ವಿಜ್ಞಾನ ಕನ್ನಡ-10

10ನೇ ಕನ್ನಡ ವಿಜ್ಞಾನ ಸಮ್ಮೇಳನ

15-17ನೇ ಸೆಪ್ಟೆಂಬರ್. 2014

ನಡಾವಳಿ

ಆಯೋಜಕರು

ಸ್ವದೇಶಿ ವಿಜ್ಞಾನ ಆಂದೋಲನ-ಕರ್ನಾಟಕ

"ಸ್ವದೇಶಿ ಸದನ", ಗುರುನಾರಾಯಣ ವಿದ್ಯಾ ವಿಹಾರ,

ಹೆಬ್ಬಾಳ, ಬೆಂಗಳೂರು-560 024; ದೂರವಾಣಿ:- 080 23258777; ಟೆಲಿಫ್ಯಾಕ್ಸ್:- 080 23258719

E-mail: svak@svakarnataka.com ; vasu@svakarnataka.com

ಜೊತೆಗೂಡಿ

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-570 006

Sponsored by

DST, New Delhi / KSOU, Mysore / CIIL, Mysore, Infosys Foundation, Bengaluru & Universities in Karnataka

ಪರಿವಿಡಿ

ಕ್ರ. ಸಂ	ವಿಷಯ	ಪುಟಸಂಖ್ಯೆ
1.	ಸಮ್ಮೇಳನದ ಪರಿಚಯ ಭಾಷಣ- ಪ್ರೊ॥ ಕೆ. ಐ. ವಾಸು	3
2.	ಆಹ್ವಾನಿತ ಹಾಗೂ ಸಂಶೋಧನ ಉಪನ್ಯಾಸಗಳು	
	* ಸಮ್ಮೇಳನದ ಕೇಂದ್ರ ವಿಷಯ: ಆರೋಗ್ಯ, ಸಂಪತ್ತು ಮತ್ತು ಪೌಷ್ಟಿಕತೆಗಾಗಿ ಆಹಾರ ತಂತ್ರಜ್ಞಾನ	4 - 26
	* ವಿಶೇಷ ವಿಷಯ: ಸಾವಯವ ಕೃಷಿ ಪದ್ಧತಿಯಲ್ಲಿ ಆಧುನಿಕತೆ	27 - 42
	* ಪಾಣೀನೀಯಮ್: ಮಾನವಶಾಸ್ತ್ರ ಮತ್ತು ಭಾಷಾ ವಿಜ್ಞಾನಗಳು	43 - 144
	* ಪತಂಜಲೀಯಮ್: ಮನೋಅಧ್ಯಾತ್ಮಿಕ ಮತ್ತು ತತ್ವಶಾಸ್ತ್ರ ವಿಜ್ಞಾನಗಳು	145 - 202
	* ಭಾರತೀಯಮ್: ಸಾಮಾಜಿಕ ಸಾಂಸ್ಕೃತಿಕವನ್ನೊಳಗೊಂಡ ಕಲೆ, ಸಂಗೀತ ನಾಟ್ಯಶಾಸ್ತ್ರ ಮತ್ತು ವಚನವಿಜ್ಞಾನಗಳು	203 - 280
	* ಕೌಟಿಲ್ಯೀಯಮ್: ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ	281 - 420
	* ಧನ್ವಂತರೀಯಮ್: ಆಯುರ್ವೇದ ಮತ್ತು ಆರೋಗ್ಯ ವಿಜ್ಞಾನಗಳು	421 - 466
	* ಪರಾಶರೀಯಮ್: ಕೃಷಿ, ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ ಮತ್ತು ಮೀನುಗಾರಿಕೆ	467 - 581
	* ವಸುಂಧರೀಯಮ್: ಭೂಶಾಸ್ತ್ರ, ಪರಿಸರ ವಿಜ್ಞಾನ, ಜೀವಜಾಲಶಾಸ್ತ್ರ ಮತ್ತು ವಿಶ್ವಶಾಸ್ತ್ರ	582 - 622
	* ನಾಗಾರ್ಜುನಿಯಮ್: ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಪಥಾರ್ಥವಿಜ್ಞಾನಗಳು	623 - 637
	* ಭಾಸ್ಕರೀಯಮ್: ಭೌತಿಕಶಾಸ್ತ್ರ, ಗಣಿತಶಾಸ್ತ್ರ ಮತ್ತು ಖಭೌತಶಾಸ್ತ್ರ ವಿಜ್ಞಾನಗಳು	638 - 649
	* ಜೆ. ಸಿ. ಭೋಸೀಯಮ್: ವಿಧ್ಯುತ್‌ಕಣಶಾಸ್ತ್ರ, ವಿಧ್ಯುತ್‌ಚಕ್ತಿಶಾಸ್ತ್ರ, ಶಕ್ತಿ ಮತ್ತು ವಿ-ಸಂವಹನ ವಿಜ್ಞಾನ	650 - 656
	* ವರಾಹಮಿಹಿರಮ್: ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಅಣುರೇಣುಮಾನ ತಂತ್ರಜ್ಞಾನ, ಆಹಾರ ತಂತ್ರಜ್ಞಾನ ಮತ್ತು ಅತೀತ ವಿಜ್ಞಾನಗಳು	657 - 707
3.	ಸಾಮಾನ್ಯ ಮಾಹಿತಿ	708 - 715
	1) ಭಾರತ ರತ್ನ ಡಾ॥ ಎಂ. ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ- 2014	
	ಅ) ಡಾ॥ ಶಂಕರ ಬಿ. ದಂಡಿನ್	
	ಆ) ಡಾ॥ ವಸುಂಧರ ಭೂಪತಿ	
	2) ಭಾರತ ರತ್ನ ಭೀಮ್‌ಸೇನ್ ಜೋಷಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕಾರ-2014	
	ಅ) ಪ್ರೊ॥ ಆರ್. ವಿಶ್ವೇಶ್ವರನ್	
	3) ಲೇಖಕರ ಪಟ್ಟಿ	716 - 720
	4) 10ನೇ ಕನ್ನಡ ವಿಜ್ಞಾನ ಸಮ್ಮೇಳನದ ಪ್ರಾಯೋಜಕರ ಪಟ್ಟಿ	721 - 722
	5) ಸಮ್ಮೇಳನದ ವರದಿ	723 - 724

ಓದುಗರ ಗಮನಕ್ಕೆ ,

ಈ ನಡಾವಳಿಯಲ್ಲಿ ಮುದ್ರಿತವಾಗಿರುವ ಎಲ್ಲಾ ಲೇಖನಗಳು ಆಯಾ ಲೇಖಕರುಗಳಿಂದ ಬಂದಂತಹದು. ಈ ಲೇಖನಗಳನ್ನು ಸಂಸ್ಥೆಯು ಯಾವುದೇ ಸಂಪಲಗಳನ್ನು ಮಾಡದೇ ಮುದ್ರಿಸಲಾಗಿದೆ. ಈ ಲೇಖನಗಳಲ್ಲಿ ಯಾವುದೇ ತಪ್ಪು ಕಂಡುಬಂದಲ್ಲಿ ಇದರ ಜವಾಬ್ದಾರಿಯು ಆಯಾ ಲೇಖಕರುಗಳಿಗೆ ಮಾತ್ರ ಸಂಬಂಧಿಸಿದ್ದು, ಇದರಲ್ಲಿ ಸಂಸ್ಥೆಯ ಪಾತ್ರ ಯಾವುದೇ ಇರುವುದಿಲ್ಲ ಮತ್ತು ಜವಾಬ್ದಾರಿಯು ಇರುವುದಿಲ್ಲ. ಪ್ರಬಂಧಗಳ ಬಗ್ಗೆ ಹೆಚ್ಚಿನ ಚರ್ಚೆ, ಮಾಹಿತಿ ಬೇಕಾದಲ್ಲಿ ಲೇಖಕರನ್ನು ನೇರವಾಗಿ ಸಂಪರ್ಕಿಸಬಹುದು. ಈ ನಡಾವಳಿಯಲ್ಲಿ ಸಮ್ಮೇಳನದಲ್ಲಿ ಪ್ರಬಂಧಗಳನ್ನು ಮಂಡನೆ ಮಾಡಿದಂತಹ ಹಾಗೂ ನಿಗದಿತ ಸಮಯಕ್ಕೆ ಮಂಡಿಸಿದ ಲೇಖನಗಳನ್ನು ಮುದ್ರಿಸಲಾಗಿದೆ. ಯಾವುದೇ ಲೇಖಕರು ಪ್ರಬಂಧ ಮಂಡನೆ ಮಾಡಿ ಅವರ ಲೇಖನಗಳು ನಡಾವಳಿಯಲ್ಲಿ ಮುದ್ರಣವಾಗದಿದ್ದಲ್ಲಿ ಇದಕ್ಕೆ ಲೇಖಕರು ತಮ್ಮ ಪ್ರಬಂದಗಳನ್ನು ನಿಗದಿತ ಸಮಯಕ್ಕೆ ಹಾಗೂ ಆಯೋಜಕರು ಕೇಳಿರುವ ಅಪಿಗಳಲ್ಲಿ ಕಳುಹಿಸದ ಕಾರಣ ಅಂತವರ ಲೇಖನಗಳನ್ನು ನಡಾವಳಿಯಲ್ಲಿ ಮುದ್ರಿಸಲಾಗಿಲ್ಲ.

ಸಮ್ಮೇಳನದ ಪರಿಚಯ ಭಾಷಣ

ಮಾನ್ಯ ಶ್ರೀ. ಎಸ್. ಆರ್. ಪಾಟೀಲ ರವರೆ, ಮಾನ್ಯ ಶ್ರೀ. ಶ್ರೀನಿವಾಸ ಪ್ರಸಾದ್ ರವರೆ, ಗೌರವಾನ್ವಿತ ಮಂತ್ರಿಗಳೆ, ಗೌರವಾನ್ವಿತ ಕುಲಪತಿಗಳೆ ಹಾಗೂ 10ನೇ ಕನ್ನಡ ವಿಜ್ಞಾನ ಸಮ್ಮೇಳನಕ್ಕೆ ಆಗಮಿಸಿರುವ ಎಲ್ಲಾ ಗಣ್ಯರೆ,

ಪ್ರೀತಿಯ ಸ್ನೇಹಿತರೆ,

ಮಾತೆ, ಮಾತೃಭೂಮಿ ಮತ್ತು ಮಾತೃಭಾಷೆ ಸ್ವದೇಶಿ ಚಿಂತನೆಯ ಆಧಾರ ಸ್ತಂಭಗಳಾಗಿವೆ. ಈ ನಿಟ್ಟಿನಲ್ಲಿ ಸ್ವದೇಶಿ ವಿಜ್ಞಾನ ಆಂದೋಲನ-ಕರ್ನಾಟಕ ದ ಮಹಿಳಾ ವಿಜ್ಞಾನಿಗಳ ವೇದಿಕೆ "ಮಾತೃ ವೇದಿಕೆ" ಎಂದು ಹೆಸರಿಸಲಾಗಿದೆ. ಇಲ್ಲಿ ತಾಯ್ತನದ ಔನ್ಯತ್ಯವನ್ನು ತೋರುವುದರ ಜೊತೆಗೆ ಮಹಿಳಾ ವಿಜ್ಞಾನಿಗಳನ್ನು ಒಂದು ವೇದಿಕೆಯಲ್ಲಿ ತರುವುದು ಮತ್ತು ಅವರಲ್ಲಿ ಹೆಮ್ಮೆಯ ಭಾವ, ವಿಶ್ವಾಸ ಮತ್ತು ಒಗ್ಗಟ್ಟು ಮೂಡಿಸುವುದು ಮುಖ್ಯ ಉದ್ದೇಶ.

ಮಾತೃಭಾಷೆಯು ಸ್ಥಳೀಯ ಆತ್ಮೀಯತೆಯನ್ನು ಹೊಂದಿರುವುದು. ಕನ್ನಡವು ಕರ್ನಾಟಕದ ಜನರ ಸಂಸ್ಕೃತಿ, ಜ್ಞಾನದೊಂದಿಗೆ ಸಮ್ಮೀಳತವಾಗಿರುವುದು. ಇದು ಸ್ವದೇಶಿ ಚಿಂತನೆಯ ಭಾಗವೆಂಬುದು ನಮ್ಮ ಭಾವನೆ. ಕನ್ನಡಾ ವಿಜ್ಞಾನ ಸಮ್ಮೇಳನವನ್ನು ಈ ನಿಟ್ಟಿನಲಿ ವಿನ್ಯಾಸಗೊಳಿಸಲಾಗಿದೆ. ಸಮ್ಮೇಳನದಲ್ಲಿ ಪ್ರಬಂಧಗಳನ್ನು ಕನ್ನಡದಲ್ಲಿ ಮಂಡಿಸಲಾಗುವುದು. ಹಾಗೆಯೇ ನಮ್ಮ ಇತರೆ ರಾಷ್ಟ್ರೀಯ ಕಾರ್ಯಕ್ರಮಗಳಾದ – ರಾಷ್ಟ್ರೀಯ ಆಯುರ್ವೇದ ಸಮ್ಮೇಳನ ಅಥವಾ ಇತರೆ ಭಾರತೀಯ ವಿಜ್ಞಾನ ಪರಂಪರೆಯ ಉಪನ್ಯಾಸ ಕಾರ್ಯಾಕ್ರಮಗಳಲ್ಲಿ ಕನ್ನಡದಲ್ಲಿ ಪ್ರಬಂಧ ಮಂಡನೆಗೆ ಅವಕಾಶನೀಡಲಾಗಿದೆ.

ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದಂತೆ ನಾವು "ಸ್ವದೇಶೋ ಭೂವನತ್ರಯಮ್" "ವಸುದೈವ ಕುಟುಂಬಂ" ಎನ್ನುವ ಉನ್ನತ ಚಿಂತನೆಗಳನ್ನು ನಾವು ಅಳವಡಿಸಿಕೊಂಡಿದ್ದೇವೆ. ಹೀಗಾಗಿ ನಮಗೆ ಜಾಗತೀಕರಣದಂತಹ ಅಲೆಗಳನ್ನು ತಡೆದುಕೊಳ್ಳಲು ಸಾಧ್ಯವಾಗಿದೆ. ಇಂದಿನ "ಭಾರತ ಮೊದಲು" "ಮೇಕ್ ಇನ್ ಇಂಡಿಯಾ" ದಂತಹ ಚಿಂತನೆಗಳು ನಮ್ಮ ಸ್ವದೇಶಿ ಚಿಂತನೆಯ ಪ್ರತಿಫಲನಗಳೆ ಆಗಿವೆ.

ಆಯುರ್ವೇದ, ಯೋಗ, ವಾಸ್ತು ಇತರೆ ಸ್ವದೇಶಿ ವಿಜ್ಞಾನ ವಿಷಯಗಳು ಭಾರತದ ಭುನಾದಿಗೆ ಅಪಾರವಾದ ಕೊಡುಗೆ ನೀಡಿದೆ ಮತ್ತು ಸ್ವದೇಶಿ ವಿಜ್ಞಾನ ಆಂದೋಲನವು ಇವುಗಳನ್ನು ದೇಶದ ಉನ್ನತಿಗಾಗಿ ಜನಪ್ರಿಯಗೊಳಿಸಿ ಮತ್ತು ಪ್ರಚಾರಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ. ನಾವು ಆಧುನಿಕ ವಿಜ್ಞಾನವನ್ನು ಭಾರತೀಯ ಪಾರಂಪರಿಕ ವಿಜ್ಞಾನಗಳ ಜೊತೆಗೆ ಮೇಳವಿಸಿ ಪ್ರಪಂಚಕ್ಕೆ ಭಾರತದ ಅಧ್ಯಾತ್ಮಿಕ ಶಕ್ತಿಯನ್ನು ತೋರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಈ ನಮ್ಮ ಪ್ರಯತ್ನದಲ್ಲಿ ತಮ್ಮ ಸಹಭಾಗಿತ್ವ, ಸಹಕಾರವನ್ನು ಪ್ರತಿಯೊಬ್ಬರು ನೀಡಬೇಕೆಂದು ಕೋರುತ್ತೇನೆ.

ಜೈ ವಿಜ್ಞಾನ ಕನ್ನಡ, ಜೈ ಕರ್ನಾಟಕ

ಪ್ರೊ|| ಕೆ. ಐ. ವಾಸು
ಸ್ಥಾಪಕ-ಪೋಷಕ-ಮಾರ್ಗದರ್ಶಕ, ಸ್ವದೇಶಿ ವಿಜ್ಞಾನ ಆಂದೋಲನ-ಕರ್ನಾಟಕ
"ಸ್ವದೇಶಿ ಸದನ", ಗುರು ನಾರಾಯಣ ವಿದ್ಯಾ ವಿಹಾರ, ಹೆಬ್ಬಾಳ, ಬೆಂಗಳೂರು-560 024
E-mail: svak@svakarnataka.com / vasu@svakarnataka.com

ಸಮ್ಮೇಳನದ ಕೇಂದ್ರ ವಿಷಯ:-01

ಆರೋಗ್ಯ, ಸಂಪತ್ತು ಮತ್ತು ಪೌಷ್ಟಿಕತೆಗಾಗಿ ಆಹಾರ ತಂತ್ರಜ್ಞಾನ

FOCAL THEME:-01
FOOD TECHNOLOGY FOR NUTRITION, HEALTH & WEALTH

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಭಾರತದ ಜನಸಾಮಾನ್ಯರಲ್ಲಿ ಪೋಷಣಾ ಪರಿವರ್ತನೆ – ಸಂಸ್ಕರಿಸಿದ ಆಹಾರ ಪದಾರ್ಥಗಳ ಸೇವನೆ ಮತ್ತು ಆಹಾರ ಅಭದ್ರತೆಯ ಕೊಡುಗೆ	ಪ್ರಭಾವತಿ.ಎಸ್.ಎನ್. ಜಮುನ ಪ್ರಕಾಶ್	6 – 10
2.	"ಹೈದರಾಬಾದ್ ಕರ್ನಾಟಕ ಭಾಗದ ಮಕ್ಕಳಲ್ಲಿಯ ಅಪೌಷ್ಟಿಕತೆ ತಡೆಗಟ್ಟುವಲ್ಲಿ ಮಾಧ್ಯಮಗಳ ಪಾತ್ರ"	ಸುನಿತಾ ಬಸವರಾಜ ಪಾಟೀಲ್	10 – 15
3.	ವರ್ತನೆಯ ಮೇಲೆ ಆಹಾರ ತಂತ್ರಜ್ಞಾನದ ಪ್ರಭಾವ	ರಶ್ಮಿ.ಎಂ. ಡಾ. ಗೋಪಾಲಕೃಷ್ಣ.ಆರ್.	16 – 18
4.	ವಯೋವೃದ್ಧರಿಗೆ ಆರೋಗ್ಯವರ್ಧಕ ಪಾನೀಯ	ಡಾ॥ ಡಿ. ಬಿ. ಪುರಾಣಿಕ	18 – 21
5.	ಮಕ್ಕಳಲ್ಲಿ ದಂತಕುಳಿ ನಿವಾರಣೆಗೆ ಹಾಲಿನ ಸಸಾರಜನಕ ಬಳಸಿ ದಂತಮಂಜನದ ಅಭಿವೃದ್ಧಿ	ಡಾ॥ ಡಿ. ಬಿ. ಪುರಾಣಿಕ	21 – 24
6	ಮಧ್ಯಾಹ್ನದ ಬಿಸಿಯೂಟದಲ್ಲಿ ಪೌಷ್ಟಿಕಾಂಶ–ಒಂದು ವಿಶ್ಲೇಷಣೆ	ಶಕುಂತಲ ಎನ್.ಡಿ, ಡಾ. ಜಿ. ಶೀಲಾ	24 – 26

ಭಾರತದ ಜನಸಾಮಾನ್ಯರಲ್ಲಿ ಪೋಷಣಾ ಪರಿವರ್ತನೆ – ಸಂಸ್ಕರಿಸಿದ ಆಹಾರ ಪದಾರ್ಥಗಳ ಸೇವನೆ ಮತ್ತು ಆಹಾರ ಅಭದ್ರತೆಯ ಕೊಡುಗೆ

ಪ್ರಭಾವತಿ.ಎಸ್.ಎನ್. ಮತ್ತು ಜಮುನ ಪ್ರಕಾಶ್
ಆಹಾರ ವಿಜ್ಞಾನ ಮತ್ತು ಪೋಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.
E-mail: pprabhavathisn@gmail.com

ಇತ್ತೀಚಿನ ದಿನಗಳಲ್ಲಿ ಪೋಷಣಾ ಪರಿವರ್ತನೆಯಿಂದ, ಜನಸಾಮಾನ್ಯರ ಆರೋಗ್ಯ ಸ್ಥಿತಿಗತಿಯಲ್ಲಿ ಬದಲಾವಣೆಯಾಗುತ್ತಿದ್ದು ಜನಸಾಮಾನ್ಯರು ಜೀವನ ಶೈಲಿಗೆ ಸಂಬಂಧಿಸಿದ ಕಾಯಿಲೆಗಳಿಗೆ ತುತ್ತಾಗುವ ಸಂಭವ ಹೆಚ್ಚುತ್ತಿದೆ. ಪೋಷಣಾ ಪರಿವರ್ತನೆ ಎಂದರೆ, ಜನರು ಸೇವಿಸುವ ಆಹಾರ ಪದ್ಧತಿ ಮತ್ತು ಪೋಷಕಾಂಶಗಳ ಪ್ರಮಾಣದಲ್ಲಿ ಬದಲಾವಣೆಗಳಾಗಿ ಪೋಷಣಾ ಸ್ಥಿತಿಗತಿಯು ವ್ಯತ್ಯಾಸವಾಗುವುದು. ಪೋಷಣಾ ಪರಿವರ್ತನೆಗೆ ಪ್ರೇರಕ ಅಂಶಗಳೆಂದರೆ, ಜಾಗತೀಕರಣ, ನಗರೀಕರಣ, ಸಾಮಾಜಿಕ ಆರ್ಥಿಕ ಬದಲಾವಣೆ ಹಾಗೂ ಕೃಷಿ ಚಟುವಟಿಕೆಗಳಲ್ಲಿನ ಬದಲಾವಣೆಗಳು. ಪ್ರಸ್ತುತ ಅಧ್ಯಯನದಲ್ಲಿ ಸಂಸ್ಕರಿಸಿದ ಆಹಾರ ಪದಾರ್ಥಗಳ ಸೇವನೆ ಹಾಗೂ ಆಹಾರ ಅಭದ್ರತೆಯು ಪೋಷಣಾ ಪರಿವರ್ತನೆಗೆ ಯಾವ ರೀತಿಯ ಕೊಡುಗೆಯನ್ನು ನೀಡಿದೆ ಎಂಬುದನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ. ಈ ಅಧ್ಯಯನದಲ್ಲಿ ಒಟ್ಟು ಸಾವಿರ ಕುಟುಂಬಗಳನ್ನು ಸಂದರ್ಶಿಸಲಾಯಿತು. ಈ ಅಧ್ಯಯನದಲ್ಲಿ ಕಂಡು ಬಂದ ಪ್ರಮುಖ ಅಂಶಗಳೆಂದರೆ, ಸಂಸ್ಕರಿಸಿದ ಆಹಾರ ಪದಾರ್ಥಗಳ ಸೇವನೆಯು ಹೆಚ್ಚಳವಾಗಿದ್ದು, ಶೇಕಡ 47 ರಷ್ಟು ಕುಟುಂಬಗಳು ವಾರಕ್ಕೆ ಒಂದು ಬಾರಿ ಸಿದ್ಧ ಆಹಾರಗಳನ್ನು ಉಪಯೋಗಿಸುತ್ತಿದ್ದರು. ಸಮೂಹ ಮಾಧ್ಯಮಗಳಾದ ಟಿವಿ, ರೇಡಿಯೋ, ಹಾಗೂ ದಿನಪತ್ರಿಕೆಗಳು ಸಂಸ್ಕರಿಸಿದ ಆಹಾರ ಪದಾರ್ಥಗಳ ಬಳಕೆಯು ಹೆಚ್ಚಾಗುವಂತೆ ಮಾಡುವಲ್ಲಿ ಪರಿಣಾಮ ಬೀರಿದೆ. ಸಂಸ್ಕರಿಸಿದ ಪದಾರ್ಥಗಳನ್ನು ಉಪಯೋಗಿಸುವುದರಿಂದ ಸಮಯವನ್ನು ಉಳಿಸಬಹುದು ಎಂದು ಬಹುತೇಕ ಕುಟುಂಬದವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಸಂಸ್ಕರಿಸಿದ ಪದಾರ್ಥಗಳನ್ನು ಖರೀದಿಸುವಾಗ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಪದಾರ್ಥಗಳನ್ನು ಖರೀದಿಸುವುದಾಗಿ ತಿಳಿಸಿದ್ದಾರೆ. ಅಧ್ಯಯನಕ್ಕೆ ಒಳಪಡಿಸಿದ ಕೆಲವು ಕುಟುಂಬಗಳು ಆಹಾರ ಅಭದ್ರತೆಯಿಂದ ಕೂಡಿರುವುದು ಕಂಬಂದಿದೆ. ಇಂತಹ ಕುಟುಂಬಗಳಲ್ಲಿ ರಕ್ಷಣಾತ್ಮಕ ಗುಣವನ್ನು ಹೊಂದಿರುವಂತಹ ಆಹಾರಗಳಾದ ಹಣ್ಣು ಮತ್ತು ತರಕಾರಿಗಳು ಮುಖ್ಯವಾಗಿ, ಹಸಿರು ಸೊಪ್ಪು, ರಾಗಿಯ ಸೇವನೆಯು ಗಣನೀಯವಾಗಿ ಕಡಿಮೆ ಪ್ರಮಾಣದಿಂದಿರುವುದು ಕಂಡುಬಂದಿದೆ. ಹಾಲು ಮತ್ತು ಹಾಲಿನ ಉತ್ಪನ್ನಗಳ ಬಳಕೆಯು ಸಹ ಗಣನೀಯ ಪ್ರಮಾಣದಲ್ಲಿ ಕುಂಠಿತವಾಗಿತ್ತು. ನಮ್ಮ ಪ್ರಸ್ತುತ ಅಧ್ಯಯನದ ಆಧಾರದ ಮೇಲೆ ಹೇಳುವುದಾದರೆ, ಸರ್ಕಾರವು ಯಾವುದೇ ರೀತಿಯ ಆಹಾರ ಮತ್ತು ಪೋಷಣೆಗೆ ಸಂಬಂಧಿಸಿದ ಕಾರ್ಯಕ್ರಮವನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡು ಪ್ರತಿ ಕುಟುಂಬಕ್ಕೂ ಸಾಕಷ್ಟು ಪ್ರಮಾಣದಲ್ಲಿ ಆಹಾರವು ದೊರಕುವಂತೆ ನೋಡಿಕೊಳ್ಳಬೇಕು. ಅಗತ್ಯ ಪ್ರಮಾಣದಲ್ಲಿ ಪೌಷ್ಟಿಕಾಂಶಯುಕ್ತ ಆಹಾರವನ್ನು ಸೇವಿಸುವುದರಿಂದ ಸುಸ್ಥಿರ ಆರೋಗ್ಯವನ್ನು ಹೊಂದಬಹುದು ಎಂಬುದರ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕು.

ಪರಿಚಯ: ಪೋಷಣಾ ಪರಿವರ್ತನೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ಆಹಾರದ ಕ್ರಮದಲ್ಲಿ ಕ್ರಮೇಣ ಬದಲಾವಣೆಗಳು ಉಂಟಾಗುತ್ತಿವೆ. ಇದರಿಂದಾಗಿ ಪೌಷ್ಟಿಕಾಂಶಗಳ ಸೇವನೆಯಲ್ಲೂ ಕೂಡ ಭಾರಿ ವ್ಯತ್ಯಾಸಗಳುಂಟಾಗುತ್ತಿವೆ. ಈ ಎಲ್ಲಾ ಬದಲಾವಣೆಗಳಿಗೆ ಮೂಲ ಕಾರಣ ಆಹಾರಾಭ್ಯಾಸದ ಪರಿವರ್ತನೆ ಎಂದು ಹೇಳಬಹುದಾಗಿದೆ ಇತಿಹಾಸ ಪೂರ್ವ ಕಾಲದಲ್ಲ ಆಚರಣೆಯಲ್ಲಿದ್ದ ಆಹಾರಾಭ್ಯಾಸಗಳು ಸಾವಿರಾರು ವರ್ಷಗಳವರೆಗೂ ಒಂದೇ ರೀತಿಯಲ್ಲಿ ಇರುತ್ತಿದ್ದವು. ನಾವು ಈಗಿನ ಕಾಲದಲ್ಲ ಸೇವಿಸುವ ಆಹಾರಕ್ಕೂ ಹಿಂದನ ಕಾಲದಲ್ಲ ಸೇವಿಸುತ್ತಿದ್ದ ಆಹಾರಕ್ಕೂ ಬಹಳ ವ್ಯತ್ಯಾಸವಿದೆ. ಈ ವ್ಯತ್ಯಾಸಗಳಿಗೆ ಮುಖ್ಯ ಕಾರಣವೆಂದರೆ ಆಗಿನ ಕಾಲದಲ್ಲಿ ಆಹಾರವನ್ನು ಸಂಗ್ರಹಿಸಲು ಅನುಸರಿಸುತ್ತಿದ್ದ ಕ್ರಮ ಬಹಳ ಭಿನ್ನವಾಗಿರುತ್ತಿತ್ತು ಏಕೆಂದರೆ ಅವರು ಬೇಟೆಯಾಡಿದ ಮತ್ತು ಸಂಗ್ರಹಿಸಿದ ಆಹಾರಗಳ ಮೇಲೆ ಪೂರ್ತಿ ಅವಲಂಬಿತರಾಗಿರುತ್ತಿದ್ದರು ಸುಮಾರು ಹತ್ತು ಸಾವಿರ ವರ್ಷಗಳಷ್ಟು ಹಿಂದೆ ಕೃಷಿ ಚಟುವಟಿಕೆಗಳು ಆರಂಭವಾದ ತರುವಾಯ ಮಹತ್ತರವಾದ ಬದಲಾವಣೆಗಳು ಕಾಣಿಸಿಕೊಳ್ಳಲು ಪ್ರಾರಂಭವಾಯಿತು ಆದ್ದರಿಂದ ಆಹಾರ ಕ್ರಮಗಳಲ್ಲೂ ಸಹ ಸ್ವಲ್ಪ ಮಟ್ಟಿಗಿನ ಬದಲಾವಣೆಗಳಾದವು ಇವುಗಳಲ್ಲಿ ಮುಖ್ಯವಾದವುಗಳೆಂದರೆ ಧಾನ್ಯಗಳ ಸೇವನೆ ಪ್ರಮಾಣದಲ್ಲಿ ಹೆಚ್ಚಳವಾಗರುವುದು. ಮತ್ತು ನೈಸರ್ಗಿಕ ಆಹಾರಗಳಾದ ಹಣ್ಣು, ಕಾಳುಗಳು ಹಾಗೂ ಬೇಟೆಯಾಡಿದ ಪ್ರಾಣಿಗಳ ಮಾಂಸದ ಸೇವನೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿತು. ಎರಡನೇ ಯುಗದ ಆರಂಭದಲ್ಲಿಯೂ ಸಹ ಆಹಾರ ಕ್ರಮ ಮತ್ತು ಪೌಷ್ಟಿಕಾಂಶಗಳ ಸೇವನೆಯಲ್ಲಿ ಬಹುಮುಖ್ಯ ಬದಲಾವಣೆಗಳಾಗಿರುವುದನ್ನು ಕಾಣಬಹುದು. ಸಂಸ್ಕರಿಸಿದ ಆಹಾರ ಪದಾರ್ಥಗಳು ಮಾರುಕಟ್ಟೆಯಲ್ಲಿ ಅಧಿಕವಾಗಿ ದೊರಕುತ್ತಿರುವುದರಿಂದ ಆಹಾರ ಕ್ರಮವು ತೀವ್ರ ರೀತಿಯಲ್ಲಿ ಬದಲಾಗಲು ನಾಂದಿಯಾಯಿತು ಎಂದು ಹೇಳಬಹುದು.

ಬಾಹ್ಯ, ಪ್ರತ್ಯಕ್ಷ ಮತ್ತು ಪರೋಕ್ಷ ಅಂಶಗಳು ಈ ಗುರತರವಾದ ಬದಲಾವಣೆಗೆ ಬಹುಮುಖ್ಯ ಕಾರಣವಾಗಿದೆ. ಈ ರೀತಿಯ ಬದಲಾವಣೆಗಳು ಆರೋಗ್ಯದ ಮೇಲೆ ಅಡ್ಡ ಪರಿಣಾಮವನ್ನು ಬೀರಬಹುದು. ಜಾಗತೀಕರಣ ಕ್ಷಿಪ್ರ ಹಾಗೂ ಅಸಮತೋಲಿತ ನಗರೀಕರಣ, ಸಾಮಾಜಿಕ ಜೀವನದಲ್ಲ ವರ್ಗಾವಣೆಯ ಅದಲು ಬದಲು ಮತ್ತು ಅಂತರ್ ದೇಶೀಯ ವಲಸೆಗಳು ಈ ಎಲ್ಲಾ ಬದಲಾವಣೆಗಳಿಗೆ ಬಹುಮುಖ್ಯ ಪ್ರೇರಕ ಅಂಶಗಳಾಗಿವೆ. ಕೃಷಿ ಚಟುವಟಿಕೆಗಳಲ್ಲಿನ ಬದಲಾವಣೆಯಿಂದಾಗಿ ಎಲ್ಲಾ ರೀತಿಯ ಆಹಾರವು ವರ್ಷ ಪೂರ್ತಿ ದೂರಕುವ ಸಂಭವ ಹೆಚ್ಚಾಗಿ ಯಾವುದೇ ಒಂದು ರೀತಿಯ ಪದಾರ್ಥದ ಮೇಲೆ ಅವಲಂಬಿತರಾಗಿರಬೇಕಾದ ಸಂದರ್ಭ ಈಗಿನ ಕಾಲದಲ್ಲಿನ ವೈವಿಧ್ಯಮಯವಾದ ಆಹಾರದ ಲಭ್ಯತೆಯ ಪ್ರಮಾಣವೂ ಕೂಡ ಹೆಚ್ಚಾಗಿ ಪೋಷಕಾಂಶಗಳ

ಸೇವೆನೆಯಲ್ಲಿ ಬದಲಾವಣೆಯುಂಟಾಗಿದೆ.

ಸಂಸ್ಕರಿಸಿದ ಆಹಾರ ಪದಾರ್ಥಗಳು ಭಾರತದ ಮಾರುಕಟ್ಟೆಯಲ್ಲಿ ಇತ್ತೀಚಿನ ದಿನಗಳಲ್ಲಿ ಅಧಿಕ ಪ್ರಮಾಣದಲ್ಲಿ ದೊರಕುವ ಕಾರಣದಿಂದ ಸುಮಾರು ಹತ್ತು ಇಪ್ಪತ್ತು ವರ್ಷಗಳ ಹಿಂದೆ ಕಾಣುತ್ತಿದ್ದ ಜೀವನ ಶೈಲಿಯಲ್ಲಿಯೂ ಸಹ ಗಮನಾರ್ಹ ಬದಲಾವಣೆಗಳಾಗಿವೆ ತಾಂತ್ರಿಕ ಅಭಿವೃದ್ಧಿ, ಮನೆಯ ಮೂಲ ರಚನೆಗಳಲ್ಲಿ ಬದಲಾವಣೆ, ಬಹುಸಂಸ್ಕೃತಿಯ ಸಮಾಜ ಮತ್ತು ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳಿಂದಾಗಿ ಆರಾಮದಯಕವಾಗಿ ಜೀವನ ನಡೆಸಲು ಸಹಕಾರಿಯಾಗುವಂತಹ ವಸ್ತುಗಳಿಗೂ ಭಾರಿ ಬೇಡಿಕೆ ಉಂಟಾಗಿದೆ. ಕಳೆದ ಕೆಲವು ದಶಕಗಳಿಂದ ಭಾರತೀಯರ ಅಭಿರುಚಿಗೆ ತಕ್ಕಂತೆ ಸಂಸ್ಕರಿಸಿದ ಆಹಾರವನ್ನು ಒದಗಿಸುವುದು ಹಾಗೂ ಅವುಗಳನ್ನು ತಯಾರಿಸುವುದನ್ನು ಹೆಚ್ಚಾಗಿ ಕಾಣಬಹುದು. ಈ ಸಂಸ್ಕರಿಸಿದ ಆಹಾರ ಪದಾರ್ಥಗಳಲ್ಲಿ ಮುಖ್ಯವಾದವುಗಳೆಂದರೆ ಸಂಸ್ಕರಿಸಿದ ಹಣ್ಣುಗಳು, ಘನೀಕೃತ ಆಹಾರಗಳು, ಶೈತ್ಯೀಕರಿಸಿದ ತರಕಾರಿಗಳು, ಮಾಂಸ ಮತ್ತು ಮೀನಿನ ಪದಾರ್ಥಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳು ಹಾಗೂ ಇನ್ನೂ ಮುಂತಾದ ಸಿದ್ಧ ಆಹಾರ ತಿನಿಸುಗಳು, ಸಿದ್ಧ ಆಹಾರ ಮಿಶ್ರಣಗಳು ಹಾಗೂ ಧಾನ್ಯದ ಉತ್ಪನ್ನಗಳು. ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ನಗರೀಕರಣ ಬಹುವೇಗವಾಗಿ ಹೊಂದುತ್ತಿದ್ದು ಆಹಾರವನ್ನು ಮನೆಯಲ್ಲಿ ತಯಾರಿಸಲು ಸಾಕಷ್ಟು ಸಮಯವಿಲ್ಲದೆ ಸಿದ್ಧ ಆಹಾರಗಳ ಮೇಲೆ ಹೆಚ್ಚು ಅವಲಂಬಿತರಾಗುತ್ತಿದ್ದಾರೆ. ಈ ಕಾರಣದಿಂದಾಗಿ ಸಿದ್ಧ ಆಹಾರ ಉದ್ದಿಮೆಗಳು ಬಹುಶ್ರೀಘ್ರಗತಿಯಲ್ಲಿ ಬೆಳವಣಿಗೆ ಹೊಂದಲು ಪ್ರಮುಖ ಕಾರಣವಾಗಿದೆ.

ನವನವೀನ ತಂತಜ್ಞಾನ ಅಭಿವೃದ್ಧಿಯಿಂದಾಗಿ ಭಾರತದಲ್ಲಿ ಶ್ರೀಮಂತ ವರ್ಗದವರು ಹೆಚ್ಚು ಆರಾಮದಯಕ ಜೀವನ ನಡೆಸಲು ಸಹಾಯಕವಾಗಿದೆ ಮತ್ತೊಂದಡೆ ಆಹಾರ ಅಭದ್ರತೆ ಎಂಬ ಗಂಭೀರ ಸಮಸ್ಯೆಯು ಆರ್ಥಿಕವಾಗಿ ದುರ್ಬಲರಾದ ವರ್ಗದಲ್ಲಿರುವ ಜನರಲ್ಲಿ ಕಂಡು ಬಂದಿದೆ. ಈ ವರ್ಗದ ಜನರಿಗೆ ತಮ್ಮ ಹಸಿವನ್ನು ಹಿಂಗಿಸಿಕೊಳ್ಳಲು ಸಾಕಷ್ಟು ಪ್ರಮಾಣದ ಆಹಾರವು ದೊರಕದೆ ಪೌಷ್ಟಿಕಾಂಶಗಳ ಕೊರತೆಯಿಂದ ಬಳಲುತ್ತಿರುವ ಸಂಭವ ಹೆಚ್ಚಾಗುತ್ತಿದೆ. ಆಹಾರ ಭದ್ರತೆ ಎಂದರೆ ಎಲ್ಲಾ ಜನಸಾಮಾನ್ಯರಿಗೂ ಎಲ್ಲಾ ಕಾಲದಲ್ಲೂ ಆಹಾರ ಪದಾರ್ಥವು ಭೌತಿಕವಾಗಿ ಮತ್ತು ಆರ್ಥಿಕವಾಗಿ ಲಭ್ಯವಾಗುವುದು ಇದರಿಂದ ಪ್ರತಿಯೊಂದು ಕುಟುಂಬಕ್ಕೂ ಸಾಕಷ್ಟು ಪ್ರಮಾಣದಲ್ಲಿ ಆಹಾರ ಪದಾರ್ಥಗಳು ದೊರೆತು ಆರೋಗ್ಯ ಪೂರ್ಣ ಜೀವನ ನಡೆಸಲು ಸಹಕಾರಿಯಾಗುತ್ತದೆ.

ಸಮುದಾಯದಲ್ಲಿ ವಾಸಿಸುವ ಕುಟುಂಬಗಳಲ್ಲಿ ಆಹಾರ ಒದಗಿಸುವ ಸಂಪನ್ಮೂಲಗಳಾದ ಉದಾ: ಹಣವು ಸಾಕಷ್ಟು ಪ್ರಮಾಣದಲ್ಲಿದ್ದರೆ ಸರಿಯಾದ ಆಹಾರ ಪದಾರ್ಥಗಳನ್ನು ಖರೀದಿಸಲು ಪೌಷ್ಟಿಕಾಂಶ ಭರಿತ ಆಹಾರವನ್ನು ಸೇವಿಸಲು ದಾರಿ ಮಾಡಿಕೊಡುತ್ತದೆ. ಒಂದು ಕುಟುಂಬ ಅಥವಾ ಸಮುದಾಯವು ಆಹಾರ ಅಭದ್ರತೆಗೆ ಒಳಗಾಗಲು ಮುಖ್ಯವಾದ ಮೂರು ಅಂಶಗಳೆಂದರೆ ಸಮುದಾಯದ ದುರ್ಬಲತೆ, ಬಾಹ್ಯ ಅಪಾಯಗಳಾದ ಬರ ಮತ್ತು ಪ್ರವಾಹದ ಸ್ಥಿತಿಗಳು ಹಾಗೂ ಕುಟುಂಬದ ಅಂತರಿಕ ಸಾಮರ್ಥ್ಯ. ಈ ಅಧ್ಯಯನವನ್ನು ಕೈಗೊಂಡ ಮುಖ್ಯ ಉದ್ದೇಶವೆಂದರೆ ಕಡಿಮೆ ಆದಾಯ ಹೊಂದಿರುವ ಹಳ್ಳಿಗಳಲ್ಲಿ ವಾಸಿಸುವ ಕುಟುಂಬಗಳಲ್ಲಿ ಸಂಸ್ಕರಿಸಿದ ಆಹಾರ ಸೇವಿಸುವ ಪ್ರವೃತ್ತಿ ಹಾಗೂ ಆಹಾರ ಅಭದ್ರತೆಯು ಪೋಷಣಾ ಪರಿವರ್ತನೆಗೆ ಹೇಗೆ ಕಾರಣವಾಗುತ್ತದೆ ಎಂಬುದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು. ಇದಕ್ಕೆ ಸಂಬಂಧಪಟ್ಟ ಮಾಹಿತಿ ಗಳನ್ನು ಮೈಸೂರು ಜಿಲ್ಲೆಗೆ ಒಳಪಟ್ಟ ಆಯ್ದ ಹಳ್ಳಿಗಳಲ್ಲಿ ಪ್ರತಿಯೊಂದು ಕುಟುಂಬದ (1000 ಕುಟುಂಗಳು) ಸದಸ್ಯರನ್ನು ರಚನ್ಮಾತಕ ಪ್ರಶ್ನಾವಳಿಗಳನ್ನು ಬಳಸಿ ಸಂದರ್ಶನದ ಮೂಲಕ ಮಾಹಿತಿಯನ್ನು ಕಲೆ ಹಾಕಲಾಯಿತು ಆಹಾರಾಭ್ಯಾಸದ ಕ್ರಮಗಳನ್ನು ತಿಳಿಯಲು ಸುಮಾರು ೫೦೦ ಮಹಿಳೆಯರನ್ನು ಸಂದರ್ಶಿಸಲಾಯಿತು.

ಫಲಿತಾಂಶ ಮತ್ತು ಚರ್ಚೆ

ಚಿತ್ರ 1



ಚಿತ್ರ 1ರಲ್ಲಿ ಆಯ್ದ ಕುಟುಂಬದ ಸದಸ್ಯರುಗಳಲ್ಲಿರುವ ಹೊರಗಿನ ತಿಂಡಿ ತಿನಿಸು ಸೇವಿಸುವ ಅಭ್ಯಾಸದ ಬಗ್ಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡಲಾಗಿದೆ ಬಹುತೇಕ(ಶೇ 47%) ಕುಟುಂಬಗಳವರು ವಾರಕ್ಕೊಮ್ಮೆ ಹೊರಗಿನ ಪದಾರ್ಥಗಳನ್ನು ಸೇವಿಸುದಾಗಿ ತಿಳಿಸಿದರು. ಕೇವಲ ಶೇ 10%ರಷ್ಟು ಕುಟುಂಬದವರು ತಿಂಗಳಿಗೊಮ್ಮೆ ಸೇವಿಸುವುದಾಗಿ ತಿಳಿಸಿದರು. ಶೇ 28% ರಷ್ಟು ಕುಟುಂಬಗಳು ಮಾತ್ರ ಪ್ರತಿ ದಿನ ಉಪಯೋಗಿಸುವುದಾಗಿ ತಿಳಿಸಿದರು. ಹೊರಗಿನ ತಿನಿಸುಗಳನ್ನು ಅತಿ ಹೆಚ್ಚು ಬಳಸಲು ಕಂಡು ಬಂದ ಮುಖ್ಯ ಕಾರಣವೇನೆಂದರೆ ಆಹಾರದ ವಿಭಿನ್ನ ರುಚಿ. ಕೆಲವು ಕುಟುಂಬದವರು ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದುದರಿಂದ ಆಹಾರ ತಯಾರಿಸಲು ಸಮಯದ ಅಭಾವದಿಂದಾಗಿ ಸಾಕಷ್ಟು ಸಲ ಹೊರಗೆ ಸಿಗುವ ಸಿದ್ಧ ಆಹಾರ ಪದಾರ್ಥಗಳ ಮೇಲೆ ಅವಲಂಬಿತರಾಗುತ್ತೇವೆಂದು ತಿಳಿಸಿದರು.

ಚಿತ್ರ 2



ಸಂಸ್ಕರಿಸಿದ ಆಹಾರ ಪದಾರ್ಥಗಳನ್ನು ಬಳಸಲು ಮುಖ್ಯವಾಗಿ ಪ್ರೇರೆಪಿಸುವ ಅಂಶಗಳ ಮಾಹಿತಿಯನ್ನು ಚಿತ್ರ ಎರಡರಲ್ಲಿ ತೋರಿಸಲಾಗಿದೆ ಶೇ ೮೦% ರಷ್ಟು ಕುಟುಂಬದವರು ತಾಯಿಯೇ

ಮುಖ್ಯವಾದ ಪ್ರೇರಕವಾದ ಅಂಶ ಎಂಬುದಾಗಿ ಅಭಿಪ್ರಾಯಪಟ್ಟರು. ಕೆಲವೇ ಕೆಲವರು ಮಾತ್ರ (ಶೇ 11% ರಷ್ಟು) ತಂದೆ ಎಂಬುದಾಗಿ ತಿಳಿಸಿದರು ಹಾಗೂ ಶೇ10% ರಷ್ಟು ಕುಟುಂಬದವರು ಬಾಹ್ಯ ಪ್ರೇರಕ ಅಂಶಗಳಾದ ಸ್ನೇಹಿತರು ಹಾಗೂ ನೆರೆಹೊರೆಯವರಿಂದ ಉತ್ತೇಜಿತರಾಗುವುದಾಗಿ ತಿಳಿಸಿದರು. ಈ ಮಾಹಿತಿಯಿಂದ ಮುಖ್ಯವಾಗಿ ತಿಳಿದು ಬರುವ ಅಂಶವನೆಂದರೆ ತಾಯಿಯು ಆಹಾರಗಳನ್ನು ಕೊಂಡುಕೊಳ್ಳುವಲ್ಲಿ ಮತ್ತು ತಯಾರಿಸುವಲ್ಲಿ ಬಹುಮುಖ್ಯವಾದ ನಿರ್ಣಯಕ ಪಾತ್ರ ವಹಿಸುತ್ತಾಳೆ.

ಚಿತ್ರ 3



ಚಿತ್ರ 3ರಲ್ಲಿ ಸಂಸ್ಕರಿಸಿದ ಆಹಾರ ಪದಾರ್ಥಗಳನ್ನು ಕೊಳ್ಳವಾಗ ಗಮನಿಸುವ ಮುಖ್ಯವಾದ ಅಂಶಗಳ ಬಗ್ಗೆ ವಿವರಣೆಯನ್ನು ನೀಡಲಾಗಿದೆ ಈ ಅಧ್ಯಯನದಲ್ಲಿ ದೊರೆತ ಮಾಹಿತಿಯ ಪ್ರಕಾರ ಶೇ 22%ರಷ್ಟು ಮಹಿಳೆಯರು ಆಹಾರ ಪದಾರ್ಥಗಳನ್ನು ಕೊಳ್ಳುವಾಗ ಬೆಲೆಯನ್ನು ಗಮನದಲ್ಲಿಟ್ಟುಕೊಂಡು ಖರೀದಿಸಿವುದಾಗಿ ತಿಳಿಸಿದರು. ಶೇ 44% ರಷ್ಟು ಹಾಗೂ ಶೇ 26% ರಷ್ಟು ಮಹಿಳೆಯರು ಗುಣಮಟ್ಟ ಹಾಗೂ ವಸ್ತುವಿನ ಮುದ್ರೆಗೆ ಪ್ರಾಮುಖ್ಯತೆ ನೀಡುವುದಾಗಿ ತಿಳಿಸಿದರು. ಸಂಸ್ಕರಿಸಿದ ಆಹಾರ ಪದಾರ್ಥ ಕೊಳ್ಳುವುದು ಒಂದು ಕುಟುಂಬದ ಒಟ್ಟು ಆದಾಯದ ಮೇಲೆ ಅವಲಂಬಿತವಾಗಿರುತ್ತಿತ್ತು. ಏಕೆಂದರೆ ಅಧ್ಯಯನಕ್ಕೆ ಒಳಪಟ್ಟ ಗ್ರಾಮಾಂತರ ಮಹಿಳೆರೆಲ್ಲರೂ ಕಡಿಮೆ ಆದಾಯ ಹೊಂದಿದ ಕುಟುಂಬದಿಂದ ಬಂದವರಾಗಿದ್ದರು. ಈ ಕುಟುಂಬದವರಿಗೆ ಅವರದ್ದೇ ಆದ ಕೆಲವೊಂದು ಮಿತಿಗಳಿದ್ದು ಸಂಸ್ಕರಿಸಿದ ಆಹಾರ ಪದಾರ್ಥಗಳ ಮೇಲೆ ಅಧಿಕ ವೆಚ್ಚ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಸಹ ಇವರೆಲ್ಲರೂ ಮಾರುಕಟ್ಟೆ ಪ್ರವೇಶಿಸುವ ಪ್ರತಿಯೊಂದು ಹೊಸ ಬಗೆಯ ವಸ್ತುವನ್ನು ಖರೀದಿಸಿ ಸೇವಿಸಲು ಕುತೂಹಲ ಹಾಗೂ ಉತ್ಸುಕರಾಗಿರುವುದಾಗಿ ತಿಳಿಸಿದರು.

ಚಿತ್ರ 4



ಸಂಸ್ಕರಿಸಿದ ಆಹಾರ ಪದಾರ್ಥಗಳನ್ನು ಬಳಸುವಂತೆ ಪ್ರೇರಪಿಸಿಸುವ ವಿವಿಧ ಅಂಶಗಳ ಬಗ್ಗೆ ಚಿತ್ರ 4 ರಲ್ಲಿ ವಿವರಣೆ ನೀಡಲಾಗಿದೆ ಶೇ60% ರಷ್ಟು ಮಹಿಳೆಯರು ದೂರದರ್ಶನದಲ್ಲಿ ತೋರಿಸುವ ಜಾಹಿರಾತುಗಳಿಂದ ಪ್ರೇರಪಿತರಾಗಿ ಕೊಳ್ಳುವುದಾಗಿ ತಿಳಿಸಿದರು. ದೂರದರ್ಶನ ವೀಕ್ಷಣೆಗಾಗಿ ಈ ಮಹಿಳೆಯರು ತಮ್ಮ ದಿನದ ಬಹುಪಾಲು ಸಮಯವನ್ನು ಮೀಸಲಿಡುತ್ತಿದ್ದುದರ ಬಗ್ಗೆಯೂ ತಿಳಿಸಿದರು. ಜಾಹಿರಾತುಗಳ ಮುಖಾಂತರ ಮಾಹಿತಿಯನ್ನು ಒಬ್ಬರಿಂದ ಒಬ್ಬರಿಗೆ ತಲುಪಿಸಲು ದೂರದರ್ಶನವು ಬಹು ಮುಖ್ಯವಾದ ವಾಹಿನಿಯಾಗಿದೆ ಇನ್ನಿತರೆ ಅಂಶಗಳಾದ ಕುಟುಂಬದ ಸದಸ್ಯರು ಹಾಗೂ ಸಂಬಂದಿಗಳು ಮತ್ತು ಸಮಾನ ವಯಸ್ಕರ ಪ್ರಭಾವಕ್ಕೆ ಒಳಗಾಗುವುದಾಗಿ ಶೇ.25% ರಷ್ಟು ಹಾಗೂ ಶೇ15% ರಷ್ಟು ಮಹಿಳೆಯರು ಕ್ರಮವಾಗಿ ಅಭಿಪ್ರಾಯಪಟ್ಟರು.

ಚಿತ್ರ 5



ಸಾಮಾನ್ಯವಾಗಿ ಖರೀದಿಸಲ್ಪಡುತ್ತಿದ್ದ ಸಂಸ್ಕರಿಸಿದ ಆಹಾರ ಪದಾರ್ಥಗಳ ಬಗ್ಗೆ ಚಿತ್ರ 5 ರಲ್ಲಿ ತೋರಿಸಲಾಗಿದೆ ಶೇ 50% ರಷ್ಟು ಮಹಿಳೆಯರು ವಿವಿಧ ರೀತಿಯ ಬಿಸ್ಕತ್ತುಗಳನ್ನು ಸಾಮಾನ್ಯವಾಗಿ ಕೊಳ್ಳವುದಾಗಿ ತಿಳಿಸಿದರು. ಶೆ 28% ರಷ್ಟು ಮಹಿಳೆಯರು ಚಿಪ್ಸ್ ಮತ್ತು ವಿವಿಧ ರೀತಿಯ ಕರಿದ ಪದಾರ್ಥಗಳನ್ನು ಬಳಸುವುದಾಗಿ ತಿಳಿಸಿದರು. ಹಣ್ಣಿನ ರಸಸೇವಿಸುವ ಅಭ್ಯಾಸವಿರುವುದಾಗಿ ಶೇ12 ರಷ್ಟು ಮಹಿಳೆಯರು ತಿಳಿಸಿದರು ಕೆಲವೇ ಕೆಲವು ಮಹಿಳೆಯರು ಮಾತ್ರ (ಶೇ10% ರಷ್ಟು) ಐಸ್‌ಕ್ರೀಂ ಬಳಸುವುದಾಗಿ ತಿಳಿಸಿದರು.

ಚಿತ್ರ 6



ವಿವಿಧ ರೀತಿಯ ಚಾಟ್ ಪದಾರ್ಥಗಳ ಸೇವನೆಗೆ ಸಂಬಂಧಪಟ್ಟ ಮಾಹಿತಿಯನ್ನು ಚಿತ್ರ 6ರಲ್ಲಿ ನೀಡಲಾಗಿದೆ. ದೊರೆತ ಮಾಹಿತಿಯ ಪ್ರಕಾರ ಶೇ. 9ರಷ್ಟು ಹಾಗೂ 19ರಷ್ಟು ಮಹಿಳೆಯರು ಮಸಾಲೆ

ಪುರಿಯನ್ನು ಪ್ರತಿದಿನವೂ ಹಾಗೂ ವಾರಕ್ಕೊಮ್ಮೆ ಕ್ರಮವಾಗಿ ಸೇವಿಸುತ್ತಿರುವುದಾಗಿ ಮಾಹಿತಿ ನೀಡಿದರು. ಚುರುಮುರಿ ಹಾಗೂ ಪಾನಿಪುರಿಯನ್ನು ಪ್ರತಿದಿನವು ಸೇವಿಸುವುದಾಗಿ ಶೇ. 34ರಷ್ಟು ಮಹಿಳೆಯರು ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ಹಳ್ಳಿಗಳಲ್ಲಿಯೂ ಸಹ ಚಾಟ್ ಪದಾರ್ಥಗಳನ್ನು ಮಾಡುವ ಅಂಗಡಿ ಇರುವುದನ್ನು ಕಾಣಬಹುದು. ಆದ್ದರಿಂದ ಹಳ್ಳಿ ಜನರು ಕೂಡ ಈ ರೀತಿಯ ಪದಾರ್ಥಗಳ ಸವಿಯನ್ನು ಸವಿಯಬಹುದಾಗಿದೆ. ಈ ಅಧ್ಯಯನದ ಸಮಯದಲ್ಲಿ ತಿಳಿದು ಬಂದ ಪ್ರಮುಖ ಅಂಶವೆಂದರೆ ಸರಿ ಸುಮಾರು 10 ರಿಂದ 15 ವರ್ಷಗಳಷ್ಟು ಹಿಂದೆ ಈ ರೀತಿಯ ಪದಾರ್ಥಗಳು ಹಳ್ಳಿಯಲ್ಲಿ ದೊರಕುತ್ತಿರಲಿಲ್ಲ. ಪಟ್ಟಣ ಪ್ರದೇಶಗಳಿಗೆ ಹೋದಾಗ ಮಾತ್ರ ಈ ರೀತಿಯ ಪದಾರ್ಥಗಳ ರುಚಿಯನ್ನು ನೋಡಲು ಅವಕಾಶವಿತ್ತೆಂದು ಅಭಿಪ್ರಾಯಪಟ್ಟರು.

ಚಿತ್ರ 7



ಚಿತ್ರ 7 ರಲ್ಲಿ ಜೈನೀಸ್ ಪದಾರ್ಥಗಳ ಸೇವನೆಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡಲಾಗಿದೆ. ಇದರಿಂದ ತಿಳಿದುಬಂದ ಮಾಹಿತಿ ಏನೆಂದರೆ ಶೇ. 29 ಹಾಗೂ 19ರಷ್ಟು ಮಹಿಳೆಯರು ಗೋಬಿ ಮಂಚೂರಿ ಹಾಗೂ ಫ್ರೈಡ್‌ರೈಸ್‌ನ್ನು ವಾರಕ್ಕೊಮ್ಮೆ ಕ್ರಮವಾಗಿ ಸೇವಿಸುವುದಾಗಿ ತಿಳಿಸಿದರು. ಈ ರೀತಿಯ ಪದಾರ್ಥಗಳನ್ನು ಪ್ರತಿದಿನ ಸೇವಿಸುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿತ್ತು. ಈ ಅಧ್ಯಯನದಿಂದ ತಿಳಿದುಬಂದ ಪ್ರಮುಖ ಅಂಶವೆಂದರೆ ಇದರಲ್ಲಿ ಹೆಚ್ಚಿನ ಮಹಿಳೆಯರು ಜೈನೀಸ್ ಪದಾರ್ಥಗಳ ಬದಲಾಗಿ ಬೇರೆ ರೀತಿಯ ಚಾಟ್ ಪದಾರ್ಥಗಳನ್ನು ಹೆಚ್ಚು ಹೆಚ್ಚು ಸೇವಿಸಲು ಇಷ್ಟಪಡುವುದಾಗಿ ತಿಳಿಸಿದರು. ಆದ್ದರಿಂದ ಜೈನೀಸ್ ಪದಾರ್ಥಗಳ ಸೇವನೆಯು ಹಳ್ಳಿಗಳಲ್ಲಿ ಕೂಡ ಬಹು ಜನಪ್ರಿಯತೆ ಹೊಂದಿಲ್ಲ ಎಂದು ಹೇಳಬಹುದಾಗಿದೆ.

ಚಿತ್ರ 8



ಬಹುತೇಕ (70%) ಮಹಿಳೆಯರು ಖಾರ ಸೇವೆನೆಯನ್ನು ಪ್ರತಿದಿನವು ಸೇವಿಸುವುದಾಗಿ ತಿಳಿಸಿದರು. ಹಾಗೆಯೇ ಇನ್ನಿತರ ಕರಿದ ಪದಾರ್ಥಗಳಾದ ಬಜ್ಜಿ, ಬೊಂಡ ಹಾಗೂ ಮಸಾಲೆ ವಡೆಯನ್ನು ಸೇವಿಸುವುದಾಗಿ, ಕ್ರಮವಾಗಿ ಶೇ. 50, 44 ಹಾಗೂ 57ರಷ್ಟು ಮಹಿಳೆಯರು ತಿಳಿಸಿದರು. ಸಾಂಪ್ರದಾಯಿಕವಾಗಿ ತಯಾರಿಸಲಾದ ಈ ರೀತಿಯ ಕರಿದ ಪದಾರ್ಥಗಳ ಸೇವನೆಯು ಬೇರೆ ಪದಾರ್ಥಗಳ ಸೇವನೆಗಿಂತ ಹೆಚ್ಚಾಗಿರುವುದು ಕಂಡುಬಂದಿತು. ಇದಕ್ಕೆ ಮುಖ್ಯ ಕಾರಣ ಅಂಗಡಿಯಲ್ಲಿ ಈ ಪದಾರ್ಥಗಳು ಬಹಳ ಸುಲಭವಾಗಿ ಸಿಗುತ್ತಿದ್ದುದು ಎಂದು ಹೇಳಬಹುದಾಗಿದೆ.

ಚಿತ್ರ 9



ಚಿತ್ರ 9ರಲ್ಲಿ ಬೇಕರಿ ತಿನಿಸುಗಳ ಸೇವನೆಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡಲಾಗಿದೆ. ಕ್ರಮವಾಗಿ ಶೇ, 59 ಹಾಗೂ ಶೇ. 22ರಷ್ಟು ಮಹಿಳೆಯರು ಬ್ರೆಡ್ ಮತ್ತು ಬನ್‌ಗಳನ್ನು ಪ್ರತಿದಿನವೂ ಸೇವಿಸುವುದಾಗಿ ತಿಳಿಸಿದರು. ಸಾಮಾನ್ಯವಾಗಿ ಈ ಪದಾರ್ಥಗಳನ್ನು ಬೆಳಗಿನ ಹೊತ್ತಿನ ಟೀ ಮತ್ತು ಕಾಫಿ ಜೊತೆಗೆ ತೆಗೆದುಕೊಳ್ಳುವುದಾಗಿ ತಿಳಿಸಿದರು. ಸುಮಾರು ಶೇ. 70ರಷ್ಟು ಮಹಿಳೆಯರು ಪ್ರತಿದಿನವು ಬಿಸ್ಕೆಟ್ ಸೇವೆನೆ ಮಾಡುವುದಾಗಿ ತಿಳಿಸಿದರು. ಹಾಗೂ ಶೇ. 22ರಷ್ಟು ಮಹಿಳೆಯರು ವಾರಕ್ಕೊಮ್ಮೆ ಬೇಕರಿ ತಿಂಡಿಯನ್ನು ತೆಗೆದುಕೊಳ್ಳುವುದಾಗಿ ತಿಳಿಸಿದರು. ಪಫ್ಸ್ ಅನ್ನು ಶೇ. 60ರಷ್ಟು ಮಹಿಳೆಯರು ವಾರಕ್ಕೊಮ್ಮೆ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಚಿತ್ರ 10



ವಿವಿಧ ರೀತಿಯ ಪಾನೀಯಗಳ ಸೇವನೆಗಳ ಸಂಬಂಧಪಟ್ಟ ಮಾಹಿತಿಯನ್ನು ಚಿತ್ರ 10ರಲ್ಲಿ ನೀಡಲಾಗಿದೆ. ಬಹುಪಾಲು (80%) ಮಹಿಳೆಯರು ಪ್ರತಿದಿನವು ಟೀ ಹಾಗೂ ಕಾಫಿ ಸೇವಿಸುವುದಾಗಿ

ತಿಳಿಸಿದರು. ಕಾರ್ಬೋನೈಟೆಡ್ ಪಾನೀಯಗಳನ್ನು ಶೇ.28ರಷ್ಟು ಮಹಿಳೆಯರು ತೆಗೆದುಕೊಳ್ಳುವುದಾಗಿ ತಿಳಿಸಿದರು. ಅಲ್ಲದೇ ಇವರಲ್ಲಿ ಬಹುಪಾಲು ಮಹಿಳೆಯರು ತಾಜಾ ಹಣ್ಣಿನ ರಸಗಳನ್ನು ಸೇವಿಸಲು ಇಚ್ಛಿಸುವುದಾಗಿ ತಿಳಿಸಿದರು. ಗಾಜಿನ ಬಾಟಲುಗಳಲ್ಲಿ ಹಾಗೂ ವಿವಿಧ ರೀತಿಯ ಪ್ಯಾಕೇಟ್‌ಗಳಲ್ಲಿ ಶೇಖರಿಸಿಟ್ಟ ಹಣ್ಣಿನ ರಸಗಳನ್ನು ಇಷ್ಟಪಡುವುದಿಲ್ಲವೆಂದು ಸಹ ತಿಳಿಸಿದರು.

ಪಟ್ಟಿ 1

ಆಹಾರ ಪದಾರ್ಥಗಳ ಸರಾಸರಿ ಸೇವನೆ

ಆಹಾರದ ಗುಂಪು	ಸರಾಸರಿ ಸೇವನೆ
ಧಾನ್ಯಗಳು	203.4+55.4
ಧಾನ್ಯದ ಉತ್ಪನ್ನಗಳು	10.9+31.9
ರಾಗಿ	78.1+67.6
ಕಾಳುಗಳು	55.9+20.6
ಸೊಪ್ಪುಗಳು	49.4+63.07
ಗೆಡ್ಡೆಗೆ ಗೆಣಸುಗಳು	74.7+38.9
ಇತರೆ ತರಕಾರಿಗಳು	94.8+57.3
ಹಾಲು	116.6+50.9
ಹಾಲಿನ ಉತ್ಪನ್ನಗಳು	24.5+62.3
ಅಡಿಗೆ ಎಣ್ಣೆ	26.7+6.14
ಸಕ್ಕರೆ	11.2+7.85
ಹಣ್ಣುಗಳು	91.5+50.1

ಒಂದು ದಿನಕ್ಕೆ ಸರಾಸರಿ ಸೇವಿಸುವ ವಿವಿಧ ರೀತಿಯ ಆಹಾರ ಪದಾರ್ಥಗಳ ಮೊತ್ತವನ್ನು ಪಟ್ಟಿ 1ರಲ್ಲಿ ಕೊಡಲಾಗಿದೆ. ವಿವಿಧ ರೀತಿಯ ಆಹಾರ ಪದಾರ್ಥಗಳಾದ ಧಾನ್ಯಗಳು (ಸೇವನೆಯ ಪ್ರಮಾಣ 78 ಗ್ರಾಂ) ಕಾಳುಗಳು (56 ಗ್ರಾಂ) ಸೊಪ್ಪು, (49 ಗ್ರಾಂ) ಹಾಗೂ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು (116 ಮಿ.ಮೀ ಮತ್ತು 24 ಗ್ರಾಂ) ಈ ಪ್ರಮಾಣದಲ್ಲಿ ಸೇವಿಸಲಾಗುತ್ತಿತ್ತು. ಈ ಮೊತ್ತವು ಆಹಾರ ಪದ್ಧತಿಯ ಪ್ರಮಾಣದ ಶಿಫಾರಸಿನಲ್ಲಿ ಸೂಚಿಸಿರುವುದಕ್ಕಿಂತ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬಂದಿತು. ಧಾನ್ಯಗಳು ಅಧಿಕ ಪ್ರಮಾಣದ ಪೋಷಕಾಂಶಗಳನ್ನು ಹೊಂದಿರುತ್ತವೆ. ಈ ರೀತಿಯ ಪದಾರ್ಥಗಳನ್ನು ಪ್ರತಿದಿನ ಸೇವಿಸುತ್ತಿರುವುದರಿಂದ ವಿವಿಧ ರೀತಿಯ ಸೊಂಕು ಹಾಗೂ ಕಾಯಿಲೆಗಳಿಂದ ರಕ್ಷಣೆ ಪಡೆಯಲು ಸಹಾಯಕವಾಗುತ್ತದೆ. ಹಸಿರು ಸೊಪ್ಪುಗಳಲ್ಲಿ ಅಧಿಕ ಪ್ರಮಾಣದ ಕಬ್ಬಿಣಾಂಶ, ಕ್ಯಾಲ್ಸಿಯಂ ಹಾಗೂ ನಾರಿನಂಶವು ಇರುವುದರಿಂದ ಇವುಗಳನ್ನು ಅಗತ್ಯ ಪ್ರಮಾಣದಲ್ಲಿ ತೆಗೆದುಕೊಳ್ಳುವುದು ಬಹಳ ಅವಶ್ಯಕ.

ಪಟ್ಟಿ 2

ಪೋಷಕಾಂಶಗಳ ಸರಾಸರಿ ಸೇವನೆಯ ಪ್ರಮಾಣ

ಪೋಷಕಾಂಶಗಳು	ಸೇವಿಸಿದ ಪ್ರಮಾಣ
ಪ್ರೋಟೀನ್	48.5+12.2
ಕೊಬ್ಬು	32.4+16.1
ನಾರಿನಾಂಶ	16.7+13.2
ಎನರ್ಜಿ	202.+642
ಕ್ಯಾಲ್ಸಿಯಂ	507.3+187.3
ಕಬ್ಬಿಣಾಂಶ	18.7+10.7
ಥಯಾಮಿನ್	1.39+1.18
ರೈಬೋಪ್ಲೀವಿನ್	1.39+1.18
ನಯಾಸಿನ್	11.33+5.15
ಸಿ	36.2+14.3

ಅಧ್ಯಯನದಲ್ಲಿ ಭಾಗವಹಿಸಿದ ಮಹಿಳೆಯರ ಸಂಖ್ಯೆ (500) ಸರಾಸರಿ ಪೋಷಾಕಾಂಶಗಳ ಸೇವನೆಯು ಪ್ರಮಾಣದ ವಿವರಣೆಯನ್ನು ಪಟ್ಟಿ 2ರಲ್ಲಿ ನೀಡಲಾಗಿದೆ. ಪ್ರೋಟಿನ್‌ಗಳು, ಶಕ್ತಿವರ್ಧಕ ಪೋಷಕಾಂಶ, ಕ್ಯಾಲ್ಸಿಯಂ, ಕಬ್ಬಿಣಾಂಶ ಹಾಗೂ ಅನ್ನಾಂಗ ಸಿಯ ಸೇವನೆಯು ಆಹಾರ ಪದ್ಧತಿಯ ಪ್ರಮಾಣದ ಶಿಫಾರಸ್ಸಿನಲ್ಲಿ ಸೂಚಿಸಿರುವುದಕ್ಕಿಂತ ಕಡಿಮೆಯಾಗಿ ಸೇವಿಸುತ್ತಿದ್ದುದು ಕಂಡುಬಂದಿತು. ಥಯಾಮಿನ್ ಮತ್ತು ಕೊಬ್ಬಿನಂಶವನ್ನು ಅಧಿಕ ಪ್ರಮಾಣದಲ್ಲಿ ಸೇವಿಸುತ್ತಿರುವುದು ಕಂಡುಬಂದಿತು. ಪ್ರೋಟೀನ್ ಮತ್ತು ಶಕ್ತಿವರ್ಧಕ ಪೋಷಕಾಂಶಗಳ ಸೇವೆನೆಯು ಆರೋಗ್ಯವನ್ನು ಕಾಪಾಡಿಕೊಳ್ಳಲು ಅತ್ಯಾವಶ್ಯಕ. ಅಸಮರ್ಪಕ ಸೇವನೆಯಿಂದಾಗಿ ಅಪೌಷ್ಟಿಕತೆಯು ಕಾಣಿಸಿಕೊಳ್ಳುತ್ತದೆ. ಕ್ಯಾಲ್ಸಿಯಂ ಸೇವನೆಯು ಕಡಿಮೆಯಾಗಿರುವುದರಿಂದ ಅದರ ಕೊರತೆಗೆ ಸಂಬಂಧಪಟ್ಟ ಅಸ್ವಸ್ಥತೆಗಳು ಕಾಣಿಸಿಕೊಳ್ಳುವ ಸಂಭವ ಹೆಚ್ಚಾಗುತ್ತದೆ.

ಚಿತ್ರ 11



ಆಯ್ದ ಪೋಷಕಾಂಶಗಳನ್ನು ಎಷ್ಟು ಸಮರ್ಪಕವಾದ ಮಟ್ಟದಲ್ಲಿ ಸೇವಿಸುತ್ತಿದ್ದರು ಎಂಬುದರ ಕುರಿತು ಚಿತ್ರ-11ರಲ್ಲಿ ವಿವರಣೆ ನೀಡಲಾಗಿದೆ. ಪ್ರಮುಖ ಪೋಷಕಾಂಶಗಳಾದ ಪ್ರೋಟೀನ್, ಶಕ್ತಿವರ್ಧಕ, ನಾರಿನಾಂಶ, ಕ್ಯಾಲ್ಸಿಯಂ, ಕಬ್ಬಿಣಾಂಶ ಹಾಗೂ ಅನ್ನಾಂಗಗಳಾದ ರೈಬೋಪ್ಲೇವಿನ್, ನಯಾಸಿನ್ ಹಾಗೂ ಸಿ ಅನ್ನಾಂಗದ ಸೇವನೆಯು ಆಹಾರದ ಪ್ರಮಾಣದ ಶಿಫಾರಸ್ಸಿನ ಮಟ್ಟಕ್ಕಿಂತ ಅಧಿಕವಾಗಿತ್ತು. ಕೊಬ್ಬಿನಾಂಶವುಳ್ಳ ಪದಾರ್ಥಗಳನ್ನು ಅಧಿಕ ಪ್ರಮಾಣದಲ್ಲಿ ಸೇವಿಸುವುದರಿಂದ ಬೊಜ್ಜು ಹಾಗೂ ಹೃದಯ ಸಂಬಂಧಿ ಕಾಯಿಲೆಗಳು ಉಂಟಾಗುವ ಸಂಭವ ಹೆಚ್ಚಾಗುತ್ತದೆ.

ಪಟ್ಟಿ 3

ಬೆಳೆದ ಬೆಳೆಯನ್ನು ಮಾರುವ ಹಾಗೂ ಉಳಸಿಕೊಳ್ಳುವ ಶೇಕಡವಾರು ವಿವರ

0%	3.8%
25%	2.2
50%	7.2
75%	0.6
ಉಳಸಿಕೊಳ್ಳುವವರೆ	
25	0.6
50	7.2
75	2.2
100	3.8
ಮಾರುವ ವಿಧಾನ	
ನೇರ ಗ್ರಾಹಕರು	8.4
ಹರಾಜು	1.6
ಆಹಾರ ಉಳಸಿಕೊಳ್ಳುವ ಉದ್ದೇಶ ಕುಟುಂಬದ ಬಳಕೆಗಾಗಿ	3.8
ಕುಟುಂಬದ ಬಳಕೆ ಹಾಗೂ ಮಾರುವ ಉದ್ದೇಶದಿಂದ	10

ಪಟ್ಟಿ 3 ರಲ್ಲಿ ರೈತರು ತಾವು ಬೆಳೆದ ಬೆಳೆಯನ್ನು ಮಾರುವ ಹಾಗೂ ಉಳಸಿಕೊಳ್ಳುವ ಪ್ರಮಾಣಕ್ಕೆ ಸಂಬಂಧಪಟ್ಟ ವಿವರಣೆಯನ್ನು ನೀಡಲಾಗಿದೆ. ಕೆಲವೇ ಕೆಲವು ಮಹಿಳೆಯರು (ಶೇ.38ರಷ್ಟು) ಕುಟುಂಬದವರು ಮಾತ್ರ ತಾವು ಬೆಳೆದ ಬೆಳೆಯನ್ನು ಮಾರುವುದಿಲ್ಲವೆಂದು ತಿಳಿಸಿದರು. ಆದರೆ ಶೇ.72 ಹಾಗೂ ಶೇ22ರಷ್ಟು ಮಹಿಳೆಯರು ಕ್ರಮವಾಗಿ ಬೆಳೆದದರದಲ್ಲಿ ಅರ್ಧಭಾಗ (ಶೇ.50) ಹಾಗೂ ಕಾಲುಭಾಗ (ಶೇ.25ರಷ್ಟು) ಮಾತ್ರ ಮಾರುವುದಾಗಿ ತಿಳಿಸಿದರು. ಶೇ.8.4 ರಷ್ಟು ರೈತರು ಗ್ರಾಹಕರಿಗೆ ನೇರವಾಗಿ ಮಾರುತ್ತಿದ್ದರು ಹಾಗೂ 1.6 ರಷ್ಟು ರೈತರು ಹರಾಜಿನ ಮುಖಾಂತರ ಮಾರುವುದಾಗಿ ತಿಳಿಸಿದರು.



ಚಿತ್ರ-12 ರಲ್ಲಿ ಸಾಕುಪ್ರಾಣಿಗಳ ಸಂಖ್ಯೆಯ ಕುರಿತಾದ ವಿವರಣೆಯನ್ನು ನೀಡಲಾಗಿದೆ. ಕೃಷಿ ಭೂಮಿ ಹೊಂದಿರುವಂತಹ ಮನೆಗಳಲ್ಲಿ ಮಾತ್ರ ಸಾಕು ಪ್ರಾಣಿಗಳಿರುವುದು ಕಂಡುಬಂದಿತು. ಕೋಳಿ, ಹಸು, ಕುರಿ, ಮೇಕೆ ಹಾಗೂ ಎಮ್ಮೆಯ ಸಂಖ್ಯೆಯು ಕ್ರಮವಾಗಿ ಶೇ.14%, 12.2%, 7.8%, 6% ಹಾಗೂ 0.4% ರಷ್ಟಿತ್ತು. ಈ ಪ್ರಾಣಿಗಳಿಂದ ದೊರಕುತ್ತಿದ್ದ ಉಪ ಉತ್ಪನ್ನಗಳನ್ನು ಮಾರುವುದರ ಮೂಲಕ ಆದಾಯವನ್ನು ಗಳಸುವುದಾಗಿ ತಿಳಿಸಿದರು.

ಪಟ್ಟಿ 4

ಸರ್ಕಾರದವತಿಯಿಂದ ಚಾಲನೆಯಲ್ಲಿದ್ದ ಕಲ್ಯಾಣ ಕಾರ್ಯಕ್ರಮಗಳು

ಸಾರ್ವಜನಿಕ ವಿತರಣಾ ವ್ಯವಸ್ಥೆ	
ಹೌದು	66
ಇಲ್ಲ	34
ಕಲ್ಯಾಣ ಕಾರ್ಯಕ್ರಮಕ್ಕೊಳಪಡಿಸುವವರ ಸಂಖ್ಯೆ	
ಹೌದು	43.6
ಇಲ್ಲ	56.4
ಸ್ತ್ರೀಶಕ್ತಿ	43.6
ಸಾಲಪಡಿದ ಪಾಲು	8.8
ಶೌಚಾಲಯದ ನಿರ್ಮಾಣ	11.4
ಮನೆ ನಿರ್ಮಾಣ	7.6

ಪಟ್ಟಿ 4 ರಲ್ಲಿ ಸರ್ಕಾರದವತಿಯಿಂದ ನಾವು ಅಧ್ಯಯನಕ್ಕೆಂದು ಆಯ್ದುಕೊಂಡ ಹಳ್ಳಿಗಳಲ್ಲಿ ಪ್ರಸ್ತುತ ಚಾಲನೆಯಲ್ಲಿರುವ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಅಧ್ಯಯನಕ್ಕೊಳಪಟ್ಟ ಒಟ್ಟು ಸಂಖ್ಯೆಯಲ್ಲಿ ಶೇ66%ರಷ್ಟು ಕುಟುಂಬಗಳು ಮಾತ್ರ ಪಡಿತರ ಚೀಟಿಯನ್ನು ಹೊಂದಿದ್ದವು. ಹಾಗೂ ಇದರ ಮುಖಾಂತರ ದಿನ ಬಳಕೆಯ ವಸ್ತುಗಳಾದ ಅಕ್ಕಿ, ಸಕ್ಕರೆ, ಗೋಧಿ, ಅಡಿಗೆ ಎಣ್ಣೆ, ಉಪ್ಪು ಹಾಗೂ ಸೀಮೆಎಣ್ಣೆಯನ್ನು ರಿಯಾಯಿತಿ ದರದಲ್ಲಿ ಕೊಂಡುಕೊಳ್ಳುವುದಾಗಿ ತಿಳಿಸಿದರು. ಶೇ44ರಷ್ಟು ಮಹಿಳೆಯರು ಸ್ತ್ರೀಶಕ್ತಿ ಮಹಿಳಾ ಸಂಘದ ನೊಂದಾಯಿತ ಸದಸ್ಯರಾಗಿದ್ದಾರೆಂದು ತಿಳಿಸಿದರು. ಸಂಘದ ಸಹಾಯದಿಂದ ಸಾಲವನ್ನು ಸಹ ಪಡೆದುಕೊಳ್ಳುತ್ತಿದ್ದುದಾಗಿ ತಿಳಿಸಿದರು. ಮನೆ ಮತ್ತು ಶೌಚಾಲಯ ನಿರ್ಮಾಣಕ್ಕಾಗಿ ಸರ್ಕಾರ ದಿಂದ ಸಹಾಯ ಪಡೆದಿರುವುದಾಗಿ ತಿಳಿಸಿದರು.

ಸಮಾಪ್ತಿ

ಅಧ್ಯಯನಕ್ಕೊಳಪಡಿಸಿದ ಹಳ್ಳಿಗಳು ಕ್ರಮೇಣವಾಗಿ ಪೌಷ್ಟಿಕಾಂಶ ಪರಿವರ್ತನೆ ಹೊಂದಲು ಮೂಲ ಕಾರಣವೇನೆಂದರೆ ಮಾರ್ಪಾಡಾದ ಜೀವನ ಶೈಲಿ ಎಂಬುವುದು ತಿಳಿದು ಬಂದಿತು. ಸಂಸ್ಕರಿಸಿದ ಆಹಾರ ಪದಾರ್ಥಗಳ ಸೇವನೆಯಲ್ಲೂ ಕೂಡ ಕ್ರಮೇಣವಾಗಿ ಹೆಚ್ಚಳವಾಗಿರುವುದು ಸಹ ಕಂಡುಬಂದಿದೆ. ಸಾಕ್ಷರತೆಯ ಪ್ರಮಾಣದಲ್ಲಿ ಹೆಚ್ಚಳ, ಆದಾಯ ಪ್ರಮಾಣದಲ್ಲಿ ಏರುವಿಕೆ ಹಾಗೂ ನಗರ ಪ್ರದೇಶಗಳಿಗೆ ಹೆಚ್ಚಾದ ವಲಸೆ ಪ್ರಮಾಣಗಳು ಈ ಬದಲಾಣೆ ಗಳಿಗೆ ಪ್ರಮುಖ ಕಾರಣ ಎಂಬುದಾಗಿ ಹೇಳಬಹುದು. ಸಮಯದ ಅಭಾವದಿಂದ ಸಿದ್ಧ ಆಹಾರಗಳ ಮೇಲಿನ ಅವಲಂಬನೆಯೂ ಸಹ ಹೆಚ್ಚಾಗುತ್ತಿದೆ. ಇವುಗಳನ್ನು ಹೊರತು ಪಡಿಸಿ ಇನ್ನಿತರ ಕಾರಣಗಳೆಂದರೆ ಈ ಪದಾರ್ಥಗಳನ್ನು ಸುಲಭವಾಗಿ ತಯಾರಿಸ ಬಹುದು ಹಾಗೂ ಇದು ಹೆಚ್ಚು ರುಚಿಕರ ಮತ್ತು ಪರಿಮಳಭರಿತವಾಗಿರುವುದೇ ಇವುಗಳ ಬಳಕೆ ಹೆಚ್ಚಾಗಲು ಕಾರಣವೆಂದು ತಿಳಿಯಬಹುದು. ಸಂಸ್ಕರಿಸಿದ ವಸ್ತುಗಳ ಬಳಕೆ ಹೆಚ್ಚಾದಂತೆಲ್ಲಾ ಕೆಲವೊಂದು ಆರೋಗ್ಯ ಸಮಸ್ಯೆಗಳೂ ಕೂಡ ಹೆಚ್ಚಾಗಿ ಕಾಣಿಸಿಕೊಳ್ಳಲು ಪ್ರಾರಂಭವಾಗುತ್ತದೆ. ಅದರಲ್ಲೂ ಮುಖ್ಯವಾಗಿ ಬೊಜ್ಜಿನ ಪ್ರಮಾಣದಲ್ಲಿ ಹೆಚ್ಚಳ. ಆಹಾರ

ಅಭದ್ರತೆಯ ಅವಲೋಕನೆಯಿಂದ ತಿಳಿದು ಬಂದ ಪ್ರಮುಖ ಅಂಶಗಳೆಂದರೆ ಸೊಪ್ಪು ಮತ್ತು ಹಣ್ಣಿನ ಸೇವನೆ ಕಡಿಮೆಯಾಗಿತ್ತು. ಇವುಗಳು ಅತ್ಯಧಿಕ ಪ್ರಮಾಣದಲ್ಲಿ ಪ್ರೋಷಕಾಂಶಗಳನ್ನು ಹೊಂದಿದ್ದು ಕಡಿಮೆ ಪ್ರಮಾಣದಲ್ಲಿ ಸೇವಿಸುವುದರಿಂದ ತೀವ್ರತರವಾದ ಆರೋಗ್ಯ ಸಮಸ್ಯೆಗಳಿಗೆ ಒಳಗಾಗುವ ಸಂಭವ ಹೆಚ್ಚಾಗುವುದು. ಆದ್ದರಿಂದ ಜನಸಾಮಾನ್ಯರಲ್ಲಿ ಈ ಕುರಿತಾದ ಅರಿವನ್ನು ಮೂಡಿಸುವುದು ಅತ್ಯಾವಶ್ಯಕ ಹಾಗೂ ಸಮತೋಲಿತ ಆಹಾರವನ್ನು ಸೇವಿಸುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂಬುದರ ಬಗ್ಗೆ ಮನವರಿಕೆ ಮಾಡಿಕೂಡಬೇಕು.

ಆಧಾರಗಳು:

1. ಡೇನಿಯಲ್, ಸಿ.ಆರ್, ಪ್ರಭಾಕರನ್ ಡಿ, ಕಪೂರ್, ಕೆ, ಗ್ರಾಪ್ ಬಾಡ್ರ್ ಬಿ.ಐ, ದೇವ್‌ಸೇನಾಪತಿ ಎಸ್, ರಾಮಕೃಷ್ಣನ್ ಎಲ್, ಜಾರ್ಜ್ ಪಿ.ಎಸ್, ಶೆಟ್ಟಿ ಹೆಚ್, ಪೇರೊಸಿ. ಎಲ್.ಎಂ,ಯರ್‌ಗಾಲೆವಿಚ್ ಎಸ್, ಚಟರ್ಜಿ ಎನ್, ರೆಡ್ಡಿ ಕೆ.ಎಸ್, ರಸ್ತೋಗಿ ಟಿ, ಗುಪ್ತ ಪಿ.ಸಿ, ಮ್ಯಾಥ್ಯೂ ಎ. ಮತ್ತು ಸಿಂಹ ಆರ್.(2011) ಕ್ರಾಸ್ ಸೆಕ್ಷನಲ್ ಇನ್ವೆಸ್ಟಿಗೇಷನ್ ಆಫ್ ರೀಜಿನಲ್ ಪ್ಯಾಟರ್ನ್ ಆಫ್ ಡಯೆಟ್ ಅಂಡ್ ಕಾಡಿಯೊಮೆಟ ಬಾಲಿಕ್ ರಿಸ್ಕ ಇನ್ ಇಂಡಿಯಾ. ನ್ಯೂಟ್ರಿಷನ್ ಜರ್ನಲ್. 10:01:13

2. ಪ್ರಕೃತ್ತಿ ಬಿ.ಎಸ್, ಪ್ರಕಾಶ್ ಜೆ. (2013) ನ್ಯೂಟ್ರಿಷನಲ್ ಸ್ಟೇಟಸ್ ಆಂಡ್ ಡಯೆಟರಿ ಪ್ಯಾಟ್ರನ್ ಆಫ್ ಇಂಡಿಯಾನ್ ರೂರಲ್ ವುಮನ್ ವಿತ್ ರೆಫರೆನ್ಸ್ ಟು ಎನರ್ಜಿ ಇನ್‌ಟೇಕ್ ಆಂಡ್ ಎಕ್ಸ್‌ಪೆಂಡಿಚರ್, ಜರ್ನಲ್ ಆಫ್ ಕಮ್ಯುನೀಟಿ ನ್ಯೂಟ್ರೀಷನಲ್ ಆಂಡ್ ಹೆಲ್ತ್. 2(1.) 1-8

3. ಆಂಗ್, ಎಸ್ ಫೈಸಾರ್ಚಿಕ್ ದಿ, ಟಿ, ಚೂ ಎಚ್, ಜೆ, (2004) ಅಡಾಪಟ್ಟರ್ಸ್ ಆಫ್ ನ್ಯೂ ಫುಡ್ ಪ್ರಾಡ್‌ಕ್ಟ್ ಇನ್ ಇಂಡಿಯಾ ಮಾರ್ಕೆಟಿಂಗ್ ಇಂಟಿಲಿಜನ್ಸ್ ಅಂಡ್ ಪ್ಲಾನಿಂಗ್ 22:371-391

4. ಪಿಂಗಲಿ.ಪಿ ಖ್ವಾಜಾ ಬಯ್(2004) .ಗ್ಲೋಬಲೈಸೇಷನ್ ಆಫ್ ಇಂಡಿಯನ್ ಡಯಟ್ಸ್ ಅಂಡ್ ಟ್ರಾನ್ಸ್‌ಫಾರ್ಮೇಷನ್ಸ್ ಆಫ್ ಫುಡ್ ಸಪ್ಲೈ ಸಿಸ್ಟಮ್, ಇ.ಎಸ್.ಎ ವರ್ಕಿಂಗ ಪೇಪರ್ ನಂಬರ್ 04-05. WWW.fao.org.es.esa

5. ಶೆಟ್ಟಿ, ಪಿ.ಎಸ್(2002), ನ್ಯೂಟ್ರೀಷನ್ ಟ್ರಾನ್ಸಿಷನ್ ಇನ್ ಇಂಡಿಯಾ ಪಬ್ಲಿಕ್ ಹೆಲ್ತ್ ನ್ಯೂಟ್ರಿಷನ್, 5:175-182.

6. ಪಾಪಕಿನ್, ಬಿ.ಎಮ್.(2001) ನ್ಯೂಟ್ರಿಷನ್ ಇನ್ ಟ್ರಾನ್ಸಿಷನ್: ದ ಚೇಜಿಂಗ್ ಗ್ಲೋಬಲ್ ನ್ಯೂಟ್ರೀಷನ್ ಚಾಲೆಂಜ್, ಏಷಿಯಾ ಪೆಸಿಪಿಕ್ ಜರ್ನಲ್ ಆಫ್ ಕ್ಲಿನಿಕಲ್ ನ್ಯೂಟ್ರಿಷನ್,10:ಎಸ್ 13-ಎಸ್ 18.

7. ಪ್ರಭು , ಪಿ (2004) ಪೆಸ್ಟರ್ನ್‌ಜೈಸೇಷನ್ ಆಫ್ ಏಷಿಯನ್ ಡಯಟ್ಸ್ ಅಂಡ್ ದ ಟ್ರಾನ್ಸ್‌ಫಾರ್ಮೇಶನ್ ಆಫ್ ಫುಡ್ ಸಿಸ್ಟಮ್ :ಇಂಪ್ಲಿಕೇಷನ್ ಫಾರ್ ರೀಸರ್ಚ ಅಂಡ್ ಪಾಲಿಸಿ, ಅಗ್ರಿಕಲ್ಚರಲ್ ಅಂಡ್ ಡೆವಲಪಮೆಂಟ್ ಎಕನಾಮಿಕ್ಸ್ 4:5

8. ಶಾಪೌರಿ, ಎಸ್, ರೋಸನ್, ಎಸ್ (2007), ಗ್ಲೋಬಲ್ ಡಯೆಟ್ ಕಾಂಪೊಸಿಷನ್, ಫ್ಯಾಕ್ಟರಸ್ ಬಿಹೈಂಡ್ ದ ಚೇಂಜಸ್ ಅಂಡ್ ಇಂಪ್ಲೀಕೇಷನ್ ಆಫ್ ದಿ ನ್ಯೂ ಟ್ರೆಂಡ್ಸ್. ಫುಡ್ ಸೆಕ್ಯೂರಿಟಿ ಅಸೆಸ್‌ಮೆಂಟ್. ಜಿ.ಎಫ್.ಎ 19 ಎಕನಾಮಿಕ್ ರೀಸರ್ಚ್ ಸರ್ವೀಸ್/ಯು.ಎಸ್.ಡಿ.ಎ

9. ಉಡಿಪಿ, ಎಸ್ (2011) ಕನ್‌ಸಂಪ್ಷನ್ ಟ್ರೆಂಡ್ಸ್ ಆಫ್ ಪ್ರೋಸಸ್ಡ್ ಫುಡ್. ಪಿ.ಎಫ್.ಎನ್.ಡಿ.ಎ.ಐ ಪೈ, ಜಿ.(2011), ಪ್ರೋಸಸ್ಡ್ ಫುಡ್ ಪಿ.ಎಫ್.ಎನ್.ಡಿ.ಎ.ಐ

"ಹೈದರಾಬಾದ್ ಕರ್ನಾಟಕ ಭಾಗದ ಮಕ್ಕಳಲ್ಲಿಯ ಅಪೌಷ್ಟಿಕತೆ ತಡೆಗಟ್ಟುವಲ್ಲಿ ಮಾಧ್ಯಮಗಳ ಪಾತ್ರ"

ಸುನಿತಾ ಬಸವರಾಜ ಪಾಟೀಲ್

ಸಂಶೋಧನಾ ವಿದ್ಯಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ

ಪ್ರಸ್ತಾವನೆ: ಹಿಂದುಳಿದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಾಡುತ್ತಿರುವ ಅನೇಕ ಸಮಸ್ಯೆಗಳಲ್ಲಿ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿರುವ ಅಪೌಷ್ಟಿಕತೆ ಸಹ ಒಂದಾಗಿದೆ. ದೇಹಕ್ಕೆ ಬೇಕಾಗುವ ಪೌಷ್ಟಿಕಾಂಶಗಳು ಸರಿಯಾದ ಪ್ರಮಾಣದಲ್ಲಿ ದೊರೆಯದಿದ್ದರೆ ಉಂಟಾಗುವ ಈ ಅಪೌಷ್ಟಿಕತೆ ಹೆಚ್ಚಾಗಿ ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಕಂಡು ಬಂದಿರುವುದು ಕೆಲವು ಟಿವಿ ವಾಹಿನಿಗಳಿಂದ ಬೆಳಕಿಗೆ ಬಂದಿದೆ. ಈ ಅಪೌಷ್ಟಿಕತೆಯಿಂದಾಗಿ ಅನೇಕ ಮಕ್ಕಳ ದೇಹದ ಅಂಗಾಂಗಗಳು ಊದಿಕೊಂಡು ದೈಹಿಕ ಬೆಳವಣಿಗೆ ಕುಂಠಿತ ಗೊಳಿಸುತ್ತಿವೆ. ಹೀಗಾಗಿ ಈ ಭಾಗದಲ್ಲಿ ಇದೊಂದು ಬಹುದೊಡ್ಡ ಸಮಸ್ಯೆಯಾಗಿದೆ.

ಪ್ರಪಂಚದಲ್ಲಿ ಎಲ್ಲ ಮಕ್ಕಳು ಸಮಾನರಾಗಿರುವುದಿಲ್ಲ ಮಾನಸಿಕವಾಕ ಹಾಗೂ ದೈಹಿಕವಾಗಿ ಅನೇಕ ವ್ಯತ್ಯಾಸಗಳು ಕಂಡು ಬರುತ್ತವೆ. ಆರೋಗ್ಯವಂತ ಮಗುವಿನ ಜನನ ಆ ಕುಟುಂಬಕ್ಕೆ ಎಷ್ಟು ಮುಖ್ಯವೋ ಸಮಾಜಕ್ಕೂ ಅಷ್ಟೇ ಮುಖ್ಯ. 'ಸದೃಢವಾದ ದೇಹದಲ್ಲಿ ಸದೃಢ ಮನಸ್ಸು ಇರುತ್ತದೆ' ಹೈದರಾಬಾದ್ ಹೈದರಾಬಾದ ಕರ್ನಾಟಕದ ಅನೇಕ ಕಡೆಗಳಲ್ಲಿ ಅಪೌಷ್ಟಿಕತೆ ಎಂಬ ಮಹಾಮಾರಿ ಮಕ್ಕಳ ಬದುಕನ್ನೇ ಕಸಿದುಕೊಳ್ಳುತ್ತಿದೆ. ಆಟಿಸಂ, ಅತಿಸಾರ, ಗಳಗಂಡ ಮುಂತಾದ ರೋಗಗಳು ಮಕ್ಕಳನ್ನು ಬೆಂಬಿಡದೇ ಕಾಡುತ್ತಿವೆ. ಬಡತನ, ಅಜ್ಞಾನ, ವೈದ್ಯಕೀಯ ಸೌಲಭ್ಯ ಇಲ್ಲದ ಕಾರಣಗಳಿಂದ ಅನೇಕ ಮಕ್ಕಳಿಗೆ ಚಿಕಿತ್ಸೆ ದೊರೆಯದೇ ಇರುವುದು ಸಾವಿನ ಪ್ರಮಾಣ ಹೆಚ್ಚಾಗಲು ಒಂದು ಕಾರಣವಾಗಿರುತ್ತದೆ. ಪೋಷಕಾಂಶಗಳ ಕೊರತೆ ಅಂಗ ವಿಹೀನತೆಯನ್ನು ಉಂಟುಮಾಡುತ್ತದೆ. ಭಾರತ ಸರ್ಕಾರವು 2013 ರ ಪೆಬ್ರುವರಿ 6 ರಂದು ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮಕ್ಕೆ (ಆರ್‌ಬಿಎಸ್‌ಕೆ) ಚಾಲನೆ ನೀಡಿತು. ನವಜಾತ ಶಿಶುಗಳಿಂದ ಹಿಡಿದು 18 ವರ್ಷದ ವರೆಗಿನ ಮಕ್ಕಳಲ್ಲಿ ವಿವಿಧ ಆರೋಗ್ಯ ಸ್ಥಿತಿಗಳನ್ನು ಅಂದರೆ ಜನ್ಮಜಾತ ದೋಷಗಳು, ಕೊರತೆಗಳು, ರೋಗಗಳು. ವಿಕಲಾಂಗತೆ ಸೇರಿದಂತೆ ಬೆಳವಣಿಗೆ ಕುಂಟಿತವಾಗುವಂತಹ ಸಮಸ್ಯೆಗಳ ತಪಾಸಣೆ ಮತ್ತು ನಿರ್ವಹಣೆಯನ್ನು ಹಂತಹಂತವಾಗಿ 270 ದಶಲಕ್ಷಕ್ಕೂ ಹೆಚ್ಚು ಮಕ್ಕಳನ್ನು ಪರೀಶಿಲಿಸಲು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮಕ್ಕಳಲ್ಲಿಯ ಅಪೌಷ್ಟಿಕತೆಯನ್ನು ಗುರುತಿಸಿ ಮೊಟ್ಟ ಮೊದಲಬಾರಿಗೆ ಸುದ್ದಿ ಹೆಕ್ಕಿ ತೆಗೆದ ಟಿವಿ ವಾಹಿನಿ ಟಿವಿ9 ಆಗಿದೆ. ಇದು ಅಕ್ಟೊಬರ್ ತಿಂಗಳ 2011ರಂದು ಕರ್ನಾಟಕದಾದ್ಯಂತ ಸುದ್ದಿ ಪ್ರಸಾರಗೊಳಿಸಿತ್ತು. ಮಕ್ಕಳ ಆರೋಗ್ಯ ಸಮಸ್ಯೆಗಳನ್ನು ಅರಿತು ಇಂದು ಅನೇಕ ಪತ್ರಿಕೆ. ನಿಯತ ಕಾಲಿಕೆ ಹಾಗೂ ಟಿವಿ ವಾಹಿನಿಗಳು ಸುದ್ದಿಗಳನ್ನು ಪ್ರಸಾರಗೊಳಿಸುತ್ತಲಿವೆ.

ಪ್ರಸ್ತಾವನೆ: ಮಾನವ ವಿಕಾಸವು ಅನುವಂಶಿಯತೆ ಮತ್ತು ಪರಿಸರ ಪ್ರಭಾವದಿಂದ ಉಂಟಾಗುವ ಒಂದು ಪ್ರಕ್ರಿಯೆ. ಪರಿಸರದ ಪ್ರಭಾವ ಶಾಲಿ ಅಂಶಗಳೆಂದರೆ ಆಹಾರ, ಆರೋಗ್ಯ, ಆಟ ಮತ್ತು ವ್ಯಾಯಾಮ ಇವುಗಳು ಅನುವಂಶಿಕತೆಯ ಬೆಳವಣಿಗೆಗೆ ಒಂದು ಮೇರೆಯನ್ನು ಹಾಕಿದರೆ ಪರಿಸರವು ಬೇಳವಣಿಗೆಯನ್ನು ಕುಂಠಿತ ಅಥವಾ ಅಭಿವೃದ್ಧಿಗೋಳಿಸಬಹುದು.

ಜಗತ್ತಿನಲ್ಲಿರುವ ಜನರನ್ನು ಗಮನಿಸಿದಾಗ ಅವರೆಲ್ಲಾ ಒಂದೇ ತೆರನಾಗಿರದೇ ಅಗಾಧ ವ್ಯತ್ಯಾಸ ಹೊಂದಿರುವುದು ನಮಗೆ ಕಂಡು ಬರುತ್ತದೆ. ಯಾವುದೇ ಎರಡು ಮಕ್ಕಳು ಎಲ್ಲ ದೃಷ್ಟಿಯಲ್ಲಿಯೂ ಒಂದೇ ರೀತಿಯಾಗಿರುವುದಿಲ್ಲ. ಕೆಲವರು ಎತ್ತರವಾಗಿದ್ದರೆ ಇನ್ನು ಕೆಲವರು ಕುಳ್ಳರಾಗಿರುತ್ತಾರೆ. ಕೆಲವರು ಸ್ಥೂರದ್ರೂಪಿಗಳಾಗಿದ್ದರೆ ಇನ್ನು ಕೆಲವರು ಕುರೂಪಿಗಳಾಗಿರುತ್ತಾರೆ. ಮಕ್ಕಳ ಎತ್ತರ, ದೇಹ–ದಾರ್ಢ್ಯತೆ, ಬಣ್ಣ, ಕಣ್ಣಿನ ರಚನೆ, ಮೂಗಿನ ಮಾಟ, ಕೈಕಾಲುಗಳ ಉದ್ದ ಇತ್ಯಾದಿ ಶಾರೀರಿಕ ಲಕ್ಷಣಗಳ ಪರಸ್ಪರ ವ್ಯತ್ಯಾಸವಾಗಿರುವುದನ್ನು ಕಾಣುತ್ತೇವೆ. ಅದೇ ರೀತಿ ಮಾನಸಿಕ ಸಾಮರ್ಥ್ಯಗಳಾದ ಬುದ್ಧಿಶಕ್ತಿ, ಕಲಿಕೆಯಲ್ಲಿಯ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ಸ್ಮರಣಶಕ್ತಿ, ವಿಚಾರವಂತಿಕೆ ಇತ್ಯಾದಿಗಳಲ್ಲಿಯೂ ವ್ಯತ್ಯಾಸಗಳನ್ನು ಕಾಣುತ್ತೇವೆ. ಇದಕ್ಕೆ ಅನುವಂಶಿಯತೆ ಕಾರಣವಾಗಿರುವುದರ ಜೋತೆಗೆ ಮಗು ಬೆಳೆದಂತಹ ಪರಿಸರವು ಕಾರಣವಾಗುತ್ತದೆ. ಮಕ್ಕಳಲ್ಲಿ ಇಂದು ಇಂತಹ ಅನೇಕ ಹೊಸ ಹೊಸ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ. ಇದಕ್ಕೆ ಕಾರಣ ಮಕ್ಕಳ ಅಪೌಷ್ಟಿಕತೆ.

ಒಂದು ಕುಟುಂಬಕ್ಕೆ ಆರೋಗ್ಯವಂತಹ ಮಗುವಿನ ಜನನ ಎಷ್ಟು ಮುಖ್ಯವೋ ಅದೇ ರೀತಿ ಸಮಾಜಕ್ಕೂ ಅಷ್ಟೆ ಮುಖ್ಯ. ಮಗುವಿನ ದೈಹಿಕ ಹಾಗೂ ಚಲನಾತ್ಮಕ ಬೆಳವಣಿಗೆಯಲ್ಲಿ ಪ್ರಮುಖ ಮೈಲುಗಲ್ಲುಗಳೆಂದರೆ, ಗೋಣು/ಕತ್ತು ನಿಲ್ಲುವುದು, ಬೋರಲಾಗಿ ಮಲಗುವುದು, ಮೊದಲ ಹೆಜ್ಜೆಗಳು ಮತ್ತು ಮೊದಲ ನುಡಿಗಳು, ಮಕ್ಕಳಿಂದ ಮಕ್ಕಳಿಗೆ ಬೆಳವಣಿಗೆಯ ಮೈಲುಗಲ್ಲುಗಳನ್ನು ತಲುಪುವಲ್ಲಿ ವ್ಯತ್ಯಾಸವಿದ್ದರೂ ಸಹ ಬೆಳವಣಿಗೆಯ ನಿರ್ದಿಷ್ಟ ಮಾದರಿಯಲ್ಲಿ ನಡೆಯುತ್ತದೆ. ಮಕ್ಕಳ ಬೆಳವಣಿಗೆಗೆ ಅನಕೂಲವಾಗುವ ಸಮೃದ್ಧಯುತವಾದ ವಾತಾವರಣ ಮಕ್ಕಳಲ್ಲಿ ಹುದುಗಿರುವ ಸಾಮರ್ಥ್ಯವನ್ನು ಹೊರಗಿಡಲು ಅನುವುಮಾಡಿಕೊಡಬಹುದು. ಇಲ್ಲವಾದಾಗ ಅವಕಾಶ ವಂಚಿತ ವಾತಾವರಣ ಬೆಳವಣಿಗೆಯ ಅಭಿವೃದ್ಧಿಯ ಗತಿಯನ್ನು ಕುಂಠಿತಗೊಳಿಸುತ್ತದೆ.

ಸರಿಯಾದ ಪ್ರಮಾಣದಲ್ಲಿ ಒಳ್ಳೆಯ ಆಹಾರವನ್ನು ಸೇವಿಸದೆ ಇರುವುದರಿಂದ ಬರುವ ತೊಂದರೆಗೆ /ರೋಗಕ್ಕೆ ಅಪೌಷ್ಟಿಕತೆ ಎನ್ನುತ್ತಾರೆ. ದೇಹಕ್ಕೆ ಬೇಕಾದ ಪೌಷ್ಟಿಕಾಂಶಗಳು ಸರಿಯಾದ ಪ್ರಮಾಣದಲ್ಲಿ ದೊರೆಯದಿದ್ದರೆ ಅಪೌಷ್ಟಿಕತೆ ಉಂಟಾಗುತ್ತದೆ.

ಚಿಕ್ಕಂದಿನಲ್ಲಿನ ಬೆಳವಣಿಗೆಯ ನಂತರ ಬೆಳವಣಿಗೆಗಿಂತ ಹೆಚ್ಚು ಮಹತ್ವ ಚಿಕ್ಕವಯಸ್ಸಿನಲ್ಲಿ ರೂಪಿತಗೊಳ್ಳುವ ಮಕ್ಕಳ ನಡುವಳಿಕೆಗಳು ಅವರ ಮುಂದಿನ ವ್ಯಕ್ತಿತ್ವ ವಿಕಾಸದ ಮೇಲೆ ಅಚ್ಚಳಿಯದ ಪ್ರಭಾವ ಬೀರುತ್ತದೆ. ಬಾಲ್ಯದಲ್ಲಿ ಮೆದುಳು ಮತ್ತು ದೇಹವು ಅತೀ ಬೆಳೆಯುತ್ತದೆ. ನವಜಾತ ಶಿಶು ತನ್ನ ಸುತ್ತಮುತ್ತಲಿನ ಸಂವೇದನೆಗಳಿಂದ ಉತ್ತೇಜಿತವಾಗುತ್ತದೆ. ನಮ್ಮ ದೇಶದಲ್ಲಿ ಸಾಂಪ್ರದಾಯಿಕ ಮನೋಭಾವನೆಯುಳ್ಳ ಗ್ರಾಮೀಣ ಮಹಿಳೆಯರು ಸೂಕ್ತ ಬೆಳವಣಿಗೆಗೆ ಪ್ರಶಸ್ತವಾದ ಪರಿಸರ ಕಲ್ಪಿಸುವಲ್ಲಿ ಅಸಮರ್ಥರಾಗಿದ್ದಾರೆ. ಕಾರಣವೆನೆಂದರೆ (ಏಕೆಂದರೆ) ಅನಕ್ಷರತೆ, ಬಡತನ, ಅಜ್ಞಾನಗಳು ಅಲ್ಲದೆ, ತಾಯಂದಿರಲ್ಲಿ ಬೇರೂರಿರುವ ಮಕ್ಕಳು ತಮ್ಮಷ್ಟಕ್ಕೆ ತಾವೇ ಬೆಳೆಯುತ್ತಾರೆ. ಅವರಿಗೆ ಯಾವುದೇ ಸುಕ್ತ ಪರಿಸರ ನಿರ್ಮಾಣ ಅಗತ್ಯವಿಲ್ಲವೆಂಬ ಮನೋಭಾವನೆ.

ಆರೋಗ್ಯವಂತ ಶಿಶು ಸಮಾಜದ ಸಂಪತ್ತು. ಈ ಬೆಳೆಯುವ ಸಿರಿಯನ್ನು ಮೊಳಕೆಯಲ್ಲೇ ಜೋಪಾನ ಮಾಡಿ ಸದೃಢವಾಗಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ. ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಆಹಾರ ನೀಡುವುದ ನಮ್ಮ ಆದ್ಯ ಕರ್ತವ್ಯ. ಪೌಷ್ಟಿಕಾಂಶಯುಳ್ಳ ಆಹಾರ ಪದಾರ್ಥಗಳನ್ನು ಸೇವಿಸದಿದ್ದರೆ ಶರೀರವು ಸಾಮಾನ್ಯವಾದ ರೀತಿಯಲ್ಲಿ ಬೆಳವಣಿಗೆಯಾಗುವುದಿಲ್ಲ. ವಿವಿಧ ರೋಗಗಳಿಗು ಇದು ಕಾರಣವಾಗುತ್ತದೆ. ಪೋಷಕಾಂಶಗಳ ಕೊರತೆ ಅಂಗ ವಿಹೀನತೆಯನ್ನು ಉಂಟುಮಾಡುತ್ತದೆ.

(ಆರ್‌ಬಿಎಸ್‌ಕೆ) ಚಾಲನೆ : ಭಾರತ ಸರ್ಕಾರವು 2013 ರ ಪೆಬ್ರುವರಿ 6 ರಂದು ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮಕ್ಕೆ (ಆರ್‌ಬಿಎಸ್‌ಕೆ) ಚಾಲನೆ ನೀಡಿತು. ನವಜಾತ ಶಿಶುಗಳಿಂದ ಹಿಡಿದು 18 ವರ್ಷದ ವರೆಗಿನ ಮಕ್ಕಳಲ್ಲಿ ವಿವಿಧ ಆರೋಗ್ಯ ಸ್ಥಿತಿಗಳನ್ನು ಅಂದರೆ ಜನ್ಮಜಾತ ದೋಷಗಳು, ಕೊರತೆಗಳು, ರೋಗಗಳು. ವಿಕಲಾಂಗತೆ ಸೇರಿದಂತೆ ಬೆಳವಣಿಗೆ ಕುಂಠಿತವಾಗುವಂತಹ ಸಮಸ್ಯೆಗಳ ತಪಾಸಣೆ ಮತ್ತು ನಿರ್ವಹಣೆಯನ್ನು ಹಂತ ಹಂತವಾಗಿ 270 ದಶಲಕ್ಷಕ್ಕೂ ಹೆಚ್ಚು ಮಕ್ಕಳನ್ನು ಪರೀಶಿಲಿಸಲು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಹೈದರಾಬಾದ್ ಕರ್ನಾಟಕ ಭಾಗದ ಮಕ್ಕಳಲ್ಲಿ ಅಪೌಷ್ಟಿಕತೆ ಶಾಪವಾಗಿ ಕಾಡುತ್ತಿದೆ. ಆಟಿಸಂ, ಅತಿಸಾರ, ಗಳಗಂಡ ಮುಂತಾದ ರೋಗಗಳು ಮಕ್ಕಳನ್ನು ಬೆಂಬಿಡದೇ ಕಾಡುತ್ತಿವೆ. ಬಡತನ, ಅಜ್ಞಾನ, ವೈದ್ಯಕೀಯ ಸೌಲಭ್ಯ ಇಲ್ಲದ ಕಾರಣಗಳಿಂದ ಅನೇಕ ಮಕ್ಕಳಿಗೆ ಚಿಕಿತ್ಸೆ ದೊರೆಯದೇ ಇರುವುದು ಸಾವಿನ ಪ್ರಮಾಣ ಹೆಚ್ಚಾಗಲು ಒಂದು ಕಾರಣವಾಗಿರುತ್ತದೆ. ಅಷ್ಟೇ ಅಲ್ಲದೇ ಸಧ್ಯದ ಸರ್ಕಾರಿ ಪ್ರಾಥಮಿಕ ಆರೋಗ್ಯ ಘಟಕ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆ, ಜಿಲ್ಲಾ, ಆಸ್ಪತ್ರೆಗಳಲ್ಲಿ ಮಕ್ಕಳ ಚಿಕಿತ್ಸೆಗಾಗಿ ಸೂಕ್ತ ಸೌಲಭ್ಯ ಇಲ್ಲದೇ ಇರುವದು ಕೂಡ ಮಕ್ಕಳ ಸಾವಿಗೆ ಕಾರಣವಾಗಿರುತ್ತದೆ.

ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಾದ ಗುಲ್ಬರ್ಗ, ಯಾದಗಿರ, ರಾಯಚೂರು, ಬೀದರ, ಕೊಪ್ಪಳ ಹಾಗೂ ಬಳ್ಳಾರಿ ಈ ಎಲ್ಲಾ ಜಿಲ್ಲೆಗಳ ಪ್ರಾಥಮಿಕ ಶಾಲಾ ಮಕ್ಕಳಲ್ಲಿಯ ಅಪೌಷ್ಟಿಕತೆ ಹಾಗೂ ಇದರ ನಿವಾರಣೆಗಾಗಿ ಮಾಧ್ಯಮಗಳು

ಯಾವ ರೀತಿ ಕಾರ್ಯನಿರ್ವತ್ತಿವೆ ಎಂಬುದನ್ನು ಅಧ್ಯಾಯನ ಮಾಡಲಾಗುವುದು.

ಅಪೌಷ್ಟಿಕತೆ ಲಕ್ಷಣಗಳು:

1) ಮಗುವಿನ ಮಾಂಸಖಂಡಗಳು ಬಲಹೀನವಾಗಿ ಮಗು ತೆಳ್ಳಗಾಗುತ್ತದೆ 2) ಮಾಂಸ ಮೂಳೆಗೆ ಅಂಟಿಕೊಂಡಿರುತ್ತದೆ. 3) ಹೊಟ್ಟೆಯು ದಪ್ಪವಾಗಿ ಎದ್ದುಕಾಣುತ್ತದೆ.4) ಮಗುವಿಗೆ ಯಾವ ಚಟುವಟಿಕೆಯಲ್ಲೂ ಆಸಕ್ತಿ ಇರುವದಿಲ್ಲ. 5) ವಯಸ್ಸಿಗೆ ತಕ್ಕ ಬೆಳವಣಿಗೆ ಇರುವದಿಲ್ಲ.6) ಕೂದಲು ಕಂದುಬಣ್ಣಕ್ಕೆ ತಿರುಗುತ್ತಿರುತ್ತವೆ. 7) ತೀವ್ರ ಬಲಹೀನತೆ, ಪಾದ ಹಾಗೂ ಮುಖದಲ್ಲಿ ಊತ, ಅತಿಸಾರ, ಭೇದಿ ಕಾಣಿಸಿಕೊಳ್ಳುತ್ತಿರುತ್ತದೆ. 8) ಮಗುವಿನಲ್ಲಿ ಕಾಣಿಸಿಕೊಳ್ಳಬಹುದಾದ ತೊಂದರೆಗಳು ಮಗು ವಯಸ್ಸಿಗೆ ತಕ್ಕ ತೂಕ ಮತ್ತು ಎತ್ತರವಿರುವದಿಲ್ಲ. 9) ಮಾಸಿಕ ಬೆಳವಣಿಗೆ ಕುಂಠಿತವಾಗಿರುತ್ತದೆ. ಮಗುವಿಗೆ ಹಸಿವು ಕಡಿಮೆ ಯಾಗುವದು 10) ಮಗು ಬೇಗ ಹಾಗೂ ಬೇಗ ಆಯಾಸಗೊಳ್ಳುವದು ಇತ್ಯಾದಿ.

ಅಪೌಷ್ಟಿಕತೆಗೆ ಕಾರಣಗಳು:

1) ಬಡತನ 2) ಪೌಷ್ಟಿಕ ಆಹಾರದ ಕೋರತೆ 3) ಅನಕ್ಷರತೆ 4) ಕುಟುಂಬ ಯೋಜನೆಯ ವೈಫಲ್ಯ 5) ಗರ್ಭಿಣಿಯರಿಗೆ ಆರೋಗ್ಯದ ಕುರಿತು ಸೂಕ್ತ ಮಾಹಿತಿ ಕೋರತೆ 6) ರಾಸಾಯನಿಕ ಗೊಬ್ಬರಗಳು ಹಾಗೂ ಕ್ರಿಮಿ ಕೀಟನಾಶಗಳ ಬಳಕೆ 7) ಆಹಾರದ ನಿರ್ಲಕ್ಷತೆ 8) ಕಲುಷಿತ ಕುಡಿಯುವ ನೀರು 9) ಗರ್ಭಿಣಿಯರ ಆರೋಗ್ಯ ಸೇವಾ ಸೌಲಭ್ಯಗಳ ಕೋರತೆ 10) ಅಸಮರ್ಪಕ ಸರ್ಕಾರಿ ಯೋಜನೆಗಳು.

ಮಕ್ಕಳಲ್ಲಿಯ ಅಪೌಷ್ಟಿಕತೆಯನ್ನು ಗುರುತಿಸಿ ಮೊಟ್ಟ ಮೊದಲ ಬಾರಿಗೆ ಸುದ್ದಿ ಹೆಕ್ಕಿ ತೆಗೆದ ಟಿವಿ ವಾಹಿನಿ ಟಿವಿ9 ಆಗಿದೆ. ಇದು ಅಕ್ಟೊಬರ್ ತಿಂಗಳ 2011ರಂದು ಕರ್ನಾಟಕದಾದ್ಯಂತ ಸುದ್ದಿ ಪ್ರಸಾರಗೊಳಿಸಿತ್ತು. ಮಕ್ಕಳ ಆರೋಗ್ಯ ಸಮಸ್ಯೆಗಳನ್ನು ಅರಿತು ಇಂದು ಅನೇಕ ಪತ್ರಿಕೆ. ನಿಯತ ಕಾಲಿಕೆ ಹಾಗೂ ಟಿವಿ ವಾಹಿನಿಗಳು ಸುದ್ದಿಗಳನ್ನು ಪ್ರಸಾರಗೊಳಿಸುತ್ತಲಿವೆ.

- 'ಜನಪದ' ನಿಯತಕಾಲಿಕೆ ಜನವರಿ 2013ರ ಸಂಚಿಕೆ
- 'ಕುಟುಂಬ ವಾರ್ತೆ' ನಿಯತಕಾಲಿಕೆ ಸೆಪ್ಟೆಂಬರ್ 2012ರ ಸಂಚಿಕೆ
- ವಿಜಯವಾಣಿ ಪತ್ರಿಕೆ ಗುಲ್ಬರ್ಗ ಸ್ಥಾನಿಕ ಸುದ್ದಿ ಪ್ರಕಟಣೆ 25/8/2014

"ದೈಹಿಕ ಬೆಳವಣಿಗೆಗೆ ಪೌಷ್ಟಿಕ ಆಹಾರ ಅಗತ್ಯ"

- ಸಂಯುಕ್ತ ಕರ್ನಾಟಕ ಪತ್ರಿಕೆ ಗುಲ್ಬರ್ಗ ಸ್ಥಾನಿಕ ಸುದ್ದಿ ಪ್ರಕಟಣೆ 25/8/2014

"ಮಕ್ಕಳ ಅನ್ನಕ್ಕೂ ಕನ್ನ, ಹಸು, ಎಮ್ಮೆ ಪಾಲಾದ ಪೌಷ್ಟಿಕ ಆಹಾರ"– ಎನ್.ಎಂ.ಬಸವರಾಜ

- ಕನ್ನಡ ಪ್ರಭ ಪತ್ರಿಕೆ ಬೈಟು ಕಾಫಿ ಪುರವಣೆ ಸುದ್ದಿ ಪ್ರಕಟಣೆ 25/8/2014

" ಪೌಷ್ಟಿಕಾಂಶಗಳ ಕೋರತೆ ಸಮಸ್ಯೆ ತಾರದೆ"

ಆಹಾರ ಪೋಷಣೆಯು ಆರೋಗ್ಯವಾಗಿರುವದಕ್ಕೆ ಬೇಕಾದ ಮೂಲ ಅಂಶಗಳಲ್ಲಿ ಒಂದಾಗಿದ್ದು ಉತ್ತಮ ಪೋಷಣೆಗೆ ವಿವಿಧ ಆಹಾರಗಳ ಸೇವನೆ ಅಗತ್ಯ. ನ್ಯೂನ್ಯ ಪೋಷಣೆಯು ಆಹಾರ ಸೇವನೆಯ ಗುಣಮಟ್ಟ ಮತ್ತು ಪ್ರಮಾಣವು ಸರಿಯಾಗಿಲ್ಲವೆಂದು ತೋರಿಸುತ್ತದೆ. ನ್ಯೂನ್ಯ ಪೋಷಣೆಯ ತೀವ್ರ ಪರಿಣಾಮವು ಶರೀರದ ಸ್ಥಿತಿ ಮತ್ತು ಸೋಂಕು ರೋಗಗಳ ಮೇಲೆ ಅವಲಂಬಿತವಾಗಿರುತ್ತದೆ. ಸದರಿ ತೀವ್ರತೆಯು ಮಾನವನ ದೈಹಿಕ, ಮಾನಸಿಕ ಮತ್ತು ಇತರೆ ಬೆಳವಣಿಗೆಗಳ ಮೇಲೆ ನಿಸ್ಸಂದೆಹವಾಗಿ ಹಾನಿಕಾರಿಕ ಪರಿಣಾಮ ಬೀರುತ್ತದೆ.

ಮಕ್ಕಳ ಹಕ್ಕುಗಳ ಒಡಂಬಡಿಕೆಯು ನಾಗರಿಕ ಮತ್ತು ರಾಜಕೀಯ ಹಕ್ಕುಗಳಲ್ಲದೆ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಹಕ್ಕುಗಳನ್ನೊಳಗೊಂಡಂತೆ ಮಾನವ ಹಕ್ಕುಗಳನ್ನು ಪೂರ್ಣ ಪ್ರಮಾಣದಲ್ಲಿ ಅಳವಡಿಸುವ ನ್ಯಾಯಬದ್ಧವಾದ ಮೊದಲ ಅಂತರಾಷ್ಟ್ರೀಯ ಸಾಧನವಾಗಿದೆ. ಮಕ್ಕಳ ಹಕ್ಕುಗಳು ಯಾವವು ಮತ್ತು ಅವುಗಳನ್ನು ಹೇಗೆ ಉಪಯೋಗಿಸಬೇಕು ಹಾಗೂ ಸಾಧಿಸಬೇಕು ಎಂದು ತಿಳಿದುಕೊಂಡು, ಪೋಷಕರು ಮತ್ತು ಶಿಕ್ಷಕರು ಈ ಕುರಿತು

ಅಪೌಷ್ಟಿಕತೆ ಕಾರ್ಯಕ್ರಮ ಬಿಂಬಿಸುವಲ್ಲಿ ಲಭ್ಯವಾದ ಟಿವಿ ವಾಹಿನಿಯ ವಿವರ:

ಟಿವಿ ಮಾಧ್ಯಮದಲ್ಲಿ ಪ್ರಸಾರಗೊಂಡ ಕಾರ್ಯಕ್ರಮಗಳು:

ಕ್ರಮ ಸಂಖ್ಯೆ	ವಾಹಿನಿ ಹೆಸರು	ದಿನಾಂಕ/ ತಿಂಗಳು	ಸ್ಥಳದ ಹೆಸರು	ಸುದ್ದಿಯ ಶಿರ್ಷಿಕೆ
1	ಟಿ.ವಿ9 ಕನ್ನಡ	ಅಕ್ಟೋಬರ್ 17,2011	ರಾಯಚೂರ	
2	"	ಸೆಪ್ಟೆಂಬರ್ 22,232011	ರಾಯಚೂರ	ನಮ್ಮೂರ(ಅನ್ನಾ ಅನ್ನಾ ಅನ್ನಾ)
3	"	ಡಿಸೆಂಬರ್6, 2012	ರಾಯಚೂರ	
4	"	ಅಕ್ಟೋಬರ್ 14,2011	ರಾಯಚೂರ	
5	"	ಅಕ್ಟೋಬರ್ 31,2011	ರಾಯಚೂರ	ಪುಕ್ಕಸಟ್ಟೆ ಫೂಡ್
6	"	ಮಾರ್ಚ 3,2014	ರಾಯಚೂರ	

ಅದೇ ರೀತಿ ಮುದ್ರಣ ಮಾಧ್ಯಮದಲ್ಲಿಯೂ ಕೆಲವೊಂದು ಸುದ್ದಿಗಳು ಪ್ರಕಟಣೆಗೊಂಡಿವೆ.

- ಎನ್ಆರ್ಎಚ್ಎಂ ವಾರ್ತಾ ಪತ್ರ ಜುಲೈ –ಅಗಸ್ಟ್ 2013ರ ಸಂಚಿಕೆ

ಹೇಳುವದು ಮುಖ್ಯ ಕರ್ತವ್ಯವಾಗಿದೆ. ಸಮಾಜ, ಸರ್ಕಾರ, ಪೋಷಕರು, ಶಿಕ್ಷಕರು, ಎಲ್ಲರೂ ಸೇರಿ ಭಾರತದ ಮುಂದಿನ ಪಿಳಿಗೆಗೆ ಉಜ್ವಲವಾದ ಮತ್ತು ಹೆಚ್ಚು ಅರ್ಥಪೂರ್ಣವಾದ ಭವಿಷ್ಯ ನಿರ್ಮಿಸಲು ಶ್ರಮಿಸಬೇಕಾಗುತ್ತದೆ ಎಂದು ಅಧ್ಯಯನದಿಂದ

ತಿಳಿದುಕೊಳ್ಳಬಹುದು.

ಸಮಾರೋಪ:

ಸಾಮಾನ್ಯವಾಗಿ ತೂಕ ಕಡಿಮೆಯಾಗಿ ಹುಟ್ಟಿದ ಮಕ್ಕಳ ಸಂಖ್ಯೆ ಶೇ.25 ರಿಂದ 30 ಇದೆ. ಪ್ರಪಂಚದಲ್ಲಿ ಹುಟ್ಟಿದ್ದ ಪ್ರತಿ ಮೂರು ಕಡಿಮೆ ತೂಕ ಮಕ್ಕಳಲ್ಲಿ ಕನಿಷ್ಠ ಒಂದು ಮಗು ಭಾರತದಾಗಿರುತ್ತದೆ. 2500 ಗ್ರಾಂ ತೂಕಕ್ಕಿಂತ ಕಡಿಮೆ ಇದ್ದಲ್ಲಿ ಕಡಿಮೆ ತೂಕ ಮಗುವೆಂದು ಕರೆಯುತ್ತಾರೆ. 1500 ಗ್ರಾಂ ತೂಕ ಇದ್ದರೆ ಅತೀ ಕಡಿಮೆ ತೂಕದ ಮಗುವೆಂದು ಮತ್ತು ಸಾವಿರ ಗ್ರಾಂ ತೂಕ ಇದ್ದರೆ ಅತೀ ಸೂಕ್ಷ್ಮ ಕಡಿಮೆ ತೂಕದ ಮಗುವೆಂದು ಕರೆಯುತ್ತಾರೆ. ಗರ್ಭಾವಸ್ಥೆಯಲ್ಲಿರುವಾಗ ಉತ್ತಮ ಆಹಾರ ಸೇವನೆ ಮಾಡಬೇಕು. ತಾಯಿ ಮತ್ತು ಮಗುವಿನ ಬೆಳವಣಿಗೆಗೆ ಹೆಚ್ಚಿನ ಪ್ರಮಾಣದ ಆಹಾದ ಅವಶ್ಯಕತೆ ಇರುತ್ತದೆ. ಆದ್ದರಿಂದ ಎರಡು ಪಟ್ಟು ಆಹಾರ ತೆಗೆದುಕೊಳ್ಳಬೇಕು. ಸ್ಥಳೀಯವಾಗಿ ಸೀಗುವ ಎಲ್ಲ ಆಹಾರ ಪದಾರ್ಥಗಳನ್ನು ಉಪಯೋಗಿಸಬೇಕು. ಅಂಗನವಾಡಿಯಲ್ಲಿ ಕೊಡುವ ಪೂರಕ ಆಹಾರ ತೆಗೆದುಕೊಂಡು ಉಪಯೋಗಿಸಬೇಕು. ಆಹಾರ ಪದ್ದತಿಯಲ್ಲಿ ಕೆಲವೊಂದು ಮೂಢ ನಂಬಿಕೆಗಳನ್ನು ಅನುಸರಿಸ ಬಾರದು. ಎಲ್ಲಾ ತರಹದ ಆಹಾರವನ್ನು ಸೇವಿಸಬೇಕು. ಕಡಿಮೆ ತೂಕದ ಮಗುವನ್ನು ಮನೆಯಲ್ಲಿಯೇ ನಿರ್ವಹಣೆ ಮಾಡಬಹುದು. ಆದರೆ ಅತೀ ಕಡಿಮೆ ತೂಕ ಇರುವ ಮಕ್ಕಳನ್ನು ಆಸ್ಪತ್ರೆಗೆ ಕಳುಹಿಸಬೇಕು. ಮಕ್ಕಳ ಆರೋಗ್ಯ ಬಗ್ಗೆ ಪೋಷಕರು ಸದಾ ಜಾಗೃತಿ ವಹಿಸಬೇಕು. ಸರ್ಕಾರದ ಹಲವಾರು ಯೋಜನೆಗಳ ಜೋತೆ ಜನರ ಕೈಜೋಡಿಸಿದಾಗ ಮಾತ್ರ ಮಕ್ಕಳನ್ನು ನಾವು ಸಂರಕ್ಷಿಸಬಹುದು. ಆರೋಗ್ಯವಂತ ಸಮಾಜ ಕಟ್ಟಬಹುದು.

ಗ್ರಂಥಋಣ

- ಎನ್‌ಆರ್‌ಎಚ್‌ಎಂ ವಾರ್ತಾ ಪತ್ರ ಜುಲೈ –ಅಗಸ್ಟ್ 2013ರ ಸಂಚಿಕೆ ಸಂಪಾದಕರು, 409 ಡಿ, ನಿರ್ಮಾಣ ಭವನ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ನವದೆಹಲಿ–110 011
- 'ಜನಪದ' ನಿಯತಕಾಲಿಕೆ ಜನವರಿ 2013ರ ಸಂಚಿಕೆ ಪ್ರಕಾಶಕರು ನಿರ್ದೇಶಕರು, ವಾರ್ತಾ ಇಲಾಖೆ #17, ಮಹಾವೀರ ರಸ್ತೆ, ಬೆಂಗಳೂರು–560001
- 'ಕುಟುಂಬ ವಾರ್ತೆ' ನಿಯತಕಾಲಿಕೆ ಸೆಪ್ಟೆಂಬರ್ 2012ರ ಸಂಚಿಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ ಬೆಂಗಳೂರು–9

'ಆಟಿಸಂ' ಮಕ್ಕಳ ಲಾಲನೆ ಪಾಲನೆ –ಡಾ.ಟೋನಿ ಆಟ್‌ವುಡ್ ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು– 560 001

- 'ಶೈಕ್ಷಣಿಕ ಮನೋವಿಜ್ಞಾನ' – ಎನ್.ಬಿ.ಕೊಂಗವಾಡ ಪ್ರಕಾಶಕರು –ಜಯದೇವ ಮೈ.ಮೆಣಸಗಿ, ನಾಗರಾಜ ಮೈ. ಮೆಣಸಗಿ ವಿದ್ಯಾನಿಧಿ ಪ್ರಕಾಶನ–ಸ್ಟೇಶನ್ ರೋಡ, ಮಹೇಂದ್ರಕರ ಸರ್ಕಲ್ ಹತ್ತಿರ, ಗದಗ–582 101
- ಅಂತರ್ಜಾಲ
- www.wfp.org/hunger/malnutrition
- En.wikipedia.org/wiki/ malnutrition
- www.medicalnewstoday.com
- newscoverage malnutritionintv9.com
- www.wfp.org/hunger/malnutrition
- newscoverage malnutritionimedia.com

ಅಪೌಷ್ಟಿಕತೆ ಮಕ್ಕಳ ಆಯ್ದ ಚಿತ್ರಗಳು

ವರ್ತನೆಯ ಮೇಲೆ ಆಹಾರ ತಂತ್ರಜ್ಞಾನದ ಪ್ರಭಾವ

*ರಶ್ಮಿ.ಎಂ.**ಡಾ. ಗೋಪಾಲಕೃಷ್ಣ.ಆರ್.

*ಸಹಾಯಕ ಪ್ರಾಧ್ಯಾಪಕಿ ಹಾಗೂ ಸಂಶೋಧನಾರ್ಥಿ, ಮನಃಶಾಸ್ತ್ರ ವಿಭಾಗ, ಮಹಾರಾಣಿ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಮಹಿಳಾ ಕಾಲೇಜು, ಶೇಷಾದ್ರಿ ರಸ್ತೆ, ಬೆಂಗಳೂರು. ** ಸಂಶೋಧನಾ ಮಾರ್ಗದರ್ಶಕರು, ಸಹ ಪ್ರಾಧ್ಯಾಪಕರು, ಮನಃಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಆಹಾರವು ಜೀವನದ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ಯಾವುದೇ ಜೀವಿಗೆ ಆಹಾರವು ಶಕ್ತಿಯ ಮೂಲ. ನಾವು ಸೇವಿಸುವ ಆಹಾರದ ಗುಣಮಟ್ಟ ಹಾಗೂ ಬಗೆ ಪ್ರಮುಖ ಪಾತ್ರ ವಹಿಸುತ್ತದೆ. ಹಸಿರು ಕ್ರಾಂತಿ ಹಾಗೂ ಜೈವಿಕ ತಂತ್ರಜ್ಞಾನದ ಅವಿಷ್ಕಾರಗಳು ನಾವು ಸೇವಿಸುವ ಆಹಾರದ ಬಗೆ ಹಾಗೂ ಗುಣಮಟ್ಟದ ಮೇಲೆ ಅಪಾರ ಪ್ರಭಾವ ಬೀರಿವೆ. ಹಾಗೆಯೇ, ಆಹಾರ ತಂತ್ರಜ್ಞಾನದ ಬಳಕೆಯು ಜನರ ಜೀವನ ಶೈಲಿ ಹಾಗೂ ಆಹಾರ ಕ್ರಮದಲ್ಲಿ ಗಣನೀಯ ಬದಲಾವಣೆಯನ್ನು ತಂದಿದೆ. ಮಾನವನ ವರ್ತನೆಯ ಮೇಲೆ ಆಹಾರ ತಂತ್ರಜ್ಞಾನವು ಬೀರುವ ಪರಿಣಾಮಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನವೇ ಈ ಲೇಖನ. ಆಹಾರ ಕ್ರಮ, ಜೀವನಶೈಲಿಯಲ್ಲಿನ ಬದಲಾವಣೆಗಳು ಮತ್ತು ವ್ಯಕ್ತಿಗಳ ಆರೋಗ್ಯ ಹಾಗೂ ವರ್ತನೆಯ ಮೇಲೆ ಆಹಾರ ತಂತ್ರಜ್ಞಾನದ ಪರಿಣಾಮದ ಬಗ್ಗೆ ಈ ಲೇಖನವು ತಿಳಿಸುತ್ತದೆ.

ಆಹಾರ ಸಂಸ್ಕರಣ ಪ್ರಕ್ರಿಯೆಯನ್ನು ಆಹಾರ ತಯಾರಿಕೆಯಲ್ಲಿ ವೈಜ್ಞಾನಿಕವಾಗಿ ಅನ್ವಯಿಸುವ ಆಹಾರ ವಿಜ್ಞಾನದ ಒಂದು ಶಾಖೆಯೇ ಆಹಾರ ತಂತ್ರಜ್ಞಾನ. ಸರಳ ಪದಗಳಲ್ಲಿ ಆಹಾರ ಸಂಸ್ಕರಣೆಯನ್ನು ವ್ಯಾಖ್ಯಾನಿಸುವುದಾದರೆ: ಕಚ್ಚಾ ಆಹಾರ ಪದಾರ್ಥಗಳನ್ನು ಸೇವನೆಗೆ, ಅಡುಗೆಗೆ ಹಾಗೂ ಸಂಗ್ರಹಣೆಗೆ ಯೋಗ್ಯಗೊಳಿಸುವ ಪ್ರಕ್ರಿಯೆಯೇ ಆಹಾರ ಸಂಸ್ಕರಣೆ. ಕಚ್ಚಾ ಪದಾರ್ಥಗಳನ್ನು ಆಹಾರವಾಗಿ ಅಥವಾ ಆಹಾರವನ್ನು ವಿವಿಧ ರೂಪಗಳಿಗೆ ಪರಿವರ್ತಿಸುವ ವಿಧಾನಕ್ಕೆ ಆಹಾರ ಸಂಸ್ಕರಣೆ ಎನ್ನಬಹುದು. ಆಹಾರ ಸಂಸ್ಕರಣೆಯಲ್ಲಿ ಸಾಮಾನ್ಯವಾಗಿ ಶುದ್ಧ, ಕಟಾವು ಮಾಡಿದ ಬೆಳೆ ಅಥವಾ ಪಶು ಉತ್ಪನ್ನಗಳನ್ನು ಬಳಸಿ ಆಕರ್ಷಕ, ಮಾರಾಟಯೋಗ್ಯ ಹಾಗೂ ದೀರ್ಘಕಾಲ ಸಂಗ್ರಹಣೆಗೆ ಯೋಗ್ಯವಾದ ಆಹಾರೋತ್ಪನ್ನಗಳನ್ನು ತಯಾರಿಸಲಾಗುತ್ತದೆ.

ಆಹಾರ ಸಂಸ್ಕರಣೆಯು ಇತ್ತೀಚಿನ ತಂತ್ರಜ್ಞಾನವೇನಲ್ಲ. ಇಂದಿನ ಅತ್ಯಾಧುನಿಕ ವಿಧಾನಗಳಲ್ಲದಿದ್ದರೂ ಇತರ ರೂಪಗಳಲ್ಲಿ ಆಹಾರ ಸಂಸ್ಕರಣೆಯು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿತ್ತು. ಪ್ರಾಣಿವಧೆ, ಹುಳಿಗೊಳಿಸುವಿಕೆ, ಸೂರ್ಯಕಿರಣಗಳ ಮೂಲಕ ಆಹಾರವನ್ನು ಒಣಗಿಸುವುದು, ಉಪ್ಪನ್ನು ಬಳಸಿ ಆಹಾರವನ್ನು ಸಂರಕ್ಷಿಸಿಡುವುದು, ಸುಡುವುದು, ಬೇಯಿಸುವುದು, ಗೂಡೊಲೆ ಬಳಸುವುದು ಹಾಗೂ ಹೊಗೆಯಿಂಪ ಅಡುಗೆ ಮಾಡುವ ವಿಧಾನಗಳು ಆಹಾರ ಸಂಸ್ಕರಣೆಯ ವಿವಿಧ ರೂಪಗಳು.

ಆಹಾರ ತಂತ್ರಜ್ಞಾನ ಕ್ಷೇತ್ರದ ಪ್ರಾರಂಭಿಕ ಹಂತದ ಸಂಶೋಧನೆಯು ಆಹಾರ ಸಂರಕ್ಷಣೆಯ ಮೇಲೆ ಹೆಚ್ಚು ಕೇಂದ್ರೀಕೃತವಾಗಿತ್ತು. 1810ರಲ್ಲಿ ನಿಕೊಲಾಸ್ ಆಪರ್ಟ್ ಅಭಿವೃದ್ಧಿಪಡಿಸಿದ 'ಕ್ಯಾನಿಂಗ್' ಪ್ರಕ್ರಿಯೆಯು ಆಹಾರ ಸಂಸ್ಕರಣಾ ತಂತ್ರಗಳ ಮೇಲೆ ಅಪಾರ ಪರಿಣಾಮ ಬೀರಿದ ಮಹತ್ತ್ವದ ಮೈಲಿಗಲ್ಲು. 1864ರಲ್ಲಿ ಲೂಯಿ ಪ್ಯಾಸ್ಚರ್ ದ್ರಾಕ್ಷಾರಸವು ಕೆಟ್ಟುಹೋಗುವುದನ್ನು ತಡೆಯುವ ವಿಧಾನವನ್ನು ವಿವರಿಸಿ, ಆಹಾರ ತಂತ್ರಜ್ಞಾನವು ವೈಜ್ಞಾನಿಕ ನೆಲೆಗಟ್ಟನ್ನು ಕಂಡುಕೊಳ್ಳಲು ನಾಂದಿ ಹಾಡಿದನು. ಇದಲ್ಲದೆ, ಪ್ಯಾಸ್ಚರ್ ಆಲ್ಕೊಹಾಲ್, ವಿನೆಗರ್, ವೈನ್, ಬಿಯರ್‌ನ ಉತ್ಪಾದನೆ ಹಾಗೂ ಹಾಲು ಹುಳಿಯಾಗುವ (ಒಡೆದು ಹೋಗುವ) ಬಗ್ಗೆ ಸಂಶೋಧನೆ ಕೈಗೊಂಡನು. ಹಾಲನ್ನು ಮತ್ತು ಹಾಲಿನ ಉತ್ಪನ್ನಗಳನ್ನು ಬಿಸಿ ಮಾಡಿ ಅವುಗಳು ಹುಳಿಯಾಗುವುದನ್ನು ತಡೆಯುವ ಹಾಗೂ ರೋಗಜನ್ಯ ಸೂಕ್ಷ್ಮಜೀವಿಗಳನ್ನು ಕೊಲ್ಲುವ ವಿಧಾನ "ಪ್ಯಾಸ್ಚರೀಕರಣ"ವನ್ನು ಅಭಿವೃದ್ಧಿಪಡಿಸಿದನು.

ಹಿಂದೆ ಗ್ರಾಹಕರು ಆಹಾರ ತಂತ್ರಜ್ಞಾನದ ಬಗ್ಗೆ ಹೆಚ್ಚು ಪ್ರಾಮುಖ್ಯತೆ ನೀಡಿರಲಿಲ್ಲ. ಆದರೆ ಈಗ ಆಹಾರ ತಂತ್ರಜ್ಞಾನವು ಆಹಾರದಷ್ಟೇ ವೈವಿಧ್ಯಮಯ. ಹೈಟೆಕ್ ಯುರೋಪ್ ಪ್ರಾಜೆಕ್ಟ್ ಎಂಬ ಯೋಜನೆಯಡಿ ನಡೆಸಿದ ಅಧ್ಯಯನದ ಪ್ರಕಾರ ಜನ ನವೀನ ಹಾಗೂ ಆಧುನಿಕ ಆಹಾರ ತಂತ್ರಜ್ಞಾನಕ್ಕಿಂದ ಸಾಂಪ್ರದಾಯಿಕ ಆಹಾರ ತಂತ್ರಜ್ಞಾನವನ್ನೇ ಹೆಚ್ಚು ಒಪ್ಪಿಕೊಂಡಿದ್ದಾರೆ. ಮೊದಮೊದಲು ಆಹಾರವು ಕೇವಲ ಶಕ್ತಿಯ ಮೂಲ ಎಂಬ ನಂಬಿಕೆಗೆ ಸೀಮಿತವಾಗಿತ್ತು. ಆದರೆ ಈಗ ಅದು ಸಂವೇದನಾತ್ಮಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಗತಿಯಾಗಿದೆ. ಆಹಾರ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಅಪಾರ ಪ್ರಗತಿಯು ಆಹಾರದ ವೈವಿಧ್ಯತೆಯನ್ನು ಹೆಚ್ಚಿಸಿದ್ದು, ಇದು ಗ್ರಾಹಕರ ಆರೋಗ್ಯ ಹಾಗೂ ವರ್ತನೆಯ ಮೇಲೆ ಪರಿಣಾಮ ಬೀರಿದೆ. (ಯುರೋಪಿಯನ್ ಆಹಾರ ಮಾಹಿತಿ ಪರಿಷತ್)

ಖಾದ್ಯಗಳಿಗೆ ಬಣ್ಣ ಮೂಡಿಸಲು ಬಳಸಲಾಗುವ ಟಾಟ್ರಜೈನ್ ಹಾಗೂ ಸನ್‌ಸೆಟ್ ಯೆಲ್ಲೋ ಎಂಬ ಪದಾರ್ಥಗಳು ಮನುಷ್ಯನ ದೇಹದಲ್ಲಿರುವ ಸತುವಿನ ಪ್ರಮಾಣವನ್ನು ಕುಗ್ಗಿಸುತ್ತವೆ ಎಂಬುದು ತಿಳಿದುಬಂದಿದೆ. (ವಾಡ್, ಎನ್.ಐ. ಮತ್ತು ಇತರರು). ಪೌಷ್ಟಿಕ ಆಹಾರದ ಆಯ್ಕೆಯ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವುದರಿಂದ ಹಾಗೂ ದೀರ್ಘಾವಧಿಯಲ್ಲಿ ಆರೋಗ್ಯಕರ ಸೇವನಾ ಹವ್ಯಾಸವನ್ನು ಅಳವಡಿಸಿ ಕೊಳ್ಳುವುದರಿಂದ ಸ್ಮರಣ ಸಾಮರ್ಥ್ಯದ ಮೇಲೆ ಸಕಾರಾತ್ಮಕ ಪರಿಣಾಮವುಂಟಾಗಿ, ವಿದ್ಯಾರ್ಥಿಯು ಶೈಕ್ಷಣಿಕ ವಿಷಯಗಳನ್ನು ಗ್ರಹಿಸಿಕೊಳ್ಳುವ ಹಾಗೂ ನೆನಪಿನಲ್ಲಿಟ್ಟುಕೊಳ್ಳುವ ಸಾಮರ್ಥ್ಯ ವೃದ್ಧಿಸುತ್ತದೆ ಎಂಬುದು ಸಂಶೋಧನೆಯಿಂದ ದೃಢಪಟ್ಟಿದೆ (ನೋಕ್ಸ್ ಸಿ ಮತ್ತು ಇತರರು 1998). ಪ್ಯಾಸ್ಚರೀಕರಣ, ಆಟೋಕ್ಲೇವೇಷನ್, ಒಣಗಿಸುವಿಕೆ, ಲವಣೀಕರಣ ಮುಂತಾದ ತಂತ್ರಜ್ಞಾನಗಳು ಆಹಾರದ ಮೂಲ ಪೋಷಕಾಂಶಗಳನ್ನು ಮಾರ್ಪಡಿಸುತ್ತವೆ. ಮಿಲ್ಲಿಂಗ್, ಸೆಂಟ್ರಿಫ್ಯುಗೇಷನ್, ಪ್ರೆಸ್ಸಿಂಗ್ ಮುಂತಾದ ಬೇರ್ಪಡಿಸುವಿಕೆಯ ವಿಧಾನಗಳು ಆಹಾರದಲ್ಲಿ ಹಿಟ್ಟು, ಎಣ್ಣೆಗಳು, ಹಣ್ಣಿನ ರಸಗಳು ಮುಂತಾದ ಪದಾರ್ಥಗಳನ್ನು ಪಡೆಯಲು ಅನುವು ಮಾಡಿಕೊಟ್ಟಿದ್ದು, ಫ್ಯಾಟಿ ಆಸಿಡ್‌ಗಳು, ಅಮೈನೋ ಆಸಿಡ್‌ಗಳು, ವಿಟಮಿನ್‌ಗಳು ಹಾಗೂ ಮಿನರಲ್‌ಗಳನ್ನೂ ಆಹಾರದಿಂದ ಬೇರ್ಪಡಿಸಿಬಿಡುತ್ತವೆ. ಹೀಗಾಗಿ, ಈ ರೀತಿಯ ಬೃಹತ್ ಪ್ರಮಾಣದ ಉತ್ಪಾದನೆಯಿಂದ ಆಹಾರದಲ್ಲಿರುವ ಪೋಷಕಾಂಶಗಳು ಮಾರ್ಪಟ್ಟು, ಹಲವು ಪೋಷಕಾಂಶಗಳು ಆಹಾರದಲ್ಲೇ ಉಳಿಯಲು, ಇನ್ನು ಕೆಲವು

ಆಹಾರದಿಂದ ಬೇರ್ಪಡಲು ಎಡೆಮಾಡಿಕೊಡುತ್ತದೆ.

ಸಂಸ್ಕರಿತ ಆಹಾರವು ಮಾನವ ಕುಲಕ್ಕೆ ಆಹಾರ ತಂತ್ರಜ್ಞಾನ ಕ್ಷೇತ್ರವು ನೀಡಿದ ಕೊಡುಗೆಗಳಲ್ಲಿ ಒಂದು. ಮಾರುಕಟ್ಟೆಯಲ್ಲಿ ಇಂದು ಲಭ್ಯವಿರುವ ವೈವಿಧ್ಯಮಯ ಸಂಸ್ಕರಿತ ಆಹಾರಗಳು ಜನರನ್ನು ಸುಲಭವಾಗಿ ಆಕರ್ಷಿಸುತ್ತವೆ. ಗ್ರಾಹಕಸ್ನೇಹಿ ಪ್ರಮಾಣಗಳಲ್ಲಿ ದೊರೆಯುವ ಈ ಸಂಸ್ಕರಿತ ಆಹಾರಗಳಿಗೆ ಬಡವ-ಬಲ್ಲಿದರಾದಿಯಾಗಿ ವಿವಿಧ ಸಾಮಾಜಿಕ-ಆರ್ಥಿಕ ಸ್ತರದ ಜನ ಮುಗಿಬೀಳುತ್ತಾರೆ. ಭವಿಷ್ಯವನ್ನು ರೂಪಿಸಿಕೊಳ್ಳುವ ಓಟದ ಸ್ಪರ್ಧೆಗೆ ಬಿದ್ದಿರುವ ಇಂದಿನ ಪೀಳಿಗೆಗೆ ಅಡುಗೆ ಮಾಡಿಕೊಳ್ಳಲು ಹಾಗೂ ಆಹಾರ ಸೇವಿಸಲು ಸಮಯದ ತೀವ್ರ ಅಭಾವವಿದೆ. ಕಾಲದ ಈ ಓಟದಲ್ಲಿ, ಇಂದಿನ ಪೀಳಿಗೆಯು ಸಂಸ್ಕರಿತ ಆಹಾರದ ಮೇಲೆ ಎಷ್ಟು ಅವಲಂಬಿತವಾಗಿದೆಯೆಂದರೆ ದಿನನಿತ್ಯದ ತರಕಾರಿಗಳು ಹಾಗೂ ಹಣ್ಣುಗಳ ಸ್ಥಾನವನ್ನು ಕೆಚಪ್, ಸಾಸ್, ಜ್ಯಾಮ್ ಹಾಗೂ ಹಣ್ಣಿನ ರಸಗಳು ಆಕ್ರಮಿಸಿಕೊಂಡಿವೆ. ಸುಲಭವಾಗಿ ಮತ್ತು ನೇರವಾಗಿ ಸೇವಿಸಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸಾಂಪ್ರದಾಯಿಕ ಆಹಾರಗಳನ್ನೂ ಸಹ ಸೀಲು ಮಾಡಿದ ಡಬ್ಬಗಳಲ್ಲಿ ಹಾಗೂ ಪ್ಯಾಕ್‌ಗಳಲ್ಲಿ ಒದಗಿಸಲಾಗುತ್ತಿದೆ. ಅಡುಗೆ ಹಾಗೂ ಸೇವನಾ ವಿಧಾನಗಳಲ್ಲಿ ಅಪಾರ ಬದಲಾವಣೆಗಳಾಗಿವೆ. ಸೇವಿಸಲು ಸಿದ್ಧಗೊಂಡ ಆಹಾರ (ready-to-eat food) ಇತ್ತೀಚೆಗೆ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಸಂಸ್ಕರಿತ ಆಹಾರದ ಅತಿಮುಖ್ಯ ಪ್ರಯೋಜನವೆಂದರೆ ಕೊಂಡೊಯ್ಯಲು ಹಾಗೂ ಸೇವಿಸಲು ಬಹು ಸುಲಭ. ಇದರಿಂದಾಗಿ, ವಿದೇಶಗಳಿಗೆ ಪ್ರಯಾಣ ಮಾಡುವವರು ತಮ್ಮ ಸ್ವಂತ ಊರಿನಲ್ಲಿಲ್ಲದಿದ್ದರೂ ತಮ್ಮೂರಿನ ಆಹಾರವನ್ನು ಸವಿಯಲು ಸಾಧ್ಯ. ಹಾಗೆಯೇ, ಆರೋಗ್ಯ ಪೇಯ ಪುಡಿಗಳು (health drink powders) ಹಲವು ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಜನರಿಗೆ ನೆರವಾಗುತ್ತವೆ. ಕೆಲವು ಪೌಷ್ಟಿಕಾಂಶ ಕೊರತೆಗಳಿಂದ ನರಳುತ್ತಿರುವ ಜನಕ್ಕೂ ಇದು ಸಹಕಾರಿ. ಸಂಸ್ಕರಿತ ಆಹಾರ ಮತ್ತು ದಿಢೀರ್ ಆಹಾರವು ಇಂದು ನಗರ ಜನಜೀವನದ ಹಾಸುಹೊಕ್ಕಾಗಿದೆ.

ಇತ್ತೀಚೆಗೆ "ಸಮತೋಲಿತ ಆಹಾರ" ಎಂಬ ಸಂಗತಿಯಿಂದ ಜನರ ಗಮನವು "ದೇಹದ ತೂಕ ನಿಯಂತ್ರಿಸುವ ಆಹಾರ" ಎಂಬ ವಿಚಾರದೆಡೆಗೆ ವಾಲುತ್ತಿರುವುದನ್ನು ನಾವು ಗಮನಿಸಬಹುದು. ತಾವು ಸೇವಿಸುವ ಆಹಾರದ ಬಗ್ಗೆ ಹಾಗೂ ಪ್ರಮಾಣದ ಬಗ್ಗೆ ಜನರ ಮನೋಭಾವವನ್ನೇ ಇದು ಬದಲಿಸಿದೆ. ಸಪೂರವಾಗಿಬೇಕು ಎಂಬ ಒಂದೇ ಕಾರಣದಿಂದ ಕ್ಯಾಲೊರಿಗಳ ಬಗ್ಗೆ ಚಿಂತಿಸುತ್ತಾ ಕೆಲವು ನಿರ್ದಿಷ್ಟ ಆಹಾರಗಳನ್ನೇ ಜನ ವರ್ಜಿಸುವ ಪ್ರವೃತ್ತಿ ಕಂಡುಬರುತ್ತಿದೆ.

ಸಪೂರ ಮೈಕಟ್ಟನ್ನು ಕಾಯ್ದುಕೊಳ್ಳುವ ಸ್ಪರ್ಧೆಗೆ ಬಿದ್ದಿರುವ ಜನ "ಸಮತೋಲಿತ ಆಹಾರ" ಎಂಬ ವಿಚಾರದಿಂದಲೇ ದೂರ ಸರಿಯುತ್ತಿದ್ದಾರೆ. ದೇಹಕ್ಕೆ ಅತ್ಯಗತ್ಯವಾಗಿ ಬೇಕಾಗಿರುವ ಕೊಬ್ಬು, ಸಕ್ಕರೆ ಮುಂತಾದ ಆಹಾರಾಂಶಗಳನ್ನು ಕಡೆಗಣಿಸುತ್ತಿದ್ದಾರೆ. ತಮ್ಮ ಬಾಹ್ಯ ಸೌಂದರ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಇನ್ನಿಲ್ಲದ ಪ್ರಾಮುಖ್ಯತೆ ಕೊಟ್ಟು ಅತ್ಯವಶ್ಯಕ ಆಹಾರಗಳನ್ನು ತ್ಯಜಿಸುವ ಈ ಪ್ರವೃತ್ತಿ ಹೀಗೆಯೇ ಮುಂದುವರೆದರೆ ಜನ ಗಂಭೀರವಾದ ಆರೋಗ್ಯ ಸಮಸ್ಯೆಗಳಿಗೆ ಸಿಲುಕುವ ಅಪಾಯವಿದೆ. ಅಲ್ಲದೆ, ಅಗತ್ಯ ಪೋಷಕಾಂಶಗಳನ್ನು ಒದಗಿಸುವ ಆಹಾರವನ್ನು ನೇರವಾಗಿ ಸೇವಿಸುವುದರ ಬದಲು ಪರ್ಯಾಯ ಪೋಷಣಾ ಉತ್ಪನ್ನಗಳ ಮೊರೆ ಹೋಗುತ್ತಿರುವುದು ಆತಂಕಕಾರಿ ಬೆಳವಣಿಗೆ.

ಕೆಲವು ವರ್ಷಗಳ ಹಿಂದೆ ಕೆಲವು ಋತುಮಾನಗಳಲ್ಲಿ ಮಾತ್ರ ದೊರೆಯುತ್ತಿದ್ದ ಹಣ್ಣುಗಳು ಮತ್ತು ತರಕಾರಿಗಳು ಈಗ ವರ್ಷದ ಎಲ್ಲಾ ಕಾಲದಲ್ಲೂ ದೊರೆಯುತ್ತಿರುವುದು ಮತ್ತೊಂದು ಗಮನಾರ್ಹ ಅಂಶ. ತೋಟಗಾರಿಕಾ ಕ್ಷೇತ್ರಕ್ಕೆ ಜೈವಿಕ ತಂತ್ರಜ್ಞಾನದ ಕೊಡುಗೆಯ ಫಲ ಇದು. ಆಹಾರ ತಂತ್ರಜ್ಞಾನದಲ್ಲುಂಟಾದ ಅವಿಷ್ಕಾರಗಳ ಪೂರ್ವದಲ್ಲಿ ತಮ್ಮ ಮೆಚ್ಚಿನ ಹಣ್ಣುಗಳು ಮತ್ತು ತರಕಾರಿಗಳನ್ನು ಹಾಗೂ ಅದರಿಂದ ಮನೆಯಲ್ಲಿ ಮಾಡುವ ರುಚಿಕರ ಖಾದ್ಯಗಳನ್ನು ಸವಿಯಲು ಜನ ಆ ಹಣ್ಣುಗಳು ಮತ್ತು ತರಕಾರಿಗಳು ದೊರೆಯುವ ಕಾಲಕ್ಕಾಗಿ ಕಾಯುತ್ತಿದ್ದರು. ಉದಾಹರಣೆಗೆ, ಕರಿದ ತಿಂಡಿಗಳಿಗೆ ಮಳೆಗಾಲ ಹಾಗೂ ಚಳಿಗಾಲದಲ್ಲಿ, ಸೌತೆಕಾಯಿಗಳಿಗೆ ಬೇಸಿಗೆಯಲ್ಲಿ ಬೇಡಿಕೆ ಹೆಚ್ಚಾಗಿರುತ್ತಿತ್ತು. ಆಯಾ ಕಾಲಗಳಲ್ಲಿ ಮಾತ್ರ ಆ ಆಹಾರಗಳನ್ನು ಸೇವಿಸುತ್ತಿದ್ದರು. ಆದರೆ ಈಗ ಆಹಾರ ತಂತ್ರಜ್ಞಾನ ಕ್ಷೇತ್ರದಲ್ಲಿನ ಸಂಶೋಧನೆಯ ಫಲವಾಗಿ ಬಹುತೇಕ ಹಣ್ಣು-ತರಕಾರಿಗಳು ವರ್ಷದ ಎಲ್ಲಾ ಕಾಲದಲ್ಲೂ ದೊರಕುವಂತಾಗಿದೆ. ವರ್ಷದ ಎಲ್ಲಾ ಋತುಗಳಲ್ಲೂ ಎಲ್ಲಾ ಬಗೆಯ ಆಹಾರಗಳು ಸಿಗುವಂತಾಗಿದ್ದರೂ ಜನರ ಆರೋಗ್ಯದ ಮೇಲೆ ಇದು ಬೀರಿರುವ ಪರಿಣಾಮ ಗಣನೀಯವಾದುದು. ಹಿಂದೆ ಆಯಾ ಋತುಗಳಿಗನುಗುಣವಾಗಿ ಹಣ್ಣು-ತರಕಾರಿಗಳು ದೊರೆಯುತ್ತಿದ್ದುದರಿಂದ, ನಮ್ಮ ಪಾಕವಿಧಾನಗಳೂ ಅದಕ್ಕೆ ಅನುಗುಣವಾಗಿದ್ದವು. ಹವಾಗುಣ ಮತ್ತು ದೇಹದ ಪಚನಕ್ರಿಯೆಗೆ ಅನುಗುಣವಾಗಿ ಅಡುಗೆ ಹಾಗೂ ಸೇವನಾ ವಿಧಾನಗಳು ಇದ್ದವು. ಆದರೆ ಈಗ ಯಾವುದೇ ಋತುಭೇದವಿಲ್ಲದೆ ಆಹಾರವು ದೊರೆಯುತ್ತಿರುವುದರಿಂದ ಜನರ ಸೇವನಾ ವರ್ತನೆಯಲ್ಲಿ ಅನಗತ್ಯ ಬದಲಾವಣೆಗಳಾಗಿವೆ. ಒಂದು ನಿರ್ದಿಷ್ಟ ಋತುವಿನಲ್ಲಿ ವರ್ಜಿಸಬೇಕಾದ ಆಹಾರವು ಎಲ್ಲಾ ಋತುಗಳಲ್ಲಿಯೂ ಸುಲಭವಾಗಿ ದೊರೆಯುತ್ತಿರುವುದರಿಂದ ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯವು ಹದಗೆಡುತ್ತಿದೆ. ಆಮ್ಲೀಯತೆ, ಅಜೀರ್ಣ, ಮಲಬದ್ಧತೆ, ಅಲರ್ಜಿ ಮುಂತಾದ ಆರೋಗ್ಯ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತಿದೆ. ಆಹಾರದ ಬಗೆಗಿನ ಅತಿ ಕಾಳಜಿ, ಆತುರದ ಆಹಾರ ಸೇವನೆ, ಅನಿಯಮಿತ ಹಾಗೂ ಅಕಾಲಿಕ ಆಹಾರ ಸೇವನೆ ಹಾಗೂ ಇವುಗಳಿಂದುಂಟಾಗುವ ಒತ್ತಡವು ಮಧುಮೇಹ, ಥೈರಾಯಿಡ್ ಗ್ರಂಥಿ ಸಮಸ್ಯೆಗಳು, ಮೂಲವ್ಯಾಧಿ, ಕೆಳಹೊಟ್ಟೆಯ ಸಮಸ್ಯೆಗಳು, ಚರ್ಮದ ಅಲರ್ಜಿ, ಅಸಹನೆ, ಆತ್ಮವಿಶ್ವಾಸದ ಕೊರತೆ, ಆಲಸ್ಯ, ಸಂತಾನೋತ್ಪತ್ತಿ ಸಮಸ್ಯೆ, ಹೀಗೆ ಹಲವಾರು ಜೀವನಶೈಲಿ ಸಂಬಂಧಿ ರೋಗಗಳಿಗೆ ಕಾರಣವಾಗುತ್ತಿವೆ. ಆಹಾರವೇ ಈ ಎಲ್ಲಾ ಸಮಸ್ಯೆಗಳಿಗೆ ಏಕೈಕ ಕಾರಣವಲ್ಲದಿದ್ದರೂ ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಪ್ರಭಾವ ಬೀರುವ ಅಂಶಗಳಲ್ಲಿ ಆಹಾರವು ಪ್ರಮುಖವಾದದ್ದು. ಯಾವುದೇ ಲಾಭ ಪ್ರಧಾನ ಆರ್ಥಿಕ ವ್ಯವಸ್ಥೆಯಲ್ಲಿ ಆರೋಗ್ಯ ವಿಷಯಗಳು ಸಾಮಾನ್ಯವಾಗಿ ಕಡೆಗಣಿಸಲ್ಪಡುತ್ತವೆ. ದೀರ್ಘಕಾಲ ಕೆಡದೆ ಉಳಿಯಬಲ್ಲ ಆಹಾರ ಪದಾರ್ಥಗಳ ಪರಿಣಾಮಕಾರಿ ಉತ್ಪಾದನೆಯೇ ಪ್ರಾಮುಖ್ಯತೆ ಪಡೆದುಕೊಂಡಿದೆ. ಇಡಿಯಾದ, ತಾಜಾ ಆಹಾರವು ಸಂಸ್ಕರಿತ ಆಹಾರಕ್ಕಿಂತ ಬಹುಬೇಗ ಕೆಡುತ್ತದಾದ್ದರಿಂದ ಇದರಿಂದ ಬರುವ ಲಾಭ ಕಡಿಮೆ. ಆದ್ದರಿಂದ ಸಹಜವಾಗಿಯೇ ಗ್ರಾಹಕರು ಹೆಚ್ಚು ಪೌಷ್ಟಿಕ ಆದರೆ ದುಬಾರಿಯಾದ ತಾಜಾ ಆಹಾರ ಹಾಗೂ ಕಡಿಮೆ ಪೌಷ್ಟಿಕಾಂಶವುಳ್ಳ ಆದರೆ ಅಗ್ಗದ ಬೆಲೆಯ ಸಂಸ್ಕರಿತ

ಆಹಾರ ಇವುಗಳಲ್ಲೊಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಏರ್ಪಟ್ಟಿದೆ. ಸಂಸ್ಕರಿತ ಆಹಾರವು ಖರೀದಿಸಲು, ಸಂಗ್ರಹಿಸಿಡಲು ಹಾಗೂ ಸಿದ್ಧಪಡಿಸಲು ಹೆಚ್ಚು ಅನುಕೂಲಕರವೂ, ಅಗ್ಗದ ಬೆಲೆಯನ್ನು ಹೊಂದಿರುವ ಕಾರಣದಿಂದ ಕ್ರಮೇಣ ಜಗತ್ತಿನಾದ್ಯಂತ ಸಂಸ್ಕರಿತ ಆಹಾರದ ಬಳಕೆ ಹೆಚ್ಚುತ್ತಿದೆ. ಆದರೆ ಇದು ಪೋಷಣಾ ಸಂಬಂಧಿ ಆರೋಗ್ಯ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತಿದೆ.

ಆದ್ದರಿಂದ, ಸಂಸ್ಕರಿತ ಆಹಾರವನ್ನು ಸಂಪೂರ್ಣವಾಗಿ ತ್ಯಜಿಸುವುದು ಸಾಧ್ಯವಿಲ್ಲದಿದ್ದರೂ, ಆಹಾರದಲ್ಲಿರುವ ಪೋಷಕಾಂಶಗಳಿಗೆ ಪ್ರಾಮುಖ್ಯತೆ ನೀಡಿ ಅದನ್ನು ಜಾಗರೂಕರಾಗಿ ಆಯ್ಕೆ ಮಾಡಿಕೊಳ್ಳಬೇಕೆಂಬ ಅಂಶದ ಬಗ್ಗೆ ಮನವರಿಕೆ ಮಾಡಿಕೊಡುವುದೇ ಈ ಲೇಖನದ ಉದ್ದೇಶ. ಆಹಾರದ ಬಗೆಗಿನ ಸರಿಯಾದ ಮನೋಭಾವ ಆರೋಗ್ಯಕರ ಜೀವನಶೈಲಿಗೆ ದಾರಿ ಮಾಡಿಕೊಟ್ಟು ಅನೇಕ ಆರೋಗ್ಯ ಸಮಸ್ಯೆಗಳಿಗೆ ಇತಿಶ್ರೀ ಹಾಡುವಲ್ಲಿ ಸಹಕಾರಿಯಾಗುತ್ತದೆ.

ಆಕರಗಳು:

- Santrock, "Life Span Development."
- Ward NI et al. The influence of the chemical additive tartrazine on the zinc status of hyperactive children – a doubleblind placebo-controlled study. The Journal of Nutrition 1990; 1: 51-7.
- Food Standards Agency website, 6 September 2007.
- Professor Jim Stevenson, The Guardian 6 September 2007.
- Dr Alexandra Richardson, The Guardian 8 May 2007
- Nokes C et al. The effects of iron deficiency and anaemia on mental and motor performance, educational achievement and behaviour in children: a noted bibliography. 1998 ISLI Human Nutrition Institute, Washington DC.
- "Nutrition (Meaning Of)." Nutrition N.p., n.d. Web. 13 Dec. 2013. <http://www.encyclo.co.uk/define/Nutrition>.
- Carpenter, Kenneth J. (1994). Protein and Energy: A Study of Changing Ideas in Nutrition. Cambridge University Press. ISBN 0521452090.
- Curley, S., and Mark (1990). The Natural Guide to Good Health, Lafayette, Louisiana, Supreme Publishing
- Nutrition Wikipedia, the free encyclopedia.
- Professor Alan Jackson, oral evidence 25 October 2007.
- Journal of Nutrition 2007;137: 1852-1856.
- Professor Alan Jackson, oral evidence 25 October 2007.
- Professor Eric Taylor, written evidence November 2007.

ವಯೋವೃದ್ಧರಿಗೆ ಆರೋಗ್ಯವರ್ಧಕ ಪಾನೀಯ

ಡಾ॥ ಡಿ. ಬಿ. ಪುರಾಣಿಕ

ಪ್ರಾಧ್ಯಾಪಕರು, ಹೈನು ತಾಂತ್ರಿಕ ವಿಭಾಗ, ಹೈನು ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು-560 024

Email: dbpuranik@yahoo.com

ರಾಗಿ, ಪ್ರೋಬಾಯಾಟಿಕ್, ಸಾಂದ್ರಿಕೃತ ಬೇಸನ ತಿಳಿನೀರು ಹಾಗೂ ಲ್ಯಾಕ್ಟೊಫೆರಿನ್ ಗಳನ್ನು ಉಪಯೋಗಿಸಿ, ವಯೋವೃದ್ಧರಿಗೆ ಆರೋಗ್ಯವರ್ಧಕ ಪಾನೀಯವನ್ನು ಅಭಿವೃದ್ಧಿಪಡಿಸಲಾಯಿತು. ಈ ಎಲ್ಲಾ ಜೈವಿಕ ಕಣಗಳನ್ನು ಬೇರೆ ಬೇರೆ ಪ್ರಮಾಣದಲ್ಲಿ ಪಾನೀಯದಲ್ಲಿ ಉಪಯೋಗಿಸಲಾಯಿತು. ಅಭಿವೃದ್ಧಿಪಡಿಸಿದ ಪಾನೀಯವನ್ನು ಸಣ್ಣ ಪ್ರಾಣಿಗಳಾದ ಇಲಿ (weanling rats) ಮೇಲೆ ಪ್ರಯೋಗಿಸಿದಾಗ ಅವುಗಳ ತೂಕ ಮತ್ತು ಮೂಳೆಗಳ ಸಾಂದ್ರತೆ ಹೆಚ್ಚಾಗಿರುವುದು ಕಂಡು ಬಂದಿತು. ಅದೇ ರೀತಿ ಅವುಗಳ ಆಹಾರ ಜೀರ್ಣಶಕ್ತಿ ಕೂಡ ಹೆಚ್ಚಾಗಿರುವದು ಕಂಡು ಬಂದಿತು. ಪಾನೀಯದಲ್ಲಿನ ಕ್ಯಾಲ್ಸಿಯಂ ಲವಣ ಕೂಡ ಜೈವಿಕವಾಗಿ ಲಭ್ಯವಾಗಿರುವದು ವಿಶೇಷತೆ ಈ ತರಹದ ಜೈವಿಕ ವಸ್ತುಗಳನ್ನು ಅಥವಾ ಕಣಗಳನ್ನು ಸುಲಭವಾಗಿ ಸೇರಿಸಿ, ವಯೋವೃದ್ಧರಿಗೆ ಆರೋಗ್ಯವರ್ಧಕ ಪಾನೀಯವನ್ನು ತಯಾರಿಸಬಹುದೆಂಬುದನ್ನು ಇಲಿಗಳ ಮೇಲಿನ ಪ್ರಯೋಗದಿಂದ ಸಾಬೀತುಪಡಿಸಲಾಯಿತು.

ಅಭಿವೃದ್ಧಿಪಡಿಸಿದ ಪಾನೀಯಾ ವಿವರಗಳು ಈ ಕೆಳಗಿನಂತಿವೆ. ರಾಗಿ ಮಾಲ್ಟ, ಪತಿಶತ 4, ಸಾಂಧ್ರೀಕೃವ ಮ್ಹೆ ಸಸಾರಜನಕ ಪ್ರತಿಶತ 5, ಸಕ್ಕರೆ ಪ್ರತಿಶತ 8, ಲ್ಯಾಕ್ಟೋಫೆರಿನ್ ಪ್ರತಿಶತ2, ಪ್ರೋಬಯೋಟಿಕ್ ಪ್ರತಿಶತ 3, ಮತ್ತು ಉಳಿದ 82 ಪ್ರತಿಶತ ಪಾಶ್ಚರೀಕರಿಸಿದ ಹಾಲಿನ ಜೊತೆ ಸೇರಿಸಿ ತಯಾರಿಸಬಹುದು. ಈ ಪಾನೀಯವನ್ನು ಸಾಧಾರಣ ಉಷ್ಣಾಂಶದಲ್ಲಿ ಎರಡೂ ದಿನ ಹಾಗೂ ಶೀಥಲೀಕರಿಸಿದ ಉಷ್ಣಾಂಶದಲ್ಲಿ ಏಳು ದಿನಗಳ ಕಾಲ ಕೆಡದಂತೆ ಶೇಖರಿಸಬಹುದ್.

ವಿಷಯ ಪರಿಚಯ

ವಯೋವೃದ್ಧರಲ್ಲಿ ಆಹಾರ ಪದ್ಧತಿ ವಿಭಿನ್ನವಾಗಿದ್ದು ಹೆಚ್ಚಾಗಿ ಪಾನೀಯ ರೂಪದಲ್ಲಿ ಆಹಾರವನ್ನು ಕೂಡ ಮಾಡಿದಲ್ಲಿ ಜೀರ್ಣಶಕ್ತಿಯು ವೃದ್ಧಿಯಾಗುತ್ತದೆ. ರಾಗಿ, ಸಾಂಧ್ರೀಕೃತ ಹಾಲೊಡಕು, ಜೈವಿಕ ಸುಕ್ಷಾಣು, ಲ್ಯಾಕ್ಟೋಫೆರಿನ ಹಾಗೂ ಬ್ಯಾಕ್ಟೀರಿಯೋಸಿನಗಳನ್ನು ಬಳಸಿ ವಯೋವೃದ್ಧರಿಗೆ ಆರೋಗ್ಯವರ್ಧಕ ಪಾನೀಯವನ್ನು ಅಭಿವೃದ್ಧಿಪಡಿಸಲಾಯಿತು. ಕ್ಯಾಲ್ಸಿಯಂ ಲವಣ ರಾಗಿಯಲ್ಲಿ ಹೆಚ್ಚಾಗಿದ್ದು ಇದು ವೃದ್ಧರಲ್ಲಿ ಎಲಬುಗಳ (ಮೂಳೆಗಳ) ಬೆಳವಣಿಗೆಗೆ ಸಹಾಯ ಕಾರಿಯಾಗಿದೆ. ಹಾಲೊಡಕಿನಲ್ಲಿ ಒಳ್ಳೆಯ ಗುಣಯುಕ್ತ ಸಸಾರಜನಕದ ಅಂಶವು ಹೆಚ್ಚಾಗಿದ್ದು ಇದೂ ಕೂಡ ವಯೋವೃದ್ಧರ ಬೆಳವಣಿಗೆಗೆ ಸಹಾಯಕಾರಿಯಾಗುತ್ತದೆ. ವಯೋವೃದ್ಧರ ದೇಹದಲ್ಲಿ ಜೀರ್ಣಶಕ್ತಿ ಹೆಚ್ಚಿಸುವುದಕ್ಕೆ ಜೈವಿಕ ಸುಕ್ಷಾಣು ಸೂಕ್ಷಾಣುಜೀವಿಗಳನ್ನು ಬಳಸಲಾಗಿದೆ. ಅದೇ ರೀತಿ ಕಬ್ಬಿಣದ ಅಂಶವನ್ನು ಹೆಚ್ಚಿಸಲು, ಲ್ಯಾಕ್ಟೋಫೆರಿನ್‌ನ್ನು ಬಳಸಲಾಯಿತು. ಈ ಎಲ್ಲಾ ಜೈವಿಕ ವಸ್ತುಗಳನ್ನು ಸೇರಿಸಿ ವಯೋವೃದ್ಧರಿಗೆ ಆರೋಗ್ಯವರ್ಧಕ ಪಾನೀಯವನ್ನು ತಯಾರಿಸಲಾಯಿತು.

ಸಾಮಗ್ರಿಗಳು ಮತ್ತು ಪದ್ಧತಿಗಳು

ಒಳ್ಳೆಯ ಗುಣಮಟ್ಟದ ರಾಗಿ ಮಾಲ್ಟನ್ನು ಸ್ಥಳೀಯ ಮಾರುಕಟ್ಟೆಯಿಂದ

ಖರೀದಿಸಲಾಯಿತು. ಸಾಂದ್ರೀಕೃತ ಹಾಲೋಡಕನ್ನು (70% ಸಸಾರಜನಕಯುಕ್ತ) ಮಹಾನ್ ಪ್ರೋಟೀನ, ಮಥುರಾದಿಂದ ಖರೀದಿಸಲಾಗಿದೆ. ಶುದ್ಧವಾದ ಹಾಲನ್ನು ವಿಧ್ಯಾರ್ಥಿಗಳ ಹೈನುಸ್ಥಾವರ, ಹೈನು ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರಿನಿಂದ ಪಡೆಯಲಾಯಿತು. ಲ್ಯಾಕ್ಟೋಫೆರಿನ್‌ನ್ನು ಹಾಲೊಡಕಿನಿಂದ ಬೇರ್ಪಡಿಸಲಾಯಿತು. ಎಲ್ಲಾ ಬೇರ್ಪಡಿಕೆಗಳನ್ನು ನಿಗದಿತ ಪದ್ಧತಿಗಳನ್ನು ಉಪಯೋಗಿಸಿ ಮಾಡಲಾಗಿದೆ. ಪಾನೀಯದ ಎಲ್ಲ ಇಂದ್ರಿಯ ಗುಣಗಳನ್ನು ೨ ಬಂದು ಹೆಡಾನಿಕ್ ಅಳತೆ ಉಪಯೋಗಿಸಿ ಮಾಡಲಾಗಿದೆ.

ಫಲಿತಾಂಶಗಳು ಹಾಗೂ ವಿಮರ್ಶೆ

ಈ ಸಂಶೋಧನೆಯಿಂದ ಬಂದ ಫಲಿತಾಂಶಗಳನ್ನು ಈ ವಿಭಾಗದಲ್ಲಿ ಕೊಡಮಾಡಿ ಚರ್ಚಿಸಲಾಗಿದೆ.

ವಯೋವೃದ್ಧರ ಆರೋಗ್ಯವರ್ಧಕ ಪಾನೀಯದ ಇಂದ್ರಿಯ ಗುಣಲಕ್ಷಣಗಳ ಮೇಲೆ ರಾಗಿ ಮಾಲ್ಟಿನ ವಿವಿಧ ಪ್ರಮಾಣಗಳ ಪರಿಣಾಮ

ಇಂದ್ರಿಯ ಗುಣಲಕ್ಷಣಗಳ ಮೇಲೆ ರಾಗಿ ಮಾಲ್ಟಿನ ವಿವಿಧ ಪ್ರಮಾಣಗಳ ಪರಿಣಾಮಗಳನ್ನು ಟೇಬಲ 1 ರಲ್ಲಿ ನಮೂದಿಸಲಾಗಿದೆ. 2, 4 ಮತ್ತು 6% ರಾಗಿಮಾಲ್ಟಗಳ ಪೈಕಿ 4% ರಾಗಿಮಾಲ್ಟನ್ನು ಆರೋಗ್ಯವರ್ಧಕ ಪಾನೀಯದಲ್ಲಿ ಉಪಯೋಗಿಸಿದಾಗ ಎಲ್ಲಾ ಗುಣಲಕ್ಷಣಗಳಿಗೆ ಹೆಚ್ಚಿನ ಅಂಕಗಳು ಲಭಿಸಿರುತ್ತದೆ. ಅದೇ ರೀತಿ ಪಾನೀಯದ ಒಟ್ಟಾರೆ ಸ್ವೀಕೃತಿಯಲ್ಲೂ ಕೂಡ 4% ರಾಗಿ ಮಾಲ್ಟಗೆ ಹೆಚ್ಚಿನ ಅಂಕಗಳು ಲಭಿಸಿರುವುದು ಕಂಡು ಬಂದಿತು.

ರಾಗಿ ಮಾಲ್ಟನ ಪ್ರಮಾಣ ಶೇಕಡ 4 ಕ್ಕಿಂತ ಹೆಚ್ಚಾದಂತೆ ಪಾನೀಯದ ಬಣ್ಣ, ಸುವಾಸನೆ ಹಾಗೂ ಒಟ್ಟಾರೆ ಸ್ವೀಕೃತಿಯ ಮೇಲೆ ಅಡ್ಡ ಪರಿಣಾಮ ಕಂಡು ಬಂದಿತು. ಆದ್ದರಿಂದ ವಯೋವೃದ್ಧರ ಆರೋಗ್ಯವರ್ಧಕ ಪಾನೀಯದಲ್ಲಿ 4% ರಾಗಿಮಾಲ್ಟ ಸೂಕ್ತವಾಗಿರುವುದು ಕಂಡು ಬಂದದ್ದರಿಂದ ಅದನ್ನೆ ಮುಂದಿನ ಪ್ರಯೋಗಗಳಿಗೆ ಉಪಯೋಗಿಸಲಾಯಿತು.

ಟೇಬಲ 1: ವಯೋವೃದ್ಧರ ಆರೋಗ್ಯವರ್ಧಕ ಪಾನೀಯದ ಇಂದ್ರಿಯ ಗುಣಲಕ್ಷಣಗಳ ಮೇಲೆ ರಾಗಿ ಮಾಲ್ಟಿನ ವಿವಿಧ ಪ್ರಮಾಣಗಳ ಪರಿಣಾಮ

ರಾಗಿ ಮಾಲ್ಟಿನ ಪ್ರಮಾಣ (ಶೇ.)	ಇಂದ್ರಿಯ ಗುಣಲಕ್ಷಣಗಳು			
	ಸುವಾಸನೆ	ಸಾಂದ್ರತೆ	ಬಣ್ಣ	ಒಟ್ಟಾರೆ ಸ್ವೀಕೃತಿ
0	7.12	8.00	7.00	7.30
2	7.70	8.43	7.98	7.85
4	8.02	8.67	8.13	8.30
6	7.65	8.17	7.90	7.61
ಸಿ.ಡಿ.	0.483	0.145	0.564	0.326

ವಯೋವೃದ್ಧರ ಆರೋಗ್ಯವರ್ಧಕ ಪಾನೀಯದ ಇಂದ್ರಿಯ ಗುಣಲಕ್ಷಣಗಳ ಮೇಲೆ ಹಾಲೊಡಕಿನ ಸಾಂದ್ರೀಕೃತ ಸಸಾರಜನಕದ ಪರಿಣಾಮ

ವಯೋವೃದ್ಧರ ಆರೋಗ್ಯವರ್ಧಕ ಪಾನೀಯದ ಇಂದ್ರಿಯ ಗುಣ ಲಕ್ಷಣಗಳ ಮೇಲೆ ಹಾಲೊಡಕಿನ ಸಾಂದ್ರೀಕೃತ ಸಸಾರಜನಕದ ಪರಿಣಾಮವನ್ನು ಟೇಬಲ 2 ರಲ್ಲಿ ತೋರಿಸಲಾಗಿದೆ. ಸಾಂದ್ರೀಕೃತ ಹಾಲೊಡಕಿನ ಸಸಾರಜನಕದ ಪ್ರಮಾಣವನ್ನು ಶೇ. 3, 5 ಹಾಗೂ 10 ರಂತೆ ಪ್ರಯೋಗಿಸಲಾಯಿತು. ಪರಿಣಾಮಗಳನ್ನು ಗಮನಿಸಲಾಗಿ, ಶೇಕಡ 5 ಪ್ರಮಾಣದ ಸಾಂದ್ರೀಕೃತ ಹಾಲೊಡಕನ್ನು ಪಾನೀಯದಲ್ಲಿ ಉಪಯೋಗಿಸಿದಾಗ, ಇಂದ್ರಿಯ ಗುಣಲಕ್ಷಣಗಳಾದ ಸುವಾಸನೆ, ಸಾಂದ್ರತೆ ಹಾಗೂ ಬಣ್ಣಗಳಿಗೆ ಹೆಚ್ಚಿನ ಅಂಕಗಳು ಬಂದಿದ್ದು, ಸ್ವೀಕೃತಿಗೆ ಅರ್ಹವಾದದ್ದು ಕಂಡು ಬಂದಿತು. ಅದೇ ರೀತಿ ಒಟ್ಟಾರೆ ಸ್ವೀಕೃತಿ ಕೂಡ ಅದೇ ಪ್ರಮಾಣದಲ್ಲಿ (ಶೇ. 5) ಹೆಚ್ಚಾದ ಅಂಕಗಳನ್ನು ಪಡೆದಿರುವುದು ವಿಶೇಷತೆ. ಆದ್ದರಿಂದ ಆರೋಗ್ಯವರ್ಧಕ ಪಾನೀಯದಲ್ಲಿ ಶೇಕಡ 5ರ ಪ್ರಮಾಣದಲ್ಲಿ ಸಾಂದ್ರೀಕೃತ ಹಾಲೊಡಕಿನ ಸಸಾರಜನಕವನ್ನು ಮುಂದಿನ ಪ್ರಯೋಗಗಳಿಗೆ ಉಪಯೋಗಿಸಲಾಯಿತು.

ಟೇಬಲ 2: ವಯೋವೃದ್ಧರ ಆರೋಗ್ಯವರ್ಧಕ ಪಾನೀಯದ ಇಂದ್ರಿಯ ಗುಣಲಕ್ಷಣಗಳ ಮೇಲೆ ಹಾಲೊಡಕಿನ ಸಾಂದ್ರೀಕೃತ ಸಸಾರಜನಕದ ಪರಿಣಾಮ

ಸಾಂದ್ರಿಕೃತ ಹಾಲೊಡಕಿನ ಪ್ರಮಾಣ(ಶೇ.)	ಇಂದ್ರಿಯ ಗುಣಲಕ್ಷಣಗಳು			
	ಸುವಾಸನೆ	ಸಾಂದ್ರತೆ	ಬಣ್ಣ	ಒಟ್ಟಾರೆ ಸ್ವೀಕೃತಿ
0	7.43	7.55	7.30	7.40
3	7.46	7.77	7.54	7.47
5	7.68	8.48	8.08	8.14
10	7.65	7.95	7.74	7.97
ಸಿ.ಡಿ.	0.084	0.011	0.119	0.336

ವಯೋವೃದ್ಧರ ಆರೋಗ್ಯವರ್ಧಕ ಪಾನೀಯದ ಗುಣಲಕ್ಷಣಗಳ ಮೇಲೇ ಜೈವಿಕ ಸುಕ್ಷಾಣುಗಳ ವಿವಿಧ ಪ್ರಮಾಣಗಳ ಪರಿಣಾಮ

ವಯೋವೃದ್ಧರ ಆರೋಗ್ಯವರ್ಧಕ ಪಾನೀಯದ ಗುಣಲಕ್ಷಣಗಳ ಮೇಲೇ ಜೈವಿಕ ಸುಕ್ಷಾಣುಗಳ ವಿವಿಧ ಪ್ರಮಾಣಗಳ ಪರಿಣಾಮವನ್ನು ಟೇಬಲ 3ರಲ್ಲಿ ತೋರಿಸಲಾಗಿದೆ. ಎಲ್. ಎಸಿಡೋಫಿಲಸ್ ಮತ್ತು ಬಿ. ಬಿಫಿಡಮ್ ಜೈವಿಕ ಸುಕ್ಷಾಣುಗಳನ್ನು 1:1 ಅನುಪಾತದಲ್ಲಿ, ಪಾನೀಯದಲ್ಲಿ ಶೇಕಡ 2, 3 ಹಾಗೂ 4 ಪ್ರಮಾಣದಲ್ಲಿ ಉಪಯೋಗಿಸಲಾಯಿತು. ನಂತರ ಈ ಪ್ರಮಾಣದ ಸೇರಿಸುವಿಕೆಯಿಂದ/ಉಪಯೋಗದಿಂದ ಆರೋಗ್ಯವರ್ಧಕ ಪಾನೀಯದ ಇಂದ್ರಿಯ ಗುಣಲಕ್ಷಣಗಳ ಮೇಲಿನ ಪರಿಣಾಮನ್ನು ಅಭ್ಯಸಿಸಲಾಯಿತು. ಶೇ. 2, 3 ಹಾಗೂ 4 ಜೈವಿಕ ಸುಕ್ಷಾಣು ಬಳಕೆಗಳ ಪೈಕಿ ಶೇ. 3 ಜೈವಿಕ ಸೂಕ್ಷ್ಮಾಣುಗಳ ಉಪಯೋಗದಿಂದ ಇಂದ್ರಿಯ ಗುಣಲಕ್ಷಣಗಳಾದ ಬಣ್ಣ, ಸುವಾಸನೆ, ಸಾಂದ್ರತೆ ಮುಂತಾದವುಗಳಿಗೆ ಹೆಚ್ಚು ಅಂಕಗಳು ಲಭ್ಯವಾಗಿರುವುದು ಕಂಡುಬಂದಿತು. ಒಟ್ಟಾರೆ ಸ್ವೀಕೃತಿಗೂ ಕೂಡ ಅತಿ ಹೆಚ್ಚು ಅಂಕಗಳು ಇದೇ ಪ್ರಮಾಣಕ್ಕೆ ಒದಗಿರುವದು ಕಂಡುಬಂದಿತು. ಜೈವಿಕ ಸುಕ್ಷಾಣುಗಳ ಪ್ರಮಾಣ ಹೆಚ್ಚಾದಂತೆ ಸ್ವೀಕೃತಿ ಅಂಕಗಳು ಕಡಿಮೆ ಬಂದದ್ದು ಗಮನಾರ್ಹ. ಬಹುಶ: ಪಾನೀಯದಲ್ಲಿ ಜೈವಿಕ ಸುಕ್ಷಾಣುಗಳ ಬಳಕೆ ಹೆಚ್ಚಾದಲ್ಲಿ ಆಮ್ಲಾಂಶ ಹೆಚ್ಚಗೆಯಾಗಿ, ಸ್ವೀಕೃತಿ ಅಂಕಗಳು ಕಡಿಮೆ ಬಂದಿರುವ ಸಾಧ್ಯತೆಯಿದೆ.

ಟೇಬಲ 3: ವಯೋವೃದ್ಧರ ಆರೋಗ್ಯವರ್ಧಕ ಪಾನೀಯದ ಗುಣಲಕ್ಷಣಗಳ ಮೇಲೇ ಜೈವಿಕ ಸುಕ್ಷಾಣುಗಳ ವಿವಿಧ ಪ್ರಮಾಣಗಳ ಪರಿಣಾಮ

ಜೈವಿಕ ಸುಕ್ಷಾಣುಗಳ ಪ್ರಮಾಣ(ಶೇ.)	ಇಂದ್ರಿಯ ಗುಣಲಕ್ಷಣಗಳು			
	ಸುವಾಸನೆ	ಸಾಂದ್ರತೆ	ಬಣ್ಣ	ಒಟ್ಟಾರೆ ಸ್ವೀಕೃತಿ
0	7.95	8.00	8.04	8.05
2	7.05	7.51	6.85	7.31
3	8.12	8.18	7.90	8.20
4	8.05	8.00	7.89	8.00
ಸಿ.ಡಿ.	0.084	0.315	0.119	0.336

ಆರೋಗ್ಯವರ್ಧಕ ಪಾನೀಯದಲ್ಲಿ ಸಜೀವ ಸುಕ್ಷಾಣುಗಳ ಸಂಖ್ಯೆ ಮತ್ತು ಆಮ್ಲಾಂಶದ ಮೇಲೆ ಜೈವಿಕ ಸುಕ್ಷಾಣು ಪ್ರಮಾಣದ ಪರಿಣಾಮ

ಆರೋಗ್ಯವರ್ಧಕ ಪಾನೀಯದಲ್ಲಿ ಸಜೀವ ಸುಕ್ಷಾಣುಗಳ ಸಂಖ್ಯೆ ಮತ್ತು ಆಮ್ಲಾಂಶದ ಮೇಲೆ ಜೈವಿಕ ಸುಕ್ಷಾಣು ಪ್ರಮಾಣದ ಪರಿಣಾಮಳನ್ನು ಟೇಬಲ 4 ರಲ್ಲಿ ತಿಳಿಸಲಾಗಿದೆ. ಶೇಕಡ 3ರ ಪ್ರಮಾಣದಲ್ಲಿ ಜೈವಿಕ ಸುಕ್ಷಾಣುಗಳನ್ನು ಪಾನೀಯದಲ್ಲಿ ಸೇರಿಸಿದಾಗ, 8.35 $\log_{10}$cfu/ml ನಷ್ಟು ಎಲ್. ಎಸಿಡೋಫಿಲಸ್ ಹಾಗೂ 7.81 $\log_{10}$cfu/ml ನಷ್ಟು ಬಿ. ಬಿಫಿಡಮ್ ಸಜೀವ ಜೈವಿಕ ಸುಕ್ಷಾಣುಗಳು ಪಾನೀಯದಲ್ಲಿ ಕಂಡು ಬಂದವು. ಇದಕ್ಕೆ ಅನುಗುಣವಾಗಿ ಆಮ್ಲೀಯತೆಯು 0.72%ನಷ್ಟು ದಾಖಲಾಗಿದ್ದು pH 4.54 ರಷ್ಟಿತ್ತು. ಸಜೀವ ಜೈವಿಕ ಸುಕ್ಷಾಣುಜೀವಿಗಳ ಸಂಖ್ಯೆಯಿಂದ, ಪಾನೀಯದ ಆಮ್ಲೀಯತೆಯ ಮೇಲೆ ಯಾವುದೆ ಪರಿಣಾಮ ಬೀರಿದ್ದು ತೋರಲಿಲ್ಲ.

ಟೇಬಲ 4: ಆರೋಗ್ಯವರ್ಧಕ ಪಾನೀಯದಲ್ಲಿ ಸಜೀವ ಸುಕ್ಷಾಣುಗಳ ಸಂಖ್ಯೆ ಮತ್ತು ಆಮ್ಲಾಂಶದ ಮೇಲೆ ಜೈವಿಕ ಸುಕ್ಷಾಣು ಪ್ರಮಾಣದ ಪರಿಣಾಮ

ಜೈವಿಕ ಸುಕ್ಷಾಣು ಜೀವಿಗಳ ಪ್ರಮಾಣ(ಶೇ.)	ಸಜೀವ ಸುಕ್ಷಾಣುಗಳ ಸಂಖ್ಯೆ ($\log_{10}$cfu/ml)			
	ಎಲ್. ಎಸಿಡೋಫಿಲಸ್	ಬಿ. ಬಿಫಿಡಮ್	ಆಮ್ಲಾಂಶ (ಶೇ.)	pH
0	—	—	0.69	4.75
2	7.92	7.36	0.70	4.64
3	8.35	7.81	0.72	4.54
4	8.89	8.26	0.78	4.40
ಸಿ.ಡಿ.	0.10	0.133	0.029	0.059

ಆರೋಗ್ಯವರ್ಧಕ ಪಾನೀಯ ನೀಡುವಿಕೆಯ ಮೊದಲು ಹಾಗೂ ನಂತರದಲ್ಲಿ ಇಲಿಗಳ ತೂಕ

ಆರೋಗ್ಯವರ್ಧಕ ಪಾನೀಯ ಕೊಡುವುದಕ್ಕಿಂತ ಮೊದಲು ಹಾಗೂ ನಂತರದಲ್ಲಿ ಇಲಿಗಳ ತೂಕ (ಗ್ರಾಂ. ಗಳಲ್ಲಿ) ವನ್ನು ಟೇಬಲ್ 5ರಲ್ಲಿ ನಮೂದಿಸಲಾಗಿದೆ. ಇಲಿಗಳಿಗೆ ಆರೋಗ್ಯವರ್ಧಕ ಪಾನೀಯವನ್ನು ಸತತ 4 ವಾರಗಳವರೆಗೆ ಕೊಟ್ಟು ಅವುಗಳ ತೂಕದಲ್ಲಿನ ಹೆಚ್ಚಳವನ್ನು ಅಭ್ಯಸಿಸಲಾಯಿತು. ಪರಿಪೂರ್ಣ ಆರೋಗ್ಯವರ್ಧಕ ಪಾನೀಯವನ್ನು (G2) ಕೊಟ್ಟಾಗ ಇಲಿಗಳ ತೂಕ 24 ಗ್ರಾಂ. ಗಳಿಂದ 70 ಗ್ರಾಂ. ಗಳಿಗೆ ಹೆಚ್ಚಳವಾಯಿತು. ಈ ಹೆಚ್ಚಳವು ಪ್ರಮುಖವಾಗಿ ಆರೋಗ್ಯವರ್ಧಕ ಪಾನೀಯದಲ್ಲಿನ ಸಾಂದ್ರೀಕೃತ ಹಾಲೊಡಕಿನ ಸಸಾರಜನಕ, ಜೈವಿಕ ಸೂಕ್ಷ್ಮಾಣುಗಳು ಹಾಗೂ ಲ್ಯಾಕ್ಟೋಫೆರಿನ್‌ನಂತಹ ಪ್ರಮುಖ ಜೀವಕಣಗಳು ಕಾರಣವಾಗಿರಲು ಸಾಕು.

ಟೇಬಲ್ 5: ಆರೋಗ್ಯವರ್ಧಕ ಪಾನೀಯ ನೀಡುವಿಕೆಯ ಮೊದಲು ಹಾಗೂ ನಂತರದಲ್ಲಿ ಇಲಿಗಳ ತೂಕ (ಗ್ರಾಂ. ಗಳಲ್ಲಿ)

ಆಹಾರ	ಪ್ರಾರಂಭಿಕ ತೂಕ	ವಾರಗಳು			
		1	2	3	4
CO	23	28	35.5	43.1	50
G1	22	30	39.8	48.9	65
G2	24	35	44.2	58.5	70
ಸಿ.ಡಿ.	0.197	0.189	1.585	1.384	1.056

CO: ನಿಯಂತ್ರಿತ ಆಹಾರ

G1: ರಾಗಿ ಮಾಲ್ಟಯುಕ್ತ ಆಹಾರ

G2: ರಾಗಿ ಮಾಲ್ಟ, ಸಾಂದ್ರೀಕೃತ ಹಾಲೊಡಕಿನ ಸಸಾರಜನಕ ಮತ್ತು ಜೈವಿಕ ಸುಕ್ಷಾಣುಯುಕ್ತ ಆಹಾರ

ಇಲಿಗಳ ಎಲುಬುಗಳ ತೂಕ, ಸಾಂದ್ರತೆ, ಆಹಾರ ಪರಿವರ್ತನೆಯ ಅನುಪಾತ ಹಾಗೂ ಕ್ಯಾಲ್ಸಿಯಂ ಲವಣದ ಪ್ರಮಾಣ

ಇಲಿಗಳ ಎಲುಬುಗಳ ತೂಕ, ಸಾಂದ್ರತೆ, ಆಹಾರ ಪರಿವರ್ತನೆಯ ಅನುಪಾತ ಹಾಗೂ ಕ್ಯಾಲ್ಸಿಯಂ ಲವಣದ ಪ್ರಮಾಣವನ್ನು ಟೇಬಲ್ 6ರಲ್ಲಿ ನಮೂದಿಸಲಾಗಿದೆ. ಈ ಟೇಬಲ್‌ನಿಂದ ಕಾಣಬಹುದಾದ ಅಂಶವೆಂದರೆ ಪರಿಪೂರ್ಣ ಆರೋಗ್ಯವರ್ಧಕ ಪಾನೀಯದ (G2) ಸೇವನೆಯಿಂದ ಇಲಿಗಳಲ್ಲಿ ಎಲುಬುಗಳ ತೂಕದ ಹೆಚ್ಚಳ (0.43 ಗ್ರಾಂ.), ಹೆಚ್ಚಿನ ಎಲುಬುಗಳ ಸಾಂದ್ರತೆ (2.09g/cm^3) ಹಾಗೂ ಹೆಚ್ಚಿದ ಕ್ಯಾಲ್ಸಿಯಂ ಲವಣಾಂಶ (13.74%) ಗಳನ್ನು ಕಾಣಬಹುದು. ಪುನಃ ಈ ಎಲ್ಲ ಹೆಚ್ಚಳಕ್ಕೆ ಆರೋಗ್ಯವರ್ಧಕ ಪಾನೀಯದಲ್ಲಿನ ಜೈವಿಕ ಅಂಶಗಳೇ ಮುಖ್ಯ ಕಾರಣ.

ಟೇಬಲ್ 6: ಇಲಿಗಳ ಎಲುಬುಗಳ ತೂಕ, ಸಾಂದ್ರತೆ, ಆಹಾರ ಪರಿವರ್ತನೆಯ ಅನುಪಾತ ಹಾಗೂ ಕ್ಯಾಲ್ಸಿಯಂ ಲವಣದ ಪ್ರಮಾಣ

ಆಹಾರದ ಅವಧಿ		ಎಲುಬುಗಳ ತೂಕ (ಗ್ರಾಂ.)	ಎಲುಬುಗಳ ಸಾಂದ್ರತೆ (g/cm^3)	ಆಹಾರ ಪರಿವರ್ತನೆಯ ಅನುಪಾತ	ಕ್ಯಾಲ್ಸಿಯಂ ಲವಣ (ಶೇ.)
ಮೊದಲು		0.18	0.90	—	8.5
ನಂತರ	ಆಹಾರದ ವಿಧ				
	CO	0.29	1.50	0.29	11.29
	G1	0.33	2.20	0.34	12.56
	G2	0.43	2.90	0.37	13.74
	ಸಿ.ಡಿ.	0.059	0.326	0.145	0.245

CO: ನಿಯಂತ್ರಿತ ಆಹಾರ

G1: ರಾಗಿ ಮಾಲ್ಟಯುಕ್ತ ಆಹಾರ

G2: ರಾಗಿ ಮಾಲ್ಟ, ಸಾಂದ್ರೀಕೃತ ಹಾಲೊಡಕಿನ ಸಸಾರಜನಕ ಮತ್ತು ಜೈವಿಕ ಸುಕ್ಷಾಣುಯುಕ್ತ ಆಹಾರ

ವಯೋವೃದ್ಧರಲ್ಲಿ ಆರೋಗ್ಯವರ್ಧಕ ಪಾನೀಯದ ಅಂತಿಮ ಕೋಷ್ಟಕ

ವಯೋವೃದ್ಧರಿಗೆ ಆರೋಗ್ಯವರ್ಧಕ ಪಾನೀಯದ ಅಂತಿಮ ಕೋಷ್ಟಕವನ್ನು ಟೇಬಲ್ 7ರಲ್ಲಿ ನಮೂದಿಸಲಾಗಿದೆ. ಇದರ ಪ್ರಕಾರ ರಾಗಿ ಮಾಲ್ಟ ಶೇ.4, ಸಕ್ಕರೆ ಶೇ.8, ಸಾಂದ್ರೀಕೃತ ಹಾಲೊಡಕಿನ ಸಸಾರಜನಕ ಶೇ.5, ಲ್ಯಾಕ್ಟೋಫೆರಿನ್ ಶೇ.2, ಜೈವಿಕ ಸೂಕ್ಷ್ಮಾಣು ಶೇ. 3 ಹಾಗೂ ಹಾಲು ಶೇ.78ರಷ್ಟು ಸೇರಿಸಿ ತಯಾರಿಸಬಹುದು.

ಟೇಬಲ್ 7: ವಯೋವೃದ್ಧರಲ್ಲಿ ಆರೋಗ್ಯವರ್ಧಕ ಪಾನೀಯದ ಅಂತಿಮ ಕೋಷ್ಟಕ

ಸಾಮಗ್ರಿಗಳು	ಪ್ರತಿಶತ (%)
ರಾಗಿ ಮಾಲ್ಟ	4.00
ಸಕ್ಕರೆ	8.00
ಸಾಂದ್ರೀಕೃತ ಹಾಲೊಡಕಿನ ಸಸಾರಜನಕ	5.00
ಲ್ಯಾಕ್ಟೋಫೆರಿನ್	2.00
ಜೈವಿಕ ಸೂಕ್ಷ್ಮಾಣು	3.00
ಹಾಲು	78.00
ಒಟ್ಟು	100.00

ಮಕ್ಕಳಲ್ಲಿ ದಂತಕುಳಿ ನಿವಾರಣೆಗೆ ಹಾಲಿನ ಸಸಾರಜನಕ ಬಳಸಿ ದಂತಮಂಜನದ ಅಭಿವೃದ್ಧಿ

ಡಾ॥ ಡಿ. ಬಿ. ಪುರಾಣಿಕ

ಪ್ರಾಧ್ಯಾಪಕರು, ಹೈನು ತಾಂತ್ರಿಕ ವಿಭಾಗ, ಹೈನು ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು-560 024

ಮಕ್ಕಳಲ್ಲಿ ದಂತಕುಳಿ ಸರ್ವೇ ಸಾಮಾನ್ಯ ಈ ದಂತಕುಳಿ ಸಾಮಾನ್ಯವಾಗಿ ಮಕ್ಕಳು ಸಿಹಿ ಪದಾರ್ಥ ತಿನ್ನುವುದರಿಂದ ಬರುತ್ತದೆ. ಈ ದಂತಕುಳಿ ನಿವರಣೆಗೆ ಹಾಲಿನಲ್ಲಿರುವ ಪ್ರಮುಖ ಸಸಾರಜನದ (ಕೇಸಿನ್) ಉಪಯೋಗಿಸಿ ದಂತಮಂಜನದ ಅಭಿವೃದ್ಧಿಗೆ ಸಂಶೋಧನೆ ನಡೆಸ್ಲಾಯಿತು. ಈ ದಂತಮಂಜನವನ್ನು 100 ಮಕ್ಕಳಲ್ಲಿ ಪ್ರಯೋಗಮಾಡಲಾಯಿಉತ್. ಕೇಸಿನ್ ನನ್ನು ಕಿಣ್ವದಿಂದ ತುಂಡೀಕರಿಸಿ, ಕೇಸಿನೋಫಾಸ್ಫೋಪೆಪ್ಟೇಡ ತಯಾರಿಸಿ ದಂತಮಂಜನದಲಿ ಉಪಯೋಗಿಸಲಾಯಿತಿ. ಪ್ರತಿಶತ 3 ಮತ್ತು 4 ರಷ್ಟು ಈ ಜೈವಿಕ ಸಸಾರಜನಕದ ಅಂಶವನ್ನು ದಂತಮಂಜನದಲ್ಲಿ ಉಪಯೋಗಿಸುವದರಿಂದ ದಂತಕುಳಿಯನ್ನು ಸಾಕಷ್ಟುಮಟ್ಟಿಗೆ ಕಡಿಮೆಯಾಗಿರುವುದು ಕಂಡು ಬಂದಿದೆ. ಈ ತರಹ ನಾಲ್ಕು ತರಹದ ದಂತಮಂಜನಗಳನ್ನು ತಯಾರಿಸಿ ಮಕ್ಕಳ ಮೇಲೆ ದಿನಕ್ಕೆ ಎರಡು ಬಾರಿ ಪ್ರಯೋಗಿಸಲಾಯಿತು 3 ಪ್ರತಿಶತ ಹಾಗೂ 4 ಪ್ರತಿಶತ ಜೈವಿಕ ಸಸಾರಜನಕವುಳ್ಳ ದಂತಮಂಜನಗಳು ಮಕ್ಕಳಲ್ಲಿ ದಂತಕುಳಿಗಳನ್ನು ನಿವಾರಿಸುವಲ್ಲಿ ಸಾಕಷ್ಟು ಪರಿಣಾಮಕಾರಿಯಾಗಿರುವುದಾಗಿ ಕಂಡು ಬಂದವು.

ವಿಷಯ ಪರಿಚಯ

ಮಕ್ಕಳಲ್ಲಿ ದಂತಕುಳಿ ಸರ್ವೇಸಾಮಾನ್ಯ. ಈ ದಂತಕುಳಿ ಸಾಮಾನ್ಯವಾಗಿ ಮಕ್ಕಳು ಸಿಹಿಪದಾರ್ಥ ತಿನ್ನುವದರಿಂದ ಬರುತ್ತದೆ. ಈ ದಂತಕುಳಿ ನಿವಾರಣೆಗೆ ಹಾಲಿನಲ್ಲಿರುವ ಸಸಾರಜನಕ (ಕೇಸೀನ್) ಬಹಳ ಪರಿಣಾಮಕಾರಿ. ಕೇಸೀನ್‌ನಿಂದ ಕೇಸೀನೋ ಪಾಸ್ಫೋಪೆಪ್ಟೈಡ (ಸಿ. ಪಿ. ಪಿ.) ಬೇರ್ಪಡಿಸಿ ಅದನ್ನು ದಂತಮಂಜನದಲ್ಲಿ ಉಪಯೋಗಿಸುವುದರಿಂದ ದಂತಕುಳಿ ನಿವಾರಣೆ ಮಾಡಬಹುದು. ಸಿ.ಪಿ.ಪಿ. ಯಲ್ಲಿ ಕ್ಯಾಲ್ಸಿಯಂ ಲವಣ ಹೀರಿಕೊಳ್ಳುವ ಶಕ್ತಿಯಿದ್ದು, ಈ ಗುಣವನ್ನು ಈ ಸಂಶೋಧನೆಯಲ್ಲಿ ಅಳವಡಿಸಿ ದಂತಮಂಜನ ವನ್ನು ಅಭಿವೃದ್ಧಿಪಡಿಸಲಾಗಿದೆ.

ಸಾಮಗ್ರಿಗಳು ಮತ್ತು ಪದ್ಧತಿಗಳು

1. ಸಿ.ಪಿ.ಪಿ. ಬೇರ್ಪಡಿಸುವಿಕೆ

ತಿರಸ್ಕೃತ ಹಾಲಿನಿಂದ ಕೇಸಿನ ಬೇರ್ಪಡಿಸಿ ಸಿ.ಪಿ.ಪಿಯನ್ನು ತಯಾರಿಸಲಾಯಿತು. ಈ ಬೇರ್ಪಡಿಕೆಯನ್ನು ಕೆಳಗಿನ ಚಿತ್ರ 1ರಲ್ಲಿ ತೋರಿಸಲಾಗಿದೆ.

ಕೇಸೀನ್

ಕಿಣ್ವದ ಬಳಕೆ

pH 4. 6 ಕ್ಕೆ ಅಳವಡಿಕೆ

ಸೆಂಟ್ರಿಫ್ಯೂಗೇಶನ

pH 7.0 ಕ್ಕೆ ಅಳವಡಿಕೆ

ಸೆಂಟ್ರಿಫ್ಯೂಗೇಶನ , 6000 rpm/ 10 ನಿ.

ಸಿ.ಪಿ.ಪಿ.

ಚಿತ್ರ 1: ಸಿ.ಪಿ.ಪಿ. ಬೇರ್ಪಡಿಕೆಯ ವಿಧಾನ

2. ಶಾಲಾ ವಿಧ್ಯಾರ್ಥಿಗಳ ಆಯ್ಕೆ

11 ರಿಂದ 14 ವಯೋಮಿತಿಯ 100 ಶಾಲಾ ಮಕ್ಕಳನ್ನು ಆರಿಸಲಾಯಿತು. ಅವರನ್ನು 25 ರಂತೆ 4 ವಿಭಾಗಗಳಾಗಿ ವಿಂಗಡನೆ ಮಾಡಲಾಯಿತು, ಈ ಗುಂಪುಗಳ ವಿಧ್ಯಾರ್ಥಿಗಳಿಗೆ, ಸಾಧಾರಣ ದಂತಮಂಜನ, ಫ್ಲೋರೈಡಯುಕ್ತ ದಂತಮಂಜನ, 3% ಸಿ.ಪಿ.ಪಿ. ಯುಕ್ತ ದಂತಮಂಜನ ಹಾಗೂ 4% ಸಿ.ಪಿ.ಪಿ.ಯುಕ್ತ ದಂತಮಂಜನಗಳ ಪ್ರಯೋಗ ಮಾಡಲಾಯಿತು. ಪ್ರತಿದಿನ ವಿದ್ಯಾರ್ಥಿಗಳಿಗೆ ಈ ದಂತಮಂಜನಗಳನ್ನು ಬೆಳಿಗ್ಗೆ ಮತ್ತು ಸಾಯಂಕಾಲ ಉಪಯೋಗಿಸುವಂತೆ ಸೂಚಿಸಲಾಯಿತು. ಈ ದಂತಮಂಜನಗಳ ಉಪಯೋಗದಿಂದ ಮಕ್ಕಳಲ್ಲಿ ದಂತಕುಳಿಗಳ ನಿವಾರಣೆಯ ಮೇಲಿನ ಪರಿಣಾಮವನ್ನು ಪ್ರತಿ 6 ತಿಂಗಳಿಗೊಮ್ಮೆ, 18 ತಿಂಗಳವರೆಗೆ ಪರೀಕ್ಷಿಸಲಾಯಿತು.

ಫಲಿತಾಂಶಗಳು ಹಾಗೂ ವಿಮರ್ಶೆ

ಟೇಬಲ 1: ಸಿ.ಪಿ.ಪಿ. ಯ ಕ್ಯಾಲ್ಸಿಯಂ ಲವಣ ಹೀರುವಿಕೆಯ ಸಾಮರ್ಥ್ಯ

ಪ್ರಯತ್ನ	ಹಾಲೊಡಕು ಸಿ.ಪಿ.ಪಿ.	ಶ್ರೀಖಂಡ ಸಿ.ಪಿ.ಪಿ.
1	0.55	0.42
2	0.54	0.44
3	0.55	0.41
ಸರಾಸರಿ	0.55	0.42

ಸಿ.ಪಿ.ಪಿ.ಯ ಕ್ಯಾಲ್ಸಿಯಂ ಲವಣ ಹೀರುವಿಕೆಯ ಸಾಮರ್ಥ್ಯ

ಸಿ.ಪಿ.ಪಿ.ಯ ಕ್ಯಾಲ್ಸಿಯಂ ಲವಣ ಹೀರುವಿಕೆಯ ಸಾಮರ್ಥ್ಯವನ್ನು ಟೇಬಲ 1ರಲ್ಲಿ ತೋರಿಸಲಾಗಿದೆ. ಹಾಲೊಡಕಿನಿಂದ (whey) ತಯಾರಿಸಿದ ಸಿ.ಪಿ.ಪಿ.ಯಲ್ಲಿ ಶ್ರೀಖಂಡ ಹಾಲೊಡಕಿಗಿಂತ ಹೆಚ್ಚಿಗೆ ಕ್ಯಾಲ್ಸಿಯಂ ಲವಣ ಹೀರುವಿಕೆಯ ಸಾಮರ್ಥ್ಯ ಹೊಂದಿರುವದನ್ನು ಕಾಣಬಹುದು (ಟೇಬಲ 1).

ಪ್ರಾಯಶ: ಶ್ರೀಖಂಡ ತಯಾರಿಕೆಯಲ್ಲಿ ಬಂದಂತಹ ಹಾಲೊಡಕು ಬುರುಗುವಿಕೆಯಿಂದ, ಕ್ಯಾಲ್ಸಿಯಂ ಲವಣ ಹೀರುವಿಕೆಯ ಸಾಮರ್ಥ್ಯವನ್ನು ಕಳೆದುಕೊಂಡಿರಬಹುದು ಹಾಗೂ ಹೆಚ್ಚು ಕ್ಯಾಲ್ಸಿಯಂ, ಹಾಲಿನ ಉತ್ಪನ್ನದೊಂದಿಗೆ ಸೇರಿಕೊಂಡಿರುವ ಸಾಧ್ಯತೆಗಳು ಇರಬಹುದು.

ದಂತಮಂಜನದ ತಯಾರಿಕೆಯ ಕೋಷ್ಟಕ

3 ಮತ್ತು 4 % ಸಿ.ಪಿ.ಪಿ. ಉಪಯೋಗಿಸಿ ದಂತಮಂಜನದ ತಯಾರಿಕೆಯ ಕೋಷ್ಟಕವನ್ನು ಟೇಬಲ 2ರಲ್ಲಿ ನಮುದಿಸಲಾಗಿದೆ.

ಟೇಬಲ 2: ದಂತಮಂಜನದ ತಯಾರಿಕೆಯ ಕೋಷ್ಟಕ

ಸಾಮಗ್ರಿಗಳು	**100** ಗ್ರಾಂ ಗೆ	**1**ಕೆ.ಜಿ. ಗೆ
ಕಾರ್ಬೊಕ್ಸಿ ಮೀಥೈಲ ಸೆಲ್ಯುಲೋಸ	1.5%	15 ಗ್ರಾಂ
ಕ್ಯಾಲ್ಸಿಯಂ ಕಾರ್ಬೊನೇಟ	25%	250 ಗ್ರಾಂ
ಕ್ಯಾಲ್ಸಿಯಂ ಪಾಫ್ಸೇಟ	25%	250 ಗ್ರಾಂ
ಸೋಡಿಯಂ ಲಾರಿಲ್ ಸಲ್ಫೇಟ	1.5%	15 ಗ್ರಾಂ
ಗ್ಲಿಸರೀನ	25%	250 ಗ್ರಾಂ
ಸೋಡಿಯಂ ಸ್ಯಾಕರೀಸ	1%	10 ಗ್ರಾಂ
ಸೋಡಿಯಂ ಫ್ಲೋರೈಡ	1%	10 ಗ್ರಾಂ
ಪೆಪ್ಪರಮಿಂಟ ಎಣ್ಣೆ	1%	10 ಗ್ರಾಂ
ಸಿ.ಪಿ.ಪಿ.	3%	30 ಗ್ರಾಂ
ಸಿ.ಪಿ.ಪಿ.	4%	40 ಗ್ರಾಂ
ನೀರು	ಸಾಕಷ್ಟು	ಸಾಕಷ್ಟು

ಸಿ,ಪಿ.ಪಿ. ಉಪಯೋಗಿಸಿ ದಂತಮಂಜನವನ್ನು ತಯಾರಿಸುವ ಕೋಷ್ಟಕವನ್ನು ಟೇಬಲ 2 ರಲ್ಲಿ ತೋರಿಸಲಾಗಿದೆ. 3 ಮತ್ತು 4% ಸಿ.ಪಿ.ಪಿ. ಗಳನ್ನು ಉಪಯೋಗಿಸಿ ದಂತಮಂಜನಗಳನ್ನು ತಯಾರಿಸಲಾಯಿತು. ಇವೆರಡರಲ್ಲೂ ದಂತಮಂಜನದ ಗುಣದಲ್ಲಿ ಯಾವುದೇ ವ್ಯತ್ಯಾಸಗಳನ್ನು ಕಾಣಲಾಗಲಿಲ್ಲ. ನಿಯಂತ್ರಿತ (C) ದಂತಮಂಜನವನ್ನು ಸಿ.ಪಿ.ಪಿ. ಇಲ್ಲದೇ ತಯಾರಿಸಲಾಯಿತು, ಅದೇ ರೀತಿ ಫ್ಲೋರೈಡಯುಕ್ತ ದಂತಮಂಜನವನ್ನು ಸೋಡಿಯಂ ಫ್ಲೋರೈಡನ್ನು ಪ್ರತಿಶತ 1 ರಷ್ಟು ಸೇರಿಸಿ ತಯಾರಿಸಲಾಯಿತು, (ಚಿತ್ರ 2).



ಗುಂಪು: ಅ ಗುಂಪು: ಬ ಗುಂಪು: ಕ ಗುಂಪು: ಡ

ಚಿತ್ರ 2: ವಿವಿಧ ಗುಂಪುಗಳ ದಂತಮಂಜನ

ಗುಂಪು: ಅ : ಸಾಧಾರಣ ದಂತಮಂಜನ
ಗುಂಪು: ಬ : ಫ್ಲೋರೈಡಯುಕ್ತ ದಂತಮಂಜನ
ಗುಂಪು: ಕ : ಶೇ. 3 ಸಿ.ಪಿ.ಪಿ.ಯುಕ್ತ ದಂತಮಂಜನ
ಗುಂಪು: ಡ : ಶೇ. 4 ಸಿ.ಪಿ.ಪಿ.ಯುಕ್ತ ದಂತಮಂಜನ

ಕೃತಕವಾಗಿ ಹಲ್ಲಿನಲ್ಲಿ ದಂತಕುಳಿಗಳನ್ನು ಸೃಷ್ಟಿಸಿ, ಅದರ ಮೇಲೆ ಸಿ.ಪಿ.ಪಿ. ಯುಕ್ತ ದಂತಮಂಜನದ ಪ್ರಯೋಗದ ಪೂರ್ವ

ಹಾಗೂ ನಂತರದ ಪರಿಣಾಮಗಳನ್ನು ಚಿತ್ರ 3 ಹಾಗೂ 4 ರಲ್ಲಿ ತೋರಿಸಲಾಗಿದೆ. ಈ ಚಿತ್ರಗಳಲ್ಲಿ ತೋರಿಸಿರುವಂತೆ ಸಿ.ಪಿ.ಪಿ.ಯುಕ್ತ ದಂತ ಮಂಜನದ ಉಪಯೋಗದಿಂದ ದಂತಕುಳಿಗಳ ಪ್ರಮಾಣದಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದಿದ್ದು, ದಂತಗಳ ಪುನರ ಕಾಲ್ಸಿಯಂ ಲವಣೀಕರಣವಾಗಿದ್ದನ್ನು ಕಾಣಬಹುದು.

ಮಾದರಿ	ಪ್ರಯೋಗದ ಪೂರ್ವ	ಪ್ರಯೋಗದ ನಂತರ
ನಿಯಂತ್ರಿತ (C)		
ಹೈಡ್ರೋಫಿಲಿಕ್ ಸಿ.ಪಿ.ಪಿ. (D1)		
ಹೈಡ್ರೋಫೋಬಿಕ್ ಸಿ.ಪಿ.ಪಿ. (D2)		

ಚಿತ್ರ 3: ಕೃತಕ ದಂತಕುಳಿಗಳ ಮೇಲೆ ಸಿ.ಪಿ.ಪಿ.ಯ ದಂತಮಂಜನದ ಕಾಲ್ಸಿಯಂ ಲವಣೀಕರಣದ ಪ್ರಭಾವ – ಪೋಲರೈಸ್ಡ್ ಸೂಕ್ಷ್ಮದರ್ಶಕ ಯಂತ್ರ

ಮಾದರಿ	ಪ್ರಯೋಗದ ಪೂರ್ವ	ಪ್ರಯೋಗದ ನಂತರ
ನಿಯಂತ್ರಿತ (C)		
ಹೈಡ್ರೋಫಿಲಿಕ್ ಸಿ.ಪಿ.ಪಿ. (D1)		
ಹೈಡ್ರೋಫೋಬಿಕ್ ಸಿ.ಪಿ.ಪಿ. (D2)		

ಚಿತ್ರ 4: ಕೃತಕ ದಂತಕುಳಿಗಳ ಮೇಲೆ ಸಿ.ಪಿ.ಪಿ.ಯ ಕಾಲ್ಸಿಯಂ ಲವಣೀಕರಣದ ಪ್ರಭಾವ – ಸ್ಕ್ಯಾನಿಂಗ್ ಎಲೆಕ್ಟ್ರಾನಿಕ್ ಸೂಕ್ಷ್ಮದರ್ಶಕ ಯಂತ್ರ

ಟೇಬಲ 3: ಕ್ಯಾಲ್ಸಿಯಂ ಮತ್ತು ಫಾಸ್ಫೋರಸ್ ಲವಣಾಂಶಗಳ ಮೊತ್ತ

	ಮಾದರಿ	ಕ್ಯಾಲ್ಸಿಯಂ (%)	ಫಾಸ್ಫೋರಸ್ (%)
ಪ್ರಯೋಗದ ಮೊದಲು	C	80.26	41.50
	D1	71.23	41.04
	D2	80.26	43.59
ಪ್ರಯೋಗದ ನಂತರ	C	89.89	41.61
	D1	95.17	41.64
	D2	94.52	43.98

C: ನಿಯಂತ್ರಿತ; D1: ಹೈಡ್ರೋಫಿಲಿಕ್ ಸಿ.ಪಿ.ಪಿ. D2 : ಹೈಡ್ರೋಫೋಬಿಕ್ ಸಿ.ಪಿ.ಪಿ.

ಟೇಬಲ 4 ರಲ್ಲಿ ತೋರಿದಂತೆ ಕ್ಯಾಲ್ಸಿಯಂ ಹಾಗೂ ಫಾಸ್ಫೋರಸ್ ಲವಣಗಳ ಸಾಂದ್ರತೆ ಪ್ರಯೋಗದ ನಂತರ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಗೆಯಿದ್ದು ಸಿ.ಪಿ.ಪಿಯ ಲವಣ ಹೀರುವಿಕೆಯ ಅಂಶವನ್ನು ತೋರುತ್ತದೆ.

ಟೇಬಲ 4: ನಾಲ್ಕು ಗುಂಪುಗಳ ಮಕ್ಕಳಲ್ಲಿ ಕ್ಯಾಲ್ಸಿಯಂ ಲವಣೀಕರಣದ ಸುಧಾರಣೆ

ಪ್ರಯೋಗದ ಅವಧಿ	ಪ್ರಾಯೋಗಿಕ ಮಕ್ಕಳ ಸಂಖ್ಯೆ							
	ಅ (ನಿಯಂತ್ರಿತ)		ಬ (1% ಫ್ಲೋರೈಡಯುಕ್ತ)		ಕ (3% ಸಿ.ಪಿ.ಪಿ.)		ಡ (4% ಸಿ.ಪಿ.ಪಿ.)	
	ದಂತಕುಳಿಯುಕ್ತ ಮಕ್ಕಳ ಸಂಖ್ಯೆ	ಮಕ್ಕಳಲ್ಲಿ ಸುಧಾರಣೆ	ದಂತಕುಳಿಯುಕ್ತ ಮಕ್ಕಳ ಸಂಖ್ಯೆ	ಮಕ್ಕಳಲ್ಲಿ ಸುಧಾರಣೆ	ದಂತಕುಳಿಯುಕ್ತ ಮಕ್ಕಳ ಸಂಖ್ಯೆ ದಂತಕುಳಿಯುಕ್ತ	ಮಕ್ಕಳಲ್ಲಿ ಸುಧಾರಣೆ	ದಂತಕುಳಿಯುಕ್ತ ಯುಕ್ತ ಮಕ್ಕಳ ಸಂಖ್ಯೆ	ಮಕ್ಕಳಲ್ಲಿ ಸುಧಾರಣೆ ಮಕ್ಕಳ
0	25	0	25	0	25	0	25	0
6 ತಿಂಗಳು	25	0	25	0	25	0	25	0
12 ತಿಂಗಳು	25	2	25	7	25	8	25	9
18 ತಿಂಗಳು	25	7	25	17	25	17	25	18

ಪರೀಕ್ಷೆಗೆ ಒಳಪಟ್ಟಿರುವ ನಾಲ್ಕು ಗುಂಪುಗಳ ಮಕ್ಕಳಲ್ಲಿ ದಂತಮಂಜನದ ಉಪಯೋಗದಿಂದ 18 ತಿಂಗಳ ಅವಧಿಯಲ್ಲಿ ದಂತಕುಳಿ ನಿವಾರಣೆಯ ಪರಿಣಾಮವನ್ನು ಟೇಬಲ 5 ರಲ್ಲಿ ತೋರಿಸಲಾಗಿದೆ. ಈ ಟೇಬಲ ಮುಖಾಂತರ ಕಾಣುವ ಅಂಶವೆಂದರೆ 3 ಮತ್ತು 4 % ಸಿ.ಪಿ.ಪಿ.ಯುಕ್ತ ದಂತಮಂಜನದ ಸತತ ಬಳಕೆಯಿಂದ ಸಾಕಷ್ಟು ದಂತಕುಳಿ ಕಡಿಮೆ ಮಾಡುವಲ್ಲಿ ಸುಧಾರಣೆಯಾಗಿರುವುದು ಕಂಡುಬರುತ್ತದೆ. 3% ಸಿ.ಪಿ.ಪಿ. ಹೊಂದಿರುವ ದಂತಮಂಜನದ ಉಪಯೋಗದಿಂದ 18 ತಿಂಗಳ ನಂತರ 25 ಮಕ್ಕಳ ಪೈಕಿ 17 ಮಕ್ಕಳಲ್ಲಿ ದಂತಕುಳಿಯಲ್ಲಿ ಸುಧಾರಣೆ ಕಂಡುಬಂದಿದ್ದು ಮತ್ತೂ 4% ಸಿ.ಪಿ.ಪಿ. ಹೊಂದಿರುವ ದಂತಮಂಜನದ ಉಪಯೋಗದಿಂದ 18 ಮಕ್ಕಳಲ್ಲಿ ದಂತಕುಳಿಯಲ್ಲಿ ಸುಧಾರಣೆ ಕಂಡು ಬಂದಿತು. ಆದರೆ ಸಿ.ಪಿ.ಪಿ. ಅಂಶವಿಲ್ಲದ ದಂತಮಂಜನದ ಉಪಯೋಗದಿಂದ ಕಡಿಮೆ ಮಕ್ಕಳಲ್ಲಿ ದಂತಕುಳಿ ಸುಧಾರಣೆ ಕಂಡು ಬಂದಿದೆ. 1% ಫ್ಲೋರೈಡಯುಕ್ತ ದಂತಮಂಜನದ ಉಪಯೋಗದಿಂದಲೂ ಕೂಡ 17 ಮಕ್ಕಳಲ್ಲಿ ಸುಧಾರಣೆ ಕಂಡು ಬಂದಿತು. ಆದ್ದರಿಂದ ಫ್ಲೋರೈಡಯುಕ್ತ ದಂತಮಂಜನದ ಸಮಾನವಾಗಿ 3% ಹಾಗೂ 4% ಸಿ.ಪಿ.ಪಿ.ಯುಕ್ತ ದಂತಮಂಜನಗಳನ್ನು ಮಕ್ಕಳ ದಂತಕುಳಿ ನಿವಾರಣೆ ಆಥವಾ ಸುಧಾರಣೆಯಲ್ಲಿ ಉಪಯೋಗಿಸಬಹುದಾಗಿದೆ.

ಮಧ್ಯಾಹ್ನದ ಬಿಸಿಯೂಟದಲ್ಲಿ ಪೌಷ್ಠಿಕಾಂಶ-ಒಂದು ವಿಶ್ಲೇಷಣೆ

*ಶಕುಂತಲ ಎನ್.ಡಿ, **ಡಾ. ಜಿ. ಶೀಲಾ
*ಸಂಶೋಧಕರು, **ಸಹಾಯಕ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
*ಇಮೇಲ್-shakunthalands4@gmail.com, **ಇಮೇಲ್- sheeyash@rediffmail.com

ಪೀಠಿಕೆ : "ಹಸಿದವ ಬಲ್ಲ ಹಸಿವಿನ ಶೂಲ". ಭಾರತವು ಅಭಿವೃದ್ಧಿಶೀಲ ರಾಷ್ಟ್ರವಾದರೂ ಹೆಚ್ಚು ಬಡ ಜನರಿಂದ ಕೂಡಿದ ರಾಷ್ಟ್ರ. ಭಾರತದಲ್ಲಿ 27 ಕೋಟಿ ಜನರು ಬಡತನ ರೇಖೆಗಿಂತಲೂ ಕೆಳಗಿದ್ದಾರೆ(ವಿಜಯ ಕರ್ನಾಟಕ ದಿನಪತ್ರಿಕೆ, ದಿ.3.8.2014). ಈಗಲೂ ಇಲ್ಲಿನ ಬಹುತೇಕ ಜನರು ಹಸಿವನ್ನು ತಾಳಲಾರದೆ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿಯೇ ಹಸಿದವನಿಗೆ ಇದು ಶೂಲವಾಗಿ ಪರಿಣಮಿಸಿದೆ. ಈ ಹಸಿವಿನ ಶೂಲದಿಂದ ತಪ್ಪಿಸಿಕೊಳ್ಳಲು ಮನೆಯ ವಯಸ್ಕ ಮಂದಿಯೆಲ್ಲ ದುಡಿದರೂ 'ಬಕಾಸುರನ ಹೊಟ್ಟೆಗೆ ಅರೆಮಜ್ಜಿಗೆ' ಎಂಬಂತಹ ಪರಿಸ್ಥಿತಿ ಇದೆ. ದಿನದಲ್ಲಿ ಒಂದು ಹೊತ್ತಾದರೂ ಹೊಟ್ಟೆ ತುಂಬಾ ಊಟ ಸಿಕ್ಕಿದಂತಾದರೆ ಸಾಕೆಂದು ಸಂತೋಷದಿಂದ ಬಾಲ್ಯ ಕಳೆಯಬೇಕಾದ ಮಕ್ಕಳನ್ನೂ ದುಡಿಯಲು ನೂಕುವ ದಯನೀಯ ಸ್ಥಿತಿ ಕಣ್ಣ ಮುಂದಿದೆ. ಹಾಗಾಗಿಯೇ ಕರ್ನಾಟಕದಲ್ಲಿ ಒಟ್ಟು ಜನಸಂಖ್ಯೆಯ 34.6%ರಷ್ಟು ಮಕ್ಕಳಿದ್ದರೂ, ಕಡ್ಡಾಯ ಶಿಕ್ಷಣ ಪದ್ಧತಿ ಜಾರಿಯಾಗಿದ್ದರೂ ಅವರಲ್ಲಿ 18% ರಷ್ಟು ಮಕ್ಕಳು ಪ್ರಾಥಮಿಕ ಶಾಲೆಯನ್ನು ಪ್ರವೇಶಿಸುತ್ತಿಲ್ಲ. (ಮೈಸೂರು ಸೇರಿದಂತೆ 5 ಜಿಲ್ಲೆಗಳಲ್ಲಿಯೇ ಬಾಲ ಕಾರ್ಮಿಕರ ಸಂಖ್ಯೆ 5,000 ದಷ್ಟಿದೆ. ಪೀಪಲ್ಸ್ ಲೀಗಲ್ ಪೋರಂ ನಿರ್ದೇಶಕ ಪಿ. ಪಿ. ಬಾಬುರಾಜ್, ವಿಜಯ ಕರ್ನಾಟಕ, ದಿ.11.6.2014). ಹೀಗೆ ಈ ಹಸಿವಿನ ಶೂಲಕ್ಕೆ ಭಾರತದ ಭವ್ಯ ಪ್ರಜೆಗಳ ತಲೆದಂಡವಾಗುತ್ತಿದೆ. ಇದರ ಪರಿಣಾಮವನ್ನು ಅರಿತಿರುವ ಸರ್ಕಾರವು ಮುಗ್ಧ ಮಕ್ಕಳನ್ನು ಹಸಿವಿನ ಬೇಗೆಯಿಂದ ಹೊರತರಲು ಹಲವಾರು ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಹಾಗೆಂದು ಹಸಿದವರಿಗೆ ಅನ್ನವನ್ನಷ್ಟೇ ನೀಡಿ ಅವರ ಭೌತಿಕ ಹಸಿವನ್ನು ನೀಗಿಸುವುದಾದರೆ ಅದರ ಬೆನ್ನಲ್ಲೇ ಬೌದ್ಧಿಕ ಹಸಿವಿನ ಪ್ರಶ್ನೆ ಧುತ್ತೆಂದು ನಿಲ್ಲುತ್ತದೆ. ಏಕೆಂದರೆ "ಜಗತ್ತನ್ನು ಬದಲಿಸಲು ನೀವು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಅಸ್ತ್ರವೆಂದರೆ ಶಿಕ್ಷಣ" ಎಂಬ ನೆಲ್ಸನ್ ಮಂಡೇಲಾ ರವರು ಹೇಳಿದ ಮಾತು ಅಕ್ಷರಶಃ ಸತ್ಯವಾಗಿದೆ. ಹಾಗಾಗಿ ಈ ಭೌತಿಕ ಮತ್ತು ಬೌದ್ಧಿಕ ಎರಡೂ ರೀತಿಯ ಹಸಿವನ್ನು ನೀಗಿಸಿದರೆ ಮಾತ್ರ ಉತ್ತಮ ಪ್ರಜೆಗಳ ನಿರ್ಮಾಣ ಸಾಧ್ಯ. ಅದಕ್ಕಾಗಿ ಸರ್ಕಾರ ರೂಪಿಸಿದ ಯೋಜನೆಯೇ ಈ ಅಕ್ಷರ ದಾಸೋಹ ಯೋಜನೆ – 'ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ'.

ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪ್ರಾಥಮಿಕ ಶಾಲಾ ಹಂತದಿಂದ ಹಿಡಿದು ಪ್ರೌಢಶಾಲಾ ಹಂತದವರೆಗೂ ಮಕ್ಕಳ ದಾಖಲಾತಿ, ಹಾಜರಾತಿಯನ್ನು ಹೆಚ್ಚಿಸಿ, ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಉತ್ತಮಪಡಿಸಲು ಹಾಗೂ ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ನೀಡಲು ಜಾರಿಗೆ ತಂದಿರುವ ಪ್ರತಿಷ್ಠಿತ ಯೋಜನೆಯೇ ಈ 'ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ'. ಬೆಳೆಯುವ ಮಕ್ಕಳಿಗೆ ಪೌಷ್ಠಿಕ ಆಹಾರ ಅತ್ಯಂತ ಅವಶ್ಯಕ. ಅದು ಸತ್ವಯುತವಾಗಿರಬೇಕು. ಅಂತೆಯೇ ಸರ್ಕಾರದ ಈ ಮಹತ್ವದ ಯೋಜನೆಯಲ್ಲಿ ಮಕ್ಕಳ ದೈಹಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆಗೆ, ಆರೋಗ್ಯ ವರ್ಧನೆಗೆ ಸೂಕ್ತವಾದ ಪೌಷ್ಠಿಕ ಆಹಾರ ಲಭ್ಯತೆಯ ಬಗ್ಗೆ ಬೀರುವ ಒಂದು ಪಕ್ಷಿನೋಟವೇ ಈ ಪತ್ರಿಕೆ.

ಶಿಕ್ಷಣ: ಭಾರತೀಯ ಸಂವಿಧಾನದ 45ನೇ ವಿಧಿಯು 6-14 ವರ್ಷದವರೆಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂದು ಚಿಂತಿಸಿ, ಭಾರತದ ಎಲ್ಲ ರಾಜ್ಯಗಳಿಗೆ ಅನ್ವಯವಾಗುವಂತೆ ಆಗಸ್ಟ್ 1, 1961 ರಂದು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿತು. ಆದರೆ ಸಂವಿಧಾನ ರಚನೆಯಾಗಿ ಆರು ದಶಕಗಳು ಕಳೆದರೂ ಶಿಕ್ಷಣವು ಎಲ್ಲರಿಗೂ ದೊರೆಯುತ್ತಿಲ್ಲ. ಹಾಗಾಗಿ ಶಿಕ್ಷಣದ ಸಾರ್ವತ್ರೀಕರಣಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಜಂಟಿಯಾಗಿ ಹಲವಾರು ಯೋಜನೆಗಳನ್ನು ಕೈಗೊಂಡಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಸಮುದಾಯದತ್ತ ಶಾಲೆ, ಬಾ ಬಾಲೆ ಶಾಲೆಗೆ, ಕೂಲಿಯಿಂದ ಶಾಲೆಗೆ, ಮರಳಿ ಬಾ ಶಾಲೆಗೆ, ಸಂಚಾರಿ ಶಾಲೆ, ಸಮನ್ವಯ ಶಾಲೆ, ಗೃಹಾಧಾರಿತ ಶಿಕ್ಷಣ, ನಲಿ-ಕಲಿ, ಶಿಕ್ಷಣ ಹಕ್ಕು ಕಾಯ್ದೆ ಮತ್ತು ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮಗಳು.

ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ: "ಅಂಬೋಕೆ ಮಾಡಿದ್ದು ಶಾಸ್ತ್ರ, ಉಂಬೋಕೆ ಮಾಡಿದ್ದು ಅನ್ನ" ಎಂದಿದ್ದರೂ ಇಲ್ಲಿ ಎರಡೂ ಪ್ರತ್ಯೇಕವಾಗದೆ ಪೂರಕವಾಗಿದೆ. ಹೇಗೆಂದರೆ 'ದಾಸೋಹ' ಎನ್ನುವುದು ದಿನಂಪ್ರತಿ ತಪ್ಪದೇ ನಡೆಯುವ ಊಟದ ಪರಿಕಲ್ಪನೆಯನ್ನು, 'ಅಕ್ಷರ' ಎಂಬ ಪದವು ಜ್ಞಾನ ಎಂಬ ಹಸಿವನ್ನು ನೀಗಿಸಲು 'ಶಿಕ್ಷಣ' ಎಂಬ

ಊಟವನ್ನು ಮಕ್ಕಳಿಗೆ ಉಣಬಡಿಸುವುದು ಎಂದಾಗಿದ್ದು, ಮಕ್ಕಳಿಗೆ ದಿನವೂ ಕಲಿಕೆಯೊಂದಿಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡುವು ದಾಗಿದೆ.

ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ ಬೆಳೆದು ಬಂದ ದಾರಿ: ಭಾರತ ದಲ್ಲಿ ಕ್ರಿ.ಶ. 1935ನೇ ಇಸವಿಗೂ ಮೊದಲೇ ದೂರದ ಪ್ರದೇಶಗಳಿಂದ ಪ್ರಾಥಮಿಕ ಶಾಲೆಗಳಿಗೆ ಬರುವ ಮಕ್ಕಳಿಗೆ ಮಧ್ಯಾಹ್ನದ ಭೋಜನ ನೀಡುವ ವ್ಯವಸ್ಥೆ ಇತ್ತು. 1957–58ರಲ್ಲಿ ಇದು ಸ್ಥಳೀಯ ಬಡಮಕ್ಕಳಿಗೂ ವಿಸ್ತೃತವಾಯಿತು. ಮೈಸೂರಿನಲ್ಲಿ ಇದು ಅಕ್ಟೋಬರ್ 2, 1963, ರಂದು ಜಾರಿಯಾಯಿತು. ಮುಂದೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ವಿಶೇಷ ಅನುದಾನದಲ್ಲಿ, 1980 ರಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಉಪಾಹಾರವನ್ನು ಒದಗಿಸಲಾಗುತ್ತಿತ್ತು. ತದ ನಂತರ ಪ್ರತಿ ತಿಂಗಳು ಅಕ್ಕಿ/ಗೋಧಿಯನ್ನು 2001 ರವರೆಗೆ ವಿತರಿಸಲಾಯಿತು. ಮುಂದೆ ರಾಜ್ಯದಲ್ಲಿ ಅಧಿಕೃತವಾಗಿ ಸರ್ಕಾರಿ ಆದೇಶ ಸಂಖ್ಯೆ ಇಡಿ.20.ಎಂ.ಎಂ.ಎನ್.2000 ದಿ.1.10.2001ರ ಪ್ರಕಾರ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ 7 ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಳ್ಳಾರಿ, ಬಿಜಾಪುರ ಮತ್ತು ಬಾಗಲಕೋಟೆಗಳಲ್ಲಿ ಜಾರಿಗೊಳಿಸಲು ಮಂಜೂರಾತಿ ನೀಡಲಾಯಿತು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್.ಎಮ್. ಕೃಷ್ಣರವರು ರಾಯಚೂರಿನ ದೇವದುರ್ಗಾ ತಾಲ್ಲೂಕಿನ ಅರಕೆರಿಯಲ್ಲಿ ದಿ. 1.11.2001 ರಂದು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ದಿ.1.6.2002 ರಿಂದ ಈ 7 ಜಿಲ್ಲೆಯ ಎಲ್ಲಾ ಶಾಲೆಗಳಲ್ಲೂ 1–5 ನೇ ತರಗತಿಯವರೆಗಿನ ಮಕ್ಕಳಿಗಾಗಿ ಪ್ರಾರಂಭವಾಯಿತು. ಇಲ್ಲಿ ಯಶಸ್ವಿಗೊಂಡ ನಂತರ ಸರ್ಕಾರವು ದಿನಾಂಕ 1.7.2003 ರಲ್ಲಿ ರಾಜ್ಯದ ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಇದನ್ನು ಮುಂದುವರೆಸಲು ಆದೇಶಿಸಿತು. ಮುಂದೆ 2004ರ ನವೆಂಬರ್‌ನಿಂದ 1–7ನೇ ತರಗತಿಯ ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡಲಾಯಿತು. 2007–08ನೇ ಸಾಲಿನಿಂದ 8–10ನೇ ತರಗತಿವರಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೂ ವಿಸ್ತರಿಸಲಾಯಿತು.

ಅಲ್ಲದೆ ಭವಿಷ್ಯದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಕೇವಲ 5 ರೂ. ದರದಲ್ಲಿ ಕಾಲೇಜಿನ ಉಪಾಹಾರ ಕೇಂದ್ರಗಳಲ್ಲಿ ಮಧ್ಯಾಹ್ನದ ಊಟವನ್ನು ಒದಗಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು 2014ರ ಜುಲೈ 22 ರಂದು ಹೇಳಿದ್ದಾರೆ. ಇವರೊಂದಿಗೆ ಕಾಲೇಜಿನ ಬೋಧಕ–ಬೋಧಕೇತರ ಸಿಬ್ಬಂದಿಗಳಿಗೂ ಕಡಿಮೆ ದರದಲ್ಲಿ ಒದಗಿಸಲು ನಿರ್ಣಯಿಸಿದ್ದಾರೆ. ಹಾಗಾಗಿ ಮುಂದೆ ಕಾಲೇಜು ವಿದ್ಯಾರ್ಥಿಗಳು, ಬೋಧಕ–ಬೋಧಕೇತರ ವರ್ಗದವರೂ ಈ ಯೋಜನೆಯ ಫಲಾನುಭವಿಗಳಾಗಲಿದ್ದಾರೆ. ಡಾ.ಚಂದ್ರಮತಿ ಸೋಂದಾರವರು ಹೇಳುವಂತೆ ಪ್ರಸ್ತುತದಲ್ಲಿ ರಾಜ್ಯದ ಸುಮಾರು 65–70 ಲಕ್ಷ ಮಕ್ಕಳು ಮಧ್ಯಾಹ್ನದ ಬಿಸಿಯೂಟದ ಪ್ರಯೋಜನ ಪಡೆಯುತ್ತಿದ್ದಾರೆ.

ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದ ಉದ್ದೇಶಗಳು: "ಯಾವುದೇ ಯೋಜನೆ ರೂಪಿಸಲು ವಿಫಲರಾದರೆ ವೈಫಲ್ಯಕ್ಕೆ ಯೋಜನೆ ಹಾಕಿಕೊಂಡಂತೆಯೇ ಸರಿ" ಎಂದು ಎಫ್ ಜೋನ್ಸ್‌ರವರು ಹೇಳುತ್ತಾರೆ. ಆದರೆ ಇಲ್ಲಿ ಈ ಮಧ್ಯಾಹ್ನದ ಬಿಸಿಯೂಟದ ಯೋಜನೆಯ ಸಾಫಲ್ಯವನ್ನು ಅದರ ಉದ್ದೇಶಗಳೇ ಸಾರುತ್ತವೆ. ಅವುಗಳೆಂದರೆ,

1. **ದಾಖಲಾತಿ:** "ಕೈ ಕಟ್ಟಿ ಕುಳಿತ ಜೀವಿಗೆ ಹೇಗೂ ಹೊಟ್ಟೆ ತುಂಬಿಸಲಾಗುವುದಿಲ್ಲ"(ಮಹಾಭಾರತ). ಹಾಗೆಯೇ ಹಸಿವು ಎಂದು ಮನೆಯಲ್ಲೇ ಇದ್ದರೆ ಮಗುವಿಗೆ ಅನ್ನ ಪಡೆಯುವ ಮಾರ್ಗ ಕಾಣುವುದಿಲ್ಲ. ಇದರ ನೆಪದಲ್ಲಾದರೂ ಮಕ್ಕಳು ಶಾಲೆಗೆ ದಾಖಲಾಗುತ್ತಾರೆಂಬ ಮಹತ್ವದ ಆಶಯದೊಡನೆ ಹಸಿವನ್ನು ನಿವಾರಿಸಿ, ಮಕ್ಕಳು ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುವಂತೆ ಮಾಡುವ ಉದ್ದೇಶವನ್ನು ಹೊಂದಿದೆ.
2. **ಹಾಜರಾತಿ:** ಹಾಜರಾತಿಯನ್ನು ನಿರಂತರವಾಗಿ ಕಾಯ್ದುಕೊಳ್ಳುವುದು ಈ ಯೋಜನೆಯ ಮತ್ತೊಂದು ಮುಖ್ಯ ಉದ್ದೇಶವಾಗಿದೆ.
3. **ಅರ್ಧದಲ್ಲಿಯೇ ಶಾಲೆ ಬಿಡುವುದನ್ನು ತಪ್ಪಿಸುವುದು:** ದಾಖಲಾದ ಮಕ್ಕಳು ಅರ್ಧದಲ್ಲಿಯೇ ಶಾಲೆ ಬಿಡುವುದನ್ನು ತಪ್ಪಿಸುವುದು.
4. **ಕಲಿಕೆಯ ಮಟ್ಟದಲ್ಲಿ ಸುಧಾರಣೆ:** ಊಟದ ಜೊತೆಗೆ ಮಕ್ಕಳು ಪಾಠದಲ್ಲಿ ತೊಡಗಿಕೊಳ್ಳುವಂತೆ ಮಾಡಿ, ಅವರ ಕಲಿಕೆಯ ಮಟ್ಟದಲ್ಲಿ ಸುಧಾರಣೆಯನ್ನು ತರುವುದು.
5. **ಪೌಷ್ಠಿಕಾಂಶದ ಹೆಚ್ಚಳ:** ಮಗುವಿನ ಸರ್ವತೋಮುಖ ವಿಕಾಸಕ್ಕೆ ಎಲ್ಲ ರೀತಿಯ ಪೌಷ್ಠಿಕಾಂಶಗಳ ಅಗತ್ಯ ಇದೆ. ಅವುಗಳನ್ನು ಮಧ್ಯಾಹ್ನದ ಊಟದಲ್ಲಿ ಮಕ್ಕಳಿಗೆ ದೊರೆಯುವಂತೆ ಮಾಡಿ ಅವರ ಸರ್ವಾಂಗೀಣ ವಿಕಾಸಕ್ಕೆ ಕಾರಣವಾಗುವುದು.
6. **ಮಾನವೀಯ ಗುಣಗಳ ಬೆಳವಣಿಗೆ:** ಶಿಕ್ಷಣದ ಮುಖ್ಯ ಗುರಿ ಸಮಾಜದಲ್ಲಿ ಇತರರೊಡನೆ ಕೂಡಿ ಬಾಳುವುದನ್ನು ಕಲಿಸುವುದಾಗಿದೆ. ಶಾಲೆಯಲ್ಲಿನ ಸಹಭೋಜನ ಕಾರ್ಯದಿಂದಾಗಿ ಮಕ್ಕಳಲ್ಲಿ ಪರಸ್ಪರ ಸಹಕಾರ, ಸಹಬಾಳ್ವೆ, ಸಹೋದರತ್ವ ಭಾವಗಳನ್ನು ಬೆಳೆಸುವುದಾಗಿದೆ.
7. **ಸಾಕ್ಷರತಾ ಪ್ರಮಾಣ:** ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದರ ಮೂಲಕ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವುದು.

ಆಹಾರ ಸಹಿತ ಪಟ್ಟಿ: ತಾಲ್ಲೂಕು ಪಂಚಾಯತಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ತಿಳಿಸಿರುವಂತೆ ಪ್ರತಿ ಮಗುವಿಗೆ ನೀಡುವ ಆಹಾರ ಮತ್ತು ಅದರ ಪ್ರಮಾಣವು ಈ ಕೆಳಗೆ ಸೂಚಿಸಿರುವ ಪಟ್ಟಿಯಲ್ಲಿರುವಂತೆ ನೀಡಬೇಕು.

ಪ್ರತಿದಿನ ಮಗುವಿಗೆ ನೀಡಬಹುದಾದ ಆಹಾರದ ಪಟ್ಟಿ

ವಾರದ ದಿನಗಳು	ತಯಾರಿಸಬೇಕಾದ ಆಹಾರ
ಸೋಮವಾರ	ಖಾರ ಪೊಂಗಲ್
ಮಂಗಳವಾರ	ಚಪಾತಿ ಪಲ್ಯ
ಬುಧವಾರ	ಅನ್ನ ಸಾಂಬಾರ್
ಗುರುವಾರ	ಚಿತ್ರಾನ್ನ
ಶುಕ್ರವಾರ	ಬಿಸಿ ಬೇಳೆ ಬಾತು
ಶನಿವಾರ	ಉಪ್ಪಿಟ್ಟು

ಪ್ರತಿದಿನ ಮಗುವಿಗೆ ನೀಡಬಹುದಾದ ಆಹಾರ ಪದಾರ್ಥಗಳ ಪ್ರಮಾಣದ ಪಟ್ಟಿ

ತರಗತಿ	ಅಕ್ಕಿ/ಗೋಧಿ	ಬೇಳೆ	ಎಣ್ಣೆ	ಉಪ್ಪು	ತರಕಾರಿ
1–5	100ಗ್ರಾಂ	20 ಗ್ರಾಂ	3 ಗ್ರಾಂ	2 ಗ್ರಾಂ	50 ಗ್ರಾಂ
6–7	150 ಗ್ರಾಂ	20 ಗ್ರಾಂ	3 ಗ್ರಾಂ	2 ಗ್ರಾಂ	50 ಗ್ರಾಂ
8–10	150 ಗ್ರಾಂ	25 ಗ್ರಾಂ	6 ಗ್ರಾಂ	4 ಗ್ರಾಂ	70 ಗ್ರಾಂ

ಇವುಗಳೊಪಡನೆ ಶುಚಿತ್ವ, ಸುರಕ್ಷತೆ ಮತ್ತು ಮಿತವ್ಯಯವನ್ನು ಕಾಯ್ದುಕೊಳ್ಳಬೇಕು.

ಮಧ್ಯಾಹ್ನದ ಬಿಸಿಯೂಟದಲ್ಲಿ ಪೌಷ್ಟಿಕಾಂಶ: ಮಗುವು ಸೇವಿಸುವ ಆಹಾರದಲ್ಲಿ ಇರಬೇಕಾದ ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯನ್ನು ಪುಷ್ಟೀಕರಿಸುವ ಸೂಕ್ತ ಪ್ರಮಾಣದ ಅಂಶವೇ ಪೌಷ್ಟಿಕಾಂಶ. ಶಾಲೆಗೆ ಬರುವ ಮಕ್ಕಳು ಬೆಳವಣಿಗಾ ಹಂತದಲ್ಲಿರುವುದ 'ರಿಂದ ಅವರು ಸೇವಿಸುವ ಆಹಾರವು ಅವರ ಜೀವನ ಪರ್ಯಂತ ಅವರನ್ನು ಸದೃಢವಂತರಾಗಿರಲು ಮೂಲವಾಗಿರುತ್ತದೆ. ಇಲ್ಲದಿದ್ದಲ್ಲಿ ಅವರಿಗೆ ಆಯಾಸ, ಏಕಾಗ್ರತೆಯ ಕೊರತೆ, ರಕ್ತಹೀನತೆಯಿಂದ ದುರ್ಬಲರಾಗುವಿಕೆ ಕೆಲವೊಮ್ಮೆ ಶಾಶ್ವತವಾಗಿ ಬುದ್ಧಿಶಕ್ತಿ ನಷ್ಟ ಹೊಂದಿ, ಶಾಲೆಗೆ ಹಾಜರಾಗದಂತಾಗಿ ಅನಕ್ಷರತೆಗೆ ಕಾರಣವಾಗುತ್ತದೆ. ಹಾಗಾಗಿ ಶಾಲೆಯಲ್ಲಿ ನೀಡುವ ಮಧ್ಯಾಹ್ನದ ಬಿಸಿಯೂಟದಲ್ಲಿ ಮೇಲಿನ ಪಟ್ಟಿಯಲ್ಲಿ ನೀಡಿರುವಂತೆ ಪೌಷ್ಟಿಕಾಂಶ ಇರಬೇಕಿರುವುದನ್ನು ಕಾಯ್ದುಕೊಳ್ಳಬೇಕಿದೆ. ಇದರೊಂದಿಗೆ ಹಾಲು, ಮೊಟ್ಟೆ, ಆಲ್ ಬೆಂಡೋಜಲ್, ಕಬ್ಬಿಣಾಂಶ ಮತ್ತು ಫ್ಲೋರಿಕ್ ಆಮ್ಲ ಮಾತ್ರೆಗಳನ್ನು ನೀಡಲಾಗುತ್ತಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಕಿ ಅಂಶದ ಪ್ರಕಾರ 2013 ರ ಮಾರ್ಚ್‌ನಲ್ಲಿ 1.32% (51,453) ರಷ್ಟಿದ್ದ ಅಪೌಷ್ಟಿಕತೆಯುಳ್ಳ ಮಕ್ಕಳ ಪ್ರಮಾಣ 2014ರ ಜೂನ್ ತಿಂಗಳ ಅಂತ್ಯಕ್ಕೆ 0.82% (32,952) ಕ್ಕೆ ಇಳಿದಿದೆ. ಪ್ರಸ್ತುತದಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ 100 ಮಕ್ಕಳನ್ನು ಆಯ್ಕೆ ಮಾಡಿಕೊಂಡು ಸಿ. ಎಫ್. ಟಿ. ಆರ್. ಐ. ಸಂಶೋಧನೆ ನಡೆಸುತ್ತಿದೆ. 2ಕೆ.ಜಿ. ಅಕ್ಕಿ, ಗೋಧಿಯಿಂದ ಸಿಹಿ ಹಾಲು ಪಾಯಸ, ಉಂಡೆ ತಯಾರಿಸಲಾಗುತ್ತಿದೆ. ಇದು ಸಫಲವಾದರೆ ರಾಜ್ಯದ ಎಲ್ಲಾ ಶಾಲಾ ಮಕ್ಕಳಿಗೂ ಕೊಡಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಎನ್.ಆರ್. ವಿಜಯ್ ತಿಳಿಸಿದ್ದಾರೆ. ಗ್ರಾಮೀಣ ಭಾಗಗಳಲ್ಲಿ ಪೌಷ್ಟಿಕ ಆಹಾರ ಸೇವನೆ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಅನೇಕ ಅಭಿಯಾನಗಳನ್ನು ಹಮ್ಮಿಕೊಳ್ಳುತ್ತಿದ್ದು, ಪ್ರತಿವರ್ಷ ಸೆಪ್ಟೆಂಬರ್ ತಿಂಗಳ 1–7 ರವರೆಗೆ 'ರಾಷ್ಟ್ರೀಯ ಪೌಷ್ಟಿಕ ಸಪ್ತಾಹ'ವನ್ನು ಜಾರಿಗೊಳಿಸಿದೆ.

ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದ ನಿಹಿತಾರ್ಥಗಳು

1. ದಾಖಲಾತಿ, ಹಾಜರಾತಿ ಪ್ರಮಾಣದಲ್ಲಿ ಹೆಚ್ಚಳ ಮತ್ತು ಮಧ್ಯದಲ್ಲಿ ಶಾಲೆ ಬಿಡುವವರ ಸಂಖ್ಯೆಯಲ್ಲಿ ಇಳಿಮುಖ: ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದಿಂದಾಗಿ ಶಾಲೆಗೆ ದಾಖಲಾಗುವ ಮತ್ತು ಹಾಜರಾಗುವ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. 2011–12 ನೇ ಸಾಲಿನಲ್ಲಿ 1 ನೇ ತರಗತಿಗೆ ಹಾಜರಾದ ಒಟ್ಟು ಮಕ್ಕಳ ಸಂಖ್ಯೆ 78,76,110 ಅವರಲ್ಲಿ ಶಾಲೆ ಬಿಟ್ಟ ಮಕ್ಕಳ ಸಂಖ್ಯೆ 6,28,047. ಪ್ರಸ್ತುತ ಅದರ ಪ್ರಮಾಣದಲ್ಲಿ ಇಳಿಕೆಯಾಗಿದೆ.

2. ಮಕ್ಕಳ ಪೌಷ್ಟಿಕತೆಯಲ್ಲಿ ಹೆಚ್ಚಳ: ಮೈಸೂರು ಜಿಲ್ಲೆಯಲ್ಲಿ 2013ನೇ ಸಾಲಿನಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿದ್ದ 1,241ರಷ್ಟಿದ್ದ ಮಕ್ಕಳ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ಅವರ ಆರೋಗ್ಯದಲ್ಲಿ ಸುಧಾರಣೆಯಾಗುತ್ತಿದೆ.

3. ಮಾನವೀಯ ಗುಣಗಳ ಬೆಳವಣಿಗೆ: ಮಕ್ಕಳಲ್ಲಿ ಮಾನವೀಯ, ಜಾತ್ಯಾತೀತ, ಸಮಾಜವಾದ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ಬೆಳವಣಿಗೆಯಾಗುತ್ತಿದೆ.

4. ಕಲಿಕೆಯಲ್ಲಿ ಹೆಚ್ಚಳ: ಮಗುವು ಪ್ರತಿನಿತ್ಯ ಶಾಲೆಗೆ ಹಾಜರಾಗಿ ಕಲಿಕೆಯಲ್ಲಿ ಪಾಲ್ಗೊಳ್ಳುವುದರಿಂದ ಹಾಗೂ ಸದೃಢ ದೇಹ ಮತ್ತು ಮನಸ್ಸನ್ನು ಹೊಂದುವುದರಿಂದ ಮಗುವಿನ ಶೈಕ್ಷಣಿಕ ಪ್ರಗತಿಗೆ ಕಾರಣವಾಗಿದೆ.

ಉಪಸಂಹಾರ

ಭಾರತವು ವಿಶ್ವದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ 2ನೇ ಸ್ಥಾನವನ್ನು ಹೊಂದಿದೆ. ಆ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸಲು ಬೆಳೆಯುವ ಅವಧಿಯಲ್ಲಿಯೇ ಮಕ್ಕಳಿಗೆ ಪೌಷ್ಟಿಕಾಂಶ ವುಳ್ಳ ಆಹಾರ ಮತ್ತು ಶಿಕ್ಷಣವನ್ನು ನೀಡಬೇಕು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರುವ ಮೂಲಕ ಅಪೌಷ್ಟಿಕತೆ ಮುಕ್ತ ಮತ್ತು ಶಿಕ್ಷಣವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಈ ಎರಡೂ ಕಾರ್ಯಗಳನ್ನು ಯಶಸ್ವಿಗೊಳಿಸಿ ಕೊಳ್ಳುವಲ್ಲಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವು ಸಹಕಾರಿ ಯಾಗಿದೆ.

ಪರಾಮರ್ಶನಾ ಗ್ರಂಥಗಳು

- ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಅಕ್ಷರ ದಾಸೋಹ ಕಾರ್ಯಕ್ರಮ ಮಾರ್ಗಸೂಚಿ, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು.
- ತಾಲ್ಲೂಕ್ ಪಂಚಾಯತ್ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ, ನಂಜನಗೂಡು ತಾಲ್ಲೂಕು, ಮೈಸೂರು.
- ಪ್ರಜಾವಾಣಿ, ವಿಜಯ ಕರ್ನಾಟಕ,ಮೈಸೂರುಮಿತ್ರ ಮತ್ತು ಆಂದೋಲನ ದಿನಪತ್ರಿಕೆಗಳು 2014.

ವಿಶೇಷ ವಿಷಯ:-02

ಸಾವಯವ ಕೃಷಿ ಪದ್ಧತಿಯಲ್ಲಿ ಆಧುನಿಕತೆ

SPECIAL THEME:-02
MODERN TRENDS IN ORGANIC FARMING

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಸಾವಯವ ಕೃಷಿ ಪದ್ಧತಿಯ ಪ್ರತಿಪಾದನೆಯಲ್ಲಿ ನವಧಾನ್ಯದ ಪಾತ್ರ	ಸೌಮ್ಯ .ಆರ್, ಬಿ. ಶಿವಣ್ಣ,	29 – 31
2.	ಸಾವಯವ ಕೃಷಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ	ಕೆ. ಎಂ. ಶ್ರೀನಿವಾಸ ರೆಡ್ಡಿ, ಶ್ರೀ ಟಿ. ರುದ್ರಮುನಿ ವೈ. ಎನ್. ಶಿವಲಿಂಗಯ್ಯ	31 – 36
3.	ಆಧುನಿಕ ಸಾವಯವ ಕೃಷಿ ಪದ್ಧತಿಯಿಂದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನೆ	ಎಂ.ಟಿ.ಸಂಜಯ್, ಪಿ.ಅಶೋಕ ವಿರೇಶ ಹತ್ತಿ, ಬಸವರಾಜ ಕುಂಬಾರ ಬಿ. ನವೀನ್	36 – 42

ಸಾವಯವ ಕೃಷಿ ಪದ್ಧತಿಯ ಪ್ರತಿಪಾದನೆಯಲ್ಲಿ ನವಧಾನ್ಯದ ಪಾತ್ರ

ಸೌಮ್ಯ .ಆರ್
ಸಂಶೋಧನ ವಿದ್ಯಾರ್ಥಿನಿ, ಮೈಸೂರು ವಿಶ್ವವಿದ್ಯಾನಿಲಯ,ಮಾನಸಗಂಗೋತ್ರಿ, ಮೈಸೂರು.

ಸಮಕಾಲೀನ ಕೃಷಿ ಪದ್ಧತಿಗಳಲ್ಲಿ ಸಾವಯವ ಕೃಷಿಯ ಅನುಷ್ಠಾನಕ್ಕೆ ಪ್ರಾಧಾನ್ಯತೆ ನೀಡಬೇಕೆಂಬುದು ಪರಿಸರವಾದಿಗಳ ಒತ್ತಾಸೆಯಾಗಿದೆ. ಈ ಪದ್ಧತಿಯ ಅಳವಡಿಕೆಯಲ್ಲಿ ಕೃಷಿಕರು, ಕೃಷಿತಜ್ಞರು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ ಅತ್ಯಗತ್ಯವಾಗಿದೆ. ಸಾವಯವ ಕೃಷಿ ಪದ್ಧತಿಯನ್ನು ಪ್ರೋತ್ಸಾಹಿಸಿ, ಪ್ರಚಾರ ಮಾಡುತ್ತಿರುವ ಭಾರತದ ಖ್ಯಾತ ಪರಿಸರವಾದಿಗಳಲ್ಲಿ ಡಾ.ವಂದನಾಶಿವರವರು ಅಗ್ರಮಾನ್ಯರಾಗಿದ್ದಾರೆ. ಅವರಿಂದ ಸ್ಥಾಪಿಸಲ್ಪಟ್ಟ ನವಧಾನ್ಯ ಎಂಬ ಸಂಸ್ಥೆಯು ಎರಡು ದಶಕಗಳಿಂದಲೂ ರಾಸಯನಿಕ ಮುಕ್ತ ಸಾವಯವ ಕೃಷಿ ಪದ್ಧತಿಯನ್ನು ಮತ್ತು ನವಧಾನ್ಯಗಳ ಬಿತ್ತನೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದ ಸಂಶೋಧನೆಗೆ ಮತ್ತು ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡುತ್ತಾ ಬಂದಿದೆ. ಸಾವಯವ ಕೃಷಿಯು ಜೀವ ವೈವಿಧ್ಯತೆಯ ಸಂರಕ್ಷಣೆ, ಧಾನ್ಯದ ಪೂರೈಕೆ, ಮಣ್ಣಿನ ಫಲವತ್ತತೆಯ ಕಾಪಾಡುವಿಕೆ, ರೋಗ ನಿಯಂತ್ರಣದಲ್ಲಿ, ನೀರಿನ ಸಂರಕ್ಷಣೆ, ವ್ಯಾಪಾರ ಮತ್ತು ವಿತರಣೆಯಲ್ಲಿ ಪ್ರಗತಿಪರವಾದುದೆಂದು ಅಭಿಪ್ರಾಯ ಪಡಲಾಗಿದೆ. ಆಹಾರ ಆರೋಗ್ಯ, ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿಗಳಿಗೆ ಮೂಲ ಆಧಾರವೇ ಕೃಷಿ ಮತ್ತು ಸಾವಯವ ಕೃಷಿಯಾಗಿದೆ. ಪ್ರಸ್ತುತದಲ್ಲಿ ಸುಸ್ಥಿರ ಕೃಷಿಯ ವಿಧಾನವು ರಾಸಾಯನಿಕ ಕೃಷಿ VS ಸಾವಯವ ಕೃಷಿಗಳಾಗಿದೆ. ರಾಸಾಯನಿಕ ಕೃಷಿಯು ವಿಷಯುಕ್ತ ಪದಾರ್ಥಗಳ ಉತ್ಪಾದನೆಯಲ್ಲಿ ಮತ್ತು ಜೈವಿಕತೆಯ ಅವನತಿ ಹೊಂದುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇದನ್ನು ಹೋಗುಲಾಡಿಸಲು ಸಾವಯವ ಕೃಷಿಯ ಪ್ರತಿಪಾದನೆಯು ಅವಶ್ಯಕವೂ, ಅನಿವಾರ್ಯವೂ, ಅನುಷ್ಠಾನ ಯೋಗ್ಯವು ಆಗಿದೆ. ಇದರಲ್ಲಿ ನವಧಾನ್ಯದ ಪಾತ್ರವು ಪ್ರಸ್ತುತವೂ ಆಗಿದೆ.

ಪೀಠಿಕೆ: ಸಮಕಾಲೀನ ಕೃಷಿ ಪದ್ಧತಿಗಳಲ್ಲಿ ಸಾವಯವ ಕೃಷಿಯ ಅನುಷ್ಠಾನಕ್ಕೆ ಪ್ರಾಧಾನ್ಯತೆ ನೀಡಬೇಕೆಂಬುದು ಪರಿಸರವಾದಿಗಳ ಒತ್ತಾಸೆಯಾಗಿದೆ. ಈ ಪದ್ಧತಿಯ ಅಳವಡಿಕೆಯಲ್ಲಿ ಕೃಷಿಕರು, ಕೃಷಿತಜ್ಞರು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ ಅತ್ಯಗತ್ಯವಾಗಿದೆ. ಸಾವಯವ ಕೃಷಿ ಪದ್ಧತಿಯನ್ನು ಪ್ರೋತ್ಸಾಹಿಸಿ, ಪ್ರಚಾರ ಮಾಡುತ್ತಿರುವ ಭಾರತದ ಖ್ಯಾತ ಪರಿಸರವಾದಿಗಳಲ್ಲಿ ಡಾ.ವಂದನಾಶಿವರವರು ಅಗ್ರಮಾನ್ಯರಾಗಿದ್ದಾರೆ. ಅವರಿಂದ ಸ್ಥಾಪಿಸಲ್ಪಟ್ಟ ನವಧಾನ್ಯ ಎಂಬ ಸಂಸ್ಥೆಯು ಎರಡು ದಶಕಗಳಿಂದಲೂ ರಾಸಯನಿಕ ಮುಕ್ತ ಸಾವಯವ ಕೃಷಿ ಪದ್ಧತಿಯನ್ನು ಮತ್ತು ನವಧಾನ್ಯಗಳ ಬಿತ್ತನೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದ ಸಂಶೋಧನೆಗೆ ಮತ್ತು ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡುತ್ತಾ ಬಂದಿದೆ. ಸಾವಯವ ಕೃಷಿಯು ಜೀವ ವೈವಿಧ್ಯತೆಯ ಸಂರಕ್ಷಣೆ, ಧಾನ್ಯದ ಪೂರೈಕೆ, ಮಣ್ಣಿನ ಫಲವತ್ತತೆಯ ಕಾಪಾಡುವಿಕೆ, ರೋಗ ನಿಯಂತ್ರಣದಲ್ಲಿ, ನೀರಿನ ಸಂರಕ್ಷಣೆ, ವ್ಯಾಪಾರ ಮತ್ತು ವಿತರಣೆಯಲ್ಲಿ[1] ಪ್ರಗತಿಪರವಾದುದೆಂದು ಅಭಿಪ್ರಾಯ ಪಡಲಾಗಿದೆ. ಆಹಾರ, ಆರೋಗ್ಯ, ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿಗಳಿಗೆ ಮೂಲ ಆಧಾರವೇ ಕೃಷಿಯಾಗಿದೆ. ಸಮಕಾಲಿನ ಸಂದರ್ಭದಲ್ಲಿ ಯಾವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂಬುದ ಬಗ್ಗೆ ಮಹಾ ಚರ್ಚೆ ನಡೆಯುತ್ತಿದೆ. ಹಸಿರು ಕ್ರಾಂತಿಗೆ ನಾಂದಿಯಾಗಿದ್ದ ರಾಸಾಯನಿಕ ಯುಕ್ತ ಕೃಷಿ ಪದ್ಧತಿ ಯೋಗ್ಯವೋ ಅಥವಾ ನಿಸರ್ಗ ಸ್ನೇಹಿ ಸುಸ್ಥಿರ ಅಭಿವೃದ್ಧಿಗೆ ಮಾನವನ ಮತ್ತು ಮನುಕುಲದ ಹಾನಿರಹಿತ ಏಳಿಗೆಗೆ ಪೂರಕವೆನ್ನಬಹುದಾದ ಸಾವಯವ ಕೃಷಿ ಯೋಗ್ಯವೋ ಎಂಬ ಎರಡು ಪ್ರಮುಖ ಪ್ರಶ್ನೆಗಳು ಚರ್ಚೆಗೆ ಗ್ರಾಸವಾಗಿವೆ. ರಾಸಾಯನಿಕ ಯುಕ್ತ ಕೃಷಿ ತ್ವರಿತ ಬೆಳೆ ಮತ್ತು ಹಿಳುವರಿಯು ಪ್ರಮಾಣವನ್ನು ಹೆಚ್ಚಿಸುತ್ತಾದ್ದಾದರೂ ವಿಷಯುಕ್ತವಾದುದಾಗಿದೆ ಎಂಬುದು ತಜ್ಞರ ಅಭಿಪಾಯವಾಗಿದೆ. ಪರಿಸರಕ್ಕೂ, ಜೀವ ಪರಿಸರಕ್ಕೂ ಹಾನಿಕಾರಕ ಎನ್ನಬಹುದಾದ ಇಂತಹ ಕೃಷಿ ಪದ್ಧತಿಯು ಅನುಕರಣೀಯ ಯೋಗ್ಯವಲ್ಲವೆಣಬುದು ಪರಿಸರ ತಜ್ಞರ ಅಭಿಪ್ರಾಯವಾಗಿದೆ. ಸಾವಯವ ಕೃಷಿಯ ಜನಪ್ರಿಯತೆಗಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಒಂದಾದ ನವಧಾನ್ಯ ಸಂಸ್ಥೆಯ ಪಾತ್ರವು ಗಮನಾರ್ಹವಾದುದು.

ಸಾವಯವ ಕೃಷಿ ಮತ್ತು ನವಧಾನ್ಯ: ಸಾವಯವ ಕೃಷಿಯು ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳನ್ನು ಪ್ರತಿನಿಧಿಸುತ್ತದೆ. ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳ ಯಶಸ್ವಿಯುತ ಬಳಕೆಯೇ ಸಾವಯವ ಕೃಷಿಯಾಗಿದೆ... ಹಾಗೆಯೇ ಆಹಾರ ಸರಪಳಿಯಲ್ಲಿ ಧಾನ್ಯವು ಪ್ರಥಮ ಕೊಂಡಿಯಾಗಿದೆ.[2] 'ಅಪೌಷ್ಟಿಕತೆ ಮತ್ತು ಹಸಿವನ್ನು ಹೋಗಲಾಡಿಸು ವುದು'[3] ಸಾವಯವ ಕೃಷಿ ಮತ್ತು ಉತ್ತಮ ಧಾನ್ಯದಿಂದ ಮಾತ್ರ ಸಾಧ್ಯ.

ಸಾವಯವ ಕೃಷಿ: ಜೈವಿಕ ಪ್ರಕ್ರಿಯೆ ಮತ್ತು ಪಾರಿಸಾರಿಕ ನಿರ್ವಹಣೆಯಲ್ಲಿ ಸಾವಯವ ಕೃಷಿಯು ನವೀಕರಣ ಹೊಂದುವ ಸಂಪನ್ಮೂಲವಾಗಿದೆ ಸಾವಯವ ಕೃಷಿಯ ಪ್ರಮುಖ ಉದ್ದೇಶವೆಂದರೆ ಪರಿಸರದಲ್ಲಿನ ಬೆಳೆಯ ಫಲವನ್ನು ಪಾರಿಸಾರಿಕವಾಗಿ ಕೊಡವುದೇ ಆಗಿದೆ. ಪ್ರಸ್ತುತದಲ್ಲಿ ಕೈಗಾರೀಕರಣ ಹೊಂದಿದ ರಾಷ್ಟ್ರಗಳು ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳುತ್ತಿರುವುದು ಹೆಚ್ಚಾಗುತ್ತದೆ.

"ಸಾವಯವ ಕೃಷಿಯು ವೇಗಗತಿಯಲ್ಲಿ ಬೆಳೆಯುತ್ತಿದ್ದು, ವಿಶ್ವಾದ್ಯಾಂತ ಸುಮಾರು 23 ಮಿಲಿಯನ್ ಎಕರೆ ಭೂಮಿಯು ಸಾವಯವ ಕೃಷಿಗೆ ಒಳಪಟ್ಟಿರುವುದು ದೃಡಪಟ್ಟಿದೆ. ಅದರಲ್ಲಿ ಆಸ್ಟ್ರೇಲಿಯಾ, ಅರ್ಜೆಂಟೈನಾ ಮತ್ತು ಇಟಲಿಯು ಮುಂದೆ ಸಾಗಿದೆ. ಇತ್ತೀಚಿನ ಸಂಶೋಧನಾ ವರದಿಯಂತೆ 200 ಸುಸ್ಥಿರ ಕೃಷಿ ಸಂಬಂಧಿ ಯೋಜನೆಯಲ್ಲಿ 52 ದೇಶಗಳು, ಸರಿಸುಮಾರು 70 ಮಿಲಿಯನ್ ಎಕರೆ ಮತ್ತು 9 ಮಿಲಿಯನ್ ಗ್ರಾಮೀಣ ರೈತರನ್ನು ಒಳಗೊಂಡಿತ್ತು. ಇದು ವಿಶ್ವವಿದ್ಯಾನಿಲಯೊಂದರ ಸಮೀಕ್ಷೆಯಾಗಿತ್ತು. ಅದರಂತೆ ಸುಸ್ಥಿರ ವಿಧಾನವನ್ನು ಶೇಕಡ 150 ರಷ್ಟು ರೈತರು ಅವಲಂಬಿತರಾಗಿದಾರೆ ಎಂದು ಸಂಶೋಧನೆಗಳಿಂದ ತಿಳಿದು ಬಂದಿತು".[4]

ವಿವಿಧ ದೇಶಗಳ ಸರ್ಕಾರಗಳು ನೇರವಾಗಿ ಸಾವಯವ ಕೃಷಿಗೆ ಉತ್ತೇಜನ ನೀಡುತ್ತಾ ಬಂದಿವೆ. ಗ್ರಾಹಕರ ಒತ್ತಾಯದ ಮೇರೆಗೆ ಸಾವಯವ ಕೃಷಿಯು ಹೆಚ್ಚು ಪ್ರವರ್ಧಮಾನಕ್ಕೆ ಬರತೊಡಗಿತ್ತು. 1987ರಲ್ಲಿ ಡೆನ್ಮಾರ್ಕ್ ಸರ್ಕಾರವು ಪ್ರಥಮಬಾರಿಗೆ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಿತು. ನಂತರದಲ್ಲಿ ಜರ್ಮನಿಯು ಸಾವಯವ ಕೃಷಿಯನ್ನು ಪ್ರೋತ್ಸಾಹಿಸತೊಡಗಿತು. 1996 ರಿಂದ ಯೂರೋಪಿನ

ಸದಸ್ಯ ರಾಜ್ಯಗಳು ಸಾವಯವ ಕೃಷಿಗೆ ಯೋಜನೆಗಳನ್ನು ಆರಂಭಿಸುವ ಮೂಲಕ ಪ್ರೋತ್ಸಾಹ ನೀಡುತ್ತಾ ಬಂದಿವೆ. ಆಸ್ಟ್ರೀಯಾ ಮತ್ತು ಸ್ವಿಜರ್ಲ್ಯಾಂಡ್ ದೇಶಗಳು ಶೇಕಡ 10 ರಷ್ಟು ಜೈವಿಕ ಕೃಷಿ ಉತ್ಪಾದನೆ ಮಾಡುತ್ತವೆ. ಸ್ವೀಡನ್ ಶೇಕಡ 15 ರಷ್ಟು ಉತ್ಪಾದನೆ ಮಾಡುತ್ತಿದೆ. ಕೃಷಿ ಸಚಿವರೊರ್ವರು 2010ರ ವೇಳೆಗೆ ಜರ್ಮನಿಯು ಶೇಕಡ 20 ರ ಪ್ರಮಾಣಕ್ಕೆ ಜೈವಿಕ ಕೃಷಿ ಉತ್ಪನ್ನಗಳ ಉತ್ಪಾದನೆಯ ಗುರಿ ಹೊಂದೊದೆ ಎಂದು ಘೋಷಿಸಿದ್ದರು.

ಸಾವಯವ ಕೃಷಿ ಪದ್ಧತಿಯು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಷ್ಟೇ ಅಲ್ಲದೆ ವಿಕಾಸ ಶೀಲ ರಆಷ್ಟ್ರಗಳಲ್ಲಿಯು ಜನಪ್ರಿಯತೆ ಯಾಗುತ್ತದೆ. ಸರ್ಕಾರೇತರ ಸಂಸ್ಥೆಯಾದ ನವಧಾನ್ಯ ಈ ಕಾರ್ಯದಲ್ಲಿ ತನ್ನನ್ನು ತಾವು ತೊಡಗಿಸಿಕೊಂಡಿದೆ.

ಸಾವಯವ ಕೃಷಿ ತತ್ವಗಳು: ನವಧಾನ್ಯ ಸಂಸ್ಥೆಯು ಸಾವಯವ ಕೃಷಿ ಅಳವಡಿಕೆ ಮತ್ತು ಜನಪ್ರಿಯತೆಗಾಗಿ ಮೌಲ್ಯಯುಕ್ತವಾದ ಈ ತತ್ವಗಳನ್ನು ಪ್ರತಿಪಾದಿಸಿ ಪ್ರಚಾರ ಮಾಡುತ್ತಿದೆ. ಅವುಗಳೆಂದರೆ.

1. ಜೀವ ವೈವಿಧ್ಯತೆ, ನೀರು ಮತ್ತು ಮಣ್ಣಿನ ಸಂರಕ್ಷಣೆಯು ಪರಿಸರ ವ್ಯವಸ್ಥೆಗೆ ಅನುಗುಣವಾಗಿ ಪೋಷಣೆ ಮತ್ತು ಸಂರಕ್ಷಣೆ ಮಾಡುವುದು.
2. ನೈಸರ್ಗಿಕ ಸಂಪನ್ಮೂಲಗಳ ಶೋಷಣೆಯನ್ನು ತಡೆಹಟ್ಟುವುದು.
3. ಪೌಷ್ಟಿಕಾಂಶ ಮತ್ತು ಉತ್ತಮ ದರ್ಜೆಯ ಆಹಾರ ಉತ್ಪಾದನೆ.
4. ಸಾಂಪ್ರದಾಯಿಕ ಕೃಷಿ ವ್ಯವಸ್ಥೆಯ ಸಂರಕ್ಷಣೆ.
5. ವೈವಿಧ್ಯತೆ.
6. ವಿಕೇಂದೀಕರಣ ತತ್ವ.
7. ಮಣ್ಣಿನ ಸಂರಕ್ಷಣೆ.
8. ಮಣ್ಣಿನ ಫಲವತ್ತತೆಯ ನಿರ್ವಹಣೆ.
9. ರಾಸಾಯನಿಕ ಮುಕ್ತ ಕೃಷಿ.
10. ಜೈವಿಕವಾಗಿ ರೋಗ ನಿಯಂತ್ರಣ ಮಾಡುವುದು
11. ಸ್ಥಳೀಯ ಸಂಪನ್ಮೂಲಗಳ ಸುಸ್ಥಿರ ಬಳಕೆ[6]

ಈ ಎಲ್ಲ ತತ್ವಗಳು ನವಧಾನ್ಯದ ತತ್ವಗಳು ಎಂದು ಹೇಳಬಹುದು. ಇವು ಸಾವಯವ ಕೃಷಿಯನ್ನು ಉಳಿಸಿ ಬೆಳೆಸುವ ನಿರ್ಣಾಯಕ ಅಂಶಗಳೇ ಆಗಿವೆ.

ನವಧಾನ್ಯ: "ನವಧಾನ್ಯ ಎಂದರೆ ಹೆಸರೇ ಸೂಚಿಸುವಂತೆ ಒಂಭತ್ತು ಧಾನ್ಯಗಳು ಎಂದರ್ಥವನ್ನು ಕೊಡುತ್ತಾರೆ.[7] ಡಾ. ವಂದನಾಶಿವರವರಿಂದ ಸ್ಥಾಪಿಸಲ್ಪಟ್ಟ ಸಂಸ್ಥೆ (Research Foundation for Science, Technology and Ecology) (RFSTE). ನವಧಾನ್ಯ. ಇದರ ಪ್ರಮುಖ ಗುರಿ ದಾನ್ಯಸಂರಕ್ಷಣೆ ಮಾಡುವುದೆ ಆಗಿದೆ. ವಿವಿದ ರಾಜ್ಯಗಳಲ್ಲಿ ದಾನ್ಯಬ್ಯಾಂಕುಗಳನ್ನು ಸ್ಥಾಪಿಸಲ್ಪಟಿದೆ. ಮತ್ತು 2000ಕ್ಕಿಂತ ಅಧಿಕ ನಮೂನೆಯ ಭತ್ತದ/ಅಕ್ಕಿ ತಳಿಗಳನ್ನು ರಕ್ಷಿಸಿದೆ. 37 ನಮೂನೆಯ ಗೋಧಿಯನ್ನು, ರಾಗಿ, ಎಣ್ಣೆ ಬೀಜಗಳು, ತರಕಾರಿಗಳನ್ನು ರಕ್ಷಿಸುತ್ತಾ ಬಂದಿದೆ. ನವಧಾನ್ಯವು ಕೃಷಿಕರ ಮತ್ತು ಗ್ರಾಹಕರ ನೇರ ಸಂಬಂಧ ವೃದ್ಧಿಗೆ ಸಹಕಾರಿಯಾಗಿದೆ. ಇದರಿಂದಾಗಿ ಜನರಿಗೆ ಆಹಾರ ಪರಮಾಧಿಕಾರದ ಹಕ್ಕು ಜೊತೆಗೆ ಆರೋಗ್ಯಕರ ಮತ್ತು ರುಚಿಕರ ಆಹಾರವು ಪ್ರತಿದಿನ ಪ್ರತಿಯೊಬ್ಬರ ಹಕ್ಕು[8] ಎಂಬುದನ್ನು ಪ್ರಚಾರ ಮಾಡುತ್ತಿದೆ.

ಸಾಂಪ್ರದಾಯಿಕ ಜ್ಞಾನಕ್ಕೆ ಅನುಗುಣವಾಗಿ ಒಂದೂಂದು ದಾನ್ಯದ ಅಂತರ್ಗತ ಶಕ್ತಿ ಮತ್ತು ಮೌಲ್ಯವನ್ನು ವರ್ಧಿಸಿ ರುಜುವಾತು ಪಡಿಸಲು ನವಧಾನ್ಯಸಂಸ್ಥೆ ಪ್ರಯತ್ನಿಸಿದೆ. ನವಗ್ರಹಗಳಲ್ಲಿರುವ ಪ್ರತಿಯೊಂದು ಗ್ರಹವು ಒಂದೂಂದು ಧಾನ್ಯದ ಪ್ರತೀಕವಾಗಿದೆ. ಅರ್ಥಾತ್ ಧಾನ್ಯ ವೊಂದರ ಶಕ್ತಿ ಗ್ರಹದ ಶಕ್ತಿಯ ಅವತಾರ ರೂಪವಾಗಿದೆ. ಧಾನ್ಯಗ್ರಹಗಳ ಸಂಬಂಧವು ಕಪೋಲ ಕಲ್ಪತವೆಂದು ಸಂಪ್ರದಾಯಿಕ ಭಾವನೆ. ಆದರು ನವಧಾನ್ಯ ಸಂಸ್ಥೆಯು ಪರಂಪರಾನುಗತವಾಗಿ ಬೆಳೆದುಬಂದ ಜ್ಞಾನವನ್ನು ಪಸರಿಸುತ್ತಿದೆ. ಸಂಬಿಕೆಯ ಶಾಸ್ತ್ರೀಯತೆಯನ್ನು ಪ್ರತಿನಿಧಿಸುತ್ತವೆ. ಅವುಗಳೆಂದರೆ. ಗೋಧಿ-ಸೂರ್ಯ, ಅಕ್ಕಿ-ಚಂದ್ರ, ತೊಗರಿ-ಕುಜ, ಹಸಿರು-ಬುಧ, ಕಡಲೆಕಾಳು-ಗುರು, ಅವರೆಕಾಳು-ಶುಕ್ರ, ಕಪ್ಪುಎಳ್ಳು-ಶನಿ, ಕಪ್ಪುಉದ್ದು-ರಾಹು, ಹುರುಳು-ಕೇತು.

ನವಧಾನ್ಯದ ಸಾವಯವ ಕೃಷಿ ಹೋರಾಟವು ದೀರ್ಘ ಸಂಚಲನವನ್ನು ಉಂಟುಮಾಡಿತು. ರಾಸಾಯನಿಕಯುಕ್ತ ಕೃಷಿಯು ಸಾರ್ವಜನಿಕ ಆರೋಗ್ಯ ಮತ್ತು ಪೋಷ್ಟಿಕಾಂಶವನ್ನು ವಿನಾಶಕ್ಕೆ ತಳ್ಳುತ್ತಿದೆ ಎಂದು ಪ್ರತಿಭಟಿಸಿತು. ಜೈವಿಕ ಕೃಷಿಯನ್ನು ಹಾಗೂ ಮುಕ್ತ ವ್ಯಾಪಾರದಲ್ಲಿ ಮತ್ತು ಆರೋಗ್ಯ, ವೈವಿದ್ಯತೆ ಮತ್ತು ಆಹಾರ ಭದ್ರತೆಯಲ್ಲಿ ಕಾಳಜಿಯನ್ನು ವಹಿಸಿ ಪ್ರತಿಭಟನೆ ಮಾಡಿತು. ಭಾರತದಲ್ಲಿ ಜೀವ ವೈವಿಧ್ಯತೆ ಸಂರಕ್ಷಣೆ ಮತ್ತು ಸಣ್ಣ ಹಿಡುವಳಿ ರೈತರ ರಕ್ಷಣೆಯು ಒಂದು ಹೋರಾಟವಾಗಿ ಮಾರ್ಪಟ್ಟಿದೆ ಈ ಹೋರಾಟವು ಪ್ರಸ್ತುತದಲ್ಲಿ ಭಾರತಾದ್ಯಾಂತ ಹರಡಿದ್ದು ನವಧಾನ್ಯದ ಸಂಘಟನೆ ಮತ್ತು ಕೃಷಿಕರ ಸಂಘಟನೆಯಲ್ಲೂ ಈ ಹೋರಾಟವು ಹೆಚ್ಚುತ್ತಿರುವುದು ಕಂಡುಬರುತ್ತಿದೆ.[10]

ಸಾವಯ ಕೃಷಿ ಚಳುವಳಿಯ ಭಾಗವಾಗಿಯೇ ಬೀಜ ಸ್ವರಾಜ್ ಮತ್ತು ಬೀಜ ಪರಮಾಧಿಕಾರವನ್ನು ನವಧಾನ್ಯ ಪ್ರತಿಪಾಧಿಸುತ್ತಿದೆ. ದೇಶೀಯ ಮೂಲ ಸಂಪ್ರದಾಯ ಅದರಲ್ಲೂ ಬಿತ್ತನೆ ಬೀಜಗಳ ಸಂರಕ್ಷಣೆ ಹಾಗೂ ಉತ್ತಮ ಆಹಾರದ ಸಂಸ್ಕೃತಿಗಾಗಿ ಉತ್ತಮ ಆಹಾರದ ಕಾರ್ಯಕ್ರಮಗಳನ್ನು (Good food programme) ಹಮ್ಮಿಕೊಂಡು ಉತ್ತಮ ಆಹಾರ ಎಲ್ಲರ ಹಕ್ಕು ಎಂಬ ಅಂಶವನ್ನು ತಿಳಿಸುವ ಪ್ರಯತ್ನ ಈ ಕಾರ್ಯಕ್ರಮದಾಗಿದೆ.[10]

ನವಧಾನ್ಯವು ಸಾವಯವ ಕೃಷಿಗೆ ಒತ್ತುಕೊಟ್ಟಂತೆ ಇತರೆ ವಲಯಕ್ಕೂ ಪ್ರಾಧಾನ್ಯತೆ ಕೊಟ್ಟಿದೆ. ಅಂದರೆ ಆರೋಗ್ಯ, ಅಭಿವೃದ್ಧಿ, ಸಂಪತ್ತು, ತಂತ್ರಜ್ಞಾನ, ವಿಜ್ಞಾನಗಳೆಲ್ಲವು ಕೃಷಿಯಲ್ಲಿ ಸೇರ್ಪಡೆಗೊಂಡಿದೆ. ಈ ಭಾಗವಾಗಿ ಸಾವಯವ ಕೃಷಿಯು ನವಧಾನ್ಯದಲ್ಲಿ ಅಡಗಿದೆ ಎಂಬುದು ಇಲ್ಲಿನ ದೃಢವಾದ ನಂಬಿಕೆಯಾಗಿದೆ.

ಉಪಸಂಹಾರ: ಸಾವಯವ ಕೃಷಿಯು ಆರ್ಥಿಕ ಪ್ರಗತಿಯನ್ನ ಸಾಧಿಸದಿದ್ದರೂ, ಉತ್ತಮ ಆರೋಗ್ಯವನ್ನು ಮತ್ತು ಆರೋಗ್ಯವಂತ ದೇಶದ ನಿರ್ಮಾಣಕ್ಕೆ ಸಹಕಾರಿಯಾದುದು, ಇದಕ್ಕೆ ಪ್ರೋತ್ಸಾಹ ನೀಡುವಂತಹುದು ಉತ್ತಮ ಧಾನ್ಯ ಹಾಗೂ ಸಂಪ್ರದಾಯಿಕ ಬಿತ್ತನೆ ಬೀಜಗಳಾಗಿವೆ. ಬಿತ್ತನೆ ಬೀಜಗಳ ಪೋಷಣೆ, ಸಂರಕ್ಷಷಣೆಯು ಕೃಷಿಯನ್ನು ಮತ್ತು ಸಾವಯವ ಕೃಷಿಯನ್ನು ವೃದ್ಧಿಗೊಳಿಸಲು ಸಹಕಾರಿ ಎಂಬುದು ಪ್ರತಿಯೊಬ್ಬರ ಆಶಾಭಾವನೆ. ಆದರೆ ಕುಲಾಂತರಿ ಬೀಜಗಳ ಹಾವಳಿ/ಹೈಬ್ರೀಡ್‌ಗಳ ಹಾವಳಿಗಳಿಂದಾಗಿ ಅನೇಕ ರೋಗ ಪೂರಿತ ಬೆಳೆಗಳು ಮಾರುಕಟ್ಟೆಗೆ ಪೂರೈಕೆಯಾಗುತ್ತಿದೆ. ಆದ್ದರಿಂದ ಹಲವಾರು ರೀತಿಯ ಖಾಯಿಲೆಗಳು ಮತ್ತು ಕುಪೌಷ್ಟಿಕತೆಯಿಂದ ಜನ ಪ್ರತಿನಿತ್ಯ ನರಳುವಂತಾಗಿದೆ ಆದ್ದರಿಂದ ಸಾವಯವ ಕೃಷಿ ಪದ್ಧತಿಯ ಪ್ರತಿಪಾದನೆಯಲ್ಲಿ ನವಧಾನ್ಯ ಪಾತ್ರ ಸ್ಪಷ್ಟಪಡಿಸುವ ಕೆಲವೊಂದು ಸಲಹೆಗಳೆಂದರೆ.

• ಸಾವಯವ ಕೃಷಿಯಿಂದ ಆರೋಗ್ಯವಂತ ಮತ್ತು ಪೌಷ್ಟಿಕಾಂಶದ ದೇಶದ ಉದಯವಾದಿತು. ಆದ್ದರಿಂದ ಬಿತ್ತನೆ ಬೀಜಗಳ ರಕ್ಷಣೆಯಲ್ಲಿ ಎಲ್ಲರು ಪಾಲ್ಗೊಳ್ಳಲೇ ಬೇಕಾಗಿದೆ.

• ಜೀವ ವೈವಿಧ್ಯತೆಯ ಸಂರಕ್ಷಣೆ ಸಾವಯವ ಕೃಷಿಯಿಂದಾಗಿದೆ.

• ಉತ್ತಮ ಆಹಾರ ಪಡೆಯುವುದು ಎಲ್ಲರ ಹಕ್ಕು ಆದ್ದರಿಂದ ಗ್ರಾಹಕರು. ಪಾಶ್ಚಮಾತ್ಯ ಸಂಸ್ಕೃತಿಯ ಆಹಾರಕ್ಕೆ ಒಳಗಾಗಿದೇ ದೇಸೀಯ ಕೃಷಿಗೆ ಪ್ರೋತ್ಸಾಹ ನೀಡಬೇಕೆಂಬುದಾಗಿದೆ.

ಹೀಗೆ ನವಧಾನ್ಯ ಸಂಸ್ಥೆಯು ಸಾವಯವ ಕೃಷಿಯಲ್ಲಿ ಪ್ರಮುಖ ಮತ್ತು ಪ್ರಧಾನ ಕಾರ್ಯವನ್ನ ನಿರ್ವಹಿಸುತ್ತಿದೆ ಎಂಬುದು ಈ ಮೇಲಿನ ಅಂಶಗಳಿಂದ ದೃಢಪಡುತ್ತದೆ.

End Notes

1. Dr. Vandana Shiv, Dr. Poonam Pande, Dr, Jitendra Singh, Principles of organic Farming Reliving the earth's Harnest, New Delhi, Navdanya, 2004
2. Vandana Shiva – Seed Dictatorship and Food Fascism, New Delhi, navdanya.
3. Dr. Vandana Shiva with Dr. Vaibhav Singh – Health per Acre – organic Saluting to hunger and malnutrition, New Delhi, Navdanya, 2011
4. Vandana Shiva, Claudio martini, - manifesto on the Future of FOOD. The International Commission on the Future of Food and Agriculture – new Delhi, Navadanya.
5. Ibid
6. Dr. Vandana Shiv, Dr. Poonam Pande, Dr, Jitendra Singh, Principles of organic Farming Reliving the earth's Harnest, New Delhi, Navdanya, 2004
7. Vandana Shiva – Seed Dictatorship and Food Fascism, New Delhi, navdanya Ed Dr. Vandana Shiva – BIJA – the Seed, Summer, 2006, Vaume – 39.
8. Ed Dr. Vandana Shiva – BIJA – the Seed, Summer, 2006, Volume – 39.
9. Vandana Shiva – Seed Dictatorship and Food Fascism, New Delhi, navdanya.
10. www.navdanya.org
11. Ed Dr. Vandana Shiva – BIJA – the Seed, Summer, 2006, Volume – 39.

ಸಾವಯವ ಕೃಷಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ

ಬಿ. ಶಿವಣ್ಣ, ಕೆ. ಎಂ. ಶ್ರೀನಿವಾಸ ರೆಡ್ಡಿ, ಶ್ರೀ ಟಿ. ರುದ್ರಮುನಿ* ಮತ್ತು ವೈ. ಎನ್. ಶಿವಲಿಂಗಯ್ಯ

ಕೃಷಿ ಕಾಲೇಜು, ಕೃಷಿ ವಿಶ್ವ ವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು 560 065 *ವಲಯ ಕೃಷಿ ಮತ್ತು ತೋಟಗಾರಿಕ ಸಂಶೋಧನ ಕೇಂದ್ರ, ಹಿರಿಯೂರು, ಶಿವಮೊಗ್ಗ, ಕೃಷಿ ಮತ್ತು ತೋಟಗಾರಿಕ ವಿಶ್ವವಿದ್ಯಾನಿಲಯ, ಶಿವಮೊಗ್ಗ.

ಇತ್ತೀಚಿನ ದಿನಗಳಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ಬರುತ್ತಿದ್ದು, ಪ್ರತಿಯೊಂದು ಬೆಳೆಯನ್ನು ಸಾವಯವ ವಿಧಾನದಲ್ಲಿ ಬೆಳೆಸಲು ಹೆಚ್ಚಿನ ಆದ್ಯತೆ ಕೊಡುವುದರಿಂದ ಕೀಟ ನಿರ್ವಹಣೆಯಲ್ಲಿ ಸಸ್ಯಾಧಾರಿತ ಕೀಟನಾಶಕಗಳು ಮಹತ್ತರವಾದ ಪಾತ್ರ ವಹಿಸುತ್ತಿವೆ. ಅತಿಯಾದ ರಾಸಾಯನಿಕ ಕೀಟನಾಶಕಗಳ ಬಳಕೆಯಿಂದ ಕೀಟಗಳ ನೈಸರ್ಗಿಕ ಶತ್ರುಗಳು ಮತ್ತು ಉಪಯುಕ್ತ ಸೂಕ್ಷಾಣುಗಳ ನಾಶ, ಪ್ರಕೃತಿ, ಮಣ್ಣು, ನೀರು, ಪಶು, ಪಕ್ಷಿ, ಸಂಕುಲ ಹಾಗೂ ಮಾನವ ಜನಾಂಗಕ್ಕೆ ಹಾನಿಕಾರಕವಾಗಿದೆ. ನಾವು ತಿನ್ನುತ್ತಿರುವ ಆಹಾರ ಹಾಗೂ ನೀರು ಸಹ ಕೀಟನಾಶಕಗಳಿಂದ ಕಲುಶಿತಗೊಂಡಿದ್ದು, ಅನೇಕ ಸಾವುಗಳು ಹಾಗೂ ವಿವಿಧ ತೊಂದರೆಗಳುಂಟಾಗುತ್ತವೆ. ಹಾಗಾಗಿ ಸಸ್ಯಾಧಾರಿತ ಕೀಟನಾಶಕಗಳು ನಿಸರ್ಗದಲ್ಲಿ ಸಮತೋಲಣ ಕಾಪಾಡುವುದರ ಜೊತೆಗೆ ರಾಸಾಯನಿಕಗಳಿಂದ ಆಗುವ ದುಷ್ಪರಿಣಾಮಗಳನ್ನು ತಪ್ಪಿಸಿದಂತಾಗುತ್ತದೆ. ಸಾವಯವ ಕೃಷಿಯಲ್ಲಿ ತೊಡಗಿರುವ ರೈತರಿಗೆ ಸಸ್ಯಾಧಾರಿತ ಕೀಟನಾಶಕಗಳು ಕೀಟ ನಿರ್ವಹಣೆಯಲ್ಲಿ ಸಹಕಾರಿಯಾಗಲಿದೆ.

ರೈತರು ರಾಸಾಯನಿಕ ಪೀಡೆನಾಶಕಗಳನ್ನು ಬಳಕೆ ಮಾಡುವುದರಿಂದ ಅನೇಕ ಸಮಸ್ಯೆಗಳು ಉದ್ಭವಿಸಿವೆ. ಕೀಟಗಳು ರಾಸಾಯನಿಕ ಪೀಡೆನಾಶಕಗಳಿಗೆ ನಿರೋಧಕ ಶಕ್ತಿ ಬೆಳಸಿಕೊಂಡಿವೆ. ಅಪ್ರದಾನ ಕೀಟಗಳು ಪ್ರಧಾನ ಕೀಟಗಳಾಗಿ ಹಾನಿ ಮಾಡುತ್ತಿರುವುದು. ಮಾನವ, ಪ್ರಾಣಿ ಇತರೆ ಜೀವಿಗಳಿಗೆ ಅಪಾಯಕಾರಿಯಾಗಿರುವುದು. ಮಿತ್ರ ಕೀಟಗಳ ನಾಶದಿಂದ ಪೀಡಗಳ ಸಂಖ್ಯೆ ಹೆಚ್ಚುವುದು. ಪರಿಸರ ಮಾಲಿನ್ಯ ಹಾಗು ಮಾನವನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ಉತ್ಪಾದನ ವೆಚ್ಚ ಹೆಚ್ಚಳವಾಗಿರುವುದು.

ಸಾವಯವ ಕೃಷಿಯ ಪೀಡೆ ನಿರ್ವಹಣೆಯಲ್ಲಿ ಅಳವಡಿಸಬಹುದಾದ ಹತೋಟಿ ಕ್ರಮಗಳೆಂದರೆ ನಿರೋಧಕ ತಳಿಗಳ ಬಳಕೆ, ಬೇಸಾಯ ಕ್ರಮಗಳು, ಯಾಂತ್ರಿಕ ಪದ್ಧತಿಗಳು, ಭೌತಿಕ ಪದ್ಧತಿಗಳು, ಜೈವಿಕ ಹತೋಟಿ ಮತ್ತು ಜೈವಿಕ ಪೀಡೆನಾಶಕಗಳ ಬಳಕೆ.

ಇತ್ತೀಚಿನ ದಿನಗಳಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ಬರುತ್ತಿದ್ದು, ಪ್ರತಿಯೊಂದು ಬೆಳೆಯನ್ನು ಸಾವಯವ ವಿಧಾನದಲ್ಲಿ ಬೆಳೆಸಲು ಹೆಚ್ಚಿನ ಆದ್ಯತೆ ಕೊಡುವುದರಿಂದ ಕೀಟ ನಿರ್ವಹಣೆಯಲ್ಲಿ ಸಸ್ಯಾಧಾರಿತ ಕೀಟನಾಶಕಗಳು ಮಹತ್ತರವಾದ ಪಾತ್ರ ವಹಿಸುತ್ತಿವೆ. ಅತಿಯಾದ ರಾಸಾಯನಿಕ ಕೀಟನಾಶಕಗಳ ಬಳಕೆಯಿಂದ ಕೀಟಗಳ ನೈಸರ್ಗಿಕ ಶತ್ರುಗಳು ಮತ್ತು ಉಪಯುಕ್ತ ಸೂಕ್ಷಾಣುಗಳ ನಾಶ, ಪ್ರಕೃತಿ, ಮಣ್ಣು , ನೀರು, ಪಶು, ಪಕ್ಷಿ, ಸಂಕುಲ ಹಾಗೂ ಮಾನವ ಜನಾಂಗಕ್ಕೆ ಹಾನಿಕಾರಕವಾಗಿದೆ. ನಾವು ತಿನ್ನುತ್ತಿರುವ ಆಹಾರ ಹಾಗೂ ನೀರು ಸಹ ಕೀಟನಾಶಕಗಳಿಂದ ಕಲುಶಿತಗೊಂಡಿದ್ದು, ಅನೇಕ ಸಾವುಗಳು ಹಾಗೂ ವಿವಿಧ ತೊಂದರೆಗಳುಂಟಾಗುತ್ತವೆ. ಹಾಗಾಗಿ ಸಸ್ಯಾಧಾರಿತ ಕೀಟನಾಶಕಗಳು ನಿಸರ್ಗದಲ್ಲಿ ಸಮತೋಲನ ಕಾಪಾಡುವುದರ ಜೊತೆಗೆ ರಾಸಾಯನಿಕಗಳಿಂದ ಆಗುವ ದುಷ್ಪರಿಣಾಮಗಳನ್ನು ತಪ್ಪಿಸಿದಂತಾಗುತ್ತದೆ. ಸಾವಯವ ಕೃಷಿಯಲ್ಲಿ ತೊಡಗಿರುವ ರೈತರಿಗೆ ಸಸ್ಯಾಧಾರಿತ ಕೀಟನಾಶಕಗಳು ಕೀಟ ನಿರ್ವಹಣೆಯಲ್ಲಿ ಸಹಕಾರಿಯಾಗಲಿದೆ.

ರೈತರು ರಾಸಾಯನಿಕ ಪೀಡೆನಾಶಕಗಳನ್ನು ಬಳಕೆ ಮಾಡುವುದರಿಂದ ಅನೇಕ ಸಮಸ್ಯಗಳು ಉದ್ಭವಿಸಿವೆ.

- ಕೀಟಗಳು ರಾಸಾಯನಿಕ ಪೀಡೆನಾಶಕಗಳಿಗೆ ನಿರೋಧಕ ಶಕ್ತಿ ಬೆಳಸಿಕೊಂಡಿವೆ.
- ಅಪ್ರದಾನ ಕೀಟಗಳು ಪ್ರಧಾನ ಕೀಟಗಳಾಗಿ ಹಾನಿ

ಮಾಡುತ್ತಿರುವುದು.

- ಮಾನವ, ಪ್ರಾಣಿ ಇತರೆ ಜೀವಿಗಳಿಗೆ ಅಪಾಯಕಾರಿಯಾಗಿರುವುದು.
- ಮಿತ್ರ ಕೀಟಗಳ ನಾಶದಿಂದ ಪೀಡಗಳ ಸಂಖ್ಯೆ ಹೆಚ್ಚುವುದು .
- ಪರಿಸರ ಮಾಲಿನ್ಯ ಹಾಗು ಮಾನವನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ .
- ಉತ್ಪಾದನ ವೆಚ್ಚ ಹೆಚ್ಚಳವಾಗಿರುವುದು.

ಸಾವಯವ ಕೃಷಿಯ ಪೀಡೆ ನಿರ್ವಹಣೆಯಲ್ಲಿ ಅಳವಡಿಸಬಹುದಾದ ಹತೋಟಿ ಕ್ರಮಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದು.

I. ನಿರೋಧಕ ತಳಿಗಳ ಬಳಕೆ
II. ಬೇಸಾಯ ಕ್ರಮಗಳು
III. ಯಾಂತ್ರಿಕ ಪದ್ಧತಿಗಳು
IV. ಭೌತಿಕ ಪದ್ಧತಿಗಳು
V. ಜೈವಿಕ ಹತೋಟಿ
VI. ಜೈವಿಕ ಪೀಡೆನಾಶಕಗಳು

ಐ. ನಿರೋಧಕ ತಳಿಗಳ ಬಳಕೆ :
ಕೆಲವೊಂದು ತಳಿಗಳು ಭೌತಿಕ ಮತ್ತು ಶಾರೀರಿಕ ನಿರೋಧಕ ಅಂಶಗಳನ್ನು ಒಳಗೊಂಡಿರುವುದರಿಂದ ಕೀಟಗಳ ಹಾವಳಿಯನ್ನು ತಪ್ಪಿಸಿಕೊಳ್ಳುತ್ತವೆ ಅಥವಾ ಸಧೃಡವಾಗಿ ತಡೆಯುವ ಶಕ್ತಿಯನ್ನು ಹೊಂದಿರುತ್ತವೆ.

ಭಾರತದಲ್ಲಿ ವಿವಿಧ ಬೆಳೆಗಳಲ್ಲಿ ಕೀಟ ನಿರೋಧಕತೆ ಹೊಂದಿದ ತಳಿಗಳು

ಸಾಮಾನ್ಯ ಹೆಸರು	ವೈಜ್ಞಾನಿಕ ಹೆಸರು	ತಳಿಗಳು
ಮೆಕ್ಕೆ ಜೊಳ		
ಕಾಂಡ ಕೊರಕ	ಸಿಸೆಮಿಯಾ ಇನಫರೆನಸ್	ಡೆಕ್ಕನ್-101 ಮತ್ತು 103
ಸ್ಪೊಟೆಡ್ ಸ್ಟೇಮ್ ಬೋರರ್	ಕೈಲೋ ಪಾರ್ಟಿಲಸ್	ಗಂಗಾ-4,5,7 ಮತ್ತು 9 ಗಂಗಾ ಸಫೇದ-2, ಡೆಕ್ಕನ್-101 & 103, ಹಿಮ್ 123, ಅಜಿತ್, ವಿಎಲ್-54, ಸಿ-1,3 & 7, ಕಾಂಚನ, ಕುಂದನ
ಭತ್ತ		
ಕಂದು ಜಿಗಿಹುಳು	ನೀಲಪರ್ವತ ಲುಗೇನ್ಸ್	ಮಾನಸ ಸರೋವರ್, ಭದ್ರಾ, ಜ್ಯೋತಿ, ಸಿಓ-42, ಎಂಟಿಯು-5249
ಗಾಲ್ ಮಿಡ್ಜ್	ಓರ್ಸೀಲಿಯಾ ಓರಾಝೆ	ಐಆರ್-36, ಕಾಕತಿಯಾ, ಲಕ್ಷ್ಮಿ, ಸುರೇಖಾ, ಫಾಲ್ಗುನಾ, ಕುಂತಿ, ಶಾಮ್ಲೇಲ್, ಆಶಾ, ರಾಜೇಂದ್ರದನ
ಹಸಿರು ಜಿಗಿ ಹುಳು	ನೆಫೋಟೆಟಿಕ್ಸ್ ಸ್ಪೀಸಿಸ್	ಐಆರ್-20
ಭತ್ತದ ಕಾಂಡ ಕೊರಕ	ಸಿರ್ಫೊಫೇಗಾ ಇನ್ಸರ್ಟುಲಸ್	ರತ್ನಾ, ಸಾಕೇತ್, ಎಂಟಿಯು-5849
ಬಿಳಿ ಬೆನ್ನಿನ ಜಿಗಿ ಹುಳು	ಸೊಗೊಟಿಲ್ಲಾ ಫರ್ಸಿಫೇರಾ	ತಂಗನೇರಾ ಆಮೆಲಬೆರೋ
ಜೋಳ	ತೆನೆ ತಿಗಣೆ	ಚಿಂಚೊಲಮ್
	ಬೆಂಕಿ ಹುಳು	ಐಸಿಎಸ್‌ವಿ-745 (ಡಿಎಸ್‌ವಿ-3)
	ಸುಳಿ ನೊಣ	ಎಂ.35-1, ಎಸ್‌ಪಿವಿ-504, ಎಸ್‌ಪಿವಿ-491
ಕಡಲೆ	ಕಾಯಿಕೊರಕ	ಐಸಿಸಿವಿ-7, ದುಲ್ಲಾ
ಅಲಸಂದಿ	ಕಾಯಿಕೊರಕ	ಬನ್‌ಸ್ಟಾರ್
ಬಟಾಣಿ	ಕಾಯಿ ಕೊರಕ	ಬೊನವಿಲ್ಲೆ, ಟಿ.0113
ತೊಗರಿ	ಕಾಯಿ ಕೊರಕ	ಐಸಿಪಿಎಲ್-332
ಉದ್ದು	ಕಾಯಿ ಕೊರಕ	ಕಲಾಲ್, ಕೃಷ್ಣಾ, ಸಿಓ-3, 4 & 5
ಶೇಂಗಾ	ತಂಬಾಕಿನ ಕೀಡೆ	ಐಸಿಜಿವಿಎಸ್-86590, ಮ್ಯುಟಂಟ್-28-2
ಸಾಸಿವೆ	ಹೇನು	ಲಹಾ-101, ಫುಸಾ ಕಲ್ಯಾಣಿ, 52, ಥಾಮಸ್ ಗ್ವಾಲಿಯರ್, ಜಿಎಸ್‌ಎ, ರಿಜೇಂಟ್
ಸೊಯಾ ಅವರೆ	ಸುರಳಿ ಪೂಚಿ	ನಿಮ್ ಸಾಯ್
ಹತ್ತಿ	ಹಸಿರು ಜಿಗಿ ಹುಳು	ಎಂಸಿಯು-5, ಕೃಷ್ಣಾ, ಮಹಾಲಕ್ಷ್ಮಿ, ಸುಜಯ, ಶ್ಯಾಂಗುಲಿಯಮ್ ಎಕನಾಥ್
	ಕೆಂಪು ಕಾಯಿ ಕೊರಕ	ಎಲ್‌ಡಿ-135, ಅಭಾದಿತ್, ಶ್ಯಾಂಗುನಿಯಮ್
	ಚುಕ್ಕೆ ಕಾಯಿ ಕೊರಕ	ಎಲ್-1245, ಶ್ಯಾಂಗುನಿಯಮ್
	ಬಿಳಿ ನೊಣ	ಎಲ್‌ಕೆ-861, ಅಮ್ರಾವತಿ, ಕಾಂಚನಾ, ಸುಪ್ರಿಯಾ, ಎಲ್‌ಪಿಎಸ್-141,
ಕಬ್ಬು	ಕಾಂಡ ಕೊರಕ	ಸಿಓ-7302
	ಬಿಳಿ ಉಣ್ಣೆ ಹೇನು	ಎಸ್‌ಎನ್‌ಕೆ-754
ತಂಬಾಕು	ಎಲೆ ತಿನ್ನುವ ಕೀಡೆ	ಜಿಟಿ-4, ಡಿಡಬ್ಲ್ಯೂಎಫ್‌ಸಿ
ತರಕಾರಿ ಬೆಳೆಗಳು		
ಬದನೆ	ಕುಡಿ ಮತ್ತು ಕಾಯಿ ಕೊರಕ	ಚಕ್ಲಾಷಿ, ಡೊಲಿ, ಡೊಲಿ-5, ಘೂಸಾ ಪರ್ಪಲ
ಬೆಂಡಿ	ಕುಡಿ ಮತ್ತು ಕಾಯಿ ಕೊರಕ	ಪರ್ಕಿನ್ಸ್, ಲಾಂಗಗ್ರೀನ್, ಕಾಮುಲಾ ಸ್ಪೇಷಲ್
ಟೊಮ್ಯಾಟೋ	ಕಾಯಿ ಕೊರಕ	ಟಿ-32, ಟಿ-27

೫೫. ಬೇಸಾಯ ಕ್ರಮಗಳು : ವಿವಿಧ ಬೇಸಾಯ ಕ್ರಮಗಳನ್ನು ಬಳಸಿ ಕೀಟಗಳ ಸಂಖ್ಯೆಯನ್ನು ಕುಗ್ಗಿಸುವುದಕ್ಕೆ ಬೇಸಾಯ ಹತೋಟಿ ಕ್ರಮ ಎಂದು ಕರೆಯುತ್ತಾರೆ. ಈ ಹತೋಟಿ ಕ್ರಮ ಮುಂಜಾಗ್ರತವಾಗಿ ಬಳಸಬಹುದಾದ್ದರಿಂದ ಇದನ್ನು ಸರಿಯಾದ ಸಮಯಕ್ಕೆ ಬಳಸಬೇಕು. ಈ ಕೆಳಗಿನ ಬೇಸಾಯ ಪದ್ಧತಿಗಳಿಂದ ವಿವಿಧ ರೀತಿಯ ಕೀಟಗಳನ್ನು ನಿಯಂತ್ರಿಸಬಹುದು.

1. ಮಾಗಿ ಉಳುಮೆ : ಬೆಳೆ ಕಟಾವು ಆದ ಮೇಲೆ ಹಿಂಗಾರಿನಲ್ಲಿ ಮಣ್ಣು ತಿರುವಿ ಹಾಕುವುದರಿಂದ ಅಥವಾ ಮುಂಗಾರಿನಲ್ಲಿ ಆಳಾವಾಗಿ ಉಳುಮೆ ಮಾಡುವುದರಿಂದ ಅನೇಕ ಕೀಟ ಹಾಗೂ ರೋಗಗಳನ್ನು ತಡೆಗಟ್ಟಬಹುದು. ಮಣ್ಣಿನಲ್ಲಿರುವ ಹುಳು ಮತ್ತು ಕೋಶಾವಸ್ಥೆಯ ಹಂತಗಳು ಮೇಲ್ಭಾಗಕ್ಕೆ ಬಂದು ಬಿಸಿಲಿನ ಶಾಖಕ್ಕೆ ಅಥವಾ ಪಕ್ಷಿಗಳಿಗೆ ತುತ್ತಾಗಿ ಸಾಯುತ್ತವೆ. ಈ ಪದ್ಧತಿಯಿಂದ ಕೆಂಪು ತಲೆ ಕಂಬಳಿ ಹುಳುಗಳು, ಬೇರು ಹುಳುಗಳು, ಕತ್ತರಿಸುವ ಹುಳುಗಳು ಇತ್ಯಾದಿಗಳ ಸಂತತಿ ಕುಗ್ಗುತ್ತದೆ.

2. ಜಮೀನಿನಲ್ಲಿ ಸ್ವಚ್ಛತೆ ಕಾಪಾಡುವುದು : ಸಮಯಕ್ಕೆ ಸರಿಯಾಗಿ ಕ್ರಮಬದ್ಧವಾಗಿ ಕಳೆ ತೆಗೆಯುವುದು, ಹುಳುಗಳ ಭಾಧೆಗೊಳಗಾದ ಗಿಡ/ಮರದ ರೆಂಬೆಗಳನ್ನು ಕತ್ತರಿಸುವುದು ಮತ್ತು ಕೂಳೆ ಬೆಳೆಯನ್ನು ಸಂಗ್ರಹಿಸಿ ನಾಶಪಡಿಸುವುದರಿಂದ
ಉದಾ : 1. ಹಾನಿಗೊಳಗಾದ ಸುಳಿ ಮತ್ತು ಕಾಯಿಗಳನ್ನು ನಾಶಪಡಿಸುವುದರಿಂದ ಬದನೆ ಸುರಳಿ ಮತ್ತು ಕಾಯಿ ಕೊರಕವನ್ನು ನಿಯಂತ್ರಿಸಬಹುದಾಗಿದೆ.

2. ಎಲೆ ಮುದುಡು ರೋಗಕ್ಕೆ ತುತ್ತಾದ ಗಿಡಗಳನ್ನು ಕಿತ್ತು ನಾಶಪಡಿಸುವುದರಿಂದ ರೋಗವನ್ನು ಹತೋಟಿಯಲ್ಲಿಡಬಹುದು.

3. ಮಧ್ಯಂತರ ಬೇಸಾಯ/ ಹಲುಬೆ ಹೊಡೆಯುವುದು : ಮಧ್ಯಂತರ ಬೇಸಾಯ ಮಾಡುವುದರಿಂದ ಹಾನಿಕಾರಕ ಕೀಟಗಳಿಗೆ ಆಸರೆಯಾಗಿರುವ ಗಿಡಗಳನ್ನು ಮತ್ತು ಕಳೆಗಳನ್ನು ನಿಯಂತ್ರಿಸಬಹುದು.

4. ಸಕಾಲದಲ್ಲಿ ಬಿತ್ತನೆ : ಸಮಯಕ್ಕೆ ಸರಿಯಾಗಿ ಬಿತ್ತನೆ ಮಾಡುವುದರಿಂದ ಕೆಲವೊಂದು ಕೀಟಗಳನ್ನು ನಿಯಂತ್ರಿಸಬಹುದು. ತೊಗರಿಯನ್ನು ಜೂನ್ 15 ರೊಳಗೆ ಬಿತ್ತನೆ ಮಾಡುವುದರಿಂದ ಕಾಯಿ ಕೊರಕ ಹುಳುವಿನ ಭಾಧೆ ಕಡಿಮೆಯಾಗುತ್ತದೆ.

5. ಸಾಲುಗಳ ಮತ್ತು ಸಸಿಗಳ ನಡುವೆ ಅಂತರವನ್ನು ಕಾಪಾಡುವುದು : ಶಿಫಾರಸ್ಸು ಮಾಡಿದ ಅಂತರವನ್ನು ಕಾಪಾಡುವುದರಿಂದ ಕೆಲವೊಂದು ರಸ ಹೀರುವ ಕೀಟಗಳ ಸಂಖ್ಯೆ ಕಡಿಮೆಯಾಗುತ್ತದೆ.

6. ನೀರಿನ ನಿರ್ವಹಣೆ : 3–4 ವಾರಗಳಿಗೊಮ್ಮೆ ಬತ್ತದ ಗದ್ದೆಗಳ ನೀರನ್ನು ಹೊರಬಿಟ್ಟು ಒಣಗಿಸುವುದರಿಂದ ಕಂದು ಜಿಗಿಹುಳುವಿನ ಭಾಧೆಯನ್ನು ಕಡಿಮೆ ಮಾಡಬಹುದು. ಬೇರುಹುಳು ಮತ್ತು ಗೆದ್ದಲಿನ ಭಾಧೆಯುಳ್ಳ ಹೊಲಗಳಲ್ಲಿ ನೀರು ಹಾಯಿಸುವುದರಿಂದ ಮೊಟ್ಟೆ, ಮರಿಹುಳು ಮತ್ತು ಹೇನನ್ನು ನಿಯಂತ್ರಿಸಬಹುದು.

7. ಸಮಗ್ರ ಪೋಷಕಾಂಶಗಳ ನಿರ್ವಹಣೆ : ಶಿಫಾರಸ್ಸು ಮಾಡಿದ ರಸಗೊಬ್ಬರಗಳನ್ನು ಸರಿಯಾದ ಪ್ರಮಾಣದಲ್ಲಿ ಕೊಟ್ಟಿದ್ದಲ್ಲಿ ಕೀಟಗಳ ಸಂಖ್ಯೆ ಹೆಚ್ಚಾಗುವುದಿಲ್ಲ. ಹೆಚ್ಚಿನ ಪೊಟ್ಯಾಷ್ ಕೊಡುವುದರಿಂದ ಕೀಟ/ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ

8. ಬೆಳೆ ಪರಿವರ್ತನೆ : ವರ್ಷ ಪೂರ್ತಿ ಒಂದೆ ಬೆಳೆಯನ್ನು ಪದೆ ಪದೆ ಬೆಳೆಯುವ ಬದಲು ಬೆಳೆ ಬದಲಾವಣೆ ಮಾಡಿದರೆ ಕೆಲವು ಕೀಟಗಳಿಗೆ ಆಹಾರ ಸಿಗದೆ ಅವುಗಳ ಸಂತತಿ ಕಡಿಮೆಯಾಗುತ್ತದೆ.
ಉದಾ : ಶೇಂಗಾ–ರಾಗಿ, ತೊಗರಿ–ಜೋಳ

9. ಬೆಳೆ ವೈವಿಧ್ಯತೆ/ಮಿಶ್ರ ಬೆಳೆ ಪದ್ಧತಿ : ಏಕ ಬೆಳೆ ಪದ್ಧತಿ ಬದಲು ಮಿಶ್ರ ಬೆಳೆ ಪದ್ಧತಿ ಅಳವಡಿಸಿದರೆ ಕೀಟದ ಹಾವಳಿ ಕಡಿಮೆಯಾಗುತ್ತದೆ. ಒಂದು ಬೆಳೆ ಕೀಟದ ಹಾವಳಿಗೆ ತುತ್ತಾದರೆ ಇತರೆ ಬೆಳೆಗಳು ಕೀಟದ ಹಾವಳಿಯಿಂದ ತಪ್ಪಿಸಿಕೊಳ್ಳುತ್ತವೆ.
ಉದಾ : ರಾಗಿಯ ಜೊತೆ ತೊಗರಿ, ಅವರೆ, ಜೋಳ, ಸಾಸಿವೆ, ಅಲಸಂದೆ ಇತ್ಯಾದಿ.

10. ಅಂತರ ಬೆಳೆಗಳು : ಅಂತರ ಬೆಳೆ ಪದ್ಧತಿ ಅಳವಡಿಸುವುದರಿಂದ ಅನೇಕ ಪೀಡೆಗಳನ್ನು ತಡೆಯಬಹುದು. ಏಕದಳ ಬೆಳೆಗಳಲ್ಲಿ ದ್ವಿದಳ ಧಾನ್ಯ ಬೆಳೆಗಳನ್ನು ಬೆಳೆಯುವುದರಿಂದ ಕೀಟದ ತೊಂದರೆಯನ್ನು ಕಡಿಮೆ ಮಾಡಿಕೊಳ್ಳಬಹುದು.
ಉದಾ :ಶೇಂಗಾ ಬೆಳೆಯಲ್ಲಿ ಅಲಸಂದೆ, ಸಜ್ಜೆ, ನವಣೆ, ಜೋಳ, ಬೆಳೆಯುವುದರಿಂದ ಸುರಳಿ ಪೂಚಿ ಕಡಿಮೆಯಾಗುತ್ತದೆ.

11. ಬಲೆ/ ಬೋನು ಬೆಳೆ : ಹೊಲದ ಸುತ್ತ ಅಥವಾ ಮಿಶ್ರ ಬೆಳೆ ಅಥವಾ ಅಕ್ಕಡಿಯಾಗಿ ಬೋನು ಬೆಳೆಗಳನ್ನು ಮುಖ್ಯ ಬೆಳೆಯ ಜೊತೆಯಲ್ಲಿ ಬಿತ್ತುವುದರಿಂದ ಹುಳುಗಳನ್ನು ಆಕರ್ಷಿಸಿ ನಾಶಪಡಿಸಬಹುದು.
ಉದಾ : ಪ್ರತಿ 16 ಸಾಲು ಟೊಮ್ಯಾಟೊದಲ್ಲಿ ಒಂದು ಸಾಲು ಚೆಂಡು ಹೂವನ್ನು ಬೆಳೆದಲ್ಲಿ ಕಾಯಿ ಕೊರಕದ ಹಾವಳಿ ಕಡಿಮೆಯಾಗುವುದು.

12. ತಡೆ ಬೆಳೆಗಳನ್ನು ಬೆಳೆಯುವುದು : ಮೆಕ್ಕೆಜೋಳವನ್ನು ಹಲವು ತರಕಾರಿ ಬೆಳೆಗಳ ಸುತ್ತಲೂ ಬೆಳೆಯುವುದರಿಂದ ಕೀಟ ಮತ್ತು ರೋಗವಾಹಕ ಕೀಟಗಳಿಂದ ರಕ್ಷಿಸಿದಂತಾಗುತ್ತದೆ. ಇಲ್ಲಿ ಮೆಕ್ಕೆಜೋಳ ತಡಗೋಡೆಯಂತೆ ಕೆಲಸ ಮಾಡುತ್ತದೆ.
ಉದಾ : ಟೊಮ್ಯಾಟೊ ಬೆಳೆಯಲ್ಲಿ ಎಲೆ ಮುದುಡು ರೋಗ ಹರಡುವ ಬಿಳಿ ನೊಣಗಳನ್ನು ಈ ವಿಧಾನದಿಂದ ತಡೆಯಬಹುದು.

13. ಬಿತ್ತನೆಗೆ ಪ್ರಮಾಣೀಕರಿಸಿದ ಸ್ವಚ್ಛ / ಶುದ್ಧವಾದ ಬೀಜಗಳ ಬಳಕೆ : ಬಿತ್ತನೆಗೆ ಕೀಟ / ರೋಗ ರಹಿತ ಬೀಜಗಳನ್ನು ಬಳಸುವುದರಿಂದ ಗಿಡಗಳು ಬಲಿಷ್ಠವಾಗಿ ಬೆಳೆದು ಕೀಟ / ರೋಗಗಳನ್ನು ತಡೆಯುವ ಶಕ್ತಿಯನ್ನು ಹೊಂದುತ್ತವೆ.

14. ಹಸಿರೆಲೆ ಗೊಬ್ಬರಗಳ ಬಳಕೆ : ಹಸಿರೆಲೆ ಗೊಬ್ಬರಗಳನ್ನು ಮಣ್ಣಿನಲ್ಲಿ ಸೇರಿಸುವುದರಿಂದ ಸಾವಯವ ಅಂಶ ಹೆಚ್ಚಿ ಗಿಡಗಳಲ್ಲಿ ಕೀಟ / ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ.
ಉದಾ : ಡಯಂಚಾ, ಸೆಸ್ಬೇನಿಯ, ಆಪ್ಸೆಣಬು, ಗ್ಲಿರಿಸಿಡಿಯ ಇತ್ಯಾದಿ

15. ಬೀಜೋಪಚಾರ : ಬಿತ್ತನೆ ಸಮಯದಲ್ಲಿ ಕೀಟನಾಶಕಗಳಿಂದ ಬೀಜೋಪಚಾರ ಮಾಡಿದ್ದಲ್ಲಿ 30–45 ದಿನಗಳವರೆಗೂ ಕೀಟಗಳು / ರೋಗಗಳಿಂದ ರಕ್ಷಣೆ ಪಡೆಯಬಹದು.
ಉದಾ : ಶೇಂಗಾದಲ್ಲಿ ಬೇರುಹುಳುವಿನ ಹಾವಳಿಗೆ ಪ್ರತಿ ಕೆಜಿ ಬೀಜಕ್ಕೆ 15 ಮಿ.ಲೀ. ಕ್ಲೊರೊಪೈರಿಫಾಸ್ ಬೀಜೋಪಚಾರ ಮಾಡಿ.

೪೪೪. ಯಾಂತ್ರಿಕ ಪದ್ಧತಿಗಳು :

1. ಕೈಯಿಂದ ಹುಳುಗಳ ಆಯುವಿಕೆ : ಗುಂಪಾಗಿಟ್ಟಿರುವ ಮೊಟ್ಟೆ, ಮರಿಹುಳುಗಳನ್ನು ಹಾಗೂ ಬೆಳೆದ ಹುಳುಗಳನ್ನು ಕೈಯಿಂದ ಆಯ್ದು ನಾಶಪಡಿಸುವುದರಿಂದ ಕೀಟಗಳ ಸಂಖ್ಯೆಯನ್ನು ನಿಯಂತ್ರಿಸಬಹುದು. ಉದಾ : ಕೆಂಪು ತಲೆ ಕಂಬಳಿಹುಳ, ಬತ್ತದ ಕಾಂಡ ಕೊರಕ

2. ಹೊಲದ ಸುತ್ತಲೂ ಕಂದಕ ತೆಗೆಯುವುದು : ಕೆಲವೊಂದು ಕೀಟದ ಹುಳುಗಳು ಒಂದು ಜಮೀನಿನಿಂದ ಇನ್ನೊಂದು ಜಮೀನಿಗೆ ವಲಸೆ ಹೋಗುವ ಪ್ರವೃತ್ತಿ ಹೊಂದಿರುತ್ತವೆ. ಹೊಲದ ಸುತ್ತ ಕಂದಕ ತೋಡುವುದರಿಂದ ಇವುಗಳಲ್ಲಿ ಆಸರೆ ಹೊಂದುತ್ತವೆ ಈ ಹುಳುಗಳನ್ನು ಆಯ್ದು ನಾಶಪಡಿಸಬಹುದು.
ಉದಾ : ಶೇಂಗಾದಲ್ಲಿ ಕೆಂಪುತಲೆ ಕಂಬಳಿ ಹುಳುವಿನ ನಿಯಂತ್ರಣ ಮಾಡಬಹುದು ತೋಟಗಾರಿಕೆ ಬೆಳೆಗಳಲ್ಲಿ ಬಸವನ ಹುಳುವಿನ ನಿಯಂತ್ರಣ ಮಾಡಬಹುದು

3. ಸಸಿ ಮಡಿಗಳ ಮೇಲೆ ನೈಲಾನ್ ಪರದೆಯ ಹೊದಿಕೆ : ತರಕಾರಿ ಮತ್ತು ಇತರೆ ಸಸಿಗಳನ್ನು ನೈಲಾನ್ ಪರದೆಯ ಕೆಳಗೆ ಬೆಳೆಯುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕೀಟಗಳ ಸಂಖ್ಯೆಯನ್ನು ನಿಯಂತ್ರಿಸಬಹುದು.

4. ಕವಲೊಡೆದ ರೆಂಬೆ ನೆಡುವಿಕೆ : ಹೂವು ಬರುವ ಸಮಯದಲ್ಲಿ ಕೀಟ ಭಕ್ಷಕ ಪಕ್ಷಿಗಳನ್ನು ಆಕರ್ಷಿಸಲು ಬೆಳೆಯಿಂದ ಸುಮಾರು 2–3 ಅಡಿ ಮೇಲೆ ಎಕರೆಗೆ 11–12 ಕವಲು ಕಡ್ಡಿಗಳನ್ನು ನೆಡಬೇಕು. ಈ ಕೀಟ ಹತೋಟಿ ವಿಧಾನವನ್ನು ತೊಗರಿ, ಕಡಲೆ, ಟೊಮ್ಯಾಟೊ ಬೆಳೆಗಳಲ್ಲಿ ಬಳಸಬಹುದು.

5. ಗಿಡದ ಕಾಂಡಕ್ಕೆ ತಗಡನ್ನು ಅಂಟಿಸುವುದು : ಈ ವಿಧಾನದಿಂದ ತೆಂಗಿನಲ್ಲಿ ಇಲಿಗಳಿಂದ ತಕ್ಷಣೆ ಪಡೆಯಲು ಸಾಧ್ಯ.

6. ಗ್ರಿಸನ್ನು ಕಾಂಡದ ಬುಡಕ್ಕೆ ಹಚ್ಚುವುದು : ಈ ವಿಧಾನದಿಂದ ಮಾವಿನಲ್ಲಿ ಹಿಟ್ಟು ತಿಗಣೆ ಮತ್ತು ಹಸಿರು ಜಿಗಿ ಹುಳುಗಳ ಭಾಧೆಯನ್ನು ಕಡಿಮೆ ಮಾಡಬಹುದು.

೪೪. ಭೌತಿಕ ಪದ್ಧತಿಗಳು :

1. ಬೆಳಕಿನ / ದೀಪದ ಬಲೆ : ಸಾಯಂಕಾಲ 7 ರಿಂದ 10 ಘಂಟೆಗೆ ದೀಪದ ಬಲೆ/ ಪೆಟ್ರೊಮ್ಯಾಕ್ಸ್ ದೀಪದ ಬಲೆಗಳನ್ನು ಇಡುವುದರಿಂದ ಚಿಟ್ಟೆಗಳನ್ನು ಆಕರ್ಷಿಸಿ ನಾಶಪಡಿಸಬಹುದು. ಎಕರೆಗೆ 4–6 ಬಲೆಗಳು ಬೇಕಾಗುತ್ತವೆ. ಇವು ಮೊಟ್ಟೆ ಇಡುವುದಕ್ಕೆ ಮೊದಲೆ ಸಾಯಿಸುವುದರಿಂದ ಇವುಗಳ ಅಂತತಿ ವೃದ್ಧಿಯಾಗುವುದು ತಪ್ಪುತ್ತದೆ.
ಉದಾ : ಹೂ ಕೋಸು/ ಗೆಡ್ಡೆ ಕೋಸಲ್ಲಿ ದೀಪದ ಬಲೆ ಅಳವಡಿಸುವುದರಿಂದ ವಜ್ರ ಬೆನ್ನಿನ ಪತಂಗದ ಹುಳಗಳನ್ನು ನಿಯಂತ್ರಿಸಬಹುದು.

2. ಲಿಂಗಾಕರ್ಷಕ ಬಲೆಗಳ ಬಳಕೆ : ಈ ಬಲೆಗಳನ್ನು ಕೀಟದ ತೀರ್ವತೆಯನ್ನು ಕಂಡುಹಿಡಿದು ಸೂಕ್ತ ನಿರ್ವಹಣೆ ಕ್ರಮಗಳನ್ನು ಕೈಗೊಳ್ಳಲು ಉಪಯುಕ್ತ. ಹೆಚ್ಚಿನ ಪ್ರಮಾಣದಲ್ಲಿ ಇವುಗಳನ್ನು ಬಳಸಿದ್ದಲ್ಲಿ ಕೀಟ ನಿಯಂತ್ರಣಕ್ಕೆ ಉಪಯೋಗಿಸಲು ಸಾಧ್ಯ. ಉದಾ : ತೊಗರಿಯಲ್ಲಿ ಕಾಯಿ ಕೊರಕ, ತೆಂಗಿನಲ್ಲಿ ಕೆಂಪು ಮೂತಿ ಹುಳು ಮತ್ತು ರೈನೊಸಿರಸ್ ದುಂಬಿ, ಕೋಸಿನಲ್ಲಿ ವಜ್ರ ಬೆನ್ನಿನ ಪತಂಗ, ಬದನೆ ಸುಳಿ ಮತ್ತು ಕಾಯಿ ಕೊರಕ, ಮಾವಿನಲ್ಲಿ ಹಣ್ಣಿನ ನೊಣ ನಿಯಂತ್ರಣಕ್ಕೆ ಉಪಯೋಗಿಸಬಹುದು.

3. ಆಹಾರಕರ್ಷಕಗಳು : ಮಿಥೈಲ್ ಯುಜಿನಾಲ್ ಎಂಬ ಆಹಾರಕರ್ಷವನ್ನು ಡೈಕ್ಲೊರೋವಾಸ್ ಎಂಬ ಕೀಟನಾಶಕದೊಂದಿಗೆ ಬೆರಸಿ ಮಾವು, ಸೌತೆ, ಕಲ್ಲಂಗಡಿ, ಕುಂಬಳ ಮುಂತಾದ ಬೆಳೆಗಳಲ್ಲಿ ಎಕರೆಗೆ 3–4 ರಂತೆ ಇಡುವುದರಿಂದ ಹಣ್ಣಿನ ನೊಣದ ಹುಳುಗಳನ್ನು ಆಕರ್ಷಿಸಿ ಸಾಯಿಸಬಹುದು. 10 ಗ್ರಾಂ ಮೆಥೋಮಿಲ್‌ನ್ನು 1 ಕೆ ಜಿ ಅಕ್ಕಿ ತೌಡಿನ ಜೊತೆ ಮಿಶ್ರಣ ಮಾಡಿ ತೋಟಗಾರಿಕೆ ಬೆಳೆಗಳಲ್ಲಿ ಎರಚಿದ್ದಲ್ಲಿ ತಂಬಾಕಿನ ಹುಳುವನ್ನು ಮತ್ತು ಬಸವನ ಹುಳುವನ್ನು ನಿಯಂತ್ರಿಸಬಹುದು.

4. ಬಿಸಿ ನೀರು / ಗಾಳಿಯ ಉಪಚಾರ : ಕಬ್ಬಿನ ತುಂಡುಗಳನ್ನು ಬಿಸಿ ನೀರಿನಲ್ಲಿ ಅದ್ದುವುದರಿಂದ ಅಥವಾ ಬಿಸಿ ಗಾಳಿಯ ಉಪಚಾರ ಮಾಡುವುದರಿಂದ ಶಲ್ಕ ಕೀಟವನ್ನು ನಿಯಂತ್ರಿಸಬಹುದು.

5. ಸೂರ್ಯ ಶಾಖ ಬಳಸಿ ಕೀಟ ನಿರ್ವಹಣೆ : ದ್ವಿದಳ ದಾನ್ಯದ ಕಾಳುಗಳನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ (25 ಘಂಟೆಗಳ ಕಾಲ) ಶೇಖರಣೆ ಮಾಡಿದ್ದಲ್ಲಿ ದಾಸ್ತಾನು ಕೀಟಗಳಿಂದ ರಕ್ಷಣೆ ಪಡೆಯಬಹುದು.

6. ಅಂಟು/ ಬಣ್ಣದ ಬಲೆಗಳ ಬಳಕೆ : ಹಳದಿ ಬಣ್ಣದ ಅಂಟಿನ ಬಲೆಗಳನ್ನು ಬಳಸುವುದರಿಂದ ಸಸ್ಯ ಹೇನು, ನುಸಿ, ಥ್ರಿಪ್ಸ್, ಜಿಗಿಹುಳು ಮತ್ತು ಬಿಳಿನೊಣಗಳನ್ನು ನಿಯಂತ್ರಿಸಬಹುದು.

ಗಿ. ಜೈವಿಕ ಹತೋಟಿ: ಜೈವಿಕ ಹತೋಟಿಯಲ್ಲಿ ಪರತಂತ್ರ (ಪರಾವಲಂಬಿ) ಜೀವಿಗಳು, ಪರಭಕ್ಷಕ ಕೀಟಗಳು, ನಂಜಾಣು, ದುಂಡಾಣು ಹಾಗೂ ಶಿಲಿಂಧ್ರಗಳನ್ನು ಇತ್ತೀಚಿನ ದಿನಗಳಲ್ಲಿ ಬಳಸುವುದರಿಂದ ಕೀಟಗಳ ಸಂಖ್ಯೆಯನ್ನು ತಡೆಗಟ್ಟುವಲ್ಲಿ ಪ್ರಮುಖ ಪಾತ್ರವಹಿಸಿವೆ.

1. ಪರತಂತ್ರ/ ಪರಾವಲಂಬಿ ಜೀವಿಗಳು (ಪ್ಯಾರಾಸೈಟ್ಸ್) : ಈ ಪರತಂತ್ರ ಜೀವಿಗಳು ಇತರೆ ಬೆಳೆಗಳ ಕೀಟಗಳ ವಿವಿಧ ಹಂತಗಳಾದ ಮೊಟ್ಟೆ, ಹುಳು, ಕೋಶಗಳಲ್ಲಿ ತಮ್ಮ ಸಂಪೂರ್ಣ ಜೀವತಾವಧಿಯನ್ನು ಮುಗಿಸುತ್ತವೆ.
ಉದಾ: ಟ್ರೆಕೊಗ್ರಾಮಾ ಪರತಂತ್ರ ಜೀವಿ ಕಬ್ಬು, ಹತ್ತಿ, ತೊಗರಿ, ಟೊಮ್ಯಾಟೊ, ಮೆಣಸಿನ ಕಾಯಿ, ಸೂರ್ಯಕಾಂತಿ, ಕಾಯಿ ಕೊರಕಗಳನ್ನು ನಿಯಂತ್ರಣದಲ್ಲಿಡುತ್ತದೆ.

2. ಪರಭಕ್ಷಕ ಜೀವಿಗಳು (ಪ್ರಿಡೇಟರ್ಸ್) : ಪರಭಕ್ಷಕ ಕೀಟಗಳು ತಮ್ಮ ವೈರಿ ಕೀಟವನ್ನು ತಕ್ಷಣ ಸಾಯಿಸಿ ತಿನ್ನುತ್ತವೆ.
ಉದಾ : ಹೇನು ಸಿಂಹ : ಬಿಳಿನೊಣ, ಸಸ್ಯ ಹೇನುಗಳನ್ನು ನಿಯಂತ್ರಣದಲ್ಲಿಡುತ್ತದೆ. ಗುಲಗಂಜಿ ಹುಳ : ತೋಟಗಾರಿಕೆ ಬೆಳೆಗಳ ಮೇಲಿನ ಹಿಟ್ಟು ತಿಗಣೆಯನ್ನು ನಿಯಂತ್ರಿಸುತ್ತದೆ.

3. ರೋಗಕಾರಕ ಜೀವಿಗಳು : ಇವು ಬೆಳೆಗಳಿಗೆ ರೋಗ ತರದೆ ಕೇವಲ ಕೀಟಗಳಿಗೆ ಮಾತ್ರ ರೋಗ ತರುತ್ತವೆ. ಇವು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಗಾಳಿಯಲ್ಲಿ ಹೆಚ್ಚಿನ ತೇವಾಂಶ ಮತ್ತು ಮೋಡಕವಿದ ವಾತಾವರಣವಿರಬೇಕು.
ಇವುಗಳನ್ನು 4 ವಿಧಗಳಾಗಿ ವರ್ಗೀಕರಿಸಬಹುದು.
ಅ. ನಂಜಾಣು
ಆ. ಶೀಲೀಂಧ್ರ
ಇ. ದುಂಡಾಣು
ಈ. ಜಂತು ಹುಳು

ಅ. ನಂಜಾಣು : ಈ ರೋಗಕಾರಕವು ನಿರ್ದಿಷ್ಟವಾದ ಒಂದು ಜಾತಿಯ ಕೀಟಕ್ಕೆ ತಗಲುತ್ತದೆ. ನಂಜಾಣು ರೋಗಾಣುವಿನಿಂದ ಬಳಲುವ ಹುಳು ಆಹಾರ ತಿನ್ನುವುದನ್ನು ಬಿಟ್ಟು ಸಾಯುವುದಕ್ಕೆ ಮುಂಚೆ ಗಿಡಗಳ ಮೇಲ್ಭಾಗಕ್ಕೆ ಹೋಗಿ ತಲೆ ಕೆಳಗಾಗಿ ಜೋತು ಬಿದ್ದು ಸಾಯುತ್ತದೆ. ಉದಾ: ಹೆಲಿಕೊವರ್ಪ ನಂಜು ರೋಗಾಣುವನ್ನು ತೊಗರಿ, ಕಡಲೆ, ಟೊಮ್ಯಾಟೊ ಕಾಯಿ ಕೊರಕ ಮುಸುಕಿನ ಜೋಳದ ಕಾಂಡ ಕೊರಕದ ಹತೋಟಿಗೆ ಬಳಸಬಹುದು.

ಆ. ಶೀಲೀಂಧ್ರ : ಶೀಲೀಂಧ್ರಗಳ ಬೀಜಾಣುವಿನ ಸಹಾಯದಿಂದ ಹುಳುವನ್ನು ನಾಶಪಡಿಸುತ್ತದೆ.
ಉದಾ : ಬೆವೇರಿಯ ಬ್ಯಾಸಿಯಾನವನ್ನು ಎಲೆ ಕೋಸಿನ ಹಸಿರು ಹುಳಕ್ಕೆ, ಮೆಟಾರಿಜಿಯಂ ಅನಿಸೋಪ್ಲಿಯೇ ತೆಂಗಿನ ರೈನೊಸಿರಸ್ ದುಂಬಿಯ ಹತೋಟಿಗೆ ಉಪಯೋಗಿಸಬಹುದು.

ಗಿಖ. ಜೈವಿಕ ಪೀಡೆನಾಶಕಗಳು: ಜೈವಿಕ ಪೀಡೆ ನಾಶಕಗಳು ಸಸ್ಯ, ಪ್ರಾಣಿ ಅಥವಾ ಸೂಕ್ಷ್ಮಜೀವಿಗಳ ಮೂಲದಿಂದ ಪಡೆದ ವಿಷಪದಾರ್ಥಗಳನ್ನು ಹೊಂದಿರುತ್ತವೆ.

1.ಸಸ್ಯಜನ್ಯ ಕೀಟನಾಶಕಗಳು : ಕೀಟನಾಶಕ ಗುಣವನ್ನಲ್ಲದೇ ತಿನ್ನದಂತೆ ಹಿಮ್ಮೆಟ್ಟಿಸುವ ಅಥವಾ ದೂರವಿರುಸುವ, ಕೀಟ ಬೆಳವಣಿಗೆಯನ್ನು ಕುಂಠಿತಗೊಳಿಸುವ ಮತ್ತು ಮೊಟ್ಟೆಗಳ ಉತ್ಪಾದನೆ ಕುಂಠಿತಗೊಳಿಸುವ, ಮೊಟ್ಟೆಗಳಿಡದಂತೆ ಮಾಡುವ(ಬಂಜೆತನ) ಮತ್ತು ಕೀಟಗಳ ವರ್ತನೆಯಲ್ಲಿ ಬದಲಾವಣೆ ತರುವ ಗುಣಗಳನ್ನು ಹೊಂದಿರಿತ್ತವೆ.
ಉದಾ : ಬೇವಿನ ವಿವಿಧ ಭಾಗಗಳಾದ ಎಲೆ, ಬೀಜ, ಎಣ್ಣೆ ಮತ್ತು ಹಿಂಡಿ. ಬೇವು 500 ಕ್ಕಿಂತ ಹೆಚ್ಚು ಕೀಟ ಜಾತಿಗಳಿಗೆ ಪರಿಣಾಮಕಾರಿಯಾಗಿ ಕಂಡು ಬಂದಿದೆ. ಬೇವಿನಿಂದ ಕಾಯಿ ಕೊರಕ ಹುಳುಗಳು(ಹತ್ತಿ, ಟೊಮ್ಯಾಟೊ) ಕೋಸಿನ ವಜ್ರಬೆನ್ನಿನ ಪತಂಗ, ಜಿಗಿಹುಳು, ಎಲೆ ಸುರುಳಿ ಹುಳು, ಬಿಳಿನೊಣ, ಶಲ್ಕ ಕೀಟ, ಹಿಟ್ಟಿನ ತಿಗಣೆ ಇತ್ಯಾದಿ ಪೀಡೆಗಳನ್ನು ನಿಯಂತ್ರಿಸಬಹುದು. ಇದೇ ರೀತಿ ಹೊಂಗೆ, ಹೊಗೆಸೂಪ್ಪು, ಕಾತ್ತಾಳೆ, ತುಳಸಿ, ಕಣಿಗಲೆ, ಎಕ್ಕ, ಮೆಣಸಿನಕಾಯಿ ಮತ್ತು ಬೆಳ್ಳುಳ್ಳಿ ಕಷಾಯ ಉಪಯೋಗಿಸಿ ಕೀಟಗಳನ್ನು ನಿಯಂತ್ರಣದಲ್ಲಿಡಬಹುದು.

2. ಸೂಕ್ಷ್ಮಜೀವಿ ಆದಾರಿತ ಕೀಟನಾಶಕಗಳು : ಸೂಕ್ಷ್ಮ ಜೀವಿಗಳು ಉತ್ಪಾದಿಸುವ ವಿಷ ಪದಾರ್ಥಗಳನ್ನು ಬಳಸಿಕೊಂಡು ಕೀಟನಾಶಕಗಳನ್ನು ತಯಾರಿಸಲಾಗಿದೆ.
ಉದಾ : 1. ಬ್ಯಾಸಿಲಸ್ ಥುರೆಂಜಿಯನ್ಸಿಸ್(ಬಿ.ಟಿ) ನ್ನು ಚಿಟ್ಟೆ ಮತ್ತು ಪತಂಗಗಳ ಮರಿಹುಳುಗಳಿಗೆ ಮಾತ್ರ ರೋಗ ತಂದು ಸಾಯಿಸುತ್ತದೆ.
2. ಆಕ್ಟಿನೋಮೈಸಿಟಿಸ್‌ನಿಂದ ಅಬಾಮೆಕ್ಟಿನ್/ಅವರೆಮೆಕ್ಟಿನ್ ಪೀಡೆನಾಶಕಗಳನ್ನು ತಯಾರಿಸಿ ಹುಳುಗಳ ನಿಯಂತ್ರಣಕ್ಕೆ ಉಪಯೋಗಿಸಲಾಗುತ್ತದೆ. ಕೋಸಿನ ವಜ್ರಬೆನ್ನಿನ ಪತಂಗ ಮತ್ತು ಕಾಯಿ ಕೊರಕಗಳ ಹತೋಟಿಗೆ ಉಪಯೋಗಿಸಲಾಗುತ್ತದೆ.

3. ಪ್ರಾಣಿ ಆಧಾರಿತ ಕೀಟನಾಶಕಗಳು :
1. ಮೀನಿನ ಎಣ್ಣೆಯ ಸೋಪಿನ ದ್ರಾವಣ : ಮೀನಿನ ಎಣ್ಣೆಯನ್ನು (2% ಅಥವಾ 20 ಮಿಲೀ ಒಂದು ಲೀಟರ್ ನೀರಿಗೆ) ಸೋಪಿನ (2%) ದ್ರಾವಣದೊಂದಿಗೆ ಮಿಶ್ರಣ ಮಾಡಿದ ನಂತರ ನೀರಿಗೆ ಸೇರಿಸಿ ಸಿಂಪಡಿಸುವುದರಿಂದ ರಸಹೀರುವ ಕೀಟಗಳಾದ ಸಸ್ಯಹೇನು, ಹಿಟ್ಟು ತಿಗಣೆ, ಬಿಳಿ ನೊಣಗಳನ್ನು ನಿಯಂತ್ರಿಸಬಹುದು.

2. ನೀರಿಸ್ ವಿಷ ಪದಾರ್ಥ : ಸಮುದ್ರದ ನೀರಿನಲ್ಲಿ ವಾಸಿಸುವ ಎರೆಹುಳು ಜಾತಿಗೆ ಸೇರಿದ ಲುಂಬ್ರಿನೆರಿಸ್ ಹೆಟಿರೊಪೊಡಾ ಎಂಬ ಜೀವಿಯಿಂದ ಬೇರ್ಪಡಿಸಿದ ಪೀಡೆನಾಶಕ ವಿಷ ಪದಾರ್ಥ ನೀರಿಸ್ ಟಾಕ್ಸಿನ್‌ನ ಆಧಾರದ ಮೇಲೆ ಹೊಸ ರಾಸಾಯನಿಕ ಕೀಟನಾಶಕಗಳನ್ನು ಉತ್ಪತ್ತಿ ಮಾಡುತ್ತಿದ್ದಾರೆ. (ವಾಣಿಜ್ಯವಾಗಿ ಸಿಗುವ ಕಾರ್ಟಪ್ ಹೈಡ್ರೋಕ್ಲೋರೈಡ್‌ನ್ನು ಭತ್ತದ ಕಾಂಡ ಕೊರೆಯುವ ಹುಳುವನ್ನು ನಿಯಂತ್ರಿಸಲು ಬಳಸಬಹುದು).

ವಿವಿಧ ಬೆಳೆಗಳಲ್ಲಿ ಸಮಗ್ರ ಕೀಟ ನಿರ್ವಹಣಾ ಪದ್ಧತಿಗಳು

ಬೆಳೆ	ಕೀಟ	ನಿರ್ವಹಣಾ ಕ್ರಮಗಳು
ಭತ್ತ	ಕಂದು ಜಿಗಿ ಹುಳು, ಕಾಂಡ ಕೊರಕ, ಭತ್ತದ ಕಣೆ	ಕೀಟ ನಿರೋಧಕ ತಳಿಗಳು, ಕೀಟಗಳ ಸಮೀಕ್ಷೆ, ನೈಸರ್ಗಿಕ ಶತ್ರುಗಳ ಬಳಕೆ ಹಾಗೂ ಸಂರಕ್ಷಣೆ, ಸಾಗುವಳಿ ಪದ್ಧತಿ
ಜೋಳ	ಸುಳಿ ನೊಣ, ತೆನೆ ಕೀಟಗಳು, ಸೈನಿಕ ಹುಳು	ಬೇಗನೆ ಬಿತ್ತುವುದು, ಬೀಜೋಪಚಾರ, ಕೀಟ ನಿರೋಧಕ ತಳಿಗಳ ಬಳಕೆ, ಜೈವಿಕ ನಿಯಂತ್ರಣ
ಹತ್ತಿ	ಕಾಯಿ ಕೊರಕಗಳು, ರಸ ಹೀರುವ ಕೀಟಗಳು	ಬೀಜೋಪಚಾರ, ಕೀಟ ನಿರೋಧಕ ತಳಿಗಳು, ಅಂತರ ಬೆಳೆ ಪದ್ಧತಿ, ಬಲೆ ಬೆಳೆ, ಮೋಹಕ ಬಲೆ, ಸಸ್ಯಜನ್ಯ ಕೀಟನಾಶಕಗಳು, ಜೈವಿಕ ಕೀಟನಾಶಕಗಳು
ತೊಗರಿ	ಕಾಯಿ ಕೊರಕ	ಬೇಗನೆ ಮಾಗುವ ತಳಿಗಳ ಬಳಕೆ, ಅಂತರ ಬೆಳೆ (ಜೋಳ / ಪುಂಡಿ), ಮೋಹಕ ಬಲೆ, ಸಸ್ಯಜನ್ಯ ಕೀಟನಾಶಕಗಳು, ಜೈವಿಕ ಕೀಟನಾಶಕಗಳು
ಶೇಂಗಾ	ಗೊಣ್ಣೆ ಹುಳು, ಕೆಂಪು ತಲೆ ಕಂಬಳಿ ಹುಳು	ಮಾಗಿ ಉಳುಮೆ, ದೀಪಾಕರ್ಷಕ ಬಲೆ, ಜೈವಿಕ ನಿಯಂತ್ರಣ, ಅಂತರ ಬೆಳೆ, ಸಸ್ಯಜನ್ಯಕೀಟನಾಶಕ
	ಸುರಳಿ ಪೂಚಿ, ತಂಬಾಕಿನ ಕೀಡೆ	ಬೀಜೋಪಚಾರ, ಅಂತರ ಬೆಳೆ (ಸಜ್ಜೆ, ಜೋಳ, ನವಣೆ), ಬಲೆ ಬೆಳೆ – ಔಡಲ, ಸೂರ್ಯಕಾಂತಿ, ಕೀಟನಾಶಕ ಶಿಲೀಂಧ್ರ, ನಂಜಾಣು, ಸಸ್ಯಜನ್ಯ ಕೀಟನಾಶಕಗಳು
ಸೋಯಾ ಅವರೆ	ಎಲೆ ತಿನ್ನುವ ಹುಳು, ಕಾಯಿ ಕೊರಕ ಹುಳು	ಬಲೆ ಬೆಳೆ–ಔಡಲ, ಸೂರ್ಯಕಾಂತಿ, ಕೀಟನಾಶಕ ಶಿಲೀಂಧ್ರ, ನಂಜಾಣು, ಸಸ್ಯಜನ್ಯ ಕೀಟನಾಶಕಗಳು

ಸೂರ್ಯ ಕಾಂತಿ	ತೆಲೆ ಕೊರಕ, ಬುಡ ಕತ್ತರಿಸುವ ಹುಳು	ಮರಿ ಹುಳುಗಳನ್ನು ಆರಿಸುವುದು, ಎನ್‌ಪಿವಿ ಬಳಕೆ
ಕಬ್ಬು	ಕಾಂಡ ಕೊರಕಗಳು, ಬಿಳಿ ಉಣ್ಣೆ ಹೇನು, ಪ್ಲೈರಿಲ್ಲಾ, ಗೊಣ್ಣೆ ಹುಳು	ದೀಪಾಕರ್ಷಕ ಬಲೆ, ಪರತಂತ್ರ ಜೀವಿಗಳ ಬಳಕೆ, ಕೀಟನಾಶಕ ಶಿಲೀಂದ್ರಗಳ ಬಳಕೆ, ಪರಭಕ್ಷಕ – ಮೈಕ್ರೋಮಸ್ & ಡಿಫಾ ಹಾಗೂ ಹೂವಿನ ನೊಣಗಳು
ತರಕಾರಿ ಬೆಳೆಗಳು		
ಹೂಕೋಸು, ಎಲೆ ಕೋಸು	ವಜ್ರಾಕೃತಿ ಬೆನ್ನಿನ ಚಿಟ್ಟೆ	ಅಂತರ ಬೆಳೆ (ಟೊಮ್ಯಾಟೋ), ಆಕರ್ಷಕ ಬೆಳೆ (ಸಾಸಿವೆ), ಸಸ್ಯ ಜನ್ಯ ಕೀಟನಾಶಕಗಳು, ಕೀಟನಾಶಕ ಶಿಲೀಂದ್ರಗಳ ಬಳಕೆ
ಬದನೆ	ಕುಡಿ & ಕಾಯಿ ಕೊರಕ	ಬೇವಿನ ಹಿಂಡಿ, ಪರತಂತ್ರ ಜೀವಿಗಳ ಬಳಕೆ, ಸಸ್ಯಜನ್ಯ ಕೀಟನಾಶಕಗಳ ಬಳಕೆ
ಬೆಂಡಿ	ರಸ ಹೀರುವ ಕೀಟಗಳು & ಕಾಯಿ ಕೊರಕ	ಕೀಟನಾಶಕ ಶಿಲೀಂದ್ರಗಳ ಬಳಕೆ, ಎನ್‌ಪಿವಿ, ಸಸ್ಯಜನ್ಯ ಕೀಟನಾಶಕಗಳ ಬಳಕೆ
ಟೊಮ್ಯಾಟೋ	ರಸ ಹೀರುವ ಕೀಟಗಳು &	ಕೀಟನಾಶಕ ಶಿಲೀಂದ್ರಗಳ ಬಳಕೆ, ಎನ್‌ಪಿವಿ, ಸಸ್ಯಜನ್ಯ ಕೀಟನಾಶಕಗಳ ಬಳಕೆ,
	ಕಾಯಿ ಕೊರಕ	ಮೋಹಕ ಬಲೆಯಾಗಿ ಚೆಂಡು ಹೂ
ಮೆಣಸಿನಕಾಯಿ	ಎಲೆ ಮುಟುರು ರೋಗ, ಕಾಯಿ ಕೊರಕ	ಗಡಿ ಬೆಳೆ (ಮೆಕ್ಕೆ ಜೋಳ), ಕೀಟನಾಶಕ ಶಿಲೀಂದ್ರಗಳ ಬಳಕೆ, ಎನ್‌ಪಿವಿ, ಸಸ್ಯಜನ್ಯ ಕೀಟನಾಶಕಗಳ ಬಳಕೆ, ಬಲೆ ಬೆಳೆಯಾಗಿ ಚೆಂಡು ಹೂ
ಹಣ್ಣಿನ ಬೆಳೆಗಳು		
ಮಾವು	ಜಿಗಿ ಹುಳು, ಹಿಟ್ಟು ತಿಗಣೆ, ಹಣ್ಣಿನ ನೊಣ	ಕಾಂಡಕ್ಕೆ ಡಾಂಬರ್ ಲೇಪನ, ಗಿಡದ ಬುಡದಲ್ಲಿರುವ ಮಣ್ಣು ಕದಡುವುದು, ಕೀಟನಾಶಕ ಶಿಲೀಂದ್ರಗಳ ಬಳಕೆ, ಸಸ್ಯಜನ್ಯ ಕೀಟನಾಶಕಗಳ ಬಳಕೆ
ಲಿಂಬೆ, ದ್ರಾಕ್ಷಿ, ಪೇರಲ	ಹಿಟ್ಟು ತಿಗಣೆ	ಪರಭಕ್ಷಕಗಳ ಬಳಕೆ, ಕೀಟನಾಶಕ ಶಿಲೀಂದ್ರಗಳ ಬಳಕೆ, ಸಸ್ಯಜನ್ಯ ಕೀಟನಾಶಕಗಳ ಬಳಕೆ
ತೆಂಗು	ದುಂಬಿ, ಕಪ್ಪು ತಲೆ ಕಂಬಳಿ ಹುಳು	ಪರತಂತ್ರ ಜೀವಿಗಳ ಉಪಯೋಗ, ಕೀಟನಾಶಕ ಶಿಲೀಂದ್ರಗಳ ಬಳಕೆ, ಸಸ್ಯಜನ್ಯ ಕೀಟನಾಶಕಗಳ ಬಳಕೆ

ಆಧುನಿಕ ಸಾವಯವ ಕೃಷಿ ಪದ್ಧತಿಯಿಂದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನೆ

ಎಂ.ಟಿ.ಸಂಜಯ್[1], ಪಿ.ಅಶೋಕ[2], ವಿರೇಶ ಹತ್ತಿ[3] ಬಸವರಾಜ ಕುಂಬಾರ [4] ಮತ್ತು ಬಿ. ನವೀನ್[5]

1. ಕಿರಿಯ ಬೇಸಾಯ ಶಾಸ್ತ್ರಜ್ಞರು, ಕಳೆ ನಿರ್ವಹಣೆ ವಿಭಾಗ, ಕೃವಿವಿ, ಬೆಂಗಳೂರು, 2. ಬೇಸಾಯ ಶಾಸ್ತ್ರಜ್ಞರು, ಕೃವಿವಿ, ಧಾರವಾಡ, 3 ಮತ್ತು 4. ಪಿ.ಹೆಚ್.ಡಿ (ಬೇಸಾಯ ಶಾಸ್ತ್ರ) ವಿದ್ಯಾರ್ಥಿ, ಕೃವಿವಿ, ಬೆಂಗಳೂರು. 5. ಸೀನಿಯರ್ ರೀಸರ್ಚ ಫೇಲೋ, ಕಳೆ ನಿರ್ವಹಣೆ ವಿಭಾಗ, ಕೃವಿವಿ, ಬೆಂಗಳೂರು. ಇ–ಮೇಲ್ : ಎಂಟಿ.ಸಂಜಯ್@ಜಿಮೇಲ್.ಕಾಮ್

ಸಾವಯವ ಕೃಷಿ ಪದ್ಧತಿಗಳನ್ನು ಭಾರತದಲ್ಲಿ ಅನಾದಿ ಕಾಲದಿಂದಲೂ ಅಳವಡಿಸಿ ಕೊಳ್ಳಲಾಗುತ್ತಿದೆ. ಸಾವಯವ ಕೃಷಿ ಪದ್ಧತಿಯಲ್ಲಿ ನಾವು ಬೆಳೆಗಳ ಉತ್ಪಾದನೆಯ ಜೊತೆಗೆ, ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಂಡು, ಪರಿಸರ ಪ್ರೇಮಿ ಪ್ರಯತ್ನದೊಂದಿಗೆ. ಮಾಲಿನ್ಯರಹಿತ ವಾತಾವರಣವನ್ನು ಪಡೆಯುತ್ತೇವೆ. ಇಲ್ಲಿ ನಾವು ಸಾವಯವ ತ್ಯಾಜ್ಯ ವಸ್ತುಗಳನ್ನು ಬಳ ಸಿಕೊಂಡು ಕಸದಿಂದ ರಸವನ್ನು ತೆಗೆಯುವ ಪ್ರಯತ್ನವನ್ನು ಮಾಡುತ್ತೇವೆ. ಜೈವಿಕ ಗೊಬ್ಬರಗಳ ಜೊತೆಗೆ, ಬೆಳೆಯಿಂದ ಬಂದಂತಹ ತ್ಯಾಜ್ಯಗಳನ್ನು ಮತ್ತೆ ಬಳಸಿಕೊಂಡು, ಬೆಳೆ ಪರಿವರ್ತನೆ, ಜೈವಿಕ ಕೀಟ, ರೋಗ ಮತ್ತು ಕಳೆನಾಶಕಗಳನ್ನು ಉತ್ಪಾದಿಸುವುದೇ ಅಲ್ಲದೆ ಮಣ್ಣಿನ ಆರೋಗ್ಯದ ಜೊತೆಗೆ, ಇಳುವರಿಯಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಲು ಅತ್ಯುತ್ತಮ ಅವಕಾಶವಿದೆ. ಸಾವಯವ ಕೃಷಿಯಿಂದ ಬರುವಂತಹ ಉತ್ಪಾದನೆಯು, ಅದನ್ನು ಬಳಸುವಂತಹ ಜನರಿಗೆ ಉತ್ತಮ ಸ್ವಾಸ್ಥ ಮತ್ತು ಪೋಷಕಾಂಶಗಳೊಂದಿಗೆ, ಒಳ್ಳೆಯ ಆರೋಗ್ಯವನ್ನು ದಯಪಾಲಿಸುತ್ತದೆ. ಸಾವಯವ ಕೃಷಿ ಪದ್ಧತಿಯಲ್ಲಿ ಸಮಗ್ರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ನೆಲ, ಜಲ, ಸೂರ್ಯರಶ್ಮಿ, ಮುಂತಾದ ನೈಸರ್ಗಿಕ ಸಂಪನ್ಮೂಲಗಳನ್ನು ಬಹು ಜಾಣ್ಮೆಯಿಂದ ಬಳಸಿಕೊಂಡು ರೈತರಿಗೆ ಅಧಿಕ ಉತ್ಪಾದನೆಯ ಜೊತೆಗೆ ಅಧಿಕ ಆದಾಯ ಮತ್ತು ಕೂಲಿ ಆಳುಗಳ ಸಮಸ್ಯೆಯನ್ನು ಕೂಡ ನೀಗಿಸಬಹುದು ಮತ್ತು ಸಮಗ್ರ ಕೃಷಿ ಪದ್ಧತಿಯಿಂದ ಅಧಿಕ ಜನರಿಗೆ ಕೃಷಿಯಲ್ಲಿ ಕೆಲಸವನ್ನು ಕೂಡ ಸೃಷ್ಠಿಸಿ, ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಹೋಗುವುದನ್ನು ಕೂಡ ಗಣನೀಯವಾಗಿ ಕಡಿಮೆ ಮಾಡಬಹುದು.

ಪೀಠಿಕೆ: ಸಾವಯವ ಕೃಷಿ ಪದ್ಧತಿಗಳನ್ನು ಭಾರತದಲ್ಲಿ ಅನಾದಿ ಕಾಲದಿಂದಲೂ ಅಳವಡಿಸಿ ಕೊಳ್ಳಲಾಗುತ್ತಿದೆ. ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆಗಳ ಉತ್ಪಾದನೆಯ ಜೊತೆಗೆ, ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಂಡು, ಪರಿಸರ ಪ್ರೇಮಿ ಪ್ರಯತ್ನದೊಂದಿಗೆ. ಮಾಲಿನ್ಯ ರಹಿತ ವಾತಾವರಣವನ್ನು ಪಡೆಯುತ್ತೇವೆ. ಸಾವಯವ, ಜೈವಿಕ ಗೊಬ್ಬರಗಳ ಜೊತೆಗೆ, ಬೆಳೆಯಿಂದ ಬಂದಂತಹ ತ್ಯಾಜ್ಯಗಳನ್ನು ಮತ್ತೆ ಬಳಸಿಕೊಂಡು, ಬೆಳೆ ಪರಿವರ್ತನೆ, ಜೈವಿಕ ಕೀಟ, ರೋಗ ಮತ್ತು ಕಳೆನಾಶಕ – ಮಣ್ಣಿನ ಆರೋಗ್ಯದ ಜೊತೆಗೆ, ಇಳುವರಿಯಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಲು ಅವಕಾಶ. ಸಾವಯವ ಕೃಷಿಯು ಜೀವವೈವಿಧ್ಯ, ಜೈವಿಕ ಚಕ್ರಗಳು ಮತ್ತು ಜೈವಿಕ ಚಟುವಟಿಕೆ ಸೇರಿದಂತೆ ಕೃಷಿ ಪರಿಸರ ವ್ಯವಸ್ಥೆಯ ಆರೋಗ್ಯಕ್ಕೆ ಒಂದು ಅನನ್ಯ ನಿರ್ಮಾಣ ನಿರ್ವಹಣೆ ವ್ಯವಸ್ಥೆಯಾಗಿದೆ.

ಸಾವಯವ ಕೃಷಿಯ ಅಗತ್ಯ:

- ಜನಸಂಖ್ಯೆ ಹೆಚ್ಚಾದಂತೆ ನಮ್ಮ ಕೃಷಿ ಉತ್ಪಾದನೆ ಸ್ಥಿರಗೊಳಿಸಲು ಹಾಗೂ ಮತ್ತಷ್ಟು ಹೆಚ್ಚಿಸಲು.
- ನೈಸರ್ಗಿಕ ಸಮತೋಲನೆ ಕಡಿಮೆ ವೆಚ್ಚದಲ್ಲಿ ನಿರ್ವಹಿಸುವ ಅಗತ್ಯವಿದೆ.
- ಪ್ರಸ್ತುತ ಕಾಲದಲ್ಲಿ, ನವೀಕರಿಸಲಾಗದ ರಾಸಾಯನಿಕ ಪದಾರ್ಥಗಳ ಲಭ್ಯತೆ ಇಳಿಮುಖವಾಗುತ್ತಿರುವುದು.
- ಇದು ಭವಿಷ್ಯದಲ್ಲಿ ನಮ್ಮ ವಿದೇಶಿ ವಿನಿಮಯ ಮೇಲೆ ಅತೀವವಾಗಿ ದಿಬಾರಿಯಾಗಬಹುದು.

ಸಾವಯವ ಕೃಷಿಯ ಪ್ರಮುಖ ಗುಣಲಕ್ಷಣಗಳು:

- ಮಣ್ಣಿನ ಜೈವಿಕ ಚಟುವಟಿಕೆ ಮತ್ತು ಸಾವಯವ ಗುಣಮಟ್ಟವನ್ನು ಕಾಯ್ದುಕೊಳ್ಳುವ ಮೂಲಕ ಮಣ್ಣಿನ ಧೀರ್ಘಕಾಲದ ಫಲವತ್ತತೆಯನ್ನು ರಕ್ಷಿಸುವುದು.
- ಮಣ್ಣಿನ ಸೂಕ್ಷ್ಮ ಜೀವಿಗಳ ಕ್ರಿಯೆಯಿಂದ ಪರೋಕ್ಷವಾಗಿ ಕರಗದ ಪೌಷ್ಟಿಕಾಂಶಗಳ ಮೂಲವನ್ನು ಬಳಸಿಕೊಂಡು ಬೆಳೆಯ ಸಸ್ಯಗಳಿಗೆ ಪೋಷಕಾಂಶಗಳನ್ನು ಒದಗಿಸುವುದು.
- ಕಾಳುಗಳು ಮತ್ತು ಜೈವಿಕ ನೈಟ್ರೋಜನ ಸ್ಥೀರಿಕರಣ ಬಳಕೆಯ ಮೂಲಕ ಸಾರಜನಕ ಸ್ವಯಂಪೂರ್ಣತೆ ಹಾಗೂ ಬೆಳೆ ಉಳಿಕೆ ಮತ್ತು ಜಾನುವಾರು ಗೊಬ್ಬರ ಸೇರಿದಂತೆ ಸಾವಯವ ವಸ್ತುಗಳ ಪರಿಣಾಮಕಾರಿ ಮರು ಬಳಕೆ.
- ಕಳೆ, ರೋಗ ಮತ್ತು ಕೀಟಗಳ ಆವಳಿಗಾಗಿ ಬೆಳೆ ಆವರ್ತನೆ, ಸ್ವಾಭಾವಿಕ ಪರಭಕ್ಷಕ, ಜೈವಿಕ ಗೊಬ್ಬರದ ಬಳಕೆ, ನಿರೋಧಕ ತಳಿಗಳ ಬಳಕೆ.
- ವ್ಯಾಪಕ ಪರಿಸರದ ಮೇಲೆ ಕೃಷಿ ವ್ಯವಸ್ಥೆಯ ಪರಿಣಾಮ, ವನ್ಯಜೀವಿ ಮತ್ತು ನೈಸರ್ಗಿಕ ಆವಾಸಸ್ಥಾನಗಳ ಸಂರಕ್ಷಣೆಗೆ ಎಚ್ಚರಿಕೆಯಿಂದ ಗಮನಹಾಸುವುದು.

ಸಾವಯವ ಕೃಷಿಯ ಸಿದ್ದಾಂತಗಳು:

- ಆರೋಗ್ಯ
- ಪರಿಸರ
- ಆರೈಕೆ
- ಸ್ಥಿರತೆ

ಗೊಬ್ಬರ ತಯಾರಿಕೆ:

- ಕೊಳೆಯುತ್ತಿರುವ ಅಥವಾ ನಿಯಾಂತ್ರಿತ ಸ್ಥಿತಿಗಳಲ್ಲಿ ಸೂಕ್ಷ್ಮ ಜೀವಿಗಳಿಂದ ಜೈವಿಕ ವಸ್ತುಗಳ ವಿಘಟನೆಯ ಒಂದು ನೈಸರ್ಗಿಕ ಪ್ರಕ್ರಿಯೆ.
- ಕಚ್ಚಾ ಸಾವಯವ ವಸ್ತುಗಳಾದ ಬೆಳೆ ತ್ಯಾಜ್ಯ, ಪ್ರಾಣಿಗಳ ತ್ಯಾಜ್ಯ, ಆಹಾರದ ಕಸ, ನಗರಗಳ ತ್ಯಾಜ್ಯ, ಹಾಗೂ ಕೈಗಾರಿಕಾ ತ್ಯಾಜ್ಯಗಳನ್ನು ಕಚ್ಚಾ ಸಾವಯವ ವಸ್ತುಗಳನ್ನಾಗಿ ಬಳಸಿಕೊಂಡು ಮಿಶ್ರ ಗೊಬ್ಬರವನ್ನು ತಯಾರಿಕೆ.

ಗೊಬ್ಬರ ತಯಾರಿಕೆಯ ವಿಧಗಳು:

- ಕೊಯಿಮತ್ತೂರು ವಿಧಾನ
- ಇಂಡೋರ್ ವಿಧಾನ
- ಬೆಂಗಳೂರು ವೊಇಧಾನ

ಕಾಂಪೋಸ್ಟ್ ಸಾವಯವದ ಪ್ರಮುಖ ಮೂಲ:

- ಮಣ್ಣಿನ ಸಾವಯವ ಫಚವತ್ತತೆ ಪೋಷಿಸುವಲ್ಲಿ ಪ್ರಮುಖ ಮಾತ್ರವನ್ನು ವಹಿಸುತ್ತದೆ ಮತ್ತು ಆದ್ದರಿಂದ ಸುಸ್ಥಿರ ಕೃಷಿ ಉತ್ಪಾದನೆ ಒಂದುತ್ತದೆ.
- ಸಸ್ಯ ಪೋಷಕಾಂಶಗಳ ಮೂಲವಾಗಿ ಜೊತೆಗೆ, ಇದು ಭೌತ-ರಾಸಾಯನಿಕ ಮತ್ತು ಮಣ್ಣಿನ ಜೈವಿಕ ಲಕ್ಷಣಗಳನ್ನು ಉತ್ತಮಗೊಳಿಸಿತ್ತದೆ. ಈ ಸುಧಾರಣೆಗಳು, ಮಣ್ಣಿನ ಮರಿಣಾಮವಾಗಿ: ಬರ, ರೋಗಗಳು ಮತ್ತು ಒತ್ತಡಗ ನಿರೋಧಕ; ಸಸ್ಯ ಪೋಷಕಾಂಶಗಳ ಸುಧಾರಿತ ಗ್ರಹಿಸುವಲ್ಲಿ ಸಹಾಯ ಮತ್ತು ಸಕ್ರಿಯ ಪೌಷ್ಟಿಕಗಳ ಸೈಕ್ಲಿಂಗ್.

ಪ್ರಾಣಿಗಳ ಸಗಣಿ ಮತ್ತು ಮೂತ್ರ ಉತ್ಪತ್ತಿ (ಒಂದು ದಿನಕ್ಕೆ):

ಪ್ರಾಣಿಗಳು	ಮೂತ್ರ (ಮಿ.ಲೀ.)	ಸಗಣಿ (ಕೆ.ಜಿ.)
ಕುದುರೆ	೩-೮	೯-೧೮
ಹಸು	೭-೧೫	೧೮-೩೦
ಎಮ್ಮೆ	೨೦-೪೫	೨೫-೪೦
ಕುರಿ ಮತ್ತು ಆಡು	೧೦-೪೦	೧-೨.೫
ಹಂದಿ	೫-೩೦	೩-೫
ಕೋಳಿ	–	೨.೫-೩.೫

ಪ್ರಾಣಿ ಘನ ಮತ್ತು ದ್ರವಮಲದ ಪೌಷ್ಟಿಕತೆ:

ಪ್ರಾಣಿಗಳು	ಮೂತ್ರ (%)			ಸಗಣಿ (ಮಿ. ಗ್ರಾಂ/ ಗ್ರಾಂ.)		
	ಸಾರಜನಕ	ರಂಜಕ	ಪೋಟ್ಯಾಷ್	ಸಾರಜನಕ	ರಂಜಕ	ಪೋಟ್ಯಾಷ್
ಹಸು	೨೦-೪೫	೪-೧೦	೭-೨೫	೧.೨೧	೦.೦೧	೧.೩೫
ಕುರಿ ಮತ್ತು ಆಡು	೨೦-೪೫	೪-೧೧	೨೦-೨೯	೧.೪೭	೦.೦೫	೧.೯೬
ಹಂದಿ	೨೦-೪೫	೬-೧೨	೧೫-೪೮	೦.೩೮	೦.೧	೦.೯೯
ಕೋಳಿ	೨೮-೬೨	೯-೨೬	೮-೨೯	–	–	–

ಗೊಬ್ಬರ ಏಕೆ ಅಗತ್ಯ:
- ಮರಗಳಿಗೆ, ತೋಟಗಳಿಗೆ, ಭೂದೃಶ್ಯಗಳಿಗೆ ಹಾಗೂ ಹುಲ್ಲುಹಾಸುಗಳಿಗೆ ಹೊದಿಕೆಯಾಗಿ ಬಳಸಬಹುದು,
- ಪಾಟಿಂಗ್ ಮಿಶ್ರಣವಾಗಿ ಬಳಸಬಹುದು.
- ಜೊತೆಗೆ ಸಸ್ಯಗಳ ಸಂರಕ್ಷಣೆ, ಕಳೆಗಳ ನಿಯಂತ್ರಣ, ನಿಧಾನ ಬಿಡುಗಡೆಯ ಪೋಷಕಾಂಶಗಳನ್ನು ಒದಗಿಸುತ್ತದೆ ಹಾಗೂ ಮಣ್ಣಿನ ಸವಳಿಕೆಯನ್ನು ತಡೆಯುತ್ತದೆ.

ಗೊಬ್ಬರದ ಬಳಕೆಯಿಂದ ಕೃಷಿಗಾಗುವ ಸದುಪಯೋಗಗಳು:
- ಮಣ್ಣಿನ ಬೌತಿಕ ಲಕ್ಷಣಗಲನ್ನು ಹೆಚ್ಚಿಸುತ್ತದೆ.
- ಮಣ್ಣಿನ ರಾಸಾಯನಿಕ ಲಕ್ಷಣಗಲನ್ನು ಹೆಚ್ಚಿಸುತ್ತದೆ
- ಮಣ್ಣಿನ ಜೈವಿಕ ಲಕ್ಷಣಗಳನ್ನು ಹೆಚ್ಚಿಸುತ್ತದೆ
- ತ್ಯಾಜ್ಯ ಸಂಪುಟ ಕಡಿತ
- ಮಿಶ್ರಗೊಬ್ಬರ ಮಣ್ಣಿಗೆ ಅನೇಕ ತ್ಯಾಜ್ಯ ವಸ್ತುಗಳ ಮೂಲಕ ಸರಿಯಾದ ಸಮಯಕ್ಕೆ ಹದವನ್ನು ತರುತ್ತದೆ
- ಮಿಶ್ರಗೋಬ್ಬರವು ಮಣ್ಣಿನ ಜೊತೆ ಪಕ್ವತೆಯ ಸಮತೋಲನವಿರುತ್ತದೆ
- ಮಿಶ್ರಗೊಬ್ಬರದಿಂದ ಮಣ್ಣಿನ ಗುಣಮಟ್ಟ ಉತ್ತಮವಾಗಿರುತ್ತೆ
- ಮಿಶ್ರಗೊಬ್ಬರದಿಂದ ಬೆಳೆಯ ಉತ್ಪನ್ನ ಹೆಚ್ಚಾಗಿರುತ್ತದೆ

ಮಿಶ್ರಗೊಬ್ಬರದ ಆರ್ಥಿಕ ಮತ್ತು ಸಾಮಾಜಿಕ ಪ್ರಯೋಜನೆಗಳು:
- ಸಾವಯವ ಬೆಳೆಗಳು ಹೆಚ್ಚಿನ ಆದಾಯವನ್ನು ತಂದುಕೊಡುತ್ತವೆ.
- ಮಿಶ್ರಗೊಬ್ಬರವು ಹಲವಾರು ಸಂಭಾವ್ಯ ಆರ್ಥಿಕ ಪ್ರಯೋಜನೆಗಳನ್ನು ಒದಗುಸುತ್ತವೆ.
- ನಾಗರಿಕರಿಗೆ ಹೊಸ ಉದ್ಯೋಗವನ್ನು ಕಲ್ಪಿಸಿಕೊಡುತ್ತದೆ.
- ಸಸ್ಯಗಳಿಗೆ ಪೋಷಕಾಂಶಗಳ ಮೂಲ
- ಮಣ್ಣಿನ ಫಲವತ್ತತೆಯನ್ನು ಸುಧಾರಿಸಿ, ನೀರು, ಕೀಟನಾಶಕ, ಶಲೀಂಧ್ರನಾಶಕ ಮತ್ತು ಸಸ್ಯನಾಶಕಗಳ ಅಗತ್ಯತೆಯನ್ನು ಕಡಿಮೆ ಮಡುತ್ತದೆ.
- ಮಿಶ್ರಗೊಬ್ಬರದಿಂದ ಮಣ್ಣಿನ ನಿರ್ವಹಣೆ ಸುಧಾರುಸುತ್ತೆದೆ.
- ಮಿಶ್ರಗೊಬ್ಬರದಿಂದ ಮಣ್ಣಿನ ಮಾಲಿನ್ಯದ ಅಪಾಯವನ್ನು ತಡೆಗಟ್ಟಬಹುದು.
- ಮಿಶ್ರಗೊಬ್ಬರದಿಂದ ಬೆಳೆಯ ರೋಗ ನಿಯಂತ್ರಣವಾಗುತ್ತದೆ
- ಮಿಶ್ರಗೊಬ್ಬರವು ಸಸ್ಯದ ರೋಗಗಳನ್ನು ಮತ್ತು ಕ್ರಿಮಿಕೀಟಗಳನ್ನು ತಡೆಯುತ್ತದೆ
- ಮಿಶ್ರಗೊಬ್ಬರದಿಂದ ಬೆಳೆಗಳ ಪ್ರಮಾಣ, ಗದ್ದೆಗಳ ಪುನರುತ್ಥಾನ ಮತ್ತು ಆವಾಸಸ್ಥಾನ ಪುನರುಜ್ಜೀವನವು ಉತ್ತಮವಾಗಿ ಕಲುಷಿತವನ್ನು ತಡೆಗಟ್ಟಬಹುದು
- ಮಣ್ಣುನಲ್ಲಿ ಅಪಾಯಕಾರಿಯಾದ ತ್ಯಾಜ್ಯ ಕಲುಷಿತವು ಹೆಚ್ಚು ಪರಿಣಾಮಕಾರಿಯಾಗುತ್ತದೆ

ಅನಾನುಕೂಲಗಳು:
- ಕೈಗಾರಿಕೆಯಿಂದ ಬರುವ ರಾಸಾಯನಿಕ ಗಾಳಿಯಿಂದ ೯೯.೬ ರಷ್ಟು ಬೆಳೆಯ ನಾಶ ಸಂಭವಿಸುತ್ತದೆ.
- ಬೃಹತ್ ಪ್ರಮಾಣದ ಉತ್ಪನ್ನವನ್ನು ಪ್ರಭಾವಕಾರಿಯಾಗಿ ರವಾನೆ ಮಾಡುವುದು ದುಬಾರಿಯಾಗಿರುತ್ತದೆ
- ರಾಸಾಯನಿಕ ಗೊಬ್ಬರವು ಸಾಮಾನ್ಯವಾಗಿ ಕಡಿಮೆ ಸಮಯದಲ್ಲಿ ಬೆಳೆಗಳ ಪೌಷ್ಟಿಕ ಅವಶ್ಯಕತೆ ಪೂರೈಸಲು ಸಾಧ್ಯವಿಲ್ಲ ಆದ್ದರಿಂದ ಪೌಷ್ಟಿಕಾಂಶದ ದರದ ಕೊರತೆ ಪರಿಣಾಮಕಾರಿಯಾಗಿದೆ
- ಮಿಶ್ರಗೊಬ್ಬರದ ಪೌಷ್ಟಿಕ ಸಂಯೋಜನೆ ರಾಸಾಯನಿಕ ಗೊಬ್ಬರಕ್ಕೆ ಹೋಲಿಸಿದರೆ ಹೆಚ್ಚು ವ್ಯತ್ಯಾಸವಿರುತ್ತದೆ

ಎರೆಹುಳು ಗೊಬ್ಬರ:
- ಎರೆಹುಳುಗಳು ಮಣ್ಣಿನಲ್ಲಿ ವಾಸವಿದ್ದು, ಕೊಳೆಯುತ್ತಿರುವ ಜೈವಿಕ ವಸ್ತುಗಳನ್ನು ತಿಂದು ಜೀವಿಸುತ್ತವೆ
- ಎರೆಹುಳುಗಳು ಅನ್ನನಾಳದ ಪ್ರಕ್ರಿಯೆಯಿಂದ ಜೈವಿಕ ತ್ಯಾಜ್ಯವನ್ನು ನೈಸರ್ಗಿಕ ತ್ಯಾಜ್ಯವನ್ನಾಗಿ ರೂಪಾಂತರಗೊಳಿಸುತ್ತವೆ.
- ಹುಳುಗಳ (ವರ್ಮ್) ಲೋಹವು ಪಿಹೆಚ್ ೭ (ತಡಸ್ಥ) ಹಾಗೂ ವಾಸನೆಯಿಲ್ಲದಾಗಿದೆ.
- ವರ್ಮ್ ಲೋಹವು ಬ್ಯಾಕ್ಟೀರಿಯಾ ಹೊದಿದ್ದು, ಅದರ ಪ್ರಕ್ರಿಯೆ ಮಣ್ಣಿನಲ್ಲಿ ಮುಂದುವರೆಯುತ್ತದೆ ಹಾಗೂ ಸೂಕ್ಷಜೀವಿಯ ಚಟುವಟಿಕೆಯನ್ನು ಹೆಚ್ಚಿಸುತ್ತದೆ.

ಎರೆ ಗೊಬ್ಬರ ಮತ್ತು ಬಳಕೆ: ಎರೆಗೊಬ್ಬರವು ಎರೆಹುಳುವಿನ ಮಲವೆಂದರೆ ತಪ್ಪಾಗಲರದು. ಏಕೆಂದರೆ ಈ ಗೊಬ್ಬರವು ಹೆಚ್ಚಿನ ರೀತಿಯಲ್ಲಿ ಹ್ಯೂಮಸ್ ಮತ್ತು ಪೋಷಕಾಂಶಗಳನ್ನು ಹೊಂದಿದೆ. ನಾವು ಕೃತಕವಾಗಿ ಇಟ್ಟಿಗೆ ತೊಟ್ಟಿಯಲ್ಲಿ ಅಥವಾ ಮರಗಳ ಕಾಂಡದ (ವಿಶೇಷವಾಗಿ ತೋಟಗಾರಿಕಾ ಮರಗಳು) ಬಳಿ ಎರೆಹುಳುವನ್ನು ಬೆಳೆಸಬಹುದಾಗಿದೆ. ಈ ಎರೆಹುಳುಗಳ ಎಚ್ಚರಿಕೆ ಮತ್ತು ಸರಿಯಾದ ಆಹಾರ ಬಳಕೆಯಿಂದ ನಾವು ಅಗತ್ಯವಿರುವ ಪ್ರಮಾಣದ ಗೊಬ್ಬರವನ್ನು ತಯಾರಿಸಬಹುದು.

ಎರೆಹುಳು ತಯಾರಿಕೆಗೆ ಬೇಕಾಗಿರುವ ಸಾಮಾಗ್ರಿಗಳು:
- ಬೆಳೆಗಳ ಶೇಷ
- ಕಳೆ ಜೀವರಾಶಿ
- ಎಲೆಯ ಅವಶೇಷ
- ಹೋಟೆಲ್ ತ್ಯಾಜ್ಯ
- ಕೃಷಿ ಕೈಗಾರಿಕೆಗಳ ತ್ಯಾಜ್ಯ
- ನಗರ ಮತ್ತು ಗ್ರಾಮೀಣ ತ್ಯಾಜ್ಯದ ಜೈವಿಕ ವಸ್ತುಗಳು

ಎರೆಹುಳುಗಳಿಗೆ ಏನು ಬೇಕು?

ಕಾಂಪೋಸ್ಟ ಹುಳುಗಳಿಗೆ ಐದು ಮೂಲಭೂತ ವಿಷಯಗಳ ಅಗತ್ಯವಿದೆ:

೧. ಆತಿಥ್ಯ ಪರಿಸರ ಅಂದರೆ ಸಾಮಾನ್ಯವಾಗಿ ಕರೆಯಲ್ಪಡುವ "ಹಾಸಿಗೆ"
೨. ಆಹಾರ
೩. ಸಾಕಷ್ಟು ತೇವಾಂಶ (೫೦% ಕ್ಕಿಂತಲೂ ಹೆಚ್ಚು ತೂಕದ ನೀರಿನಂಶ)
೪. ಸಾಕಷ್ಟು ಗಾಳಿ
೫. ಹೆಚ್ಚಿನ ಬಿಸಿಲಿನ ತಾಪದಿಂದ ಕಾಪಾಡುವುದು

ಎರೆ ಗೊಬ್ಬರ ತಯಾರಿಕೆಯ ಪದ್ಧತಿಗಳು:

೧. ಸೂಕ್ತ ಎರೆಹುಳುವಿನ ಆಯ್ಕೆ
೨. ಎರೆಹುಳುವಿನ ಗೊಬ್ಬರ ತಯಾರಿಕೆಯ ಸ್ಥಳದ ಆಯ್ಕೆ
೩. ಎರೆಹುಳುವಿನ ಗೊಬ್ಬರದ ಉತ್ಪಾದನೆಯ ಧಾರಕಗಳು
೪. ಎರೆಹುಳುವಿನ ಹಾಸಿಗೆ
೫. ವರ್ಮ್ ಆಹಾರ
೬. ಎರೆಗೊಬ್ಬರ ಉತ್ಪಾದನೆಯ ಆಯ್ಕೆ
೭. ಎರೆಗೊಬ್ಬರ ಉತ್ಪಾದನೆಯ ಧಾರಕಗಳಲ್ಲಿ ತ್ಯಾಜ್ಯ ಹಾಕುವುದು
೮. ವರ್ಮ್ ಹಾಸಿಕೆಗೆ ನೀರುಣಿಸುವುದು

೯. ಎರೆಗೊಬ್ಬರವನ್ನು ಧಾರಕಗಳಿಂದ ಹೊರತೆಗೆಯುವುದು
೧೦. ಎರೆಹುಳುಗಳನ್ನು ಧಾರಕಗಳಿಂದ ಹೊರತೆಗೆಯುವುದು
ಎರೆಗೊಬ್ಬರದ ಪ್ಯಾಕಿಂಗ್ ಮತ್ತು ಸಂಗ್ರಹಣೆ

ಎರೆಹುಳುವಿನ ವಿಧಗಳು:



1
ಆಫ್ರಿಕನ್ ಎರೆಹುಳು (ಯೂಡ್ರಿಲ್ಲಸ್ ಯೂಗಿನಿಯೆ)



೨.
ಟೈಗರ್ ಹುಳು (ಈಸೆನಿಯಾ ಪೊಯ್ತಿಡಾ)



೩.
ಏಸಿಯನ್ ಹುಳು (ಪೆರಿನೊನಿಕ್ಸ್ ಯಿಕವಾಟಸ್)

ಎರೆ ಗೊಬ್ಬರದ ಪೌಷ್ಟಿಕತೆ:

- ಸಾವಯವ ಇಂಗಾಲ: ೯.೫–೧೭.೯೮%
- ಸಾರಜನಕ: ೦.೫–೧.೫೦
- ಪಾಸ್ಪರಸ್: ೦.೧–೦.೩೦%
- ಪೊಟ್ಯಾಸಿಯಂ: ೦.೧೫–೦.೫೬%
- ಸೋಡಿಯಂ: ೦.೦೬–೦.೩೦%
- ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ: ೨೨.೬೭ & ೪೭.೬೦ ಮಿ. ಗ್ರಾಂ/ ೧೦೦
- ಕಾಪರ್: ೨–೯.೫೦ ಮಿ. ಗ್ರಾಂ/ ಕೆ.ಜಿ
- ಐರನ್: ೨–೯.೩೦ ಮಿ. ಗ್ರಾಂ/ ಕೆ.ಜಿ
- ಝಿಂಕ್: ೫.೭೦–೧೧.೫೦ ಮಿ. ಗ್ರಾಂ/ ಕೆ.ಜಿ
- ಸಲ್ಫರ್: ೧೨೮–೫೪೮ ಮಿ. ಗ್ರಾಂ/ ಕೆ.ಜಿ

ತೆಂಗಿನ ನಾರಿನ ಗೊಬ್ಬರ:

ಕಚ್ಚಾ ಮತ್ತು ಮಿಶ್ರಗೊಬ್ಬರದ ನಾರು ಮುಖ್ಯಭಾಗ ಕಾಂಪೋಸ್ಟ್ ಪೌಷ್ಟಿಕತೆ:

ನಿಯತಾಂಕಗಳ	ಕಚ್ಚಾನಾರು ಮುಖ್ಯಭಾಗ (%)	ಮಿಶ್ರಗೊಬ್ಬರದನಾರು ಮುಖ್ಯಭಾಗ (%)
ಲಿಗ್ನಿನ್	೩೦.೦೦	೪. ೮೦
ಸೆಲ್ಯುಲೋಸ್	೨೬.೫೨	೧೦.೧೦
ಕಾರ್ಬನ್	೨೬.೦೦	೨೪.೦೦
ಸಾರಜನಕ	೦.೨೬	೧.೨೪
ಪಾಸ್ಪರಸ್	೦.೦೧	೦.೦೬
ಪೊಟ್ಯಾಸಿಯಂ	೦.೭೮	೧.೨೦
ಕ್ಯಾಲ್ಶಿಯಂ	೦.೪೦	೦.೫೦
ಮೆಗ್ನೀಸಿಯಂ	೦.೩೬	೦.೪೮
ಐರನ್ (ಪಿಪಿಎಮ್)	೦.೦೭	೦.೦೯
ಮ್ಯಾಂಗನೀಸ್ (ಪಿಪಿಎಮ್)	೧೨.೩೦	೨೫.೦೦
ಜಿಂಕ್ (ಪಿಪಿಎಮ್)	೭.೫೦	೧೫.೮೦
ಕಾಪರ್ (ಪಿಪಿಎಮ್)	೩.೧೦	೬.೨೦
ಸಿ: ಎನ್ ಅನುಪಾತ	೧೧೨.೧	೨೪:೧

ಕುಕ್ಕುಟ ತ್ಯಾಜ್ಯ (ಕೋಳಿ):
- ಸಾರಜನಕ- ೧.೮೯ %
- ರಂಜಕ- ೧.೮೩ %
- ಪೋಷ್ಪಾಷ್- ೧.೩೪ %
- ಸಿ/ಎನ್- ೧೨.೨೦ %

ಭತ್ತದಲ್ಲಿನ ಪ್ರಮುಖ ಕೀಟಗಳು:
- ಹಸಿರು ಜಿಗಿ ಹುಳು
- ಕಂದು ಜಿಗಿ ಹುಳು
- ಎಲೆ ಸುರುಳಿ ಹುಳು
- ಕಾಂಡ ಕೊರಕ
- ತಿಗಣೆ
- ಸೈನಿಕ ಹುಳು

ಭತ್ತದಲ್ಲಿ ಜೈವಿಕ ಕೀಟ ನಿರ್ವಹಣೆ:
- ಐ.ಆರ್.-೫೦, ೫೪, ೬೪, ಸಿ.ಆರ್.-೧೦೦೯, ಐ.ಆರ್-೨೦, ೩೬, ೪೦, ನಂತಹ ಮತ್ತು ತುಂಗ್ರೊ ನಿರೋಧಕ ಪ್ರಭೇಧಗಳನ್ನು ಬಳಸುವುದು.
- ಬೇವಿನ ಹಿಂಡಿ @ ೧೨.೫ ಕೆ.ಜಿ./ ೨೦ ರಷ್ಟು ನರ್ಸರಿಗೆ ತಳ ಪ್ರಮಾಣದಲ್ಲಿ ಕೊಡುವುದು
- ನಾಟಿ ಮಾಡುವ ಮೊದಲು ಸಸ್ಯಗಳ ತುದಿ ಮುರಿದು ನಾಟಿ ಮಾಡುವುದು.
- ಮೊಟ್ಟೆಗಳ ಸಮೂಹವನ್ನು ಸಂಗ್ರಹಿಸಿ, ನಾಶ ಪಡಿಸುವುದು.
- ಹಾವಳಿಗೆ ಹೊಳಗಾದಂತಹ ಗಿಡಗಳನ್ನು ಗುರುತಿಸಿ, ನಾಶ ಪಡಿಸುವುದು.
- ಬದುಗಳಲ್ಲಿನ ಹುಲ್ಲನ್ನು ಕತ್ತರಿಸಿ, ಸ್ವಚ್ಛವಾಗಿದುವುದು.
- ಹಾಲು ತುಂಬುವ ಹಂತದಲ್ಲಿ ತುಂಬಾ ನಿಗವಹಿಸುವುದು.
- ಸರಿಯಾದ ಪ್ರಮಾಂದ ಗೊಬ್ಬರವನ್ನು ಕೊಡುವುದು, ವಿಶಾಲ ಅಂತರ ಸರಿಯದ ಸಮಯದಲ್ಲಿ ನಾಟಿಮಡುವುದು.

ಭತ್ತದಲ್ಲಿನ ಪ್ರಮುಖ ರೋಗಗಳು:
- ದುಂಡಾಣು ಅಂಗಮರಿ ರೋಗ
- ಕಂದುಚುಕ್ಕೆ ರೋಗ
- ಬೆಂಕಿ ರೋಗ
- ಕತ್ತು ಕೊಳೆ ರೋಗ
- ತೆನೆ ಕವಚ ಕೊಳೆ ರೋಗ
- ಉದು ಬತ್ತಿ ರೋಗ

ಭತ್ತದಲ್ಲಿನ ಪ್ರಮುಖ ರೋಗಗಳ ನಿರ್ವಹಣೆ:
- ರೋಗಗ್ರಸ್ತವಲ್ಲದ ಬೀಜವನ್ನು ಬಳಸುವುದು
- ಬೀಜೋಪಚಾರ
- ರೋಗಗ್ರಸ್ತ ಗದ್ದೆಗಳಿಂದ ನೀರು ಹರಿಯುವುದನ್ನು ತಡೆಗಟ್ಟುವುದು
- ರೋಗ ನಿರೋಧಕ ತಳಿಗಳನ್ನು ಬಳಸುವುದು (ಸ್ವರ್ಣ, ದೀಪ್ತಿ, ಮುಂತಾದವು)
- ಆರೋಗ್ಯಕರ ಸಸ್ಯಗಳನ್ನು ನಾಟಿ ಮಾಡುವುದು

ಹತ್ತಿ ಬೆಳೆಯ ಪ್ರಮುಖ ಕೀಟಗಳು:
- ಕಾಯಿ ಕೊರಕ
- ಸ್ಪೊಡೋಪ್ಟೆರಾ
- ಜಿಗಿ ಹುಳು
- ಹೇನು
- ಕಾಂಡ ಕೊರಕ

ಹತ್ತಿಯ ಪ್ರಮುಖ ಕೀಟಗಳ ನಿರ್ವಹಣೆ:
- ಒಂದೇ ರೀತಿಯ ಬೆಳೆಯನ್ನು ಬೆಳೆಯಬಾರದು
- ಕಳೆ ಮತ್ತು ಕೂಳೆಗಳನ್ನು ನಾಶಪಡಿಸುವುದು
- ವರ್ಷಕ್ಕೆ ಒಂದೇ ಹತ್ತಿಯ ಬೆಳೆಯನ್ನು ಬೆಳೆಯವುದು
- ಹಳದಿ ಪ್ಯನ್ ಮತ್ತು ಜಿಗುಟಾದ ಬಲೆಗಳನ್ನು @ ೧೨/ ಹೆ ಬಳಸುವುದು
- ಮರಿಹುಳುಗಳನ್ನು ಕೈಯಿಂದ ಹಾರಿಸುವುದು
- ೨೫೦ ಟನ್ ಕೊಟ್ಟಿಗೆ ಗೊಬ್ಬರ ಮತ್ತು ೨೫೦ ಕೆ.ಜಿ/ ಹೆ ಬೇವಿನ ಹಿಂಡಿಯನ್ನು ಬಳಸುವುದು
- ಭೂಮಿಯನ್ನು ಸ್ವಚ್ಛವಾಗಿಡುವುದು

ಹತ್ತಿಯ ಪ್ರಮುಖ ರೋಗಗಳು:
- ಬ್ಲಾಕ್ ಆರ್ಮ್
- ಎಲೆ ಚುಕ್ಕೆ ರೋಗ
- ಕೊಳೆ ರೋಗ

ನಿರ್ವಹಣೆ:
- ಬಿಜೋಪಚಾರ
- ರೋಗನಿರೋಧಕ ತಳಿಗಳನ್ನು ಬೆಳೆಯುವುದು
- ಒಳ್ಳೆಯ ಗಾಳೀ, ನೀರು ಮತ್ತು ಗೊಬ್ಬರ ಪೂರೈಕೆ
- ರೋಗಗ್ರಸ್ತ ಗಿಡಗಳನ್ನು ಕಿತ್ತು ನಾಶಪಡಿಸುವುದು

ಕಬ್ಬಿನ ಪ್ರಮುಖ ಕೀಟಗಳು:
- ಸುಳಿ ಕೊರೆಯುವ ಹುಳು
- ಕಾಂಡ ಕೊರೆಯುವ ಹುಳು
- ಸುಳಿ ಕೊರೆಯುವ ಹುಳು
- ಗೆದ್ದಲು ಹುಳು
- ಬಿಳಿ ಹೇನು
- ಹಿಟ್ಟು ತಿಗಣೆ

ಕಬ್ಬಿನ ಪ್ರಮುಖ ಕೀಟಗಳ ನಿರ್ವಹಣೆ :
- ನಿರೋಧಕ ತಳಿಗಳನ್ನು ಬೆಳೆಯುವುದು
- ನಾಟಿಮಾಡಲು ಒಳ್ಳೆಯ ತುಂಡುಗಳ ಆಯ್ಕೆ
- ಗದ್ದೆಯಲ್ಲಿನ ಹೆಚ್ಚಿನ ನೀರನ್ನು ಹೊರಹಾಕುವುದು
- ಜೋಡಿಸಾಲು ಪದ್ಧತಿಯನ್ನು ಅನುಸರಿಸುವುದು
- ಸರಿಯಾದ ಪ್ರಮಾಣದ ಸಾರಜನಕ ಗೊಬ್ಬರವನ್ನು ಬಳಸುವುದು
- ಹೆಚ್ಚಿನ ಪ್ರಮಾಣದ ಸಾವಯವ ಗೊಬ್ಬರವನ್ನು ಬಳಸುವುದು
- ಗೆದ್ದಲು ಕಟ್ಟಿದ ಉತ್ತವನ್ನು ನಾಶಪಡಿಸುವುದು

ಕಬ್ಬಿನ ಪ್ರಮುಖ ರೋಗಗಳ ನಿರ್ವಹಣೆ:
- ಅನನಸ್ ರೋಗ
- ಹಳದಿ ನಂಜು ರೋಗ
- ಎಲೆ ಚುಕ್ಕಿ ರೋಗ

ನಿರ್ವಹಣೆ:
- ಒಳ್ಳೆಯ ತುಂಡುಗಳ ಆಯ್ಕೆ ಕಮತ್ತು ನಾಟಿ
- ಬಿಸಿ ನೀರಿನ ಉಪಚಾರ (ನಾಟಿಮಾಡುವ ಮೊದಲು ತುಂಡುಗಳನ್ನು 520 ಸಿ, ಒಂದು ಗಂಟೆಯವರೆಗೆ)
- ರೋಗಗ್ರಸ್ತ ಕೂಳೆಬೆಳೆಯನ್ನು ತೆಗೆದುಕೊಳ್ಳಬಾರದು
- ಬೆಳೆ ಪರಿವರ್ತನೆ

ಜೋಳದ ಪ್ರಮುಖ ಕೀಟಗಳು:
- ಕಾಂಡ ಕೊರೆಯುವ ಹುಳು
- ಸಸ್ಯಹೇನು
- ತೆನೆಹೇನು

ನಿರ್ವಹಣೆ:
- ಮಾಗಿ ಹುಳುಮೆ
- ಮೋಹಕ ಬಲೆಯ ಬಳಕೆ @ ೧೨/ಹೆ

ತೊಗರಿ, ಉದ್ದು, ಹೆಸರ ಬೆಳೆಯ ಪ್ರಮುಖ ಕೀಟಗಳು:
- ಕಾಯಿ ಕೊರಕ
- ಕಾಯಿಯ ಹುಳು
- ಕಾಂಡ ಹುಳು
- ಎಲೆ ಸತ್ತುವ ಹುಳು
- ಹಸಿರು ಜಿಗಿ ಹುಳು

ತೊಗರಿ ಬೆಳೆಯ ಪ್ರಮುಖ ಕೀಟಗಳ ನಿರ್ವಹಣೆ:
- ಮೋಹಕ ಬಲೆಯ ಬಳಕೆ @ ೧೨/ ಹೆ
- ಬೇವಿನ ಎಣ್ಣೆಯ ಬಳಕೆ @ ೨ %
- ಜೋಳವನ್ನು ಬದುವಿನ ಬೆಳೆಯಾಗಿ ಬೆಳೆಯುವುದು
- ಮಾಗಿ ಉಳುಮೆ
- ಸಸ್ಯಗಳ ಹತ್ತಿರ ಅಂತರವನ್ನು ತಪ್ಪಿಸಿ
- ಹುಳುಗಳನ್ನು ಕೈಯಲ್ಲಿ ಹೆಕ್ಕುವುದು
- ಸಾವಯವ ಗೊಬ್ಬರದ ಬಳಕೆ

ಸೂರ್ಯಕಾಂತಿ ಬೆಳೆಯ ಪ್ರಮುಖ ರೋಗಗಳು & ನಿರ್ವಹಣೆ:
- ಎಲೆಚುಕ್ಕೆ ರೋಗ
- ತುಕ್ಕು ರೋಗ
- ನಂಜು ರೋಗ
- ಬೂದಿ ರೋಗ

ನಿರ್ವಹಣೆ:
- ನಿರೋಧಕ ತಳಿಗಳ ಆಯ್ಕೆ
- ಬೆಳೆಯ ತ್ಯಾಜ್ಯ ನಿರ್ವಹಣೆ
- ಜೈವಿಕ ಗೊಬ್ಬರದ ಬಳಕೆ
- ಅಂತರ ಬೆಳೆ
- ಮಾಗಿ ಉಳುಮೆ

ಕಡಲೇಕಾಯಿ ಬೆಳೆಯ ಪ್ರಮುಖ ರೋಗಗಳು:
- ಕತ್ತು ಕೊಳೆ
- ಟಿಕ್ಕಾ ರೋಗ
- ತುಕ್ಕು ರೋಗ
- ಕಾಂಡ ಸುಳಿ ಕೊಳೆ ರೋಗ

ನಿರ್ವಹಣೆ:
- ಮಾಗಿ ಉಳುಮೆ
- ರೋಗಗ್ರಸ್ತ ಗಿಡಗಳನ್ನು ಕಿತ್ತುಹಾಕುವುದು
- ಆರೋಗ್ಯಕರ ಬೀಜವನ್ನು & ರೋಗ ನಿರೋಧಕ ತಳಿಗಳನ್ನು ಬಳಸುವುದು
- ಬೀಜೋಪಚಾರ
- ಬೆಳೆ ಪರಿವರ್ತನೆ

ಸಾವಯವ ಬೇಸಾಯದಲ್ಲಿ ಕಳೆ ನಿರ್ವಹಣೆ:
- ಕೀಟ ಮತ್ತು ರೋಗಗಳ ಹಾವಳಿ, ನೀರಿನ ಮತ್ತು ಸೂರ್ಯರಶ್ಮಿಯ ಕೊರತೆ, ಹಾಗೂ ಪೋಷಕಾಂಶಗಳು ಮತ್ತು ಬೆಳೆಗಳ ಇಳುವರಿ ಕಡಿಮೆ ಹಾಗುತ್ತದೆ. ಏಕೆಂದರೆ ಕಳೆಯೇ ಈ ಸಮಸ್ಯೆಗೆ ಗಮನಾರ್ಹ ಕಾರಣ ಎಂದು ಪರಿಗಣಿಸಬಹುದು.
- ಸಸ್ಯನಾಶಕಗಳು ಅವಿಷ್ಕಾರವಾದಾಗಿನಿಂದ ರೈತರು ಕಳೆ ನಿರ್ಮೂಲನೆಗೆ ರಾಸಾಯನಿಕಗಳನ್ನು ಬಳಸಲು ಆರಂಭಿಸಿದ್ದಾರೆ. ಸಸ್ಯನಾಶಕಗಳನ್ನು ಉಪಯೋಗಿಸಿದ ಮಾತ್ರಕ್ಕೆ ಬೆಳೆ ಇಳುವರಿ ಹೆಚ್ಚುವುದಿಲ್ಲ ಇದರ ಜೋತೆಗೆ ಕಳೆ ತೆಗೆಯಲು ಬೇಕಾದ ಶ್ರಮ ಕೂಡ ಕಡಿಮೆಯಾಗುತ್ತದೆ.
- ಕೃಷಿ ರಾಸಾಯನಿಕಗಳ ವ್ಯಾಪಕ ಬಳಕೆಯಿಂದ ಪರಿಸರ ಮತ್ತು ಆರೋಗ್ಯ ಸಮಸ್ಯೆಗಳು ಹೆಚ್ಚುತ್ತದೆ.
- ಕೆಲವು ರೈತರು ಕಳೆ ನಿರ್ವಹಣೆಯಲ್ಲಿ ನವೀನ ಸಾವಯವ ವಿಧಾನಗಳನ್ನು ಅನುಸರಿಸುವಲ್ಲಿ ಆಸಕ್ತಿಯನ್ನು ಹೊಂದಿದ್ದಾರೆ.
- ಇದು ಕೆಲವು ಸಂದರ್ಭಗಳಲ್ಲಿ ಕಳೆನಾಶಕಗಳ ಬಳಕೆಯಿಂದ ಬೀಜಗಳ ಬೆಳವಣಿಗೆಗೆ ಪ್ರತಿರೋಧವಾಗುತ್ತದೆ ಏಕೆಂದರೆ ಕೆಲವು ಕಳೆ ಜಾತಿಗಳಿಗೆ ಹೆಚ್ಚು ಜಾಗ ಪ್ರಾಬಲ್ಯ ಉಂಟಾಗಿರುವುದು ಕಂಡುಬರುತ್ತದೆ.

ತೋಟಗಾರಿಕಾ ಬೆಳೆಗಳು ಕ್ರಿಟಿಕಲ್ ಕಳೆ ರಹಿತ ಅವಧಿ:

ಬೆಳೆ	ಕ್ರಿಟಿಕಲ್ ಕಳೆ ರಹಿತ ಅವಧಿ
ಸೇಬು, ಹೊಸ ಬೇಸಾಯ	ಮೇ ಮತ್ತು ಜೂನ್ ತಿಂಗಳ ಅವಧಿಯಲ್ಲಿ
ಬೀಟ್‌ರೋಟ್	೨-೪ ವಾರಗಳ ಹೊರಹೊಮ್ಮುವಿಕೆಯ ನಂತರ
ಎಲೆಕೋಸು (ಆರಂಭಿಕ)	೩ ವಾರಗಳ ನಾಟಿ ನಂತರ
ಕ್ಯಾರೆಟ್	೩-೬ ವಾರಗಳ ಹೊರಹೊಮ್ಮುವಿಕೆಯ ನಂತರ
ಸೌತೆಕಾಯಿ	೪ ವಾರಗಳ ಎಳೆಸಸಿ ನಂತರ
ಲೆಟ್ಯೂಸ್	೩ ವಾರಗಳ ನಾಟಿ ನಂತರ
ಈರುಳ್ಳಿ	ಇಡೀ ಋತುವಿನ ಅವಧಿಯಲ್ಲಿ
ಆಲೂಗಡ್ಡೆಗಳು	೪ ವಾರಗಳ ನಾಟಿ ನಂತರ
ಸ್ಟ್ರಾಬೆರಿ	ಮೇ ಮತ್ತು ಜೂನ್ ಅವಧಿಯಲ್ಲಿ
ಟೊಮ್ಯಾಟೊ	೯ ವಾರಗಳ ಬಿತ್ತನೆಯ ನಂತರ

ಸಮಗ್ರ ಸಾವಯವ ಕಳೆ ನಿಯಂತ್ರಣ ಪದ್ಧತಿಗಳು:
೧. ಸಾಂಸ್ಕೃತಿಕ ಪದ್ಧತಿ
೨. ಯಾಂತ್ರಿಕ ಪದ್ಧತಿ
೩. ಉಷ್ಣ ಪದ್ಧತಿ
೪. ಜೈವಿಕ ಪದ್ಧತಿ

ಸಾಂಸ್ಕೃತಿಕ ಪದ್ಧತಿಗಳು:
- ಸರದಿ ಬೆಳೆ
- ಕವರ್ ಬೆಳೆ
- ಅಂತರ ಬೆಳೆ
- ಫೀಲ್ಡ್ ಸ್ಕೌಟಿಂಗ್
- ಮಲ್ಚಿಂಗ್
- ಲಿವಿಂಗ್ ಮಲ್ಚ್
- ಸಾವಯವ ಮಲ್ಚ್
- ಸಸಿಗಳನ್ನು ನೆಡುವ ವಿಧಾನ
- ತಳಿಗಳ ಆಯ್ಕೆ
- ಉಳುಮೆ ಪದ್ಧತಿ
- ಸಾರಜನಕ ಫಲವತ್ತತೆ
- ನೀರಿನ ನಿರ್ವಹಣೆ

ಯಾತ್ರಿಕ ಪದ್ಧತಿ:
- ಕುಂಟೆ ಹಾಕುವುದು
- ಉಳುಮೆ ಮೂವರ್ಸ

ಉಷ್ಣ ಪದ್ಧತಿಗಳು:
- ಫ್ಲೇಮರ್ಸ್
- ಮಣ್ಣಿನ ಸೌರಿಕರಣ
- ಇನ್ಫಾರೆಡ್ ವೀಡರ್ಸ್

ಜೈವಿಕ ಪದ್ಧತಿ:
೧. ಅಲಿಲೋಪತಿ
೨. ಕಳೆ ನಿಯಂತ್ರಣಕ್ಕೆ ಜೈವಿಕ ಜೀವಿಗಳ ಬಳಕೆ

ಕಳೆಯ ಹೆಸರು	ಜೈವಿಕ ಜೀವಿ
ತುಂಗೆ	ಬಾಕ್ಟ ಪೆರುಟನ
ಪಾರ್ಥೇನಿಯಂ	ಜೈಗೊಗ್ರಾಮ ಬೈಕೊಲೊರಟ (ಮೆಕ್ಸಿಕನ್ ದುಂಬಿ)
ರೋಸುವಾಳ	ಕ್ರೋಸಿದೊಸೆಮ ಲಾಂಟನ

ಕಳೆ ನಿಯಂತ್ರಣಕ್ಕೆ ನಿಯಂತ್ರಣಕ್ಕೆ ಮೀನಿನ ಬಳಕೆ:

ಕಳೆಯ ಹೆಸರು	ಮೀನು
ಲೆಮ್ನ, ಹೈಡ್ರಿಲ್ಲ	ವೈಟ್ ಅಮುರ್
ಆಲ್ಗೆ	ಸಿಲ್ವರ್ ಕಾರ್ಪ್

ಕಳೆ ನಿಯಂತ್ರಣಕ್ಕೆ ಸ್ಪರ್ಧಾತ್ಮಕ ಗಿಡಗಳ ಬಳಕೆ:

ಕಳೆಯ ಹೆಸರು	ಸ್ಪರ್ಧಾತ್ಮಕ ಗಿಡ
ಪಾರ್ಥೇನಿಯಂ	ಕ್ಯಾಸಿಯಾ ಸೆರಿಸೀಯ
ಟೈಫಾ ಸ್ಪಿಸಿಸ್	ಬ್ರಕೈರಿಯಾ ಮುಟಿಕ

ವಿಷಯ:–01

ಪಾಣಿನೀಯಮ್

ಮಾನವಶಾಸ್ತ್ರ ಮತ್ತು ಭಾಷಾ ವಿಜ್ಞಾನಗಳು

THEME:-01

PANINEEYAM
HUMANITIES AND LINGUISTIC SCIENCES

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಕರ್ನಾಟಕ ರಾಜ್ಯದ ಅಂಧ ಮಕ್ಕಳಲ್ಲಿ ನವಮಾಧ್ಯಮದ ಬಳಕೆ: ಒಂದು ಅಧ್ಯಯನ	ನೀಲಕಂಠ ಸ್ವಾಮಿ, ಪ್ರೋ. ಪಿ.ಕೆ ಖಿಂಡೋಬಾ, ಡಾ. ಸಿ.ಕೆ ಪುಟ್ಟಸಾಮಿ	45 – 48
2.	ನವೋದಯ ಕನ್ನಡ ಕಾವ್ಯಗಳಲ್ಲಿ ಕನಸು: ಸ್ವರೂಪ ಮತ್ತು ಪ್ರಭಾವ (ಬೇಂದ್ರೆ, ಕುವೆಂಪು, ಮಧುರಚನ್ನರ ಕಾವ್ಯಗಳನ್ನು ಅನುಲಕ್ಷಿಸಿ)	ಗಾಣಿಗರ್ ಎನ್ ಎಸ್	48 – 54
3.	ಪಾಣಿನೀಯಂ ಹಾಗೂ ಭಾಷಾವಿಜ್ಞಾನ	ಡಾ॥ ಕೆ. ನಾರಾಯಣ ಭಟ್	54 – 59
4.	ಡಾ. ಬಿ ಆರ್ ಅಂಬೇಡ್ಕರ್ ಸಂವಹನ ದರ್ಶನಃ ಒಂದು ಅಧ್ಯಯನ	ರಾಜಕುಮಾರ ಎಂ ದಣ್ಣೂರ, ಡಾ. ವಿ.ಟಿ ಕಾಂಬಳೆ, ಡಾ.ಸಿ.ಕೆ ಪುಟ್ಟಸ್ವಾಮಿ	60 – 63
5	ಹೈದರಾಬಾದ್ ಕರ್ನಾಟಕ ಪತ್ರಿಕೆಗಳ ಐತಿಹಾಸಿಕ ಅಧ್ಯಯನ	ಸರ್ದಾರ ರಾಯಪ್ಪ ಸೊಪ್ಪಿ	64 – 66
6	ಯುವಜನತೆ ಮೇಲೆ ಸಾಮಾಜಿಕ ಮಾಧ್ಯಮಗಳ ಪ್ರಭಾವ ಹೈದರಾಬಾದ್ ಕರ್ನಾಟಕ ಪ್ರದೇಶದ ನಗರಗಳ ಅನುಲಕ್ಷಿಸಿ: ಒಂದು ಅಧ್ಯಯನ	ಸಾಯಬಣ್ಣ ಈರಣ್ಣ ಗುಡುಬಾ	67 – 71
7	ದಶಕದ ಕತೆಗಳಲ್ಲಿ ಆಧುನಿಕತೆಯ ವಿಭಿನ್ನ ಆಯಾಮಗಳು (೨೦೦೧–೨೦೧೦)	ಮಹಾಂತೇಶ ಪಾಟೀಲ	71 – 76
8	ಮಾನವ ಸಾಗಾಣಿಕೆ ತಡೆಗಟ್ಟುವಲ್ಲಿ ಮಾಧ್ಯಮಗಳ ಪಾತ್ರ: ಒಂದು ಅಧ್ಯಯನ	ಡಾ. ಸಿ. ಕೆ ಪುಟ್ಟಸ್ವಾಮಿ ದಿಲೀಪ್ ಕುಮಾರ್ ಎಂ ರಮ್ಯ ಎ	76 – 81
9	ಆದಿವಾಸಿಗಳ ಶುದ್ಧೀಕರಣ ಪದ್ಧತಿಗಳ ಲೋಕದೃಷ್ಟಿ	ಡಾ. ಎಸ್.ಎಂ. ಮುತ್ತಯ್ಯ	81 – 87
10	ಮಹಾತ್ಮ ಜ್ಯೋತಿಬಾ ಫುಲೆಯವರ ವೈಚಾರಿಕ ಚಿಂತನೆಗಳು	ಗುಂಡಪ್ಪ ಸಿ.ಸಿಂಗೆ	87 – 90
11	ನಶಿಸಿ ಹೋಗುತ್ತಿರುವ ಭಾಷೆಗಳು ಮತ್ತು ಪುನರುಜ್ಜೀವಗೊಳಿಸುವಿಕೆ	ಬಿ.ಕೆ. ರವೀಂದ್ರನಾಥ್	90 – 93
12	ಜನಪದ ಗಾದೆಗಳಲ್ಲಿ ಆರೋಗ್ಯ ಪ್ರಜ್ಞೆ	ಯೋಗೀಶ. ಬ. ಎಸ್	93 - 96
13	ನಮ್ಮ ಸ್ವರಗಳು-ಖಿಒಂದು ಚಿಂತನೆ	ಡಾ. ನಾ .ದತ್ತಾತ್ರೇಯ	96 - 100
14	ನಮ್ಮ ರೂಪಾಕ್ಷರಗಳು: ಸವಾಲುಗಳು	ಡಾ॥ ನಾ. ದತ್ತಾತ್ರೇಯ	100 - 106
15	ನರವ್ಯೂಹ ಭಾಷಾ ವಿಜ್ಞಾನ' ಮತ್ತು ಮಾನವ ವರ್ತನೆಗಳು	ಚೈತನ್ಯ ಎಸ್.	107 – 109
16	ಕೆರೆಯ ಪದ್ಮರಸನ ದೀಕ್ಷಾಬೋಧೆ: ಸಾಮಾಜಿಕ ವಿಶ್ಲೇಷಣೆ	ಮಾದಪ್ಪ. ಜಿ	109 – 113
17	ವ್ಯಾಸ ಭಾರತದಲ್ಲಿನ ಪಾತ್ರಗಳು: ನಾಯಕನ ಹುಡುಕಾಟ (ಪ್ರಾತಿನಿಧಿಕ ಕನ್ನಡ ಭಾರತಗಳೊಟ್ಟಿಗೆ)	ರೇಖಾ. ಕೆ. ಎನ್	113 - 116
18	ಸಮಾಜಮುಖಿಯಾಗಿ ನಾಗತಿಹಳ್ಳಿಚಂದ್ರಶೇಖರ	ನಾಗರಾಜಮೂರ್ತಿ, ಡಾ॥ ಸಿ. ಕೆ. ಪುಟ್ಟಸ್ವಾಮಿ	116 - 119
19	ನಾಗತಿಹಳ್ಳಿ ಚಂದ್ರಶೇಖರ ಮತ್ತು ಸಿನಿಮಾ	ನಾಗರಾಜಮೂರ್ತಿ, ಡಾ॥ ಸಿ. ಕೆ. ಪುಟ್ಟಸ್ವಾಮಿ	119 - 123
20	ಪಿ. ಲಂಕೇಶರ ಕತೆಗಳಲ್ಲಿ ಚಲನಶೀಲ ಸಮಾಜದ ಪರಿಕಲ್ಪನೆಗಳು	ಸಿ.ಜಿ. ರಮೇಶ್	124 – 126
21	ಪಿ. ಲಂಕೇಶರ –"ಮುಸ್ಸಂಜೆಯ ಕಥಾ ಪ್ರಸಂಗ" : ಒಂದು ತಾತ್ವಿಕ ವಿವೇಚನೆ	ಸಿ.ಜಿ. ರಮೇಶ್	126 – 130
22	ಡಾ. ಸಾರಾ ಅಬೂಬಕ್ಕರ್ ಅವರ ಕಾದಂಬರಿಗಳಲ್ಲಿ ವಿಭಿನ್ನ ನೆಲೆಗಳು	ರಹಿಮಾನ ಆಯ್. ಗೊರಜನಾಳ	130 – 135
23	ರಹಮತ್ ತರೀಕೆರೆ ಅವರ ಸಮಗ್ರ ಸಾಹಿತ್ಯದಲ್ಲಿ ಸ್ತ್ರೀವಾದಿ ವಿಮರ್ಶೆಯ ನಿಲವುಗಳು – ಒಂದು ಅವಲೋಕನ	ರಮೇಶ.	135 – 138
24	ರಹಮತ್‌ತರೀಕೆರೆ ಅವರ ಪ್ರತಿಸಂಸ್ಕೃತಿ ಚಿಂತನೆ :ಕೆಲವು ಹೊಳಹುಗಳು	ರಮೇಶ.	139 – 143
25	ಇರುವೆ ಕಥೆ – ಒಂದು ಸ್ಥೂಲ ಚಿತ್ರ	ಡಾ॥ ಆರ್. ಪೂರ್ಣಿಮ	143 – 144

ಪಾಣಿನೀಯಮ್:-01

ಕರ್ನಾಟಕ ರಾಜ್ಯದ ಅಂಧ ಮಕ್ಕಳಲ್ಲಿ ನವಮಾಧ್ಯಮದ ಬಳಕೆ: ಒಂದು ಅಧ್ಯಯನ

* ನೀಲಕಂಠ ಸ್ವಾಮಿ, ** ಪ್ರೋ. ಪಿ.ಕೆ ವಿಂಡೋಬಾ, ***ಡಾ. ಸಿ.ಕೆ ಪುಟ್ಟಸಾಮಿ
* ಸಂಶೋಧನಾ ವಿದ್ಯಾರ್ಥಿ, ** ಸಂಯೋಜಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.***ಸಹ ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಮಾನವ ಸಾಮಾಜಿಕ ಸಂಘಜೀವಿ, ತನ್ನ ನೆರೆಹೊರೆಯವರೊಂದಿಗೆ ಪರಸ್ಪರ ಬೆರೆತು ತನ್ನ ಆಸೆ ಅಭಿರುಚಿ ಸುಖ: ದುಖಿಗಳನ್ನು ಹಂಚಿಕೊಂಡು ಬದುಕುತ್ತಿದ್ದಾನೆ. ತನ್ನ ಅಂತರಾಳದ ಭಾವನೆಗಳನ್ನು ಮತ್ತೊಬ್ಬರೊಂದಿಗೆ ವಿನಿಮಯ ಮಾಡಿಕೊಳ್ಳಲು ಸಂವಹನದಲ್ಲಿ ತೊಡಗುತ್ತಾನೆ. ಹಾಗಾಗಿ, ಸಮುದಾಯ ಜೀವನದ ಮೊದಲ ಮೆಟ್ಟಿಲು ಸಂಹವನವಾಗಿದೆ. ಸಮಾಜದಲ್ಲಿ ಸಂಹವನ ಸಮೂಹ ಮಾಧ್ಯಮಗಳು ಇಲ್ಲದಂತಹ ಜೀವನವನ್ನು ಊಹಿಸಿಕೊಳ್ಳಲು ಅಸಾಧ್ಯ.

20ನೇ ಶತಮಾನದ ಕೊನೆಯ ಭಾಗದಲ್ಲಿ ಸಮೂಹ ಸಂಪರ್ಕ ಕ್ಷೇತ್ರದಲ್ಲಿ ಅದ್ಭುತ ಕ್ರಾಂತಿ ಜರುಗಿತು. ಉಪಗ್ರಹ ಸಂಪರ್ಕ, ದೂರ ಸಂಪರ್ಕ ಮತ್ತು ಗಣಕಯಂತ್ರ ಸಂವಹನಗಳು ಮೂಲಭೂತವಾಗಿ ನೂತನ ಸಂವಹನ ತಂತ್ರಜ್ಞಾನಗಳೆಂದು ಬಣ್ಣಿಸಲ್ಪಟ್ಟಿವೆ. ಸಮೂಹ ಮಾಧ್ಯಮಗಳಾದ ಪತ್ರಿಕೆ, ಚಲನಚಿತ್ರ, ರೇಡಿಯೋ, ದೂರದರ್ಶನ ಹಾಗೂ ಜಾನಪದ ಮಾಧ್ಯಮಗಳು ನಮ್ಮ ಜೀವನದ ಅವಿಭಾಜ್ಯ ಅಂಗಗಳಾಗಿದ್ದರೂ ಇವುಗಳನ್ನು ಮೀರಿ ನವಮಾಧ್ಯಮಗಳು ಜನಮನದಲ್ಲಿ ಅಚ್ಚೊತ್ತಿವೆ. ಅಧುನಿಕ ಜಗತ್ತಿನಲ್ಲಿ ವಿಜ್ಞಾನ ತಂತ್ರಜ್ಞಾನ ಬೆಳೆದಂತೆಲ್ಲಾ ಸಮೂಹ ಮತ್ತು ಮಾಹಿತಿ ಸಂಪರ್ಕ ಸಾಧನಗಳಲ್ಲಿ ಬದಲಾವಣೆಗಳು ದಿನದಿಂದ ದಿನಕ್ಕೆ ಆಗುತ್ತಾ ಬರುತ್ತಿವೆ. ಅಂತಹವುಗಳ ಸಾಲಿನಲ್ಲಿ ಕ್ಷಿಪ್ರವಾಗಿ ಬೆಳೆದು ಪ್ರಪಂಚವನ್ನು ಜಾಗತಿಕ ಹಳ್ಳಿಯನ್ನಾಗಿ ಪರಿವರ್ತಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ ಅಂತರ್‌ಜಾಲವೂ ಒಂದು.

ಬದಲಾಗುತ್ತಿರುವ ಜಗತ್ತಿನೊಡನೆ ಜನರೂ ಸಹ ಬದಲಾಗುವ ಅವಶ್ಯಕತೆಯಿದೆ. ಇಂದಿನ ಸ್ಥಿಗತಿಗೆ ಅನುಗುಣವಾಗಿ ಜನ ಹೊಂದಿಕೊಳ್ಳಬೇಕಾಗಿದೆ. ಪ್ರಸ್ತುತ ನವಮಾಧ್ಯಮ ಯುಗದಲ್ಲಿ ಗಣಕಯಂತ್ರ ಮತ್ತು ನವಮಾಧ್ಯಮದ ಬಗ್ಗೆ ಜ್ಞಾನ ಹೊಂದಬೇಕಾಗಿದೆ.

ಹೀಗೆ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಅಂಧಮಕ್ಕಳು ಸಾಮಾನ್ಯ ಮಕ್ಕಳಂತೆ ತಂತ್ರಜ್ಞಾನವನ್ನು ಮುಕ್ತವಾಗಿ ಬಳಸಲು ಸಾಧ್ಯವಿಲ್ಲ. ಗಣಕಯಂತ್ರ ಮತ್ತು ಅಂತರ್‌ಜಾಲ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಒಂದು ಭಾಗವಾಗಿದ್ದು, ನವಮಾಧ್ಯಮದಡಿಯಲ್ಲಿ ಬರುವ ಅಂತರ್‌ಜಾಲವು ಜ್ಞಾನ ಸಾಗರವಿದ್ದಂತೆ.

ಅಂಧತ್ವದ ತೊಂದರೆಯನ್ನು ಎದುರುಸುತ್ತಿರುವ ವಿದ್ಯಾರ್ಥಿಗಳಿಗೆ ಅಂತರ್‌ಜಾಲದ ಬಳಕೆ ಸುಲಭವಲ್ಲ. ಅಂತರ್‌ಜಾಲದಲ್ಲಿ ತಮಗೆ ಅಗತ್ಯವಿರುವ ಮಾಹಿತಿಯು ಲಭ್ಯವೆಂದು ತಿಳಿದಿದ್ದರೂ ಕೂಡಾ ಸೌಲಭ್ಯದ ಪ್ರಯೋಜನೆ ಪಡೆದುಕೊಳ್ಳಲು ನೂರಾರು ತೊಂದರೆಗಳಿವೆ. ಅಂತಹ ತೊಂದರೆಗಳನ್ನು ಮೀರಿ ಮಾಹಿತಿಯನ್ನು ಹುಡುಕಿ ಅದನ್ನು ಸದುಪಯೋಗ ಮಾಡಿಕೊಂಡ ಅದೆಷ್ಟೋ ಅಂಧ ವಿದ್ಯಾರ್ಥಿಗಳನ್ನು ಕಾಣಬಹುದು.

ಸಾಮಾನ್ಯ ವಿದ್ಯಾರ್ಥಿಗಳು ನವಮಾಧ್ಯಮವನ್ನು ಬಳಸುವುದರಲ್ಲಿ ಯಾವುದೇ ವಿಶೇಷತೆ ಇರುವುದಿಲ್ಲ. ಅದೇ ಅಂಧ ವಿದ್ಯಾರ್ಥಿಗಳು ಇವುಗಳನ್ನು ಬಳಸುವುದು ಸಾಮಾನ್ಯರಿಗಿಂತ ವಿಭಿನ್ನ ಮತ್ತು ವಿಶೇಷವಾಗಿರುತ್ತದೆ. ಅಲ್ಲದೇ ಇವರಿಗೆಂದೇ ಇರುವ ತಂತ್ರಾಂಶಗಳನ್ನು ಬಳಸಿಕೊಂಡು ಅಂತರ್‌ಜಾಲ ಬಳಸುವುದು ವಿಶೇಷವಾಗಿರುತ್ತದೆ. ಕಾರಣ ಇವರಿಗಾಗಿ ಸೃಷ್ಟಿಸಿರುವ ತಂತ್ರಾಂಶಗಳು ಇವರಿಗೆ ಧ್ವನಿಯ ಮೂಲಕ ಅಂತರ್‌ಜಾಲ ಬಳಸುವಲ್ಲಿ ಸಹಕಾರಿಯಾಗುತ್ತಿದೆ. ಕೆಲವೊಮ್ಮೆ ಎಲ್ಲಾ ರೀತಿಯ ತಂತ್ರಾಂಶಗಳ ಬಳಕೆಯಲ್ಲಿ ಇವರಿಗೆ ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲವಾದರೂ ಸಾಮಾನ್ಯವಾಗಿ ಇವರಿಗೆಂದೇ ಇರುವ ಸೌಲಬ್ಯಗಳನ್ನು ಉಪಯೋಗಿಸಿಕೊಳ್ಳುವುದು ವಿಶೇಷವಾಗಿದೆ.

ಅಧ್ಯಯನಕ್ಕೆ ಸಂಭಂದಿಸಿದಂತೆ ಕರ್ನಾಟಕ ರಾಜ್ಯದ ಅಂಧ ಮಕ್ಕಳಲ್ಲಿ ನವಮಾಧ್ಯಮದ ಬಳಕೆ: ಒಂದು ಅಧ್ಯಯನ ಕುರಿತಾಗಿ ಕೆಲ ಅಂಧ ವಿದ್ಯಾರ್ಥಿಗಳನ್ನು ಆಯ್ದುಕೊಳ್ಳಲಾಗಿತ್ತು. ನಮ್ಮ ಪ್ರಶ್ನಾವಳಿ ಮೂಲಕ ಅವರಿಂದ ಉತ್ತರಗಳನ್ನು ಪಡೆಯಲಾಗಿದ್ದು ನವಮಾದ್ಯಮಗಳ ಬಳಕೆ ಕುರಿತಾಗಿ ಅಧ್ಯಯನ ಮಾಡುವುದಾಗಿದೆ.

ಪೀಠಿಕೆ : ಸಂವಹನದ ಸಮೂಹ ಮಾಧ್ಯಮಗಳು ಸರ್ವವ್ಯಾಪಿಯಾಗಿ ಹಲವಾರು ಬಗೆಯಲ್ಲಿ ಮಾನವನ ಜೀವನವನ್ನು ನಿಯಂತ್ರಿಸುತ್ತವೆ. ಜನರು ತಮ್ಮ ಮುಖ್ಯ ಉದ್ಯೋಗಗಳಲ್ಲಿ ಕಳಿಯುವಷ್ಟೇ ವೇಳೆಯನ್ನು ಮಾಧ್ಯಮಗಳೊಂದಿಗೆ ಕಳೆಯುತ್ತಿದ್ದಾರೆ. ಬೆಳಗಿನ ಕಾಫಿಯಂತೆ ದಿನ ಪತ್ರಿಕೆಯೂ ದೈನಂದಿನ ಕೆಲಸವನ್ನು ಪ್ರಾರಂಭಿಸುವ ಅಗತ್ಯವಾಗಿದೆ. ಸಮಾಜದಲ್ಲಿ ದಿನನಿತ್ಯ ನಡೆಯುವ ವಿವಿಧ ವಿದ್ಯಾಮಾನಗಳನ್ನು ಜನತೆಗೆ ಮುಟ್ಟಿಸಲಿರುವ ಪರಿಣಾಮಕಾರಿ ಮಾರ್ಗವೇ ಮಾಧ್ಯಮವಾಗಿದೆ. ಜೊತೆಗೆ ಜನಸಾಮಾನ್ಯರಲ್ಲಿ ಸರಿ ತಪ್ಪು ತಿಳಿಸು ಓರೆಕೋರೆಗಳನ್ನು ಎತ್ತಿ ಹಿಡಿಯುವ ಕಾರ್ಯವನ್ನು ಮಾಧ್ಯಮಗಳು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸುತ್ತವೆ. ಜನತಂತ್ರ ವ್ಯವಸ್ಥೆಯನ್ನು ಗಟ್ಟಿಗೊಳಿಸುವಲ್ಲಿ ಪತ್ರಿಕಾರಂಗದ ಪಾತ್ರ ಮತ್ತು ಕೊಡುಗೆ ಅಗಾಧ. ಮಾಧ್ಯಮಗಳ ಕಾವಲುನಾಯಿಯಂತೆ ವ್ಯವಸ್ಥೆಯ ಹುಳುಕಯನ್ನು ಎತ್ತಿ ಹಿಡಿದು ತಿದ್ದಿ ತೀಡುವ ಹೊಣೆಗಾರಿಕೆ ಮಾಧ್ಯಮದ್ದಾಗಿದೆ. ಸದಾಚಾರ, ಕಟ್ಟಚಾರ ಮತ್ತು ತತ್ವ ಸಿದ್ಧಾಂತಗಳ ಮಾಧ್ಯಮದ ಜೀವಾಳ. ಈ ನಿಟ್ಟಿಯಲ್ಲಿ ಹದ್ದಿನ ಕಣ್ಣು ಅತ್ಯಾವಶ್ಯಕ. ಮುಕ್ತ ನಿರ್ಭೀತ ಮತ್ತು ನ್ಯಾಯಸಮ್ಮತ ಕಾರ್ಯನಿರ್ವಹಣೆ ಮಾಧ್ಯಮಗಳ ಆದ್ಯ ಕರ್ತವ್ಯ. ಸುದ್ದಿ ಪ್ರಸಾರ ವಿಚಾರವಂತಿಕೆ ದರ್ಶನ ಸದಾಭಿರುಚಿ ಹಾಗೂ ಜನಾಭಿಪ್ರಾಯ ಕ್ರೋಡೀಕರಣ ಮಾಧ್ಯಮದ ಹೆಗ್ಗಳಿಕೆಯಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕೋದ್ಯಮವು ಸಾಮಾಜಿಕ ಜನ ಸಂಪರ್ಕ ಮಾಧ್ಯಮವಾಗಿ ಬೆಳೆದಿದೆ. ಪತ್ರಿಕಾ ರಂಗವು 17ನೇ ಶತಮಾನದಲ್ಲಿ ಭಾರತಕ್ಕೆ ಪದಾರ್ಪಣೆ ಮಾಡಿತ್ತು. ಪತ್ರಿಕಾ ಕ್ಷೇತ್ರವು ಜನತೆಗೆ ಶಿಕ್ಷಣ ,ಮಾಹಿತಿ ಮತ್ತು ಮನರಂಜನೆಯನ್ನು ಒದಗಿಸಿ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾ ಬಂದಿದೆ. 21ನೇ ಶತಮಾನದ ಆಧುನಿಕ ತಂತ್ರಜ್ಞಾನ ಈ ಯುಗದಲ್ಲಿ ಮಾಧ್ಯಮ ವಿಲ್ಲದೆ ಸಮಾಜ ಸುಧಾರಣೆಯಾಗಲು ಸಾಧ್ಯವಿಲ್ಲ, ಅಂತೆಯೇ ಮಾಧ್ಯಮಗಳು ದೇಶದ ಅಭಿವೃದ್ಧಿಯಲ್ಲಿ ಆಧಾರ ಸ್ಥಂಭವಾಗಿವೆ. ಇಡೀ ಜಗತ್ತನ್ನೇ ಬದಲಿಸುವ ಶಕ್ತಿ ಮಾಧ್ಯಮಕಿದೆ.

ಸಮೂಹ ಸಂವಹನ ಪ್ರಕ್ರಿಯೆ ಅಲ್ಲಾ ಸಮಾಜ ವ್ಯವಸ್ತೆಗಳ ಬದಲಾಣೆಯನ್ನು ತರುತ್ತದೆ ಎಂಬದು ರುಜುವಾತಾಗಿದೆ. ಈ ಹಿನ್ನೆಲೆಯಲ್ಲಿ ದೇಶದ ತ್ವರಿತಗತಿಯ ಬದಲಾವಣೆ ಜನಸಮೂಹಕ್ಕೆ ಸುಲಭವಾಗಿ ತಲುಪಲು ನವಮಾಧ್ಯಮದ ಪಾತ್ರ ಮಹತ್ವವಾದದ್ದು. ಸಮಾಜದ ಸೀಮಿತ ವರ್ಗಕ್ಕಷ್ಟೇ ಜ್ಞಾನಗಳಿಕೆಗೆ ಅವಶ್ಯಕವದ್ದುದು ತಿಳಿದ ವಿಚಾರ. ಚಾರಿತ್ರಿಕ ಕಾರಣಗಳಿಗಾಗಿ ಈ ವರ್ಗ ಇತರ ಜನ ಸಮೂಹಗಳಿಗೆ ಜ್ಞಾನಗಳಿಕೆ ಅಕಾಶ ನೀಡದಿರಲು ತನಗೆ ಎಲ್ಲಾ ವಿದ್ಯಗಳನ್ನು ಕುಟಿಲತೆಗಳನ್ನು ಬಳಸಿಕೊಂಡಿತು. ಜ್ಞಾನ ಮತ್ತು ಅರಿವನ್ನು ಪಡೆದುದ್ದ ಸೀಮಿತ ವರ್ಗ ಎಲ್ಲಾ ಅಧಿಕಾರವನ್ನು ಪಡೆದಿತ್ತು.

ಅಂತರ್‌ಜಾಲವೂ ಕೂಡ ತಂತ್ರಜ್ಞಾದ ಒಂದು ಭಾಗ ನವಮಾಧ್ಯಮದಡಿಯಲ್ಲಿ ಬರುವ ಅಂತರ್‌ಜಾಲವೂ ಜ್ಞಾನ ಸಾಗರದಂತೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಅಂಧ ಮಕ್ಕಳು ಸಾಮಾನ್ಯರಂತೆ ತಂತ್ರಜ್ಞಾನವನ್ನು ಮುಕ್ತವಾಗಿ ಬಳಸಲು ಸಾದ್ಯವಿಲ್ಲ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಾಹಿತಿ ಅಗತ್ಯವಷ್ಟೆ ಅಲ್ಲ, ಅನಿವಾರ್ಯವೂ ಹೌದು. ಅಂಧತ್ವದ ತೊಂದರೆಯನ್ನು ಹೊಂದಿರುವ ಮಕ್ಕಳು ಅಂತರ್‌ಜಾಲದ ಬಳಕೆ ಸುಲಬವಲ್ಲ. ಅಂತರ್‌ಜಾಲದಲ್ಲಿ ತಮಗೆ ಅಗತ್ಯವಿರುವ ಮಾಹಿತಿಯೂ ಲಭ್ಯವಿದೆಯೆಂದು ತಿಳಿದಿದ್ದರೂ ಕೂಡ ಈ ಸೌಲಬ್ಯದ ಪ್ರಯೋಜನೆ ಪಡೆದುಕೊಳ್ಳಲು ನೂರಾರು ಅಡೆತಡೆಗಳಿವೆ. ಈ ಅಡೆತಡೆಗಳೆಲ್ಲವನ್ನು ಮೀರಿ ಮಾಹಿತಿ ಹುಡುಕಿ ಸದುಪಯೋಗ ಪಡೆದುಕೊಳ್ಳುವುದ ಕಷ್ಟ. ಅಂತರ್ ಜಾಲದ ಉಪಯೋಗ ಅರಿಯದಿದ್ದರೆ ಶೈಕ್ಷಣಿಕ ಕ್ಷೇತ್ರದಲ್ಲೂ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಪ್ರಸ್ತುತ ದಿನಗಳಲ್ಲಿ ಅಂಧ ವಿದ್ಯಾರ್ಥಿಗಳು ಶೀಕ್ಷಣ ಕ್ಷೇತ್ರದಲ್ಲಿ ಮುಂದುವರೆಯುತ್ತಿರುವುದು ಖುಷಿಯ ಸಂಗತಿಯಾದರು ಇವರಿಗೆ ಅಂತರ್ ಜಾಲ ಮತ್ತು ನವಮಾಧ್ಯಮದಂತಹ ತಂತ್ರಜ್ಞಾನದ ಬಳಕೆಯ ಜ್ಞಾನ ಇಲ್ಲದಿದ್ದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಏಳಿಗೆಯು ಕುಂಠಿತವಾಗುತ್ತದೆ..

ಅಂಧರಿಗಾಗಿ ಸಾಕಷ್ಟು ಸುಧಾರಿತ ತಂತ್ರಜ್ಞಾನಗಳಿದ್ದರೂ ಕೂಡ ಇವರ ಉಪಯೋಗದ ದೃಷ್ಟಿಯಿಂದ ಇವುಗಳ ಗುಣಮಟ್ಟ ಸುಧಾರಣೆ ಆಗಬೆಕಿದೆ. ಅಂಧ ವಿದ್ಯಾರ್ಥಿಗಳು ಬಳಸುತ್ತಿರುವ ತಂತ್ರಜ್ಞಾನಗಳನ್ನು ಎರಡು ರಿತಿಯಲ್ಲಿ ವಿಂಗಡಿಸಬಹುದು.

ಕೆಲವು ಕಂಪ್ಯೂಟರ್‌ನಲ್ಲಿ ಬಳಸುವ ಸಾಫ್ಟ್‌ವೇರಗಳಾದರೆ ಮತ್ತೆ ಕೆಲವು ಮೊಬೈಲ್‌ಗಳಲ್ಲಿ ಬಳಸುವ ಸಾಫ್ಟ್‌ವೇರ್‌ಗಳು ಜಾಸ್(Jaws) ಮತ್ತು ಎನ್.ವಿ.ಡಿ.ಎ(NVDA) ಕಂಪ್ಯೂಟರ್‌ನಲ್ಲಿ ಸಾಫ್ಟ್‌ವೇರಗಳಾದರೆ ಟಾಕ್ಸ (Talk's) ಮತ್ತು ಸನ್‌ಜಿಟ್ (Songit) ಮೊಬೈಲ್‌ಗಳಲ್ಲಿ ಬಳಸುವ ಸಾಫ್ಟ್‌ವೇರ್‌ಗಳು. ಇವು ಪ್ರಸ್ತುತ ಅಂಧರಿಗಾಗಿ ರಚಿಸಲಾದ ಪ್ರಮುಖ ಸಾಫ್ಟ್‌ವೇರ್‌ಗಳಾಗಿವೆ. ಈ ತಂತ್ರಾಂಶಗಳು ಸುಲಭವಾಗಿ ಉಪಯೋಗಿಸುವಂತಿದ್ದರೂ ಕೂಡ ಇವುಗಳಲ್ಲಿ ಇನ್ನಷ್ಟು ಸುಧಾರಣೆಯಾಗಬೇಕಿದೆ.

ಸಾಮಾನ್ಯ ವಿದ್ಯಾರ್ಥಿಗಳು ನವಮಾಧ್ಯಮವನ್ನು ಬಳಸುವುದರಲ್ಲಿ ಯಾವುದೇ ವಿಷೇಶತೆ ಇರುವುದಿಲ್ಲ. ಅದೇ ಅಂಧ ಮಕ್ಕಳು ಬಳಸುವುದು ಸಾಮಾನ್ಯರಿಗಿಂತ ವಿಭಿನ್ನ ಮತ್ತು ವಿಷೇಶವಾಗಿರುತ್ತದೆ. ಅಲ್ಲದೇ ಇವರಿಗೆಂದೇ ಇರುವ ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ಅಂತರ್‌ಜಾಲ ಮತ್ತು ನವಮಾಧ್ಯಮ ಬಳಸುವುದು ವಿಷೇಶವಾಗಿರುತ್ತದೆ. ಇವರಿಗೆಂದೆ ಸೃಷ್ಟಿಸಿರುವ ಸಾಫ್ಟ್‌ವೇರ್‌ಗಳು ಕಂಪ್ಯೂಟರ್‌ನಲ್ಲಿ ಮುದ್ರಿಸಲಾದ ಪ್ರತಿ ಅಕ್ಷರವನ್ನು ಧ್ವನಿಯ ಮೂಲಕ ತಿಳಿಸುತ್ತದೆ. ಹಾಗಾಗಿ ಅಂತರ್‌ಜಾಲದಲ್ಲಿ ಯಾವುದೇ ಮಾಹಿತಿಯನ್ನು ಅಂಧ ಮಕ್ಕಳು ಪಡೆಯಬಹುದು. ಆದರೆ ಪ್ರತಿ ಹಂತದಲ್ಲಿಯೂ ಈ ತಂತ್ರಾಂಶಗಳ ಬಳಕೆ ಇವರಿಗೆ ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲವಾದರೂ ಸಾಮಾನ್ಯವಾಗಿ ಇವರಿಗೆಂದೆ ಇರುವ ಸೌಲಬ್ಯಗಳನ್ನು ಉಪಯೋಗಿಸಿಕೊಳ್ಳುವುದು ವಿಷೇಶವಾಗಿದೆ.

ದತ್ತಾಂಶ ವಿಶ್ಲೇಶಣೆ : ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಒಟ್ಟು 50 ಸಂವಾದಿಗಳಿಂದ ನವಮಾಧ್ಯಮಕ್ಕೆ ಸಂಬಂಧಪಟ್ಟ ಆಯ್ದ ವಿಷಯಗಳು ಕುರಿತು ಸಂದರ್ಶನ ಮಾಡಿ, ಪ್ರಶ್ನಾವಳಿ ಮೂಲಕ ನವಮಾಧ್ಯಮದ ಬಳಕೆಯಲ್ಲಿ ಅಂಧ ಮಕ್ಕಳ ಪಾತ್ರ ಕ್ಕನುಗುಣವಾಗಿ ಸಂಬಂದಿಸಿದ ದತ್ತಾಂಶವನ್ನು ಕಲೆ ಹಾಕಿ ವಿಶ್ಲೇಷಣೆ ಮಾಡಲಾಗಿದೆ.

1) ಲಿಂಗ ವಿವರ.

ಸಂವಾದಿಗಳ	ಸಂಖ್ಯೆ	ಶೇಕಡವಾರು
ಪುರುಷಾ	35	70%
ಮಹಿಳೆ	15	30%
ಒಟ್ಟು	50	100%

ಸಂವಾದಿಗಳ ಆಯ್ಕೆಯ ನಂತರ ಲಿಂಗ ವಿವರ ನೋಡಿದಾಗ 35 ಪುರುಷ ಸಂವಾದಿಗಳು ಮತ್ತು 15 ಮಹಿಳಾ ಸಂವಾದಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದು, ಅದರಲ್ಲಿ ಶೇಕಡಾವಾರಿನಲ್ಲಿ ಪ್ರತಿಶತವನ್ನು 100 ಕ್ಕೆ ಹೋಲಿಸಲಾಗಿದೆ.

2) ವಯಸ್ಸಿನ ವಿವರ.

ಸಂವಾದಿಗಳ ವಯಸ್ಸು	ಪುರುಷ	ಶೇಕಡ	ಮಹಿಳಾ	ಶೇಕಡ
18 ರಿಂದ 20	11	22%	04	08%
21 ರಿಂದ 23	17	34%	06	12%
23 ಮೆಲ್ಪಟ್ಟು	07	14%	05	10%
ಒಟ್ಟು	35	70%	15	30%
ಒಟ್ಟು ಸಂವಾದಿಗಳು		50	ಶೇಕಡವಾರು	100%

ಸಂವಾದಿಗಳ ವಯಸ್ಸಿನ ವಿವರವನ್ನು ಪಡೆದಾಗ ಸಂವಾದಿಗಳಲ್ಲಿ ಹೆಚ್ಚಿನ ಮಂದಿ 21 ರಿಂದ 23 ವಯೋಮಿತಿಯವರಾಗಿದ್ದಾರೆ. ಒಟ್ಟು ಶೇಕಡಾ 46 ರಷ್ಟು ಸಂವಾದಿಗಳು 21 ರಿಂದ 23 ವಯಸ್ಸು ಹೊಂದಿದ್ದಾರೆ. ಇನ್ನೂಳಿದಂತೆ ಶೇಕಡಾ 30 ರಷ್ಟು ಸಂವಾದಿಗಳು 18 ರಿಂದ 20 ವಯಸ್ಸಿನವರು ಹಾಗೂ 23 ಮೆಲ್ಪಟ್ಟು ಶೇಕಡಾ 24 ರಷ್ಟು ಸಂವಾದಿಗಳು ನಮ್ಮ ಅಧ್ಯಯನದಲ್ಲಿ ಇದ್ದಾರೆ.

3) ನವಮಾಧ್ಯಮದ ಬಳಕೆದಾರರ ಸಂಖ್ಯೆ

ಬಳಕೆದಾರರ ಸಂಖ್ಯೆ.	ಪುರುಷ	ಶೇಕಡ	ಮಹಿಳಾ	ಶೇಕಡ
ಹೌದು	30	60%	11	22%
ಇಲ್ಲ	05	10%	04	08%
ಒಟ್ಟು	35	70%	15	30%
ಒಟ್ಟು ಸಂವಾದಿಗಳು	50	ಶೇಕಡವಾರು		100%

ಸಂವಾದಿಗಳಿಗೆ ನವಮಾಧ್ಯಮದ ಬಳಕೆಯ ವಿವರ ನೋಡಿದಾಗ ನಮ್ಮ ಒಟ್ಟು ಸಂವಾದಿಗಳಲ್ಲಿ ಶೇಕಡಾ 82 ರಷ್ಟು ವಿದ್ಯಾರ್ಥಿಗಳು ನವಮಾಧ್ಯಮದ ಬಳಸುವವರಾಗಿದ್ದು, ಶೇಕಡಾ 18 ರಷ್ಟು ಬಳಸುತ್ತಿಲ್ಲ ಎಂಬುದಾಗಿ ತಿಳಿಸಿದ್ದಾರೆ.

4) ದಿನಕ್ಕೆ ಎಷ್ಟು ಸಮಯ ಬಳಸುತ್ತೀರಿ.

ಸಮಯ	ಪುರುಷ	ಶೇಕಡ	ಮಹಿಳಾ	ಶೇಕಡ
1 ರಿಂದ 3 ಗಂಟೆ	20	40%	11	22%
3 ರಿಂದ 6 ಗಂಟೆ	11	22%	04	08%
ಯಾವಾಗಲು	04	08%	00	00%
ಒಟ್ಟು	35	70%	15	30%
ಒಟ್ಟು ಸಂವಾದಿಗಳು	50	ಶೇಕಡವಾರು		100%

ಸಾಮಾಜಿಕ ಜಾಲತಾಣಗಳನ್ನು ದಿನಕ್ಕೆ ಎಷ್ಟು ಸಮಯ ಬಳಸುತ್ತಿರಿ ಎಂಬ ಪ್ರಶ್ನೆಗೆ 1 ರಿಂದ 3 ಗಂಟೆಯಷ್ಟು ಶೇಕಡಾ 62 ಸಂವಾದಿಗಳು ಬಳಸುತ್ತಿದ್ದು, 3 ರಿಂದ 6 ಗಂಟೆಯಷ್ಟು ಶೇಕಡಾ 30 ಸಂವಾದಿಗಳು ಬಳಸುತ್ತಿದ್ದು, ಯಾವಾಗಲು ಅಂದರೆ ಸತತವಾಗಿ ಶೇಕಡಾ 08 ಸಂವಾದಿಗಳು ಬಳಸುತ್ತಿದ್ದಾರೆ ತಿಳಿಸಿದ್ದಾರೆ.

5) ನವಮಾಧ್ಯಮದ ಬಳಕೆಗೆ ಪ್ರೇರೆಪಿತರಾರು.

ಪ್ರೇರೆಪಿತರು	ಪುರುಷ	ಶೇಕಡ	ಮಹಿಳಾ	ಶೇಕಡ
ಸ್ನೇಹಿತರು/ ಸಂಬಂದಧಿಕರು	22	44%	08	16%
ಪೋಷಕರು	04	08%	01	02%
ಸಹೊದ್ಯೋಗಿಗಳು	06	12%	05	10%
ಇತರೆ	03	06%	01	02%
ಒಟ್ಟು	35	70%	15	30%
ಒಟ್ಟು ಸಂವಾದಿಗಳ	50	ಶೇಕಡವಾರು		100%

ಅಂತರ್‌ಜಾಲ ಬಳಸಲು ಪ್ರೇರೆಪಿತರಾರು ಎನ್ನುವ ಪ್ರಶ್ನೆಗೆ ಶೇಕಡಾ 60 ರಷ್ಟು ಸಂವಾದಿಗಳು ಸ್ನೇಹಿತರು/ಸಂಬಂದಧಿಕರು ಪ್ರೇರೆಪಿತರಾಗಿದ್ದು, ಶೇಕಡಾ 10 ರಷ್ಟು ಸಂವಾದಿಗಳು ತಾವು ಪೋಷಕರಿಂದ ಪ್ರೇರೆಪಿತರಾಗಿದ್ದು, ಶೇಕಡಾ 22ರಷ್ಟು ಸಂವಾದಿಗಳು ತಾವು ಸಹೊದ್ಯೋಗಿಗಳಿಂದ ಪ್ರೇರೆಪಿತರಾಗಿದ್ದು ಮತ್ತು ಶೇಕಡಾ 08 ರಷ್ಟು ಸಂವಾದಿಗಳು ತಾವು ಇತರೆ ಮೂಲಗಳಿಂದ ಪ್ರೇರೆಪಿತರಾಗಿದ್ದು ಎಂಬ ಮಾಹಿತಿಯು ಈ ಪ್ರಶ್ನಾವಳಿಯಿಂದ ಲಭ್ಯವಾಗಿದೆ.

6) ಸಂವಹನಕ್ಕೆ ಉಪಯೋಗಿಸುವ ನವಮಾಧ್ಯಮದ ಅಪ್ಲಿಕೇಷನ್ ಯಾವುದು.

ಅಪ್ಲಿಕೇಷನ್‌ಗಳು	ಪುರುಷ	ಶೇಕಡ	ಮಹಿಳಾ	ಶೇಕಡ
ಫೇಸ್‌ಬುಕ್	18	28%	11	22%
ಟ್ವೀಟ್ಟರ್	10	18%	01	02%
ಯೂಟ್ಯುಬ್	03	06%	02	04%
ಗೂಗಲ್ +	04	08%	01	02%
ಒಟ್ಟು	35	70%	15	30%
ಒಟ್ಟು ಸಂವಾದಿಗಳ	50	ಶೇಕಡವಾರು		100%

ನವಮಾಧ್ಯಮದಲ್ಲಿ ಸಂವಹನಕ್ಕೆ ಹೆಚ್ಚು ಉಪಯೋಗಿಸುವ ಅಪ್ಲಿಕೇಷನ್ ಯಾವುದು ಎನ್ನುವ ಪ್ರಶ್ನೆಗೆ ಶೇಕಡಾ 50 ರಷ್ಟು ಸಂವಾದಿಗಳು ಫೇಸ್‌ಬುಕ್ ಬಳಸುವುದಾಗಿ, ಶೇಕಡಾ 20 ರಷ್ಟು ಸಂವಾದಿಗಳು ಟ್ವೀಟ್ಟರ್ ಬಳಸುವುದಾಗಿ, ಶೇಕಡಾ 10 ರಷ್ಟು ಸಂವಾದಿಗಳು ತಾವು ಯೂಟ್ಯುಬ್ ಬಳಸುವುದಾಗಿ, ಮತ್ತು ಶೇಕಡಾ 10 ರಷ್ಟು ಗೂಗಲ್ + ಬಳಸುತ್ತಿರುವುದಾಗಿ ಮಾಹಿತಿ ಈ ಪ್ರಶ್ನಾವಳಿಯಿಂದ ಲಭ್ಯವಾಗಿದೆ.

7) ಸಂವಹನಕ್ಕೆ ಬಳಸುವ ಮೊಬೈಲ್ ಅಪ್ಲಿಕೇಶನ್ ಯಾವುದು.

ಮೊಬೈಲ್ ಅಪ್ಲಿಕೇಷನ್‌ಗಳು	ಪುರುಷ	ಶೇಕಡ	ಮಹಿಳಾ	ಶೇಕಡ
ವಿಚಾಟ್ ಆನ್	12	24%	07	14%
ವಾಟ್ಸ ಅಪ್	11	22%	04	08%
ಹೈಕ್	02	04%	01	02%
ಫೇಸ್‌ಬುಕ್	10	10%	03	06%
ಒಟ್ಟು	35	70%	15	30%
ಒಟ್ಟು ಸಂವಾದಿಗಳ	50	ಶೇಕಡವಾರು		100%

ಸಂವಹನಕ್ಕೆ ಉಪಯೋಗಿಸುವ ಮೊಬೈಲ್ ಅಪ್ಲಿಕೇಷನ್ ಯಾವುದು ಎನ್ನುವ ಪ್ರಶ್ನೆಗೆ ಶೇಕಡಾ 38 ರಷ್ಟು ಸಂವಾದಿಗಳು ವಿಚಾಟ್ ಆನ್ ಬಳಸುವುದಾಗಿ, ಶೇಕಡಾ 30 ರಷ್ಟು ಸಂವಾದಿಗಳು ವಾಟ್ಸ ಅಪ್ ಬಳಸುವುದಾಗಿ ಆದರೆ ಶೇಕಡಾ 06 ಸಂವಾದಿಗಳು ಹೈಕ್ ಬಳಸುವುದಾಗಿ ಮತ್ತು ಶೇಕಡಾ 16 ರಷ್ಟು ಫೇಸ್‌ಬುಕ್ ಬಳಸುತ್ತಿರುವುದಾಗಿ ಮಾಹಿತಿ ಈ ಪ್ರಶ್ನಾವಳಿಯಿಂದ ಲಭ್ಯವಾಗಿದೆ.

8) ಶೈಕ್ಷಣಿಕವಾಗಿ ಉಪಯುಕ್ತವಾಗುತ್ತಿವೆಯೇ ನವಮಾಧ್ಯಮಗಳು.

ಶೈಕ್ಷಣಿಕ ಉಪಯೋಗ	ಪುರುಷ	ಶೇಕಡ	ಮಹಿಳಾ	ಶೇಕಡ
ಹೌದು	31	62%	14	28%
ಇಲ್ಲ	04	08%	01	02%
ಒಟ್ಟು	35	70%	15	30%
ಒಟ್ಟು ಸಂವಾದಿಗಳ	50	ಶೇಕಡವಾರು		100%

ನವಮಾಧ್ಯಮಗಳು ಶೈಕ್ಷಣಿಕವಾಗಿ ಉಪಯುಕ್ತವಾಗುತ್ತಿವೆಯೇ ಎನ್ನುವ ಪ್ರಶ್ನೆಗೆ ಶೇಕಡಾ 90 ರಷ್ಟು ಸಂವಾದಿಗಳು ಹೌದು ಮತ್ತು ಶೇಕಡ 10

ರಷ್ಟು ಇಲ್ಲ ಅಂದರೆ ಉಪಯೋಗವಾಗುತ್ತಿಲ್ಲ ಎಂದು ತಿಳಿಸಿದ್ದಾರೆ.

9) ನವಮಾಧ್ಯಮದ ಗುಣಮಟ್ಟ ಹೆಚ್ಚಿಸುವ ಅಗತ್ಯವಿದೆಯೇ.

ಗುಣಮಟ್ಟ	ಪುರುಷ	ಶೇಕಡ	ಮಹಿಳಾ	ಶೇಕಡ
ಹೌದು	35	70%	15	30%
ಇಲ್ಲ	00	00%	00	00%
ಒಟ್ಟು	35	70%	15	30%
ಒಟ್ಟು ಸಂವಾದಿಗಳ	50	ಶೇಕಡವಾರು		100%

ನವಮಾಧ್ಯಮಗಳು ಗುಣಮಟ್ಟ ಹೆಚ್ಚಿಸುವ ಅಗತ್ಯವಿದೆಯೇ ಎನ್ನುವ ಪ್ರಶ್ನೆಗೆ ಶೇಕಡಾ 100 ರಷ್ಟು ಸಂವಾದಿಗಳು ಹೌದು ಮತ್ತು ಶೇಕಡ 00 ರಷ್ಟು ಇಲ್ಲ ಎಂದು ತಿಳಿಸಿದ್ದಾರೆ. ಅಂದರೆ ಇಲ್ಲಿ ನವಮಾಧ್ಯಮಗಳ ಗುಣಮಟ್ಟ ಹೆಚ್ಚಿಸಬೇಕಾಗಿದೆ ಎಂದಿದ್ದಾರೆ.

10) ನಿಮಗಾಗಿ ರೂಪಿಸಿರುವ ಸಾಫ್ಟೆ ವೇರ್ಗಳುಗಳು ಉಪಯೋಗವಾಗುತ್ತಿವೆಯೆ.

ಉಪಯೋಗ	ಪುರುಷ	ಶೇಕಡ	ಮಹಿಳಾ	ಶೇಕಡ
ಹೌದು	30	60%	14	28%
ಇಲ್ಲ	05	10%	01	02%
ಒಟ್ಟು	35	70%	15	30%
ಒಟ್ಟು ಸಂವಾದಿಗಳ	50	ಶೇಕಡವಾರು		100%

ನಿಮಗಾಗಿ ರೂಪಿಸಿರುವ ಸಾಫ್ಟೆ ವೇರ್ಗಳುಗಳು ಉಪಯೋಗವಾಗುತ್ತಿವೆಯೆ ಎನ್ನುವ ಪ್ರಶ್ನೆಗೆ ಶೇಕಡಾ 88 ರಷ್ಟು ಸಂವಾದಿಗಳು ಹೌದು ಮತ್ತು ಶೇಕಡ 12 ರಷ್ಟು ಇಲ್ಲ ಎಂದು ತಿಳಿಸಿದ್ದಾರೆ. ಅಂದರೆ ಇಲ್ಲಿ ನವಮಾಧ್ಯಮಗಳ ಗುಣಮಟ್ಟ ಹೆಚ್ಚಿಸಬೇಕಾಗಿದೆ ಎಂದಿದ್ದಾರೆ.

ಉಪಸಂಹಾರ : ಒಟ್ಟಾರೆಯಾಗಿ ನಾವು ಇಲ್ಲಿ ಗಮನಿಸುವುದಾದರೆ ನಮಗೆ ದೊರೆತ ದತ್ತಾಂಶಗಳ ಮಾಹಿತಿಯನ್ನು ವಿಶ್ಲೇಷಿಸಿ ಗಮನಿಸಿದಾಗ ಅಂಧಮಕ್ಕಳು ಈ ನವಮಾಧ್ಯಮಗಳನ್ನು ಹೆಚ್ಚಿನ ರೀತಿಯಲ್ಲಿ ಬಳಸುತ್ತಿದ್ದು ಇದರಿಂದ ಅದರ ಉಪಯೋಗವು ಹೆಚ್ಚಿದೆ ಎಂದು ತಿಳಿಯುತ್ತದೆ ಮತ್ತು ನವಮಾಧ್ಯಮಗಳು ಗುಣಮಟ್ಟ ಹೆಚ್ಚಿಸಬೇಕಾಗಿದೆ.

ಇಲ್ಲ ಸಾಮನ್ಯರಂತೆ ಅಂಧ ಮಕ್ಕಳೂ ಕೂಡ ನವಮಾಧ್ಯಮಗಳನ್ನು ಬಳಸುತ್ತಿದ್ದು, ಇದರಿಂದ ಹೆಚ್ಚಿನ ರೀತಿಯಲ್ಲಿ ಜ್ಞಾನ ಪಡೆಯುತ್ತಿದ್ದಾರೆ ಎನ್ನಬಹುದಾಗಿದೆ. ಈ ನವಮಾಧ್ಯಮಗಳನ್ನು ಇವರು ಸ್ನೇಹಿತರು ಮತ್ತು ಸಂಬಂಧಿಕರಿಂದ ಹೆಚ್ಚಿನ ರೀತಿಯಲ್ಲಿ ಪ್ರಭಾವಿತರಾಗಿ ಬಳಕೆ ಪ್ರಾರಂಬಿಸಿರುವುದಾಗಿ ತಿಳಿದುಬರುತ್ತದೆ. ಕೆಲ ಅಂಧಮಕ್ಕಳು ನವಮಾಧ್ಯಮದ ಒಂದು ಭಾಗವದ ಮೊಬೈಲನ್ನು ಬಲಸುತ್ತಿದ್ದು ಅದರಲ್ಲಿ ವಿವಿದ ರಿತಿಯ ಅಪ್ಲಿಕೇಶನ್ಗಳನ್ನು ಬಳಸುತ್ತರುವುದು ಕಂಡುಬರುತ್ತದೆ. ಶೈಕ್ಷಣಿಕವಾಗಿ ಈ ನವಮಾಧ್ಯಮ ಉಪಯೋಗಿಸಲ್ಪಡುತ್ತಿದ್ದರೂ ಇವರ ಪಾಲಿಗೆ ಇವುಗಳ ಗುಣಮಟ್ಟ ಇನ್ನೂ ಹೆಚ್ಚಿಸಬೇಕಾಗಿದೆ ಎಂಬುದು ಅವರ ಅಭಿಪ್ರಾಯವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಇ ನವಮಾಧ್ಯಮಗಳು ಅಂಧಮಕ್ಕಳಿಗೆ ಉಪಯುಕ್ತವಾಗುತ್ತಿದ್ದರೂ ಅವರೂ ಅದರಿಂದ ಮಾಹಿತಿ ಪಡೆಯಲು ಅವರು ಸಂಪೂರ್ಣ ಸ್ವತಂತ್ರರಾಗಿಲ್ಲ. ಅಂದರೆ ಅವರಿಗಾಗಿ ಕೆಲ ತಂತ್ರಾಂಶಗಳು ಇದ್ದರು ಅದರಿಂದ ಪರಿಣಾಮಕಾರಿಯಾಗಿ ಮಾಹಿತಿ ಪಡೆಯಲು ಆಗುತ್ತಿಲ್ಲ ಮತ್ತು ಅದರ ಉಪಯೋಗ ಸುಲಭವಾಗಿಲ್ಲ. ಆದ್ದರಿಂದ ಇದರ ಬಳಕೆ ಸುಲಬಗೊಳಿಸಿ ಅವರಿಗಾಗಿ ಕೆಲ ತಂತ್ರಾಂಶಗಳ ಗುಣಮಟ್ಟ ಹೆಚ್ಚಿಸುವುದು ಅಗತ್ಯವಾಗಿದೆ. ಇವುಗಳ ಗುಣಮಟ್ಟ ಹೇಚ್ಚಿಸುವುದರಿಂದ ಅಂಧಮಕ್ಕಳ ಅಂತರ್ಜಾಲ ಬಳಕೆಯಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಅನುಕೂಲವಾಗುತ್ತದೆ.

ಗ್ರಂಥಋಣ

ಜಿ.ಎನ್. ರಂಗನಾಥ್ ರಾವ್, (1965) 'ಪತ್ರಿಕೋದ್ಯಮ' ಕಾಮದೇನು ಪ್ರಕಾಶನ, ಬೆಂಗಳೂರು.

'ಭಾರತೀಯ ಪತ್ರಿಕೋದ್ಯಮ' ನಾಡಿಗ ಕೃಷ್ಣಮೂರ್ತಿ, ಮೈಸೂರು ವಿಶ್ವವಿದ್ಯಾಲಯ.

ಬಾಲಸುಬ್ರಹ್ಮಣ್ಯಂ ಎ. ಎಸ್. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮ ಒಂದು ಅವಲೋಕನ (2009), ಪತ್ರಿಕೋದ್ಯಮ ಪುಸ್ತಕ ಮಾಲೆ, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

'ಆಧುನಿಕ ಸಂವಹನ ಮಾಧ್ಯಮಗಳು' ಡಾ.ಸಿ.ಪೂರ್ಣಿಮಾ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ

http://en.wikipedia.org/wiki/Braille_technology.

http://chronicle.com/article/Blind-students-Demand-Access/125695.

http://webaim.org/artical/visul/blind

http://en.wikipedia.org/wiki/Blindness.

www.google.com

ನವೋದಯ ಕನ್ನಡ ಕಾವ್ಯಗಳಲ್ಲಿ ಕನಸು: ಸ್ವರೂಪ ಮತ್ತು ಪ್ರಭಾವ

(ಬೇಂದ್ರೆ, ಕುವೆಂಪು, ಮುಧುರಚನ್ನರ ಕಾವ್ಯಗಳನ್ನು ಅನುಲಕ್ಷಿಸಿ)

ಗಾಣಿಗರ್ ಎನ್ ಎಸ್

ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಆಳಂದ ರಸ್ತೆ ಕಡಗಂಚಿ-585311 ಆಳಂದ ತಾಲ್ಲೂಕ ಗುಲ್ಬರ್ಗಾ ಜಿಲ್ಲೆ e.mail-gniranjana4@gmail.com.

ಸಾಕಷ್ಟು ಪ್ರಖರ ಪರಿಣಮಗಳನ್ನು ಹೊಂದಿರುವ ಕನಸು ಸಾಹಿತ್ಯ ಲೋಕದಲ್ಲಿಯೂ ವೈವಿಧ್ಯತೆಯನ್ನು ಮೆರೆದಿದೆ. ಮನೋಶಾಸ್ತ್ರವನ್ನು ಹೊರೆತುಪಡೆಸಿ ಕನಸನ್ನು ಸಾಹಿತ್ಯದ ಭಾಗವಾಗಿ ನೋಡಿದಾಗ, ಅದರ ಸ್ವರೂಪ ಎಂಥದ್ದು, ಅದರ ಹರವು ಮತ್ತು ಒಳಹುಗಳು ಹೇಗೆ ಚಿತ್ರಿತವಾಗವೆ, ಅವುಗಳ ಸಾಂಕೇತಿಕತೆಯ ಅರ್ಥ ಯಾವುದು ಎಂಬ ಹತ್ತು ಹಲವು ವಿಚಾರವನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಸೃಜನಶೀಲ ಸಾಹಿತ್ಯ ಪ್ರಕಾರವಾದ ಕಾವ್ಯದಲ್ಲಿ ಕನಸನ್ನು ಕೇವಲ ಯಾವುದೋ ಒಂದು ಉದ್ದೇಶಕ್ಕಾಗಿ ಬಳಕೆಯಾಗಲ್ಲ. ಅದು ವಿವಿಧ

ಆಯಮಗಳಲ್ಲಿ, ವೈವಿಧ್ಯಮಯ ಸಂದರ್ಭದ ಸೃಷ್ಟಿಯಲ್ಲಿ ಒಳಗಾಗುತ್ತದೆ. ಕನಸು ಕೆಲವೊಮ್ಮೆ ಇಡೀ ಕಾವ್ಯದ ವಸ್ತುವಾಗಿ ಬಳಕೆಯಾದರೆ, ಕೆಲವೊಂದರಲ್ಲಿ ಕಾವ್ಯದ ತಂತ್ರವಾಗಿ, ನಿರೂಪಣಾ ವಿಧಾನವಾಗಿ, ಬಳಕೆ ಯಾಗಿರುವುದನ್ನು ಗುರುತಿಸಬಹುದು.

ಇಷ್ಟೇ ಅಲ್ಲದ ಕನಸು ಕಾವ್ಯದಲ್ಲಿ ಒಮ್ಮೆಮ್ಮೆ ವಾಹಕವಾಗಿ; ವಾಸ್ತವ–ಅಮೂರ್ತವನ್ನು ಬೆಸೆಯುವಲ್ಲಿ, ಸತ್ಯ ಮಿಥ್ಯಗಳ ಅಂತರವನ್ನು ನಿರ್ಧಿರಿಸಲು, ಅನುಭವದ ಅಗಾದತೆಯ ತೀವ್ರತೆಯನ್ನು ನಿರ್ದೇಶಿಸಲು ಸಹ ಬಳಕೆಯಾಗಿರುವುದನ್ನು ನೋಡಬಹುದು. ಕೆಲವೊಮ್ಮೆಯಂತೂ ಕಾವ್ಯ ವ್ಯಕ್ತಿತ್ವವನ್ನು ಹೇಳಲು ಸಹ ಕನಸು ಬಳಕೆ ಯಾಗಿರುವುದನ್ನು ಗಮನಿಸಬಹುದು. ಕಾವ್ಯದಲ್ಲಿ ಬಳಕೆಯಾಗುವ ಕನಸಿನ ಪ್ರತಿಮೆಗಳು ಅತ್ಯಂತ ಬಿಗುವು ಮತ್ತು ವಿಶಿಷ್ಟಾರ್ಥಪೂರ್ಣವಾದಂತಹವುಗಳಾಗಿರುತ್ತವೆ. ಕಾವ್ಯದಲ್ಲಿ ಕನಸು ಯಾವ ಆಯಾಮವನ್ನಾದರೂ ಪಡೆಯಬಹುದು, ಆದ್ಯಾತ್ಮವಾಗಿರಬಹುದು, ವೈಜ್ಞಾನಿಕ, ವೈಚಾರಿಕವಾಗಿರಬಹುದು, ಸಾಮಾಜಿಕ, ಹೀಗೆ ಮುಂತಾದವು. ಆದರೆ ಅದರ ಪ್ರತೀ ಆಯಾಮದಲ್ಲೂ ಭಿನ್ನವಾದ ಪ್ರತಿಮೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಬ್ಬ ಕವಿಯೂ ಕನಸಿನ ಪ್ರತಿಮೆಗಳನ್ನು ತಮ್ಮ ಅನುಭವದ ವೈಶಿಷ್ಟ್ಯದ ಅಡಿಯಲ್ಲಿ ನಿರೂಪಿಸಿರುವುದನ್ನು ಗುರುತಿಸಬಹುದು.

ಒಂದು ಕಾವ್ಯ ಯಾವುದೇ ಒಂದು ವಸ್ತು ಅಥವಾ ವಿಷಯದಿಂದ ಶ್ರೇಷ್ಟವಾಗುವುದಿಲ್ಲ; ಅದರಂತೆ ಕಾವ್ಯದಲ್ಲಿ ಕನಸು ಕೇವಲ ಅದರ ವಾಚ್ಯಾರ್ಥದಲ್ಲಿಯೇ ಮುಕ್ತಾಯವಾಗುವುದಿಲ್ಲ. ಅದು ಸಂಕೇತಿಕತೆಯನ್ನು ಹೆಚ್ಚಾಗಿ ಬಯಸುವುದರಿಂದ ಅದರ ಸೂಚ್ಯಾರ್ಥ ಮತ್ತು ಧ್ವನ್ಯಾರ್ಥಗಳೇ ಬೇರೆಯಾಗಿ ಗೋಚರಿಸುತ್ತದೆ. ಕೆಲಮೊಮ್ಮೆ ಕನಸೇ ವಾಸ್ತವವಾಗಿ ವಾಸ್ತವವೇ ಕನಸಾಗುವ ಮಟ್ಟಿಗೆ ಅದರ ಅನುಭವಗಮ್ಯತೆ ಕಾವ್ಯದಲ್ಲಿ ವ್ಯಕ್ತವಾಗುತ್ತದೆ. ಕಾವ್ಯ ಕೇವಲ ಬರೀ ವಾಸ್ತವವೂ ಅಲ್ಲ ಬರೀ ಕಲ್ಪನೆಯೂ ಅಲ್ಲ, ಇದರಂತೆ ಕನಸು ಕೇವಲ ಅಮೂರ್ತದ ಅಭವ್ಯಕ್ತಿಯೂ ಅಲ್ಲ; ಕೇವಲ ಮನೋಲೋಕದ ಆಂತರ್ಯದ ಅನಾವರಣವೂ ಅಲ್ಲ. ಅದರ ಅರ್ಥಸಾಧ್ಯತೆಗಳು ಕಾವ್ಯದ ನೈಜ ವ್ಯಕ್ತಿತ್ವದ ಮೇಲೆ ಪ್ರತಿಮಾರೂಪದ ಮೇಲೆ ನಿರ್ಧಾರವಾಗುತ್ತದೆ ಎನ್ನಬಹುದು. ಹೀಗೆಕನಸು ಕಾವ್ಯದಲ್ಲಿ ಅತ್ಯಂತ ಸೂಕ್ಷ್ಮವಾಗಿಯೂ ಕಾಣಬಹುದು ಅಥವಾ ಕಾವ್ಯದ ಬಿತ್ತಿಯ ರಚನಾ ಬಂಧವಾಗಿಯೂ ಕಾಣಬಹುದು. ಕಾವ್ಯಸಾಹಿತ್ಯ ಇಡೀ ಬದುಕಿನ ಜೀವನಾಭಿವ್ಯಕ್ತಿಯಾದರೆ, ಕನಸು ಮನೋಲೋಕದ ಭಾವಾಭಿವ್ಯಕ್ತಿಯಾಗುತ್ತದೆ. ಹೀಗೆ ಕಾವ್ಯ ಮತ್ತು ಕನಸಿನ ಅನುಸಂದಾನದನ್ನು ನಾವು ಗುರುತಿಸಬಹುದು. ಹೀಗೆ ಈ ಪ್ರಬಂಧವು ಕಾವ್ಯಗಳಲ್ಲಿನ ಕನಸಿನ ಸ್ವರೂಪ ಮತ್ತು ಪ್ರಭಾವವನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ. ಪ್ರಾತಿನಿಧಿಕ ಕವಿಗಳಾಗಿ ನವೋದಯದ ಕುವೆಂಪು, ಬೇಂದ್ರೆ, ಮಧುರಚನ್ನರ ಕಾವ್ಯಗಳನ್ನು ಮಾತ್ರ ಈ ನನ್ನ ಸಂಶೋಧನಾ ಪ್ರಬಂದವು ಒಳಗೊಂಡಿದೆ.

'ಕನಸು' ಹಾಗೆಂದರೇನು ಎನುವುದಕ್ಕೆ ನಿರ್ದಿಷ್ಟವಾಗಿ ಹೇಳುದು ಕಷ್ಟ; ಏನು ಹೇಳಿದರೂ ಅದು ನಮ್ಮ ವ್ಯಾಪ್ತಿಯದಷ್ಟೇ ಆಗಿರಿತ್ತದೆ. ಏಕೆಂದರೆ ಕನಸಿನ ಲೋಕವೇ ಅತ್ಯಂತ ವಿಸ್ತಾರ ಮತ್ತು ವೈವಿಧ್ಯಮಯವಾದುದು. ಕನಸು ಪ್ರತಿಯೊಬ್ಬರೂ ಅನುಭವಿಸಿರಿವ, ಅನುಭವಿಸುವ, ಅನುಭವಿಸಲೇಬೇಕಾದ ಒಂದು ಸಹಜ ಮಾನಸಿಕ ಪ್ರಕ್ರಿಯೆ. ಇದರಾಚೆ ಉಳಿಯಲು ಸಾಧ್ಯವಿಲ್ಲ ಅದು ಮನುಷ್ಯನಾಗಲೀ, ಪ್ರಾಣಿಗಳೇಯಾಗಲಿ. ಹಾಗೇನಾದರೂ ಹೊರಗಿದ್ದರೆ ಖಂಡಿತವಾಗಿಯೂ ಅವರು ಮಾನಸಿಕ ರೋಗಿಗಳೇ ಎಂದು ನಿರ್ಧರಿಸುವಷ್ಟು ವೈಜ್ಞಾನಿಕ ಸಂಶೋಧನೆಗಳು, ಸ್ವಪ್ನಶಾಸ್ತ್ರ ಸಿದ್ಧಾಂತಗಳು ಸಾಬೀತುಪಡಿಸಿವೆ. ಕನಸು ನಮ್ಮ ಮನೋಲೋಕದಲ್ಲಿ ಘಟಿಸುವ ಜೀವ ಪ್ರಭೆ. ನಮ್ಮ ಸುಪ್ತ ಮನಸಿನಲ್ಲಿ ಜರುಗುವ ಮಾನಸಿಕ ಪ್ರಕ್ರಿಯೆ. ಅಥವಾ ಇನ್ನು ಆಳವಾಗಿ ಹೇಳುವುದಾದರೆ ನಮ್ಮ ಸುಪ್ತ ಮನಸ್ಸಿನ ಬಯಕೆಗಳು ಜಾಗೃತಾವಸ್ಥೆಯ ಅರಿವಿಗೆ ಬಾರದೇ, ಜಾಗೃತಾವಸ್ಥೆ ನೆದ್ರೆಯ ಹಂತದಲ್ಲಿಯೇ ಅಭಿವ್ಯಕ್ತವಾಗುವ ಒಂದು ಸಂಕೀರ್ಣವಾದ ಪ್ರಕ್ರಿಯೆ. ಹೆಚ್ಚೆಂದರೆ ನಾವು ನಿದ್ರಿಸುವಾಗ ನಮ್ಮ ಮನಸ್ಸಿನ ಆಲೋಚನೆಗಳ ಚಿತ್ರರೂಪವೇ ಕನಸು.

ಅಂದರೆ ಕನಸು ಒಂದು ಜೀವಂತ ಅನುಭವ ಎಂದಾಯಿತು. ಅದು ನಮ್ಮ ವಾಸ್ತವ ಅನುಭವಗಳಂತೆಯೇ ವೇದ್ಯವಾಗುವಂತದ್ದು. ಮನುಷ್ಯನ ದೇಹ, ಮನಸ್ಸು ಹಾಗೂ ಸಂದರ್ಭಗಳ ನಡುವಿನ ಸಂವಹನವೇ ಕನಸು. ಇನ್ನು ಸರಳೀಕರಿಸುವುದಾದರೆ ಮೆದುಳು ವಿವಿಧ ಸಂದರ್ಭಗಳಲ್ಲಿ ಕಂಡ ಅಥವಾ ಭಾವಿಸಿಕೊಂಡ ಚಿತ್ರಗಳ ಮುರುಪ್ರಸಾರ. ಇಲ್ಲಿ ವಿವಿಧ ಸಂದರ್ಭಗಳು, ವಿವಿಧ ಹಂತಗಳು ಎಂದರೆ; ಸುಪ್ತಾವಸ್ತೆಯಲ್ಲಿ, ಜಾಗೃತಾವಸ್ತೆಯಲ್ಲಿ, ಬೇಸರಿಕೆಯಲ್ಲಿ, ಭಾವಾವೇಶದಿಂದ ಇದ್ದಾಗ ವಿವಿಧ ದ್ವಂದ್ವಗಳ ಅಲೆಗಳನ್ನು ಎಬ್ಬಿಸುತ್ತದೆ. ಇದೆಲ್ಲವೂ ನಮ್ಮ ಮದುಳಿನ ನೆನಪಿನ ಪಟಲದಲ್ಲಿ ಉಳಿದುಬಿಡುತ್ತವೆ. ಹೀಗೆ ಉಳಿದುಕೊಂಡಂ ತವುಗಳು ನಿದ್ರೆಯವೇಳೆ ಮೆದುಳು ವಿಶ್ರಾಂತ ಸ್ಥಿತಿಯಲ್ಲಿದ್ದಾಗ ಈ ಅಲೆಗಳು ಮತ್ತೆ ಮತ್ತೆ ಏಳುತ್ತವೆ, ಇವನ್ನೇ ನಾವು ಬೇರೆ ಪರಿಭಾಷೆಯಲ್ಲಿ 'ಕನಸು' ಎಂದು ಕರೆಯುತ್ತೇವೆ.

ನಮ್ಮಲ್ಲಿ ಉಂಟಾಗುವ ನಿರ್ದಿಷ್ಟವಾದ ಭಾವಸ್ಥಿತಿಗಳನ್ನು ವ್ಯಕ್ತಪಡಿಸದೇ, ಅಥವಾ ಜಾಗೃತಾವಸ್ಥೆಯಲ್ಲಿ ಅಭಿವ್ಯಕ್ತಿಸದೇ ಹಾಗೇ ದಮನವಾಗಿಸಿದರೆ ಅವು ಕನಸಿನ ರೂಪದಲ್ಲಿ ಹೊರಹೊಮ್ಮುತ್ತವೆ. ಇದನ್ನ ಮುಂದುವರಿಸುವುದಾದರೆ ನಮ್ಮಮನಸಿನ ಬಯಕೆಗಳು ಮತ್ತು ಹುಟ್ಟಾಸೆಗಳು ಪೂರ್ಣ ಪ್ರಮಾಣದಲ್ಲಿ ಅಭಿವ್ಯಕ್ತವಾಗದಿದ್ದಾಗ ನಮ್ಮ ಮನೋಬಿತ್ತಿಯ ಒಳಗೆ ಉಳಿದು ಅವು ನಿದ್ರೆಯಲ್ಲಿ ಪೂರ್ಣತೆಯನ್ನು ಹವಣಿಸುತ್ತವೆ ಈ ಹವಾಣಿಕೆಯ ಚಿತ್ರ ರೂಪವೇ ಕನಸು. ಇನ್ನೊಂದ ಅರ್ಥದಲ್ಲಿ ವಿವರಿಸುವುದಾದಗೆ ನಮ್ಮ ಮನಸು ಒಳ್ಳೆಯ ಅಥವಾ ಕೆಡುಕಿನ ಪ್ರೇರಣೆ, ಭಾವನೆ, ಆಲೋಚನೆ ನಂಬುಗೆಗಳ ಡೋಲಾಯತೆ. ಅತೀವ ಘರ್ಷಣೆ, ತುಮುಲ, ತಲ್ಲಣಗಳಿಗೆ, ಅಭೀಪ್ಸೆ ಆಸೆ, ಆಕಾಂಕ್ಷೆಗಳ ವಿಶಾಲ ಆಟದ ಮೈದಾನ, ವಿಚಿತ್ರ ಅನಪೇಕ್ಷಿತ, ಅಸಾಮಾನ್ಯ ವಿಧ್ಯಮಾನಗಳ ತವರು ಆಗಿರುವಂತೆ. ಕನಸು ಕೂಡ ಅವುಗಳಲ್ಲೊಂದಾಗಿ ಗುರುತಿಸಬಹುದು.

ಹೀಗೆ ಕನಸು ಮಾನವನ ನಮಸಿನ ಒಂದು ವಿಚಿತ್ರ ವಿಧ್ಯಾಮಾನ. ಇದರ ಆಂತರ್ಯಗಳೂ ಸಹ ಬಹು ವಿಸ್ತೃತ. ಅಲ್ಲದೇ ಅದರ ರೂಪ ಸ್ವಭಾವ, ಸ್ವರೂಪ, ಅರ್ಥಸಾಧ್ಯತೆಗಳೂಸಹ ಸಲೀಸಾಗಿ ಸಿಗುವಂತವುಗಳಲ್ಲ. ಅಂದರೆ ಕನಸುಗಳ ಯೊಜನೆ–ಸಂಯೊಜನೆ–ನಿರ್ಮಾಣ ನಮ್ಮ ಅನುಭವಕ್ಕೆ ಬಂದಿರುವಂತೆ ಚಿತ್ರವಿಚಿತ್ರವಾಗಿದಾಗಿವೆ. ಅಲ್ಲದೇ ಕನಸುಗಳು ಒಬ್ಬ ವ್ಯಕ್ತಿಯ ಭವಿಷ್ಯದ ಬುದುಕಿನಲ್ಲಾಗುವ ಸಫಲತೆ ವಿಫಲತೆಗಳ, ಸಾವು–ನೋವುಗಳ ಸಂತೋಷ–ಸಂಕಟಗಳ ಸಾಧನೆ–ಸಿದ್ದಿಗಳ ಮುನ್ಸೂಚನೆಗಳೆಂದೂ ಹೇಳುತ್ತಾರೆ. ಇದಕ್ಕೆ ಪುರಾಣ

ಪುಣ್ಯ ಕಥೆಗಳಲ್ಲಿ ಆಧಾರಗಳೂಸಿಗುತ್ತವೆ ಉದಾ– ರಾಮಾಯಣ ಮಹಾಭಾರತ, ಭಗವದ್ಗೀತೆ, ಮುಂತಾದವು. ಈ ಕನಸಿನ ಅರ್ಥವಿವರಣೆಯನ್ನು ಸ್ವಲ್ಪ ವೈಜ್ಞಾನೀಕರಿಸುವುದಾದರೆ ಕನಸಿನ ಚಿಟುವಟಕೆಗಳು ಸುಪ್ತವಾಗಿರುವ ಬಯಕೆಗಳನ್ನು ಜಾಗೃತಾವಸ್ಥೆಯ ನಿದ್ದೆಯಲ್ಲಿ ವ್ಯಕ್ತಪಡಿಸುವ ಒಂದು ಸಹಜ ಕ್ರಿಯ ಎಂದು ಫ್ರಾಯ್ಡ್ ವಿವರಿಸುತ್ತಾನೆ. ಇಲ್ಲಿ ನಾವು ಒತ್ತು ಕೊಡಬೇಕಾದದ್ದು 'ಸಹಜಕ್ರಿಯೆ' ಎನ್ನುವುದರ ಮೇಲೆ. ಮನುಷ್ಯನ ಜೀವಂತಿಕೆಗೆ ಮೂಲಭೂತ ಅವಶ್ಯಕತೆಗಳಾದ ಗಾಳಿ, ನೀರು, ಆಹಾರ ಹೇಗೆ ಮುಖ್ಯವೋ ಅವನ ಮಾನಸಿಕ ಸಮತೋಲನಕ್ಕೆ ನಿದ್ರೆ, ಕನಸು, ಲೈಂಗಿಕತೆ, ಸಾತ್ವಿಕ ಆಲೋಚನೆಗಳೂ; ಮತ್ತು ದೈಹಿಕ ಸ್ವಾಸ್ಥ್ಯಕ್ಕೆ ನಿಯಮಿತ ವ್ಯಾಯಾಮ, ಶಾರೀರಿಕ ಅರಿವು ಸಹ ಅವಶ್ಯಕವಾಗಿ ಬೇಕಾಗುತ್ತದೆ. ಹೀಗೆ ಕನಸುಗಳೂ ಸಹ ಮಾನವನ ಅವಿಭಾಜ್ಯ ಸಹಜ ಪ್ರಕ್ರಿಯೆಯೆಂಬುದನ್ನು ಮರೆಯುವಂತಿಲ್ಲ.

ಹೀಗೆ ಕನಸಿನ ಬಗೆ ಇನ್ನು ಸಾಕಷ್ಟು ವ್ಯಾಖ್ಯಾನಗಳು ನಮ್ಮ ಸುತ್ತಲೂ ಇವೆ. ಕನಸನ್ನು ಕೇವಲ ಒಳ್ಳೆಯದರ ಸಂಕೇತವೆಂದೇನು ತಿಳಿಯಬೇಕಾಗಿಲ್ಲ ಏಕೆಂದರೆ ಕನಸುಗಳನ್ನು ದೈವವಾಣಿಗಳು, ದೇವರ ನಿರ್ದೇಶನಗಳು ಎಂದು ಕರೆದಂತೆ ಅವುಗಳನ್ನು ದೆವ್ವದ ಚೇಷ್ಟೆಗಳು, ಪಿಶಾಚಿಗಳಿಂದ ಬರುವ ಪ್ರಲೋಭಗಳೂ ಎಂದು ಅರ್ಥೈಸಲಾಗಿದೆ. ನಿದ್ರೆಯಲ್ಲಿ ಪಿಶಾಚಿಗಳು ಮನವನ ಮನಸ್ಸನ್ನು ಆಕ್ರಮಿಸಿ ಕಲುಷಿತಗೊಳಿಸಿ ಅಲ್ಲಿ ದುಷ್ಟ ಚಿಂತನೆಗಳನ್ನು ಬಿತ್ತುತ್ತವೆಂದು ಬಲವಾಗಿ ನಂಬಲಾಗತ್ತು. ಇದರಿಂದಲೇ ಕನಸುಗಳು ಎಂದರೆ ಭಯ.ಆತಂಕ, ಕೆಡುಕು ಶಕುನಗಳು ಹುಟ್ಟಿರಬಹುದು. ಹೀಗೆ ಕನಸು ವೈವಿಧ್ಯವಾದ ಅರ್ಥಸಾಧ್ಯತೆಗಳನ್ನು ಒಳಗೊಂಡಿವೆ. ಹಾಗಾದರೆ ನಾವು ಕನಸಿನಲ್ಲಿ ಏನನ್ನು ಕಾಣುತ್ತೇವೆ? ಎನ್ನುವ ಪ್ರಶ್ನೆಗೆ ಸೀಮಿತ ಉತ್ತರವಿಲ್ಲ. ಕನಸು ಒಂದು ಜೀವಂತ ಅನುಭವ, ನಾವು ನಿದ್ರೆಯಲ್ಲಿದ್ದಾಗ ಕನಸುಗಳು ಬೀಳುತ್ತವೆ. ಅದು ನೆಡೆಯುವಾಗ ನಿಜವೆನ್ನಿಸುತ್ತವೆ. ಕನಸಿನಲ್ಲಿ ದೃಶ್ಯಗಳು, ಧ್ವನಿಗಳು, ಘಟನೆ, ಚಟುವಟಿಗೆಗಳು, ಸ್ಥಳ, ವಸ್ತು, ವ್ಯಕ್ತಿಗಳೊಂದಿಗೆ ವ್ಯವಹರಿಸಿದಂತೆ ಅನುಭವವಾಗುತ್ತದೆ. ಹೀಗೆ ಹೇಳುತ್ತಾಹೋದರೆ ಅಂತ್ಯವಿಲ್ಲ. ಅದು ಒಂದು ರಮ್ಯ ಅದ್ಭುತ ಲೋಕವೆಂದಷ್ಟೇ ಹೇಳಬಹುದು. ನಾವುಕಾಣುತ್ತಿರುವ ಕನಸುಗಳು ನಮ್ಮ ನಿದ್ದೆಯ ವಿಚ್ಚರಿಕೆಯಿಂದ ಬಂದ್ ಆಗಿಬಿಡುತ್ತವೆ. ಆಗ ಇದುವರೆಗೂ ನೋಡಿದ್ದು ಕೇಳಿದ್ದು ಅನುಭವಿಸಿದ್ದೆಲ್ಲಾ ಕೇವಲ ಕನಸು, ಭ್ರಮೆ, ಕಲ್ಪನೆ ಎಂದು ತಿಳಿದಾಗ ನಮೆಗೆ ಬೇಸರವೂ ಆಗಬಹುದು ಒಟ್ಟಿಗೆ ಆಶ್ಚರ್ಯವೂ ಆಗುತ್ತದೆ.

"ಪ್ರತಿಯೊಂದು ಕನಸೂ ಜಾಗೃತಾವಸ್ಥೆಯಲ್ಲಿ ಪೂರೈಕೆಯಾಗದೇ ಸುಪ್ತ ಸ್ತರಕ್ಕೆ ತಳ್ಳಲ್ಪಟ್ಟ ಬಯಕೆಗಳ ಸಾಕೇತಿಕ ಅಭಿವ್ಯಕ್ತತೆ" ಎಂಬುದು ಫ್ರಾಯ್ಡನ ಸಿದ್ಧಾಂತ. ಮುಂದುರರಿಸಿ, ನಾವುಕಾಣುವ ಕನಸನ್ನು 'ವ್ಯಕ್ತವಿಷಯ'ಎಂದು ಕರೆದು, ಈ ಕನಸಿನ ಹುಟ್ಟಿಗೆ ಕಾರಣವಾದ ಆಂತರಿಕ ಸುಪ್ತಚೇತನದಲ್ಲಿರುವ ಅಂಶಗಳನ್ನು 'ಅವ್ಯಕ್ತ ವಿಷಯ' ಎಂದು ಕರೆಯುತ್ತಾನೆ. ಅವನ ಪ್ರಕಾರ ವ್ಯಕ್ತ ಅಂಶಗಳ ಜಾಡನ್ನು ಹಿಡಿದು ಅವ್ಯಕ್ತವಿಷಯಗಳನ್ನು ಕಂಡುಕೊಳ್ಳುವುದೇ ಸ್ವಪ್ನ ವಿಶ್ಲೇಷಣೆಯ ಉದ್ದೇಶ ಎಂದು ತನ್ನ ಸಿದ್ಧಾಂತವನ್ನು ಸ್ಪಷ್ಟೀಕರಿಸುತ್ತಾನೆ. ಅವ್ಯಕ್ತ ವಿಷಯಗಳು ಕಂಡ ಕನಸಾಗಿ ಮಾರ್ಪಾಡಾಗುವುದನ್ನು ಅವನು ಸ್ವಪ್ನ ಕ್ರಿಯ ಎಂದು ಕರೆಯುತ್ತಾನೆ. ಅಂದರೆ ನಿಮ್ಮ ಬಯಕೆಗಳು ಅನೈತಿಕವಾಗಿದ್ದರೆ, ಅಮಾನವೀಯವಾಗಿದ್ದರೆ ಅವು ನಾಗರೀಕ ಸಮಾಜದಲ್ಲಿ ಪ್ರತ್ಯಕ್ಷವಾಗಿ ಅಭಿವ್ಯಕ್ತಿಗೊಳ್ಳುವುದು ಸಾಧ್ಯವೇ ಇಲ್ಲ. ಆದರೂ ಅವು ಅಭಿವ್ಯಕ್ತಿಗಾಗಿ ಹಾತೊರೆಯುತ್ತಿರುತ್ತವೆ. ನೇರವಾಗಿ, ಪ್ರಜ್ಞಾತ್ಮಕವಾಗಿ, ಕ್ರಿಯಾತ್ಮಕವಗಿ ತೃಪ್ತಿಗೊಳ್ಳುವುದು ಅಸಾಧ್ಯವಾದುದರಿಂದ ಈ ಬಯಕೆಗಳು ಮಾನಸಿಕವಾಗಿ ನಿದ್ರಾಸ್ಥಿತಿಯಲ್ಲಿ ಸಾಕೇತಿಕವಾಗಿ ರೂಪಮರೆಸಿಕೊಂಡು, ಕನಸಸಗಿ ಹೊರ ಹೊಮ್ಮುತ್ತವೆ.

'ಕನಸು' ಎನ್ನುವ ಸಂಕೀರ್ಣ ವಸ್ತುವನ್ನು ಮನೋವಿಜ್ಞಾನ, ಸ್ವಪ್ನಶಾಸ್ತ್ರಗಳು, ಸಾಕಷ್ಟು ಸ್ತರಗಳಲ್ಲಿ ಸಂಶೋಧನೆಗೆ ಒಳಪಡಿಸಿ ಅರ್ಥಸಾಧ್ಯತೆಗಳನ್ನು ಕಂಡುಕೊಂಡಿವೆ. ವೈಜ್ಞಾನಿಕ ಹಾಸಿಗೆಯೊಳಗೆ ಪ್ರಯೋಗಕ್ಕೆ ಒಳಪಡಿಸುವ ಮೂಲಕ ಇದರ ರಹಸ್ಯವನ್ನು ತಕ್ಕಮಟ್ಟಿಗೆ ಭೇಧಿಸಲು ಹರಸಾಹಸ ಪಟ್ಟಿದ್ದಾರೆ. ಈ ಪ್ರಯತ್ನದ ಪರಿಣಾಮವಾಗಿ ಕನಸಿನ ಹುಟ್ಟು, ಸ್ವರೂಪ, ಗುಣ–ಸ್ವಭಾವ, ಅರ್ಥಗ್ರಹಿಕೆಗಳಿಗೆ ಸಾಕಷ್ಟು ಸಿದ್ಧಾಂತಗಳೇ ಪ್ರಚುರಕ್ಕೆ ಬಂದುಬಿಟ್ಟಿವೆ. ಇವೆಲ್ಲವೂ ಕನಸಿನ ಮನೋವೈಜ್ಞಾನಿಕ ಆಯಾಮದ ಪಾತಳಿಯೊಳಗೆ ಅರ್ಥವಿಶ್ಲೇಷಣೆಯನ್ನು ಮಾಡುವುದಕ್ಕೆ ಮುಂದಾಗಿವೆ ಎಂಬುದನ್ನು ಗಮನಿಸಬೇಕು. ಆದರೆ ಸಾಹಿತ್ಯಿಕ ವಿಷ್ಯವಾಗಿ ಕನಸನ್ನು ಅಧ್ಯಯನಕ್ಕೆ ಒಳಪಡಿಸಿರುದು ಇಲ್ಲ ಎನ್ನುವಷ್ಟು ಕಡಿಮೆ. ಆಗಿದ್ದರೂ ಲೇಖನ, ಪ್ರಬಂಧ, ಬಿಡಿಬರಹಗಳಲ್ಲಿ ಬಂದಿವೆಹೊರೆತು ಇಡಿಯಾಗಿ ಕನಸಿನ ಬಗ್ಗೆ ಕನ್ನಡದಲ್ಲಿ ಕೆಲಸ ನೆಡೆದಿಲ್ಲ. ಕನ್ನಡ ಸಾಹಿತ್ಯದಲ್ಲಿ 'ಕನಸು' ಎಲ್ಲಾ ಪ್ರಕಾರದಲ್ಲಿಯೂ ಕಂಡುಬರುವ ಒಂದು ಪರಿಕಲ್ಪನೆ. ಇದೊಂದು ಮನೋ ಮಾನಸದ ಅಮೂರ್ತ ಅನುಭವವಾದರೂ ಸಾಹಿತ್ಯದಲ್ಲಿ ಅದರ ದೃಷ್ಟಿ ಮತ್ತು ಸೃಷ್ಟಿ ವೈವಿಧ್ಯಮಯವಾದುದು. ಸಾಹಿತ್ಯ ಲೋಕದಲ್ಲಿ ಕನಸಿನ ಮನೋವೈಜ್ಞಾನಿಕ ಆಯಾಮ ಬೇರೆಯದೇ ಆಗಿದ್ದು ಅದೆಕ್ಕೆ ಸೃಜನಾತ್ಮಕತೆಯ ಹೊಳವು ಮತ್ತು ಸಳುವುಗಳು ಅಂಟಿಕೊಂಡಿರುತ್ತವೆ. ಅಲ್ಲದೇ ಜನರಲ್ಲಿ ಕನಸನ್ನು ಕುರಿತಾದ ಆಸಕ್ತಿ, ಕುತೂಹಲ, ಆತಂಕಗಳು ಬಹಾಳ ಪುರಾತನವಾದುದು. ರಾಮಾಯಣ, ಮಹಾಭಾರತ, ಭಗವದ್ಗೀತೆಯಂತಹ ಪುರಾಣಗಳಲ್ಲಿ ಮತ್ತು ಧಾರ್ಮಿಕ ಕಾವ್ಯಗಳಲ್ಲಿಯೇ ಅದರ ರೂಪವಿದೆ. ಭಗವದ್ಗೀತೆ, ಜೈನಪುರಾಣಗಳು, ಪಂಪಭಾರತ ಮುಂತಾದವುಗಳಲ್ಲಿ ಕನಸುಗಳು ದೈವದ ರೂಪವಾಗಿ, ಮುಂದಿನ ಘಟನೆಗಳ ಸೂಚನೆಯನ್ನು ತಿಳಿಸುವ ಕೆಲಸವನ್ನು ಮಾಡಿವೆ. ಅಲ್ಲದೇ ಕಥೆ ಕಾದಂಬರಿಗಳಲ್ಲಿ ಕನಸಿನ ಮೇಲಾಟ ಸಾಕಷ್ಟು ಗಮನ ಸೆಳೆಯುತ್ತದೆ. ಕಾವ್ಯ ಜಗತ್ತಿನಲ್ಲಂತು ಕನಸುಗಳು ವೈವಿಧ್ಯಮಯವಾಗಿ, ಬಳಕೆಯಾಗಿದೆ. ಅದರಲ್ಲು ನವೋದಯ ಕಾಲವಂತೂ ಕನಸಿಗೆ ಸುವರ್ಣಯುಗದಂದತೆ ಕಂಡಿದೆ. ಇಷ್ಟೆಲ್ಲ ಹಾಸುವಕ್ಕಾದ ಕನಸಿನ ಬಗ್ಗೆ ಸಾಹಿತ್ಯ ಸಶೋಧಕರು ಅಷ್ಟು ಹೆಚ್ಚಾಗಿ ಗಮನ ಹರಿಸಿಲ್ಲ.

ಸಾಕಷ್ಟು ಪ್ರಖರ ಪರಿಣಮಗಳನ್ನು ಹೊಂದಿರುವ ಕನಸು ಸಾಹಿತ್ಯ ಲೋಕದಲ್ಲಿಯೂ ವೈವಿಧ್ಯತೆಯನ್ನು ಮೆರೆದಿದೆ. ಮನೋಶಾಸ್ತ್ರವನ್ನು ಹೊರೆತುಪಡೆಸಿ ಕನಸನ್ನು ಸಾಹಿತ್ಯದ ಭಾಗವಾಗಿ ನೋಡಿದಾಗ, ಅದರ ಸ್ವರೂಪ ಎಂಥದ್ದು, ಅದರ ಹರವು ಮತ್ತು ಒಳಹುಗಳು ಹೇಗೆ ಚಿತ್ರಿತವಾಗವೆ, ಅವುಗಳ ಸಾಂಕೇತಿಕತೆಯ ಅರ್ಥ ಯಾವುದು ಎಂಬ ಹತ್ತು ಹಲವು ವಿಚಾರವನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಸೃಜನಶೀಲ ಸಾಹಿತ್ಯ ಪ್ರಕಾರವಾದ ಕಾವ್ಯದಲ್ಲಿ ಕನಸನ್ನು ಕೇವಲ ಯಾವುದೋ ಒಂದು ಉದ್ದೇಶಕ್ಕಾಗಿ ಬಳಕೆಯಾಗಲ್ಲ. ಅದು ವಿವಿಧ ಆಯಮಗಳಲ್ಲಿ, ವೈವಿಧ್ಯಮಯ ಸಂದರ್ಭದ ಸೃಷ್ಟಿಯಲ್ಲಿ ಒಳಗಾಗುತ್ತದೆ. ಕನಸು ಕೆಲವೊಮ್ಮೆ ಇಡೀ ಕಾವ್ಯದ ವಸ್ತುವಾಗಿ ಬಳಕೆಯಾದರೆ,

ಕೆಲವೊಂದರಲ್ಲಿ ಕಾವ್ಯದ ತಂತ್ರವಾಗಿ, ನಿರೂಪಣಾ ವಿಧಾನವಾಗಿ, ಬಳಕೆ ಯಾಗಿರುವುದನ್ನು ಗುರುತಿಸಬಹುದು.

ಇಷ್ಟೇ ಅಲ್ಲದ ಕನಸು ಕಾವ್ಯದಲ್ಲಿ ಒಮ್ಮೆಮ್ಮೆ ವಾಹಕವಾಗಿ; ವಾಸ್ತವ-ಅಮೂರ್ತವನ್ನು ಬೆಸೆಯುವಲ್ಲಿ, ಸತ್ಯ ಮಿಥ್ಯಗಳ ಅಂತರವನ್ನು ನಿರ್ಧರಿಸಲು, ಅನುಭವದ ಅಗಾದತೆಯ ತೀವ್ರತೆಯನ್ನು ನಿರ್ದೇಶಿಸಲು ಸಹ ಬಳಕೆಯಾಗಿದೆ. ಕೆಲವೊಮ್ಮೆಯಂತೂ ಕಾವ್ಯ ವ್ಯಕ್ತಿತ್ವವನ್ನು ಹೇಳಲು ಸಹ ಕನಸು ಬಳಕೆ ಯಾಗಿರುವುದನ್ನು ಗಮನಿಸಬಹುದು. ಕಾವ್ಯದಲ್ಲಿ ಬಳಕೆಯಾಗುವ ಕನಸಿನ ಪ್ರತಿಮೆಗಳು ಅತ್ಯಂತ ಬಿಗುವು ಮತ್ತು ವಿಶಿಷ್ಟಾರ್ಥಪೂರ್ಣವಾದಂತಹವುಗಳಾಗಿರುತ್ತವೆ. ಕಾವ್ಯದಲ್ಲಿ ಕನಸು ಯಾವ ಆಯಾಮವನ್ನಾದರೂ ಪಡೆಯಬಹುದು, ಆದ್ಯಾತ್ಮವಾಗಿರ 'ಬಹುದು, ವೈಜ್ಞಾನಿಕ, ವೈಚಾರಿಕವಾಗಿರಬಹುದು, ಸಾಮಾಜಿಕ, ಹೀಗೆ ಮುಂತಾದವು. ಆದರೆ ಅದರ ಪ್ರತೀ ಆಯಾಮದಲ್ಲೂ ಭಿನ್ನವಾದ ಪ್ರತಿಮೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಬ್ಬ ಕವಿಯೂ ಕನಸಿನ ಪ್ರತಿಮೆಗಳನ್ನು ತಮ್ಮ ಅನುಭವದ ವೈಶಿಷ್ಟ್ಯದ ಅಡಿಯಲ್ಲಿ ನಿರೂಪಿಸಿರುವುದನ್ನು ಗುರುತಿಸಬಹುದು. ಕನಸಿನ ಪ್ರಕ್ರಿಯೆ ಎಲ್ಲರಿಗೂ ಒಂದೇ ಆದರೂ, ಅದರ ಅನುಭವ ಅಭಿವ್ಯಕ್ತ ವ್ಯಕ್ತಿಕೇಂದ್ರಿತವಾಗಿಯೇ ಇರುತ್ತದೆ.

ಒಂದು ಕಾವ್ಯ ಯಾವುದೇ ಒಂದು ವಸ್ತು ಅಥವಾ ವಿಷಯದಿಂದ ಶ್ರೇಷ್ಟವಾಗುವುದಿಲ್ಲ; ಅದರಂತೆ ಕಾವ್ಯದಲ್ಲಿ ಕನಸು ಕೇವಲ ಅದರ ವಾಚ್ಯಾರ್ಥದಲ್ಲಿಯೇ ಮುಕ್ತಾಯವಾಗುವುದಿಲ್ಲ. ಅದು ಸಂಕೇತಿಕತೆಯನ್ನು ಹೆಚ್ಚಾಗಿ ಬಯಸುವುದರಿಂದ ಅದರ ಸೂಚ್ಯಾರ್ಥ ಮತ್ತು ಧ್ವನ್ಯಾರ್ಥಗಳೇ ಬೇರೆಯಾಗಿ ಗೋಚರಿಸುತ್ತದೆ. ಕೆಲಮೊಮ್ಮೆ ಕನಸೇ ವಾಸ್ತವವಾಗಿ ವಾಸ್ತವವೇ ಕನಸಾಗುವ ಮಟ್ಟಿಗೆ ಅದರ ಅನುಭವಗಮ್ಯತೆ ಕಾವ್ಯದಲ್ಲಿ ವ್ಯಕ್ತವಾಗುತ್ತದೆ. ಕಾವ್ಯ ಕೇವಲ ಬರೀ ವಾಸ್ತವವೂ ಅಲ್ಲ ಬರೀ ಕಲ್ಪನೆಯೂ ಅಲ್ಲ, ಇದರಂತೆ ಕನಸು ಕೇವಲ ಅಮೂರ್ತದ ಅಭವ್ಯಕ್ತಿಯೂ ಅಲ್ಲ; ಕೇವಲ ಮನೋಲೋಕದ ಆಂತರ್ಯದ ಅನಾವರಣವೂ ಅಲ್ಲ. ಅದರ ಅರ್ಥಸಾಧ್ಯತೆಗಳು ಕಾವ್ಯದ ನೈಜ ವ್ಯಕ್ತಿತ್ವದ ಮೇಲೆ ಪ್ರತಿಮಾರೂಪದ ಮೇಲೆ ನಿರ್ಧಾರವಾಗುತ್ತದೆ ಎನ್ನಬಹುದು. ಹೀಗೆಕನಸು ಕಾವ್ಯದಲ್ಲಿ ಅತ್ಯಂತ ಸೂಕ್ಷ್ಮವಾಗಿಯೂ ಕಾಣಬಹುದು ಅಥವಾ ಕಾವ್ಯದ ಬಿತ್ತಿಯ ರಚನಾ ಬಂಧವಾಗಿಯೂ ಕಾಣಬಹುದು. ಕಾವ್ಯಸಾಹಿತ್ಯ ಇಡೀ ಬದುಕಿನ ಜೀವನಾಭಿವ್ಯಕ್ತಿಯಾದರೆ, ಕನಸು ಮನೋಲೋಕದ ಭಾವಾಭಿವ್ಯಕ್ತಿಯಾಗುತ್ತದೆ. ಹೀಗೆ ಕಾವ್ಯ ಮತ್ತು ಕನಸಿನ ಅನುಸಂದಾನದನ್ನು ನಾವು ಗುರುತಿಸಬಹುದು. ಹೀಗೆ ಈ ಪ್ರಬಂಧವು ಕಾವ್ಯಗಳಲ್ಲಿನ ಕನಸಿನ ಸ್ವರೂಪ ಮತ್ತು ಪ್ರಭಾವವನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ. ಪ್ರಾತಿನಿಧಿಕ ಕವಿಗಳಾಗಿ ನವೋದಯದ ಕುವೆಂಪು, ಬೇಂದ್ರೆ, ಮಧುರಚನ್ನರ ಕಾವ್ಯಗಳನ್ನು ಮಾತ್ರ ಈ ನನ್ನ ಸಂಶೋಧನಾ ಪ್ರಬಂದವು ಒಳಗೊಂಡಿದೆ.

ಕುವೆಂಪು ಕಾವ್ಯ ಶಕ್ತಿಯ ಅಗಾಧದಲ್ಲಿ ಕನಸೂಕೂಡ ವೈವಿಧ್ಯಮಯ ರೂಪವನ್ನು ಧರಿಸುತ್ತದೆ. ಅವರ ಕಾವ್ಯ ಮಲೆನಾಡಿಮಡಿ ಲಲ್ಲಿ ಹರಿಯುವಂಥದ್ದು ಹಾಗೆ ಹೆಚ್ಚಾಗಿ ರಮ್ಯತೆಯ ಮೈಯನ್ನು ತಳೆದಿರುವಂಥದ್ದು. ಇವರ ಕನಸಾಧಾರಿತ ಕಾವ್ಯಗಳಲ್ಲಿ ಹೆಚ್ಚು ಪ್ರಕೃತಿಯ ಅಂಶಗಳೇ ಹೆಚ್ಚಾಗಿ ಬಳಕೆಯಾಗುವುದನ್ನು ನಾವು ಗುರುತಿಸಬಹುದು. ಅಲ್ಲದೆ ಇವರ ಕನಸುಗಾರಿಕೆ ರಮ್ಯ ಆವರಣದಲ್ಲಿ ಹೆಚ್ಚಾಗಿ ವಿಹರಿಸುವಂತದ್ದು. ಮುಗಿಲು, ಆಕಾಶ, ಮೋಡ, ತಾರೆ, ಮರ, ಗಿಡ, ಬಳ್ಳಿ ನದಿ, ಕಲ್ಲು ಮಣ್ಣು, ಹಕ್ಕಿ, ಹೀಗೆ ಪ್ರಕೃತಿಕ ಚರಾಚರಗಳ ಒಳಗೆ ಸಾಂಕೇತತ್ವವನ್ನು ಹೇಳಲು ಪ್ರಯತ್ನಿಸುವಂತಹವುಗಳು. ಅಲ್ಲದೇ ಅವರ ಕನಸಿನ ಅಭಿವ್ಯಕ್ತಿ ಹೊರಗಿನಿಂದ ಒಳಮುಖವಾಗಿ ಚಲಿಸುವಂತಹುದು. ಇದಕ್ಕೆ ಉದಾಹರಣೆಯಾಗಿ 'ರಕ್ತ ರಜನಿ' ಎನ್ನುವ ಕಾವ್ಯದಲ್ಲಿ

ಹಕ್ಕಿಗಳ ಸದ್ದಿಲ್ಲ; ಮಿಗಗಳು
ಸಂಚರಿಪ ರವಮಿಲ್ಲ; ತರಗೆಲೆ
ಸುಳಿವ ತಂಗಾಳಿಯಲಿ ಕುಣಿಯುವ
ಸದ್ದದೊಂದೇ ಮೌನವಿಮ್ಮಡಿ
ಯಾಗುವಂದದಿ ಸುತ್ತಿ ಚಿಮ್ಮಿತು
ಕನಸಿನಂದದಲಿ. (ಪು-೬೧೩, ಸ.ಕಾ.ಸಂ-೨)

ಹಾಗೆಯೇ ಅವರ ಕಥನ ಕಾವ್ಯವಾದ 'ತಾನಾಜಿ' (ಪು-೬೩೭, ಅದೇ) ಕವಿತೆಯಲ್ಲಿ ಬರುವ

ನಿದ್ರಿತ ಭೂಮಿಯ ಮನದಲಿ ದುರ್ಗವೂ
ಸ್ವಪ್ನವಾಗಿತ್ತು, ಸ್ವಪ್ನವಾಗಿತ್ತು.(ಪು-೬೩೭, ಅದೇ)

ಇವುಗಳಲ್ಲಿ ಪ್ರತಿಮೆಗಳು ಬೇರೆ ಬೇರೆಯಾದರೂ, ಅವು ನಿಸರ್ಗದವೇ ಆಗಿದ್ದು, ಒಂದು ಕನಸನ್ನು ರೂಪವಾಗಿ ಬಳಸಿಕೊಂಡರೆ, ಮತ್ತೊಂದು, ಪ್ರತಿಮೆಯಾಗಿ ಬಳಸಿಕೊಂಡಿದೆ. ಅವರ ಕನಸುಗಳ ಇನ್ನೊಂದು ಪ್ರಮುಖವಾದ ಆಯಾಮವೆಂದರೆ "ಒಂದೇ ಸಮಯದಲ್ಲಿ ಎರಡು ವೇದಿಕೆಗಳಲ್ಲಿ ಕ್ರಿಯಾಶೀಲವಾಗುವಂತಹದು. ಒಂದು ವೇದಿಕೆ ನಮ್ಮ ಹೊರಗೆ ಇರುವ ವಾಸ್ತವ, ಮತ್ತೊಂದು ನಮ್ಮ ಒಳಗೆ ಇರುವ ಕಲ್ಪನೆ". 'ಮುಂದಕೆಲ್ಲಿಗೆ' ಎನ್ನುವ ಕವಿತೆಯಲ್ಲಿ ಕವಿ ತನ್ನ ಹುಟ್ಟಿನ ಆದಿ ಮೊದಲುಗಳನ್ನು ತಿಳಿಯುವುದೇ ಬಂದುದಲ್ಲದೇ ಏನಾಗಬೇಕೆಂದರಿಯದೇ, ಏಕೆ ಬಂದುದೆಂದರಿಯದೇ ಬಂಧ ಜೀವದ ವಿವಿಧ ಸ್ತರಗಳನ್ನು ಅವನ ವಿವಿದ ಜನ್ಮ (ರೂಪ)ಗಳನ್ನು ಹೇಳಿ, ಕೊನೆಗೆ ಮನುಜ ಜನ್ಮದಲ್ಲಿನ ಇರುವನ್ನು ತಿಳಿಸಿ ಮತ್ತೇ ಮುಂದಕೆಲ್ಲಿಗೆ? ಎಂದು ಪ್ರಶ್ನೆಯಲ್ಲಿ ಮುಗಿಸುತ್ತಾರೆ.

ಮಲಗಿ ಕಲ್ಲು ಮಣ್ಣುಗಳಲಿ
ಜಡ ಸುಷುಪ್ತಿಯಲ್ಲಿ ಬಳಲಿ
ಯುಗಗಳಾದವು !
ಸಸ್ಯಗಳಲ್ಲಿ ಕನಸ ಕಂಡು
ಹುಟ್ಟು ಬಾಳು ಸಾವನುಂಡು'
ಕಲ್ಪ ಹೋದವು (ಪು-೧೨, ಸಂ-೧)

ಇದರಲ್ಲಿ ಬದುಕಿನ ವಾಸ್ತವ ಮತ್ತು ಜನ್ಮದ ಕಲ್ಪನೆ ಎರಡನ್ನೂ ಒಂದೇ ವೇದಿಕೆಯಲ್ಲಿಟ್ಟು ನೋಡಿದ್ದಾರೆ. ಇಲ್ಲಿ ಜನ್ಮಗಳು ಕನಸಿನ ಮನೋಲೋಕದ ಒಳಗೆ ಬರುವ ರೂಪಚಿತ್ರಗಳಾಗಿದ್ದು, ಅವು ತನ್ನೊಳಗೆ ಸೃಷ್ಟಿಯಾದ ಅವಾಸ್ತವ ಬದುಕಿನ ರೂಪ ಕಲ್ಪನೆಗಳು. ಆದರೆ ಅವರು ಹೊರ ಬದುಕಿನ ವಾಸ್ತವದಲ್ಲಿ ತಾವಿರುವ ಮನುಷ್ಯ ಜನ್ಮವನ್ನ ತನ್ನೊಳಗೆ ಸೃಷ್ಟಿಯಾಗಿದ್ದ ರೂಪ ಜನ್ಮದೊಂದಿಗೆ ಹೋಲಿಸಿ ನೋಡಿದ್ದಾರೆ.ಅವರ 'ಮಲ್ಲಿಗೆ ಹೂಗಳು' ಕವಿತೆಯಲ್ಲಿಯೂ ಈ ರೀತಿಯ ವೇದಿಕೆಯನ್ನು ಗುರುತಿಸಬಹುದು.

ಬಳ್ಳಿಯ ಒಳಗಿಹ ನಿದ್ದೆಯ ಊರಿನ
ಕನಸಿನ ಶಾಲೆಯೊಳೋದುವರೆ ?
ಕನಸಿನಾನಂದವ ಸವಿಯುತ, ನಲಿಯುತ
ಕನಸಿನ ಕತೆಗಳ ಕೇಳುವರೆ ? (ಪು-೭೮೪, ಸಂ-೨)

ಇವರ ಕನಸುಗಳು ಕಾವ್ಯಗಳಲ್ಲಿ ವಿವರಣೆಯಾಗಿ ಬರುವಂತೆ,

ನಿರೂಪಣೆಯಾಗಿ ಬರುವಂತೆ, ಕನಸಿನ ನೇರ ಅಭಿವ್ಯಕ್ತಿಯಾಗಿಯೂ ಬರುತ್ತವೆ. ಕನಸಿನ ರಚನೆ ಮತ್ತು ಅದರ ಬಂಧವನ್ನೇ ಕುರಿತ ಕಾವ್ಯಗಳು ಸಹ ಇವರಲ್ಲಿ ಕಂಡು ಬರುತ್ತವೆ. ಉದಾಹರಣೆಗೆ 'ಕನಸಿನ ಕನಸು' ಎಂಬ ಕವಿತೆಯಲ್ಲಿ ಕನಸು ಅದು ಎಂದಿಗೂ ಕನಸೇ, ಅದರ ಅನುಭವ ಮನೋಲೋಕದ್ದು, ವಾಸ್ತವಾಗಲಾರದು ಎಂದು ಹೇಳಿ, ನಮ್ಮ ಇಡೀ ಸಾವು ಬಾಳುಗಳನ್ನು ಕನಸಿನಿಂದ ಕನಸಿನೆಡೆಗೆ ಎಂದು ಅರ್ಥೈಸುತ್ತಾರೆ.

ಕನಸಿನೊಳು ಸಂಚರಿಪ ಕನಸಯ್ಯ ನಾನು
ನೀನದನು ಹಿಡಿದು ಬಂಧಿಸಿಡಲಾರೆ
ಸಿಟ್ಟಿನಲ್ಲಿ ಕುಟ್ಟಿದೊಡೆ ಪುಡಿ ಮಾಡಲಾರೆ
ಕನಸೆಂದು ಕನಸಯ್ಯ ತುದಿಯವರೆಗೆ

ಕೂಸಿನ ಕನಸು ಎನ್ನುವ ಕವಿತೆಯಲ್ಲಿಯೂ ಶಿಶು ಕನಸಿನ ರಚನೆಯನ್ನೆ, ಬಂಧವನ್ನೆ ಮತ್ತದೆ ಪ್ರಾಕೃತಿಕ ಪ್ರತಿಮೆಗಳ ಮೂಲಕ ಚಿತ್ರಿಸುತ್ತಾರೆ. ಇಲ್ಲಿ ಶಿಶು ಕನಸು ಎಂತಹದೆಂದರೆ ಬಾಲ ಕೃಷ್ಣನಂತೆ ಎಲ್ಲವೂ ತಾನೆ ಆಗಿರುವುದು. ತನಗೆ ಇರುವುದು, ತನ್ನಿಂದಲೇ ಇರುವುದು. ಅಂದರೆ ಅದರ ಬಂಧ ಬಹುರೂಪವಾದದು. ಕೇವಲ ಒಂದು ವಸ್ತು ಒಂದು ಮಜಲಿನದಲ್ಲ. ಏಷ್ಟೇ ಆದರೂ ಮಕ್ಕಳ ಮನಸು ಚಂಚಲೆಯಾದುದಲ್ಲವೇ, ಅದರ ಆಲೋಚನೆಗಳೇ ಭಿನ್ನವಾದಂತಹದು. ಇವರ ಬಹುಮುಖ ಚರ್ಚೆ ಹೀಗೇ ಮುಂದುವರಿಯುತ್ತದೆ....

ಬೇಂದ್ರೆಯವರ ಕಾವ್ಯ ಜಗತ್ತು ಕನ್ನಡ ದೇಸಿ ಪರಂಪರೆಯಿಂದ ಪ್ರಭಾವಿತವಾದುದು. ಬೇಂದ್ರೆಯವರ ಮುಖ್ಯ ಕಾಳಜಿ ಸ್ವಾನಿಷ್ಠವಾದುದ್ದು, ಇಡೀಯಾದ ವ್ಯಕ್ತಿವಾದಿ ಸಂಸ್ಕೃತಿಯ ಒಂದು ವಿಶಿಷ್ಟ ಸ್ತರದೊಂಡನೆ ಇವರು ಬರಿಯಲಾರಂಭಿಸಿದ್ದು ಅತ್ಯಂತ ಮುಖ್ಯವಾದರೂ ಇದು ಉದ್ದೇಶದ ಮತ್ತು ಆಳದ ಪ್ರಜ್ಞೆಯು ಮಾತಾಗಿ ಅಷ್ಟೇ ಉಳಿದುಬಿಟ್ಟಿದೆ.ಬೇಂದ್ರೆಯವರ ಬದುಕಿನ ಬಗೆಗಿನ ಪ್ರೀತಿ ಸಾಮಾಜಿಕ ಕಾಳಜಿ ಆಧ್ಯಾತ್ಮದ ಬಂಧುತ್ವ, ನಿಸರ್ಗದೊಂದಿಗಿನ ತಾದಾತ್ಮಕತೆ ಅವರ ಕಾವ್ಯಗಳಲ್ಲಿ ಜನಪದೀಯ, ದೇಸಿ ಮೂಲದಲ್ಲಿ ಅಭಿವ್ಯಕ್ತವಾಗಿವೆ. ಈ ಎಲ್ಲಾ ಆಯಾಮಗಳಲ್ಲೂ ಕನಸಿನ ರೂಪಗಳು ಕಂಡು ಬರುತ್ತವೆ.

ಅವರ ಕನಸು ಆಧಾರಿತ ಕಾವ್ಯಗಳಲ್ಲಿ ಪ್ರತಿಮೆಗಳು ಹೆಚ್ಚಾಗಿ ಬದುಕು, ಜೀವನ, ಕುಟುಂಬ ಪ್ರೀತಿ, ಸಾವು, ದಾಂಪತ್ಯ ಅಮೂರ್ತ ಅನುಭಗಳ ಸಾಕ್ಷಾತ್ಕಾರ ರೂಪವಾಗಿ ಕಂಡು ಬರುತ್ತವೆ. ಅವರ ಕನಸಿನ ಪ್ರತಿಮೆಗಳು ಕುಟುಂಬ ಸಂಬಂಧಿ ಕಾವ್ಯಗಳಲ್ಲಿ, ಸಾವು ನಿಸರ್ಗ ಸಂದರ್ಭದಲ್ಲಿ, ಅವರ ದಾಂಪತ್ಯ ಕಾವ್ಯಗಳಲ್ಲಿ ಭಿನ್ನವಾಗಿಯೇ ಪ್ರವೇಶಿಸುತ್ತವೆ. ಬೇಂದ್ರೆಯವರು ಹೆಚ್ಚಾಗಿ ತಮ್ಮ ಕಾವ್ಯಗಳಲ್ಲಿ 'ಕನಸಿನ ಪ್ರವೇಶವನ್ನು ಒಳಮುಖದಿಂದ ಹೊರಮೂಖವಾಗಿಯೇ ಅಭಿವ್ಯಕ್ತವಾಗಿರುವುದನ್ನು' ಗುರುತಿಸಬಹುದು. ಅಂದರೆ ಅವರು ಕನಸಿನ ಗಾಢತೆಯಿಂದ ಹೊರಬರುವುದನ್ನೇ ಹೆಚ್ಚಾಗಿ ಹಾತೋರೆಯುವುದು ಅವರ ಕನಸಾಧಾರಿತ ಕಾವ್ಯಗಳಲ್ಲಿ ಕಂಡು ಬರುತ್ತದೆ. 'ಕನಸು ಜನಿಸುತ್ತದೆ' ಎಂಬ ಕವಿತೆಯಲ್ಲಿ ಭ್ರಮೆ, ಕಲ್ಪನೆ, ಕನಸಿನ ಆವರಣ ಆವೃತವಾಗುವ ಪರಿಯಲ್ಲಿ ವಿವರಿಸಿ, ಅವುಗಳು ನಮ್ಮ ಮನಸು ದೇಹವನ್ನಲ್ಲದೇ ಬದುಕನ್ನೇ ಹೇಗೆ ಒಳಗಾಗಿಸಿಕೊಳ್ಳುತ್ತವೆ ಎಂಬುದನ್ನು ಚಿತ್ರಿಸುತ್ತಾರೆ.

ಮೈಮುಸುಕು ಸರಿದಾಗ
ಪ್ರಾಣದ ಕವಾಟದಲ್ಲಿ
ಮನದ ಮೂಖವಾಡಗಳ ಕಟ್ಟಿಕೊಂಡು
ಮೈಗರೆದ ಬಯಲಿನಲಿ
ಮೈಮರೆತ ಕನಸುಗಳು
ಭ್ರಮಿಸುತಿವೆ ಕಲ್ಪನೆಯನಿಟ್ಟಿಕೊಂಡು

ಬೇಂದ್ರೆಯವರ ಮನೋಲೋಕದ ಕನಸಿನ ಪರಿಕಲ್ಪನೆ ಭಿನ್ನವಾದುದು. ಅದರ ಸುಳಿವನ್ನು ಸೂಚಿಸುವುದು ಹೆಚ್ಚು ಸಂದಿಗ್ಧವಾದುದು. ಅಲ್ಲದೇ ಈ ಮೇಲಿನ ಕವಿತೆಯಲ್ಲಿ ಕನಸಿನ ಹುಟ್ಟಿನ ಸ್ವರೂಪವನ್ನೇ ಹೇಳಿದ್ದಾರೆಂದೆನಿಸುತ್ತದೆ. "ಭ್ರಮೆ ಮತು ಕಲ್ಪನೆಯ ಕೂಡುವಿಕೆಯಿಂದ ಕನಸು ಹುಟ್ಟುತ್ತದೆ" ಎಂದು ವ್ಯಾಖ್ಯಾನಿಸಿದಂತೆ ಕಾಣುತ್ತದೆ. ಇಲ್ಲಿ ಕನಸುಗಳು ಸಂಭವಿಸುವುದು 'ಮನದಮೂಖವಾಡ'ಗಳನ್ನು ಧರಿಸಿಕೊಂಡು ಎಂದಿರುವುದು ವಿಶೇಷ. ಇದಕ್ಕೆ ಕಾರಣ ನಮ್ಮ ವಾಸ್ತವದ ಅನುಭವಗಳೇ ಕನಸಿನಲ್ಲಿ ಬೇರೊಂದು ರೂಪಧರಿಸಿ ಬರುವುದಾಗಿರಬಹುದು. ಅಥವಾ ಮೈಮರೆತ ಸ್ಥಿತಿಯಲ್ಲಿ ಅವು ಭ್ರಮಿಸುವ ವಾಸ್ತವಾನುಭವಕ್ಕೂ ಮೀರಿದ ಪ್ರಪಂಚ ಅಥವಾ ಅಸಂಗತ ಚಿತ್ರ ಪರಿವೇಶಗಳಾಗಿರಬಹುದು. ಇಲ್ಲವೆ ನಮ್ಮ ನೈಜ ಜೀವನದ ಘಟನಾವಳಿಗಳ ಮರುಸೃಷ್ಟಿ ಅಥವಾ ಪಡಿಯಚ್ಚಾಗಿಯೂ ಇರಬಹುದು.

ಬೇಂದ್ರೆಯವರ 'ಏಳು ಕನ್ನಿಕೆಯರು' ಎನ್ನುವ ಕವಿತೆ ಕನಸೆ ಕವಿತೆಯಾಗಿದ್ದು ಇಲ್ಲಿ ಕಾಮ ಉದ್ರೇಕದ ಅನುಭವವಾಗಿಸುವ ಒಂದು ವೈಶಿಷ್ಟಪೂರ್ಣ ಕವಿತೆ. ಕನಸಿನಲ್ಲಿ ಕನ್ನಿಕೆಯರು ಬಂದು ನಗ್ನ ದೇಹವನ್ನು ಸ್ಪರ್ಶಿಸುವುದು, ಸ್ಪರ್ಶ ಅನುಭವದ ಕ್ರಿಯೆ ನಡದುಹೋಗುವುದನ್ನು ಈ ಕವಿತೆಯಲ್ಲಿ ಕಾಣಬಹುದು.

(೧) ನಿದ್ದೆಗಡಲಿನಲ್ಲಿ ನಾನು
ಎದ್ದೇಳುತ್ತಿದ್ದೇನಾಗ
ಏಳು ಕನ್ನಿಕೆಯರು ಬಂದು
ಏಳು ಎಂದು ಎಂದರೋ, ಏಳು ಎಂದು ಎಂದರು
(೩)ಅಡಿಮುಡಿಗಳ ತುಟಿಕಟಗಳ
ಮಿಡಿದು ಹಿಡಿದು ನೋಡುತಿರಲು
ಮರ್ಮ ಕೆಣಕಿ ಮೋಡಿದಂತೆ
ಕರ್ಮ ಕುದಿಗೆ ಬಂದಿತೋ, ಕರ್ಮ ಕುದಿಗೆ ಬಂದಿತು
(೯)ಬೆಳಕಿನ ಕುಡಿ ಆರುವಂತೆ
ಚಳಕದ ಕನ್ಯೆಯರು ಹಾರೆ
ಹೇಡಿ ಮಣ್ಣ ಕಂಬದಂತೆ
ಗಾಡಿಯಳಿದು ಬಿದ್ದೆನೋ, ಗಾಡಿಯಳಿದು ಬಿದ್ದೇನು (ಪು-೭೫, ಸಂ-೨)

ಇದರಲ್ಲಿನ ಕೇಂದ್ರ ಕಾಮನೆಯಾದರೂ ಅದು ಕನಸಿನಲ್ಲಿ ಸಂಭವಿಸುತ್ತಿದ್ದರೂ ಅದರ ಅನುಭವದ ಪ್ರತಿಕ್ರಿಯೆಗೆ ದೇಹ ಸ್ಪಂದಿಸುವ ಮತ್ತು ಅದನ್ನು ಸಹಜವಾಗಿ ಎಂಬಂತೆ ಇಂದ್ರೀಯಾದಿಗಳನ್ನು ಚೇತನಗೊಳಿಸುವ ಕ್ರಿಯೆಯನ್ನು ಗಮನಿಸಬಹುದು. ಅಂದರೆ ಕಾಮನೆಯ ಅನುಭವಗಳನ್ನು ತುತ್ತ ತುದಿಯವರೆಗೂ ಅನುಭವಿಸುತ್ತಾ ನಿರಾಶಾದಾಯಕ ಸ್ಥತಿಯನ್ನು ತಲುಪುವಂತಹದ್ದೇ ಆಗಿದೆ. ಇನ್ನೂ ವಿಸ್ತರಿಸುವುದಾದರೆ ಕನಸಿನಲ್ಲಿ ಏಳು ಕನ್ನಿಕೆಯರು ಬಂದು ದೇಹದ ಅಂಗಾಂಗಗಳನ್ನೆಲ್ಲ ಮುಟ್ಟಿ ತಟ್ಟುವುದು, ಕಾಮ ಉದ್ರೇಕದ ಹಂತ ತಲುಪಿ ಇನ್ನೇನೂ ನನ್ನ ಕೈಗೆ ಸಿಕ್ಕಿಬಿಟ್ಟರು ಎನ್ನುವಷ್ಟರಲ್ಲಿ ತನಗಾದ ಕಾಮದ ಅನುಭವಗಳೆಲ್ಲ ವ್ಯರ್ಥವಾದವು. ಹಾರಿದವೂ ಎನ್ನುವಲ್ಲಿ ಫಲಿಸದ ಸಂಭೋಗದ ಕ್ರಿಯೆಯನ್ನು ಹೇಳುವಂತಿದೆ. ಬೇಂದ್ರೆಯವರ

ಕಾವ್ಯ ಚಿಂತನಾ ತಾತ್ವಿಕದೊಳಗೆ ಕನಸು ಕೇವಲ ಮನೋಲೋಕದ ಚಿತ್ರರೂಪವಷ್ಟೇ ಅಲ್ಲ, ಅದು ದರ್ಶನದ ದಾರ್ಶನಿಕತ್ವದ ಕಾಣ್ಕೆಯಾಗಿಯೂ ಸಂಭವಿಸುತ್ತದೆ. ಅವರು ಹೊಂದಿದ್ದ ಆಧ್ಯಾತ್ಮ ಸಾಕ್ಷಾತ್ಕಾರದ ರೂಪ ಅವರ ಆತ್ಮ ಪರಿಶೋಧನೆಗೆಂದೆ ಬಳಸಿಕೊಂಡಂತವರು. ಹಾಗೆಯೇ ಕನಸು ಕೂಡ ಅವರ ಮನೋ ಮಾನಸದ ಮನೋಭಿಲಾಷೆಯ ನಿಷ್ಕರ್ಷೆಗಾಗಿ ಅಥವಾ ನೈತಿಕಾಭಿಲಾಷೆಯ ಒಳಗೆ ದಾರಿ ತೋರುವ ಮಿಂಚುಗಳಾಗಿ ಕನಸುಗಳು ಕಂಡು ಬರುತ್ತವೆ. ಆದ್ದರಿಂದಲೇ ಕವಿ ಕನಸಿನ ಕಣಸು ಎಂದು ಅದಕ್ಕೆ ಕರದಿದ್ದಾನೆ. ಕಣಸು ಎನ್ನುವುದು ಕಾಣಿಕೆ ಅಥವಾ
ದರ್ಶನ ಎನ್ನುವ ಭಾವ ಇದರಲ್ಲಡಗಿದೆ.

"ಯಾರು ನಿಂದವರಿಲ್ಲಿ ತಾಯೆ" ಎಂದೆ
"ಯಾರು ಕೇಳುವರೆನಗೆ ಯಾಕೆ ತಂದೆ?"
.....
"ನಿನಾರ ಮನೆಯ ಮುತ್ತೈದೆ ಹೇಳು"
"ನಾನಾರ ಮನೆಯ ಮನೆಯವಳೋ ಬಯಲನ್ನೇ ಕೇಳು"
" ಆಪ್ತರಿಲ್ಲವೇ ನಿನಗೆ, ಇಷ್ಟರಿಲ್ಲೆ ? "
"ಗುಪ್ತರಾದರೋ ಏನೊ ಇಷ್ಟರಲ್ಲೇ" (ಪು-೭೨, ಅದೇ)

ಇಡೀ ಕವಿತೆ ಕನಸಿನಲ್ಲಿ ಸಂವಾದದ ರೂಪದಲ್ಲಿ ಅಭಿವ್ಯಕ್ತಗೊಂಡಂತಹದು. ಇಲ್ಲಿ ಬರುವ ತಾಯಿ ಮಗನ ಸಂವಾದ ಮೊದಲು ವ್ಯಷ್ಟಿಯಾಗಿದ್ದು, ಬೆಳೆಯುತ್ತಾ ಬೆಳೆಯುತ್ತಾ ಅರಿವಿನೊಳಗೆ ವಿಶಾಲವಾಗಿ ಸಮಷ್ಟಿಗೊಳ್ಳುತ್ತದೆ. ತಾಯಿ ಇಲ್ಲಿ ಬೆಳೆದು ಕನ್ನಡದೇವಿ, ಭಾರತಾಂಬೆಯಾಗಿ, ಮಗ ಇಡೀ ಕನ್ನಡಿಗರಾಗಿ ಬೆಳದುಬಿಡುತ್ತಾರೆ. ಇದು ಕವಿಯ ಮನಸಿನಲ್ಲಿ ದೇವಿ ಇರಬಹುದು ಎಂದು ಬೆಳೆದಬೆಳದ ಹಾಗೆ ಅವಳು ಬೆಳೆಯುತ್ತಾ ಹೋಗುತ್ತಾಳೆ. ಕೇಳುವವನ ಮನಸು ಬೆಳದ ಹಾಗೆ ಅವಳು ಬೆಳೆಯುವುದು. ಇದೊಂದು ಅದ್ಭುತವಾದ ಪದ್ಯ.ಅದು ಅರಿಯುವಿಕೆಯ ಬಗ್ಗೆನೇ ಇರುವ ಪದ್ಯ. ಅವಳ ಬೆಳವಣಿಗೆ ಮತ್ತು ಅವನ ಮನಸಿನ ಬೆಳವಣಿಗೆ– ಇದು ತಾತ್ವಿಕವಾಗಿ ಶುಂಬಾ ಆಸಕ್ತದಾಯಕವಾದುದು. ಹೀಗೆ ಇವರ ಕಾವ್ಯದ ತಾತ್ವಿಕ ಚರ್ಚೆ ಮತ್ತು ಕನಸುಗಾರಿಕಾ ಆಯಾಮ ಮುಂದುವರಿಯುತ್ತದೆ.....

ಇವರಿಬ್ಬರಿಗಿಂತ ಭಿನ್ನ ತಾತ್ವಿಕತೆಯಿಂದ ಕನಸುಗಳನ್ನು ನೋಡಿದ್ದು ಮಧುಚನ್ನರು. ಮಧುರಚನ್ನರ ಕಾವ್ಯದ ಮೂಲನೆಲೆ ಆಧ್ಯತ್ಮಾನುಭವ ಅಥವಾ ಅನುಭಾವಿಕ ಸ್ವರೂಪದ್ದು. ಅವರ ಕಾವ್ಯದಲ್ಲಿ ಹೆಚ್ಚಾಗಿ ಜೀವ, ಆತ್ಮ , ಭಾವ, ಬುದ್ಧಿ, ಚೇತನ, ಚಿತ್ತ, ಭಿತ್ತಿಯಂತಹ ಅಂಶಗಳೇ ಹೆಚ್ಚಾಗಿ ಬರುವಂತವುಗಳು. ಅವರ ಜೀವನಾನುಭವವೆಲ್ಲ ಅನುಭಾವದ ಒಳಗೆ ಹರಿಯುವಂತಹದ್ದು. ಅವರ ಕನಸಾದಾರಿತ ಕವಿತೆಗಳಲ್ಲಿ ಮನಸು ಆತ್ಮದ ಅಭೇದತೆಯೇ ಹೆಚ್ಚಾಗಿ ಕಂಡು ಬರುತ್ತದೆ. ಜೀವ, ಆತ್ಮವನ್ನು ಎರಡಾಗಿಸದ ಅವರ ಅನುಭಾವಿಕತೆಯು ಕನಸಿನ ಸಂದರ್ಭದಲ್ಲಿಯೂ ಅಭೇದತೆಯನ್ನೇ ಸಾಧಿಸುತ್ತಾರೆ. ಕನಸಿನ ಒಳಗೆ ಅವರ ಪ್ರತಿಮೆಗಳು ಹೆಚ್ಚಾಗಿ ದೈವತ್ವ ಸ್ವರೂಪದವುಗಳೆ ಆಗಿರುವುದನ್ನು ಗುರುತಿಸಬಹುದಾಗಿದೆ. ಧಾರ್ಮಿಕ ಚೌಕಟ್ಟಿ ಅಮೂರ್ತದಲ್ಲಿ ನಡೆಯುವುದರಿಂದ, ನಂಬಿಕೆಯ ತಹಬದಿಯಲ್ಲಿ ಒಳಗಾಗುವುದರಿಂದ ಅವರ ಕನಸು ಅಮೂರ್ತದ ಆಧ್ಯಾತ್ಮದ ತಹಬದಿಗೆ ಸೇರಿ ಒಂದಾಗುವಂತಹದ್ದು. ಅವರ "ಶ್ರುತಾಶ್ರುತ ವೀಣಾರವ" ಎನ್ನುವ ಕವಿತೆಯಲ್ಲಿ ಕಾಣುವುದರ ವಿವಿಧ ಸ್ಥರಗಳನ್ನು, ಆಯಾಮಗಳನ್ನು ಗುರುತಿಸುತ್ತಾರೆ. ಕಾಣುವ ಮತ್ತು ಕಾಣದುದರ ಸಂಬಂಧ-ವೈರುಧ್ಯಗಳ ಆತ್ಮೀಕರಿಸುವ ಚಹರೆ ಅಭೂತವಾದದುದು.

ಕಾಣುವುದೆಲ್ಲ ಸವಿಗನಸು
ಕಾಣದುದದು ಕನಸಿನ ಕನಸು
ಮೀನಿನ ಹೆಜ್ಜೆಯ ಗೆರೆಯಂತೆ
ಕಾಣುವ ಕನಸಿನ ಸವಿಯಂತೆ.

ಈ ಕವಿತೆ ಅವರ ಕನಸಿನ ಸ್ವರೂಪ ಅವರ ಅನುಭವದಲ್ಲಿ ಹೇಗೆ ಅರಗಿಸಿಕೊಂಡಿದ್ದಾರೆ ಎಂಬುದನ್ನು ಸೂಚಿಸುತ್ತದೆ. ವಾಸ್ತವ ಮತ್ತು ಕಲ್ಪನೆಗಳೆರಡರ ಐಕ್ಯ, ಕಾಣುವ-ಕಾಣದುದರ ಮಧ್ಯ ಇಲ್ಲಿ ಸಂಭವಿಸುತ್ತದೆ. ದೇವರ ನೆನೆಯುವ ಅವರ ದೈವಭಕ್ತಿಯ ಪ್ರೇಮ ಅದು ಕನಸಿಬಲ್ಲಿಯೂ ಸಂಭವಿಸುವಂತದ್ದು ಎಂದು ಅವರ "ಪಾತ್ರತೆ" ಎನ್ನುವ ಕವಿತೆ ಸ್ಫುರಿಸುತ್ತದೆ.

ತನುಮನವೆಲ್ಲ ನಿನ್ನದೇ ಎಲ್ಲ
ಕನಸೂ ಮನಸೂ ನಿನ್ನಯ ನೆನಸು
ಎಲ್ಲಿದ್ದಲ್ಲಿ ನಿನ್ನದೆ ನೆನವು
ಎಲ್ಲಿದ್ದಲ್ಲಿ ನಿನ್ನದೇ ಒಲವು.

ಮಧುರಚನ್ನರ ಸ್ವಪ್ನಗಾರಿಕೆಯನ್ನು ಅವರು ಮನಸು ಗೃಹಿಸಿದ್ದು "ಶಬ್ಧದ ನಿಶ್ಶಬ್ಧ, ನಿಶ್ಶಬ್ಧದ ಶಬ್ಧದಂತೆ" ಸ್ವಪ್ನವನ್ನು ಅವರು ಮಧುರತಮ ಅನುಭವವೆಂದೇ ಹೇಳುತ್ತಾರೆ. ಅವರ ಯಾಮಿನಿ ಕವಿತೆಯಲ್ಲಿ "ಸ್ವಪ್ನಂ ದಿವ್ಯಂ ಮಧುರಂ" ಎಂದು ವ್ಯಾಖ್ಯಾನಿಸುತ್ತಾರೆ. ಅವರ ಹೆಚ್ಚು ಕನಸಿನ ಕವಿತೆಗಳಲ್ಲಿ ಕನಸಿನ ಕನಸು-ನನಸುಗಳ ವಸೌನಸಂವಾದ ನಡೆಯುತ್ತದೆ.ಕೊನೆಯಲ್ಲಿ ಅದು ಆತ್ಮದ ಆಂತರ್ಯಕ್ಕೆ ನುಗ್ಗಿ ಮಾಯವಾಗಿ ಬಿಡುತ್ತದೆ. ಮಧುರಚನ್ನರ ಕಾವ್ಯದ ಕೇಂದ್ರ ಕನಸಿನ ಸ್ಥಿತಿಯೇ ಆಗಿದೆ.ಅವರ ಕಾವ್ಯದ ಪರಿಪೂರ್ಣ ಗುರುತ್ವ ಆತ್ಮದ ಪರಿಶೋಧನೆಯಲ್ಲಿ ನಡೆಯುವಂತಹದು.ಅದಕ್ಕೆ ಕಾರಣ ಅವರ ಆಧ್ಯಾತ್ಮಿಕ ಚಿಂತನಾ ಸ್ವರೂಪ. ಅವರು ಮೊದಲಿನಿಂದಲೂ ಜೀವನವನ್ನು ನೋಡುವ ದೃಷ್ಟಿ, ಅದರ ಬಗೆಗೆ ಇರಿಸಿಕೊಂಡ ಶ್ರದ್ಧೆ ಒಂದೇ ಬಗೆಯದಾಗಿದೆ.ಆದ್ದರಿಂದ ಅವರ ಇಡೀ ಕಾವ್ಯ ಸೃಷ್ಟಿಯೇ ಆಧ್ಯಾತ್ಮಿಕ ಪ್ರಪಂಚಕ್ಕೆ ಸೇರಿದ್ದೆಂದು ಹೇಳಬಹುದು.ವಸ್ತುಸ್ಥಿತಿ ಹೇಗಿದ್ದರೂ ಆಧ್ಯಾತ್ಮಿಕ ಕೇಂದ್ರ ಭಾವವುಳ್ಳ ಪ್ರಕೃತಿ ಚಿತ್ತರಣಗಳು, ಲೌಕಿಕ ಜೀವನ ಚಿತ್ರಣಗಳು ಅವರ ಕವಿತೆಗಳಲ್ಲಿ ತಕ್ಕ ಮಟ್ಟಿಗೆ ಅರ್ಥಪೂರ್ಣವಾಗಿಯೇ ದೊರೆಯುತ್ತವೆ. ಹೀಗೆಂದೂ ಹೇಳುವಲ್ಲಿ ಜೀವ, ಆತ್ಮ, ರಸ, ಜಡದ ಚಿತ್ತ, ಸದ್ಧರ್ಮೊಲುಮೆ ಮುಂತಾದುವೆಲ್ಲ ಕಾವ್ಯಗುಣವನ್ನು ಉಳಿಸಿಕೊಂಡು ಆಧ್ಯಾತ್ಮಿಕಕತೆಯನ್ನು ಪ್ರತಿಬಿಂಬಿಸುತ್ತವೆ. ಅಂದರೆ ಆಧ್ಯಾತ್ಮ ಎಂಬುವ ಪರಿಕಲ್ಪನೆಯು ಅಮೂರ್ತದ ನೆರಳಿಲ್ಲಿ ಸಾಗುವಂತಹದು. ಅದೇ ರೀತಿ ಕನಸು ಕೂಡ ಅವಾಸ್ತವ , ಅಜಾಗೃತ ಅವಸ್ಥೆಯಲ್ಲಿ, ಅಮೂರ್ತದಲ್ಲಿ ಸಂಭವಿಸುವಂತಹದು. ಈ ಎರಡಕ್ಕೂ ಮೂಲನೆಲೆ ಮನಸ್ಸು. ನಿದ್ರಾವಸ್ಥೆಯಲ್ಲಿಯೂ ಆಧ್ಯಾತ್ಮ ನೆರಳ ಪ್ರತೀಕಗಳು ಕಂಡದ್ದು ಮಧುರಚನ್ನರಲ್ಲಿಯೇ ಎಂದು ನಿರ್ಧರಿಸಬಹುದು.
ನಿದ್ರಿಸುವ ಕತ್ತಲೆಯ ಕನಸಿಡುವ ತಿಳಿಬೆಳಕೆ
ಜಾಗೃತದ ಕಿಚ್ಚೆ ನೀನಾರೆ ಹೇಳು
ನಿದ್ರೆಬಾರದೇ ನಿಂತು ಸೋತು ಸಣ್ಣಾಗಿಹೆನೂ
ರಾಜರಾಜನ ಠಾವ ತೋರಿಸೇಳು

ಎಂಬುದೊಂದು ಸುಷುಪ್ತಿ. ಸ್ವಪ್ನ ಜಾಗೃತಾವಸ್ಥೆಗಳಿಗೆ ಕಾವ್ಯತ್ವವನ್ನು ತಂದುಕೊಟ್ಟು ಕವಿಯ ಯೋಗಿಕ ಅನುಭವವನ್ನು ಸಾಕಾರಗೊಳಿಸಿ

ತೋರಿಸುತ್ತದೆ.ಇಂತಹ ಕಾವ್ಯ ಸಿದ್ಧಿ ಬರೀ ಓದಿನಿಂದ ಬರುವಂತಹದ್ದಲ್ಲ. ಸಾಧನೆಯಿಂದ ಮಾತ್ರ ದೊರೆಯುವಂತಹದು. ಸುಗುಣೋಪಾಸನೆಯಿಂದ ನಿರ್ಗುಣೋಪಾಸನೆಯ ಕಡೆಗೆ ಸಾಗುವ ಯೋಗಿಯ ತುರ್ಯಾನುಭವ ಇಲ್ಲಿದ್ದು, ಕವಿತೆ ಮೂರ್ತದಿಂದ ಅಮೂರ್ತದ ಕಡೆಗೆ ಸಾಗುತ್ತದೆ.ಬಾಹ್ಯದ ಮೂರ್ತ, ಅಮೂರ್ತ ವಸ್ತುಗಳನ್ನು ಕುರಿತು ಮಾತನಾಡಿಸುವ ಕವಿ ಈಗ ಅಂತರಂಗದ ಅತ್ಯಮೂರ್ತದ ಕಡೆಗೆ ಹೊರಳಿದ್ದುದು ಇಲ್ಲಿಯೇ ಕಂಡು ಬರುತ್ತದೆ.

"ಕಣ್ಣು ಮುಚ್ಚಲು ಮಣ್ಣು ಕಣ್ಣು ಬಿಚ್ಚಲು ಬಣ್ಣ
ಕಣ್ಣಿನಾಚೆಯ ನಿನ್ನ ರೂಪವರಿಯೆ
.....
ಕಣ್ಣು ಕಿಂಡಿಯ ಒಳಗೆ ಹಿಣಿಕಿ ಹಾಕುವ ಜಾಣೆ
ಒಳಗೆ ಜೀವದ ಬೆನ್ನು ಬಡಿವ ಜಾಣೆ
.....

ಎನ್ನುವ ಸಾಲುಗಳು ಕನಸನ್ನೇ ಕುರಿತೇ ಹೇಳಿದಂತವುಗಳು ಎಂತನಿಸುತ್ತದೆ. ಆಧ್ಯಾತ್ಮದ ಪ್ರಖರ ಪ್ರಭೆಯಿದ್ದರು ಇದು ಸಂಭವಿಸಿರುವುದು ಅಜಾಗೃತ ಮನಸಿನ ಅಂತ್ಯದಲ್ಲಿಯೇ. ಕನಸೆಂಬುದು ಆಧ್ಯಾತ್ಮದಂತೆಯೇ ಕಣ್ಣಿನಾಚೆಯ ರೂಪವೇ ಸರಿ. ಅದು ನಮ್ಮ ಪ್ರಜ್ಞೆಯಲ್ಲಿ ನಾವು ನೋಡುತ್ತಿದ್ದೇವೆ ಎಂದೆನಿಸಿದರೂ ಅದು ಒಳಗಿನ ದರ್ಶನವಾಗಿ , ಕಾಣ್ಕೆಯಾಗಿಯೇ ಕಂಡಿರುತ್ತದೆ. ವಾಸ್ತವದಲ್ಲಿ ಅದರ ರೂಪಚಿತ್ರ ನೋಡಿದ್ದರ ಸುಳ್ಳು ರೂಪವಷ್ಟೇ. ಕನಸು ಒಳಗೆ ಜೀವದ ಬೆನ್ನು ಬಡೆಯುವ ಜಾಣೆಯಾಗಿದೆ. ಅಂದರೆ ನಮ್ಮೊಳಗೆ ಸೃಷ್ಟಿಯಾಗುವ, ಕಣ್ಣ ಒಳಗಿಂಡಿಯೊಳಗೆ ಘಟಿಸುವ, ಘಟನೆ, ಸಂದರ್ಭ, ಸನ್ನಿವೇಶ, ಕ್ಷಣಗಳು ಅಥವಾ ವಿದ್ಯಮಾನಗಳು ಒಳಗಿನ ಜೀವದ ಬೆನ್ನಲ್ಲೇ ಹತ್ತು ಕುಳಿತು ವಿಹರಿಸಲು ಪ್ರಾರಂಭಿಸುತ್ತವೆ.

ಮಧುರಚನ್ನರ ಕಾವ್ಯದ ಸತ್ವವಿರುವುದು ಅವರ ಆಧ್ಯಾತ್ಮಿಕ ಭಾವದಲ್ಲಿ ಹಾಗೂ ಅದನ್ನು ಅಭಿವ್ಯಕ್ತಗೊಳಿಸುವ ರೀತಿಯಲ್ಲಿ. ಅವರ ಏಕಮೇವ ಕವನ ಸಂಗ್ರಹ ನನ್ನ ನಲ್ಲವನ್ನು ನೋಡಿದರೆ ಅವರ ಕಾವ್ಯ ಸಾಮರ್ಥ್ಯ ಎಂತಹುದೆಂದು ತಿಳಿದು ಬರುತ್ತದೆ. ಇದರಲ್ಲಿನ ದೇವತಾ ಪೃಥವಿ ಕವಿತೆಯ ವರ್ಣನೆಯ ಉದ್ದಕ್ಕೂ ನಿದ್ದೆ, ಎಚ್ಚರ, ಜಢ-ಚೇತನ, ಕತ್ತಲೆ-ಬೆಳಕು, ಮೂರ್ತ ಆತ್ಮ ಇವುಗಳ ದ್ವಂದ್ವ ತಾತ್ವಿಕ ಚಿಂತನೆಯ ಫಲವಾಗಿ, ಆಧ್ಯಾತ್ಮಿಕ ಅನುಭವವಾಗಿ ವಿಶಿಷ್ಟ ರೀತಿಯಲ್ಲಿ ಇಲ್ಲಿ ಅಭಿವ್ಯಕ್ತಿ ಪಡೆಯುತ್ತದೆ. ಅಲ್ಲದೇ ಇಲ್ಲಿಯ ಹೆಚ್ಚು ವರ್ಣನೆಗಳು ಬುದ್ದಿಗ್ರಾಹ್ಯವೆನ್ನಿಸುವುದಿಲ್ಲ. ಕಾರಣ ಅವು ಮನೋಲೋಕದ ಒಳಗೆ ರೂಪಿತಗೊಳ್ಳುವ ಭಾವಲಹರಿಗಳು. ಹಾಗೆಂದ ಮಾತ್ರಕ್ಕೆ ಬುದ್ದಿಗ್ರಾಹ್ಯವೆನಿಸದಿದ್ದರೂ ಭಾವಕ್ಕೆ ತಟ್ಟುವಂತಿವೆ ಎಂದು ಹೇಳುವುದನ್ನು ಮರೆಯುವಂತಲ್ಲ. ಹೀಗೆ ಇವರ ಕನಸಿನ ಕಾವ್ಯಸ್ಥಿತಿ ಮುಂದುವರಿಯುತ್ತದೆ... ಇಲ್ಲಿ ಮೂರು ಕವಿಗಳ ಕಾವ್ಯಗಳನ್ನು ಪ್ರತ್ಯೇಕವಾಗಿ ನೋಡಿರಿವ ಕಾರಣ ಕನಸು ಪ್ರತಯೊಬ್ಬ ವ್ಯಕ್ತಿಯಲ್ಲೂ ಭಿನ್ನ, ಅಲ್ಲದೇ ಇವರ ತೌಲನಿಕ ಅಧ್ಯಯನ ಮಾಡುವುದೂ ಈ ಪ್ರಬಂಧದ ಉದ್ದೇಶವಲ್ಲ. ಈ ಕವಿಗಳ ಕಾವ್ಯಗಳಲ್ಲಿ ಕನಸು ಹೇಗೆ ಪ್ರತಿನಿಧಿತ್ವವನ್ನು ಪಡೆದುಕೊಂಡಿದೆ?, ಅದರ ಅರ್ಥಸಾಧ್ಯತೆಗಳೇನು?, ಅಭಿವ್ಯಕ್ತಿಯ ಕ್ರಮಗಳು ಹೇಗೆ ನಿರೂಪಿತವಾಗಿವೆ?, ಎಂಬ ಕೆಲವೇ ಅಂಶಗಳನ್ನು ಮಾತ್ರ ಅವಗಾಹನೆಗೆ ತಗೆದುಕೊಂಡು ಇಲ್ಲಿ ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ. ಇದು ಕೇವಲ ನನ್ನ ಅಧ್ಯಯನದ ಒಂದು ಸೆಳವು ಮಾತ್ರ ಸಾಗರವಲ್ಲ.

ಅ. ಆಕರ ಗ್ರಂಥಗಳು

೧. ಕುವೆಂಪುರವರ ಸಮಗ್ರ ಕಾವ್ಯ. – ರಾಷ್ಟ್ರಕವಿ ಕುವಂಪು ಪ್ರತಿಷ್ಠಾನ(ರಿ) ಕುಪ್ಪಳ್ಳಿ

೨. ಔದುಂಬರಗಾಥೆ ಅಂಬಿಕಾತನೆಯದತ್ತರ ಸಮಗ್ರ ಕಾವ್ಯ ವಿಕಾಸ. – ಸಂಪಾದಕರು ವಾಮನ ಬೇಂದ್ರೆ

೩. ಮಧುರಚನ್ನರ ಸಮಗ್ರ ಕಾವ್ಯ. – ವಿಶ್ವಕನ್ನಡ ಸಾಹಿತ್ಯಮಾಲೆ

ಆ. ಪರಾಮರ್ಶನ ಗ್ರಂಥಗಳು

೧. ಕನಸಿನ ಕಥೆ (ಒಂದು ಮನೋವೈಜ್ಞಾನಿಕ ವಿವರಣೆ) – ಎಂ ಬಸವಣ್ಣ

೨. ಕಾರ್ಲ್ ಯೂಂಗ್ – ಎಂ ಬಸವಣ್ಣ

೩. ಸಿಗ್ಮಂಡ್ ಫ್ರಾಯ್ಡ್ – ಡಾ. ಕೆ. ಆರ್ ಶ್ರೀಧರ್

೪. ಚಿತ್ತ ಚೇತನ – ಡಾ. ಕೆ. ಎ. ಅಶೋಕ್ ಪೈ

೫. ಮನೋವೈಜ್ಞಾನಿಕ ಸಿದ್ಧಾಂತಗಳ ಕೈಪಿಡಿ – ಡಾ. ಅ. ಶ್ರೀಧರ್

೬. ಈ ವರ್ತನೆಗಳು ನಿಮ್ಮಲ್ಲಿ ಎಷ್ಟಿವೆ – ಡಾ. ಮೀನಗುಂಡಿ ಸುಬ್ರಮಣ್ಯ

೮. ತಂತ್ರ (ಮನೋವೈಜ್ಞಾನಿಕ ಪರಿಕಲ್ಪನೆ) – ಮೀರಾಚಕ್ರವರ್ತಿ

೯. ಈಡಿಪಸ್ ಕಾಂಪ್ಲೆಕ್ಸ್ (ಮನೋವೈಜ್ಞಾನಿಕ ಲೇಖನಗಳು) – ಎಂ ಬಸವಣ್ಣ

English source

1. Interpretation of Dreams - Sigmund freud
2. Fascinating world of Dreams – Vinay Mohan Sharma
3. Creative writers and day-dreaming - Sigmund freud
4. Psychology and literature - C. G. Jung

ಪಾಣಿನೀಯಂ ಹಾಗೂ ಭಾಷಾವಿಜ್ಞಾನ

ಡಾ|| ಕೆ. ನಾರಾಯಣ ಭಟ್

ಸಹ-ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦ ೦೦೬

ಸಮಾಜವು ನಾನಾಜೀವಪ್ರಭೇದಗಳಿಂದ ಕೂಡಿದೆ. ಸಾಮಾಜಿಕರಾದ ಆಬಾಲವೃದ್ಧಪರ್ಯಂತವಾದ ಮನುಷ್ಯರು ಪರಸ್ಪರ ವ್ಯವಪರಿಸಲು ಭಾಷೆಯೇ ಸಂವಹನಮಾಧ್ಯಮವಾಗಿದೆ. ಭಾಷೆಯ ಮಹತ್ವವನ್ನು ಕುರಿತು ದಂಡಿಯು "ಇದಮಂಧತಮಃ ಕೃತ್ಸ್ನಂ ಜಾಯೇತ ಭುವನತ್ರಯಮ್ । ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಂ ನ ದೀಪ್ಯತೇ" ಎಂಬ ಶ್ಲೋಕದಿಂದ ಭಾಷೆಯು ಸಂಸಾರ ಬೆಳಗುವ ಜ್ಯೋತಿ ಎಂದಿದ್ದಾನೆ. ಪ್ರಬಂಧದಲ್ಲಿ ಇದು ಉಪಕ್ರಮವಾದ್ದರಿಂದ ಭಾಷೆ, ಭಾಷೆಗಳ ಮಹತ್ವ ಹಾಗೂ ಶಬ್ದ ಮತ್ತು ವಾಙ್ಮಯಗಳ ವಿಶ್ಲೇಷಣೆಗಳನ್ನಿಲ್ಲಿ ನಡೆಸಲಾಗಿದೆ. ಭಾಷೆಗಳನ್ನು ಲಿಪಿಯುಕ್ತ ಮತ್ತು ಲಿಪಿರಹಿತ ಹಾಗೂ ಗ್ರಾಂಥಿಕವೆಂದು ಪ್ರತ್ಯೇಕಿಸಿ ದೃಷ್ಟಾಂತಗಳೊಂದಿಗೆ ವಿವರಿಸಲಾಗಿದೆ. ಭಾಷಾವಿಜ್ಞಾನದ ಕುರಿತು ವ್ಯಾಖ್ಯಿನಿಸಬೇಕಾದ್ದರಿಂದ ಭಾಷೆಯ ಪ್ರಾಚೀನತೆಯನ್ನು ಅನ್ವೇಷಿಸಿ ವೈದಿಕ ಭಾಷೆಯೇ ಅವುಗಳಿಗೆಲ್ಲ ಆಕರವೆಂಬುದನ್ನು ಪ್ರಮಾಣಸಹಿತ ಸಂಗ್ರಹಿಸಲಾಗಿದೆ.

ಸಂಸ್ಕೃತಭಾಷೆಯನ್ನು ಪಾಣಿನೀಯದಿಂದ ಪ್ರತ್ಯೇಕಿಸಲಾಗದಕಾರಣ ಸಂಸ್ಕೃತಕ್ಕೆ ಶಾಸ್ತ್ರೀಯತೆಯನ್ನು ನೀಡುವಲ್ಲಿ ಸೂತ್ರಕಾರನೆಂದು ವಿಖ್ಯಾತಗೊಡ ಪಾಣಿನಿಯನ್ನು ಪರಿಚಯಿಸಲಾಗಿದೆ.

ಸೂತ್ರಕಾರನಾದರೂ ಪಾಣಿನಿಗೆ ೧೪ ಸೂತ್ರಗಳು ಪರಮೇಶ್ವರನಿಂದ ಉಪದಿಷ್ಟವಾದಕಾರಣ ಅಕ್ಷರಸಮಾಮ್ನಾಯರೂಪವಾದ ಅವುಗಳನ್ನಿಲ್ಲಿ ಪ್ರಸ್ತುತಪಡಿಸಿ ಪ್ರತ್ಯಾಹಾರ ವಿಧಾನವನ್ನು ಮತ್ತು ವ್ಯಾಕರಣಕ್ಕೆ ಅವುಗಳ ಅನಿವಾರ್ಯತೆ ಹಾಗೂ ಭಾಷೆಗಳಿಗೆ ಅವುಗಳಿಂದಾಗುವ ಪ್ರಯೋಜನವನ್ನು ವಿಶದಪಡಿಸಲಾಗಿದೆ. ಶಬ್ದ ಮತ್ತು ವಾಕ್ಯಗಳ ಪ್ರಯೋಗದಲ್ಲಿ ಸ್ವರವು ಅತ್ಯಂತಮಹತ್ವದ್ದಾದ್ದರಿಂದ ಪಾಣಿನಿಯು ಪ್ರತಿಪಾದಿಸಿದ ಉದಾತ್ತಾದಿಸ್ವರಗಳ ಮಹತ್ವವನ್ನು ಸಂಬಧಿತ ಕಥಾನಕದೊಂದಿಗೆ ವಿವರಿಸಿದೆ. ಸಾಮಾಜಿಕರಲ್ಲಿಯೂ ಶಬ್ದಪ್ರಯೋಗಿಸುವಾಗ ಸ್ವರಗಳು ಹೇಗೆ ಮಹತ್ವವನ್ನು ಹೊಂದುತ್ತವೆಂದು ಉದಹರಣೆಯೊಂದಿಗೆ ಸಂಗ್ರಹಿಸಿದೆ.

ಪಾಣಿನೀಯರು ತಿಳಿಸಿದಂತೆ ಪುಲ್ಲಿಂಗ ಶಬ್ದವನ್ನು ಸ್ತ್ರೀಲಿಂಗವಾಗಿ ಪರಿವರ್ತಿಸುವುದನ್ನು ಮತ್ತು ಧಾತುಗಳಿಂದ ಶಬ್ದವನ್ನು ಸಿದ್ಧಪಡಿಸುವಿಕೆ ಹಾಗೂ ಒಂದುಶಬ್ದಕ್ಕೆ ವಿಶೇಷವಾದ ಅರ್ಥವನ್ನು ಕೊಡುವ ಇನ್ನೊಂದು ಪ್ರತ್ಯಯವನ್ನು ಸೇರಿಸಿ ವಿಶೇಷವಾದ ಅರ್ಥದಲ್ಲಿ ಇನ್ನೊಂದು ಶಬ್ದವಾಗಿಸುವ ವಿಧಾನವನೂಸಹ ಉದಾಹರಣಪೂರ್ವಕ ವ್ಯಾಖ್ಯಾನಿಸಲಾಗಿದೆ.

ಭಾಷೆಯ ಅಭಿವೃದ್ಧಿ ಮತ್ತು ಭಾಷಾಮಹತ್ವಕ್ಕೆ ಆಧಾರವಾದ ಈ ಚಿಂತನದ ಕೊನೆಯಲ್ಲಿ ಉಪಸಂಹಾರವನ್ನು ರಚಿಸಲಾಗಿದೆ.

ವಾಕ್ಯಪ್ರಯೋಗವಿಧಾನಗಳಾದ ಕರ್ತರಿಪ್ರಯೋಗ ಮತ್ತು ಕರ್ಮಣಿಪ್ರಯೋಗ ಹಾಗೂ ಭಾವೇಪ್ರಯೋಗಗಳನ್ನು ಪ್ರಸ್ತುತಪಡಿಸಿ ಪಾಣಿನೀಯ ಶಾಸ್ತ್ರದಿಂದ ಭಾಷಾಭಿವೃದ್ಧಿಗೆ ಉಂಟಾಗುವ ಪ್ರಯೋಜನ ಮತ್ತು ಭಾಷೆಯಿಂದಾಗುವ ಸಮಾಜಿಕ ಲಾಭಾಂಶವನ್ನೂಸಹ ಪ್ರಸ್ತುತಪಡಿಸಲಾಗಿದೆ.

ಮಾನವನ ಪರಸ್ಪರ ವ್ಯವಹಾರಸಾಧನವಾದ ನುಡಿಗಳು ಭಾಷಾವಿಜ್ಞಾನ ವೆಂಬ ಹೆಸರಿನ ಸ್ವತಂತ್ರವಾದ ಶಾಸ್ತ್ರೀಯವಿಷಯವಾಗಿ ಬೆಳೆದು ನಿಂತಿದೆ. ಭಾಷೆಪಾಜ್ಮಯ.ಇದು ಮನುಷ್ಯನಿಗೆ ಅನಿವಾರ್ಯವೂ ಹೌದು. ಈ ಕುರಿತಾಗಿ ಪ್ರಾಚೀನ ಕವಿಗಳಲ್ಲೊಬ್ಬನಾದ ದಂಡಿಯು " ಈ ಸಂಸಾರವನ್ನು ಬೆಳಗುವ ಶಬ್ದವೆಂಬ ಜ್ಯೋತಿ ಇಲ್ಲದಿದ್ದರೆ ಲೋಕವೆಲ್ಲಾ ಅಂಧಕಾರದಲ್ಲಿ ಮುಳುಗಿರಬೇಕಾಗಿತ್ತು" ಎಂದಿದ್ದಾನೆ. ಆದ್ದರಿಂದ ಮನುಷ್ಯನ ಜೀವನದೊಂದಿಗೆ ಭಾಷೆಯು ಅವಿನಾಭಾವ ಸಂಬಧವನ್ನು ಹೊಂದಿದೆ ಎಂಬುದು ಸ್ಪಷ್ಟ.

ಶಬ್ದಗಳೆಲ್ಲವೂ ಭಾಷೆ ಎನಿಸಲಾರವು.ಇವುಗಳ ಮೂಲಧಾತುಗಳು ಭಿನ್ನವಾಗಿವೆ. ಒಂದು ಆವಿಷ್ಕಾರಾರ್ಥಕವಾದ 'ಶಬ್ದ' ಧಾತುವಾದರೆ ಇನ್ನೊಂದು 'ಅಭಿವ್ಯಕ್ತವಾಕ್' ಎಂಬರ್ಥವುಳ್ಳ'ಭಾಷೃ' ಧಾತುವಾಗಿದೆ. ಆದ್ದರಿಂದ ಮೃದಂಗ ಭೇರ್ಯಾದಿಧ್ವನಿಗಳು ಶಬ್ದವೆಂದಾದರೂ ಸ್ಫುಟವಾದ ವಾಕ್ ಅಲ್ಲವಾದ್ದರಿಂದ ಭಾಷೆ ಎನ್ನುವಂತಿಲ್ಲ. ಆದರೆ 'ವಾಜ್ಮಯ'ಎಂಬರ್ಥದಲ್ಲಿ ಈ ಎರಡೂ ಧಾತುಜನ್ಯಶಬ್ದವ್ಯವಹಾರವು ಸಮಾನವಾಗಿದೆ.ಆದ್ದರಿಂದಲೇ ದಂಡಿಯು'ಶಬ್ದಾಹ್ವಯಂ ಜ್ಯೋತಿಃ' ಎಂದು ಪ್ರಯೋಗಿಸಿರುವುದು ವಾಜ್ಮಯಾರ್ಥಪರಕವಾದ್ದರಿಂದ ಪ್ರಸ್ತುತ ಸಂದರ್ಭಕ್ಕೆ ವಿರೋಧವಾಗಲಾರದು.

ಮನುಷ್ಯನ ಇಂಗಿತವನ್ನು ಪ್ರಕಟಗೊಳಿಸಲು ಚೇಷ್ಟಾದಿಗಳನ್ನು ಹೊರತುಪಡಿಸಿ ಸ್ಫುಟವಾಗಿ ಪ್ರಯೋಗಿಸುವ ವಾಕ್ಯಿನ ಉಚ್ಚಾರಣೆಯೇ ಭಾಷೆ. ಇದು ಭಾರತೀಯ ಮತ್ತು ಪಾಶ್ಚಾತ್ಯ ಭಾಷಾವಿಜ್ಞಾನಿಗಳಿಗೆ ಸಮ್ಮತವೆಂದು ಆಯಾ ಗ್ರಂಥಾಧ್ಯಯನದಿಂದ ತಿಳಿದುಬರುತ್ತದೆ. 'ವಿಜ್ಞಾನ' ಪದಕ್ಕೆ ಅನೇಕಾರ್ಥಗಳಿದ್ದರೂ "ವಿಜ್ಞಾನಂ ಶಿಲ್ಪಶಾಸ್ತ್ರಯೋಃ" ಎಂಬ ಕೋಶವಾಕ್ಯವು ತಿಳಿಸುವಂತೆ "ಶಾಸ್ತ್ರಜ್ಞಾನ" ಎಂಬುದೂ ಅವುಗಳಲ್ಲೊಂದರ್ಥವಾದ್ದರಿಂದ ಭಾಷೆಯ ವಿಶ್ಲೇಷಣೆ, ಆದರ ಲಕ್ಷಣ, ಭಾಷಾಪ್ರಭೇದ, ಭಾಷೆಯ ವಿಕೃತಿ ಮತ್ತು ಭಾಷಾ ಉತ್ಪತ್ತಿ ಹಾಗೂ ವಿಕಾಸಾದಿಗಳ ವ್ಯಾಖ್ಯಾನಾತ್ಮಕ ಅಧ್ಯಯನವನ್ನು 'ಭಾಷಾವಿಜ್ಞಾನ'ವೆಂದು ತಿಳಿಯಬಹುದು.

ಭಾಷೆಯು ಲಿಪಿಯುಕ್ತ ಮತ್ತು ಲಿಪಿರಹಿತ ಹಾಗೂ ಗ್ರಂಥಸ್ಥವೆಂಬ ಭೇದಗಳನ್ನು ಹೊಂದಿದೆ.ಕನ್ನಡ, ತಮಿಳು, ತೆಲಗು, ಮುಂತಾದ ಆಯಾ ರಾಜ್ಯ ಮತ್ತು ರಾಷ್ಟ್ರಭಾಷೆಗಳು ಲಿಪಿಯುಕ್ತವಾದರೆ ತುಳು, ಲಂಬಾಣಿ ಮುಂತಾದವು ಲಿಪಿರಹಿತಭಾಷೆಗಳಾಗಿವೆ. ಕಾಲಕಾಲಕ್ಕೆ ವಿಕಸಿತಗೊಳ್ಳದಿರುವ ಲ್ಯಾಟಿನ್ ಮುಂತಾದವುಗಳೇ ಗ್ರಂಥಸ್ಥಭಾಷೆಗಳು. ಅನ್ವೇಷಣೆಯಿಂದ ಇವು ಪ್ರತಿಯೊಂದು ರಾಜ್ಯದಲ್ಲಿಯೂ ಲಭ್ಯವಾಗ ಬಹುದು .ಲಿಪಿಯುಕ್ತವಾದವುಗಳು ನುಡಿ ಮತ್ತು ಲೇಖನ ವೆಂಬೆರಡುವಿಧವಾದ ವ್ಯವಹಾರಮಾಧ್ಯಮವಾದರೆಲಿಪಿರಹಿತವಾದವು ಕೇವಲ ನುಡಿರೂಪವಾದ ವ್ಯಪಹಾರಮಾಧ್ಯಮವಾಗಿದೆ. ಗ್ರಂಥಸ್ಥವು ಸಮಾಜಿಕ ವ್ಯವಹಾರದಿಂದ ಬಹುದೂರವಾದವುಗಳಾಗಿವೆ.

ಭಾಷೆಯು ಸಾರ್ವಕಾಲಿಕವಾಗಿ ಒಂದೇರೂಪವಾಗಿಲ್ಲ. ಆದರೆ ಆಯದೇಶಕಾಲವನ್ನಾಧರಿಸಿ ಆಂಶಿಕವಾದ ಪರಿವರ್ತನೆಹೊಂದುತ್ತಿರುವುದನ್ನು ನಾವು ಕಾಣುತ್ತೇವೆ. ಪರಿವರ್ತನಾತ್ಮಕವಾದ ವಸ್ತುವನ್ನು ನೋಡಿದಾಗ ಅದರ ಮೂಲಸ್ವರೂಪ ಮತ್ತು ಪರಿವರ್ತನಾಪ್ರಕಾರಗಳನ್ನು ತಿಳಿಯುವ ಕುತೂಹಲವುಂಟಾಗುವುದು ವಿದ್ವಜ್ಜನಮಾನಸದ ಸಹಜಸ್ವಭಾವ. ಈ ನಿಟ್ಟಿನಲ್ಲಿ ಭಾಷೆಯು ಪ್ರಾಚೀನತೆಯನ್ನು ಅನ್ವೇಷಣೆಗಯ್ಯುತ್ತಾ ಮುಂದಕ್ಕೆ ಸರಿದಾಗ ವೇದವಾಜ್ಮಯವು ಅದಕ್ಕೆ ವಿರಾಮಸ್ಥಾನವಾಗಿದೆ. "ತೇ ದೇವಾ ಇಂದ್ರಮಬ್ರುವನ್, ಇಮಾಂ ನೋ ವಾಚಂ ವ್ಯಾಕುರ್ವಿತಿ" ಎಂಬೀ ಮಂತ್ರವು ದೇವತೆಗಳ ಪ್ರಾರ್ಥನೆಯ ಮೇರೆಗೆ ಇಂದ್ರನಿಂದ ದೇವವಾಣಿಯು ಅಭಿವ್ಯಕ್ತವಾಯಿತೆಂಬುದನ್ನು ಬೋಧಿಸುತ್ತದೆ. ಅದು ಭಾಷೆಯಾದರೂ ನಿರ್ಮಿತವಲ್ಲ ಎಂದರ್ಥ.ಇದು ಭಾರತೀಯ ಶಾಸ್ತ್ರಪರಂಪರಾಪ್ರಸಿದ್ಧವೂ ಹೌದು.ಅದಕ್ಕೂ ಪ್ರಾಚೀನವದ ಯಾವುದೇ ಭಾಷೆಯು ಲಭ್ಯವಿಲ್ಲವೆಂಬುದು ವಿದ್ವಾಂಸರ ಅಭಿಪ್ರಾಯ. ಅಪೌರುಷೇಯವಾದರೂ ಸಂಸ್ಕೃತಮಂಯವಾದ ಈ ವಾಜ್ಮಯಕ್ಕೆ ಶಾಸ್ತ್ರೀಯವ್ಯವಸ್ಥೆಯನ್ನು ನೀಡಿರುವಲ್ಲಿ ಪಾಣಿನಿ ಮಹರ್ಷಿಯ ಕೊಡುಗೆ ಅಪಾರ ಮತ್ತು ಅಮೂಲ್ಯ. ಅಷ್ಟುಮಾತ್ರವಲ್ಲ, ಭಾಷೆಯನ್ನು ಲೇಖನರೂಪವಾಗಿ ವ್ಯವಹರಿಸುವ ಕಾರ್ಯವೂ ಇವನಿಂದಲೇ ಆರಂಭಗೊಡಿತೆಂಬುದು "ಅಧಿಕೃತ್ಯಕೃತೇ ಗ್ರಂಥೇ" ಮುಂತಾದ ಸೂತ್ರಗಳಿಂದ ತಿಳಿದುಬರುತ್ತದೆ.

ಪಾಣಿನಿ:–ಸಂಸ್ಕೃತ ವ್ಯಾಕರಣಮಾನವನ ಪರಸ್ಪರ ವ್ಯವಹಾರಸಾಧನವಾದ ನುಡಿಗಳು ಭಾಷಾವಿಜ್ಞಾನವೆಂಬ ಹೆಸರಿನ ಸ್ವತಂತ್ರವಾದ ಶಾಸ್ತ್ರೀಯವಿಷಯವಾಗಿ ಬೆಳೆದು ನಿಂತಿದೆ.ಭಾಷೆವಾಙ್ಮಯ.ಇದು ಮನುಷ್ಯನಿಗೆ ಅನಿವಾರ್ಯವೂ ಹೌದು. ಈ ಕುರಿತಾಗಿ ಪ್ರಾಚೀನ ಕವಿಗಳಲ್ಲೊಬ್ಬನಾದ ದಂಡಿಯು " ಈ ಸಂಸಾರವನ್ನು ಬೆಳಗುವ ಶಬ್ದವೆಂಬ ಜ್ಯೋತಿ ಇಲ್ಲದಿದ್ದರೆ ಲೋಕವೆಲ್ಲಾ ಅಂಧಕಾರದಲ್ಲಿ ಮುಳುಗಿರಬೇಕಾಗಿತ್ತು" ಎಂದಿದ್ದಾನೆ. ಆದ್ದರಿಂದ ಮನುಷ್ಯನ ಜೀವನದೊಂದಿಗೆ ಭಾಷೆಯು ಅವಿನಾಭಾವ ಸಂಬಧವನ್ನು ಹೊಂದಿದೆ ಎಂಬುದು ಸ್ಪಷ್ಟ.

ಶಬ್ದಗಳೆಲ್ಲವೂ ಭಾಷೆ ಎನಿಸಲಾರವು.ಇವುಗಳ ಮೂಲಧಾತುಗಳು ಭಿನ್ನವಾಗಿವೆ. ಒಂದು ಅವಿಷ್ಕಾರಾರ್ಥಕವಾದ 'ಶಬ್ದ' ಧಾತುವಾದರೆ ಇನ್ನೊಂದು 'ಅಭಿವ್ಯಕ್ತವಾಕ್' ಎಂಬರ್ಥವುಳ್ಳ 'ಭಾಷೃ' ಧಾತುವಾಗಿದೆ.ಆದ್ದರಿಂದ ಮೃದಂಗ ಭೇರ್ಯಾದಿಧ್ವನಿಗಳು ಶಬ್ದವೆಂದಾದರೂ ಸ್ಫುಟವಾದ ವಾಕ್ ಅಲ್ಲವಾದ್ದರಿಂದ ಭಾಷೆ ಎನ್ನುವಂತಿಲ್ಲ. ಆದರೆ 'ವಾಙ್ಮಯ'ಎಂಬರ್ಥದಲ್ಲಿ ಈ ಎರಡೂ ಧಾತುಜನ್ಯಶಬ್ದವ್ಯವಹಾರವು ಸಮಾನವಾಗಿದೆ.ಆದ್ದರಿಂದಲೇ ದಂಡಿಯು'ಶಬ್ದಾಹ್ವಯಂ ಜ್ಯೋತಿಃ' ಎಂದು ಪ್ರಯೋಗಿಸಿರುವುದು ವಾಙ್ಮಯಾರ್ಥಪರಕವಾದ್ದರಿಂದ ಪ್ರಸ್ತುತ ಸಂದರ್ಭಕ್ಕೆ ವಿರೋಧವಾಗಲಾರದು.

ಮನುಷ್ಯನ ಇಂಗಿತವನ್ನು ಪ್ರಕಟಗೊಳಿಸಲು ಚೇಷ್ಟಾದಿಗಳನ್ನು ಹೊರತುಪಡಿಸಿ ಸ್ಫುಟವಾಗಿ ಪ್ರಯೋಗಿಸುವ ವಾಕ್ಯಿನ ಉಚ್ಚಾರಣೆಯೇ ಭಾಷೆ. ಇದು ಭಾರತೀಯ ಮತ್ತು ಪಾಶ್ಚಾತ್ಯ ಭಾಷಾವಿಜ್ಞಾನಿಗಳಿಗೆ ಸಮ್ಮತವೆಂದು ಆಯಾ ಗ್ರಂಥಾಧ್ಯಯನದಿಂದ ತಿಳಿದುಬರುತ್ತದೆ. 'ವಿಜ್ಞಾನ' ಪದಕ್ಕೆ ಅನೇಕಾರ್ಥಗಳಿದ್ದರೂ "ವಿಜ್ಞಾನಂ ಶಿಲ್ಪಶಾಸ್ತ್ರಯೋಃ" ಎಂಬ ಕೋಶವಾಕ್ಯವು ತಿಳಿಸುವಂತೆ "ಶಾಸ್ತ್ರಜ್ಞಾನ" ಎಂಬುದೂ ಅವುಗಳಲ್ಲೊಂದರ್ಥವಾದ್ದರಿಂದ ಭಾಷೆಯ ವಿಶ್ಲೇಷಣೆ, ಅದರ ಲಕ್ಷಣ, ಭಾಷಾಪ್ರಭೇದ, ಭಾಷೆಯ ವಿಕೃತಿ ಮತ್ತು ಭಾಷಾ ಉತ್ಪತ್ತಿ ಹಾಗೂ ವಿಕಾಸಾದಿಗಳ ವ್ಯಾಖ್ಯಾನಾತ್ಮಕ ಅಧ್ಯಯನವನ್ನು 'ಭಾಷಾವಿಜ್ಞಾನ'ವೆಂದು ತಿಳಿಯಬಹುದು.

ಭಾಷೆಯು ಲಿಪಿಯುಕ್ತ ಮತ್ತು ಲಿಪಿರಹಿತ ಹಾಗೂ ಗ್ರಂಥಸ್ಥವೆಂಬ ಭೇದಗಳನ್ನು ಹೊಂದಿದೆ.ಕನ್ನಡ, ತಮಿಳು, ತೆಲಗು, ಮುಂತಾದ ಆಯಾ ರಾಜ್ಯ ಮತ್ತು ರಾಷ್ಟ್ರಭಾಷೆಗಳು ಲಿಪಿಯುಕ್ತವಾದರೆ ತುಳು, ಲಂಬಾಣಿ ಮುಂತಾದವು ಲಿಪಿರಹಿತಭಾಷೆಗಳಾಗಿವೆ. ಕಾಲಕಾಲಕ್ಕೆ ವಿಕಸಿತಗೊಳ್ಳದಿರುವ ಲ್ಯಾಟಿನ್ ಮುಂತಾದವುಗಳೇ ಗ್ರಂಥಸ್ಥಭಾಷೆಗಳು.ಅನ್ವೇಷಣೆಯಿಂದ ಇವು ಪ್ರತಿಯೊಂದು ರಾಜ್ಯದಲ್ಲಿಯೂ ಲಭ್ಯವಾಗಬಹುದು .ಲಿಪಿಯುಕ್ತವಾದವುಗಳು ನುಡಿ ಮತ್ತು ಲೇಖನವೆಂಬೆರಡುವಿಧವಾದ ವ್ಯವಹಾರಮಾಧ್ಯಮವಾದರೆ ಲಿಪಿರಹಿತವಾದವು ಕೇವಲ ನುಡಿರೂಪವಾದ ವ್ಯವಹಾರಮಾಧ್ಯಮವಾಗಿದೆ. ಗ್ರಂಥಸ್ಥವು ಸಮಾಜಿಕ ವ್ಯವಹಾರದಿಂದ ಬಹುದೂರವಾದವುಗಳಾಗಿವೆ.

ಭಾಷೆಯು ಸಾರ್ವಕಾಲಿಕವಾಗಿ ಒಂದೇರೂಪವಾಗಿಲ್ಲ. ಆದರೆ ಆಯದೇಶಕಾಲವನ್ನಾಧರಿಸಿ ಆಂಶಿಕವಾದ ಪರಿವರ್ತನೆಹೊಂದುತ್ತಿರುವುದನ್ನು ನಾವು ಕಾಣುತ್ತೇವೆ. ಪರಿವರ್ತನಾತ್ಮಕವಾದ ವಸ್ತುವನ್ನು ನೋಡಿದಾಗ ಅದರ ಮೂಲಸ್ವರೂಪ ಮತ್ತು ಪರಿವರ್ತನಾಪ್ರಕಾರಗಳನ್ನು ತಿಳಿಯುವ ಕುತೂಹಲವುಂಟಾಗುವುದು ವಿದ್ವಜ್ಜನಮಾನಸದ ಸಹಜಸ್ವಭಾವ. ಈ ನಿಟ್ಟಿನಲ್ಲಿ ಭಾಷೆಯ ಪ್ರಾಚೀನತೆಯನ್ನು ಅನ್ವೇಷಣೆಗಯ್ಯುತ್ತಾ ಮುಂದಕ್ಕೆ ಸರಿದಾಗ ವೇದವಾಙ್ಮಯವು ಅದಕ್ಕೆ ವಿರಾಮಸ್ಥಾನವಾಗಿದೆ. "ತೇ ದೇವಾ ಇಂದ್ರಮಬ್ರುವನ್, ಇಮಾಂ ನೋ ವಾಚಂ ವ್ಯಾಕುರ್ವಿತಿ" ಎಂಬೀ ಮಂತ್ರವು ದೇವತೆಗಳ ಪ್ರಾರ್ಥನೆಯ ಮೇರೆಗೆ ಇಂದ್ರನಿಂದ ದೇವವಾಣಿಯು ಅಭಿವ್ಯಕ್ತವಾಯಿತೆಂಬುದನ್ನು ಬೋಧಿಸುತ್ತದೆ. ಅದು ಭಾಷೆಯಾದರೂ ನಿರ್ಮಿತವಲ್ಲ ಎಂದರ್ಥ.ಇದು ಭಾರತೀಯ ಶಾಸ್ತ್ರಪರಂಪರಾಪ್ರಸಿದ್ಧವೂ ಹೌದು.ಆದಕ್ಕೂ ಪ್ರಾಚೀನವದ ಯಾವುದೇ ಭಾಷೆಯು ಲಭ್ಯವಿಲ್ಲವೆಂಬುದು ವಿದ್ವಾಂಸರ ಅಭಿಪ್ರಾಯ. ಅಪೌರುಷೇಯವಾದರೂ ಸಂಸ್ಕೃತಮಯವಾದ ಈ ವಾಙ್ಮಯಕ್ಕೆ ಶಾಸ್ತ್ರೀಯವ್ಯವಸ್ಥೆಯನ್ನು ನೀಡಿರುವಲ್ಲಿ ಪಾಣಿನಿ ಮಹರ್ಷಿಯ ಕೊಡುಗೆ ಅಪಾರ ಮತ್ತು ಅಮೂಲ್ಯ. ಅಷ್ಟುಮಾತ್ರವಲ್ಲ, ಭಾಷೆಯನ್ನು ಲೇಖನರೂಪವಾಗಿ ವ್ಯವಹರಿಸುವ ಕಾರ್ಯವೂ ಇವನಿಂದಲೇ ಆರಂಭಗೊಡಿತೆಂಬುದು "ಆಧಿಕೃತ್ಯಕೃತೇ ಗ್ರಂಥೇ" ಮುಂತಾದ ಸೂತ್ರಗಳಿಂದ ತಿಳಿದುಬರುತ್ತದೆ.

ಪಾಣಿನಿ:– ಸಂಸ್ಕೃತ ವ್ಯಾಕರಣದ ಪ್ರಥಮಪ್ರವರ್ತಕನು ಪಾಣಿನಿ. ಇವನ ಕಾಲ ಕ್ರಿ.ಪೂ. ೬ನೇ ಶತಮಾನವೆಂದು ತಿಳಿದುಬರುತ್ತದೆ.'ಪಣಿ' ಎಂಬ ಮುನಿಯ ಮಗನಾದ್ದರಿಂದ 'ಪಣಿನ್' ಶಬ್ದಕ್ಕೆ ಅಪತ್ಯಾರ್ಥದಲ್ಲಿ 'ಅಣ್' ಪ್ರತ್ಯಯ ಯೋಗದಿಂದ 'ಪಾಣಿನಿ' ಎಂಬ ಹೆಸರು ಸಿದ್ಧಿಸಿದೆ.ವರ್ಷನೆಂಬ ಗುರುವಿನಲ್ಲಿ ಅಧ್ಯಯನ ಕೈಗೊಂಡ ಇವನು ಶಿವನನ್ನು ಕುರಿತು ತಪಸ್ಸನಾಚರಿಸಿ ಶಿವನಿಂದ ೧೪ ಸೂತ್ರರೂಪವಾಗಿ ವರ್ಣಸಮಾಮ್ನಾಯವನ್ನು ಪಡೆದು ವ್ಯಾಕರಣಸೂತ್ರವನ್ನು ರಚಿಸಿ ವ್ಯಾಕರಣಶಾಸ್ತ್ರಕ್ಕೆ ಸೂತ್ರಕಾರನೆಂದು ವಿಖ್ಯಾತಗೊಂಡನು.

'ಪಾಣಿನಿ' ಶಬ್ದಕ್ಕೆ'ಛ'ಪ್ರತ್ಯಯ 'ಈಯ್' ಆದೇಶದಿಂದ 'ಪಾಣಿನೀಯಂ' ಶಬ್ದವು ಸಿದ್ಧಿಗೊಳ್ಳುವುದು.ಇದಕ್ಕೆ ಪಾಣಿನಿಯಲ್ಲಿ ಭಕ್ತಿಯುಳ್ಳ ಶಿಷ್ಯರು, ಅಥವಾ ಪಾಣಿನಿಯಿಂದ ಪ್ರೋಕ್ತವಾದದ್ದು, ಪಾಣಿನಿಯಿಂದ ಪ್ರಥಮವಾಗಿ ತಿಳಿಯಲ್ಪಟ್ಟದ್ದು, ಪಾಣಿನಿಸಂಬದ್ಧವಾದದ್ದು ಮುಂತಾದ ಅರ್ಥಸಮುದಾಯಗಳನ್ನು ಕೋಶಕಾರರು ನಿಶ್ಚಯಿಸಿರುತ್ತಾರೆ.

ಭಾಷ್ಯ ವಾರ್ತಿಕಾದಿ ವ್ಯಾಕರಣಶಾಸ್ತ್ರದ ವ್ಯಾಖ್ಯಾನಗ್ರಂಥಗಳೆಲ್ಲ ಪಾಣಿನಿಸಂಬದ್ಧವಾದ್ದರಿಂದ 'ಪಾಣಿನೀಯಂ'ಪದಾರ್ಥವಾಗುತ್ತದೆ.ಆದರೆ ಪಾಣಿನಿಯಿಂದ ತಿಳಿಯಲಾದ ಮತ್ತು ಪ್ರೋಕ್ತವಾದ್ದರಿಂದ ಅಷ್ಟಾಧ್ಯಾಯಿಗ್ರಂಥವೇ ಪ್ರಸ್ತುತ 'ಪಾಣಿನೀಯಂ' ಪದಾರ್ಥವಾಗಿದೆ. ಈಕುರುತಾಗಿ "ಪಾಣಿನೀಯಂ ಮಹಾಶಾಸ್ತ್ರಂ ಪದಸಾಧುತ್ವಲಕ್ಷಣಮ್ । ಸರ್ವೋಪಕಾರಕಂ ಗ್ರಾಹ್ಯಂ ಕೃತ್ಸ್ನಂ ತ್ಯಾಜ್ಯಂ ನ ಕಿಂಚನ" ಎಂಬ ಶಾಸ್ತ್ರವಚನವುಅಷ್ಟಾಧ್ಯಾಯಿಯನ್ನೇ 'ಪಾಣಿನೀಯಂ' ಎಂದು ಸಂಕೇತಿಸಿರುವುದನ್ನು ಗಮನಿಸಬಹುದು.

ಪಾಣಿನೀಯವು ಸೂತ್ರಪಾಠ, ಗಣಪಾಠ, ಧಾತುಪಾಠ, ಉಣಾದಿ ಮತ್ತು ಲಿಂಗಾನುಶಾಸನಮ್ ಎಂದು ಪಂಚವಿಧವಾಗಿದೆ. ವಿಶಾಲ ಅರ್ಥವನ್ನು ಬೋಧಿಸುವ ಸ್ವಲ್ಪಾಕ್ಷರಗಳುಳ್ಳ ವಾಕ್ಯವು ಸೂತ್ರವೆನ್ನಿಸಿದರೆ ಸೂತ್ರನಿಯಮದಿಂದ ಸಂಪೂರ್ಣವಾಗಿ ಸಿದ್ಧಿಸದ ಪ್ರಸಿದ್ಧಪದಗಳ ಸಮೂಹವು ಗಣಪಾಠವೆಂದು ಪ್ರಸಿದ್ಧವಾಗಿದೆ. ಸತ್ತಾರ್ಥಕವಾದ 'ಭೂ'

ಮುಂತಾದವುಗಳ ಸಮೂಹವು ಧಾತುಪಾಠ. ಇದು ಎರಡುಸಾವಿರಕ್ಕೂ ಅಧಿಕ ಸಂಖ್ಯಾತ್ಮಕವಾಗಿದ್ದು ದಶಗಣಗಳಲ್ಲಿ ವಿಭಕ್ತವಾಗಿದೆ. ಯಾವ ಶಬ್ದವು ಯಾವಲಿಂಗವಾಗುತ್ತದೆಂದು ಲಕ್ಷಣಪೂರ್ವಕವಾಗಿ ವ್ಯವಸ್ಥೆ ಗೊಳಿಸಿರುವುದು ಲಿಂಗಾನುಶಾಸನ. ಹೀಗೆ ಈ ಐದು ಪ್ರಭೇದವನ್ನು ಸಂಕಲಿಸಿ ಸಮಗ್ರ ಸಂಸ್ಕೃತವಾಙ್ಮಯವನ್ನು ಶಾಸ್ತ್ರೀಯವನ್ನಾಗಿಸಿದ ಪ್ರಥಮ ಮಹರ್ಷಿ ಪಾಣಿನಿಯಾಗಿದ್ದಾನೆ.

ಭಾರತೀಯ ಭಾಷೆಗಳಲ್ಲಿ ಪ್ರಾಚೀನವಾದದ್ದು ಸಂಸ್ಕೃತ ಭಾಷೆಯಾದ್ದ ರಿಂದ ಹಾಗೂ ಪಾಣಿನಿಯು ಸಂಸ್ಕೃತಕ್ಕೆ ನೀಡಿದ ನೀತಿನಿಯಮಗಳನ್ನು ಅನ್ವೇಷಣೆಗೈದಾಗ ಉಳಿದೆಲ್ಲ ಭಾಷೆಗಳಿಗೂ ಒಂದಲ್ಲ ಒಂದು ವಿಧವಾಗಿ ಪ್ರಯೋಜನಕಾರಿಯಾಗುವುದರಿಂದ ಸಂಸ್ಕೃತ ಮತ್ತು ಭಾಷಾಶಾಸ್ತ್ರಕ್ಕೆ ಪಾಣಿನೀಯವಾದ ಪಾಣಿನಿಯ ಉಪಾದೇಯವಿಲ್ಲಿ ಅನ್ವೇಷಣ ಯೋಗ್ಯವಾಗಿದೆ.

ಮಾಹೇಶ್ವರವರ್ಣಸಮುದಾಯ :– ಮಹೇಶ್ವರನಿಂದ ಪಾಣಿನಿಗೆ ಉಪದೇಶಿಸಲಾದ ೧೪ ಸೂತ್ರಗಳು ಭಾಷಾರೂಪವಾದ ವಾಙ್ಮಯದ ಜೀವನಾಡಿಯಾದ ವರ್ಣಸಮುದಾಯಗಳಾಗಿವೆ. ಇವು ಸ್ವರ, ವ್ಯಂಜನ ಮತ್ತು ಅನುಸ್ವಾರ ವಿಸರ್ಗವೆಂಬ ಪ್ರಭೇದವನ್ನು ಹೊಂದಿವೆ. "ಅಕ್" ಪ್ರತ್ಯಾಹಾರದ ಅ,ಇ,ಉ,ಋ,ಲೃ, ಗಳು ಹ್ರಸ್ವಸ್ವರಗಳಾದರೆ "ಏಚ್" ಪ್ರತ್ಯಾಹಾರದ ಏ,ಓ,ಐ,ಔ,ಗಳುದೀರ್ಘಸ್ವರಗಳಾಗಿವೆ. ಇನ್ನುಳಿದವು ಅನುಸ್ವಾರ, ವಿಸರ್ಗ ಮತ್ತು ವ್ಯಂಜನಗಳು. ಇವು ಭಾರತೀಯ ಭಾಷೆಗಳಲ್ಲೆಲ್ಲಾ ವ್ಯಾಪ್ತವಾಗಿವೆ.ಪದ ವಾಕ್ಯರೂಪವಾದ ಭಾಷೆಯು ವರ್ಣಗಳನ್ನಾಧರಿಸಿರುವುದರಿಂದ ಸ್ವರವ್ಯಂಜನಾದಿವರ್ಣಸಮುದಾ ಯವನ್ನು ಪಡೆದು ಲೋಕಕ್ಕೆ ಉಪದೇಶಿಸಿರುವುದು ಭಾಷಶಾಸ್ತ್ರಕ್ಕೆ ಪಾಣಿನಿಯ ಪ್ರಥಮ ಕೊಡುಗೆಯಾಗಿದೆ. ಭಾಷೆಯು ಲಿಪಿಯುಕ್ತವಾಗಲಿ ಅಥವಾ ಲಿಪಿರಹಿತವಾಗಲಿ ಅವುಗಳಲ್ಲೆಲ್ಲ ಪಾಣಿನಿಯ ಅಕ್ಷರಸಮುದಾಯಗಳ ಅನುಸ್ಯೂತತ್ವವನ್ನು ನಾವಲ್ಲಿ ಕಾಣಲು ಸಾಧ್ಯ.

ಪ್ರತ್ಯಾಹಾರ :–"ಹಲಂತ್ಯಮ್" ಮತ್ತು "ಆದಿರಂತ್ಯೇನ ಸಹೇತಾ" ಎಂಬ ಸೂತ್ರಗಳನ್ನು ನಿರ್ದೇಶಿಸಿ ಪಾಣಿನಿಯು ಮಾಹೇಶ್ವರಸೂತ್ರದಲ್ಲಿಯ ವರ್ಣಸಮುದಾಯಗಳ ಪ್ರತ್ಯಾಹಾರಕ್ರಿಯೆಯ ವಿಧಾನವನ್ನು ತೋರಿಸಿದ್ದಾನೆ. ಅಷ್ಟುಮಾತ್ರವಲ್ಲದೇ ತಾನು ರಚಿಸಿದ ಸೂತ್ರಗಳಲ್ಲಿ ಅಣ್, ಅಕ್, ಅಲ್, ಹಲ್ ಮುಂತಾದ ಪ್ರತ್ಯಾಹಾರಗಳನ್ನು ಪ್ರಯೋಗಿಸಿದ್ದಾನೆ.

ಅಕ್ಷರಸಮಾಮ್ನಾಯವಾದ ಮಾಹೇಶ್ವರಸೂತ್ರವು ಉಪದೇಶವಾದ್ದರಿಂದ ಅವುಗಳ ಆಂತ್ಯವರ್ಣಕ್ಕೆ 'ಇತ್' ಸಂಜ್ಞೆಯನ್ನು ವಿಧಿಸಲಾಗಿದೆ. ಇತ್ಸಂಜ್ಞೆಯುಳ್ಳ ಆಂತ್ಯವರ್ಣದೊಂದಿಗೆ ಆದಿವರ್ಣವನ್ನು ಉಚ್ಚರಿಸಿದಾಗ ಮಧ್ಯದಲ್ಲಿರುವ ವರ್ಣಗಳಿಗೂ ತನ್ನತನ್ನಸಂಜ್ಞೆ ಬರುವುದು.ಆದ್ದರಿಂದ ಇತ್ಸಂಜ್ಞೆಯ ಅಂತ್ಯವರ್ಣದಿಂದ ಆದಿವರ್ಣವನ್ನು ಸೇರಿಸಿ ಹೇಳುವುದೇ ಪ್ರತ್ಯಾಹಾರ. ಉದಾಹರಣೆ :–'ಅಣ್' ಎಂದರೆ ಅ,ಇ,ಉ ಎಂದರ್ಥ. ಇದರಂತೆಯೇ 'ಅಲ್' ಎಂದರೆ ಅಕಾರದಿಂದ ಕೊನೆಯ 'ಲ'ವರ್ಣದ ತನಕವಿರುವ ಅಕ್ಷರಗಳು ಎಂದರ್ಥ.ಇದು ಲೇಖನ ಮತ್ತು ನುಡಿರೂಪವಾದ ವಾಗ್ವ್ಯವಹಾರದಲ್ಲಿ ಸರಳಮತ್ತು ಲಾಘವವಾಗುವುದು. ಪ್ರಸ್ತುತ ಕನ್ನಡದಲ್ಲಿ "ಗಣೇಶ ನಾರಾಯಣ ಭಟ್ಟ" ಇದನ್ನು "ಗನಾಭ" ಎಂದು ಮತ್ತು "ಕ್ರಮಸಂಖ್ಯೆ" ಯನ್ನು "ಕ್ರ.ಸಂ" ಎಂದು ಪ್ರತ್ಯಾಹಾರ ರೂಪವಾಗಿ ಪ್ರಯೋಗಿಸುವುದು ಪ್ರಚಲಿತದಲ್ಲಿರುವಂತೆ ಭಾರತೀಯಭಾಷೆ ಮತ್ತು ಪಾಶ್ಚಾತ್ಯಭಾಷೆಯಾದ ಇಂಗ್ಲೀಷ್‌ನಲ್ಲಿಯೂಸಹ ಇವು ವಿಪುಲವಾಗಿ ಲಭ್ಯ.ಈ ಪ್ರತ್ಯಾಹಾರ ವಿಧಾನವು ಪದ, ವಾಕ್ಯ, ಪ್ರಬಂಧ ಮುಂತಾದ ರೀತಿಯಲ್ಲಿ ಪ್ರಯೋಗಿಸಲು ಸಾಧ್ಯವಾದ್ದರಿಂದ ಭಾಷಾಶಾಸ್ತ್ರದಲ್ಲಿ ಇದೊಂದು ವೈಜ್ಞಾನಿಕವಿಧಾನವೇಸರಿ.ಆದ್ದರಿಂದ ಇದು ಭಾಷಾಶಾಸ್ತ್ರಕ್ಕೆ ಪಾಣಿನೀಯದ ಅಪೂರ್ವ ಕೊಡುಗೆಯಾಗಿದೆ.

ಪಾಣಿನಿಪ್ರೋಕ್ತಶಾಸ್ತ್ರದ ವ್ಯಾಖ್ಯಾನಾದಿಗಳು ಪಾಣಿನೀಯವೇಸರಿ. ಈ ಪರಂಪರೆಯಲ್ಲೊಂದಾದವೈಯ್ಯಾಕರಣಸಿದ್ಧಂತಕೌಮುದಿಯಲ್ಲಿ ವರ್ಣಗಳ ಉತ್ಪತ್ತಿಸ್ಥಾನವನ್ನು ಮತ್ತು ವರ್ಣಗಳ ಉಚ್ಚಾರಣೆಯಲ್ಲುಂಟಾಗುವ ಪ್ರಯತ್ನವನ್ನು ಸ್ಪಷ್ಟಪಡಿಸಲಗಿದೆ. "ಅಕುಹವಿಸರ್ಜನೀಯಾನಾಂ ಕಂಠಃ, ಇಚುಯಶಾನಾಂ ತಾಲು" ಮುಂತಾದ ವಾಕ್ಯಗಳಿಂದ ಸ್ವರ, ವ್ಯಂಜನ, ಅನುಸ್ವಾರ, ವಿಸರ್ಗ, ಉಪಧ್ಮಾನೀಯ, ಜಿಹ್ವಮೂಲೀಯಗಳ ಉತ್ಪತ್ತಿಸ್ಥಾನ ಮತ್ತು ಅವುಗಳಿಗುಂಟಾಗುವ ಪ್ರಯತ್ನಗಳನ್ನು ಸ್ಪಷ್ಟಪಡಿಸಿ ಸವಾನ ಪ್ರಯತ್ನವರ್ಣಗಳಿಗೆ ಸವರ್ಣಸಂಜ್ಞೆಯನ್ನೂ ಹೇಳಲಾಗಿದೆ.ಇದು ಭಾಷೆಯ ಶಾಸ್ತ್ರೀಯ ಚೌಕಟ್ಟಿಗೆ ಆಡಿಗಲ್ಲಾಗಿದೆ.ಮತ್ತು ಭಾಷಾಮಾಧ್ಯಮ ದಲ್ಲಿ ಪ್ರಯೋಗಿಸಲಾಗುವ ಶಬ್ದಸಂಧಿಗಳಿಗೆ ಸಹಕಾರಿಯಾಗಿದೆ. ಹೀಗೆ ವರ್ಣಗಳು ನಿರ್ದಿಷ್ಟವಾಗಿರುವಕಾರಣ ಸುಖವಾಚಿಯಾದ "ಶಂ" ಯುಕ್ತವಾದ 'ಶಂಕರ'ಶಬ್ದವನ್ನು ಸಂಕರ ಎಂದು ಉಚ್ಚರಿಸಿದರೆ ಅದು ಸುಖವನ್ನುಂಟುಮಾಡುವುದೆಂಬ ಅರ್ಥವನ್ನು ಬೋಧಿಸುವುದಿಲ್ಲ. ಆದರೆ ಆದರಿಂದ "ಕಲಬೆರಿಕೆ" ಎಂಬರ್ಥ ಭೋಧವಾಗುವುದು.ಇದರಂತೆ "ಷಣ್ಮುಖ ಶಣ್ಮುಖ" ಮುಂತಾದವುಗಳನ್ನು ತಿಳಿಯಬಹುದು. ಭಾಷೆಯಲ್ಲಿ ಯ ಇಂತಪ ಸಂದಿಗ್ಧತೆಯನ್ನು ನಿವಾರಿಸಿ ಸ್ಪಷ್ಟ ಹಾಗೂ ನಿಶ್ಚಯಾತ್ಮಕವಾದ ಅರ್ಥಾವಗತಿಯಾಗುವಂತೆ ಪಾಣಿನೀಯ ವರ್ಣೋತ್ಪತ್ತಿ ನಿಯಮಗಳು ವಾಙ್ಮಯಕ್ಕೆ ಸಹಕರಿಸಿ ನೀಡಿದ ಕೊಡುಗೆಯಾಗಿದೆ.

ಪಾಣಿನೀಯಸ್ವರಗಳು :–ಪಾಣಿನೀಯ ವ್ಯಾಕರಣದಲ್ಲಿ "ಸ್ವರ ಪ್ರಕ್ರಿಯೆ" ಎಂಬುದು ಮಹತ್ವದ ಘಟ್ಟವಾಗಿದೆ. ಧ್ವನಿಯೂಸಹ ಸ್ವರಪದಾರ್ಥವಾ ದರೂ ಪ್ರಸ್ತುತವಾಗಿ ಅ,ಇ,ಉ ಮುಂತಾದ ಸ್ವರಾಕ್ಷರಗಳು ಸ್ವರಪದಾರ್ಥವಾಗಿದೆ. ಸ್ವರವನ್ನು ಕುರಿತು ಪಾಣಿನಿಯು "ಉಚ್ಚೈರುದಾತ್ತಃ" "ನೀಚ್ಯೈರನುದಾತ್ತಃ""ಸಮಾಹಾರ: ಸ್ವರಿತಃ" ಮುಂತಾದ ಸೂತ್ರಗಳಿಂದ ಉದಾತ್ತ, ಅನುದಾತ್ತ, ಸ್ವರಿತ ಮತ್ತು ಕಂಪನಾತ್ಮಕವಾದ ಸ್ವರಗಳನ್ನು ವ್ಯಾಖ್ಯಾನಿಸಿರುತ್ತಾನೆ.

ಕಂಠತಾಲು ಮುಂತಾದ ವರ್ಣೋತ್ಪತ್ತಿಸ್ಥಾನಗಳ ಊರ್ಧ್ವ(ಮೇಲಿನ) ಭಾಗದಿಂದ ಉಚ್ಚರಿತ ಸ್ವರ ಉದಾತ್ತ. ಮತ್ತು ವರ್ಣೋತ್ಪತ್ತಿಸ್ಥಾನಗಳ ಅಧೋಭಾಗ(ಕೆಳಭಾಗ)ದಿಂದ ಉಚ್ಚರಿತವಾದ ಸ್ವರವು ಅನುದಾತ್ತ. ಮತ್ತು ಉದಾತ್ತ ಅನುದಾತ್ತತ್ವ ವರ್ಣಧರ್ಮಗಳು ಸಮವಾಗಿ ಉಚ್ಚರಿತವಾದ ಸ್ವರವು ಸ್ವರಿತವೆಂಬುದು ಇವುಗಳ ಲಕ್ಷಣಾರ್ಥವಾಗಿದೆ. ಸ್ವರಿತದ ಮುಂದೆ ಉದಾತ್ತ ಅಥವಾ ಸ್ವರಿತವು ಪರವಾದಾಗ ಹಿಂದಿನ ಸ್ವರಿತದ ಪ್ರಥಮಾರ್ಧವು ಅನುದಾತ್ತವಾಗಿ ಮತ್ತು ಉಳಿದವು ಉದಾತ್ತಸ್ವರವಾಗಿ ಉಚ್ಚಾರಿತವಾಗುವುದೆಂಬ ನಿಯಮವಾದ್ದರಿಂದ ಇದು ಕಂಪಸ್ವರ.ಈ ವಿಷಯವು ಅಷ್ಟಾಧ್ಯಾಯಿ ಗ್ರಂಥದ ಪ್ರಥಮಾಧ್ಯಾಯದ ದ್ವಿತೀಯಪಾದದಲ್ಲಿ ತಿಳಿಸಲಾಗಿದೆ.ಸಮಾಸಗೊಂಡ ಪದಗಳಿಗೆ

ವಿಹಿತವಾಗುವ ಸ್ವರನಿಯಮಗಳು "ಸಮಾ"ಸಸ್ಯ" ಮುಂತಾದ ಸೂತ್ರ ಗಳಿಂದ ಆರನೇ ಅಧ್ಯಾಯದಲ್ಲಿ ಸ್ಪಷ್ಟವಾಗಿಸಲಾಗಿದೆ.ಇವು ವೇದವಾಕ್ಯ ಗಳಿಗೆ ಸಂಬಂಧವಾದ್ದರಿಂದ ಇವುಗಳನ್ನು ವೈದಿಕಸ್ವರವೆನ್ನ ಲಾಗಿದೆ. ಹೀಗೆ ಅಧ್ಯಾಯ ಭೇದದಿಂದ ಉದಾತ್ತಾದಿ ಸ್ವರಗಳು ಉಪದಿಷ್ಟವಾ ದ್ದರಿಂದ ಉದತ್ತಾನುದಾತ್ತಸ್ವರಿತಗಳು ಲೌಕಿಕ ಭಾಷಾರೂಪವಾದ ಸಂಸ್ಕೃತಪಾಜ್ಯಕ್ಕೂ ಅನ್ವಿತವಾಗುತ್ತದೆಂದು ತಿಳಿಯಬೇಕಾಗುತ್ತದೆ.ಇವು ಸ್ವರವರ್ಣಗಳಿಗುಂಟಾಗುವುದರಿಂದ ಸ್ವರವ್ಯಂಜನಯುಕ್ತವಾದ ಶಬ್ದ ಗಳನ್ನು ಉದತ್ತಾನುದಾತ್ತಸ್ವ ರಿತಯುಕ್ತವಾಗಿ ಉಚ್ಚರಿಸುವುದು ಶಾಸ್ತ್ರೀಯನಿಯಮ. ವರ್ತಮಾನ ಸಮಯದಲ್ಲಿ ಸಮಗಿದು ಲಭ್ಯವಾಗದಿದ್ದರೂ ಪ್ರಾಚೀನವಾಗಿ ಈ ಪರಿಪಾಠ ಪ್ರಚಲಿತವಾಗಿತ್ತೆಂದು ಊಹಿಸಲು ಸಾಧ್ಯ.ಕರ್ನಾಟಕದ ಕಲೆಗಳಲ್ಲೊಂದಾದ ಯಕ್ಷಗಾನದಲ್ಲಿ ಇಂದಿಗೂ ಸ್ವರಸಹಿತವಾದ ಶಬ್ದಗಳಿಂದ ಸಂಭಾಷಣೆ ನಡೆಯುವುದನ್ನು ನಾವು ನೋಡಬಹುದು. ಭೀಮನ ಪಾತ್ರಧಾರಿಯಾದವನು "ಓ ತಮ್ಮಾ"ಎಂದು ಆಕಾರವನ್ನು ಸ್ವರಿತವಾಗಿ ಉಚ್ಚರಿಸಿದಾಗ ಅದು ತಮ್ಮನಾದವನು ಅವಶ್ಯವಾಗಿ ಕೇಳಲೇಬೇಕೆಂಬ ಅರ್ಥದ ಧ್ವನಿಯಾದ್ದರಿಂದ ತಮ್ಮನಾದವನು ಅದರ ಪ್ರತ್ಯುತ್ತರವಾಗಿ "ಓ ಅಗ್ರಜಾ" ಆಕಾರಸ್ವರಿತಾಂತವಾಗಿಯೇ ಸಮ್ಮತಿ ನೀಡುತ್ತಾನೆ. ಅಂದರೆ ನೀನು ಹೇಳುವುದನ್ನು ಅವಶ್ಯವಾಗಿ ಕೇಳುತ್ತಿದ್ದೇನೆಂದರ್ಥ.

ಸ್ವರದ ಮಹತ್ವ :–ಆರ್ಯಾಶಬ್ದವು ಉಚ್ಚರಿತ ಸ್ವರಭೇದದಿಂದ ಅರ್ಥವ್ಯತ್ಯಾಸವುಂಟಾಗುವುದೆಂಬ ವಿಷಯದಲ್ಲಿ ವೃತ್ರಾಸುರನ ಕಥಾನಕವೊಂದು ಪ್ರಮಾಣವಾಗಿದೆ. ವೃತ್ರನ ತಂದೆಯಾದ ವಿಶ್ವಕರ್ಮನು 'ಇಂದ್ರನನ್ನು ಕೊಲ್ಲುವ ಮಗನನ್ನು' ಎಂಬರ್ಥಹೊಂದಲು "ಇಂದ್ರಶತ್ರು" ಎಂಬ ಪದವನ್ನು ಪ್ರಯೋಗಿಸಿದ.ಇದು ತತ್ಪುರುಷ ಸಮಾಸವಾದ್ದರಿಂದ "ಪೂರ್ವಪದ ಪ್ರಕೃತಿಕ ಸ್ವರದಿಂದುಚ್ಚರಿಸಬೇಕಿತ್ತು.ಆದರೆ ಅದನ್ನು ಬಿಟ್ಟು ಸಮಾಸ ಸಮಾನ್ಯವಾದ ಅಂತೋದಾತ್ತ ಸ್ವರದಿಂದ ಅದನ್ನು ಹೇಳಿರುವ ಕಾರಣ ಇಂದ್ರನನ್ನು ವಧಿಸುವ ಎಂದರ್ಥ ಲಭ್ಯವಾಗದೇ ಇಂದ್ರನಿಂದ ವಧಿಸಲ್ಪಡುವ ವೃತ್ರಾಸುರನನ್ನು ಅವನು ಪುತ್ರನಾಗಿ ಹೊಂದಿದನು ಎಂಬ ಆಖ್ಯಾನವು ಸ್ವರದ ಮಹತ್ವವನ್ನು ಬೋಧಿಸುತ್ತದೆ. ಆದ್ದರಿಂದ ಶಬ್ದೋಚ್ಚಾರಣೆಯಲ್ಲಿರುವ ಉದಾತ್ತಾದಿ ಸ್ವರ ನಿಯಮವು ಸಂಸ್ಕೃತಭಾಷೆಗೆ ಅಪಶ್ಯಪಾದಂತೆ ಆರ್ಯಾ ವ್ಯವಹಾರಯುಕ್ತ ಭಾಷೆಗಳಲ್ಲಿಯೂ ಸಹ ಸ್ವರ (ಧ್ವನಿ) ಭೇದದಿಂದ ಒಂದೇ ಶಬ್ದವು ವಿಭಿನ್ನಾರ್ಥವಾಗಿ ಬೋಧವಾಗುವುದನ್ನು ನಾವು ನಿತ್ಯದಲ್ಲಿ ಅನುಭವಿಸುತ್ತೇವೆ. ಹಿರಿಯರಿಗೆ ಗೌರವವನ್ನು ಕೊಡುವ ನಿಮಿತ್ತ ಹೇಳುವ 'ನಮಸ್ಕಾರ' ಎಂಬ ಶಬ್ದವು ವಿನಯಪೂರ್ವಕವಿಲ್ಲದೇ ಇದ್ದಾಗ ಹೇಳುವ ಸ್ವರ ವ್ಯತ್ಯಾಸದಿಂದ ಅಪಾರ್ಥಬೋಧಕವಾಗಿ ಅದನ್ನು ಕೇಳಿದವನಿಗೆ ಸಿಟ್ಟು ಬರುತ್ತದೆ ಮತ್ತೂ ಅದು ಕಲಹಕ್ಕೆ ಕಾರಣವಾಗುವುದು.ಅದೇ ಶಬ್ದವು ವಿನಯಯುಕ್ತ ಸ್ವರವಾದರೆ ಗೌರವಲಾಭಪೂರ್ವಕಸಂತೋಷಕ್ಕೆ ಕಾರಣವಾಗುವುದು.ಶಬ್ದವು ಸ್ವಲ್ಪೋಚ್ಚಾರಣೆಯಿಂದ ಅಧಿಕಾರ್ಥಬೋಧಕ ಮತ್ತು ಬಹ್ವರ್ಥಪ್ರಾಪಕಸಾಧನ. ಸರಿಯಾದ ಶಬ್ದೋಚ್ಚಾರಣೆಯು ಸತ್ಸಮಾಜದ ಅಭಿವೃದ್ಧಿಕಾರಣವಾದ್ದರಿಂದ ಭಾಷಾಶಸ್ತ್ರ ಸಂಶೋಧನೆ ನಡೆಸುವವರು ಈ ಕುರಿತಾಗಿ ಹೆಚ್ಚಿನ ಸಂಶೋಧನೆ ನಡೆಸಲು ಸಾಧ್ಯವೆಂಬುದು ನನ್ನ ಅಭಿಪ್ರಾಯ.

ಪುಲ್ಲಿಂಗಶಬ್ದಗಳನ್ನು ಸ್ತ್ರೀಲಿಂಗವಾಗಿಸುವುದು :–ಪಾಣಿನೀಯವಾದ ಅಷ್ಟಾಧ್ಯಾಯಿಯು ನಾಲ್ಕನೇ ಅಧ್ಯಾಯ ಒಂದನೆ ಪಾದದಲ್ಲಿ "ಅಜಾದ್ಯ"ತಷ್ಟಾಪ್" ಮುಂತಾದ ಸೂತ್ರಗಳಿವೆ. ಇವು ಪುಲ್ಲಿಂಗಶಬ್ದವು ಸ್ತ್ರೀವಾಚಕವಾಗಿ ಸ್ತ್ರೀಲಿಂಗ ಶಬ್ದವನ್ನಾಗಿಸುವ ವಿಧಾನವನ್ನು ಹೇಳುತ್ತದೆ. ಅಂದರೆ –ಅ,ಇ ಮುಂತಾದ ಸ್ವರಾದಿ ಮತ್ತು 'ಅ'ಕಾರಾಂತವಾದ ಪುಲ್ಲಿಂಗಶಬ್ದವನ್ನು ಸ್ತ್ರೀವಿವಕ್ಷೆಯಿಂದ ಸ್ತ್ರೀಲಿಂಗವನ್ನಾಗಿಸುವುದಾದರೆ ಅದಕ್ಕೆ ಅಂತ್ಯದಲ್ಲಿ 'ಟಾಪ್' ಪ್ರತ್ಯಯವನ್ನು ಸೇರಿಸುವುದು ಎಂದರ್ಥ. 'ಟಾಪ್' ನಲ್ಲಿ ಉಳಿದವು ಲೋಪವಾಗಿ 'ಆ' ಮಾತ್ರ ಉಳಿಯುತ್ತದೆ. ಆದ್ದರಿಂದ ಅಜ,ಚಟಕ,ಮೂಷಕ, ಮುಂತಾದವುಗಳು ಸ್ತ್ರೀಲಿಂಗದಲ್ಲಿ ಅಜಾ,ಚಟಕಾ,ಮೂಷಿಕಾ ಎಂದು ರೂಪಾಂತರ ಗೊಳ್ಳುತ್ತದೆ. ಇದರಂತೆ 'ಋ'ಕಾರಾಂತ ಶಬ್ದವು ಸ್ತ್ರೀಲಿಂಗದಲ್ಲಿ 'ಈ'ಕಾರಾಂತವಾಗುವುದರಿಂದ ಭವತ್,ಪಚತ್ ಮುಂತಾದವು ಭವತೀ,ಪಚಂತೀ ಮುಂತಾಗಿ ರೂಪಹೊಂದುತ್ತವೆ. ಹೀಗೆ ಪುಲ್ಲಿಂಗಶಬ್ದವನ್ನು ಸ್ತ್ರೀಲಿಂಗವಾಗಿಸುವ ನಾನಾವಿಧಾನವನ್ನು ಈ ಪ್ರಕರಣದಲ್ಲಿ ತಿಳಿಸಿದ್ದಾರೆ. ಇದು ಭರತೀಯ ಭಾಷೆಗಳಲ್ಲಿಯೂ ಆಚರಿಸಿರುವುದು ಅಲ್ಲಲ್ಲಿ ಗಮನಿಸಲು ಸಾಧ್ಯ.ಇತ್ತೀಚಿನ ದಿನಗಳಲ್ಲಿ ಸಂಸ್ಕೃತವನ್ನು ದ್ವೇಷಿಸುವುದರಿಂದಲೋ ಅಥವಾ ಆಕುರಿತಾದ ಅಜ್ಞಾನದಿಂದಲೋ ಸಾಮಾಜಿಕರಲ್ಲಿ 'ವಿಜಯಾ' ಎಂಬುದು ಪುರುಷರ ಹೆಸರಾಗಿ ಮತ್ತು ಕೃಷ್ಣಪ್ರಿಯ,ಕೋಮಲ ಮುಂತಾದವು ಸ್ತ್ರೀಯರ ಹೆಸರಾಗಿಯೂ ವ್ಯವಹರಿಸುತ್ತಿರುವುದು ಕಂಡುಬರುತ್ತದೆ. ದೈನಂದಿನ ಭಾಷೆಯಲ್ಲಿ ಘಟಿಸುತ್ತಿರುವ ಅದೆಷ್ಟೋ ಲೋಪದೋಷಗಳನ್ನು ಸರಿಪಡಿಸಲು ಪಾಣಿನೀಯವೊಂದನ್ನೆ ಆಶ್ರಯಿಸುವುದೊಳಿತೆಂದರೆ ತಪ್ಪಾಗಲಾರದು. ಭಾಷಾಶಾಸ್ತ್ರವನ್ನು ಅನುಲಕ್ಷಿಸಿ ನಾನಾವಿಧವಾಗಿ ಸಂಶೋಧನೆಗೈಯ್ಯಲು ಇದು ಮಾರ್ಗದರ್ಶಿಯಾಗಿರುವ ಕಾರಣ ವಾಜ್ಮಯಮಾತ್ರಕ್ಕೆ ಅಪಾರವಾದ ಈ ಕೊಡುಗೆ ಪಾಣಿನೀಯ ಪರಂಪರೆಯಿಂದಾಗಿದೆ.

ಕೃದಂತಶಬ್ದಗಳು :–ಸೂತ್ರಪಾಠದಂತೇ ಧಾತುಪಾಠವೂ ಸಹ ಪಾಣಿನಿಯ ಕೃತಿಯಾಗಿದೆ. 'ಧಾತು' ಎಂದರೆ ಕ್ರಿಯಾಪದದ ಮೂಲರೂಪವೆಂದರ್ಥ. ಅವು 'ತಿಙ್'ಆದಿ ಪ್ರತ್ಯಯಗಳಿಂದ ಕ್ರಿಯಾಪದರೂಪವನ್ನು ಹೊಂದುತ್ತವೆ. ಅದೇ ಧಾತುಗಳು 'ಕೃತ್'ಪ್ರತ್ಯಯಯೋಗದಿಂದ ಶಬ್ದರೂಪವನ್ನು ಹೊಂದುತ್ತವೆ. 'ಗಮ್ಲೃ'ಧಾತುವು 'ತಿಪ್'ಪ್ರತ್ಯಯದಿಂದ ಗಚ್ಛತಿ ಎಂದು ಕ್ರಿಯಾರೂಪವಾದರೆ 'ಲ್ಯುಟ್'ಎಂಬ ಕೃತ್ಪ್ರತ್ಯಯದಿಂದ 'ಗಮನಮ್' ಎಂಬ ಶಬ್ದರೂಪವಾಗುತ್ತದೆ. ಕ್ರೀಡಾರ್ಥಕವಾದ 'ರಮು'ಧಾತುವು 'ರಮಂಯತಿ'ಎಂದು ಕ್ರಿಯಾರೂಪವಾದರೆ ಕೃತ್ಪ್ರತ್ಯಯವಾದ 'ಆಣ್'ಪ್ರತ್ಯಯದಿಂದ 'ರಾಮ'ಎಂಬ ಶಬ್ದವಾಗುವುದು.ಇದೇ'ಟಾಪ್'ಪ್ರತ್ಯಯದಿಂದ ಸ್ತ್ರೀಲಿಂಗದಲ್ಲಿ 'ರಮಾ'ಎಂದು ಶಬ್ದಾಂತರವಾಗುವುದು.ಇದೇ ರೀತಿಯಾಗಿ ಎಲ್ಲಾ ಆರ್ಯಾಭಾಷೆಗಳಲ್ಲಿಯೂಸಹ ಪ್ರಯೋಗಿಸುವ ಕ್ರಿಯಾಪದಗಳು ಮತ್ತು ಭೂತ-ಭವಿಷ್ಯತ್-ವರ್ತಮಾನಕಾಲಗಳ ಭೇದದಿಂದುಟಾಗುವ ಅವುಗಳ ವ್ಯತ್ಯಾಸದ ಕ್ರಮನಿಯಮವು ಪಾಣಿನೀಯ ಮೂಲವನ್ನು ಹೊಂದಿದೆ ಎಂದು ಆರ್ಯಾಭಾಷಾವ್ಯಾಕರಣಜ್ಞರಿಗೆ ವೇದ್ಯ.ಇದರಂತೆ ಭಾರತೀಯ ಭಾಷೆಗಳಲ್ಲಿ ಪ್ರಚಲಿತವಾಗಿರುವ ಬಹಳಷ್ಟು ಶಬ್ದಗಳು ಧಾತುಜನ್ಯವೆಂಬುದನ್ನು ನಾವು ನಿರಾಕರಿಸುವಂತಿಲ್ಲ. ಪಾಣಿನೀಯಶಾಸ್ತ್ರೋಕ್ತವಾದ ಕ್ರಿಯಾಪದ ಮತ್ತು

ಶಬ್ದಸೃಜನನಿಯಮಗಳು ಆಯಾಭಾಷೆಯಲ್ಲಿಯೂ ಅನುಸರಿಸಲು ಸಾಧ್ಯ.ಧಾತುಜನ್ಯ ಶಬ್ದಗಳ ತತ್ಸಮ–ತದ್ಭವ ರೂಪಗಳು ಭಾರತೀಯ ಭಾಷೆಗಳಲ್ಲೆಲ್ಲ ವಿಪುಲವಾಗಿ ಲಭ್ಯ. ಆದ್ದರಿಂದ ಶಬ್ದ ಮತ್ತು ಕ್ರಿಯಾಪದಸೃಜನಸಾಮರ್ಥ್ಯವುಳ್ಳ ಈ ಪಾಣಿನೀಯ ನಿಯಮವು ಭಾಷಾಶಾಸ್ತ್ರಕ್ಕೆ ಅಪಾರವಾದ ವಿಜ್ಞಾನಾತ್ಮಕ ಶಾಸ್ತ್ರೀಯ ಕೊಡುಗೆ ಎನ್ನಲೇಬೇಕಾಗುತ್ತದೆ.

ತದ್ಧಿತಪ್ರಕ್ರಿಯೆ :– ಒಂದು ಶಬ್ದದಿಂದ ಇನ್ನೊಂದು ಶಬ್ದನಿರ್ಮಾಣ ಪ್ರಕ್ರಿಯೆಯು ವ್ಯಾಕರಣದಲ್ಲೊಂದು ವಿಶೇಷ ವಿಧಾನ. ಪಾಣಿನೀಯದ ನಾಲ್ಕನೇ ಅಧ್ಯಾಯದ ಒಂದನೇಪಾದದ "ಪ್ರಾಗ್ದೀವ್ಯ°ತೋಽಣ್" ಮುಂತಾದ ಸೂತ್ರಗಳು ಒಂದು ಶಬ್ದಕ್ಕೆ ಆಯಾವಿಶೇಷಾರ್ಥದಲ್ಲಿ 'ಅಣ್ಮುಂತಾದ ಪ್ರತ್ಯಯವನ್ನು ವಿಧಿಸುತ್ತವೆ. ಅಣಾದಿಪ್ರತ್ಯಯವು ಸೇರಿದಾಗ ಶಬ್ದವು ರೂಪಾಂತರಗೊಡು ವಿಶೇಷಾರ್ಥಬೋಧಕವಾಗುವುದು. ಉದಾಹರಣೆಯಾಗಿ "ಅಶ್ವಪತಿ" ಶಬ್ದಕ್ಕೆ ಅವನ (ಅಶ್ವಪತಿಯ) ಸಂತಾನ ಎಂಬರ್ಥದಲ್ಲಿ 'ಅಣ್' ಪ್ರತ್ಯಯವು ಸೇರಿದಾಗ 'ಆಶ್ವಪತ್ಯಮ್' ಎಂದು ರೂಪಾಂತರ ಗೊಳ್ಳುವುದು. ಆಗ "ಆಶ್ವಪತ್ಯಮ್' ಎಂದರೆ ಅಶ್ವಪತಿಯ ಸಂತಾನದವ ನೆಂದರ್ಥ. ಇದರಂತೆ ಗಣಪತಿ ದೇವತೆಯ ಮಂತ್ರ ಎಂಬರ್ಥದ 'ಅಣ್' ಪ್ರತ್ಯಯವು ಗಣಪತಿಶಬ್ದಕ್ಕೆ ಸೇರಿದಾಗ 'ಗಾಣಪತ್ಯಮ್' ಎಂಬ ರೂಪಾಂತರವಾಗುವುದು. ಹಾಗೆಯೇ ಅಗ್ನಿದೇವತೆಯ ಮಂತ್ರ ಎಂಬರ್ಥದಲ್ಲಿ ಅಗ್ನಿಶಬ್ದಕ್ಕೆ 'ಢಕ್' ಪ್ರತ್ಯಯ ಬಂದು ಅದಕ್ಕೆ "ಏಯ್" ಆದೇಶವಾದಾಗ "ಆಗ್ನೇಯಮ್" ಎಂದಾಗುವುದು. ಹೀಗೆ ಆಯಾವಿಶೇಷ ಪ್ರತ್ಯಯದ ಯೋಗದಿಂದ ಒಂದು ಶಬ್ದವು ಇನ್ನೊಂದು ವಿಶೇಷ ಶಬ್ದವಾಗಿ ರೂಪಾಂತರಗೊಳ್ಳುವ ಪ್ರಕರಣವನ್ನು "ತದ್ಧಿತಾಂತ" ಎಂದು ಹೆಸರಿಸಲಾಗಿದೆ.ಇಲ್ಲಿ ತಿಳಿಸಿರುವ ಪ್ರತ್ಯಯಗಳೆಲ್ಲವೂ ತದ್ಧಿತಾಂತ ಪ್ರತ್ಯಯಗಳು.ಇವುಗಳಲ್ಲಿ ಸಮೂಹವಾಚಕ ಮತ್ತು ಆಧಿಕ್ಯವಾಚಕವೇ ಮುಂತಾದ ಪ್ರತ್ಯಯಗಳಿವೆ. ಅವುಗಳನ್ನು ಸೂಕ್ಷ್ಮಬುದ್ಧಿಯಿಂದವಲೋಕಿಸಿ ಹೊಸಹೊಸ ಶಬ್ದನಿರ್ಮಾಣ ಮಾಡುವಿಕೆಯೂ ನಿಜವಾದ ಮತ್ತು ಅಪೂರ್ವವಾದ ಭಾಷಾವಿಜ್ಞಾನಾಂಶಗಳಲ್ಲೊಂದಾಗಿದೆ.ಪಾಣಿನೀಯವಾದ ಈ ಅಂಶಗಳನ್ನು ಆಯಾಭಾಷೆಗಳಲ್ಲಿ ಉಪಯೋಗಿಸಲು ಸಾಧ್ಯ.ಉದಾಹರಣೆಗೆ "ಮಗಳ ಮಗ ಮೊಮ್ಮಗ""ಪುತ್ರನ ಮಗ–ಪೌತ್ರ" ಇವೇ ಮುಂತಾದವು ಪ್ರಚಲಿತ ಕನ್ನಡಭಾಷೆಯಲ್ಲಿಯೂ ನಾವು ಗುರುತಿಸಬಹುದು.ಹೀಗೆ ಪಾಣಿನಿಯ ನಿಯಮವನ್ನು ಪ್ರತಿಯೊಂದು ಭಾಷೆಯಲ್ಲಿಯೂ ಉಪಯೋಗಿಸಿ ಆಯಾಭಾಷೆಯನ್ನು ಶ್ರೀಮಂತಗೊಳಿಸು ವ ನಿಟ್ಟಿನಲ್ಲಿ ವಿದ್ವಾಂಸರು ಪ್ರಯತ್ನಿಸಬೇಕು.ಇದಲ್ಲದೇ ಪಾಣಿನೀಯವಾದ ಸಪ್ತ ವಿಭಕ್ತಿಗಳು ಮತ್ತು ವರ್ತಮಾನಾದಿ ಕಾಲಭೇದದಿಂದ ಪ್ರಚಲಿತವಾಗಿರುವ ದಶ ಲಕಾರಗಳೂ ಸಹ ವಚನಭೇದದಿಂದ ವಾಕ್ಯಪ್ರಯೋಗದಲ್ಲಿಯ ನಿಖರತೆಯನ್ನು ತೋರಿಸುತ್ತದೆ.ಈ ನಿಖರತೆಯು ಉಳಿದ ಭಾಷೆಗಳಲ್ಲಿ ಇಷ್ಟು ಸ್ಪಷ್ಟವಾಗಿಲ್ಲ. ಭಾಷಾವಿದ್ವಾಂಸರು ವಿಶಾಲಹೃದಯದಿಂದ ಆ ನಿಯಮಗಳನ್ನು ತಮ್ಮ ತಮ್ಮ ಭಾಷೆಗೆ ಯಥಾಯೋಗ್ಯ ರೀತಿಯಲ್ಲಿ ಸ್ವೀಕರಿಸಲು ಸಾಧ್ಯ.

ಭಾಷಾಮಾಧ್ಯಮದಲ್ಲಿ ವಾಕ್ಯಪ್ರಯೋಗವು ಮಹತ್ವದ್ದಾಗಿದೆ.ಪಾಣಿನಿಯು ಈಕುರಿತಾಗಿ ಕರ್ತರಿ, ಕರ್ಮಣಿ, ಮತ್ತು ಭಾವೇ ಎಂಬ ಮೂರು ಪ್ರಭೇದವನ್ನು ಗುರುತಿಸಿ ಸಕರ್ಮಕ ಮತ್ತು ಅಕರ್ಮಕವನ್ನು ವಿಂಗಡಿಸಿ ಗುರುತಿಸಿದ್ದಾನೆ. ಕರ್ತರಿ ಮತ್ತು ಕರ್ಮಣಿ ಪ್ರಯೋಗಗಳು ಇತರ ಭಾಷೆಗಳಲ್ಲಿ ಲಭ್ಯವಾಗಿದ್ದರೂ ಭಾವೇಪ್ರಯೋಗ ಮತ್ತು ಅಕರ್ಮಕ ಪ್ರಯೋಗವಿಧಾನವು ಪಾಣಿನೀಯವೆಂದು ಪ್ರಖ್ಯಾತಾವಾದ ಸಂಸ್ಕೃತದಲ್ಲಿ ಮಾತ್ರ ಲಭ್ಯವಾಗಿದೆ.ಉಳಿದೆಡೆ ಗುರುತಿಸುವುದು ಕಷ್ಟಸಾಧ್ಯ.ಈ ನಿಟ್ಟಿನಲ್ಲಿ ಸಂಶೋಧಕರು ಪ್ರಯತ್ನಿಸಿ ಇತರ ಭಾಷೆಗಳಲ್ಲಿಯೂ ಭಾವೇ ಮತ್ತು ಅಕರ್ಮಕವನ್ನು ಪ್ರಯೋಗಿಸುವಂತಾಗಿಸಿದರೆ ಭಾಷೆಯ ವೈಶಾಲ್ಯ ಮತ್ತು ವೈದುಷ್ಯಪೂರ್ಣತ್ವಕ್ಕೆ ಅದು ಸಪಕಾರಿಯಗುವುದರಿಂದ ಇದೂ ಸಹ ಪಾಣಿನೀಯ ಕೊಡುಗೆಯೇ ಸರಿ.

ಮಾನವನ ಭಾಷಾಪ್ರಯೋಗವು ಶುದ್ಧವಾಗಿದ್ದಾಗ ಅವು ಯಾವುದೇ ಸಂದೇಹಾದಿಗಳಿಗೆಡೆಮಾಡದೆ ಸೌಹರ್ದತೆಗೆ ಕಾರಣವಾಗುವವು. ಪರಸ್ಪರ ಸೌಹಾರ್ದತೆಯಿಂದ ಸಾಮಾಜಿಕರು ಸುಖ,ಶಾಂತಿ,ಸಮೃದ್ಧಿಯಿಂದ ಜೀವಿಸಲು ಸಾಧ್ಯ. ಆಗ ನಾವು ಸಮೃದ್ಧ ಸಮಾಜವನ್ನು ಕಾಣಬಹುದು.ಹೀಗೆ ಸತ್ಸಮಾಜ ನಿರ್ಮಾಣಕ್ಕೆ ಸಾಧುಶಬ್ದಗಳು ಕಾರಣವಾದ್ದರಿಂದಲೇ ಇವು ಶಬ್ದವೆಂಬ ಪ್ರಕಾಶವೆಂದು ದಂಡಿ ಹೇಳಿರುವುದು ಅಕ್ಷರಶಃ ಸತ್ಯವೇ ಸರಿ.ಸಾಧುಶಬ್ದಪ್ರಯೋಗದಲ್ಲಿ ಪಾಣಿನೀಯವೊಂದೇ ನಮಗೆ ಅಪೂರ್ವ ಆಕರ.ಆದನ್ನಾಶ್ರಯಿಸಿ ನಮ್ಮ ನಮ್ಮ ಭಾಷೆಯನ್ನು ಶ್ರೀಮಂತಗೊಳಿಸುವ ನಿರಹಂಕಾರವಾದ ಪರಿಶ್ರಮದಲ್ಲಿ ತೊಡಗುವಂತೆ ನಮ್ಮೆಲ್ಲರಿಗೆ ಆ ಶಾರದಾಮಾತೆ ಬುದ್ಧಿಯನ್ನು ಕರುಣಿಸಲಿ.

ಆಧಾರಿತ ಗ್ರಂಥಗಳು

೧. ವಾಚಸ್ಪತ್ಯಮ್.
೨. ಶಬ್ದಕೌಸ್ತುಭ.
೩. ಶಬ್ದಕಲ್ಪದ್ರುಮ.
೪. ಅಮರಕೋಶ
೫. ಭಾಷಾಶಾಸ್ತ್ರ
೬. ಸಾಮಾನ್ಯ ಭಾಷವಿಜ್ಞಾನ. (ಕೆಂಪೇಗೌಡ.)
೭. ಸಂಸ್ಕೃತವ್ಯಾಕರಣಸೌರಭ.
೮. ಧ್ವನ್ಯಾಲೋಕ
೯. ಸ್ವರಮಂಜರೀ,
೧೦. ಅಷ್ಟಾಧ್ಯಾಯಿ (ಚೌಕಾಂಬಾ).
೧೧. ವ್ಯಾಕರಣಸ್ಯೇತಿಹಾಸ.
೧೨. ಮಹಾಭಾಷ್ಯ ಪಸ್ಪಶಾನ್ನಿಕ.
೧೩. ಸಿದ್ಧಾಂತಕೌಮುದೀ
೧೪. ಮಧ್ಯಸಿದ್ಧಾಂತಕೌಮುದೀ
೧೫. ಲಘುಸಿದ್ಧಂತಕೌಮುದೀ
೧೬. ಕಾವ್ಯಾದರ್ಶ (ದಂಡಿ)
೧೭. ವೈದಿಕಸಾಹಿತ್ಯ ಚರಿತೆ (ಅನಂತರಂಗಾಚಾರ್ಯ)
೧೮. ಭಾರತೀಯದರ್ಶನಮ್.
೧೯. ಸಾಗರಿಕಾ ವಿ.ಸ.೨೦೨೦.
೨೦. ದಿಗ್ದರ್ಶನೀ ೨೦೦೭.
೨೧. ಶೋಧಪ್ರಭಾ ೨೦೧೨.

೧. ತೈತ್ತಿ.ಬ್ರಾ.
೨. ಭಾ.ದರ್ಶನಂ
೩. ಪಾ.ಸೂ.
೪. ಪಾ.ಸೂ
೫. ಪಾ.ಸೂ.
೬ .ಪಾ.ಸೂ
೭ .ಪಾ.ಸೂ
೮. ಪಾ.ಸೂ
೯. ಪಾ.ಸೂ.
೧೦. ಪಾ.ಸೂ

ಡಾ. ಬಿ ಆರ್ ಅಂಬೇಡ್ಕರ್ ಸಂವಹನ ದರ್ಶನಃ ಒಂದು ಅಧ್ಯಯನ

* ರಾಜಕುಮಾರ ಎಂ ದಣ್ಣೂರ, ** ಡಾ. ವಿ.ಟಿ ಕಾಂಬಳೆ, ***ಡಾ.ಸಿ.ಕೆ ಪುಟ್ಟಸ್ವಾಮಿ
* ಸಂಶೋಧನಾ ವಿದ್ಯಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ** ಪ್ರಾಧ್ಯಾಪಕರು, ಗ್ರಾಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ, ***ಪ್ರಾಧ್ಯಾಪಕರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮಾನಸ, ಗಂಗೋತ್ರಿ ಮೈಸೂರು

ಭೂಮಿಯ ಮೇಲೆ ಮಾನವನು ಜನಿಸಿದಂದಿನಿಂದ ಸಂವಹನ ಕ್ರಿಯೆಗೆ ಒಂದು ಸಮಪರ್ಕವಾದ ಮಾಧ್ಯಮದ ಅಗತ್ಯವಿತ್ತೆಂಬುದು ಇತಿಹಾಸದ ಪುಟಗಳು ನಮಗೆ ತಿಳಿಸುತ್ತವೆ. ಅಂದಿನಿಂದ ಮಾನವನ ಸುಖ ದುಃಖಿಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತಹ ಮಾಧ್ಯಮದ ಶೋಧಕ್ಕೆ ಪ್ರಯತ್ನ ಜಾರಿಯಲ್ಲಿತ್ತು. ಈ ಅವ್ಯಾಹತವಾದ ಪ್ರಯತ್ನ ನಿರಂತರ ಶ್ರಮ, ಕ್ರಮೇಣ ಹಂತ ಹಂತವಾಗಿ ಮಾನವನ ಅನುಭವಗಳನ್ನು ಇತರರಿಗೆ ಸಂವಹಿಸುವ ಕ್ರಿಯೆ ಯಶಸ್ಸನ್ನು ಕಾಣತೊಡಗಿತು. ಅಂತಹ ಸಾವಿರಾರು ವರ್ಷಗಳ ಪ್ರಯತ್ನದಿಂದಾಗಿ ೧೫೨೯ ರಲ್ಲಿ ಮುದ್ರಣ ಮಾಧ್ಯಮ ಆವಿಷ್ಕಾರವಾಯಿತು. ಬೂತಾನ್ ವಾಟೋ ಮೆಕ್ಸಿಕೋ ನಗರದಲ್ಲಿ ಒಂದು ಮುದ್ರಣ ಪ್ರೆಸ್ಸನ್ನು ಸ್ಥಾಪಿಸಿದ. ಆದರೆ ಗೂಟನ್ ಬರ್ಗ್‌ನ ಆವಿಷ್ಕಾರ ಇಡೀ ಪಾಶ್ಚಿಮಾತ್ಯ ದೇಶಗಳಲ್ಲಿ ಒಂದು ಕ್ರಾಂತಿಯನ್ನೇ ಮಾಡಿತು. ಇದರ ಪರಿಣಾಮವಾಗಿ ವಿಜ್ಞಾನ, ತತ್ವಶಾಸ್ತ್ರ ಹಾಗೂ ವಿಕಾಸ ತ್ವರಿತಗೊಳಿಸಲು ಸಹಾಯಕವಾಯಿತು.

ಆಧುನಿಕ ಯುಗದಲ್ಲಿ ಮಾಧ್ಯಮಗಳು ಸಮಾಚಾರ, ಶಿಕ್ಷಣ ಮತ್ತು ಮನರಂಜನೆಗಳನ್ನು ಒದಗಿಸುತ್ತವೆ. ಜನಾಭಿಪ್ರಾಯ ನಿರೂಪಿಸುವಲ್ಲಿ ಮಾಧ್ಯಮಗಳು ಅತ್ಯಂತ ಪರಿಣಾಮಕಾರಿ ಪಾತ್ರವಹಿಸುತ್ತವೆ. ಪತ್ರಿಕೆಗಳಿಲ್ಲದ ಸಮಾಜ ಸೃಜನಶೀಲತೆಯನ್ನು ಕಳೆದುಕೊಳ್ಳುತ್ತದೆ. ಜನರ ಹಿತರಕ್ಷಣೆ ಮಾಡುವಲ್ಲಿ ಶಾಸಕಾಂಗ, ಕಾರ್ಯಂಗ, ನ್ಯಾಯಾಂಗಗಳು ವಿಫಲಗೊಂಡಾಗ ಪತ್ರಿಕಾಂಗವು ಜನತೆಯ ವಕೀಲನಂತೆ ಕಾರ್ಯ ನಿರ್ವಹಿಸುತ್ತವೆ. ಪತ್ರಿಕೋದ್ಯಮವು ಕೇವಲ ಹಣಗಳಿಸುವ ಉದ್ಯಮವಾಗಿರದೆ ಜನಸೇವಾ ಸಂಸ್ಥೆಯೂ ಆಗಿದೆ. ಪತ್ರಿಕೋದ್ಯಮವು ಜನಸೇವೆಯನ್ನು ಆಧರಿಸಿದಂತಹ ಒಂದು ಪ್ರಧಾನ ವೃತ್ತಿ ಮತ್ತು ಸೇವಾ ಮಾಧ್ಯಮ.

ಡಾ. ಅಂಬೇಡ್ಕರರ ತಾತ್ವಿಕ ವಿಚಾರಗಳು:

"ಜಾತಿ ಪದ್ಧತಿಯನ್ನು ತೊಲಗಿಸಲು ಆಸಕ್ತರಾಗಿರುವ ಭಾರತ ಸಮಾಜದ ಕೆಳಸ್ಥರದವರಿಗೆ ಶಿಕ್ಷಣ ಕೊಟ್ಟರೆ ಜಾತಿ ಪದ್ಧತಿ ನಾಶಗೊಳ್ಳುತ್ತದೆ" ಡಾ. ಅಂಬೇಡ್ಕರರು ತಮ್ಮ ತಾತ್ವಿಕ ವಿಚಾರಗಳನ್ನು ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ. ಯಾಕೆಂದರೆ "ಭಾರತೀಯ ಹಿಂದೂ ಸಮಾಜ ಅಸಮಾನತೆಯ ತವರು" ಎಂಬುದನ್ನು ಅರಿತ ಡಾ. ಅಂಬೇಡ್ಕರ್ ಅವರು ಸಾಮಾಜಿಕ ಅಸಮಾನತೆ, ಶೋಷಣೆಯ ವಿರುದ್ಧ ಸಿಡಿದೆದ್ದರು. ಕ್ರಾಂತಿಯ ಪಾಂಚಜನ್ಯ ಊದಿದರು. ನವಸಮಾಜ ನಿರ್ಮಾಣಕ್ಕೆ ನಾಂದಿಯಾಗಬಲ್ಲ ಸಂವಿಧಾನವನ್ನು ರೂಪಿಸಿದರು. ಅವರು ಸಾಮಾಜಿಕ ಕ್ರಾಂತಿಯ ಸಂಕೇತ "ಪ್ರಗತಿಗೆ ವಿದ್ಯೆಯೇ ಮೂಲ" ಎಂಬ ಮಂತ್ರವನ್ನು ಸಾರಿದ ಡಾ. ಅಂಬೇಡ್ಕರ್ ಅವರು ಭಾರತಕ್ಕೆ ಮೊದಲು ಸಾಮಾಜಿಕ ಸ್ವಾತಂತ್ರ್ಯ ದೊರಕಬೇಕೆಂದು ಪ್ರತಿಪಾದಿಸಿ, ಶೋಷಿತ ಜನಾಂಗದ ವಿಕಾಸಕ್ಕೆ ಮಾರ್ಗೋಪಾಯಗಳನ್ನು ಚಿಂತಿಸಿದವರು. "ಭಾರತದ ಜಾತಿ ಪದ್ಧತಿಯೇ ಎಲ್ಲ ಅನಿಷ್ಟಗಳಿಗೆ ಕಾರಣ. ಅದು ನಿವಾರಣೆಯಾಗದೆ ಭಾರತದ ಪ್ರಗತಿ ಅಸಾಧ್ಯವೆಂದು ದೃಢವಾಗಿ ನಂಬಿದರು. ಮುಂದುವರೆದು ಹೇಳುತ್ತಾ."ಅಸ್ಪೃಶ್ಯತೆಯ ಬೇರು ಜಾತಿ ವ್ಯವಸ್ಥೆಯಲ್ಲಿದೆ. ವರ್ಣಾಶ್ರಮ ಧರ್ಮದ ಬೇರು ಬ್ರಾಹ್ಮಣತ್ವ ದಲ್ಲಿದೆ. ಬ್ರಾಹ್ಮಣತ್ವದ ಬೇರು ಸರ್ವಾಧಿಕಾರದಲ್ಲಿದೆ ಅರ್ಥಾತ್ ರಾಜಕೀಯ ಅಧಿಕಾರದಲ್ಲಿದೆ. ಅಂಬೇಡ್ಕರರು ಈ ವಿಚಾರವನ್ನು ಯಾಕೆ ಹೇಳುತ್ತಾರೆಂದರೆ. ಜಾತಿಯ ಬೇರು ರಾಜಕೀಯ ಅಧಿಕಾರದಲ್ಲಿದೆ ಆದ್ದರಿಂದ ನನ್ನ ಜನ ಆಳುವ ವರ್ಗ ಆಗಬೇಕೆಂದು ಡಾ. ಅಂಬೇಡ್ಕರರು ಬಯಸಿದರು

ಇಡೀ ದೇಶ ಸ್ವಾತಂತ್ರ್ಯ ಎಂಬ ಏಕೈಕ ಸಂಗ್ರಾಮದಲ್ಲಿ ಮುಳಿಗಿದಾಗ ಭಾರತ ದೇಶಕ್ಕೆ ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯದ ಅರ್ಥವನ್ನೇ ತಿಳಿಯದ ಕೋಟ್ಯಾಂತರ ಅಸಾಹಾಯಕ ಜನವರ್ಗಕ್ಕೆ ಎಕಕಾಲದಲ್ಲಿ ಸ್ವಾತಂತ್ರ್ಯ ಸಿಗಬೇಕೆಂದು ಅವಿರತ ಹೋರಾಟ ನಡೆಸಿದ ಮಾಹಾ ಪುರುಷ ಅಂಬೇಡ್ಕರರು

ಭಾರತದಲ್ಲಿ ಇವರಿಗೆ ಸಮಾನ ವಿದ್ಯ ನಿರಾಕರಿಸಿದ್ದರಿಂದ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೊಗಿ ಭಾರತದಲ್ಲಿ ಯಾರು ಸಹ ಗಳಿಸಲಾರದಷ್ಟು ವಿದ್ಯಗಳಿಸಿಕೊಂಡು ಭಾರತಕ್ಕೆ ಮರಳಿದರು. ಡಾ. ಅಂಬೇಡ್ಕರಗಿದ್ದ ಪ್ರತಿಭೆ, ಅಪಾರ ಪಾಂಡಿತ್ಯ, ಪ್ರಮಾಣಿಕತೆ, ಸ್ವಾಬಿಮಾನ ಹಾಗೂ ಸಚ್ಚಾರಿತ್ರ್ಯ ಜೀವನ ಶೈಲಿಗಳಿಂದಾಗಿ ಅವರು ಜಗತ್ತಿನ ಒಬ್ಬ ಅಸಾಮಾನ್ಯ ವ್ಯಕ್ತಿ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಅಂಬೇಡ್ಕರ ಎಲ್ಲಾ ತರಹದ ಶೋಷಣೆ ಮತ್ತು ಅಸಮಾನತೆಗಳ ವಿರುದ್ಧ ಚಂಡುಮಾರುತವಾಗಿ ಬೀಸಿ ಜ್ವಾಲಮುಖಿಯಾಗಿ ಉಕ್ಕಿದರು. ಸಾವಿರಾರು ವರ್ಷಗಳಿಂದ ನಿಂತಲ್ಲೇ ನಿಂತಿದ್ದ ಭಾರತದ ಸಮಾಜಿಕ ವ್ಯವಸ್ಥೆಯ ದಿಕ್ಕನು ಬದಲಿಸಿ ಅದು ಹರಿಯುವಂತೆ ಮಾಡಿದರು. ಜಾತಿವಾದಿ ಪಾಪಾಹಪಂಡಿತರಗಳು ಅಂಬೇಡ್ಕರ ಜೊತೆ ಸೈದ್ಧಾಂತಿಕವಾಗಿ ಹೋರಾಟ ಮಾಡಬೇಕಾದ ಸಂದರ್ಭಗಳು ಬಂದರೆ ಪಲಾಯನಗೈಯುತ್ತಿದ್ದರು. 40 ವರ್ಷಗಳ ಕಾಲ ಸತತವಾಗಿ ಅಮಾನತೆಯ ವಿರುದ್ಧ ಹೋರಾಟವನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸಿ ಜಯಗಳಿಸುವಲ್ಲಿ ಯಶಸ್ವಿಯಾದರು. ಅಂಬೇಡ್ಕರ ಎಂದೂ ಸಹ ಅನ್ಯಜಾತಿಯ ಜನಗಳೆಲ್ಲರನ್ನು ಸಾಮೂಹಿಕವಾಗಿ ಟೀಕಿಸಲಿಲ್ಲ. ಬದಲಾಗಿ ಜಾತೀಯತೆಯನ್ನು ಹಾಗೂ ಜಾತಿವಾದಿಗಳನ್ನು ಮಾತ್ರ ಕಟುವಾಗಿ ಟೀಕಿಸುತ್ತಿದ್ದರು. ಈ ದೇಶದ ಎಳಿಗೆಗೆ ಅಡ್ಡ ಗೋಡೆಯಾಗಿರುವ ಅನಿಷ್ಟ ಪದ್ಧತಿಯಾದ ಜಾತಿ ವ್ಯವಸ್ಥೆಯನ್ನು ಈ ನೆಲದಿಂದ ಸಂಪೂರ್ಣವಾಗಿ ಕಿತ್ತೊಗೆದು ಸಮಾನತೆ ಸಮಾಜದ ನವ ಬಲಿಷ್ಟ ಭಾರತ ಕಟ್ಟಲು ಅಂಬೇಡ್ಕರ ತಾವು ಬದುಕಿರುವವರಿಗೂ ಅವಿರತ

ಹೋರಾಟ ನಡೆಸಿದರು.

ಡಾ. ಅಂಬೇಡ್ಕರ್ ಸಂವಹನ ದರ್ಶನ:

ಸಂವಹನ ಮತ್ತು ಸಮೂಹ ಮಾಧ್ಯಮ ಅಧ್ಯಯನ ಅನೇಕ ಸಿದ್ಧಾಂತಗಳು ಸೂತ್ರೀಕರಣ ಕಾರಣವಾಗಿದೆ. ರಚನಾತ್ಮಕ ಮತ್ತು ಕ್ರಿಯಾತ್ಮಕ ಸಿದ್ಧಾಂತಗಳು ಸಾಮಾಜಿಕ ರಚನೆಗಳು ವಸ್ತು ನಿಷ್ಠವಾಗಿ ಕಾಣಬಹುದು. ಅರಿವಿನ ಮತ್ತು ವರ್ತನೆಯ ಸಿದ್ಧಾಂತಗಳು ವ್ಯಕ್ತಿಗಳ ಮನೋವಿಜ್ಞಾನ ಒಲವು ಸಿದ್ಧಾಂತಗಳು ಪರಸ್ಪರ ಒಂದು ಪ್ರಕ್ರಿಯೆ ಎಂದು ಸಮಾಜಿಕ ಜೀವನ ವೀಕ್ಷಿಸಲು ವಿವರಣಾತ್ಮಕ ಸಿದ್ಧಾಂತಗಳು ಆಗಿವೆ. ಹುಟ್ಟಿನಿಂದ ಹಿಡಿದು ಮರಣದವರೆಗೆ ಡಾ. ಅಂಬೇಡ್ಕರ್ ಬದುಕಿನ ಬಗೆ ಇದೆಯಲ್ಲಾ ಅದು ರೋಚಕ, ವಿಸ್ಮಯಕಾರಿ, ಕುತೂಹಲಭರಿತ ಇದಕ್ಕಿಂತ ಹೆಚ್ಚಾಗಿ ೬೫ ವರ್ಷಗಳ ತಮ್ಮ ತುಂಬು ಜೀವನದಲ್ಲಿ ಒಂದು ಸಿದ್ಧಾಂತವನ್ನು ಇಟ್ಟಿಕೊಂಡು ಬಂದಿದ್ದರು.

ಸ್ವಾತಂತ್ರ್ಯವನ್ನು ಸಮಾನತೆಯಿಂದ ಬೇರ್ಪಡಿಸುವಂತಿಲ್ಲ. ಹಾಗೆಯೇ ಸ್ವಾತಂತ್ರ್ಯ ಮತ್ತು ಸಮಾನತೆ ಇವುಗಳನ್ನು ಸಹೋದರತೆಯಿಂದ ಬೇರ್ಪಡಿಸುವಂತಿಲ್ಲ. ಎಲ್ಲಿ ಸಮಾನತೆ ಇರುವುದಿಲ್ಲವೋ ಅಲ್ಲಿ ಸ್ವಾತಂತ್ರ್ಯ ಎನ್ನುವುದು ಬಹುಸಂಖ್ಯಾತರ ಮೇಲೆ ಅಲ್ಪಸಂಖ್ಯಾತರು ನಡೆಸುವ ಅಧಿಕಾರ ಆಗುತ್ತದೆ. ಸ್ವಾತಂತ್ರ್ಯ ಇಲ್ಲದ ಸಮಾನತೆಯನ್ನು ವ್ಯಕ್ತಿತ್ವವನ್ನು ನಾಶಗೋಳಿಸುತ್ತದೆ. ಸೋದರತೆ ಇಲ್ಲದೆ ಸಮಾನತೆ ಮತ್ತು ಸ್ವಾತಂತ್ರ್ಯ ಇವು ಸುಸೂತ್ರವಾಗಿ ನಡೆಯುವಂತಿಲ್ಲ. ಎಲ್ಲಿ ಶೋಷಣೆ ಇಲ್ಲವೋ ಎಲ್ಲಿ ಒಂದು ವರ್ಗದ ಮೇಲೆ ಇನ್ನೊಂದು ವರ್ಗದ ದಬ್ಬಾಳಿಕೆ ಇರುವುದಿಲ್ಲವೋ ಎಲ್ಲಿ ನಿರುದ್ಯೋಗ, ಬಡತನ ಗಳು ಇಲ್ಲವೋ ಎಲ್ಲಿ ವ್ಯಕ್ತಿಗೆ ತನ್ನ ಕ್ರಿಯೆಯ ಪರಿಣಾಮವಾಗಿ ಉದ್ಯೋಗ, ಮನೆ, ಆಹಾರಗಳನ್ನು ಕಳೆದುಕೊಳ್ಳುವ ಭೀತಿ ಇರುವುದಿಲ್ಲವೋ ಅಲ್ಲಿ ನಿಜವಾದ ಸ್ವಾತಂತ್ರ್ಯ ಇರುತ್ತದೆ. ಈ ಮೇಲಿನ ಎಲ್ಲ ಹೇಳಿಕೆಗಳನ್ನು ಡಾ. ಬಾಬಾ ಸಾಹೇಬರ ಸಿದ್ಧಾಂತ ಗಳಲ್ಲಿ ಅಡಗಿವೆ.

ಸಂವಹನಕಾರ ಡಾ. ಅಂಬೇಡ್ಕರ್

ಡಾ. ಅಂಬೇಡ್ಕರರನ್ನು ಸಂವಹನಕಾರರನ್ನಾಗಿ ಅಧ್ಯಯನ ಮಾಡು ವಾಗ ಬಹುಶಃ ಅನೇಕ ವಿಚಾರಗಳು ಬೆಳಕಿಗೆ ಬರುವಂತೆ ತೋರುತ್ತ ದೆ. ೧೯೨೦ರಿಂದ ೧೯೫೬ರ ವರೆಗೆ ಸುಮಾರು ಮೂರುವರೆ ದಶಕಗಳ ಕಾಲ ನಿತಂತರವಾಗಿ ಪತ್ರಕರ್ತರಾಗಿ ದುಡಿದ ಅಂಬೇಡ್ಕರರು ಆ ಮೂರುವರೆ ದಶಕಗಳು ಅವರು ನಡೆಸಿಕೊಂಡು ಬಂದ ಒಟ್ಟು ನಾಲ್ಕು ಪತ್ರಿಕೆಗಾಳಾದ 'ಮೂಕನಾಯಕ' 'ಬಹಿಷ್ಕೃತ ಭಾರತ' 'ಜನತಾ' ಹಾಗೂ 'ಪ್ರಬುದ್ಧ ಬಾರತ' ಈ ಪತ್ರಿಕೆಗಳ ಹೆಸರೆ ಒಂದು ವಿಶೇಷ. ಅಸ್ಪೃಶ್ಯರ ಮಾನವ ಸ್ವಾತಂತ್ರ್ಯದ ಹೋರಾಟಕ್ಕಾಗಿ ಒಂದು ತಾತ್ವಿಕ ಭೂಮಿಕೆಯ ನಿರ್ಮಾರ್ಣದಲ್ಲಿ ತೊಡಗಿದ ಡಾ. ಅಂಬೇಡ್ಕರರ ಪತ್ರಿಕಾ ಬರಹಗಳು, ವೈಕ್ತಿಕ ನೋವು ಸಂಕಟಗಳ ಮೂಲಪ್ರಸ್ಥಾನದಿಂದಲೇ ಮೂಡಿ ಬಂದವು. ಬಹುಶಃ ಡಾ. ಅಂಬೇಡ್ಕರರು ಆ ಕಾಲದಲ್ಲಿ ತಮ್ಮ ಸಾರ್ವಜನಿಕ ಜೀವನದ ಪ್ರವೇಶಕ್ಕೆ ಅಂದು ಅವರು ಪತ್ರಿಕೋದ್ಯಮ ವನ್ನು ಆರಿಸಿಕೊಳ್ಳದೇ ಹೋಗಿದ್ದಲ್ಲಿ ವಯಕ್ತಿಕವಾಗಿ ಅಭಿವ್ಯಕ್ತಿ ವಂಚನೆಯಿಂದ ಅವರು ನರಳಬೇಕಾಗಿದ್ದದು ಮಾತ್ರವಲ್ಲದೆ, ಅದಕಿಂತಲೂ ಮುಖ್ಯವಾಗಿ ರಾಷ್ಟ್ರೀಯ ಸ್ವಾತಂತ್ರ್ಯದ ಜೋತೆ ಜೋತೆಗೇ ಅಸ್ಪೃಶ್ಯರ ಸರ್ವರೀತಿಯ ಸ್ವಾತಂತ್ರ್ಯದ ವಿಷಯ ಕೂಡ ಇತ್ಯರ್ಥವಾಗಬೇಕೆಂಬ ಅತ್ಯಂತ ಜರೂರಿನ ಸಮಸ್ಯೆಯತ್ತ ಬ್ರಿಟಿಷ್ ಸರ್ಕಾರ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯದ ಆಂದೋಲನ ಇವೆರಡರ ಗಮನವನ್ನು ಏಕತ್ರ ಸೆಳೆದುಕೊಳ್ಳಲು ಡಾ. ಅಂಬೇಡ್ಕರ ರಿಗೆ ಸಾಧ್ಯವಾದದ್ದು ಕೂಡ ಅವರು ಆರಿಸಿಕೊಂಡ ಪತ್ರಿಕೋದ್ಯ ಮದ ಮೂಲಕ.

ಅಂಬೇಡ್ಕರರ ಪತ್ರಿಕೋದ್ಯಮ ನಡೆದ್ದದ್ದಲ್ಲಾ ಒಂದು ಸ್ಥಳೀಯ ಭಾಷೆಯಲ್ಲಿ. ಅದು ಮರಾಠಿಯಲ್ಲಿ. ಪತ್ರಿಕೆ ಮಾರಾಠಿಯಲ್ಲಿ ಇದ್ದಿದರಿಂದ ಪತ್ರಿಕೆಗೊಂದು ಭಾಷಾ ಪರಿಮಿತಿ ಸೃಷ್ಟಿಯಾದುದು ಕೂಡ ಸ್ವಾಭಾವಿಕವಾಗಿಯೇ ಇದೆ. ಅಂದರೆ ಮಹಾರಾಷ್ಟ್ರ ಪ್ರಾಂತ್ಯದ ಅಸ್ಪೃಶ್ಯರ ಸಮಸ್ಯೆಗಳನ್ನು ಈ ಪತ್ರಿಕೆಯಲ್ಲಿ ನಿರಂತರವಾಗಿ ಚರ್ಚೆಯಾಗುತ್ತಾ ಇದ್ದವು. ಅದರಲ್ಲಿ ಅಸ್ಪೃಶ್ಯರ ಗುಡಿ ಪ್ರವೇಶ ಚಳುವಳಿಯಾಗಲಿ, ಸಾರ್ವಜನಿಕ ನೀರಿನ ತಾಣಗಳು, ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ದಲಿತರ ಹಕ್ಕಿನ ವಿಷಯವಾಗಲಿ ಅಥವಾ ಅವರ ಸಮಸ್ಯೆಗಳತ್ತ ಅಂದಿನ ಮನುವಾದಿ ಪತ್ರಿಕೆಗಳು ತೋರಿದ ನಿರ್ಲಕ್ಷ್ಯ ಧೋರಣೆಯಾಗಲಿ, ಕೇವಲಸ್ಥಳೀಯ ಸಮಸ್ಯೆಗಳು ಮಾತ್ರವಾಗಿ ಉಳಿಯದೆ ಅವು ರಾಷ್ಟ್ರೀಯ ಸಮಸ್ಯೆಗಳು ಕೂಡ ಆಗಿದ್ದವು ಎಂಬುದನ್ನು ಮರೆಯುವ ಂತಿಲ್ಲ. ಅಂತಹ ಹಲವಾರು ಸಮಸ್ಯೆಗಳನ್ನು ಅಂಬೇಡ್ಕರ ರು ಸಂವಹನಕಾರರಾಗಿ ಚರ್ಚಿಸಿರುವುದನ್ನು ನಾವು ಕಾಣಬಹುದು. 'ಬಹಿಷ್ಕೃತ ಭಾರತ'ದಲ್ಲಿ ಅಂದು ಪ್ರಕಟವಾದ ಅಂಬೇಡ್ಕರರ ನೂರಾರು .ಲೇಖನಗಳು ಇಂದು ಉಪಲಬ್ಧವಿವೆ. ಅದರಲ್ಲೂ ಮುಖ್ಯ ಮತ್ತು ಅಮುಖ್ಯ ಎಂಬ ತಲೆಬರಹದಡಿಯಲ್ಲಿ ಅವುಗಳನ್ನು ವಿಂಗಡಿಸುವುದು ಅತ್ಯಂತ ಮುಖ್ಯವಾದ ಕೆಲಸ.

೧) ಅಸ್ಪೃಶ್ಯರ ಸಮಸ್ಯೆಗಳು ಹಾಗೂ ಹಿಂದೂ ಪತ್ರಿಕೆಗಳು
೨) ಅಸ್ಪೃಶ್ಯರು ಹಾಗೂ ಹಿಂದೂ ಸಂಘಟನೆಗಳು
೩) ಅಸ್ಪೃಶ್ಯರು ಹಾಗೂ ಕಮ್ಯೂನಿಸ್ಟ್ ಕ್ರಾಂತಿ
೪) ಅಸ್ಪೃಶ್ಯರು ಹಾಗೂ ಬ್ರಿಟಿಷ್ ಸರ್ಕಾರ
೫) ಅಸ್ಪೃಶ್ಯರು ಹಾಗೂ ಮನುಸ್ಮೃತಿಯ ದಹನ

ಅಸ್ಪೃಶ್ಯರು ಸಮಸ್ಯೆಗಳು ಹಾಗೂ ಹಿಂದೂ ಪತ್ರಿಕೆಗಳು ಎಂಬ ವಿಷಯ ವಾಸ್ತವವಾಗಿಯೇ ಅತ್ಯಂತ ಗಂಭೀರವಾದುದು. ಏಕೆಂದರೆ ಅಂಬೇಡ್ಕರರು ಅಸ್ಪೃಶ್ಯರನ್ನೂ ಅವರ ಸಮಸ್ಯೆ ಸಂಕೋಲೆ ಗಳನ್ನೆಲ್ಲಾ ಮಡಿವಂತ ಹಿಂದೂ ಪತ್ರಿಕೆಗಳು ಬಹು ದೂರದಲ್ಲೇ ಇಟ್ಟಿದ್ದವು. ಅದರಲ್ಲಿ ಬಾಲಗಂಗಾಧರ ತಿಲಕರ ಕೇಸರಿ ಪತ್ರಿಕೆಯು ಕೂಡ ಇದರಿಂದ ಹೊರತಾಗಲಿಲ್ಲ. ಅಸ್ಪೃಶ್ಯರು ಪತ್ರಿಕೆ ಆರಂಭಿಸುವ ುದನ್ನು ತಿಲಕರೂ ಅವರ ಅನುಯಾಯಿಗಳೂ ತೀವ್ರ ಅಸಹನೆ ಯಿಂದ ನೋಡಿದ್ದು . ಆ ಬಗ್ಗೆ ಅಂಬೇಡ್ಕರರು ಹೀಗೆ ಬರೆಯು ತ್ತಾರೆ: ೧೯೧೯ ರಲ್ಲಿ ನಾವು 'ಮೂಕನಾಯಕ' ಪತ್ರಿಕೆಯನ್ನು ಪ್ರಾರಂಭಿಸುವಾಗ 'ಕೇಸರಿ' ಪತ್ರಿಕೆಯಲ್ಲಿ ನಮ್ಮ ಜಾಹೀರಾತನ್ನು ಪ್ರಕಟಿಸುವಂತೆ ವಿನಂತಿಸಿದರು ಅವರು ಪ್ರಕಟಿಸಲಿಲ್ಲ. ಆಮೇಲೆ ಅದಕ್ಕೆ ತಗಲುವ ವೆಚ್ಚಕೂಡ ಕೊಡುತ್ತೇವೆ ಮುದ್ರಿಸಿ ಎಂದು ಕೇಳಿದರು ನಮ್ಮ ಪತ್ರಿಕೆಯಲ್ಲಿ ಸ್ಥಳ ಖಾಲಿ ಇಲ್ಲ ಎಂಬ ಉತ್ತರ

ನೀಡಿದರು.

ಈಗ ಮನುಸ್ಮೃತಿಯ ದಹನದ ಬಗ್ಗೆ ದೇಶಾದ್ಯಂತ ಆ ಕಾಲದಲ್ಲಿ ಉಂಟಾದ ವಿವಾದಗಳ ಸ್ವರೂಪವನ್ನು ಆ ಬಗ್ಗೆ ಅಂಬೇಡ್ಕರರು ತೋರಿದ ಪ್ರತಿವಾದವನ್ನು ಇನ್ನು ಮುಂದು ನೋಡಬಹುದು. "ಧುಳೆಯಿಂದ ಪ್ರಕಟವಾಗುತ್ತಿದ್ದ' ಪ್ರಭೋದ' ಪೇಣದಿಂದ ಪ್ರಕಟವಾಗುತ್ತಿದ್ದ 'ಕುಲಾಬಾ ಸಮಾಚಾರ' ಮುಂಬಯಿಯ 'ರಣಗರ್ಜನೆ' ಮತ್ತು ಪುಣೆಯ 'ಬಾಲಾ' ಮುಂತಾದ ಹಲವಾರು ಮರಾಠಿ ಪತ್ರಿಕೆಗಳು ಮನುಸ್ಮೃತಿಯನ್ನು ದಹಿಸಿದ್ದಕ್ಕಾಗಿ ಅತ್ಯಂತ ಅವಮಾನಕಾರಕವಾದ ಹಾಗೂ ಅವಾಚ್ಯ ಶಬ್ದಗಳಿಂದ ಅಂಬೇಡ್ಕರರನ್ನು ಬೈದು ಬರೆದಿರುವ ಮರಾಠಿ ಬರಹಗಳನ್ನು ನೋಡಬಹುದಾಗಿದೆ. ಅಷ್ಟೆಲ್ಲ ಅವಾಚ್ಯ ಶಬ್ದಗಳಿಂದ ಬೈದ ನಂತರವೂ ಆ ಎಲ್ಲಾ ಪತ್ರಿಕೆಗಳು ಕೇಳಿದ ಒಂದೇ ಒಂದು ಪ್ರಜ್ಞಾವಂತ ಪ್ರಶ್ನೆ ಏನೆಂದರೆ "ಮನುಸ್ಮೃತಿಯನ್ನು" ಸುಟ್ಟು ಅಂಬೇಡ್ಕರರು ಸಾಧಿಸಿದ್ದೇನು? ಈ ಪ್ರಶ್ನೆಗೆ ಅಂಬೇಡ್ಕರರು ನೇರವಾಗಿ ಹೀಗೆ ಉತ್ತರ ಹೇಳುತ್ತಾರೆ 'ಅಸಹಕಾರ ಚಳುವಳಿಯಲ್ಲಿ ವಿದೇಶಿ ಬಟ್ಟೆಗಳನ್ನು ಸುಟ್ಟು ಗಾಂಧಿಯವರು ಸಾಧಿಸಿದ್ದೇನು?

೨) ಅಸ್ಪೃಶ್ಯರು ಹಾಗೂ ಹಿಂದೂ ಸಂಘಟನೆಗಳು

ಮಾತಿಲ್ಲದೆ ಮೂಕರಾಗಿದ್ದ ಮಾನವರನ್ನು ಜಾಗೃತಗೊಳಿಸುತ್ತಾ ನಡೆದ ಅಂಬೇಡ್ಕರರ ಪತ್ರಿಕಾ ಗರ್ಜನೆ ಕೇವಲ ಮಹಾರಾಷ್ಟ್ರದ ಅಸ್ಪೃಶ್ಯರನ್ನಷ್ಟೇ ಸಂಘಟಿಸುತ್ತಾ ನಡೆದರೂ ಅದು ಇಡೀ ರಾಷ್ಟ್ರೀಯ ಆಂದೋಲನದ ಗಮನ ಸೆಳೆದ್ದು ಅವರ ಪತ್ರಿಕಾ ಗರ್ಜನೆಯ ಉದ್ದೇಶಚಾಚೆಗಿನ ಮಹತ್ವದ ಸಾಧನೆ ಎಂದೇ ಹೇಳಬಹುದು. ಪತ್ರಿಕಾ ಮಾಧ್ಯಮದ ಮೂಲಕ ಅಂಬೇಡ್ಕರರು ಪತ್ರಿಪಾದಿಸಿದ ವಿಚಾರ ಸರಣಿಯನ್ನು ಸದ್ಯ ರಾಜಕೀಯ ವಿಚಾರಗಳಿಂದ ಸ್ವಲ್ಪ ಬೇರ್ಪಡಿಸಿ ಆ ಯುಗದಲ್ಲಿ ಅಸ್ಪೃಶ್ಯರ ದೃಷ್ಟಿಯಲ್ಲಿ ಅತ್ಯಂತ ಮಹತ್ವದ ಸಂಘಟನೆಯಗಳು ಎಂದೆನಿಸಿದ್ದ ಎರಡು ಹಿಂದೂ ಸಂಘನೆಗಳನ್ನು ಮಾತ್ರ ಇಲ್ಲಿ ಮುಖ್ಯವಾಗಿ ಪ್ರಸ್ತಾಪಿಸಬಹುದಾಗಿದೆ. ಅವುಗಳೆಂದರೆ ಒಂದು ದಯಾನಂದ ಸರಸ್ವತೀಯವರ 'ಆರ್ಯಸಮಾಜ' ಇನ್ನೊಂದು ವಿಡಿ ಸಾವರಕರ್‌ರವರ 'ಹಿಂದೂ ಮಹಾಸಭಾ'

ಈ ಎರಡು ಸಂಘಟನೆಗಳ ಚಾರಿತ್ರಿಕ ಅಂಶಗಳ ಬಗ್ಗೆ ಚರ್ಚೆ ಮಾಡುವಾಗ ಹಲವಾರು ಮುಖ್ಯ ವಿಚಾರಗಳು ಬೆಳಕಿಗೆ ಬರಲು ಸಾಧ್ಯವಿದೆ. ಏಕೆಂದರೆ ಈ ಬಗ್ಗೆ ಅನ್ಯರು ವಿಚಾರ ಮಾಡುವುದಕ್ಕೂ ಅಸ್ಪೃಶ್ಯರು ವಿಚಾರ ಮಾಡುವುದಕ್ಕೂ ಇರುವ ಕೆಲವು ಮೂಲಭೂತ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಉದಾಃ ಈ ಎರಡು ಹಿಂದೂ ಸಂಘಟನೆಗಳ ಸ್ಥಾಪನೆಯ ಮೂಲ ಉದ್ದೇಶ ಏನೆಂಬುದನ್ನು ಇಲ್ಲಿ ಮೊದಲು ನೆನೆಯುವುದು ಅಗತ್ಯ. ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದೂ ಧರ್ಮದ ಎಲ್ಲ ಬಗೆಯ ಅನಿಷ್ಟಗಳನ್ನು ಮೂಲೋತ್ಪಾಟನೆ ಮಾಡುವುದೇ ಆರ್ಯ ಸಮಾಜದ ಮೂಲ ಗುರಿಯಾಗಿತ್ತೆಂಬುದನ್ನು ಅದರ ಸಂಸ್ಥಾಪಕರಾದ ದಯಾನಂದ ಸರಸ್ವತೀಯವರ ಜೀವನ ಹಾಗೂ ಹೋರಾಟದ ಚರಿತ್ರೆಯಿಂದ ತಿಳಿಯಬಹುದಾಗಿದೆ. ಅದೇ ಪ್ರಕಾರ ಭಾರತದಲ್ಲಿ ಮತಾಂತರವನ್ನು ತಡೆಗಟ್ಟುವುದೇ ಅಲ್ಲದೆ ಈಗಾಗಲೇ ಮತಾಂತರಗೊಂಡಿರುವ ವರನ್ನು ಶೂದ್ಧೀಕರಣಕ್ಕೆ ಒಳಪಡಿಸುವುದೇ ಹಿಂದೂ ಮಹಾಸಭೆಯ ಮೂಲ ಉದ್ದೇಶವೆಂಬುದನ್ನು ಅದರ ಸಂಸ್ಥಾಪಕರಾದ ವಿನಾಯಕ ದಾಮೋದರ ಸಾವರ್ಕರ್‌ವರ ಜೀವನ ಹಾಗೂ ವಿಚಾರಗಳಿಂದ ಮನಗಾಣಬಹುದು.

ಈ ಯುಗದಲ್ಲಿ ಅದರಲ್ಲೂ ರಾಷ್ಟ್ರದಲ್ಲಿ ಪ್ರಜಾಡಳಿತವನ್ನು ನೆಲೆಗೊಳಿಸಬೇಕಾಗಿದ್ದ ಈ ನಿರ್ಣಾಯಕ ಸಂದರ್ಭದಲ್ಲಿ ಒಬ್ಬ ದಿಟ್ಟ ಹೋರಾಟದ ಪತ್ರಕರ್ತರಾಗಿ ಅಂಬೇಡ್ಕರರು ಮಾಡಿದ ಬಹುದೊಡ್ಡ ಕಾರ್ಯದ ಸ್ವರೂಪವನ್ನಾದರೂ ಇಲ್ಲ ಮನಗಾಣಬೇಕಾಗುತ್ತದೆ. ಅರಲ್ಲೂ ಹಿಂದೂ ಸಂಘಟನೆಗಳ ಹಾಗೂ ಅವುಗಳ ನಾಯಕರ ಈ ನಿಗೂಢ ಮರ್ಮಗಳನ್ನು ಪ್ರಗತಿಪರವಾದ ಅಂದಿನ ಜನಸಮುದಾಯಕ್ಕೂ ಬ್ರಟಿಷ್ ಸರ್ಕಾರಕ್ಕು ಮನವರಿಕೆ ಮಾಡಬೇಕಾದದು ಕೂಡ ಪತ್ರಕರ್ತರಾಗಿ ಡಾ. ಅಂಬೇಡ್ಕರರ ಕರ್ತವ್ಯವಾಗಿತ್ತು. ಇದನ್ನೇ ಇನ್ನೊಂದು ಮಾತಿನಲ್ಲೂ ಹೇಳುವುದಾದರೆ ಒಬ್ಬ ಪತ್ರಕರ್ತರೂ ಅಂದಿನ ದಲಿತ ವರ್ಗಗಳ ನಾಯಕರೂ ಆಗಿದ್ದ ಅಂಬೇಡ್ಕರರ ಮುಂದೆ ಅತ್ಯಂತ ಮುಖ್ಯವಾದ ಎರಡು ಸಮಸ್ಯೆಗಳಿದ್ದವು. ಅಸ್ಪೃಶ್ಯರ ಮೇಲಿನ ಹಿಂದೂಧರ್ಮದ ದಬ್ಬಾಳಿಕೆಯನ್ನು ಹಿಂದೂಗಳೇ ತಮ್ಮ ನಾಯಕರು ಎಂಬುದನ್ನು ಒಪ್ಪಿಕೊಂಡು ತನ್ನ ಜನಾಂಗ ಸ್ವತಂತ್ರ ಭಾರತದಲ್ಲೂ ಎರಡನೆ ದರ್ಜೆಯ ಪ್ರಜೆಗಳಾಗಿ ಬದುಕುವುದು. ಅಥವಾ ಒಂದು ವೇಳೆ ಆ ಎರಡನೆಯ ದರ್ಜೆಯ ಪ್ರಜೆಗಳಾಗುವುದು ಇಷ್ಟವಿಲ್ಲದಿದ್ದಲ್ಲಿ ಸ್ವತಂತ್ರವಾಗಲಿರುವ ರಾಷ್ಟ್ರದಲ್ಲಿ ರಾಜಕೀಯವಾಗಿ ತಾನೂ ತನ್ನ ಜನಾಂಗವೂ ಏನಾಗಿರಬೇಕೆಂಬುದನ್ನು ಬ್ರಿಟಿಷ್ ಆಡಳಿತದ ಕಾಲದಲ್ಲೇ ನಿರ್ಣಯಿಸಿಕೊಳ್ಳಬೇಕಾದುದು. ಬಹುಶಃ ನಿಸ್ಸಂದೇಹವಾಗಿ ಈ ಎರಡನೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದೇ ಅತ್ಯಂತ ಅರ್ಥಪೂರ್ಣವೂ ಉಳಿದಿರುವ ಏಕೈಕ ಪರಿಹಾರ ಮಾರ್ಗವೂ ಆಗಿ ಅಂಬೇಡ್ಕರರಿಗೆ ಕಂಡಿರಬೇಕೆಂಬುದಕ್ಕೆ ಅವರ ಆನಂತರದ ಜೀವನ ಹಾಗೂ ಹೋರಾಗಳಿಂದ ವಿಫಲವಾದ ಪುರಾವೇಗಳನ್ನೇ ಕಾಣಬಹುದಾಗಿದೆ.

೩) ಅಸ್ಪೃಶ್ಯರು ಹಾಗೂ ಕಮ್ಯೂನಿಸ್ಟ್ ಕ್ರಾಂತಿ

೧೮ನೇ ಶತಮಾನದ ನಂತರ ಯೂರೋಪಿನ ಅನೇಕ ರಾಷ್ಟ್ರಗಳಲ್ಲಿ ಕಾರ್ಲ್‌ಮಾರ್ಕ್ಸ್‌ನ ಚಿಂತೆನೆಯಿಂದ ಘಟಿಸಿದ ಜನಪರ ಆರ್ಥಿಕ ಆಂದೋಲನ ಕಮ್ಯೂನಿಸ್ಟ್ ಆಂದೋಲನವಾಗಿ ಪರಿವರ್ತೆನೆಗೊಂಡಿತು. ತತ್ಪರಿಣಾಮವಾಗಿ ಅಲ್ಲಿನ ಹಲವಾರು ರಾಷ್ಟ್ರಗಳ ಸಮಸ್ತ ಜೀವನ ವಿಧಾನವನ್ನೇ ಬದಲಾಯಿಸಿದ ಏಕೈಕ ಸಿದ್ಧಾಂತ ಕಮ್ಯೂನಿಸ್‌ಂ ಎಂಬುದು ಜನಜನಿತ ಚರಿತ್ರೆಯಾಗಿದೆ. ಉಳ್ಳವರು ಉಳ್ಳವರಾಗಿಯೇ ಇಲ್ಲದವರು ಇಲ್ಲದವರಾಗಿಯೇ ಮುಂದುವರೆಯುತ್ತಿದ್ದ ಮತ್ತು ಅವರು ಹಾಗೆ ಮುಂದುವರಿಸ ಬೇಕೆಂದು ಹವಣಿಸಿದ ಯಥಾಸ್ಥಿತಿವಾದಿಗಳನ್ನು ಸಹಜ ಪರಿವರ್ತನಶೀಲ ಜಾಯಮಾನದ ಹಾದಿಗೆ ತಂದುದೇ ಕಮ್ಯೂನಿಸ್ ಂನ ಬಹುದೊಡ್ಡ ಸಾಧನೆ. ಈ ಮಹತ್ಸಾಧನೆಯ ಗರ್ಭದಲ್ಲಿ ರಾಜಕೀಯ ಪರಿರ್ತನೆಗಳು ಘಟಿಸಿದವು. ಆರ್ಥಿಕ ಬದಲಾವಣೆ ಗಳು ಜನಿಸಿದವು. ಜನರ ಜೀವನ ಮಟ್ಟಗಳು ನಿರಂತರ ಬದಲಾವಣೆ ಯ ಗತಿವೃತ್ತಕ್ಕೆ ತಕ್ಕೆಬಿದ್ದು ಜನಜೀವನ ಮಟ್ಟಗಳು ಜೀವನ ವಿಧಾನಗಳು

ಸ್ವಾಭಾವಿಕವಾಗಿಯೇ ಸುಧಾರಿಸತೊಡಗಿದವು.

ಅಂಬೇಡ್ಕರರ ಲೇಖನದಲ್ಲಿ ಮೂರನೆಯದು ಮತ್ತು ಮುಖ್ಯವಾದುದು ಆದ ಅಂಶವೆಂದರೆ, ಕಮ್ಯೂನಿಸ್ಂ ಕೇವಲ ಒಂದು ರಾಜನೀತಿ ಮಾತ್ರವಲ್ಲದೆ, ಸಾಮಾಜಿಕ ನೀತಿಯೂ ಅದರಲ್ಲಿ ಅಂತರ್ಗತವಾಗಿದೆ ಎಂಬುದು ಅಂಬೇಡ್ಕರರ ಅಭಿಪ್ರಾಯವಾಗಿದ್ದು, ಬಹುಶಃ ಇಂಡಿಯಾದ ಕಮ್ಯೂನಿಸ್ಟ್ ಚಳುವಳಿ ಈ ಸತ್ಯವನ್ನು ಅರ್ಥಮಾಡಿಕೊಂಡಿಲ್ಲವೆಂಬುದೇ ಅಂಬೇಡ್ಕರರ ಅಭಿಪ್ರಾಯದ ಮೂಲ ಧೋರಣೆ ಎನಿಸುವಂತಿದೆ. ಇದಕ್ಕಿರುವ ಸಾಮಾನ್ಯ ಕಾರಣ, ಬಹುಶಃ ಜನಜನಿತವಾದುದು; ಏಕೆಂದರೆ, ಇಂಡಿಯಾದಲ್ಲಿರುವ ಜಾತಿವ್ಯವಸ್ಥೆ ಇಂಡಿಯಾದಲ್ಲಿ ಮಾತ್ರ ಇದೆಯೇ ಹೊರತು, ಅದು ರಷ್ಯಾದಲ್ಲೂ ಇಲ್ಲ, ಚೈನಾದಲ್ಲೂ ಇಲ್ಲ, ಅದೂ ಅಲ್ಲದೆ, ಇಂಡಿಯಾದ ಕಮ್ಯೂನಿಸ್ಟ್ ಚಳುವಳಿಯ ಮುಖಂಡರೆಲ್ಲ ಬಹುತೇಕ ಮೇಲಿನ ಜಾತಿಗಳಿಂದ ಬಂದವರೇ ಆಗಿರುವ ವಾಸ್ತವ ಸತ್ಯವನ್ನು ಇಲ್ಲಿ ಕಾಣುತ್ತೇವೆ.

ಅಂಬೇಡ್ಕರರ ಸಂಪಾದಕತ್ವದಲ್ಲಿ ಪ್ರಕಟಗೊಳ್ಳುತ್ತಿದ್ದ "ಬಹಿಷ್ಕೃತ ಭಾರತ" ಎಂಬ ವಾರಪತ್ರಿಕೆಯಲ್ಲಿನ ಸ್ಪಷ್ಟವಾದ ಲೇಖನಗಳೇ ಆಗಲಿ , ಸಂಪಾದಕೀಯವೇ ಆಗಲಿ, ತುಂಬಾ ಗಂಭೀರವೂ , ವಿದ್ವತ್‌ಪೂರ್ಣವೂ ಆಗಿರುತ್ತಿದ್ದವು ಎಂಬುದನ್ನು ಸುಲಬವಾಗಿಯೇ ಗುರುತಿಸಬಹುದಾಗಿದೆ. ಆದರೆ, ಅವೆಲ್ಲವೂಗಳ ಪರಮ ಧ್ಯೇಯ ಒಂದೇ ಒಂದು; ಅದು, ಪತ್ರಕರ್ತರಾಗಿ ಅಮಬೇಡ್ಕರರು ಒಂದು "ಜನಪರ ಚಳುವಳಿ"ಯನ್ನು ಕಟ್ಟಬೇಕಿತ್ತು; ಎಲ್ಲ ರೀತಿಯ ಅನ್ಯಾಯಗಳು ಮತ್ತು ಅವಹೇಳನಗಳು ಶಾಸನವೂ ಶಾಸ್ತ್ರಪ್ರಣೀತವೂ ಆಗಿದ್ದ ಸಮಾಜದಲ್ಲಿ, ಸಾಮಾಜಿಕ ನ್ಯಾಯವನ್ನು ನೆಲೆಗೊಳ್ಳಬೇಕಿತ್ತು; ಅದೂ ಪತ್ರಕರ್ತರಾಗಿ. ಎಂತೆಲೇ ತಮ್ಮೆದುರಿಗಿದ್ದ ಸಮಾಜದ ದೈನಂದಿನ ಜೀವನದಲ್ಲಿನ, ಜನಮನದ ಮರೆಯಲ್ಲಿ ಅಡಗಿದ್ದ ಎಲ್ಲ ರೀತಿಯ ಜನವಿರೋಧಿ ನೀತಿ ನಡಾವಳಿಗಳನ್ನೆಲ್ಲ ಕಡುಗಿಚ್ಚಿನ ಗರ್ಭದಲ್ಲಿರಿಸಿ, ಅವುಗಳನ್ನು ನಿರಂತರವಾಗಿ ಕರಗಿಸಿ ಕರಗಿಸಿ, ಅವುಗಳನ್ನು ಜನಪರ ಚಳುವಳಿಯ ಧ್ಯೇಯ. ತನ್ಮೂಲಕ, ಜನವಿರೋಧಿ ನೀತಿಗಳು ಜನಪರವಾದ ಉತ್ತ್ಯಾಂತಿಗೂ ಇರುವ ಮೂಲಭೂತ ವಯತ್ಯಾಸವನ್ನು ಪತ್ರಕರ್ತರಾಗಿ ಜನಮಕೆ ಮುಟ್ಟಿಸುವುದು ಅಂಬೇಡ್ಕರರ ಏಕೈಕ ಉದ್ದೇಶವಾಗಿತ್ತು. ಈ ಅಂಶವೂ ಅವರ ಬರಹಗಳಿಂದ ಸಾದರವಾಗಿಯೂ ಸ್ಪಷ್ಟವಾಗುತ್ತದೆ. ಅಥವಾ ಇದನ್ನು ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಯಾರಿಗೆ ಅದರ ಪಥ್ಯವಾಗಲಿ ಆಗದಿರಲಿ ಪತ್ರಕರ್ತನ ವೃತಿ ಒಂದು ದೊಡ್ಡ ಸಾಮಾಜಿಕ ಉದ್ದೇಶವನ್ನು ಒಳಗೊಂಡಿರುತ್ತದೆ ಎಂಬುದನ್ನು, ಪತ್ರಕರ್ತರಾಗಿ ಅಂಬಡ್ಕರರು ತಮ್ಮ ಹಲವಾರು ಲೇಖನಗಳಲ್ಲೂ ಸಂಪಾದಿಕೀಯದಲ್ಲಿಯೂ ವ್ಯಕತಪಡಿಸಿರುವದನ್ನು ಕಾಣಬಹುದಾಗಿದೆ.

ನಾಗರೀಕ ಹಕ್ಕುಗಳಿಗಾಗಿ ಸಾಮಾಜಿಕ ಸಮಾನತೆಗಾಗಿ ಅಸ್ಪೃಶ್ಯರು ಸಂಘಟಿಸಿದ ವ್ಯವಸ್ಥಿತ ಆಂದೋಲನದ ಆರಂಭದ ಬಿಂದು. 'ಚೌದಾರಕೆರೆಯ ಸತ್ಯಾಗ್ರಹ' ಹಾಗೆಯೇ ಆ ಸತ್ಯಗ್ರಹದಲ್ಲಿ ದಲಿತರು ಸೃಷ್ಟಿಸಿದ ಒಂದು ಅವಿಸ್ಮರಣೆಯ ದಾಖಲೆ ಎಂದರೆ 'ಮನುಸ್ಮೃತಿ'ಯ ದಹನ. ಮಹಾಡ ಸತ್ಯಾಗ್ರಹದ ಮೂಲ ಉದ್ದೇಶ ಆ ನಗರದ ಚೌದರ ಕೆರಯ ನೀರನ್ನು ಉಪಯೋಗಿಸಲು ಅಸ್ಪೃಶ್ಯರು ತಮ್ಮ ನಾಗರೀಕ ಹಕ್ಕುಗಳನ್ನು ಪ್ರತಿಷ್ಠಾಪಿಸುವುದು. ಬಹುಶಃ ಈ ಮೊಕದ್ದಮೆಯ ನಾಯತ್ಮಕ ಅಂಶವನ್ನು ಒಂದು ಮಾತಿನಲ್ಲಿ ಸೂಚಿಸುವುದಾದರೆ ೧೯೨೩ ರಲ್ಲಿ ಮುಂಬಯಿ ಶಾಸನ ಸಭೆಯ ಸದಸ್ಯರಾಗಿದ್ದ ಸೀತಾರಾಮ ಬೋಲೆಯವರು, ಶಾಸನ ಸಬೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿದ್ದು, ಚೌದಾರಕೆರೆಯ ಮೇಲೆ ಅಸ್ಪೃಶ್ಯರಿಗೆ ಹಕ್ಕಿದೆ ಎಂಬುದನ್ನು ಆ ನಿರ್ಣಯದಲ್ಲಿ ತಿಳಿಸಲಾಗಿತ್ತು. ತದನಂತರದ ಶಾಸನ ಸಭೆಯಲ್ಲಿ ಒಂದು ನಿರ್ಣಯವು ಅಂಗಿಕರಿಸಿ, ಸರ್ಕಾರಿ ವೆಚ್ಚದಲ್ಲಿ ಅನಿರಕ್ಷಿಸಲಾಗುವ ಯಾವುದೇ ಸಾರ್ವಜನಿಕ ನೀರಿನ ಕೇಂದ್ರಗಳು, ಹಾಗೂ ಧರ್ಮಶಾಲಗಳೆ ಮುಂತಾದವುಗಳ ಮೇಲೆ ಅಸ್ಪೃಶ್ಯರಿಗೂ ಸಮಾನವಾದ ಹಕ್ಕಿದೇ ಎಂಬುದನ್ನು ಆ ನಿರ್ಣಯದಲ್ಲಿ ತಿಳಿಸಲಾಯಿತು. ಅಂದರೆ ಈ ಮೊಕದ್ದಮೆಯಲ್ಲಿ ಕಾನೂನಿನ ದೃಷ್ಟಿಯಲ್ಲಿ ಅಂಬೇಡ್ಕರರು ಹಾಗೂ ಅವರ ಅನುಯಾಯಿಗಳಾದ ಅಸ್ಪೃಶ್ಯರು ನ್ಯಾಯಸಮ್ಮತವಾದ ಸ್ಥಾನದಲ್ಲೇ ಇದ್ದರು. ಅಲ್ಲದೆ ನ್ಯಾಯಸಮ್ಮತವಾಗಿಯೇ ಆ ಕರೆಯ ನೀರನ್ನು ಕುಡಿಯೂವ ಮೂಲಕ ಅಂಬೇಡ್ಕರರು ಅದರ ಮೇಲಿನ ಅಸ್ಪೃಶ್ಯರ ಹಕ್ಕುಗಳನ್ನು ವಿದ್ಯುಕ್ತವಾಗಿ ಪ್ರತಿಷ್ಠಾಪಿಸಿದರು.

ಪರಾಮರ್ಶನ ಗ್ರಂಥಗಳು :

೧) ಅಂಬೇಡ್ಕರ್ ಭಾರತೀಯ ಬೆಳಕು– ಡಾ. ವಿ ಮುನಿವೆಂಕಟಪ್ಪ –ಪ್ರ ಪಂಚಶೀಲ ಪ್ರಕಾಶನ ೨೮೫ ಮಧುವನ ೧೦ನೇ ಕ್ರಾಸ್ ಶ್ರೀರಾಂಪುರ ೨ನೇ ಹಂತ ಮೈಸೂರು–೨೦೧೦

೨) ಅಂಬೇಡ್ಕರ್ ಎಂಬ ಕರಗದ ಬಂಡೆ ರಘೋತ್ತಮ ಹೊ.ಬ– ಪ್ರ ಸಾಂಚಿ ಪುಸ್ತಕ ೧೩/೧೮೪ ೩ನೇ ಕ್ರಾಸ್ ಅಂಬೇಡ್ಕರ್ ಬಡಾವಣೆ ಚಾಮರಾಜ ನಗರ–೨೦೧೨

೩) ಅಂಬೇಡ್ಕರ್ ಥಾಟ್ಸ್– ಎಸ್ ಆರ್ ಶಿವರಾಮ –ಪ್ರ ಪಂಚಶೀಲ ಪ್ರಕಾಶನ ೨೮೫ ಮಧುವನ ೧೦ನೇ ಕ್ರಾಸ್ ಶ್ರೀರಾಂಪುರ ೨ನೇ ಹಂತ ಮೈಸೂರು–೨೦೧೦

೪) ಡಾ. ಬಾಬಾ ಸಾಹೇಬ ಅಂಬೇಡ್ಕರ್ ಸಮಗ್ರಹ ಬರಹಗಳು ಮತ್ತು ಭಾಷಣಗಳು (ಸಂಪುಟ) ೭– ಪ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕುವೆಂಪು ಭಾಷಾ ಭಾರತಿ ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ ಮಲ್ಲತ್ತಹಳ್ಳಿ ಬೆಂಗಳೂರು ೫೬೦೦೫೬– ೨೦೦೯

೫) ಕರ್ನಾಟಕ ಸಂಗಾತಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿದಾನ ಸೌಧ, ಬೆಂಗಳೂರು–ಪ್ರ ಕರ್ನಾಟಕ ಸರ್ಕಾರ ೨೦೦೨

೬) ಎದೆಗೆ ಬಿದ್ದ ಗಾಂಧಿ– ರಘೋತ್ತಮ ಹೊ.ಬ –ಪ್ರ ಸಾಂಚಿ ಪುಸ್ತಕ ೧೩/೧೮೪, ೩ನೇ ಕ್ರಾಸ್ ಅಂಬೆಡ್ಕರ್ ಬಡಾವಣೆ– ೨೦೧೪

೭) ದಲಿತ ಗಾಂಧಿ– ಜಿ.ಬಿ ಮಾದೇಶ್– ಪ್ರ ಸಂಜನ ಪ್ರಕಾಶನ ಮುದ್ದೂರು, ಮಂಡ್ಯ ಜಿಲ್ಲೆ –೨೦೧೩

೮) ಮೋಕ್ಷವಾದ ಮತ್ತು ಅಂಬೇಡ್ಕರ್‌ವಾದ– ಎಚ್.ಎಸ್ ಬೇನಾಳ– ಪ್ರ ಸಹನಾ ಪ್ರಕಾಶನ ಗುಲಬರ್ಗಾ–೨೦೧೩

೯) ಗಾಂಧಿ ಹೋರಾಟ ಯಾರ ವಿರುದ್ಧ– ರಘೋತ್ತಮ ಹೊ.ಬ– ಪ್ರ ತಾರಾ ಪ್ರಂಟಿಂಗ್ ಅಂಡ ಪಬ್ಲಿಷಿಂಗ್ ಹೌಸ್ ೨೮೫/ ಎಫ್೬ ೫ನೇ ವೆಸ್ಟ್ ಕ್ರಾಸ್ ಉತ್ತರಾಧಿ ಮಠದ ರಸ್ತೆ ಮೈಸೂರು– ೨೦೧೦

ಹೈದರಾಬಾದ್ ಕರ್ನಾಟಕ ಪತ್ರಿಕೆಗಳ ಐತಿಹಾಸಿಕ ಅಧ್ಯಯನ

ಸರ್ದಾರ ರಾಯಪ್ಪ ಸೊಪ್ಪಿ
ಸಂಶೋಧನಾ ವಿದ್ಯಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ

ಪ್ರಸ್ತಾವನೆ: ಕನ್ನಡ ಪತ್ರಿಕೋದ್ಯಮದ ಹುಟ್ಟು ಬೆಳವಣಿಗೆಯ ಇತಿಹಾಸಕ್ಕೆ ಸಂಬಂಧಿಸಿದಂತೆ ಒಂದು ಪರಿಪೂರ್ಣ ಹೊತ್ತಿಗೆವಿಲ್ಲ. ಇದು ಕನ್ನಡ ಪತ್ರಿಕೊದ್ಯಮಕ್ಕೆ ದೊಡ್ಡ ಅವಮಾನದ ಜೊತೆಗೆ ಹಿನ್ನಡೆಯು ಹೌದು. ಹೈದ್ರಾಬಾದ್ ಕರ್ನಾಟಕ ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಒಂದು ಸಣ್ಣ ಪುಸ್ತಕವು ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಕನ್ನಡ ಪತ್ರಿಕೊದ್ಯಮಕ್ಕೆ ಸಂಬಂಧಿಸಿದ ಕೆಲವೂ ಪುಸ್ತಕಗಳಿದ್ದರೂ, ಹೈದ್ರಾಬಾದ್ ಕರ್ನಾಟಕ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಮಾಹಿತಿಗಳಿಲ್ಲದಿರುವುದು ಇನ್ನೊಂದು ದೊಡ್ಡ ಕೊರತೆ! ಇಲ್ಲಿಯವರೆಗೆ ಪ್ರಕಟವಾಗಿರುವ ಕೆಲವು ಪತ್ರಿಕೋದ್ಯಮ ಇತಿಹಾಸ ಗ್ರಂಥಗಳನ್ನು ಅವಲೋಕಿಸಿದಾಗ ಗೊತ್ತಾಗುತ್ತೆದೆ ಹೈದ್ರಾಬಾದ ಕರ್ನಾಟಕ ಪ್ರದೇಶದ ಪತ್ರಿಕೆಗಳು, ಪತ್ರಿಕೊದ್ಯಮ ಅಲಕ್ಷಕ್ಕೊಳಗಾಗಿದಿದ್ದು, ಇದೆಲ್ಲವನ್ನು ಕೂಲಂಕೂಶವಾಗಿ ಗಮನಿಸಿದರೆ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ವಾತಂತ್ರ ಪೂರ್ವದಲ್ಲಿ, ಭಾಷವಾರು ಪ್ರಾಂತ ರಚನೆಯ ಪೂರ್ವದಲ್ಲಿ ಪತ್ರಿಕೆಗಳೇ ಇರಲಿಲ್ಲವೇ? ಈ ಭಾಗದಲ್ಲಿ ಯಾರೂ ಪತ್ರಿಕೆಯನ್ನು ನಡೆಸುವ ಯಾವುದೇ ಸಾಹಸವನ್ನು ಮಾಡಲೇ ಇಲ್ಲವೇ? ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಕ್ಕಾಗಲಿ, ಹೈದ್ರಾಬಾದ್ ಕರ್ನಾಟಕ ವಿಮೋಚನ ಸಂದರ್ಭದಲ್ಲಾಗಲಿ, ಕರ್ನಾಟಕ ಏಕೀಕರಣ ಚಳುವಳಿಗಾಗಲೀ ಈ ಭಾಗದ ಪತ್ರಿಕೆಗಳ ಕಾಣಿಕೆಯೇ ಇರಲಿಲ್ಲವೇ? ಹೀಗೆ ಹತ್ತು ಹಲವು ಪ್ರಶ್ನೆಗಳು ಒಂದರ ಮೇಲೊಂದರಂತೆ ಮನದಲ್ಲಿ ಶರಧಿ ತೆರೆಗಳಂತೆ ಎದ್ದುಬರುತ್ತವೆ. ಕೊನೆಗೆ ಈ ಭಾಗದಲ್ಲಿ ಪತ್ರಿಕೆಗಳು ಇರಲಿಲ್ಲವೆ? ಎನ್ನುವ ಭಾವ ಉಂಟಾಗದೆ ಇರದು.

ಹೈದ್ರಾಬಾದ್-ಕರ್ನಾಟಕ ಪತ್ರಿಕೋದ್ಯಮ ಕುರಿತು ಲೇಖನವೊಂದಕ್ಕೆ ಸಾಕಾಗುವಷ್ಟು ಸಾಮಗ್ರಿ ಕೂಡ ಇಲ್ಲ! ಅಂದಮೇಲೆ ಅದರ ಇತಿಹಾಸ ರಚಿಸುವುದು ಸುಲಭದ ಮಾತಲ್ಲ. ಪತ್ರಿಕೋದ್ಯಮ ಬೆಳವಣಿಗೆ ಕುರಿತಾದ ಅನೇಕ ಕೆಲವು ಗ್ರಂಥಗಳಲ್ಲಿ, ಗ್ಯಾಸಟಿಯರ್‌ಳಲ್ಲಿ ಇರುದನ್ನು ನೋಡಿದರೆ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಪತ್ರಿಕೋದ್ಯಮದ ಕಾಣಿಕೆ, ಕನ್ನಡ ಪತ್ರಿಕೋದ್ಯಮಕ್ಕೆ ಶೂನ್ಯ! ಎನಿಸುತ್ತದೆ. ಇದು ಆಘಾತಕಾರಿ ಸಂಘತಿಯನ್ನಬಹುದು. ಹೈದ್ರಾಬಾದ ರಾಜ್ಯ ವಿಮೋಚನೆಯಾಗಿ ಆರು ದಶಕಗಳಾಗಿದ್ದರೂ ಈ ಪ್ರದೇಶದ ಯಾರೊಬ್ಬರು ಕೂಡ ಈ ಭಾಗದ ಪತ್ರಿಕೋದ್ಯಮದ / ಮಾಧ್ಯಮದ ಕುರಿತಾದ ಐತಿಹಾಸಿಕ ಚಿತ್ರಣ ನೀಡಲು ಕೈ ಹಾಕದಿರುವುದು ಸೋಜಿಗವೇನಿಸುತ್ತದೆ. ಅಲ್ಲಲ್ಲಿ ವೈಯಕ್ತಿಕ ನೆಲೆಯಲ್ಲಿ, ಲೇಖನಗಳ ಸ್ವರೂಪದಲ್ಲಿ ಒಂದಿಷ್ಟು ಕೆಲಸ ನಡೆದಿದೆ. ಹಿರಿಯ ಕವಿ ಪ್ರೊ. ವಸಂತ ಕುಷ್ಟಗಿ, ಹಾಗೂ ಶ್ರೀನಿವಾಸ ಗಟ್ಟು ಈ ಪ್ರದೇಶದ ಪತ್ರಿಕೋದ್ಯಮ ಕುರಿತು ಉಪಯುಕ್ತ ಲೇಖನ ಬರೆದಿದ್ದಾರೆ.

ಪ್ರಸ್ತಾವನೆ : ಕನ್ನಡ ಪತ್ರಿಕೋದ್ಯಮದ ಹುಟ್ಟು ಬೆಳವಣಿಗೆಯ ಇತಿಹಾಸಕ್ಕೆ ಸಂಬಂಧಿಸಿದಂತೆ ಒಂದು ಪರಿಪೂರ್ಣ ಹೊತ್ತಿಗೆ ಗ್ರಂಥವಿಲ್ಲ. ಇದು ಕನ್ನಡ ಪತ್ರಿಕೋದ್ಯಮಕ್ಕೆ ದೊಡ್ಡ ಅವಮಾನದ ಜೊತೆಗೆ ಹಿನ್ನಡೆಯು ಹೌದು. ಹೈದ್ರಾಬಾದ್ ಕರ್ನಾಟಕ ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಒಂದು ಸಣ್ಣ ಪುಸ್ತಕವು ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಕನ್ನಡ ಪತ್ರಿಕೋದ್ಯಮಕ್ಕೆ ಸಂಬಧಿಸಿದ ಕೆಲವೂ ಪುಸ್ತಕಗಳಿದ್ದರೂ ಹೈದ್ರಾಬಾದ್ ಕರ್ನಾಟಕ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಮಾಹಿತಿಗಳಿಲ್ಲದಿರುವುದು ಇನ್ನೊಂದು ದೊಡ್ಡ ಕೊರತೆ! ಇಲ್ಲಿಯವರೆಗೆ ಪ್ರಕಟವಾಗಿರುವ ಕೆಲವು ಪತ್ರಿಕೋದ್ಯಮ ಇತಿಹಾಸ ಗ್ರಂಥಗಳನ್ನು ಅವಲೋಕಿಸಿದಾಗ ಗೊತ್ತಾಗುತ್ತೆದೆ ಹೈದ್ರಾಬಾದ ಕರ್ನಾಟಕ ಪ್ರದೇಶದ ಪತ್ರಿಕೆಗಳು, ಪತ್ರಿಕೋದ್ಯಮ ಅಲಕ್ಷಕ್ಕೊಳಗಾಗಿದಿದ್ದು.

ಹೈದ್ರಾಬಾದ್-ಕರ್ನಾಟಕ ಪತ್ರಿಕೋದ್ಯಮ ಕುರಿತು ಲೇಖನವೊಂದಕ್ಕೆ ಸಾಕಾಗುವಷ್ಟು ಸಾಮಗ್ರಿ ಕೂಡ ಇಲ್ಲ! ಅಂದಮೇಲೆ ಅದರ ಇತಿಹಾಸ ರಚಿಸುವುದು ಸುಲಭದಮಾತಲ್ಲ. ಪತ್ರಿಕೋದ್ಯಮ ಬೆಳವಣಿಗೆ ಕುರಿತಾದನೇಕ ಕೆಲವು ಗ್ರಂಥಗಳಲ್ಲಿ, ಗ್ಯಾಸಟಿಯರ್‌ಳಲ್ಲಿ ಇರುದನ್ನು ನೋಡಿದರೆ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಪತ್ರಿಕೋದ್ಯಮದ ಕಾಣಿಕೆ, ಕನ್ನಡ ಪತ್ರಿಕೋದ್ಯಮಕ್ಕೆ ಶೂನ್ಯ! ಎನಿಸುತ್ತದೆ. ಇದು ಆಘಾತಕಾರಿ ಸಂಘತಿಯನ್ನಬಹುದು. ನಿಜವೇ ಆಗಿದ್ದರೆ ಇದೊಂದು ರೀತಿಯಲ್ಲಿ ಅಪಮಾನಕಾರಿಯಾದ ಮತ್ತು ಅವಹೇಳನಕಾರಿಯಾದ ಕಟು ಸತ್ಯವಾಗುತ್ತದೆ. ಆದರೆ ಅದು ಖಂಡಿತ ಹಾಗಲ್ಲ. ಹೈದ್ರಾಬಾದ-ಕರ್ನಾಟಕದಲ್ಲೂ ಪತ್ರಿಕೆಗಳು ಬೆಳೆದು ಬಂದಿವೆ, ತಮ್ಮದೇ ಆದ ಕಾಣಿಕೆ ನೀಡಿದೆ. ಆದರೆ ಅದನ್ನು ಹೆಕ್ಕಿ ತೆಗೆದು ಆವಿಷ್ಕರಿಸಿ ಗುರುತಿಸುವ ಕಾರ್ಯ ಈವರೆಗೆ ಆಗಿಲ್ಲ ಎಂಬುದು ಮಾತ್ರ ಸತ್ಯ.

ಭಾರತೀಯ ಪತ್ರಿಕೋದ್ಯಮ ಇತಿಹಾಸಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಲಭ್ಯವಿರುವ ಏಕೈಕ ಪ್ರಾತಿನಿಧಿಕ ಗ್ರಂಥವೆಂದರೆ ಶ್ರೀ ನಾಡಿಗ ಕೃಷ್ಣಮೂರ್ತಿ ಅವರು ಬರೆದ "ಭಾರತೀಯ ಪತ್ರಿಕೋದ್ಯಮ". ಈ ಗ್ರಂಥದಲ್ಲಿ ಕನ್ನಡ ಪತ್ರಿಕೋದ್ಯಮದ ಇತಿಹಾಸ ಕುರಿತು ಚರ್ಚಿಸುವಾಗ ಹೈದ್ರಾಬಾದ-ಕರ್ನಾಟಕ ಪ್ರದೇಶದ ಉಲ್ಲೇಖ ಬರುತ್ತದೆ ನಿಜ. ಆದರೆ ಅದು ತೀರ ನಗಣ್ಯ ಮತ್ತು ಅತ್ಯಂತ ಆಘಾತಕಾರಿಯಾದ ಲೋಪ. ಏಕೆಂದರೆ ನಾಡಿಗ ಕೃಷ್ಣಮೂರ್ತಿಯವರು ದಾಖಲಿಸಿರುವಂತೆ ಹೈದ್ರಾಬಾದ್-ಕರ್ನಾಟಕದ ಜಿಲ್ಲೆಗಳಾದ ಗುಲ್ಬರ್ಗಾ, ಬೀದರ, ರಾಯಚೂರುಗಳಲ್ಲಿ ಕನ್ನಡ ಪತ್ರಿಕೆಗಳೇ ಇರಲಿಲ್ಲ! "....ಹೈದ್ರಾಬಾದಿನ ಕನ್ನಡ ಪ್ರಜೆಗಳ ಕುಂದುಕೊರೆತೆಗಳನ್ನು ಸರಕಾರಕ್ಕೆ ತಿಳಿಸುವ ಉದ್ದೇಶದಿಂದ 'ಸಾಧನ' ಎಂಬ ವಾರಪತ್ರಿಕೆಯನ್ನುಕಾಂಗ್ರೆಸ್ಸಿಗರಾದ ಜಿ. ಕೆ. ಪ್ರಾಣೇಶಾಚಾರ್ಯರು ಸ್ಥಾಪಿಸಿದ್ದರು. ಅದು ಹೈದ್ರಾಬಾದ್ ಸಂಸ್ಥಾನದಲ್ಲಿ ಪ್ರಜೆಗಳ ಸ್ವಾತಂತ್ರ್ಯ ಚಳುವಳಿಗೆ ಸಂಪೂರ್ಣ ಬೆಂಬಲ ಕೊಟ್ಟಿತು. ಪ್ರಾಣೇಶಾಚಾರ್ಯರು ತೀರಿಕೊಂಡ ನಂತರ ಸಾಧನಾ ಪ್ರಕಟನೆ ನಿಂತಿತು. ಕನ್ನಡದ ಮೂರು ಜಿಲ್ಲೆಗಳು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಂಡ ನಂತರ ಹೈದ್ರಾಬಾದಿನಲ್ಲಿ ಕನ್ನಡ ಪತ್ರಿಕೆಯ ಅವಶ್ಯಕತೆ ಕಂಡು ಬಾರದ್ದರಿಂದ ಅಲ್ಲಿ ಪತ್ರಿಕೆಗಳು ಹೊರಡಲಿಲ್ಲ."ಎಂದು ಬರೆಯುತ್ತಾರೆ ನಾಡಿಗ ಕೃಷ್ಣಮೂರ್ತಿಯವರು.

ನಾಡಿಗ ಕೃಷ್ಣಮೂರ್ತಿಅವರು ಓರ್ವಮಹಾನ್ ಪತ್ರಿಕೋದ್ಯಮ ಶಿಕ್ಷಕ, ಲೇಖಕ, ಮತ್ತು ಅತ್ಯಂತ ಮೇಧಾವಿಗಳಲ್ಲೋಬ್ಬರು. ಅವರು ಅಷ್ಟೇ ನಿಷ್ಟಾವಂತರು ಮತ್ತು ಪ್ರಾಮಾಣಿಕರು ಕೂಡ. ಆದಾಗ್ಯೂ ಅವರು ಒಂದಿಷ್ಟು ಸಂವೇದನಾಶೀಲರಾಗಿದ್ದಲಿ ಪ್ರಾಯಃ ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು ಕುರಿತಾದ ಅಧಿಕ ಮಾಹಿತಿಯನ್ನು ನೀಡಬಹುದಿತ್ತೇನೋ

ಎಂದೆನಿಸದಿರಲಾರದು. ಹೈದ್ರಾಬಾದ ಕರ್ನಾಟಕ ಪತ್ರಿಕೋದ್ಯಮಕ್ಕೆ ತತ್ಸಾರವಾಡಿದ್ದಾರೆ ಎನ್ನುವುದನ್ನು ಬಿಟ್ಟರೆ 'ಭಾರತೀಯ ಪತ್ರಿಕೋದ್ಯಮ'ದಂತಹ ಅತ್ಯಂತ ಮೂಲಭೂತ, ಮೌಲಿಕ, ಸಮಗ್ರ, ಅಧ್ಯಯನ-ಸಂಶೋಧನಾ ನಿರತರಿಗೆ ಅಷ್ಟೇ ಉಪಯುಕ್ತ ಕೃತಿಯನ್ನು ರಚಿಸಿ, ಅವರು ಮಹದುಪಕಾರ ಮಾಡಿದ್ದಾರೆ.

ಅಕಾಡೆಮಿ ಅಸ್ತಿತ್ವಕ್ಕೆ ಬಂದು ೨೦೦೭ಕ್ಕೆ ೨೫ ವರ್ಷಗಳಾದವು. ಆದರೂ, ಅದು ಇಡಿ ಕರ್ನಾಟಕ ಪತ್ರಿಕೋದ್ಯಮದ ಸಮಗ್ರ ಇತಿಹಾಸ ಕುರಿತಾದ ಗ್ರಂಥ ರಚನೆಗೆ ಮುಂದಾಗದಿದ್ದದು ವಿಷಾದಕರ. ಕರ್ನಾಟಕ ವಿಕೀಕರಣಕ್ಕೆ ಮುಂಚೆ ಬೇರೆ ಬೇರೆ ಸ್ವರೂಪದಲ್ಲಿದ್ದ ಕನ್ನಡ ಭೂಪ್ರದೇಶಗಳಾದ ಮೈಸೂರು ಸಂಸ್ಥಾನ, ಮುಂಬೈ ಕರ್ನಾಟಕ, ಮದರಾಸು ಕರ್ನಾಟಕ, ಹೈದ್ರಾಬಾದ ಕರ್ನಾಟಕ, ಕೊಡಗು ಪ್ರಾಂತ ಮುಂತಾದ ಪ್ರದೇಶಗಳ ಪತ್ರಿಕಾ ಇತಿಹಾಸವನ್ನು ಅಕಾಡೆಮಿ ಪ್ರತ್ಯೇಕವಾಗಿ ಪ್ರಕಟಿಸುಬಹುದಿತ್ತು.

• ಹೈದ್ರಾಬಾದ ಕರ್ನಾಟಕ ಪ್ರದೇಶ ಸುಮಾರು ೬೦೦ ವರ್ಷಗಳ ಕಾಲ ನಿರಂತರವಾಗಿ ಭಾಷೆಯ ವಿಷಯದಲ್ಲಿ ಅನುಭವಿಸಿದ ದುರವಸ್ಥೆ, ರಾಜಕೀಯ ಆಕ್ರಮಣದೊಂದಿಗೆ ವ್ಯವಸ್ಥಿತವಾದ ಸಾಂಸ್ಕೃತಿಕ ಆಕ್ರಮಣವೂ ಈ ಆರು ಶತಮಾನಗಳ ಅವಧಿಯಲ್ಲಿ ನಡೆದಿದ್ದರಿಂದ ಈ ಪ್ರದೇಶದಲ್ಲಿ ಕನ್ನಡ ಸಾಂಸ್ಕೃತಿಕ ಅನಾಥೆಯನ್ನು ಅನುಭವಿಸಬೇಕಾಯಿತು. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆ ಈ ಭಾಗದಲ್ಲಿ ಜೀವ ಹಿಡಿದುಕೊಂಡು, ಉಳಿದು ಬೆಳೆದು ಬಂದದ್ದೇ ಒಂದು ಪವಾಡ.

• ಕನ್ನಡದಲ್ಲಿ ಶಿಕ್ಷಣ ಹೊಂದಲು ಈ ಭಾಗದಲ್ಲಿ ಯಾವುದೇ ಅವಕಾಶ ಇಲ್ಲದಿದ್ದುದು. ಉರ್ದು-ಪರ್ಷಿಯನ್ ಭಾಷೆಗಳ ರಾಜಕೀಯ, ಆಡಳಿತ ಮತ್ತು ಶೈಕ್ಷಣಿಕ ಪ್ರಾಬಲ್ಯ ಕನ್ನಡ ಸಮೂಹ ಸಂವಹನದ ಮೇಲೆ ಉಂಟುಮಾಡಿದ ದೀರ್ಘಕಾಲೀನ ದುಷ್ಪರಿಣಾಮ.

• ಈ ಭಾಗದವರಾರೂ ಕನ್ನಡ ಪತ್ರಿಕೋದ್ಯಮದಲ್ಲಿ ರಾಜ್ಯ ಮಟ್ಟದಲ್ಲಿ ದೊಡ್ಡ ಹೆಸರು ಮಾಡಲು ಸಾಧ್ಯವಾಗದಿದ್ದುದು. ಈ ಭಾಗದವರೇ ಆದ ರಾಘು ಜಾಗೀರದಾರ ಮತ್ತು ವಿ. ಎಚ್. ದೇಸಾಯಿ ಅವರು ರಾಷ್ಟ್ರಮಟ್ಟದಲ್ಲಿ ಇಂಗ್ಲೀಷ, ಬಂಗಾಲಿ ಪತ್ರಿಕೋದ್ಯಮದಲ್ಲಿ ಹೆಸರು ಮಾಡಿದ್ದರೂ ಕನ್ನಡ ಪತ್ರಿಕೋದ್ಯಮಕ್ಕೆ ಅವರ ಕಾಣಿಕೆ ತೀರಾ ಅತ್ಯಲ್ಪ.

• ಕನ್ನಡ ಪತ್ರಿಕೋದ್ಯಮ ಕುರಿತಾದ ಪುಸ್ತಕ ಬರೆದ ಲೇಖಕರೆಲ್ಲರು ಸಾಮಾನ್ಯವಾಗಿ ದಕ್ಷಿಣ ಕರ್ನಾಟಕಕ್ಕೆ ಸೇರಿದವರಾಗಿದ್ದು, ಹೈದ್ರಾಬಾದ್ ಕರ್ನಾಟಕ ವಿಷಯದಲ್ಲಿ ಅವರಿಗೆ ತೀಕ್ಷ್ಣ ನೋಟದ ಕೊರತೆ ಇದ್ದದ್ದು.

ಹೈದ್ರಾಬಾದ ರಾಜ್ಯ ವಿಮೋಚನೆಯಾಗಿ ಆರು ದಶಕಗಳಾಗಿದ್ದರೂ ಈ ಪ್ರದೇಶದ ಯಾರೊಬ್ಬರು ಕೂಡ ಈ ಭಾಗದ ಪತ್ರಿಕೋದ್ಯಮದ / ಮಾಧ್ಯಮದ ಕುರಿತಾದ ಐತಿಹಾಸಿಕ ಚಿತ್ರಣ ನೀಡಲು ಕೈ ಹಾಕದಿರುವುದು ಸೋಜಿಗವೇನಿಸುತ್ತದೆ. ಅಲ್ಲಲ್ಲಿ ವೈಯಕ್ತಿಕ ನೆಲೆಯಲ್ಲಿ, ಲೇಖನಗಳ ಸ್ವರೂಪದಲ್ಲಿ ಒಂದಿಷ್ಟು ಕೆಲಸ ನಡೆದಿದೆ. ಹಿರಿಯ ಕವಿ ಪ್ರೊ. ವಸಂತ ಕುಷ್ಟಗಿ, ಹಾಗೂ ಶ್ರೀನಿವಾಸ ಗಟ್ಟು ಈ ಪ್ರದೇಶದ ಪತ್ರಿಕೋದ್ಯಮ ಕುರಿತು ಉಪಯುಕ್ತ ಲೇಖನ ಬರೆದಿದ್ದಾರೆ.

ಗುಲ್ಬರ್ಗಾ ವಿಶ್ವವಿದ್ಯಾಲಯ ತನ್ನ ಬೆಳ್ಳಿಹಬ್ಬದ ಸಂದರ್ಬದಲ್ಲಿ 'ಬೆಳ್ಳಿ ಬೆಳಕು' ಮಾಲೆಯಲ್ಲಿ ಜಿಲ್ಲಾ ದರ್ಶನ ಸಂಪುಟಗಳನ್ನು ಪ್ರಕಟಿಸಿದ್ದು ಕಲಬುರಗಿ, ಬೀದರ, ಕೊಪ್ಪಳ ಜಿಲ್ಲೆಗಳ ಕನ್ನಡ ಪತ್ರಿಕೆಗಳ ಬೆಳವಣಿಗೆ ಕುರಿತಾದ ಲೇಖನಗಳನ್ನು ಅವು ಹೊಂದಿವೆ. ಆದರೆ ರಾಯಚೂರ ಜಿಲ್ಲಾ ದರ್ಶನ ಸಂಪೂಟದಲ್ಲಿ ಅದು ಕೂಡ ಇಲ್ಲ!

ಸ್ವಾತಂತ್ರ್ಯ ಚಳುವಳಿ, ವಿಕೀಕರಣ, ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ಕೃಷಿ, ವಿಜ್ಞಾನ, ಶಿಕ್ಷಣ, ಮಾನವಿಕ ಶಾಸ್ತ್ರ ಮತ್ತು ಇತ್ಯಾದಿ ಕ್ಷೇತ್ರಗಳಲ್ಲಿ ಈ ಪ್ರದೇಶ ನಾಡಿಗೆ, ದೇಶಕ್ಕೆ ಸಮೃದ್ಧ ಕಾಣಿಕೆ ನೀಡಿದೆ. ಅವುಗಳನ್ನೆಲ್ಲ ಸೂಕ್ತ ಒಳನೋಟಗಳೊಂದಿಗೆ ದಾಖಲಿಸುವ ಕಾರ್ಯ ಆಗಬೇಕಷ್ಟೆ. ಈ ನಿಟ್ಟಿನಲ್ಲಿ 'ಹೈದ್ರಾಬಾದ್ ಕರ್ನಾಟಕ ಪತ್ರಿಕೆಗಗಳ ಐತಿಹಾಸಿಕ ಅಧ್ಯಯನ' ಎನ್ನುವ ಸಂಶೋಧನೆ ಒಂದು ಸಣ್ಣ ಪ್ರಯತ್ನವಾಗಿದೆ. ಈ ಸಂಶೋಧನೆ ಬರೀ ಪತ್ರಿಕೆಗಳಿಗೆ ಸೀಮಿತವಾಗಿದ್ದರು. ಸಮೂಹ ಸಂವಹನ ಮಾಧ್ಯಮದ ಮತ್ತೆರಡು ಕ್ಷೇತ್ರಗಳಾದ ರೇಡಿಯೋ ಮತ್ತು ದೂರದರ್ಶನ ಕ್ಷೇತ್ರಗಳಲ್ಲಿ ಈ ಭಾಗ ಭಾರೀ ಬೆಳೆವಣಿಗೆಯನ್ನು ಕಂಡಿದೆ. ಕರ್ನಾಟಕದ ಮೊಟ್ಟಮೊದಲು ದೂರದರ್ಶನ ವಿಕ್ಷಣ ವ್ಯವಸ್ಥೆ ೧೯೭೫ರಲ್ಲಿ ಲಭ್ಯವಾದದ್ದು ಕಲಬುರಗಿಯಲ್ಲಿ, ಈ ಹೆಮ್ಮೆಯ ಸಂಗತಿಯನ್ನು ಮರೆಮಾಚಲಾದಿತೇನು? ಆಕಾಶವಾಣಿ ಕ್ಷೇತ್ರದಲ್ಲಿ ಕಳೆದ ನಾಲ್ಕು ದಶಕಗಳಿಂದ ಕಲಬುರಗಿ ಪ್ರದೇಶ ಕಂಪನಿಯುಕ್ತವಾಗಿ ಬೆಳೆದುಕೊಂಡು ಬಂದಿದೆ. ಮಾಧ್ಯಮ ಕ್ಷೇತ್ರ ಇಂದು ತಂತ್ರಜ್ಞಾನ ಭರಾಟೆಯಿಂದ ಯದ್ವಾತದ್ವಾ ಬೆಳೆಯುತ್ತಿದೆ. ಮಾಧ್ಯಮ ಶಿಕ್ಷಣ ಸೌಕರ್ಯಗಳು ಈಗೀಗ ಈ ಭಾಗದಲ್ಲಿ ಪ್ರಾಪ್ತವಾಗತೊಡಗಿವೆ. ಗುಲ್ಬರ್ಗಾ ವಿಶ್ವವಿದ್ಯಾಲಯ ೨೦೦೫-೨೦೦೬ರಿಂದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಸ್ನಾತಕೋತ್ತರ ಪದವಿಯನ್ನು ಪ್ರಾರಂಭಿಸಿದೆ. ಕೆಲವು ಕಾಲೇಜುಗಳಲ್ಲಿ ಪದವಿ ಶಿಕ್ಷಣ ಪ್ರಾರಂಭಗೊಂಡಿವೆ, ಮತ್ತು ಪ್ರಾರಂಭಗೊಳ್ಳುತ್ತಲಿವೆ. ಈ ಎಲ್ಲ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಮಾಧ್ಯಮದ ಮೂರು ಪ್ರಮುಖ ಕ್ಷೇತ್ರಗಳನ್ನು ಮುದ್ರಣ, ಶ್ರವ್ಯ ಹಾಗು ದೃಶ್ಯ ಒಳಗೊಂಡಂತೆ ಒಂದು ಐತಿಹಾಸಿಕ ಪರಿಚಯಾತ್ಮಕ ಪಕ್ಷಿನೋಟವನ್ನು ನೀಡುವ ಸಂಶೋಧನೆ ನಡೆಯಬೇಕು. ನಿಮ್ಮಲ್ಲಿ ಒಂದು ಪ್ರೆಶ್ನೆ ಮೂಡಬಹುದು ನೀವೆ ಹೈದ್ರಾಬಾದ್ ಕರ್ನಾಟಕದ ಸಮೂಹ ಸಂವಹನ ಸಮಗ್ರ ಸಂಶೋಧನೆ ಯಾಕೆಮಾಡಬಾರದು? ಬಿರೀ ಪತ್ರಿಕೆಗಳಕುರಿತು ಏಕೆಮಾಡುವಿರಿ? ಎಂದು ಕೆಳಬಹುದು. ಸಮಗ್ರವಾದ ಮತ್ತು ದೊಶಮುಕ್ತವಾದ ಸಂಶೋದನೆ ನಡೆಯಬೇಕಾದರೆ ಸಂಶೋಧನ ವಿಷಯ ನಿಕರ, ಹಾಗೂ ಸೀಮಿತವಾಗಿರಬೇಕು. ಅದಕ್ಕಾಗಿ ನಾನು ಪತ್ರಿಕೆಗಳನ್ನು ಆಯ್ಕೆಮಾಡಿಕೊಂಡೆ. ಇವೆಲ್ಲವನ್ನು ಗಮನಿಸಿದ ಮೇಲೆ ಒಂದು ಮಾತಂತೂ ಸ್ಪಷ್ಟವೇನಿಸುತ್ತದೆ. ಈ ಮೂರು ಮಾಧ್ಯಮ ಕ್ಷೇತ್ರಗಳಲ್ಲಿ ಅಭಿವೃದ್ಧಿ, ನಿರೀಕ್ಷೆಗಿಂತಲೂ ಬಹಳಷ್ಟು ಕುಂಠಿತವಾಗಿದೆ. ಇರುವ ಹಲವಾರು ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಆಗುತ್ತಿಲ್ಲ. ಆದ್ದರಿಂದ ಅಂದಿನ ನಮ್ಮೇಲ್ಲರ ಸಂವಹನ ಸಂಪರ್ಕ ಸಾದನಗಳಾಗಿದ್ದ ಈ ಭಾಗದ ಪತ್ರಿಕೆಗಳು ಇಂದು ನಾವೆಲ್ಲಕಳೆದು ಕೊಂಡಿದ್ದೆವೆ.

ಇವತ್ತಿನ ರಾಜ್ಯಮಟ್ಟದ ಪತ್ರಿಕೆಗಳು ಬರುವಕ್ಕಿಂತ ಮುಂಚನೆ ಈ ಭಾಗದ ಜನರ ನೋವು, ನಲಿವಿಗೆ ಸ್ಪಂದಿಸುತ್ತಿದ್ದವು. ಅವರ ಬೇಕು ಬೇಡಗಳನ್ನು ಕೇಳುತ್ತಿದ್ದವು. ಅಷ್ಟೆ ಅಲ್ಲದೆ ಈ ಪ್ರದೇಶದ ಜನರ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿ, ಆಚಾರ, ವಿಚಾರಗಳನ್ನು ಎತ್ತಿ ಹಿಡಿದಿದ್ದವು. ಇವರ ಭಾಷೆಕ್ಕೆ, ಸಾಹಿತ್ಯಕ್ಕೆ ತನ್ನ ಮಡಿಲಲ್ಲಿ ಸ್ಥಾನ ನೀಡಿ ಪೋಷಿಸಿದವು.

ಹೈದ್ರಾಬಾದ್ ನಿಜಾಮನ ಆಳ್ವಿಕೆಯಿಂದ ಈ ಪ್ರದೇಶ ವಿಮೋಚನೆ

ಗೊಳಿಸಲು ಯಾವುದೇ ನೀರಿಕ್ಷೆ ಇಲ್ಲದೆ, ವೀರ ಸೇನಾನಿಯಂತೇ ಹೋರಾಡಿದವು. ಈ ಪ್ರದೇಶ ಸ್ವತಂತ್ರ ಆಗುವವರಗೆ ನಿರಂತರ ಹೋರಾಟ ಮಾಡಿದವು, ಅದಕ್ಕಾಗಿ ತ್ಯಾಗ ಬಲಿದಾನ ಮಾಡಿದವರಿಗೆ ಗುರುತಿಸುತ್ತಿದ್ದವು. ಇನ್ನಷ್ಟು ಯುವಕರನ್ನು ಹೋರಾಟಕ್ಕೆ ಪ್ರೇರೆಪಿಸುತ್ತಿದ್ದವು. ಹೋರಾಟ ಮಾಡುವ ಜನರ ಬೆಂಬಲಕ್ಕೆ ಕಟಿಬದ್ದವಾಗಿ ನಿಂತಿದ್ದವು, ಸ್ವತಂತ್ರವಾಗುವರೆಗೆ ಹಟಬಿಡದ ತ್ರಿವಿಕ್ರಮನಂತೆ ನಿರಂತರ ತನ್ನ ಕಾರ್ಯ್ಯ ಮಾಡಿ ಯಶಸ್ವಿಯಾದವು. ಈ ಭಾಗದಲ್ಲಿ ಪತ್ರಿಕೆ ಆರಂಭವಾಗಿದ್ದು ಮೊದಲು ಉರ್ದು, ನಂತರ ಮರಾಠಿ, ಹಿಂದಿ ಆನಂತರ ಕನ್ನಡ ಕ್ರಮವಾಗಿ ಪತ್ರಿಕೆಗಳು ಜನ್ಮತಾಳಿ, ಈ ಪ್ರದೆಶಕ್ಕೆ ವರ್ದಾನವಾದವು. ಈಗ ಇದರಲ್ಲಿ ಕೆಲವು ಪತ್ರಿಕೆಗಳು ಸಂಪೂರ್ಣವಾಗಿ ಕಳೆದು ಹೋಗಿವೆ. ಇವುಗಳನ್ನು ನೆನಪಿಸಿಕೊಳ್ಳಲು ಮತ್ತು ಗುರ್ತಿಸಿ ದಾಖಲಿಸುವ ಸಲುವಾಗಿ "ಹೈದ್ರಾಬಾದ ಕರ್ನಾಟಕ ಪತ್ರಿಕೆಗಳ ಐತಿಹಾಸಿಕ ಅದ್ಯಾಯನ" ಎಂಬ ಶಿರ್ಷಿಕೆಯಡಿಯಲ್ಲಿ ಸಂಶೋಧನ ವಿಷಯ ಆಯ್ಕೆ ಮಾಡಿಕೊಂಡಿದ್ದೆನೆ. ಎಕೆಂದರೆ ಕಳೆದುಕೊಂಡಲ್ಲೇ ಹುಡಿಕಿದ್ರೆ ಮಾತ್ರ ಸಿಗುತ್ತದೆ. ಅದಕ್ಕಾಗಿ ಈ ಪ್ರಯತ್ನ. ಮತ್ತು ಈ ವಿಷಯದ ಮೇಲೆ ಯಾವ ಸಂಶೋಧನೆಯಾಗಲಿ, ಕಿರು ಪ್ರಬಂಧವಾಗಲಿ ಮಹಾಪ್ರಬಂಧವಾಗಲಿ ನಡೆದಿಲ್ಲ. ನನ್ನ ಈ ಪ್ರಯತ್ನದ ಲ್ಲಿ ಈ ಭಾಗಕ್ಕೆ ದುಡಿದ ಅಂದಿನ ಪ್ರಾದೇಶಿಕ ಪತ್ರಿಕಾ ಸಂಸ್ಥಾಪಕರಿಗೆ, ಸಂಪಾದಕರಿಗೆ ಮತ್ತು ಪತ್ರಿಕೆಗಳಿಗೆ ಧನ್ಯತೆಯನ್ನು ಅರ್ಪಿಸಲು ನನ್ನ ಸಂಶೋಧನೆಯ ಉದ್ದೇಶವಾಗಿದೆ.

ಅಧ್ಯಯನದ ಸಾಮಾನ್ಯ ಉದ್ದೇಶಗಳು: ಹೈದ್ರಾಬಾದ್ ಕರ್ನಾಟಕದ ಪ್ರಾದೇಶಿಕ ಪತ್ರಿಕೆಗಳ ಕುರಿತು ಇಲ್ಲಿಯವರೆಗೆ ಯಾವುದೆ ರೀತಿಯಾದ ಸಂಶೋಧನೆ ನಡೆದಿಲ್ಲ. ಈ ಭಾಗದ ಪತ್ರಿಕೆಗಳು ಭಾರತ ಸ್ವಾತಂತ್ರ್ಯ ಹೋರಾಟಕ್ಕೂ ಶ್ರಮಿಸಿದಲ್ಲದೆ, ತನ್ನ ತವರು ಪ್ರದೇಶವನ್ನು ಹೈದ್ರಾಬಾದ ನಿಜಾಮನಿಂದ ವಿಮೋಚನೆಗೊಳಿಸುವ ಹೋರಾಟದಿಂದ ಹಿಡಿದು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯವಾಗಿ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಈ ಪ್ರದೇಶವನ್ನು ಅಭಿವೃದ್ಧಿಯತ್ತ ಕೊಂಡ್ಯೊವಲ್ಲಿ ಅಪಾರವಾಗಿ ಶ್ರಮಿಸಿವೆ. ಅದಕ್ಕಾಗಿ ಅವುಗಳನ್ನು ಗುರ್ತಿಸುವ ಸಲುವಾಗಿ, "ಹೈದ್ರಾಬಾದ ಕರ್ನಾಟಕ ಪತ್ರಿಕೆಗಳ ಐತಿಹಾಸಿಕ ಅಧ್ಯಯನ" ಎಂಬ ಸಂಶೋಧನ ವಿಷಯವನ್ನು ಆಯ್ಕೆಮಾಡಿಕೊಂಡು. ಈ ಭಾಗದ ಎಲ್ಲಾ ಪತ್ರಿಕೆಗಳು ಮಾಡಿರುವ ಕೆಲಸ ಕಾರ್ಯ್ಯಗಳನ್ನು ಗುರ್ತಿಸುವುದಾಗಿದೆ. ಮತ್ತು ಈ ಭಾಗದ ಧಾರ್ಮಿಕ, ಆಚರಣೆಗಳಿಂದ ಹಿಡಿದು ಸಾಮಾಜಿಕ, ಸಾಂಸ್ಕೃತಿಕ, ಭಾಷೆ ಕಲೆಗಳ ಮೇಲೆ ಇವುಗಳು ಬೀರಿರುವ ಪ್ರಭಾವವನ್ನು ಗುರ್ತಿಸುವುದು. ಈ ಪತ್ರಿಕೆಗಳು ನಡೆಸಲು ಹೊರಟಿದ್ದ ಸಂಸ್ಥಾಪರ ಉದ್ದೇಶಗಳು ತಿಳಿಯುವುದು ತಂತ್ರಜ್ಞಾನದಿಂದ ಬದಲಾದ ಪತ್ರಿಕೋದ್ಯಮಕ್ಕೆ ಹೊಂದಿಕೊಳ್ಳಲು ಆಗದೆ ಇರಲು ಕಾರಣವೆನೆಂಬುವುದು ಗಮನಿಸುವುದು. ಶೈಕ್ಷಣಿಕ ಪ್ರಭಾವ ಗುರ್ತಿಸಿ ಬದಲಾವಣಿ ಅರಿಯುವದು. ಸಾಮಾಜಿಕ ಪ್ರಭಾವ ಗುರ್ತಿಸುವುದು, ಧಾರ್ಮಿಕ ಪ್ರಬಾವ ಗುರ್ತಿಸುವುದು, ಸಾಂಸ್ಕೃತಿಕ ಪ್ರಭಾವ ಗುರ್ತಿಸುವುದು, ಮತ್ತು ಭಾಷೆ ಪ್ರಬಾವ ಗುರ್ತಿಸುವುದು.

ಅಧ್ಯಯನದ ಪ್ರಮುಖ ಉದ್ದೇಶಗಳು

೧) ಹೈದ್ರಾಬಾದ್ ಕರ್ನಾಟಕ ಭಾಗದ ಪತ್ರಿಕೋದ್ಯಮದ ಇತಿಹಾಸವನ್ನು ಗುರುತಿಸುವುದು.

೨) ಹೈದ್ರಾಬಾದ್ ಕರ್ನಾಟಕ ಭಾಗದ ಪತ್ರಿಕೋದ್ಯಮದ ಮಹತ್ವವನ್ನು ವಿಶ್ಲೇಷಿಸುವುದು.

೩) ಹೈದ್ರಾಬಾದ್ ಕರ್ನಾಟಕ ಭಾಗದ ಪತ್ರಿಕೆಗಳ ಹುಟ್ಟು ಮತ್ತು ಬೆಳವಣಿಗೆಯನ್ನು ವಿಶ್ಲೇಷಿಸುವುದು.

೪) ಹೈದ್ರಾಬಾದ್ ಕರ್ನಾಟಕ ಭಾಗದ ಪತ್ರಿಕೋದ್ಯಮಿಗಳನ್ನು ಗುರುತಿಸುವುದು.

೫) ಸ್ಥಳಿಯ ಪತ್ರಿಕೆಗಳ ವಸ್ತು ವೈವಿದ್ಯೆತೆಯನ್ನು ವಿಶ್ಲೇಷಿಸುವುದು.

೬) ಹೈದ್ರಾಬಾದ್ ಕರ್ನಾಟಕದ ಪತ್ರಿಕೆಗಳ ಐತಿಹಾಸಿಕ ಮಹತ್ವವನ್ನು ತಿಳಿಯುವುದು.

೭) ಹೈದ್ರಾಬಾದ್ ಕರ್ನಾಟಕ ಭಾಗದ ಅಭಿವೃದ್ಧಿಯಲ್ಲಿ ಈ ಭಾಗದ ಪ್ರಮುಖ ಪತ್ರಿಕೆಗಳ ಪಾತ್ರವನ್ನು ದಾಖಲಿಸುವುದು.

೮)ಹೈದ್ರಾಬಾದ್ ಕರ್ನಾಟಕ ಭಾಗದ ಪತ್ರಿಕೋದ್ಯಮದ ಸ್ಥಾನಮಾನ ಸ್ಥಿತಿಗತಿಗಳನ್ನು ವಿಶ್ಲೇಷಣೆ ಮಾಡುವುದು. ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಅಧ್ಯಯನದ ವಿಧಾನ: ಅಧ್ಯಯನದ ವಿಧಾನವು ಮೂಲ ದಾಖಲಾತಿಯನ್ನು ಕಲೆ ಹಾಕುವುದು, ಸಮಕಾಲಿಗರನ್ನು ಸಂದರ್ಶಿಸುವುದು. ಪತ್ರಿಕೆ ಆರಂಭಿಸಿದ ಸಂಸ್ಥಾಪಕರ, ಸಂಪಾದಕರ ಹಾಗೂ ಅಂದಿನ ಓದುಗರಿಂದ ಮಾಹಿತಿ ಪಡೆಯುವದು. ಮತ್ತು ಕರ್ನಾಟಕ ಸರಕಾರದ ಗೇಜಿಟಿಯರ್, ಹಾಗೂ ಪತ್ರಿಕೋದ್ಯಮಕ್ಕೆ, ಮತ್ತು ಪತ್ರಿಕೋದ್ಯಮ ಇತಿಹಾಸಕ್ಕೆ ಸಂಬಂಧಿಸಿದ್ದ ಪುಸ್ತಕದಿಂದ ಆಕರ ಪಡೆದು, ವಿಶ್ಲೆಷಣಾತ್ಮಕ ಅಧ್ಯಯನ ಮಾಡುವುದು. ಅಗತ್ಯಬಿದ್ದಲ್ಲಿ ಅಧ್ಯಯನದಕ್ಕೆ ಅನುಕೂಲವಾಗುವಂತೆ ಕೆಲವು ಬದಲಾವಣೆ ಮಾಡಿಕೊಳ್ಳಲಾಗುವುದು. ಕೆಲವು ಬದಲಾವಣೆ ಏಕೆಂದರೆ ಅಧ್ಯಯನದ ಹಿತ ದೃಷ್ಟಿಯಿಂದ ಮಾತ್ರ.

ಸಮಾರೋಪ : ಹೈದ್ರಾಬಾದ್ ಕರ್ನಾಟಕದ ಪ್ರಾದೇಶಿಕ ಪತ್ರಿಕೆಗಳ ಕುರಿತು ಇಲ್ಲಿಯವರೆಗೆ ಯಾವುದೆ ರೀತಿಯಾದ ಸಂಶೋಧನೆ ನಡೆದಿಲ್ಲ. ಭಾರತ ಸ್ವಾತಂತ್ರ ಚಳುವಳಿ, ಹೈದ್ರಾಬಾದ್ ಕರ್ನಾಟಕ ಪ್ರದೇಶದ ಏಕೀಕರಣ, ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ಕೃಷಿ, ವಿಜ್ಞಾನ, ಶಿಕ್ಷಣ, ಮಾನವಿಕ ಶಾಸ್ತ ಇತ್ಯಾದಿ ಕ್ಷೇತ್ರಗಳಲ್ಲಿ ಈ ಪ್ರದೇಶ. ನಾಡಿಗೆ, ದೇಶಕ್ಕೆ ಸಮೃದ್ಧ ಕಾಣಿಕೆ ನೀಡಿದೆ. ಅವುಗಳನ್ನೆಲ್ಲ ಸೂಕ್ತ ಒಳನೋಟಗಳೊಂದಿಗೆ ದಾಖಲಿಸುವ ಕಾರ್ಯ ಆಗಬೇಕಷ್ಟೆ. ಈ ನಿಟ್ಟಿನಲ್ಲಿ 'ಹೈದ್ರಾಬಾದ್ ಕರ್ನಾಟಕ ಪತ್ರಿಕೆಗಳ ಐತಿಹಾಸಿಕ ಅಧ್ಯಯನ' ಎನ್ನುವ ಸಂಶೋಧನೆ ಒಂದು ಸಣ್ಣ ಪ್ರಯತ್ನವಾಗಿದೆ.

ಗ್ರಂಥ ಋಣ:

೧. ಭಾರತೀಯ ಪತ್ರಿಕೋದ್ಯಮ – ನಾಡಿಗ ಕೃಷ್ಣಮೂರ್ತಿ.

೨. ವೃತ್ತಪತ್ರಿಕೆ, ಅದರ ಚರಿತ್ರೆ, ಅದರ ಕರ್ತವ್ಯ, ಅದರ ಸ್ವಾತಂತ್ರ್ಯ– ಡಿ.ವಿ.ಜಿ

೩. ಹೈದ್ರಾಬಾದ್ ಕರ್ನಾಟಕ ಮಾಧ್ಯಮ – ಶ್ರೀನಿವಾಸ ಸಿರನುರಕರ್.

೪. ಕನ್ನಡ ಪತ್ರಿಕೆಗಳು – ಡಾ. ಪ್ರಭು ಖಾನಾಪುರೆ; ಕಲ್ಬುರ್ಗಿ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯಾಲಯ.

೫. ಕನ್ನಡ ಪತ್ರಿಕೆಗಳು – ಡಾ. ವಿ. ಬಿ ವಿಸಾಜಿ; ಬೀದರ್ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯಾಲಯ.

೬. ಗುಲ್ಬರ್ಗಾ ಜಿಲ್ಲಾ ಗ್ಯಾಸ್‌ಟಿಯರ್.

'ಯುವಜನತೆ ಮೇಲೆ ಸಾಮಾಜಿಕ ಮಾಧ್ಯಮಗಳ ಪ್ರಭಾವ' ಹೈದರಾಬಾದ್ ಕರ್ನಾಟಕ ಪ್ರದೇಶದ ನಗರಗಳ ಅನುಲಕ್ಷಿಸಿ: ಒಂದು ಅಧ್ಯಯನ

ಸಾಯಬಣ್ಣ ಈರಣ್ಣ ಗುಡುಬಾ
ಸಂಶೋಧನಾ ವಿದ್ಯಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಗುಲ್ಬರ್ಗ ವಿಶ್ವವಿದ್ಯಾಲಯ ಗುಲ್ಬರ್ಗ

ಪ್ರಸ್ತುತ ಜಗತ್ತಿನಲ್ಲಿ ಸಾಮಾಜಿಕ ಮಾಧ್ಯಮಗಳು (ಜಾಲತಾಣಗಳು) ಕ್ಷಣಾರ್ಧದಲ್ಲಿ ಜನರಿಗೆ ಅತ್ಯಮೂಲ್ಯ ಮಾಹಿತಿಯನ್ನು ತಲುಪಿಸುವ ಸಾಮಾಜಿಕ ತಾಣಗಳಾಗಿ ಬೆಳೆದುನಿಂತಿವೆ. ಫೇಸ್‌ಬುಕ್, ಟ್ವೀಟರ್, ಯೂಟ್ಯಬ್, ಮೈಸ್ಪೇಸ್, ಬ್ಲಾಗ್, ವೆಬ್‌ಸೈಟ್, ಬೆಬೂ, ಗೂಗಲ್+ ಮುಂತಾದವುಗಳು ಸಾಮಾಜಿಕ ಜಾಲತಾಣಗಳ ಪಟ್ಟಿಯಲ್ಲಿ ಪ್ರಮುಖವಾಗಿವೆ. ಜನರ ಮಧ್ಯೆ ಸಂಪರ್ಕ ಬೆಸೆಯುವುದರ ಜೊತೆಗೆ ಚಿತ್ರಸಹಿತ ಮಾಹಿತಿ ವಿಶೇಷ, ಸಂದೇಶ, ಭಾವನೆಗಳ ವಿನಿಮಯ ಮಾಡಿಕೊಳ್ಳುವ ಸಾಧನವಾಗಿ ಈ ಸಾಮಾಜಿಕ ಜಾಲತಾಣಗಳು ಕಾರ್ಯನಿರ್ವಹಿಸುತ್ತಿವೆ. ಯುವಕರು, ಹದಿಹರೆಯದವರು, ವಿದ್ಯಾರ್ಥಿಗಳು ಈ ಜಾಲತಾಣಗಳತ್ತ ಆಕರ್ಶಿತರಾಗುತ್ತಿದ್ದು ಇವುಗಳ ಬಳಕೆಯು ತೀವ್ರಗತಿಯಲ್ಲಿ ಹೆಚ್ಚಾಗುತ್ತಿದೆ. ಪ್ರಸ್ತುತ ದಿನಗಳಲ್ಲಿ ಯುವಕರು ಈ ಜಾಲತಾಣಗಳಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದಾರೆ. ಅಲ್ಲದೆ ಇತ್ತೀಚಿನ ದಿನಗಳಲ್ಲಿ ಹೊಸ ತಂತ್ರಜ್ಞಾನವುಳ್ಳ ಆ್ಯಂಡ್ರಾಯಿಡ್ ಮೊಬೈಲಗಳಿಂದ ಸಾಮಾಜಿಕ ಜಾಲತಾಣಗಳು ಯುವಕರ ಜೇಬಿಗೆ ಬಂದಂತಾಗಿವೆ. ಇದರ ಬಳಕೆಯಿಂದ ಯುವಕರು ಹೊರಜಗತ್ತಿನ ಸಾಮಾಜಿಕ ಒಡನಾಟ, ವೈಯಕ್ತಿಕ ಸಂಬಂಧಗಳಿಂದ ತಮ್ಮ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಕುಂಟಿತಗೊಳ್ಳುತ್ತಿರುವುದು ಕಂಡುಬರುತ್ತಿದೆ.

ಅಧುನಿಕ ಜಗತ್ತಿನಲ್ಲಿ ವಿಜ್ಞಾನ ತಂತ್ರಜ್ಞಾನ ಬೆಳೆದಂತೆಲ್ಲಾ ಸಮೂಹ ಮತ್ತು ಮಾಹಿತಿ ಸಂಪರ್ಕ ಸಾಧನಗಳಲ್ಲಿ ಬದಲಾವಣೆಗಳು ದಿನದಿಂದ ದಿನಕ್ಕೆ ಆಗುತ್ತಾ ಬರುತ್ತಿವೆ. ಅಂತಹವುಗಳ ಸಾಲಿನಲ್ಲಿ ಕ್ಷಿಪ್ರವಾಗಿ ಬೆಳೆದು ಪ್ರಪಂಚವನ್ನು ಜಾಗತಿಕ ಹಳ್ಳಿಯನ್ನಾಗಿ ಪರಿವರ್ತಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ ಅಂತರ್ಜಾಲವೂ ಒಂದು. ಒಂದುವರೆ ದಶಕಗಳ ಹಿಂದಷ್ಟೆ ಕಣ್‌ತೆರೆದ ಅಂತರ್ಜಾಲ ಪ್ರಸ್ತುತ ಸಮಾಜದ ಅವಿಭಾಜ್ಯ ಅಂಗವಾಗಿ ಬೆಳೆದು ನಿಂತಿದೆ.ಅಂತರ್ಜಾಲದ ಮುಂದುವರೆದ ಆವಿಷ್ಕಾರವಾಗಿ ಬೆಳೆದದ್ದೆ ಈ ಸಾಮಾಜಿಕ ಜಾಲತಾಣಗಳು. 21ನೇ ಶತಮಾನ ಇದನ್ನು ನವ ಮಾಧ್ಯಮಗಳ ಯುಗ ಎಂತಲೂ ಕರೆಯಲಾಗುತ್ತದೆ. ವರ್ಷಗಳು ಉರುಳಿದಂತೆ ಸಂಪ್ರಾದಾಯಿಕ ಮಾಧ್ಯಮಗಳ ಮಹತ್ವತೆ ಅಷ್ಟೇನು ಪರಿಣಾಮ ಬೀರದೆ ಇದ್ದಂತಹ ಸಂದರ್ಭದಲ್ಲಿ ನವ ಮಾಧ್ಯಮ ಜನ್ಮ ತಾಳಿದವು. ಜಗತ್ತಿನ ಮೂಲೆಯೊಂದರಲ್ಲಿ ನಡೆದ ಮತ್ತು ನಡೆಯುತ್ತಿರುವ ಘಟನೆಗಳನ್ನು, ಮಾಹಿತಿಗಳನ್ನು ಕ್ಷಣಾರ್ಧದಲ್ಲಿ ನಮಗೆ ನೀಡುವಲ್ಲಿ ಈ ನವ ಮಾಧ್ಯಮಗಳು ಯಶಸ್ವಿಯಾಗಿ ಮನೆಮಾತಾಗಿಬಿಟ್ಟವು.

ಪೀಠಿಕೆ: ಆಧುನಿಕ ಜಗತ್ತಿನಲ್ಲಿ ಸಾಮಾಜಿಕ ಮಾಧ್ಯಮಗಳು (ಜಾಲತಾಣಗಳು) ವಿಶ್ವದ ಜನರ ಮಧ್ಯೆ ಜಾಗತಿಕ ಸಂವಹನ ಸಂಪರ್ಕ ಸೇತುವೆಯಾಗಿ ಕಲೆಸ ನಿರ್ವಹಿಸುತ್ತಿವೆ ಇಂಥ ಮಾಧ್ಯಮಗಳ ಬಳಕೆ ಮಾಡಿಕೊಂಡು ವಿವಿಧ ದೇಶಗಳು ಅಭಿವೃದ್ಧಿ ಸಾಧಿಸುತ್ತಿವೆ. ಜಪಾನ, ಅಮೆರಿಕಾದಂತಹ ದೇಶಗಳು ನವ ಮಾಧ್ಯಗಳ ಮೂಲಕ ವಿಶ್ವವನ್ನೇ ಆಳುತ್ತಿವೆ. ಸಾಮಾಜಿಕ ಮಾಧ್ಯಮಗಳು (ಜಾಲತಾಣಗಳು) ಕ್ಷಣಾರ್ಧದಲ್ಲಿ ಜನರಿಗೆ ಅತ್ಯಮೂಲ್ಯ ಮಾಹಿತಿಯನ್ನು ತಲುಪಿಸುವ ಸಾಮಾಜಿಕ ತಾಣಗಳಾಗಿ ಬೆಳೆದುನಿಂತಿವೆ. ಫೇಸ್‌ಬುಕ್, ಟ್ವೀಟರ್, ಯೂಟ್ಯಬ್, ಮೈಸ್ಪೇಸ್, ಬ್ಲಾಗ್, ವೆಬ್‌ಸೈಟ್, ಬೆಬೂ, ಗೂಗಲ್+ ಮುಂತಾದವುಗಳು ಸಾಮಾಜಿಕ ಜಾಲತಾಣಗಳ ಪಟ್ಟಿಯಲ್ಲಿ ಪ್ರಮುಖವಾಗಿವೆ. "ಸಾಮಾಜಿಕ ಜಾಲತಾಣಗಳು" ಹೆಸರೇ ಸೂಚಿಸುವಂತೆ ಇವು ಸಾಮಾಜಿಕ ಜಾಲತಾಣಗಳಾಗಿವೆ.

ಜನರ ಮಧ್ಯೆ ಸಂಪರ್ಕ ಬೆಸೆಯುವುದರ ಜೊತೆಗೆ ಚಿತ್ರಸಹಿತ ಮಾಹಿತಿ ವಿಶೇಷ, ಸಂದೇಶ, ಭಾವನೆಗಳ ವಿನಿಮಯ ಮಾಡಿಕೊಳ್ಳುವ ಸಾಧನವಾಗಿ ಈ ಸಾಮಾಜಿಕ ಜಾಲತಾಣಗಳು ಕಾರ್ಯನಿರ್ವಹಿಸುತ್ತಿವೆ. ಯುವಕರು, ಹದಿಹರೆಯದವರು, ವಿದ್ಯಾರ್ಥಿಗಳು ಈ ಜಾಲತಾಣಗಳತ್ತ ಆಕರ್ಶಿತರಾಗುತ್ತಿದ್ದು ಇವುಗಳ ಬಳಕೆಯು ತೀವ್ರಗತಿಯಲ್ಲಿ ಹೆಚ್ಚಾಗುತ್ತಿದೆ. ಪ್ರಸ್ತುತ ದಿನಗಳಲ್ಲಿ ಯುವಕರು ಈ ಜಾಲತಾಣಗಳಲ್ಲಿ ಹೆಚ್ಚಿನ ಸಮಯ ಕಳೆಯುತ್ತಿ ದ್ದಾರೆ. ಅಲ್ಲದೆ ಇತ್ತೀಚಿನ ದಿನಗಳಲ್ಲಿ ಹೊಸ ತಂತ್ರಜ್ಞಾನವುಳ್ಳ ಆ್ಯಂಡ್ರಾಯಿಡ್ ಮೊಬೈಲಗಳಿಂದ ಸಾಮಾಜಿಕ ಜಾಲತಾಣಗಳು ಯುವಕರ ಜೇಬಿಗೆ ಬಂದಂತಾಗಿವೆ. ಇದರ ಬಳಕೆಯಿಂದ ಯುವಕರು ಹೊರಜಗತ್ತಿನ ಸಾಮಾಜಿಕ ಒಡನಾಟ, ವೈಯಕ್ತಿಕ ಸಂಬಂಧಗಳಿಂದ ತಮ್ಮ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಕುಂಟಿತಗೊಳ್ಳುತ್ತಿರುವುದು ಕಂಡುಬ ರುತ್ತಿದೆ.

ಅಧುನಿಕ ಜಗತ್ತಿನಲ್ಲಿ ವಿಜ್ಞಾನ ತಂತ್ರಜ್ಞಾನ ಬೆಳೆದಂತೆಲ್ಲಾ ಸಮೂಹ ಮತ್ತು ಮಾಹಿತಿ ಸಂಪರ್ಕ ಸಾಧನಗಳಲ್ಲಿ ಬದಲಾವಣೆಗಳು ದಿನದಿಂದ ದಿನಕ್ಕೆ ಆಗುತ್ತಾ ಬರುತ್ತಿವೆ. ಅಂತಹವುಗಳ ಸಾಲಿನಲ್ಲಿ ಕ್ಷಿಪ್ರವಾಗಿ ಬೆಳೆದು ಪ್ರಪಂಚವನ್ನು ಜಾಗತಿಕ ಹಳ್ಳಿಯನ್ನಾಗಿ ಪರಿವರ್ತಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ ಅಂತರ್ಜಾ ಲವೂ ಒಂದು. ಒಂದುವರೆ ದಶಕಗಳ ಹಿಂದಷ್ಟೆ ಕಣ್‌ತೆರೆದ ಅಂತರ್ಜಾಲ ಪ್ರಸ್ತುತ ಸಾಮಾಜದ ಅವಿಭಾಜ್ಯ ಅಂಗವಾಗಿ ಬೆಳೆದು ನಿಂತಿದೆ.

ಅಂತರ್ಜಾಲದ ಮುಂದುವರೆದ ಆವಿಷ್ಕಾರವಾಗಿ ಬೆಳೆದದ್ದೆ ಈ ಸಾಮಾಜಿಕ ಜಾಲತಾಣಗಳು. 21ನೇ ಶತಮಾನ ಇದನ್ನು ನವ ಮಾಧ್ಯಮಗಳ ಯುಗ ಎಂತಲೂ ಕರೆಯಲಾಗುತ್ತದೆ. ವರ್ಷಗಳು ಉರುಳಿದಂತೆ ಸಂಪ್ರಾದಾಯಿಕ ಮಾಧ್ಯಮಗಳ ಮಹತ್ವತೆ ಅಷ್ಟೇನು

ಪರಿಣಾಮ ಬೀರದೆ ಇದ್ದಂತಹ ಸಂದರ್ಭದಲ್ಲಿ ನವ ಮಾಧ್ಯಮ ಜನ್ಮ ತಾಳಿದವು. ಜಗತ್ತಿನ ಮೂಲೆಯೊಂದರಲ್ಲಿ ನಡೆದ ಮತ್ತು ನಡೆಯುತ್ತಿರುವ ಘಟನೆಗಳನ್ನು, ಮಾಹಿತಿಗಳನ್ನು ಕ್ಷಣಾರ್ಧದಲ್ಲಿ ನಮಗೆ ನೀಡುವಲ್ಲಿ ಈ ನವ ಮಾಧ್ಯಮಗಳು ಯಶಸ್ವಿಯಾಗಿ ಮನೆಮಾತಾಗಿಬಿಟ್ಟವು.

ಇಂತಹ ಹಲವಾರು ಜಾಲತಾಣಗಳು ನಾವು ಇಂದು ಕಾಣಬಹುದಾಗಿದೆ. ಮೊಬೈಲ್ ಜಾಲತಾಣಗಳು ಅಷ್ಟೇ ಪ್ರಮುಖ ಪಾತ್ರ ವಹಿಸುತ್ತವೆ. ಅವುಗಳೆಂದರೆ What's App, ChatON Messenger, We Chat ಹೀಗೆ ಹಲವಾರು ಸಾಮಾಜಿಕ ತಾಣಗಳನ್ನು ನಾವು ಕಾಣಬಹುದಾಗಿದೆ. ಅವುಗಳಲ್ಲೂ ಶೇಕಡವಾರು ಪರಿಣಾಮ ಮತ್ತು ದುಷ್ಪರಿಣಾಮ ಸರಿಸಮಾನವಾಗಿ ಜೊತೆಯಲ್ಲಿ ಹೊತ್ತು ಸಾಗುತ್ತಿವೆ. ಈ ಜಾಲತಾಣಗಳ ಅತಿ ಬಳಕೆಯಿಂದ ಪ್ರಸ್ತುತ ಯುವಪಿಳಿಗೆಯು ಹಿನ್ನಡೆ ಪಡೆಯುತ್ತಿರುವುದು ನಾವು ಕಾಣಬಹುದು. ಇವುಗಳ ತೀವ್ರ ಬಳಕೆಯಿಂದ ಯುವಕರು-ಕಾಲೇಜು ವಿದ್ಯಾರ್ಥಿಗಳು ಹಲವು ಹಂತಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ಹಿನ್ನಡೆ ಸಾಧಿಸುತ್ತಿರುವುದು ನಾವು ಪ್ರಮುಖವಾಗಿ ಕಾಣಬಹುದಾಗಿದೆ.

ಸಮಾಜದ ಮೇಲೆ ಸಾಮಾಜಿಕ ಮಾಧ್ಯಮಗಳ (ಜಾಲತಾಣಗಳ) ಪಾತ್ರ

ಫೇಸ್‌ಬುಕ್, ಟ್ವೀಟರ್, ಯೂಟ್ಯೂಬ್, ಮೈಸ್ಪೇಸ್, ಬ್ಲಾಗ್, ವೆಬ್‌ಸೈಟ್, ಬೆಬೂ, ಗೂಗಲ್+ ಮುಂತಾದವುಗಳ ಮೂಲಕ ಜನರು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುತ್ತಿದ್ದಾರೆ. ಇದರಿಂದ ಕಳೆದ 2014ರ ಲೋಕಸಭಾ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಫೇಸ್‌ಬುಕ್, ಟ್ವೀಟರ್ ಸೇರಿದಂತೆ ವಿವಿಧ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಚುನಾವಣೆಯಲ್ಲಿ ಜಯಬೇರಿ ಬಾರಿಸಿರುವದು ವಿಶ್ವದ ಗಮನ ಸೆಳೆದಿವೆ.

1960 ರಲ್ಲಿ ಪ್ರಾರಂಬವಾದ ಈ ಅಂತರ್ಜಾಲವು ದಿನೆ ದಿನೆ ಹೊಸ ಆವಿಷ್ಕಾರಗಳಿಗೆ ಒಳಗಾಗಿ ಹಲವಾರು ಆಯಾಮಗಳನ್ನು ಕಂಡು ಪ್ರಸ್ತುತ ಮಾನವ ಜೀನವದ ದೈನಂದಿನ ಕಾರ್ಯಗಳಿಗೆ ಅವಶ್ಯಕ ಅಂಗವಾಗಿ ಬೆಳೆದುನಿಂತಿದೆ. ಅಂತರ್ಜಾಲದ ಬಳಕೆ ಹಲವಾರು ಪ್ರಾಯೋಗಿಕ ಸಾಮಾಜಿಕ ಜಾಲತಾಣಗಳು ಹುಟ್ಟಿಕೊಂಡವು. ಅದರಲ್ಲಿ ಅಮೇರಿಕಾ ಆನ್‌ಲೈನ್, ಪೋಡಿಜಿ. ಕಂಪ್ಯೂಸರ್ ಸರ್ವ ಮತ್ತು ಬಾರ್ಟನೆಟ್ ಇವು ಪ್ರಮುಖ ಪ್ರಾಯೋಗಿಕ ತಾಣಗಳಾಗಿ ಮೂಡಿಬಂದವು. 1994ರಲ್ಲಿ ಜಿಯಾಸಿಟಿಸ್, 1995 ರಲ್ಲಿ ದಿಗೊಬ್.ಕಾಂ ಮತ್ತು ಟೈಪೊಡ.ಕಾಂ ಅಂದಿನ ಪ್ರಮುಖ ಸಾಮಾಜಿಕ ತಾಣಗಳ ತಂಗುದಾಣಗಳಾಗಿದ್ದವು. ಇವು ಮುಂದೆ ಸಾಮಾಜಿಕ ತಾಣಗಳಲ್ಲಿ ಹೊಸ ಆಯಾಮವನ್ನು ಸೃಷ್ಟಿಸಿದವು. ಪ್ರಪಂಚದಲ್ಲಿ ವಿವಿದೆಡೆ ಇರುವವರು ವಿಷಯಕ್ಕೆ ಅನುಗುಣವಾಗಿ ಎಲ್ಲರೂ ಒಂದೇ ವಿಷಯಕ್ಕೆ ಸಂಭಂದ ಪಟ್ಟಂತೆ ಒಂದೆ ಅಭಿಪ್ರಾಯ ಸಲ್ಲಿಸುವಂತೆ ಮಾಡಿತು. 1990 ದಶಕದ ವೇಳೆಗೆ ಸಾವಾಜಿಕ ಜಾಲತಾಣದಲ್ಲಿ ಒಂದು ಹೊಸ ಆವಿಷ್ಕಾರದೊಂದಿಗೆ ಗೆಳೆಯರ ಪಟ್ಟಿ ವೈಯಕ್ತಿಕ ವಿಚಾರ ಹಂಚಿಕೊಳ್ಳಲು ಸಂಗ್ರಹಿಸಲು ಇವುಗಳು ಸಾಧನಗಳಾದವು. ಇನ್ನೂ 2000 ನಂತರ ಈ ಜಾಲತಾಣಗಳು ಜನಸಾಮಾನ್ಯರಿಗೆ ಸುಲುಭವಾಗಿ ಉಪಯೋಗಿಸಲು ಅನುವು ಮಾಡಿಕೊಟ್ಟವು. ಅದರಲ್ಲಿ ಪ್ರಮುಖವಾಗಿ "ಪ್ರೇಂಡ ಸ್ಟೋರ್" 2002 ರ ನಂತರ ಮೈಸ್ಪೇಸ್, ಲಿಂಕಡ್ ಇನ್ ಹೀಗೆ ಹಲವಾರು ತಾಣಗಳು ಹುಟ್ಟಿಕೊಂಡವು. ಅಂತರ್ಜಾಲವು ಸಾಮಾಜಿಕ ತಾಣಗಳನ್ನು ಸಂವಹನದ ಹೊಸ ವಿದಾನ ಮತ್ತು ಆಯಾಮವನ್ನು ಹುಟ್ಟುಹಾಕಿದೆ. ಅಲ್ಲದೆ ಪ್ರಸ್ತುತ ಜಾಲವನ್ನು ನವಯುಗ ಮಾದ್ಯಮ (ಹೊಸ ಮಾದ್ಯಮ) ಎಂದು ಕರೆಯಲಾಗುತ್ತಿದೆ. ಇಲ್ಲಿಯವರೆಗೆ ಸರಕಾರದ ಮೂರು ಅಂಗಗಳು ಮತ್ತು ನಾಲ್ಕನೆ ಅಂಗವಾಗಿ ಮಾಧ್ಯಮವನ್ನು ಗುರುತಿಸಲಾಗುತ್ತಿತ್ತು, ಆದರೆ ಈಗ ಐದನೆ ಅಂಗವೆಂದು ನವಮಾಧ್ಯಮವನ್ನು ಕರೆಯಲಾಗುತ್ತಿದೆ. ಈ ನವಮಾಧ್ಯಮವು ಸಂವಹನ ಮತ್ತು ಮಾಹಿತಿ ಸಂಗ್ರಹಣೆಯಲ್ಲಿ ಮಹತ್ವದ ಪಾತ್ರವಹಿಸಿದೆ.

ಯುವಕರ ಮೇಲೆ ಸಾಮಾಜಿಕ ಮಾಧ್ಯಮಗಳ (ಜಾಲತಾಣಗಳ) ಪ್ರಭಾವ

ಸಾಮಾಜಿಕ ಜಾಲತಾಣಗಳ ಪಟ್ಟಿಯಲ್ಲಿ ಸೇರುವ ಫೇಸ್‌ಬುಕ್, ಟ್ವಿಟರ್, ಯೂಟ್ಯೂಬ್, ಮೈಸ್ಪೇಸ್, ಬ್ಲಾಗ್, ಬೆಬೋ, ಐಪ್ಯಾಡಗಳು, ಟೆಸ್ಟಿಂಗ್ ಸೇರಿದಂತೆ ನೂರಾರು ವೆಬ್‌ಸೈಟ್‌ಗಳು ಪ್ರಮುಖವಾಗಿವೆ. ಇಂತಹ ಸಾಮಾಜಿಕ ಜಾಲತಾಣಗಳು ಪ್ರಸ್ತುತ ಯುವಕರು ಮತ್ತು ವಿದ್ಯಾರ್ಥಿಗಳ ಪ್ರತಿನಿತ್ಯ ಜೀವನದ ಅವಿಭಾಜ್ಯ ಅಂಗವಾಗಿವೆ. ಈ ತಾಣಗಳಿಂದ ಸಾಮಾನ್ಯವಾಗಿ ಗೆಳೆಯರೊಂದಿಗೆ ವೈಯಕ್ತಿಕ ಮತ್ತು ಅವರ ಭಾವನೆಗಳನ್ನು ಹಂಚಿಕೊಳ್ಳಲು ರೂಪಿತವಾದ ವ್ಯವಸ್ಥಿತ ಜಾಲತಾಣವಾಗಿವೆ. ಅದರಲ್ಲೂ ನಮ್ಮ ಯುವ ಸಮೂಹ ಈ ಜಾಲತಾಣಗಳನ್ನು ಅತಿ ಹೆಚ್ಚಿನ ರೀತಿಯಲ್ಲಿ ಉಪಯೋಗಿಸುತ್ತಿರುವುದು ಗಮನಿಸಬಹುದಾದ ಸಂಗತಿ.

ಸಾಮಾಜಿಕ ಜಾಲತಾಣಗಳ ಪೈಕಿ ಅತಿಹೆಚ್ಚು ಪ್ರಚಲಿತ ಮತ್ತು ಪ್ರಖ್ಯಾತಿ ಪಡೆದ ಜಾಲತಾಣವಾಗಿ ಫೇಸ್‌ಬುಕ್ ಪ್ರಮುಖ ಪಾತ್ರವಹಿಸುತ್ತಿದೆ. ಅಕ್ಟೋಬರ್ 28, 2004 ರಲ್ಲಿ ಜಾರಿಗೆ ಬಂದ ಇದು ಅತೀ ವೇಗವಾಗಿ ಬೇಳೆಯಿತು. ಹದಿಹರೆಯದ ಮಕ್ಕಳಿಂದ ಹಿಡಿದು ವಯಸ್ಕರವರೆಗಿನ ವರ್ಗಕ್ಕೆ ಇದು ಅಚ್ಚು ಮೆಚ್ಚಿನ ತಾಣವಾಗಿದೆ. ಇದು 2013 ಸೆಪ್ಟಂಬರ್ ಅಂತ್ಯದ ವೇಳೆಗೆ 1.2 ಬಿಲಿಯನ್ ನಷ್ಟು ಬಳಕೆದಾರರು ಫೇಸ್‌ಬುಕ್ ಅನ್ನು ಬಳಸುತ್ತಿರುವುದು ಕಂಡುಬರುತ್ತಿದೆ. ಅದರಲ್ಲೂ ಯುವಕರು ಇದರ ಬಳಕೆಯಲ್ಲಿ ಒಂದು ಹೆಜ್ಜೆ ಮುಂದು. ಈ ತಾಣಗಳಲ್ಲಿ ಕುಳಿತರೆ ಸಾಕು ಅವರಿಗೆ ಹೊರಗಿನ ಪ್ರಪಂಚ ಮರೆತು, ಓದು, ತಿಂಡಿ ತಿನಿಸು, ಸಂಭಂದಗಳು ಬೇಡವೇ ಬೇಡ ಎನ್ನುವಷ್ಟರ ಮಟ್ಟಿಗೆ ಮಗ್ನರಾಗಿರುತ್ತಾರೆ.

ಇನ್ನೂ ಟ್ವೀಟರ್ ಸದ್ಯ ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಉಪಯೋಗಿಸಲ್ಪಡುತ್ತಿರುವ ಉತ್ತಮ ಸಂವಹನ ಜಾಲತಾಣವಾಗಿದೆ. 15ನೇ ಜುಲೈ 2006 ರಲ್ಲಿ ಬಳಕೆಗೆ ಬಂದ ಈ ತಾಣವೂ ಫೆಬ್ರವರಿ 2013ರ ವೇಳೆಗೆ 200 ಮಿಲಿಯನ್ ಬಳಕೆದಾರರನ್ನು ಹೊಂದಿದೆ. ಅನೇಕರು ತಮ್ಮ ಹೇಳಿಕೆ, ಅನಿಸಿಕೆ, ಅಭಿಪ್ರಾಯ ಭಾವನೆಗಳನ್ನು ತೀವ್ರವಾಗಿ ವ್ಯಕ್ತಪಡಿಸುವ ವಿರೋಧಿಸುವಲ್ಲಿ ಇದು ಪರಿಣಾಮಕಾರಿ ಸಂವಹನ ಮಾಧ್ಯಮವಾಗಿ ಪ್ರಸಿದ್ಧಿ ಪಡೆದಿದೆ. ಶೈಕ್ಷಣಿಕ ಕ್ಷೇತ್ರಕ್ಕೆ ಸಂಭಂದ ಪಟ್ಟಂತೆ ನೋಡಿದರೆ ವಿದ್ಯಾರ್ಥಿಗಳು ತಮ್ಮ ಪಠ್ಯ ಪುಸ್ತಕಗಳಿಗಿಂತ ಹೆಚ್ಚು ಇವುಗಳ ಬಳಕೆಯಲ್ಲೆ ಕಾಲ ಕಳೆಯುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಹಿನ್ನಡೆ ಪಡೆಯುತ್ತಿದ್ದಾರೆ.

ಯೂಟ್ಯೂಬ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿಯೇ ವಿಶೇಷ

ತಾಣವಾಗಿ ಪರಿಗಣಿಸಲ್ಪಡುತ್ತದೆ. ಇಲ್ಲಿ ನಮಗೆ ಬೇಕಾದ ಮಾಹಿತಿಯನ್ನು ವಿಡಿಯೋ ರೂಪದಲ್ಲಿ ಪಡೆಯಬಹುದಾಗಿದೆ. ಫೆಬ್ರವರಿ 2005 ರಲ್ಲಿ ಆವಿಷ್ಕಾರವಾದ ಈ ತಾಣವೂ ಸುಮಾರು 3ಬಿಲಿಯನ್ ವಿಡಿಯೋಗಳನ್ನು 2010ರಲ್ಲಿ 700 ಬಿಲಿಯನ್ ಪ್ಲೇಬ್ಯಾಕ್ ತಲುಪುವ ಯೂಟ್ಯೂಬ್‌ನಲ್ಲಿ ಪ್ರತಿಯೊಂದು ದಿನ ನೋಡಲಾಗುತ್ತದೆ. ಇದರಿಂದ ಇದು ಅತೀ ವೇಗವಾಗಿ ಬೇಳೆದು ಜನಪ್ರೀಯವಾಯಿತು. ಈ ತಾಣವು ಒಂದೆಡೆ ವರವಾದರೆ ಮತ್ತೊಂದೆಡೆ ಶಾಪವೂ ಹೌದು. ಈ ತಾಣದಲ್ಲಿ ಹದಿಹರೆಯದವರಿಂದ ಹಿಡಿದು ವಯಸ್ಕರವರೆಗೆ ಒಂದಲ್ಲ ಒಂದು ರೀತಿಯಲ್ಲಿ ವಿಡಿಯೋಗಳನ್ನು ನೋಡಲು ಬಳಸುತ್ತಿದ್ದಾರೆ. ಅದರಲ್ಲಿ ಕೆಲ ಯುವ ಸಮೂಹ ಈ ತಾಣವನ್ನು ಅಶ್ಲೀಲ ಚಿತ್ರಗಳ ತಾಣವಾಗಿ ಮಾಡಿಕೊಂಡಿರುವುದು ಒಂದು ಬಹುದೊಡ್ಡ ಶಾಪವಾಗಿದೆ. ಅಶ್ಲೀಲ ಚಿತ್ರಗಳ ಬಳಕೆ ಹೆಚ್ಚಾದದ್ದನ್ನು ಅರಿತ ತಾಣ ಪ್ರಸ್ತುತ ಆ ಚಿತ್ರಗಳನ್ನು ರದ್ದುಗೊಳಿಸಿದೆ.

ಇನ್ನೂ ಬ್ಲಾಗ್‌ಗಳು ಪ್ರಸ್ತುತ ದಿನಗಳಲ್ಲಿ ಉತ್ತಮ ಸಂವಹನ ಜಾಲವಾಗಿ ಹೆಸರು ಪಡೆಯುತ್ತಿದೆ. ವೈಯಕ್ತಿಕ ವಿವರಗಳನ್ನು ಮತ್ತು ವೈಯಕ್ತಿಕ ಅನಿಸಿಕೆಗಳನ್ನು ಬರೆದು ಹಂಚಿಕೊಳ್ಳುವ ಒಂದು ವ್ಯವಸ್ಥೆ ಇದರಲ್ಲಿ ಕಾಣಬಹುದಾಗಿದೆ. ಒಬ್ಬ ವ್ಯಕ್ತಿಯ ಮನಸ್ಸಿನ ಭಾವನೆಗಳನ್ನು ಇದರಲ್ಲಿ ಹಂಚಿಕೊಳ್ಳುವ ಸ್ವಾತಂತ್ರ್ಯ ಕಾಣಬಹುದು. ಅಶ್ಲೀಲತೆಯಿಂದ ಕೂಡಿದ ಬ್ಲಾಗ್ಸ್‌ಗಳು ಯುವ ಸಮೂಹದ ಮೇಲೆ ನೇರ ದುಷ್ಪರಿಣಾಮಗಳನ್ನು ಬೀರುತ್ತಿವೆ. ಇಲ್ಲಿ ಈ ಸಾಮಾಜಿಕ ತಾಣಗಳು ಯುವಕರ ಮೇಲೆ ಬೀರುತ್ತಿರುವ ಪ್ರಭಾವ ಮತ್ತು ದುಷ್ಪರಿಣಾಮಗಳ ಬಗ್ಗೆ ಅಧ್ಯಯನ ಮಾಡುವುದೇ ಅಧ್ಯಯನದ ಪ್ರಾಮುಖ್ಯತೆಯಾಗಿದೆ.

ಸಾಮಾಜಿಕ ಮಾಧ್ಯಮಗಳ ದುರುಉಪಯೋಗ: ಅಂತರ್ಜಾಲ ಬ್ಲಾಗ್‌ಗಳು ವಾಕ್‌ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಲೇ ಬರೀ ಸುಳ್ಳು ಬೊಗಳುವ ನಿಂದಿಸುವ ಕೀಳು ಭಾವನೆ ವ್ಯಕ್ತಪಡಿಸುವ ಕೊಲೆಗಡುಕ ಗೊಂಪೊಂದಕ್ಕೆ ಸಿಕ್ಕಿರುವ ವೇದಿಕೆಗಳಾಗಿವೆ. ಎಂದು ಕೆಲ ವರ್ಷಗಳ ಹಿಂದೆ ಡ್ಯಾನಿಯಲ್ ಲಿಯಾನ್ಸ್ ಹೇಳಿದ್ದರು. ಪ್ರಸ್ತುತ ಅಂತರ್ಜಾಲದ ಬೇರೆಬೇರೆ ಪುಟಗಳನ್ನು ಒಮ್ಮೆ ತಿರುವಿ ನೋಡಿದರೆ ಸಾಕು ಒಂದಿಲ್ಲೊಂದು ಗೌರವಾನ್ವಿತ ವ್ಯಕ್ತಿಯ ಬೇಡವಾದ ಅಸಹ್ಯವಾದ ಕಮೆಂಟ್ ಇರುತ್ತದೆ. ಆದರೆ ವಾಸ್ತವವಾಗಿ ಯಾರದರೂ ಸಾರ್ವಜನಿಕವಾಗಿ ನಿಂದಿಸಿದರೆ ಅವರ ಬಗ್ಗೆ ಕಾನೂನು ಕ್ರಮ ಜರುಗುತ್ತದೆ. ಆದರೆ ಅಂತರ್ಜಾಲ ಬ್ಲಾಗ್‌ಗಳಲ್ಲಿ ವ್ಯಕ್ತಿ, ಸಂಸ್ಥೆ ಬಗ್ಗೆ ನಿಂದರೆ ಮಾಡಿದರೆ ತಕ್ಷಣ ಕ್ರಮ ಆಗುವದಿಲ್ಲ. ಇದಕ್ಕೆ ಕಾರಣ ವೆಬ್ ಸೈಬರ್ ನಿಗಾ ಸಂಸ್ಥೆ ದುರ್ಬಲವಾಗಿದೆ. ಇದರಿಂದ ಇದಕ್ಕೆ ಮೂರು ಮುಖ್ಯ ಕಾರಣವಿದೆ.

- ಅಂತರ್ಜಾಲ ಕಮೆಂಟಿಗರು ತಮ್ಮ ಗುರುತು ಮರೆಮಾಚಿಕೊಳ್ಳುವದಕ್ಕೆ ಅಂತರ್ಜಾಲ ಬ್ಲಾಗ್‌ಗಳಲಿ ಅವಕಾಶವಿದೆ.
- ಅಂತರ್ಜಾಲ ಕಂಪೆನಿಗಳಾದ ಶೋಧನಾ ತಾಣಗಳು ಸಾಮಾಜಿಕ ಜಾಲತಾಣಗಳು ಬ್ಲಾಗ್ ನಡೆಸುವ ಕಂಪೆನಿಗಳು ಹಾಗೂ ಐಎಸ್‌ಪಿಗಳು (ಮಧ್ಯವರ್ತಿ ಸಂಸ್ಥೆಗಳು)ಎಲ್ಲಾ ಸೇರಿಕೊಂಡು ಪಿತೂರಿ ನಡೆಸಿ ಅತ್ಯಂತ ಅಸಹ್ಯಕರ ಕಮೆಂಟ್‌ಗಳನ್ನು ಲಿಂಕ್‌ಗಳನ್ನು ಡಿಲೀಟ್ ಮಾಡುವುದಕ್ಕೆ ನಿರಾಕರಿಸುವದಲ್ಲದೆ ಅನಾಮಿಕ ಕಮೆಂಟಿಗರ ಗುರುತು ಪತ್ತೆಗೆ ಒಪ್ಪುವದಿಲ್ಲ.
- ವೆಬ್ ತಾಣಗಳಲ್ಲಿ ಬರುವ ಕಮೆಂಟ್‌ಗಳಿಗೆ ಮೇಲ್ನೋಟಕ್ಕೆ ಜವಾಬ್ದಾರರಾಗದ ಇಂತಹ ಮಧ್ಯವರ್ತಿಗಳಿಗೆ ನೀಡಿರುವ ಕಾನೂನು ರಕ್ಷಣೆ(ಅಮೆರಿಕದ ಸಂವಹನ ಸಭ್ಯತಾ 30ನೇ ಕಾಯ್ದೆ ಯಾವುದೇ ಮಧ್ಯವರ್ತಿ ಸಂಸ್ಥೆಯ ವೆಬ್ ತಾಣದ ಮೇಲೆ ದಾಖಲಿಸುವ ನಿಂದನಾತ್ಮಕ ಕಮೆಂಟ್‌ಗಳಿಗೆ ಹೊಣೆಯಾಗದಂತೆ ರಕ್ಷಣೆ ನೀಡಿದೆ.

ಸಾಮಾಜಿಕ ಜಾಲತಾಣಗಳ ದುರುಉಪಯೋಗ ತಡೆ: ಸೈಬರ್ ನಿಗಾ ಸಂಸ್ಥೆಯ ಸ್ಥಾಪನೆ ಮೂಲಕ ಹಲವು ನಿಂದನೆ ಪ್ರಕರಣಗಳನ್ನು ತಡೆಯಲಾಗಿದೆ. ಇದರಿಂದ ಅಮೆರಿಕದ ನಾಗರೀಕ ಹಾಗೂ ಇಬೇ ಕಂಪೆನಿ ಬಝಿಡಾಟ್‌ಕಾಂನ ಮುಖ್ಯಸ್ಥ ಅವನಿಶ್ ಬಜಾಜ್‌ನನ್ನು ತನ್ನ ವೆಬ್ ತಾಣದಲ್ಲಿ ಅಶ್ಲೀಲ ಲೈಂಗಿಕತೆಗೆ ಅವಕಾಶ ಮಾಡಿಕೊಡುತ್ತಿದ್ದ ಎಂಬ ಕಾರಣದಿಂದ 6 ವರ್ಷಗಳ ಹಿಂದೆ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಬಂಧಿಸಿ ಜೈಲಿಗೆ ಹಾಕಲಾಗಿತ್ತು. 2008ರಲ್ಲಿ ಸೈಬರ್ ಕಾರಣಗಳಿಂದಾಗಿಯೇ ಕೋರಿಯಾದ ತಾರೆಯೊಬ್ಬ ಸಾವು ಕಂಡಾಗ ಕೋರಿಯಾದ ಸೈಬರ್ ಭಯೋತ್ಪಾದನಾ ಕೇಂದ್ರದ 900ಸರಕಾರಿ ಏಜೆಂಟ್‌ಗಳು ಹಲವಾರು ಬ್ಲಾಗ್‌ಗಳನ್ನು ಶೋಧಿಸಿ ಅವರನ್ನೆಲ್ಲ ಬಂಧಿಸಿದರು.

ಅಧ್ಯಯನದ ಉದ್ದೇಶ: ಸಾಮಾಜಿಕ ಮಾಧ್ಯಮಗಳು ಜಾಗತಿಕ ಮಟ್ಟದ ಸಂಪರ್ಕ ಸೇತುವೆಯಾಗಿ ಮತ್ತು ಪ್ರತಿಯೊಬ್ಬರು ತಮ್ಮ ಸ್ವಾತಂತ್ರ್ಯ ವ್ಯಕ್ತಪಡಿಸುವ ಸಾಧನಗಳು, ಸಾಮಾಜಿಕ ಜಾಲಾತಾಣಗಳಾಗಿವೆ. ಆದರೆ ಯುವಕರು ಸಾಮಾಜಿಕ ಮಾಧ್ಯಮಗಳನ್ನು ಒಳ್ಳೆಯ ಕೆಲಸಕ್ಕೆ ಬಳಸಿಕೊಳ್ಳುವ ಬದಲು ಕೆಟ್ಟ ವಾಮಾ ಮಾರ್ಗದ ಕಡೆಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಇದರಿಂದ ಹೈದರಾಬಾದ್ ಕರ್ನಾಟಕ ಪ್ರದೇಶದ ಯುವಕರು ಇಂಥಹ ಮಾಧ್ಯಮಗಳನ್ನು ಯಾವ ರೀತಿ ಉಪಯುಕ್ತ ಮಾಡಿಕೊಳ್ಳುತ್ತಿದ್ದಾರೆ ಎಂಬ ಪ್ರಯತ್ನ ಈ ಸಂಶೋಧನೆಯ ಮೂಲ ಉದ್ದೇಶವಾಗಿದೆ.

ಅಧ್ಯಯನದ ಉದ್ದೇಶಗಳು:

- ಯುವ ವಯಸ್ಕರಲ್ಲಿ ಸಾಮಾಜಿಕ ಮಾಧ್ಯಮಗಳ ಜಾಗೃತಿ ಪರೀಕ್ಷಿಸಲು
- ಯುವಕರ ದೈನಂದಿನ ಜೀವನದಲ್ಲಿ ಸಾಮಾಜಿಕ ಮಾಧ್ಯಮಗಳ ಪ್ರಭಾವ ನಿರ್ಧರಿಸಲು
- ಸಾಮಾಜಿಕ ಮಾಧ್ಯಮ ಜಾಲತಾಣಗಳ ಮತ್ತು ವೃತ್ತಿ ಬೆಳವಣಿಗೆ ನಡುವಿನ ಸಂಬಂಧವನ್ನು ವಿಶ್ಲೇಷಿಸಲು.
- ಸಾಮಾಜಿಕ ಮಾಧ್ಯಮಗಳ ಬಳಕೆಯಿಂದ ಯುವಕರ ಮೇಲೆ ಬೀರುವ ದುಷ್ಪರಿಣಾಮದ ಕುರಿತು
- ಸಾಮಾಜಿಕ ಮಾಧ್ಯಮಗಳ ಬಳಕೆಯಿಂದ ಯುವಕರ ಸಾಧಕ ಬಾಧಕಗಳ ಕುರಿತು ಅಧ್ಯಯನ ನಡೆಸುವುದು.

ಅಧ್ಯಯನದ ವ್ಯಾಪ್ತಿ: ಸಾಮಾಜಿಕ ಮಾಧ್ಯಮಗಳ ಬಳಕೆಯಿಂದ ಪ್ರಸ್ತುತ ಯುವಕರು ಯಾವ ರೀತಿ ಪ್ರಭಾವಕ್ಕೆ ಒಳಗಾಗಿದ್ದಾರೆ. ಮತ್ತು ಸಾಮಾಜಿಕ ಜಾಲತಾಣಗಳ ಪರಿಣಾಮಗಳ ಬಗ್ಗೆ ಕುರಿತು ಹೈದರಾಬಾದ್ ಕರ್ನಾಟಕ ಪ್ರದೇಶದ ಪೈಕಿ ಗುಲ್ಬರ್ಗಾ ನಗರದ ಯುವಕರನ್ನು ಸಂಶೋಧನಾ ಅಧ್ಯಯನಕ್ಕೆ ಆಯ್ಕೆಗೆ ಒಳಪಡಿಸಿಕೊಂಡು ಸಂಶೋಧನೆ ಮಾಡಲಾಗಿದೆ.

1. ಅಧ್ಯಯನದ ಪ್ರಾಮುಖ್ಯತೆ : ಅಧ್ಯಯನಕ್ಕೆ ಸಂಭಂದಿಸಿದಂತೆ **ಯುವಜನತೆ ಮೇಲೆ ಸಾಮಾಜಿಕ ಮಾಧ್ಯಮಗಳ ಪ್ರಭಾವ ಹೈದರಾಬಾದ್ ಕರ್ನಾಟಕ ಪ್ರದೇಶದ ನಗರಗಳ ಯುವಕರು** ಉಪಯೋಗಿಸುತ್ತಿರುವ ಜಾಲತಾಣಗಳ ಬಗ್ಗೆ ತಿಳಿದುಕೊಳ್ಳುವುದು ಹಾಗೂ ಅದರ ಪರಿಣಾಮ ಮತ್ತು ದುಷ್ಪರಿಣಾಮ ಕುರಿತು ಅಧ್ಯಯನ ಮಾಡುವುದು ಪ್ರಮುಖ ಉದ್ದೇಶವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಯುವಕರು ಸಾಮಾಜಿಕ ಜಾಲತಾಣಗಳ ಬಳಕೆಯಿಂದ ವೈಯಕ್ತಿಕ ಸಂಭಂದ ದಿಂದ ದೂರವಾಗುತ್ತಿರುವುದು, ಶೈಕ್ಷಣಿಕ ಸಾಲಿಗೆ ಸಂಭಂದ ಪಟ್ಟಂತೆ ಶೈಕ್ಷಣಿಕ ಹಿನ್ನಡೆ ಪಡೆಯುತ್ತಿರುವುದು, ಸಾಮಾಜಿಕ ಒಡನಾಟಗಳು ಕುಗ್ಗುತ್ತಿರುವುದು ಹೀಗೆ ಅಧ್ಯಯನದಲ್ಲಿ ಕೆಲ ಪ್ರಮುಖ ಆಂಶಗಳನ್ನು ವಿಶ್ಲೇಷಿಸಲಾಗಿದೆ.

ಸಾಮಾಜಿಕ ಜಾಲತಾಣಗಳ ಬಳಕೆಯಿಂದ ಯುವಕರು ತಮ್ಮ ಸಂಭಂದಗಳನ್ನು ಮರೆತುಬಿಡುತ್ತಿದ್ದಾರೆ. ಕಂಪ್ಯೂಟರ್‌ನಲ್ಲಿ ಆನ್‌ಲೈನ್ ಗೇಮ್ಸ ಆಡುವುದು, ಅಶ್ಲೀಲ ಚಿತ್ರಗಳನ್ನು ನೋಡುವುದು, ಆನ್‌ಲೈನ್ ಚಾಟಿಂಗ್ ಮಾಡುವುದು, ಫೇಸ್‌ಬುಕ್ ಮೂಲಕ ಪರಿಚಯವಾಗಿ ಪ್ರೀತಿ ಪ್ರೇಮಕ್ಕೆ ಸಿಲುಕಿ ಅದೇಷ್ಟು ಯುವಕ, ಯುವತಿಯರು ತಮ್ಮ ಸುಂದರವಾದ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ.

ಟ್ವಿಟ್ಟರ್, ಫೇಸ್‌ಬುಕ್ ವಿವಿಧ ಜಾಲತಾಣಗಳಲ್ಲಿ ಒಬ್ಬರ ಅಶ್ಲೀಲ ಚಿತ್ರಗಳನ್ನು ಹಾಕುವ ಮೂಲಕ ಸಮಾಜವನ್ನು ರೋಗಗ್ರಸ್ಥವನ್ನಾಗಿ ಮಾಡುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳು ಒಂದು ಕಡೆ ಜಾಗತಿಕವಾಗಿ ವ್ಯಾಪಾರ ವೈವಾಟಿಗೆ ಅನುಕೂಲವಾದರೇ ಇನ್ನೊಂದು ಕಡೆ ಯುವಕರ ದುಸಕೃತ್ಯಕ್ಕೆ ಎಡೆ ಮಾಡಿಕೊಡುತ್ತಿವೆ. ಸಾಮಾಜಿಕ ಜಾಲತಾಣಗಳು ಪ್ರತಿಯೊಬ್ಬರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವದಕ್ಕೆ ಮುಕ್ತ ಸ್ವಾತಂತ್ರ್ಯ ನೀಡುತ್ತವೆ. ಇದರಿಂದಲೇ ಇಂದು ವಿವಿಧ ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳನ್ನು ತಮ್ಮ ಪಕ್ಷದ ಪ್ರಚಾರ ಸಾಧನಗಳನ್ನಾಗಿ ಬಳಸಿಕೊಂಡು ಯಶಸ್ವಿಯಾಗಿವೆ. ಇದರಿಂದ ಇಂಥ ಸಾಮಾಜಿಕ ಜಾಲತಾಣಗಳ ಬಳಕೆಯಿಂದ ಪ್ರಸ್ತುತ ಯುವಕರ ಮೇಲೆ ಯಾವ ದುಷ್ಪಪರಿಣಾಮ ಮತ್ತು ಅನಕೂವಾಗುತ್ತಿದೆ ಎಂಬ ಸಮಗ್ರ ಅಂಶಗಳೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ವಿಧಾನ

'ಯುವಜನತೆ ಮೇಲೆ ಸಾಮಾಜಿಕ ಮಾಧ್ಯಮಗಳ ಪ್ರಭಾವ' ಹೈದರಾಬಾದ್ ಕರ್ನಾಟಕ ಪ್ರದೇಶದ ನಗರಗಳ ಅನುಲಕ್ಷಿಸಿ-ಒಂದು ಅಧ್ಯಯನ ಎಂಬ ವಿಷಯ ಕುರಿತು ಸಂಶೋಧನೆ ಕೈಗೊಂಡಿರುವ ನಾನು ಕ್ಷೇತ್ರ ಕಾರ್ಯ ವಿಧಾನವನ್ನು ಬಳಸಿಕೊಂಡು ಗುಲ್ಬರ್ಗಾ ನಗರದ ಯುವಕರ ಅಧ್ಯಯನ ನಡೆಸಲಾಗಿದೆ. ಈ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ದೊರೆತ ಆಕಾರಗಳ ಸಹಾಯದಿಂದ ವಿನ್ಯಾಸವನ್ನು ರೂಪಿಸಿಕೊಳ್ಳಲಾಗಿದೆ.

1. ಸಾಮಾಜಿಕ ಜಾಲತಾಣಗಳ ಬಳಕೆ

ಸಾಮಾಜಿಕ ಜಾಲತಾಣಗಳು	ಸಂವಾದಿಗಳು	ಪ್ರತಿಶತ
ಫೇಸ್‌ಬುಕ್	50	100%
ಯುಟೂಬ್	45	90%
ಟ್ವಿಟ್ಟರ್	16	32%
ಮೈ ಸ್ಪೇಸ್	12	24%
ಲಿಂಕ್ಡ್ ಇನ್	30	60%

2. ಸಾಮಾಜಿಕ ಜಾಲತಾಣಗಳಿಂದ ಸಂವಾದಿಗಳ ತೃಪ್ತಿ.

ಸಾಮಾಜಿಕ ಜಾಲತಾಣಗಳು	ಅತಿ ತೃಪ್ತಿ	ಪರವಾಗಿಲ್ಲಾ	ಅತೃಪ್ತಿ	ಸಂವಾದಿಗಳು
ಫೇಸ್‌ಬುಕ್	40	05	05	50
ಯುಟ್ಯೂಬ್	35	11	04	50
ಟ್ವಿಟರ್	16	22	12	50
ಮೈಸ್ಪೇಸ್	09	04	37	50
ಲಿಂಕ್ಡ್ ಇನ್	26	13	11	50

ಉಪಸಂಹಾರ : ಸಾಮಾಜಿಕ ಮಾಧ್ಯಮಗಳು(ಜಾಲತಾಣಗಳು) ಜಾಗತಿಕ ಮಟ್ಟದಲ್ಲಿ ಸಂವಹನ ಸಂಪರ್ಕವಾಗಿ ಬೆಳೆದಿದೆ. ಇದರಿಂದ ಔದ್ಯೋಗಿಕವಾಗಿ ಮತ್ತು ಶೈಕ್ಷಣಿಕವಾಗಿ ಜಾಲತಾಣಗಳು ವಿವಿಧ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿವೆ. ಇದರಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವಹಿವಾಟಿಗೆ ಸಹಕಾರವಾಗಿದೆ. ಇದರಿಂದ ಪ್ರತಿಯೊಂದು ಆಡಳಿತ ಯಂತ್ರದಲ್ಲಿ ಇವುಗಳ ಬಳಕೆ ವಿಪರಿತವಾಗಿದೆ. ಒಟ್ಟಾರೆ ಒಂದು ದೇಶದ ಅಭಿವೃದ್ಧಿ ಅಲ್ಲಿನ ಸಾಮಾಜಿಕ ಮಾಧ್ಯಮಗಳ ಬಳಕೆ ನಿರ್ಧರಿಸುತ್ತದೆ. ಇದರಿಂದ ಪ್ರಸ್ತುತ ಯುವಜನತೆ ಒಂದು ವರ್ಗ ಸಾಮಾಜಿಕ ಮಾಧ್ಯಮಗಳನ್ನು ಶೈಕ್ಷಣಿಕ ಹಂತದಲ್ಲಿ ಬಳಸಿಕೊಂಡು ಉನ್ನತ ಸಾಧನೆ ಮಾಡಿದರೆ ಇನ್ನೊಂದು ವರ್ಗ ಇಂತಹ ಮಾಧ್ಯಮಗಳನ್ನು ದುರುಉಪಯೋಗ ಮಾಡಿಕೊಂಡು ತಮ್ಮ ಭವಿಷ್ಯ ಆಳು ಮಾಡಿಕೊಳ್ಳುತ್ತಿದ್ದಾರೆ.

ಕಪ್ಲಾನ್ ಮತ್ತು ಮೈಕಲ್ ಪ್ರಕಾರ 2010ರಲ್ಲಿ ಸಾಮಾಜಿಕ ಮಾಧ್ಯಮಗಳು ನಿರ್ಮಿಸಲು ಅಂತರ್ಜಾಲ ಆಧಾರಿತ ಒಂದು ಗುಂಪು ಎಂದಿದ್ದಾರೆ. ಇಂಥಹ ಮಾಧ್ಯಮಗಳು ಬ್ಲಾಗ್‌ಗಳು ವಾಕ್ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಲೇ ಬರೀ ಸುಳ್ಳು ಬೊಗಳುವ ನಿಂದಿಸುವ ಕೀಳು ಭಾವನೆ ವ್ಯಕ್ತಪಡಿಸುವ ಕೊಲೆಗಡುಕ ಗುಂಪೊಂದಕ್ಕೆ ಸಿಕ್ಕಿರುವ ವೇದಿಕೆಗಳಾಗಿವೆ ಎಂದು ಕೆಲ ವರ್ಷಗಳ ಹಿಂದೆ ಡ್ಯಾನಿಯಲ್ ಲಿಯಾನ್ಸ್ ಹೇಳಿದ್ದರು. ಆದರೆ ಇಂದು ಅಂತರ್ಜಾಲದ ಉದ್ದೇಶ ಇನ್ನೂ ಹದಗೆಟ್ಟಿದೆ. ನಾಲ್ಕಕ್ಷರದ ಪದಗಳಿಂದ ಹಿಡಿದು ಪೂರ್ವಗ್ರಹ ಪೀಡಿತ ನಿಂದನೆಗಳು, ಅಶ್ಲೀಲ ಲೈಂಗಿಕ ಕಮೆಂಟುಗಳು, ಜನಾಂಗೀಯ ದಾಳಿ ಹಾಗೂ ಮೈಯ್ಯುರಿಸುವ ದೋಷಾರೋಪದಗಳವರೆಗೆ ಎಲ್ಲವನ್ನೂ ಒಳಗೊಂಡು ಅಂತರ್ಜಾಲವು ಒಂದು ಸಾಮಾಜಿಕ ವ್ಯವಸ್ಥೆಯನ್ನು

ವೆಬಿಚಾರಗೊಳಿಸುವ ಒಂದು ಸಾಧನವಾಗಿದೆ.

ಇಂಥ ಸಾಮಾಜಿಕ ಜಾಲತಾಣಗಳಲ್ಲಿ ಗೌರವ್ಹಾನಿತ ವ್ಯಕ್ತಿಗಳ, ಯುವತಿಯರ ನಿಂದನೆ, ಅಶ್ಲೀಲ ಚಿತ್ರಗಳ ಕಮೆಂಟ್ ಮಾಡಿದರೆ, ಇಲ್ಲಿ ಅವರಿಗೆ ರಕ್ಷಣೆ ದೊರೆಯುತ್ತದೆ. ಅವರ ಗುರುತು ಪತ್ತೆಗೆ ಗೂಗಲ್ ನಂತಹ ತಾಣಗಳು ಯಾವುದೇ ಮಾಹಿತಿ ನೀಡುವದಿಲ್ಲ. ಇದರಿಂದ ಇಂಥಹ ಜಾಲತಾಣಗಳನ್ನು ಯುವಕರು ಬಳಸಿಕೊಂಡು ತಮ್ಮ ಅಮೂಲ್ಯವಾದ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಒಂದು ಕಡೆ ದೇಶದ ಅಭಿವೃದ್ಧಿಗೆ ಸಾಮಾಜಿಕ ಜಾಲತಾಣಗಳು ಪೂರಕವಾದರೆ, ಇನ್ನೊಂದು ಕಡೆ ಸಮಾಜವನ್ನು ಕಲುಷಿತ ಮಾಡುತ್ತಿವೆ. ಇದರಿಂದ ಪ್ರಸ್ತುತ ಯುವಕರು ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಯಾವ ರೀತಿ ಪ್ರಗತಿ ಸಾಧಿಸುತ್ತಿದ್ದಾರೆ ಎಂಬ ಅಂಶಗಳನ್ನು ಕಂಡುಕೊಳ್ಳುವದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಗ್ರಂಥಋಣ

www.theinternationaljournal.org > RJSSM: Volume: 03, Number: 10, February-2014 Page 196

A Study on Social Media Networking and its Impact on Daily Life with Special Reference to Young Adults in Television Media

Ms. Anitha.K M.Phil Research Scholar, School Of Management Studies, Vel's University

Ms. Annie Sam Associate Professor, School Of Management Studies, Vel's University

Social Media and its effects on youth Daniel J. Flannery PhD, Dr. Semi J. and Ruth Begun Professor Director, Director, Begun Center for Violence Violence Prevention Prevention Research Research & Education Mandel School of Applied Social Sciences

Case Western Reserve UniversityTypes of Social Media utilized utilized by youth.

Impact of Social Networking on College Students: A Comparative Study in India and the Netherlands

Rajalakshmi Kanagavel (Anna University, India) and Chandrasekharan Velayutham (Anna University, India).

Andreas S. Problematic Use of Online Social Networking Sites For College Students: Prevalence, Predictors, And Association With Well Being. [PhD thesis]. University of Florida, 2009. Available from: http://www.ufdc.ufl.edu/UFE0024085/00001

Grohol JM. Internet addiction guide. 1999. Available from: http://www.psychcentral.com/netaddiction

Sharon HH. Problems with social networking sites and teens. Available from: http://www.life123.com/parenting/tweens-teens/social-networking/issues-with-teens-and-social-networking.shtml Uma Rani P. Social Media and Mobile Internet Usage Among Teenagers And Young Adults: An Exploratory Study.

International Journal of Logistics & Supply Chain Management Perspectives. Volume 2, Number 4, October – December' 2013. Young KS.

Internet addiction: The emergence of a new clinical disorder. Cyber Psychol Behav 1998;1:237-44. Internet resource: Wikipedia Facebook Google+ Twitter YouTube

ದಶಕದ ಕತೆಗಳಲ್ಲಿ ಆಧುನಿಕತೆಯ ವಿಭಿನ್ನ ಆಯಾಮಗಳು (೨೦೦೧–೨೦೧೦)

ಮಹಾಂತೇಶ ಪಾಟೀಲ

ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯಟ ಕಡಗಂಚಿ : 585113

(ತಾ: ಆಳಂದ, ಜಿ:ಗುಲಬರ್ಗಾ) Email-manteshpatil186@gmail.com

ಕನ್ನಡದ ಸೃಜನಶೀಲ ಮನಸುಗಳು ಆಯಾ ಕಾಲದ ಮನ್ವಂತರಗಳಿಗೆ ಮುಖಾಮುಖಿಯಾಗುವಾಗ, ತಮ್ಮದೇಯಾದ ರೀತಿಯಲ್ಲಿ ಸ್ಪಂದಿಸುತ್ತಾ ಬಂದಿವೆ. ಪರಂಪರೆಯೊಂದಿಗಿನ ಮುಖಾಮುಖಿ ಇರಲಿ, ಆಧುನಿಕತೆಯೊಂದಿಗಿನ ಸಾಧ್ಯತೆಗಳೇ ಇರಲಿ, ಸೃಜನ ಪಠ್ಯಗಳ ಆಶಯದಲ್ಲಿ ವೈರುಧ್ಯತೆಯನ್ನು ಕಾಣುತ್ತೇವೆ. ಆಧುನಿಕತೆ ಎನ್ನುವುದು ವಸಾಹತ್ತೋತ್ತರ ನಂತರದ ಬದುಕಾಗಿಯೂ, ಪಶ್ಚಿಮದ ಅನುಕರಿಸುವ ಜೀವನ ಮಾದರಿಯಾಗಿಯೂ ತಿಳಿಯಲಾಗಿದೆ. ಹಾಗೆ ನೋಡಿದರೆ ಆಧುನಿಕತೆ ಎಂಬುದು ಭೌತಿಕ ವಿಕಾಸಕ್ಕಿಂತ, ವೈಚಾರಿಕ ವಿಕಾಸವನ್ನು ಹೆಚ್ಚು ಬೆಂಬಲಿಸುವಂತಹದು. ಆದರೆ ಕನ್ನಡದ ಬಹಳಷ್ಟು ಸೃಜನಶೀಲ ಪಠ್ಯಗಳು ಆಧುನಿಕತೆಯನ್ನು 'ಮಟೀರಿಯಲ್ ಕಲ್ಚರ್' ಆಗಿಯೇ ಅರ್ಥೈಸಿದ್ದು ಎದ್ದು ಕಾಣುತ್ತದೆ. ಆತ್ಮಶುದ್ಧಿಯ ನೆಲೆಯ, ಎಲ್ಲ ಜಾತಿ, ಪಂಥಗಳ ಮೀರಿ ವಿಶ್ವಮಾನವನಾಗುವ ತುಡಿತಗಳು ವಾಸ್ತವದ ಆಧುನಿಕತೆಯನ್ನು ಪ್ರತಿನಿಧಿಸುವ ಸಂಗತಿಗಳಾಗಿ ನೋಡಬೇಕಾಗಿದೆ.

ದಶಕದ (೨೦೦೧–೨೦೧೦) ಕತೆಗಳು ಆಧುನಿಕತೆಗೆ ಎದುರಾಗುವಾಗ ತಾಳುವ ನಿಲುವುಗಳು ಏಕತಾನತೆ ಕಾಣಲಾರದು. ಇದಕ್ಕೆ ಕಾರಣವೆಂದರೆ ಕತೆಯ ಬರವಣಿಗೆಯಲ್ಲಿ ತೊಡಗಿರುವ ಮನಸುಗಳು ಭಿನ್ನವಾದ ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ ಹಿನ್ನಲೆಯಿಂದ ಬಂದವುಗಳಾಗಿವೆ. ಗಾಂಧಿವಾದ, ಅಂಬೇಡ್ಕರವಾದ, ಲೋಹಿಯಾವಾದ, ದೇಸೀವಾದ ಮತ್ತು ಆಧುನಿಕೋತ್ತರವಾದಗಳು ಈ ಕಾಲಾವಧಿಯ ಲೇಖಕರನ್ನು ಪ್ರಭಾವಿಸಿವೆ. ಮೇಲ್ನೋಟಕ್ಕೆ ಚಳುವಳಿ ರಹಿತ ಸಾಹಿತ್ಯಘಟ್ಟ ಎಂದು ಭಾವಿಸಿದರು, ಅನೇಕ ಚಳುವಳಿಯ ಆಶಯಗಳನ್ನು ಒಳಗೊಳ್ಳುವ ಕಾಲವಿದು.

ದಶಕದ ಕತೆಗಳ ಹಿನ್ನಲೆಯಲ್ಲೆಯಾಗಿ ಆಧುನಿಕತೆಯನ್ನು ಗ್ರಹಿಸುವ ಮಾದರಿಗಳನ್ನು ನಾಲ್ಕು ರೀತಿಯಲ್ಲಿ ಚರ್ಚೆಗೆ ಒಳಗು ಮಾಡಬಹುದು. ಅವುಗಳೆಂದರೆ (೧) ದೇಸೀ ಕಥನಗಳು ಪ್ರತಿರೋಧಿಸುವ ಆಧುನಿಕತೆ: ಅಮರೇಶ ನುಗಡೋಣಿ, ಮಹಾಂತೇಶ ನವಲಕಲ್, ಕಲಿಗಣನಾಥ

ಗುಡದೂರ, ಎಚ್. ನಾಗವೇಣಿರವರ ಕತೆಗಳಲ್ಲಿ ಕಳೆದು ಹೋಗುತ್ತಿರುವ ದೇಸೀ ಬದುಕಿಗೆ ಕಾರಣವಾಗಿ ಆಧುನಿಕತೆಯನ್ನು ಗುಮಾನಿಯಿಂದ ನೋಡುತ್ತಾ, ಅದರ ಅಮಾನವೀಯ ಮುಖಗಳನ್ನು ಕುರಿತಾಗಿ ತಕರಾರು ಎತ್ತುತ್ತಾರೆ. (೨) ಮಹಿಳಾ ಕಥನಗಳ ಇಬ್ಬಂದಿತನದ ಆಧುನಿಕತೆ: ವಿನಯಾ ಒಕ್ಕುಂದ, ಸುನಂದಾ ಕಡಿಮೆ, ವಸುಮತಿ ಉಡುಪಿ, ಸುಮಂಗಲಾ, ಎಲ್.ಸಿ ಸುಮಿತ್ರಾ, ಕೆ.ನೀಲಾ, ಸಬಿಹಾ ಭೂಮಿಗೌಡರವರ ಕತೆಗಳು ಮಹಿಳೆ ಸ್ವಾತಂತ್ರ್ಯ, ಶಿಕ್ಷಣ, ಸಮಾನತೆ, ಉದ್ಯೋಗಕ್ಕೆ ಅವಕಾಶ ಮಾಡಿಕೊಟ್ಟ ಕಾರಣದಿಂದ ಆಧುನಿಕತೆಯ ಕುರಿತಾಗಿ ಆತ್ಮೀಯತೆ, ಅದರಲ್ಲಿ ಹುಟ್ಟಿಕೊಂಡ ಹೆಣ್ಣಿನ ಹಿಂಸೆಯನ್ನು ವಿರೋಧಿಸುತ್ತಾರೆ. (೩) ದಲಿತ ಕಥನಗಳ ಆರಾಧನಾ ಆಧುನಿಕತೆ: ಭಾರತದ ಸಂಪ್ರದಾಯಿಕ ಮೌಢ್ಯತೆ, ಅಸ್ಪೃಶ್ಯತೆಯಿಂದ ಪಾರಾಗಲು ಸಾಧ್ಯವಾದ ಒಂದು ಮಾರ್ಗವೆಂಬ ಕಾರಣದಿಂದ ಮೊಗಳ್ಳಿ ಗಣೇಶ, ಮಂಜುನಾಥಲತಾ, ಲೋಕೇಶ ಅಗಸನಕಟ್ಟಿ, ಬಸವರಾಜ ಕುಕ್ಕರಹಳ್ಳಿ, ಎಚ್.ಎಸ್ ಅನೂಪಮಾ, ಹನೂರ ಚನ್ನಪ್ಪರವರ ಕತೆಗಳು ಆಧುನಿಕತೆಯನ್ನು ಅರಾಧಿಸುತ್ತವೆ. (೪) ಕಾರ್ಪೋರೇಟ ಕಥನಗಳ ಅವಕಾಶವಾದಿ ಆಧುನಿಕತೆ: ಆಧುನಿಕತೆಯ ಸಾಚಾ ಮಾದರಿಯಾದ ಕಾರ್ಪೋರೇಟ ವಲಯ, ಮತ್ತು ಅದು ನೀಡುವ ಅವಕಾಶಗಳ ಕಾರಣದಿಂದ ಅದನ್ನು ಒಪ್ಪಿಕೊಳ್ಳಲಾಗುತ್ತದೆ. ಈ ಒಪ್ಪಿಕೊಳ್ಳುವಿಕೆಯಲ್ಲಿ ಅನೇಕ ಅಮಾನವೀಯ ಕ್ರೌರ್ಯಗಳಿದ್ದಾಗ್ಯೂ, ಆ ವಲಯದ ಹಣದ ಉನ್ಮತ್ತಿನಲ್ಲಿ ಅರಿವಿಗೆ ಬಾರದೆ ಹೋಗುತ್ತವೆ. ಈ ತರಹದ ಕತೆಗಳು ವಸುಧೇಂದ್ರ, ನಾಗರಾಜ ವಸ್ತಾರೆ, ವಿವೇಕ ಶಾನಭಾಗ, ಅಶೋಕ ಹೆಗಡೆ, ಲೋಹಿತ ನಾಯ್ಕರ ಅವರಲ್ಲಿ ನೋಡುತ್ತೇವೆ. ಇಲ್ಲಿನ ನಾಲ್ಕು ಆಯಾಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಆಧುನಿಕತೆಯ ಕುರಿತಾಗಿ ಇರುವ ಅನೇಕ ಒಳ ಸಾಂಸ್ಕೃತಿಕ ರಾಜಕಾರಣಗಳು ಅರಿವಿಗೆ ಬರುತ್ತವೆ. ಈ ಅಂಶಗಳನ್ನು ಪ್ರಬಂಧದ ದೀರ್ಘ ಬರಹದಲ್ಲಿ ವಿಸ್ತಾರವಾಗಿ, ಸೂಕ್ಷ್ಮವಾದ ಒಳನೋಟಗಳ ಮೂಲಕ ಚರ್ಚಿಸಲಾಗುವುದು.

ಕನ್ನಡದ ಸೃಜನಶೀಲ ಮನಸುಗಳು ಆಯಾ ಕಾಲದ ಮನ್ವಂತರಗಳಿಗೆ ಮುಖಾಮುಖಿಯಾಗುವಾಗ, ತಮ್ಮದೇಯಾದ ರೀತಿಯಲ್ಲಿ ಸ್ಪಂದಿಸುತ್ತಾ ಬಂದಿವೆ. ಪರಂಪರೆಯೊಂದಿಗಿನ ಒಡನಾಟವೇ ಇರಲಿ, ಆಧುನಿಕತೆಯೊಂದಿಗಿನ ಮುಖಾಮುಖಿಯೇ ಇರಲಿ, ಸೃಜನಶೀಲ ಪಠ್ಯಗಳ ಆಶಯದಲ್ಲಿ ವೈರುಧ್ಯತೆಯನ್ನು ಕಾಣುತ್ತೇವೆ. ಆಧುನಿಕತೆ ಎನ್ನುವುದು ವಸಾಹತ್ತೋತ್ತರ ನಂತರದ ಬದುಕಿನ ವಿಧಾನವಾಗಿಯೂ, ಪಶ್ಚಿಮವನ್ನು ಅನುಕರಿಸುವ ಜೀವನ ಮಾದರಿಯಾಗಿಯೂ ನಮ್ಮನ್ನು ಆವರಿಸಿದೆ. ಹಾಗೆ ನೋಡಿದರೆ ಆಧುನಿಕತೆ ಎಂಬುದು ಭೌತಿಕ ವಿಕಾಸಕ್ಕಿಂತ, ವಾಸ್ತವವಾಗಿ ವೈಚಾರಿಕ ವಿಕಾಸವನ್ನು ಹೆಚ್ಚು ಬೆಂಬಲಿಸುವಂತಹದು. ಆದರೆ ಕನ್ನಡದ ಸೃಜನಶೀಲ ಪಠ್ಯಗಳು ಆಧುನಿಕತೆಯನ್ನು 'ಮಟೀರಿಯಲ್ ಕಲ್ಚರ್' (ಭೌತಿಕ ಸಂಸ್ಕೃತಿ) ಆಗಿಯೇ ಅರ್ಥೈಸಿದ್ದು ಎದ್ದು ಕಾಣುತ್ತದೆ. ವೈಚಾರಿಕವಾದುದನ್ನು ಆಧುನಿತೆಯೆಂದು ನಿರೂಪಿಸುವ ಕಥನಗಳನ್ನು ಕ್ವಚಿತ್ತಾಗಿ ನೋಡಬಹುದು. ಆತ್ಮಶುದ್ಧಿಯ ನೆಲೆಯ, ಎಲ್ಲ ಜಾತಿ, ಪಂಥಗಳ ಮೀರಿ ವಿಶ್ವಮಾನವನಾಗುವ ತುಡಿತಗಳು, ವಾಸ್ತವದ ಆಧುನಿಕತೆಯನ್ನು ಪ್ರತಿನಿಧಿಸುವ ಸಂಗತಿಗಳಾಗಿ ನೋಡಬೇಕಾದ ಅಗತ್ಯವಿದೆ.

ದಶಕದ (2001-2010) ಕತೆಗಳು ಆಧುನಿಕತೆಗೆ ಎದುರಾಗುವಾಗ ತಾಳುವ ನಿಲುವುಗಳು ಏಕತಾನತೆ ಕಾಣಲಾರದು. ಇದಕ್ಕೆ ಕಾರಣವೆಂದರೆ ಕತೆಯ ಬರವಣಿಗೆಯಲ್ಲಿ ತೊಡಗಿರುವ ಮನಸುಗಳು ಭಿನ್ನವಾದ ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ ಹಿನ್ನಲೆಯಿಂದ ಬಂದವುಗಳಾಗಿವೆ. ಮುಖ್ಯವಾಗಿ ಅವುಗಳೊಡನೆ ಗಾಂಧಿವಾದ, ಅಂಬೇಡ್ಕರವಾದ, ಮಾರ್ಕ್ಸ್‌ವಾದ, ಲೋಹಿಯಾವಾದ, ದೇಸೀವಾದ ಮತ್ತು ಆಧುನಿಕೋತ್ತರವಾದಗಳು ಈ ಕಾಲಾವಧಿಯ ಲೇಖಕರನ್ನು ಬೌದ್ಧಿಕವಾಗಿ ಪ್ರಭಾವಿಸಿವೆ. ಮೇಲ್ನೋಟಕ್ಕೆ ಚಳುವಳಿ ರಹಿತ ಸಾಹಿತ್ಯಘಟ್ಟ ಎಂದು ಭಾವಿಸಿದರು, ಅನೇಕ ಚಳುವಳಿಯ ಆಶಯಗಳನ್ನು ಒಳಗೊಳ್ಳುವ ಕಾಲವಿದು. ಹಾಗಾಗಿ ಪ್ರತಿಯೊಬ್ಬ ಬರಹಗಾರನು ಅಂತಿಮವಾಗಿ ಆಧುನಿಕತೆಗೆ ಸಂವಾದಿಯಾಗಿ ಅಥವಾ ಸವಾಲಾಗಿ ತನ್ನ ಕಥನಗಳನ್ನು ಕಟ್ಟಿಕೊಂಡಿದ್ದಾನೆ.

ವಸಾಹತೋತ್ತರ ಕಾಲದ ನಂತರದಲ್ಲಿ ಭಾರತೀಯರ ಬದುಕಿನಲ್ಲಿ ಪ್ರವೇಶ ಪಡೆದ ಆಧುನಿಕತೆಯೂ ಆರಂಭದಲ್ಲಿ ಭಾರತೀಯ ಸಂಪ್ರದಾಯಿಕ ಮೌಢ್ಯಗಳಿಂದ ಉದ್ದಾರವಾಗುವ ಮಹಾಮುಕ್ತಿಯ ಮಾರ್ಗವಾಗಿಯೇ ಕಂಡಿತು. ಕೆಳಜಾತಿಗಳು ವರ್ಣಾಶ್ರಮ ಜಾತಿ ವ್ಯವಸ್ಥೆಯಿಂದ ಬಿಡುಗಡೆ ಮಾಡುವ ಆಪತ್ ರಕ್ಷಕನಂತೆ ಭಾಸವಾಯಿತು. ಹಾಗಾಗಿ ಬಹುತೇಕ ಸಮುದಾಯಗಳು ಆಧುನಿಕನಾಗುವುದನ್ನು ಒಂದು ಹಸಿವು ಆಗಿ ಪರಿಗಣಿಸಿದವು. ಆದರೆ ಕಾಲಾಂತರದಲ್ಲಿ ಆಧುನಿಕತೆ ವೈಚಾರ ನಿಲುವುಗಳು ಬದಿಗೆ ಸರಿಸಿ, ಜಾಗತೀಕರಣವೂ ಆಧುನಿಕತೆಯ ಸ್ಥಾನವನ್ನು ಅಲಂಕರಿಸಿತು. ಆಧುನಿಕತೆಯ ಮುಖವಾಡ ಧರಿಸಿದ, ಈ ಜಾಗತೀಕರಣವೂ, ಇಡೀ ಭಾರತೀಯ ಬದುಕಿನ ಎಲ್ಲ ವಲಯಗಳನ್ನು ವ್ಯಾಪಾರಿಕರಣ ಮಾಡಲಾರಂಭಿಸಿತು. ಹೀಗಾಗಿ ದೇಸೀ ಬದುಕಿನ ಅನೇಕ ಸಂಬಂಧ, ಸಂಸ್ಕೃತಿಗಳನ್ನು ವ್ಯಾಪಾರೀಕರಣದ ಮನೋಭಾವ ಸಹಜವಾಗಿಯೇ ಆವರಿಸಿ ಬಿಟ್ಟಿತು. ಆರಂಭದಲ್ಲಿ ಮಹಾನಗರಗಳಲ್ಲಿ ಮಾತ್ರವಿದ್ದ ಭೋಗಮಯ, ವ್ಯಾಪಾರಿ ಸಂಸ್ಕೃತಿಯೂ, ದೇಶದ ಬಹುಸಂಖ್ಯಾತ ಗ್ರಾಮಗಳನ್ನು ಆಗಂತುಕನಂತೆ

ಆವರಿಸಿದವು. ಮೇಲ್ನೋಟಕ್ಕೆ ಪ್ರಗತಿ ಎಂದು ಕಾಣುವ ಹಳ್ಳಿಗಳು, ಒಳಗೊಳಗೆ ಪರಕೀಯ ಬದುಕಿನೊಡನೆ ಸಂಘರ್ಷದಲ್ಲಿ ತನ್ಮಯವಾದವು. ಹಾಗಾಗಿ ಪರಂಪರಾಗತ ಬದುಕಿನ ಸಂಗತಿಗಳು ಕಣ್ಮರೆಯಾಗುತ್ತ ಸಾಗಿದಂತೆ, ಸಾಮಾಜಿಕ ವಿಘಟನೆ ಲಕ್ಷಣ ಕಾಣಲಾರಂಭಿಸಿದವು.

ಚಳುವಳಿಗಳ ಗೈರು ಹಾಜರಿಯ ಕಾಲದಲ್ಲಿಯೂ ಈ ದಶಕದ ಕತೆಗಳ ಆಧುನಿಕತೆಯ ಸಾಂಗತ್ಯದ ನೆಲೆಯಲ್ಲಿಯೂ, ಇಲ್ಲಾ ಅದರ ಹುಳುಕುಗಳ ಎತ್ತಿ ಹಿಡಿಯುತ್ತಾ ಅನುಸಂಧಾನವೂ, ಸಂವಾದವನ್ನು ಮಾಡುವ ಕಥನಗಳನ್ನು ಮುಖ್ಯವಾಗಿ ಅಧ್ಯಯನದ ಅನುಕೂಲಕ್ಕೆ ನಾಲ್ಕು ರೀತಿಯಲ್ಲಿ ವಿವರಿಸಿಕೊಳ್ಳಬಹುದಾಗಿದೆ. (1) ದೇಸೀ ಕಥನಗಳು ಪ್ರತಿರೋಧಿಸುವ ಆಧುನಿಕತೆ, (2) ಮಹಿಳಾ ಕಥನಗಳ ಇಬ್ಬಂದಿತನದ ಆಧುನಿಕತೆ, (3) ದಲಿತ ಕಥನಗಳ ಆರಾಧನೆಯ ಆತಂಕ ಆಧುನಿಕತೆ, (4) ಕಾರ್ಪೋರೇಟ ಕಥನಗಳ ಅವಕಾಶವಾದಿ ಆಧುನಿಕತೆ. ಮುಖ್ಯವಾಗಿ ಈ ತರಹದ ವರ್ಗೀಕರಣವನ್ನು ಮೀರಿಯು ಕೆಲವು ಕತೆಗಳು ಆಧುನಿಕೋತ್ತರ ವಿಚಾರಧಾರೆಗಳನ್ನು ಮೈಮೇಲೆ ಎಳೆದುಕೊಂಡು ಸೃಜನಶೀಲತೆಗೆ ಒಳಗಾಗಿರುವುದನ್ನು ಕಾಣುತ್ತೇವೆ. ಕೆಲವು ಬರಹಗಾರರು ಇಬ್ಬಗೆಯ ರೀತಿಯಲ್ಲಿ ಆಧುನಿ

ಕತೆಯನ್ನು ಗೃಹಿಸುತ್ತಾರೆ. ಆಧುನಿಕತೆಯೂ ನಮಗೆ ತಂದ ಸವಲತ್ತು ಗಳ ಹಿನ್ನಲೆಯಲ್ಲಿ, ಅದನ್ನು ಆರಾಧಿಸುವ ಮತ್ತು ಅಮಾನವೀಯವಾ ಗುವ ಸಂಗತಿಗಳ ಹಿನ್ನಲೆಯಿಂದ ವಿರೋಧ ವ್ಯಕ್ತಪಡಿಸುವುದನ್ನು ನೋಡುತ್ತೇವೆ.

ಆಧುನಿಕ ವ್ಯವಸ್ಥೆಯ ಮುಖ್ಯ ಲಕ್ಷಣ ಎಂದರೆ ಬಂಡವಾಳಷಾಹಿ ವ್ಯಾಪಾರೀಕರಣದ ಮನೋಭಾವ, ಈ ವ್ಯಾಪಾರೀಕರಣವು ನೈಸರ್ಗಿಕವಾದ ದೇಸೀ ಸಾಂಸ್ಕೃತಿಕ ಸಂಗತಿ; ವಕ್ಕಲುತನ ಮತ್ತು ಆಹಾರ ವಿಧಾನಗಳನ್ನು ತನ್ನ ವ್ಯಾಪಾರೀಕರಣ ಪ್ರಕ್ರಿಯೆಗೆ ಒಳಪಡಿಸಿದೆ. ಆದರೆ ದೇಸೀ ಜೀವನ ಪದ್ಧತಿ ಈ ತರಹದ ಅಭಿವೃದ್ಧಿ ಮಾದರಿಗಳನ್ನು ನಿರಾಕರಿಸುತ್ತಾ, ಮತ್ತೇ ದೇಸೀ ಸಂಗತಿಗಳನ್ನು ಪುನಃ ರಚಿಸಿಕೊಳ್ಳುವ ತುಡಿತಗಳು ದಶಕದ ಅನೇಕ ಕತೆಗಳಲ್ಲಿ ಕಾಣುತ್ತೇವೆ. (1) ದೇಸೀ ಕಥನಗಳು ಪ್ರತಿರೋಧಿಸುವ ಆಧುನಿಕತೆ: ಅಮರೇಶ ನುಗಡೋಣಿ ಅವರ 'ಒಡಲುಗೊಂಡವರು' ಕತೆಯಲ್ಲಿನ ಹರಿಶ್ಚಂದ್ರನು ತನ್ನ ತಾಯಿಯ ಆಸ್ತಿಯಾದ ಭೂಮಿಯನ್ನು ಕಂಪನಿ ಯೊಂದಕ್ಕೆ ಫ್ಯಾಕ್ಟರಿ ಕಟ್ಟಲು ಮಾರಾಟ ಮಾಡಿದಾಗ, ಅವನ ತಾಯಿ ಬಸವ್ವ ಪ್ರತಿಭಟನೆಯನ್ನು ಒಡ್ಡುತ್ತಾಳೆ. ತನ್ನ ಸಾವಿನ ಸಮಾಧಿ, ಅದು ತನ್ನ ಭೂಮಿಯಲ್ಲಿಯೇ ಆಗಬೇಕೆಂದು ಹಠ ಹಿಡಿದು ಸಾಯುತ್ತಾಳೆ. ಆದರೆ ಮಗ ಕಂಪನಿಯವರಿಗೆ ಮಾರಿದ ಹೊಲವನ್ನು ಹಿಂತಿರುಗಿ ಪಡೆಯಲಾಗದ ಅಸಹಾಯಕತೆಯನ್ನು ಅನುಭವಿಸು ತ್ತಾನೆ. ಬಸವ್ವಳ ತನ್ನ ಭೂಮಿಗಾಗಿ ಮಾಡುವ ಪ್ರತಿಭಟನೆಯೂ, ಪರೋಕ್ಷವಾಗಿ ಆಧುನಿಕತೆಯ ರೂಪಗಳಾದ ಖಾಸಗಿ ಕಂಪನಿಗಳನ್ನು ವಿರೋಧಿಸುವ ಮನೋಭಾವವನ್ನು ಕಾಣುತ್ತೇವೆ. ಮಹಾಂತೇಶ ನವಲಕಲ್ ಅವರ 'ನಾಯಿ ಎಂಬ ಮನುಷ್ಯ' ಕತೆಯೂ ಬಿ.ಟಿ ಹತ್ತಿ ಬೆಳೆಯನ್ನು ಹೆಚ್ಚಿನ ಇಳುವರಿಯ ನೇಪದಲ್ಲಿ ಇಲ್ಲಿನ ರೈತರಿಗೆ ಹಂಚುವ ಮೂಲಕವಾಗಿ ಖಾಸಗಿ ಬೀಜ ಮಾರಾಟ ಕಂಪನಿಗಳು, ನೈಸರ್ಗಿಕ ಬೀಜಗಳನ್ನು 'ನಿರ್ಬೀಜೀಕರಣ' ಮಾಡುವ ಹುನ್ನಾರವಿದೆ. ದೇಸೀ ಬೆಳೆಗಳ ಬೀಜ ಪದ್ಧತಿಯನ್ನು ನಿರ್ನಾಮ ಮಾಡಿ, ಅದರ ಜೊತೆ ಹೆಚ್ಚು ಇಳುವರಿಯೆಂಬ ಜಾಹೀರಾತಿನ ಮುಖಾಂತರ ದೇಸೀ ಬೆಳೆಗಳನ್ನು ಕಣ್ಮರೆ ಮಾಡುವ ಮೋಸತನವಿದೆ.. ವ್ಯಾಪಾರೀಕರಣ ದಿಂದ ದೇಸೀ ಕೃಷಿ ಸಹಜತೆಯನ್ನು ಕಳೆದುಕೊಂಡು 'ರೋಗಮಯ' ವಾಗುತ್ತಿರುವುದನ್ನು ಆತಂಕದಿಂದ ಕತೆಯಲ್ಲಿ ನಿರೂಪಿಸುತ್ತಾರೆ.

ಕಲಿಗಣನಾಥ ಗುಡದೂರ ಅವರ 'ಈ ದಾಹ ದೊಡ್ಡದು" ಕತೆಯಲ್ಲಿ ಊರಿನ ಗೌಡನ ಮಗನು 'ಪುಡ್ ಫಾರ್ ಸಂಡಾಸ್' ವ್ಯಾಪಾರವನ್ನು ಗುತ್ತಿಗೆ ಪಡೆಯುವ ಮೂಲಕವಾಗಿ, ಇಡೀ ಊರಿನ ಎಲ್ಲ ಯುವಕರಿಗೆ ಆಹಾರವನ್ನು ಹಂಚಿ, ಆ ಮೇಲೆ ಅವರ ಸಂಡಾಸನ್ನು ವ್ಯಾಪಾರವಾಗಿ ಖರೀದಿಸುತ್ತಾನೆ. ತಿಪ್ಪಯ್ಯನ ಮಕ್ಕಳು, ಜೀಂಕ ಆಹಾರವನ್ನು ತಿಂದು ಸಾಯುತ್ತಾರೆ. ಅವರನ್ನು ಬದುಕಿಸಲು, ದೇಸೀ ಆಹಾರವನ್ನು ತಿನ್ನಿಸಲು ಮಾಡಿದ ಪ್ರಯತ್ನಗಳು ವಿಫಲವಾಗುತ್ತವೆ. ಕತೆಗಾರ ಆಧುನಿಕತೆಯಲ್ಲಿ ವಿದೇಶಿ ಆಹಾರ ಪದ್ಧತಿ ಜೀವನದ ಮೇಲೆ ಮಾಡುತ್ತಿರುವ ಮರಣಘಾತುಕ ಹಲ್ಲೆಗಳನ್ನು ವಿರೋಧಿಸುತ್ತಾರೆ. ಆಹಾರ ತಯಾರಿಸುವ ವಿದೇಶಿ ಕಂಪನಿಯೂ ಗ್ರಾಮಕ್ಕೆ ಬಂದಾಗ ಊರವರೆಲ್ಲರನ್ನು ತಿಪ್ಪಯ್ಯ ಒಂದು ಮಾಡಿ, ಹೋರಾಟ ಮಾಡುತ್ತಾನೆ. ಈ ಮೂಲಕವಾಗಿ ಕಲಿಗಣನಾಥರ ಬಹುತೇಕ ಕಥೆಗಳು ಆಧುನಿಕ ವ್ಯವಸ್ಥೆಯ ಅಮಾನವೀಯ ಕ್ರೌರ್ಯಗಳ ವಿರುದ್ಧ ಹೋರಾಟಕ್ಕೆ ತೊಡಗುತ್ತಾವೆ. ಆ ಮುಖಾಂತರವಾಗಿ ಮತ್ತೇ ನಾವು ದೇಸೀ ಆಹಾರ, ಬೇಸಾಯ ಪದ್ಧತಿಯನ್ನು ಅನುಸರಿಸಬೇಕೆಂಬ ಹಂಬಲ ಅವರ ಎಲ್ಲ ಪಾತ್ರಗಳ ಮನೋಭಾವವಿದೆ.

ಎಚ್. ನಾಗವೇಣಿರವರ 'ವಸುಂಧರೆಯ ಗ್ಯಾನ ಸಂಕಲನದಲ್ಲಿನ ಕತೆಗಳಲ್ಲಿ ಕಳೆದು ಹೋಗುತ್ತಿರುವ ದೇಸೀ ಬದುಕಿಗೆ ಕಾರಣವಾಗಿ ಆಧುನಿಕತೆಯನ್ನು ಗುಮಾನಿಯಿಂದ ನೋಡುತ್ತಾ, ಅದರ ಅಮಾನವೀಯ ಮುಖಗಳನ್ನು ಕುರಿತಾಗಿ ತಕರಾರು ಎತ್ತುತ್ತಾರೆ. ತುಳು ಸಂಸ್ಕೃತಿ, ಕಡಲ ಸಂಪ್ರದಾಯಿಕ ಮತ್ತು ನೈಸರ್ಗಿಕ ಸಂಗತಿಗನ್ನು ಹೊಸಕಿ ಹಾಕುವ ಕೆಲಸ ಮಾಡುತ್ತಿರುವ, ಅಭಿವೃದ್ಧಿ ಹೆಸರಿನಲ್ಲಿ ಆಧುನಿಕತೆ ನಡೆಸುವ ಹಿಂಸೆಯನ್ನು ಚಿತ್ರಿಸುತ್ತಾರೆ. ಸಮುದ್ರವು ವ್ಯಾಪಾರೀಕರಣಕ್ಕೆ ಒಳಗಾಗುವ ಮುಖಾಂತರ, ಸಮುದ್ರವನ್ನು ನಂಬಿ ವೃತ್ತಿಯನ್ನು ಮಾಡುವ ಸಮುದಾಯಗಳ ಅವಕಾಶವನ್ನು ಖಾಸಗಿ ಕಂಪನಿಗಳು, ಮೀನುಗಾರಿಕೆಯ ಮೇಲೆ ಸ್ವಾಧಿನತೆ ಸಾಧಿಸುವಲ್ಲಿ ಆಗುವ ಅನಾಹುತಗನ್ನು ವಿವರಿಸುತ್ತಾರೆ. ಎಲ್.ಸಿ ಸುಮಿತ್ರಾ ಅವರ 'ಕಲ್ಲಿನ ಕೋಳಿ' ಕತೆಯಲ್ಲಿ ಮಲೆನಾಡಿನಲ್ಲಿ ಆಧುನಿಕತೆಯ ಬೆಳೆಯಾಗಿ ದಾಳ ಮಾಡಿದ 'ವೆನಿಲಾ' ಬೆಳೆಯಿಂದ ದೇಸೀ ಬೆಳೆಗಳಾದ ತೆಂಗು, ಭತ್ತ, ಅಡಿಕೆ, ಬಾಳೆ ಕಣ್ಮರೆಯಾಗುವು ದನ್ನು ಕಂಡು, ಹಳೆಯ ತಲೆಮಾರಿನ ದಾನಮ್ಮ, ಗೌರಮ್ಮ ಕಳವಳವನ್ನು ವ್ಯಕ್ತಪಡಿಸುತ್ತಾರೆ. ವೆನಿಲಾವನ್ನು ಐಸ್‌ಕ್ರಿಮ್ ತಯಾರಿಕೆಯಲ್ಲಿ ಪ್ರಮುಖ ಉತ್ಪನ್ನವಾಗಿ ಬಳಸುತ್ತಾರೆ. ಬರುವ ಲಾಭವೆನೋ ಸರಿ, ಆದರೆ ಸಂಪ್ರದಾಯಿಕ ಬೆಳೆಗಳ ಔಷಧಿಯ ಗುಣ, ವರ್ತಮಾನದ ಜನರು ಕಳೆದುಕೊಳ್ಳುತ್ತಿರುವುದರಲ್ಲಿ ದುರಂತವನ್ನು ಕಥೆಗಾರ್ತಿ ಅಭಿವ್ಯಕ್ತ ಪಡಿಸುತ್ತಾಳೆ.

ದೇಸೀ ಬದುಕಿನಲ್ಲಿ ವ್ಯಾಪಾರೀಕರಣದ ಮನೋಭಾವಗಳಿಗೆ ಬಹುಮುಖಿಯ ಆಧ್ಯತೆ ಇರಲಾರದು. ತಲ ತಲಾಂತರಗಳಿಂದ ಇಂತಹ ಜೀವನ ಪದ್ಧತಿಯನ್ನು ಅನುಸರಿಸುತ್ತಾ ಬಂದ ಭಾರತೀಯರಿಗೆ, ಶಿಕ್ಷಣ, ಕಾನೂನು, ಕೃಷಿ, ಆಹಾರ, ಸಂಸ್ಕೃತಿಕ ಸಂಗತಿಗಳ ಸ್ಥಾನದಲ್ಲಿ ಯೂರೋಪ ಮಾದರಿಯ ಆಧುನಿಕ ಜೀವನ ಪದ್ಧತಿಯನ್ನು ಒತ್ತಾಯ ಪೂರ್ವಕವಾಗಿ ಹೇರುವಲ್ಲಿ ಆಗುತ್ತಿರುವ ಹಿಂಸೆಯಿಂದ ಹೊರ ಬರಬೇಕಾದರೆ, ನಮಗೆ ದೇಸೀ ಜೀವನ ಪದ್ಧತಿಯ ಅನಿವಾರ್ಯ ಎಂಬುವ ನಿಲುವುಗಳನ್ನು ನುಗಡೋಣಿ, ನವಲಕಲ್, ಕಲಿಗಣನಾಥ ಮತ್ತು ನಾಗವೇಣಿ ಅವರ ಕತೆಗಳಲ್ಲಿ ಕಾಣುತ್ತೇವೆ.

(2) ಮಹಿಳಾ ಕಥನಗಳ ಇಬ್ಬಂಧಿತನದ ಆಧುನಿಕತೆ : ದಶಕದ ಕತೆಗಳ ಮಹಿಳಾ ಕತೆಗಾರ್ತಿಯರ ಸಂಖ್ಯೆ ಹೆಚ್ಚಾಗಿದೆ. ಅಕ್ಷರದ ಅರಿವಿನೊಂದಿಗೆ ವರ್ತಮಾನವನ್ನು ಅರಿಯುವ ಮನೋಭಾವಗಳಲ್ಲಿ ಅನೇಕ ಬದಲಾವಣೆಗಳನ್ನು ಮಹಿಳಾ ಬರಹಗಾರರಲ್ಲಿ ಕಾಣುತ್ತೇವೆ. ಸಂಪ್ರದಾಯಿಕ ಸಮಾಜದಲ್ಲಿನ ಅನೇಕ ಆಚರಣೆಗಳು ಮಹಿಳೆಯನ್ನು ಬಂಧನಕ್ಕೆ ಒಳಗು ಮಾಡಿದ್ದವು. ಈ ಬಂಧನಗಳಿಂದ ಬಿಡುಗಡೆ ಹೊಂದಲು ಆಧುನಿಕತೆಯೂ ಅವಕಾಶ ಒದಗಿಸಿದೆ. ಸಮಾನತೆ, ಸ್ವಾತಂತ್ರ್ಯ, ಶಿಕ್ಷಣ, ಲೈಂಗಿಕತೆಯಂತಹ ಸಂಗತಿಗಳನ್ನು ಕತೆಯೊಳಗಿಳಿಸಿ, ಅನುಸಂಧಾನ ಮಾಡುವ ಮಟ್ಟಕ್ಕೆ ಕತೆಗಾರ್ತಿ ಯರು ಬೆಳದಿದ್ದಾರೆ. ವಿನಯಾ ಒಕ್ಕುಂದ ಅವರ 'ಊರ ಒಳಗಿನ ಬಯಲು' ಸಂಕಲನದಲ್ಲಿನ ಕತೆಗಳು ಆಧುನಿಕತೆಯ ಸೃಷ್ಟಿಸುತ್ತಿರುವ

ಕೋಮುವಾದ, ಲಿಂಗ ಅಸಮಾನತೆ, ಮಹಿಳಾ ಶೋಷಣೆಯ ಸಂಗತಿಗಳನ್ನು ವಿವರಿಸುತ್ತಾ, ಅವುಗಳಿಗೆ ಬಲಿಯಾಗುವ ಮಗ್ಧ ಹೆಣ್ಣುಮಕ್ಕಳ ಜೀವನವನ್ನು ಭಾವನಾಮಯವಾಗಿ ಚಿತ್ರಿಸುತ್ತಾರೆ. ಎಲ್ಲಿದೆ ಅಂತ ತೋರಿಸುವುದು, ಒಳಗಿನ ನೋವುಗಳನ್ನು ಎಂಬ ಅವರ ಮಾತು, ಮಹಿಳಾ ಪಾತ್ರಗಳ ಅಸಹಾಯಕತೆ ಮುಖ್ಯವಾಗಿ ಆಧುನಿಕತೆಗೆ ಎದುರಾಗಿ ಹೇಳುತ್ತದೆ.

'ಪುಟ್ಟ ಪಾದದ ಗುರುತು', 'ಗಾಂಧಿ ಚಿತ್ರದ ನೋಟು' ಕಥಾ ಸಂಕಲಗಳನ್ನು ಬರೆದ ಸುನಂದಾ ಕಡಿಮೆ ಅವರು ಮಹಿಳಾ ಪಾತ್ರಗಳು ನಗರದ ಮಧ್ಯಮ ವರ್ಗದ ಬದುಕನ್ನು ಕಟ್ಟಿಕೊಡುತ್ತವೆ. ಅಡುಗೆ ಮನೆಗೆ ಸೀಮಿತವಾಗಿದ್ದ ಮಹಿಳಾ ಕೆಲಸಗಳು, ಆಧುನಿಕತೆಗೆ ತೆರದುಕೊಂಡಾಗ ಹೊರಗಿನ ಬದುಕಿನಲ್ಲಿಯೂ ಕೆಲಸಗಳನ್ನು ಮಾಡಬೇಕು. ಎರಡು ಕಡೆಯ ಕೆಲಸದ ಒತ್ತಡದ ನಡುವೆ ಮಹಿಳೆ ಸೋತು ಹೋಗಿ, ಜೀವನ ಆತಂಕವನ್ನು ಎದುರಿಸುತ್ತದೆ. ಆ ಆತಂಕದಿಂದ ಹೊರಬರಲು ನರಳಾಡುವ ಮಧ್ಯಮ ವರ್ಗದ ಮಹಿಳಾ ಪಾತ್ರಗಳನ್ನು ಅವರ ಕಥೆಗಳಲ್ಲಿ ಕಾಣುತ್ತೇವೆ. ಆಧುನಿತೆಯ ಪರವಾಗಿಯೂ, ವಿರೋಧವಾಗಿಯೂ, ಯಾವುದೇ ಒಂದೇ ಮಗ್ಗುಲಿಗೆ ಹೊರಳದ ಆಶಯ ಅವರ ಕತೆಗಳಲ್ಲಿ ದಟ್ಟವಾಗಿ ವ್ಯಕ್ತವಾಗಿದೆ. ವಸುಮತಿ ಉಡುಪಿ ಅವರ 'ಅನಾವರಣ, ಸಿಂಡ್ರೆಲಾ, ವಿಲಕ್ಷಣರು, ಕನಸುಗಳ ಕೊಲ್ಲುವವರು, ಸಂಕ್ರಮಣ ಕತೆಗಳು ಮುಖ್ಯವಾಗಿ ಆಧುನಿಕತೆಯಿಂದ ಹೆಣ್ಣು ಮತ್ತು ಗಂಡಿನ ಸಂಬಂಧಗಳಲ್ಲಿ ಕಾಣುತ್ತಿರುವ ಬಿರುಕು, ಮತ್ತು ಕುಟುಂಬದ ಸದಸ್ಯರ ನಡುವೆ ಹುಟ್ಟಿಕೊಳ್ಳುತ್ತಿರುವ ಸುಪ್ತ ಲೈಂಗಿಕ ಕಾಮನೆಗಳು, ಟಿ.ವಿ ಮಾಧ್ಯಮದ ಮೂಲಕ ಪ್ರಚೋದಿತವಾಗಿ, ಅನಾವರಣವಾದಾಗ ಇಡೀ ಕುಟುಂಬದ ಪರಿಸರವು ಆತಂಕಮಯವಾಗಿ, ಮಹಿಳೆಯರು ಎದುರಿಸುವ ನೋವುಗಳನ್ನು ಮುಖ್ಯವಾಗಿ ವಿವರಿಸುತ್ತವೆ. ಆದರೆ ಇವರ ಕಥನ ಆಧುನಿಕತೆಯಲ್ಲಿ ಮಹಿಳಾ ಬದುಕಿನ ತಲ್ಲಣಗಳನ್ನು ಸೂಕ್ಷ್ಮವಾಗಿ ನಿರೂಪಿಸುವ ಕಾರ್ಯವನ್ನು ಗಟ್ಟಿಯಾಗಿ ಮಾಡುವುದಿಲ್ಲ.

ಸುಮಂಗಲಾ ಅವರ ಜುಮುರು ಮಳೆ ಸಂಕಲನದಲ್ಲಿನ 'ಆಲಿಕಲ್ಲು' ಕತೆಯಲ್ಲಿನ ಕಮಲವ್ವ ಗಂಡನ ನಿರಾಕರಣೆ ಮಾಡಿದಾಗ, ಅವನನ್ನು ತೊರೆದು, ತನ್ನ ಮಗನೊಂದಿಗೆ ಇದ್ದು, ಕಾಯಿಪಲ್ಲೆ ಮಾರಿ ದಿಟ್ಟತನದಿಂದ ಬದುಕನ್ನು ಸಾಗಿಸುತ್ತಾಳೆ. ಅವರ 'ಫಾತಿಮಾಗೆ ಮಳೆಯೆಂದರೆ ಇಷ್ಟ' ಕತೆಯ ಫಾತಿಮಾ ಮನೆ ಕೆಲಸ ಮಾಡಿ ಜೀವನ ಸಾಗಿಸುತ್ತಾಳೆ. ಮುಖ್ಯವಾಗಿ ಸುಮಂಗಲಾ ಅವರ ಕತೆಗಳಲ್ಲಿನ ಮಹಿಳೆಯರು ಕೆಳವರ್ಗಕ್ಕೆ ಸೇರಿದ ದಿಟ್ಟತನದವರು. ಹಾಗಾಗಿ ಸಂಪ್ರದಾಯಿಕ ಕುಟುಂಬದಲ್ಲಿ ಎದುರಾಗುವ ಸಂಕಟ, ಆಧುನಿಕ ಸಂಕಟಗಳು ಎದುರಾದಾಗ ಎದೆಗೊಂದದೆ, ಅದನ್ನು ಎದುರಿಸಿ ಬಾಳುತ್ತಾರೆ. ಅವರಲ್ಲಿನ ಜೀವನ ಪ್ರೀತಿ, ಗಂಡಂದಿರ, ಮಕ್ಕಳ ತೊರುವ ಅನಾಧಾರಗಳ ಮಧ್ಯೆಯು ಜೀವಂತಿಕೆಯಿಂದ ಕೂಡಿದಾಗಿದೆ. ಇದೇ ಮಾತು ಇವರ 'ಕಾಲಿಟ್ಟಲ್ಲಿ ಕಾಲುದಾರಿ' ಸಂಕಲನದ ಕುರಿತು ಹೇಳಲಾಗದು.

ಆಧುನಿಕತೆ ಕೆಳವರ್ಗದ ದುಡಿಯುವ ಮಹಿಳೆಗೆ ಒಡ್ಡುವ ಸವಾಲನ್ನು ಸ್ವೀಕರಿಸಿ, ಜೀವನ ಸಾಗಿಸುವ ಪಾತ್ರಗಳು ಕೆ.ನೀಲಾ ಅವರ ಕತೆಗಳಲ್ಲಿ ಕಾಣುತ್ತೇವೆ. 'ತಿಪ್ಪೆಯನರಸಿ ಮತ್ತು ಇತರೆ ಕತೆಗಳು' ಸಂಕಲನದಲ್ಲಿ ಹೆಣ್ಣು ಸಾಮಾಜಿಕವಾಗಿ ಇನ್ನೂ ಅನುಭವಿಸುತ್ತಿರುವ ಲಿಂಗ, ಜಾತಿ ತಾರತಮ್ಯಗಳ ಹಿನ್ನಲೆಯಲ್ಲಿ ವಿಸ್ತಾರವಾಗುವ ಕತೆಗಳಿವೆ. ವೇಶ್ಯಾವಾಟಿಕೆ, ಭ್ರೂಣಹತ್ಯೆ, ವಿಧವಾ ಸಮಸ್ಯೆಯಂತ ಸಂಪ್ರದಾಯಿಕ ಭಾರತೀಯ ಸಮಾಜದ ಸಮಸ್ಯೆಗಳು ಆಧುನಿಕವಾಗಿಯೂ ಉತ್ತರ ಕಂಡುಕೊಳ್ಳಲಾಗದೇ, ಮುಂದುವರೆದಿರುವ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತಾರೆ. ಸಬಿಹಾ ಭೂಮಿಗೌಡರವರ ಕತೆಗಳು 'ಕಡಲ ತಡಿಯ ಗುಡಾರ' ಸಂಕಲನದಲ್ಲಿನ ಕತೆಗಳು ಧರ್ಮ, ಜಾತಿ, ಲಿಂಗ ವ್ಯವಸ್ಥೆಯನ್ನು ಮೀರಿ ಮಾನವೀಯತೆಗೆ ತುಡಿಯುವ ಮಹಿಳಾ ಪಾತ್ರಗಳನ್ನು ಕಾಣುತ್ತೇವೆ. ಆಧುನಿತೆ ಒಡ್ಡುವ ಸವಾಲುಗಳಲ್ಲೂ ಮಾನವೀಯವಾಗಬೇಕೆಂಬ ಹಂಬಲ ಕತೆಗಳ ಪಾತ್ರಗಳಲ್ಲಿದೆ. ಒಟ್ಟಾರೆಯಾಗಿ ದಶಕದ ಕತೆಗಾರ್ತಿಯರು ಸ್ವಾತಂತ್ರ್ಯ, ಶಿಕ್ಷಣ, ಸಮಾನತೆ, ಉದ್ಯೋಗಕ್ಕೆ ಅವಕಾಶ ಮಾಡಿಕೊಟ್ಟ ಕಾರಣದಿಂದ ಆಧುನಿಕತೆಯ ಕುರಿತಾಗಿ ಆತ್ಮೀಯತೆ, ಅದರಲ್ಲಿಯೇ ಹುಟ್ಟಿಕೊಂಡ ಹೆಣ್ಣಿನ ಹಿಂಸೆಯನ್ನು ವಿರೋಧಿಸುತ್ತಾರೆ.

ಭಾರತೀಯ ಸಮಾಜದಲ್ಲಿ ಪ್ರಮುಖವಾಗಿ ಕೆಳಜಾತಿಗಳು ಶತಶತ ಮಾನಗಳಿಂದ ಬಿಡುಗಡೆಯ ಕನಸು ಕಾಣುತ್ತಲೆ ಬಂದಿದ್ದವು. ಆದರೆ ಜಾತಿಯಾಸಕ್ತ ಮನಸುಗಳು, ಅದಕ್ಕೆ ಅವಕಾಶವನ್ನೇ ಕಲ್ಪಿಸಲಿಲ್ಲ. ಈ ಕನಸು ನಿಜವಾಗಿಯೂ ಸಾಧ್ಯವಾಗಿದ್ದು ಸ್ವಾತಂತ್ರ್ಯ ನಂತರದ ಕಾಲದಲ್ಲಿ. ಅದಕ್ಕೆ ಅಂಬೇಡ್ಕರ್ ಕೊಡುಗೆ ಅಪಾರವಾದುದು. ಶಿಕ್ಷಣ, ಸಮಾನತೆ, ಉದ್ಯೋಗವಕಾಶಗಳ ನೀಡಲು ಸಹಾಯಕವಾದ ಆಧುನಿಕ ಸಂವಿಧಾನದಿಂದ ಕೆಳಜಾತಿಗಳಿಗೆ ಅನೇಕ ಅವಕಾಶಗಳು ತೆರೆದುಕೊಂಡವು. ಆದರೆ ಸಂವಿಧಾನದ ಪೂರ್ಣ ಆಶಯ ಕಾರ್ಯ ರೂಪಕ್ಕೆ ಬರದೇ ಇದ್ದುದರಿಂದಾಗಿ, ಸ್ವಾತಂತ್ರ್ಯ ಬಂದು ಐದಾರೂ ದಶಕಗಳು ಕಳೆದರು ಜಾತಿ ಹೆಸರಿನಲ್ಲಿಯ ಶೋಷಣೆಗಳು ಕೊನೆಯಾಗಿಲ್ಲ. ಶಿಕ್ಷಣ ಸವಲತ್ತು, ಸಮಾನ ಅವಕಾಶಗಳನ್ನು ಸಾಧ್ಯವಾಗಿಸಿದ್ದ ಆಧುನಿಕತೆ, ತನ್ನೊಳಗೆಯೇ ಕೆಳಜಾತಿಗಳಿಗೆ ಮಾರಕವಾಗುವ ಅನೇಕ ಸಂಗತಿಗಳನ್ನು ಜಾಗತೀಕರಣ ನೀತಿಗಳನ್ನು ಹುಟ್ಟುಹಾಕಿದೆ. ಹೀಗಾಗಿ ಆಧುನಿಕತೆ ದಲಿತರಿಗೆ ಸವಲತ್ತುಗಳನ್ನು ಕಲ್ಪಿಸಿದೆ. ಅದರೊಡನೆ ಹೊಸ ತಲ್ಲಣಗಳನ್ನು ಕೂಡಾ. (3) ದಲಿತ ಕಥನಗಳ ಆರಾಧನೆಗೆ ಆತಂಕವಾದ ಆಧುನಿಕತೆ : ಭಾರತದ ಸಂಪ್ರದಾಯಿಕ ಮೌಢ್ಯತೆ, ಅಸ್ಪೃಶ್ಯತೆಯಿಂದ ಪಾರಾಗಲು ಸಾಧ್ಯವಾದ ಒಂದು ಮಾರ್ಗವೆಂಬ ಕಾರಣದಿಂದ ಮೊಗಳ್ಳಿ ಗಣೇಶ ಅವರ 'ತೋಪು' ಕತೆಯು ಊರಿನ ಗೌಡ ಅಧಿಕಾರದ ಬಲದಿಂದ 'ರುದ್ರಭೂಮಿಯ ತೋಪು' ಕಡಿಸುವು ಮೂಲಕವಾಗಿ, ಅದರೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದ ಕೆಳಜಾತಿಗಳು ಏಕಾಏಕಿ ಅನುಭವಿಸುವ ಪರಕೀಯತೆಯನ್ನು ಚಿತ್ರಿಸುತ್ತಾರೆ. ಯಾವುದು ದಲಿತರ ಉದ್ಧಾರವೆಂದು ಭಾವಿಸಲಾಗಿತ್ತು, ಆ ವ್ಯವಸ್ಥೆಯೂ ಸಹ ಇನ್ನೂ ಜಾತಿಯನ್ನು ಹೊಸ ಆಯಾಮದಲ್ಲಿ ಸ್ಥಿರೀಕರಿಸುವ ಪ್ರಯತ್ನವನ್ನು ಮಾಡುತ್ತಿರುವ ಸಂಗತಿಯನ್ನು ಜಾನಪದ, ಗ್ರಾಮ ಪರಿಸರಗಳ ಹಿನ್ನಲೆಯಲ್ಲಿ ಆಧುನಿಕತೆಯನ್ನು ಆತಂಕದಿಂದ ನೋಡುತ್ತಾರೆ.

'ಸನ್ ಆಫ್ ಸಿದ್ಧಪ್ಪಾಜಿ' ಸಂಕಲನದಲ್ಲಿನ ಕತೆಗಳು ಕೆಳಜಾತಿಯವರು ಮೇಲ್ವರ್ಗದ ಜನರಿಂದ ಅನುಭವಿಸುವ ಅಸ್ಪೃಶ್ಯತೆ, ಅಧಿಕಾರದ ಅಸಮಾನತೆ, ಲೈಂಗಿಕ ಶೋಷಣೆ, ಕೂಲಿಯಿಲ್ಲದೇ ದುಡಿಮೆಗಳ

ಮಂಜುನಾಥಲತಾ ಅವರು ಚಿತ್ರಿಸುತ್ತಾರೆ. ಕೆಳಜಾತಿಯ ಕೂಲಿ ಹೆಂಗಸರೊಂದಿಗೆ ಕೂಡುವ ಮೇಲ್ವರ್ಗದ ಗಂಡಸರು, ಅದಕ್ಕೆ ಪ್ರತಿಯಾಗಿ ಮೇಲ್ಜಾತಿಯ ಹೆಂಗಸರೊಡನೆ ಕೆಳಜಾತಿಯ ಗಂಡಸರು ಕೂಡುತ್ತಾರೆ. ಜಾತಿ ವೈರತ್ವದ ಮೂಲಕವಾಗಿ ಎರಡು ಕಡೆ ಅಂತಿಮವಾಗಿ ಮಹಿಳೆಯೇ ಶೋಷಣೆಯನ್ನು ಅನುಭವಿಸುತ್ತಾಳೆ. ಅವರ ಬಹುತೇಕ ಕತೆಗಳು ಮಹಿಳಾ ಸಂವೇದನೆಯನ್ನು ಅಭಿವ್ಯಕ್ತಿಸುತ್ತವೆ. ಆಧುನಿಕ ಸರಕಾರದ ಚುನಾವಣೆಯ ವ್ಯವಸ್ಥೆ, ಅಧಿಕಾರಕ್ಕಾಗಿ ಹುಟ್ಟಿಕೊಳ್ಳುವ ಮತಾಂಧತೆಯ ಹಿಂಸಾ ಸ್ವರೂಪಗಳ ಕಥನಕಗಳು ಸಹ ಇವೆ. ಲೋಕೇಶ ಅಗಸನಕಟ್ಟಿ ಅವರ 'ಹಟ್ಟಿಯೆಂಬ ಭೂಮಿಯ ತುಣಕು' ಸಂಕಲನದಲ್ಲಿ ಕತೆಗಳೆಲ್ಲವೂ ಊರು ಮತ್ತು ಕೇರಿಯ ಸಂಘರ್ಷಗಳವೆ. ಈ ಸಂಘರ್ಷಗಳು ಮೊದಲಿಗಿಂತ ಈಗ ಭೀಕರವಾಗಿವೆ. ಶೋಷಣೆಯನ್ನು ಪ್ರಶ್ನಿಸುವ ಕೆಳಜಾತಿಯವರ ಧೈರ್ಯವನ್ನು ಕಂಡು ಮತ್ತಷ್ಟು ಅಮಾನವೀಯವಾಗಿ ಶೋಷಣೆಯನ್ನು ಮಾಡುತ್ತಾರೆ. ಮತಾಂತರವಾದರೂ ಸಹ, ಅಲ್ಲಿಯೂ ಅಸ್ಪೃಶ್ಯರಂತೆಯೇ ಕಾಣುವ ಮನೋಭಾವವನ್ನು ಕಂಡು, ಮತ್ತೇ ಬೇರೆ ಮಾರ್ಗ ಹುಡಿಕಿಕೊಳ್ಳುವ ಕಥಾನಕವೂ ಹಟ್ಟಿಯೆಂಬ ಭೂಮಿಯ ತುಣುಕು ದಲ್ಲಿ ಕಾಣುತ್ತೇವೆ.

ಹನೂರ ಚೆನ್ನಪ್ಪರವರ ಕತೆಗಳು ಮುಖ್ಯವಾಗಿ ಭೂಮಿಯ ಪ್ರಶ್ನೆಯನ್ನು ಎತ್ತುವಲ್ಲಿ ಹೊಸದಾದ ಆಯಾಮವನ್ನು ಕಾಣುತ್ತೇವೆ. 'ಹೊಸ' ಕತೆಯಲ್ಲಿ ಬರುವ ಹೊಂಗನ ಮಗ, ತಂದೆ ಕಷ್ಟಪಟ್ಟು ಸಂಪಾದಿಸಿದ ಭೂಮಿಯನ್ನು ಮಾರಿ, ಸಾಲ ತೀರಿಸಿ ಅಂಗಡಿಯಿಟ್ಟು ವ್ಯಾಪಾರ ಮಾಡಬೇಕು ಎನ್ನುತ್ತಾನೆ. ಮುಖ್ಯವಾಗಿ ಕೆಳಜಾತಿಯ ಜನರು ಭೂಮಿಯಲ್ಲಿ ಉಳುವ ಕನಸುಗಳನ್ನು ಬದಿಗೆ ಸರಿಸಿ, ನಗರವನ್ನು ಸೇರಿ ವ್ಯಾಪಾರ ಮಾಡಬೇಕೆಂಬ ಮನೋಧರ್ಮ ಆಧುನಿಕತೆಯಿಂದ ಬಂದುದಾಗಿದೆ. ಆದರೆ ಸಂಪ್ರದಾಯಸ್ಥನಾದ ಹೊಂಗನಿಗೆ ಮಗ, ಭೂಮಿಯ ನಿರಾಕರಿಸಿ, ವ್ಯಾಪಾರವನ್ನು ಮಾಡುತ್ತೇನೆಂದು ಹೊರಡುವುದು ತಂಬಾ ದುರಂತವಾಗಿ ಕಾಣುತ್ತದೆ. ಇದು ದಲಿತರ ಹೊಸ ಬದುಕಿನ ಸಾಧ್ಯತೆಯಲ್ಲಿ ಹಿರಿಯ ತಲೆಮಾರಿನವರು, ಮಕ್ಕಳು ಆಧುನಿಕತೆಯನ್ನು ಅರಾಧಿಸುವುದನ್ನು ಆತಂಕದಿಂದ ಅರ್ಥಮಾಡಿಕೊಳ್ಳುತ್ತಾರೆ. 'ಜೀತ' ಕತೆಯನ್ನು ಒಳಗೊಂಡು ಇವರ ಅನೇಕ ಕತೆಗಳ ಪಾತ್ರಗಳು ಉಳ್ಳವರ ಹೊಲದಲ್ಲಿ ಜೀತದಾಳುಗಳಾಗಿ ಅನುಭವಿಸುತ್ತಿರುವ ಯಾತನೆಯನ್ನು ಕಟ್ಟಿಕೊಡುತ್ತವೆ. ನಗರ ಕೇಂದ್ರೀತ ದಲಿತ ಬದುಕಿನಲ್ಲಿ ಜಾತಿಯ ಹೊಸ ಸವಾಲುಗಳು ಹೇಗೆ ಎದುರಾಗುತ್ತವೆ ಎಂಬುದನ್ನು 'ಫಾಲ್ಸ್ ಸರ್ಟಿಫಿಕೇಟ್' ಕತೆಯ ಮೂಲಕವಾಗಿ ನಟರಾಜ್ ಹುಳಿಯಾರ ವಿವರಿಸುತ್ತಾರೆ. ಅದರೊಡನೆ ನಗರದಲ್ಲಿನ ವ್ಯಕ್ತಿತ್ವಗಳಲ್ಲಿ ಕಾಣುವ ಒತ್ತಡ, ಆತ್ಮರತಿಯ ಗೀಳು, ಕೋಮುವಾದ, ಜಾತಿಯತೆಯನ್ನು ಮುಖ್ಯವಾಗಿ ಕತೆಯಾಗಿಸಿದ್ದಾರೆ. ಕೆಲವು ಬರಹಗಾರರು ದಲಿತರ ಮೇಲಾಗುವ ಅಸ್ಪೃಶ್ಯತೆ, ಲೈಂಗಿಕ ಶೋಷಣೆಗಳ ಚಿತ್ರಣವನ್ನು ಕಾಣುತ್ತೇವೆ. ಅದರಾಚೆಗೆ ಒಟ್ಟು ಮನುಷ್ಯ ಅಸ್ತಿತ್ವದ ಹುಡುಕಾಟಗಳನ್ನು ಮತ್ತೆ ಕೆಲವು ದಲಿತ ಬರಹಗಾರರು ಮಾಡಿದ್ದಾರೆ.

ನವ್ಯದ ಕತೆಗಾರರಾದ ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ ರಂತಹ ಕತೆಗಾರರು ಮುಂಬೈ ಮಹಾನಗರದ ಬದುಕನ್ನು ಕತೆಯಾಗಿಸಿದರು, ಅಲ್ಲಿನ ಕಾರ್ಪೋರೇಟ ಲೋಕದ ಅಮಾನವೀಯಗಳನ್ನು ಕತೆಯಲ್ಲಿ ತಂದರು. ಮುಖ್ಯವಾಗಿ ಈ ದಶಕದ ಅವಧಿಯಲ್ಲಿ ಹೆಚ್ಚು ಕಾರ್ಪೋರೇಟ್ ಕಥನಗಳು ರಚನೆಯಾಗಿವೆ. ಅದೇ ವಲಯದಲ್ಲಿ ಕೆಲಸ ಮಾಡುವ ಕನ್ನಡಿಗರು ಕಥೆಯನ್ನು ಬರೆದಿದ್ದಾರೆ. (4). ಕಾರ್ಪೋರೇಟ ಕಥನಗಳ ಅವಕಾಶವಾದಿ ಆಧುನಿಕತೆ : ಆಧುನಿಕತೆಯ ಸಾಚಾ ಮಾದರಿಯಾದ ಕಾರ್ಪೋರೇಟ ವಲಯ ಮತ್ತು ಅದು ನೀಡುವ ಅವಕಾಶಗಳ ಕಾರಣದಿಂದ ಅದನ್ನು ಒಪ್ಪಿಕೊಳ್ಳಲಾಗುತ್ತದೆ. ಈ ಒಪ್ಪಿಕೊಳ್ಳುವಿಕೆಯಲ್ಲಿ ಅನೇಕ ಅಮಾನವೀಯ ಕೃರ್ಯಗಳಿದ್ದಾಗೂ, ಆ ವಲಯದ ಹಣದ ಉನ್ಮತ್ತಿನಲ್ಲಿ ಅರಿವಿಗೆ ಬಾರದೆ ಹೋಗುತ್ತವೆ. ಈ ತರಹದ ಕತೆಗಳು ವಸುಧೇಂದ್ರ, ನಾಗರಾಜ ವಸ್ತಾರೆ, ವಿವೇಕ ಶಾನಭಾಗ, ಅಶೋಕ ಹೆಗಡೆ, ಲೋಹಿತ ನಾಯ್ಕರ ಅವರಲ್ಲಿ ನೋಡುತ್ತೇವೆ.

ಯುಗಾದಿ, ಮನೀಷೆ, ಚೇಳು, ಹಂಪಿ ಎಕ್ಸಪ್ರೆಸ್ ಕಥಾ ಸಂಕಲನಗಳಲ್ಲಿ ಪಾತ್ರಗಳು ಕಾರ್ಪೋರೇಟ ಕಂಪನಿಯಲ್ಲಿ ಕೆಲಸ ಮಾಡುವ ಉದ್ಯೋಗಸ್ಥರು. ಅವರ ಕೆಲಸದ ಒತ್ತಡಗಳು, ಅದರಿಂದ ಉಂಟಾಗುವ ಮಾನಸಿಕ ಖಿನ್ನತೆ, ಗಂಡಸರು ಪುರುಷತ್ವದ ಸತ್ವವನ್ನು ಕಳೆದುಕೊಂಡು ಯಾತನೆಯನ್ನು ಅನುಭವಿಸುತ್ತಾರೆ. ಆದರೆ ಕಂಪನಿಯವರು ನೀಡುವ ಸಂಬಳದಲ್ಲಿ, ತೊಂದರೆಗಳನ್ನು ಮರೆತು ಬಿಡುತ್ತಾರೆ. ಮನುಷ್ಯತ್ವವನ್ನು ಕೂಡಾ. ಅಲ್ಲಿಯ ಉದ್ಯೋಗಸ್ಥರು ಜನರಿಂದ ಪ್ರೀತಿಯನ್ನು ಬಯಸುತ್ತಾರೆ. ಆದರೆ ಅವರಿಗೆ ಅಂತಿಮವಾಗಿ, ಮೊದಲಾಗಿ ಸಿಗುವುದು ಹಣ ಮಾತ್ರ. ಸುಖ, ನೆಮ್ಮದಿ, ಕಾಮ, ಸಂತೋಷಗಳನ್ನು ಸಹ ಕಂಪನಿಗಳು ವ್ಯವಹಾರದ ನೆಲೆಯಿಂದಲೇ ಯೋಚಿಸುತ್ತವೆ. ಹೀಗಾಗಿ ಅವರು ಮಾಡುವ ಶೋಷಣೆ, ಹಣದ ಅಮಲೀನಲ್ಲಿ ಮರೆಯಾಗಿ ಬಿಡುತ್ತದೆ. ನಾಗರಾಜ್ ವಸ್ತಾರೆ ಅವರ 'ಹಕೂನ ಮಟಾಟ್, ಮಡಿಲು' ಸಂಕಲನದ ಕತೆಗಳು ಕಾರ್ಪೋರೇಟ್ ವಲಯದಲ್ಲಿ ಹರೆಯದ ಗಂಡು ಹೆಣ್ಣಿನ ಸಂಬಂಧಗಳು ಮುಕ್ತವಾಗಿ ವರ್ತಿಸುತ್ತಾ, ದಾಂಪತ್ಯ, ಶೀಲ, ಪಾವಿತ್ರದ ಚೌಕಟ್ಟುಗಳನ್ನು ಮೀರುವ ಪಾತ್ರಗಳನ್ನು ಕಾಣುತ್ತೇವೆ. ವಿವಾಹ ಪೂರ್ವ ಲೈಂಗಿಕ ಸಂಬಂಧ, ಲಿವಿಂಗ್ ಟೂಗೇದರ್ ಸಂಬಂಧ ಹೊಂದಲು ಆಸಕ್ತಿಯನ್ನು ಹೊಂದಿದ ಕತೆಗಳನ್ನು ಕಾಣುತ್ತೇವೆ. ಇವರ ಕತೆಗಳು ಗಮನ ಸೆಳೆವುದು ಭಾಷೆ, ವಸ್ತುವಿನಿಂದ ಮಾತ್ರ, ಅವುಗಳ ಕಲಾತ್ಮಕತೆಯಿಂದ ಅಲ್ಲ.

ವಿವೇಕ ಶಾನಭಾಗ ಅವರ ಮತ್ತೊಬ್ಬ ಸಂಸಾರ ಕತೆಯೂ ಪ್ರಮೋದ ಕುಮಾರ ಸೇಲ್ಸ್ ಮ್ಯಾನೇಜರ್ ಹೇಳುವ ಎರಡು ಸಂಸಾರಗಳನ್ನು ಒಬ್ಬನೇ ಪುರುಷ ನಿರ್ವಹಿಸುವ ಮೂಲಕವಾಗಿ, ಜೀವನದಲ್ಲೂ ವ್ಯಾಪಾರದ ಧೋರಣೆಯನ್ನು ಅಳವಡಿಸಿಕೊಂಡು ಬದುಕುತ್ತಾನೆ. ಆದರೆ ಈ ಸಂಗತಿ ಇಬ್ಬರು ಹೆಂಡಂದಿರಿಗೆ ಗೊತ್ತಾದಾಗ ಸಂಕಟ ಅನುಭವಿಸುತ್ತಾನೆ. ಅವನ ಸಂಕಟ, ಹೆಂಡತಿಯರ ಸಂಕಟವೂ ಆಗುತ್ತದೆ. ಮಾಡದ ಅಪರಾಧಕ್ಕೂ ತಾವು ಅಪರಾಧಿತನವನ್ನು ಅನುಭವಿಸುತ್ತಾರೆ.

ಲೋಹಿತ ನಾಯ್ಕರ್ ಅವರ ದೃಷ್ಟಿಕೋನ. ಕಥಾನಾಯಕಿಯ ಕತೆಗಳಲ್ಲಿ ಕಥನಗಳು ಮುಖ್ಯವಾಗಿ ಪಾಶ್ಚಾತ್ಯ ಮಾದರಿಯ ಕುಟುಂಬದ ಸಂಬಂಧಕ್ಕೆ ಹಂಬಲಿಸುತ್ತವೆ. ವಿವಾಹಪೂರ್ವ ಸಂಬಂಧ, ವಿಚ್ಛೇದನ, ಗರ್ಭಪಾತದಂತಹ ಸಂಗತಿಗಳು ಅತೀ ಸ್ವಚ್ಛಾಚಾರಿ ವರ್ತನೆಯಾಗುವ ಮೂಲಕ ವಿವಾಹ ವ್ಯವಸ್ಥೆ ಅರ್ಥ

ಕಳೆದುಕೊಳ್ಳುವ ರೀತಿಯಲ್ಲಿ ಚಿತ್ರಿಸುತ್ತಾರೆ. ಎಂ.ಎಸ್. ಶ್ರೀರಾಮ್ ಅವರ 'ಲಾಟರಿ' ಕತೆಯಲ್ಲಿ ವೃದ್ಧರು ತಮ್ಮ ಇಳಿ ವಯಸ್ಸಿನಲ್ಲಿ ಮತ್ತೆ ಪ್ರೀತಿಗೆ ಹಂಬಲಿಸುತ್ತಾ ಸಂಬಂಧವನ್ನು ಬೆಳಸುತ್ತಾರೆ. ಆದರೆ ಈ ಸಂಬಂಧಗಳು ಅವರ ಮಕ್ಕಳಿಗೆ ಮುಜುಗರವನ್ನುಂಟು ಮಾಡುತ್ತವೆ. ರಾಯರ ವೃದ್ಧಾಪ್ಯದ ಖಾಸಗಿ ಸಂಬಂಧ ಸಾರ್ವಜನಿಕವಾಗಿ ಛತ್ತರಗೊಂಡಾಗ, ಅವರು ಸಹ ಮುಜುಗರವನ್ನು ಅನುಭವಿಸುತ್ತಾರೆ. ಈ ತರಹದ ಮನೋಭಾವ ಆಧುನಿಕೊತ್ತರ ಚಿಂತನೆಗಳ ಫಲ. 'ಹೊಸ ಕಾಲದ ಹಿಂಸೆ' ಕತೆಯಲ್ಲಿ ಕೆ. ಸತ್ಯನಾರಾಯಣ ಅವರು, ನಗರ ಪರಿಸರದಲ್ಲಿ ಮನುಷ್ಯ ಆಧುನಿಕ ಪಲ್ಲಟದಿಂದ ಎದುರಿಸುತ್ತಿರುವ ಹಿಂಸೆಯನ್ನು ಕಟ್ಟಿಕೊಡುತ್ತಾರೆ. ಕ್ಷುಲ್ಲಕವಾದ ಕಾರಣದಿಂದ ಉಂಟಾದ ಜಗಳ, ವೃದ್ಧರ ಅವಮಾನಕ್ಕೆ ಕಾರಣವಾಗಿ, ಅವರನ್ನು ಮಾನಸೀಕವಾಗಿ ಮತ್ತಷ್ಟು ಕುಗ್ಗಿಸುತ್ತದೆ. ಮನುಷ್ಯ ಸಮಾಜವನ್ನು ಆವರಿಸುತ್ತಿರುವ ಹಿಂಸೆಗಳು, ಸಮಾಜದ ಹಿರಿಯ ಜೀವಗಳು ಹೆಚ್ಚು ಕಾಡುತ್ತಿವೆ. ಪರಂಪರೆಯಲ್ಲಿ ಬೆಳೆದ ಅವರಿಗೆ, ಆಧುನಿಕತೆ ಸಂದರ್ಭದಲ್ಲಿ ವೃದ್ಧಾಪ್ಯ ಅನುಭವಿಸುವಲ್ಲಿ ಅನೇಕ ನೈತಿಕ ಬಿಕ್ಕಟ್ಟುಗಳು ಎದುರಾಗುವುದನ್ನು ಸತ್ಯನಾರಾಯಣ ಅವರು ವಿವರಿಸುತ್ತಾರೆ.

ದಶಕದ ಕತೆಗಳನ್ನು ಹಿನ್ನಲೆಯಾಗಿ, ಇಲ್ಲಿನ ನಾಲ್ಕು ಆಯಾಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಆಧುನಿಕತೆಯ ಕುರಿತಾಗಿ ಇರುವ ಅನೇಕ ಒಳ ಸಾಂಸ್ಕೃತಿಕ ರಾಜಕಾರಣಗಳು ಅರಿವಿಗೆ ಬರುತ್ತವೆ. ಆಧುನಿಕ ಸರಕಾರಗಳ ಜಾತ್ಯಾತೀತ, ಧರ್ಮಾತೀತ ಪರಿಕಲ್ಪನೆಗಳು. ಅವುಗಳ ಕುರಿತಾದ ಹೇಳಿಕೆಗಳು ಆದರ್ಶವಾಗಿ ಕಂಡರೂ, ಅವುಗಳ ವಾಸ್ತವ ಅರ್ಥ ಬೇರೆಯಾಗಿದೆ. "ಮೇಲು ನೋಟಕ್ಕೆ ತಾತ್ವಕವಾಗಿ ಜಾತಿಪದ್ಧತಿಯ ಮೌಲ್ಯಗಳನ್ನು ನಿರಾಕರಿಸುವಂತೆ ಕಾಣುವ ಈ ಪ್ರಗತಿಯ ಪಥದ ಬೌಕಟ್ಟು ಅಂತಿಮವಾಗಿ ಕೆಳಜಾತಿಗಳ ಮೇಲಿನ ಹಿಂಸೆಯನ್ನು ಮುಂದುವರಿಸುತ್ತದೆ. ಬಂಡವಾಳಷಾಹಿ ವ್ಯವಸ್ಥೆ ಜಾತಿಪದ್ಧತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿದೆ... ವಿಜ್ಞಾನ, ತಂತ್ರಜ್ಞಾನ ಪ್ರತಿಷ್ಠಿತ ವ್ಯವಸ್ಥೆಯಲ್ಲೂ ಅಂತಿಮವಾಗಿ ಮೇಲು ಜಾತಿಯವರದೇ ಪ್ರಾಧಾನ್ಯ. ಈ ರೀತಿಯ ಸಮಾಜ ನಿರ್ಮಾಣ ಮೂಲಭೂತವಾಗಿ ಹಳೆಯ ಶೋಷಣಾ ರೂಪಗಳನ್ನೇ, ಕೆಳಜಾತಿಯವರ ಮಟ್ಟಿಗೆ, ಆಧುನಿಕರಿಸಿ ಮುಂದುವರೆಸುತ್ತದೆ ಎಂದು ಹೇಳಬಹುದು." (ಸಂಸ್ಕೃತ ಕಥನ: ಡಿ.ಆರ್ ನಾಗರಾಜ್, ಪು-360) ಪರಂಪರಾಗತ ಭಾರತೀಯ ಜೀವನ ಪದ್ಧತಿಯನ್ನು ಅನುಸರಿಸುವ ಹಿಂದಿನ ತೆಲೆಮಾರು ಮತ್ತು ಆಧುನಿಕತೆಯ ಪಾಶ್ಚಾತ್ಯ ಜೀವನ ಮಾದರಿಯನ್ನು ಮೋಹದಿಂದ ಪ್ರೀತಿಸುವ ವರ್ತಮಾನದ ಯುವಜನಾಂಗ. ಎರಡು ತೆಲೆಮಾರುಗಳ ಮಧ್ಯ ಕಂದಕಗಳು ದಿನೆ ದಿನೇ ದೊಡ್ಡದಾಗುತ್ತಿವೆ. ಆಧುನಿಕತೆಯಿಂದ ಬದಲಾಗುತ್ತಿರುವ ಕೃಷಿ ಪದ್ಧತಿ, ಆಹಾರ ಕ್ರಮ, ಕುಟುಂಬ ಪದ್ಧತಿ, ವಿವಾಹ ಸಂಬಂಧ, ಅದರೊಡನೆ ಇಡೀ ಬದುಕೇ ವಾಣಿಜ್ಯಮಯವಾಗುವ ನಿಟ್ಟಿನಲ್ಲಿ ಸಾಗಿರುವುದು ಭಾರತೀಯ ಸಾಂಸ್ಕೃತಿಯೆಂಬುದು ಆಳದಿಂದಲೆ ಪಲ್ಲಟಗಳನ್ನು ಅನುಭವಿಸುತ್ತದೆ. ನಮ್ಮ ಬದುಕಿಗೆ ಹೊಂದಿಕೆಯಾಗದ ಜೀವನ ಪದ್ಧತಿಗಳೊಳಗೆ ಜೀವನ ಮಾಡಬೇಕಾದ ಅನಿವಾರ್ಯತೆಯನ್ನು ಆಧುನಿತೆ ಸೃಷ್ಟಿಸಿದೆ. ಹೀಗಾಗಿ ಮತ್ತೇ ನಾವು ಆಧುನಿತೆಗೆ ಪರ್ಯಾಯವಾಗಿ ದೇಸೀ ಜೀವನ ಪದ್ಧತಿಯನ್ನು ಕಂಡುಕೊಳ್ಳ ಬೇಕಿದೆ. ಆದರೆ ಅದು ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಪುನರ್ ರಚಿಸಿಕೊಳ್ಳಬೇಕಿದೆ. ನಮ್ಮ ಸೃಜನಶೀಲ ಬರವಣಿಗೆಗೆಗಳು ಈ ನಿಟ್ಟಿನಲ್ಲಿ ಹೊಸ ಹೊಸ ಸಂಕಥನಗಳನ್ನು ಮನುಷ್ಯ ಪರವಾಗಿ ಕಟ್ಟಿಕೊಡಬೇಕಿದೆ.

ಮಾನವ ಸಾಗಾಣಿಕೆ ತಡೆಗಟ್ಟುವಲ್ಲಿ ಮಾಧ್ಯಮಗಳ ಪಾತ್ರ: ಒಂದು ಅಧ್ಯಯನ

* ಡಾ. ಸಿ. ಕೆ ಪುಟ್ಟಸ್ವಾಮಿ ** ದಿಲೀಪ್ ಕುಮಾರ್ ಎಂ *** ರಮ್ಯ. ಎ ****
*ಅಸೋಸಿಯೆಟ್ ಪ್ರೋಪೆಸರ್, ** ಸಂಶೋಧನ ವಿದ್ಯಾರ್ಥಿ,***ದ್ವಿತೀಯ, ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,
ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಭಾರತದಲ್ಲಿ ಗ್ರಾಮೀಣ ಸಮಸ್ಯೆಗಳು ರಾಷ್ಟ್ರೀಯ ಅಭಿವೃದ್ಧಿಗೆ ಮಾರಕವಾಗಿ ಭಾರತವನ್ನ ಕಿತ್ತುತಿನ್ನುವುದರ ಜೊತೆಗೆ ಜಾಗತಿಕ ಮಟ್ಟದಲ್ಲಿ ತಲೆತಗ್ಗಿಸುವಂತೆ ಮಾಡಿವೆ. ಅವುಗಳಲ್ಲಿ ಇಂದು ಇಡೀ ದೇಶಕ್ಕೆ ಸವಾಲಾಗಿ ನಿಂತಿರುವ 'ಮಾನವ ಸಾಗಾಣಿಕೆ' ಕೂಡ ಒಂದಾಗಿದೆ. ಮಾನವ ಸಾಗಾಣಿಕೆಯನ್ನ ಲೈಂಗಿಕ ವ್ಯಾಪಾರಕ್ಕಾಗಿ, ಬಲವಂತದ ಜೀತಕ್ಕಾಗಿ, ಅಂಗಾಂಗಳ ವ್ಯಾಪಾರಕ್ಕಾಗಿ, ಮದ್ಯವರ್ತಿಗಳ ಲಾಭಕ್ಕಾಗಿ ಬಳಸುತ್ತ ಬಂದಿರುವುದನ್ನು ಕಾಣಬಹುದಾಗಿದ್ದು, ಅದೇನೇ ಆದರೂ ನಿರ್ಭಿತಿಯಿಂದ ಅವುಗಳನ್ನು ಜನರ ಜನರೆಡೆಗೆ ತಲುಪಿಸುವ ಕೆಲಸವನ್ನು ಮಾಧ್ಯಮಗಳು ಮಾಡುತ್ತಾ ಬಂದಿರುವುದು ಒಂದು ಪರಿಣಾಮಕಾರಿಯಾದ ಅಂಶವೇ ಆಗಿದೆ.

ಮಾಧ್ಯಮಗಳ ಬೆಂಬಲವಿಲ್ಲದೆ ಯಾವುದೇ ಒಂದು ಸಮಸ್ಯೆಯನ್ನ ಹತ್ತಿಕ್ಕಲು ಸಾಧ್ಯವಿಲ್ಲ. ಮಾಧ್ಯಮಗಳು ಯಾವುದೇ ಹೋರಾಟದ ವಿರುದ್ಧದ ಪ್ರಬಲ ಅಸ್ತ್ರಗಳಾಗಿರುತ್ತವೆ. ಪ್ರಸ್ತುತ ಈ ಸಂಶೋಧನೆಯು ಮೈಸೂರು ಜಿಲ್ಲೆಯ ಆಯ್ದ ಸರ್ಕಾರ ಹಾಗೂ ಸರ್ಕಾರೇತರ ಮೂರು ಪುನರ್ವಸತಿ ಕೇಂದ್ರಗಳಿಗೆ ಬೇಟಿ ನೀಡಿ ಅಲ್ಲಿ ಆಶ್ರಯ ಪಡೆದಿದ್ದ ಮಾನವ ಸಾಗಾಣಿಕೆಗೆ ಒಳಗಾದ ಸುಮಾರು 120 ಮಂದಿ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಂಡು, ಪಡೆದ ಮಾಹಿತಿಯನ್ನು ಕೋಷ್ಟಕದಲ್ಲಿ ವಿಭಾಗೀಕರಿಸಿ ದತ್ತಾಂಶವನ್ನು ವಿಶ್ಲೇಷಣೆಯನ್ನು ಮಾಡಲಾಗಿದೆ. ಈ ಅಧ್ಯಯನವು ಸಾಮಾಜಿಕ ಅಧ್ಯಯನ ವಿಭಾಗಕ್ಕೆ ಸೇರಿರುವುದರಿಂದ ಸಮೀಕ್ಷಾ ವಿಧಾನವನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಪೀಠಿಕೆ: ಜಾಗತಿಕವಾಗಿ ಹಲವಾರು ಸಮಸ್ಯೆಗಳು ಇಂದು ನಮ್ಮನ್ನು ಕಾಡುತ್ತಿವೆ. ವೈಜ್ಞಾನಿಕವಾಗಿ ಏನೆಲ್ಲಾ ಸಾಧಿಸುವ ಮಾನವ ತನ್ನ ಅಸ್ಥಿತ್ವವನ್ನು ವಿಕಸಿತಗೊಳಿಸಿಕೊಳ್ಳುತ್ತಿದ್ದಾನೆ. ಆದರೆ ಬಹುರೂಪಿಯಾಗಿ ಕಾಡುವ ಹಲವಾರು ಸಾಮಾಜಿಕ ಸಮಸ್ಯೆಗಳು, ಗೊಂದಲಗಳು ಇಂದಿಗೂ ಪರಿಹಾರಗಳಿಲ್ಲದೇ ಭೂತಕಾಲವಾಗಿ ಬೆಳೆದು ಅತಿದೊಡ್ಡ ಜಾಗತಿಕ ಸವಾಲುಗಳಾಗಿ ಪರಿಣಮಿಸಿದೆ.

ಅಂತಹ ಹಲವಾರು ಸಾಮಾಜಿಕ ಸಮಸ್ಯೆಗಳ ವಿರುದ್ಧ ಇಂದು ದೊಡ್ಡ ದೊಡ್ಡ ಹೋರಾಟಗಳು ನಡೆಯುತ್ತಿವೆ. ಅದೇನೇ ಆದರೂ

ಮನುಷ್ಯರು ಮನುಷ್ಯರನ್ನೇ ಮಾರಿಕೊಳ್ಳುವಂತಹ ಹೀನಾ ಪ್ರವೃತ್ತಿ ಯಂತಹ "ಮಾನವ ಸಾಗಾಣಿಕೆ ಇಂದು ಜಾಗತಿಕ ಮಟ್ಟದಲ್ಲಿ ಜ್ವಲಂತ ಸಮಸ್ಯೆಯಷ್ಟೆಯಲ್ಲದೆ ಇಡೀ ಮನುಕುಲಕ್ಕೆ ಸವಾಲಾಗಿದೆ ಎಂಬುದು ಅತಿಶಯೋಕ್ತಿಯಲ್ಲ".

ಮಾನವ ಸಾಗಾಣಿಕೆಯೂ ಹಲವಾರು ಕಾರಣಗಳಿಗಾಗಿ ನಡೆದರೂ ಕೂಡ ಭಾವನೆಗಳ್ಳುಳ್ಳ ವ್ಯಕ್ತಿಯೊಬ್ಬ ತನ್ನ ತದ್ರೂಪಿಯನ್ನು ಯಾವುದೇ ಹಿಂಜರಿಕೆಗಳಿಲ್ಲದೇ ಮಾರುವಂತದ್ದು ಅತಿಹೀನಾ ಕೃತ್ಯವಾಗಿದೆ. ಇಂತಹ ಮಾನವ ಸಾಗಾಣಿಕೆಯು ಜಗತ್ತಿನ ಅತೀ ಮುಂಚೂಣಿ ರಾಷ್ಟ್ರಗಳಾದ ಚೀನಾ, ಭಾರತ, ಅಮೇರಿಕಾ, ಇಂಗ್ಲೇಡ್, ಸ್ವೀಡನ್‌ಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಿದ್ದು ಇದರ ನಿರ್ಮೂಲನೆಯಲ್ಲಿ ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಜನಸಾಮಾನ್ಯರು ಹೆಚ್ಚು ಹೆಚ್ಚು ಜಾಗೃತರಾಗಬೇಕು. ಈ ರೀತಿ ಜಾಗೃತಿ ಉಂಟಾಗಬೇಕಾದರೇ ಅದು ಮಾಧ್ಯಮಗಳಿಂದ ಮಾತ್ರ ಸಾಧ್ಯ.

ಮಾಧ್ಯಮಗಳು ಮಾನವ ಸಾಗಾಣಿಕೆಯ ಬಗ್ಗೆ ಅವುಗಳಿಂದಾಗುವ ಸಮಸ್ಯೆಗಳ ಬಗ್ಗೆ ಸ್ಪವಿವರವಾಗಿ ಜನಸಾಮಾನ್ಯರಿಗೆ ತಿಳಿಸುವ ಮೂಲಕ ಅವರನ್ನ ಜಾಗೃತಗೊಳಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಮಾಧ್ಯಮಗಳು ಕೇವಲ ಕೆಲವು ಭಾಗಗಳಿಗೆ ಅಷ್ಟೇ ಸೀಮಿತವಾಗಿರದೇ

ವಿಶ್ವದಾದ್ಯಂತ ಮಾನವ ಸಾಗಾಣಿಕೆಯ ಬಗ್ಗೆ ಜಾಗೃತಿ ಮೂಡಿಸುತ್ತಿವೆ. ಮಾನವ ಸಾಗಾಣಿಕೆಗೆ ಪೂರಕವಾದ ಕಾನೂನು ಬಾಹಿರ ವಲಸೆಯಾ ಬಗ್ಗೆಯೂ ಜನಸಾಮಾನ್ಯರಿಗೆ ತಿಳುವಳಿಕೆ ನೀಡುತ್ತವೆ. ಜಾಗತಿಕ ಬೆಳವಣಿಗೆಗಳಿಂದಾಗಿ ವೃತ್ತಪತ್ರಿಕೆ, ದೃಶ್ಯ ಮಾಧ್ಯಮಗಳು, ಅಂತರ್ಜಾಲ ಹಲವಾರು ತಾಂತ್ರಿಕ ವಿದ್ಯಮಾನಗಳು ಅನುಷ್ಠಾನಕ್ಕೆ ಬಂದಿದ್ದು ಮನುಷ್ಯರನ್ನ ಅತೀ ಸುಲಭವಾಗಿ ಮಾನವ ಸಾಗಾಣಿಕೆಯ ಜಾಲದ ಸುಳಿಗೆ ಸಿಲುಕಿಸುವಲ್ಲಿ ಇವುಗಳ ಪ್ರಭಾವ ಮಹತ್ವದ್ದಾಗಿದೆ.

ಮಾಧ್ಯಮಗಳು ಜನರನ್ನು ಆಕರ್ಷಿಸುವಷ್ಟು ಬಹುಶಃ ಬೇರೆ ಯಾವ ಮಾರ್ಗಗಳು ಜನರನ್ನು ಆಕರ್ಷಿಸುವುದಿಲ್ಲ. ಮನುಷ್ಯನ ಬೆಳಗು ಪ್ರಾರಂಭವಾಗುವುದೇ ವೃತ್ತಪತ್ರಿಕೆಗಳಿಂದ, ದೂರದರ್ಶನ ಸುದ್ದಿಗಳಿಂದ, ಅಂತೆಯೇ ಇಡೀ ದಿನದ ವಿಚಾರಗಳನ್ನು ಅರಿತ ಮೇಲೆಯೇ ಅವರ ಬೈನಂದಿನ ಬದುಕು ಕೊನೆಗೊಳ್ಳುವುದು. ಮಾನವ ಸಾಗಾಣಿಕೆಯೂ ತನ್ನ ವಿವಿಧ ರೂಪಗಳ ಮೂಲಕ ಪ್ರತಿದಿನ ಒಂದಿಲ್ಲೊಂದು ರೀತಿಯಲ್ಲಿ ಸದ್ದು ಮಾಡುತ್ತಾ ಹಲವಾರು ಸಾಮಾಜಿಕ ದುಷ್ಪರಿಣಾಮಗಳನ್ನು ಉಂಟುಮಾಡುತ್ತಿರುವುದನ್ನ ಮಾಧ್ಯಮಗಳು ಚಾಚುತಪ್ಪದೇ ವರದಿ ಮಾಡುತ್ತಿರುವುದರಿಂದ ಜನರು ಎಚ್ಚೆತುಕೊಂಡು ಮಾನವ ಸಾಗಾಣಿಕೆಯ ಬಗ್ಗೆ ಅರಿವನ್ನು ಹೊಂದಲು ಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ಮಾನವ ಸಾಗಾಣಿಕೆಯಲ್ಲಿ ಮಾಧ್ಯಮಗಳ ಪಾತ್ರ ಪ್ರಶಂಸನೀಯವಾದುದು.

ಜಾಗತಿಕ ಮಟ್ಟದಲ್ಲಿ ಮಾನವ ಸಾಗಾಣಿಕೆ : ವಿಶ್ವ ವ್ಯಾಪಿಯಾಗಿ ಬಳಕೆಯಾಗಿರುವ ಮಾನವ ಸಾಗಾಣಿಕೆಯ ಬಗ್ಗೆ ವಿಶ್ವದಾದ್ಯಂತ ಮುನ್ನೆಚ್ಚರಿಕೆ ಕ್ರಮಗಳು, ರಕ್ಷಣ, ಕಾನೂನಿನ ಕ್ರಮಗಳು ಎಲ್ಲವನ್ನು ಕಾನೂನಾತ್ಮಕವಾಗಿ ರೂಪಿಸಲಾಗಿದ್ದರು ಮಾನವ ಸಾಗಾಣಿಕೆಯನ್ನು ನಿರ್ಮೂಲನೆ ಮಾಡುವುದರಲಿ, ಸಾಗಾಣಿಕೆಯನ್ನ ಕಡಿಮೆ ಮಾಡಲು ಕೂಡ ಸೋಲುತ್ತಿದೆ.

ಮಾನವ ಸಾಗಾಣಿಕೆಯು ಕೆಲವು ಸಂದರ್ಭದಲ್ಲಿ ದೇಶದ ಒಳಗಡೆ ಆಂತರಿಕವಾಗಿ ನಡೆಯಲ್ಪಟ್ಟರೆ, ಮತ್ತು ಕೆಲವು ಸಂದರ್ಭದಲ್ಲಿ ದೇಶದಿಂದ-ದೇಶಕ್ಕೆ ನಡೆಯುತ್ತದೆ. ಮಾನವ ಸಾಗಾಣಿಕೆ ಒಂದು ಅನೈತಿಕ ವ್ಯಾಪಾರವಾಗಿದ್ದು ಇದರಲ್ಲಿ ಬಹುಮುಖ್ಯವಾಗಿ ಮಹಿಳೆಯರು ಮತ್ತು ಮಕ್ಕಳು ಸಾಗಾಣಿಕೆಯ ಸರಕಾಗುತ್ತಾರೆ. ಅಷ್ಟೇ ಅಲ್ಲದೇ ಮಹಿಳೆ, ಪುರುಷ ಮತ್ತು ಮಕ್ಕಳು ಹಲವಾರು ಉದ್ದೇಶಗಳಿಗಾಗಿ ಮಾರಾಟಕ್ಕೆ ಒಳಗಾಗುತ್ತಿದ್ದಾರೆ. ಸಾಗಾಣಿಕೆಗೆ ಒಳಪಟ್ಟ ಮಹಿಳೆಯರು ಮತ್ತು ಮಕ್ಕಳು ವೇಶ್ಯಾವಾಟಿಕೆಗಾಗಿ ಹಾಗೂ ಮನೆಕೆಲಸಕ್ಕಾಗಿ ಸರಬರಾಜಾಗುತ್ತಾರೆ. ಅಂತೆಯೇ ಪುರುಷರು ಮತ್ತು ಮಕ್ಕಳು ಸಾಮಾನ್ಯವಾಗಿ ಜೀತಕ್ಕಾಗಿ, ನೌಕರಿಗಾಗಿ ಬಿಕರಿಯಾಗುತ್ತಾರೆ.

ಜಾಗತಿಕ ಮಟ್ಟದಲ್ಲಿ ಮಾನವ ಸಾಗಾಣಿಕೆಯನ್ನು ಬೇರೆ-ಬೇರೆ ವಿಧದಲ್ಲಿ ಶ್ರೇಣಿಕರಿಸಲಾಗಿದ್ದು, 2007ರ ಅಮೇರಿಕಾ ಸಂಯುಕ್ತ ಸಂಸ್ಥಾನದ ವರದಿಯ ಪ್ರಕಾರ ಜಗತ್ತಿನಲ್ಲಿ ಸು.27 ಮಿಲಿಯನ್ ಜನರು ಸಾಗಾಣಿಕೆಗೆ ಒಳಪಟ್ಟವರಗಿದ್ದಾರೆ. ಅಂತರಾಷ್ಟೀಯ ಸಮೀಕ್ಷೆಯ ಪ್ರಕಾರ ಪ್ರತೀ ವರ್ಷ 8 ಲಕ್ಷ ಮಂದಿ ಅಂತರಾಷ್ಟ್ರೀಯ ಗಡಿಯನ್ನು ದಾಟಿ ಸಾಗಾಣಿಕೆಗೆ ಒಳಗಾಗುತ್ತಿದ್ದಾರೆ ಎಂದು ತಿಳಿಸಿದೆ. ಅಂತೆಯೇ ಅಮೇರಿಕಾ ಸಂಯುಕ್ತ ಸಂಸ್ಥಾನದ The facts about child sex tourism 2005 ರ ಪ್ರಕಾರ ಜಗತ್ತಿನಾದ್ಯಂತ ಪ್ರತಿವರ್ಷಕ್ಕೆ ಒಂದು ಮಿಲಿಯನ್ ಮಕ್ಕಳು ಜಾಗತಿಕ ವೇಶ್ಯಾವಾಟಿಕೆಗೆ ಬಲಿಯಾಗುತ್ತಿದ್ದಾರೆ. ಅಮೇರಿಕಾ ಸಂಯುಕ್ತ ಸಂಸ್ಥಾನದ ನ್ಯಾಯಿಕ ಸಂಸ್ಥೆಯು 2004 ರಲ್ಲಿ ನೀಡಿದ ವರದಿಯ ಪ್ರಕಾರ ಸಾಗಾಣಿಕೆಗೆ ಒಳಪಡುವ 100 ಮಂದಿ ಮಹಿಳೆಯರಲ್ಲಿ 70 ಮಂದಿ ವೇಶ್ಯಾವಾಟಿಕೆಗೂ ಹಾಗೂ 30 ಮಂದಿ ಮನೆಗೆಲಸಕ್ಕೂ ಬಳಸಲ್ಪಡುತ್ತಿದ್ದಾರೆ.

ಜಗತ್ತಿನಾದ್ಯಂತ 161 ದೇಶಗಳು ಮಾನವ ಸಾಗಾಣಿಕೆಯಿಂದ ಈಗಾಗಲೇ ಪರಿಣಾಮಗಳನ್ನು ಎದುರಿಸುತ್ತಿದ್ದರೆ, 127 ದೇಶಗಳಲ್ಲಿ ಮಾನವ ಸಾಗಾಣಿಕೆಯು ಪ್ರಾರಂಭಿಕ ಹಂತದಲ್ಲಿ ಇದೆ. 98 ದೇಶಗಳು ಸಮಸ್ಯೆಗಳ ಚಿಂತಿಸತೊಡಗಿದ್ದರೆ, 137 ದೇಶಗಳು ಮಾನವ ಸಾಗಾಣಿಕೆಯಿಂದ ಉಂಟಾಗುವ ಸವಾಲುಗಳನ್ನು ಎದುರಿಸಲು ಸಿದ್ಧವಾಗಿವೆ. (ಕಾಲದಿಂದ ಕಾಲಕ್ಕೆ, ದೇಶಗಳ ಸಂಖ್ಯೆಗಳು ಏರುಪೇರಾಗುತ್ತವೆ) ಎಂಬುದಾಗಿ ಸಂಯುಕ್ತ ರಾಷ್ಟ್ರಗಳ Drugs and Crime trafficking in persons ಎಂಬ ವರದಿಯೂ ತಿಳಿಸಿದೆ. ಜಗತ್ತಿನಲ್ಲಿ 32 ಬಿಲಿಯನ್‌ಷ್ಟು ಹಣ ಮಾನವ ಸಾಗಾಣಿಕೆ ಉದ್ದಿಮೆಯಿಂದಾಗಿ ಗಳಿಸಲ್ಪಡುತ್ತಿದೆ. ಇದರಲ್ಲಿ 15.5 ಬಿಲಿಯನ್‌ಷ್ಟು ಹಣ ಮುಂದುವರೆದ ರಾಷ್ಟ್ರಗಳಾದ್ದಾದರೆ, 9.7 ಬಿಲಿಯನ್‌ಷ್ಟು ಹಣ ಏಷ್ಯಾ ರಾಷ್ಟ್ರದ್ದಾಗಿದೆ. 7.3 ಬಿಲಿಯನಷ್ಟು ಹಣ ಹಿಂದುಳಿದ ದೇಶದ್ದಾಗಿದೆ ಎಂಬುದಾಗಿ ILO, A global alliance against forced labour-2005 ವರದಿಯೂ ತಿಳಿಸಿದೆ.

2013 ರಲ್ಲಿ ಜಗತ್ತಿನಾದ್ಯಂತ 20.9 ಮಿಲಿಯನ್ ಜನ ಮಾನವ ಸಾಗಾಣಿಕೆಗೆ ಒಳಗಾಗಿದ್ದಾರೆ. ಜಾಗತಿಕ ವರದಿಯ ಪ್ರಕಾರ ಒಬ್ಬ ಮದ್ಯವರ್ತಿಯೂ ಒಂದು ಮಾರಾಟಕ್ಕೆ ಒಳಗಾದ ಮಹಿಳೆಯಿಂದ ವಾರ್ಷಿಕ 67.200 ಡಾಲರ್‌ಗಳಷ್ಟು ಹಣವನ್ನು ಸಂಪಾದಿಸುತ್ತಾನೆ. ರೋಮಾನಿಯ ಎಂಬ ದೇಶದಲ್ಲಿ 2013ರಲ್ಲಿ 900 ಮಂದಿ ಮಾನವ ಸಾಗಾಣಿಕೆಗೆ ಒಳಗಾಗಿದ್ದರೆ, ಅದರಲ್ಲಿ 557 ಮಂದಿ ಕಾನೂನಿನ ಅಡಿಯಲ್ಲಿ ಗುರುತಿಸಲ್ಪಟ್ಟು ರಕ್ಷಣೆಗೊಂಡು ಪನರ್ವಸತಿ ಹೊಂದಿದ್ದರೆ,

228 ಮಹಿಳೆಯರು ಅಪ್ರಾಪ್ತ ವಯೋಮಾನದವರಾಗಿರುತ್ತಾರೆ.

ಭಾರತದಲ್ಲಿ ಮಾನವ ಸಾಗಾಣಿಕೆ: ಭಾರತ ಗ್ರಾಮಗಳಿಂದ ಕೂಡಿದ ರಾಷ್ಟ್ರ, ಗ್ರಾಮಗಳ ಅಭಿವೃದ್ಧಿಯೇ ರಾಷ್ಟ್ರದ ಅಭಿವೃದ್ಧಿ ಎಂಬ ಮಹಾತ್ಮ ಗಾಂಧೀಜಿಯವರ ಅಭಿಪ್ರಾಯವೂ ಎಷ್ಟು ಸತ್ಯವೋ ಅಷ್ಟೇ ಸತ್ಯವಾದ ಮತ್ತೊಂದು ವಿಚಾರವೆಂದರೆ, ಗ್ರಾಮೀಣ ಸಮಸ್ಯೆಗಳು ರಾಷ್ಟ್ರೀಯ ಅಭಿವೃದ್ಧಿಗೆ ಮಾರಕವಾಗಿರುತ್ತವೆ ಎಂಬುದು! ಅತ್ಯಧಿಕ ಜನ ಸಂಪತ್ತು ಇದ್ದರೂ ಅವರಲ್ಲಿನ ಶಿಕ್ಷಣ, ಸಾಮಾಜಿಕ ಜ್ಞಾನ, ಸಮರ್ಥತೆ, ನೈತಿಕತೆಯ ಕೊರತೆ ಹಾಗು ರಾಷ್ಟ್ರ ಪ್ರೇಮದ ಕೊರತೆಯಿಂದಾಗಿ ಇಂದು ಅದೆಷ್ಟೋ ಸಾಮಾಜಿಕ ಸಮಸ್ಯೆಗಳು ಭಾರತವನ್ನ ಕಿತ್ತುತಿನ್ನುವುದರ ಜೊತೆಗೆ ಜಾಗತಿಕ ಮಟ್ಟದಲ್ಲಿ ತಲೆತಗ್ಗಿಸುವಂತೆ ಮಾಡಿವೆ. ಅವುಗಳಲ್ಲಿ ಇಂದು ಇಡೀ ದೇಶಕ್ಕೆ ಸವಾಲಾಗಿ ನಿಂತಿರುವ ಮಾನವ ಸಾಗಾಣಿಕೆ ಕೂಡ ಒಂದಾಗಿದೆ.

ಭಾರತದಲ್ಲಿ ಹರಿಯಾಣ, ಪಂಜಾಬ್ ಹಾಗೂ ರಾಜಾಸ್ಥಾನಗಳು ಪ್ರಮುಖವಾಗಿ ಅತಿಹೆಚ್ಚು ಮಾನವ ಸಾಗಾಣಿಕೆ ನಡೆಯುವ ರಾಜ್ಯಗಳಾಗಿವೆ. ಸಮೀಕ್ಷೆಯ ಪ್ರಕಾರ ಶೇ.23ರಷ್ಟು ಜನ ಪಶ್ಚಿಮ ಬಂಗಾಳದಿಂದ, ಶೇ.17ರಷ್ಟು ಬಿಹಾರದಿಂದ, ಶೇ.13ರಷ್ಟು ಅಸ್ಸಾಂನಿಂದ, ಶೇ11ರಷ್ಟು ಆಂಧ್ರಪ್ರದೇಶದಿಂದ, ಶೇ.8ರಷ್ಟು ಒರಿಸ್ಸಾದಿಂದ, ಶೇ.6ರಷ್ಟು ಕೇರಳದಿಂದ ಮಾನವ ಸಾಗಾಣಿಕೆಗೆ ಒಳಗಾಗುತ್ತಿದ್ದಾರೆ.

ರಾಷ್ಟ್ರೀಯ ಸಮೀಕ್ಷೆಯ ಪ್ರಕಾರ ಶೇ.100ರಲ್ಲಿ ಶೇ.44ರಷ್ಟು ಜನ ಮಾನವ ಸಾಗಾಣಿಕೆಯಿಂದ ಹೊರಬಂದರೆ, ಶೇ.56ರಷ್ಟು ಮಂದಿ ಎರಡನೇ ಮಾರಾಟಕ್ಕೆ ಒಳಪಡುತ್ತಾರೆ. ಶೇ.21ರಷ್ಟು ಮಂದಿ ಮೂರನೇ ಬಾರಿ ಮಾರಾಟಕ್ಕೆ ಒಳಪಡುತ್ತಾರೆ. ಶೇ.6ರಷ್ಟು ಮಂದಿ ನಾಲ್ಕು ಅಥವಾ ಅಧಿಕ ಬಾರಿ ಮಾರಾಟಕ್ಕೆ ಒಳಗಾಗುತ್ತಾರೆ. ಅದೇನೆ ಇರಲಿ ಮೇಲ್ಕಂಡ ಎಲ್ಲಾ ಅಂಕಿ-ಅಂಶಗಳೂ, ಕಾನೂನುಗಳು ಅದೇನೇ ಹೇಳಿದರೂ ಮಾನವೀಯತೆ ಇರುವ ಜನ ಸಮುದಾಯ ಎಚ್ಚೆತ್ತುಕೊಂಡರೆ ಮಾತ್ರ ಇಂತಹ ಒಂದು ಅಮಾನವೀಯ ಕೃತ್ಯವನ್ನು ತಡೆದು ಮಾನವ ಸಾಗಾಣಿಕೆಯನ್ನು ನಿರ್ಮೂಲನೆ ಮಾಡಬಹುದು. ಅದರ ಹೊರತಾಗಿ ಸಾಗಾಣಿಕೆಯ ಜಾಲ ಪ್ರತಿಯೊಬ್ಬನನ್ನು ಕಿತ್ತುತಿನ್ನುವ ವಿಚಾರವಾಗಿ ಇಡೀ ಭಾರತದ ಅಭಿವೃದ್ಧಿಯ ಮೇಲೆ ತನ್ನ ಕೆಟ್ಟ ಪ್ರಭಾವವನ್ನು ಬೀರುವುದರಲ್ಲಿ ಯಾವುದೇ ಸಂಶಯವಿಲ್ಲ.

ಕರ್ನಾಟಕದಲ್ಲಿ ಮಾನವ ಸಾಗಾಣಿಕೆ- ಮಾಧ್ಯಮಗಳ ಪಾತ್ರ : ಕರ್ನಾಟಕದಲ್ಲಿ ಮಾನವ ಸಾಗಾಣಿಕೆಯೂ ಪ್ರಾರಂಭದಲ್ಲಿ ಕಡಿಮೆ ಪ್ರಮಾಣದಲ್ಲಿದ್ದು ಇದೀಗ ಅಧಿಕವಾಗುತ್ತಿದೆ. ಅಷ್ಟೇ ಅಲ್ಲದೇ ಭಾರತ ದೇಶದಲ್ಲಿ ಅತಿಹೆಚ್ಚು ಮಾನವ ಸಾಗಾಣಿಕೆ ನಡೆಯುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವೂ ಮೂರನೇ ಸ್ಥಾನದಲ್ಲಿದೆ. ವರ್ಷದಿಂದ ವರ್ಷಕ್ಕೆ ಮಾನವ ಸಾಗಾಣಿಕೆ ಪ್ರಮಾಣ ಏರಿಕೆಯಾಗುತ್ತಿದ್ದು, ಸರ್ಕಾರದ ಅಂಕಿ-ಅಂಶಗಳ ಪ್ರಕಾರ ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ 3 ಸಾವಿರಕ್ಕೂ ಹೆಚ್ಚು ಮಾನವ ಸಾಗಾಣಿಕೆ ಪ್ರಕರಣಗಳು ವರದಿಯಾಗಿವೆ.

ಸರ್ಕಾರೇತರ ಸಂಸ್ಥೆಗಳು ಮಾನವ ಸಾಗಾಣಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಅಲ್ಲದೇ ಕರ್ನಾಟಕದಲ್ಲಿ ಮಾನವ ಸಾಗಾಣಿಕಾ ನಿಗ್ರಹ ದಳವನ್ನ ರಚಿಸಲಾಗಿದ್ದು, ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಹಲವಾರು ಅರಿವಿನ ಕಾರ್ಯಕ್ರಮಗಳನ್ನು ಜನರಿಗೆ ನೀಡುತ್ತಿವೆ. ಕರ್ನಾಟಕದಲ್ಲಿ ಮಾನವ ಸಾಗಾಣಿಕೆಗೆ ಒಳಗಾದವರಿಗಿಂತ ಮಧ್ಯವರ್ತಿಗಳು ಹೆಚ್ಚು ಲಾಭಕೋರರಾಗಿರುತ್ತಾರೆ. ಕರ್ನಾಟಕದಲ್ಲಿ ಮಾನವ ಸಾಗಾಣಿಕೆಯನ್ನ ಹತ್ತಿಕ್ಕುವ ದೃಷ್ಟಿಯಿಂದ ಹಲವಾರು ಯೋಜನೆಗಳು ಅನುಷ್ಠಾನಕ್ಕೆ ಬಂದಿವೆ. ಅವುಗಳಲ್ಲಿ ಪ್ರಮುಖವಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಬಾಲ ನ್ಯಾಯಮಂಡಳಿಗಳು, ಸಲಹ ಸಮಿತಿಗಳು, ಕಾನೂನು ಸಹಕಾರ ಪತ್ರಿಕೆಗಳು, ಸ್ವಯಂಸೇವಾ ಸಂಸ್ಥೆಗಳು, ವಿಶೇಷ ತನಿಖಾ ದಳಗಳು ರಚನೆಯಾಗಿವೆ.

ಮಾಧ್ಯಮಗಳು ವ್ಯವಸ್ಥೆಯ ಕನ್ನಡಿಯಿದ್ದಂತೆ. ಹೀಗಾಗಿಯೇ ಮಾಧ್ಯಮಗಳನ್ನ ಸಂವಿಧಾನದ 4ನೇ ಅಂಗವೆಂದು ಬಣ್ಣಿಸಲಾಗಿದೆ. ಮಾನವ ಸಾಗಾಣಿಕೆಯಲ್ಲಿ ಮಾಧ್ಯಮಗಳ ಪಾತ್ರ ಅದರಲ್ಲೂ ಕರ್ನಾಟಕದ ಮಾಧ್ಯಮಗಳ ಪಾತ್ರ ಮುಖ್ಯವಾದುದು. ಮಾಧ್ಯಮಗಳು ತಮ್ಮ TRP ಮಾನದಂಡವನ್ನಾಗಿ ಇಟ್ಟುಕೊಂಡು ಕೆಲಸ ಮಾಡುತ್ತಿವೆಯೇ ವಿನಃ, ಗುಣಾತ್ಮಕವಾಗಿ ಎಲ್ಲಿಯೂ ತಮ್ಮ ಪಾತ್ರವನ್ನಾಗಲಿ, ಪರಿಣಾಮವನ್ನಾಗಲಿ ಬೀರುತ್ತಿಲ್ಲ ಎಂಬುದು ವಿಷಾದಕರವಾದ ಸಂಗತಿಯಾಗಿದೆ. ಕರ್ನಾಟಕ ಜನತೆ ಮಾಧ್ಯಮಗಳಿಗೆ ಅದರಲ್ಲೂ ದೃಶ್ಯ ಮಾಧ್ಯಮಗಳಿಗೆ ಮನ್ನಣೆ ನೀಡುತ್ತಿದ್ದಾರೆ.

ಇಂದಿನ ಯುವಕ-ಯುವತಿಯರು ಬಹುಬೇಗ ಆಕರ್ಷಿತರಾಗಿ ಸಿನಿಮಾಗಳಿಗೆ, ಜಾಹೀರಾತುಗಳಿಗೆ, ಮಾಡೆಲಿಂಗ್‌ಗಳಿಗೆ ಸೇರಬೇಕೆಂಬ ಕನಸನ್ನ ಹೊತ್ತಿಕೊಂಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಪ್ರಸಾರವಾಗುವ ಜಾಹೀರಾತುಗಳು ಇವರನ್ನು ಬಹುಬೇಗ ಆಕರ್ಷಿಸಿ ಪಟ್ಟಣದೆಡೆಗೆ ಅದರಲ್ಲೂ ಸಮಸ್ಯಗಳೆಡೆಗೆ ಬಹುಬೇಗ ನೂಕುತ್ತವೆ. ಹೀಗೆ ಕರ್ನಾಟಕದಲ್ಲಿ ಮಾಧ್ಯಮಗಳು ಮಾನವ ಸಾಗಾಣಿಕೆಯಲ್ಲಿ ಅತಿ ಹೆಚ್ಚು ಪಾತ್ರವನ್ನು ವಹಿಸುತ್ತಿದ್ದು, ಅದರಲ್ಲೂ ಇಂತಹ ಋಣಾತ್ಮಕ ಪಾತ್ರದಿಂದಾಗಿ ಮಾನವ ಸಾಗಾಣಿಕೆ ದಿನೇ ದಿನೇ ಏರಿಕೆಯಾಗುತ್ತಿದೆ.

ಕರ್ನಾಟಕವು ಭಾರತದಲ್ಲಿ ಮಾನವ ಸಾಗಾಣಿಕೆಯಲ್ಲಿ ಮೂರನೇ ಸ್ಥಾನವನ್ನು ಪಡೆದಿರುವುದು ವಿಷಾದಕರ ಸಂಗತಿಯಾದರು, ಮಾನವ ಸಾಗಾಣಿಕೆಯನ್ನ ಕಡಿಮೆ ಮಾಡಲು ಮಾಧ್ಯಮಗಳು ಮಾಡುತ್ತಿರುವ ಪ್ರಯತ್ನಗಳು ಮಾತ್ರ ಮೆಚ್ಚುವಂತದಾಗಿದೇ. ವೃತ್ತಿಗಳಿಗಾಗಿ, ಬಣ್ಣಬಣ್ಣದ ಕನಸುಗಳಿಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಾಣಿಕೆಗೆ ಒಳಪಡುವ ಜನರು ಎಂತದೆಲ್ಲ ಸಮಸ್ಯೆಗಳನ್ನ ಎದುರಿಸಬಹುದು ಎಂಬುದನ್ನ ಪ್ರತ್ಯಕ್ಷವಾಗಿ, ಘಟನೆಗಳ ಆಧಾರಿತವಾಗಿ ಆಗಿಂದಾಗೇ ಜನರಿಗೆ ಮುಟ್ಟಿಸುವ ಪ್ರಯತ್ನವನ್ನ ಮಾಧ್ಯಮಗಳು ಬಹಳ ಪ್ರಾಮಾಣಿಕವಾಗಿ ಮಾಡುತ್ತಿವೆ. ಇದರಿಂದಾಗಿಯೇ ಇಂದು ಕುಟುಂಬಗಳು ತಮ್ಮ ಮಕ್ಕಳನ್ನ ಸುಶಿಕ್ಷಿತರನ್ನಾಗಿಮಾಡಲು ಹಾತೊರೆಯುತ್ತಿವೆ. ಅಲ್ಲದೇ ಯಾವುದೇ ಪೂರ್ವ ಜ್ಞಾನ, ಮಾರ್ಗದರ್ಶನವಿಲ್ಲದೇ ಅಪರಿಚಿತ ವ್ಯಕ್ತಿಗಳೊಡನೆ ಅಥವಾ ಅಪರಿಚಿತ ಸ್ಥಳಗಳಿಗೆ ತಾವಾಗಲೀ, ತಮ್ಮ ಮಕ್ಕಳಾಗಲೀ ಹೋಗಬಾರದೆಂಬ ಜ್ಞಾನವನ್ನ ವೃದ್ಧಿಸಿಕೊಂಡಿದ್ದಾರೆ. ಈ ನಿಟ್ಟನಲ್ಲಿ ಮಾಧ್ಯಮಗಳ ಪಾತ್ರ ಕರ್ನಾಟಕ ರಾಜ್ಯದಲ್ಲಿ ಸಕ್ರಿಯವಾದುದೆಂದು ಹೇಳಬಹುದಾಗಿದೆ.

ಹೀಗಾಗಿ ಮಾಧ್ಯಮಗಳಲ್ಲಿ ಪ್ರಸಾರವಾಗುವ ನೈಜ ಸುದ್ದಿಗಳು ಜನಮಾನಸವನ್ನ ಬದಲಾಯಿಸದೇ ಇರುವುದಿಲ್ಲ. ಯಾವುದೇ ಸರ್ಕಾರವಾಗಲೀ, ಸಂಘ ಸಂಸ್ಥೆಗಳಾಗಲಿ ಮಾನವ ಸಾಗಾಣಿಕೆಯನ್ನ ತಡೆಗಟ್ಟುವ ನಿಟ್ಟಿನಲ್ಲಿ ಅರಿವಿನ ಕಾರ್ಯಕ್ರಮಗಳನ್ನ ಮಾಡಬೇಕೆಂದರೇ ಅದು ಪರಿಣಾಮಕಾರಿಯಾದ ಮಾಧ್ಯಮಗಳಿಂದ ಮಾತ್ರ

ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಮಾನವ ಸಾಗಾಣಿಕೆಯಲ್ಲಿ ಮಾಧ್ಯಮಗಳು ಅತ್ಯಂತ ಪ್ರಭಾವಕಾರಿಕಯೆಂದು ಅರಿಯಬಹುದಾಗಿದೆ.

ಸಾಹಿತ್ಯ ಪರಾಮರ್ಶೆ

- ವ್ಯಕ್ತಿಗತ ಮಾನವ ಸಾಗಾಣಿಕೆ ಕುರಿತು ಸಂಯುಕ್ತ ಸಂಸ್ಥಾನಗಳ (U.S) ಸಭೆಯ ನಡವಳಿಗಳು(1949) ಅಂತರಾಷ್ಟ್ರೀಯ ಸಂಘಟಿತ ಅಪರಾಧಗಳ ಮೇಲಿನ ಸಂಯುಕ್ತ ಸಂಸ್ಥಾನಗಳ ಸಭೆ (2000).
- 2012ರಲ್ಲಿ ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ [ILO]ಯೂ ಮಾನವ ಸಾಗಾಣಿಕೆಯಿಂದ ಬಲವಂತದ ಜೀತಕ್ಕೆ ಬಲಿಯಾದವರ ಬಗ್ಗೆ ಸಮೀಕ್ಷೆಯೊಂದನ್ನು ಕೈಗೊಂಡಿತು. ದಕ್ಷಿಣಾ ಏಷ್ಯಾದಲ್ಲಿ ಮಾನವ ಸಾಗಾಣಿಕೆಗೆ ಒಳಗಾದವರಿಗೆ ಹಲವಾರು ಅಂತರಾಷ್ಟ್ರೀಯ ಕಾನೂನುಗಳು ನೆರವನ್ನು ನೀಡುತ್ತಿವೆ.
- NIJ [National Institute of Justice] ತನ್ನ ಅಧ್ಯಯನದಲ್ಲಿ, ಮಾನವ ಸಾಗಾಣಿಕೆಯಲ್ಲಿ ಪ್ರಾಥಾಮಿಕವಾಗಿ ಶಿಕ್ಷಣದ ಪ್ರಭಾವ ಎಂಬ ವಿಚಾರವಾಗಿ ಅಧ್ಯಯನ ನಡೆಸಿದೆ.
- ಭಾರತ ಸರ್ಕಾರವೂ ಮಾನವ ಸಾಗಾಣಿಕೆಯ ವಿರುದ್ಧ ITPA [Immoral Trafficking Prevention Act] ಯನ್ನು ಮಾನವ ಸಾಗಾಣಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಾರಿಗೆ ತಂದಿದ್ದು ಇದರ ಅನ್ವಯ ಮಾನವ ಸಾಗಾಣಿಕೆಗೆ ಕಾರಣರಾದವರಿಗೆ 7 ವರ್ಷ ಜೈಲುಶಿಕ್ಷೆ ಹಾಗೂ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ, ಬಾಲಕಾರ್ಮಿಕ ನಿರ್ಮೂಲನೆ ಕಾಯ್ದೆ, ಬಾಲನ್ಯಾಯ [Jevenal Justice] ಕಾಯ್ದೆ, POCSO[Protection Of Children From Sexual Offences] ಕಾಯ್ದೆಗಳಂತಹ ಬಲಿಷ್ಟ ಕಾನೂನುಗಳ ನಿರ್ಮಿಸಿ ಮಾನವ ಸಾಗಾಣಿಕೆಯನ್ನ ತಡೆಗಟ್ಟಲು ಪ್ರಯತ್ನಿಸುತ್ತಿದೆ.
- ಭಾರತದಲ್ಲಿ NOT FOR SALE ಎಂಬ ಸಂಸ್ಥೆಯೂ ಮಾನವ ಸಾಗಾಣಿಕೆಗೆ ಒಳಗಾದವರಿಗಾಗಿ ಕಾರ್ಯನಿರ್ವಹಿಸಿತ್ತಿದ್ದು ಈ ಸಂಸ್ಥೆಯೂ ಸಾಗಾಣಿಕೆಗೆ ಒಳಗಾದ ಮಹಿಳೆಯರ ಪರವಾಗಿ ಇತ್ತೀಚೆಗೆ ಅಧ್ಯಯನವನ್ನು ಕೈಗೊಂಡಿದೆ.
- ಭಾರತದ ಬೇಲರ್ [BAYLOR] ವಿಶ್ವವಿದ್ಯಾನಿಲಯವೂ ಮಾನವ ಸಾಗಾಣಿಕೆ ವಿಚಾರವನ್ನು ತನ್ನ ಪಠ್ಯ ಕ್ರಮದಲ್ಲಿ ಅಳವಡಿಸಿಕೊಂಡಿದೆ. ಈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದಲ್ಲಿ ಮಾನವ ಸಾಗಾಣಿಕೆ ಬಗೆಗಿನ ಪೂರ್ಣ ಮಾಹಿತಿಗಳೊಟ್ಟಿಗೆ ಕಾನೂನುಗಳು, ಸವಾಲುಗಳು ಅದರಿಂದಾಗುವ ಪರಿಣಾಮಗಳ ಬಗ್ಗೆಯೂ ಅರಿಯಲೇ ಬೇಕಾಗಿರುತ್ತದೆ.
- ಭಾರತದ ಅತ್ಯಂತ ಪ್ರಸಿದ್ಧ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ IGNOU [Indiragandhi National Open University] ವಿಶ್ವವಿದ್ಯಾನಿಲಯವೂ CAHT [Certificate in Anti Human Trafficking] ಎಂಬ ಅಧ್ಯಯನ ವಿಷಯವನ್ನು ಹೊಂದಿರುತ್ತದೆ.
- 2003ರಲ್ಲಿ ಅಮೇರಿಕಾ ಸರ್ಕಾರವು ತನ್ನ ವಾರ್ಷಿಕ ವರದಿ [Trafficking in persons] ಎಂಬುದರಲ್ಲಿ ಕರ್ನಾಟಕವೂ ಮಾನವ ಸಾಗಾಣಿಕೆಯ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಒಂದಾಗಿದೆ.

ಅಧ್ಯಯನದ ಉದ್ದೇಶಗಳು:

- ಮಾನವ ಸಾಗಾಣಿಕೆ ತಡೆಗಟ್ಟುವಲ್ಲಿ ಮಾಧ್ಯಮಗಳ ಪಾತ್ರವನ್ನು ಅರಿಯುವುದು.
- ಮಾನವ ಸಾಗಾಣಿಕೆ ನಿಯಂತ್ರಿಸುವಲ್ಲಿ ಮಾಧ್ಯಮದ ಕಾರ್ಯಕ್ರಮಗಳನ್ನು ಚಿತ್ರಿಸುವುದು.
- ಮಾನವ ಸಾಗಾಣಿಕೆ ನಿಯಂತ್ರಿಸುವಲ್ಲಿ ಸ್ವಯಂ ಸೇವಾ ಸಂಸ್ಥೆಯವರ ಪಾತ್ರ ಗುರುತಿಸುವುದು.
- ಮಾನವ ಸಾಗಾಣಿಕೆಗೆ ನಿಯಂತ್ರಿಸುವಲ್ಲಿ ಸರ್ಕಾರದ ಯೋಜನೆಗಳನ್ನು ಪ್ರಚಾರ ಪಡಿಸಲು ಮಾಧ್ಯಮಗಳ ಪಾತ್ರ.
- ಮಾನವ ಸಾಗಾಣಿಕೆಗೆ ಒಳಗಾದವರ ಕ್ರೇಯೋಭಿವೃದ್ಧಿಗೆ ಮಾಧ್ಯಮಗಳ ಒಡನಾಟ.

ಅಧ್ಯಯನದ ಮಹತ್ವ: ಮಾನವ ಸಾಗಾಣಿಕೆ ತಡೆಗಟ್ಟುವಲ್ಲಿ ಮಾಧ್ಯಮಗಳ ಪಾತ್ರ ಏನೆಂಬುದರ ಬಗ್ಗೆ ಅಧ್ಯಯನ ಕೈಗೊಳ್ಳುವಾಗ ಮಾಧ್ಯಮ ಸಂಶೋಧನೆ ಮಾಡುವುದು ಬಹುಮುಖ್ಯವಾದ ಅಂಶವಾಗಿದೆ. ಮಾಧ್ಯಮಗಳ ಬೆಂಬಲವಿಲ್ಲದೆ ಯಾವುದೇ ಒಂದು ಸಮಸ್ಯೆಯನ್ನ ಹತ್ತಿಕ್ಕಲು ಸಾಧ್ಯವಿಲ್ಲ. ಮಾಧ್ಯಮಗಳು ಯಾವುದೇ ಹೋರಾಟದ ವಿರುದ್ಧದ ಪ್ರಬಲ ಅಸ್ತ್ರಗಳಾಗಿರುತ್ತವೆ. ಅಂತೆಯೇ ಮಾನವ ಸಾಗಾಣಿಕೆಯ ವಿರುದ್ಧದ ಹೋರಾಟದಲ್ಲಿಯೂ ಮಾಧ್ಯಮಗಳು ಬಹುಮುಖ್ಯ ಹಾಗೂ ಪರಿಣಾಮಕಾರಿಯಾದ ಅಂಶಗಳಾಗಿವೆ. ಮಾಧ್ಯಮ ಸಂಶೋಧನೆ ಕೈಗೊಂಡಾಗ ಅವುಗಳ ಮಹತ್ವ ಅರಿವಾಗುತ್ತಾದೆ.

ಅಧ್ಯಯನ ಕಾರ್ಯವಿಧಾನ: ಪ್ರಸ್ತುತ ಅಧ್ಯಯನವನ್ನು ಪ್ರಧಾನವಾಗಿ ಐತಿಹಾಸಿಕ ವಿಧಾನ ಹಾಗೂ ಸಮೀಕ್ಷಾ ವಿಧಾನ ಹಾಗೂ ಸಂದರ್ಶನ ವಿಧಾನಗಳನ್ನು ಅಳವಡಿಸಿಕೊಂಡು ಪೂರ್ಣ ಗೊಳಿಸಲಾಯಿತು. ಅಧ್ಯಯನದಲ್ಲಿ ಮೈಸೂರು ಜಿಲ್ಲೆಯ ಆಯ್ದ ಸರ್ಕಾರ ಹಾಗೂ ಸರ್ಕಾರೇತರ ಮೂರು ಪುನರ್ವಸತಿ ಕೇಂದ್ರಗಳಿಗೆ ಬೇಟಿ ನೀಡಿ ಅಲ್ಲಿ ಆಶ್ರಯ ಪಡೆದಿದ್ದ ಮಾನವ ಸಾಗಾಣಿಕೆಗೆ ಒಳಗಾದ ಸುಮಾರು 120 ಮಂದಿ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಂಡು ಅವರಿಂದ ಸಿದ್ಧಪಡಿಸಿದ ಪ್ರಶ್ನಾವಳಿಗೆ ಅನುಸಾರವಾಗಿ ಸಮೀಕ್ಷೆ ಹಾಗೂ ನೇರ ಸಂದರ್ಶನವನ್ನು ಮಾಡಲಾಯಿತು, ಅಷ್ಟೇ ಅಲ್ಲದೇ ಈ ಸಂದರ್ಭದಲ್ಲಿ ಸಂದರ್ಶನ ವಿಧಾನಗಳನ್ನು ಅನುಸರಿಸಿ ಪ್ರಾಥಾಮಿಕ ಮಾಹಿತಿಯನ್ನು ಸಂಗ್ರಹಿಸಲಾಯಿತು.

ಪ್ರಸ್ತುತ ಅಧ್ಯಯನದ ಸ್ವತಂತ್ರ ಪರಿವರ್ತ್ಯಗಳಲ್ಲಿ ಹೆಸರು, ವಯಸ್ಸು, ಶೈಕ್ಷಣಿಕ ಮಟ್ಟ, ವೈವಾಹಿಕ ಸ್ಥಿತಿ, ಮೊದಲಾದವುಗಳು ಪ್ರಧಾನವಾಗಿದೆ. ಇಲ್ಲಿ ಯಾವುದೇ ಇತಿಹಾಸವಾಗಲೀ, ಘಟನೆಗಳಾಗಲೀ ಪ್ರಭಾವ ಬೀರುವುದಿಲ್ಲ ಬದಲಾಗಿ ಫಲಾನುಭವಿಗಳೇ ನೇರವಾಗಿ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಹಂಚಿಕೊಂಡಿರುವುದರಿಂದ ಇದು ವಾಸ್ತವಗಳನ್ನು ಪ್ರತಿನಿಧಿಸುವ ಹಾಗೂ ಸತ್ಯಕ್ಕೆ ಹತ್ತಿರವಾದ ವಿಷಯದ ನಿರೂಪಣೆಯಾಗಿರುತ್ತದೆ.

ಅಧ್ಯಯನದ ಕಾರ್ಯಕ್ಷೇತ್ರ : ಪ್ರಸ್ತುತ ಈ ಸಂಶೋಧನೆಯು ಮೈಸೂರು ಜಿಲ್ಲೆಯ ಆಯ್ದ ಸರ್ಕಾರ ಹಾಗೂ ಸರ್ಕಾರೇತರ ಮೂರು ಪುನರ್ವಸತಿ ಕೇಂದ್ರಗಳಿಗೆ ಬೇಟಿ ನೀಡಿ ಅಲ್ಲಿ ಆಶ್ರಯ ಪಡೆದಿದ್ದ ಮಾನವ ಸಾಗಾಣಿಕೆಗೆ ಒಳಗಾದ ಸುಮಾರು 120 ಮಂದಿ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಂಡು, ಪಡೆದ ಮಾಹಿತಿಯನ್ನು ಕೋಷ್ಟಕದಲ್ಲಿ ವಿಭಾಗೀಕರಿಸಿ ದತ್ತಾಂಶವನ್ನು ವಿಶ್ಲೇಷಣೆಯನ್ನು ಮಾಡಲಾಗಿದೆ. ಈ ಅಧ್ಯಯನವು ಸಾಮಾಜಿಕ ಅಧ್ಯಯನ ವಿಭಾಗಕ್ಕೆ ಸೇರಿರುವುದರಿಂದ ಸಮೀಕ್ಷಾ ವಿಧಾನವನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಅಧ್ಯಯನದ ಫಲಿತಾಂಶಗಳು

- ಮಾನವ ಸಾಗಾಣಿಕೆ ಒಳಗಾದ ಸಂವಾದಿಗಳು ಹೇಗೆ ಸಾಗಾಣಿಕೆಗೆ ಒಳಗಾದರು ಎಂಬುದನ್ನು ಪ್ರತಿಕ್ರಿಯಿಸಿರುವ ಫಲಾನುಭವಿಗಳು ಶೇ.46 ಮಧ್ಯವರ್ತಿಗಳಿಂದ, ಶೇ.30 ಸಂಬಂಧಿಕರಿಂದಲೂ, ಶೇ.08 ಪೋಷಕರಿಂದಲೂ, ಶೇ.10 ರಷ್ಟು ಮಾಧ್ಯಮಗಳ ಪ್ರಭಾವದಿಂದಲೂ, ಶೇ.06 ಸ್ವ-ಇಚ್ಛೆಯಿಂದಲೂ ಒಳಗಾಗಿರುತ್ತಾರೆ ಎಂಬುದು ತಿಳಿದು ಬರುತ್ತದೆ.
- ಶೇಕಡ 76ರಷ್ಟು ಸಂವಾದಿಗಳು ಸಾಗಾಣಿಕೆಗೆ ಒಳಗಾದ ತಮ್ಮ ಸಮಸ್ಯೆಯ ವಿಚಾರವಾಗಿ ಮಾಧ್ಯಮಗಳ ಜೊತೆ ಮುಕ್ತವಾಗಿ ಮಾತನಾಡಲು ಇಚ್ಛಿಸುವುದಿಲ್ಲ ಎಂದು ತಿಳಿಸಿದ್ದಾರೆ.
- ಶೇಕಡ 70ರಷ್ಟು ಸಂವಾದಿಗಳು ಮಾಧ್ಯಮಗಳು ಮಾನವ ಸಾಗಾಣಿಕೆ ನಿಯಂತ್ರಿಸುವಲ್ಲಿ ಪೂರಕವಾಗಿಲ್ಲ ಎಂದು ತಿಳಿಸಿದ್ದಾರೆ.
- ಶೇಕಡ 65ರಷ್ಟು ಸಂವಾದಿಗಳು ಮಾಧ್ಯಮಗಳಲ್ಲಿ ಮಾನವ ಸಾಗಾಣಿಕೆಯ ವಿಚಾರಗಳನ್ನು ಪ್ರಸ್ಥಾಪ ಮಾಡುತ್ತಿಲ್ಲ ಎಂದು ತಿಳಿಸಿದ್ದಾರೆ.
- ಶೇಕಡ 92ರಷ್ಟು ಸಂವಾದಿಗಳು ಮಾನವ ಸಾಗಾಣಿಕೆಗೆ ಸಂಬಂಧಪಟ್ಟಂತೆ ಸಂವಿಧಾನದಲ್ಲಿ ಉಲ್ಲೇಖಿಸಿರುವ ಕಾಲಂಗಳ ಬಗ್ಗೆ ಮಾಧ್ಯಮಗಳು ವರದಿ ನೀಡುತ್ತಿಲ್ಲ ಎಂದು ತಿಳಿಸಿದ್ದಾರೆ.
- ಶೇಕಡ 84ರಷ್ಟು ಸಂವಾದಿಗಳು ಮಾನವ ಸಾಗಾಣಿಕೆಯಿಂದ ಮುಕ್ತಿ ಹೊಂದಿದ ನಂತರ ಸರ್ಕಾರದ ಸವಲತ್ತು ಮತ್ತು ಯೋಜನೆಯ ಬಗ್ಗೆ ಮಾಧ್ಯಮಗಳು ಮಾಹಿತಿ ನೀಡುತ್ತಿಲ್ಲ ಎಂದು ತಿಳಿಸಿದ್ದಾರೆ.
- ಶೇಕಡ 92ರಷ್ಟು ಸಂವಾದಿಗಳು ಮಾನವ ಸಾಗಾಣಿಕೆ ವಿರುದ್ಧ ಹೋರಾಟ ನಡೆಸುವುದಾದರೆ ತಾವು ಪಾಲ್ಗೊಳ್ಳಲು ಒಪ್ಪಿಗೆ ಸೂಚಿಸಿದ್ದಾರೆ.
- ಮಾನವ ಸಾಗಾಣಿಕೆಯನ್ನು ಯಾವುದರ ಮೂಲಕ ತಡೆಬಟ್ಟಬಹುದು ಎಂಬ ಪ್ರಶ್ನೆಗೆ ಶೇಕಡ 26 ರಷ್ಟು ಫಲಾನುಭವಿಗಳು ಸರ್ಕಾರದಿಂದ, ಶೇಕಡ 64ರಷ್ಟು ಸ್ವಯಂ ಸೇವಾ ಸಂಸ್ಥೆಗಳಿಂದ, ಶೇಕಡ 10ರಷ್ಟು ಮಾಧ್ಯಮಗಳಿಂದ ಪರಿಣಾಮಕಾರಿಯಾಗಿ ತಡೆಗಟ್ಟಬಹುದು ಎಂದಿದ್ದಾರೆ.
- ಶೇಕಡ 74ರಷ್ಟು ಸಂವಾದಿಗಳು ಮಾನವ ಸಾಗಾಣಿಕೆ ವಿರೋದಿ ಕಾನೂನಿನ ಬಗ್ಗೆ ಮಾಧ್ಯಮಗಳು ಅರಿವು ಮೂಡಿಸುತ್ತಿಲ್ಲ ಎಂದಿದ್ದಾರೆ.
- ಶೇಕಡ 62ರಷ್ಟು ಸಂವಾದಿಗಳು ಮಾನವ ಸಾಗಾಣಿಕೆಗಳಲ್ಲಿ ಒಳಗಾದಂತಹ ಪ್ರಕರಣಗಳನ್ನು ನೋಡಿದಾಗ ಖಿನ್ನತೆಗೆ ಒಳಗಾಗುತ್ತೇವೆ ಎಂದಿದ್ದಾರೆ.

ಮಾನವ ಸಾಗಾಣಿಕೆ ತಡೆಗಟ್ಟುವಲಿ ಮಾಧ್ಯಮಗಳ ಕುರಿತು ಶಿಫಾರಸ್ಸು:

- ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಮಾಧ್ಯಮಗಳೊಡನೆ ಉತ್ತಮ ಸಂಬಂಧ ಹೊಂದುವುದು.
- ಮಾನವ ಸಾಗಾಣಿಕೆಯ ಬಗ್ಗೆ ಪತ್ರಕರ್ತರಿಗೆ ಅರಿವಿನ ಕಾರ್ಯಗಾರ 'ಗಳನ್ನು ಆಗಿಂದಾಗ್ಗೆ ಆಯೋಜಿಸುವುದು. ಮಾನವ ಸಾಗಾಣಿಕೆಗೆ ಒಳಪಟ್ಟಂತೆ ವಿಶೇಷ ಅರಿವಿನ ಲೇಖನಗಳನ್ನು ಹಾಗೂ ಕಾರ್ಯಕ್ರಮ ಗಳನ್ನು ಬಿತ್ತರಿಸುವ ಮಾಧ್ಯಮಗಳಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಪ್ರಶಸ್ತಿಗಳನ್ನ ನೀಡಬೇಕು.
- ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಹಾಗೂ ಸಮಾಜ ಸೇವಕರು ವಿಶೇಷವೆಂದೆನಿಸುವ ಮಾನವ ಸಾಗಾಣಿಕೆಯ ಘಟನೆಗಳನ್ನು ವ್ಯಕ್ತಿ ವಿವರಗಳನ್ನು ಮಾಧ್ಯಮಗಳ ಮೂಲಕ ಪ್ರಚಾರಪಡಿಸಿ ಆ ಮೂಲಕ ಜನಸಾಮಾನ್ಯರಲ್ಲಿ ಹೆಚ್ಚು ಹೆಚ್ಚು ಅರಿವು ಮೂಡಿಸುವಂತಾಗಬೇಕು.
- ಮಾನವ ಸಾಗಾಣಿಕೆ ಕುರಿತಾದ ಸಿನಿಮಾಗಳು, ಕಿರುಚಿತ್ರಗಳು, ಸಾಕ್ಷ್ಯಚಿತ್ರಗಳು, ನಾಟಕಗಳು, ಧಾರಾವಾಹಿಗಳು, ಕಾದಂಬರಿಗಳು, ಕಥೆಗಳು, ಲೇಖನಗಳು, ಕವನಗಳು, ವರ್ಣಚಿತ್ರಗಳು ಹೆಚ್ಚು ಹೆಚ್ಚು ರಚನೆಗೊಂಡು ಜನ ಸಾಮಾನ್ಯರನ್ನ ಮುಟ್ಟುವಂತಾಗಬೇಕು.
- ಮಾನವ ಸಾಗಾಣಿಕೆಯ ವಿರುದ್ಧ ಅಸ್ಥಿತ್ವಕ್ಕೆ ಬಂದಿರುವ ಕಾಯಿದೆ, ಕಾನೂನು ಹಾಗೂ ಶಿಕ್ಷೆಯ ಪ್ರಮಾಣಗಳನ್ನ ಆಗಿಂದಾಗ್ಗೆ ಸಾರ್ವಜನಿಕವಾಗಿ ತಿಳಿಸುವ ಕಾರ್ಯಗಳು ಮಾಧ್ಯಮಗಳಿಂದಾಗಬೇಕು.
- ಮಾಧ್ಯಮಗಳು ಕೇವಲ ವಾಣಿಜ್ಯದ ದೃಷ್ಟಿಕೋನವನ್ನು ಇಟ್ಟುಕೊಳ್ಳದೇ ಅಶ್ಲೀಲ ಹಾಗೂ ಅಸಭ್ಯ ಹಾಗೂ ಮಾನವ ಸಾಗಾಣಿಕೆಯಂತಹ ಸಮಸ್ಯೆಗೆ ಪೂರಕವಾದಂತಹ ಕಾರ್ಯಕ್ರಮಗಳನ್ನು ಹಾಗೂ ಜಾಹೀರಾತುಗಳನ್ನು ಪ್ರಸಾರ ಮಾಡುವುದನ್ನ ನಿಲ್ಲಿಸಬೇಕು.
- ಮಾನವ ಸಾಗಾಣಿಕೆಯಿಂದ ಮಹಿಳೆಯರನ್ನು ಮತ್ತು ಮಕ್ಕಳನ್ನು ರಕ್ಷಣೆ ಮಾಡುವಂತಹ ಸಂದರ್ಭದಲ್ಲಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು ಮಾಧ್ಯಮಗಳನ್ನ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.
- ಮಾಧ್ಯಮಗಳಲ್ಲಿ ಅಥವಾ ವೃತ್ತಪತ್ರಿಕೆಗಳಲ್ಲಿ ಮಾನವ ಸಾಗಾಣಿಕೆಯ ಬಗ್ಗೆ ಅಂಕಣಗಳನ್ನು ಪ್ರಾರಂಭಿಸಬೇಕು. ಸಾಮಾಜಿಕ ತಾಣಗಳಾದ ಅಂತರ್ಜಾಲ, ಫೇಸ್‌ಬುಕ್, ಟ್ವಿಟರ್, ಲಿಂಕ್‌ಡನ್ ಮೊದಲಾದವುಗಳಲ್ಲಿ ಸಂದೇಶಗಳನ್ನು ರವಾನಿಸಬೇಕು.

ಹೀಗೆ ಮಾಧ್ಯಮಗಳು ಮಾನವ ಸಾಗಾಣಿಕೆಯನ್ನ ನಿಯಂತ್ರಿಸುವ ಪ್ರಬಲ ಅಸ್ತ್ರಗಳೆಂದೇ ಬಿಂಬಿತವಾಗಿರುವ ನಿಟ್ಟಿನಲ್ಲಿ ಮೇಲ್ಕಂಡ ಶಿಫಾರಸ್ಸುಗಳನ್ನು ಅಳವಡಿಸಿಕೊಂಡದ್ದೆ ಆದಲ್ಲಿ ಉತ್ತಮ ಪರಿವರ್ತನೆ ಸಾಧ್ಯವಾಗಬಹುದು.

ಉಪಸಂಹಾರ : ಮಾನವ ಸಾಗಾಣಿಕೆ ತಡೆಗಟ್ಟುವಲ್ಲಿ ಮಾಧ್ಯಮಗಳ ಪಾತ್ರ ಎಂಬ ವಿಚಾರವನ್ನ ಅಧ್ಯಯನದ ವಸ್ತುವನ್ನಾಗಿ ತೆಗೆದುಕೊಂಡಾಗ ಇದು ಬಹಳ ಸಂಕೀರ್ಣವಾದ ಹಾಗೂ ಜಟಿಲವಾದ ವಿಚಾರ ಎಂದೆನಿಸದೇ ಇರಲಿಲ್ಲ, ಏಕೆಂದರೇ ಸಾಮಾಜಿಕವಾಗಿ ಅದೆಷ್ಟೋ ಸಮಸ್ಯೆಗಳು ಪ್ರತಿನಿತ್ಯ ಹುಟ್ಟಿಕೊಳ್ಳುತ್ತಿರುವುದು ಇಂದು ಸಹಜವೆನಿಸುವ ಪ್ರಕ್ರಿಯೆಯಾಗಿದೆ. ಬಹುಶಃ ಸಮಾಜಗಳು, ಸಮುದಾಯಗಳು ಹಿಂದೆಂದೂ ಕಂಡು ಅರಿಯದ ಬೃಹತ್ ಸಮಸ್ಯೆ ಇದೆನಿಸಿತು. ಏಕೆಂದರೆ ಇತರೆ ಜೀವಿಗಳಿಗಿಂತ ಬುದ್ಧಿವಂತರೆಬೆನಿಸಿಕೊಳ್ಳುವ ಮಾನವರು ಸರಕುಗಳಂತೆ ಬಿಕರಿಯಾಗುತ್ತಿರುವುದು ನಾಚಿಕೆಗೇಡಿನ ಹಾಗೂ ಇಡೀ ಮನುಕುಲವೇ ತಲೆತಗ್ಗಿಸುವ ಸಂಗತಿಯಾಗಿದೆ. ಮಾನವ ಸಾಗಾಣಿಕೆ ತಡೆಗಟ್ಟುವಲ್ಲಿ ಮಾಧ್ಯಮಗಳ ಪಾತ್ರ ಎಂಬ ವಿಚಾರದಲ್ಲಿ ಸಂಪೂರ್ಣದ ಅಧ್ಯಯನದ ಕೊನೆಯಲ್ಲಿ ಫಲಿತಾಂಶವನ್ನು ವಿಶ್ಲೇಷಿಸುತ್ತಾ ಹೋದರೆ ಅಷ್ಟೊಂದು ಪರಿಣಾಮಕಾರಿಯೆಂದೆನಿಸುವುದಿಲ್ಲ. ನಾವು ದಾಖಲಿಸುವ ಎಲ್ಲಾ ವಿಚಾರಗಳು ಕೇವಲ ದಾಖಲೆಗಳಲ್ಲೇ ಉಳಿಯಬಾರದು, ಬದಲಾಗಿ ದಾಖಲೆಗಳು ಮಾತನಾಡುವಂತಾಗಬೇಕು ಆಗ ಮಾತ್ರ ನಿರೀಕ್ಷಿತ ಫಲಿತಾಂಶವನ್ನ ಪಡೆಯಲು ಸಾಧ್ಯವಾಗುತ್ತದೆ, ಎಷ್ಟೇ ಎಲ್ಲ ಕಾನೂನು ಅಂಶಗಳ ಬಗ್ಗೆ ತಿಳಿದುಕೊಂಡಾಗಿಯೂ ಸಹ ಅವುಗಳಿಂದ ಯಾವುದೇ ಪರಿಹಾರ ಕ್ರಮಗಳು ದೊರೆಯುತ್ತಿಲ್ಲ ಎಂಬುದು ಇಡೀ ಕಾನೂನು ಸುವ್ಯವಸ್ಥೆಯ ಬಗ್ಗೆ ಅಸಹನೆಯನ್ನ ಹುಟ್ಟಿಸುತ್ತದೆ. ಒಟ್ಟಾರೆಯಾಗಿ ಇಡೀ ಸಮಾಜದ ಮುಂದೆ ಎರಡು ದಾರಿಗಳಿವೆ. ಮೊದಲನೆಯದು ಸಮಸ್ಯೆಗಳಿಗೆ ತಕ್ಷಣದ ಪರಿಹಾರ ಕಂಡುಕೊಳ್ಳುವುದು ಹಾಗೂ ಎರಡನೆಯದು ದೂರದೃಷ್ಟಿಯೊಡನೆ ಸಮಸ್ಯೆಗಳಿಗೆ ಶಾಶ್ವತ

ಪರಿಹಾರ ಹುಡುಕುವುದು. ಈ ನಿಟ್ಟಿನಲ್ಲಿ ಈ ವರದಿಯೂ ಒಂದು ಉತ್ತಮ ಮಾಹಿತಿಯನ್ನ ಒದಗಿಸಬಲ್ಲದೆಂಬುದು ಒಂದು ಸಣ್ಣ ಆಶಯವಾಗಿದೆ.

ಪರಾಮರ್ಶನ ಗ್ರಂಥಗಳು:

- ಅಂತರ್ಜಾಲದಿಂದ ಸಂಗ್ರಹಿಸಲಾದ ಮಾಹಿತಿ.
- ಮಾನವ ಸಾಗಾಣಿಕೆಗೆ ಸಂಬಂಧಿಸಿದ ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳು.
- ಒಡನಾಡಿ ಸಂಸ್ಥೆಯ ಸಂಘಟಿಕರಿಂದ ಪಡೆದ ಮಾಹಿತಿ.
- POCOS-2012
- ಬಾಲ ನ್ಯಾಯ ಕಾಯಿದೆ ಅಧಿನಿಯಮ.
- ಕರ್ನಾಟಕ ಸರ್ಕಾರದ ಸಾಂತ್ವನ ಯೋಜನ ಕೈಪಿಡಿ.
- ಭಾರತ ಸರ್ಕಾರದ ಸ್ವಾಧಾರ್ ಯೋಜನ ಕೈಪಿಡಿ.
- ಮುಕ್ತ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಶಾಸ್ತ್ರದ ಪ್ರಥಮ ವರ್ಷದ ಅಧ್ಯಯನದ ಪುಸ್ತಕಗಳು.

ಆದಿವಾಸಿಗಳ ಶುದ್ಧೀಕರಣ ಪದ್ಧತಿಗಳ ಲೋಕದೃಷ್ಟಿ

* ಡಾ. ಎಸ್.ಎಂ. ಮುತ್ತಯ್ಯ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಬಿ.ಹೆಚ್. ರಸ್ತೆ, ಶಿವಮೊಗ್ಗ – 577203,
smmuthaiah@gmail.com

ಮಾನವ ಗುಂಪುಗಳಲ್ಲಿ ವನವಾಸಿಗಳಾದ ಬುಡಕಟ್ಟು ಸಮುದಾಯಗಳಿಗೆ ಮಡಿ–ಮೈಲಿಗೆ ಮನೋಭಾವ ಹೆಚ್ಚು. ಈ ಗುಂಪುಗಳು ಮೈಲಿಗೆ ಎಂದು ಭಾವಿಸುವ ಮುಖ್ಯ ಸಂದರ್ಭಗಳೆಂದರೆ : ತಮ್ಮ ಹಟ್ಟಿಗಳ ಅಥವಾ ಮನೆಗಳ ಒಳಗೆ ಬೇರೆ ಸಮುದಾಯಗಳ ಜನ ಪ್ರವೇಶಿಸಿದಾಗ, ಜನನ ಮತ್ತು ಮರಣದ ಸಂದರ್ಭಗಳು, ಹೆಣ್ಣು ಮಕ್ಕಳು ಮೈನೆರೆದಾಗ, ತಿಂಗಳ ಮುಟ್ಟಾದಾಗ, ಎಂಜಲ್ಲು ತಿಂದಾಗ, ಅಂತರ್ಜಾತಿಯ ವಿವಾಹ ಹಾಗೂ ಸಂಪರ್ಕಗಳು ನಡೆದಾಗ, ತಮಗೆ ನಿಷಿದ್ಧವಾದ ಆಹಾರ ಸೇವಿಸಿದಾಗ, ಚಪ್ಪಲಿ ಮತ್ತಿತರ ವಸ್ತಗಳಿಂದ ಹೊಡೆದಾಗ ಇತ್ಯಾದಿ. ಇಂಥ ಸಂದರ್ಭಗಳಲ್ಲಿ ಕುಲಗೆಟ್ಟ ವ್ಯಕ್ತಿಗಳನ್ನು ತಮ್ಮ ಹಟ್ಟಿಗಳಿಂದ ಹಾಗೂ ಇಡೀ ಸಮುದಾಯದಿಂದ ಬಹಿಷ್ಕಾರ ಹಾಕುವ ಕ್ರಮಗಳಿವೆ. ಹಾಗೆಯೇ ಈ ದೋಷಗಳಿಗೆ ಸಲುಭ ಪರಿಹಾರಗಳೂ ಇರುತ್ತವೆ. ನಾಗರೀಕ ಸಮುದಾಯಗಳಂತೆ ಅತ್ಯಂತ ಕಠಿಣವಾದ ಕ್ರಮಗಳು ಇರುವುದಿಲ್ಲ. ಬಹು ಬೇಗ ಮೈಲಿಗೆ ಭಾವನೆಯನ್ನು ತಾಳುವ ಇವರು ಅಷ್ಟೇ ಬೇಗ ಅದಕ್ಕೆ ಅತ್ಯಂತ ಸರಳವಾದ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ಇಂಥ ಕಾರಣಗಳಿಂದ ಕುಲಗೆಟ್ಟ ವ್ಯಕ್ತಿಗಳನ್ನು ಶುದ್ಧೀಕರಿಸಿ ತಮ್ಮೊಳಗೆ ಸೆರಿಸಿಕೊಳ್ಳುವ ಅನೇಕ ಪದ್ಧತಿಗಳು ಇಂದಿಗೂ ಆಚರಣೆಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಅಂಥ ಪದ್ಧತಿಗಳಲ್ಲಿ ಮುಖ್ಯವಾಗಿ ಅಗ್ನಿತತ್ವ, ಜಲತತ್ವ ಹಾಗೂ ಭೂಮಿತತ್ವಗಳ ಮೂಲಕ ಶದ್ಧೀಕರಿಸುವ ಕ್ರಮಗಳು ಪ್ರಧಾನವಾಗಿವೆ. ಈ ಆಚರಣಾ ಕ್ರಮಗಳು ಈ ಆದಿವಾಸಿ ಸಮುದಾಯಗಳ ಲೋಕದೃಷ್ಟಿಯನ್ನು ಪ್ರಕಟಪಡಿಸುತ್ತವೆ. ಇಂತಹ ಆಚರಣೆಗಳ ಹಿಂದಿರುವ ಸಮುದಾಯಗಳ ಲೋಕದೃಷ್ಟಿಯನ್ನು ಕಂಡುಕೊಳ್ಳುವುದರ ಮೂಲಕ ಅವುಗಳಲ್ಲಿ ಅಡಗಿರುವ ವೈಜ್ಞಾನಿಕ ಅಂಶಗಳನ್ನು ಪರಿಶೀಲಿಸುವ ಪ್ರಯತ್ನವೇ ಈ ಲೇಖನ.

ಬುಡಕಟ್ಟು ಸಮುದಾಯಗಳು ಆಧನಿಕತೆ ಹಾಗೂ ಅದರ ನೆರಳಲ್ಲಿ ರೂಪುಗೊಂಡ ಪ್ರಭುತ್ವದ ಅಭಿವೃದ್ಧಿ ಯೋಜನೆಗಳ ಕಾರಣದಿಂದ ತಮ್ಮ ಬದುಕಿನ ಅನನನ್ಯತೆಯನ್ನು ಕಳೆದುಕೊಂಡಿವೆ ಎಂಬುದು ನಿರ್ವಿವಾದ. ಆಧುನಿಕತೆಯ ಆಕರ್ಷಣೆಗೆ ಒಳಗಾಗಿರುವ ಈ ಆದಿವಾಸಿ ಸಮುದಾಯಗಳು ಯಾವುದೇ ನಿದಿಷ್ಟ ತಳಹದಿಯಿಲ್ಲದ ಆಸೆಗಳಿಗೆ ಮುಖಮಾಡಿ ಹಲವಾರು ಸವಾಲು ಹಾಗೂ ಸಂಕಟಗಳನ್ನು ಎದುರಿಸುತ್ತಿವೆ. ಮುಖ್ಯವಾಗಿ ಎದುರಿಸುತ್ತಿರುವ ಸಂಕಟವೆಂದರೆ ತಮ್ಮ ಭಾಷೆ, ಸಂಸ್ಕೃತಿ, ವೃತ್ತಿಜ್ಞಾನಗಳು, ಜೀವನ ಮೌಲ್ಯಗಳು ಹಾಗೂ ಬದುಕಿನ ಅನುಭವ ಜನ್ಯವಾಗಿ ಬಂದ ಸಮಸ್ತ ಜ್ಞಾನಗಳನ್ನು ಕಳೆದುಕೊಂಡು ಅನಾಥ ಸ್ಥಿತಿಗೆ ತಲುಪಿರುವುದು. ಈ ಕಾಲದ ವಿಪರ್ಯಾಸದ ಸಂಗತಿಯೆಂದರೆ ತಮ್ಮ ಅನನ್ಯತೆಯ ಬದುಕಿನ ಕ್ರಮಗಳನ್ನು ಮತ್ತು ಮೌಲ್ಯಗಳನ್ನು ಅನುಸರಿಸುವುದು ಒಂದು ದೊಡ್ಡ ದೋಷವೆಂಬ ಅಪರಾಧಿ ಭಾವನೆಯೊಂದಿಗೆ ಜೀವಿಸುವಂತೆ ಮಾಡಿರುವುದು. ಬುಡಕಟ್ಟುಗಳು ಉದ್ಧಾರವಾಗಬೇಕಾದರೆ ಅವು ತಮ್ಮ ಮೂಲ ನೆಲೆಗಳನ್ನು ತೊರೆದು ಮುಖ್ಯವಾಹಿನಿಗೆ ಬರಲೇಬೇಕು ಎಂಬ ಭಾವನೆಯನ್ನು ಪ್ರಶ್ನಾತೀತವಾಗಿ ನಂಬಿಸಲಾಗಿರುವುದು. ಈ ವಿಷಯದಲ್ಲಿ ಚಿಂತಕರ ಚರ್ಚೆಗಳಲ್ಲಿ ಇಣುಕುವ ಒಂದು ಪ್ರಶ್ನೆಯೆಂದರೆ ಪಾರಂಪರಿಕ ಸಮುದಾಯಗಳು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳಬೇಕೆಂದಾಗ ಅಂತ ಸಮುದಾಯಗಳ ಅಭಿವೃದ್ಧಿಯನ್ನು ತಡೆದಂತಾಗುವುದಿಲ್ಲವೇ? ಈ ಪ್ರಶ್ನೆ ಸರಿ ಎನಿಸಿದರೂ ಪಾರಂಪರಿಕ ಜ್ಞಾನಗಳನ್ನು ಗೌರವಿಸಿ, ಉಳಿಸಿ ಬೆಳೆಸುವ ನೆಲೆಯಲ್ಲಿ ಯೋಚಿಸಿದರೆ ಬೇರೆಯೇ ಆದ ಪ್ರಶ್ನೆಗಳು ಎದುರಾಗುತ್ತವೆ. ಅವುಗಳೆಂದರೆ ಒಂದು ಸಮುದಾಯ ತನ್ನ ನಿಡುಗಾಲದ ಬದುಕಲ್ಲಿ ಅನುಭವದಿಂದ ಕಂಡುಕೊಂಡ ಜ್ಞಾನಗಳನ್ನು ಯಾವುದೇ ವಿಚಾರಮಾಡದೆ ಮೌಢ್ಯಗಳೆಂದು ನಿರಾಕರಿಸುವುದು ಎಷ್ಟು ಸರಿ? ಅಷ್ಟಾಗಿಯೂ ಒಂದು ಸಮುದಾಯದ ವೃತ್ತಿ ಬದುಕನ್ನು ಅದೇ ಸಮುದಾಯ ಮುಂದುವರಿಸಬೇಕೆಂದು ಹೇಳಿದವರಾರು? ಆ ವೃತ್ತಿ ಮತ್ತು ಬದುಕಿನ ಜ್ಞಾನಗಳನ್ನು ಬೇರೆ ಸಮುದಾಯಗಳು ಅನುಸರಿಸಬಾರದೆಂದು ಎಲ್ಲಿ ಹೇಳಿದೆ? ಹಾಗೆಯೇ ಇವರ ಜೀವನದ ಸಮಸಮಾಜ ನಿರ್ಮಾಣ ಹಾಗೂ ಮಾನವೀಯತೆಯ ಮೌಲ್ಯಗಳೇನಿವೆ ಅವುಗಳು ಈ ಕಾಲಕ್ಕೆ ಅನಿವಾರ್ಯ ಎನಿಸಿರುವಾಗ ಅವುಗಳನ್ನು ಆಧುನಿಕ ಸಮಾಜಗಳು ಅನುಸರಿಸಬಾರದೇಕೆ? ಇಂಥ ಹಲವು ಮಹತ್ವದ ಪ್ರಶ್ನೆಗಳಿಗೆ ಮುಖಾಮುಖಿಯಾದಾಗ ಪ್ರಮುಖವಾಗಿ ಎರಡು ಸಂಗತಿಗಳ ಬಗ್ಗೆ ಗಮನಹರಿಸಬೇಕಾಗುತ್ತದೆ.

1. ಬುಡಕಟ್ಟು ಸಮುದಾಯಗಳಲ್ಲಿ ಪಾರಂಪರಿಕವಾಗಿ ಹರಿದು ಬಂದಿರುವ ವೃತ್ತಿ ಹಾಗೂ ಬದುಕಿನ ಜ್ಞಾನಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅವುಗಳನ್ನು ಮೌಢ್ಯತೆಯ ನೆಪ ಹೇಳಿ ವಿನಾಶಕ್ಕೆ ತಳ್ಳುವುದು ಸರಿಯಲ್ಲ. ಈ ಸಮುದಾಯಗಳು ಅನುಸರಿಸುವ ಕ್ರಮಗಳೆಲ್ಲ ಮೌಢ್ಯತೆಯಿಂದ ಮುಕ್ತವಾಗಿವೆ ಎಂದು ಹೇಳಲಾಗದಿದ್ದರೂ

ಕೆಲವಾದರೂ ಪದ್ಧತಿಗಳು ಶುದ್ಧ ಅನುಭವಜನ್ಯ ಜ್ಞಾನಗಳಾದ್ದರಿಂದ ಅವುಗಳು ವೈಜ್ಞಾನಿಕ ತಳಹದಿಯನ್ನು ಹೊಂದಿವೆ. ಅವುಗಳನ್ನು ಇರುವಂತೆ ಅಲ್ಲದಿದ್ದರೂ ಅವುಗಳ ಹಿಂದಿರುವ ತಾತ್ವಿಕತೆಯ ಹಿನ್ನೆಲೆಯಲ್ಲಿ ಸಮಕಾಲೀನ ಸಮಾಜ ಮುಂದುವರೆಸಬೇಕಿದೆ.

2. ಆಧುನಿಕ ಕಾಲಕ್ಕೆ ದಕ್ಕಿರುವ ಪಾಶ್ಚಿಮಾತ್ಯ ಸಂಸ್ಕೃತಿಯ ಮೌಲ್ಯಗಳು ನಮ್ಮ ಪಾರಂಪರಿಕ ಹಿನ್ನೆಲೆಯಿರುವ ಸಮಾಜಕ್ಕೆ ಹೊಂದಿಕೆಯಾಗದಿರುವ ಹಿನ್ನೆಲೆಯಲ್ಲಿ ನಮ್ಮ ಪಾರಂಪರಿಕ ಸಮಾಜದ ಮೌಲ್ಯಗಳನ್ನು ಉಳಿಸಿಕೊಂಡು ಮಾನವೀಯತೆಯ ಸ್ಪರ್ಷವನ್ನು ಉಳಿಸಿಕೊಳ್ಳ ಬೇಕಾಗಿದೆ.

ಮೇಲಿನ ಎರಡು ಅಂಶಗಳಿಗೆ ಅನೇಕರಿಗೆ ಒಪ್ಪಿಗೆಯಾಗಿದ್ದು ಇವುಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನಗಳು ಆರಂಭವಾಗಿವೆ. ಈ ಪ್ರಯತ್ನಗಳ ಭಾಗವಾಗಿ ಈ ಲೇಖನದಲ್ಲಿ ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿ ಆಚರಣೆಯಲ್ಲಿರುವ ಶುದ್ಧೀಕರಣ ಪದ್ಧತಿಗಳ ಸ್ವರೂಪ ಹಾಗೂ ಅವುಗಳ ಹಿಂದಿರುವ ಲೋಕದೃಷ್ಟಿ ಹಾಗೂ ತಾತ್ವಿಕ ಹಿನ್ನೆಲೆಯನ್ನು ಪರಿಶೀಲಿಸುವ ಪ್ರಯತ್ನಮಾಡಲಾಗಿದೆ.

ಲೋಕದೃಷ್ಟಿಯ ಪರಿಕಲ್ಪನೆ : ಪ್ರಸ್ತುತ ಲೇಖನದಲ್ಲಿ ಬುಡಕಟ್ಟುಗಳ ಶುದ್ಧೀಕರಣ ಪದ್ಧತಿಗಳನ್ನು ಅವರ ಲೋಕದೃಷ್ಟಿಯ ಹಿನ್ನೆಲೆಯಲ್ಲಿ ಪರಿಶೀಲಿಸುವುದರಿಂದ ಲೋಕದೃಷ್ಟಿಯ ಪರಿಕಲ್ಪನೆಯ ಬಗ್ಗೆ ಕೆಲವು ಪ್ರಾಥಮಿಕ ವಿಚಾರಗಳನ್ನು ತಿಳಿಯುವುದು ಸೂಕ್ತ. ಮಾನವಶಾಸ್ತ್ರ, ಜಾನಪದ ಅಧ್ಯಯನಕಾರರು ವ್ಯಾಖ್ಯಾನಿಸಿರುವಂತೆ "ಜನಪದರು ನೇರವಾಗಿ ಅಥವಾ ಪರೋಕ್ಷವಾಗಿ ಲೋಕದ ಸಮಸ್ತದ ಬಗೆಗೆ ಹೊಂದಿರುವ ದರ್ಶನವನ್ನು ಲೋಕದೃಷ್ಟಿ ಎಂದು ಕರೆಯಬಹುದು. ಇದು ಜನಾಂಗದಿಂದ ಜನಾಂಗಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ ಭಿನ್ನ ಸ್ವರೂಪವನ್ನು ಹೊಂದಬಹುದು. ವರ್ಗ ಮತ್ತು ಜಾತಿಗಳಿಗನುಗುಣವಾಗಿ ಬದಲಾಗಬಹುದು. ಲೋಕದೃಷ್ಟಿ ಆಳದಲ್ಲಿ ಸಂಸ್ಕೃತಿ ನಿಷ್ಠವಾಗಿರುತ್ತದೆ. ಹೀಗೆಂದಾಕ್ಷಣ ಸರ್ವ ಸಾಮಾನ್ಯವಾದ ಒಂದೇ ಲೋಕದೃಷ್ಟಿ ಇರುವುದು ಸಾಧ್ಯವೇ ಇಲ್ಲವೆಂದು ಭಾವಿಸ ಬೇಕಾಗಿಲ್ಲ. ಭೌಗೋಳಿಕ ಪರಿಸರದಿಂದ ಪ್ರೇರಿತವಾದ ಭಿನ್ನ ಜನ ವರ್ಗದಲ್ಲಿ ಒಂದೇ ದೃಷ್ಟಿಕೋನ ಕಂಡು ಬರುವ ಸಾಧ್ಯತೆಯೂ ಇಲ್ಲದಿಲ್ಲ" (ಜಾನಪದ ಕೈಪಿಡಿ, ಪುಟ : 460) ಹಾಗಾಗಿ "ಲೋಕ ದೃಷ್ಟಿ ಎಂಬುದು ಇಲ್ಲದೇ ಇರುವ ಜನರಾಗಲಿ, ಜನಾಂಗವಾಗಲಿ ಎಲ್ಲಾದರೂ ಇರಲು ಸಾಧ್ಯವೇ ಇಲ್ಲ. ಜನಪದರು ಬದುಕುತ್ತಿರುವ ವರ್ತಮಾನದ ಉತ್ಕಟ ಕ್ಷಣಗಳಲ್ಲಿ, ಅದು ಪರಂಪರೆಯ ಕೊಡುಗೆಯಾಗಿ ಮತ್ತು ಭವಿಷ್ಯತ್ತಿನ ಬುನಾದಿಯಾಗಿ ಕ್ರಿಯಾಶೀಲವಾಗುತ್ತಿರುತ್ತದೆ." (ಜಾನಪದ ಕೈಪಿಡಿ, ಪುಟ : 460) "ಲೋಕದೃಷ್ಟಿಯು ಯಾವುದೇ ಸಂಸ್ಕೃತಿಯ ಹೃದಯ ಭಾಗದಲ್ಲಿದ್ದು ಸಂಸ್ಕೃತಿಯ ಶಿಷ್ಟವನ್ನು, ಪರಿಶಿಷ್ಟವನ್ನು ರೂಪಿಸುತ್ತದೆ. ತನ್ನ ಒಳಗಿನ ಜನರಿಗೆ ಅಪ್ರಜ್ಞಾಪೂರ್ವಕವಾಗಿ ಮಾರ್ಗದರ್ಶನ ಮಾಡುತ್ತದೆ. ಇದರಿಂದಲೇ ಜಾನಪದರ ಜೀವನ ವಿನ್ಯಾಸಗಳು ರೂಪುಗೊಳ್ಳುತ್ತವೆ. ಈ ಕಾರಣಕ್ಕೆ ಲೋಕದೃಷ್ಟಿಯನ್ನು ಸಂಸ್ಕೃತಿಯೊಂದರ ಕೇಂದ್ರೀಯ ನಿಯಂತ್ರಕ ಶಕ್ತಿ ಎಂದು ಕರೆಯಬಹುದು"(ಜಾನಪದ ಕೈಪಿಡಿ, ಪುಟ : 463) ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಸಮಾಜದ ನಂಬಿಕೆ ಸಂಪ್ರದಾಯ ಆಚರಣೆಗಳ ಹಿಂದೆ ಅವುಗಳನ್ನು ಆಚರಿಸುವ ಸಮುದಾಯದ ಲೋಕದೃಷ್ಟಿ ಪ್ರಮುಖ ಪಾತ್ರವಹಿಸುತ್ತದೆ. ಹಾಗಾಗಿ ಬುಡಕಟ್ಟು ಸಮುದಾಯಗಳಲ್ಲಿ ಪ್ರಚಲಿತವಿರುವ ಶುದ್ಧೀಕರಣ ಪದ್ಧತಿಗಳ ಆಚರಣೆಗಳನ್ನು ಅವುಗಳ ಸ್ವರೂಪವನ್ನು ತಿಳಿಯುವುದರ ಜೊತೆಗೆ ಅವುಗಳ ಹಿಂದೆ ಅಡಗಿರುವ ಲೋಕದೃಷ್ಟಿಯನ್ನು ಗಮನಿಸಿ ಆಚರಣೆಗಳಲ್ಲಿ ಅಡಗಿರುವ ಆಶಯಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಈ ಸಂಶೋಧನಾ ಲೇಖನಕ್ಕೆ ಕರ್ನಾಟಕದಲ್ಲಿ ನೆಲೆನಿಂತಿರುವ ಹಸಲರು, ಸಿದ್ಧಿಯರು, ಗೌಳಿಗರು, ಗೊಂಡರು, ಕುಡುಬಿಗಳು, ಕೊರಗರು, ಸೋಲಿಗರು, ಹಾಲಕ್ಕಿ ಒಕ್ಕಲಿಗರು, ಕರೆ ಒಕ್ಕಲರು, ಗ್ರಾಮೊಕ್ಕಲು, ಮುಕ್ರಿಯರು, ಗೌಡಾಲು, ಮಲೆಕುಡಿಯರು, ಮನ್ಸರು, ಪಣಿಯರು, ಜೇನುಕುರುಬರು, ಕಾಡುಕುರುಬರು, ಕಾಡುಗೊಲ್ಲರು ಮತ್ತು ಮ್ಯಾಸಬೇಡರು ಮೊದಲಾದ ಬುಡಕಟ್ಟು ಸಾಮಾಜಗಳಲ್ಲಿ ಆಚರಣೆಯಲ್ಲಿರುವ ಆಚರಣೆಗಳನ್ನು ಗಮನಿಸಲಾಗುವುದು. ಪ್ರಸ್ತುತ ಲೇಖನಕ್ಕೆ ಆಕರ ಸಾಮಗ್ರಿಯನ್ನು ಈ ಬುಡಕಟ್ಟು ಸಮುದಾಯಗಳ ಬಗ್ಗೆ ಈವರೆಗೂ ನಡೆದಿರುವ ಸಂಶೋಧನಾ ಅಧ್ಯಯನಗಳಲ್ಲಿ ಲಭ್ಯವಾಗಿರುವ ಮಾಹಿತಿಯನ್ನು ಆಧರಿಸಿ ಪಡೆಯಲಾಗಿದೆ. ಉಳಿದಂತೆ ಕೆಲವು ಬುಡಕಟ್ಟು ಸಮಾಜಗಳಲ್ಲಿ ಖುದ್ದು ಕ್ಷೇತ್ರಕಾರ್ಯ ನಡೆಸಿಯೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಬುಡಕಟ್ಟುಗಳ ಮೈಲಿಗೆ ಭಾವ ಮತ್ತು ಶುದ್ಧೀಕರಣ: ಪ್ರಪಂಚದ ಯಾವುದೇ ಬುಡಕಟ್ಟುಗಳಲ್ಲಿ ಕಂಡುಬರುವ ಸಾಮಾನ್ಯ ಗುಣಲಕ್ಷಣಗಳೆಂದರೆ ಪ್ರಕೃತಿಯ ಅವಲಂಬನೆಯ ಬದುಕು ಮತ್ತು ಅತಿಯಾದ ಮೈಲಿಗೆ ಭಾವ. ಬುಡಕಟ್ಟು ಸಮುದಾಯದ ಜನರ ಮೊದಲ ಆದ್ಯತೆ ತಮ್ಮ ದೇಹ, ಮನಸ್ಸು, ಸ್ಥಳ, ಸಂಸ್ಕೃತಿ ಹೀಗೆ ಬದುಕಿನ ಪ್ರತೀ ಹಂತಗಳಲ್ಲೂ ತಮ್ಮ ಪರಿಶುದ್ಧತೆಯನ್ನು ಉಳಿಸಿಕೊಳ್ಳುವುದು. ಈ ಪರಿಶುದ್ಧತೆಗೆ ಭಂಗ ಬಂದಲ್ಲಿ ಅದನ್ನು ಪ್ರಕೃತಿಯ ಮಡಿಲಿಂದಲೇ ಸುಲಭವಾಗಿ ಪರಿಹರಿಸಿಕೊಳ್ಳುತ್ತಾರೆ. ಇವರು ಮೈಲಿಗೆಯೆಂದು ಭಾವಿಸುವ ಸಂದರ್ಭಗಳನ್ನು ಹೀಗೆ ಗುರುತಿಸ ಬಹುದು : ಬೇರೆ ಸಮುದಾಯದ ಅಥವಾ ನಾಗರೀಕ ಸಮುದಾಯದ ಜನ ತಮ್ಮ ಹಾಡಿ/ಹಟ್ಟಿಗಳಿಗೆ ಪ್ರವೇಶಮಾಡಿದರೆ, ತಮ್ಮದೇ ಮನೆಗಳಲ್ಲಿ ಹುಟ್ಟು, ಋತುಮತಿ, ಸಾವಿನಂತಹ ನೈಸರ್ಗಿಕ ಕ್ರಿಯೆಗಳು ನಡೆದಾಗ, ಅನ್ಯರ ಮನೆಗಳಲ್ಲಿ ಊಟಮಾಡಿದಾಗ, ಬೇರೆಯವರ ಎಂಜಲು ತಿಂದಾಗ, ಅಂತರ್ಜಾತಿಯ ವಿವಾಹ ಅಥವಾ ಲೈಂಗಿಕ ಸಂಪರ್ಕಗಳು ನಡೆದಾಗ ಹಾಗೂ ಚಪ್ಪಲಿ ಮತ್ತಿತರ ವಸ್ತುಗಳಿಂದ ಹೊಡೆದಾಡಿದಾಗ ಇವೇ ಮುಂತಾದ ಸಂದರ್ಭಗಳು. ಈ ಸಂದರ್ಭಗಳಲ್ಲಿ ಮೈಲಿಗೆ ಎಂದು ತಿಳಿದಾಕ್ಷಣ ಅನುಸರಿಸುವ ಕ್ರಮಗಳು ಹಾಗೂ ಅವುಗಳ ನಿವಾರಣೆಗೆ ಅನುಸರಿಸುವ ಕ್ರಮಗಳನ್ನು ಈ ಮುಂದಿನಂತೆ ಪರಿಶೀಲಿಸಬಹುದು.

ಜನನ : ಮಾನವನ ಜೀವನದಲ್ಲಿ ಜನನ ಬಹಳಮುಖ್ಯವಾದ ಘಟನೆ. ಈ ಕ್ರಿಯೆ ಒಂದು ಮನೆಗೆ ಒಬ್ಬ ಹೊಸ ಸದಸ್ಯನ್ನು ಪಡೆದ ಖುಷಿ ಒಂದು ಕಡೆಯಾದರೆ. ಜನನದ ಸಂದರ್ಭ ಮೈಲಿಗೆ ಎಂಬ ಭಾವನೆಯಿಂದ ಬರುವ ಸೂತಕದ ಛಾಯೆ ಮತ್ತೊಂದು ಕಡೆ. ಇಲ್ಲಿ ಖುಷಿಯ ಸಂಗತಿಯನ್ನು ಮರೆತು ಸೂತಕದ ಭಾವನೆಗಳ ಸ್ವರೂಪವನ್ನು ಪರಿಶೀಲಿಸುವುದಾದರೆ – ಬಹುತೇಕ ಬುಡಕಟ್ಟುಗಳಲ್ಲಿ ಜನನ ಸೂತಕವೆಂದು ನಂಬಿರುವ ಹಿನ್ನೆಲೆಯಲ್ಲಿ ಗರ್ಭವತಿಯನ್ನು ಮೂರು, ಐದು, ಏಳು, ಒಂಭತ್ತು, ಹನ್ನೊಂದು ದಿನಗಳ ಕಾಲ ವಾಸದ ಮನೆಯಿಂದ ಹೊರಗಡೆ ಪ್ರತ್ಯೇಕ ಗುಡಿಸಲುಗಳಲಲ್ಲಿ ಇರಿಸುವ ಕ್ರಮವಿದೆ.

ಹೀಗೆ ಹೊರಗಿಟ್ಟ ಬಾಣಂತಿ, ಮಗು ಹಾಗೂ ಆಕೆಯನ್ನು ನೋಡಿಕೊಳ್ಳಲು ನೇಮಿಸಿರುವ ಹೆಂಗಸನ್ನು ಯಾರೂ ಮುಟ್ಟುವಂತಿಲ್ಲ. ಅಷ್ಟೇ ಅಲ್ಲ ಅವರಿಗೆ ಪ್ರತ್ಯೇಕ ಊಟದ ವ್ಯವಸ್ಥೆಯನ್ನು ಮಾಡುವ ಕ್ರಮವಿದೆ. ಇಂಥ ಪದ್ಧತಿಯನ್ನು ಅನುಸರಿಸುವ ಸಮುದಾಯಗಳಲ್ಲಿ ಕಾಡುಗೊಲ್ಲರು, ಕೊರಗರು, ಮಲೆಕುಡಿಯರು, ಗೌಳಿಗರು ಮತ್ತಿತರ ಸಮುದಾಯಗಳು ಪ್ರಮುಖವಾಗಿವೆ. ಹಾಗೆಯೇ ಹೆರಿಗೆಯ ನಂತರ ಬಾಣಂತಿಯನ್ನು ಯಾರು ಮುಟ್ಟುವಂತಿಲ್ಲ ಮತ್ತು ಆ ಮನೆಯಲ್ಲಿ ಯಾವುದೇ ರೀತಿಯ ಶುಭಾ ಸಮಾರಂಭಗಳನ್ನು ಮಾಡುವುದಿಲ್ಲ. ಹೆರಿಗೆ ಮನೆಯ ಸದಸ್ಯರು ಬೇರೆ ಯಾವುದೇ ಹಬ್ಬ, ಜಾತ್ರೆ, ಮರಣಗಳಲ್ಲಿ ಭಾಗವಹಿಸುವಂತಿಲ್ಲ. ಒಟ್ಟಾರೆ ಈ ರೀತಿ ಜನನವನ್ನು ಸೂತಕ ಎಂದು ಭಾವಿಸಿ ಜನನದ ಆ ಮನೆ, ವ್ಯಕ್ತಿಗಳನ್ನು ಮುಟ್ಟದಿರುವ, ಮನೆಯಿಂದ ದೂರವಿಡುವ ಕ್ರಮಗಳು ಬಳಕೆಯಲ್ಲಿವೆ.

ಈ ಸೂತಕದ ಭಾವನೆಗಳು ಶಾಶ್ವತವಲ್ಲ.. ಇದರ ಪರಿಹಾರ ಅತೀ ಸುಲುಭ. ಜನನದ ಕ್ರಿಯೆಯಿಂದ ಆಗಿರುವ ಸೂತಕವನ್ನು ಕಳೆಯುವ ಕ್ರಮಗಳು ಎಂಥವು ಎಂಬುದನ್ನು ಈ ಮುಂದಿನಂತೆ ತಿಳಿಯಬಹುದು :

1. ಮಗು ಹುಟ್ಟಿದ ತಕ್ಷಣ ಭಟ್ಟರ ಮನೆಯಿಂದ ಪಂಚಗವ್ಯ ತಂದು ಸೂತಕದ ಮನೆಯನ್ನು ಶುಚಿಗೊಳಿಸುತ್ತಾರೆ. ಹನ್ನೊಂದನೇ ದಿನ ಸ್ವತಃ ಬ್ರಾಹ್ಮಣನೇ ಬಂದು ಮನೆಗೆ ತೀರ್ಥ ಪರೋಕ್ಷಣ ಮಾಡಿ ಹೋಗುತ್ತಾರೆ.(ಸಿದ್ಧಿಯರು)

2. ಬಾಣಂತಿ ಮತ್ತು ಮಗುವಿಗೆ ಸ್ನಾನ ಮಾಡಿಸುತ್ತಾರೆ. ಸಂಬಂಧಿಗಳಿಗೆ ಊಟವಾಕುತ್ತಾರೆ. ದೇವರಿಗೆ ಆಕಳಿಗೆ ಪೂಜೆಮಾಡಿ ಎಡೆ ಮಾಡುತ್ತಾರೆ.(ಗೌಳಿಗರು)

3. ಶಿಶುವಿನ ಪೋಷಕ ವಸ್ತುಗಳನ್ನು ಮಲತ ಇತ್ಯಾದಿಗಳನ್ನು ಮನೆಯ ಮುಂದಿನ ಅಂಗಳದ ಹೊರಗೆ ಒಂದು ಹೊಂಡ(ಅಮೆ ಹೊಂಡ) ತೋಡಿ ಹುಗಿದು ಮಣ್ಣು ಮುಚ್ಚಿ ಅಲ್ಲಿಯೇ ನಿತ್ಯ ಶಿಶುವನ್ನು ಮೀಯಿಸುತ್ತಾರೆ. ಶಿಶು ಜನನವಾದ 3,5,9 ದಿನಗಳಲ್ಲೊಂದು ದಿನ ಶಿಶುವನ್ನು ಶುದ್ದ ಮಾಡುವ ಕಾರ್ಯಕ್ರಮವಿರುತ್ತದೆ. ಆ ದಿನ ಹಿಂದೆ ಮಡಿವಾಳತಿ 'ಕಾರ' ಎಂಬ ಹೆಸರಿನ ಬೂದಿಯನ್ನು ತರುತ್ತಾಳೆ. ಕಾರದ ನೀರನ್ನು ಮನೆಯಲ್ಲಿ ಹಾಗೂ ಹೊರಗೆ ಸಿಂಪಡಿಸಿ ಮನೆ ಶುದ್ಧ ಮಾಡುತಿದ್ದರು(ಗೊಂಡರು)

4. ಹೆರಿಗೆಯಾದ ಮೂರನೇ ದಿನಕ್ಕೆ ಶುದ್ಧವನ್ನು ಮಾಡಿಸುತ್ತಾರೆ. ಬ್ರಾಹ್ಮಣರ ಮನೆ ಇಲ್ಲವೇ ದೇವಾಸ್ಥಾನದಿಂದ ಪವಿತ್ರ ಜಲವನ್ನು ತಂದು, ಸಗಣಿ ಸಾರಿಸಿದ ನಂತರ ಚಿಮುಕಿಸಿ ಶುದ್ಧಗೊಳಿಸುತ್ತಾರೆ. ಹೆರಿಗೆಯಾದ ಏಳನೇ ದಿವಸಕ್ಕೆ ಆಮೆಯನ್ನು ಮಾಡುತ್ತಾರೆ. ಅಮೆ ಗೆ ಜಾತಿ ಮನೆಯವರನ್ನು ಕರೆಸುತ್ತಾರೆ. ಅಮೆಯ ಮರುದಿನ ಹೆಂಗಸರು ಬಾಣಂತಿ ಮತ್ತು ಮಗುವಿಗೆ ಶುದ್ಧದ ಆಚರಣೆಯನ್ನು ನಡೆಸುತ್ತಾರೆ. ಅಂದೇ ಯಜಮನನ ಹೆಂಡತಿ ಮಗುವಿನ ಬಾಯಿಗೆ ಅನ್ನದ ತುತ್ತನ್ನು ಇಡಬೇಕು. (ಕುಡುಬಿಯರು)

5. ಸಮುದಾಯದ ಬಂಧುಗಳು ರಕ್ತಬಾಂಧವರು, ತಾಯಿ ಮಗುವಿಗೆ ಸ್ನಾನ ಮಾಡಿಸಿ ಹೊಸಬಟ್ಟೆ ಉಡಿಸುವರು. ಅಮೆ ಕಳೆಯುವ ಪರಿವರ್ತನಾ ವಿಧಿಗಳು ಸಮುದಾಯದ ಗುರಿಕಾರನ ಮೂಲಕ ನಡೆಯುವುದು. (ಕೊರಗರು)

6. ಹುಟ್ಟಿನ ಹನ್ನೊಂದನೇ ದಿನಕ್ಕೆ ಮಡಿವಾಳಗಿತ್ತಿ ತಂದ ಕಾರ ಬೂದಿಯಿಂದ ಮನೆಯನ್ನು ಶುದ್ಧ ಮಾಡುತ್ತಾರೆ. ಎಲ್ಲಾ ಬಟ್ಟೆಗಳನ್ನು ತೊಳೆಯುತ್ತಾರೆ. ಮನೆಯವರಿಗೆಲ್ಲ ತಲೆಮೈಯನ್ನು ಮೀಯಿಸುತ್ತಾರೆ. ಮಗುವನ್ನು ಸ್ನಾನ ಮಾಡಿಸಿಕೊಂಡು ಬರುವಾಗ ಮನೆ ಮುಂದಿನ ಸೊರಕಲ್ಲಿನಲ್ಲಿ ನಿಲ್ಲಿಸಿ ಮುಖಕ್ಕೆ ಚಳ್ಳನಿರನ್ನು ಹೊಡೆಯುತ್ತಾರೆ. ಬಾಣಂತಿಯು ಒಂದು ಎಲೆ ಮತ್ತು ಆಡಿಕೆಯನ್ನು ತೆಗೆದುಕೊಂಡು ಹೋಗಿ ನೀರಿಗೆ ಬಿಟ್ಟು ಪೂಜೆಮಾಡಿ ಬರಬೇಕು. ಆ ದಿನದಿಂದ ಅವಳ ಮೈಲಿಗೆ ಕಳೆಯುತ್ತದೆ.(ಮುಕ್ರಿಯರು)

7. ಜನನದ ನಾಲ್ಕನೇ ದಿವಸಕ್ಕೆ ಮನೆಯನ್ನು ಶುಚಿಗೊಳಿಸುತ್ತಾರೆ. ಮಡಿವಾಳನನ್ನು ಕರೆಸಿ ನಡು ಮನೆಯಲ್ಲಿ ಮಡಿ ಇಡಿಸಿ ಪೂಜೆ ನೆರವರಿಸುವರು.(ಮಲೆಕುಡಿಯರು)

8. ಹೆರಿಗೆಯಾದ ಮೂರು, ಐದು, ಏಳನೇ ದಿನಗಳಂದು ಅಮೆ ಆಚರಣೆ ನಡೆಯುತ್ತದೆ. ಮೊದಲ ದಿನ ಬಾಣಂತಿಗೆ ಪಳಧ್ಯ ಮಾಡಿಕೊಡಬೇಕು., ಮೂರನೇ ದಿನ ದೇವರ ನೀರು ತಂದು ಶುದ್ಧವಾಗಬೇಕು. ಬಟ್ಟೆ, ಚಾಪೆ ಇತ್ಯಾದಿ ಒಗೆದು ಶುಚಿಗೊಳಿಸಬೇಕು. ಐದನೇ ದಿನ ಬಾಣಂತಿಗೆ ಮಾಂಸದ ಅಡಿಗೆಯನ್ನು ನೀಡುತ್ತಾರೆ. (ಮನ್ನರು)

9. ಜನನವಾದ ಮೂರನೇ ದಿನ, ಐದನೇ ದಿನ, ಏಳನೇ ದಿನ, ಒಂಬತ್ತನೇ ದಿನ, ಹನ್ನೊಂದನೇ ದಿನ ಹೀಗೆ ಶುದ್ದೀಕರಣ ಕ್ರಮಗಳು ಜರಗುತ್ತವೆ. ಇದರಲ್ಲಿ ಮುಖ್ಯವಾಗಿ ಬೇವಿನ ಸೊಪ್ಪು ಬೆರಸಿದ ನೀರಿನಿಂದ ಬಾಣಂತಿಯನ್ನು ಸ್ನಾನ ಮಡಿಸುತ್ತಾರೆ. ಮನೆಯನ್ನು ಶುಚಿಗೊಳಿಸುವರು, ಗೋ ಮೂತ್ರವನ್ನು ಮನೆಗೆ ಪ್ರೋಕ್ಷಣೆ ಮಾಡುವರು. ಬೇವಿನ ಸೊಪ್ಪನ್ನು ಹಿಡಿದು ಸೂರ್ಯ ದೇವನಿಗೆ ನಮಸ್ಕಾರ ಮಾಡಿಸುವರು. (ಮ್ಯಾಸನಾಯಕರು)

10. ಹೆರಿಗೆಯಾದ ಎರಡನೇ ದಿನ ಬಾಣಂತಿಯ ಗುಡಿಸಲಿನ ಆವರಣ ವನ್ನು ಸಗಣಿಯಿಂದ ಸಾರಿಸಿ ಸ್ವಚ್ಛಗೊಳಿಸುವರು. ಹನ್ನೆರಡನೇ ದಿನ ಬಾಣಂತಿ ತನ್ನ ಮಗುವಿನೊಡನೆ ಹಟ್ಟಿಯ ಮೂಡಲ ದಿಕ್ಕಿಗೆ ಬರುತ್ತಾಳೆ. ಆಕೆಯ ಗಂಡ ತನ್ನ ಕುಲದೈವದ ಗುಡಿಗೆ ಹೋಗಿ ಜನ್ನಿಗೆ ಕುರಿ (ಪವಿತ್ರ ಕುರಿ) ಹಾಲನ್ನು ತರುತ್ತಾನೆ. ಈ ಹಾಲನ್ನು ಬಾಣಂತಿ ಮತ್ತು ಮಗು ಸೇವಿಸಿ ಊರ ಒಳಗೆ ಪ್ರವೇಶ ಮಾಡುತ್ತಾರೆ. ಮಾಡಿದ ತಕ್ಷಣ ಮತ್ತೊಮ್ಮೆ ಜನ್ನಿಗೆ ಹಾಲನ್ನು ಕುಡಿಸಲಾಗುತ್ತದೆ. ಅಲ್ಲಿಂದ ನೇರವಾಗಿ ದೇವರ ಗುಡಿಗೆ ಹೋಗಿ ಪೂಜೆ ಮಾಡಿಸಿ ಪೂಜಾರಿಯಿಂದ ಮತ್ತೊಂದು ಸುತ್ತು ಜನ್ನಿಗೆ ಹಾಲನ್ನು ಕುಡಿಸುತ್ತಾರೆ. ಅನಂತರ ಮಗುವಿನ ತಂದೆ ಪೂಜಾರಿಗೆ ಸಾಕಷ್ಟು ಪ್ರಮಾಣದಲ್ಲಿ ಎಲೆ ಅಡಿಕೆಯನ್ನು ನೀಡುತ್ತಾನೆ. ಅಲ್ಲಿಗೆ ಸೂತಕ ಕಳೆದಂತಾಗುತ್ತದೆ. (ಕಾಡುಗೊಲ್ಲರು)

ಋತುಮತಿ : ಹೆಣ್ಣು ಮಗುವೊಂದು ಮಕ್ಕಳನ್ನು ಪಡೆಯುವ ಶಕ್ತಿ ಪಡೆಯುವ ಈ ನೈಸರ್ಗಿಕ ಬದಲಾವಣೆ ಒಂದು ದೃಷ್ಟಿಯಲ್ಲಿ ಋಷಿಯ ಸಂಗತಿ ಆದರೆ ಮತ್ತೊಂದು ದೃಷ್ಟಿಯಲ್ಲಿ ಸೂತಕ. ಈ ಸಂದರ್ಭದಲ್ಲಿ ಅನುಸರಿಸುವ ಮೈಲಿಗೆ ನಡೆಗಳನ್ನು ನೋಡುವುದಾದರೆ : ಹೆಣ್ಣು ಮೈನೆರೆದಳು ಎಂದು ತಿಳಿದ ತಕ್ಷಣ ಅವಳನ್ನು ಮನೆಯಿಂದ ಹೊರಗೆ ಏಳು ಒಂಬತ್ತು ಅಥವಾ ಹನ್ನೊಂದು ದಿನಗಳ ಕಾಲ ಪ್ರತ್ಯೇಕ ಗುಡಿಸಲಲ್ಲಿ ಇರಿಸುತ್ತಾರೆ. ಅವರನ್ನು ಯಾರೂ ಮುಟ್ಟುವಂತಿಲ್ಲ. ಬಹುತೇಕ ಎಲ್ಲಾ ಬುಡಕಟ್ಟುಗಳಲ್ಲಿ ಈ ಕ್ರಮವಿದೆ. ಇಂಥ ಸೂತಕದ ಭಾವವದಿಂದ ಹೊರಬರಲು ಆಚರಿಸುವ ಆಚರಣೆಗಳ ಬಗ್ಗೆ ನೋಡುವುದಾದರೆ ಅವು ಹೀಗಿವೆ :

1. ಋತುಮತಿಯಾದ ಹುಡುಗಿಯನ್ನು ಐದು ದಿನದ ನಂತರ

ಹಳ್ಳದಲ್ಲಿಯೋ ಕೆರೆಯಲ್ಲಿಯೋ ನೀರು ತಂದು ಸ್ನಾನ ಮಾಡಿಸುತ್ತಾರೆ. ಕೆಲವೊಮ್ಮೆ ಹನ್ನೆರಡನೇ ದಿನಕ್ಕೆ ಕಳಸ ಹಿಡಿದು ದಾಸಯ್ಯನಿಂದ ಪಡೆದು ತಂದ ತೀರ್ಥ ಕುಡಿದು ನಂತರ ಪವಿತ್ರಳಾಗುತ್ತಾಳೆ.(ಹಲಸರು)

2. ಹನ್ನೆರಡನೇ ದಿವಸ ಮೈನೆರೆದ ಹೆಣ್ಣಿಗೆ ನೀರೋಯ್ಯುವ ಶಾಸ್ತ್ರ ಮಾಡಿಸುತ್ತಾರೆ. ಸುಮಂಗಲೆಯೊಬ್ಬಳು ತನ್ನ ಎಡಗೈಯ ಐದು ಬೆರಳುಗಳ ಮೇಲೆ ಬಿಲ್ಲೆಯಾಕಾರದ ಐದು ರಾಗಿ ರೊಟ್ಟಿಗಳನ್ನಿಟ್ಟು ಕೊಂಡು ಹುಡುಗಿಯ ತಲೆಯ ಮೇಲೆ ಕೈ ಚಾಚಿ ನಿಲ್ಲಬೇಕು. ಇನ್ನೊಬ್ಬ ಸುಮಂಗಲೆ ರೊಟ್ಟಿಗಳ ಮೇಲೆ ನೀರೊಯ್ಯುತ್ತಾಳೆ. ಮನೆಯನ್ನು ಶುಚಿಗೊಳಿಸುತ್ತಾರೆ. ಅವಳಿಗೆ ಹೊಸ ಉಡುಗೆಗಳನ್ನು ಕೊಟ್ಟು ಮಡಿಲು ತುಂಬಿಸುತ್ತಾರೆ. ನಂತರ ಮನೆಯಲ್ಲಿ ಸಿಹಿ ಊಟಮಾಡುತ್ತಾರೆ.(ಗೌಳಿಗರು)

3. ಮುಟ್ಟಾದವರನ್ನು ಯಾರಾದರೂ ಮುಟ್ಟಿದರೆ ಅವರು ಮೈಲಿಗೆಯಾಗುತ್ತದೆ ಎಂಬ ಭಾವನೆಯಿಂದಾಗಿ ಅವರು ಬಟ್ಟೆಯನ್ನು ತೆಗೆದಿಡಬೇಕು ಇಲ್ಲವೇ ನೀರಿಗಾಕಬೇಕು. ಬಟ್ಟೆಯಿಲ್ಲದೆ ಮುಟ್ಟಿದರೆ ಮೈಲಿಗೆ ಇಲ್ಲ. ಮುಟ್ಟಾದವಳು ತಾನು ಮಲಗಿದ ಸ್ಥಾನವನ್ನು, ಊಟ ಮಾಡಿದ ಸ್ಥಳವನ್ನು ಪ್ರತಿ ಬಾರಿ ಸಗಣಿಯಲ್ಲಿ ಸಾರಿಸಬೇಕು.(ಗೊಂಡರು)

4. ಸೂತಕ ಕಳೆಯಲು ಹುಡುಗಿಯನ್ನು ನೀರಿನ ಬಳಿ ಕರೆದುಕೊಂಡು ಹೋಗಿ ಒನಕೆ ದಾಟಿಸುತ್ತಾರೆ.(ಕಾಡು ಕುರುಬರು)

5. ಮೈನೆರೆದ ಕೂಡಲೆ ಹೆಣ್ಣನ್ನು ಹಾಲು ಬರುವ ಮರದ ಬುಡದಲ್ಲಿ ಕೂರಿಸುತ್ತಾರೆ. ಬಂಧು ಸಮಾಜದ ವಿಭಿನ್ನ ಬಳಿಯ ಹೆಂಗಸರು ಕೂಡಿ ನೀರೆರದು ಮೈನೆರೆದ ಹೆಣ್ಣುಮಗಳನ್ನು ಸ್ನಾನ ಮಾಡಿಸುತ್ತಾರೆ. ಏಳನೇ ದಿನ ಸೂರ್ಯನಿಗೆ ಕೈಮುಗಿಸಿ ಹರಿವ ನೀರಿನಲ್ಲಿ ಸ್ನಾನ ಮಾಡಿಸಿ ಮನೆಯ ಮುಂದಿನ ಅಂಗಳದಲ್ಲಿ ಕ್ರಿಯಾ ವಿಧಿಗಳನ್ನು ನಡೆಸಿ ಆ ಬಳಿಕ ಮನೆಯ ಒಳಗೆ ಕರೆದು ಕೊಳ್ಳುತ್ತಾರೆ.(ಕೊರಗರು)

6. ಋತುಮತಿಯಾದ ಹುಡುಗಿಯನ್ನು ಕೆರೆಗೆ ಕರೆದುಕೊಂಡು ಹೋಗಿ ಸ್ನಾನ ಮಾಡಿಸುತ್ತಾರೆ. ಗಂಗಾ ಪೂಜೆಯನ್ನು ಮಾಡಿ ಹುಡುಗಿಯ ಕೈಯಲ್ಲಿ ಒಂದು ಮಡಕೆಯಲ್ಲಿ ನೀರು ಹಿಡಿಸಿಕೊಂಡು ವಾದ್ಯ ಘೋಷಗಳೊಂದಿಗೆ ಮೆರವಣಿಗೆಯಲ್ಲಿ ಮನೆಗೆ ಬರುತ್ತಾರೆ. ನಂತರ ಹುಡುಗಿ ಹಿರಿಯರಿಗೆ ಎಲೆ ಅಡಿಕೆ ನೀಡಿ ಕಾಲಿಗೆ ಬಿದ್ದು ಆರ್ಶಿವಾದ ಪಡೆದುಕೊಳ್ಳುತ್ತಾಳೆ.(ಪಣಿಯರು)

7. ಹೆಣ್ಣು ಮಕ್ಕಳು ಮೈನೆರೆತಾಗ ಮನೆಯ ಮುಂದೆ ಹೊಂಗೆ ಮತ್ತು ಬೇವಿನ ಸೊಪ್ಪಿನಿಂದ ಗುಡಿಸಲು ನಿರ್ಮಿಸಿ ಅದರಲ್ಲಿ ಈ ಹೆಣ್ಣುಮಗಳನ್ನು ಹನ್ನೊಂದು ದಿನದವರೆಗೆ ಇರಿಸಲಾಗುತ್ತದೆ. ಹನ್ನೊಂದನೆ ದಿನ ಊರ ಹೊರಗೆ ಕರೆದೊಯ್ದು ಸ್ನಾನ ಮಾಡಿಸಿ ವಾದ್ಯ ಸಮೇತ ಹಟ್ಟಿಯೊಳಗೆ ಕರೆತರುವರು. ಬರುವಾಗ ಮಾರ್ಗ ಮಧ್ಯೆದಲ್ಲಿ ತಂಗಟೆ ಗಿಡವನ್ನು ಅತ್ತಿಂದ ಇತ್ತ, ಇತ್ತಿಂದ ಅತ್ತ ಮೂರು ಬಾರಿ ದಾಟಿಸುತ್ತಾರೆ. ಅನಂತರ ದೇವಸ್ಥಾನದ ಬಳಿ ಬಂದು ಪೂಜಾರಿಗೆ ಎಲೆ ಅಡಿಕೆ ಹಾಗೂ ಕಾಸು ಕೊಟ್ಟು ದೇವರಿಗೆ ನಮಸ್ಕಾರ ಮಾಡುತ್ತಾರೆ. ಅಲ್ಲಿಂದ ನೇರವಾಗಿ ಮನೆಯ ಬಳಿ ಕರೆದುಕೊಂಡು ಬರುತ್ತಾರೆ. ಮನೆಯ ಮುಂದಿನ ಅಂಗಳದಲ್ಲಿ ಕರೆ ಕಂಬಳಿ ಹಾಸಿ ಅದರ ಮುಂದೆ ಕುರಿಯ ಒಣ ಪಿಕ್ಕೆಯಿಂದ ಕೆಂಡಮಾಡಿರಲಾಗುತ್ತದೆ. ಆ ಕೆಂಡದಿಂದ ಬೇವಿನ ಕಡ್ಡಿಯ ಮೂಲಕ ಅವಳ ನಾಲಗೆಯನ್ನು ಸುಡಲಾಗುತ್ತದೆ. ಇದ್ದಿಲನಿಂದ ಹಲ್ಲುಜ್ಜಿಸಿ ಬಾಯಿ ತೊಳೆಸುತ್ತಾರೆ. ನಂತರ ಅಲ್ಲಿ ಹಾಕಿದ್ದ ಎಡೆಯನ್ನು ತಿನ್ನಲು ನಾಯಿಯೊಂದನ್ನು ಹಿಡಿದು ತರುತ್ತಾರೆ. ಆ ನಾಯಿ ಅನ್ನ ತಿನ್ನುವುದಕ್ಕೆ ಮೊದಲೇ ಅದರ ಕಿವಿ ಹಿಂಡಿ ಹೋಡಿಸುತ್ತಾರೆ. ಈ ಕಾರ್ಯವನ್ನು ಅವಳ ಸೋದರ ಮಾವನೇ ಮಾಡಬೇಕೆಂಬುದು ನಿಯಮ. ಕೊನೆಯಲ್ಲು ಅವಳು ಸೋದರ ಮಾವನಿಗೆ ಉತ್ತುತ್ತಿ, ಕೊಬ್ಬರಿ, ಎಲೆ ಅಡಿಕೆ ಮತ್ತು ಕಾಸು ಕೊಡುತ್ತಾಳೆ. ಅಲ್ಲಿಗೆ ಸೂತಕ ಮುಗಿಯಿತೆಂದು ಭಾವಿಸಲಾಗುತ್ತದೆ.(ಮ್ಯಾಸನಾಯಕರು)

8. ಹದಿಮೂರನೇ ದಿನ ಋತುಮತಿಯಾದ ಹೆಣ್ಣು ಮಗಳು ಹಟ್ಟಿಯ ಮೂಡಲ ಮೂಡಲ ದಿಕ್ಕಿನಿಂದ ಸ್ನಾನಮಾಡಿ ಮಡಿ ಬಟ್ಟೆಗಳನ್ನು ಉಟ್ಟು ಹಟ್ಟಿಯೊಳಗೆ ಬರುವಳು. ಅವಳಿಗೆ ಮೈತುಂಬಾ ಕಂಬಳಿ ಹೊದಿಸಿ ಕೈಯಲ್ಲಿ ಉರಿಯುವ ಹಣತೆಯನ್ನು ಕೊಡುತ್ತಾರೆ. ಆಕೆಯನ್ನು ನಿದಾನವಾಗಿ ನಡೆಸಿಕೊಂಡು ಗುಡಿಗೆ ಬರುತ್ತಾರೆ. ಗುಡಿಯಲ್ಲಿ ಪೂಜಾರಿಗೆ ಎಲೆ ಅಡಿಕೆ ಕೊಟ್ಟು ಪೂಜೆ ಮಾಡಿಸಿದ ಮೇಲೆ ಅಲ್ಲಿಂದ ಆಕೆಯನ್ನು ಮತ್ತೆ ಹಟ್ಟಿಗಳ ಮುಂದೆ ಗೀತೆಗಳನ್ನು ಹಾಡಿಕೊಂಡು ಮೆರವಣಿಗೆಯ ಮೂಲಕ ಮನೆಗೆ ಸೇರಿಸಿಕೊಳ್ಳುತ್ತಾರೆ.(ಕಾಡುಗೊಲ್ಲರು)

ಮರಣ : ಮರಣ ಬಹುತೇಕ ಎಲ್ಲಾ ಸಮುದಾಯಗಳಲ್ಲಿ ಸೂತಕವೇ. ಸೂತಕದ ಜೊತೆಗೆ ನೋವಿನ ಸಂಗತಿ. ಬುಕಟ್ಟುಗಳಲ್ಲಿ ಈ ನೋವು ಮತ್ತು ಸೂತಕಗಳಲ್ಲಿ ಸೂತಕಕ್ಕೆ ಮೊದಲ ಆದ್ಯತೆ. ನೋವಿನ ನಡುವೆಯೂ ಸೂತಕದ ಆಚರಣೆಗಳನ್ನು ಕಟ್ಟು ನಿಟ್ಟಾಗಿ ಆಚರಿಸುತ್ತಾರೆ. ಮರಣವಾದ ಮನೆಯವರು ಮತ್ತು ಅವರ ಬಳಿಯವರಿಗೆಲ್ಲ ಹೊರಗಡೆ ಹೋಗುವುದಾಗಲಿ, ಶುಭಕಾರ್ಯಗಳಲ್ಲಿ ಭಾಗವಹಿಸುವುದಾಗಲಿ ನಿಷಿದ್ಧವಾಗಿರುತ್ತದೆ. ಊಟ ಉಪಚಾರ ಮತ್ತಿತರ ನಡಾವಳಿಗಳ ಮೇಲೆ ನಿರ್ಬಂಧವಿರುತ್ತದೆ. ಇಂಥ ನಿರ್ಬಂಧಗಳು ಸೂತಕ ಪರಿಹಾರದ ನಂತರ ಸಹಜ ಸ್ಥಿತಿಗೆ ಬರುತ್ತವೆ. ಅಂಥ ಕೆಲವು ಸೂತಕ ಪರಿಹಾರದ ಆಚರಣೆಗಳನ್ನು ಈ ಮುಂದಿನಂತೆ ವಿವರಿಸಿಕೊಳ್ಳಬಹುದು :

1. ಸಾವಿನ ಸೂತಕ ಒಂಬತ್ತರಿಂದ ಹನ್ನೊಂದನೇ ದಿನದವರೆಗೆ ಇರುತ್ತದೆ. ಅಥವಾ ಶುಚಿ ಕಾರ್ಯ ಆಗುವವರೆಗೆ ಇರುತ್ತದೆ. ಶುಚಿ ಕಾರ್ಯದ ದಿನ ಮನೆಯನ್ನೆಲ್ಲಾ ತೊಳೆಯುತ್ತಾರೆ. ಸಗಣಿಯಿಂದ ನೆಲ ಸಾರಿಸುತ್ತಾರೆ. ಬ್ರಾಹ್ಮಣ ಭಟ್ಟರಿಂದ ಅಥವಾ ಲಿಂಗಯತ ಜಂಗಮನಿಂದ ತಂದ ತೀರ್ಥವನ್ನು ಸಿಂಪಡಿಸುತ್ತಾರೆ.(ಹಸಲರು)

2. ಸಾವಿನ ಒಂಬತ್ತನೇ ದಿನದಂದು ಕುರಿ ಕುಯ್ದು ಮಾಂಸದ ಅಡಿಗೆ ಮಾಡಿ ತಮ್ಮ ಬಳಿಯರಿಗೆಲ್ಲ ಊಟ ಹಾಕುತ್ತಾರೆ. ನಂತರ ದೈವದವರು ಕೂಡಿ ಹುಣಸೆ ಸೊಪ್ಪಿನಿಂದ ಗೋಮೂತ್ರ ಸಿಂಚನಗೈದು ಸೂತಕ ಪರಿಹಾರ ಮಾಡುತ್ತಾರೆ.(ಗೌಳಿಗರು)

3. ಹೆಣವನ್ನು ಹೂಳಲು ಹೋದವರು ಹೊಳೆಯಲ್ಲಿ ಸ್ನಾನಮಾಡುತ್ತಾರೆ. ನಂತರ ಸತ್ತವರ ಮನೆಗೆ ಬರುತ್ತಾರೆ. ಅಲ್ಲಿ ಹೆಂಗಸರು ಮನೆಯನ್ನು ಸಾರಿಸಿ, ಚಪ್ಪೆ ಗಂಜಿ ಮಾಡಿರುತ್ತಾರೆ. ಸಿಂಹನ ಬೇಟೆಗೆ (ಸಂಸ್ಕಾರಕ್ಕೆ)ಹೋಗಿ ಬಂದವರಿಗೆ ಗೋಮಯ ಹಾಗೂ ಮಾವಿನ ಚಕ್ಕೆ ಹಾಕಿದ ನೀರಿನಲ್ಲಿ ಯಾದಿ ಮಾಡಿ ಎಲೆಯನ್ನು ಅದ್ದಿಸಿಕೊಡುತ್ತಾರೆ. ಅದನ್ನು ಅವರು ಎಡಗೈಯಲ್ಲಿ ಮೂಸಿ ಒಗೆಯುತ್ತಾರೆ. ಹಾಗೆಯೆ ಸಂಸ್ಕಾರಕ್ಕೆ ಹೋಗಿ ಬಂದವರಿಗೆಲ್ಲ ನಾಳೆಗೆ ಬರಬೇಡಿ ಎಂದು ಎಡಗೈಯಲ್ಲಿ ಗೋಮಯ ಹೊಡೆಯುತ್ತಾರೆ.(ಮುಕ್ರಿಯರು)

4. ಸಾವಾದ ವ್ಯಕ್ತಿಯನ್ನು ಸಂಸ್ಕಾರ ಮಾಡಿದ ನಂತರ ಪಕ್ಕದಲ್ಲಿದ್ದ ಹಳ್ಳ ಅಥವಾ ಬೋರ್ವೆಲ್ ಬಳಿ ಕೈ ಕಾಲು ಮುಖ ತೊಳೆದು ನೆಂಟರು ಬಂಟರು ಪರಸ್ಪರ ಎಲೆ ಅಡಿಕೆ ಹಂಚಿಕೆ ಮಾಡಿಕೊಂಡು ಹಟ್ಟಿಗೆ ಬರುತ್ತಾರೆ. ಮೊದಲು ಸತ್ತವರ ಮನೆಗೆ ಬಂದು ದೀಪ ನೋಡುತ್ತಾರೆ. ಆ ಮನೆಯ ಒಳಗೆ ಹೋಗುವ ಮುನ್ನ ಮನೆಯ ಬಾಗಿಲಲ್ಲೇ ಸಗಣಿ, ಎಕ್ಕೆ ಎಲೆಗಳು ಹಾಗೂ ನೀರನ್ನು ಇಟ್ಟಿರುತ್ತಾರೆ.

ಅವುಗಳನ್ನು ಎಡಗೈಯಲ್ಲಿ ಸ್ವಲ್ಪ ತೆಗೆದುಕೊಂಡು ಮೈಗೆ ಚಿಮುಕಿಸಿ ಕೊಂಡು ಹೊಳಗೆ ಹೊಗಿ ದೀಪ ನೋಡಬೇಕು. ನೋಡಿ ಅಲ್ಲಿಯೇ ಒಂದರೆಡು ಸೆಕೆಂಡ್ ಗಳ ಕಾಲ ಕುಳಿತುಕೊಳ್ಳ ಬೇಕು ನಂತರ ನೇರವಾಗಿ ದೇವಾಸ್ಥಾನಕ್ಕೆ ಹೋಗಿ ದೇವರಿಗೆ ಕೈಮುಗಿದು ತಮ್ಮ ತಮ್ಮ ಮನೆಗಳಿಗೆ ವಾಪಾಸ್ಸು ಹೋಗಬೇಕು. ಇದಾದ ಮೂರನೇ ದಿನಕ್ಕೆ ಸಣ್ಣ ದಿವಸ ಮಾಡುತ್ತಾರೆ. ಆ ದಿನ ಬೆಳಗ್ಗೆ ಹೆಣ ಹೊತ್ತವರಿಗೆ ಹೊರೆ ಇಳಿಸುವ ಕಾರ್ಯಕ್ರವಿರುತ್ತದೆ. ಆ ನಂತರ ಮನೆಯನ್ನು ಶುಚಿಗೊಳಿಸಿ ಕೂಳು ಹಾಕುವ ಶಾಸ್ತ್ರವಿರುತ್ತದೆ.(ಮ್ಯಾಸನಾಯಕರು)

ಇತರೆ ಮೈಲಿಗೆ ಸಂದರ್ಭಗಳು:

1. ಚಪ್ಪಲಿಯಲ್ಲಿ ಹೊಡೆದರೆ, ಹೊಡೆಸಿಕೊಂಡವನು ದಾಸಯ್ಯನ ಮೂಲಕ ಮಠಕ್ಕೆ ಹೋಗಿ ಸ್ವಾಮಿಗಳಿಂದ ತೀರ್ಥ ಹಾಕಿಸಿಕೊಂಡು ಬರಬೇಕು(ಹಸಲರು)

2. ತಮ್ಮದಲ್ಲದ ಬುಡಕಟ್ಟಿನಲ್ಲಿ ವಿವಾಹವಾದರೆ ಇಂಥ ವಿಶೇಷ ಸಂದರ್ಭಗಳಲ್ಲಿ ಒಂದು ಹುಲ್ಲಿನ ಗುಡಿಸಲಿಗೆ ಹೆಣ್ಣನ್ನು ಕೂಡಿಹಾಕಿ ಬೆಂಕಿ ಹಚ್ಚುತ್ತಾರೆ. ಅದರಿಂದ ತಪ್ಪಿಸಿಕೊಂಡು ಹೆಣ್ಣು ಹೊರ ಬರಬೇಕು. ಹಾಗೆ ಹೊರಬಂದ ನಂತರ ಸುಟ್ಟ ಬೂದಿಯನ್ನು ಸಮುದಾಯದ ಮುಖ್ಯಸ್ಥ ಆ ಹೆಣ್ಣಿಗೆ ತಿನ್ನಿಸುತ್ತಾನೆ. ಅಲ್ಲಿಂದ ಅವಳು ಮೂಲ ಸ್ಥಿತಿಗೆ ಬಂದಳೆಂದು ಭಾವಿಸಲಾಗುತ್ತದೆ.(ಸಿದ್ದಿಗಳು)

3. ಉತ್ತರ ಕನ್ನಡ ಜಿಲ್ಲೆಯ ಸಿದ್ದಿಗಳಲ್ಲಿ ಇತರೆ ಬುಡಕಟ್ಟುಗಳಲ್ಲಿ ದೇವರು ಮೈಮೇಲೆ ಬರುವುದು ಸಾಮಾನ್ಯವಾದರೂ ಅದರ ಹಿಂದಿನ ತಿಳುವಳಿಕೆಗಳಲ್ಲಿ ವ್ಯತ್ಯಾಸವಿದೆ. ಮನೆಯಲ್ಲಿ ಏನಾದರೂ ತೊಂದರೆಯಾದರೆ, ಹಿರಿಯರ ಆತ್ಮಗಳಿಗೆ ಅತೃಪ್ತಿಯಾದರೆ ಕುಟುಂಬದ ವಯಸ್ಕರಲ್ಲಿ ಯಾರಾದರೂ ಒಬ್ಬರಿಗೆ ಮೈಮೇಲೆ ಬರುತ್ತದೆ. ಮೈಮೇಲೆ ಬಂದಾಗ ಮನೆಯಲ್ಲಿ ತೊಂದರೆಯಾಗಿರುವ ಕಾರಣವನ್ನು ಹಾಗೂ ಅದರ ಉಪಶಮನಕ್ಕೆ ಮಾಡಬೇಕಾದ ಕೆಲಸಗಳನ್ನು ದೇವರು ಕುಟುಂಬದವರಿಗೆ ತಿಳಿಸಿ ಹೇಳುವುದು. ನಂತರ ಕುಟುಂಬದ ಯಜಮಾನನು ಮನೆಯ ಗೃಹ ಶುದ್ಧಿಮಾಡುವನು. ಇಂಥ ಕೆಲಸಕ್ಕೆ ಆಕಳ ಸಗಣಿಯು ಬಹಳ ಮುಖ್ಯ.(ಸಿದ್ಧಿಗಳು)

4. ಯಾವುದಾದರೂ ತಪ್ಪು ಮಾಡಿದ ವ್ಯಕ್ತಿಯನ್ನು ಕುಲದಿಂದ ಹೊರ ಹಾಕುವಾಗ ಅಪರಾಧಿಯ ಕೊರಳಿಗೆ ದನದ ಮೂಳೆಯ ಸರವನ್ನು ಹಾಕಿ ಕುಲದ ಹಿರಿಯರು ಬಹಿಷ್ಕಾರ ಹಾಕುತ್ತಾರೆ. ಹೀಗೆ ಕುಲದಿಂದ ಬಹಿಷ್ಕರಿಸಲ್ಪಟ್ಟ ವ್ಯಕ್ತಿ ಒಂದು ವೇಳೆ ಕುಲಕ್ಕೆ ಸೇರಲು ಇಚ್ಛಿಸಿದರೆ ಹಿರಿಯರಿಗೆ ಬೇಡಿಕೆ ಸಲ್ಲಿಸಬೇಕು. ಹಿರಿಯರು ಮಾಡಿದ ತಪ್ಪಿಗೆ ಪರಿಹಾರವನ್ನು ಜೊತೆಗೆ ಇಡೀ ಕುಲಕ್ಕೆ ಊಟವನ್ನು ಹಾಕಬೇಕೆಂದು ಷರತ್ತು ಹಾಕುತ್ತಾರೆ. ಇದಕ್ಕೆ ಬಹಿಷ್ಕೃತ ಒಪ್ಪಿದರೆ ಆಗ ಆ ವ್ಯಕ್ತಿಯನ್ನು ಕುಲಕ್ಕೆ ಸೇರಿಸಿಕೊಳ್ಳುವ ಆಚರಣೆಯೊಂದು ನಡೆಯುತ್ತದೆ. ಅದರ ಸ್ವರೂಪ ಹೀಗಿರುತ್ತದೆ. ಮೊದಲು ಅಪರಾದಿಯ ತಲೆ ಬೋಳಿಸುತ್ತಾರೆ. ಮಿಂದು ಮಡಿಯುಟ್ಟು ಬಂದ ಅವನನ್ನು ಊರಿಂದ ಹೊರಗಡೆ ಏಳು ಪರದೆಯ ಆಚೆ ನಿಲ್ಲಿಸಿ ಒಂದೊಂದು ತೆರೆಯನ್ನು ದಾಟಿದಾಗಲೂ ಗೋಮೂತ್ರ ಕುಡಿಯುತ್ತ ಹೀಗೆ ಏಳು ಬಾರಿ ತೀರ್ಥ ಕುಡಿದು ಏಳು ತೆರೆಗಳನ್ನು ದಾಟಿಸಿಕೊಂಡು ಊರೊಳಗೆ ಕರೆದುಕೊಂಡು ಬರುತ್ತಾರೆ.(ಸೋಲಿಗರು)

5. ಚರ್ಮದ ಚಪ್ಪಲಿಯಿಂದ ಏಟು ತಿಂದವನು ಮೈಲಿಗೆಯಾಗುತ್ತಾನೆ. ಹೀಗೆ ಅಶುಚಿಯಾದವನನ್ನು ಶುಚಿಗೊಳಿಸಿ ಮರಳಿ ಒಳಕ್ಕೆ ಕರೆದು ಕೊಳ್ಳಲು ನಾಗಬೆತ್ತದ ತೀರ್ಥವನ್ನು ಊರ ಗೌಡನಿಂದ ಪ್ರೋಕ್ಷಿಸಿಕೊಳ್ಳುತ್ತಾರೆ(ಕರೆ ಒಕ್ಕಲರು)

6. ಮೆಟ್ಟನಿಂದ ಹೊಡೆದಾಡಿಕೊಳ್ಳುವುದು ವಿಧವೆಯರು ಅನೈತಿಕ ಸಂಬಂಧದ ಮೂಲಕ ಗರ್ಭಧರಿಸುವುದನ್ನು ಗಾಮೊಕ್ಕಲು ಮಹಾ ಅಪರಾಧವೆಂದು ಭಾವಿಸುತ್ತಾರೆ. ಮೆಟ್ಟಿನಿಂದ ಹೊಡೆದವ ಮತ್ತು ಹೊಡೆಸಿಕೊಂಡವ ಇಬ್ಬರೂ ಗೋಕರ್ಣಕ್ಕೆ ಹೋಗಿ ತೀರ್ಥ ಸ್ನಾನಮಾಡಿ ಶುದ್ಧವಾಗಿ ಬರಬೇಕು. ವಿಧವೆಯರ ಅನೈತಿಕ ಬಸಿರಿಗೆ ಕಾರಣರಾದವರು ಗೋಕರ್ಣಕ್ಕೆ ಹೋಗಿ ಗಡ್ಡ ಮೀಸೆ ಬೋಳಿಸಿ, ತೀರ್ಥ ಸ್ನಾನಮಾಡಿಸಿಕೊಂಡು ಬರಬೇಕು.(ಗಾಮೊಕ್ಕಲು)

7. ವಿಧವೆ ಗರ್ಭಿಣಿಯಾದರೆ ಮುಕ್ರಿಯರು ಆಕೆಗೆ ಬಹಿಷ್ಕಾರ ಹಾಕುತ್ತಾರೆ. ಇದಕ್ಕೆ ಕಾರಣನಾದ ಪುರುಷ ಮೊದಲು ಗೋಕರ್ಣಕ್ಕೆ ಹೋಗಿ ತಲೆ ಬೋಳಿಸಿಕೊಂಡು ತೀರ್ಥ ಹಾಕಿಸಿಕೊಂಡು ಬರಬೇಕು. ನಂತರ ಊರಿಗೆ ಬಂದು ಜಾತಿಯ ಇಬ್ಬರು ಗೃಹಸ್ಥರ ಮುಂದೆ ಸ್ನಾನ ಮಾಡಿ ಅಲ್ಲಿಯೇ ಹಂಗಾಮಿಯಾಗಿ ನಿರ್ಮಿಸಿದ ಏಳು ಕಡಜನ ಗುಡಿಸಲುಗಳನ್ನು ಆತ ಪ್ರವೇಶಿಸಬೇಕು ಕೊನೆಗೆ ಆ ಗುಡಿಸಲುಗಳಿಗೆ ಬೆಂಕಿ ಹಚ್ಚಿ ಸುಡುತ್ತಾರೆ.(ಮುಕ್ರಿಯರು)

8. ಹೆಣ್ಣು ಮದುವೆಗಿಂತ ಮೊದಲೇ ಗರ್ಭಿಣಿಯಾದರೆ ಆಕೆಯ ಗೊಂಬೆಯನ್ನು ಹುಲ್ಲಿನಿಂದ ಸುಟ್ಟು ಹಾಕುತ್ತಾರೆ(ಗೌಡಾಲು)

9. ಕಾಡುಗೊಲ್ಲರಲ್ಲಿ ಹೆಣ್ಣಿರಲಿ ಗಂಡಿರಲಿ ತಮ್ಮದಲ್ಲದ ಸಮಾಜದ ವ್ಯಕ್ತಿಗಳೊಡನೆ ದೈಹಿಕ ಸಂಬಂಧಗಳನ್ನು ಇಟ್ಟುಕೊಂಡಿದ್ದೇ ಆದರೆ ಅವರು ಕುಲವನ್ನು ಬಿಟ್ಟು ಹೋಗಬೇಕು ಇಲ್ಲವಾದರೆ ಕುಲದ ಹಿರಿಯರು ಒಳಪಡಿಸುವ ಶುದ್ಧೀಕರಣ ಪ್ರಕ್ರಿಯೆಗೆ ಒಳಗಾಗಬೇಕು. ಇಲ್ಲಿ ಮೊದಲು ದೇವರನ್ನು ಗಂಗಾ ಪೂಜೆಗೆ ಹೊರಡಿಸಬೇಕು. ಅದರ ಖರ್ಚನ್ನು ತಪ್ಪಿತಸ್ಥರೇ ನೀಡಬೇಕಾಗುತ್ತದೆ. ಗಂಗಾ ಪೂಜೆಗೆ ಹೋಗುವಾಗ ದಾರಿಯಲ್ಲಿ ಮೂರು ಕಡೆ ಹುಲ್ಲಿನ ಗುಡಿಸಲುಗಳನ್ನು ಹಾಕಿರುತ್ತಾರೆ. ಅಪರಾಧಿಯು ಈ ಮೂರು ಗುಡಿಸಲಿಗಳಲ್ಲಿ ಒಂದೊಂದಕ್ಕೂ ಒಳಗೆ ಪ್ರವೇಶ ಮಾಡುತ್ತಿದ್ದಂತೆ ಯಜಮಾನ ಆ ಗುಡಿಸಲಿಗೆ ಬೆಂಕಿ ಹಚ್ಚುತ್ತಾನೆ. ಅದರಿಂದ ಆತ ತಪ್ಪಿಸಿಕೊಳ್ಳಬೇಕು. ಆನಂತರ ಅವರು ಏಳು ಕೆರೆ ಅಥವಾ ಬಾವಿಗಳಲ್ಲಿ ಸ್ನಾನ ಮಾಡಿಬರಬೇಕು. ಅನಂತರ ಊಟದ ವ್ಯವಸ್ಥೆ ಇರುತ್ತದೆ. ಊಟದ ಸಮಯದಲ್ಲಿ ಅಪರಾಧಿಯಾದವರು ನೆಲದಲ್ಲಿ ಗುಂಡಿ ತೋಡಿಕೊಂಡು ಅದಕ್ಕೆ ಅಂಬಲಿ ಸುರಿದು ಅದನ್ನು ನೆಕ್ಕುತ್ತಿರಬೇಕು. ಆಗ ಯಜಮಾನನೊಬ್ಬ ಆ ಅಪರಾಧಿಯನ್ನು ನಾಯಿಯನ್ನು ಕರೆಯುವಂತೆ ಕರೆಯುತ್ತಾನೆ. ಅವರು ಎದ್ದು ಬಂದರೆ ಯಜಮಾನ ತನ್ನ ಕೈಯಲ್ಲಿ ಹಿಡಿದ ಬರಲಿನಿಂದ ಹೊಡೆಯುತ್ತಾನೆ. ನಂತರ ಪೂಜಾರಿ ತಪ್ಪಿತಸ್ಥರ ನಾಲಗೆಯನ್ನು ಬೇವಿನ ಕಡ್ಡಿಯಿಂದ ಸುಡುವನು. ಕೊನೆಗೆ ಹಸುವಿನ ಗಂಜಳವನ್ನು ತೀರ್ಥದಂತೆ ಕುಡಿಯ ಬೇಕು. ಅಲ್ಲಿಗೆ ಅವರು ಶುದ್ಧಿಯಾದಂತೆ.(ಕಾಡುಗೊಲ್ಲರು)

10. ಮ್ಯಾಸನಾಯಕರಲ್ಲಿ ಅನ್ಯ ಸಮುದಾಯದ ಪುರುಷರ ಜೊತೆ ದೈಹಿಕ ಸಂಬಂಧವನ್ನು ಬೆಳೆಸಿದರೆ ಅವಳನ್ನು ಕುಲದಿಂದ ಹೊಗಿಡುತ್ತಾರೆ. ಮತ್ತೆ ಅವಳನ್ನು ಕುಲದ ಒಳಗೆ ಕರೆದುಕೊಳ್ಳಲು ಮಾಡುವ ಒಂದು ಆಚರಣೆ ಹೀಗಿದೆ : ಹಟ್ಟಿಯ ಹೊರಗೆ ಏಳು ಗುಡಿಸಲುಗಳನ್ನು ನಿರ್ಮಿಸುತ್ತಾರೆ. ಆನಂತರ ಅವಳ ತಲೆ ಬೋಳಿಸಿ ಗುಡಿಸಲೊಳಗೆ ಕಳುಹಿಸುತ್ತಾರೆ. ಅವಳು ಒಂದೊಂದು ಗುಡಿಸಳೊಳಗೆ ಹೋದಾಕ್ಷಣ ಆ ಗುಡಿಸಲಿಗೆ ಬೆಂಕಿ ಹಚ್ಚುತ್ತಾರೆ. ಅವಳು ಆ ಬೆಂಕಿಯಿಂದ ತಪ್ಪಿಸಿಕೊಳ್ಳಬೇಕು. ಕೊನೆಯಲ್ಲಿ ಗೋ ಗಂಜಳ

ಚಿಮುಕಿಸಿಕೊಂಡು ಪರಿಶುದ್ಧಳಾಗುತ್ತಾಳೆ. (ಮ್ಯಾಸ ನಾಯಕರು)

11. ಚಪ್ಪಲಿಯಲ್ಲಿ ಹೊಡೆದಾಡಿದರೆ, ಹೊಡೆದವರು ಹೊಡಿಸಿಕೊಂಡವರು ಇಬ್ಬರೂ ಕುಲಗೆಟ್ಟಂತೆ. ಹೀಗೆ ಕುಲಗೆಟ್ಟವರು ದೇವರ ಎತ್ತುಗಳ ಗೂಡಿಗೆ ಬಂದು ನೀರಾಕಿಸಿಕೊಂಡು ಹೋಗಬೇಕು. ನೀರು ಹಾಕಿ ಸಿದ್ಧಿ ಮಾಡುವವನು ದೇವರ ಎತ್ತಿನ ಕಿಲಾರಿ. ಚಪ್ಪಲಿಯಲ್ಲಿ ಹೊಡೆದವನು ಭತ್ಯೆ(ಧಾನ್ಯ)–ಬೇಟೆ ದಂಡ ಕೊಡಬೇಕು. ಹೀಗೆ ಕೊಟ್ಟ ಬತ್ತ್ಯೆಯನ್ನು ಬೇಟೆಯನ್ನು ಊರಿನ ಯಜಮಾನರಿಗೆ ತಿಳಿಸಿ ಗೂಡಿಗೆ ತರಬೇಕು. ಅವೊತ್ತು ಗೂಡಲ್ಲಿ ಅನ್ನ ಮಾಡಿ ಮೂರು ಎಡೆ ಹಾಕುತ್ತಾರೆ. ಅಲ್ಲಿ ಪೂಜೆ ಮಾಡಿ ಯಜಮಾನ ಬೇಟೆ ಕಡಿಯುತ್ತಾನೆ. ನಂತರ ಕಿಲಾರಿ ತಂದುಕೊಡುವ ದೇವರ ಎತ್ತುಗಳ ತೀರ್ಥ(ಗಂಜಲು) ಹಿಡಿದು ಪೂಜೆಗೆ ಇಟ್ಟಿರುತ್ತೇನೆ. ಆ ಮೇಲೆ ಆ ತೀರ್ಥವನ್ನು ಗೌಡರ ಕೈಗೆ ಕೊಡುತ್ತಾನೆ. ಅಲ್ಲಿಯವರೆಗೂ ಕುಲಗೆಟ್ಟವರು ಗೂಡಿನ ಹೊರಗೆ ಇರುತ್ತಾರೆ. ಆಗ ಗೌಡ್ರು ಈ ತೀರ್ಥ ತಗೆದುಕೊಂಡು ಹೋಗಿ ಅವರಿಗೆ (ಕುಲಗೆಟ್ಟವರಿಗೆ) ಕುಡಿಸಿ, ಮೈಗೆ ಚಿಮುಕಿಸಿ ಗೂಡಿನ ಒಳಗೆ ಕರೆದುಕೊಳ್ಳುತ್ತಾನೆ. ಆಮೇಲೆ ಮಾಂಸಾಹಾರ ಮಾಡಿರುತ್ತಾರೆ. ಆ ಮುದ್ದೆ ಊಣ್ಣುವಾಗ ಎಲ್ಲರ ಜನ್ನೆಗಳಿಂದ ಅಂದರೆ ಏಳು ಜನ ಹಿರಿಯರು ತಮ್ಮ ಜನ್ನೆಯಿಂದ ಒಂದೊಂದು ತುತ್ತನ್ನು ಕುಲಗೆಟ್ಟವರಿಗೆ ಕೊಡುತ್ತಾರೆ. ಅದನ್ನು ಅವರು ತಿಂದು ಶುದ್ಧನಾಗಬೇಕು. ಹೊಡೆಸಿಕೊಂಡವರು, ಹೊಡೆದವರು ಒಂದೇ ದಿನ ಬರುವುದಿಲ್ಲ. ಬೇರೆ ಬೇರೆ ದಿನ ಬಂದು ಶುದ್ಧರಾಗಿ ಹೋಗುತ್ತಾರೆ. ಜೈಲಿಗೆ ಹೋಗಿ ಬಂದವರು ಕೂಡ ಕುಲಗೆಟ್ಟಿರುತ್ತಾರೆ. ಅವರನ್ನು ಹೀಗೆ ಶುದ್ಧ ಮಾಡುತ್ತಾರೆ.(ಮ್ಯಾಸನಾಯಕರು)

ಬುಡಕಟ್ಟುಗಳ ಶುದ್ಧೀಕರಣ ಪದ್ಧತಿಗಳ ಲೋಕದೃಷ್ಟಿ: ಬುಡಕಟ್ಟುಗಳ ವಿಶೇಷ ಲಕ್ಷಣವೆಂದರೆ ಅತಿಯಾದ ಮಡಿವಂತಿಕೆ. ಬಹುಬೇಗ ಮೈಲಿಗೆಯ ಭಾವನೆಯನ್ನು ತಾಳುವ ಇವರು ಅಷ್ಟೇ ಬೇಗ ಹಾಗೂ ಅಷ್ಟೇ ಸುಲಭ ಮಾರ್ಗದಲ್ಲಿ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ ಎಂಬುದು. ಮೇಲಿನ ಉಲ್ಲೇಖಗಳಿಂದ ನಾವು ತಿಳಿಯಬಹುದಾದ ಸಂಗತಿಗಳೆಂದರೆ :

1. ಶುದ್ಧೀಕರಣಕ್ಕೆ ಇವರು ಬಳಸುವ ವಸ್ತುಗಳೆಂದರೆ ದೇವರ ತೀರ್ಥ, ಗೋಗಂಜಳ, ಬೇವಿನ ಕಡ್ಡಿ ಮತ್ತು ಸೊಪ್ಪು, ಉರಿವ ಬೆಂಕಿ, ಹರಿವ ಜಲ, ಬೂದಿ, ಸಗಣಿ, ಎಕ್ಕೆಗಿಡ, ಉಣಿಸೆ ಎಲೆ, ಮಾವಿನ ಚಕ್ಕೆ, ಆಕಳು ಹಾಲು ಅಥವಾ ಜಿನ್ನಿಗೆ ಹಾಲು ಇವುಗಳನ್ನು ಮೈಮೇಲೆ ಪ್ರೋಕ್ಷಣೆ ಮಾಡಿಕೊಂಡರೆ ಪವಿತ್ರತೆ ಬರುತ್ತದೆ ಎಂಬ ಭಾವನೆ.

2. ಈ ಶುದ್ಧೀಕರಣದಲ್ಲಿ ದೇವರು ಮತ್ತು ಪೂಜಾರಿ, ಕುಲದ ಹಿರಿಯರು, ಮಡಿವಾಳ, ಮಡಿವಾಳತಿ, ದೇವರಹಸುಗಳು, ಕಾಗೆ, ನಾಯಿ ಮೊದಲಾದ ಮನುಷ್ಯ, ಪ್ರಾಣಿ ಪಕ್ಷಿಗಳು ಪಾತ್ರವಹಿಸುವವು

3. ಮಾಡುವ ಕಾರ್ಯಗಳೆಂದರೆ ಸ್ನಾನಮಾಡುವುದು, ಮನೆಯನ್ನು ಶುಚಿಗೊಳಿಸುವುದು, ಬಟ್ಟೆ ಕಳಚಿಹಾಕುವುದು, ಬೆಂಕಿಯನ್ನು ದಾಟಿಹೋಗುವುದು, ಕೈತುತ್ತು ತಿನ್ನವುದು, ತಲೆ ಬೋಳಿಸುವುದು ಇತ್ಯಾದಿ

4. ಅನ್ನ ಸೇವೆ ಮಾಡುವುದು, ಎಲೆ ಅಡಿಕೆ ಮತ್ತು ಕಾಸು ಕೊಡುವುದು, ದೇವರಿಗೆ ಪೂಜಾರಿಗಳಿಗೆ ನಮಸ್ಕರಿಸುವುದು ಲ್ಲಿ ಬಳಸುವ ವಸ್ತಗಳು, ಪಾಲ್ಗೊಳ್ಳುವ ಜೀವಗಳು, ಕಾರ್ಯಮಾಡುವ ಕ್ರಮಗಳು ಮುಖ್ಯವಾಗಿ ಆ ಸಮುದಾಯಗಳು ನಮ್ಮ ಲೋಕ ರಚನೆ ಹಾಗೂ ನಿರ್ವಹಣೆಯ ಬಗ್ಗೆ ಹೊಂದಿರುವ ನಂಬಿಕೆಗಳನ್ನು ಆದರಿಸಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಂಶಗಳನ್ನು ಪರಿಶೀಲಿಸಿದರೆ ಅವುಗಳ ಹಿಂದಿನ ಆಲೋಚನೆಯ ದೃಷ್ಟಿ ದೊರೆಯುತ್ತದೆ. ಮೊದಲು ಸದರಿ ಆಚರಣೆಗಳಲ್ಲಿ ಪಾಲ್ಗೊಳ್ಳುವ ಹಿರಿಯರು/ಗುರಿಕಾರರು ಇಡೀ ಕುಲದ ಜವಾಬ್ದಾರರು. ಇವರು ಕುಲದ ಕ್ಷೇಮಪಾಲಕರೆಂಬುದು ಇಡೀ ಸಮುದಾಯದ ನಂಬಿಕೆ. ಹಾಗಾಗಿಯೇ ಕುಲಕ್ಕೆ ಅಪಚಾರ ಮಾಡಿದವರನ್ನು ಕುಲದಿಂದ ಹೊರ ಹಾಕುವ ಮತ್ತೆ ಒಳಗೆ ಕರೆದುಕೊಳ್ಳುವ ಹಕ್ಕುಳ್ಳವರು. ಹಾಗಾಗಿಯೇ ಇಲ್ಲಿ ಇವರಿಗೆ ಬಹಳ ಪ್ರಾಮುಖ್ಯತೆ ಇದೆ. ಹಾಗೆಯೇ ಶುದ್ಧೀಕರಣ ಪದ್ಧತಿಗಳಲ್ಲಿ ಮಡಿವಾಳ/ಮಡಿವಾಳತಿಯರಿಗೆ ಪ್ರಮುಖ ಸ್ಥಾನವಿದೆ. ಇದಕ್ಕೆ ಕಾರಣ ಇವರು ಮಡಿಬಟ್ಟೆಗಳನ್ನು ಮಡಿಮಾಡುವವರು. ಅಂದರೆ ಆಗಿರುವ ಕೊಳೆಯನ್ನು ತೊಳೆಯುವವರು. ಬಟ್ಟೆಗಳನ್ನು ತೊಳೆಯುವ ಹಾಗೆ ಎಲ್ಲಾ ರೀತಿಯ ಕೊಳೆಗಳನ್ನು ತೊಳೆಯ ಬಲ್ಲವರೆಂಬ ಭಾವನೆಯಿದೆ. ಹಾಗೆಯೇ ಇಲ್ಲಿ ಬಳಸುವ ಕೆಲವು ವಸ್ತುಗಳ ಬಗ್ಗೆಯೂ ಇಂಥದ್ದೇ ತಿಳುವಳಿಕೆ ಇದೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ಪರಿಶೀಲಿಸಬಹುದು :

ನೀರು : ಪಂಚಭೂತಗಳಲ್ಲಿ ನೀರು ಅತ್ಯಂತ ಮಹತ್ವದ್ದು. ಅದಕ್ಕಾಗಿಯೇ ಇದನ್ನು ನೀರು ಎಂಬ ಸಮಾನ್ಯ ಹೆಸರಲ್ಲಿ ಕರೆಯುವುದಕ್ಕಿಂತ ಜಲ ಎಂಬ ಪವಿತ್ರ ಭಾವನೆಯುಳ್ಳ ಹೆಸರಲ್ಲಿ ಕರೆಯಲಾಗಿದೆ. ಈ ಜಲ ಮನುಷ್ಯನ ಜೀವನಕ್ಕೆ ಅತೀ ಮುಖ್ಯವೆಂದು ಜಗತ್ತಿನ ಎಲ್ಲಾ ಸಮುದಾಯಗಳು ನಂಬುತ್ತವೆ. ನೀರಿಗೆ ಔಷಧೀಯ ಗುಣವಿದೆ ಎನ್ನುವುದನ್ನು ಅನಾದಿ ಕಾಲದಿಂದಲೂ ಮಾನವ ತಿಳಿದಿದ್ದ. ಮಾಟ ಮಂತ್ರಗಳಲ್ಲಿ ಬಳಸುವ ಜಲಕ್ಕೆ ಕ್ಷುದ್ರಶಕ್ತಿಯನ್ನು ಬಿಡಿಸುವ ಮತ್ತು ರೋಗ ಗುಣಪಡಿಸುವ ಶಕ್ತಿಯಿದೆ ಎಂದು ನಂಬಲಾಗಿದೆ. (ವಿವರಗಳಿಗೆ ನೋಡಿ : ಕನ್ನಡ ವಿಷಯ ವಿಶ್ವಕೋಶ– ಜಾನಪದ ಸಂಪುಟದ ಪುಟ : 640–641)

ಬೇವು : ಬೇವಿನಮರ ಸರ್ವೋಪಯೋಗಿ. ಇದನ್ನು ಜನಪದರು ಅನೇಕ ಔಷಧಿಗಳಲ್ಲಿ ಬಳಸುತ್ತಾರೆ. ಹಾಗಾಗಿಯೇ ಇದನ್ನು ದೈವವೆಂದು ಪೂಜಿಸುತ್ತಾರೆ. (ವಿವರಗಳಿಗೆ ನೋಡಿ : ಕನ್ನಡ ವಿಷಯ ವಿಶ್ವಕೋಶ– ಜಾನಪದ ಸಂಪುಟದ ಪುಟ : 894)

ಹುಣಸೆ : ದಕ್ಷಿಣ ಆಫ್ರಿಕಾ ಮೂಲದ ಈ ಹುಣಸೆ ಮರ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಹುಣಸೆ ಹಣ್ಣನ್ನು ಪಾತ್ರೆ ಶುದ್ಧಿ ಮಾಡಲು ಬಳಸುತ್ತಾರೆ. ಕೆಲವುಮ್ಮೆ ಮಡಿ ಮೈಲಿಗೆಯ ಸಂಕೇತವಾಗಿ ನೋಡುವುದು ಉಂಟು. ಈ ಮರಗಳಲ್ಲಿ ದೆವ್ವಗಳು ವಾಸಿಸುತ್ತವೆ ಎಂಬುದು ನಂಬಿಕೆ (ವಿವರಗಳಿಗೆ ನೋಡಿ : ಕನ್ನಡ ವಿಷಯ ವಿಶ್ವಕೋಶ– ಜಾನಪದ ಸಂಪುಟದ ಪುಟ : 1256)

ಜನ್ನಿಗೆ.ಕುರಿ/ಹಸು : ಕರ್ನಾಟಕದ ಕಾಡುಗೊಲ್ಲರು, ಮ್ಯಾಸ ಬೇಡರು ಮೊದಲಾದ ಕೆಲವೇ ಕೆಲವು ಸಮುದಾಯಗಳಲ್ಲಿ ಪ್ರಚಲಿತ ವಿರುವ ಸಂಪ್ರದಾಯ. ದೇವರ ಹೆಸರಿನಲ್ಲಿ ಕುರಿ/ಹಸುವನ್ನು ಜನ್ನಿಗೆ ಬಿಡುತ್ತಾರೆ. ಇದು ಅತ್ಯಂತ ಪವಿತ್ರವೆಂಬುದು ಇವರ ನಂಬಿಕೆ. ಇವುಗಳ ಹಾಲು ಪವಿತ್ರ ಹಾಗಾಗಿ ಈ ಹಾಲನ್ನು ಮಡಿಯಾಗಲು ಬಳಸುತ್ತಾರೆ (ವಿವರಗಳಿಗೆ ನೋಡಿ : ಕನ್ನಡ ವಿಷಯ ವಿಶ್ವಕೋಶ– ಜಾನಪದ ಸಂಪುಟದ ಪುಟ : 636)

ಹೀಗೆ ತಮ್ಮ ತಿಳುವಳಿಕೆಯಿಂದ ಕುಲದಿಂದ ಮೈಲಿಗೆಯಾಗಿರುವ ವ್ಯಕ್ತಿಗಳನ್ನು ಶುದ್ಧೀಕರಿಸುವ ಪದ್ಧತಿಯಲ್ಲಿ ಅನುಸರಿಸುವ ಕ್ರಮ ಹಾಗೂ ಬಳಸುವ ವಸ್ತುಗಳ ಬಳಕೆಯ ಹಿಂದಿನ ಜ್ಞಾನವನ್ನು ಇನ್ನಷ್ಟು ಆಳವಾಗಿ

ವಿಶ್ಲೇಷಣೆಗೆ ಒಳಪಡಿಸಿ ಅವುಗಳ ಹಿಂದಿರುವ ಲೋಕಜ್ಞಾನವನ್ನು ಅರ್ಥಮಾಡಿಕೊಳ್ಳಬೇಕಿದೆ.

ಒಟ್ಟಾರೆ ಕುಲದಿಂದ ಹೊರಹಾಕುವ ಕ್ರೂರವೆನಿಸುವ ಪದ್ಧತಿಗಳನ್ನು ಅನುಸರಿಸುವ ಸಮುದಾಯಗಳು ಅಷ್ಟೇ ಮಾನವೀಯವಾದ ಸರಳ ಪರಿಹಾರಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿವೆ ಎಂಬುದು ಇಲ್ಲಿ ಗಮನಾರ್ಹ.

ಪರಮರ್ಶನ ಗ್ರಂಥಗಳು

1. ಕರ್ನಾಟಕ ಬುಡಕಟ್ಟುಗಳು-1, ಸಂ : ಹೆಚ್.ಜೆ. ಲಕ್ಕಪ್ಪಗೌಡ, 1998, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

2. ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಸಂ : ಎ.ಎಸ್.ಪ್ರಭಾಕರ, 2004, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

3. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಎ.ಎಸ್.ಪ್ರಭಾಕರ, 2000, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

4. ಕನ್ನಡ ವಿಷಯ ವಿಶ್ವಕೋಶ-ಜಾನಪದ, 2006, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

5. ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲರು ಹಾಗೂ ಮ್ಯಾಸ ಬೇಡರ ಕೆಲವು ಹಟ್ಟಿಗಳಲ್ಲಿ ನಡೆಸಿದ ಕ್ಷೇತ್ರಕಾರ್ಯದ ವಿವರಗಳು

ಮಹಾತ್ಮ ಜ್ಯೋತಿಬಾ ಫುಲೆಯವರ ವೈಚಾರಿಕ ಚಿಂತನೆಗಳು

ಗುಂಡಪ್ಪ ಸಿ.ಸಿಂಗೆ
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಪ್ರಸ್ತಾವನೆ :- ಜಗತ್ತಿನಲ್ಲಿ ಅಂಧಕಾರ ಮೌಢ್ಯದ ವಿರುದ್ಧ ಹೋರಾಡಿ ಹುಟ್ಟಿನಿಂದ ಯಾರು ಶ್ರೇಷ್ಠರಾಗುವುದಿಲ್ಲ. ಅವರವರ ಕಠಿಣ ಪರಿಶ್ರಮಕ್ಕೆ ತಕ್ಕಂತೆ ಸಾಧನೆ ಮಾಡಬಹುದು. ಅಂತಹ ಸಾಧನೆ ಮಾಡಿದವರಲ್ಲಿ ಭಾರತೀಯ ಸಮಾಜಕ್ಕೆ ಶೋಷಿತ ವರ್ಗಕ್ಕೆ, ಮಹಿಳೆಯರಿಗೆ, ಪುರುಷರಿಗೆ ಮತ್ತು ಸ್ತ್ರೀ ಎಂಬ ಬೇಧಭಾವನೆಯಿಲ್ಲದೆ ಆಧುನಿಕ ಭಾರತದಲ್ಲಿ ಜರ್ಝರಿತ ಸಮಾಜ ರಚನೆಯ ವಿರುದ್ಧ ಬಂಡಾಯ ಸ್ವರ ಎತ್ತಿದ ಮೊದಲನೇ ಮಹಾ ಪುರುಷ ಜ್ಯೋತಿಬಾ ಫುಲೆ. ಜೀವನದಲ್ಲಿ ಸಾಕಷ್ಟು ಸಂಘರ್ಷ ಮಾಡಿ ಸ್ವತಹ ಅವರು ಶಿಕ್ಷಣ ಕಲಿಯಬೇಕೆಂಬ ಹಂಬಲವಿದ್ದರು ಮೇಲ್ವರ್ಗದವರ ಕುತಂತ್ರದಿಂದ ಶಾಲೆಬಿಡುವ ಪ್ರಸಂಗ ಅವರ ತಂದೆಯಿಂದಲೇ ಬಂತು. ಮುಂದೆ ಅವರ ತಂದೆಗೆ ಅರಿವಾದಾಗ ಮತ್ತೆ ಶಾಲೆಗೆ ಸೇರಿದ್ದುಂಟು. ಭಾರತ ದೇಶದಲ್ಲಿ ಮೊಟ್ಟಮೊದಲಬಾರಿಗೆ ಅವರವರ ವಿಚಾರವನ್ನು ವ್ಯಕ್ತಪಡಿಸುವ ಅಧಿಕಾರ ಅವರಿಗೆವಿದೆ. ಮಾನವ ಹಕ್ಕುಗಳನ್ನು ಪರಿಪೂರ್ಣವಾಗಿ ಜಾರಿಗೆ ತರುವಲ್ಲಿ ಹಾಗೂ ಶಿಕ್ಷಣವು ಸರ್ವಾಂಗೀಣ ಅಭಿವೃದ್ಧಿಗೆ ಹೆಬ್ಬಾಗಿಲು. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿ ಅವನ ಸಾಮಾಜಿಕ ಸೇವೆ ರಾಜಕೀಯ ಮುತ್ಸದ್ಧಿ ಹಾಗೂ ಬೃಹತ್ ಉದ್ದಿಮೆದಾರನಾಗಬೇಕಾದರೆ ಶಿಕ್ಷಣ ಅವಶ್ಯವೆಂದು, ಅದು ಲಿಂಗಭೇದವಿಲ್ಲದೆ, ಜಾತಿಭೇದವಿಲ್ಲದೆ ಎಲ್ಲರಿಗೂ ದೊರೆಯಬೇಕು. ಈ ಮೂಲಕ ಅವರು ದೇಶದಲ್ಲಿ ಸಾಮಾಜಿಕ ಶೈಕ್ಷಣಿಕ ಸುಧಾರಣೆ, ಆರ್ಥಿಕ ಸುಧಾರಣೆ ತರಲು, ಜೀವನಪೂರ್ತಿ ಶ್ರಮಪಟ್ಟು ಶ್ರಮಜೀವಿಗಳ ಪರವಾಗಿ ಅವರು ಕೆಲಸ ಮಾಡಿದರು.

ಫುಲೆಯವರು ಭಾರತದ ಶ್ರೇಷ್ಠ ಕ್ರಾಂತಿಕಾರಿ. ಅವರ ಚಿಂತನಾಕಾರ್ಯಗಳು ಉದಾತ್ತವಾದವುಗಳು. 19ನೇ ಶತಮಾನದಲ್ಲಿ ಅವರ ಸಾಮಾಜಿಕ, ಧಾರ್ಮಿಕ, ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸಲು ಕಾರಣರಾದರು. ಶೂದ್ರಾತಿಶೂದ್ರರಿಗೆ ನಾಯಕರಾದ ಅವರು ರಾಜವಂಶಾವಳಿ, ಜಮೀನ್ದಾರರು, ಪುರೋಹಿತಶಾಹಿ, ಮತ್ತು ಬೃಹತ್ ವ್ಯಾಪಾರಿ ವರ್ಗಗಳು ನಡೆಸುತ್ತಿದ್ದ ಶೋಷಣೆಯನ್ನು ಧಿಕ್ಕರಿಸಿ ಜನಾಂದೋಲವನ್ನು ಕಟ್ಟಿದರು. ಧರ್ಮದ ಆಧಾರದ ಮೇಲೆ ನಡೆಯುತ್ತಿದ್ದ ಅನ್ಯಾಯ ಅತ್ಯಾಚಾರ, ಸಾಮಾಜಿಕ ಶೋಷಣೆ, ಗುಲಾಮಗಿರಿ, ಆರ್ಥಿಕ ಶೋಷಣೆ ಇದರ ವಿರುದ್ಧವಾಗಿ ಮೆಟ್ಟಿನಿಂತು ಬಾಲ್ಯವಿವಾಹ, ಬಹುಪತ್ನಿತ್ವ, ಗಂಡ ಸತ್ತಾಗ ಹೆಂಡತಿ ಕೇಶ ಮುಂಡನೆ ಮಾಡಿಕೊಳ್ಳುವುದು, ಜಾತಿಯತೆ ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ಪಾಪಗಳ ವಿರುದ್ಧ ಜೀವನಪೂರ್ತಿ ಅವರು ಸಾಮಾಜಿಕ ಆಂದೋಲನವನ್ನು ನಡೆಸಿ ಬದಲಾವಣೆ ತರುವಲ್ಲಿ ಯಶಸ್ವಿಯಾದರು. ಸ್ವಾರ್ಥವನ್ನು ಬಿಟ್ಟು ನಿಸ್ವಾರ್ಥತೆಯಿಂದ ಹೆಣ್ಣುಮಕ್ಕಳಿಗೆ ಶಿಕ್ಷಣ ಪ್ರಸಾರ ಮಾಡಿದರು. ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಪ್ರಸಾರ ಮಾಡುವ ಸಂದರ್ಭದಲ್ಲಿ ಅವರ ಮನೆಯವರಿಂದ ವಿರೋಧ ಬಂದಾಗ ಅವರು ಮನೆಯನ್ನು ತೊರೆದು ಸಮಾಜದಲ್ಲಿರುವ ವೈಶ್ಯ ಹೊಡೆದೋಡಿಸುವುದು ನನ್ನ ಜೀವನದ ಪೂರ್ತಿ ಹೋರಾಟ ಎಂದು ಮನಗಂಡು ಅವರ ಪತ್ನಿಗೆ ಶಿಕ್ಷಣ ಕೊಡಿಸಿ ಪತ್ನಿಗೆ ಶಿಕ್ಷಕಿಯಾಗಿ ಮಾಡಿ ಮಹಿಳೆಯರಿಗೆ ಶಿಕ್ಷಣದ ಪ್ರಸಾರ ಮಾಡಿದ ಕೀರ್ತಿ ತಾಯಿ ಸಾವಿತ್ರಿಬಾಯಿ ಫುಲೆ ಮಾಹತ್ವ ಜ್ಯೋತಿಬಾ ಫುಲೆ ಯವರಿಗೆ ಸಲ್ಲುತ್ತದೆ.

ಮಹಾತ್ಮ ಜ್ಯೋತಿಬಾ ಫುಲೆಯವರ ಜನನ ಮತ್ತು ಶಿಕ್ಷಣ :- ಮಹಾತ್ಮ ಜ್ಯೋತಿಬಾ ಫುಲೆಯವರ ಮಹಾರಾಷ್ಟ್ರ ರಾಜ್ಯದ ಸತಾರಾ ಜಿಲ್ಲೆಯ ಕಾಟುಗುನ ಎಂಬ ಹಳ್ಳಿಯಲ್ಲಿ ಗೋವಿಂದರಾವ ಫುಲೆ ಮತ್ತು ಚಿಮುನಬಾಯಿ ಫುಲೆ ಎಂಬ ಬಲಿಜ ಜನಾಂಗದ (ಹೂವಾಡಿಗ) ದಂಪತಿಗಳಿಗೆ 1827 ಏಪ್ರಿಲ್ 11 ರಂದು ಸಾಮಾನ್ಯ ಕುಟುಂಬದಲ್ಲಿ ಜನನವಾಯಿತು. ಜ್ಯೋತಿಯಂದರೆ ದೀಪ ಬಹಳ ಸುಂದರ ಹೆಸರವಿದು. ಜಗತ್ತಿನ ಕತ್ತಲೆಯನ್ನು ಅಳಿಸಿ ಹಾಕುವುದೇ ಜ್ಯೋತಿಯ ಕೆಲಸ ನಮ್ಮ ಜ್ಯೋತಿಕೂಡ ಅಜ್ಞಾನ ಅಂಧಕಾರವನ್ನು ಕೊನೆಗಾಣಿಸಿ, ಜ್ಞಾನದ ಪ್ರಕಾಶನದಿಂದ ಹೊಸ ಜಗತ್ತನ್ನು ನಿರ್ಮಿಸಬಲ್ಲವೆಂದು ಜ್ಯೋತಿ ಕುಟುಂಬದ ಸದಸ್ಯರು ಅವರ ತಂದೆತಾಯಿ ಸಂತೋಷಪಡುತ್ತಾರೆ. ಜ್ಯೋತಿ ಎಂಬ ಹೆಸರಿಡಲು ಅವರ ತಾಯಿಯ ಇಚ್ಛೆಯ ಮೇರೆಗೆ ಜ್ಯೋತಿಯೆಂದು ಹೆಸರಿಡುತ್ತಾರೆ.

ಫುಲೆಯವರ ಶಿಕ್ಷಣ :- ಗೋವಿಂದರಾವ್ ಫುಲೆಯವರ ಮೊದಲನೇ ಮಗ ರಾಜಾರಾಮ್ ಎರಡನೇ ಮಗ ಜ್ಯೋತಿಬಾ ಅವರು. ಸಾಕಷ್ಟು ವಿಮರ್ಶಾತ್ಮಕ ಪ್ರಶ್ನೆಗಳನ್ನು ಕೇಳುತ್ತಿದ್ದ. ಸಂದೇಹವಿದ್ದಿರುವಂತಹ ವಿಷಯಗಳನ್ನು ವಿಮರ್ಶಿಸಿ ಸಮಸ್ಯಗೆ ಇತ್ಯರ್ಥ ಮಾಡುತ್ತಿದ್ದ. ಮಗನಿಗೆ ಶಿಕ್ಷಣಕೊಡಿಸಬೇಕೆಂಬ ಹಂಬಲ ಅವನದಾಗಿರುತ್ತದೆ. ಅಂದಿನ

ವ್ಯವಸ್ಥೆಯಲ್ಲಿ ಬ್ರಹ್ಮಕುಲದವರಿಗೆ ಮಾತ್ರ ಶಿಕ್ಷಣ ಮೀಸಲಿರುತ್ತದೆ. ಮಗನಿಗೆ ಶಾಲೆಗೆ ಸೇರಿಸಬೇಕೆಂದು ಎಷ್ಟೇ ಪ್ರಯತ್ನಮಾಡಿದರು ಜ್ಯೋತಿಗೆ ಶಾಲೆಗೆ ಪ್ರವೇಶ ದೊರಕಲಿಲ್ಲ. ಜ್ಯೋತಿಭಾ ಫುಲೆಯವರು 11 ವರ್ಷದವರಿದ್ದಾಗ ಗೋವಿಂದರಾವ್ ಅಂಗಡಿಯಲ್ಲಿ ಗುಮಾಸ್ತನಾಗಿದ್ದ. ಬ್ರಾಹ್ಮಣರೊಬ್ಬರ ಪಿತೂರಿಯಿಂದಾಗಿ ಜ್ಯೋತಿಭಾರನ್ನು ಶಾಲೆಯಿಂದ ಬಿಡಿಸಲಾಯಿತು. 13ನೇ ವಯಸ್ಸಿನಲ್ಲಿ 8 ವರ್ಷದ ಬಾಲಕಿ ಸಾವಿತ್ರಿಬಾಯಿಯೊಂದಿಗೆ ವಿವಾಹವಾಯಿತು. ಶಾಲೆ ಬಿಟ್ಟು ತಮ್ಮ ಕುಲಕಸುಬಿನಲ್ಲಿ ಮುಂದುವರೆದರು. ಫುಲೆಯವರಿಗೆ ವಿದ್ಯೆಯಲ್ಲಿ ಆಸಕ್ತಿ ಕುಂದಲಿಲ್ಲ. ಇವರ ಆಸಕ್ತಿಯನು ಕಂಡು "ಗಫೂರ ಬೇಗ ಮುನ್ಶಿ" ಎಂಬ ಉರ್ದು–ಫಾರ್ಸಿ ಟೀಚರ ಹಾಗೂ ಲೆಗಿಟ್ ಎಂಬ ಕ್ರೈಸ್ತ ಪಾದ್ರಿಯು ಗೋವಿಂದರಾವ್ ತಮ್ಮ ಮಗನನ್ನು ಮತ್ತೆ ಶಾಲೆಗೆ ಸೇರಿಸುವಂತೆ ಒತ್ತಾಯಿಸಿದರು. 1841ರಲ್ಲಿ ಜ್ಯೋತಿಭಾ ಫುಲೆಯವರು ಪುನಃ ಶಾಲೆಗೆ ಸೇರಿದರು (ಸ್ಕಾಟಿಶ್ ಮಿಷನ್ ಸ್ಕೂಲ್). 1847ರಲ್ಲಿ ಇಂಗ್ಲೀಷ್ ಶಿಕ್ಷಣವು ಪೂರ್ಣಗೊಂಡಿತು.

ಮಾಹತ್ಮ ಜ್ಯೋತಿಭಾ ಫುಲೆಯವರ ವೈಚಾರಿಕ ವಿಚಾರಗಳು :– ಧಾರ್ಮಿಕ ಢಾಂಬಿಕತೆಯ ವಿರುದ್ಧ ಹೋರಾಡಲು ಅವರಿಗೆ ಪ್ರೇರಣೆಯಾಗಿದ್ದು ಸುಪ್ರಸಿದ್ಧ ಬಂಡಾಯಗಾರ ಲೇಖಕ ಥಾಮಸ್ ಪೇನ್ ಅವರ Rights of Man, The Age of Reason of Humanity ಹಾಗೂ Justice and Humanity ಮುಂತಾದ ಪುಸ್ತಕಗಳು ಅವರ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನು ಬೀರಿದವು. ಅವರಿಗೆ ಈ ಮಟ್ಟಕೆ ಅವರು ಬರಲು ಸಾಮಾಜಿಕ ಸಂಘರ್ಷ ತಳಮಟ್ಟದಲ್ಲಿ ನಡೆಯುವ ದೌರ್ಜನ್ಯವನ್ನು ತಡೆಗಟ್ಟಲು ಅವರಿಗೆ ಆದ ಅನುಭವ ಹೇಗಿದೆಯೆಂದರೆ ಅವರ ಜೀವನದ ದಿಕ್ಕನ್ನೆ ಬದಲಿಸಿತು. ಅಂದಿನ ದಿನಗಳಲ್ಲಿ ಬ್ರಾಹ್ಮಣರ ಚಿತಾವಣೆ ಮೇರೆಗೆ ನಡೆದ ಭಾರತೀಯರ ಬಂಡಾಯವು ತರುಣ ಜ್ಯೋತಿಯ ಮೇಲೆ ಆಳವಾದ ಪ್ರಭಾವ ಬೀರಿದ್ದವು, ಆದ ಕಾರಣ ಬ್ರಿಟೀಷರನ್ನು ಭಾರತದಿಂದ ತೊಲಗಿಸುವುದು ನನ್ನ ಪವಿತ್ರ ಕರ್ತವ್ಯವೆಂದು ಅವರು ತಿಳಿದಿದ್ದರು. 1848 ರಲ್ಲಿ ನಡೆದ ಘಟನೆಯು ಅವರ ಜೀವನದ ದಿಕ್ಕನ್ನೆ ಬದಲಿಸಿತು. ಒಬ್ಬ ಬ್ರಾಹ್ಮಣ ಮಿತ್ರನ ಮದುವೆಯ ಮೆರವಣಿಗೆಯಲ್ಲಿ ಭಾಗವಹಿಸಿದ 'ತಪ್ಪಿಗಾಗಿ' ಕೆಲವು ಹಿರಿಯ ಬ್ರಾಹ್ಮಣರೆಲ್ಲರೂ ಸೇರಿ ಅವರನು ಅಪಮಾನಿಸಿ, ಮೆರವಣಿಗೆಯಿಂದ ಹೊರಗುಳಿಸಿದರು. ಈ ಘಟನೆಯ ಪರಿಣಾಮವಾಗಿ, ಶೂದ್ರಾತಿಶೂದ್ರರಿಗೆ ಶಿಕ್ಷಣ ನೀಡುವ ಚಳುವಳಿಗೆ ಫುಲೆಯವರು "ನಾವು ಬ್ರಟೀಷರಿಗೆ ಚಿರ ಋಣಿಗಳಾಗಿರಬೇಕು. ಅವರ ಅನುಕಂಪವನ್ನು ನಾವು ಮರೆಯುವಂತೆಯೇ ಇಲ್ಲ. ಶತಮಾನಗಳ ಕಾಲದ ಬ್ರಾಹ್ಮಣಾದಿ ಶೋಷಣೆಯಿಂದ ನಮ್ಮನ್ನು ಬಿಡುಗಡೆಗೊಳಿಸಿ, ನಮ್ಮ ಮಕ್ಕಳಿಗೆ ಭರವಸೆಯ ಭವಿಷ್ಯವನ್ನು ನೀಡಿದವರು ಬ್ರಿಟೀಷರು. ಈ ನಾಡಿಗೆ ಬ್ರಿಟೀಷರು ದೊರೆಗಳಾಗಿ ಬಾರದೆ ಇದ್ದಲ್ಲಿ ಭಟ್ಟರು (ಬ್ರಾಹ್ಮಣರು) ನಮ್ಮನ್ನು ಸರ್ವನಾಶ ಮಾಡಿರುತ್ತಿದ್ದರು ಎಂದರು. (Slavery p.xlix)

ಅವರು ಕನ್ಯಾ ಪಾಠಶಾಲೆ ಆರಂಭಿಸುವ ಸಮಯದಲ್ಲಿ ಮಾಡಿದ ಭಾಷಣ ಅವರ ಸಾಮಾಜಿಕ ಕ್ರಾಂತಿಯ ಸ್ಪಷ್ಟ ದಿಕ್ಕನ್ನು ಸೂಚಿಸಿದೆ. ಅವರು ಹೇಳಿದ "ನಮ್ಮ ಜನಾಂಗದ ಮಹಾರ, ಮಾಂಗ, ಚಮ್ಮಾರ ಮುಂತಾದ ಜಾತಿಯ ಸೋದರ–ಸೋದರಿಯರನ್ನು ದುಖಃದ ಕಗ್ಗತ್ತಲೆ ಆವರಿಸಿದೆ. ಅವರನ್ನು ಸುಧಾರಿಸುವ ಸ್ಫೂರ್ತಿ ನನ್ನಲ್ಲಿ ಅಂಕುರಿತವಾಗಿದೆ. ಮೊಟ್ಟ ಮೊದಲು ಕನ್ಯಾ ಪಾಠಶಾಲೆಯನ್ನು ಪ್ರಾರಂಭ ಮಾಡುವ ಬಯಕೆ ನನ್ನಲ್ಲಿ ಉಂಟಾಯಿತು. ಗಂಭೀರವಾಗಿ ವಿಚಾರ ಮಾಡಿದಾಗ ನನಗೆ ಗಂಡು ಮಕ್ಕಳ ಶಾಲೆಗಿಂತ ಹೆಣ್ಣುಮಕ್ಕಳ ಶಾಲೆ ಅಗತ್ಯವೆನಿಸಿತು. ಅಲ್ಲದೆ ಇದು ನನ್ನ ಜೀವನದ ಧ್ಯೇಯವೆಂದು ಬಗೆದು ಈ ದಾರಿಯಲ್ಲಿ ಮುಂದುವರಿಯುವೆ. ಇದಕೆ ಹೆಣ್ಣು ಮಕ್ಕಳ ತಂದೆ ತಾಯಿಯರು ಸಹಕಾರ ನೀಡಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕು" ಎಂದು ಕೇಳಿಕೊಂಡರು.

1848–49 ರಲ್ಲಿ ಫುಲೆಯವರು ಶೂದ್ರಾತಿಶೂದ್ರ ಹೆಣ್ಣು ಮಕ್ಕಳ ಶಾಲೆಯನ್ನು ತೆರೆದರು. ಆದರೆ ಬ್ರಾಹ್ಮಣವಾದಿಗಳು ಗೋವಿಂದರಾವ್‌ರ ಮೇಲೆ ಒತ್ತಡ ಹೇರಿ, ಫುಲೆಯವರನ್ನು ಪತ್ನಿ ಸಮೇತ ಮನೆಯಿಂದ ಜುಲೈ 3. 1851ರಂದು ಮತ್ತೊಂದು ಶಾಲೆಯನ್ನು ತೆರೆದರು. ಈ ಶಾಲೆಯಲ್ಲಿ ಆರಂಭಕ್ಕೆ 8 ಹುಡುಗಿಯರಿದ್ದು, ಬಲು ಬೇಗ ಆ ಸಂಖ್ಯೆಯು 48 ಕ್ಕೆ ಏರಿತು. ಈ ಶಾಲೆಗೆ ಮಾತೆ ಸಾವಿತ್ರಿಬಾಯಿಯವರೇ ಹೆಡ್ ಮೇಡಮ್ ಆದರು. ಶೂದ್ರಾತಿ ಅತಿಶೂದ್ರರಿಗೆ ಶಿಕ್ಷಣ ನೀಡಲು ಫುಲೆ ಕೈಗೊಂಡ ಕಾರ್ಯಗಳಿಗಾಗಿ ಅವರನ್ನು ಎಲ್ಲಾ ಜಾತಿಗಳವರು ಖಂಡಿಸಿದರು. ಅವರು ಮತ್ತು ಅವರ ಪತ್ನಿ ಶಾಲೆಗೆ ಹೊಗುತ್ತಿದ್ದ ಸಮಯವನ್ನು ನೋಡಿಕೊಂಡು ಅವರ ಸೆಗಣಿ ಸುರಿಯುವ ನೀಚ ಮಟ್ಟಕ್ಕು ಕೆಲವರು ಹೋದರು. ಆದರೆ ಫುಲೆ ಮತ್ತು ಸಾವಿತ್ರಿಬಾಯಿ ತಮ್ಮ ಗುರಿ ತಲುಪುವ ಮಾರ್ಗವನ್ನು ಕೈಬಿಡಲಿಲ್ಲ. ಇಂಥ ಲೋಕಹಿತ ಕಾರ್ಯಗಳನು ಕೈಗೊಳ್ಳುತ್ತಾ ಎಲ್ಲಾ ಸಮುಡಾಯಗಳವರಿಗೆ ಸರಿದಾರಿ ತೋರುತ್ತಾ ಎಲ್ಲರ ಬಾಳಲ್ಲಿ ಬೆಳಕು ತಂದ ಫುಲೆ, ಎಲ್ಲರ ಬಾಳು ಹಸನಾಗುವಂತೆ ಮಾಡಿದರು. ಹೆಣ್ಣು ಮಕ್ಕಳ ಶಾಲೆ ತೆರೆಯುವಂತೆ ಫುಲೆಯವರ ಮೇಲೆ ಪ್ರಭಾವ ಬೀರಿದವರು ಅಮೇರಿಕಾ ಮಿಷನ್ನಿನ ಮಿಸ್ ಫರಾರ್‌ರವರು. ನಂತರ 1852 ರೊಳಗೆ, ಅವರು ಮತ್ತೆರಡು ಶಾಲೆಗಳನ್ನು ತೆರೆದರು. 1882ರಲ್ಲಿ ಸರ್ ವಿಲಿಯಂ ಹಂಟರ್ ರವರ ಅಧ್ಯಕ್ಷತೆಯಲ್ಲಿ ಭಾರತಕೆ ಭೇಟಿ ನೀಡಿದ "ಶಿಕ್ಷಣ ಆಯೋಗಕ್ಕೆ" ಮಹಾತ್ಮ ಫುಲೆಯವರು ಒಂದು ಮನವಿ ಸಲ್ಲಿಸಿದರು.

ಹಂಟರ್ ಕಮಿಷನ್ ಮುಂದಿಟ್ಟ ಬೇಡಿಕೆಗಳು :

1) ಪ್ರತಿ ಹಳ್ಳಯಲ್ಲಿ ಶೂದ್ರ ಮಕ್ಕಳಿಗೆ ಶಾಲೆಗಳು ತೆರೆಯಬೇಕು. 2) ಎಲ್ಲರಿಗೂ ಉಚಿತ ಪ್ರಾಥಮಿಕ ಶಿಕ್ಷಣ ಸಿಗಬೇಕು. 3) ಶಾಲೆಗಳಲ್ಲಿ ಬ್ರಾಹ್ಮಣರಲ್ಲದ ಶಿಕ್ಷಕರನ್ನು ನೇಮಕಮಾಡಬೇಕು. 4) ಆ ಬ್ರಾಹ್ಮಣ ಶಿಕ್ಷಕರು ಎಲ್ಲಾ ಮಕ್ಕಳೊಂದಿಗೆ ಯಾವುದೇ ಭೇದ ಭಾವವಿಲ್ಲದೇ ಬೆರೆಯಬೇಕು. 5) ಅಸ್ಪೃಶ್ಯರಾದ ಮಹರ್, ಮಾಂಗ್, ಮತ್ತಿತರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯುವುದು. 6) ಶಿಷ್ಯವೇತನ, ಫ್ರೀ–ಶಿಪ್ ಅಸ್ಪೃಶ್ಯರಿಗೆ ವಸತಿ ವ್ಯವಸ್ಥೆ, ಊಟವ್ಯವಸ್ಥೆ ಕಲ್ಪಿಸುವುದು. 7) ಅವರು ತರಬೇತಿ ಪಡೆದ ಶಿಕ್ಷಕರಾಗಿರಬೇಕಲ್ಲದೆ, ಬೇಸಾಯ ಮತ್ತು ನೈರ್ಮಲ್ಯದ ಬಗ್ಗೆ ತಿಳುವಳಿಕೆಯುಳ್ಳವರಾಗಿರಬೇಕು, ಮಕ್ಕಳು ಕಲಿಯಬೇಕಾದ ಪಠ್ಯಕ್ರಮ, ಲೆಕ್ಕ (ಅಕೌಂಟ್), ಚರಿತ್ರೆ, ಭೂಗೋಳ, ವ್ಯಾಕರಣ, ಬೇಸಾಯದ ಮೂಲಭೂತ ತಿಳುವಳಿಕೆ, ನೀತಿ ಪಾಠ, ನೈರ್ಮಲ್ಯ, ಇಂಗ್ಲೀಷ್ ಮತ್ತು ಪ್ರಾದೇಶಿಕ ಭಾಷೆಗಳನ್ನು ಸ್ಥಳೀಯರ ಅಗತ್ಯಗಳಿಗೆ ತಕ್ಕಂತೆ ತಿದ್ದುಪಡಿ ಮಾಡುವುದು. ಪ್ರಗತಿಗೆ ಅಗತ್ಯವಾದ ತಾಂತ್ರಿಕ ಮತ್ತು ಕಲಾ ಶಿಕ್ಷಣ, 9) ಪ್ರತಿಯೊಂದು ಮುನಿಸಿಪಾಲಟಿಯು ತನ್ನ ವ್ಯಾಪ್ತಿಯೊಳಗೆ ಬರುವ ಶಾಲೆಗಳನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವಂತೆ ಕಾಯ್ದೆ ಮಾಡುವುದು, 10) ಇಂಪೀರಿಯಲ್ ಮತ್ತು

ಪ್ರವಿನ್ವಯಲ್ ನಿಧಿಯಿಂದ ಶಿಕ್ಷಣಕೆ ಅಗತ್ಯವಾದ ಧನಸಹಾಯ ಮತ್ತು 11) ರೈತರಿಗೆ ಇತರರಿಂದ ಆಗುವ ಕಿರುಕುಳದಿಂದ ರಕ್ಷಣೆ ಮತ್ತು ಶೂದ್ರಾತಿಶೂದ್ರರು ಇತರ ಸಾರ್ವಜನಿಕ ಸೇವೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಫುಲೆಯವರ ವಿಚಾರಗಳು :-

1. ತನ್ನ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಖರ್ಚು ವೆಚ್ಚಗಳನ್ನು ಮುನಿಸಿಪಾಲಿಟಿಗಳೇ ವಹಿಸಿಕೊಂಡರೂ, ಶಿಕ್ಷಣದ ಸಂಪೂರ್ಣ ಉಸ್ತುವಾರಿಯು ಪ್ರತ್ಯೇಕ ಶಿಕ್ಷಣ ಇಲಾಖೆಗೆ ಸೇರಿಸಬೇಕು.
2. ಮುನಿಸಿಪಾಲಿಟಿಗಳು ಖಾಸಗಿ ಇಂಗ್ಲೀಷ್ ಶಾಲೆಗಳಿಗೆ ಗ್ರ್ಯಾಂಟ್ ನೀಡಬೇಕು. ಈ ನಿಟ್ಟಿನಲ್ಲಿ ಕಾಯ್ದೆಯಾಗಬೇಕು.
3. ಶಿಕ್ಷಣಕೆ ನಿಗದಿಯಾದ ಹಣವು ದುರುಪಯೋಗವಾಗದಿರಲು, ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಒಂದು ಬುದ್ಧಿ ಜೀವಿಗಳ ಮಂಡಳಿಯಿರಬೇಕು.
4. ಪ್ರತಿ ಮೂರು ತಿಂಗಳಿಗೊಮ್ಮೆ ಉನ್ನತ ಅಧಿಕಾರಿಗಳಿಂದ ಶಾಲೆಗಳ ಇನ್ಸ್‌ಪೆಕ್ಷನ್ ನಡೆಯಬೇಕು.
5. ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮತ್ತು ಬಹುಮಾನಗಳನ್ನು ನೀಡುವಂತೆಯೇ, ಶಿಕ್ಷಕರಿಗೂ ಉತ್ತೇಜನ ನೀಡಬೇಕು.
6. ನಿರುದ್ಯೋಗಿ ಪದವಿಧರರು ಶಾಲೆಗಳನ್ನು ತೆರೆಯಲು ಪ್ರೋತ್ಸಾಹಿಸಬೇಕು.
7. ಉನ್ನತ ಶಿಕ್ಷಣವನ್ನು ಅಗ್ಗಗೊಳಿಸಿ ಎಲ್ಲರ ಕೈಗೆಟುಕುವಂತೆ ಮಾಡಬೇಕು.
8. ಮೆಟ್ರಿಕ್ಯುಲೇಷನ್ನಿನ ಪಠ್ಯಪುಸ್ತಕಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಬೇಕು.

ಸತ್ಯಶೋಧಕ ಸಮಾಜ ಚಳುವಳಿ : ಶೂದ್ರಾತಿಶೂದ್ರರಲ್ಲಿ ಶಿಕ್ಷಣವನ್ನು ಹರಡುವುದರ ಮುಖಾಂತರ ಜನತೆಗೆ, ಸಾಮಾಜಿಕ ಪರಿವರ್ತನೆಗಾಗಿ ಸತ್ಯಶೋಧಕ ಸಮಾಜ ಸಂಸ್ಥೆಯನ್ನು 1873 ಸೆಪ್ಟೆಂಬರ್ 24ರಂದು ಮಹಾತ್ಮಾ ಜ್ಯೋತಿಭಾ ಫುಲೆಯವರು ಸ್ಥಾಪಿಸಿದರು ಮೂಲಕ ಸಮಾಜದಲ್ಲಿರುವ ಚಾತುರ್‌ವರ್ಣ ವ್ಯವಸ್ಥೆಯನ್ನು ಧಿಕ್ಕರಿಸುವುದು, ಮೂರ್ತಿಪೂಜೆ ವಿರೋಧ, ಬ್ರಾಹ್ಮಣರ ಪೌರೋಹಿತ್ಯವಿಲ್ಲದ ಮದುವೆ ಮತ್ತಿತರ ಕಾರ್ಯಕ್ರಮವನ್ನು ಮಾಡುವುದು, ಕುಲಗಳನು ಆಧರಿಸಿ ಕಸುಬುಗಳನು ಮಾಡುವುದಕ್ಕೆ ಜ್ಯೋತಿಭಾ ಫುಲೆಯವರ ಪ್ರಬಲ ವಿರೋಧವಿತ್ತು. ಏಕೆಂದರೆ ಕುಲಕಸುಬುಗಳನ್ನು ಮಾಡುವುದರಿಂದ ಜಾತಿಯತೇ ಜೀವಂತವಿರುತ್ತದೆ. ಪ್ರತಿಭೆಗೆ ತಕ್ಕಂತೆ ಅವರವರ ಉದ್ಯೋಗ ಮಾಡಲಿ. ಆದ್ದರಿಂದ ಅವರು ಸಂಪೂರ್ಣ ಕುಲಕಸುಬಿಗೆ ವಿರೋಧವಿದ್ದರು. ವಿಧವಾ ವಿವಾಹ ಮಹಿಳೆಯರ ಸಮಾನ ಹಕ್ಕುಗಳು, ಸೇಟ್‌ಜೀಗಳ ಸರ್ವಾಧಿಕಾರದ ವಿರುದ್ಧ ಹೋರಾಡಬೇಕು. ವೇದಗಳ ಪರಮಾಧಿಕಾರವನ್ನು ಧಿಕ್ಕರಿಸುವುದು. ಅದು ಕೇವಲ ಒಂದು ವರ್ಗಕ್ಕೆ ಸೀಮಿತವಲ್ಲ ಎಂಬ ದೃಢವಾದ ವಿಚಾರವನ್ನು ಹೊಂದಿದ್ದರು.

ಜ್ಯೋತಿಭಾ ಫುಲೆಯವರ ಕ್ರಾಂತಿಕಾರಿ ಕಾರ್ಯಗಳು :

1. ಬಾಲ್ಯ ವಿವಾಹವನ್ನು ವಿರೋಧಿಸಿದರು.
2. ಬ್ರಾಹ್ಮಣರಿಲ್ಲದ ವಿವಾಹ ನಡೆಸಿದ್ದು.
3. 1848ರಲ್ಲಿ ಶೂದ್ರ ಬಾಲಕಿಯರಿಗಾಗಿ ಶಾಲೆ ಪ್ರಾರಂಭಿಸಿದರು. ಮೂರು ವರ್ಷಗಳ ಬಳಿಕ ದಲಿತರಿಗಾಗಿ ಮೊದಲ ಶಾಲೆ ಶುರು ಮಾಡಿದರು. ತಮ್ಮ ಪತ್ನಿ ಸಾವಿತ್ರಿಬಾಯಿಗೆ ಮನೆಯಲ್ಲೇ ಪಾಠ ಹೇಳಿ, ಅವರನ್ನು ಶಿಕ್ಷಕಿಯಾಗಿ ತರಬೇತಿಗೊಳಿಸಿದರು. ತಮ್ಮ ಬಾವಿಯಿಂದ ನೀರು ತೆಗೆದುಕೊಳ್ಳಲು ಅಸ್ಪೃಶ್ಯರಿಗೆ ಅವಕಾಶ ನೀಡಿದರು.
4. 1860ರಲ್ಲಿ ವಿಧವೆಯರ ತಲೆಬೋಳಿಸುವುದನ್ನು ವಿರೋಧಿಸಲು ಕ್ಷೌರಿಕರನ್ನು ಸಂಘಟಿಸಿದರು.
5. ವಿಧವೆಯರ ಮಕ್ಕಳನ್ನು ಪೋಷಿಸಲು 1863ರಲ್ಲಿ ಅನಾಥಾಲಯ ಪ್ರಾರಂಭಿಸಿದರು.
6. ಬಾಲ ಹತ್ಯ ನಿಷೇಧಕ ಪ್ರಸೂತಿ ಗೃಹವನ್ನು ಆರಂಭಿಸಲಾಯಿತು. ಈ ಪ್ರಸೂತಿ ಗೃಹದಲ್ಲಿ ಗರ್ಭವತಿ ವಿಧವೆಯರ ಹೆರಿಗೆ ಗುಪ್ತವಾಗಿ ಸುಸೂತ್ರವಾಗಿ ನೆರವೇರುತ್ತಿತ್ತು. ಕಾಶಿಬಾಯಿ ಎಂಬ ವಿಧುವೆ ಹೆರಿಗೆಯ ಸಮಯದಲ್ಲಿ ಸಾವಿತ್ರಿ ಬಾಯಿಯವರೇ ಹೊಕ್ಕಳನ್ನು ಕತ್ತರಿಸಿದರು. ಆ ಮಗುವನ್ನೇ ಜ್ಯೋತಿಬಾ, ಸಾವಿತ್ರಿಬಾಯಿ ದಂಪತಿಗಳು ದತ್ತು ತೆಗೆದುಕೊಂಡು 'ಯಶವಂತ' ಎಂದು ನಾಮಕರಣ ಮಾಡಿದರು. ಅವನು ದೊಡ್ಡ ಡಾಕ್ಟರ್ ಆಗಿ ಹೆಸರು ಗಳಿಸಿದ.
7. ವಿಧವಾ ವಿವಾಹವನ್ನು ಸಮರ್ಥಿಸಿದರು ಮತ್ತು 1864ರಿಂದ ಅನೇಕ ವಿಧವಾ ವಿವಾಹಗಳನ್ನು ನೆರವೇರಿಸಿದರು.
8. ದಲಿತ ಹುಡುಗಿ ಮತ್ತು ಬ್ರಾಹ್ಮಣ ಹುಡುಗರ ಪ್ರೇಮ ವಿವಾಹಕ್ಕೆ ಇಂಬಾಗಿ ನಿಂತರು.
9. ಬ್ರಾಹ್ಮಣರು ತಮ್ಮ ವಿಧುವೆಯರ ತಲೆ ಬೋಳಿಸಲು ಹೋಗಬಾರದೆಂದು ಕ್ಷೌರಿಕ ಸಮುದಾಯಕೆ ಮನವಿ ಮಾಡಿಕೊಂಡರು.
10. 1873ರಲ್ಲಿ 'ಸತ್ಯಶೋಧಕ ಸಮಾಜ'ವನ್ನು ಸ್ಥಾಪಿಸಿದರು. ಈ ಮೂಲಕ ಶೂದ್ರರಲ್ಲಿ ಮತ್ತು ದಲಿತರಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳನ್ನು ಹಮ್ಮಿಕೊಂಡರು.
11. ಜಮೀನ್ದಾರರ ಸುಲಿಗೆಯನ್ನು ವಿರೋಧಿಸಿದರು; ರೈತರಿಗೆ ಮತ್ತು ರೈತ ಕೂಲಿಕಾರರಿಗೆ ನ್ಯಾಯ ಸಿಕ್ಕಬೇಕೆಂದು ಒತ್ತಾಯಿಸಿದರು.
12. ಶೂದ್ರ-ಅತಿಶೂದ್ರರಲ್ಲಿ ಜಾಗೃತಿ ಮೂಡಿಸಲು 'ತೃತೀಯ ರತ್ನ', ಬ್ರಾಹ್ಮಣರ ಕರಾಮತ್ತು; ಗುಲಾಮಗಿರಿ, 'ರೈತರ ಬಂಡಾಯ', 'ಇಶಾರಾ', 'ಸಾರ್ವಜನಿಕ ಸತ್ಯಧರ್ಮ ಪುಸ್ತಕ', ಮುಂತಾದ ಪುಸ್ತಕಗಳನ್ನು ಬರೆದರು.
13. 'ಸತ್ಕಾರ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ, ಶೂದ್ರ ಅತಿಶೂದ್ರರಲ್ಲಿ ಪ್ರಸಾರ ಮಾಡಿದರು.
14. 1879ರಲ್ಲಿ 'ದೀನಬಂಧು' ವಾರಪತ್ರಿಕೆಯನ್ನು ಆರಂಭಿಸಿದರು. ಇದು ಸತ್ಯಶೋಧಕ ಸಮಾಜ ಸಂಸ್ಥೆಯ ಮುಖವಾಣಿಯಾಗಿತ್ತು.
15. 'ಗುಲಾಮಗಿರಿ', 'ಬ್ರಾಹ್ಮಣಾಚಿ ಕಸದ್' ಮತ್ತು 'ಶೇಟ್ ಕರ್ಯಾಂಚ ಅಸೋದ್' ಎಂಬ ಪುಸ್ತಕಗಳನ್ನು ಬರೆದರು.
16. ಜಸ್ಟೀಸ್ ರಾನಡೆಯವರು ಸತ್ಯಶೋಧಕ ಸಮಾಜ ಚಳುವಳಿಗೆ ತಮ್ಮನ್ನೂ ಸೇರಿಸಿಕೊಳ್ಳುವಂತೆ ಮಹಾತ್ಮ ಫುಲೆಯವರಲ್ಲಿ ವಿನಂತಿಸಿದಾಗ "ಸಮಾನತಾವಾದದ ಚಿಂತನೆಯಿಲ್ಲದ ಬದ್ಧಾತಿ ಉದ್ದೇಶಗಳನ್ನು ಹೊಂದಿರುವ ಜನರಿಗೆ ಇಲ್ಲಿ ಅವಕಾಶವಿಲ್ಲ ನೀವು ಪ್ರಗತಿಪರರೇ ಆಗಿದ್ದಲ್ಲಿ ನಿಮ್ಮ ಬ್ರಾಹ್ಮಣ ಜನರ ನಡುವೆ ಕೆಲಸ ಮಾಡಿ, ಅವರನ್ನು ಪ್ರಗತಿಪರರನ್ನಾಗಿ ಮಾಡಿ" ಎಂದರು.

"ಶಿಕ್ಷಣವಿಲ್ಲದ್ದರಿಂದಾಗಿ ಬುದ್ಧಿಯು ನಾಶವಾಯಿತು, ಬುದ್ಧಿಯಿಲ್ಲ ದ್ದರಿಂದಾಗಿ ನೈತಿಕತೆ ನಾಶವಾಯಿತು, ನೈತಿಕತೆ ಇಲ್ಲದ್ದರಿಂದಾಗಿ

ಕ್ರಿಯಾಶೀಲತೆ ನಾಶವಾಯಿತು, ಕ್ರಿಯಾಶೀಲತೆ ಇಲ್ಲದ್ದರಿಂದಾಗಿ ಸಂಪತ್ತು ನಾಶವಾಯಿತು, ಸಂಪತ್ತು ಇಲ್ಲದ್ದರಿಂದಾಗಿ ಶೂದ್ರರು ಅವನತಿಗಿಳಿದರು– ಹೀಗೆ ಶಿಕ್ಷಣವಿಲ್ಲದಿರುವುದು ಎಲ್ಲಾ ಬಗೆಯ ಅವನತಿಗೆ ಕಾರಣವಾಯಿತು".

ಜ್ಯೋತಿಭಾ ಫುಲೆಯವರ ಕೃತಿಗಳು :

1) 'ತೃತೀಯ ರತ್ನ' ನಾಟಕ (1855)
2) 'ಜಾತಿ ಭೇದ ವಿವೇಕ ಸಾರ' ಪ್ರಸ್ತಾವನೆ (1865)
3) ಛತ್ರಪತಿ ಶಿವಾಜಿ ಅವರ ಪವ್ಹಾಡ (1869)
4) ಬ್ರಾಹ್ಮಣರ ಕುಯುಕ್ತಿ (1869)
5) ದಾಸ್ಯ (1873)
6) ಸತ್ಯ ಶೋಧಕ ಸಮಾಜ ರೀತ್ಯಾ ಮಂತ್ರಾದಿ ಸರ್ವ ಪೂಜಾವಿಧಿ (1887)
7) ಸಾರ್ವಜನಿಕ ಸತ್ಯ ಧರ್ಮ (1891)

ಜ್ಯೋತಿಬಾರವರ ಅಂತಿಮ ದಿನಗಳು: ಜ್ಯೋತಿಬಾ ಅವರು ತಮ್ಮ ಜೀವನದಲ್ಲಿ ಆಸ್ತಿ–ಪಾಸ್ತಿ ಮಾಡಲಿಲ್ಲ. ಮಕ್ಕಳು ಇಲ್ಲದ್ದರಿಂದ ಒಂದು ಅನಾಥ ಮಗುವನ್ನು ದತ್ತು ತೆಗೆದುಕೊಂಡು ಬೆಳೆಸಿದರು. ಇಂದಿನ ಸಂದರ್ಭದಲ್ಲಿ ಮಕ್ಕಳು ಇರದೇ ಹೋದಲ್ಲಿ ಮತ್ತೊಂದು ಮದುವೆಯನ್ನು ಮಾಡಿಕೊಳ್ಳುತ್ತಾರೆ. ತ್ಯಾಗ ಜೀವಿಯಾದ ಜ್ಯೋತಿಯವರು ಅನಾಥ ಮಗುವನ್ನು ತೆಗೆದುಕೊಂಡು ಆ ಮಗುವನ್ನು ಒಳ್ಳೆಯ ಶಿಕ್ಷಣ ಕೊಡಿಸಿ ಅವನಿಗೆ ವೈದ್ಯನಾಗುವಂತೆ ಮಾಡುತ್ತಾರೆ. ಆ ಮಗುವೇ ಡಾ॥ ಯಶವಂತ. ಡಾ॥ ಯಶವಂತ ಅವರ ತಂದೆ–ತಾಯಿಯ ಸಾಮಾಜಿಕ ಸೇವಾ ಕಾರ್ಯಕ್ರಮಗಳಲ್ಲಿ ಕೈ ಜೋಡಿಸುತ್ತಾನೆ. 1888ರ ಜುಲೈನಲ್ಲಿ ಜ್ಯೋತಿಬಾಗೆ ಪಾರ್ಶ್ವವಾಯು ತಗುಲಿತು. 188ರ ಡಿಸ್ಸೆಂಬರ್‌ನಲ್ಲಿ ಎರಡನೇಯ ಬಾರಿ ಪಾರ್ಶ್ವವಾಯು ತಗುಲಿತು. ಕೊನೆಗೆ 27–11–1890 ರಂದು ಅವರ ಸ್ಥಿತಿ ಗಂಭೀರವಾಯಿತು. ಅದೇ ದಿನ ಸಂಜೆ 5.00 ಗಂಟೆಗೆ ತಮ್ಮವರೆನ್ನೇಲ್ಲಾ ಕರೆದು ಕೊನೆಯದಾಗಿ ಹೀಗೆ ನುಡಿದರು. "ಗೆಳೆಯರೆ ಈಗ ನಾನು ಲೋಕ ಬಿಡುವ ಕಾಲ ಬಂದಿದೆ. ನಾನು ಕೈಗೆತ್ತಿಕೊಂಡ ಕಾರ್ಯವೆಲ್ಲಾ ಸರಿಸುಮಾರು ಯಶಸ್ವಿಯಾಗಿ ಪೂರೈಸಿದ್ದೇನೆ. ನೀವೆಲ್ಲರೂ ನನಗೆ ನೀಡಿದ ಸಹಾಯ ಸಹಕಾರಗಳಿಗೆ ಬೆಲೆ ಕಟ್ಟಲಾಗದು, ನನ್ನ ಬಾಳ ಸಂಗಾತಿ ಸಾವಿತ್ರಿ ಕ್ಷಣ ಕ್ಷಣಕೂ ನೆರಳಿನಂತೆ ನನ್ನ ಜೊತೆ ಇರುತ್ತಿದ್ದಳು ಮಗ ಯಶವಂತ ಇನ್ನೂ ಚಿಕ್ಕವನು ಆದರೆ ಕೆಲಸ ಕಾರ್ಯದಲ್ಲಿನ ಅವನಿಗೆ ಅದಮ್ಯ ಉತ್ಸಾಹವಿದೆ. ನಾನು ಇವರಿಬ್ಬರನ್ನು ನಿಮ್ಮ ವಶಕ್ಕೆ ಒಪ್ಪಿಸಿದ್ದೇನೆ. ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ. ಹಿಂದೆ ನಮ್ಮ ಪೂರ್ವಿಕರು ಹೋದರು ಇಂದು ನನ್ನ ಸರದಿ ನಾಳೆ ನಿಮ್ಮ ಪಾಳಿ ಶೋಕಾರ್ತರಾಗಿ ಇರಬೇಡಿ. ನೀವು ನಿಮ್ಮ ಕೆಲಸ ಮಾಡುತ್ತಾ ಹೋಗಿ, ಒಳ್ಳೆಯ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ, ನನ್ನೊಂದಿಗೆ ನೀವೆಲ್ಲಾ ನೊಂದಿದ್ದೀರಿ, ಮುಂದೆ ಇದಕ್ಕಿಂತ ಹೆಚ್ಚು ಯಾತನೆ ಅನುಭವಿಸಬೇಕಾದೀತು, ಆದರೆ ಯಾವುದಕ್ಕೂ ಹೆದರದೆ ನಿಮ್ಮ ಮೇಲೆ ನಂಬಿಕೆ ಇಟ್ಟು ನಿಮ್ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ". ಎಂದರು. ಎಲ್ಲರೂ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವಂತೆ ಕೇಳಿಕೊಂಡರೂ ಮರುಕ್ಷಣವೇ ಅವರು ನಿಧನರಾದರು. ಲಕ್ಷಾಂತರ ಜನರು ತಮ್ಮ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸಿ ಶವಯಾತ್ರೆಯಲ್ಲಿ ಪಾಲ್ಗೊಂಡರು. ಮಗ ಯಶವಂತ ಚಿತೆಗೆ ಅಗ್ನಿ ಸ್ಪರ್ಷ ಮಾಡಿದರು. ಈ ರೀತಿ ಒಬ್ಬ ಧೀರ, ಕರ್ಮನಿಷ್ಠ ಬಹುಮುಖ ವ್ಯಕ್ತಿತ್ವವೊಂದು ಕಣ್ಮರೆಯಾಯಿತು.

1876–77ರ ನಂತರ ಮಹಾರಾಷ್ಟ್ರದಲ್ಲಿ ಇನ್ನೊಮ್ಮೆ ಕ್ಷಾಮ ತಲೆದೋರಿತ್ತು. ಸಾವಿತ್ರಬಾಯಿ ಜ್ಯೋತಿಬಾ ಫುಲೆಯವರು ಬರಗಾಲ ಪೀಡಿತರ ನೆರವಿಗೆ ಹಲವಾರು ಕೆಲಸ ಕಾರ್ಯಗಳನ್ನು ಸರ್ಕಾರ ಆರಂಭಿಸಬೇಕೆಂದು ಒತ್ತಾಯ ಮಾಡಿದರು. ಬರಗಾಲದ ಕಾಟ ತೀರಿತೆಂದು ನೆಮ್ಮದಿಯ ಉಸಿರೆಳೆಯುತ್ತಿದ್ದಂತೆ 1897ರಲ್ಲಿ ಪುಣೆಯಲ್ಲಿ ಭಯಂಕರ ಪ್ಲೇಗ್ ಹಾವಳಿ ಶುರುವಾಯಿತು. ಈ ಸೋಂಕು ಜಾಡ್ಯ ನಿಧಾನವಾಗಿ ಸುತ್ತುಮುತ್ತಿನ ಹಳ್ಳಗಳಿಗೂ ಹಬ್ಬಿತು. ಸಾವಿಗೆ ಲೆಕ್ಕವೇ ಇಲ್ಲದಂತಾಯಿತು. ಆಗ ಡಾಕ್ಟರ್ ಯಶವಂತರು ಅನೇಕ ರೋಗಿಗಳ ಚಿಕಿತ್ಸೆಗೆ ನೆರವಾದರು. ಸಾವಿತ್ರಿ ಬಾಯಿ ಮನೆಮನೆಗೂ ಹೋಗಿ ರೋಗಿಗಳ ಪತ್ತೆ ಹಚ್ಚಿ ಚಿಕಿತ್ಸೆಗಾಗಿ ಡಾ॥ ಯಶವಂತರ ಬಳಿ ಕರೆದುಕೊಂಡು ಬರುತ್ತಿದ್ದರು. ಈ ಸೇವಾಕಾರ್ಯ ನಡೆಸುತ್ತಿದ್ದಾಗ ಸಾವಿತ್ರಿ ಬಾಯಿಗೂ ಸೊಂಕು ಜಾಡ್ಯ ತಗುಲಿತು. ಪ್ಲೇಗಿನ ಸೊಂಕು ತಗುಲಿ ಮಾರ್ಚ್ 10 1897 ರಂದು ಭಾರತ ದೇಶದ ಮೊದಲ ಮಹಿಳಾ ಶಿಕ್ಷಕಿ ತೀರಿಕೊಂಡರು. ಈ ಒಂದು ಹಿನೆಲೆಯಲ್ಲಿ ಕರ್ನಾಟಕ ಸರ್ಕಾರ ಆಗಲಿ ಭಾರತ ಸರ್ಕಾರ ಆಗಲಿ ಇಲ್ಲಿಯವರೆಗೂ ಸಾವಿತ್ರಿಬಾಯಿ ಫುಲೆಯವರ ಜನ್ಮ ದಿನಾಚರಣೆಯಾಗಿ ಘೋಷಿಸಿದರೆ ಅರ್ಥಪೂರ್ಣವಾಗಬಲ್ಲದು. ಈ ನಿಟ್ಟಿನಲ್ಲಿ ಸರ್ಕಾರ ವೈಚಾರಿಕ ವಿಚಾರಗಳನ್ನು ಸಾರಿದ ಮಹಾತ್ಮ ಫುಲೆಯವರ ಶಿಕ್ಷಣದ ಅರ್ಥವನ್ನು ಇನ್ನಷ್ಟು ವಿಸ್ತರಿಸಬಹುದು.

ಆಧಾರ ಗ್ರಂಥಗಳು :–

1) ಮಹಾತ್ಮ ಜ್ಯೋತಿರಾಮ ಫುಲೆ(ಮೂಲ ಮರಾಠಿ)–ಧನಂಜಯ ಕೀರ್, ಪಾಪ್ಯುಲರ ಪ್ರಾಕಾಶನ, ಮುಂಬೈ.
2) ಮಹಾತ್ಮ ಫುಲೆ – ಮುರುಳಿಧರ ಜಗತಾಪ
3) ಮಹಾತ್ಮ ಜ್ಯೋತಿಬಾ ಫುಲೆ – ಬಿ.ಗೋಪಾಲ್
4) ಕನ್ನಡ ಪ್ರಮುಖ ದಿನಪತ್ರಿಕೆಗಳು.

ನಶಿಸಿ ಹೋಗುತ್ತಿರುವ ಭಾಷೆಗಳು ಮತ್ತು ಪುನರುಜ್ಜೀವಗೊಳಿಸುವಿಕೆ

* ಬಿ.ಕೆ. ರವೀಂದ್ರನಾಥ್
ಭಾಷಾವಿಜ್ಞಾನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು– 6

ಪ್ರಪಂಚದಲ್ಲಿ 6000ಕ್ಕಿಂತಲೂ ಹೆಚ್ಚಿನ ಭಾಷೆಗಳಿವೆ. ಮುಂದಿನ ನೂರು ವರ್ಷಗಳಲ್ಲಿ 3000 ಭಾಷೆಗಳು ನಶಿಸಿ ಹೋಗಬಹುದು ಎಂದು ಅಂದಾಜಿಸಲಾಗಿದೆ. ಯಾವುದೇ ಒಂದು ಕಾರಣದಿಂದಾಗಿ ಭಾಷೆ ಅಳಿವಿನ ಅಂಚಿನಲ್ಲಿದೆ ಎಂದು ನಿರ್ಧರಿಸಲಾಗದು. ಒಂದು ಭಾಷೆಯನ್ನಾಡುವವರು ಆ ಭಾಷೆಯ ಬಳಕೆಯನ್ನು ನಿಲ್ಲಿಸಿದಾಗ, ತಮ್ಮ ಪ್ರಾಂತ್ಯಗಳಲ್ಲಿ ಆ ಭಾಷೆಯ ಶೈಲಿಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುವುದರಿಂದ, ಮುಂದಿನ ಪೀಳಿಗೆಯವರು ಬಳಸದಂತೆ, ಸಾಗದಂತೆ ಅಥವಾ ದಾಟದಂತೆ ಮಾಡುವುದರಿಂದ ಭಾಷೆಯು ಅಳಿವಿನ ಅಂಚಿಗೆ ಹೋಗುತ್ತದೆ. ಪ್ರತಿಯೊಂದು

ಭಾಷೆ ತನ್ನದೇ ಆದ ಸಾಂಸ್ಕೃತಿಕ ವೈಶಿಷ್ಟ್ಯ, ಮೌಲ್ಯ ವ್ಯವಸ್ಥೆಗಳೊಂದಿಗೆ ಅನನ್ಯ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಅಂತಹದೊಂದು ಭಾಷೆಯ ಅಳಿವು ಶತಮಾನಗಳಿಂದ ಅದು ಸಂಪಾದಿಸಿದ ಐತಿಹಾಸಿಕ, ಆಧ್ಯಾತ್ಮಿಕ ಮತ್ತು ಪರಿಸರದ ಜ್ಞಾನ ಸೇರಿದಂತೆ ಮತ್ತೊಮ್ಮೆ ಗಳಿಸಲಾಗದ ಅನನ್ಯ ಸಾಂಸ್ಕೃತಿಕ ನಷ್ಟವಾಗುತ್ತದೆ. ನಶಿಸಿ ಹೋಗುತ್ತಿರುವ ಭಾಷೆಗಳನ್ನು ಯಾವುದಾದರೂ ರೀತಿಯಲ್ಲಿ ದಾಖಲಿಸಿದ್ದರೆ ಮತ್ತು ಜನರಿಗೆ ಅದನ್ನು ಪುನರುಜ್ಜೀವನಗೊಳಿಸುವ ಒಲವಿದ್ದರೆ ಅವುಗಳನ್ನು ಉಳಿಸಿಕೊಳ್ಳಬಹುದು. ಹಾಗೆ ಪರಿಸ್ಥಿತಿ ಅನುಕೂಲಕರವಾಗಿದ್ದರೆ ನಶಿಸಿ ಹೋಗಿರುವ ಭಾಷೆಯನ್ನು ಕೂಡ ಬಳಕೆಗೆ ತರಬಹುದು. ಇತ್ತೀಚಿನ ವಿದ್ಯುನ್ಮಾನ ಕ್ಷೇತ್ರದಲ್ಲಿ ಆಗುತ್ತಿರುವ ಬೆಳವಣಿಗೆಗಳಿಂದ ಇದು ಖಂಡಿತ ಸಾಧ್ಯವಾಗುತ್ತದೆ. ಈ ಪ್ರಬಂಧದಲ್ಲಿ ನಶಿಸಿ ಹೋಗುತ್ತಿರುವ ಭಾಷೆಗಳು, ಅವುಗಳ ಮಹತ್ವ ಮತ್ತು ಅಂತಹ ಭಾಷೆಗಳನ್ನು ಪುನರ್ಜೀವಗೊಳಿಸುವ ಬಗೆಗೆ ಚರ್ಚಿಸಲಾಗಿದೆ.

ಒಂದು ಭಾಷೆಯನ್ನು ಆಡುವ ಕೊನೆಯ ವ್ಯಕ್ತಿ ಸತ್ತಾಗ ಆ ಭಾಷೆ ಸಾಯುತ್ತದೆ. ಇದು ಪ್ರಪಂಚದ ಅನೇಕ ಕಡೆ ಸಂಭವಿಸುತ್ತಿದೆ. ಅನೇಕ ಭಾಷೆಗಳನ್ನು ಕೆಲವೇ ಕೆಲವು ಅಂದರೆ ನೂರರಿಂದ ಇನ್ನೂರು ಜನ ಮಾತ್ರ ಆಡುತ್ತಿದ್ದಾರೆ. ಉದಾಹರಣೆಗೆ ಬ್ರೆಜಿಲ್ ಮತ್ತು ಇಂಡೋನೇಷ್ಯಾದ ಬುಡಕಟ್ಟುಗಳ ಭಾಷೆಗಳನ್ನು ಕೆಲವೇ ಮಂದಿ ಮಾತನಾಡುವವರಿದ್ದಾರೆ. ಇನ್ನೂ ಒಬ್ಬಿಬ್ಬರು ಮಾತ್ರವೇ ಆಡುವ ಅನೇಕ ಭಾಷೆಗಳನ್ನು ಕೂಡ ಕಾಣಬಹುದಾಗಿದೆ. ಯಾವ ಭಾಷೆಗಳು ಕೆಲವೇ ಮಂದಿ ಮಾತುಗಾರರನ್ನು ಹೊಂದಿದೆಯೋ, ಅಂತಹ ಭಾಷೆಗಳು ಬೇಗನೇ ಸಾಯುತ್ತವೆ. ಅಂತಹ ಭಾಷೆಗಳನ್ನು 'ಎಂಡೇಜರ್ಡ್ ಲಾಂಗ್ವೇಜಸ್' ಅಥವಾ ಅಳಿವಿನಂಚಿನಲ್ಲಿರುವ ಭಾಷೆಗಳು ಎಂದು ಕರೆಯಲಾಗುತ್ತದೆ.

ಇಂಗ್ಲಿಷ್ ಚೀನಿ, ಸ್ಪಾನಿಸ್ ಭಾಷೆಗಳು ಸಮೃದ್ಧಿ ಭಾಷೆಗಳು. ಇವುಗಳು ಮಾತು ಬರಹ ಮತ್ತು ಸಂಜ್ಞೆಗಳ ರೂಪಗಳಲ್ಲಿ ಕಾಣುತ್ತವೆ ಅಥವಾ ಬದುಕುಳಿದಿವೆ, ಅವುಗಳನ್ನು ಪ್ರಪಂಚದಾದ್ಯಂತ ನೂರು ಮಿಲಿಯನ್‌ಗಿಂತಲೂ ಹೆಚ್ಚು ಜನರು ಮಾಡುತ್ತಿದ್ದಾರೆ. ಆದರೆ ಪ್ರಪಂಚದ 6000ಕ್ಕಿಂತಲೂ ಹೆಚ್ಚಿನ ಭಾಷೆಗಳು ಈ ರೀತಿಯ ಸಮೃದ್ಧಿಯಿಂದ ಕೂಡಿಲ್ಲ. ಅವುಗಳನ್ನು ಬಹಳ ಕಡಿಮೆ ಜನರು ಬಳಸುತ್ತಿದ್ದಾರೆ. ಮಕ್ಕಳು ತಮ್ಮ ತಂದೆ ತಾಯಿಗಳಿಂದ ಆ ಭಾಷೆಗಳನ್ನು ಕಲಿಯುತ್ತಿಲ್ಲ. ಹಾಗಾಗಿ ಈ ಭಾಷೆಗಳು ವಾಸ್ತವವಾಗಿ ಸಾಯುವ ಸ್ಥಿತಿಯಲ್ಲಿವೆ.

ಪ್ರಾಯಶಃ ಮುಂದಿನ ನೂರು ವರ್ಷಗಳಲ್ಲಿ ಪ್ರಪಂಚದ 3000 ಭಾಷೆಗಳು ನಶಿಸಿ ಹೋಗಬಹುದು ಎಂದು ಅಂದಾಜಿಸಲಾಗಿದೆ. ಅಂದರೆ 3000 ಭಾಷೆಗಳು 1,200 ತಿಂಗಳುಗಳಲ್ಲಿ ಕಾಣೆಯಾಗಬಹುದಾಗಿವೆ. ಸರಾಸರಿ ಪ್ರಪಂಚದಲ್ಲಿರುವ ಯಾವ ಕಡೆಯಲ್ಲಾದರೂ ಪ್ರತಿ ಹದಿನೈದು ದಿವಸಕ್ಕೆ ಒಂದು ಭಾಷೆ ನಶಿಸಿ ಹೋಗುವುದನ್ನು ಕಾಣಬಹುದಾಗಿದೆ. ಈ ಹಿಂದೆ ಏನಾಗಿದೆಯೋ ಅದಕ್ಕಿಂತ ವೇಗವಾಗಿ ಈ ರೀತಿ ಆಗಲಿದೆ. ಯಾವುದೇ ಒಂದು ಭಾಷೆ ಸಾಯುವುದು ಅಥವಾ ನಶಿಸಿ ಹೋಗುವುದು ಇತ್ತೀಚಿನದಲ್ಲ. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಮಿಡಲ್ ಈಸ್ಟ್‌ನಲ್ಲಿ ಅನೇಕ ಭಾಷೆಗಳನ್ನು ಆಡುತ್ತಿದ್ದರು. ಅವುಗಳು ಈ ದಿನ ಕಾಣೆಯಾಗಿವೆ. ಒಬ್ಬ ರಾಜ ಇನ್ನೊಬ್ಬನನ್ನು ಸೋಲಿಸಿದಾಗಲೇ ಆ ಸೋತ ಜನರ ಭಾಷೆಗಳು ಅವರ ಜೊತೆಯಲ್ಲಿಯೇ ಕಾಣೆಯಾಗಿವೆ.

ಪ್ರಾಚೀನ ಭಾಷೆಗಳ ಬಗೆಗೆ ನಮಗೆ ಅಲ್ಪ ಸ್ವಲ್ಪ ಗೊತ್ತಿದೆ. ಏಕೆಂದರೆ ಕೆಲವುಗಳನ್ನು ಬರೆದಿಡಲಾಗಿದೆ. ಹಾಗಾಗಿ ಅವು ಯಾವಾಗಲೂ ಸಾಯುವುದಿಲ್ಲ. ಆದರೂ ಅನೇಕ ಪ್ರಾಚೀನ ಭಾಷೆಗಳನ್ನು ಬರೆದಿಡಲಾಗಲಿಲ್ಲ. ಅಂತೆಯೇ ಅವು ಯಾವಾಗಲೂ ಸತ್ತಂತೆಯೇ. ಭಾಷೆಗಳ ಈಗಿನ ಸ್ಥಿತಿಯೂ ಅದೇ ಆಗಿದೆ. ಸುಮಾರು 2000 ಭಾಷೆಗಳನ್ನು ಬರೆದಿಡಲಾಗಲಿಲ್ಲ. ಭಾಷಾ ವಿಜ್ಞಾನಿಗಳು ಏನಾದರೂ ಅವುಗಳು ನಶಿಸಿಹೋಗುವ ಮೊದಲು ಹಿಡಿದಿಡುವ ಪ್ರಯತ್ನ ಮಾಡದೇ ಹೋದರೆ ಅವು ಕೂಡ ಮರೆಯಾಗುವುದರಲ್ಲಿ ಸಂಶಯವಿಲ್ಲ.

ಒಂದು ಸಂಸ್ಕೃತಿ ನಶಿಸಿ ಹೋದರೆ ಅದರ ಕುರುಹು ಹೇಗಾದರೂ ಆಗಲಿ ಆ ಸಂಸ್ಕೃತಿಯ ಜನರು ಹೇಗೆ ಜೀವಿಸಿದ್ದರು ಎಂದು ಗೊತ್ತಾಗುತ್ತದೆ. ಉದಾಹರಣೆಗೆ ಪುರಾತತ್ವ ಶಾಸ್ತ್ರಜ್ಞರು ಭೂಮಿಯನ್ನು ಅಗೆದು ಅಲ್ಲಿರುವ ಮಡಿಕೆ, ಕುಡಿಕೆ, ಮೊಳೆಗಳು, ಅಸ್ಥಿಪಂಜರ, ನಾಣ್ಯ, ಆಯುಧ ಮುಂತಾದ ವಸ್ತುಗಳನ್ನು ಆಧರಿಸಿ ನಶಿಸಿ ಹೊದ ಒಂದು ಸಂಸ್ಕೃತಿಯನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತಾರೆ. ಆದರೆ ಆಡುಭಾಷೆಗಳು ಮರೆಯಾಗುವಾಗ ಯಾವ ಕುರುಹನ್ನು ಬಿಟ್ಟು ಹೋಗಿರುವುದಿಲ್ಲ. ಕಾರಣ ಆಡುಭಾಷೆ ಗಾಳಿಯಲ್ಲಿನ ಕಂಪನಗಳಾಗಿರುತ್ತವೆ, ತರಂಗಗಳಾಗಿರುತ್ತವೆ. ಆದುದರಿಂದ ಒಂದು ಆಡುಭಾಷೆಯನ್ನು ದಾಖಲಿಸುವ ಮುನ್ನ ನಶಿಸಿ ಹೋದರೆ ನಂತರ ಅದನ್ನು ಯಾವ ರೀತಿಯಲ್ಲೂ ದಾಖಲಿಸಲು ಅದು ಸಾಧ್ಯವಾಗುವುದಿಲ್ಲ.

ಯಾವುದೋ ಒಂದು ಭಾಷೆ ನಶಿಸಿ ಹೋದರೆ ಅದು ಅಸಾಮಾನ್ಯ ವಾದುದೇನಲ್ಲ ಆದರೆ ಹಿಂದಿನ ಸನ್ನಿವೇಶಕ್ಕೆ ಹೋಲಿಸಿದರೆ ಇತ್ತೀಚೆಗೆ ಏನಾಗುತ್ತಿದೆ ಅದು ಅಸಾಮಾನ್ಯವಾದುದು. ಹೆಚ್ಚಿನ ಸಂಖ್ಯೆಯಲ್ಲಿ ಭಾಷೆಗಳು ನಶಿಸಿ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಕೆಲವು ಸಸ್ಯ ಮತ್ತು ಪ್ರಾಣಿ ಪ್ರಬೇಧಗಳಿಗೆ ಏನು ಆಗುತ್ತಿದೆಯೋ ಅದು ಭಾಷೆಗಳಿಗೂ ಆಗುತ್ತಿದೆ. ಇವು ಮೊದಲಿಗಿಂದಲೂ ಇತ್ತೀಚೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬಹುಬೇಗನೆ ನಶಿಸುತ್ತಿವೆ. ಇದಕ್ಕೆ ಕಾರಣವೇನಿರಬಹುದು?

ಭಾಷೆಗಳನ್ನು ನಿಷೇಧಿಸುವುದರಿಂದಾಗಲಿ ಅಥವಾ ಇನ್ನಾವುದೇ ಕಾರಣದಿಂದಾಗಲಿ ಇದ್ದಕ್ಕಿದ್ದಂತೆ ಬಹು ಬೇಗನೆ ಅಳಿವಿನ ಅಂಚಿಗೆ ಹೋಗುವುದಿಲ್ಲ. ತಮ್ಮ ಮಾತೃಭಾಷೆಯ ಬದಲು ಇನ್ನೊಂದು ಭಾಷೆಯನ್ನು ಬಳಸುವುದೂ ಇದಕ್ಕೆ ಮುಖ್ಯ ಕಾರಣವಾಗುತ್ತದೆ. ಉದಾಹರಣೆಗೆ, ಹಲವಾರು ವರ್ಷಗಳಿಂದ ತಮ್ಮ ಮಾತೃಭಾಷೆಯ ಬದಲು ವೇಲ್ಸ್‌ನ ಜನರು ಇಂಗ್ಲಿಷ್ ಭಾಷೆಯನ್ನು ಬ್ರಿಟನ್ನಿನ ಜನರು ಫ್ರೆಂಚ್ ಭಾಷೆಯನ್ನು ಆಡುತ್ತಿದ್ದಾರೆ. ಹೀಗೆ ಕೆಲ ಕುಟುಂಬಗಳು ಒಂದು ಭಾಷೆಯನ್ನು ಬಿಟ್ಟು ಇನ್ನೊಂದನ್ನು ಬಳಕೆ ಮಾಡುತ್ತಿದ್ದಾರೆ. ಅವರು ಹೀಗೇಕೆ ಮಾಡುತ್ತಿದ್ದಾರೆ? ಇದಕ್ಕೆ ಮುಖ್ಯ ಕಾರಣ ಹೊಸ ಭಾಷೆಯಿಂದ ಅವರಿಗೆ ಅನುಕೂಲಕರ ಜೀವನ ನಡೆಸಲು ಸಹಕಾರಿಯಾಗಿದೆ. ಹೊಸ ಭಾಷೆ ಕಲಿಯುವುದರಿಂದ ಅವರಿಗೆ ಒಳ್ಳೆ ಕೆಲಸಗಳು ಸಿಗುತ್ತಿವೆ. ಎಲ್ಲಾ ಒಳ್ಳೆ ಕೆಲಸಗಳ ಬಗ್ಗೆ ಯೋಚಿಸಿದಾಗ ಅವುಗಳೆಲ್ಲ ಸಿಗುವುದು ದೊಡ್ಡ ದೊಡ್ಡ ನಗರಗಳಲ್ಲಿ. ಅಲ್ಲಿನ ಮುಖ್ಯ ಭಾಷೆಗಳನ್ನು ಮಾತನಾಡದೆ ಹೋದರೆ ಅಂತಹ ಕೆಲಸಗಳನ್ನು ನಿರ್ವಹಿಸುವುದು ಸಾಧ್ಯವಾಗುವುದಿಲ್ಲ. ಅಲ್ಲಿನ ಭಾಷೆಗಳನ್ನು ಕಲಿಯುವುದರಿಂದ ಒಂದು ಹೊಸ ಜೀವನ ನಡೆಸಬಹುದೆಂದು ಮನಗಂಡಿದ್ದಾರೆ. ಹೀಗೆ ಅವರ ಮಾತೃಭಾಷೆ ನಿಧಾನವಾಗಿ ಅಳಿವಿನ ಅಂಚಿಗೆ

ಸರಿಯುತ್ತಿದೆ.

ಈ ಹಿಂದೆ ಹಲವು ನೂರು ವರ್ಷಗಳ ಹಿಂದೆ ಬ್ರಿಟಿಷ್, ಸ್ಪಾನಿಷ್ ಮತ್ತು ಇತರರು ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿ ಆಡಳಿತ ನಡೆಸುವಾಗ ತಮ್ಮದಲ್ಲದ ಸಂಸ್ಕೃತಿ ಮತ್ತು ಭಾಷೆಯನ್ನು ಬೇಡವಾದ ಮನಸ್ಸಿನಿಂದ ಅನುಸರಿಸುತ್ತಿದ್ದರು. ಇಂತಹ ಸನ್ನಿವೇಶಗಳಲ್ಲಿ ತಮ್ಮ ಹಳೆಯ ಭಾಷೆ ಕೈ ಬಿಡುತ್ತಿತ್ತು. ಮಕ್ಕಳೂ ಕೂಡ ಆ ಬಗ್ಗೆ ಚಿಂತೆ ಮಾಡುತ್ತಿರಲಿಲ್ಲ. ಕಾರಣ ಹೊಸ ಭಾಷೆಯಿಂದ ಉಪಯೋಗಗಳು ಅಥವಾ ಪ್ರಯೋಜನಗಳು ಸಾಕಷ್ಟಿದ್ದವು. ಅವುಗಳ ಮೋಹಕ್ಕೆ ಒಳಗಾಗಿ ಅವರ ಮೊದಲ ಭಾಷೆ ಕ್ರಮೇಣ ಬಳಕೆಯಿಂದ ದೂರ ಸರಿಯುತ್ತಿತ್ತು.

ಇದು ಹೀಗೆಯೇ ಆಗಬೇಕಾಗಿಲ್ಲ. ಜನರು ತಮ್ಮ ಮೊದಲ ಭಾಷೆಯನ್ನು ಕಳೆದುಕೊಳ್ಳದೇ ಹೊಸ ಭಾಷೆಯನ್ನು ಕಲಿಯಬಹುದು. ದ್ವಿಭಾಷಿಕತೆಯ ಮೂಲಕ ತಮ್ಮ ಮೊದಲ ಭಾಷೆಯನ್ನು ಕಾಪಾಡಿಕೊಳ್ಳಬಹುದು. ಹೊಸ ಭಾಷೆ ಒಳ್ಳೆಯ ಕೆಲಸ ಒಳ್ಳೆಯ ಜೀವನ ನಡೆಸಲು ಸಹಾಯ ಮಾಡಬಲ್ಲದು. ಹಳೆಯ ಭಾಷೆ ನೀನು ಯಾರು ಎಂಬ ತಿಳುವಳಿಕೆಯನ್ನು ಅರಿಯಲು ಸಹಾಯ ಮಾಡುತ್ತದೆ. ನಿಮ್ಮ ಸ್ವಂತಿಕೆ ಮತ್ತು ವ್ಯಕ್ತಿತ್ವವನ್ನು ಕಪಾಡಿಕೊಂಡು ಹೋಗಲು ಸಹಾಯ ಮಾಡುತ್ತದೆ. ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ದೇಶಗಳ ಜನರು ಈ ಸತ್ಯವನ್ನು ಗ್ರಹಿಸುತ್ತಿದ್ದಾರೆ. ಪ್ರಾಣಿಗಳ ಸಸ್ಯಗಳ ವೈವಿಧ್ಯತೆಯನ್ನು ಜೀವಂತವಾಗಿಡುವ ಹಾಗೆ ಭಾಷೆಗಳನ್ನು ಭಾಷೆಯ ವೈವಿಧ್ಯತೆಯನ್ನು ಕಾಪಾಡಿಕೊಳ್ಳುವ ಅಥವಾ ಜೀವಂತವಾಗಿಡುವ ಕಡೆ ಗಮನ ಹರಿಸುತ್ತಿದ್ದಾರೆ. ಸ್ಪರ್ಶವೇದ್ಯ ಭೂಮಿಯ ಮೇಲೆ ಕಾಣುವ ಭೌತಿಕ ವಸ್ತುಗಳಾದ ಮರಳುಗಾಡು, ಕಾಡು, ಸರೋವರ, ಕಟ್ಟಡ, ಸ್ಮಾರಕಗಳನ್ನು ಜೋಪಾನ ಮಾಡಿದರೆ ಸಾಲದು. ಅಸ್ಪೃಶ್ಯವೇದ್ಯ ಅಥವಾ ಸ್ಪರ್ಶಾತೀತ ಸಂಪತ್ತುಗಳಾದ ಸಂಗೀತ, ನೃತ್ಯ, ನಾಟಕ, ಕಲೆ, ಕರಕುಶಲ ಕೈಗಾರಿಕೆ ವಿಶೇಷವಾಗಿ ಭಾಷೆಗಳನ್ನು ಸಂರಕ್ಷಿಸಬೇಕು. ಇತ್ತೀಚಿಗೆ ವಿಶ್ವದ ಅನೇಕ ಸಂಘಟನೆಗಳು ಕೂಡ ಇತ್ತ ಗಮನಹರಿಸುತ್ತಿವೆ.

ಪ್ರಪಂಚದ ಪ್ರತಿಯೊಂದು ಭಾಷೆ ತನ್ನದೇ ಆದ ಸಾಂಸ್ಕೃತಿಕ ವೈಶಿಷ್ಟ್ಯ, ಮೌಲ್ಯ ವ್ಯವಸ್ಥೆಗಳೊಂದಿಗೆ ಅನನ್ಯ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಅಂತಹದೊಂದು ಭಾಷೆಯ ಅಳಿವು, ಶತಮಾನಗಳಿಂದ ಅದು ಸಂಪಾದಿಸಿದ ಐತಿಹಾಸಿಕ, ಆಧ್ಯಾತ್ಮಿಕ ಮತ್ತು ಪರಿಸರದ ಜ್ಞಾನ ಸೇರಿದಂತೆ, ಆ ಭಾಷೆಯನ್ನು ಆಡುವವರ ಉಳಿವಿಗಲ್ಲದೆ ಇತರ ಅಸಂಖ್ಯಾತರಿಗೆ, ಮತ್ತೊಮ್ಮೆ ಗಳಿಸಲಾಗದ ಅನನ್ಯ ಸಾಂಸ್ಕೃತಿಕ ನಷ್ಟವಾಗುತ್ತದೆ. ಭಾಷೆಗಳು ಒಂದು ಭಾಷಾ ಸಮುದಾಯದವರ ಸಂಪ್ರದಾಯಗಳನ್ನು ಸೃಷ್ಟಿಸುವುದಲ್ಲದೆ ಬಹಳ ವೇಗವಾಗಿ ಪ್ರಸರಣ ಕೂಡ ಮಾಡುತ್ತವೆ. ಅವುಗಳು ಸಾಂಸ್ಕೃತಿಕ ಅನನ್ಯತೆಯನ್ನು ಬೆಂಬಲಿಸುತ್ತವೆಯಲ್ಲದೆ ಸಮುದಾಯದ ಅತ್ಯಾವಶ್ಯಕ ಭಾಗವಾಗುತ್ತವೆ.

ಸಸ್ಯ ಮತ್ತು ಪ್ರಾಣಿ ಪ್ರಬೇಧಗಳು ನಶಿಸಲು ಹಲವಾರು ಕಾರಣಗಳಿವೆ. ಅವುಗಳೆಂದರೆ ಪರಿಸರ, ಹೊಸದಾಗಿ ಕಾಣಿಸಿಕೊಳ್ಳುವ ರೋಗಗಳು ಅಥವಾ ಜನರು ಭೂಮಿಯನ್ನು ಬಳಸುತ್ತಿರುವ ರೀತಿ ಮುಂತಾದವುಗಳು. ಇಲ್ಲಿನ ಕೆಲವು ಕಾರಣಗಳು ಭಾಷೆಗೂ ಕೂಡ ಅನ್ವಯಿಸುತ್ತವೆ. ನೈಸರ್ಗಿಕ ವಿಪತ್ತುಗಳಾದ ಭೂಕಂಪ, ಸುನಾಮಿ, ಹಳ್ಳಿ, ಪಟ್ಟಣಗಳನ್ನು ನಾಶಪಡಿಸುತ್ತವೆ ಮತ್ತು ಹಲವಾರು ಜನರನ್ನು ಬಲಿ ತೆಗೆದುಕೊಳ್ಳುತ್ತವೆ. ಹೀಗೆ ಜನರು ಸತ್ತರೆ ಅಥವಾ ಅವರ ಸಮುದಾಯವೇ ಧ್ವಂಸವಾದರೆ ಅವರ ಭಾಷೆಯೂ ಕೂಡ ನಾಶವಾಗುತ್ತದೆ.

ಜನರು ಕೂಡ ಭಾಷೆಯ ಅಳಿವಿಗೆ ಕಾರಣವಾಗುತ್ತಾರೆ. ಬೇಟೆಗಾರರು ಯಾವುದೊ ಒಂದು ಪ್ರಬೇಧದ ಉಳಿದಿರುವ ಪ್ರಾಣಿಗಳನ್ನು ಸಾಯಿಸಬಹುದು. ಹಾಗೆಯೇ ಸಂಗ್ರಹಕಾರರು ಒಂದು ಪ್ರಬೇಧದ ಎಲ್ಲಾ ಉಳಿದಿರುವ ಸಸ್ಯಗಳನ್ನು ತೆಗೆದುಕೊಳ್ಳಬಹುದು. ಸರಕಾರ ಯಾವುದೋ ಒಂದು ಭಾಷೆಯನ್ನು ನಿಷೇಧಿಸಬಹುದು. ಮಕ್ಕಳಿಗೆ ಅದನ್ನು ಕಲಿಯದಂತೆ ವಿರೋಧಿಸಬಹುದು ಅಥವಾ ಕಲಿಯಲು ಅವಕಾಶ ಕಲಿಸದೇ ಇಇಬಹುದು. ಆಗ ಆ ಭಾಷೆ ಬೇಗನೇ ನಶಿಸಿ ಹೋಗಬಹುದು.

ಭಾಷೆಗಳನ್ನು ಸಂರಕ್ಷಿಸಲು ಕೆಲವು ಮುಖ್ಯ ಅಂಶಗಳನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು.

1. ನಶಿಸಿಹೋಗುತ್ತಿರುವ ಭಾಷೆಯನ್ನು ಸಂರಕ್ಷಿಸಿಕೊಳ್ಳಬೇಕು ಎನ್ನುವ ಭಾವನೆ ಆ ಭಾಷೆಯನ್ನಾಡುವ ಜನರಲ್ಲಿ ಮೊದಲು ಮೂಡಬೇಕು.
2. ಇದು ಹೆಚ್ಚು ಖರ್ಚಿನ ಕೆಲಸವಾದ್ದರಿಂದ ಆ ಭಾಷೆಯನ್ನಾಡುವ ಪ್ರದೇಶದ ಸರ್ಕಾರ ಈ ನಿಟ್ಟಿನಲ್ಲಿ ಸಹಾಯ ಮಾಡಬೇಕು ಅಂದರೆ ಹಣದ ಅವಶ್ಯಕತೆಯನ್ನು ಪೂರೈಸುವಂತಿರಬೇಕು.
3. ಇತ್ತೀಚಿನ ವಿದ್ಯುನ್ಮಾನ ಸಲಕರಣೆಗಳು ಮತ್ತು ತಂತ್ರಾಂಶಗಳ ನೆರವಿನಿಂದ ದಾಖಲೀಕರಿಸಿ ಮತ್ತು ವಿಶ್ಲೇಷಣೆ ಮಾಡಿ ಹಾನಿಯಾಗದಂತೆ ಸಂಗ್ರಹಿಸಬೇಕು.
4. ನಶಿಸಿ ಹೋಗುತ್ತಿರುವ ಭಾಷೆಯ ನಿಘಂಟನ್ನು ಮತ್ತು ಭಾಷೆಯ ವಿವರಣಾತ್ಮಕ ವ್ಯಾಕರಣವನ್ನು ತಯಾರಿಸಿಕೊಳ್ಳುವುದು.
5. ಪ್ರಾಥಮಿಕ ಪಠ್ಯ ಪುಸ್ತಕಗಳನ್ನು ಪ್ರಕಟಿಸಿ ಶಿಕ್ಷಕರಿಗೆ ತರಬೇತಿ ಕೊಡಬೇಕು, ಸಮುದಾಯ ಕೇಂದ್ರಗಳನ್ನು ಸ್ಥಾಪಿಸಿ ನಶಿಸಿ ಹೋಗುತ್ತಿರುವ ಭಾಷೆಗಳನ್ನು ಉಳಿಸಿಕೊಳ್ಳಲು ಮುಂದಾಗುವುದು.

ಇತ್ತೀಚಿನ ವಿದ್ಯುನ್ಮಾನ ಕ್ಷೇತ್ರದಲ್ಲಿ ಆಗುತ್ತಿರುವ ಕ್ಷಿಪ್ರ ಬೆಳವಣಿಗೆ ಅಳಿವಿನಂಚಿನಲ್ಲಿರುವ ಭಾಷೆಗಳನ್ನು ಉಳಿಸಿ ಬೆಳೆಸಲು ನಮಗೆ ಸಿಕ್ಕಿರುವ 'ವರ' ಎಂದೇ ಹೇಳಬಹುದು. ಇಂತಹ ಭಾಷೆಗಳ ಮೌಖಿಕ ಸಂಪ್ರದಾಯಗಳಾದ ಕಥೆ, ಪುರಾಣ, ಕವನ, ನಂಬಿಕೆ, ಗಾದೆ, ಒಗಟು, ನುಡಿಗಟ್ಟು ಇನ್ನಿತರ ಸಂಭಾಷಣೆಗಳನ್ನು ವಾಯ್ಸ್ ರೆಕಾರ್ಡರ್ ಮತ್ತು ವಿಡಿಯೋ ರೆಕಾರ್ಡರ್‌ಗಳ ಸಹಾಯದಿಂದ ದಾಖಲಿಸಿಕೊಳ್ಳಬೇಕು. ಹೀಗೆ ದಾಖಲಿಸಿದ ಮಾಹಿತಿಯನ್ನು ಪ್ರಾಕ್, ಎಲಾನ್, ಸಿಲ್ ಮುಂತಾದ ತಂತ್ರಾಂಶಗಳ ಮೂಲಕ ವಿಶ್ಲೇಷಿಸಿ ವಿವರಿಸಿಕೊಳ್ಳಬಹುದಾಗಿದೆ. ಈ ರೀತಿ ವಿಶ್ಲೇಷಿಸಿ ವಿವರಿಸಿಕೊಳ್ಳಲಾದ ಮಾಹಿತಿಯನ್ನು ನೂರಾರು ವರ್ಷಗಳವರೆಗೆ ಯಾರಿಗೂ ಹಾನಿ ಆಗದಂತೆ ಸಂಗ್ರಹಿಸಿಡ ಬಹುದಾದ ತಂತ್ರಜ್ಞಾನವೂ ನಮ್ಮ ಮುಂದಿದೆ. ನಂತರದಲ್ಲಿ ಈ ಮಾಹಿತಿಯ ಸಹಾಯದಿಂದ ಶಬ್ದಕೋಶ ಪ್ರಾಥಮಿಕ ಪಠ್ಯಪುಸ್ತಕಗಳನ್ನು ರಚಿಸಿ, ಆಯಾ ಭಾಷಾಸಮುದಾಯದ ಮಕ್ಕಳಿಗೆ ಅಭ್ಯಾಸ ಮಾಡಿಸುವುದರಿಂದ ನಶಿಸಿ ಹೋಗುತ್ತಿರುವ ಭಾಷೆಗಳನ್ನು ಉಳಿಸಿ ಬೆಳೆಸಲು ಸಹಾಯವಾಗುತ್ತದೆ. ಈ ಎಲ್ಲಾ ಅಂಶಗಳನ್ನು ಅನುಸರಿಸಿದರೆ ಅದ್ಭುತ ಕಾರ್ಯವನ್ನು ಮಾಡಿ ಭಾಷೆಗೆ ಹೊಸ ಜೀವವನ್ನು ತುಂಬಬಹುದು. ಈ ಕ್ರಿಯೆಯನ್ನು ಭಾಷಾ ಪುನರುಜ್ಜೀವಗೊಳಿಸುವಿಕೆ ಅಥವಾ 'ಪುನಃಸತ್ವಯುತಗೊಳಿಸುವಿಕೆ' ಎಂದು ಕರೆಯಬಹುದು.

ಇವುಗಳಿಂದ ಭಾಷೆ ಖಂಡಿತ ಸತ್ವಯುತಗೊಳ್ಳುತ್ತದೆ. ಕಳೆದ 50 ವರ್ಷಗಳಲ್ಲಿ ಇಂತಹ ಉದಾಹರಣೆಗಳನ್ನು ಕಾಣಬಹುದಾಗಿದೆ. ಹೀಗೆಯೇ, 'ಹೆಬ್ರು' ಭಾಷೆ ಪುನರುಜ್ಜೀವಗೊಂಡು ಆಧುನಿಕ ಇಸ್ರೇಲಿನ

ಆಡಳಿತ ಭಾಷೆಯಾಗಿದೆ. ಇದೇ ರೀತಿಯಿಂದಾಗಿ 'ವೇಲ್ಸ್' ಭಾಷೆಯ ಬಿತ್ತಿಪತ್ರಗಳನ್ನು ವೇಲ್ಸ್ ಸಾರ್ವಜನಿಕ ಸ್ಥಳಗಳಲ್ಲಿ ಕಾಣಬಹುದಾಗಿದೆ. ನ್ಯೂಜಿಲ್ಯಾಂಡಿನ 'ಮಾಹರಿ' ಭಾಷೆ ಕೂಡ 'ಭಾಷಾಗೂಡು'ಗಳ ಮೂಲಕ ಪುನರ್‌ಜ್ಜೀವಗೊಂಡಿದೆ. ಕೆಲವು ಸಂಘಟನೆಗಳು ಇಂತಹ 'ಭಾಷಾಗೂಡು'ಗಳನ್ನು ಸ್ಥಾಪಿಸಿ, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಒಂದುಗೂಡಿಸಿ, ಮನೆಯ ವಾತಾವರಣವನ್ನು ಸೃಷ್ಟಿಸಿ ಅಲ್ಲಿ ಭಾಷೆಯ ಬಗೆಗೆ ಆಳವಾಗಿ ಅಭ್ಯಾಸ ಮಾಡಿಸಲಾಗುತ್ತದೆ. ಅಲ್ಲಿನ ಶಿಕ್ಷಕರು, ಕೆಲಸಗಾರರು ಎಲ್ಲರೂ 'ಮಾಹರಿ' ಭಾಷೆ ಮಾತನಾಡುವ ಸ್ಥಳೀಯ ಸಮುದಾಯದವರಾಗಿರುತ್ತಾರೆ. ಹೀಗೆ ಮಕ್ಕಳು 'ಮಾಹರಿ' ಭಾಷೆಯನ್ನು ಬಳಸುವ ಕೌಶಲವನ್ನು ಕಲಿತು 'ಭಾಷಾಗೂಡ'ನ್ನು ಬಿಟ್ಟ ಮೇಲೆ ತಾವು ಬೆಳೆದು ತಮ್ಮ ಮಕ್ಕಳಿಗೆ ಈ ಭಾಷೆಯನ್ನು ಕಲಿಯಲು ಸಹಾಯಮಾಡಬಹುದು.

ಪರಿಸ್ಥಿತಿ ಅನುಕೂಲಕರವಾಗಿದ್ದರೆ, ನಶಿಸಿ ಹೋಗಿರುವ ಭಾಷೆಯನ್ನು ಕೂಡ ಬಳಕೆಗೆ ತರಬಹುದು. ಆ ಭಾಷೆಯನ್ನು ಯಾವುದಾದರೂ ರೀತಿಯಲ್ಲಿ ದಾಖಲಿಸಿದ್ದರೆ ಮತ್ತು ಜನರಿಗೆ ಅದನ್ನು ಪುನರುಜ್ಜೀವನಗೊಳಿಸುವ ಒಲವಿದ್ದರೆ ಇದು ಖಂಡಿತ ಸಾಧ್ಯವಾಗುತ್ತದೆ. ದಕ್ಷಿಣ ಆಸ್ಟ್ರೇಲಿಯಾದ 'ಕೌರ್‌ನಾ' ಭಾಷೆಯ ವಿಷಯದಲ್ಲಿ ಹೀಗೆ ನಡೆದಿದೆ. ಈ ಭಾಷೆಯ ಕೊನೆಯ ಆಡುಗ 1929ರಲ್ಲಿ ತೀರಿ ಹೋದ. ಆದರೆ 1980 'ಕೌರ್‌ನಾ' ಜನ ಅವರ ಭಾಷೆಯನ್ನು ಪುನರ್‌ಜ್ಜೀವಗೊಳಿಸಲು ಮುಂದಾಗುತ್ತಾರೆ. ಭಾಷಾ ವಿಜ್ಞಾನಿಗಳ ಮತ್ತು ಉಳಿದ ಭಾಷಾ ಸಾಮಗ್ರಿಗಳ ಸಹಾಯದಿಂದ 'ಕೌರ್‌ನಾ' ಜನ ಪುನಃ ಭಾಷೆಯನ್ನು ಕಲಿಯಲು ಪ್ರಾರಂಭಿಸಿದ್ದಾರೆ, ಶಾಲೆಗಳಲ್ಲೂ ಬೋಧಿಸಲಾಗುತ್ತಿದೆ. ಈಗ ಅವರು ನಮ್ಮ 'ಭಾಷೆ ಸತ್ತಿರಲಿಲ್ಲ ಅದು ನಿದ್ರಿಸುತ್ತಿತ್ತು ಅಷ್ಟೆ' ಎನ್ನುತ್ತಾರೆ. ಮುಂದೆ ಮಕ್ಕಳು ಈ ಭಾಷೆಯನ್ನು ತಮ್ಮ ಮಾತೃಭಾಷೆಯನ್ನಾಗಿ ಕಲಿಯಬಹುದಾಗಿದೆ. ಇಂತಹ ಸಂದರ್ಭಗಳಲ್ಲಿ ಭಾಷಾವಿಜ್ಞಾನಿಗಳು ಭಾಷೆಯ ಶಬ್ದಕೋಶವನ್ನು ಪರಿಷ್ಕರಿಸಬೇಕಾಗುತ್ತದೆ. ಹೊಸ ಹೊಸ ಅವಿಷ್ಕಾರಗಳಿಗೆ ಪರ್ಯಾಯ ಪದಗಳನ್ನು ಟಂಕಿಸಬೇಕಾಗುತ್ತದೆ.

ಪರಾಮರ್ಶನ ಗ್ರಂಥಗಳು

ಬೇಟ್ಸ್ ಇತರರು (2009). ಲರ್ನಿಂಗ್ ಅಂಡ್ ನೋಯಿಂಗ್ ಇನ್‌ಡಿ ಜೀನಿಯನಿಸ್ ಸೋಸೈಟೀಸ್ ಟುಡೆ, ಇಲಸ್/ಎಸ್ಸಿ ಡಬ್ಲು. ಎಸ್/1 2009.

ಕ್ರಿಸ್ಟಲ್ ಡೇವಿಡ್ (2010). ದಿ ಲಿಟಲ್ ಬುಕ್ ಆಫ್ ಲಾಂಗ್ವೇಜ್, ಯೇಲ್ ಯುನಿವರ್ಸಿಟಿ ಪ್ರೆಸ್.

ಮೋಸ್ಲಿ ಕ್ರಿಸ್ಟೋಫರ್ (ಸಂ) (2010). ಅಟ್ಲಾಸ್ ಆಫ್ ದಿ ವರ್ಲ್ಡ್‌ಸ್ ಲ್ಯಾಂಗ್ವೇಜಸ್ ಇನ್ ಡೇಂಜರ್, 3ನೇ ಆವೃತ್ತಿ, ಪ್ಯಾರೀಸ್, ಯುಎನ್‌ಇಎಸ್‌ಸಿಒ ಪಬ್ಲಲೀಷಿಂಗ್. ಆನ್‌ಲೈನ್ ವರ್ಷನ್.

ಸ್ಟೀಪನ್. ಡಬ್ಲೂ. (2001) ವಾಟ್ ಫ್ಯೂಚರ್ ಫಾರ್ ಮೈನಾರಿಟಿ ಲ್ಯಾಂಗ್ವೇಜ್ ಆಂಡ್ ತ್ರೆಟಂಡ್ ಲ್ಯಾಂಗ್ವೇಜಸ್? ಕೇಸ್ ಟು ದಿ 21 ಸೆಂಚುರಿ. 160–163

ಜನಪದ ಗಾದೆಗಳಲ್ಲಿ ಆರೋಗ್ಯ ಪ್ರಜ್ಞೆ

ಯೋಗೇಶ. ಬಿ. ಎಸ್

ಉಪನ್ಯಾಸಕರು, ಕನ್ನಡ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇಮೇಲ್ ಐ.ಡಿ yogi8141@gmail.com

ಜನಪದರ ಬದುಕಿನ ಮತ್ತು ನಿತ್ಯ ಬಳಸುವ ಮಾತಿನಲ್ಲಿ ಗಾದೆಗಳು ಬಿಳಲುಗಳಂತೆ ಹೆಣೆದುಕೊಂಡಿವೆ. ಗಾದೆಗಳು ವಾಮನ ರೂಪವಾದರೂ ತನ್ನ ಅಂತರಾಳದಲ್ಲಿ ವಿರಾಟ್ ರೂಪವನ್ನೇ ಅಡಗಿಸಿಕೊಂಡಿವೆಯಲ್ಲದೆ; ಆ ಮೂಲಕ ಮಾತಿಗೆ ಮೆರಗನ್ನು, ಸತ್ವವನ್ನು ತಂದುಕೊಡುತ್ತವೆ. ಕನ್ನಡಿಗರು ಗಾದೆಯನ್ನು ಕುರಿತು, 'ಗಾದೆಗಳು ವೇದಗಳೂ ಸಮ', 'ಗಾದೆಯ ಮರ್ಮವನ್ನರಿತವನು ವೇದದ ಮರ್ಮವನ್ನರಿತಾನು', ಎಂದರ್ ರಷ್ಯನ್ನರು 'ಸತ್ಯವನ್ನೂ, ಮೂರ್ಖನನ್ನೂ, ಗಾದೆಮಾತನ್ನೂ ಎದುರಿಸಿದವರಿಲ್ಲ' ಎನ್ನುತ್ತಾರೆ, ಗಾದೆ ನುಡಿಗಳು ಪುರಾಣ, ಚರಿತ್ರೆ ಅಥವಾ ಸಮಕಾಲೀನ ಸಮಾಜದಿಂದ ಆಯ್ದವಾಗಿರಬಹುದು, ಈ ನುಡಿಗಳು ಅನುಭವಸಾರವಾಗಿದ್ದು ಇವು ಮನುಷ್ಯನಿಗೆ ನೈತಿಕತೆ, ಆಚಾರ-ವಿಚಾರ, ವೃತ್ತಿ, ಶಿಕ್ಷಣ, ವೈದ್ಯಕೀಯ, ಹವಮಾನ ಮತ್ತು ಆರೋಗ್ಯ ಮುಂತಾದ ವಿಚಾರಗಳನ್ನು ಕುರಿತ ಜ್ಞಾನ, ಅವುಗಳ ಅಗತ್ಯತೆ ಹಾಗೂ ಮಹತ್ವವನ್ನು ತಿಳಿಸಿಕೊಡುತ್ತವೆ. ಜೊತೆಗೆ ಮನುಷ್ಯ ಅವುಗಳನ್ನು ತನ್ನದಾಗಿಸಿಕೊಂಡು; ಸಮಾಜದಲ್ಲಿ ತನ್ನ ಬದುಕಿನುದ್ದಕ್ಕೂ ಸರಿಯಾದ ಪಥದಲ್ಲಿ ನಡೆಯುವಂತೆ ಪ್ರೇರೆಪಿಸುತ್ತವೆ. ಮನುಷ್ಯ ತನ್ನ ಪರಿಸರ ಮತ್ತು ಆರೋಗ್ಯವನ್ನು ಕಾಯ್ದಕೊಳ್ಳುವುದು ಅತ್ಯಗತ್ಯ ಈ ನಿಲುವಿನಲ್ಲಿ, 'ಊಟಕ್ಕೆ ಉಪ್ಪಿನ ಕಾಯಿ', 'ಹಸಿದು ಹಲಸು ತಿನ್ನು, ಉಂಡು ಮಾವು ತಿನ್ನು', 'ಕೂಸಿಗೆ ಎಣ್ಣೆ ಕಾಸಿ ಹಾಕು', 'ಹೊನೆಗೊನೆ ಸೊಪ್ಪು ಹೋದ ಕಣ್ಣುತಂತು', ಇನ್ನು ಮುಂತಾದ ಗಾದೆಗಳು ಮಾನವನ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಲಹೆಗಳನ್ನು ಮಾರ್ಗಸೂಚಿಯನ್ನು ಹಾಕಿಕೋಡುವುದನ್ನು ಕಾಣಬಹುದು. ಇಂಥಾ ಸಾಕಷ್ಟು ಗಾದೆಗಳನ್ನು ಅನುಲಕ್ಷಿಸಿ ಗಾದೆಗಳಲ್ಲಿ ಬಿಂಬಿತವಾಗಿರುವ ಜನಪದರಲ್ಲಿನ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಸಂಬಂಧಿಸಿದ ಅಂಶಗಳನ್ನು ಅವಲೋಕಿಸಬಹುದು.

ಜನಪದರ ಬದುಕಿನಲ್ಲಿ ಗಾದೆ ಮಾತುಗಳು ಬಿಳಲುಗಳಂತೆ ಹೆಣೆದುಕೊಂಡಿದೆ. ಇವುಗಳ ರೂಪ ವಾಮನ ರೀತಿಯದ್ದಾದರು ತನ್ನ ಅಂತರಾಳದಲ್ಲಿ ವಿರಾಟ ರೂಪವನ್ನೆ ಅಡಗಿಸಿಕೊಂಡಿವೆ. ಆಮೂಲಕ ಮಾತಿಗೆ ಶಕ್ತಿಯನ್ನು ವಿಶಿಷ್ಟ ಕಾಂತಿಯನ್ನು ಮತ್ತು ಸತ್ವವನ್ನು ತಂದುಕೊಟ್ಟಿವೆ. ಗಾದೆಗಳು ಅನುಭವದ ಸಾರವಾಗಿದ್ದು ಜನರ ಬದುಕಿಗೆ ಮಾರ್ಗದರ್ಶನ ಮಾಡುತ್ತ ಸರಿಯಾದ ಪಥದಲ್ಲಿ ನಡೆಯುವಂತೆ ಪ್ರೇರೆಪಿಸುತ್ತವೆ, ಅಂದರೆ ಜನಮಾನಸದಲ್ಲಿ ನಿತ್ಯನೆಲೆಸಿವೆ ಎಂದು ಹೇಳಬಹುದು.

'ಗಾದೆ' ಎಂಬ ಪದವು ಸಂಸ್ಕೃತದ 'ಗಾಥಾ' ಎಂಬ ಪದದಿಂದ ಬಂದಿದ್ದು ಗಾದೆ ಎಂದರೇ 'ಹಿರಿಯರ ಅನುಭವದ ನುಡಿ' ಎಂಬ ಅರ್ಥವನ್ನು ಪಡೆದಿದೆ. ಗಾದೆಯನ್ನು ಕುರಿತು ಪ್ರಾಕೃತದಲ್ಲಿ 'ಗಾಹೆ' (ಗತಿಬದ್ಧ ನುಡಿ/ಹಾಡು), ಹಂಗರಿ ಭಾಷೆಯಲ್ಲಿ ಪೆಲ್ದಬೆಗೆಡ್ (ದೃಷ್ಟಾಂತ), ಚೀಣೀಯಲ್ಲಿ 'ಯೆನ್' (ಮನೋಹರವಾದ ಮಾತು), ಲ್ಯಾಟಿನ್‌ನಲ್ಲಿ 'ಪ್ರವರ್ಬಿಯಂ' (ಜನರೆದುರು ಹಾಡಿದ ಮಾತು) ಎಂದು ಹೇಳಿದರೆ. ಕನ್ನಡದಲ್ಲಿ ನಾಣ್ನುಡಿ, ತಮಿಳು, ಮಲಯಾಳಂ ಮತ್ತು ಐರಿಷ್ ಭಾಷೆಗಳಲ್ಲಿ ಗಾದೆಗಳನ್ನು 'ಹಳೆಯ ಮಾತು' ಎಂದು

ಕರೆದಿದ್ದಾರೆ.

ಜರ್ಮನ್ ಗಾದೆಗಳ ಸಂಗ್ರಹಕಾರ ಇಸೆಲಿಯನ್ "ಗಾದೆಗಳೆಂದರೆ ಜನಸಾಮಾನ್ಯರಲ್ಲಿ ಚಲಾವಣೆಯಲ್ಲಿರುವ ಸಾರ್ವಜನಿಕ ಮುದ್ರೆಬಿದ್ದಿರುವ, ಪ್ರಚಲಿತವೂ ಸ್ವೀಕೃತ ಮೌಲ್ಯಭರಿತವೂ ಆಗಿರುವ ನಾಣ್ಯ" ಎಂದರೆ. ಅರ್ಲ್‌ರಸೆಲ್ "ಅನೇಕರ ಅನುಭವ, ಒಬ್ಬನ ಬುದ್ಧಿ" ಎಂದು ಕರೆದನು. ಇಷ್ಟೇ ಅಲ್ಲದೆ ಗಾದೆಗಳನ್ನು ಕುರಿತು ಅನೇಕರು ತಮ್ಮದೆ ಆದ ರೀತಿಯಲ್ಲಿ ವ್ಯಾಖ್ಯಾನಿಸಲು ಪ್ರಯತ್ನಿಸಿದರೂ ಗಾದೆ ಎಂದರೇನು? ಎಂಬುದನ್ನು ವಿವರಿಸುವಲ್ಲಿ ಸಫಲರಾಗಿಲ್ಲ ಮತ್ತು ಯಾವ ರೀತಿಯಿಂದ ವ್ಯಾಖ್ಯಾನಿಸಲು ಮುಂದಾದರು ಅದು ಅತಿವ್ಯಾಪ್ತಿ– ಅವ್ಯಾಪ್ತಿಗಳಿಂದ ಮುಕ್ತವಾಗಿಲ್ಲ.

ಗಾದೆಯ ಹುಟ್ಟಿನ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ಅವುಗಳ ಹುಟ್ಟು ಒಂದು ಸಂಗತಿಯನ್ನೋ, ಕಥೆಯನ್ನೋ, ಚರಿತ್ರೆಯ ಎಳೆಯನ್ನೋ ಎತ್ತಿಕೊಂಡಿರುವದು ಕಾಣಬರುತ್ತದೆ. ಗಾದೆಯ ಕಾಲವನ್ನು ಇಂತಹದ್ದೆ ಎಂದು ಹೇಳಲು ಏಕೆ ಸಾಧ್ಯವಿಲ್ಲವೆಂದರೆ, ಉದಾಹರಣೆಗೆ 'ಮೊಬೈಲ್ ಮನಸ್ಸ್ ಕೇಡುಸ್ತು, ಮೆಸೆಜ್ ತಲೆಕೇಡಿಸ್ತು', 'ಆಟೋ ಹಿಂದೆ ಹೋದ್ರೆ ಧೂಳ್ ಹುಡ್ಗಿ ಹಿಂದೆ ಹೋದ್ರೆ ಗೋಳ್' ಮೊದಲಾದ ಪ್ರಚಲಿತದಲ್ಲಿರುವ ಈ ತಮಾಷೆಯ ನುಡಿಗಳೆ ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ಗಾದೆ ಮಾತಾಗಿ ಬಳಕೆಗೆ ಬರಬಹುದು. ಏನೇ ಇರಲಿ 'ಅಲ್ಲಿ ಬಿದ್ದು ಇಲ್ಲಿ ಬಿದ್ದು ಮಗ ಗುಂಡುಕಲ್ಲಾದ' ಎನ್ನುವಂತೆ ಹೋದವು ಹೋಗಿ ಬಂದವು ಬಂದು ಗಾದೆಯ ರಾಶಿ ದಿನದಿಂದ ದಿನಕ್ಕೆ ಬೆಳೆಯುತ್ತ ಸಮುದ್ರದಂತೆ ಅಪಾರವಾಗಿವೆ. ಅಂದರೆ ಸಮುದಾಯದ ನಡುವೆ ಅಗತ್ಯ ಬಿದ್ದಾಗ ಹುಟ್ಟಿ ರೀತಿ–ನೀತಿ, ನೈತಿಕತೆ, ಬುದ್ಧಿಮಾತುಗಳನ್ನು ಹೇಳುತ್ತ ಸಮುದಾಯವನ್ನು ಸರಿಯಾದ ದಾರಿಯಲ್ಲಿ ನಡೆಸಲು ಮುಂದಾಗಿವೆ.

ಗಾದೆ ನುಡಿಗಳು ಪುರಾಣ, ಚರಿತ್ರೆ, ಸಮಕಾಲೀನ ಸಮಾಜದಿಂದ ಆಯ್ದವಾಗಿರಬಹುದು. ಈ ನುಡಿಗಳು ಅನುಭವ ಸಾರವಾಗಿದ್ದು ಮಾನವರಿಗೆ ನೈತಿಕತೆ, ವೃತ್ತಿ, ಆಚಾರ–ವಿಚಾರ, ಶಿಕ್ಷಣ, ಹವಮಾನ, ಕೆಲಸ, ದುಡಿಮೆ ಅದರ ಫಲ ಮುಂತಾದ ವಿಷಯಗಳನ್ನು ಕುರಿತು ಅಗಾಧವಾದ ತಿಳುವಳಿಕೆಯನ್ನು ಕಟ್ಟಿಕೊಡುತ್ತವೆ. ಅಲ್ಲದೆ ಜನಪದರು ದೇಹ ಸ್ವಾಸ್ಥ್ಯ ಅಥವಾ ಆರೋಗ್ಯಕ್ಕೆ ಸಂಬಂಧಿಸಿದಂತೆ ಆರೋಗ್ಯವೇ ಭಾಗ್ಯ ಎಂಬ ಮಾತನ್ನು ದೃಢವಾಗಿ ನಂಬಿ ಆರೋಗ್ಯದ ರಕ್ಷಣೆಗೆ ತಂತ್ರ–ಗುಟ್ಟುಗಳನ್ನು, ಔಷದಿಗಳನ್ನು ಕಂಡುಕೊಂಡು ಅವುಗಳನ್ನು ತಲೆಮಾರಿನಿಂದ ತಲೆಮಾರಿಗೆ ಕೆಲ ಗಾದೆಗಳ ರೂಪದಲ್ಲಿ ಹರಿಬಿಟ್ಟಿದ್ದಾರೆ. ಇಂಥಾ ಆರೋಗ್ಯ ಸಂಬಂಧಿ ಗಾದೆಗಳನ್ನು ಗಮನಿಸುವುದಾದರೆ ಅವುಗಳನ್ನು ದೈಹಿಕ ಆರೋಗ್ಯ ಸಂಬಂಧಿ ಮತ್ತು ಮಾನಸಿಕ ಆರೋಗ್ಯ ಸಂಬಂಧಿ ಎಂದು ವಿಭಾಗಿಸಿಕೊಳ್ಳಬಹುದು.

ದೈಹಿಕ ಆರೋಗ್ಯ ಎಂದೊಡನೆ, ದೇಹ ಸ್ವಾಸ್ಥ್ಯವನ್ನು ಸಮಸ್ಥಿತಿಯಲ್ಲಿಡುವುದು ಎಂದರ್ಥವಾಗಬಹುದು. ದೇಹ ಸ್ವಾಸ್ಥ್ಯಗಳಿಸಲು ವ್ಯಕ್ತಿ ಸರಿಯಾದ ಆಹಾರವನ್ನು ಸರಿಯಾದ ಕ್ರಮದಲ್ಲಿ ಸೇವಿಸುವುದು ತುಂಬಾ ಅಗತ್ಯ. ಇಲ್ಲದಿದ್ದರೆ 'ಆಗಿಷ್ಟುಂಡು ಈಗಿಷ್ಟುಂಡು ರೋಗಿಷ್ಟನಾದ' ಎಂಬಂತಾಗುತ್ತದೆ. ಜನಪದರು ಸಮುದಾಯದ ಆರೋಗ್ಯ ದೃಷ್ಟಿಯಿಂದ ಉತ್ತಮ ಆಹಾರ ಮತ್ತು ಆಹಾರ ಸೇವಿಸುವ ಕ್ರಮ ಹೇಗಿರಬೇಕು ಎಂಬುದನ್ನು ಗಾದೆಗಳ ಮೂಲಕ ತಿಳಿಹೇಳುವುದನ್ನು ಕಾಣಬಹುದು. ಅವುಗಳು ಕೇವಲ ನುಡಿಗಟ್ಟಿನ ಚಮತ್ಕಾರವನ್ನು ಮಾತ್ರ ಹೊಂದಿರದೆ ತಮ್ಮ ಅಂತರಾಳದಲ್ಲಿ ಕೆಲವು ವೈಜ್ಞಾನಿಕ ಸತ್ಯಗಳನ್ನು ಹುದುಗಿಸಿಕೊಂಡಿರುವುದನ್ನು ಕಾಣಬಹುದು.

'ಅಕ್ಕಿ ಉಂಡವ ಹಕ್ಕಿ ಜೋಳ ಉಂಡವ ತೋಳ', 'ರಾಗಿ ಇದ್ರೆ ರಾಗ ರಾಗಿ ಇಲ್ದಿದ್ರೆ ರೋಗ', 'ರಾಗಿ ಮುದ್ದೆಗಿಂತ ಊಟವಿಲ್ಲ ಸಿದ್ದಪ್ಪನಂತ ದೇವರಿಲ್ಲ', 'ಹಿಟ್ಟು ತಿಂದೋನು ಬೆಟ್ಟಕಿತ್ತ' ಎಂಬಿತ್ಯಾದಿ ಗಾದೆಗಳು ಸಾಮಾನ್ಯವಾಗಿ ಅಕ್ಕಿಗಿಂತ ರಾಗಿ ಮತ್ತು ಜೋಳ ಉತ್ತಮ ಮತ್ತು ಶಕ್ತಿದಾಯಕ ಆಹಾರಗಳೆಂದು ಅವುಗಳ ಸೇವನೆಯಿಂದ ಅಧಿಕ ಶಕ್ತಿ ದೊರೆಯುತ್ತದೆ ಮತ್ತು ದೇಹಾರೋಗ್ಯ ಚೆನ್ನಾಗಿರುತ್ತದೆ ಎಂಬ ತಿಳುವಳಿಕೆಯನ್ನು ಬಿತ್ತುತ್ತವೆ.

'ಊಟಕ್ಕೆ ಮೊದಲು ಉಪ್ಪಿನಕಾಯಿ' ಎಂಬ ಗಾದೆ ಮಾತನ್ನೊಮ್ಮೆ ಪರಾಮರ್ಶಿಸಿ ನೋಡುವುದಾದರೆ. ಉಪ್ಪಿನಕಾಯಿಯನ್ನು ಬಾಯಿಗೆ ಹಾಕಿಕೊಳ್ಳುವುದಿರಲಿ ಅದರ ಹೆಸರು ಹೇಳಿದ ಕೂಡಲೆ ಲಾಲಾರಸವು ಜಿಗಿದೇಳುವುದು. ಈ ಲಾಲಾರಸವು ಪಚನ ಕ್ರಿಯೆಯನ್ನು ಸುಗಮಗೊಳಿಸುವುದು. ಅಂತೆಯೇ 'ರೊಟ್ಟಿ ಕುಡಿ; ನೀರು ತಿನ್ನು'. ಎಂಬೊಂದು ಗಾದೆ ಮಾತಿದೆ ನಮಗೆ ಅಚ್ಚರಿಯಾಗಬಹುದು ಸಾಮಾನ್ಯವಾಗಿ ನಾವುಗಳೆಲ್ಲರು ರೊಟ್ಟಿಯನ್ನ ತಿನ್ನುತ್ತೇವೆ ಮತ್ತು ನೀರನ್ನು ಕುಡಿಯುತ್ತೇವೆ ಇದು ಲೋಕ ರೂಢಿ. ಆದರೆ ಮೇಲಿನ ಮಾತು ಇದಕ್ಕೆ ತದ್ವಿರುದ್ಧವೆನಿಸಿ ಹಾಸ್ಯಾಸ್ಪದವಾಗಬಹುದು. ಆದರೂ ಈ ಮಾತು ಆಹಾರವನ್ನು ಚೆನ್ನಾಗಿ ಅಗಿದು ಜಗಿದು ತಿನ್ನಬೇಕು ಅಂದರೆ ಜಗಿದು ಜೊಲ್ಲಿನಲ್ಲಿ ನಾದಿ ದ್ರವರೂಪಕ್ಕೆ ತಂದು ನುಂಗುವುದು ಒಳ್ಳೆಯದು ಅದೆ ರೀತಿ ನೀರನ್ನು ತಿನ್ನುವ ರೀತಿಯಲ್ಲಿ ಗುಟುಕು ಗುಟುಕು ನುಂಗಿದರೆ ಅನ್ನಾಶಯಕ್ಕೆ ಇಳಿದ ಅನ್ನ ಹದಗೊಳ್ಳುತ್ತದೆ ಅದರಿಂದ ಪಾಚಕ ರಸಗಳು ಸ್ಫೂರ್ತಿಗೊಂಡು ಪಚನ ಕ್ರಿಯೆಯನ್ನು ಸರಾಗಗೊಳಿಸುತ್ತವೆ. ಎಂಬಿತ್ಯಾದಿ ಅಂಶಗಳನ್ನು ಗಾದೆಗಳು ತಮ್ಮ ಮಡಿಲಿನಲ್ಲಿ ಹುದುಗಿಸಿಕೊಂಡಿವೆ. ಇದೆ ರೀತಿಯಾಗಿ 'ಉಂಡು ಉಂಗುಟ ತೊಳೆ' ಮುಂತಾದ ಗಾದೆಗಳನ್ನು ಕಾಣಬಹುದು.

ಇವುಗಳಂತೆಯೇ ಉಣಿಸು–ತಿನಿಸುಗಳಲ್ಲಿ ಕಟ್ಟುಪಾಡು ಹೇಳುವ ಹಲವಾರು ಗಾದೆಗಳು ನಮ್ಮ ಆರೋಗ್ಯವನ್ನ ಕಾಯ್ದುಕೊಳ್ಳಲು ಸಹಕಾರಿಯಾಗಬಲ್ಲವು. ಸಿಕ್ಕಿದ್ದನೆಲ್ಲ ಮುಕ್ಕಿ ಅತೀ ದಪ್ಪ, ಬೊಜ್ಜು ಮುಂತಾದ ಸಮಸ್ಯೆಗಳನ್ನು ಹೊಂದಿರುವ ಮತ್ತು ಆರೋಗ್ಯವನ್ನ ಹದಗೆಡಿಸಿಕೊಳ್ಳುವವರಿಗೆ ಕೆಲ ಗಾದೆಗಳು ಎಚ್ಚರಿಕೆಯನ್ನು ನೀಡುವುದರೊಂದಿಗೆ ಪರಿಹಾರ ಸೂಚಿಸುವ ಪ್ರಯತ್ನಗಳಾಗಿ ಕಾಣಬರುತ್ತವೆ. 'ಶರೀರಕ್ಕೆ ಸುಖ ಹೊಟ್ಟೆಗೆ ದುಃಖ', 'ತುತ್ತು ತೂಕ ಕೆಡಿಸಿತು; ಕುತ್ತು ಜೀವ ಕೆಡಿಸಿತು', 'ಕಸ ತಿನ್ನುವುದಕ್ಕಿಂತ ತುಸು ತಿನ್ನುವುದು ಲೇಸು' ಹಾಗೂ 'ಒಂದು ಹೊತ್ತು ತಿನ್ನೋವ್ನು ಯೋಗಿ; ಎರಡು ಹೊತ್ತು ತಿನ್ನೋವ್ನು ಭೋಗಿ; ಮೂರು ಹೊತ್ತು ತಿನ್ನೋವ್ನು ರೋಗಿ; ನಾಲ್ಕು ಹೊತ್ತು ತಿನ್ನೋವ್ನ ಹೊತ್ಕೊಂಡು ಹೋಗಿ'. ಮತ್ತು 'ಸತ್ಯವೂ ಪಥ್ಯವೂ ಕೆಡಿಸುವುದಿಲ್ಲ' ಎಂಬ ಉಕ್ತಿಗಳು ಆಹಾರ ಸೇವನೆಯ ಕ್ರಮ ಮತ್ತು ಇತಿಮಿತಿಗಳು ಅರಿತು ಆರೋಗ್ಯ ಪೂರ್ಣವಾಗಿರಲು ಕಿವಿ ಮಾತನೇಳುತ್ತವೆ. ಅಂತೆಯೆ 'ಅತಿಯಾದರೆ ಅಮೃತವು ವಿಷ', 'ಅಧರಕ್ಕೆ ಕಹಿ ಉದರಕ್ಕೆ ಸಿಹಿ', 'ಲಕ್ಕಿ ಸೊಪ್ಪಾದರೂ ಲೆಕ್ಕದ ಮುದ್ದೆ ಉಣ್ಣ ಬೇಕು' ಎಂಬ ಗಾದೆಮಾತುಗಳೂ ಸಹ.

ಬಸುರಿಯಾಗಿರುವಾಗ ಚೆನ್ನಾಗಿ ಕೆಲಸ ಮಾಡುವುದರಿಂದ ಹೆರಿಗೆ ಸುಗಮವಾಗಿರುವುದೆಂದು ಬಾಣಂತಿಯಾದಾಗ ಅವಳ ದೇಹ ಸ್ಥಿತಿಯು

ತುಂಬಾ ಸೂಕ್ಷ್ಮವಾಗಿರುವುದರಿಂದ ಹೆಚ್ಚಿನ ಆರೈಕೆ ಬೇಕು ಎಂಬುದನ್ನು ಜನಪದರು 'ಬಸುರಿಯಲ್ಲಿ ಗೇದು ಉಣ್ಣು ಬಾಣಂತನದಲ್ಲಿ ಕೂತು ಉಣ್ಣು' ಎಂಬ ಗಾದೆ ಮಾತೊಂದರಿಂದಲೇ ಅಂತಹದೊಂದು ಜ್ಞಾನವನ್ನು ಕಟ್ಟಿಕೊಡುತ್ತಾರೆ. ಇನ್ನು ಆರೋಗ್ಯದ ದೃಷ್ಟಿಯಿಂದ 'ಹಸಿದು ಹಣ್ಣು ತಿನ್ನು; ಉಂಡು ಕಬ್ಬು ತಿನ್ನು', 'ಹಸಿದು ಹಲಸು ತಿನ್ನು ಉಂಡು ಮಾವು ತಿನ್ನು'* ಎನ್ನುವ ಮಾತುಗಳು ಮಹತ್ವದೆನಿಸುತ್ತವೆ. ಅಲ್ಲದೆ 'ಊಟ ಬಲ್ಲವನಿಗೆ ರೋಗವಿಲ್ಲ' ಎಂಬುದನ್ನು ಸ್ಪಷ್ಟಪಡಿಸುತ್ತವೆ. ಆರೋಗ್ಯ ಭಾಗ್ಯ ಮಹಾ ಭಾಗ್ಯ ಅದನ್ನು ಸರಿಯಾಗಿ ನೋಡಿಕೊಂಡಿದ್ದೆ ಆದರೆ ದುಡಿಮೆ, ಸಿರಿ ಸಂಪತ್ತು ಎಲ್ಲಾ ಆದಕಾರಣ ಕಾಯ ಆರೋಗ್ಯದಾಯಕವಾಗಿರುವಂತೆ ನೋಡಿಕೊಳ್ಳಲು ತಿಳಿಹೇಳುವ ಪ್ರಯತ್ನ ಕೆಲ ಗಾದೆಗಳಲ್ಲಿ ಬಿಂಬಿತವಾಗಿರುವುದನ್ನು ಕಾಣಬಹುದು. 'ಹಾಡ್ತಾ ಹಾಡ್ತಾ ರಾಗ ಉಗುಳ್ತಾ ಉಗುಳ್ತಾ ರೋಗ', ಎಂಬಲ್ಲಿ ಪದೇ ಪದೇ ಉಗುಳುವುದರಿಂದ ಬಾಯಿಯಿಂದ ಲಾಲಾರಸ ಹೊರ ಹೋಗುವುದರಿಂದ ಪಚನ ಕ್ರಿಯೆಯಲ್ಲಿ ವ್ಯತ್ಯಾಸ ಕಂಡುಬಂದು ರೋಗ ಸಂಭವಿಸಬಹುದು ಎಂಬುದನ್ನು ಚಮತ್ಕಾರಯುತ ಮಾತಿನ ಮೂಲಕ ಕಟ್ಟಿಕೊಡುತ್ತಾರೆ. ಅದೇ ರೀತಿ 'ಕೋಣೆಯ ಕೂಸು ಕೊಳೆಯಿತು; ಬೀದಿಯ ಕೂಸು ಬೆಳೆಯಿತು', 'ಊತವನು ಸತ್ತ ಸೀತವನು ಬದುಕಿದ', 'ಕೂಸಿಗೆ ಎಣ್ಣೆ ಕಾಸಿ ಹಾಕು', ಎಂಬಿತ್ಯಾದಿ ಗಾದೆಗಳ ಮುಖೇನ ಜನಪದರು ಆರೋಗ್ಯವನ್ನು ಕಾಯ್ದುಕೊಳ್ಳಲು ತಾವು ಕಂಡುಕೊಂಡ ವಿಷಯಗಳನ್ನು ಹರಿಬಿಟ್ಟಿದ್ದಾರೆ.

* ಹಸಿದು ಹಲಸು ತಿನ್ನು ಉಂಡು ಮಾವು ತಿನ್ನು ಎಂಬ ಗಾದೆಯು ಹರಿದು ಹಲಸು ತಿನ್ನು ಉಂಡೆ ಮಾವು ತಿನ್ನು ಎಂಬಂತೆ ಬಳಕೆಯಲ್ಲಿತ್ತು ತದನಂತರದಲ್ಲಿ ಈಗಿನ ರೂಪ ಪಡೆದಿದೆ ಎಂಬ ಮಾತಿದೆ.

'ಹೊನೆಗೊನೆ ಸೊಪ್ಪು ಹೋದ ಕಣ್ಣು ತಂತು' ಎಂಬ ಗಾದೆ ಮಾತು ಕಣ್ಣಿನ ವ್ಯಾದಿಗೆ ಅಥವಾ ದೃಷ್ಟಿ ಮಾಂದ್ಯತೆಯ ನಿವಾರಣೆಗೆ ಹೊನೆಗೊನೆ ಸೊಪ್ಪು (Alternathera sessilis) ಪರಮ ಔಷಧವೆಂದು ಅದರಿಂದ ತಯಾರಿಸಿದ ಸಾರು ಮತ್ತು ಪಲ್ಯವನ್ನು ಉಪಯೋಗಿಸುವುದು ಒಳ್ಳೆಯದೆಂದು ಹೇಳುತ್ತಾರೆ. ಈ ಗಾದೆಯ ಹಿಂದೆ ಒಂದು ಜನಪದ ಕಥೆಯೆ ಇದೆ.**

ಇನ್ನು ದೇಹದ ಆರೋಗ್ಯದ ಜೊತೆಯಲ್ಲಿಯೇ ಮಾನಸಿಕ ಆರೋಗ್ಯವು ತುಂಬಾ ಪ್ರಮುಖವಾದುದ್ದು. ವ್ಯಕ್ತಿ ಮಾನಸಿಕವಾಗಿ ಸದೃಢನಿದ್ದಾಗ ಮಾತ್ರ ಎದುರಾಗುವ ಎಲ್ಲಾ ಸಂದರ್ಭಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯ. ದೈಹಿಕ ಬೇನೆಗಳು ಸಾಧಾರಣವಾಗಿ ಮನುಷ್ಯನ ಶಕ್ತಿಯನ್ನು ಕುಗ್ಗಿಸಿ ಒಂದಿಷ್ಟು ದಿನ ಅವನನ್ನು ಆಯಾಸದಾರನನ್ನಾಗಿಸಿ ಮರೆಯಾಗುತ್ತವೆ. ಆದರೆ ಈ ಮನೋರೋಗವು ಹಾಗಲ್ಲ ವ್ಯಕ್ತಿಯನ್ನು ಚಿಂತಾಮಜ್ಜನಾಗಿಸಿ, ವಿಕಾಂಗಿಯಾಗಿಮಾಡಿ, ಕಿನ್ನತೆಗೆ ತಂದು ಅವನ್ನು ಅಂತರ್ಮುಖಿಯನ್ನಾಗಿ ಮಾಡಿಬಿಡುವುದಲ್ಲದೆ ಮಾನಸಿಕವಾಗಿ ಮತ್ತು ದೈಹಿಕವಾಗಿ ವ್ಯಕ್ತಿಯನ್ನು ಜರ್ಜರಿತನ್ನಾಗಿಸಿ ಬಿಡುತ್ತದೆ. ಆದ ಕಾರಣ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಒಳ್ಳೆಯದು. ಮಾನಸಿಕ ದೃಢತೆಯನ್ನು ಕಾಯ್ದುಕೊಳ್ಳುವಲ್ಲಿ ಗಾದೆಗಳು ಸಮುದಾಯವನ್ನು ತನ್ನದೆ ಆದ ರೀತಿಯಲ್ಲಿ ಎಚ್ಚರಿಸುತ್ತವೆ. 'ಚಿಂತೆಯೆ ಮುಪ್ಪು, ಸಂತೋಷವೆ ಯೌವನ', 'ಚಿಂತೆಯೇ ಚಿತೆಗೆ ಕಾರಣ', 'ಮನೋರೋಗವೇ ಮಹಾ ರೋಗ', 'ಮನೋರೋಗಕ್ಕೆ ಮರಣವೆ ಮದ್ದು', 'ತನುವಿನ ರೋಗಕ್ಕೆ ಮದ್ದು ಮನದ ರೋಗಕ್ಕೆ ಮೃತ್ಯು', 'ಆಧಿ ಹಿಡಿದ ಮನುಷ್ಯನಿಗೆ ಅದೇ ಮುಪ್ಪು', 'ಮನೋರೋಗಕ್ಕೆ ಮದ್ದಿಲ್ಲ, ಕೆಡುವ ಕಾಲಕ್ಕೆ ಬುದ್ಧಿಯಿಲ್ಲ', ಮುಂತಾದ ನುಡಿಗಳು ಮಾನಸಿಕ ಆರೋಗ್ಯದ ಮಹತ್ವ ಮತ್ತು ಅದು ಹದಗೆಟ್ಟರೆ ಉಂಟು ಮಾಡಬಹುದಾದ ಪರಿಣಾಮವನ್ನು ವ್ಯವಸ್ಥಿತವಾಗಿ ಬಿಚ್ಚಿಡುವ ಮುಖೇನ ಸಲಹೆ ನೀಡುತ್ತವೆ. ಒಟ್ಟಾರೇ ಮನಶಾಸ್ತ್ರಜ್ಞನೊಬ್ಬ ಮಾಡಬಹುದಾದ ಸಲಹೆ ಮತ್ತು ಮಾರ್ಗದರ್ಶನ ಮಾಡುವ ಕಾರ್ಯವನ್ನು ಗಾದೆಗಳು ನಿರ್ವಹಿಸುತ್ತವೆ ಎಂದು ಹೇಳಬಹುದು.

ಇದಲ್ಲದೆ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಆಹಾರ, ನೀರು ಮುಂತಾದವುಗಳಷ್ಟೇ ನಿದ್ದೆಯು

** ಸೊಸೆ ರುಚಿರುಚಿಯಾಗಿ ಬೇಕಾದ್ದನ್ನೂ ಮಾಡಿಕೊಂಡು ತಿನ್ನು ಕುರುಡರಾದ ಅತ್ತೆ ಮಾವರಿಗೆ ಕೆವಲ ಹೊನೆಗೊನೆ ಸೊಪ್ಪನ್ನು ತಂದು ಬೇಯಿಸಿ ನಾವೂ ಇದನ್ನೇ ತಿನ್ನುತಿದ್ದೇವೆ ಎಂದು ಹೇಳಿ ತಿನ್ನಲಿಕ್ಕೆ ಕೊಡುತ್ತಿದ್ದಳಂತೆ ಹೀಗೆ ನಡೆಯುತ್ತಿರುವಾಗ ಒಮ್ಮೆ ಇದ್ದಕ್ಕಿದ್ದಂತೆ ಅತ್ತೆ ಮತ್ತು ಮಾವನಿಗೆ ಕಣ್ಣು ಕಾಣೀಸ ತೊಡಗಿದವಂತೆ. ಮಾವ ಅಡುಗೆ ಮನೆಗೆ ಹೋಗಿ ನೋಡುತ್ತಾನೆ; ಸೊಸೆ ರುಚಿ-ರುಚಿ ಖಾದ್ಯಗಳನ್ನು ತಯಾರಿಸಿಟ್ಟು ಎಲ್ಲೋ ಹೋಗಿದ್ದಳಂತೆ. ಮನೆಗೆ ಬಂದು ಅತ್ತೆ ಮಾವನಿಗೆ ಯಥಾ ಪ್ರಕಾರ ಹೊನೆಗೊನೆ ಸೊಪ್ಪನ್ನು ತಿನ್ನಲಿಕ್ಕೆ ಕೊಟ್ಟಗಾ ಮಾವ, ಸೊಸೆ ಒಳಗಿರೊದನ್ನ ನಮಗೂ ಸ್ವಲ್ಪಕೊಡು ಎಂದು ಕೇಳಿದನಂತೆ. ಸೊಸೆ ಚಕಿತಳಾದಾಗ ಅವರು ನೀನು ನಮಗೆ ಕೊಡುತ್ತಿದ್ದ ಹೊನೆಗೊನೆ ಸೊಪ್ಪು ತಿಂದು ಕಣ್ಣು ಕಾಣಿಸುವಂತಾಯಿತು ಎಂದರಂತೆ.

ತುಂಬಾ ಅಗತ್ಯದ್ದಾಗಿದೆ. ಮನುಷ್ಯ ತನ್ನ ಆರೋಗ್ಯದ ದೃಷ್ಟಿಯಿಂದ ಕನಿಷ್ಟ 6 ರಿಂದ 7 ತಾಸಾದರೂ ನಿದ್ದೆ ಮಾಡಬೇಕೆಂಬುದನ್ನು ವೈದ್ಯಕೀಯ ಸಲಹೆಯಾಗಿದೆ. ಇದೆ ಮಾತನ್ನು ಗಾದೆಗಳು ತಮ್ಮದೆ ರೂಪ ಶೈಲಿಯಲ್ಲಿ ಬಿತ್ತರಿಸುತ್ತವೆ. ಅಂತಹುಗಳೆಂದರೆ, 'ಊಟ ಕೆಟ್ಟರೆ ನೆಡೆದೀತು ನಿದ್ದೆ ಕೆಡಬಾರದು', 'ಕಣ್ಣ್ ತುಂಬ ನಿದ್ದೆ ಮಾಡಬೇಕು ಮನಸ್ಸು ತುಂಬಾ ಶಾಂತವಾಗಿರಬೇಕು', 'ನಿದ್ದೆ ಕೆಟ್ಟಿಯೊ, ಬುದ್ಧಿ ಕೆಟ್ಟಿಯೋ?' ಮುಂತಾದ ಗಾದೆಗಳು ನಿದ್ದೆಯು ಮನಸ್ಸಿಗೆ ಶಾಂತಿಯನ್ನು ಮತ್ತು ಉಲ್ಲಾಸವನ್ನು ಒದಗಿಸುತ್ತದೆ ಅಲ್ಲದೆ ದೇಹದ ಆಯಾಸ ಕಡಿಮೆ ಮಾಡುತ್ತದೆ ಆ ಕಾರಣವಾಗಿ ಉತ್ತಮ ಆರೋಗ್ಯವನ್ನು ತಮ್ಮದಾಗಿಸಿಕೊಳ್ಳಲು ಅಗತ್ಯಕ್ಕೆ ತಕ್ಕಷ್ಟು ನಿದ್ರೆ ಒಳ್ಳೆಯದೆಂದು ಸಾರುತ್ತವೆ.

ಇನ್ನು ವೈದ್ಯರ ಅಗತ್ಯತೆ ಮತ್ತು ಅವನ ತುರ್ತು ಕುರಿತು ಕೆಲವು ಗಾದೆಗಳು ಜನಪದರ ಬಳಿ ಇವೆ. 'ಮೃತ್ಯು ಬಂದ ಮೇಲೆ ವೈದ್ಯ ಬಂದ' ಎಂಬುದು ವೈದ್ಯನು ತಡವಾಗಿ ಆಗಮಿಸಿದ ಎಂಬುದನ್ನು ಹೇಳುತ್ತಿದಾಗ್ಯೂ ಸಮುದಾಯಕ್ಕೆ ವೈದ್ಯನ ಅಗತ್ಯ ತುಂಬಾ ಇದೆ ಆದಕಾರಣ ವೈದ್ಯನಾದವನು ವಿಳಂಬ ಮಾಡದೆ ಜವಾಬ್ದಾರಿಯಿಂದ ಕಾರ್ಯವನ್ನು ಮಾಡಬೇಕು ಎಂದು ಕಿವಿಮಾತು ಹೇಳುತ್ತದೆ. ಅಂತೆಯೇ 'ವೈದ್ಯರ ಮತ್ತು ವಕೀಲರ ಹತ್ತಿರ ಸುಳ್ಳು ಹೇಳಬಾರದು' ಎಂಬ ಗಾದೆಯು ರೋಗಿಯು ಯಾವುದೇ ವಿಷಯವನ್ನು ಮುಚ್ಚಿಡದೆ ವಿವರವಾಗಿ ಹೇಳುವುದರಿಂದ ವೈದ್ಯನಿಗೆ ರೋಗವನ್ನು ಪತ್ತೆ ಮಾಡಲು ಮತ್ತು ಅಗತ್ಯ ಮದ್ದನ್ನು ನೀಡಲು ಸಹಕಾರಿಯಾಗುತ್ತದೆ ಮತ್ತು ಅದರ ಫಲವಾಗಿ ರೋಗಿಯು ಬಹುಬೇಗ ಗುಣವಾಗಬಹುದು ಅದೇ ರೀತಿ ವಕೀಲರಲ್ಲಿಯು.

ಇದಿಷ್ಟೇಯಲ್ಲದೆ ವ್ಯಕ್ತಿ ನಡವಳಿಕೆಗಳು, ಬದುಕು, ದುಡಿಮೆ, ಪರಿಸರ, ಕುಟುಂಬ ಜೀವನ, ಸಂಪ್ರದಾಯ, ಚರಿತ್ರೆ, ಪುರಾಣ ಮುಂತಾದವುಗಳನ್ನು ಒಳಗೊಂಡಂತೆ ಸಾಕಷ್ಟು ಗಾದೆಗಳನ್ನು ಅವು ಒದಗಿಸುವ ಅಗಾದವಾದ ಜ್ಞಾನವನ್ನು ಅವಲೋಕಿಸಿ ಉತ್ತಮ ಅಂಶಗಳನ್ನು ಎಕ್ಕಿ ತೆಗೆದು ತಮ್ಮ ನಿತ್ಯ ಜೀವನದಲ್ಲಿ ಬಳಸಿಕೊಳ್ಳಬಹುದು. ಗಾದೆ ಜ್ಞಾನದ ಆಗರವೇ ಆಗಿದ್ದು ಜನ ಸಾಮಾನ್ಯರ ಜೀವನದ ನಾನಾ ಭಾಗಗಳಲ್ಲಿ ಅವರಿಗಿರುವ ಜ್ಞಾನಾನುಭವಗಳನ್ನು ತನ್ನಲ್ಲಿ ಅಡಕವಾಗಿಸಿಕೊಂಡಿವೆ. 'ಉತ್ತಮ ಶರೀರವೇ ದೇಣಿಗೆ ಸಂತೋಷವೇ ಸಿರಿತನ', ಆರೋಗ್ಯ ಪೂರ್ಣ ದೇಹವಿದ್ದರೆ ನಿಜವಾಗಿಯೂ ವ್ಯಕ್ತಿ ಸಂತೋಷವನ್ನು ಪಡೆಯುತ್ತಾನೆ. ಆದ ಕಾರಣ ಮೇಲಿನ ಗಾದೆ ಮಾತುಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ತಮ್ಮ ಆರೋಗ್ಯ ಸುಧಾರಿಸಿಕೊಳ್ಳಬಹುದಾಗಿದೆ. ಇದರ ಜೊತೆಯಲ್ಲಿಯೇ ಗಾದೆಗಳ ಬೃಹತ್ ರಾಶಿಯನ್ನೊಮ್ಮೆ ಹೊಕ್ಕು ಅಲ್ಲಿ ಅಡಗಿರುವ ಸಾಕಷ್ಟು ಜ್ಞಾನಾಮೃತವನ್ನು ಹೊರ ಜಗತ್ತಿಗೆ ತಿಳಿಸುವ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಬೇಕಾಗಿದೆ.

ಪರಾಮರ್ಶನ ಗ್ರಂಥಗಳು

1. ಜಾನಪದ : ಕೆಲವು ಅಧ್ಯಯನಗಳು – ಡಾ. ಅಂಬಳಿಕೆ ಹಿರಿಯಣ್ಣ, ಕರ್ನಾಟಕ ಜಾನಪದ-ಮತ್ತು ಯಕ್ಷಗಾನ ಅಕಾಡೆಮಿಯ ಪ್ರಕಟಣೆ, ಬೆಂಗಳೂರು. 1994
2. ಜಾನಪದ ಮತ್ತು ಪೂರಕ ಕ್ಷೇತ್ರಗಳು – ಸಂ. ಲಕ್ಕಪ್ಪಗೌಡ, ಕನ್ನಡ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಬಿ.ಆರ್ ಪ್ರಾಜೆಕ್ಟ್, 1991
3. ಮಲೆನಾಡ ಜನಪದ – ಸಂ.ಲಕ್ಕಪ್ಪಗೌಡ, ಕನ್ನಡ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಬಿ.ಆರ್ ಪ್ರಾಜೆಕ್ಟ್, 1983
4. ಜೀಶಂಪ ಅವರ ಜಾನಪದ ಬರಹಗಳು – ಸಂ. ಪ್ರೊ. ಕಾಳೇಗೌಡ ನಾಗವಾರ ಮತ್ತು ಅಂಬಳಿಕೆ ಹಿರಿಯಣ್ಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು. 2000
5. ಜನಪದ ಸಾಹಿತ್ಯ ಪ್ರಕಾರಗಳು– ಸಂ. ತೀ.ನಂ. ಶಂಕರನಾರಾಯಣ ಮತ್ತು ಡಾ. ಎಂ.ಎನ್. ವೆಂಕಟೇಶ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. 2004
6. ಎ.ಕೆ. ರಾಮಾನುಜನ್ ಸಮಗ್ರ – ಮನೋಹರ ಗ್ರಂಥ ಮಾಲಾ, ಧಾರವಾಡ. 2011
7. ಗಾದೆಗಳ ಗರ್ಭದೊಳಗೆ (ಬಿಡಿ ಲೇಖನ) – ರಾಜೇಗೌಡ ಹೊಸಹಳ್ಳಿ,
8. ಗಾದೆಗಳ ಗಾರುಡಿ – ಸಿಂಪಿ ಲಿಂಗಣ್ಣ, ಜಾನಪದ ಪ್ರತಿಭಾ ಪ್ರಕಾಶನ, ಗೊಳಸಂಗಿ, ವಿಜಾಪುರ. 1988

ನಮ್ಮ ಸ್ವರಗಳು-ಖಿಬಂದು ಚಿಂತನೆ

ಡಾ. ನಾ .ದತ್ತಾತ್ರೇಯ
ಅಂಕೋಲಾ

ಜಂಯು ಭಾರತ ಜನನಿಂಯು ತನುಜಾತೇ ,
ಜಂಯು ಹೇ ಕರ್ನಾಟಕ ಮಾತೇ.

ಇಲ್ಲಿ ನಾನು **ಭಾಷೆಂ ಯು ಸ್ವರಗಳ ಬಗ್ಗೆ** ಪ್ರಬಂ ಧ ಮಖಿಡಿಸುತ್ತಿದ್ದೇನೆ. (ಸಂ ಗೀತದ ಸ್ವರಗಳ ಬಗ್ಗೆ ಅಲ್ಲ.)

ಕ ನಮ್ಮ ಸ್ವರಗಳು ಎಂದರೆ ಕನ್ನಡವೂ ಸೇರಿದಂತೆ ಭಾರತೀಯ ಮಾದರಿ ವರ್ಣಮಾಲೆಯು ಸ್ವರಗಳ **ಶಬ್ದಾಕ್ಷರಗಳು ಮತ್ತು ರೂಪಾಕ್ಷರಗಳು.**

ಮಾದರಿ ಭಾರತೀಯ ವರ್ಣಮಾಲೆಯಂತೆ ಕನ್ನಡವೂ ಸೇರಿದಂತೆ ದಕ್ಷಿಣ ಭಾರತದ ಸಹೋದರ ಭಾಷೆಗಳ (ತೆಲುಗು, ತಮಿಳು, ಮಲೆಯಾಳಖಿ) ಭಾಷೆಗಳ ವರ್ಣಮಾಲೆಗಳಿದ್ದು, ಸ್ವರಗಳಲ್ಲಿ ಇವು ಕೇವಲ `ಎ` ಮತ್ತು ಒ ಗಳನ್ನು ಹೆಚ್ಚುವರಿಯಾಗಿ ಹೊಂದಿವೆ. **ಮತ್ತು ಇವುಗಳ ವರ್ಣಮಾಲೆಯಲ್ಲಿ ಎ ಏ ಐ , ಒ, ಓ, ಔ, ಎಂ ದು ಏ ಐ ಗಿಗಿಗಳ ಮೊದಲು `ಎ` ಗೆ ಮತ್ತು ಓ, ಔ ಖಿಗಿ ಗಳ ಮೊದಲು ` ಒ ` ಗೆ ಸ್ಥಾನವನ್ನು ಇಲ್ಲಿಂಯು ವ್ಯಾಕರಣ ಶಾಸ್ತ್ರಜ್ಞರು ಕೊಟ್ಟಿದ್ದಾರೆ. ಇದು ಸರಿಯೇ (ಈ ಕ್ರಮವು , ಅನುಕ್ರಮವು ಸರಿಯೇ)?** ಎಂದು ಪುನರವಲೊಕಿಸುವ ಕಾಲ ಬಂದಿದೆ ಎಂದು ನನಗೆ ಅನಿಸುತ್ತದೆ.

ನಮ್ಮ ಸ್ವರಗಳು (ಶಬ್ದಾಕ್ಷರಗಳು) :- ನಮ್ಮ ಅಕ್ಷರಮಾಲೆಯು ಪ್ರಾರಂಭದಲ್ಲಿ ಸ್ವರಗಳಿಗೆ ಸ್ಥಾನ ನೀಡಲಾಗಿದೆ.

ನಮ್ಮಖಿತಂಯೇ ವಿಶ್ವದ ಪ್ರಮುಖ ಅಕ್ಷರ ಮಾಲೆಗಳು ` ಅ,ಆ ` ದಿಂದಲೇ ಪ್ರಾರಂಭವಾಗುತ್ತವೆ.:-

ಉದಾಹರಣೆಗೆ :- **-ಗ್ರೀಕ್‌ಗಿಗಿ `ά`ಗಿಗಿ`ಅಲ್ಫಾ ` - ದಿಂದ**
-ಲ್ಯಾಟಿನ್ ಗಿ ಋ' ಗಿ ಋಕ - ದಿಂದ
-ಹಿಬ್ರೂಗಿಗಿಋಕಗಿಋಲೇಫ್- ದಿಂದ
-ಅರಬ್ಬೀಗಿಗಿಳ'— 'ಅಲೇಫ್‌ಕ ದಿಂದ
-ರಶಿಖಿಯನ್‌ಗಿಋ' ಗಿಋಕ - ದಿಂದ
-ಇಖಿಗ್ಲಿಷ್‌ಗಿಗಿಋ' ಗಿಕಖಕ - ದಿಂದ
- ಫ್ರೆಖಿಚ್‌ಗಿಗಿಋ' ಗಿ ಋಕ - ದಿಂದ
-ಸ್ಪೆನಿಶ್‌ಗಿಗಿಋ ಕಗಿ ಋಕ - ದಿಂದ
-ಜರ್ಮನ್‌ಗಿಗಿಋ ಕಗಿ ಋಕ - ದಿಂದ
-ಜಪಾನಿಗಿಗಿಋಕಗಿ ಋಕ - ದಿಂದ ಇತ್ಯಾದಿ

ಈಗ ವಿವಿಧ ಕೋನಗಳಿಂದ ನಮ್ಮ ಸ್ವರಗಳನ್ನು ನೋಡೋಣ:-

1) ಸಂಖ್ಯೆಂಯು ದೃಷ್ಟಿಯಿಂದ
2) ಉಚ್ಚಾರದ ದೃಷ್ಟಿಯಿಂದ
3) ಬಳಕೆಂಯು ದೃಷ್ಟಿಯಿಂದ
4) ವ್ಯಾಕರಣದ ದೃಷ್ಟಿಯಿಂದ
5) ಅನುಕ್ರಮದ ದೃಷ್ಟಿಯಿಂದ

1) ಸಂಖ್ಯೆಂಯು ದೃಷ್ಟಿಯಿಂದ

ನಾವು ಸಾಕಷ್ಟು ಸಂಖ್ಯೆಯ ಸ್ವರಗಳನ್ನು ಹೊಂದಿದ್ದೇವೆ. (ಹೇಳಿದಂತೆ ಬರೆಯಲು ಮತ್ತು ಬರೆದಂತೆ ಓದಲು ಸಾಕಾಗುವಷ್ಟು.)

ಮಾದರಿ ಭಾರತೀಯ ವರ್ಣಮಾಲೆಯಲ್ಲಿ ನಮ್ಮ ವಿಶೇಷ ಸ್ವರಗಳಾದ ಋ, ೠ-, ಌ, ೡ- ಗಳು ಸೆರಿದಂತೆ ಖಿಟ್ಟೂ 14 ಸ್ವರಗಳು ಇದ್ದು, ಕನ್ನಡದಲ್ಲಿ ಌ, ೡ- ಗಳು ಇಲ್ಲದಿದ್ದರೂ ಎ, ಒ ಖಿ ಗಳು ಇರುವದರಿಂದ ಖಿಒಟ್ಟು 14 ಸ್ವರಗಳು ಇವೆ.

2) ಉಚ್ಚಾರದ ದೃಷ್ಟಿಯಿಂದ

(1) ಸ್ವರಗಳನ್ನು **ಮುಚ್ಚಿದ** (ಬಾಯಿ) (close) ಮತ್ತು **ತೆರೆದ** (ಬಾಯಿ) (ಖಿಪನ್, open) ಎಂದು 2 ವಿಧವಾಗಿ ವಿಂಗಡಿಸಬಹುದು. ಭಾರತೀಯ ಸ್ವರಗಳಾದ ಇ, ಈ, ಉ,ಊ, ಋ,ೠ-, ಌ, ೡ- , ಏ, ಐ, ಓ,ಔ ಖಿ ಗಿ ಇವುಗಳು **ಮುಚ್ಚಿದ** ಸ್ವರಗಳಾಗಿರುತ್ತವೆ.

ಅಕದರ ಉಚ್ಚಾರದ ಸಮಯದಲ್ಲಿ ಬಾಯಿಯೂ ಸುಮಾರು ಅರ್ಧ ತೆರೆದುಕೊಂಡಿರುತ್ತದೆ. ಆದರೆ ಋಕ, ಏ, ಮತ್ತು ಓ ಇವುಗಳ ಉಚ್ಚಾರದ ಸಂದರ್ಭದಲ್ಲಿ ಬಾಯಿ ತೆರೆದಕೊಂಡಿರುತ್ತದೆ. ಅದ್ದರಿಂದ ಇವು **ತೆರೆದ** ಸ್ವರಗಳಾಗಿರುತ್ತವೆ.

(2) ಇನ್ನು, ಕಇಕ ದರ ದೀರ್ಘ ಕಈಕ (ಇ+ಇ)

ಋಉಕ ದರ ದೀರ್ಘ ಋಊಕ (ಉ+ಉ)

ಋಋಕ ದರ ದೀರ್ಘ ಕಋ-ಕ(ಋ+ಋ)

ಌೡಕ ದರ ದೀರ್ಘ ಌೡ-ಕ(ಌ+ಌ)

ಆದರೆ ಋಅ ಕ ದರ ದೀರ್ಘ ಋಅಕ (ಅ+ಅ) ಇರುತ್ತದೆ. (ಅs ಅಲ್ಲಾ) ಎಖಿಬುದನ್ನು ಗಮನಿಸಿ.

3) ಬಳಕೆಂಯ ದೃಷ್ಟಿಯಿಂದ

ನಮ್ಮ ವರ್ಣಮಾಲೆಂಯಲ್ಲಿ **ಅ, ಇ, ಉ, ಋ, ಌ,**ಗಿ ಈ 5 **ಮೂಲಸ್ವರಗಳು** ಅನುಕ್ರಮವಾಗಿ ಇವೆ.

ವಿಶ್ವದ ಬಹುತೇಕ ಭಾಷೆಗಳಲ್ಲಿ `ಅ, ಆ`ಗಿ ಈ ಸ್ವರಗಳು ಇವೆ ಮತ್ತು ಮೊದಲನೇ ಸ್ಥಾನದಲ್ಲಿವೆ. 2 ನೇ ಸ್ಥಾನದಲ್ಲಿ `ಇ, ಈ`ಗಿ ಈ ಸ್ವರಗಳು ಮತ್ತು 3ನೇ ಸ್ಥಾನದಲ್ಲಿ `ಉ, ಊ`ಗಿ ಈ ಸ್ವರಗಳು ಇವೆ. ಹೀಗೆ ವಿಶ್ವದ ಹೆಚ್ಚಿನ ಭಾಷೆಗಳಲ್ಲಿ (ಶಾಸ್ತ್ರೀಯ ಅರಬ್ಬಿಯನ್ನು ಹಿಡಿದು) `ಅ, `ಇ, `ಉ`ಗಿ ಈ 3 ಸ್ವರಗಳು ಇರುವುದು ಕಂಡುಬರುತ್ತದೆ.

ಇದರಂತೆ ನಮ್ಮಲ್ಲಿ ಕೂಡ ಅ, ಇ, ಉಗಿ ಈ ಸ್ವರಗಳು ಅತೀ ಹೆಚ್ಚು ಬಳಸಲ್ಪಡುವ ಸ್ವರಗಳಾಗಿದ್ದು ಋ, ಌಗಿ ಗಳು ಕ್ರಮವಾಗಿ ಕಡಿಮೆ ಮತ್ತು ಇನ್ನೂ (ಬಹಳ ಬಹಳ) ಕಡಿಮೆ ಪ್ರಮಾಣದಲ್ಲಿ ಬಳಕೆಯಾಗುತ್ತವೆ.

ಆದರೂ ಇವು ನಮ್ಮ ಮಾದರಿ ಭಾರತೀಯ ಅಕ್ಷರ ಮಾಲೆಯ ವಿಶೇಷ ಸ್ವರಗಳಾಗಿವೆ.□ಮರೆಯಲಾಗದು

4) ವ್ಯಾಕರಣದ ದೃಷ್ಟಿಯಿಖಿದ

ವಿಶ್ವ ಪ್ರಸಿದ್ಧವಾದ ಪಾಣಿನಿಯ ವ್ಯಾಕರಣದಂತೆ ಅಕ್ಷರಮಾಲೆಯ ಸ್ವರಗಳನ್ನು ವಿಶ್ಲೇಷಿಸೋಣ.:-

(1) ನಮ್ಮಲ್ಲಿ **ಅ, ಇ, ಋ, ಌ, ಉ**ಗಿಗಿ ಈ 5 ಮೂಲ ಸ್ವರ ಗಳಿದ್ದು ಅವು **ಕ್ರಮವಾಗಿ**

ಕಖಿಠ, ತಾಲು, ಮೂರ್ಧಾ, ದಖಿತ, ಖಿಷ್ಠಗಿ **ಎಖಿಬ 5 ಉತ್ಪತ್ತಿ ಸ್ಥಾನ**ಗಳಲ್ಲಿ ಉತ್ಪತ್ತಿಂಯಾಗುತ್ತವೆ. ಆದರೆ ವರ್ಣಮಾಲೆಯಲ್ಲಿ ಅವುಗಳ ಅನುಕ್ರಮ **ಅ, ಇ. ಉ, ಋ, ಌ**ಗಿ ಎಂದಿದೆ.

(2) ಇನ್ನು ಪಾಣಿನಿಯು ಸ್ವರಗಳನ್ನು ಹ್ರಸ್ವ, ದೀರ್ಘ, ಪ್ಲುತ, ಎಂದು 3 ವಿಧವಾಗಿ ವಿಂಗಡಿಸಿದ್ದಾನೆ.

ಅ + ಅ = ಆ (ಅs ಅಲ್ಲ)

ಇ + ಇ = ಈ

ಉ + ಉ = ಊ

ಋ + ಋ = ೠ-

ಌ + ಌ = ೡ- _ ಇಲ್ಲಿ 2 ಹ್ರಸ್ವಸ್ವರ ಸೇರಿಒಂದು ದೀರ್ಘ ಸ್ವರವಾಗಿದೆ. ಮತ್ತು ಇಲ್ಲಿ **ಸವರ್ಣದೀರ್ಘ ಸಂಧಿ**ಯಾಗಿರುತ್ತದೆ.

ಅ, ಆ (ಅ+ಅ), ಇ, ಈ (ಇ+ಇ), ಉ, ಊ (ಉ+ಉ), ಋ, ೠ- (ಋ + ಋ), ಌ, ೡ- (ಌ + ಌ)ಗಿಗಿ ಇಲ್ಲಿ ಮೂಲ ಸ್ವರಗಳು ಮತ್ತು ಅವುಗಳ ದೀರ್ಘಗಳು ಇದ್ದು ಎರಡು ಮೂಲ ಸ್ವರಗಳು ಸೇರಿ ಒಂದು ದೀರ್ಘ ಸ್ವರವಾ

ಗುವಾಗ ಸವರ್ಣದೀರ್ಘ ಸಂಧಿ ಆಗಿರುವದು ಕಂಡುಬರುತ್ತದೆ.

ಎ(?) (ಪಾಣಿನಿಯು ಇದನ್ನು ಸ್ವೀಕರಿಸಿಲ್ಲ) , **ಏ (ಅ+ಇ) (ಗುಣಸಂಧಿ) , ಐ (ಅ+ಏ) (ವೃದ್ಧಿ ಸಂಧಿ) ,**

(?) (ಪಾಣಿನಿಯು ಇದನ್ನು ಸ್ವೀಕರಿಸಿಲ್ಲ) , **ಖಿ (ಅ+ಉ) (ಗುಣಸಂಧಿ) , ಖಿ (ಅ+ಓ)(ವೃದ್ಧಿಸಂಧಿ) , ಏ** (ಅ+ಇ)(ಗುಣಸಂಧಿ), ಓ (ಅ+ಉ)(ಗುಣಸಂಧಿ) ಮತ್ತು **ಐ** (ಅ+ಏ) (ವೃದ್ಧಿ ಸಂಧಿ) = **ಋಅಇಕ ಅಥವಾ ಋಅಂಯ್ ಋಅಲ್ಲ ., ಖಿ** (ಅ+ಓ)(ವೃದ್ಧಿಸಂಧಿ) = **ಋಅಉ ಋಥವಾ ಕಅವ್ ಋಅಲ್ಲ.ಗಿ ಇವು ಸಂಂಯುಕ್ತಸ್ವರಗಳು.**

(3)ಪಾಣಿನಿಯ ವ್ಯಾಕರಣದಂತೆ ಸ್ವರಗಳಲ್ಲಿ **ಸಾನುನಾಸಿಕ ಸ್ವರ ಗಳು ಮತ್ತು ಅನನುನಾಸಿಕ ಸ್ವರಗಳು ಎಂದು 2 ವಿಧ**

1) ಸಾನುನಾಸಿಕ ಸ್ವರಗಳ ಉದಾ:- ಅಖಿ*, ಹಾಖಿ*, ಹೂಖಿ*,

2) ಅನನುನಾಸಿಕ ಸ್ವರಗಳು ಉದಾ:- ಅ, ಹಾ, ಹೂ, ಸಾನುನಾಸಿಕ ಸ್ವರಗಳು ಕೊಂಕಣಿ, ಹಿಂದಿ, ಸಂಸ್ಕೃತ ಹಾಗೇಯೇ ಫ್ರೆಂಚ್, ಪೋರ್ತುಗಲ್, ಪೋಲಿಷ್ ಇತ್ಯಾದಿ ಭಾಷೆಗಳಲ್ಲಿ ಕಂಡುಬರುತ್ತದೆ.

(4) ಪಾಣಿನಿಯ ಕೊನೆಯ ಸೂತ್ರದಂತೆ ಸ್ವರಗಳಲ್ಲಿ 2 ವಿಧ. :-

(1) ಸಂವೃತ ಸ್ವರ:- ಇದು ಸಾಮಾನ್ಯವಾಗಿ ನಾವು ದಿನನಿತ್ಯ ಬಳಸುವ ಹ್ರಸ್ವ ಸ್ವರಕ್ಕಿಂತ ಕಡಿಮೆ ಮಾತ್ರೆಯದಾಗಿರುತ್ತದೆ. ಉದಾ:- (1) ಉರ್ದುಗಿ ಈ ಶಬ್ದದಲ್ಲಿನ ಉ,

(2) ಕಮ್ (ಹಿಂದಿ), come (ಇಂಗ್ಲಿಷ್)ಗಿ ಈ ಶಬ್ದಗಳಲ್ಲಿನ `ಕ`ದರ ಜೊತೆಗಿರುವ ಋಅಕ (3) ರನ್ (ಇಂಗ್ಲಿಷ್)ಗಿ ಇದರಲ್ಲಿನ ಕಕದ ಜೊತೆಗಿರುವ ಋಅಕ ಇದು ಇಂಗ್ಲಿಷ್, ಜರ್ಮನ್, ವಿಯೇಟ್ನಾಮಿ ಇತ್ಯಾದಿ ಭಾಷೆಗಳಲ್ಲಿ ಕಂಡು ಬರುತ್ತದೆ.

ಮಲೆಯಾಳ ಭಾಷೆಯು ಸಂವೃತ-ಋಕಗೆ ಪ್ರತ್ಯೇಕ ಚಿಹ್ನೆಯನ್ನು ಹೊಂದಿದೆ.

(2) ವಿವೃತ ಸ್ವರ:- ಇದು ನಾವು ಸಾಮಾನ್ಯವಾಗಿ ದಿನನಿತ್ಯ ಬಳಸುವ ಹ್ರಸ್ವ ಸ್ವರ ವಾಗಿರುತ್ತದೆ. ಇದು ಮೂಲ ಸ್ವರವಾಗಿದ್ದು ಒಂದು ಮಾತ್ರಾ ಕಾಲವನ್ನು ಹೊಂದಿರುತ್ತದೆ. ಉದಾ:- (1) ಉದಯ, (2) ಕನ್ನಡ, (3) ರಣಹದ್ದು.

5) ಅಕ್ಷರಗಳ ಅನುಕ್ರಮದ ದೃಷ್ಟಿಯಿಂದ ನಮ್ಮ ಸ್ವರಗಳ ಅನುಕ್ರಮ ಹೀಗಿದೆ:-

ಅ ಆ ಇ ಈ ಉ ಊ ಋ ೠ- ಲೃ ಲೄ- (ಎ) ಏ ಐ (ಒ) ಓ, ಔ
ಕ ಕಾ ಕಿ ಕೀ ಕು ಕೂ ಕೃ ಕೄ- ಕ್ಲ ಕ್ಲೃ- ಕೆ ಕೇ ಕೈ ಕೊ ಕೋ ಕೌ
ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ನಮ್ಮ ಸ್ವರಗಳನ್ನು ಹೇಗೆ ಕಲಿಸುತ್ತಾರೆ ಎಂಬುದನ್ನು ಖಿಜಿಮ್ಮೆ ನೋಡೋಣ:- ಇದು ಸಣ್ಣ `ಇ `, ಇದು ದೊಡ್ಡ `ಇ (ಈ),`

ಇದು ಸಣ್ಣ ಋಕ, ಇದು ದೊಡ್ಡಕಋ (ಋೂ),ಕ
ಇದು ಸಣ್ಣ ಹಾಕ ಇದು ದೊಡ್ಡ ಹಾ (ಏ),ಕ
ಇದು ಸಣ್ಣ ಹೊಖಿಕ, ಇದು ದೊಡ್ಡ ಕ ಒ ಖಿ (ಓ),
ಹಾಗೇಯೇ ಕಾಗುಣಿತದಲ್ಲಿ,
ಇದು ಸಣ್ಣ ಕಕೆ ಕ ಇದು ದೊಡ್ಡ ಕ ಕೆ ಕ(ಕೇ)

ಇದು ಸಣ್ಣ ಹೊಕ,ಇದು ದೊಡ್ಡ ಕ ಕೊ ಕ(ಕೋ) ಎಂದು ಕಲಿಸುತ್ತಾರೆ. ಇದರಿಂದಾಗಿ ಹಾಕ ಇದು ಹೃಸ್ವ (ಸಣ್ಣ) ಮತ್ತು ಕಏಕ ಇದು ದೀರ್ಘ(ದೊಡ್ಡ) ಹಾಗೇಯೇ ಹೊಕ ಇದು ಹೃಸ್ವ (ಸಣ್ಣ) ಮತ್ತು ಹೊಕ ಇದು ದೀರ್ಘ (ದೊಡ್ಡ) ಎಂಬ ತಿಳುವಳಿಕೆ ಉಂಟಾಗುತ್ತದೆ. ಅದರಂತೆ ISO notation ಮತ್ತು Unicode Number ಗಿಗಿ ಇವುಗ ಳಲ್ಲಿ ಇದು ಪ್ರತಿಫಲನವಾದಂತೆ ಕಂಡು ಬರುತ್ತದೆ. ಇದು ಸರಿಯೇ ಎಂಬುದನ್ನು ಸರಿ ಎಂಬುದನ್ನು ನೋಡೋಣ.

ಹಾಕ ಇದು ಹೃಸ್ವ, & ಹೂಕ ಇದು ದೀರ್ಘ ಎನ್ನುವುದು ಸರಿ.
ಕಖಿಖಿಕ ಇದು ಹೃಸ್ವ, & ಹೊಖಿಕ ಇದು ದೀರ್ಘ ಎನ್ನುವುದು ಸರಿ.
ಆದರೆ ಹಾ ಕ ಇದು ಹೂಕದರ ಹೃಸ್ವ ಅಲ್ಲ ಮತ್ತು ಖಿಜಿಕ ಇದು ಹೊಖಿಕದರ ಹೃಸ್ವ ಅಲ್ಲ ಹಾಗೇಯೇ ಕಏಕ ಇದು ಹಾಕದರ ದೀರ್ಘ ಅಲ್ಲ ಮತ್ತು ಹೊಖಿಕ ಇದು ಹೂಕ ದರ ದೀರ್ಘ ಅಲ್ಲ
ಏ= (ಅ+ಇ) = ಗುಣಸಂಧಿ ಮತ್ತು ಓ = (ಅ + ಉ) = ಗುಣಸಂಧಿ ಗಿ ಇವು ಸಯುಕ್ತ ಸ್ವರಗಳಾಗಿರುತ್ತವೆ. ಮತ್ತು ಇವು ಯಾವತ್ತೂ ದೀರ್ಘ ಸ್ವರಗಳಾಗಿರುತ್ತವೆ. ಇವಕ್ಕೆ ಹೃಸ್ವ ಇಲ್ಲ.

ಹಾಕಮತ್ತು ಹೂಕಗಳು ಕನ್ನಡದ ಹೃಸ್ವ ಸ್ವರಗಳಾಗಿವೆ. ಇವು ಲಘು ಮಾತ್ರೆಯನ್ನು ಹೊಂದಿವೆ. ಇವುಗಳ ದೀರ್ಘ ಇದೆಯೇ ? ಎಂದು ಯೋಚಿಸಬೇಕು.

ಹಾಕ ಮತ್ತು ಖಿಜಿಕಗಳನ್ನು **ತೆರೆದ (open)** ಸ್ವರಗಳೆಂದು ಮತ್ತು **ಹೂಕಮತ್ತು ಹೊಕ**ಗಳನ್ನು **ಮುಚ್ಚಿದ (closed)** ಸ್ವರ ಗಳೆಂದು ಜಾಗತಿಕ ಮಟ್ಟದಲ್ಲಿ ವರ್ಗೀಕರಿಸುತ್ತಾರೆ. ಮತ್ತು ಹಾ, ಖಿಜಿಕಿ ಗಳು ಭಾರತದ ದಕ್ಷಿಣ ಪ್ರದೇಶದಲ್ಲಿರುವ ದ್ರಾವಿಡ ಕುಟುಂಬದ ಭಾಷೆಗಳಲ್ಲಿ ,ಕೊಂಕಣಿಯಲ್ಲಿ, ಖಿಯುರೋಪಿನ ಫ್ರೆಂಚ್, ಇಂಗ್ಲಿಷ್ ಇತ್ಯಾದಿ ಭಾಷೆಗಳಲ್ಲಿ ಹಾಗೆಯೇ ದಕ್ಷಿಣ ಮತ್ತು ಆಗ್ನೇಯ ಏಶಿಯಾದ ಭಾಷೆಗಳಲ್ಲಿ ಮತ್ತು ಚೀನಿ, ಕೊರಿಯಾ, ಜಪಾನಿ ಭಾಷೆ ಗಳಲ್ಲಿ ಕಂಡುಬರುತ್ತದೆ. ಮತ್ತು ಬೇರೆ ಬೇರೆ ಚಿಹ್ನೆಗಳಿಂದ ಬರೆದು ಬೇರೆ ಬೇರೆ ಭಾಷೆಯವರು ಇವನ್ನು `ಏ` ಮತ್ತು `ಓ` ಗಳಿಗಿಂತ ಭಿನ್ನವಾಗಿ ತೋರಿಸಲು (ತಿಳಿಸಲು) ಪ್ರಯತ್ನಿಸಿದ್ದಾರೆ. ಉದಾ:- ಹಿಂದಿಯಲ್ಲಿ `ಏ` ದರ ಮೇಲೆ ಅರ್ದ ಚಂದ್ರ ಚಿಹ್ನೆಯನ್ನು ಹಾಕಿದ್ದರೆ `ಎ` ಎಂದು ಓದಬೇಕಾಗುತ್ತದೆ. ಪಾಣಿನಿಯು ಹಾಕಮತ್ತು ಹೊಖಿಕ ಈ ಸ್ವರಗಳನ್ನು ತನ್ನ ವ್ಯಾಕರಣದ ಮಾದರಿಯಲ್ಲಿ ಸ್ವೀಕರಿಸಲಿಲ್ಲ. & ಅವು ಗಳ ಉತ್ಪತ್ತಿ ಸ್ಥಾನವನ್ನೂ ಹೇಳಿಲ್ಲ. ಆದರೆ ಕನ್ನಡದ ವ್ಯಾಕರಣಕಾರರು ಇವುಗಳ ಉತ್ಪತ್ತಿ ಸ್ಥಾನ `ಏ` ಮತ್ತು `ಖಿಓ` ಗಳಂತೆ, ಅನುಕ್ರಮವಾಗಿ ಕಂಠತಾಲವ್ಯ ಮತ್ತು ಕಂಠೋಷ್ಠ್ಯ ಎಂದು ಅಭಿಪ್ರಾಯಪಟ್ಟಿದ್ದು, ಇದು ವಿವಿಧ ವ್ಯಾಕರಣ ಪುಸ್ತಕಗಳಲ್ಲಿ ಕಂಡುಬರುತ್ತದೆ. ಇದು ಎಷ್ಟು ಸರಿ ಎನ್ನುವುದು ನನಗೆ ಅರ್ಥವಾಗಿಲ್ಲ. ಹೀಗಿದ್ದರೂ ಹಿಂದಿನ ಭಾಷಾ ಶಾಸ್ತ್ರಜ್ಞರು ಕನ್ನಡವೂ ಸೇರಿದಂತೆ ದಕ್ಷಿಣ ಭಾರತದ 4 ಪ್ರಮುಖ ಭಾಷೆಗಳ ಅಕ್ಷರ ಮಾಲೆಯಲ್ಲಿ, ಮಾದರಿ ಭಾರತೀಯ ವರ್ಣಮಾಲೆಯಲ್ಲಿ ಇರುವಖಿತೆ **ಏಐ, ಓಔಖಿ, ಎಂಬ ಕ್ರಮ**ವನ್ನು ಇಡದೇ **ಎ ಏ ಐ, ಒಓಔ, ಎಂಬ ಕ್ರಮ**ವನ್ನು ಇಟ್ಟಿದ್ದಾರೆ (**ಎ ಐ ಏ, ಓಔಒ, ಎಂಬ ಕ್ರಮ**ವನ್ನು ಅಲ್ಲ) ಇದನ್ನು **ಏ ಐ, ಒ ಔ, ಅಂಖಿ ಅ:, ಎ ಏ ಖಿ ಎಂಬ ಕ್ರಮ**ವನ್ನು ಅನುಸರಿಸಬಹುದೇ ಎಂದು ಯೋಚಿಸಬೇಕಾಗಿದೆ.

5) ಧ್ವನಿ - ಶಾಸ್ತ್ರೀಯ (ಫೊನೆಟಿಕಲ್) ಚಿಹ್ನೆಗಳು (ಸಿಂಬಾಲ್ಸ್) ನಮ್ಮ ಸ್ವರಗಳ ಬಗ್ಗೆ ಬೇರೆ ಬೇರೆ ಪುಸ್ತಕಗಳಲ್ಲಿ ಇರುವ ಧ್ವನಿ - ಶಾಸ್ತ್ರೀಯ ಚಿಹ್ನೆಗಳ ಬಗ್ಗೆ ಏಕರೂಪತೆ ಇಲ್ಲ ಮತ್ತು `ಋ` & `ಲೃ` ಗಳಿಗೆ ಇಂಥ ಚಿಹ್ನೆ ಗಳನ್ನು ಈವರೆಗೂ ನೀಡಿಯೇ ಇಲ್ಲ! (ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಭಾಷಾ ವಿಜ್ಞಾನದ ಸಂಸ್ಥೆ ಗಳು.)

ನಮ್ಮ ಸ್ವರಚಿಹ್ನೆಗಳು (ರೂಪಾಕ್ಷರಗಳು)

ಕನ್ನಡ ಲಿಪಿಯಲ್ಲಿ ಸಂಸ್ಕೃತದಿಂದ ಸ್ವೀಕರಿಸಲ್ಪಟ್ಟ ಋ, ೠ-, ಐ, ಔ ಗಿ ಇತ್ಯಾದಿಗಳು ಇರುವುದರಿದ ಸಂಸ್ಕೃತವೂ (ವೇದಗಳೂ) ಕನ್ನಡದಲ್ಲಿ ಬರೆಯಲ್ಪಟ್ಟಿತು. ಮತ್ತು ಇತರ ಭಾರತೀಯ ಭಾಷೆ ಗಳಾದ ಕೊಂಕಣಿ, ತುಳು ಇತ್ಯಾದಿಗಳು ಬರೆಯಲ್ಪಡುತ್ತಿವೆ.
ಈಗ **ತ್ರಿಭಾಷಾ ಸೂತ್ರ**ದಂತೆ ಕನ್ನಡ , ಹಿಂದಿ (ಸಂಸ್ಕೃತ), ಇಂಗ್ಲಿಷ್ ಗಿ ಈ ಮೂರು ಭಾಷೆಗಳ ಸ್ವರಚಿಹ್ನೆ
ಗಳನ್ನು (ರೂಪಾಕ್ಷರಗಳನ್ನು) ಹೋಲಿಕೆ ಮಾಡಿ ನೋಡೋಣ:-
1) **ಸ್ವಂತದ ಲಿಪಿಯನ್ನು ಹೊಂದಿರುವಿಕೆ.** ಕನ್ನಡ ಭಾಷೆಯು ತನ್ನ ಸ್ವಂತದ ಲಿಪಿಯಾದ ಕನ್ನಡ ಲಿಪಿಯನ್ನು ಹೊಂದಿದೆ. ಆದರೆ ಹಿಂದಿ & ಇಂಗ್ಲಿಷ್‌ಗಳು ಕ್ರಮವಾಗಿ ದೇವನಾಗರಿ ಲಿಪಿ ಮತ್ತು ಲೆಟಿನ್ ರೋಮನ್ ಲಿಪಿಗಿ ಬಳಸುತ್ತವೆ.
2) **ತಾನು ಬಳಸುವ ಲಿಪಿಯ ಜಾತಿ :-** ಕನ್ನಡ ಮತ್ತು ಹಿಂದಿ ಭಾಷೆಗಳ ಲಿಪಿಗಳು `**ಅಬುಗಿದಾ**` ಮಾದರಿಯ ಲಿಪಿಗಳಾಗಿದ್ದು ಇವುಗಳಲ್ಲಿ ವ್ಯಂಜನದೊಡನೆ ಸ್ವರವನ್ನು ಕೂಡಿಸಿಯೇ ಅಂದರೆ ಸ್ವರದ ಪ್ರತಿನಧಿಯಾದ ಕಾಗುಣಿತ ಚಿಹ್ನೆಯನ್ನು ವ್ಯಂಜನಕ್ಕೆ ಸೇರಿಸಿ ಗುಣಿತಾಕ್ಷರ ಬರೆಯಲಾಗುತ್ತದೆ. ಇಂಗ್ಲಿಷ್ ಲಿಪಿಯು `**ಅಲ್ಫಾಬೆಟ್**` ಮಾದರಿಯದಾಗಿದ್ದು ಇದರಲ್ಲಿ ವ್ಯಂಜನ ಮತ್ತು ಸ್ವರ ಇವುಗಳನ್ನು ಬಿಡಿಬಿಡಿ ಯಾಗಿ ಬರೆಯಲಾಗುತ್ತದೆ. ಉದಾ:- ಕ, ಕಿ, ಕು = ka, ki, ku.ಕನ್ನಡ/ಹಿಂದಿಯಲ್ಲಿ ಹೆಚ್ಚುವರಿಯಾದ ಒತ್ತಕ್ಷರ ಚಿಹ್ನೆಯನ್ನು ಬಳಸಿ ಸಂಯುಕ್ತಾಕ್ಷರಗಳನ್ನು ಬರೆಯಲಾಗುತ್ತದೆ. ಅದೇ ಇಂಗ್ಲಿಷ್‌ನಲ್ಲಿ ಹೆಚ್ಚುವರಿಯಾದ ಒತ್ತಕ್ಷರ ಚಿಹ್ನೆಇಲ್ಲದೇ, ಮೇಲೆ ಕೆಳಗೆ ಜಾಗವನ್ನು ಹಾಳುಮಾಡದೇ, ಉಚ್ಚಾರದಂತೆ ಕ್ರಮವಾಗಿ ಅಕ್ಷರಗಳನ್ನು ಒಂದರ ಮುಂದು ಒಂದರಂತೆ ಬರೆದು ಏಕಸ್ತರೀಯವಾದ ಸಂಯುಕ್ತಾಕ್ಷರವನ್ನು ರಚಿಸಲಾಗುತ್ತದೆ. ಉದಾ.:– ಅಕ್ಕ, Akka; ಅಕ್ಕಿ,Akki.
(ಅಲ್ಫಾಬೆಟ್ ಮಾದರಿಯು ಲಿಪಿಯು ಗಣಕ ಯಂತ್ರಕ್ಕೆ

ಅತ್ಯಂತ ಸೂಕ್ತವಾದ ಲಿಪಿ ಎಂದು ತಿಳಿಯಲಾಗದೆ.)

3) ತಾನು ಬಳಸುವ ಲಿಪಿಯು ವಯಸ್ಸು ಅಥವಾ ಪ್ರಾಚೀನತೆಯು ದೃಷ್ಟಿಯಿಂದ :- ಹಿಂದಿಯು **ದೇವನಾಗರಿ ಲಿಪಿಯು 12ನೇ ಶತಮಾನದ ನಂತರ ಬ್ರಾಹ್ಮಿಲಿಪಿಯಿಂದ** ವಿಕಸಿತವಾಗಿದೆ.

ಕನ್ನಡ ಲಿಪಿಯು ಸುಮಾರು **1,600 ವರ್ಷ**ಗಳ ಲಿಖಿತ ಧಾಖಲೆಯನ್ನು ಹೊಂದಿದೆ.

ರೋಮನ್ - ಲೆಟಿನ್ ಲಿಪಿಯು **ಕ್ರಿ.ಪೂ. 7ನೇ ಶತಮಾನದಿಂದಿದ್ದು** ಪ್ರಾರಂಭದಲ್ಲಿ **ಕೆಪಿಟಲ್** (Capital) ಅಕ್ಷರ ಗಳನ್ನು ಮಾತ್ರ ಹೊಂದಿತ್ತು. ಕ್ರಿ. ಶ ಸುಮಾರು 4-5 ನೇ ಶತಮಾನದಿಂದ **ಸ್ಮೋಲ್ (Small)** ಅಕ್ಷರಗಳು ವಿಕಸಿತವಾದವು.

4) ತನ್ನ ಲ್ಲಿರುವ ಸ್ವರಗಳಿಗೆ ರೂಪಾಕ್ಷರಗಳನ್ನು ಹೊಂದಿರುವ ದೃಷ್ಟಿಯಿಂದ :-
ಕನ್ನಡ ಮತ್ತು ಹಿಂದಿ ಬಾಷೆಯ ಲಿಪಿಗಳು ತಮ್ಮ ಸ್ವರಗಳಿಗೆ ರೂಪಾಕ್ಷರಗಳನ್ನು ಹೊಂದಿವೆ. ಆದರೆ ಇಂಗ್ಲಿಷ್ ಭಾಷೆಯು ತನ್ನ ಸುಮಾರು 20 ಸ್ವರಗಳಿಗೆ ಕೇವಲ 5 ಸ್ವರ ಚಿಹ್ನೆಗಳನ್ನು ಮಾತ್ರ ಹೊಂದಿದೆ.

5) ಹ್ರಸ್ವ , ದೀರ್ಘ , ಪ್ಲುತಗಿ ಇವುಗಳಿಗೆ ಚಿಹ್ನೆಗಳನ್ನು ಹೊಂದಿರುವ ದೃಷ್ಟಿಯಿಂದ :- ಕನ್ನಡ ಮತ್ತು ಹಿಂದಿಯಲ್ಲಿ ಹ್ರಸ್ವ ಮತ್ತು ದೀರ್ಘ ಸ್ವರಗಳಿಗೆ ಚಿಹ್ನೆ ಇದೆ; ಆದರೆ ಪ್ಲುತಕ್ಕೆ ಚಿಹ್ನೆ ಇಲ್ಲ. ಇಂಗ್ಲಿಷನಲ್ಲಿ ಕೆವಲ ಹ್ರಸ್ವ ಸ್ವರಕ್ಕೆ ಚಿಹ್ನೆ ಇರುವದು ಕಂಡುಬರುತ್ತದೆ.

6) ಸಾನುನಾಸಿಕ ಸ್ವರ ಚಿಹ್ನೆಯನ್ನು ಹೊಂದಿರುವ ದೃಷ್ಟಿಯಿಂದ:- ದೇವನಾಗರಿ ಲಿಪಿಯು ಮಾತ್ರ ಈ ಚಿಹ್ನೆಯನ್ನು ಹೊಂದಿದೆ. ಉದಾ:- ಅಖಿ*, ಹಾಖಿ*, ಹೂಖಿ*. ಕನ್ನಡ ಮತ್ತು ಇಂಗ್ಲಿಷನಲ್ಲಿ ಈ ಚಿಹ್ನೆ ಇರುವದಿಲ್ಲ.

7) ಸಂವೃತ- ವಿವೃತ ಸ್ವರ ಚಿಹ್ನೆಗಳನ್ನು ಹೊಂದಿರುವ ದೃಷ್ಟಿಯಿಂದ:- ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಈ ಮೂರು ಭಾಷೆಗಳ ಲಿಪಿಗಳು ಸಂವೃತ ಸ್ವರ ಚಿಹ್ನೆಯನ್ನು ಹೊಂದಿಲ್ಲ, ಆದರೆ ಮಲೆಯಾಳಿ ಭಾಷೆಯು `ಸಖಿವೃತ-ಉ` ಎನ್ನುವ ಪ್ರತ್ಯೇಕ ಚಿಹ್ನೆಯನ್ನು ಹೊಂದಿದೆ.

8) ಅಕ್ಷರವನ್ನು ಬರೆಯುವ (ಗೀಚುವ) ದಿಕ್ಕು:- ಉದಾ:- ಕನ್ನಡ ಅ ಇ ಉ, ಹಿಖಿದಿ ಅ ಇ ಉ ಮತ್ತು A I U, a i u.ಗಿ ಇವುಗಳನ್ನು ನೋಡೋಣ ಕನ್ನಡದಲ್ಲಿ ಅ, ಉ ಮತ್ತು ಇಗಿ ಇವುಗಳನ್ನು ಬರೆಯುವ ದಿಕ್ಕು ಪರಸ್ಪರ ವಿರುದ್ಧವಾಗಿರುವದು ಕಂಡುಬರುತ್ತದೆ. ಹಿಂದಿಯಲ್ಲಿ ಅ ಇ ಉ ಗಿಇವುಗಳನ್ನು ಬರೆಯುವ ದಿಕ್ಕು ಒಂದೇ ಆಗಿರುತ್ತದೆ. ರೋಮನ್ ಕೇಪಿಟಲ್‌ನಲ್ಲಿ A I U ಇವನ್ನು ಬರೆಯುವ ದಿಕ್ಕು ಬೇರೆ ಬೇರೆ ಯಾಗಿರುತ್ತದೆ. ಆದರೆ ರೋಮನ್ ಸ್ಮಾಲ್‌ನಲ್ಲಿ a i u ಇವುಗಳನ್ನು ಬರೆಯುವ ದಿಕ್ಕು ಖಿಒಂದೇ ಆಗಿರುತ್ತದೆ.

9) ಖಿಒಂದು ಅಕ್ಷರವನ್ನು ಬರೆಯಲು ತಗಲುವ ಗೆರೆ ಗಳ ಸಂಖ್ಯೆ ಮತ್ತು ವೇಗದ ಬರವಣಿಗೆ:-

ಉದಾ:- ಕನ್ನಡ-ಉ, ಹಿಂದಿ - ಉ , U, u. ಗಿ ಇಲ್ಲಿ ಕನ್ನಡದ ಉ ಬರೆಯಲು 4 ಗೆರೆಗಳು ಬೇಕಾಗುತ್ತದೆ. ಹಿಂದಿಯ ಉ ಬರೆಯಲು 3 ಗೆರೆಗಳು ಬೇಕಾಗುತ್ತದೆ. ಮತ್ತು ಕ್ಯಾಪಿಟಲ್ ಗಿU ಬರೆಯಲು 2 ಗೆರೆಗಳು ಬೇಕಾಗುತ್ತವೆ. ಸ್ಮೋಲ್ ಗಿ u ಬರೆಯಲು 2 (ಆದರೆ ಸಣ್ಣ) ಗೆರೆಗಳು ಬೇಕಾಗುತ್ತದೆ. ಇಲ್ಲಿ ಕಡಿಮೆ ಗೆರೆಗಳು ಮತ್ತು ಸಣ್ಣ ಗಾತ್ರವಿರುವ ಕಾರಣ ರೋಮನ್ ಸ್ಮಾಲ್ ರೂಪಾಕ್ಷರಗಳಿಖಿದ ಇತರ ಕನ್ನಡ, ಹಿಂದಿ ಮತ್ತು ರೋಮನ್ ಕ್ಯಾಪಿಟಲ್ ರೂಪಾಕ್ಷರ ಗಳಿಗಿಂತ ವೇಗದ ಬರವಣಿಗೆ ಸಾಧ್ಯವಿರುತ್ತದೆ.
ಅಕ್ಷರವು ಹೆಚ್ಚುಗೆರೆಗಳನ್ನು ಹೊಂದಿದಂತೆ ಮತ್ತು ದೊಡ್ಡದಾದಂತೆ ವೇಗದ ಬರವಣಿಗೆಗೆ ತೊಂದರೆಯಾಗುತ್ತದೆ.

10) ಅಕ್ಷರದ ಬಿಳಿಯ ಭಾಗಗಳು ಮತ್ತು ಅಕ್ಷರಗಳ ಸ್ಪಷ್ಟತೆಯ ದೃಷ್ಟಿಯಿಂದ:-
ಉದಾ:- ಕನ್ನಡದ - ಉ , ಹಿಖಿದಿಖಿಯ - ಉ , U, u. ಗಿಗಿ ಇಲ್ಲಿ ಕನ್ನಡದ ಉ ನಲ್ಲಿ 4 ಬಿಳಿಯ ಭಾಗಗಳಿವೆ. ಹಿಂದಿಯ ಉ ನಲ್ಲಿ 3 ಬಿಳಿಯ ಭಾಗಗಳಿರುತ್ತವೆ. ಮತ್ತು ಕ್ಯಾಪಿಟಲ್ U & u ಗಳಲ್ಲಿ ಒಂದೇ ಬಿಳಿಯ ಭಾಗ ಇರುತ್ತದೆ.

ಒಂದು ಅಕ್ಷರದ ಅಕಾರವು ಕೇವಲ ಕರಿಯ (ಕಪ್ಪು) ಗೆರೆಗಳಿಂದ ಮಾತ್ರ ಆಗಿರದೆ ಅದರ ಬಿಳಿಯ ಭಾಗಗಳಿಂದ (ಕಂಟೂರಗಳು) ಕೂಡ ಆಗಿರುತ್ತದೆ. ಇದಕ್ಕೆ `ಕಂಟೂರ್` ಗಳು ಎಂದು ಕರೆಯುತ್ತಾರೆ. **ನಾವು ಒಂದು ಅಕ್ಷರವು ಹಾಳಾಗದಂತೆ ಇರಲು ಬಯಸಿದಲ್ಲಿ ಈ ಬಿಳಿ- ಭಾಗಗಳ (ಕಂಟೂರ್ ಗಳ) ಆಕಾರ ಮತ್ತು ಗಾತ್ರ ಸಂರಕ್ಷಿಸಬೇಕು.**

ಯಾವಾಗ ಬಿಳಿಯ ಭಾಗಗಳ ಸಂಖ್ಯೆ ಹೆಚ್ಚಾಗುತ್ತದೋ ಆಗ ಪ್ರತಿಯೊಂದು ಕಂಟೂರಕ್ಕೂ ಸಿಗುವ ಅವಕಾಶ (ಜಾಗ) ಕಡಿಮೆಯಾಗುತ್ತದೆ. ಅದು ಕಪ್ಪು ಗೆರೆಗಳಿಗಿಂತ ತೆಳುವಾಗಿ ಸುತ್ತದೆ. ಮತ್ತು ಅಚ್ಚಿನಲ್ಲಿ (ಮುದ್ರಣದಲ್ಲಿ) ಅಕ್ಷರ ಗಳಲ್ಲಿ ಗೋಚರಿಸುವ ಬಿಳಿಭಾಗವು ಶೂನ್ಯವಾಗಿರುತ್ತವೆ. ಹಾಗಾಗಿ* **1-2 ಬಿಳಿ ಭಾಗಗಳನ್ನು ಹೊಂದಿರುವ ಅಕ್ಷರಗಳು ಬೆರಳಚ್ಚು ಯಂತ್ರಕ್ಕೆ ಹೆಚ್ಚು ಸೂಕ್ತವಾಗಿರುತ್ತವೆ.** ಬಿಳಿ ಭಾಗಗಳನ್ನು ಹೆಚ್ಚಿಸಿದರೆ ಆ ಅಕ್ಷರವು ಬೆರಳಚ್ಚು ಯಂತ್ರಕ್ಕೆ ಸೂಕ್ತವಾಗಿರುವುದಿಲ್ಲ.

11) ಗುಣಿತಾಕ್ಷರಗಳ ಸುಲಭತೆಯ ದೃಷ್ಟಿಯಿಂದ :-
ಅ ಇ ಉ ಏ ಐ ಎ ಓ ಔ ಒ ಖಿ ಖಿ ಖಿ
a i u
ಕ ಕಿ ಕು ಕೇ ಕೈ ಕೆ ಕೋ ಕೌ ಕೊ
ka ki ku
ಇದನ್ನು ಗಮನಿಸಿದರೆ ಕನ್ನಡದ ಕಾಗುಣಿತವು ಮತ್ತು ಹಿಂದಿಯ ಕಾಗುಣಿತವು ರೋಮನ್ ಕಾಗುಣಿತಕ್ಕಿಂತ ಕ್ಲಿಷ್ಟವಾಗಿದೆ. ರೋಮನ್ನ ಕಾಗುಣಿತವು ಸುಲಭವಾಗಿದ್ದು ಏಕದಿಶೆಯಲ್ಲಿರುವುದು ಏಕಸ್ತರೀಯವಾಗಿರುವುದು ಕಂಡು ಬರುತ್ತದೆ. ಇಲ್ಲಿ ವ್ಯಂಜನದ ಮುಂದೆ ಅದೇ ಸ್ತರದಲ್ಲಿ ಸ್ವರವನ್ನು ಬರೆದು ಏಕ ದಿಶೆಯಲ್ಲಿ ಕಾಗುಣಿತವನ್ನು ಬರೆಯಲಾಗುತ್ತದೆ.

ಇಲ್ಲಿ ಕನ್ನಡ ಮತ್ತು ಹಿಂದಿಯ ಕಾಗುಣಿತದಲ್ಲಿರುವಂತೆ ಅಕ್ಷರದ

ಮೇಲೆ , ಕೆಳಗೆ (ಹಿಂದಿಯಲ್ಲಿರುವಂತೆ ಕೆಲವೊಮ್ಮೆ ಹಿಂದೆ)ಬರೆಯುವ ಅವಶ್ಯಕತೆ ಇರುವುದಿಲ್ಲ.(ಕನ್ನಡ ಮತ್ತು ಹಿಂದಿಗಳಲ್ಲಿ ವ್ಯಂಜನದೊಡನೆ ಸ್ವರದ ಪ್ರತಿನಿಧಿಯಾದ ಕಾಗುಣಿತ ಚಿಹ್ನೆಯನ್ನು (ಮುಂದೆ, ಮೇಲೆ, ಕೆಳಗೆ, ಹಿಂದೆ (ಹಿಂದಿ) ,) ಕೂಡಿಸಿ ಬರೆದಿರುತ್ತಾರೆ. ಆದ್ದರಿಂದ ಇವುಗಳಲ್ಲಿ ಗುಣಿತಾಕ್ಷರವು ತ್ರಿಸ್ತರೀಯವಾಗಿರುತ್ತದೆ.

12) ಪ್ರದರ್ಶನ-ಫಲಕಗಳಲ್ಲಿ ಪ್ರದರ್ಶಿಸುವ ದೃಷ್ಟಿಯಿಂದ:-

(1) 16 Segment Display (16 ಭಾಗಗಳ ಪ್ರದರ್ಶನ):- ಇದರಲ್ಲಿ ಇಂಗ್ಲಿಷ್ ನ ರೋಮನ್ ಲಿಪಿಯನ್ನು ಪ್ರದರ್ಶಿಸಲು ಸಾಧ್ಯವಾಗುತ್ತದೆ. ಆದರೆ ಕನ್ನಡ ಮತ್ತು ದೇವನಾಗರಿ ಲಿಪಿಗಳನ್ನು ಪ್ರದರ್ಶಿಸಲಾ
ಗುವದಿಲ್ಲ.

(2) Liquid Crystal Display (ದ್ರವ ಸ್ಫಟಿಕ ಪ್ರದರ್ಶನ):- ಇದರಲ್ಲಿ ಕನ್ನಡ , ದೇವನಾಗರಿ ಮತ್ತು ರೋಮನ್ ಈ ಮೂರು ಲಿಪಿಗಳನ್ನು ಪ್ರದರ್ಶಿಸಬಹುದು.

13) ವೇಗದ ಬರವಣಿಗೆಯ ವ್ಯವಸ್ಥೆಯ ವಿಕಾಸವನ್ನು ಹೊಂದಿರುವಿಕೆಯ ದೃಷ್ಟಿಯಿಂದ:- ಕನ್ನಡ ಲಿಪಿಯಲ್ಲಿ ಈ ವಿಕಾಸ ಆದಂತೆ ಕಂಡುಬರುವದಿಲ್ಲ. ಆದರೆ ದೇವನಾಗರಿಯಿಂದ **`ಮೋಡಿ`** ಎನ್ನುವ ವೇಗದ ಬರವಣಿಗೆ ವ್ಯವಸ್ಥೆ 16-17 ಶತಮಾನದಲ್ಲಿ ವಿಕಾಸವಾಗಿ ಬಳಕೆಯಲ್ಲಿ ಬಂದಿರುವುದು ಕಂಡುಬರುತ್ತದೆ. ರೋಮನ್ನ ಲಿಪಿಯು ಆರಂಭದಲ್ಲಿ ಕೆಪಿಟಲ್ ಅಕ್ಷರಗಳನ್ನು ಮಾತ್ರ ಹೊಂದಿದ್ದರೂ ಮುಂದೆ ಕ್ರಿ.ಶ. 3 - 5 ನೇ ಶತಮಾನದಲ್ಲಿ ಕ್ಯಾಲ್ಕಎನ್ನುವ ವೇಗದ ಬರವಣಿಗೆಯ ವ್ಯವಸ್ಥೆ ವಿಕಾಸವನ್ನು ಹೊಂದಿ ವ್ಯಾಪಕ ಬಳಕೆಗೆ ಬಂದಿರುವದು ಕಂಡು ಬರುತ್ತದೆ.

14) ಬೆರಳಚ್ಚು ಯಂತ್ರಕ್ಕೆ ಲಿಪಿಯ ಸೂಕ್ತತೆ ದೃಷ್ಟಿಯಿಂದ :- ಉದಾ:- ಕನ್ನಡ ಉ , ಹಿಖಿದಿ ಉ, U, u.ಗಿಗಿ ಇಲ್ಲಿ ಕನ್ನಡದ `ಉ` ಇದು 4, ಹಿಂದಿಯ `ಉ` ಇದು 3, `U` ಇದು 1, `u` ಇದು 1,ಗಿಗಿಗಿ ಬಿಳಿ- ಭಾಗಗಳನ್ನು ಹೊಂದಿವೆ. ಆದ್ದರಿಂದ ಬೆರಳಚ್ಚು ಯಂತ್ರಕ್ಕೆ ಕನ್ನಡದ `ಉ` ದಕ್ಕಿಖಿತ ಹಿಂದಿಯ `ಉ` ಮತ್ತು ಇದಕ್ಕಿಂತ `U`, `u` ಗಿ ಇವು ಹೆಚ್ಚು ಸೂಕ್ತ.
*(10 ನೇಯದರ ಕೊನೆಯ ಸಾಲುಳನ್ನು ನೋಡಿದಾಗ,) **1- 2 ಬಿಳಿಯ ಭಾಗಗಳನ್ನು ಹೊಂದಿರುವ ಅಕ್ಷರಗಳು ಬೆರಳಚ್ಚುಯಂತ್ರಕ್ಕೆ ಹೆಚ್ಚು ಸೂಕ್ತವಾಗಿರುತ್ತವೆ.** ಮತ್ತು ಬಿಳಿಯ ಭಾಗಗಳನ್ನು ಹೆಚ್ಚಿಸಿದರೆ ಆ ಅಕ್ಷರವು ಬೆರಳಚ್ಚು ಖಿಯಂತ್ರಕ್ಕೆ ಸೂಕ್ತವಾಗಿರುವುದಿಲ್ಲ.

3-4 ಕಂಟೂರಕಗಳನ್ನು ಹೊಂದಿರುವ ಖಿಒಂದೇ ಅಕ್ಷರವೂ ಕೂಡ ಖಿಒಂದು ಮೇಳಿ ಅದು ಮೇಲಿಂದ ಮೇಲೆ ಬರುವ ಅಕ್ಷರವಾಗಿದ್ದರೆ ಬೆರಳಚ್ಚು ಯಂತ್ರದ ಒಂದು ಸಂಪೂರ್ಣ ಪುಟವನ್ನೇ ಹಾಳುಗೆಡುಹಬಲ್ಲದು.

ಸ್ವರಗಳ ವಿಕಾಸದ ಕುರಿತು :-
ಋಕ ಇದು ಕನ್ನಡದ ಹ್ರಸ್ವಸ್ವರ.
ಹುಖಿಕ ಇದು ಕನ್ನಡದ ಹ್ರಸ್ವಸ್ವರ.
ಕುಎ, ಒಕಗೆ ದೀರ್ಘ ಸ್ವರ ಇದೆಯೇ? ಗಿಎಂದು ಖಿಯೋಚಿಸಬೇಕು. ಮುಂದೆ ಗಮನಿಸಿ. :-
ಉದಾ:- ಋಕಕ= ಬೆಕ ಗ್, ಬೆಕಡಾ, ಬೆಕಖಿಕ್ , ಥೆಕಖಿಕ್ಸ್. ಹುಕಕ= ಬೊಕಳೆ, ನೊಕಗಲ್ಯಾ, ಬೊಕಲ್, ಕೊಕಲ್, ಮೊಕಲ್
ಎಕ & ಒಕ ಗಿಗಿ ಇವುಗಳನ್ನು ಕ್ರಮವಾಗಿ `ಏ` & `ಓ` ಗಳ ದೀರ್ಘ ಎಂದು ಪರಿಗಣಿಸಬಹುದೆ?

ಕೊನೆಯಲ್ಲಿ ಒಂದು ವಿಚಾರ :-
ಪಾಣಿನಿ (ಪ್ರಾಚೀನ ಮುನಿ)



ಆಧುನಿಕ ವಿಜ್ಞಾನಿ (ಆಧುನಿಕ ವಿದ್ಯಾಲಯಗಳು) (ಪ್ರಾಚೀನ ಪಾಠ ಶಾಲೆಗಳು) (ಆಧುನಿಕ ವಿಜ್ಞಾನ & ತಂತ್ರಜ್ಞಾನ) (ಪ್ರಾಚೀನ ಧ್ವನಿಶಾಸ್ತ್ರ) (ಮುದ್ರಣ ಯಂತ್ರ, ಬೆರಳಚ್ಚು ಖಿಯಂತ್ರ, ಗಣಕಯಂತ್ರ, ಜಂಗಮವಾಣಿ) (ತಾಳೆಗರಿ & ಭೂರ್ಜ ಪತ್ರ)

ನಮ್ಮ ರೂಪಾಕ್ಷರಗಳು: ಸಪಾಲುಗಳು

*ಡಾ॥ ನಾ. ದತ್ತಾತ್ರೇಯ
*ಕೇಣಿರಸ್ತೆ, ಅಂಕೋಲಾ, ಉತ್ತರ ಕನ್ನಡ-581 314

ಇಂದು ಶಾಲೆಗಳಲ್ಲಿ ನಮ್ಮ ಮಕ್ಕಳಿಗೆ ನಾವು ತ್ರಿಭಾಷಾ ಸೂತ್ರದಂತೆ ಕನ್ನಡ, ಹಿಂದಿ ಮತ್ತು ಇಂಗ್ಲೀಷ್ ಹೀಗೆ 3 ಭಾಷೆಗಳನ್ನು ಮತ್ತು ಅವುಗಳ ಜೊತೆಗೆ ಕನ್ನಡ, ದೇವನಾಗರಿ ಮತ್ತು ರೋಮನ್ ಈ ಮೂರು ಲಿಪಿಗಳನ್ನು ಕಲಿಸುತ್ತಿದ್ದೇವೆ. ಇಂದಿನ ಜಗತ್ತಿನಲ್ಲಿ ಇವು ತೀರಾ ನಮ್ಮ ರೂಪಾಕ್ಷರಗಳಾಗಿವೆ. ಇವನ್ನು ಸಾಮಾನ್ಯರು ಕನ್ನಡ, ಹಿಂದಿ ಮತ್ತು ಇಂಗ್ಲೀಷ್ ಲಿಪಿಗಳೆಂದು ಕರೆಯುತ್ತಾರೆ.

ಕನ್ನಡ ಶಾಲೆಯ ಮಕ್ಕಳನ್ನು ಉದ್ದೇಶಿಸಿ ಈ 3 ಲಿಪಿಗಳಲ್ಲಿ ಯಾವುದು ಸುಲಭ ಎಂದು ಕೇಳಿದರೆ ಅವರು ಇಂಗ್ಲೀಷ್ ಲಿಪಿ. ಅದರಲ್ಲಿ ಒತ್ತಕ್ಷರ ಇಲ್ಲ ಎಂದು ಉತ್ತರಿಸುತ್ತಾರೆ.

ಗಣಕದಲ್ಲಿ ಸಾರ್ವತ್ರಿಕವಾಗಿ ಇಂಗ್ಲೀಷ್ ಕೀಲಿ-ಮಣೆಯಿಂದಲೇ ಇಂಗ್ಲೀಷ್-ಕನ್ನಡ-ಹಿಂದಿ ಬೆರಳಚ್ಚಿಸುವುದನ್ನು ನಾವು ಕಾಣುತ್ತಿದ್ದೇವೆ.

ಮುದ್ರಣಾಂಕಗಳಲ್ಲೂ ಇಂಗ್ಲೀಷ್, ಕನ್ನಡ ಅಪಿ ಜೋಡಿಸಿ ಕಪ್ಪ, ಕ್ಲೇಷ್ಟ ಶ್ರಮದಾಯಕ ಎನ್ನೋಣ. ಇವಕ್ಕೆ ಕಾರಣ ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸುವ ಮುಂದೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಾಯಕವಾಗುತ್ತದೆ ಎನ್ನುವ ವಿಶ್ವಾಸದಿಂದ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಇಂದು ಶಾಲೆಗಳಲ್ಲಿ ನಾವು **ತ್ರಿಭಾಷಾ–ಸೂತ್ರವನ್ನು** ಅಳವಡಿಸಿ, ನಮ್ಮ ಮಕ್ಕಳಿಗೆ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಈ ಮೂರು ಭಾಷೆಗಳನ್ನು ಮತ್ತು ಜೊತೆಗೆ ಅವುಗಳು ಈಗ ಬಳಸುತ್ತಿರುವ ಲಿಪಿಗಳನ್ನು ಕಲಿಸುತ್ತಿದ್ದೇವೆ. ಅನುಕ್ರಮವಾಗಿ ಈ ಮೂರು ಭಾಷೆಗಳ ಇಂದಿನ ಲಿಪಿಗಳಾದ ಕನ್ನಡ ಲಿಪಿ, ದೇವನಾಗರಿ ಲಿಪಿ ಮತ್ತು ರೋಮನ್ ಲಿಪಿ ಇವುಗಳು ಇಂದು ನಮ್ಮ ರೂಪಾಕ್ಷರಗಳಾಗಿವೆ. ಮತ್ತು ಜಗತ್ತು ಹತ್ತಿರವಾದ ಇಂದಿನ ಈ ದಿನಗಳಲ್ಲಿ ದೇಶಿಯ ಹಾಗೂ ವಿದೇಶಿಯ ಶಬ್ದಗಳೆಲ್ಲವು ಈ ಮೂರು ಲಿಪಿಗಳಲ್ಲಿ ಬರೆಯಲ್ಪಡುತ್ತಿವೆ.

ಉದಾ:– 1) ಅಂಗಡಿಯ ಫಲಕಗಳು ಉದಾ:– **ಬೊಂಬೆ ಫ್ಯಾಶನ್ಸ್,**
2) ವೃತ್ತ ಪತ್ರಿಕೆಗಳಲ್ಲಿ ಹೆಸರುಗಳು ಉದಾ:– **ನರೇಂದ್ರ ಮೋದಿ,ಬರಾಕ್ ಒಬಾಮಾ,ವ್ಲಾದಿಮಿರ್ ಪುತಿನ್.**
3) ಭೋಜನಾಲಯದ ಫಲಕಗಳಲ್ಲಿ ಪದಾರ್ಥಗಳ ಹೆಸರು. ಉದಾ:– **ಪಕೋಡಾ.**
4) ಮತದಾರರ ಗುರುತಿನ ಚೀಟಿಯಲ್ಲಿ ಹೆಸರು. ಉದಾ:– **ಸುಭಾಷ, SUBHASH, ವಿನ್ಸ್‌ಟನ್, ಸಲೀಮ್.**
ಇವನ್ನೇ ಸಾಮಾನ್ಯರು ಕನ್ನಡ ಲಿಪಿ, ಹಿಂದಿ ಲಿಪಿ ಮತ್ತು ಇಂಗ್ಲಿಷ್ ಲಿಪಿ ಎಂದು ಗುರುತಿಸುತ್ತಾರೆ.

I) ನಮಗರಿವಿಲ್ಲದೆಯೇ ನಮ್ಮ ಮೇಲೆ ಪ್ರಭಾವ ಬೀರುವ ಅಂಶಗಳು:–
1)ನಾವು ನಮ್ಮ ಕನ್ನಡ ಶಾಲೆಯ ಮಕ್ಕಳನ್ನು ಉದ್ದೇಶಿಸಿ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಈ ಮೂರು ಲಿಪಿಗಳಲ್ಲಿ ಯಾವ ಲಿಪಿ **ಸುಲಭ** ಎಂದು ಕೇಳಿದರೆ ಅವರು **ಇಂಗ್ಲಿಷ್ ಲಿಪಿ** ಎಂದು ಉತ್ತರಿಸುತ್ತಾರೆ. ಏಕೆಂದರೆ ಅದರಲ್ಲಿ ಒತ್ತಕ್ಷರ ಇಲ್ಲಾ ಎಂದು ಕಾರಣವನ್ನೂ ತಿಳಿಸುತ್ತಾರೆ.
2) i) ನಮ್ಮ ಕನ್ನಡ ನೆಲದಲ್ಲಿ, ಕನ್ನಡದ ಕೀಲಿ ಮಣೆಯಿಂದ ಕನ್ನಡವನ್ನು ಗಣಕಯಂತ್ರದಲ್ಲಿ ಬೆರಳಚ್ಚಿಸುವವರು ನೋಡಲು ಸಿಗುವುದು ಅಪರೂಪದಲ್ಲಿ ಅಪರೂಪ ಎನ್ನಬಹುದು. ಆದರೆ ಸಾಮಾನ್ಯವಾಗಿ ಇಂಗ್ಲಿಷ್ ಕೀಲಿಮಣೆಯಿಂದ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಇತ್ಯಾದಿ ಭಾಷೆಗಳನ್ನು ಗಣಕದಲ್ಲಿ ಬೆರಳಚ್ಚಿಸಿ ಬರೆಯುವದನ್ನು ನಾವು ಕಾಣುತ್ತೇವೆ.

ii. ಗಣಕದ ಬೆರಳಚ್ಚುಗಾರರು ಇಂಗ್ಲಿಷ್‌ಗಿಂತ ಕನ್ನಡ ಬೆರಳಚ್ಚುವಿಕೆ ಕಷ್ಟ, ಇದು ಅಧಿಕ ಶ್ರಮ ಮತ್ತು ಸಮಯವನ್ನು ತೆಗೆದುಕೊಳ್ಳುತ್ತದೆ. ಎಂದು ಅಭಿಪ್ರಾಯ ಪಡುತ್ತಾರೆ.
3) ಜಂಗಮದಲ್ಲಿ (ಮೊಬೈಲ್‌ನಲ್ಲಿ)ಕನ್ನಡ ಭಾಷೆಯ ಸಂದೇಶವನ್ನು ಬರೆಯಲು ಕನ್ನಡಿಗರೂ ಇಂಗ್ಲಿಷ್ ಕೀಲಿಪಟ್ಟಿಯನ್ನೇ (ಕೀಪೆಡನ್ನೇ) ಮತ್ತು ರೋಮನ್ ಲಿಪಿಯನ್ನೇ ಹೆಚ್ಚು ಹೆಚ್ಚಾಗಿ ಬಳಸುವುದನ್ನು ಕಾಣುತ್ತಿದ್ದೇವೆ.
4) ಮುದ್ರಣಾಲಯಗಳಲ್ಲಿ (ಪುಸ್ತಕ) ಮುದ್ರಕರು ಕನ್ನಡ/ಹಿಂದಿ ಅಕ್ಷರ ಜೋಡಣೆ ಇಂಗ್ಲಿಷ್‌ಗಿಂತ ಕಷ್ಟ, ಏಕೆಂದರೆ, ಇದರಲ್ಲಿ ಗುಣಿತಾಕ್ಷರಗಳು, ಒತ್ತಕ್ಷರಗಳು, ಅರ್ಧಾಕ್ಷರಗಳು, ಕನ್ನಡದಲ್ಲಿರ್ ರ ಒತ್ತು (ಹಿಂದಿಯಲ್ಲಿ ಅರ್ಕಾವಲಿ)ಇವೆ. ಮತ್ತು ಒಂದೇ ರೀತಿ ಕಾಣುವ ಅಕ್ಷರಗಳನ್ನು ಬೇರೆ ಬೇರೆಯಾಗಿ ಕಾಣುವಂತೆ ಶ್ರಮ ವಹಿಸಬೇಕಾಗುತ್ತದೆ. ಉದಾ:– ಯೋಗಶಾಲಾ ಮತ್ತು ಯಾಗಶಾಲಾ. ಆದ್ದರಿಂದ ಕನ್ನಡ ಮುದ್ರಣದ ಸಮಯ ಹೆಚ್ಚು ಶ್ರಮ ಹೆಚ್ಚು (ಮತ್ತು ತನ್ಮೂಲಕ ಬೆಲೆಯೂ ಹೆಚ್ಚು) ಎಂದು ಹೇಳುತ್ತಾರೆ.
5) ಔಷಧಿಗಳ ಮೇಲಿನ ಗುರುತು ಪಟ್ಟಿಯಲ್ಲಿ (ಲೇಬಲ್) ರೋಮನ್‌ಲಿಪಿಯಲ್ಲಿ ಅದರಲ್ಲಿಯ ಘಟಕಗಳನ್ನು ತೀರಾ ಚಿಕ್ಕದಾಗಿ ಬರೆಯುತ್ತಿರುವದನ್ನು ನಾವು ಸಾಮಾನ್ಯವಾಗಿ ಕಾಣುತ್ತೇವೆ. ಹಾಗೆಯೇ ಯಾವುದೇ ವಸ್ತುವಿನ ಮಾಹಿತಿ ಪತ್ರಕಗಳಲ್ಲೂ. –ಇವು ಒಂದು ವೇಳೆ ಇವು ಚಿಕ್ಕದಾಗಿ ಬಹುಭಾಷೀಯಾಗಿದ್ದರೆ, ಅಷ್ಟೇ ದೊಡ್ಡದಾದ ಕನ್ನಡ/ಹಿಂದಿ ಅಕ್ಷರಗಳಿಗಿಂತ ರೋಮನ್ ಅಕ್ಷರ ಬೇಗ ಗಮನ ಸೆಳೆಯುವದನ್ನು ನಾವು ಗಮನಿಸುತ್ತಿರುತ್ತೇವೆ.

II ನಮಗನ್ನಿಸುವ (ನಮ್ಮ ಅನುಭವಕ್ಕೆ ಬಂದ ಅಂಶಗಳು) :–
1) ರೋಮನ್ ಲಿಪಿಯಲ್ಲಿ (ಕನ್ನಡ ಮತ್ತು ದೇವನಾಗರಿಯಲ್ಲಿರುವಂತೆ) ಹೆಚ್ಚುವರಿಯಾದ ಒತ್ತಕ್ಷರ ಚಿಹ್ನೆಗಳು ಇಲ್ಲ. ಹಾಗಿದ್ದರೂ ಇರುವ ಅಕ್ಷರಗಳನ್ನು ಬಳಸಿಯೇ ಸಂಯುಕ್ತಾಕ್ಷರಗಳನ್ನು ಸರಳವಾಗಿ ಬರೆಯಲು ಸಾಧ್ಯ. ಉದಾ:– DISCO,SAPNA,KANNADA
2)ರೋಮನ್ ಲಿಪಿಯಲ್ಲಿ (ಕನ್ನಡ ಮತ್ತು ದೇವನಾಗರಿಯಲ್ಲಿರುವಂತೆ) ಹೆಚ್ಚುವರಿಯಾದ ಗುಣಿತಾಕ್ಷರ
ಚಿಹ್ನೆಗಳೂ ಇಲ್ಲ. ಹಾಗಿದ್ದರೂ ಇರುವ ಅಕ್ಷರಗಳನ್ನು ಬಳಸಿಯೇ ಗುಣಿತಾಕ್ಷರಗಳನ್ನು ರಚಿಸುವ
ಸರಳವಾದ, ಸುಲಭವಾದ ವಿಧಾನ ಅಲ್ಲಿದೆ. ಉದಾ:– Ka,Ki,Ku.....,In, Go ಇತ್ಯಾದಿ.
3)ನಾವು ಗಮನಿಸಿದ ಹಾಗೆ ರೋಮನ್ ಲಿಪಿಯಲ್ಲಿ, ಜಂಗಮ/ಗಣಕದಲ್ಲಿ ಬರೆಯುವಾಗ ಗುಣಿತಾಕ್ಷರವಿರಲಿ ಅಥವಾ ಸಂಯುಕ್ತಾಕ್ಷರವಿರಲಿ ಉಚ್ಚಾರಕ್ಕನುಸಾರವಾಗಿ, ಅಕ್ಷರ (ವ್ಯಂಜನ/ಸ್ವರ) ಗಳನ್ನು ಬರೆಯುವ ದಿಶೆಯಲ್ಲಿ (ಒಂದೇ ದಿಕ್ಕು–ಬಲಕ್ಕೆ) ಒಂದರ ನಂತರ ಒಂದು ಹೀಗೆ ಕ್ರಮವಾಗಿ ಮತ್ತು ಬಿಡಿಬಿಡಿಯಾಗಿ ಬರೆಯುತ್ತ ಹೋದರಾಯಿತು. ಈ ವಿಧಾನವು (ನಮಗೆ ನಿತ್ಯ ಅನುಭವಕ್ಕೆ ಬರುತ್ತದೆ) **ಕಲಿಯಲು** (ಓದಲು, ಬರೆಯಲು, ಬೆರಳಚ್ಚಿಸಲು) ಹೊಸಬರಿಗೂ ವಯಸ್ಸಾದವರಿಗೂ ವಿದೇಶಿಯರಿಗೂ ಜನಸಾಮಾನ್ಯರಿಗೂ **ಸರಳ ಮತ್ತು ಸುಲಭವಾಗಿದ್ದು ಬಳಕೆದಾರರ ಸ್ನೇಹಿಯಾಗಿರುತ್ತದೆ.**

4)ಬಹುತೇಕವಾಗಿ ಪ್ರದರ್ಶನ ಫಲಕಗಳಲ್ಲಿ (ಡಿಸ್‌ಪ್ಲೇ), ಫಲಕಗಳಲ್ಲಿ ರೋಮನ್ ಕೆಪಿಟಲ್ ಅಕ್ಷರಗಳನ್ನು ವ್ಯಾಪಕವಾಗಿ ಬಳಸುವವುದನ್ನು ಕಾಣುತ್ತೇವೆ.
ಉದಾ:– ರೈಲು ನಿಲ್ದಾಣಗಳ ಪ್ರದರ್ಶನ ಫಲಕಗಳು, ಫಲಕಗಳು; ಭಾರತೀಯ ಪುರಾತತ್ವ
ಇಲಾಖೆಯ ಫಲಕಗಳು—ಇತ್ಯಾದಿಗಳಲ್ಲಿ ಇಂಗ್ಲಿಷ್ ಅಕ್ಷರ ಕನ್ನಡ/ಹಿಂದಿ ಅಕ್ಷರಗಳಿಗಿಂತ
ದೊಡ್ಡದಾಗಿ, ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಮತ್ತು ದೂರದಿಂದ ಓದಲ್ಪಡುತ್ತದೆ.
5)ಸ್ಕೂಲ್ ರೋಮನ್‌ನಲ್ಲಿ ರೋಮನ್ ಕೈಪಿಟಲ್, ದೇವನಾಗರಿ, ಕನ್ನಡ□ ಇವುಗಳಿಗಿಂತ
ವೇಗದ ಬರವಣಿಗೆ ಸಾಧ್ಯ.

6)ಹಾಗೆಯೇ ಸ್ಮೊಲ್ ರೋಮನ್ ಅಕ್ಷರವನ್ನು ಕನ್ನಡ ಮತ್ತು ದೇವನಾಗರಿಗಿಂತ ಗಣಕದಲ್ಲಿ ಜಂಗಮದಲ್ಲಿ ಪುಸ್ತಕದಲ್ಲಿ ಔಷಧಿಗಳ ಅಂಟುಪಟ್ಟಿಗಳಲ್ಲಿ, ವಸ್ತುಒಂದರ ಮಾಹಿತಿ ಪತ್ರಕದಲ್ಲಿ ಅತೀ ಚಿಕ್ಕದಾಗಿ ಮುದ್ರಿಸಲು/ಓದಲು ಸಾಧ್ಯವಾಗಿರುತ್ತದೆ. (ಅದೇ ಕನ್ನಡ/ದೇವನಾಗರಿ ಅಕ್ಷರಗಳು ಚಿಕ್ಕದಾದಷ್ಟು ಓದಲು ಕಷ್ಟ) ಇದು ವಾಸ್ತವಿಕವಾದ ವಿಷಯ. ಇವೆಲ್ಲದರ ಪರಿಣಾಮ ನಮ್ಮ ಜನಾಂಗದ ಮೇಲೆ, ನಮ್ಮ ಮಕ್ಕಳ ಮೇಲೆ ಆಗಿ, ನಾವು ನಮಗರಿವಿಲ್ಲದಂತೆಯೇ ನಮ್ಮದು ಕಷ್ಟ , ಇಂಗ್ಲಿಷ್ ಸುಲಭ ; ನಮ್ಮದು ಕೀಳು, ಇಂಗ್ಲಿಷ್ ಮೇಲು ಎನ್ನುವ ಭಾವನೆ ನಮ್ಮ ಒಳ–ಮನಸ್ಸಿನಲ್ಲಿ ಮೇಲಿಂದ ಮೇಲೆ ಮೂಡುವುದು ಮತ್ತು ಅದು ಸತತವಾಗಿ ಅಚ್ಚೊತ್ತಿಕೊಂಡು ಉಳಿದು ಮುಂದೆ ನಮ್ಮವರ ನಡವಳಿಕೆಯಲ್ಲಿ ಪ್ರಕಟವಾಗುತ್ತಿರುಗವುದನ್ನು ನಾವು ಕಾಣುತ್ತಿದ್ದೇವೆ. ಮುಂದೆ ಪರಿಹಾರ ಕಂಡುಕೊಳ್ಳುವಲ್ಲಿ ಇದು ಸಹಾಯಕವಾಗುತ್ತದೆ ಎನ್ನುವ ವಿಶ್ವಾಸದಿಂದ ಇದಕ್ಕೆ ಕಾರಣಗಳನ್ನು (ಸ್ಪಷ್ಟವಾಗಿ) ಗುರುತಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ. ಈಗ ಈ ಬಗ್ಗೆ ಇನ್ನೂ ಹೆಚ್ಚಿನದನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ.

III) ಕನ್ನಡ ಲಿಪಿ: ಇದನ್ನು ಸುಮಾರು 3 ರಿಂದ 6 ಕೋಟಿ ಜನ ಬಳಸುತ್ತಾರೆ.

ಇದು ಸುಮಾರು 1,600 ವರ್ಷಗಳ ಶಾಸನಗಳ ದಾಖಲೆ ಹೊಂದಿದೆ. ಉದಾ:– ಹಲ್ಮಿಡಿ ಶಾಸನ (ಕ್ರಿ.ಶ. ಸುಮಾರು 430), ಶ್ರವಣಬೆಳಗೊಳದ ಚಂದ್ರಗಿರಿ ಶಾಸನ (ಕ್ರಿ.ಶ. 350 ರಿಂದ 400)

ಇದು **ಕನ್ನಡ ಭಾಷೆಯ ಸ್ವಂತ ಲಿಪಿಯಾಗಿದೆ. ಅದರ ಜೊತೆಗೇ ಇದನ್ನು ಸಂಸ್ಕೃತ, ಕೊಂಕಣಿ, ತುಳು ಇತ್ಯಾದಿ ಭಾಷೆಗಳನ್ನು ಬರೆಯಲು ಬಳಸುತ್ತಾರೆ.**

ಗೆರೆ ಹಾಳೆಯ ಮೇಲೆ ಇದನ್ನು ಎಡದಿಂದ ಬಲಕ್ಕೆ ಬರೆಯುತ್ತಾರೆ.

ಇದರಲ್ಲಿ ದೇವನಾಗರಿಯಂತೆ 52 ಅಕ್ಷರಗಳು ಮತ್ತು ಹೆಚ್ಚುವರಿಯಾದ ಕಾಗುಣಿತ ಚಿಹ್ನೆಗಳು ಮತ್ತು ಒತ್ತಕ್ಷರ ಚಿಹ್ನೆಗಳನ್ನು ಹೊಂದಿದ್ದು ಗಣಕದ ಕೀಲಿಮಣೆಯಲ್ಲಿ ಇಂಗ್ಲಿಷ್‌ನ ಆ ಯಾಂತ್ರಿಕ ಅನುಕೂಲತೆಯನ್ನು ಹೊಂದಿಲ್ಲ.

ಇದು **'ಅಬುಗಿದಾ'** ಜಾತಿಯ ಲಿಪಿಯಾಗಿದೆ. ಇದರಲ್ಲಿ ವ್ಯಂಜನಕ್ಕೆ ಸ್ವರದ ಪ್ರತಿನಿಧಿಯಾದ ಕಾಗುಣಿತ ಚಿಹ್ನೆಯನ್ನು ಕೂಡಿಸಿ ಗುಣಿತಾಕ್ಷರ ಬರೆಯುತ್ತಾರೆ.:–

ಗುಣಿತಾಕ್ಷರ = ವ್ಯಂಜನ + ಸ್ವರ = ವ್ಯಂಜನ + ಸ್ವರದ ಪ್ರತಿನಿಧಿಯಾದ ಕಾಗುಣಿತ ಚಿಹ್ನೆ.

ಕ = ಕ್ + ಅ = ಕ್ + –,,–

ಕಿ = ಕ್ + ಇ = ಕ್ + –,,–

ಕು = ಕ್ + ಉ = ಕ್ + –,,–.

ಆದ್ದರಿಂದ ಈ ಲಿಪಿಯಲ್ಲಿ **ಎಲ್ಲ ಗುಣಿತಾಕ್ಷರಗಳನ್ನು ವರ್ಣಮಾಲೆಯ ಅಕ್ಷರಗಳಿಗೆ ಹೆಚ್ಚುವರಿಯಾಗಿ ಕಲಿಯಬೇಕಾಗುತ್ತದೆ.** ಹಾಗಾಗಿ ಈ ಲಿಪಿಯಲ್ಲಿ ಅಕ್ಷರ–ಚಿಹ್ನೆಗಳ ಸಂಖ್ಯೆ ಹೆಚ್ಚು ಇದು ಕಲಿಕೆಯನ್ನು ಕಷ್ಟಕರವಾಗಿಸುತ್ತದೆ.

ಕನ್ನಡದ ಬರವಣಿಗೆ ಒಂದೇ ದಿಶೆಯಲ್ಲಿದ್ದರೂ ಗುಣಿತಾಕ್ಷರದಲ್ಲಿ ಕಾಗುಣಿತ ಚಿಹ್ನೆಗಳು ವ್ಯಂಜನದ 3 ವಿವಿಧ ದಿಶೆಗಳಲ್ಲಿ ಇರುವದರಿಂದ ಗುಣಿತಾಕ್ಷರಗಳ ಬರವಣಿಗೆಯು ಮುಂದೆ, ಮೇಲೆ ಮತ್ತು ಕೆಳಗೆ ▯ ಹೀಗೆ ಮೂರು ದಿಶೆಗಳಲ್ಲಿ ಮತ್ತು 3 ಸ್ತರಗಳಲ್ಲಿ (ತ್ರಿಸ್ತರೀಯ)ಮತ್ತು ಅಲ್ಲಿಂದ ಬಲಕ್ಕೆ ನಡೆಯುತ್ತದೆ. ಉದಾ:– ಕೃಷಿ ಕೆಲಸ, ಕೃಷಿಕೇಂದ್ರ. ಇದರಿಂದ ಬರವಣಿಗೆಯ ವೇಗವು ಕಡಿಮೆಯಾಗುತ್ತದೆ. ಮತ್ತು ವ್ಯಂಜನವು ಗುಣಿತಾಕ್ಷರ ಚಿಹ್ನೆಗಳಿಂದ ಮಧ್ಯದ ಸ್ತರಕ್ಕೆ ಸರಿಸಲ್ಪಟ್ಟು ಚಿಕ್ಕದಾಗಿ ಕಾಣುತ್ತದೆ.

ಸಾಮಾನ್ಯವಾಗಿ ಇದರಲ್ಲಿ ಸಂಯುಕ್ತಾಕ್ಷರ ಬರೆಯಲು ವ್ಯಂಜನದ ಪ್ರತಿನಿಧಿಯಾದ ಒತ್ತಕ್ಷರ ಚಿಹ್ನೆಯನ್ನು ವ್ಯಂಜನದ ಕೆಳಗೆ ಮತ್ತು ಮುಂದೆ (ಬಲಕ್ಕೆ) ಬಳಸುತ್ತಾರೆ.:–

ಸಂಯುಕ್ತಾಕ್ಷರ = ವ್ಯಂಜನ + ಒತ್ತಕ್ಷರ + ಸ್ವರ

ಕ್ಕ = ಕ್ + ಕ್ + ಅ

ಹೀಗೆ **ಕನ್ನಡದ ಒತ್ತಕ್ಷರಗಳನ್ನು ಬರೆಯಲು ಅಕ್ಷರಕ್ಕಿಂತ ಚಿಕ್ಕದಾದ ಒತ್ತಕ್ಷರ–ಚಿಹ್ನೆಗಳನ್ನು ಹೆಚ್ಚುವರಿಯಾಗಿ ಬಳಸುತ್ತಾರೆ.** (ಆದರೆ ಇವು ಗುಣಿತಾಕ್ಷರ ಚಿಹ್ನೆಯಂತೆ ವ್ಯಂಜನಕ್ಕೆ ತಾಗಿರುವುದಿಲ್ಲ.) ಮತ್ತು ಇವುಗಳನ್ನು ಅಕ್ಷರಮಾಲೆಗೆ ಹೆಚ್ಚುವರಿಯಾಗಿ ಕಲಿಯಬೇಕಾಗುತ್ತದೆ. ಇದು ಕೂಡಾ ಲಿಪಿಯ ಅಕ್ಷರ ಚಿಹ್ನೆಗಳನ್ನು ಹೆಚ್ಚಿಸುತ್ತದೆ. ಆದ್ದರಿಂದ ಇದು ಕಲಿಯುವವನಿಗೆ ಕ್ಲಿಷ್ಟ ಮತ್ತು ಕಷ್ಟ.

ಈ ಕನ್ನಡದ ಸಂಯುಕ್ತಾಕ್ಷರ ಬರವಣಿಗೆಯು ಒಂದಕ್ಕಿಂತ ಹೆಚ್ಚು ಸ್ತರ ಅಂದರೆ ಎರಡು ಸ್ತರಿಯವಾಗಿರುತ್ತದೆ. (**ದ್ವಿ–ಸ್ತರೀಯ**). **ಉದಾ:– ಕೊಕ್ಕರೆ.** (ದ್ವಿಸ್ತರ) KOKKARE (ಏಕಸ್ತರ)

ಆದ್ದರಿಂದ ಕೂಡ ಬರವಣಿಗೆಯ ವೇಗ ಕಡಿಮೆಯಾಗುತ್ತದೆ. ಒತ್ತಕ್ಷರ ಚಿಹ್ನೆಯು ಅಕ್ಷರದ ಕೆಳಗೆ(ಗಡಿಯಾರದ 5 ಘಂಟೆಯ ದಿಶೆಯಲ್ಲಿ) ಇದ್ದು ಹೆಚ್ಚಿನ ಜಾಗವನ್ನು ಕಬಳಿಸುತ್ತದೆ. ಉದಾ:– ಸಪ್ನಾ.

ಒಂದರಲ್ಲಿ ಒಂದಕ್ಕಿಂತ ಹೆಚ್ಚು ಒತ್ತಕ್ಷರಗಳಿದ್ದರೆ ಅದು ಅಕ್ಷರದ ಕೆಳಗೆ ಇನ್ನೂ ಹೆಚ್ಚಿನ ಜಾಗವನ್ನು ಕಬಳಿಸುತ್ತದೆ ಉದಾ:– ರಾಷ್ಟ್ರೀಯ, ಶಾಸ್ತ್ರೀಯ.

ಒಂದು ಸಾಲಿನಲ್ಲಿ ಒಂದೇ ಒಂದು ಒತ್ತಕ್ಷರವಿದ್ದರೂ ಆ ಇಡಿ ಸಾಲಿನಲ್ಲಿ ಅಕ್ಷರಗಳ ಕೆಳಗೆ ಅಷ್ಟು ಹೆಚ್ಚಿನ ಜಾಗವನ್ನು ವ್ಯರ್ಥವಾಗಿ ಖಾಲಿ ಬಿಡಬೇಕಾಗುತ್ತದೆ. ಕನ್ನಡದ ಒತ್ತಕ್ಷರ ಚಿಹ್ನೆಗಳಲ್ಲಿ ಏಕ ಪ್ರಕಾರತೆ ಇಲ್ಲ. ಉದಾ:– ಅಪ್ಪ & ಅಮ್ಮ. ಕನ್ನಡದ ಒತ್ತಕ್ಷರ ಬರೆಯುವ ವಿಧಾನಗಳಲ್ಲಿ ಏಕ ಪ್ರಕಾರತೆ ಇಲ್ಲ. ಉದಾ:– ನಾಟ್ಯ & ನರ್ತನ. ಕನ್ನಡದ ಒತ್ತಕ್ಷರ–ರೂಪಗಳಲ್ಲಿ ಏಕರೂಪತೆ ಇಲ್ಲ. ಉದಾ:– ಸೂರ್ಯ & ಸೂರ್ಯ.

ಒತ್ತಕ್ಷರವು ಅಕ್ಷರಕ್ಕಿಂತ ಚಿಕ್ಕದಾಗಿರುವುದರಿಂದ **ಅಕ್ಷರವು ಚಿಕ್ಕದಾದಂತೆ ಒತ್ತಕ್ಷರವು ಇನ್ನೂ ಚಿಕ್ಕದಾಗಿ ಅಸ್ಪಷ್ಟವಾಗುತ್ತ ಹೋಗುತ್ತದೆ.**

ಹಾಗಾಗಿ ತ್ರಿಸ್ತರಿಯ ಬರವಣಿಗೆಯ ಕನ್ನಡಲಿಪಿಯಲ್ಲಿ, ಒಂದು ಬಿಂದು ಅವಕಾಶದಲ್ಲಿ (ಒಂದು ಸ್ವರ ಬಿಟ್ಟರೆ) ಒಂದು ಗುಣಿತಾಕ್ಷರ ಇಲ್ಲವೇ ಒಂದು ಸಂಯುಕ್ತಾಕ್ಷರ ಬರುತ್ತದೆ. ಆದ್ದರಿಂದ

(ಒಂದು ಬಿಂದು ಅವಕಾಶ) = ವ್ಯಂಜನ + ಒತ್ತಕ್ಷರ + ಕಾಗುಣಿತ ಚಿಹ್ನೆ (ತ್ರಿಸ್ತರೀಯ). ಆದ್ದರಿಂದ,

1) ಇದರಿಂದಾಗಿ ವ್ಯಂಜನವು ಒಂದು ಬಿಂದು ಅವಕಾಶವನ್ನು ಪೂರ್ತಿಯಾಗಿ ಆವರಿಸಿಕೊಂಡು ಇರದೇ ಅದರಲ್ಲಿ ಮಧ್ಯದ ಸ್ತರಕ್ಕೆ ಎಡಕ್ಕೆ ಸರಿಸಲ್ಪಟ್ಟು ಉಳಿದ 3 ದಿಕ್ಕುಗಳಲ್ಲಿ ಗುಣಿತಾಕ್ಷರ ಚಿಹ್ನೆ ಮತ್ತು ಒತ್ತಕ್ಷರ ಚಿಹ್ನೆಗಳು ಆಕ್ರಮಿಸಿಕೊಳ್ಳುವದರಿಂದ ವ್ಯಂಜನವು ಒಂದು ಬಿಂದು ಅವಕಾಶಕ್ಕಿಂತ ಚಿಕ್ಕದಾಗಿ ಕಾಣುತ್ತದೆ. **ಆದ್ದರಿಂದ ಮುದ್ರಣದಲ್ಲಿ, ಫಲಕಗಳಲ್ಲಿ, ಪ್ರದರ್ಶನ ಫಲಕಗಳಲ್ಲಿ (ಡಿಸ್‌ಪ್ಲೇ) ಅದೇ ನಂಬರಿನ**

ಇಂಗ್ಲಿಷ್ ಅಕ್ಷರಕ್ಕಿಂತ ಕನ್ನಡ ಅಕ್ಷರ ಚಿಕ್ಕದಾಗಿ ಕಾಣುತ್ತದೆ. ಉದಾ:–
1) ಕನ್ನಡ – KANNADA 2) ತ್ರಿಪುರಾ TRIPURA
3) ಗೃಹ ಪ್ರವೇಶ – GRIHA-PRAVESH.

2) ಈಗಾಗಲೇ ಹೆಚ್ಚು ಗೀಚುಗಳು (ಗೆರೆಗಳು) ಮತ್ತು ಬಿಳಿಭಾಗಗಳನ್ನು (ಕಂಟೂರ್‌ಗಳನ್ನು) ಹೊಂದಿರುವ ಕನ್ನಡದ ಅಕ್ಷರಗಳು ಸಹಜವಾಗಿ ಚಿಕ್ಕದಾದಂತೆ ಅಸ್ಪಷ್ಟವಾಗಿ ಕಾಣುತ್ತವೆ. ಒಂದು ಬಿಂದು ಅವಕಾಶದಲ್ಲಿ ಇವುಗಳಿಗೆ ತಾಗಿಕೊಂಡಿರುವ ಕಾಗುಣಿತ ಚಿಹ್ನೆಗಳು ಮತ್ತು ತಾಗದೇ ಇರುವ ಒತ್ತಕ್ಷರ ಚಿಹ್ನೆಗಳು ಇನ್ನು ಹೆಚ್ಚಿನ ಗೀಚುಗಳು ಮತ್ತು ಬಿಳಿ ಭಾಗಗಳನ್ನು ಸೇರಿಸುವುದರಿಂದ ಅದು ಚಿಕ್ಕದಾದಂತೆ ಇನ್ನೂ ಹೆಚ್ಚು ಅಸ್ಪಷ್ಟವಾಗಿ ಕಾಣುತ್ತದೆ. ಉದಾ:–
ಕನ್ನಡೋತ್ಸವ <KANNADOTSVA (ನಂ.14), ಕನ್ನಡೋತ್ಸವ < KANNADOTSVA (ನಂ.12), ಕನ್ನಡೋತ್ಸವ <KANNADOTSVA (ನಂ.10), ಕನ್ನಡೋತ್ಸವ < KANNADOTSVA (ನಂ.9), ಕನ್ನಡೋತ್ಸವ <KANNADOTSVA(ನಂ.8).

3) ಒಂದು ಬಿಂದು ಅವಕಾಶದಲ್ಲಿ, ತ್ರಿಸ್ತರೀಯ ಕನ್ನಡ ಬರವಣಿಗೆಯಲ್ಲಿ ವ್ಯಂಜನಾಕ್ಷರವು ಅದೇ ನಂಬರಿನ ಏಕಸ್ತರೀಯ ಬರವಣಿಗೆಯ ರೋಮನ್ ಕೆಪಿಟಲ್ ಅಕ್ಷರ(ಸ್ವರ/ವ್ಯಂಜನ)ಕ್ಕಿಂತ ಚಿಕ್ಕದಾಗಿ ಇರುತ್ತದೆ. ಇದಕ್ಕೆ ಕನ್ನಡದ ತ್ರಿಸ್ತರೀಯವಾದ ಗುಣಿತಾಕ್ಷರಗಳ ರಚನೆಯು ಮತ್ತು ದ್ವಿಸ್ತರೀಯವಾದ ಒತ್ತಕ್ಷರಗಳ ರಚನೆಯು ಒಟ್ಟಿನಲ್ಲಿ ಈ ವ್ಯಂಜನಾಕ್ಷರವನ್ನು ಚಿಕ್ಕದಾಗಿ ವಿನ್ಯಾಸಗೊಳಿಸಲು ಪೂರಕವಾಗಿರುತ್ತದೆ. ಉದಾ,:– ಕ, ಕೃ, ಕೈ, ಕೌ,ಕ್ಕ. =ka,kri,kai,kau,kka. < KA, KRI, KAI, KAU,KKA.

(ಒಂದು ಬಿಂದು ಅವಕಾಶ) = ಕ (ತ್ರಿಸ್ತರ) = ka (ತ್ರಿಸ್ತರ)<KA (ಏಕಸ್ತರ)

ಆದ್ದರಿಂದ ಕನ್ನಡದಲ್ಲಿ 5 ನಂಬರಿನ ಮುದ್ರಣ ಮತ್ತು ಓದುವಿಕೆ ಕಷ್ಟ

IV) ದೇವನಾಗರಿ ಲಿಪಿ: ಇದನ್ನು ಸುಮಾರು 30ಕೋಟಿಗೂ ಅಧಿಕ ಜನರು ಭಾರತದಾದ್ಯಂತ, ವಿಶೇಷವಾಗಿ ಉತ್ತರ ಭಾರತಗದಲ್ಲಿ ಬಳಸುತ್ತಾರೆ.

ಇದು 13ನೇ ಶತಮಾನದ ನಂತರ ಬ್ರಾಹ್ಮಿಯಿಂದ ವಿಕಸಿತವಾದ ಭಾರತೀಯ ಮೂಲದ ಲಿಪಿಯಾಗಿದೆ.

ಇಂದು ಇದನ್ನು ಹಿಂದಿ, ಮರಾಠಿ, ಕೊಂಕಣಿ ಇತ್ಯಾದಿ ಭಾಷೆಗಳನ್ನು ಬರೆಯಲು ಬಳಸುತ್ತಾರೆ. **18ನೇ ಶತಮಾನದ ನಂತರ, ಸ್ಥಳೀಯ ಭಾಷೆಗಳಲ್ಲಿ ಬರೆಯಲ್ಪಡುತಿದ್ದ ಸಂಸ್ಕೃತವು ಹೆಚ್ಚು ಹೆಚ್ಚಾಗಿ ದೇವನಾಗರಿಯಲ್ಲಿ ಬರೆಯಲ್ಪಡುತ್ತಿದೆ. ಆದರೂ ಪಾಣಿನಿಯ ವ್ಯಾಕರಣದ ಎಲ್ಲ ಸೂತ್ರಗಳನ್ನೂ ಇಂದಿಗೂ ದೇವನಾಗರಿಯಲ್ಲಿ ಬರೆಯಲಾಗುವುದಿಲ್ಲ.**
ಉದಾ:– ಉರ್ದು('ಸಂವೃತ–ಉ') ಮತ್ತು ಉದಯ('ವಿವೃತ–ಉ')— ಎರಡೂ ಶಬ್ದಗಳಲ್ಲಿ 'ಉ' ಅನ್ನು ಒಂದೇ ಚಿಹ್ನೆಯಿಂದ ಬರೆಯಲಾಗುತ್ತದೆ.

ಗೆರೆಯ ಹಾಳೆಯಲ್ಲಿ ಇದನ್ನು ಗೆರೆಯ ಕೆಳಗೆ ಬರೆಯುತ್ತಾರೆ. ಇದನ್ನು ಎಡದಿಂದ ಬಲಕ್ಕೆ ಬರೆಯುತ್ತಾರೆ.

ಇದರಲ್ಲಿ ಕನ್ನಡದಂತೆ 52 ಅಕ್ಷರಗಳು ಮತ್ತು ಹೆಚ್ಚುವರಿಯಾದ ಕಾಗುಣಿತ ಚಿಹ್ನೆಗಳು ಮತ್ತು ಒತ್ತಕ್ಷರ ಚಿಹ್ನೆಗಳನ್ನು ಹೊಂದಿದ್ದು ಗಣಕದ ಕೀಲಿಮಣೆಯಲ್ಲಿ ಇಂಗ್ಲಿಷ್‌ನ ಆ ಯಾಂತ್ರಿಕ ಅನುಕೂಲತೆಯನ್ನು ಹೊಂದಿಲ್ಲ.

ಮೇಲ್ನೋಟಕ್ಕೆ ಅಕ್ಷರಗಳ ತಲೆಯ ಮೇಲೆ ಎಳೆಯುವ ಉದ್ದನೆಯ (ಅಡ್ಡ) ಗೆರೆಯೇ ಸುಮಾರು ಮಸಿಯನ್ನು ಬಳಸಿಕೊಳ್ಳುತ್ತದೆ.

ಇದು ಕೂಡ ಕನ್ನಡದಂತೆ **"ಅಬುಗಿದಾ"** ಜಾತಿಯ ಲಿಪಿಯಾಗಿದೆ. ಇದರಲ್ಲಿ ಗುಣಿತಾಕ್ಷರ ಬರೆಯುವಾಗ ಸ್ವರದ ಪ್ರತಿನಿಧಿಯಾ ಕಾಗುಣಿತ ಚಿಹ್ನೆಯನ್ನು ವ್ಯಂಜನಕ್ಕೆ 4 ಬೇರೆ ಬೇರೆ ದಿಶೆಗಳಲ್ಲಿ ಸೇರಿಸಿ ಗುಣಿತಾಕ್ಷರ ಬರೆಯುತ್ತಾರೆ. ಆದ್ದರಿಂದ,:

ಗುಣಿತಾಕ್ಷರ = ವ್ಯಂಜನ + ಸ್ವರ = ವ್ಯಂಜನ + ಸ್ವರದ ಪ್ರತಿನಿಧಿಯಾದ ಕಾಗುಣಿತ ಚಿಹ್ನೆ.

ಕ = ಕ್ + ಅ = ಕ್ + –„–
ಕಿ = ಕ್ + ಇ = ಕ್ + –„–
ಕು = ಕ್ + ಉ = ಕ್ + –„–.

ಆದ್ದರಿಂದ ಈ ಲಿಪಿಯಲ್ಲಿ ಎಲ್ಲ ಗುಣಿತಾಕ್ಷರಗಳನ್ನು ವರ್ಣಮಾಲೆಯ ಅಕ್ಷರಗಳಿಗೆ ಹೆಚ್ಚುವರಿಯಾಗಿ ಕಲಿಯಬೇಕಾಗುತ್ತದೆ. ಹಾಗಾಗಿ ಈ ಲಿಪಿಯಲ್ಲಿ ಅಕ್ಷರ–ಚಿಹ್ನೆಗಳ ಸಂಖ್ಯೆ ಹೆಚ್ಚು ಇದು ಕಲಿಕೆಯನ್ನು ಕಷ್ಟಕರವಾಗಿಸುತ್ತದೆ. ದೇವನಾಗರಿ ಬರವಣಿಗೆ ಒಂದೇ ದಿಶೆಯಲ್ಲಿದ್ದರೂ ಗುಣಿತಾಕ್ಷರಗಳಲ್ಲಿ ಕಾಗುಣಿತ ಚಿಹ್ನೆಗಳು ವ್ಯಂಜನದ 4 ಬೇರೆ ಬೇರೆ ದಿಶೆಗಳಲ್ಲಿ ಇರುವುದರಿಂದ **ವ್ಯಾವಹಾರಿಕವಾಗಿ ಗುಣಿತಾಕ್ಷರಗಳ ಬರವಣಿಗೆಯು ಮುಂದೆ, ಮೇಲೆ ಮತ್ತು ಕೆಳಗೆ ಹೀಗೆ 3 ದಿಶೆಗಳಲ್ಲಿ ಮತ್ತು 3 ಸ್ತರಗಳಲ್ಲಿ ಮತ್ತು ಅಲ್ಲಿಂದ ಬಲಕ್ಕೆ ನಡೆಯುತ್ತದೆ.** ಉದಾ:– ತ್ರಿಪುರಾ, ಕೃಷಿಕೇಂದ್ರ, ಗೃಹಪ್ರವೇಶ. ಇದರಿಂದ ಬರವಣಿಗೆಯ ವೇಗ ಕಡಿಮೆಯಾಗುತ್ತದೆ ಮತ್ತು ವ್ಯಂಜನವು ಮಧ್ಯದ ಸ್ತರದಷ್ಟು ಚಿಕ್ಕದಾಗಿ ಕಾಣುತ್ತದೆ.

ಸಾಮಾನ್ಯವಾಗಿ ಸಂಯುಕ್ತಾಕ್ಷರವನ್ನು ಬರೆಯಲು ಒತ್ತಕ್ಷರವಾಗಲಿರುವ ವ್ಯಂಜನದ ಭಾಗವನ್ನು ಅಂದರೆ ಒತ್ತಕ್ಷರ ಚಿಹ್ನೆಯನ್ನು ಮತ್ತೊಂದು ವ್ಯಂಜನದ ಹಿಂದೆ ಅದಕ್ಕೆ ತಾಗಿಸಿಯೇ ಬರೆಯುತ್ತಾರೆ. ಇವೆರಡೂ ಒಂದೇ ಸ್ತರದಲ್ಲಿರುವುದರಿಂದ ಈ ಲಿಪಿಯಲ್ಲಿ ಒತ್ತಕ್ಷರಕ್ಕಾಗಿ ಜಾಗ ಹಾಳಾಗುವುದಿಲ್ಲ. ಉದಾ.:–ಸಪ್ನಾ, ಸತ್ಯ,ಸತ್ವ,

ಸಂಯುಕ್ತಾಕ್ಷರ = ಒತ್ತಕ್ಷರ ಚಿಹ್ನೆ + ವ್ಯಂಜನ + ಸ್ವರ
ಕ್ಕ = ಕ್ + ಕ್ + ಅ

ಇನ್ನು, ದೇವನಾಗರಿ ಸಂಯುಕ್ತಾಕ್ಷರ ಚಿಹ್ನೆಗಳಲ್ಲಿ ಏಕ–ಪ್ರಕಾರತೆ ಇಲ್ಲ. ಉದಾ.:– ಸೂರ್ಯ,ಸತ್ವ,ಸತ್ರ, ಪಕ್ಕಾ (ಎಲ್ಲ ದೇವನಾಗರಿ ಲಿಪಿಯಲ್ಲಿ)

ದೇವನಾಗರಿ ಸಂಯುಕ್ತಾಕ್ಷರ ಬರೆಯುವ ವಿಧಾನದಲ್ಲಿ ಏಕ ಪ್ರಕಾರ ವಿಧಾನ ಇಲ್ಲ. ಉದಾ.:– ನಾಟ್ಯ & ನರ್ತನ. ಆದ್ದರಿಂದ ದೇವನಾಗರಿಯಲ್ಲಿ ಸಂಯುಕ್ತಾಕ್ಷರ ಬರವಣಿಗೆಯು ಒಟ್ಟಿನಲ್ಲಿ ಒಂದಕ್ಕಿಂತ ಹೆಚ್ಚು ಅಂದರೆ 2 ಸ್ತರಗಳನ್ನು ಬಳಸಿಕೊಳ್ಳುತ್ತದೆ.(ಅರ್ಕಾವಲಿ ಇರುವದರಿಂದ) (ದ್ವಿಸ್ತರೀಯವಾಗಿದೆ.) ಉದಾ.:– ಆರ್ದ್ರತಾ.

ಹಾಗಾಗಿ ಈ ತ್ರಿಸ್ತರಿಯ ಬರವಣಿಗೆ ಇರುವ ದೇವನಾಗರಿಯಲ್ಲಿ ಒಂದು ಬಿಂದು ಅವಕಾಶದಲ್ಲಿ (ಒಂದು ಬಿಡಿ ಸ್ವರವನ್ನು ಬಿಟ್ಟರೆ) ಒಂದು ಗುಣಿತಾಕ್ಷರ ಇಲ್ಲವೇ ಒಂದು ಸಂಯುಕ್ತಾಕ್ಷರ ಬರುತ್ತವೆ. ಆದ್ದರಿಂದ,

(ಒಂದು ಬಿಂದು ಅವಕಾಶ) (ತ್ರಿಸ್ತರ) = ಒತ್ತಕ್ಷರ ಚಿಹ್ನೆ(ಹಿಂದೆ,ಮೇಲೆ ಅರ್ಕಾವಲಿ) + ವ್ಯಂಜನ(ಮಧ್ಯದದ ಸ್ತರ)+ ಕಾಗುಣಿತ ಚಿಹ್ನೆ(ಹಿಂದೆ, ಮುಂದೆ, ಮೇಲೆ, ಕೆಳಗೆ.). ಇದರಿಂದಾಗಿ,

(1) ವ್ಯಂಜನವು ಒಂದು ಬಿಂದು ಅವಕಾಶವನ್ನು ಆವರಿಸದೆ ಅದರ ಮಧ್ಯಸ್ತರಕ್ಕೆ, ಒತ್ತಕ್ಷರ ಚಿಹ್ನೆಯ ಬಲಕ್ಕೆ ಸರಿಸಲ್ಪಟ್ಟು, ಅದೇ ಮಧ್ಯಸ್ಥರಕ್ಕೆ

ಸೀಮಿತಗೊಂಡು, ಉಳಿದ 4 ಬೇರೆ ಬೇರೆ ದಿಕ್ಕುಗಳಲ್ಲಿ ಕಾಗುಣಿತ ಚಿಹ್ನೆಗಳು ಮತ್ತು ಹಿಂದೆ(ಎಡಕ್ಕೆ) ತಾಗಿಯೆ ಇರುವ ಸಂಯುಕ್ತಾಕ್ಷರ ಚಿಹ್ನೆ—ಇವು ಜಾಗವನ್ನು ಆಕ್ರಮಿಸಿಕೊಳ್ಳುವದರಿಂದ, ಅದು **ಒಂದು ಬಿಂದು ಅವಕಾಶಕ್ಕಿಂತ ಚಿಕ್ಕದಾಗಿ ಕಾಣುತ್ತದೆ.** ಆದ್ದರಿಂದ ಮುದ್ರಣದಲ್ಲಿ, ಫಲಕಗಳಲ್ಲಿ, ಪ್ರದರ್ಶನ ಫಲಕಗಳಲ್ಲಿ (ಡಿಸ್‌ಪ್ಲೇ) ಅದೇ ನಂಬರಿನ **ಇಂಗ್ಲಿಷ್ ದೊಡ್ಡ(CAPITAL,ಕೆಪಿಟಲ್) ಅಕ್ಷರಕ್ಕಿಂತ ದೇವನಾಗರಿ ಅಕ್ಷರ ಚಿಕ್ಕದಾಗಿ ಕಾಣುತ್ತದೆ.** ಉದಾ.:– 1) ಸುನಿಧಾ< SUNIDHA, 2) ತ್ರಿಪುರಾ< TRIPURA, 3) ಕನ್ನಡ< KANNADA, 4) ಗೃಹ ಪ್ರವೇಶ< GRIHAPRAVESH.

(2) ಈಗಾಗಲೇ **ಹೆಚ್ಚು ಗೀಚುಗಳು ಮತ್ತು ಬಿಳಿ ಭಾಗಗಳನ್ನು** ಹೊಂದಿರುವ ದೇವನಾಗರಿ ಅಕ್ಷರಗಳು ಸಹಜವಾಗಿ ಚಿಕ್ಕದಾದಂತೆ ಅಸ್ಪಷ್ಟವಾಗಿ ಕಾಣುತ್ತವೆ. ಇವುಗಳಿಗೆ ತಾಗಿಕೊಂಡಿರುವ ಕಾಗುಣಿತ ಚಿಹ್ನೆಗಳು(4ದಿಕ್ಕುಗಳಲ್ಲಿ) ಮತ್ತು ಹಿಂದೆ ತಾಗಿರುವ ಒತ್ತಕ್ಷರ ಚಿಹ್ನೆ—ಇವು ಇನ್ನೂ ಹೆಚ್ಚಿನ ಗೀಚುಗಳು ಮತ್ತು ಬಿಳಿ ಭಾಗಗಳನ್ನು ಸೇರಿಸುವುದರಿಂದ ಈ ಅಕ್ಷರಗಳು ಚಿಕ್ಕದಾದಂತೆ ಇನ್ನೂ ಹೆಚ್ಚು ಅಸ್ಪಷ್ಟವಾಗಿ (ಮಸುಕಾಗಿ) ಕಾಣುತ್ತವೆ.

ಉದಾ:–

ಕನ್ನಡೋತ್ಸವ=kannadotsava <Kannadotsava, KANNADO TSAVA (ನಂ.14), ಕನ್ನಡೋತ್ಸವ= kannadotsava <Kannado tsava, KANNADOTSAVA kannadotsava <Kannadotsava, KANNADOTSAVA (ನಂ.12), ಕನ್ನಡೋತ್ಸವ kannadotsava <Kannadotsava, KANNADOTSAVA (ನಂ.10), ಕನ್ನಡೋತ್ಸವ= kannadotsava <Kannadotsava, KANNADO TSAVA <KANNADOTSAVA (ನಂ.8),

ಕನ್ನಡೋತ್ಸವ= kannadotsava <Kannadotsava, KANNADOT SAVA (ನಂ.6), ಕನ್ನಡೋತ್ಸವ= kannadotsava <Kannadotsava, KANNADOTSAVA (ನಂ.5), ಕನ್ನಡೋತ್ಸವ=kannadotsava <Kannadotsava, KANNADOTSAVA(ನಂ.4).

(3) **ಒಂದು ಬಿಂದು ಅವಕಾಶದಲ್ಲಿ, ತ್ರಿಸ್ತರೀಯ ದೇವನಾಗರಿಯ ಬರವಣಿಗೆಯಲ್ಲಿ ವ್ಯಂಜನಾಕ್ಷರವು ಅದೇ ನಂಬರಿನ ಏಕಸ್ತರೀಯ ಬರವಣಿಗೆಯ ರೋಮನ್ ಕೆಪಿಟಲ್ ಅಕ್ಷರ(ಸ್ವರ/ವ್ಯಂಜನ)ಕ್ಕಿಂತ ಚಿಕ್ಕದಾಗಿ ಇರುತ್ತದೆ.** ಇದಕ್ಕೆ ದೇವನಾಗರಿಯ ತ್ರಿಸ್ತರೀಯವಾದ ಗುಣಿತಾಕ್ಷರಗಳ ರಚನೆಯು ಮತ್ತು ದ್ವಿಸ್ತರೀಯವಾದ ಒತ್ತಕ್ಷರಗಳ ರಚನೆಯು ಒಟ್ಟಿನಲ್ಲಿ ಈ ವ್ಯಂಜನಾಕ್ಷರವನ್ನು ಚಿಕ್ಕದಾಗಿ ವಿನ್ಯಾಸಗೊಳಿಸಲು ಪೂರಕವಾಗಿರುತ್ತದೆ.

ಉದಾ.:– ಕ, ಕೃ, ಕೈ, ಕೌ,ಕ್ಕ. =ka,kri,kai,kau,kka. <KA, KRI, KAI, KAU,KKA.

(ಒಂದು ಬಿಂದು ಅವಕಾಶ) = ಕ (ತ್ರಿಸ್ತರ) = ka (ತ್ರಿಸ್ತರ)<KA (ಏಕಸ್ತರ)

ಆದ್ದರಿಂದ ದೇವನಾಗರಿಯಲ್ಲಿ 5 ನಂಬರಿನ ಮುದ್ರಣ ಮತ್ತು ಓದುವಿಕೆ ಕಷ್ಟ.

IV) ರೋಮನ್ ಲಿಪಿ:– ಇಂದು ಜಗತ್ತಿನಲ್ಲಿ 300 ಕೋಟಿಗೂ ಹೆಚ್ಚು ಜನರು ಈ ಲಿಪಿಯನ್ನು ಗಣಕ-ಜಂಗಮಗಳಲ್ಲಿ ಬಳಸುತ್ತಿದ್ದಾರೆ. **ಇದು ವಿಶ್ವದಲ್ಲಿ ಅತೀ ಹೆಚ್ಚು ಬಳಸಲ್ಪಡುತ್ತಿರುವ ಲಿಪಿಯಾಗಿದ್ದು, ಎಲ್ಲ ಭೂ-ಖಂಡಗಳಲ್ಲಿ, ಬೇರೆ ಬೇರೆ ಭಾಷೆಗಳಿಗಾಗಿ ಇದನ್ನು ಬಳಸುತ್ತಾರೆ.** ಇದು ಕ್ರಿಪೂ. 7ನೇ ಶತಮಾನದಲ್ಲಿ ರೋಮನ್ ಸಾಮ್ರಾಜ್ಯದ ಲೆಟಿನ್ ಭಾಷೆಗಾಗಿ ಗ್ರೀಕ್ ಲಿಪಿಯಿಂದ ವಿಕಸಿತವಾಯಿತು.

ಆರಂಭದಲ್ಲಿ ಕೇವಲ ಕೆಪಿಟಲ್(ದೊಡ್ಡ) ಅಕ್ಷರಗಳನ್ನು ಹೊಂದಿದ ಈ ಲಿಪಿಯಲ್ಲಿ ಸುಮಾರು ಕ್ರಿಶ 5ನೇ ಶತಮಾನದ ಹೊತ್ತಿಗೆ ವೇಗದ ಬರಬಣಿಗೆಗಾಗಿ(ಕೆಪಿಟಲ್‌ನಿಂದ) ಸ್ಮೊಲ್(ಸಣ್ಣ) ಅಕ್ಷರಗಳು ಅಭಿವೃದ್ಧಿ ಹೊಂದಿದವು.

ಕ್ರಿಶ 11ನೇ ಶತಮಾನದ ನಂತರ ಇಂಗ್ಲಿಷ್ ಭಾಷೆಯು ತನ್ನ ಲಿಪಿಯ ಬದಲಿಗೆ ಈ ರೋಮನ್ ಲಿಪಿಯನ್ನು ಸ್ವೀಕರಿಸಿತು. ಗೆರೆಯ ಹಾಳೆಯಲ್ಲಿ ಇದು ಗೆರೆಯ ಮೇಲೆ ಎಡದಿಂದ ಬಲಕ್ಕೆ ಬರೆಯಲ್ಪಡುತ್ತದೆ.

ಇಂದು ಇದರಲ್ಲಿ 5 ಸ್ವರಗಳ ಸಹಿತ 26 ಅಕ್ಷರಗಳಿವೆ. **ಇಷ್ಟು ಕಡಿಮೆ ಅಕ್ಷರಗಳನ್ನು ಈ ಲಿಪಿಯು ಹೊಂದಿರುವುದು ಇದನ್ನು ಸ್ವೀಕರಿಸಿದ ಇಂಗ್ಲಿಷ್/ ಯುರೋಪೀಯ ಭಾಷೆಗಳಿಗೆ ಸಾಂಖ್ಯಿಕವಾಗಿ ಗಣಕದ ಕೀಲಿಮಣೆಯಲ್ಲಿ ಯಾಂತ್ರಿಕ ಅನುಕೂಲತೆಯನ್ನು ಕಲ್ಪಿಸುತ್ತದೆ.** ಆದರೆ ಇದರಲ್ಲಿ ಭಾರತೀಯ ಮಾದರಿ ಅಕ್ಷರಮಾಲೆಯಲ್ಲಿ ಇರುವಷ್ಟು ಸ್ವರ ಮತ್ತು ವ್ಯಂಜನಗಳು ಇಲ್ಲದೇ ಇರುವುದರಿಂದ ನಮ್ಮಂತೆ **ಹೇಳಿದಂತೆ ಬರೆಯುವುದು ಮತ್ತು ಬರೆದಂತೆ ಓದುವುದು ಸಾಧ್ಯವಾಗುವುದಿಲ್ಲ.**

ರೋಮನ್ ಲಿಪಿಯು **"ಅಲ್ಫಾಬೆಟ್"** ಜಾತಿಯ ಲಿಪಿಯಾಗಿದೆ. ಇದರಲ್ಲಿ ಅಕ್ಷರಗಳನ್ನು (ಸ್ವರ/ವ್ಯಂಜನ) ಇಡಿ ಇಡಿಯಾಗಿ ಮತ್ತು ಬಿಡಿ ಬಿಡಿಯಾಗಿ ಒಂದರ ಮುಂದೆ ಒಂದು ಹೀಗೆ ಏಕ– ದಿಶೆಯಲ್ಲಿ ಮತ್ತು ಏಕ–ಸ್ತರದಲ್ಲಿ ಬರೆಯುತ್ತಾರೆ. ಆದ್ದರಿಂದ **ಬರವಣಿಗೆಯು ಏಕಸ್ತರದಿಂದಲೇ ಬಲಕ್ಕೆ ಇರುತ್ತದೆ.** ಆದ್ದರಿಂದ ಬರವಣಿಗೆಯ ವೇಗ ಹೆಚ್ಚು.

ಇದರಲ್ಲಿ ಅಕ್ಷರವು(ವ್ಯಂಜನ/ಸ್ವರ) ಒಂದು ಬಿಂದು ಅವಕಾಶದಲ್ಲಿ ಇರುತ್ತದೆ. ಮತ್ತು ಒಂದು ಬಿಂದು ಅವಕಾಶದಲ್ಲಿ ಒಂದು ಅಕ್ಷರ (ಸ್ವರ/ವ್ಯಂಜನ) ಮಾತ್ರವೇ ಇರುತ್ತದೆ. ಮತ್ತು ಈ ಅವಕಾಶವನ್ನು ಕಾಗುಣಿತ ಚಿಹ್ನೆ ಅಥವಾ ಒತ್ತಕ್ಷರ ಚಿಹ್ನೆಗಳನ್ನು ಹೊಂದದೇ ಒಂದು ಅಕ್ಷರವು ಬಿಡಿ ಬಿಡಿಯಾಗಿ ಇಡಿಯಾಗಿ (ಅದರ ಪೂರ್ಣ ಎತ್ತರವನ್ನು ಮತ್ತು ಅಗಲವನ್ನು) ಆವರಿಸಿಕೊಳ್ಳುವದರಿಂದ ಇದು ಸ್ಪಷ್ಟವಾಗಿ ಕಾಣಿಸುತ್ತದೆ. ವಿಶೇಷವಾಗಿ ರೋಮನ್ನ ಕೆಪಿಟಲ್ ಅಕ್ಷರವು ದೊಡ್ಡದಾಗಿ ಕಾಣುತ್ತದೆ.

(ಒಂದು ಬಿಂದು ಅವಕಾಶ) = ಸ್ವರ/ವ್ಯಂಜನ = KA,K,Ka,K,ka,k, ಕ,ಕ್.

ಈ ಲಿಪಿಯಲ್ಲಿ ಉಚ್ಚಾರದಂತೆ ಎಡದಿಂದ ಬಲಕ್ಕೆ ಬರವಣಿಗೆಯ ದಿಶೆಯಲ್ಲಿ ವ್ಯಂಜನ ಮತ್ತು ಸ್ವರಗಳನ್ನು ಕ್ರಮವಾಗಿ ಒಂದರ ನಂತರ ಒಂದರಂತೆ ಇಡಿ ಇಡಿಯಾಗಿ ಮತ್ತು ಬಿಡಿ ಬಿಡಿಯಾಗಿ ಬರೆಯುತ್ತ ಹೋದರಾಯಿತು. ನಮಗೆ ಬೇಕಾದ ಪದದ ರಚನೆಯಾಗುತ್ತದೆ. ಹೀಗೆ ಕಲಿಯಲು (ಓದಲು–ಬರೆಯಲು) ಇದು **ಅತ್ಯಂತ ಸರಳ ಮತ್ತು ಸುಲಭವಾದ ವಿಧಾನವಾಗಿದ್ದು** ಇದು ಬಳಕೆದಾರ–ಸ್ನೇಹಿಯಾಗಿದೆ. ಇದನ್ನು ಮಕ್ಕಳೂ ಸಾಮಾನ್ಯ ಜನರೂ ವಿದೇಶಿಯರೂ ಮತ್ತು ವಯಸ್ಸಾದವರು ಸಹಜವಾಗಿ ಹೆಚ್ಚು ಕಷ್ಟಪಡದೇ ಕಲಿಯಬಹುದಾಗಿದೆ. ಈ ಲಿಪಿಯಲ್ಲಿ **ಸ್ವರವೇ ಕಾಗುಣಿತ ಚಿಹ್ನೆಯಾಗಿರುತ್ತದೆ. ಮತ್ತು ವ್ಯಂಜನವೇ ಒತ್ತಕ್ಷರ ಚಿಹ್ನೆಯಾಗಿರುತ್ತದೆ.** (ಹೊರತು ಸ್ವರಗಳ ಪ್ರತಿನಿಧಿಯಾದ ಬೇರೆ ಕಾಗುಣಿತ ಚಿಹ್ನೆಗಳಾಗಲಿ ಅಥವಾ ವ್ಯಂಜನಗಳ ಪ್ರತಿನಿಧಿಯಾದ ಬೇರೆ ಒತ್ತಕ್ಷರ ಚಿಹ್ನೆಗಳಾಗಲಿ ಹೆಚ್ಚುವರಿಯಾಗಿ ಇರುವುದಿಲ್ಲ.) ಹೀಗಿದ್ದರೂ ಈ ಕಡಿಮೆ ಅಕ್ಷರಗಳಿಂದಲೇ ಅಗಣಿತ

ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಸೃಷ್ಟಿಮಾಡಿ ಉಚ್ಚಾರವಾಗಲಿ ಅರ್ಥವಾಗಲಿ ವ್ಯತ್ಯಾಸವಾಗದಂತೆ ಬರೆಯಲು ಸಾಧ್ಯ. ಇದು ಈ ಲಿಪಿಯ ವಿಶೇಷತೆಯಾಗಿದೆ.:-

ಗುಣಿತಾಕ್ಷರ (ಏಕಸ್ತರ) = ವ್ಯಂಜನ + ಸ್ವರ (ಸ್ವರದ ಪ್ರತಿನಿಧಿಯಾದ ಕಾಗುಣಿತ ಚಿಹ್ನೆ ಇಲ್ಲ).

ಸಂಯುಕ್ತಾಕ್ಷರ(ಏಕಸ್ತರ) =ವ್ಯಂಜನ (ಒತ್ತಕ್ಷರ ಚಿಹ್ನೆ ಇಲ್ಲ) + ವ್ಯಂಜನ + ಸ್ವರ.

ಉದಾ:-. ಕನ್ನಡೋತ್ಸವ= kannadotsava. <KANNADOTSAVA, Kannadotsava. ಹೀಗೆ ಏಕಸ್ತರೀಯವಾದ ಏಕದಿಶೆಯ ರೋಮನ್(ಇಂಗ್ಲಿಷ್) ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರ ರಚನೆಯು, ರೋಮನ್-ಕೆಪಿಟಲ್ ಅಕ್ಷರಗಳನ್ನು (ಒಂದು ಬಿಂದು ಅವಕಾಶವನ್ನು ಪೂರ್ಣವಾಗಿ ಬಳಸಿಕೊಂಡು) ದೊಡ್ಡದಾಗಿ ವಿನ್ಯಾಸಗೊಳಿಸಲು ಪೂರಕವಾಗಿರುತ್ತದೆ.

ಇದರಲ್ಲಿ, ಕೇವಲ ಬರವಣಿಗೆಯ ದಿಕ್ಕು ಬಲಕ್ಕಾಗಿರದೇ ಪ್ರತಿ ಕಾಗುಣಿತ ಬರೆಯುವ ದಿಶೆ ಮತ್ತು ಸ್ತರ, ಹಾಗೆಯೇ ಪ್ರತಿ ಸಂಯುಕ್ತಾಕ್ಷರ ಬರೆಯುವ ದಿಶೆ ಮತ್ತು ಸ್ತರ ಕೂಡ ಒಂದೇ ಆಗಿರುತ್ತದೆ. ಅದು ಗುಣಿತಾಕ್ಷರವಿರಲಿ ಅಥವಾ ಸಂಯುಕ್ತಾಕ್ಷರವಿರಲಿ□ಇದರಲ್ಲಿ ಒಂದು ಪೂರ್ಣವಾದ ಅಕ್ಷರವನ್ನು ಒಂದರ ಮುಂದೆ ಒಂದರಂತೆ ಬರೆಯುತ್ತ ಹೋಗುವುದರಿಂದ **ಈ ಬರವಣಿಗೆಯು ಏಕದಿಶೆಯಲ್ಲಿರುತ್ತದೆ. ಅಷ್ಟೇ ಅಲ್ಲ ಏಕದಿಶೆಯಿಂದ ಏಕಸ್ತರಿಯವಾಗಿರುತ್ತದೆ.** (ದೇವನಾಗರಿ ಮತ್ತು ಕನ್ನಡದಂತೆ ಇದರ ಬರವಣಿಗೆಯು ತ್ರಿ-ಸ್ತರಿಯ ಮತ್ತು ಮೂರು ವಿವಿಧ ದಿಕ್ಕುಗಳಿಂದ ಬಲ (ಮುಂದಿನ,ಒಂದು) ದಿಕ್ಕಿಗೆ ಇರುವುದಿಲ್ಲ.)

ಹಾಗಾಗಿ,

1) ಇದರಲ್ಲಿ ಕಾಗುಣಿತ ಚಿಹ್ನೆಗಳಿಗಾಗಿ ಮೇಲೆ, ಕೆಳಗೆ ಜಾಗ ಹಾಳಾಗುವುದಿಲ್ಲ. ಮತ್ತು ಒತ್ತಕ್ಷರಕ್ಕಾಗಿಯೂ ಮೇಲೆ (ದೇವನಾಗರಿ ಅರ್ಕಾವಲಿ), ಕೆಳಗೆ (ಕನ್ನಡ) ಜಾಗ ಹಾಳಾಗುವುದಿಲ್ಲ. ಅವು ಮಧ್ಯದ ಒಂದೇ ಸ್ತರದಲ್ಲಿ ಒಂದೇ ದಿಕ್ಕಿನಲ್ಲಿ ಜಾಗವನ್ನು ಬಳಸಿಕೊಳ್ಳುತ್ತವೆ.

2) ಇದರ **ಏಕದಿಶೆಯ, ಏಕಸ್ತರಿಯ, ಬಿಡಿ ಬಿಡಿಯಾದ, ಇಡಿಯಾದ ಬೆರಳಚ್ಚು/ಬರವಣಿಗೆಯ ವಿಧಾನವು** ಬಹಳ ಸರಳ ಮತ್ತು ಸುಲಭವಾಗಿದೆ. ಮತ್ತು ಇದರ ವೇಗವು ಹೆಚ್ಚು ಇರುತ್ತದೆ.

ಉದಾ:-. ಸಪ್ನಾ <SAPNA, sapna ; ಆಯುರ್ವೇದ < AYURVEDA, ayurveda ; ಆರ್ದ್ರತಾ <ARDRATA, ardrata.

ಹೀಗೆ ಇದು ಏದಿಶೆಯ ಏಕಸ್ತರೀಯ ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಹೊಂದಿದ್ದು ಕ ಈ ಬರೆಯುವ ವಿಧಾನವು ಏಕ ಪ್ರಕಾರದ್ದಾಗಿದೆ. ಮತ್ತು ರಚಿತವಾದ ಪದಗಳ ರೂಪವು ಒಂದೇ (ಏಕರೂಪವೇ) ಆಗಿರುತ್ತದೆ. ಇದರಲ್ಲಿ **ಒಂದು ವ್ಯಂಜನಕ್ಕೆ ಒಂದು ಒತ್ತಕ್ಷರ ಚಿಹ್ನೆ ಮಾತ್ರ ಇರುತ್ತದೆ. ಉದಾ:- ಆರ್ದ್ರತಾ <ARDRATA, ardrata.**

ಈ **ಏಕಸ್ತರಿಯ** ಲಿಪಿಯಲ್ಲಿ ವಿಶೇಷವಾಗಿ **ರೋಮನ್ ಕೆಪಿಟಲ್ ಅಕ್ಷರ**□ ಇದು ಒಂದು ಬಿಂದು ಅವಕಾಶವನ್ನು ಸಂಪೂರ್ಣವಾಗಿ ತಾನೇ ಬಳಸಿಕೊಳ್ಳುವದರಿಂದ (ಎತ್ತರಕ್ಕೆ ಅಗಲಕ್ಕೆ ಸರಿಯಾಗಿ ಚಾಚುವದರಿಂದ) **ದೊಡ್ಡದಾಗಿ ಕಾಣುತ್ತದೆ. ಇದರ ಹೋಲಿಕೆಯಲ್ಲಿ ತ್ರಿಸ್ತರೀಯ ದೇವನಾಗರಿ ಮತ್ತು ಕನ್ನಡ ಲಿಪಿಗಳಲ್ಲಿ ವ್ಯಂಜನಾಕ್ಷರಗಳು** ಮಧ್ಯದ ಸ್ತರಕ್ಕೆ (ಒಂದು ಬಿಂದು ಅವಕಾಶದಲ್ಲಿ) ಸೀಮಿತಗೊಂಡು ಸುತ್ತಲಿನ ದಿಸೆಗಳಲ್ಲಿ ಕಾಗುಣಿತ ಚಿಹ್ನೆ ಅಥವಾ/ಮತ್ತು ಒತ್ತಕ್ಷರ ಚಿಹ್ನೆಯನ್ನು ಹೊಂದಿರುವದರಿಂದ **ಸಣ್ಣದಾಗಿ ಕಾಣುತ್ತವೆ.** ಹೆಚ್ಚುವರಿಯಾದ ಗುಣಿತಾಕ್ಷರ ಚಿಹ್ನೆಗಳ ಇಲ್ಲದಿರುವಿಕೆ ಮತ್ತು ಹೆಚ್ಚುವರಿಯಾದ ಒತ್ತಕ್ಷರಗಳು ಇಲ್ಲದಿರುವಿಕೆ ಮತ್ತು ಇದನ್ನು ಬರೆಯುವ ಏಕದಿಶೆಯ ಏಕಸ್ತರಿಯ ವಿಧಾನ ಇದಕ್ಕೆ ಪೂರಕವಾಗಿರುತ್ತದೆ. ಹಾಗಾಗಿ ಫಲಕಗಳಲ್ಲಿ, ಪ್ರದರ್ಶನ-ಫಲಕಗಳಲ್ಲಿ ಮತ್ತು ಮುದ್ರಣದಲ್ಲಿ (ತಲೆಬರಹಕ್ಕಾಗಿ, ಮುಖ್ಯಾಂಶಗಳಿಗಾಗಿ) ರೋಮನ್ ಕೆಪಿಟಲ್ ಅಕ್ಷರಗಳನ್ನು ಬಳಸುತ್ತಾರೆ. ಮತ್ತು ಇದು ಎದ್ದು ಕಾಣುತ್ತದೆ.

ರೋಮನ್ ಸ್ಮೊಲ್‌ನಲ್ಲಿ ಪ್ರತಿ ಅಕ್ಷರವು ಕನಿಷ್ಠ ಗೀಚುಗಳು (2) ಮತ್ತು ಕಡಿಮೆ ಬಿಳಿ-ಭಾಗಗಳನ್ನು (ಕಂಟೂರಗಳನ್ನು)ಹೊಂದಿರುವದರಿಂದ ಅಕ್ಷರ ಚಿಕ್ಕದಾದರೂ ಅದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ಹಾಗೆಯೇ ಒಂದು ಬಿಂದು ಅವಕಾಶದಲ್ಲಿ ಕಾಗುಣಿತ ಚಿಹ್ನೆ ಮತ್ತು/ಅಥವಾ ಒತ್ತಕ್ಷರ ಚಿಹ್ನೆಗಳನ್ನು ಹೊಂದದೇ ಅದು ಪಾತ್ರ ಇರುವುದಿಂದ(ಇಡಿಯಾಗಿ ಇರುವದರಿಂದ) ಮತ್ತು ಬರವಣಿಗೆಯು ಏಕಸ್ತರಿಯವು ಮತ್ತು ಅಲ್ಲಿಂದ ಬಲಕ್ಕೆ ಒಂದೇ ದಿಶೆಯಲ್ಲಿ ಬರವಣಿಗೆಯು ಬಿಡಿಬಿಡಿಯಾಗಿ, ಇರುವುದರಿಂದಲೂ ಇದು ಸಣ್ಣದಾದರೂ ಸ್ಪಷ್ಟವಾಗಿ ಕಾಣುತ್ತದೆ.

ರೋಮನ್‌ಲಿಪಿಯಲ್ಲಿ ಎಂದರೆ ನಂ 5ರ ವರೆಗೆ ಬರೆಯಬಹುದು.ಉದಾ:-. ಕನ್ನಡ=kannada <KANNADA, Kannada (No.8), ಕನ್ನಡ=kannada<KANNADA,Kannada (No.7), ಕನ್ನಡ=kannada<KANNADA,Kannada (No.6), ಕನ್ನಡ=kannada<KANNADA,Kannada (No.5)., ಕನ್ನಡ=kannada<KANNADA,Kannada (No.4),

ವಿಶೇಷವಾಗಿ ರೋಮನ್ ಸ್ಮೊಲ್‌ನಲ್ಲಿ ಅಕ್ಷರಗಳ ಗೀಚುಗಳು ಹೆಚ್ಚಾಗಿ ಎಡದಿಂದ ಬಲಕ್ಕೆ ಅಪ್ರದಕ್ಷಿಣಾಕಾರದಲ್ಲಿ ಇರುವದರಿಂದ ಇದರ ಕೈ-ಬರವಣಿಗೆಯ ವೇಗ ಕೆಪಿಟಲ್‌ಗಿಂತ, ದೇವನಾಗರಿಗಿಂತ ಮತ್ತು ಕನ್ನಡಕಿಂತ **ಹೆಚ್ಚು.** ರೋಮನ್ ಏಕಸ್ತರೀಯ ಏಕದಿಶೆಯ ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರ ರಚನೆಯು ಇದಕ್ಕೆ ಪೂರಕವಾಗಿರುತ್ತದೆ.

ಒಂದೇ ನಂಬರಿನ ಬೇರೆ ಬೇರೆ ಭಾಷೆಯ ಅಕ್ಷರಗಳಲ್ಲಿ, ಏಕಸ್ತರೀಯ ಇಂಗ್ಲಿಷ್ ಕೆಪಿಟಲ್ ಅಕ್ಷರವು ಮಾತ್ರ ದೊಡ್ಡದಾಗಿರುತ್ತದೆ. ಮತ್ತು ದೊಡ್ಡದಾಗಿ ಕಾಣುತ್ತದೆ. ಮತ್ತು ಅದೇ ನಂಬರಿನ ತ್ರಿಸ್ತರೀಯ ದೇವನಾಗರಿ/ಕನ್ನಡ ಅಕ್ಷರ ಚಿಕ್ಕದಾಗಿರುತ್ತದೆ. ಹಾಗೆಯೆ ತ್ರಿಸ್ತರೀಯವಾದ ರೋಮನ್ ಸ್ಮೊಲ್ ಅಕ್ಷರ ಕೂಡ ಚಿಕ್ಕದಾಗಿರುತ್ತದೆ.

ಉದಾ:- ಕನ್ನಡ ರಾಜ್ಯೋತ್ಸವ=kannada rajyotsava< KANNADARAJYOTSAVA,Kannada Rajyotsava.

ರೋಮನ್ ಕೆಪಿಟಲ್‌ನಲ್ಲಿ ಪ್ರದರ್ಶನ ಫಲಕದಲ್ಲಿ 'H' ಎಂದು ಬರೆದರು ಬರವಣಿಗೆಯಲ್ಲಿ 'A' ಎಂದೂ ರೋಮನ್ ಸ್ಮೊಲ್‌ನಲ್ಲಿ ಮುದ್ರಣದಲ್ಲಿ 'a' ಎಂದು ಬರೆದರೂ ಬರವಣಿಗೆಯಲ್ಲಿ '@' ಎಂದು ಬರೆಯುತ್ತಾರೆ. ಏಕೆಂದರೆ ಹೀಗೆ ಮಾಡುವುದರಿಂದ ಒಂದು ಗೀಚು (ಗೆರೆ) ಕಡಿಮೆಯಾಗುತ್ತದೆ ಮತ್ತು ಅದನ್ನು ಹಾಗೆಯೇ ಸ್ವೀಕರಿಸಬೇಕು ಎನ್ನುವುದು ಅವರ ಮಾನಸಿಕತೆ. .ರೋಮನ್‌ನಲ್ಲಿ ಒಂದು ಹೊಸ ಅಕ್ಷರ ವಿನ್ಯಾಸ ಮಾಡಬೇಕಾಗಿ ಬಂದರೆ ಕೆಪಿಟಲ್ ಮತ್ತು ಸ್ಮೊಲ್ ಈ 2 ರೂಪಗಳನ್ನು ವಿನ್ಯಾಸಮಾಡಿದರೆ ಸಾಕು. ಅದೇ ದೇವನಾಗರಿ ಮತ್ತು ಕನ್ನಡದಲ್ಲಿ, ಸ್ವರವಾದರೆ □ ಸ್ವರಾಕ್ಷರ ಮತ್ತು ಸ್ವರದ ಕಾಗುಣಿತ ಚಿಹ್ನೆ ಮತ್ತು ವ್ಯಂಜನವಾದರೆ—ಅದರಗುಣಿತಾಕ್ಷರಗಳು ಮತ್ತು ಒತ್ತಕ್ಷರ ಚಿಹ್ನೆಯನ್ನು ವಿನ್ಯಾಸಮಾಡಬೇಕಾಗುತ್ತದೆ.

ಲಿಪಿ ಸುಧಾರಣೆಯಲ್ಲಿ ಕೇವಲ ವ್ಯಾಕರಣವನ್ನಷ್ಟೇ ಅಲ್ಲದೇ ಮೇಲಿನ ವೈಜ್ಞಾನಿಕ ಮತ್ತು ತಾಂತ್ರಿಕ ಅಂಶಗಳನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕು.

ನಮ್ಮ ಸುಧಾರಿತ ಅಕ್ಷರಮಾಲೆಯನ್ನು ಸುಧಾರಿತ ರೋಮನ್ ಲಿಪಿಯಲ್ಲಿ ಪ್ರತಿನಿಧಿಸಿ, (ಧ್ವನಿಶಾಸ್ತ್ರಾಧಾರಿತವಾದ) ಸಂಸ್ಕೃತದ ಪಾಣಿನಿಯ ವ್ಯಾಕರಣದ ಸೂತ್ರಗಳಂತೆ ಏಕಸ್ತರೀಯವಾಗಿ ಬರೆಯಲು ವಿನ್ಯಾಸಗೊಳಿಸಿದ ಸಂಪನ್ನ ಲಿಪಿ:-

ಅ ಆ ಇ ಈ ಉ ಊ ಋ ೠ– ಲ	ಏ ಐ ಓ ಔ	ಅಂ ಅಃ	ಎ ಎf ಒ ಒf	ಅ ಅಂ* ಅf ಅ3
(ಅ+ಅ) (ಇ+ಇ) (ಉ+ಉ) (ಋ+ಋ)	(ಅ+ಇ) (ಅ+ಏ) (ಅ+ಉ) (ಅ+ಓ)	(ಅ+ಂ) (ಅ+ಃ)		
(a+a) (i+i) (u+u) (æ +æ)	(a+i) (a+e) (a+u) (a+o)	(a+ṃ) (a+ḥ)		
a aa i ii u uu/w æ æ- L	e ae/æ o ao/þ	ao a:	? ?f Ω Ωf	a, aÚ af aaa
AAA I II U UU/W æ æ- L-	E AE/Æ O AO/þ	Ao A:	? ?f Ω Ωf	A, AÚ Af AAA

ಕ ಖ ಗ ಘ ಙ
ka k?a ga g?a x-a/Ãa
KA K?A GA G?A X-A/ÃA
ಚ ಛ ಜ ಝ ಞ
ca c?a ja j?a z-a
Ca C?a Ja J?a Z-a
ಟ ಠ ಡ ಢ ಣ
ta t?a da ð?a áa
TA T?A DA Ð?A ÁA
ತ ಥ ದ ಧ ನ
•a •?a ða d?a na
•A •?A ÐA D?A NA
ಪ ಫ ಬ ಭ ಮ
pa p?a/fa ba b?a ma
PA P?A/FA BA B?A MA
ಯ ರ ಲ ವ ಶ ಷ ಸ ಹ ಳ ಕ್ಷ ಜ್ಞ
ya ra la va ÿa q-a sa ha Ôa k x-a jz-a
ÃÃ YA RA LA VA ßA Q-A SA HA ÔA K X-A JZ-A

(áÁ, ÔÔ, æÆ, þÞ,ß ß_____ ಈ 5 ಅಕ್ಷರ–ಚಿಹ್ನೆಗಳನ್ನು ರಷ್ಯನ್ ರೋಮನ್ ಲಿಪಿಯಿಂದ ಸ್ವೀಕರಿಸಲಾಗಿದೆ. ಇವನ್ನು ಕ್ರಮವಾಗಿ ಬೆ, ಎಫ್, ಝಿ, ಯು, ಯಾ ಎಂದು ಅವರು ಓದುತ್ತಾರೆ)

(L-L-ವನ್ನು ಗಣಕದಿಂದ ಪಡೆಯಲಾಗಿದೆ.)z

(••, ðÐ)= ಈ 2 ಲಿಪಿ– ಚಿಹ್ನೆಗಳನ್ನು ಮತ್ತು ಸಾನುನಾಸಿಕ ಚಿಹ್ನೆ "Ú', ಮಹಾಪ್ರಾಣ ಚಿಹ್ನೆ '?', ಅವಗ್ರಹ ಚಿಹ್ನೆ

ದಂತಮೂಲೀಯ ಚಿಹ್ನೆ 'n' & ಮಾತ್ರಾ –ಚಿಹ್ನೆ'f '____ಈ 5 ಚಿಹ್ನೆಗಳನ್ನು ಇವುಗಳನ್ನು ಸಂಗಣಕದಿಂದ ಆರಸಲಾಗಿದೆ.(••– ಇದು ಸರ್ಬಿಯಾ ಭಾಷೆಯ ವಿಶೇಷ ಅಕ್ಷರವಾಗಿರುತ್ತದೆ; ðÐ— ಇದು ಹಳೆಯ ಇಂಗ್ಲಿಷ್ ಅಕ್ಷರ.)

(ಅನುಸ್ವಾರ ಅಂ= aṃಅಥವಾ 'ಂ' ಮತ್ತು ವಿಸರ್ಗ ಅಃ=aḥ ಅಥವಾ'ಃ'ಚಿಹ್ನೆಗಳನ್ನು ಕನ್ನಡ ಲಿಪಿಯಿಂದ ಸ್ವೀಕರಸಲಾಗಿದೆ.)

(f, q,w,x,z ಈ 5 ಅಕ್ಷರಚಿಹ್ನೆಗಳನ್ನು ಸ್ವಲ್ಪ ಬದಲಾದರೂಪ (Modified form) ದಲ್ಲಿ ಬಳಸಲಾಗಿದೆ.)

(ಎ, ಒ ಇವು ಸಂಸ್ಕೃತ ಸಂಧಿಗಳಲ್ಲಿ ಭಾಗವಹಿಸುವದಿಲ್ಲ& ಅಂ* ಇದು ಯಾವುದೇ ಸಂಧಿಯಲ್ಲಿ ಭಾಗವಹಿಸುವದಿಲ್ಲ. ಆದ್ದರಿಂದ ಇವುಗಳಿಗೆ ಅಂ, ಅಃ ದ ನಂತರ

ಕ್ರಮವಾಗಿ ಸ್ಥಾನವನ್ನು ನೀಡಿ, ಎ, ಒ, ಅಂ* ಎಂದು ಬರೆಯಲಾಗಿದೆ.)

ಳ ಇದು ಪಾಣಿನೀಯ ವ್ಯಾಕರಣದಲ್ಲಿ ಸ್ವೀಕರಿಸಲ್ಪಟ್ಟಿಲ್ಲ ಆದ್ದರಿಂದ ಇದಕ್ಕೆ 'ಹ' ನಂತರದ ಸ್ಥಾನ ನೀಡಲಾಗಿದೆ. ಉದಾ: 1) ದತ್ತಾತ್ರೇಯ = da••aa•reya(Hosalipi, ಹೊಸಲಿಪಿ), dattatreya (English roman latin),

daTTaTreÿ(Russian)

ಕೆಲವು ಉದಾಹರಣೆಗಳು :-1) ಪಾಣಿನಿ = Paáa ini (Hosalipi)=Panini(English).

2)ಪತಂಜಲಿ = Pa•az-jali(H)=Patanjali.

3) ಅಣ್ಣ = Aááa(H)=Anna(E).

4) ಬಲ = Bala (H)=Bala(E).

ಬಲಾ = Balaa(H)= Bala(E).

ಬಾಲಾ = Baalaa(H)= Bala(E).

ಬಾಲ = Baala(H) = Bala(E).

1) ಅಮ್ಮ = Amma(H) = Amma(E)

2) ಆಕಾಶ = Aakaaÿa(H)= Akash(E)

3) ಇಂದು = Indu (H)= Indu(E)

4) ಈಶ = Iiÿa(H) = Isha.(E)

5) ಉಷಾ = Uq-aa (H) = Usha(E)

6) ಉದಯ= U ðaya(H) = Udaya (E)

7) ಊಟ =Uuta(H) =Uta(E)

8) ಔಷಧ = þq-ad?a(H) = Aushadha(E)

9) ಅಂಕುರ = Ax-kura (H) = Ankura(E)

10) ಋಚಾ = æcaa(H) = rucha(E).

ನರವ್ಯೂಹ ಭಾಷಾ ವಿಜ್ಞಾನ' ಮತ್ತು ಮಾನವ ವರ್ತನೆಗಳು

ಚೈತನ್ಯ ಎಸ್.
ಸಂಶೋಧನಾ ವಿದ್ಯಾರ್ಥಿನಿ, ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಮಾನವನಿಗೂ ಭಾಷೆಗೂ ನಿಕಟವಾದ ಸಂಬಂಧವಿದೆ. ಜಗತ್ತಿನ ಎಲ್ಲಾ ಸಜೀವಿಗಳಲ್ಲಿ ಮಾನತಾಡುವ ಶಕ್ತಿ ಇರುವುದು ಮಾನವನಿಗೆ ಮಾತ್ರ, ಪ್ರಾಣಿ ಪಕ್ಷಿಗಳು ಮಾತನಾಡುತ್ತವೆ. ಆದರೂ ಇವಕ್ಕೆ ನಿರ್ದಿಷ್ಟ ಭಾಷೆ ಎಂದು ಇಲ್ಲಿಯವರೆಗೆ ಅಧ್ಯಯನ ಮಾಡಲು ಸಾಧ್ಯವಾಗಿಲ್ಲ. ಆದರೆ ಮನುಷ್ಯನೊಟ್ಟಿಗೆ ಅವುಗಳ ಸಂವನಹನ ಸಾಧ್ಯವಾಗಿರುವುದು ಸುಳ್ಳಲ್ಲ.

ಭಾಷೆ ಮಾನವನಿಗೆ ತನ್ನ ಭಾವನೆಗಳನ್ನು ಸಂವಹನ ಮಾಡಲು ಇರುವ ಒಂದು ಶಕ್ತ ಸಾಧನ. ಭಾಷೆಯ ಬಗ್ಗೆ ಅನೇಕ ಶತಮಾನಗಳಿಂದ ಅಧ್ಯಯನಗಳು ನಡೆಸುತ್ತಲೇ ಇದೆ. Nome Chamski ಭಾಷಿಕ ಮೂಲವನ್ನು ವೈಜ್ಞಾನಿಕವಾಗಿ ಶೋಧಿಸುತ್ತ ಅದು ಜೈವಿಕವಾದುದು ಎಂದು ಪ್ರತಿಪಾದಿಸುತ್ತಾರೆ. ಅದು ಮೆದುಳಿನ ನರಮಂಡಲ ವ್ಯವಸ್ಥೆಯಲ್ಲಿ ಹುಟ್ಟಿದಾಗಿನಿಂದಾಗಲೆ ಹುಟ್ಟಿಕೊಂಡಿರುವುದು ಎಂದು ಜೀವವಿಜ್ಞಾನಗಳು ಶೋಧಿಸಿದ್ದಾರೆ. ನರಮಂಡಲದಲ್ಲಿರುವ ಈ ಭಾಷಾ ವ್ಯವಸ್ಥೆಯು ಮಾನವನ ವರ್ತನೆಗೆ ಕಾರಣವಾಗಿವೆ. ಈ ವರ್ತನೆಯನ್ನು ಜನ್ಮಜಾತವಾಗಿ ಬಂದ ಭಾಷೆ ಹೇಗೆ ನಿಭಾಯಿಸುತ್ತದೆ ಅದಕ್ಕಿರುವ ಸಮಸ್ಯೆಗಳು ಮತ್ತು ಸವಾಲುಗಳು ಯಾವುವು ಎಂಬುದನ್ನು ಅಧ್ಯಯನ ಮಾಡುವುದು ಹಾಗೂ ಅವುಗಳಿಗೆ ಧನಾತ್ಮಕ ಉತ್ತರವನ್ನು ಕಂಡುಕೊಳ್ಳುವುದು ಈ ಅಧ್ಯಯನದ ಆಶಯವಾಗಿರುತ್ತದೆ.

ಮಾನವನಿಗು ಭಾಷೆಗು ನಿಕಟವಾದ ಸಂಬಂಧವಿದೆ. ಜಗತ್ತಿನ ಎಲ್ಲಾ ಸಜೀವಿಗಳಲ್ಲಿ ಮಾತನಾಡುವ ಶಕ್ತಿ ಇರುವುದು ಮಾನವನಿಗೆ ಮಾತ್ರ ಪ್ರಾಣಿ ಪಕ್ಷಿಗಳು ಮಾತನಾಡುತ್ತವೆ ಆದರೂ ಇವುಗಳಿಗೆ ನಿರ್ದಿಷ್ಟ ಭಾಷೆ ಎಂದು ಇಲ್ಲಿಯವರೆಗೆ ಅಧ್ಯಯನ ಮಾಡಲು ಸಾಧ್ಯವಾಗಿಲ್ಲ ಆದರೆ ಮನುಷ್ಯನೊಟ್ಟಿಗೆ ಇವುಗಳ ಸಂವಹನ ಸಾಧ್ಯವಾಗಿರುವುದು ಸುಳ್ಳಲ್ಲ. ಭಾಷೆ ಎಂಬುದ ಮಾನವನಿಗೆ ತನ್ನ ಭಾವನೆಗಳನ್ನು ಸಂವಹನ ಮಾಡಲು ಇರುವ ಒಂದು ಶಕ್ತ ಸಾಧನ

ಮಾನುಷ್ಯನ ಮೆದುಳು ಹೇಗೆ ಕ್ರಿಯೆ ನಿರ್ವಹಿಸುತ್ತದೆ ಮತ್ತು ಹೇಗೆ ಸಂಕೇತಗಳನ್ನು ಉಪಯೋಗಿಸಿಕೊಂಡು ವರ್ತನೆಗೆ ಸಹಾಯ ಮಾಡುತ್ತದೆ ಮತ್ತು ಈ ಕ್ರಿಯೆ ಸಂಕೇತ ವರ್ತನೆಗಳನ್ನು ಹೇಗೆ ನಿಗ್ರಹಿಸಿ ಆಯಾ ಸಮಯಕ್ಕೆ ತಕ್ಕಂತೆ ವರ್ತನೆ ಬದಲಾಗುತ್ತದೆ ಎಂಬುದು ಈ ಅಧ್ಯಯನದಲ್ಲಿ ವ್ಯಕ್ತವಾಗಿದೆ

ಭಾಷೆಯ ಬಗ್ಗೆ ಅನೇಕ ಶತಮಾನಗಳಿಂದ ಅಧ್ಯಯನಗಳು ನಡೆಯುತ್ತಲೇ ಇದೆ ಗ್ರಹಿಕೆ ವರ್ತನೆಗಳ ವ್ಯತ್ಯಾಸಗಳನ್ನು ಗುರುತಿಸಿ ಇದು ಹೇಗೆ ಬದಲಾಯಿಸಲು ಸಾಧ್ಯ ಮತ್ತು ನಮ್ಮ ಭಾವನೆಗಳನ್ನು ನಿಗ್ರಹಿಸಲು ಸಾಧ್ಯ ಎಂಬುದನ್ನು ಕಂಡುಹಿಡಿಯಬಹುದಾಗಿದೆ
ಹುಟ್ಟಿನಿಂದ ನಮ್ಮ ನಂಬಿಕೆ ವರ್ತನೆ ಭಯ ಆಕರ್ಷಣೆ ಹೊಂದಾಣಿಕೆ ಅಭ್ಯಾಸ ಇವುಗಳು ಯಾವು ಕೂಡ ಇರುವುದಿಲ್ಲ ಇವುಗಳು ನಾವು ಬೆಳೆಯುವ ಸಮಾಜ ನಮ್ಮ ಸುತ್ತಮುತ್ತಲಿನ ಜಗತ್ತು ಕಲಿಸುತ್ತವೆ.

"ನರವ್ಯೂಹ ಭಾಷಾ ವಿಜ್ಞಾನವು" 1970ರಲ್ಲಿ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಇನ್‌ಫರ್‌ಮೇಷನ್ ವಿಜ್ಞಾನಿ ಒಬ್ಬರು ವಿಕಾಸಗೊಳಿಸಿದರು ಮನುಷ್ಯನ ನರವ್ಯೂಹವು ಮೆದುಳಿಗೆ

ನರವ್ಯೂಹವು ಮನುಷ್ಯನ ಮೆದುಳಿಗೆ ಸಂಬಂಧಿಸಿದೆ ಮತ್ತು ನರಗಳು ಹೇಗೆ ಮೆದುಳಿಗೆ ವಿಷಯವನ್ನು ಕಳುಹಿಸುತ್ತದೆ, ಸಂಕೇತಗಳನ್ನು ಹೇಗೆ ಒಟ್ಟುಗೂಡಿಸಿ ಬೇಕಾದ ರೀತಿಯಲ್ಲಿ ವ್ಯತಿರಿಕ್ತವಾಗುತ್ತದೆ ಎಂಬುದನ್ನು ತಿಳಿಸುತ್ತದೆ.

ಲಿಂಗ್ವಿಸ್ಟಿಕ್ ಭಾಷೆಯು ಮುಖ್ಯವಾಗಿ ಎರಡು ಅಂಶಗಳನ್ನು ಒಳಗೊಂಡಿದೆ

1. ಶಾಬ್ದಿಕ ಸಂವಹನ
2. ಅಶಾಬ್ದಿಕ ಸಂವಹನ

ಪ್ರೋಗ್ರಾಮಿಂಗ್ ಎನ್ನುವುದು ನರಗಳು ಮೆದುಳಿಗೆ ಕಳುಹಿಸುವ ಸಂಕೇತಗಳನ್ನು ಸಮಾಚಾಖು ವಿಷಯಕ್ಕೆ ಯುಕ್ತಿ ಕೌಶಲ್ಯರಿಂದ ಹೇಗೆ ಪರಿವರ್ತಿಸುತ್ತದೆ ಎಂಬುದು ೀಳಿಯಬಹುದು ಆದರೆ ಮೆದುಳು ಒಂದು ವಿಷಯವನ್ನಾಗಿ ಪರಿವರ್ತಿಸಬೇಕಾದರೆ ಮೆದುಳು ತನ್ನ ಅನುಭವದ ಮೇರೆಗೆ ಅಥವಾ ಸಂಗ್ರಹಿದ ವಿಷಯವು ನಮ್ಮ ಯೋಚನಾ ಕೌಶಲ್ಯದ ಮೂಲಕ ಪರಿವರ್ತಿನೆಯಾಗಿ ವರ್ತನೆಯಾಗಿ ವಿಕಾಸಗೊಳ್ಳುತ್ತದೆ. ಇಲ್ಲಿ ನಮ್ಮ ಅನುಭವ, ಭಾವನೆಗಳು ಬಾಹ್ಯಕೆಲಸಕ್ಕೆ ನಮ್ಮ ವರ್ತನೆ ಪರಿಣಾಮ ಬೀರುತ್ತದೆ ಉದಾಹರಣೆ ಹಾವು ಎದುರಿಗೆ ಬಂದರೆ ನಾವು ಭಯಗೊಳ್ಳುತ್ತೇವೆ (fear of snake)

ಈ ನರವ್ಯೂಹ ಭಾಷಾ ವಿಜ್ಞಾನವು ನಮ್ಮ ನಕಾರಾತ್ಮಕ ಯೋಚನೆಗಳನ್ನು ಪರಿಣಾಮಕಾರಿಯಾಗಿ ಸಕಾರಾತ್ಮಕ ಂಯೋಚನೆಗಳನ್ನಾಗಿ ಉತ್ತೇಜಿಸಿಕೊಂಡು ಪರಿವರ್ತಿಸುತ್ತದೆ ಇದು ನಮ್ಮ ಮೆದುಳಿನ ಪ್ರತಿಭಾವಂತಿಕೆಯನ್ನು ಮತ್ತು ಯೋಚನೆ, ಭಾವುಕತೆ ನಂಬಿಕೆ ಅನುಭವ ಹೀಗೆ ಅನೇಕ ರೀತಿಯಾಗಿ ಬದಲಾಗುವ ಕ್ರಿಯೆಗಳನ್ನು ಅಧ್ಯಯನ ಮಾಡುತ್ತದೆ ಪ್ರತಿಯೊಂದು ಮಾನವನ ವರ್ತನೆಗಳಿಗೆ ನಮ್ಮ ಅನುಭವ, ಭಾಷೆ, ಗಮನ, ಗ್ರಹಿಕೆ ಮೇಲೆ ಸಂಬಂಧಪಟ್ಟಿರುತ್ತದೆ ಇದರ ಆಧಾರದ ಮೇಲೆ ಮಾನವನ ಭಾವನೆಗಳು ವರ್ತನೆಗಳು ಬದಲಾವಣೆ ಹೊಂದುತ್ತದೆ.

ಸಂವಹನ ಒಂದು ಶಕ್ತ ಸಾಧಕ ಮನುಷ್ಯನು ತನ್ನ ಅನುಭವ ಭಾವನೆಗಳು ಆಲೋಚನೆಗಳು ಗ್ರಹಿಸುವಿಕೆ ಆಂತರ್ಯ ಮತ್ತು ಬಾಹ್ಯವರ್ತನೆಗಳನ್ನು ತನ್ನ ಬುದ್ಧಿವಂತಿಕೆಯ ಯುಕ್ತಿ ಕೌಶಲ್ಯದಿಂದ ಹೇಗೆ ವ್ಯತಿರಿಕ್ತಗೊಳಿಸುತ್ತಾನೆ ಎಂಬುದನ್ನು ಅಧ್ಯಯನ ಮಾಡುತ್ತದೆ.

ನಮ್ಮ ವ್ಯಕ್ತಿ ವಿಕಸನ ವಾಸ್ತವಿಕತೆ ಆಲೋಚನೆ ಬಾಹ್ಯವರ್ತನೆ ಮನೋರಂಚನೆ ಹೀಗೆ ಆನೇಕ ಕ್ರಿಯೆಗಳು ಮಾನವನ ವರ್ತನೆಯ ನಿದರ್ಶನವಾಗಿದೆ

ಇವುಗಳು ಶಾಬ್ದಿಕವಾಗಿ ನೋಡುವುದು ಗ್ರಹಿಸುವುದು ಭಾವಿಸುವುದು ಸಂದರ್ಭಕ್ಕನುಗುಣವಾಗಿ ವರ್ತಿಸುವುದು . ಆದರೆ ಈ ಎಲ್ಲಾ ಕ್ರಿಯೆಗಳು ಸಂದರ್ಭಕ್ಕನುಣವಾಗಿ ವರ್ತಿಸುವುದು ಆದರೆ ಈ ಎಲ್ಲಾ ಕ್ರಿಯೆಗಳು ಮೆದುಳಿನ ಸಂದೇಶಗಳ ಮೂಲಕವೇ ಆಗಬೇಕಿದೆ. ನಮ್ಮ ನಿರ್ಧಾರಗಳು

ಪ್ರಜ್ಞಾವಸ್ಥೆ ಅಪ್ರಜ್ಞಾವಸ್ಥೆಯಲ್ಲಿ ವರ್ತನೆಗಳು ಸಂಧರ್ಭಕ್ಕೆ ತಕ್ಕಂತೆ ಬಾಹ್ಯಕ್ಕೆ ಬೇರೆಯವರಿಗೆ ಅರ್ಥವಾಗುವಂತೆ ವ್ಯಕ್ತವಾಗುತ್ತದೆ. ಭಾವನೆಗಳನ್ನು ಸುಲಭವಾಗಿ ಕಂಡುಹಿಡಿಯಬಹುದು ಉಸಿರಾಡುವ ಕ್ರಿಯೆ ನೋಟ ಮಾತು ಸನ್ನೆ ಧ್ವನಿ ದೇಹಸ್ಥಿತಿ ಮನಸ್ಸಿನ ಭಾವ ಸ್ಪರ್ಶ ಇವುಗಳು ಸ್ಪಷ್ಟಪಡಿಸುತ್ತವೆ.

ಅಶಾಬ್ದಿಕ ಸಂವಹನವು ದೃಷ್ಟಿ ಸಂಬಂಧಿತ ಚಿಹ್ನೆಗಳು ದೇಹಸ್ಥಿತಿ ಮುಖಭಾವ ಚಿತ್ರಗಳು ಭಾವನೆಗಳು ಹೀಗೆ ಅನೇಕ ರೀತಿಯಲ್ಲಿ ಸಂವಹನ ಸಡೆಸಬಹುದು ಪ್ರತಿಯೊಂದು ಭಾಷಡ ವರ್ತನೆಗೆ ಒಂದು ನಿರ್ಧಿಷ್ಟ ಬೆಲೆ ಇದೆ ಇದರಲ್ಲಿ ಮುಖ್ಯವಾಗಿ "ಡಿಸೈನ್ ಹ್ಯೂಮನ್ ಇಂಜಿನಿಯರಿಂಗ್" ಎಂಬುದನ್ನು ಕಂಡುಹಿಡಿಯಲಾಗಿದೆ.

ನಮ್ಮ ಕ್ರಿಯಾ ಶೀಲತೆ ಅನುಕ್ರಮ ಏಕಕಾಳದ ಭಾವನೆಗಳು ಸೃಜನಾತ್ಮಕವಾಗಿ ಹೇಗೆ ವಿಚಾರ ವಿನಿಮಯವಾಗುತ್ತದೆ ಎಂಬುದನ್ನು ತಿಳಿಸುತ್ತದೆ ಬೇಡ ಬೇಕುಗಳನ್ನು ಗುರುತಿಸುತ್ತದೆ. ಗ್ರಹಿಕೆಯ ವ್ಯತ್ಯಾಸಗಳು ಸಂತಸ ನೋವು ಸ್ಥಿತಿ, ಧ್ವನಿ, ಮನೋಭಾವ, ಅಭಿವ್ಯಕ್ತತೆ, ತೀಕ್ಷ್ಣತೆ ಇವುಗಳನ್ನು ನಿಗ್ರಹಿಸುವ ಶಕ್ತಿಯನ್ನು ನೀಡಲು ಸಹಾಯಮಾಡುತ್ತದೆ.

ನೋಮ್‌ಚಾಮ್‌ಸ್ಕಿ ಇವರು "ಮನುಕುಲದ ಮಾತುಗಾರ" ಎಂದು ಕರೆಯುತ್ತಾರೆ. ಭಾಷೆ ಜೈವಿಕವಾದದ್ದು ಶ್ರಮ ಜ್ಞಾನ ನಂಬಿಕೆಗಳ ಮೂಲಕ ಮಾನವನು ವರ್ತಿಸುತ್ತಾನೆ. ಇವರ ಅಧ್ಯಯನದಲ್ಲಿ ನರವ್ಯೂಹ, ಭಾಷೆ, ವರ್ತನೆಗಳನ್ನು ಹೀಗೆ ವಿವರಿಸಿದ್ದಾರೆ. ಮನೋವಿಜ್ಞಾನ ಭಾಷಾಶಾಸ್ತ್ರ ವಿವರಗಳಿಂದ ಇದನ್ನು ವಿವರಿಸಲು ಸಾಧ್ಯವಾಗಿದೆ. ಭಾಷೆಯ ಅಧ್ಯಯನವು ನಿಯಮಬದ್ಧವಾದ ವ್ಯವಸ್ಥೆಯನ್ನು ಮಾನವನ ಮನೋರಚನೆಯನ್ನು ಸೃಜನಕ್ರಿಯೆಯಿಂದ ಸಾಧ್ಯ ಎಂದು ಹೇಳಿದ್ದಾರೆ.

ಮನುಷ್ಯನ ಸ್ವರೂಪದ ಮೂಲದ್ರವ್ಯವೆಂದರೆ ಆತನಿಗಿರುವ ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯ ಪ್ರಜ್ಞೆ ಮೂಲಭೂತವಾಗಿ ಮನುಷ್ಯನ ಸ್ವಾಭವಕ್ಕೆ ಸಂಬಂಧಿಸಿದ ಸಂಗತಿಗಳಲ್ಲಿ ಯಾವುದಾದರೂ ಕೊಂಡಿಗಳಿರುವದರ ಬಗ್ಗೆ ಹೇಳಬಹುದೇ ಹೊರತು ನೇರ ಸಂಬಂಧವಿಲ್ಲ. "ಫ್ರೀ ವಿಲ್" ಎಂಬುದು ಮನುಷ್ಯರಲ್ಲಿ ಇರುವಂಥದ್ದು ಆದರೆ ಭಾಷಾ ಶಾಸ್ತ್ರಕ್ಕೂ ಸ್ವತಂತ್ರ ಅಭಿಪ್ರಾಯಕ್ಕೂ ಸಂಬಂಧ ಇದೆ ಇನ್ನುವುದು ಸಂಶಯಾತ್ಮಕ ವಾದುದು. ಇವರ ಪ್ರಕಾರ ವಿಶ್ವ ವ್ಯಾಪಲ ವ್ಯಾಕರಣದ ಸಿದ್ಧಾಂತದ ಮೇರೆಗೆ ಭಾಷೆಗೂ ವರ್ತನೆಗೂ ಸಂಬಂಧವಿದೆ ಎಂದು ಹೇಳಬಹದು ಭಾಷೆಯ ವ್ಯಾಕರಣ ನಿಯಮಗಳ ಅಧ್ಯಯನವು ಮನುಷ್ಯ ಸ್ವಭಾವವನ್ನು ಕುರಿತು ಸಂಗತಿಯೊಂದನ್ನು ನೇತ್ಯಾತ್ಮಕವಾಗಿ ಹೇಳುತ್ತದೆ ಮನುಷ್ಯನ ಮನೋಗುಣಗಳ ವಿಷಯದಲ್ಲಿ ನಮ್ಮ ತಿಳಿವಳಿಕೆಯ ಮಿತಿಯನ್ನು ಎತ್ತಿ ತೋರಿಸುತ್ತದೆ.

"ರೋಸೋ" ಎಂಬುವರು ಮನುಷ್ಯನ ಸ್ವರೂಪವನ್ನು ನಿರ್ಧರಿಸಲು ಪ್ರಾಣಿಯೊಂದಿಗೆ ಹೋಲಿಸುತ್ತಾರೆ ಮನುಷ್ಯನ ಸ್ವರೂಪವನ್ನು ನಿರ್ಧರಿಸಲು ಪ್ರಾನೀಯೊಂದಿಗೆ ಹೋಲಿಸುತ್ತಾರೆ ಮನುಷ್ಯ ಬುದ್ಧಿವಂತ ಮುಕ್ತ ಹಾಗೂ ತರ್ಕಶಕ್ತಿಯನ್ನು ಹೊಂದಿದ ಏಕೈಕ ಪ್ರಾಣಿ ಎಂದಿದ್ದಾರೆ.

ಮನುಷ್ಯನಿಗೆ ಪ್ರಕೃತಿಯ ಪ್ರೇರಣ ಇದೆ ಆದರೆ ಇದನ್ನು ಒಪ್ಪುವ ನಿರಾಕರಿಸುವ ಸ್ವತಂತ್ರ್ಯ ತನಗೆ ಇದೆಯೆಂದು ತಿಳಿದಿದ್ದಾನೆ. ಆತನಲ್ಲಿರುವ ಇಚ್ಛಾಶಕ್ತಿ ಅಥವಾ ನಿರ್ಧಾರಶಕ್ತಿ ಹಾಗೂ ಈ ಶಕ್ತಿಯಿಂದ ಹೂಮ್ಮುವ ಆತನ ಅಭಿಪ್ರಾಯಗಳು ಆತನ ಚೇತನದಿಂದ ನಿರ್ಧಾರವಾಗುವಂತಹವು ಮನುಷ್ಯನ ಬೆಳವಣಿಗೆ ಮಿತಿಗೊಳಿಸುವಂಥದ್ದಲ್ಲ. ಗುಣಗಳನ್ನು ಮನಸ್ಸು ಹೊಂದಿದ್ದರೂ ವ್ಯಕ್ತಿತ್ವವು ಪರಿಪೂರ್ಣತೆಯ ಕಡೆಗೆ ಸಾಗುತ್ತದೆ ದ್ವನ್ಯಂಗಗಳು ಮನುಷ್ಯನಿಗೆ ಸಹಜವಾಗಿಯೇ ಬಂದಿದ್ದರೂ ಮಾತುಗಳು ಸಹಜವಾದುದ್ದಲ್ಲ ಹಾಗೂ ನಮ್ಮೊಳಗೆ ವ್ಯವಸ್ಥಿತವಾದ ರೀತಿಯಲ್ಲಿ ಅಡಗಿದ್ದು ಬಾಹ್ಯ ಪ್ರಚೋದನೆಯ ಸಂದರ್ಭಗಳು ಒದಗಿದೊಡನೆ ಸಂದಭಗಳಿಂದ ಮುಕ್ತವಾದ ರೀತಿಯಲ್ಲಿ ನಮ್ಮ ವಿಚಾರಗಳು ಹೊರಹೊಮ್ಮುತ್ತವೆ

ಮನಸ್ಸಿನ ವಿಚಾರಗಳು ಹುಟ್ಟುವುದು ಶಬ್ದಗಳ ಮೂಲಕ ಹಾಗೂ ನಮ್ಮ ಜ್ಞಾನ ಇವುಗಳನ್ನು ಪ್ರತಿಪಾದನೆಯ ರೂಪದಲ್ಲಿ ಒಳಗೊಂಡಿರುತ್ತದೆ ಪ್ರಾಣಿಗಳಲ್ಲಿ ಈ ಶಕ್ತಿಯನ್ನು ಹೊಂದಿಲ್ಲದ ಪರಿಪೂರ್ಣತೆಯನ್ನು ಸಾಧಿಸುವುದಿಲ್ಲ ಪ್ರಾಣಿಗಳಲ್ಲಿ ಕೇವಲ ಯಾಂತ್ರಿಕವಾದ ವರ್ತನೆಯನ್ನು ಕಾಣಬಹುದು ಆದರೆ ಮಾನವನಿಗೆ ವಿಶಿಷ್ಟವಾದ ಸೃಜನ ಶೀಲತ್ವವೂ ಇರುತ್ತದೆ

ಮನೋವಿಜ್ಞಾನ, ತತ್ವಜ್ಞಾನ, ಊಹನಾ ನರವಿಜ್ಞಾನ, ಅನೈಸರ್ಗಿಕ ಬುದ್ಧಿಶಕ್ತಿ ಮತ್ತು ಜ್ಞಾನ ವಿಜ್ಞಾನದ ಅಗಲವಾದ ಪಾತಳಿಯ ಮೇಲೆ ಬೇರೆ ಬೇರೆ ಜ್ಞಾನ ಕ್ಷೇತ್ರಗಳಿಗೆ ನಿಷ್ಪಕ್ಷಪಾತವಾಗಿ ಅನ್ವಯವಾಗುವ ಸಾಮಾನ್ಯ ಕಾರ್ಯ ವಿಧಾನಗಳಾದ ಸಾರ್ವತ್ರಿಕ ಬುದ್ಧಿಶಕ್ತಿಯ ತಂತ್ರಕುಶಲತೆಗಳು ಇವೆಯೆಂದು ತಿಳಿಯಲಾಗಿದೆ. ಟಿ ಆರ್ ಬಾಲ್ಡ್‌ವಿನ್ ಮತ್ತು ಡೇನಿಯಲ್ ಡೆನೆಟ್‌ರಪ್ರಕಾರ 'ಆಧ್ಯಾತ್ಮಿಕ ಪ್ರಕೃತಿವಾದ' ನಮ್ಮ ಮನಸ್ಸಿನ ತಾತ್ವಿಕ ವಿವರಣೆಗಳು ನಮ್ಮ ಜ್ಞಾನ ನಮ್ಮ ಭಾಷೆ ಅಂತಿಮವಾಗಿ ಪ್ರಾಕೃತಿಕ ವಿಜ್ಞಾನಗಳ ಜೋತಟ ನಿರಂತರವೂ ಸಮರಸವೂ ಆಗಿದೆ. ಭಾಷೆಗೂ ಶಬ್ದಕ್ಕೂ ಹೊರ ಜಗತ್ತಿನ ಒಂದು ಸಂಬಂಧವಿದೆ. ಭಾಷಾಜ್ಞಾನವು ವೈಯಕ್ತಿಕವಾದುದು ಇದು ಮಾನಸಿಕ ರಚನೆ ಹಾಗಾಗಿ ಭಾಷೆ ದೇಹವೂ ಆಗಿಬಿಡುತ್ತದೆ. ಭಾಷೆ ಮತ್ತು ಮನಸ್ಸಿನ ಬಗ್ಗೆ ಚಿಂತಿಸುವಾಗ ಎರಡು ವಿಷಯಗಳು ಮುಖ್ಯವಾಗುತ್ತದೆ

1. ಆಲೋಚನಾ ಕ್ರಮ (ಅರಿಯಬಹುದಾದ ಸಮಸ್ಯೆಗಳು)
2. ಅರಿಯುವ ವಿಧಾನ (ನಿಗೂಡಗಳು)

ರೊಪ್ಲೆಕ್ಷನ್ ಆನ್ ಲ್ಯಾಂಗ್ವೇಜ್ ಎಂಬುದು ನಿಗೂಢತೆಯ ಬಗೆಗಿನ ಜ್ಞಾನ ಎಲ್ಲಾ ಸಂಗತಿಗಳನ್ನು ಶೋಧಿಸಿ ಅಹಂಕಾವನ್ನು ನಾಶಮಾಡಿ ಅಧಿಕಾರ ಕೇಂದ್ರಗಳನ್ನು ಪ್ರಶ್ನಿಸುತ್ತದೆ. ಪ್ರಜ್ಞೆಯನ್ನು ಕಾಂಪಿಟೆನ್ಸ್ ಎಂದರೆ ಪರ್‌ಫಾರ್ಮೆನ್ಸ್‌ನ್ನು ಅರಿಯಲು ಸಾಧ್ಯವಿಲ್ಲ 'ಲ್ಯಾಂಗ್ವೇಜ್ ಆಂಡ್ ರೆಸ್ಪಾನ್ಸ್' ಎಂಬ ಮೀಟ್ಲೋ ರೊನಾಟ್‌ರವರ ಪುಸ್ತಕದಲ್ಲಿ ಈ ಎರಡೂ ಸಂಗತಿಗಳು ಮನುಷ್ಯನ ಸ್ವಾತಂತ್ರ್ಯ ಸಂಬಂಧಿಸಿದ್ದು ಎನ್ನುತ್ತಾರೆ. ತಿಳುವಳಿಕೆ ಅಥವಾ ಸಾಮರ್ಥ್ಯ ಮನಸ್ಸಿಗೆ ಸಂಬಂಧಿಸಿದ್ದು ಭಾಷೆ ಮತ್ತು ವರ್ತನೆ ನಾವು ಪಡೆದುಕೊಳ್ಳುವ ಸಾಮರ್ಥ್ಯವಾಗಿದೆ

ಪ್ಲೇಟೋ ಮತ್ತು ಸಾಕ್ರಟಿಸ್‌ರವರ ಅಧ್ಯಯನದ ಪ್ರಕಾರ ಭಾಷೆಗೆ ಜೈವಿಕ ಮೂಲವಿದೆ ಎಂದಿದ್ದಾರೆ ಇದು ದಶಕಗಳಿಂದ ನಡೆದ ಅಧ್ಯಯನಗಳಿಂದ ಸಮರ್ಥನೆಗೊಂಡಿದೆ. ಇದು ಸಾಧ್ಯವಾಗಿರುವುದು ಮೆದುಳಿಗೆ ಆಂಶಿಕ ಆಘಾತ ಉಂಟಾಗಿರುವ ವ್ಯಕ್ತಿಗಳ ಅಧ್ಯಯನದಿಂದ ಮಾತ್ರ

ಜನ್ಮಜಾತವಾದ ಭಾಷಾ ಸಾಮರ್ಥ್ಯವನ್ನು ಯೂನಿವರ್ಸಲ್ ಗ್ರಾಮರ್ (UG) ಎಂದು ಕಲ್ಪಿಸಿಕೊಳ್ಳಲಾಗಿದೆ. ಭಾಷೆಗಳಲ್ಲಿನ ಎಲ್ಲಾ ವಾಕ್ಯಗಳು ಪದಮಾಹಿತಿಗಳ ಸರಣಿಯಾಗಿರುವುದು ಖಚಿತಗೊಂಡಿದೆ ಅನುಭೋಗಿ (s) ಕ್ರಿಯಾಪದ (o), (v) ಗಳೆಂಬ ಭೇದಗಳಿವೆ ಭಾಷೆಯನ್ನು ಅರ್ಥೈಸಿ

ಕೊಳ್ಳಲು 6 ಸಾಧ್ಯತೆಗಳಲ್ಲಿ ಜಗತ್ತು ಬಳಸುತ್ತವೆ ಎಂದಿದ್ದಾರೆ.

ನೋಮ್ ಚಾಮ್‌ಸ್ಕಿ ಮನುಷ್ಯನ ಅಂತಸ್ಥೆ ತಿಳುವಳಿಕೆಯು ನುಡಿಯಾಗಿ ಮಾತಾಗಿ ಪರಿವರ್ತಿತವಾಗುವುದು ಗ್ರಹಿಕೆಯ ನೆಲೆ ಮತ್ತು ಅಭಿವ್ಯಕ್ತಿಯ ನೆಲೆ ಇವೆರಡರಿಂದ ಸಂದರ್ಭನುಗುಣವಾಗಿ ವಾಕ್ಯಗಳನ್ನು ಉತ್ಪಾದಿಸುತೇವೆ ಹಾಗೆಯೇ ವರ್ತಿಸುತ್ತೇವೆ. ಮನುಷ್ಯನ ಭಾಷೆ, ವರ್ತನೆಗಳು ಏರುಪೇರಾಗುವುದು ಉದ್ದೇಶಿವಾಗಿಯೇ ಹೊರತು ಅಂತಸ್ಥ ಸಾಮರ್ಥ್ಯದಿಂದಲ್ಲ

ವಿಧವಿಧ ಬಗೆಯ ಜೈವಿಕ ಪ್ರಕಿಯೆಗಳು, ಹಲವು ಅಂಗಾಂಗಗಳು ಭಾಷೆಯ ಉತ್ಪಾದನೆಯಲ್ಲಿ ಪಾತ್ರವಹಿಸುತ್ತದೆ. ಕಣ್ಣು, ಕಿವಿ, ಧ್ವನ್ಯಂಗಗಳು ಪ್ರಧಾನವಾದವು. ನರವ್ಯೂಹ ಕಾರ್ಯವಿಧಾನಗಳ ಸಮನ್ವಯವು ಕಣ್ಣಿನಿಂದ ದೊರಕುವ ಐಂದ್ರಿಯಿಕ ಮಾಹಿತಿ ಭಾಷೆ ಮಾಹಿತಿಯಾಗಿ ಪರಿವರ್ತನೆ ಹೊಂದುತ್ತದೆ. ಹೀಗೆ ಭಾಷೆ, ಮನಸ್ಸು ವರ್ತನೆ ಈ ಮೂರು ಆಯಾಮಗಳ ಮೇಲೆ ಸಂಶೋಧನೆ ದಶಕಗಳಿಂದ ನಡೆಯುತ ಲಿದ್ದು ವೈಜ್ಞಾನಿಕ ದೃಷ್ಟಿಕೋನವು ವಾಸ್ತವಿಕ ತತ್ವವೆಂದು ವಿವರಿಸಬೇಕಿದೆ.

ಉಲ್ಲೇಖಗಳು

1. ನೋಮ್ ಚಾಮ್‌ಸ್ಕಿ–ಮನುಕುಲದ ಮಾತುಗಾರ ಆಭಿನವ ಪಬ್ಲಿಕೇಷನ್ಸ್ 2001
2. ನೋಮ್ ಚಾಮ್‌ಸ್ಕಿ ಲ್ಯಾಂಗ್ವೇಜ್ ಆಂಡ್ ಥಾಟ್ ಲೇಖನ (1999) ಕೆ ವಿ ತಿರುಮಲೇಶ್
3. ನ್ಯೂ ಹೊರೈಝೂನ್ ಇನ್ ದಿ ಸ್ಟಡಿ ಆಫ್ ಲ್ಯಾಂಗ್ವೇಜ್ ಆಂಡ್ ಮೈಟ್ ಚಾಮ್‌ಸ್ಕಿ 2000, 1968
4. ಇಂಟರ್ ನೆಟ್ ವಿವರಣೆಗಳು
5. ಆರ್ಟಿಕಲ್‌ಗಳು

ಕೆರೆಯ ಪದ್ಮರಸನ ದೀಕ್ಷಾಬೋಧೆ: ಸಾಮಾಜಿಕ ವಿಶ್ಲೇಷಣೆ

ಮಾದಪ್ಪ. ಜಿ

ಸಂಶೋದನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೦೦೬

madhuvamshishree@gmail.com

ಇತಿವೃತ್ತ: ಹರಿಹರ–ರಾಘವಾಂಕರಂತಹ ಮಹಾಕವಿಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವಸಾಹಿತ್ಯ ಪ್ರಕಾರಗಳನ್ನು ಸೃಷ್ಟಿಸಿ, ತಮ್ಮ ವಿಶಿಷ್ಟ ಸ್ಥಾನವನ್ನುಗಳಿಸಿ ಸಾಹಿತ್ಯದ ಮೈಲುಗಲ್ಲನ್ನು ಸ್ಥಾಪಿಸಲು ನೆರವಾದ ಕೆರೆಯ ಪದ್ಮರಸನ ಕಾಲವು ಕ್ರಿ.ಶ.೧೨೦೦. ಈತನ ತಂದೆ ಮಾಯಿದೇವ, ತಾಯಿ ಮಂಗಳದೇವಿ, ಈತನ ಕೃತಿ 'ದೀಕ್ಷಾಬೋಧೆ.'

ದೀಕ್ಷಾಬೋಧೆಯು ವೀರಶೈವ ದೀಕ್ಷೆಯನ್ನು ತಿಳಿಸುವ ಕನ್ನಡದ ಮೊದಲ ಸ್ವತಂತ್ರ ಕೃತಿ, ಇದರ ಪ್ರಮುಖ ಗುರಿ ವೀರಶೈವ ಮತ ತತ್ವವನ್ನು ಪ್ರತಿಪಾದಿಸುವುದು. ದೀಕ್ಷಾಬೋಧೆ ಕೃತಿಯಲ್ಲಿ ಮುಖ್ಯವಾಗಿ ಮೂರು ಪ್ರಮುಖ ಸ್ಥಲಗಳಿವೆ. ಈ ಮೂರು ಸ್ಥಲಗಳೂ ಕೂಡ ವಿಭಿನ್ನ ಮತ್ತು ವೈಶಿಷ್ಟ್ಯತೆಯಿಂದ ಕೂಡಿದೆ.

ಯಾವುದೇ ಕೃತಿ ರಚನೆಗೆ ಮೂಲ ಕಾರಣವಿರುವಂತೆ; ಪ್ರಭಾವ, ಪ್ರೇರಣೆ ಇರುವಂತೆ ಪದ್ಮರಸನ ದೀಕ್ಷಾಬೋಧೆ ಕೃತಿಗೆ ಆಂಧ್ರದ ವೈಧಿಕ ಸಂಪ್ರದಾಯದ ತ್ರಿಭುವನತಾತನು ಪದ್ಮರಸನ ಜೊತೆ ನಡೆಸಿದ ಧರ್ಮತತ್ವಗಳ (ವೀರಶೈವ ಮತ್ತು ವೈಧಿಕ) ಮದ್ಯೆ ನಡೆಸಿದ ವಾದ–ವಿವಾದಗಳೇ ಪ್ರಮುಖ ಅಂಶವಾಗಿದೆ.

ಹೊಯ್ಸಳ ನರಸಿಂಹ ಬಲ್ಲಾಳನಲ್ಲಿ ಮಂತ್ರಿಯಾಗಿದ್ದ ಪದ್ಮರಸನಿಗೆ ಅವನ ಸಾಮಾಜಿಕ ಕಾರ್ಯಗಳಿಗೆ ಜನ ಮೆಚ್ಚಿ ನೀಡಿದ್ದು 'ಕೆರೆಯ ಪದ್ಮರಸ' ಎಂಬ ತಲೆಬರಹ. ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ಪರಿಣತನಾಗಿದ್ದ ಪದ್ಮರಸ ತೆಲುಗಿನ ತ್ರಿಭುವನ ತಾತನನ್ನು ವಾದದಲ್ಲಿ ಸೋಲಿಸಿದ ಮೇಲೆ ವಾದದ ನಿರ್ಣಯದಂತೆ ಸೋತವರು ದೀಕ್ಷೆ ಪಡೆಯಬೇಕಾದ್ದರಿಂದ ತ್ರಿಭುವನತಾತನು ಕೆರೆಯ ಪದ್ಮರಸನಿಂದ 'ಶಿವಶರಣರ' ದೀಕ್ಷಾ ವಿಧಾನಗಳನ್ನು ತತ್ವಸಿದ್ಧಾಂತಗಳನ್ನು ಕಾಲಕ್ರಮೇಣ ಆಚರಣೆಯ ಮೂಲಕ ದೀಕ್ಷೆ ಪಡೆದು, ತನ್ನವರಿಗೂ ಶಿವದೀಕ್ಷೆ ಪಡೆದುಕೊಂಡ ಪ್ರಸಂಗವನ್ನು ಪದ್ಮರಸನು 'ತನ್ನ ಕೃತಿಯ ಮೂಲಕ ದೀಕ್ಷಾಬೋಧೆಯಾಗಿ ನಿವೇದಿಸಿದ್ದಾನೆ.

ಹರಿಹರ–ರಾಘವಾಂಕ ಮತ್ತು ಕೆರೆಯ ಪದ್ಮರಸ ಈ ಮೂವರು ಕವಿಗಳ ಕಾಲ ವಿಚಾರವು ಬಹಳ ಚರ್ಚೆಗೆ ಗ್ರಾಸವಾಗಿವೆ. ಮೂವರ ಕಾಲವು ಒಂದೇ ಕಾಲಾವಧಿಯ ಪರಿಧಿಯಲ್ಲೇ ತೋಯ್ದಾಡುವುದರಿಂದ ಇವರು ಮೂರು ಜನ ಸಮಕಾಲೀನರೆಂದು ಇದುವರೆಗೂ ಚರ್ಚಿಸಿರುವ ಸಾಹಿತ್ಯ ಚರಿತ್ರೆಕಾರರ ಮತ್ತು ವಿದ್ವಾಂಸರ ಮಾತುಗಳು ಮತ್ತು ಅಭಿಪ್ರಾಯಗಳಲ್ಲಿ ಕಾಣಬಹುದಾಗಿದೆ. ಕಾಲ ವಿಚಾರದ ಚರ್ಚೆ ಇಲ್ಲಿ ಅಪ್ರಸ್ತುತವೆಂದು ಭಾವಿಸುತ್ತೇನೆ. ಮತ್ತು ಎಲ್ಲಾ ಚರ್ಚಿತ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಪದ್ಮರಸ ಮತ್ತು ಹರಿಹರ–ರಾಘವಾಂಕ ಕಾಲವನ್ನು ಹನ್ನೆರಡನೆಯ ಶತಮಾನದ ಕೊನೆಯ ಹಾಗೂ ಹದಿಮೂರನೆಯ ಶತಮಾನದ ಪೂರ್ವಾರ್ಧವೆಂದು ಗ್ರಹಿಸಬಹುದು.

ಮಂತ್ರಿಯಾಗಿ ಸಮಾಜ ಕಾರ್ಯಗಳಲ್ಲಿ ತೊಡಗಿ ಜನನಾಯಕನಾಗಿ ಬಿಂಬಿತನಾಗಿದ್ದ ಮತ್ತು ಆಧ್ಯಾತ್ಮ ಮತ್ತು ಶಿವಭಕ್ತನಾಗಿದ್ದ ಪದ್ಮರಸನು ವೀರಶೈವ ಮತ ಪ್ರಚಾರಕ್ಕಾಗಿ ದೀಕ್ಷಾಬೋಧೆ ಕೃತಿ ರಚನೆಡ ಮಾಡಿದನು. ಗ್ರಂಥಾರಂಭದಲ್ಲಿ ವೀಶ್ವನಾಥ (ಶಿವ)ನನ್ನು ಪ್ರಭುವೆಂದು ಪರಿಗಣಿಸಿರುವುದರಿಂದ ಇಲ್ಲಿಯೇ ರಾಜಪ್ರಭುತ್ವಕ್ಕೆ ವಿರೋಧವನ್ನು ವಚನ ಸಾಹಿತ್ಯದ ಪ್ರಭಾವ ಮತ್ತು ಕ್ರಾಂತಿಯಿಂದ ಉಂಟಾದ ಪ್ರಜಾಪ್ರಭುವನ್ನು ಮೇಲ್ಸ್ತರಕ್ಕೆ ಕೊಂಡೊಯ್ದಿರುವುದು ಗಮನಾರ್ಹ ಸಂಗತಿ.

ಶ್ರೀಮದ ಗಜೇಶ ಕರುಣಿ ಸು
ಧಾಮಯ ನತಜನಚಕೋರಚಯ ಹಿಮಕರ ಸು
ತ್ರಾಮಕ ಹರಿಸೇವಿತ ಗುಣ
ನಾಮನೆ ಸಲಹೆನ್ನ ವಿಶ್ವನಾಥ ಪ್ರಭುವೇ – (೧. ಪ್ರಥಮ ಸ್ಥಲ)

ಎಂದು ಪ್ರಾರ್ಥಿಸುತ್ತಾ ವೀರಶೈವ ದೀಕ್ಷೆಯನ್ನು ಪಡೆಯಲು ಬೇಕಾದ ವಿಷಯಗಳು, ಗುರುಶಿಷ್ಯ ಸಂವಾದ ರೂಪದಲ್ಲಿ ವಿವರಿಸಲಾಗಿದೆ. 'ದೀಕ್ಷಾಬೋಧೆಯ' ಒಂದು ಮತ್ತು ಮೂರನೆಯ ಸ್ಥಲಗಳು ಲಲಿತರಗಳೆಗಳಲ್ಲಿಯೂ ಎರಡನೆಯ ಸ್ಥಲ ಮಂದಾನಿಲರಗಳೆಯ ಲ್ಲಿಯೂ ಇದ್ದು, ಮಧ್ಯೆ ವೇದಾಗಮ ಪುರಾಣಗಳಿಂದ ಉದ್ಧರಿಸಿದ ಸಂಸ್ಕೃತ ಶ್ಲೋಕಗಳು ಸಾಕ್ಷಿಯ ರೂಪವಾಗಿ ಬಂದಿವೆ. ಹಲವಾರು ಧರ್ಮಗಳ ನೆಲೆವೀಡಾದ ಭರತ ಭೂಖಂಡದಲ್ಲಿ ಕಾಲಕ್ರಮೇಣ ಧರ್ಮಗಳ ಸಂಘರ್ಷ ಮತ್ತು ಮೇಲಾಟಗಳು ನಡೆದಿರುವುದು ಮತ್ತು ಸ್ವಧರ್ಮ ಪ್ರತಿಷ್ಠಾಪನೆಗಾಗಿ ರಾಜಾಸ್ತಾನದಲ್ಲಿ ಪಂಡಿತವರ್ಯರ ಪಾಂಡಿತ್ಯ ಪ್ರದರ್ಶನ ನಡೆದಿರುವುದನ್ನು ನಾವು ಗಮನಿಸಬಹುದು. ೧೨ನೆಯ ಶತಮಾನದಲ್ಲಿ ಧಾರ್ಮಿಕ ವಿಡಂಬನಾ ಕಾವ್ಯಗಳು ಹುಟ್ಟಿದವು. ನಂತರದಲ್ಲಿ ೧೩ನೇ ಶತಮಾನದಲ್ಲಿ ಪ್ರಮುಖವಾಗಿ ಕೆರೆಯ ಪದ್ಮರಸನ ಕೃತಿಯು ಧರ್ಮಪ್ರೇರಿತವಾದದ್ದಾಗಿ ಕಂಡುಬರುತ್ತದೆ.

ಕೆರೆಯ ಪದ್ಮರಸ ಮತ್ತು ಆಂಧ್ರದ ಬ್ರಾಹ್ಮಣ ಕವಿ ತ್ರಿಭುವನತಾತನಿಗೂ ನಡೆದ ವಾದ ಪ್ರಕರಣವೇ ಅವುಗಳಲ್ಲಿ ಪ್ರಮುಖವಾದಂತದ್ದು, ಅಂದರೆ ಬೇಲೂರಿನಲ್ಲಿ ತನ್ನ ತಪಶ್ಚಕ್ತಿಯಿಂದ ಕೆರೆಯನ್ನು ನಿರ್ಮಾಣ ಮಾಡಿದ ಶಿವಶರಣ ಪದ್ಮರಸನ ಪ್ರಖ್ಯಾತಿ, ಪ್ರಸಿದ್ಧಿ ಆಂಧ್ರದವರೆಗೂ ತಲುಪಿ ಅಲ್ಲಿಯ ತ್ರಿಭುವನತಾತನು 'ವಿಷ್ಣುವೇ ಪರಮದೈವ'ನೆಂದು ಸ್ಥಾಪಿಸಲು ದ್ವಾರಸಮುದ್ರದ ನರಸಿಂಹಬಲ್ಲಾಳನ ಆಸ್ಥಾನಕ್ಕೆ ಬರುತ್ತಾನೆ. ಆಗ ಬೇಲೂರಿನಿಂದ ಪದ್ಮರಸನು ದೋರಾಂಬುಧಿಯ ರಾಮಣ್ಣ, ಉಭಯ ಕವಿ ಶರಭಬೇರುಂಡ ರಾಘವ, (ರಾಘವಾಂಕ), ಹುಲಿಗೆರೆಯ ಮಾಯಿದೇವ ಪುರಾಣಭಟ್ಟ, ಗುರುಭಕ್ತ ಕಾಮಣ್ಣ, ವಿಶ್ವಣ್ಣನಂತಹ ವಿದ್ವಾಂಸರ, ಪಂಡಿತರ ಜೊತೆಯಲ್ಲಿ ಆಗಮಿಸಿದನು.

ಪದ್ಮರಸನು ನರಸಿಂಹಬಲ್ಲಾಳನ ಸಭೆಯಲ್ಲಿ ಶಿವಾದ್ವೈತ ಸಾಕಾರ ಸಿದ್ಧಾಂತ 'ಸಾನಮದ ಚರಿತ್ರ'ವೆಂಬ ಸಂಸ್ಕೃತ ಗ್ರಂಥವನ್ನು ರಚಿಸಿ ತ್ರಿಭುವನ ತಾತನನ್ನು ವಾದದಲ್ಲಿ ಜಯಿಸಿದನು. ಒಪ್ಪಂದದ ಪ್ರಕಾರ ತ್ರಿಭುವನ ತಾತನು ಕೆರೆಯ ಪದ್ಮರಸನಿಂದ ವೀರಶೈವ ದೀಕ್ಷೆಯನ್ನು ಪಡೆದು ಪದ್ಮರಸನ ಶಿಷ್ಯನಾದನು.

ಸಂಸ್ಕೃತದ 'ಸಾನಂದ ಚರಿತೆ'ಯನ್ನು ರಚಿಸಿ ತ್ರಿಭುವನ ತಾತನನ್ನು ಸೋಲಿಸಿದಂತೆ ಅನೇಕ ವೀರಶೈವ ಕವಿಗಳು ಮತ್ತು ವಚನಕಾರರು ತಮ್ಮ ಸ್ವಧರ್ಮಪ್ರತಿಷ್ಠಾಪನೆಗಾಗಿ ಜೈನ ಧರ್ಮವನ್ನು ವಿಡಂಬಿಸಿ ಕಾವ್ಯ ರಚಿಸಿದ್ದಾರೆ. ಪುಲಿಗೆರೆಯ ಆದಯ್ಯನ ಸೋಮನಾಥ ಪ್ರತಿಷ್ಠಾಪನೆ ಪ್ರಕರಣವೂ ಒಂದು. 'ದೀಕ್ಷಾಬೋಧೆ' ಕೃತಿಯಲ್ಲಿ ಹೆಸರೇ ಸೂಚಿಸುವಂತೆ ದೀಕ್ಷೆಯ ಕಾಲ (ಸಮಯ) (ಇಂದು ಲಿಂಗಧಾರಣೆಯನ್ನು ಪ್ರಾಪ್ತವ ಯಸ್ಕ ಅಥವಾ ಅದಕ್ಕಿಂತ ಕಿರಿಯನಾಗಿರುವ ಹುಡುಗರಿಗೆ ಸಂಪ್ರದಾಯ ಪ್ರಕಾರ ವಂಶದಲ್ಲಿ ಹಿರಿಯ ಮಗನೊಬ್ಬನಿಗೆ 'ಗುಡ್ಡ' (ದೇವರಗುಡ್ಡ) ನನ್ನಾಗಿ ಬಿಡುವುದರಿಂದ ಮಾಡಲಾಗುತ್ತದೆ. ಇಂತಹ ಸಂದರ್ಭದಲ್ಲಿ ಅವನು ಮದುವೆ ಆಗಿರಬಾರದು. ಮದುವೆಗೂ ಮುಂಚೆಯೇ ದೀಕ್ಷೆ ಪಡೆಯಬೇಕಾಗಿರುತ್ತದೆ. ಮತ್ತು ಅದರ ಕಟ್ಟಳೆಗಳನ್ನು ಪಾಲಿಸಬೇಕಾಗುತ್ತದೆ) ದಲ್ಲಿ ಗುರುವು ಶಿಷ್ಯನಿಗೆ ಮಾಡುವ ಉಪದೇಶವನ್ನು ನೀತಿ, ನಿಯಮಗಳನ್ನು ನಿರೂಪಿಸಲಾಗಿದೆ.

ವೀರಶೈವ ಧರ್ಮದಲ್ಲಿ ಶಿವದೀಕ್ಷಾ ಸಂಸ್ಕಾರಕ್ಕೆ ಬಹಳ ಮಹತ್ವವಿರುವುದನ್ನು ದೀಕ್ಷಾಬೋಧೆ ಕೃತಿಯು ಪ್ರಸ್ತುತಪಡಿಸುತ್ತದೆ. ವೇದಾಗಮಗಳ ಕಾಲದಿಂದಲೂ ದೀಕ್ಷಾಪದ್ಧತಿ ಆಚರಣೆಯಲ್ಲಿದೆ. ಅಂಗದ ಮೇಲೆ ಲಿಂಗ ಸಂಬಂಧವನ್ನುಂಟು ಮಾಡುವುದರ ಮೂಲಕ ತನುತ್ರಯ, ಮಲತ್ರಯ ಮತ್ತು ದೀಕ್ಷಾತ್ರಯಗಳನ್ನು (ಮೂರು ಸ್ಥಲಗಳಲ್ಲಿ ವಿವರಿಸಿದೆ) ನಾಶಪಡಿಸುವುದೇ ದೀಕ್ಷೆಯಾಗಿದೆ. ದೀಕ್ಷಾಬೋಧೆ ಶಾಸ್ತ್ರಗ್ರಂಥವಾದರೂ ಕಾವ್ಯಗುಣಗಳೂ ಅಲ್ಲಲ್ಲಿ ಮಿಂಚಿ ಮರೆಯಾಗಿವೆ.

ಕೃತಿ ವಿಶ್ಲೇಷಣೆ: ವೀರಶೈವ ಕವಿಗಳಾದ ಹರಿಹರ-ರಾಘವಾಂಕರ ಸಮಕಾಲೀನನಾದ ಕೆರೆಯ ಪದ್ಮರಸನ ದೀಕ್ಷಾಬೋಧೆ ೧೩ನೇ ಶತಮಾನದ ಲಿಂಗಾಯತ ಮತ ಸಮಾಜಗಳ ಸ್ವರೂಪವನ್ನು ತಿಳಿಯುವವರಿಗೆ, ಒಂದು ಒಳ್ಳೆಯ ಆಕಾರವಾಗಿದೆ. ಶಿವಭಕ್ತರಾದವರು, ವೀರಶೈವ ಮತಾವಲಂಬಿಗಳಾದವರೂ ಹಾಗೂ ಲಿಂಗವಂತ ದಲಿತರಾದವರಿಗೂ ಅವರು ಅನುಸರಿಬೇಕಾದ ಧರ್ಮಾಚರಣೆ, ಲಿಂಗಾಚರಣೆ ಮತ್ತು ವೀರಶೈವ ತತ್ವಸಿದ್ಧಾಂತವನ್ನು ನೇರವಾಗಿ ಪ್ರತಿಪಾದಿಸಿರುವ ಕವಿ ಕೆರೆಯ ಪದ್ಮರಸನು ಸ್ವಮತ (ವೀರಶೈವ)ವನ್ನು ಉತ್ತಮವೆಂದು ಪ್ರತಿಪಾದಿಸಿದ್ದಾನೆ. ಜಗತ್ತಿನ ಸಕಲ ಚರಾಚರಗಳಿಗೆ 'ಪ್ರಕೃತಿ ನಿಯಮ' ಇರುವಂತೆ ಮಾನವ ಕುಲದ ಶಿವಶರಣರಿಗೂ, ವೀರಶೈವ ಮತಾಚರಣೆಯವರಿಗೂ ಒಂದು ನಿಯಮವನ್ನು ಬೋಧಿಸುವ ಉತ್ತಮ ಕೃತಿ ಈ ದೀಕ್ಷಾಬೋಧೆ.

ಕೆರೆಯ ಪದ್ಮರಸ ಮತ್ತು ಆಂಧ್ರದ ತ್ರಿಭುವನತಾತ ಇವರ ನಡುವಿನವಾದ ಸರಣಿಯ ಭಾಗವೇ ಈ ಕೃತಿಯ ರೂಪ. ಕೃತಿಯ ಮೂಲವಸ್ತು ಸ್ವಧರ್ಮ ಪ್ರತಿಪಾದನೆ, ವೀರಶೈವ ಧರ್ಮವೇ ಶ್ರೇಷ್ಠವಾದ ಮಾನವಧರ್ಮವೆಂಬುದು ಪ್ರಮುಖ ಆಶಯವಾಗಿದೆ. ಇಲ್ಲಿ ಯಾವುದೇ ಕುಲ, ಧರ್ಮ ಜಾತಿಯ ಸೋಪಾನವಿಲ್ಲದೆ ಪ್ರತಿಯೊಬ್ಬ ಶಿವಶರಣನಾದವನು ಸರ್ವರೊಳು ಸಮಾನ ಎಂಬುದು ವಿಧಿತವಾಗಿದೆ.

ಕ್ರಾಂತಿಕಾರಿ ಬಸವಣ್ಣನಂತೆ ಬಸವಣ್ಣನಂತೆ ಕೆರೆಯಪದ್ಮರಸನು ಮಹಾಶಿವಭಕ್ತನಾದರೂ ಕೂಡ "ಶಿವಭಕ್ತರಲ್ಲದವರೇ ಅವನ ಪ್ರಕಾರ ಅಂತ್ಯಜರು, (ಕಳೆವುದಂತ್ಯಜರೆಂದು ಶಿವಭಕ್ತರಲ್ಲದವರ...) ಮತ್ತು ವೀರಶೈವರಿಗೆ 'ಸೂತಕಗಳಿಲ್ಲಾಗಿ ಜಾತಿದೋಷಗಳಿಲ್ಲ" ಎಂಬ ಮಾತನ್ನು ಒಪ್ಪಲಾಗುವುದಿಲ್ಲ. ಸಾವಿಲ್ಲದ ಮನೆಯ ಸಾಸಿವೆ ಇಲ್ಲದಿರುವಂತೆಯೇ ಸೂತಕಗಳಿಲ್ಲದ ಮನೆಯೂ ಇರುವುದಿಲ್ಲ. ಒಂದು ವೇಳೆ ಸೂತಕಗಳೇ ಇಲ್ಲವೆನ್ನುವುದಾದರೆ ಜಾತಿಗಳೇ ಇಲ್ಲವೆಂದಾಗುತ್ತದೆಯಲ್ಲವೇ?

ಮತ್ತೊಂದು ಪ್ರಕರಣ ಈ ಕೃತಿಯಲ್ಲಿರುವಂತೆ ಈಶ್ವರ=ಬ್ರಾಹ್ಮಣ, ವಿಷ್ಣು=ಕ್ಷತ್ರಿಯ, ಬ್ರಹ್ಮ=ವೈಶ್ಯ, ಇಂದ್ರ=ಶೂದ್ರನೆಂಬುದು ಅವನ ಕಾಲದ ನಂಬುಗೆಯೆಂಬುದನ್ನು ಪದ್ಮರಸನ ಮಗ ಕುಮಾರ ಪದ್ಮರಸನು ಪ್ರತಿಪಾದಿಸಿರುವುದರಿಂದ ಅದು ಸಮಾನತೆಗೆ ವಿರುದ್ಧವಾದ ಮತ್ತು ಸಾಮಾಜಿಕ ಅಸಮಾನತೆಯನ್ನು ಎತ್ತಿಹಿಡಿದಿರುವುದರಿಂದ ಇಂತಹ ಮಾತುಗಳನ್ನು ಒಪ್ಪಲು ಅಸಾಧ್ಯ ಮತ್ತು ಅಸಿಂಧುವಾಗಿದೆ ಎಂದು ಭಾವಿಸಬಹುದು. ಹಿಂದೂ ಧರ್ಮದ ಪ್ರಾತಿನಿಧಿಕ ಭಾಗವೇ ಆಗಿರುವ ವೀರಶೈವ ಧರ್ಮವು ಇಂದ್ರನನ್ನು ಶೂದ್ರನೆಂದು ಸೂತ್ರೀಕರಿಸಿದರೆ, ಅದನ್ನೇ ಹಿಂದೂ ಧರ್ಮವು ಇಂದ್ರನನ್ನು ದೇವತೆಗಳ ಅಧಿಪತಿಯೆಂದು ಸ್ವೀಕರಿಸಿದೆ. ಇದು ವೈರುಧ್ಯದಿಂದಲೇ ಕೂಡಿದೆ.

ಈ ಮೇಲಿನ ಎರಡು ಅಂಶಗಳನ್ನು ಗಮನಿಸಿದರೆ ವೀರಶೈವ ಮತ್ತು ಹಿಂದೂ, ಈ ಎರಡು ಧರ್ಮಗಳು ಪ್ರತ್ಯೇಕವಾದವುಗಳೆಂದು ಭಾಸವಾಗುತ್ತದೆ. ಹಾಗಾಗಿಯೇ ಇಂದು ವೀರಶೈವ ಧರ್ಮವು ಹಿಂದೂ

ಧರ್ಮದಿಂದ ಬಿಡಿಸಿಕೊಳ್ಳಲು ಪ್ರತ್ಯೇಕ ಅಸ್ತಿತ್ವವನ್ನು ಸ್ಥಾಪಿಸಲು/ ಸ್ಥಾಪಿಸಿಕೊಳ್ಳಲು ಪ್ರಯತ್ನ ನಡೆಸುತ್ತಿದೆ. ವೀರಶೈವ ಧರ್ಮವು ಸನಾತನ ಹಿಂದೂ ಧರ್ಮಕ್ಕಿಂತ ಈಚೀನದು ಅಂದರೆ ಬಸವಾದಿ ಶರಣರು ಕಟ್ಟಿಕೊಂಡ ಧರ್ಮವದು. ಹಾಗಾಗಿ ದಕ್ಷಿಣ ಭಾರತದ ಸ್ಥಳೀಯ ಧರ್ಮವೆಂದು ವೀರಶೈವ ಧರ್ಮವು ಗುರುತಿಸಿಕೊಂಡಿದೆ. ಇದನ್ನು ಎಂ.ಎಂ.ಕಲಬುರ್ಗಿ ಅವರ ಮಾತುಗಳು ಸಮರ್ಥಿಸುತ್ತವೆ.

ಇಲ್ಲಿ ವೀರಶೈವ ಧರ್ಮವು ಇಂದ್ರನನ್ನು ಶೂದ್ರನೆಂದು ಕರೆದರೆಂದರೆ ಸಮಾನತೆಯನ್ನು ಈ ಧರ್ಮದಲ್ಲಿ ಕಾಣಲು ಸಾಧ್ಯವಿಲ್ಲವೆಂದಾಗುತ್ತದೆ. ಮತ್ತು ವರ್ಣಾಶ್ರಮ ಪದ್ಧತಿಯ ಆಚರಣೆಯು ವೀರಶೈವ ಧರ್ಮದಲ್ಲಿ ಇದ್ದಂತೆ ಕಾಣುತ್ತದೆ. ಸಾಮಾನ್ಯನಿಗೂ ಸಮಾಜದಲ್ಲಿ ಅಸ್ತಿತ್ವವನ್ನು ತಂದುಕೊಟ್ಟ ವಚನ ಸಾಹಿತ್ಯವು ವೀರಶೈವ ಧರ್ಮದ ಒಡಲಲ್ಲಿ ಕಲೆತು ಪ್ರದರ್ಶನವಾಗಿದ್ದರೂ ಕೂಡ ನಂತರದಲ್ಲಿ ಬಂದಂತಹ ಕವಿಗಳ ಕಾವ್ಯಗಳಲ್ಲಿ ಈ ರೀತಿಯ ಜಾತಿ, ಧರ್ಮದ ವೈರುದ್ಯ ಕಂಡುಬಂದಿರುವುದು ವಿಷಾದದ ಸಂಗತಿ ಮತ್ತು ಕಲ್ಯಾಣ ಕ್ರಾಂತಿಯು ಉಂಟಾಗಿ ವೀರ ಶೈವ ಧರ್ಮವು ತನ್ನ ಅಸ್ತಿತ್ವಕ್ಕೆ ತಂದುಕೊಂಡ ಧಕ್ಕೆ ಎಂಬುದಕ್ಕೆ ಈ ರೀತಿಯ ಸಂಗತಿಗಳು ಕಾರಣೀಭೂತವಾಗುತ್ತವೆ.

ಆದರೆ ಪದ್ಮರಸನು 'ಕುಷ್ಠರೋಗಿಯನ್ನು ಉದ್ಧರಿಸಿದುದು ಮೇಲಿನ ವಾದಕ್ಕೆ ಅಪವಾದವಾಗುತ್ತದೆ. ಪದ್ಮರಸ ಶಿವಭಕ್ತರ ಕಾಲ್ಗೆರಗಿ ಒಳಗೆ ಕರೆದುಕೊಂಡು ಹೋಗಿ ಸತ್ಕರಿಸುತ್ತಾನೆ. ಇದನ್ನು ಸಹಿಸದ ಆಸ್ಥಾನದ ಇತರರು ಮಂತ್ರಿಯಾದ ಕೆರೆಯ ಪದ್ಮರಸನ ಮೇಲೆ ಚಾಡಿ ಹೇಳುತ್ತಾ "ಕುಲಹೀನನೋರ್ವನಂ ಮೆಯ್ಯಟ್ಟು ಕೂಳ್ಪುಟ್ಟದೆ ಬಗುತಿಕೆಯನಾಂತಿರ್ಪನಾತನಂ ನಿಲಯಕ್ಕೆ ತಂದು ಕಾಲ್ದೊಳೆದು ತಜ್ಜಲ ಮೀಂಟಿಯುಣಲಿಕ್ಕಿ ಮಿಕ್ಕಿದುಂಡು ಪೊಲಗಲಸಿದಂ ಬ್ರಹ್ಮವಿನ್ನೆಲ್ಲಿ ಎಂದು ನುಡಿದಾಗ ಅರಸ ವಿವರಣೆ ತಿಳಿಯಲು ಪದ್ಮರಸನನ್ನು ಕರೆಯಿಸಿ, ನೀವಿಂತಿಂತ್ಯಜನುಮಾದ ಮೆಯ್ಯಟ್ಟವನೋಳ್ ಬೆರೆಯುವುದು ಚಿತವೇ ಎಂದು ಕೇಳುತ್ತಾನೆ. ಇಲ್ಲಿ ಅರಸನಿಗೂ ಕೂಡ ಶ್ರೀಸಾಮಾನ್ಯನಲ್ಲಿ ಗೌರವವಿಲ್ಲವೆಂಬುದು ಖಚಿತವಾಗಿಯೇ ಇದೆ.

ಇದಕ್ಕೆ ಪ್ರತ್ಯುತ್ತರವಾಗಿ ಪದ್ಮರಸನು
ಶಿವಶಿವಾಯೆನುತೆರಡು ಕೈಗಳಂ ನಿಜಕರ್ಣ
ವಿವರಕೊಂದಿಸುತೀ.....ವೇದಾಂತ್ಯಜಂ
ಸುವಿವೇಕಿಗಳ ನಿಶ್ಚಲಮನೋತ್ಯಜಂ ಸಂವಿದಂತ್ಯಜಂ ತಾನಲ್ಲದೆ.

ಎಂದು ವಿವರಿಸುತ್ತಾನೆ. ಇಲ್ಲಿ ಶಿವಭಕ್ತರಾದವರು ಯಾರೇ ಆದರೂ ಅವರಿಗೆ ಯಾವುದೇ ಕುಲ, ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯ ಎಂಬ ಭಿನ್ನ ಬೇಧಗಳಿರುವುದಿಲ್ಲೆಂಬುದನ್ನು ತಿಳಿಸಿ ಹೇಳುತ್ತಾನೆ. ಜೊತೆಗೆ ಕವಿಯೇ ಹೇಳುವಂತೆ ತನ್ನ ಕೃತಿಯ ವೈಶಿಷ್ಟ್ಯ ವಿವರಿಸುತ್ತಾ "ಇದು ಮತೀಯ ಚಮತ್ಕೃತಿಯಲ್ಲ. ಶ್ರುತಿ ಶಾಸ್ತ್ರ ಆಗಮ ಪುರಾಣರಹಸ್ಯಾದಿಗಳೊಂದಿಗೆ ಅತಿಶಯವಾದ ಯುಕ್ತಾರ್ಥವನ್ನು ಹೇಳುತ್ತಿರುವುದರಿಂದ ಭಕ್ತಿ ಜನರು ಚಿತ್ತೈಸಿ ಕೇಳಬೇಕು ಎಂದಿರುವುದು ಪ್ರಮುಖ ಅಂಶವಾಗಿ ಕಂಡುಬರುತ್ತದೆ.

ಕೆರೆಯ ಪದ್ಮರಸ ವಿವರಿಸುವಂತೆ ಮಾಯಾಮಲವು ಜಾತಿಧರ್ಮಗಳ ಸಂಪ್ರೀತಿಯೇ ಆಗಿರುತ್ತದೆ. ಇದನ್ನು ತ್ಯಜಿಸಬೇಕಾದರೆ 'ಕುಲ'ವೆಂಬ ಕಾಳ್ಕರುಳತನವನ್ನು ಬಿಡಬೇಕು. ಕುಲದ ನೆಲೆಯನ್ನು ತಿಳಿಯಬೇಕಾದರೆ ಹೊಲೆಯೆಂಬುದೇ ಉಚಿಟಿಲ್ಲದೆ ಶುದ್ಧಕುಲವಿಲ್ಲ. ಕಾಯಕ್ಕೆ ಕುಲವೋ ಜೀವಕ್ಕೆ ಕುಲವೋ ಪೇಳು ಈ ಎರಡರೊಳಗೆಯನ್ನವುದಕ್ಕೆ ಕುಲಪೇಳು' ಎಂದು ಶಿಷ್ಯ (ತ್ರಿಭುವನತಾತ)ನು ಕೇಳಿದಾಗ ಕಾಯವಾದರೂ ಸಹಿತ ಅದು ಹೊಲೆಯಲ್ಲಿ ಹುಟ್ಟಿದುದು. ಜೀವವೂ ನಿರವಯವಾದುದು. ಇವೆರಡಕ್ಕೂ ಸತ್ಕುಲವಿಲ್ಲ.

ಹೊಟ್ಟೆಯಲ್ಲಿ ಹೊಲೆ ಹುಟ್ಟುವಲ್ಲಿ ಹೊಂದುವಲ್ಲಿ ಹೊಲೆ
ನಟ್ಟನಡುವೆ ಹಗೆ ಬಂದುದು ಸತ್ಕುಲದ ಹರಲೆ

ಎಂದು ಸತ್ಕುಲದವರಿಗೇ ಹೊಲೆಯೆಂಬುದೇ ಇಲ್ಲ ಎಂದು ಪದ್ಮರಸನು ಹೇಳಿದಾಗ, ತ್ರಿಭುವನ ತಾತನು. "ದೇಹವಿಡಿದ ಮೇಲೆ ಕುಲವಿಲ್ಲವೆಂದು ಹೇಗೆ ಹೇಳುವುದು? ಪ್ರಾಣಿಗಳಿಗೂ, ವಸ್ತುಗಳಿಗೂ ಕುಲವನ್ನು ಹೇಳಲಾಗುವುದಿಲ್ಲವೇ? ಎಂದು ಪ್ರಶ್ನಿಸುತ್ತಾನೆ.

ಅದಕ್ಕೆ ಗುರುವು ಆ ಪ್ರಾಣಿವಸ್ತುಗಳಿಗೆ ಕುಲಗಳನ್ನು ಹೇಳುವವರು ಮನುಷ್ಯರು. ಅವುಗಳಿಗೆ ಜಾತಿಸೂತಕವಿಲ್ಲವಾಗಿ ಜಾತಿದೋಷಗಳಿಲ್ಲ. ರತಿಸಂಕರಗಳಿಲ್ಲದ ಪ್ರಾಣಿಗಳಿಗೆ ಕುಲವಿಲ್ಲವೆಂದಾಗ ರತಿ ಸಂಕರವುಳ್ಳ ಮಾನವರಿಗೆ ಸತ್ಕುಲವೆಲ್ಲಿಂದ ಬಂತು? ಸೂತಕ ಜನನದವರಿಗೆ ಕೇಳುಕುಲ, ಸೂತಕ ರಹಿತವಾದ ಶಿವಭಕ್ತರಿಗೆ ಇರುವುದು ಸತ್ಕುಲ ವೊಂದೇ. ಆದ್ದರಿಂದ ಶಿವಲಿಂಗಕ್ಕೆ ವರ್ಣವಿಲ್ಲ. ಆಶ್ರಮಗಳಿಲ್ಲ, ಯಾವ ಕುಲವೂ ಇಲ್ಲ, ಇಂತಹ ಶಿವಲಿಂಗರಿಂದ ಜನಿಸಿದ ಶಿವಜಾತರಿಗೂ ಕುಲವಿಲ್ಲ ಎನ್ನುತ್ತಾರೆ. ಮತ್ತು ಶಿವಭಕ್ತರಾದವರಿಗೆ ಸೂತಕವಾಗಲಿ ಜಾತೀಯತೆಯಾಗಲಿ ಇರುವುದಿಲ್ಲ. ಅವರು ಲಿಂಗದ ನಿಜದಲ್ಲಿ ಯುಕ್ತರಾದವರು. ಕುಲದ ಬೀಜವನ್ನು ಸುಟ್ಟಂಥವರು ಕುಲದ ಮದವನ್ನು ಕಳಚಿ ಹಾಕಿ ನಾಶಪಡಿಸಿದಂಥವರು. ನಾರಿಯರು, ಪುರುಷರು, ಷಂಡ ಶಬರಾದಿಗಳು, ದ್ವಿಪಚರು, ದ್ವಿಜಾಧಿಪರು ಮುಂತಾದವರೇ ಆಗಲಿ ಶುದ್ಧಲಿಂಗದ ಅರ್ಚನೆಯನ್ನು ಮಾಡಿದಲ್ಲಿ ಅವರಿಗೆ ಶಿವಪ್ರಾಪ್ತಿಯುಂಟಾಗುವುದು. ಈ ಶ್ರದ್ಧೆ ನಿಶ್ಚಿಲಗೊಂಡಾಗ ಮಾಯಾಮಲ ನಾಶವಾಗುವುದು ಎಂದು ಪದ್ಮರಸ ಕುಲದ ಬಗ್ಗೆ ವಿವರಿಸುತ್ತಾ ತಿಳಿಸಿದ್ದಾನೆ.

ಇನ್ನು ಕಾರ್ಮಿಕಮಲದ ಬಗ್ಗೆ ವಿವರಿಸುತ್ತಾ 'ಮನುಜಜನ್ಮದಲ್ಲಿ ಬಂದ ಮೇಲೆ ಪ್ರತಿಯೊಬ್ಬರೂ ಅನುಭವಿಸಬೇಕೆಂದು ಶಿವನು ಹಲವಾರು ರೀತಿಯಲ್ಲಿ ದ್ರವ್ಯವನ್ನು ನಿರ್ಮಿಸಿದ್ದಾನೆ. ಧರೆ, ಶಿಲೆ, ತರು, ಗುಲ್ಮ, ಲತೆಗಳಲ್ಲಿ ಉದ್ಯೋಗಾದಿಗಳಲ್ಲಿ, ಕನಕ ಮೊದಲಾದ ಅಖಿಲಾದಿ ವಸ್ತುಗಳಲ್ಲಿ ಇರಿಸಿದ್ದಾನೆ. ಇಲ್ಲಿ ಸಂಗ್ರಹಿಸಿದ ಹಣವನ್ನು ಸಹಿತ ಶಿವಭಕ್ತರಿಗೆ ಅಂದರೆ ತನುವನ್ನು ಗುರುವಿಗೂ, ಮನವನ್ನು ಲಿಂಗಕ್ಕೂ, ಧನವನ್ನು ಜಂಗಮಕ್ಕೂ ಅರ್ಪಿಸಬೇಕೆಂಬ ನಿಲುವನ್ನು ಪದ್ಮರಸನೂ ಒಪ್ಪಿರುವುದು ಸಮಯೋಚಿತವಾಗಿದೆ. ಹೀಗೆಯೇ ಹಲವು ರೀತಿಯಲ್ಲಿ ಮಾನವ ಸಮಾಜದ ನೈತಿಕ ಜೀವನಕ್ಕೆ ಸಂಬಂಧಿಸಿದ ಕೆಲವು ವಿಚಾರಗಳು ಹೇಳಲ್ಪಟ್ಟಿವೆ. ಸಮಾಜದಲ್ಲಿರುವ ಅನಿಷ್ಟ, ಆಚಾರ-ವಿಚಾರಗಳನ್ನು ಕುರಿತು ತೋರಿದ ಪದ್ಮರಸ ಪ್ರತಿಭಟನಾ ಮನೋಧರ್ಮವನ್ನು ಇಲ್ಲಿ ಗುರುತಿಸಬಹುದಾಗಿದೆ.

ದೀಕ್ಷೆಯು ವೀರಶೈವ ಮತದ ಪ್ರಮುಖವಾದ ಸಂಸ್ಕಾರವಾಗಿದೆ. ದೀಕ್ಷಾಬೋಧೆಯಲ್ಲಿ ತ್ರೈಮಲವನ್ನು ತೊಡೆವ, ಸುಜ್ಞಾನವನ್ನು ನೀಡುವ ಮೃಡನೊಳೇಕಾರ್ಥವಹ ಬೆಡಗಿನ ಉಪಾಯವಿದೆಂದು ಸಮುಚಿತವಾಗಿ ವರ್ಣಿಸಲಾಗಿದೆ.

ದೀಯತೇ ಜ್ಞಾನಸಂಬಧಃ ಕ್ಷೀಯತೇ ಚ ಮಲತ್ರಯಂ
ದೀಯತೆ ಕ್ಷೀಯತೇ ಯೇನ ಸಾದೀಕ್ಷೇತಿ ನಿಗದ್ಯತೇ

ಹಾಗಾಗಿ ಕೆರೆಯ ಪದ್ಮರಸನು ತ್ರಿಭುವನತಾತನಿಗೆ ನೀಡಿದ ದೀಕ್ಷಾಬೋಧೆಯು ವೀರಶೈವ ತತ್ವ, ಮತನಿಷ್ಠೆ, ಏಕಮೇವ ಧರ್ಮಪ್ರತಿಪಾದನೆಯ ಸಂಕೇತವಾಗಿದೆ. ಇಲ್ಲಿ ದೀಕ್ಷೆ ಪಡೆದು ತ್ರಿಭುವನತಾತನಿಗೆ ಕೆರೆಯ ಪದ್ಮರಸನು ವೀರಶೈವ ಧರ್ಮದ ಅತ್ಯಂತ ಕಠಿಣವಾದ ಆಚರಣೆಯ ಮೂಲಕ ಪಡೆಯಬಹುದಾದ ಆತ್ಮ ಮತ್ತು ಜೀವಾತ್ಮಗಳ ಮುಕ್ತಿ ಮತ್ತು ತೃಪ್ತಿಯ ಬಗೆಗಿನ ನಿಲುವನ್ನು ಹೇಳುತ್ತಾನೆ. ಆ ಆಚರಣೆಗಳು ಇಂದಿಗೂ ಕಂಡರೂ ಅವುಗಳ ಸ್ವರೂಪ ಮತ್ತು ವಿಧಾನಗಳು ವಿಭಿನ್ನವಾಗಿದ್ದು ಜಾತ್ಯಾತೀತವಾಗಿವೆ.

ಬ್ರಾಹ್ಮಣನಾಗಿದ್ದ ತ್ರಿಭುವನತಾತ ವಾದದಲ್ಲಿ ಸೋತ ಕಾರಣ ತನ್ನ ಬ್ರಾಹ್ಮಣ್ಯತ್ವವನ್ನು ತ್ಯಜಿಸಿ ಶಿವತ್ವಕ್ಕೆ ಶರಣಾಗುವುದು ದೈವಾಂತರದ ಕುರುಹಾಗಿದೆ. ಮತಾಂತರದ ಪ್ರಭಾವವಿರುವುದನ್ನು ಗಮನಿಸಬಹುದು. ೧೨ ಮತ್ತು ೧೩ನೇ ಶತಮಾನದ ವಚನ ಸಾಹಿತ್ಯ ನಂತರದಲ್ಲಿ ಕಾಣಿಸಿಕೊಂಡ ವೀರಶೈವ ಸಾಹಿತ್ಯವು ಜೈನ ಸಾಹಿತ್ಯ ಮತ್ತು ಧರ್ಮದೊಂದಿಗೆ ಸಂಘರ್ಷಕ್ಕೊಳಗಾಗಿ ಬೆಳೆದು ಜನಪದೀಯವಾಗಿ ಸಾಮಾನ್ಯನಿಗೂ ನಿಲುಕದಂತ ಸಾಹಿತ್ಯವಾಗಿದೆ. ವೈದಿಕ ಬ್ರಾಹ್ಮಣರು ಕೃಷ್ಣಪಾರಮ್ಯವನ್ನು ಎತ್ತಿ ಹಿಡಿಯುವ ಸಂದರ್ಭದಲ್ಲಿ ಶಿವನಾಧಿಕ್ಯವನ್ನೇ ಮೊದಲು ಮಾಡಿ ಸೃಷ್ಟಿಯ ಮೂಲ ಶಿವನೇ ಎಂದು ಸ್ವಧರ್ಮ ಪರಿಪಾಲನೆ ಮತ್ತು ಪ್ರತಿಷ್ಠಾಪನೆಗೈದ ವೀರಶೈವ ಸಾಹಿತ್ಯವು ಶಿವನನ್ನು ಶಿವತ್ವವನ್ನೂ ಎತ್ತಿ ಹಿಡಿದಿದೆ.

ಪದ್ಮರಸನು ಶಿವಶರಣರು ಮತ್ತು ಅವರ ಗುರುತರವಾದ ಲಾಂಛನವನ್ನು ಕಂಡರೆ ಭವಿಯು (ಅರಸ, ರಾಜ, ದೊರೆ ಸೇರಿದಂತೆ ಇತ್ಯಾದಿ) ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಹೇಳುತ್ತ ಮತ್ತು ಅದಕ್ಕೆ ವಿರುದ್ಧವಾದರೆ ಅದರಿಂದಾಗುವ ಅನಾಹುತದ ಬಗ್ಗೆ ಬಹಳ ಸ್ವಾರಸ್ಯಕರವಾಗಿ ತಿಳಿಸಿದ್ದಾನೆ.

ಈಶಲಾಂಛನವ ಕಂಡಾಸನವಿಳಿಯಬೇಕು.
.....
ಇಳಿಯದಾಸನದೊಳಿರೆ ಪಿತನ ಸದ್ಧರ್ಮಮಂ
ಕಳೆದು ತಾನುಂಬ ಕೌರವಮಪ್ಪನರಕಮಂ (೧-೭೨)

ಇಲ್ಲಿ ಗಮನಿಸಬೇಕಾದದ್ದು ರಾಜಪ್ರಭುತ್ವವನ್ನು ಕೆರೆಯ ಪದ್ಮರಸ ವಿರೋಧಿಸಿರುವುದು ಮತ್ತು ಪ್ರತಿಭಟಿಸಿರುವುದನ್ನು.

ಶಿವನಿಂದೇ ಜನ್ಮ ಪ್ರಾಪ್ತಿ ಆದರೂ ಕೂಡ ಸಾವಿರ ಜನ್ಮದ ತಪಸ್ಸಾಚರಣೆಯಿಂದ ಮಾತ್ರವೇ ಶಿವಶರಣ ಜನ್ಮಬರುವುದು. ಹಾಗಾಗಿಯೇ ಸ್ವಧರ್ಮ, ಸ್ವಜಾತಿಯ ಅಭಿಮಾನದಿಂದ ಕೆರೆಯ ಪದ್ಮರಸನು

....ಸುರೆಮಾಂಸಭಕ್ಷಣೆಯು ಕಾಮಮೇಳಂಗಳಂ
ಪರದೈವ ಭಜನೆ ಪರವಧುಪರಧನಂಗಳಂ
ಬಿಡಬೇಕು ಬಿಡದಿರಲು ಬಿಡುಗವನ ಗುರುಲಿಂಗ
ತೊಡರುಗು ಮಹಾದ್ರೋಹ ಭವಿ ಪಾತಕರ ಸಂಗ (೧-೪೯)

ಎನ್ನುತ್ತಾ ಸನ್ಮಾರ್ಗದಿಂದ ಸಚ್ಚಾರಿತ್ರದಿಂದ ಇರಬೇಕೆಂದು ದೀಕ್ಷಾ ಬೋಧೆಯಲ್ಲಿ ನೇರವಾಗಿ ಬೋಧಿಸುತ್ತಾ, ಅಂತಹ ಆಚರಣೆಯನ್ನು ಪಾಲಿಸದಿದ್ದರೆ ಆಗುವಂತಹ ಅನಾಹುತಗಳನ್ನು ಸಾಂಕೇತಿಕವಾಗಿ ನಿರ್ದೇಶಿಸಿದ್ದಾನೆ. ಪರದೈವ ಭಜನೆ ಬಿಡಬೇಕೆಂಬ ಮಾತಿನಲ್ಲಿ 'ಏಕದೇವೋಪಾಸನೆ'ಯನ್ನು ಪಾಲಿಸುವ ಕ್ರಮ 'ಅದ್ವೈತ' ಸಿದ್ಧಾಂತವನ್ನು ಕಾಣಬಹುದಾಗಿದೆ. ಸಮಾಜದಲ್ಲಿ ನಾನಾವರ್ಗದ, ನಾನಾವೃತ್ತಿಯ ಜನವರ್ಗವಿರುವಾಗ 'ಏಕದೇವೋಪಾಸನೆ'ಯ ಪರಿಕಲ್ಪನೆ ಮತಾಂತರ ಮತ್ತು ಸ್ವಧರ್ಮವೇ ಶ್ರೇಷ್ಠವೆಂಬ ಪುನರುಕ್ತಿಯಾಗಿದೆ.

ಭವಿಯ ಮನೆಯನ್ನಪಾನವನುಣ್ಣದಿರಬೇಕು
ಭವಿಯಾದ ಮಾತಪಿತರಂ ವಿವರಿಸಲು ಬೇಕು
ವಿವರಿಸದೆಯವರಿಡಲು ಉಂಡುದುಂ ಮನಸಂದು
ಶಿವರಹಸ್ಯದೊಳೆಂದ ಗೋಮಾಂಸ ಸರಿಯೆಂದು (೧-೫೮)

ಇಲ್ಲಿ ಗಮನಿಸಬೇಕಾದದ್ದು ಮುಖ್ಯವಾಗಿ ಆಹಾರ ಪದ್ಧತಿಯ ವಿಡಂಬನೆ. ಜಗತ್ತಿನಲ್ಲಿ ಸರ್ವರಿಗೂ ಒಂದೇ ರೀತಿಯ ಆಹಾರವು ರುಚಿಸುವುದಿಲ್ಲ. ಅದು ಅವರವರಿಗೆ ಸೇರಿದ್ದಾಗಿರುತ್ತದೆ. ಆಹಾರಕ್ಕೆ ಯಾವುದೇ ರೀತಿಯ ಜಾತಿಯ ಲೇಪನ ಸಲ್ಲುವುದಿಲ್ಲ. ಗೋಮಾಂಸ 'ದಲಿತರ' ಶ್ರೇಷ್ಟವಾದ ಆಹಾರ ಕ್ರಮವಾಗಿದೆ. ತನ್ನ ತಾನು ಬಣ್ಣಿಸಿಕೊಳ್ಳಲು ಅಥವಾ ತನ್ನ ಅಸ್ತಿತ್ವವನ್ನು ನಿರೂಪಿಸಲು ಇನ್ನೊಂದು ವರ್ಗದ ಜನರ ಬಗ್ಗೆ ಹೀಯಾಳಿಸುವುದು ಅನರ್ಥವಾಗುತ್ತದೆ. ಬೇಡರ ಕಣ್ಣಪ್ಪನು ಶಿವನಿಗೆ ಮಾಂಸವನ್ನೇ ನೈವೇದ್ಯ ಮಾಡುತ್ತಿದ್ದನು. ಅವನಂತೆ ಅನೇಕ ಶರಣರು ಕೂಡ ಇದೇ ಪದ್ಧತಿಯನ್ನು ಅನುಸರಿಸುತ್ತಿದ್ದರು. ಎಂಬುದನ್ನು ವಚನಕಾರರಲ್ಲಿ ನಾವು ಕಾಣಬಹುದು.

ತಿನ್ನುವ, ಉಣ್ಣುವ ಆಹಾರ ಕ್ರಮದಲ್ಲೇ ಜಾತಿಯ ಹೆಸರನ್ನು ಸೂಚಿಸುವುದಾದರೆ ದಲಿತರಿಗಿಂತ ಶುದ್ಧರಾದವರು, ಶ್ರೇಷ್ಠರಾದವರೂ ಬೇರೆ ಯಾರು ಇಲ್ಲವೆಂದೇ ಗ್ರಹಿಸಬೇಕಾಗುತ್ತದೆ. ಮಾಂಸಹಾರಿಗಳಾದರೂ ಕೂಡ ದಲಿತರು, ಲಿಂಗಾಯಿತರಿಗಿಂತಲೂ ಹೆಚ್ಚು ಶುದ್ಧವಾಗಿದ್ದಾರೆ. ಇದರಲ್ಲಿ ತನುಶುದ್ಧಿ, ಭಾವಶುದ್ಧಿ ಸೇರಿಕೊಂಡಿರುತ್ತದೆ.

ಜಾತಿಯೊಂದೇ ಜನನವೊಬ್ಬರಿಂದಾದರಿಗೆ
ವರ್ಣವಿಲ್ಲಾ ಶ್ರಮಗಳಿಲ್ಲ ಶಿವಲಿಂಗಕ್ಕೆ
ನಿರ್ಣಯವ ತಿಳಿ ಯಾವ ಕುಲವಿಲ್ಲ ಲಿಂಗಕ್ಕೆ
ಇಂತಾತನಿಂದಾದವರ್ಗಾವ ಕುಲವಿಲ್ಲ
ಸಂತತಂ ಶಿವಜಾತರಿಗೆ ಮುನ್ನ ಕುಲವಿಲ್ಲ... (೧-೧೧೬)

ಎಂದು ದೀರ್ಘವಾಗಿ ಸತ್ಕುಲದ ಬಗ್ಗೆ ಮತ್ತು ಶಿವನಿಂದಾದವರಿಗೆ ಕುಲವಿಲ್ಲವೆಂದು ತಿಳಿಸುವಾಗ ಲಿಂಗವಂತರೆಲ್ಲ ಸತ್ಕುಲದವರೆಂದು ಹೇಳಿದ್ದಾನೆ. ಆದ್ದರಿಂದ ಇಂದಿನ ದಲಿತ ಲಿಂಗವಂತರು ಸತ್ಕುಲದವರು ಅವರುಗಳು ಕೀಳಲ್ಲ ಮತ್ತು ಸಮಾಜದಲ್ಲಿ ಅವರು ಸಮಾನರೆಂಬುದನ್ನು ಈ ಮೂಲಕ ಇಂದಿನ ಮತಾಂಧರು, ಜಾತಿವಾದಿಗಳು ಸ್ಮೃತಿಪಟಲದಲ್ಲಿ ಅರಿಯಬೇಕಾಗಿದೆ. ಆದರೆ ದಲಿತರು ಯಾರಿಂದಲೂ ಪ್ರಮಾಣಪತ್ರ ಪಡೆಯುವ ದರಿದ್ರರಲ್ಲ, ಅವರು ಶ್ರೇಷ್ಠರೇ.

ಶಿವ ಭಕ್ತರುಗಳ ಕುಲ ವಿವರಿಸದೆ ಇರಬೇಕು
ಅವರ ಗೃಹದೊಳು ಪದಾರ್ಥವನ್ನು ಭುಂಜಿಸಬೇಕು
ಉಳಿದವರ ಕುಲವು ಸತ್ಕುಲವಾದೊಡಂತವರ
ಕಳೆವುದಂತ್ಯಜರೆಂದು ಶಿವಭಕ್ತರಲ್ಲದವರ... ೧-(೫೯)

ಯಾವುದೇ ವರ್ಗ, ವರ್ಣ, ಜಾತಿಯವರು ಶರಣರಾಗಿದ್ದಾರೆ ಅಥವಾ ಶಿವಭಕ್ತರಾಗಿದ್ದರೆ ಅವರ ಕುಲವನ್ನು ವಿಚಾರಿಸದೆ ಅವರ ಗೃಹ (ನಿವಾಸ)ದೊಳಗೆ ಕೊಡುವ ಆಹಾರವನ್ನು ಸೇವಿಸಬಹುದು. ಅಂದರೆ ದಲಿತನೊರ್ವ ಶರಣ/ಶಿವಭಕ್ತನಾಗಿದ್ದರೂ ಕೂಡ ಅವರ ಮನೆಯಲ್ಲಿ ಆಹಾರ ಸೇವಿಸುವುದು ಉಚಿತ ಮತ್ತು ಅವನ ಕುಲವನ್ನು ಕೇಳುವಂತಿಲ್ಲ. ಆದರೆ ಉತ್ತಮ ಜಾತಿಯಲ್ಲಿಯೇ ಹುಟ್ಟಿ ಸತ್ಕುಲನಾಗಿಲ್ಲದಿದ್ದರೆ ಅವನ

ಮನೆಯಲ್ಲಿ ಆಹಾರ ಸೇವನೆ ನಿಷಿದ್ಧವಾಗಿರುತ್ತದೆ. ಇದನ್ನು ದಲಿತ ಸಂವೇದನೆಯ ಹಿನ್ನೆಲೆಯಲ್ಲಿಯೇ ಗ್ರಹಿಸಬಹುದಾಗಿದೆ.

ಹೀಗೆ ಒಟ್ಟಾರೆ ಕೃತಿಯ ಹಿನ್ನೆಲೆಯಲ್ಲಿ ಗಮನಿಸಿದಾಗ ಕೆರೆಯ ಪದ್ಮರಸನು ವೀರಶೈವನಾಗಿದ್ದು ಧರ್ಮವಾದದಲ್ಲಿ ಸೋತ ತ್ರಿಭುವನತಾತನು ವೈಷ್ಣವನಾಗಿದ್ದು ಅಂದಿನ (೧೩ನೇ ಶತಮಾನ) ಕಾಲದ ಸಂದರ್ಭದಲ್ಲಿ ಬಹಳ ಪ್ರಮುಖವಾಗಿ ಉತ್ಕೃಷ್ಟ ಸ್ಥಿತಿಯಲ್ಲಿದ್ದ ಎರಡು ಪ್ರಮುಖ ಧರ್ಮಗಳ ಪ್ರತಿನಿಧಿಗಳಾಗಿದ್ದರು. ಆದರೆ ಸೋತ ತ್ರಿಭುವನ ತಾತನು ವೀರಶೈವ ಧರ್ಮವನ್ನು ಒಪ್ಪಿಕೊಂಡು ತನ್ನವರಿಗೆಲ್ಲಾ ವೀರಶೈವ ದೀಕ್ಷೆಯನ್ನು ಪಡೆಯುವ ಮೂಲಕ ಮತಾಂತರಗೊಂಡಿರುವುದು ಕಣ್ಣಿಗೆ ಕಾಣಿಸುವ ಸತ್ಯವಾಗಿದೆ.

ದೀಕ್ಷೆಯ ಸಂದರ್ಭದಲ್ಲಿ ದೀಕ್ಷೆಯ ಸ್ವರೂಪವನ್ನು ತಿಳಿಯ ಹೇಳಿದ ಪದ್ಮರಸನು ಕುಲ, ಧರ್ಮ, ವರ್ಗ, ವರ್ಣ, ಜಾತಿ, ಸಂಕರ, ಆಹಾರ ಪದ್ಧತಿಗಳಂತಹ ಅನೇಕ ಸಾಮಾಜಿಕ ವಿಷಯಗಳನ್ನು ಹಲವಾರು ಘಟನೆಗಳ ಮೂಲಕ ಸಾಂದರ್ಭಿಕ ಮತ್ತು ಸಾಂಕೇತಿಕವಾಗಿ ವಿವರಿಸಿದ್ದಾನೆ.

ಇದು ವೀರಶೈವ ಧರ್ಮ ಮತ ಪ್ರಚಾರದ ಮತ್ತು ತತ್ವ ಸಿದ್ಧಾಂತಗಳ ನ್ನೊಳಗೊಂಡ ಏಕೈಕ ಸ್ವತಂತ್ರ ಪ್ರಥಮ ಕೃತಿಯಾಗಿದೆ. ಮತ್ತು ಇಡೀ ವೀರಶೈವ ಧರ್ಮಸಾರವನ್ನು ಈ ಕೃತಿಯು ಒಳಗೊಂಡಿದೆ.

ಹೀಗೆ ದೀಕ್ಷೆ ಎಂದರೆ ಗುರುವಿನಿಂದ ಲಿಂಗಸಂಗವ ಮಾಡಿ ಮೋಕ್ಷಗೊಳ್ಳುವುದು. ಅಂದರೆ ಭಾವದಲ್ಲಿ ನೆಲೆಗೊಳ್ಳುವಿಕೆ ಮತ್ತು ವೀರಶೈವ ಮತಸ್ಥರಲ್ಲಿ ಸಾಂಪ್ರದಾಯಿಕವಾಗಿ ೧. ಸಮಯ ದೀಕ್ಷೆ ೨. ಸಾಧಕ ದೀಕ್ಷೆ ೩. ಆಚಾರ್ಯ ದೀಕ್ಷೆ ಮತ್ತು ೪. ಅನುಗ್ರಹ ದೀಕ್ಷೆ – ಈ ನಾಲ್ಕು ಬಗೆಯ ದೀಕ್ಷೆಗಳು ಕಂಡುಬರುತ್ತವೆ. ಈ ಎಲ್ಲಾ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಕೆರೆಯ ಪದ್ಮರಸನು ವೀರಶೈವ ಧರ್ಮದ ಪ್ರಚಾರಕ್ಕಾಗಿ ಕೃತಿ ರಚನೆ ಮಾಡಿರುವುದು ವಿಧಿತವಾಗುತ್ತದೆ. ಈ ಕೃತಿಯಲ್ಲಿ ಕುಲ, ಜಾತಿ ವರ್ಣಗಳೆಂಬ ದಲಿತ ಸಂವೇದನೆಯುಳ್ಳ ಸಾಮಾಜಿಕ ಅಂಶಗಳು ಅಲ್ಲಲ್ಲಿ ಕಂಡು ಬರುವುದನ್ನು ಈವರೆಗೂ ಚರ್ಚಿಸಲಾಗಿದೆ. ಆದರೆ ಇದು ಹೆಚ್ಚು ವೀರಶೈವ ಧರ್ಮಸಾರವನ್ನು ವಿಜೃಂಬಿಸಿರುವುದರಿಂದ ಈ ಕೃತಿಯು ವೀರಶೈವ ಧರ್ಮ ತತ್ವಸಾರದ ಕೃತಿಯಾಗಿ ಪರಿಣಮಿಸಿದೆ.

ಹೀಗೆ ಈ ಕೃತಿಯು ದಲಿತ ಸಂವೇದನೆಯನ್ನು ಆಂಶಿಕವಾಗಿ ಹೊಂದಿರುವುದಷ್ಟೇ ಕಂಡು ಬರುತ್ತದೆ.

ವ್ಯಾಸ ಭಾರತದಲ್ಲಿನ ಪಾತ್ರಗಳು: ನಾಯಕನ ಹುಡುಕಾಟ

(ಪ್ರಾತಿನಿಧಿಕ ಕನ್ನಡ ಭಾರತಗಳೊಟ್ಟಿಗೆ)

ರೇಖಾ. ಕೆ. ಎನ್
ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬
ಇಮೇಲ್ ಐ.ಡಿ rekhakn81@gmail.com

ಮಹಾಭಾರತ ತನ್ನ ಕಥಾ ಸಂವಿಧಾನದ ದೃಷ್ಟಿಯಿಂದ ಕಾವ್ಯವೂ ಹೌದು: ಅಂತೆಯೇ ಇತಿಹಾಸವೂ ಹೌದು. ಮಹಾಭಾರತದ ಕಥಯಾಗಲಿ, ಪಾತ್ರಗಳಾಗಲಿ ನಮ್ಮ ಜನರಿಗೆ ಹೊಸದೇನಲ್ಲ. ಸಾವಿರಾರು ವರ್ಷಗಳಿಂದ ನಾವು ಅವುಗಳನ್ನು ಉಸಿರಾಡುತ್ತಲೇ, ಬದುಕುತ್ತಲೇ ರಕ್ತಗತವಾಗಿಸಿಕೊಂಡಿದ್ದೇವೆ. ಭೀಷ್ಮನ ಪ್ರತಿಜ್ಞೆ, ಶಕುನಿಯ ಕುತಂತ್ರ, ಉತ್ತರನ ಪೌರುಷ, ದುರ್ಯೋಧನನ ಹಠ, ಕರ್ಣನ ತ್ಯಾಗ, ಭೀಮಾರ್ಜುನರ ಪರಾಕ್ರಮ, ಧರ್ಮನ ಸತ್ಯ.... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಮುಲವ್ಯಾಸರು ಕಟ್ಟಿಕೊಡುವ ಈ ಪಾತ್ರ ಚಿತ್ರಣಗಳಲ್ಲಿ ಸ್ವಭಾವ ವೈರುಧ್ಯವು, ಮಾನವೀಯ ಸಂಘರ್ಷದ ಜೀವಂತಿಕೆಯು ಬೆರೆತು ಪಾತ್ರಗಳನ್ನು ನಿತ್ಯನೂತನವಾಗಿಸಿದೆ. ಹೀಗಾಗಿಯೇ ಇಂದಿಗೂ ಈ ನೆಲದ ಜನರ ವ್ಯಕ್ತಿತ್ವಗಳಲ್ಲಿ ಅಡಿಗಡಿಗೆ ನಾವು ಮಹಾಭಾರತದ 'ಮಹಾನ್' ಪಾತ್ರಗಳನ್ನು ಒಮ್ಮೆ ಅಣಕಿನೋಡುವ ಪ್ರಯತ್ನಮಾಡುತ್ತೇವೆ.

ವ್ಯಾಸ ಮಹಾಭಾರತದ ಒಡಲು ಸಮೃದ್ಧ: ಅಲ್ಲಿನ ಆಖ್ಯಾನ – ಉಪಖ್ಯಾನ, ಕಥೆ–ಉಪಕಥೆಗಳೊಟ್ಟಿಗೆ ಬರುವ ಪಾತ್ರಗಳು ಅಸಂಖ್ಯ. ಅಷ್ಟೇ ವೈವಿಧ್ಯ. ಪಾತ್ರಗಳ ಪಟ್ಟಿ ಮಾಡುವುದೇ ಒಂದು ಸಂಶೋಧನೆಯಾಗಬಲ್ಲದೇನೋ? ಇಂಥಹ ಪ್ರಯತ್ನಗಳು ಕೂಡ ನಡೆದಿರುವುದು ಸ್ತುತ್ಯರ್ಹವೇ. (ಉದಾ: ಅ.ರಾ.ಮಿತ್ರ: ಮಹಾಭಾರತದ ಪಾತ್ರ ಸಂಗತಿಗಳು: ಸರಿ ಸುಮಾರು ೪೦೦ಕ್ಕೂ ಹೆಚ್ಚು ಪಾತ್ರಗಳ ಕಿರುಪರಿಚಯ) ತನ್ನ ಕಥಾಸಂವಿಧಾನ ಐತಿಹಾಸಿಕ ಮಹತ್ತಿನಿಂದಾಗಿ ವ್ಯಾಸ ಮಹಾಭಾರತವು ಅಖಿಂಡವಾದ ಮಹಾಕಾವ್ಯವೆನ್ನಲು ಅಡ್ಡಿಯಿಲ್ಲ. ಆದರೆ ಮಹಾಕಾವ್ಯವೆಂದಮೇಲೆ ಅದರ ನಾಯಕ ಯಾರು? ನಾಯಕಿ ಯಾರು? ಎಂಬ ಪ್ರಶ್ನೆಗಳು ಕಾಡುವುದು ಸಹಜ.

ನಾಯಕಿಯಾಗಿ ನಮ್ಮ ಕಣ್ಣ ಮುಂದೆ ಯಾವುದೇ ಗೊಂದಲಗಳಿಗೆಡೆಯಿಲ್ಲದಂತೆ ಮೂಡಿನಿಲ್ಲುವ ಒಂದೇ ಚಿತ್ರ: ದ್ರೌಪದಿಯದು. ಯುದ್ಧದಲ್ಲಿ ಕಾದದೆಯೂ, ಕಾದುವಂತೆ ಪ್ರೇರೆಪಿಸಿದವಳು, ಮೂದಲಿಕೆ– ಹಠಗಳನ್ನೆ ತಾನೂ ಪಟ್ಟ ಕಷ್ಟ–ನಿಷ್ಠುರಗಳನ್ನು ಗೆಲ್ಲುವ ಮಾರ್ಗಗಳನ್ನಾಗಿಸಿ ಕೊಂಡವಳು; ಕಾದಿ ಮಡಿಯದೆಯೇ ಗಂಡಂದಿರ ಜೊತೆಯಲ್ಲಿಯೇ ವೀರಸ್ವರ್ಗ ಅನುಭವಿಸಿದವಳು. ಪಂಚಪತಿತ್ವವನ್ನು ಕಿಂಚಿತ್ತು ದೋಷವಿಲ್ಲದಂತೆ ನಿಭಾಯಿಸಿ ಪಂಚಪತಿವ್ರತೆಯರಲ್ಲಿ ಒಬ್ಬಳಾಗಿ ಉಳಿದವಳು. ಇಂತಹ ದ್ರೌಪದಿ ನಾಯಕಿ ಎನ್ನುವಲ್ಲಿ ಕಾವ್ಯಾಂತರ್ಗತ ಪ್ರಮಾಣಗಳು, ತರ್ಕದ ವಾದಗಳು ಅಥವಾ ಇನ್ನಿತರೆ ಯಾವದೇ ಕಾರಣಗಳು ಅಡ್ಡಿಯೆನಿಸುವುದಿಲ್ಲ. ಆದರೆ ನಾಯಕ ಯಾರು? ಎಂಬ ಪ್ರಶ್ನೆ ಬಂದರೆ ಉತ್ತರ ಸುಲಭವಾಗಿ ಲಭಿಸದು. ಪ್ರಧಾನ ಪಾತ್ರಗಳ ಪಟ್ಟಿಯಲ್ಲಿ ನಾಯಕತ್ವ ಯುಧಿಷ್ಠಿರ, ಭೀಮ, ಅರ್ಜುನ ಈ ಮೂವರಲ್ಲಿ ಹಂಚಿಹೋಗಿರುವಷ್ಟರ ಮಟ್ಟಿಗಿನ ಬೆಸುಗೆಯ ಚಿತ್ರಣ ಲಭಿಸುತ್ತದೆ. ಇನ್ನು 'ಕೃಷ್ಣ'ನಿಲ್ಲದ ಮಹಾಭಾರತ ಊಹಿಸಲು ಸಾಧ್ಯವಿಲ್ಲವೆನ್ನುವಂತಹ, ಆದ್ಯಂತವಾದ ಪಾತ್ರ ಅವನದು. ಭೀಷ್ಮನಾದರೂ ಅಷ್ಟೇ ಆಧಾರಸ್ತಂಭ. ಅಲ್ಲಿ ಹಾದುಬರುವ ಅಸಂಖ್ಯರ ಬದುಕು ಕಟ್ಟಬಯಸಿದ ಜೀವ. ಆದರೆ ಮೀಮಾಂಸೆಯು ಒಪ್ಪದ ನಾಯಕತ್ವದ ಲಕ್ಷಣಗಳನ್ನು ಅನ್ವಯಿಸಿ ನೋಡುವುದಾದರೂ ಧರ್ಮನು ನಮ್ಮ ಮುಂದೆ ಧೀರೋದಾತ್ತ

ನಾಗಿಯೂ, ಭೀಮನು ಧೀರಲಲಿತನಾಗಿಯೂ, ಅರ್ಜುನನು ಅಪ್ರತಿಮ ಪರಾಕ್ರಮಿಯಾಗಿಯೂ ನಾಯಕತ್ವಕ್ಕೆ ಸಲ್ಲುತ್ತಾರೆ. ಯುದಿಷ್ಠರನೆಂಬ ನಾಮಾಂಕಿತದಿಂದ ಗುರುತಿಸಲ್ಪಡುವ ಧರ್ಮರಾಯನು ಹೆಸರಿಗೆ ತಕ್ಕಂತೆ ಬದುಕಿದವನು. ಅದಕ್ಕಾಗಿಯೇ ಸಶರೀರನಾಗಿ ಸ್ವರ್ಗಪ್ರಾಪ್ತಿ ಪಡೆದವನು. ಇಂತಹ ಮಹಾನಾಯಕನನ್ನೇ ವ್ಯಾಸರು ಹೆಚ್ಚು ಸಮರ್ಥಿಸಿದ್ದಾರೆನ್ನಲು ಸಾಕಷ್ಟು ಸಾಕ್ಷಿಗಳಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಕೌರವನ ವಿನಾಶದ ನಂತರ ಇಡೀ ಭರತವರ್ಷಕ್ಕೆ ಒಡೆಯನಾಗಿ ೩೬ ವರ್ಷಕಾಲ ಧರ್ಮರಾಜ್ಯ ಪರಿಪಾಲನೆ ಮಾಡಿದನೆಂದು ವ್ಯಾಸರೇ (ಶಾಂತಿಪರ್ವ: ೪೧ನೇ ಅಧ್ಯಾಯ) ಹೇಳಿರುವುದರಿಂದ ವ್ಯಾಸಭಾರತದ ನಾಯಕ ತಾರ್ಕಿಕವಾಗಿ ಯುಧಿಷ್ಠರನೆಂಬುದು ನಿಸ್ಸಂಶಯ. ಆದರೆ ಕನ್ನಡ ಸಾಹಿತ್ಯದಲ್ಲಿ ಮೇರುಭಾರತಗಳನ್ನು ಸೃಷ್ಟಿಸಿದ ಪಂಪ, ರನ್ನ, ಕುಮಾರವ್ಯಾಸರ ದೃಷ್ಟಿಕೋನ ಈ ನಿಟ್ಟಿನಲ್ಲಿ ಬದಲಾಗಿರುವುದನ್ನು ನಾವು ಗುರುತಿಸಿದ್ದೇವೆ. ಅರ್ಜುನ, ಭೀಮ, ಕೃಷ್ಣರು ಈ ಕವಿಗಳನ್ನು ಅನುಕ್ರಮವಾಗಿ ಆಕ್ರಮಿಸಿ ಮೆರೆದಿರುವುದಕ್ಕೆ ಅವರ ಭಾರತ ಕೃತಿಗಳೇ ಸಾಕ್ಷಿಯಾಗಿವೆ. ಈ ಮರುಸೃಷ್ಟಿಗೆ ಕಾರಣಗಳು ಇಲ್ಲದಿಲ್ಲ. ಮೂಲತಃ ವ್ಯಾಸರು ಮಹಾಕಾವ್ಯರಚನೆಯ, ಆ ಚೌಕಟ್ಟಿನ ವರ್ಣನೆ ಮತ್ತು ಚಿತ್ರಣಗಳನ್ನು ಉದ್ದೇಶವಾಗಿಸಿಕೊಂಡು ಮಹಾಭಾರತ ಬರೆದಿಲ್ಲ. ಅವರಿಗೆ ಅದೊಂದು ಮಾನವ ಬದುಕಿನ ಸಮಗ್ರ ಚಿತ್ರಣ, ಬದುಕಿನ ಸಾಧ್ಯಾಸಾಧ್ಯತೆಯ ಭಾವಾಭಿವ್ಯಕ್ತಿಯ ಸಂಗಮ. ವ್ಯಾಸರ ಭಾರತ ಶುಷ್ಕ ಇತಿಹಾಸವೋ, ಒಣಕಾವ್ಯವೋ ಅಲ್ಲವೇ ಅಲ್ಲ. ಇತಿಹಾಸದ ಸಂಗತಿಗಳು ಕಾವ್ಯದ ಚೌಕಟ್ಟಿನಲ್ಲಿ ಪಡಿಮೂಡಿದ್ದರೂ ಅಲ್ಲಿನ ಮಾನವ ಸಂಘರ್ಷವು ಬದುಕಿನ ಅಸಂಖ್ಯ ವಿರಿಳಿತಗಳು, ಧರ್ಮ ಆಧ್ಯಾತ್ಮದ ಜಿಜ್ಞಾಸೆಗಳು, ಯುದ್ಧ ರಾಜತಾಂತ್ರಿಕತೆಯ ವಿರುಪೇರುಗಳು, ಮಾನವ ಸಹಜ ಹಿರಿಮೆ, ದೌರ್ಬಲ್ಯಗಳು ಹೀಗೆ ಎಲ್ಲವನ್ನೂ ಕೂಡಿಕೊಂಡ ಚಿತ್ರಣವಾಗಿದೆ. ಈ ನಿಟ್ಟಿನಲ್ಲಿ ವ್ಯಾಸರ ಸಾಮಾಜಿಕ ರಾಜಕೀಯ ಧಾರ್ಮಿಕ ನೋಟದ ಸಂಪೂರ್ಣ ಜೀವನಪ್ರೀತಿ ಮಹಾಭಾರತದಲ್ಲಿ ಅನಾವರಣಗೊಂಡಿದೆ. ಮಹಾಭಾರತವು ಈ ನೆಲದ ಜೀವನಕ್ಕೆ ಹಿಡಿದ ಕನ್ನಡಿಯೂ ಹೌದು; ಇಲ್ಲಿನ ಜನ ಜೀವನವನ್ನು ಮುನ್ನೆಡೆಸುವ ದಾರಿದೀಪವೂ ಹೌದು. ಮಾನವ ಬದುಕಿನ ಭಗ್ನತೆಯನ್ನೇ ಹೇಳಲು ತವಕಿಸುವ ಕೃತಿಯಾಗಿ ತೋರುವ ಮಹಾಭಾರತವು, ಮನುಷ್ಯ ಸ್ವಭಾವದ ಎತ್ತರ ಬಿತ್ತರಗಳನ್ನು ಎಲ್ಲ ನೆಲೆಗಳಿಂದಲೂ ಶೋಧಿಸಿ ತೆಗೆದ ಅಖಂಡ ಕಾವ್ಯ. ಧೃತರಾಷ್ಟ್ರ-ಪಾಂಡುಸೋದರ ಪ್ರೀತಿಗೆ ನಿದರ್ಶನವಾಗಿ ನಿಂತ ಮರುಕ್ಷಣವೇ-ಪಾಂಡವರು ಸೋದರ ದ್ವೇಷಕ್ಕೆ ಪ್ರತಿರೂಪವಾಗಿ ಎದುರಾಗುವ ವೈರುಧ್ಯವೇ ಮಹಾಭಾರತದ ನಿಷ್ಠುರ ಜೀವನದರ್ಶನಕ್ಕೆ ಸಾಕ್ಷ್ಯ ನುಡಿಯುತ್ತದೆ. ಮಹಾಭಾರತದ ಈ ಸ್ವಭಾವ-ಸಂಘರ್ಷಗಳ ಹಿನ್ನೆಲೆಯಲ್ಲಿ ನಾವು ಅಲ್ಲಿನ ಪಾತ್ರಗಳನ್ನು, ತನ್ಮೂಲಕ ನಾಯಕತ್ವದ ಲಕ್ಷಣಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಭಾರತವು ಒಳಗೊಳ್ಳುವ ಪ್ರತಿ ಪಾತ್ರವು ಅದರದೇ ಆದ ಪ್ರಾಮುಖ್ಯತೆ ಪಡೆದಿವೆ. ಅದು ಹೇಳುವ ತತ್ವ-ದರ್ಶನ, ಜೀವನ ಮೀಮಾಂಸೆಗಳು ಅನನ್ಯವಾಗಿರುತ್ತದೆ. ಅಲ್ಲದೇ ಭಾರತದ ಪಾತ್ರಗಳು ಬುದ್ಧಿಪ್ರಧಾನವಾದ ತರ್ಕಕ್ಕೆ ಸುಲಭವಾಗಿ ನಿಲುಕುವ ಮಾನವೀಯ ಸಂಘರ್ಷದ ನೆಲೆಯಲ್ಲಿ ಚಿತ್ರಿತವಾಗಿರುವುದರಿಂದ ನೋಡುವಾತನ ದೃಷ್ಟಿಕೋನಕ್ಕೆ ತಕ್ಕಂತೆ ಕಾಣುವ ಗುಣವುಳ್ಳವು ಆಗಿವೆ. ಈ ಕಾರಣದಿಂದಾಗಿ ಪ್ರಧಾನ ಪಾತ್ರಗಳಲ್ಲಿ ನಾಯಕತ್ವದ ಲಕ್ಷಣಗಳು ಕಂಡುಬಂದು ನಾಯಕ ಯಾರು? ಎನ್ನಿಸುವಷ್ಟರ ಮಟ್ಟಿಗೆ ಗೊಂದಲವೇರ್ಪಡುತ್ತದೆ. ಅಷ್ಟೆ ಅಲ್ಲದೇ ಪಾತ್ರಗಳು ತದನಂತರದ ಪರಂಪರೆಯಲ್ಲಿ ಮರುಸೃಷ್ಟಿಸಿಕೊಂಡು ಮೂಲದಿಂದ ಭಿನ್ನವಾಗಿ ನಿಲ್ಲುತ್ತವೆ. ಈ ಹಿನ್ನೆಲೆಯಲ್ಲಿ ವ್ಯಾಸನಿರ್ಮಿತ ದುರ್ಯೋಧನನು,

ದುರ್ಯೋಧನೋ ಮನ್ಯುಮಯೋ ಮಹಾದ್ರುಮಃ
ಸ್ಕಂದಃಕರ್ಣಃ ಶಕುನಿಸ್ತಸ್ಯ ಶಾಖಾಃ
ದುಃಶ್ಯಾಸನಃ ಪುಷ್ಪಫಲೇ ಸಮೃದ್ಧೇ ಮೂಲಂ
ರಾಜಾ ಧೃತರಾಷ್ಟ್ರೋ ಮನೀಷೀ .. ಎಂಬ ದೃಷ್ಟಿಕೋನದಿಂದ ನೋಡಲ್ಪಟ್ಟಿದ್ದರೂ,

ಪಂಪ-ರನ್ನರಲ್ಲಿ ಛಲದಂಕಮಲ್ಲನಾಗಿ ಪ್ರತಿನಾಯಕನ ಪಟ್ಟಕ್ಕೇರಿರುವುದು, ತದನಂತರದಲ್ಲಿ ಪಾಶ್ಚಾತ್ಯ ಮೀಮಾಂಸೆ ಮತ್ತು ವಿಮರ್ಶೆಗಳ ಫಲವಾಗಿ ದುರಂತ ನಾಯಕನೆನಿಸಿ (ಕರ್ಣನೂ ಕೂಡ) ಮರುಕಗಿಟ್ಟಿಸುವ ಬೆಳವಣಿಗೆಗಳು ನಡೆದಿವೆ. ಹಾಗೆಂದ ಮಾತ್ರಕ್ಕೆ ಕರ್ಣ, ದುರ್ಯೋಧನರ ವಿಚಾರವಾಗಿ ವ್ಯಾಸಭಾರತ ಬರಿ ಕೆಡುಕಿನ ಚಿತ್ರಣವನ್ನು ಕಟ್ಟುವುದಿಲ್ಲ. ವ್ಯಾಸರು ವಾಚ್ಯವಾಗಿ ಯಾರನ್ನು ನಾಯಕನೆಂದು ವಿಜೃಂಭಿಸಿಲ್ಲ. ಆದರೆ ಕಾವ್ಯೋದ್ದೇಶ, ವ್ಯಾಸರ ದೃಷ್ಟಿಗಳ ನಿಚ್ಚಳತೆಗಳು ಯುಧಿಷ್ಠಿರನೇ ನಾಯಕನೆಂದು ಸಹಜವಾಗಿಯೇ ವೇದ್ಯಗೊಳಿಸುತ್ತವೆ. ಆದರೂ ಭೀಮ, ಅರ್ಜುನ, ಕೃಷ್ಣ, ಭೀಷ್ಮ, ವಿದುರ, ಅಷ್ಟೇ ಏಕೆ? ಕರ್ಣ, ದುರ್ಯೋಧನ, ಧೃತರಾಷ್ಟ್ರಾದಿಗಳ ಪಾತ್ರಗಳನ್ನು ಕಟ್ಟಿಕೊಡುವ ಹಂತದಲ್ಲಿ ಧರ್ಮ-ಅರ್ಥ-ಕಾಮ-ಮೋಕ್ಷಗಳನ್ನು ಜೀವನಧರ್ಮವನ್ನಾಗಿಸಿಕೊಂಡು, ಅವರವರ ಕರ್ಮಭೂಮಿಕೆಯಲ್ಲಿ ಅವರವರೇ ನಾಯಕರೆಂಬ ಜೀವನ ಸತ್ಯವನ್ನು ಹೇಳದೆಯೋ ಹೇಳಿದೆ. ಹೀಗಾಗಿ ವ್ಯಾಸರ ಪಾತ್ರಸೃಷ್ಟಿ 'ಕಥಾಸಂವಿಧಾನ' ಕೇಂದ್ರವನ್ನು ಸುತ್ತವರಿದಿದೆ ಎಂದಷ್ಟೇ ಹೇಳಬಹುದು (ಅರಿಸ್ಟಾಟಲನಲ್ಲಿ ಪಾತ್ರಕ್ಕಿಂತ ವಸ್ತುವೇ ಪ್ರಧಾನವೆಂಬ ಅಭಿಪ್ರಾಯವನ್ನಿಲ್ಲಿ ಪರಿಗಣಿಸಬಹುದು.)

ಮಹಾಕಾವ್ಯ ಲಕ್ಷ್ಯವಾಗಿಸಿಕೊಳ್ಳುವ ನಾಯಕನ ಅಥವಾ ಪ್ರಧಾನ ಪಾತ್ರಗಳ ದೈಹಿಕ ಲಕ್ಷಣಗಳು ರಮ್ಯವರ್ಣನೆಗಳಾಗಿ ಪಡಿಮೂಡಿರುವುದು ವ್ಯಾಸರಲ್ಲಿ ಕಂಡುಬರುವುದಿಲ್ಲ. ವ್ಯಾಸರ ನಾಯಕತ್ವದ ಲಕ್ಷ್ಯವಿರುವುದು ಆತನ ನಡತೆಯಲ್ಲಿ ಅಂದರೆ ಪಾತ್ರದ ಧರ್ಮ, ಕರ್ಮ, ಯೋಗ, ಜೀವನ ಶ್ರದ್ಧೆಗಳಲ್ಲಿ. ಹೀಗಾಗಿ ವ್ಯಾಸರ ಪಾತ್ರಗಳು ವಿಶಿಷ್ಟ ದೇಹರಚನೆಯ ಅಮಾನುಷ ಶಕ್ತಿಯ ಕಲ್ಪನೆಗಳಿಗೆ ಇಂಬು ನೀಡುವುದಿಲ್ಲ. (ಘಟೋತ್ಕಚ, ಹಿಡಿಂಬ, ಬಕಾಸುರರಂತಹ ಅಸುರೀ ಚಿತ್ರಣಗಳು, ಕೃಷ್ಣನ ದೈವತ್ವದ ಚಿತ್ರಣವನ್ನುಳಿದು.) ಬದಲಾಗಿ ಆಕೃತಿ, ಬುದ್ಧಿ, ಚಲನವಲನಗಳಲ್ಲಿ ಹೆಚ್ಚು ಮಾನವೀಯವಾಗಿವೆ. ಇಂದಿಗೂ ಮಾನವೀಯತೆ ಪರ-ವಿರುದ್ಧಗಳ ತರ್ಕಕ್ಕೆ ಸಿಲುಕಿ ಮರುಸೃಷ್ಟಿಗೊಳ್ಳುತ್ತಲೇ ಇವೆ.

ಪಾಶ್ಚಾತ್ಯ ಮೀಮಾಂಸೆಯು ಗುರುತಿಸಿರುವಂತೆ ಪರಂಪರೆಯಲ್ಲಿ ಹಾದುಬಂದ ಇತಿಹಾಸದ ಕಥೆಯು ಇಂದು ಬಿಂಬಿತವಾದ ರೀತಿಯು ಕೂಡ ಹಿಂದಿನದನ್ನು ಪ್ರಭಾವಿಸುತ್ತದೆ. ಅಂದರೆ ಭಾರತ ಪರಂಪರೆಯ ಪಂಪ-ರನ್ನರ ಕೃತಿಗಳು ಬಂದ ಮೇಲೆ ವ್ಯಾಸರ ಮೂಲಭಾರತ ಪ್ರಭಾವಗೊಳಗಾಯಿತು ಎಂದಾಯಿತು. (ಚಾರಿತ್ರಿಕ ಪ್ರಜ್ಞೆ: ಎಲಿಯಟ್) ಅಂದರೆ ವ್ಯಾಸಭಾರತವು ನೋಡುವ ದೃಷ್ಟಿಕೋನಗಳು ಹೊಸತಾದವು. ಹೀಗಾಗಿ ಪಂಪ-ರನ್ನರು, ಕುಮಾರವ್ಯಾಸನ ಸೃಷ್ಟಿಸಿರುವ ಭಾರತದ ಪಾತ್ರಗಳನ್ನ ವ್ಯಾಸರ ಚಿತ್ರಣದೊಟ್ಟಿಗೆ ಸರಿದೂಗಿಸುವ ಪ್ರಯತ್ನಗಳು ನಡೆದಿವೆ. ಪಾತ್ರ ಸಂಬಂಧಿಯಾಗಿ ಮೂಲ ವ್ಯಾಸರಲ್ಲಿ ಪಡೆಯದಷ್ಟು

ಭಿನ್ನ ರೂಪಾಂತರಗಳು ಕನ್ನಡ ಭಾರತ ಪರಂಪರೆಯಲ್ಲಿ ನಡೆದಿದೆ ಎನ್ನಬಹುದು. ಒಬ್ಬರಿಗೆ ಸರಿ ಕಂಡದ್ದು, ಒಬ್ಬರ ಸಾಂದರ್ಭಿಕ ತುತ್ತಿಗೆ ಹೊಂದಿಕೆಯಾದುದು, ಮತ್ತೊಬ್ಬನಿಗೆ ತಪ್ಪಾಗಿ, ಅಸಮಂಜಸವಾಗಿ ತೋರುತ್ತದೆ. ಇದು ಮಾನವ ಪ್ರಕೃತಿಯಲ್ಲಿ ಸಹಜ. ಪಂಪನ ವಿಕ್ರಮಾರ್ಜುನ, ರನ್ನನ ಸಾಹಸಭೀಮ, ಕುಮಾರವ್ಯಾಸನ ಕೃಷ್ಣಕಥೆಯ ಹಿಂದೆ ಇಂತಹದ್ದೊಂದು ಕಾರಣದೊಂದಿಗೆ ಅವರ ಧರ್ಮ, ಕಾವ್ಯಧರ್ಮ, ರಾಜಕೀಯ ತುರ್ತು ಇತ್ಯಾದಿ ಅಂಶಗಳು ಚರ್ಚಿತವಾಗಿರುವುದು ಸರಿಯಷ್ಟೇ.

ಮಹೋನ್ನತ ಚಿಂತಕ ಡೆಂಡಾಗು ಹೇಳುವಂತೆ 'ಕೇಂದ್ರ ಬದ್ಧ' ಚಿಂತನೆಗಳು ಎಲ್ಲ ದೇಶ-ಕಾಲ ಪರಿಸ್ಥಿತಿಗಳನ್ನು ಒಳಗೊಳ್ಳುತ್ತವೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷರು ಕೇಂದ್ರದಲ್ಲಿಯೂ ಸ್ತ್ರೀಯರು ಸಮಾಜದ ಅಂಚಿನಲ್ಲಿಯೂ ಇರುವಂತೆಯೂ ಜಾತಿನಿಷ್ಠ ಸಮಾಜದಲ್ಲಿ ಮೇಲ್ಜಾತಿ-ಕೆಳಜಾತಿಗಳಲ್ಲಿ ಈ ಹಂಚಿಕೆಯು ಇರುತ್ತದೆ. ಅಂತೆಯೇ ಬಂಡವಾಳಷಾಹಿ ಸಮಾಜದಲ್ಲಿ ಶ್ರೀಮಂತರು-ಬಡವರು, ವಿದ್ಯಾವಂತ ಸಮಾಜದಲ್ಲಿ ಅಕ್ಷರಸ್ಥರು-ಅನಕ್ಷರಸ್ಥರು ಇಂತಹ ಕೇಂದ್ರ ಮತ್ತು ಅಂಚುಗಳಿಗೆ ಸಲ್ಲುತ್ತಾರೆ. ಇದನ್ನ ವಿಸ್ತರಿಸಿಕೊಂಡು ಹೇಳುವುದಾದರೆ ಆದರ್ಶ ಸಮಾಜದಲ್ಲಿ ಸರ್ವಗುಣ ಸಂಪನ್ನನೆನಿಸುವ ನಾಯಕನು ಕೇಂದ್ರ ಪಾತ್ರವೆನಿಸುವುದು, ದೌರ್ಬಲ್ಯಗಳಿಗೀಡಾದ ಪಾತ್ರಗಳು ಅಂಚಿನವಾಗಿ ಖಳನಾಯಕ, ಪೋಷಕ, ದುರಂತನಾಯಕ ಹೀಗೆ ಭಿನ್ನ ತಲೆಪಟ್ಟಿಯಲ್ಲಿ ಚಿತ್ರಿತವಾಗುತ್ತವೆಂದು ಭಾವಿಸಬಹುದು. ಪ್ರಧಾನ-ಅಧೀನವೆಂಬ ಕಲ್ಪನೆ ಇಲ್ಲಿ ಅಂತಿಮವಾಗಿ ಉಳಿದುಬಿಡುತ್ತದೆ. ಆದರೆ ಇಂತಹ 'ಕೇಂದ್ರಬದ್ಧ' ಚಿಂತನೆಗಳು ಹೆಚ್ಚು ಒತ್ತು ಪಡೆಯುವುದರಿಂದಲೇ ನಾಯಕ ಸ್ಥಾನಗಳು ಬದಲಾಗುತ್ತವೆ ಎನ್ನಬಹುದು. ಪಂಪ, ರನ್ನ, ಕುಮಾರವ್ಯಾಸರ 'ನಾಯಕ'ರು ಬದಲಾಗಿರುವುದರ ಹಿಂದೆ ವ್ಯಕ್ತಿಯಿಂದ ವ್ಯಕ್ತಿಗೆ ನಾಯಕನ 'ಕೇಂದ್ರಬದ್ಧ'ತೆಯ ಕಲ್ಪನೆ ಬದಲಾಗಿರುವ ಮತ್ತು ಅದಕ್ಕನುಗುಣವಾಗಿ ಕವಿಯ ಮನೋವ್ಯಾಪಾರವು ವರ್ತಿಸಿರುವ ಸತ್ಯವನ್ನು ಕಾಣಬಹುದಾಗಿದೆ.

ಪಂಪನ 'ವಿಕ್ರಮಾರ್ಜುನ'ನ ವಿಷಯವಾಗಿ ಹೇಳುವುದಾದರೆ ಅರ್ಜುನ ಈ ಮಹಾಭಾರತದ ನಾಯಕನೆನ್ನುವುದು ಬೌದ್ಧಿಕ ತರ್ಕಕ್ಕೆ ಸುಲಭವಾಗಿ ನಿಲುಕುವಂತಹ ಸತ್ಯ. ತನ್ನ ಪ್ರಭು ಅರಿಕೇಸರಿಯನ್ನು ಸರಿದೂಗಲು ಅರ್ಜುನನೇ ಸರಿ ಎನಿಸಿ ವಿಕ್ರಮಾರ್ಜುನ ವಿಜಯವನ್ನಾಗಿಸಿರುವ ಪಂಪನಲ್ಲಿ ಕರ್ಣ, ದುರ್ಯೋಧನರು ಮೂಲಭಾರತಕ್ಕಿಂತ ಭಿನ್ನರಾಗಿಯೇ ಚಿತ್ರಿತರಾಗಿದ್ದಾರೆ. ಅರಿಕೇಸರಿಗಾಗಿ ಅರ್ಜುನನನ್ನು ಆರಿಸಿಕೊಂಡ ಪಂಪನಲ್ಲಿ ಶ್ರೀಕೃಷ್ಣನೆಡೆಗೆ ಮಿತಿಮೀರಿದ ಸೆಳೆತ ಕಾಣದು: ಅರ್ಜುನ-ಕೃಷ್ಣರ ಅನನ್ಯ ಸಖ್ಯದ ಹೊರತಾಗಿಯೂ ಪಂಪನಿಗೆ ಅರ್ಜುನನಷ್ಟೇ ಹೆಚ್ಚು. ಆದರೆ ತನ್ನ ನಾಯಕ ಅರ್ಜುನನೆಂದ ಮೇಲೂ ಕರ್ಣನನ್ನು ಕಲಿಯಾಗಿಸಿ, ತನ್ನ ಭಾರತವನ್ನು ಕರ್ಣರಸಾಯನವಾಗಿಸಿದ್ದರೆ ಹಿಂದಿನ ತುರ್ತುಗಳೇಕೋ ಅಷ್ಟು ಸುಲಭ ತರ್ಕಕ್ಕೆ ನಿಲುಕವು. ತನ್ನ ನಾಯಕ ಅರಿಕೇಸರಿಗೆ ಎದುರಾಗಿ ಕರ್ಣನಂತಹ ಪ್ರತಿನಾಯಕನನ್ನು ಸೃಷ್ಟಿಸಿ, ನಾಯಕನಿಗೆ ಸಡ್ಡುಹೊಡೆದು ನಿಂತ ದುರ್ಯೋಧನನ್ನು ಕೂಡ ಧೀಮಂತಗೊಳಿಸಿರುವ ಪಂಪನ ಮನೋದೃಷ್ಟಿ ಭಿನ್ನವೇ ಆಗಿದೆ.

ರನ್ನನು ಕೂಡ ತನ್ನ ಸಾಹಸಭೀಮನನ್ನು ರೌದ್ರ ನಾಯಕನಾಗಿಸಿ, ದುರ್ಯೋಧನನನ್ನು ದುರಂತ ನಾಯಕನ ಕನಿಕರಕ್ಕೆ ಪಾತ್ರವಾಗಿಸಿರುವುದರ ಹಿಂದೆ ಕೂಡ ತರ್ಕಕ್ಕೆ ನಿಲುಕದ ಸಂಗತಿಗಳಿವೆ. ಅನೇಕ ಸದ್ಗುಣಗಳುಳ್ಳ ಪಾತ್ರವೊಂದು ಯಾವುದೋ ಒಂದು ದೋಷಮಿಳಿತದಿಂದಾಗಿ ವಿನಾಸಕ್ಕೆ ಕಾರಣವಾಗುವುದರ ದುರಂತತೆ ರನ್ನನಲ್ಲಿ ದುರ್ಯೋಧನನಿಗೆ ಆರೋಪಿತವಾಗಿದೆ. ಆದರೆ ವ್ಯಾಸರು ಆತನನ್ನು ಪಂಪ-ರನ್ನರು ಕಂಡಂತೆ ಹಲವು ಸದ್ಗುಣಗಳ ನಡುವೆ ಮುಳುಗೆದ್ದ ಕೆಲವು ಮಿತಿಗಳೊಡನೆ ಚಿತ್ರಿಸಿಲ್ಲದಿರುವುದು ಸ್ಪಷ್ಟ. ಇನ್ನು ನಾಯಕ ಭೀಮಸೇನನ ವಿಚಾರವಾಗಿ ಹೇಳುವುದಾದರೆ ಆತ ಬಲ, ಸಾಹಸ, ಉಜ್ವಲ ಗುಣಗಳ ಪ್ರತೀಕ. ಅಂತೆಯೇ ಮಾನವೀಯ ಸಂಕಥನದ ಮಾದರಿಗೆ ಒಗ್ಗುವ ಸೂಕ್ತ ನಾಯಕನೆನಿಸುತ್ತಾನೆ. ಯುದ್ಧೋತ್ಪಾದನದಲ್ಲಿ ಪ್ರಮುಖನು, ಯುದ್ಧ ಸಮಾಪ್ತಿಗೆ ಕಾರಣನು ಆದ ಭೀಮನು, ಪಂಚಪತಿಗಳಲ್ಲಿ ದ್ರೌಪದಿಯ ಅಗತ್ಯಕ್ಕೆಂದಾಗಿನ ಪತಿಯು ಕೂಡ ಹೌದು..

ಈ ಹಿನ್ನೆಲೆಯಲ್ಲಿ ರನ್ನನ ಇಂಬಬೆಡಗನನ್ನು ಸರಿದೂಗುವ ನಾಯಕನಾಗಿ ಭೀಮ ಕಂಡಿರಲು ಸಾಕು. ಇನ್ನು ಕೃಷ್ಣಭಕ್ತ ನಾರಣಪ್ಪನಿಗಾದರೂ ಅಷ್ಟೆ, ಅವನದೇ ಆದ ಭಕ್ತಿಯ ಲೋಕವೇ ಪ್ರಧಾನ. ಅದಕ್ಕಾಗಿಯೇ ದುರ್ಯೋಧನನನ್ನು ಮೊದಲ್ಗೊಂದು ಎಲ್ಲರಿಗೂ ಆತ ಕೃಷ್ಣನ ಮಹಿಮೆಯನ್ನು ಅರುಹುತ್ತಾನೆ. ಕಥೆಯ ಕೇಂದ್ರದಲ್ಲಿ ನಿಂತು ಉಳಿದ ಪಾತ್ರಗಳನ್ನು ತನ್ನ ಸುತ್ತಲು ತಿರುಗಿಸುವ ಸೂತ್ರಧಾರ ಕೃಷ್ಣ, ನಾರಣಪ್ಪನ ಅಘೋಷಿತ ನಾಯಕ. ಆದರೆ ಕಾವ್ಯದ ಪರಿಧಿಯಲ್ಲಿ ಹೇಳುವುದಾದರೆ ರಾಜಪಟ್ಟಕ್ಕೆ ಯುಧಿಷ್ಠಿರನೇ ಇಲ್ಲೂ ಸಲ್ಲುತ್ತಾನೆ.

ಈ ಎಲ್ಲ ಸೂಚನೆಗಳ ಹಿನ್ನೆಲೆಯಲ್ಲಿ ಮಹಾಭಾರತದ ಪಾತ್ರಗಳ ಮೂಲಕ ವ್ಯಾಸರು ಹೇಳಹೊರಟಿರುವ ದರ್ಶನ ಒಂದೇ ಎಂದು ತೀರ್ಮಾನಿಸಬಹುದು. ಅದೆಂದರೆ ಸಕಲ ಗುಣಗಳು ನಡುವೆಯೂ ಬಂದು ಮಾನವಸಹಜ ದೌರ್ಬಲ್ಯ ಕಾಡುವುದು ಸಾಧ್ಯ; ಅಂತೆಯೇ ಹಲವು ಮಿತಿಗಳ ನಡುವೆಯೂ ಮನುಷ್ಯ ಕೆಲವು ವಿಶಿಷ್ಟ ಗುಣಗಳನ್ನು ಕಾಯ್ದುಕೊಳ್ಳುವುದೂ ಸಾಧ್ಯ. ಈ ಅಂಶವನ್ನು ಅನ್ವಯಿಸಿ ನೋಡಹೊರಟರೆ ಧರ್ಮನ ಸತ್ಯದ, ಅರ್ಜುನನ ವೀರದ, ಭೀಮನ ಬಲದ, ಕೃಷ್ಣನ ರಾಗತಾಂತ್ರಿಕತೆಯ, ಭೀಷ್ಮನ ಮಹಿಮೆಯ, ಕರ್ಣನ ನನ್ನಿಯ ಹಿಂದೆಯೂ ದೋಷಗಳನ್ನು ಹುಡುಕಬಹುದು. ಅದೇ ಕಾರಣದಿಂದಲೇ ದುರ್ಯೋಧನನ ದೋಷಗಳಿಗೂ ಪರಿಹಾರ ಹುಡುಕಬಹುದು. ಈ ನಿಟ್ಟಿನಲ್ಲಿಯೇ ಸಮಗ್ರ ಮಹಾಭಾರತದ ಪಾತ್ರಗಳನ್ನು ಕೆದುಕುತ್ತಾ, ವಿಮರ್ಶಿಸುತ್ತಾ ಮರುಕಟ್ಟುವ ಪ್ರಯತ್ನಗಳು ನಡೆದಿವೆ ಎನ್ನಬಹುದು. ವ್ಯಾಸ, ಪಂಪ, ರನ್ನ, ಕುಮಾರವ್ಯಾಸರಿಗೆ ಒಬ್ಬೊಬ್ಬ ನೆಚ್ಚಿನ ನಾಯಕನಿರುವಂತೆ ಸಾಮಾನ್ಯರಿಗೂ ಅದರ ಮನೋವೃತ್ತಿಯೆಂಬಲ್ಲಿ ಒಂದು ನಾಯಕತ್ವದ ನಿದರ್ಶನ ಸಿಗಬಲ್ಲದು. ಆದರೆ ಯಾವುದೂ 'ಇದಮಿತ್ತಂ' ಎನ್ನುವ ಅಂತಿಮ ನಿರ್ಣಯವಾಗದು. ಪರಂಪರೆಯನ್ನೊಮ್ಮೆ ಹಿಂದಿರುಗಿ ನೋಡುವ ಹೊಸ ದೃಷ್ಟಿಕೋನವಾಗಿಯಷ್ಟೆ ನೆನಪಿನಲ್ಲುಳಿಯಬಲ್ಲುದೇನೊ? ಅಂತಿಮವಾಗಿ ಅವರವರ ನಾಯಕ ಅವರಲ್ಲೇ ಇರುತ್ತಾನೆನ್ನಬಹುದು.

ಪರಾಮರ್ಶನ ಕೃತಿಗಳು

೧. ವಚನಭಾರತ – ಪ್ರೊ. ಎ.ಆರ್.ಕೃಷ್ಣಶಾಸ್ತ್ರೀ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ,ಜೆ.ಸಿ.ರಸ್ತೆ, ಬೆಂಗಳೂರು-೫೬೦೦೨, ೯ನೇ ಮುದ್ರಣ (೨೦೦೯)
೨. ಯುಗಾಂತ – ಅನುಃ ಶ್ರೀಪತಿ ತಂತ್ರಿ, (ಇರಾವತಿಕರ್ವೆ) ಅಭಿನವ, ೧೭-೧೮-೨, ಮೊದಲನೆ ಮುಖ್ಯರಸ್ತೆ, ಮಾರೇನಹಳ್ಳಿ,

ವಿಜಯನಗರ, ಬೆಂಗಳೂರು-೫೬೦೦೪೦, ೧ನೇ ಮುದ್ರಣ (೨೦೧೩)
೩. ಕನ್ನಡಿ-ಕೈದೀವಿಗೆ – ಡಾ. ಪ್ರೀತಿ ಶುಭಾಚಂದ್ರ, ವಿವೇಕ ಪ್ರಕಾಶನ, ೪೬೨, ಚಿತ್ರಭಾನು ರಸ್ತೆ, ಕುವೆಂಪುನಗರ, ಮೈಸೂರು-೫೭೦೦೨೩. (ಮೊದಲ ಮುದ್ರಣ ೨೦೦೭)
೪. ಶ್ರೀ ಮಹಾಭಾರತ ಪಾತ್ರ ಪ್ರಪಂಚ- ಕೆ.ಎಸ್.ನಾರಾಯಣಾಚಾರ್ಯ, ಸಾಹಿತ್ಯ ಪ್ರಕಾಶನ ಕೊಪ್ಪೀಕರ್‌ಬೀದಿ, ಹುಬ್ಬಳ್ಳಿ – ೫೮೦೦೨೦. (೨೦೧೦)
೫. ವೇದವ್ಯಾಸರು ಮಹಾಭಾರತವನ್ನು ಬರೆದದ್ದು ಏಕೆ? ನಿರುಪಮಾ, ಪೂರ್ಣಿಮಾ ಪ್ರಕಾಶನ ಬೆಂಗಳೂರು. (೧ನೇ ಮುದ್ರಣ ೨೦೧೧)
೬. ರನ್ನನ ಸಾಹಸಭೀಮ ವಿಜಯ: ಪರಾಮರ್ಶೆ (ಸಂ) -- ಡಾ. ಬಾಳಣ್ಣ ಸೀಗೀಹಳ್ಳಿ, ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು.
೭. ಕುಮಾರವ್ಯಾಸ ಒಂದು ಅಧ್ಯಯನ – (ಸಂ) ಜಿ.ಎಸ್.ಭಟ್ಟ ಚೇತನ ಬುಕ್‌ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಲಕ್ಷ್ಮಿ ಟಾಕೀಸ್ ಹಿಂಭಾಗ), ಮೈಸೂರು-೫೭೦೦೨೪ (೧ನೇ-೧೯೯೯)
೮. ತೌಲನಿಕ ಕಾವ್ಯಮೀಮಾಂಸೆ – ಎಚ್.ತಿಪ್ಪೇರುದ್ರಸ್ವಾಮಿ
೯. ಅರಿಸ್ಟಾಟಲನ ಕಾವ್ಯಮೀಮಾಂಸೆ – ಎನ್.ಬಾಲಸುಬ್ರಹ್ಮಣ್ಯ
೧೦. ಡೆಂಡಾ -- ಡಾ. ಮಾಧವ ಡೆರಾಜೆ, ಕನ್ನಡ ಪುಸ್ತಕ ಪ್ರಾಧಿಕಾರ ಪಂಪ ಮಹಾಕವಿರಸ್ತೆ, ಚಾಮರಾಜಪೇಟೆ ಬೆಂಗಳೂರು-೫೬೦೦೧೮, ಮೊದಲಮುದ್ರಣ ೨೦೦೩.

ಸಮಾಜಮುಖಿಯಾಗಿ ನಾಗತಿಹಳ್ಳಿಚಂದ್ರಶೇಖರ

*ನಾಗರಾಜಮೂರ್ತಿ, ** ಡಾ॥ ಸಿ. ಕೆ. ಪುಟ್ಟಸ್ವಾಮಿ
* ಸಂಶೋಧಕರು, ಸಂಪಹನ ಹಾಗೂ ಪತ್ರಿಕೊದ್ಯಮ ವಿಭಾಗ ಮಾನಸಗಂಗೋತ್ರಿ, ಮೈಸೂರು-೫೭೦ ೦೦೬
ಇಮೇಲ್ ಐ.ಡಿ nagarajamurthy36@yahoo.in

ನಾಗತಿಹಳ್ಳಿಚಂದ್ರಶೇಖರ ಎಂದ ತಕ್ಷಣ ನಮಗೆ ತಟ್ಟನೆ ನೆನೆಪಾಗುವುದು ಅವರು ಮೆಷ್ಟ್ರು, ಸಾಹಿತಿ, ಚಲನಚಿತ್ರ ನಿರ್ದೇಶಕರು ಎಂದು. ಹೌದು ಇದು ಅಕ್ಷರ ಸಹ ನಿಜ, ಅವರು ಮೇಷ್ಟ್ರಾಗಿ ತಮ್ಮ ಭೋಧನೆಯ ಅವಧಿಯಲ್ಲಿ ಅನೇಕ ಪ್ರತಿವಾಂತ ವಿದ್ಯಾವಂತ ಯುವಕರನ್ನು ಬೆಳೆಸಿದ್ದಾರೆ, ಸಿನಿಮಾ ಕ್ಷೇತ್ರಕ್ಕೆ ಬಂದರೇ ಅಲ್ಲಿಯು ಸಹಾ ಅನೇಕ ಹೊಸ ಹೊಸ ಕಲಾವಿದರನ್ನು ಬೆಳಕಿಗೆ ತಂದು ಜನಮನಣಿಗಳಿಸಿದ್ದಾರೆ, ಸಾಹಿತ್ಯ ಕ್ಷೇತ್ರಕ್ಕೆ ಬಂದರೆ ತಮ್ಮ ಆಕರ್ಷಕವಾದ ಬರವಣಿಗೆಯ ಮೂಲಕ ತಾವು ಪ್ರಪಂಚವನ್ನೆಲ್ಲ ತಿರುಗಿ ಕಂಡು ಅನುಭವಿಸಿದ ಅನುಭವವನ್ನೆಲ್ಲ ತಮ್ಮ ಸರಳವಾದ ಕಾವ್ಯ ಭಾಷೆಯ ಶೈಲಿಯಲ್ಲಿ ಅನಾವಣಗೊಳಿಸಿ ತಮ್ಮ ಶ್ರೇಷ್ಠತೆಯನ್ನ ಹೆಚ್ಚಿಸಿಕೊಂಡಿದ್ದಾರೆ, ಹೊಳೆದಂಡೆ ಹಾಗೂ ರೆಕ್ಕೆ ಮತ್ತು ಬೇರು ಎಂಬ ಅಂಕಣಗಳನ್ನು ಬರೆಯುವ ಮೂಲಕ ತಮ್ಮದೇ ಆದ ಓದುವ ವರ್ಗವನು ಹೆಚ್ಚಿಸಿಕೊಂಡಿದ್ದಾರೆ ಇದು ಎಲ್ಲರಿಗೂ ತಿಳಿದ ವಿಚಾರವೇ ಸರಿ, ಹೆತ್ತತಾಯಿ ಹೊತ್ತ ಭೂಮಿ ಸ್ವರ್ಗಕ್ಕೆ ಮಿಗಿಲು ಎಂಬ ವಾಕ್ಯವನ್ನು ಅವರು ಅಕ್ಷರ ಸಹವೂ ಮೈಗೂಡಿಸಿ ಕೊಂಡಿದ್ದಾರೆ ಅವರು ಹುಟ್ಟಿದ ಊರಿನ ಋಣ ತೀರಿಸಲೆಂದೇ ಅವರು ಅನೇಕ ಸಮಾಜ ಮುಖಕೆಲಸವನ್ನು ಮಾಡುತ್ತ ಬರುತ್ತಿದ್ದಾರೆ, ಇದನ್ನು ತಿಳಿದು ಕೋಳ್ಳುವುದು ನಮ್ಮೆಲರ ಅದೃಷ್ಟವೇ ಸರಿ ಅದನ್ನು ಮುಂದೇ ತಿಳಿದು ಕೊಳ್ಳೋಣ.

ನಾಗತಿಹಳ್ಳಿಚಂದ್ರಶೇಖರ ಜನನ:– ನಾಗತಿಹಳ್ಳಿಚಂದ್ರಶೇಖರ ರವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೋಕಿನ ಎ.ನಾಗತಿಹಳ್ಳಿ ಎಂಬ ಒಂದು ಪುಟ್ಟ ಹಳ್ಳಿಯಲ್ಲಿ 1956 ಆಗಸ್ಟ್ 15 ರಂದು ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಶುಭ ದಿನದಂದು ತಂದೆ ತಿಮ್ಮಶೆಟ್ಟಿಗೌಡ ಮತ್ತು ತಾಯಿ ಪಾರ್ವತಮ್ಮ ಅವರಿಗೆ ಮೂರನೆಯ ಮಗನಾಗಿ ಜನಿಸುತ್ತಾರೆ.

ದಾಂಪತ್ಯ ಜೀವನ:– ನಾಗತಿಹಳ್ಳಿಚಂದ್ರಶೇಖರ ಇವರು ಮಾನಸ ಗಂಗೋತ್ರಿಯ ಅಭ್ಯಾಸದಲ್ಲಿರುವಾಗಲೇ ವಿಜ್ಞಾನ ವಿಭಾಗದ ಭೌತಶಾಸ್ತ್ರದ ವಿಷಯದಲ್ಲಿ ಅಭ್ಯಾಸ ಮಾಡುತ್ತಿದ್ದ ಶೋಭಾ ಎಂಬುವವರನ್ನು ಪ್ರೀತಿಸುತ್ತಾರೆ ಅವರ ಹುಟ್ಟು ಹಬ್ಬದ ದಿನದಂದೆ ಅಂದರೆ 1986 ಆಗಸ್ಟ್ 15ರಂದು ದಲಿತ ಕವಿ,ವಿಚಾರವಾದಿ,ಡಾ.ಸಿದ್ದಲಿಂಗಯ್ಯ ನವರ ನೇತೃತ್ವದಲ್ಲಿ ಅತ್ಯಂತ ಸರಳ ರೀತಿಯಲ್ಲಿ ಮದುವೆ ನಡೆಯುತ್ತದೆ.

ಶಿಕ್ಷಣ:– ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮೂರಿನ ಮುಗಿಸಿ ಪ್ರೌಢ ಅಭ್ಯಾಸಕ್ಕೆಂದು ಕಂಬದ ಹಳ್ಳಿಗೆ ಬರುತ್ತಾರೆ.ತಮ್ಮ ಹೈಸ್ಕೂಲ್ ಅಭ್ಯಾಸ ಯಶಸ್ವಿಯಾಗಿ ಮುಗಿಸಿ ಕಾಲೇಜು ವ್ಯಾಸಂಗಕ್ಕಾಗಿ ಮಲೆನಾಡಿನ ಕಾರವಾರಕ್ಕೆ ಬರುತ್ತಾರೆ. ನಂತರ ಮೈಸೂರಿನಲ್ಲಿ ಪದವಿಯನ್ನು ಪಡೆದು,ಸ್ನಾತಕೋತರ ಪದವಿ ವಿದ್ಯಾಬ್ಯಾಸಕ್ಕಾಗಿ ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರವೇಶ ಪಡೆಯುತ್ತಾರೆ.ಅವರ ಪರಿಶ್ರಮದ ಫಲವಾಗಿ 1985ರಲ್ಲಿ ಎಂ.ಎ. ಪದವಿಯಲ್ಲಿ ಎಂಟು ಚಿನ್ನದ ಪದಕಗಳನ್ನು ಪಡೆಯುತ್ತಾರೆ.

ಸಮಾಜಮುಖಿಯಾಗಿ ನಾಗತಿಹಳ್ಳಿಚಂದ್ರಶೇಖರ: ಮಂಡ್ಯದ ಮಣ್ಣಿನಲ್ಲಿ ಅರಳಿದ ನಾಗತಿಹಳ್ಳಿಚಂದ್ರಶೇಖರ ಅವರು ತಮ್ಮಂತೆ ತಮ್ಮ ಸುತ್ತ ಮುತ್ತಲಿನವರು ಸಂತೋಷವಾಗಿರಬೇಕು ಅನ್ನುವ ಮನೋಭಾವ ದವರು. ಒಬ್ಬ ಉತ್ತಮ ಕತೆಗಾರನ ಬದುಕನ್ನು ಕೇವಲ ಸಾಹಿತಿಯಂತೆ ನೋಡದೆ ಹಲವು ಬಗೆಯಲ್ಲಿ ಅಧ್ಯಯನ ಮಾಡಬೇಕಾಗಿದೆ ಅವರು ತಮ್ಮ ಹಳ್ಳಿಯೊಂದಿಗೆ ಹೊಂದಿರುವ ಸಂಬಂಧ, ನಾಡಿನೊಂದಿಗೆ ಹೊಂದಿರುವ ಸಂಬಂಧ, ಕಲೆಯೊಂದಿಗೆ ಇವರ ಸಂಬಂಧ ಇವುಗಳನ್ನೆಲ್ಲ ಅರ್ಥಮಾಡಿಕೊಳ್ಳಬೇಕಾಗಿ ಚಂದ್ರುರವರು ಒಂದು ಉತ್ತಮವಾದ ಹಳ್ಳಿ ಹೇಗಿರಬೇಕೆಂದು ಬಯಸುತ್ತೇವೆಯೋ ಅಂತಹದೊಂದು ಹಳ್ಳಿಯನ್ನು ತಾವೇ ನಿಂತು ರೂಪಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ವಿವೇಕನಂದ ಯುವಕರ ಸಂಘ: ಚಂದ್ರುರವರ ಆರಂಭಿಕ ಜೀವನ ಪ್ರಾರಂಭವಾದದ್ದು ಅವರ ಹುಟ್ಟೂರಾದ ನಾಗತಿಹಳ್ಳಿಯಲ್ಲಿ ಅದು ವಿವೇಕನಂದ ಯುವಕ ಸಂಘವವನ್ನು ಕಟ್ಟುವ ಮೂಲಕ,ಚಿಕ್ಕವಯಸ್ಸಿನ ತನ್ನ ತನ್ನ ಸಂಗಡಿಗರೊಂದಿಗೆ ಈ ಸಂಘವನ್ನು ಸ್ಥಾಪಿಸಿ ಅನೇಕ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕೆಲಸಗಳನ್ನು ಕೈಗೊಂಡಿದ್ದಾರೆ. ಸರ್ಕಾರದ ನೆರವಿಲ್ಲದೆ ಹಳ್ಳಿಗರ ಹಣದಿಂದಲೇ ಊರಿನ ಅಭಿವೃದ್ಧಿಗೆ ಯೋಜನೆಗಳನ್ನು ಹಾಕಿಕೊಂಡಿದ್ದು ಈ ಸಂಘದ ವೈಶಿಷ್ಟ್ಯ.ಊರಿನ

ರಸ್ತೆ ಚರಂಡಿಗಳನ್ನು ಸ್ವಚ್ಚ ಗೊಳಿಸುವ, ಬೀದಿ ದೀಪಗಳನ್ನು ರಿಪೇರಿ ಮಾಡುವ ಊರಿಗೆ ಟ್ಯೂಬ್ ಗಳನ್ನು ಕೊಡಿಸಿಕೊಡುವ ಕೆಲಸಗಳನ್ನು ಮಾಡಿದ್ದಾರೆ.

ಸಂಘ ಸಂಸ್ಥೆಗಳಲ್ಲಿ ಕೆಲಸಮಾಡುವ ವ್ಯಕ್ತಿಗೆ ಅನೇಕ ಅವಮಾನಕರ ಪ್ರಸಂಗಗಳು ಎದುರಾಗುತ್ತವೆ ಆತ ಎಷ್ಟೇ ಪ್ರಾಮಾಣಿಕನಾಗಿದ್ದರೂ ಅದರ ಬಗ್ಗೆ ಜನ ಸಂಶಯತಾಳುತ್ತಾರೆ ಒಳ್ಳೆಯ ಮಾತನಾಡುವವರು ಬಹಳ ಕಡಿಮೆ.ಆದರೂ ಅವರ ಶ್ರಮಕ್ಕೆ ಈ ಯುವಕ ಸಂಘ ಚಂದ್ರು ರವರಿಗೆ ಅತ್ಯುತ್ತಮ ಯುವಕ ಪ್ರಶಸ್ತಿಯನ್ನು ತಂದುಕೊಟ್ಟಿತ್ತು.

ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ: ಚಂದ್ರು ತಮ್ಮ ಹುಟ್ಟು ಹಬ್ಬದ ಶುಭದಿನ 1958ರ ಆಗಸ್ಟ್ 15,ರಂದು "ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ"ಯನ್ನು ಆರಂಭಿಸಿದರು.ಸರ್ಕಾರದ, ಸಂಘ ಸಂಸ್ಥೆಗಳ ಧನಸಹಾಯ ಇದಕ್ಕಿಲ್ಲ. ಅವರು ಕೇಳಿದ್ದರೆ ಆರ್ಥಿಕ ಸಹಾಯ ಸಿಗಬಹುದಿತ್ತು. ಆದರೆ ಆ ಕಾರ್ಯವನ್ನು ತಮ್ಮ ಆದಾಯದ ಒಂದು ಪಾಲಿನಲ್ಲಿ ನಡೆಸಬೇಕು ಎಂದು ಬಯಸಿದ್ದರಿಂದ ಇಂದಿಗೂ ಅವರ ಹಣಕಾಸು ನೆರವಿನಿಂದಲೇ ಈ ವೇದಿಕೆ ನಡೆಯುತ್ತಿದೆ.ಪ್ರತಿ ತಿಂಗಳು ಈ ವೇದಿಕೆಯಲ್ಲಿ ಹೊರಗಿನ ಗೆಳೆಯರನ್ನು ಸೇರಿಸಿಕೊಂಡು ಯಾವುದಾದರೊಂದು ಪ್ರಸ್ತುತ ವಿಷಯ ಕುರಿತು ಚರ್ಚಿಸುವ ವಿಚಾರ ಸಂಕಿರಣಗಳನ್ನು ನಡೆಸುವುದು, ಗ್ರಾಮದಲ್ಲಿ ಸಸಿ ನೆಡುವ, ಪರಿಸರ ಸಂರಕ್ಷಿಸುವ ಕೆಲಸವನ್ನು ನಡೆಸಲಾಗುತ್ತಿದೆ. ಆದ್ದರಿಂದ ತಿಂಗಳಿಗೊಮ್ಮೆ ಚರ್ಚೆ, ವಿಚಾರ ಸಂಕಿರಣಗಳನ್ನು ಸಣ್ಣ ಪ್ರಮಾಣದಲ್ಲಿ ನಡೆಯುತ್ತವೆ.ಮತ್ತು ಪ್ರತಿ ಯುಗಾದಿಯ ಸಂದರ್ಭದಲ್ಲಿ ಈ ಸಾಂಸ್ಕೃತಿಕ ಹಬ್ಬಕ್ಕೆ ಚಾಲನೆ ನೀಡಲಾಗುತ್ತಿದೆ.

ಬರೀ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದರೆ ಸಾಕೇ ಎಂಬ ಪ್ರಶ್ನೆಯೂ ವೇದಿಕೆಗೆ ಎದುರಾದಾಗ ಹೊಳೆದದ್ದು.

ಹಾಲು ಒಕ್ಕೂಟದ ಸ್ಥಾಪನೆ.: ಇದು ಚಂದ್ರುರವರ ದಿಟ್ಟ ಹೆಜ್ಜೆಯ ಪ್ರತಿಫಲದ ರೂಪ. ಯಾವುದೇ ಒಂದು ಸುಸಂಸ್ಕೃತವಾದ ಹಳ್ಳಿಯನ್ನು ನಿರ್ಮಾಣವಾಗಬೇಕಾದರೆ ಅದಕ್ಕೆ ಆರ್ಥಿಕ ಸಬಲತೆ ಮುಖ್ಯಕಾರಣ ವೆಂದು ತಿಳಿದಿದ ಇವರು ಹಾಲು ಒಕ್ಕೂಟದ ಸ್ಥಾಪನೆಗೆ ಚಿಂತಿಸಿ ಅದರಂತೆ ಸುಸರ್ಜಿತವಾದ ಹಾಲು ಒಕ್ಕೂಟವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು.ಹಳ್ಳಿಯ ಹೆಂಗಸರೇ ಇರುವ ಈ ಒಕ್ಕೂಟಕ್ಕೆ ಪ್ರತಿವರ್ಷ ಚುನಾವಣೆಯೂ ನಡೆಯುತ್ತದೆ. ಆ ಚುನಾವಣೆಯಲ್ಲಿ ವಿಜೇತರಾದವರು ಈ ಒಕ್ಕೂಟದ ನಿರ್ದೇಶಕರಾಗುತ್ತಾರೆ. ಆ ಮೂಲಕ ಅತಿ ಹೆಚ್ಚು ಹಾಲನ್ನು ಯಾರು ಸಂಗ್ರಹಿಸುತ್ತಾರೋ ಅವರಿಗೆ ಪ್ರತಿವರ್ಷವೂ ಸನ್ಮಾನಿಸಲಾಗುವುದು. ಇದರಿಂದ ಹಸುಗಳನ್ನು ಸಾಕುವವರ ಸಂಖ್ಯೆ ಹೆಚ್ಚಾಗಿದ್ದು, ಹಾಲಿನ ಗುಣಮಟ್ಟ ಹಾಗೂ ಹಾಲು ಸಂಗ್ರಹಣೆಯ ಹೆಚ್ಚಾಗಿದೆ. ಮಹಿಳೆಯರನ್ನು ಪ್ರೊತ್ಸಾಹಿಸುವ ಸಲುವಾಗಿ ವಿವಿಧ ಬಗೆಯ ಹಸುಗಳ ತಳಿಗಳನ್ನು ಪರಿಚಯಿಸಲಾಗುತ್ತಿದೆ. ಹಾಲು ಕರೆಯುವ ವಿಧಾನ,ಅತಿ ಹೆಚ್ಚು ಹಾಲುಕೊಡುವ ಹಸುಗಳು,ಅವುಗಳ ಪೋಷಣೆ ಇವೇ ಮುಂತಾದವುಗಳ ಬಗ್ಗೆ ಮಾರ್ಗದರ್ಶನವನ್ನು ಸಹಾ ನೀಡಲಾಗುವುದು. ಇದರಿಂದ ಇಂದು ಹಾಲುಸಂಗ್ರಹಣೆಯ ಪ್ರಮಾಣ ಹೆಚ್ಚಾಗಿ ಅಧಿಕ ಮಾರಾಟ ಫಲವಾಗಿ ನಾಗತಿಹಳ್ಳಿ ಆರ್ಥಿಕ ಸಬಲತೆಯತ್ತ ಸಾಗುತ್ತಿದ್ದು, ಹೆಂಗಸರು ಆರ್ಥಿಕವಾಗಿ ಸಬಲರಾಗಿ ಸುಭೀಕ್ಷೆ ಜೀವನ ನಡೆಸುತ್ತಿದಾರೆ ಎಂದರೆ ಅದಕ್ಕೆ ಚಂದ್ರು ರವರೆ ಪ್ರಮುಖ ಕಾರಣ.

ಅನಕ್ಷರಸ್ಥರ ನಾಟಕ ತಂಡ : ಅಕ್ಷರ ಕಲಿಯದ 40 ಮಂದಿ ಮಹಿಳೆಯರ ತಂಡವು 'ಅಭಿವ್ಯಕ್ತಿ ಮಹಿಳಾ ಸಂಘ' ರಚಿಸಿಕೊಂಡೇ ಇಡೀ ರಾಜ್ಯಾದ್ಯಂತ 'ಕರಿಭಂಟ' ಎಂಬ ನಾಟಕವನ್ನು ಪ್ರದರ್ಶಿಸಿದ್ದಾರೆ. ಇಲ್ಲಿಯ ಮಕ್ಕಳು ಸಾಂಸ್ಕೃತಿಕ ತಂಡವನ್ನು ಕಟ್ಟಿಕೊಂಡಿದ್ದಾರೆ.ತಮ್ಮ ವೇದಿಕೆಯ ಕುರಿತು ಮಾತನಾಡಿದ ಚಂದ್ರು ನನ್ನ ಬೆಳೆಸಿದ ಹಳ್ಳಿಗೆ ಏನಾದರೂ ಋಣ ಸಂದಾಯ ಮಾಡಬೇಕು ಎಂಬ ಉದ್ದೇಶದಿಂದಲೇ 'ಅಭಿವ್ಯಕ್ತಿ' ಅಸ್ತಿತ್ವಕ್ಕೆ ಬಂತು. ಅದಾಗಲೇ ಕಥೆಗಾರನೂ ಆಗಿದ್ದರಿಂದ ವೇದಿಕೆಯ ಮೂಲಕ ಕಥೆಗಳನ್ನು ಪ್ರಕಟಿಸಬಹುದಲ್ಲ ಎಂದು ಯೋಚಿಸಿದೆ. ಬರೀ ನನ್ನ ಕೃತಿಗಳಷ್ಟೇ ಏಕೆ? ವೇದಿಕೆ ಇಲ್ಲದವರಿಗೆ ವೇದಿಕೆಯನ್ನು ಕಲ್ಪಿಸಬೇಕೆಂದುಕೊಂಡು ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರ ಕೃತಿಗಳನ್ನು ಪ್ರಕಟಿಸಿ ಅದರಲ್ಲಿ ಕೆಲವು ಕೃತಿಗಳಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಬಂದಿದೆ ಎಂದು ಸಂಭ್ರಮಿಸಿದರು.

ಅಂತರ್ಜಾತಿ ವಿವಾಹ ವೇದಿಕೆ: ಹೇಳುವವನು ಮಾಡಲಾರ, ಮಾಡುವವನು ಹೇಳಲಾರ" ಇದು ಹಿರಿಯವರ ಗಾದೆ, ಈ ಮಾತು ಕಟು ಸತ್ಯ ಏಕೆಂದರೆ ಚಂದ್ರುರವರು ಯಾವುದೇ ಕೆಲಸವನ್ನು ಮಾಡಬೇಕಾದರೂ ಸಹಾ ಅದನ್ನು ಯಾರಿಗೂ ಹೇಳುವುದ್ದಿಲ್ಲ ಅದನ್ನು ಮಾಡಿಯೇ ತಿರಿಸುತ್ತಾರೆ ಎಂಬುದಕ್ಕೆ ಅವರು ಅಂತರ್ ಜಾತಿಯ ವಿವಾಹವಾದ (ಶೋಭರವರನ್ನು) ನಿದರ್ಶನವೇ ಸಾಕ್ಷೀ,ಇವರು ಈ ವೇದಿಕೆಯ ಮೂಲಕ ಅಂತರ್‌ಜಾತಿ, ಅಂತರ್‌ಧರ್ಮೀಯ ಮದುವೆಗಳನ್ನು ಮಾಡಿಸುತ್ತಾ ಬಂದಿದ್ದು, ಈವರೆಗೆ ಸುಮಾರು 30 ಮದುವೆಗಳು ನಡೆದಿವೆ ಎನ್ನಬಹುದು.

ಸಿಹಿ ಮತ್ತು ಕಸು ರಂಗ ಮಂದಿರ: ಸಂಸ್ಕೃತಿ ಹಬ್ಬದ ಪ್ರತಿದಿನ ರಾತ್ರಿ ನಾಡಿನ ಖ್ಯಾತ ರಂಗ ಸಂಘಟನೆಗಳಿಂದ ನಾಟಕ ಪ್ರದರ್ಶನ ಏರ್ಪಡಿಸಿಕೊಂಡು ಬರಲಾಗುತ್ತಿದೆ ನಾಗತಿಹಳ್ಳಿ ಯುವಕ ಮಂಡಳಿಯ ಸದಸ್ಯರಿಗೆ ರಂಗತರಬೇತಿ ಶಿಬಿರಗಳನ್ನು ನಡೆಸಿ ನಮ್ಮೂರ ಗಾಂಧಿ, ಇಗೋ ಪಂಜರ ಅಗೋ ಮುಗಿಲು, ಅಂಗಿಬಟ್ಟೆ, ಹಳ್ಳಚಿತ್ರ, ಧನ್ವಂತರಿ ಚಿಕಿತ್ಸೆ, ನಾಟಕಗಳನ್ನು ನಾಡಿನಾದ್ಯಂತ ಪ್ರದರ್ಶಿಸಲಾಗಿದೆ. ರಂಗ ಭೂಮಿಯ ಅರಿವು ಸಂಪರ್ಕ ಇಲ್ಲದ ಅಭಿವ್ಯಕ್ತಿ ಮಹಿಳಾ ಸಂಘಟನೆಯ ರೈತ ಮಹಿಳೆಯರು ಕಲಿತು ಅಭಿನಯಿಸಿದ ನಾಟಕ "ಕರಿಭಂಟ" ಈ ನಾಟಕ ದೆಹಲಿಯ ಕರ್ನಾಟಕ ಸಂಘದ ಪ್ರದರ್ಶನವು ಸೇರಿದಂತೆ ರಾಜ್ಯಾದಂತ 25ಕ್ಕೂ ಹೆಚ್ಚು ಪ್ರದರ್ಶನವಾಗಿರುವುದು ಕನ್ನಡ ರಂಗಭೂಮಿ ಇತಿಹಾಸದಲ್ಲಿ ದಾಖಲಿಸಬೇಕಾದ ಸಂಗತಿ. ಚಂದ್ರು ರಂಗತರಬೇತಿ ನೀಡಿ ಅವರಿಂದ ದೇವರ ಆಟ, ಹುಲಿ ಬಂತು ಹುಲಿ, ಪಂಚತಂತ್ರ, ನಮ್ಮೂರ ಮಕ್ಕಳು, ಮತ್ತೆ ಬಂದವರು ಗಾಂಧಿ, ಬದುಕು ಬದ ಲಾಯಿಸಬಹುದು, ಇಡ್ಲಿ ಮಾದಮ್ಮ, ಉದ್ಭವ ಮೂರ್ತಿ, ನಾಟಕಗಳ ರಂಗಪ್ರಯೋಗ ನಡೆಸಲಾಗಿದೆ ಅಂತರ್ಜಾತೀಯ ಅಂತರ್ ಧರ್ಮೀಯ ವಿವಾಹಿತರ ಸಮ್ಮೇಳದ ಆಶಯದೊಂದಿಗೆ 2013ರ ಸಂಸ್ಕೃತಿ ಹಬ್ಬವನ್ನು ಆಚರಿಸಲಾಯಿತು.2004ರಿಂದ ಪ್ರತಿವರ್ಷ ನಡೆದು ಕೊಂಡು ಬರುತ್ತಿರುವ ನಾಗತಿಹಳ್ಳಿ ಸಂಸ್ಕೃತಿ ಹಬ್ಬಕ್ಕೆ ದಶಮಹೋತ್ಸವದ ಸಂಭ್ರಮ.ಕನ್ನಡದ ಬಹುತೇಕ ಹಿರಿಯ, ಕಿರಿಯಸಾಹಿತಿಗಳು, ಕಲಾವಿದರು, ಸಿನಿಮಾ ನಟ ನಟಿಯರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ನಾಗತಿಹಳ್ಳಿಯು ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಳ್ಳುತ್ತಾ ಸುತ್ತಲಿನ ಗ್ರಾಮಗಳಲ್ಲಿ ಸಂಸ್ಕೃತಿ ಹಬ್ಬಗಳು ನಡೆಯಲು ಪ್ರೇರೇಪಣೆ ನೀಡುತ್ತಿದೆ.

ಮಕ್ಕಳ ಶಿಬಿರ: ಸಂಸ್ಕೃತಿ ಹಬ್ಬದ ಭಾಗವಾಗಿ ಮಕ್ಕಳ ಶಿಬಿರಗಳನ್ನು ಏರ್ಪಡಿಸಿ ಮಕ್ಕಳ ಕವಿಗೋಷ್ಠಿ ಜಾನಪದ ಮತ್ತು ಭಾವಗೀತೆಗಳ ಕಲಿಕೆಯ ಶಿಬಿರ,ಯಕ್ಷಗಾನ ತರಬೇತಿ,ಮಣ್ಣಿನ ಕಲಾಕೃತಿ ರಚನೆ ಹಾಗೂ ಚಿತ್ರಕಲಾಶಿಬಿರ, ರಂಗಶಿಬಿರ,ಹಾಗೂ ನಾಗತಿಹಳ್ಳಿ ಸುತ್ತಲಿನ ಶಾಲಾ ಮಕ್ಕಳಲ್ಲಿ ಸೃಜನ ಶೀಲತೆ,ಕೌಶಲತೆಯನ್ನು ಬೆಳೆಸುವ ಕಾರ್ಯಕ್ರಮಗಳು ನಡೆದಿವೆ.

ರೈತರಿಗೆ ಕೃಷಿ ಅಧ್ಯಯನದ ಪ್ರವಾಸ: ಚಂದ್ರು ರವರು ಸಾಹಿತ್ಯ ಸಂಸ್ಕೃತಿಗಳಿರುವ ನಿಜವಾದ ವ್ಯಕ್ತಿ, ಜನರ ಜೀವನದ ಬಗೆ ಕಾಳಜಿ ಇಟ್ಟುಕೊಂಡಿರುವ,ಇವರು ತನ್ನ ಶ್ರಮದ ಮೇಲೆ ಬಂದವರು. ಹೆಸರು ಹಣ ಎರಡನ್ನೂ ಸಂಪಾದಿಸಿಕೊಂಡು ಬಂದವರು.ತಾನು ಗಳಿಸಿದ ಹಣದಲ್ಲಿ ತನ್ನ ಹುಟ್ಟೂರಿಗೆ ಏನಾದರೂ ಮಾಡಬೇಕೆಂಬ ಹಂಬಲದಿಂದ ಸುತ್ತಲ ರೈತರಿಗೆ ಆಧುನಿಕ ಬೇಸಾಯದ ಕ್ರಮಗಳನ್ನು ಪರಿಚಯಿಸಿ ಉತ್ತೇಜಿಸುವ ಉದ್ದೇಶದಿಂದ ಪ್ರತಿವರ್ಷ ರೈತರು ಹಾಗೂ ರೈತ ಮಹಿಳೆರನ್ನು ಪ್ರವಾಸಕ್ಕೆ ಕರೆದೊಯ್ಯಲಾಗುತ್ತಿದೆ. ಮೈಸೂರು, ಚಾಮರಾಜನಗರ, ಹೆಗಡದೇವನಕೋಟೆ,ತಿರುಪತಿ, ಹೊರನಾಡು, ಶೃಂಗೇರಿ, ಉತ್ತರ ಕರ್ನಾಟಕ ಹಾಗೂ ಕರಾವಳಿ ಪ್ರಾಂತ್ಯಗಳಿಗೆ ಬೇಟಿನೀಡಿ ರೈತರಿಗೆ ಪ್ರಶಸ್ತಿ ಪಡೆದ ರೈತರ ಸಂದರ್ಶನ,ಉತ್ತಮ ತೋಟಗಳ ಬೇಟಿ,ಕೃಷಿ ಪಂಡಿತರುಗಳಿಂದ ಮಾರ್ಗದರ್ಶನ ಪಡೆಯಲಾಗಿದೆ. ಅಂದಿನ ಶಿಕ್ಷಣ ಸಚಿವ ಬಸವರಾಜ್ ಹೊರಟ್ಟಿ ರವರು ತಮ್ಮ ಹುಬ್ಬಳ್ಳಿ ತೋಟದಲಿ ಮಾವು ತೆಂಗು, ಬಾಳೆ, ಕಾಫಿ, ಹಣ್ಣು ಹಂಪಲುಗಳ ಗಿಡ ಮರಗಳನ್ನು ಬೆಳೆಸುವುದು.ಪ್ರಾಣಿ ಪಕ್ಷಿಗಳ. ವಿಶಿಷ್ಟ ಜಾತಿಯ ದನಕರುಗಳ,ಬಾತುಕೋಳಿಗಳ.ಸಾಕುವುದರ ಬಗ್ಗೆ ರೈತರಿಗೆ ತಿಳಿಸಿದರು.ಕೇರಳದ ಕಾಸರಗೋಡುವಿನಲ್ಲಿ ನಮ್ಮ ದೇಶದ ಶ್ರೇಷ್ಠ ಕೃಷಿ ವಿಜ್ಞಾನಿ ಡಾ॥ಚಂದ್ರಶೇಖರ ಚೌಟ ಹಾಗೂ ಅವರ ತಮ್ಮಂದಿರಾದ ಪ್ರಭಾಕರ ಚೌಟ ಹಾಗೂ ಮನೋಹರ ಚೌಟರು ನಮ್ಮ ರೈತರಿಗೆ ಅಡಿಕೆ, ತೆಂಗು, ಕಾಫಿ, ವೆನಿಲಾ, ಎಲ್ಲವನ್ನು ತೋರಿಸಿದರು.ವಿಶಿಷ್ಟ ರೀತಿಯ ಮಾವಿನ ಮರಗಳು, ರಬ್ಬರ್ ಸಸಿಗಳು, ಹಾಗೂ ತೋಟದ ಅಲ್ಲಲ್ಲಿ ಬೆಳೆದಿದ್ದ ಕಮ್ಯೂನಿಸ್ಟ್ ಗಿಡಗಳನ್ನು ರೈತರಿಗೆ ಪರಿಚಯಿಸಿದ್ದರು.

ಪರಿಸರ ಬಗ್ಗೆ ಕಾಳಜಿ: ಎಂಬತ್ತರ ದಶಕದಲ್ಲಿ ತೀವ್ರಗೊಂಡಿದ್ದ ರೈತಚಳುವಳಿಯಲ್ಲಿ ನಾಗತಿಹಳ್ಳಿ ಸಕ್ರಿಯವಾಗಿ ಭಾಗವಹಿಸಿದ್ದರು ಹಾಗೂ ರೈತ ಸಂಘದ ಕಾರ್ಯದರ್ಶಿಯಾಗಿದ್ದರು.1998ರಲ್ಲಿ ಕರ್ನಾಟಕ ರಾಜ್ಯ ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಾಂಶುಪಾಲರ, ಉಪನ್ಯಾಸಕರ, ಬೋಧಕೇತರರ ಒಕ್ಕೂಟ ಮೌಲ್ಯಮಾಪನ ಬಹಿಷ್ಕಾರಕ್ಕೆ ಕರೆಕೊಟ್ಟಿತ್ತು. ಯಶಸ್ಸಿನ ಮೆಟ್ಟಿಲು ಹತ್ತುತ್ತಿದ್ದ ಈ ಚಳುವಳಿಯನ್ನು ಕೆಲವು ಸ್ವಾರ್ಥಿ ಪದಾಧಿಕಾರಿಗಳು ತಮ್ಮ ವೈಯಕ್ತಿಕ ಸ್ವಾರ್ಥಕ್ಕಾಗಿ ಬಲಿಕೊಟ್ಟರು.ಅಂಥ ಶಿಕ್ಷಕ ವಿರೋಧಿಗಳ ವಿರುದ್ಧ ಹೋರಾಟ ರೂಪಿಸಿದಾಗ ಬೆಂಬಲವಾಗಿ 2 ಸಾವಿರ ಜನ ಉಪನ್ಯಾಸಕರು, ಪ್ರಾಂಶುಪಾಲರು, ಸಭೆ ನಡೆಸಿದ್ದರು. ಈ ಹೋರಾಟದಲ್ಲಿ ಚಂದ್ರು ಭಾಗವಹಿಸುವ ಮೂಲಕ ಆ ಸಭೆಗೆ ಸ್ಫೂರ್ತಿ ತುಂಬಿದ್ದರು. ಈ ಚಳುವಳಿಯ ವಂಚನೆಗೆ ಗುರಿಯಾದ ಅನೇಕರಿಗೆ ಆರ್ಥಿಕವಾಗಿ, ನೈತಿಕವಾಗಿ ಬೆಂಬಲ ಕೊಟ್ಟಿದ್ದರು. ಭದ್ರಾವತಿಯ ಕಾರ್ಮಿಕ ಚಳುವಳಿಯ ಮುಖಂಡರು ಇಕ್ಕಟ್ಟಿಗೆ ಸಿಕ್ಕಾಗಲೆಲ್ಲಾ ಅವರಿಗೆ ಬೆಂಬಲ ನೀಡುತ್ತಿದ್ದರು. ಕಾರ್ಮಿಕ ರಾಜು ಭದ್ರಾವತಿ ಮತ್ತು ಆಂಜನೇಯ ರನ್ನು ಸಂಕಷ್ಟದ ದಿನಗಳಲ್ಲಿ ಕೈ ಹಿಡಿದಿದ್ದಾರೆ.

ನಮ್ಮ ನಾಡಿನ ಬೆರಳೆಣಿಕೆಯ ಪ್ರಾಮಾಣಿಕ ಪರಿಸರ ಹೋರಾಟಗಾರರಲ್ಲಿ ಚಂದ್ರು ಒಬ್ಬರು.ಕೈಗಾ ಅಣುಸ್ಥಾವರದ ವಿರುದ್ಧ ರೂಪಿತಗೊಂಡ ಪ್ರಬಲ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.ಪರಿಸರ ಚಳುವಳ್ಳಿ ಕ್ರಮೇಣ ರಾಮಭಜನೆ ಮಾಡುವ ಹಿಂದುತ್ವದ ಚಳುವಳಿಯಾಗಿ ಮಾರ್ಪಟ್ಟಿದ್ದನ್ನು ಕಂಡು ಅಲ್ಲಿ ಮುಂದುವರೆಯಲಾರದೆ ಹಿಂದೆ ಸರಿಯುತ್ತಾರೆ.ಚಳವಳಿ ಹೋರಾಟಗಳಿಂದ ಹಿಂದೆ ಸರಿದರೂ ತಮ್ಮ ಸಿನಿಮಾ ಹಾಗೂ ಸಾಹಿತ್ಯ ಕೃತಿಗಳಲ್ಲಿ ಪರಿಸರ ಕಾಳಜಿಯನ್ನು ವ್ಯಕ್ತ ಪಡಿಸಿದ್ದಾರೆ.ಹಡೆದ್ದವ ಇದು ಚಂದ್ರು ರವರ ಪರಿಸರ ಗೀತೆಗಳ ಜನಪ್ರಿಯ ಕ್ಯಾಸೆಟ್,ಇಲ್ಲಿನ ಹಾಡುಗಳನ್ನು ದೂರದರ್ಶನ ಮತ್ತೆ ಮತ್ತೆ ಪ್ರಸಾರ ಮಾಡುವ ಮೂಲಕ ಜನರಲ್ಲಿ ಗಿಡಮರಗಳ ಬಗ್ಗೆ ಪ್ರೀತಿಯನ್ನುಂಟು ಮಾಡಿತ್ತು ಹಾಗೂ ಪರಿಸರವನ್ನು ವಸ್ತು ವಾಗಿಟ್ಟುಕೊಂಡು ಚಂದ್ರು ಡಾಕ್ಯುಮೆಂಟರಿಗಳನ್ನು ತಯಾರಿಸಿದ್ದಾರೆ. ಅವರ ಬಹುತೇಕ ಸಿನಿಮಾಗಳಲ್ಲಿ ಮಲೆನಡಿನ ನಿಸರ್ಗ ಚೆಲುವನ್ನು ಸೆರೆಹಿಡಿಸಿದ್ದಾರೆ.

80ರ ದಶಕದಿಂದ ಉಚ್ಛ್ರಾಯ ಸ್ಥಿತಿಯಲ್ಲಿದ್ದ ರೈತ ಚಳುವಳಿಯಲ್ಲಿ ಸಕ್ರಿಯರಾಗಿ ಭಾಗಿಯಾಗಿದ್ದ ಚಂದ್ರು ಬನ್ನೇರಿ ಕಥೆಯನ್ನು ಜಳವಳಿಯ ಪ್ರಭಾವದಿಂದ ಬರೆದದ್ದು.

ಸುಸಜ್ಜಿತ ಗ್ರಂಥಾಲಯ ಹಾಗೂ ಕಂಪ್ಯೂಟರ್ ಕೇಂದ್ರ: ಹಳ್ಳಿಯ ಜನ ವಿದ್ಯಾವಂತರಾಗ ಬೇಕು ಆಗಮಾತ್ರ ಆ ಹಳ್ಳಿಯ ಅಭಿವೃದ್ಧಿ ಸಾಧ್ಯ ಎಂದು ಮನಗಂಡಿದ ಚಂದ್ರು ಅದರಂತೆ ನಾಗತಿಹಳ್ಳಿಗೆ ಸುಸಜ್ಜಿತವಾದ ಗ್ರಂಥಾಲಯವನ್ನು ಹಾಗೂ ಕಂಪ್ಯೂಟರ್ ಕೇಂದ್ರವನ್ನು ಸ್ಥಾಪಿಸಿದ್ದರು.ಈ ಗ್ರಂಥಾಲಯದಲ್ಲಿ ಇತಿಹಾಸ, ಭೂ ಗೋಳಶಾಸ್ತ್ರ, ರಾಜಕೀಯ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಕ್ರೀಡೆ, ಸಾಹಿತ್ಯ, ಪ್ರಚಲಿತ ವಿದ್ಯಾಮಾನ,ಇನ್ನು ಮುಂತಾದ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಓದುಗರಿಗೆ ಕಲ್ಪಿಸಿಕೊಡಲಾಗಿದೆ.

ಆಧುನಿಕ ಯುಗವು ಕಂಪ್ಯೂಟರ್ ಯುಗವಾದರಿಂದ ಕಪ್ಯೂಟರ್ ಜ್ಞಾನವನ್ನು ತಮ್ಮ ಹಳ್ಳಿಯ ಜನರಿಗೆ ತಿಳಿಸಕೊಡುವ ಸಲುವಾಗಿ ಇಂದು ಈ ಊರಿನಲ್ಲಿ ಕಂಪ್ಯೂಟರ್ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಇದರಿಂದ ಇಂದು ಊರಿನಲ್ಲಿ ಯುವಕರು, ಯುವತಿಯರು ಇದರ ಸದುಪಯೋಗ ಪಡೆಯುತ್ತಿದ್ದಾರೆ.

ಉಚಿತ ವೈದ್ಯಕೀಯ ಶಿಬಿರ: ಚಂದ್ರು ರವರು ಪ್ರತಿವರ್ಷವು ಆಗಸ್ಟ್ 15ರಂದು ತಮ್ಮ ಹುಟ್ಟಿದ ಶುಭದಿನದ ಸಂಕೇತವಾಗಿ ಆಚರಿಸುವ ಸಾಂಸ್ಕೃತಿಕ ಹಬ್ಬದ ದಿನದಂದು ಬೆಂಗಳೂರಿನಿಂದ ನುರಿತ ವೈದ್ಯರನ್ನು ತಮ್ಮ ಊರಿಗೆ ಕರೆತಂದು ಊರಿನಲ್ಲಿ ಕಡುಬಡವರಿಗೆ ಉಚಿತ ವೈದ್ಯಕೀಯ ತಪಾಸಣೆ ಶಿಬಿರವನ್ನು ನಡೆಸುವರು, ಈ ಶಿಬಿರದಲ್ಲಿ ಕಣ್ಣಿನ ತಪ್ಪಾಸಣೆ, ಕಣ್ಣಿನ ಪೊರೆಯ ಪರೀಕ್ಷೆ, ದೂರದೃಷ್ಟಿ ಉಳ್ಳವರಿಗೆ, ಸಮೀಪ ದೂರ ದೃಷ್ಟಿ ಉಳ್ಳವರಿಗೆ ಉಚಿತ ಕನಡಕ ನೀಡಲಾಗುವುದು, ಕಣ್ಣು ಕಾಣದವರಿಗೆ ಆಪರೇಷನ್ ಮಾಡಲು ಸಲುವಾಗಿ ವೈದ್ಯರು ಒಂದು ನಿಗದಿತ ದಿನಾಂಕದಂದು ಅವರಿಗೆ ಸಸ್ತ್ರ ಚಿಕಿತ್ಸೆಯನ್ನು ಸಹಾ ಮಡಲಾಗುವುದು. ಹೀಗಾಗಿ ನಾಗತಿಹಳ್ಳಿಚಂದ್ರಶೇಖರ್ ರವರು ಕಣ್ಣಿಲ್ಲದವರಿಗೆ ಕಣ್ಣಾಗಿದ್ದಾರೆ.

ಉಪಸಂಹಾರ: ನಾಗತಿಹಳ್ಳಿಚಂದ್ರಶೇಖರವರು ಕೇವಲ ಮೆಷ್ಟ್ರಲ ಅವರು ಸಹಾಯದ ಸಹಾನು ಭೂತಿ ಉಳ್ಳವರು ಇಂದು ಪ್ರತಿಯೊಬ್ಬ ವ್ಯಕ್ತಿಯೂ

ಅವರವರ ಜೀವನ ನಡೆಸುವುದೇ ತುಂಬ ಕಷ್ಟಕರವಾದ ಕೆಲಸ,ಎಂತಹ ಅಗರ್ಭವಾದ ಶ್ರೀಮಂತರು ಸಹಾ ಸಮಾಜಮುಖಿ ಸೇವೆಯಲ್ಲಿ ತೊಡಿಸಿಕೊಳ್ಳುವುದು ಕಷ್ಟಕರವಾದ ಕಾಲದಲ್ಲಿ ಒಬ್ಬ ಸಾಮಾನ್ಯ ಮೆಷ್ಟರ ಮಗನಾಗಿ ನಿಶ್ವಾರ್ಥತೆಯಿಂದ ಅನೇಕ ಸಮಾಜ ಮುಖಿಕೆಲಸವನ್ನು ಮಾಡುತ ಬರುತ್ತಿದ್ದಾರೆ,ಇವರಿಗೆ ಆ ದೇವರು ಆರೋಗ್ಯ ಹಾಗೂ ಆಯಸ್ಸು ಕೊಟ್ಟು ಇನ್ನೂ ಅವರ ಸಮಾಜ ಮುಖಿ ಕೆಲಸಮಾಡುವ ಕೈಗಳಿಗೆ ಶಕ್ತಿಕೊಡಲ್ಲಿ ಎಂದು ಈ ಅಧ್ಯಯನದ ಮೂಲಕ ಹೇಳಲು ಇಷ್ಟ ಪಡುತ್ತೇನೆ.

ಸಾಹಿತ್ಯ,ಸಾಮಾಜಿಕ,ಚಲನಚಿತ್ರಪ್ರಶಸ್ತಿಗಳು ಮತ್ತು ಮನ್ನಣೆಗಳು

- 1985– ರಲ್ಲಿ ನವದೆಹಲಿಯಲ್ಲಿ ನಡೆದ **"21ನೇ ಶತಮಾನದತ್ತ ಯುವಜನತೆ"** ವಿಚಾರಗೋಷ್ಠಿಯಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಆಯ್ಕೆ ವಿಚಾರ ಮಂಡನೆ.
- 1987–ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡಮಿಯಿಂದ **"ಕನ್ನಡ ಗುಜರಾತಿ ತುಲನಾತ್ಮಕ ಅಧ್ಯಯನಕ್ಕಾಗಿ"** ಗುಜರಾತ್ ರಾಜ್ಯ ಸಂದರ್ಶನ.
- 1990–ರಲ್ಲಿ **"ಭಾರತ ಫ್ರಾನ್ಸ್ ಸಾಂಸ್ಕೃತಿಕ ವಿನಿಮಯ"** ತಂಡದಲ್ಲಿ ಭಾರತದ ಪ್ರತಿನಿಧಿಯಾಗಿ ಫ್ರಾನ್ಸ್ ಬೇಟಿ.ಆಯನ ಕೃತಿ ರಚನೆ.
- 1995 –**"ಆರ್ಯಭಟ"** ಸಾಹಿತ್ಯ ಪ್ರಶಸ್ತಿ.
- 2003–ಶಿವಮೊಗ್ಗ ಕರ್ನಾಟಕ ಸಂಘದಿಂದ ಹಾ.ಮಾ.ನಾಯಕ ಪ್ರಶಸ್ತಿ.
- 2005–ಧರ್ಮಸ್ಥಳ 73ನೇ ಅಧಿವೇಶನದ ಸಾಹಿತ್ಯ ಸಮ್ಮೇಳನದ ಉದ್ಘಾಟಕರು.
- 2006–ರಂಗೋತ್ರಿ ಮಕ್ಕಳ ಶಾಲೆಯಿಂದ **"ಗೌತಮ"** ಪ್ರಶಸ್ತಿ.
- 2008–ಮೂಡಬಿದಿರೆಯ ಆಳ್ವಾಸ್ **"ನುಡಿಸಿರಿ"** ಪ್ರಶಸ್ತಿ.
- 2010–ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ.
- 2011–ಮಂಗಳೂರಿನ ಪ್ರೊ:ಎಸ್.ವಿ.ಪರಮೇಶ್ವರಭಟ್ಟ ಪ್ರಶಸ್ತಿ.
- 2012–ಮಂಡ್ಯದ ಸೀತಸುತ ಸಂಸ್ಮರಣೆಯ ಸಾಹಿತ್ಯ ಸೇವ ಪ್ರಶಸ್ತಿ.
- 1986 ರಿಂದ 2012 ರವರೆಗೆ ವಿವಿಧ ಚಲನಚಿತ್ರಗಳಾಗಿ ಮೂರು ಭಾರಿ ರಾಷ್ಟ್ರ ಪ್ರಶಸ್ತಿ,ಹದಿಮೂರು ರಾಜ್ಯ ಪ್ರಶಸ್ತಿ ಮತ್ತು ಎರಡು ಬಾರಿ ಫಿಲ್ಮ್ ಫೇರ್ ಪ್ರಶಸ್ತಿ.
- 2009–ರ ರಾಜ್ಯಪ್ರಶಸ್ತಿಯ ಚಲನಚಿತ್ರ ಆಯ್ಕೆ ಸಮಿತಿಯ ಅಧ್ಯಕ್ಷರು.
- 2012–ರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರಾಷ್ಟ್ರೀಯ ನೀತಿ ಒತ್ತಾಸೆಯ ದೆಹಲಿ ಆಯೋಗದ ಸದಸ್ಯರು.
- 2012–ರ ರಾಷ್ಟೀಯ ಚಲನಚಿತ್ರ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯರು.
- ಇವರ ಕೃತಿಗಳು ಗುಲ್ಬರ್ಗ ವಿವಿಯಲ್ಲಿ ಹಾಗೂ ದಕ್ಷಿಣ ದ್ರುವದಿಂ ಪ್ರವಾಸ ಕಥನ ಜೆಎಸ್ ಎಸ್ ಕಾಲೇಜು ಮೈಸೂರು–ಇಲ್ಲಿ ಪಠ್ಯ ಪುಸ್ತಕಗಳಾಗಿವೆ.
- 2012–ರ ಸಾಲಿನಿಂದ ಪದವಿ ಪೂರ್ವ ತರಗತಿಗಳಿಗೆ ಇವರ **"ಬುದ್ಧ ಬಿಸಿಯೂರಿ ನವನು"** ಲೇಖನ ಪಠ್ಯವಾಗಿದೆ.

ಗ್ರಂಥಗಳು:–

1)ಸಿನಿಮಾಯಾನ–ಕೆ.ಪುಟ್ಟಸ್ವಾಮಿ–ಹಸಿರು ಪ್ರಕಾಶನ ಜೆ.ಪಿ.ನಗರ ಬೆಂಗಳೂರು

2)ಕನ್ನಡ ಸಾಹಿತ್ಯ ಮತ್ತು ಸಿನಿಮಾ–ಬರಗೂರು ರಾಮಚಂದ್ರಪ್ಪ–ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು

3)ಸಿನಿಮಾ ಕಲೆ–ನೆಲೆ;ಗಿರೀಶ್ ಕಾಸರವಳ್ಳಿ–ನವಕರ್ನಾಟಕ ಪಬ್ಲಿಕೇಷನ್(ಪ್ರೈ)ಲಿಮಿಟೆಡ್ ಬೆಂಗಳೂರು

4)ಸಿನಿಮಾ ಮತ್ತು ಸಮಾಜ;ಗಿರೀಶ್ ಕಾಸರವಳ್ಳಿ–ಸುವರ್ಣಕರ್ನಾಟಕ ವಿಶೇಷಸಂಭಾಷಣೆ.

5)ಬಾ ನಲ್ಲೆ ಮಧುಚಂದ್ರಕೆ ಕಾದಂಬರಿ 1ನೇ ಮುದ್ರಣ ಪ್ರಕಾಶಕರು ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ,ಬನಶಂಕರಿ ಬೆಂಗಳೂರು.

6)ಚುಕ್ಕಿಚಂದ್ರಮರ ನಾಡಿನಲ್ಲಿ–ಕಾಬಂಬರಿ ಮುದ್ರಣ ಪ್ರಕಾಶಕರು ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ,ಬನಶಂಕರಿ ಬೆಂಗಳೂರು(2011)

7)ಸಿನಿಮಾಂತರಂಗ,ಪುಸ್ತಕ ಚಿಲುಮೆ,ಅಬ್ದುಲ್ ರಹಮಾನ್ ಪಾಷ,ಪ್ರಕಾಶನ–ತಿಲಕ್ ನಗರ ಮೈಸೂರು–(1927).

8)ನಾಯನಾರ್ ಸಂತರು(ಸಿವಭಕ್ತ ಚರಿತಾಮೃತ)ಬೆಳ್ಳಿತೆರೆ ಪುಸ್ತಕ ಪ್ರಹಟಣ ಸಮಿತಿ–ಅನಂತಲಕ್ಷ್ಮೀ ನಟರಾಜನ್ ಪ್ರಕಾಶನ, ದಾವಣಗೆರೆ (2002)

9)ಕನ್ನಡದ ಮುತ್ತಿನಕಥೆ–ಬಿ ಗಣಪತಿ ಸಿನಿಮಾ ಸಾಹಿತ್ಯ ಪ್ರಕಾಶನ ಬೆಂಗಳೂರು(2006)

10)ಕನ್ನಡದ ಸಿನಿಮಾ ಇತಿಹಾಸದ ಪುಟಗಳಲ್ಲಿ–ಗಂಗಾಧರ್ ಮೊದಲಿಯಾರ್ ಪ್ರಕಾಶನ ಕನ್ನಡಪುಸ್ತಕ ಪ್ರಾಧಿಕಾರ(1996)

11)ಗೀತೆ–ಸಂಗೀತ–ಚಂದ್ರಶೇಖರ್ ಆಲೂರುಕಲ್ಯಾಣೇ ಪ್ರಕಾಶನ ಬೆಂಗಳೂರು(1991)

12)ಕಲೆಯೇ ಕಾಯಕ ಕನ್ನಡ ಮತ್ತು ಸಂಸ್ಕೃತ ಇಲಾಖೆ–ಗುಬ್ಬಿ ವೀರಣ (1996)

13)ಮುತ್ತಿನ ಕಣಜ–ಡಾ॥ರಾಜಸೇಖರ ಪಿ.ಕೆ ಸಂವಹನ ಮೈಸೂರು(2001)

14)ಹಾಡೆ ಹಾದಿಯ ತೋರಿತು–ರಾಗವೇಂದ್ರರಾವ್ ಎಚ್.ಎಸ್–ಕನ್ನಡ ಕ್ರೈಸ್ತ ಕಾಲೇಜು.ಬೆಂಗಳೂರು(1996)

15)ಸಿನಿಮಾ–ರಮೇಶ ಜಿ.ಕೆ ಪ್ರಜ್ವಲ ಪ್ರಕಾಶನ ಮೈಸೂರು (1982)

16)ಸಿನಿಮಾ ಒಂದು ಜನಪದ ಕಲೆ–ಡಾ॥ಬರಗೂರು ರಾಮಚಂದ್ರಪ್ಪ ಅಂಕಿಪ್ರಕಾಶನ (2002).

ನಾಗತಿಹಳ್ಳಿ ಚಂದ್ರಶೇಖರ ಮತ್ತು ಸಿನಿಮಾ

*ನಾಗರಾಜಮೂರ್ತಿ, ** ಡಾ॥ ಸಿ. ಕೆ. ಪುಟ್ಟಸ್ವಾಮಿ

* ಸಂಶೋಧಕರು, ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗ ಮಾನಸಗಂಗೋತ್ರಿ, ಮೈಸೂರು-570 006

E-mail nagarajamurthy36@yahoo.in

ನಾಗತಿಹಳ್ಳಿಚಂದ್ರಶೇಖರ ರವರು ಮೇಷ್ಟ್ರು, ಸಾಹಿತಿ, ಎಂದು ಎಲ್ಲರಿಗೂ ತಿಳಿದ ವಿಚಾರವೇ ಹೌದು ಇದು ಅಕ್ಷರ ಸಹ ನಿಜ, ಅವರು ಮೇಷ್ಟ್ರಾಗಿ ತಮ್ಮ ಬೋಧನೆಯ ಅವಧಿಯಲಿ ಅನೇಕ ಪ್ರತಿಭಾವಂತ ವಿದ್ಯಾರ್ಥಂತ ಯುವಕರನ್ನು ಬೆಳೆಸಿದ್ದಾರೆ, ಸಿನಿಮಾ ಕ್ಷೇತ್ರಕ್ಕೆ ಬಂದರೆ ಅಲ್ಲಿಯೂ ಸಹಾ ಅನೇಕ ಹೊಸ ಹೊಸ ಕಲಾವಿಧರನ್ನು ಬೆಳಕಿಗೆ ತಂದು ಜನಮನಣೆಗಳಿಸಿದ್ದಾರೆ, ಸಾಹಿತ್ಯ ಕ್ಷೇತ್ರಕ್ಕೆ ಬಂದರೆ ತಮ್ಮ ಆಕರ್ಷಕವಾದ ಬರವಣಿಗೆಯ ಮೂಲಕ ತಾವು

ಪ್ರಪಂಚವನ್ನೆಲ್ಲ ತಿರುಗಿ ಕಂಡು ಅನುಭವಿಸಿದ ಅನುಭವವನ್ನೆಲ್ಲ ತಮ್ಮ ಸರಳವಾದ ಕಾವ್ಯ ಭಾಷೆಯ ಶೈಲಿಯಲ್ಲಿ ಅನಾವರಣಗೊಳಿಸಿ ತಮ್ಮ ಶ್ರೇಷ್ಠತೆಯನ್ನು ಹೆಚ್ಚಿಸಿಕೊಂಡಿದ್ದಾರೆ, ಹೊಳೆದಂಡೆ ಹಾಗೂ 'ರೆಕ್ಕೆ ಮತ್ತು ಬೇರು' ಎಂಬ ಅಂಕಣಗಳನ್ನು ಬರೆಯುವ ಮೂಲಕ ತಮ್ಮದೇ ಆದ ಓದುವ ವರ್ಗವನ್ನು ಹೆಚ್ಚಿಸಿಕೊಂಡಿದ್ದರೆ ಇದು ಎಲ್ಲರಿಗೂ ತಿಳಿದ ವಿಚಾರವೇ ಸರಿ, ಹೆತ್ತತಾಯಿ ಹೊತ್ತ ಭೂವಿ ಸ್ವರ್ಗಕ್ಕೆ ಮಿಗಿಲು ಎಂಬ ವಾಕ್ಯವನ್ನು ಅವರು ಅಕ್ಷರ ಸಹವೂ ಮೈಗೂಡಿಸಿ ಕೊಂಡಿದ್ದಾರೆ ಅವರು ಹುಟ್ಟಿದ ಊರಿನ ಋಣ ತೀರಿಸಲೆಂದೇ ಅವರು ಅನೇಕ ಸಮಾಜ ಮುಖಕೆಲಸಮಾಡಿದ್ದಾರೆ. ಅದರೆ ನಾಗತಿಹಳ್ಳಿ ಚಂದ್ರಶೇಕರ ಮತ್ತು ಸಿನಿಮಾ ಎಂಬ ವಿಷಯವನ್ನಾಧರಿಸಿ ಅವರು ನಿರ್ದೇಶನದ ಸಿನಿವಾಗಳನ್ನು ಇದನ್ನು ತಿಳಿದು ಕೊಳ್ಳುವುದು ನಮ್ಮೆಲರ ಅದೃಷ್ಟವೇ ಸರಿ ಅದನ್ನು ಮುಂದೇ ತಿಳಿದು ಕೊಳೋಣ.

ನಾಗತಿಹಳ್ಳಿಚಂದ್ರಶೇಖರ ಜನನ:– ನಾಗತಿಹಳ್ಳಿಚಂದ್ರಶೇಖರ ರವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೋಕಿನ ಎ.ನಾಗತಿಹಳ್ಳಿ ಎಂಬ ಒಂದು ಪುಟ್ಟ ಹಳ್ಳಿಯಲ್ಲಿ 1956 ಆಗಸ್ಟ್ 15 ರಂದು ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಶುಭ ದಿನದಂದು ತಂದೆ ತಿಮ್ಮಶೆಟ್ಟಿಗೌಡ ಮತ್ತು ತಾಯಿ ಪಾರ್ವತಮ್ಮ ಅವರಿಗೆ ಮೂರನೆಯ ಮಗನಾಗಿ ಜನಿಸುತ್ತಾರೆ.

ದಾಂಪತ್ಯ ಜೀವನ:– ನಾಗತಿಹಳ್ಳಿಚಂದ್ರಶೇಖರ ಇವರು ಮಾನಸ ಗಂಗೋತ್ರಿಯ ಅಭ್ಯಾಸದಲ್ಲಿರುವಾಗಲೇ ವಿಜ್ಞಾನ ವಿಭಾಗದ ಭೌತಶಾಸ್ತ್ರದ ವಿಷಯದಲ್ಲಿ ಅಭ್ಯಾಸ ಮಾಡುತ್ತಿದ್ದ ಶೋಭಾ ಎಂಬುವವರನ್ನು ಪ್ರೀತಿಸುತ್ತಾರೆ ಅವರ ಹುಟ್ಟು ಹಬ್ಬದ ದಿನದಂದೆ ಅಂದರೆ 1986 ಆಗಸ್ಟ್ 15ರಂದು ದಲಿತ ಕವಿ,ವಿಚಾರವಾದಿ,ಡಾ.ಸಿದ್ದಲಿಂಗಯ್ಯ ನವರ ನೇತೃತ್ವದಲ್ಲಿ ಅತ್ಯಂತ ಸರಳ ರೀತಿಯಲ್ಲಿ ಮದುವೆ ನಡೆಯುತ್ತದೆ.

ಶಿಕ್ಷಣ:– ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮೂರಿನ ಮುಗಿಸಿ ಪ್ರೌಢ ಅಭ್ಯಾಸಕ್ಕೆಂದು ಕಂಬದ ಹಳ್ಳಿಗೆ ಬರುತ್ತಾರೆ.ತಮ್ಮ ಹೈಸ್ಕೂಲ್ ಅಭ್ಯಾಸ ಯಶಸ್ವಿಯಾಗಿ ಮುಗಿಸಿ ಕಾಲೇಜು ವ್ಯಾಸಂಗಕ್ಕಾಗಿ ಮಲೆನಾಡಿನ ಕಾರವಾರಕ್ಕೆ ಬರುತ್ತಾರೆ. ನಂತರ ಮೈಸೂರಿಗೆ ಬರುತ್ತಾರೆ.ಇಲ್ಲಿ ಪದವಿಯನ್ನು ಪಡೆದು ನಂತರ ಸ್ನಾತಕೋತರ ಪದವಿ ವಿದ್ಯಾಬ್ಯಾಸಕ್ಕಾಗಿ ಮೈಸೂರು ವಿಶ್ವವಿದ್ಯಾಲಯ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರವೇಶ ಪಡೆಯುತ್ತಾರೆ.ಅವರ ಪರಿಶ್ರಮದ ಫಲವಾಗಿ 1985ರಲ್ಲಿ ಎಂ.ಎ. ಪದವಿಯಲ್ಲಿ ಎಂಟು ಚಿನ್ನದ ಪದಕಗಳನ್ನು ಪಡೆಯುತ್ತಾರೆ.

ಚಿತ್ರಗೀತೆ–ಸಾಹಿತ್ಯ :– ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರವಾದುದು
1.ಅಮೃತಧಾರೆಯು–ಮನೆಕಟ್ಟಿ ನೋಡು ಒಮ್ಮೆ ಮನೆಕಟ್ಟಿ ನೋಡು!!,ಹುಡುಗ–ಹುಡುಗ ಓ ನನ್ನ ಮುದ್ದಿನ ಹುಡುಗ!!,ನೀ ಅಮೃತಧಾರೆ!!
2.ಹೂ ಮಳೆ–ಹೂಮಳೆ ಹೂಮಳೆ ಹೂಗಳ ಸುರಿಮಳೆ !!
3.ಚೆಲುವೆಯೇ ನಿನ್ನೆ ನೋಡಲು–ಜನುವಾದ ಜೋಡಿ ನನ್ ರಾಜಕುಮಾರ!!
4.ಒಲವೇ ಜೀವನ ಲೆಕ್ಕಚಾರಚಿತ್ರ–ನನ್ನಪ್ರೀತಿಯಗೆಳೆಯ ಕೇಳೂ ಒಲವಿನ ಕತೆಯಾ ಕಣ್ಣಮುಚಿದರೂನು ಬಿಚ್ಚಿರಲೇನು ಎಲ್ಲಾ ನೀನು!!
5.ಸವಿ ಸವಿ ನೆನಪು ಚಿತ್ರದ–ಸವಿಯೋ ಸವಿಯೋ!!
6.ಮನಸೆಲ್ಲಾ ನೀನೆಚಿತ್ರದ–ಫಳ ಫಳ ಹೊಳೆಯುವ !!
7.ಪ್ಯಾರೀಸ್ ಪ್ರಣಯಚಿತ್ರ–ಕೃಷ್ಣನೀ ಬೇಗನೆ ಬಾರೋ!!
ಚಿತ್ರಗಳಿಗೆ ಸ್ವತಃ ತಾವೇ ಸಾಹಿತ್ಯವನ್ನು ಬರೆದು ಹಾಡುಗಳನ್ನು ರಚಿಸಿದ್ದಾರೆ.

ಚಲನಚಿತ್ರಮಾಧ್ಯಮ: ಆಧುನಿಕ ಪ್ರಪಂಚದಲ್ಲಿ ಇಂದು ಪರಿಣಾಮಕಾರಿ ಹಾಗೂ ಪ್ರಭಾವಶಾಲಿ ಮಾಧ್ಯಮವೆಂದರೆ ಅದು ಚಲನಚಿತ್ರ ಮಾಧ್ಯಮ. ಚಲನಚಿತ್ರ ಮಾಧ್ಯಮವು ಪ್ರಪಂಚದೆಲ್ಲೆಡೆ ತನ್ನದೇ ಆದ ಮಹತ್ವ ಹೊಂದಿದ್ದು ಭಾಷೆ, ಧರ್ಮ, ವರ್ಗ, ಜಾತ್ಯಾತೀತವಾದ ಸಮೂಹ ಮಾಧ್ಯಮವಾಗಿದ್ದು ತನ್ನದೇ ಆದ ಭಾಷೂ ಮೂಡಿಸಿದೆ.ಜಗತ್ತಿನೆಲ್ಲೆಡೆ ಅತ್ಯಧಿಕ ಪ್ರಮಾಣದಲ್ಲಿ ಚಲನಚಿತ್ರಗಳನ್ನು ತಯಾರಿಸುವ ದೇಶವೆಂಬ ಹೆಗ್ಗಳಿಕೆಯ ಪಾತ್ರವಾಗಿದೆ. ಸಿನಿಮಾ ಎಂಬುದು ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳುಮಾಡುವ ಗಾಳಿ, ದೆವ್ವ ಎಂಬ ಸಾಮಾನ್ಯಮೂಡ ನಂಬಿಕೆ ಇಂದು ಮರೆಯಾಗಿದೆ. ಸಿನಿಮಾಗಳ ರಾಗಾಲಾಪ, ಸೂಕ್ಷ್ಮ, ಸ್ವರಸ್ಥಾನವನ್ನು ಬಿಡದೆ ಮೆಟ್ಟಿ ಮುನ್ನಡೆಯುವ ನಾದಝರಿಯಂತಿದೆ ಕಡುವ್ಯಾಮೋಹಿಯೊಬ್ಬನನ್ನು ತಲುಪಬಹುದಾದ ಪ್ರೌಢಿಮೆಯ ಸಾಕ್ಷಿಯೂ ಹೌದು. ಭಾರತೀಯ ಚಲನಚಿತ್ರಗಳು ಕನ್ನಡನಾಡಿಗೆ ಕೊಡುಗೆಯ ಹೆಗ್ಗಳಿಕೆಯನ್ನು ತಂದುಕೊಟ್ಟಿವೆ.

ನಾಗತಿಹಳ್ಳಿಚಂದ್ರಶೇಖರ ಮತ್ತು ಸಿನಿಮಾ: ಕನ್ನಡಚಲನ ಚಿತ್ರರಂಗವು ಇದುವರೆವಿಗೂ ಹಲವಾರು ಚಿತ್ರ ನಟ–ನಟಿಯರ,ಪ್ರಖ್ಯಾತ ನಿರ್ದೇಶಕರುಗಳನ್ನು ನೋಡಿದೆ.ಕನ್ನಡ ಚಲನ ಚಿತ್ರರಂಗವು ತನ್ನದೆ ಆದ ಬಹುದೊಡ್ಡ ಇತಿಹಾಸವನ್ನು ಹೊಂದಿದ್ದು 100ರ ಹೊಸ್ತಿಲನ್ನು ದಾಟಿದೆ.ಕನ್ನಡಚಿತ್ರರಂಗವು ಸಮಾಜವನ್ನು ಮುಖ್ಯವಾಹಿನಿಗೆ ತರಲು ಹಾಗು ಸಂಸ್ಕೃತಿಯನ್ನು ಸುಂದರಗೊಳಿಸುವ ಸಿನಿಮಾರಂಗವು ಪ್ರಮುಖ ಪಾತ್ರವಹಿಸುತ್ತಿದೆ.ನಾಗತಿಹಳ್ಳಿಚಂದ್ರಶೇಖರ್‌ರವರು ಕನ್ನಡ ಸಿನಿಮಾ ನಿರ್ದೇಶಕರು,ಚಂದ್ರು ಎಂಬ ಹೆಸರಿನೊಂದಿಗೆ ಚಿರಪರಿಚಿತರಾದವರು ಇವರಿಗೆ 1989ರಲ್ಲಿ ಅಶೋಕ್ ಪೈ ನಿರ್ಮಾಣದ ಚಿತ್ರಕ್ಕೆ ನಿರ್ದೇಶಿಸಲು ಅವಕಾಶ ಬಂತು,ನಂತರ ಸಿನಿಮಾ ಉದ್ಯಮದಲ್ಲಿ ಕಾರ್ಯಪ್ರಾರಂಬಿಸಿದ್ದು "ಕಾಡಿನಬೆಂಕಿ" ಚಿತ್ರಕ್ಕೆ ಸಂಭಾಷಣೆ ಬರೆಯುವುದರ ಮೂಲಕ, ನಾಗತಿಹಳ್ಳಿಯವರು 1991ರಲ್ಲಿ ಸ್ವತಂತ್ರ ನಿರ್ದೇಶಕರಾಗಿ "ಉಂಡೂ ಹೋದ ಕೊಂಡುಹೋದ" ಚಿತ್ರದ ಮೂಲಕ ಕನ್ನಡ ಸಿನಿಮಾರಂಗಕ್ಕೆ ಪಾದರ್ಪಣೆ ಮಾಡಿದ ಇವರು "ನೂರು ಜನ್ಮಕೂ" ಚಿತ್ರದವರೆಗೆ 53ವರ್ಷದ ಅವಧಿಯಲ್ಲಿ ಸುಮಾರು 15ಚಿತ್ರಗಳಿಗೆ ನಿರ್ದೇಶಕರಾಗಿ ಕೆಲಸಮಾಡಿದ್ದಾರೆ. ಅವರ ಚಿತ್ರಗಳು ರಾಷ್ಟ್ರಮಟ್ಟದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಅವರ ಚಿತ್ರಗಳ ಪ್ರಯೋಗಗಳು ಗಮನಸೆಳೆದಿವೆ. ತಮ್ಮ ವಿಶಿಷ್ಟವಾದ ಹೊಸ ಹೊಸ ಪ್ರಯೋಗಗಳ ಮೂಲಕ ಕನ್ನಡಚಿತ್ರರಂಗವನ್ನು ಯಶಸ್ಸಿನ ಮುಂಚೂಣಿಗೆ ತೆಗೆದುಕೊಂಡು ಹೊದ ಹಾಗೂ ಚಿತ್ರರಂಗಕ್ಕೆ ತಮ್ಮದೆ ಆದ ಕೊಡುಗೆ ನೀಡಿರುವ ನಾಗತಿಹಳ್ಳಿಚಂದ್ರಶೇಖರ ಮತ್ತು ಸಿನಿಮಾ ಎಂಬ ವಿಷಯವನ್ನು ಕುರಿತ ಪ್ರಸ್ತುತ ಅಧ್ಯಯನದ ಪ್ರಬಂಧ ಮಂಡನೆ ಮಹತ್ವಹೊಂದಿದೆ

ನಾಗತಿಹಳ್ಳಿ ಚಂದ್ರಶೇಖರ ಅವರು ನಿರ್ದೇಶಿಸಿದ ಚಿತ್ರಗಳಲ್ಲಿ ಒಂದು ವಿಶಿಷ್ಟವೆಂದರೆ

ಚಂದ್ರು ದೇಶವಿದೇಶಗಳಲ್ಲಿ ಸುತ್ತಾಡಿ ಅಲ್ಲಿನ ಅನೇಕ ಚಿತ್ರಗಳನ್ನು ವೀಕ್ಷಿಸಿ ಅವುಗಳಿಂದ ಆಕರ್ಷಿತರಾಗಿ, ಪ್ರಭಾವಿತರಾಗಿ ಬೆಲೆಬಾಳುವ ಚಿತ್ರವನ್ನು ಸೃಷ್ಟಿಮಾಡಿದ್ದಾರೆ.ತಮ್ಮ ಚಿತ್ರಗಳಲ್ಲಿ ಬಾಲ್ಯ ಜೀವನದ ಅನುಭವದಿಂದ ಹಿಡಿದು ವ್ಯಕ್ತಿಯ ಎಲ್ಲಾ ಹಂತಗಳ ಅನುಭವವನ್ನು ಸಮಾಜದ ಸಮುದಾಯದ ಅನುಭವಗಳನ್ನು ಸಮರ್ಥವಾಗಿ ಸೆರೆಹಿಡಿದಿದ್ದಾರೆ. ಸಮಾಜದಲ್ಲಿ ನೆಡೆಯುವ ಬಡತನ,ಸ್ವಾತಂತ್ರ ಹರಣ, ಅಸಮಾನತೆ, ವಿಧವೆಯರ ನೋವು, ಪ್ರೀತಿ–ಪ್ರೇಮ, ಮಕ್ಕಳು, ಮಧ್ಯಮ ವರ್ಗದ ವ್ಯಕ್ತಿಯ ಭ್ರಮೆಗಳು, ಆದರ್ಶ, ಹುಟ್ಟು–ಸಾವು, ತ್ಯಾಗ ಮತ್ತು ಸಹನೆಯಂತಹ ಅಂಶಗಳನ್ನು ತಮ್ಮ ಚಿತ್ರದಲ್ಲಿ ಕೊಡುವುದನ್ನು ಅವರು ಮರೆತಿಲ. ಗ್ರಾಮೀಣ ಪರಿಸರದ ಚಿತ್ರಗಳಲ್ಲಿ ಸಾಮಾಜಿಕ ಅಸಮಾನತೆಯ ಬಗೆಗಿನ ಚಿಂತನೆ, ಗ್ರಾಮೀಣ ಪರಿಸರದಲ್ಲಿನ ನೊಂದಜೀವಗಳು ಪ್ರತಿಪಲಿತವಾಗಿರುತ್ತವೆ.ಗ್ರಾಮೀಣ ಪರಿಸರದ ಜೀವನದ ವಿವಿಧ ಮುಖಗಳನ್ನು ಅನಾವರಣಗೊಳಿಸಿದ್ದಾರೆ.ಇವರ ಕಥಾವಸ್ತು ಚಿತ್ರದಿಂದ ಚಿತ್ರಕ್ಕೆ ಬೆಳೆಯುತ್ತಾ ಹೊಗಿ ತಮ್ಮದೇ ಆದಂತಹ ಸಿನಿಮಾಶೈಲಿಗೆ ಅಪ್ಪಟ ಉದಾಹರಣೆಯಾಗಿ ನಿಲ್ಲುತ್ತಾರೆ. ಇದರಿಂದಾಗಿಯೇ ನಾಗತಿಹಳ್ಳಿಯವರಿಗೆ ಅವರದೇ ಆದಂತಹ ಸಿನಿಮಾ ಶೈಲಿಯನ್ನು ಇದರಲ್ಲಿ ಗುರುತಿಸಬಹುದು, ಹೊಸ ಅಲೆಯ ನಿರ್ದೇಶಕರುಗಳಲ್ಲಿ ಪಾಶ್ಚಾತ್ಯಾ ಪ್ರಭಾವಗಳಿಗೆ ಒಳಗಾದವರಲ್ಲಿ ನಾಗತಿಹಳ್ಳಿಯವರು ಸಹಾ ಒಬ್ಬರು. ಪಾಶ್ಚಾತ್ಯ ಹಾಗೂ ದೇಶಿಯ ಅನುಭವಗಳನ್ನು ತಮ್ಮ ದೃಶ್ಯ ಮಾಧ್ಯಮದಲ್ಲಿ ಕಟ್ಟಿಕೊಟಿದ್ದಾರೆ.ಗ್ರಾಮೀಣ ಪರಿಸರದಿಂದಲೇ ಬಂದಂತಹ ನಾಗತಿಹಳ್ಳಿಯವರು ತಮ್ಮ ಅನುಭವಗಳನ್ನು ದೃಶ್ಯ ಮಾಧ್ಯಮದಲ್ಲಿ ಕಟ್ಟಿಕೊಟ್ಟಿದ್ದಾರೆ. ಜೊತೆಗೆ ಅವರ ಚಿಂತನೆಗಳನ್ನು ಹೇಳುವ ಅವಕಾಶವನ್ನು ವಿದೇಶಿ ಸಂಸ್ಕೃತಿಯನ್ನು ತಮ್ಮ ಚಿತ್ರದ ಮೂಲಕ ವ್ಯಕ್ತಪಡಿಸಿದ್ದಾರೆ,ಈ ರೀತಿ ತಮ್ಮ ಅನುಭವದ ಅನುಭವಗಳನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸುವುದು ಒಬ್ಬ ಬದ್ಧ ನಿರ್ದೇಶಕನಿಗೆ ಮಾತ್ರ ಸಾಧ್ಯ.

ನಾಗತಿಹಳ್ಳಿ ಚಂದ್ರಶೇಖರ ಅವರು ಮನುಷ್ಯನ ಭಾವನೆಗಳನ್ನು ಕೆದಕುತ್ತ ಮನೋವೈಜ್ಞಾನಿಕ ವಿಷಯಗಳ ಮೇಲೆ ಚಿತ್ರರಚನೆ ಮಾಡಿ ನೋಡುಗರಿಗೆ ಒಂದು ಹೊಸ ಲೋಕದ ಪರಿಚಯವನ್ನೇ ಮಾಡಿಕೊಟ್ಟಿದ್ದಾರೆ. ಮನುಷ್ಯನ ಮನಸ್ಸಿನ ಆಂತರೀಕ ವ್ಯವಹಾರಗಳನ್ನು ವಿವಿಧ ಸ್ತರಗಳಲ್ಲಿ ಹೆಚ್ಚು ವೈಜ್ಞಾನಿಕವಾಗಿ ಮತ್ತು ಅಷ್ಟೇ ಸಾಹಿತ್ಯಕವಾಗಿ ಬಿಂಬಿಸಿದ್ದಾರೆ. ಸನ್ನಿವೇಶ ನಿರ್ಮಾರ್ಣ ಮಾಡುವಲ್ಲಂತೂ ಇವರು ನಿಪುಣರು.

ನಾಗತಿಹಳ್ಳಿಚಂದ್ರಶೇಖರ ರವರ ಸಿನಿಮಾ ಪ್ರಯಾಣ

ಕಾಡಿನ ಬೆಂಕಿ(1986)–ಹೌದು ಇದು ನಿಜ ಜೀವನದ ಸತ್ಯ ಘಟನೆಯ ಕಾದಂಬರಿ ಆಧಾರಿತ ಚಿತ್ರವಾಗಿದೆ. ಮನೋಹರಿ ಪ್ರಾಯದ ಸುರ ಸುಂದರ ಚೆಲುವೆ ಈಕೆ ಒಳ್ಳೆಯ ಕಟುಮಸ್ತಿನ ಹುಡುಗನನ್ನು ಮಧುವೆಯಾಗಿ ಗಂಡ ಮಕ್ಕಳ ಜೊತೆ ಸುಖವಾದ ಜೀವನವನ್ನು ನಡೆಸಬೇಕೆಂಬ ಆಸೆಯ ಗೋಪುರವನ್ನು ಕಟ್ಟಿಕೊಂಡಿರುತ್ತಾಳೆ ಆದರೇ ಬಡತನದಲ್ಲಿ ಹುಟ್ಟಿದ ಈಕೆಯನ್ನ ಇವರ ತಂದೆ ಮಹದೇವ ಎಂಬ ವಯೋಮಾನವನಿಗೆ ಕೊಟ್ಟು ಮಧುವೆ ಮಾಡಿಕೊಡುತ್ತಾನೆ, ಮಹದೇವನು ತುಂಬವಯಸ್ಸಿನವನಾಗಿದ್ದು ಇವನು ಅಸ್ತಮಾ ಖಾಯಿಲೆಯಿಂದ ಬಳಲುತ್ತಿರುತ್ತಾನೆ ಹಾಗೂ ಇವರಿಬ್ಬರೂ ಫಾರೆಸ್ಟ್ ಆಫೀಸ್‌ನಲ್ಲಿ ಕೆಲಸಮಾಡುತ್ತಿರುತ್ತಾರೆ, ಇಲ್ಲಿಗೆ ಅರಣ್ಯಾಧಿಕಾರಿಯಾಗಿ ರಘುರಾಮ್ ಪ್ರಾಯದ ಹುಡುಗ ಬರುತ್ತಾನೆ ಇವನು ಎಡಿಪ್ಲಸ್‌ಕಾಂಪ್ಲೇಕ್ಸ್ ಎಂಬ ಮನೋರೋಗದಿಂದ ಬಳಲುತ್ತಿರುತ್ತಾನೆ ಅಂದರೆ ಹೆಣ್ಣು ಗಂಡು ರತಿ ಕ್ರೀಡೆಯಲ್ಲಿ ತೋಡಗಿರುವ ದೃಶ್ಯವನ್ನು ನೋಡಿದರೇ ಮಾತ್ರ ಇವನಿಗೆ ಲೈಂಗಿಕ ಆಸೆ ಮೂಡುತ್ತದೆ ಇಲ್ಲವಾದರೇ ಹೆಣ್ಣಿನ್ನು ತಾಯ್ತನದ ರೀತಿಯಲ್ಲಿ ನೋಡುತ್ತಾನೆ.ಇದು ಈ ಚಿತ್ರದ ತಿರುಳು.

ಉಂಡು ಹೋದ ಕೊಂಡು ಹೋದ (1991)–ಈ ಚಿತ್ರವು ನಾಗತಿಹಳ್ಳಿ ಚಂದ್ರಶೇಖರ ರವರ ನಿರ್ದೇಶನದಲ್ಲಿ ಮೂಡಿಬಂದ ಮೊದಲ ಚಿತ್ರವಾಗಿದೆ. ಚಿತ್ರದಲ್ಲಿ ದೇಶದ ಅನೇಕ ಸಮಸ್ಯೆಗಳಲ್ಲಿ ಒಂದಾದ ನಿರುದ್ಯೋಗ ಸಮಸ್ಯೆಯ ಒಂದು ಸಂಪೂರ್ಣ ಚಿತ್ರಣವನ್ನು ಚಿತ್ರಿಕರಿಸಲಾಗಿದೆ. ಗ್ರಾಮೀಣ ಪ್ರದೇಶದ ನಿರುದ್ಯೋಗ ವ್ಯಕ್ತಿಯ ಸಂವೇದನೆಯನ್ನು ಈ ಚಿತ್ರದಲ್ಲಿ ಸೆರೆಹಿಡಿಯಲಾಗಿದೆ. ಇದು'ಕಮಂಗಿಪುರದ ಕಥೆ' ಯನ್ನ ಆಧರಿಸಿ ಚಿತ್ರ ತೆಗೆಯಲಾಗಿದೆ. ಈ ಚಿತ್ರಕ್ಕೆ ಅತ್ಯುತ್ತಮ ಕಥೆಗಾರ ಪ್ರಶಸ್ತಿ ರಾಜ್ಯ ಪ್ರಶಸ್ತಿ ಲಭಿಸಿದೆ.

ಬಾನಲ್ಲೆ ಮಧುಚಂದ್ರಕೆ (1993)–ಇದೊಂದು ಸುಂದರ ಪ್ರೇಮಕಥೆ ನಾಯಕ ಒಬ್ಬ ಕಥೆಗಾರ,ಈತ ತನ್ನ ಪ್ರಿಯತಮೆಯನ್ನು ಗಾಡವಾಗಿ ಪ್ರೀತಿಸುತ್ತಾನೆ,ಆದರೇ ಆಕೆ ಇನ್ನೊಬ್ಬನ ಜೊತೆ ಅನೈತಿಕ ಸಂಬಂಧವನಿಟು ಕೊಂಡಿರುತ್ತಾಳೆ ಇದನ್ನು ಕಣ್ಣೆದುರೆ ಕಂಡ ನಾಯಕ ಆಕೆಯನ್ನು ಕೊಲೆಮಾಡಲೆಂದೆ ಎಣೆದ ಸುಂದರ ಕಥೆಯೇ ಬಾನಲ್ಲೆ ಮಧು ಚಂದ್ರಕೆ.

ಕೊಟ್ರೇಶಿ ಕನಸ್ಸು (1994) -ಕೊಟ್ರೇಶಿ ಹೈಸ್ಕೂಲಿಗೆ ಸೇರಿದ ವಿಷಯವನ್ನೇ ಆಧರಿಸಿದ ಚಿತ್ರ ಇದಾಗಿದೆ. ಈ ಚಿತ್ರವು 1994ರಲ್ಲಿ ಬೆಳ್ಳಿತೆರೆ ಕಂಡಿತು. ದಲಿತ ಹುಡುಗನೊಬ್ಬ ಶಾಲೆಗೆ ಹೋಗುವುದು, ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾಗುವುದು ಅಲ್ಲದೆ ದಲಿತ ಬದುಕಿನ ನೋವು ನಲಿವುಗಳನ್ನು ಚಿತ್ರಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಅಮೇರಿಕಾ! ಅಮೇರಿಕಾ !! (1996) –ಇದು ನಾಗತಿಹಳ್ಳಿ ಚಂದ್ರಶೇಖರ ರವರ ಮಹತ್ವಾಕಾಂಕ್ಷೀಯ ಚಿತ್ರವಾಗಿದೆ. ಇದು 264 ದಿನಗಳು ಪ್ರದರ್ಶನಗೊಂಡು ಯಶಸ್ವಿಯಾದ ಚಿತ್ರ, ಅಮೇರಿಕಾ ಆಕರ್ಷಣೆಯ ದೇಶವಾಗಿದೆ. ಅಲ್ಲಿನ ಯಾಂತ್ರಿಕ ಬದುಕು,ಮಾನವೀಯ ಮೌಲ್ಯಗಳನ್ನು ಬಿತ್ತರಿಸುವುದೇ ಇಲ್ಲಿನ ಚಿತ್ರದ ಉದ್ದೇಶವಾಗಿದೆ. ಅಮೇರಿಕಾ ಚಿತ್ರಮಂದಿರಗಳಲ್ಲಿ ಇದು ಪ್ರದರ್ಶನಗೊಂಡಿದೆ. ತೆಲುಗು, ತಮಿಳು, ಹಿಂದಿ, ಮುಂತಾದ ಭಾಷೆಗಳಿಗೆ ಡಬ್ಬಿಂಗ್ ಗೊಂಡು ಪ್ರೇಮಿಗಳ ಹೃದಯ ಸೂರೆಗೊಂಡಿದೆ. ರಾಜ್ಯ ಹಾಗೂ ರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದೆ. ಆರ್ಯಭಟ ಪ್ರಶಸ್ತಿ ಸೇರಿದಂತೆ ಒಟ್ಟು 28 ಪ್ರಶಸ್ತಗಳನ್ನು ಪಡೆದು ದಾಖಲೆ ನಿರ್ಮಿಸಿದ ಚಿತ್ರ ಇದಾಗಿದೆ.

ಹೂಮಳೆ (1998)–ರಲ್ಲಿ ತೆರೆಕಂಡ ಈ ಚಿತ್ರ,ಸುಂದರವಾದ ಕೌಟುಂಬಿಕ ಚಿತ್ರವಾಗಿದೆ. ಈ ಚಿತ್ರದಲ್ಲಿ ನಾಯಕಿಯು ವಿಧವೆಯಾಗಿದು ಆಕೆಯ ಬಾಳಿನಲ್ಲಿ ನಡೆಯುವ ಒಂದು ಕಥೆಯೆ ಹೂಮಳೆ,ಈಕೆಯ ರೂಪಕ್ಕೆ ನಾಯಕ ನಟ ಅರವಿಂದ್ ರಮೇಶ್ ನಾಯಕಿಯ ಮನಸೋತು ಆಕೆಯನ್ನು ಮಧುವೆಯಾಗುವ ಚಿತ್ರದ ಸಾರಾಂಶವಾಗಿದೆ,ಚಿತ್ರದಲ್ಲಿ ಆಕೆ ಹೆಣ್ಣಿನ ಅಂತರಂಗದಲ್ಲಿ ನಡೆಯುವ ನೋವುಗಳು, ವಿಧವೆಯು ಸಮಾಜದ ಹಿತರರಿಂದ ಅನುಭವಿಸುವ ಯಾತನೆಗಳು,ಇನ್ನೂ

ಹಲವಾರು ಕೌತುಕದ ವಿಷಯಗಲನ್ನು, ಘಟನೆಗಳನ್ನು ಚಿತ್ರಹೊಂದಿದೆ, ಇದು ಅಸ್ಸಾಂನಲ್ಲಿ ನಡೆಯುವ ಒಂದು ಸುಮಧುರ ಪ್ರೇಮಕಾವ್ಯ.

ನನ್ನ ಪ್ರೀತಿಯ ಹುಡುಗಿ (2000)–ನನ್ನ ಪ್ರೀತಿಯ ಹುಡುಗಿ ಎಂಬ ಚಲನಚಿತ್ರವೂ ಒಂದು ಸುಂದರ ಪ್ರೇಮಕಥೆಯನ್ನೋಳಗೊಂಡ ಚಿತ್ರ,ಮನೆಮಂದಿಯಲ್ಲ ಕುಳಿತು ನೋಡುವ ಸಿನಿಮಾ ಇದಾಗಿದೆ. ಹಳ್ಳಿಯ ಹುಡುಗನೊಬ್ಬ ಶ್ರೀಮಂತ ಕುಟುಂಬದ ಹುಡುಗಿಯನ್ನು ಪ್ರೀತಿಸಿ ಒಂದಾಗುವ ಸುಂದರ ಕಥೆ.ಹದಿ ಹರೆಯದ ಯುವ ಮನಸ್ಸುಗಳ ಪ್ರೀತಿಯನ್ನು ವಿವಿದ ಪರಿಯಲ್ಲಿ ಸುಂದರವಾಗಿ ಚಿತ್ರಿಕರಿಸಲಾಗಿದೆ ಇದು ಅಮೇರಿಕಾದಲ್ಲಿ ನಡೆಯುವ ಒಂದು ಪ್ರೇಮ ಪ್ರಸಂಗ,ಹಳ್ಳಿಯ ಹುಡುಗ ಶ್ರೀಮಂತರ ಹುಡುಗಿಯ ಮನಸ್ಸನ್ನು ಗೆಲುವಲ್ಲಿ ಯಶಸ್ವಿಯಾಗುವುದನ್ನು ನಿರ್ದೇಶಕರು ಅಚ್ಚು ಕಟ್ಟಾಗಿ ತಮ್ಮ ನಿರ್ದೇಶನದಲ್ಲಿ ನಿರ್ದೇಶಿಸಿದ್ದಾರೆ ನನ್ನ ಪ್ರೀತಿಯ ಹುಡುಗಿ ಎಂಬ ವಿಷಯಾಧಾರಿತ ಚಿತ್ರವನ್ನು ಪರದೆಯ ಮೇಲೆ ಮೂಡಿಸಿ ನಿರ್ದೇಶರು ಪ್ರೇಕ್ಷಕರ ಮನಸ್ಸನ್ನು ಗೆದಿದ್ದಾರೆ.

ಸೂಪರ್ ಸ್ಟಾರ್ (2002) –ಪ್ರೀತಿಯ ಮೋಹದಲ್ಲಿ ಸಿಲುಕಿದ ನೇಪಾಳ ಅರಸ ದೀಪೇಂದ್ರನ ಕುರಿತ ಚಿತ್ರ ಕಥೆ ಇದು.2002ರಲ್ಲಿ ಬೆಳ್ಳಿ ತೆರೆ. ಕಂಡು ಯಶಸ್ವಿ ಚಿತ್ರವಾಗಿ ಮೂಡಿಬಂದಿದೆ. ಉಪೇಂದ್ರ ರವರು ದ್ವೀಪಾತ್ರದಲ್ಲಿ ನಟಿಸಿರುವ ಚಿತ್ರವಿದು,ಇದೊಂದು ಸುಂದರ ಕೌಟುಂಬಿಕ ಚಿತ್ರವಾಗಿದ್ದು ಚಿತ್ರದ ಅರ್ಧಭಾಗವನ್ನು ಬ್ಯಾಂಕಾಂಗ್‌ನಲ್ಲಿ ಚಿತ್ರಿಕರಣ ಮಾಡಲಾಗಿದೆ.ದೀಪೇಂದ, ರಿಕ್ಕಿ ಹಾಗೂ ದೇವಯಾನಿ ನಡುವೆ ಒಂದು ಸುಂದರ ಪ್ರೇಮ ಕಥೆ.

ಪ್ಯಾರಿಸ್ ಪ್ರಣಯ (2003) –ಭಾರತ ಹಾಗೂ ಫ್ರಾನ್ಸ್ ಸಂಸ್ಕೃತಿಗಳ ಸಂಗಮ ಚಿತ್ರವೇ 'ಪ್ಯಾರಿಸ್ ಪ್ರಣಯ'. ಫ್ರಾನ್ಸ್ ದೇಶದ ಕಲೆ, ಸಂಗೀತ, ಚಿತ್ರಕಲೆ, ಇತಿಹಾಸವನ್ನು ಇಲ್ಲಿನ ಕಥೆ ಒಳಗೊಂಡಿದೆ. ಇಲ್ಲಿನ ಚಿತ್ರಕ್ಕೆ ಒಂದು ವಿಶಿಷ್ಟ ಸ್ಥಾನವಿದೆ.ಇದು ಕೌಟುಂಬಿಕ ಚಿತ್ರವಾಗಿದ್ದು,ಹೊಸ ಯುವ ಪ್ರತಿಭೆಗಳ ಪ್ರಥಮ ಪ್ರಯತ್ನವಾಗಿದೆ., ಚಿಗುರೊಡೆಯುವ ಎಳೆಯ ಮನಸ್ಸುಗಳ ಸ್ವಭಾವಗಳನ್ನ ಕಥಾರೂಪಕ್ಕೆ ಇಳಿಸಿರುವ ಒಂದು ಸುಂದರ ಪ್ರೇಮ ಕಥೆ.ಕನ್ನಡ ಸಿನಿಮಾಗಳ ಪ್ರದರ್ಶನವು ಕುಗ್ಗಿದಂತಹ ಕಾಲದಲ್ಲಿ "ಪ್ಯಾರೀಸ್ ಪ್ರಣಯ" ಎಂಬ ಒಂದು ವಿಷಯಾಧಾರಿತ ಚಿತ್ರವನ್ನು ತೆರೆಯ ಮೇಲೆ ಮೂಡಿಸಿ ಜನರನ್ನ ಥೆಯೇಟರ್‌ಗಳತ್ತ ಮನಸ್ಸು ಸೆಳೆದ ಚಿತ್ರ, ಪ್ಯಾರೀಸ್ ಪ್ರಣಯ. ಪೂರ್ವ ದೇಶ ಭಾರತ ಹಾಗು ಪಶ್ಚಿಮ ದೇಶ ಪ್ಯಾರೀಸ್‌ನ ಎರಡು ದೇಶಗಳ ಸಂಸ್ಕೃತಿಯ ಹೋಲಿಕೆಗಳನ್ನ ಪ್ರದರ್ಶಿಸಿದ ಚಿತ್ರ.

ಅಮೃತಧಾರೆ (2005)–ಪುರು ಅಗರ್ಬ ಶ್ರೀಮಂತನ (ಅವಿನಾಶ್)ಮಗ, ಅಮೃತಾ ಒಬ್ಬ ಸಾಧಾರಣ ಶಿಕ್ಷಕಿಯ(ಭವ್ಯಾ) ಮಗಳು ಇವರಿಬ್ಬರು ಒಬ್ಬರ ನೊಬ್ಬರು ಪ್ರೀತಿಸಿ ಮನೆಬಿಟ್ಟು ಹೊರಬಂದು ಜೀವನ ನಡೆಸುವ ಸುಂದರ ಪ್ರೇಮ ಕಥೆ.

ಮಾತಾಡ್ ಮಾತಾಡ್ ಮಲ್ಲಿಗೆ (2007)–ಮಾತಾಡ್ ಮಾತಾಡು ಮಲ್ಲಿಗೆ ಇದೊಂದು ಸಾಹಸೋದ್ಯಮ ಜಾಗತೀಕರಣ ಮತ್ತು ಅಪ್ರಧಾನವಾದ ವೃತ್ತಿಗಳನ್ನು ಅದರ ಪ್ರಭಾವದ ಬಗ್ಗೆ ಎತ್ತಿ ತೋರಿಸುವ ಒಂದು ಚಿತ್ರ,ಈ ಚಿತ್ರ ಗ್ರಾಮೀಣ ಭಾರತದಾದ್ಯಂತ ಪ್ರಸ್ತುತ ನಡೆಯುತ್ತಿರುವ ಘಟನೆಗಳನ್ನು ಬಿಂಬಿಸುವ ಮತ್ತು ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ತೋರಿಸುವ ಒಂದು ಸುಂದರ ಸಿನಿಮಾ.

ಒಲವೇ ಜೀವನ ಲೆಕ್ಕಚಾರ (2009) –ಇದು ಸಂಸಾರಿಕ ಚಿತ್ರವಾಗಿದೆ. ಮನರಂಜನೆ ಹಾಗೂ ಹಾಸ್ಯಮಯದಿಂದ ಕೂಡಿದೆ, ತಾಯಿ ಮಗುವಿನ ಮೇಲೆ ತೋರಿಸುವ ಲೆಕ್ಕಚಾರ, ತಂದೆ ಮಗಳ ಮೇಲೆ ತೋರಿಸುವ ಪ್ರೀತಿಯಾ ಲೆಕ್ಕಚಾರ, ಪ್ರೇಮಿಸುವ ಹಕ್ಕಿಗಳ ನಡುವೆ ಲೆಕ್ಕಚಾರ, ಗುರು ಶಿಷ್ಯಂದಿರ ನಡುವೆಯು ಲೆಕ್ಕಚಾರ ಅಷ್ಟೇ ಏಕೆ ಮೋಸ ಮಾಡುವಾಗಲು ಲೆಕ್ಕಾಚಾರ ವಿರಬೇಕು, ಹುಡುಗಿಯನ್ನ ಪ್ರೀತಿಸಿದ ,ಹಾಗಿರಬೇಕು ಆದರೇ ಪ್ರೀತಿಸಬಾರದು ಅನುಭವಿಸಿ ಮಜಾ ಉಡಾಯಿಸಿಬಿಡಬೇಕು ಆದರೆ ಮದುವೆಯಾಗಬಾರದು ಒಟ್ಟಿನಲ್ಲಿ ಕ್ರಾಂತಿಯಾಗಬೇಕು ಕ್ರಾಂತಿ ಇದು ಈ ಚಿತ್ರ ಒಳಗೊಂಡಿರುವ ಚಿತ್ರಕಥೆ.

ಬ್ರೇಕಿಂಗ್ ನ್ಯೂಸ್(2012)–ಬ್ರೇಕಿಂಗ್ ನ್ಯೂಸ್ ಇದೊಂದು ಖಾಸಗಿ ಸಿನಿಮಾ,ಬ್ರೇಕಿಂಗ್ ನ್ಯೂಸ್ ಪ್ರತಿಸ್ಪರ್ಧಿವಾಹಿನಿಗಳಿಗೆ ಮುಂದೆ ಉಳಿಯಲು ದೂರದರ್ಶನ ಚಾನಲ್ ಸಕಾಲವು ಬ್ರೇಕಿಂಗ್ ನ್ಯೂಸ್ ಸಿನಿಮಾದಲ್ಲಿ ಕೇಂದ್ರಬಿಂದುವಾಗಿ ಬಿಂಬಿಸಲಾಗಿದೆ.ನಾಯಕನ ಪಾತ್ರದಲ್ಲಿ ಅರ್ಜುನ್‌ರಾವ್ ನಾಯಕಿಯ ಪಾತ್ರದಲ್ಲಿ ರಾಧಿಕ ಪಂಡಿತ್ ರವರು ನಟಿಸಿದ್ದು,ಇವರಿಬ್ಬರ ಪ್ರೇಮ ಕಥೆಯನ್ನು ನಿರ್ದೇಶಕರು ಅಚ್ಚು ಕಟ್ಟಾಗಿ ನಿರ್ದೇಶಿಸಿದ್ದಾರೆ.

ಪಡೆದ ಪ್ರಶಸ್ತಿ ಮತ್ತು ಪರಸ್ಕಾರ

- **ಕಾಡಿನ ಬೆಂಕಿ** (1986)– ಚಿತ್ರಕಥೆ,ಗೀತಾ ಸಾಹಿತ್ಯ,ಸಂಭಾಷಣೆ– ರಾಷ್ಟ್ರಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿ.
- **ಸಂಕ್ರಾಂತಿ** (1988) ಗೀತಾಸಾಹಿತ್ಯ, ಚಿತ್ರ ಕಥೆಗೆ– ರಾಜ್ಯ ಪ್ರಶಸ್ತಿ ಮತ್ತು ಬರ್ಕಲಿ ತರಂಗಿಣಿ ಪ್ರಶಸ್ತಿ.
- **ಪ್ರಥಮ ಉಷಾಕಿರಣ** (1989) ಚಿತ್ರಕಥೆ, ಸಂಭಾಷಣೆ, ಗೀತಾಸಾಹಿತ್ಯ,– ರಾಜ್ಯ ಮತ್ತು ಫಿಲಂ ಫೇರ್ ಪ್ರಶಸ್ತಿ.
- **ಉದ್ಭವ** (1990) ಚಿತ್ರಕಥೆ, ಸಂಭಾಷಣೆ, ಸಾಹಿತ್ಯ, ಸಂಭಾಷಣೆಗೆ – ರಾಜ್ಯ ಪ್ರಶಸ್ತಿ ಮತ್ತು ಬರ್ಕಲಿ ತರಂಗಿಣಿ ಪ್ರಶಸ್ತಿ.
- **ಉಂಡು ಹೋದ ಕೊಂಡು ಹೋದ** (1991) ನಿರ್ದೇಶನ, ಕಥೆ, ಚಿತ್ರಕಥೆ, ಗೀತಸಾಹಿತ್ಯ,– ಅತ್ಯುತ್ತಮ ಕತೆಗಾರ ರಾಜ್ಯ ಪ್ರಶಸ್ತಿ ತಾರಾ ಪೂರ್ಣ ಪ್ರಮಾಣದ ನಾಯಕಿ,ಹೊಸ ಕಲಾವಿದರಾಗಿ ಕರಿಬಸವಯ್ಯ ಈ ಚಿತ್ರದಿಂದ ಬೆಳ್ಳಿತೆರೆಗೆ ಪರಿಚಯ.
- **ಬಾ ನಲ್ಲೆ ಮಧು ಚಂದ್ರಕೆ** (1993) ನಿರ್ದೇಶನ, ಕಥೆ, ಚಿತ್ರಕಥೆ, ಗೀತಸಾಹಿತ್ಯ, ಸಂಭಾಷಣೆ ಯಶಸ್ವಿ ಚಿತ್ರ, ಹೊಸ ಕಲಾವಿದರಾದ ಶಿವರಾಂ ಈ ಚಿತ್ರದಿಂದ ಬೆಳ್ಳಿತೆರೆಗೆ ಪರಿಚಯ.
- **ಕೋಟೇಶಿ ಕಸಸ್ಸು** (1994) ನಿರ್ದೇಶನ, ಗೀತಸಾಹಿತ್ಯ, ಚಿತ್ರಕಥೆ ಸಂಭಾಷಣೆ – ರಾಷ್ಟ್ರಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿ ಮದ್ರಾಸ್ ಫಿಲಂ ಫ್ಯಾನ್ಸ್ ಅಸೋಸಿಯೆಷನ್ ಪ್ರಶಸ್ತಿ,ನಿರ್ದೇಶಕರ ಸಂಘದ ಪ್ರಶಸ್ತಿ.ವಿಷ್ಣು ಫಿಲಂ ಫೆಸ್ಟಿವಲ್ ಮತ್ತು ಅಮೇರಿಕಾದ ಹಲವಾರು ವಿಶ್ವ ವಿದ್ಯಾನಿಲಯ ಗಳಲ್ಲಿ ಪ್ರದರ್ಶನ.ಮಾ.ವಿಜಯರಾಘವೇಂದ್ರರವರಿಗೆ ಅತ್ಯುತ್ತಮ ಬಾಲನಟ ರಾಷ್ಟ್ರೀಯ ಪ್ರಶಸ್ತಿ.
- **ಊರ್ವಶಿ** (1995) ಗೀತಸಾಹಿತ್ಯ, ಚಿತ್ರಕಥೆ,ರಾಜ್ಯ ಪ್ರಶಸ್ತಿ.

• **ಅಮೇರಿಕಾ! ಅಮೇರಿಕಾ!!** (1996) ನಿರ್ದೇಶನ , ಗೀತಾಸಾಹಿತ್ಯ, ಕಥೆ, ಚಿತ್ರಕಥೆ, ಸಂಭಾಷಣೆ, ಶೇ 75%ಭಾಗ ಅಮೇರಿಕಾದಲ್ಲಿ ಚಿತ್ರಣಗೊಂಡ ಪ್ರಥಮ ಭಾರತೀಯ ಚಿತ್ರ.ಸಂಗೀತ ನಿರ್ದೇಶಕ ಮನೋಮೂರ್ತಿ ಬೆಳ್ಳಿತೆರೆಗೆ ಪರಿಚಯ.ರಾಷ್ಟ್ರ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿ,ಮದ್ರಾಸ್ ಫಿಲಂ ಫ್ಯಾನ್ಸ್ ಅಸೋಸಿಯೆಷನ್ ಪ್ರಶಸ್ತಿ,ಆರ್ಯಭಟ ಪ್ರಸಸ್ತಿಗಳ ಜೊತೆಗೆ 28 ವಿವಿಧ ಪ್ರಶಸ್ತಿ.ಕರ್ನಾಟಕದ ಹಲವಾರು ಚಿತ್ರಮಂದಿರಗಳಲ್ಲಿ 265 ದಿನ ಪ್ರದರ್ಶನ.ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ನಿರ್ಮಾಣ.

• **ಹೂಮಳೆ** (1998) ನಿರ್ದೇಶನ, ಗೀತಸಾಹಿತ್ಯ, ಚಿತ್ರಕಥೆ, ಸಂಭಾಷಣೆ – ರಾಷ್ಟ್ರ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿ ಉದಯ ಟಿವಿ ಪ್ರಶಸ್ತಿ ಸುಮನ್ ಅಗರ್‌ಕರ್ ಪೂರ್ಣ ಪ್ರಮಾಣದ ನಾಯಕಿ.

• **ನನ್ನ ಪ್ರೀತಿಯ ಹುಡುಗಿ** (2000) ನಿರ್ದೇಶನ, ಗೀತಸಾಹಿತ್ಯ, ಕಥೆ, ಚಿತ್ರಕಥೆ, ಸಂಭಾಷಣೆ ಹೊಸ ಕಲಾವಿದರಾದ ಧ್ಯಾನ್ ಮತ್ತು ದೀಪಾಲಿ ಈ ಚಿತ್ರದಿಂದ ಬೆಳ್ಳಿ ತೆರೆಗೆ ಪರಿಚಯ 25 ವಾರಗಳ ಪ್ರದರ್ಶನ 2002ರಲ್ಲಿ ಉತ್ತಮ ನಿರ್ದೇಶನಕ್ಕಾಗಿ ಫಿಲಂ ಫೇರ್ ಪ್ರಶಸ್ತಿ.

• **ಸೂಪರ್ ಸ್ಟಾರ್** (2001) ನಿರ್ದೇಶನ , ನೇಪಾಳಿ ರಾಜಕುಮಾರ ದೀಪೇಂದ್ರನ ದುರಂತ ಪ್ರೇಮ ಕಥೆಯ ಸ್ಫೂರ್ತಿಯಿಂದ ತಯಾರಾದ ಚಿತ್ರ

• **ಪ್ಯಾರಿಸ್ ಪ್ರಣಯ** (2002) ನಿರ್ದೆಶನ, ಸಾಹಿತ್ಯ, ಕಥೆ, ಚಿತ್ರಕಥೆ, ಮತ್ತು ಸಂಭಾಷಣೆ – 2004ರಲ್ಲಿ 3 ರಾಜ್ಯಪ್ರಶಸ್ತಿ (ಉತ್ತಮ ಸಾಹಿತ್ಯ,ಉತ್ತಮ ಸಂಗೀತ, ಉತ್ತಮ ನಾಯಕಿ) 2004ರಲ್ಲಿ ಉತ್ತಮ ಚಿತ್ರಕ್ಕಾಗಿ ಫಿಲಂ ಫೇರ್ ಪ್ರಶಸ್ತಿ.ಸಂಗೀತ ನಿರ್ದೇಶಕ ಪ್ರಯೋಗ್ ಬೆಳ್ಳಿ ತೆರೆಗೆ ಪರಿಚಯ.

• **ಅಮೃತಧಾರೆ** (2005) ನಿರ್ಮಾಣ, ನಿರ್ದೇಶನ, ಸಾಹಿತ್ಯ, ಚಿತ್ರಕಥೆ ಮತ್ತು ಸಂಭಾಷಣೆ – 2006ರಲ್ಲಿ 3ರಾಜ್ಯ ಪ್ರಶಸ್ತಿ,30 ವಾರಗಳ ಯಶಸ್ವಿ ಪ್ರದರ್ಶನ.ಅಮಿತಾಭ್ ಬಚ್ಚನ್ ವಿಶೇಷ ಪಾತ್ರದಲಲಿ ಅಭಿನಯ, ತೆಲುಗು ಭಾಷೆಯಲ್ಲಿ ನಿರ್ಮಾಣ.

• **ಮಾತಾಡ್ ಮಾತಾಡ್ ಮಲ್ಲಿಗೆ** (2007) ನಿರ್ದೇಶನ, ಸಾಹಿತ್ಯ ,ಕಥೆ,ಚಿತ್ರಕಥೆ ಮತ್ತು ಸಂಭಾಷಣೆ– 2007ರ ಮದ್ರಾಸಿನ ಪ್ರತಿಷ್ಠಿತ "ಸಿಕಾ" ಅವಾರ್ಡ್ ಉತ್ತಮ ನಿರ್ದೇಶನಕ್ಕಾಗಿ ಪ್ರತಿಷ್ಠಿತ ಕಾನ್ ಚಿತ್ರೋತ್ಸವದಲ್ಲಿ ಪ್ರದರ್ಶನವಾದ ಮೊದಲ ಕನ್ನಡ ಚಿತ್ರ ಹಲವಾರು ಅಂತರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ 2007ರ 3ನೇ ಅತ್ಯುತ್ತಮ ಚಿತ್ರ ರಾಜ್ಯ ಪ್ರಶಸ್ತಿ.

• **ಒಲವೇ ಜೀವನ ಲೆಕ್ಕಾಚಾರ** (2008) ನಿರ್ದೇಶನ, ಸಾಹಿತ್ಯ, ಕಥೆ , ಚಿತ್ರಕಥೆ ಮತ್ತು ಸಂಭಾಷಣೆ ಭೂಮಿ ಗುಂಡಗಿದೆ ಕಥೆ ಆಧರಿಸಿದ ಚಿತ್ರ,ಯುವಜನರನ್ನು ದಾರಿ ತಪ್ಪಿಸುವ ಹುಸಿ ಕ್ರಾಂತಿಕಾರಿಗಳ ಮುಖವಾಡವನ್ನು ಕಳಚುವ ವಸ್ತುವುಳ್ಳ ಚಿತ್ರ ಅತ್ಯುತ್ತಮ ಕಥೆ,ರಾಜ್ಯ ಪ್ರಶಸ್ತಿ.

• **ನೂರು ಜನ್ಮಕೂ** (2010) ನಿರ್ದೇಶನ, ಸಾಹಿತ್ಯ ,ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಮಹತ್ವ ಕಾಂಕ್ಷಿ ಯುವ ಜನರ ಉದ್ಯಮಶೀಲತೆ, ಪ್ರೇಮ, ಜಾಗತೀಕರಣ, ಆರ್ಥಿಕ ಹಿಂಜರಿತ ಮುಂತಾದ ವಸ್ತುಗಳನ್ನು ಒಳಗೊಂಡ ಚಿತ್ರ.

• **ಬ್ರೇಕಿಂಗ್ ನ್ಯೂಸ್** (2012) ನಿರ್ದೇಶನ, ಕಥೆ, ಚಿತ್ರಕಥೆ ಮತ್ತು ಗೀತೆಗಳು ಸಮಾಜದ ಮೇಲೆ ದೃಶ್ಯ ಮಾಧ್ಯಮ, ವಿಶೇಷವಾಗಿ,ಕಿರುತೆರೆಯ ಪ್ರಭಾವದ ಹಿನ್ನಲೆಯಲ್ಲಿ ರೂಪು ತಳೆದ ಹಾಸ್ಯಮಯ ಚಿತ್ರ.

ಉಪಸಂಹಾರ: 1986ರಲ್ಲಿ 'ಕಾಡಿನ ಬೆಂಕಿ' ಚಿತ್ರಕ್ಕೆ ಚಿತ್ರಕಥೆ ಸಂಭಾಷಣೆ,ಗೀತಾ ಸಾಹಿತ್ಯ ರಚಿಸುವ ಮೂಲಕ ಸಿನಿಮಾ ರಂಗಕ್ಕೆ ಕಾಲಿರಿಸಿ ಆ ಮೂಲಕ ಈ ಕ್ಷೇತ್ರವನ್ನು ಶ್ರೀಮಂತಿಕೆಗೊಳಿಸಿದ್ದಾರೆ ಸಿನಿಮಾ ಮತ್ತು ಸಾಹಿತ್ಯದ ನಡುವೆ ಸೇತುವೆಯಂತೆ ಕೆಲಸಮಾಡುತ್ತಾ ಮೆಷ್ಟ್ರು ಎಂದು ಗುರುತಿಸಿಕೊಂಡಿದ್ದಾರೆ,ಕಲಾತ್ಮಕ ಹಾಗೂ ಮನರಂಜನಾತ್ಮಕ ಚಿತ್ರಗಳ ನಡುವೆ ಗೆರೆಯಂತೆ ತಮ್ಮ ಸಧರುಚಿಯ ಚಿತ್ರಗಳಿಂದ ಕನ್ನಡ ಸಿನಿಮಾ ಲೋಕಕ್ಕೆ ಹೊಸ ದಿಕ್ಕನ್ನು ತೋರಿಸಿ ಕೊಟ್ಟಿದ್ದಾರೆ.

ಗ್ರಂಥಗಳು;-

1)ಸಿನಿಮಾಯಾನ-ಕೆ.ಪುಟ್ಟಸ್ವಾಮಿ-ಹಸಿರು ಪ್ರಕಾಶನ ಜೆ.ಪಿ.ನಗರ ಬೆಂಗಳೂರು

2)ಕನ್ನಡ ಸಾಹಿತ್ಯ ಮತ್ತು ಸಿನಿಮಾ-ಬರಗೂರು ರಾಮಚಂದ್ರಪ್ಪ-ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು

3)ಸಿನಿವಾ ಕಲೆ-ನೆಲೆ;ಗಿರೀಶ್ ಕಾಸರವಳ್ಳಿ-ನವಕರ್ನಾಟಕ ಪಬ್ಲಿಕೇಷನ್(ಪ್ರೈ)ಲಿಮಿಟೆಡ್ ಬೆರಗಳೂರು

4)ಸಿನಿಮಾ ಮತ್ತು ಸಮಾಜ;ಗಿರೀಶ್ ಕಾಸರವಳ್ಳಿ-ಸುವರ್ಣಕರ್ನಾಟಕ ವಿಶೇಷಸಂಭಾಷಣೆ.

5)ಬಾ ನಲ್ಲೆ ಮಧುಚಂದ್ರಕೆ ಕಾದಂಬರಿ 1ನೇ ಮುದ್ರಣ ಪ್ರಕಾಶಕರು ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ,ಬನಶಂಕರಿ ಬೆಂಗಳೂರು.

6)ಚುಕ್ಕಿಚಂದ್ರಮರ ನಾಡಿನಲ್ಲಿ-ಕಾಬಂಬರಿ ಮುದ್ರಣ ಪ್ರಕಾಶಕರು ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ,ಬನಶಂಕರಿ ಬೆಂಗಳೂರು(2011)

7)ಸಿನಿಮಾಂತರಂಗ,ಪುಸ್ತಕ ಚಿಲುಮೆ,ಅಬ್ದುಲ್ ರಹಮಾನ್ ಪಾಷ, ಪ್ರಕಾಶನ-ತಿಲಕ್ ನಗರ ಮೈಸೂರು-(1927).

8)ನಾಯನಾರ್ ಸಂತರು(ಸಿವಭಕ್ತ ಚರಿತಾಮೃತ)ಬೆಳ್ಳಿತೆರೆ ಪುಸ್ತಕ ಪ್ರಹಟಣ ಸಮಿತಿ-ಅನಂತಲಕ್ಷ್ಮೀ ನಟರಾಜನ್ ಪ್ರಕಾಶನ, ದಾವಣಗೆರೆ (2002)

9)ಕನ್ನಡದ ಮುತ್ತಿನಕಥೆ-ಬಿ ಗಣಪತಿ ಸಿನಿಮಾ ಸಾಹಿತ್ಯ ಪ್ರಕಾಶನ ಬೆಂಗಳೂರು(2006)

10)ಕನ್ನಡದ ಸಿನಿಮಾ ಇತಿಹಾಸದ ಪುಟಗಳಲ್ಲಿ-ಗಂಗಾಧರ್ ಮೊದಲಿಯಾರ್ ಪ್ರಕಾಶನ ಕನ್ನಡಪುಸ್ತಕ ಪ್ರಾಧಿಕಾರ(1996)

11)ಗೀತೆ-ಸಂಗೀತ-ಚಂದ್ರಶೇಖರ್ ಆಲೂರುಕಲ್ಯಾಣೇ ಪ್ರಕಾಶನ ಬೆಂಗಳೂರು(1991)

12)ಕಲೆಯೇ ಕಾಯಕ ಕನ್ನಡ ಮತ್ತು ಸಂಸ್ಕೃತ ಇಲಾಖೆ-ಗುಬ್ಬಿ ವೀರಣ (1996)

13)ಮುತ್ತಿನ ಕಣಜ-ಡಾ॥ರಾಜಸೇಖರ ಪಿ.ಕೆ ಸಂವಹನ ಮೈಸೂರು(2001)

14)ಹಾಡೆ ಹಾದಿಯ ತೋರಿತು-ರಾಗವೇಂದ್ರರಾವ್ ಎಚ್.ಎಸ್-ಕನ್ನಡ ಕ್ರೈಸ್ತ ಕಾಲೇಜು.ಬೆಂಗಳೂರು(1996)

15)ಸಿನಿಮಾ-ರಮೇಶ ಜಿ.ಕೆ ಪ್ರಜ್ವಲ ಪ್ರಕಾಶನ ಮೈಸೂರು (1982)

16)ಸಿನಿಮಾ ಒಂದು ಜನಪದ ಕಲೆ-ಡಾ॥ಬರಗೂರು ರಾಮಚಂದ್ರಪ್ಪ ಅಂಕಿಪ್ರಕಾಶನ (2002).

ಪಿ. ಲಂಕೇಶರ ಕತೆಗಳಲ್ಲಿ ಚಲನಶೀಲ ಸಮಾಜದ ಪರಿಕಲ್ಪನೆಗಳು

ಸಿ.ಜಿ. ರಮೇಶ್
ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಜೇಂದ್ರನಗರ, ಮೈಸೂರು

ಕನ್ನಡದ ಕಥನ ಸಾಹಿತ್ಯ ಪರಂಪರೆ ಸುಮಾರು ಶತಮಾನಗಳ ಇತಿಹಾಸವನ್ನು ಹೊಂದಿದ್ದು, ಈ ಅಪಾರವಾದ ಕಾಲದ ಅಂತರದಲ್ಲಿ ಅನೇಕ ಬದಲಾವಣೆಗಳನ್ನು ಹೊಂದಿದೆ. ಕಾಲ ದೇಶ ಮಿತಿಗಳಿಗೆ ಒಗ್ಗಿಕೊಂಡು ತನ್ನದೇ ಆದ ಸಾಮಾಜಿಕ ಮಿತಿಗಳೊಂದಿಗೆ ಇಂದಿಗೂ ತನ್ನತನವನ್ನು ಉಳಿಸಿಕೊಂಡು ಚಲಾವಣೆಯಾಗುತ್ತಿದೆ. ಪ್ರಾಚೀನ ಸಾಹಿತ್ಯ ಪರಂಪರೆಯ ನಿರ್ಬಂಧಗಳಿಂದ ಬಿಡಿಸಿಕೊಂಡು ಶೈಲಿ, ತಂತ್ರ, ಉದ್ದೇಶಗಳಿಂದ ಹಿಡಿದು ಕಥನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರತಿಯೊಂದನ್ನೂ ಬದಲಾವಣೆಗೆ ಒಳಪಡಿಸಿ ಒಂದು ಹೊಸ ರೂಪವನ್ನು ಆಂಗ್ಲ ಸಾಹಿತ್ಯ ಬಲ್ಲ ಆಧುನಿಕ ಬರಹಗಾರರು ಕೊಟ್ಟರು. ಅಂದಿನಿಂದ ಉಂಟಾದ ಬದಲಾವಣೆ ಕಥನ ಸಾಹಿತ್ಯಕ್ಕೆ ಒಂದು ಹೊಸ ಪಲ್ಲಟವನ್ನು ಕೊಟ್ಟಿತು. ಸಣ್ಣ ಕಥಾಪ್ರಕಾರ ಕಥನ ಸಾಹಿತ್ಯಕ್ಕೆ ಒಂದು ಕ್ರಾಂತಿಕಾರಕ ವ್ಯಕ್ತಿತ್ವವನ್ನು ತಂದು ಕೊಟ್ಟಿತು. ಅದರಲ್ಲೂ ಲಂಕೇಶರ ಸಣ್ಣ ಕತಾ ಸಾಹಿತ್ಯಕೃಷಿಯಂತೂ ಕಥನ ಸಾಹಿತ್ಯ ಪರಂಪರೆಗೆ ಬಹು ದೊಡ್ಡ ಕೊಡುಗೆ ಎನ್ನಬಹುದು. ಇಲ್ಲಿನ ನನ್ನ ಉದ್ದೇಶ ಲಂಕೇಶರ ಕತೆಗಳ ಸಾಮಾಜಿಕ ಸ್ವರೂಪ ಮತ್ತು ಸಾಧ್ಯತೆಗಳ ಕುರಿತು ಆಗಿರುವುದರಿಂದ ಕತೆಗಾರರೊಬ್ಬರ ಕತೆಗಳ ತಾತ್ವಿಕ ನೆಲೆಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದೇನೆ.

19 ನೇ ಶತಮಾನದ ಸಾಹಿತ್ಯ ಪರಂಪರೆಯು ಭಾರತೀಯ ಸಾಹಿತ್ಯದಲ್ಲಿ ಅನೇಕ ಹೊಸತನಗಳನ್ನು ಒಡಮೂಡಿಸಿಕೊಂಡು ಸಮಾಜದಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ನಿರ್ವಹಿಸುವ ಹಂತಕ್ಕೆ ಬಂದು ತಲುಪಿತು. ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ ಹೊಸ ಹೊಸ ಪರಿಕಲ್ಪನೆಗಳು ಭಾರತೀಯ ಸಾಹಿತ್ಯ ಪರಂಪರೆಗೆ ಬಂದು ಸೇರಿಕೊಂಡವು. "19 ನೇ ಶತಮಾನದಲ್ಲಿ ಸಾಹಿತ್ಯವನ್ನು ಅನ್ಯ ಜ್ಞಾನ ಶಿಸ್ತುಗಳ ಮೂಲಕ ನೋಡುವ, ಪರಿಶೀಲಿಸುವ ಪ್ರಜ್ಞೆ ಜಾಗೃತವಾಯಿತು. ಹೀಗಾಗಿ ಸಾಹಿತ್ಯವು ಸಮಾಜದೊಂದಿಗೆ, ತತ್ವಶಾಸ್ತ್ರದೊಂದಿಗೆ, ಮನಶಾಸ್ತ್ರದೊಂದಿಗೆ ಪರಸ್ಪರ ಇರುವ ಸಂಬಂಧದ ನೆಲೆಗಳನ್ನು ಗೊತ್ತುಮಾಡಿಕೊಳ್ಳುವ, ವಿಶ್ಲೇಷಿಸಿಕೊಳ್ಳುವ ಮಾರ್ಗವಾಗಿ ನಮ್ಮ ವಿಮರ್ಶಾ ಕ್ಷೇತ್ರ ಬೆಳೆಯಿತು"

ಸಮಾಜದೊಂದಿಗಿನ ನಿಕಟ ಸಂಪರ್ಕದಿಂದ ಹುಟ್ಟಿಕೊಂಡ ಆಧುನಿಕ ಕನ್ನಡ ಸಾಹಿತ್ಯ ಬದಲಾದ ಸಮಾಜ ಮತ್ತು ಸಾಮಾಜಿಕರ ಸಂಬಂಧಗಳಿಗನುಗುಣವಾಗಿ ತಾನೂ ಬದಲಾವಣೆ ಹೊಂದುತ್ತಾ "ಅನ್ಯ ದೇಶಗಳ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿ ಸಮಕಾಲೀನ ಮಾನವನ ಬದುಕನ್ನೇ ಪ್ರಧಾನ ಬಿತ್ತಿಯಾಗಿಸಿಕೊಂಡು ಪ್ರಾಚೀನ ಕಾವ್ಯಕ್ಕೆ ಪ್ರತಿಕ್ರಿಯೆ ಮತ್ತು ಪ್ರತಿಭಟನೆಯಾಗಿ ಹುಟ್ಟಿಕೊಂಡ ನವೋದಯ ಸಾಹಿತ್ಯ ಆಧುನಿಕ ಸಾಹಿತ್ಯ ರಚನೆಗೆ ಅನನ್ಯ ಪ್ರಕಾರಗಳನ್ನು ನೀಡಿತು,

ಹೊಸಗನ್ನಡ ಸಾಹಿತ್ಯದ ಮಹತ್ವದ ಬರಹಗಾರರಲ್ಲಿ ಒಬ್ಬರಾದ ಪಿ.ಲಂಕೇಶರು ಸಾಂಸ್ಕೃತಿಕ ವೈವಿಧ್ಯಮಯ ಬದುಕು ಸಹ ಆಗಿದ್ದರು. ಸೃಜನ ಶೀಲ ರಚನೆಗಳಲ್ಲಿಯೇ ಸ್ವಂತಿಕೆಯನ್ನು ಮೆರೆದ ಸಾಹಿತಿ. ಜೀವನದ ಎಲ್ಲ ಬಗೆಯ ಸಾಂಸ್ಕೃತಿಕ ಸಂವಾದಗಳಿಗೆ ಮುಖವಾಣಿಯಾಗಿ ನಿಂತವರು. ಲಂಕೇಶರು ಮೂಲತಃ ಸಮಾಜವಾದಿ; ಸಾಮಾಜಿಕ ಚಿಂತನೆಗಳಿಂದ ಪ್ರಭಾವಿತರಾದವರು ಇಂತಹ ಆಲೋಚನೆಗಳ ಸಿದ್ಧಿಯಿಂದಲೇ ನವ್ಯ ಮನೋಧರ್ಮವನ್ನು ಮೀರಿ ಸಾಮಾಜಿಕ ಆಶಯಗಳನ್ನು ಅಭಿವ್ಯಕ್ತಿಸಲು ಸಾಧ್ಯವಾಯಿತು.

ನವ್ಯೋತ್ತರ ಸಾಹಿತ್ಯದಿಂದ ದೂರನಿಂತು, ಹೊಸ ಶತಮಾನದ ಮುಂಗುರುಳಲ್ಲಿ ನಿಂತು ಲಂಕೇಶರ ಸಾಹಿತ್ಯವನ್ನು ಗಮನಿಸಿದರೆ ಸ್ವಾತಂತ್ರ್ಯೋತ್ಸವ ಭಾರತದ ವ್ಯಕ್ತಿಗತ ಮತ್ತು ಸಾಮಾಜಿಕ ಹಿತಾಸಕ್ತಿಗಳು ಹೇಗೆ ವಿಫಲಗೊಂಡು ಕನಸುಗಳೆಂಬ ಭ್ರಮೆಗಳಲ್ಲಿ ಸಿಲುಕಿ ವಾಸ್ತವದ ಸುಡುಬೇಗೆಯಲ್ಲಿ ಬೇಯುತ್ತವೆ, ಆತ್ಯಂತಿಕ ನೀಚತನಗಳಿಂದ ವ್ಯಕ್ತಿ ಮತ್ತು ಸಮಾಜ ಹೇಗೆ? ಅಧಃಪತನಕ್ಕಿಳಿದು ಸರಿಪಡಿಸಲಾಗದ ಅಸ್ತವ್ಯಸ್ಥೆಯಲ್ಲಿ ನರಳುತ್ತವೆ ಎಂಬುದರ ಚಿತ್ರಣ ಸ್ಪಷ್ಟವಾಗುತ್ತದೆ.

ಲಂಕೇಶರ ಬಹುಶ್ರುತಿ ಸಾಹಿತ್ಯ ವ್ಯಕ್ತಿ ಮತ್ತು ಸಮಾಜದ ನಡುವೆಯೇ ಹೆಣೆಯುವುದರಿಂದ ಪ್ರಮುಖವಾಗಿ ವ್ಯಕ್ತಿ ಮತ್ತು ಸಮಾಜ ಪರಸ್ಪರ ಸಂಧಿಸುವ ಬಿಂದುವಿನಲ್ಲಿ ಸಂಸ್ಕೃತಿ ಅರಳಬೇಕು ಎನ್ನುವ ತಾತ್ವಿಕತೆಯೇ ಸಮಾಜಮುಖಿಯಾಗುವುದು. ಹೀಗೆ ಸಂಚರಿಸುವ ವೈವಿಧ್ಯಮಯ ಸಾಂಸ್ಕೃತಿಕ ವ್ಯಕ್ತಿಯಾದ ಲಂಕೇಶರು... ಹೆಚ್ಚು ಪ್ರಭಾವಿತರಾದದ್ದು ಕಥನ ಸಾಹಿತ್ಯದಲ್ಲಿ ಇವರ ಸಣ್ಣಕಥಾ ಸಾಹಿತ್ಯ ಕೃಷಿಯಂತೂ ಕಥನ ಸಾಹಿತ್ಯ ಪರಂಪರೆಗೆ ಬಹುದೊಡ್ಡ ರೂಪಕವಾಯಿತೆನ್ನಬಹುದು.

"ಜೀವನ ಸಂಬಂಧ ಮತ್ತು ಸಾಮಾಜಿಕ ಸಂಬಂಧಗಳ ಜೊತೆಗೆ ವ್ಯಕ್ತಿಯ ಸಂವೇದನಾ ಪ್ರಪಂಚ ಹೇಗೆ ವಿವಹರಿಸುತ್ತೆ? ಅದರೊಟ್ಟಿಗೆ ಸಮಾಜದ ಜೊತೆ ವ್ಯಕ್ತಿಯ ಪ್ರತಿಸ್ಪಂದನ ಹೇಗೆ ಮಿಡಿತಗೊಂಡಿದೆ? ಎಂಬುದರ ಕ್ರಿಯಾಜನ್ಯ ಮುಖಾಮುಖಿಯ ಅಂತರಾವಲೋಕನ ಇಲ್ಲಿ ಆಧಾರವಾಗಿ ವ್ಯಾಖ್ಯಾನಿಸಿಕೊಳ್ಳುತ್ತದೆ.

ಮನುಷ್ಯನ ಚಲನವಲನದ ಸಹಸ್ಪಂದನದ ನೆಲೆಯಲ್ಲಿಯೇ ಗ್ರಾಮೀಣ ಬದುಕಿನ ಸಂವೇದನೆಯನ್ನೇ ಸಾಂಸ್ಕೃತಿಕ ರಂಗಕ್ಕೇರಿಸುವುದರ ಮೂಲಕ ಆಧುನಿಕ ಮನಸ್ಸುಗಳನ್ನು ಮತ್ತು ಹಳ್ಳಿಗಳ ಸ್ಥಿತಿಗತಿಗಳಲ್ಲಿ ಉಂಟಾದ ಸಾಮಾಜಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಬೆತ್ತಲಾಗಿಸುವ ನಿರ್ಭಿಡತೆಯ ಮಟ್ಟದಲ್ಲಿಯೇ ರಚಿತವಾದಂತಹ ಇವರ ಕಥನ ಪರಂಪರೆ, ಶ್ರೀ ಸಾಮಾನ್ಯನ ಬದುಕಿನ ಕಾವ್ಯವಾಗಿ, ಸಾಕ್ಷ್ಯಚಿತ್ರಗಳನ್ನೊದಗಿಸುವ ದಾಖಲೆಗಳಾಗಿವೆ ಎಂದರೇ ತಪ್ಪಗಲಾರದು.

ಲಂಕೇಶರು ಬರೆದದ್ದು ಕಲ್ಪನೆಯಲ್ಲಿ, ಬದಲಾಗಿ ಸಂವೇದನೆಯ ಸಮಾಗಮದಲ್ಲಿ. ಇವರ ಆಲೋಚನ ಲಹರಿ ಪ್ರಜಾಪ್ರಭುತ್ವವನ್ನು ಗೇಲಿಮಾಡುತ್ತಾ, ರಾಜಕೀಯವನ್ನು ವ್ಯಂಗ್ಯವಾಗಿಸುತ್ತಾ, ಸಮಾಜವನ್ನು ಅಣಕಿಸುತ್ತಾ, ವ್ಯಕ್ತಿಯ ಭಾವನೆಗಳಿಗೆ ಸ್ಪಂದಿಸುವುದಾಗಿತ್ತು ಮತ್ತು ಸಂಧಿಸುವುದಾಗಿತ್ತು.

ಇವರು ಎಂದಿಗೂ ಸಮಾಜದಿಂದ ದೂರನಿಂತ ಅಕ್ಷರಗಳನ್ನು

ಅವಲೋಕಿಸಿದವರಲ್ಲ, ಚಿಂತೆಯು ದಾಸ್ಯರಾಗದೇ, ಚಿಂತನಾಶೀಲತೆಯಲ್ಲಿಯೇ ಸದಾ ಜಾಗೃತರಾಗುತ್ತ, ಕ್ರಿಯಾಶೀಲತೆ ಇವರ ನಿಲುವು. ಸಮಾಜದ ಹಿತವನ್ನು ಕಾಪಾಡುವುದೇ ಏನ್ನುವುದರಲ್ಲಿ ಎರಡು ಮಾತಿಲ್ಲ, ಸಾಮಾಜಿಕ ಸಂಬಂಧಗಳಲ್ಲಿಯೇ ಸಮಾಜ ಕಟ್ಟುವ ಕೆಲಸ ಮೂಡಿದವರಲ್ಲಿ ಇವರೇ ಅಗ್ರ ಗಣ್ಯರು.

ಬಹುಶಃ ಸ್ವಾತಂತ್ರ್ಯೋತ್ತರ ಭಾರತದ ಬಗೆಗಿನ ಕನಸುಗಳು, ಭಗ್ನಗೊಂಡ ಸ್ಥಿತಿ, ಆದರ್ಶರಹಿತ ಬದುಕು, ಬದಲಾದ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿಗಳು ವಾಸ್ತವದ ನಿಲುವಿಗೆ ತಂದೊಡ್ಡುವ ಇವರ ಸೃಜನಶೀಲ ಸಂಗತಕ್ರಿಯೆ ಸೋಜಿಗವೆನಿಸುತ್ತದೆ.

ಹೀಗೆ ಅಂತರಂಗದ ವಾಸ್ತವಿಕ ಚಿತ್ರ ಸೃಷ್ಟಿಗೆ ಪ್ರಾಧಾನ್ಯತೆ ನೀಡ ಬೇಕೆಂಬ ಹಂಬಲದಿಂದ ನವ್ಯದ ಮನೋಧರ್ಮದಲ್ಲಿಯೇ ಲಂಕೇಶರು ತಮ್ಮ ಕಥಾಹಂದರವನ್ನು ಹೆಣೆದರು.

ಇವರ ಕತೆಗಳು ನವ್ಯದ ಕತೆಗಳು ಎಂದು ಸಂಕೀರ್ಣಗೊಳ್ಳದೇ ಇವು ಲಂಕೇಶರ ಸಾಮಾಜಿಕ ಕಾಳಜಿ ಮತ್ತು ಜೀವನ ಪ್ರೀತಿಯ ಹರಹುಗಳೆಂದೇ ದಾಖಲಾಗುತ್ತವೆ. ಇಂತಹ ಸೂಕ್ಷ್ಮ ಸಂವೇದನೆಯ ಅದಮ್ಯ ನೋಟವನ್ನು ಕಲ್ಲುಕರಗುವ ಸಮಯ ಮತ್ತು ಇತರೆ ಕತೆಗಳು, ಮಂಜು ಕವಿದ ಸಂಜೆ ಕಥಾಸಂಕಲನಗಳು, ನಾನಲ್ಲ ಸಂಕಲನದ ರೊಡ್ಡಿ, ಆಕ್ಟೋಪಸ್, ವಾಸನೆ ಇಂತಹ ಕಥನಗಳಲ್ಲಿ ನೋಡಬಹುದಾಗಿದೆ.

ಲಂಕೇಶರ ಮಾತು ಸಮಾಜದ ದನಿಯೇ ಎಂಬಂತೆ ಅವರ ಅಭಿವ್ಯಕ್ತಿಗಳು ಲಾಲಿತ್ಯಗೊಂಡಿದ್ದರಿಂದ ಅವರ ಬೌದ್ಧಿಕ ಕಸರತ್ತಿನ ಕತೆಗಳಲ್ಲಿ ಬಡತನ, ಅನಕ್ಷರತೆ, ಶೋಷಣೆ, ಕಂದಾಚಾರ, 'ಜಾತೀಯತೆ, ಕೌಟುಂಬಿಕ ಸಮಸ್ಯೆಗಳು, ಮಹಿಳಾ ಸಂವೇದನೆ, ವೈವಾಹಿಕ ಸಂಬಂಧಗಳ ಜಿಗುಟುತನಗಳು ಇಂತಹ ಸಾಮಾಜಿಕ ಸಮಸ್ಯೆಗಳ ವಸ್ತು ಸ್ಥಿತಿಯ ವಿಡಂಬನೆ ಮತ್ತು ವ್ಯಂಗ್ಯಗಳನ್ನೇ ಕಾಣಬಹುದಾಗಿದೆ.

ಲಂಕೇಶರು ಕೇವಲ ಸಾಹಿತಿಯಾಗಿರದೇ ರಾಜಕೀಯ ಚಿಂತಕರಾಗಿಯೂ ತಮ್ಮನ್ನು ತಾವು ಗುರುತಿಸಿಕೊಂಡವರು. ಆದರೇ ಇವರ ಕಾರ್ಯಕ್ಷಮತೆ ಎಂತದ್ದು ಎಂದು ಪ್ರಶ್ನೆ ಮಾಡುವ ಹಕ್ಕು ಬಹುಶಃ ಲಂಕೇಶರ ಭಾವನಾ ಲೋಕದ ಸದಸ್ಯರಾದವರಿಗೆ ಮಾತ್ರ ಎಂದರೇ ವಿಷಾದವೆನಿಸಲಾರದು... ಅವರ ರಾಜಕೀಯ ಜಾಗೃತ ಮನಸ್ಸು, ಭವಿಷ್ಯ ಭಾರತದ ಸಾಂಸ್ಕೃತಿಕ ಆಯಾಮಗಳಿಗೆ ಅವರಲ್ಲಿದ್ದಂತಹ ರೂಪನಿಷ್ಠ ಮೌಲ್ಯಗಳು ಅವರನ್ನು ರಾಜಕೀಯದಲ್ಲಿ ಗುರುತಿಸಿ ಕೊಳ್ಳುವಂತೆ ಮಾಡಿತ್ತು.. ಸ್ವತಃ ರಾಜಕೀಯ ರಂಗದ ಪ್ರತಿನಿಧಿಯಾಗಿ ದ್ದರಿಂದ ಅಲ್ಲಿನ ಅವ್ಯವಸ್ಥೆಗಳನ್ನೇ ಕತೆಯ ವಸ್ತುವನ್ನಾಗಿ ಬಳಸಿ ಸಮಾಜವನ್ನು ಎಚ್ಚರಿಸುವ ವಿಜ್ಞಾನಿಯಾದರು ಅವರ "ರೊಟ್ಟಿಕತೆ ಬಹುಶಃ ಸಾಮಾಜಿಕ ನಿಲುವಿನ ಬಹುದೊಡ್ಡ ಧೋರಣೆಯೇ ಆಗಿದೆ. ಇಲ್ಲಿ ಸಮಾಜದ ತಾಟಸ್ಥ್ಯನೀತಿ, ಅಜ್ಜಿಯ ಜಿಗುಟುತನದ ಸಂವೇದನಾ ಶೀಲತೆ, ವ್ಯವಸ್ಥೆಯ ಮೂಕತನ, ಹಸಿವಿನ ಸೂಕ್ಷ್ಮ ಪ್ರಜ್ಞೆ ಅಡಕವಾಗಿ ರುವುದನ್ನು ಕಾಣಬಹುದು ಹಾಗೆಯೇ "ಮುಟ್ಟಿಸಿಕೊಂಡವನು" ಎನ್ನುವ ಕತೆ, "ಅಸ್ಪೃಶ್ಯತೆಯ ಕಳಂಕವನ್ನು ತೊಡೆದು ಹಾಕಿ, ಮನುಷ್ಯನ ಸಾಮಾಜಿಕ ಆರೋಗ್ಯಕ್ಕಿರುವ ಅಡ್ಡಿಯನ್ನು ಹೋಗಲಾ ಡಿಸುವ ಮನೋಧರ್ಮ ಮಾಧ್ಯಮವಾಗಿ ನಿರ್ವಹಿಸಿಕೊಳ್ಳುತ್ತದೆ. ಕಲ್ಲುಕರುಗುವ ಸಮಯ ಕತೆಯಲ್ಲಿ ಶ್ಯಾಮಲಾ ಮತ್ತು ತಿಪ್ಪಣ್ಣರ ಪ್ರೇಮದ ಮೂಲಕ ಜಾತಿರೋಗವನ್ನು ತೊಡೆಯುವ ಕೆಲಸವನ್ನು ಲಂಕೇಶರು ಮಾಡಿದ್ದಾರೆ. ಮನುಷ್ಯ ಸಂಬಂಧದ ಜಟಿಲತೆಯನ್ನು, ಸಾಮಾಜಿಕ ಅಡ್ಡಿಗಳನ್ನು ಮೀರಿ, ಪಲ್ಲಟಗೊಳ್ಳುತ್ತಿರುವ ಸಾಮಾಜಿಕ ವ್ಯವಸ್ಥೆಯ ಪ್ರಕ್ರಿಯೆಯಂತ ಮಾನವೀಯ ಮೌಲ್ಯಗಳ ಕೇಂದ್ರೀಕರಣ ದಲ್ಲೇ ಸುತ್ತುತ್ತದೆ.

ಬಹುಶಃ ಲಂಕೇಶರು ಈ ಕತೆಗಳನ್ನು ಬರೆಯುವ ವೇಳೆಗೆ ಗಾಂಧೀಜಿ ಮತ್ತು ಟಾಲ್‌ಸ್ಟಾಯ್ ಅವರ ಪ್ರಭಾವಕ್ಕೆ ಒಳಗಾಗಿದ್ದರಿಂದಲೇ ಲಂಕೇಶರಲ್ಲಿ ಲೋಕಾನುಭವದ ಜೊತೆಗೆ ಬದುಕನ್ನು ಉದಾರವಾಗಿ ನೋಡುವ, ಸಂಯಮಶೀಲರಾಗಿ ಬ್ರಾತ್ರುತ್ವಮಯಿಯಾಗಿ ಹೆಣೆಯುವ ಸಾಕಾರಗಳತ್ತ ಒಲವು ಬೆಳೆದಿರುವುದು ಔಚಿತ್ಯವೆನಿಸುತ್ತದೆ, ಹಾಗಾಗಿಯೇ ಇಲ್ಲಿ ಹಿಂಸೆ, ಕೆಡುಕು, ಹಾದರ, ಪ್ರೀತಿ, ಅಂಧ ಪ್ರಜ್ಞೆ, ಕ್ರೌರ್ಯಗಳೆಲ್ಲ ಬೆರೆಯದೆ ತನ್ನದೇ ಆದ ಹೊಸ ದೃಷ್ಟಿಕೋನ ದಲ್ಲಿ ಸಾಗುತ್ತಾ, ಸಾಮಾಜಿಕ ಸಾರ್ಥಕತೆಯ ಬಾಳಿಗೆ ಹೆಜ್ಜೆ ಹಾಕುತ್ತವೆ.

ಲಂಕೇಶರ ಕತೆಗಳಲ್ಲಿ ಸಮಾಜವನ್ನು ಆರೋಗ್ಯಕರವಾಗಿ ಇಡದ ಸಂಗತಿಗಳ ಬಗೆಗಿನ ವಿಷಾದ ನೈತಿಕತೆ ಎಲ್ಲೆ ಮೀರಿ ಬಂಡಾಯದ ಮಿತಿಯೊಳಗೆ ವಿಹರಿಸಿದಂತೆ ಗೋಚರಿಸುತ್ತದೆ. ಅಂತರಂಗದಲ್ಲಿಯೇ ಸಾಮಾಜಿಕ ಕಾರ್ಯಕರ್ತನಾಗಿ ಶೋಧಿಸುವ ಇವರ ಚಿಂತನೆಗಳು ಸಮಾಜಿಕ ಸಮಸ್ಯೆಗಳಿಗೆ ಪ್ರತಿರೋಧವನ್ನು ಒಡ್ಡಲೆಂದೆ ತಪ್ಪಸ್ಸು ಮಾಡಿರಬಹುದೆಂಬ ಅನಾಥಪ್ರಜ್ಞೆ ಕಾಡದೆ ಮುಂದೆ ಹೋಗಲಾರದು.

ಬಡತನಕ್ಕೆ "ರೊಟ್ಟಿ ಕತೆ ಈ ಮೊದಲೇ ಹೇಳಿದಂತೆ. ಹೆಣ್ಣಿನ ಅಸಹಾಯಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳದ ಸಮಾಜ, ಹೇಗೆ ಬಡವಿ ಮತ್ತು ಭಿಕ್ಷುಕನ ನಡುವೆ ನಡೆದ ಈ ಘಟನೆ ಈ ಸಮಾಜದಲ್ಲಿ ಬಿಂಬಿತವಾಗಿ ಪ್ರಸ್ತುತ ಸನ್ನಿವೇಶದ ದುಸ್ಥಿತಿಗಳನ್ನು ಪ್ರದರ್ಶಿಸುತ್ತದೆ ಇದಕ್ಕೆ ಪೂರಕವಾಗಿ 'ಉಲ್ಲಂಘನೆ & ಇತರೆ ಕತೆಗಳು" ಎನ್ನುವ ಕತೆಯ ವಸ್ತುವೂ ಕೂಡ ಬಡವರು ಮೇಲಿನ ದೌರ್ಜನ್ಯದ ವಿಷಸಂಗತಿಗಳನ್ನು ಅಭಿವ್ಯಕ್ತಿಸುತ್ತದೆ.

ಲಂಕೇಶರ ದೃಷ್ಟಿಯಲ್ಲಿ ಮಹಿಳಾ ಪ್ರತಿನಿಧೀಕರಣಗಳು ಶೋಷಣೆ, ಸ್ವಾವಲಂಬಿ ನೆಲೆಗಳಲ್ಲಿ ಗುರ್ತಿಸಿಕೊಂಡಿವೆ, ಸಮಾಜದಲ್ಲಿ ಮುಖವಾಡ ಧರಿಸಿ ಬದುಕುವ ಗಟ್ಟಿಧ್ವನಿ ಬಳೆಗಳು ಹಾಗೂ ಮೂಕ ಸಂವೇದನೆಯನ್ನೇ ಜೀವನದ ಧರ್ಮವಾಗಿ ಅನುಭವಿಸುವ ಸಂಪ್ರಾದಾಯ ಸಿಂಧೂರಗಳ ಸಂಘರ್ಷದ ಕುರುಹುಗಳು ಕಾಣಸಿಗುತ್ತವೆ. ಸುಪ್ತಕತೆಯ ರುದ್ರಾಣಿ ಸಾಧಿಸುವ ಛಲಗಾತಿಯಾಗಿ ಕಂಡುಬಂದರೆ, ರೊಟ್ಟಿಕತೆಯಲ್ಲಿನ ಅಜ್ಜಿ ಸಾಮಾಜಿಕ ಮೂಕಳಾಗಿ, ಜಿಗುಟುತನದವಳಾಗಿ, ಮುಟ್ಟಿಸಿಕೊಂಡವಳು ಕತೆಯ ಸಿದ್ಲಿಂಗಿ, ಒಂದು ಬಾಗಿಲು ಕತೆಯ ಚೆನ್ನಮ್ಮನಂತಹ ಸ್ತ್ರೀ ಪಾತ್ರಗಳು, ಸಂವೇದನೆಯ ದನಿಯಾಗಿ ಕೊರಗುತ್ತವೆ. ಇಲ್ಲಿ ಸ್ತ್ರೀ ಲಂಕೇಶರ ದೃಷ್ಟಿಯಲ್ಲಿ ಸ್ವಾತಂತ್ರಳು, ಸಮಾನಳು ಸಾಮಾಜಿಕ ಅಂಗ ಎಂಬುದನ್ನು ಎಲ್ಲೂ ಕುಂದುಂಟಾಗದಂತೆ ನೋಡಿಕೊಂಡಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೇ ಲಂಕೇಶರ ಕಥನಗಳಲ್ಲಿ ಚಲನಶೀಲ ಸಮಾಜದ ಮೌಲ್ಯಗಳು ಪ್ರತಿನಿಧೀಕರಿಸಿಕೊಳ್ಳುತ್ತಾ, ಸಮಕಾಲೀನ ಸಂದರ್ಭದಲ್ಲಿ ಜಾಗೃತ ದನಿಯಾಗಿ ನಿಲ್ಲುತ್ತವೆ ಎಂಬುದನ್ನು ಹಾಗೂ ಸಾಂಸ್ಕೃತಿಕ ಬದುಕಿನ ಶೈಶಾವಸ್ಥೆಯ ಗ್ರಾಮೀಣ ಬದುಕಿನ ಸಂವೇದನಾ

ಶೀಲ ವಿಹಂಗಮ ಚಿತ್ರಣವನ್ನು ನಿರ್ವಹಿಸಿಕೊಳ್ಳುವುದೇ ಆಗಿದೆ.

ಲಂಕೇಶರೆಂದರೇ ಸಮಾಜ, ನವ್ಯರೆಂದರೇ ಲಂಕೇಶರು ಎನ್ನುವ ತೀರ್ಮಾನಕ್ಕೆ ಬಂದು ಬಿಡಬಹುದಾದ ಧೋರಣೆ ಇವರ ಕುಟುಂಬದಲ್ಲಿನ ಜೀವನ. ಪ್ರೀತಿ, ಮತ್ತು ಜೀವನ ವಿಕಾಸದ ಹಾದಿಗಳಲ್ಲಿ ಅಭಿವ್ಯಕ್ತವಾಗುತ್ತದೆ. ಗ್ರಾಮೀಣ ಕುಟುಂಬದ ಜಟಿಲ ಮನಸ್ಸುಗಳಲ್ಲಿಯೇ ಬೆಸುಗೆಯನ್ನು ನಿರೀಕ್ಷಿಸುವ ವಾಸ್ತವ ಮತ್ತು ಸತ್ಯದರ್ಶನಗಳೇ ಕತೆಯ ವಸ್ತುಗಳು. ಆದರ್ಶ ಕುಟುಂಬದ ಪರಿಕಲ್ಪನೆ ಸಾಮೂಹಿಕ ಯಾಜಮಾನ್ಯತೆ, ಸಂಬಂಧಗಳ ಮುಖಾ-ಮುಖಿ ಗ್ರಾಮೀಣ ಮತ್ತು ನಗರ ಸಮಾಜದ ಸಂಸ್ಕೃತಿಗಳ ಮುಖಾ-ಮುಖಿ ಸಂದರ್ಶನ, ವಿಘಟನೆಗೊಳಗಾದ ಕೌಟುಂಬಿಕ ಸಂರಚನೆಗಳು ಹಾಗೂ ಇವುಗಳ ವಿರುದ್ಧ ಮೌಲ್ಯೀಕರಿಸಿದ ಲಂಕೇಶರ ದೃಷ್ಟಿಕೋನ ಕೌಟುಂಬಿಕ ಪರಿಜ್ಞಾನದ ಬಗೆಗಿನ ಬಲವನ್ನು ಔನ್ನತ್ತೀಕರಿಸುತ್ತದೆ.

ಇವರ ವೈವಾಹಿಕ ಸಂಬಂಧದ ಬಗೆಗಿನ ನಿಲುವುಗಳು ಬೇಂದ್ರೆಯವರ ಆದರ್ಶದಷ್ಟೆ ಪ್ರಚಲಿತವಾಗಿದ್ದವೇನೋ ಎನಿಸುತ್ತದೆ. ಧಾಹ, ಮತ್ತಿತರ ಕತೆಗಳು ಗಂಡ-ಹೆಂಡತಿರ ನಡುವಿನ ಸಂಕೀರ್ಣ ಬದುಕಿನ ಅಭಿಲಾಷೆಗಳನ್ನು ಹೊತ್ತುಸಾಗುತ್ತದೆ. ನೋವಿನ ಹಿಂದೆ ಉಲ್ಲಾಸಗಳು, ದುರಂತದ ನೆನಪು-ಆದರ್ಶಕ್ಕೆ ಸ್ಫೂರ್ತಿ ಎಂಬಂತೆ "ನಮ್ಮ ನಡುವಿನ ಹುಡುಗರು" ಕತೆಯಲ್ಲಿ ಗಂಭೀರ ಚರ್ಚೆಯ ಸಾಮಾಜಿಕ ಪ್ರಜ್ಞೆ ಆವರಿಸುತ್ತದೆ ಅದರೊಟ್ಟಿಗೆ ಗಂಡ ಹೆಂಡಿರ ಜಗಳ ಗಂಧ ತೇದಂಗೆ" ಎನ್ನುವ ಉದಾತ್ತತೆಯನ್ನೂ ಆಜ್ಞಾಪಿಸುವ ನಿರುಮ್ಮಳತೆ ಇಲ್ಲಿದೆ. ಸ್ವಾತಂತ್ರ್ಯ ಪೂರ್ವದ ಮೂಲಭೂತ ಸಮಸ್ಯೆಗಳಾಗಿದ್ದಂತಹ, ಬಡತನ, ಅನಕ್ಷರತೆ, ಜಾತಿಯತೆಯಂತಹ ಸಾಮಾಜಿಕ ಪಿಡುಗಗಳ ಧರ್ಮಾಂತತೆಯ ಹರುಹುಗಳು "ನಾನಲ್ಲ" ಕುರುಡು ಕಾಂಚಾಣ ದಂತಹ ಕತೆಗಳು ಎತ್ತಿ ತೋರಿಸುತ್ತದೆ ಸ್ವಾಭಿಮಾನ ಮತ್ತು ಪರಿಶ್ರಮದ ಫಲಗಳು ಹೇಗೆ ನಮ್ಮದಾಗುತ್ತವೆ. ಅದರೊಟ್ಟಿಗೆ ಭ್ರಷ್ಟಾಚಾರದ ಛಾಯೆಯು ಮುಖವಾಡಗಳು ಬಿಚ್ಚಿಕೊಳ್ಳುತ್ತವೆ.

ಪಿ. ಲಂಕೇಶರ -"ಮುಸ್ಸಂಜೆಯ ಕಥಾ ಪ್ರಸಂಗ" : ಒಂದು ತಾತ್ವಿಕ ವಿವೇಚನೆ

ಸಿ.ಜಿ. ರಮೇಶ್
ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಜೇಂದ್ರನಗರ, ಮೈಸೂರು

ಪಿ. ಲಂಕೇಶ್ ಕನ್ನಡ ನವ್ಯ ಸಾಹಿತ್ಯದ ಅದ್ಭುತ ಪ್ರತಿಭೆ. ಗ್ರಾಮೀಣ ಪ್ರದೇಶದ ಹಿನ್ನೆಲೆಯಿಂದ ಬಂದ ಲಂಕೇಶ್ ನಗರ ಸಂಸ್ಕೃತಿಗೆ ತೆರೆದುಕೊಳ್ಳುವಷ್ಟರಲ್ಲಿ ಅಪಾರವಾದ ಅನುಭವವನ್ನು ಸ್ವತಃ ಅನುಭವಿಸಿ ನೋಡಿ ತಿಳಿದವರು.

ವಸಾಹತುಶಾಹಿ ಆಗಮನದ ನಂತರ ಭರತಖಂಡದ ಜನಜೀವನ ಹೇಗೆ ಅದಕ್ಕೆ ಮುಖಾಮುಖಿ ಆಯಿತು ಹಾಗೂ ತಮ್ಮ ಗ್ರಾಮ ಸಮಾಜದ ಸಿದ್ಧಮೌಲ್ಯಗಳು ಕಣ್ಣೆದುರೇ ಹೇಗೆ ಪಲ್ಲಟಗೊಂಡವು ಎಂಬುದನ್ನು ತಾವು ಬರೆದ ತಮ್ಮ ಮೂರು ಕಾದಂಬರಿಗಳಲ್ಲಿ ಸಂಶೋಧಿಸಿದರು. ಸಂಕೀರ್ಣ ಸೂಕ್ಷ್ಮವಾದ ನೈತಿಕತೆಯೊಂದು ತನಗೆ ತಾನೇ ವ್ಯಂಗ್ಯ ಮಾಡಿಕೊಂಡು ಕ್ರಾಂತಿಕಾರಕ ಭೂಳೇತನಗಳನ್ನು ಹೇಗೆ ತಮ್ಮ ವ್ಯಕ್ತಿತ್ವದಲ್ಲಿ ಬಿಡಿಸಿಕೊಂಡಿತೆಂಬ ವಿಷಾದನೀಯ ಕಥೆಯನ್ನು ಕ್ರಮವಾಗಿ ಬಿರುಕು, ಮುಸ್ಸಂಜೆಯ ಕಥಾ ಪ್ರಸಂಗ, ಅಕ್ಕ ಕಾದಂಬರಿಗಳನ್ನು ಬರೆಯುವುದರ ಮೂಲಕ ಕಟ್ಟಿಕೊಟ್ಟರು. ಸ್ವಾತಂತ್ರ್ಯೋತ್ತರ ಭಾರತದ ಕನಸುಗಳು ಆಧುನಿಕತೆಗೆ ಒಗ್ಗಿಕೊಳ್ಳುವ ಭರದಲ್ಲಿ ಛಿದ್ರಗೊಂಡು ಅವಸರದ ಆಮಿಷಗಳಿಗೆ, ಆ ಕ್ಷಣದ ಸುಖಗಳಿಗೆ, ತಮ್ಮನ್ನು ಒಪ್ಪಿಸಿಕೊಳ್ಳುವ ತಲೆಮಾರಿನ ತಲ್ಲಣಗಳನ್ನು, ಅರ್ಥವಿಲ್ಲದ ಯಾಂತ್ರಿಕ ಬದುಕನ್ನು ಈ ಮೂರು ಕಾದಂಬರಿಗಳು ಚಿತ್ರಿಸಿವೆ.

ಬದಲಾದ ಜೀವನದ ಕತೆ ಹೇಗೆ ಗ್ರಾಮ ಭಾರತದ ಪದರುಗಳನ್ನು ತೆರೆದು ತೋರಿಸುತ್ತದೆ ಹಾಗೂ ತನ್ನ ಸಾಚಾತನಗಳಿಂದ ಬಿಡಿಸಿಕೊಳ್ಳಲು ಅವಸರದ ತೀರ್ಮಾನಗಳನ್ನು ತೆಗೆದುಕೊಂಡು ಬಿಡುತ್ತದೆ ಎನ್ನುವ ವ್ಯಕ್ತಿತ್ವಗಳ ಹುಡುಕಾಟವನ್ನು ಈ ಕಾದಂಬರಿಗಳು ಪ್ರಸ್ತುತಪಡಿಸುತ್ತವೆ. ಎಲ್ಲವೂ ಗ್ರಾಮ ಭಾರತದ ಸಾಮಾಜಿಕ ಪರಿಸರದಲ್ಲಿ ನಡೆಯುವುದರಿಂದ ಅದರ ವಿಸ್ತೃತ ಚರ್ಚಾರೂಪವನ್ನು ಈ ಲೇಖನದಲ್ಲಿ ಮಂಡಿಸಲಾಗಿದೆ.

ಲಂಕೇಶರು ನವ್ಯ ಸಾಹಿತ್ಯದಲ್ಲಿ ತುಂಬಾ ವಿಫುಲವಾದ ಸೃಜನ ಕ್ರಿಯೆಯನ್ನ ತೋರಿಸುವುದರ ಮೂಲಕ ಸೃಷ್ಟಿಶೀಲ ಬರಹವನ್ನು ಕನ್ನಡಕ್ಕೆ ಕೊಟ್ಟವರು. ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಅನುವಾದ, ಪತ್ರಿಕೆ, ಬರಹ, ವೈಚಾರಿಕ ಲೇಖನ, ಸಿನಿಮಾ ನಿರ್ದೇಶನ ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಅವರು ಸಮಾಜವನ್ನು ಗ್ರಹಿಸಿದ ರೀತಿ ತುಂಬಾ ತೀಕ್ಷ್ಣವಾದುದು. ತಾವು ಅಂದುಕೊಂಡದ್ದನ್ನು, ಹೇಳಬೇಕಾದ್ದನ್ನು ಯಾವ ಅಂಜಿಕೆಯೂ ಇಲ್ಲದೆ ಅಳುಕದೆ ಮುಜುಗರ ಪಟ್ಟುಕೊಳ್ಳದೆ ನೇರವಾಗಿ ಹೇಳುವ ಜಾಯಮಾನ ಲಂಕೇಶರದ್ದು.

ಸ್ವಾತಂತ್ರ್ಯೋತ್ತರದ ಆನಂತರದಲ್ಲಿ ಆಧುನಿಕತೆ ಉಂಟುಮಾಡಿದ ವಿಚಿತ್ರ ಪರಿಣಾಮಗಳು ನಮ್ಮ ಗ್ರಾಮ ಸಮಾಜದ ಮೇಲೆ ತೀವ್ರತರವಾದ ತಲ್ಲಣಗಳನ್ನು ತಂದವು. ಅದನ್ನು ಲಂಕೇಶರು ಗ್ರಹಿಸಿದ ರೀತಿ ನವ್ಯದ ಮಾದರಿಯಲ್ಲಿದ್ದರೂ ಅದನ್ನು ಅಭಿವ್ಯಕ್ತಿಸಿದ ವಸ್ತು ಸ್ಥಿತಿ ಮಾತ್ರ ನವ್ಯೋತ್ತರದ ಮಾನದಂಡದಂತಿತ್ತು. ಈ ಹಿನ್ನೆಲೆಯಲ್ಲಿ ಅವರ 'ಮುಸ್ಸಂಜೆಯ ಕಥಾಪ್ರಸಂಗ' ಸಾಂದರ್ಭಿಕ ಸತ್ಯವಾಗಿದ್ದು ಅದನ್ನಿಲ್ಲಿ ವಿಮರ್ಶಾತ್ಮಕವಾಗಿ ಕಥಾನಕದ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ.

ಲಂಕೇಶರ ಮುಸ್ಸಂಜೆಯ ಕಥಾ ಪ್ರಸಂಗ: ಲಂಕೇಶ್‌ರವರು 'ಮುಸ್ಸಂಜೆ ಕಥಾ ಪ್ರಸಂಗ' ಕಾದಂಬರಿಯ ಮೂಲಕ ಕಟ್ಟಿಕೊಡುವ ಕಂಬಳ್ಳಿ ಇಡೀ ಭಾರತೀಯ ಗ್ರಾಮ ಸಮಾಜದ ಸಮಷ್ಟಿಪ್ರಜ್ಞೆಯಾಗಿದೆ. ಕಂಬಳ್ಳಿ ಗ್ರಾಮ ಸಮಾಜ ಆಧುನಿಕತೆಯ ನವ ವಸಾಹತುಶಾಹಿತ್ವಕ್ಕೆ ಗುರಿಗೊಳಿಸಿಕೊಂಡು ಬದಲಾವಣೆಗೆ ಸಾಕ್ಷಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಭಾರತದ ಗ್ರಾಮ ಸಮಾಜದ ತಲ್ಲಣಗಳನ್ನು ಕಂಬಳ್ಳಿಯ ವಸ್ತು ಸ್ಥಿತಿಯೊಡನೆ ಕಟ್ಟಿಕೊಡುವ ಲಂಕೇಶರು ಆ ಮೂಲಕ ಕಂಬಳ್ಳಿಯನ್ನು ಆವರಿಸಿರುವ ಜಾತಿ, ವರ್ಗ, ಹಣ, ರಾಜಕೀಯ,

ಅಸೂಯೆ, ದ್ವೇಷ, ಮೋಸ ಮುಂತಾದವುಗಳನ್ನು ಅನಾವರಣಗೊಳಿಸುತ್ತಾರೆ.

ಕಾದಂಬರಿಯ ಪ್ರಾರಂಭದಲ್ಲಿ ಹೇಳಿರುವಂತೆ ವಾಚಕಮಹಾಶಯರಿಗೆ ಆನಂದದಾಯಕವಾಗಬಲ್ಲ ಕಥಾವಸ್ತುಗಳಾದ ಹಣ, ವಿದ್ಯೆ, ಜಾತಿ, ಕುಸ್ತಿ ಮತ್ತು ಪ್ರೇಮವನ್ನು ಕುರಿತ ಈ ವೃತ್ತಾಂತ ನಡೆದದ್ದು ಕಂಬಳ್ಳಿಎಂಬ ಗ್ರಾಮದಲ್ಲಿ. ಕುಂಸಿಯಿಂದ ಐದಾರು ಮೈಲಿ ಈಚೆಗೆ ಶಿವಮೊಗ್ಗದಿಂದ ಹತ್ತಾರು ಮೈಲಿ ಆಚೆಗೆ ಕಾಡಿನ ನಡುವೆ ನಡೆದ ಕೆಲವು ಘಟನೆಗಳು ಮತ್ತು ಕೆಲವು ಬದಲಾವಣೆಗಳು ಆದಷ್ಟು ಸಂಗ್ರಹವಾಗಿ ದಾಖಲೆಗೊಳಿಸುವುದು ಲೇಖಕರ ಉದ್ದೇಶವಾಗಿದೆ. ಮನುಷ್ಯನ ಬದುಕಿನ ಆಸಕ್ತಿ, ವಿಷಯಗಳನ್ನು ಮತ್ತು ಕುತೂಹಲಕರವಾದ ಸಂಗತಿಗಳನ್ನು ಕೇಂದ್ರವಾಗಿರಿಸಿಕೊಂಡಿರುವ ಲಂಕೇಶರು ಗ್ರಾಮದ ಪರಿಸರದಲ್ಲಿ ಉಂಟಾಗುವ ಸಂಘರ್ಷ ಮತ್ತು ಬದಲಾವಣೆಗಳನ್ನು ಸೂಕ್ಷ್ಮವಾದ ಗ್ರಹಿಕೆಗೆ ಒಳಪಡಿಸಿದ್ದಾರೆ.

'ಮುಸ್ಸಂಜೆ ಕಥಾ ಪ್ರಸಂಗ'ಕ್ಕೆ ಒಂದು ಕೇಂದ್ರ ಪಾತ್ರವಿಲ್ಲ. ನಾಯಕ, ನಾಯಕಿಯರ ಸರಳ ಸೂತ್ರವಿಲ್ಲ. ಕಂಬಳ್ಳಿಯ ಸಮಸ್ತ ಜನರ ಬದುಕನ್ನು ಕಥೆಯ ಹಂದರವಾಗಿಸುವ ಪ್ರಯತ್ನವಿದೆ. 'ಅನೇಕ ಜನರಿರುವ ಈ ಹಳ್ಳಿಯನ್ನು ಕೆಲವೇ ಪಾತ್ರಗಳಿಗೆ ಇಳಿಸುವುದಾಗಲೀ, ಕೇಂದ್ರದ ಪಾತ್ರವೆನ್ನಿಸಿಕೊಳ್ಳುವ ಒಬ್ಬ ನಾಯಕ ನಾಯಕಿಯ ಹಂಗಿಗೆ ಒಳಗಾಗಿ ಅವನ ಅಥವಾ ಅವಳ ಸುತ್ತಾ ಮಿಕ್ಕದ್ದನ್ನು ಹೆಣೆಯುವುದಾಗಲೀ ಕಂಬಳ್ಳಿಯ ಒಟ್ಟಾರೆ ಗುಣಕ್ಕೆ ಅನ್ಯಾಯ ಮಾಡೀತು ಎಂಬ ನಂಬಿಕೆಯಿಂದ ಹಲವಾರು ಜನ ಮನುಷ್ಯನ ಕ್ರಿಯೆಗಳನ್ನು ಕ್ರಿಯಾಶಾಲಿಗಳಲ್ಲದ ಮನುಷ್ಯರ ಅನಿಸಿಕೆಗಳನ್ನು ಮುಂದೆ ಕೊಡಲಾಗಿದೆ ಎನ್ನುವ ಲಂಕೇಶರ ಕಥೆಯ ಹರಹು ಇಡೀ ಹಳ್ಳಿಗೆ ವಿಸ್ತರಿಸಿಕೊಂಡಿರುವುದರಿಂದ ಒಂದು ಸೂತ್ರಕ್ಕೆ ತಂದು ಒಟ್ಟಾಗಿ ನಿರೂಪಿಸುವ ಮುಂದಾಲೋಚನೆಯಿಂದ ಪ್ರತಿಯೊಂದು ಅಧ್ಯಾಯಕ್ಕೂ ಉಪಶೀರ್ಷಿಕೆಯನ್ನು ನೀಡಿ, ಕಥೆಯನ್ನು ಒಟ್ಟಂದವಾಗಿ ಗ್ರಹಿಸಲು ಓದುಗರಿಗೆ ನೆರವಾಗುತ್ತಾರೆ ಮಾತ್ರವಲ್ಲ, ಶೀರ್ಷಿಕೆಯ ಮೂಲಕವೇ ಆಯಾ ಪ್ರಕರಣದ ಸ್ವಾರಸ್ಯವನ್ನು ತಿಳಿಸುವ ಲಂಕೇಶರು ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ಅನುಸರಿಸಿರುವ ನಿರೂಪಣಾ ಕ್ರಮಗಳನ್ನು ಅಳವಡಿಸಿಕೊಂಡಿರುವರೇನೋ ಎನ್ನಿಸುತ್ತದೆ.

ಕಾದಂಬರಿಯ ಕೇಂದ್ರ ಬಿಂದುವಾಗಿರುವ ಹಾಗೆ ಬಡ್ಡಿ ರಂಗವ್ವ ಮತ್ತು ಅವಳ ಮಗಳು ಸಾವಂತ್ರಿ ಕಥೆಯ ಮುಖ್ಯ ಪಾತ್ರಗಳಾಗಿದ್ದು, ಮನುಷ್ಯ ಸಹಜ ದೌರ್ಬಲ್ಯವಿರುವ ಸರಳ ಸಾಮಾನ್ಯವಾದ ಗಟ್ಟಿಮುಟ್ಟಾದ ಪಾತ್ರಗಳಾಗಿವೆ. ಪ್ರತಿನಾಯಕನಾಗಿ ನಿಲ್ಲುವ ಮೆಶಿನ್ ಭರ್ಮಣ್ಣ ಮತ್ತು ಅವನ ಸ್ನೇಹಿತರು ಕಾದಂಬರಿ ಬೆಳವಣಿಗೆಗೆ ಸಾಕ್ಷಿಯಾಗಿದ್ದಾರೆ. ಇವರ ನಡುವೆ ಘರ್ಷಣೆ ಉಂಟಾಗುವುದೂ ತೀರಾ ಖಾಸಗಿ ನೆಲೆಯ ಆರ್ಥಿಕ ವ್ಯವಹಾರದಿಂದ; ಪರಸ್ಪರ ಅಸೂಯೆ ಸಣ್ಣತನಗಳಿಂದ, ಆದರೆ ಇದು ಮುಂದೆ ಬೆಳೆದು ಸಾಮಾಜಿಕವಾದ ಅವನತಿಗೆ ಕಾರಣವಾಗುವುದನ್ನು ಕಾಣುತ್ತೇವೆ.

ರಂಗವ್ವ ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು ವಿಧವೆಯಾದವಳು. ಚಿಕ್ಕ ಮಗಳಾದ ಸಾವಂತ್ರಿಯನ್ನು ತನ್ನಂತೆಯೇ ಆತ್ಮವಿಶ್ವಾಸ ಉಳ್ಳವಳಾಗಿ ಬೆಳೆಸುತ್ತಾಳೆ. ತಾನು ಹಾಲು ಮಾರಿ ಸಂಪಾದಿಸಿದ ಹಣವನ್ನು ಚಿಕ್ಕ ಪುಟ್ಟದಾಗಿ ಬಡ್ಡಿ ಸಾಲ ನೀಡುವ ರಂಗವ್ವ ಈ ಮೂಲಕವೇ ಊರಿನಲ್ಲಿ ತನ್ನ ಪ್ರತಿಷ್ಠೆ ಬೆಳೆಸಿಕೊಂಡಿದ್ದಾಳೆ; ಬೆಳೆಸಿಕೊಳ್ಳುತ್ತಾಳೆ. ತನ್ನ ಜಾತಿ ಸಂಬಂಧಿಯಾದ ಭರ್ಮಣ್ಣನ ಸಹಕಾರವನ್ನು ಪಡೆದಿದ್ದಾಳೆ. ಹೀಗಿರುವಾಗ ಭರ್ಮಣ್ಣ ತನಗೆ ಹಣದ ಲೆಕ್ಕದ ವಿಚಾರದಲ್ಲಿ ಮೋಸ ಮಾಡುತ್ತಿರುವನೆಂಬ ಸಂಶಯ ಉಂಟಾದಾಗ ತನ್ನ ಹಣಕಾಸಿನ ವ್ಯವಹಾರದಲ್ಲಿ ಸ್ವತಂತ್ರಳಾಗಲು ಯತ್ನಿಸುತ್ತಾಳೆ. ಇದು ಭರ್ಮಣ್ಣನಿಗೆ ಸಹಿಸದಾಗುತ್ತದೆ.

ರಂಗವ್ವ ಮತ್ತು ಸಾವಂತ್ರಿಯ ಮೇಲೆ ಕಾಮಮಿಶ್ರಿತ ಭಾವನೆಯನ್ನು ಹೊಂದಿದ್ದ ಭರ್ಮಣ್ಣನಿಗೆ ರಂಗವ್ವನ ಆಕಸ್ಮಿಕ ಘರ್ಷಣೆಯಿಂದ ತನ್ನೆಲ್ಲಾ ಕನಸುಗಳು ಭಗ್ನವಾಗಿ ಅವಮಾನ ನಿರಾಶೆಗಳಿಗೆ ಕಾರಣವಾಗುತ್ತದೆ. ಪರಿಣಾಮದಲ್ಲಿ ರಂಗವ್ವನನ್ನು ಎದುರಿಸುವ ಏಕೈಕ ಅಸ್ತ್ರವಾಗಿ ಸಾವಂತ್ರಿ ಮಂಜರ ಪ್ರೇಮ ಸಂಬಂಧವನ್ನು ಇಟ್ಟುಕೊಂಡು ಜಿದ್ದನ್ನು ಸಾಧಿಸುತ್ತಾನೆ. ಇದಕ್ಕೆ ವೀರಶೈವ ಸಮುದಾಯದ ಸಹಕಾರವನ್ನು ಪಡೆದುಕೊಳ್ಳುತ್ತಾನೆ. ಇದರಿಂದ ರಂಗವ್ವ ಕೊಂಚ ಅಧೀರಳಾದರೂ ಅದನ್ನು ತೋರಿಸಿಕೊಳ್ಳದೆ ಆತನನ್ನು ಮೀರಿ ನಿಲ್ಲುತ್ತಾಳೆ. ಹಣವನ್ನು ಕಳೆದುಕೊಂಡ ಭರ್ಮಣ್ಣ ತನಗಾದ ಅವಮಾನಕ್ಕೆ ರಂಗವ್ವನ ಮೇಲೆ ಸೇಡು ತೀರಿಸಿಕೊಳ್ಳಲು ತನ್ನ ಮನೋಧರ್ಮದವರೇ ಆದ ಬೂಸಿ, ರಾಚ, ಶಿವಾಜಿ, ಅಂಜನಿ ಮುಂತಾದವರ ಸಹಕಾರ ಪಡೆಯುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ.

ಪರಸ್ಪರ ಸಂಬಂಧಗಳು ಸರಿಯಾಗಿರುವವರೆಗೂ ಎಡೆತಾಕದ ಮತಧರ್ಮಗಳು ಅನಂತರದಲ್ಲಿ ದ್ವೇಷಸಾಧನೆಯ ಸಾಧನಗಳಾಗಿ ಸೃಷ್ಟಿಯಾಗುತ್ತವೆ. ವೀರಶೈವ ಕೋಮಿಗೆ ಸೇರಿದ ರಂಗವ್ವನ ಮಗಳು ಸಾವಂತ್ರಿ ಬ್ಯಾಡರ ಮಂಜನ ಜೊತೆಗಿನ ಪ್ರೇಮ ಭರ್ಮಣ್ಣ ಮತ್ತು ಸಂಗಡಿಗರಿಗೆ ಧರ್ಮದ್ರೋಹದ ಮಹಾಪರಾಧವಾಗಿ ಕಾಣುತ್ತದೆ. ರಂಗವ್ವನನ್ನು ಆರ್ಥಿಕವಾಗಿ ಮಟ್ಟ ಹಾಕಲು ಇಂತಹ ಸಂದರ್ಭವನ್ನು ಬಳಸಿಕೊಳ್ಳಲು ಹೊಂಚು ಹಾಕುತ್ತಾರೆ.

ಈ ನಡುವೆ ಭರ್ಮಣ್ಣ ರಂಗವ್ವನ ಮನೆಯಿಂದ ಹಣದ ಪೆಟ್ಟಿಗೆ ಕದಿಯಲು ಹನುಮಕ್ಕನ ಮಗನಾದ ಕರಿಯನನ್ನು ಬಳಸಿಕೊಳ್ಳುವನು. ಆದರೆ ಪ್ರಯತ್ನ ವಿಫಲವಾದಾಗ ಅವನನ್ನು ಬೇರೆ ಕೆಲಸಕ್ಕೆ ನೇಮಿಸುವನು. ಕರಿಯ ವನಸ್ಸಿನಲ್ಲಿ ಇನ್ನೂ ಹದಿನೈದು ವರ್ಷಗಳನ್ನು ದಾಟಿರದಿದ್ದರೂ ಅವನು ಕಲಿಯುತ್ತಿದ್ದ ತರಗತಿಗೆ ಅದು ಮೀರಿದ್ದಾಗಿತ್ತು. ಅಲ್ಲದೆ ಭರ್ಮಣ್ಣ ಸೇರಿದಂತೆ ಹಲವರು ಕರಿಯನನ್ನು ವಯಸ್ಸಿಗೂ ಮೀರಿದ ಕೆಲಸಗಳಲ್ಲಿ ಭಾಗಿಯಾಗುವಂತೆ ಸಿದ್ಧಪಡಿಸುತ್ತಾರೆ. ಈ ವ್ಯವಹಾರಕ್ಕೆ ಸಿಗುತ್ತಿದ್ದ ಪುಡಿಗಾಸಿಗಾಗಿ ಕರಿಯ ತನ್ನ ಈ ಓದನ್ನು ಮರೆತು ಅಡ್ಡದಾರಿ ಹಿಡಿದಿದ್ದ. ಒಮ್ಮೆ ಭರ್ಮಣ್ಣ ಕರಿಯನನ್ನು ಕೆಲಸದ ನಿಮ್ಮಿತ್ತ ತಯಾರಿ ಮಾಡುತ್ತಿದ್ದಾಗ ಅಕಸ್ಮಾತ್ ಹನುಮಕ್ಕ ಅಲ್ಲಿ ಪ್ರತ್ಯಕ್ಷವಾಗಿ ಆಡುವ ಮಾತುಗಳು ಕರಿಯನ ಬದುಕಿನ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಅವಳು ಅಂದುಕೊಳ್ಳುವಂತೆ "ತನ್ನ ಮಗನನ್ನು ಎಲ್ಲರೂ ಕೆಡಿಸುತ್ತಿರುವುದಾಗಿಯೂ, ಅವನು ಓದಲಿಕ್ಕೆ ಬರೆಯಲಿಕ್ಕೆ ಕಾಲವಿಲ್ಲದಂತೆ ಎಲ್ಲರೂ ಎಲ್ಲರೂ ಅವನನ್ನು ಕೆಲಸಗಳ ಮೇಲೆ ಕಳಿಸಿ ಹಾಳು ಮಾಡುತ್ತಿರುವುದಾಗಿಯೂ, ಈ ಊರಿನಲ್ಲಿರುವಷ್ಟು ಕೀಳು ಮನಸ್ಸಿನ, ಹಾಳಾಗಿ ಹುಳುಬಿದ್ದು ಕೊಳೆಯುತ್ತಿರುವ ಜನ ಬೇರೆಲ್ಲೂ ಇಲ್ಲವೆಂದೂ ಇಂಥ ಊರಿಗೆ ಮಾರಿ ಬಡಿದಿರುವುದಾಗಿಯೂ ಕೂಗಿ" ಕೊಳ್ಳುವುದು ಸಹಜವೇ ಆಗಿದೆ.

ಅವಳ ಈ ಕೂಗು ಕೇವಲ ಬಜಾರಿಯೊಬ್ಬಳ ಕೂಗಾಗಿರದೆ ಆ ಕೂಗಿನಲ್ಲಿ ಸತ್ಯಾಂಶವಿತ್ತು ಮಾತ್ರವಲ್ಲ, ನೊಂದ ತಾಯಿಯೊಬ್ಬಳ ಅಳಲುಕೂಡಾ ಇದೆ ಎನ್ನುವುದು ಸ್ಪಷ್ಟವಾಗುತ್ತದೆ. ಮತ್ತು ಕರಿಯನ ಬದುಕು ಹಾಳಾಗುತ್ತಿರುವುದರ ಜೊತೆಗೆ ಕೂಲಿನಾಲಿ ಮಾಡಿಕೊಂಡು ಸರಳವಾಗಿ ಇರಬಲ್ಲ ಮಗನಿಗಾಗಿ ಆಶಿಸಿದ್ದ ಆಕೆ ಹೀಗೆ ದೊಡ್ಡವರ ಜೊತೆ ಬಿದ್ದು ಕಾಸು ಮಾಡಿ ಹಾಳಾಗುವ ಕರಿಯನ ಬಗ್ಗೆ ಏನು ಯೋಚಿಸುವುದೆಂದು ಗೊತ್ತಿಲ್ಲದೆ ಮನಸ್ಸಿನ ತುಂಬ ವಿರೋಧಾಭಾಸದ ಭಾವನೆಗಳನ್ನು ತುಂಬಿಕೊಳ್ಳುತ್ತಾಳೆ. ಭರ್ಮಣ್ಣನ ಜಾಣತನವಾಗಲಿ, ಶ್ರೇಷ್ಠಿಯವರ ಸನ್ಯಾಸತ್ವವಾಗಲೀ ಅವಳಿಗೆ ಸಮಾಧಾನ ತರುವ ಹಾಗಿರಲಿಲ್ಲ. ಕರಿಯ ಅವಳಿಗೆ ಸಾಮಾನ್ಯ ಹುಡುಗರ ಥರ ಇಲ್ಲವೆನಿಸಿತ್ತು. ಅವಳೇ ಭಾವಿಸುವಂತೆ "ಆತ ಹುಡುಗರಂತೆ ನಿದ್ರಿಸುತ್ತಿರಲಿಲ್ಲ. ಯಾರೆಂದರವರು ಅವನನ್ನು ಬಳಸಿಕೊಂಡು ಎಸೆಯುತ್ತಿದ್ದ ಹಾಗಿತ್ತು".

ಸಾವಂತ್ರಿಯನ್ನು ಪ್ರೇಮಿಸಿ ಅಪರಾಧಿಯಾಗಿದ್ದ ಮಂಜ ಈ ನಡುವೆ ಶ್ರೇಷ್ಠಿಯ ಮಗನಾದ ಶಿವಲಿಂಗನ ಜೊತೆ ಸೇರಿ ಕಲ್ಲಹಳ್ಳದ ಹತ್ತಿರ ಕಳ್ಳಭಟ್ಟಿ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದ ವಿಷಯ ತಿಳಿದು ಭರ್ಮಣ್ಣ ಮತ್ತು ಅವನ ಸಂಗಡಿಗರು ಪೋಲೀಸ್ ಕಂಪ್ಲೇಂಟ್ ಕೊಡುವ ತಯಾರಿಯಲ್ಲಿ ಅವನ ವ್ಯವಹಾರವನ್ನು ಖುದ್ದಾಗಿ ತಿಳಿಯಲು ಕರಿಯನನ್ನು ನೇಮಿಸುತ್ತಾರೆ. ಈ ನಿಮಿತ್ತ ಕಲ್ಲ ಹಳ್ಳದ ಕಡೆ ಪಯಣ ಬೆಳೆಸುವ ಕರಿಯ ರಾತ್ರಿ ಹೊತ್ತಿನಲ್ಲಿ ಕಲ್ಲು ಹಳ್ಳಕ್ಕೆ ಹೊರಟು ಹುಲಿ ಕಿರುಬಗಳ ಬಾಯೊಳಕ್ಕೆ ಹೋಗಿಬಿಡಬಹುದೆಂದು ಭಯ ಪಡುತ್ತಾನೆ. ಆದರೂ ಸಂದಿಗ್ಧತೆಗೆ ಸಿಕ್ಕಿಕೊಂಡಿರುವ ಕರಿಯ ಬಡವನಾಗಿದ್ದೂ ಭರ್ಮಣ್ಣನಿಂದ ಮಂಜೂರಿ ಪಡೆದುಕೊಂಡು ಇದಕ್ಕೆ ತನ್ನ ತಾಯಿ ಹಸುಮಕ್ಕನ ಸಮ್ಮತಿಯನ್ನು ಪಡೆದುಕೊಳ್ಳುತ್ತಾನೆ. ಹಣ ಮತ್ತು ಹಣದ ಅಭಾವ ಮನುಷ್ಯನನ್ನು ಎಂಥ ಅಸಹಾಯಕ ಸ್ಥಿತಿಗೆ ತರುವುದೆಂಬುದಕ್ಕೆ ಕರಿಯ ಇಲ್ಲಿ ಉದಾಹರಣೆಯಾಗುತ್ತಾನೆ. ಹೀಗೆ ಯಾರೆಂದರೆ ಅವರು ಉಪಯೋಗಿಸಿಕೊಂಡು ಎಸೆಯಲ್ಪಡುತ್ತಿದ್ದ ಕರಿಯ ಒಂದು ರೀತಿಯಲ್ಲಿ ಈ ಸಮಾಜದಲ್ಲಿನ 'ಅನಾಥಪ್ರಜ್ಞೆ'ಯ ಪ್ರತೀಕವಾಗಿದ್ದ. ಕರಿಯನಲ್ಲಿ ಸಂಶಯ ಮತ್ತು ಭಯ ಸದಾ ಮನೆಮಾಡಿಕೊಂಡಿದ್ದು, ಜನರೊಂದಿಗೆ ವ್ಯವಹರಿಸುವಾಗಲೆಲ್ಲಾ ಸಣ್ಣಗೆ ಬೆವರುವ ಅನುಭವವಾಗುತ್ತದೆ. ಇವೆಲ್ಲವುಗಳನ್ನು ಮರೆಯಲೋ ಎಂಬಂತೆ ಚಿಕ್ಕವಯಸ್ಸಿಗೆ ಕುಡುಕನಾಗಿ ತನ್ನ ಬಾಲ್ಯದ ಸುಂದರ ಭವಿಷ್ಯವನ್ನು ನುಚ್ಚುನೂರುಗೊಳಿಸಿಕೊಳ್ಳುತ್ತಾನೆ.

ಕರಿಯನಂತೆಯೇ ಕಾದಂಬರಿಯ ವಿಶಿಷ್ಟ ಪಾತ್ರವೆಂದರೆ ಗಿಡ್ಡ, ಮೇಷ್ಟ್ರು, ಸಣ್ಣೀರಪ್ಪ. ಊರಿನ ಎಲ್ಲಾ ಉಸ್ತುವಾರಿ, ಗೂಢಾಚಾರಿ ಕೆಲಸದ ಈತ ರಂಗವ್ವನಿಗೆ ಭಯ ಹುಟ್ಟಿಸಿ ಮಸ್ಕ ಹೊಡೆದು ಸಾಲ ಪಡೆಯಲು ಯತ್ನಿಸುವನು. ಬಾಳೆಹಣ್ಣು ಲಂಚಕೊಟ್ಟು ಕಾಸು ತೆಗೆದುಕೊಳ್ಳದ ಆರೋಪದಿಂದ ಮುಕ್ತನಾಗುತ್ತಿದ್ದ ಈತ ಸ್ಕೂಲಿನ ಬಾಳೆಗೊನೆಯನ್ನು ಒತ್ತೆ ಇಡುವುದರಿಂದ ಹಿಡಿದು, ವರದಕ್ಷಿಣೆ, ದಲ್ಲಾಳಿ, ಓಸೀ ಕಂಪೆನಿ ಷೇರು ಹೀಗೆ ದೇಶದ ರಾಜಕೀಯವನೆಲ್ಲಾ ರಹಸ್ಯವಾಗಿ ನಡೆಸುವ ಸ್ಥಳ ಗುತ್ಯಪ್ಪನ ಮನೆಯಲ್ಲಿ ಸಾಗುತ್ತದೆ.

ಕಂಬಳ್ಳಿಯ ಅವರಿವರಿಗೆ ಕಾಗದ ಪತ್ರಗಳನ್ನು ಬರೆದುಕೊಡುತ್ತಿದ್ದ ಮೇಷ್ಟ್ರು ತನ್ನ ವಿದ್ಯೆ ಮತ್ತು ಪಟ್ಟಣದ 'ಜ್ಞಾನವನ್ನು 'ಓಸೀ' ಕಂಪನಿ ಷೇರು ಹಾಗೂ ಜೂಜಿನ ರೂಪಗಳಾಗಿ ಹಂಚಿ ಕಂಬಳ್ಳಿಯ ಜನರನ್ನು 'ನಾಗರೀಕತೆ'ಯ ಕಡೆ ಒಯ್ಯುತ್ತಿದ್ದ. ವಿದ್ಯೆಯು ಸೃಷ್ಟಿಸಿದ ವಿಕೃತ ರೂಪದಂತಿದ್ದ ಈತ ತನ್ನ ಹಿತಾಸಕ್ತಿಗೋಸ್ಕರ ಏನೂ ಅರಿಯದ ನಂಜ್ಯಪ್ಪನ ಮಗಳಾದ ಶಿವಿ ದತ್ತಣ್ಣನ ಮದುವೆಯಾಗಲು ತೆರಳಿ ಮಾರ್ಗಮಧ್ಯೆಯಲ್ಲಿ ಕಾಯಿಲೆಯಿಂದ ವಾಂತಿ ಮಾಡಿಕೊಂಡು ಸತ್ತಾಗ ಅವಳ ಬಗ್ಗೆ ಕೆಟ್ಟದಾಗಿ ಅಪಪ್ರಚಾರ ಮಾಡಿ ತನ್ನ ನೀಚತನವನ್ನು ಪ್ರದರ್ಶಿಸುತ್ತಾನೆ. ಅಷ್ಟಲ್ಲದೆ ಊರಿನಲ್ಲಿ ದಿನಕಳೆದಂತೆ ತನ್ನ ವರ್ಚಸ್ಸನ್ನು ಕಳೆದುಕೊಂಡು ವೃತ್ತಿಯನ್ನು ಕಳೆದುಕೊಳ್ಳುತ್ತಾನೆ. ಸಣ್ಣೀರಪ್ಪ ತಾನು ಮೇಷ್ಟ್ರಾಗಿ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳು ಮಾಡುತ್ತಿರುವುದಷ್ಟೇ ಅಲ್ಲದೆ ಕಂಬಳ್ಳಿಯ ಅಧಃಪತನಕ್ಕೂ ಕಾರಣವಾಗುತ್ತಾನೆ. ಇಂತಹ ವಿಶಿಷ್ಟ ಬಗೆಯ ಪಾತ್ರವನ್ನು ಸೃಷ್ಟಿಸುವ ಮೂಲಕ ಲಂಕೇಶರು ಇಂತಹವರ ವಿಚಾರದಲ್ಲಿ ಸಮಾಜ ಹೊಂದಬೇಕಾದ ಎಚ್ಚರಿಕೆಯನ್ನು ಪರೋಕ್ಷವಾಗಿ ಸೂಚಿಸುತ್ತಾರೆ.

ಸಾವಂತ್ರಿ ಮಂಜರ ಪ್ರೇಮ ಸಂಬಂಧ ಮುಂದುವರೆಯುತ್ತಿರುವುದನ್ನು ಸಹಿಸದ ಭರ್ಮಣ್ಣ ಹಾಗೂ ಸಂಗಡಿಗರಲ್ಲಿ ಅಸೂಯೆ ಪ್ರಬಲವಾಗಿ, ಸಾವಂತ್ರಿಯ ಶೀಲವನ್ನು ಕೆಡಿಸುವ ಸಾಹಸಕ್ಕೆ ಮುಂದಾಗುತ್ತಾನೆ. ಪ್ರಯತ್ನ ವಿಫಲವಾಗಿ ಹಿಂದಿರುಗಿ ಬರುವಷ್ಟರಲ್ಲಿ ಪೈಲ್ವಾನ್ ಶಿವಾಜಿ ಭರ್ಮಣ್ಣನ ಕಿರಿಯ ಹೆಂಡತಿ ರಾಮಿಯನ್ನೇ ಹಾರಿಸಿಕೊಂಡು ಹೋಗಿರುತ್ತಾನೆ. ಇಬ್ಬರು ಹೆಂಡಿರನ್ನು ಕಟ್ಟಿಕೊಂಡಿದ್ದ ಭರ್ಮಣ್ಣ ಅವರಿಗೆ ಸುಖ ಕೊಡಲಾಗದೆ ಇದ್ದದ್ದೂ, ಹಾಗೆಂಥೇ ಚಿಕ್ಕವಯಸ್ಸಿನವಳಾದ ರಾಮಿಯನ್ನು ಮದುವೆ ಮಾಡಿಕೊಂಡಿದ್ದು ಪ್ರಮುಖ ಕಾರಣವಾಗಿ ಕಾಣುತ್ತಾರೆ. ಇಷ್ಟಾದರೂ ಅರಿತುಕೊಳ್ಳದ ಭರ್ಮಣ್ಣ ತನ್ನ ಭ್ರಷ್ಟತನಗಳನ್ನು ಮುಂದುವರೆಸುತ್ತಾನೆ. ರಂಗವ್ವಳಿಗೆ ಅಪಮಾನ ಮಾಡುವುದಕ್ಕಾಗಿಯೇ ಮಠದ ಸ್ವಾಮಿಗಳನ್ನು ಕರೆಸಲು ಯೋಜನೆ ರೂಪಿಸುತ್ತಾನೆ. ಹೀಗಿರುವಾಗಲು ಸಾವಂತ್ರಿ ಮಂಜರ ಪ್ರೇಮ ತಾರಕ ಮುಟ್ಟಿದಾಗ ಅದನ್ನು ವಿಫಲಗೊಳಿಸುವ ಕೊನೆಯ ಪ್ರಯತ್ನವಾಗಿ ರಂಗವ್ವನ ತಮ್ಮನಾದ ಶಿವನಂಜನನ್ನು ಕರೆಸಿ, ಅವನಿಗೆ ತಲೆಕೆಡಿಸಿ ಅವನನ್ನು ಉದ್ರೇಕಕ್ಕೆ ಒಳಗಾಗಿಸಿ, ರಾಜ, ಬೂಸ, ಶಿವಾಜಿ, ಅಂಜನಿ ಜೊತೆಗೂಡಿ ತೋಪಿನ ಹತ್ತಿರ ಪ್ರೇಮದಲ್ಲಿ ತೊಡಗಿದ್ದ ಸಾವಂತ್ರಿ ಮಂಜರನ್ನು ತೀವ್ರವಾಗಿ ಹಿಂಸಿಸುವ ಮೂಲಕ ತನ್ನ ಅಸೂಯೆಯ ಪರಮಾವಧಿಯನ್ನು ಮೆರೆಯುತ್ತಾನೆ. ಇದೆಲ್ಲವನ್ನು ಸಮಾಧಾನದಿಂದಲೇ ಸ್ವೀಕರಿಸುವ ರಂಗವ್ವ ತನ್ನ ತಾಳ್ಮೆಯನ್ನು ಕಳೆದುಕೊಂಡು ಇಡೀ ಸಮಾಜಕ್ಕೆ ಮಾದರಿಯಾಗುವ ರೀತಿಯಲ್ಲಿ ಸಾವಂತ್ರಿ ಮಂಜರನ್ನು ಮದುವೆ ಮಾಡಿಸುತ್ತಾಳೆ.

ಭರ್ಮಣ್ಣ ಹಾಗೂ ಅವನ ಸಮೂಹ ತಾವೇನೋ ಸಾಧಿಸಿದ್ದೇವೆ ಎಂದು ಮಂಜ ಹಾಗೂ ಸಾವಂತ್ರಿಯ ಗಾಡಿಯನ್ನು ಹಿಡಿದು ತರಲು, ರಂಗವ್ವ ತನ್ನ ಕೈಯಲ್ಲಿನ ಕುಡುಗೋಲನ್ನು ಸುತ್ತಣ ಜನಕ್ಕೆ ಎತ್ತಿ ತೋರಿಸುತ್ತಾ, ಕ್ರೂರ ಧ್ವನಿಯಲ್ಲಿ ಭರ್ಮಣ್ಣನ ಸಮೂಹಕ್ಕೆ ಶಾಪ ಹಾಕುತ್ತಾಳೆ. ಮಂಜ ಮತ್ತು ಸಾವಂತ್ರಿಯನ್ನು ಎಳೆಗಂಬಗಳನ್ನು ಹಿಡಿದಂತೆ ಹಿಡಿದು ಗಾಡಿಯಿಂದ ಕೆಳಕ್ಕೆ ತಂದಾಗ ಕ್ಷಣ ಮಾತ್ರದಲ್ಲಿ ಆಗುತ್ತಿದ್ದ ಈ ವಿಷಯ ನೋಡಿದ ಕೆಲವರಿಗೆ ರಂಗವ್ವ ಅವರಿಬ್ಬರನ್ನು ಕೊಚ್ಚಿ ಹಾಕುವುದಾಗಿ ಕಾಣಿಸುತ್ತದೆ. ಆದರೆ ರಂಗವ್ವ ಅವರಿಬ್ಬರನ್ನು ಗಾಡಿಯಿಂದ ಕೆಳಕ್ಕೆ ಎಳೆತಂದು ತನ್ನ ಸೊಂಟದಲ್ಲಿದ್ದ ತಾಳಿಸರವನ್ನು ಕೈಗೆ ಮಗುಚಿಹಾಕಿಕೊಂಡು ಮಂಜನಿಗೆ ಕೊಟ್ಟು ಅದನ್ನು ಸಾವಂತ್ರಿಯ ಕೊರಳಿಗೆ ಕಟ್ಟಲು ಹೇಳುತ್ತಾಳೆ. ಚಳಿಯಾದವನಂತೆ ಅತ್ಯಂತ

ಭಯಗ್ರಸ್ಥನಾಗಿ ನಡುಗುತ್ತಿದ್ದ ಮಂಜ ಅದನ್ನು ಹೇಗೋ ಕಟ್ಟುವುದನ್ನು ಕಾಣುತ್ತೇವೆ. ತಮ್ಮಿಬ್ಬರನ್ನು ಕೊಂದು ಹಾಕುವುದಕ್ಕಾಗಿಯೇ ಮಾಡುತ್ತಿರಬಹುದು ಅಂದುಕೊಳ್ಳುತ್ತಾನೆ. ಮಂಜನಿಗೆ ಇನ್ನೇನು ಸಾವು ಹತ್ತಿರವಾಯಿತೆಂದೇ ಅನ್ನಿಸುತ್ತದೆ. ಆದರೆ ರಂಗವ್ವ ಉಡುಪನತ್ತ ತಿರುಗಿ, "ಏನೋರೆ ಮಂತ್ರಹೇಳಿ ಮದ್ವೆ ಮಾಡಿಕೊಡ್ರಿ – ಈ ಬಾಡ್ಯಾ ಭರ್ಮಣ್ಣನ ಮನಿಗೆ ಬೆಂಕಿ ಹಾಕ್ತನಿ" ಎಂದು ಕೂಗಿದಾಗ ಏನೇನೋ ಭಾವಿಸಿಕೊಂಡಿದ್ದ ಅಲ್ಲಿ ನೆರೆದಿದ್ದ ಸಮೂಹಕ್ಕೆ ಏನೂ ಆಗದೆ ಹೋಗಿ ಒಂದು ವಿಚಿತ್ರವಾದ ತಿರುವು ಪಡೆದುಕೊಳ್ಳುವ ಮೂಲಕ ಸಾಮಾಜಿಕವಾಗಿ ಹೊಸದೊಂದು ಸಂಸ್ಕೃತಿ ಸಂಕರಕ್ಕೆ ನಾಂದಿಯಾಗುವುದನ್ನು ಕಾಣುತ್ತೇವೆ.

"ಇಲ್ಲಿಯ ಇನ್ನೊಂದು ವಿಶೇಷತೆಯೆಂದರೆ ಕನ್ನಡ ಕಾದಂಬರಿಯ ಇತರ ಶ್ರೇಷ್ಠ ಪಾತ್ರಗಳಲ್ಲಿರುವಂತೆ ಅವಳಲ್ಲಿಯೂ ಅತ್ಯಂತ ತೀವ್ರವಾಗಿರುವುದು ಬದುಕಬೇಕೆನ್ನುವ ಪ್ರವೃತ್ತಿ. ಲಂಕೇಶರ ಈವರೆಗಿನ ಸಾಹಿತ್ಯದಲ್ಲಿಯೂ ಇದು ಒಂದು ಹೊಸ ಸಾಧ್ಯತೆಯನ್ನು ತೋರಿಸುತ್ತದೆ. ಬದುಕಿನ ಬಗ್ಗೆ ಇತ್ಯಾತ್ಮಕವಾದ ಸಮರ್ಥನೆ ಮತ್ತು ಅವರು ಇಟ್ಟ ಹೆಜ್ಜೆ ಇದಾಗಿದೆ" ಎನ್ನುವ ರಾಜೇಂದ್ರ ಚೆನ್ನಿಯವರು ಲಂಕೇಶರ ವೈಚಾರಿಕ ನಿಲುವಿನ ವಿಶಿಷ್ಟತೆಯನ್ನು ಎತ್ತಿತೋರಿಸಿರುವುದನ್ನು ಕಾಣುತ್ತೇವೆ.

ಕಂಬಳ್ಳಿಯನ್ನು ಆವರಿಸಿಕೊಂಡಿರುವ ದಟ್ಟವಾದ ಹಿಂಸೆಯ ನಡುವೆಯೂ ಅಧಿಕವಾಗಿ ಬದುಕನ್ನು ಪ್ರೀತಿಸುವ ರಂಗವ್ವ ಸಾವಂತ್ರಿಯರ ಹಾಗೆ ಇನ್ನೂ ಕೆಲವರನ್ನು ನಾವಿಲ್ಲಿ ಕಾಣಬಹುದು. ಬಡವನಾದ ನಂದಪ್ಪ ರಂಗವ್ವನ ನೆರೆಮನೆಯವನಾಗಿದ್ದು ಇಡೀ ಕಂಬಳ್ಳಿಯಲ್ಲಿ ಪ್ರಾಮಾಣಿಕವಾಗಿ ವ್ಯಕ್ತಿತ್ವವುಳ್ಳವನಾಗಿದ್ದಾನೆ. ಶ್ರೇಷ್ಠಿಯವರ ಜಮೀನನ್ನು ಗೇಣಿಗೆ ಮಾಡುತ್ತಿರುವ ಈತ ಯಾರೇ ಕೊಡಲಿ ಬಿಡಲಿ ಕಾಲಕಾಲಕ್ಕೆ ತಮ್ಮ ಪಾಲಿನ ಗೇಣಿಯನ್ನು ಭೂಮಿಯ ಒಡೆಯರಾದ ಶ್ರೇಷ್ಟಿಯವರಿಗೆ ತಲುಪಿಸಿ ಉಳಿದಿದ್ದರಲ್ಲೇ ತಣ್ಣಗೆ ಜೀವನ ಸಾಗಿಸುತ್ತಿದ್ದಾನೆ. ಬೆಳೆಬಾರದ ಅಸಹಾಯಕತೆ, ಮದುವೆಯ ವಯಸ್ಸಿಗೆ ಬಂದ ಮಗಳಾದ ಶಿವಿ ತೀರಿಕೊಂಡಾಗ, ಅವಳ ಶೀಲದದ ಬಗ್ಗೆ ಸಣ್ಣೀರಪ್ಪ ಅಪಪ್ರಚಾರ ಮಾಡಿದಾಗ ಅದನ್ನು ಮೌನವಾಗಿ ಸಹಿಸಿಕೊಳ್ಳುತ್ತಾನೆ. ಊರಿನ ಉಸಾಬರಿಗೆ ಹೋಗದೆ ತನ್ನಷ್ಟಕ್ಕೆ ತಾನು ಬದುಕುವ ನಂದ್ಯಪ್ಪನನ್ನು ಕಂಡರೆ ಭರ್ಮಣ್ಣ ಸಂಗಡಿಗರಿಗೆ ಅಸೂಯೆ. ಸಜ್ಜನರ ಬದುಕು ಹಳ್ಳಿಯಲ್ಲೇ ದುಸ್ಸಾಧ್ಯ ಎಂಬುದಕ್ಕೆ ಇದು ಒಂದು ಉದಾಹರಣೆಯಾಗುತ್ತದೆ..

ಕಾದಂಬರಿಯಲ್ಲಿ ವ್ಯಕ್ತವಾಗಿರುವಂತೆ "ಶ್ರೇಷ್ಟಿ ಕಂಬಳ್ಳಿಯ ದೊಡ್ಡ ಜಮೀನ್ದಾರರು; ಅವರದು ಪ್ರತಿಷ್ಠಿತ ಮನೆತನ; ತನ್ನ ಪ್ರತಿಷ್ಠೆಯ ಭಾರದಲ್ಲೇ ಕುಸಿಯತೊಡಗಿದ ಮನೆತನ. ಅವರ ಜಮೀನನ್ನು ಗೇಣಿ ಮಾಡುತ್ತಿದ್ದ ಕೆಳಜಾತಿಯವರು ಕ್ರಮೇಣ ಅವರಿಗೆ ಗೇಣಿ ನೀಡಲು ತಪ್ಪಿಸತೊಡಗುತ್ತಾರೆ. ಮಗಳು ದೇವಿ, ಅಸ್ಪೃಶ್ಯ ಹುಡುಗನೊಂದಿಗೆ ಓಡಿಹೋಗುತ್ತಾಳೆ. ಮಗ ಶಿವಲಿಂಗ ಮನೆ ಸೇರದೆ ಅಪನನ್ನು ಧಿಕ್ಕರಿಸಿ ಅರಾಜಕವಾದಿಯಾಗಿದ್ದಾನೆ. ಸುಖವನ್ನೇ ಅರಸುತ್ತಿದ್ದ ತಮ್ಮ ಸೂಳೆಮನೆಯಲ್ಲೇ ಕೊಲೆಯಾಗಿದ್ದಾನೆ. ಇದೆಲ್ಲವನ್ನು ಕಣ್ಣಾರೆ ಕಂಡು ಕುಪಿತರಾಗಿರುವ ಶ್ರೇಷ್ಠಿಗಳು ತಮ್ಮ ಮನೆಯ ವೈಭವದ ಪರಂಪರೆ ಕನಸಾಗಿ ಮನೆಯ ಮೇಲೆ ದುರಂತದ ನೆರಳು ಹಚ್ಚಿ ಅಪಾರವಾದ ನೋವನ್ನು ಅನುಭವಿಸಿದ್ದರು. ತಮ್ಮ ಮಗ ಮತ್ತು ಮಗಳು ಹಾಳಾದದ್ದು ಹಣ ತಂದ ಧಿಮಾಕಿನಿಂದ ಎಂಬ ಸತ್ಯವನ್ನು ಅರಿತಿರುವ ಶ್ರೇಷ್ಠಿಗಳುಹಣ ಸಂಪತ್ತುಗಳಿಂದ ಬೇರ್ಪಟ್ಟು ವಿಮೋಚನೆಯ ಕಡೆ ಮುಖಮಾಡಿದ್ದಾರೆ" ಎನ್ನುವ ಸಾಲುಗಳು ಶ್ರೇಷ್ಠಿಯವರ ಕೌಟುಂಬಿಕ ಬದುಕನ್ನು ಕಟ್ಟಿಕೊಡುತ್ತದೆ. ಈ ನಡುವೆ ಬಾಲ್ಯ ಸ್ನೇಹಿತರಾದ ಶಾಸ್ತ್ರಿ ಮನೆಗೆ ಬಂದಾಗ ತನ್ನ ಜೀವಿತದ ನೋವುಗಳನ್ನು ತೆರೆದುಕೊಳ್ಳುವುದನ್ನು ಕಾಣುತ್ತೇವೆ. ಆಗ ಸೂಕ್ಷ್ಮಮತಿಯಾದ ಶಾಸ್ತ್ರಿಗಳು ಶ್ರೇಷ್ಠಿಯವರನ್ನು ಅರ್ಥ ಸಮಾಧಾನಗೊಳಿಸುತ್ತಾ ಅರ್ಥ ಹೀಯಾಳಿಸುತ್ತಾ ಹೇಳುವ ಮಾತುಗಳು ಅರ್ಥಪೂರ್ಣವಾಗಿವೆ. "ದೇವರು ಯಾರನ್ನು ಕುರಿತು ಉದಾರವಾಗಿಲ್ಲವೋ ಅವರಿಗೆ ಮಾತ್ರ ನನ್ನ ಕಣಿಯಿಂದ ಉಪಯೋಗ ನಿನಗ್ಯಾಕಯ್ಯ" "ನೋಡು ಭವಿಷ್ಯ ಹೇಳೋದು ಬಿಡೋದು ಒತ್ತಟ್ಟಿಗಿರಲಿ. ನನ್ನ ಯಾವುದೇ ಶಕ್ತಿಯಿಂದ ಹೊರಗೆ ಸಾಮಾಜಿಕ ಶಕ್ತಿಗಳಿವೆ ಅನ್ನೋದನ್ನ ನಾವು ಯಾರೂ ಮರೀಬಾರದು. ನಿನಗಿಂತ ದೇಶ ಸುತ್ತಿರೋನು ನಾನು, ಅದಕ್ಕೇ ಹೇಳ್ತಿದ್ದೇನೆ ಸುಖ, ಸಂಪತ್ತು ನಮ್ಮ ಬೇರನ್ನು ಅಲುಗಿಸಿ ಅನಾಥರನ್ನಾಗಿ ಮಾಡೋ ಹಾಗೆ ಯಾವುದೂ ಮಾಡೋಲ್ಲ, ಜನರನ್ನು ತೊರೆದ ಮನುಷ್ಯ ಉಳಿಯೋಲ್ಲ; ಅವನ ಸಂಪತ್ತು ಅವನನ್ನ ಉಳಿಸೋಲ್ಲ" "ಬದುಕಿನಿಂದ ತಗೊಳ್ಳೋದನ್ನ ಮಾತ್ರ ಮಾಡ್ತಾ ಹೋದರೆ, ಬದುಕು ನಮ್ಮಿಂದಾನೂ ತಗೊಳ್ಳುತ್ತೆ" ಚರಿತ್ರೇನ ಮನುಷ್ಯ ಕೊಂಚ ಮಾತ್ರ ತಿದ್ದಬಹುದು– ಆದರೆ ಅದರ ಒಟ್ಟಾರೆ ಆಘಾತದಿಂದ ತಪ್ಪಿಸಿಕೊಳ್ಳಕಾಗಲ್ಲ, ಅದು ಏನು ಮಾಡಬೇಕೋ ಅದನ್ನ ಮಾಡೇ ಮಾಡುತ್ತೇ" ಎನ್ನುವ ಶಾಸ್ತ್ರಿಗಳು ಶ್ರೇಷ್ಠಿ ಬದುಕಿನಲ್ಲಿ ಅನುಸರಿಸಿದ ಜೀವಿತ ಕ್ರಮವನ್ನು ಸೂಕ್ಷ್ಮವಾಗಿ ಬಿಚ್ಚಿಡುತ್ತಾನೆ. ಹಾಗೆಯೇ ಜಾತಿವಿರೋಧಿಯಾದ ಶ್ರೇಷ್ಠಿಯವರಿಗೆ ಚುಚ್ಚುವಂತೆ "ಲಿಂಗಾಯಿತ್ರೇನು ಮಾದಿಗ್ರೇನು ಎಲ್ಲ ಒಂದೇ ಈ ಜಗತ್ತಿನಲ್ಲಿ ಬದುಕೋದು ಮುಖ್ಯ" ಎನ್ನುವ ಮೂಲಕ ಮನುಷ್ಯ ಕುಲವನ್ನೇ ಒಂದೇ ಎಂಬ ವಾದವನ್ನು ತಿಳಿಸುತ್ತಾರೆ. ಇದರಿಂದ ಮನನೊಂದ ಶ್ರೇಷ್ಠಿಗಳು ಮೌನವಾಗಿ ಜೀವಿಸಲು ತೊಡಗುತ್ತಾರೆ. ಇದನ್ನು ಕಂಡ ಊರಿನ ಜನರು ಶ್ರೇಷ್ಠಿಯವರಿಗೆ ಹುಚ್ಚು ಹಿಡಿದಿದೆ ಎಂದು ಮಾತನಾಡಿಕೊಳ್ಳುತ್ತಾರೆ. ಇದನ್ನು ಮೌನವಾಗಿ ಸ್ವೀಕರಿಸಿದ ಶ್ರೇಷ್ಠಿಗಳು ಚಂಚಲಗೊಳ್ಳದೆ ತಾವಂದುಕೊಂಡಂತೆ ಬದುಕನ್ನು ಸಾಗಿಸುತ್ತಾರೆ. ಆದರೆ ಶ್ರೇಷ್ಠಿಯವರ ಅಂತರಾಳದಲ್ಲಿ ಹಳೆಯ ಹಳ್ಳಿ ವಿನಾಶವಾಗುತ್ತಿರುವುದಕ್ಕೆ ಅಪಾರವಾದ ನೋವು ಎದ್ದು ಕಾಣುತ್ತದೆ. ಈ ರೀತಿಯ ಆಲೋಚನೆಗಳನ್ನು ಲಂಕೇಶರ 'ಒಬ್ಬರು'ಕತೆಯ ಮಂಜಣ್ಣನಲ್ಲಿ ಕಾನಬಹುದಾಗಿದೆ. ಶ್ರೇಷ್ಠಿ ಮತ್ತು ಮಂಜಣ್ಣನಲ್ಲಿ ವಿಕಾತ್ಮಕತೆ ಇದೆ. ತಮ್ಮ ಮಕ್ಕಳನ್ನು ಅರ್ಥಮಾಡಿಕೊಳ್ಳಲಾಗದ ಈ ಇಬ್ಬರೂ ಹೊಸ ಜಗತ್ತಿನ ಯಶಸ್ಸಿನ ದಾರಿಗಳನ್ನು ಅರಿತವರಾಗಿಲ್ಲ. ಅಥವಾ ಅರಿತವರಾಗಿದ್ದರೂ ಅವುಗಳ ಬಗ್ಗೆ ತಿರಸ್ಕಾರವುಳ್ಳವರಾಗಿದ್ದಾರೆ. ಈ ನೆಲೆಯಲ್ಲಿ ಲಂಕೇಶರ ಕಥೆ ಕಾದಂಬರಿಗಳನ್ನು ಅಮೂಲಾಗ್ರವಾಗಿ ನೋಡಿದ್ದೇ ಆದಲ್ಲಿ ಎರಡು ತಲೆಮಾರುಗಳ ಘರ್ಷಣೆಯನ್ನು ಆರಂಭದ ಕಥೆಗಳಿಂದ ಮುಸ್ಸಂಜೆಯ ಕಥಾ ಪ್ರಸಂಗದವರೆಗೂ ಮುಂದುವರೆಸಿರುವ ಸೂಕ್ಷ್ಮತೆ ಸ್ಪಷ್ಟವಾಗುತ್ತದೆ.

ಕಾದಂಬರಿಯ ಕೊನೆಗೆ ಏರ್ಪಡುವ ಕುಸ್ತಿ ಕಂಬಳ್ಳಿಯ ಕ್ರೌರ್ಯತನದ ಅಂತ್ಯವನ್ನು ಮನಗಾಣಿಸುತ್ತದೆ. "ಪ್ರೀತಿಯಾಗಲಿ, ವಿಶ್ವಾಸವಾಗಲಿ ಅಪರೂಪವಾಗುತ್ತಿರುವ ಈ ಊರು ನಾಶವಾಗುತ್ತಿದೆ. ಇದರ

ಧರ್ಮವಾಗಲಿ, ಜಾತಿಗಳಾಗಲಿ ಇದನ್ನು ಉಳಿಸುವುದಿಲ್ಲ. ನಾನು ಮಾತ್ರ ನನ್ನೆಲ್ಲ ಜಮೀನನ್ನು ಅದರ ನಿಜವಾದ ವಾರಸುದಾರರಾದ ಹರಿಜನರಿಗೆ ಬರೆದುಕೊಟ್ಟಿದ್ದೇನೆ. ಇದರಿಂದ ಮಹಾಕಾರ್ಯ ಮಾಡಿದ ಹೆಮ್ಮೆ ನನಗಿಲ್ಲ. ನನ್ನ ಜಮೀನಿನಿಂದ ಈ ಊರ ಪಾಪವೇ ಹೆಚ್ಚಾಗುವ ಸಂಭವವೂ ಇದೆ. ಅದೇನಾದರೂ ಇರಲಿ. ನಾನು ದಾನ ಮಾಡಿದೆನೆಂದು ಹೆಮ್ಮೆಯಿಂದ ಬೀಗುವ ಆಸೆ ನನಗೆ ಇಲ್ಲವಾದ ಪ್ರಯುಕ್ತ ನೀನು ಇಲ್ಲವಾದ ತರುವಾಯ ಯಾರಾದರೂ ನನ್ನ ಪತ್ರಗಳೊಂದಿಗೆ ಈ ಜಮೀನು ಪತ್ರವನ್ನು ಪಡೆಯಬಹುದು. ನಾನು ಬಲ್ಲ ವೇದಾ ಒಳ್ಳೆಯ ಹುಡುಗಿ ನೀನು ಎಂಬ ಕಾರಣಕ್ಕೆ ಈ ಕಾಗದ ನಂದ್ಯಪ್ಪನ ಒಳ್ಳೆಯತನವಾಗಲಿ, ಮೇಷ್ಟ್ರ ಜಾಣತನವಾಗಲಿ ನನಗೆ ಹಿಡಿಸುವುದಿಲ್ಲ" ಎನ್ನುವ ಶ್ರೇಷ್ಠಿಯವರ ನಿಲುವಿನ ಮಾತುಗಳು ಮತಧರ್ಮಗಳು ಪ್ರೀತಿ-ಪ್ರೇಮಗಳನ್ನು ಹತ್ತಿಕ್ಕಲು ಪ್ರಯತ್ನಿಸುವುದು ಹೊಸದಲ್ಲದಿದ್ದರೂ ಅವುಗಳ ಕ್ರೌರ್ಯದ ಹಿಂದಿನ ಕಾಲಸ್ಥಿತಿಗೆ ವ್ಯತ್ಯಾಸವಾಗಬೇಕಾದ ಅಗತ್ಯವನ್ನು ಒತ್ತಿ ಹೇಳುವುದನ್ನು ಕಾಣುತ್ತೇವೆ.

ಕಂಬಳ್ಳಿಯನ್ನು ಆವರಿಸಿಕೊಂಡಿರುವ ಮೌಢ್ಯಗಳು, ಆಧುನಿಕತೆಯಿಂದ ಉಂಟಾದ ವಿಕೃತಗಳು ಕಂಬಳ್ಳಿಯ ವಿನಾಶಕ್ಕೆ ಕಾರಣವಾಗುತ್ತವೆ. ಹೀಗಾಗಿ ಕಾಲ ಸಂದರ್ಭಕ್ಕೆ ಅನುಗುಣವಾಗಿ ಬದುಕನ್ನು ಕಟ್ಟಿಕೊಳ್ಳಬೇಕಾದ ಅಗತ್ಯತೆಯನ್ನು ಕಾದಂಬರಿಕಾರರಾದ ಲಂಕೇಶರು ಸೂಚ್ಯವಾಗಿ ಸೂಚಿಸುತ್ತಾರೆ. ಗ್ರಾಮ ಸಮಾಜದಲ್ಲಿ ಮಡುಗಟ್ಟಿರುವ ಜಾತೀಯತೆ, ಧಾರ್ಮಿಕ ಕಟ್ಟುಪಾಡು, ಅಸಮಾನತೆ, ಮೇಲುಕೀಳು ಮುಂತಾದವು ಸಾಮಾಜಿಕವಾಗಿ ಸಾಮೂಹಿಕವಾಗಿ ಬದಲಾಗಬೇಕಾದ ಅಗತ್ಯವನ್ನು ತಿಳಿಸುತ್ತಾರೆ. ಈ ಬದಲಾವಣೆಗೆ ಅಂತರ್‌ಜಾತಿ ವಿವಾಹ, ಅಂತರ್‌ಧರ್ಮ, ವಿವಾಹ, ಹೆಣ್ಣಿಗೆ ಆರ್ಥಿಕ ಸಮಾನತೆ, ಮುಂತಾದವುಗಳನ್ನು ಕಲ್ಪಿಸುವ ಲಂಕೇಶರು ಅವುಗಳನ್ನು ಕಾರ್ಯರೂಪಗೊಳಿಸುತ್ತಲೇ ಹೊಸದೊಂದು ಸಂಸ್ಕೃತಿಗೆ ತಳಹದಿ ಹಾಕುತ್ತಾರೆ. ಇದನ್ನು ಲಂಕೇಶರ ಸಾಹಿತ್ಯ ಬರಹದ ಒಂದು ತಾತ್ವಿಕ ಸಿದ್ಧಾಂತವಾಗಿ ಗುರುತಿಸಬಹುದಾಗಿದೆ.

ಪ್ರಸಿದ್ಧ ನಾಟಕಕಾರ ಹಾಗೂ ವಿಮರ್ಶಕರಾದ ಮರುಳಸಿದ್ಧಪ್ಪನವರು ಗುರುತಿಸುವಂತೆ "ಮುಸ್ಸಂಜೆಯ ಕಥಾ ಪ್ರಸಂಗ'ವೆಂಬ ಕಾದಂಬರಿಯ ಹೆಸರು ಕಂಬಳ್ಳಿಯ ಸಾಮಾಜಿಕ ಅವನತಿಯನ್ನು ಸೂಚಿಸುವಂತಿದೆ ಎಂಬ ವಿಚಾರಕ್ಕೆ ಪುಷ್ಟಿ ದೊರೆಯುವಂತೆ ಲಂಕೇಶರು ಹೇಳಿರುವವರಾದರೂ ಅಲ್ಲಿ ನಡೆದ ಸಾಮಾಜಿಕ ಪರಿವರ್ತನೆಯನ್ನು ಲೇಖಕರು ಸಂಪೂರ್ಣ ಒಪ್ಪಿಕೊಳ್ಳುವುದೂ ಇಲ್ಲ; ನಿರಾಕರಿಸುವುದೂ ಇಲ್ಲವೆಂಬುದು ಗಮನಾರ್ಹ ವಿಚಾರವಾಗುತ್ತದೆ. ಶ್ರೇಣೀಕೃತ ಜಾತಿ ವ್ಯವಸ್ಥೆ ಶಿಥಿಲಗೊಳ್ಳುವುದು, ಪುರುಷ ಪ್ರಧಾನತೆಯ ವಿರುದ್ಧ ಸ್ತ್ರೀ ಅವಿಧೇಯಳಾಗಿ ಬಂಡಾಯವೇಳುವುದು, ಗೇಣಿದಾರರಿಗೆ ಅವರ ಹಕ್ಕಿನ ಜಮೀನಿನ ಒಡೆತನ ದಕ್ಕುವುದು ಇವೆಲ್ಲ ಪ್ರಗತಿಪರವಾದ ಬದಲಾವಣೆಗಳು; ಕಾದಂಬರಿಕಾರರು ಇವುಗಳ ಪರವಾಗಿದ್ದಾರೆ. ಆದರೆ ವಿದ್ಯೆ ಮತ್ತು ನಾಗರೀಕತೆಯ ಜೊತೆ ಜೊತೆಗೆ ಬಂದಿರುವ ಸುಖಾಪೇಕ್ಷೆ, ಹೊಣೆಗೇಡಿ ಮನರಂಜನೆಗಳು, ಜೂಜುಕೋರತನ, ಸುಲಭವಾಗಿ ಹಣ ಮಾಡುವ ಚಪಲ, ಪುಡಾರಿಗಳ ರಾಜಕೀಯ ಗೂಂಡಾಗಿರಿ ಮುಂತಾದವು ಗ್ರಾಮೀಣ ಸಮಾಜವನ್ನು ಅವನತಿಯತ್ತ ದೂಡಿವೆ. ಈ ಅವನತಿಯ ವಿಚಾರದಲ್ಲಿ ಲೇಖಕರಿಗೆ ಆತಂಕವಿದೆ. ಆದರೆ ಬದುಕು ಅಲ್ಲೋಲಕಲ್ಲೋಲಗಳ ನಡುವೆಯೂ ಆಕರ್ಷಣೆಯನ್ನು ಕಳೆದುಕೊಂಡಿಲ್ಲ. ಅದೆಲ್ಲವನ್ನು ಸಮಗ್ರವಾಗಿ ಗ್ರಹಿಸಿ ಸಾಕ್ಷೀ ಭಾವದಿಂದ ದಾಖಲೆಗೊಳಿಸುವ ಕೆಲಸವೇ ತಮಗೆ ಬಹುಮುಖ್ಯವೆಂದು ಕಾದಂಬರಿಕಾರರು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ" ಎನ್ನುವ ಮಾತುಗಳೂ ಕಾದಂಬರಿಯ ಸಮಗ್ರ ಚಿತ್ರಣವನ್ನು ತಿಳಿಸುತ್ತದೆ.

ಡಾ. ಸಾರಾ ಅಬೂಬಕ್ಕರ್ ಅವರ ಕಾದಂಬರಿಗಳಲ್ಲಿ ವಿಭಿನ್ನ ನೆಲೆಗಳು

ರಹಿಮಾನ ಆಯ್. ಗೊರಜನಾಳ
ಸಂಶೋಧನಾ ವಿದ್ಯಾರ್ಥಿ, ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
E-mail: rahimangorajanal28@gmail.com

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಆಧುನಿಕ ಸಾಹಿತ್ಯವು ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ನವ್ಯ ಮತ್ತು ದಲಿತ-ಬಂಡಾಯ ಸಾಹಿತ್ಯವು ಪರಿವರ್ತನೆ ಪಡಿಯುತ್ತಾ ಸಾಗಿದೆ. ಇದರಲ್ಲಿ ಮಹಿಳಾ ಸಾಹಿತ್ಯವು ಹೊಸ ವಿಚಾರಗಳೊಂದಿಗೆ, ಸೃಜನಶೀಲತೆಯನ್ನು ಪಡೆಯುತ್ತಾ ಬಂದಿದೆ ಮತ್ತು ಹೊಸ ಸಂಚಲನ ಪಡೆಯುತ್ತಾ ಮುಂದೆ ಸಾಗುತ್ತಿದೆ. ತ್ರಿವೇಣಿ ಜಯದೇವಿತಾಯಿ ಲಿಗಾಡೆ, ವೈದೇಹಿ, ಗೀತಾ ನಾಗಭೂಷಣ, ಬಿ.ಟಿ. ಲಲಿತಾನಾಯಕ ಮತ್ತು ಡಾ. ಸಾರಾ ಅಬೂಬಕ್ಕರರು ಸಹ ಸೃಜನಶೀಲ ಬರಹಗಾರರು ಆಗ ಕಂಡುಬರುತ್ತಾರೆ. ಇವರೊಂದಿಗೆ ಇನ್ನೂ ಹಲವಾರು ಮಹಿಳಾ ಬರಹಗಾರರು ಇದ್ದಾರೆ. ಆದ್ದರಿಂದ ನಾವು ಡಾ. ಸಾರಾ ಅಬೂಬಕ್ಕರ್ ಅವರ ಕಾದಂಬರಿಗಳಲ್ಲಿ ವಿವಿಧ ನೆಲೆಯನ್ನು ಅಧ್ಯಯನದಿಂದ ಅರಿಯುವುದಾಗಿದೆ. ಅಷ್ಟೇ ಅಲ್ಲ ಮುಸ್ಲಿಂ ಮಹಿಳಾ ಜೀವನವನ್ನು ಪರಿಚಯಿಸುತ್ತಾರೆ.

ಡಾ. ಸಾರಾ ಅಬೂಬಕ್ಕರ್ ಅವರ ಕಾದಂಬರಿಗಳಲ್ಲಿ ವಿಭಿನ್ನ ನೆಲೆಗಳು : ಡಾ. ಸಾರಾ ಅವರು ಕರಾವಳಿಯ ಕಡಲತೀರದಲ್ಲಿ ಅಲ್ಲಿನ ಪರಿಸರ, ಭೌಗೋಳಿಕತೆ, ಸಾಮಾಜಿಕ, ಆರ್ಥಿಕತೆ, ವ್ಯಾಪಾರ ಮತ್ತು ಸಮಸ್ಯೆಗಳು ಎದುರಾದ ನೈಜ ಘಟನೆಯಿಂದ ಮತ್ತು ಮಹಿಳಾಪ್ರಧಾನದಿಂದ ಮಾನವೀತೆಯ ನೆಲೆಯಲ್ಲಿ ತಮ್ಮ ಕಾದಂಬರಿಗಳಲ್ಲಿ ಬರೆಯುತ್ತಿರುವುದು ಕಂಡುಬರುತ್ತದೆ. ಹೆಣ್ಣುಮಕ್ಕಳ ಸಮಸ್ಯೆಗಳು, ಪರಿಹಾರಗಳು ಮತ್ತು ಪರಿಣಾಮಗಳು, ಸಾಂಸ್ಕೃತಿಕ ನೆಲೆಯಿಂದ ಧಾರ್ಮಿಕ ಕಟ್ಟಳೆಯನ್ನು ತಿಳಿಗೊಳಿಸುತ್ತಾ ಸಮಾಜದ ಉತ್ತಮ ಬೆಳವಣಿಗೆಗೆ ತಮ್ಮ ಬರಹಗಳ ಮುಖಾಂತರ ಪ್ರತಿಕ್ರಿಯಿಸುತ್ತಾರೆ.

ಧಾರ್ಮಿಕತೆಯ ನೆಲೆ : ಡಾ. ಸಾರಾ ಅವರು ತಮ್ಮ ಕಾದಂಬರಿಗಳಲ್ಲಿ ಆ ಮಲೆನಾಡಿನ ಪರಿಸರದಲ್ಲಿ ಮುಸ್ಲಿಂ ಧಾರ್ಮಿಕತೆಗೆ ಸಂಬಂಧಿಸಿದಂತೆ ಇರುವ ಪರಿಸ್ಥಿತಿಗಳನ್ನು ಅರಿಯುತ್ತಾ ಮತ್ತು ಆಚರಣೆಯಲ್ಲಿ ತಂದಿರುವ ನೀತಿ-ನಿಯಮಗಳನ್ನು ಉಸಿರುಗಟ್ಟಿಸುವಂತಹ ಪರಿಸ್ಥಿತಿ ಎದುರಾದ ಸಂದರ್ಭದಲ್ಲಿ ವ್ಯಕ್ತಿಯ ಸ್ವಾತಂತ್ರ್ಯದ ಹಿನ್ನೆಲೆಯಿಂದ ಸದಾ ಧ್ವನಿಯನ್ನು ಎತ್ತುತ್ತಾರೆ. ಅಷ್ಟೇ ಅಲ್ಲ ಪರಿಸ್ಥಿತಿಯು ಎದುರಾಗದಂತೆ ಪ್ರತಿಭಟಿಸಿ,

ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳುತ್ತಾರೆ.

ಇಲ್ಲಿ ಹಿಂದೂ ಮತ್ತು ಮುಸ್ಲಿಂ ಸಂಸ್ಕೃತಿಗೆ ಸಮಾನತೆ ಮತ್ತು ಸಮನ್ವತೆಯ ಪ್ರತಿಕ್ರಿಯೆಯನ್ನು ನೀಡುತ್ತಾ ಬಂದಿದ್ದಾರೆ. ಮಹಿಳೆಯರ ಬದುಕಿಗೆ ಇರುವ ಕಟ್ಟಳೆಯನ್ನು ತಿಳಿಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಉದಾ: "ಈ ನಡುವೆ ರಮಜಾನ್ ತಿಂಗಳು ಬಂದು ಹೋಗಿತ್ತು. ರಮಜಾನ್ ತಿಂಗಳಲ್ಲಿ ಒಂದು ದಿನ ಕೆಲವು ಮೌಲವಿಗಳನ್ನು ತಮಗೆ ಬೇಕಾದ ಕೆಲವರನ್ನು ಇಫ್ತಾರ್‌ಗೆ ಕರೆಯುವುದು ರೂಢಿಯಾಗಿತ್ತು. ಹಿಂದೆಲ್ಲಾ ರಶೀದಾ ಹನೀಫ ಮತ್ತು ಮಕ್ಕಳೊಡನೆ ಇಫ್ತಾರ್‌ಗೆ ಬರುತ್ತಿದ್ದಳು. ಆದರೆ ಈ ಬಾರಿ ಅವಳು ಮತ್ತು ಮಕ್ಕಳು ಮನೆಯಲ್ಲೇ ಇದ್ದರು. ಹನೀಫ್‌ನನ್ನು ಇಫ್ತಾರಗೆ ಆಮಂತ್ರಿಸಬೇಕೇ ಬೇಡವೇ ಎಂಬ ಚರ್ಚೆಯಾದರೂ ಕೊನೆಗೆ ಕಾದರ್ ಹಾಜಿಯವರು, "ಅವನು ಆ ಮಕ್ಕಳ ತಂದೆಯಲ್ಲವಾ? ಅವನನ್ನು ಕರೆದು ನಮ್ಮ ಕರ್ತವ್ಯ ನಾವು ತೀರಿಸುವಾ"[1] ಎಂದರು. ಹೀಗೆ ಸ್ತ್ರೀಯರ ಧಾರ್ಮಿಕತೆಯನ್ನು ತಮ್ಮ ಕಾದಂಬರಿಗಳಲ್ಲಿ ವಿವರಿಸುತ್ತಾರೆ. ಝಕಾತ್ ಶಹರಿಯತ್, ಹಜ್ಜ್, ರೋಜಾ, ನಮಾಜ, ನಿಖಾ, ತಲಾಖ್ ಹೀಗೆ ವಿವಿಧ ಧಾರ್ಮಿಕತೆಯ ಅಂಶಗಳು ಸಹ ಕಂಡುಬರುತ್ತವೆ.

ರಾಜಕೀಯ ನೆಲೆ : ಸಾರಾ ಅವರ ಕಾದಂಬರಿಯಲ್ಲಿ ಮೌಲವಿಗಳು ರಾಜಕೀಯ ಪ್ರಧಾನ ಪಾತ್ರದಾರಿಯಾಗಿ ಕಂಡುಬರುತ್ತಾರೆ. ಯಾಕೆಂದರೆ ಇವರು ಧಾರ್ಮಿಕ ಗುರು, ನಾಯಕ, ಮಾರ್ಗದರ್ಶಕ, ಚಿಂತಕ ಮತ್ತು ಹಿತೈಷಿಯಾಗಿ ಕಂಡುಬಂದರು. ಇವರನ್ನು ಇಲ್ಲಿ ರಾಜಕೀಯದ ರಾಯಭಾರಿ ಎಂದರೆ ತಪ್ಪಾಗಲಾರದು. ಹೀಗೆ ಮೌಲವಿಗಳು ಧಾರ್ಮಿಕ ಗುರುವಾಗಿದ್ದರೂ ಸಮಾಜದ ಆಗು ಹೋಗುಗಳಿಗೆ ಇತನ ಮುಖಾಂತರವೇ ನಡೆಯಬೇಕು. ಇತನು ಇದ್ದರೆ ಜಮಾತ್ (ಸಮಾಜ) ವೇ ಇದ್ದಂತೆ. ಆದ್ದರಿಂದ ಗುರು-ಹಿರಿಯರ ಸಮ್ಮುಖದಲ್ಲಿ ನಡೆಯುವ ಕಾರ್ಯಗಳಿಗೆ ಇತನ ಅನುಮತಿಯ ಪರವಾನಿಗೆಯೂ ಸಹ ಬೇಕಾಗುತ್ತದೆ. ಉದಾ: ನಿಖಾ, ತಲ್ಲಾಖ್, ನಮಾಜ ಮತ್ತು ಸಂಬಂಧಗಳನ್ನು ಬೆಸೆಯಲು ಮತ್ತು ಖುಲಾಸೆಗೊಳಿಸಲು ಸಹ ಇತನು ಮೌಲವಿ ಇರಲೇಬೇಕಾದ ಖಡ್ಡಾಯವಾದ ನೀತಿ-ನಿಯಮವಿದೆ. ಆದ್ದರಿಂದ ಇಷ್ಟೆಲ್ಲ ಕಾರ್ಯಕ್ಕೆ ಚಾಲನೆ ನೀಡುವ ಈ ಮೌಲವಿ ರಾಜಕೀಯದ ರಾಯಭಾರಿಯಾಗಿ, ಕೆಲವೊಮ್ಮೆ ತನ್ನ ಸ್ವಇಚ್ಛೆಗೆ ಆಸೆಯೊಡ್ಡಿ ದುರ್ಬಲ ಬುದ್ಧಿಯ ಪ್ರದರ್ಶನವು ತೋರಿಸುವ ಸಂದರ್ಭವು ಬರಬಹುದು. ಆದ್ದರಿಂದ ರಾಜಕೀಯ ನಾಯಕನಂತೆಯೂ ಸಮಾಜದಲ್ಲಿ ಮೌಲವಿ ಕಂಡುಬರುತ್ತಾರೆ.

ಉದಾ: "ಮಮ್ಮೂಟಿ ತಡಮಾಡದೆ ಒಂದಿಬ್ಬರು ಮೌಲವಿಗಳನ್ನು ಮನೆಗೆ ಕರೆಸಿ ಮುನೀರ್‌ನ ಕೈಯಲ್ಲಿ ಕಾಗದವೊಂದನ್ನು ಕೊಟ್ಟು, "ಮೌಲವಿಗಳು ಹೇಳಿದಂತೆ ಬರೆದು ಸಹಿ ಹಾಕಿ ಕೊಡು. ಹೂಂ.... ಬೇಗ" ಎಂದು ಗಂಭೀರವಾಗಿ ನುಡಿದನು. ಮುನೀರ್ ಅತ್ತಹೋದ ಬಳಿಕ ಮೌಲವಿಗಳು ಮಮ್ಮೂಟಿಯೊಡನೆ, "ನಿಮ್ಮ ಮಗನಿಗೆ ತಲಾಖ್ ಕೊಡುವುದು ಇಷ್ಟವಿರಲಿಲ್ಲವೆಂದು ಕಾಣುತ್ತದೆ. ನೀವ್ಯಾಕೆ ಆ ರೀತಿ ಒತ್ತಾಯ ಮಾಡಿದಿರಿ? ಎಂದು ಕೇಳಿದನು."[2] ಹೀಗೆ ಈ ಮೌಲವಿಗಳ ನಾಯಕತ್ವದಲ್ಲಿ ಕಾರ್ಯಗಳು ನಡೆದು ಬರುತ್ತವೆ.

'ಸುಳಿ' ಕಾದಂಬರಿಗಳಲ್ಲಿ 'ಮೌಲವಿ' ಪಾತ್ರ, ಚಂದ್ರಗಿರಿ ತೀರದಲ್ಲಿ 'ಮೌಲವಿ' ನಾದಿರಾಳ 'ತಖಾಲ್'ಗೆ ಕೇರಳದ 'ಧರ್ಮ ಗುರುಗಳ ಭಾಷಣ' (ಮೌಲವಿಗಳು), ಇಳಿಜಾರು ಕಾದಂಬರಿಯಲ್ಲಿ ಮುಂತಾದವುಗಳಲ್ಲಿ ಕಂಡು ಬರುತ್ತದೆ. ಹೀಗೆ ಧಾರ್ಮಿಕ ಗುರುಗಳು ರಾಜಕೀಯದ ಪ್ರತೀಕವಾಗಿಯೂ ಕಾಣುತ್ತಾರೆಂದರೆ ತಪ್ಪಾಗಲಾರದು.

ಸಾಮಾಜಿಕ ನೆಲೆ : ಈ ಆಧುನಿಕತೆಯಲ್ಲಿ ಶಿಕ್ಷಣದ ಮೌಲ್ಯವನ್ನು ಮನವರಿಕೆಗೊಂಡಾಗ ಮುಸ್ಲಿಂ ಸಮುದಾಯವು ಇನ್ನೂ ಏಳಿಗೆಯನ್ನು ಪಡೆಯಬೇಕಾದ ಅಗತ್ಯತೆಯನ್ನು ಸಾರಾರವರು ಮನಗೊಂಡಿದ್ದಾರೆ. ಅದರಂತೆ ಸಾಮಾಜಿಕ ಸಮಸ್ಯೆಗಳು ಬಿಂಬಿಸುವ ಪ್ರತಿಬಿಂಬದಿಂದ ಅವರು ಬರೆದಾಗ ಸಮಾಜದ ನೆಲೆಯಲ್ಲಿ ಸಹಜವಾದ ಹೊಸದೊಂದು ವೈಜ್ಞಾನಿಕ ಅಲೆಯೊಂದು ಎಬ್ಬಿಸಿತೆಂದರೆ ತಪ್ಪಾಗಲಾರದು. ಸಾಮಾಜಿಕತೆಗೆ ತಾವು ನಂಬಿಕೊಂಡುಬಂದ ನಂಬಿಕೆ, ಮೌಲ್ಯಗಳು, ಸುಧಾರಣೆಗೆ ಚಡಪಡಿಸಿದಾಗ ಮೌಲ್ಯಗಳ ಶ್ರೇಷ್ಠತೆ ಅದರ ಬಗೆಗಿನ ಟೀಕೆ ಈ ರೀತಿ ಧ್ವನಿ ಎತ್ತಿದಾಗ ಕೆಲವೊಂದು ಉಷ್ಣಾಂತಕ್ಕೆ ತಮ್ಮ ಅಹಂನಿಂದ ಪೆಟ್ಟು ಬಿದ್ದಾಗ ಜನ ಸಿಡಿದೆಳುವುದು ಸಹಜವೇ ಆಗಿದೆ.

ಈ ಸಾಮಾಜಿಕ ಕಾದಂಬರಿಯ ಕಥಾವಸ್ತು ಮದುವೆ, ಅನ್ಯೋನ್ಯ ಪ್ರೀತಿ, ಕುಟುಂಬದೊಳಗಣ ವೈಮನಸ್ಸು ಈ ಕಾರಣದಿಂದ ಪತಿ-ಪತ್ನಿಯರ ಅಗಲಿಕೆ, ವಿವಾಹ ವಿಚ್ಛೇದನ, ಪುನರ್ಮಿಲನವಾಗದೆ ಒದಗಿದ ಒಂದು ದುರಂತ. ಈ ಆಚರಣೆಗಳಿಂದ ಕಷ್ಟ ಸಂಕಷ್ಟವನ್ನು ನೇರವಾಗಿ ಅನುಭವಿಸುವ ಬಲಿ ಪಶುವಾದ ಹೆಣ್ಣಿನ ಒಳಗುರಿ ಮಿಡಿತ ತುಡಿತಗಳು ಅದರೊಳಗಿನ ಮತ್ತೊಂದು ಆವರಣ.

ಉದಾ: ಕೇಳಿರಿ ಕೇಳಿರಿ ಎಲ್ಲರೂ ಕೇಳಿರಿ ಕರೀಂಸಾಬರೆ ಹೆಂಡತಿ ಖತೀಜಾಬಿ ಊರಿನ ಮಸೀದಿಯ ಜಮಾಅತ್ ಸಮಿತಿಯ ತೀರ್ಪನ್ನು ಉಲ್ಲಂಘಿಸಿದ ಕಾರಣ ಅವರು ಮತ್ತು ಅವರ ಕುಟುಂಬವನ್ನು ಊರಿನವರೆಲ್ಲರೂ ಬಹಿಷ್ಕರಿಸಬೇಕು. ಅಪರ ಮನೆಯವರೊಡನೆ ಯಾರೂ ಯಾವ ರೀತಿಯ ಸಂಬಂಧವನ್ನು ಇಟ್ಟುಕೊಳ್ಳಬಾರದು. ಅಂಗಡಿಯವರಾರು ಅವರಿಗೆ ಯಾವ ರೀತಿಯ ಆಹಾರ ಪದಾರ್ಥಗಳನ್ನಾಗಲಿ, ಇನ್ನಿತರ ಸಾಮಗ್ರಿಗಳನ್ನಾಗಲೀ ಮಾರಬಾರದು. ಅವರಿಗೆ ಕುಡಿಯಲು ನೀರನ್ನೂ ಕೊಡಬಾರದು. ಆ ಕುಟುಂಬದಲ್ಲಿ ಯಾರಾದರೂ ಸತ್ತರೆ ಅವರ ಶವಸಂಸ್ಕಾರವನ್ನು ಯಾರು ಮಾಡ ಬಾರದು. ಆ ಮನೆಯಿಂದ ಕೂದಲು ಕತ್ತರಿಸಲು ಊರ ಕ್ಷೌರಿಕನೂ ಸಿದ್ಧನಾಗಬಾರದು." ಧ್ವನಿವರ್ಧಕ ಇನ್ನೂ ಕಿರುಚುತ್ತಲೇ ಜೀಪು ನಿಧಾನವಾಗಿ ಮುಂದುವರೆಯಿತು."[3] ಹೀಗೆ "ನಾದಿರಾ, ರಶೀದ್, ನಿರ್ಮಲ, ಸಂಜಯ, ಕದನ ವಿರಾಮ ಕಾದಂಬರಿ, ಹನೀಫ್, ರಶೀದಾ-ಇಳಿಜಾರು ಕಾದಂಬರಿ ಹೀಗೆ ಮುಂತಾದ ಕಾದಂಬರಿ ಮುಖಾಂತರ ಪರಿಚಯಿಸುತ್ತಾರೆ.

ಆರ್ಥಿಕ ನೆಲೆ : ಸಾಮಾಜಿಕ ಸ್ಥಿತಿಗತಿಯಿಂದ ಈ ವಿವಾಹ-ಕುಟುಂಬ ಜೀವನದ ನಿರ್ವಹಣೆಗೆ ಆರ್ಥಿಕತೆಯ ಸಬಲತೆಯು ಬೇಕಾಗುತ್ತದೆ. ಗಂಡ-ಹೆಂಡತಿಯ ಸಂಸಾರದ ನೌಕೆಯನ್ನು ನಿಭಾಯಿಸಿಕೊಂಡು ಹೋಗಬೇಕಾದರೆ ದುಡಿಯಲೇ ಬೇಕು. ಇದರಿಂದ ಮಕ್ಕಳ ಸ್ಕೂಲಿಗೆ, ವ್ಯಾಪಾರಕ್ಕೆ ಮನೆಯನ್ನು ನಿಭಾಯಿಸಿಕೊಂಡು ಹೋಗಲಿಕ್ಕೆ ಗಂಡಾದರೇನು? ಹೆಣ್ಣಾದರೇನು? ದುಡಿಯಲೇ ಬೇಕು. ಆದರೆ ಸಂಸಾರದ ನೌಕೆ ಸಾಗಬೇಕಾದರೆ ಹೆಣ್ಣೆ ದುಡಿಯಬೇಕು. ಅಷ್ಟೇ ಆರ್ಥಿಕ ದಿವಾಳಿತನ ತಲೆ ದೋರಿದಾಗ ಸಂಸಾರದಲ್ಲಿ ಮಹಿಳೆಯರು ತಮ್ಮದೇ ಆದಂತಹ ವಿಚಾರಗಳಿಂದ ಆರ್ಥಿಕ ಭದ್ರತೆಯನ್ನು ಸುಭದ್ರ ಪಡಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಾರೆ. ಚಂದ್ರಗಿರಿಯ ನದೀರಾಳು ಗಂಡನ ಆರ್ಥಿಕ ಸ್ಥಿತಿಗತಿ ಗೊತ್ತಾಗಿ 'ತೆಂಗಿನ ಕಾಯಿ' ವ್ಯಾಪಾರ

ಮಾಡುತ್ತಾಳೆ. ಉದಾ: 'ನಿರ್ಮಲೆಗೆ ಒಮ್ಮೊಮ್ಮೆ ಸಂಜಯನೊಡನೆ ಜೋರಾಗಿ ಜಗಳವಾಡಬೇಕೆಂದೆನಿಸುತ್ತಿತ್ತು. ತಮ್ಮ ಮನೆಯ ಆರ್ಥಿಕ ಪರಿಸ್ಥಿತಿಯಂತೂ ಆಕೆಯ ಮನಸ್ಸಿಗೆ ತೀರಾ ಆಳವಾದ ಗಾಯಮಾಡಿತು. ಆತನಿಗೆ ದೊರೆಯುವ ಸಂಬಳದ ಒಂದು ಪಾಲನ್ನು ಊರಿನಲ್ಲಿ ತಂದೆ-ತಾಯಿಗಳಿಗೆ ಕಳಿಸಿಕೊಡಬೇಕಾಗಿತ್ತು. ಇನ್ನುಳಿದ ಹಣದಲ್ಲಿ ಆಕೆಗೆ ಬೇಕಾದದ್ದನ್ನು ತರಲು ಆಕೆಯ ಮಟಕ್ಕನುಸರಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ." ನಾವು ಒಂದು ಗ್ಯಾಸ್ ಸ್ಟೌವನ್ನು ಕೊಂಡುಕೊಳ್ಳೋಣ" ಎಂದು ಆಕೆ ಸೂಚಿಸಿದಾಗ ಆತನಿಂದ ಬಂದ ಉತ್ತರ ಒರಟಾಗಿತ್ತು.

"ಯಾಕೇ? ಈಗಿರುವ ಸ್ಟೌವ್‌ಗಳಲ್ಲಿ ಅಡಿಗೆ ಮಾಡಲಾಗುವುದಿಲ್ಲವೇ? ಹಾಗೆಲ್ಲ ದುಂದು ವೆಚ್ಚ ಮಾಡಲು ನನ್ನ ಬಳಿಯಲ್ಲಿ ಹಣವಿಲ್ಲ." ಆತ ಮತ್ತೊಂದು ಸಲಹೆಯನ್ನು ನೀಡಿದನು: "ಅಂತಹ ವಿಲಾಸೀ ವಸ್ತುಗಳನ್ನೆಲ್ಲ ಕೊಳ್ಳಬೇಕಾದರೆ ನಿನ್ನ ತಂದೆಯಿಂದ ಹಣ ತರಿಸು,"[4] ಎಂದು ಹೇಳುತ್ತಾರೆ. ಹೀಗೆ ಮಹಿಳೆಯರು ಬಟ್ಟೆ ಹೊಲಿಯುವುದು, ವ್ಯಾಪಾರ ಮಾಡುವುದು, ಹಾಲು ಮಾರುವುದು, ತರಕಾರಿ ಕೆಲಸ ಮತ್ತು ಕಿರಾಣಿ ಅಂಗಡಿಯ ವ್ಯವಸ್ಥೆಯನ್ನು ಮಾಡಿಕೊಂಡು ಆರ್ಥಿಕತೆ ಭದ್ರತೆಯನ್ನು ಒದಗಿಸುವ ನಿಲುವುಗಳನ್ನು ನೋಡಬಹುದು.

ಮಹಿಳಾ ಪ್ರಧಾನ ನೆಲೆ : ಸಾರಾರವರ ಕಾದಂಬರಿಗಳು ಮಹಿಳಾ ಕೇಂದ್ರವಾಗಿವೆ. ಆದ್ದರಿಂದ ಒಂದು ಹೆಣ್ಣು ಜನನದಿಂದ ಮರಣದ ವರೆಗಿನ ಮಧ್ಯೆ ಎದುರಾಗುವ ಸಮಸ್ಯೆಗಳು – ಪರಿಹಾರೋಪಾಯಗಳು – ಪರಿಣಾಮಗಳು ಸಹ ಕೇಂದ್ರೀಕರಿಸುತ್ತವೆ. ಇಸ್ಲಾಮಿಕ್ ನಿಯಮಗಳು ಕಾಲಹಾದಿಗಳಲ್ಲಿ ದೇಶಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಬದಲಾವಣೆ ಹೊಂದಿರುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಸಾಂವಿಧಾನಿಕ ಹಕ್ಕುಗಳನ್ನು ಅನುಷ್ಠಾನಕ್ಕೆ ತಂದು ಮುಸ್ಲಿಂ ಮಹಿಳೆಯರಿಗೆ ರಕ್ಷಣೆಯೊದಗಿಸಬೇಕು. ಶರಿಯತ್ ನಿಯಮ, ಮುಸ್ಲಿಂ ಕಾನೂನು, ವಿವಾಹ ವಿಚ್ಛೇದನ (ತಲ್ಲಾಖ್) ವಾರೀಸು ಹಕ್ಕು, ಮುಂತಾದ ವಿಷಯಗಳ ಚರ್ಚೆಗಳು ಕಂಡುಬರುತ್ತವೆ. ಸಂಸಾರದಲ್ಲಿನ ಹೊಂದಾಣಿಕೆ ಕೇವಲ ಮಹಿಳೆಯಿಂದಲೇ ಅಷ್ಟೇ ಅಲ್ಲ ಪುರುಷರಿಂದಲೂ ಆದಾಗ ಜೀವನ ಉತ್ತಮವಾಗಿರುತ್ತದೆ ಎಂದು ತಿಳಿಸುತ್ತಾರೆ. ಭಾರತೀಯ ಸಂವಿಧಾನದಲ್ಲಿ ಧರ್ಮ, ಜಾತಿ, ಲಿಂಗಭೇದವಿಲ್ಲದೆ ಸರ್ವ ನಾಗರಿಕರಿಗೂ ಸ್ವಾತಂತ್ರ್ಯ, ಸಮಾನತೆ ಮತ್ತು ನ್ಯಾಯವನ್ನು ನೀಡಿದೆ. ಮಹಿಳೆಯರಿಗೆ ಯಾಕೆ ಈ ಪರಿಸ್ಥಿತಿ ಎಂದು ಪ್ರಶ್ನೆ ಎತ್ತುತ್ತಾರೆ.

ಸಾರಾ ಅವರು ಹೀಗೆ ಹೇಳುತ್ತಾರೆ. ಹೆಣ್ಣಿನ ಕುರಿತು ಪ್ರವಾದಿಗಳು ಎಷ್ಟೊಂದು ಉದಾರಿಗಳು, ಕ್ಷಮಾಶೀಲರೂ ಆಗಿದ್ದರೆಂಬುದಕ್ಕೆ ಒಂದೇ ಒಂದು ಉದಾಹರಣೆ ನೀಡುತ್ತೇನೆ. "ಹೆಂಡತಿಯೋರ್ವಳು ಗಂಡನನ್ನು ಬಿಟ್ಟು ಬೇರೊಬ್ಬ ಪುರುಷನೊಡನೆ ಹೋದರೂ ಕೆಲವು ಸಮಯದ ಬಳಿಕ ಆಕೆ ತಪ್ಪೊಪ್ಪಿಕೊಂಡು ಬಂದು ಮುಂದೆಂದೂ ಅಂತಹ ಅಪರಾಧ ವೆಸಗುವುದಿಲ್ಲವೆಂದು ಆ ಗಂಡನ ಕ್ಷಮೆ ಕೇಳಿದರೆ ಆ ಗಂಡನು ಆಕೆಯನ್ನು ಕ್ಷಮಿಸಿ, ಆಕೆಯನ್ನು ಮರಳಿ ಸ್ವೀಕರಿಸಬೇಕು. ಅಷ್ಟು ಮಾತ್ರವಲ್ಲ ಮತ್ತೆಂದು ಆ ವಿಷಯವನ್ನೆತ್ತಿಕೊಂಡು ಆಕೆಯನ್ನು ನೋಯಿಸಬಾರದು ಎಂಬುದು ಪ್ರತಿವಾದಿಗಳು ಬೋಧಿಸಿದ ಧರ್ಮ. ಆದರೆ ಇಂದು ಏನಾಗುತ್ತಿದೆ? ಮಹಿಳೆಯೋರ್ವಳು ವ್ಯಭಿಚಾರ ಮಾಡಿದಳೆಂದು ಆಕೆಯನ್ನು ನಡುಬೀದಿಯಲ್ಲಿ ಗುಂಡಿಟ್ಟು ಕೊಲ್ಲಲಾಗುತ್ತದೆ? ಪ್ರವಾದಿಗಳು ತೋರಿದ ಮಾನವೀಯತೆ ಎಲ್ಲಾದರೂ ಕಾಣಿಸುತ್ತಿದೆಯೇ?[5] ಎಂದು ಪ್ರಶ್ನೆ ಹಾಕುತ್ತಾಳೆ. ವೈವಾಹಿಕ ಬದುಕಿನಲ್ಲಿ ಪ್ರವೇಶಿಸಲಿಚ್ಚಿಸುವ ಮಹಿಳೆಯರು ಎಂದು ದುಡಕಬಾರದು. ಹೆತ್ತವರೂ ಕೂಡಾ ತಮ್ಮ ಮಕ್ಕಳನ್ನು ಸಮನಾದ ಹಾದಿಯಲ್ಲಿ ಮುನ್ನಡೆಸಬೇಕು. ಸಂಸಾರದಲ್ಲಿ ತೊಡಗಿದಾಗ ಜೀವನದಲ್ಲಿ ಎದುರಾಗುವ ಎಲ್ಲಾ ಸಮಸ್ಯೆಗಳನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕೆಂದು ತಿಳಿಸುತ್ತಾರೆ.

ವಿವಾಹ (ನಿಖಾ) ಮತ್ತು ಕುಟುಂಬ : ಮುಸ್ಲಿಂ ಧಾರ್ಮಿಕ ಮೂಲಭೂತವಾದವು ಮಹಿಳೆಯನ್ನು ವಸ್ತುವಿನ ಹಾಗೆ ಬಳಸಿಕೊಂಡಿದೆ. ಅವರ ಆಸೆ, ಕನಸುಗಳಿಗೆ ಒದಗುವ ಅವಕಾಶಗಳನ್ನೇ ಕಿತ್ತುಕೊಂಡಿದೆ. ಮುಸ್ಲಿಂರದ್ದೇ ಆದ ಪ್ರತ್ಯೇಕ ಕಾನೂನು ಮಹಿಳೆಗೆ ಮಹತ್ವದ ಅವಕಾಶಗಳನ್ನು ಒದಗಿಸಿದ್ದರೂ ಅವುಗಳ ಬಳಕೆಯಂತೂ ಆಗುವುದೇ ಇಲ್ಲ. "ಮುಸ್ಲಿಂ ಮಹಿಳೆ ವಿವಾಹದ ವೇಳೆ: ನಿಖಾ ವೇಳೆ ಖುಬೂಲ್ ಇಲ್ಲ ಎಂದು ದಿಕ್ಕರಿಸಬಹುದು. ಆ ಅವಕಾಶ ಬಳಕೆಯಾಗುವುದೇ ಇಲ್ಲ. ಕೌಟುಂಬಿಕ ಜವಾಬ್ದಾರಿಗಳ ನಡುವೆಯೇ ಮುಸ್ಲಿಂ ಮಹಿಳೆ ಕಳೆದುಹೋಗುವುದಕ್ಕೆ ಮುಸ್ಲಿಂ ಸಾಮಾಜಿಕ ವ್ಯವಸ್ಥೆ ಒಪ್ಪಿಕೊಂಡಿರುವ ಮೂಲಭೂತವಾದಿ ಕರಡು ನಂಬಿಕೆಗಳೇ ಕಾರಣ."[6] ಈ ನಿಖಾದ ನೀತಿ ನಿಯಮಗಳನ್ನು ಅನುಸರಿಸಿ ಮೌಲವಿಯ ಸಮ್ಮುಖದಲ್ಲಿ ಈ ಕಾರ್ಯ ನಡೆಯುತ್ತದೆ.

ಮಹಿಳೆಯರು ವಿವಾಹದ ನಂತರ ಕೌಟುಂಬಿಕ ಜವಾಬ್ದಾರಿಗೆ ಮುಖ ಮಾಡುತ್ತಾರೆ. ಅತ್ತೆ-ಮಾವ-ಭಾವ-ಮೈದನ, ನಾದಿನಿಯರು, ಅಳಿಯಂದಿರು, ಸೊಸೆಯಿಂದಿರು ಮತ್ತು ಮಕ್ಕಳು ಹೀಗೆ ಎಲ್ಲರೊಂದಿಗೆ ನಂಬಿಕೆ, ವಿಶ್ವಾಸಗಳಿಸಿಕೊಂಡು ಬದುಕಿನಲ್ಲಿ ಎದುರಾಗುವ ತವಕ-ತಲ್ಲಣಗಳಿಗೆ ಮೂಕ ಸಾಕ್ಷಿಯಾಗಿ ಮುಂದೆಸಾಗಬೇಕಾಗುತ್ತದೆ. ಆದ್ದರಿಂದ ಮಹಿಳೆಯರ ಸ್ಥಿತಿ-ಗತಿ ಯಾವ ರೀತಿಯಿದೆ ಎಂದು ನಮ್ಮ ಗಮನಕ್ಕೆ ಬರುತ್ತದೆ. ಉದಾ: "ಇಸ್ಲಾಂ ಧರ್ಮದಲ್ಲಿ ಹೀಗೆ ಸ್ತ್ರೀಯರಿಗೆ ವಿದ್ಯೆ ಮತ್ತು ಸ್ವಾತಂತ್ರ್ಯ ಇಲ್ಲದಿರುವುದೂ ಬಡತನ, ಬಹುಪತ್ನಿತ್ವ, ತಲಾಖ್‌ಗಳಿಗೂ ಸೇರಿ ಅವಳ ಬದುಕನ್ನು ಬರ್ಭರವಾಗಿಸುವೆ"[7] ಎಂದು ಚಿಂತನ ಮಂಥನಗಳು ಕಂಡುಬರುತ್ತವೆ.

ಶಿಕ್ಷಣ : ಈ ಆಧುನಿಕತೆಯಲ್ಲಿ ಮುಸ್ಲಿಂ ಶಿಕ್ಷಣದ ಬಗ್ಗೆ ಬೇಕಾದ ರೀತಿಯಲ್ಲಿ ಪರಿವರ್ತನೆಗೆ ಸಂಬಂಧಿಸಿದಂತೆ ಕಾರ್ಯದ ಬಗ್ಗೆ ಸಾರಾ ಅವರು ತಮ್ಮ ಕಾದಂಬರಿ ಮೂಲಕ ತಿಳಿಸುತ್ತಾರೆ. ಮುಸ್ಲಿಂ ಹೆಣ್ಣುಮಕ್ಕಳು ಶಿಕ್ಷಣ ಪಡೆದರೆ ಹೇಗೆ ಜೀವನ ನೋಡುವ ದೃಷ್ಟಿಕೋನ ಬದಲಾಯಿಸುತ್ತದೆ ಎಂದು ಹೇಳುತ್ತಾರೆ. ಸಾರಾ ಅವರ ಮಾತಿನಲ್ಲಿ "ಮೂರನೇ ತರಗತಿಯಿಂದ ನಾನು ಬದಲಾಗತೊಡಗಿದೆ. ಕನ್ನಡ ಭಾಷೆ ಕಲಿತಂತೆ, ಗಣಿತದಲ್ಲಿ ಪ್ರಗತಿ ಹೊಂದಿದಂತೆ, ಹೊಸ ಗೆಳತಿಯರು ದೊರೆತಂತೆ ಶಾಲೆ ನನಗೆ ಸಹನೀಯವಾಗತೊಡಗಿತ್ತು. ಆದರೆ ನನ್ನ ಖುರ್‌ಆನ್ ವಿದ್ಯಾಭ್ಯಾಸ ಸ್ಥಗಿತಗೊಂಡಿತ್ತು. ಖುರ್‌ಆನಿನ ಅಧ್ಯಾಯವೆಲ್ಲವನ್ನೂ ಚೆನ್ನಾಗಿ ಓದಲು ಕಲಿಯುವುದು ಕಡ್ಡಾಯವಾಗಿತ್ತು. ಅದರೊಡನೆ ನಮಾಜ್ ಮತ್ತಿತರ ಮುಖ್ಯ ವಿಷಯಗಳನ್ನು ಕಲಿತುಕೊಳ್ಳಬೇಕಾಗಿತ್ತು. ಅದಕ್ಕಾಗಿ ಪ್ರತಿ ವರ್ಷ ಬೇಸಿಗೆ ರಜೆಯ ಒಂದೂವರೆ ತಿಂಗಳನ್ನು ಚಮನಾಡಿನಲ್ಲಿ ಕಳೆಯುತ್ತಿದ್ದೆ. ಅಲ್ಲಿ ಮೌಲವಿಗಳ ಬಳಿಯಲ್ಲಿ ಹಾಗೂ ಅಜ್ಜನ ಬಳಿಯಲ್ಲಿ ಮಲಯಾಳ ಕೃತಿಗಳೆಲ್ಲವನ್ನೂ ಓದಿಕೊಳ್ಳುತ್ತಿದ್ದೆ. ನನಗೆ ತಿಳಿಯದ ವಿಷಯಗಳನ್ನು ಅಜ್ಜನವರು ಹೇಳಿಕೊಡುತ್ತಿದ್ದರು. ಬಹುಶಃ ನನ್ನ ತಂದೆ ನನ್ನ ಶಿಕ್ಷಣದ ಕುರಿತು ಇಷ್ಟೊಂದು ಆಸಕ್ತಿ ವಹಿಸದಿದ್ದರೆ ಇಂದು ನಾನು ನಮ್ಮೂರಿನ

ಎಲ್ಲಾ ಮುಸ್ಲಿಂ ಮಹಿಳೆಯರಂತೆ ಚಮನಾಡಿನ ಶಾಲೆಯಲ್ಲಿ ಐದನೇ ತರಗತಿಯನ್ನು ಮುಗಿಸಿ ಹತ್ತನೇ ವರ್ಷಕ್ಕೆಲ್ಲಾ ಮದುವೆಯಾಗಿ ಕಾಸರಗೋಡಿನ ಯಾವುದೋ ಒಂದು ಮೂಲೆಯಲ್ಲಿರುತ್ತಿದ್ದೆ! ಎಂದು ತಿಳಿಸುತ್ತಾರೆ."[8]

"ಪ್ರವಾಹ ಸುಳಿ" ಕಾದಂಬರಿಯ ಮುಮ್ಮೂಟಿ ಕೂಡಾ ತನ್ನ ಮಗಳು ಸಾಹಿರಾಳನ್ನು ಶಾಲೆಗೆ ಕಳುಹಿಸದೇ ಇರುವೆಂತೆ ತನ್ನ ಹೆಂಡತಿ ಫರೀದಾಗೆ ಎಚ್ಚರಿಕೆ ನೀಡುತ್ತಾನೆ. ಮಸೀದಿಯ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಮೌಲ್ವಿಗಳು ಶಿಕ್ಷಣ ವಿರೋಧಿಸಿ ನಿಲುವನ್ನು ಭಾಷಣ ಬಿಗಿಯುವುದರ ಮೂಲಕ ವ್ಯಕ್ತಪಡಿಸುತ್ತಾರೆ.

"ಇತ್ತೀಚಿಗೆ ನಮ್ಮ ಹೆಣ್ಣು ಮಕ್ಕಳು ಶಾಲೆಗೆ ಹೋಗತೊಡಗಿದ್ದಾರೆ. ಆದರೆ ಹೆಣ್ಣು ಮಕ್ಕಳಿಗೆ ಈ ವಿದ್ಯಾಭ್ಯಾಸವೆಲ್ಲಾ ಬೇಕಾಗಿಲ್ಲ. ಇಂಥ ವಿದ್ಯಾಭ್ಯಾಸದಿಂದ ಅವರು ಕೆಟ್ಟು ಹೋಗುತ್ತಾರೆ. ಅವರಿಗೆ ಖುರ್‌ಆನ್ ಮತ್ತು ಧಾರ್ಮಿಕ ಗ್ರಂಥಗಳನ್ನು ಓದಲು ತಿಳಿದರೆ ಧಾರಾಳ ಸಾಕು. ನಿಮ್ಮ ಹೆಂಗಸರನ್ನು ಬೀದಿಯಲ್ಲಿ ಸುತ್ತಿಸಬೇಡಿ. ನೀವು ಅವರನ್ನು ಮನೆಯಿಂದ ಹೊರಗೆ ಕಳುಹಿಸಿದರೆ ದೇವರ ಎದುರಿನಲ್ಲಿ ನೀವು ತಪ್ಪುಗಾರರಾಗುತ್ತೀರಿ.

ನಿಮ್ಮ ಹೆಂಗಸರು ಮನೆಯೊಳಗಿದ್ದು ಖುರಾನ್ ಓದುತ್ತಾ, ಮಕ್ಕಳನ್ನು ಸಾಕುತ್ತಾ, ಮನೆವಾರ್ತೆ ನೋಡಿಕೊಂಡಿದ್ದರೆ ನಿಮಗೆ ಕ್ಷೇಮ. ಈ ಪ್ರಪಂಚದಲ್ಲಿ ಯಾವುದಕ್ಕೂ ಆಸೆ ಪಡಬೇಡಿರೆಂದು ನಿಮ್ಮ ಹೆಂಗಸರಿಗೆ ತಿಳಿಸಿರಿ. ಅಲ್ಲಾಹ್ ಎಲ್ಲವನ್ನೂ ನಿಮಗಾಗಿ ಸ್ವರ್ಗದಲ್ಲಿ ಸೃಷ್ಟಿಸಿಟ್ಟಿದ್ದಾನೆ. ನೀವು ದೇವರ ಆಜ್ಞೆಯನ್ನು ಪಾಲಿಸಿದರೆ ಅಲ್ಲಾಹ್ ನಿಮಗೆ ಸ್ವರ್ಗದಲ್ಲಿ ಎಲ್ಲ ಸುಖವನ್ನು ನೀಡುವನು"[9] ಎಂದು ಹೇಳುತ್ತಾರೆ. ಅದನ್ನು ಕೇಳಿಬಂದ ತಕ್ಷಣವೇ ಮುಮ್ಮೂಟಿ ಸಾಹಿರಾಳನ್ನು ಇನ್ನು ಶಾಲೆಗೆ ಕಳುಹಿಸುವುದು ಬೇಡ ಎಂದು ನಿಲುವನ್ನು ವ್ಯಕ್ತಪಡಿಸುತ್ತಾನೆ.

ಉದ್ಯೋಗ ಅವಕಾಶ : ಸಾರಾ ಅವರು ತಮ್ಮ ಸ್ತ್ರೀ ಪಾತ್ರಗಳಿಗೂ ಉದ್ಯೋಗಾವಕಾಶ ಕಲ್ಪಿಸಿಕೊಡುತ್ತಾರೆ. ಯಾಕೆಂದರೆ ಸಂಸಾರದ ಜವಾಬ್ದಾರಿಯೇ ಆಗಿದೆ. ಬೀಡಿ ಕಟ್ಟುವ ಇಲ್ಲವೇ ವಿವಿಧ ಮನೆಗಳಲ್ಲಿ ಕೆಲಸಕ್ಕಿರುವ ಸ್ತ್ರೀಪಾತ್ರಗಳು ಬದುಕಿನಾದ್ಯಂತ ದುಡಿಮೆಯ ಬವಣೆಯೊಂದಿಗೇ ಗುರುತಿಸಿಕೊಳ್ಳುತ್ತವೆ. ಶೈಕ್ಷಣಿಕ ಅರ್ಹತೆಗಳೇ ಇಲ್ಲದೆ ಹೊರಜಗತ್ತಿನ ನಾಲ್ಕು ಗೋಡೆಗಳಾಚೆಗಿನ ಉದ್ಯೋಗಾವಕಾಶಗಳನ್ನು ದಕ್ಕಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. 'ಸಹನಾ' ಕಾದಂಬರಿಯ ಸಕೀನಾ ಗಂಡನಿಂದ ಪರಿತ್ಯಕ್ತೆಯಾನಂತರ ತನ್ನ ಎರಡು ವರ್ಷದ ಪುಟ್ಟ ಮಗುವಿನ ಪೋಷಣೆಯ ಕಾರಣಕ್ಕಾಗಿ ವಿವಿಧ ಕಡೆ ಕೆಲಸಕ್ಕೆ ಹೋಗುತ್ತಾಳೆ. ಸ್ವಂತ ದುಡಿಮೆ, ಸ್ವತಂತ್ರ ಬದುಕು ಎಂದೆನಿಸಿದರೂ ಸ್ತ್ರೀಯರನ್ನು ನೋಡುವ ಅಸಮಾನ ದೃಷ್ಟಿಕೋನಗಳ ನಡುವೆ ಸಾಂಪ್ರದಾಯಿಕೆಯೊಂದಿಗೆ ಸಕೀನಾ ಬದಕುತ್ತಾಳೆ. ಈ ಕಾರಣಕ್ಕಾಗಿಯೇ ಮಗಳು ನಸೀಮಾಳಿಗೆ ಹೊರಜಗತ್ತಿನ ಶಾಲೆಗೆ ಕಳುಹಿಸುವ ಬದಲು ಸಾಂಪ್ರದಾಯಿಕ ಶಾಲೆಗೆ ಕಳುಹಿಸುತ್ತಾಳೆ. ಸಕೀನಾ ತನ್ನ ಮಗಳು ನಸೀಮಾ ಶಾಲೆಗೆ ಹೋಗುವುದನ್ನು ತಡೆದು ಬೀಡಿ ಕಟ್ಟುವ ಕೆಲಸ ಕಲಿಯುವಂತೆ ಒತ್ತಾಯಿಸುತ್ತಾಳೆ. ಬೀಡಿ ಕಟ್ಟುವುದು ಹತ್ತು ವರ್ಷದ ನಸೀಮಾಳಿಗೆ ಪ್ರಯಾಸದ ಕೆಲಸ.

"ಚಂದ್ರಗಿರಿ ತೀರದಲ್ಲಿ" ಕಾದಂಬರಿಯ ನಾದಿರಾ ಕೂಡಾ ಬೀಡಿ ಕಟ್ಟುವ ಕೆಲಸದಲ್ಲಿ ನಿರತಳಾಗುತ್ತಾಳೆ. ಆದರೆ, ಆಕೆಗೆ ಸ್ವತಂತ್ರ ಅಸ್ತಿತ್ವವೇ ಇಲ್ಲ. ತಂದೆ ಮಹಮ್ಮದ ಖಾನ್‌ನ ಕಟ್ಟಪ್ಪಣೆಗಳ ನಡುವೆಯೇ ಬಂಧಿಯಾಗಿ ಉದ್ಯೋಗವಕಾಶದೊಂದಿಗಿನ ಸ್ವಾವಲಂಬಿ ಜೀವನ ಆಕೆಗೆ ಸಾಧ್ಯವಾಗುವುದೇ ಇಲ್ಲ. ಮದುವೆಯಾದ ನಂತರವೂ ವ್ಯತಿರಿಕ್ತ ಪರಿಸ್ಥಿತಿಗಳ ಕೈಗೊಂಬೆಯಾಗಿ ನಲುಗಬೇಕಾಗುತ್ತದೆ ಮತ್ತು 'ಇಳಿಜಾರು' ಕಾದಂಬರಿಯಲ್ಲಿ "ಕಾಯಿಗಳನ್ನು ಮಾರಾಟ ಮಾಡಿದರೆ ಮನೆ ಖರ್ಚಿಗೆ ಹಣವಾಗುತ್ತದೆ. ಈವರೆಗೂ ಆಕೆ ಇಂತಹ ವಿಷಯಗಳಲ್ಲಿ ತಲೆ ಹಾಕಿದವಳಲ್ಲ. ಅಂಗಳದಲ್ಲಿ ಹಾಕಿದ ಕಾಯಿಗಳನ್ನು ಹನೀಫ್ ಅಲ್ಲಿಂದಲೇ ಮಾರಾಟ ಮಾಡಿ ಹಣ ಎಣಿಸಿಕೊಂಡು ಒಳಗೆ ಬರುತ್ತಿದ್ದನು. ಕಾಯಿಯ ಬೆಲೆ ಎಷ್ಟು ಹಣ ಎಷ್ಟು ಬಂತು ಎಂದು ಆಕೆಯೆಂದೂ ವಿಚಾರಿಸಿದವಳೇ ಅಲ್ಲ. ಅಂಬು ಹೇಳಿದಂತೆ ಆಕೆ ತಾನೇ ಕೊಬ್ಬರಿ ಮಾಡಿಸುವ ಕೆಲಸಕ್ಕಿಳಿದಿದ್ದಳು.[10] ಹೀಗೆ ಮಹಿಳೆಯರು ಉದ್ಯೋಗ ಅವಕಾಶ ಕುರಿತು ವಿವರಿಸುತ್ತಾರೆ.

ವ್ಯಾಪಾರ ಮತ್ತು ವ್ಯವಹಾರ : ಸಾರಾ ಅವರು ಕಾದಂಬರಿಯಲ್ಲಿ ವ್ಯಾಪಾರದ ಏರು-ಪೇರು ಕುರಿತು ಚರ್ಚಿಸುತ್ತಾರೆ. ಇದರಿಂದ ಬದುಕಿನ ಮೇಲೆ ಆಗುವ ಪರಿಣಾಮ ಲಾಭ-ನಷ್ಟ ಲೆಕ್ಕಾಚಾರ ತಿಳಿಸುತ್ತಾರೆ. 'ಬಿತ್ತಿ ಬೆಳೆದವರು'ನಲ್ಲಿನ ಸಂದರ್ಭ – "ಮರ ಮತ್ತು ತೋಪಿನ ಬಗ್ಗೆ ಅಷ್ಟಿಷ್ಟು ಪರಿಚಯವಿದ್ದ ಆತನು ಮರದ ವ್ಯಾಪಾರಿಯೊಬ್ಬರ ಬಳಿ ಕೆಲಸಕ್ಕೆ ಸೇರಿದನು. ಅಲ್ಲಿಯ ಲಾರಿ ಚಾಲಕನೊಡನೆ ಸ್ನೇಹ ಬೆಳೆಸಿ ಚಾಲಕನ ಕೆಲಸವನ್ನೂ ಕಲಿತುಕೊಂಡನು. ಯಜಮಾನರು ಹೊಸ ಲಾರಿ ಕೊಂಡಾಗ ಆತನೇ ಅದರ ಚಾಲಕನಾದನು. ಚಾಲಕನಾಗಿ ಕೆಲಸಕ್ಕೆ ಸೇರಿದ ಬಳಿಕ ಯಜಮಾನನ ಕಣ್ಣು ತಪ್ಪಿಸಿ ತಾನೇ ವ್ಯಾಪಾರ ಪ್ರಾರಂಭಿಸಿದನು. ಕಾಡಿನ ಸಮೀಪದ ಊರಿನಲ್ಲಿಯೇ ಹುಟ್ಟಿಬೆಳೆದವನು. ಕಳೆದ ಕೆಲವು ವರ್ಷಗಳಿಂದಲೂ ಈ ವ್ಯಾಪಾರವನ್ನು ಕಣ್ಣಾರೆಕಂಡು ಸಮೀಪದಿಂದ ಎಲ್ಲವನ್ನೂ ಅವಲೋಕಿಸಿದ್ದ ಈತನಿಗೆ ವ್ಯಾಪಾರದ ಮರ್ಮವೆಲ್ಲ ಚೆನ್ನಾಗಿ ತಿಳಿದಿತ್ತು. ಸಾಕಷ್ಟು ಹಣ ಕೈ ಸೇರಿದೊಡನೆ ಸ್ವತಂತ್ರವಾಗಿಯೇ ಆರಂಭವಾಗಿತ್ತು. ಅದಾಗಲೇ ವ್ಯಾಪಾರದಲ್ಲಿ ಚೆನ್ನಾಗಿ ಪಳಗಿದ್ದ ಈತನು ಯಾವ ತೊಡಕೂ ಇಲ್ಲದೆ ಬಹಳ ಬೇಗನೆ ಪ್ರಗತಿ ಸಾಧಿಸಿದನು.

"ಫ್ಯಾಕ್ಟರಿಯ ಕಡೆಗೆ ಗಮನಹರಿಸದಿದ್ದರೆ, ಕಬ್ಬಿಣ ತರಿಸದಿದ್ದರೆ ಫ್ಯಾಕ್ಟರಿಯ ವ್ಯವಹಾರದ ಗತಿಯೇನು? ಬೇಕಲ್ಲ? ಇಲ್ಲವಾದರೆ ಅವರಾದರೂ ಯಾಕಿರ್ತಾರೆ? ಈ ವಿಷಯವನ್ನೆಲ್ಲ ಅನಾರೋಗ್ಯದಿಂದಿರುವ ಮಾವನಿಗೆ ತಿಳಿಸಲು ಸಾಧ್ಯವಾ? ಫ್ಯಾಕ್ಟರಿ ನಡೆಯದಿದ್ದರೆ, ಖರ್ಚು ವೆಚ್ಚಗಳನ್ನು ನಿಭಾಯಿಸುವುದು ಹೇಗೆ? ಚಿಂತಿಸುತ್ತಾ ಮಲಗಿದವಳಿಗೆ ತಾನೆಲ್ಲೊ ಆಳವಾದ ನೀರಿನಲ್ಲಿ ಮುಳುಗಿ ಉಸಿರುಗಟ್ಟುತ್ತಿರುವಂತೆ ಭಾಸವಾಯಿತು. ಫ್ಯಾಕ್ಟರಿಯ ವ್ಯವಹಾರ, ಹಣದ ತಾಪತ್ರಯ ಮುಂತಾದ ವಿಷಯಗಳಲ್ಲಿ ರಶೀದಾ ಅಜ್ಞಳಾಗಿದ್ದಳು. ಗಂಡಸರು ತಂದು ಹಾಕಿದ್ದನ್ನು ಬೇಯಿಸಿ ಹಾಕುವುದಷ್ಟೇ ಹೆಂಗಸರ ಕೆಲಸ ಎಂದು ತಿಳಿದುಕೊಂಡಂತಹ ಪರಿಸರದಲ್ಲಿ ಬೆಳೆದಾಕೆ ಅವಳು. ಆರ್ಥಿಕ ಸಮಸ್ಯೆಗೆ ಪರಿಹಾರವೇನೆಂದು ಯೋಚಿಸಬೇಕಾದ ಸಂದರ್ಭ ತನಗೆ ಬರಬಹುದೆಂದು ಆಕೆ ಕನಸಿನಲ್ಲೂ ಊಹಿಸುವುದು ಸಾಧ್ಯವಿರಲಿಲ್ಲ."[11]

"ನಿಮ್ಮ ಮಾತುಕೇಳಿ ಒಂದು ಪಕ್ಷಕ್ಕೆ ಮಾತ್ರ ಹಣ ಕೊಟ್ಟು ಸುಮ್ಮನಾಗಿದ್ದರೆ ಇಂದು ಆ ಕಾಡು ನಮ್ಮದಾಗುತ್ತಿರಲಿಲ್ಲ. ಇಷ್ಟು ಹಣವೂ ಬರುತ್ತಿರಲಿಲ್ಲ. ನಾವು ಕೊಟ್ಟಿದ್ದು ಮೂರು ಪಕ್ಷಕ್ಕೆ ಮೂವತ್ತು ಸಾವಿರ ತಾನೆ? ಈಗ ನೋಡಿ, ನಮಗಾದ ಲಾಭ ಎಷ್ಟೆಂದು? ಸಾವಿರಬಿತ್ತಿ ಲಕ್ಷದ ಬೆಳೆ

ತೆಗೆಯುವುದು ಹೇಗೆಂದು ಈಗಲಾದರೂ ಅರ್ಥವಾಯಿತೇ? ಎಂದು ಕೇಳಿದರು ಮತ್ತು ತಮ್ಮ ಬುದ್ಧಿವಾದವನ್ನು ಮತ್ತು ಮುಂದುವರೆಸಿದರು."[12] ಹೀಗೆ ವ್ಯಾಪಾರದ ಬಗ್ಗೆ ಪರಿಚಯಿಸುತ್ತಾರೆ.

ಪರಿಸರ : ಸಹ್ಯಾದ್ರಿಯ ಬೆಟ್ಟದ ಆ ಮೇಲೆ ನಾಡಿನ ಪರಿಸರದ ಬಗ್ಗೆ ಸಾರಾ ಅವರು ತುಂಬಾ ರೋಮಾಂಚನವಾಗಿ ಚಿತ್ರಿಸಿದ್ದಾರೆ. ಆದ್ದರಿಂದ ಮುಸ್ಲಿಂರ ಆ ಮನೆತನಗಳ ಸಂಸ್ಕಾರದ ಬಗ್ಗೆ ಸಮಸ್ಯೆಗಳು ಮತ್ತು ಪರಿಹಾರದ ರೀತಿಯಲ್ಲಿ ಆಯಾ ಪರಿಸರಕ್ಕೆ ತಕ್ಕಂತೆ ಪರಿಸರದ ನಡುವೆ ವಿವರಿಸುತ್ತಾರೆ. ಅಷ್ಟೇ ಅಲ್ಲ ಅಲ್ಲಿ ಮುಸ್ಲಿಂ, ಕಾನೂನುಗಳ ಬಗ್ಗೆನು ತಿಳಿಸುತ್ತಾರೆ. ಉದಾ: 'ಚಂದ್ರಗಿರಿ ತೀರದಲ್ಲಿ' – ಕಾದಂಬರಿಯಲ್ಲಿ ಚಂದ್ರಗಿರಿ ತೀರದ ಪ್ರದೇಶವನ್ನು ಕುರಿತು ನಾದಿರಾಳ ಮುಖಾಂತರ ಆ ಪರಿಸರದ ವರ್ಣನೆ ಮಾಡುತ್ತಾರೆ. ಮಲೆನಾಡಿನ ಆ ಗಿಡ-ಬಳ್ಳಿಗಳು, ನೆಲ-ಜಲ, ನುಡಿಯ ಬಗ್ಗೆನು ಚಿತ್ರಿಸುತ್ತಾ ಸಮುದ್ರ, ನದಿಗಳು ಮತ್ತು ಪರಿಸರದ ಬಗ್ಗೆ ವಿವರಿಸುತ್ತಾರೆ. "ಬೇರೆಯೇ ಪರಿಸರ ಬೇರೆಯೇ ಜನರು, ಹೊರಭಾಗದ ದೃಶ್ಯವೂ ಈಗ ಬೇರೆಯಾಗಿಯೇ ಕಂಡಿತವಳಿಗೆ. ವಸಂತವೆಲ್ಲ ಕಳೆದು ಹೋಗಿತ್ತು.

ಕೆಂಪು, ನೀಲಿ, ಹಳದಿ ಹೂಗಳಿಂದ ತುಂಬಿದ ಮರಗಳಲ್ಲಿ ಹೂಗಳೆಲ್ಲವೂ ಉದುರಿ ಬೋಳಾಗಿ ಬರೀ ಅಡ್ಡಡ್ಡ ಹರಡಿದ ಕೊಂಬೆ ರೆಂಬೆಗಳು ತನ್ನನ್ನು ಅಣಕಿಸುವಂತೆ ತೋರಿತವಳಿಗೆ. ಕೋಗಿಲೆಗಳೆಲ್ಲವು ಹಾರಿ ಹೋಗಿದ್ದವೇನೋ, ಕಾಗೆಗಳ ಕರ್ಕಶ ಸ್ವರ ಮಾತ್ರ ಈಗವಳಿಗೆ ಇನ್ನಷ್ಟು ಕರ್ಣ ಕಠೋರವಾಗಿ ಕೇಳಿಸುತ್ತಿತ್ತು. ಸಹಪ್ರಮಾಣಿಕರ ಹೃದಯದಲ್ಲಿ ವಾತ್ಸಲ್ಯದೊರತೆಯೂ ಇರಲಿಲ್ಲ."[13] ಎದುರು ಬೆಂಚಿನ ಮಹಿಳೆ ತನ್ನಲ್ಲಿ ಆ ವ್ಯಕ್ತಿ ಮಗುವನ್ನು ಬಿಟ್ಟು ಹೋದಾಗ ಪರಿಸರದ ಪ್ರಭಾವದಿಂದ ಅಲ್ಲಿನ ಪ್ರಕೃತಿ ವರ್ಣನೆ ಕುರಿತು ತಿಳಿಸುತ್ತಾರೆ.

"ಮಳೆಗಾಲದ ದಿನವಾದುದರಿಂದ ಬೀದಿಯಲ್ಲಿ ಅಲ್ಲಲ್ಲಿ ನೀರು ನಿಂತಿತ್ತು. ದಟ್ಟ ಮೋಡವೊಂದು ಅಟ್ಟಿಸಿಕೊಂಡು ಬಂದು ಧಾರಾಕಾರವಾಗಿ ಮಳೆ ಸುರಿಯತೊಡಗಿತ್ತು. ಕೊಂಚ ಹೊತ್ತಿನಲ್ಲಿ ಮಳೆ ನಿಂತರೂ ತೋಡುಗಳಲ್ಲಿ ಕೆನ್ನೀರು ಹರಿಯುತ್ತಲೇ ಇತ್ತು. ಗೊರಬೆಯನ್ನು ಹೊದ್ದಕೊಂಡ ಹೆಂಗಸರು ಗದ್ದೆಗಳಲ್ಲಿ ಭತ್ತದ ಸಸಿ ನೆಡುತ್ತಿದ್ದರು. ತುಂಬಿ ಹರಿಯುತ್ತಿರುವ ಕೆರೆ ತೊರೆಗಳು, ಅಡಿಕೆ, ತೆಂಗುಗಳ ಗೊನೆಗಳು ಮರದ ತುಂಬ ತುಂಬಿಕೊಂಡು ಕಣ್ಮನ ತಣಿಸುತ್ತಿತ್ತು. ಒಂದು ಕ್ಷಣ ತನ್ನ ತೋಟದ ನೆನಪಾದರೂ ಮಗನ ಅಪಘಾತದ ಸುದ್ದಿ ತೋಟದ ನೆನಪಿಗೆ ತೆರೆಯೆಳೆಯಿತು. ದೂರದಲ್ಲಿ ಘಟ್ಟ ಮತ್ತು ಮೋಡಗಳ ಮಿಲನ ಧಾರಾಕಾರದ ಮಳೆಯಲ್ಲಿ ಪರ್ಯವಸಾನವಾಗುತ್ತಿತ್ತು. ಬೆಟ್ಟ ಗುಡ್ಡಗಳೆಡೆಯಿಂದ ಬಿಳಿ ನೊರೆಯುಕ್ಕಿಸಿ ದುಮ್ಮಿಕಿ ಹರಿಯುವ ಜಲಪಾತ ಎಂತಹವರನ್ನು ಮೈ ಮರೆಸುವ ಸೃಷ್ಟಿ ವೈಚಿತ್ರ್ಯ."[14] ಎಂದು ಪರಿಸರದ ವರ್ಣನೆ ಮಾಡುತ್ತಾರೆ.

ಮಾನವೀಯತೆ : ತಂದೆ-ತಾಯಿಗಳ ಎಚ್ಚರಿಕೆ ಮಕ್ಕಳಿಗೆ ಉತ್ತಮ ನಿಜಜೀವನ ಮಾರ್ಗದರ್ಶನವಾಗುತ್ತದೆ. ಸಾರಾ ಅವರು ತಮ್ಮ ಕಾದಂಬರಿಗಳ ಮುಖಾಂತರ ಮುಸ್ಲಿಂ ಮಹಿಳೆಯರ ಸಂವೇದನೆಗೆ ಬೆಳಕಾಗಿ ಗೋಚರಿಸುತ್ತಾರೆ. ಆದ್ದರಿಂದ ಅವರ ಕಾದಂಬರಿಗಳಲ್ಲಿ ಬಡವರು ಶ್ರೀಮಂತರು, ಮಹಿಳೆಯರ ನಿಖಾ, ಸಮಸ್ಯೆಗಳು – ಪರಿಹಾರಗಳು, ಹದಿಹರೆಯದ ವಯಸ್ಸಿನವರ ಎಡವಿದ ಕಥೆಗಳನ್ನು ಕೇಂದ್ರವಾಗಿಟ್ಟುಕೊಂಡು ಮಾನವೀಯತೆಯಿಂದ ಚಿತ್ರಿಸುತ್ತಾರೆ. ನಮ್ಮ ಸಮಾಜವು ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ಅರಿಯುವುದರಿಂದ ನಾಗರಿಕ ಜಗತ್ತಿಗೆ ಪರಿಚಯಿಸುವುದಾಗಿದೆ.

ಕಾದಂಬರಿಗಳಲ್ಲಿ ತಮ್ಮ ಪಾತ್ರಗಳ ಮುಖಾಂತರ ಹೇಳಿಸುತ್ತಾರೆ. "ಎಲ್ಲ ಮುಜುಗರ, ದುಃಖ, ದೈಹಿಕ ಅಸ್ವಸ್ಥತೆ ಹಾಗೂ ಅಸಹನೆಯೊಡನೆ ಆಕೆಯ ಹೃದಯಾಂತರಾಳದಲ್ಲಿ ಮಾನವೀಯತೆಯ ಹೊಸ ಒರತೆಯೊಂದು ನಿಧಾನವಾಗಿ ಜಿನುಗತೊಡಗಿತು. ಹೊಟ್ಟೆಯೊಳಗಿನ ಮಿಸುಕಾಟ ವೃದ್ಧಿಸಿದಂತೆ, ಮಾನವ ಜೀವಿಯೊಂದು ಹೊಟ್ಟೆಯೊಳಗೆ ಕೈಕಾಲಾಡಿಸಿದಂತಹ ಅನುಭವಾದಂತೆ ಆಕೆಯ ಹೃದಯ ಮೃದುವಾಗಿ ಹೊಡೆದುಕೊಳ್ಳುತ್ತಿತ್ತು. ಅದನ್ನು ಹುಟ್ಟಿಸಿದಾತನ ಕುರಿತು ದ್ವೇಷ ಮಡುಗಟ್ಟಿ ನಿಂತಿದ್ದರೂ ಎದೆಯಾಳದಲ್ಲಿ ತಾಯ್ತನದ ವಾತ್ಸಲ್ಯ ಮಾತ್ರ ನಿರಾಂತಕವಾಗಿ ಹರಿಯತೊಡಗಿತ್ತು." ಹೀಗೆ ಮಾನವೀಯತೆ ನೆಲೆಗಳನ್ನು ಕುರಿತು ಚರ್ಚಿಸುತ್ತಾ ಬಂದಿದ್ದಾರೆ.

ಒಟ್ಟಾರೆಯಾಗಿ ಡಾ. ಸಾರಾ ಅಬೂಬಕ್ಕರ್ ಅವರು ಮುಸ್ಲಿಂರ ಮತ್ತು ಸಮಾಜದ ನೈಜ ಘಟನೆಗಳನ್ನು ಆಧಾರಿಸಿ, ತಮ್ಮ ಸುತ್ತಮುತ್ತಣ ನಡೆದಿರುವ ಕಥೆಗಳು, ಘಟನೆಗಳು, ವಿಷಯಗಳನ್ನು ಸಾಹಿತ್ಯದ ರೂಪದಿಂದ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ, ಶಿಕ್ಷಣ, ಉದ್ಯೋಗ ಅವಕಾಶ, ವ್ಯಾಪಾರ, ಪರಿಸರ ಮತ್ತು ಮಾನವೀಯ ನೆಲೆಗಳಿಂದ ತಮ್ಮ ಕಾದಂಬರಿಗಳಲ್ಲಿ ಮತ್ತು ಇತರೆ ಸಾಹಿತ್ಯದ ರೂಪದಲ್ಲಿಯೂ ಸಹ ಚರ್ಚಿಸಿದ್ದಾರೆ. ಉತ್ತಮ ಸಮಾಜದ ಏಳಿಗೆಗೆ ಪ್ರತಿಕ್ರಿಯಿಸುತ್ತಿರುತ್ತಾರೆ.

ಆಕರ ಗ್ರಂಥಗಳು :

1. ಡಾ. ಸಾರಾ ಅಬೂಬಕ್ಕರ್ – 'ಕದನ ವಿರಾಮ', ಚಂದ್ರಗಿರಿ ಪ್ರಕಾಶನ, ಮಂಗಳೂರು.
2. ಡಾ. ಸಾರಾ ಅಬೂಬಕ್ಕರ್, 'ಇಳಿಜಾರು,' ಚಂದ್ರಗಿರಿ ಪ್ರಕಾಶನ, ಮಂಗಳೂರು.
3. ಡಾ. ಸಾರಾ ಅಬೂಬಕ್ಕರ್, 'ಸೂಳಿ,' ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
4. ಡಾ. ಸಾರಾ ಅಬೂಬಕ್ಕರ್, 'ಪಂಜರ,' ಚಂದ್ರಗಿರಿ ಪ್ರಕಾಶನ, ಮಂಗಳೂರು.
5. ಡಾ. ಸಾರಾ ಅಬೂಬಕ್ಕರ್, 'ಚಿಂತೆ ಚಿಂತನೆ,' ಚಂದ್ರಗಿರಿ ಪ್ರಕಾಶನ ಮಂಗಳೂರು.
6. ಡಾ. ಸಾರಾ ಅಬೂಬಕ್ಕರ್, 'ಚಪ್ಪಲಿಗಳು,' ಚಂದ್ರಗಿರಿ ಪ್ರಕಾಶನ, ಮಂಗಳೂರು.
7. ನಾಡೋಜ ಡಾ. ಸಾರಾ ಅಬೂಬಕ್ಕರ್, 'ಹೊತ್ತು ಕಂತುವ ಮುನ್ನ," ಚಂದ್ರಗಿರಿ ಪ್ರಕಾಶನ, ಮಂಗಳೂರು.
8. ಡಾ. ಸಾರಾ ಅಬೂಬಕ್ಕರ್, 'ತೇಲಾಡುವ ಮೋಡಗಳು,' ಚಂದ್ರಗಿರಿ ಪ್ರಕಾಶನ, ಮಂಗಳೂರು.
9. ಡಾ. ಸಾರಾ ಅಬೂಬಕ್ಕರ್, 'ಮನೋಮಿ,' ಚಂದ್ರಗಿರಿ ಪ್ರಕಾಶನ, ಮಂಗಳೂರು.
10. ನಾಡೋಜ ಡಾ. ಸಾರಾ ಅಬೂಬಕ್ಕರ್, 'ಸಂದೇಹದ ಸುಳಿಯಲ್ಲಿ,' ಚಂದ್ರಗಿರಿ ಪ್ರಕಾಶನ, ಮಂಗಳೂರು.
11. ಅನು: ಡಾ. ಸಾರಾ ಅಬೂಬಕ್ಕರ್, 'ಧರ್ಮದ ಹೆಸರಿನಲ್ಲಿ,' ಚಂದ್ರಗಿರಿ ಪ್ರಕಾಶನ, ಮಂಗಳೂರು.
12. ಸಂ: ಡಾ. ಸಬೀಹಾ, 'ಚಂದ್ರಗಿರಿ,' ಸಿರಿವರ ಪ್ರಕಾಶನ, ಬೆಂಗಳೂರು.

[1] ಡಾ. ಸಾರಾ ಅಬೂಬಕ್ಕರ್, 'ಇಳಿಜಾರು,' ಪುಟ-115.

[2] ಸಾರಾ ಅಬೂಬಕ್ಕರ್, 'ಸುಳಿ,' ಪು-251.
[3] ಚಪ್ಪಲಿಗಳು 'ಧರ್ಮ ಬಲೆ ಬೀಸಿದಾಗ,' – ಸಾರಾ ಅಬೂಬಕ್ಕರ್, ಪುಟ-70.
[4] ಸಾರಾ ಅಬೂಬಕ್ಕರ್, 'ಕದನವಿರಾಮ,' ಪುಟ-111
[5] ಸಾರಾ ಅಬೂಬಕ್ಕರ್, 'ಚಿಂತೆ-ಚಿಂತನೆ,' ಪುಟ-42-43.
[6] ಸಾರಾ ಅಬೂಬಕ್ಕರ್ ಅವರ ಕಥಾಸಾಹಿತ್ಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಗೃಹಿಕೆಗಳು, ಅನ್ನಪೂರ್ಣ, ಪು- 51.
[7] ಎಸ್.ವಿ. ಪ್ರಭಾವತಿ, 'ದಾಂಪತ್ಯದ ಹಕ್ಕು ಬಾಧ್ಯತೆಗಳು,' ಚಂದ್ರಗಿರಿ, ಪುಟ-204-205.
[8] ಸಾರಾಅಬೂಬಕ್ಕರ್ – ಚಂದ್ರಗಿರಿ – ಹೆಜ್ಜೆಹಾದಿ – ಪುಟ-5.
[9] ಸಾರಾ ಅಬೂಬಕ್ಕರ್, ಪ್ರವಾಹ ಸುಳಿ – ಪುಟ-5.
[10] ಡಾ. ಸಾರಾ ಅಬೂಬಕ್ಕರ್, ಇಳಿಜಾರು, ಪುಟ. 48-49.
[11] ಡಾ. ಸಾರಾ ಅಬೂಬಕ್ಕರ್, 'ಇಳಿಜಾರು,' ಪುಟ-36-37.
[12] ಡಾ. ಸಾರಾ ಅಬೂಬಕ್ಕರ್, 'ಚಪ್ಪಲಿಗಳು,' ಪುಟ-185.
[13] ನಾಡೋಜ ಡಾ ಸಾರಾ ಅಬೂಬಕ್ಕರ್, 'ಚಪ್ಪಲಿಗಳು,' ಪಯಣ, ಪು. 19..
[14] ಸಾರಾ ಅಬೂಬಕ್ಕರ್, 'ಸುಳಿ,' ಪು. 273-274.

ರಹಮತ್ ತರೀಕೆರೆ ಅವರ ಸಮಗ್ರ ಸಾಹಿತ್ಯದಲ್ಲಿ ಸ್ತ್ರೀವಾದಿ ವಿಮರ್ಶೆಯ ನಿಲುವುಗಳು – ಒಂದು ಅವಲೋಕನ

ರಮೇಶ.
ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು

1) ಹಿನ್ನೆಲೆ : ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಪ್ರತಿಭಾವಂತ ಸಾಹಿತಿ ಹಾಗೂ ಸಂಸ್ಕೃತಿ ಚಿಂತಕರಾದ ಪ್ರೊ. ರಹಮತ್ ತರೀಕೆರೆ ಅವರ ಸಮಗ್ರ ಸಾಹಿತ್ಯವನ್ನು 'ಸ್ತ್ರೀವಾದಿ ವಿಮರ್ಶೆ'ಯ ಹಿನ್ನೆಲೆಯಿಂದ ಪರಿವೀಕ್ಷಿಸಲಾಗಿದೆ. ರಹಮತ್ ತರೀಕೆರೆ ಅವರು ಸಾಹಿತ್ಯ, ವಿಮರ್ಶೆ, ಗ್ರಂಥಸಂಪಾದನೆ, ಸಂಶೋಧನೆ, ಅನುವಾದ, ಜಾನಪದ, ಕನ್ನಡ ಸಾಹಿತ್ಯ ಮೀಮಾಂಸೆ, ಸಂದರ್ಶನ, ಪ್ರವಾಸ ಕಥನ ಹಾಗೂ ಪತ್ರಿಕಾಲೇಖನಗಳ ಮೂಲಕ ಕನ್ನಡದ ಓದುಗರಿಗೆ ಚಿರಪರಿಚಿತರು. ರಹಮತ್ ತರೀಕೆರೆ ಅವರ ಸಮಗ್ರ ಸಾಹಿತ್ಯದ ಹಿನ್ನೆಲೆಯಿಂದ ಈ ಲೇಖನದ ಚರ್ಚೆಯು ಬೆಳೆದಿದೆ.

ಪ್ರಸಕ್ತ ಶತಕದ ಉತ್ತರಾರ್ಧದಲ್ಲಿ ಮುಖ್ಯವಾಗಿ ಅಮೇರಿಕ ಮತ್ತು ಫ್ರಾನ್ಸ್ ದೇಶಗಳಲ್ಲಿ 'ಸ್ತ್ರೀ ಸ್ವಾತಂತ್ರ್ಯ ಚಳವಳಿ'ಯು ಬೆಳೆಯಿತು. ಈ ಚಳವಳಿಯ ಫಲಶೃತಿಯಾಗಿ 'ಸ್ತ್ರೀ ನಿಷ್ಠ ವಿಮರ್ಶೆ' Feminist Criticism) ಹುಟ್ಟಿತು. ಸ್ತ್ರೀ ನಿಷ್ಠ ವಿಮರ್ಶೆಯು ಸಮಾಜ ಕೇಂದ್ರಿತ ವಿಮರ್ಶೆಯ ಒಂದು ಮುಖ್ಯ ಕವಲಾಗಿದೆ. ಈ ವಿಮರ್ಶಾ ವಿಧಾನವು ಮನೋವೈಜ್ಞಾನಿಕ ವಿಮರ್ಶೆ ಮತ್ತು ಮಾರ್ಕ್ಸ್‌ವಾದಿ ವಿಮರ್ಶೆಗಳಿಗೆ ರಡಕ್ಕೂ ಸಮೀಪವಾಗಿದೆ. ಸ್ತ್ರೀನಿಷ್ಠ ವಿಮರ್ಶೆಯನ್ನು ಸ್ತ್ರೀಚಳುವಳಿಯ ಮುಖ್ಯ ವಿಕ್ತಾರರಾದ ಸಿಮೋನ್‌ದಬೋವಾ, ಜೂಲಿಯಾ ಕ್ರಿಸ್ಟೇವ್, ಮತ್ತು ಕೇಟ್ ಮಿಲೆಟ್ ಅವರು ಬೆಳೆಸಿದರು.

2) ಸ್ತ್ರೀವಾದಿ ವಿಮರ್ಶೆಯ ಸೈದ್ಧಾಂತಿಕ ನೆಲೆಗಳು : ಸ್ತ್ರೀನಿಷ್ಠ ವಿಮರ್ಶೆಯ ಸೈದ್ಧಾಂತಿಕ ನೆಲೆಗಳ ಬಗ್ಗೆ ನಿಶ್ಚಿತವಾದ ಆವರಣಗಳಿಲ್ಲ. ಈ ವಿಮರ್ಶೆಯು ಮಾರ್ಕ್ಸ್‌ವಾದಿ ವಿಮರ್ಶೆಯಂತೆಯೇ ನಾನಾ ರೂಪಗಳಲ್ಲಿ ಅಥವಾ ಪರಸ್ಪರ ವಿರೋಧ ರೂಪಗಳಲ್ಲಿ ಬೆಳೆದಿದೆ. ಸ್ತ್ರೀನಿಷ್ಠ ವಿಮರ್ಶಕಿಯರಲ್ಲಿ ಕೆಲವರು ಸ್ತ್ರೀವಾದಿ ವಿಮರ್ಶೆಗೆ ಸೈದ್ಧಾಂತಿಕ ನೆಲೆಯನ್ನು ಮಂಡಿಸುವ ಪ್ರಯತ್ನವನ್ನು ವಿರೋಧಿಸುತ್ತಾರೆ. ಸಿದ್ಧಾಂತಗಳು – ತತ್ತ್ವಪ್ರಣಾಲಿಗಳ ಹಿಂದೆ ಪುರುಷತ್ವ (Male principle) ಇರುವುದನ್ನು ಮನಗಂಡ ಸ್ತ್ರೀವಾದಿ ವಿಮರ್ಶಕಿಯರು ಸ್ತ್ರೀತ್ವವನ್ನು 'ಯಾವ ಒಂದು ಸಿದ್ಧಾಂತಕ್ಕೂ ಕಟ್ಟು ಬೀಳದ, ವಿವಿಧ ಕ್ಷೇತ್ರಗಳಲ್ಲಿ ಸರಾಗವಾಗಿ ಹರಿಯುವ ಪ್ರಜ್ಞೆಯೆಂದು ಪರಿಗಣಿಸುತ್ತಾರೆ'. ಆದರೆ ಅಧ್ಯಯನ ಅನುಕೂಲಕ್ಕಾಗಿ ಸಾಹಿತ್ಯಿಕವಾಗಿ ಸ್ತ್ರೀನಿಷ್ಠ ಚಿಂತನೆಯನ್ನು ಕಾಲಾನುಕ್ರಮದಲ್ಲಿ ವಿವರಿಸಬಹುದಾಗಿದೆ.

3) ಸಾಹಿತ್ಯ ವಿಮರ್ಶೆಯೊಳಗಿನ ಸ್ತ್ರೀವಾದಿ ವಿಮರ್ಶೆಯ ನಿಲುವುಗಳು : ರಹಮತ್ ತರೀಕೆರೆ ಅವರ 'ಸಾಹಿತ್ಯ ವಿಮರ್ಶೆ'ಯಲ್ಲಿ ಸ್ತ್ರೀನಿಷ್ಠೆಯನ್ನು ಸ್ಥೂಲವಾಗಿ ಗುರುತಿಸುವ ಪ್ರಯತ್ನವನ್ನು ಮಾಡಬಹುದಾಗಿದೆ. ಸಾಹಿತ್ಯದ ಗಂಭೀರ ಓದುಗರಾದ ರಹಮತ್ ತರೀಕೆರೆ ಅವರ ಮೇಲೆ 19ನೆಯ ಶತಮಾನದ ಲೇಡಿ ಮೇರಿ ವರ್ಟಿಲಿ ಮೊಂಟೆಗೂ (Lady Mary Wortly Mantagu) (1968-1722) ಮತ್ತು ಮೇರಿ ವುಲ್‌ಸ್ಟನ್ ಕ್ರೌಫ್ಟ್ (Mary Wollstone Craft (1759-1797) ಅವರ ಪ್ರಭಾವವಿದೆ. ಇದರಿಂದಾಗಿ ಪ್ರತಿಸಂಸ್ಕೃತಿ ಚಿಂತನೆಯಲ್ಲಿ ರಹಮತ್ ತರೀಕೆರೆ ಅವರು 'ಪುರುಷ ನಿರ್ಮಿತ ಮಾದರಿ'ಗಳನ್ನು ತಿರಸ್ಕರಿಸುತ್ತಾರೆ. ಸ್ತ್ರೀತ್ವದಲ್ಲಿ ಸ್ತ್ರೀಯರ ಹಕ್ಕುಗಳ ಸಮರ್ಥನೆಯೇ ಮುಖ್ಯವಾಗುತ್ತದೆ ಎಂಬ ನಿಲುವು ರಹಮತ್ ತರೀಕೆರೆ ಅವರಲ್ಲಿದೆ. ಜನಪದ ಸಾಹಿತ್ಯ ಚಿಂತನೆಯಲ್ಲಿ ಪುರುಷ ನಿರ್ಮಿತ ಮಾದರಿಯ ಜೀವನಕ್ರಮವಿರುವುದನ್ನು ರಹಮತ್ ತರೀಕೆರೆ ಕಂಡುಕೊಂಡು ಸ್ತ್ರೀಪರ ಚಿಂತನೆಗೆ ಆದ್ಯತೆಯನ್ನು ನೀಡುತ್ತಾರೆ.

ಕೀಳಿರಿಮೆಯಿಂದ ಕೂಡಿದ ಆತ್ಮದ್ವೇಷ ನಿಲುವಿನ ಸ್ತ್ರೀಯರ ಅಭಿವ್ಯಕ್ತಿಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿವೆ. "ಹೆಣ್ಣಾಗಿ ಹುಟ್ಟೋಕ್ಕಿಂತ ಮಣ್ಣಾಗಿ ಹುಟ್ಟಿದರೆ' ಎಂಬ ಮಾತು ಸಂಸ್ಕೃತಿಯ ಶೋಷಣೆಯನ್ನು ಪ್ರತಿನಿಧಿಸುವಂತಿದೆ. ಇಲ್ಲಿ ಜನಪದ ಸ್ತ್ರೀಯರ ನೋವು-ಅಪಮಾನಗಳು ಮಡುಗಟ್ಟಿದೆ. ಆಧುನಿಕ ಸ್ತ್ರೀವಾದದ ಕೇಂದ್ರವನ್ನು ಪ್ರತಿನಿಧಿಸುವ ಮಹಿಳಾ ಸಾಹಿತ್ಯ/ತಿಗಳ ಪರವಾದ ಅಭಿಪ್ರಾಯವೊಂದು ಹೀಗಿದೆ, "ಓರ್ವ ಸ್ತ್ರೀ ಉತ್ತಮ ಸಾಹಿತ್ಯವನ್ನು ರಚಿಸಬೇಕಾದರೆ ಅವಳಿಗೆ ತನ್ನದೇ ಆದ ಕೊಠಡಿ ಸ್ವತಂತ್ರ ಸ್ಥಳ ಮತ್ತು ಸ್ವಂತ ಆದಾಯಗಳಿರಬೇಕು" (ವರ್ಜಿನಿಯಾ ವುಲ್ಫ್ (1882-1941), "ತನ್ನದೇ ಸ್ವತಂತ್ರ ಕೊಠಡಿ" (A room of One's own, 1929) ನಿಜವಾಗಿಯೂ ಪುರುಷರು ಸ್ತ್ರೀಯನ್ನು ಅನ್ಯಳಾಗಿಸುವುದು, ಸ್ತ್ರೀ-ಪುರುಷರ ಸ್ಥಾನಮಾನಗಳ ವ್ಯತ್ಯಾಸಗಳಿಗೆ ಸಂಸ್ಕೃತಿಯ ಕೊಡುಗೆಯೂ ಇದ್ದೇ ಇದೆ ಎಂದು ರಹಮತ್ ತರೀಕೆರೆ ಪ್ರತಿಪಾದಿಸಿದ್ದಾರೆ. ಸ್ತ್ರೀಶೋಷಣೆ, 'ಒಂದು ನಿರ್ದಿಷ್ಟ ಕಾಲಮಾನದ ಸಾಮಾಜಿಕ ನಿರ್ಮಿತಗಳೇ ಹೊರತು ಜನ್ಮಜಾತವಲ್ಲ' ಎಂಬಂಥ ಮೌಲಿಕ ವಿಚಾರಗಳನ್ನು ರಹಮತ್ ತರೀಕೆರೆ ಅವರು ಸಾಹಿತ್ಯ ಸಂಸ್ಕೃತಿ ಚಿಂತನೆಗಳಲ್ಲಿ ಒಳಗೊಳ್ಳುತ್ತಾರೆ. ಶಾಂತರಸರ ಕತೆಗಳನ್ನು ವಿಮರ್ಶಿಸುವಾಗ ರಹಮತ್ ತರೀಕೆರೆ ಅವರು ಹೀಗೆನ್ನು

ತ್ತಾರೆ,"ಶಾಂತರಸದ ಕತೆಗಳು "ಹಾದರದ ಕತೆಗಳು" ಅನಿಸುವುದುಂಟಾದರೂ ಹೈದ್ರಾಬಾದ್ ಕರ್ನಾಟಕದ ಊಳಿಗ ಮಾನ್ಯ ಪದ್ಧತಿಯೂ ನವಾಬರ ಆಳ್ವಿಕೆಯೂ ಸೇರಿ ನಿರ್ಮಿಸಿದ್ದ ದಯನೀಯ ಸ್ತ್ರೀಜಗತ್ತಿನ ವಾಸ್ತವವೇ ಅದಾಗಿತ್ತು"[1] ಎಂದಿದ್ದಾರೆ. ರಹಮತ್ ತರೀಕೆರೆ ಅವರು ವ್ಯಾಪಕವಾಗಿ, ಶಾಸ್ತ್ರೀಯವಾಗಿ ಮತ್ತು ಪ್ರಭಾವಶಾಲಿಯಾಗಿ ಸ್ತ್ರೀಕೇಂದ್ರಿತ ಚಿಂತನೆಗೆ ಅಭಿವ್ಯಕ್ತಿಯನ್ನು ನೀಡುತ್ತಾರೆ. ಅವರು ಚರಿತ್ರೆಯ ನಿರಂತರತೆಯಲ್ಲಿ ಸ್ತ್ರೀಯ ಸ್ಥಿತಿಯನ್ನು ಮನ:ಶಾಸ್ತ್ರ, ಮತ-ಧರ್ಮ, ಚರಿತ್ರೆ, ಸಾಹಿತ್ಯ ಮತ್ತು ತಾತ್ತ್ವಿಕವಾಗಿ ವಿಶ್ಲೇಷಿಸುತ್ತಾರೆ. ಪ್ರಾಚೀನ ಕಾಲದಿಂದಲೂ ಎಲ್ಲಾ ಸಮಾಜಗಳಲ್ಲಿ ಸ್ತ್ರೀ ಎರಡನೆಯ ದರ್ಜೆಯ ಪ್ರಜೆ'ಯಾಗಿ ಉಳಿದಿದ್ದಾಳೆ. ಲಿಂಗಭೇದ ಹೇಗೆ ಸ್ತ್ರೀಗೆ ಮಾತ್ರವಲ್ಲದೆ ಇಡೀ ಸಮಾಜಕ್ಕೆ ಹಾನಿಕಾರಕವೆಂದು ರಹಮತ್ ತರೀಕೆರೆ ಅವರು ವಿಶ್ಲೇಷಿಸುತ್ತಾರೆ. ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸ್ತ್ರೀಪರವಾದ ಸ್ತ್ರೀವಾದಿ ಚಿಂತನೆಯ ಸಾಹಿತ್ಯ ಸೃಷ್ಟಿಯಾಗಿದೆ. "ಹೆಣ್ಣು, ತೋಳಗಳ ನಡುವಿನ ಕುರಿಮರಿಯಂತೆ, ಕೇವಲ ಅನುಭವಿಸುವ ವಸ್ತುವಾಗಿಸಿರುವ ಸಾಮಾಜಿಕ ಮನೋಧರ್ಮ ಇರುವ ಭಾಗದಿಂದ ಬಂದ (ಶಾಂತರಸರನ್ನೊಳಗೊಂಡ ವಾಲಿಕಾರ, ಕುಂವೀ, ನೀರಮಾನ್ವಿ ಮೊದಲಾದ) ಕತೆಗಾರರಲ್ಲಿ ಇದೇ ಹೆಣ್ಣನ್ನು ಜೀವಶಕ್ತಿಯ ಸೆಲೆಯಾಗಿ, ಪ್ರತಿಭಟನೆಯ ಮೂರ್ತಿಯಾಗಿ ಕಾಣಿಸುವುದು ಅರ್ಥಪೂರ್ಣವಾಗಿದೆ"[2] ಎನ್ನುವ ರಹಮತ್ ತರೀಕೆರೆ ಅವರು ಸ್ತ್ರೀನಿಷ್ಠ ವಿಮರ್ಶೆಗೆ ಬದ್ಧರಾಗಿದ್ದಾರೆ. ಪ್ರಾಚೀನ ಕಾಲದಿಂದಲೂ ಪುರುಷರು ಸ್ತ್ರೀಯನ್ನು ಸ್ವತಂತ್ರ್ಯ ವ್ಯಕ್ತಿಯಂತಲ್ಲದೆ ಪುರುಷತ್ವಕ್ಕೆ ಪೂರಕವಾಗುವ 'ತಾಯಿ', 'ಪತ್ನಿ', 'ವೇಶ್ಯೆ', ಇತ್ಯಾದಿ ಸಿದ್ಧ ಪಡಿಯಚ್ಚುಗಳಲ್ಲಿ ಕಂಡಿದ್ದಾರೆ. ಸ್ತ್ರೀಯ ಪಾಲನೆ, ಅವಳಿಗೆ ನೀಡುವ ಶಿಕ್ಷಣ, ಅವಳ ಸಾಮಾಜಿಕ ಪರಿಸ್ಥಿತಿ ಇವೆಲ್ಲವೂ ಸ್ತ್ರೀಯನ್ನು ಒಂದು ಪೂರ್ವ ನಿರ್ಧಾರಿತ ಪ್ರಕಾರದಲ್ಲಿ ನಿಯಂತ್ರಿಸಿ ಸ್ವತ ಅವಳೇ ತನ್ನ ಪರಾಧೀನ ಸ್ಥಿತಿಯನ್ನು ಒಪ್ಪಿಕೊಳ್ಳುವಂತೆ ಮಾಡಲಾಗುತ್ತದೆ. ರಹಮತ್ ತರೀಕೆರೆ ಅವರು ಶಾಂತರಸರ ಕತೆಗಳನ್ನು ವಿಶ್ಲೇಷಿಸುತ್ತಾ ಆ ಕತೆಗಳಲ್ಲಿನ ಸ್ತ್ರೀ ಪ್ರಧಾನ ಜಗತ್ತನ್ನು ಹೀಗೆ ಪರಿಚಯಿಸಿದ್ದಾರೆ. "ಮಲ್ಲಮ್ಮ, ರಾಜಮ್ಮ, ಸಾವಿತ್ರಿಯಂತ ಎಷ್ಟೋ ಧೀಮಂತ ಪಾತ್ರಗಳು ಗಂಡಸರ ಸಣ್ಣತನಗಳೆದುರೇ ಬೆಳೆಯುತ್ತವೆ, ಸಾಮಾಜಿಕವಾಗಿ ಆರ್ಥಿಕವಾಗಿ ಪರಾವಲಂಬಿಗಳಾಗಿ ಬದುಕಬೇಕಾದ ಅಸಾಯಕ ವಾಸ್ತವದಲ್ಲೇ ತಮ್ಮ ದಿಟ್ಟತನವನ್ನೂ ತೋರುತ್ತವೆ. ಅವರ ಇಚ್ಛಾಶಕ್ತಿ, ಬದುಕುವ ಹಠ, ಪ್ರೇಮಪ್ರೀತಿಗಾಗಿ ನಿರ್ಣಾಯಕಗಳಿಗೆಗಳಲ್ಲಿ ಸಂಪ್ರದಾಯದ ಕಟ್ಟುಗಳನ್ನು ಹರಿದೊಗೆಯುವ ಮನೋಬಲ, ಇವುಗಳ ಎದುರು ಗಂಡಸರು ಕ್ಷುದ್ರವಾಗಿ ದುರ್ಬಲವಾಗಿ ಕಾಣುತ್ತಾರೆ. ಈ ಕತೆಗಳು ಹೈದ್ರಾಬಾದ್ ಕರ್ನಾಟಕದ ಸ್ತ್ರೀ ಬದುಕಿನ ಅಧ್ಯಯನಕ್ಕೆ ಆಕರಗಳಂತಿವೆ."[3] ಶಾಂತರಸರು ತಮ್ಮ ಕತೆಗಳಲ್ಲಿ ಧೀಮಂತ ಸ್ತ್ರೀ ಪಾತ್ರಗಳನ್ನು ಸೃಷ್ಟಿಸುವ ಮೂಲಕ ಸ್ತ್ರೀವಾದಿ ನಿಲುವಿಗೆ ಬದ್ಧರಾಗಿದ್ದಾರೆ. ಸ್ವತಂತ್ರ್ಯಮನೋಭಾವದ, ಆರ್ಥಿಕವಾಗಿ ಸ್ವಾವಲಂಬಿಗಳಾದ; ದಿಟ್ಟತನದ ಮತ್ತು ಪ್ರಬಲ ಇಚ್ಛಾಶಕ್ತಿಯ ಸ್ತ್ರೀ ಪಾತ್ರಗಳು ಗುಣಾತ್ಮಕ ಜೀವದ ಮೌಲ್ಯವನ್ನು ಪ್ರತಿನಿಧಿಸುತ್ತವೆ. ಇಲ್ಲಿನ ಕತೆಗಳು ಪರಾಧೀನ ಪರಿಸ್ಥಿತಿಯಿಂದ ಸ್ತ್ರೀಹೊರಬರಬೇಕಾದರೆ ಆಗಬೇಕಾದ ಸಾಮಾಜಿಕ-ವೈಚಾರಿಕ ಪರವರ್ತನೆಗಳ ಅಗತ್ಯತೆಯನ್ನು ತಿಳಿಸುತ್ತವೆ.

ಶಾಂತರಸರ ಕತೆಗಳು "ಯಾವಾಗಲೂ ಹೆಣ್ಣಿನ ಉದಾರತೆ ಅನುಕಂಪಗಳನ್ನೂ, ಲೈಂಗಿಕ ಸ್ವಾತಂತ್ರ್ಯದ ಅಸೀಮ ಧೈರ್ಯವನ್ನು ಶ್ರದ್ಧೆ ಮತ್ತು ಪ್ರೀತಿಯಿಂದ ಚಿತ್ರಿಸುವುದೇ ಪತನಮುಖಿ ಸಮಾಜವನ್ನು ತಿರಸ್ಕರಿಸುವ ಪ್ರತಿಸಂಸ್ಕೃತಿ ವಿಧಾನವಾಗಿದೆ"[4] ಎನ್ನುವ ರಹಮತ್ ತರೀಕೆರೆ ಅವರು ಸ್ತ್ರೀನಿಷ್ಠ ವಿಮರ್ಶಕರಿಗೆ ಗುರುತಿಸಿಕೊಳ್ಳುತ್ತಾರೆ. ಮುಖ್ಯವಾಗಿ ರಹಮತ್ ತರೀಕೆರೆ ಅವರು ಸ್ತ್ರೀಯರಿಗೆ ನಿರಂತರವಾಗಿ ಆಗಿರುವ ಸಾಂಸ್ಕೃತಿಕ ವಿದ್ರೋಹಗಳ ಬಗ್ಗೆಯೂ ಚರ್ಚಿಸುತ್ತಾರೆ. ಈ ಚರ್ಚೆ ಸ್ತ್ರೀಯ ಆತ್ಮಪ್ರತ್ಯೇಯವನ್ನೂ ಪ್ರತಿನಿಧಿಸುತ್ತದೆ. ಸ್ತ್ರೀಕೇಂದ್ರಿತ ಕಥೆಗಳಲ್ಲಿ ಸ್ತ್ರೀಯರ ಉದಾರತೆ, ಅನುಕಂಪ, ಲೈಂಗಿಕ ಸ್ವಾತಂತ್ರ್ಯ, ಅಸೀಮಧೈರ್ಯ, ಶ್ರದ್ಧೆ ಮತ್ತು ಪ್ರೀತಿಯ ಅನಾವರಣಗಳಿದ್ದರೆ ಅದು ಇತ್ಯಾತ್ಮಕ ದೃಷ್ಟಿಕೋನವಾಗಿರುತ್ತದೆ.

ರಹಮತ್ ತರೀಕೆರೆ ಅವರು ಸಾಮಾಜಿಕವಾಗಿ ಸ್ತ್ರೀಯರು ಅನ್ಯವಾಸುವಿಕೆ (Othering) ಯನ್ನು ವಿರೋಧಿಸುತ್ತಾರೆ. ಪುರುಷರನ್ನು ಮಾನವತೆಯ ಸ್ವಯಂಪೂರ್ಣ ಪ್ರತಿನಿಧಿಯೆಂದು ಒಪ್ಪಿಕೊಂಡಂತೆ ಸ್ತ್ರೀಯನ್ನೂ, ಹಾಗೆಯೇ ಒಪ್ಪಬೇಕೆಂದು ಹೇಳುತ್ತಾರೆ. 'ಪುರುಷ ತತ್ತ್ವ'ದ ಆಧಾರದ ಮೇಲೆ ಸ್ತ್ರೀ ತನ್ನನ್ನು, ತನ್ನ ಮಿತಿಗಳನ್ನು ಕೊರತೆಗಳನ್ನು ಗುರುತಿಸಬೇಕಾದ ಪರಿಸ್ಥಿತಿಯನ್ನು ರಹಮತ್ ತರೀಕೆರೆ ವಿರೋಧಿಸುತ್ತಾರೆ. ಅಲ್ಲದೆ ರಹಮತ್ ತರೀಕೆರೆ ಅವರು 'ಹೆಣ್ಣಿಗಿರುವಂತೆ ಗಂಡಿಗೂ ವಿಶಿಷ್ಟ ದೈಹಿಕ ಅಂಗಗಳಿವೆಯೆಂದು, ದೈಹಿಕ ಮಿತಿಗಳಿವೆಯೆಂದು ಪುರುಷನಿಗೆ ತೋಚುವುದೇ ಇಲ್ಲ' ಎಂದು ವಿವೇಚಿಸುತ್ತಾರೆ. ಅವರ ಚಿಂತನೆಯಲ್ಲಿ ಸ್ತ್ರೀವಾದಿ ನಿಲುವುಗಳಿವೆ.

ಶಾಂತರಸರ ಕಥೆಗಳು ಲೈಂಗಿಕ ಸಂಬಂಧಗಳನ್ನು ಕೇಂದ್ರವಾಗಿಟ್ಟುಕೊಂಡು ಬೆಳೆಯುತ್ತದೆ. "ಇಲ್ಲಿನ ಕತೆಗಳ ವಸ್ತುವಾದ 'ಘರ್ಷಣೆಗೆ', ಹೆಣ್ಣನ್ನು ಹಂಚಿಕೊಳ್ಳಲು ಆಳುವ ವರ್ಗ ನಡೆಸುವ ಕಲಹಗಳೇ ಕಾರಣವೆಂದು ಹೇಳಬಹುದು"[5] ಎಂದು ರಹಮತ್ ತರೀಕೆರೆ ಹೇಳುತ್ತಾರೆ. ಸಾಮಾಜಿಕ ವಾಸ್ತವ ಸ್ಥಿತಿ, ಕತೆಗಾರನ ವೈಯಕ್ತಿಕ ಅಭಿರುಚಿ ಅಥವಾ ಕಥಾ ದೃಷ್ಟಿಯಿಂದಾಗಿ ಶಾಂತರಸರ ಕಥೆಗಳಲ್ಲಿ ಲೈಂಗಿಕ ವರ್ಣನೆಗಳು ಹನಿಹನಿಯಾಗಿರುವುದನ್ನು ರಹಮತ್ ತರೀಕೆರೆ ವಿಮರ್ಶಿಸಿ, 'ಶಾಂತರಸರು ಇದನ್ನು ತಮ್ಮ ಕತೆಗಳ ಆಕರ್ಷಣೆಯ ಅಗ್ಗದ ತಂತ್ರವಾಗಿ ಬಳಸುತ್ತಿದ್ದಾರೆಯೇ' ಎಂದೂ ಅನುಮಾನಿಸುತ್ತಾರೆ. ಕೆಲವು ಕಥೆಗಳಲ್ಲಿ ಲೈಂಗಿಕತೆಯು ಜೀವನ ಶ್ರದ್ಧೆಯ ಕ್ರಿಯಾಶೀಲತೆಯ ಅಂಶವಾಗಿರುವುದನ್ನು ರಹಮತ್ ತರೀಕೆರೆ ವಿವರಿಸಿದ್ದಾರೆ. ಈ ಹಿನ್ನೆಲೆಯಿಂದ, 'ಸಂಬಂಧಗಳು' ಕತೆಯು ಆರೋಗ್ಯ ಪೂರ್ಣ ಧೋರಣೆಯ ಲೈಂಗಿಕ ಪವಿತ್ರ್ಯದಾಚೆಗಿನ ಪ್ರೇಮವನ್ನು ತೋರುವ ಶ್ರೇಷ್ಠ ಕತೆಯಾಗಿದೆ ಎಂಬುದನ್ನು ರಹಮತ್ ತರೀಕೆರೆ ಒಪ್ಪುತ್ತಾರೆ.

ಸ್ತ್ರೀಯನ್ನು 'ಪುರುಷನಲ್ಲದವಳು' ಎಂಬ ವ್ಯಾಖ್ಯಾನದಲ್ಲಿ ಅಡಗಿಸಿ, ಸ್ತ್ರೀಯೆಂದರೆ ಹೀಗೆ 'ಸ್ವತಂತ್ರ್ಯ ಅಸ್ತಿತ್ವವಿಲ್ಲದಿರುವಳು' ಎಂಬ ಪರಿಭಾವನೆಯನ್ನು ರಹಮತ್ ತರೀಕೆರೆ ನಿರಾಕರಿಸುತ್ತಾರೆ. ಸ್ತ್ರೀ ಪ್ರಜ್ಞೆಯ ವಿಸ್ತರಿಸುವ ಚಳವಳಿಗಳನ್ನು ಮತ್ತು ಅರಿವನ್ನು ಬೆಳೆಸುವ ಸ್ತ್ರೀವಾದವನ್ನು ರಹಮತ್ ತರೀಕೆರೆ ಸ್ವಾಗತಿಸುತ್ತಾರೆ. ಎಲ್.ಎಸ್. ಶೇಷಗಿರಿರಾಯರು ಅನಕೃ ಅವರ ಸ್ತ್ರೀ ಪಾತ್ರ ಚಿತ್ರಣವನ್ನು ಒಪ್ಪುತ್ತಾರಾದರೂ ರಹಮತ್ ತರೀಕೆರೆ ಅವರು 'ತ್ಯಾಗಜೀವಿ' ಸ್ವಂತಿಕೆಯನ್ನು ನಿರಾಕರಿಸುವ ಪತಿ-ವ್ರತೆಯರ ಪಾತ್ರಗಳನ್ನು ಆಕ್ಷೇಪಿಸುತ್ತಾರೆ. ಅನಕೃ ಅವರ ಕಾದಂಬರಿಗಳಲ್ಲಿ ಹೆಣ್ಣು ಕ್ಷುದ್ರವಾಗಿ ಚಿತ್ರಿತವಾಗಿದ್ದಾಳೆ. ಅನಕೃ ಅವರ ಮೇಲೆ ಶರಚ್ಚಂದ್ರರ ಪ್ರಭಾವವಾಗಿಲ್ಲ ಎಂಬುದನ್ನು ರಹಮತ್ ತರೀಕೆರೆ ಗುರುತಿಸಿದ್ದಾರೆ. ಏಕೆಂದರೆ ಶರಚ್ಚಂದ್ರರಲ್ಲಿ, "ವಿವಾಹೇತರ ಸಂಬಂಧಗಳನ್ನು ವ್ಯಕ್ತಿ ಸ್ವತಂತ್ರ್ಯ ಹಾಗೂ ಮಾನವತಾವಾದಗಳ ಅನನ್ಯ

ಶ್ರದ್ಧೆಯಿಂದ (ಪಥೇರ್ ಧಾಬಿ' ಯನವತಾರಾ, 'ಬಡೇದೀದಿ'ಯ ದೀದಿ) ಕಾಣಿಸುತ್ತಾರೆ. ಹೆಣ್ಣು ಅವರ ಕಾದಂಬರಿಗಳಲ್ಲಿ (ಸತ್ಯಜಿತ್ ರಾಯರ ಸಿನಿಮಾಗಳಲ್ಲಿರುವಂತೆ) ಒಂದು ಅದಮ್ಯ ಚೈತನ್ಯವಾಗಿದ್ದಾಳೆ"[6] ಅನಕೃ ಸ್ತ್ರೀಯರನ್ನು ಗಂಡಿನ ವ್ಯಕ್ತಿತ್ವ ವಿಜೃಂಭಣೆಗಾಗಿ ಬಳಸುತ್ತಾರೆ. ಸ್ತ್ರೀವಿರೋಧಿ ನಿಲುವಿನ ಕಥಾನಕಗಳನ್ನು ಅನಕೃ ಅವರಲ್ಲಿ ಕಾಣಬಹುದೆಂದು ರಹಮತ್ ತರೀಕೆರೆ ಅಭಿಪ್ರಾಯ ಪಡುತ್ತಾರೆ. ಆದರೆ ನಿರಂಜನರು ಹೋರಾಟಗಾರರಾದ ಸ್ತ್ರೀಯರನ್ನು ಸೃಷ್ಟಿಸುತ್ತಾರೆ. 'ಬನಶಂಕರಿ'ಯ ಸಂಪ್ರದಾಯದ ಹೆಣ್ಣಿನ ಕೆಚ್ಚನ್ನು ಈ ಹಿನ್ನೆಲೆಯಿಂದ ಗಮನಿಸಬಹುದಾಗಿದೆ. ಬಸವರಾಜ ಕಟ್ಟೀಮನಿ ಅವರು ಗಂಡಿನ ಸಮಸಮಕ್ಕೆ ನಿಂತು ದುಡಿಯುವ ಶಾಂತಾ, ಹೇಮ, ರತ್ನಾ ಮೊದಲಾದ ಪಾತ್ರಗಳನ್ನು ಸೃಷ್ಟಿಸುತ್ತಾರೆ. ಇಂಥ ಚರ್ಚೆಯ ನಡುವೆ 'ದ ವಜೈನಾ ಮಾನ ಲಾಫ್ಸ್' (1996) ಎಂಬ ನಾಟಕದ ನಾಟಕಕಾರ್ತಿ ಈವ್ ಎನ್ಸ್ಲರ್ ಅವರ ಮಾತುಗಳು ನೆನಪಾಗುತ್ತವೆ. "ನಾವು ಬೇಲಿಗಳನ್ನು ಮುರಿದಿದ್ದೇವೆ. ಗೋಡೆಗಳನ್ನು ಕೆಡವಿದ್ದೇವೆ, ಈ ನೆಲದ ನಿರ್ವಚನಗಳನ್ನೇ ಬದಲಾಯಿಸುತ್ತಿದ್ದೇವೆ. ನಮ್ಮ ಕತೆಗಳನ್ನು, ನಮ್ಮ ಧ್ವನಿಗಳನ್ನು ನಾವು ಮತ್ತೆ ಪಡೆದುಕೊಳ್ಳುತ್ತಿದ್ದೇವೆ. ಆದರೂ ಅತ್ಯಾಚಾರಕ್ಕೆ ಕಾರಣವಾಗುವ ಸಾಂಸ್ಕೃತಿಕ ಹುನ್ನಾರಗಳನ್ನು ಅರಿಯುವಲ್ಲಿ ನಾವು ಇನ್ನೂ ಸಫಲರಾಗಿಲ್ಲ"[7] ಈ ನಾಟಕವು ಹೆಣ್ಣಿನ ಅಂತಸತ್ವ ಕುಗ್ಗಿಸುವ, ಅವಮಾನಿಸುವ ಘಟನೆಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾಗಿದೆ. ಸಾಮಾಜಿಕ ಸ್ವಾತಂತ್ರ್ಯ ಕೇಳುವ ಮಾತುಗಳಲ್ಲಿ ಸಾಂಸ್ಕೃತಿಕ ಹುನ್ನಾರಗಳನ್ನು ಗೆಲ್ಲುವ ಆಶಯವಿದ್ದರೂ ಪರಿಸ್ಥಿತಿಯ ತಂತ್ರಗಳ ಇದಿರು ಅಸಾಯಕವಾಗುವಿಕೆಯನ್ನು ಎತ್ತಿಹಿಡಿದಿವೆ. ರಹಮತ್ ತರೀಕೆರೆ ಅವರು ಸಮಾಜ ರಚನೆಗಳಲ್ಲಿಯೂ, ಪುರಾಣಗಳಲ್ಲಿಯೂ 'ತಾನು–ಅನ್ಯರು' (the self – the other) ಎಂಬ ಪರಿಕಲ್ಪನೆ ಹೇಗೆ ಸ್ತ್ರೀಯರ ಪಾಲಿಗೆ ಅನಿವಾರ್ಯವಾಗದೆ ಎಂದು ಚರ್ಚಿಸುತ್ತಾರೆ. ಇತಿಹಾಸ, ಧರ್ಮಶಾಸ್ತ್ರ, ಮತ್ತು ಪುರಾಣಗಳ ಹಿನ್ನೆಲೆಯಿಂದ ಸ್ತ್ರೀ ಪಾತ್ರಗಳನ್ನು ರಹಮತ್ ತರೀಕೆರೆ ಅವರು ವಿಶ್ಲೇಷಿಸುತ್ತಾರೆ. ಆದರೂ, "ಇತಿಹಾಸದ ಪ್ರಾರಂಭಿಕ ಘಟ್ಟದಿಂದಲೂ ಪುರುಷರ ಮಧ್ಯೆ ಹಂಚಿಹೋಗಿರುವ ಸ್ತ್ರೀಗೆ ಪ್ರತ್ಯೇಕ ಚರಿತ್ರೆಯಲ್ಲಿ, ಪ್ರತ್ಯೇಕ ಸಂಘಟನೆಯಿಲ್ಲ, ಪ್ರತ್ಯೇಕ ಅಸ್ತಿತ್ವವೂ ಇಲ್ಲ, ಇತಿಹಾಸದುದ್ದಕ್ಕೂ ಅವಳು ಪುರುಷನ ನೆರಳಾಗಿ ಬದುಕುತ್ತಾ ಬಂದಿದ್ದಾಳೆ"[8] ಎಂಬ ಲೇಖಕಿ ಸಿಮೋನ್ ದ ಬೋವಾ (Simone de Beavuvior, 1908-86) ಅಭಿಪ್ರಾಯ ಸಂಗತವೆನಿಸುತ್ತದೆ.

ರಹಮತ್ ತರೀಕೆರೆ ಅವರು ಶ್ರೀಕೃಷ್ಣ ಆಲನಹಳ್ಳಿ ಅವರ ಕಾದಂಬರಿಗಳಲ್ಲಿ ಲೈಂಗಿಕ ಸ್ವಚ್ಛಂದವು ಎಷ್ಟು ಪುರುಷವಾದಿಯಾಗಿದೆ ಎಂಬುದನ್ನು ವಿಸ್ತೃತವಾಗಿ ಚರ್ಚಿಸಿದ್ದಾರೆ. ಆಲನಹಳ್ಳಿ ಅವರ ಕಾದಂಬರಿಗಳಲ್ಲಿ, "ನಗರದಲ್ಲಿ ಶಿಕ್ಷಣ ಪಡೆದು ಬರುವ ಈ ಎಲ್ಲ ಬದಲು ಲೈಂಗಿಕ ಕುತೂಹಲ ಮತ್ತು ಸ್ವಚ್ಛಂದತೆಯಾಗಿ ವ್ಯಾಖ್ಯಾನಿಸಿಕೊಂಡಿವೆ"[9] ಎನ್ನುವ ರಹಮತ್ ತರೀಕೆರೆ ಅವರು ದೇವನೂರು ಮಹಾದೇವರ ರಾಜ–ಶಂಭುವಿನಂಥ ಹುಡುಗರನ್ನು, ಮರಂಕಿಯೊಡನೆ ಲೈಂಗಿಕಾನುಭವಕ್ಕೆ ಹಾತೊರೆವ ಶಿವಣ್ಣ ಅಥವಾ ಸುಶೀಲಳೊಡನೆ ಲೈಂಗಿಕಾನುಭವ ಪಡೆಯುವುದೊಂದೇ ಮುಖ್ಯಾನುಭವವಾಗುವ ರಾಜ ಮತ್ತು ನಾರಯಣರಿಗೆ ಹೋಲಿಸಿ ತಾತ್ತ್ವಿಕ ವೈತ್ಯಾಸಗಳನ್ನು ಗುರುತಿಸುತ್ತಾರೆ. ಆಲನಹಳ್ಳಿ ಅವರ ಕಾದಂಬರಿಗಳಲ್ಲಿ ಭೋಗಿಸುವ ಹೆಣ್ಣು ಹೆಸರೇ ಇಲ್ಲದ 'ಅವಳು' ಮಾತ್ರವಾಗುವ ವಿಪರ್ಯಾಸದ ಪುರುಷವಾದಿ ನಿಲುವನ್ನು ಪ್ರಶ್ನಿಸಿದ್ದಾರೆ. ವಾಸ್ತವದಲ್ಲಿ ಜನರು ಆಧುನಿಕತೆಯ ಅವೈಚಾರಿಕ ಮಾದರಿಗಳನ್ನು ಸ್ವೀಕರಿಸಿ ವ್ಯಕ್ತಿತ್ವದ ನಿಜವಾದ ಸತ್ವವನ್ನು ಗುಣವನ್ನು ನಿರಾಕರಿಸುವ ರೀತಿಯನ್ನು ರಹಮತ್‌ತರೀಕೆರೆ ಪ್ರಶ್ನಿಸಿ ವ್ಯಕ್ತಿತ್ವದ ಆದರ್ಶಗಳಿಗೆ ಪ್ರಾಧಾನ್ಯತೆಯನ್ನು ನೀಡುತ್ತಾರೆ.

ಸ್ತ್ರೀವಾದಿ ಚಿಂತನೆಯ ಫಲವೆಂದರೆ ಸಾಮಾಜಿಕವಾಗಿ ಸ್ತ್ರೀಯರ ಇತ್ಯಾತ್ಮಕ ಪರಿವರ್ತನೆಯಾಗಿದೆ. ಮಹಿಳೆಯರು ಆರ್ಥಿಕವಾಗಿ ಸಬಲರಾಗಿ ಬದುಕಲು ಸ್ತ್ರೀವಾದಿ ಚಿಂತನೆ ಬೆಂಬಲಿಸುತ್ತದೆ. ಸ್ತ್ರೀಯರು ಆತ್ಮಕೇಂದ್ರಿತ ದರ್ಶನ ಪಡೆದು ನೇತ್ಯಾತ್ಮಕ ಕವಚಗಳಿಂದ ಹೊರಬಂದು ಇತ್ಯಾತ್ಮಕ ನೆಲೆಯನ್ನು ಗಳಿಸಿಕೊಳ್ಳಬೇಕೆಂಬ ಆಶಯ ರಹಮತ್ ತರೀಕೆರೆ ಅವರ ಸ್ತ್ರೀವಾದಿ ಚಿಂತನೆಯ ಮೂಲಾಂಶವಾಗಿದೆ. ಅರಿವನ್ನು ವಿಸ್ತೃತಗೊಳಿಸುವ ಪ್ರಯತ್ನವನ್ನು ಸ್ತ್ರೀವಾದೀ ವಿಮರ್ಶೆಯು ಮಾಡುತ್ತಾ, ಸ್ತ್ರೀಯರ ಒಳಗಣ್ಣನ್ನು ತೆರೆಸುತ್ತದೆ. ಅರಿವಿನ ಸ್ಫೋಟಕ್ಕೆ 'ಸ್ತ್ರೀ ಸ್ವಾತಂತ್ರ್ಯ ಚಳುವಳಿಗಳು ನೆರವಾಗುವಂತೆ, ಬದುಕಿನ ಸಾಕ್ಷಾತ್ಕಾರಕ್ಕೆ ಮತ್ತು ಜೀವನಾನಂದ ಸ್ವರೂಪವನ್ನು ಅರಿಯಲು ಸ್ತ್ರೀವಾದಿ ನಿಲುವುಗಳ ಅಗತ್ಯವಿದೆ. ಸಂಸ್ಕೃತಿಯನ್ನು ಅಪವೌಲ್ಯೀಕರಣಗೊಳಿಸದೆ ಪ್ರತಿಸಂಸ್ಕೃತಿಯನ್ನು ರೂಪಿಸಿಕೊಳ್ಳುವ ಸವಾಲಿನ ಸಂದರ್ಭದಲ್ಲಿ ಸ್ತ್ರೀನಿಷ್ಠ ಚಿಂತನೆಗಳು ಸ್ತ್ರೀಯರಿಗೆ ನೆರವಾಗಬಲ್ಲವು.

ಸ್ತ್ರೀವಾದಿ ವಿಮರ್ಶೆಯು ಲಿಂಗಭೇದ ಮತ್ತು ಲಿಂಗಾಧಾರಿತ ಅಸಮಾನತೆಯನ್ನು ಕುರಿತು ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳುತದೆ. ಜೈವಿಕವಾಗಿ ನಿಸರ್ಗ ಶಪಿತಳಾದ ಸ್ತ್ರೀ ಪುರುಷನಂತೆ ದೈಹಿಕವಾಗಿ ಬಲಶಾಲಿಯಲ್ಲ; ಆದರೆ ಲಿಂಗಭೇದ ಒಂದು ಶ್ರೇಣೀಕೃತ ಮೌಲ್ಯವಲ್ಲ. ಆರ್ಥಿಕ ಸ್ವಾತಂತ್ರ್ಯವೊಂದೇ ಸ್ತ್ರೀಗೆ ತನ್ನತನವನ್ನು ಕೊಡಲಾರದು ಎಂಬುದೂ ಸತ್ಯವಾಗಿದೆ. ರಹಮತ್ ತರೀಕೆರೆ ಅವರು ತಮ್ಮ ವಿಮರ್ಶೆಗಳಲ್ಲಿ ಸ್ತ್ರೀಕೇಂದ್ರಿತ ಚಿಂತನೆಗೆ ಒಂದು ಸೈದ್ಧಾಂತಿಕತೆಯನ್ನು ನೀಡಿದ್ದಾರೆ. ಭಾರತದಂಥ ಬಹುಮುಖಿ ಸಂಸ್ಕೃತಿಯೊಳಗೆ ಸ್ತ್ರೀಯರ ಪಾರತಂತ್ರಕ್ಕೆ 'ಪಿತೃ ಪ್ರಧಾನ ವ್ಯವಸ್ಥೆ' (patriarchy) ಕಾರಣಗಳಲ್ಲಿ ಒಂದೆಂಬುದನ್ನು ಮರೆಯುವಂತಿಲ್ಲ. ಸಮಾಜದೊಳಗೆ ಲಿಂಗಭೇದವು ಜೈವಿಕವಾಗಿ ನಿರ್ಧರಿಸಲ್ಪಟ್ಟಿದ್ದರೆ, ಲಿಂಗ ಪ್ರಜ್ಞೆಯನ್ನು ಶಿಕ್ಷಣ, ಸಂಸ್ಕೃತಿ, ಮತ್ತು ಧರ್ಮಾಚರಣೆಗಳು ಮತ್ತು ನಂಬಿಕೆಗಳು ರೂಪಿಸುತ್ತವೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಥೆ, ಕಾದಂಬರಿ ಮತ್ತು ನಾಟಕಗಳಲ್ಲಿ ಸ್ತ್ರೀ ಪಾತ್ರಗಳು ಮತ್ತು ಸ್ತ್ರೀ ಪುರುಷ ಸಂಬಂಧಗಳು ಕೆಲವೊಮ್ಮೆ ನೇರವಾಗಿ, ಕೆಲವೊಮ್ಮೆ ಪರೋಕ್ಷವಾಗಿ 'ಲೈಂಗಿಕ ರಾಜಕೀಯ'ದಿಂದ ಪ್ರಭಾವಿತವಾಗಿರುವುದನ್ನು ರಹಮತ್ ತರೀಕೆರೆ ಅವರು ಸ್ಪಷ್ಟವಾಗಿ ಗುರುತಿಸುತ್ತಾರೆ.

ರಹಮತ್ ತರೀಕೆರೆ ಅವರು, "ಮಲೆನಾಡಿನಲ್ಲಿ ಒಡೆಯಜೀತದಾಳು, ಸವರ್ಣೀಯ – ಅಸ್ಪೃಶ್ಯ, ಗಂಡು–ಹೆಣ್ಣು ಇತ್ಯಾದಿ ಸಂಬಂಧಗಳನ್ನು ಕುರಿತು ಕುವೆಂಪು ಸಾಹಿತ್ಯವು ಸಮೃದ್ಧಿ ತಿಳುವಳಿಕೆಯನ್ನು ನಮಗೆ ಕೊಟ್ಟಿದೆ"[10] ಎಂದಿದ್ದಾರೆ. ಮಲೆನಾಡಿನಲ್ಲಿ ಸ್ತ್ರೀಯರು ವೈವಾಹಿಕ ಶೋಷಣೆಗೆ ಒಳಗಾಗುವುದು, ಭೂಮಾಲೀಕರು ಬಡವರ ಮನೆಯ ಹೆಣ್ಣುಗಳನ್ನು ಮದುವೆಯಾಗುತ್ತಾ ಹೋಗುವುದು, ವೃದ್ಧರನ್ನು ವಿವಾಹವಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಹೆಣ್ಣುಗಳು, ಹೆರಿಗೆಯ ಸಮಯದಲ್ಲೇ ಸಾಯುವ ಹೆಣ್ಣುಮಕ್ಕಳು ಇತ್ಯಾದಿ ಸ್ತ್ರೀಯಾತನಾ ಜಗತ್ತನ್ನು ರಹಮತ್ ತರೀಕೆರೆ ಪರಿಚಯಿಸುತ್ತಾರೆ.

ಅವರೇ ಹೇಳುವಂತೆ, "ತಮ್ಮ ಗಂಡಂದಿರ ಮನೆಗಳಲ್ಲಿ (ಹೆಣ್ಣು)

ಮಕ್ಕಳು ಸತ್ತಾಗ ಗಟ್ಟಿಯಾಗಿ ಅಳಲೂ ಹಕ್ಕಿಲ್ಲದ ಹೆತ್ತ ತಾಯಿಯಂದಿರುವ ಈ ಸ್ತ್ರೀ ಜಗತ್ತು, ದಲಿತರಷ್ಟೇ ಅಸಾಯಕವಾಗಿದೆ."[11] ಇದು ಹೆಣ್ಣು ಮಕ್ಕಳ ಕೌಟುಂಬಿಕ, ಸಾಮಾಜಿಕ ಸ್ಥಿತಿಗತಿಯನ್ನು ನಿಚ್ಚಳವಾಗಿ ತೋರಿ ಸ್ತ್ರೀವಾದದ ಅಗತ್ಯವನ್ನು ತೋರುತ್ತದೆ. ಇಂದಿಗೂ ಅಷ್ಟೇನೂ ಬದಲಾಗದ ಪರಿಸ್ಥಿತಿ ಇದಾಗಿದೆ. ಸ್ತ್ರೀಯರು ಶಿಕ್ಷಿತರಾಗುವುದು ಮಾತ್ರವಲ್ಲದೆ ಸಾಮಾಜಿಕ-ರಾಜಕೀಯ ಚಳವಳಿಗಳಲ್ಲಿಯೂ ನೇರವಾಗಿ ತೊಡಗಿಸಿಕೊಳ್ಳಬೇಕಾದ ಅಗತ್ಯವನ್ನು ರಹಮತ್ ತರೀಕೆರೆ ಒತ್ತಿ ಹೇಳುತ್ತಾರೆ. ಸ್ತ್ರೀಯರು ಅಲ್ಪ ಸಂಖ್ಯಾತರಲ್ಲ (Minorities) ವಾದರೂ ಇತರೆ ಧಾರ್ಮಿಕ-ಭಾಷಿಕ-ವರ್ಣೀಯ ಅಲ್ಪಸಂಖ್ಯಾತರಂತೆ ಸಮಾಜದಲ್ಲಿ ಶೋಷಣೆಗೊಳಪಟ್ಟಿದ್ದಾರೆ. ಆದ್ದರಿಂದ, "ಅಧಿಕಾರ – ಶಿಕ್ಷಣ – ಸಮೂಹ ಮಾಧ್ಯಮ ಕ್ಷೇತ್ರಗಳಲ್ಲಿ ಪರಿಧೀಯ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. (Marginalised) ಆದ್ದರಿಂದ, ಇತರ ಅಲ್ಪಸಂಖ್ಯಾತರಂತೆ ಸ್ತ್ರೀಯರೂ ಸಂಘಟಿತರಾಗಿ, ಸಾಂಗಿಕವಾಗಿ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಟ ಮಾಡಬೇಕು"[12] ಎಂಬ ನಿಲುವು ಸಾರ್ವತ್ರಿಕವಾದದ್ದು. ಹೀಗೆ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳನ್ನೊಳ್ಳ ಸ್ತ್ರೀ ನಿಷ್ಠ ಚಿಂತನೆಯ ಸಾಹಿತ್ಯಕ ದಿಕ್ಕುಗಳಲ್ಲಿ ರಹಮತ್ ತರೀಕೆರೆ ತಮ್ಮ ಸಾಹಿತ್ಯ ಬರೆವಣಿಗೆಯಲ್ಲಿ ಕಂಡುಕೊಂಡು ವಿವರಗಳನ್ನು ಕಟ್ಟಿಕೊಡುತ್ತಾರೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸ್ತ್ರೀಯರಿಂದ ಬರೆಯಲ್ಪಟ್ಟ ಸೃಜನಶೀಲ ಹಾಗೂ ವೈಚಾರಿಕ ಕೃತಿಗಳನ್ನು ಶೋಧಿಸಿ ಬೆಳಕಿಗೆ ತರುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಚಿ.ನ. ಮಂಗಳಾ ಅವರು ತಿರುಮಲಾಂಬಾ ಅವರ ಕೃತಿಗಳನ್ನು ಶೋಧಿಸಿ ಬೆಳಕಿಗೆ ತಂದಿರುವುದನ್ನು ನೆನೆಯಬಹುದಾಗಿದೆ.

ಗ್ರಾಮದೇವತೆಗಳ ಸಂದರ್ಭದಲ್ಲಿ ಸ್ತ್ರೀದೇವತೆಗಳಿಗೆ ಪ್ರಾಧಾನ್ಯತೆ ಇರುವುದರ ಹಿನ್ನೆಲೆಯನ್ನು ಅರಿಯಬೇಕಾಗಿದೆ. (ಚೌಡಮ್ಮನಿಗೆ ಜಾತಿ ಭೇದವಿಲ್ಲ) ಜನಪದರು ಸ್ತ್ರೀಯರನ್ನು ಅಧಿದೇವತೆಗಳಾಗಿಸಿಕೊಂಡು ಆರಾಧಿಸಿದ ಸೈದ್ಧಾಂತಿಕತೆಯನ್ನು ಶೋಧಿಸಬೇಕಾಗಿದೆ. ಉಜ್ಜನಿ ಚೌಡಮ್ಮನು "ಅವರವರ ಕೆಲಸವನ್ನು ಅವರವರು ಮಾಡುವಂತೆ" ಹೇಳುವುದು ವೈಚಾರಿಕವೆನಿಸುತ್ತದೆ. ರಹಮತ್ ತರೀಕೆರೆ ಅವರು ಹೇಳುವಂತೆ, "ಸ್ತ್ರೀ ದೇವತೆಗಳ ಹುಟ್ಟಿನ ಮೂಲದ ಪುರಾಣವೆಲ್ಲ ಆರ್ಯ ಮೂಲದ ಪುರುಷ ದೃಷ್ಟಿಕೋನದಿಂದ ಹುಟ್ಟಿದ್ದು, ಸ್ತ್ರೀಯನ್ನು ಹದ್ದುಬಸ್ತಿನಲ್ಲಿಡುವ ಆಶಯಗಳಿಂದ ಕೂಡಿದೆ" ಎನ್ನುವಲ್ಲಿ ತಾತ್ತ್ವಿಕ ಜಿಜ್ಞಾಸೆ ಇದೆ. "ತನ್ನ ಅನಾಮಿಕ ಗಂಡನಿಗಾದ ಅಪಮಾನ ಸಹಿಸದೆ ಬೆಂಕಿಗೆ ಹಾರಿದ ವೈದಿಕರ ಹೆಣ್ಣು (ಚಾಮುಂಡಿ) ಒಬ್ಬಳಾದರೆ, ಅನಾರ್ಯಗಂಡನ್ನು ಮದುವೆಯಾದದ್ದಕ್ಕಾಗಿ ಪಶ್ಚಾತ್ತಾಪದಿಂದ ಬೆಂಕಿಗೆ ಹಾರಿದ ವೈದಿಕರ ಹೆಣ್ಣು (ಮಾರವ್ವ) ಮತ್ತೊಬ್ಬಳು" ಈ ಸಂಕೀರ್ಣ ಗ್ರಾಮದೇವತೆಗಳ ಲೋಕವನ್ನು ವೈಚಾರಿಕ ವಿಮರ್ಶೆಗೆ ಒಳಪಡಿಸಬೇಕಾದ ಆಶಯವನ್ನು ರಹಮತ್‌ತರೀಕೆರೆ ಅವರು ವ್ಯಕ್ತಪಡಿಸುತ್ತಾರೆ. ಗ್ರಾಮದೇವತೆ ಎಂಬ ಶಬ್ಧವು 'ಊರಮ್ಮ'ನನ್ನೂ ಅಳಿಸುವ ಮೂಲಕವೇ ಬಹುಶಃಶುರುವಾಯಿತು ಎಂಬ ಅನಿಸಿಕೆ ಚರ್ಚೆಗೆ ಒಳಗಾಗಬೇಕಿದೆ.

ಸ್ತ್ರೀವಾದದ ಸೃಷ್ಟಿಶೀಲತೆಯ ಉಕ್ಕು ಚೈತನ್ಯವನ್ನು ಸಮರ್ಥವಾಗಿ ರಹಮತ್‌ತರೀಕೆರೆ ಬಳಸಿಕೊಂಡಿದ್ದಾರೆ. ಇದು ಅವರ ಪ್ರತಿಸಂಸ್ಕೃತಿ ಚಿಂತನೆಯಲ್ಲಿ ಹಾಸುಹೊಕ್ಕಾಗಿದೆ.

ಉಪಸಂಹಾರ : ಸ್ತ್ರೀ ಕೇಂದ್ರಿತ ವೈಚಾರಿಕ ನೆಲೆಯಲ್ಲಿ ಸೃಜನಶೀಲ ಮತ್ತು ವೈಚಾರಿಕ ಕೃತಿಗಳನ್ನು ವಿಪುಲವಾಗಿ ರಚಿಸಿ "ಸ್ತ್ರೀವಿಶಿಷ್ಟ ಪ್ರಜ್ಞೆ"ಗೆ ಅಭಿವ್ಯಕ್ತಿ ಮತ್ತು ಪ್ರಸಾರ ಕೊಡುವ ನೇಮದಲ್ಲಿ ರಹಮತ್ ತರೀಕೆರೆ ಅವರು ನಿರತರಾಗಿದಾರೆ. ಅವರು ಸ್ತ್ರೀವಾದವನ್ನು ಸೈದ್ಧಾಂತಿಕವಾಗಿ ಮತ್ತು ವಿದ್ವತ್ಪೂರ್ಣವಾಗಿ ಚರ್ಚಿಸುವಲ್ಲಿ ಯಶಸ್ವಿಯೂ ಆಗಿದ್ದಾರೆ. ರಹಮತ್ ತರೀಕೆರೆ ಅವರು 'ಸ್ತ್ರೀಯನ್ನೂ ಓದುಗಳಾಗಿ' (Women as Feader) ಮತ್ತು 'ಸ್ತ್ರೀಯನ್ನು ಲೇಖಿಕೆ'ಯಾಗಿ (Woman as writer) ಈ ಎರಡೂ ನೆಲೆಯಿಂದ ಗ್ರಹಿಸಿ 'ಸ್ತ್ರೀನಿಷ್ಠ ಮಿಮರ್ಶೆ' (Gynocriticism) ಗೆ ಪ್ರಾಧಾನ್ಯತೆಯನ್ನು ತಮ್ಮ ಕೃತಿಗಳನ್ನು ನೀಡಿದ್ದಾರೆ. ಇವರು ಸ್ತ್ರೀಗೆ "ಹೇಳಲು ಸಾಧ್ಯವಾಗದ" (Terminine not said) ಅಂಶಗಳನ್ನೂ ರಾಜಕೀಯ ಕಾಳಜಿಯ ಹಿನ್ನೆಲೆಯಿಂದ ಹೇಳಬಲ್ಲವರಾಗಿದ್ದಾರೆ. ಸ್ತ್ರೀನಿಷ್ಠ ವಿಮರ್ಶೆಯನ್ನು 'ಕೃತಿನಿಷ್ಠ'ವಾಗಿ ಮತ್ತು 'ಸಂದರ್ಭ ನಿಷ್ಠ'ವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯ ಇವರಿಗಿದೆ. ಕಳೆದೆರಡು ದಶಕಗಳಲ್ಲಿ ಕನ್ನಡದಲ್ಲಿ ಬೆಳೆದಿರುವ ಸ್ತ್ರೀವಾದಿ ಚಿಂತನೆಗೆ ತೇಜಸ್ವಿನಿ ನಿರಂಜನ, ವಿಜಯಾದಬ್ಬೆ, ಬಿ.ಎನ್. ಸುಮಿತ್ರಾಬಾಯಿ, ನೇಮಿಚಂದ್ರ, ಎನ್. ಗಾಯಿತ್ರಿ, ಬಿ.ಎಂ. ರೋಹಿಣಿ ಮೊದಲಾದವರು ಕೊಡುಗೆ ನೀಡಿದ್ದಾರೆ. ಒಟ್ಟಾರೆ ಸ್ತ್ರೀ ನಿಷ್ಠ ಚಿಂತನೆಯನ್ನು ಜೈವಿಕ ನಿಯತವಾದದ (Biological Determinism) ವಿರುದ್ಧ ವಿಶ್ವದಾದ್ಯಂತ ನಡೆದಿರುವ ಹೋರಾಟವೆಂದು ಹೇಳಬಹುದಾಗಿದೆ.

ಪರಾಮರ್ಶನ ಗ್ರಂಥಗಳು :

1) ಪ್ರೊ. ಸಿ.ಎನ್. ರವಿಚಂದ್ರನ್, "ಸಾಹಿತ್ಯ ವಿಮರ್ಶೆ:, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – 2010.

2) ರಹಮತ್ ತರೀಕೆರೆ, "ಪ್ರತಿಸಂಸ್ಕೃತಿ", ಅಭಿನವ ಪ್ರಕಾಶನ, ಬೆಂಗಳೂರು – 2010.

3) ಕೆ.ವಿ. ನಾರಾಯಣ, "ಶೈಲಿಶಾಸ್ತ್ರ", ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – 1990.

4) ಗರಡ್ಡಿ ಗೋವಿಂದರಾಜ, "ಕಲ್ಪಿತವಾಸ್ತವ: ಕನ್ನಡ ಸಣ್ಣ ಕತೆ", ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ – 2009.

5) ಓ.ಎಲ್. ನಾಗಭೂಷಣಭೂಮಿ, 'ವಿಮರ್ಶೆಯ ಪರಿಭಾಷೆ', ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು – 1998.

[1] ಪ್ರತಿಸಂಸ್ಕೃತಿ, ಪು. 31
[2] ಪೂರ್ವೋಕ್ತ, ಪು. 31
[3] ಪೂರ್ವೋಕ್ತ, ಪು. 31
[4] ಪೂರ್ವೋಕ್ತ, ಪು. 31
[5] ಪೂರ್ವೋಕ್ತ, ಪು. 31
[6] ಪೂರ್ವೋಕ್ತ, ಪು. 41
[7] ಪ್ರಜಾವಾಣಿ, ಸಾಪ್ತಾಹಿಕ ಪುರವಣಿ', 31-8-2014, ಪು. 6
[8] ಅಕಾಡೆಮಿ, ಬೆಂಗಳೂರು, 2-10, ಪು. 86
[9] ಪ್ರತಿಸಂಸ್ಕೃತಿ, ಪು. 49
[10] ಪ್ರತಿಸಂಸ್ಕೃತಿ, ಪು. 70
[11] ಪ್ರತಿಸಂಸ್ಕೃತಿ, ಪು. 70
[12] ಸಾಹಿತ್ಯವಿಮರ್ಶೆ, ಪು. 89

ರಹಮತ್‌ತರೀಕೆರೆ ಅವರ ಪ್ರತಿಸಂಸ್ಕೃತಿ ಚಿಂತನೆ :ಕೆಲವು ಹೊಳಹುಗಳು

ರಮೇಶ.
ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು

1. ಹಿನ್ನೆಲೆ : ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಪ್ರತಿಭಾವಂತ ಬರೆಹಗಾರರಾಗಿ ಮತ್ತು ಸಂಸ್ಕೃತಿ ಚಿಂತಕರಾದ ಪ್ರೊ. ರಹಮತ್‌ತರೀಕೆರೆ ಅವರು ಗಮನಾರ್ಹರು. 1959 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸಮತಳದಲ್ಲಿ ಜನಿಸಿದ ಇವರು ತರೀಕೆರೆ, ಶಿವಮೊಗ್ಗ ಮತ್ತು ಮೈಸೂರುಗಳಲ್ಲಿ ಶಿಕ್ಷಣವನ್ನು ಪಡೆದರು. ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ರಹಮತ್‌ತರೀಕೆರೆ ಅವರು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಚ್.ಎಂ.ಚೆನ್ನಯ್ಯ ಅವರ ಮಾರ್ಗದರ್ಶನದಲ್ಲಿ 'ಆಧುನಿಕ ಕನ್ನಡ ಕಾವ್ಯ ಮತ್ತು ಪ್ರತಿಭಟನೆ' ಎಂಬ ವಿಷಯದ ಮೇಲೆ ನಡೆಸಿದ ಸಂಶೋಧನೆಗಾಗಿ ಪಿ.ಎಚ್.ಡಿ., ಪದವಿಯನ್ನು ಪಡೆದುಕೊಂಡಿದ್ದಾರೆ. ಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆಯುವ ಮೂಲಕ ಪ್ರೊ. ರಹಮತ್ ತರೀಕೆರೆ ಅವರು ಪ್ರಸಿದ್ಧರು. ಇವರನ್ನು ಎಡ ಪಂಥೀಯ ಚಿಂತಕರು ಹಾಗೂ ಬಂಡಾಯ ವಿಮರ್ಶಕರೆಂದು ಗುರುತಿಸುತ್ತಾರೆ.

2. ಪ್ರತಿಸಂಸ್ಕೃತಿ ಚಿಂತನೆ : ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಪ್ರತಿಸಂಸ್ಕೃತಿ ಚಿಂತನೆ ವಿಭಿನ್ನ ನೆಲೆಗಳಲ್ಲಿ ಬೆಳೆದಿದೆ. ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಆಧುನಿಕ ಕನ್ನಡ ಸಾಹಿತ್ಯಗಳೆರಡಲ್ಲೂ ಪ್ರತಿಸಂಸ್ಕೃತಿ ಚಿಂತನೆಯ ನಿಲುವುಗಳನ್ನು ಗುರುತಿಸಬಹುದಾಗಿದೆ. ರಹಮತ್‌ತರೀಕೆರೆ ಅವರು ತಮ್ಮೊಳಗೆ ಪ್ರತಿಸಂಸ್ಕೃತಿ ಚಿಂತನೆ ಹುಟ್ಟಿಕೊಂಡ ಬಗೆಯನ್ನು ಹೀಗೆ ವಿವರಿಸಿದ್ದಾರೆ.

"ಕನ್ನಡ ಸಾಹಿತ್ಯವನ್ನು ಜಾನಪದವನ್ನೂ ಅಧ್ಯಯನ ಮಾಡುತ್ತಾ ಬಂದ ನನಗೆ ವ್ಯವಸ್ಥೆಯ ಕರಾರುಗಳನ್ನು ಮುರಿಯಲು ಒಂದು ಸಂಸ್ಕೃತಿಯ ಒಳಗೇ ಹುಟ್ಟಿಕೊಳ್ಳುವ ಹಲವು ಬಗೆಯ ಹುನ್ನಾರಗಳು ತುಂಬ ಮುಖ್ಯವೆಂದು ಕಂಡವು. ಅಂಥ 'ಪ್ರತಿಸಂಸ್ಕೃತಿ'ಯ ಎಳೆಗಳನ್ನು ಹಿಡಿದು ನನ್ನ ಲೇಖನಗಳಲ್ಲಿ ನೇಯುತ್ತಾ ಈ ಪರಿಕಲ್ಪನೆಯನ್ನು ಕಟ್ಟಿಕೊಳ್ಳುತ್ತಾ ಬಂದೆ"[1] ಅಂದರೆ ವ್ಯವಸ್ಥೆಯ ಶೋಧಕದಂತಿರುವ ಸಂಸ್ಕೃತಿಯ ಸಂಕ್ರಮಣ ಗಳಲ್ಲಿ ಪ್ರತಿಸಂಸ್ಕೃತಿಯ ನಿಲುವುಗಳಿರುತ್ತದೆ. ಇಂಥ ನಿಲುವುಗಳ ಹಿನ್ನೆಲೆಯಿಂದ ಚರಿತ್ರೆ, ವರ್ತಮಾನವನ್ನು ಕುರಿತಂತೆ ಚರ್ಚಿಸುವ ಪ್ರಯತ್ನವಿಲ್ಲಿದೆ. ಸಾಹಿತ್ಯ ವಿಮರ್ಶೆಯು ಎಂದಿಗೂ ಸಾಂಸ್ಕೃತಿಕ ಪರಿಸರವನ್ನು ಅರ್ಥಮಾಡಿಕೊಳ್ಳಲು ರಾಜಕೀಯ ಪ್ರಜ್ಞೆಯನ್ನು ಒಳಗೊಳ್ಳ ಬೇಕೆಂಬ ವಿಚಾರವನ್ನು ರಹಮತ್‌ತರೀಕೆರೆ ಅರಿತಿದ್ದರು. ಇವರ ದೃಷ್ಟಿಯಲ್ಲಿ, "ಕೆಟ್ಟದ್ದರ ನಾಶದ ನಂತರ ಒಳ್ಳೆಯದೊಂದನ್ನು ಬದಲಿಗೆ ಕಟ್ಟಿಕೊಳ್ಳುವ ಹೊಣೆ ಇರಲೇಬೇಕು. ಯಾಕೆಂದರೆ ಕೆಡಹುವ ಕ್ರಿಯೆಗೆ ಕಟ್ಟುವ ಕನಸಿಲ್ಲದಾಗ ಜೆಲೆಯಿರುವುದಿಲ್ಲ. ಹೀಗೆ ಕೆಡಹಿ ಮತ್ತೆ ಕಟ್ಟುವ ಕ್ರಿಯೆಯೇ ಪ್ರತಿಸಂಸ್ಕೃತಿ."[2] ಪ್ರತಿಸಂಸ್ಕೃತಿಯು ಸದಾ ಕಾಲಕ್ಕೂ ಗುಣವಂತ ಸಮಾಜವನ್ನು ನಿರೀಕ್ಷಿಸುತ್ತದೆ. ಅಂದರೆ ಅಸಮಜವಾದ ಸಂಸ್ಕೃತಿಯು ರೂಪಿಸಿದ್ದನ್ನು ಅಪಮೌಲೀಕರಣಗೊಳಿಸುತ್ತದೆ. ಧಣಿಗಳ ಹಿತಕಾದ ಸಂಸ್ಕೃತಿಯನ್ನು ದುಡಿಯುವ ಜನರು ನಿರಾಕರಿಸಿ ತಮ್ಮದಾದ ಪ್ರತಿಸಂಸ್ಕೃತಿಯನ್ನು ನಿರ್ಮಿಸಿಕೊಳ್ಳಲು ಯತ್ನಿಸುವುದನ್ನು ರಹಮತ್‌ತರೀಕೆರೆ ಕಂಡುಕೊಂಡಿದ್ದಾರೆ. 'ವ್ಯವಸ್ಥೆ' ಮತ್ತು 'ಅವಸ್ಥೆ'ಗಳ ವ್ಯತ್ಯಾಸದ ಅರಿವು ಪ್ರತಿಸಂಸ್ಕೃತಿಯ ಜ್ಞಾನವಾಗಿದೆ. ಆಳುವ ಸಂಸ್ಕೃತಿಯನ್ನು ವೈಚಾರಿಕವಾಗಿ ವಿಶ್ಲೇಷಿಸುವ ಹಾಗೂ ಅದರ ನಾಶ ಸಾಧಿಸುವ ಪ್ರಯತ್ನ ರಹಮತ್‌ತರೀಕೆರೆ ಅವರ ಚಿಂತನಾದ್ರವ್ಯವಾಗಿದೆ. ಅಷ್ಟಕ್ಕೇನಿಲ್ಲದೆ ಪುನರ್ ನಿರ್ಮಾಣ ಪ್ರಕ್ರಿಯೆಯನ್ನು ಅವರು ನಿರೀಕ್ಷಿಸುತ್ತಾರೆ.

ರಹಮತ್ ತರೀಕೆರೆ ಅವರು, 'ಎಲ್ಲರೂ ಸಮಾನವಾಗಿ ಸುಖವಾಗಿ ಬದುಕುವ ಕನಸುಗಳನ್ನು ಕಾಣುವುದು ಭವಿಷ್ಯದ ಕ್ರಿಯೆ' ಎಂದು ಪರಿಭಾವಿಸುತ್ತಾರೆ. ಹೀಗಾಗಿ ಬೇಕಾದರೆ ಪರಂಪರೆಯ ಪಾವಿತ್ರ್ಯ ನಾಶವಾಗಬೇಕು ಹಾಗೂ ಪ್ರತಿಸಂಸ್ಕೃತಿ ನಿರ್ಮಿತಿ ಅಗತ್ಯವನ್ನು ಮನಗಾಣುತ್ತಾರೆ. ಚರಿತ್ರೆಯ ಅವಗಾಹನೆ ಮತ್ತು ವರ್ತಮಾನದ ಅರಿವುಗಳೆರಡೂ ಪ್ರತಿಸಂಸ್ಕೃತಿಯನ್ನು ಸೃಷ್ಟಿಸುತ್ತದೆ. ಮುಖ್ಯವಾಗಿ ಧಣಿ ಸಂಸ್ಕೃತಿಯು ಬೆಳೆಸಿಕೊಂಡು ಬಂದಿರುವ ಸಮಾಜೋಧಾರ್ಮಿಕ ನಂಬಿಕೆಗಳ ವಿಶ್ಲೇಷಣೆಯು ಅಗತ್ಯವಿದೆ. ಪರಂಪರೆಯೇ ನಿರ್ಮಿಸಿಕೊಂಡು ಬಂದಿರುವ 'ಮಿತ್'ಗಳನ್ನು ವಿಶ್ಲೇಷಿಸುವಲ್ಲಿ ವೈಚಾರಿಕ ಹಾದಿ ಸೃಷ್ಟಿಯಾಗುತ್ತದೆ. ದುಡಿವ ಕೆಳವರ್ಗಗಳ ಬದುಕಿಗೆ ಸಂಬಂಧಿಸಿದ ಸಂಕೇತಗಳನ್ನು, ವೈರುಧ್ಯಗಳನ್ನು ನಾಶಪಡಿಸಬೇಕಾಗಿದೆ. ಇಂಡಿಯಾದ ಜಾತಿ ಸಂಸ್ಕೃತಿಯಲ್ಲಿರುವ ಅಸ್ಪೃಶ್ಯತೆ, ದೈಹಿಕ ಶ್ರಮ, ದನದ ಮಾಂಸಹಾರ, ಕಪ್ಪು ಬಣ್ಣ, ದೇಶೀಭಾಷೆಗಳು ಇತ್ಯಾದಿ ಮಿತ್‌ಗಳನ್ನು ಪ್ರಶ್ನಿಸುವಲ್ಲಿ ಉತ್ತರವಾಗಿ ಪ್ರತಿಸಂಸ್ಕೃತಿಯಿದೆ. ರಹಮತ್‌ತರೀಕೆರೆ ಅವರು ಸಂಸ್ಕೃತಿಯೊ ಳಗಿನ ವೈರುಧ್ಯವನ್ನು ನಿಚ್ಚಳವಾಗಿ ಗುರುತಿಸುತ್ತಾರೆ. ವೈರುಧ್ಯವೆಂದರೆ, ದುಡಿಯುವ ಕೆಳವರ್ಗದವರೂ ತಮ್ಮ ವಿರುದ್ಧದ 'ಮಿತ್'ಗಳನ್ನು ಬಹುಮಟ್ಟಿಗೆ ಒಪ್ಪಿಕೊಂಡು ಮುಂದುವರಿದಿದ್ದಾರೆ. ಇಂಥ ಸ್ಥಿತಿಯಲ್ಲಿ ಹೀಗಿರುವ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಕುರಿತಂತೆ ರಹಮತ್ ತರೀಕೆರೆ ಅವರ ಅಭಿಮತ ಹೀಗಿದೆ, "ಈಗ ಕೆಡಹುವುದು ಎಂದರೆ – ಇಂಥ ಸಾಮಾಜಿಕ ಆಲೋಚನ ಕ್ರಮವನ್ನು ಧಿಕ್ಕರಿಸುವುದು; ಶ್ರೇಷ್ಠವೆಂದು ಮಾನ್ಯವಾಗಿರುವುದರ ಪಾವಿತ್ರ್ಯನಾಶಗೈಯುವುದು. ಕಟ್ಟುವುದೆಂದರೆ – ತಿರಸ್ಕೃತವೆನಿಸಿರುವ ದುಡಿಯುವ ವರ್ಗದ ಸಂಸ್ಕೃತಿಯನ್ನು ಹಠತೊಟ್ಟು ಮೌಲ್ಯೀಕರಿಸುವುದು, ಅಪಮಾನಿತವಾಗಿ ದೀನವಾಗಿ ಹೋಗಿರುವುದನ್ನು ಘನತೆಗೊಳಿಸುವುದು, ಕಡೆಯಲ್ಲಿ, ಯಾರ ಮನಸ್ಸೂ ಮುರಿಯದ ಯಾರ ಬದುಕೂ ಬಾಡದ, ಜನಪರವಾದ ಹೊಸ ಸಮಾಜವಾದಿ ಮಿತ್ ಒಂದನ್ನು ನೆಲೆಗೊಳಿಸುವುದು. ಪ್ರತಿಸಂಸ್ಕೃತಿಯೆಂದರೆ ಈ ಸಾಂಸ್ಕೃತಿಕ ಜವಾಬ್ದಾರಿಯಾಗಿದೆ"[3] ಸಾಂಪ್ರದಾಯಿಕ ಹಾಗೂ ಅವೈಚಾರಿಕ ಪರಂಪರಾತ್ಮಕ ಚಿಂತನೆಗಳನ್ನು ತಿರಸ್ಕರಿಸಿ, ದುಡಿಯುವ ವರ್ಗದ ಸಂಸ್ಕೃತಿಯನ್ನು ಹಠತೊಟ್ಟು ಘನತೆಗೊಳಿಸುವ ತುರ್ತಿನ ಅಗತ್ಯವನ್ನು ಸಾಂಸ್ಕೃತಿಕ ಜವಾಬ್ದಾರಿಯೆಂದು ರಹಮತ್ ತರೀಕೆರೆ ಹೇಳುತ್ತಾರೆ.

ಪ್ರತಿಸಂಸ್ಕೃತಿ ನಿರ್ಮಾಣಕ್ಕೆ ತನ್ನದೇ ಆದ ತೊಡಕುಗಳಿವೆ. ಮತೀಯ ನೆಲೆಯ ವಿರೋಧ, ಸುಧಾರಣಾವಾದ, ಸಿಟ್ಟಿನ ನಿರಸನ, ಪ್ರತಿನಿಷೇಧದ ಆಚರಣೆ ಹಾಗೂ ಮಿತ್‌ಗಳು, ಸ್ವವಿಮರ್ಶೆಯಿಲ್ಲದ ವೈಭವೀಕರಣ, ಭೌತಿಕ ಬಳಕೆಯಲ್ಲಿ ಎಚ್ಚರಗೆಡುವುದು ಮತ್ತು ಪುರಾಣ ಸಂಬಂಧಿ

ಚಿಂತನೆಗಳು ಇತ್ಯಾದಿಯಾಗಿ ರಹಮತ್‌ತರೀಕೆರೆ ಅವರು ವಿವರವಾದ ವಿಶ್ಲೇಷಣೆಯನ್ನು ನೀಡಿದ್ದಾರೆ. ಪ್ರತಿಸಂಸ್ಕೃತಿಯ ಕಾರ್ಯವು ಕೇವಲ ಹುಸಿ ತಂತ್ರವಾಗಬಾರದು. ಪ್ರತಿಭಟನೆಗಳು ಮತ್ತು ಪ್ರತಿರೋಧಗಳು ಪರಿಸ್ಥಿತಿಯನ್ನು ಸ್ವಲ್ಪಕಾಲ ತಿಳಿಯಾಗಿಸಿ ಮರಳಿ ಹಿಂದಿನ ಸ್ಥಿತಿಯನ್ನು ಮುಂದುವರಿಸುವ ಪರಿಸ್ಥಿತಿಯನ್ನು ಏರ್ಪಡಿಸುತ್ತವೆ. ಇಂಥ ಪ್ರತಿಸಂಸ್ಕೃತಿ ನಿಲವಿನಿಂದ ಪ್ರಯೋಜನವಾಗದು. ರಹಮತ್‌ತರೀಕೆರೆ ಅವರು ಹೇಳುವಂತೆ, "ಪುರಾಣ ಭಂಜನೆಯು ತಾತ್ತ್ವಿಕ ಎಚ್ಚರದಲ್ಲೇ ಜರುಗಬೇಕು. ಇಂಥ ತಾತ್ತ್ವಿಕ ಎಚ್ಚರವಿಲ್ಲದಿದ್ದರೆ ಪ್ರತಿಭಟನೆ ಭೋಳೆಯಾಗಿ, ವ್ಯವಸ್ಥೆಗೆ ಪ್ರಿಯವಾದ ಕೆಲಸವೇ ಜರುಗಿಬಿಡುತ್ತದೆ".[4] ಅಂದರೆ ಪ್ರತಿಸಂಸ್ಕೃತಿಯ ದೆಸೆಯಿಂದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಬದಲಾವಣೆಗಳಾಗಬೇಕು. ಇಲ್ಲವಾದರೆ ಯಾವ ಪ್ರಯೋಜನವೂ ಆಗದು. ಉದಾಹರಣೆಗೆ, ದಲಿತರಿಗೆ ದೇವಾಲಯ ಪ್ರವೇಶದ ಹಕ್ಕನ್ನು ಪ್ರತಿಸಂಸ್ಕೃತಿ ಒತ್ತಾಯಿಸುತ್ತದೆ. ಇದು ಧಾರ್ಮಿಕ ಹಕ್ಕು; ಆದರೆ ದೇವಾಲಯಗಳಿಂದ ದಲಿತರು ಶೋಷಿತರಾಗದಂತೆ ಪ್ರತಿಸಂಸ್ಕೃತಿ ಎಚ್ಚರವಹಿಸುತ್ತದೆ. ಸಾಂಸ್ಕೃತಿಕ ಸ್ವಾತಂತ್ರ್ಯ ಆರ್ಥಿಕ ದಿವಾಳಿತನಕ್ಕೆ ಎರವಾಗಬಾರದು. ಇದೇ ಬಗೆಯ ಅಪಾಯ ಮತೀಯ ನೆಲೆಯ ವಿರೋಧದಲ್ಲಿದೆ ಈ ಬಗ್ಗೆ ತಿಳಿಯೋಣ.

2.1. ಬದಲೀ ಸಂಸ್ಕೃತಿಯ ಕಲ್ಪನೆ : ಭಾರತದಲ್ಲಿ ಒಂದು ಸಂಸ್ಕೃತಿಯನ್ನು ತಿರಸ್ಕರಿಸಿ ಮತ್ತೊಂದನ್ನು ಪಡೆಯುವಾಗ ವೈಚಾರಿಕ ಆಲೋಚನೆಗಳ ಅಗತ್ಯವಿದೆ. ಅದರಲ್ಲೂ ಆಳುವ ಸಂಸ್ಕೃತಿಯ ಪುರಾಣಕಲ್ಪನೆ ನಂಬಿಕೆಗಳ ಶ್ರೇಷ್ಠತೆಯನ್ನು ಇಲ್ಲವಾಗಿಸಿ ಮತ್ತೊಂದನ್ನು ಅನುಸರಿಸಲು ಹೊರಟಾಗ ಜಡವೆನಿಸುವ ಹೊಸ ರೂಢಿಗಳಿಗೆ ಬೀಳಬಾರದು. ಜಡ ಸಂಸ್ಕೃತಿಯಿಂದ ಜಡ ಸಂಸ್ಕೃತಿಯೆಡೆಗಿನ ಪಯಣ ವಿಚಾರಗಳಿಂದ ಕೂಡಿರದೆ ಮೂಢ ನಂಬಿಕೆಗಳನ್ನು ಬೆಳೆಸಬಲ್ಲದು. ಇಲ್ಲಿನ ವೈರುಧ್ಯವೆಂದರೆ, "ಅನೇಕ ಭಾಷೆ, ಮತ, ಸಂಸ್ಕೃತಿ, ಜನಾಂಗಗಳು ಒಟ್ಟಿಗೆ ಇರುವ ದೇಶದಲ್ಲಿ, ಆಳುವ ವರ್ಗವಾಗಲು ವಿಚಿತ್ರ ಪೈಪೋಟಿಯಿರುತ್ತದೆ. ಆಗ ಪ್ರಭುತ್ವದ ಸಂಸ್ಕೃತಿ ಅಥವಾ ಮತಕ್ಕೆ ಜನವಿರೋಧ ಬರತೊಡಗಿದಾಗ, ಈ ಲಾಭವನ್ನು ಮತ್ತೊಂದು ಮತ ಅಥವಾ ಸಂಸ್ಕೃತಿ ಪಡೆಯತೊಡಗುತ್ತದೆ." [5] ಅಂದರೆ ರಾಜಕೀಯ ಕಾರಣಗಳಿಗಾಗಿ ಒಂದು ಸಂಸ್ಕೃತಿಯನ್ನು ವಿರೋಧಿಸಿ ಅದರ ಸ್ಥಳದಲ್ಲೇ ಅಷ್ಟೇ ಅವೈಚಾರಿಕ ಸಂಸ್ಕೃತಿಯನ್ನು ನೆಲೆಗೊಳಿಸಿದಾಗ ಪ್ರಯೋಜನವಾಗದು. ರಹಮತ್‌ತರೀಕೆರೆ ಅವರು ಈ ಹಿನ್ನೆಲೆಯಿಂದ ಸಾಹಿತ್ಯಿಕ, ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವಿಶ್ಲೇಷಣೆ, ಸಮರ್ಥನೆಗಳನ್ನು ನೀಡಿದ್ದಾರೆ. ಕವಿ ಬ್ರಹ್ಮ ಶಿವನು ವೈದಿಕ ಮತ್ತು ಶೈವಪುರಾಣಗಳನ್ನು ಪ್ರಶ್ನಿಸಿ ಜೈನ ಧರ್ಮವನ್ನು ಎತ್ತಿ ಹಿಡಿದನು. ಆದರೆ ಜೈನ ಧರ್ಮದ ಅವೈಚಾರಿಕತೆಯ ದೋಷಗಳನ್ನು ಬ್ರಹ್ಮಶಿವನು ಪ್ರಶ್ನಿಸಲಿಲ್ಲ. ಆದರೆ 'ವೈದಿಕ ಸಂಸ್ಕೃತಿಯ ಅಪಮೌಲೀಕರಣದ ಮೂಲಕವೇ ಕಾಣಿಸಿಕೊಂಡ ಬೌದ್ಧರು, ಚಾರ್ವಾಕರು ಅಥವಾ ವಚನಕಾರರು, ಪ್ರತಿಸಂಸ್ಕೃತಿಯೊಂದನ್ನು ಕಟ್ಟಿಕೊಡುವ ವಿಶಾಲ ಹಾದಿಯಲ್ಲಿ ಸ್ವಲ್ಪ ದೂರ ನಡೆದರು."[6] ಬೌದ್ಧರು, ಚಾರ್ವಾಕರು ಅಥವಾ ವಚನಕಾರರು ಜೀವನ ಸತ್ಯಗಳನ್ನು ವಿವರಿಸಲು ಪ್ರಯತ್ನಿಸಿದರು. ಮುಖ್ಯವಾಗಿ ಕಾಯಕ ತತ್ತ್ವವನ್ನು ಎತ್ತಿ ಹಿಡಿದು ಜೀವನದರ್ಶನವನ್ನು ರೂಪಿಸಿದರು. ದೇವರನ್ನು ಒಳಗೊಂಡು, ಇಲ್ಲವೆ ತಿರಸ್ಕರಿಸಿಯೂ ಬದುಕಿನ ಸ್ವಾರಸ್ಯವನ್ನು ಮನದಟ್ಟುಮಾಡಿಕೊಟ್ಟರು. 18-19ನೇ ಶತಮಾನದಲ್ಲಿ ಮೊಗ್ಲಿಂಗ್ ಮೊದಲಾದ ಕ್ರೈಸ್ತ ಮಿಷನರಿಗಳೂ ಕೂಡ ಮತೀಯ ಚಿಂತನೆಗಳಲ್ಲೇ ನೆಲೆನಿಂತರು. ಹೀಗಾಗಿ ಪ್ರತಿಸಂಸ್ಕೃತಿಯೊಂದನ್ನು ಕಟ್ಟುವಲ್ಲಿ ವಿಫಲರಾದರು. ಮತೀಯ ನೆಲೆ ಚರ್ಚೆಗಳಿಂದ ವೈಚಾರಿಕ ಅಥವಾ ಜನಪರ ನಿಲುವುಗಳನ್ನು ಸೃಷ್ಟಿಸಲಾಗದೆಂದು ರಹಮತ್ ತರೀಕೆರೆ ಸ್ಪಷ್ಟಪಡಿಸಿದ್ದಾರೆ.

ರಹಮತ್‌ತರೀಕೆರೆ ಅವರ ಪ್ರತಿಸಂಸ್ಕೃತಿ ಚಿಂತನೆ ಗಾಢ ಬದ್ಧತೆಯ ಕೇಂದ್ರದಿಂದ ಹೊರಟು ಸಮಗ್ರ ಚರಿತ್ರೆಯನ್ನು ಒಳಗೊಳ್ಳುತ್ತದೆ. ಚರಿತ್ರೆಗೆ ಮರುಬೆಲೆ ಕಟ್ಟುತ್ತಾ ಸಮಕಾಲೀನತೆಯನ್ನು ಒಳಗು ಮಾಡಿಕೊಳ್ಳುವ ವೈಚಾರಿಕತೆ ಇವರದ್ದಾಗಿದೆ. ರಹಮತ್‌ತರೀಕೆರೆ ಅವರ ಪ್ರತಿಭೆ, ಪಾಂಡಿತ್ಯ, ಮತ್ತು ಅಭಿವ್ಯಕ್ತಿ ಗಮನಾರ್ಹವಾದದ್ದು. ಇವರು ಬಂಡಾಯ ಬರೆವಣಿಗೆಯ ಆವರಣದೊಳಗಡೆಯೂ ಆತ್ಮವಿಮರ್ಶೆ ಮತ್ತು ತರ-ತಮ ವೈಚಾರಿಕ ವಿವೇಚನೆಗಳನ್ನು ಒಳಗೊಳ್ಳುವರು.

2.2. ಸುಧಾರಣೆಯೆಂದರೆ ನಾಗರಿಕ ಹಕ್ಕು : ಕಾಲಮಾನದ ದೆಸೆಯಿಂದ ಜನಸಾಮಾನ್ಯರು ತಮ್ಮ ಶೋಷಣೆಯ ಬಗ್ಗೆ ಯೋಚಿಸಿ ಪ್ರತಿಭಟನೆಯನ್ನು ಒಡ್ಡುತ್ತಾರೆ. ಆಳುವ ಸಂಸ್ಕೃತಿಯ ರೂಢಿಗತ ನಿಯಮಗಳನ್ನು ಪ್ರಶ್ನಿಸುತ್ತಾರೆ. ಹೀಗಾದಾಗ ವ್ಯವಸ್ಥೆಯೇ ಪುರಾಣ ಭಂಜನ ಮಾಡಿ ಶೋಷಿತರಿಗೆ ನ್ಯಾಯವನ್ನು ಒದಗಿಸುತ್ತದೆ. 19ನೇಯ ಶತಮಾನದ ಸುಧಾರಣಾವಾದಿಗಳು ಸತಿ ಪದ್ಧತಿ, ಬಾಲ್ಯವಿವಾಹ, ಮತ್ತು ಅಸ್ಪೃಶ್ಯತೆಯಿಂದ ಕೂಡಿದ್ದ ಭಾರತೀಯ ಸಂಸ್ಕೃತಿಗೆ ಚಿಕಿತ್ಸೆಯನ್ನು ನೀಡಿ ಪ್ರತಿಸಂಸ್ಕೃತಿ ನಿರ್ಮಿಸಿದರು. ಇದು ನಿಜವಾಗಿಯೂ ಸುಧಾರಣೆಯಷ್ಟೇ ಅಲ್ಲದೆ ಜನಸಾಮಾನ್ಯರಿಗೆ, ದುಡಿಯುವ ಸಮುದಾಯಕ್ಕೆ ಹಾಗೂ ಮಹಿಳೆಯರಿಗೆ ನಾಗರಿಕಹಕ್ಕು ದೊರೆತಂತಾಯಿತು. ಧಾರ್ಮಿಕವಾಗಿ, ಸಾಹಿತ್ಯಕವಾಗಿ ಮತ್ತು ಸಾಮಾಜಿಕವಾಗಿ ಇಂಥ ಇತ್ಯಾತ್ಮಕ ಬದಲಾವಣೆ ಗಳಾದವು. ಆರ್ಯ ಸಮಾಜವು ಕೆಳಜಾತಿಯವರಿಗೂ ಬ್ರಾಹ್ಮಣಮತದ ಸಂಸ್ಕಾರಗಳನ್ನು ದೊರಕಿಸಿ ಕೊಡುವ ಮೂಲಕ ನಾಗರಿಕತೆಯನ್ನು ಪ್ರಚುರಪಡಿಸಿತು. ಗಾಂಧೀಜಿ ಅವರ ಸಾಮಾಜಿಕ ಚಟುವಟಿಕೆಗಳಲ್ಲಿ ಈ ಬಗೆಯ ಆಶಯಗಳಿದ್ದವು. ಅಡಿಗರ ಕಾವ್ಯವು ಆಧುನೀಕರಣಗೊಂಡ ಸಂಸ್ಕೃತಿಯನ್ನು ಪ್ರತಿಪಾದಿಸಿತು. ರಹಮತ್‌ತರೀಕೆರೆ ಅವರು ಕನ್ನಡ ನವೋದಯ ಕಾವ್ಯಗಳಲ್ಲಿ ಸುಧಾರಣಾವಾದಿ ಸಾಮಾಜಿಕ ನಿಲುವುಗಳಿರುವುದನ್ನು ಗುರುತಿಸುತ್ತಾರೆ. ಈ ಹಿನ್ನೆಲೆಯಿಂದ ಪಂಜೆಮಂಗೇಶರಾಯರು ಮತ್ತು ಗೋವಿಂದ ಪೈಗಳ ಹೊಲೆಯರನ್ನು ಕುರಿತ ಹಾಡುಗಳು, ಭೈರಪ್ಪ ಅವರ ಕಾದಂಬರಿಗಳು ಮತ್ತು ಕುವೆಂಪು ಅವರ ಕಾದಂಬರಿಗಳು ಸುಧಾರಣಾವಾದಿ ನಿಲುವುಗಳನ್ನು ಹೊಂದಿದ್ದವು. ಕುವೆಂಪು ಅವರು ಶ್ರೀರಾಮಾಯಣ ದರ್ಶನಂ ನಲ್ಲಿ ಆರ್ಯ ರಾವಣನನ್ನು ಸರ್ವ ಸಾಮಾನ್ಯನಾದ ಪುರುಷೋತ್ತಮನಾಗಿ ಪರಿವರ್ತಿಸಿದರು. ಇಲ್ಲೆಲ್ಲ ಪ್ರಗತಿಪರತೆಯ ಜೊತೆಗೆ ಪ್ರತಿಸಂಸ್ಕೃತಿ ನಿರ್ಮಾಣದ ಪ್ರಕ್ರಿಯೆಯೂ ನಡೆಯಿತು. ಮುಖ್ಯವಾಗಿ ರಹಮತ್‌ತರೀಕೆರೆ ಅವರು ವಿವರಿಸುವಂತೆ, "ಅಸ್ಪೃಶ್ಯರಿಗೆ ದೇವಸ್ಥಾನ ಪ್ರವೇಶ ಹಕ್ಕನ್ನು ಕೇಳುವ ದಲಿತರ ಹಠವು, ಆ ದೈವವ್ಯವಸ್ಥೆಯನ್ನು ಪಡೆದುಕೊಳ್ಳುವುದಕ್ಕಲ್ಲ. ಸಾಂಕೇತಿಕವಾದ ಪಾವಿತ್ರ್ಯ ನಾಶದ ಮೂಲಕ ನಾಗರಿಕಹಕ್ಕನ್ನು ಚಲಾಯಿಸುವುದಕ್ಕೆ"[7] ಇಲ್ಲಿ ಸುಧಾರಣಾವಾದವು ಪ್ರತಿಸಂಸ್ಕೃತಿಯೊಂದನ್ನು ರೂಪಿಸಿ ನಾಗರಿಕ ಹಕ್ಕನ್ನು ಕೊಡಮಾಡುತ್ತದೆ. ಪ್ರತಿಸಂಸ್ಕೃತಿಯ ನಿಲವು ಇದಾಗಿದೆ.

ರಹಮತ್‌ತರೀಕೆರೆ ಅವರು ಸಂಸ್ಕೃತಿಯ ಬಹುಮುಖಿತೆ ಹಾಗೂ ಅದರ ಅಲಕ್ಷಿತ ನೆಲೆಗಳ ಶೋಧದಲ್ಲಿ ಪ್ರತಿಸಂಸ್ಕೃತಿಯ ಅಗತ್ಯತೆಯನ್ನು ಮನಗಾಣುತ್ತಾರೆ. ಪರಂಪರೆಯಲ್ಲಿ ಆದರ್ಶವೆಂದು ಪರಿಭಾವಿಸಿದ ಸಂಸ್ಕೃತಿ ವಿವರಗಳನ್ನು ರಹಮತ್ ತರೀಕೆರೆ ಅವರು ವಿಮರ್ಶಿಸುತ್ತಾರೆ. ಹೀಗಾಗಿ ಅವರು ಸಮಕಾಲೀನವೆನಿಸುವ ಜನಪರವಾದ ಪ್ರತಿಸಂಸ್ಕೃತಿಯ ವಿವರಗಳನ್ನು ನೀಡಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಎಚ್.ಎಸ್. ರಾಘವೇಂದ್ರರಾವ್ ಅವರು ಹೇಳುವಂತೆ, "ರಹಮತ್‌ತರೀಕೆರೆ ಅವರ ನಿಲುವುಗಳ ಹಿಂದೆ ನೋವಿನ ನಡುವೆಯೂ ಅರ್ಥವಂತಿಕೆ ಹಾಗೂ ಅಭಿಮಾನಗಳನ್ನು ಕಾಪಾಡಿಕೊಂಡ ಜೀವನಕ್ರಮವೊಂದರ ಒತ್ತಡ, ಒತ್ತಾಸೆಗಳಿವೆ."[8] ಸಂಸ್ಕೃತಿಯನ್ನು ಪರಿವೀಕ್ಷಿಸುವ, ಮರುಬೆಲೆ ಕಟ್ಟುವ ವಿಚಾರದಲ್ಲಿ ರಹಮತ್‌ತರೀಕೆರೆ ಆಧುನಿಕ ವಿಚಾರಗಳ ಮಾನದಂಡವನ್ನು ಬಳಸುತ್ತಾರೆ.

2.3. ತಾತ್ಕಾಲಿಕ ಪ್ರತಿಭಟನೆ ಅಥವ ಸಿಟ್ಟಿನ ನಿರಸನ : ಪ್ರತಿಸಂಸ್ಕೃತಿಯ ನಿಲುವಿನಲ್ಲಿ ಆಗುವ ಪರಿಣಾಮ ಸುದೀರ್ಘದ್ದಾಗಿರಬೇಕು. ಅಂದರೆ "ವ್ಯವಸ್ಥೆಯ ಮೇಲಿನ ಸಿಟ್ಟು ಅರ್ಥಪೂರ್ಣ ಬದಲಾವಣೆಯ ಕ್ರಿಯೆಯಲ್ಲಿ ಒತ್ತಡ ನಿರ್ಮಿಸಬೇಕು. ಚಲನೆಗೆ ಒತ್ತಾಸೆಯಾಗಿ ಬರಬೇಕು".[9] ಕ್ರಾಂತಿ ನಡೆದ ಕೆಲವು ಕಾಲ ವಿಚಾರಪರತೆ ಇದ್ದು ಅನಂತರ ಮುಂದಿನ ದಿನಗಳಲ್ಲಿ ಶೋಷಣೆ ಪುನರ್ ನವೀಕರಣಗೊಂಡರೆ ಪ್ರತಿಸಂಸ್ಕೃತಿಯ ಸಾರ್ಥಕತೆ ಇಲ್ಲವಾಗುತ್ತದೆ. ಸಾಹಿತ್ಯ-ಸಿನಿಮಾಗಳಲ್ಲಿ ಇಂಥ ಸ್ಥಿತಿ ಉದ್ಭವವಾಗುವುದನ್ನು ರಹಮತ್‌ತರೀಕೆರೆ ಗುರುತಿಸಿದ್ದಾರೆ. ಆಳುವ ವ್ಯವಸ್ಥೆಯೇ ತಮ್ಮನ್ನು ಅಪಹಾಸ್ಯ ಮಾಡಲು ವಿಪರ್ಯಾಸ ಮಾಡಿ ಅನಂತರ ಸಾಮಾಜಿಕ ಸ್ಥಿತಿ ಎಂದಿನಂತೆ ಮುಂದುವರಿಯಲು ಅನುವು ಮಾಡಿಕೊಡುತ್ತದೆ. ಸ್ವಯಂ ತೇಜೋವಧೆ ಮಾಡಿಕೊಂಡ ಆಳುವ ವ್ಯವಸ್ಥೆ ತನ್ನ ಕಬಂಧಬಾಹುಗಳಿಂದ ದುಡಿವ ಸಮುದಾಯವನ್ನು ಮೇಲೇಳದಂತೆ ಹಿಡಿದಿಡುತ್ತದೆ. ರಹಮತ್‌ತರೀಕೆರೆ ಅವರು ತಮ್ಮ ವಿಚಾರಗಳಿಗೆ ಪೂರಕವಾಗಿ ಜಾನಪದದಲ್ಲಿನ ನಿದರ್ಶನಗಳನ್ನು ನೀಡುತ್ತಾರೆ. "ಗ್ರಾಮದೇವತೆಗಳ ಹಬ್ಬಗಳಲ್ಲಿ ಅಸ್ಪೃಶ್ಯರಾದ ಆಸಾದಿಗಳು ಸವರ್ಣೀಯ ದೇವರುಗಳಿಗೆ ಬಾಯಿಗೆ ಬಂದಂತೆ ಬೈಯುವುದು. ಮುಖಕ್ಕೆ ಉಗಿಯುವುದು, ಇದರಲ್ಲಿ ಒಂದಾಗಿದೆ. ಮಾರಿಹಬ್ಬದ ಈ ಮಿತ್, ಕೆಳಜಾತಿಯೊಡನೆ ಕೊಡುಕೊಳು ನಡೆಯದಂತೆ, ಜಾತಿ ಸಂಕರವಾಗದಂತೆ, ಮೇಲ್ತುದಿಯ ಜಾತಿಗಳು ಹೇರುವ ನಿಷೇಧದ ಸಂಕೇತವಾಗಿದೆ."[10] (ಈ ಮಿಥ್ ಪ್ರಕಾರ, ಬ್ರಾಹ್ಮಣ ಹುಡುಗಿಗೆ ಮಾದಿಗರ ಹುಡುಗನು ತನ್ನ ಹುಟ್ಟನ್ನು ಮರೆಮಾಚಿ ಮದುವೆಯಾಗುತ್ತಾನೆ. ನಿಜ ಗೊತ್ತಾದ ಮೇಲೆ ಆ ಹುಡುಗಿಯು ಅವನಿಗೆ ಕೋಣವಾಗುವಂತೆ ಶಾಪ ಹಾಕಿ, ವರ್ಷಕ್ಕೊಮ್ಮೆ ಕೊಂದು ಸೇಡು ತೀರಿಸಿಕೊಳ್ಳುತ್ತಾಳೆ). ಇದರಿಂದ ತಿಳಿದುಬರುವುದೇನೆಂದರೆ ತಾತ್ಕಾಲಿಕ ಪ್ರತಿಭಟನೆ ಮನೋರಂಜನೆಯಾಗಿ ಪರಿವರ್ತಿತವಾಗಿ ಬಿಡುತ್ತದೆ. ಮುಖ್ಯವಾಗಿ "ಚರಿತ್ರೆಯಲ್ಲಿ ಆಗಿರುವ ಈ ಅಪಮಾನವನ್ನು ಕೆಳಜಾತಿಗಳು ಬಯ್ಯುವ ಮತ್ತು ಉಗಿಯುವ ಪಾವಿತ್ರ್ಯನಾಶದಲ್ಲಿ ಸರಿದೂಗಿಸುತ್ತಿರುತ್ತವೆ."[11] ಈ ಬಗೆಯ ಪ್ರತಿಸಂಸ್ಕೃತಿಯ ಸಾಂಕೇತಿಕ ಪ್ರತಿಭಟನೆಯಿಂದ ಯಾವ ಇತ್ಯಾತ್ಮಕವಾದ ಬದಲಾವಣೆಯೂ ಆಗುವುದಿಲ್ಲ. ನಿಜವಾದ ಬದಲಾವಣೆ ಎಂದರೆ ಸಿಟ್ಟಿನ ನಿರಸನವಾಗದೆ ವಾಸ್ತವ ಜೀವನದೊಳಗೆ ಪರಿವರ್ತನೆಗಳಾಗಬೇಕು. ಅಸ್ಪೃಶ್ಯನ ಮನೆಯ ಬೆಂಕಿ, ಸುರೆಬಾನಿಯ ನೀರು ಪವಿತ್ರವೆಂದು ತಿಳಿಯುವ ಸಂಸ್ಕೃತಿಯಿಂದ ಅಸ್ಪೃಶ್ಯನಿಗೆ ಪ್ರಯೋಜನವಾಗದು. ವಚನಕಾರರಲ್ಲಿ, ಕುವೆಂಪು ಕಾದಂಬರಿಗಳಲ್ಲಿ, ಸಿದ್ಧರವೇಷ ಧರಿಸುವಲ್ಲಿ ಇಂಥದ್ದೇ ಸಂಸ್ಕೃತಿಯ ಅನಾವರಣಗಳಿವೆ. ಇಂಥ ಸಾಂಸ್ಕೃತಿಕ ಆಚರಣೆಗಳು ಮತ್ತು ವಿವರಗಳು ಸಂಸ್ಕೃತಿಯೊಳಗೆ ಶೋಷಿತರನ್ನು ಶೋಷಣೆಯಲ್ಲಿಯೇ ನೆಲೆಗೊಳಿಸುತ್ತವೆ.

ರಹಮತ್‌ತರೀಕೆರೆ ಅವರು, "ತಮ್ಮ ಸಂಸ್ಕೃತಿ ಚಿಂತನೆಗೆ ಆಕಾರ ಕೊಡಲೆಂದು ಸಾಹಿತ್ಯವನ್ನು ವಿಮರ್ಶೆಯನ್ನು ಅಲ್ಲಗೆಳೆಯುವುದಿಲ್ಲ. ಹಾಗೆಂದು ಪ್ರಾಯೋಗಿಕ ವಿಮರ್ಶೆಯ ಗೋಡೆಗಳ ನಡುವೆ ನಿರಾಶವಾಗಿ ಕೂಡುವುದೂ ಇಲ್ಲ. ಜೀವನ ಮತ್ತು ಸಾಹಿತ್ಯಗಳನ್ನು ಪರಸ್ಪರ ಒರೆಗಲ್ಲುಗಳಾಗಿ ಅವರು ಉಪಯೋಗಿಸುತ್ತಾರೆ."[12] ಸಂಸ್ಕೃತಿ ಚಿಂತನೆಯನ್ನು ಒಳಗೊಳ್ಳುವ ಪರಿಕರಗಳಾದ ಚರಿತ್ರೆ, ಸಾಹಿತ್ಯ, ಸಂಸ್ಕೃತಿ ಮತ್ತು ವರ್ತಮಾನದ ವಿಚಾರಗಳನ್ನು ರಹಮತ್‌ತರೀಕೆರೆ ತಮ್ಮ ಪ್ರತಿಸಂಸ್ಕೃತಿ ಚಿಂತನೆಗೆ ಬಳಸಿಕೊಳ್ಳುತ್ತಾರೆ.

2.4. ಆಚರಣೆ ಮತ್ತು ಮಿತ್‌ಗಳಿಂದಾಗುವ ಪರಿಣಾಮಗಳು : ರಹಮತ್‌ತರೀಕೆರೆ ಅವರು ಪ್ರತಿಸಂಸ್ಕೃತಿಯನ್ನು ಒಡ್ಡಿಕೊಂಡೇ ಬದುಕಿರುವ ಪ್ರತಿನಿಷೇಧದ ಸಂಸ್ಕೃತಿಯನ್ನು ಒಳಗೊಂಡವರ ನಿದರ್ಶನವನ್ನು ನೀಡುತ್ತಾರೆ. "1910ರ ಜನಗಣತಿಯಲ್ಲಿ 'ಹಿಂದೂ' ಗಳಲ್ಲದ ಕೆಳಜಾತಿ-ಅಸ್ಪೃಶ್ಯರನ್ನು ಬೇರೆ ಮಾಡಲು ಹತ್ತು ವ್ಯತ್ಯಾಸಗಳನ್ನು ಗುರುತಿಸಲಾಯಿತು. ಅದರಲ್ಲಿ ಮೇಲು ಜಾತಿಯವರ ಹಾಗೂ ಅವರ ಪವಿತ್ರ ಗ್ರಂಥಗಳ ಶ್ರೇಷ್ಠತೆಯನ್ನು ತಿರಸ್ಕರಿಸುವವರು, ಗೋಪೂಜೆ ಬದಲಿಗೆ ಗೋಮಾಂಸ ತಿನ್ನುವವರು ಮುಂತಾದ ಲಕ್ಷಣಗಳು ಸೇರಿವೆ"[13] ಇಲ್ಲಿ ನಿಜ ಸಂಸ್ಕೃತಿಯ ರೀತಿರಿವಾಜುಗಳು ಕಂಡುಬರುತ್ತವೆ. ಅಲ್ಲದೆ ಪ್ರಧಾನ ಸಂಸ್ಕೃತಿಯೊಳಗೆ ಪ್ರತಿಸಂಸ್ಕೃತಿಯ ನಿಲುವುಗಳಿವೆ. ಪವಿತ್ರ ಗ್ರಂಥಗಳ ನಿರಾಕರಣೆ, ಗೋಪೂಜೆಯ ನಿರಾಕರಣೆ ಹಾಗೂ ಗೋಮಾಂಸ ಬಳಕೆ ಹೀಗೆ ತಮ್ಮನ್ನು ತಮ್ಮ ನೆಲೆಯೊಡನೆ ಗುರುತಿಸಿಕೊಳ್ಳುವ ಹಠವಿರುವುದೇ ಪ್ರತಿಸಂಸ್ಕೃತಿಯಾಗುತ್ತದೆ. ನಿಜವಾಗಿಯೂ ಅಂಬೇಡ್ಕರ್ ಅವರು ಹೇಳಿದಂತೆ, "ಬ್ರಾಹ್ಮಣರು ಅಸ್ಪೃಶ್ಯರನ್ನು ದೂರವಿರಿಸಿದಂತೆಯೇ ಅಸ್ಪೃಶ್ಯರೂ ಬ್ರಾಹ್ಮಣರನ್ನು ಮುಟ್ಟದೆ ದೂರವಿರಿಸಿದ್ದಾರೆ"[14] ಇಂಥ ಪ್ರತಿನಿಷೇಧದ ನಿಲುವುಗಳಲ್ಲಿ ಪ್ರತಿಸಂಸ್ಕೃತಿಯ ಹೊಳಹುಗಳಿವೆ.

ಪ್ರತಿಸಂಸ್ಕೃತಿ ಚಿಂತನೆಯನ್ನು ಕುರಿತಂತೆ ಪ್ರತಿಪಾದಿಸುವಾಗ ರಹಮತ್‌ತರೀಕೆರೆ ಅವರ ವ್ಯಾಪಕ ಅಧ್ಯಯನ ಗಮನವನ್ನು ಸೆಳೆಯುತ್ತದೆ. ಭಾರತೀಯ ಸಂಸ್ಕೃತಿ ಉಗಮಗೊಂಡಾಗ ಜನಪದ ಸಂಸ್ಕೃತಿಯಾಗಿತ್ತು. ಅನಂತರ ಭಾರತೀಯ ಸಂಸ್ಕೃತಿ ವೇದೋಪನಿಷತ್ತು, ಪುರಾಣ, ಮಹಾಕಾವ್ಯಗಳಲ್ಲಿ ತನ್ನತನವನ್ನೂ ಕಂಡುಕೊಂಡಿತು. ಧಾರ್ಮಿಕ ವಿಧಿಗಳು, ಮಂತ್ರಗಳು, ಅಧಿಕಾರ, ವರ್ಗ ಪ್ರಜ್ಞೆ ಸಂಸ್ಕೃತಿಯನ್ನು ಇಬ್ಭಾಗಗೊಳಿಸಿತು. ಒಳ್ಳೆಯ ಕಾವ್ಯ ಒಳ್ಳೆಯ ಜೀವನವನ್ನು ಕಟ್ಟಿಕೊಡುವ ಬದಲಾಗಿ ಜಾತಿ-ವರ್ಗ ಪ್ರಜ್ಞೆಯನ್ನು ಇಮ್ಮಡಿಗೊಳಿಸಿತು. ಕವಿಯೂ ಪುರೋಹಿತನೂ ಅಭಿನ್ನರೆನಿಸಿ ಇವರ ಚಿಂತನೆಗಳೇ ಸಂಸ್ಕೃತಿ ಎನಿಸಿತು. ಹೀಗಾಗಿ ಧಾರ್ಮಿಕ ಹಾಗೂ ಮಾಂತ್ರಿಕ ಮಹತ್ವವೇ ಸಂಸ್ಕೃತಿಯ ಹೂರಣವಾಯಿತು. ಧಾರ್ಮಿಕ ಉದ್ದೇಶಗಳಿಗೆ ಕೆಳಜಾತಿ ವರ್ಗದ ದುಡಿಯುವ ಸಮುದಾಯ ಬಲಿಯಾಯಿತು. ರಾಜ, ಕವಿ, ಋಷಿ, ದ್ರಷ್ಟಾರರು ದುಡಿಯುವ ಸಮುದಾಯವನ್ನು ದೂರವಿಟ್ಟು ಶೋಷಿಸಿದರು. ಭಾರತೀಯ ಸಂಸ್ಕೃತಿ ಭಾರತೀಯತೆಯಲ್ಲಿ ಸಮನ್ವಯವನ್ನು ಪುರಸ್ಕರಿಸಲಿಲ್ಲ. ಹೀಗಿದ್ದೂ

ಜನಪದರು ಪ್ರತಿಸಂಸ್ಕೃತಿಯೊಳಗೆ ಬಾಳಿದರೂ ಸಾಮಾಜಿಕವಾಗಿ ಶೋಷಿತರಾಗಿ ಉಳಿದರು. 'ದಕ್ಷಿಣ ಭಾರತದ ಪರಯನ್ ಜನ, ಮೇಲ್ಜಾತಿಯವನು ತಮ್ಮ ಕೇರಿಗಳಲ್ಲಿ ಬಂದರೆ ತಮಗೆ ಕೇಡಾಗುತ್ತದೆ, ಆತ ಮನೆಗೆ ನುಗ್ಗಿದರೆ ತಮ್ಮ 'ಅದೃಷ್ಟ' ಹೊರಟುಹೋಗುತ್ತದೆ ಎಂದು ನಂಬುತ್ತಾರೆ' – ಈ ನಂಬಿಕೆ ಜನಪದವೆನಿಸಿದರೂ ಇದು ಪ್ರತಿ ಸಂಸ್ಕೃತಿಯ ಫಲವೇ ಆಗಿದೆ. ಮೇಲ್ಜಾತಿಯವನನ್ನು ಪ್ರತಿನಿಷೇಧದ ಆಚರಣೆಯ ಮೂಲಕ ಪ್ರತಿಭಟಿಸುವ ನಿಲುವು ಇಲ್ಲಿದೆ. 'ನನ್ನನ್ನು ನೀನು ಮುಟ್ಟಿಸಿಕೊಳ್ಳಲು ಹಿಂಜರಿಯುವಂತೆ, ನಾನೂ ನಿನ್ನನ್ನೂ ಮುಟ್ಟಲು ಹಿಂಜರಿಯುವೆ' ಎಂಬ ತಾತ್ತ್ವಿಕತೆ ಇಲ್ಲಿದೆ.

ದಲಿತರು ದೇವಸ್ಥಾನದ ಹೊರಗುಳಿಯಲು ಕಾರಣವೇನು ಎಂಬ ಪ್ರಶ್ನೆಗೆ ಉತ್ತರ ಹೀಗಿದೆ, "ಒಂದು ಕಾಲದಲ್ಲಿ ಆಳುವ ವರ್ಗದವರಾಗಿದ್ದ ದಲಿತರು ಪೂಜೆಗೆಂದು ಕುದುರೆಯ ಮೇಲೆ ಹೊರಟರಂತೆ, ಸುಧಾರಿಸಿಕೊಳ್ಳಲೆಂದು ಕೂತಾಗ ಕಾಲುನಡುಗೆಯಲ್ಲಿದ್ದ 'ಇತರರು' (ಮೇಲ್ಜಾತಿ–ವರ್ಗ) ಬೇಗ ದೇವಸ್ಥಾನ ಸೇರಿಕೊಂಡರಂತೆ. ತಡವಾಗಿ ಕುದುರೆಯವರು ಬಂದಾಗ ಬಾಗಿಲು ಮುಚ್ಚಿತ್ತಂತೆ."[15] ಈ ಬಗೆಯ ಮಿತ್ ಅಥವಾ ಪ್ರತಿನಿಷೇಧದ ಆಚರಣೆ ಜನಪರ ನಿಲುವಿನ ಪ್ರಜ್ಞೆಯು ಪ್ರತಿಕ್ರಿಯಿಸಿದ ರೀತಿಯಾಗಿದೆ. ಇಂಥ ವಿವರಗಳ ಹಿನ್ನೆಲೆಯಿಂದ ತಮ್ಮ ಪ್ರತಿಸಂಸ್ಕೃತಿ ಶೋಧದ ನೆಲೆಗಳನ್ನು ರಹಮತ್‌ತರೀಕೆರೆ ಕಟ್ಟಿಕೊಡುತ್ತಾರೆ. ಆದರೆ ಈ ಬಗೆಯ ಹುಸಿ ಸ್ವಾಭಿಮಾನಗಳು ವಾಸ್ತವವನ್ನು ಬದಲಿಸುವಲ್ಲಿ ಎಷ್ಟರಮಟ್ಟಿಗೆ ಫಲಕಾರಿ ಎಂಬುದೂ ಅವರ ಪ್ರಶ್ನೆಯಾಗಿದೆ. ದಲಿತವಚನಕಾರರು ಕೆಳಸ್ತರದ ಸಂಸ್ಕೃತಿಯಲ್ಲಿರುವ ಮೌಲ್ಯವನ್ನು ತೋರಿಸಿಕೊಟ್ಟರು. ಪ್ರತಿಸಂಸ್ಕೃತಿಯನ್ನು ಕಟ್ಟುವ ಭರದಲ್ಲಿ ಜಮದಗ್ನಿ ಹಾಗೂ ಮಾತಂಗಿಯರ ಪುರಾಣಗಳ ಹಿನ್ನೆಲೆ ದಲಿತ ವಚನಕಾರರಿಗೆ ಅಗತ್ಯವಾಯಿತು. ಹೀಗೆ 'ಜನ ವಿರೋಧಿ ಪುರಾಣಕ್ಕೆ ವಿರೋಧಿಯಾದ ಪುರಾಣಗಳು ಹುಟ್ಟಿದವು" ಇಷ್ಟಾದರೂ ಪ್ರತಿಸಂಸ್ಕೃತಿ ವಿಚಾರಧಾರೆ ತನ್ನ ಸ್ಥಿರನೆಲೆಯನ್ನು ಕಂಡುಕೊಳ್ಳಲಿಲ್ಲವೆಂದು ರಹಮತ್‌ತರೀಕೆರೆ ಹೇಳುತ್ತಾರೆ.

ಪ್ರತಿಸಂಸ್ಕೃತಿಯ ವ್ಯಾಖ್ಯಾನವನ್ನು ನೀಡುತ್ತಾ ಅದರ ಸ್ವರೂಪವನ್ನು ವಿವಿಧ ನೆಲೆಗಳಲ್ಲಿ ರಹಮತ್‌ತರೀಕೆರೆ ವಿವರಿಸುತ್ತಾರೆ. ಪ್ರತಿಸಂಸ್ಕೃತಿಯ ಉದ್ದೇಶ, ಪ್ರಯೋಜನಗಳೂ ಒಳಗೊಳಗೆ ಚರ್ಚಿತವಾಗಿವೆ. ರಹಮತ್‌ತರೀಕೆರೆ ಅವರ ಚಿಂತನೆಗಳು ಓದುಗರ ಮೇಲೆ ಪರಿಣಾಮವನ್ನುಂಟು ಮಾಡುವಷ್ಟು ಶಕ್ತವಾಗಿವೆ. 'ಸಂಸ್ಕೃತಿ' ಯನ್ನು ಕುರಿತ ಚಿಂತನೆ ಕಾಲದೇಶಾನುಗುಣವಾಗಿ ಭಿನ್ನವಾಗಿ ಬೆಳೆದಿದೆ. ವಿವಿಧ ಅಭಿಪ್ರಾಯಗಳಿಗೆ ಎಡೆಗೊಟ್ಟು ಎಲ್ಲಾ ಚಿಂತಕರಲ್ಲೂ ಐಕ್ಯಮತ್ಯವನ್ನು ಗುರುತಿಸುವುದು ಸಾಧ್ಯವಿಲ್ಲವಾಗಿದೆ. ಭಾರತೀಯರಲ್ಲೂ ಪಾಶ್ಚಾತ್ಯರಲ್ಲೂ ಸಂಸ್ಕೃತಿ–ಪ್ರತಿಸಂಸ್ಕೃತಿಗಳನ್ನು ಕುರಿತಂತೆ ಜಿಜ್ಞಾಸೆ ಮುಂದುವರಿದಿದೆ. ಭಾರತೀಯ ಮತ–ಧರ್ಮ, ಸಂಸ್ಕೃತಿ, ಪಾಶ್ಚಾತ್ಯರ ವರ್ಣಭೇದ ಮತ್ತು ವರ್ಗಭೇದಗಳ ಸಂಘರ್ಷ ಭಿನ್ನವೆನಿಸಿದರೂ ಮಾನವತೆಯ ಹೋರಾಟ ಒಂದೇ ಆಗಿದೆ.

2.5. ಕೀಳಿರಿಮೆ ಮತ್ತು ಪ್ರತಿಸಂಸ್ಕೃತಿ : ರಹಮತ್‌ತರೀಕೆರೆ ಅವರು ಪ್ರತಿಸಂಸ್ಕೃತಿ ಚಿಂತನೆಯನ್ನು ಗದ್ಯ ಲಯಬದ್ಧ ಭಾಷೆಯಲ್ಲಿ ಸಮೂರ್ತವಾಗಿ ಅಭಿವ್ಯಕ್ತಿಗೊಳಿಸುತ್ತಾರೆ. ಅವರ ಸಂಸ್ಕೃತಿ ಚಿಂತನೆ ಸ್ಥೂಲವಿಲ್ಲವಾದರೂ ಪ್ರತಿಸಂಸ್ಕೃತಿಯ ನೆಲೆಗಳನ್ನು ಯುಕ್ತವಾಗಿ ಸಂಶೋಧಿಸುತ್ತದೆ. ಅವರ ಒಟ್ಟು ಚಿಂತನೆಯಲ್ಲಿ ಪ್ರತಿಸಂಸ್ಕೃತಿಯ ವಿವರಗಳು ಗ್ರಾಹ್ಯವಾಗುತ್ತದೆ. ಆಹ್ಲಾದಕರವಾಗಿ ಚರ್ಚೆಯನ್ನು ಮುಂದುವರಿಸಿ ಚಿಂತನೆಯ ಬಂಧದಲ್ಲಿ ವಿವರಗಳನ್ನಿಡುವ ರಹಮತ್ ತರೀಕೆರೆ ಅವರ ಶೈಲಿ ಅನನ್ಯವಾಗಿದೆ. ಪ್ರತಿಸಂಸ್ಕೃತಿಯ ತೊಡಕೆಂದರೆ, "ಆಳುವ ಸಂಸ್ಕೃತಿಗೇ ಶರಣಾಗಿ ತಮ್ಮ ಸಾಂಸ್ಕೃತಿಕ ನೆಲೆಗಳನ್ನು ಕೀಳೆಂದು ತಾವೇ ವಿರೋಧಿಸಿಕೊಳ್ಳುವುದು, ಇದು ಕೀಳರಿಮೆಯ, ಆತ್ಮದ್ವೇಷಿ ಹಂತ, ಸಂಘರ್ಷವೇ ಸಾಧ್ಯವಾಗದ, ಸಂಘರ್ಷ ಮಾಡಿದರೆ ನಾಶವಾಗಿ ಬಿಡುವ ಇಕ್ಕಟ್ಟಿನ ಸ್ಥಿತಿಯಲ್ಲಿ ಇದು ಹುಟ್ಟುತ್ತದೆ."[16] ಇಂಥ ಅಪಾಯ ಭಾರತೀಯ ಸಂಸ್ಕೃತಿಯಲ್ಲಿದೆ. ಅಲ್ಲದೆ ಇದು ಶತಶತಮಾನಗಳಿಂದ ಮುಂದುವರಿದು ಕೊಂಡು ಬಂದಿದೆ. ಇದನ್ನು ಈ ಹೇಳಿಕೆಗಳಿಂದ ರಹಮತ್‌ತರೀಕೆರೆ ಅವರು ಸಮರ್ಥಿಸುತ್ತಾರೆ. "ಹೆಣ್ಣಾಗಿ ಹುಟ್ಟೋಕ್ಕಿಂತ ಮಣ್ಣಾಗಿ ಹುಟ್ಟಿದರೆ", 'ಹೊಲೆ–ಮಾದಿಗರಾಗಿ ಹುಟ್ಟಬಾರದ್ರಪ್ಪೋ" – ಎಂಬ ಹತಾಶೆಗಳು ವ್ಯವಸ್ಥೆಯ ಮೇಲಿನ ಸಿಟ್ಟಾಗಿ ಅಸಾಯಕತೆಯ ಸ್ಥಿತಿಯನ್ನು ವ್ಯಕ್ತಪಡಿಸುತ್ತವೆ. ಇಂಥ ಸಂದರ್ಭದಲ್ಲಿ ಪ್ರತಿಭಟನೆಯಾಗಲೀ, ಸಂಘರ್ಷವಾಗಲಿ ಅರ್ಥಹೀನವೆನಿಸುತ್ತದೆ. ಈ ಹಿನ್ನೆಲೆಯಿಂದ, "ಅಂಬೇಡ್ಕರ್ ಅವರ ಮತಾಂತರವು ಅಥವಾ ದಲಿತ ವಚನಕಾರರ 'ಲಿಂಗದೀಕ್ಷೆ'ಯು ಸನಾತನ ಧರ್ಮವನ್ನು ಅಪಮೌಲೀಕರಿಸಿದ ಪ್ರಸಂಗಗಳೇ ಆಗಿವೆ"[17] ಎಂದು ರಹಮತ್‌ತರೀಕೆರೆ ಅಭಿಪ್ರಾಯ ಪಡುತ್ತಾರೆ. ಸನಾತನಧರ್ಮವನ್ನು ಧಿಕ್ಕರಿಸಲು ಪ್ರತಿಸಂಸ್ಕೃತಿಯನ್ನು ರೂಪಿಸಿಕೊಳ್ಳಲು ಇದೇ ಮಾರ್ಗವೆನಿಸುತ್ತದೆ.

3. ಉಪಸಂಹಾರ : ಆಧುನಿಕ ಶಿಕ್ಷಣ ಮತ್ತು ವೈಚಾರಿಕ ಪ್ರಜ್ಞೆಯ ಪ್ರಭಾವ–ಪ್ರೇರಣೆಗಳಿಂದ ಸಾಂಪ್ರದಾಯಿಕ ಮಿತ್‌ಗಳ ಅತಿರೇಕಗಳನ್ನು ತಿರಸ್ಕರಿಸುವ ಭಾವ ಹುಟ್ಟುತ್ತದೆ. ಇದು ಮೇಲುವರ್ಗದ ಸಾಂಸ್ಕೃತಿಕ ಹೇರನ್ನು ಕಿತ್ತೊಗೆದು ಸ್ವಂತಿಕೆಯನ್ನು ಪ್ರದರ್ಶಿಸುವ ಕ್ರಮವಾಗಿದೆ. ಆದರೆ ಇಂಥ ಸಂದರ್ಭದಲ್ಲಿ ದೇಶಿ ಸಂಸ್ಕೃತಿಯ ಮಿತಿಗಳನ್ನು ಮರೆಯುವಂತಿಲ್ಲ.

ಪರಾಮರ್ಶನ :

1) ರಹಮತ್‌ತರೀಕೆರೆ, "ಪ್ರತಿ ಸಂಸ್ಕೃತಿ", ಅಭಿನವ ಪ್ರಕಾಶನ, 17/18–2, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು – 560 040– 2010.

2) ಸಾರಾ ಅಬೂಬಕ್ಕರ್, "ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 2007.

3) ರಹಮತ್ ತರೀಕೆರೆ, "ಧರ್ಮಪರೀಕ್ಷೆ, ನವ ಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೈಸೆಂಟ್ ರಸ್ತೆ, ಬೆಂಗಳೂರು – 560 001 – 2010.

4) ಪ್ರ.ಸಂ. ಅರವಿಂದಮಾಲಗತ್ತಿ, "ಕನ್ನಡ ವಿಷಯ ವಿಶ್ವಕೋಶ", ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 2005.

5) ಸಿ.ಆರ್, ಯರವಿನತೆಲಿಮಠ, "ಸಾಹಿತ್ಯ ವಿಮರ್ಶೆಯ ಮಾದರಿಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 2008.

6) ಎಂ. ಚಿದಾನಂದಮೂರ್ತಿ, "ಸಂಶೋಧನೆ: ಪಾಂಡಿತ್ಯರಸ", ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು – 2011.

[1] ರಹಮತ್ ತರೀಕೆರೆ, 'ಪ್ರತಿಸಂಸ್ಕೃತಿ', ಅಭಿನವ ಪ್ರಕಾಶನ, ಬೆಂಗಳೂರು, 2010, ಪುಟ. ಬರೆಹವನ ಮಾತು.

[2] ಪೂರ್ವೋಕ್ತ. ಪು. 1
[3] ಪೂರ್ವೋಕ್ತ. ಪು. 02
[4] ಪೂರ್ವೋಕ್ತ. ಪು.02
[5] ಪೂರ್ವೋಕ್ತಿ, ಪು. 3
[6] ಪೂರ್ವೋಕ್ತಿ, ಪು. 3
[7] ಪೂರ್ವೋಕ್ತ. ಪು. 4
[8] ಪೂರ್ವೋಕ್ತ, ಬೆನ್ನುಡಿ.
[9] ಪೂರ್ವೋಕ್ತ, ಪು. 04
[10] ಪೋರ್ವೋಕ್ತ, ಪು. 4
[11] ಪೋರ್ವೋಕ್ತ, ಪು. 4
[12] ಪುತಿನಂ. ಸ್ಥಿತಿ, ಪು. ಬೆಣ್ಣಡಿ
[13] ಪೋರ್ವೋಕ್ತ, ಪು. 5
[14] ಅಸ್ಪೃಶ್ಯರು, 1963, ಅನು. ವೇದುಣ್ಣ, ಪು. 78
[15] 'ದಲಿತ ಸಂಸ್ಕೃತಿ' ಹಕ್ಕಿನೋಟ, 1990, ಪು. 74
[16] ಪ್ರತಿಸಂಸ್ಕೃತಿ, ಪು. 6
[17] ಪೋರ್ವೋಕ್ತಿ, ಪು. 6

ಇರುವೆ ಕಥೆ – ಒಂದು ಸ್ಥೂಲ ಚಿತ್ರ

ಡಾ॥ ಆರ್. ಪೂರ್ಣಿಮ
ಇಂಗ್ಲೀಷ್ ಪ್ರಾಧ್ಯಾಪಕರು, ಕ. ರಾ. ಮು. ವಿ., ಮೈಸೂರು

2002ರಲ್ಲಿ ಪ್ರಕಟವಾದ ಪ. ವಿ. ಚಂದ್ರಶೇಖರ್ ರಾವ್ ವಿರಚಿತ ಇರುವೆಯ ಕಥೆ ಒಂದು ಸಣ್ಣ ಕಾದಂಬರಿ ಮಕ್ಕಳಿಗಾಗಿ ಬರೆದಿದ್ದರೂ, ವಯಸ್ಥ ಓದುಗರನ್ನು ಆಕರ್ಷಿಸುವ ಸಾಮರ್ಥ್ಯವಿರುವುದು, ಈ ಪುಸ್ತಕದ ವಿಶಿಷ್ಠತೆ. 92 ಪುಟಗಳಿರುವ ಈ ಪುಸ್ತಕದಲ್ಲಿ 22 ಅಧ್ಯಾಯಗಳೂ ಹಾಗೂ 5 ಸಚಿತ್ರಗಳಿವೆ. ಪ್ರತಿ ಅಧ್ಯಯಕ್ಕೂ ಆಕರ್ಷಿಕವಾದ ಶಿರೋನಾಮ, ಓದುಗರ ಗಮನವನ್ನು ಸೆಳೆಯುತ್ತದೆ.

ವಾಸ್ತವ ಹಾಗೂ ಕಾಲ್ಪನಿಕ – ಎರಡರ ಸಂಗಮವನ್ನು ನಾವು ಈ ಪುಸ್ತಕದಲ್ಲಿ ಕಾಣಬಹುದು. ಸರಳವಾದ ಶಬ್ದಕೋಶ, ಸ್ವಾರಸ್ಯವಾಗಿರುವ ವಸ್ತು ವಿಷಯ, ಮಕ್ಕಳಿಗೆ ಆನಂದವನ್ನು ಉಂಟುಮಾಡುವುದರೊಂದಿಗೆ ವಿಷಯವನ್ನು ಮನ ಮುಟ್ಟುವಂತೆ ತಲುಪಿಸುವುದು ನಿಸ್ಸಂಶಯ, ಸರ್ವವ್ಯಾಪಿ ನಿರೂಪಕನೊಂದಿಗೆ ಸಂಯುಕ್ತಾಕ್ಷಿ ಮಂದಾಕ್ಷಿ ಹಾಗೂ ಮಾಲಾಕ್ಷಿ – 3 ಹೆಣ್ಣು ಇರುವೆಗಳು ನಿರೂಪಕರಾಗಿ ಕಾರ್ಯನಿರ್ವಹಿಸುವುದಲ್ಲದೆ, ಪಾತ್ರಗಳು ಆಗಿರುತ್ತವೆ. "ವಿಜ್ಞಾನಿಯ ಪ್ರಯೋಗಶಾಲೆಯಲ್ಲಿ" ಎಂಬ ಶಿರ್ಷಕೆ ಇರುವ ಅಂತಿಮ ಅಧ್ಯಾಯದಲ್ಲಿ ಒಬ್ಬ ವಿಜ್ಞಾನಿ ನಿರೂಪಕನಾಗುತ್ತಾನೆ. ಓದುಗರ ಕುತೂಹಲ / ಆಸಕ್ತಿ ಎಂದೂ ಕುಗ್ಗುವುದಿಲ್ಲ. ಚಂದ್ರಶೇಖರ್ ರಾವ್ ರವರು ತರುವ ಸುಸ್ಪಷ್ಟ ವರ್ಣನೆ, ಕುತೂಹಲಕಾರಿಯಾದ ಪಾತ್ರ ಚಿತ್ರಣಗಳು, ನಿರೂಪಣೆಯ ತಂತ್ರಗಳು, ಇರುವೆಯ ಪ್ರಪಂಚ ವಿಶ್ವಕೋಶದಲ್ಲಿ ಪ್ರಕಟವಾಗುವ ಒಂದು ವಸ್ತು ಸಂಗತಿಯಾಗಿ ಉಳಿಯದೆ, ಈ ಪುಸ್ತಕವನ್ನು ಒಂದು ಸೃಜನಶೀಲ ಕೃತಿಯನ್ನಾಗಿ ಮಾರ್ಪಾಡುಮಾಡುತ್ತದೆ. ಗಮನಾರ್ಹವಾದ ನೈಪುಣ್ಯದಿಂದ ಇರುವೆಗಳ ಅಂತರಿಕ ಪ್ರಪಂಚವನ್ನು ಬರಹಗಾರರು ತೆರೆದಿಟ್ಟಿದ್ದಾರೆ. ಪ್ರಶ್ನೆ ಉತ್ತರಗಳ ಸರಣಿ ಈ ಪುಸ್ತಕವನ್ನು ಮತ್ತೆ ಮತ್ತೆ ಓದುವಂತೆ ಮಾಡುತ್ತದೆ.

ಕಥೆ ಹೇಳುವ 3 ಇರುವೆಗಳು ವಿಭಿನ್ನ ಪಾತ್ರಗಳನ್ನು ಮಾಡುತ್ತವೆ – ಅವುಗಳು ನಟರು, ನಿರೂಪಕರು, ವೀಕ್ಷಕರೂ ಹಾಗೂ ಕೇಳುಗರೂ ಕೂಡ. ಓದುಗರು ಅವುಗಳು ನೋಡುವುದನ್ನು ನೋಡುತ್ತಾರೆ. ಅವುಗಳು ಯಾವುದರ ವಾಸನೆಯನ್ನು ಹಿಡಿಯುತ್ತಾರೋ ಅದನೇ ಓದುಗರೂ ಅನುಭವಿಸುತ್ತಾನೆ. ಅಂತಿಮ ಅಧ್ಯಾಯದಲ್ಲಿ 3 ಇರುವೆಗಳು ಕೇಳುಗರಾಗಿ ಮಾರ್ಪಾಟಾಗುತ್ತಾರೆ. ಅವುಗಳು ಕೇಳುವುದನ್ನೇ ಓದುಗನೂ ಕೇಳುತಾನೆ. ವಿಜ್ಞಾನಿಯೊಬ್ಬ ತನ್ನ ಸಂಶೋಧನ ವಿದ್ಯಾರ್ಥಿಗಳೊಂದಿಗೆ ಸಂಭಾಷಣೆ ಹಾಗೂ ವಿಷಯ ವಿನಿಮಯದಲ್ಲಿ ತೊಡಗಿರುತ್ತಾನೆ. ಕಥಾ ನಿರೂಪಣೆಯ ಪಾತ್ರವನ್ನು ತ್ಯಜಿಸಿ, ಈಗ ಕೇಳುಗರಾಗುವ ಈ 3 ಇರುವೆಗಳು, ಆಗೊಮ್ಮೆ ಈಗೊಮ್ಮೆ ವ್ಯಾಖ್ಯಾನ ಹಾಗೂ ಟೀಕೆಗಳನ್ನು ಮಾಡುವುದರ ಮೂಲಕ ವಿಷಯವನ್ನು ಮಂಡಿಸುತ್ತಾರೆ. ಓದುಗರಿಗೆ ತಲುಪುವ ಮಾಹಿತಿ ಮತ್ತಷ್ಟು ಅಧಿಕವಾಗುತ್ತದೆ ಈ ನಿರೂಪಕ ಪಾತ್ರಧಾರಿಗಳ ಜ್ಞಾನದಾಹ ಹಾಗೂ ಅವರು ಆಗಲೇ ತಿಳಿದುಕೊಂಡಿರುವ ಜ್ಞಾನದಾಹ ಹಾಗೂ ಅವರು ಆಗಲೇ ತಿಳಿದುಕೊಂಡಿರುವ ಜ್ಞಾನ ಸಂಪತ್ತು ಓದುಗರನ್ನು ಮೂಕರನ್ನಾಗಿ ಮಾಡುತ್ತದೆ.

ಗಾತ್ರದಲ್ಲಿ ಸಣ್ಣಗಿದ್ದರೂ, ಇರುವೆಯ ಕಥೆ, ಈ ಇರುವೆಗಳ ಹಲವು ತಿಂಗಳುಗಳ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಆಕರ್ಶಕವಾದ ರೀತಿಯಲ್ಲಿ ನೀಡುತ್ತದೆ. ಇವುಗಳ ಪಯಣವು ಕೇವಲ ಒಂದು ಕ್ಷೇತ್ರಕ್ಕಾಗಲಿ, ಅಥವಾ ಕೇವಲ ಗಂಟೆಗಳಿಗೆ ಸೀಮಿತವಾಗಿಲ್ಲ. ಸಂಯುಕ್ತಾಕ್ಷ ಮಾಲಾಕ್ಷಿ ಮತ್ತು ಮಂದಾಕ್ಷಿ ಕೋಲರೊಡಾ ಮರುಭೂಮಿ ತನಕ ಹೋಗುತ್ತಾರೆ. ಅಮೇರಿಕಾದಲ್ಲಿ ಉಳಿಯದೆ, ಸ್ವದೇಶಕ್ಕೆ ಮರಳುತ್ತಾರೆ.

ಈ ಇರುವೆಗಳ ಪ್ರಪಂಚದಲ್ಲಿ ಮಹಿಳೆಯರದ್ದೆ ಮೈಲುಗೈ. ಸ್ತ್ರೀವಾದಿಗಳಿಗೆ ಹೆಮ್ಮೆ ತರುವಂತಾದ್ದು, ಅವುಗಳೇ ಅದಿಶಕ್ತಿ, ಬಹಳಷ್ಟು ಗಂಡು ಇರುವೆಗಳು ಮೈಗಳ್ಳರು. ಸೊಮಾರಿತನದೊಂದಿಗೆ ಅವರು ಹೊಟ್ಟೆಬಾಕರು ಹಾಗೂ ಅಸಮರ್ಥರು. ವಾಸ್ತವ ಹಾಗೂ ಕಾಲ್ಪನಿಕ ಜಗತ್ತನ್ನು ಬಿಂಬಿಸುವ ಇರುವೆಯ ಕಥೆ, ಇರುವೆಗಳ ಶರೀರ ಹಾಗೂ ಮನೋಸ್ಥಿತಿಯನ್ನು ವಿವರಗಳೊಂದಿಗೆ ಸಾಕಷ್ಟು ಉಲ್ಲೇಖಿಸುತ್ತಾರೆ ಚಂದ್ರಶೇಖರ್ ರಾವ್ ರವರು. ಮಾನವ ಜಗತ್ತಿನಲ್ಲಿ ಇರುವಹಾಗೆ, ಅವುಗಳಲ್ಲೂ ಬುದ್ಧಿವಂತರೂ, ಪೆದ್ದರು, ಪ್ರೊ-ಅಕ್ಟಿವ್ ಆಗಿ ದುಡಿಯುವವರು, ಅಪ್ರಯೋಜಕರು, ಕುಡುಕರು, ಸ್ಥಿಮಿತ ಬುದ್ಧಿಯವರು, ತಮ್ಮ ಕುಟುಂಬವನ್ನು ಪೋಷಿಸುವರು, ನಿರ್ಲಕ್ಷಿಸುವವರು ಇರುತ್ತದೆ. ಶೋಷಣೆ ಮಾಡುವವರು ಹಾಗೂ ಶೋಷಣೆಗೆ ಒಳಗಾಗುವವರು, ಈ ಪ್ರಪಂಚದಲ್ಲೂ ಇವೆ ಅನ್ನುವುದನ್ನು ಬರಹಗಾರರು ನಿದರ್ಶನಗಳೊಂದಿಗೆ ಸಾಬೀತುಪಡಿಸುತ್ತಾರೆ.

ಇರುವೆಗಳ ಆಚರಣೆ-ವಿಚಾರಣೆ ಅಟ-ಪಾಠ, ಅವುಗಳು ಮರಿಗಳನ್ನು ಲಾಲನೆ-ಪಾಲನೆ ಮಾಡುವ ರೀತಿ ನೀತಿಗಳು, ಇರುವೆ ಪ್ರಪಂಚದ ವೈವಿಧ್ಯತೆಯನ್ನು ಎತ್ತಿಹಿಡಿಯುತ್ತವೆ. ಬಿ.ಇ, ಎಂ-ಟೆಕ್ ಮಾಡದಿದ್ದರೂ,

ಈ ಇರುವೆಗಳು ತಮ್ಮ ಗೂಡುಗಳನ್ನು ನಿರ್ಮಿಸುವ ರೀತಿ ನೀತಿ, (ಆರ್ಕಿಟ್ಯೆಕ್ಚರಲ್ ಡಿಜೈನ್) ಬಗ್ಗೆ ಇರುವ ಅಪಾರವಾದ ಹಾಗೂ ಆಳವಾದ ಜ್ಞಾನ ಪದವೀಧರರನ್ನೂ ನಾಚಿಸುವಂತೆ ಮಾಡುತ್ತದೆ.

ಚಂದ್ರಶೇಖರ್ ರವರು ಇರುವೆಗಳನ್ನು ಒಂದು ವರ್ಗದ ಮಾದರಿಯಾಗಿಯೂ, ಹಾಗೂ ಕೆಲವು ಇರುವೆಗಳಿಗೆ ತನ್ನದೇ ಆದ ವ್ಯಕ್ತಿತ್ವ ಉಳ್ಳವರಾಗಿ ಚಿತ್ರಿಸುತ್ತಾರೆ, ಗಂಡು ಇರುವೆಗಳು ಅನಾಮಿಕರಾದರೆ, ಹೆಣ್ಣುಗಳಿಗೆ ಹೆಸರನ್ನು ನೀಡಿದ್ದಾರೆ. ವ್ಯಕ್ತಿಕರಣ ಅಥವಾ ಪರ್ಸಿಫಿಕ್ಸ್ ಬಳಕೆಯನ್ನು ನಾವು ಇಲ್ಲಿ ಕಾಣಬಹುದು. ನಿರೂಪಣೆಯ ಹೊಣೆಯನ್ನು ಹೊತ್ತಿರುವ ಇರುವೆಗಳು ಅವರವರ ದೈಹಿಕ ಲಕ್ಷಣಗಳಿಗೆ ಅನುಗುಣವಾಗಿ ಬರಹಗಾರರು ಹೆಸರಿಸುತ್ತಾರೆ. ಒಬ್ಬಳು "ಮಾಲಾಕ್ಷಿ" ಮತ್ತೊಬ್ಬಳು "ಮಂದಾಕ್ಷಿ" ಮಗದೊಬ್ಬಳು "ಸಂಯುಕ್ತಾಕ್ಷಿ" ಈ ತಂತ್ರವು ನಮಗೆ ಬೈನ್ಯೋಷನ ತಂತ್ರದ ರೀತಿ ಇದೆಯೆಂದು ಭಾಸವಾಗುತ್ತದೆ.

ಇರುವೆಗಳನ್ನು ಪ್ರಶಂಸೆಮಾಡುವ, ವಿಜ್ಞಾನಿಯ ಅಲಂಕಾರಿಕ ಹಾಗೂ ಉಜ್ವಲ ಭಾಷಣದೊಂದಿಗೆ ಪುಸ್ತಕವು ಮುಕ್ತಾಯವಾಗುತ್ತದೆ. ಈ ಹೂಗಳಿಕೆ ನಿರೂಪಕ ಇರುವೆಗಳಿಗೆ ಸಂತಸ ತಂದರೆ, ಸಂಶೋಧನ ವಿದ್ಯಾರ್ಥಿಗಳಿಗೆ ಇರುವೆಗಳನ್ನು ಕುರಿತು ಮತ್ತಷ್ಟು ಆಳವಾಗಿ ಸಂಶೋಧನೆ ಮಾಡಬೇಕೆಂಬ ಉತ್ಸಾಹ ಇಮ್ಮಡಿಯಾಗುತ್ತದೆ.

ಪ್ರಾಣಿ, ಪಕ್ಷಿ ಹಾಗೂ ಕ್ರಿಮಿಗಳ ಒಳಪ್ರಪಂಚದ ಅರಿವಾಗಲೂ, ಇರುವೆ ಕಥೆಯಂತಹ ಪುಸ್ತಕಗಳು ಅತ್ಯವಶ್ಯಕ. ಮರು ಮುದ್ರಣ ಕಾಣಬೇಕಾಗಿದೆ "ನಮ್ಮ ನಾಡಿನ ಎಳೆಯರಿಗೆ ಇದು ಸಮರ್ಪಿತ" ಎನ್ನುತ್ತಾರೆ. ಬರಹಗಾರರು, ಕಿರಿಯರನ್ನು ಮನಸ್ಸಿನಲ್ಲಿಟ್ಟುಕೊಂಡು ರಾವ್ ರವರು ರಚಿಸಿದ್ದರೂ, ಈ ಪುಸ್ತಕ ಮಯಸ್ಕರಿಗೂ ಆನಂದವನ್ನು ಓದಿದ್ದ ತೃಪ್ತಿತರುತ್ತದೆ.

ರಂಗಸಕ್ತರು, ಇವುಗಳಲ್ಲಿರುವ ಕೆಲವು ದೃಶ್ಯಗಳನೂ ಅಳವಡಿಸಿಕೊಂಡು ರಂಗಪುರೋಗವನ್ನು ಮಾಡಬಹುದು. ಈ ಮಾಧ್ಯಮದಲ್ಲಿ ಪಾಲು ಗೊಂಡ ಮಕ್ಕಳು ಮತ್ತಷ್ಟು ಲವಲವಿಕೆಯಿಂದ ವಿವರಗಳನ್ನು ಸ್ವೀಕರಿಸಿ, ಆಹ್ಲಾದಿಸಲು ಉಪಯುಕ್ತವಾಗುತ್ತದೆ ಇದನ್ನು ನಾನೇ "ಚಿಲ್ಡ್ರನ್ಸ್ ಲಿಟರರಿ ಕ್ಲಬ್" ಎನ್ನುವ ಸ್ವಯಂಸೇವಾ ಸಂಸ್ಥೆಯ ಅಡಿಯಲ್ಲಿ ಮಾಡಿದ್ದೇನೆ, ಮಕ್ಕಳ ಆನಂದಭರಿತ ಉತ್ಸಕತೆಯನ್ನು ಅನುಭವಿಸಿದ್ದೇನೆ. ನಾನು ಮಕ್ಕಳೊಂದಿಗೆ ಸಂಪೂರ್ಣವಾಗಿ ಪುಸ್ತಕವನ್ನು ಓದಿ, ಬರಹಗಾರರೊಂದಿಗೆ ಚರ್ಚೆಯನ್ನು ಏರ್ಪಡಿಸಿದ್ದೇನೆ. ಈ ಪುಸ್ತಕವು ತರ್ಜುಮೆಯಾದರ, ವಿವಿಧ ರಾಜ್ಯಗಳ ಮಕ್ಕಳಿಗೂ ಈ ಪುಸ್ತಕ ದಕ್ಕಲು ಅನುಕೂಲವಾಗುವುದು ನಿಸ್ಸಂಶಯ. ಈ ಕಾರ್ಯಶೀರ್ಘವಾಗಿ ಕಾರ್ಯರೂಪಕ್ಕೆ ಬರಲಿಯೆಂದು ಆಶಿಸುತ್ತೇನೆ.

ವಿಷಯ:-02

ಪತಂಜಲೀಯಮ್
ಮನೋಽಧ್ಯಾತ್ಮಿಕ ಮತ್ತು ತತ್ವಶಾಸ್ತ್ರ ವಿಜ್ಞಾನಗಳು

THEME:-02

PATANJALEEYAM
PSYCHOSPIRITUAL AND PHILOSOPHICAL SCIENCES

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಭಗವದ್ಗೀತೆಯಲ್ಲಿ ಜ್ಞಾನಯೋಗದ ಪರಿಕಲ್ಪತೆ	ಡಾ. ಎಂ.ಪಿ. ರಮೇಶ	147 – 149
2	ಗಾಂಧೀಜಿಯವರ ದೃಷ್ಟಿಯಲ್ಲಿ ಧಾರ್ಮಿಕ ಸಾಮರಸ್ಯ	ಎನ್.ಚಿನ್ನಸ್ವಾಮಿ	150 – 152
3	ಸಮಕಾಲೀನ ಧಾರ್ಮಿಕ ವೈಪರೀತ್ಯಗಳಿಗೆ ಭಕ್ತಿಯೋಗದ ಪ್ರಸ್ತುತತೆ	ಡಾ.ಸಿ.ಗಂಗರಾಜು	152 – 154
4	ಅಕ್ಕಮಹಾದೇವಿಯ ವಚನಗಳಲ್ಲಿ ವೈಜ್ಞಾನಿಕ ಅಂಶಗಳು	ಡಾ.ಕೆ.ವ್ಹಿ.ಜುಕ್ತಿಮಠ	154 – 159
5	ಹದಿಹರೆಯದವರಲ್ಲಿ ಒತ್ತಡ ಮತ್ತು ಹೊಂದಾಣಿಕೆ ನಡುವಿನ ಸಂಬಂಧ: ಒಂದು ಮನೋವೈಜ್ಞಾನಿಕ ಅಧ್ಯಯನ	ಮಧು ಕರ್ನಾಟ್ ಎಸ್ ಡಾ. ಎನ್ ಎಲ್ ಶ್ರೀಮತಿ	159 – 162
6	ಪತಂಜಲಿ ಯೋಗದ ಮುಖಾಂತರ ಮನಸ್ಸಿನ ನಿಯಂತ್ರಣ	ಶ್ರೀಮತಿ ಎಸ್.ಸುರ್ಮ ಡಾ. ಸಂಪತ್ತ್‌ಕುಮಾರ್	
7	ಮಾನಸಿಕ ಆರೋಗ್ಯ ಮತ್ತು ಧ್ಯಾನ	ಡಾ.ಮಂಜುನಾಥ್.ಪಿ ಡಾ.ಮಂಜುನಾಥ ಪಿ. ಡಾ. ಸಂಪತ್ತ್‌ಕುಮಾರ್ ಶ್ರೀಮತಿ ಎಸ್. ಸುರ್ಮ	162 – 166 166 – 170
8	ವಿಕಸನ: ಅಂತಃದೃಷ್ಟಿಯ ತುತ್ತತುದಿಯ ಪ್ರಜ್ಞೆಯಿಂದ ಬೌದ್ಧಿಕ ತುತ್ತತುದಿಯ ಪ್ರಜ್ಞೆ	ಚಂದ್ರಮೌಳಿ ಎಂ.ಎಸ್ ಭಾನು ಕೆ.ಎನ್	170 – 177
9	ವಚನಗಳಲ್ಲಿ ಸತ್ಯ ಹಾಗೂ ಅಸತ್ಯಗಳ ವಿಶ್ಲೇಷಣೆ	ಡಾ. ರಾಮಕೃಷ್ಣ ಜಿ.	178 - 180
10	ಸ್ವಾಮಿ ವಿವೇಕಾನಂದರ ಪ್ರಕಾರ 'ಕರ್ಮಯೋಗ'	ಡಾ.ಬಿ.ಎಚ್.ಗುಜಲಾರ	180 – 182
11	ಸಾಮಾಜಿಕ ವಿಜ್ಞಾನಿ ಪರೀಕ್ಷರು	ಡಾ. ಡಿ. ಕುಮಾರ್	182 – 184
12	ವಚನಕಾರ್ತಿ0ಯರ ಸಾಹಿತ್ಯ: ಅಭಿವ್ಯಕ್ತಿ0ಯ ವಿಭಿನ್ನ ನೆಲೆಗಳು	ಅನಿತ. ಎಂ. ಎಸ್.	184 – 187
13	ವಿಶ್ವಬಂಧು ಮರುಳಸಿದ್ದ; ಸಾಮಾಜಿಕ ಹೋರಾಟ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಕಂಡು ಬರುವ ದೇವಸ್ಥಾನ ಐತಿಹ್ಯ ಮತ್ತು ಕುರುಹುಗಳು	ಡಾ. ಎಂ.ಶ್ರೀನಿವಾಸಮೂರ್ತಿ	187– 190
14	ಮಹಿಳೆ, ಸಂಸ್ಕೃತಿ ಮತ್ತು ವೈಜ್ಞಾನಿಕ ಮನೋಧರ್ಮ : ಒಂದು ವಿಶ್ಲೇಷಣೆ	ವನಮಾನ ಎಸ್.ಎಂ. ಹೆಚ್.ಕಮಲ	190 – 194
15	ಯೋಗದರ್ಶನದಲ್ಲಿ ಸ್ವಪ್ನಸ್ವರೂಪ	ರಾಜೋಟಿದೇವರು	194 – 196
16	ಡಾ. ಪ್ರಭುಶಂಕರಅವರ ಬೌದ್ಧ ಸಾಹಿತ್ಯಚಿಂತನೆ	ಎಂ.ಎನ್.ಕವಿತಾ	196 – 202
17	ಉತ್ತಮ ಸಮಾಜನಿರ್ಮಾಣಕ್ಕಾಗಿ ಉಪನಿಷತ್ತಿನ ಸೂತ್ರಗಳು	ಜಿ. ಅನಂತಪದ್ಮನಾಭ	202 – 202

ಭಗವದ್ಗೀತೆಯಲ್ಲಿ ಜ್ಞಾನಯೋಗದ ಪರಿಕಲ್ಪತೆ

ಡಾ. ಎಂ.ಪಿ. ರಮೇಶ
ಸಹಾಯಕ ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 580 003.

ಭಾರತದ ನಾಗರಿಕತೆಯು ವಿಶ್ವದಲ್ಲಿ ಇಂದು ಉಳಿದಿರುವ ಅತ್ಯಂತ ಪ್ರಾಚೀನವಾದ ಸಂಸ್ಕೃತಿಯಾಗಿದೆ. ಮಹಾ ಧಾರ್ಮಿಕವಾದ ನಾಗರೀಕತೆಗೆ ಮುಖ್ಯವಾದ ಸಾಹಿತ್ಯಿಕವಾದ ಸಮರ್ಥನೆಯನ್ನು ಭಗವದ್ಗೀತೆಯಲ್ಲಿ ನೋಡಬಹುದು. ಭಗವದ್ಗೀತೆಯಲ್ಲಿ ಆತ್ಮ-ದೇವರು ಮತ್ತು ಅವರ ಸಂಬಂಧದ ಆಧ್ಯಾತ್ಮಿಕ ಜ್ಞಾನದ ಅಗ್ನಿಯಿಂದ ಪರಿಶುದ್ಧನಾಗಿ ಶಾಂತಿ, ನಿರ್ಲಿಪ್ತತೆ, ಸಲಹೆ, ಆಧ್ಯಾತ್ಮಿಕ ದರ್ಶನ ಮತ್ತು ಆನಂದಗಳನ್ನು ಪಡೆದುಕೊಳ್ಳುತ್ತಾನೆ.

"ಮಾನವ ಜನಾಂಗವು ಈ ಹೊಸ ಯುಗದಲ್ಲಿ ಅರಸುತ್ತಿರುವ ಹಾಗೂ ನಮ್ಮ ಭಾರತ ಸಂವಿಧಾನದಲ್ಲಿ ಅಡಕಗೊಳಿಸಲ್ಪಟ್ಟಿರುವ ಮಾನವೀಯ ಧ್ಯೇಯಗಳೊಂದಿಗೆ ಎಲ್ಲಾ ಸ್ತ್ರೀ-ಪುರುಷರ ಅಂತರಂಗದಲ್ಲಿರುವ ಚಿರಂತನ ಆಧ್ಯಾತ್ಮಕ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ನೆರವಾಗುವುದಕ್ಕೆ ಉದ್ದೇಶದಿಂದ ರಚಿಸಲಾಗಿರುವ ಕೃತಿ ಇದು." ಈ ಕಾರಣದಿಂದಲೇ ಈಗ ಗೀತಾ ಸಂದೇಶವು ಜಗತ್ತಿನ ವಿವಿಧ ಭಾಗಗಳಲ್ಲಿ ಹರಡುತ್ತಿರುವುದು.

ಭಗವದ್ಗೀತೆಯ ಉದ್ದೇಶ ಎಲ್ಲರ ಹೊಣೆಗಾರರಾದ ಸ್ತ್ರೀ ಪುರುಷರ ಹಿತಕ್ಕಾಗಿ ದುಡಿಯುವಂತೆ ಪ್ರೇರೇಪಿಸುವುದು. ಅಂಥಾದ್ದೇ ಈ ಪುಸ್ತಕ. ಇದು ನಿಮಗೆ ನಿದ್ರೆ ತರಿಸುವುದಕ್ಕಾಗಿ ಇರುವುದಿಲ್ಲ; ಬದಲಿಗೆ ಎಚ್ಚರಗೊಳಿಸುವುದಕ್ಕಾಗಿ. ಇದು ನಿಮಗೆ ಕೇವಲ ಮನಶ್ಯಾಂತಿಯನ್ನು ಕೊಡುವುದಕ್ಕಾಗಿ ಅಲ್ಲ. ಸಮಾಜದಲ್ಲಿರುವ ಎಲ್ಲರ ಹಿತಕ್ಕಾಗಿ ಕಾರ್ಯ ಮಾಡುವ ಧೃಡವಾದ ನಿರ್ಧಾರವನ್ನು ಅದಕ್ಕೆ ಬೇಕಾಗುವ ಪ್ರಚಂಡ ಮಾನವೀಯ ಅನುಕಂಪವನ್ನು ನಿಮಗೆ ಕೊಡುತ್ತದೆ.

ಭಕ್ತಿ ಎನ್ನುವುದು ಭಾರದ ನೆಲೆಗಟ್ಟಿನ ಮೇಲೆ ನಿಂತಿದೆ. ಆ ಭಾವವನ್ನು ಬುದ್ಧಿಯಿಂದ ನಿರ್ವಹಿಸಿ ಜ್ಞಾನದ ಸಹಾಯದಿಂದ ಸರಿಯಾದ ಮಾರ್ಗದಲ್ಲಿ ನಡೆಯುವುದೇ ಭಕ್ತಿ. ಜ್ಞಾನ ಅಂದರೆ ಅರಿವು; ವಿಜ್ಞಾನವೆಂದರೆ ಅನುಭಾವ. ವಿಜ್ಞಾನ ಎಂದರೆ ಆಪ್ತವಾದ ದಿವ್ಯಾನುಭವ; ಜ್ಞಾನ ಎಂದರೆ ದಿವ್ಯತೆಯ ಬಗ್ಗೆ ತಿಳುವಳಿಕೆ, ಅರಿವು.

ನಮ್ಮ ವ್ಯಕ್ತಿತ್ವದಲ್ಲಿ ಅನೇಕ ಅಂಶಗಳಿವೆ. ಭಗವದ್ಗೀತೆಯ ವ್ಯಾಪಕವಾದ ಆಧ್ಯಾತ್ಮಿಕತೆ ವ್ಯಕ್ತಿತ್ವದ ಪ್ರತಿಯೊಂದು ಅಂಶಕ್ಕೂ ಪೋಷಣೆಯನ್ನೊದಗಿಸುತ್ತದೆ. ಇಲ್ಲದಿದ್ದರೆ ಆಧ್ಯಾತ್ಮಿಕತೆ ಏಕಮುಖಿವಾಗಿ ಬೆಳೆದು; ಪರಿಣಾಮವಾಗಿ ನಮ್ಮ ಅಸ್ತಿತ್ವದ ಅನೇಕ ಅಂಶಗಳು ಬೆಳೆದು ಇನ್ನುಳಿದ ಅಂಶಗಳು ಹಿಂದೆ ಬೀಳುತ್ತವೆ. ಅದು ಹಾಗಾಗಬಾರದು. ವ್ಯಕ್ತಿತ್ವದ ಎಲ್ಲ ಅಂಶಗಳನ್ನು ಸರ್ವತೋಮುಖಿವಾಗಿ ಬೆಳೆಸಿಕೊಳ್ಳುವಂತಾಗಬೇಕು. ಭಾವವೆಂಬುದು ಪ್ರಮುಖವಾದ ಅಂಶ. ಭಕ್ತಿ ಎನ್ನುವುದು ಭಾವದ ನೆಲೆಗಟ್ಟಿನ ಮೇಲೆ ನಿಂತಿದೆ. ಆ ಭಾವವನ್ನು ಬುದ್ಧಿಯಿಂದ ನಿರ್ವಹಿಸಿ ಜ್ಞಾನದ ಸಹಾಯದಿಂದ ಸರಿಯಾದ ಮಾರ್ಗದಲ್ಲಿ ನಡೆಯುವುದೇ ಭಕ್ತಿ. ಜ್ಞಾನ ಅಂದರೆ ಅರಿವು; ವಿಜ್ಞಾನವೆಂದರೆ ಅನುಭಾವ. ವಿಜ್ಞಾನ ಎಂದರೆ ಆಪ್ತವಾದ ದಿವ್ಯಾನುಭವ; ಜ್ಞಾನ ಎಂದರೆ ದಿವ್ಯತೆಯ ಬಗ್ಗೆ ತಿಳುವಳಿಕೆ, ಅರಿವು.

"ಪ್ರತಿಯೊಬ್ಬನು ಅಂತಸ್ಥನಾಗಿ ದೈವಿಕನೇ. ಬಾಹ್ಯ, ಆಂತರಿಕ ಪ್ರಜ್ಞೆಯನ್ನು ನಿಗ್ರಹಿಸುವುದರ ಮೂಲಕ ಈ ಅಂತಸ್ಥ ದೈವಿಕತೆಯನ್ನು ಹೊರತರುವುದೇ ಜೀವನದ ಗುರಿ. ಇದನ್ನು ಕರ್ಮ, ಭಕ್ತಿ, ಯೋಗ, ಜ್ಞಾನ ಇವುಗಳಲ್ಲಿ ಒಂದು ಅಥವಾ ಅನೇಕದಿಂದ ಸಾಧಿಸಿ ಮತ್ತು ಮುಕ್ತರಾಗಿರಿ. ಪೂರ್ಣವಾಗಿ ಧರ್ಮವೆಂದರೆ ಇದೇ. ಸಿದ್ಧಾಂತಗಳು, ಮತಗಳು, ಕ್ರಿಯಾವಿಧಿಗಳು, ಶಾಸ್ತ್ರಗಳು, ದೇವಾಲಯಗಳು, ದಿವ್ಯರೂಪಗಳು ಈ ಎಲ್ಲವೂ ಅನುಷಂಗಿಕ ವಿವರಗಳೇ."[೨] ಭಗವಂತನ ಪ್ರಜ್ಞೆಯ ಆಂದೋಳವು ಜೀವನದ ಅತ್ಯುನ್ನತ ಪರಿಪೂರ್ಣತೆಯನ್ನು ತಂದುಕೊಡುತ್ತದೆ. ಆದುದರಿಂದ ಮಾನವ ಕುಲಕ್ಕೆ ಇದು ಅಗತ್ಯವಾದದ್ದು ಎಂಬ ವಿಚಾರವನ್ನು ಭಗವದ್ಗೀತೆಯಲ್ಲಿ ಕಾಣಬಹುದು. "ದುರದೃಷ್ಟದಿಂದ ಪ್ರಾಪಂಚಿಕ ಮನೋಧರ್ಮದ ಜಗಳಗಂಟರು ತಮ್ಮ ಅಸುರೀ ಒಲವುಗಳನ್ನು ಮುನ್ನುಗ್ಗಿಸಿದ್ದಾರೆ. ಬದುಕಿನ ಸರಳಸೂತ್ರಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಲ್ಲಿ ಜನರನ್ನು ತಪ್ಪುಮಾರ್ಗಕ್ಕೆಳೆದಿದ್ದಾರೆ. ಇವುಗಳಿಗಾಗಿ ಭಗವದ್ಗೀತೆಯ ಲಾಭವನ್ನು ಪಡೆದುಕೊಂಡಿದ್ದಾರೆ. ದೇವರ ಮಹಿಮೆಯೇನು ಎನ್ನುವುದು ಪ್ರತಿಯೊಬ್ಬರಿಗೂ ತಿಳಿದಿರಬೇಕು. ಜೀವಿಗಳ ವಾಸ್ತಸ್ಥಾನವೇನು ಎನ್ನುವುದನ್ನು ಪ್ರತಿಯೊಬ್ಬರೂ ತಿಳಿದಿರಬೇಕು. ಜೀವಿಯು ಶಾಶ್ವತನಾಗಿ ಸೇವಕನು; ಮನುಷ್ಯನು ಕೃಷ್ಣನ ಸೇವೆ ಮಾಡದಿದ್ದರೆ ಐಹಿಕ ಪ್ರಕೃತಿಯ ಮೂರು ಗುಣಗಳ ವಿವಿಧ ರೀತಿಗಳಲ್ಲಿ ಮಾಯೆಯನ್ನು ಸೇವಿಸಬೇಕಾಗುತ್ತದೆ. ಇದರಿಂದ ನಿರಂತರವಾಗಿ ಹುಟ್ಟುಸಾವುಗಳ ಚಕ್ರದಲ್ಲಿ ಅಲೆಯಬೇಕಾಗುತ್ತದೆ; ಊಹಾತ್ಮಕ ಚಿಂತನೆ ಮಾಡುವ ಮುಕ್ತ ಮಾಯವಾದಿ ಎನಿಸಿಕೊಂಡವನು ಈ ಪ್ರಕ್ರಿಯೆಯನ್ನು ಅನುಭವಿಸಬೇಕಾಗುತ್ತದೆ. ಈ ಜ್ಞಾನವು ಬಹು ಶ್ರೇಷ್ಠ ವಿಜ್ಞಾನ; ಪ್ರತಿಯೊಬ್ಬ ಜೀವಿಯೂ ತನ್ನ ಹಿತಕ್ಕಾಗಿಯೇ ಇದನ್ನು ಕೇಳಬೇಕು."[೨]

ಭಗವದ್ಗೀತೆಯನ್ನು ದೇವೋತ್ತಮ ಪರಮ ಪುರುಷನೇ ಹೇಳಿರುವುದರಿಂದ ಬೇರೆ ಯಾವುದೇ ವೈದಿಕ ರಚನೆಯನ್ನು ಓದುವ ಅಗತ್ಯವಿಲ್ಲ. ಒಳ್ಳೆಯ ಮನಸ್ಸಿನಿಂದ ಯಾವಾಗಲೂ ಶ್ರದ್ಧೆಯಿಂದ ಭಗವದ್ಗೀತೆಯನ್ನು ಕೇಳುವುದಾಗಲಿ ಓದುವುದಾಗಲೀ ಮಾಡಿದರೆ ಸಾಕು. ಈಗಿನ ಜನರು ಪ್ರಾಪಂಚಿಕ ವ್ಯವಹಾರಗಳಲ್ಲಿ ಎಷ್ಟರ ಮಟ್ಟಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ ಎಂದರೆ ಅವರೆಲ್ಲರಿಗೂ ವೈದಿಕ ಸಾಹಿತ್ಯವನ್ನು ಅಂದರೆ ವೇದಗಳನ್ನು ಓದುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ ಭಗವದ್ಗೀತೆಯೆಂಬ ಗ್ರಂಥವನ್ನು ಓದಿಕೊಂಡರೆ ಅಥವಾ ಆಚರಿಸಿದರೆ ಸಾಕು; ಏಕೆಂದರೆ ಅದು ಎಲ್ಲಾ ವೇದಗಳ ಸಾರಸಂಗ್ರಹವಾಗಿದೆ. ಈ ಮಾತು ಗೀತಾಮಹಾತ್ಮೆ ನಾಲ್ಕರಲ್ಲಿ ಅಡಕವಾಗಿದೆ.

ಭಗವದ್ಗೀತೆಯ ಉದ್ದೇಶ ಕೇವಲ ಮನಶ್ಯಾಂತಿ ಕೊಡುವುದಲ್ಲ; ಅದರಲ್ಲಿ ಅಡಕವಾಗಿರುವ ಪ್ರಮುಖ ನೆಲೆಯೆಂದರೆ ಜನರ ಸೇವೆ ಮಾಡಲು ನಿಮಗೆ ಹೆಚ್ಚಿನ ಬಲವನ್ನು ತಂದುಕೊಡುತ್ತದೆ. ನಮ್ಮನ್ನು ಸಮಾಜದ ಒಬ್ಬ ಉತ್ತಮ ನಾಗರಿಕನನ್ನಾಗಿ ಮಾಡಿ, ಸಮಾಜದಲ್ಲಿ ಉತ್ತಮ ಜೀವನ ಮತ್ತು ಕಾಯಕದ ಬಗೆಗಿನ ಬಹು ವ್ಯಾಪಕವಾದ ಅರ್ಥ,

ತತ್ವ ಅದರಲ್ಲಿದೆ. ಭಗವದ್ಗೀತೆಯು ಮಾನವೀಯ ಸಮಸ್ಯೆಗಳನ್ನು ಮಾನವೀಯ ರೀತಿಯಲ್ಲಿಯೆ ತೆಗೆದುಕೊಂಡಿದೆ. ಶತಶತಮಾನಗಳಿಂದ ಭಾರತದಲ್ಲಿ ಮಾನವನ ಮನಸ್ಸನ್ನು ಪ್ರಚೋದಿಸಿದ ಈ ಗ್ರಂಥ, ಇಂದು ಜಗತ್ತಿನಾದ್ಯಂತ ಹಲವು ದೇಶಗಳ ಮಿಲಿಯಗಟ್ಟಲೆ ಜನರಿಗೆ ಸ್ಫೂರ್ತಿಯ ಚಿಲುಮೆಯಾಗಿದೆ. "ಭಗವದ್ಗೀತೆಯ ಸಂದೇಶವು ಸಾರ್ವತ್ರಿಕ, ಪ್ರಾಯೋಗಿಕ, ಶಕ್ತಿವರ್ಧಕ ಮತ್ತು ಶುದ್ಧಕಾರಕ. ಮಾನವ ಸಂಪನ್ಮೂಲಗಳ ಬಗ್ಗೆ ಮಾನವ ಸಾಧ್ಯತೆಗಳ ವಿಜ್ಞಾನದ ಬಗ್ಗೆ ಬೋಧಿಸುವ ಆ ಮಹಾ ಉಪನಿಷತ್ತುಗಳು ತಮ್ಮ ಪ್ರಾಯೋಗಿಕ ನೆಲೆಯ ನಿರ್ದೇಶನವನ್ನು ಗೀತೆಯಲ್ಲಿ ಕಂಡುಕೊಳ್ಳುತ್ತೇವೆ. ಈ ದೃಷ್ಟಿಕೋನದಿಂದ ಮಾನವಾಭಿವೃದ್ಧಿಯ ಮತ್ತು ಮಾನವ ಸಾಫಲ್ಯದ ವಿಜ್ಞಾನವಾಗಿ ನಾವು ಈ ಪುಸ್ತಕವನ್ನು ಅಧ್ಯಯನ ಮಾಡಬೇಕು. ಅದರ ಹದಿನೆಂಟು ಅಧ್ಯಾಯಗಳಲ್ಲಿ ಏಳುನೂರು ಶ್ಲೋಕಗಳ ಛಂದಸ್ಸೂ ಸರಳವಾಗಿದೆ. ಒಂದು ಸಾಲಿನಲ್ಲಿ ಎಂಟು ಆಕರಗಳು ಬರುವ ಅನುಷ್ಟುಪ್ ಎಂಬ ಹೆಸರಿನ ಛಂದಸ್ಸಿದೆ."[3]

ಭಗವದ್ಗೀತೆ ಮಹಾಭಾರತ ಭೀಷ್ಮಪರ್ವದ ಒಂದು ಭಾಗ. ಅದನ್ನು ಬಹುಮಟ್ಟಿಗೆ ಹೋಲುವ ಮೋಕ್ಷಧರ್ಮ ಶಾಂತಿಪರ್ವದ ಒಂದು ಭಾಗ. ಭಗವದ್ಗೀತೆ ಮೋಕ್ಷಧರ್ಮಕ್ಕಿಂತಲೂ ತತ್ವದಲ್ಲೂ ಕಾವ್ಯಗುಣದಲ್ಲೂ ಉತ್ತಮವಾದದ್ದು. ಇದನ್ನು ರಚಿಸಿದ ಕಾಲ ಕ್ರಿ.ಪೂ. ಐದನೆಯ ಶತಮಾನ. ಶ್ವೇತಾಶ್ವತರ ಉಪನಿಷತ್ತು ರುದ್ರನ ಪರವಾಗಿರುವಂತೆ ಇದು ವಿಷ್ಣುವಿನ ಪರವಾಗಿ ಬರೆದದ್ದು. ಗೀತೆಯ ಕೊನೆಯಲ್ಲಿ ಅದು 'ಗೀತೋಪನಿಷತ್' ಎಂದು ಕರೆದುಕೊಂಡಿದೆ. ಬೇರೆ ಬೇರೆ ಉಪನಿಷತ್ತುಗಳಲ್ಲಿ ಹಂಚಿ ಹೋಗಿರುವ ಜ್ಞಾನ, ಕರ್ಮ ಮತ್ತು ಭಕ್ತಿಮಾರ್ಗಗಳನ್ನು, ಅಕ್ಷರಬ್ರಹ್ಮ ಮತ್ತು ಈಶ್ವರ ಭಾವನೆಗಳನ್ನು ಭಗವದ್ಗೀತೆ ಒಂದುಗೂಡಿಸಿ ಅವುಗಳ ಜೊತೆಗೆ ಭಾಗವತ ಮತತ್ವವನ್ನು ಸೇರಿಸಿ ರಚಿಸಿದ ಉಪನಿಷತ್ ಗೀತೆ. ಈ ಗೀತೋಪನಿಷತ್ತು ಸರ್ವ ಉಪನಿಷತ್ತುಗಳ ಸಾರಭೂತವಾದ ದೊಡ್ಡ ಉಪನಿಷತ್ತು. ಇದು ವೇದದ ಉಪನಿಷತ್ತುಗಳಿಗೂ, ಬ್ರಹ್ಮಸೂತ್ರಗಳಿಗೂ ಸಮಾನವಾದುದೆಂದು ವೇದಾಂತಿಗಳು ಅನೇಕ ಶತಮಾನಗಳ ಹಿಂದಿನಿಂದ ಭಾವಿಸಿರುತ್ತಾರೆ. ಇದನ್ನು ಅವೆರಡರ ಜೊತೆಗೆ ಸೇರಿಸಿ ವೇದಾಂತ ಪ್ರಸ್ಥಾನತ್ರಯಗಳೆಂದು ಶಂಕರಾಚಾರ್ಯರು ಕರೆದಿರುತ್ತಾರೆ."[4]

ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ ।
ಪಾರ್ಥೋ ವತ್ಸಃ ಸುಧಿರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥

ಅಂದರೆ, ಉಪನಿಷತ್ತುಗಳೆಲ್ಲವೂ ಹಸು; ಹಾಲು ಕರೆಯುವವನು ಗೋವಳ ಬಾಲಕ (ಶ್ರೀಕೃಷ್ಣ); ಪಾರ್ಥ ಅಥವಾ ಅರ್ಜುನನೇ ಕರು; ಋಜುಬುದ್ಧಿಯುಳ್ಳ ಸ್ತ್ರೀ ಪುರುಷರು ಪಾನ ಮಾಡುವವರು; ಗೀತೆಯೇ ಹಾಲು ಅಂದರೆ ಅಮೃತಸಮಾನವಾದುದು. ಇದೊಂದೇ ಪ್ರಸಿದ್ಧವಾದ ಶ್ಲೋಕ. ಉಪನಿಷತ್ತುಗಳ ಸಾರವೇ ಭಗವದ್ಗೀತೆಯೆಂದು ವಿವರಿಸಲಾಗಿದೆ. ಭಗವದ್ಗೀತೆಯು ಯಾವುದೋ ಒಂದು ಜನಾಂಗವನ್ನೋ, ಒಂದು ದೇಶವನ್ನೋ, ಒಂದು ಕುಲವನ್ನೋ ಕುರಿತು ಬೋಧಿಸಲು ಕೃಷ್ಣನು ಈ ಭೂಮಿಗಿಳಿದು ಬಂದಿಲ್ಲ. ಇದು ಎಲ್ಲಾ ಮಾನವ ಸಮುದಾಯಕ್ಕಾಗಿ ಬಂದವನು; ಅದನ್ನೇ ಒಂದು ಶ್ಲೋಕ ಉಚ್ಚರಿಸುತ್ತದೆ; ಕೃಷ್ಣಂ ಒಂದೇ ಜಗದ್ಗುರುಮ್.

ಭಗವದ್ಗೀತೆಯು ಮೂರು ಷಟ್ಕಗಳಿಂದ ಒಳಗೊಂಡಿದ್ದು, ಆರಂಭದಲ್ಲಿ ಕರ್ಮ, ಜ್ಞಾನ, ಭಕ್ತಿಯೋಗಗಳನ್ನು ತಿಳಿಸುತ್ತದೆ. ಎರಡನೆಯದರಲ್ಲಿ ಬ್ರಹ್ಮ, ಈಶ್ವರ, ಬ್ರಹ್ಮಗತ್, ಬ್ರಹ್ಮಜೀವರುಗಳ ಸಂಬಂಧಗಳನ್ನು ವಿವರಿಸುತ್ತದೆ. ಕೊನೆಯಲ್ಲಿ ಪ್ರಕೃತಿಪುರುಷ ಸಂಬಂಧ, ತ್ರಿಗುಣಗಳ ತತ್ತ್ವ, ಸಂಸಾರವೃಕ್ಷ, ದೈವ ಮತ್ತು ಆಸುರಿ ಗುಣಗಳಿಂದ ಪ್ರಗತಿ ಮತ್ತು ವಿಗತಿ, ಶ್ರದ್ಧಾತ್ರಯಗಳು ಮತ್ತು ಉಪಸಂಹಾರ ಸೇರಿವೆ.

ಉಪನಿಷತ್ತುಗಳಂತೆಯೇ ಭಗವದ್ಗೀತೆಯ ಪರಮಧ್ಯೇಯ ಮೋಕ್ಷ ಅಥವಾ ಮುಕ್ತಿ. ಇದಕ್ಕೆ ದಾರಿ ಯಾವುದು? ಜ್ಞಾನವೇ, ಕರ್ಮವೇ, ಭಕ್ತಿಯೇ ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ಉಪನಿಷತ್ತುಗಳಲ್ಲಿ ವಿಶೇಷವಾಗಿ ಜ್ಞಾನವೇ ಮೋಕ್ಷಕ್ಕೆ ಸಾಧನ ಎಂಬ ಭಾವನೆಯಿದೆ. ಈಶೋಪನಿಷತ್ತಿನಲ್ಲಿ ಕರ್ಮಕ್ಕೆ ನೂತನ ಅರ್ಥಕೊಟ್ಟಿದೆ. ನಿಷ್ಕಾಮದಿಂದ ಈಶ್ವರಾರ್ಪಣವೆಂದು ಮಾಡಿದ ಕರ್ಮಕ್ಕೆ ಅರಿವಿಲ್ಲ. ಅದು ಬಂಧಿಸುವುದಿಲ್ಲ; ಇವೆರಡರ ಫಲವೂ ಒಂದೇಯಾಗಿದೆಯೆಂಬ ಜ್ಞಾನಕರ್ಮದ ಸಮನ್ವಯತೆಯನ್ನು ಬೋಧಿಸುತ್ತದೆ. "ಈ ನಿಷ್ಕಾಮ ಕರ್ಮತತ್ವವನ್ನು ಭಗವದ್ಗೀತೆ ಬೆಳೆಸುತ್ತದೆ. ಶ್ವೇತಾಶ್ವತರ ಉಪನಿಷತ್ತು ಜ್ಞಾನದೊಂದಿಗೆ ಭಕ್ತಿಯನ್ನು ಬೋಧಿಸುತ್ತದೆ. ಅಲ್ಲಿ ಜ್ಞಾನದೊಂದಿಗೆ ಭಕ್ತಿ ಸಮನ್ವಯವಾಗಿರುತ್ತದೆ. ಯೋಗವೆಂದರೆ ಒಂದಾಗುವುದು; ಭಗವಂತನೊಂದಿಗೆ ಸೇರುವುದು. ಈ ಸೇರಿಕೆ ಮೂರು ವಿಧವಾಗಿರಬಹುದು. ಅವನ ಸಾಮೀಪ್ಯವನ್ನು ಸೇರುವುದು, ಸಾಮೀಪ್ಯ, ಸಹವಾಸ ಅವನಂತೆ ಆಗುವುದು. ಅವನಲ್ಲಿ ಒಂದು ಅಂಶವಾಗುವುದು ಸಾಯುಜ್ಯ. ಅವನೆ ಆಗುವುದು ಸಾರೂಪ್ಯ. ಇವುಗಳಲ್ಲಿ ಯಾವುದನ್ನಾದರೂ ಬಯಸಿದವನು ನಿಶ್ಚಲ ಭಕ್ತಿಯಿಂದ ಅಥವಾ ನಿಷ್ಕಾಮಕರ್ಮದಿಂದ ಅಥವಾ ಅಕ್ಷರಬ್ರಹ್ಮಜ್ಞಾನದಿಂದ ತನ್ನ ಇಷ್ಟಾರ್ಥವನ್ನು ಪಡೆಯಬಹುದು. ಭಗವದ್ಗೀತೆಯ ಅಂತಿಮ ತೀರ್ಮ ಇದು. ನನ್ನನ್ನು ನಿಶ್ಚಲ ಭಕ್ತಿಯಿಂದ ಉಪಾಸಿಸುವವರನ್ನೇ ನಾನು ಪರಿಪೂರ್ಣಯೋಗಿಗಳೆಂದು ಭಾವಿಸುತ್ತೇನೆ."[5] ನಿರ್ಗುಣ ಬ್ರಹ್ಮನನ್ನು ಜ್ಞಾನದಿಂದ ಉಪಾಸಿಸುವವರೂ ನನ್ನನ್ನು ಸೇರುತ್ತಾರೆ. ಆದರೆ ಅವರದು ಕಠಿಣ ಮಾರ್ಗ. ತನ್ನೆಲ್ಲ ಕರ್ಮಗಳನ್ನೂ ನನಗೆ ಅರ್ಪಿಸಿದವನಿಗೂ, ನನ್ನ ಸೇವೆಯಲ್ಲಿ ನಿರತನಾದವನಿಗೂ ಮೋಕ್ಷ ನೀಡುತ್ತೇನೆ. ಅದೂ ಇಲ್ಲದಿದ್ದರೆ ಸ್ವಾರ್ಥ ಬಿಟ್ಟು ಕರ್ಮ ಮಾಡಿದವನಿಗೂ ಮೋಕ್ಷ ನೀಡುತ್ತೇನೆ. ಇವರೆಲ್ಲರೂ ನನಗೆ ಪ್ರಿಯರೇ. ಆದರೆ ಪರಮ ಭಕ್ತ ಮಾತ್ರ ನನಗೆ ಅತ್ಯಂತ ಪ್ರಿಯನಾಗಿರುತ್ತಾನೆ.

ಭಗವದ್ಗೀತೆಯು ಶಿಷ್ಯ ಮತ್ತು ಗುರು, ಅಂದರೆ ಅರ್ಜುನ ಮತ್ತು ಶ್ರೀಕೃಷ್ಣ ಇಲ್ಲಿ ವಿಶಿಷ್ಟ ವ್ಯಕ್ತಿಗಳು; ಯೋಧರವರು. ಗುರುವಾದ ಶ್ರೀಕೃಷ್ಣ ದಯಾಪೂರ್ಣನಾದವನು. ವಿಶ್ವದೃಷ್ಟಿಯುಳ್ಳವನು. ಹೀಗೆ ಗೀತೆಯಲ್ಲಿ ಗುರುವಿನಿಂದ ಶಿಷ್ಯನಿಗೆ ಕೊಡಲ್ಪಟ್ಟ ಸಂದೇಶವಾಗಿದೆ. ಅದರ ಸಾರ್ವತ್ರಿಕ ಗುಣಗಳಿಂದಾಗಿ ಅದು ಜಗತ್ತಿನ ಎಲ್ಲಾ ಮಾನವರಿಗೆ ಅವನ ಮಾನವೀಯ ಗುಣಗಳನ್ನಾಗಿ ತಿಳಿಯುವುದಕ್ಕೆ ಅನ್ವಯಿಸುತ್ತದೆ. ಒಂದು ಸಾವಿರ ವರ್ಷಗಳ ಹಿಂದೆ ಉಪನಿಷತ್ತುಗಳು ಅಥವಾ ವೇದಾಂತ, ಮಾನವ ಸಾಧ್ಯತೆಗಳ ವಿಜ್ಞಾನವನ್ನು ಬೋಧಿಸಿದವು; ಭಗವದ್ಗೀತೆ ಆ ವಿಜ್ಞಾನಗಳ ಪ್ರಾಯೋಗಿಕ ಅನ್ವಯವನ್ನು ಬೋಧಿಸಿತು. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಗೀತೆಯನ್ನು ಪ್ರಾಯೋಗಿಕ ವೇದಾಂತದ ಅತ್ಯುತ್ತಮ ಪುಸ್ತಕವೆಂದು ಕರೆದಿದ್ದಾರೆ.

ಜ್ಞಾನವೆಂದರೆ ಪ್ರಾಪಂಚಿಕ ಜ್ಞಾನದಿಂದ ಹಿಡಿದು ಅತ್ಯುನ್ನತ ಆಧ್ಯಾತ್ಮಕದವರೆಗಿನ ಜ್ಞಾನ. ನಾವು ಭಾರತದವರಾದ್ದರಿಂದ ಪ್ರಾಪಂಚಿಕ ಜ್ಞಾನ ಮತ್ತು ಆಧ್ಯಾತ್ಮಿಕ ಜ್ಞಾನ ಎರಡಕ್ಕೂ ಭಿನ್ನತೆಯನ್ನೇನೂ ಮಾಡಲಿಲ್ಲ. ನಮಗೆ ಎಲ್ಲಾ ರೀತಿಯ ಜ್ಞಾನವು ಪವಿತ್ರವೆ. ಎಲ್ಲಾ ರೀತಿಯ ಜ್ಞಾನವನ್ನೂ ತಂತ್ರಗಳನ್ನೂ ಪ್ರತಿನಿಧಿಸುವವಳು ದೇವಿ ಸರಸ್ವತಿ ಮಾತ್ರ.

"ಭಾರತೀಯ ಸಂಪ್ರದಾಯದಲ್ಲಿ ಸಮಸ್ತ ಜ್ಞಾನವೂ ಒಂದೇ ಎಂಬುದು ಮಹತ್ವದ ಕಲ್ಪನೆ. ಅಧ್ಯಯನದ ಉದ್ದೇಶದಿಂದ ನಾವು ಜ್ಞಾನದ ವಿವಿಧ ವಿಭಾಗಗಳನ್ನು ಸೃಷ್ಟಿಸಿಕೊಳ್ಳಬಹುದು; ಆದರೆ ಜ್ಞಾನದ ಐಕ್ಯವನ್ನು ಮಾತ್ರ ಒಡೆಯಬಾರದು. ಅದು ಭಾರತದಲ್ಲಿ ನಾವು ನೋಡುವ ಬೋಧನೆ. ಅರಸಬಹುದಾದ ಅತ್ಯಂತ ದೊಡ್ಡ ವಸ್ತುವೇ ಜ್ಞಾನ. 'ವಿದ್ಯಾಧನಂ ಸರ್ವಧನಪ್ರಧಾನಮ್' ಎಲ್ಲಾ ಬಗೆಯ ಶ್ರೀಮಂತಿಕೆಗಳಿಗಿಂತಲೂ ಜ್ಞಾನದ ಶ್ರೀಮಂತಿಕೆಯೇ ಅತ್ಯಂತ ದೊಡ್ಡದು ಎಂಬ ಈ ಕಲ್ಪನೆ ನಮ್ಮಲ್ಲಿದೆ. ಜ್ಞಾನದಂತಹ ಪವಿತ್ರಗೊಳಿಸುವಂಥಾದ್ದು ಈ ಲೋಕದಲ್ಲಿ ಬೇರೆ ಯಾವುದೂ ಇಲ್ಲ ಎನ್ನುತ್ತದೆ ಗೀತ (೪:೩೮) 'ನ ಹಿ ಜ್ಞಾನೇನ ಸದೃಶಂ ಪವಿತ್ರಂ ಇಹ ವಿದ್ಯೇತೇ"[೬]

ಜ್ಞಾನಯೋಗದಲ್ಲಿ ಒಟ್ಟು ೪೨ ಶ್ಲೋಕಗಳಿವೆ. ಇದರ ಮುಖ್ಯ ವಿಷಯವು ಜ್ಞಾನವಾಗಿದ್ದರೂ ಪ್ರಮುಖವಾಗಿ ನಾಲ್ಕು ವಿಷಯಗಳನ್ನು ಕುರಿತು ಚರ್ಚಿಸುತ್ತದೆ. ೧. ಅವತಾರ ಕಲ್ಪನೆ, ೨. ವರ್ಣಧರ್ಮ, ೩. ಕರ್ಮ ಮತ್ತು ಅಕರ್ಮ, ೪. ಯಜ್ಞ.

ಈ ಅಧ್ಯಾಯದಲ್ಲಿ ವಿಧವಿಧವಾದ ಯಜ್ಞಕರ್ಮಗಳನ್ನು ವಿವರಿಸಿದ ನಂತರ ದ್ರವ್ಯಮಯವಾದ ಯಜ್ಞಕ್ಕಿಂತಲೂ ಜ್ಞಾನಯಜ್ಞ ಮೇಲೂ, ಎಲ್ಲ ಕರ್ಮವೂ ಜ್ಞಾನದಲ್ಲಿ ಕೊನೆಗಾಣುತ್ತದೆ (೪.೩೩). "ನೀನು ಎಲ್ಲ ಪಾಪಗಳಿಗಿಂತಲೂ ಹೆಚ್ಚು ಪಾಪವನ್ನು ಮಾಡಿದ್ದರೂ ಆ ಪಾಪಗಳೆಲ್ಲವನ್ನೂ ಜ್ಞಾನವೆಂಬ ತೆಪ್ಪದಿಂದ ದಾಟಿಬಿಡುವೆ (೪.೩೬). ಚೆನ್ನಾಗಿ ಉರಿಯುತ್ತಿರುವ ಬೆಂಕಿ ಕಟ್ಟಿಗೆಗಳನ್ನೆಲ್ಲಾ ಹೇಗೆ ಬೂದಿಯಾಗಿ ಮಾಡುವುದೋ, ಜ್ಞಾನಾಗ್ನಿ ಹಾಗೆ ಕರ್ಮಗಳನ್ನೆಲ್ಲಾ ಬೂದಿ ಮಾಡಿಬಿಡುವುದು (೪.೩೭). ಜ್ಞಾನಕ್ಕೆ ಸದೃಶವಾದ ಪವಿತ್ರವಸ್ತು ಇಲ್ಲಿ ಎಲ್ಲಿಯೂ ಇಲ್ಲ. ಅದನ್ನು ಯೋಗ ಸಂಸಿದ್ಧನಾದವನು ಕಾಲಾನುಕಾಲಕ್ಕೆ ತನ್ನಲ್ಲಿ ಪಡೆದುಕೊಳ್ಳುವನು ಎಂದು ಹೇಳಿದಾಗ ಜ್ಞಾನ ಎಲ್ಲಕ್ಕೂ ಮಿಗಿಲಾದುದು ಎಂಬುದು ಗೀತೆಯ ಬೋಧೆಯೆಂಬುದು ವ್ಯಕ್ತವಾಗುತ್ತದೆ. ಶಂಕರಾಚಾರ್ಯರು ಹೇಳುವುದೂ ಅದೇ ಆಗಿರುತ್ತದೆ."[೭]

ಕರ್ಮಸಂನ್ಯಾಸವೂ ಕರ್ಮಯೋಗವೂ ಎರಡೂ ಚಿತ್ತವನ್ನು ಆತ್ಮನ ಕಡೆಗೆ ತಿರುಗಿಸಿ ಆತ್ಮಜ್ಞಾನದ ಮೂಲಕ ಮೋಕ್ಷವನ್ನುಂಟು ಮಾಡುವವು. ಆದರೆ ಇವೆರಡರಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗ ಹೆಚ್ಚಿನದು. ಏಕೆಂದರೆ ರಾಗದ್ವೇಷ ತೊರೆದು ಕರ್ಮವನ್ನು ಮಾಡುವವನು ನಿತ್ಯಸಂನ್ಯಾಸಿ. ಅವನಿಗೆ ಬಂಧನವು ಸುಲಭವಾಗಿ ಕಳೆಯುವುದು. ಕರ್ಮಕ್ಕೆ ಸಮಬುದ್ಧಿಯೇ ಮುಂತಾದವೂ ಸೇರಿದರೆ ಅದಕ್ಕೆ ಕರ್ಮಯೋಗವೆಂದು ಹೆಸರು. ಸಂನ್ಯಾಸಕ್ಕೆ ಜ್ಞಾನವೇ ಮುಂತಾದವು ಸೇರಿದರೆ ಕರ್ಮಸಂನ್ಯಾಸವಾಗುವುದು. ಇವೆರಡೂ ಮೋಕ್ಷಸಾಧಕವಾದರೂ ಕರ್ಮಸಂನ್ಯಾಸವು ಕರ್ಮಯೋಗವಿಲ್ಲದೆ ಸಾಧ್ಯವಾಗುವುದಿಲ್ಲ. ಆದುದರಿಂದ ಕರ್ಮಯೋಗ ಮೇಲು.

"ಹೀಗೆ ಹೇಳಿದ ಮೇಲೆ ಇವೆರಡು ಸ್ವತಂತ್ರವಾದ ಮಾರ್ಗಗಳಲ್ಲಿ, ಜ್ಞಾನವೇ ಸ್ವತಂತ್ರವಾದ ಮಾರ್ಗವಾದುದರಿಂದ ಅದೇ ಉಳಿದೆಲ್ಲವಕ್ಕೂ ಮೇಲು. ಜ್ಞಾನಿಯಾದವನು ಯಾವ ಕರ್ಮವನ್ನೂ ಮಾಡುವುದಿಲ್ಲ. ತನ್ನ ದೇಹ ಮತ್ತು ಮನಸ್ಸು ಕೆಲಸ ಮಾಡುತ್ತಿದ್ದಾಗೂ ಅವು ಅವನಿಗೆ ಸೇರಿದವಾದುದರಿಂದ ಏನೇನೂ ಮಾಡುವುದಿಲ್ಲವೆಂದು ಜ್ಞಾನಿ ತಿಳಿದಿರುತ್ತಾನೆ. ಅವನು ವ್ಯವಹಾರದೃಷ್ಟಿಯಿಂದ ಕರ್ಮ ಮಾಡುತ್ತಿದ್ದರೂ ಅದು ನಿಜವಾಗಿಯೂ ಕರ್ಮವಲ್ಲ. ಬರಿಯ ಕರ್ಮಸನ್ಯಾಸವಲ್ಲ. ಕರ್ಮವನ್ನು ಮಾಡಿಯೂ ಅದು ನನ್ನದಲ್ಲ ಎಂದು ತಿಳಿದಿರುವವನೇ ನಿಜವಾದ ಸಂನ್ಯಾಸಿ ಪರಮಾರ್ಥ ಸನ್ಯಾಸಿ. ಇಂಥವನಿಗೆ ಸಾತ್ವಿಕ, ರಾಜಸಿಕ, ತಾಮಸಿಕ, ಜೀವರೆಲ್ಲ ಪರಬ್ರಹ್ಮರೂಪವಾಗಿಯೇ ಕಾಣುವರು. ಹೀಗೆ ಎಲ್ಲವನ್ನೂ ಒಂದೇ ಬಗೆಯಾಗಿ ಕಂಡದ್ದರಿಂದ ಹೆಚ್ಚಾದವರನ್ನು ಕಡಿಮೆಯಾಗಿ ಕಂಡ ದ್ವೇಷವಾಗಲಿ, ಕಡಿಮೆಯಾದ್ದನ್ನು ಮೇಲಕ್ಕೇರಿಸಿದ ದೋಷವಾಗಲಿ ಅವರಿಗೆ ತಟ್ಟುವುದಿಲ್ಲ. ಏಕೆಂದರೆ ನಿರ್ದೋಷವಾದ ಬ್ರಹ್ಮವೇ ಸಕಲ ಜೀವನ ರೂಪದಿಂದಲೂ ತಮ್ಮ ರೂಪದಿಂದಲೂ ಇರುವುದೆಂಬ ತತ್ವವನ್ನು ಅವರು ಕಂಡುಕೊಂಡಿದ್ದಾರೆ. ಇಂಥ ಜ್ಞಾನದಿಂದ ಕಂಡದ್ದೆಲ್ಲ ಬ್ರಹ್ಮವೇ ಆಗಿರುವುದರಿಂದ ಅವರಿಗೆ ಪ್ರಿಯವಾದುದನ್ನು ಕಂಡು ಹಿಗ್ಗುವ ಅಥವಾ ಅಪ್ರಿಯವಾದುದನ್ನು ಕಂಡು ಕುಗ್ಗುವ ಸಂಭವವೇ ಇಲ್ಲ. ಅವನಿಗೆ ಸುಖವೆಂದರೆ ಆತ್ಮನೆ; ಆ ಸುಖಕ್ಕೆ ನಾಶವೇ ಇಲ್ಲ."[೮]

ಹೀಗೆ ಯಾವನು ವಿಷಯಗಳಿಂದ ಮನಸ್ಸನ್ನು ಹಿಡಿದೆಳೆದು ಆತ್ಮನಲ್ಲಿಯೇ ಪ್ರೀತಿಯಿಟ್ಟು, ಆತ್ಮನೇ ತನ್ನ ಬೆಳಕೆಂದು, ಆತ್ಮನೇ ತನ್ನ ಸುಖವೆಂದೂ ನಂಬುವನೋ ಅವನು ಬದುಕಿರುವಾಗಲೇ ಬ್ರಹ್ಮನಾಗಿದ್ದು ಬಳಿಕ ಬ್ರಹ್ಮನನ್ನೇ ಸೇರುತ್ತಾನೆ.

ಹೀಗೆ ಜ್ಞಾನದಿಂದಾದ ಅದ್ವೈತಸಿದ್ಧಿಯೇ ಮೋಕ್ಷವೆಂದೂ, ಅದೇ ಪರಮಾರ್ಥವೆಂದೂ ಅದೇ ಗೀತಾರಹಸ್ಯವೆಂದೂ ತಿಳಿಸುವುದೇ ಶಂಕರಾಚಾರ್ಯರ ಭಾಷ್ಯದ ಉದ್ದೇಶ. ಗೀತೆ ಅದ್ವೈತವಲ್ಲದೆ, ವಿಶಿಷ್ಟಾದ್ವೈತ, ದ್ವೈತಗಳನ್ನೂ ಬೋಧಿಸುತ್ತದೆಂದು ಇತರ ಭಾಷ್ಯಕಾರರ ಮತ. ಇವುಗಳಲ್ಲದೆ ಇನ್ನೂ ಒಂದು ಮತವಿದೆ. ಭಾಗವತ ಮತವನ್ನು ಬೋಧಿಸುವುದೇ ಗೀತೆಯ ಮುಖ್ಯ ಉದ್ದೇಶ.

ಭಗವಂತನ ಸ್ವರೂಪವನ್ನು ವಿಚಾರದ ಮೂಲಕ ತಿಳಿದುಕೊಂಡು ಬ್ರಹ್ಮಸಾಕ್ಷಾತ್ಕಾರ ಪಡೆಯುವುದೇ ಜ್ಞಾನಮಾರ್ಗ. ಜ್ಞಾನಯೋಗಿಗೆ ಎಲ್ಲೆಲ್ಲೂ ಬ್ರಹ್ಮ ಒಂದೇ ಎಂಬ ದಿವ್ಯವಾದ ಅನುಭವವಾಗುವುದರಿಂದ ಜಾತಿ, ಮತ, ಕಾಲ, ದೇಶಗಳ ಬೇಧವಿರುವುದಿಲ್ಲ. ಜೀವನದ ಗುರಿಯು ಶಾಶ್ವತವಾದ ಆನಂದ. ಇದು ದೊರೆಯಲು ಸಾಧ್ಯ ಎಂಬ ನಂಬಿಕೆಯಿಂದ ಆರಂಭಿಸಿ ಸಾಧನೆಯನ್ನು ಮಾಡಿ, ಪರಮ ಜ್ಞಾನವನ್ನು ಹೊಂದುವುದರಿಂದ ದೊರಕುವ ಆನಂದವೇ ಬ್ರಹ್ಮಾನಂದ.

ಅಡಿಟಿಪ್ಪಣಿಗಳು :

೧ ಪು. ೫೦, ಭಗವದ್ಗೀತೆಯ ವಿಶ್ವಸಂದೇಶ (ಭಾಗ–೧), ಸ್ವಾಮಿ ರಂಗನಾಥಾನಂದ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೨೦೦೪.

೨ ಭಗವದ್ಗೀತಾ ಯಥಾರೂಪ, ಎಲ್. ಎಸ್. ಶೇಷಗಿರಿರಾವ್, ಭಕ್ತಿವೇದಾಂತ ಬುಕ್‌ಟ್ರಸ್ಟ್, ಬೆಂಗಳೂರು, ೨೦೦೪.

೩ ಪು.೩, ಭಗವದ್ಗೀತೆಯ ವಿಶ್ವಸಂದೇಶ (ಭಾಗ–೧), ಸ್ವಾಮಿ ರಂಗನಾಥಾನಂದ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೨೦೦೪.

೪ ಭಗವದ್ಗೀತೆ, ಜಿ. ಹನುಮಂತರಾವ್, ಡಿ.ವಿ.ಕೆ. ಮೂರ್ತಿ, ಮೈಸೂರು, ೨೦೦೪, ಪು. ೩.

೫ ಅದೇ ಪು. ೮.

೬ ಪು. ೧೦, ಭಗವದ್ಗೀತೆಯ ವಿಶ್ವಸಂದೇಶ, ಭಾಗ–೧, ಸ್ವಾಮಿ ರಂಗನಾಥಾನಂದ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೨೦೦೪.

೭ ಪು. ೪೭೪, ಜಿ. ಹನುಮಂತರಾವ್ ಅವರ ಆಯ್ದ ಲೇಖನಗಳು, ಸಂ. ದೇಜಗೌ, ಪ್ರಸಾರಾಂಗ ಮೈಸೂರು ವಿ.ವಿ. ಮೈಸೂರು.

೮ ಪು. ೪೭೪–೭೬, ಜಿ. ಹನುಮಂತರಾವ್ ಅವರ ಆಯ್ದ ಲೇಖನಗಳು, ಸಂ. ದೇಜಗೌ, ಪ್ರಸಾರಾಂಗ ಮೈಸೂರು ವಿ.ವಿ. ಮೈಸೂರು.

ಗಾಂಧೀಜಿಯವರ ದೃಷ್ಟಿಯಲ್ಲಿ ಧಾರ್ಮಿಕ ಸಾಮರಸ್ಯ

ಎನ್.ಚಿನ್ನಸ್ವಾಮಿ
ಸಂಶೋಧಕರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೦೬.

ಧಾರ್ಮಿಕ ಸಂಘರ್ಷವು ಮಾನವನ ಇತಿಹಾಸದಷ್ಟೇ ಪ್ರಾಚೀನವಾದುದು. ಮಾನವನು ಹೆಚ್ಚು ಹೆಚ್ಚು ನಾಗರೀಕನಾಗುತ್ತಾ ಹೋದರೂ ಧಾರ್ಮಿಕ ಸಂಘರ್ಷವು ಅನೇಕ ಆಯಾಮಗಳನ್ನು ಪಡೆದುಕೊಳ್ಳುತ್ತಾ ರಾಷ್ಟ್ರದ ಆರೋಗ್ಯಕರ ಬೆಳವಣಿಗೆಗೆ ತೊಡಕಾಗಿಯೇ ಉಳಿದಿದೆ. ಶತಮಾನಗಳಿಂದಲೂ ಅನೇಕ ದಾರ್ಶನಿಕರು, ಸಮಾಜ ಸುಧಾರಕರು ಧಾರ್ಮಿಕ ಸಂಘರ್ಷದ ದುಷ್ಪರಿಣಾಮಗಳನ್ನು ಮನಗಂಡು ಸಮಾಜದಲ್ಲಿ ಧಾರ್ಮಿಕ ಸಾಮರಸ್ಯವನ್ನು ಬೆಳೆಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಅದರಲ್ಲಿ ಮಹಾತ್ಮ ಗಾಂಧೀಜಿಯವರು ಸಹ ಒಬ್ಬರು. ಗಾಂಧೀಜಿಯವರು ಧಾರ್ಮಿಕ ಸಾಮರಸ್ಯವನ್ನು ಪ್ರತಿಪಾದಿಸಿದವರಲ್ಲಿ ಅತ್ಯಂತ ಪ್ರಮುಖರಾದವರು. ಅವರು ಮಾನವೀಯತೆ, ಬ್ರಾತೃತ್ವದ ಕಲ್ಪನೆಯನ್ನು ಅನುಷ್ಠಾನಗೊಳಿಸಿದವರು. ಭಾರತವು ಅನೇಕ ಧರ್ಮಗಳ ಆಶ್ರಯತಾಣವಾಗಿದೆ. ಧರ್ಮಗಳ ನಡುವೆ ಅನೇಕ ಸಂಘರ್ಷಗಳು ಸಾಮಾನ್ಯವಾಗಿ ನಡೆಯುತ್ತಿದ್ದವು. ಧಾರ್ಮಿಕ ಸಂಘರ್ಷವು ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡುವುತ್ತವೆ ಎಂಬುದನ್ನು ಮನಗಂಡು ಗಾಂಧೀಜಿಯವರು ತಮ್ಮ ಆಶ್ರಮದಲ್ಲಿ ಎಲ್ಲಾ ಧರ್ಮದವರಿಗೂ ಸಮಾನವಾದ ಅವಕಾಶವನ್ನು ನೀಡಿದ್ದರು. ಸರ್ವಧರ್ಮೀಯರನ್ನು ಗೌರವಿಸುತ್ತಿದ್ದರು. ಮಾನವರೆಲ್ಲರೂ ಒಂದೇ ಎಂಬ ಮಂತ್ರವನ್ನು ಪಾಲಿಸುತ್ತಿದ್ದರು. ಪ್ರಸ್ತುತ ಧಾರ್ಮಿಕ ಸಂಘರ್ಷಗಳು ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವುದರಿಂದ ಗಾಂಧೀಜಿಯವರ ಧಾರ್ಮಿಕ ಸಾಮರಸ್ಯದ ಕಲ್ಪನೆಯ ವಿಶ್ವವ್ಯಾಪಕತ್ವವನ್ನು ಒತ್ತಿಹೇಳಬೇಕಾದ ಅವಶ್ಯಕತೆ ಇದೆ.

ಗಾಂಧೀಜಿ ಕೋಮು ಸೌಹಾರ್ದತೆಯ ಅಪ್ರತಿಮ ಸಾಕಾರರಾಗಿದ್ದು, ವಿವಿಧ ಧರ್ಮಗಳ ಸಮನ್ವಯ ಮತ್ತು ಮಾನವ ಭ್ರಾತೃತ್ವದ ಆದರ್ಶಗಳನ್ನು ಎತ್ತಿ ಹಿಡಿದವರು. ದೇವರು ಒಬ್ಬನೇ ಎಂದು ಅವರು ದೃಢವಾಗಿ ನಂಬಿದ್ದರು. ವಿವಿಧ ಧಾರ್ಮಿಕ ಜನಾಂಗಗಳ ನಡುವೆ ಸ್ನೇಹ ಮತ್ತು ಶಾಂತಿಗಳನ್ನು ಸ್ಥಾಪಿಸಲು ಅವಿರತವಾಗಿ ದುಡಿದ ಅವರು ಅದೇ ಕೋಮುವಾದದ ಮೃಗೀಯ ಪ್ರವೃತ್ತಿಗೆ ತಮ್ಮ ಬದುಕನ್ನು ಬಲಿಯಾಗಿ ತೆತ್ತುದು ವಿಷಾದನೀಯ ಸಂಗತಿ.

ಮೂಲತಃ ಗಾಂಧೀಜಿ ಒಬ್ಬ ಧಾರ್ಮಿಕ ವ್ಯಕ್ತಿ. ಧರ್ಮದಲ್ಲಿ ಅವರಿಗಿದ್ದ ದೃಢವಾದ ನಂಬಿಕೆಯು ಕೋಮು ಸೌಹಾರ್ದದ ಬಗ್ಗೆ ಹೆಚ್ಚಾಗಿ ಬರೆಯುವಂತೆ ಅವರನ್ನು ಪ್ರೇರೇಪಿಸಿತು. ಅವರೊಬ್ಬ ಕ್ರಿಯಾಶೀಲ ವ್ಯಕ್ತಿಯಾಗಿದ್ದರು ಮತ್ತು ತಮ್ಮ ಚಿಂತನೆ ಹಾಗೂ ಬರಹಗಳಿಗೆ ಅನುಸಾರವಾಗಿ ಕ್ರಿಯಾಶೀಲರಾಗುವ ಪ್ರವೃತ್ತಿಯನ್ನು ಹೊಂದಿದ್ದರು. ಕೋಮು ಸೌಹಾರ್ದತೆಯನ್ನು ಸ್ಥಾಪಿಸುವಲ್ಲಿ ಅವರ ಧಾರ್ಮಿಕ ಹಿನ್ನೆಲೆಯು ಪ್ರಮುಖ ಪಾತ್ರವನ್ನು ನಿರ್ವಹಿಸಿತು.

ಕಾಥಿಯಾವಾಡ ಧಾರ್ಮಿಕ ವೈವಿಧ್ಯಕ್ಕೆ ಪ್ರಸಿದ್ಧವಾದ ನೆಲೆ. ಅದರ ಧಾರ್ಮಿಕ ವ್ಯಾಪ್ತಿಯು ಸೂರ್ಯಾರಾಧನೆಯಿಂದ ಹಿಡಿದು ಇಸ್ಲಾಮಿನ ಏಕೇಶ್ವರವಾದದವರೆಗೆ ವಿಸ್ತರಿಸಿದೆ. ಭಕ್ತಿಪಂಥಕ್ಕೆ ಹೆಸರಾದ ವೈಷ್ಣವ ಧರ್ಮವು ಗಾಂಧೀಜಿಯವರನ್ನು ಕ್ರೈಸ್ತಧರ್ಮದ ತತ್ವವನ್ನು ಸ್ವೀಕರಿಸುವಂತೆ ಸಿದ್ಧಗೊಳಿಸಿತು. ಈಶ್ವರನಲ್ಲಿ ಭಕ್ತಿ ಮತ್ತು ಪ್ರಪತ್ತಿ, ದಯೆ ಮತ್ತು ಅನುಭಾವ – ಈ ವಿಷಯಗಳಲ್ಲಿ ವೈಷ್ಣವ ಧರ್ಮಕ್ಕೂ ಮತ್ತು ಕ್ರೈಸ್ತಧರ್ಮಕ್ಕೂ ಬಹಳ ಸಾಮ್ಯವಿದೆ.

ಗಾಂಧೀಜಿಯವರ ತಾಯಿಯಾದ ಪುತಲೀಬಾಯಿ ಒಬ್ಬ ಧಾರ್ಮಿಕ ಮಹಿಳೆಯಾಗಿದ್ದರು. ಮೂಲತಃ ಆಕೆಯು ವೈಷ್ಣವ ಸಂಪ್ರದಾಯಕ್ಕೆ ಸೇರಿದವರು. ತೀವ್ರವಾದ ಭಕ್ತಿಯಿಂದ ಆಕೆ ದೇವರನ್ನು ಕುರಿತು ಪ್ರಾರ್ಥನೆಯನ್ನು ನಡೆಸುತ್ತಿದ್ದಳು, ಯಾತ್ರೆ ಉಪವಾಸ ಮುಂತಾದ ವ್ರತಗಳನ್ನು ಪದೇ ಪದೇ ಕೈಗೊಳ್ಳುತ್ತಿದ್ದಳು. ಗಾಂಧೀಜಿ ಸಹಜವಾಗಿಯೇ ತಮ್ಮ ತಾಯಿಯ ಪ್ರಭಾವಕ್ಕೆ ಒಳಗಾದರು. ಮನೆಯಲ್ಲಿ ರಾಮಾಯಣ ಮತ್ತು ಭಗವದ್ಗೀತೆಗಳ ಪಾರಾಯಣ ನಡೆಯುತ್ತಿತ್ತು. ತುಳಸೀ ರಾಮಾಯಣವು ಗಾಂಧಿಯನ್ನು ಸ್ಫೂರ್ತಿಗೊಳಿಸಿತು. ಜೈನ ಸಾಧುಗಳು ಅವರ ಮನೆಗೆ ಪದೇ ಪದೇ ಭೇಟಿ ಕೊಡುತ್ತಿದ್ದರು. ಇದು ಅವರನ್ನು ಜೈನಧರ್ಮವನ್ನು ಕುರಿತು ಇನ್ನೂ ಆಳವಾಗಿ ತಿಳಿಯುವಂತೆ ಪ್ರೇರೇಪಿಸಿತು.

ತರುಣ ಗಾಂಧಿಯು ಮೂಲತಃ ನಾಚಿಕೆಯ ಸ್ವಭಾವದವರು. ಅವರಿಗೆ ಕಳ್ಳರು, ಸರ್ಪಗಳು ಮತ್ತು ಭೂತ ಪ್ರೇತಗಳೆಂದರೆ ಭಯ. ರಂಭಾ ಎಂಬ ತನ್ನ ಮನೆಯ ವೃದ್ಧ ದಾದಿಯೊಂದಿಗೆ ಅವರು ತಮ್ಮ ಈ ಭಯವನ್ನು ಹೇಳಿಕೊಳ್ಳುತ್ತಿದ್ದರು. ಗಾಂಧೀಜಿಗೆ ಈಕೆಯನ್ನು ಕಂಡರೆ ಅತ್ಯಂತ ಗೌರವ. ಈಕೆಯು ಅವರ ಭಯಕ್ಕೆ ಒಂದು ಔಷಧದ ಸಲಹೆಯನ್ನು ನೀಡಿದಳು: ಅದೇ ರಾಮನಾಮ ಪಾರಾಯಣ. ದಾದಿಯಲ್ಲಿನ ಗೌರವವು ತರುಣ ಗಾಂಧಿಯನ್ನು ಈ ಕ್ಷುಲ್ಲಕ ಭಯದಿಂದ ಮುಕ್ತನಾಗುವಂತೆ ಮಾಡಿತು, ಮುಂದೆ ಧಾರ್ಮಿಕ ಶ್ರದ್ಧೆಯು ಇನ್ನೂ ಆಳವಾಗಿ ಬೇರೂರುವಂತೆ ಮಾಡಿತು. ವಾಸ್ತವವಾಗಿ ಅವರು ಹತ್ಯೆಗೆ ಒಳಗಾದಾಗ ಅವರ ಬಾಯಿಂದ ಹೊರಬಂದುದೇ ಈ ರಾಮನಾಮ.

ಲಂಡನ್‌ನಲ್ಲಿ ಇರುವಾಗ ಗಾಂಧೀಜಿ ಸರ್ ಎಡ್ವಿನ್ ಅರ್ನಾಲ್ಡ್‌ರವರು ಬರೆದ "Song Celestial" ಎಂಬ ಗೀತೆಯ ಅನುವಾದವನ್ನು ಓದಿದರು. ಈ ಗ್ರಂಥವು ಅವರ ದೃಷ್ಟಿಯಲ್ಲಿ ಒಂದು ಅಮೂಲ್ಯವಾದ ನಿಧಿಯಾಗಿತ್ತು. ಅರ್ನಾಲ್ಡ್‌ರ "The Light of Asia" ಎಂಬ ಬುದ್ಧನ ಜೀವನ ಚರಿತ್ರೆಯು ಅವರನ್ನು ಸ್ಫೂರ್ತಿಗೊಳಿಸಿತ್ತು. ಥಿಯೋಸೊಫಿಸ್ಟರಾದ ಮೇಡಂ ಬ್ಲಾವಾಟ್‌ಸ್ಕಿಯವರ ಸಹವಾಸವು ಅವರನ್ನು ಹಿಂದೂಧರ್ಮವನ್ನು ಕುರಿತು ಇನ್ನೂ ಆಳವಾಗಿ ತಿಳಿಯುವಂತೆ ಪ್ರೇರೇಪಿಸಿತು. ಇದರಿಂದ ಹಿಂದೂಧರ್ಮದ ಬಗ್ಗೆ ಕ್ರೈಸ್ತ ಮತಾಂತರಿಗಳಿಗಿದ್ದ ತಪ್ಪು ಅಭಿಪ್ರಾಯಗಳನ್ನು ಸರಿಪಡಿಸಿಕೊಳ್ಳುವಂತೆ ಅವರನ್ನು ಪ್ರಚೋದಿಸಿತು.

ಒಬ್ಬ ಕ್ರೈಸ್ತಮಿತ್ರನ ಒತ್ತಾಯದಿಂದ ಗಾಂಧೀಜಿ ಬೈಬಲ್‌ನ್ನು ಓದಿದರು. "The Sermon on the Mount" ಅವರ ಹೃದಯವನ್ನು ನೇರವಾಗಿ ತಲುಪಿತು. ಕೃಷ್ಣ, ಬುದ್ಧ, ಥಾಮಸ್ ಕಾರ್ಲೈಲರ

ಹೀರೋಸ್ ಮತ್ತು ಹೀರೋ ವರ್ಶಿಪ್ – ಅದರಲ್ಲೂ ವಿಶೇಷವಾಗಿ ಅದರ ಕೊನೆಯ ಅಧ್ಯಾಯವಾದ "Hero as a Prophet" ನ ಅಧ್ಯಯನವು ಗಾಂಧೀಜಿಯವರನ್ನು ಕೃಷ್ಣ, ಬುದ್ಧ ಮತ್ತು ಜೀಸಸ್ ಒಂದೇ ಎಂದು ಭಾವಿಸುವಂತೆ ಮಾಡಿತು. ಗಾಂಧೀಜಿ ನಾಸ್ತಿಕವಾದವನ್ನು ಕುರಿತು ಕೆಲವು ಗ್ರಂಥಗಳನ್ನು ಓದಿದ್ದರು. ಅವರು ಪ್ಯಾರಿಸ್‌ಗೆ ಭೇಟಿ ಕೊಟ್ಟಾಗ 1890ರ ಅದರ ವಸ್ತು ಪ್ರದರ್ಶನವಾಗಲೀ ಅಥವಾ ಭವ್ಯವಾದ ಐಫೆಲ್ ಟವರ್ ಆಗಲೀ ಅವರನ್ನು ಆಕರ್ಷಿಸಲಿಲ್ಲ. ಬದಲಾಗಿ ಪ್ಯಾರಿಸ್‌ನ ಪ್ರಾಚೀನ ಚರ್ಚ್‌ಗಳ ಭವ್ಯತೆ ಮತ್ತು ಗಾಢವಾದ ಶಾಂತತೆಯು ಅವರನ್ನು ಸ್ಫೂರ್ತಿಗೊಳಿಸಿದವು.

ಏಪ್ರಿಲ್ 1893ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಾಗೆ ಹಡಗಿನಲ್ಲಿ ಪ್ರಯಾಣ ಮಾಡಿದರು. ನೆಟಾಲ್‌ನಲ್ಲಿ ಭಾರತೀಯ ಮುಸ್ಲೀಮರಾದ ದಾದಾ ಅಬ್ದುಲ್ಲಾ ಶೇತ್ ಅವರನ್ನು ಸ್ವಾಗತಿಸಿದರು. ಇಲ್ಲಿ ಗಾಂಧೀಜಿ ತಮ್ಮ ಧಾರ್ಮಿಕ ಅಧ್ಯಯನವನ್ನು ಮುಂದುವರೆಸಿದರು. ಹಿಂದೂಧರ್ಮ, ಕ್ರೈಸ್ತಧರ್ಮ ಮತ್ತು ಇಸ್ಲಾಂಧರ್ಮಗಳ ಸಾರತತ್ವಗಳನ್ನು ಗ್ರಹಿಸಲು ಪ್ರಯತ್ನಿಸಿದರು. ಟಾಲ್‌ಸ್ಟಾಯ್‌ರ "ದೈವ ಸಾಮ್ರಾಜ್ಯವು ನಿನ್ನಲ್ಲೇ ಇದೆ" ಎಂಬ ಗ್ರಂಥವು ಅವರನ್ನು ರೋಮಾಂಚನಗೊಳಿಸಿತು. ಅವರು ವಿವಿಧ ಧರ್ಮಗಳಿಗೆ ಸೇರಿದ ವಿವಿಧ ವ್ಯಕ್ತಿಗಳೊಡನೆ ಮತ್ತು ವಿವಿಧ ಸಿದ್ಧಾಂತಗಳ ಪ್ರತಿಪಾದಕರೊಡನೆ ನೇರ ಮತ್ತು ಅಂಚೆ ಸಂಪರ್ಕವನ್ನು ಪಡೆದರು. ವಿವಿಧ ಶ್ರದ್ಧೆಗಳ, ಭಾಷೆಗಳ, ಜನಾಂಗಗಳ ಮತ್ತು ದೇಶಗಳ ಜನರ ನಡುವಣ ಅವರ ಕ್ರಿಯಾಶೀಲ ಸಂಪರ್ಕವು "ನನ್ನ ಹೃದಯವು ಯಾವುದೇ ರೀತಿಯ ಭೇದವನ್ನು ಎಣಿಸಲು ಅಶಕ್ತವಾಗಿದೆ" ಎನ್ನುವ ಹಂತಕ್ಕೆ ಅವರನ್ನು ತಳ್ಳಿತು. ಅವರು ಅಸಂಖ್ಯಾತವಾದ ಗ್ರಂಥಗಳನ್ನು ಓದಿದರು. ತತ್‌ಪರಿಣಾಮವಾಗಿ ಅವರ ಹೃದಯದಲ್ಲಿ ಕೋಮು ಸೌಹಾರ್ದತಾ ಭಾವವು ದೃಢವಾಗಿ ನೆಲೆಸಿತು. ಅಹಿಂಸೆಯು ಸತ್ಯಾನ್ವೇಷಣೆಗೆ ಮೂಲಪ್ರೇರಕವಾಯಿತು. "ನಾವೆಲ್ಲರೂ ಒಬ್ಬನೇ ಸೃಷ್ಟಿಕರ್ತನ ಮಕ್ಕಳು" ಎಂಬ ಸಾಕ್ಷಾತ್ಕಾರವು ಅವರಿಗುಂಟಾಯಿತು. ಅನಂತವಾದ ದೈವಿಕ ಶಕ್ತಿಯು ನಮ್ಮೊಳಗೆ ನೆಲೆಸಿದೆ ಎಂಬ ಭಾವವು ಅವರಿಗಾಯಿತು.

ಒಬ್ಬ ಥಿಯೋಸೊಫಿಸ್ಟ್ ಸ್ನೇಹಿತನ ಸಹಾಯದಿಂದ ಅವರು ಪತಂಜಲಿಗಳ ಯೋಗಸೂತ್ರವನ್ನು ಓದಿದರು. ಇಲ್ಲಿ ಪ್ರತಿಪಾದಿಸಲಾಗಿದ್ದ ಅಪರಿಗ್ರಹ ಮತ್ತು ಸಮಭಾವಗಳೆಂಬ ಮೌಲ್ಯಗಳು ಅವರ ಇಡೀ ವ್ಯಕ್ತಿತ್ವವನ್ನು ಆವರಿಸಿದವು. ವಿಲಿಯಂ ಮಾರ್ಕ್ ಇಂಟೈರ್ ಸಾಲ್ಟರ್ ಮಾರ್ಚ್ 1898ರಲ್ಲಿ "Ethical Religion" ಎಂಬ ಗ್ರಂಥವನ್ನು ಪ್ರಕಟಿಸಿದ್ದರು. ಇದು ಇಂಗ್ಲೆಂಡಿನಲ್ಲಿ 1905ರಲ್ಲಿ ಪ್ರಕಟವಾಯಿತು. 15 ಅಧ್ಯಾಯಗಳನ್ನು ಒಳಗೊಂಡ ಈ ಗ್ರಂಥದ 8 ಅಧ್ಯಾಯಗಳ ಸಾರವನ್ನು ಗಾಂಧೀಜಿ ಗುಜರಾತಿ ಭಾಷೆಯಲ್ಲಿ ಹೊರತಂದರು. "Indian Opinion" ಎಂಬ ಪತ್ರಿಕೆಯಲ್ಲಿ ಇದು ಧಾರಾವಾಹಿಯಾಗಿ ಹೊರಬಂತು. Ethical Religion ಎಂದರೆ "ಎಲ್ಲಾ ಧರ್ಮಗಳ ಮೂಲಭೂತ ನೈತಿಕ ಅಂಶಗಳನ್ನು ಕಂಡುಕೊಂಡು ಅವುಗಳನ್ನು ಆಚರಣೆಗೆ ತರುವುದು" ಎಂದರ್ಥ. ಗಾಂಧೀಜಿಯವರ ಇಡೀ ಜೀವನ ಧ್ಯೇಯವೇ ಈ ಸಾರ್ವತ್ರಿಕ ಮೌಲ್ಯವಾಯಿತು.

ಇದರ ಪರಿಣಾಮವಾಗಿ ಕೋಮುಸೌಹಾರ್ದತೆಯು ಗಾಂಧೀಜಿಯವರ ಒಂದು ಮುಖ್ಯವೂ ಮತ್ತು ರಚನಾತ್ಮಕವೂ ಆದ ಧ್ಯೇಯವಾಯಿತು. ಅವರ ಆಶ್ರಮಗಳಲ್ಲಿ ಕೋಮು ಸೌಹಾರ್ದತೆಯು ಅಲ್ಲಿ ವಿಧಿಸಲಾಗಿದ್ದ ವ್ರತಾಚರಣೆಗಳ ಅಂಗವಾಗಿತ್ತು. ಇದರ ಪರಿಣಾಮವಾಗಿ ಧರ್ಮ, ಮತ, ಜಾತಿ ಭೇದವಿಲ್ಲದೇ ಎಲ್ಲರೂ ಗಾಂಧೀಜಿಯವರ ಆಶ್ರಮದ ಸದಸ್ಯರಾದರು. ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಸಾಧಿಸಿದ ಈ ಕೋಮು ಸೌಹಾರ್ದತೆಯು ಸಣ್ಣ ಪ್ರಮಾಣದ್ದಾಗಿತ್ತು. ಇದು ಮುಂದೆ ಭಾರತ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯುವುದಕ್ಕೆ ನಾಂದಿಯಾಯಿತು.

ಭಾರತೀಯ ಸ್ಫೂರ್ತಿ: ಈ ಹಿಂದೆಯೇ ಹೇಳಿದಂತೆ ಗಾಂಧೀಜಿಯವರು ತಮ್ಮ ಕುಟುಂಬ ಸಂಸ್ಕಾರದಿಂದ ಧಾರ್ಮಿಕ ಸಮನ್ವಯಕ್ಕೆ ಹೆಸರಾದ ಭಾರತೀಯ ಸ್ಫೂರ್ತಿಯನ್ನು ಮೈಗೂಡಿಸಿಕೊಂಡಿದ್ದರು. ಬಾಲ್ಯದಿಂದಲೇ ಅವರಲ್ಲಿ ಧಾರ್ಮಿಕ ವಿಶಾಲತೆ ಮೈಗೂಡಿತ್ತು. ಈ ಸ್ಫೂರ್ತಿಯು ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾದಲ್ಲಿನ ಅವರ ವಾಸದಲ್ಲಿ ಇನ್ನೂ ವಿಸ್ತಾರವಾಯಿತು. ಅವರು ವಿವಿಧ ಧರ್ಮಗ್ರಂಥಗಳ ಅಧ್ಯಯನದಲ್ಲಿ ತೊಡಗಿದರಲ್ಲದೆ ವಿವಿಧ ಧಾರ್ಮಿಕ ಸಂಸ್ಕೃತಿಗಳ ನೇರ ಅನುಭವವನ್ನು ಪಡೆದುಕೊಂಡರು. ಈ ಅನುಭವದಿಂದಾಗಿ ಅವರಿಗೆ ಹಿಂದೂಧರ್ಮದ ಗುಣದೋಷ ಗಳ ಅರಿವು ಉಂಟಾಯಿತು. ಅವರು ಮತಾಂತರ ವನ್ನು ಆಕ್ಷೇಪಿಸಿದರಾದರೂ ಒಂದು ಆರೋಗ್ಯಕರ ಸಂವಾದ ಹಾಗೂ ಧರ್ಮಗಳ ನಡುವಣ ಸಹಕಾರವನ್ನು ಬಯಸಿದರು.

ಧರ್ಮವನ್ನು ಕುರಿತ ಅವರ ನಿಲುವು ಕೆಳಕಂಡ ವಿಶಿಷ್ಟ ಲಕ್ಷಣಗಳಿಂದ ಕೂಡಿದೆ.

1. ಎಲ್ಲ ಧರ್ಮಗಳೂ ಮೂಲತಃ ಒಂದೇ ಆಗಿವೆ.
2. ಬಹುತೇಕ ಎಲ್ಲ ಧರ್ಮಗಳು ನಿಜವೇ ಆದರೂ ಅವು ಅಪೂರ್ಣವಾಗಿವೆ.
3. "ದೇವರು ಸತ್ಯ ಎನ್ನುವುದಕ್ಕಿಂತಲು ಸತ್ಯವೇ ದೇವರು" ಎಂಬ ಹೇಳಿಕೆಯು ಅರ್ಥಪೂರ್ಣ.
4. ಧರ್ಮ ಮತ್ತು ರಾಜಕೀಯಗಳು ಪರಸ್ಪರ ಪರಿವರ್ತಿಸಲಾಗದ ಪದಗಳು. ಧರ್ಮವು ಬಹಳ ವಿಸ್ತಾರವಾದ ಕಲ್ಪನೆ. ಅದು ನಮ್ಮ ಜೀವನದ ಎಲ್ಲಾ ಅಂಶಗಳನ್ನು ವ್ಯಾಪಿಸಿದೆ. ಅದು ಒಂದು ನೈತಿಕ ನಿಲುವನ್ನು ಮತ್ತು ಬದುಕಿನ ವಿಧಾನವನ್ನು ಪ್ರತಿನಿಧಿಸುತ್ತದೆ. ಧರ್ಮ ಮತ್ತು ದೇವರುಗಳನ್ನು ದೈನಂದಿನ ಬದುಕಿನಿಂದ ಪ್ರತ್ಯೇಕಿಸುವುದು ಕಷ್ಟ.
5. ಕಾರ್ಯಶೀಲತೆಯು ಬದುಕಿನ ಅವಿಭಾಜ್ಯ ಅಂಗವಾಗಿದೆ.

ವಿವಿಧ ಧರ್ಮಗಳ ಜಾಗರೂಕ ಅಧ್ಯಯನದಿಂದ ಗಾಂಧೀಜಿಯವರು ಎಲ್ಲ ಧರ್ಮಗಳು ಏಕವೆಂದು ಮನಗಂಡರು. ಅವರ ಪ್ರಕಾರ ಧಾರ್ಮಿಕ ವ್ಯಕ್ತಿಗಳ ಅತ್ಯಂತ ದೊಡ್ಡ ದೋಷವೆಂದರೆ ಈ ಧಾರ್ಮಿಕ ಏಕತೆಯನ್ನು ಸಾಕ್ಷಾತ್ಕರಿಸಿಕೊಳ್ಳದಿರುವುದು. ಗಾಂಧಿ ಧರ್ಮಗಳ ಮೂಲಭೂತ ಏಕತೆಯನ್ನು ಕುರಿತು ಹೀಗೆ ಸಾರುತ್ತಾರೆ, "ನನಗೆ ವಿವಿಧ ಧರ್ಮಗಳು ಒಂದೇ ತೋಟದ ವಿವಿಧ ಸುಂದರ ಪುಷ್ಪಗಳಂತೆ ಅಥವಾ ಒಂದು ಭವ್ಯವಾದ ವೃಕ್ಷದಿಂದ ಹೊರಹೊಮ್ಮುವ ವಿವಿಧ ಶಾಖೆಗಳಂತೆ. ವಿವಿಧ ವ್ಯಕ್ತಿಗಳು ಅವುಗಳನ್ನು ವಿವಿಧ ರೀತಿ ಸ್ವೀಕರಿಸಿ ಮತ್ತು ಅವುಗಳನ್ನು ವಿವಿಧ ರೀತಿ ವ್ಯಾಖ್ಯಾನಿಸುತ್ತಾರೆ. ಆದರೆ ಇವೆಲ್ಲವೂ ನನ್ನ ದೃಷ್ಟಿಯಲ್ಲಿ ಸತ್ಯವೇ

ಆಗಿವೆ". ಅವರು ಮತ್ತೂ ಹೀಗೆ ಹೇಳುತ್ತಾರೆ, "ಮನುಷ್ಯನ ಇಡೀ ಕಾರ್ಯವ್ಯಾಪ್ತಿಯು ಇಂದು ಒಂದು ಅವಿಭಾಜ್ಯ ಪೂರ್ಣವಾಗಿದೆ. ನೀವು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಎಂದು ಕೆಲಸಗಳನ್ನು ಕಟ್ಟುನಿಟ್ಟಾಗಿ ವಿಭಜಿಸಲು ಸಾಧ್ಯವಿಲ್ಲ. ಮಾನವನ ಕ್ರಿಯಾಶೀಲತೆಯನ್ನು ಹೊರತುಪಡಿಸಿ ಯಾವ ಧರ್ಮವೂ ನನಗೆ ತಿಳಿದಿಲ್ಲ".

ಗಾಂಧೀಜಿ ವಿಗ್ರಹಾರಾಧನೆಯನ್ನು, ಧಾರ್ಮಿಕ ಸಂಸ್ಥೆಗಳನ್ನು ಮತ್ತು ಅರ್ಥಹೀನ ಆಚಾರಗಳನ್ನು ನಂಬುತ್ತಿರಲಿಲ್ಲ. ಆದರೆ ಅವರ ದೃಷ್ಟಿಯಲ್ಲಿ ವಿಗ್ರಹಾರಾಧನೆ ಪ್ರಾರಂಭದಲ್ಲಿ ಮನುಷ್ಯನಿಗೆ ಅವಶ್ಯಕ. ಅವರ ಪ್ರಾರ್ಥನೆಗಳು ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಪ್ರಭಾವವನ್ನು ಹೊರಸೂಸುತ್ತವೆ. ಸಾರ್ವತ್ರಿಕ ಸಭೆಗಳಲ್ಲಿ ಅವರು ಅಂತರ್ ಧಾರ್ಮಿಕ ಪ್ರಾರ್ಥನೆಯನ್ನು ಪ್ರೋತ್ಸಾಹಿಸುವಲ್ಲಿ ಯಶಸ್ವಿಯಾದರು. ಇಲ್ಲಿ ಅವರ ಪಾರ್ಥನೆಯು ವಿವಿಧ ಧರ್ಮಗಳ ಭಕ್ತಿಗೀತೆಗಳನ್ನು, ಮೌನವ್ರತವನ್ನು ಮತ್ತು ಧ್ಯಾನವನ್ನು ಒಳಗೊಂಡಿತ್ತು.

ಗಾಂಧಿ ತಮ್ಮ ಧರ್ಮದಲ್ಲಿದ್ದ ದೋಷವನ್ನು ಎತ್ತಿ ತೋರಿಸಲು ಹಿಂಜರಿಯುತ್ತಿರಲಿಲ್ಲ. ಅವರು ಹೀಗೆ ಹೇಳಿದರು. "ಅಸ್ಪೃಶ್ಯತೆಯು ಧರ್ಮದ ಸತ್ವವಲ್ಲ. ಅದು ಸೈತಾನನ ಉಪಕರಣ. ಸೈತಾನನೇ ಯಾವಾಗಲೂ ಧರ್ಮಗ್ರಂಥಗಳನ್ನು ಉಲ್ಲೇಖಿಸುವುದು. ಆದರೆ ಧರ್ಮಗ್ರಂಥಗಳು ಸತ್ಯ ಮತ್ತು ವಿಚಾರಗಳಿಗೆ ಅತೀತವಾಗಲು ಸಾಧ್ಯವಿಲ್ಲ. ಅವು ಇರುವುದು ನಮ್ಮ ವಿಚಾರವನ್ನು ಶುದ್ಧೀಕರಿಸಲೆಂದು ಮತ್ತು ನಮಗೆ ಸತ್ಯವನ್ನು ಪ್ರಕಾಶಿಸಲೆಂದು. ಅಸ್ಪೃಶ್ಯತೆಯು ಹಿಂದೂಧರ್ಮದ ಅಂಗವಾಗಿದ್ದಲ್ಲಿ ನಾನು ನನ್ನನ್ನು ಹಿಂದೂ ಎಂದು ಕರೆದುಕೊಳ್ಳಲು ನಿರಾಕರಿಸುತ್ತೇನೆ". ಧರ್ಮವನ್ನು ಕುರಿತ ಗಾಂಧೀಜಿಯವರ ಪರಿಕಲ್ಪನೆಯನ್ನು "ನೈತಿಕ ಧರ್ಮ" ಎಂದು ಕರೆಯಬಹುದು. ಇದಕ್ಕೆ 4 ಆಯಾಮಗಳುಂಟು.

1. ಸತ್ಯವೇ ಮನುಷ್ಯನ ಅಂತಿಮ ಗುರಿ.
2. ನೈತಿಕ ಬದುಕು ಅವನ ಪ್ರಾಣ.
3. ಜಗತ್ತಿನಲ್ಲಿ ಎಲ್ಲ ಧರ್ಮಗಳಿಗೂ ಸಮವಾದ ಸ್ಥಾನವಿದೆ.
4. ಇದರ ಸಾಕ್ಷಾತ್ಕಾರವು ಮನುಷ್ಯನಿಗೆ ಅದ್ಭುತವಾದ ಶಕ್ತಿಯನ್ನು ನೀಡುತ್ತದೆ.

ಗಾಂಧೀಜಿ ಯಾವ ಹೊಸಧರ್ಮವನ್ನೂ ಸ್ಥಾಪಿಸಲು ಯತ್ನಿಸಲಿಲ್ಲ. ಧರ್ಮವನ್ನು ಕುರಿತ ಅವರ ಪರಿಕಲ್ಪನೆಯನ್ನು ನಾವು Ethical Religion ಎಂದು ಕರೆಯಬಹುದಾದರೂ ಅವರು ಮಾತ್ರ ತಮ್ಮ ಧಾರ್ಮಿಕ ನಿಲುವಿಗೆ ಯಾವ ನಿರ್ದಿಷ್ಟ ಹೆಸರನ್ನೂ ನೀಡಲಿಲ್ಲ. ಅವರು ತಮ್ಮದು ಹಿಂದೂಧರ್ಮವೆಂದು ಕರೆಯಲು ಮಾತ್ರ ಇಚ್ಛಿಸಿದರು. ವಿವಿಧ ಧರ್ಮಗಳ ಸತ್ವವನ್ನು ಸಮನ್ವಯಗೊಳಿಸಿ ಅದನ್ನು ಆಚರಣೆಗೆ ತಂದು ರಾಮರಾಜ್ಯವನ್ನು ಸ್ಥಾಪಿಸಲು ಯತ್ನಿಸಿದರು. ಈ ಸಾರ್ವತ್ರಿಕ ಧರ್ಮದ ಮೂಲಕ ಇಡೀ ವಿಶ್ವವನ್ನು ಒಂದಾಗಿಸುವ ಮಹಾಪ್ರಯತ್ನವನ್ನು ಮಾಡಿದರು. ರಾಜಕೀಯವನ್ನೂ ಒಳಗೊಂಡಂತೆ ಧರ್ಮವು ಅವರ ಇಡೀ ಬದುಕಿನ ವಿಧಾನವಾಗಿತ್ತು. ಹಿಂದೂವಾಗಿದ್ದರೂ ಯಾವುದೇ ಧಾರ್ಮಿಕ ಚೌಕಟ್ಟಿಗೆ ಸಿಲುಕದೆ ಜಾಗತಿಕ ನೆಲೆಗಟ್ಟಿನಲ್ಲಿ ಅವರು ಜನರನ್ನು ಸ್ಪಂದಿಸಿದರು. ಧರ್ಮಗಳಲ್ಲಿ ಕಂಡು ಬಂದ ಸಂಕುಚಿತ ಕಂದಾಚಾರಗಳನ್ನು ತುಚ್ಛೀಕರಿಸಿ ಆಧ್ಯಾತ್ಮಿಕತೆ ಮತ್ತು ನೈತಿಕತೆಗೆ ಒತ್ತನ್ನು ನೀಡಿದರು.

ಸಮೃದ್ಧ ಧಾರ್ಮಿಕ ನೆಲೆಯನ್ನು ಹೊಂದಿರುವುದರ ಜೊತೆಗೆ ವಿವಿಧ ಧರ್ಮಗಳನ್ನು ಅರಿಯುವ ಅವರ ಅವಿರತ ಪ್ರಯತ್ನ ಮತ್ತು ಅವರ ವೈಯಕ್ತಿಕ ಅನುಭವ, ಕೋಮು ಸೌಹಾರ್ದವನ್ನು ಸ್ಥಾಪಿಸಲು ನೆರವಾಯಿತು. ಅಂತರ್ ಧಾರ್ಮಿಕ ಸಂವಾದ ಮತ್ತು ಧರ್ಮಗಳ ಸಹಕಾರವು ಅವರಿಗೆ ಜೀವನದ ತತ್ವವಾಗಿತ್ತು. ಕೋಮು ದಳ್ಳುರಿಯು ಪ್ರಾರಂಭವಾದಾಗ ಬಂಗಾಳದಲ್ಲಿ ಅವರು ಈ ದಳ್ಳುರಿಯನ್ನು ಏಕಾಂಗಿಯಾಗಿ ಆರಿಸಿದರು. ಈ ಸಂದರ್ಭದಲ್ಲಿ ಮಿಲಿಟರಿ ಕಾರ್ಯಾಚರಣೆಯು ವಿಫಲವಾಗಿತ್ತೆಂಬುದು ಗಮನಾರ್ಹ ಸಂಗತಿ. ಭಾರತದ ಆಗಿನ ಗವರ್ನರ್ ಜನರಲ್ ಆದ ಮೌಂಟ್ ಬ್ಯಾಟನ್ ಗಾಂಧೀಜಿಯವರನ್ನು "The One Man Boundary Force" ಎಂದು ಕರೆದರು. ಆದ್ದರಿಂದಲೇ Louis Fischer ಎಂಬಾತನು ಗಾಂಧೀಜಿಯವರನ್ನು ಕುರಿತ ಜೀವನ ಚಿತ್ರದಲ್ಲಿ ಹೀಗೆ ಉದ್ಗರಿಸಿದ, "just an old man with a loin cloth and a stick in his hand, yet when he died the whole humanity wept".

ಸಮಕಾಲೀನ ಧಾರ್ಮಿಕ ವೈಪರೀತ್ಯಗಳಿಗೆ ಭಕ್ತಿಯೋಗದ ಪ್ರಸ್ತುತತೆ

ಡಾ.ಸಿ.ಗಂಗರಾಜು
ಪಿ.ಡಿ.ಎಫ್ ಸಂಶೋಧಕರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-06

ಮಾನವ ಜೀವನದಲ್ಲಿ ಧರ್ಮವು ಅತ್ಯಂತ ಪ್ರಭಾವವನ್ನು ಬೀರುವ ಪರಿಣಾಮಕಾರಿಯಾದ ಅಂಶವಾಗಿದೆ. ಭಕ್ತಿಯೇ ಧರ್ಮದ ಜೀವಾಳ. ವ್ಯಕ್ತಿಯ ಧಾರ್ಮಿಕ ಶ್ರದ್ಧೆಯಲ್ಲಿ ಭಕ್ತಿ ಇರಬೇಕಾದುದು ಅತ್ಯವಶ್ಯಕವಾದುದು. ಧಾರ್ಮಿಕ ಆಚರಣೆಗಳಲ್ಲಿ ಭಕ್ತನು ಅನೇಕ ರೀತಿಯಲ್ಲಿ ತನ್ನ ಭಕ್ತಿಯನ್ನು ವ್ಯಕ್ತಪಡಿಸುತ್ತಾನೆ. ತನ್ನ ಭಕ್ತಿಯನ್ನು ನಿವೇದಿಸಿಕೊಳ್ಳಲು ಅನೇಕ ಆಚರಣೆಗಳನ್ನು ಅನುಸರಿಸುತ್ತಾನೆ. ಆಚಾರ, ರೀತಿ, ನೀತಿ, ಸಂಪ್ರದಾಯಗಳು ಭಕ್ತಿಯ ಬಾಹ್ಯ ಆಚರಣೆಗಳಾಗಿವೆಯೇ ಹೊರತು ನಿಜವಾದ ಭಕ್ತಿಯಾಗಿರುವುದಿಲ್ಲ. ಭಕ್ತಿಯ ಹೆಸರಲ್ಲಿ ಮೌಢ್ಯ, ಅಂಧಾನುಕರಣೆಯೇ ಹೆಚ್ಚಾಗಿದೆ. ಪ್ರಸ್ತುತದಲ್ಲಿ ಧರ್ಮವನ್ನು ಮೌಲ್ಯಯುತ ಜೀವನವನ್ನು ನಡೆಸುವುದಕ್ಕೆ ಉಪಯೋಗಿಸುವ ಬದಲು ಮಾನವನ ಅಸ್ತಿತ್ವಕ್ಕೆ ಧಕ್ಕೆ ತರುವಂತಹ ಕಾರ್ಯಗಳಿಗೆ ಉಪಯೋಗಿಸಲ್ಪಡುತ್ತಿರುವುದು ವಿಪರ್ಯಾಸವೇ ಸರಿ. ಜಗತ್ತಿನೆಲ್ಲೆಡೆ ಭಕ್ತಿಯ ಸೋಗಿನಲ್ಲಿ ಅನೇಕ ಅತ್ಯಾಚಾರ, ಅನಾಚಾರಗಳು ನಡೆಯುತ್ತಿವೆ. ಭಗವದ್ಗೀತೆಯು ಭಕ್ತಿ ಎಂದರೆ ಪರಿಶುದ್ಧವಾದ ಪ್ರೇಮ ಎಂದು ಅರ್ಥೈಸುತ್ತದೆ. ದೇವರು ಭಕ್ತನಿಂದ ಪರಿಶುದ್ಧವಾದ ಪ್ರೇಮವನ್ನು ಬಯಸುತ್ತಾನೆಯೇ ಹೊರತು ತೋರಿಕೆಯ ಆಚರಣೆಗಳನ್ನಲ್ಲ. ನಿಜವಾದ ಭಕ್ತಿಯು ಮನಸ್ಸಿಗೆ ಶಾಂತಿ, ಸುಖ, ನೆಮ್ಮದಿಯನ್ನು ನೀಡುತ್ತದೆ. "ಭಕ್ತನು ಎಷ್ಟು ಶ್ರದ್ಧೆಯಿಂದ ಯಾವ ರೂಪವನ್ನು ನನಗೆ ಕೊಟ್ಟು ಪೂಜಿಸುತ್ತಾನೋ ಅವನಿಗೆ ಅದೇ ರೂಪದಲ್ಲಿ ಇನ್ನೂ ಹೆಚ್ಚು ಶ್ರದ್ಧೆ ಬರುವಂತೆ ಮಾಡುತ್ತಾನೆ" ಎಂದು ಶ್ರೀ ಕೃಷ್ಣನು ಹೇಳಿದ್ದಾನೆ.

ಭಕ್ತಿಯಲ್ಲಿ ಶ್ರದ್ಧೆ ಮತ್ತು ಪ್ರೇಮವೇ ಅತ್ಯಂತ ಅಗತ್ಯವಾದುದು ಎನ್ನುವುದನ್ನು ತಿಳಿಯಬೇಕಾಗಿದೆ. ಪ್ರಸ್ತುತ ಧಾರ್ಮಿಕ ವಿದ್ಯಮಾನಗಳನ್ನು ಗಮನಿಸಿದಾಗ ಭಕ್ತಿಯೋಗವನ್ನು ಜೀವನದಲ್ಲಿ ಅನುಷ್ಠಾನ ಮಾಡಿಕೊಳ್ಳಬೇಕಾದ ಅಗತ್ಯವಿದೆ.

ಮತಧರ್ಮಗಳು ಮಾನವರ ಒಳಿತಿಗಾಗಿಯೇ ಸೃಷ್ಟಿಯಾದವು. ಇವುಗಳನ್ನು ರೂಪಿಸಿದ ಮಹಾತ್ಮರಿಗೆ ವ್ಯಕ್ತಿಯ ಉನ್ನತಿ, ಸಮಷ್ಟಿಯ ಹಿತ ಮುಖ್ಯವಾಗಿತ್ತು. ಸನ್ಮಾರ್ಗದಲ್ಲಿ ಸಾಗಲು ಸಹಕಾರಿಯಾಗ ಬೇಕಿದ್ದ ಮತಧರ್ಮಗಳು ಬರುಬರುತ್ತಾ ಬೇಲಿಗಳಾಗಿ, ವ್ಯಕ್ತಿಯ ಅವನತಿಗೆ ಕಾರಣವಾಗತೊಡಗಿದವು. ಇಂತಹ ಅನಾಹುತಗಳಿಗೆ ಮತಧರ್ಮಗಳೇ ಕಾರಣವೆಂದಲ್ಲ. ಅವುಗಳನ್ನು ವಿರೂಪಗೊಳಿಸಿ ತಮಗನುಕೂಲವಾಗುವಂತೆ ತಿರುಚಿಕೊಳ್ಳುವ ಪಟ್ಟಭದ್ರ ಹಿತಾಶಕ್ತರ ಕುತಂತ್ರಗಳು ಕಾರಣವಾಗಿದೆ. ಧರ್ಮ, ದೇವರುಗಳ ಹೆಸರಿನಲ್ಲಿ ನಡೆದಿರುವಷ್ಟು ಕೊಲೆ ಸುಲಿಗೆಗಳು, ಅತ್ಯಾಚಾರ, ಅನಾಚರಗಳು ಮತ್ತಾವುದರಿಂದಲೂ ನಡೆದಿಲ್ಲ. ಧರ್ಮದ ದುರ್ಬಳಕೆಯಿಂದಾಗಿ ಅರಾಜಕತೆ ಹೆಚ್ಚಿ ಸಾಮಾಜಿಕ ಸುವ್ಯವಸ್ಥೆ ಹದಗೆಡುತ್ತಿದೆ. ಮಾನವೀಯ ಮೌಲ್ಯಗಳು ಮೂಲೆ ಗುಂಪಾಗುತ್ತಿವೆ. ಭಾವೈಕ್ಯದ ಬೇರುಗಳು ಸಡಿಲಗೊಳ್ಳುತ್ತಿವೆ

ದೇವರ ಆರಾಧನೆಗೆ ಸಾಧನ ಪೂಜೆ ಮತ್ತು ಭಕ್ತಿ, ಪೂಜೆಯು ಸಾಂಪ್ರದಾಯಿಕ ವಿಧಿ ವಿಧಾನಗಳಿಂದ ಕೂಡಿರುತ್ತದೆ. ಕೆಲವರು ದೇವರ ಆರಾಧನೆಗೆ ವೈಭೋಗದ ಪೂಜಾ ಪರಿಕರಗಳನ್ನು ಉಪ ಯೋಗಿಸುತ್ತಾರೆ. ಪ್ರತಿಯೊಬ್ಬರು ಅವರವರ ಶಕ್ತಿಗನುಗುಣವಾಗಿ ದೇವರಿಗೆ ಅಭಿಷೇಕ ನೈವೇದ್ಯಗಳನ್ನು ಮಾಡುತ್ತಾರೆ. ಇನ್ನು ಮುಂದೆ ಹೋಗಿ ದೇವರಿಗೆ ಪ್ರಾಣಿ ಬಲಿಯನ್ನು ಸಹ ಕೊಡುತ್ತಾರೆ. ಇವೆಲ್ಲವು ಗಳಿಂದ ದೇವರು ಒಲಿಯುವನೆಂಬುದು ಅವಿವೇಕದ ಪರಮಾವಧಿ. ಪೂಜೆಯಲ್ಲಿ ಮುಖ್ಯವಾಗಿ ಇರಬೇಕಾದುದು ಒಲುಮೆ, ತನ್ಮಯತೆ, ಉತ್ಸಾಹ, ಶ್ರದ್ಧೆ ಮತ್ತು ಏಕಾಗ್ರತೆ.

ಪೂಜೆಯಿಂದ ಮನಸ್ಸು ಪ್ರಸನ್ನವಾಗಬೇಕು. ಪೂಜೆಯಲ್ಲಿ ಸ್ವಾರ್ಥ ಅಹಂಕಾರ ಲವಶೇಷವೂ ಇರಕೂಡದು. ಒಲುಮೆ ಇಲ್ಲದ ಪೂಜೆ, ಸ್ನೇಹವಿಲ್ಲದ ಆಚರಣೆ ತೋರಿಕೆಗೆ ಮಾತ್ರ ಅದ್ಭುತವೆನಿಸಿದರೂ ಅದರಿಂದ ಯಾವ ಪ್ರಯೋಜನವೂ ಆಗದು. ಪೂಜೆಯಲ್ಲಿ ಬುದ್ಧಿ ಭಾವಗಳ ಬೆಸುಗೆಯಾಗಬೇಕು. ದೇವರು ವೇದಪ್ರಿಯನಾಗಲೀ, ನಾದಪ್ರಿಯನಾಗಲೀ ಅಲ್ಲ. ಆತನು ಭಕ್ತಿಪ್ರಿಯ. ಭಕ್ತಿಯು ಭಕ್ತನ ಬಾಹ್ಯ ಆಚರಣೆಗಳಿಗಿಂತಲೂ ಆತನ ಅಂತರಂಗಕ್ಕೆ ಸಂಬಂಧಿಸಿದ್ದು. ಭಕ್ತನ ಮನಸ್ಸು ನಿರ್ಮಲವಾಗಿರಬೇಕು. ಅಂತಃಕರಣ ಶುದ್ಧಿಯಾಗಿರಬೇಕು. ನಡೆನುಡಿಗಳು ಒಂದಾಗಿರಬೇಕು. ಭಕ್ತನಲ್ಲಿ ಅರ್ಪಣಾ ಮನೋಭಾವವಿರಬೇಕು.

ಈಗಿನ ಸಮಾಜದಲ್ಲಿ ಭಕ್ತಿಯನ್ನು ವ್ಯವಹಾರವನ್ನಾಗಿಸಿ ಕೊಂಡಿರು ವುದನ್ನು ಕಾಣಬಹುದು. ದೇವರ ಹೆಸರಿನಲ್ಲಿ, ಭಕ್ತಿಯ ಸೋಗಿನಲ್ಲಿ, ಧರ್ಮದ ಆಶ್ರಯದಲ್ಲಿ ನಡೆಯುತ್ತಿರುವ ರಕ್ತಪಾತಗಳು, ಹಿಂಸೆಗಳು, ಅಮಾನವೀಯ ಕೃತ್ಯಗಳಿಗೆ ಭಗವದ್ಗೀತೆಯಲ್ಲಿ ಹೇಳಿರುವ ಭಕ್ತಿಯೋಗವು ಸರ್ವಮಾನ್ಯವೂ, ಸರ್ವವ್ಯಾಪಕವೂ ಆಗಿದೆ. ದೇವರು ಭಕ್ತನಿಂದ ಬಯಸುವುದು ಕೇವಲ ಪರಿಶುದ್ಧ ಭಕ್ತಿಯನ್ನು ಮಾತ್ರ. ಅವನಿಗೆ ಇನ್ನಾವುದೇ ವಸ್ತುಗಳ, ಐಶ್ವರ್ಯದ ಅವಶ್ಯಕತೆ ಇಲ್ಲ. ಅಲ್ಪ ಬುದ್ಧಿಯಿಂದ ಕೂಡಿರುವ ಮಾನವರು ಅವನಿಗೆ ಭಕ್ತಿಯನ್ನು ಹೊರತುಪಡಿಸಿ ಉಳಿದೆಲ್ಲಾ ವಿಚಾರಗಳನ್ನು ಆಚರಣೆಗೆ ತಂದಿರುವರು. ದೇವರ ಹೆಸರಿನಲ್ಲಿ ಸುಲಿಗೆ ಮಾಡುವರು. ಅನಾವ ಶ್ಯಕ ದುಂದುವೆಚ್ಚ ಮಾಡುವರು. ಒಟ್ಟಾರೆಯಾಗಿ ಭಕ್ತಿಯ ನೈಜ ಅರ್ಥವನ್ನೇ ಮರೆಮಾಚಿರುವರು.

ಭಗವದ್ಗೀತೆಯು ಭಕ್ತಿಗೆ ನೀಡಿರುವ ವ್ಯಾಖ್ಯಾನವು ಅತ್ಯಂತ ಸರಳವೂ ಹಾಗೂ ಸರ್ವರೂ ಅನುಸರಿಸಬಹುದಾದುದಾಗಿದೆ. ಭಕ್ತನ ಬಳಿ ಏನೂ ಇಲ್ಲದಿದ್ದರೂ ಕೇವಲ ಒಂದು ಪುಷ್ಪ ಅಥವಾ ಹೂವಿನಿಂದ ದೇವರು ಸಂತುಷ್ಟನಾಗುತ್ತಾನೆ. ಆದರೆ ಅವುಗಳನ್ನು ಅರ್ಪಿಸುವ ಭಕ್ತನ ಮನಸ್ಸು ದೇವರಿಗಾಗಿ ಸದಾ ಮಿಡಿಯುತ್ತಿರಬೇಕು.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥26॥

"ಯಾವ ಭಕ್ತನೇ ಆಗಲಿ ನನಗೆ ಪ್ರೇಮದಿಂದ ಪತ್ರ, ಪುಷ್ಪ, ಫಲ, ಜಲ ಮೊದಲಾದವುಗಳನ್ನು ಅರ್ಪಿಸುತ್ತಾನೋ, ಆ ಶುದ್ಧಬುದ್ಧಿಯುಳ್ಳ ನಿಷ್ಕಾಮ ಪ್ರೇಮಿಯಾದ ಭಕ್ತನು, ಪ್ರೇಮಪೂರ್ವ ಕವಾಗಿ ಅರ್ಪಿಸಿದ ಆ ಪತ್ರ-ಪುಷ್ಪಾದಿಗಳನ್ನು ನಾನು ಸಗುಣರೂಪ ದಿಂದ ಪ್ರಕಟನಾಗಿ ಪ್ರೀತಿಸಹಿತ ಸ್ವೀಕರಿಸುತ್ತೇನೆ" ಎಂದು ಶ್ರೀಕೃಷ್ಣನು ಹೇಳುತ್ತಾನೆ.

ಯಾವುದೇ ವರ್ಣ, ಆಶ್ರಮ ಮತ್ತು ಜಾತಿಯ ಯಾವುದೇ ಮನುಷ್ಯನು ಪತ್ರ, ಪುಷ್ಪ, ಫಲ, ಜಲ ಮೊದಲಾದುವನ್ನು ದೇವರಿಗೆ ಅರ್ಪಿಸಬಹುದಾಗಿದೆ. ಬಲ, ರೂಪ, ಧನ, ಜಾತಿ, ಗುಣ ಮತ್ತು ವಿದ್ಯೆ ಮೊದಲಾದವುಗಳ ಕಾರಣದಿಂದ ದೇವರಿಗೆ ಯಾರಲ್ಲಿಯೂ ಭೇದಬುದ್ಧಿ ಇಲ್ಲ. ಅವಶ್ಯವಾಗಿ ಅರ್ಪಣೆ ಮಾಡುವವನ ಭಾವವು ಶುದ್ಧ ಮತ್ತು ಪ್ರೇಮಪೂರ್ಣವಾಗಿರಬೇಕು.

ಪತ್ರ, ಪುಷ್ಪ, ಫಲ, ಜಲಗಳನ್ನು ಯಾವ ಪರಿಶ್ರಮವಿಲ್ಲದೆ, ಹಿಂಸೆ ಮತ್ತು ಹಣ ವ್ಯಯಿಸದೇ ಅನಾಯಸವಾಗಿ ಸಿಗಬಹುದೋ ಅಂತಹ ವಸ್ತುವೂ ಕೂಡ ಭಗವಂತನಿಗೆ ಅರ್ಪಿಸಬಹುದು ಎಂದು ಶ್ರೀ ಕೃಷ್ಣನುಹೇಳಿದ್ದಾನೆ. ಭಗವಂತನು ಪೂರ್ಣಕಾಮನಾದ ಕಾರಣ ಅವನಿಗೆ ಯಾವ ವಸ್ತುಗಳ ಬಯಕೆಯೂ ಇಲ್ಲ. ಅವನಿಗಾದರೋ ಕೇವಲ ಪ್ರೇಮದ ಅವಶ್ಯಕತೆ ಇದೆ. ಅತ್ಯಂತ ಸಾಧಾರಣ ಮನುಷ್ಯ ನಿಂದ ಅರ್ಪಿಸಲ್ಪಟ್ಟ ಅತೀ ಚಿಕ್ಕ ವಸ್ತುವನ್ನು ಸಹ ಪ್ರೇಮಪೂರ್ಣ ಭಾವದಿಂದ ಅರ್ಪಿಸಿದಾಗ ಭಗವಂತನು ಆನಂದದಿಂದ ಸ್ವೀಕರಿಸುತ್ತಾನೆ. ಈ ಭಾವದಿಂದ ಭಾವಿತನಾಗಿ ಪ್ರೇಮವಿಹ್ವಲ ಚಿತ್ತದಿಂದ ಯಾವುದೇ ವಸ್ತುವನ್ನು ಭಗವಂತನಿಗೆ ಸಮರ್ಪಿಸುವುದೇ ಅದು ಭಕ್ತಿಪೂರ್ವಕವಾಗಿ ಭಗವಂತನಿಗೆ ಅರ್ಪಿಸುವುದಾಗಿದೆ. ಒಂದು ವೇಳೆ ಅರ್ಪಿಸುವವನ ಭಾವವು ಶುದ್ಧವಾಗಿಲ್ಲದಿದ್ದರೆ, ಪ್ರದರ್ಶನಕ್ಕಾಗಿ ಹೊರಗಿನಿಂದ ಎಷ್ಟೇ ಶಿಷ್ಟಾಚಾರದೊಂದಿಗೆ, ಎಷ್ಟೇ ಉತ್ತಮೋತ್ತಮ ಸಾಮಗ್ರಿಯನ್ನು ನನಗೆ ಅರ್ಪಿಸಿದರೂ ನಾನು ಅದನ್ನು ಎಂದೂ ಸ್ವೀಕರಿಸುವುದಿಲ್ಲ ಎಂದು ಶ್ರೀಕೃಷ್ಣನು ಹೇಳುತ್ತಾನೆ. ನಾನು ದುರ್ಯೋಧನನ ಆಮಂತ್ರಣವನ್ನು ಸ್ವೀಕರಿಸದೆ, ಭಾವ ಶುದ್ಧವಿರುವ ಕಾರಣ ವಿದುರನ ಮನೆಗೆ ಹೋಗಿ ಪ್ರೇಮಪೂರ್ವಕ ಭೋಜನ ಮಾಡಿದೆನು. ಸುಧಾಮನ ಅವಲಕ್ಕಿಯನ್ನು ಬಹು ಅಪೇಕ್ಷೆಯೊಂದಿಗೆ ತಿಂದೆನು. ಇದೇ ಪ್ರಕಾರದಿಂದ ಭಕ್ತರು ಪ್ರೇಮಪೂರ್ವಕವಾಗಿ ಅರ್ಪಿಸಿದ ವಸ್ತುಗಳನ್ನು ನಾನು ಹರ್ಷದಿಂದ

ಸ್ವೀಕರಿಸುತ್ತೇನೆ ಎಂದು ಶ್ರೀ ಕೃಷ್ಣನು ಹೇಳುತ್ತಾನೆ.

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್ ॥32॥

"ಹೇ ಅರ್ಜುನಾ! ಸ್ತ್ರೀಯರು, ವೈಶ್ಯರು, ಶೂದ್ರರು ಹಾಗೂ ಪಾಪಯೋನಿಗಳು ಮುಂತಾದ ಯಾರೇ ಆಗಿರಲಿ ಅವರೂ ಕೂಡ ನನ್ನಲ್ಲಿ ಶರಣಾಗಿ ಪರಮಗತಿಯನ್ನೇ ಪಡೆಯುತ್ತಾರೆ" ಎಂದು ಶ್ರೀಕೃಷ್ಣನು ಹೇಳುತ್ತಾನೆ.

ಭಗವಂತನ ಭಕ್ತಿಗಾಗಿ ಯಾವುದೇ ಜಾತಿಯವನಾಗಿರಲಿ ಅಥವಾ ವರ್ಣದವರಾಗಿರಲಿ ಅವರಿಗೆ ಯಾವ ತಡೆಯೂ ಇಲ್ಲ. ಶುದ್ಧ ಪ್ರೇಮದ ಅವಶ್ಯಕತೆ ಮಾತ್ರ ಇದೆ. ಇಂತಹ ಜಾತಿಗಳಲ್ಲಿ ಪ್ರಾಚೀನ ಮತ್ತು ಅರ್ವಾಚೀನ ಕಾಲದಲ್ಲಿ ಭಗವಂತನ ಅನೇಕ ಇಂತಹ ಮಹಾನ್ ಭಕ್ತರಿದ್ದರು. ಅವರುಗಳೆಲ್ಲರೂ ತಮ್ಮ ಭಕ್ತಿಯ ಪ್ರಭಾವದಿಂದ ಭಗವಂತನನ್ನು ಪಡೆದಿರುವ ಉದಾಹರಣೆಗಳಿವೆ. ಭಗವಂತನಲ್ಲಿಯೇ ಅನನ್ಯ ಪ್ರೇಮ ಉಂಟಾಗುವುದು ಹಾಗೂ ತನ್ನ ತನು ಮನ, ಇಂದ್ರಿಯ ಮತ್ತು ಶರೀರ ಹಾಗೂ ಧನ ಮೊದಲಾದ ಸರ್ವಸ್ವವೂ ಭಗವಂತನದ್ದೇ ಎಂದು ತಿಳಿದುಕೊಂಡು ಭಗವಂತನಿಗಾಗಿಯೇ ಭಗವಂತನ ಸೇವೆಯಲ್ಲಿ ಎಂದೆಂದಿಗೂ ತೊಡಗುವುದೇ ಅನನ್ಯ ಭಕ್ತಿಯಾಗಿದೆ.

ಅನನ್ಯ ಭಕ್ತಿಯ ಮೂಲಕ ಭಗವಂತನನ್ನು ನೋಡುವುದು, ತಿಳಿಯುವುದು ಮತ್ತು ಏಕೀಭಾವದಿಂದ ಪ್ರಾಪ್ತಿಮಾಡಿಕೊಳ್ಳವುದು ಸುಲಭವೆಂದು ಹೇಳುತ್ತಾನೆ.

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥2॥

"ನನ್ನಲ್ಲಿ ಮನಸ್ಸನ್ನು ಏಕಾಗ್ರಮಾಡಿ, ನಿರಂತರ ನನ್ನ ಭಜನೆ-ಧ್ಯಾನದಲ್ಲಿ ತೊಡಗಿದ್ದು ಯಾವ ಭಕ್ತರು ಅತಿಶಯ, ಶ್ರೇಷ್ಠವಾದ ಶ್ರದ್ಧೆಯಿಂದ ಕೂಡಿದವರಾಗಿ, ಸಗುಣರೂಪೀ ಪರಮೇಶ್ವರನಾದ ನನ್ನನ್ನು ಭಜಿಸುತ್ತಾರೋ ಅವರು ನನಗೆ ಯೋಗಿಗಳಲ್ಲಿ ಅತಿ ಉತ್ತಮಯೋಗಿಯೆಂದು ಮಾನ್ಯರಾಗಿದ್ದಾರೆ" ಎಂದು ಶ್ರೀ ಕೃಷ್ಣನು ಹೇಳುತ್ತಾನೆ.

ಎಲ್ಲಾ ಕರ್ಮಗಳನ್ನು ಮಾಡುವಾಗ ಪರಮ ಪ್ರೇಮಾಸ್ಪದ, ಸರ್ವಶಕ್ತಿವಂತ, ಸರ್ವಾಂತರ್ಯಾಮಿ, ಸಂಪೂರ್ಣ ಗುಣಗಳ ಸಮುದ್ರನಾದ ಭಗವಂತನಲ್ಲಿ ಮನವನ್ನು ತನ್ಮಯಗೊಳಿಸಿ, ಅವನ ಗುಣ, ಪ್ರಭಾವ ಮತ್ತು ಸ್ವರೂಪವನ್ನು ಪ್ರೇಮ ಪೂರ್ವಕವಾಗಿ ಚಿಂತನೆಮಾಡುತ್ತಿರುವುದೇ ಮನವನ್ನು ಏಕಾಗ್ರಗೊಳಿಸಿ ನಿರಂತರ ಭಗವಂತನ ಉಪಾಸನೆ ಮಾಡುವುದು ನಿಜವಾದ ಭಕ್ತನ ಲಕ್ಷಣವಾಗಿದೆ.

ಭಗವಂತನ ಮೇಲೆಯೇ ಸಂಪೂರ್ಣ ಅವಲಂಬಿತರಾಗಿ ಅನೇಕ ವಿಧವಾದ ದುಃಖಿಗಳು ಪ್ರಾಪ್ತಿಯಾದರೂ ಕೂಡ ಭಕ್ತ ಪ್ರಹ್ಲಾದನಂತೆ ನಿರ್ಭಯ ಮತ್ತು ನಿರ್ವಿಕಾರವಾಗಿ ಆ ದುಃಖಿಗಳನ್ನು ಭಗವಂತನು ಕಳಿಸಿರುವ ಉಡುಗೊರೆ ಎಂದು ತಿಳಿದುಕೊಂಡು ಸುಖರೂಪವೆಂದು ತಿಳಿದು ಭಗವಂತನನ್ನೇ ಪರಮಪ್ರೇಮೀ, ಪರಮಗತಿ, ಪರಮಸುಹೃದ್ ಮತ್ತು ಎಲ್ಲ ಪ್ರಕಾರದಿಂದಲೂ ಶರಣಾಗಲು ಯೋಗ್ಯನೆಂದು ತಿಳಿದುಕೊಂಡು ತಾನು-ತನ್ನನ್ನೇ ಭಗವಂತನಲ್ಲಿ ಅರ್ಪಿಸಿಕೊಳ್ಳುವವನೆ ನಿಜವಾದ ಭಕ್ತನಾಗಿದ್ದಾನೆ. ಭಗವಂತನಲ್ಲದೇ ನನ್ನದೇನೂ ಇಲ್ಲ, ಅವನೇ ನನ್ನ ಸರ್ವಸ್ವವಾಗಿದ್ದಾನೆ ಎಂದು ತಿಳಿದುಕೊಂಡು ಯಾರು ಭಗವಂತನಲ್ಲಿ ಸ್ವಾರ್ಥ ರಹಿತವಾಗಿ ಹಾಗೂ ಅತ್ಯಂತ ಶ್ರದ್ಧಾಯುಕ್ತನಾಗಿ ಅನನ್ಯವಾಗಿ ಪ್ರೇಮಿಸುತ್ತಾ, ಯಾವ ಪ್ರೇಮದಲ್ಲಿ ಸ್ವಾರ್ಥ, ಅಭಿಮಾನ ಮತ್ತು ವ್ಯಭಿಚಾರಾದಿ ದೋಷಗಳು ಸ್ವಲ್ಪವೂ ಇರುವುದಿಲ್ಲವೋ, ಯಾವುದು ಸರ್ವಥಾ ಪೂರ್ಣ ಮತ್ತು ಅಚಲವಾಗಿದೆಯೋ, ಯಾವುದರ ಕಿಂಚಿತ್ ಅಂಶವೂ ಕೂಡ ಭಗವಂತನಿಗಿಂತ ಬೇರೆಯಾದ ವಸ್ತುಗಳಲ್ಲಿ ಇಲ್ಲವೋ ಮತ್ತು ಯಾವುದರ ಕಾರಣದಿಂದ ಕ್ಷಣಮಾತ್ರವೂ ಕೂಡ ಭಗವಂತನ ವಿಸ್ಮೃತಿ ಅಸಹ್ಯವಾಗುತ್ತದೋ ಆ ಅನನ್ಯ ಪ್ರೇಮವನ್ನು 'ಅನನ್ಯ ಭಕ್ತಿಯೋಗ'ವೆಂದು ಹೇಳುತ್ತಾರೆ ಮತ್ತು ಇಂತಹ ಭಕ್ತಿಯೋಗದ ಮೂಲಕ ನಿರಂತರ ಭಗವಂತನ ಚಿಂತನೆ ಮಾಡುತ್ತ ಯಾರು ಅವನ ಗುಣ, ಪ್ರಭಾವ ಮತ್ತು ಲೀಲೆಗಳ ಶ್ರವಣ, ಕೀರ್ತನ, ಅವನ ನಾಮಗಳ ಉಚ್ಚಾರಣೆ ಮತ್ತು ಜಪಾದಿಗಳನ್ನು ಮಾಡುವುದಿದೆಯೋ ಇದೇ ಭಗವಂತನ ಉಪಾಸನೆ ಮಾಡುವುದಾಗಿದೆ ಎಂದು ಶ್ರೀ ಕೃಷ್ಣನು ಹೇಳುತ್ತಾನೆ.

ಉಪಸಂಹಾರ

ಆಧುನಿಕ ಕಾಲದ ನಾಗಾಲೋಟ ಬೆಳವಣಿಗೆಯಲ್ಲಿ ಮಾನವನು ಧಾರ್ಮಿಕ ಜೀವನವನ್ನು ನಡೆಸುತ್ತಿದ್ದರೂ ಅವನು ನಿಜವಾದ ಧಾರ್ಮಿಕನಾಗಿ ನಡೆಯುತ್ತಿರುವುದು ಅತಿ ವಿರಳ. ಧರ್ಮದಲ್ಲಿರುವ, ಧರ್ಮಗಳ ನಡುವೆ ಇರುವ ವೈರುಧ್ಯಗಳು ಕೇವಲ ಬಾಹ್ಯ ಜ್ಞಾನದಿಂದ ಗೋಚರಿಸುತ್ತದೆಯೇ ವಿನಃ ನಿಜವಾದ ಅನುಭಾವಿಯು ಎಲ್ಲಾ ಧರ್ಮಗಳನ್ನು ಒಂದೇ ಎಂಬ ಭಾವವನ್ನು ಹೊಂದಿರುತ್ತಾನೆ. ಇಂತಹ ಅನುಭಾವಿಯು ಮಾತ್ರ ಧರ್ಮದಲ್ಲಿರುವ ವೈರುಧ್ಯಗಳ ನಡುವೆ ಇರುವ ಸಮನ್ವಯವನ್ನು ಅರಿಯಬಲ್ಲವನಾಗಿರುತ್ತಾನೆ.

ಅಕ್ಕಮಹಾದೇವಿಯ ವಚನಗಳಲ್ಲಿ ವೈಜ್ಞಾನಿಕ ಅಂಶಗಳು

ಡಾ.ಕೆ.ವ್ಹಿ.ಜುಕ್ತಿಮಠ
ಸಹ ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ, ಕ.ವಿ.ವಿ.ಧಾರವಾಡ.

ಹನ್ನೆರಡನೆಯ ಶತಮಾನ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹೊಸ ಮೈಲುಗಲ್ಲನ್ನು ಸ್ಥಾಪಿಸಿರುವಂತಹದ್ದು. ವಚನಗಳ ರಚನೆಯ ಕಾಲವದು. ವಚನಗಳು ಕೇವಲ ಮಾತಲ್ಲ, ರಚಿಸಬೇಕೆಂಬ ಭಾವನೆಯಿಂದ ರಚನೆಗೊಂಡವುಗಳಲ್ಲ. ಅವುಗಳು ಶಿವಶರಣರ ಅಂತರಂಗದಿಂದ ಹೊರಹೊಮ್ಮಿದ ಅನುಭಾವದ ಆಧ್ಯಾತ್ಮದ ನುಡಿಗಳು. ಶಿವಶರಣರು ವೀರಶೈವ ಧರ್ಮ-ದರ್ಶನವನ್ನು ಬೆಳೆಸಿದ ಪುಣ್ಯಪುರುಷರು. ಸಮಾಜ ಅವರನ್ನು ತುಂಬಾ ಗೌರವಿಸುತ್ತದೆ. ಅವರ ಕಾಲದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಅವರ

ಸಾಮಾಜಿಕ ಸುಧಾರಣೆಯ ವಿಚಾರಗಳ ಗಮನಿಸಿ, ಕಲ್ಯಾಣದ ಕಡೆ ಕೈಮಾಡಿ ಬಂದವರೇ ಹೆಚ್ಚು. ಅದೊಂದು ಸಾಮಾಜಿಕ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ರಾಂತಿ.

ವಚನಗಳಲ್ಲಿ ಕೇವಲ ಧಾರ್ಮಿಕ ಆಧ್ಯಾತ್ಮಿಕ ವಿಷಯಗಳಲ್ಲದೆ ವೈಜ್ಞಾನಿಕ ಅಂಶಗಳಿವೆ ಎಂಬ ಸತ್ಯವು ಇತ್ತೀಚೀನ ಸಂಶೋಧನೆಯಿಂದ ಕಂಡುಬಂದಿದೆ. ಈ ಸೃಷ್ಟಿಯಲ್ಲಿ ಹಲವು ರಹಸ್ಯಗಳಿವೆ. ಅವುಗಳನ್ನು ಭೇದಿಸುವ ಪ್ರಯತ್ನವನ್ನು ಮನುಷ್ಯ ನಿರಂತರವಾಗಿ ಮಾಡುತ್ತಿದ್ದಾನೆ. ಅವುಗಳ ಜ್ಞಾನವನ್ನು ಪಡೆಯಬೇಕೆಂಬ ಹಂಬಲ ಅವನಿಗೆ ಹೆಚ್ಚು. ಕೆಲವು ಬಾರಿ ಅವುಗಳ ಕುರಿತು ಜ್ಞಾನ ಲಭಿಸಿದರೆ, ಇನ್ನೂ ಕೆಲವಾರು ರಹಸ್ಯಗಳು ಹಾಗೆ ಉಳಿದುಕೊಂಡಿವೆ. ಆದರೆ, ಮನುಷ್ಯನ ಮನಸ್ಸು ಆ ನಿಟ್ಟಿನಲ್ಲಿ ಸಾಗಿರುವುದಂತು ಸತ್ಯ. ಇಂದು ವಿಜ್ಞಾನವೆಂಬುದು ಜೀವನದ ಅವಿಭಾಜ್ಯ ಅಂಗವೆನ್ನುವಷ್ಟರ ಮಟ್ಟಿಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ವಿಜ್ಞಾನದ ಆವಿಷ್ಕಾರಗಳು ಬಹುಪಯೋಗಿಯಾಗಿವೆ.

ಶಿವಶರಣರ ವಚನಗಳು ಸ್ವರಬದ್ಧವಾಗಿ ಲಯಬದ್ಧವಾಗಿ ರಚನೆಗೊಂಡಿವೆ. ಅಲ್ಲದೆ, ವೈಜ್ಞಾನಿಕ ಸತ್ಯಾಂಶಗಳನ್ನು ಒಳಗೊಂಡಿವೆ. ಅಕ್ಕಮಹಾದೇವಿ ಒಬ್ಬ ದಿಟ್ಟ ಮಹಿಳೆ, ಶಿವಶರಣೆ. ಮನೆತನ-ಸಮಾಜ ಈ ವ್ಯವಸ್ಥೆಯನ್ನು ಬದಿಗಿರಿಸಿ ಶಿವನೇ ನನಗೆ ಗಂಡನೆಂದು ಕಲ್ಯಾಣಕ್ಕೆ ಬಂದು, ಮುಂದೆ ಶ್ರೀಶೈಲಕ್ಕೆ ಪಾದಯಾತ್ರೆ ಹೋದವಳು. ಕಲ್ಯಾಣದಲ್ಲಿ ಶಿವಶರಣರ ಅನುಭಾವ ಮಂಟಪದಲ್ಲಿದ್ದಾಗ ಅನುಭಾವದ ಬಲದಿಂದ ಮೂಡಿದ ಸುಮಾರು ಮೂರುನೂರು ವಚನಗಳನ್ನು ರಚಿಸಿದಳು. ಅದರಲ್ಲಿ ಹಲವು ವಚನಗಳು ವೈಜ್ಞಾನಿಕ ಅಂಶಗಳನ್ನು ಪ್ರಕಟಪಡಿಸುತ್ತವೆ. ಇದನ್ನು ಅವಲೋಕನ ಮಾಡಿದರೆ ಹನ್ನೆರಡನೆಯ ಶತಮಾನದ ಶಿವಶರಣ-ಶಿವಶರಣೆಯರಿಗೆ ವೈಜ್ಞಾನಿಕ ತಿಳುವಳಿಕೆ ಇತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಅಕ್ಕಮಹಾದೇವಿಯ ಕೆಲವಾರು ವಚನಗಳಲ್ಲಿಯ ವೈಜ್ಞಾನಿಕ ಅಂಶಗಳನ್ನು ಗುರುತಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಹನ್ನೆರಡನೇಯ ಶತಮಾನದಲ್ಲಿ ಕನ್ನಡ ಸಾಹಿತ್ಯಕ್ಕೆ ವಚನ ಪ್ರಕಾರ ಒಂದು ವಿಶಿಷ್ಟ ಕೊಡುಗೆ. ಬಸವಣ್ಣನವರು, ಅಲ್ಲಮಪ್ರಭುದೇವರು, ಚೆನ್ನಬಸವಣ್ಣ, ಸಿದ್ದರಾಮ ಹಾಗೂ ಅಕ್ಕಮಹಾದೇವಿ ಮುಂತಾದ ವಚನಕಾರರಿಂದ ವಚನಸಾಹಿತ್ಯ ಪ್ರಾರಂಭಗೊಂಡು ಹೆಚ್ಚು ಜನಪ್ರಿಯತೆಯನ್ನು ಗಳಿಸಿತು. ಅಧ್ಯಾತ್ಮ, ಮನೋವಿಜ್ಞಾನ, ಯೋಗ, ಧರ್ಮ, ಆಚಾರ, ಸಮಾಜ, ಸಂಸ್ಕೃತಿ ಮತ್ತು ಭೌತಿಕ ವಿಜ್ಞಾನಗಳ ಅಂಶಗಳನ್ನು ತನ್ನ ಪರಿಧಿಯಲ್ಲಿ ಒಳಗೊಂಡಿರುವ ವಚನಗಳಲ್ಲಿ ವಿಜ್ಞಾನದ ಅಂಶಗಳು ಅಂಕುರಗೊಂಡಿರುವುದು, ಅವುಗಳನ್ನು ಸಾಧ್ಯಾಂತವಾಗಿ ಶೋಧಿಸಿದಾಗ ಸ್ಪಷ್ಟವಾಗಿದೆ. ನನ್ನ ಈ ಪ್ರಬಂಧವು ಅಕ್ಕಮಹಾದೇವಿಯ ಆಯ್ದ ವಚನಗಳಲ್ಲಿಯ ವೈಜ್ಞಾನಿಕ ಅಂಶ ಗಳನ್ನು ತೋರಿಸಲು ಪ್ರಯತ್ನಿಸಲಾಗಿದೆ.

ವಿಜ್ಞಾನವು ಹೆಚ್ಚು ಆವಿಷ್ಕಾರಗೊಂಡು ಹೊರಬಂದಿದ್ದು ಹದಿನೇಳನೆಯ ಶತಮಾನದಲ್ಲಿ ಈ ಕಾರ್ಯದಲ್ಲಿ ತೊಡಗಿದ ಕೆಲವರ ಹೆಸರುಗಳು ಇಂತಿವೆ: ಬೆಕಾನ್, ಡೆಕಾರ್ಟ, ನ್ಯೂಟನ್, ಲೈಬ್ನಿಜ್ ಮುಂತಾದವರು ಭೌತಶಾಸ್ತ್ರದ ಶೋಧನೆಗಳನ್ನು ಮತ್ತು ಹೊಸ ಹೊಸ ವೈಜ್ಞಾನಿಕ ಪ್ರಯೋಗಗಳನ್ನು ಮಾಡಿದರು. ಚಾರ್ಲ್ಸ್ ಡಾರ್ವಿನ್ನ ಜೀವವಿಕಾಸ ಸಿದ್ಧಾಂತ, ಜಾನ್‌ಡಾಲ್ಟನ್‌ನ ಅಣುಸಿದ್ಧಾಂತ, ಥರ್ಮಾಡೈನಮಿಕ್ಸ ಮತ್ತು ಎಲೆಕ್ಟ್ರೋಮ್ಯಾಗನ್ಟಿಕ್ ಥಿಯರಿಗಳು (ಸಿದ್ಧಾಂತಗಳು) ನ್ಯೂಟನ್ನರ ತತ್ವಗಳನ್ನೆ ಆಧರಿಸಿ ಹೊರಬಂದವು. ಇವೆಲ್ಲ ತುಂಬಾ ಜನಪ್ರಿಯತೆಯನ್ನು ಹಾಗೂ ಜನೋಪಯೋಗಿಯ ವಿಚಾರಗಳಾಗಿ ಹೊರಬಂದವು.

ಇಪ್ಪತ್ತನೇಯ ಶತಮಾನದಲ್ಲಿ ಐನ್‌ಸ್ಟೀನ್ನರ **ಥೀಯರಿ ಆಫ್ ರಿಲೇಟಿವಿಟಿ** ಮತ್ತು ಪ್ಲೆಂಕ್‌ನ **ಕ್ವಾಂಟಂ ಸಿದ್ಧಾಂತಗಳು** ನ್ಯೂಟನ್ನನ ಭೌತಶಾಸ್ತ್ರದ ಸಿದ್ಧಾಂತಗಳಿಗೆ ಪರ್ಯಾಯವಾಗಿ ಹೊರಬಂದವು. ಇವೆಲ್ಲವು ಇತ್ತೀಚಿನ ದಿನಗಳಲ್ಲಿ ಆವಿಷ್ಕಾರಗೊಂಡ ವೈಜ್ಞಾನಿಕ ಸಿದ್ಧಾಂತಗಳಲ್ಲಿ ಮಹತ್ವವನ್ನು ಪಡೆದುಕೊಂಡಿವೆ.

ಪಾಶ್ಚಾತ್ಯರು ವಿಜ್ಞಾನವನ್ನು ಭೌತಿಕ ಸವಲತ್ತುಗಳನ್ನು ಪಡೆಯಲು ಬೇಕಾದ ಜ್ಞಾನ ಶಾಖೆಯೆಂದು ಕರೆದರು. ಉದಾಹರಣೆಗೆ: ಸೌರಮಂಡಲದ ಸ್ವರೂಪ, ಅದರಲ್ಲಿರುವ ಆಕಾಶ ಕಾಯಗಳು, ಅವುಗಳ ಚಲನವಲನ, ಭೂಮಿಯ ಚಲನೆ, ವಿದ್ಯುತ್, ಕಟ್ಟಡ ನಿರ್ಮಾಣ, ಔಷಧ, ಚಿಕಿತ್ಸೆ, ವಾಹನ ನಿರ್ಮಾಣ ಮುಂತಾದ ಸಂಶೋಧನೆಗಳು ವಿಜ್ಞಾನವೆನಿಸಿದವು. ಪ್ರಕೃತಿಯಲ್ಲಿಯ ಸಹಜ ಕ್ರಿಯೆಗಳಾಗಿ ಬೆಳೆಯುವ ಗಿಡಮರಗಳು ಇತ್ಯಾದಿ ಕ್ರಿಯೆಗಳ ಅಧ್ಯಯನವೂ ವಿಜ್ಞಾನವೆನಿಸಿತು. ಕಣ್ಣಿಗೆ ಕಾಣುವ ಪ್ರಯೋಗಗಳ ಮೂಲಕ ಫಲಿತಾಂಶ ಕಂಡುಹಿಡಿದು ಮಾನವನ ಉಪಯೋಗಕ್ಕೆ ಬಳಸಬಹುದಾದ ವಸ್ತುಗಳನ್ನು ನಿರ್ಮಿಸುವ ಶೋಧನೆಗಳೆಲ್ಲ ವೈಜ್ಞಾನಿಕ ಸಂಶೋಧನೆಗಳೆನಿಸಿ ಹೆಸರಾದವು. ಸತ್ಯ ಶೋಧನೆಯ ಆವಿಷ್ಕಾರವೇ ಅದರ ಉದ್ದೇಶ. ಅದರಂತೆ ತತ್ವಜ್ಞಾನದ ಉದ್ದೇಶವು ಕೂಡಾ ಸತ್ಯಶೋಧನೆ ಆಗಿದೆ. ಆದರೆ, ಅವುಗಳು ಅನುಸರಿಸುವ ಸಿದ್ಧಾಂತ-ವಿಧಾನ-ಮಾರ್ಗಗಳು- ಮಾತ್ರ ಬೇರೆಬೇರೆ. ನಾವು ಇನ್ನೂ ಮುಂದೆ ಅಕ್ಕಮಹಾದೇವಿಯು ವಚನಗಳನ್ನೇ ಕೇಂದ್ರವಾಗಿಟ್ಟುಕೊಂಡು ಅವುಗಳಲ್ಲಿರುವ ವೈಜ್ಞಾನಿಕ ಅಂಶಗಳನ್ನು ಹೊರತೆಗೆಯಲು ಪ್ರಯತ್ನಿಸೋಣ.

ಅಕ್ಕಮಹಾದೇವಿ ಜೀವನ: ಅಕ್ಕಮಹಾದೇವಿ ಒಬ್ಬ ಶಿವಶರಣೆ, ವೀರಶೈವಳು/ ಲಿಂಗಾಯತ. 12ನೇ ಶತಮಾನದಲ್ಲಿ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿಯಲ್ಲಿ ಶಿವಭಕ್ತ ಶಿರೋಮಣಿಗಳ ಗರ್ಭದಲ್ಲಿ ಜನಿಸಿದಳು. ಚಿಲುವೆಯಾದ ಅಕ್ಕಮಹಾದೇವಿ ಆತ್ಮಸಂಸ್ಕಾರವನ್ನು ಪಡೆದುದು ಗುರುಲಿಂಗದೇವರಿಂದ (ವ.ಸಂ.310). ಇವರಿಂದಲೇ ಶ್ರೀಶೈಲದ ಮಲ್ಲಿಕಾರ್ಜುನನ್ನು ಕಾಣುವ ಪ್ರಬಲ ಇಚ್ಛೆ ಬೆಳೆಸಿಕೊಂಡವಳು. "ಮಲ್ಲಿಕಾರ್ಜುನ ನಿನ್ನಲ್ಲಿಯೇ ಇದ್ದಾನೆ. ಆತನನ್ನು ಕಂಡುಕೊಳ್ಳಲು ಸಾಧನೆಯ ಬಲದಿಂದ ಸಾಧ್ಯ ಮಗು" ಎಂದು ಹರಿಸಿದರು. ಭಕ್ತಿಯ ಸಾಕಾರ ರೂಪಿಣಿಯಾದ ಅಕ್ಕಮಹಾದೇವಿ ಶ್ರದ್ಧಾಭಕ್ತಿಯಿಂದ ಶಿವನನ್ನು ಪೂಜಿಸಲು ಪ್ರಾರಂಭಿಸಿ ಶಿವಪ್ರೇಮಿಯಾಗಿ, ಗುಣಶೀಲೆಯಾಗಿ, ರೂಪಸಂಪನ್ನೆಯಾಗಿ, ಆಧ್ಯಾತ್ಮ ಶಿಶುವಾಗಿ,

ಸಮರಸಭಕ್ತಿಯಲ್ಲಿ ತನ್ನ ನಿಜವಾದ ಪತಿಯೇ ಚೆನ್ನಮಲ್ಲಿಕಾರ್ಜುನ (ಪರಶಿವ) ಎಂದು ಕಂಡುಕೊಂಡಳು (ನೋಡಿ ವಚನಗಳನ್ನ 65, 110, 323, 334, 336). (ಮುಂದೆ: ಅಕ್ಕಮಹಾದೇವಿಯನ್ನು ನಾನು ಈ ಲೇಖನದಲ್ಲಿ "ಅಕ್ಕ" ಎಂದು ಸಂಭೋಧಿಸಿದ್ದೇನೆ).

ಅಕ್ಕಮಹಾದೇವಿಯ ಕೆಲವು ವಚನದಲ್ಲಿ ವೈಜ್ಞಾನಿಕ ಅಂಶಗಳ ವಿಚಾರಗಳನ್ನು ನೋಡೋಣ:

(1) ಸೃಷ್ಟಿಯ ರಹಸ್ಯಗಳ ಕುರಿತಾದ ವಚನಗಳು:

ಈಳೆ ನಿಂಬೆ ಮಾವು ಮೂದಲಕ್ಕೆ
ಹುಳಿನೀರನೆರೆದವರಾರಯ್ಯ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿನೀರನೆರೆದವರಾರಯ್ಯ?
ಕಳೆವ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೇ, ನೆಲವು ಒಂದೆ, ಆಕಾಶವು ಒಂದೆ,
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿಬೇರಾಗಿಹ ಹಾಗೆ,
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು?
ಎನ್ನ ಪರಿ ಬೇರೆ (ವಚನ ಸಂಖ್ಯೆ – 66)[1]

ಈ ವಚನವು ಸೃಷ್ಟಿಯಲ್ಲಿಯ ಗಿಡಮರಗಳ ಕುರಿತು ರಚನೆಗೊಂಡಿದೆ. ಇಲ್ಲಿ ಒಂದೊಂದು ಮರಗಳಲ್ಲಿಯ ವಿಶೇಷ ಗುಣಗಳನ್ನು ಹೇಳುತ್ತಾ ನಿಂಬೆ, ಮಾವು ಮುಂತಾದ ಗಿಡ–ಮರಗಳಿಗೆ ಹುಳಿ ನೀರನ್ನು ಎರೆದವರಾರು? ಎಂದು ಪ್ರಶ್ನಿಸುವಾಗ ವೈಜ್ಞಾನಿಕ ಚಿಕಿತ್ಸಕ ಬುದ್ಧಿಯ ಮನೋಭಾವನೆ ಬಿಂಬಿತವಾಗಿದೆ. ಇಲ್ಲಿ ಮುಖ್ಯವಾಗಿ, ಹುಳಿಯ ಕಲ್ಪನೆ ಇಂತಹ ಗಿಡಗಳಲ್ಲಿ, ಸಿಹಿಯ ಕಲ್ಪನೆ ಇಂತಹ ಗಿಡಗಳಲ್ಲಿ, ಸುಗಂಧ ಸೂಸುವ ಪರಿಮಳ ಇಂತಹ ಗಿಡ–ಬಳ್ಳಿಗಳಲ್ಲಿದೆ ಎನ್ನುವಲ್ಲಿ, ವೈಜ್ಞಾನಿಕ ಅಂಶಗಳನ್ನು ತೋರಿಸುತ್ತವೆ. ಅಕ್ಕಮಹಾದೇವಿಯು ನಿಸರ್ಗದಲ್ಲಿರುವ ಹಲವು ಗಿಡ–ಮರಗಳ ಕುರಿತು ತಿಳಿದುಕೊಳ್ಳುವ ಪ್ರಯತ್ನದ ಜೊತೆಗೆ, ಸೃಷ್ಟಿಯ ರಹಸ್ಯದ ಕುರಿತು ತಿಳಿದುಕೊಳ್ಳುವ ಹಂಬಲ ಉಂಟಾಗಿದೆ. ಇಲ್ಲಿ ಅಕ್ಕಮಹಾದೇವಿ ತಾನಾಡುವ ಭಾಷೆಯಲ್ಲಿ ತಿಳಿಸುವ ಪ್ರಯತ್ನವನ್ನು ಮಾಡಿದ್ದಾಳೆ. ವಿಜ್ಞಾನದ ವಿಚಾರಗಳನ್ನು ಕೇವಲ ವಿಜ್ಞಾನಿಗಳಿಗೆ ಮಾತ್ರ ಸಾಧ್ಯವೆಂಬ ವಿಚಾರವನ್ನು ದೂರಮಾಡಿ, ಸಾಮಾನ್ಯ ಜೀವನ ನಡೆಸುವ ವ್ಯಕ್ತಿಗಳು ಸಹ ವಿಜ್ಞಾನದ ಅಂಶಗಳ ಜ್ಞಾನವನ್ನು ತಿಳಿದುಕೊಳ್ಳಬಹುದೆಂಬ ವಿಚಾರವನ್ನು ತೋರಿಸಿಕೊಟ್ಟಿದ್ದಾಳೆ.

ಮನುಷ್ಯನ ಸಾಮಾನ್ಯ ಬದುಕಿನ ವಿಚಾರಗಳು ಮತ್ತು ಲೌಕಿಕ ಜ್ಞಾನವೆನಿಸಿದ ಸೃಷ್ಟಿ ರಹಸ್ಯದ ವಿಚಾರಗಳ ಹಿಂದೆಇರುವ ನಿಗೂಢ ಸತ್ಯದ ಸಾಕ್ಷಾತ್ಕಾರ ಅಲೌಕಿಕ ಜ್ಞಾನವೆನಿಸುವುದು. ಲೌಕಿಕ ಜೀವನದ ಸಾಧನ ವಿಜ್ಞಾನವೆಂದು, ಕರೆಸಿಕೊಂಡರೆ, ಜೀವನದ ಸಂತೃಪ್ತಿಗೆ ಕಾರಣವಾದುದು ಆಧ್ಯಾತ್ಮ ಅಥವಾ ತತ್ವಜ್ಞಾನ.

ಸೃಷ್ಟಿಯ ಉತ್ಪತ್ತಿ, ಸ್ಥಿತಿ, ಲಯಗಳನ್ನು ಅಂದರೆ ಸೃಷ್ಟಿ ಚಕ್ರವನ್ನು ವಿವರಿಸುವ ಈ ವಚನವು ನಿತ್ಯಸತ್ಯವಾದ ಶಿವನಿಂದ ಹೊರಹೊಮ್ಮಿದ ಈ ಪ್ರಪಂಚ ಮಿಥ್ಯವಲ್ಲ. ಅದು ಶಿವನ ಅಂಶವೆಂದು, ದೇವರ ಇರುವಿಕೆಯ ಕುರಿತಾದ ವಿಚಾರದಲ್ಲಿ ಅಕ್ಕನ ನಿಲುವು ವೈಜ್ಞಾನಿಕತೆಯನ್ನು ಒಳಗೊಂಡಿದೆ. ಜಗತ್ತು ಶಿವಮಯ. ಶಿವನು ಸರ್ವ ಚೇತನಾಚೇತನ ವಸ್ತುಗಳಲ್ಲಿ ಅಂತ:ರ್ಯಾಮಿಯಾಗಿ ದ್ದಾನೆಂಬ ಮಾತನ್ನು ಹೇಳುತ್ತಾಳೆ. ಪಾಶ್ಚಾತ್ಯ ತತ್ವಜ್ಞಾನಿಗಳು ತಿಳಿಸಿದಂತೆ ಸಮರ್ಥಿಸಿಕೊಳ್ಳುತ್ತಾಳೆ.

ವನವೆಲ್ಲಾ ನೀನೇ, ವನದೊಳಗಣ ದೇವತರವೆಲ್ಲಾ ನೀನೆ,
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ
ಚೆನ್ನಮಲ್ಲಿಕಾರ್ಜುನ,
ಸರ್ವಭರಿತನಾಗಿ ಎನಗೇಕೆ ಮುಖವಿದೋರಾ?
(ವಚನ ಸಂಖ್ಯೆ– 300)

ಪ್ರತಿಯೊಂದು ಅಣುವಿಯಲ್ಲಿರುವ ಶಿವನು (ಪರವಸ್ತು), ಸಕಲ ಜೀವರಾಶಿಗಳಲ್ಲಿ ಅತ್ಯುನ್ನತ ಸ್ಥಾನದಲ್ಲಿರುವ ಮಾನವನಲ್ಲಿರಲಾರನೆ? ದೇವನು(ಶಕ್ತಿ)ಸನ್ಮಾರ್ಗ, ಸದಾಚಾರಿಗಳ ಅಂತರಂಗದಲ್ಲಿ ಅಂತರ ಮುಖಿಯಾಗಿರುವನು. ತನ್ನ ತಾನರಿವಡೆ ತಾನೇ ಪರಬ್ರಹ್ಮವೆಂಬ ಮಾತು ಕೂಡಾ ಇದನ್ನೇ ಅನುಮೋದಿಸುವುದು.

ವೀರಶೈವ/ಲಿಂಗಾಯತ ಧರ್ಮದಲ್ಲಿ ಪೂಜಿಸಲ್ಪಡುವ ಇಷ್ಟಲಿಂಗದ ಪರಿಕಲ್ಪನೆ ವಿಶ್ವವ್ಯಾಪಿಯ ಅರ್ಥವನ್ನು ಸೂಚಿಸಿದೆ. ದೇವರಿಗೆ (ಶಕ್ತಿಗೆ) ವಿಶ್ವವ್ಯಾಪಿ ಹಾಗೂ ವಿಶ್ವಾಂತರ್ಯಾಮಿ ಗುಣವನ್ನು ಹೇಳಲಾಗಿದೆ. ಅದು ಕಲ್ಲಿರಲಿ, ಬೆಟ್ಟವಿರಲಿ, ನೀರಿರಲಿ, ಗಾಳಿಯಿರಲಿ ಇಲ್ಲವೇ ಅರಣ್ಯವಿರಲಿ ಅಲ್ಲಿಯ ಗಿಡ–ಮರಗಳ, ಖಗಮೃಗಗಳಲ್ಲಿಯು ನಿರ್ವಿಕಾರ ಶಕ್ತಿ(ತತ್ವದ)ಯನ್ನು ಕಾಣುವ ಅಕ್ಕನ ವಿಶೇಷ ಗುಣವು ಸಾಮಾನ್ಯವಲ್ಲ. ಇದು ಅನುಭಾವ ಜ್ಞಾನದ ನಿಲುವು. ಇದಕ್ಕೆ ನಿರಂತರವಾದ ಪರಿಶ್ರಮ ಬೇಕು.

ಪಾತಾಳವಿತ್ತಿತ್ತ, ಪಾದಂಗಳತ್ತತ್ತ,
ದಶದಿಕ್ಕು ಇತ್ತಿತ್ತ ದಶಭುಜಂಗಳತ್ತತ್ತ,
ಬ್ರಹ್ಮಾಂಡವಿತ್ತತ್ತ ಮಣಿಮುಕುಟವತ್ತತ್ತ,
ಚೆನ್ನಮಲ್ಲಿಕಾರ್ಜುನಯ್ಯಾ,
ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ ಲಿಂಗವೆ.
(ವಚನ ಸಂಖ್ಯೆ– 228)

ಈ ವಚನವು ಕೂಡಾ ವಿಜ್ಞಾನ ಶೋಧಿಸಿ ಕೆಲಸ ತೆಗೆದುಕೊಳ್ಳುತ್ತಿರುವ ಕ್ಯಾಮರಾದ ಚಿತ್ರಣವನ್ನು ನೆನಪಿಗೆ ತರುತ್ತಿದೆ. ಕ್ಯಾಮರಾ ಹೇಗೆ ಚಿತ್ರಣಗಳನ್ನ ತನ್ನ ಪೆಟ್ಟಿಗೆಯಲ್ಲಿ ಸೆರೆಹಿಡಿದಿಡುತ್ತದೆಯೋ ಹಾಗೇ ಎಲ್ಲ ಕಡೆಗೂ ವ್ಯಾಪಿಸಿರುವ ದೇವನು ನಮ್ಮ ಹಸ್ತದಲ್ಲಿರುವ ಇಷ್ಟಲಿಂಗದ ಚಿಕ್ಕ ರೂಪದಲ್ಲಿ ಪ್ರಕಟಗೊಳ್ಳುತ್ತಾನೆ. ಅದನ್ನೇ ಚುಳುಕಾಗಿ ಬಂದಿದೆ ಎಂದು ಹೇಳುವಳು. ಅಕ್ಕನ ಮತ್ತೊಂದು ಸೃಷ್ಟಿಯ ಸೊಬಗಿನ ವಚನವು ವೈಜ್ಞಾನಿಕ ಅಂಶಗಳನ್ನು ಪ್ರಕಟಮಾಡುತ್ತದೆ.

ನೆಲದ ಮರೆಯ ನಿಧಾನದಂತೆ,
ಫಲದ ಮರೆಯ ರುಚಿಯಂತೆ,
ಶಿಲೆಯ ಮರೆಯ ಹೇಮದಂತೆ,
ತಿಲದ ಮರೆಯ ತೈಲದಂತೆ,
ಮರದ ಮರೆಯ ತೇಜದಂತೆ (ಅಗ್ನಿ)
ಭಾವದ ಮರೆಯ ಬ್ರಹ್ಮವಾಗಿಪ್ಪ

ಚೆನ್ನಮಲ್ಲಿಕಾರ್ಜುನನ ನಿಲುವನರಿಯಬಾರದು.
(ವಚನ ಸಂಖ್ಯೆ– 219)

ಪ್ರಾಚೀನ ಕಾಲದಿಂದಲೂ ಹೇಮ/ಸಂಪತ್ತು ನಮಗೆ ದೊರಕುವದು ಮಣ್ಣಿನಲ್ಲಿ. ಈ ವಿಚಾರವನ್ನು ಅಕ್ಕಳು ನೆಲದಲ್ಲಿ ಮರೆಯಾಗಿದೆ ಸಂಪತ್ತು ಎಂದು ಹೇಳುವುದರ ಮೂಲಕ ಹಲವಾರು ಉತ್ಕೃಷ್ಟ ಉಪಮಾನಗಳನ್ನು ತಿಳಿಸಿ ಸತ್ಯವನ್ನು ಹೊರಹಾಕುವಳು. ಬಂಗಾರವು ಮಣ್ಣಿನಿಂದ ಆವಿಷ್ಕರಿಸುವುದರ ಮೂಲಕ, ಇಲ್ಲಿಯ ಹಲವು ಉದಾಹರಣೆ ಉಪಮಾನಗಳೆಲ್ಲವು ವೈಜ್ಞಾನಿಕ ಅಂಶಗಳನ್ನು ಸಾಬೀತು ಪಡಿಸುವಂತವುಗಳು. ಕಾರ್ಯಕಾರಣ ಸಿದ್ಧಾಂತದ ವಿಚಾರಗಳೇ ಅವುಗಳು. ಫಲದಲ್ಲಿ ಅಡಗಿರುವ ರುಚಿ, ಶಿಲೆಯ ಮರೆಯಲ್ಲಿ ಇರುವ ಬಂಗಾರ, ಎಳ್ಳಿನೊಳಗಿರುವ ಎಣ್ಣೆ ಈ ಎಲ್ಲ ಉದಾಹರಣೆಗಳು ವೈಜ್ಞಾನಿಕ ಚಿಂತನೆಗಳು ಹೌದು. ಇವು ಕಾರ್ಯ–ಕಾರಣ ಸಂಬಂಧಗಳಿಗೆ ಮಹತ್ವದ ಸಾಕ್ಷಿಗಳು. ಈ ಅಂಶಗಳನ್ನೆ ಆಧರಿಸಿ ಅಕ್ಕಳು, ಕೊನೆಯಲ್ಲಿ ಹೇಳಿದ ಭಾವದ ಮರೆಯಲ್ಲಿ ಮರೆಯಾಗಿರುವ ಚನ್ನಮಲ್ಲಿಕಾರ್ಜುನನ (ಬ್ರಹ್ಮನ) ನಿಲುವಿನಂತೆ ಎನ್ನುವುದು ಅಲೌಕಿಕ ವಿಚಾರ. ಲೌಕಿಕ ಬದುಕಿನ ಉದಾಹರಣೆಗಳ ಸಾಕ್ಷಿಗಳಿಂದ ಅಲೌಕಿಕ ಶಕ್ತಿಗಳನ್ನು ತಿಳಿದುಕೊಳ್ಳಲು ಸಹಾಯವಾಗುವುದು. ಇದು ಲೌಕಿಕ ಬದುಕನ್ನು ಅನುಭವಿಸಿ, ತಿಳಿದವನಿಗೆ ಅಲೌಕಿಕದತ್ತ ಸಾಗುವ ಸರಳ ಮಾರ್ಗವನ್ನು ಅಕ್ಕ ಇಲ್ಲಿ ಸಮರ್ಥಿಸಿದ್ದಾಳೆ. ಇದು ವಿಜ್ಞಾನದ ನಿತ್ಯ ಸಂದೇಶವನ್ನು ಸಾರುವಲ್ಲಿ ಯಶಸ್ವಿಯಾಗಿದೆ.

ಅಕ್ಕಳು, ಕಾಷ್ಟದಲ್ಲಿರುವ ಬೆಂಕಿಯನ್ನು ಗುರುತಿಸುವಲ್ಲಿ ನೀಡುವ ಉದಾಹರಣೆಯು ವೈಜ್ಞಾನಿಕ ಅಂಶವನ್ನು ಗಮನಿಸಿದೆ. ಪ್ರಾಚೀನ ಕಾಲದಲ್ಲಿ ಮಾನವ ಅಗ್ನಿಯ ಆವಿಷ್ಕಾರವನ್ನು ಮಾಡಿ ಆಹಾರವನ್ನು ಬೇಯಿಸಿಕೊಳ್ಳುವ ಜ್ಞಾನವನ್ನು ಪಡೆದನು. ಬೆಂಕಿಯನ್ನು ಅವನು ಕಲ್ಲಿನ ಘರ್ಷಣೆಯಿಂದ ಸಾಧ್ಯವೆಂಬ ಜ್ಞಾನವನ್ನು ಪಡೆದನು. ಅದನ್ನೇ ಅಕ್ಕಳು, ಕಲ್ಲು ಕಲ್ಲು ಮಥನಿಸಿದರೆ, ಕಟ್ಟಿಗೆ ಕಟ್ಟಿಗೆ ಮಥನಿಸಿದರೆ ಕಿಚ್ಚು ಹುಟ್ಟುವುದು ಸಹಜ. ಕಟ್ಟಿಗೆಗಳ ಘರ್ಷಣೆಯಿಂದ ಅಗ್ನಿಯನ್ನು ಹುಟ್ಟಿಸುವ ಅಂಶವನ್ನು ಗುರುತಿಸಿ ಅಕ್ಕಳು ತನ್ನ ವಚನದಲ್ಲಿ ಈ ವೈಜ್ಞಾನಿಕ ಶೋಧವನ್ನು ನೆನಪಿಸಿರುವುದು ಸತ್ಯ.

ಮರಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತ್ತು
ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು
ಇಂತಪ್ಪ ಅನುಭಾವರ ಅನುಭಾವವ ತೋರಿ
ಎನ್ನ ಒಡಲನುಳುಹಿಕೊಳ್ಳಿ ಚೆನ್ನಮಲ್ಲಿಕಾರ್ಜುನಾ.
(ವಚನ ಸಂಖ್ಯೆ–270)

ಈ ಕೆಳಗಿನ ಮತ್ತೊಂದು ವಚನದಲ್ಲಿ ಶಾಂತಿ–ಸಮಾಧಾನ ಸಂದೇಶವನ್ನು ನೀಡಿರುವಂತೆ ಕಂಡುಬರುವುದು. ಈ ವಚನವು ಬೆಟ್ಟದಲ್ಲಿರುವ ಮೃಗಗಳಿಗೆ ಅಂಜವುದಾಗಲಿ, ಸುತ್ತ–ಮುತ್ತಲಿನ ಪರಿಸರದಲ್ಲಿರುವ ಪರಿಸ್ಥಿತಿಗಳ ಗುಣಗಳನ್ನು ತಿಳಿಸುವ ಮೂಲಕ ಅದಕ್ಕೆ ಹೊಂದಿಕೊಳ್ಳುವ ವೈಜ್ಞಾನಿಕ ಮನೋಭಾವದ ಕುರಿತು ತಿಳಿಸಿದ್ದಾಳೆ.

ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ,
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ,
ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.
(ವಚನ ಸಂಖ್ಯೆ– 253)

ಈ ವಚನದಲ್ಲಿ, ಅರಣ್ಯದಲ್ಲಿ ಮನೆ ಮಾಡಿದ ಮೇಲೇ ಪ್ರಾಣಿಗಳಿವೆ, ನಮ್ಮನ್ನು ಭಕ್ಷಿಸುತ್ತವೆ ಎಂದು ಹೆದರುವದೇ? ಸಮುದ್ರದ ದಡದಲ್ಲಿ ಮನೆಮಾಡಿದ ಮೇಲೆ, ಅಲ್ಲಿ ಉಕ್ಕಿ ಬರುವ ತೆರೆಗಳಿಗೆ ಅಂಜಬಹುದೇ? ಇನ್ನೂ ಸಂತೆಯಲ್ಲಿ ಮನೆ ಮಾಡುವುದು ಎಂದರೆ ಜನಜಂಗುಳಿಯಿಂದ ಕೂಡಿದ ಪ್ರದೇಶ. ಅಲ್ಲಿಯ ಜನಜಂಗುಳಿಯಿಂದ ಹೊರಡುವ ಶಬ್ದಕ್ಕೆ ನಾಚುವುದೇ? ಇಲ್ಲ ಇಲ್ಲ. ಇದಕ್ಕಾಗಿ ವ್ಯಥೆಪಡುವುದು ಬೇಕಾಗಿಲ್ಲ. ಇಂತಹ ಪ್ರಸಂಗಗಳಲ್ಲಿ ಇದೆಲ್ಲ ಸಹಜ ಕ್ರಿಯೇ ಅದಕ್ಕಾಗಿ ಹೆದರಬೇಕಾಗಿಲ್ಲ ಎಂಬುದು ಪರಸ್ಥಿತಿ–ಸತ್ಯಸ್ಥಿತಿಯು ವೈಜ್ಞಾನಿಕ ಮನೋಭಾವನೆಯ ಅಂಶ. ಅದರಂತೆ, ಉಪ್ಪಿನ ರಚನೆಯ ಜ್ಞಾನದ ಕುರಿತು, ಅಕ್ಕನ ಒಂದು ವಚನ ಹೀಗೆ ಹೇಳುತ್ತದೆ.

ಮುತ್ತು ನೀರಲಾಯಿತ್ತು, ವಾರಿಕಲ್ಲು ನೀರಲಾಯಿತ್ತು
ಉಪ್ಪು ನೀರಲಾಯಿತ್ತು,
ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು,
ಮುತ್ತು ಕರಗಿದುದನಾರೂ ಕಂಡವರಿಲ್ಲ
ಈ ಸಂಸಾರಿಮಾನವರು ಲಿಂಗವಮುಟ್ಟಿ ಭವಭಾರಿಗಳಾದರು
ನಾನಿಮ್ಮ ಮುಟ್ಟಿ ಕರಿಗೊಂಡೆನಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ. (ವಚನ ಸಂಖ್ಯೆ– 280)

ಇಲ್ಲಿ ಕೇವಲ ಉಪ್ಪು ಒಂದೇ ಅಲ್ಲ, ಮುತ್ತು, ಆಲಿಕಲ್ಲು, ಹುಟ್ಟುವ ವಿಧಾನದ ಕುರಿತಾದ ತಿಳುವಳಿಕೆಯು ಒಂದು ವೈಜ್ಞಾನಿಕ ಅಂಶ. ಮುತ್ತು, ಆಣಿಕಲ್ಲು, ಉಪ್ಪು ಇವುಗಳು ರಚನೆಯಾಗುವುದು ನೀರಿನಿಂದೆಂಬ ಸತ್ಯ ಇಂದು ನಿನ್ನೆಯದಲ್ಲ ಮತ್ತು ಅವುಗಳ ಮಹತ್ವವನ್ನು ಕೂಡಾ ತೋರಿಸಿಕೊಟ್ಟಿದ್ದಾಳೆ. ಇಂತಹ ಎಷ್ಟೊ ಲೌಕಿಕದ ಉದಾಹರಣೆಗಳ ಸಹಾಯದಿಂದ ವಚನಗಳಲ್ಲಿ ವಿಜ್ಞಾನ ಮನೋಭಾವನೆಗಳನ್ನು ಕಾಣಲು ಸಾಧ್ಯ.

(2) ಮನೋವೈಜ್ಞಾನಿಕ ಅಂಶಗಳ ಕುರಿತಾದ ವಚನಗಳು:

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ,
ಕರಣಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ? (ವಚನ ಸಂಖ್ಯೆ–297)

ಅಕ್ಕಮಹಾದೇವಿಯ ಈ ವಚನವು ಮನೋವೈಜ್ಞಾನಿಕ ಅಂಶಗಳನ್ನು ತೋರಿಸುತ್ತದೆ. ಇಂದು ಮನೋವಿಜ್ಞಾನ ವಿಭಾಗವು, ವಿಜ್ಞಾನದ ಶಾಖೆಯಾಗಿ ಹಲವು ಸಂಶೋಧನೆಗಳನ್ನು ನಡೆಸಿ ಪ್ರಬಲವಾಗಿ ಕಾರ್ಯನಿರ್ವಹಿಸುತ್ತಿದೆ. ಒಬ್ಬ ಮನೋವಿಜ್ಞಾನಿಯ ರೀತಿಯಲ್ಲಿ

ಅಕ್ಕಮಹಾದೇವಿ ಇಲ್ಲಿ ಮಾತನಾಡಿದ್ದಾಳೆ. ಈ ವಚನದಲ್ಲಿಯ ಆಕೆಯ ಆಧ್ಯಾತ್ಮದ ಅರ್ಥವನ್ನು ಗಮನಿಸದೆ, ಸೂರ್ಯನ ಆಗಮನ ಪ್ರಪಂಚದ ದೈನಂದಿನ ಕ್ರಿಯೆಗೆ ಬೀಜವೆಂಬಂತೆ ಎಂದು ಹೇಳುವ ಮಾತು ಅರ್ಥಪೂರ್ಣ. ಇಲ್ಲಿ ಆಕೆ ಕೊಡುವ ಉಪಮೆ ಎಲ್ಲರನ್ನು ಚಕಿತರನ್ನಾಗಿಸುತ್ತದೆ ಮತ್ತು ಅದು ಸತ್ಯವು ಕೂಡಾ ಹೌದು. ಬೀಜದಿಂದಲೇ ವೃಕ್ಷವೆಂಬ ವೈಜ್ಞಾನಿಕ ಅಂಶ. ಎಲ್ಲರು ಬಲ್ಲರು. ಕಾರ್ಯಕಾರಣ ನಿಯಮದಿಂದ ಸ್ಪಷ್ಟವಾಗಿದೆ. ಇದು ವೈಜ್ಞಾನಿಕ ಅಂಶವು ಹೌದು. ಬೀಜವಿಲ್ಲದೆ ವೃಕ್ಷ ಅಸಾಧ್ಯ. ಪಂಚೇಂದ್ರಿಯಗಳ ಕಾರ್ಯಗಳಿಗೆ ಮನಸ್ಸು ಮೂಲ. ಭಾರತೀಯ ಇಲ್ಲವೇ ಪಾಶ್ಚಾತ್ಯ ತತ್ವಶಾಸ್ತ್ರದಲ್ಲಾಗಲಿ ಮನಸ್ಸನ್ನು ಸ್ವೀಕರಿಸಿದ್ದಾರೆ. ಮನಸ್ಸು ಗೋಚರವಲ್ಲ. ಆದಾಗ್ಯೂ ಅದರಿಂದ ನಡೆಯುವ ಕಾರ್ಯಗಳಾಗಲಿ ಅಥವಾ ಅದರ ಪರಿಣಾಮಗಳಾಗಲಿ ಯಾರು ಅಲ್ಲಗಳೆಯಲು ಸಾಧ್ಯವಿಲ್ಲ. ಪ್ರತಿಯೊಬ್ಬರಲ್ಲಿಯೂ ಮನಸ್ಸಿದೆ. ಅದನ್ನು ಚಂಚಲಗೊಳಿಸದೆ ಅದನ್ನು ನಿನ್ನಲ್ಲಿ (ದೇವನಲ್ಲಿ) ಐಕ್ಯಗೊಳಿಸಿದ ಮೇಲೆ, ಅಥವಾ ಆ ಮನವನ್ನೇ ಚೆನ್ನಮಲ್ಲಿಕಾರ್ಜುನ ದೇವನೇ, ನೀನು ಆವರಿಸಿಕೊಂಡ ಮೇಲೆ ನನಗೆ ಬೇರೆ ದಾರಿಯೇ ಇಲ್ಲ ಎಂಬಲ್ಲಿ ತನ್ನ ಸಮರ್ಪಣಾಭಾವ ಸ್ಪಷ್ಟವಾಗುವುದು. ಇದು ಆಧ್ಯಾತ್ಮದ ಸಂದೇಶವನ್ನು ಹೊರಹಾಕುತ್ತದೆ. ಆಧ್ಯಾತ್ಮವು ಕಲ್ಮಶಗಳನ್ನು ತೊಳೆಯುವಂಥದು. ದ್ವಂದ್ವಗಳಿಂದ ಕೂಡಿದ ಮನಸ್ಸಿನ ಕಡಿವಾಣ ಅತೀ ಅವಶ್ಯ. ಇಲ್ಲಸಲ್ಲದ ಚೇಷ್ಟೇ ಮಾಡುವುದು ಕೂಡಾ ಅದರ ಸ್ವಭಾವ. ಅದನ್ನು ನಿಲ್ಲಿಸುವುದೆಂದರೆ ಏಕಾಗ್ರಗೊಳಿಸುವುದೆಂದರ್ಥ. ಮುಂದುವರಿದಂತೆ ಅಕ್ಕಮಹಾದೇವಿ ವಚನದಲ್ಲಿ ಹೀಗೆ ಹೇಳುತ್ತಾಳೆ.

ಉಳ್ಳದೊಂದು ತನು, ಉಳ್ಳದೊಂದು ಮನ
ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯ?
ಸಂಸಾರವನಾವ ಮನದಲ್ಲಿ ತಲ್ಲೀಯವಾಹನಯ್ಯ..
ಅಕಟಕಟಾ, ಕೆಟ್ಟೆ ಕೆಟ್ಟೆ! ಸಂಸಾರಕ್ಕಲ್ಲಾ, ಪರಮಾರ್ಥಕ್ಕಲ್ಲಾ!
ಎರಡಕ್ಕೆ ಬಿಟ್ಟ ಕರುವಿನಂತೆ!
ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಬಹುದೆ
ಚೆನ್ನ ಮಲ್ಲಿಕಾರ್ಜುನಾ? (ವಚನ ಸಂಖ್ಯೆ –74)

ಮನಸ್ಸನ್ನು ಸ್ವಚ್ಛಂದವಾಗಿ ಹರಿಬಿಡದೆ ನಿಯಂತ್ರದಲ್ಲಿಡಬೇಕೆಂಬ ನಿಲುವು ಅಕ್ಕನದು. ಅಕ್ಕಮಹಾದೇವಿ ಸಾಮಾನ್ಯಳಲ್ಲ ಮನಸ್ಸನ್ನು ಗೆದ್ದ ಮಹಾದೇವಿ ಅಂತೆಯೇ ಅವಳು

"... ಘನವನೊಳಕೊಂಡ ಮನದ ಮಹಾನುಭಾವಿಗಳ
ಬಳಿವಿಡಿದು ಬದುಕುವೆನಯ್ಯಾ..." (ವಚನ ಸಂಖ್ಯೆ □)

ಎಂದು ವಿಧೇಯತೆಯಿಂದ ಆಡುವ ಮಾತುಗಳ ಅನುಭಾವದ ಎತ್ತರವನ್ನು ಸಾಬೀತಪಡಿಸುವುದು.

(3) ಶರೀರ ರಚನೆಯ ವೈಜ್ಞಾನಿಕ ಅಂಶಗಳ ಕುರಿತಾದ ವಚನಗಳು: ಅಂಗ (ಶರೀರದ) ರಚನೆಯು ಹಾಗೂ ಅದರ ಕಾರ್ಯ ವೈಖರಿಯ ಕುರಿತು ನಾವು ತಿಳಿದುಕೊಳ್ಳಬೇಕಾದರೆ ಶರೀರರಚನೆ ಶಾಸ್ತ್ರವನ್ನು ಓದಲೇಬೇಕು. ಅದು ಕೂಡ ವಿಜ್ಞಾನ. ಶರೀರದ ಕುರಿತು ಮಾತನಾಡುವದೆಂದರೆ ವೈಜ್ಞಾನಿಕ ಅಂಶಗಳನ್ನು ಕುರಿತು ಮಾತನಾಡಿದಂತೆ. ಅದನ್ನು ಅಕ್ಕಮಹಾದೇವಿಯು ತನ್ನ ಒಂದು ವಚನದಲ್ಲಿ ಸಮರ್ಥಿಸಿ ಕೊಂಡಿದ್ದಾಳೆ.

ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ
ಎಲುವಿನ ಹಡಿಕೆ, ಕೀವಿನ ಹಡಿಕೆ
ಸುಡಲೀ ದೇಹವ, ಒಡಲು ವಿಡಿದು ಕೆಡದಿರು
ಚೆನ್ನಮಲ್ಲಿಕಾರ್ಜುನನರಿಯದ ಮರುಳೇ. (ವಚನ ಸಂಖ್ಯೆ–17)

ಈ ದೇಹವನ್ನು (ಶರೀರವನ್ನು) ಮಡಿಕೆಗೆ ಹೋಲಿಸಿದ್ದಾಳೆ. ಅಸ್ಥಿ ಪಂಜರದಿಂದ ಕೂಡಿದ ಈ ಹಂದರದಲ್ಲಿ ರಸ, ರಕ್ತ, ಮಾಂಸ ಮತ್ತು ನೀರು ಇದರಲ್ಲಿ ವ್ಯಾಪಿಸಿಕೊಂಡಿರುವುದಂತು ಸತ್ಯ. ಇಂತಹ ವೈಜ್ಞಾನಿಕ ಅಂಶಗಳ ಜ್ಞಾನವನ್ನು ಅಕ್ಕಮಹಾದೇವಿ ಪಡೆದಿರುವಳೆಂದು ಇಲ್ಲಿ ಮನಗೆ ತಿಳಿದುಬರುವುದು. ಅಂದರೆ, ವಿಜ್ಞಾನದ ಕುರಿತಾದ ತಿಳುವಳಿಕೆ ಅವರಲ್ಲಿ ಇತ್ತು ಎಂಬುದಕ್ಕೆ ಇದು ಸಾಕ್ಷಿ. ಭೌತಿಕಶರೀರ (ದೇಹ) ಭಸ್ಮವಾಗುವಂತಹದು. ಶಾಶ್ವತವಲ್ಲ, ನಾಶವಾಗುವ ಶರೀರವನ್ನು ಬೆನ್ನಹತ್ತಿ ಹೋಗಬೇಡಿ. ಅದಕ್ಕಿಂತಲೂ ಮಿಗಿಲಾದ, ಈ ಶರೀರವನ್ನು ನಿಯಾಮಿಸುವ ಶಕ್ತಿ ಇದೆ, ಅದನ್ನು ತಿಳಿಯುವ ಪ್ರಯತ್ನ ಮಾಡಬೇಕು ಮರುಳೆ, ಎಂಬ ಆಧ್ಯಾತ್ಮದ ಸಂದೇಶವನ್ನು ನೀಡುತ್ತಾಳೆ. ಆದ್ದರಿಂದ ಮೇಲಿನ ಮಾತುಗಳೆಲ್ಲ ಶರೀರ ರಚನಾಶಾಸ್ತ್ರದ (ಅಂಗ ರಚನಾಶಾಸ್ತ್ರದ) ಕೆಲವಾರು ಅಂಶಗಳನ್ನು ಸಾಬೀತುಪಡಿಸುವ ನಿದರ್ಶನಗಳು.

(4) ಆರೋಗ್ಯಶಾಸ್ತ್ರದ ವೈಜ್ಞಾನಿಕ ಅಂಶಗಳ ಕುರಿತಾದ ವಚನಗಳು: ಆರೋಗ್ಯಶಾಸ್ತ್ರವು ಕೂಡಾ ಅತ್ಯಂತ ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿದೆ. ಋಷಿ–ಮುನಿಗಳು ಆರೋಗ್ಯಕ್ಕಾಗಿ ನೀಡಿದ ಉತ್ಕೃಷ್ಟವಾದ ಸಲಹೆಗಳು ಮನುಷ್ಯನು ಆರೋಗ್ಯವಂತನಾಗಿ ಜೀವನವನ್ನು ನಡೆಸಲು ಸಾಧ್ಯವಾಗುವುದು. ಅನಾರೋಗ್ಯಕ್ಕೆ ತುತ್ತಾದವನು ಯಾವ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲ. ಮನಸ್ಸು ಹಾಗೂ ದೇಹ ಆರೋಗ್ಯಪೂರ್ಣವಾಗಿದ್ದರೆ, ಜೀವನದಲ್ಲಿ ಯಶಪಡೆಯಲು ಸಾಧ್ಯ. ಅಕ್ಕನ ವಚನಗಳಲ್ಲಿ ಆರೋಗ್ಯದ ಕುರಿತ ವಚನಗಳು ತುಂಬಾ ಕಾಣುತ್ತೇವೆ. ಆರೋಗ್ಯವು ಸುಖಜೀವನಕ್ಕೆ ಅವಶ್ಯ. ಆರೋಗ್ಯಪೂರ್ಣ ಮನುಷ್ಯ ಮಾತ್ರ ಚೆನ್ನಾಗಿ ಕೆಲಸಮಾಡಬಲ್ಲ. ಇದರಿಂದ ಸಾಮಾಜಿಕ ಪಿಡುಗು ಉಂಟಾಗಲಾರದು. ಆರೋಗ್ಯ ಒಂದು ಶ್ರೇಷ್ಠ ಗುಣಧರ್ಮ. ಹಿತಮಿತ ಮತ್ತು ಮಿತಹಿತ ಎಂಬ ಮಾತಿನಂತೆ ಹಿತವಾಗಿ ಹಾಗೂ ಮಿತವಾಗಿ ಆಹಾರ ಸೇವನೆ ಮಾಡಬೇಕು. ಅತೀಯಾದ ಆಹಾರ ಸೇವನೆಯಿಂದ ಮನುಷ್ಯ ನಾನಾ ರೋಗಗಳಿಗೆ ತುತ್ತಾಗುತ್ತಾನೆ. ಅದರಲ್ಲಿ ಮುಖ್ಯವಾಗಿ ಸೋಮಾರಿತನ, ಹಾಗೂ ಆಲಸ್ಯ, ನಿದ್ರೆಗೆ ಮನುಷ್ಯ ಒಳಗಾಗುತ್ತಾನೆ. ಅತೀ ಆಹಾರ ಸೇವನೆಯಿಂದ ಮನುಷ್ಯ ತನ್ನಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಿಲ್ಲ. ದೈಹಿಕ ತೃಷೆಗಳನ್ನು ನಿಯಂತ್ರಿಸಲು ಆಹಾರ ಭುಂಜಿಸುವ ಕ್ರಮದಲ್ಲಿ ಪಥ್ಯಗಳನ್ನು ಪಾಲಿಸಲೇಬೇಕು.

ಆಹಾರವ ಕಿರಿದು ಮಾಡಿರಣ್ಣಾ, ಆಹಾರವ ಕಿರಿದು ಮಾಡಿ,
ಆಹಾರದಿಂದ ವ್ಯಾಧಿ ಹಬ್ಬಿ ಬಲಿವುದಯ್ಯಾ
ಆಹಾರದಿಂ ನಿದ್ರೆ, ನಿದ್ರೆಯಂ ತಾಮಸ, ಅಜ್ಞಾನ, ಮೈಮರಹು
ಅಜ್ಞಾನದಿಂ ಕಾಮವಿಕಾರ ಹೆಚ್ಚಿ,
ಕಾಯವಿಕಾರ, ಮನೋವಿಕಾರ, ಇಂದ್ರಿಯವಿಕಾರ,
ಭಾವವಿಕಾರ, ವಾಯುವಿಕಾರವನುಂಟು ಮಾಡಿ,
ಸೃಷ್ಟಿಗೆ ತಹುದಾದ ಕಾರಣ ಕಾಯದ ಅತಿಪೋಷಣ ಬೇಡ.

ಅತಿಪೋಷಣೆ ಮೃತ್ಯುವೆಂದುದು,
ಜಪ ತಪ ಧ್ಯಾನ ಧಾರಣ ಪೂಜೆಗೆ ಸೂಕ್ಷ್ಮದಿಂ ತನುಮಾತ್ರವಿದ್ದರೆ ಸಾಲದೆ?
ತನುವ ಪೋಷಿಸವ ಆಸೆ ಯತಿತ್ವಕ್ಕೆ ವಿಘ್ನವೆಂದುದು.
ತನುಪೋಷಣೆಯಿಂದ ತಾಮಸ ಹೆಚ್ಚಿ, ಅಜ್ಞಾನದಿಂ ವಿರಕ್ತಿ ಹಾನಿ,
ಅರಿವು ನಷ್ಟ, ಪರವು ದೂರ, ನಿರಕೆ ನಿಲವಿಲ್ಲದ ಕಾರಣ
ಚೆನ್ನಮಲ್ಲಿಕಾರ್ಜುನನೊಲಿಸ ಬಂದ ಕಾಯುವ
ಕೆಡಿಸಿದೆ ಉಳಿಸಿಕೊಳ್ಳಿರಯ್ಯಾ. (ವಚನ ಸಂಖ್ಯೆ- 58)

ಈ ವಚನವು ಪ್ರಸ್ತುತ ನುರಿತ ವೈದ್ಯನು ಹೇಗೆ ರೋಗಿಗಳಿಗೆ ಸಲಹೆಯನ್ನು ನೀಡಬೇಕೆನ್ನುವುದನ್ನು ತಿಳಿಸಿದಂತಿದೆ. ಇಲ್ಲಿ ಅಕ್ಕನ ಜಾಣ್ಮೆಯ ವಿಚಾರಗಳು ವೈಜ್ಞಾನಿಕ ನಿಲುವುಗಳನ್ನು ಸಮರ್ಥಿಸಿದಂತಲ್ಲವೇ? ಇದಕ್ಕಿಂತ ಮಿಗಿಲಾದ ವಿಜ್ಞಾನದ ಅಂಶಗಳು ಬೇರೆಯವು ಇರಲು ಸಾಧ್ಯವೇ? ರೋಗ-ರುಜಿನಗಳಿಗೆ ಆಗರವಾದ ಶರೀರ ಆರೋಗ್ಯದಿಂದರಬೇಕಾದರೆ, ಆಹಾರ ಸೇವನೆಯಲ್ಲಿ ಮಿತಿ ಇರಬೇಕು. ಇದರಿಂದ ಪಂಚವಿಕಾರಗಳಿಂದ ದೂರ ಇರಲು ಸಾಧ್ಯ. ಅತೀಯಾದ ಆಹಾರ ಸೇವನೆಯು ಮೃತ್ಯುವನ್ನು ತಂದು ನಿಲ್ಲಿಸುವುದು. ಅಂತೆಯೇ, ಮುಂಜಾಗ್ರತೆಯನ್ನು ವಹಿಸಬೇಕು. ದೇಹವನ್ನು ಕಾಯಕದಲ್ಲಿ (ದುಡಿಮೆಯಲ್ಲಿ) ತೊಡಗಿಸಬೇಕೆಂಬ ಮಾತು ಅರ್ಥಪೂರ್ಣ.

ಸಮಾರೋಪ: ವಚನಗಳು ಹನ್ನೆರಡನೆಯ ಶತಮಾನದಲ್ಲಿ ರಚನೆಗೊಂಡವು. ಅವುಗಳನ್ನು ಶಿವಶರಣ-ಶರಣೆಯರು ಆಧ್ಯಾತ್ಮ ಮತ್ತು ಧರ್ಮವನ್ನಷ್ಟೇ ಸಾರದೇ, ವಿಜ್ಞಾನದ ಅಂಶಗಳ ಜ್ಞಾನವನ್ನು ಪಡೆದಿದ್ದರೆಂಬುದಕ್ಕೆ ಸಾಕ್ಷಿ. ಈಗೀಗ ವಚನಗಳಲ್ಲಿ ವಿಜ್ಞಾನವನ್ನು ಕಾಣುವ ಕೆಲಸ ಪ್ರಾರಂಭವಾಗಿದ್ದು ಬಹು ಸಂತೋಷ. ಈ ವಿಚಾರಗಳು ವಚನದಲ್ಲಿ ಬಹುಪ್ರಮಾಣದಲ್ಲಿ ಕಂಡು ಬಂದಿಲ್ಲವಾದರು ವಿದ್ವಾಂಸರು, ವಿಜ್ಞಾನಿಗಳು ವಚನಗಳನ್ನು ಇನ್ನಷ್ಟು ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸಿದರೆ ವೈಜ್ಞಾನಿಕ ವಿಚಾರಗಳು ಹೊರಬರಲು ಸಾಧ್ಯ.

ಗ್ರಂಥಋಣ:
1) ಡಾ.ವೀರಣ್ಣ ರಾಜೂರ (ಸಂ): ಶಿವಶರಣೆಯರ ವಚನ ಸಂಪುಟ,5 ಪ್ರಕಾಶಕರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು (ಕರ್ನಾಟಕ ಸರ್ಕಾರ) 1993.

ಹದಿಹರೆಯದವರಲ್ಲಿ ಒತ್ತಡ ಮತ್ತು ಹೊಂದಾಣಿಕೆ ನಡುವಿನ ಸಂಬಂಧ: ಒಂದು ಮನೋವೈಜ್ಞಾನಿಕ ಅಧ್ಯಯನ

*ಮಧು ಕರ್ನಾಟ್ ಎಸ್, ** ಡಾ. ಎನ್ ಎಲ್ ಶ್ರೀಮತಿ
*ಸಂಶೋಧನ ವಿದ್ಯಾರ್ಥಿ, ** ಪ್ರೊಫೆಸರ ಮತ್ತು ಅಧ್ಯಕ್ಷರು, ಮನೋವಿಜ್ಞಾನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಪ್ರಸ್ತುತ ಅಧ್ಯಯನದ ಮುಖ್ಯ ಧ್ಯೇಯವು ಒತ್ತಡ ಮತ್ತು ಹೊಂದಾಣಿಕೆಯ ನಡುವಿನ ಸಹ ಸಬಂಧ ಹಾಗೂ ಇವುಗಳ ಮೇಲೆ ಲಿಂಗದ ಪ್ರಭಾವವನ್ನು ನಿರ್ಧರಿಸುವುದು. ಈ ಅಧ್ಯಯನದಲ್ಲಿ 120 ವಿದ್ಯಾರ್ಥಿಗಳನ್ನು ದತ್ತಾಂಶ ಸಂಗ್ರಹಕ್ಕೆ ಆಯ್ಕೆಮಾಡಲಾಗಿದ್ದು, ಇವರಲ್ಲಿ 60 ಪುರುಷರು ಮತ್ತು 60 ಮಹಿಳಾ ವಿದ್ಯಾರ್ಥಿಗಳು ಇದ್ದರು. ಈ ಅಧ್ಯಯನದಲ್ಲಿ ಸಹ ಸಂಬಂಧ ಮತ್ತು ದ್ವಿಪುಚ್ಛ 't' ಪರಿಕ್ಷೆಯನ್ನು ಬಳಸಿಕೊಳ್ಳಲಾಯಿತು. ಪಡೆದ ಫಲಿತಾಂಶವು ಒತ್ತಡ ಮತ್ತು ಹೊಂದಾಣಿಯಲ್ಲಿ ಋಣಾತ್ಮಕ ಸಹಸಂಬಂಧವಿದೆ ಎಂದು ತಿಳಿಸುತ್ತದೆ ಮತ್ತು ಪುರುಷ ಹಾಗೂ ಮಹಿಳಾ ವಿದ್ಯಾರ್ಥಿಗಳಲ್ಲಿ ಒತ್ತಡ ಮತ್ತು ಹೊಂದಾಣಿಕೆಯಲ್ಲಿ ಗಣನೀಯವಾದ ವ್ಯತ್ಯಾಸವಿದೆ ಎಂದು ಕಂಡುಬಂದಿದೆ. ಈ ಅಧ್ಯಯನವು ಹದಿಹರೆಯದವರಲ್ಲಿ ಒತ್ತಡ ನಿವಾರಿಸುವ ಮತ್ತು ಹೊಂದಾಣಿಕೆಯನ್ನು ಹೆಚ್ಚಿಸುವ ಬಗ್ಗೆ ಕೆಲವು ಪರಿಹಾರೋಪಯಗಳನ್ನೂ ಸೂಚಿಸಿದೆ.

ಪೀಠಿಕೆ

ತಾರುಣ್ಯಾವಸ್ಥೆ ಅರ್ಥ: ವ್ಯಕ್ತಿಯ ಜೀವನದಲ್ಲಿ ತಾರುಣ್ಯವಸ್ಥೆಯ ಹಂತವು ಬಹುಮುಖ್ಯವಾದುದು. ಇದು ಬಾಲ್ಯಾವಸ್ಥೆ ಮತ್ತು ಯೌವನಾವಸ್ಥೆಯ ನಡುವಿನ ಕಾಲ. ತಾರುಣ್ಯಾವಸ್ಥೆ ಎಂಬುದು ಬದುಕೆಂಬ ಏಣಿಯ ಮಧ್ಯದ ಮೆಟ್ಟಿಲು. ಇದು ವ್ಯಕ್ತಿಯ ಜೀವನದ ಸಂಕ್ರಮಣ ಕಾಲವಾಗಿದ್ದು ಹೊಸ ಜೀವನವನ್ನು ಪಡೆದುಕೊಳ್ಳುವ ಕಾಲವಾಗಿದೆ. ಹದಿಹರೆಯದ (ವಯಸ್ಸು 13-18) ರವರನ್ನು ಸಾಮಾನ್ಯವಾಗಿ ತಾರುಣ್ಯಾವಸ್ಥೆಯ ಸೂಚಕವೆಂದು ಅರ್ಥೈಸಲಾಗಿದೆ.

ತಾರುಣ್ಯಾವಸ್ಥೆಯನ್ನು ಆಂಗ್ಲ ಭಾಷೆಯಲ್ಲಿ Adolescence ಎಂದು ಕರೆಯುವರು. Adolescence ಎಂಬ ಆಂಗ್ಲ ಪದವು ಲ್ಯಾಟಿನ್ ಭಾಷೆಯ Adolescere ಎಂಬ ಪದದಿಂದ ಉತ್ಪತ್ತಿಯಾಗಿದೆ. ಇದರರ್ಥ ಪರಿಪಕ್ವತೆಯೆಡೆಗೆ ಬೆಳವಣಿಗೆ ಹೊಂದುವುದು ಎಂದಾಗುತ್ತದೆ. ಬಿ. ಕುಪ್ಪಸ್ವಾಮಿ (1974): ತಾರುಣ್ಯವಸ್ಥೆಯು ಬಾಲ್ಯಾವಸ್ಥೆ ಮತ್ತು ವಯಸ್ಕರ ನಡುವಿನ ಜೈವಿಕ ಸಾಮಾಜಿಕ ಬದಲಾವಣೆಯ ಅವಧಿಯಾಗಿದೆ.

ಸ್ಥಿಮಿತಭಾವ: ಬೆಳೆದ ತರುಣ – ತರುಣಿಯರಲ್ಲಿ ಹೆಚ್ಚು ಸ್ಥಿಮಿತಭಾವ, ಚಿತ್ತಶಾಂತಿ ಮತ್ತು ವಾಸ್ತವಿಕ ದೃಷ್ಟಿಗಳು ಕಂಡುಬರುತ್ತದೆ. ದಿನಗಳೆದಂತೆ ತಮ್ಮ ಅಭಿರುಚಿಗಳು ಗೆಳೆತನ ಅಭಿವ್ಯತ್ತಿಗಳು ಮತ್ತು ಭಾವಜೀವನಗಳಲ್ಲಿ ಅವರು ಹೆಚ್ಚು ಸ್ಥಿಮಿತ ಭಾವದಿಂದ ಕೂಡಿರುತ್ತಾರೆ (Crow and Crow, 1965). ಇದರಿಂದಾಗಿ ಜೀವನದ ವಿವಿಧ ಕ್ಷೇತ್ರಗಳಲ್ಲಿನ ಅವರ ಹೊಂದಾಣಿಕೆಯು ಹೆಚ್ಚು ವ್ಯವಸ್ಥಿತವಾಗಿ ತೊಡಗುತ್ತದೆ. ಈ ಅವಧಿಯೂ ತಮ್ಮ ತಂದೆ-ತಾಯಿಯರಿಂದ ದೂರವಿದ್ದು, ವಿದ್ಯಾರ್ಥಿನಿಲಯ ವಾಸಿಸುತ್ತಿರುವವರು, ತಮ್ಮ ವ್ಯವಹಾರವನ್ನು ತಾವೇ ನಿರ್ವಹಿಸಿಕೊಳ್ಳಲು ಕಲಿಯುತ್ತಾರೆ ಅಲ್ಲದೆ ಅಮಿಭಾವವು ಬೆಳೆಯಲು ಹೆಚ್ಚು ಅನುಕೂಲವಾಗುತ್ತದೆ (Hurlock, 1968). ಇದರಂತೆಯೇ ದೊಡ್ಡಕುಟುಂಬದಲ್ಲಿ ಬೆಳೆಯುವವರು ಕೂಡ ಈ ವಯಸ್ಸಿನ ವೇಳೆಗೆ ಹೆಚ್ಚು ಸ್ಥಿಮಿತಭಾವವನ್ನು ಬೆಳೆಸಿ ಕೊಂಡಿರುತ್ತಾರೆ. ತಾರುಣ್ಯಾವಸ್ಥೆಯ – ಬಾಲ್ಯವಸ್ಥೆ, ಮತ್ತು ಪ್ರೌಢವಸ್ಥೆಯ ನಡುವೆ ಸಂಭವಿಸುವ ದೈಹಿಕ ಮತ್ತು ಮಾನಸಿಕವಾಗಿ ವ್ಯಕ್ತಿಯ ವಿಕಾಸನದ ಸಂಕ್ರಮಣಾವಸ್ಥೆಯಾಗಿದೆ.

ಒತ್ತಡ (Stress): ಮಾನವ ಇಂದು ಆತಂಕಯುಗದ ಮಾನವನಾಗಿದ್ದಾನೆ. ಹಿಂದೆ ಮಾನವನು ಮೂಲಭೂತ ಅವಶ್ಯಕತೆಯನ್ನು ಈಡೇರಿಸಿಕೊಳ್ಳುವಲ್ಲಿ ಅವನ ಮನಸ್ಸು ಸಂತೃಪ್ತಿಗೊಳ್ಳುತ್ತಿತ್ತು. ಮತ್ತು ಇವುಗಳ ಸಫಲತೆಯನ್ನು ಕಂಡುಕೊಳ್ಳುತ್ತಿದ್ದ. ಆದರೆ ಮನವು

ವಿಕಾಸಗೊಂಡಂತೆ ಅವನ ಮನಸ್ಸು ಹೆಚ್ಚು ಹೆಚ್ಚು ವಿಕಾಸಗೊಂಡು, ಅವನ ಮನಸ್ಸಿನಲ್ಲಿ ಹಲವಾರು ರೀತಿಯ ಯೋಚನೆಗಳು ಹುಟ್ಟುಕೊಳ್ಳತೊಡಗಿದವು. ತಾನು ಎಲ್ಲರನ್ನು ಮೀರಿಸಬೇಕು, ಹೆಚ್ಚು ಸಾಧನೆಗೈಬೇಕು, ಎಲ್ಲರಿಗಿಂತ ಉನ್ನತ ಮಟ್ಟಕೇರಬೇಕೆಂಬ ಹಂಬಲ, ಛಲ ಅವನಲ್ಲಿ ಉದ್ಭವಿಸಿದವು. ಇದರಿಂದ ಅವನ ಜೀವನ ಶೈಲಿಯಲ್ಲಿ ವ್ಯಾಪಕವಾದ ಬದಲಾವಣೆಗಳು ಉಂಟಾದವು. ಮತ್ತು ತನ್ನ ಸಾಮರ್ಥ್ಯವನ್ನು ಮೀರಿ ಕೆಲಸ ಕಾರ್ಯಗಳಲ್ಲಿ ತೊಡಗುವುದು ಇಂದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಅದರ ಪರಿಣಾಮವಾಗಿ ಕ್ಷಣ ಕ್ಷಣಕ್ಕೆ ಅನುಭವಿಸುತ್ತಿರುವ ಭಯ, ಆತಂಕ, ಕೋಪ, ದುಃಖ, ನಿರಾಸೆ, ಹತಾಶೆ, ಹಿಂಜರಿತ, ನಕಾರಾತ್ಮಕ ವರ್ತನೆಗಳಿಂದ, ಮನಸ್ಸಿನಲ್ಲಿ ಗೊಂದಲ, ತನ್ನ ಆತಂಕಗಳನ್ನು ತನ್ನಲ್ಲೇ ಅದುಮಿಡತೊಡಗಿದ ಪರಿಣಾಮವೇ ಮಾನಸಿಕ ಒತ್ತಡಕ್ಕೆ ಕಾರಣವಾಗುತ್ತದೆ (ವೆನ್ಡ್ಡೈಡೀನ್, 2001) ಈ ರೀತಿ ನಿರಂತರವಾದ ತಡೆಯಲಾಗದ ಹೊರ ಚೆಲ್ಲದ ಒತ್ತಡಗಳು ನಮ್ಮ ಅಂಗಾಂಗಳಲ್ಲಿ ಬೆರೆತು ಅವುಗಳ ಮೇಲೆ ಪರಿಣಾಮ ಬೀರುತ್ತದೆ.

ಕೆಲವೊಂದು ಒತ್ತಡವನ್ನು ಮನೋ–ಸಾಮಾಜಿಕ (Psycho-Social) ವರ್ಗಕ್ಕರ ಸೇರಿಸಬಹುದು. ಈ ಪದವನ್ನು ಅಂದರೆ ಒತ್ತಡವನ್ನು ವಿವಿಧ ಅರ್ಥದಲ್ಲಿ ತಿಳಿದುಕೊಳ್ಳಬಹುದು. ಒತ್ತಡವು ಭೌತಿಕ ವಿಜ್ಞಾನದಿಂದ (Psycho-Social) ಉಗಮವಾಗಿದೆ. ಭೌತಿಕ ವಿಜ್ಞಾನದ ಪ್ರಕಾರ ವ್ಯಕ್ತಿಯ ಅಸಹನೀಯ ಅಥವಾ ಮಿತಿ ಮೀರಿದ ಸಂದಿಗ್ಧ ಪರಿಸ್ಥಿತಿ. ಈ ಒತ್ತಡವು ಮಾನಸಿಕ ಮತ್ತು ದೈಹಿಕ ಬದಲಾವಣೆಗೂ ಕಾರಣವಾಗುತ್ತದೆ. (ಸ್ಪಿಪನ್ ಪ್ಲಾಮರ್, 2001). ಗ್ರಂಥಿಶಾಸ್ತ್ರಜ್ಞನಾದ ಹ್ಯಾನ್ಸ್‌ಸೆಲ್ಯೆ (ಜೈಪ್ರಕಾಶ್, 1998) ಒತ್ತಡದ ಬಗ್ಗೆ ಪ್ರಥಮವಾಗಿ ಜೈವಿಕ ವಿಜ್ಞಾನದಲ್ಲಿ ಬಳಕೆಗೆ ತಂದರು. ಒತ್ತಡವನ್ನು ಸಾಮಾನ್ಯವಾಗಿ ವ್ಯಾಪ್ತತೆ, ಘರ್ಷಣೆ (Conflict) ಮತ್ತು ಎಡೆಬಿಡದೆ ಒತ್ತಡದ ಬಲ (Pressure) ಎಂದು ಎರ್ಥೈಸಿಕೊಳ್ಳಬಹುದು. ಈ ಮೂರು ವಿವಿಧ ಮೂಲಗಳು ಅಂದರೆ ವ್ಯಾಪ್ತತೆ, ಘರ್ಷಣೆ ಮತ್ತು ಎಡೆಬಿಡದೆ ಒತ್ತಡದ ಬಲ ಒಂದಕ್ಕೊಂದು ನಿಕಟವಾಗಿದ್ದು ಅದು ವ್ಯಕ್ತಿಯ ಒತ್ತಡಕ್ಕೆ ಕಾರಣವಾಗಿದೆ. ಒತ್ತಡವನ್ನು ಕುರಿತಂತೆ ಲಾಜರಸ್ (1977) ಇವರುಗಳು ಒತ್ತಡದ ಬಗ್ಗೆ ಈ ರೀತಿಯಾಗಿ ತರ್ಕಿಸಿದ್ದಾರೆ. "ಯಾವುದಾದರೊಂದು ಗುರಿ ಮುಟ್ಟುವ ಮುನ್ನ ವಸ್ತು ಸ್ಥಿತಿಯಿಂದಾಗುವ ಅಥವಾ ವಾಸ್ತವಿಕೆಯಿಂದಾಗುವ ತೊಂದರೆಯೇ ಅಥವಾ ಬೆದರಿಕೆಯೇ ಒತ್ತಡ".

ಮಾನಸಿಕ ಒತ್ತಡದಿಂದಾಗುವ ಹಾನಿ: ಅಪಾಯ ಎದುರಾಯಿತು ಎಂದರೆ ಅದನ್ನು ಎದುರಿಸಲು "ಓಡು ಇಲ್ಲವೆ ಕಾದಾಡು" ಎನ್ನುವ ಮೂಲಭೂತ ಪ್ರೇರಣೆಯನ್ನು ಜೀವಿಗಳಲ್ಲಿ ಪ್ರಕೃತಿ ನೀಡಿದೆ. ವಿಷಪೂರಿತ ಹಾವು ಕಂಡರೆ ನಾವು ಓಡುತ್ತೇವೆ. ಇಲ್ಲವೇ ಅದರ ಮೇಲೆ ಆಕ್ರಮಣ ಮಾಡಿ ಅದನ್ನು ಓಡಿಸುವುದೋ, ಸಾಯಿಸುವುದೋ ಮಾಡುತ್ತೇವೆ ಒಟ್ಟಿನಲ್ಲಿ "Fight or Flight" ದೇಹದ ಶಕ್ತಿಯು ಅಪಾಯವನ್ನು ಎದುರಿಸಲು ಒಟ್ಟಾಗುತ್ತದೆ. ದಿನನಿತ್ಯದ ಜಂಜಾಟಗಳಿಗೆಲ್ಲಾ ಹೀಗೆ ದೇಹ ಪ್ರತಿಕ್ರಯಿಸಿದರೆ ಬಹು ಬೇಗ ಅದು ನಿತ್ರಾಣ ಸ್ಥಿತಿ ತಲುಪುತ್ತದೆ. ಈ ಸ್ಥಿತಿಯಲ್ಲಿ ರೋಗ ನಿರೋಧಕ ಶಕ್ತಿ ಕುಗ್ಗಿ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಮಾನಸಿಕ ಒತ್ತಡದ ಪರಿಣಾಮವು ದೇಹ, ಮನಸ್ಸು, ಮತ್ತು ವರ್ತನೆಯ ಮೇಲಾಗುತ್ತದೆ.

ಈ ಎಲ್ಲಾ ಒತ್ತಡವೂ ಕೆಟ್ಟದೇ ಎನ್ನಲಾಗುವುದಿಲ್ಲ. ದಿನನಿತ್ಯದ ಜೀವನದಲ್ಲಿ ಒಂದಿಷ್ಟು, ಆತಂಕ, ಭೀತಿ ಇರಬೇಕಾದದ್ದೇ ಇದಲ್ಲದಿದ್ದರೆ ವ್ಯಕ್ತಿಗೆ ಏನನ್ನೂ ಸಾಧಿಸಬೇಕೆಂಬ ಪ್ರೇರಣೆಗಳೇ ಇರುವುದಿಲ್ಲ. ಅತಿಯಾದ ಒತ್ತಡ, ಸದಾ ಇರುವ ಒತ್ತಡ, ಸಹಾಯ ಅಥವಾ ಸಾಂತ್ವಾನ ನೀಡುವ ಆಪ್ತರು ಇಲ್ಲದಿರುವಾಗ ಒತ್ತಡ ದುಷ್ಪರಿಣಾಮ ಉಂಟು ಮಾಡುತ್ತದೆ.

ಹೊಂದಾಣಿಕೆ/ಸಮಯೋಜನೆ (Adjustment): ಸಮಯೋಜನೆ ಎಂಬುದು ಕ್ರಿಯಾ ಪದವಾಗಿದ್ದು ಇದರ ಅರ್ಥ ಹೊಂದಿಕೆ ಮಾಡಿಕೊಳ್ಳುವುದು, ರೂಢಿಸಿಕೊಳ್ಳುವುದು ಅಥವಾ ಸರಿಹೊಂದಿಸಿಕೊಂಡು ಹೋಗುವುದು ಎಂದಾಗಿದೆ. ಪ್ರತಿಯೊಂದು ಜೀವಿಯೂ ತನ್ನ ಪರಿಸರಕ್ಕೆ ಹೊಂದಿಕೊಳ್ಳಲೇಬೇಕು. "ವ್ಯಕ್ತಿ ತನ್ನ ಪರಿಸರದೊಂದಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹೊಂದಿಕೊಳ್ಳುವ ಪ್ರಕ್ರಿಯೆಯೇ ಸಮಯೋಜನೆ.

ಸಮಯೋಜನೆ ಕ್ರಿಯೆಯು ಒಬ್ಬ ವ್ಯಕ್ತಿಯಲ್ಲಿ ಮಾನಸಿಕವಾಗಿ ದೈಹಿಕವಾಗಿ ತನ್ನ ವಾತಾವರಣಕ್ಕೆ ಹೊಂದಿಕೊಳ್ಳುವ ಪ್ರಯತ್ನ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಒಬ್ಬ ವ್ಯಕ್ತಿ ಅವನ ಭೌಗೋಳಿಕೆ ಮತ್ತು ಸಾಮಾಜಿಕ ವಾತಾರಣಕ್ಕೆ ಹೊಂದಿಕೊಂಡು ನಡೆಯುತ್ತಿದ್ದರೆ ಅವನು ಸಮಂಜಸ ವ್ಯಕ್ತಿತ್ವವನ್ನು ಹೊಂದಿರುತ್ತಾನೆಂದು ಹೇಳಬಹುದು. ಆಂತರೀಕ ಘರ್ಷಣೆಗಳು ಮತ್ತು ಆಶಾಭಾವನೆಗಳು ಇಲ್ಲದಿದ್ದರೆ ಅವನದು ಹೊಂದಾಣಿಕೆ ವ್ಯಕ್ತಿತ್ವ, ಇಲ್ಲಿ ವ್ಯಕ್ತಿಯ ಅನುಭವಕ್ಕೆ ಮತ್ತು ಅವನ ಸ್ವಯಂಭಾವಕ್ಕೆ ಹೆಚ್ಚು ಬೆಲೆಯಿರುತ್ತದೆ. Cattell ರವರ ಪ್ರಕಾರ ಸಮಯೋಜನೆಯ ಆಂತರಿಕ ಘರ್ಷಣೆ ಮತ್ತು ಅಸ್ಥಿರತೆಯಿಂದ ಸ್ವತಂತ್ರವಾಗಿರುದಾಗಿದೆ.

ಅಪಹೊಂದಾಣಿಕೆ ಮತ್ತು ಅಪಸಮಾಯೋಜನೆ (Maladjustment): ವ್ಯಕ್ತಿಯ ಸತತವಾಗಿ ತನ್ನ ಪರಿಸರಕ್ಕೆ ಹೊಂದಿಕೊಳ್ಳುವ ಪ್ರಕ್ರಿಯೆಯೂ ವ್ಯಕ್ತಿಯ ಹತೋಟಿಯನ್ನು ಮೀರಿದ ಅನೇಕ ಆಂತರಿಕ ಮತ್ತು ಬಾಹ್ಯ ಕಾರಣಗಳಿಂದ ನಿರ್ಧರಿಸಲ್ಪಡುತ್ತದೆ. ಆದ್ದರಿಂದ ಹೊಂದಾಣಿಕೆ ಸೂಸೂತ್ರವಾಗಿ ನಡೆಯದೇ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪವುಂಟಾಗಿ ವ್ಯಕ್ತಿಯು ಸಮಾಯೋಜನೆ ಸಮಸ್ಯೆಯನ್ನು ಎದುರಿಸುತ್ತಾನೆ. ಇವುಗಳಿಂದ ವ್ಯಕ್ತಿ ವಿಭಿನ್ನ ರೀತಿಯಲ್ಲಿ ವರ್ತಿಸಲು ತೊಡಗಿ ಅಸಮಾಯೋಜನೆಗೆ ಒಳಗಾಗುತ್ತಾನೆ. ಅಪಹೊಂದಾಣಿಕೆಯನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ: ಮನೋಬೇನೆಗಳು (Neuroses) ಉದ್ವಿಗ್ನತೆ, ಭೀತಿ, ನಿದ್ದೆಗೇಡುತನ... ಮತ್ತು ಮನೋವಿಕೃತಿಗಳು (Psychoses) ಇಚ್ಛಿತ್ತ, ಉನ್ಮಾದ, ವಿಷಾದ...

ಸಂಶೋಧನಾ ಧ್ಯೇಯ: ಒತ್ತಡ ಮತ್ತು ಹೊಂದಾಣಿಕೆಯ ನಡುವಿನ ಸಹ ಸಬಂಧ ಹಾಗೂ ಇವುಗಳ ಮೇಲೆ ಲಿಂಗದ ಪ್ರಭಾವವನ್ನು ನಿರ್ಧರಿಸುವುದು.

ಪ್ರಾಕಲ್ಪನೆಗಳು:

1. ಒತ್ತಡ ಮತ್ತು ಹೊಂದಾಣಿಕೆಗು ಸಹ ಸಬಂಧವಿದೆ.
2. ಹುಡುಗ ಮತ್ತು ಹುಡುಗಿಯರಲ್ಲಿ ಒತ್ತಡ ಮತ್ತು ಹೊಂದಾಣಿಕೆಯಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

ಚರಾಂಶಗಳು:

➢ಸ್ವತಂತ್ರ ಚರಾಂಶಗಳು

1. ಲಿಂಗ

➢ ಪರತಂತ್ರ ಚರಾಂಶಗಳು

1. ಒತ್ತಡ ಪ್ರಶ್ನಾವಳಿ
2. ಹೊಂದಾಣಿಕೆ ಪ್ರಶ್ನಾವಳಿ

ಸಂಖ್ಯಾಶಾಸ್ತ್ರೀಯ ವಿಧಾನಗಳು:
ದ್ವಿಮಾಧ್ಯಮಾಂಕ / ದ್ವಿಪುಚ್ಛ 'T' ಲಕ್ಷ್ಯಾರ್ಹತೆಯ ಪರೀಕ್ಷೆ

ಸಲಕರಣೆಗಳು:
ವೈಯಕ್ತಿಕ ವಿವರಪಟ್ಟಿ, ಒತ್ತಡ ಪ್ರಶ್ನಾವಳಿ ಮತ್ತು ಸಮಯೋಜನಾ ಪ್ರಶ್ನಾವಳಿ. ವಿವರಣೆ:

1. ವೈಯಕ್ತಿಕ ಮಾಹಿತಿ ಪತ್ರ: ವ್ಯಕ್ತಿಯ ವೈಯಕ್ತಿಕ ಮಾಹಿತಿಪತ್ರದಲ್ಲಿ ವ್ಯಕ್ತಿಯ ಹೆಸರು, ವಯಸ್ಸು, ಲಿಂಗ, ವಿದ್ಯಾರ್ಹತೆ, ಜನನ ಕ್ರಮ, ಕುಟುಂಬ ವಿಧ, ವಾಸಿಸುವ ಪ್ರದೇಶ, ವೈವಾಹಿಕ ಸ್ಥಾನಮಾನ, ತಂದೆ ತಾಯಿಯ ಆದಾಯ ಇತ್ಯಾದಿಗಳ ಬಗ್ಗೆ ತಿಳಿದು ಕೊಳ್ಳಲು ಈ ವೈಯಕ್ತಿಕ ಮಾಹಿತಿ ಪಟ್ಟಿಯನ್ನು ತಯಾರಿಸಲಾಯಿತು.

2. ಜೀವನ ಸನ್ನಿವೇಶಗಳ ಒತ್ತಡ ಗ್ರಹಿಕಾ ಮಾಪನ (1994): ಪ್ರೌಢಶಾಲಾ ವಿದ್ಯಾರ್ಥಿಗಳ ಮತ್ತು ಕಾಲೇಜು ವಿದ್ಯಾರ್ಥಿಗಳ ಒತ್ತಡ ಗ್ರಹಿಕಾ ಅಧ್ಯಯನವನ್ನು ಜೀವನ ಸನ್ನಿವೇಶಗಳ ಒತ್ತಡ ಗ್ರಹಿಕಾ ಮಾಪನದಿಂದ ಅಳತೆಮಾಡಲಾಗಿದೆ. ಇದನ್ನು ಜಿ. ವೆಂಕಟೇಶ್ ಕುಮಾರ್ ಮಾನಸಗಂಗೋತ್ರಿ ಮೈಸೂರು ಅಭಿವೃದ್ಧಿ ಪಡಿಸಿದರು. ಇದನ್ನು ಹೋಮ್ ಮತ್ತು ರಹೆ (1967) ರವರ ಸಾಮಾಜಿಕ ಪುನರ್ ಹೊಂದಾಣಿಕೆ ದರ್ಜಾಮಾಪನದಿಂದ ಮಾರ್ಪಡಿಸಲಾಗಿದೆ.

3. ಸಮಯೋಜನಾ ಪ್ರಶ್ನಾವಳಿ: ಹೆಚ್. ಎಂ. ಬೆಲ್ಸ್‌ರವರ ಪ್ರಣಾಳಿಕೆಯನ್ನು 1966ರಲ್ಲಿ ಸ್ಟಾನ್ ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಹೆಚ್. ಎಂ. ಬೆಲ್ಸ್‌ರವರು ವಿಕಾಸಗೊಳಿಸಿದರು. ಈ ಪ್ರಣಾಳಿಕೆಯಲ್ಲಿ ಒಟ್ಟು 140 ಪ್ರಶ್ನೆಗಳಿದ್ದು ಅವುಗಳನ್ನು ನಲ್ಕು ವಿಭಾಗಗಳಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ: ಕುಟುಂಬ ಸಮಯೋಜನೆ – 35 ಪ್ರಶ್ನೆಗಳು, ಆರೋಗ್ಯ ಸಮಯೋಜನೆ – 35 ಪ್ರಶ್ನೆಗಳು, ಭಾವನಾತ್ಮಕ ಸಮಯೋಜನೆ –35 ಪ್ರಶ್ನೆಗಳು ಮತ್ತು ಸಾಮಾಜಿಕ ಸಮಯೋಜನೆ –35 ಪ್ರಶ್ನೆಗಳು.

ಅಧ್ಯಯನ ಕ್ಷೇತ್ರದ ವಿನ್ಯಾಸ ಆಯ್ಕೆ ಮತ್ತು ದತ್ತಾಂಶ ಸಂಗ್ರಹಣೆಯ ವಿಧಾನ: ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಉದ್ದೇಶವನ್ನು ಕಾರ್ಯರೂಪಕ್ಕೆ ತರಲು ಪದವಿ ಪೂರ್ವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ದತ್ತಾಂಶ ಸಂಗ್ರಹಣೆ ಮಾಡಲು 16–18 ವಯಸ್ಸಿನ ವಿದ್ಯಾರ್ಥಿಗಳನ್ನು ಆಯ್ಕೆ ಮಡಿಕೊಳ್ಳಲಾಗಿದೆ.

ಸಂಶೋಧನಾ ಕಾರ್ಯಕ್ಕೆ ದತ್ತಾಂಶಸಂಗ್ರಹ ಮಾಡಲು ಕೆ.ಆರ್.ನಗರ ಕ್ಷೇತ್ರದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳ ಲಾಗಿದೆ. ಒಟ್ಟು 120 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡಿದ್ದು 60 ಹುಡುಗರು ಮತ್ತು 60 ಹುಡುಗಿಯರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಯನ ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಮೊದಲು ವ್ಯಕ್ತಿಯ ವೈಯಕ್ತಿಕ ಮಾಹಿತಿ ಪತ್ರವನ್ನು ನೀಡಿ ಭರ್ತಿ ಮಾಡಲು ಹೇಳಲಾಯಿತು. ಮತ್ತು ವ್ಯಕ್ತಿಯ ವೈಯಕ್ತಿಕ ಮಾಹಿತಿ ಸಂಗ್ರಹಣೆ ಮಾಡಲಾಯಿತು. ನಂತರ ಸೂಚನೆಗಳನ್ನು ನೀಡಿ ಪ್ರಶ್ನಾವಳಿಯನ್ನು ಉತ್ತರಿಸಲು ತಿಳಿಸಲಾಯಿತು.

ಫಲಿತಾಂಶ: ಪ್ರಸಕ್ತ ಅಧ್ಯಯನದಲ್ಲಿ ಈ ಹಿಂದೆ ತಿಳಿಯಪಡಿಸಿರುವಂತೆ ಸಂಗ್ರಹಿಸಿದ ದತ್ತಾಂಶಗಳನ್ನು T ಪರೀಕ್ಷೆ, ಸಹ ಸಂಬಂಧ ವಿಶ್ಲೇಷಣೆಗೆ ಒಳಪಡಿಸಿ ಕಂಡು ಬಂದಂತಹ ಫಲಿತಾಂಶಗಳನ್ನು ವಿವಿಧ ವಿಭಾಗಗಳಲ್ಲಿ ವಿಶ್ಲೇಷಿಸಲಾಗಿದೆ.

ತಾಲಿಕೆ – 1

ವಿದ್ಯಾರ್ಥಿಗಳ ಒತ್ತಡ ಮತ್ತು ಸಮಾಯೋಜನೆಯಲ್ಲಿ ಪಡೆದಿರುವ ಸಹ ಸಂಬಂಧ ಪರೀಕ್ಷೆಯ ಸಾಂಖ್ಯೀಕ ವಿವರ :

Stress	Adjustment				
	Family	Health	Social	Emotional	Total
Stress Values	.611	.582	.361	.423	.665
Significance	.000	.000	.000	.000	.000

ಪಟ್ಟಿಯಲ್ಲಿ ನಮೂದಿಸಲ್ಪಟ್ಟಿರುವ ವಿದ್ಯಾರ್ಥಿಗಳ ಫಲಿತಾಂಶದ ಪ್ರಕಾರ ಸಮಾಯೋಜನೆಗೆ ಸಂಬಂಧಿಸಿದಂತೆ ಕುಟುಂಬ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಲ್ಲಿ ಕಂಡು ಬಂದಿರುವ ಒತ್ತಡದ ಅಂಕವು .611 ಆಗಿದ್ದು ಸಮಾಯೋಜನೆಯ ಅಂಕವು .000 ಆಗಿದೆ ಇವೆರಡರ ಅಂಕವು ಪರಸ್ಪರ ಮಹತ್ವತೆಯನ್ನು ಹೊಂದಿದೆ. ಅದೇ ರೀತಿ ಆರೋಗ್ಯ ಕ್ಷೇತ್ರದಲ್ಲಿ ಒತ್ತಡದ ಅಂಕವು .582 ಆಗಿದ್ದು, ಮಾಯೋಜನೆಯ ಅಂಕವು .000 ಆಗಿದೆ ಇವೆರಡರ ಅಂಕವು ಪರಸ್ಪರ ಮಹತ್ವತೆಯನ್ನು ಹೊಂದಿದೆ. ಅದೇ ರೀತಿ ಸಾಮಾಜಿಕ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಲ್ಲಿ ಕಂಡು ಬಂದಿರುವ ಒತ್ತಡದ ಅಂಕವು 0.361 ಆಗಿದ್ದು, ಸಮಾಯೋಜನೆ .000 ಆಗಿದೆ. ಇವೆರಡರ ಅಂಕ ಪರಸ್ಪರ ಮಹತ್ವತೆ ಹೊಂದಿದೆ. ಅದೇ ರೀತಿ ಭಾವಾನಾತ್ಮಕ ಸಮಾಯೋಜನೆ ಕ್ಷೇತ್ರದಲ್ಲಿ ಒತ್ತಡ ಅಂಕವು .423 ಆಗಿದ್ದು ಸಮಾಯೋಜನೆಯ ಅಂಕವು .000 ಆಗಿದ್ದು ಇವೆರಡರ ಅಂಕವು ಪರಸ್ಪರ ಮಹತ್ವತೆಯನ್ನು ಹೊಂದಿದೆ.

ಈ ಮೇಲಿನ ಫಲಿತಾಂಶವನ್ನು ಗಮನಿಸಿದಾಗ ಒತ್ತಡ ಮತ್ತು ಸಮಾಯೋಜನೆಗೆ ಪರಸ್ಪರ ಸಂಬಂಧವಿದ್ದು ಒತ್ತಡ ಹೆಚ್ಚಿದಷ್ಟು ಸಮಾಯೋಜನೆಯ ಸಮಸ್ಯೆ ಉಂಟಾಗುತ್ತದೆ ಎಂದು ಫಲಿತಾಂಶದಿಂದ ತಿಳಿದು ಬಂದಿದೆ.

ತಾಲಿಕೆ – 2

ಹುಡುಗ ಮತ್ತು ಹುಡುಗಿಯರ ಒತ್ತಡ ಮತ್ತು ಒಟ್ಟಾರೆ ಒತ್ತಡದ ಸರಾಸರಿ ಅಂಕಗಳು ಮತ್ತು ದ್ವಿಮಧ್ಯಮಾಂಕ / ದ್ವಿಪುಚ್ಛ 'T', ಲಕ್ಷ್ಯಾರ್ಹತೆಯ ಪರೀಕ್ಷೆ ವಿಶ್ಲೇಷಣೆಯ ಫಲಿತಾಂಶದ ಸಾಂಖ್ಯೀಕ ವಿವರ:

	Gender	Mean	Standard deviation	T	Signifi cance
Stress	Male	22.200	7.18473	-3.835	.000
	Female	27,4500	7.79923		

ಈ ಮೇಲಿನ ತಾಲಿಕೆಯ ಫಲಿತಾಂಶದ ಪ್ರಕಾರ ಹುಡುಗರ ಸರಾಸರಿ ಅಂಕವು 22,2000 ಆಗಿದ್ದು, ಅದರ ಮಾನಕ ವಿಚಲನೆ –7,18473 ಆಗಿದೆ ಮತ್ತು ಹುಡುಗಿಯರ ಸರಾಸರಿ ಅಂಕವು 27,4500 ಆಗಿದ್ದು ಮಾನಕ ವಿಚಲನೆ 7,79923 ಆಗಿದೆ, ಒಟ್ಟಾರೆ ಒತ್ತಡ ದ್ವಿಮಧ್ಯ ಮಾಂಕವು 3,835 ಆಗಿದ್ದು, ಅದರ ಮಹತ್ವ ಪೂರ್ಣತೆಯು .000 ಆಗಿದೆ. ಈ ಫಲಿತಾಂಸದ ಪ್ರಕಾರ ಹುಡುಗಿಯರು ಹುಡುಗರಿಗಿಂತ

ಹೆಚ್ಚಿನ ಒತ್ತಡವನ್ನು ಹೊಂದಿದ್ದು ಇವರಿಬ್ಬರಲ್ಲಿ ಪರಸ್ಪರ ವತ್ಯಾಸ ಕಂಡು ಬಂದಿದೆ.

ತಾಲಿಕೆ – 3

ಹುಡುಗ ಮತ್ತ ಹುಡುಗಿಯರ ಸಮಾಯೋಜನೆ ಮತ್ತು ಒಟ್ಟಾರೆ ಸಮಾಯೋಜನೆಯ ಸರಾಸರಿ ಅಂಕಗಳು ದ್ವಿಮಧ್ಯಮಾಂಕ / ದ್ವಿಪುಚ್ಚ 'T' ಪರೀಕ್ಷಾ ವಿಶ್ಲೇಷಣೆಯ ಫಲಿತಾಂಶದ ಸಾಂಖ್ಯೀಕ ವಿವರ:

Adjustment areas	T-test for equality		
	T	Significane	Mean difference
Family	-2.906	.004	-2.9833
Health	-3.809	.000	-3.4000
Social	-943	.347	-7833
Emotional	-1.808	.073	-1.3833
Total	-3.374	.001	-8.9500

ಈ ಮೇಲಿನ ತಾಲಿಕೆಯ ಫಲಿತಾಂಶದ ಪ್ರಕಾರ ಹುಡುಗ ಮತ್ತು ಹುಡುಗಿಯರ ಕುಟುಂಬ ಸಮಾಯೋಜನೆ ಕ್ಷೇತ್ರದಲ್ಲಿ 'T' ದ್ವಿಮಧ್ಯಮಾಂಕವು –2,906 ಮತ್ತು ಮಹತ್ವತೆಯ ಅಂಕವು .004 ಆಗಿದೆ. ಅದೇ ರೀತಿಯಲ್ಲಿ ಆರೋಗ್ಯ ಸಮಾಯೋಜನೆ ಕ್ಷೇತ್ರದಲ್ಲಿ ಣ ಅಂಕವು –3.809 ಮತ್ತು ಮಹತ್ವತೆಯ ಅಂಕ .000 ಅಗಿದೆ. ಅದೇ ರೀತಿ ಸಾಮಾಜಿಕ ಸಮಾಯೋಜನೆಯು 'T' ಮಧ್ಯಮಾಂಕವು –943 ಮತ್ತು ಮಹತ್ವತೆಯ ಅಂಕ .347 ಅದೇ ರೀತಿ ಭಾವಾನಾತ್ಮಕ ಸಮಾಯೋಜನೆ ಕ್ಷೇತ್ರದಲ್ಲಿ T ಅಂಕವು –1.808 ಮತ್ತು ಮಹತ್ವತೆ ಅಂಕ .073 ಆಗಿರುವುದು ಕಂಡು ಬಂದಿದೆ. ಒಟ್ಟಾರೆ ಫಲಿತಾಂಶದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿನ ಸರಾಸರಿ ಅಂತರವ ಕ್ರಮವಾಗಿ –2.9833, –3.400, –7833, –1.3833 ಆಗಿದೆ. ಹಾಗೆಯೇ ಒಟ್ಟಾರೆ ಎಲ್ಲಾ ಕ್ಷೇತ್ರಗಳಲ್ಲಿನ ಒಟ್ಟಾರೆ ಣ ಅಂಕವು –3.374 ಆಗಿದ್ದು, ಅದರ ಮಹತ್ವತೆಯ ಅಂಶವು .001 ಮತ್ತು ಒಟ್ಟಾರೆ ಸರಾಸರಿ ಅಂತರವು –8.9500 ಆಗಿದ್ದು, ಮಹತ್ವತೆಯ ಅಂಕವು .001 ಬಂದಿರುವುದರಿಂದ ಕಡಿಮೆ ಸಮಾಯೋಜನೆ ಹೊಂದಿರುವುದು ಕಂಡು ಬಂದಿದೆ. ಕುಟುಂಬ ಮತ್ತು ಆರೋಗ್ಯ ಸಮಾಯೋಜನೆಯಲ್ಲಿ ಮಹತ್ವ ಪೂರ್ಣ ಅಂಶ ಬಂದಿರುವುದು ಕಂಡು ಬಂದಿದೆ. ಒಟ್ಟಾರೆ ಫಲಿತಾಂಶವನ್ನು ಗಮನಿಸಿದಾಗ ಕುಟುಂಬ, ಆರೋಗ್ಯ ಮತ್ತು ಸಾಮಾಜಿಕ ಸಮಾಯೋಜನಾ ಕ್ಷೇತ್ರದಲ್ಲಿ ಹೆಚ್ಚು ಒತ್ತಡ ಹೊಂದಿರುವುದು ಕಂಡು ಬಂದಿದೆ.

ಸಮಾರೋಪ: ಒತ್ತಡವು ಆತಂಕ ಭಾವದಿಂದ ಕೂಡಿದ ವ್ಯಾದಿಯಾಗಿದ್ದು, ವ್ಯಕ್ತಿಯ ಆಂತರಿಕ ಮತ್ತು ವೃತ್ತಿಪರ ಗುರಿಗೆ ಸಂಬಂಧಿಸಿದಂತೆ ಸಾಮಾಜಿಕ ಸನ್ನಿವೇಶಗಳಲ್ಲಿ ಅಡೆತಡೆಗಳನ್ನುಂಟು ಮಾಡುವಂತಹ ಋಣಾತ್ಮಕ, ಆತ್ಮ ವಿಮರ್ಶೆಯಿಂದ ಸ್ವಯಂ ಕೇಂದ್ರೀಕೃತವಾದ ಪ್ರಾಯೋಗಿಕ ಗುಣವಾಗಿದೆ. ಒತ್ತಡ ಹೆಚ್ಚಾದಾಗ ವ್ಯಕ್ತಿಯಲ್ಲಿ ಸಹಜವಾಗಿ ಸಮಾಯೋಜನೆಯು ಶಕ್ತಿ ಕಡಿಮೆಯಾಗುತ್ತ ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಇದಕ್ಕನುಗುಣವಾಗಿ ಪ್ರಸ್ತುತ ಅಧ್ಯಯನದಲ್ಲಿ ಸಂಗ್ರಹಿಸಿದಂತಹ ದತ್ತಾಂಶಗಳಿಂದ ತಿಳಿದು ಬಂದ ಅಂಶಗಳೆಂದರೆ, ತಾರುಣ್ಯವಸ್ಥೆಯಲ್ಲಿರುವ ಹೆಚ್ಚಿನ ವಿದ್ಯಾರ್ಥಿಗಳು ಒತ್ತಡವು ಸರಾಸರಿ ಮಟ್ಟದಲ್ಲಿರುವುದು ಕಂಡು ಬಂದಿದೆ. ವಿದ್ಯಾರ್ಥಿಗಳಲ್ಲಿ ದೈಹಿಕ ಅಂಶಗಳಲ್ಲಿನ ಇನ್ನಿತರ ಅಂಶಗಳಾದ ಸಾಮಾಜಿಕ ಮಾನಸಿಕ ಅಂಶಗಳಲ್ಲಿನ ಒತ್ತಡವು ಹೆಚ್ಚಾಗಿ ಕಂಡು ಬಂದಿದೆ. ಒಟ್ಟಾರೆಯಾಗಿ ಹುಡುಗಿಯರಲ್ಲಿ ಅಪಸಮಾಯೋಜನೆ ಕಂಡು ಬಂದಿದೆ. ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡಕ್ಕೆ ಕಾರಣವಾದ ಅಂಶಗಳನ್ನು ಪತ್ತೆ ಮಾಡಿ ಕುಟುಂಬ ವೈದ್ಯರ ಮತ್ತು ತಜ್ಞ ವೈದ್ಯರ ಸಲಹೆಯನ್ನು ಸಂದರ್ಭನುಸಾರ ಪಡೆಯುತ್ತಿದ್ದರೆ ಒತ್ತಡದಿಂದ ಮುಕ್ತರಾಗಿ ಉತ್ತಮ ಸಮಾಯೋಜನೆಯಿಂದ ತಾರುಣ್ಯವಸ್ಥೆಯಲ್ಲಿರುವ ವಿದ್ಯಾರ್ಥಿಗಳು ಇತರ ಸಾಮಾನ್ಯ ಮಕ್ಕಳಂತೆ ಜೀವಿಸಬಹುದಾಗಿದೆ ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ.

ಒತ್ತಡದ ನಿವಾರಣೆಗೆ ಪರಿಹಾರಗಳು: ಫಲಿತಾಂಶಗಳಿಗೆ ಸಂಬಂಧಿಸಿದಂತೆ ಪೂರಕವಾದ ಪರಿಹಾರಕೆ: ಮಕ್ಕಳು ಹೆಚ್ಚಾಗಿ ಸಾಮಾಜಿಕ ಕೌಶಲ್ಯಯುಕ್ತ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸುವಂತೆ, ತಮ್ಮ ಕೆಲಸಗಳನ್ನು ತಾವೇ ನಿರ್ವಹಿಸುವಂತೆ, ಮುಕ್ತ ಶಿಸ್ತಿಗೆ ಅಗತ್ಯವಾದ ಪೂರಕವಾದಂತಹ ಸನ್ನಿವೇಶವನ್ನು ಮತ್ತು ಅವಕಾಶಗಳನ್ನು, ಸಂವಹನ ಕೌಶಲ್ಯಗಳನ್ನು ಕಲಿಯುವಂತೆ ಶಿಕ್ಷಕವರ್ಗದವರು ಮತ್ತು ಪೋಷಕರು ಕಲ್ಪಿಸಿ ಪ್ರೋತ್ಸಾಹಿಸಬೇಕು.

ಉಲ್ಲೇಖಿಗಳು:

1. Barrow John, Hayashi & Judy(1980) shyness clinic A social development program for adolescentsw and young adults personnel & Guidance journal 59(1) 58-61
2. Bell G. D (1956) processes in the Formation of Adolescent Aspirations social psychology 13: 176:186
3. Crow L. D. & A.Crow (1965)'Adolescent development and adjustment zded. New York: mncgraw –Hill
4. Hurlock E.B. 1973 adolescnet Development TATA mc Graw Hill Newyork.
5. Kuppuswamy, B. "A Test Book of Child Behaviour and Development". Vikas Publishing House, Pvt. Ltd. Delhi, 1974.
6. Green berg J. S. (1996) Comprehensive stress management (5th ed) chicago Brown nd Benchmark

ಪತಂಜಲಿ ಯೋಗದ ಮುಖಾಂತರ ಮನಸ್ಸಿನ ನಿಯಂತ್ರಣ

★ಶ್ರೀಮತಿ ಎಸ್.ಸುರ್ಮ ★★ಡಾ. ಸಂಪತ್ತ್‌ಕುಮಾರ್ ★ಡಾ.ಮಂಜುನಾಥ್.ಪಿ

★ ಸಹಾಯಕ ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು

★★ಸಹಾಯಕ ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ಪ್ರಬಂಧ ಸಾರ: ಪ್ರಸ್ತುತ ಲೇಖನವು ಮನಸ್ಸಿನ ನಿಯಂತ್ರಣವನ್ನು ಪಡೆಯುವಲ್ಲಿ ಪತಂಜಲಿ ಯೋಗದ ಮಹತ್ವತೆಯನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸುತ್ತದೆ. ಪ್ರಸ್ತುತ ದಿನಗಳಲ್ಲಿ ಇದರ ಅವಶ್ಯಕತೆಯು ಬಹಳ ಹೆಚ್ಚಾಗಿದೆ. ಯೋಗವೆಂದರೆ ಚೇತನಾವಸ್ಥೆಯ ಏರಿಳಿತಗಳನ್ನು ತಡೆಯುವ

ಮತ್ತು ಮನಸ್ಸಿನಲ್ಲಿ ಆಲೋಚನೆಯ ಅಲೆಗಳನ್ನು ನಿಯಂತ್ರಿಸುವುದಾಗಿದೆ. ಆದ್ದರಿಂದ ಯೋಗವು ವ್ಯಕ್ತಿಯ ಹಲವು ಮನೋವೈಜ್ಞಾನಿಕ ಸಮಸ್ಯೆಗಳು ಮತ್ತು ಮಾನಸಿಕ ಕಾಯಿಲೆಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಪತಂಜಲಿಯವರ ಪ್ರಕಾರ "ಯೋಗವೆಂದರೆ ಚಿತ್ತ ವೃತ್ತಿ ನಿರೋಧ" ಎಂದರೆ ಚಿತ್ತದ (ಮನಸ್ಸಿನ) ಎಲ್ಲಾ ಅವಸ್ಥೆಗಳನ್ನು ತಟಸ್ಥವಾಗಿಸುವುದು, ವ್ಯಕ್ತಿಯು ಯೋಗದ ಮುಖಾಂತರ ಐದು ವೃತ್ತಿಗಳು ಮತ್ತು ಕ್ಲೇಶಗಳನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳುವುದರಿಂದ ತನ್ನ ಮನಸ್ಸಿನ ಕಾರ್ಯಚಟುವಟಿಕೆಗಳ ಬಗ್ಗೆ ಸಂಪೂರ್ಣವಾಗಿ ಅರ್ಥೈಸಿಕೊಳ್ಳಬಹುದು ಮತ್ತು ಆ ಮೂಲಕ ತನ್ನ ಶಕ್ತಿ ಮತ್ತು ದೌರ್ಬಲ್ಯಗಳ ಬಗ್ಗೆ ಅರಿವುಂಟಾಗುತ್ತದೆ. ಈ ಮೂಲ ಅರಿವಿನಿಂದಾಗಿ ವ್ಯಕ್ತಿಯು ತನ್ನಲ್ಲಿ ಬಳಲಿಕೆಗಳನ್ನು ಉಂಟು ಮಾಡುವ ಕಾರಣಗಳನ್ನು ತಿಳಿದು, ಅದರಿಂದ ಹೊರಬರಲು ಸಹಾಯ ಮಾಡುತ್ತದೆ. ಪತಂಜಲಿಯವರು ಪ್ರತಿಪಾದಿಸುವ ಯೋಗ ಸೂತ್ರಗಳು ಎಂಟು ಪಾದಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ. ಇವುಗಳು ವ್ಯಕ್ತಿಯು ಸಾಂಪ್ರದಾಯಿಕ ಆಲೋಚನೆಗಳಿಂದ ಹೊರಬರಲು ಸಹಾಯ ಮಾಡುತ್ತವೆ. ಪತಂಜಲಿ ಯೋಗವು ವಿವರಣಾತ್ಮಕ ಮನೋವಿಜ್ಞಾನವಾಗಿದ್ದು ಯೋಗದ ಮುಖಾಂತರ ಹಲವು ಸಂವೇಗಾತ್ಮಕ ಬಳಲಿಕೆಗಳನ್ನು ಗುಣಪಡಿಸುತ್ತದೆ. ಯೋಗದ ಮುಖ್ಯ ಉದ್ದೇಶವು ಆಧ್ಯಾತ್ಮಿಕ ಬದಲಾವಣೆಯಾಗಿರುತ್ತದೆ. ಪತಂಜಲಿಯವರ ಪ್ರಕಾರ ಮಾನವ ಬಳಲಿಕೆಗಳು ಪ್ರಾಥಮಿಕವಾಗಿ ಚೇತನಾವಸ್ಥೆಯಿಂದಲೇ ಉಂಟಾಗುತ್ತವೆ. ಚೇತನವು ಪ್ರಕೃತಿಯ ವಿವಿಧ ರೂಪಗಳೊಂದಿಗೆ ಅಂಟಿಕೊಂಡಿರುವುದರಿಂದ ಇದು ನೈಜ ಸ್ವರೂಪದ 'ಪುರುಷ'ವನ್ನು ಅರ್ಥಮಾಡಿಕೊಳ್ಳುವಲ್ಲಿ ತೊಂದರೆಯ–ನ್ನುಂಟುಮಾಡುತ್ತದೆ. ಐದು ಕ್ಲೇಶಗಳಿಂದಾಗಿ ಮನಸ್ಸಿನ ಮಾರ್ಪಾಡಾಗುವಿಕೆಗೆ ತಪ್ಪಾದ ಗುರುತಿಸುವಿಕೆಯನ್ನುಂಟು ಮಾಡುವಲ್ಲಿ ಮೂಲ ಕಾರಣವಾಗುತ್ತದೆ. ಮತ್ತು ಇದನ್ನು ತೊಡೆದು ಹಾಕುವುದು ಯೋಗ ಅಭ್ಯಾಸದ ಗುರಿಯಾಗಿರುತ್ತದೆ.

ಪ್ರಸ್ತುತ ಲೇಖನವು ಇತ್ತೀಚಿನ ಹಲವು ವೈಜ್ಞಾನಿಕ ಸಂಶೋಧನ ಅಧ್ಯಯನಗಳು ಮತ್ತು ಪುನರಾವಲೋಕನಗಳನ್ನು ಆಧರಿಸಿ ಪತಂಜಲಿ ಯೋಗದ ಮಹತ್ವತೆ ಮತ್ತು ಪತಂಜಲಿ ಯೋಗದ ಮುಖಾಂತರ ಮನಸ್ಸಿನ ನಿಯಂತ್ರಣವನ್ನು ಹೊಂದುವುದನ್ನು ವಿವರಿಸುತ್ತದೆ.

ದೇಹ ಸ್ವಸ್ಥವಾಗಿರಬೇಕಾದರೆ, ಮನಸ್ಸು ಸ್ವಸ್ಥವಾಗಿರಬೇಕು ಆದ್ದರಿಂದ ವ್ಯಕ್ತಿಯು ದೈಹಿಕವಾಗಿ ಆರೋಗ್ಯವಂತನಾಗಿರಬೇಕಾದರೆ ಆತನ ಮನಸ್ಸು ಆರೋಗ್ಯಯುತವಾಗಿರಬೇಕು. ಮಾನವನ ಮನಸ್ಸು ಚಂಚಲಚಿತ್ತವಾದದ್ದು, ಅನಿಯಮಿತವಾದದ್ದು. ಈ ಚಂಚಲಚಿತ್ತವಾದ ಮನಸ್ಸನ್ನು ನಿಯಂತ್ರಿಸಿಕೊಂಡು ಸರಿಯಾದ ದಿಕ್ಕಿನಲ್ಲಿ ನಡೆದರೆ ವ್ಯಕ್ತಿಯು ಯಶಸ್ಸನ್ನು ಸಾಧಿಸಬಹುದು. ಮನಸ್ಸು ಆಲೋಚನೆಗಳು, ಭಾವನೆಗಳು ಮತ್ತು ನೆನಪುಗಳಿಂದ ಕೂಡಿರುತ್ತದೆ. ಇವುಗಳು ಸಕಾರಾತ್ಮಕವಾಗಿದ್ದರೆ ವ್ಯಕ್ತಿಯಲ್ಲಿ ಚೈತನ್ಯ, ಉಲ್ಲಾಸ ಕಂಡುಬರುತ್ತದೆ, ಒಂದು ವೇಳೆ ನಕಾರಾತ್ಮಕವಾಗಿದ್ದರೆ ನಿರುತ್ಸಾಹ, ಹತಾಸೆ, ನಿರಾಸೆ, ಕೋಪ, ಖಿನ್ನತೆ ಮುಂತಾದವುಗಳು ಕಂಡುಬರುತ್ತವೆ. ಇದರಿಂದ ಮಾನಸಿಕವಾಗಿ ವ್ಯಕ್ತಿ ತೊಂದರೆ ಅನುಭವಿಸುತ್ತಾನೆ ಮತ್ತು ದೈಹಿಕವಾಗಿ ಅನಾರೋಗ್ಯಕ್ಕೆ ಒಳಗಾಗುತ್ತಾನೆ. ಮನಸ್ಸು ಮತ್ತು ದೇಹದ ನಡುವಿನ ಸಂಬಂಧ ಬಹಳ ಸಂಕೀರ್ಣವಾಗಿದ್ದು, ಮನಸ್ಸಿನಲ್ಲಿ ನಡೆಯುವಂತಹ ಕ್ರಿಯೆಗಳು ದೇಹದ ಮೇಲೆ ಪರಿಣಾಮಬೀರುತ್ತವೆ. ಆದ್ದರಿಂದ ಮನಸ್ಸು ವ್ಯಕ್ತಿಯ ಎಲ್ಲಾ ಕ್ರಿಯೆಗಳ ಮೂಲ ಮತ್ತು ಪ್ರಬಲಕೇಂದ್ರ, ಮಾನವನ ಮನಸ್ಸು ಅಗಾಧ ಶಕ್ತಿಯನ್ನು ಹೊಂದಿದೆ. ಇಂತಹ ಮನಸ್ಸನ್ನು ನಿಯಂತ್ರಿಸಿ ಕಾರ್ಯೋನ್ಮುಖವಾದರೆ ವ್ಯಕ್ತಿಯು ಜೀವನದಲ್ಲಿ ಸುಖ, ನೆಮ್ಮದಿ ಮತ್ತು ಯಶಸ್ಸನ್ನು ಸಾಧಿಸಬಹುದು.

ಪುರಾತನ ಕಾಲದಿಂದಲೂ ಭಾರತೀಯ ಪರಂಪರೆಯಲ್ಲಿ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಸಲುವಾಗಿ ಹಲವಾರು ವಿಧಾನಗಳನ್ನು ಅನುಸರಿಸುವುದನ್ನು ನಾವು ಕಾಣಬಹುದು. ಅಂದರೆ ಯೋಗ, ಧ್ಯಾನ, ಪ್ರಾಣಾಯಾಮ, ಸಂಗೀತ ಮುಂತಾದವು. ಇವುಗಳು ಮನಸ್ಸನ್ನು ನಿಯಂತ್ರಣಗೊಳಿಸುವ ಮುಖಾಂತರ ವ್ಯಕ್ತಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯಯುತವಾಗಿರುವಂತೆ ಮಾಡುತ್ತವೆ. ಪ್ರಸ್ತುತ ಲೇಖನದಲ್ಲಿ ಪತಂಜಲಿ ಯೋಗದ ಮುಖಾಂತರ ಮನಸ್ಸಿನ ನಿಯಂತ್ರಣದ ಕುರಿತಾಗಿ ಚರ್ಚಿಸಲಾಗಿದೆ.

ಪತಂಜಲಿಯೋಗ: ಮಹರ್ಷಿ ಪತಂಜಲಿಯವರು ಯೋಗಸೂತ್ರಗಳನ್ನು ಬರೆದವರಲ್ಲಿ ಮೊದಲಿಗರಾಗಿದ್ದಾರೆ. ಇವರು ಪ್ರತಿಪಾದಿಸಿದ ಯೋಗ ಸೂತ್ರಗಳನ್ನು 'ಪತಂಜಲಿ ಯೋಗ' ಎಂದು ಕರೆಯುವರು. ಪತಂಜಲಿಯವರ ಪ್ರಕಾರ ಯೋಗವೆಂದರೆ "ಚಿತ್ತ ವೃತ್ತಿ ನಿರೋಧ".

ಜಾಗ್ರತಾವಸ್ಥೆಯಲ್ಲಿ ಬದಲಾಗುತ್ತಿರುವ ಸ್ಥಳಾಂತರಗೊಳ್ಳುತ್ತಿರುವಂತಹ ದೃಶ್ಯಾವಳಿಗಳ ಹಂತವೇ ಚೇತನವಸ್ಥೆಯ ಮನಸ್ಸು ಇದನ್ನೇ 'ವೃತ್ತಿ' ಎನ್ನುವರು. ವೃತ್ತಿಗಳೆಂದರೆ ಮನಸ್ಸು ಏರಿಳಿತಗಳಿಂದ ಕೂಡಿರುವ ಸ್ಥಿತಿಯಾಗಿದ್ದು ಇದು ಸಂಜ್ಞಾನಾತ್ಮಕತೆಯಿಂದ, ಭಾವನಾತ್ಮಕತೆಯಿಂದ ಮತ್ತು ಸಂಕಲ್ಪ ಸ್ಥಿತ್ಯಂತರದಿಂದ ಕೂಡಿರುತ್ತದೆ.

ವೃತ್ತಿಗಳು ಮಾನವನ ವರ್ತನೆಯ ಮೇಲೆ ಪ್ರಭಾವ ಬೀರುತ್ತವೆ. ಆದ್ದರಿಂದ ವೃತ್ತಿಗಳನ್ನು ಯಾವ ವಾಹಿನಿಯಲ್ಲಿ ಹರಿಸಬಹುದು ಮತ್ತು ಹೇಗೆ ನಿಯಂತ್ರಿಸಬಹುದು ಎಂದು ತಿಳಿಯುವುದು ಬಹಳ ಪ್ರಮುಖವಾದದ್ದು. ಯೋಗದ ಅಭ್ಯಾಸದ ಉದ್ದೇಶವು ಚಿತ್ತ ವೃತ್ತಿಯನ್ನು ನಿಯಂತ್ರಿಸುವುದಾಗಿರುತ್ತದೆ. ವಿಚಲಿತಗೊಂಡ ಮನಸ್ಸು ರಭಸದಿಂದ ಉಕ್ಕಿ ಹರಿಯುವ ಸಮುದ್ರದಂತೆ ಮತ್ತು ಮಾನವನ ಜೀವನದ ಉದ್ದೇಶ ಆತ್ಮಸಾಕ್ಷಾತ್ಕಾರವಾಗಿದ್ದು ಅದನ್ನು ಹೊಂದಲು ಆತ ತನ್ನ ಮನಸ್ಸನ್ನು ಮತ್ತು ಅದರ ಏರಿಳಿತಗಳನ್ನು ನಿಯಂತ್ರಿಸಬೇಕು. ಇದು ಯೋಗದ ಪ್ರಮುಖ ಗುರಿಯಾಗಿರುತ್ತದೆ.

ಮನಸ್ಸಿನ ಏರಿಳಿತಗಳನ್ನು ನಿಯಂತ್ರಿಸಲು ಅಡ್ಡ ಬರುವ ವಿಚಾರಗಳೆಂದರೆ ಐದು ಕ್ಲೇಶಗಳು. ಅವು **ಅವಿದ್ಯಾ**– ಎಂದರೆ ಸರಿ ಮತ್ತು ತಪ್ಪು, ಹಿತವಾದದ್ದು ಮತ್ತು ಅಹಿತಕರವಾದದ್ದು, ಸತ್ಯ ಮತ್ತು ಮಿಥ್ಯ, ಶಾಶ್ವತ ಮತ್ತು ನಶ್ವರ, ಪರಿಶುದ್ಧ ಮತ್ತು ಅಪರಿಶುದ್ಧವಾದದ್ದು. ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವ ಅಸಮರ್ಥತೆಯಾಗಿದೆ. ಅವಿದ್ಯೆ ಎಂದರೆ ಜ್ಞಾನದ ಕೊರತೆಯಲ್ಲ, ಆದರೆ ತಪ್ಪಾದ ಜ್ಞಾನವು ತೊಂದರೆಯಾಗುತ್ತದೆ.

ಅಸ್ಮಿತ– **"ನಾನು"** ಎಂಬ ಆಹಂನಿಂದ ಉಂಟಾದ ತಪ್ಪಾದ ವೈಯಕ್ತಿಕ ಗುರುತಿಸಿಕೊಳ್ಳುವಿಕೆಯಾಗಿರುತ್ತದೆ. **ರಾಗ** – ಸಂತಸದ ಹುಡುಕಾಟದ ಅತಿಯಾದ ಆಸೆಯಾಗಿರುತ್ತದೆ. ಇದು ದುರಾಸೆ, ತೀರದ ಬಯಕೆ ಮತ್ತು ಮೋಜಿನ ಹುಡುಕಾಟವಾಗಿರುತ್ತದೆ. ಅವಿದ್ಯೆಯು ಅಸ್ಮಿತಕ್ಕೆ

ಎಂದರೆ ತಪ್ಪಾದ ವೈಯಕ್ತಿಕ ಗುರುತಿಸಿಕೊಳ್ಳುವಿಕೆಗೆ ಎಡೆಮಾಡಿಕೊಡುತ್ತದೆ ಮತ್ತು ರಾಗವನ್ನು ಹೆಚ್ಚು ಮಾಡುತ್ತದೆ. **ದ್ವೇಷ** – ದ್ವೇಷವು ರಾಗಕ್ಕೆ ವಿರುದ್ಧವಾದುದು. ಯಾವುದೇ ನೋವೆಂದು ಹೇಳುವುದಕ್ಕೆ ಅದು ವಿರುದ್ಧವಾದುದು. **ಅಭಿನಿವೇಶ** – ಜೀವನದಲ್ಲಿ ಬದುಕುವುದಕ್ಕೆ ಆಸೆ ಪಡುವುದು. ಈ ಐದು ಕ್ಲೇಶಗಳಲ್ಲಿ ಅವಿದ್ಯೆಯೇ ಎಲ್ಲದಕ್ಕೂ ಮೂಲವಾದುದು.

ಪತಂಜಲಿ ಯೋಗದಲ್ಲಿ ವ್ಯಕ್ತಿಯ ಮನಸ್ಸಿನಲ್ಲಿ ಉಂಟಾಗುವ ಏರಿಳಿತಗಳನ್ನು ನಿಯಂತ್ರಿಸಲು ಅಡ್ಡಬರುವಂತಹ ಐದು ಕ್ಲೇಶಗಳನ್ನು ತೊಡೆದು ಹಾಕಿ ಮನಸ್ಸನ್ನು ನಿಯಂತ್ರಿಸುವ ಮೊದಲ ಹಂತ **ಕ್ಷಿಪ್ತ** ಇಲ್ಲಿ ಏರಿಳಿತಗಳ ಮನಸ್ಸನ್ನು ನಿಯಂತ್ರಿಸುವುದು. ಎರಡನೇ ಹಂತ **'ಮೂಢ'** ಏನನ್ನೂ ಮಾಡದೆ ತಟಸ್ಥವಾಗಿರುವುದು ಅಥವಾ ಮರೆಯುವುದು, ನಿದ್ರಾ ಅವಸ್ಥೆಯಲ್ಲಿ ಮರೆಯುವ ಹಾಗೆ, ಮೂರನೇಯ ಹಂತ **ವಿಕ್ಷಿಪ್ತ** ಅಂದರೆ ಮನಸ್ಸು ತಾತ್ಕಾಲಿಕವಾಗಿ ಯಾವುದಾದರೂ ಒಂದು ವಿಚಾರಕ್ಕೆ ತನ್ನ ಅವಧಾನವನ್ನು ಕೇಂದ್ರಿಕರಿಸುವುದು. ನಾಲ್ಕನೇ ಹಂತ **ಏಕಾಗ್ರತೆ** ಇಲ್ಲಿ ಮನಸ್ಸು ಏಕಾಗ್ರತೆಯನ್ನು ಹೊಂದುತ್ತದೆ ಮತ್ತು ಇತರ ವಿಷಯಗಳಿಂದ ಅವಧಾನವನ್ನು ತನ್ನ ವಿಚಾರಕ್ಕೆ ತಂದು ಕೊಳ್ಳುತ್ತದೆ. ಅಂತಿಮವಾಗಿ ಐದನೇ ಹಂತ **ನಿರುದ್ಧ** ಇಲ್ಲಿ ಎಲ್ಲಾ ಮಾನಸಿಕ ಚಟುವಟಿಕೆಗಳು ಹಾಗೇ ನಿಲ್ಲುತ್ತವೆ ಮತ್ತು ಚೇತನಾವಸ್ಥೆಗೆ ಬರುತ್ತವೆ. ನಿರುದ್ಧ ಅಥವಾ ನಿರೋಧ ಹಂತವು ಯೋಗದ ಅಭ್ಯಾಸದಿಂದ ತಲುಪಬಹುದಾದ ಹಂತವಾಗಿದೆ. ಯೋಗಭ್ಯಾಸದಿಂದ ವ್ಯಕ್ತಿಯು ಈ ಹಂತವನ್ನು ತಲುಪಿದಾಗ ತೊಡಕುಗಳನ್ನು ಮೀರಿ ಚಿತ್ತ ವೃತ್ತಿಗಳ ಮೇಲೆ ನಿಯಂತ್ರಣವನ್ನು ಪಡೆಯುತ್ತಾನೆ. ವೃತ್ತಿಗಳು ನಿರೋಧಿಸಲ್ಪಟ್ಟಾಗ ವ್ಯಕ್ತಿಯ ಚೇತನಾ ವ್ಯವಸ್ಥೆಯು ಕ್ರಮೇಣ ವಿವೇಕದಿಂದ ಅಂದರೆ ಚೇತನಾ ವ್ಯಸ್ಥೆಯು ಪರಿಶುದ್ಧ, ಮುಕ್ತ ಸ್ವಯಂಪ್ರಕಾಶವನ್ನು ಹೊಂದುವ ಸ್ಥಿತಿಯಾಗಿರುತ್ತದೆ.

ಮನಸ್ಸಿನ ನಿಯಂತ್ರಣವು ಬಹಳ ಸುಲಭದ ಕೆಲಸವಲ್ಲ. ಮನಸ್ಸನ್ನು ನಿಯಂತ್ರಿಸಲು ವ್ಯಕ್ತಿಯು ತನಗೆ ತಾನೇ ರೂಢಿಸಿಕೊಂಡ ಕೆಲವು ನಿಯಮಗಳು ಕಟ್ಟಳೆಗಳು ಮತ್ತು ಅದನ್ನು ದಂಡಿಸಲೂ ಸಹ ತಿಳಿಯಬೇಕಾಗುತ್ತದೆ. ಯಾವ ವ್ಯಕ್ತಿಯು ತನ್ನ ಮನಸ್ಸನ್ನು ನಿಯಂತ್ರಿಸಲು ಕಲಿಯುತ್ತಾನೋ, ಆತನು ತನ್ನ ಪಂಚೇಂದ್ರಿಯಗಳ ಪ್ರಲೋಭನೆಯ ಮೇಲೆ ಜಯ ಸಾಧಿಸುತ್ತಾನೆ. ತನ್ನ ಸುತ್ತ ಮುತ್ತಲಿನ ಆಕರ್ಷಣೆಗಳಿಂದ ವಿಚಲಿತನಾಗುವುದಿಲ್ಲ ಮತ್ತು ಇತರರ ಟೀಕೆ ಟಿಪ್ಪಣಿಗಳಿಗಾಗಿ ಮಾನಸಿಕ ಯಾತನೆಗಳನ್ನು ಅನುಭವಿಸುವುದಿಲ್ಲ. ವಸ್ತುಗಳಿಂದ ದೊರಕಬಹುದಾದ ಸುಖವನ್ನು ಹುಡುಕುವುದನ್ನು ನಿಲ್ಲಿಸಿ ಸಂತೋಷವನ್ನು ತನ್ನೊಳಗೆ ಅನುಭವಿಸಲು ಕಲಿಯುತ್ತಾನೆ. ತನ್ನ ಸಂತೋಷ ಮತ್ತು ಬೇಸರಗಳಿಗೆ ಬಾಹ್ಯ ಪ್ರಪಂಚವನ್ನು ನಿಂದಿಸುವುದನ್ನು ನಿಲ್ಲಿಸುತ್ತಾನೆ. ಮನಸ್ಸಿನ ನಿಯಂತ್ರಣವನ್ನು ಹೊಂದಿದ ವ್ಯಕ್ತಿ ಆಂತರಿಕವಾಗಿ ಸಂತೋಷದಿಂದಿರುತ್ತಾನೆ. ಮತ್ತು ಮನಸ್ಸಿನ ಸಮತೋಲನವನ್ನು ಹೊಂದ್ದುತ್ತಾನೆ.

ಪತಂಜಲಿ ಯೋಗದ ಅಷ್ಟಾಂಗಗಳ ಮುಖಾಂತರ ಮನಸ್ಸಿನ ನಿಯಂತ್ರಣ

ಮಹರ್ಷಿ ಪತಂಜಲಿ ಯೋಗದಲ್ಲಿ ಅಷ್ಟಾಂಗಗಳಿದ್ದು, ಮನಸ್ಸಿನ ಏರಿಳಿತಗಳನ್ನು ನಿಯಂತ್ರಿಸಲು ಇವು ಪ್ರಮುಖ ಪಾತ್ರವಹಿಸುತ್ತವೆ.

ಯಮ: ಯಮ ಎಂದರೆ ಅಹಿಂಸೆ, ಸತ್ಯಪರತೆ, ಕಳ್ಳತನದಿಂದ ದೂರು ಉಳಿಯುವುದು, ಅವಶ್ಯಕವಲ್ಲದ ವಸ್ತುಗಳ ಶೇಖರಣೆಯಿಂದ ದೂರವಿರುವುದು, ವ್ಯಕ್ತಿಯು ಬಹಳ ನಿಷ್ಠೆಯಿಂದ ಯಮವನ್ನು ಪಾಲಿಸಿದಲ್ಲಿ ತನ್ನ ಮನಸ್ಸಿನ ನಿಯಂತ್ರಣವನ್ನು ಪಡೆದು ಉತ್ತಮ ನಡವಳಿಕೆಯನ್ನು ಹೊಂದುತ್ತಾನೆ.

ನಿಯಮ: ನಿಯಮವೆಂದರೆ, ಸ್ವಚ್ಚತೆ, ಸಂತೃಪ್ತತೆ, ಸಂತುಷ್ಟತೆ ಮತ್ತು ದೇವರ ಬಗ್ಗೆ ಅಧ್ಯಯನ ಮಾಡುವುದು, ಗ್ರಂಥಗಳನ್ನು ಓದುವುದರ ಮುಖಾಂತರ ವ್ಯಕ್ತಿಯು ಬಾಹ್ಯ ಮತ್ತು ಆಂತರಿಕ ಸ್ವಚ್ಚತೆಯನ್ನು ಕಾಪಾಡಿಕೊಳ್ಳತ್ತಾನೆ. ಬಾಹ್ಯ ಸ್ವಚ್ಚತೆಯಿಂದ ದೇಹವು ಮತ್ತು ಆಂತರಿಕ ಸ್ವಚ್ಚತೆಯಿಂದ ಮನಸ್ಸು ಪರಿಶುದ್ಧವಾಗುತ್ತದೆ.

ಆಸನ: ಆಸನವು ದೇಹವನ್ನು ವಿವಿಧ ಭಂಗಿಗಳಲ್ಲಿ ವ್ಯಾಯಾಮ ಮಾಡುವುದನ್ನು ಸೂಚಿಸುತ್ತದೆ. ಆಸನದ ಅಭ್ಯಾಸದಿಂದ ದೇಹ, ಉಸಿರಾಟ ಮತ್ತು ಮನಸ್ಸಿನ ಒಂದುಗೂಡುವಿಕೆಯ ಅಭ್ಯಾಸವಾಗುತ್ತದೆ. ಇದರಿಂದ ಉಸಿರಾಟದ ನಿಯಂತ್ರಣ, ದೇಹದ ಅಂಗಗಳಿಗೆ ವ್ಯಾಯಾಮ ದೊರಕಿದಂತಾಗುತ್ತದೆ, ಮನಸ್ಸು ಕೇಂದ್ರಿಕರಿಸುವುದು ಅಭ್ಯಾಸವಾಗುತ್ತದೆ, ಮತ್ತು ಸಂತೋಷದ ಮತ್ತು ಆರಾಮದ ಭಾವನೆಯು ಉಂಟಾಗುತ್ತದೆ. ವಿವಿಧ ಆಸನಗಳಿಂದ ವ್ಯಕ್ತಿಯಲ್ಲಿ ಸದೃಢತೆ, ಧೈರ್ಯ, ಸಮತೋಲನ, ನಮ್ರತೆ ತೆರೆದುಕೊಳ್ಳುವಿಕೆ, ಸ್ವೀಕರಿಸುವಿಕೆಗಳು ಬೆಳವಣಿಗೆಯಾಗುತ್ತವೆ.

ಪ್ರಾಣಾಯಾಮ: ಪ್ರಾಣಾಯಾಮದಲ್ಲಿ ವ್ಯಕ್ತಿ ತನ್ನ ಮನಸ್ಸನ್ನು ಉಸಿರಾಟದ ಮೇಲೆ ಕೇಂದ್ರಿಕರಿಸುತ್ತಾನೆ ಮತ್ತು ಉಸಿರಾಟವು ದೇಹದಲ್ಲಿ ಸಂಚರಿಸುವುದರ ಅರಿವಾಗುತ್ತದೆ. ದೀರ್ಘ ಉಸಿರಾಟದಿಂದಾಗಿ ದೇಹವು ಪುನಶ್ಚೇತನಗೊಳ್ಳುತ್ತದೆ ಮತ್ತು ದೇಹದಲ್ಲಿನ ಒತ್ತಡವು ಕಡಿಮೆಯಾಗುತ್ತದೆ. ಇದರಿಂದ ಮನಸ್ಸಿಗೆ ಒತ್ತಡಗಳು ಕಡಿಮೆಯಾಗುತ್ತವೆ. ಪ್ರಾಣಾಯಾಮದಿಂದ ಆಮ್ಲಜನಕವು ಹೆಚ್ಚಾಗಿ ಮೆದುಳಿಗೆ ಪೂರೈಕೆಗೊಳ್ಳುವುದರಿಂದ ಮೆದುಳು ಹೆಚ್ಚು ಕಾರ್ಯನಿರತವಾಗುತ್ತದೆ ಮತ್ತು ಸಂಜ್ಞಾನಾತ್ಮಕತೆಯ ಪ್ರಕ್ರಿಯೆಗಳು ಹೆಚ್ಚು ಪರಿಣಾಮಕಾರಿಯಾಗಿ ನಡೆಯುತ್ತವೆ. ದೇಹದಲ್ಲಿ ಶಕ್ತಿಯ ಹರಿಯುವಿಕೆಯಿಂದ ದೇಹವು ನಿಯಂತ್ರಣಗೊಳ್ಳುತ್ತದೆ. ಮತ್ತು ಉಸಿರಾಟದ ಕ್ರಿಯೆಯಿಂದ ಇಚ್ಚಾಶಕ್ತಿಯು ಬಲಗೊಳ್ಳುತ್ತದೆ.

ಪ್ರತ್ಯಾಹಾರ: ಪ್ರತ್ಯಾಹಾರವೆಂದರೆ ಮನಸ್ಸನ್ನು ಸಂವೇದನೆಗಳಿಂದ ದೂರ ಸೆಳೆಯುವುದು. ಮನಸ್ಸನ್ನು ಸಂವೇದನೆಗಳಿಂದ ದೂರ ಸೆಳೆದು ಬೇರ್ಪಡಿಸಿದಾಗ ಮನಸ್ಸು ನಿಯಂತ್ರಣಗೊಳ್ಳುತ್ತದೆ. ಮನಸ್ಸನ್ನು ಆಂತರಿಕವಾಗಿ ಸೆಳೆದಾಗ ಅದು ಬಾಹ್ಯ ವಸ್ತುಗಳಿಂದ ದೂರವಾಗುತ್ತದೆ. ಪ್ರತ್ಯಾಹಾರವು ನಾವು ನಮ್ಮನ್ನು ಒಳಗಿನ ಪ್ರಪಂಚದೊಂದಿಗೆ ಕಂಡುಕೊಳ್ಳುವ ಮೊದಲ ಹಂತವಾಗಿರುತ್ತದೆ. ಪ್ರತ್ಯಾಹಾರದಿಂದ ವ್ಯಕ್ತಿಯ ದೃಷ್ಟಿ ಕೋನವು ಬದಲಾಗುತ್ತದೆ.ಇದರ ಪರಿಣಾಮವಾಗಿ ಮನಸ್ಸನ್ನು ಪರಿಶುದ್ಧಗೊಳಿಸಲು ಬೇಕಾಗುವ ಬುದ್ದಿಶಕ್ತಿಯ ಪೋಷಣೆಯಾಗುತ್ತದೆ.

ಧಾರಣ: ಧಾರಣ ಎಂದರೆ ಅವಧಾನವನ್ನು ಹಿಡಿದಿಡುವುದು ಅಥವಾ ನಿರ್ವಹಿಸುವುದು. ಧಾರಣದಲ್ಲಿ ವ್ಯಕ್ತಿಗೆ ತನ್ನ ಮನಸ್ಸಿನ ಬಗ್ಗೆ ಅರಿವಿರುತ್ತದೆ. ಮನಸ್ಸು ಸದಾ ಬಾಹ್ಯ ಪ್ರಚೋದನೆ ಅಥವಾ ಆಂತರಿಕ ಪ್ರಚೋದನೆಯ ವಿಚಾರಗಳೆಡೆಗೆ ಹೋಗಲು ಪ್ರಯತ್ನಿಸುತ್ತಿರುತ್ತದೆ. ಧಾರಣದಿಂದ ಮನಸ್ಸನ್ನು ಬಾಹ್ಯ ಪ್ರಚೋದನೆಯಿಂದ ಆಂತರಿಕವಾಗಿ ನಿಯಂತ್ರಿಸುವುದು ಕ್ರಮೇಣವಾಗಿ ಅಭ್ಯಾಸವಾಗುತ್ತದೆ. ಇದರ ಫಲಿತಾಂಶವಾಗಿ ಮನಸ್ಸನ್ನು ಕೇಂದ್ರಿಕರಿಸುವ ಸಾಮರ್ಥ್ಯವು ಬಲಗೊಳ್ಳುತ್ತದೆ.

ಪತಂಜಲಿಯವರ ಯೋಗ ಸೂತ್ರದ ಪ್ರಕಾರ ಮನಸ್ಸನ್ನು ನಿರಂತರವಾಗಿ

ಒಂದೇ ವಸ್ತುವಿನ ಮೇಲೆ ಕೇಂದ್ರೀಕರಿಸುವುದನ್ನು 'ಏಕಾಗ್ರತೆ' ಎನ್ನುವರು. ಮನಸ್ಸು ಯಾವ ಸ್ಥಳದಲ್ಲಿ ಶೂನ್ಯತೆಯಲ್ಲಿ ತನ್ನನ್ನು ತಾನು ಹಿಡಿದಿಟ್ಟುಕೊಳ್ಳುತ್ತದೋ ಅದನ್ನು 'ಧಾರಣ' ಎನ್ನುತ್ತಾರೆ.

ಧ್ಯಾನ: ಧ್ಯಾನವೆಂದರೆ ನಮ್ಮ ಮನಸ್ಸಿನ ಆಲೋಚನೆಗಳನ್ನು ಶಾಂತವಾಗಿಸುವ ನಿರ್ದಿಷ್ಟ ಹಂತವಾಗಿರುತ್ತದೆ. ಈ ಅಭ್ಯಾಸವು ಮನಸ್ಸನ್ನು ಶಾಂತಗೊಳಿಸುವುದನ್ನು ಬಲಗೊಳಿಸುತ್ತದೆ. ಧ್ಯಾನದಲ್ಲಿ ಯಾವುದೇ ಬಾಹ್ಯ ಆಲೋಜನೆಗಳಿಲ್ಲದೆ ಮನಸ್ಸು ಶಾಂತವಾದ ಸ್ಥಿತಿಯ ಅನುಭವವನ್ನು ಹೊಂದುತ್ತದೆ. ಮನಸ್ಸನ್ನು ಒಂದೇ ವಿಚಾರದತ್ತ ಕೇಂದ್ರೀಕರಿಸುವುದರಿಂದ ಅದು ಧ್ಯಾನದ ತಟಸ್ಥತೆಯನ್ನು ಪಡೆಯುತ್ತದೆ. ವ್ಯಕ್ತಿಯು ಬಹಳ ಕಡಿಮೆ ವಿಚಾರದ ಬಗ್ಗೆ ಹೆಚ್ಚು ಹೆಚ್ಚು ಗಮನವನ್ನು ಕೇಂದ್ರೀಕರಿಸುವುದನ್ನು ಧ್ಯಾನವೆನ್ನುತ್ತಾರೆ.

ಸಮಾಧಿ: ಸಮಾಧಿ ಎಂದರೆ ವ್ಯಕ್ತಿಯ ಮನಸ್ಸು, ಧ್ಯಾನದ ವಸ್ತುವಿನ ಮೇಲೆ ಕೇಂದ್ರಿಕೃತವಾಗಿದ್ದು ಆ ವಸ್ತುವಿನಿಂದ ವಿಕಾಗ್ರತೆಯು ಬೇರ್ಪಡಿಸಲಾಗದ ಸ್ಥಿತಿಯಾಗಿರುತ್ತದೆ. ವ್ಯಕ್ತಿಯು ವಿಕಾಗ್ರತೆಯಲ್ಲಿ ತನ್ನನ್ನು ತಾನೇ ಮರೆಯುತ್ತಾನೆ, ಇಲ್ಲಿ ಆತನಿಗೆ ಸ್ವಯಂನ ಅರಿವಿರುವುದಿಲ್ಲ. ನೈತಿಕ ನಿಯಮಗಳ ಅಭ್ಯಾಸ, ಸ್ವ–ಶಿಸ್ತುಪಾಲನೆ, ಆಸನಗಳ ಅಭ್ಯಾಸ, ಪ್ರಾಣಾಯಾಮಗಳಿಂದ ಉಸಿರಾಟದ ನಿಯಂತ್ರಣ, ಸಂವೇದನೆಗಳಿಂದ ಬೇರ್ಪಡಿಸುವಿಕೆ, ಧ್ಯಾನದ ವಿಕಾಗ್ರತೆಯ ಸಿದ್ಧತೆ ಮತ್ತು ಬಲಗೊಳ್ಳುವಿಕೆಯು ವ್ಯಕ್ತಿಗೆ ಸಮಾಧಿಯ ಸ್ಥಿತಿಯನ್ನು ಹೊಂದಲು ಸಾಧ್ಯವಾಗುತ್ತದೆ. ಸಮಾಧಿಯ ಸ್ಥಿತಿಯು ಪರಮಾನಂದದ ಸ್ಥಿತಿಯಾಗಿರುತ್ತದೆ. ಹೀಗೆ ಅಷ್ಟಾಂಗ ಯೋಗದ ಎಂಟು ಪಾದಗಳನ್ನು ಅಭ್ಯಸಿಸುವುದರಿಂದ ವ್ಯಕ್ತಿಯ ಶಾರೀರಿಕ ಮತ್ತು ಮಾನಸಿಕ ಕ್ರಿಯೆಗಳಲ್ಲಿ ಸಕಾರಾತ್ಮಕವಾದ ಬದಲಾವಣೆಗಳು ಕಂಡುಬರುತ್ತವೆ. ಅಲ್ಲದೆ ಮನಸ್ಸಿನ ನಿಯಂತ್ರಣವೂ ಸಹ ಸಾಧಿತವಾಗುತ್ತದೆ.

ಯೋಗದ ಮುಖಾಂತರ ಮನಸ್ಸಿನ ನಿಯಂತ್ರಣ ಕುರಿತಾದ ವೈಜ್ಞಾನಿಕ ಸಂಶೋಧನಾ ಅಧ್ಯಯನಗಳು

ದೈಹಿಕ ಮತ್ತು ಮಾನಸಿಕ ಪರಿಶುದ್ಧತೆಗಾಗಿ ಪತಂಜಲಿ ಅಷ್ಟಾಂಗ ಯೋಗದ ಯಮ ಮತ್ತು ನಿಯಮಗಳು ತುಂಬಾ ಪರಿಣಾಮಕಾರಿಯಾದದ್ದು ಇವು ವ್ಯಕ್ತಿಯ ಜೀವನದ ವರ್ತನೆಯ ವಿವರಣಾದಿನಚರಿಯನ್ನು ನೀಡುತ್ತವೆ. ಪ್ರಪಂಚದಾದ್ಯಂತ ಜನರು ತಮ್ಮ ವಿವಿಧ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಇದನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು 'ಪ್ರಸ್ತುತ ದೈನಂದಿನ ಜೀವನ ಶೈಲಿಯಲ್ಲಿ ಯೋಗದ ಮಹತ್ವತೆ' ಎಂಬ ಲೇಖನದಲ್ಲಿ ಅಂಜನಾ ಜಿ.ಟಿ.ರವರು (2013) ತಿಳಿಸುತ್ತಾರೆ. ಪತಂಜಲಿಯೋಗದ ಅಭ್ಯಾಸದಿಂದ ವ್ಯಕ್ತಿಯಲ್ಲಿ ಧೀರ್ಘವಿಶ್ರಾಂತತೆ ಕಂಡುಬರುತ್ತದೆ. ವಿವಿಧ ಬಗೆಯ ಮನೋಶಾರೀರಿಕ ಪ್ರಯೋಜನಗಳು ಉಂಟಾಗುತ್ತವೆ. ದೈಹಿಕ ಅಂಗಗಳ ನಡುವಣ ಸಂಯೋಜನೆ ಕಂಡುಬರುತ್ತದೆ. ಜೀವನದ ಗುಣಮಟ್ಟ ಹೆಚ್ಚಾಗುತ್ತದೆ. ರಕ್ತದ ಒತ್ತಡವು ಕಡಿಮೆಯಾಗುತ್ತದೆ ಎಂದು ಕ್ಯಾತರಿನ್ ವುಡ್ ಯಾರ್ಡ್ಲಿ ರವರು (2011) ತಮ್ಮ ಸಂಶೋಧನಾ ಲೇಖನದಲ್ಲಿ ದೃಢೀಕರಿಸಿರುತ್ತಾರೆ.

ಮನಸ್ಸಿನ ಗುಣಮಟ್ಟ ಆರೋಗ್ಯದ ಬಹಳ ಮುಖ್ಯ ಅಂಶವಾಗಿರುತ್ತದೆ. ಆದ್ದರಿಂದ ನಾವು ಮನಸ್ಸು ಮತ್ತು ದೇಹ ಎರಡರ ಮೇಲೂ ಸಕಾರಾತ್ಮಕವಾಗಿ ಪ್ರಭಾವ ಬೀರುವ ವಿಧಾನಗಳ ಕಡೆಗೆ ಹೆಚ್ಚು ಕೇಂದ್ರೀಕರಿಸಬೇಕು. ಯೋಗವು ಇದನ್ನು ಸಾಧಿಸಲು ಉತ್ತಮವಾದ ವಿಧಾನವಾಗಿದೆ ಎಂದು ಬಿಶಂಬರ್ ಸಿಂಗ್ ಮತ್ತು ಸುರೇಂದ್ರ ಕುಮಾರ್ ಸಾಯಿ ರವರು (2010) ತಮ್ಮ ಅಧ್ಯಯನದಿಂದ ದೃಢಪಡಿಸಿರುತ್ತಾರೆ. ರಾಮಕೃಷ್ಣರಾವ್.ಕೆ. ಮತ್ತು ಆನಂದ ಸಿ. ಪರಾಂಜಪೆಯವರ (2009) ಸಂಶೋಧನಾ ಅಧ್ಯಯನದ ಪ್ರಕಾರ ಪತಂಜಲಿಯವರು ಯೋಗದಲ್ಲಿ ಚಿತ್ತವನ್ನು ಬುದ್ಧಿ, ಅಹಂಕಾರ ಮತ್ತು ಮನಸ್ಸುಗಳಾಗಿ ವಿಂಗಡಿಸುತ್ತಾರೆ. ಮನಸ್ಸೆಂಬುದು ಕೇಂದ್ರ ಪ್ರಕ್ರಿಯೆಯಾಗಿದ್ದು ಇದು ಸಂವೇದನೆಗಳು ಒದಗಿಸುವ ವಸ್ತುಗಳಿಂದ ಒಳಗೊಳ್ಳುವಿಕೆ ಮತ್ತು ವ್ಯತ್ಯಾಸಗೊಳಿಸುವುದರ ಮೂಲಕ ತನ್ನ ನಡವಳಿಕೆಯನ್ನು ರೂಪಿಸುತ್ತದೆ. ಮನಸ್ಸು ಬಹಳಷ್ಟು ವಿರಿಳಿತ ಮತ್ತು ಮಾರ್ಪಾಡುಗಳಿಗೆ ಒಳಗಾಗುತ್ತದೆ. ಮನಸ್ಸಿಗೆ ಯಾವುದೇ ತರಹದ ನಿರ್ಧಾರಿತ ಗುರಿಗಳಿರುವುದಿಲ್ಲ. ಮನಸ್ಸು ಪ್ರಪಂಚದ ವಸ್ತುಗಳೊಂದಿಗೆ ವ್ಯವಹರಿಸುತ್ತದೆ. ಮನಸ್ಸು ಯಾವುದೇ ಸ್ಥಳ ಮತ್ತು ಸಮಯದ ಮಿತಿಯೊಳಗಿರದೆ ಯಾವುದೇ ಸ್ಥಳ ಮತ್ತು ಸಮಯಕ್ಕಾದರೂ ತಲುಪಬಹುದಾದ ಶಕ್ತಿಯನ್ನು ಹೊಂದಿದ್ದು ಅದು ಮುಕ್ತವಾಗಿರುತ್ತದೆ ಎಂದು ಪ್ರತಿಪಾದಿಸುತ್ತಾರೆ ಆದ್ದರಿಂದ ಮನಸ್ಸನ್ನು ನಿಯಂತ್ರಿಸಲು ಯೋಗವು ಉತ್ತಮವಾದ ಮಾರ್ಗ ಎಂದು ಅಭಿಪ್ರಾಯಪಡುತ್ತಾರೆ.

ಮನಸ್ಸು ಸದಾ ಬದಲಾಗುತ್ತಿರುತ್ತದೆ. ಅದು ನೈಜತೆಯಿಂದ ದೂರವಿರುತ್ತದೆ. ಮನಸ್ಸು ಆರಾಮದ ಸ್ಥಿತಿಯಲ್ಲಿಲ್ಲದಿದ್ದರೆ ಅದು ಸಾಮಾಜಿಕ ಸಂಬಂಧಗಳನಷ್ಟೇ ಅಲ್ಲದೆ, ಶೈಕ್ಷಣಿಕ ಪ್ರಗತಿ, ಮತ್ತು ಜೀವನದ ಗುಣಮಟ್ಟವನ್ನೇ ತೊಂದರೆಗೊಳಪಡಿಸುತ್ತದೆ. ಆದ್ದರಿಂದ ಮನಸ್ಸು ವಾಸ್ತವಿಕತೆಯಲ್ಲಿರಲು ಯೋಗವನ್ನು ಅಭ್ಯಾಸಮಾಡುವುದು ಉತ್ತಮ ಎಂದು ಪಂಡಿತ್.ಎಸ್.ಎ. ರವರು (2008) ತಮ್ಮ ಸಂಶೋಧನೆಯಿಂದ ತಿಳಿಸಿರುತ್ತಾರೆ.

ಯೋಗದ ಅಭ್ಯಾಸವು ಒತ್ತಡದ ಪ್ರತಿಕ್ರಿಯೆಯಿಂದ ತಪ್ಪಿಸಿಕೊಳ್ಳುವುದು ಅಥವಾ ಹೋರಾಡುವಂತಹ ಇದರ ವಿರುದ್ಧ ಸ್ಥಿತಿಯನ್ನು ಸೃಷ್ಟಿಸುತ್ತದೆ ಮತ್ತು ಒತ್ತಡದ ಪ್ರತಿಕ್ರಿಯೆಯಲ್ಲಿ ಅಡೆತಡೆ ಉಂಟಾಗುವುದರಿಂದ ದೇಹ ಮತ್ತು ಮನಸ್ಸಿನಲ್ಲಿ ಸಮತೋಲನದ ಸ್ಥಿತಿಯು ಉಂಟಾಗುತ್ತದೆ ಎಂದು ಅರೋರ. ಎಸ್.ಭಟ್ಟಾಚಾರಿಜಿ.ಜೆ. ರವರು (2008) ತಮ್ಮ ಸಂಶೋಧನೆಯಿಂದ ದೃಢಪಡಿಸಿರುತ್ತಾರೆ.

ಯೋಗದಲ್ಲಿ ಬರುವ ಅಷ್ಟಾಂಗಗಳ ಪ್ರಕ್ರಿಯೆಯಿಂದ ದೈಹಿಕ, ಮಾನಸಿಕ ಮತ್ತು ಸಂವೇಗಾತ್ಮಕ ಹಂತಗಳಲ್ಲಿ ಉಂಟಾಗುವ ತಮ್ಮಗಳನ್ನು ಸ್ವಾಭಾವಿಕ ಮತ್ತು ವ್ಯವಸ್ಥಿತ ಮಾದರಿಯಲ್ಲಿ ಸರಿಪಡಿಸಬಹುದು ಎಂದು ರಾಣಿ ಮತ್ತು ರಾವ್ ರವರು (2005) ತಮ್ಮ ಸಂಶೋಧನೆಯಿಂದ ತಿಳಿಸಿರುತ್ತಾರೆ.

ಯೋಗದ ಅಭ್ಯಾಸದಿಂದ ಖಿನ್ನತೆ, ಮತ್ತು ಅತಿಯಾದ ವಿಷಣ್ಣತೆಯ ಗುಣಲಕ್ಷಣಗಳನ್ನು ಕಡಿಮೆಗೊಳಿಸಬಹುದೆಂದು ಪಿಕ್‌ಲಿಂಗ್‌ಟನ್ ಕೆ., ಕರ್ಕ್‌ವುಡ್ .ಜಿ, ಎಚ್. ರೇಪಸ್ ಮತ್ತು ರಿಚರ್ಡ್‌ಸನ್ .ಜೆ ರವರು (2005) ತಮ್ಮ ಸಂಶೋಧನೆಯಿಂದ ದೃಢಪಡಿಸಿರುತ್ತಾರೆ. ಮನಸ್ಸು ಸಂವೇದನೆಗಳಿಗೆ ಪ್ರತಿಕ್ರಿಯಿಸಬೇಕೇ ಬೇಡವೇ ಎಂದು ನಿರ್ಧರಿಸುವ ಶಕ್ತಿಯನ್ನು ಬೆಳೆಸಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಪ್ರತ್ಯಾಹಾರವು ಮನಸ್ಸನ್ನು ಒಳಗೆ ನಿಲ್ಲಿಸುವ ಮಾನಸಿಕ ಅಭ್ಯಾಸವೆಂದು ತಿಳಿಸಲಾಗಿದೆ. ನಮ್ಮ ಮನಸ್ಸನ್ನು ನಮ್ಮೊಳಗೇ ಹಿಡಿದಿಟ್ಟುಕೊಳ್ಳುವುದರಿಂದ ನಮ್ಮ ಸುತ್ತಮುತ್ತಲೂ ಏನೇ ನಡೆಯುತ್ತಿದ್ದರೂ ಅದರಿಂದ ದೂರ ಉಳಿಯುವ ಬಲವು ದೊರಕುತ್ತದೆ. ಆದ್ದರಿಂದ ಮನಸ್ಸು ಹಠಾತ್

ಪ್ರವೃತ್ತಿಯಿಂದ ತಕ್ಷಣ ಪ್ರತಿಕ್ರಿಯಿಸದೇ ಮೌಲ್ಯಮಾಪನ ಮಾಡುವ ಸಮರ್ಪಕವಾದ ನಿರ್ಣಯಗಳನ್ನು ತೆಗೆದುಕೊಳ್ಳುವ ಶಕ್ತಿಯನ್ನು ಹೊಂದುತ್ತದೆ. ಯಾವಾಗ ವ್ಯಕ್ತಿಯು ಪ್ರಚೋದನೆಗಳಿಗೆ ಪ್ರತಿಕ್ರಿಯಿಸುವುದನ್ನು ನಿಯಂತ್ರಿಸುವುದನ್ನು ಕಲಿತು ಅದರ ಬದಲಾಗಿ ಶಾಂತ ಮನೋಭಾವವನ್ನು ನಿರ್ವಹಿಸುತ್ತಾನೋ ಆಗ ಆತನಿಗೆ ಸಂಪೂರ್ಣ ಸಂತೋಷ ಮತ್ತು ಸ್ವತಂತ್ರವೂ ದೊರಕುತ್ತದೆ. ಪ್ರತ್ಯಾಹಾರದ ಮೂಲಕ ವ್ಯಕ್ತಿಯು ಸ್ವ-ಜ್ಞಾನದ ಬಗ್ಗೆ ಮನಸ್ಸನ್ನು ಕೇಂದ್ರೀಕರಿಸಬಹುದು. ಪ್ರತ್ಯಾಹಾರವು ಪ್ರತ್ಯಕ್ಷಾನುಭವದ ಬಾಗಿಲುಗಳನ್ನು ಶುದ್ಧಗೊಳಿಸುವು ದಾಗಿರುತ್ತದೆ ಎಂದು ಶೀರರ್ ಅಲಿಸ್ತ್ಯೇರ್ ರವರು (2002) ತಮ್ಮ ಸಂಶೋಧನೆಗಳಿಂದ ದೃಢಪಡಿಸಿರುತ್ತಾರೆ.

ಉಪಸಂಹಾರ: ದೇಹ ಮತ್ತು ಮನಸ್ಸಿನ ನಡುವೆ ಬಹಳ ಗಾಢವಾದ ಸಂಬಂಧವಿದೆ. ವ್ಯಕ್ತಿಯಲ್ಲಿ ಚೈತನ್ಯಯುತವಾದ ಮನಸ್ಸಿದ್ದಲ್ಲಿ ದೈಹಿಕ ಆರೋಗ್ಯವು ಉತ್ತಮವಾಗಿರುತ್ತದೆ. ಆದ್ದರಿಂದ ಉತ್ತಮವಾದ ದೈಹಿಕ ಆರೋಗ್ಯವನ್ನು ಹೊಂದಬೇಕಾದರೆ ಮೊದಲು ಉತ್ತಮವಾದ ಮಾನಸಿಕ ಆರೋಗ್ಯವು ಉತ್ತಮವಾಗಿರಬೇಕು. ಮಾನಸಿಕ ಆರೋಗ್ಯವನ್ನು ಹೊಂದಲು ಮನಸ್ಸು ನಕರಾತ್ಮಕ ಸಂವೇಗಗಳು, ಆಲೋಚನೆಗಳಿಂದ ದೂರವಿರಬೇಕು. ನಕಾರತ್ಮಕ ಆಲೋಚನೆಗಳನ್ನು ಹೊರಹಾಕಿ ಆರೋಗ್ಯಯುತ ಮನಸ್ಸನ್ನು ಹೊಂದಲು ಪತಂಜಲಿಯವರು ಸೂಚಿಸುವ ಅಷ್ಟಾಂಗ ಯೋಗವು ಬಹಳ ಸೂಕ್ತವಾಗಿರುತ್ತದೆ. ಅಷ್ಟಾಂಗ ಯೋಗದಲ್ಲಿ ತಿಳಿಸಿರುವ ಹಾಗೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಇವುಗಳನ್ನು ಸಮರ್ಪಕವಾಗಿ ಅಭ್ಯಾಸಮಾಡುವುದರಿಂದ ವ್ಯಕ್ತಿಯು ತನ್ನ ಮನಸ್ಸನ್ನು ಉತ್ತಮ ರೀತಿಯಲ್ಲಿ ನಿಯಂತ್ರಿಸಬಹುದು. ನಿಯಂತ್ರಿತ ಮನಸ್ಸು ಪ್ರಾಪಂಚಿಕ ವಿಚಲತೆಗಳಿಂದ ಮುಕ್ತವಾಗಿ ತನ್ನ ಗುರಿಸಾಧನೆಯತ್ತ ಸಾಗಬಹುದು. ಅಷ್ಟಾಂಗ ಯೋಗವನ್ನು ಅಭ್ಯಸಿಸುವುದರಿಂದ ಮನಸ್ಸು ಶಾಂತಗೊಳ್ಳುತ್ತದೆ, ಬಲಗೊಳ್ಳುತ್ತದೆ ಮತ್ತು ನಿಯಂತ್ರಣದಲ್ಲಿರುತ್ತದೆ. ಮತ್ತು ಹಲವು ಮಾನಸಿಕ ಕಾಯಿಲೆಗಳಲ್ಲಿ ಇದನ್ನು ಮನೋಚಿಕಿತ್ಸೆಯಾಗಿ ಬಳಸಲಾಗಿದೆ ಎಂದು ಅನೇಕ ವೈಜ್ಞಾನಿಕ ಸಂಶೋಧನೆಗಳು ಮತ್ತು ಅಧ್ಯಯನಗಳಿಂದ ತಿಳಿದುಬರುತ್ತದೆ.

ಪತಂಜಲಿಯವರ ಅಷ್ಟಾಂಗ ಯೋಗವು ಮನಸ್ಸಿನ ನಿಯಂತ್ರಣವನ್ನು ಮಾಡುವಲ್ಲಿ ಬಹಳ ಪರಿಣಾಮಕಾರಿಯಾಗಿದೆ ಎಂಬುದನ್ನು ವೈಜ್ಞಾನಿಕ ಸಂಶೋಧನೆಗಳಲ್ಲಿ ಬಂದಿರುವ ಪಲಿತಾಂಶಗಳು ದೃಡಪಡಿಸಿವೆ.

ಪರಾಮರ್ಶನ ಗ್ರಂಥಗಳು:

1. Anjana G.T. (2013) *Excellence of Yoga in Present Day Life* Journal of Sukritndra Oriental Research Institute.
2. Woodyard.C (2011) *Exploring the therapeutic effects of Yoga and its ability to increase quality of life,* International Journal of Yoga.
3. Bishamber Singh and Surendra Kumar Sia (2010) *Reducing Anxiety through Yogic Practices,* Journal of Indian Health Psychology, volume 4, No.2, March
4. K.Ramakrishna Rao and Anand C. Paranjape, Ajit K.Dalal (2009). *Hand Book of Indian Psychology* (Edited) Cambridge University Press, Kolkata.
5. Ravindra Ravi (2009) *The Wisdom of Patanjali's Yoga Sutras*; A New Translation and Guide, Morning Light Press, Sand Point.
6. Pandit .S.A. (2008) *Assessing quality of life from Yogic perspective.* A preliminary investigation, Psychological Studies, 53(2) 150-153)
7. Arora S.Bhattacharjee .J. *Modulation of immune response in stress by Yoga,* International Journal of Yoga, 2008 1:45-55
8. Rani N.J. and Rao .PVK (2005) *Impact of Yoga training on body image and depression,* psychological studies, 50(1) 98-100.
9. Pilkington .K, Kirkwood .G, Rampes .H, Richardson .J (2005) *Yoga for Depression*; The Research Evidence.
10. Shearer Alistair, (2002) *The Yoga sutras of Patanjali.* Bell Tower. New York 132 P.

ಮಾನಸಿಕ ಆರೋಗ್ಯ ಮತ್ತು ಧ್ಯಾನ

★ಡಾ.ಮಂಜುನಾಥ ಪಿ.★★ಡಾ. ಸಂಪತ್ತ್‌ಕುಮಾರ್★ಶ್ರೀಮತಿ ಎಸ್. ಸುರ್ಮ

★ಸಹಾಯಕ ಪ್ರಾಧ್ಯಾಪಕರು, ಮನೋವಿಜ್ಞಾನಅಧ್ಯಯನ ವಿಭಾಗ, ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

★★ಸಹಾಯಕ ಪ್ರಾಧ್ಯಾಪಕರು, ಮನೋವಿಜ್ಞಾನಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪ್ರಬಂಧ ಸಾರ: ಪ್ರಸ್ತುತ ಲೇಖನದಉದ್ದೇಶವು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಧ್ಯಾನದ ಪಾತ್ರವನ್ನು ಅರ್ಥಮಾಡಿಕೊಳ್ಳುವುದಾಗಿರುತ್ತದೆ. ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಬಹುಪಾಲು ಜನರು ಪ್ರತಿಬಲನ,ಖಿನ್ನತೆ,ಆತಂಕ ಮತ್ತುಇತರ ಹಲವಾರು ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.ಆದ್ದರಿಂದ ಪ್ರತಿಯೊಬ್ಬರಿಗೂತಮ್ಮಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಮುಖ್ಯವಾಗಿರುತ್ತದೆ.ಧ್ಯಾನವು ಮಾನಸಿಕ ಆರೋಗ್ಯವನ್ನು ಹೇಗೆ ಉತ್ತಮಪಡಿಸುತ್ತದೆ? ಧ್ಯಾನ ಮತ್ತು ಮಾನಸಿಕ ಆರೋಗ್ಯದ ನಡುವಿನ ಸಂಬಂಧವೇನು? ಧ್ಯಾನದ ಪ್ರಮುಖ ವಿಧಗಳು ಯಾವುವು? ಮಾನಸಿಕ ಆರೋಗ್ಯವನ್ನು ಉತ್ತಮಪಡಿಸಿಕೊಳ್ಳಲು ಅವುಗಳನ್ನು ಅಳವಡಿಸಿಕೊಳ್ಳುವುದು ಹೇಗೆ?ಈ ಮೇಲಿನ ಪ್ರಮುಖವಾದಪ್ರಶ್ನೆಗಳನ್ನು ಈ ಲೇಖನದಲ್ಲಿಚರ್ಚಿಸಲಾಗಿದೆ.

ಭಾರತೀಯ ಪರಂಪರೆಯಲ್ಲಿ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಹಲವಾರು ತಂತ್ರಗಳಿವೆ. ಅವುಗಳಲ್ಲಿ ಬಹುಮುಖ್ಯವಾದದ್ದು ಮಹರ್ಷಿ ಪತಂಜಲಿಯವರು ಪ್ರತಿಪಾದಿಸಿರುವ ಪತಂಜಲಿ ಯೋಗ.ಈ ಯೋಗವುಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿಎಂಬ ಎಂಟು ಪಾದಗಳನ್ನು ಹೊಂದಿರುತ್ತದೆ.ಪ್ರಸ್ತುತ ಲೇಖನದಲ್ಲಿ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಧ್ಯಾನದ ಪಾತ್ರವನ್ನು ಮಾತ್ರಚರ್ಚಿಸಲಾಗಿದೆ.

ಧ್ಯಾನವೆಂಬುದುಮನಸ್ಸನ್ನು ಶಾಂತವಾಗಿಸುವ ಮತ್ತುಅದರ ಮೇಲೆ ನಿಯಂತ್ರಣವನ್ನು ಹೊಂದುವಕೌಶಲಯುತವಾದ ವಿಧಾನವಾಗಿರುತ್ತದೆ. ಇದುದೈಹಿಕ ಮತ್ತು ಸಂವೇಗಾತ್ಮಕ ಬಳಲಿಕೆಯನ್ನು ಕಡಿಮೆ ಮಾಡುವ ಮುಖಾಂತರ ವ್ಯಕ್ತಿಯಲ್ಲಿರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸಿ ದೇಹ ಮತ್ತು ಮನಸ್ಸನ್ನು ಸದೃಢಗೊಳಿಸಲು ಸಹಾಯಮಾಡುತ್ತದೆ.ಈ ಲೇಖನವು ಇತ್ತೀಚಿನ ಸಂಶೋಧನಾ ಅಧ್ಯಯನಗಳನ್ನು ಆಧರಿಸಿ ಧ್ಯಾನದಿಂದ ಮಾನಸಿಕ ಆರೋಗ್ಯವನ್ನು ಹೇಗೆ ಹೆಚ್ಚಿಸಿಕೊಳ್ಳಬಹುದೆಂದುಪ್ರತಿಪಾದಿಸುತ್ತದೆ.

ಪ್ರಸ್ತುತ ಸಾಮಾಜಿಕ ಸನ್ನಿವೇಶದಲ್ಲಿಆಧುನಿಕ ಮತ್ತುಅತಿವೇಗದಜೀವನ ಶೈಲಿಯಿಂದಾಗಿ ಬಹುಪಾಲು ಜನರು ಪ್ರತಿಬಲನ, ರಕ್ತದೊತ್ತಡ, ಆತಂಕ, ವಿಷಣ್ಣತೆ, ಸಂವೇಗಗಳ ಅಸಮತೋಲನ, ಬಾಂಧವ್ಯಗಳ ಅಸಮರ್ಪಕ ನಿರ್ವಹಣೆ ಮುಂತಾದ ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದು ನಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ.ಭಾರತದಲ್ಲಿ ಶೇ.6.7 ರಷ್ಟು ಜನರು ಮಾನಸಿಕ ವಿಕಾರಗಳಿಂದ ಬಳಲುತ್ತಿದ್ದಾರೆ.ಇದರ ಪ್ರಮಾಣವು 2020ರ ವೇಳೆಗೆ ಶೇ.15ರಷ್ಟು ಏರಿಕೆಯಾಗಬಹುದೆಂದು ಅಂದಾಜಿಸಲಾಗಿದೆ ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮವು ವರದಿಯಲ್ಲಿ ತಿಳಿಸಿದೆ (NMHP 2011). ಹಾಗೆಯೇ ಭಾರತದಲ್ಲಿ 37,37,481 ಜನರು ಸ್ಕಿಜೋಫ್ರೇನಿಯಾ, 12,45,827 ಜನರು ಬುದ್ಧಿಮಾಂದ್ಯತೆ, 18,93,657 ಜನರು ಡೆಮೆನ್‌ಷಿಯಾ, 1,12,12,443 ಜನರು ಮೂರ್ಛೆರೋಗ ಮತ್ತು ನರಗಳಿಗೆ ಸಂಬಂಧಿಸಿದ ವಿಕಾರಗಳು, 1,99,33,232 ಜನರು ಭಾವನಾತ್ಮಕ ವಿಕಾರಗಳು, ಏಕಧ್ರುವ ಮತ್ತು ದ್ವಿಧ್ರುವ ವಿಕಾರಗಳು, 3,08,96,510 ಜನರು ಸಾಮಾನ್ಯ ಮಾನಸಿಕ ವಿಕಾರಗಳಿಂದ ಬಳಲುತ್ತಿದ್ದಾರೆ ಎಂದು ರಾಷ್ಟ್ರೀಯ ಆಯೋಗದ ಸೂಕ್ಷ್ಮ–ಅರ್ಥಶಾಸ್ತ್ರ 2010 ಆರೋಗ್ಯ ವರದಿಯು ಹೇಳುತ್ತದೆ. ಆದ್ದರಿಂದ ಮಾನಸಿಕ ಅನಾರೋಗ್ಯವು ಗಂಭೀರವಾದ ಸಮಸ್ಯೆಯಾಗಿದ್ದು ಪ್ರತಿಯೊಬ್ಬರೂ ತಮ್ಮ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಮುಖ್ಯವಾಗಿರುತ್ತದೆ.

ಮಾನಸಿಕ ಆರೋಗ್ಯವೆಂದರೆ, ವ್ಯಕ್ತಿಯುಜೀವನದಲ್ಲಿ ಸಾಮಾಜಿಕ, ದೈಹಿಕ, ಆಧ್ಯಾತ್ಮಿಕ ಮತ್ತು ಸಂವೇಗಾತ್ಮಕವಾಗಿ ಸಮತೋಲನವನ್ನು ಹೊಂದಿರುವುದಾಗಿದೆ.ಈ ಸಮತೋಲನವು ವ್ಯಕ್ತಿಯಲ್ಲಿನ ಸಂಪೂರ್ಣ ಸ್ವಾಸ್ಥ್ಯವನ್ನು ಸೂಚಿಸುತ್ತದೆ.ಮಾನಸಿಕಆರೋಗ್ಯವೆಂದರೆ,'ವ್ಯಕ್ತಿಯುತನ್ನ ಸಾಮಾರ್ಥ್ಯಗಳ ಬಗ್ಗೆ ಅರಿವನ್ನುಂಟುಮಾಡಿಕೊಳ್ಳುವ ಸ್ವಾಸ್ಥ್ಯಸ್ಥಿತಿಯಾಗಿದ್ದು, ಜೀವನದ ಒತ್ತಡಗಳನ್ನು ನಿರ್ವಹಿಸಬಲ್ಲ, ತನ್ನ ಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ತನ್ನ ಸಮುದಾಯಕ್ಕೆಕೊಡುಗೆಯನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುವುದಾಗಿದೆ' ಎಂದುವಿಶ್ವ ಆರೋಗ್ಯ ಸಂಸ್ಥೆಯು (2010) ವ್ಯಾಖ್ಯಾನಿಸಿದೆ.ಅಂದರೆ ವ್ಯಕ್ತಿಯು ತನ್ನ ಸ್ವಭಾವ, ಶಕ್ತಿ ಸಾಮರ್ಥ್ಯ, ದೌರ್ಬಲ್ಯಗಳನ್ನು ಮತ್ತು ತನ್ನ ಬಗ್ಗೆ ಇರುವ ಸ್ವ–ಪರಿಕಲ್ಪನೆ, ಮನೋಭಾವ ಮುಂತಾದವುಗಳನ್ನು ಅರಿತುಕೊಂಡು ಆ ಮೂಲಕ ದೈನಂದಿನ ಜೀವನದಲ್ಲಿ ಎದುರಾಗುವಂತಹ ಮಾನಸಿಕ ಒತ್ತಡ, ಸೋಲು, ಉದ್ವೇಗ, ಅಭದ್ರತೆ, ತಿರಸ್ಕಾರದ ಭಾವನೆ ಮುಂತಾದವುಗಳನ್ನು ಸಮರ್ಥವಾಗಿ ಎದುರಿಸಬೇಕು. ದೃಢವಾದ ಮನಸ್ಸು ಮತ್ತು ಆರೋಗ್ಯವನ್ನು ಕಾಪಾಡಿಕೊಂಡು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವ ಮುಖಾಂತರ ಆರೋಗ್ಯಯುತವಾದ ಸಮಾಜವನ್ನು ನಿರ್ಮಾಣ ಮಾಡುವುದು ಮತ್ತು ಆ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಉತ್ತಮ ಮಾನವ ಸಂಪನ್ಮೂಲವಾಗಿ ಕೊಡುಗೆಯನ್ನು ನೀಡುವುದು ಪ್ರತಿಯೊಬ್ಬ ವ್ಯಕ್ತಿಯ ಗುರಿಯಾಗಿರುತ್ತದೆ.

ಮಾನಸಿಕ ಆರೋಗ್ಯವನ್ನು ಹೊಂದಲು ಹಲವಾರು ವಿಧಾನಗಳಿವೆ. ಅವುಗಳೆಂದರೆ ಯೋಗ, ವ್ಯಾಯಾಮಗಳು, ಸಂಗೀತ, ಧ್ಯಾನ ಮೊದಲಾದವು. ಅದರಲ್ಲೂ ಧ್ಯಾನವು ಆರೋಗ್ಯಯುತವಾದ ಮನಸ್ಸನ್ನು ಮತ್ತು ದೇಹವನ್ನು ರೂಪಿಸುವಲ್ಲಿ ಬಹಳ ಪ್ರಭಾವವನ್ನು ಬೀರುತ್ತದೆ.

ಮಹರ್ಷಿ ಪತಂಜಲಿಯವರು ಯೋಗ ಸೂತ್ರವನ್ನು ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಯೋಗವೆಂದರೆ 'ಚಿತ್ತ ವೃತ್ತಿ ನಿರೋಧ' ಅಂದರೆ ಮನಸ್ಸಿನಲ್ಲಿ ಉಂಟಾಗುವ ವಿರಿಳಿತಗಳನ್ನು (ವೃತ್ತಿ) ಧಮನ ಮಾಡುವುದು ಎಂದರ್ಥ.ವೃತ್ತಿ ಎಂದರೆ ಮನಸ್ಸು ವಿರಿಳಿತಗಳಿಂದ ಕೂಡಿರುವ ಸ್ಥಿತಿಯಾಗಿದ್ದು ಇದು ಸಂಜ್ಞಾನಾತ್ಮಕತೆ, ಸಂವೇಗಾತ್ಮಕತೆ ಮತ್ತು ಸಂಕಲ್ಪ ಸ್ಥಿತ್ಯಾಂತರಗಳಿಂದ ಕೂಡಿರುತ್ತದೆ.ಇವುಗಳನ್ನು ನಿಯಂತ್ರಿಸದಿದ್ದರೆ ಮಾನಸಿಕ ಅನಾರೋಗ್ಯವು ಉಂಟಾಗುತ್ತದೆ.ಆದ್ದರಿಂದ ಮನಸ್ಸನ್ನು ನಿಯಂತ್ರಿಸುವುದು ತುಂಬಾ ಪ್ರಮುಖವಾಗಿದ್ದು, ಈ ನಿಟ್ಟಿನಲ್ಲಿ ಧ್ಯಾನವು ಮನಸ್ಸಿನಲ್ಲಿರುವ ನಕಾರಾತ್ಮಕ ಮನೋಭಾವಗಳು, ಆಲೋಚನೆಗಳು ಮತ್ತು ಸಂವೇಗಗಳನ್ನು ನಿಯಂತ್ರಿಸಿ, ಮಾನಸಿಕವಾಗಿ ಶಾಂತಸ್ಥಿತಿಯನ್ನು ಉಂಟು ಮಾಡುತ್ತದೆ.ಇದರಿಂದಾಗಿ ಮಾನಸಿಕ ಆರೋಗ್ಯವು ವೃದ್ಧಿಯಾಗುತ್ತದೆ.ಆದ್ದರಿಂದ ಧ್ಯಾನ ಮತ್ತು ಮಾನಸಿಕ ಆರೋಗ್ಯವು ಪರಸ್ಪರ ಪೂರಕವಾದ ಸಂಬಂಧವನ್ನು ಹೊಂದಿದ್ದು ಮಾನಸಿಕ ಆರೋಗ್ಯದ ಮೇಲೆ ಧ್ಯಾನವು ತುಂಬಾ ಪ್ರಭಾವವನ್ನು ಬೀರುತ್ತದೆ.

ಪತಂಜಲಿ ಯೋಗವು ಎಂಟು ಪಾದಗಳನ್ನು ಹೊಂದಿದ್ದು ಇದನ್ನು **'ಅಷ್ಟಾಂಗ ಯೋಗ'** ಎಂದೂ ಸಹ ಕರೆಯುವರು.ಅವುಗಳನ್ನು ಸಂಕ್ಷಿಪ್ತವಾಗಿ ನೋಡೋಣ.*ಯಮ*ಪಾದದಲ್ಲಿ ಮನಸ್ಸಿನಲ್ಲಿರುವ ಅಹಿತಕರ ನಕಾರಾತ್ಮಕ ಪ್ರಲೋಭನೆಗಳನ್ನು ನಿಯಂತ್ರಿಸಿ ಮನಸ್ಸನ್ನು ಹತೋಟಿಗೆ ತರಲಾಗುವುದು.*ನಿಯಮ* ಪಾದದಲ್ಲಿ ಮನಸ್ಸು ಮತ್ತು ದೇಹದ ಪರಿಶುದ್ಧತೆಯನ್ನು ಹೆಚ್ಚಿಸಲಾಗುವುದು.*ಆಸನ*ಪಾದದಲ್ಲಿ ದೇಹವನ್ನು ವಿವಿಧ ಭಂಗಿಗಳಲ್ಲಿ ವ್ಯಾಯಾಮ ಮಾಡಲು ಸದೃಢಗೊಳಿಸಲಾಗುವುದು.*ಪ್ರಾಣಾಯಾಮ*ಪಾದದಲ್ಲಿ ಉಸಿರಾಟದ ಮೇಲೆ ಗಮನ ಕೇಂದ್ರೀಕರಿಸಲಾಗುವುದು.*ಪ್ರತ್ಯಾಹಾರ* ಪಾದದಲ್ಲಿ ಮನಸ್ಸನ್ನು ಸಂವೇದನೆಗಳಿಂದ ದೂರ ಇಡುವಂತೆ ಮಾಡುವುದು.ಇದರಿಂದ ಮನಸ್ಸು ಏಕಾಗ್ರತೆಗೊಳ್ಳಲು ಸಾಧ್ಯವಾಗುತ್ತದೆ.*ಧಾರಣ* ಪಾದದಲ್ಲಿ ಇತರ ಅನಾವಶ್ಯಕ ವಿಚಾರಗಳನ್ನು ನಿರ್ಲಕ್ಷಿಸಿ ಒಂದೇ ವಿಚಾರದತ್ತ ಮನಸ್ಸನ್ನು ಹಿಡಿದಿಟ್ಟುಕೊಳ್ಳುವುದು. *ಧ್ಯಾನ* ಪಾದದಲ್ಲಿ ಮನಸ್ಸನ್ನು ಒಂದೇ ವಿಚಾರದತ್ತ ದೀರ್ಘಕಾಲ ಕೇಂದ್ರೀಕರಿಸುವಂತೆ ಮಾಡುವುದು. ಇದರಿಂದ ಮನಸ್ಸು ಶಾಂತ ಸ್ಥಿತಿಯನ್ನು ತಲುಪುವುದು. ಅಂತಿಮವಾಗಿ *ಸಮಾಧಿ* ಪಾದದಲ್ಲಿ ಮನಸ್ಸು ಏಕಾಗ್ರತೆಯ ಅನುಭವದ ಮೇಲೆ ಸಂಪೂರ್ಣವಾಗಿ ಧ್ಯಾನದಿಂದ ತಲ್ಲೀನವಾಗುವಂತೆ ಮಾಡುವುದು

ಧ್ಯಾನದ ಬಗೆಗಳು: ಮಾನಸಿಕ ಆರೋಗ್ಯವನ್ನು ಉತ್ತಮ ಪಡಿಸುವ ಪ್ರಮುಖ ಧ್ಯಾನದ ಬಗೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸೋಣ.

ವಿಪಸ್ಸನ ಧ್ಯಾನ:ವಿಪಸ್ಸನ ಧ್ಯಾನವನ್ನು ಭಾರತದಲ್ಲಿ ಬೌದ್ಧಧರ್ಮದ

ಪ್ರತಿಪಾದಕನಾದಗೌತಮ ಬುದ್ಧನು ಪರಿಚಯಿಸಿದನು. ವಿಪಸ್ಸನ ಎಂಬ ಪದವು ಪಾಲಿ ಭಾಷೆಯಿಂದ ಬಂದಿದ್ದು, ಇದರ ಅರ್ಥ 'ಒಳದೃಷ್ಟಿ'. ಹಾಗೆಯೇ ಸಂಸ್ಕೃತದಲ್ಲಿ ವಿಪಸ್ಸ್ಯ ('ವಿ' ಎಂದರೆ 'ಒಳ' ಎಂತಲೂ, 'ಪಸ್ಸ್ಯ' ಎಂದರೆ ನೋಟ) ಎಂದರೆ'ಒಳನೋಟ' ಎಂಬ ಅರ್ಥ ಬರುತ್ತದೆ. ವ್ಯಕ್ತಿಯು ಧ್ಯಾನವನ್ನು ಪ್ರಾರಂಭಿಸಿದಾಗ ಮೊದಲು ಉಸಿರಾಟವನ್ನು ಗಮನಿಸುತ್ತಾನೆ. ಅನಂತರ ತನ್ನ ಶರೀರದಲ್ಲಿ ಆಂತರಿಕವಾಗಿ ಜರುಗುವಂತಹ ಜೈವಿಕ ಮತ್ತು ಮಾನಸಿಕ ಕ್ರಿಯೆಗಳನ್ನು ಗಮನಿಸುತ್ತಾನೆ. ಈ ರೀತಿಗಮನಿಸುವ ಸಾಮರ್ಥ್ಯವನ್ನು ಪಡೆದ ಮೇಲೆ ಆತನಿಗೆ ಶಾರೀರಿಕ ಮತ್ತು ಮಾನಸಿಕ ಕ್ರಿಯೆಗಳನ್ನು ನಿಯಂತ್ರಿಸುವ ಸಾಮರ್ಥ್ಯವು ಬಲಗೊಳ್ಳುತ್ತದೆ. ಇದರಿಂದಾಗಿ ವ್ಯಕ್ತಿಯಲ್ಲಿ ಧ್ಯಾನದ ಮುಖಾಂತರ ತನ್ನ ಶಾರೀರಿಕ ಮತ್ತು ಮಾನಸಿಕ ಕ್ರಿಯೆಗಳಲ್ಲಿ ಉಂಟಾಗುವ ನಕಾರಾತ್ಮಕ ಅಂಶಗಳನ್ನು ತೊಡೆದು ಹಾಕಿ ಸಕಾರಾತ್ಮಕ ಅಂಶಗಳನ್ನು ಮಾತ್ರ ಉಳಿಸಿಕೊಳ್ಳುತ್ತಾನೆ.ಆ ಮೂಲಕ ಉತ್ತಮ ಮಾನಸಿಕ ಮತ್ತು ದೈಹಿಕ ಸ್ಥಿತಿಯನ್ನು ಹೊಂದುತ್ತಾನೆ.

ಅನುಭವಾತೀತ ಧ್ಯಾನ:ಅನುಭವಾತೀತ ಧ್ಯಾನವನ್ನು ಹೆಚ್ಚಾಗಿ ನೈದಾನಿಕ ಮತ್ತು ವೈದ್ಯಕೀಯಕ್ಷೇತ್ರದಲ್ಲಿ ಬಳಸಲಾಗುತ್ತದೆ.ಈ ತಂತ್ರವು ಮೂಲತಃ ಭಾರತದ ಸನಾತನ ಸಂಪ್ರದಾಯದಲ್ಲಿ ಪ್ರಾರಂಭವಾಗಿರುತ್ತದೆ. ಸಾಮಾನ್ಯವಾಗಿಒಂದು ಮಂತ್ರ, ಶಬ್ದ, ಪದಅಥವಾಉಕ್ತಿಯನ್ನು ನಿಶ್ಯಬ್ದವಾಗಿ ಪಠಿಸುತ್ತ ಮನಸ್ಸಿಗೆ ಇತರೆ ವಿಚಾರಗಳು ಬರದಂತೆತಡೆಯುವುದಾಗಿರುತ್ತದೆ. ಅನುಭವಾತೀತ ಧ್ಯಾನದ ಮುಖ್ಯಉದ್ದೇಶವು ಮನಸ್ಸನ್ನು ಶಾಂತ ಸ್ಥಿತಿಗೆ ತರುವುದು ಮತ್ತುದೇಹಕ್ಕೆ ಆಳವಾದ ವಿಶ್ರಾಂತಿಯ ಸ್ಥಿತಿಯನ್ನು ನೀಡುವುದು.ಅನುಭವಾತೀತ ಧ್ಯಾನದ ಮುಖಾಂತರ ವ್ಯಕ್ತಿಯು ತನ್ನ ಬಗೆಗೆ ಆಳವಾದ ಮತ್ತು ವ್ಯಾಪಕವಾದ ಅನುಭವವನ್ನು ಪಡೆಯುತ್ತಾನೆ. ಇಲ್ಲಿ ವ್ಯಕ್ತಿಯು ಪ್ರಜ್ಞಾವಸ್ಥೆಯ ಉನ್ನತ ಅನುಭವವನ್ನು ಪಡೆಯುತ್ತಾನೆ.ಇದನ್ನು ನೈದಾನಿಕ ಮತ್ತು ಮನೋಚಿಕಿತ್ಸೆಗಳಲ್ಲಿ ಮಾನಸಿಕ ರೋಗಗಳನ್ನು ಗುಣಪಡಿಸಲೂ ಸಹ ಇತ್ತೀಚಿನ ದಿನಗಳಲ್ಲಿ ಪ್ರಮುಖವಾಗಿ ಬಳಸಲಾಗುತ್ತಿದೆ.

ಪೂರ್ಣ ಮನಸ್ಸಿನ ಧ್ಯಾನ:ಪೂರ್ಣ ಮನಸ್ಸಿನ ಧ್ಯಾನವೆಂದರೆ ನಿರ್ಧಾರಿತ ರೀತಿಯಲ್ಲಿ ಆಂತರಿಕ ಮತ್ತು ಬಾಹ್ಯ ಅನುಭವಗಳು ಪ್ರಸ್ತುತಕ್ಷಣದಲಿ ಇರುವತ್ತಉದ್ದೇಶಪೂರ್ವಕವಾಗಿವ್ಯಕ್ತಿಯಅವಧಾನವನ್ನುತರುವ ಪ್ರಕ್ರಿಯೆಯಾಗಿರುತ್ತದೆ.ಅಂದರೆ ವ್ಯಕ್ತಿಯ ಜೀವನದಲ್ಲಿ ನಡೆದಂತಹ ಅಹಿತಕರ ಘಟನೆಗಳು ಮತ್ತು ನಕಾರಾತ್ಮಕ ಅನುಭವಗಳು ಸ್ಮರಣೆಯಲ್ಲಿರುತ್ತವೆ.ಇವು ವರ್ತಮಾನದ ಮಾನಸಿಕ ಮತ್ತು ದೈಹಿಕ ಸ್ಥಿತಿಯ ಮೇಲೆ ಪ್ರಭಾವ ಬೀರುತ್ತವೆ. ಹಾಗೆಯೇ ವ್ಯಕ್ತಿಯು ತನ್ನ ಜೀವನದಲ್ಲಿ ಭವಿಷ್ಯದ ಬಗ್ಗೆ ಹಲವಾರು ಆಸೆ, ಆಕಾಂಕ್ಷೆ, ನಿರೀಕ್ಷೆ ಮತ್ತು ಭ್ರಮೆಗಳನ್ನು ಹೊಂದಿರುತ್ತಾನೆ.ಇವು ಸಹ ಸ್ಮರಣೆಯಲ್ಲಿದ್ದು ವರ್ತಮಾನದ ಮಾನಸಿಕ ಮತ್ತು ದೈಹಿಕ ಸ್ಥಿತಿಯ ಮೇಲೆ ಪ್ರಭಾವ ಬೀರುತ್ತವೆ. ಆದುದರಿಂದ ವ್ಯಕ್ತಿಯ ಸ್ಮರಣೆಯಲ್ಲಿರುವ ಭೂತಕಾಲದ ಮತ್ತು ಭವಿಷ್ಯತ್ತಿನ ಅಂಶಗಳನ್ನು ಸಮತೋಲನ ಮಾಡಿ ಅವುಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ವಾಸ್ತವಿಕ ಮತ್ತು ಪ್ರಚಲಿತದಲ್ಲಿ ಯಶಸ್ವಿಯಾಗಿ ಬದುಕುವುದನ್ನು ಪೂರ್ಣ ಮನಸ್ಸಿನ ಧ್ಯಾನದಿಂದ ಪಡೆಯಬಹುದು.

ಪ್ರೇಕ್ಷಾಧ್ಯಾನ:ಮನೋಭಾವಗಳು ವ್ಯಕ್ತಿಯ ವರ್ತನೆಯನ್ನು ನಿರ್ಧರಿಸುವ ಮನೋದೈಹಿಕ ಪೂರ್ವಸಿದ್ಧತೆಗಳಾಗಿರುತ್ತವೆ. ವ್ಯಕ್ತಿಯು ಒಂದು ವಸ್ತು, ವ್ಯಕ್ತಿ ಮತ್ತು ವಿಚಾರಗಳ ಬಗ್ಗೆ ಹೊಂದಿರುವ ಭಾವನೆಗಳನ್ನು 'ಮನೋಭಾವಗಳು' ಎಂದು ಕರೆಯುವರು.ಮನೋಭಾವಗಳಲ್ಲಿ ಸಕರಾತ್ಮಕಮತ್ತು ನಕರಾತ್ಮಕ ಮನೋಭಾವಗಳಿರುತ್ತವೆ.ಈ ಮನೋಭಾವಗಳು ವಾಸ್ತವಿಕತೆಯೆಡೆಗೆ ಪೂರಕವಾಗಿದ್ದರೆ ಯಾವುದೇ ಸಮಸ್ಯೆ ಉದ್ಭವಿಸುವುದಿಲ್ಲ ಬದಲಾಗಿ ವಾಸ್ತವ ಮತ್ತು ಮನೋಭಾವಗಳ ನಡುವೆ ವೈರುಧ್ಯಗಳು ಉಂಟಾದರೆ ಪರಿಣಾಮವಾಗಿ ಮಾನಸಿಕ ಘರ್ಷಣೆ ಮತ್ತು ಅಸಮತೋಲನ ಉಂಟಾಗುತ್ತವೆ.ಇಂತಹ ಸಮಸ್ಯೆಗಳು ಉದ್ಭವಿಸಿದಾಗ ಮನೋಭಾವಗಳನ್ನು ಮಾರ್ಪಡಿಸಲು ಪ್ರೇಕ್ಷಾ ಧ್ಯಾನವನ್ನು ಬಳಸಲಾಗುತ್ತಿದೆ.

ಪ್ರೇಕ್ಷಾಧ್ಯಾನವು ಮನೋಭಾವಗಳ ಬದಲಾವಣೆ, ವರ್ತನಾ ಮಾರ್ಪಡಿಸುವಿಕೆ, ಆರೋಗ್ಯ ವರ್ಧನೆ ಮತ್ತು ವ್ಯಕ್ತಿತ್ವದ ಸಮಗ್ರ ಬೆಳವಣಿಗೆಯನ್ನು ಉಂಟುಮಾಡುತ್ತದೆ.ಪ್ರೇಕ್ಷಾಧ್ಯಾನವುಇತರ ಸಾಮಾನ್ಯ ಧ್ಯಾನಗಳಷ್ಟು ಹೆಚ್ಚು ಪ್ರಚಲಿತವಾಗಿರುವುದಿಲ್ಲ.ಇದನ್ನು ಮನೋಚಿಕಿತ್ಸೆಯಲ್ಲಿ ಮಾತ್ರ ಬಳಸಲಾಗುತ್ತದೆ.

ಪತಂಜಲಿ ಧ್ಯಾನ: ಪತಂಜಲಿ ಯೋಗದಲ್ಲಿ ಏಳನೇ ಅಂಗವಾದಧ್ಯಾನವು ಬಹಳ ಮುಖ್ಯವಾದುದಾಗಿದೆ.ಧ್ಯಾನವೆಂದರೆ, ವ್ಯಕ್ತಿಯುತನ್ನ ಮನಸ್ಸನ್ನು ಒಂದೇ ವಿಚಾರದೆಡೆಗೆಏಕಾಗ್ರತೆಯಿಂದಕೇಂದ್ರಿಕರಿಸುವುದು. ವ್ಯಕ್ತಿಯು ಯಾವ ವಿಚಾರದ ಬಗ್ಗೆ ಧ್ಯಾನ ಮಾಡುತ್ತಾನೊ ಆ ವಿಚಾರದ ಬಗ್ಗೆಯೇ ನಿರಂತರವಾಗಿಆಲೋಚಿಸುವುದಾಗಿರುತ್ತದೆ.ಆ ಮೂಲಕ ಇತರ ಅನಾವಶ್ಯಕ ವಿಚಾರಗಳಿಂದ ವಿಚಲಿತನಾಗದೆಒಂದೇ ವಿಚಾರದ ಬಗ್ಗೆ ಮನಸ್ಸನ್ನುಹಿಡಿದಿಟ್ಟುಕೊಳ್ಳುವುದಾಗಿದೆ. ಹೀಗೆ, ಮನಸ್ಸುಒಂದು ವಿಚಾರದೆಡೆಗೆಯಾವಾಗ ವಿಚಲತೆಯಿಲ್ಲದೆಕೇಂದ್ರಿಕೃತವಾಗುವುದೊ ಆಗ ಧ್ಯಾನ ಸ್ಥಿತಿ ತಲುಪಿದಂತಾಗುವುದು.ಪತಂಜಲಿಯವರ ಪ್ರಕಾರ, ಧ್ಯಾನದಿಂದ ವ್ಯಕ್ತಿಯುತನ್ನನ್ನುತಾನು ಅರ್ಥೈಸಿಕೊಳ್ಳುತ್ತಾನೆ ಮತ್ತು ಸಂವೇಧನಾ ಸೂಕ್ಷ್ಮತೆಯ ಸ್ಥಿತಿಯನ್ನು ತಲುಪುತ್ತಾನೆ.ವ್ಯಕ್ತಿಯುತನ್ನ ಮನಸ್ಸು ಮತ್ತು ದೇಹವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಧ್ಯಾನವೊಂದೇಉತ್ತಮವಾದ ಮಾರ್ಗಎಂದುಅಭಿಪ್ರಾಯಪಡುತ್ತಾರೆ.ಧ್ಯಾನವನ್ನು ಹೊರತುಪಡಿಸಿ ಇತರ ಯಾವುದೇ ಶಿಸ್ತು ಅಥವಾತಾಂತ್ರಿಕ ವಿಧಾನದಿಂದ ಮನಸ್ಸು ಮತ್ತುದೇಹವನ್ನು ನಿಯಂತ್ರಣದಲ್ಲಿಡಲು ಸಾಧ್ಯವಿಲ್ಲವೆಂದು ತಿಳಿಸುತ್ತಾರೆ. (ರವೀಂದ್ರರವಿ, 2009)

ಧ್ಯಾನದ ಮುಖ್ಯ ಉದ್ದೇಶವೆಂದರೆ, ಮನಸ್ಸನ್ನು ವಸ್ತುನಿಷ್ಠ ಪ್ರಪಂಚದಿಂದ ಹೊರತರುವುದು ಆಗ ಮನಸ್ಸು ಶಾಂತಗೊಳ್ಳುತ್ತದೆ ಮತ್ತು ಹೆಚ್ಚು ವಿಶ್ರಾಂತಿಯುತ ಸ್ಥಿತಿಯಲ್ಲಿರುತ್ತದೆ. ಕೇಂದ್ರಿಕೃತವಾದ ಮನಸ್ಸು ಸಾತ್ವಿಕ, ಶಾಂತಿಯುತ ಒಳದೃಷ್ಟಿಯುಳ್ಳ ಪ್ರವೃತ್ತಿಗಳನ್ನು ನಮ್ಮೊಳಗೆ ಬಲಗೊಳಿಸುತ್ತದೆ ಮತ್ತು ಜೀವನದ ಇತರ ಕ್ಷೇತ್ರಗಳಿಗೂ ಹರಡುತ್ತದೆ.ಧ್ಯಾನವು ಸ್ವಯಂ ಒಪ್ಪಿಕೊಳ್ಳುವಿಕೆ ಮತ್ತು ಸ್ವಾಸ್ಥ್ಯವನ್ನು ನಿರ್ವಹಿಸುವಲ್ಲಿ ಪರಿಣಾಮಕಾರಿಯಾಗಿದೆ.

ಧ್ಯಾನವನ್ನು ಮಾಡಲು ವಿವಿಧ ರೀತಿಯ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು. ಅಂದರೆ, ಧ್ಯಾನವನ್ನು ಮಾಡಲು ಯಾವುದಾದರೂ ದೃಷ್ಟಿಬಿಂಬವನ್ನು ಮನಸ್ಸಿನಲ್ಲಿ ಕೇಂದ್ರಿಕರಿಸಿಕೊಂಡು ಧ್ಯಾನವನ್ನು ಮಾಡಬಹುದು ಅಥವಾ ಮಂತ್ರ, ಶಬ್ದ, ಓಂಕಾರ ಮುಂತಾದವುಗಳ ಕಡೆಗೆ ಮನಸ್ಸನ್ನುಕೇಂದ್ರಿಕರಿಸುವ ಮುಖಾಂತರಧ್ಯಾನವನ್ನುಅಭ್ಯಾಸ ಮಾಡಬಹುದು.ಧ್ಯಾನ ಮಾಡುವಾಗ ಮನಸ್ಸನ್ನು ಕೇಂದ್ರೀಕರಿಸಲು ವಿವಿಧ ವಸ್ತುಗಳಾದ ಮೇಣದ ಬತ್ತಿ, ಜಪಮಣಿ ಎಣಿಸುವುದು,

ಆಹ್ಲಾದಕರ ಶಬ್ದಗಳನ್ನು ಕೇಳುವುದು ಮತ್ತು ಉಸಿರಾಟವನ್ನು ಎಣಿಸುವುದು ಮುಂತಾದವುಗಳನ್ನು ಕೇಂದ್ರ ಬಿಂದುಗಳಾಗಿ ಬಳಸಲಾಗುವುದು. ಧ್ಯಾನ ಮಾಡುವುದುನಿರಂತರವಾಗಿ ಅಭ್ಯಾಸವಾದ ನಂತರಯಾವುದೇ ಬಿಂಬ ಅಥವಾ ಮಂತ್ರದಅವಶ್ಯಕತೆಯಿಲ್ಲದೆಧ್ಯಾನವನ್ನು ಮಾಡಬಹುದು.

ಧ್ಯಾನವೆಂದರೆ, ಪರಿಶುದ್ಧವಾಗಿ ನೋಡುವುದು ಮತ್ತುಇದರಲ್ಲಿಯಾವುದೇ ವ್ಯಕ್ತಿನಿಷ್ಠ ಅಂಶಗಳಿರುವುದಿಲ್ಲ. ಧ್ಯಾನದಲ್ಲಿ ವ್ಯಕ್ತಿಯು ಇತರೆ ಎಲ್ಲಾ ವಿಚಾರಗಳನ್ನು ಹೊರತುಪಡಿಸಿ ಕೇವಲ ಒಂದು ವಿಚಾರದತ್ತ ಜಾಗೃತನಾಗಿರುತ್ತಾನೆ.ಮನಸ್ಸನ್ನು ಇಂದ್ರಿಯಗಳ ಪ್ರಚೋದನೆಯಿಂದದೂರ ಮಾಡಿದಾಗ ಮನಸ್ಸು ಶಾಂತಗೊಳ್ಳುತ್ತದೆ.ಇದರಿಂದಾಗಿ ಮಾನಸಿಕ ಆರೋಗ್ಯವು ಉತ್ತಮಗೊಳ್ಳುತ್ತದೆ.

ಮಾನಸಿಕ ಆರೋಗ್ಯದ ಮೇಲೆ ಧ್ಯಾನದ ಪ್ರಭಾವ ಕುರಿತಾದ ವೈಜ್ಞಾನಿಕ ಅಧ್ಯಯನಗಳು: ರಾವ್ ಕೆ. (2010) ರವರು ಧ್ಯಾನವು ಮಾನಸಿಕ ಆರೋಗ್ಯವನ್ನು ಉತ್ತಮಪಡಿಸುವಲ್ಲಿ ಪ್ರಮುಖವಾದದ್ದು ಎಂದು 'ಮನೋವೈಜ್ಞಾನಿಕ ಮಧ್ಯಪ್ರವೇಶಿಕೆಯ ಕಾರ್ಯಕ್ರಮಗಳು; ಸಿದ್ಧಾಂತ ಮತ್ತು ಅಭ್ಯಾಸ' ಎಂಬ ತಮ್ಮ ಲೇಖನದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಹಾಗೆಯೇ ಧ್ಯಾನವು ಅಹಿತಕರವಾದ ಮತ್ತು ಅನವಶ್ಯಕವಾದ ಆಲೋಚನೆಗಳನ್ನು ನಿಯಂತ್ರಿಸುತ್ತದೆ, ವಿಷಣ್ಣತೆ ಮತ್ತು ರೋಗಭ್ರಾಂತಿಯ ಆಲೋಚನೆಗಳನ್ನು ತಡೆಯುತ್ತದೆ ಎಂದು ಕ್ಲಾರ್ಕ್, ಕ್ರಿಸ್ಟೈನ್ ಮತ್ತು ಪರಾಡನ್ (2009) ರವರು ತಮ್ಮ ಸಂಶೋಧನೆಗಳಿಂದ ದೃಢಪಡಿಸಿರುತ್ತಾರೆ. ಧ್ಯಾನವನ್ನು ನಿರಂತರವಾಗಿ ಅಭ್ಯಾಸ ಮಾಡುವುದರಿಂದ ಮಾನಸಿಕ ಸಮಸ್ಯೆಗಳಾದ ವಿಷಣ್ಣತೆ, ಆತಂಕ, ಗಾಬರಿ ಮತ್ತು ಕೋಪ ಕಡಿಮೆಯಾಗುತ್ತವೆ ಎಂದು ಗ್ರಿಸನ್ (2009) ಮತ್ತು ಬ್ರೌನ್ ಕೆ. ಡಬ್ಲ್ಯು ಮುಂತಾದವರು (2007) ತಮ್ಮ ಸಂಶೋಧನಾ ಅಧ್ಯಯನಗಳಿಂದ ದೃಢಪಡಿಸಿರುತ್ತಾರೆ.

ಮಸೂದ್ ಯುನೇಸೈನ್, ಅಪ್ಸೈನ್ ಅಸ್ಲಾನಿ, ಜಾವೇದ್ ಉಮಾಯುನ್ ವಾಸ್ ಮತ್ತು ಅಬ್ಬಾಸ್ ಬಾಗ್ಹೇರಿ ಯಾಜ್‌ದಿ ರವರು (2008) ತೆಹರಾನ್‌ನ ವಯಸ್ಕರ ಸಮೂಹವನ್ನು ಆಯ್ಕೆ ಮಾಡಿಕೊಂಡು ಮಾನಸಿಕ ಆರೋಗ್ಯದಲ್ಲಿ ಅನುಭವಾತೀತ ಧ್ಯಾನದ ಪರಿಣಾಮವನ್ನು ಕುರಿತು ಸಂಶೋಧನೆಯನ್ನು ನಡೆಸಿರುತ್ತಾರೆ.ಇವರ ಸಂಶೋಧನೆಯಿಂದ ದೃಢಪಟ್ಟಿರುವ ಫಲಿತಾಂಶವೆಂದರೆ ಅನುಭವಾತೀತ ಧ್ಯಾನದಿಂದಾಗಿ ಪ್ರಾಯೋಗಿಕ ವಯಸ್ಕರ ಸಮೂಹದಲ್ಲಿ ಒತ್ತಡ ಮತ್ತು ಆತಂಕ ಮಹತ್ವಪೂರ್ಣ ಪ್ರಮಾಣದಲ್ಲಿ ಕಡಿಮೆಯಾಗಿ ಇವರ ಮಾನಸಿಕ ಆರೋಗ್ಯವು ತುಂಬಾ ಉತ್ತಮವಾಗಿರುತ್ತದೆ ಎಂದು ತಿಳಿದುಬರುತ್ತದೆ. ಪೂರ್ಣ ಮನಸ್ಸಿನ ಧ್ಯಾನದ ಪರಿಣಾಮದಿಂದಾಗಿ ಪ್ರತಿಬಲನ ಮತ್ತು ನಕಾರಾತ್ಮಕ ಭಾವ ಸ್ಥಿತಿಗಳು ಕಡಿಮೆಯಾಗುತ್ತವೆ.ಆ ಮುಖಾಂತರ ಉತ್ತಮ ಸಂವೇಗಾತ್ಮಕ ಸ್ಥಿತಿ ಉಂಟಾಗುತ್ತದೆ.ವ್ಯಕ್ತಿಯು ಶಾರೀರಿಕ ಅನಾರೋಗ್ಯದಿಂದ ಮುಕ್ತನಾಗಿ ಗುಣಮಟ್ಟದ ಜೀವನವನ್ನು ಹೊಂದುತ್ತಾನೆ ಎಂದು ಗ್ರಾಸಮ್ಯಾನ್ ಪಿ ಮುಂತಾದವರು (2004) ಮತ್ತು ಲೆಡಿಸ್ಮ ಡಿ, ಕುಮುನೋ ಹೆಚ್ (2008) ರವರು ತಮ್ಮ ಸಂಶೋಧನಾ ಅಧ್ಯಯನಗಳಿಂದ ದೃಢಪಡಿಸಿರುತ್ತಾರೆ.

ವಿಪಸ್ಸನ ಧ್ಯಾನದಿಂದಾಗಿ ಒತ್ತಡವು ಕಡಿಮೆಯಾಗುತ್ತದೆ.ಮನೋದೈಹಿಕ ಕಾಯಿಲೆಗಳಾದ ಅತಿಯಾದ ರಕ್ತದೊತ್ತಡ, ಜಠರದ ಹುಣ್ಣು, ಜೀರ್ಣಾಂಗದ ತೊಂದರೆಗಳು, ಅಸ್ತಮ, ಚರ್ಮ ರೋಗಗಳು, ವಿಷಣ್ಣತೆ ಮತ್ತು ವಿಷಣ್ಣತೆ ಮುಂತಾದವುಗಳು ಕಡಿಮೆಯಾಗುವುದುಎಂದು ಕುಮಾರ್ ಎಂ.ಡಿ.ರವರು (2005) ತಮ್ಮ ಸಂಶೋಧನ ಅಧ್ಯಯನದಿಂದ ತಿಳಿಸಿರುತ್ತಾರೆ.

ಧ್ಯಾನವುಒಂದು ವಿಶ್ರಾಂತಿಯುತವಾದಅನುಭವವಾಗಿದ್ದುಇದನ್ನು ಮಾನಸಿಕ ಪ್ರತಿಬಲನಗಳನ್ನು ಒಳಗೊಂಡಂತಹ ವಿಕಾರಗಳ ನಿರ್ವಹಣೆಗೆ ಪ್ರಾಥಮಿಕವಾಗಿ ಬಳಸಲಾಗುತ್ತದೆ. ಈ ವಿಕಾರಗಳೆಂದರೆ, ನಿದ್ರಾಹೀನತೆ, ಆತಂಕ ವಿಕಾರಗಳು, ಮಹಿಳೆಯರ ಋತುಚಕ್ರಕ್ಕೆ ಸಂಬಂಧಿಸಿದ ತೊಂದರೆಗಳು, ಅತಿರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆಗಳನ್ನು ಧ್ಯಾನವು ಕಡಿಮೆ ಮಾಡುತ್ತದೆಎಂದು (ಬ್ಯಾರೋಸ್ ಮತ್ತು ಜಾಕೂಬ್ಸ್, 2002, ಆ್ಯಸ್ಟಿನ್, ಶಪ್ರಿಪ್, ಏಸನ್‌ಬರ್ಗ್ ಮತ್ತು ಪೋರೀಸ್, 2003).ತಮ್ಮ ಸಂಶೋಧನೆಗಳ ಫಲಿತಾಂಶಗಳಿಂದ ದೃಢಪಡಿಸಿದ್ದಾರೆ.

ಕಹುರಾನ್ ಮತ್ತು ದಾಹರ್ (2000) ರವರು ತಿಹಾರ್ ಜೈಲಿನ ಅಪರಾಧಿಗಳ ಮಾನಸಿಕ ಆರೋಗ್ಯದ ಮೇಲೆ ವಿಪಸ್ಸನ ಧ್ಯಾನದ ಪ್ರಭಾವವನ್ನು ಕುರಿತಾಗಿ ಸಂಶೋಧನೆ ಕೈಗೊಂಡಿರುತ್ತಾರೆ.ಈ ಸಂಶೋಧನೆಯಿಂದ ದೃಢಪಟ್ಟ ಫಲಿತಾಂಶವೆಂದರೆ ವಿಪಸ್ಸನ ಧ್ಯಾನದಿಂದಾಗಿ ಅಪರಾಧಿಗಳು ಅಪರಾಧಿ ಮನೋಭಾವದಿಂದ ಮಾನವೀಯತೆಯ ಮನೋಭಾವದೆಡೆಗೆ ಪರಿವರ್ತನೆಯಾಗಿರುವುದು ಕಂಡುಬರುತ್ತದೆ.ಆದ್ದರಿಂದ ವಿಪಸ್ಸನ ಧ್ಯಾನವು ಮಾನಸಿಕ ಆರೋಗ್ಯದ ಮೇಲೆ ಮಹತ್ವಪೂರ್ಣ ಮತ್ತು ಸಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ತಿಳಿಸಿರುತ್ತಾರೆ.

ಹೀಗೆಧ್ಯಾನವು ವ್ಯಕ್ತಿಯಲ್ಲಿ ಸದೃಢವಾದ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಉಂಟು ಮಾಡುತ್ತದೆ ಎಂಬುದನ್ನು ಮೇಲ್ಕಂಡ ವೈಜ್ಞಾನಿಕ ಸಂಶೋಧನಾ ಅಧ್ಯಯನಗಳು ದೃಢಪಡಿಸಿವೆ.

ಉಪಸಂಹಾರ: ಮಾನವನಜೀವನದಲ್ಲಿಕಂಡು ಬರುವ ಶೇಕಡ 95% ರಷ್ಟು ಕಾಯಿಲೆಗಳು ಮನೋದೈಹಿಕ ಕಾಯಿಲೆಗಳಾಗಿವೆ ಎಂಬುದಾಗಿ ನೈದಾನಿಕ ಮನೋವಿಜ್ಞಾನವು ಹೇಳುತ್ತದೆ.ಪ್ರತಿಬಲನ, ಮಾನಸಿಕ ಖಿನ್ನತೆ, ನಿದ್ರಾಹೀನತೆ, ರಕ್ತದೊತ್ತಡ, ಅಸ್ತಮ, ಆತಂಕ, ಪ್ರತಿಭೀತಿ, ವಿಷಣ್ಣತೆ, ಮುಂತಾದವುಗಳನ್ನು ನಾವು ಪ್ರತಿನಿತ್ಯಎದುರಿಸುತ್ತಿದ್ದೇವೆ. ಇವುಗಳನ್ನು ಸಮರ್ಥವಾಗಿ ತಡೆಗಟ್ಟಲು ಸೂಕ್ತವಾದ ಮಾರ್ಗವೆಂದರೆಧ್ಯಾನ. ಅಮೇರಿಕ ವೈದ್ಯಕೀಯ ಸಂಘವೂ ಸಹ ಧ್ಯಾನವು ವಿಶ್ರಾಂತಿಯನ್ನು ಪ್ರೇರೇಪಿಸುವ ವಿಧಾನವಾಗಿದೆ ಮತ್ತು ಮನೋಚಿಕಿತ್ಸೆಯಲ್ಲಿ ಇದು ಬಹಳ ಉಪಯುಕ್ತವಾದುದು ಎಂದು ತಿಳಿಸುತ್ತದೆ.ಆದ್ದರಿಂದ ಮಾನಸಿಕ ಆರೋಗ್ಯವು ಹದಗೆಡದಂತೆ ತಡೆಯಲು ಮುಂಜಾಗ್ರತಾ ಕ್ರಮವಾಗಿ ಧ್ಯಾನವನ್ನು ಬಳಸುವುದು ಅವಶ್ಯಕವಾದುದು.ಧ್ಯಾನದ ಅಭ್ಯಾಸದಿಂದ ವ್ಯಕ್ತಿಯುಆರೋಗ್ಯಯುತವಾದ ಮನಸ್ಸನ್ನು ಮತ್ತುದೇಹವನ್ನು ಹೊಂದಲು ಸಾಧ್ಯವಾಗುತ್ತದೆ ಎಂಬುದನ್ನು ಹಲವಾರು ವೈಜ್ಞಾನಿಕ ಸಂಶೋಧನೆಗಳು ದೃಢಪಡಿಸಿವೆ.

ಪರಾಮರ್ಶನ ಗ್ರಂಥಗಳು:

1. *Annual Report (2011) to the people on health,* Government of India Ministry of Health and Family Welfare, New Delhi.
2. World Health Organization (WHO), *World Health Report-2010.*

3. Rao K. (2010), *Psychological Interventions ; from theory to practice* in J. Mishra (ED), Psychology in India, Vol. 3, Clinical and Health Psychology (PP 317-359), New Delhi, Pearson Education.
4. Clark D.A. Christine I., & Purdon C., (2009), *Mental control of unwanted instrusive thoughts; a phenomenological study of non clinical individuals.* International journal of cognitive therapy. 2, 267-281.
5. Ravindra Ravi (2009) The Wisdom of Patanjali's Yoga Sutras; A New Translation and Guide, Morning Light Press, Sand Point.
6. Yunesian et al (2008), *Effects of Transcendental Meditation on Mental Health : A before-after study,* http/ www.cpementalhealth.com
7. Ledesma D., Kumano H., (2008), *Mindfulness-based stress reduction and cancer : a meta analysis,* Psychooncology. 571-579.
8. Greeson J.M., (2008), *Mindfulness research update, compliment health practice.*
9. Brown K. W., Ryan R.M., Creswell J.D., (2007), *Mindfulness; Theoretical foundations and evidence for salutary effects.* Psychol, Inv.
10. Kumar M.D. (2005), *Advantages of vipasana meditation on psychosomatic professional and managerial development of business graduates a quantitative research,* Kurgan, Lonavla. 410-401.
11. Grossman P., Niemann L., Schminds Walach .H (2004), *Mindfulness-based stress reduction and health benefits : a meta analysis,* J. Psychosom.57, 35-43.
12. Barrows .K .A and Jacobs B. P. (2002) *Mind body Medicine, An Introduction and review of literature,* Medical clinical of North America. 86, 11-31
13. Khurana A., Dhar P.L., (2000), *Research Paper on Inmates of Thihar Jail,* Delhi, Indian Institute of Technology, New Delhi.

ವಿಕಸನ: ಅಂತಃದೃಷ್ಟಿಯ ತುತ್ತತುದಿಯ ಪ್ರಜ್ಞೆಯಿಂದ ಬೌದ್ಧಿಕ ತುತ್ತತುದಿಯ ಪ್ರಜ್ಞೆ

[೧]ಚಂದ್ರಮೌಳಿ ಎಂ.ಎಸ್., [೨]ಭಾನು ಕೆ.ಎನ್.
[೧]ವಿದ್ಯಾರ್ಥಿ, ಕೆ.ಎಸ್.ಒ.ಯು., ಮೈಸೂರು, [೨]ಸಹಾಯಕ ಪ್ರಾಧ್ಯಾಪಕರು, ಪಿ.ಆರ್,ಸಿ.ಇ., ಬೆಂಗಳೂರು, ಭಾರತ.

ವಿಕಸನ ಸಿದ್ಧಾಂತವು ವೈಜ್ಞಾನಿಕ ರೀತಿಯಲ್ಲಿ ಹೇಗೆ ಪ್ರಸ್ತುತವಿದೆಯೋ, ಹಾಗೆಯೇ ಹಿಂದು ಧರ್ಮದ ಪುರಾಣೋಪನಿಷತ್ತುಗಳಲ್ಲೂ ಉಲ್ಲೇಖಗಳಿವೆ. ವೈಜ್ಞಾನಿಕ ರೀತಿಯಲ್ಲಿನ ಪ್ರಸ್ತುತ ವಿಕಾಸವಾದವು ಅದರ ಕೆಲವು ಭಾಗಗಳನ್ನಷ್ಟೇ ಹೇಳಿದರೆ, ಪುರಾಣೋಪನಿಷತ್ತುಗಳಲ್ಲಿ ಮುಂದುವರೆದ ವಿಚಾರಗಳಿವೆ.

ವಿಕಾಸನ ಸಿದ್ಧಾಂತವನ್ನು ವೈಜ್ಞಾನಿಕ ರೀತಿಯಲ್ಲಿ ಪ್ರಸ್ತುತಪಡಿಸಿದವರಲ್ಲಿ ಚಾರ್ಲ್ಸ ಡಾರ್ವಿನ್ನನ ಹೆಸರು ಬಹಳ ಪ್ರಖ್ಯಾತಿಯಲ್ಲಿದೆ. ಅವನ ಸೈದ್ಧಾಂತಿಕ ವಾದದ ಪ್ರಕಾರವಾಗಿ ಎರಡು ಮುಖ್ಯವಾದ ಅಂಶಗಳೆಂದರೆ, ಹೊಂದಿಕೊಳ್ಳುವುರಿಂದ ಬದುಕಿರುವುದು ಹಾಗು ಮಂಗನಿಂದ ಮಾನವ. ಇವುಗಳಲ್ಲಿ ಎರಡನೆಯದಾದ ಮಂಗನಿಂದ ಮಾನವ ಎಂಬ ಅಂಶವನ್ನು ಇವತ್ತಿನ ವಿಜ್ಞಾನ ಭಾಗಶಃ ತಳ್ಳಿಹಾಕಿದೆ.

ವೈಜ್ಞಾನಿಕ ಸಿದ್ಧಾಂತಗಳು ಇಲ್ಲಿಯವರೆಗೆ ನಡೆದಿರಬಹುದಾದಂತಃ ವಿಚಾರಗಳಲ್ಲಿ ಕೆಲವು ಭಾಗಗಳನ್ನಷ್ಟೇ ಅರಿಯಲು ಸಹಕಾರಿಯಾಗಿದ್ದು, ಇನ್ನುಳಿದ ವಿಚಾರಗಳನ್ನು ನಿರ್ಲಕ್ಷಿಸಿ, ಅವುಗಳನ್ನು ಅವೈಜ್ಞಾನಿಕ ಎಂಬಂತಹ ತೀರ್ಮಾನಕ್ಕೆ ಬಂದುಬಿಡುವುದೇ ಆಗಿದೆ. ಅದರಲ್ಲಿ, ಈ ವಿಕಾಸವಾದವೂ ಕೂಡಾ ಒಂದು. ಇನ್ನೊಂದು ಮುಖ್ಯವಾದ ಗಮನಿಸಬೇಕಾದ ಅಂಶ ಎಂದರೆ, ಏಕಾಣು ಜೀವಿಗಳಿಂದ ಶುರುಮಾಡಿ ಮಾನವನವರೆಗಿನ ವಿಕಾಸವಾದವನ್ನು ವೈಜ್ಞಾನಿಕ ಸಿದ್ಧಾಂತಗಳು ಅವಲೋಕಿಸಿದೆ. ಆದರೆ, ಮಾನವನ ನಂತರದ ವಿಕಾಸ ಏನು? ಏತ್ತಕಡೆ? ನಂತರದಲ್ಲಿ ಏನಾಗಬಹುದು? ಇತ್ಯಾದಿ ಎಂಬಂತಹ ಹಲವಾರು ಪ್ರಶ್ನೆಗಳಿಗೆ ಉತ್ತರ ಕೊಡುವುದರಲ್ಲಿ ಒಮ್ಮತವಾದ ಅಭಿಪ್ರಾಯಕ್ಕೆ ಪ್ರಸ್ತುತ ಬಂದಂತಿಲ್ಲ.

ಆಲ್‌ಬರ್ಟ ಐನ್‌ಸ್ಟೈನ್ ಅವರ ಪ್ರಕಾರ, 'ತತ್ವಶಾಸ್ತ್ರವಿಲ್ಲದ ವಿಜ್ಞಾನ ಕುಂಟು, ವೈಜ್ಞಾನಿಕವಲ್ಲದ ತತ್ವಶಾಸ್ತ್ರ ಕುರುಡು' ಎಂಬುದು ಬಹಳ ಅರ್ಥಗರ್ಭಿತವಾಗಿದೆ. ಹಾಗಾಗಿ ವಿಕಾಸದ ಸಿದ್ಧಾಂತದ ಬಗೆಗಿನ ತತ್ವಶಾಸ್ತ್ರದಲ್ಲಿನ ಉಲ್ಲೇಖಗಳನ್ನು ವೈಜ್ಞಾನಿಕವಾಗಿ ವಿಚಾರಮಾಡುವುದರಿಂದ ಇನ್ನೂ ಹೆಚ್ಚು ಸ್ಪಷ್ಟವಾಗಿ ಅರಿಯಬಹುದಾಗಿದೆ. ಉಪನಿಷತ್ತುಗಳಲ್ಲಿನ ವಿವರಣೆಗಳಿಂದ ವಿಕಾಸದ ಮುಂದಿನ ಹಂತಗಳನ್ನು ಅರಿಯಬಹುದಾಗಿದೆ.

ವಿವರಣೆ: ಭಾರತೀಯ ಪುರಾಣಗಳಲ್ಲಿನ ಉಲ್ಲೇಖಗಳಲ್ಲಿ ದಶಾವತಾರದ[೧] ಚಿಂತನೆಗಳಿದ್ದು, ಅವುಗಳು ತನ್ನದೇ ರೀತಿಯಲ್ಲಿ ಈಗಿನ ಮಾನವನ ತನಕ ನಡೆದ ವಿಕಾಸವನ್ನು ಮಂಡಿಸಿವೆ. ಮಾನವನಂತರದ ವಿಕಾಸ ಸಿದ್ಧಾಂತವನ್ನು ಉಪನಿಷತ್ತುಗಳಲ್ಲಿ ಕಾಣಬಹುದಾಗಿದೆ. ತತ್ವಶಾಸ್ತ್ರದಲ್ಲಿನ ಮಾನವನವರೆಗಿನ ವಿಕಾಸವನ್ನು ನಾವು ವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ ಎರಡೂ ಸಿದ್ಧಾಂತಗಳ ಸಾಮ್ಯತೆಗಳನ್ನು ಕಂಡುಕೊಳ್ಳಬಹುದಾಗಿದೆ. ಮಾನವನ ಮುಂದಿನ ವಿಕಾಸಗಳನ್ನು ಉಪನಿಷತ್ತುಗಳ ಸಹಾಯದಿಂದ ಅರ್ಥಮಾಡಿಕೊಳ್ಳಬಹುದಾಗಿದೆ.

ದಶಾವತಾರಗಳಲ್ಲಿನ ಹತ್ತು ಅವತಾರಗಳು ಮತ್ತು ಉಪನಷತ್ತುಗಳಲ್ಲಿನ ಉಳಿದ ಹಂತಗಳು ಶಾರೀರ ಹಾಗೂ ಶರೀರಗಳ ವಿಕಾಸವನ್ನು ವಿವರಿಸುತ್ತವೆ. ಪ್ರಜ್ಞೆಯು ಯಾವರೀತಿಯಾಗಿ ಹಂತ ಹಂತವಾಗಿ ವಿಕಸನಗೊಳ್ಳುತ್ತಾಬಂದಿದೆ ಮತ್ತು ಎಲ್ಲಿಯವರೆಗೂ ವಿಸ್ತರಿಸುವ ಅವಕಾಶಗಳಿದೆ ಎಂಬುದಾಗಿಯೂ ಹೇಳುತ್ತವೆ. ಸಧ್ಯದ ಪರೀಸ್ಥಿತಿಯಿಂದ ಮುಂದುವರೆದು ವಿಕಾಸಗೊಳ್ಳಲು ಏನು

ಮಾಡಬೇಕು ಹಾಗು ಆಗ ಎದುರಾಗುವ ಸಮಸ್ಯಗಳು ಏನು? ಮತ್ತು ಅದಕ್ಕೆ ಇರುವ ಪರಿಹಾರಗಳನ್ನೂ ಕೂಡ ವಿವರವಾಗಿ ಪ್ರಸ್ತುತಪಡಿಸುತ್ತವೆ.

ಭಾರತೀಯ ತತ್ವಶಾಸ್ತ್ರವನ್ನು ವಿಕಾಸದ ದೃಷ್ಟಿಯಿಂದ ಅವಲೋಕಿಸಿದಾಗ ಎರಡು ವಿಚಾರಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ ಮತ್ಸ್ಯದಿಂದ ಮಾನವನವರೆಗಿನ ವಿಕಾಸ, ಹಾಗು ಮಾನವನಿಂದ ಮುಂದೆ ಹೇಗೆ? ಏನು? ಎಂಬ ವಿಚಾರ. ಎರಡನೆಯದಾಗಿ ಸಧ್ಯದ ಮಾನವನು ವಿಕಾಸದ ಕಡೆಗೆ ಪಯಣಿಸಲು ಪ್ರಾರಂಭಿಸಿದರೆ, ಅದು ಹೇಗೆ ಕೆಲಸಮಾಡುತ್ತದೆ, ಅದರ ಹಿಂದಿರುವ ತತ್ವಗಳೇನು? ಶರೀರ ಹಾಗು ಶಾರೀರಗಳು ಯಾವ ಯಾವ ಪರಿಸ್ಥಿತಿಯನ್ನು ಎದುರಿಸಬೆಕಾಗುತ್ತದೆ, ಇತ್ಯಾದಿ ಅಂಶಗಳ ಬಗ್ಗೆಯೂ ಪುನಃ ಅವುಗಳೇ ಪ್ರಸ್ತುತ ಪಡಿಸುತ್ತವೆ.

ಜಗತ್ತಿನ ಯಾವುದೇ ಧರ್ಮದ ಉದ್ದೇಶ ಮಾನವನ ವಿಕಾಸವೇ ಆಗಿದೆ. ಎಲ್ಲಾ ಧರ್ಮಗಳು ಬೇರೆ ಬೇರೆಯಾಗಿ ಕಂಡರೂ ಮೂಲ ಉದ್ದೇಶ ಮಾನವನ ಉದ್ಧಾರ ಅಂದರೆ ವಿಕಸನವೇ ಆಗಿದೆ. ಪ್ರಜ್ಞೆಯು ಸ್ಥಿತ್ಯಂತರಗೊಂಡು ವಿಕಾಸ ಹೊಂದಿದ ನಂತರದ ಸ್ಥಿತಿಗತಿಗಳು ಒಂದೇ ಆಗಿದ್ದರೂ, ಸ್ಥಿತ್ಯಂತರಗೊಳ್ಳುವ ರೀತಿನೀತಿಗಳಲ್ಲಿನ ವೈತ್ಯಾಸವೇ ಒಂದೊಂದು ಧರ್ಮ ಒಂದೊಂದು ರೀತಿಯಾಗಿ ಕಾಣುವುದಕ್ಕೆ ಅವಕಾಶವಾಡಿಕೊಡುವುದಾಗಿವೆ. ವಿಕಾಸ ಸಿದ್ಧಾಂತವನ್ನು ಅರಿತಲ್ಲಿ ಬಹುಶಃ ಈ ಮೇಲೆ ಹೇಳಿದ ಅಭಿಪ್ರಾಯದಿಂದ ಬಿಡುಗಡೆ ಹೊಂದಬಹುದಾಗಿದೆ.

ದಶಾವತಾರಗಳಲ್ಲಿ ಬರುವ ಶಾರೀರ ಹಾಗೂ ಶರೀರದ ಹಂತಗಳು ಕ್ರಮವಾಗಿ, ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಹಾಗು ಮುಂಬರುವ ಕಲ್ಕಿ ಆಗಿರುವುದಾಗಿದೆ. ಉಪನಿಷತ್ತಿನಲಿ[೨] ಬರುವ ಮುಂದಿನ ವಿಕಾಸದ ಹಂತಗಳು ಕ್ರಮವಾಗಿ ಬ್ರಾಹಣ, ಮನುಷ್ಯ ಗಂಧರ್ವ, ದೇವ ಗಂಧರ್ವ, ಪಿತೃ (ಚಿರಲೋಕ), ಅಜಾನಜಾನಂ ದೇವ, ಕರ್ಮದೇವ, ದೇವ, ಇಂದ್ರ, ಬೃಹಸ್ಪತಿ, ಪ್ರಜಾಪತಿ, ಮತು ಬ್ರಹ್ಮ ಆಗಿರುವುದಾಗಿದೆ.

ಪ್ರಸ್ತುತ ಪರಿಸ್ಥಿತಿಯನ್ನು ಅವಲೋಕಿಸಿದಾಗ, ಪುರಾಣಗಳಲ್ಲಿ ಉಲ್ಲೇಖಿಸಿರುವ ವಿಕಾಸ ಸಿದ್ಧಾಂತವು ಒಟ್ಟಾರೆಯಾಗಿ ಜೀವಶಾಸ್ತ್ರ ಹಾಗು ಪರಿಸರದ ತಳಹದಿಯ ಮೇಲೆಯೇ ಇರುವಂತೆ ಕಂಡುಬರುವುದಾಗಿದೆ.

ವಿಕಾಸವು[೩] ಒಂದು ಅವಕಾಶ ಹಾಗು ಅವಶ್ಯಕತೆಗಳ ಕಟ್ಟುನಿಟ್ಟಿನ ಸನ್ನಿವೇಶ, ಗೊತ್ತು ಗುರಿಯಿಲ್ಲದ (ಮಾನವನ ತಿಳುವಳಿಕೆಗೆ) ವಸಾರ್ಪಡಿಕೆ ಮತ್ತು ಬದುಕುವುದರ ಅವಶ್ಯಕತೆಯೇ ಆಗಿರುವುದಾಗಿದೆ. ಅವಶ್ಯಕತೆ ಹಾಗು ಅವಕಾಶಗಳು ವಿಕಾಸದ ವಿಚಾರಗಳಾದರೂ ಅವುಗಳ ಪಾತ್ರಗಳು ವಿಭಿನ್ನವಾಗಿವೆ. ಅಂತರಂಗದೊಳಗಿನ ಏರುಪೇರಾಗುವ ಒತ್ತಡ ಹಾಗು ರಚನೆಯು ಸಂದಿಗ್ಧ ಸ್ಥಿತಿಗೆ ತಲುಪುವ ರೀತಿಗಳು ಮಾನವನ ದೃಷ್ಟಿಯಲ್ಲಿ ಗೊತ್ತುಗುರಿಯಲ್ಲದಾಗಿರುತ್ತವೆ ಮತ್ತು ಊಹಾತೀತವಾಗಿರುತ್ತವೆ, ಆದರೆ ಒಂದುಸಾರಿ ರಚನೆಯು ಸಂದಿಗ್ಧ ಸ್ಥಿತಿಗೆ ತಲುಪಿದಾಗ ಒತ್ತಡಕ್ಕೊಳಗಾಗಿ ಹೊಸ ವಿನ್ಯಾಸಕ್ಕೆ ಉತ್ಕ್ರಾಂತಿಗೊಳ್ಳುತ್ತದೆ. ಈ ಪ್ರಕಾರವಾಗಿ ಅವಕಾಶ ಮತ್ತು ಅವಶ್ಯಕತೆಗಳು ಒಂದೇ ಸಮಯದಲ್ಲಿ ನಡೆಯುತ್ತವೆ ಹಾಗೂ ಒಂದಕ್ಕೊಂದು ಪೂರಕವಾಗಿರುತ್ತವೆ. ಇನ್ನೂ ಹೆಚ್ಚಾಗಿ, ಈ ಸಂಪೂರ್ಣ ಪ್ರಕ್ರಿಯೆಯು ಅಸ್ಥಿರತೆಗೆ ಮಾತ್ರ ಸೀಮಿತವಾಗದೆ ಮಾನವನ ಊಹೆಗೂ ಮೀರಿದ್ದೇ ಆಗಿರುತ್ತದೆ. ಯಾವಾಗ ರಚನೆಯು ಅಸ್ಥಿರವಾಗುತ್ತದೋ, ಆಗ ವಿನ್ಯಾಸವು ಕಡೇ ಪಕ್ಷ ಎರಡು ರೀತಿಗಳಲ್ಲಾದರೂ ವಿಕಸನಗೊಳ್ಳುವ ಸಂಭವನೀಯತೆ ಇದ್ದೇ ಇರುವುದಾಗಿದೆ. ಈ ರೀತಿಯಾಗಿ ರಚನೆಯು ಸ್ಥಿರತೆಯ ಸ್ಥಿತಿಯನ್ನು ಬಿಟ್ಟು ಎಷ್ಟೆಷ್ಟು ಮುಂದುವರೆಯುತ್ತದೋ, ಅಷ್ಟಷ್ಟು ವಿಕಸನದ ಸಂಭವನೀಯತೆಗಳು ಹೆಚ್ಚುತ್ತಾ ಹೋಗುತ್ತದೆ. ನಿಜವಾದ ಅಯ್ಕೆಯ ಸ್ವಾತಂತ್ರ್ಯವಿದ್ದು ಯಾವ ಸಂಭವನೀಯತೆ ಆಯ್ಕೆ ಆಗುವುದು ಎನ್ನುವುದು ಮಾನವನಿಗೆ ಊಹಾತೀತವಾಗಿರುತ್ತದೆ. ರಚನೆಯು ಸಂಗಿಗ್ಧ ಬಿಂದುವನ್ನು ಸಮೀಪಿಸುತ್ತಿದ್ದಂತೆಯೇ, ಅದು ದಿಕ್ಕನ್ನು ನಿರ್ಧರಿಸುತ್ತದೆ ಮತ್ತು ಈ ನಿರ್ಧಾರವು ವಿಕಸನವನ್ನು ನಿರ್ಧರಿಸುತ್ತದೆ. ಒಟ್ಟಾರೆಯಾದ ವಿಕಸನದ ಸಂಭವನೀಯತೆಗಳ ಹಾದಿಗಳು ನಿರ್ಧರಿಸಲು ಸ್ವತಂತ್ರ್ಯವಿರುವ ಬಹುವಾಗಿ ಟಿಸಿಲೊಡೆದ ಮರವೆಂಬುವುದಾಗಿ ಕಲ್ಪಿಸಿಕೊಳ್ಳಬಹುದಾಗಿದೆ.

ವಿಕಸನವು ಮೂಲಭೂತವಾಗಿ ತೆರೆದ ಮಧ್ಯವರ್ತಿಯಾಗಿದೆ. ಇದಕ್ಕೆ ಒಂದು ಗೊತ್ತು ಗುರಿ ಹಾಗು ನಿರ್ದಿಷ್ಟ ಉದ್ದೇಶರಹಿತವಾಗಿದ್ದಾಗ್ಯೂ ಗುರ್ತಿಸಲ್ಪಡುವಂಥಾ ವೃದ್ಧಿಯೇ ಆಗಿದೆ. ಇದರ ರಚನೆಯ ವಿವರಗಳು ಊಹಾತೀತವಾಗಿದೆ.

ಮೊದಲನೆಯದಾಗಿ ಮತ್ಸ್ಯಾವತಾರ. ಪುರಾಣದ ಪ್ರಕರಾವಾಗಿ, ಮೀನು ಮೊದಲ ಜೀವಿ, ಹಾಗು ಕದ್ದು ಸಾಗರದ ತಳಕ್ಕೆ ತೆಗೆದುಕೊಂಡು ಹೋಗಿದ್ದ ಅಸುರನಿಂದ ವೇದಗಳನ್ನು ಕೂಡ ಕಾಪಾಡುತ್ತದೆ ಎಂಬುದಾಗಿಯೂ ಇದೆ. ಕುಂಡಲಿನಿಯ[೪] ಶಾಸ್ತ್ರದ ಪ್ರಕಾರವಾಗಿ ಸಾಗರ ಎಂಬುವುದು ಭವಿಷ್ಯವಾಗಿದ್ದು, ಅದರ ತಳ ಎನ್ನುವುದು 'ಮೂಲಾಧಾರ' ಚಕ್ರವನ್ನು ಸೂಚಿಸುತ್ತದೆ ಎಂದು ಅರ್ಥೈಸಬಹುದಾಗಿದೆ.

ಮೂಲಾಧಾರ ಚಕ್ರವು ಭೂಮಿ ಎಂಬ ತತ್ವಕ್ಕೆ ಸಂಬಂಧ ಪಟ್ಟದ್ದಾಗಿದ್ದು, ಹೆಸರೇ ಸೂಚಿಸುವಂತೆ ಎಲ್ಲದಕ್ಕೂ ಆಧಾರವಾಗಿದೆ. ಭೂಮಿಯೇ ಇಲ್ಲದ ಕಡೆಯಲ್ಲಿ ಸೃಷ್ಟಿಯ ಕಾರ್ಯವು ಶೇಕಡ ಐವತ್ತು ಭಾಗ ಅಸಾಧ್ಯವೇ ಸರಿ ಎಂದರೆ ತಪ್ಪಾಗಲಾರದು. ಏಕೆಂದರೆ, ಮೊದಲು ಭೂಮಿ, ಅಂದರೆ ಘನ, ನಂತರದಲ್ಲಿ ದ್ರವ, ಗಾಳಿ, ಅದರ ಆಧಾರ ಸಂಬಂಧಿತ ಜೀವರಾಶಿ ಇತ್ಯಾದಿ, ಇತ್ಯಾದಿ. ಅದೇ ರೀತಿಯಾಗಿ, ಒಂದು ಜೀವ ಮೊದಲು ರೂಪುಗೊಳ್ಳಲು ಬೇಕಾಗಿರುವುದು ಘನ ಶರೀರ. ನಂತದರಲ್ಲಿ ಜೀವ ಹಾಗೂ ಮತ್ತೆಲ್ಲವೂ ಸೇರಿಕೊಳ್ಳುವುದಾಗಿದೆ. ಈ ರೀತಿಯಾಗಿ ಮೂಲಾಧಾರವೇ ಇಲ್ಲದೆ ಕಡೆ ಜೀವಿಗಳ ಭವಿಷ್ಯ ಎಲ್ಲಿಯದು? ಜೀವ ಶಾಸ್ತ್ರದ ಪ್ರಕಾರವಾಗಿಯೂ, ನೀರಿನಲ್ಲೇ ಮೊದಲ ಪರಿಮೂರ್ಣವಾದ ಜೀವ ಉದ್ಭವಿಸಿದ್ದು ಎಂದು ಸೈದ್ಧಾಂತಿಕವಾಗಿ ರಜುವಾತಾದ ವಿಚಾರವೇ ಆಗಿದೆ. ಶಾಸ್ತ್ರಗಳಲ್ಲಿಯೂ ಕೂಡ ಮೀನು ಮೊದಲ ಪರಿಪೂರ್ಣವಾಗಿ ವಿಕಾಸಗೊಂಡ ಮೊದಲ ಜೀವಿ ಎಂಬುದಾಗಿದೆ. ಇದನ್ನು ಪ್ರಜ್ಞೆಯ ವಿಕಾಸದ ಆಧಾರದ

ಮೇಲೆ ನಿರೂಪಣೆಗೊಳಿಸಿರುವುದಾಗಿದೆ.

ಮೀನು ಮುಖ್ಯವಾಗಿ ಅಂತಃದೃಷ್ಟಿಯ ತುತ್ತತುದಿಯ ಪ್ರಜ್ಞೆಯಿಂದಲೇ ಜೀವಿಸಿರುವುದಾಗಿದೆ. ಅದರಲ್ಲಿ ಬೌದ್ಧಿಕಮಟ್ಟದ ಪ್ರಜ್ಞಾತ್ಮಕ ಅಂಶವು ಲವಲೇಶವೂ ಇಲ್ಲದಿರುವುದು ವೈಜ್ಞಾನಿಕವಾಗಿಯೂ ನಿರೂಪಣೆಗೊಂಡ ವಿಚಾರವೇ ಆಗಿದೆ. ಪುರಾಣ ಹಾಗೂ ಕುಂಡಲಿನಿ ಶಾಸ್ತ್ರದ ಆಧಾರವಾಗಯೂ ಹೇಳುವುದಾದರೆ, ಅದರ ಪ್ರಜ್ಞೆಯು ಕೇವಲ ಮೂಲಾಧಾರ ಚಕ್ರದ ಮೇಲೆಯೇ ಸಂಪೂರ್ಣ ಅವಲಂಬಿತವಾಗಿದೆ. ಅದರ ನೆನೆಪಿನ ಶಕ್ತಯೂ ಕೂಡ ಆರು ಸೆಕೆಂಡಿಗಿಂತ ಹೆಚ್ಚಾಗಿರುವುದಿಲ್ಲ ಎಂದು ವಿಜ್ಞಾನವು ಹೇಳುತ್ತದೆ. ಎರಡನೆಯ ಅವತಾರವೇ, ಕೂರ್ಮಾವತಾರ. ಆಮೆಯು ಉಭಯ ಜೀವಿ. ಅದು ನೀರಿನಲ್ಲಯೂ ಜೀವಿಸಬಲ್ಲದಾಗಿದೆ, ಹಾಗೆಯೇ ನೆಲದ ಮೇಲೂ ಜೀವಿಸ ಬಲ್ಲದಾಗಿದೆ. ಇದರಬಗ್ಗೆ ಸೂಕ್ಷ್ಮವಾಗಿ ಆಲೋಚಿಸಿದಾಗ ಎರಡು ರೀತಿಯಾದ ಅರ್ಥವನ್ನು ಗ್ರಹಿಸಬಹುದಾಗಿದೆ. ಮೊದಲು ಕಡಲಿನಿಂದ ಭೂಮಿಯ ಕಡೆ ನಡೆದ ಜೀವ ವಿಸ್ತರಣೆ, ಎರಡನೆಯದು ಜೀವಿಯ ವಿಕಸನದ ಕಸರತ್ತುಗಳು.

ಮನುಷ್ಯ ದೇಹದ ಹೊಕ್ಕುಳ ಭಾಗದಲ್ಲಿನ ನಾಡಿಗಳು ಆಮೆ ರೀತಿಯಲ್ಲಿ ರಚಿತವಾಗಿದೆ. ಈಗ ಅವತಾರದ ಉಲ್ಲೇಖಗಳ ಬಗ್ಗೆ ಗಮನಿಸಿ: ವಾಸುಕಿಯನ್ನ ಕಡೆಯುವ ಹಗ್ಗವಾಗಿ ಉಪಯೋಗಿಸಿ, ಹಾಲಿನ ಕಡಲನ್ನು ಕಡೆದು, ಅದರಲ್ಲಿ ಅಡಗಿರುವ ಅಮೂಲ್ಯ ವಸ್ತುಗಳನ್ನು ಪಡೆಯಲು ದೇವರು ಮತ್ತು ದಾನವರು ಜೊತೆಗೂಡಿ ಒಪ್ಪಿಕೊಂಡು ಕಾರ್ಯಗತಗೊಳಿಸಿದರು. ಇದರ ಒಳಾರ್ಥವನ್ನು ಅವಲೋಕಿಸಿದಾಗ, ಕಡಲು ಕಡೆಯುವ' ಕಾರ್ಯ ಪ್ರತಿಯೊಬ್ಬ ಸಾಧಕನೊಳಗೂ ನಡೆಯುತ್ತದೆ. ದೇವ ಹಾಗು ದಾನವರುಗಳು ಒಳ್ಳೆಯ ಹಾಗು ಕೆಟ್ಟ ಅಲೋಚನೆಗಳಿಗೆ ಸಂಬಂಧಿಸಿರುವುದೇ ಆಗಿದೆ. ಪರ್ವತವು ಸಾಧಕನ ಬೆನ್ನುಲುಬು ಹಾಗು ಬೆನ್ನುಹುರಿಯನ್ನು ಪ್ರತಿನಿಧಿಸುತ್ತದೆ. ಸಾಧಾರಣವಾಗಿ ಬೆನ್ನುಹುರಿಯು ಕರ್ಮಗಳ ಸರಪಳಿಯಾಗಿದ್ದು, ಸಾಧಕನನ್ನು ಪುನಃ ಪುನಃ ಜನ್ಮವೆತ್ತಲು ಕಾರಣೀಭೂತವಾಗಿರುತ್ತದೆ. ಏಕೆಂದರೆ, ಬೆನ್ನುಹುರಿಯು ಪ್ರಜ್ಞೆಯನ್ನು ದೇಹದ ಹೊರಗೆ ಯೋಚಿಸುವಂತೆ ಮಾಡುತ್ತದೆ. ವಾಸುಕಿಯು ಕುಂಡಲಿನಿ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಅಸ್ತಿತ್ವವನ್ನು ಕಡೆದು ಕುಂಡಲಿನಿ ಶಕ್ತಿಯನ್ನು ಉಪಯೋಗಿಸಲು ಸಾಧಕನಿಗೆ ಸ್ಥಿರವಾದ ತಳಹದಿಯ ಅವಶ್ಯಕತೆಯು ಖಂಡಿತವಾಗಿಯೂ ಅವಶ್ಯವಾಗಿದೆ, ಇಲ್ಲವಾದಲ್ಲಿ ಸಾಧಕನ ಸಂಪೂರ್ಣ ಗಮನವು ಹೊರ ಪ್ರಪಂಚದ ಕಡೆಗೇ ಪುನಃ ಪುನಃ ಜಾರುತ್ತಲಿರುತ್ತದೆ. ಈ ರೀತಿಯಲ್ಲಿ ದೇಹದ ಅಸ್ತಿತ್ವದಲ್ಲಿನ ಪ್ರಾಣದ ಕಡೆಯುವಿಕೆಯಲ್ಲಿ ಆಮೆಯ ಪಾತ್ರ ಒಳಗೊಂಡಿರುವುದಾಗಿರುತ್ತದೆ.

ವ್ಯಕ್ತಪಾದ ಅಸ್ತಿತ್ವದ ಸಾಗರದಲ್ಲಿ ಪ್ರಜ್ಞೆಯನ್ನು ಕಡೆದಾಗ ಅದು ಸಂಸಾರ ಎಂಬ ಹಾಲಾಹಲ ವಿಷದಿಂದ ಬೇರ್ಪಡುತ್ತದೆ. ಸಾಧಕನು ಇನ್ನೂ ವಿಕಾಸದ ಸ್ಥಿತ್ಯಂತರದ ಸಮಯದಲ್ಲಿರುವಾಗ ಸಂಸಾರವನ್ನು ತೆಗೆದುಹಾಕಲಾರದ, ಬಿಡಲಾರದ ಪರೀಸ್ಥಿತಿ ಉಂಟಾಗುತ್ತದೆ. ಈ ಸಂಧರ್ಭದ ನಿರ್ವಹಣೆಯನ್ನು ಪುರಾಣಗಳಲ್ಲಿ ಉಲ್ಲೇಖಿಸಿರುವ ಪ್ರಕಾರ, ಹಲಾಹಲವನ್ನು ಶಿವನು ತಾನೊಬ್ಬನೇ ಸಂಪೂರ್ಣವಾಗಿ ಕುಡಿದ ಸಮಯಲ್ಲಿ ಪಾರ್ವತಿಯು ಬಂದು ಆ ವಿಷವು ದೇಹದಲ್ಲಿ ಸೇರಿ ಪ್ರಾಣ ತೆಗೆಯುವ ಮೊದಲೇ ಅದನ್ನು ಅವನ ಗಂಟಲಿನಿಂದೆ ಕೆಳಗಿಳಿಯದಂತೆ ಮಾಡಿದಳು, ಎಂಬುದಾಗಿದೆ. ಈ ವಿವರಣೆಯ ಒಳಾರ್ಥವನ್ನು ಗ್ರಹಿಸಿ ವಿಕಾಸದ ವಿಚಾರಕ್ಕೆ ಸಮೀಕರಿಸಿದಾಗ ಅರಿವಾಗುವ ವಿಚಾರ ಕೆಳಕಂಡಂತಿದೆ.

ಈ ರೀತಿಯಾಗಿ ಬೇರ್ಪಟ್ಟ ವಿಷವನ್ನು ಸಾಧಕನು ಗಂಟಲಿನಿಂದ ಪುನಃ ಕೆಳಗಿಳಿದು ಬರಲು ಬಿಡದಂತೆ ತಡೆಹಿಡಿಯಬೇಕಾಗುತ್ತದೆ. ಸಾಧಕನು ಸಾಧನೆಯಲ್ಲಿ ತೊಡಗಿಕೊಂಡಾಗ ಅರ್ಥಾತ್ ವಿಕಾಸದ ಕಡೆ ನಡೆಯತೊಡಗಿದಾಗ ಹೊರಜಗತ್ತನ್ನು ಹೊರಗೇ ಇಟ್ಟು ಅಂತರಿಕವನ್ನು ಕೃಷಿಮಾಡಬೇಕಾಗುತ್ತದೆ, ಇಲ್ಲದಿದ್ದಲ್ಲಿ ಸಾಧಕನು ಪುನಃ ವಿಷಪ್ರೇರಿತನಾಗುವ ಸಂಭವನೀಯತೆ ಬಹಳವಾಗಿರುತ್ತದೆ. ದೇಹದ ಅಂತರಂಗದಲ್ಲಿ ಅಮೃತವು ಕಾಣಿಸಿಕೊಂಡಾಗ ಒಂದು ರೀತಿಯಾದ ಹೋರಾಟ ಕಾಣಿಸಿಕೊಳ್ಳುತ್ತದೆ. ವ್ಯಕ್ತಿತ್ವದಲ್ಲಿನ ಸ್ವಾರ್ಥ ವಿಚಾರಗಳೂ ಕೂಡ ತಮ್ಮ ಭಾಗಕ್ಕಾಗಿ ಹೋರಾಟ ನಡೆಸುತ್ತವೆ. ಆದರೆ ಸಾಧಕನ ಆತ್ಮವು ಪುನಃ ತಿರುಗಿ ಹೋರಾಟ ಮಾಡುವ ತನಕ ಮೋಸಗೊಳಿಸುತ್ತಲೇ ಇದ್ದು, ಸಾಧನೆಯ ಮುಖಾಂತರ ಅವುಗಳನ್ನು ದುರ್ಬಲಗೊಳಿಸಿ, ಅಂತಿಮವಾಗಿ ನಾಶಮಾಡುತ್ತದೆ. ಅವುಗಳನ್ನು ಸಂಪೂರ್ಣವಾಗಿ ನಾಶಗೊಳಿಸದಿದ್ದಲ್ಲಿ, ಪುನಃ ಪ್ರಭಲಗೊಂಡು ಸಾಧಕನ್ನು ಸ್ವಾರ್ಥ ಮಾರ್ಗಕ್ಕೆ ಎಳೆದು ತರುತ್ತವೆ. ಹಾಗಾಗಿ, ಅಮೃತವು ಜನಿಸಿದಾಗ ಸಾಧನೆಯು ಬಹಳ ಪ್ರಮುಖವಾಗಿರುತ್ತದೆ.

ವರಾಹ, ಇದು ದಶಾವತಾರದಲ್ಲಿನ ಮೂರನೆಯ ಅವತಾರ. ಇದು ಸಂಪೂರ್ಣವಾಗಿ ಭೂಮಿಯಲ್ಲೇ ವಾಸವಾಗಿರುವ ಜೀವಿ, ಹಾಗು ಅವಶ್ಯಕತೆ ಇದ್ದಾಗ ನೀರಿನಲ್ಲೂ ಈಜಬಲ್ಲುದಾಗಿದೆ. ಮೊದಲೆರಡು ಅವತಾರಗಳಿಗೆ ಹೋಲಿಸಿದರೆ ವರಾಹವು ಮಾನವರಿಗೆ ಪ್ರಾಂಜ್ಞಿಕವಾಗಿ ಸಮೀಪವಾಗಿದೆ.

ವರಾಹವು ಸೃಷ್ಟಿಕರ್ತನ ನಾಸಿಕದಿಂದ ಅವತರಿಸಲ್ಪಟ್ಟಿರುವುದಾಗಿದೆ. ಈ ಅವತಾರದ ಮೂಲ ಉದ್ದೇಶವು ಸಮುದ್ರದಾಳಕ್ಕೆ ಧುಮುಕಿ ಭೂಮಿಯನ್ನು ಅಸುರನಾದ ಹಿರಣ್ಯಾಕ್ಷನ ಹಿಡಿತದಿಂದ ಸಂರಕ್ಷಿಸುವುದೇ ಆಗಿದೆ. ವಾರಹವು ಭೂಮಿ ಹಾಗು ಪ್ರಾಣದ ಎಲ್ಲೇಯಲ್ಲೇ ಬಹಳ ಒತ್ತಾಗಿ ಬಂಧಿಸಲ್ಪಟ್ಟಿರುವುದಾಗಿದೆ. ಭೂಮಿಯೂ ಕೂಡ ಪ್ರಾಣಕ್ಕೆ ಒಂದು ರೀತಿಯಲ್ಲಿ ಸಂಬಂಧಿಸಿರುವುದೇ ಆಗಿದೆ. ಭೂಮಿಯು ಪ್ರಕೃತಿಯ ತಾಯಿಯಾಗಿದೆ, ಹಾಗು ಸಕಲ ಜೀವ ರಾಶಿಗಳಿಗೂ ಆಧಾರವಾಗಿದೆ. ದೇಹದಲ್ಲಿ ಅಮೃತವು ಪುನರುಜ್ಜೀವನಗೊಂಡಾಗ ಹಾಗು ಪ್ರಾಣವು ಒಳ್ಳೆಯ ನಿಯಂತ್ರಣಕ್ಕೆ ಸಿಕ್ಕಾಗ ಮಾತ್ರವೇ ಸಾಧಕನಿಗೆ ಮೂಲಾಧಾರ ಚಕ್ರದ ಕಡೆಗೆ ಚಲಿಸಲು ಸಾಧ್ಯವಾಗುವುದಾಗಿದೆ ಮತ್ತು ಕುಂಡಲಿನಿ ಶಕ್ತಿಯನ್ನು ವ್ಯಕ್ತದ ಸಾಗರದಾಳದಿಂದ ಹೊತರಲು ಸಾಧ್ಯವಾಗಿದ್ದು, ಅದು ಪುನಃ ತನ್ನ ಮೂಲ ಸ್ಥಾನಕ್ಕೆ ಹಿಂತಿರುಗಲು ಸಾಧ್ಯವಿರುವುದಾಗಿದೆ. ಮುಂದಿನ ವಿಕಾಸದ ಹಂತವೇ ನರಸಿಂಹ. ನರದ ದೇಹ ಹಾಗು ಸಿಂಹದ ಶಿರ. ಮೊದಲು ಮಾನವನು ಶರೀರವನ್ನು ಮಾನವ ರೂಪದಲ್ಲಿ ಹೊಂದಿದ್ದರೂ, ಶಾರೀರವು ಪ್ರಾಣಿಯ ರೂಪದಲ್ಲೇ ಇರುವುದಾಗಿತ್ತು ಎಂದೆನ್ನಲಾಗಿದೆ. ಮೊದ ಮೊದಲು ಮಾನವನ ಪ್ರಜ್ಞೆಯು ಪ್ರಾಣಿಯ ರೂಪ ಅಂದರೆ ಅಂತಃದೃಷ್ಟಿಯ ಮೇಲೆ ಸಂಪೂರ್ಣಗಿ ಆಧರಿಸಿದ್ದದ್ದು ಸ್ಪಷ್ಟವಾಗಿ ಕಂಡುಬರುತ್ತದೆ.

ಪುರಾಣ ಪ್ರಕಾರವಾಗಿ ನೋಡಿದಾಗ, ಹಿರಣ್ಯಕಶಿಪುವಿನಲ್ಲಿ ಕುಂಡಲಿನಿ ಶಕ್ತಿಯು ಮಣಿಪುರ ಚಕ್ರದಲ್ಲಿ ಬಂಧಿಸಲ್ಪಟ್ಟಿತ್ತು, ಹಾಗಾಗಿ ಅವನ ಅಪಾನ ವಾಯುವು ಕೆಳಮುಖವಾಗಿ ಚಲಿಸಲು ಸಾಧ್ಯವಾಗದಂತೆ ಬಲವಂತವಾಗಿ ತಡೆಹಿಡಿಯಲ್ಪಟ್ಟಿತ್ತು. ಇದರ ಕಾರಣದಿಂದಾಗಿಯೇ ಅವನು ಎಷ್ಟೇ ಬಲಶಾಲಿಯಾಗಿದ್ದೂ, ಸಾಧಕನಾಗಿದ್ದರೂ, ಋಜು ಮಾರ್ಗ ವಿಮುಖನಾಗಿ ಅಸುರೀ ಶಕ್ತಿಯಾಗಿ ವರ್ತಿಸುತ್ತಿದ್ದನು ಎಂದು ಕಂಡುಕೊಳ್ಳಬಹುದಾಗಿದೆ. ಈ ರೀತಿಯಾಗಿ ಸಿಕ್ಕಿಕೊಂಡ ಕುಂಡಲಿನಿ ಶಕ್ತಿ ಅಥವಾ ಮಾನಸಿಕ ಶಕ್ತಿಯ ದಾರಿಯನ್ನು ಸಾರಗಗೊಳಿಸಿ ಹಿರಣ್ಯಕಶಿಪುವು ವಿಕಾಸಗೊಳ್ಳಲು ನರಸಿಂಹನು ಅವನ ಹೊಟ್ಟೆಯನ್ನು ಬಗೆದು, ಮಣಿಪುರ ಚಕ್ರವನ್ನು ಎಚ್ಚರಗೊಳಿಸಿ, ಅವನ ಎಲ್ಲಾ ಜಠರಾಗ್ನಿ ಹಾಗು ದೇಹದ ಸಂಪೂರ್ಣ ಜೀರ್ಣ ಶಕ್ತಿಯನ್ನು ಭೂತಾಗ್ನಿಯಾಗಿ ಅಂದರೆ ಮಾನಸಿಕ ಶಕ್ತಿಯನ್ನಾಗಿ ಪರಿವರ್ತಿಸಿದನು. ಮತ್ತೊಂದು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ನರಸಿಂಹನು ಕಂಬದಿಂದ ಹುಟ್ಟಿದ ಎಂಬುವುದರ ಬಗ್ಗೆ. ಇಲ್ಲಿ, ಕಂಬ ಎನ್ನುವುದು ಬೆನ್ನುಹುರಿಯನ್ನು ಪ್ರತಿನಿಧಿಸುವುದೇ ಆಗಿದೆ.

ಎಲ್ಲರೂ ಎಲ್ಲಾ ರೀತಿಯ ಸಾಧನೆ ಮಾಡಲು ಸಾಧ್ಯವಾಗುವುದಿಲ್ಲ, ಅಂದರೆ ವಿಕಾಸದ ಹಾದಿ ಹಾಗು ಅಂತಿಮ ಫಲಗಳು ಒಂದೇ ರೀತಿಯಾಗಿರವುದಿಲ್ಲ. ಏಕೆಂದರೆ, ಒಬ್ಬೊಬ್ಬನದೂ ಒಂದೊಂದು ರೀತಿಯಾದ ಶಾರೀರಿಕ ಹಾಗು ಮಾನಸಿಕ ರಚನೆಗಳಿರುತ್ತವೆ. ಮೂಲಭೂತವಾಗಿ ಸಾಧಕನ ಸಾಧನೆಯ ರೀತಿ ನೀತಿಗಳು ಅವನ ದೇಹದ ರಾಸಾಯನಿಕ ಸಂಯೋಜನೆಯ ಆಧಾರದ ಮೇಲೆ ನಿಂತಿರುವುದಾಗಿ ಶಾಸ್ತ್ರಗಳು ಹೇಳುತ್ತವೆ. ಈ ವಿಚಾರವನ್ನೇ ಭಗವದ್ಗೀತೆಯಲ್ಲಿ ಕೃಷ್ಣನು ಸ್ವಧರ್ಮವನ್ನು ಮೊದಲು ಅರಿ, ನಂತರ ಸಾಧಿಸು, ಎಂದೂ ಬಹಳವಾಗಿ ಒತ್ತಿ ಹೇಳಿರುವುದಾಗಿದೆ. ಮಾನಸಿಕ ವಿಕಾಸದ ಕಡೆಗೆ ಸಾಧಿಸಲು ಹೊರಟಾಗ ಮೊದಲು ಸಾಧಕನು ಅವನ ದೇಹದ ರಚನೆ ಹಾಗು ಮಾನಸಿಕ ರಚನೆಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ, ಅದರ ಧನಾತ್ಮಕ ಹಾಗು ಋಣಾತ್ಮಕ ಅಂಶಗಳನ್ನು ಅರಿತು, ಅದಕ್ಕೆ ತಕ್ಕುದಾದ ರೀತಿಯಲ್ಲಿ ಸಾಧನೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇದನ್ನು ತೈತ್ತರೀಯ ಉಪನಿಷತ್ತಿನ ಬ್ರಹ್ಮಾನಂದ ಮೀಮಾಂಸ ಭಾಗದಲ್ಲೂ ಪ್ರಸ್ತುತ ಪಡಿಸಲಾಗಿದೆ.

ಮೊದಲು ಸೃಷ್ಟಿಗೊಂಡ ಮತ್ಸ್ಯಾವತಾರದಿಂದ ಹಿಡಿದು ನರಸಿಂಹ ಅವತಾರದ ತನಕವೂ ಪ್ರಜ್ಞೆಯ ಸ್ಥಿತಿಗತಿಗಳು ಹಾಗು ವರ್ತನೆಗಳು ಅತೀಂದ್ರಿಯ (ಇಂಟ್ಯೂಷನಲ್) ಪ್ರಜ್ಞೆ ಸೂಚಿಸುತ್ತವೇ ವಿನಃ, ಬೌದ್ಧಿಕವಾದ (ಇಂಟಲೆಕ್ಚುಯಲ್) ಪ್ರಜ್ಞೆಯನ್ನಲ್ಲ ಎಂಬುದನ್ನು ನಾವು ಅಧ್ಯಯನದಿಂದ ತಿಳಿಯಬಹುದಾಗಿದೆ.

ಸೃಷ್ಟಿಯಲ್ಲಿ ವಿಕಾಸಗೊಂಡ ಮುಂದಿನ ಹಂತದ ಜೀವವೇ ವಾಮನ ಅವತಾರವಾಗಿದೆ. ಈ ಅವತಾರದಲ್ಲಿ ಜೀವವು ಸಂಪೂರ್ಣ ಮೂಲಭೂತವಾದ ಬೌದ್ಧಿಕ ವಿಕಾಸಗೊಂಡ ಮಾನವ ಪ್ರಜ್ಞೆಯುಳ್ಳವನಾಗಿದ್ದರೂ, ಶರೀರದ ಸಂಪೂರ್ಣವಾದ ನಿಲುವು ಇಲ್ಲದಿರುವುದು ತಿಳಿದುಬರುತ್ತದೆ. ವಾ+ಮನ = ವಾಮನ, ವಾ ಎನ್ನುವುದು ಮುಂಬರುವ ಮಾನವನ ವಿಕಾಸದ ಕಿಮ್ಮತ್ತಾದರೆ, ಮನ ಎನ್ನುವುದು ಮಾನಸಿಕ ಕಲಿತನವನ್ನು ಸೂಚಿಸುತ್ತದೆ. ಅದೇ ರೀತಿ ವಾನರ ಎಂಬುವುದು ನರನಾಗುವುದಕ್ಕೆ ಬೇಕಾಗಿರುವ ವಿಕಾಸದ ಕಿಮ್ಮತ್ತನ್ನು ಸೂಚಿಸುವುದೇ ಆಗಿದೆ.

ಪರಶುರಾಮ ಅವತಾರವೇ ಮುಂದಿನ ವಿಕಾಸದ ಹಂತವಾಗಿದೆ. ಪರಶು ಎನ್ನುವುದು ಆ ಅವತಾರದ ಹೆಸರಿನಲ್ಲೇ ಸೇರಿದ್ದು, ಪುರಾತನ ಕಾಲದ ಅನಾಗರೀಕ ಅಥವಾ ವಿಚಾರವಿಲ್ಲದ ಮನಃಸ್ಥಿತಿಯನ್ನು ಸೂಚಿಸುತ್ತದೆ. ಈ ಅವತಾರದಲ್ಲಿ ಮನುಷ್ಯನ ಸಂಪೂರ್ಣವಾದ ದೈಹಿಕ ಬೆಳವಣಿಗೆಯನ್ನು ಸೂಚಿಸಿದ್ದು, ಮಾನಸಿಕ ಮೂಲಭೂತ ಬೆಳವಣಿಗೆಯನ್ನು ಮಾತ್ರ ಪ್ರತಿಬಿಂಬಿಸುತ್ತದೆ. ವೈಜ್ಞಾನಿಕ ಸಿದ್ಧಾಂತದ ಪ್ರಕಾರವಾಗಿಯೂ, ಮಾನವನು ಮೊದಲು ಪ್ರಾಣಿಗಳನ್ನು ಬೇಟೆಯಾಡಿಕೊಂಡೇ ಬದುಕಿದವನಾದ್ದನು. ಆ ಸಮಯದಲ್ಲಿ ವ್ಯವಸಾಯ ಪದ್ಧತಿಯು ಇನ್ನೂ ಮಾನವನಿಗೆ ಅಪರಿಚಿವಾಗಿಯೇ ಇದ್ದು, ನಂತರದಲ್ಲಿ ಅದು ಅಭಿವೃದ್ಧಿಯಾಯಿತೆಂದು ಹೇಳಲಾಗಿದೆ. ಪರಾಣಗಳ ಪ್ರಕಾರವಾಗಿಯೂ ಪರಶುರಾಮನ ಚರಿತ್ರೆಯಲ್ಲಿ, ಅವನು ಭೂಮಂಡಲವನ್ನು ಹದಿನೇಳು ಬಾರಿ ಪ್ರದಿಕ್ಷಿಣೆ ಮಾಡಿ ಸಾವಿರಾರು ಕ್ಷತ್ರಿಯರನ್ನು ಕೊಂದ, ಹಾಗು ಅವನು ತನ್ನ ತಂದೆಯ ಮಾತನ್ನು ಕೇಳಿ ತನ್ನ ತಾಯಿಯ ತಲೆಯನ್ನೇ ತರಿದುಹಾಕಿದ. ಈ ಎಲ್ಲಾ ಕೃತ್ಯಗಳಿಂದ ಕಡೆಯಲ್ಲಿ ಅವನಿಗೇ ಬೇಸರವಾಗಿ, ಪಶ್ಚಾತ್ತಾಪದಿಂದ ತಪಸ್ಸಿಗೆ ಕುಳಿತ ಎಂಬುದಾಗಿದೆ. ಈ ರೀತಿಯಾದ ವಿವರಣೆಗಳನ್ನು ನಾವು ವೈಜ್ಞಾನಿಕ ದೃಷ್ಟಿಕೋಣದಿಂದ ನೋಡಿದಾಗ, ಈ ಅವತಾರದಲ್ಲಿ ದೈಹಿಕವಾದ ಸಂಪೂರ್ಣವಾದ ವಿಕಾಸವನ್ನು ನೋಡಿದರೂ ನಾಗರೀಕತೆಯ ಅಥವಾ ವೈಚಾರಿಕತೆಯ ಅಭಾವವೆನ್ನು ಈಗಿನ ಕಾಲಕ್ಕೆ ಹೋಲಿಸಿದಾಗ ಗಮನಕ್ಕೆ ಬರುತ್ತದೆ. ಅಂದರೆ, ಈ ರೀತಿ ವಿಕಾಸಗೊಂಡ ಮನುಷ್ಯನಲ್ಲಿ ಪ್ರಜ್ಞೆಯು ಬಹುತೇಕವಾಗಿ ಅಂತಃದೃಷ್ಟಿಯ (ಇಂಟೂಷ್ಯನಲ್) ತಳಹದಿಯ ಮೆಲೇಯೇ ಅವಲಂಬಿತವಾಗಿದದ್ದು ಕಂಡುಬರುವುದಾಗಿದೆ.

ಮುಂದಿನ ಅವತಾರ ಅಥವಾ ವಿಕಾಸದಲ್ಲಿ ರಾಮನನ್ನು ಹೆಸರಿಸಲಾಗಿದ್ದು, ಅವನು ರಾಜನಾಗಿದ್ದ ಎನ್ನಲಾಗಿದೆ. ಅರ್ಥಾತ್, ಅವನು ೭೨,೦೦೦ ನಾಡಿಗಳನ್ನು[೫] ಸವಾನಾಂತರದಲ್ಲಿ ಕಾಯ್ದುಕೊಳ್ಳಬಲ್ಲವನಾಗಿದ್ದ. ಅವನಿಗಿದ್ದ ಪರಿಮಿತಿ ಎಂದರೆ, ಅವನಲ್ಲಿ ಕೇವಲ ಸಾತ್ವಿಕ ಗುಣವಿದ್ದು, ಬೇರೆ ಎರಡು ಗುಣಗಳಾದ ರಾಜಸ ಹಾಗು ತಾಮಸ ಗುಣಗಳು ಇರದಿದ್ದದ್ದೇ ಆಗಿದೆ. ಅವನ ಅಂತಸತ್ವವು ಏಳು ಖಂಡಗಳಿಂದ ಕೂಡಿದ್ದು ಅವುಗಳು ಕ್ರಮವಾಗಿ ೬ ಮೂಲಭೂತ ಇಚ್ಛೆಗಳನ್ನು ಹಾಗು ಮತ್ತೊಂದು ಬಹುಮುಖ್ಯವಾದರಸ ಪ್ರೇಮರಸವನ್ನು ಸೂಚಿಸುವಂಥವು ಗಳಾಗಿವೆ. ಸಂಪೂರ್ಣ ರಾಮಾಯಣದ ಕಥೆಯನ್ನು ಅವಲೋಕಿಸಿದಾಗ, ಅದು ಮನುಷ್ಯನಲ್ಲಿರುವ ಪ್ರಜ್ಞೆಯು ವಿಕಾಸದೆಡೆಗೆ ಮುಂದುವರೆಯುವ ಬಗ್ಗೆಯೇ ಆಗಿರುವುದಾಗಿ ಅರಿವಿಗೆ ಬರುತ್ತದೆ. ಆ ಕಥೆಯಲ್ಲಿ ಬರುವ ಸನ್ನಿವೇಶಗಳು ಸಾಧಾರಣವಾಗಿ ನಮ್ಮೆಲ್ಲರ ಬಾಳಿನಲ್ಲಿ ಬರುವುದೇ ಆಗಿದ್ದು, ಯಾರ್ಯಾರು ವಿಕಾಸದ ಸಾಧನೆಗಳ ಕಡೆಗೆ ಹೊರಡುತ್ತಾರೋ, ಅವರೆಲ್ಲರೂ ರಾಮ ಹಾಗು ಸೀತೆಯವರು ತಮ್ಮ ಬಾಳಿನಲ್ಲಿ ಬಂದ ಬಿರುಗಾಳಿಗಳನ್ನು ಮತ್ತು ಪರೀಕ್ಷೆಗಳನ್ನು ಎದುರಿಸಿದಂತೆಯೇ ಎದುರಿಸಬೇಕಾಗುತ್ತದೆ. ರಾಮಾಯಣದಲ್ಲಿ ಬರುವ ರಾಮ, ಸೀತೆಯನ್ನೊಳಗೊಂಡ ಎಲ್ಲಾ ಪಾತ್ರಗಳೂ

ಅವರವರ ಸ್ವಂತ ವ್ಯಕ್ತಿತ್ವಗಳನ್ನು ಹೊಂದಿದ್ದವುಗಳಾಗಿದ್ದು ವಿಕಾಸದ ಹಂತದಲ್ಲಿ ಬರುವ ನಾನಾ ಎಡರು ತೊಡರುಗಳನ್ನು ಪ್ರತಿಬಿಂಬಿಸುವುದೇ ಆಗಿದೆ.

ರಾಮನು ಕೂಡ ಒಬ್ಬ ಮನುಷ್ಯನಾಗಿದ್ದು, ಅವನು ಬಹುವಾಗಿ ಪ್ರೀತಿಸುತ್ತಿದ್ದ ಅವನ ಪತ್ನಿ ಸೀತೆಯನ್ನು (ಕುಂಡಲಿನಿ ಶಕ್ತಿ) ಒಬ್ಬ ಭಯಂಕರ ಶತ್ರುವೊಬ್ಬನು (ಬಾಹ್ಯ ವಿಚಾರ) ಅಪಹರಿಸುತ್ತಾನೆ. ಅವಳು ಎಲ್ಲಿದ್ದಾಳೆ ಎಂಬುದನ್ನು ಕಂಡುಹಿಡಿಯುವ ಮೊದಲು ರಾಮನು ಭೂಮಂಡಲದ ಉದ್ದಗಲಕ್ಕೂ ಸಂಚರಿಸುತ್ತಾನೆ (ಸಾಧನೆ); ಸಾಧಕನಲ್ಲಿರುವ ಕುಂಡಲಿನಿ ಶಕ್ತಯು ಅವನ ಪ್ರಜ್ಞೆಯ ಜೊತೆ ಬಂಧಿಸಲ್ಪಡದೆ ಬೇರೆ ಇನ್ಯಾವುದೋ ವಿಚಾರಕ್ಕೆ ಬಂಧಿಸಲ್ಪಟ್ಟಾಗ, ಅವನೂ ಕೂಡ ರಾಮನು ಸೀತೆಯನ್ನು ಕಂಡು ಹಿಡಿಯಲು ಪಟ್ಟ ಕಷ್ಟವನ್ನೇ ಅನುಭವಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ರಾಮನು ಅನುಜ ಲಕ್ಷ್ಮಣನ (ತದೇಕಚಿತ್ತ) ಸಹಾಯದಿಂದ ತನ್ನ ಪತ್ನಿಯನ್ನು ಹುಡುಕುತ್ತಾನೆ. ನಂತರದಲ್ಲಿ ಆಂಜನೇಯನೆಯನ (ವಾಯುಪುತ್ರ ಅಥವಾ ಪ್ರಾಣ) ಪರಿಚಯವಾಗಿ ಅವನಿಂದ ತತ್‌ಕ್ಷಣವೇ ಸಹಾಯ ದೊರಕುತ್ತದೆ; ಸರಿಯಾದ ಹಿಡಿತಕ್ಕೆ ಸಿಕ್ಕ ಪ್ರಾಣವು ಕುಂಡಿಲಿನಿ ಶಕ್ತಿಯನ್ನು ಮೂಲೋದ್ದೇಶದ ಕಡೆಗೆ ಚಲಿಸಿ, ಗಮ್ಯ ತಲುಪಲು ಸಹಾಯ ಮಾಡುತ್ತದೆ. ಇದನ್ನೇ ಆಂಜನೇಯನ್ನು ಪ್ರತೀ ಹಂತದಲ್ಲೂ ರಾಮ ಮತ್ತು ಸೀತೆಯವರಿಗೆ ಸಹಾಯಮಾಡಿದ ಎಂದಿರುವುದಾಗಿದೆ. ರಾಮ ರಾವಣನನ್ನು ಕೊಂದ ನಂತರ ಸೀತೆ ತನ್ನ ಗಂಡನನ್ನು ಸೇರಿದಳು ಎನ್ನಲಾಗಿದೆ. ಸಾಧಕನ ದೇಹದಲ್ಲಿನ ಅಗ್ನಿ ಅಂಶವು ಸಂಪೂರ್ಣವಾಗಿ ಶುದ್ಧಿಗೊಂಡ ನಂತರ ಕುಂಡಲಿನಿ ಶಕ್ತಿಯು ಜಠರಾಗ್ನಿಯ ಹಿಡಿತದಿಂದ ಪಾರಾಗಿ ಭೂತಾಗ್ನಿಯ ಪ್ರಭಾವಕ್ಕೆ ಹಿಂತಿರಿಗಿರುವುದನ್ನು ಸೂಚಿಸುತ್ತದೆ. ಸೀತೆಯನ್ನು ಹಿಂದಿರುಗಿ ಪಡೆದನಂತರ ರಾಮನು ಅವಳನ್ನು ಅಗ್ನಿಗೆ ಅರ್ಪಿಸಿ ಪಾವಿತ್ರ್ಯತೆಯ ಸತ್ವ ಪರೀಕ್ಷೆಗೊಳಪಡಿಸಿದ, ಅಂದರೆ ಕುಂಡಲಿನಿ ಶಕ್ತಿಯು ಜಠರಾಗ್ನಿಯ ಪ್ರಭಾವದಿಂದ ಕಲುಶಿತಗೊಳ್ಳಲಿಲ್ಲ ಎಂದು ಸಮೀಕರಿಸಬಹುದಾಗಿದೆ. ಸಾಧಕನು ಇದೇ ರೀತಿಯಲ್ಲಿ, ಅಂದರೆ ಅಂತರಂಗದಲ್ಲಿ, ಈ ಹಂತದಲ್ಲಿ ಪರೀಕ್ಷೆಗೆ ಒಳಪಡಿಸಿಕೊಂಡಾಗ, ಸಾಧಕನು ಉತ್ತೀರ್ಣನಾದಲ್ಲಿ, ಅವನು ಆಹಾರದ ಅವಶ್ಯಕತೆಯಿಂದ ಮುಕ್ತನಾಗುತ್ತಾನೆ. ನಂತರದ ವಿಕಾಸದ ಹಾದಿಯಲ್ಲಿ ಕುಂಡಲಿನಿ ಶಕ್ತಿಯು ಮಣಿಪುರ ಚಕ್ರದಿಂದ ಅನಾಹತ ಚಕ್ರದ ಎಡೆಗೆ ಚಲಿಸುತ್ತದೆ. ಲಕ್ಷ್ಮಣ, ರಾಮ, ಸೀತೆ ಹಾಗು ಕೆಲವರು ಲಂಕೆಯಿಂದ ರಾಮನ ರಾಜಧಾನಿಯಾದ ಅಯೋಧ್ಯೆಗೆ ಪುಷ್ಪಕ ವಿಮನದಲ್ಲಿ ಕುಳಿತು ವಾಯುಮಾರ್ಗದಲ್ಲಿ ಹಿಂತಿರುಗಿ ಬರುತ್ತಾರೆ. ಅದು ಸಹಜವೇ ಆಗಿದೆ, ಏಕೆಂದರೆ, ಅನಾಹತ ಚಕ್ರವು ವಾಯುವಿನ ಮೂಲ ಸ್ಥಾನವೇ ಆಗಿದೆ ಹಾಗು ಇಲ್ಲಿಯೇ ಸಾಧಕನು ವಾಯುವನ್ನು ಸಂಧಿಸಬಹುದಾಗಿದೆ. ಕೆಳಗಿನ ಮೂರು ಚಕ್ರಗಳ ಬಂಗಲೆಗಳು ಶಾಶ್ವತವಾಗಿ ಮುಚ್ಚಿಕೊಂಡಿರುವಾಗ, ಸಾಧಕನಿಗೆ ಪುನಃ ಹಿಂದಿರುಗಿ ಹೋಗಬಹುದಾದ ಅವಕಾಶವಿಲ್ಲದಾಗಿರುತ್ತದೆ ಮತ್ತು ಪ್ರಜ್ಞೆಯು ವಿಶುದ್ಧ ಅಥವಾ ಅದಕ್ಕಿಂತ ಮೇಲಿರುವಾಗ ಸಮಾನ್ಯ ಜ್ಞಾನದ ಲೋಕ ಸಂಪರ್ಕವು ಅಸಾಧ್ಯವಾಗಿರುತ್ತದೆ.

ಕುಂಡಲಿನಿಯ (ಪ್ರಜ್ಞೆ) ಎಚ್ಚರಗೊಳ್ಳುವಿಕೆಯೇ ಅಂತಿಮವಲ್ಲ, ಅದು ಕೇವಲ ವಿಕಾಸ ಹೊಂದುವ ಪ್ರಕ್ರಿಯೆಯ ಮೊದಲ ಹಂತವಾಗಿದೆ. ಈ ಹಂತದಲ್ಲಿ ಸಾಧಕನ ಗಮನವು ಸಂಪೂರ್ಣವಾಗಿ ಆ ಪ್ರಕ್ರಿಯೆಯ ಮೇಲೆ ಕೇಂದ್ರಿಕೃತಗೊಂಡಿರುವ ಅವಶ್ಯಕತೆ ಬಹಳವಾಗಿ ಇರುವುದಾಗಿದೆ. ಇಲ್ಲದಿದ್ದಲ್ಲಿ ಪ್ರಜ್ಞೆಯು ವಿಕಾಂಗಿಯಾಗಿ ಅನ್ಯಥಾ ವಿಷಯಗಳಿಂದ ಸಂಪೂರ್ಣವಾಗಿ ಅಪಹರಣಗೊಳ್ಳುವ ಸಾಧ್ಯತೆ ಇರುವುದಾಗಿದ್ದು, ಸೀತೆಯನ್ನು ರಾವಣ ಅಪಹರಿಸಿದಂತಾಗವುದಾಗಿದೆ.

ರಾಮ ಎಂದರೆ ನಿಜವಾದ, ನಿರಂತರವಾದ, ಸಾವಿಲ್ಲದ ನಿರ್ಗುಣವಾದ ಆತ್ಮವೇ ಆಗಿದೆ. ಲಕ್ಷ್ಮಣನೆಂದರೆ, ಏಕ ಲಕ್ಷ್ಯ, ನಿರ್ವಿಕಲ್ಪ ಸಮಾಧಿ ಸ್ಥಿತಿಯನ್ನು ಹೊಂದಬೇಕಾದರೆ, ಪ್ರಜ್ಞೆಯಲ್ಲಿರುವ ಕಟ್ಟಕಡೆಯ ವಸ್ತು ಅಥವಾ ಗಮನವು ಕರಗಲೇಬೇಕಾಗಿದೆ. ಈ ಪ್ರಕಾರವಾಗಿ ನಿವಿಕಲ್ಪ ಸಾಧನೆಯ ಹೊಂದುವ ಕ್ಷಣದಲ್ಲಿ ಅಂದರೆ ವೆತ್ಯಾಸ ಉಂಟಾಗುವ ಕ್ಷಣದಲ್ಲಿ ಪ್ರತಿಯೊಬ್ಬ ಸಾಧಕನು, ಮೆದುಳಿನಲ್ಲಿ ಇರುವ ಮಾನಸ ಸರೋವರ ಎಂಬುವುದರಿಂದ ಉದ್ಭವಿಸಿ ಲಲಾಟದಲ್ಲಿ ಪ್ರವಹಿಸುತ್ತಿರುವ ಸರಯೂ ಎಂಬ ನದಿಗೆ ಹಾರಲೇಬೇಕಾಗುತ್ತದೆ. ಎಂದು ತದೇಕಚಿತ್ತವು ತನ್ನನ್ನು ತಾನೇ ಅಖಿಂಡದಲ್ಲಿ ಮುಳುಗಿ ವಿಲೀನಗೊಳ್ಳುತ್ತದೋ, ಆಗ ರಾಮ (ಆತ್ಮ) ಮಾತ್ರವೇ ಉಳಿದುಕೊಳ್ಳುತ್ತದೆ, ಏಕೆಂದರೆ ಅದೇ ವೇಳೆಗೆ ಸೀತೆಯು ತನ್ನ ಉಗಮ ಸ್ಥಾನ ಅಂದರೆ ಭೂತಾಯಿಯ ಗರ್ಭಕ್ಕೆ ಸೇರಿಕೊಂಡಾಗಿರುತ್ತದೆ. ಈಗ ಆತ್ಮವು ತನ್ನ ಶಕ್ತಿ ಹಾಗು ಮಾಯೆಯ ಸಹಿತ ಪ್ರತಿಯೊಂದನ್ನೂ ಮೀರಿದ್ದಾಗಿರುತ್ತದೆ.

ಲಕ್ಷ್ಮಣನ್ನು ಕಳೆದುಕೊಂಡ ರಾಮನಲ್ಲಿ ಜೀವಿಸಲು ಇನ್ಯಾವ ಇಚ್ಛೆಯೂ ಉಳಿಯದೆ, ಪ್ರಾಣ ಸಮಾನನಾದ ಆಂಜನೇಯನಿಗೆ ವಿದಾಯ ಹೇಳಿ ಸ್ವತಃ ನದಿಯನ್ನು ಪ್ರವೇಶಿಸುತ್ತಾನೆ. ರಾಮನು ಎಂದು ಅಖಿಂಡದೊಡನೆ ವಿಲೀನಗೊಳ್ಳುತ್ತಾನೋ, ಆಗ ನಿರ್ವಿಕಲ್ಪ ಸಮಾಧಿ ಉಂಟಾಗುತ್ತದೆ. ರಾಮಯಣದ ಆಟ ಅಲ್ಲಿಗೆ ಮುಕ್ತಾಯವಾಗುತ್ತದೆ.

ರಾಮಾಯಣದ ಕೊನೆಯಲ್ಲಿ ಆಂಜನೇಯನೊಬ್ಬನನ್ನು ಬಿಟ್ಟು ಎಲ್ಲರೂ ಸ್ವಾವನ್ನಪ್ಪುತ್ತಾರೆ ಅಥವಾ ಕಾಣೆಯಾಗುತ್ತಾರೆ. ರಾಮನು ಕೊನೆಯಲ್ಲಿ ಹೇಳುವ ಮಾತಿನ ಉಲ್ಲೇಖ ಹೀಗಿದೆ, 'ನಾನು ದೈವಾಂಶ ಸಂಭೂತನಾದರೂ ನನ್ನ ಅವತಾರವನ್ನು ಸಮಾಪ್ತಿ ಮಾಡಲೇಬೇಕಿದೆ. ಆದರೆ ನೀನು ಮೃತ್ಯುದೇವತೆಯಾದ ರುದ್ರನ ಅವತಾರವೇ ಆಗಿರುವೆ. ಹಾಗಾಗಿ ನೀನು ಸಾಯಲು ಸಾಧ್ಯವಿಲ್ಲ' ಇದು ಸತ್ಯವೂ ಹೌದು, ಹನುಮಂತನು ಮಹಾಕಾಲನ ಹಾಗೆ ಚಿರಂಜೀವಿಯೇ ಆಗಿದ್ದಾನೆ. ಆತ್ಮವು ವಿಲೀನವಾದರೂ ಸೃಷ್ಟಯ ಲೀಲೆಯ ಅಂಶವೇ ಆದ ಪ್ರಾಣವು ವಿಲೀನಗೊಂಡು ಸಮಾಪ್ತಿಯಾಗದೆ ಮುಂದುವರಿಯುತ್ತಲೇ ಇರುತ್ತದೆ.

ಸೀತೆಯನ್ನು ಅಪಹರಿಸಿದ ರಾವಣನು ಸಂಪೂರ್ಣವಾಗಿ ತನ್ನ ವ್ಯಕ್ತಿತ್ವದೊಡನೆಯೇ ಗುರುತಿಸಿಕೊಂಡಿದ್ದು, 'ನಾನೇ ಸರ್ವಸ್ವ' ಎಂಬ ಅಹಂಭಾವದಿಂದ ಇರಪಂಥವನಾಗಿದ್ದನು. ಅವನ ಹತ್ತು ತಲೆಗಳು ಹತ್ತು ಇಂದ್ರಿಗಳನ್ನು ಪ್ರತಿನಿಧಿಸುವಂಥದ್ದಾಗಿದೆ. ಅವನು ತನ್ನ ಇಂದ್ರಿಯಗಳನ್ನು ಶಿವನ ಹೊರತಾಗಿ ಅನ್ಯ ವಿಷಯಗಳ ವಿಚಾರವಾಗಿ ಬಲವಂತವಾಗಿ ನಿಗ್ರಹಿಸಿಕೊಂಡಿದ್ದ ಎಂಬುದು ಕಂಡುಬರುತ್ತದೆ. ಹೀಗಾಗಿ ಅವನ ಈ ಎಲ್ಲಾ ವಿಚಾರಗಳು ಉದ್ದೇಶ

ಸಹಿತ ಹಾಗು ಸ್ವಾರ್ಥ ಸಾಧನೆಗಾಗಿ ಒಳಗಾಗಿದ್ದದ್ದು ಕಂಡುಬರುತ್ತದೆ. ಕ್ಷಾತ್ರ ತೇಜಸ್ಸಿನ ವರ್ಧನೆ ಅವನ ಪ್ರಮುಖ ಹಾಗು ಅಂತಿಮ ಗುರಿಯಾಗಿದ್ದದ್ದು ತಿಳಿದುಬರುತ್ತದೆ.

ವಿಕಾಸದ ಮುಂದಿನ ಹೆಜ್ಜೆ ಕೃಷ್ಣನ ಅವತಾರವಾಗಿದ್ದು, ಅವನು ಪೂರ್ಣಾತ್ಮಕ ಪುರುಷೋತ್ತಮನಾಗಿರುತ್ತಾನೆ ಎಂದು ಪುರಾನತ ಉಲ್ಲೇಳಗಳು ಸ್ಪಷ್ಟಪಡಿಸುತ್ತವೆ. ಈ ಅವತಾರದಲ್ಲಿ ಅವನು ಸಂಪೂರ್ಣ ವಿಕಾಸದ ಪ್ರತೀಕವಾಗಿದ್ದು, ಸಾತ್ವಿಕ, ರಾಜಸ ಹಾಗು ತಾಮಸಗಳ, ಸಂಪೂರ್ಣ ವಿಕಾಸಗೊಂಡ ಪ್ರಜ್ಞೆಯನ್ನೊಳ ಗೊಂಡಂಥಃ, ಪೂರ್ತಿಗೊಂಡ ನಾಡಿ[ಳಿ] ರಚನೆಗಳುಳ್ಳ, ಸರ್ವಾಂಗ ಸುಂದರನಾದಂಥ ದೇಹವುಳ್ಳ ಮಾನವನಾಗಿ ಗೋಚರವಾಗುತ್ತಾನೆ. ಕೃಷ್ಣನು ಚಂದ್ರವಂಶದವನಾಗಿದ್ದು, ತನ್ನ ಉಪಾಸಕರೊಡನೆ ಸರ್ವದಾ ಕಣ್ಣು ಮುಚ್ಚಾಲೆ ಆಟವಾಡಿಕೊಂಡಿದ್ದು, ಅವರ ಸಂಪೂರ್ಣವಾದ ವಿಕಾಸವಾಗದ ಹೊರತು ಅನುಗ್ರಹಿಸುತ್ತಿರಲಿಲ್ಲ ಎಂಬುವುದೂ ಕೂಡ ಸ್ಪಷ್ಟವಾಗಿದೆ.

ಕೃಷ್ಣನು ಬಾಲ್ಯದಲ್ಲಿ (ಗೋ+ಕುಲ) ಗೋಕುಲದಲ್ಲಿ ದನಗಾಹಿಯಾಗಿ ದ್ದುಕೊಂಡು ದನಗಳನ್ನು ಕಾಯುತ್ತಿದ್ದ ಹಾಗು ಅವನನ್ನು ತಲುಪಲು ಗೋಕುಲಕ್ಕೆ ಬರುತ್ತಿದ್ದವರ ದನಗಳ ಹಿಂಡನ್ನು ಕಾಯುತ್ತಿದ್ದ ಎನ್ನಲಾಗಿದೆ. ಮಾನವನ ಶಿರವು ಇಂದ್ರಿಯಗಳ ಸಂಸಾರವಾಗಿದ್ದು (ಗೋಕುಲ), ಅದನ್ನು ಸಂಪೂರ್ಣವಾಗಿ ಯಾವುದೇ ಒಂದು ಇಂದ್ರಿಯದಿಂದ ಅಥವಾ ಒಂದು ಚಕ್ರದ ಪ್ರಜ್ಞೆಯ ಆಧಾರದಿಂದ ಅರ್ಥೈಸಲು ಸಾಧ್ಯವಿಲ್ಲದ್ದಾಗಿದೆ ಎಂಬುದನ್ನು ಸೂಚಿಸುತ್ತದೆ.

ಇಲ್ಲಿ ಗೋಪಿಕಾಸ್ತ್ರೀಯರ ಉಲ್ಲೇಖವಿದೆ. ಗೋಪ್ಯ ಎಂದರೆ ರಹಸ್ಯ ಎಂಬುದಾಗಿದ್ದು, ಅವರ ಪಾತ್ರಗಳನ್ನು ನಾಡಿಗಳಿಗೆ ಅನುಪಾತಿಕೊಳ್ಳ ಬಹುದಾಗಿದೆ. ನರನ ನಾಡಿಗಳು ಅವನ ಪ್ರಜ್ಞಾ (ಆಸ್ಟ್ರಲ್) ಶರೀರವನ್ನು ಸೂಚಿಸುತ್ತಿರುವುದಾಗಿದೆ. ಕೃಷ್ಣ ಎಂಬುವುದನ್ನು ಆತ್ಮಕ್ಕೆ ಅನುಪಾತಿಸಿಕೊಳ್ಳಬಹುದಾಗಿದೆ.

ಒಟ್ಟಾರೆಯಾಗಿ ನೋಡಿದಾಗ ಕೃಷ್ಣನು ತ್ರಿಗುಣಗಳನ್ನೂ ಹೊಂದಿ ಅವುಗಳ ಮಿತಿಗಳನ್ನು ದಾಟಿದ, ಸಂಪೂರ್ಣವಾಗಿ ವಿಕಾಸಗೊಂಡ ಒಂದು ಜೀವಿ ಎಂದು ನೋಡಬಹುದಾಗಿದೆ. ಇವುಗಳೆಲ್ಲವೂ ಕ್ಷಾತ್ರ ತೇಜಸ್ಸಿನ ಸಂಪೂರ್ಣ ವಿಕಾಸವಾಗಿ ಕಂಡರೂ ಸಾವನ್ನು ಮೀರಿದಂಥದಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅವನ ಸಾಧನೆಗಳನ್ನು ಗಮನಿಸಿದಾಗ ಮಾಯೆ ಹಾಗು ಶಕ್ತಿ ಇವುಗಳ ಸಂಪೂರ್ಣ ಅನುಪಾತದಿಂದ ರೂಪುಗೊಂಡ, ಮಾನವ ಹಾಗು ಪ್ರಕೃತಿಯ ಅತ್ಯುನ್ನತ ಸಮ್ಮಿಳಿತವಾಗಿ ಕಂಡುಬರುವುದಾಗಿದೆ.

ಕೃಷ್ಣ ಎಂಬ ಪದವು ಎರಡು ಮತ್ತು ಅರ್ಧ ಸ್ವರಗಳಿಂದ ರೂಪಿತ ಗೊಂಡಿದ್ದು, ಪ್ರೇಮವನ್ನು ಸೂಚಿಸುವಂಥದ್ದಾಗಿದೆ. ಹೀಗಾಗಿ ಅವನ ಜೀವನದಲ್ಲಿ ಪ್ರೇಮ ಎಂಬುವುದು ಸ್ವಾಭಾವಿಕವಾಗಿಯೇ ಇರುವುದಾಗಿದೆ. ಅವನು ಒಬ್ಬ ಸಾಧಾರಣ ಪ್ರೇಮಿಯಾಗಿರದೆ, ನಿಜವಾದ ಕಳ್ಳನ ರೀತಿಯಲ್ಲಿ ಆಟವಾಡುವುದು ಕಂಡುಬರುವುದರಿಂದ ಅವನನ್ನು 'ಚಲಿಯ', ಅಸ್ಥಿರ ಸ್ವಭಾವದವ ಎಂದೂ ಕೂಡ ಉಲ್ಲೇಖಿಸಲಾಗಿದೆ. ಅವನ ಸಾಧಿಸಿದ ಸಿದ್ಧಿಗಳು ಕ್ರಮವಾಗಿ ಕರ್ತಂ – ಆದಿಭೌತಿಕ, ಅಕರ್ತಂ – ಆಧ್ಯಾತ್ಮಿಕ ಹಾಗು ಅನ್ಯಥಾಕರ್ತಂ – ಆದಿದೈವಿಕ ಎಂಬುದಾಗಿದೆ. ಕೃಷ್ಣನಿಗೆ ೧೬,೦೦೦ ಹೆಂಡತಿಯರು, ಹಾಗು ಅವರಲ್ಲಿ ೧೦೦ ಜನರು ಅವನ ಬಹಳ ಮೆಚ್ಚಿನವರಾಗಿದ್ದರು ಎಂಬ ಉಲ್ಲೇಖವಿದೆ. ಇದರರ್ಥವು, ಮಾನವನ ಶರೀರದಲ್ಲಿ ೭೨,೦೦೦ ನಾಡಿಗಳಿದ್ದು, ಅವುಗಳಲ್ಲಿ ೧೬,೦೦೦ ನಾಡಿಗಳು ಪ್ರಭಾವಿಕವಾಗಿದ್ದು, ಆ ೧೬,೦೦೦ ಸಾವಿರದಲ್ಲಿ ೧೦೦ ನಾಡಿಗಳು ಕುಂಡಲಿನಿ ಯೋಗದ ಪ್ರಕಾರ ಬಹಳ ಪ್ರಮುಖವಾದವುಗಳಾಗಿವೆ. ಇವುಗಳಲ್ಲಿ ೩ ನಾಡಿಗಳು ಪ್ರಧಾನವಾಗಿದ್ದು, ಆ ಮೂರರಲ್ಲಿ ಸುಶುಮ್ನ ನಾಡಿಯು ಮುಖ್ಯವಾದದ್ದಾಗಿದೆ, ರಾಧ, ಕೃಷ್ಣನಿಗೆ ಸಹಧರ್ಮಿಣಿ ಆಗಿರದಿದ್ದರೂ ಅವನಿಗೆ ಬಹು ಹತ್ತಿರದವಳಾಗಿ, ಸುಶುಮ್ನ ನಾಡಿಯನ್ನು ಪ್ರತಿನಿಧಿಸಿರುವಂತಿದೆ.

ಕೃಷ್ಣನ ಕ್ರೀಡಾ, ಉದಾಹರಣೆಗೆ ರತಿ ಕ್ರೀಡಾ ಎನ್ನುವುದು ಅಪ್ರಜ್ಞಾ ಪೂರಕವಾದ (ಅನ್‌ಕಾನ್ಷಿಯಸ್) ಒಂದು ನಟನೆಯೇ ಆಗಿರುವುದಾಗಿದೆ. ಏಕೆಂದರೆ, ಸಾಮಾನ್ಯವಾಗಿ ಕ್ರೀಡೆಯು ಆಡುವವನ ನಿಯಂತ್ರಣದಲ್ಲಿರದೆ, ಇನ್ಯಾರದೋ ಅಥವಾ ಬೇರೆ ಯಾವುದರದೋ ನಿಯಂತ್ರಣದಲ್ಲಿರುದೆ. ಋಷಿಗಳ ಆಟಗಳನ್ನು ಸಾಮಾನ್ಯವಾಗಿ ಲೀಲೆ ಎಂದು ಗುರುತಿಸಲಾಗುತ್ತದೆ, ವಿಶ್ವದ ಆಗುಹೋಗುಗಳು ಸಂಪೂರ್ಣವಾಗಿ ಅವರ ನಿಯಂತ್ರಣದಲ್ಲಿ ರುತ್ತದೆ. ಕೃಷ್ಣನ ಜೊತೆಯಲ್ಲಿ ನರ್ತಿಸುವ ಮೊದಲು ಗೋಪಿಕೆಯರು ಸಂಪೂರ್ಣವಾಗಿ ವಿವಸ್ತ್ರಗೊಳ್ಳಬೇಕಾಗಿದ್ದಿತು, ಮೂರು ಹೊದಿಕೆ ಗಳು (ಸಾತ್ವಿಕ, ರಾಜಸ ಹಾಗು ತಾಮಸ) ಕುಂಡಲಿನಿಯನ್ನು ಸುತ್ತುವರೆದು ಮಂಕುಮಾಡಿರುತ್ತವೆ. ಮೊದಮೊದಲು ಗೋಪಿಕೆ ಯರು ಪೇಚಿಗೆ ಸಿಲುಕಿ ನಾಚಿಕೊಳ್ಳುತ್ತಿದ್ದರು, ಚಿರಪರಿಚಿತವಾದ ಹಾಗು ಮೊದಲಿಂದಲೂ ಗುರುತಿಸಿಕೊಂಡಿರುವ ವ್ಯಕ್ತಿತ್ವವನ್ನು ಅವರ ಅಹಂ ಅಷ್ಟು ಸುಲಭವಾಗಿ ಬಿಟ್ಟುಕೊಡಲಾರಲಾಗಿದ್ದದ್ದೇ ಕಾರಣವಾಗಿದ್ದಿತು. ಆದರೆ ಕೃಷ್ಣನ ನಿರ್ಧಾರ ಅಚಲವಾದದ್ದರಿಂದ ಬೇರೆ ದಾರಿಯಿಲ್ಲದೆ ಗೋಪಿಕಾ ಸ್ತ್ರೀಯರು ವಿವಸ್ತ್ರಗೊಳ್ಳುತ್ತಿದ್ದರು. ನಂತರೆದಲ್ಲಷ್ಟೇ ಕುಂಡಲಿನಿ ಶಕ್ತಿಯು ಯಾವುದೇ ಅಡೆ ತಡೆಯಿಲ್ಲದೆ ಸರ್ವ ಸ್ವಾತಂತ್ರ್ಯದಿಂದ ನಾಡಿಗಳಲ್ಲಿ ಸರಾಗವಾಗಿ ಹರಿಯುತ್ತಿತ್ತು ಹಾಗು ನಾಡಿಗಳು ನರ್ತಿಸಲು ಮೊದಲು ಮಾಡುತ್ತಿದ್ದವು. ಪ್ರತಿಯೊಂದು ನಾಡಿಯೂ ಕೃಷ್ಣನು ನನ್ನ ಜೊತೆಗೇ ಇರುವನೆಂದು ಆನಂದದಿಂದ ಕಂಪಿಸುತ್ತಿದ್ದವು, ನೈಜನತೆಯಲ್ಲಿ ಕೃಷ್ಣನು ಆತ್ಮೋಪಾ ದಿಯಲ್ಲಿ ಸಕಲ ನಾಡಿಯೊಳಗೆ ಇರುವವನಾಗಿದ್ದನು. ಈ ರೀತಿಯಾಗಿ ಸಾಧಕನು ತನ್ನ ದೇಹದೊಳಗಿರುವ ನಾಡಿಗಳನ್ನು ಆತ್ಮದ ಜೊತೆಗೂಡಿ ವಿಕಾಸದೆಡೆಗೆ ಹೆಜ್ಜೆ ಹಾಕುವಾಗ ಸಿಗುವ ಆನಂದವನ್ನೇ ಕೃಷ್ಣನ ರಾಸಲೀಲೆಗೆ ಸಮೀಕರಿಸಬಹುದಾಗಿದೆ.

ಕೃಷ್ಣನ ಅವತಾರದ ನಂತರದ ಅವತಾರವೇ ಬುದ್ಧನ ಅವರತಾರ. ಬುದ್ಧಿ ಎಂದರೆ ವಿವೇಚನೆ ಮತ್ತು ಬುದ್ಧನು ಸೌಂದರ್ಯ ಗುಣಗ್ರಾಹ್ಯದ ಶೂನ್ಯ ಅನುಭಾವಿಕ ಸಂಪಾದನೆಯ ಸಾಧಕನಾ ಗಿದ್ದರೂ, ವಿವೇಚನೆಯ ಸಂಪೂರ್ಣವಾದ ವಿಕಾಸವನ್ನು ಹೊಂದಿ ದವನಾಗಿದ್ದ ಎಂಬುವುದನ್ನು ನಾವು ಇಲ್ಲಿ ಗಮನಿಸ ಬೇಕಾದ ಅಂಶವೇ ಆಗಿದೆ. ಅವನ ಅವತಾರವು ಮಾನವನ ತರ್ಕದ ಸಾಮರ್ಥ್ಯದ ಸಂಪೂರ್ಣವಾದ ವಿಕಾಸತೆಯನ್ನು ಸೂಚಿಸುವುದೇ ಆಗಿದೆ. ಬುದ್ಧನನ್ನು ಸರ್ಪದ ಜೊತೆಗೇ ಬಹುವೆಡೆ ಚಿತ್ರಿಸಿರುವುದಿದೆ, ಇದರರ್ಥವು ಅವನೂ ಒಬ್ಬ ತೀರ್ಥಂಕರನೇ ಎಂಬುವುದಾಗಿದೆ.

ಜಗತ್ತಿನಲ್ಲಿ ಒಟ್ಟು ಇಪ್ಪತ್ತ ನಾಲ್ಕು ತೀರ್ಥಂಕರರು ಎಂದು ಹೇಳಲಾಗಿದೆ. ಸಂಖ್ಯಾಶಾಸ್ತ್ರದ ರೀತಿಯಲ್ಲಿ ಗಮನಿಸಿದಾಗ ಎರಡು ಹಾಗು ನಾಲ್ಕನ್ನು ಕೂಡಿದಾಗ ಉತ್ತರ ಆರು ಎಂಬುದಾಗಿದೆ ಹಾಗು ಈ ಸಂಖ್ಯೆಯನ್ನು ಮಾನವನ ದೇಹದ ಒಟ್ಟು ಚಕ್ರಗಳ ಸಂಖ್ಯೆಗೆ ಸಮೀಕರಿಸಬಹುದಾಗಿದೆ. ಸೂಕ್ಷ್ಮವಾಗಿ ಅವಲೋಕಿಸಿದಾಗ ತೀರ್ಥಂಕರನು ಎಂಬುವವನು ಒಬ್ಬ ಸಾಧಕನು, ತನ್ನ ಪ್ರಜ್ಞೆಯನ್ನು (ಕುಂಡಲಿನಿ ಶಕ್ತಿ) ದೇಹದಲ್ಲಿರುವ ಆರು ಚಕ್ರಗಳ ಮುಖಾಂತರ ಊರ್ಧ್ವಗೊಳಿಸಿರುವವನು, ವಿಕಾಸದ ದಾರಿ ಅರಿತಿರುವವನು, ಅಪರಿಪೂರ್ಣತೆಯಿಂದ ಪೂರ್ಣತೆಯ ಕಡೆಗೆ ಹೊರಟಿರುವವನು ಹಾಗು ವ್ಯಕ್ತದ ಮತ್ತೊಂದು ದಡಕ್ಕೆ ಸೇರಲು ಹವಣಿಸುತ್ತಿರುವವನು ಎಂಬುದಾಗಿ ಅರಿಯಬಹುದಾಗಿದೆ. ಬುದ್ಧನೂ ಕೂಡ ಒಬ್ಬ ತೀರ್ಥಂಕರ ಹಾಗು ಮಾನವೀಯ ಮೌಲ್ಯಗಳನ್ನರಿತ, ಅನುಕಂಪದಿಂದೊಡಗೂಡಿದ ಬೋಧಿಸತ್ವ ಎಂಬುದಾಗಿಯೂ ವರ್ಣಿಸಲಾಗಿದೆ. ಈ ದತ್ತಾಂಶಗಳನ್ನು ವಿಚಾರಕ್ಕೊಳಪಡಿಸಿ ಯೋಚಿಸಿದಾಗ ಮಾನವನ ದೈಹಿಕ ಸಂಪೂರ್ಣವಾದ ಬೆಳವಣಿಗೆಯನ್ನು ಹಾಗು ಬೌದ್ಧಿಕ ಮೂಲಭೂತ ವಿಕಾಸವನ್ನು ತೋರಿಸಿಕೊಡುತ್ತದೆ.

ಇಲ್ಲಿಯವರೆಗೂ ಮೇಲೆ ಹೇಳಲ್ಪಟ್ಟ ವಿಕಾಸದ ವಿಚಾರಗಳೆಲ್ಲವೂ ಭೂತಕಾಲದಲ್ಲಿ ನಡೆದು ಹೋದದ್ದಾಗಿದೆ. ವಾಸ್ತವಿಕದಲ್ಲಿ ಸಧ್ಯದ ಮಾನವನು ಈ ಎಲ್ಲಾ ಹಂತಗಳನ್ನು ದಾಟಿ ಬಂದವನೇ ಆಗಿದ್ದಾನೆ. ವೈಜ್ಞಾನಿಕ ಸಿದ್ಧಾಂತಗಳಲ್ಲಿ ವಿಕಾಸದ ಬಗೆಗೆ ಹಲವಾರು ಸಿದ್ಧಾಂತಗಳಿದ್ದು, ಕೆಲವೊಮ್ಮೆ ಒಂದಕ್ಕೊಂದು ವಿರೋಧವಾಗಿಯೂ ಹಾಗು ಅಭಾಸವಾಗಿಯೂ ಕಾಣತೊಡಗುತ್ತವೆ. ಯಾವುದೇ ವೈಜ್ಞಾನಿಕ ವಿಕಾಸ ಸಿದ್ಧಾಂತಗಳನ್ನು ಅವಲೋಕಿಸಿದಾಗ ಅವುಗಳು ತಾರ್ಕಿಕವಾಗಿಯೋ, ಪೃಥಕ್ಕರಿಸುವ ರೀತಿಯಲ್ಲಿಯೋ ಅಥವಾ ಇನ್ಯಾವುದೋ ರೀತಿಯಲ್ಲಿ ಪರಿಪೂರ್ಣತೆಯ ದೋಷ ಅನುಭವಕ್ಕೆ ಬರತೊಡಗುತ್ತದೆ. ಯಾವುದೇ ವೈಜ್ಞಾನಿಕ ಸಿದ್ಧಾಂತಗಳು ನಮ್ಮ ಆಲೋಚನಾ ರೀತಿಗಳನ್ನು ಖಂಡಿತವಾಗಿಯೂ ಒಂದು ಹಂತಕ್ಕೆ ಕೊಂಡೊಯ್ದರೂ, ಮತ್ತೆ ಹಲವು ಸಂಶಯಗಳನ್ನು ಸೃಷ್ಟಿ ಮಾಡದೆ ಇರವು.

ಪ್ರಸ್ತುತ ನಡೆಯುತ್ತಿರುವ ಕಾಲ ಘಟ್ಟವನ್ನು ಕಲಿಯುಗ ಎಂದು ಕರೆದಿರುತ್ತಾರೆ. ಹೆಸರೇ ಸೂಚಿಸುವಂತೆ ಸಧ್ಯದ ಮಾನವನು ವಿಕಾಸದ ಹಾದಿಯಲ್ಲಿ ಸ್ವಲ್ಪ ಭಾಗವೇ ಕ್ರಮಿಸಿದ್ದು ಮುಂದೆ ಕ್ರಮಿಸಬೇಕಾದ ಹಾದಿ ಬಹಳವೇ ಇದೆ, ಅಂದರೆ ಕಲಿಯುವುದು ಬಹಳವಿದೆ ಎಂಬುವುದೇ ಆಗಿದೆ. ಏನನ್ನು ಕಲಿಯಬೇಕು ಎಂಬುದೇ ಈ ಕ್ಷಣದ ಪ್ರಶ್ನೆಯಾಗಿದ್ದು, ಅದಕ್ಕೆ ಬೇಕಾಗಿರುವ ಮಾರ್ಗದರ್ಶನದ ಅವಶ್ಯಕತೆ ಇರುವುದಾಗಿದೆ. ವಿಜ್ಞಾನವು ಕಳೆದು ಹೋದ ಕಾಲ ಘಟ್ಟಗಳ ಬಗ್ಗೆ ಒಂದು ಪಕ್ಷಿನೋಟ ಒದಗಿಸಿದರೂ, ಮುಂಬರುವ ಕಾಲ ಹಾಗು ವಿಕಾಸದ ಬಗ್ಗೆ ಯಾವುದೇ ರೀತಿಯಾದ ಪಕ್ಷವಾದ ಖಚಿತ ಮಾಹಿತಿ ಒದಗಿಸಿಲ್ಲದಿರುವುದು ಅಧ್ಯಯನದಿಂದ ತಿಳಿದುಬರುತ್ತದೆ. ಮಾನವನ ಮುಂದಿನ ವಿಕಾಸದ ಹಂತ ಏನು? ಈ ಹಂತವನ್ನು ದಾಟಿ ಮುಂದುವರೆಯಲು ನಾವು ಏನು ಮಾಡಬೇಕು ಎಂಬುವುದಕ್ಕೆ ಸಧ್ಯಕ್ಕೆ ನಮ್ಮ ಮುಂದಿರುವ ದಾರಿಗಳಲ್ಲಿ ಭಾರತದ ಪುರಾತನವಾದ ವೇದ ಹಾಗು ಉಪನಿಷತ್ತುಗಳು ಕೂಡ ಮಾರ್ಗದರ್ಶಕವಾಗಿರುವುದಾಗಿದೆ.

ಪ್ರಕೃತಿಯಲ್ಲಿ ಪ್ರಯತ್ನವಿಲ್ಲದೆ ವಿಕಾಸವು ಅಸಾಧ್ಯವೇ ಸರಿ. ಪ್ರಯತ್ನವೆಂಬುದು ಸಾಧನೆಗೆ ಸಮೀಕರಿಸಬಹುದಾಗಿದೆ. ಸಾಧನೆಯ ಇನ್ನೊಂದು ಮುಖವು ಕರ್ಮವೇ ಆಗಿರುವುದಾಗಿದೆ. ಕೇವಲ ಕರ್ಮದಿಂದಲೇ ವಿಕಾಸ ಹೊಂದಲು ಸಾಧ್ಯವಿರದೆ, ಅದರ ಜೊತೆ ಜೊತೆಗೆ ಜ್ಞಾನದ ಅವಶ್ಯಕತೆಯೂ ಇರುವುದಾಗಿದೆ. ಕರ್ಮ ಹಾಗು ಜ್ಞಾನ ಇವೆರಡನ್ನೂ ಜೊತೆ ಜೊತೆಯಾಗಿ ಕೊಂಡೊಯ್ಯುವ ಬಗೆ ಹಾಗು ಅದರ ಪರಿಣಾಮಗಳ ಕುರಿತಾಗಿ ಅನುಭವಿಸಿದ ಅನುಭಾವಿಗಳ ಭಾವಾನುವಾದವೇ ಯಾವುದೇ ಧರ್ಮದ ರಚನೆಯ ಆಧಾರವಾಗಿರುವುದಾಗಿದೆ.

ವಿಕಾಸದ ಹಂತಗಳಲ್ಲಿ ಆನಂದವು ಬಹಳ ಪ್ರಮುಖ ಸ್ಥಾನವನ್ನು ಹೊಂದಿದೆ. ಯಾವುದೇ ಜೀವಿಯು ಏನನ್ನು ಮಾಡಲು ಹೊರಟರೂ ಅಂತ್ಯದಲ್ಲಿ ಏನು ಸಿಗುತ್ತದೆ ಅಥವಾ ಏನಾಗುತ್ತದೆ ಎಂಬುವುದನ್ನರಿಯದೆ ಮುಂದುವರೆಯಲು ಇಚ್ಛಿಸುವುದಿಲ್ಲ. ಯಾವುದೇ ಧರ್ಮದಲ್ಲೂ ಅಥವಾ ವಿಚಾರದಲ್ಲೂ ಅಂತಿಮವಾಗಿ ಏನು ಎಂದೆನ್ನುವ ಪ್ರಶ್ನೆಗೆ ಉತ್ತರ 'ಆನಂದ' ಮಾತ್ರವೇ ಆಗಿರುವುದಾಗಿದೆ. ಹೀಗಾಗಿ ನಮ್ಮ ಉಪನಿಷತ್ತುಗಳಲ್ಲೂ ಕೂಡ ಅಂತಿಮ ಏನು ಎನ್ನುವುದಕ್ಕೆ ಉತ್ತರ ಆನಂದವನ್ನು ಹೊಂದುವುದು ಎನ್ನುವುದೇ ಆಗಿದೆ.

ಬಾಹ್ಯ ಸಾಧನಗಳಾದ ಧನ, ಪಶು, ಸಂಗಾತಿ, ಸುತ, ಆಲಯಗಳಿಂದ ಮೊದಲುಗೊಂಡು ಆಂತರಿಕ ಸಾಧನಗಳಾದ ಜ್ಞಾನ ಮೊದಲಾದವುಗಳಿಂದಲೂ ಅತ್ಯಂತ ಉತ್ಕೃಷ್ಟವಾದ ಲೌಕಿಕ ಆನಂದವು ಮನುಷ್ಯನಿಗೆ ಉಂಟಾಗುತ್ತದೆ. ವಿಕಸನದ ನಂತರದ ಆನಂದದ ಅನುಭವಕ್ಕಾಗಿಯೇ ಲೌಕಿಕ ಅನಂದವು ಇರುವುದಾಗಿದೆ. ವಿಕೆಂದರೆ ಸ್ವಾನುಭವಕ್ಕೆ ಬರುವ ಆನಂದದ ಮೂಲಕವಾಗಿಯೇ ವಿಷಯಾತೀತವಾದ ವಿಕಾಸಗಳ ನಂತರದ ಅನಂದವನ್ನು ಅರಿಯಲು ಸಾಧ್ಯವಿರುವುದಾಗಿದೆ. ಸಧ್ಯದ ಆನಂದವೂ ಕೂಡ ವಿಕಾಸದ ಅಂತಿಮ ಹಂತದಲ್ಲಿ ಸಿಗುವ ಆನಂದದ ಒಂದು ಅಂಶವೇ ಆಗಿರುವುದಾಗಿದೆ. ವಿಕಾಸದ ಹಂತಗಳಿಲ್ಲಿ ಹಿಮ್ಮುಖವಾಗಿ ಚಲಿಸಿದಂತೆಲ್ಲಾ ಅವಿದ್ಯೆಯಿಂದ ಜ್ಞಾನವು ಮರೆಯಾಗುತ್ತದೆ ಹಾಗು ಅವಿದ್ಯೆಯು ಹೆಚ್ಚುತ್ತಾ ಬಂದಂತೆಲ್ಲಾ ಬ್ರಹ್ಮಾನಂದವು (ವಿಕಸನದ ಅಂತಿಮ ಹಂತದ ಆನಂದವು) ಲೌಕಿಕಾನಂದವಾಗಿ ಪರಿಣಮಿಸತೊಡಗುತ್ತದೆ. ಈ ಆನಂದವನ್ನೇ ವಿಕಸನದ ವಿವಿಧ ಸ್ತರಗಳಲ್ಲಿರುವ ಜೀವಿಗಳು ತಮ್ಮ ತಮ್ಮ ಜ್ಞಾನ, ಕರ್ಮ ಹಾಗು ಕ್ರಿಯೆಗಳನುಸಾರವಾಗಿ ಅನುಭವಿಸುತ್ತವೆ.

ಮಾನವನ ಮುಂದಿನ ಹಂತದ ವಿಕಸವು ತೈತ್ತಿರೀಯೋಪನಿಷತ್ತಿನ ಪ್ರಕಾರವಾಗಿ ಅವನ ವ್ಯಕ್ತಿತ್ವದ ಮೇಲೆ ಆಧಾರಿತವಾಗಿದೆ. ಅತ್ಯಂತ ಆಶೆಯುಳ್ಳವನು (ಆಶಿಷ್ಠಃ), ಬಲಿಷ್ಠನಾಗಿರುವವನೂ (ಬಲಿಷಗತಃ) ಹಾಗು ದೃಢತೆಯುಳ್ಳವನಾಗಿರುವವನೂ (ದೃಢಿಷ್ಠಃ) ಆಗಿರುವ ಮಾನವನನ್ನು ಒಂದು ಮಾನವ ಆನಂದ ಎಂದು ಅಳತೆಗೋಲಾಗಿಸಿಕೊಂಡು ಮುಂದಿನ ವಿಕಾಸದ ರೂಪಗಳನ್ನು ಅಥವಾ ಹಂತಗಳನ್ನು ಉಲ್ಲೇಖಿಸಿದ್ದಾರೆ. ಈ ಹಂತದಲ್ಲಿ ಸಾಧಕನು 'ಶ್ರೋತ್ರೀಯಸ್ಯ ಚಾಕಾಮಹತಸ್ಯ' ಅಂದರೆ ಶ್ರೋತ್ರೀಯ–ವಿದ್ಯೆಯನ್ನು

ಕೇಳಿ ಆರ್ಥೈಸಿಕೊಂಡು ಅಳವಡಿಸಿಕೊಳ್ಳುವವ, ಚ–ಮತ್ತು, ಕಾಮಹತಸ್ಯ–ಸರ್ವಕಾಮನೆಗಳಿಂದ ದೂರವಿರುವ ವ್ಯಕ್ತತ್ವವನ್ನು ಹೊಂದಿರಲೇಬೇಕು ಎಂದು ಉಲ್ಲೇಖಿಸಲಾಗಿದೆ. ಮಾನವನ ಆನಂದದ ಒಂದು ನೂರು ಪಟ್ಟು ಆನಂದಗಳು ಮನುಷ್ಯಗಂಧರ್ವರ ಒಂದು ಆನಂದ ಎಂದೆನ್ನಲಾಗಿದೆ. ಈ ವಿಕಾಸದ ಹಂತವು ಮಾನವನು ವಿಶೇಷವಾದ ಜ್ಞಾನ ಹಾಗು ಕರ್ಮಗಳಿಂದ ಗಂಧರ್ವತ್ವವನ್ನು ಹೊಂದಿದವರು ಅಂಬುವುದಾಗಿದೆ. ಈ ಹಂತದಲ್ಲೂ ಕೂಡ ಸಾಧಕನು ಶ್ರೋತ್ರೀಯಸ್ಯ ಚಾಕಾಮಹತಸ್ಯದ ವ್ಯಕ್ತತ್ವದಲ್ಲೇ ಇರಬೇಕಾಗಿರುತ್ತದೆ. ಹೀಗೆ ಮುಂದುವರೆದು, ಸಾಧಕನು ಮನುಷ್ಯ ಗಂಧರ್ವನ ಒಂದು ನೂರು ಪಟ್ಟು ಆನಂದವನ್ನು ಸಾಧಿಸಿದಾಗ ಅವನು ದೇವಗಂಧರ್ವನಾಗುತ್ತಾನೆ ಎಂದೆನ್ನಲಾಗಿದೆ. ಈ ಹಂತದಲ್ಲಿ ಸಾಧಕನು ಜನ್ಮದಿಂದಲೇ ಗಂಧರ್ವನಾಗಿ ಹುಟ್ಟುತ್ತಾನೆ ಹಾಗು ಅವನು ಪುನಃ ಶ್ರೋತ್ರೀಯಸ್ಯ ಚಾಕಾಮಹತಸ್ಯದ ವ್ಯಕ್ತತ್ವದಲ್ಲೇ ಮುಂದುವರೆಯಬೇಕಾಗಿದೆ. ಹೀಗೆ ಸಾಧನೆಯಲ್ಲಿ ಮುಂದುವರೆದಲ್ಲಿ ಚಿರಲೋಕಸ್ಥಾಯಿಯಾದ ಪಿತೃ ಲೋಕದಲ್ಲಿಗೆ ಮುಂದುವರೆಯುತ್ತಾನೆ ಹಾಗು ನಂತರದಲ್ಲೂ ಶ್ರೋತ್ರೀಯಸ್ಯ ಚಾಕಾಮಹತಸ್ಯದ ವ್ಯಕ್ತತ್ವದಲ್ಲೇ ಮುಂದುವರೆದು ಒಂದು ನೂರು ಪಿತೃ ಆನಂದವನ್ನು ಸಾಧಿಸಿದಲ್ಲಿ ಅಜಾನಜ ದೇವತೆಗಳ ಲೋಕದ ಭೌತಿಕ ನಿಯಮಾನುಸಾರದಲ್ಲಿ ಹುಟ್ಟಿ ಸ್ಮಾರ್ತ ಕರ್ಮಗಳನ್ನು ಪೂರೈಸಿದವರಾಗಿದ್ದು, ಶ್ರೋತ್ರೀಯಸ್ಯ ಚಾಕಾಮಹತಸ್ಯದ ವ್ಯಕ್ತತ್ವದಲ್ಲೇ ಮುಂದುವರೆದವರಾಗಿರುತ್ತಾರೆ.

ಮುಂದಿನ ವಿಕಾಸದ ನಡೆಯು ಒಂದು ನೂರು ಅಜಾನಜ ದೇವತೆಗಳ ಆನಂದಕ್ಕೆ ಸಮನಾಗಿದ್ದು, ವೈದೀಕ ಕರ್ಮವನ್ನು ಪೂರೈಸಿದವರಾಗಿದ್ದು, ಹವಿಸ್ಸನ್ನಯ ಪರಿಗ್ರಹಿಸುವ ಕರ್ಮದೇವತೆಗಳ ನಿಯಮಾನುಸಾರವಾಗಿರುವುದಾಗಿದೆ. ಈ ಹಂತದಲ್ಲಿ ಶ್ರೋತ್ರೀಯಸ್ಯ ಚಾಕಾಮಹತಸ್ಯದ ವ್ಯಕ್ತತ್ವದಲ್ಲೇ ಮುಂದುವರೆಯುವವರಾಗಿದ್ದರೆ, ಹಾಗು ಒಂದು ನೂರು ಪಟ್ಟು ಕರ್ಮದೇವತೆಗಳ ಆನಂದವನ್ನು ಗಳಿಸಿಕೊಂಡಲ್ಲಿ ಪರಿಪೂರ್ಣವಾದ ದೇವತೆಗಳ ವಿಕಾಸ ಹೊಂದಿ ಶ್ರೋತ್ರೀಯಸ್ಯ ಚಾಕಾಮಹತಸ್ಯದ ವ್ಯಕ್ತತ್ವದಲ್ಲೇ ಮುಂದುವರೆಯುವವರಾಗಿರುತ್ತಾರೆ.

ಮುಂದಿನ ವಿಕಾಸವು ದೇವತೆಗಳ ಒಂದು ನೂರು ಆನಂದವನ್ನು ಹೊಂದಿದ ದೇವತೆಗಳ ಸ್ವಾಮಿಯಾದ ಇಂದ್ರನಿಗೆ ಸರಿಸಮವಾಗಿದ್ದಾಗಿರುತ್ತದೆ. ಇಲ್ಲಿಯೂ ಕೂಡ ಶ್ರೋತ್ರೀಯಸ್ಯ ಚಾಕಾಮಹತಸ್ಯದ ವ್ಯಕ್ತತ್ವವನ್ನು ಮೈಗೂಡಿಸಿಕೊಂಡು ಒಂದು ನೂರು ಇಂದ್ರನ ಆನಂದವನ್ನು ಪಡೆದಿದ್ದೇ ಆದಲ್ಲಿ, ದೇವತೆಗಳ ಗುರುವಾದ ಬೃಹಸ್ಪತಿಯ ಸರಿಸಮನಾದ ವಿಕಾಸವನ್ನು ಹೊಂದಬಹುದಾಗಿದೆ. ಮುಂದಿನ ವಿಕಾಸದ ನಡೆಯು ಒಂದು ನೂರು ಬೃಹಸ್ಪತಿಯ ಆನಂದಕ್ಕೆ ಸಮನಾದ, ಶ್ರೋತ್ರೀಯಸ್ಯ ಚಾಕಾಮಹತಸ್ಯದ ವ್ಯಕ್ತತ್ವದಲ್ಲೇ ಮುಂದುವರೆದ, ತ್ರೈಲೋಕ್ಯ ಶರೀರಿಯಾದ, ವಿರಾಟ್ ಪುರುಷ ಎಂದೆನಿಸಿಕೊಳ್ಳುವ, ಪ್ರಜಾಪತಿಯೇ ಆಗುವುದಾಗಿ ಉಪನಿಷತ್ತುಗಳು ಖಚಿತವಾಗಿ ಹೇಳುತ್ತವೆ.

ಸಾಧಕನು ಶ್ರೋತ್ರೀಯಸ್ಯ ಚಾಕಾಮಹತಸ್ಯದ ವ್ಯಕ್ತತ್ವದಲ್ಲೇ ಮುಂದುವರೆದು, ಒಂದು ನೂರು ಪ್ರಜಾಪತಿಯ ಆನಂದವನ್ನು ಗಳಿಸಿದ್ದೇ ಆದಲ್ಲಿ, ಸಮಷ್ಟಿ–ವ್ಯಷ್ಟಿರೂಪನೂ ಸಂಸಾರ ಮಂಡಲ ವ್ಯಾಪಿಯೂ ಆದ ಹಿರಣ್ಯಗರ್ಭನೆಂಬ ಬ್ರಹ್ಮನಾಗಿ ವಿಕಾಸಗೊಳ್ಳುತ್ತಾನೆ ಎಂಬುದಾಗಿದೆ. ಈ ಹಂತವು ಉಪನಿಷತ್ತುಗಳ ಪ್ರಕಾರವಾಗಿ ಕೊನೆಯ ಹಂತವಾಗಿದ್ದು, ಇದುವರೆಗೆ ಸಾಧಕನು ಸಂಪಾದಿಸಿದಂತಃ ಸಕಲ ಆನಂದಗಳು ಏಕತ್ವವನ್ನು ಹೊಂದುತ್ತವೆ ಎಂಬುದಾಗಿದೆ.

ಉಪಸಂಹಾರ: ವಿಕಾಸದ ಹಂತಗಳಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಹಾಗು ಆನಂದಮಯ ಎಂಬ ಒಂದರೊಳಗೊಂದು ಕೋಶಗಳಿದ್ದು, ಪ್ರಜ್ಞಾ ಪೂರಕವಾಗಿ ಸಾಧನೆಯ ಸಹಾಯದಿಂದ ಅವುಗಳನ್ನು ದಾಟಿ, ಕೊನೆಯ ಹಂತವನ್ನು ಮುಟ್ಟಿದಾಗ ಅವುಗಳೆಲ್ಲವೂ ಏಕತ್ವವನ್ನು ಹೊಂದುವುದರಿಂದ, ಬೌದ್ಧಿಕತೆಯ ಅವಶ್ಯಕತೆ ಕೊನೆಗೊಳ್ಳುತ್ತದೆ.

ತೈತ್ತರೀಯದ ಉಪನಿಷತ್ತಿನಲ್ಲಿ ಸಂಕ್ರಮಣ ಎಂಬ ಪದದ ಪ್ರಯೋಗವಿದೆ. ಇದರ ಅರ್ಥವು ಕೇವಲ ವಿಕಾಸದ ಸ್ಥಾನಗಳನ್ನು ಹೊಂದುವುದು ಎಂಬಷ್ಟಕ್ಕೇ ಸೀಮಿತವಾಗದೆ, ಅರಿತುಕೊಳ್ಳುವುದು ಎಂಬ ಅರ್ಥವನ್ನೂ ನಾವು ಸಮೀಕರಿಸಬಹುದಾಗಿದೆ. ಏಕೆಂದರೆ, ಆತ್ಮದ ಜ್ಞಾನವು ಉದಯವಾದರೆ, ಹೃದಯ ಗುಹಾ ಸಂಬಂಧಿತ ಪ್ರಭಾವದಿಂದ ಅನ್ನಮಯಾದಿ ಅನಾತ್ಮರುಗಳಲ್ಲಿ ಉದಯಿಸಿ ಪಕ್ವಗೊಂಡಿರುವ ಆತ್ಮತ್ವ ಕುರಿತ ಭ್ರಾಂತಿಯು ಸಂಕ್ರಮಣದಿಂದ ನಾಶವಾಗುವುದಾಗಿದೆ. ಅವಿದ್ಯೆಯಿಂದ ಬ್ರಹ್ಮತವನ್ನು ಹೊಂದಲಾಗಲಾರದ ಆತ್ಮನು ವಿದ್ಯೆಯಿಂದ ಹಾಗು ಬೌದ್ಧಿಕವಿಕಾಸದ ಪ್ರಕ್ರಿಯೆಯಿಂದ ಹೊಂದಬಹುದಾಗಿದೆ. ಅದಲ್ಲದೆ ಸರ್ವಗತನಾದ ಆತ್ಮನಿಗೆ ಬೇರೆ ಯಾವ ವಿಧದಿಂದಲೂ ಸಂಕ್ರಮಣವು ಸಾಧ್ಯವಿಲ್ಲದಿರುವುದಾಗಿದೆ ಎಂದು ಭಾರತೀಯ ತತ್ವ ಶಾಸ್ತ್ರ ಪ್ರಮಾಣೀಕರಿಸುತ್ತದೆ.

ಮೇಲೆ ಹೇಳಿದ ರೀತಿಯಲ್ಲಿ ವಿವರವಾಗಿ ಪರಾಮರ್ಶಿಸಿದಾಗ ವಿಕಸನವು, ಅಂತಃದೃಷ್ಟಿಯ ಪ್ರಜ್ಞೆಯ ತುತ್ತತುದಿಯಿಂದ, ಬೌದ್ಧಿಕ ಪ್ರಜ್ಞೆಯ ತುತ್ತತುದಿಯ ಕಡೆಗೆ, ಅದಕ್ಕನುಗುಣವಾದ ಶಾರೀರ ಹಾಗು ಶರೀರದ ಪಕ್ವಗೊಂಡ ಬದಲಾವಣೆಯು ಸಂಯೋಗದಿಂದೊಡಗೂಡಿದ ಪಯಣವೇ ಆಗಿರುವುದಾಗಿದೆ.

ರೆಫರೆನ್ಸ್:
೧. ಭಾಗವತ
೨. ತೈತ್ತರೀಯ ಉಪನಿಷತ್ತು
೩. ಮನೋವಿಜ್ಞಾನ
೪. ಕುಂಡಲಿನಿ ಶಾಸ್ತ್ರ
೫. ನಾಡಿ ಶಾಸ್ತ್ರ

ವಚನಗಳಲ್ಲಿ ಸತ್ಯ ಹಾಗೂ ಅಸತ್ಯಗಳ ವಿಶ್ಲೇಷಣೆ

ಡಾ. ರಾಮಕೃಷ್ಣ ಜಿ.
ಪೋಸ್ಟ್ ಡಾಕ್ಟರಲ್ ಫೆಲೋ, ತತ್ವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -೫೮೦ ೦೦೩.

ಸತ್ಯ ಎಂದರೆ ನಿಜವಾದದ್ದು, ನಿಜವನ್ನೇ ಹೇಳುವಂತದ್ದು, ಇದ್ದಕ್ಕಿದ್ದಂತೆ ಹೇಳುವಂತದ್ದು. ಇದಕ್ಕೆ ಸತ್ಯವೆಂದು ಹೆಸರು. ಸತ್ಯ ಎಂಬ ಪದವು 'ಸತ್' ಮತ್ತು 'ಯ' ಎಂಬ ಪದಗಳಿಂದ ಬಂದಿದೆ. ಯಾವ ವಸ್ತುವನ್ನು ಅಥವಾ ವಿಷಯವನ್ನು ಸ್ವತಃ ತಾನು ನೋಡಿದಂತೆ, ಕೇಳಿದಂತೆಯೇ ಹೇಳುವುದಕ್ಕೆ ಸತ್ಯವೆನ್ನುತ್ತೇವೆ. ಸತ್ಯವು ಧರ್ಮವಾದರೆ ಅಸತ್ಯವು ಅಧರ್ಮವೆನಿಸುತ್ತದೆ. 'ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ' ಎಂಬುದು ಲೋಕರೂಢಿಯಾಗಿದೆ. ಸತ್ಯದ ಹಾದಿಯಲ್ಲಿ ಸದಾ ಜಯವಿದೆ. 'ಸತ್ಯಮೇವ ಜಯತೆ'ಯಂತೆ ಸತ್ಯಕ್ಕೆ ಯಾವಾಗಲೂ ಜಯವಿದೆ. 'ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ' ಎಂಬ ವಚನೋಕ್ತಿಯು ಸತ್ಯವಾಗಿದೆ. ಸತ್ಯವು ಜ್ಞಾನದಲ್ಲಿ ಅಂತರ್ಗತವಾಗಿದೆ.

ಪ್ರಾಮಾಣಿಕತೆಯಲ್ಲಿ ಎಲ್ಲರೂ ಸತ್ಯವಂತರೇ, ಅಸತ್ಯವನ್ನು ನುಡಿಯುತ್ತಿರುವವರು ಒಂದು ಸಮಯಕ್ಕಾದರೂ ಸತ್ಯವನ್ನೇ ನುಡಿಯುತ್ತಿದ್ದೆನೆಂದು ಹೇಳುತ್ತಾರೆ. ನಂಬಿಕೆ ಉಳ್ಳವರು, ನಂಬಿಕೆಯಲ್ಲಿ ಇರುವುದೆಲ್ಲವೂ ಅವರಿಗೆ ಸತ್ಯವೇ ಆಗಿರುತ್ತದೆ. ಮಕ್ಕಳ ಮೇಲೆ, ತಂದೆ ತಾಯಿಗಳ ಮೇಲೆ ತಮ್ಮ ದೇವರ ಮೇಲೆ ಸದ್ಗತಿಯ ಮೇಲೆ ಪ್ರಮಾಣ ಮಾಡಲು ಸಿದ್ಧರಾಗಿರುತ್ತಾರೆ. ನ್ಯಾಯಾಲಯಕ್ಕೆ ಹೋಗಿ ನಿಂತಾಗಲೂ ನಾನು ಸತ್ಯವನ್ನೇ ಹೇಳುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾರೆ. ನ್ಯಾಯಾಲಯಗಳಿಗೆ ಹೋಗಿ ನಿಂತವರಿಗೆ ಇದು ಎಷ್ಟು ನಿಜವಲ್ಲವೆಂಬುದು ಗೊತ್ತಾಗುತ್ತದೆ. ಅದರಂತೆ "ಹಾಲು ಪರಮೋತ್ತಮವಾದ ಆಹಾರವೆಂದು ಹೇಳುವಾಗ ನಮ್ಮ ಉದ್ದೇಶ ಹಾಲಿನ ಆಹಾರದ ಯೋಗ್ಯತೆ, ಹಾಗೆಯೇ ಸತ್ಯವನ್ನು ನಮಗೆ ಅಮೂಲ್ಯವನ್ನಾಗಿ ಮಾಡುವುದು ಅದರ ಧರ್ಮ ಸಾರ್ಥಕತೆ, ಹೀಗಾಗಿ ಧರ್ಮವೆಂಬುದಕ್ಕೆ ಸತ್ಯವು ಅವಶ್ಯವಾಗಿದೆ."

ಉಪನಿಷತ್ತುಗಳಲ್ಲಿ ಸತ್ಯದ ಮಹತ್ವವನ್ನು ವ್ಯಕ್ತಪಡಿಸಿದಂತೆ ವಚನಗಳು ಸಹಿತ ಸತ್ಯದ ಮಹತ್ವವನ್ನು ತಿಳಿಸುತ್ತವೆ. ವ್ಯಕ್ತಿಯು ನಿತ್ಯ ಜೀವನದಲ್ಲಿ ಯಥಾರ್ಥವಾದುದನ್ನು ನುಡಿಯಬೇಕು ಹಾಗೂ ಅದರಂತೆಯೇ ನಡೆಯಬೇಕು. ಹೀಗೆ ಸತ್ಯವು ಜೀವನದಲ್ಲಿ ಪೂರ್ಣವಾಗಿ ಬೆಳೆದು ಬಂದಾಗ ಸತ್ಯದ ಸಫಲತೆ ಲಭಿಸುತ್ತದೆ. ಸತ್ಯವನ್ನು ಆಚರಿಸಬೇಕೆಂಬುದು ನೀತಿ ಸಂಹಿತೆಯೆಂದು ತಿಳಿಯಲಾಗಿದೆ. ಸತ್ಯದ ಮಹತ್ವವನ್ನರಿತ ಶಿವಶರಣರು 'ನುಡಿದಂತೆ ನಡೆದರೆ, ಇದೆ ಜನ್ಮ ಕಡೆ' ಎಂದು ಸಾರಿದರು. ಆಡಿದ ಮಾತಿನಂತೆ ತಮ್ಮ ಸತ್ಯತೆಯನ್ನು ಅನುಸರಿಸುವುದು ಸಾಮಾಜಿಕ ಜೀವನದಲ್ಲಿ ಸತ್ಯವು ಸಾರ್ವತ್ರಿಕವಾಗಿದೆ ಎಂದು ಈ ಲೇಖನದಲ್ಲಿ ತೋರಿಸಲಾಗಿದೆ.

ಸತ್ಯ ಎಂದರೆ ನಿಜವಾದದ್ದು, ನಿಜವನ್ನೇ ಹೇಳುವಂತದ್ದು, ಇದ್ದಕ್ಕಿದ್ದಂತೆ ಹೇಳುವಂತದ್ದು. ಇದಕ್ಕೆ ಸತ್ಯವೆಂದು ಹೆಸರು. ಸತ್ಯ ಎಂಬ ಪದವು 'ಸತ್' ಮತ್ತು 'ಯ' ಎಂಬ ಪದಗಳಿಂದ ಬಂದಿದೆ. ಯಾವ ವಸ್ತುವನ್ನು ಅಥವಾ ವಿಷಯವನ್ನು ಸ್ವತಃ ತಾನು ನೋಡಿದಂತೆ, ಕೇಳಿದಂತೆಯೇ ಹೇಳುವುದಕ್ಕೆ ಸತ್ಯವೆನ್ನುತ್ತೇವೆ. ಸತ್ಯವು ಧರ್ಮವಾದರೆ ಅಸತ್ಯವು ಅಧರ್ಮವೆನಿಸುತ್ತದೆ. 'ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ' ಎಂಬುದು ಲೋಕರೂಢಿಯಾಗಿದೆ. ಸತ್ಯದ ಹಾದಿಯಲ್ಲಿ ಸದಾ ಜಯವಿದೆ. 'ಸತ್ಯಮೇವ ಜಯತೆ'ಯಂತೆ ಸತ್ಯಕ್ಕೆ ಯಾವಾಗಲೂ ಜಯವಿದೆ. 'ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ' ಎಂಬ ವಚನೋಕ್ತಿಯು ಸತ್ಯವಾಗಿದೆ. ಸತ್ಯವು ಜ್ಞಾನದಲ್ಲಿ ಅಂತರ್ಗತವಾಗಿದೆ.

> "ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ.
> ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ.
> ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ.
> ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ.
> ಕೂಡಲಸಂಗನ ಶರಣರ ಅನುಭಾವದಿಂದ
> ಎನ್ನ ಭವದ ಕೇಡು ನೋಡಯ್ಯಾ"[1]

ನಿತ್ಯ ಸತ್ಯವೆಂದರೆ ಪರಮಾತ್ಮ ಮತ್ತು ಪರಬ್ರಹ್ಮವೆಂದರ್ಥ. ಸತ್ಯ ನುಡಿಯುವದು ನೈತಿಕವಾದದ್ದು ಅಂದರೆ ಸತ್ಯವಂತರಾಗಿ ಧರ್ಮವನ್ನು ಪಾಲಿಸುವುದು. ಯಾವುದು ಪರಮ ಸತ್ಯವೋ ಅದು ದೊರೆಯಬೇಕಾದರೆ ಸತ್ಯದ ನಡೆ-ನುಡಿಗಳೆರೆಡೂ ಒಂದೇ ನಾಣ್ಯದ ಎರಡು ಮುಖಗಳಂತಿರಬೇಕು.

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೇಳಿರುವ ಪ್ರಕಾರ ವಸ್ತುವನ್ನು ಅರಿತುಕೊಳ್ಳುವುದು ಸತ್ಯವಾಗಿದೆ. ಅದನ್ನೇ ಅನುಷ್ಠಾನ ಮಾಡಿದರೆ ಧರ್ಮವೆನಿಸುವುದು ಮತ್ತು ಅದು ಸತ್ಯವಾಗುವುದು. ಇದರಿಂದ ಸತ್ಯ ಧರ್ಮಗಳು ಒಂದನ್ನೊಂದು ಅವಲಂಬಿಸುತ್ತವೆ. ಸತ್ಯವು ವ್ಯಕ್ತಿಗತಕ್ಕಿಂತ ಸಾರ್ವತ್ರಿಕವಾಗಿ ಶ್ರೇಷ್ಠವಾಗಿದೆ. ಮಾನವ ಜೀವನದ ಮುಖ್ಯ ಗುರಿ ಸತ್ಯದ ಅನ್ವೇಷಣೆ ಆತ್ಮ ತೃಪ್ತಿಗಾಗಿ ಮನಸ್ಸು, ಚಿತ್ತ, ಭಾವಗಳಲ್ಲಿ ಸತ್ಯದ ದರ್ಶನವಾಗುತ್ತದೆ. ಸತ್ಯದ ದರ್ಶನಕ್ಕಾಗಿ ವ್ಯಕ್ತಿಯಲ್ಲಿ ಮೂಲಭೂತ ಅಂಶಗಳು ನೆಲೆಗೊಂಡಾಗ ಅವನಿಗೆ ಆತ್ಮ ತೃಪ್ತಿಯ ಅನುಭವವಾಗುತ್ತದೆ. ಆಗ ಸತ್ಯವು, ಅಸತ್ಯತೆಯನ್ನು, ನ್ಯಾಯ-ಅನ್ಯಾಯಗಳ, ಧರ್ಮ-ಅಧರ್ಮದ ಭೇದತೆಯನ್ನು ಗುರುತಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಇಂಥ ಸಾಮರ್ಥ್ಯವನ್ನು ಪಡೆದಾಗ ಜಾತ್ಯಾತೀತತೆಯ ಮನೋಭಾವ ಪರಧರ್ಮ ಸಂಹಿಷ್ಣುತಾ ಮನೋಭುವ ಬೆಳೆದಾಗ ಸಾರ್ವತ್ರಿಕ ಸತ್ಯವನ್ನು ಕಂಡುಕೊಳ್ಳಲು ಸಹಾಯವಾಗಿದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ 'ಸತ್ಯ'ವು ಹಾಗೂ ಅರ್ಥಪೂರ್ಣ ಪರಿಭಾವನೆಯಾಗಿದೆ. ಅದು ಎಲ್ಲ ಧರ್ಮ, ಮತ ಪಂಥದವರಿಗೆ ಅನ್ವಯಿಸಿದೆ. ಬುದ್ಧ ಬಸವ, ಮಹಾವೀರ, ಶಂಕರರು ಮೊದಲಾದ ಸಂತರು ಮತ್ತು ಶರಣರು 'ಸತ್ಯ'ವನ್ನು ಕುರಿತು ಚಿಂತಿಸಿದ್ದಾರೆ. ನಮ್ಮ ಪ್ರಾಚೀನ ಋಷಿ ಮುನಿಗಳು 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಎಂದಿರುವರು. ಅವರು ಸತ್ಯವನ್ನು ಬ್ರಹ್ಮನಿಗೆ ಪರ್ಯಾಯವಾಗಿ ಬೆಳೆಸಿರುವರು.

ಈ ಜಗತ್ತಿಗೂ, ಜೀವನಕ್ಕೂ ಸತ್ಯವೇ ಆಶ್ರಯವಾಗಿದೆ, ಸತ್ಯದ ಕ್ಷೇತ್ರದಲ್ಲಿ ನಮ್ಮ ಜೀವನದ ಪೈರು ಬೆಳೆಯುತ್ತದೆ. ಸತ್ಯ ಸಾಗರದ ಮೇಲೆ ನಮ್ಮ ಅನುಭವಗಳು ತೆರೆಗಳಾಗುತ್ತವೆ. ಈ ಅನಂತ ಆಕಾಶ ಹರವಿರುವುದು, ಸೂರ್ಯ ಬೆಳಗುವುದು, ಭೂಮಿ ಸುತ್ತುವುದು, ಗಾಳಿ ಬೀಸುವುದು, ಅಸಂಖ್ಯ ನಕ್ಷತ್ರಗಳು ಮಿನುಗುವುದು ಎಲ್ಲವೂ ಆ ಮಹಾಸತ್ಯದ ಆಧಾರದ ಮೇಲೆಯೇ ಬಂದಿದೆ. ಇಂಥ ಸತ್ಯವನ್ನು ತಿರಸ್ಕರಿಸುವ,

ಅಲ್ಲಗಳೆಯುವ ಒಬ್ಬನೇ ಒಬ್ಬ ಮನುಷ್ಯ. ಈ ಜಗತ್ತಿನಲ್ಲಿ ಇಲ್ಲ. ಸತ್ಯವನ್ನು ಅಲ್ಲಗಳೆಯುವುದು ಎಂದರೆ ತನ್ನನ್ನ ತಾನೇ ಅಲ್ಲಗಳೆದಂತೆ. "ನಾನು ಇರುವುದಿಲ್ಲ" ಎಂದು ಹೇಳುವದಕ್ಕೂ ಹಾಗೆ ಹೇಳುವವನು ಇರಬೇಕಾಗುತ್ತದೆ. 'ಸತ್ಯ ಇದೆ' ಅಥವಾ 'ಸತ್ಯ ಇಲ್ಲ' ಎಂದು ಹೇಳುವುದಕ್ಕೂ ಹಾಗೆ ಹೇಳುವ 'ನಾನು' ಇರಬೇಕಾಗುತ್ತದೆ.

ಸತ್ಯದಿಂದಲೇ ಈ ಜೀವನಕ್ಕೆ ಹಾಗೂ ಜಗತ್ತಿಗೆ ಒಂದು ಅಸ್ತಿತ್ವವಿದೆ. ಆ ಮಹಾ ಸತ್ಯವು ಸ್ವಯಂಪೂರಿತವಾಗಿದೆ. ಅದರ ಅಸ್ತಿತ್ವಕ್ಕೆ ಇನ್ನೊಂದರ ಅವಶ್ಯಕತೆ ಇಲ್ಲ. ಅದು ಸ್ವಯಂ ಸಿದ್ಧ-ರಕ್ಷಿತವಾಗಿದೆ. 'ಸ್ವಯಂ ಭವತಿ, ಅಸ್ತಿ ಇತಿ ಸ್ವಯಂಭು' ತನ್ನಷ್ಟಕ್ಕೆ ತಾನೇ ತೋರುತ್ತದೆ. ಅದು ಸ್ವಯಂಭು ಋಷಿಗಳು ಅದನ್ನೇ 'ಬ್ರಹ್ಮ' ಎಂದರು. 'ಬ್ರಹ್ಮ' ಎಂದರೆ ದೊಡ್ಡದು ಎಂದರ್ಥ. ಸತ್ಯವು ಸದಾ ಇರುತ್ತದೆ. ಅದಕ್ಕೆ ಆದಿ ಅಂತ್ಯಗಳೇ ಇಲ್ಲ ಅದು ಅನಾದಿ, ಅನಂತವಾಗಿದೆ! ಸತ್ಯವಿಲ್ಲದ ದೇಶವಾಗಲಿ, ಕಾಲವಾಗಲಿ ಎಲ್ಲಿಯೂ ಇಲ್ಲ, ಅದು ಸರ್ವವ್ಯಾಪಿ. ಅದನ್ನು ಮೀರಿಸುವ ಶಕ್ತಿ ಈ ವಿಶ್ವದಲ್ಲಿಯೇ ಇಲ್ಲ. ಅದು ಸರ್ವಶಕ್ತ. ಅದಕ್ಕೆ ಅರಿಯದೇ ಇರುವ ವಿಷಯವೇ ಇಲ್ಲವಾಗಿದೆ. ಸತ್ಯದ ಪ್ರಜ್ಞೆ ಜಾಗ್ರತಗೊಳಿಸುವ ಸಾಧನವೇ ಧರ್ಮವಾಗಿದೆ. ವಿಶ್ವವು ಅತ್ಯಂತ ವಿಶಾಲವಾದುದು. ಅಲ್ಲಿ ಅನೇಕ ಸೂಕ್ಷ್ಮಾತೀಸೂಕ್ಷ್ಮ ವಿಷಯಗಳಿವೆ. ಆ ಎಲ್ಲ ವಿಷಯಗಳನ್ನು ತಿಳಿಯುವುದು ಮನುಷ್ಯನಿಂದ ಅಸಾಧ್ಯವಾಗಿದೆ. ಆದ್ದರಿಂದ ನಮಗೆ ತಿಳಿದಿರುವುದಷ್ಟೇ ಈ ಜಗತ್ತಿನಲ್ಲಿ ಇದೆ ಎಂದಲ್ಲ. ತಿಳಿಯದೆ ಇರುವುದೂ ಸಾಕಷ್ಟು ಇದೆ. ಈ ಪ್ರಪಂಚಕ್ಕೆ ಆಧಾರವಾದ ಸತ್ಯವಸ್ತುವು ನಮಗೆ ತಿಳಿಯದಾಗಿದೆ. ಆದರೂ ಅದು ಇದೆ ಎಂಬ ಭಾವನೆಯೇ ಶ್ರದ್ಧೆಯಾಗಿದೆ. ಅದನ್ನು 'ಅಸ್ತಿ ಇತಿ ಭಾವಃ' ಎನ್ನುವರು.

ಪ್ರಾಮಾಣಿಕತೆಯಲ್ಲಿ ಎಲ್ಲರೂ ಸತ್ಯವಂತರೇ, ಅಸತ್ಯವನ್ನು ನುಡಿಯುತ್ತಿರುವವರು ಒಂದು ಸಮಯಕ್ಕಾದರೂ ಸತ್ಯವನ್ನೇ ನುಡಿಯುತ್ತಿದ್ದೆನೆಂದು ಹೇಳುತ್ತಾರೆ. ನಂಬಿಕೆ ಉಳ್ಳವರು, ನಂಬಿಕೆಯಲ್ಲಿ ಇರುವುದೆಲ್ಲವೂ ಅವರಿಗೆ ಸತ್ಯವೇ ಆಗಿರುತ್ತದೆ. ಮಕ್ಕಳ ಮೇಲೆ, ತಂದೆ ತಾಯಿಗಳ ಮೇಲೆ ತಮ್ಮ ದೇವರ ಮೇಲೆ ಸದ್ಗತಿಯ ಮೇಲೆ ಪ್ರಮಾಣ ಮಾಡಲು ಸಿದ್ಧರಾಗಿರುತ್ತಾರೆ. ನ್ಯಾಯಾಲಯಕ್ಕೆ ಹೋಗಿ ನಿಂತಾಗಲೂ ನಾನು ಸತ್ಯವನ್ನೇ ಹೇಳುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾರೆ. ನ್ಯಾಯಾಲಯಗಳಿಗೆ ಹೋಗಿ ನಿಂತವರಿಗೆ ಇದು ಎಷ್ಟು ನಿಜಪಲ್ಲಪೆಂಬುದು ಗೊತ್ತಾಗುತ್ತದೆ. ಅದರಂತೆ "ಹಾಲು ಪರಮೋತ್ತಮವಾದ ಆಹಾರವೆಂದು ಹೇಳುವಾಗ ನಮ್ಮ ಉದ್ದೇಶ ಹಾಲಿನ ಆಹಾರದ ಯೋಗ್ಯತೆ, ಹಾಗೆಯೇ ಸತ್ಯವನ್ನು ನಮಗೆ ಅಮೂಲ್ಯವನ್ನಾಗಿ ಮಾಡುವುದು ಅದರ ಧರ್ಮ ಸಾಧಕತೆ, ಹೀಗಾಗಿ ಧರ್ಮವೆಂಬುದಕ್ಕೆ ಸತ್ಯವು ಅವಶ್ಯವಾಗಿದೆ."

"ಸತ್ಯ ಎಂದರೇ ಬರೇ ಮಾತಿನ ಮೂಲಕ ಸತ್ಯವೆಂದರ್ಥವಲ್ಲ. ಶರೀರ, ಮನಸ್ಸುಗಳಲ್ಲಿ ಸತ್ಯವು ಇರಬೇಕಾಗುತ್ತದೆ. ಸತ್ಯ, ಕ್ಷಮೆ, ನಾಚಿಕೆ, ಅಸೂಯೆ, ತ್ಯಾಗ, ಇತರರ ಹಿತವನ್ನು ಬಯಸುವುದು, ಹೀಗೆ ಸತ್ಯ ಎನ್ನುವುದು, ಸತ್ಯಮೇವ ಜಯತೇ ಎನ್ನುವಂತೆ ಸತ್ಯಕ್ಕೆ ಯಾವಾಗಲೂ ಜಯ ಇದ್ದೇ ಇರುತ್ತದೆ. "ಸತ್ಯಕ್ಕೆ ಜಯ, ಸುಳ್ಳಿಗೆ ಎಂದಿಗೂ ಜಯವಿಲ್ಲ" ಮಹಾಭಾರತದಲ್ಲಿ ತಿಳಿಸಿರುವಂತೆ ನೀತಿ, ಧರ್ಮ ಮತ್ತು ಸತ್ಯ ಇವುಗಳ ಮೌಲ್ಯ ಸಾರ್ವಕಾಲಿಕವಾಗಿರುತ್ತದೆ. "ಸತ್ಯವೇ ದೇವರು, ಸತ್ಯವೇ ಪ್ರಪಂಚ, ಜಗತ್ತು ನಿಂತಿರುವುದು ಸತ್ಯದ ಮೇಲೆಯೇ. ಸತ್ಯದ ಹೊರತು ಲೋಕವನ್ನು ಸುರಕ್ಷಿತವಾಗಿ ಇಟ್ಟಿರಲಾಗುವುದಿಲ್ಲ." ಸತ್ಯಕ್ಕಿಂತ ಬಲಿಷ್ಠವಾದದು ಮತ್ತೊಂದು ಇಲ್ಲ. ಧರ್ಮದ ಆಚರಣೆಗೆ ಸತ್ಯವೇ ಮೂಲ ಶಕ್ತಿಯಾಗಿದೆ. ಧರ್ಮದ ಮೂಲ ಸತ್ಯವಾದರೆ, ಸತ್ಯದ ಆಧಾರ ಧರ್ಮವಾಗಿದೆ. ಲೋಕದಲ್ಲಿ ಯಾವುದೂ ಸತ್ಯಕ್ಕಿಂತ ದೊಡ್ಡದಲ್ಲ. ಪರಮಶಿವನ ಅನುಗ್ರಹವನ್ನು ಪಡೆಯಲು ಅದಕ್ಕೆ ಅರ್ಹತೆಯನ್ನು ಹೊಂದಿರಬೇಕು. ಅದರಂತೆ ಶಿವಶರಣರು ಪ್ರತಿಪಾದಿಸಿದ ಮೌಲ್ಯಗಳಲ್ಲಿ ಸತ್ಯವು ಒಂದಾಗಿದೆ. ಅವರಿಗೆ ಜೀವನ ಮಿಥ್ಯವಲ್ಲ. ಅದು ಸತ್ಯವಾದುದು. ಆದುದರಿಂದ ಸತ್ಯದ ಆಚರಣೆಯನ್ನು ನಡೆ-ನುಡಿಗಳಲ್ಲಿ ಜೀವನದುದ್ದಕ್ಕೂ ಅಳವಡಿಸಿಕೊಳ್ಳಬೇಕು. ಯಾವುದೇ ದೇವಲೋಕದಿಂದ ದೊರಕುವ ಪುಣ್ಯ, ಸತ್ಯ ನುಡಿಯುವಲ್ಲಿ ದೊರೆಯುತ್ತದೆ ಎಂದು ಶರಣರು ಹೇಳಿದ್ದಾರೆ.

"ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ!
ಸತ್ಯ ನುಡಿಯುವುದೇ ದೇವಲೋಕ, ಮಿಥ್ಯವ ನುಡಿಯುವುದೇ
ಮರ್ತ್ಯಲೋಕ
ಆಚಾರವೇ ಸ್ವರ್ಗ, ಅನಾಚಾರವೇ ನರಕ 4
ಕೂಡಲ ಸಂಗಮದೇವಾ ನೀವೆ ಪ್ರಮಾಣು"

ಶಿವಶರಣರು ಯಾರೋಡನೆ ಮಾತಾಡಿದರೂ ಆ ವ್ಯಕ್ತಿಗಳು ಸತ್ಯ ನಿಷ್ಠರಾಗಿದ್ದಲ್ಲಿಯೇ ಅವರು ತಮ್ಮ ವ್ಯವಹಾರ ನಡೆಸಿದರು. ಲೋಕದಲ್ಲಿ ಮಿಥ್ಯ ನುಡಿಯುವವರ ಸಂಖ್ಯೆಯೇ ಅಪಾರವಾಗಿದೆ. ಇಂತಹ ವಿರಳರಲ್ಲಿ ಸತ್ಯವಂತರನ್ನು, ಸಹಸ್ರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ ಎಂಬುದಾಗಿ ಶರಣರು ಗುರುತಿಸಿದ್ದಾರೆ. ಶಿವನು ಬೇರೆಯಲ್ಲ ಮತ್ತು ಸತ್ಯದ ನಿಲುವು ಬೇರೆಯಲ್ಲ ಎಂದಾಗಿದೆ. ಆದುದರಿಂದ ಸತ್ಯವೇ ಶಿವನು, ಶಿವನೇ ಸತ್ಯವಾಗಿದ್ದಾನೆ. ಇದನ್ನು ಷಣ್ಮುಖ ಶಿವಯೋಗಿಗಳು "ಸತ್ಯದ ಮನೆಯಲ್ಲಿ ಶಿವನರ್ಪಲ್ಲದೆ ಅಸತ್ಯದ ಮನೆಯಲ್ಲಿ ಶಿವನಿರ್ಪನೆ" ಎಂದು ನಿರೂಪಿಸುತ್ತಾರೆ. ಶಿವಶರಣೆ ಅಕ್ಕ ಮಹಾದೇವಿಯು "ಹುಸಿಯೆಂಬುದು ಹೊಲೆ ಶಿವಭಕ್ತರಿಗೆ ಹುಸಿಯೆಂಬುದುಂಟೆಯ್ಯಾ? ಎಂದು ಕೇಳುತ್ತಾಳೆ. ಜೆನ್ನಬಸವಣ್ಣನವರು ಡಾಂಭಿಕ ಭಕ್ತರನ್ನು ಮತ್ತು ಆಚರಣೆಗಳನ್ನು ದೂರುತ್ತಾ "ಸತ್ಯವಿಲ್ಲದ ಭಕ್ತಿಯ ಸಾವಿರ ವರುಷ ಮಾಡಿದರೇನು? ಎಂದು ದೂಷಿಸುತ್ತಾರೆ.

ಶಿವಶರಣರ ಜೀವನ ವೃತ್ತಿಯಲ್ಲಿ ಅವರು ಸತ್ಯವನ್ನು ಒಂದು ವ್ರತವೆಂದು ಪರಿಪಾಲಿಸಿದ್ದು ಕಂಡು ಬರುತ್ತದೆ. ರಾಘವಾಂಕನು "ಹರನೆಂಬುದೇ ಸತ್ಯ, ಸತ್ಯ ವೆಂಬುದೇ ಹರ" ಎಂಬ ವಾಕ್ಯದಿಂದ ಶಿವಶರಣರು ಆಚರಿಸಿದ ಮಾರ್ಗಗಳು ಸತ್ಯಮಾರ್ಗಕ್ಕೆ ಸಮೀಪವಾಗಿದೆ. ಸತ್ಯದ ವಿಚಾರದಲ್ಲಿ ಬಸವಣ್ಣನವರು ಹೀಗೆ ನುಡಿದಿದ್ದಾರೆ.

"ಎನ್ನ ನಡೆಯೊಂದು ಪರಿ; ಎನ್ನ ನುಡಿಯೊಂದು ಪರಿ;
ಎನ್ನೊಳಗೇನು ಶುದ್ಧವಿಲ್ಲ ನೋಡಯ್ಯಾ.
ನುಡಿಗೆ ತಕ್ಕ ನಡೆಯ ಕಂಡಡೆ 5
ಕೂಡಲ ಸಂಗಮದೇವನೊಳಗಿಪ್ಪನಯ್ಯಾ"

ನಡೆ-ನುಡಿಯಲ್ಲಿ ಮಾನವನ ವೈಚಾರಿಕತೆಯಲ್ಲಿ ಬಾಹ್ಯ ಮತ್ತು ಆಂತರಿಕ ವಿಚಾರದಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಮಾತಿನಂತೆ ನಡೆಯುವುದು ಸತ್ಯವಾಗಿದೆ. ಆದರೆ ಮಾತಿನಲ್ಲಿ ಹೇಳಿದ ಸತ್ಯ ಆಂತರಿಕವಾಗಿ ಸತ್ಯವಾದರೂ ಅಸತ್ಯವಾಗುತ್ತದೆ. ಈ ಎರಡು ಅಂತರಕ್ಕೆ ಕಾಣುವಂತಹವು. ಅಂತರಂಗ ಶುದ್ಧಿಯಿಂದ ನಡೆ-ನುಡಿಗಳ ಸಮನ್ವಯ ಸಿಗುತ್ತದೆ. ವ್ಯಕ್ತಿಯ ನೈತಿಕ ಸತ್ಯಗಳು ಜೀವನದ ನಡೆ ನುಡಿಯಲ್ಲಿ ಮೌಲ್ಯವಾಗಿದೆ. ವೈಯಕ್ತಿಕ ಸತ್ಯಕ್ಕಿಂತ ಸಾರ್ವತ್ರಿಕ ಸತ್ಯವು ಶ್ರೇಷ್ಠವಾಗಿದೆ. ಸತ್ಯದ ವ್ಯಕ್ತಿಯಲ್ಲಿ ಮೂಲ ಅಂಶಗಳು ನೆಲೆಗೊಂಡಾಗ ಅವರಿಗೆ

ಆತ್ಮ ತೃಪ್ತಿಯ ಅನುಭವವಾಗುತ್ತದೆ.

ಉಪನಿಷತ್ತುಗಳಲ್ಲಿ ಸತ್ಯದ ಮಹತ್ವವನ್ನು ವ್ಯಕ್ತಪಡಿಸಿದಂತೆ ವಚನಗಳು ಸಹಿತ ಸತ್ಯದ ಮಹತ್ವವನ್ನು ತಿಳಿಸುತ್ತವೆ. ವ್ಯಕ್ತಿಯು ನಿತ್ಯ ಜೀವನದಲ್ಲಿ ಯಥಾರ್ಥವಾದುದನ್ನು ನುಡಿಯಬೇಕು ಹಾಗೂ ಅದರಂತೆಯೇ ನಡೆಯಬೇಕು. ಹೀಗೆ ಸತ್ಯವು ಜೀವನದಲ್ಲಿ ಪೂರ್ಣವಾಗಿ ಬೆಳೆದು ಬಂದಾಗ ಸತ್ಯದ ಸಫಲತೆ ಲಭಿಸುತ್ತದೆ. ಸತ್ಯವನ್ನು ಆಚರಿಸಬೇಕೆಂಬುದು ನೀತಿ ಸಂಹಿತೆಯೆಂದು ತಿಳಿಯಲಾಗಿದೆ. ಸತ್ಯದ ಮಹತ್ವವನ್ನರಿತ ಶಿವಶರಣರು 'ನುಡಿದಂತೆ ನಡೆದರೆ, ಇದೆ ಜನ್ಮ ಕಡೆ' ಎಂದು ಸಾರಿದರು. ಆಡಿದ ಮಾತಿನಂತೆ ತಮ್ಮ ಸತ್ಯತೆಯನ್ನು ಅನುಸರಿಸುವುದು ಸಾಮಾಜಿಕ ಜೀವನದಲ್ಲಿ ಸತ್ಯವು ಸಾರ್ವತ್ರಿಕವಾಗಿದೆ ಎಂದು ಈ ಲೇಖನದಲ್ಲಿ ತೋರಿಸಲಾಗಿದೆ.

ಅಡಿಟಿಪ್ಪಣಿಗಳು :

1. ಹಿರೇಮಠ ಆರ್.ಸಿ. (ಸಂ.) : ಭಕ್ತಿಭಂಡಾರಿ ಬಸವಣ್ಣವರ ವಚನಗಳು, ವಚನ ಸಂಖ್ಯೆ–841, ಕ.ವಿ.ವಿ. ಧಾರವಾಡ, 1968.
2. ಶಂಕರ ನಾರಾಯಣ ಭಟ್ : ಹಿಂದೂ ಧರ್ಮದ ಪರಿಚಯ, ಪು. 288.
3. ಕೃಷ್ಣಮೂರ್ತಿ : ಧರ್ಮಜ್ಯೋತಿ, ಪು. 165.
4. ಹಿರೇಮಠ ಆರ್.ಸಿ. (ಸಂ.) : ಭಕ್ತಿಭಂಡಾರಿ ಬಸವಣ್ಣವರ ವಚನಗಳು, ವಚನ ಸಂಖ್ಯೆ–239, ಕ.ವಿ.ವಿ. ಧಾರವಾಡ, 1968.
5. ಅದೇ, ವಚನ ಸಂಖ್ಯೆ–30.

ಸ್ವಾಮಿ ವಿವೇಕಾನಂದರ ಪ್ರಕಾರ 'ಕರ್ಮಯೋಗ'

ಡಾ.ಬಿ.ಎಚ್.ಗುಜಲಾರ

ಸಹ ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕರ್ಮ ಎಂಬ ಶಬ್ದವು ಹುಟ್ಟಿರುವುದು ಸಂಸ್ಕೃತದ 'ಕೃ' ಮಾಡು ಎಂಬ ಧಾತುವಿನಿಂದ ಎಲ್ಲ ಕ್ರಿಯೆಯು ಕರ್ಮವೇ. ತತ್ವಶಾಸ್ತ್ರದಲ್ಲಿ ಈ ಶಬ್ದವನ್ನು ನಮ್ಮ ಪೂರ್ವ ಕರ್ಮಗಳ ಫಲವೆಂಬ ಅರ್ಥದಲ್ಲಿಯೂ ಕೆಲವು ಸಂದರ್ಭಗಳಲ್ಲಿ ಪ್ರಯೋಗ ಮಾಡಿರುವುದಿಲ್ಲ. ಆದರೆ ಕರ್ಮಯುಗದಲ್ಲಿ 'ಕರ್ಮ' ಎಂದರೆ ಕ್ರಿಯೆ ಎಂಬ ಅರ್ಥದಲ್ಲಿ ಮಾತ್ರವೇ ಆ ಶಬ್ದದ ಪ್ರಯೋಗ. ಮನುಷ್ಯನ ಗುರಿ ಜ್ಞಾನವನ್ನು ಪಡೆಯುವುದು ಅದೇ ಅವನ ಆದರ್ಶ ಮನುಷ್ಯನ ಲಕ್ಷ್ಯ ಸುಖವಲ್ಲ. ಜ್ಞಾನ ಸಂತೋಷವೆಂಬ ಇವು ಪರ್ಶ ಸುಖವೇ ನಮ್ಮ ಲಕ್ಷವೆಂದು ಎನಿಸುವುದೇ ತಪ್ಪು ಅದೇ ನಮ್ಮ ಜೀವನದ ಗುರಿ ಎಂದು ತಿಳಿಯುವುದೆ ತಪ್ಪು. ಅದೇ ಎಲ್ಲ ಕ್ಲೇಷಗಳಿಗೆ ಕಾರಣ. ಆದ್ದರಿಂದ ಸ್ವಾಮಿ ವಿವೇಕಾನಂದವರು ಈ ವಿಷಯಗಳನ್ನು ತಮ್ಮದೇ ಆದ ದೃಷ್ಟಿಯಲ್ಲಿ ಯಾವ ಜನತೆಗೆ ಹೇಗೆ ದಾರಿದೀಪವಾಗಬೇಕೆಂಬ ತಿಳಿಸಿದ್ದಾರೆ ಮತ್ತು ಅವರ ವಿಚಾರಗಳು ಈಗ ಎಷ್ಟು ಪ್ರಸ್ತುತ ಎಂದು ತಿಳಿಸುವುದೆ ನನ್ನ ಪ್ರಬಂಧದ ಗುರಿಯಾಗಿದೆ.

'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'
(ಕರ್ಮ ಮಾಡಲು ನಿನಗೆ ಅಧಿಕಾರವೇ ವಿನಾ ಎಂದಿಗೂ ಕರ್ಮಫಲಕ್ಕಲ್ಲ)

ಕರ್ಮ ಎಂಬ ಪದವು ಸಂಸ್ಕೃತದ 'ಕೃ' ಎಂಬ ಅಕ್ಷರದಿಂದ ಉಂಟಾಗಿರುವುದು 'ಕೃ' ಎಂದರೆ ಮಾಡು ಎಂದು ಅರ್ಥವನ್ನು ಕೊಡುತ್ತದೆ. ಈ ಅರ್ಥದಲ್ಲಿ ಎಲ್ಲ ಬರೆಯ ಕ್ರಿಯೆಗಳು ಕರ್ಮವೇ. ತತ್ವಶಾಸ್ತ್ರದಲ್ಲಿ ಈ ಶಬ್ದವನ್ನು ನಮ್ಮ ಪೂರ್ವ ಕರ್ಮಗಳ ಫಲ ಎಂದು ಬಳಸಿರುವುದು ಇದೆ. ಆದರೆ ಕರ್ಮಯೋಗದಲ್ಲಿ 'ಕರ್ಮ' ಎಂದರೆ 'ಕ್ರಿಯೆ' ಎಂಬ ಅರ್ಥದಲ್ಲಿ ಮಾತ್ರವೇ ಆ ಶಬ್ದದ ಉಪಯೋಗ ಮಾಡಲಾಗಿದೆ. ಅಂದರೆ ಕರ್ಮ ಎಂದರೆ ಫಲವನ್ನುಂಟುಮಾಡು ಪ್ರತಿಯೊಂದು ಕ್ರಿಯೆ ಎಂದಾಯಿತು. ಆದುದರಿಂದ ಕರ್ಮ ನಿಯಮವೆಂದರೆ ಕಾರಣ ನಿಯಮವೆಂದು ಅರ್ಥ.

ಮನುಷ್ಯನು ಕರ್ಮವನ್ನು ಬಗೆಬಗೆಯ ಉದ್ದೇಶಗಳಿಂದ ಮಾಡುವನ್ನು ಉದ್ದೇಶವಿಲ್ಲದ ಕರ್ಮವಿಲ್ಲ ಕೆಲವರಿಗೆ ಕುರ್ಚಿಬೇಕು ಕೆಲವರಿಗೆ ದುಡ್ಡು ಬೇಕು, ಕೆಲವರಿಗೆ ಅಧಿಕಾರಬೇಕು. ಅಂಥವರು ಅದಕ್ಕಾಗಿ ಕರ್ಮವನ್ನು ಮಾಡುವರು ಇನ್ನು ಕೆಲವರು ಸ್ವರ್ಗ ನರಕಗಳ ಪರಿಕಲ್ಪನೆಗಳನ್ನು ಮನದಲ್ಲಿ ಇಟ್ಟುಕೊಂಡು ಕೆಲಸವನ್ನು ಮಾಡುವರು.

ಕರ್ಮಯೋಗದ ಪ್ರಕಾರ ಯಾವ ಕರ್ಮವಾದರೂ ಆಗಲಿ ಅದು ತನ್ನ ಫಲವನ್ನು ಕೊಡದೆ ನಾಶವಾಗುವುದಿಲ್ಲ. ಈ ಪ್ರಪಂಚದಲ್ಲಿ ಯಾವ ಶಕ್ತಿಯೂ ಅದನ್ನು ತಡೆಹಿಡಿಯಲು ಸಾಧ್ಯವಿಲ್ಲ. ಕರ್ಮಯೋಗವೆಂದರೇನು? ಕರ್ಮರಹಸ್ಯದ ಪರಿಜ್ಞಾನ ಪ್ರಪಂಚದ ಘಟಕಗಳಿಗೆ ಸಿಕ್ಕಿದ ಮೇಲೆ ಬೇಕಾದಷ್ಟು ಪೆಟ್ಟು ತಂದ ಅನುಭವನದ ಮೇಲೆ ಪ್ರಪಂಚ ಎಂದರೇನು? ಎಂದು ಎಂಬುದನ್ನು ಅರಿಯುವುದಲ್ಲ ಕರ್ಮಯೋಗವು ಕರ್ಮರಹಸ್ಯವನ್ನು ಕರ್ಮ ಮಾಡುವ ರೀತಿಯನ್ನು ಸಾಮರ್ಥ್ಯವನ್ನು ಭೋದಿಸುವುದು.

ಅನವರತ ಕರ್ಮದಲ್ಲಿ ನಿರತನಾಗಿರು ಆದರೆ ಕರ್ಮದಲ್ಲಿ ಆಸಕ್ತನಾಗಬೇಡ ನಿಮ್ಮ ಮನಸ್ಸು ಯಾವಾಗಲು ಸ್ವತಂತ್ರ್ಯವಾಗಿರಲು ಯಾವುದಕ್ಕೂ ಅಂಟಿಕೊಳ್ಳಬೇಡಿ. ಕರ್ಮಯೋಗವು ಮೊದಲು ಸ್ವಾರ್ಥಪ್ರವೃತ್ತಿಯನ್ನು ನಿಗ್ರಹಿಸಿ ಅದರ ನಿಗ್ರಹ ಸಾಧ್ಯವಾದ ಮೇಲೆ ಪುನ: ಅದು ಸ್ವಾರ್ಥಕತೆಗೆ ಹೋಗದಂತೆ ನೋಡಿಕೊಳ್ಳಿ ಎಂಬುದನ್ನು ತಿಳಿಸುತ್ತದೆ. ಕರ್ಮಯೋಗಿಯ ಗುರು ಎಲ್ಲಾ ಜೀವಿಗಳ ಗುರಿಯಂತೆಯೇ ಮುಕ್ತನಾಗುವುದು ಅವನು ಇದನ್ನು ನಿಸ್ವಾರ್ಥದ ಮೂಲಕ ಸಾಧಿಸುತ್ತಾನೆ. ಯಾವುದು ಸ್ವಾರ್ಥವೋ ಅದು ಅಧರ್ಮ ಯಾವುದು ನಿಸ್ವಾರ್ಥವೋ ಅದು ಧರ್ಮ.

ನಾವು ಬಿಡುವಲ್ಲದೆ ಕರ್ಮವನ್ನು ಆಚರಿಸುತ್ತ ಇರಬೇಕೆಂಬುದನ್ನು ನಮ್ಮ ಎಲ್ಲ ಕರ್ಮಗಳು ಸ್ವಭಾವತ: ಶುಭಾಶುಭಗಳಿಂದ ಕೂಡಿರುವುವೆಂಬುದನ್ನು ಭಗವದ್ಗೀತೆಯಲ್ಲಿ ನಾವು ಓದುತ್ತೇವೆ. ಸರ್ವದಾ ನಾವೂ ಕರ್ಮಾಚರಣೆಯಲ್ಲಿರಬೇಕೆಂಬುದು ಏಕೆ? ಕರ್ಮ ಬಂಧನದ ಫಲಗಳಿಗೆ ಕೊನೆಯೇ ಇಲ್ಲವೇ? ಬಂದನವನ್ನುಂಟುಮಾಡುವ ಕರ್ಮ ಸ್ವಭಾವದಿಂದ ಬಿಡುಗಡೆ ಹೊಂದಲು

ಗೀತೆಯಲ್ಲಿ ಹೇಳಿದೆ. ನಾವು ಮಾಡುವ ಅನುಸಕ್ತನಾಗಿದ್ದರೆ ಅದು ಆತ್ಮನನ್ನು ಬಂದಿಸುವುದಿಲ್ಲ ಎಂಬುದು ಸರ್ವದಾ ಕರ್ಮವನ್ನು ಆಚರಿಸುತ್ತಿರಬೇಕು ಆದರೆ ಕರ್ಮಕ್ಕಾಗಲಿ ಅದರ ಫಲಕ್ಕಾಗಲಿ ಕಟ್ಟು ಬೀಳಕೂಡದು ಎಂಬುದೆ·ಗೀತೆಯ ಪ್ರಧಾನ ಕೇಂದ್ರ ಭಾವ ಸಂಸ್ಕಾರ ಎಂದರೆ ನಮ್ಮಲ್ಲಿ ಅಡಗಿರುವ ಪ್ರವೃತ್ತಿ (ನಿರಂತರವಾಗಿ ಎಳುವ ಅಲೆಗಳು).

ಪ್ರತಿಯೊಂದು ಯೋಗವು ಸಾಧಕನನ್ನು ಕೊನೆಯಲ್ಲಿ ಒಂದೇ ಸ್ಥಾನಕ್ಕೆ ಕೊಂಡೊಯ್ಯುವುದರಿಂದ ಅವುಗಳ ಫಲ ಒಂದೇ ಎಂಬುದನ್ನು ಮರೆಯಕೂಡದು. ಬುದ್ಧನು ಧ್ಯಾನದಿಂದಲೂ ಕ್ರಿಸ್ತನು ಭಕ್ತಿಯಿಂದಲೂ ಯಾವ ಪದವಿಯನ್ನು ಪಡೆದರೋ ಆ ಸ್ಥಿತಿಯನ್ನು ಕರ್ಮದ್ವಾರ ಎಂದು ಕರೆಯಬಹುದು. ಕರ್ಮಗಳನ್ನು ಮೊದಲು ಆದರೆ ಕರ್ಮವಾಗಲಿ ಅವರ ಅಲೋಚನೆಯಾಗಲಿ ನಿಮ್ಮ ಮನಸ್ಸಿನ ಮೇಲೆ ಪ್ರಬಲವಾದ ಸಂಸ್ಕಾರ ಮುದ್ರೆಯನ್ನೊತ್ತದಂತೆ ನೋಡಿಕೊಳ್ಳಿ ಏಕೆಂದರೆ ಯಾವ ಕಾರ್ಯದಲ್ಲಿ ನಮಗೆ ಆಸಕ್ತಿ ಉಂಟಾಗುವುದೋ ಆ ಕರ್ಮದ ಸಂಸ್ಕಾರವು ದೀರ್ಘಕಾಲ ನಿಲ್ಲುತ್ತದೆ. ಆದ್ದರಿಂದ ನಮ್ಮ ಬಂದನಕ್ಕೆ ಆಸಕ್ತಿಯ ಕಾರಣ ಆದುದರಿಂದ ಅನಾಸಕ್ತಿವಾಗು ಈ ಪೃಥ್ವಿಯಲ್ಲಿ ನಿನೋಬ್ಬ ಆಗುಂತುಕನಂತೆ ಸತತವೂ ಕಾರ್ಯ ಮಾಡು ಈ ಪ್ರಪಂಚಕ ಪದಾರ್ಥಗಳಿಗೆ ಕಟ್ಟು ಬೀಳಬೇಡ. ಏಕೆಂದರೆ ಬಂಧನವನ್ನುವುದು ಘೋರವಾದುದು. ಈ ಪ್ರಪಂಚ ನಮ್ಮ ವಾಸಸ್ಥಾನವಲ್ಲ. ನಮ್ಮ ಯಾತ್ರೆಯಲ್ಲಿ ನಾವು ದಾಟಬೇಕಾದ ಅನೇಕ ಸ್ಥಳಗಳಲ್ಲಿ ಇದು ಒಂದು ಸಾಂಖ್ಯದ ಈ ಮಹಾವಾಕ್ಯವನ್ನು ನೆನಬೇಡ ಪುರುಷನಿಗಾಗಿ ಪ್ರಕೃತಿಯ ಹೊರಟು ಪ್ರಕೃತಿಗಾಗಿ ಪುರುಷನಲ್ಲಿ ಪ್ರಕೃತಿ ಎಂಬುದು ನಾವು ಓದಬೇಕಾದ ಒಂದು ಪುಸ್ತಕ ಇದ್ದಂತೆ ಓದಿದ ಬಳಿಕ ಅವರ ಪ್ರಯೋಜನವಿಲ್ಲ ಹಾಗೆಯೇ ಈ ಪ್ರಪಂಚವನ್ನು ನಾವು ನೋಡದೆ ಅದರೊಂದಿಗೆ ಭಾವವನ್ನು ಕಲ್ಪಿಸಿಕೊಂಡಿದ್ದಾನೆ. ಪ್ರಕೃತಿಗಾಗಿ ಆತ್ಮವಿರುವುದು ಎಂದು ವಾಸಿಸಿರುವವು ಪ್ರಕೃತಿಯಲ್ಲಿ ಆಸಕ್ತರಾಗುತ್ತಿದ್ದಾನೆ ಈ ಆಸಕ್ತ ಬಂದೊಡನೆ ಆತ್ಮನಲ್ಲಿ ಪ್ರಬಲ ಸಂಸ್ಕಾರ ಉಂಟಾಗುತ್ತದೆ. ಇದು ನಮ್ಮನ್ನು ಬಂದಿರುತ್ತದೆ ಮತ್ತು ಗುಲಾಮರಂತೆ ಕೆಲಸ ಮಾಡಲು ಹೆಚ್ಚುತ್ತದೆ. ನೀನು ಸ್ವಾಮಿಯಂತೆ ಕರ್ಮ ಮಾಡು. ಗುಲಾಮನಂತೆ ಮಾಡಬೇಡ ಅನವರತವು ಕಾರ್ಯಮಾಡು ಆದರೆ ಜೀತಗಾರನಂತೆ ದುಡಿಯುವದು.

ಶ್ರೀ ಕೃಷ್ಣನು ಗೀತೆಯಲ್ಲಿ ಹಾಗೆ ಹೇಳುತ್ತಾನೆ. ಅರ್ಜುನ ನನ್ನದನ್ನು ನೋಡು ನಾನೊಂದುಕ್ಷಣ ಮಾತ್ರ ಕರ್ಮ ಮಾಡುವುದನ್ನು ನಿಲ್ಲಿವಾದರೂ ಈ ವಿಶ್ವಾಸ ನಾಶವಾಗುತ್ತದೆ. ಈ ಕರ್ಮದಿಂದ ನನಗೆ ನಾನುಬೇಕು? ಅವರು ನಾನು ಕರ್ಮವನ್ನು ಮಾಡುತ್ತೇನೆ. ಏಕೆಂದರೆ ಈ ಪ್ರಪಂಚವನ್ನು ನಾನು ಪ್ರೀತಿಸುತ್ತೇನೆ.

ಈ ವಿಶ್ವದ ಮೇಲಣ ಆಸೆಯನ್ನು ಬಿಟ್ಟು ಬಿಡುವುದು ಅತ್ಯಂರ ಪ್ರಯಾಸದ ಕಾರ್ಯ. ಹಾಗೆ ಬಿಟ್ಟುಬಿಡುವ ಸ್ಥಿತಿಯನ್ನು ಮುಟ್ಟುವವರು ಅತಿ ವಿರಳ. ಈ ತ್ಯಾಗಬುದ್ಧಿ ಪ್ರಾಪ್ತಿಗೆ ನಮ್ಮ ಶಾಸ್ತ್ರಗಳಲ್ಲಿ ಉಕ್ತವಾಗಿರುವ ಎರಡು ದಾರಿಗಳುಂಟು. ಒಂದು 'ನೇತಿ–ನೇತಿ– 'ಇದಲ್ಲ,ಇದಲ್ಲ' ಎಂಬುದು. ಮತ್ತೊಂದು 'ಇತಿ. ಇತ' – 'ಇದು, ಇದು' ಎಂಬುದು. ಮೊದಲನೆಯದು ನಿಷೇಧಾತ್ಮಕ ಮಾರ್ಗ; ಎರಡನೆಯದು ಭಾವಾತ್ಮಕ ಮಾರ್ಗ. ಅವುಗಳಲ್ಲಿ ಮೊದಲನೆಯ ದಾರಿಯು ಅತ್ಯಂತ ಕಠಿಣವಾದುದು. ಸುಮ್ಮನೆ ಎದ್ದು ನಿಂತು "ಇಲ್ಲ, ಇದು ನನಗೆ ಬೇಡ" ಎಂದು ಹೇಳತಕ್ಕ ಪ್ರಬಲವಾದ, ಅಸಾಮಾನ್ಯವಾದ ಮನಸ್ಸುಳ್ಳ ಮತ್ತು ಅತಿ ಮಹತ್ತಾದ ಇಚ್ಛಾಶಕ್ತಿಯಿಂದ ಕೂಡಿದ ಮನುಷ್ಯರಿಗೆ ಮಾತ್ರ ಈ ದಾರಿ ಸಾಧ್ಯ. ಅಂತಹವರ ತನುಮತಗಳು ಅವರ ಇಚ್ಛಾನುವರ್ತಿಗಳಾಗಿರುತ್ತವೆ. ಆದ್ದರಿಂದ ಅವರ ಇಷ್ಟ ಸಿದ್ಧಿಸುತ್ತದೆ. ಆದರೆ ಅಂತಹವರು ನಿಶ್ಚಿತವಾಗಿಯೂ ಅಪೂರ್ವ. ಆದುದರಿಂದ ಮನುಷ್ಯಕೋಟಿಯಲ್ಲಿ ಹೆಚ್ಚು ಜನರಿಗೆ ಯೋಗ್ಯ ಮಾರ್ಗ, ಬಂಧನಗಳನ್ನು ಬಿಡಿಸುವುದಕ್ಕೆ ಬಂಧನಗಳನ್ನೇ ಬಳಸಿಕೊಳ್ಳುವ ಎರಡನೆಯ ಮಾರ್ಗ. ಇದು ಕೂಡ ಒಂದು ಬಗೆಯ ತ್ಯಾಗಮಾರ್ಗ: ಇದು ಪದಾರ್ಥಗಳನ್ನರಿತು ಅವುಗಳನ್ನು ಉಪಭೋಗಿಸಿದ ನಂತರ, ಅವುಗಳ ಕ್ಷಣಿಕ ಮತ್ತು ಉಪಾಧಿಬದ್ಧವಾದ ಸ್ವಭಾವದ ಜ್ಞಾನವನ್ನು ಅನುಭವದ ಮೂಲಕ ಪಡೆದು, ಕೊನೆಗೆ ಮನಸ್ಸು ಅವೆಲ್ಲವನ್ನೂ ಬಿಟ್ಟು ಅನಾಸಕ್ತವಾಗುವ ಮಂದಗತಿಯ ಮಾರ್ಗ. ಮೊದಲನೆಯದಾದ 'ನೇತಿ' ಮಾರ್ಗದಲ್ಲಿ ಅನಾಸಕ್ತಿ ಲಾಭವು ವಿಚಾರದಿಂದಲೂ, ಎರಡನೆಯದರಲ್ಲಿ ಕರ್ಮದಿಂದಲೂ ಮತ್ತು ಅನುಭವದಿಂದಲೂ ಉಂಟಾಗುತ್ತದೆ. ಮೊದಲನೆಯದು ಜ್ಞಾನ ಮಾರ್ಗ, ಯಾವ ಕಾರ್ಯವನ್ನೂ ಮಾಡುವುದಿಲ್ಲವೆಂದು ಹೇಳುವುದು ಅವರ ಲಕ್ಷಣ. ಎರಡನೆಯದು ಕರ್ಮಮಾರ್ಗ. ಅದರಲ್ಲಿ ಕರ್ಮಕ್ಕೆ ವಿರಾಮವೇ ಇಲ್ಲ. ಭಗವದ್ಗೀತೆಯಲ್ಲಿ ಈ ಎರಡು ವಿಧಾನಗಳೂ ಮನೋಹರವಾಗಿ ಉಕ್ತವಾಗಿದೆ:

ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವ:
ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ

"ಯಾವಾತನಿಗೆ ಆತ್ಮನೇ ಕ್ರೀಡಾ ವಿಷಯವೋ, ಆತ್ಮನಲ್ಲಿಯೇ ಯಾವಾತನಿಗೆ ತೃಪ್ತಿಯೋ, ಆತ್ಮನಲ್ಲಿಯೇ ಯಾವಾತ ನಿಗೆ ಸಂತುಷ್ಟಿಯೋ ಆತನಿಗೆ ಕರ್ಮವಾವುದೂ ಇಲ್ಲ." ಉಳಿದವರು ಕರ್ಮ ಮಾಡಲೇಬೇಕು. ತನ್ನ ಪ್ರಕೃತಿಗೆ ಅನುಸಾರವಾಗಿ ತಡೆಯಿಲ್ಲದೆ ಹರಿದುಬರುವ ಹೊಳೆಯು ಒಂದು ಮಡುವಿಗೆ ಧುಮುಕಿ, ಅಲ್ಲಿ ಸುಳಿಯಾಗಿ ಕೊಂಡಕಾಲ ಸುತ್ತಿ ಸುತಿ, ಮರಳಿ ತಡೆಯಿಲ್ಲದೆ ಹರಿದುಹೋಗುವ ಬಂಧಮುಕ್ತ ನವಪ್ರವಾಹವಾಗಿ ಅಲ್ಲಿಂದ ಹೊರಗೆ ಬರುತ್ತದೆ. ಪ್ರತಿಯೊಬ್ಬ ಮನುಷ್ಯನ ಜೀವನವೂ ಆ ಪ್ರವಾಹದಂತೆ. ದೇಶಕಾಲ ನಿಮಿತ್ತಗಳಿಂದ ಕೂಡಿದ ಪ್ರಪಂಚವೆಂಬ ಸುಳಿಯಲ್ಲಿ ಸಿಲುಕಿ, ಅಲ್ಲಿ "ನನ್ನ ತಂದೆ, ನನ್ನ ಒಡಹುಟ್ಟಿದವ, ನನ್ನ ಹೆಸರು, ನನ್ನ ಖ್ಯಾತಿ" ಎಂದು ಮುಂತಾಗಿ ಕೂಗಿಕೊಳ್ಳುತ್ತ, ಕೊಂಡ ಸುತ್ತಿ, ಕೊನೆಗೆ ಅದರಿಂದ ಹೊರಗೆ ಬಂದು, ತನ್ನ ಸಹಜ ಸ್ಥಿತಿಯನ್ನು ಪಡೆಯುತ್ತದೆ. ಒಟ್ಟು ವಿಶ್ವವೇ ನಿಜವಾಗಿಯೂ ಈ ಪ್ರಕಾರ ಮಾಡುತ್ತಿದೆ. ಅರಿತೋ, ಅರಿಯದೆಯೋ ನಾವೆಲ್ಲರೂ ಈ ಪ್ರಪಂಚವೆಂಬ ಕನಸಿನಿಂದ ಪಾರಾಗಲು ಕಾರ್ಯ ಮಾಡುತ್ತಿದ್ದೇವೆ. ಮನುಷ್ಯನಿಗೆ ಪ್ರಾಪಂಚಿಕಾನುಭವ ಏತಕ್ಕೆಂದರೆ, ಈ ಸುಳಿಯಿಂದ ತಪ್ಪಿಸಿಕೊಳ್ಳುವ ಶಕ್ತಿಯನ್ನು ಗಳಿಸುವುದಕ್ಕಾಗಿ.

ಕರ್ಮಯೋಗ ಎಂದರೇನು? ಅದು ಕರ್ಮರಹಸ್ಯದ ಜ್ಞಾನ. ಇಡೀ ವಿಶ್ವವೇ ಕರ್ಮಮಾಡುವುದನ್ನು ನಾವು ನೋಡುತ್ತೇವಷ್ಟೆ ಅದು ಹಾಗೆ ಮಾಡುವುದು ಏತಕ್ಕೋಸ್ಕರ? ಮುಕ್ತಿ ಪ್ರಾಪ್ತಿಗಾಗಿ, ಸ್ವಾತಂತ್ರ್ಯ ಪ್ರಾಪ್ತಿಗಾಗಿ. ತಿಳಿದೋ ತಿಳಿಯದೆಯೋ ಯಥಾರ್ಥವಾ

ಗಿಯೂ, ಬಲು ಸಣ್ಣದಾದ ಪರಮಾಣು ಮೊದಲುಗೊಂಡು ಅತ್ಯಂತ ಮಹತ್ತಾದುದರವರೆಗೆ ಪ್ರತಿಯೊಂದೂ ಅದಕ್ಕಾಗಿಯೇ ಕರ್ಮ ಮಾಡುತ್ತದೆ. ಅವೆಲ್ಲವೂ ಮನಸ್ಸು, ದೇಹ, ಆತ್ಮ ಇವುಗಳಿಗೆ ಸ್ವಾತಂತ್ರ್ಯವನ್ನು ದೊರಕಿಸಿ ಕೊಡುವ ಒಂದೇ ಒಂದು ಉದ್ದೇಶದಿಂದ ಕರ್ಮಮಾಡುತ್ತಿವೆ. ಸಂಕ್ಷೇಪವಾಗಿ ಹೇಳುವುದಾದರೆ, ಈ ಉಪಾಧಿಬದ್ಧವಾದ ಜೀವನದಿಂದ ತಪ್ಪಿಸಿಕೊಂಡು ಪರಮ ಸ್ವಾತಂತ್ರ್ಯವನ್ನು ಪಡೆಯುವದಕ್ಕಾಗಿ ಸಮಸ್ತ ಭೂತಗಳೂ ಸಂತತವೂ ಪ್ರಯತ್ನಪಡುತ್ತಿವೆ. ಸೂರ್ಯ, ಚಂದ್ರ, ಭೂಮಿ, ಗ್ರಹಗಳು ಇವೆಲ್ಲವೂ ಆ ಬಂಧನದಿಂದ ಬಿಡಿಸಿಕೊಳ್ಳಲು ಓಡುತ್ತಿವೆ.

ಕರ್ಮಯೋಗ ತಿಳಿಸುವುದೇನೆಂದರೆ, ಈ ಸ್ವಾರ್ಥದ ಕೈಯನ್ನು ನೀಡುವ ಪ್ರವೃತ್ತಿಯನ್ನು ಮೊದಲು ನಾಶಮಾಡು. ತರುವಾಯ ಸ್ವಾರ್ಥ ನಿರೋಧ ಶಕ್ತಿ ನಿನಗಿರುವಾಗ, ಮನಸ್ಸನ್ನು ಗಟ್ಟಿಮಾಡಿಕೊಂಡು ಮರಳಿ ಅದು ಸ್ವಾರ್ಥವೆಂಬ ಅಲೆಯೊಳಕ್ಕೆ ಹೋಗಲು ಅವಕಾಶವನ್ನು ಕೊಡದಿರು. ಅಮೇಲೆ ನೀನು ಪ್ರಪಂಚ ಯಾತ್ರೆಯನ್ನು ಮಾಡುತ್ತ ಯಥಾಶಕ್ತಿ ಕರ್ಮವನ್ನಾಚರಿಸು. ಆಗ ನೀನೆಲ್ಲಿಗೆ ಹೋಗಬಹುದಾದರೂ, ನೀನು ಯಾವುದನ್ನು ಮಾಡಬಹುದಾದರೂ ನಿನಗೆ ಪಾಪದ ಸೋಂಕಿರದು. ಕಮಲ ಪತ್ರವು ಸಂತತವೂ ನೀರಿನಲ್ಲಿದ್ದರೂ ನೀರು ಅದನ್ನು ಮುಟ್ಟದು, ಅದಕ್ಕೆ ಸೋಂಕದು. ಆಗ ಅದರಂತೆ ಪ್ರಪಂಚದಲ್ಲಿ ನೀನು ಇರುವೆ. ಕರ್ಮಯೋಗದಲ್ಲಿ, ಮನಸ್ಸಿನ ಈ ಬಗೆಯ ಸ್ಥಿತಿಗೆ ವೈರಾಗ್ಯ ಅಥವಾ ಅನಾಸಕ್ತಿ ಎಂದು ಹೆಸರು.

ಗ್ರಂಥಋಣ: 1) ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ ಭಾಗ–6.
2) ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ ಭಾಗ–6.

ಸಾಮಾಜಿಕ ವಿಜ್ಞಾನಿ ಷರೀಫರು

ಡಾ. ಡಿ. ಕುಮಾರ್
ಉಪನ್ಯಾಸಕರು, ಗಾಂಧಿಭವನ, ಮಾನಸಗಂಗೋತ್ರಿ, ಮೈಸೂರು. kumardmysore@gmail.com

ಭಾರತವೂ ಸಿದ್ಧ ಪುರುಷರ ನಾಡೆಂದು ಸ್ವದೇಶ ಹಾಗೂ ವಿದೇಶಗಳಲ್ಲಿ, ಖ್ಯಾತಿ ಪಡೆದಿದೆ. ಇಲ್ಲಿ ಅನಾದಿ ಕಾಲದಿಂದಲೂ ಋಷಿಗಳು, ಮುನಿಗಳು, ಯೋಗಿಗಳು, ತ್ಯಾಗಿಗಳು, ಸಾಧು ಸತ್ಪುರುಷರು, ಜೀವನ್ಮುಕ್ತರಾಗಿ ಬಾಳಿ ಬದುಕಿ, ತತ್ವಸತ್ವಗಳನ್ನು ತೋರಿ ಈ ನೆಲ ಜಗತ್ತಿನಲ್ಲಿ ಪವಿತ್ರಗೊಳಿಸಿದ್ದುಂಟು. ಪಾಶ್ಚಾತ್ಯರು ಕೂಡ ಭಾರತವು ಮಾನವ ಕುಲದ ಮಂದಿರವಾಗಿದೆ ಎಂದು ಹೊಗಳುತ್ತಿದ್ದಾರೆ.

ಇಂತಹ ಪುಣ್ಯ ಭೂಮಿಯಲ್ಲಿ ಮಹಿಮಾ ಪುರುಷರೆಂದು, ತ್ರಿಕಾಲ ಜ್ಞಾನಿಗಳೆಂದು ವರಕವಿಗಳೆಂದು, ಎಲ್ಲಕ್ಕೂ ಮಿಗಿಲಾಗಿ ಮಹಾ ಮಾನವತಾವಾದಿಗಳೆಂದು ಕರ್ನಾಟಕದಲ್ಲಿ ಪ್ರಸಿದ್ಧರಾಗಿ ಹೋದ ಶಿಶುನಾಳ ಷರೀಫರು ಒಬ್ಬರು.

ಷರೀಫರು ಹುಟ್ಟಿದ್ದು ಮುಸಲ್ಮಾನನಾಗಿ, ಬೆಳೆದುದ್ದು ಹಿಂದೂವಾಗಿ, ಕೊನೆಗೆ ವೀರಶೈವನಾಗಿ ನಾಶ ಹೊಂದುತ್ತಾರೆ (ಇಹಲೋಕ ತ್ಯಜಿಸಿದರು) ಷರೀಫರು ಜನ್ಮತಾಳಿ, ಬಾಳಿ ಜೀವನ್ಮುಕ್ತರಾದ ಕಾಲ ಹತ್ತೊಂಭತ್ತನೆಯ ಶತಮಾನ. ಹಾಗೂ ಒಂದೆಡೆ ರಾಜ್ಯ ನೈತಿಕ ಶಕ್ತಿಯ ಸಹಾಯದಿಂದ, ಕ್ರಿಶ್ಚಿಯನ್ ಧರ್ಮ ಹರಡಲು ಪ್ರಯತ್ನಿಸಿದರೆ, ಹಾಗೂ, ಸಮಾಜದಲ್ಲಿನ ನಾನಾ ಮತ, ಸಂಪ್ರದಾಯ, ಜಾತಿ–ಉಪಜಾತಿ, ಭೇದ ಭಾವಗಳು, ಬೆಳಕು, ಹಿಂದೂ ಧರ್ಮದ ಆದರ್ಶಗಳು ಮಾಯವಾಗಿದ್ದವು. ಮಂತ್ರ–ತಂತ್ರ ಜನರನ್ನು ಬೆರಗುಗೊಳಿಸಿ ಹಣಸಂಪಾದನೆ ಮಾಡುತ್ತಿದ್ದರು. ದೇವರು, ಧರ್ಮದ ಹೆಸರಿನಲ್ಲಿ ಬಾಹ್ಯಾಡಂಬರ, ಮೇಲು ಕೀಳು ಭಾವನೆ ತುಂಬಿಕೊಂಡಿತು. ಮಾನವೀಯ ಮೌಲ್ಯಗಳನ್ನು ಜನರು ಮರೆತಿದ್ದರು. ಇಂತಹ ಸಮಯದಲ್ಲಿ ಷರೀಫರು ಗೊಡ್ಡು ಆಚರಣೆ, ಮೂಢನಂಬಿಕೆಗಳ ವಿರುದ್ಧ ಸಮರ ಸಾರಿದರು.

ಭಾರತವೂ ಸಿದ್ಧ ಪುರುಷರ ನಾಡೆಂದು ಸ್ವದೇಶ ಹಾಗೂ ವಿದೇಶಗಳಲ್ಲಿ, ಖ್ಯಾತಿ ಪಡೆದಿದೆ. ಇಲ್ಲಿ ಅನಾದಿ ಕಾಲದಿಂದಲೂ ಋಷಿಗಳು, ಮುನಿಗಳು, ಯೋಗಿಗಳು, ತ್ಯಾಗಿಗಳು, ಸಾಧು ಸತ್ಪುರುಷರು, ಜೀವನ್ಮುಕ್ತರಾಗಿ ಬಾಳಿ ಬದುಕಿ, ತತ್ವಸತ್ವಗಳನ್ನು ತೋರಿ ಈ ನೆಲ ಜಗತ್ತಿನಲ್ಲಿ ಪವಿತ್ರಗೊಳಿಸಿದ್ದುಂಟು. ಪಾಶ್ಚಾತ್ಯರು ಕೂಡ ಭಾರತವು ಮಾನವ ಕುಲದ ಮಂದಿರವಾಗಿದೆ ಎಂದು ಹೊಗಳುತ್ತಿದ್ದಾರೆ.

ಇಂತಹ ಪುಣ್ಯ ಭೂಮಿಯಲ್ಲಿ ಮಹಿಮಾ ಪುರುಷರೆಂದು, ತ್ರಿಕಾಲ ಜ್ಞಾನಿಗಳೆಂದು ವರಕವಿಗಳೆಂದು, ಎಲ್ಲಕ್ಕೂ ಮಿಗಿಲಾಗಿ ಮಹಾ ಮಾನವತಾವಾದಿಗಳೆಂದು ಕರ್ನಾಟಕದಲ್ಲಿ ಪ್ರಸಿದ್ಧರಾದವರಲ್ಲಿ ಶಿಶುನಾಳ ಷರೀಫರೂ ಒಬ್ಬರು.

ಉತ್ತರ ಕರ್ನಾಟಕದ ಇಂದಿನ ಹಾವೇರಿ ಜಿಲ್ಲೆ ಶಿಗ್ಗಾವಿ ತಾಲ್ಲೂಕಿನ ಶಿಶುನಾಳದಲ್ಲಿ ದೇವಕಾರ ಮನೆತನದ ಇಮಾಮ್ ಹಜರತ್ ಸಾಹೇಬರ ಧರ್ಮಪತ್ನಿ ಹಜ್ಜುಮಾಳರ ಪುತ್ರರಾಗಿ ಕ್ರಿ.ಶ. 1819, ಮಾರ್ಚ್ 7 ರಂದು ಶಿಶುನಾಳ ಷರೀಫರು ಜನಿಸಿದರು.

ಷರೀಫರ ವಿದ್ಯಾಬ್ಯಾಸವು ಸ್ಥಳೀಯ ಕೂಲಿ ಮಠದಲ್ಲಿಯೇ ನಡೆಯುತ್ತದೆ. ಇವರು ಮುಲ್ಕಿ ಪರೀಕ್ಷೆ (7ನೇ ತರಗತಿ)ತನ್ನು ಪಾಸು ಮಾಡುತ್ತಾರೆ. ನಂತರ ನೆರೆಯ ಗ್ರಾಮಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ. ಲೋಕ ಶಿಕ್ಷಕರಾಗಬಯಸುವ ಷರೀಫರಿಗೆ ಶಾಲಾ ಶಿಕ್ಷಕ ವೃತ್ತಿಗೆ ಶರಣು ಹೊಡೆದು, ಆಧ್ಯಾತ್ಮಿಕ ಜ್ಞಾನದ ಸಂಪಾದನೆಗಾಗಿ ಸ್ಮಾರ್ತ ಬ್ರಾಹ್ಮಣ ಜಾತಿಗೆ ಸೇರಿ ಬ್ರಾಹ್ಮಣ ಗುರು ಗೋವಿಂದಭಟ್ಟರನ್ನು ಗುರುವಾಗಿ ಸ್ವೀಕರಿಸಿ, ಲೋಕಶಿಕ್ಷಕರಾಗುತ್ತಾರೆ.

ಷರೀಫರು, ಬಹುಮುಖ ವ್ಯಕ್ತಿತ್ವಗಳನ್ನು, ಪ್ರತಿಭೆಗಳನ್ನು ಹೊಂದಿದ್ದರು. ಸಾಧು ಶರಣ, ತತ್ವಜ್ಞಾನಿ ಕವಿ, ಕಾಲಜ್ಞಾನಿ, ಸಮಾಜಸುಧಾರಕ ಮುಂತಾದ ವ್ಯಕ್ತಿತ್ವಗಳನ್ನು ಹೊಂದಿದ್ದರು.

ಮಹಾಕವಿಯನ್ನು ಸೃಷ್ಟಿಸುವುದಕ್ಕೆ ಸಮಾಜ ಕಾರಣವಾದರೆ ಸಮಾಜ ಸೃಷ್ಟಿಗೆ ಮಹಾಕವಿ ಕಾರಣ. ಯಾವ ಯುಗದಲ್ಲಿ ಕವಿ ಅವತರಿಸುವನು ಆ ಯುಗದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಪರಿಸ್ಥಿತಿಗಳು, ಕವಿಯ ಭೌತಿಕ ಜೀವನವನ್ನೇ ಮಾತ್ರವಲ್ಲದೆ ಕವಿಯ ಹೃದಯ

ಮೆದುಳುಗಳನ್ನು ಹೊಕ್ಕು ಕವಿಯ ಸೃಷ್ಟಿಗೆ ತಳಪಾಯವನ್ನು ನಿರ್ಮಿಸುತ್ತದೆ. ಈ ಬುನಾದಿಯ ಮೇಲೆ ಕವಿಯು ತನ್ನ ಕಲ್ಪನೆಯ ಸಹಾಯದಿಂದ ನೂತನ ಸೃಷ್ಟಿಯನ್ನು ರಚಿಸುವನು. ಈ ರೀತಿಯಾಗಿ ಷರೀಫರ ಕೃತಿ ಮತ್ತು ಹುಟ್ಟಿಬಾಳಿದ ಯುಗ ಅನ್ಯಾದೃಶ್ಯವಾದುದು. ಜ್ಞಾನದ ಬಲದಿಂದ ಅಜ್ಞಾನದ ಕೇಡೆನ್ನುವಂತೆ, ಜ್ಞಾನದ ಬಲದಿಂದ ಸಮಾಜಕ್ಕೆ ಅಂಟಿದ ಅಜ್ಞಾನವೆಂಬ ಕತ್ತಲನ್ನು ಕಳೆಯಲು ಕಂಕಣ ಬದ್ಧರಾಗಿ ನಿಂತರು ಷರಿಫರು. ತಮ್ಮ ಸಂಚಾರದುದ್ದಕ್ಕೂ ಸಮಕಾಲೀನ ಸಾಧು ಶರಣ ಸತ್ಪುರುಷ ದರ್ಶನವನ್ನು ಪಡೆದರು. ಅದರ ಸದ್ಗುಣಗಳನ್ನು ಪ್ರಾಂಜಲ ಮನಸ್ಸಿನಿಂದ ಹಾಡಿ ಹೊಗಳಿದರು.

ಷರೀಫರು ಜನ್ಮತಾಳಿ ಜೀವನ್ಮುಕ್ತರಾದ ಕಾಲ ಹತ್ತೊಂಬತ್ತನೆಯ ಶತಮಾನ. ಈ ಸಮಯದಲ್ಲಿ ಉತ್ತರ ಕರ್ನಾಟಕ ಮೊದಲು ಪೇಶ್ವೆಯರಿಂದ, ವಿದೇಶಿಯರ ದಬ್ಬಾಳಿಕೆಯಿಂದ ಕರ್ನಾಟಕದ ಜನತೆ ನಿರ್ವೀರ್ಯವಾಗಿತ್ತು. ಒಂದೆಡೆ ರಾಜನೈತಿಕ ಸಹಾದಿಂದ ಕ್ರಿಶ್ಚಿಯನ್ ಧರ್ಮ ಹರಡಲು ಪ್ರಯತ್ನಿಸಿದರೆ ಇನ್ನೊಂದೆಡೆ ಹಿಂದೂ ಸಮಾಜ ನಾನಾ ಮತ, ಸಂಪ್ರದಾಯ, ಜಾತಿ-ಉಪಜಾತಿ, ಬೇಧ-ಭಾವನೆಗಳು ಬೆಳೆದು ನೂತನ ಹಿಂದೂ ಧರ್ಮದ ಆದರ್ಶಗಳೂ ಮಾಯವಾಗಿದ್ದವು. ಸಿದ್ಧರು, ಯೋಗಿಗಳು ಮಂತ್ರ-ತಂತ್ರ, ಯೋಗಾಭ್ಯಾಸದ ಚಮತ್ಕಾರ ಗಳಿಂದ ಜನರನ್ನು ಬೆರಗುಗೊಳಿಸಿ ಜನರಿಂದ ಹಣ ಕೀಳುತ್ತಿದ್ದರು. ದೇವರು, ಧರ್ಮದ ಹೆಸರಿನಲ್ಲಿ ಬಾಹ್ಯಾಡಂಬರ ದಿನೇ ದಿನೇ ಬೆಳೆಯುತ್ತಿತ್ತು. ಉಚ್ಚಜಾತಿಯವರು ನೀಚ ಜಾತಿಯವರನ್ನು ತಿರಸ್ಕಾರದ ದೃಷ್ಟಿಯಿಂದ ನೋಡುತ್ತಿದ್ದರು. ಮಾನವೀಯ ಮೌಲ್ಯಗಳನ್ನು, ಉದಾತ್ತಗುಣಗಳನ್ನು ಜನರು ಮರೆತಿದ್ದರು. ಅಸತ್ಯ, ಮೋಸ, ಕಪಟ, ಆಡಂಬರ ಇತ್ಯಾದಿ ದುರ್ಗುಣಗಳು ಜನಜೀವನದಲ್ಲಿ ಎಲ್ಲೆಡೆ ಕಾಣುತ್ತಿದ್ದವು. ಈ ರೀತಿಯಾಗಿ ಜನ ಜೀವನದ ಎಲ್ಲಾ ಹಂತಗಳಲ್ಲಿ ಅಶಾಂತಿ ತಾಂಡವವಾಡುತ್ತಿತ್ತು.

ಇಂತಹ ಸಮಯದಲ್ಲಿ ಷರೀಫರು ಸಾಮಾನ್ಯ ಕುಟುಂಬದಲ್ಲಿ ಜನ್ಮವೆತ್ತಿ ಹೆಚ್ಚಿನ ವಿದ್ಯೆ ಸಂಪಾದಿಸದಿದ್ದರೂ ತಮ್ಮ ಅಸಾಧಾರಣ ಗ್ರಹಣಶಕ್ತಿಯಿಂದ ಎಲ್ಲಾ ಭಾವನೆಗಳನ್ನು ಗ್ರಹಿಸಿ ಜ್ಞಾನದ ಕವಡೆ ಬೀಸಿದರು. ಷರೀಫರಿಗೆ ಸಾಮಾಜಿಕ ಮೌಲ್ಯಗಳ ಬಗ್ಗೆ ಅತ್ಯಂತ ಆಸ್ಥೆ ಇತ್ತು ಎಂಬುದಕ್ಕೆ ಅವರ ಕಾವ್ಯದಲ್ಲಿನ ತುಡಿತ ಮಿಡಿತಗಳನ್ನು ಗಮನಿಸಿದರೆ, ಮಿಡಿತವಾಗುತ್ತದೆ. ಜಾತೀಯತೆ, ಪುರೋಹಿತವರ್ಗದವರಿಂದ ಮುಗ್ಧ ಭಕ್ತರ ಶೋಷಣೆ ಧಾರ್ಮಿಕ ಅಂಧಶ್ರದ್ಧೆ ಗೊಡ್ಡು ಸಂಪ್ರದಾಯ ಇವೇ ಮೊದಲಾದ ಅನಿಷ್ಠಗಳ ವಿರುದ್ಧ ಷರೀಫರು ತಮ್ಮ ಕಾವ್ಯಖಡ್ಗವನ್ನು ಝಳಪಿಸಿದರು. ಕೇವಲ ಕಂದಾಚಾರಗಳು, ನೇಮ ನಿತ್ಯಗಳು ಮಾನವರನ್ನು ಉದ್ಧಾರ ಮಾಡಲಾರವೆಂದು ಷರೀಫರ ಅಭಿಮತವಾಗಿತ್ತು.

ಷರೀಫರು ಯಾವುದಕ್ಕೂ ಅಂಜಿದವರಲ್ಲ. ನ್ಯಾಯನಿಷ್ಠರ ದಾಕ್ಷಿಣ್ಯಪರ ನಾನಲ್ಲ. ಲೋಕ ವಿರೋಧಿ ಶರಣ ನಾರಿಗೂ ಅಂಜುವವನಲ್ಲ ಎಂಬ ಬಸವಣ್ಣನ ಧೀರೋಕ್ತಿಯಂತೆ ಜಾತಿ ಕುಲಗಳನ್ನು ಖಂಡಿಸಿದರು. ಭೂಮಿಯ ಮೇಲೆ ಹುಟ್ಟುವ ಪ್ರತಿಯೊಬ್ಬನೂ ತೊಗಲಿ ಮಲಿಯ (ತಾಯಿಯ) ಹಾಲು ಕುಡಿದರು ದೊಡ್ಡವನಾದರೂ ತಮ್ಮ ತಮ್ಮೊಳಗೆ ತಾರತಮ್ಯ ಎಣಿಸುವುದನ್ನು ನೋಡಿ ಕಸಿವಿಸಿಗೊಂಡರು.

ಜಾತಿ-ಜಾತಿ ಬ್ಯಾರೆಯೆನಿಸಿ...
ನಡೆವುದೊಂದೇ ಭೂಮಿ, ಕುಡಿವುದೊಂದೇ ನೀರು,
ಸುಡುವಗ್ನಿಯೊಂದೇ ಇರುತಿರಲು ಕುಲಗೋತ್ರ ನಡುವೆ ಎತ್ತಣದು,

ಎನ್ನುವಾ ಸರಿಸಮಾನತೆ ಹಾಗೂ ಜಾತ್ಯಾತೀತ ಮನೋಭಾವದ ಸರ್ವಜ್ಞನಂತೆ ಷರೀಫರು ಕೂಡ ಕುಲಬೇಧಗಳೂ ಕೃತಕ, ಮಾನವ ನಿರ್ಮಿತವಾದವು ಎಂದು ಖಂಡಿಸಿ ಸಮಾಜಕ್ಕೆ ಆರೋಗ್ಯಕರವಲ್ಲವೆಂದು ಖಂಡಿಸಿದರು.

ಬೋಕಿಯೊಳಗೆ ಮೂರು ಲೋಕ ಹುಟ್ಟಿತೋ
ಆಕುಲ ಈ ಕುಲ ಎಲ್ಲಿತ್ತೋ?
ಜೋಕಿಲೇ ಹದಿನೆಂಟು ಜಾತಿಗೆ ಹೇಳುತಿನಿ ...

ಎಂದು ಜಾತಿ ಮತಗಳನ್ನು ಎಲ್ಲಾ ವಲಯಗಳಲ್ಲಿ (ಧರ್ಮ) ರುವ ಪೂಜಾರಿ ಪ್ರವೃತ್ತಿಯನ್ನು ಖಂಡಿಸಿದರು. ಉದಾ : ಜಂಗಮರ ಕರ್ತವ್ಯಚ್ಯುತಿಯನ್ನು ಹಾಗೂ ಮುಗ್ಧ ಭಕ್ತರ ಶೋಷಣೆ ಮಾಡುವುದನ್ನು ಷರೀಫರು ಖಂಡಿಸಿದರು.

ಲಿಂಗದೊಳು ಮನವಿಲ್ಲದೆ
ಜಂಗಮ ಜಂಗುಕಟ್ಟಿ ಹಿಂಗದೆ ತಿರುಗಲು
ಸಂಗನ ಶರಣರಿಗೇನು ಫಲ? .....

ಜಂಗಮರ ನಿಜವಾದ ಕರ್ತವ್ಯ, ಧರ್ಮಬೋಧೆ ಹಾಗೂ ಆತನಲ್ಲಿರಬೇಕಾದ ಸದ್ಗುಣಗಳಾವುವು ಎಂಬುದನ್ನು ವಿವರಿಸುವಲ್ಲಿ ಪ್ರಶ್ನಿಸುವಲ್ಲಿ ಹಿಂದೆ ಬೀಳಲಿಲ್ಲ. ಭಕ್ತರ ಹೆಗಲ ಮೇಲೆ ಅಡ್ಡಪಲ್ಲಕ್ಕಿಯಲ್ಲಿ ಕುಳಿತು ಮೆರೆಯುವ ಮಹಾಸ್ವಾಮಿಗಳನ್ನು ಖಂಡಿಸಿದರು.

ಮಹಮದೀಯ ಮೂಲದವರಾದ ಷರೀಫರು ಡಾಂಭಿಕತೆ, ಹಾಗೂ ಮುಗ್ಧ ಭಕ್ತರ ಶೋಷಣೆ ಮಾಡುವುದನ್ನು ನಿರ್ಭೀತಿಯಿಂದ ಟೀಕಿಸುವಾಗ ಅನ್ಯಧರ್ಮಗಳಲ್ಲಿ ತಾಳ್ಮೆ ಅಥವಾ ಗೌರವ ಇರಲಿಲ್ಲ ಎಂದು ಭಾವಿಸುವುದುಂಟು. ಉದಾ: ಸಂದರ್ಭೋಚಿತವಾಗಿ ಟೀಕಿಸಿರುವುದನ್ನು ಅವಲೋಕಿಸಬಹುದಾಗಿದೆ. ಮೂರ್ತಿ ಪೂಜೆ ಹೊಲ್ಲ, ಇಸ್ಲಾಂಧರ್ಮದ ಪ್ರಮುಖ ತತ್ವವಾಗಿದ್ದರೋ ಮೊಹರಂ ಹಬ್ಬದ ಸಂದರ್ಭದಲ್ಲಿ ಪಂಚಾ-ತಾಭೂತಗಳನ್ನು ಪೂಜೆಮಾಡುವುದು, ನೈವೇದ್ಯದ ರೂಪದಲ್ಲಿ ಬೆಲ್ಲ ಕಂದೂರಿಗಳನ್ನು ಸಲ್ಲಿಸುವ ಭಕ್ತರನ್ನು ಮುಲ್ಲಾ – ಮೌಲ್ವಿಗಳನ್ನು ಷರೀಫರು ತರಾಟೆಗೆ ತೆಗೆದುಕೊಳ್ಳದೆ ಬಿಡಲಿಲ್ಲ. ಹಬ್ಬದ ನಿಜವಾದ ಹಿನ್ನೆಲೆಯನ್ನು ಅರಿಯದೆ ಕುಡಿದು ತಿಂದು ಕೇಕೆ ಹಾಕಿ ನಲಿಬಡುವುದನ್ನು ಖಂಡಿಸಿ ಮುಸಲ್ಮಾನ ಬಾಂಧವರ ಕಣ್ಣು ತೆರೆಸಿದರು. ದೇವರು ಧರ್ಮದ ಹೆಸರಿನಲ್ಲಿ ಭಿಕ್ಷೆಬೇಡುವುದನ್ನು ಕೆಣಕಿದರು. ಭಿಕ್ಷೆ ಬೇಡುವುದರಿಂದ ವೆಕ್ತಿಯ ವ್ಯಕ್ತಿತ್ವವೇ ನಾಶವಾಗುವುದುದೆಂಬ ಅಳಕು ಷರೀಪರದು.

ಒಮ್ಮೆ ಷರೀಫರು ತಾಯಿ ಮನೆಯಲ್ಲಿ ಗಂಜಿಗೂ ಗತಿ ಇಲ್ಲದಾಗ ಊರಿನ ಕರುಣಿಕರ ಮನೆಯಲ್ಲಿ ಜೋಳ ಕೇಳಲು ಕಳುಹಿಸಿದಾಗ, ಒಲ್ಲದ ಮನಸ್ಸಿನಿಂದಲೇ ಕರುಣಿಕರ ಮನೆಯಲ್ಲಿ ಜೋಳ ಕೀಳಲು ಹೋದಾಗ, ಕರುಣಿಕರ ಮಗ. ಅರಪಾವು ಜೋಳವನ್ನು ನೀಡಲು ಬಂದಾಗ, ಹೊಟ್ಟೆಬರ ಹಿಂಗುದ್ಯಾಂಗಲೊ ಮನಸೇ ಎಂದು ತಮ್ಮನ್ನು ತಾವೇ ನಿಂದಿಸಿಕೊಳ್ಳುತ್ತಾರೆ. ಇದರಿಂದ ಆತ್ಮಗೌರವ ನಾಶವಾಗುತ್ತದೆ ಎನ್ನುತ್ತಾರೆ. ದುಡಿದು ತುಂಬಿಸಬೇಕೋ ತುತ್ತಿನ ಚೀಲವಾ ಎಂದು ಬಸವಣ್ಣನವರಂತೆ "ಕೈ ಕೆಸರಾದರೆ ಬಾಯಿ ಮೊಸರು, ಕಾಯಕವೇ ಕೈಲಾಸ" ಎಂಬ ನುಡಿಯನ್ನು ಚೆನ್ನಾಗಿ ಅರಿತು ಬಲ್ಲವರಾಗಿದ್ದರು. ಇದನ್ನು ಮಾನವರಿಗೆ ತಿಳಿಸಿ ಹೇಳುತ್ತಾರೆ.

ಸಕ್ರಿಯವಾಗಿ ಸಮಾಜದ ರಚನಾತ್ಮ ಕಾರ್ಯಗಳಲ್ಲಿ ದೈಹಿಕವಾಗಿ, ನೇರವಾಗಿ ಧುಮುಕಿದರೂ ಎಲ್ಲಿಯೂ ದಾಖಲೆಯಿಲ್ಲ. ಆದರೆ ಸಮಾಜ ಸೇವೆಯನ್ನು ತಮ್ಮ ಉಸಿರಾಗಿಸಿಕೊಂಡಿದ್ದರು. ನಾಟಿ ವೈದ್ಯರಾಗಿ ಗಿಡಮೂಲಕೆಗಳ ಔಷಧಿಗಳನ್ನು ನೀಡುವುದು, ವ್ಯಾಧಿಗಳನ್ನು ಅರಿತು ಕೆಲಸ ಮಾಡುತ್ತಿದ್ದರು.

ಜನ ಮರುಳೋ ಜಾತ್ರೆ ಮರುಳೋ ಎನ್ನುವಂತೆ ಅದ್ಯಾವುದೋ ಒಬ್ಬ ಕುನ್ನಿ ಮನುಜ ಮಾಡಿದ ಈ ರಂಗಸಜ್ಜಿಕೆಗೆ ಎಷ್ಟೊಂದು ಜನರು ಮೋಸಹೋದರಲ್ಲಾ ಎಂದು ಷರೀಫರು ಮರುಗಿದರು.

ಕುನ್ನಿ ಮನುಜರು ಮಾಡುವ ಕಪಟಕ್ಕೆ
ಕುಹಿತನದಲ್ಲಿ ಈರನ್ನ ಮಾತು.....

ಹೀಗೆ ಷರೀಫರ ಹಾಡುಗಳಲ್ಲಿ ಅಣೋಕ್ತಿ, ಸೂಚ್ಯಾರ್ಥ, ವ್ಯಂಗ್ಯಾರ್ಥಗಳಿದ್ದುದನ್ನು ಗಮನಿಸಬಹುದಾಗಿದೆ. ಅದಕ್ಕಿಂತ ಮುಖ್ಯವಾಗಿ ತಪ್ಪನ್ನು ತಿದ್ದುವಂತ ಅತ್ಯಂತ ಜರೂರಿನ ಕೆಲಸವನ್ನು ತಮ್ಮ ಕಾಲದಲ್ಲಿ ಅವರು ತಡಮಾಡದೆ ಮಾಡಿದರು. ಅಲ್ಲಲ್ಲಿ ವಿಡಂಬನೆಯ ಕತ್ತಿ ಝಳಪಿಸದೆ ಷರೀಫರೆಂದಿಗೂ ಸತ್ಯಪ್ರಿಯತೆ, ಒಳ್ಳೆದರ ಬಗ್ಗೆ ಅವಾಜ್ಯ ಪ್ರೇಮ, ಕೆಟ್ಟದರ ಬಗ್ಗೆ ಸಹಿಸಿಕೊಳ್ಳಲಾರದ ದ್ವೇಷ, ಅವರ ವ್ಯಕ್ತಿತ್ವದ ಗುಣವೆಂಬಂತೆ ಕಾವ್ಯದಲ್ಲಿ ಮೂಡಿಬಂದಿದೆ. ಅವರ ಮನಸ್ಸಿನ ಮಥನದಲ್ಲಿ ವ್ಯಕ್ತಿಯ ಕೋರೆಗಳು, ಸಂಘದ ತತ್ವಗಳು, ಆ ಮತದ ಅತೀ ಕೋರೆಗಳು ಕುಂದಿವೆ.

ಆದ್ದರಿಂದಲೇ ಸಮಾಜದ ಖಾಯಿಲೆಗಳನ್ನು ನಾಶಪಡಿಸಲು ಹೊಸ ಸನ್ನಿವೇಶಗಳನ್ನು ಕಾಣಲು ತಮ್ಮ ಕಾವ್ಯಗಳನ್ನು ಕಾಯಕಲ್ಪ ಗುಳಿಗೆಗಳನ್ನಾಗಿ ಜನಕ್ಕೆ ಕೊಟ್ಟು ತಮ್ಮ ಚಾಣಾಕ್ಷತನವನ್ನು ಕೋರಿದರು. ಜನಕ್ಕೆ ಈ ಭವ ರೋಗ ವೈದ್ಯ ಕೊಟ್ಟ ಚುಚ್ಚುಮದ್ದಗಳು ಹಿಡಿಸಿದವೋ ಇಲ್ಲವೋ ಇವುಗಳನ್ನೆಲ್ಲ ನಿಷ್ಕರ್ಷಿಸಿ ಹೇಳವುದು ಸುಲಭದ ಕೆಲಸವಾಗಿರಲಿಲ್ಲ. ಕಾರಣ ಇವ್ಯಾವುಗಳಿಗೂ ದಾಖಲೆಗಳು ಲಭ್ಯವಿಲ್ಲ. ಆರೋಗ್ಯಕರ ಸಮಾಜದ ಕನಸು ಅವರ ತಲೆಯಲ್ಲಿ ಕುಡಿಯೊಡೆದಿರಬೇಕು, ಆದರೆ ಅದನ್ನು ಸಾಮೂಹಿಕ ಆಂದೋಲನ ಮಾಡುವಷ್ಟು ಅವರು ಕ್ರಿಯಾತ್ಮಕವಾಗಿ ಭಾಗಿಯಾಗದೆ ನೀತಿ ಬೋಧೆಗಳ ರೂಪದಲ್ಲಿ ಹೃದಯ ಮನಸ್ಸುಗಳಲ್ಲಿನ ಅಹಿತಕರ ವಾಸನೆಗಳನ್ನೇ ಮೂಲಭೂತವಾಗಿ ತಿದ್ದಲು ವೈಚಾರಿಕ (ವೈಜ್ಞಾನಿಕ) ಕಾವ್ಯಗಳನ್ನು ಜನಸಾಮಾನ್ಯರ ಕಿವಿಗೆ ತಲುಪಿಸಿ ಪರಿವರ್ತನೆಗೆ ಪ್ರಯತ್ನಿಸಿದರು.

'ಸಮಾಜ ವಿಜ್ಞಾನಿ ಷರೀಫ' ಎಂಬ ಮಾತು ಸ್ವಲ್ಪ ದೊಡ್ಡದಾದರೂ ಅವರು ನಿರ್ವಹಿಸಿದ ಜವಾಬುದಾರಿಕೆಯನ್ನು ಗಮನಿಸಿದರೆ ಆ ಮಾತಿನಲ್ಲೇನೋ ಉತ್ಪ್ರೇಕ್ಷೆಯಾಗಲಾರದು. ಅವರನ್ನು ಆಗಿನ ಕಾಲದ ನೈತಿಕ ಹಾಗೂ ಸಾಮಾಜಿಕ ಸಮಸ್ಯೆಗಳು ಕಾಡಿಸಿ, ಪೀಡಿಸಿರುವುದರಿಂದಲೇ ಅವರ ಸ್ಫೂರ್ತಿಯುತ ಚಿಂತನೆಗಳು ವಾಸ್ತವಾಂಶ ಮತ್ತು ಸರ್ವಕಾಲಿಕ ಮೌಲ್ಯ ಅನಾಯಾಸವಾಗಿ ಹೊರಹೊಮ್ಮಿದವಲ್ಲದೆ ಇಂದಿಗೂ ಅವು ಜನರ ನಾಲಿಗೆಯ ತುದಿಯ ಮೇಲೆ ಉಳಿಯುವಂತೆ, ಅವುಗಳ ಘನತೆ ಚಿರಂತನ ಸತ್ವ ಪಡೆದಿರುತ್ತದೆ. ಇಂದಿನ ಸಮಾಜಕ್ಕೂ ಅವರ ಮಾತಿನ ಹಿಂದಿನ ಹೃದಯ ಪರಿವರ್ತನೆಯ ಚಿಕಿತ್ಸೆ ಅನ್ವಯವಾಗುತ್ತದೆಂಬುದನ್ನು ಮರೆಯುಂತಿಲ್ಲ.

ಶಿಶುನಾಳ ಷರೀಫರು ವೈಜ್ಞಾನಿಕ ಸ್ಫೂರ್ತಿಯನ್ನು ಹೊಂದಿದ್ದರು. ಮೂಢನಂಬಿಕೆಗಳಿಗೂ ವಿಜ್ಞಾನಕ್ಕೂ ಎಣ್ಣೆ ಸೀಗೇಕಾಯಿ ಇದ್ದ ಹಾಗೆ. ಶಿಶುನಾಳ ಷರೀಫರು ಮೂಢನಂಬಿಕೆಗಳನ್ನು, ಕಂದಾಚಾರಗಳನ್ನು ಪ್ರಬಲವಾಗಿ ವಿರೋಧಿಸಿದರು. ಹೀಗೆ ಮಾಡಲು ಅವರಿಗೆ ವಿಜ್ಞಾನದಲ್ಲಿನ ಅತೀವ ನಂಬಿಕೆಯೇ ಕಾರಣ. ಒಟ್ಟಿನಲ್ಲಿ ಷರೀಫರು ಒಬ್ಬ ಸಮಾಜ ವಿಜ್ಞಾನಿ ಅಷ್ಟೇ ಅಲ್ಲ, ಪರಿಣಾಮಕಾರಿ ಸಮಾಜ ಸುಧಾರಕರೆಂದು ಹೇಳಬಹುದು.

ಗ್ರಂಥಋಣ

1. ಡಾ. ಎನ್.ಎಸ್. ಲಕ್ಷ್ಮಿನಾರಾಯಣ ಭಟ್ಟ : ಶಿಶುನಾಳ ಷರೀಫ ಸಾಹೇಬರ ಗೀತೆಗಳು.
2. ಡಾ. ಮಲ್ಲಿಕಾರ್ಜುನ ಸಿಂಧಗಿ : ಶಿಶುನಾಳ ಷರೀಫ ಸಾಹೇಬರ ಜೀವನ ಲೀಲಾಮೃತ
3. ಡಾ. ಮಲ್ಲಿಕಾರ್ಜುನ ಸಿಂಧಗಿ : ಶಿಶುನಾಳ ಷರೀಫ್ ಸಾಹೇಬರ ತತ್ವ ಪದಗಳು
4. ಶಿವಾನಂದ ಗುಬ್ಬಣ್ಣ ವರ : ಶಿಶುನಾಳ ಷರೀಪರ ಗೀತೆಗಳು
5. ಡಾ. ಡಿ. ಕುಮಾರ್ : ವಿಶ್ವಧರ್ಮಕ್ಕೆ ಸಂತ ಶಿಶುನಾಳ ಷರೀಫರ ಕೊಡುಗೆ., ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ.

ವಚನಕಾರ್ತಿ0ಯರ ಸಾಹಿತ್ಯ: ಅಭಿವ್ಯಕ್ತಿ0ಯ ವಿಭಿನ್ನ ನೆಲೆಗಳು

ಅನಿತ. ಎಂ. ಎಸ್.

ಸಂಶೋಧನಾ ವಿದ್ಯಾರ್ಥಿ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮಾನಸಗಂಗೋತ್ರಿ. ಮೈಸೂರು-570 006

12ನೇ ಶತಮಾನ ಕರ್ನಾಟಕ ಇತಿಹಾಸದಲ್ಲೇ ಮಹತ್ವಪೂರ್ಣವಾದದ್ದು. ಅರಮನೆ, ಗುರುಮನೆಗಳನ್ನು ತೊರೆದು ಜನವಾಣಿ0ಯನ್ನೇ ದೈವವಾಣಿ0ಯನ್ನಾಗಿ ಮಾಡಿಕೊಂಡು, ಮಹಿಳೆ0ಯರ, ತಳಸಮುದಾ0ಯದವರ ಧನಿ0ಯಾಗಿ ಒಡಮೂಡಿದ್ದೇ, 'ವಚನಸಾಹಿತ್ಯ'. ವಿಶೇಷವೆಂದರೆ ಏಕಕಾಲಕ್ಕೆ ಪುರುಷರೊಂದಿಗೆ, ಸ್ತೀ0ಯರೂ ಚಳುವಳಿ0ಯಲ್ಲಿ ಭಾಗವಹಿಸಿದ್ದು, ಹಾಗೂ ಸುಮಾರು 34 ಜನ ವಚನಕಾರ್ತಿ0ಯರು ಏಕಕಾಲಕ್ಕೆ ವಿಭಿನ್ನನೆಲೆಗಳಲ್ಲಿ ವಚನಗಳನ್ನು ರಚಿಸಿದ್ದು ಅಚ್ಚರಿಪಡುವಂತಹದ್ದಾಗಿದೆ.

ಅಕ್ಕ ಮಹಾದೇವಿ, ಸತ್ಯಕ್ಕ, ಆ0ಯ್ದಕ್ಕಿ ಲಕ್ಕಮ್ಮ, ಲಿಂಗಮ್ಮ, ಅಕ್ಕನಾಗಮ್ಮ, ಅಮ್ಮಗೆರಾ0ಯಮ್ಮ, ಜೊಂತಾದೇವಿ, ಕದಿರೆ0ಯರೆಮ್ಮವ್ವ, ಕೊಟ್ಟಣದ ಸೋಮವ್ವೆ, ಸೂಳೆಸಂಕವ್ವೆ, ಕೇತಲದೇವಿ, ಕಾಳವ್ವೆ, ಕಾಲಕಣ್ಣಿ0ಯ ಕಾಮಾವ್ವ, ಗುಡ್ಡೆವ್ವ ಇವರೇ ಮೊದಲಾದವರು. ತಮ್ಮ ವಿಚಾರಧಾರೆ0ಯನ್ನು ವಚನದ ಮೂಲಕ ಪ್ರತಿಪಾದಿಸಿದ್ದಾರೆ. ಈ ಹಿನ್ನಲೆ0ಯನ್ನು ಒಳಗೊಂಡ ಪ್ರಬಂಧವು ಮಾನವೀ0ಯ ನೆಲೆ, ನೋವಿನ ನೆಲೆ, ಪ್ರತಿ ಭಾವನಾತ್ಮಕ ನೆಲೆ ಹಾಗೂ ಭಾಷಿಕ ಸೊಗಡಿನ ನೆಲೆ ಎಂಬ 4 ವಿಭಿನ್ನ ನೆಲೆಗಳನ್ನು ವಚನಗಳನ್ನು ಸಾಕ್ಷೀಕರಿಸುತ್ತ ಸಾಗಿದೆ.

ಮಾನವೀಯ ನೆಲೆ: ವಚನಚಳವಳಿಯ ಮುಖ್ಯ ಉದ್ದೇಶ, ಸಕಲ ಜೀವಗಳಿಗೂ ಲೇಸನುಂಟು ಮಾಡುವುದು. ಹಾಗೂ ಯಾವುದೇ ಭೇದವಿಲ್ಲದೆ ಮನುಷ್ಯರನ್ನ ಮನುಷ್ಯರನ್ನಾಗಿ ಕಾಣುವುದು. ವಚನ ಚಳವಳಿಯನ್ನು ಪ್ರಸ್ತುತದಲ್ಲೂ ಕೂಡ ಯಾಕೆ ಇಷ್ಟು ಮಹತ್ವಕೊಟ್ಟು

ಚರ್ಚಿಸಲಾಗುತ್ತಿದೆ ಎಂದರೆ, ಸಾಮಾಜಿಕವಾಗಿ ಅಪಮಾನಕ್ಕೆ ಒಳಗಾಗಿ ನೋವುಣ್ಣುತ್ತಿದ್ದವರನ್ನು ಕರೆದು, ಬಾಚಿತಬ್ಬಿಕೊಂಡು ಅವರಿಗೆ ಆತ್ಮವಿಶ್ವಾಸವನ್ನು ವಚನಕಾರರು ತುಂಬಿದರು, ಎಂಬ ಕಾರಣಕ್ಕಾಗಿ; ಬಹಳ ಮುಖ್ಯವಾಗಿ ಯಾವ ಧರ್ಮಗಳು ಸ್ತ್ರೀಯರನ್ನು ಧಾರ್ಮಿಕವಾಗಿ ಸರಿಸಮವೆಂದು ಪರಿಗಣಿಸದೆ ಹೋದಾಗ ಹೆಣ್ಣು ಜೀವಗಳು ಇದೆ ನಾಡಿನ ಇತಿಹಾಸದಲ್ಲಿ ಮೊದಲ ಬಾರಿಗೆ ಸಾರ್ವಜನಿಕವಾಗಿ ಪುರುಷರೊಂದಿಗೆ ಅನುಭವಮಂಟಪದ ಚರ್ಚೆಯಲ್ಲಿ ಭಾಗವಹಿಸಿದರು, ವಚನಗಳನ್ನು ರಚಿಸಿದರು. ಹಾಗೆಯೇ ತಳಸಮುದಾಯದ ಅರ್ಥಾತ್ ದಲಿತರ ನೋವಿಗೆ ಸ್ಪಂಧಿಸಿದರು ಎನ್ನುವುದಕ್ಕಾಗಿ ವಚನಚಳವಳಿಯನ್ನ ನಾವೂ ಇಂದೂ ಕೂಡ ಚರ್ಚೆಗೆ ಒಳಪಡಿಸುತ್ತೇವೆ. ಮಾನವೀಯ ನೆಲೆಯೊಳಗೆ ಲಿಂಗತಾರತಮ್ಯದ ವಿರೋಧಿ ನೆಲೆ ಹಾಗೂ ಜಾತಿ ವಿರೋಧಿ ನೆಲೆಗಳನ್ನು ಗುರುತಿಸಿ ಅರ್ಥೈಸುವ ಪ್ರಯತ್ನ ಮಾಡಲಾಗಿದೆ.

"ಮೊಲೆ ಮೂಡಿ ಬಂದೆಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣು ಅಲ್ಲ ಗಂಡೂ ಅಲ್ಲ ಕಾಣ ರಾಮನಾಥ"

ಇದು ಆದಿ ವಚನಕಾರ ಚೇಡರ ದಾಸಿಮಯ್ಯನ ನಿಲುವು ಮಾತ್ರವಲ್ಲ. ಇಡಿ ವಚನ ಚಳುವಳಿ ಹೆಣ್ಣನು ಕಂಡ ಬಗೆಯೂ ಆಗಿದೆ. ಜೈನಧರ್ಮದಲ್ಲಿ ಹೆಣ್ಣಿಗೆ ಮೋಕ್ಷ ಪ್ರಾಪ್ತಿಯಾಗುವುದು ಗಂಡುಜನ್ಮ ಪಡೆದಾಗ ಮಾತ್ರ, ಇಂತ ಡಾಂಬಿಕತೆಗೆ ಶರಣ–ಶರಣೆಯರೆಲ್ಲರು ತಿರುಗೇಟು ನೀಡಿದರು.

ಶಿವಶರಣೆ ಗೊಗ್ಗವ್ವೆ ಜ್ಞಾನಕ್ಕೆ ಹೆಣ್ಣು–ಗಂಡೆಂಬ ಬೇಧವಿಲ್ಲ ಎನ್ನುತ್ತಾಳೆ:

ಮೊಲೆ ಮೂಡಿ ಬಂದೆಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯ ಜ್ಞಾನ ಹೆಣ್ಣೋ–ಗಂಡೋ ನಾಸ್ತಿನಾಥಾ?
ಹಾಗೆಯೇ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ–
"ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬುದು
ಹೆಣ್ಣೆಂಗೆಯೂ ಲಿಂಗಕ್ಕೆಯೂ ವಿರುದ್ಧವೇ?"

ಎಂದು ಪ್ರಶ್ನಿಸುವ ಮೂಲಕ ಲಿಂಗಭೇದವನ್ನು ನಿರಾಕರಿಸುತ್ತಾಳೆ. ಅಕ್ಕಮಹಾದೇವಿ ಹೆಣ್ಣು–ಗಂಡಿಗೆ ಮಾಯೆ, ಗಂಡು–ಹೆಣ್ಣಿಗೆ ಮಾಯೆ ಎಂಬುದನ್ನು ನಿಖರವಾಗಿ ಹೇಳಿ ಗಂಡು–ಹೆಣ್ಣಿನ ಸಮಾನತೆಯನ್ನು ಸಾರುತ್ತಾಳೆ. ಹೀಗೆ ಶರಣ–ಶರಣೆಯರು ಆತ್ಮಕ್ಕೆ ಲಿಂಗಭೇದವಿಲ್ಲ. ಹೆಣ್ಣು ಮಾಯೆಯಲ್ಲ, ಹೆಣ್ಣು ಅಸ್ಪೃಶ್ಯಳಲ್ಲ, ಹೆಣ್ಣು ಪ್ರತ್ಯಕ್ಷತ ದೇವತೆ ಎಂಬುದನ್ನು ತಮ್ಮ ವಚನಗಳಲ್ಲಿ ಪ್ರತಿಪಾದಿಸಿದರು.

ಶತ–ಶತಮಾನಗಳಿಂದ ಅಂಟಿಕೊಂಡುಬಂದಿರುವ ಅಮಾನವೀಯ ವಾದ ಮೌಢ್ಯವೇ ಜಾತೀಯತೆ. ಇದನ್ನು ಎಲ್ಲ ಶರಣ–ಶರಣೆಯರು ವಿರೋಧಿಸುತ್ತಾರೆ. ಇದು ಅವರ ಮನುಷ್ಯಪರವಾದ, ವೈಚಾರಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ. ಶರಣೆ ಬೊಂತಾದೇವಿ:

ಊರ ಒಳಗಣ ಬಯಲು ಊರ
ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ ಭಯಲು ಊರ
ಹೊರಗೆ ಹೊಲೆ ಬಯಲೆಂದುಂಟೆ?

ಎಂದು ಸಮಾಜಕ್ಕೆ ಪ್ರಶ್ನೆ ಕೇಳಿದ್ದಾಳೆ. ಬಯಲಿಗೇ ಇಲ್ಲದ ಜಾತಿ ಬಯಲಾಗುವ ಮನುಷ್ಯನಿಗೆಲ್ಲಿಂದ ಬಂತು? ಇದೇ ರೀತಿ ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರಿ ಕಾಳವ್ವೆಯ ವಚನ:

ಕುರಿಕೋಳಿ ಕಿರಿಮೀನು ತಿಂಬರಿಗೆಲ್ಲ ಕುಲಜ ಕುಲಜರೆಂದೆಂಬರು.
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು
ಅವರೆಂತು ಕೀಳುಜಾತಿಯಾದರೂ? ಜಾತಿಗಳು ನೀವೇಕೆ ಕೀಳಾಗಿರೊ?
ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿಹೋಯಿತು.
ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು.
ಸಿದ್ದಲಿಕೆಯ ತುಪ್ಪವನು, ಸಗ್ಗಳೆಯ ನೀರನು
ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯಾ
ಉರಿಲಿಂಗ ಪೆದ್ದಿಗಳರಸು ಒಲ್ಲನವ್ವಾ.

ಹೀಗೆ ಕಠೋರವಾಗಿ ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಕಾಯಕ ಸಮಾನತೆಗೆ ದಾಸೋಹಕ್ಕೆ ಹೆಚ್ಚು ಮಹತ್ವ ನೀಡುತ್ತಾರೆ. ಇದು ಸಮತವಾದ, ಸಮಾಜವಾದದ ತಳಹದಿಯೂ ಆಗಿದೆ.

ನೋವಿನ ನೆಲೆ: ವಚನಕಾರ್ತಿಯರು ಜನರ ನೋವಿಗೆ ಸ್ಪಂಧಿಸುವ ಬಗೆ ವಿಶಿಷ್ಟವಾಗಿದೆ. ಜನರ ನೋವನ್ನು ಕಂಡು–ಕೇಳಿ, ಅವರ ಮನಸ್ಸು ಮಿಡಿಯುತ್ತದೆ. ಆ ನೋವಿಗೆ ವಚನಗಳ ಮೂಲಕ ಚಿಕಿತ್ಸೆ ಸಮಾಧಾನ ಹೇಳುತ್ತಾರೆ. ಹೀಗೆ ಹೇಳುವಾಗ ವ್ಯಕ್ತಿಗತನೆಲೆಯಲ್ಲಿ ಕಾಣುವ ನೋವು ಅನಂತರ ಅದು ಸ್ವಂತದ ನೆಲೆಯನ್ನು ದಾಟಿ ಒಂದು ಸಮುದಾಯದ ನೋವಾಗಿರುವುದು ವಚನಗಳಲ್ಲಿ ವ್ಯಕ್ತವಾಗಿದೆ. 'ನೊಂದವರ ನೋವ ನೋಯದವರೆತ್ತಬಲ್ಲರೇ? ಎಂದು ಸಮುದಾಯದ ಪ್ರತಿನಿಧಿಯಾಗಿ ಕೇಳುವ ಅಕ್ಕಮಹಾದೇವಿ ಅದಕ್ಕೆ ಸಮಾಧಾನವನ್ನು ಹೀಗೆ ಹೇಳುತ್ತಾಳೆ:

ಬೆಟ್ಟದ ಮೇಲೊಂದು ಮನೆಯಮಾಡಿ
ಮೃಗಗಳಿಗಂಜಿದಡೆಂತಯ್ಯಾ?
.....
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೆಕು.

ಜೀವನದಲ್ಲಿ ಬರುವ ಯಾತನೆಗಳೆಲ್ಲಾ ನಮ್ಮನ್ನು ಗಟ್ಟಿಗರನ್ನಾಗಿ ಮಾಡಲು ಬರುತ್ತವೆ. ಅವನ್ನು ಸ್ವೀಕರಿಸಬೇಕು ಎಂದು ಅಕ್ಕನಾಗಮ್ಮ ತನ್ನ ವಚನದಲ್ಲಿ ಹೀಗೆ ಹೇಳುತ್ತಾಳೆ:

ಮನದೊಡನೆ ಮಹಾದೇವ ಮನವ ನೋಡಿಹೆನೆಂದು
ಮನುಜರ ಕೈಯಿಂದ ಒಂದೊಂದ ನುಡಿಸುವನು
ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ತನುವೆ.

ಎಂದು ಹೇಳುವಾಗಲೆಲ್ಲ ಸಾಮಾಜಿಕ ವ್ಯವಸ್ಥೆಯ ಅಡಿಪಾಯದ ಮಾನವ ಮನಸ್ಸುಗಳ ಸ್ವಾಸ್ಥ್ಯದ ಬಗ್ಗೆ ಎಲ್ಲ ಶರಣ–ಶರಣೆಯರು ಚಿಂತಿಸಿದ್ದಾರೆ ಎಂಬುದು ಎದ್ದು ಕಾಣುತ್ತದೆ. ಯಾಕೆಂದರೆ ಜೀವನದ ಕಷ್ಟ–ನಷ್ಟಗಳನ್ನ ಎದುರಿಸದೇ ಎಷ್ಟೋ ಜನ ಆತ್ಮಹತ್ಯೆ ಮಾಡಿಕೊಂಡು ಕುಟುಂಬವನ್ನು ಅನಾಥ ಮಾಡಿದವರಿದ್ದಾರೆ; ಆಶಾಭಂಗದಿಂದ ಹುಚ್ಚರಾಗಿ ಸಮಾಜದ ಶಿಸ್ತಿಗೆ ಭಂಗ ತಂದವರಿದ್ದಾರೆ. ಇವೆಲ್ಲವುಗಳಿಂದ ಶರಣೆಯರು ಸಮಾಜವನ್ನುಳಿಸುವ ಹಲವು ಪರಿಗಳನ್ನು ಹೇಳಿದ್ದಾರೆ. ಅಮ್ಮುಗೆ ರಾಯಮ್ಮ ನಿಲುವನ್ನು ಗಮನಿಸಿ:

'ಹೆದರದಿರಂ ಮನವೆ ಹಿಮ್ಮೆಟ್ಟದಿರುಮನವೆ
ಹಿಡಿದ ಛಲವ, ಬಿಡದಿರು ಮನವೆ'

ಎಂದು ಆತ್ಮವಿಶ್ವಾಸ ತುಂಬುವ ಮೂಲಕ ವ್ಯಕ್ತಿಯನ್ನು ಸಾಮಾಜಿಕ

ಜೀವನಕ್ಕೆ ಒಗ್ಗಿಸುವ ಯತ್ನಮಾಡುತ್ತಾರೆ. ಹೀಗೆ ವ್ಯಕ್ತಿಗತ ಹಾಗೂ ಸಮಾಜದ ನೋವುಗಳಿಗೆ ಸ್ಪಂದಿಸಿ ಆ ನೋವುಗಳಿಗೆ ಚಿಕಿತ್ಸೆಯನ್ನು ತಮ್ಮ ವಚನಗಳ ಮೂಲಕ ನೀಡಿದ್ದಾರೆ.

ಪ್ರತಿಭಟನಾತ್ಮಕ ನೆಲೆ: ಶರಣೆಯರಲ್ಲಿ ಬಹಳ ಮುಖ್ಯವೆನಿಸುವುದು ಮೂಢನಂಬಿಕೆ, ಕಂದಾಚಾರ, ಸಂಪ್ರದಾಯಗಳನ್ನು ಕಣ್ಣು–ಮುಚ್ಚಿ ಅನುಸರಿಸದೆ ಅವುಗಳ ವಿರುದ್ಧ ಪ್ರತಿಭಟಿಸಿದ್ದು, ಅಂತರಂಗ ಶುದ್ಧವಾಗದೆ ಬಹಿರಂಗದ ಆಚರಣೆಗಳು ಹೇಗೆ ವ್ಯರ್ಥವಾಗುತ್ತವೆ ಎಂಬುದನ್ನು ವಚನಕಾರ್ತಿ ಲಿಂಗಮ್ಮ ವ್ಯಂಗ್ಯವಾಗಿ ಟೀಕಿಸಿದ್ದಾಳೆ:

'ತನು ನಷ್ಟವಾದಡೇನಯ್ಯ ಮನ ನಷ್ಟವಾಗದನ್ನಕ್ಕ?
ವಾಕ್ಕು ನಷ್ಟವಾದಡೇನಯ್ಯ ಬೇಕು ಬೇಡೆಂಬುವಳಿಯದನ್ನಕ್ಕ?
ಅಂಗಸುಖ ನಷ್ಟವಾದಡೇನಯ್ಯ ಕಂಗಳ ಪಟಲ ಆರೊಳಗಿದ್ದು
ವಲ್ಲಭನೆನೆಸಿಕೊಂಬುವವರ ನುಡಿಯ, ಬಲ್ಲರು
ನಮ್ಮ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ.

ಶರೀರವನ್ನು ಕುಂದಿಸಿ ಮನಸ್ಸನ್ನು ದಂಡಿಸದವರು, ಮೌನವ್ರತ ಧರಿಸಿದರೂ ಆಸೆಗಳನ್ನು ಬಿಡದವರು, ಸನ್ಯಾಸಿಯಾಗಿದ್ದೇನೆಂದು ಅಹಂಕಾರ ಪಡುತ್ತಿರುವ ಒಳದೃಷ್ಟಿಯನ್ನ ಪಡೆಯದಿರುವವರು ಇಷ್ಟೆಲ್ಲಾ ಇದ್ದು ಸಮಾಜದಲ್ಲಿ ಪೂಜ್ಯರು, ಹಿರಿಯರು ಎನಿಸಿಕೊಳ್ಳುವ, ಇಂಥವರನ್ನು ದೇವರು ಮೆಚ್ಚುವುದಿಲ್ಲ ಎನ್ನುತ್ತಾಳೆ ಲಿಂಗಮ್ಮ. ಶರಣೆ ಅಕ್ಕಮ್ಮ ಅಂತೂ ಇಂಥ ಧಾರ್ಮಿಕ ಅಂಧಾನುಕರಣ ಉಳ್ಳವರನ್ನು ತರಾಟೆಗೆ ತೆಗೆದು ಕೊಂಡಿದ್ದಾಳೆ:

ಬತ್ತಲೆ ಇದ್ದವರೆಲ್ಲ ಕತ್ತೆಯ ಮರಿಗಳು
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು
ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ
ಆವಪ್ರಕಾರವಾದಡೇನು ಅರಿವೆ ಮುಖ್ಯವಯ್ಯ
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ

ಬಟ್ಟೆ ಕಳಚುವುದಾಗಲೀ, ತಲೆ ಬೋಳಿಸುವುದಾಗಲೀ ಅಥವಾ ತಲೆ ಜಡೆಗಟ್ಟಿಸಿಕೊಳ್ಳುವವರೆಲ್ಲ ಹೀನರು, ಕೇವಲ ಆಚಾರವೇ ಮುಖ್ಯ ಹೊರತು ಆವರಣವಲ್ಲ ಅನ್ನುತ್ತಾಳೆ. ಗುಡ್ಡವ್ವೆ ಕೂಡ 'ತನು ಬತ್ತಲೆಯಾದಡೇನು ಮನ ಬತ್ತಲೆಯಾಗದನ್ನಕ್ಕ' ಎಂದು ಛೇಡಿಸಿದ್ದಾಳೆ. ವ್ರತಭ್ರಷ್ಟರ ಕುರಿತು, ವ್ರತಹೀನರನ್ನು ಕುರಿತು, ವಚನಕಾರ್ತಿಯರು ತುಂಬಾ ಹೀನಾಯವಾದ ಮಾತುಗಳನ್ನಾಡಿದ್ದಾರೆ. ಸಾಮಾಜಿಕ, ಧಾರ್ಮಿಕ, ನೈತಿಕ ಕ್ಷೇತ್ರಗಳನೆಲ್ಲಾ ಕಲುಷಿತಗೊಳಿಸುವವರಿಂದ ಸಮಾಜ, ಧರ್ಮ, ಎರಡೂ ಅವನತಿಗಿಳಿಯುತ್ತವೆ ಎಂದು ಅವರನ್ನು ತಮ್ಮಿಂದ ದೂರವಿರಿಸಿ ಮಾನಸಿಕವಾಗಿ ಹಿಂಸಿಸಿ, ಮರಳಿ ಸನ್ಮಾರ್ಗಕ್ಕೆ ಅವರೇ ಬರುವಂತೆ ಮಾಡುವ ಚಾಣಾಕ್ಷತನ ಇಲ್ಲಿ ಕಂಡುಬರುತ್ತದೆ:

ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ
ಗುರು–ಲಿಂಗ–ಜಂಗಮದ ಕಾಲಕಟ್ಟುವೆ
ವ್ರತಭ್ರಷ್ಟರನಿಟ್ಟೊರೆಸುವೆ, ಸುಟ್ಟು ತುರುತುರನೆ
ತೂರುವೆ, ನಿರ್ಭೀತಿ ನಿದಲಿಂಗದಲ್ಲಿ

ಎಂದು ಅಂಥ ಕಂಟಕರನ್ನು ನಿಶ್ಯೇಷವಾಗಿ ನಾಶಮಾಡುವೆ ಎಂದು ಕಾಲಕಣ್ಣೀಯೆ ಕಾಮಮ್ಮ ಆಕ್ರೋಷಿಸಿದ್ದಾಳೆ. ಅವಳಂತೆ

ಕಾಲಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ –
ಬಂಜೆಯಾವಿಂಗೆ ಕ್ಷೀರವುಂಟೆ?
ವ್ರತಹೀನನ ಬೆರೆಯಲುಂಟೆ?
ನೀ ಬೆರೆದಡೊ ಬೆರೆ ನಾನೊಲ್ಲೆ
ನಿಜ ಶಾಂತೇಶ್ವರಾ.

ಎನ್ನುವ ಅವಳು ವ್ರತಹೀನನೊಂದಿಗೆ ಸಂಗಮಾಡಿ ಸಜ್ಜನಿಕೆ ಬಯಸುವದು ಬಂಜೆ ಆಕಳಿಂದ ಹಾಲು ನಿರೀಕ್ಷಿಸಿದಷ್ಟೇ ವ್ಯರ್ಥ. ನೀ ಬೇಕಾದರೆ ಕೂಡು ಎಂದು ದೇವರಿಗೇ ಸವಾಲು ಹಾಕಿದ್ದಾಳೆ. ಕೇತಲದೇವಿ, 'ಹದ ಮಣ್ಣಲ್ಲದೆ ಮಡಿಕೆಯಾಗಲಾರದು, ವ್ರತಹೀನನ ಬೆರೆಯಲಾಗದು' ಕೊಟ್ಟಣದ ಸೋಮಮ್ಮ 'ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ'. ಕಾಳವ್ವೆ ಕೂಡ 'ವ್ರತಹೀನನ ನೆರೆಯ ನರಕವಲ್ಲದೆ ಮುಕ್ತಿಯಲ್ಲ' ಅನ್ನುತ್ತಾಳೆ.

ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ
ಹಿಡಿದೆಡೆ ಬತ್ತಲೆ ನಿಲಿಸಿ ಕೊಲುವರಯ್ಯ
ವ್ರತಹೀನನ ಬೆರೆದಡೆ ಕಾದ ಕತ್ತಿಯಲ್ಲಿ
ಕವಿ ಮೂಗ ಕೊಯ್ವರಯ್ಯಾ
ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ.

ಹೀಗೆ ವ್ರತಹೀನರನ್ನು ಸೂಳೆಸಂಕವ್ವ ಪ್ರತಿಭಟಿಸಿದ್ದಾಳೆ. ಅಕ್ಕ ಮಹಾದೇವಿ, "ವೇದಶಾಸ್ತ್ರ, ಪುರಾಣಗಳೆಲ್ಲವು ಕೊಟ್ಟವ ಕುಟ್ಟಿದನುಚ್ಚು ತೌಡು ಕಾಣಿಭೋ" ಎಂದು ಅವುಗಳು ಹೇಳುವ ಮೌಢ್ಯದ ವಿರುದ್ಧ ಪ್ರತಿಭಟಿಸುತ್ತಾಳೆ.

ಭಾಷಿಕ ಸೊಗಡಿನ ನೆಲೆ: ವಚನಕಾರರು ಅರಮನೆ, ಗುರುಮನೆಗಳೆಲ್ಲವನ್ನು ತೊರೆದು ಜನವಾಣಿಯನ್ನ ದೈವವಾಣಿಯನ್ನಾಗಿಸಿದರು. ತಮ್ಮ ಸ್ವತಂತ್ರ್ಯ ಅಭಿವ್ಯಕ್ತಿಗೆ ನೂತನವಾದ 'ವಚನ' ಎಂಬ ಪ್ರಕಾರವನ್ನೆ ಸೃಜಿಸಿದರು. ೧೨ನೇ ಶತಮಾನಕ್ಕೋ ಹಿಂದೆ ಚಂಪೂ ಶೈಲಿಯ ಹಳಗನ್ನಡ ಭಾಷೆ ಕೇವಲ ಅರಮನೆಯ ಪಂಡಿತರಿಗಷ್ಟೆ ಮೆಚ್ಚಿಸಲು ಇದ್ದಂತಹದು. ವಚನಕಾರರು ತಮ್ಮ ಚಳವಳಿಗೆ ಬಹುಮುಖ್ಯ ಮಾಧ್ಯಮವಾಗಿ, ಆಯಕೆಮಾಡಿಕೊಂಡದ್ದು "ವಚನಗಳನ್ನು". ತಮ್ಮ ಪರಿಸರದ, ಆಡುಮಾತಿಗೆ ದೇಸಿಭಾಷೆಯನ್ನೇ ಸಾಹಿತ್ಯಿಕ ಭಾಷೆಯಾಗಿ ದುಡಿಸಿಕೊಂಡದ್ದು ಮಹತ್ವದ ಸಂಗತಿ. ತಮ್ಮ ಕಾಯಕವಲಯದಲ್ಲಿ ಪರಿಚಯವಿದ್ದ ಆಯಾ ವೃತ್ತಿಗೆ ಸಹಜವಾದ ಪಾರಿಭಾಷಿಕ ಮಾತುಗಳು, ಒಗಟುಗಳು, ಗಾದೆಗಳು, ನುಡಿಗಟ್ಟುಗಳನ್ನೆ ಬಳಸಿಕೊಂಡು ಉಪಮೆ, ರೂಪಕಗಳ ಮೂಲಕ ಸರಳವಾಗಿ ವಚನಗಳ ರಚಿಸಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಮನಮುಟ್ಟುವಂತೆ ವಚನಗಳನ್ನು ಚಳವಳಿಯ ಮಾಧ್ಯಮವಾಗಿ ದುಡಿಸಿಕೊಂಡರು. ಬಸವಣ್ಣನ "ನುಡಿದರೆ ಮುತ್ತಿನ ಹಾರದಂತಿರಬೇಕು" ವಚನ ಸುಲಭ ಸರಳ ಮತ್ತು ನುಡಿ–ನಡೆ ಬಗ್ಗೆ ಉಪಮೆ–ರೂಪಕಗಳ ಮೂಲಕ ಎಲ್ಲರಿಗೂ ಶರಣಧರ್ಮದ ತತ್ವವನ್ನು ಮನಮುಟ್ಟುವಂತೆ ಹೇಳುತ್ತದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಕುಂಬಾರ ಗುಂಡಯ್ಯನ ಪತ್ನಿ ಕೇತಾಲದೇವಿಯ ವಚನ ಗಮನಿಸಿ:

"ಹದಮಣ್ಣಲ್ಲದೆ ಮಡಕೆಯಾಗಲಾರದು
ವ್ರತಹೀನನ ಬೆರೆಯಲಾಗದು
ಬೆರೆದಡೆ ನರಕ ತಪ್ಪದು;
ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ"

ತಮ್ಮ ಉಪಜೀವನಕ್ಕಾಗಿ ಹಿಡಿದ ಕಾಯಕದ ಪರಿಭಾಷೆಯಲ್ಲೇ ಆ ಮಾತಿನ ಸೊಗಡಿನಲ್ಲೇ ವಚನಗಳನ್ನು ರಚಿಸಿವುದಕ್ಕೆ ಮೇಲಿನ ವಚನ ನಿದರ್ಶನವಾಗಿದೆ. ಮಣ್ಣು ಹದವಿಲ್ಲದೆ ಹೇಗೆ ಮಡಿಕೆ ಒಂದು ಪರಿಪೂರ್ಣ ಅಸ್ತಿತ್ವವನ್ನು ಪಡೆಯಲಾರದೇ, ಹಾಗೆಯೇ,

ಶರಣನಾದವನು ಕೇವಲ ಶಿವನಿಷ್ಠೆಯನ್ನು ಮಾತ್ರವಲ್ಲದೆ, ಇಡೀ ಜೀವನವನ್ನೆ ಶರಣಮಾರ್ಗದಲ್ಲಿ ಸಾಗಿಸಬೇಕೆಂಬುದನ್ನು "ವ್ರತಹೀನನ ಬೆರೆಯಲಾಗದು, ಬೆರೆದಡೆ ನರಕ ತಪ್ಪದು" ಎಂಬ ಸರಳ ನುಡಿಯಲ್ಲೂ ಸಾಮಾನ್ಯರ ಗ್ರಹಿಕೆಗೆ ಸೂಕ್ತ ಧಾಟಿಯಲ್ಲೂ ಹೇಳಲಾಗಿದೆ. ಸಾಮಾನ್ಯ ವೃತ್ತಿಯಾದ ಕುಂಬಾರಿಕೆಯ ಪರಿಭಾಷೆಯಲ್ಲೂ ಹೇಳುವಲ್ಲಿನ ಶರಣರು ಕಸಿ ಮಾಡಿದ ಶರಣತತ್ವದ ಸೈದ್ಧಾಂತಿಕ ಸೊಗಸನ್ನು ಕಲಾತ್ಮಕವಾಗಿ, ಸರಳವಾಗಿ ನಿರೂಪಿಸುತ್ತಾರೆ. ಆಯ್ದಕ್ಕಿ ಲಕ್ಕಮ್ಮ ತನ್ನ ಗಂಡನಿಗೆ 'ಈಸಕ್ಕಿಯಾಸೆ ನಿಮಗೇಕೆ ಅಯ್ಯಾ'? ಎನ್ನುವಲ್ಲು ಎಷ್ಟೆಲ್ಲಾ ಮೌಲ್ಯ ಪ್ರತಿಪಾದನೆಯನ್ನು ಮಾಡುತ್ತಿದೆ. ವಾಕ್ಯ ಪ್ರಶ್ನಾರ್ಥಕ ಹೇಳಿಕೆ ಎನಿಸಿದರು ಶರಣರ ತತ್ವದ ಮೌಲ್ಯವನ್ನು ಪ್ರತಿಪಾದಿಸುತ್ತದೆ.

ಹೀಗೆ ವಚನಕಾರ್ತಿಯರು, ವರ್ಣ, ಜಾತಿಗಳ ವಿರುದ್ಧ ದನಿಯೆತ್ತಿ, ಮಠ, ದೇವಾಲಯಗಳನ್ನು ಧಿಕ್ಕರಿಸಿ, ವೇದ ಪುರಾಣಗಳನ್ನು ಟೀಕಿಸುತ್ತಾ, ಹೆಣ್ಣು-ಗಂಡಿನ ಭೇದವನ್ನು ಪ್ರಶ್ನಿಸಿ ದುಡಿಮೆಯ ಮಹತ್ವವನ್ನು ಸಾರಿದರು. ಮನುಷ್ಯತ್ವದ ನೆಲೆಯ ಸಮಸಮಾಜವನ್ನು ಕಟ್ಟಲು ನಿರಂತರವಾಗಿ ಶ್ರಮಿಸಿದ ಕಾಯಕಯೋಗಿಗಳು, ಶರಣ ಶರಣೆಯರು.

ಪರಾಮರ್ಶನ ಗ್ರಂಥಗಳು

೧. ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ: ಸಂ.ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು-೨೦೦೬.

೨. ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ: ಸಂ.ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು-೧೯೯೩.

೩. ದಲಿತವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ: ಮ.ನ.ಜವರಯ್ಯ ಸಿದ್ಧಾರ್ಥ ಗ್ರಂಥಮಾಲೆ-೧೯೯೭.

೪. ವಚನಕಾರ್ತಿಯರು: ಎಂ.ಎಸ್.ವೇದಾ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೨೦೧೧.

೫. ವಚನಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು: ಮೂಲ: ಸಿದ್ಧಯ್ಯ ಪುರಾಣಿಕ ಅನು: ಎಸ್.ನಂಜುಂಡಸ್ವಾಮಿ, ಭಾರತೀಯ ವಿದ್ಯಾಭವನ-೨೦೦೪.

೬. ಶಿವಶರಣೆಯರ ವಚನಸಂಪುಟ: (ಸಂ).ವೀರಣ್ಣರಾಜೂರು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು-೨೦೦೧.

೭. ಹಣತೆಯ ಬೆಳಕಿನಲ್ಲಿ: ಶಶಿಕಲಾವಸ್ತ್ರದ: ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೨೦೧೩.

ವಿಶ್ವಬಂಧು ಮರುಳಸಿದ್ದ; ಸಾಮಾಜಿಕ ಹೋರಾಟ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಕಂಡು ಬರುವ ದೇವಸ್ಥಾನ ಐತಿಹ್ಯ ಮತ್ತು ಕುರುಹುಗಳು

ಡಾ. ಎಂ.ಶ್ರೀನಿವಾಸಮೂರ್ತಿ

ಸಂಶೋಧನ ಅಧಿಕಾರಿ, ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು-06, ಇ-ಮೇಲ್: Srimurthy72@yahoo.in

ಬಸವಣ್ಣನ ಹಿರಿಯ ಸಮಕಾಲೀನ ಮರುಳಸಿದ್ಧನು ಉಜ್ಜಯಿನಿಯಲ್ಲಿ ಸದ್ಧರ್ಮ ಪೀಠವೊಂದನ್ನು ಸ್ಥಾಪಿಸಿ ಆ ಪೀಠದಲ್ಲಿ ತನ್ನ ಶಿಷ್ಯ ತೆಲುಗು ಬಾಳು ಸಿದ್ಧಯ್ಯನನ್ನು ಮಾಘಶುದ್ಧ ಹುಣ್ಣಿಮೆಯಂದು ಕೂರಿಸಿ 'ತರಳ, ಬಾಳು' ಎಂದು ಹರಸಿ ಆಶೀರ್ವದಿಸಿದ ದಿನವನ್ನು ತರಳಬಾಳು ಹುಣ್ಣಿಮೆ ಎಂದು ಕರೆಯಲಾಗುತ್ತಿದೆ. ಜಾತಿ-ಮತ ಗಂಡು-ಹೆಣ್ಣು ಎಂಬ ಬೇಧ-ಭಾವ ತೊರೆದು ಮಾನವರ ಉನ್ನತಿಗೆ ಯತ್ನಿಸುತ್ತಾ ಅಣವ ಮಲ, ಮಾಯಾ ಮಲ, ಕಾರ್ಮಿಕ ಮಲಗಳಿಂದ ದೂರವಾಗಿ ವಿಶ್ವಮಾನವರಾಗಿ ಬಾಳಬೇಕೆಂಬ ಮಹಾನ್ ತತ್ವದ ಆರಾಧನೆ ಮತ್ತು ಅನುಷ್ಠಾನದ ಸಂಕಲ್ಪವೇ ತರಳಬಾಳು ಹುಣ್ಣಿಮೆ. ಮಾಘಶುದ್ಧ ಹುಣ್ಣಿಮೆಯೆಂದು 9 ಪಾದಗಳ ಭೂಮಿಯನ್ನು ಪಡೆದು ಸದ್ಧರ್ಮ ಪೀಠ ನಿರ್ಮಿಸಿ – 'ತರಳಾ, ಬಾಳು' ಎಂದು ಹರಸಿದ ಆ ದಿನದ ಸ್ಮರಣಾರ್ಥ 9 ದಿನಗಳ ಕಾಲ ನಡೆಯುವ ಕಾರ್ಯಕ್ರಮವೇ 'ತರಳಬಾಳು ಹುಣ್ಣಿಮೆ' ಎಂದು ಪ್ರಖ್ಯಾತಗೊಂಡಿದೆ. ಶ್ರೀ ತರಳಬಾಳು ಜಗದ್ಗುರು ಬೃಹನ್ಮಠವು ಕಳೆದ ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ನಾಡಿನ ಒಳ-ಹೊರಗೆ ನಡೆಸಿಕೊಂಡು ಬಂದಿರುವ 'ತರಳಬಾಳು ಹುಣ್ಣಿಮೆ ಮಹೋತ್ಸವ'ವು ಒಂದು ನಾಡಹಬ್ಬವಾಗಿ ಸರ್ವಜನಾದರಣೆಯನ್ನು ಗಳಿಸಿದೆ. ಸಂಕುಚಿತ ಬುದ್ಧಿಯ ಮೂಲಭೂತವಾದಿಗಳ ಕೋಲಾಹಲದಿಂದಾಗಿ ವಿವಿಧ ಧರ್ಮಗಳ ಮಧ್ಯೆ ಸಂಶಯದ ಅಡ್ಡಗೋಡೆಗಳು ನಿರ್ಮಾಣವಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಜಾತಿ-ಮತ, ಪ್ರಾಂತ್ಯ-ಪ್ರದೇಶಗಳ ಭೇದವಿಲ್ಲದೆ ಎಲ್ಲರನ್ನೂ ಮಾನವತಾ ಸದ್ಧರ್ಮದ ಬೆಸುಗೆಯಲ್ಲಿ ಒಗ್ಗೂಡಿಸುವ ಭಾವೈಕ್ಯ ಸಂಗಮವಾದ ಈ ಮಹೋತ್ಸವದ ಮಹಾವೇದಿಕೆ ಒಂದು ಆಶಾಕಿರಣವಾಗಿದೆ.

ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರ ಸಮಕಾಲೀನರಾದ ವಿಶ್ವಬಂಧು ಮರುಳಸಿದ್ಧರು ಅಂದಿನ ಸಮಾಜವನ್ನು ಪಟ್ಟಭದ್ರ ಹಿತಾಸಕ್ತಿಗಳ ಶೋಷಣೆಯ ಕಬಂಧಬಾಹುಗಳಿಂದ ರಕ್ಷಿಸಲು ಅಜೀವಪರ್ಯಂತ ಹೋರಾಡಿದರು. ಧರ್ಮದ ತಳಹದಿಯ ಮೇಲೆ ಮಾನವ ಮಾನವರ ಮಧ್ಯೆ ತರತಮ ಭಾವವಿಲ್ಲದ ನವಸಮಾಜವನ್ನು ನಿರ್ಮಿಸಿ, ಸದ್ಧರ್ಮ ಪೀಠವನ್ನು ಸ್ಥಾಪಿಸಿದರು. ಮಾಘ ಶುದ್ಧ ಪೂರ್ಣಿಮೆಯಂದು ತಮ್ಮ ಶಿಷ್ಯಯ ತೆಲಗುಬಾಳು ಸಿದ್ಧಯ್ಯನನ್ನು ಸದ್ಧರ್ಮ ಪೀಠದಲ್ಲಿ ಕುಳ್ಳಿರಿಸಿ 'ತರಳಾ, ಬಾಳು' ಎಂದು ಹರಸಿದರು. 'ತರಳಾ, ಬಾಳು' ಎಂಬ ಪಂಚಾಕ್ಷರಿ ಮಂತ್ರದಲ್ಲಿ ಮಾನವಕುಲದ ಅಭ್ಯದಯವೇ ಅಡಕವಾಗಿದೆ. ಈ ಆಶೀರ್ವಾದದ ಪರಂಪರೆಯಲ್ಲಿ ಸಾಗಿಬಂದ ಸದ್ಧರ್ಮ ಪೀಠಾಧಿಪತಿಗಳೇ ತರಳಬಾಳು ಜಗದ್ಗುರುಗಳವರು ಎಂದು ಹೆಸರಾಗಿದ್ದಾರೆ. ಈ ಐತಿಹಾಸಿಕ ಘಟನೆಯು ಜರುಗಿದ ಹುಣ್ಣಿಮೆಯು ನಾಡಿನಲ್ಲಿ 'ತರಳಬಾಳು ಹುಣ್ಣಿಮೆ' ಎಂದು ಸುಪ್ರಸಿದ್ಧವಾಗಿದೆ.

ಒಂದು ಮಠದ ಪರಂಪರೆಯ ಹಿನ್ನೆಲೆಯಲ್ಲಿ ನಡೆದುಕೊಂಡು ಬಂದಿರುವ ಈ ಹುಣ್ಣಿಮೆ ಮಹೋತ್ಸವವನ್ನು ಜಾತಿ-ಮತ-ಪಂಥಗಳ ಚೌಕಟ್ಟನ್ನು ಮೀರಿ ನಾಡ ಜನರ ಭಾವೈಕ್ಯತೆಯ ಸಾಧನವನ್ನಾಗಿ ರೂಪಿಸಲಾಗಿದೆ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪ್ರತಿವರ್ಷವೂ ನಾಡಿನ ಒಳ ಹೊರಗೆ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ.

ಬಸವಣ್ಣನವರ ಸಮಕಾಲದಲ್ಲಿ ಅಂದರೆ ಹನ್ನೆರಡನೆಯ ಶತಮಾನದ ಉತ್ತರ ಭಾಗದಲ್ಲಿ ಕರ್ನಾಟಕದಲ್ಲಿ ಆಚಾರ್ಯ ಮರುಳಸಿದ್ದನೂ. ಆಂಧ್ರ ಪ್ರದೇಶದಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯನೂ ಆಚಾರ್ಯ ಮರುಳಸಿದ್ದನೂ. ಆಂಧ್ರದೇಶದಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯನೂ ವೀರಶೈವ ಧರ್ಮೋನ್ನತಿಗಾಗಿ ಮಾಡಿದ ಕೆಲಸಗಳು ಅಸಾಧಾರಣ ವಾದುವು. ಮರುಳಸಿದ್ದೇಶ್ವರನು ಆಚಾರ್ಯ ರೇವಣಸಿದ್ಧನ ಶಿಷ್ಯನೆಂದು 'ಮರುಳಸಿದ್ಧ ಕಾವ್ಯ'ದಲ್ಲಿ ಹೇಳಿದೆ. (ಸಂಧಿ 5). ಮರುಳಸಿದ್ಧನ ಹೆಸರು ಸಿದ್ಧರಾಮೇಶ್ವರ ವಚನದಲ್ಲಿ ಬಂದಿದೆ. ಮರುಳಸಿದ್ಧನ ವಚನ ಅರವತ್ತೆಂಟು ಸಾವಿರ ಎಂದು ಸಿದ್ಧರಾಮೇಶ್ವರ ವಚನಗಳಲ್ಲಿ ಹೇಳಿದೆ. (ಸಿದ್ಧರಾಮೇಶ್ವರ ವಚನಗಳು, ಪು. 79) ಆದಿಸೆಟ್ಟಿಯ ವಚನದಲ್ಲಿಯೂ ಮರುಳಸಿದ್ಧನ ಹೆಸರಿದೆ. (ಮರುಳ ಸಿದ್ಧಯ್ಯದೇವರ ಅದೃಷ್ಟಪ್ರಸಾದದ ನಿಷ್ಠೆ ಆದಿಸೆಟ್ಟಿ ವಚನಗಳು ಪುಟ 163, ಧಾರವಾಡ ಮುರುಘಾಮಠದ ಪ್ರಕಟಣೆ).

ಕನ್ನಡ ಕವಿಚರಿತ್ರೆಕಾರರು ವೀರಶೈವ ಆಚಾರ್ಯ ಪಂಚಕಗಳ ವಿಷಯ ಹೇಳುವಾಗ "ಈತನು (ಮರುಳಸಿದ್ಧನು) ಕಗ್ಗಲ್ಲಗೌಡನಿಗೆ ಮಗುವಾಗಿ ಸಿಕ್ಕಿದ್ದನು. ಜಜ್ಜು ಗಂತೆಯ ಧರಿಸಿ, ಕೊಲ್ಲಾಪುರದ ರಕ್ಕಸಿಯ ಕೊಂದು, ಅವಳ ಅವಯವಗಳಿಂದ ಕಿನ್ನರವೀಣೆಯಂ ಮಾಡಿಕೊಂಡನು. ಮರುಳನಂತೆ ಇದ್ದು ಉಜ್ಜುಗಿಯಲ್ಲಿ ಬಯಲಾದನು" ಎಂದು ಹೇಳಿದ್ದಾರೆ. ಇತರ ಆಚಾರ್ಯರ ವಿಷಯವನ್ನು ಕುರಿತು ಹೇಳುವಾಗ 'ವೀರಶೈವ ಕವಿಗಳು' ತಮ್ಮ ಗ್ರಂಥಗಳಲ್ಲಿ ರೇವಣಸಿದ್ಧ, ಮರುಳಸಿದ್ಧ, ಏಕೋರಾಮಿ ತಂದೆ, ಪಂಡಿತಾರಾಧ್ಯ, ವಿಶ್ವಾರಾಧ್ಯ ಎಂಬ ಐವರು ಆಚಾರ್ಯರನ್ನು ಸ್ಮರಿಸಿದ್ದಾರೆ. ಇವರಲ್ಲಿ ಕೆಲವರು ಬಸವನಿಗೆ ಮೊದಲೂ, ಕೆಲವರು ಅವನ ಸಮ ಕಾಲದಲ್ಲಿಯೂ ಇದ್ದಂತೆ ತೋರುತ್ತದೆ. 'ಸುಪ್ರಬೋಧಾಗಮ' ಎಂಬ ಸಂಸ್ಕೃತ ಗ್ರಂಥದಲ್ಲಿ ಈ ಪಂಚಾಚಾರ್ಯರು ಈಶ್ವರನ ಪಂಚಮುಖಿಗಳ ಅವತಾರವೆಂದೂ, ಪಂಚಕ್ಷೇತ್ರಗಳಲ್ಲಿ ಲಿಂಗದಿಂದ ಉತ್ಪನ್ನರಾದರೆಂದೂ ಹೇಳಿದೆ. ಕವಿಚರಿತೆಯ ಉಲ್ಲೇಖದಿಂದ ವೀರಶೈವ ಪಂಚಾಚಾರ್ಯರಲ್ಲಿ ನಾಲ್ವರು – ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ – ಇವರು ಬಸವನ ಸಮಕಾಲೀನರೆಂದೂ ತಿಳಿದುಬರುತ್ತದೆ.

ಆಚಾರ್ಯ ಮರುಳಸಿದ್ಧನನ್ನು ಕುರಿತು ದೇಪಕವಿಯು (1587) ಒಂದು ಕಾವ್ಯವನ್ನು ಬರೆದಿದ್ದಾನೆ. ಆ ಕಾವ್ಯದಲ್ಲಿ ಶ್ರೀಶೈಲದ ಶಿಲಾದಮುನಿಯ ಪತ್ನಿ ಸುಪ್ರಭ ರಜಸ್ವಲೆಯಾಗಿ ಶಿವಾರ್ಚನೆ ಮಾಡಿದ್ದರಿಂದ ಶಿಲಾದಮುನಿಯಿಂದ ಹೊಲೆ ಜನ್ಮದಲ್ಲಿ ಜನಿಸು ಎಂದು ಶಾಪಗ್ರಸ್ತಳಾದಳು. ಆ ಶಾಪವನ್ನು ಪರಿಹರಿಸಿಕೊಳ್ಳಲು ಕರುಗಲ್ಲಿನ ಒಡೆಯ ಬಾಚಿಗೌಡನ ಸೇವಕ ಕುಲಹೀನನ ಹೊಟ್ಟೆಯಲ್ಲಿ ಜನಿಸು. ನಿನ್ನ ಹೊಟ್ಟೆಯಲ್ಲಿ ಒಬ್ಬ ಮಹಾತ್ಮ ಜನಿಸುವನು. ಅವನಿಂದ ಶಾಪವಿಮೋಚನೆಯಾಗುವುದು ಎಂದು ಶಿಲಾದಮುನಿ ಹೇಳಿದನು. ಮುನಿಯ ಆಜ್ಞೆಯಂತೆ ಕಗ್ಗಲ್ಲಪುರಕ್ಕೆ ಬಂದು ಕೂಗಿಮಾರನ ಪತ್ನಿಯಾಗುವಳು. ಇವಳ ಹೊಟ್ಟೆಯಲ್ಲಿ ಮರುಳಸಿದ್ಧನು ಜನಿಸುವನು.

ಮರುಳನು ದನಗಳನ್ನು ಕಾಯುವ ಕಾಯಕವನ್ನು ಕೈಗೊಂಡು, ಶಿವನ ಕೃಪೆಯಿಂದ ಮಹಿಮಾಶಾಲಿ ಎನಿಸಿಕೊಂಡನು. ಮಾಯೆಯನ್ನು ಜಯಿಸಿದನು. ಕುಂಭದ ಪವಾಡ ಮತ್ತು ಸುಣ್ಣದ ಪವಾಡ ಮೊದಲಾದುವನ್ನು ಮಾಡಿದನು. ಕಂಬಳಾಪುರದ ರಾಜನೇ ಮೊದಲಾದವರಿಂದ ಸ್ತುತಿಗೊಂಡನು. ಮಲೆಯಾಳದೊಳಗೆ ಪ್ರಸಿದ್ಧಿ ಪಡೆದ ಚಿನ್ಮಯಗಿರಿಯ ಸಿದ್ಧರಾಮನನ್ನು ಕಂಡನು. ಚಿನ್ಮೂಲಗಿರಿಯಲ್ಲಿ ಗುರುಗಳಾದ ರೇವಣಸಿದ್ಧನ ಮೂರ್ತಿಯನ್ನು ಕಂಡನು (ಇದು ಕೊಲ್ಲಾಪುರ ಜಿಲ್ಲಾ ಸಿದ್ದಗಿರಿಯಾಗಿರಬೇಕು). "ಗುರುರಾಯ ಸಲಹು" ಎಂದು ಬೇಡಿಕೊಂಡನು. "ತಂದೆ ಕರುಣಿಪುದು ಮುಂದಣ ಭಕ್ತಿಯಾಚರಣೆಯನು" ಎಂದು ಅಂಗಲಾಚಿದನು. ಓರುಂಗಲ್ಲಿಗೆ ಹೋಗಿ ಮಹಿಮೆಯನ್ನು ತೋರಿದನು. ಕೊಲ್ಲಾಪುರದ ಮಾಯೆಯನ್ನು ಜಯಿಸಿದನು. ನವನಾಥಸಿದ್ಧನನ್ನು ವಾದದಲ್ಲಿ ಸೋಲಿಸಿದನು. ಇವನ ವಚನಗಳ ಅಂಕಿತ 'ರೇವಣಪ್ರಭುವೆ', ಈತನು ಯಜ್ಞಯಾಗಗಳ ಹಿಂಸೆಯನ್ನು ತಪ್ಪಿಸಲು ಹೆಣಗಿದನು. ಕಡೆಗೆ ಬಳ್ಳಾರಿ ಜಿಲ್ಲಾ, ಉಜ್ಜಯಿನಿಯಲ್ಲಿ ಬಯಲಾದವನು. ಈತನ ಸಮಾಧಿ ಉಜ್ಜಯಿನಿಯ ಹರಿಜನ ಕೇರಿಯಲ್ಲಿದೆ ಎಂದು 'ಮರುಳಶಿದ್ಧಾಂಕ'ದಲ್ಲಿ ಹೇಳಿದೆ.

ಶಿವಾಗಮಗಳಲ್ಲಿ ಮರುಳಸಿದ್ಧನು ಮಾಳವದೇಶದ ಉಜ್ಜಯಿನಿಯ ವಟಕ್ಷೇತ್ರದಲ್ಲಿ ಸಿದ್ದೇಶ್ವರ ಲಿಂಗದಲ್ಲಿ ಹುಟ್ಟಿದಂತೆ ಹೇಳಿದೆ. "ತದ್ವನ್ ಮರುಳಸಿದ್ದಸ್ಯ ವಟಕ್ಷೇತ್ರೇ ಮಹತ್ತರೆ । ಸಿದ್ದೇಶಲಿಂಗಾ ಸಂಸ್ಥಾನಮುಜ್ಜಯಿನೀಪುರೇ" ಎಂದು ಹೇಳಿದೆ. (ಸ್ವಯಂಭುವಾಗಮ) ಈ ಮಾತಿಗೆ ಸಾಕ್ಷಿಯಾಗಿ ಅವಂತಿ ಅಥವಾ ಉಜ್ಜಯಿನಿ (ಮಾಳವದೇಶ)ಯಲ್ಲಿ ಇಂದಿಗೂ ವಟಕ್ಷೇತ್ರ ಸಿದ್ದೇಶ್ವರಲಿಂಗವಿರುವುದನ್ನು ನಾವು ಕಾಣಬಹುದು. ಲಿಂಗೋದ್ಭವಲೀಲೆಯನ್ನು ನಂಬದವರಿಗೂ ಇಲ್ಲಿ ಚರಿತ್ರೆಯ ಆಧಾರವಿದೆ ಎಂಬುದು ಗಮನಾರ್ಹವಾಗಿದೆ.

ಮರುಳಸಿದ್ಧನ ವಿಚಾರಗಳು ಈ ಮುಂದೆ ಹೇಳುವ ಗ್ರಂಥಗಳಲ್ಲಿವೆ; ಸ್ವಯಂಭುವಾಗಮ, ಸುಪ್ರಭೇದಾಗಮ, ವೀರಲೈಂಗೋಪನಿಷತ್, ರೇಣುಕ ವಿಜಯ, ಶ್ರೀಕರಭಾಷ್ಯ, ವೀರಶೈವಾಚಾರ ಪ್ರದೀಪಿಕಾ, ವೀರಶೈವ ಕೌಸ್ತುಭ, ಸದಾಚಾರ ಸಂಗ್ರಹ, ವೀರಶೈವಾನ್ವಯ ಚಂದ್ರಿಕಾ, ವೀರಶೈವ ಮಹಾಪುರಾಣ, ಗುರುರಾಜಚಾರಿತ್ರ, ಚತುರಾಚಾರ್ಯ ಪುರಾಣ, ವಿವೇಕ ಚಿಂತಾಮಣಿ, ಚೆನ್ನಬಸವ ಪುರಾಣ, ಪಂಚಬ್ರಹ್ಮೋದಯ ಭಾಷ್ಯ ಇತ್ಯಾದಿ.

ವಚನಕಾರರ ಮೇಲೆ ಶರಣ ಮರುಳಸಿದ್ಧನ ಪ್ರಭಾವ ಬಿದ್ದಂತೆ ತೋರುತ್ತದೆ. ಆದಿಸೆಟ್ಟಿಯ ವಚನದಲ್ಲಿ "ಮರುಳಸಿದ್ಧಯ್ಯ ದೇವರ ಅದೃಷ್ಟ ಪ್ರಸಾದದ ನಿಷ್ಠೆ" (ಆದಿಶೆಟ್ಟಿ ವಚನ ಪು. 163) ಎಂಬ ಮಾತಿದೆ. ಅದೇವಚನಗಳಲ್ಲಿ 'ಮರುಳಸಿದ್ಧ ದೇವರೆನ್ನಗೋತ್ರ' (ಪು. 164) ಎಂಬ ಇನ್ನೊಂದು ಮಾತಿದೆ. ಸಿದ್ಧರಾಮನ ವಚನಗಳಲ್ಲಿ 'ಮರುಳಸಿದ್ಧನ ವಚನ ಅರವತ್ತೆಂಟು ಸಾವಿರ' (ಪು. 79) ಎಂದು ಹೇಳಿದೆ. ಇದರಿಂದ ಮರುಳಸಿದ್ಧನು ಪ್ರಸಿದ್ಧ ವಚನಕಾರನೆಂದು ಹೇಳಬಹುದು. ಇವನ್ನೆಲ್ಲಾ ಸಂಗ್ರಹಿಸಿ, ಪ್ರಕಾಶಿಸಿದರೆ ಕನ್ನಡ ಸಾಹಿತ್ಯಕ್ಕೆ ಮಹೋಪಕಾರವಾದೀತು.

ವಿಶ್ವಬಂಧು ಮರಳುಸಿದ್ಧನ ಹಿನ್ನೆಲೆ:–ಮರುಳಸಿದ್ಧನ ತಂದೆ–ತಾಯಿಗಳು ಅವನ ಬಾಲ್ಯದಲ್ಲಿಯೇ ಮರಣ ಹೊಂದಿದ್ದರಿಂದ ಕಗ್ಗಲ್ಲುಪುರದ ಬಾಚಣ್ಣಗೌಡನ ಮನೆಯಲ್ಲಿ ಬೆಳೆಯುತ್ತಾನೆ. ದನ–ಕರುಗಳನ್ನು ಕಾಯ್ದುಕೊಂಡು ಅವುಗಳ ಒಡನಾಡಿಯಾಗಿದ್ದ ಮರುಳಸಿದ್ಧನಿಗೆ ಮಾರಿ ಜಾತ್ರೆಯಲ್ಲಿ ಕೋಣವೊಂದನ್ನು ಬಲಿ ಕೊಡುವ ವಿಷಯ ತಿಳಿದು ಕೋಣನ ಬಲಿಯನ್ನು ವಿರೋಧಿಸಿ ನಿಲ್ಲುತ್ತಾನೆ. ವೈದಿಕರು ಮೌಢ್ಯವನ್ನೇ ಬಿತ್ತಿಊರ ಗೌಡನಗೂ ಊರಿಗೂ ಶ್ರೇಯಸ್ಕರವಾಗುವುದಿಲ್ಲವೆಂಬ ಭಯವನ್ನು ತುಂಬಿದ್ದರಿಂದ ಮರುಳಸಿದ್ಧನ ಹೋರಾಟ ಹಿಂಬಿಳುತ್ತದೆ. ಈ ಕಾರಣದಿಂದ ಬೇಸರ ಹೊಂದಿ ಊರನ್ನೇ ತೊರೆದು ಕಾಡು–

ಮೇಡು ಅಲೆದು ಚಿನ್ಮೂಲಾದ್ರಿ ಬೆಟ್ಟಕ್ಕೆ (ಚಿತ್ರದುರ್ಗ) ಬರುತ್ತಾನೆ. ಸಿದ್ಧರ ಬೀಡಾಗಿದ್ದ ಚಿನ್ಮೂಲಾದ್ರಿಯಲ್ಲಿ ಗುರು ರೇವಣ ಸಿದ್ಧರ ಶಿಷ್ಯನಾಗಿ ಅವರಿಂದ ಜ್ಞಾನವನ್ನು ಪಡೆದು ಲೋಕ ಸಂಚಾರಕ್ಕೆ ಹೊರಡುತ್ತಾನೆ. ವೈದಿಕ–ಅವೈದಿಕ ಪರಂಪರೆಗಳ ಬಹು ದೊಡ್ಡ ಸಂಘರ್ಷದ ಮಹಾಯಾತ್ರೆಯಲ್ಲಿ ಮರುಳಸಿದ್ಧನದ್ದು ದೊಡ್ಡ ಪಾತ್ರವಾಗಿದೆ. ಅವನ ಸಂಚಾರದಲ್ಲಿ ಮೊಟ್ಟ ಮೊದಲು ಎದುರಿಸುವುದು ವೈದಿಕಾರ ಯಾಗವನ್ನು. ಹೆಮ್ಮನ ಬೇತೂರಿನಲ್ಲಿ ಯಜ್ಞ ಯಾಗಾದಿಗಳು ಬಹು ಸಂಭ್ರಮದಿಂದ ನಡೆಯುವಾಗ ಅವನು ಮಧ್ಯೆ ಪ್ರವೇಶಿಸುತ್ತಾನೆ. ಸುತ್ತೆಲ್ಲ ಬಡತನ, ಜನರು ಅನ್ನಕ್ಕೆ ಕಷ್ಟ ಪಡುತ್ತಿರುವಾಗ ತುಪ್ಪ–ಅನ್ನ–ಗಂಧಗಳನ್ನು ಅಗ್ನಿಗೆ ಅರ್ಪಿಸುವ ಈ ಬಗೆಯ ಆಚರಣೆಯ ವಿರುದ್ಧ ಮರುಳಸಿದ್ಧ ದನಿ ಎತ್ತುತ್ತಾನೆ. ಜನರನ್ನು ಸಂಘಟಿಸುತ್ತಾನೆ. ಆದರೂ ಬಹು ಸಂಖ್ಯಾತ ಯಥಾಸ್ಥಿತಿ ವಾದಿಗಳು ಆತನ ವಿರುದ್ಧ ಮುಗಿಬೀಳುತ್ತಾರೆ. ಅಲ್ಲಿನ ಮುಖಂಡ ಮರುಳಸಿದ್ಧರ ಕೈಕಾಲುಗಳನ್ನು ಕಟ್ಟಿ ಹತ್ತಿರದ ಅಣಜಿ ಕೆರೆಯಲ್ಲಿಹಾಕಿ ಬರುತ್ತಾರೆ. ಅಣೆಮಾದಿ ವಿದ್ಯೆಗಳನ್ನು ಬಲ್ಲ ಮರುಳಸಿದ್ಧ ಅದರಿಂದ ಪಾರಾಗಿ ಬಂದು ಮತ್ತೆ ವೈದಿಕರ ಮುಂದೆ ನಿಲುತ್ತಾನೆ. ಈ ಬಾರಿ ಅವನನ್ನು ಕುರುಡಿಯಲ್ಲಿ ಹಗೇವೊಂದಕ್ಕೆ ಸುಣ್ಣ ತುಂಬಿ ಅವನನ್ನು ಅದರೊಳಗೆ ಹಾಕಿ ಮುಚ್ಚಿ ಬರುತ್ತಾರೆ. ಆದರೂ ಮರುಳಸಿದ್ಧ ಅಲ್ಲಿಂದ ಹೊರಕ್ಕೆ ಬರುತ್ತಾರೆ. ಇವನ ಉಪಟಳವನ್ನು ತಡೆಯಲು ಪ್ರಭುತ್ವದ ನರವು ಕೋರುವ ಪುರೋಹಿತರಿಗೆ ಪಾಂಡ್ಯ ಅರಸು ಹಸಾದವೆಂದು ಮರಳುಸಿದ್ಧನ ಮೇಲೆ ಆನೆಯನ್ನು ಬಿಡುತ್ತಾನೆ. ಹೀಗೆ ಪ್ರಭುತ್ವ ಮತ್ತು ಪುರೋಹಿತಶಾಹಿ ಒಂದಾಗಿ ಮರುಳಸಿದ್ಧನ ದನಿಯನ್ನು ಅಡಗಿಸಲು ನೋಡುತ್ತಾರೆ. ಮರುಳಸಿದ್ಧನ ಸಿದ್ಧಿ ಮತ್ತು ಸಾಧನೆಯ ಮುಂದೆ ಈ ಎಲ್ಲಾ ಬೌದ್ಧಿಕ ಹೋರಾಟಗಳು ವಿಫಲವಾಗುತ್ತವೆ. ಇದು ಅಂದಾನುಕರಣೆಯ ವಿರುದ್ಧ ಮರುಸಿದ್ಧ ನಡೆಸಿದ ಮೊದಲ ಹೋರಾಟ.

ಮರುಳಸಿದ್ಧ ಪ್ರಜಾಪರವಾದ ಹೋರಾಟಕ್ಕೆ ಸದಾ ಮುಂದೆ ಎಂಬುದಕ್ಕೆ ಹಳೇಬೀಡಿನ ಅರಸ ಬಲ್ಲಾಳ ಹಾಗೂ ಕೊಲ್ಲಾಪುರದ ಮಾಯೆಯ ವಿರುದ್ಧ ನಡೆಸಿದ ಹೋರಾಟಗಳು ಸಾಕ್ಷಿಗಳಾಗಿವೆ. ಪ್ರಜಾಪೀಡಕನಾದ ಬಲ್ಲಾಳ ದೊರೆಯ ವಿರುದ್ಧವಾಗಿ ಅವನು ಸ್ಥಳೀಯ ಜನರನ್ನು ಸಂಘಟಿಸಿ ಹೋರಾಡಿ ಸಮಾನ ಹಕ್ಕು ಮತ್ತು ಸಾಮಾನ್ಯ ಅಗತ್ಯತೆಗಳ ಪೂರ್ಯೆಕೆಯಲ್ಲಿ ನಡೆಸಿದ ಹೋರಾಟದಲ್ಲಿ ಅವ ಪಾತ್ರ ಗಣ್ಯವಾದುದು. ಶಕ್ತಿಯೇ ಮುಖ್ಯವೆಂದು ಭಾವಿಸಿ ಆ ಸಿದ್ಧಾಂತಕ್ಕೆ ಬದ್ಧಳಾಗಿ ಶಿವನ ಆರಾಧಕರನ್ನು ಹಿಂಸಿಸುವ, ತನ್ನ ಮಾಟ–ಮಂತ್ರ ಹಾಗೂ ವಿತಂಡ ವಾದದ ಮೂಲಕ ಶಿವ ಭಕ್ತರನ್ನು ಸೋಲಿಸಿ ಅವರನ್ನು ಬಂಧನಗೈಯುತ್ತಿದ್ದ ಕೊಲ್ಲಾಪುರದ ಯುವರಾಣಿ ಮಾಯೆಯ ವಿರುದ್ಧವೂ ಮರುಳಸಿದ್ಧ ತಾತ್ವಿಕವಾದ ಹೋರಾಟ ಮಾಡುತ್ತಾನೆ. ಆಧಾರ ಸ್ತಂಭದಂತಿರುವ ಶಿವನಿಲ್ಲದೇ ಆಧೇಯವಾದ ಶಕ್ತಿಗೆ ಅಸ್ತಿತ್ವವೇ ಇಲ್ಲವೆಂಬುದನ್ನು ಮಾಯೆಗೆ ಮನವರಿಕೆ ಮಾಡಿಕೊಡುತ್ತಾನೆ. ಅನಂತರ ಕ್ರಿಯಾದೀಕ್ಷೆಯನ್ನು ನೀಡಿ ಪರಿವರ್ತಿಸುತ್ತಾನೆ. ಜಟ್ಟಿಗ ಮೊದಲಾದ ಮಾಯೆಯ ಹಿಂಬಾಲಕರು ಮರುಳಸಿದ್ಧನ ಮಾರ್ಗವನ್ನು ಹಿಡಿಯುತ್ತಾರೆ.

ಹೊಸತಲೆಮಾರಿನ ಲೇಖಕರು ಕಂಡಂತೆ ಮರುಳಸಿದ್ಧ:–ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿನ ಪ್ರಮುಖ ಕವಿ ಡಾ. ಮಹದೇವ ಬಣಕಾರರು "ವಿಶ್ವಬಂಧು ಮರುಳಸಿದ್ಧ ಕಾವ್ಯ" ಎಂಬ ಮಹಾಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಇದು ಒಂದು ಸಾವಿರದ ಇನ್ನೂರ ಅರವತ್ತೊಂಬತ್ತು ಪದ್ಯಗಳಿರುವ ಕೃತಿಯಾಗಿದ್ದು ದೇವಕವಿ ಮರುಳಸಿದ್ಧ ಕಾವ್ಯವನ್ನು ಆಧಾರವಾಗಿಟ್ಟುಕೊಂಡು ಅವಾಸ್ತವ ಅಂಶಗಳನ್ನು ಕೈಬಿಟ್ಟು ವೈಜ್ಞಾನಿಕ ತಳಹದಿಯ ಮೇಲೆ ಕಾವ್ಯ ರಚನೆ ಮಾಡಿದ್ದಾರೆ.

ಮರುಳಸಿದ್ಧನ ಮಹಿಮೆಯನ್ನು ವಸ್ತುವಾಗಿಟ್ಟುಕೊಂಡು ದ.ರಾ.ಬೇಂದ್ರೆ 'ಮಾಯಾ ಕಿನ್ನರಿ' ಕವನವನ್ನು ರಚಿಸಿದ್ದಾರೆ. ಇದೊಂದು ವಿಶಿಷ್ಟವಾದ ಆಧ್ಯಾತ್ಮಿಕ ಅನುಭಾವದ ಕಥನಗೀತೆಯಂತಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಮರುಳಸಿದ್ಧನ ಮಹಿಮೆಯನ್ನು ಕುರಿತು "ಸಿದ್ಧಕಿನ್ನರಿ" ಎಂಬ ಕವನ ರಚಿಸಿದ್ದಾರೆ. ಒಟ್ಟಾರೆ ಮರುಳಸಿದ್ಧನ ಜೀವನ ಸಾಧನೆಯನ್ನು ವಿವರಿಸುವ ಈ ಎರಡೂ ಗೀತೆಗಳು ಮೌಲಿಕವಾದವು.

ಚಿತ್ರದುರ್ಗ ಜಿಲ್ಲೆಯ ಪ್ರಮುಖ ಕಾದಂಬರಿಕಾರರಾಗಿರುವ ಬಿ.ಎಲ್.ವೇಣು ಅವರು ಅಸ್ಪೃಶ್ಯನಾಗಿ ಬಹುದೊಡ್ಡ ಸಾಧನೆಗೈದು ಒಂದು ದೊಡ್ಡ ಪರಂಪರೆಯೇ ಬೆಳೆಯಲು ಕಾರಣಕರ್ತನಾದ ಮರುಳಸಿದ್ಧನ ವ್ಯಕ್ತಿತ್ವದಿಂದ ಆಕರ್ಷಿತರಾಗಿ ಸಾಕಷ್ಟು ಕ್ಷೇತ್ರಕಾರ್ಯ ನಡೆಸಿ ಕಾದಂಬರಿಕಾರರಾಗಿ ನೂರ ಹದಿನೈದು ವಚನಗಳನ್ನು ಒಳಗೊಂಡ 'ಕ್ರಾಂತಿಯೋಗಿ ಮರುಳಸಿದ್ಧ' ಎಂಬ ಕಾದಂಬರಿಯನ್ನು ಬರೆದಿದ್ದಾರೆ.

ಶಿಕ್ಷಣ ಸಂಸ್ಥೆಗಳು:–ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯನ್ನು ಹುಟ್ಟುಹಾಕಿದ್ದು ಗ್ರಾಮೀಣ ಭಾಗದ ಜನರಿಗೆ ಅತ್ಯಂತ ಉಪಯುಕ್ತವಾಗಿದೆ. ವಿದ್ಯಾಸಂಸ್ಥೆಯ ಆಶ್ರಯದಲ್ಲಿ ಇಂದು 230ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ನಡೆಯುತ್ತಿವೆ. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 35,000. ನೌಕರರು 1500 ಇದರ ಬಹುಭಾಗ ಸಂಸ್ಥೆಗಳು ಮಧ್ಯಕರ್ನಾಟಕದ 13 ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿದ್ದು ಅಲ್ಲಿ ಮಾರ್ದನಿಗೊಳ್ಳುತ್ತಿದೆ. ಶಿಶುವಿಹಾರದಿಂದ ಇಂಜಿನಿಯರಿಂಗ್ ಕಾಲೇಜಿನವರೆಗೆ ವಿವಿಧ ಶಿಕ್ಷಣ ಸಂಸ್ಥೆಗಳು ಇದರ ತೆಕ್ಕೆಯಲ್ಲಿವೆ.

ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿ:–ಸಂಸ್ಥೆಯ ಅಧ್ಯಕ್ಷರಾದ ಇವರನ್ನು ಪರಮಪೂಜ್ಯ ಶ್ರೀ ಮದುಜ್ಜಯಿನಿಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ 1109 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಎಂದು ಉಲ್ಲೇಖಿಸಲಾಗುತ್ತವೆ. ವಿದ್ವಾಂಸರೂ ಬಹುಭಾಷಾ ಪಂಡಿತರಾಗಿ ಕಂಪ್ಯೂಟರ್ ತಜ್ಞರೂ ಆಗಿರುವ ಶ್ರೀಗಳವರದು ಅತ್ಯಂತ ವೈಜ್ಞಾನಿಕ ವೈಚಾರಿಕ ಮನೋಭಾವ ಅವರು ತಮ್ಮ ಅಮೂಲ್ಯ ಕನ್ನಡ ಮತ್ತು ಇಂಗ್ಲೀಷ್ ಬರಹ ಭಾಷಣಗಳು ಹಾಗೂ ಕೃತಿಗಳ ಮೂಲಕ ರಾಷ್ಟ್ರೀಯ– ಅಂತರಾಷ್ಟ್ರೀಯ ಮಟ್ಟದಲ್ಲಿ ವಿದ್ವಜ್ಜನರ ಗಮನ ಸೆಳೆದಿದ್ದಾರೆ.

ತರಳಬಾಳು ಹುಣ್ಣಿಮೆ ಮಹೋತ್ಸವ: ಬಸವಣ್ಣನ ಹಿರಿಯ ಸಮಕಾಲೀನ ಮರುಳಸಿದ್ಧನು ಉಜ್ಜಯಿನಿಯಲ್ಲಿ ಸದ್ಧರ್ಮ ಪೀಠವೊಂದನ್ನು ಸ್ಥಾಪಿಸಿ ಆ ಪೀಠದಲ್ಲಿ ತನ್ನ ಶಿಷ್ಯ ತೆಲುಗು ಬಾಳು ಸಿದ್ಧಯ್ಯನನ್ನು ಮಾಘಶುದ್ಧ ಹುಣ್ಣಿಮೆಯಂದು ಕೂರಿಸಿ 'ತರಳ, ಬಾಳು' ಎಂದು ಹರಸಿ ಆಶೀರ್ವದಿಸಿದ ದಿನವನ್ನು ತರಳಬಾಳು ಹುಣ್ಣಿಮೆ ಎಂದು ಕರೆಯಲಾಗುತ್ತಿದೆ. ಜಾತಿ–ಮತ ಗಂಡು–ಹೆಣ್ಣು ಎಂಬ ಬೇಧ–ಭಾವ ತೊರೆದು ಮಾನವರ ಉನ್ನತಿಗೆ ಯತ್ನಿಸುತ್ತಾ ಅಣವ ಮಲ, ಮಾಯಾ ಮಲ, ಕಾರ್ಮಿಕ ಮಲಗಳಿಂದ ದೂರವಾಗಿ ವಿಶ್ವಮಾನವರಾಗಿ ಬಾಳಬೇಕೆಂಬ ಮಹಾನ್ ತತ್ವದ ಆರಾಧನೆ ಮತ್ತು ಅನುಷ್ಠಾನದ ಸಂಕಲ್ಪವೇ ತರಳಬಾಳು

ಹುಣ್ಣಿಮೆ. ಮಾಘಶುದ್ಧ ಹುಣ್ಣಿಮೆಯೆಂದು 9 ಪಾದಗಳ ಭೂಮಿಯನ್ನು ಪಡೆದು ಸದ್ಧರ್ಮ ಪೀಠ ನಿರ್ಮಿಸಿ – 'ತರಳಾ, ಬಾಳು' ಎಂದು ಹರಸಿದ ಆ ದಿನದ ಸ್ಮರಣಾರ್ಥ 9 ದಿನಗಳ ಕಾಲ ನಡೆಯುವ ಕಾರ್ಯಕ್ರಮವೇ 'ತರಳಬಾಳು ಹುಣ್ಣಿಮೆ' ಎಂದು ಪ್ರಖ್ಯಾತಗೊಂಡಿದೆ. ಶ್ರೀ ತರಳಬಾಳು ಜಗದ್ಗುರು ಬೃಹನ್ಮಠವು ಕಳೆದ ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ನಾಡಿನ ಒಳ–ಹೊರಗೆ ನಡೆಸಿಕೊಂಡು ಬಂದಿರುವ 'ತರಳಬಾಳು ಹುಣ್ಣಿಮೆ ಮಹೋತ್ಸವ'ವು ಒಂದು ನಾಡಹಬ್ಬವಾಗಿ ಸರ್ವಜನಾದರಣೆಯನ್ನು ಗಳಿಸಿದೆ. ಸಂಕುಚಿತ ಬುದ್ಧಿಯ ಮೂಲಭೂತವಾದಿಗಳ ಕೋಲಾಹಲದಿಂದಾಗಿ ವಿವಿಧ ಧರ್ಮಗಳ ಮಧ್ಯೆ ಸಂಶಯದ ಅಡ್ಡಗೋಡೆಗಳು ನಿರ್ಮಾಣವಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಜಾತಿ–ಮತ, ಪ್ರಾಂತ್ಯ–ಪ್ರದೇಶಗಳ ಭೇದವಿಲ್ಲದೆ ಎಲ್ಲರನ್ನೂ ಮಾನವತಾ ಸದ್ಧರ್ಮದ ಬೆಸುಗೆಯಲ್ಲಿ ಒಗ್ಗೂಡಿಸುವ ಭಾವೈಕ್ಯ ಸಂಗಮವಾದ ಈ ಮಹೋತ್ಸವದ ಮಹಾವೇದಿಕೆ ಒಂದು ಆಶಾಕಿರಣವಾಗಿದೆ.

ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರ ಸಮಕಾಲೀನರಾದ ವಿಶ್ವಬಂಧು ಮರುಳಸಿದ್ಧರು ಅಂದಿನ ಸಮಾಜವನ್ನು ಪಟ್ಟಭದ್ರ ಹಿತಾಸಕ್ತಿಗಳ ಶೋಷಣೆಯ ಕಬಂಧಬಾಹುಗಳಿಂದ ರಕ್ಷಿಸಲು ಅಜೀವಪರ್ಯಂತ ಹೋರಾಡಿದರು. ಧರ್ಮದ ತಳಹದಿಯ ಮೇಲೆ ಮಾನವ ಮಾನವರ ಮಧ್ಯೆ ತರತಮ ಭಾವವಿಲ್ಲದ ನವಸಮಾಜವನ್ನು ನಿರ್ಮಿಸಿ, ಸದ್ಧರ್ಮ ಪೀಠವನ್ನು ಸ್ಥಾಪಿಸಿದರು. ಮಾಘ ಶುದ್ಧ ಪೂರ್ಣಿಮೆಯಂದು ತಮ್ಮ ಶಿಷ್ಯಯ ತೆಲಗುಬಾಳು ಸಿದ್ಧಯ್ಯನನ್ನು ಸದ್ಧರ್ಮ ಪೀಠದಲ್ಲಿ ಕುಳ್ಳಿರಿಸಿ 'ತರಳಾ, ಬಾಳು' ಎಂದು ಹರಸಿದರು. 'ತರಳಾ, ಬಾಳು' ಎಂಬ ಪಂಚಾಕ್ಷರಿ ಮಂತ್ರದಲ್ಲಿ ಮಾನವಕುಲದ ಅಭ್ಯದಯವೇ ಅಡಕವಾಗಿದೆ. ಈ ಆಶೀರ್ವಾದದ ಪರಂಪರೆಯಲ್ಲಿ ಸಾಗಿಬಂದ ಸದ್ಧರ್ಮ ಪೀಠಾಧಿಪತಿಗಳೇ ತರಳಬಾಳು ಜಗದ್ಗುರುಗಳವರು ಎಂದು ಹೆಸರಾಗಿದ್ದಾರೆ. ಈ ಐತಿಹಾಸಿಕ ಘಟನೆಯು ಜರುಗಿದ ಹುಣ್ಣಿಮೆಯು ನಾಡಿನಲ್ಲಿ 'ತರಳಬಾಳು ಹುಣ್ಣಿಮೆ' ಎಂದು ಸುಪ್ರಸಿದ್ಧವಾಗಿದೆ.

ಒಂದು ಮಠದ ಪರಂಪರೆಯ ಹಿನ್ನೆಲೆಯಲ್ಲಿ ನಡೆದುಕೊಂಡು ಬಂದಿರುವ ಈ ಹುಣ್ಣಿಮೆ ಮಹೋತ್ಸವವನ್ನು ಜಾತಿ–ಮತ–ಪಂಥಗಳ ಚೌಕಟ್ಟನ್ನು ಮೀರಿ ನಾಡ ಜನರ ಭಾವೈಕ್ಯತೆಯ ಸಾಧನವನ್ನಾಗಿ ರೂಪಿಸಿದವರು ಹಿಂದಿನ ಶ್ರೀ ತರಳಬಾಳು ಜಗದ್ಗುರು ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪ್ರತಿವರ್ಷವೂ ನಾಡಿನ ಒಳ ಹೊರಗೆ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. ನಾಡಿನ ಪ್ರಮುಖ ಧಾರ್ಮಿಕ ಸಮಾರಂಭಗಳಿಗೆ ಮಾತೃಸ್ವರೂಪದಂತಿರುವ ಈ ತರಳಬಾಳು ಹುಣ್ಣಿಮೆ ಮಹೋತ್ಸವವು ಲಿಂಗೈಕ್ಯ ಗುರುಗಳ ಕರಕಮಲಸಂಜಾತರಾದ ಶ್ರೀ ತರಳಬಾಳು ಜಗದ್ಗುರು ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ನೇತೃತ್ವದಲ್ಲಿ ಹೊಸ ಆಯಾಮವನ್ನು ಪಡೆದು ವಿಶ್ವಬಂಧು ಮರುಳಸಿದ್ಧರ 'ತರಳಾ, ಬಾಳು' ಆಶೀರ್ವಾದ ಮೂಲಮಂತ್ರದ ಆಶಯದಂತೆ ಮುನ್ನಡೆದಿದೆ.

ಆಕರ ಗ್ರಂಥಗಳು

1) ಮಹದೇವ ಬಣಕಾರ, ಮರುಳಸಿದ್ಧ ಕಾವ್ಯ, ಶ್ರೀ ತರಳಬಾಳು ಪ್ರಕಾಶನ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ, 1989.

2) ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿ, ವಿಶ್ವಬಂಧು ಮರುಳಸಿದ್ಧ ಐತಿಹಾಸಿಕ ನಾಟಕ 1970.

3) ವೇಣು ಬಿ.ಎಲ್. ಕ್ರಾಂತಿಯೋಗಿ ಮರುಳಸಿದ್ಧ, ಐತಿಹಾಸಿಕ ಕಾದಂಬರಿ – 2000.

4) ಡಾ.ಎಂ. ಶ್ರೀನಿವಾಸಮೂರ್ತಿ, ವಿಶ್ವಬಂಧು ಮರುಳಸಿದ್ಧ: ಒಂದು ಅಧ್ಯಯನ, ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧ (ಅಪ್ರಕಟಿತ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 2008.

5) ತರಳಬಾಳು ಹುಣ್ಣಿಮೆ, ಸ್ಮರಣ ಸಂಚಿಕೆ 2011, ಬೆಂಗಳೂರು ಸಂಪಾದಕರು: ನಾಗತಿಹಳ್ಳಿ ಚಂದ್ರಶೇಖರ, ತರಳಬಾಳು ಹುಣ್ಣಿಮೆ ಮಹೋತ್ಸವ ಸಮಿತಿ, ಬೆಂಗಳೂರು 2011.

6) ತರಳಬಾಳು ಹುಣ್ಣಿಮೆ, ಸ್ಮರಣ ಸಂಚಿಕೆ 2001, ತರಳಬಾಳು ಹುಣ್ಣಿಮೆ ಮಹೋತ್ಸವ ಸಮಿತಿ

7) ತರಳಬಾಳು ಹುಣ್ಣಿಮೆ, ಸ್ಮರಣ ಸಂಚಿಕೆ 2009, ತರಳಬಾಳು ಹುಣ್ಣಿಮೆ ಮಹೋತ್ಸವ ಸಮಿತಿ

ಮಹಿಳೆ, ಸಂಸ್ಕೃತಿ ಮತ್ತು ವೈಜ್ಞಾನಿಕ ಮನೋಧರ್ಮ : ಒಂದು ವಿಶ್ಲೇಷಣೆ

*ವನಮಾನ ಎಸ್.ಎಂ. ಮತ್ತು ** ಹೆಚ್.ಕಮಲ

* ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಸರ್. ಎಂ. ವಿ. ಪಿ. ಜಿ. ಸೆಂ. ಮಂಡ್ಯ, ** ಸಹ–ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು

ಮಾನವ ನಾಗರೀಕತೆಯ ಮುನ್ನಡೆಯ ಬಗ್ಗೆ ನಮಗೆಲ್ಲಾ ಹೆಮ್ಮೆ, ಗೌರವವಿದೆ. ಮಾನವ ಸಂಸ್ಕೃತಿ ನಾಗರೀಕತೆಯ ಸಾಧನೆಗೆ ಮುಖ್ಯ ಕಾರಣವಾಗಿದೆ ಎಂದು ತಿಳಿದಿದ್ದೇವೆ. ಅದರಲ್ಲೂ ಭಾರತದ ಸಂಸ್ಕೃತಿಗೆ ಎರಡು ಸಾವಿರ ವರ್ಷಗಳಷ್ಟು ಇತಿಹಾಸವಿದೆ. ಭಾರತದ ಸಂಸ್ಕೃತಿಯ ಭಾಗವಾಗಿ ಸಮಾಜದ ಎಲ್ಲ ಮಜಲುಗಳಲ್ಲಿ ನಿರ್ದಿಷ್ಟವಾದ ಅಥವ ನಿರ್ಧಾರಯುತವಾದ ಸಂಪ್ರದಾಯಕ ಪರಂಪರೆಗಳು ಆಚರಣೆಯಲ್ಲಿದೆ. ಈ ಕಾರಣಕ್ಕಾಗಿ ಭಾರತವು ಒಂದು ಸಂಪ್ರದಾಯಸ್ತ ದೇಶ ಎಂದು ಪ್ರಚಲಿತವಾಗಿದೆ. ಅಂದರೆ ಇಲ್ಲಿ ಸಂಪ್ರದಾಯ, ಪರಂಪರೆಯಿಂದ ರೂಢಿಯಲ್ಲಿರುವುದನ್ನು ಜನ ತೀವ್ರವಾಗಿ ನಂಬುತ್ತಾರೆ ಮತ್ತು ಸಾಕಷ್ಟು ಭಕ್ತಿಯಿಂದ ಬಳಕೆಯಲ್ಲಿ ಇಡುತ್ತಾರೆ. ಪರಂಪರಾಗತ ರೂಡಿಗಳಿಗೆ ಅಡ್ಡಿಯಾದಲ್ಲಿ ಅನಾಹುತವಾದಂತೆ ಪರಿತಪ್ಪಿಸುತ್ತಾರೆ. ದೇಶದ ಪ್ರಗತಿಶೀಲತೆಗೆ ಈ ಸಂಪ್ರದಾಯಗಳು ತಡೆಗೊಡೆಗಳಾಗಿ ಕೆಲಸ ಮಾಡುವ ಸಾಧ್ಯತೆಗಳೆ ಹೆಚ್ಚು ಎಂದು ಜನಗಳಿಗೆ ತಿಳಿಹೇಳುವುದು ಬಹಳ ಕಷ್ಟಕರ. ಧರ್ಮ, ಜಾತಿ, ಸ್ತ್ರೀಯರನ್ನು ಅರ್ಥೈಸುವಲ್ಲಿ ಸ್ತ್ರೀ–ಪುರುಷರ ಸಂಬಂಧವನ್ನು ವ್ಯಾಖ್ಯಾನಿಸುವುದರಲ್ಲಿ ಭಾರತೀಯ ಸಂಪ್ರದಾಯ ತನ್ನದೇ ಪರಿಪಾಟವನ್ನು ಹೊಂದಿದೆ. ಖುಷ್‌ವಂತ್ ಸಿಂಗ್ "ಧರ್ಮ ಹಾಗೂ ಸಂಪ್ರದಾಯಗಳ ಯಮಭಾರ" ಎಂಬ ಅನುವಾದಗೊಂಡ ಲೇಖನದಲ್ಲಿ ಭಾರತೀಯರ ಸಂಪ್ರದಾಯಿಕತ್ವದ

ಬಗೆ ಹೇಳಿರುವ ಮಾತು ಇಲ್ಲಿ ಸೂಕ್ತ.

"ಸಂಪ್ರದಾಯಿಕ ಆಚರಣೆಗಳಲ್ಲಿ ಪ್ರಪಂಚದ ಇನ್ನಾವ ಜನರೂ ಭಾರತೀಯರಷ್ಟು ಕಾಲ ವ್ಯರ್ಥ ಮಾಡುವುದಿಲ್ಲ. ತಮ್ಮ ಉದ್ದೇಶ ಮತ್ತು ಅರ್ಥವನ್ನೂ ಕಳೆದುಕೊಂಡಿರುವ ಸಂಪ್ರದಾಯಗಳಿಗೆ ನಮ್ಮಷ್ಟು ಮೊಂಡುತನದಿಂದ ಇನ್ನಾರೂ ಅತುಕೊಂಡಿರುವುದಿಲ್ಲ. ಸಂಪ್ರದಾಯಗಳಾದರೋ ನಮ್ಮ ಸ್ವೋಪಜ್ಞತೆ ಮತ್ತು ಸಾಹಸೀ ಪ್ರವೃತ್ತಿಯನ್ನು ಕಸಿದುಕೊಳ್ಳುತ್ತವೆ. ಪ್ರಗತಿಶೀಲವಾಗಿರಬೇಕು ಮತ್ತು ಪ್ರಪಂಚದ ಅತ್ಯಂತ ಅಭಿವೃದ್ಧಿ ಹೊಂದಿದ ದೇಶದೊಡನೆ ಸರಿಸಮನಾಗ ಬೇಕು ಎಂದು ಆಶಿಸುವ ದೇಶವು ಈ ಗುಣಗಳನ್ನು ಹೊಂದಿರಲೇ ಬೇಕು".

ಖುಷ್‌ವಂತ್ ಸಿಂಗ್‌ರ ಈ ಮೇಲಿನ ಮಾತುಗಳಲ್ಲಿ ಸಂಪ್ರದಾಯಿಕತೆ ಸಮಾಜದ ಬದಲಾವಣೆಗೆ, ಅಭಿವೃದ್ಧಿಗೆ ಅಡಚಣೆ ಎಂಬ ಗ್ರಹಿಕೆ ಸ್ಪಷ್ಟವಾಗಿದೆ. ಭಾರತದ ಸಂಸ್ಕೃತಿ ಹೆಚ್ಚಿನ ಆಚಾರಗಳಲ್ಲಿ ಪ್ರಭುತ್ವ ಅಥವಾ ನಿರಂಕುಶಾಧಿಕಾರದ ಬೀಜವನ್ನು ಅಡಗಿಸಿಕೊಂಡಿದೆ. ಸ್ತ್ರೀಯರನ್ನು ಅರ್ಥೈಸುವ, ಸ್ತ್ರೀ–ಪುರುಷರ ಸಂಬಂಧವನ್ನು ವ್ಯಾಖ್ಯಾನಿಸುವ ಪುರುಷಪ್ರಧಾನ ಸಂಸ್ಕೃತಿ ಭಾರತೀಯ ಸಂಸ್ಕೃತಿಯ ಒಂದು ಭಾಗವಾಗಿದೆ. ಪುರುಷಪ್ರಭುತ್ವ ರಾಜಕಾರಣ ಈ ಸಂಪ್ರದಾಯದ ಮುಖ್ಯ ಗುಣ. ಮಹಿಳೆಯ ಶೋಷಣೆಯನ್ನು ಪ್ರತಿಪಾದಿಸುವ ಈ ಸಂಸ್ಕೃತಿ ಇಂದಿನ ಆಧುನಿಕ ಯುಗದಲ್ಲೂ ಚಾಲ್ತಿಯಲ್ಲಿರುವುದನ್ನು ಕಂಡಾಗ ನಾವು ಸಾಧಿಸಿರುವ ನಾಗರೀಕತೆಯ ಬಗ್ಗೆ ಅನುಮಾನ ಮೂಡುತ್ತದೆ. ಎಷ್ಟೋ ವಿಚಾರಗಳಲ್ಲಿ ವೈಜ್ಞಾನಿಕ ಪರಂಪರೆ ಚಾಲ್ತಿಗೆ ಬಂದಿದೆ. ಆರೋಗ್ಯ, ಆಹಾರ, ಪ್ರಯಾಣ ಸೌಕರ್ಯ, ಸಂವಹನ ಮುಂತಾದ ವಿಚಾರಗಳಲ್ಲಿ ವಿಜ್ಞಾನ ಮತ್ತು ಅದರ ತಂತ್ರವಿದ್ಯೆ ಯಶಸ್ವಿಯಾಗಿ ಉಪಯೋಗದಲ್ಲಿದೆ. ಆದರೆ ಸ್ತ್ರೀಯರ ಸ್ಥಾನಮಾನವನ್ನು ಅರ್ಥೈಸುವಲ್ಲಿ, ಅವಳ ಯೋಗ್ಯತೆಯನ್ನು ನಿರ್ಧರಿಸುವಲ್ಲಿ ಸಂಪ್ರದಾಯವೆ ಪ್ರಮುಖ ವಾಗಿದೆ. ಅಂದರೆ ಪುರುಷ ಪ್ರಧಾನ ಸಂಸ್ಕೃತಿಯನ್ನು ನಾವುಗಳು ಬಹಳ ವೈಜ್ಞಾನಿಕವೆಂದು ನಂಬಿ ದಂತಿದೆ. ಇದು ನಿಜವೇ ಆದಲ್ಲಿ ನಾವು ವೈಜ್ಞಾನಿಕ ಮನೋಧರ್ಮದ ನಿಜ ಅರ್ಥವನ್ನು ಗ್ರಹಿಸುವಲ್ಲಿ ಸೋತಿದ್ದೇವೆ. ಭಾರತದ ಸಮಾಜ ಒಂದು ಶ್ರೇಣಿಕೃತ ಸಮಾಜ. ಧರ್ಮ, ಜಾತಿ, ಭಾಷೆ, ಸಂಸ್ಕೃತಿಯನ್ನು ಮೇಲು ಕೀಳೆಂದು ವಿಂಗಡಿಸಿರುವುದರಿಂದ ಸಮಾಜದಲ್ಲಿ ಸದಾ ಗಲಭೆಗಳಾಗುವ ಭಯದ ನೆರಳಿನಲ್ಲಿ ಇರುವಂತಾಗಿದೆ.

ಸಮಾಜದ ಎಲ್ಲ ಶ್ರೇಣಿಕೃತ ಮಜಲುಗಳನ್ನು ಅರ್ಥೈಸುವುದು ಈ ಲೇಖನದ ಗುರಿಯಲ್ಲ. ನನ್ನ ಈ ಲೇಖನದ ಮುಖ್ಯ ಗುರಿ ಭಾರತದ ಮಹಿಳೆ ಹೇಗೆ ಪುರುಷಪ್ರಧಾನ ಸಂಪ್ರದಾಯ ಗಳಿಂದ ಶಾಪಗ್ರಸ್ಥಳಾಗಿದ್ದಾಳೆ ಎಂದು ಗ್ರಹಿಸುತ್ತಾ ಇದರಿಂದ ಅವಳಿಗೆ ಬಿಡುಗಡೆ ಎಂತು ಎಂದು ತಿಳಿಯುವ ಪ್ರಯತ್ನವಾಗಿದೆ. ಅಂದರೆ ಮಹಿಳೆ ವ್ಯಕ್ತಿಸ್ವಾತಂತ್ರ್ಯ ಪಡೆಯುವಲ್ಲಿ ವೈಜ್ಞಾನಿಕ ಮನೋಭಾವದ ಪಾತ್ರವೇನು ಎಂದು ಅರ್ಥೈಸುವುದೇ ಆಗಿದೆ. ಈ ಲೇಖನ ಸ್ತ್ರೀವಾದಿ ಚಿಂತನೆಯ ಗರಿಷ್ಠ ಪ್ರತೀಕವೂ ಅಲ್ಲ ಅಥವ ಪುರುಷ ಸಮುದಾಯದ ಮೇಲಿನ ತೀವ್ರ ಆಕ್ರಮಣವೂ ಅಲ್ಲ. ವಿಜ್ಞಾನದ ಬೆಳವಣಿಗೆಯಿಂದ ಸಾಧ್ಯವಾಗಿರುವ ಕಾರ್ಯ–ಕಾರಣ ವಿವೇಚನೆ ಯಿಂದ ಹೇಗೆ ಮಹಿಳೆಯ ಗುಣ ಸ್ವಭಾವಗಳನ್ನು ಮತ್ತು ಅವಳ ಸ್ಥಿತಿಗತಿಗಳನ್ನು ಹೆಚ್ಚು ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿ ಸ್ತ್ರೀ–ಪುರುಷ ತಾರತಮ್ಯವನ್ನು ಕಡಿಮೆ ಮಾಡಬಹುದು ಎಂಬ ದಿಕ್ಕಿನಲ್ಲಿ ಮಾಡಿರುವ ಒಂದು ಚಿಂತನೆ.

ವೈಜ್ಞಾನಿಕ ಮನೋಧರ್ಮ ಆಧುನಿಕಥೆಯ ಈ ಕಾಲಘಟ್ಟದಲ್ಲಿ ಎಲ್ಲರಿಗೂ ಪರಿಚಿತ ವಿರುವ ಪದ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಲೋಚನ ಕ್ರಮಗಳಲ್ಲಿ ವೈಜ್ಞಾನಿಕ ದೃಷ್ಟಿಕೋನವನ್ನು ಅಳವಿಡಿಸಿ ಕೊಂಡಿರುತ್ತೇನೆ ಎಂದೇ ಸಾಧಿಸುತ್ತಾನೆ. ಈ ಕಾರಣಕ್ಕೆ ಸವಕಲು ನಾಣ್ಯವಾಗಿರುವ ಎಷ್ಟೋ ಪದಗಳಲ್ಲಿ ಈ ಪದವು ಒಂದಾಗಿದೆ. ಜಿ.ಟಿ.ನಾರಾಯಣರಾವ್ ಇದರ ಬಹುಪ್ರಯೋಗದ ಬಗ್ಗೆ ಈ ರೀತಿ ಹೇಳುತ್ತಾರೆ.

"ಆಧುನಿಕತೆಯ ಮೋಹ ಪರವಶತೆಯಲ್ಲಿ ಮುಳುಗಿರುವ ಇಂದಿನ ಜನಾಂಗ ಪದೇಪದೇ ಚಾಲ್ತಿಯಲಿಟ್ಟಿರುವ ಪದ ಎಂದರೆ ವೈಜ್ಞಾನಿಕ ಮನೋಧರ್ಮ".

ತಮ್ಮ ಮೋಸ ಮಾರ್ಗಗಳಿಗೆ ಧಾರ್ಮಿಕ ನಾಯಕರುಗಳು, ರಾಜಕಾರಣಿಗಳು, ಫಲಜೋತಿಷಿಗಳು, ಬುದ್ಧಿಜೀವಿಗಳು, ಶ್ರೀರಕ್ಷೆಯಾಗಿ ಬಳಸುತ್ತಿರುವ ಬೀಜಮಂತ್ರ ವೈಜ್ಞಾನಿಕ ಮನೋಧರ್ಮ. ತಮ್ಮ ಕೆಲಸಗಳಲ್ಲಿ ವೈಯಕ್ತಿಕ ವ್ಯಾಮೋಹವಿಲ್ಲ ಎಂದು ಸಾದರ ಪಡಿಸಲು ಈ ಪದವನ್ನು ಸಾರ್ವತ್ರಿಕವಾಗಿ ಉಪಯೋಗಿಸುತ್ತಿದ್ದಾರೆ. ಇಂದಿನ ವಿದ್ಯಾವಂತರು ವೈಜ್ಞಾನಿಕ ಮನೋಧರ್ಮದ ನಿಜ ಅರ್ಥವನ್ನು ಗ್ರಹಿಸುವಲ್ಲಿ ವಿಫಲರಾಗಿದ್ದಾರೆ. ಇಲ್ಲದಿದ್ದಲ್ಲಿ ಪರಂಪರಾಗತವಾಗಿ ಬಂದ ಎಷ್ಟೋ ಅವೈಜ್ಞಾನಿಕ ವಿಚಾರಗಳನ್ನು ಇಂದಿನ ವೈಜ್ಞಾನಿಕ ಯುಗದಲ್ಲಿ ಯತಾವತ್ತಾಗಿ ಚಾಲ್ತಿಯಲ್ಲಿಡುತ್ತಿರಲಿಲ್ಲ. ವ್ಯಕ್ತಿ ಸ್ವಾತಂತ್ರ್ಯದ ಸಮಾನತೆಯ ಬೀಜಮಂತ್ರವನ್ನು ಎತ್ತಿಹಿಡಿಯುವ ಪ್ರಜಾಪ್ರಭುತ್ವ ದೇಶದಲ್ಲಿ ಮಹಿಳೆಯ ವ್ಯಕ್ತಿ ಸ್ವಾತಂತ್ರ್ಯಕ್ಕೆ ಇಷ್ಟೊಂದು ಅಡಚಣೆ ಇರುತ್ತಿರಲಿಲ್ಲ. ವೈಜ್ಞಾನಿಕ ಮನೋಧರ್ಮದ ಸಹಾಯದಿಂದ ಹೇಗೆ ಪುರುಷಪ್ರಧಾನ ರಚನೆಗಳನ್ನು ವಿರಚನೆಗಳಿಸಬಹುದು, ಪುರುಷ ಮತ್ತು ಸ್ತ್ರೀಯರ ಮಧ್ಯ ಇರುವ ತಾರತಮ್ಯಗಳನ್ನು ಕಡಿಮೆಗೊಳಿಸಬಹುದು ಮತ್ತು ಶೋಷಿತ ಮಹಿಳೆಯ ಸಬಲೀಕರಣಗೊಳಿಸಬಹುದು ಎಂದು ಚಿಂತಿಸಿವುದು ಇಂದು ಬಹಳ ಮುಖ್ಯವಾಗಿದೆ. ಇದಕ್ಕೆ ಪೂರಕವಾಗಿ ವೈಜ್ಞಾನಿಕ ದೃಷ್ಟಿಕೋನದ ಸರಿಯಾದ ಅರ್ಥ ಮತ್ತು ಸ್ವರೂಪವನ್ನು ತಿಳಿಯುವುದು ಬಹಳ ಮುಖ್ಯ

ಮೊದಲಿಗೆ ವೈಜ್ಞಾನಿಕ ಮನೋಧರ್ಮವೆಂದರೇನೆಂದು ತಿಳಿಯುವುದು ಬಹಳ ಮುಖ್ಯ. ವಸ್ತುನಿಷ್ಠತೆ (ಜ್ಞೇಯನಿಷ್ಠತೆ) ಮಾರ್ಗದಲ್ಲಿ ನಡೆಯುವುದೇ ವೈಜ್ಞಾನಿಕ ಮನೋಧರ್ಮ. ಕಾರ್ಯ–ಕಾರಣ ಮಾರ್ಗದಲ್ಲಿ ಸಾಗುವ ವ್ಯಕ್ತಿಯ ಮನಸ್ಸು ತಳೆಯುವ ಸ್ಥಿತಿಯೇ ವೈಜ್ಞಾನಿಕ ಮನೋಧರ್ಮ. ವ್ಯಕ್ತಿ–ವ್ಯಕ್ತಿ, ವ್ಯಕ್ತಿ–ಸಮಾಜ, ಸಮಾಜ–ವ್ಯಕ್ತಿ ಮತ್ತು ವ್ಯಕ್ತಿ–ನಿಸರ್ಗ ಕುರಿತ ಭೌತ ಅಥವ ವಾಸ್ತವ ಸಂಬಂಧಗಳನ್ನು ನಿಯಂತ್ರಿಸುವ ವಿಧಾನ ವಿಜ್ಞಾನ. ವಿಜ್ಞಾನ, ನಿಸರ್ಗದ ಅಧ್ಯಯನ ಮತ್ತು ಪ್ರಾಯೋಗಿಕ ಪರಾಮರ್ಷನದ ಮೂಲಕ, ಮೂಲಭೂತ ನಿಯಮಗಳ ಆವಿಷ್ಕಾರಗೈಯುತ್ತದೆ. ವಿಜ್ಞಾನದ ಮೂಲಭೂತ ನಿಯಮಗಳ ಮನನ ಮತ್ತು ಪ್ರಯೋಗ ನಮ್ಮ ಸಂಸ್ಕೃತಿಯ ರಚನೆಗಳ ಮೇಲೆ ಆದಲ್ಲಿ, ಸಂಸ್ಕೃತಿಯ ವಿಧಿ–ವಿಧಾನಗಳ ಟೊಳ್ಳುತನದ ಪರಿಚಯವಾಗುತ್ತದೆ ಮತ್ತು ಅದರ ನಿರಚನೆಗೆ ದಾರಿ ಮಾಡಿಕೊಡುತ್ತದೆ. ವಿಜ್ಞಾನದ ಅನ್ವೇಷಣ ಪಥವನ್ನು ರೂಪಿಸುವ ತತ್ವಗಳು ಮುಖ್ಯವಾಗಿ ಮೂರು : ವಿಶ್ವದ ಸಮಸ್ತ ವಿದ್ಯಮಾನಗಳಲ್ಲಿಯೂ 'ಕ್ರಮ'ವಿದೆ; ಈ 'ಕ್ರಮ' ವನ್ನು ಗುರುತಿಸಿ ಅರ್ಥವಿಸಿ ವ್ಯಾಖ್ಯಾನಿಸುವ ಸಾಮರ್ಥ್ಯ

ಮಾನವ ಮತಿಗಿದೆ; ವಿಶ್ವದ ತಳದಲ್ಲಿ ಕ್ರಿಯಾಶೀಲವಾಗಿರುವನಿಯಮಗಳು ಮಾನವನ ಜೊತೆ ಎಂದೂ ಪಕ್ಷಪಾತ ನೀತಿಯನ್ನಾಗಲೀ ಕಪಟ ವರ್ತನೆಯನ್ನಾಗಲೀ ಪ್ರದರ್ಶಿಸುವುದಿಲ್ಲ. ಸಂಸ್ಕೃತಿ ಪ್ರಕೃತಿಯನ್ನು ಅನುಕರಿಸಿದಾಗ ಪಕ್ಷಪಾತ ನೀತಿಯನ್ನು ಕೈಬಿಡಬೇಕಾಗುತ್ತದೆ. ಇದು ಸ್ತ್ರೀ–ಪುರುಷರ ಸಂಬಂಧಕ್ಕೂ ಅನ್ವಯಿಸುತ್ತದೆ. ಇಂತಹ ಸ್ತ್ರೀ–ಪುರುಷರ ಸಂಬಂಧದ ನಮ್ಮ ವೈಜ್ಞಾನಿಕ ವ್ಯಾಖ್ಯಾನವನ್ನು ನಿಸರ್ಗ ಒಪ್ಪುವುದೇ ಇಲ್ಲವೇ ಎಂಬುದು ಮಾತ್ರ ಇಲ್ಲಿ ನಿರ್ಣಾಯಕ, ಅವರಿವರು ಏನೆಂದರು, ಸಮಾಜ ಏನನ್ನುತ್ತದೆ ಎಂಬುದಲ್ಲ.

ವಿಜ್ಞಾನದ ಯಾವುದೇ ಸಿದ್ಧಾಂತ ದಿನದಿನವು ಪ್ರಯೋಗದ ನಿಕಷದಲ್ಲಿ ಉತ್ತೀರ್ಣವಾಗುತ್ತಲೇ ಇರಬೇಕಾಗುತ್ತದೆ. ಅಂದರೆ ಬದಲಾವಣೆಗೆ ತನ್ನನ್ನೇ ಒಪ್ಪಿಸಿಕೊಳ್ಳುತ್ತಾ ಸತ್ಯಕ್ಕೆ ಹತ್ತಿರವಾಗುವ ಪ್ರಯತ್ನದಲ್ಲಿರುತ್ತದೆ. ಆದರೆ ಸಂಸ್ಕೃತಿಯ ರಚನೆಗಳಾದರೋ ಪ್ರಯೋಗದ ನಿಕಷದಲ್ಲಿ ಉತ್ತೀರ್ಣವಾಗದೆ ಇದ್ದರೂ ಸರ್ವಕಾಲಿಕ ಸತ್ಯವೆಂದೆ ಸಾಧಿಸುತ್ತಾ ಉಳಿಯಲೆತ್ನಿಸುತ್ತದೆ. ಬದಲಾವಣೆಯ ಓರೆಗಲ್ಲಿಗೆ ಒಡ್ಡಿಕೊಳ್ಳದೆ ಸ್ಥಿರತೆಯನ್ನು ಸಾದರಪಡಿಸುತ್ತದೆ. ಇಲ್ಲಿ ಹೆಚ್ಚಿನ ಸಮಯದಲ್ಲಿ ಸುಳ್ಳು ಸತ್ಯವೆಂಬಂತೇ ಮೆರೆಯುತ್ತಿರುತ್ತದೆ. ಸತ್ಯಾನ್ವೇಷಣೆಗೆ, ನಿಸರ್ಗವನ್ನು ಅರ್ಥೈಸುವಿಕೆಗೆ ವಿಜ್ಞಾನ ಅನ್ವೇಷಣಾ ಮಾರ್ಗಗಳಾದ ಕಾರ್ಯ–ಕಾರಣ ಸಂಬಂಧವನ್ನು ಗ್ರಹಿಸಲೆತ್ನಿಸುತ್ತಾ ಇಂತಹುದೇ ಪ್ರಯೋಗ ಮಾನವ ಸಂಸ್ಕೃತಿಯ ಎಲ್ಲಾ ಮಜಲುಗಳಿಗೆ ಅಳವಡಿಸಬೇಕಾಗಿದೆ. ಆಗ ಮಾತ್ರ ಸಂಸ್ಕೃತಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಬೇರು ಬಿಟ್ಟಿರುವ ಪ್ರಭುತ್ವ ರಾಜಕಾರಣದ ವಿಧಾನವನ್ನು ಮಟ್ಟಹಾಕಲು ಸಾಧ್ಯ. ವೈಜ್ಞಾನಿಕ ಮನೋಧರ್ಮ ವೈಚಾರಿಕತೆಯನ್ನು ಬೆಳೆಸುತ್ತಾ ನ್ಯಾಯದ ದೃಷ್ಟಿಕೋನವನ್ನು ಪ್ರಚೋದಿಸುವ ಮನೋಭಾವ. ಅದು ಸಾರ್ವತ್ರಿಕ ಅನ್ವಯವುಳ್ಳದ್ದು. ನಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಮಸ್ಯೆಗಳನ್ನು ಅರ್ಥೈಸಲು ನೆರವು ನೀಡುವ ಪ್ರಧಾನ ಮೌಲ್ಯವಾಗಿ ಅದು ಸಮಾಜದಲ್ಲಿ ಪ್ರವೇಶಿಸಬೇಕು. ಸತ್ವಶೀಲ ವೈಚಾರಿಕತೆ, ಪ್ರಶ್ನಿಸುವ ಮತ್ತು ಪ್ರಶ್ನಿಸಿಕೊಳ್ಳುವ ಮನೋಬಾವ – ಇವು ವೈಜ್ಞಾನಿಕ ಮನೋಭಾವದ ಮೂಲ ಲಕ್ಷಣಗಳು.

ಪುರುಷ–ಪ್ರಧಾನ ಸಂಸ್ಕೃತಿಯ ಪ್ರಭುತ್ವಪೂರಿತ ರಚನೆಗಳನ್ನು ಹಿಂದೆಂದಿಗಿಂತಲೂ ಇಂದು ವಿಜ್ಞಾನದ ಹಿನ್ನೆಲೆಯಲ್ಲಿ ವಿರಚನಗೊಳಿಸಬಹುದು ಎಂಬುದೇ ಆಶಾದಾಯಕ ವಿಷಯ. ಪುರುಷ ಪ್ರಧಾನ ಸಂಸ್ಕೃತಿ ಮಹಿಳಾಶಕ್ತಿ ಮತ್ತು ಯೋಗ್ಯತೆಯ ವಿಚಾರದಲ್ಲಿ ನಿರಾಕರಣ ಸಂಸ್ಕೃತಿಯ ಪರಿಪಾಟವನ್ನು ಹೊಂದಿದೆ. ದೈಹಿಕ ಶಕ್ತಿಯನ್ನು ಮುಖ್ಯ ಮಾಡಿಕೊಂಡು, ದೇಹಶಕ್ತಿಯಲ್ಲಿ ಪುರುಷನ ಸಮವಲ್ಲದ ಕಾರಣ ಮಹಿಳೆಯನ್ನು ಮನೆಯ ನಾಲ್ಕು ಗೋಡೆಗಳ ಮಧ್ಯೆ ಬಂದಿಯಾಗಿಸಿದೆ. ಆದರೇ ವಿಜ್ಞಾನ ಒಂದು ಕಟುಸತ್ಯವನ್ನು ನಿರೂಪಿಸಿದೆ. ಮನುಷ್ಯನ ಹಿರಿಮೆ ಇರುವುದು ದೇಹಶಕ್ತಿಯಲ್ಲಲ್ಲ (ಕೀಳು ಪ್ರಾಣಿಗಳು ಮನುಷ್ಯನಿಗಿಂತ ಬಹಳ ಬಲಿಷ್ಟ) ಬುದ್ಧಿಶಕ್ತಿಯಲ್ಲಿ, ಬುದ್ಧಿಯಿಂದ ಆಗುವ ಕಾರ್ಯ ಕಣ್ಣಿಗೆ ಕಾಣುವಂತದಲ್ಲ, ಕೆಲಸದ ಮೂಲಕ ಪ್ರಕಟವಾಗುವಂತಹದು. ಇಂದು ಮಹಿಳೆ ಎಲ್ಲಾ ಕಾರ್ಯ–ಕ್ಷೇತ್ರಗಳಲ್ಲೂ ತನ್ನ ಅಸ್ತಿತ್ವವನ್ನು ಸಾದರಪಡಿಸುತ್ತಾ ತನ್ನ ಸಬಲೀಕರಣಕ್ಕೆ ತಾನೇ ಕಾರಣಗಳಾಗಿದ್ದಾಳೆ. ನಿರಾಕರಣ ಸಂಸ್ಕೃತಿಯಿಂದ ಸಂಪೂರ್ಣ ಸ್ವತಂತ್ರ ಸಿಕ್ಕಿದ್ದೇ ಆದರೆ ಸಮಾಜದ ಬೆಳವಣಿಗೆಯಲ್ಲಿ ತನ್ನದೇ ಚಾಪು ಮೂಡಿಸಬಲ್ಲವಳಾಗಿದ್ದಾಳೆ.

1949ರಲ್ಲಿ "ದ ಸೆಕೆಂಡ್ ಸೆಕ್ಸ್" ಎಂಬ ಪುಸ್ತಕದಲ್ಲಿ ಸಿಮೋನ್ ದ ಬೋವಾ ಮಹಿಳೆಯರಿಗೆ ಸಂಬಂಧಿಸಿದ ಮಿಥಾಕಲ್ಪನೆಗಳನ್ನು ಸಾಹಿತ್ಯ, ಚರಿತ್ರೆ, ಜೀವಶಾಸ್ತ್ರ, ಮನೋವಿಜ್ಞಾನಶಾಸ್ತ್ರ, ತತ್ವಶಾಸ್ತ್ರಗಳಂತ ಪ್ರತಿಷ್ಠಿತ ಜ್ಞಾನಶಾಖೆಗಳ ಸಹಾಯದಿಂದ ವಿಶ್ಲೇಷಿಸುತ್ತ ಈ ರೀತಿ ಹೇಳಿದ್ದಾರೆ, "ಹೆಣ್ಣಾಗಿ ಯಾರು ಹುಟ್ಟುವುದಿಲ್ಲ, ನಂತರ ರೂಪಿತವಾಗುತ್ತಾರಷ್ಟೆ". ಸ್ತ್ರೀ ಹೆಂಗಸಾಗೇ ಉಳಿಯಬೇಕೆಂದು ಈ ಆಧುನಿಕ ಕಾಲದಲ್ಲೂ ಚಾಲ್ತಿಯಲ್ಲಿರುವ ಪುರುಷಪ್ರಧಾನ ಸಂಸ್ಕೃತಿ ಬಯಸುತ್ತದೆ. ಇಲ್ಲಿ 'ಸ್ತ್ರೀ' ಎಂಬ ಪದ ಪ್ರಕೃತಿದತ್ತ ಅಸ್ಥಿತ್ವ. ಈ ಅಸ್ಥಿತ್ವದಲ್ಲಿ ಸ್ತ್ರೀ ಪುರುಷನ ಪ್ರಕೃತಿ ನಿರ್ಮಿತ ಸಹಭಾಗಿ. ಮೇಲು ಕೀಳಿನ ಕಹಿ ಜಾಡ್ಯ ಈ ಒಂದಕ್ಕೊಂದು ಪೂರಕವಾಗಿರುವ ಈ ಸಂಬಂಧಕ್ಕಿಲ್ಲ. ಆದರೆ 'ಹೆಂಗಸು' ಎಂಬ ಅಸ್ಥಿತ್ವ ಪುರುಷಪ್ರಧಾನ ಸಂಸ್ಕೃತಿ 'ಸ್ತ್ರೀ' ರೂಪಕ್ಕೆ ಹಚ್ಚಿರುವ ನಕಾರಾತ್ಮಕ ಗುಣವಿಶೇಷಗಳಿಂದ ಕೂಡಿದ ಅಸ್ತಿತ್ವ. ಈ ರೂಪದಲ್ಲಿ ಅವಳ ಪುರಷನಿಗಿಂತ ಬಹಳಷ್ಟು ತಳಸ್ಥಾನ ಹೊಂದಿರುತ್ತಾಳೆ. ಆದುದರಿಂದ ಯಾವುದೇ ಪುರುಷ ಸಮಾನ ಹಕ್ಕು ಅವಳಿಗೆ ನಿಷಿದ್ಧ. ಆಧುನಿಕ ಬದಲಾವಣೆ ಗಳು, ಸ್ತ್ರೀ ಸ್ವಾತಂತ್ರ್ಯದ ಬೆಳವಣಿಗೆಗಳು ಸ್ಪಂದಿಸುತ್ತಾ ಸಂಪ್ರದಾಯಸ್ಥ ಸಮಾಜ, ಹೆಂಗಸು ಹಾದಿ ತಪ್ಪುತ್ತಿದ್ದಾಳೆ, ಹೆಂಗಸು ಕಳೆದು ಹೋಗಿದ್ದಾಳೆ ಎಂದು ಪರಿತಪಿಸುತ್ತದೆ. ಅವಳ ಕಾರ್ಯಕ್ಷೇತ್ರಗಳನ್ನು ಸೀಮಿತಗೊಳಿಸಿ, ಗಾಯಕ್ಕೆ ಉಪ್ಪು ಸುರಿವಂತೆ, ಅವಳನ್ನು ನಿಷ್ಕ್ರೀಯಳೆಂದು ಹೇಳುತ್ತಾ 'ಅಬಲೆ' ಎಂಬ ಹಣೆಪಟ್ಟಿ ನೀಡಿದೆ.

ಆದರೆ ಸ್ತ್ರೀ ಹೆಂಗಸಾಗಿ ಉಳಿಯುವ ಅಪಾಯದಿಂದ ಜೈವಿಕ ಮತ್ತು ಸಮಾಜಶಾಸ್ತ್ರ ವಿಜ್ಞಾನಗಳು ಕಾಪಾಡಿವೆ ಎಂದರೆ ತಪ್ಪಲ್ಲ. ಅದು ಹೇಗೆಂದರೆ ಒಂದು ನಿರ್ದಿಷ್ಟ ಸಂದರ್ಭವನ್ನು ಅವಲಂಬಿಸಿ ಅದಕ್ಕೆ ತೋರುವ ಪ್ರತಿಕ್ರಿಯೆಯನ್ನೇ ವ್ಯಕ್ತಿಯ ಲಕ್ಷಣವೆಂದು ಪರಿಗಣಿಸಬೇಕೆಂದು ವಿಜ್ಞಾನ ಸೂಚಿಸುತ್ತದೆ. ಅಂದರೆ ಪೂರ್ವನಿಯೋಜಿತ (ಪುರುಷಪ್ರಧಾನ) ಪರಿಕಲ್ಪನೆಯಿಂದ ಮಹಿಳೆಯನ್ನು ಪರಗಣಿಸಬಾರದು ಎಂಬುದೇ ಇದರ ಅರ್ಥ. ಲಿಂಗ ವ್ಯತ್ಯಾಸವನ್ನು ಜೀವಶಾಸ್ತ್ರ ಹೇಳುತ್ತದೆ ಆದರೆ ಮೇಲು ಕೀಳಿನ ವ್ಯತ್ಯಾಸವನೇನು ಹೇಳುವುದಿಲ್ಲ. ಪ್ರಕೃತಿ ಮತ್ತು ಪ್ರಕೃತಿಯ ಸಮಾನಾಂತರದಲ್ಲಿ ಕೆಲಸ ಮಾಡುವ ಮನಸ್ಸು ವಿಜ್ಞಾನ ಕಾರ್ಯಕ್ಷೇತ್ರದಲ್ಲಿ ಕಂಡು ಬರುತ್ತದೆ. ಪ್ರಕೃತಿಯ ವಿಧಾನವನ್ನು ವೈಜ್ಞಾನಿಕ ಮನೋಧರ್ಮ ಅಳವಡಿಸಿಕೊಂಡು ವಸ್ತುನಿಷ್ಟೆಗೆ ಪ್ರಾಮುಖ್ಯತೆ ಕೊಡುತ್ತದೆ. ಮಾನವ ನಿರ್ಮಿತ ಸಂಸ್ಕೃತಿಯಲ್ಲಿರುವ ಮೇಲು ಕೀಳೆಂಬ ಲೆಕ್ಕಾಚಾರಕ್ಕೆ ಇಲ್ಲಿ ಅವಕಾಶವಿಲ್ಲ. ಇದೇ ಹಿನ್ನೆಲೆಯಲ್ಲಿ ಡೊರೋತಿ ಪಾರ್ಕರ್ "ಮಾರ್ಡನ್ ವುಮೆನ್ ದ ಲಾಸ್ಟ್ ಸೆಕ್ಸ್" (Modern Women-the lost sex) ಎಂಬ ಪುಸ್ತಕದಲ್ಲಿ

"ಹೆಂಗಸು ಎಂದು ಪರಗಣಿಸುವ ಪುಸ್ತಕಗಳ ಪರವನ್ನು ನಾನು ವಹಿಸಲಾರೆ ... ನಾನು ತಿಳಿಯುವಂತೆ ನಾವೆಲ್ಲರೂ, ಗಂಡಸರಾಗಲಿ ಅಥವಾ ಹೆಂಗಸರಾಗಲಿ, ಮಾನವ ಜೀವಿಗಳೆಂದೇ ಪರಿಗಣಿತರಾಗಬೇಕಾಗುತ್ತದೆ"

ಎಂದು ಹೇಳಿದ್ದಾರೆ. ಪುರುಷ ಮತ್ತು ಸ್ತ್ರೀ ಎಂಬ ಎರಡು ವರ್ಗಗಳಿವೆ ಮತ್ತು ಈ ವರ್ಗಗಳಲ್ಲಿ ಎದ್ದು ಕಾಣುವ ವ್ಯತ್ಯಾಸಗಳೂ ಇವೆ. ಆದರೆ ಪುರುಷವರ್ಗದ ಗುಣಲಕ್ಷಣ ಹಿರಿಮೆ ಪಡೆದು ಮತ್ತೊಂದು ಕೀಳೆಂದು ವಾದಿಸುವ ವಿಧಾನ ಬದಲಾವಣೆಯಾಗಬೇಕಾಗಿದೆ. ಪುರುಷ ಮತ್ತು ಸ್ತ್ರೀ ಮಧ್ಯದ ವ್ಯತ್ಯಾಸ ಎಷ್ಟು ವಿಸ್ತಾರವೆಂದರೆ 'ಹೆಂಗಸು' ಎಂಬ

ಪದ ನಕಾರಾತ್ಮಕ, ಸೀಮಿತ ಪ್ರಾತಿನಿಧ್ಯವುಳ್ಳದ್ದಾಗಿ ಗುರುತಿಸಿಕೊಂಡಿದೆ. ಆದರೆ 'ಗಂಡಸು' ಎಂಬ ಪದ ಇಡೀ ಮಾನವ ಜೀವವರ್ಗವನ್ನು ಪ್ರತಿನಿಧಿಸುತ್ತಾ ಸಕಾರಾತ್ಮಕ ದೃವವನ್ನಷ್ಟೇ ಪ್ರತಿನಿಧಿಸುತ್ತದೆ. ಇಂತಹ ಗ್ರಹಿಕೆಯನ್ನು ವೈಜ್ಞಾನಿಕ ಮನೋಧರ್ಮವುಳ್ಳವರು ಮಾತ್ರ ಟೀಕಿಸಬಲ್ಲರು. ವಸ್ತುನಿಷ್ಠವಾಗಿ ಸತ್ಯವನ್ನು ಗ್ರಹಿಸಬಲ್ಲ ವೈಜ್ಞಾನಿಕ ಕಾರ್ಯಮಾದರಿ ವ್ಯಕ್ತಿನಿಷ್ಠೆಯ ವಿಚಾರಕಷ್ಟೆ ಬೆಲೆಕಟ್ಟುತ್ತಾ ಹೆಂಗಸು, ಅಥವಾ ಗಂಡಸು ಎಂಬ ವ್ಯತ್ಯಾಸವನ್ನು ಗಮನಿಸದೆ ತೀರ್ಮಾನ ಕೊಡುವುದರಿಂದ ಹೆಚ್ಚು ನ್ಯಾಯ ಪೂರಕವಾಗಿರುತ್ತದೆ. ಪ್ರಕೃತಿಯಲ್ಲಿ ಸ್ತ್ರೀ–ಪುರುಷ ಸಮಾನರು, ಆದರೆ ಪ್ರಾಕೃತಿಕ ಅವಸ್ಥೆಯಿಂದ ಸಾಂಸ್ಕೃತಿಕ ಅವಸ್ಥೆಗೆ ದಾಟಿ ಬರುವ ಪ್ರಕ್ರಿಯೆಯಲ್ಲಿ ಮನುಷ್ಯರು ಜೈವಿಕ ಸಂಬಂಧಗಳನ್ನು– ದ್ವಷ್ಟ, ಪರಾಯ, ವಿರೋಧ, ಸಾಮ್ಯ ಎಂದು ವ್ಯತ್ಯಾಸಗಳನ್ನು ಗುರುತಿಸ ತೊಡಗಿದರೆಂದು ಮಾನವಶಾಸ್ತ್ರಜ್ಞ ಲೆವಿ ಸ್ಟ್ರಾಸ್ ಹೇಳುತ್ತಾನೆ. ಅಂದರೆ ಮಾನವ ಸಮಾಜವು ಕೇವಲ ಬಂಧುತ್ವ ಮತ್ತು ಸಖ್ಯಭಾವದಿಂದ ಮಾತ್ರ ರೂಪಗೊಂಡಿಲ್ಲ ಎಂದು ಅರ್ಥ. ಈ ಪರಿವರ್ತನಾ ಕಾಲದಲ್ಲೇ ಸ್ತ್ರೀ ಹೆಂಗಸಾಗಿ ರೂಪಗೊಂಡಿದ್ದು. ಸ್ತ್ರೀ–ಪುರುಷ ದೇಹ, ಆಕಾರಗಳಲ್ಲಿ ಮತ್ತು ಕಾರ್ಯ ಚಟುವಟಿಕೆಯಲ್ಲಿ ವ್ಯತ್ಯಾಸ ಖಂಡಿತ ಇದೇ. ಗಂಡಸಿನಂತೇ ಹೆಂಗಸಿನ ದೇಹ ಇಲ್ಲವೆಂಬ ಕಾರಣಕ್ಕೆ ಅವಳನ್ನು ಕೀಳು ಎನ್ನುವುದು, ಪುರುಷ ದೇಹಪ್ರಕೃತಿ ಸಾಧಿಸುವ ಕೆಲಸಕ್ಕೆ ಒತ್ತು ಕೊಡುವುದು ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳ ಲಾಗದ ಮಾನಸಿಕ ಅಪಕ್ವತೆಯ ಸಂಕೇತ ಅಥವಾ ವಸ್ತುನಿಷ್ಠವಾಗಿ ಸತ್ಯವನ್ನು ಗ್ರಹಿಸಬಲ್ಲ ವೈಜ್ಞಾನಿಕ ಮನೋಧರ್ಮದ ಕೊರತೆ ಎನ್ನಬಹುದು. ಜೀವಶಾಸ್ತ್ರ ಪುರುಷ ಮತ್ತು ಸ್ತ್ರೀ ಒಬ್ಬರನ್ನೊಬ್ಬರು ಅವಲಂಬಿತರೆಂದು ಸಾದರ ಪಡಿಸುತ್ತದೆ. ಲೈಂಗಿಕ ತೃಷೆ, ಮಕ್ಕಳನ್ನು ಪಡೆಯುವ ಬಯಕೆಯ ವಿಚಾರದಲ್ಲಿ ಪುರುಷ ಸ್ತ್ರೀಯ ಪೂರ್ಣಾವಲಂಬಿ. ಇದೇ ರೀತಿಯ ಕೆಲವೊಂದು ವಿಚಾರದಲ್ಲಿ ಸ್ತ್ರೀ ಪುರುಷನ ಅವಲಂಬಿ. ಪುರುಷಾವಲಂಬನದ ಬಗ್ಗೆ ಸಂಪ್ರದಾಯಸ್ಥ ಮನಸ್ಸುಗಳು ಹೆಚ್ಚು ಚರ್ಚಿಸುವುದಿಲ್ಲ. ಆದರೆ ಸ್ತ್ರೀ ಅವಲಂಬಿಕೆಯ ಬಗ್ಗೆ ಎಲ್ಲರೂ ಪದೇಪದೇ ಮಾತನಾಡುವುದು ಕೇಳಿಬರುತ್ತದೆ. ಸಮಾಜದ ತುಂಬೆಲ್ಲ ಇಂತಹ ಜಾಣ ಮರವೇ ಚಲಾವಣೆಯಲ್ಲಿದ್ದಂತಿದೆ. ಪುರುಷಪ್ರಧಾನ ಸಂಸ್ಕೃತಿಯ ಬಗ್ಗೆ ಪೌಲಿನ್ ದಲಾಬಾರ್ ಹೀಗೆಂದಿದ್ದಾಳೆ

"ಹೆಂಗಸಿನ ಬಗ್ಗೆ ಗಂಡಸು ಬರೆದುದೆನಲ್ಲವನ್ನೂ ಸಂದೇಹದಿಂದಲೇ ನೋಡಬೇಕು. ಏಕೆಂದರೆ, ಗಂಡಸು ಏಕಕಾಲಕ್ಕೆ ಪ್ರತಿವಾದಿಯಾಗಿರುವಂತೆ ನ್ಯಾಯಾಧೀಶನು ಆಗಿದ್ದಾನೆ".

ಇನ್ನೊಂದು ಅರ್ಥದಲ್ಲಿ ಹೆಂಗಸನ್ನು ಕೆಳದೆಯೇ ಗಂಡಸರು ನಿಯಮಗಳನ್ನು ಮಾಡುವುದರಿಂದ ಮನಸ್ತಾಪಗಳು, ವಿವಾದಗಳು ಮೂಡುವುದು ಸಹಜ. ಪ್ರಜಾಪ್ರಭುತ್ವದ ಆದರ್ಶದೊಂದಿಗೆ ಜೊತೆಗೂಡಿದ ವಿಜ್ಞಾನ ನಿಷ್ಪಕ್ಷಪಾತವನ್ನು ಅನುಸರಿಸುವ ಮಾರ್ಗವನ್ನು ಕಲಿಸುತದ. ವಿಜ್ಞಾನದಿಂದ ಕೈಗಾರಿಕ ಕ್ರಾಂತಿಯಾಯಿತು. ಇದರಿಂದ ಹೆಂಗಸರು ಉತ್ಪಾದಕ ದುಡಿಮೆಯ ವಲಯಕ್ಕೆ ಪ್ರವೇಶ ಪಡೆದು ಆರ್ಥಿಕ ಸ್ವಾವಲಂಬನೆಯನ್ನು ಪಡೆದು ವ್ಯಕ್ತಿ ಮುಖ್ಯ ಲಿಂಗವಲ್ಲ ಎಂಬ ನಿಜಸತ್ಯದ ಅರಿವು ಪಡೆದರು. ಸ್ತ್ರೀಪುರುಷರಿಬ್ಬರಿಗೂ ಸಮಾಜದಲ್ಲಿರುವ ತಾರತಮ್ಯದ ಅರಿವು ಬಹಳ ಮುಖ್ಯ. ಹೆಂಗಸರು ಸಮಾನರೆಂದು, ಸಮಾನರಲ್ಲವೆಂದು ವಾದ ಪ್ರತಿವಾದವನ್ನು ಮಂಡಿಸುವವರನ್ನು ಎಲ್ಲೇಲ್ಲೂ ನೋಡುತ್ತೇವೆ, ಇದು ಸರಿಯಲ್ಲ. ಸಿಮೊನ್‌ದ ಬೋವಾ ಆರೋಪ ಪ್ರತ್ಯಾಪರೋಪದ ಅಪಾಯವನ್ನು ಈ ರೀತಿ ಹೇಳಿದ್ದಾರೆ.

"ಇದು ಮೇಲುನೋಟಕ್ಕೆ ಕ್ಷುಲ್ಲಕವೆನಿಸಿದರು ಅದರಿಂದಾಗಿ ಹೆಂಗಸಿನ ನೈತಿಕ ಹಾಗೂ ಭೌಧಿಕ ಸ್ವಭಾವಗಳು ಎಷ್ಟು ಪ್ರಭಾವಿತವಾಗುತ್ತದೆಂದರೆ ಅದು ಅವಳ ಹುಟ್ಟು ಗುಣಗಳಿಂದ ಮೈತಳೆದದ್ದು ಅನಿಸಿಬಿಡುತ್ತದೆ".

ಸ್ತ್ರೀ–ಪುರುಷರ ಮಧ್ಯೆ ವಿಕಾಸದ ನೆಲೆಯಲ್ಲಿಯೇ ಅಂಗರಚನೆಯಲ್ಲಿ ತಾರತಮ್ಯವಿದೆ ಎಂಬ ವಾದವನ್ನು ಮುಂದಿಟ್ಟು ಇವರಿಬ್ಬರ ವ್ಯತ್ಯಾಸವನ್ನು ಪುಷ್ಟೀಕರಿಸುವ ಪ್ರಯತ್ನ ಪುರುಷಪ್ರಧಾನ ಸಂಪ್ರದಾಯದಲ್ಲಿ ನಡೆದಿದೆ. ಮೆದುಳಿನ ತೂಕಕ್ಕೂ ವ್ಯಕ್ತಿಯ ಬುದ್ಧಿಮತ್ತೆಗೂ ಸಂಬಂಧವಿದೆಯೆಂದು ಹೆಂಗಸಿನ ಮೆದಳು ಚಿಕ್ಕದಾದುದರಿಂದ ಅವಳಿಗೆ ಬುದ್ಧಿ ಪುರುಷನಿಗಿಂತ ಕಮ್ಮಿ ಎಂದು, ಹೆಣ್ಣು ಗಂಡಿನ ಹಾರ್ಮೋನ್‌ಗಳ ರಾಸಾಯನಿಕ ರಚನೆಗೂ ಅವರ ಮಾನಸಿಕ ಅವಸ್ಥೆಗೂ ಸಂಬಂಧವಿದೆ ಎಂದು ಹೇಳುವ ವಾದಗಳು ವೈಜ್ಞಾನಿಕವಾಗಿ ಸಾಬೀತಾಗಿಲ್ಲ. ಚಾರಿತ್ರಿಕ ವಾಸ್ತವಗಳು ಹೇಗೆ ಬದಲಾಗಬಲ್ಲವೋ ಹಾಗೇ ವಸ್ತು ಸ್ವಭಾವಗಳು ಕೂಡ ಬದಲಾಗುತ್ತದೆ. ಮಾನವ ಜೀವಿಗಳಲ್ಲಿ ಎಲ್ಲವೂ ನಿರಂತರವಾಗಿ ಬದಲಾಗುತ್ತಿದೆ, ಆದರೆ ಪ್ರಾಣಿಜೀವಿಗಳ ಸ್ಥಿತಿ ಸ್ಥಿರವಾಗಿದೆ ಎಂದು ವಿಜ್ಞಾನದ ವಿಕಾಸ ಸಿದ್ಧಾಂತ ಹೇಳುತ್ತದೆ. ಇದರ ಅರ್ಥ ಮಾನವ ಜೀವಿಗಳಲ್ಲಿ "ಆಗುವಿಕೆ" ಮುಖ್ಯ. ಹೆಂಗಸು ಕೂಡ ಪುರುಷನಂತೆ ಈಗಾಗಲೇ ದೈಹಿಕ / ಮಾನಸಿಕವಾಗಿ ಪೂರ್ಣಗೊಂಡವಳಲ್ಲ– ಆಕೆ "ಆಗುತ್ತಿದ್ದಾಳೆ", ಈ 'ಆಗುವಿಕೆಯ' ನೆಲೆಯಲ್ಲಿ ಮಾತ್ರ ಆಕೆಯನ್ನು ಗಂಡಸಿನೊಡನೆ ಹೋಲಿಸಬೇಕು. ಅಂದರೆ ಆಕೆಯ ಸಾಧನೆಗಳ ವ್ಯಾಖ್ಯಾನ ಮಾಡಬೇಕು. ಆಕೆಯ ಸಾಮರ್ಥ್ಯಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುವ ಚರ್ಚೆಗಳು ನಡೆಯಬೇಕು. ತನ್ನನ್ನು ತಾನು ಮೀರಿ 'ಆಗುತ್ತಿರುವ' ಮಹಿಳಾ ಜೀವಿಯ ಸಾಧ್ಯತೆಗಳನ್ನು ನಾವು ಪರಿಶೀಲಿಸುತ್ತಿರುವುದರಿಂದ ನಾವು ಸದಾ ತೆರೆದ ಮನಸ್ಸಿನವರಾಗಿರಬೇಕಾಗುತ್ತದೆ. ಇಂತಹ ಆಲೋಚನೆ ವೈಜ್ಞಾನಿಕ ದೃಷ್ಟಿಕೋನದಿಂದ ಮಾತ್ರ ಸಾಧ್ಯ.

ಸ್ತ್ರೀ–ಪುರುಷ ಅಂಗಗಳ ಮಧ್ಯೆ ಇರುವ ಸ್ನಾಯುಬಲದ ವ್ಯತ್ಯಾಸವನ್ನು ಮುಂದಿಟ್ಟುಕೊಂಡು ಹೆಚ್ಚುಗಾರಿಕೆಯನ್ನು ಸ್ಥಾಪಿಸುವ ಪ್ರಯತ್ನ ಮಾಡಿದರೆ ನಾಗರೀಕ ಸಮಾಜದಲ್ಲಿ ಹಿಂಸೆ, ನಿಷಿದ್ಧವೆನ್ನುವ ಹಿನ್ನಲೆಯಲ್ಲಿ ಸ್ನಾಯುಬಲ ಮೇಲುಗೈ ಸಾಧಿಸುವ ಸಾಧನವಾಗುವುದಿಲ್ಲ. ಮಾನವ ಜೀವಿಯ ಸಬಲತೆಯನ್ನು ಆರ್ಥಿಕ ಮತ್ತು ನೈತಿಕ ನೆಲೆಗಳಲ್ಲಿ ಮಾತ್ರ ಗುರುತಿಸಬೇಕು. ಪ್ರಕೃತಿಯ ಹಿನ್ನೆಲೆಯಲ್ಲಿ ಜೀವ ವರ್ಗಗಳ ವ್ಯತ್ಯಾಸ ಮುಖ್ಯವಾದರೂ ಸಮಾಜದ ರೀತಿ ನೀತಿಗಳನ್ನು ಜೀವಶಾಸ್ತ್ರದ ಹಿನ್ನೆಲೆಯಲ್ಲಿ ವಿವರಿಸಲು ಬರುವುದಿಲ್ಲ. ಸಮಾಜದಲ್ಲಿರುವ ವ್ಯಕ್ತಿಗಳು ಕೇವಲ ಜೈವಿಕ ದೇಹಗಳಲ್ಲ. ತನ್ನ ಪ್ರಜ್ಞೆಗೆ ಅಧೀನವಾದ ದೇಹವದು. ಸಾಮಾಜಿಕ ಮೌಲ್ಯಗಳು ಅಂಗ ರಚನೆಯಿಂದ ನಿರ್ದೇಶಿತವಾದುದಲ್ಲ. ಇನ್ನೂ ಹೇಳುವುದಾದರೆ ಸಾಮಾಜಿಕ ಮೌಲ್ಯಗಳು ಜೀವಶಾಸ್ತ್ರದ ತಿಳುವಳಿಕೆಯನ್ನು ಪ್ರಭಾವಿಸುತ್ತದೆ. ಉದಾ: ಹೆಣ್ಣನ್ನು ಗೌರವಿಸಬೇಕೆಂಬ ಮೌಲ್ಯ ಪುರುಷನ ಸ್ನಾಯುಬಲವನ್ನು ಹದ್ದುಬಸ್ತಿನಲ್ಲಿಡುತ್ತದೆ. ಸಮಾಜದ ಅಂಗವಾದ ಜ್ಞಾನಮಿಮಾಂಸೆ, ಆರ್ಥಿಕ ಚಟುವಟಿಕೆ, ಮಾನಸಿಕ ರಚನೆಗಳು, ಜೀವಶಾಸ್ತ್ರದ ಪರಿಮಿತಿಯನ್ನು ಮೀರಿದು. ಪ್ರಜ್ಞಾವಂತ ವ್ಯಕ್ತಿತ್ವವನ್ನು ರೂಪಿಸುವುದು ಸಾಮಾಜಿಕ ಚಟುವಟಿಕೆಯ

ಮುಖ್ಯ ಉದ್ದೇಶ. ಈ ಪ್ರಜ್ಞಾವಂತ ವ್ಯಕ್ತಿತ್ವದ ರಚನೆಗೆ ವೈಜ್ಞಾನಿಕ ಮನೋಧರ್ಮ ಬಹಳ ಮುಖ್ಯವಾದದ್ದು. ಇದು ಯಾವುದೇ ಪೂರ್ವ ನಿಯೋಜಿತ ನಿರ್ಧಾರಗಳಿಲ್ಲದೆ, ವಸ್ತುನಿಷ್ಠವಾಗಿ, ಸಾಂದರ್ಭಿಕವಾಗಿ ವ್ಯಕ್ತಿಯನ್ನು ಗ್ರಹಿಸುವುದನ್ನು ಕಲಿಸುತ್ತದೆ.

ಸತ್ವಶೀಲ ವೈಚಾರಿಕತೆ, ಪ್ರಶ್ನಿಸುವ ಮತ್ತು ಪ್ರಶ್ನಿಸಿಕೊಳ್ಳುವ ಮನೋಬಾವವನ್ನು ಮನುಷ್ಯರಲ್ಲಿ ಹುಟ್ಟುಹಾಕುತ್ತವೆ. ಸಾಂಸ್ಕೃತಿಕ ರಾಜಕಾರಣದ ಎಲ್ಲ ಮಜಲುಗಳಲ್ಲಿ ಇಂತಹ ಸಂವೇದನಶೀಲ ಮನಸ್ಸಿನ ಅಗತ್ಯವಿದೆ. ಅದರಲ್ಲೂ ಸ್ತ್ರೀಪುರುಷ ರಾಜಕೀಯ ದೊಂಬರಾಟಕ್ಕೆ ಇದರ ಅಗತ್ಯ ಹೆಚ್ಚು ಮುಖ್ಯ ಪುರುಷರಲ್ಲಿ ಸ್ವಸಮೀಕ್ಷೆಗೆ ಸಂವೇದನಶೀಲ ಮನಸ್ಸು ಬೇಕಾದಲ್ಲಿ, ಸ್ತ್ರೀಗೆ ಪ್ರಭುತ್ವ ದಬ್ಬಾಳಿಕೆಯನ್ನು ಪ್ರಶ್ನಿಸದೇ ಒಗ್ಗಿಕೊಂಡಿರಲು ತನ್ನಲಿರುವ ಕೊರತೆ ಏನು ಎಂದು ಸ್ವಸಮೀಕ್ಷೆಗೆ ಇದರ ಅಗತ್ಯವಿದೆ. ಮೊಸಕ್ಕೊಳಗಾಗುವವರು ಇರುವವರೆಗೂ ಮೋಸ ಮಾಡುವವರು ಇರುತ್ತಾರೆ ಎಂಬ ನಾಣ್ನುಡಿಯಂತಿದೆ ಈ ವಿಚಾರ. ವೈಜ್ಞಾನಿಕ ವಿಚಾರಧಾರೆಯ ಪ್ರಾಮುಖ್ಯತೆಯನ್ನು ಎಚ್.ನರಸಿಂಹಯ್ಯ ಅವರ ಮಾತುಗಳನ್ನು ನೆನಪಿಸಿಕೊಳ್ಳುವುದು ಬಹಳ ಮುಖ್ಯ.

"ವಿವೇಚನಾ ವಿಧಾನವೂ ಮನುಷ್ಯರ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಮುಖ್ಯ ಕ್ರಮವಾಗಿದೆ. ಮನುಷ್ಯರು ತಮ್ಮಲ್ಲಿ ಧೈರ್ಯ ತಾಳಿದರೆ ಇದು ಸಾಧ್ಯವಾಗುವುದು".

ವೈಜ್ಞಾನಿಕ ಮನೋಧರ್ಮದ ಮೂಲ ಸ್ವರೂಪವನ್ನು ಅರಿತು ನಮ್ಮ ಪ್ರಜ್ಞೆಯ ಅವಿಭಾಜ್ಯ ವಿಧಾನವಾಗಿಸಿದಾಗ ಸಂಸ್ಕೃತಿಯ ಗಟ್ಟಿತನವನ್ನು ಸ್ವೀಕರಿಸುತ್ತಾ ಜೊಳ್ಳನ್ನು ಬೇರೆಯಾಗಿಸಬಹುದು.

ಪರಾಮರ್ಶನ ಕೃತಿಗಳು:

1) ಡಾ॥ ಸಿ.ಆರ್.ಚಂದ್ರಶೇಖರ್, "ಮಹಳೆ ಮತ್ತು ಮಾನಸಿಕ ಅಸ್ವಸ್ಥಗಳು", ನವ ಕರ್ನಾಟಕ ಪ್ರಕಾಶನ, ಬೆಂಗಳೂರು, 2012.
2) ಎಂ.ಎ.ಸೇತುರಾವ್, "ವೈಜ್ಞಾನಿಕ ಮನೋಭಾವ", ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, 1987.
3) ಜಿ.ಟಿ.ನಾರಾಯಣರಾವ್, "ವೈಜ್ಞಾನಿಕ ಮನೋಧರ್ಮ", ನವ ಕರ್ನಾಟಕ ಪ್ರಕಾಶನ, ಬೆಂಗಳೂರು, 2011.
4) ಸಿಮೋನ್ ದ ಬೊವಾ "ದ ಸೆಕೆಂಡ್ ಸೆಕ್ಸ್", ಅನುವಾದ ಡಾ. ಹೆಚ್.ಎಸ್.ಶ್ರೀಮತಿ, ಅಧ್ಯಯನ ಮಂಡಲ, ಬೆಂಗಳೂರು, 2007

ಯೋಗದರ್ಶನದಲ್ಲಿ ಸ್ವಪ್ನಸ್ವರೂಪ

ರಾಚೋಟಿದೇವರು [ಶ್ರೀ ಷ.ಬ್ರ. ರಾಚೋಟಿ ಶಿವಾಚಾರ್ಯ ಸ್ವಾಮಿಗಳು]
ಸಂಶೋಧನ ವಿದ್ಯಾರ್ಥಿ, ಸಂಸ್ಕೃತಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾಲಯಮಾನಸಗಂಗೋತ್ರಿ, ಮೈಸೂರು ೦೬.
E-mail:hrachotidevaru@yahoo.com& sswamijivhmatha@yahoo.in

ಭಾರತದೇಶವುಜ್ಞಾನದಆಗರ, ಆಧ್ಯಾತ್ಮದ ಸಾಗರ, ಅನುಭಾವಗಳ ಆಧಾರ, ಋಷಿಮುನಿಗಳು ತಮ್ಮ ನಿತ್ಯಜೀವನವನ್ನು ಪರೋಪಕಾರಕ್ಕಾಗಿ ಮೀಸಲಿಟ್ಟುತಮ್ಮಜೀವನಾಡಿಯನ್ನು ಸವಿದಿರುತ್ತಾರೆ. ಅಂತಹ ಪರೋಪಕಾರಿಗಳಾದ ಶರಣರು, ಸಂತರು, ಸತ್ಪುರಷರು, ಮೇಧಾವಿಗಳು, ಜ್ಞಾನಿಗಳು, ವಿಜ್ಞಾನಿಗಳು, ತತ್ವದರ್ಶಿಗಳು, ತಮ್ಮತಪೋಬಲ ಶಕ್ತಿಯಿಂದ ಪ್ರಪಂಚಕ್ಕೆ ಹಲವು ಕೊಡುಗೆಗಳನ್ನು ನೀಡಿದ್ದಾರೆ. ಅದರಲ್ಲಿ ಭಾರತೀಯರಕೊಡುಗೆಅದ್ಭುತಜ್ಞಾನಕ್ಷೇತ್ರ, ವಿಜ್ಞಾನಕ್ಷೇತ್ರ, ತಂತ್ರಜ್ಞಾನಕ್ಷೇತ್ರ, ಹಿಗೆ ಹಲವು ಕ್ಷೇತ್ರಗಳಲ್ಲಿ ತಮ್ಮದೆಆದ ನಿಲುವಿನಲ್ಲಿ ಸಾಧನೆಯನ್ನು ಮಾಡಿದವರುಅಸಂಖ್ಯಾತರು. ಅಂತಹ ಋಷಿಮುನಿಗಳ ಸಾಲಿನಲ್ಲಿಒಬ್ಬರಾದ ಪತಂಜಲಿ ಮಹರ್ಷಿಗಳು ಪ್ರಪಂಚಕ್ಕೆ ನೀಡಿರುವಕೊಡುಗೆಅಪಾರ. ಪತಂಜಲಿ ಮಹರ್ಷಿಗಳ ಮಹತ್ವವನ್ನಭಿವ್ಯಕ್ತಗೊಳಿಸುವ ಉಕ್ತಿ ಒಂದು ಪ್ರಚಾರದಲ್ಲಿದೆ.

ಯೋಗೇನಚಿತ್ತಸ್ಯ ಪದೇನ ವಾಚಾಂ ಮಲಂ ಶರೀರಸ್ಯತು ವೈದ್ಯಕೇನ ।
ಯೋಪಾಕರೋತ್ತಂ ಪ್ರವರಂ ಮುನೀನಾಂ ಪತಂಜಲಿಂ
ಪ್ರಾಜಲಿರಾನತೋಸ್ಮಿ ॥

ಈ ಮೇಲಿನ ಉಕ್ತಿಯಿಂದ ಪತಂಜಲಿಮರ್ಷಿಗಳ ವೈದುಷ್ಯ ನಮಗೆ ಅರಿವಾಗುತ್ತದೆ. ಪತಂಜಲಿಮಹರ್ಷಿಗಳು ಯೋಗದಿಂದಚಿತ್ತ ವೃತ್ತಿಯಶುದ್ಧಿಯನ್ನು ಮತ್ತುವ್ಯಾಕರಣಶಾಸ್ತ್ರದಅಧ್ಯಯನದಿಂದ ವಾಕ್ ಶುದ್ಧಿಯನ್ನು ಹಾಗೂಆಯುರ್ವೇದ ಶಾಸ್ತ್ರಅಧ್ಯಯನದಿಂದ ಧಾತುತ್ರಯಗಳಾದ- ವಾತ, ಪಿತ್ತ, ಕಫಾದಿಗಳ ಸಾಮ್ಯತೆಯಿಂದ ಶಾರೀರಿಕ ಶುದ್ಧಿಯನ್ನು ಭೋಧಿಸಿದ ಮಹನೀಯರು. ಅಂತಹ ಪತಂಜಲಿ ಮಹರ್ಷಿಗಳಿಗೆ ನಾವು ನಮಸ್ಕರಿಸುತ್ತೆವೆ, ಎನ್ನುವ ಮುಖಾಂತರ ಭಾರತೀಯ ಪರಂಪರೆಯಲ್ಲಿ ವ್ಯಾಕರಣ ಮಹಾಭಾಷ್ಯರಚನಕಾರರು ಹಾಗು ಯೋಗಸೂತ್ರದರಚನೆಯನ್ನು ಮಾಡಿದ ಪತಂಜಲಿ ಮಹರ್ಷಿಗಳೋಬ್ಬರೆ ಎಂಬ ಪ್ರತೀತಿಗೂಇದು ಪೂರಕವಾಗುತ್ತದೆ.

ಪಾಶ್ಚಾತ್ಯಹಾಗೂಆಧುನಿಕ ವಿದ್ವಾಂಸರನೇಕರು ಈ ಪರಂಪರಾಗತವಾದವನ್ನು ನಂಬದೆಯೋಗದರ್ಶನ ಪ್ರವರ್ತಕನಾದ ಪತಂಜಲಿ ಮತ್ತು ವ್ಯಾಕರಣ ಮಹಾಭಾಷ್ಯಕಾರನಾದ ಪತಂಜಲಿಯೇ ಬೇರೆಎನ್ನುವ ವಾದವನ್ನು ಮಂಡಿಸತ್ತಾರೆ. ಪ್ರಸ್ತುತ ವಾದವೇನಿದ್ದರೂಕೂಡ ಪತಂಜಲಿಗಳ ಯೋಗದರ್ಶನವಂತೂ ಲೋಕಪ್ರಸಿದ್ದಿಯಾಗಿ ಆಧುನಿಕತಂತ್ರಜ್ಞಾನ ದಿನಗಳಲ್ಲಿಯೂ ಕೂಡ ಪತಂಜಲಿಗಳ ಯೋಗಕ್ಕೆ ಮಾರುಹೋಗದಜನರುಅತ್ಯಲ್ಪವಾಗಿದ್ದಾರೆ. ಯೋಗವೆಂದರೆಕೂಡುವುದು, ಸೇರುವುದು, ಸಂಯೋಜನೆಎನ್ನುವ ಸಾಮಾನ್ಯಅರ್ಥ. ಆದರೆ"**ಯುಜ್ ಸಮಾಧೌ**"ಎನ್ನುವಸಂಸ್ಕೃತದಮೂಲಧಾತುನಿಂದಯೋಗಶಬ್ದವುನಿಷ್ಪನ್ನವಾದೆ. ಪ್ರಾಚೀನಕಾಲದಿಂದಲೂನಾಲ್ಕುಬಗೆಯ ಯೋಗಗಳುಪ್ರಸಿದ್ದವಾಗಿವೆ. ಅವು:-

೧. ಮಂತ್ರಯೋಗ
೨. ಲಯಯೋಗ
೩. ರಾಜಯೋಗ
೪. ಹಠಯೋಗಗಳೆಂಬುದಾಗಿ

ಅವುಗಳಲ್ಲಿ ಪತಂಜಲಿಮಹರ್ಷಿಗಳು ಬರೆದಯೋಗದರ್ಶನವು ರಾಜಯೋಗ ವೆಂದು ಕರೆಯಲ್ಪಡುತ್ತದೆ. ಯೋಗದ ಮೂಲ ಉದ್ದೇಶ ಪತಂಜಲಿಗಳೆ ಹೇಳುವ ಹಾಗೆ

"**ಯೋಗಶ್ಚಿತ್ತವೃತ್ತಿನಿರೋಧಃ**"ಚಿತ್ತದವೃತ್ತಿಯನಿರೋಧವನ್ನುಂಟುಮಾಡುವದೇಯೋಗ. ಆ ಚಿತ್ತವೃತ್ತಿಗಳುಐದುವಿಧ. ಅವುಗಳು ಇಂತಿವೆ.

೧. ಪ್ರಮಾಣ
೨. ವಿಪರ್ಯಯ
೩. ವಿಕಲ್ಪ
೪. ನಿದ್ರಾ

ಜಿ. ಸ್ಮೃತಿ

ಈ ಎಲ್ಲಾ ವೃತ್ತಿಗಳು ಚಿತ್ತವನ್ನು ಅವಲಂಬಿಸಿವೆ. ಆ ಚಿತ್ತವೇ ಮನೋ ಎನ್ನುವಅಪರನಾಮದಿಂದಕರೆಯಲ್ಪಡುತ್ತದೆ. ಆದ್ದರಿಂದಲೇ ಉಪನಿಷತ್ಕಾರರು ಮನಸ್ಸು ಸರ್ವಕ್ಕೂಕಾರಣವೆಂದು ಪ್ರತಿಪಾದಿಸುತ್ತಾರೆ.

ಮನ ಏವ ಮನಷ್ಯಾಣಾಂಕಾರಣಂ ಬಂಧ ಮೋಕ್ಷಯೋಃ ।
ಬಂಧಾಯ ವಿಷಯಾಸಕ್ತಂ ಮುಕ್ತೈ ನಿರ್ವಿಷಯಂ ಸ್ಮೃತಮ್ ॥
(ಬ್ರಹ್ಮಬಿಂದೂಪನಿಷತ್)

ಮನುಷ್ಯನ ಬಂಧ ಮತ್ತು ಮೋಕ್ಷಗಳಿಗೆ ಸುಖ ದುಃಖಗಳಿಗೆ ಕಾರಣಕರ್ತ್ಯವಾದದ್ದು ಮನಸ್ಸು. ಅಂತಹ ಮನಸ್ಸು ವಿಷಯಾಸಕ್ತಿಗಳಿಗೆ ಒಳಪಟ್ಟರೆ ಅದು ಬಂಧ. ವಿಷಯಾಸಕ್ತರಹಿತವಾಗಿದ್ದರೆಅದುವೇ ಮೋಕ್ಷ. ಮೋಕ್ಷ ಹೊಂದಬೇಕಾದರೆ ನಿರ್ವಿಷಯವಾದ ಮನಸ್ಕರಿಂದ ಮಾತ್ರ ಸಾಧ್ಯ. ಮನಸ್ಸು ಪಂಚ ಜ್ಞಾನೇಂದ್ರಿಯಗಳ ಮುಖಾಂತರ ಸದಾ ವ್ಯಸ್ತವಾಗಿರುತ್ತದೆ. ಅಂತಹ ವ್ಯಸ್ತಮನಸ್ಸಿನ ಏಕತ್ರೀಕರಣಕ್ಕೆಯೋಗದಅವಶ್ಯಕತೆಯಿದೆ. ಆದ್ದರಿಂದಲೇ ಪತಂಜಲಿ ಮಹಾರ್ಷಿಗಳು ಯೋಗವೆಂದರೆ,

"ಚಿತ್ತವೃತ್ತಿನಿರೋಧಃ"ಎಂದು ಪ್ರಾರಂಬದಲ್ಲಿ ಪ್ರತಿಪಾದಿಸುತ್ತಾರೆ. ಪತಂಜಲಿಯದೃಷ್ಟಿಯಲ್ಲಿಚಿತ್ತವೆಂದರೆ ನಿರೋಧವನ್ನು ಮಾಡಲೇಬೇಕಾದ ನಾನಾ ಬಗೆಯ ವೃತ್ತಿಯನ್ನುಯಾವುದು ಹೋಂದುತ್ತದೆಯೋಅದೇಚಿತ್ತವೆಂಬ ಅರ್ಥವು ಈ ಹಿಂದೆ ಹೇಳಿದ ಸೂತ್ರದಿಂದಅಭಿವ್ಯಕ್ತವಾಗುತ್ತದೆ. ಇದನ್ನು ವ್ಯಾಖ್ಯಾನಿಸುವ ಸಂದರ್ಭದಲ್ಲಿ ಭಾಷ್ಯಕಾರರು ಹೀಗೆ ಹೇಳುತ್ತಾರೆ.

"ಚಿತ್ತಂ ಹಿ ಪ್ರಖ್ಯಾಪ್ರವೃತ್ತಿಸ್ಥಿತಿಶೀಲತ್ವಾತ್ ತ್ರಿಗುಣಮ್" ಚಿತ್ತವುಮೂರು ವಿಧ ಅವುಗಳುಪ್ರಖ್ಯಾರೂಪ, ಪ್ರವೃತಿರೂಪ, ಸ್ಥಿತಿರೂಪವೆಂದು ಚಿತ್ತವನ್ನು ವಿಭಾಗಿಸುತ್ತಾರೆ. ಅದುವೇ ಸತ್ವರಜೋತಮೋಗುಣಾತ್ಮಕವೆಂದು ಪ್ರಸಿದ್ಧವಾಗಿದೆ.

"ವೀತರಾಗ ವಿಷಯಂ ವಾ ಚತ್ತಂ. ಸ್ವಪ್ನ ನಿದ್ರಾಜ್ಞಾನಾಲಂಬನಂ ವಾ"ಎಂದಿದ್ದಾರೆ. ರಾಗದ್ವೇಷರಹಿತವಾದದ್ದು, ಸ್ವಪ್ನ ನಿದ್ರಾವಸ್ಥೆಗಳಿಂದ ಕೂಡಿರುವುದು, ಜ್ಞಾನಕ್ಕೆಆಶ್ರಯವಾದದ್ದುಚಿತ್ತವೆಂದು ವ್ಯಾಖ್ಯಾನಿಸುತ್ತಾರೆ. ಅಂತಹಚಿತ್ತವನ್ನುಯೋಗದ ಮೂಖಾಂತರ ನಿಗ್ರಹಿಸುವ ಬಗೆಯನ್ನುಯೋಗದರ್ಶನವು ತಿಳಿಸುತ್ತದೆ. ಯೋಗವುಎಂಟು ಬಗೆಯೆಂದುಪತಂಜಲಿಗಳು ಪ್ರತಿಪಾದಿಸುತ್ತಾರೆ.

❖ ಅವುಗಳು ಇಂತಿವೆ.

೧. ಯಮ..
೨. ನಿಯಮ.
೩. ಆಸನ.
೪. ಪ್ರಾಣಾಯಾಮ.
೫. ಪತ್ಯಾಹಾರ,
೬. ಧಾರಣ.
೭. ಧ್ಯಾನ.
೮. ಸಮಾಧಿ. ಎಂದು.

ಈ ಎಂಟು ಬಗೆಯಯೋಗದ ಮೂಖಾಂತರ ಮನೋನಿಗ್ರಹ, ಮನೋನಿಗ್ರಹ ಮೂಲಕ ಸಮಾಧಿ ಸಾಧ್ಯವೆಂದು ಮಹರ್ಷಿಗಳ ಅಭೀಪ್ರಾಯ.

ಪ್ರಸ್ತುತ ಮನಸ್ಸುಜ್ಞಾನಕ್ಕೆಆಶ್ರಯತಾಣವಾಗಿದ್ದುಅದರ ಮುಖಾಂತರ ಆವಸ್ಥಾತ್ರಯಗಳು ಉತ್ಪನ್ನವಾಗುತ್ತವೆ. ಅವುಜಾಗ್ರದಾವಸ್ಥೆ, ಸ್ವಪ್ನಾವಸ್ಥೆ, ನಿದ್ರಾವಸ್ಥೆ, ಎಂಬುದಾಗಿ ತಿಳಿದುಬರುತ್ತದೆ. ಸ್ವಪ್ನವೆಂದರೆ:- **"ಸ್ವಪ್ನೇ ಚ ಸರ್ವಮೇವಜ್ಞಾನಂ ಸ್ಮರಣಂ"**ಅಂದರೆಜಾಗ್ರತ್ ಹಾಗು ನಿದ್ರೆಯು ಸಂಧಿಸುವ ಸ್ಥಿತ್ತಿಯಲ್ಲಿ ಮನಸ್ಸು ಮಾಡಿಕೋಳ್ಳುವ ಆಯಾಯ ಪದಾರ್ಥ ವಿಷಯಕಜ್ಞಾನದ ಸ್ಮರಣೆಯೇ ಸ್ವಪ್ನಾವಸ್ಥೆಯೇಂದುರಾಮಾನಂದ ಯತಿವರ್ಯರು ಪತಂಜಲಿ ಯೋಗಸೂತ್ರವೃತ್ತಿಯಲ್ಲಿ ಪ್ರತಿಪಾದಿಸುತ್ತಾರೆ. ಅಲ್ಲಿಅವರು ಸ್ವಪ್ನವನ್ನು ಮೂರು ಬಗೆಯಾಗಿ ವಿಭಾಗಿಸುತ್ತಾರೆ.

೧. ಸಂಸ್ಕಾರಜನ್ಯ ಸ್ವಪ್ನ.
೨. ಧಾತುದೋಷಜನ್ಯ ಸ್ವಪ್ನ.

೩. ಧರ್ಮಾಧರ್ಮಾದೃಷ್ಟ ವಿಶೇಷೋತ್ಪನ್ನ ಸ್ವಪ್ನವೆಂದು ವಿಭಾಗಿಸುತ್ತಾರೆ.

❖**ಸಂಸ್ಕಾರಜನ್ಯ ಸ್ವಪ್ನ :-** ಸಂಸ್ಕಾರಜನ್ಯ ಸ್ವಪ್ನವು ವ್ಯಕ್ತಿಯ ಸುಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಸಂಸ್ಕಾರವುವ್ಯತ್ಯಾಸ ವಾಗಿರುವದರಿಂದ ವ್ಯಕ್ತಿ ವ್ಯಕ್ತಿಗಳಲ್ಲಿಯು ಸ್ವಪ್ನದಲ್ಲಿವ್ಯತ್ಯಸಕಾಣಬಹುದು. ಉದಾ:- ಸಾಮಾನ್ಯವಾಗಿ ಹಿಂದೂಧರ್ಮೀಯರುಕಾಣುವ ಸ್ವಪ್ನವು ಕಾಶೀಯಾತ್ರೆ ಹೋದಹಾಗೆ, ದೇವಸ್ಥಾನದಲ್ಲಿ ಪೂಜೆ ಪುಸ್ಕಾರ ಮಾಡಿದ ಹಾಗೆ ಮತ್ತು ಹೋಮ ಹವನಾದಿಗಳನ್ನು ನೇರವೆರಿಸುತ್ತಿರುವಂತೆ. ಕಾಣುವುದು. ಇಸ್ಲಾಂಧರ್ಮೀಯರು ಮಸೀದಿಗೆ ಹೋಗಿ ನಮಾಜ್ ಮಾಡಿದ ಹಾಗೆ. ಕ್ರಿಶ್ಚಿಯನ್ನರು ಚರ್ಚಿನಲ್ಲಿ ಪ್ರಾರ್ಥನೆ ಮಾಡಿದ ಹಾಗೆ. ಈ ರೀತಿಯ ಸ್ವಪ್ನಗಳನ್ನು ಕಂಡರೆ, ಇಂತಹ ಸ್ವಪ್ನಗಳನ್ನು ಸಂಸ್ಕಾರಜನ್ಯ ಸ್ವಪ್ನ ವೆಂದುಕರೆಯುತ್ತಾರೆ.

❖ **ಧಾತುದೋಷಜನ್ಯ ಸ್ವಪ್ನ:-** ವಾತ, ಪಿತ್ತ, ಕಫಗಳಸಮಸ್ಥಿತಿಯೇ ಆರೋಗ್ಯವೆಂದುಆಯುರ್ವೇದಶಾಸ್ತ್ರಕಾರರು ಭಾವಿಸುತ್ತಾರೆ. ಈ ಮೇಲ್ಕಂಡ ಧಾತುಗಳಲ್ಲಿ ವ್ಯತ್ಯಾಸವಾದಾಗ ಮನುಷ್ಯನ ಸ್ವಪ್ನಗಳಲ್ಲಿ ವ್ಯತ್ಯಾಸವನ್ನುಅರಿಯಬಹುದು. ಉದಾ:-ಆಕಾಶದಲ್ಲಿತೇಲಿದ ಹಾಗೆ, ಬೇಂಕಿಯಲ್ಲಿ ಬೆಂದ ಹಾಗೆ, ನೀರಿನಲ್ಲಿ ಮುಳುಗಿದ ಹಾಗೆ. ಈ ರೀತಿಯ ಹಲವು ಸ್ವಪ್ನಗಳು ಕಂಡರೆಇಂತಹ ಸ್ವಪ್ನಗಳನ್ನು ಧಾತುದೋಷಜನ್ಯಸ್ವಪ್ನವೆಂದು ಕರೆಯುತ್ತಾರೆ.

❖ಧರ್ಮಾಧರ್ಮಾದೃಷ್ಟವಿಶೇಷಜನ್ಯ ಸ್ವಪ್ನ :- ವ್ಯಕ್ತಿಯುತಾನು ಆಚರಿಸುವ ಧರ್ಮ ಹಾಗು ಶಆಧರ್ಮಕ್ಕನುಗುಣವಾಗಿತಾನು ನಿತ್ಯಜೀವನದಲ್ಲಿ ಅನುಭವಿಸಿದ ವಿಷಯಗಳನ್ನು ಸ್ವಪ್ನದಲ್ಲಿಕಾಣುವುದು ಮತ್ತು ಮುಂದೆಅನುಭವಿಲಿರುವ ಮತ್ತುಅನುಭವಿಸ ಬೆಕೆಂದು ಚಿಂತಿಸಿದ ವಿಷಯಗಳನ್ನು ಸ್ವಪ್ನಗಳಲ್ಲಿ ಕಾಣುವುದು. ಉದಾ:- ಕೇಲವರು ಭೂಮಿಯೊಳಗಿನ ನಿಧೀಯನ್ನುಸ್ವಪ್ನದಲ್ಲಿಕಂಡು ಆದನ್ನುಜಾಗ್ರದಾವಸ್ಥೆಯಲ್ಲಿ ಗುರುತಿಸಿದರೆ ಅಂತಹ ಸ್ವಪ್ನಗಳನ್ನು ಧರ್ಮಾಧರ್ಮಾದೃಷ್ಟವಿಶೇಷಜನ್ಯ ಸ್ವಪ್ನವೆಂದುಯೋಗದರ್ಶನಕಾರರು ವಿಭಾಗಿಸುತ್ತಾರೆ.

■ **ಉಪಸಂಹಾರ:-** "ಚಿತ್ತ ವೃತ್ತಿಯ ನಿರೋಧವೇ" ಪ್ರಧಾನವಾಗಿ ನೀರೂಪಣೆ ಮಾಡಿರುವಂತಹಯೋಗದರ್ಶನಕಾರರು ನಿದ್ರಾ ಹಾಗು ಸ್ವಪ್ನಾವಸ್ಥೆಗಳನ್ನು ಯೋಗ ಸಾಧನೆಗೆ ವಿಘ್ನಾವಸ್ಥೆಗಳೆಂದು ಹೇಳಿರುವುದುಂಟು. ಆದ್ದರಿಂದಯೋಗ ಸಾಧನೆಗೆ ನಿದ್ರೆ ಹಾಗು ಸ್ವಪ್ನಗಳು ಬಂಧಕವಾಗಿರುವುದ ರಿಂದ ಅವುಗಳು ದೋಷವೆಂದುಕರೆಯುತ್ತಾರೆ. ಆದರೆ ಸ್ವಪ್ನವುಯೋಗಕ್ಕೆ ಬಾಧಕವಾದರೂಕೂಡ ಸಾಧಕನಿಗೆತನ್ನನ್ನು ತಾನ ಿಅರಿಯುವಲ್ಲಿ ಸಾಧಕವೆನ್ನುವುದು ನಿರ್ವಿವಾದ. ಸ್ವಪ್ನದ ಬಗ್ಗೆ ಅರಿವು ಪ್ರತಿಯೊಬ್ಬರಿಗೂ ಆಗಲೇಬೇಕನ್ನುವದೃಷ್ಟಿಯಿಂದ ಭಾರತೀಯ ಎಲ್ಲಾ ದರ್ಶನ ಕಾರರಂತ ಯೋಗದಾರ್ಶನಿಕರುಕೂಡ ಸ್ವಪ್ನಾವಸ್ಥೆಯನ್ನು ಕೂಲಂಕುಷವಾಗಿ ಚರ್ಚಿಸಿರುತ್ತಾರೆ. ಈ ರೀತಿಯಾದ ವಿಸ್ತೃತವಾದ ಸ್ವಪ್ನವನ್ನು ತಿಳಿದು ಆ ಮೂಲಕ ಶುಭಾಶುಭಾ ಫಲವನ್ನು ನಾವೇಲ್ಲರೂ ಹೊಂದುವಂತೆ ಭಗವಂತನು ನಮ್ಮೆಲ್ಲರನ್ನುದಯಪಾಲಿಸಲಿ ಎನ್ನುವುದೆಯೋಗದರ್ಶನದಆಶಯ.

* ಪರಾಮರ್ಶನ ಗ್ರಂಥಗಳು
೧. ಯೋಗದರ್ಶನ ಸಮೀಕ್ಷಾಲೇಖಕರು. ಶ್ರೀ ಕೃಷ್ಣ ತ್ರಿಪಾಟಿ. ಪ್ರಕಾಶನ: ಕೃಷ್ಣದಾಸಅಕಾಡಮಿ ವಾರಣಾಸಿ
೨. ಪತಂಜಲಿ ಯೋಗಸೂತ್ರ ವೃತ್ತಿ. ಸಂಪಾದಕರು: ಡಾ॥ ವಿಮಲಾ ಕರ್ನಾಟಕ. ಪ್ರಕಾಶನ: ಚೌಕಂಬಾ ಕೃಷ್ಣದಾಸಅಕಾಡಮಿ ವಾರಣಾಸಿ
೩. ಉಪನಿಷತ್ತ ಸಂಗಸಂಪಾದಕರು: ಪಂಡಿತಜಗದಿಶ ಶಾಸ್ತ್ರಿ. ಪ್ರಕಾಶನ: ಮೋತಿಲಾಲ ಬನರಸಿದಾಸ ನವದೆಹಲಿ ಮತ್ತು ವಾರಣಾಸಿ
೪. ಸರ್ವದರ್ಶನ ಸಂಗ್ರಹ. ಅನುವಾದಕರು: ಡಾ॥ ಶಿವಬಸವ ಮಹಾಸ್ವಾಮಿಗಳು. ಪ್ರಕಾಶನ: ಜೆ. ಎಸ್. ಎಸ್. ಮಹಾವಿದ್ಯಾಪೀಠ ಮೈಸೂರು.

ಡಾ. ಪ್ರಭುಶಂಕರಅವರ ಬೌದ್ಧ ಸಾಹಿತ್ಯಚಿಂತನೆ

ಎಂ.ಎನ್.ಕವಿತಾ
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆಕಾಲೇಜು, ಚಾಮರಾಜನಗರ

ಆರೋಗ್ಯವೇ ಪರಮ ಲಾಭ, ತೃಪ್ತಿಯೇ ಪರಮಧರ್ಮ, ವಿಶ್ವಾಸವೇ ಪರಮ ಬಂಧು, ಮನಸಿನ ಸಾಂತಿಯೇ ಪರಮ ಸುಖ ಬುದ್ಧತೋರಿದ ಬದುಕಿನದಾರಿಇದು. ಶೀಘ್ರವಾಗಿ ಅಭಿವೃಧಿಕಾಣುತ್ತಿರುವಆಧುನಿಕಜಗತ್ತು ಸಂಪೂರ್ಣವಾಗಿ ಈ ನಾಲ್ಕು ಲಾಭಗಳಿಂದ ವಂಚಿತವಾಗಿರುವುದರಜೊತೆಗೆ ಇವುಗಳನ್ನು ಹಂಬಲಿಸುತ್ತಾಆಸೆಗಣ್ಣಿನ ಬೆಳಕಿನಲ್ಲಿ ಹುಡುಕುತ್ತಿವೆ. ಅವು ಅಷ್ಟು ಸುಲಭಕ್ಕೆ ಸಿಗುವುದೇ? ಈ ಚಾತುರ್ ಲಾಭಗಳಿಗಾಗಿ ನಾವು ಬುದ್ಧನನಿಲುವುಗಳನ್ನು ಗ್ರಹಿಸಲೇ ಬೇಕು.

ಆಧುನಿಕಜಗತ್ತಿನಜಟಿಲ ಸಮಸ್ಯೆಗಳಿಂದ ಪಾರಗಲು ಬುದ್ಧ-ಬಸವ ರಂತಹ ಶಾಂತಿದೂತರಕುರಿತಾದಓದು-ಅನುಸಂಧಾನನಿರಂತರವಾಗಿ ನಡೆಯುತ್ತಿರಲೇ ಬೇಕು.

ಬುದ್ಧನನ್ನುಕುರಿತುಕನ್ನಡದಲ್ಲಿ ಅನೇಕ ಕೃತಿಗಳು ಬಂದಿದ್ದರೂ, ಅವು ಕಡಿಮೆಯೇ. ಪ್ರಸ್ತುತ ಸಮಾಜಕ್ಕೆಆತನ ಚಿಂತನೆಗಳು ಮತ್ತೆ ಮತ್ತೆ ಪೌಷ್ಟಿಕತೆಯನ್ನು ನೀಡುತ್ತಲೇಇರುತ್ತದೆ. ಆ ಕಾರಣಕ್ಕೆ ಬುದ್ಧನನ್ನುಕುರಿತು ಬರೆದಕಥೆ,ನಾಟಕಾದಿ ಸಾಹಿತ್ಯ ಪ್ರಕಾರಗಳ ಮರುಚಿಂತನೆ ನಡೆಯುತ್ತಿಲೇ ಬೇಕಾಗುತ್ತದೆ. ಈ ನಿಟ್ಟಿನಲ್ಲಿಡಾ. ಪ್ರಭುಶಂಕರಅವರ ಸಾಹಿತ್ಯಕಕೊಡುಗೆ ಬಹಳ ಮುಖ್ಯವಾಗಿದೆ.ಅಂಗುಲೀ ಮಾಲ, ಆಮ್ರಪಾಲಿ, ಸುಜಾತ, ಗಾಳಿ ಎಂಬ ಕುದುರೆಏರಿ ಈ ನಾಲ್ಕು ನಾಟಕಗಳನ್ನು ಬುದ್ಧನಿಗೆ ಸಂಬಂಧಿಸಿದಂತೆ ರಚಿಸಿದ್ದಾರೆ. ಈ ನಾಟಕಗಳ ಮೂಲಕ ಪ್ರಭುಶಂಕರಅವರುಕಂಡುಕೊಂಡ ಮೌಲಿಕ ಚಿಂತನೆಗಳನ್ನು ನನ್ನ ಪ್ರಬಂಧದಲ್ಲಿ ವಿವರಿಸ ಬಯಸುತ್ತೇನೆ.ವಂದನೆಗಳೊಂದಿಗೆ,

'ತ್ರಿಕರಣ'ಗಳ ದೆಸೆಯಿಂದ ಕಂಗಾಲಾದ ಆಧುನಿಕ ಜಗತ್ತಿನ ಜನತೆಗೆ ಹಣ-ಆವಿಷ್ಕಾರಿತ ವಸ್ತುಗಳಿಂದ ನೆಮ್ಮದಿ ಸಿಗದೆಂಬ ಸತ್ಯದ ಅರಿವಾಗಿದೆ. ಜೊತೆಗೆ ಆರೋಗ್ಯವೇ ಪರಮ ಲಾಭ, ತೃಪ್ತಿಯೇ ಪರಮ ಧರ್ಮ, ವಿಶ್ವಾಸವೇ ಪರಮ ಬಂಧು, ಮನಸ್ಸಿನ ಶಾಂತಿಯೇ ಪರಮ ಸುಖ ಎಂಬ ಸತ್ಯದ ಸಾಕ್ಷಾತ್ಕಾರವೂ ಆಗಿದೆ. ತಮ್ಮ ಬದುಕಿನುದ್ದಕ್ಕೂ ಇದೇ ಸಾಕ್ಷಾತ್ಕಾರವನ್ನು ಜನತೆಗೆ ಉಪದೇಶಿಸಿದ ಬುದ್ಧ-ಬಸವಾದಿ ಮಹಾ ಮಾನವತಾವಾದಿಗಳು. ಅವರ ಬೋಧನೆಗಳು ಈ ಹೊತ್ತಿಗೆ ಹೆಚ್ಚು ಪ್ರಸ್ತುತ. ತ್ರಿಕರಣಗಳ ಪೂರ್ವದಲ್ಲೂ ಜನ ಆಧ್ಯಾತ್ಮದ ಅನುಸಂಧಾನಕ್ಕಾಗಿ ಮೊರೆ ಹೋಗಿದ್ದು ಬುದ್ಧ-ಬಸವಾದಿ ಮಹನೀಯರ ಚಿಂತನೆಗಳಿಗೆ. ಹಾಗಾಗಿ ಆಧುನಿಕ ಕನ್ನಡ ಸಾಹಿತಿಗಳು ಅವರ ಚಿಂತನೆಗಳನ್ನು ಸಾಹಿತ್ಯ ರೂಪಗಳಲ್ಲಿ ಬಿಂಬಿಸುವ ಪ್ರಯತ್ನ ಮಾಡಿದರು. ಈ ಪ್ರಯತ್ನ ಪ್ರಸ್ತುತ ಸಮಾಜಕ್ಕೆ ಮೌಲ್ಯಿಕ ಕೊಡುಗೆಯಾಗಿದೆ.

ಗತಕಾಲದ ಸಮಾಜದಲ್ಲಿನ ಜನರ ಬೆಳಕಾಗಿ ಬದುಕಿದ್ದ ಅನೇಕ ವ್ಯಕ್ತಿಗಳ ಬದುಕು ಪ್ರಸ್ತುತ ಕಾಲದ ಜನರ ಬದುಕನ್ನು ಬೆಳಗಿಸಬಲ್ಲುದು ಎಂಬುದನ್ನು ಕೆಲವು ಐತಿಹಾಸಿಕ ವ್ಯಕ್ತಿಗಳ ಪಾತ್ರ ರಚನೆಯ ಮೂಲಕ ನಿರೂಪಿಸುವ ಪ್ರಯತ್ನ ಆಧುನಿಕ ಸಾಹಿತಿಗಳಿಂದ ನಡೆಯಿತು. ಹಾಗಾಗಿ ಆಧುನಿಕ ಸಾಹಿತ್ಯ ಸಂಧರ್ಭದಲ್ಲಿ ಬುದ್ಧ, ಬಸವ, ಕ್ರಿಸ್ತ, ಗಾಂಧಿ, ಮಹಾವೀರ ರಂತಹ ಅನೇಕ ವಿಶ್ವಮಾನವರ ಬದುಕು ಸಾಹಿತ್ಯದಲ್ಲಿ ಮರುಹುಟ್ಟು ಪಡೆಯಿತು. ಬುದ್ಧನ ವಿಚಾರಧಾರೆಯಂತೂ ಎಲ್ಲಾ ಕಾಲದ ಸಮಾಜಕ್ಕೂ ದಾರಿದೀಪ ಎಂಬುದರಲ್ಲಿ ಸಂಶಯವೇ ಇಲ್ಲ ಕನ್ನಡದ ಅನೇಕ ಕವಿಗಳಿಗೆ ಬುದ್ಧನ ಬದುಕು ಮಾದರಿಯಾಗಿ ಕಂಡಿತು. ಅವನು ನಡೆದ ದಾರಿಯಲ್ಲಿ ಬದುಕಿನ ಕತ್ತಲೆ ಕಳೆಯುವ ಪ್ರಜ್ವಲತೆ ಕಾಣಿಸಿತು. ನವೋದಯ ಸಾಹಿತ್ಯ ಸಂದರ್ಭದ ವರೆಗೂ ಕನ್ನಡ ಸಾಹಿತ್ಯದಲ್ಲಿ ಎಲ್ಲೂ ಕಾಣದಿರುವ ಬೌದ್ಧ ಸಾಹಿತ್ಯ ಕನ್ನಡ ಸಾಹಿತ್ಯ ಲೋಕದೊಳಗೆ ಪ್ರವೇಶ ಪಡೆಯಿತು. ಕನ್ನಡದಲ್ಲಿ ಬುದ್ಧನಿಗೆ ಸಂಬಂಧಿಸಿದಂತೆ ಅನೇಕ ಕೃತಿಗಳು ಹೊರಬಂದಿವೆ. ಅವುಗಳ ಪೈಕಿ ನಾಟಕಕ್ಕೆ ಸಿಂಹಪಾಲಿದೆ. ಬಿ. ಪುಟ್ಟಸ್ವಾಮಯ್ಯ ನವರ 'ಗೌತಮ ಬುದ್ಧ', ಗೋವಿಂದ ಪೈ ಅವರ 'ವೈಶಾಖಿ', ಕುವೆಂಪು ಅವರ 'ಮಹಾರಾತ್ರಿ' ಮಾಸ್ತಿಯವರ 'ಯಶೋಧರ' ಹೀಗೆ ಅನೇಕ ನಾಟಕಗಳಿಗೆ ಬುದ್ಧನ ಬದುಕೇ ಆಧಾರವಾಗಿದೆ. ನಾಟಕಗಳಲ್ಲಷ್ಟೇ ಅಲ್ಲದೇ ಬುದ್ಧನ ಬದುಕು ಕಥೆ ಕಾದಂಬರಿಗಳ ರೂಪದಲ್ಲಿಯೂ ಸಾಕಷ್ಟು ರಚನೆಯಾಗಿದೆ ಈ ನಿಟ್ಟಿನಲ್ಲಿ ಜಿ.ಪಿ. ರಾಜರತ್ನಂ ಅವರ ಹೆಸರು ಬಹು ಮುಖ್ಯವಾದದ್ದು.

ಡಾ. ಪ್ರಭುಶಂಕರ ಅವರು ಬುದ್ಧನ ವಿಚಾರಧಾರೆಗಳ ಬಗೆಗೆ ತಳೆದಿರುವ ಆಸಕ್ತಿ, ನಿಲುವುಗಳು ಬಹಳ ವಿಶೇಷವಾದವು. ಬುದ್ಧನ ಮೇಲಿನ ಗೌರವ ದಿಂದ, ಬೌದ್ಧದರ್ಮದ ಸಂದೇಶದ ಬಗೆಗೆ ಇರುವ ಅಭಿಮಾನದಿಂದ ಒಟ್ಟು ನಾಲ್ಕು ನಾಟಕಗಳು ಒಂದು ಕಾದಂಬರಿಯನ್ನು ಬುದ್ಧನಿಗೆ ಸಂಬಂಧಿಸಿದಂತೆ ರಚಿಸಿದ್ದಾರೆ. ಯಾವ ಸಾಹಿತ್ಯ ಪಂಥಕ್ಕೂ ಅಂಟಿಕೊಳ್ಳದ ಪ್ರಭುಶಂಕರ ಅವರು ಯಾವ ಸಾಹಿತ್ಯ ಪ್ರಕಾರಕ್ಕೂ ಅಂಟಿಕೊಂಡವರಲ್ಲ. ಆದರೆ ನಾಟಕ ಸಾಹಿತ್ಯದ ಮೂಲಕ ಬುದ್ಧನ ವಿಚಾರಗಳನ್ನು ಸಹೃದಯರಿಗೆ ತಲುಪಿಸುವುದು ಪರಿಣಮಕಾರಿ ಪ್ರಯತ್ನ ಎಂಬ ಕಾರಣಕ್ಕೆ ಅಂಗುಲೀಮಾಲ, ಆಮ್ರಪಾಲಿ, ಸುಜಾತೆ, ಗಾಳಿಯೆಂಬ ಕುದುರೆ ಏರಿ ಎಂಬ ನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ಪ್ರೇಮ ಬಿಕ್ಷು ಎಂಬ ಕಾದಂಬರಿಯನ್ನು ಅಂಗುಲೀಮಾಲನ ಜೀವನಕ್ಕೆ ಸಂಬದಿಸಿದಂತೆ ರಚಿಸಿದ್ದಾರೆ . ಬುದ್ಧನ ಬದುಕಿನ ಘಟನೆಗಳನ್ನೇ ಆಧಾರವಾಗಿಟ್ಟು ಕೊಂಡು ರಚಿತವಾದ ಈ ನಾಲ್ಕು ನಾಟಕಗಳು ಪ್ರತ್ಯೇಕವಾಗಿ ಪ್ರಕಟಗೊಂಡಿವೆ. ಇವುಗಳನ್ನು ಒಂದೇ ಕೃತಿಯಲ್ಲಿ 'ಬುದ್ಧ

ನಾಟಕ ಚಕ್ರ' ಎಂಬ ಶೀರ್ಷಿಕೆ ಮತ್ತು ಬುದ್ಧ ಎದ್ದು ಬರುವ ನಾಲ್ಕು ನಾಟಕಗಳು ಎಂಬ ಉಪ ಶೀರ್ಷಿಕೆಯೊಂದಿಗೆ ಡಿ. ವಿ . ಕೆ. ಮೂರ್ತಿಯ ವರು ಪ್ರಕಟಿಸಿದ್ದಾರೆ.

ಸುಮಾರು ಎರಡು ಸಾವಿರದ ಐದುನೂರು ವರ್ಷಗಳ ಹಿಂದೆಯೇ ಶಾಂತಿ ಮತ್ತು ಅಹಿಂಸೆ ತತ್ತ್ವಗಳು ಮನುಷ್ಯನ ಬದುಕಾಗಬೇಕೆಂದು ಬೋಧಿಸಿದ ಆ ಮೂಲಕ ಮನುಕುಲ ದು;ಖ ನಿವಾರಕನಾದ 'ಗೌತಮ ಬುದ್ಧ' ನ ಜೀವನ ಮತ್ತು ಸಂದೇಶಗಳು ಜಗತ್ತಿಗೆ ಮಾದರಿಯಾದದ್ದಾಗಿದೆ. ಸರ್ ಎಡ್ವಿನ್ ಅರ್ನಾಲ್ಡ್ ಬುದ್ದನನ್ನು 'ಲೈಟ್ ಆಫ್ ಏಶಿಯಾ' ಎಂದದ್ದು ಈ ಕಾರಣಕ್ಕೆ ಇರಬೇಕು. ಭಾರತೀಯ ಸಾಹಿತ್ಯದಲ್ಲಿ ಬುದ್ಧನ ಸಮಗ್ರ ಜೀವನವನ್ನು ಪ್ರತಿಬಿಂಬಿಸುವ ಮೊದಲ ಕೃತಿಯೆಂದರೆ ಸಂಸ್ಕೃತದ ಅಶ್ವಘೋಷನ 'ಬುದ್ಧಚರಿತೆ' ಆಧುನಿಕ ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ಡಾ. ಕೋಸಂಬಿ ಅವರ 'ಭಗವಾನ್ ಬುದ್ದ' ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ' ಬುದ್ದ ಮತ್ತು ಆತನ ಧರ್ಮ' ಕೃತಿಗಳು. ಬುದ್ಧನ ಜೀವನ ಮತ್ತು ಸಂದೇಶ ಸಾರುವ ಪ್ರಮುಖ ಕೃತಿಗಳು. ಅಶ್ವಘೋಷನ ಕೃತಿ ಬುದ್ಧನ ವೈರಾಗ್ಯಕ್ಕೆ ರೋಗ, ಮುಪ್ಪು ಮತ್ತು ಮರಣಗಳ ದೃಶ್ಯ ನೋಡಿದ್ದೇ ಕಾರಣವೆಂದು ತಿಳಿಸಿದ್ದರೆ, ಕೋಸಂಬಿ ಮತ್ತು ಅಂಬೇಡ್ಕರ್ ಅವರು ಬುದ್ದನ ವೈರಾಗ್ಯಕ್ಕೆ ಜಲವಿವಾದ ಕಾರಣವೆಂಬ ನಿರೂಪಣೆ ಕೊಡುತ್ತಾರೆ. ಈ ವಿಚಾರಗಳೇ ಕನ್ನಡ ನಾಟಕಗಳಿಗೂ ಕಥಾವಸ್ತುವಾಗಿ ರುವುದನ್ನು ಗಮನಿಸಬಹುದು ಕಾರಂತರ ಕಿಸಾಗೋತಮಿ, ಕುವೆಂಪು ರವರ ಮಹಾರಾತ್ರಿ, ಮಾಸ್ತಿಯ ವರ ಯಶೋಧರಾ, ಬಿ. ಪುಟ್ಟಸ್ವಾಮಯ್ಯ ನವರ ಗೌತಮ ಬುದ್ಧ, ಮ.ನ.ಜ. ಅವರ ಜಲ ನಾಟಕಗಳನ್ನು ಮುಖ್ಯವಾಗಿ ಗಮನಿಸುವುದ ರೊಂದಿಗೆ, ಡಾ. ಪ್ರಭುಶಂಕರ ಅವರ ನಾಟಕಗಳನ್ನೂ ಬುದ್ಧನ ಬದುಕು– ಸಂದೇಶಗಳ ಹಿನ್ನೆಲೆಯಲ್ಲೇ ನೋಡಬಹುದು.

ಬುದ್ಧ ಎಂದರೆ ತಿಳಿದವ ಜ್ಞಾನಿ, ನಿದ್ದೆಯಿಂದ ಎಚ್ಚೆತ್ತವ ಎಂಬರ್ಥಗಳಿವೆ . ಆಧ್ಯಾತ್ಮ ಜಾಗೃತಿಯನ್ನು ಈ ಪದ ನಿರ್ದೇಶಿಸುತ್ತದೆ. ಡಾ. ಪ್ರಭುಶಂಕರ ಅವರೂ ತಮ್ಮ ಬದುಕಿನಲ್ಲಿ ಆಧ್ಯಾತ್ಮದ ಒಲವನ್ನು ತಮ್ಮ ಗುರು ಮಹಾಕವಿ ಕುವೆಂಪುರವರಿಂದಲೂ, ರಾಕೃಷ್ಣಪರಮಹಂಸರ ವಿಚಾರ– ಚಿಂತನೆಗಳಿಂದಲೂ ಸ್ವೀಕರಿಸಿದವರು. ಬುದ್ಧನ ಸಂದೇಶಗಳು ಪ್ರಭುಶಂಕರ ಅವರ ಆಧ್ಯಾತ್ಮ ಚಿಂತನೆಗೆ ಗಟ್ಟಿಯಾದ ಬುನಾದಿ ಎಂದೇ ಹೇಳಬಹುದು.

'ಅಂಗುಲೀಮಾಲ' ಡಾ. ಪ್ರಭುಶಂಕರ ಅವರ ಮೊದಲನೆಯ ನಾಟಕ. ಒಟ್ಟು ಐದು ದೃಶ್ಯಗಳು ಈ ನಾಟಕದಲ್ಲಿವೆ. ನಾಟಕದ ಸ್ವರೂಪ ಗೇಯತೆಯಿಂದ ಕೂಡಿರುವುದರಿಂದಲೇ ಇದಕ್ಕೆ ಮುನ್ನುಡಿ ಬರೆದಿರುವ ಕನ್ನಡದ ಮುಖ್ಯ ಕವಿ ಪು.ತಿ.ನರಸಿಂಹಚಾರ್ ಅವರು ಕಾವ್ಯ ವರ್ಣನೆಯನ್ನು, ಪ್ರಭುಶಂಕರ ಅವರು ನಾಟಕದಲ್ಲಿ ಕಾವ್ಯಪ್ರತಿಭೆಯನ್ನು ಬಳಸಿಕೊಂಡಿರುವ ರೀತಿಯನ್ನು ಸವಿವರವಾಗಿ ವಿವರಿಸುತ್ತಾರೆ. ದರೋಡೆಕೋರ, ಕೂಲೆಪಾತಕಿ ಎಂದೇ ಕುಖ್ಯಾತಿ ಪಡೆದಿದ್ದ ಅಂಗುಲೀಮಾಲನೇ, ಅವನ ವ್ಯಕ್ತಿತ್ವವೇ ಇಲ್ಲಿನ ಕಥಾವಸ್ತು. ಸಾವತ್ತಿ ನಗರದ ಬೆಟ್ಟದಲ್ಲಿ ವಾಸವಿದ್ದ ಅಂಗುಲೀಮಾಲ ಜನರನ್ನು ಹಿಂಸಿಸಿ ಆನಂದ ಪಡುತ್ತಿದ್ದ ಕ್ರೂರ ವ್ಯಕ್ತಿತ್ವದವನು. ಅವನೆಂದರೆ ಊರಿನ ರಾಜನೂ ಒಳಗೊಂಡಂತೆ ಎಲ್ಲರಲ್ಲೂ ಭಯ. ಬುದ್ಧ ದೇವ ಮತ್ತು ಅವನ ಪರಿವಾರದವರು ಸಾವತ್ತಿ ನಗರವನ್ನು ಪ್ರವೇಶಿಸಿದಾಗ ರಾಜ ಪಸೆನದಿಗೆ ಇರುವ ಭಯದ ಜೊತೆಗೆ ಅಂಗುಲೀಮಾಲನ ಕ್ರೂರ ಮುಖದ ಪರಿಚಯವು ಬುದ್ಧನಿಗಾಗುತ್ತದೆ. ಅವನ ವ್ಯಗ್ರರೂಪವನ್ನು ತನ್ನ ಶಿಷ್ಯರು ವಿವರಿಸಿದ ಮೇಲೂ ಬುದ್ಧ ಅಂಗುಲೀಮಾಲನನ್ನು ಸ್ವತ: ಭೇಟಿ ಮಾಡಿ ಬರುವುದಾಗಿ ಹೊರಡುತ್ತಾನೆ. ಶಿಷ್ಯಂದಿರು ಎಷ್ಟೇ ತಡೆದರೂ ಪ್ರಯೋಜನವಾಗುವುದಿಲ್ಲ. ಬೆಟ್ಟದ ಮೇಲಿರುವ ಅಂಗುಲೀಮಾಲನ ಬಳಿ ಹೋದ ಬುದ್ಧನನ್ನು ತಿರಸ್ಕಾರ, ತೋಳ್ಬಲದ ಅಹಂಕಾರದಿಂದಲೇ ಮಾತನಾಡಿಸಿದ ಅಂಗುಲೀಮಾಲ ಮತ್ತು ಅವನ ಅನುಚರರನ್ನು ಬುದ್ಧ ತಲೆ ಎತ್ತಿ ನೋಡಿದ ಕೂಡಲೇ ಬುದ್ಧನನ್ನು ಹೊಡೆಯಲೆಂದು ಕತ್ತಿ ಸಮೇತ ಎತ್ತಿದ ಅಗುಲೀಮಾಲನ ಕೈ ಕೆಳಗಿಳಿಯುತ್ತದೆ. ಅನುಚರರನ್ನು ಗುಹೆಗಟ್ಟುತ್ತಾನೆ. ನಿಧಾನವಾಗಿ ಆ ಶಾಂತಿ ಸ್ವರೂಪನ ನೋಟ, ಮಾತುಗಳಿಗೆ ಶರಣಾಗಿ ಕ್ರೂರತೆಗೆ ಸಂಕೇತವಾಗಿದ್ದ ಆಯುಧಗಳನ್ನೆಲ್ಲಾ ಎಸೆಯುತ್ತಾ, ಹೆಬ್ಬೆರಳ ಮಾಲೆಯನ್ನು ಬೀಸಾಡುತ್ತಾನೆ. ಬುದ್ಧನ ಹಿಂದೆಯೇ ಬರುತ್ತಾ ತನ್ನ ವ್ಯಕ್ತಿತ್ವವನ್ನೇ ಬದಲಿಸಿಕೊಳ್ಳುತ್ತಾನೆ. ಬುದ್ಧನೇ ತನ್ನ ಮುಂದಿನ ಬದುಕಿನ ದಾರಿಯೆಂದು ಪರಿವರ್ತಿತನಾಗುತ್ತಾನೆ. ಬೆಟ್ಟದ ಮೇಲೆ ತೋರಿದ ಆರ್ಭಟವೆಲ್ಲ ಬೆಟ್ಟ ಇಳಿಯುವುದರೊಳಗೆ ಕರಗಿ ಬಿಡುತ್ತದೆ. ಕೆಳಗಿಳಿದು ತನ್ನ ಪರಿವಾರ ಸೇರಿದ ಬುದ್ಧ ಅಂಗುಲೀಮಾಲನನ್ನು ಪರಿವಾರದ ಚಿಕ್ಕ ತಮ್ಮನೆಂದು ಭಾವಿಸಿರಿ ಎನ್ನುತ್ತಾನೆ. 'ಪುಣ್ಯಾಕ್ಷ' ನೆಂಬ ಹೊಸ ಹೆಸರನ್ನೂ ಕೂಡುತ್ತಾನೆ. ಬುದ್ಧನ ವಿಚಾರಗಳಿಂದ ಪ್ರೇರಿತನಾದ ಅಂಗುಲೀಮಾಲ ಏಳು ದಿನಗಳ ಕಾಲ ಬಿಕ್ಷೆ ಬೇಡಿ ಬರುವುದಾಗಿ ಹೋಗುತ್ತಾನೆ ಕಡೆಯದಿನ ರಕ್ತ ಸುರಿಯುತ್ತಿರುವ, ಹೊಡೆತ ತಿಂದು ನೋವು ಅನುಭವಿಸುತ್ತಿರುವ ಸ್ಥಿತಿಯಲ್ಲಿ ಬಂದ ಅಂಗುಲೀಮಾಲ ಬುದ್ಧನ ತೊಡೆ ಮೇಲೆ ತಲೆ ಇಟ್ಟು ಜನ ತಾನು ಕೊಟ್ಟದ್ದನ್ನು ಹಿಂತಿರುಗಿಸಿದ ವಿಚಾರ ತಿಳಿಸಿ ಸಾಯುತ್ತಾನೆ.

ನಾಟಕಕಾರರು ಅಂಗುಲೀಮಾಲ ಮತ್ತು ಬುದ್ಧ ಪಾತ್ರಗಳ ಮೂಲಕ ಜಗತ್ತಿಗೆ ದೊಡ್ಡ ಸಂದೇಶ ಸಾರುವ ಪ್ರಯತ್ನ ಮಾಡಿದ್ದಾರೆ. ಶಾಂತಿಯೊಂದೇ ಜಗತ್ತನ್ನು ನೆಮ್ಮದಿಯಾಗಿಡಬಲ್ಲ ಏಕೈಕ ಅಸ್ತ್ರ. ಜಗತ್ತನ್ನೇ ಗೆಲ್ಲಬೇಕೆಂದು ಹಂಬಲ ಹೊಂದಿದ್ದ ನೂರಾರು ರಾಜರು ಎಷ್ಟೇ ರಕ್ತಪಾತ ಮಾಡಿದರೂ ನೆಮ್ಮದಿಯನ್ನು ಕಾಣಲಾಗಲ್ಲಿಲ್ಲ. ಶಾಂತಿ ಎಂಬ ಸರಳ ಮಂತ್ರದಿಂದ ಜಗತ್ತನ್ನೇ ಗೆದ್ದ ಮತ್ತು ಜಗತ್ತಿನಲ್ಲಿ ಶಾಶ್ವತವಾಗಿ ತನ್ನ ಹೆಸರನ್ನು ಉಳಿಸಿದ ಬುದ್ಧನ ವಿಚಾರವನ್ನು ಎತ್ತಿಹಿಡಿಯುವ ಪ್ರಯತ್ನ ಈ ನಾಟಕದಲ್ಲಾಗಿದೆ . ನಾಟಕದ ಆರಂಭದಲ್ಲಿ ರಾಜ ಪಸೆನದಿಯ ಕೋಟೆಯ ಭದ್ರತೆ, ಸೈನಿಕರ ಸಿದ್ಧತೆ, ಆಯುದಗಳೆಲ್ಲ ಆತಂಕ ಹೆಚ್ಚಿಸುವುದೇ ಹೊರತು ಭಯ ನಿವಾರಿಸುವುದಿಲ್ಲ ಎಂಬುದನ್ನು ತಿಳಿಸುತ್ತದೆ. ಬುದ್ಧ ತನ್ನ ಮನದಲ್ಲಿ ತಳೆದಿದ್ದ ಪ್ರೀತಿ, ಅವನಾಡಿದ ಮಾತುಗಳು ಅಂಗುಲೀಮಾಲನ ಕ್ರೂರತೆಗೆ ಹೊಸ ಬದಲಾವಣೆಯ ದಾರಿಯನ್ನು ತೆರೆಯಿತು. ಎರಡು ಮಹಾಯುದ್ಧಗಳನ್ನೂ ಒಳಗೊಂ ಡಂತೆ ಅನೇಕ ದುರಂತ ಯುದ್ಧ ಗಳನ್ನು ಕಂಡ ಈ ಜಗತ್ತಿಗೆ ಬೇಕಿರುವುದು ಅಣುಬಾಂಬ್ ಅಲ್ಲ, ಬುದ್ಧನಂತಹ ಶಾಂತಿ ದೂತ. ಮನಸ್ಸು ಬದಲಾದರೆ ಮನುಷ್ಯನ ಅಂತರಂಗದಲ್ಲಡಗಿರುವ ರಾಕ್ಷಸ ತಾನಾಗಿ ಸಾಯುತ್ತಾನೆ. ಅವನ ಕ್ರೂರತ್ವ ಕೊಲ್ಲಲು ಇತರ ಅಸ್ತ್ರಗಳೇ ಬೇಕಿಲ್ಲ ಎಂಬುದು ಬುದ್ಧನ ಸಂದೇಶವಾಗಿತ್ತು. ಅವನ ಶಿಷ್ಯ ಅಂಗುಲೀಮಾಲನ ಜೀವನಗಾಥೆ ಅದನ್ನು ಯಶಸ್ವಿಯಾಗಿ ನಿರೂಪಿಸಿದೆ. ಪ್ರೇಮಬಿಕ್ಷು ಕಾದಂಬರಿಯೂ ಅಂಗೂಲಿಮಾಲನ ಬದುಕಿನ ಕಥೆಯನ್ನೇ ಹೇಳಿದರೂ, ಅಂಗೂಲೀಮಾಲನ ಕ್ರೂರತೆಗೆ ಅವನು ಜೀವನದಲ್ಲಿ ಅನುಭವಿಸಿದ ಕಹಿ ಘಟನೆಗಳೇ ಕಾರಣ, ವ್ಯಕ್ತಿ ಹುಟ್ಟು ಕಟುಕನಾಗಿರು

ವುದಿಲ್ಲ. ಅವನ ಸುತ್ತಲಿನ ವ್ಯವಸ್ಥೆ ಅವನ್ನು ಕ್ರೂರನನ್ನಾಗಿಸುತ್ತದೆ ಎಂಬ ವಿಚಾರದೊಂದಿಗೆ ಅಂಗುಲೀಮಾಲನ ವ್ಯಕ್ತಿತ್ವಕ್ಕೆ ಹೊಸ ಆಯಮ ಕಲ್ಪಿಸಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ಇಂತಹ ವಿಶೇಷ ವ್ಯಕ್ತಿತ್ವವನ್ನು ಪರಿಚಯಿಸುವುದರೊಂದಿಗೆ ಬುದ್ಧನ ವ್ಯಕ್ತಿತ್ವದ ಶಕ್ತಿಯನ್ನು ಜಗತ್ತಿಗೆ ಪರಿಚಯಿಸುವ ಕೆಲಸ ಡಾ. ಪ್ರಭುಶಂಕರ ಅವರಿಂದಾಗಿದೆ.

ಆಮ್ರಪಾಲಿ ಇದು ಡಾ.ಪ್ರಭುಶಂಕರ ಅವರ ಎರಡನೆಯ ನಾಟಕವಾಗಿದೆ. ಆಮ್ರಪಾಲಿ ಶ್ರಾವಸ್ತಿ ನಗರದ ವೇಶ್ಯ ಬುದ್ಧನ ಪರಿವಾರದಲ್ಲಿ ಸ್ತ್ರೀಯರಿಗೂ ಸ್ಥಾನವಿತ್ತು ಎಂಬುದಕ್ಕೆ ಆಮ್ರಪಾಲಿ ಉದಾಹರಣೆಯಾಗಿ ನಿಲ್ಲುತ್ತಾಳೆ. ಅದರಲ್ಲೂ ವೇಶ್ಯೆಯಾಗಿದ್ದವಳು ಬಿಕ್ಷುಣಿಯಾಗುವ ವಿಶೇಷ ಸಂಗತಿ ಇಲ್ಲಿದೆ. ಬುದ್ಧನ ಉಪದೆಶಗಳಿಂದ ಪ್ರಭಾವಿತಳಾದ ಆಮ್ರಪಾಲಿ ತನ್ನ ಸಮಸ್ತ ಆಸ್ತಿಯನ್ನು ಬಿಕ್ಷುಗಳ ಸಂಘ ಸ್ವೀಕರಿಸಬೇಕಾಗಿ ವಿನಂತಿಸುತ್ತಾಳೆ. ಇದಕ್ಕೆ ಒಪ್ಪದ ಬುದ್ಧನನ್ನು ಪರಿಪರಿಯಾಗಿ ವಿನಂತಿಸಿ ಉಪದೇಶ ನೀಡುವ ಮಾವಿನ ತೋಪನ್ನಾದರೂ ಸಂಘಕ್ಕೆ ಒಪ್ಪಿಸಿಕೊಳ್ಳಬೇಕು ಎಂದಾಗ ಬುದ್ಧ ಆಮ್ರಪಾಲಿಯ ಮನಸನ್ನು ನೋಯಿಸಲಾರದೆ ಒಪ್ಪಗೆ ನೀಡುತ್ತಾ, ಆಮ್ರಪಾಲಿಯನ್ನೂ ಬಿಕ್ಷುಣಿ ಎಂದು ಒಪ್ಪಕೊಳ್ಳುವ ವಿಚಾರ ಇಲ್ಲಿದೆ. ಕಾವಿ ತೊಟ್ಟು ತಲೆ ಭೋಳಿಸಿ ಕೊಂಡ ಮಾತ್ರಕ್ಕೆ ಸಂನ್ಯಾಸಿಯಾಗಲು ಸಾಧ್ಯವಿಲ್ಲ ಮನಸ್ಸೇ ಸಂನ್ಯಾಸದ ಮುಖ್ಯ ಶಕ್ತಿ ಎಂಬ ಅರಿವು ನಾಟಕದಲ್ಲಿದೆ. ಮನಸ್ಸು ಮಾಗದ, ಭೋಗದಾಸೆ ಇಳಿಯದ ಸುವರ್ಣದತ್ತ ಕಾವಿತೊಟ್ಟು ತಲೆಬೋಳಿಸಿ ಸುಬಿಕ್ಷು ಎಂದು ಹೆಸರು ಪಡೆದರೂ ಹಳೆಯ ವಾಸನೆಗಳಿಂದ ಮುಕ್ತನಾಗಲಾರದೆ, ಸಂನ್ಯಾಸದ ಜವಾಬ್ದಾರಿ ಹೊರಲಾರದೆ ಕಾವಿ ಕಳಚಿ ಓಡಿ ಹೋಗುತ್ತಾನೆ. ಆಮ್ರಪಾಲಿ ಸಂನ್ಯಾಸವನ್ನಾಚರಿಸಲು ವೇಶ್ಯಾ ವೃತಿಯನ್ನೇ ತ್ಯಜಿಸುತ್ತಾಳೆ. ಸಂನ್ಯಾಸಿ ಎಂದು ಹೊರನೋಟದಿಂದ ಕಾಣಿಸಿಕೊಳ್ಳುವುದಲ್ಲ ಅಂತರಂಗದಲ್ಲಿ ಸಿದ್ಧಮಾಡಿಕೊಳ್ಳಬೇಕಾದ ವಿಶೇಷ ಸಿದ್ಧತೆ ಅದನ್ನು ಆಮ್ರಪಾಲಿ ನಿರೂಪಿಸುತ್ತಾಳೆ.

ಬುದ್ಧ ತನ್ನ ಪರಿವಾರದಲ್ಲಿ ಬಿಕ್ಷುಣಿಯರಿಗೆ ಅವಕಾಶ ನೀಡುತ್ತಿರಲಿಲ್ಲ. ಎಂಬುದರ ಬಗೆಗೆ ಅನೇಕ ಚರ್ಚೆಗಳಿವೆ. ಬುದ್ಧ ತನ್ನ ಪರಿವಾರದಲ್ಲಿ ಅನೇಕ ತರುಣರಿದದ್ದನ್ನು ಅವರ ಮನಸ್ಸು ಇನ್ನು ಸಂನ್ಯಾಸಕ್ಕೆ ಪಕ್ವಗೊಳ್ಳದಿರುವುದನ್ನು ತಿಳಿದಿದ್ದ ಅದಕ್ಕಾಗಿಯೇ ತನ್ನ ಪರಿವಾರದಲ್ಲಿ ಮೊದ ಮೊದಲು ಬಿಕ್ಷುಣಿಯರಿಗೆ ಅವಕಾಶವನ್ನು ನಿರಾಕರಿಸುತ್ತಾನೆ. ಸ್ವತ: ಗೌತಮನನ್ನು ಬೆಳಸಿದ ತಾಯಿ ಯನ್ನು ಕೂಡ ಬಿಕ್ಷುಣಿಯಾಗಿ ಸೇರಿಸಿಕೊಳ್ಳಲು ಸಮ್ಮತಿಸಲಿಲ್ಲ. ಅನಂತರ ಆಕೆಯ ಮಾತಿಗೆ ಮಣಿದು ಬಿಕ್ಷುಣಿಯರಿಗೂ ತನ್ನ ಸಂಘದಲ್ಲಿ ಪ್ರವೇಶ ಕಲ್ಪಿಸಿದ. ಇದೇ ವಿಚಾರವನ್ನು ಆಧಾರವಾಗಿಟ್ಟು ಕೊಂಡು ಆಮ್ರಪಾಲಿ ನಾಟಕ ರಚನೆಯಾಗಿದೆ.

ಬುದ್ಧ ಭಗವಾನರು ಶ್ರಾವಸ್ತಿ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಆ ಊರಿನ ಸುವರ್ಣದತ್ತನೆಂಬ ಯುವಕ ಬುದ್ಧನ ಉಪದೇಶ ಕೇಳಿ ಸಂನ್ಯಾಸ ಪಡೆದು ಸಂಘದ ನಿಯಮದಂತೆ ಬಿಕ್ಷೆಗೆ ಕಾವಿ ತೊಟ್ಟು, ತಲೆ ಬೋಳಿಸಿಕೊಂಡು ಬರುವುದರೊಂದಿಗೆ ನಾಟಕ ಆರಂಭವಾಗುತ್ತದೆ. ಸುವರ್ಣದತ್ತ ಸಾಕಷ್ಟು ಹಣವುಳ್ಳ ಯುವಕ ಆತ ಸಂನ್ಯಾಸ ಪಡೆಯುವ ಮೊದಲು ಆಮ್ರಪಾಲಿಯ ಮನೆಯಲ್ಲಿ ಬೋಗಲಲಾಸೆಯ ದೆಸೆಯಿಂದ ಇರುತ್ತಿದ್ದ. 'ಸುಬಿಕ್ಷು' ಎಂಬ ಹೆಸರಿನೊಂದಿಗೆ ಇಂದು ಕಾವಿಧಾರಿಯಾಗಿ ಬಂದ ಬಿಕ್ಷುಕನನ್ನು ಗುರುತಿಸಿದ ಆ ಮನೆಯ ಮೋಹಿನಿ ಮಾಲಿನಿ ದೀಪಿಕಾ ಲಾವಣ್ಯ ಮೊದಲಾದ ಹೆಂಗೆಳೆಯರು ಅವರನ್ನು ನಾನಾ ರೀತಿಯಲ್ಲಿ ಲೇವಡಿಮಾಡುತ್ತಾರೆ. ಬಿಕ್ಷು ತಾನು ಸ್ತ್ರೀಯರೊಂದಿಗೆ ಹೆಚ್ಚು ಸಮಯ ಮಾತನಾಡುವುದಿಲ್ಲ ಅದು ಸಂಘದ ನಿಯಮಕ್ಕೆ ವಿರುದ್ಧವೆಂದು ಅವನ ಹಳೆಯ ನೆನಪುಗಳನ್ನೆಷ್ಟೇ ಕೆದುಕುವ ಪ್ರಯತ್ನ ಮಾಡಿದರೂ ದೃಢ ಚಿತ್ತದಿಂದ ತಾನು ಸಂನ್ಯಾಸಿಯೇ ಎಂದು ಹೊರಟು ಬಿಡುತ್ತಾನೆ.

ಸುಬಿಕ್ಷು ತಾನು ಸುವರ್ಣದತ್ತನಲ್ಲ, ಕಾವಿಯನ್ನು ತೊಟ್ಟ ಕ್ಷಣದಿಂದಲೇ ಆ ಸುವರ್ಣದತ್ತ ಸತ್ತ. ನಾನೀಗ ಸುಬಿಕ್ಷು ಎನ್ನುತ್ತಾನೆ. ಆತಂಕಕ್ಕೊಳಗಾದ ಸುಬಿಕ್ಷು ಮಧ್ಯರಾತ್ರಿಯಲ್ಲಿ ಬುದ್ಧನ ಹಿರಿಯ ಶಿಷ್ಯ ಆನಂದನ ಬಳಿ ಹೋಗಿ ಸಂನ್ಯಾಸ ಸ್ವೀಕರಿಸಿದ ನಾನು ಹಳೆಯ ವಾಸನೆಗಳಿಂದ ಮುಕ್ತಗೊಂಡಿರುವೆನೊ ಇಲ್ಲವೋ ಎಂಬ ಪರೀಕ್ಷೆಗಾಗಿ ಆಮ್ರಪಾಲಿಯ ಮನೆಗೇ ಬಿಕ್ಷೆಗೆ ಹೋದೆ ಆ ಮನೆಯ ಮುಂದಿರುವ ವರೆಗೂ ಸದೃಢವಾಗೇ ಇದ್ದ ನನ್ನ ಮನಸ್ಸು ಆಲ್ಲಿಂದ ತಿರುಗಿ ಬರುವಷ್ಟರಲ್ಲಿ ಹಳೆಯ ನೆನಪುಗಳೊಂದಿಗೆ ಕದಡಿ ಹೋಗಿದೆ ಎಂದು ತನ್ನ ಸಂಕಟ ಹೇಳಿಕೊಳ್ಳುತ್ತಾನೆ. ಹಿರಿಯನೂ ಅನುಭವಿಯೂ ಆದ ಆನಂದ ಇದು ಆತಂಕ ತಂದು ಕೊಳ್ಳುವ ಸಂಗತಿಯಲ್ಲ ಭಗವಾನರನ್ನು ಒಳಗೊಂಡಂತೆ ನಾವೆಲ್ಲ ಸಂಸಾರಿಗಳಾಗೇ ಸಂನ್ಯಾಸಕ್ಕೆ ಜಿಗಿದದ್ದು ಮನಸ್ಸಿನ ಹಿಡಿತ ಬಹಳ ಕಠಿಣವಾದದ್ದು ಹಾಗೆಂದು ಹಿಗೆಂದು ಹಿಂತಿರುಗಿ ಹೋದರೆ ಮೋಕ್ಷ ದೊರೆಯದು ದೃಢ ಸಂಕಲ್ಪ ಮಾಡುವ ಪ್ರಯತ್ನ ಮುಂದುವರೆಸು ಪರಿಹಾರ ಕಾಣುತ್ತದೆ ಎನ್ನುತ್ತಾನೆ. ಆನಂದನ ಮಾತುಗಳನ್ನು ಕೇಳಿದ ತರುವಾಯ ಬುದ್ಧನ ಬಳಿಯೇ ಬಂದ ಸುಬಿಕ್ಷು ತನ್ನ ಅಂತರಂಗದ ತಾಕಲಾಟವನ್ನು ನಿವೇದಿಸಿ ಕೊಳ್ಳುತ್ತಾನೆ. ಬುದ್ಧ " ನೀನಿನ್ನೂ ಯುವಕ, ಶಕ್ತ, ಮನಸ್ಸು ನಿರ್ಮಿಸುವ ಕಲ್ಪನೆಯ ಭೋಗ- ತ್ಯಾಗಗಳ ರಮ್ಯ ನಗರಗಳಿಂದ ದೂರ ಓಡಬಲ್ಲೆ ಓಡು ಎನ್ನುತ್ತಾನೆ." ಬುದ್ಧನ ಮಾತಿನ ಜಾಣ್ಮೆ ಅರಿಯದ ಸುಬಿಕ್ಷು ಕಾವಿ ಕಳಚಿ ಮೊದಲಿನಂತೆ ಪೀತಾಂಬರ ಉಡುಗೆ ತೊಟ್ಟು ಮೋಹಿನಿಯೊಂದಿಗೆ ಓಡಿ ಹೋಗಿ ಸಂಸಾರ ಮಾಡಲು ಅವಳನ್ನು ಕರೆಯುತ್ತಾನೆ ಮೋಹಿನಿಯೂ ಬುದ್ಧನ ಪ್ರವಚನಗಳಿಂದ ಹದಗೊಳಿಸಿ ಕೊಂಡ ಮನಸ್ಕಳಾಗಿರುತ್ತಾಳೆ. ಸಂನ್ಯಾಸ ತೊರೆದು ಬಂದ ಸುಬಿಕ್ಷುವಿಗೆ ವಿವೇಕ ಹೇಳುತ್ತಾನೆ. ಆದರೇನು ಪ್ರಯೋಜನ? ನಿನಗಾಗಿ ವೈರಾಗ್ಯ ತ್ಯಾಗ ಮಾಡಿ ಬಂದಿದ್ದೇನೆ ಬಾರೆಂದು ಕರೆಯುತ್ತಾನೆ. ಮೋಹಿನಿಯು " ಹಗಲು ತೊಟ್ಟ ಕಾವಿಯನ್ನು ಇರುಳು ತೆಗೆದೆಸೆದು ಪೀತಾಂಬರ ಧರಿಸುವ ಬಿಕ್ಷುಗಳು ಸಂಘವನ್ನು ಬಿಟ್ಟು ನಡೆವುದೇ ಕೀರ್ತಿ" ಎಂದು ವಿವೇಕ ಹೇಳುತ್ತಾಳೆ.

ಸುವರ್ಣದತ್ತನ ನಡೆತೆಗೆ ವಿರುದ್ಧವಾಗಿ ಆಮ್ರಪಾಲಿಯ ಮನಸ್ಸು ಬುದ್ಧನ ಪ್ರವಚನ ಕೇಳಿ ಭೋಗದಿಂದ ಸಂನ್ಯಾಸಕ್ಕೆ ವಾಲುತ್ತಾ ಹೋಗುತ್ತದೆ. ಶ್ರಾವಸ್ತಿನಗರ ಬಿಡುವ ಮೊದಲು ಬುದ್ಧ ಮತ್ತು ತನ್ನ ಪರಿವಾರದವರು ಆಮ್ರಪಾಲಿಯ ಮನೆಗೆ ಊಟಕ್ಕೆ ಬರುವುದಾಗಿ ತಿಳಿಸಿದಾಗ, ಅವನ ಶಿಷ್ಯವರ್ಗವೇ ಅದನ್ನು ವಿರೋಧಿಸುತ್ತದೆ ಅವಳೊಬ್ಬಳು ವೇಶ್ಯೆಯೆಂದು ತಿರಸ್ಕಾರದ ನುಡಿಗಳನ್ನಾಡುತ್ತಾರೆ. ಬುದ್ಧ ತನ್ನ ಶಿಷ್ಯರಿಗೆ ನಿಮಗಿನ್ನು ಪೂರ್ವ ಸಂಸ್ಕಾರದ ವಾಸನೆ ಅಳಿದಿಲ್ಲ ಆದ್ದರಿಂದ ಆಮ್ರಪಾಲಿಯನ್ನು ವೇಶ್ಯೆಯಾಗಿ ಕಾಣುತ್ತಿದ್ದೀರಿ ಆದರೆ ನನಗೆ ಅವಳೊಂದು ಜೀವವಾಗಷ್ಟೇ ಕಾಣುತ್ತಿದ್ದಾಳೆ. ನಿಮಗೆ ಹೆಚ್ಚೆಂದರೆ ಹೆಣ್ಣು ಜೀವವಾಗಷ್ಟೇ ಕಾಣಬೇಕಿತ್ತು ಆಕೆಯ ಮನೆಯಲ್ಲಿ ಬಿಕ್ಷೆ ಸ್ವೀಕರಿಸುವುದರಲ್ಲಿ ನನಗೆ ಯಾವ ತಪ್ಪೂ ಕಾಣದು ಎಂದು

ಶಿಷ್ಯರ ಮನವೊಲಿಸುತ್ತಾನೆ.

ಶ್ರಾವಸ್ತಿ ನಗರದ ಜನರಲ್ಲೂ ಕೆಲವರಿಗೆ ಬುದ್ಧನ ಪರಿವಾರ ಆಮ್ರಪಾಲಿಯ ಮನೆಗೆ ಔತಣಕ್ಕೆ ಹೋಗುವುದು ಸರಿಯಲ್ಲವೆಂಬ ಅನಿಸಿಕೆ ಇದ್ದರೆ ಬುದ್ಧನ ವರ್ತನೆ ಕಂಡಿದ್ದ ಜನರಿಗೆ ಆತನ ನಿಷ್ಪಕ್ಷಪಾತ ಭಾವನೆ, ಸರ್ವರೂ ಸಮನೆಂದು ಕಾಣುವ ಗುಣ ಎಲ್ಲರಂತೆ ಬುದ್ಧನಲ್ಲ ಆಗಾಗಿ ಆಮ್ರಪಾಲಿಯ ಮನೆಗೆ ಔತಣಕ್ಕೆ ಹೋಗುವುದರಲ್ಲಿ ತಪ್ಪಿಲ್ಲವೆಂಬ ಭಾವನೆ ಬರುವಂತೆ ಮೂಡುತ್ತದೆ. ಬಿಕ್ಷು ಸಂಘಕ್ಕೆ ಔತಣ ನೀಡಿದ ಆಮ್ರಪಾಲಿಯ ಪರಿವಾರವೂ ಪರಿವಾರದಲ್ಲಿ ಸೇರಿಕೊಳ್ಳುವ ಅಭಿಲಾಷೆಯನ್ನು ವ್ಯಕ್ತಪಡಿಸುತ್ತದೆ. ಆದರೆ ಬುದ್ಧ ಇದನ್ನು ಒಪ್ಪುವುದಿಲ್ಲ ನಮ್ಮ ಸಂಘದಲ್ಲಿ ಅನೇಕ ತರುಣರಿದ್ದಾರೆ ಅವರ ಮನಸ್ಸನ್ನು ಪಕ್ವಗೊಂಡಿಲ್ಲ ಆಕಾರಣಕ್ಕೆ ನಿಮ್ಮನ್ನು ನಮ್ಮ ಪರಿವಾರದಲ್ಲಿರಿಸಿ ಕೊಳ್ಳಲಾಗದು. ಬೆಣ್ಣೆಯ ಗಡಿಗೆಯನ್ನು ಬೆಂಕಿಯ ಪಕ್ಕದಲ್ಲಿಡುವುದು ಸೂಕ್ತವಲ್ಲ. ಆದ್ದರಿಂದ ನೀವು ನೀವಿದ್ದಲಿಂದಲೇ ಸಂನ್ಯಾಸತ್ವ ಆಚರಿಸಿರೆಂದು ಸಲಹೆ ನೀಡುತ್ತಾನೆ. ಆ ಮೂಲಕ ಬಿಕ್ಷುಣಿಯರನ್ನು ಸಂಘದಲ್ಲಿ ಸೇರಿಸಿಕೊಂಡ ವಿಶೇಷತೆ ನಾಟಕದಲ್ಲಿದೆ.

'ಸುಜಾತ' ಪ್ರಭುಶಂಕರ ಅವರ ಮೂರನೆಯ ನಾಟಕ ಐದು ದೃಶ್ಯಗಳನ್ನೊಳಗೊಂಡ ಈ ಪುಟ್ಟ ನಾಟಕದಲ್ಲಿ ಬುದ್ಧನ ಜೀವಕ್ಕೆ ಜ್ಞಾನೋದಯ ಸಂದರ್ಭದಲ್ಲಿ ಅಮೃತ ಶಕ್ತಿ ನೀಡಿದ ಸುಜಾತೆ ಎಂಬ ಹೆಣ್ಣಿನ ಪರಿಚಯವಿದೆ. ಆಕೆ ನೀಡಿದ ಪಾಯಸದ ಚೈತನ್ಯ ಬುದ್ಧನ ಜೀವವನ್ನು ಉಳಿಸಿತು. ಅಂದೇ ಬುದ್ಧನಿಗೆ ಜ್ಞಾನೋದಯವು ಆಯಿತು. ಆಗಾಗಿ ಬುದ್ಧನ ಬದುಕಿನಲ್ಲಿ ಸುಜಾತೆಯ ಪಾತ್ರ ಮಹತ್ವದ್ದಾಗಿದೆ.

ಬುದ್ಧನಿಗೆ ಜ್ಞಾನೋದಯವಾಗುವ ಮೊದಲು ಅನೇಕ ಗುರುಗಳ ಬಳಿ ಶಿಷ್ಯನಾಗಿರುತ್ತಾನೆ ಆದರೆ ಅವನಿಗೆ ಯಾರಲ್ಲಿಯೂ ತನ್ನ ಪ್ರಶ್ನೆಗಳಿಗೆ ಉತ್ತರ ಸಿಗಲ್ಲಿಲ್ಲ. ಪ್ರತಿಯೊಬ್ಬರೂ ಅವರವರ ಬದುಕಿನ ದಾರಿಯನ್ನು ಅವರವರೇ ಕಂಡುಕೊಳ್ಳಬೇಕೆಂದು ನಿರ್ಧಾರಕ್ಕೆ ಬರುತ್ತಾನೆ. ಬುದ್ಧನಿಗೆ ಈ ಸಂದರ್ಭದಲ್ಲಿ ಕೊಂಡ ವಪ್ಪ, ಭದ್ದಿಯಾ ಅಸ್ಸ, ಮಹಾನಾಮ ಎಂಬ ಐವರು ಸಹಸಾಧಕರು ಜೊತೆಯಾಗಿ ಸಿಗುತ್ತಾರೆ. ಕಠಿಣ ವ್ರತಾಚಾರಿಗಳಾದ ಇವರಿಗೆ ಕನಸಿನಲ್ಲಿ ಅನ್ನ, ಪಾನೀಯಾದಿಗಳೇ ಪಾಣಿಸುತ್ತಿರುವುದಾಗಿ ಒಂದು ದಿನ ಚರ್ಚೆಯಲ್ಲಿ ಹೇಳುತ್ತಾರೆ. ಬುದ್ಧ ಆಗ ನಾವು ದೇಹಕ್ಕೆ ಅತಿ ದಂಡನೆ ಮಾಡುತ್ತಿದ್ದೇವೆ ಅದಕ್ಕೆ ಇಂತಹ ಕನಸುಗಳು, ದೇಹ ತೀರ ಸೊರಗುತ್ತದೆ ನಾನೋ ಬಹಳ ಕೃಶನಾಗಿದ್ದೇನೆ ಮೂತ್ರ ವಿಸರ್ಜನೆಗೆ ಹೋದರೆ ಅದರ ಮೇಲೆ ಬೀಳುವಂತಹ ದೇಹಸ್ಥಿತಿ ನನ್ನದಾಗಿದೆ ಆದ್ದರಿಂದ ನಾನು ದೇಹಕ್ಕೆ ಅತಿ ದಂಡನೆ ನೀಡದೆ ಸಾಧನೆಯ ದಾರಿಯಲ್ಲಿ ಮುನ್ನೆಡೆಯ ಬೇಕೆಂದಿದ್ದೇನೆ ಎನ್ನುತ್ತಾನೆ. ತಂತೀವಾದ್ಯದಿಂದ ಸುಮಧುರ ನಾದ ಹೊಮ್ಮಬೇಕಾದರೆ ತಂತಿಯನ್ನು ಹದವಾಗಿ ಕಟ್ಟಬೇಕು ಸಡಿಲವಾಗಿ ಅಥವಾ ಅತಿ ಬಿಗಿಯಾಗಿ ಕಟ್ಟಿದರೆ ಪ್ರಯೋಜನವಿಲ್ಲ ಹಾಗೆಯೇ "ದೇಹವನ್ನು ಅತಿಯಾದ ಹಿಂಸೆಗೆ ಗುರಿಪಡಿಸಬಾರದು ಅದಕ್ಕೆ ಅತಿಯಾದ ಆರೈಕೆಯೂ ಕೂಡದು" ನಾನು ಎಲ್ಲಿಯೂ ಬಿಕ್ಷೆಗೆ ಹೋಗುವುದಿಲ್ಲ ಅವರಾಗಿ ಯಾರಾದರೂ ಏನನ್ನಾದರೂ ತಂದು ನೀಡಿದರೆ ಸ್ವೀಕರಿಸಿ ಜೀವ ಉಳಿಸಿಕೊಳ್ಳುವುದಾಗಿ ಹೇಳುತ್ತಾನೆ. ಬುದ್ಧನ ಈ ನಿಲುವು ಒಪ್ಪದ ಐವರೂ ಮೊದಲು ನಿನಗೆ ಬೋಧೆಯಾದರೆ ನಮಗೂ ಅದನ್ನು ತಿಳಿಸು ನಮಗೆ ಬೋಧಿಯಾದರೆ ನೀನಿರುವಲ್ಲಿಗೆ ಬಂದು ನಿನಗೆ ಅದನ್ನು ಹೇಳುತ್ತೇವೆ ಎಂದು ಬುದ್ಧನಿಂದ ದೂರ ಹೋಗುತ್ತಾರೆ.

ನಾಟಕದ ಕೇಂದ್ರ ಪಾತ್ರ ಸುಜಾತೆಯದು. ಈಕೆ ಉರುವೇಲದ ರಾಜ ಸೇನಾನಿಯ ಮಗಳು ಈಕೆಗೆ ಮದುವೇ ಮುನ್ನ ಸಂಪತ್ತು ಇದ್ದರೂ ಜೀವನದಲ್ಲೇನೋ ಕೊರತೆ ಎನಿಸಿತು ಮದುವೆಯಾದ ನಂತರ ಗಂಡನೊಂದಿಗೆ ಸ್ವಲ್ಪ ದಿನಗಳವರೆಗೆ ಸಂಭ್ರಮವೆನಿಸಿತು ಆದರೂ ಬದುಕನ್ನೇನೋ ಶೂನ್ಯ ಆದರಿಸಿದಂತೆನಿಸಿತು. (ಜಾಗತಿಕರಣದ ಸಂದರ್ಭದಲ್ಲಿ ಎಲ್ಲವೂ ಇದ್ದು ಏನನ್ನೋ ಕಳೆದು ಕೊಂಡಂತಹ ಸ್ಥಿತಿಯಲ್ಲಿ ಬದುಕು ಸಾಗಿಸುತ್ತಿರುವ ನಮ್ಮಂತೆ) ಮಗುವೊಂದರ ಅಪೇಕ್ಷೆಯಾಗಿ ನ್ಯಗ್ರೋಧ ಮರಕ್ಕೆ ವ್ರತಾಚಾರಣೆ ಕೈಗೊಳ್ಳಲು ಆರಂಭಿಸುತ್ತಾಳೆ. ಇವಳ ಅಂತರಂಗದಲ್ಲಿ ಮಹಾನುಭಾವನೊಬ್ಬನ ಆಗಮನದ ನಿರೀಕ್ಷೆ ಸದಾ ಇದ್ದೇ ಇರುತ್ತದೆ. ಏಕೆ ಇನ್ನು ನನ್ನ ಕನಸಿನಲ್ಲಿ ಕಂಡ ಆ ದಿವ್ಯ ಸ್ವರೂಪ ಬರಲೇ ಇಲ್ಲ ಎಂಬ ಚಿಂತೆಯೊಳಗೆ ಸದಾ ಮುಳುಗಿರುತ್ತಾಳೆ. ತನಗೆ ಮಗುವಾದರೆ ನ್ಯಗ್ರೋಧ ಮರಕ್ಕೆ ಪಾಯಸ ನೈವೇದ್ಯ ತರುವುದಾಗಿ ಹರಕೆ ಮಾಡಿಕೊಂಡಿರುತ್ತಾಳೆ. ಅದರಂತೆ ತನ್ನ ಮಗುವಿಗೆ ಒಂದು ವರ್ಷ ತುಂಬಿದಾಗ ತಾನು ಸದಾ ಆರಾಧಿಸುವ ನ್ಯಗ್ರೋಧ ಮರಕ್ಕೆ ನೈವೇದ್ಯ ಅರ್ಪಿಸಲು ಸಖಿಯೊಂದಿಗೆ ಬರುತ್ತಾಳೆ ಅಲ್ಲಿ ತನ್ನ ಕನಸಿಗೆ ಅಂತರಂಗಕ್ಕೆ ಗೋಚರವಾಗುತ್ತಿದ್ದ ವ್ಯಕ್ತಿಯೇ ಕುಳಿತಿರುತ್ತಾನೆ ಅತಿಯಾದ ಸಂತೋಷದಿಂದ ಪಾಯಸ ಸ್ವೀಕರಿಸಲು ಮನವಿ ಮಾಡುತ್ತಾಳೆ. ಬುದ್ಧ ಸುಜಾತಾ ನೀಡಿದ ಪಾಯಸವನ್ನು ಸ್ವೀಕರಿಸಿ ನಾನು ಸಾಧನ ನಿರತನಾಗಿದ್ದು, ನೀನು ನೀಡಿದ ಈ ಪಾಯಸ ನನ್ನ ಜೀವ ಉಳಿಸಿದೆ. ಬೆಳಗ್ಗೆ ಕುಟುಂಬ ಸಹಿತವಾಗಿ ಬನ್ನಿ ನನಗೆ ಭೋಧಿ ಜ್ಞಾನ ಪ್ರಾಪ್ತವಾಗಿದ್ದರೆ ನಿಮಗೂ ಭೋಧಿಸುತ್ತೇನೆ ಇಲ್ಲ ನಾನು ಸತ್ತಿದ್ದರೆ ನಿರಂಜರ ನದಿಯಲ್ಲಿ ನನ್ನ ಹೆಣವನ್ನು ಎಸೆದು ಬಿಡಿ ಎಂದು ಹೇಳುತ್ತಾನೆ. ಸುಜಾತೆ ಖಂಡಿತವಾಗಿಯೂ ನಿಮಗೆ ಬೋಧಿ ಪ್ರಾಪ್ತಿ ಆಗಿಯೇ ಆಗುತ್ತದೆ. ನನ್ನ ಅಂತರಂಗ ಸದಾ ನಿಮಗೆ ಬೋಧಿ ಉಂಟಾಗುವ ನಿರೀಕ್ಷೆಯಲ್ಲೇ ಕಾದಿದ್ದೆ. ಇದು ಸತ್ಯ ಎಂದು ಹಿಂದಿರುಗುತ್ತಾಳೆ.

ಮರುದಿನ ಬೆಳಗ್ಗೆ ತನ್ನ ಕುಟುಂಬ ಸಮೇತ ನ್ಯಗ್ರೋಧ ಮರದ ಬಳಿ ಬಂದಾಗ ಬುದ್ಧನಿಗೆ ಜ್ಞಾನೋದಯ ಪೂರ್ವದಲ್ಲಿ ಆ ಪಾಯಸ ನೀಡದಿದ್ದರೆ ಬುದ್ಧ ಸಾಯುತ್ತಿದ್ದನೋ ಎನೋ? ಸುಜಾತೆಯ ಭಕ್ತಿ ಬುದ್ಧನಿಗೆ ಜ್ಞಾನೋದಯವಾಗಲು ಕಾರಣವಾಯಿತು. ಬೋಧಿಯುಂಟಾದಾಗ ಕುಳಿತಿದ್ದ ಮರ "ಭೋದಿವೃಕ್ಷ" ಎಂಬ ಹೆಸರನ್ನು ಪಡೆಯಿತು.

ಸುಜಾತಾ ನಾಟಕದ ಮೂಲಕ ಪ್ರಭುಶಂಕರ ಅವರು ಮುಖ್ಯವಾಗಿ ಹೇಳ ಹೊರಟಿರುವುದು ಸಂನ್ಯಾಸತ್ವಕ್ಕೆ ದೇಹವನ್ನು ಹದಗೊಳಿಸಿಕೊಳ್ಳುವ ಬಗೆಯನ್ನು ದೇಹಕ್ಕೆ ಅತಿಯಾದ ದಂಡನೆ ಸಂನ್ಯಾಸವಾಗುವುದಿಲ್ಲ, ಅತಿಯಾಗಿ ದಂಡಿಸುತ್ತಾ ವಿವಿಧ ಭಕ್ಷ್ಯ ಭೋಜನಗಳ ಕನಸು ಕಂಡರೆ ಮನಸ್ಸು ಸಂನ್ಯಾಸದಿಂದ ಬೇರೆಯಾಗುತ್ತಾ ಹೋಗುತ್ತದೆ. ಸಂನ್ಯಾಸಕ್ಕೆ ದೇಹ ಮನಸ್ಸುಗಳ ಸಮತೋಲನ ಕಾಯ್ದುಕೊಳ್ಳ ಬೇಕು. ಹಾಗೆ ಸಮತೋಲನ ಕಾಪಾಡಿಕೊಳ್ಳ ಬೇಕಾದರೆ ದೇಹಕ್ಕೆ ಹಿತ-ಮಿತ ಪ್ರಮಾಣದಲ್ಲಿ ಆಹಾರ ಬೇಕೇ ಬೇಕು ಎಂಬ ನಿಲುವು ಬುದ್ಧನ ಮಾತುಗಳಲ್ಲಿರುವುದು ಕಂಡು ಬರುತ್ತದೆ.

ಗಾಳಿಯೆಂಬ ಕುದುರೆ ಏರಿ ಪ್ರಭುಶಂಕರ ಅವರ ನಾಲ್ಕನೆಯ ನಾಟಕ. ಇದರ ವಸ್ತು ಬುದ್ಧನ ಜ್ಞಾನೋದಯ ಪೂರ್ವದ ಸಂದರ್ಭದ್ದು. ತಾನು ಎಂದೂ ಕಾಣದ ಬದುಕಿನ ವಿವಿಧ ಘಟನೆಗಳಿಂದ ಬೇಸತ್ತ ಸಿದ್ಧಾರ್ಥ ಪರಿಹಾರ ಕಾಣಲೇಬೇಕೆಂಬ ಹಂಬಲ ಉತ್ಸಾಹದೊಂದಿಗೆ

ಮನೆ , ಮಡದಿ, ರಾಜ್ಯ ತ್ಯಜಿಸಿ ಹೋಗುವ ಸಂಧರ್ಭಕ್ಕೆ ಸಂಬದಿಸಿದ್ದು. ಈ ನಾಟಕದಲ್ಲಿ ಅಗ್ನಿ ಮಿತ್ರ ಮತ್ತು ಬುದ್ಧ, ರಮಾ ಮತ್ತು ಯಶೋಧರಾ ಎಂಬ ಎರಡೆರಡು ವೈರುಧ್ಯ ಸ್ವಭಾವದ ವ್ಯಕ್ತಿಗಳ ಪರಿಚಯವಾಗುತ್ತದೆ. ಗಾಳಿಯೆಂಬ ಕುದುರೆಗೆ ಇಂತದ್ದೇ ದಿಕ್ಕು , ಹೀಗೆ ಸಾಗಬೇಕು ಎಂಬ ನಿಯಮಾವಳಿಗಳೇನಿಲ್ಲ. ಮನುಷ್ಯನಾದವನ ಮನಸ್ಸು ಅಷ್ಟೇ, ತೋಚಿದಂತೆ ಹೋಗುವ ಹಂಬಲ ವ್ಯಕ್ತ ಪಡಿಸಿ ಬಿಡುತ್ತದೆ ಆದರೆ, ಅದರಿಚ್ಛೆಯಂತೆ ಹೋಗಲು ಬಿಡದೆ ಕಡಿವಾಣ ಹಾಕಬೇಕು. ಕಡಿವಾಣ ಹಾಕಬೇಕಾದರೆ ಮೊದಲು ಅದು ಹೊಯ್ದೆಡೆಯಲೆಲ್ಲಾ ಸುತ್ತಲೇ ಬೇಕು. ಸಿದ್ಧಾರ್ಥ ಬುದ್ಧನಾಗುವ ಮೊದಲು ಅನುಭವಿಸಿದ್ದು ಇದೇ ಮಾನಸಿಕ ತಾಕಲಾಟವನ್ನು ಬಹುಶ: ಅದಕ್ಕೆ ಈ ನಾಟಕಕ್ಕೆ 'ಗಾಳಿಯೆಂಬ ಕುದುರೆ ಏರಿ' ಎಂಬ ಹೆಸರನ್ನಿಡಲಾಗಿದೆ ಎನಿಸುತ್ತದೆ.

ನಾಟಕ ಆರಂಭವಾಗುವ ವೇಳೆಗೆ ಉದ್ಯಾನ ಒಂದರಲ್ಲಿ ಉತ್ತರವನ್ನೇ ಕಂಡುಕೊಳ್ಳಲಾರದ ಪ್ರಶ್ನೆಗಳನ್ನೊತ್ತ ಬುದ್ಧ ದೇಶಾಂತರ ಹೊರಡಲು ಸಿದ್ಧನಾಗಿ ಕುಳಿತಿರುತ್ತಾನೆ. ಅದೇ ಸಂದರ್ಭಕ್ಕೆ ಅಗ್ನಿಮಿತ್ರನೆಂಬ ನಡು ವಯಸ್ಸಿನ ವ್ಯಕ್ತಿ ಉತ್ತರವೇ ಸಿಗದ ಪ್ರಶ್ನೆಗಳಿಗೆ ಪ್ರಶ್ನೆಗಳೆ ಉತ್ತರವೆಂಬ ನಿಲುವಿಗೆ ಬಂದು, ದೇಶಂತರ ಸುತ್ತಿದ್ದು ಸಾಕು ಈಗಲಾದರೂ ತನ್ನ ಕುಟುಂಬವನ್ನು ಸೇರಬೇಕೆಂಬ ಹಂಬಲದೊಂದಿಗೆ ಸಿದ್ಧಾರ್ಥನಿದ್ದ ಉದ್ಯಾನಕ್ಕೆ ಬಂದು ಕುಳಿತುಕೋಳ್ಳುತ್ತಾನೆ. ಇಬ್ಬರೂ ಪರಸ್ಪರರನ್ನು ಮಾತನಾಡಿಸುತ್ತಾ ಉದ್ಯಾನದಲ್ಲಿ ಬಂದು ಸೇರಿದ್ದಕ್ಕೆ ಕಾರಣಗಳನ್ನು ಹೇಳುತ್ತಾರೆ.

ಅಗ್ನಿಮಿತ್ರ ಇಪ್ಪತ್ತು ವರ್ಷಗಳಷ್ಟು ಕಾಲವನ್ನು ವ್ಯರ್ಥವಾಗಿ ಉತ್ತರ ವಿಲ್ಲದ ಪ್ರಶ್ನೆಗಳಿಗೆ ಉತ್ತರ ಹುಡುಕಲು ಕಳೆದಿದ್ದು ಆದರಿಂದ ಯಾವ ಪ್ರಯೋಜನವೂಸಿಗದೆ ಬರಿಗೈಯಲ್ಲಿ ಸಂಸಾರಕ್ಕೆ ಹಿಂತಿರುಗುತ್ತಿರುವುದಾಗಿ ತಿಳಿಸುತ್ತಾನೆ, ಜೊತೆಗೆ ಬುದ್ಧ ಹೊರಟಿರುವ ಕೆಲಸವೂ ನನ್ನ ಕೆಲಸದಂತೆ ಎಷ್ಟೇ ಹುಡುಕಿದರೂ ಉತ್ತರ ಸಿಗದ ಪ್ರಶ್ನೆಗಳೇ ಮತ್ತೆ, ಮತ್ತೆ ನಮ್ಮ ಮುಂದೆ ನಿಲ್ಲುತ್ತವೆ. ಇದರಿಂದ ಯಾರಿಗೂ ಲಾಭವಾಗದೆಂಬ ಸತ್ಯವನ್ನು ಹೇಳುತ್ತಾನೆ. ತಂದೆ ಹೆಂಡತಿಯ ಮಾತನ್ನೇ ಕೇಳದೆ ಊರು ಬಿಡಲು ಸಿದ್ದನಾಗಿರುವ ಸಿದ್ಧಾರ್ಥನಿಗೆ ಅಗ್ನಿಮಿತ್ರನ ಅನುಭವದ ನುಡಿ ತಾಕೀತೆ. ಸಿದ್ಧಾರ್ಥ ತನಗೆ ಇಂದು ಗಂಡುಮಗುವೊಂದು ಜನಿಸಿದ್ದು ಅದನ್ನು ನೋಡುವ ಮನಸ್ಸನ್ನೂ ಮಾಡದೆ ನನ್ನನ್ನು ಕಾಡುತ್ತಿರುವ ಪ್ರಶ್ನೆಗಳಿಗೆ ಉತ್ತರ ಹುಡುಕಿ ಹೊರಟಿದ್ದೇನೆ ಎಂದಾಗ ಅಗ್ನಿಮಿತ್ರ ನಿಜಕ್ಕೂ ಆಶ್ಚರ್ಯಗೊಳ್ಳುತ್ತಾನೆ. ಇದು ತಪ್ಪೆಂದು ವಾದಿಸುತ್ತಾನೆ. ಸಿದ್ಧಾರ್ಥನ ಸುಮಜಾಯಿಷಿ ಏನೆಂದರೆ ಮಗುವನ್ನು ಕಂಡರೆ ಅದರ ಮುಗ್ದತೆಯ ಸೆಳೆತ ನನ್ನ ಹುಡುಕಾಟಕ್ಕೆ ಅಡ್ಡಿತನ್ನುಂಟು ಮಾಡುತ್ತದೆಂಬುದಾಗಿದೆ ನನ್ನ ಪ್ರಯತ್ನದ ಮೇಲಿರುವ ನಂಬಿಕೆಯಿಂದ ನಾನು ಹೊರಡುತ್ತಿರುವುದಾಗಿ ಇದರಲ್ಲಿ ಗೆಲ್ಲುವ ಮಹತ್ವಾಕಾಂಕ್ಷೆ ತನ್ನದೆನ್ನುತ್ತಾನೆ. ಅಗ್ನಿಮಿತ್ರನ ಹೆಂಡತಿ ರಮಾ ಗಂಡ ಮನೆ ಬಿಡುವಾಗ ಬೇಡವೆಂದು ಅಂಗಲಾಚುತ್ತಾಳೆ ಏಕೆಂದರೆ, ಅವಳ ಬದುಕಿಗೆ ಬೇರೆ ಯಾವ ಆಧಾರವೂ ಇರುವುದಿಲ್ಲ, ಅದೇ ಬುದ್ಧನ ಪತ್ನಿ ಯಶೋಧರೆ ಹಾಗೆ ಅಡ್ಡಿ ಮಾಡುವುದಿಲ್ಲ. ಕಾರಣ ಬುದ್ಧ ಹೊರ ಹೋಗಿ ಬದುಕನ್ನು ಅರ್ಥೈಸಿಕೊಳ್ಳ ಬೇಕೆಂಬುದು ಅವಳ ನಿಲುವು. ಬುದ್ಧನಿಲ್ಲದಿದ್ದರೂ ಬದಕುವ ಆರ್ಥಿಕ ಶಕ್ತಿಯೂ ಈ ಪ್ರೇರಣೆಗೆ ಕಾರಣವಿರಬಹುದು. ಆದರೆ ರಮಾಳಿಗೆ ಈ ಧೈರ್ಯವಿಲ್ಲ. ಅಗ್ನಿಮಿತ್ರ ಅವಳ ಬೇಡಿಕೆಯನ್ನು ಮನ್ನಿಸದೇ ಹೋದವನು ಇಪ್ಪತ್ತು ವರ್ಷಗಳ ನಂತರ ಹಿಂದಿರುಗಿದಾಗ ಅವನನ್ನು ಒಪ್ಪುವುದಿಲ್ಲ. ಈ ಅಂತರದಲ್ಲಿ ರಮಾ ಬದುಕನ್ನು ಕಟ್ಟುವ ಸಾಮಾರ್ಥ್ಯ ಗಳಿಸಿರುತ್ತಾಳೆ. ಬದುಕು ಅವಲಂಭಿಯಾಗಿರುವವರೆಗಷ್ಟೆ ಭಾರ, ಸ್ವಾವಲಂಭಿತನ ಸಾಧಿಸಿದ ಮೇಲೆ ದೂರ ಹೋದವರ ಅನಿವಾರ್ಯತೆಯನ್ನು ಬಯಸುವುದಿಲ್ಲ ಎಂಬುದನ್ನು ಈ ಪಾತ್ರ ನಿರೂಪಿಸಿದೆ.

ಒಟ್ಟಾರೆಯಾಗಿ ಪ್ರಭುಶಂಕರ ಅವರು ಗ್ರಹಿಸಿದ ಬುದ್ಧತತ್ವ ಪ್ರಸ್ತುತವೂ, ಪರಿಣಾಮಕಾರಿಯೂ ಆದ ಚಿಂತನೆಗಳಾಗಿದ್ದು, ಓದುಗರಲ್ಲಿ ಬದುಕಿನ ಬಗೆಗೆ ಕೆಲವು ಹೊಸ ಹೊಳಹುಗಳನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ. ನಿರಂತರವಾಗಿ ಬುದ್ಧನ ಚಿಂತನೆಗಳಿಗೆ --ಅನುಸಂಧಾನಕ್ಕೆ ಪೂರಕವೂ ಆಗಿದೆ.

ಉತ್ತಮ ಸಮಾಜನಿರ್ಮಾಣಕ್ಕಾಗಿ ಉಪನಿಷತ್ತಿನ ಸೂತ್ರಗಳು

ಜಿ. ಅನಂತಪದ್ಮನಾಭ
ಸಂಸ್ಕೃತೋಪನ್ಯಾಸಕ, ಎಮ್.ಎಸ್, ರಾಮಯ್ಯ ಪಿ.ಯು. ಕಾಲೇಜು, ಬೆಂಗಳೂರು.

ವೇದ ಎನ್ನುವ ಪದಕ್ಕೆ ಅರ್ಥ ಜ್ಞಾನ. ಶ್ರುತಿ, ತ್ರಯೀ ಎಂಬುದು ಇದಕ್ಕಿರುವ ಇತರ ಹೆಸರುಗಳು. ವೇದಗಳನ್ನು ಯಾವ ಮನುಷ್ಯನು ತನ್ನ ಯೋಚನಾಶಕ್ತಿಯಿಂದ ರಚನೆ ಮಾಡಿರುವುದಾಗಿಯೂ ಮತ್ತು ಬರೆದಿರುವುದಾಗಿಯೂ ಅಲ್ಲ. ಅದು ಋಷಿ–ಮುನಿಗಳು ತಮ್ಮ ತಪ್ಪಸ್ಸಿನ ಮೂಲಕ ಋತಂಬರಾ ಪ್ರಜ್ಞೆಯನ್ನು ಪಡೆದು ಅದರ ಮೂಲಕ ವೇದಗಳನ್ನು ಕಂಡುಕೊಂಡಿದ್ದಾರೆ. ಅದುದರಿಂದ ಅವುಗಳನ್ನು ಅಪೌರುಷೇಯ ಎಂದು ಕರೆಯುತ್ತಾರೆ. ಇಂತಹ ಜ್ಞಾನರಾಶಿಯನ್ನು ಮುಂದಿನ ಭವಿಷ್ಯವನ್ನು ತಿಳಿದು ವ್ಯಾಸರು ವೇದಗಳನ್ನು ವಿಭಜಿಸಿದರು. ಆದುದರಿಂದ ವ್ಯಾಸರು ವೇದವ್ಯಾಸ ಎಂದು ಪ್ರಸಿದ್ಧಿಯನ್ನು ಹೊಂದಿದರು. ಅವುಗಳನ್ನು ಹೀಗೆ ಚಿತ್ರದ ಮೂಲಕ ತಿಳಿಯಬಹುದು.



ಹೀಗೆ ವಿಭಜಿಸಿದ ಪ್ರತಿಯೊಂದು ವೇದದಲ್ಲಿ ಸಂಹಿತಾ, ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷತ್ ಎಂಬ ಪ್ರಭೇದಗಳು ಇವೆ. ಉಪನಿಷತ್ ವೇದದ ಕೊನೆಯ ಭಾಗವಾದುದರಿಂದ ಅದನ್ನು ವೇದಾಂತ ಎಂದು ಕರೆಯುತ್ತಾರೆ. (ವೇದಾನಾಂ ಅಂತೇ ವಿದ್ಯತೇ ಇತಿ ವೇದಾಂತಃ ಅಥವಾ

ವೇದಸ್ಯ ಅಂತಃ ವೇದಾಂತ)

ಸಹಸ್ರಾಧಿಕ ಉಪನಿಷತ್ತುಗಳು ಇವೆ. ಅವುಗಳಲ್ಲಿ ೧೦೮ ಉಪನಿಷತ್ತುಗಳು ಅಧ್ಯಯನಕ್ಕೆ ಲಭ್ಯವಾಗಿವೆ. ಆದರಲ್ಲಿಯೂ ಹತ್ತು ಉಪನಿಷತ್ತುಗಳು ನಿರಂತರಾಧ್ಯಯನಕ್ಕೆ ಭಾಷ್ಯಶಿತ್ವಾಗಿ ಸಿಗುತ್ತದೆ ಮತ್ತು ಶಂಕರಾಚಾರ್ಯರಾದಿ ಅನೇಕ ಆಚಾರ್ಯರು ಈ ಹತ್ತು ಉಪನಿಷತ್ತುಗಳಿಗೆ ಭಾಷ್ಯವನ್ನೂ, ವ್ಯಾಖ್ಯಾನವನ್ನು ಮತ್ತು ಟೀಕೆಯನ್ನು ಬರೆದ್ದಿದಾರೆ. ಅವುಗಳನ್ನು ಲಭ್ಯ ಇವೆ. ಮೊದಲ ಈ ದಶ ಉಪನಿಷತ್ತುಗಳಿಗೆ ಆಚಾರ್ಯ ಶಂಕರರು ಭಾಷ್ಯವನ್ನು ಬರೆದು ಅಧ್ಯಯಬಕ್ಕೆ ತಂದವರು, ಅದುದರಿಂದ ಅಧ್ಯಯನಾರಂಭದಲ್ಲಿ ಮೊದಲು ಈ ಒಂದು ಶ್ಲೋಕವನ್ನು ಹೇಳುತ್ತಾರೆ ಜಿಜ್ಞಾಸಿಗಳು.

ಶೃತಿಸ್ಮೃತಿಪುರಾಣಾನಾಂ ಆಲಯಂ ಕರುಣಾಲಯಂ! ನಮಾಮಿ
ಭಗವತ್ಪಾದ ಶಂಕರಂ ಲೋಕಶಂಕರಮ್!!

ಈ ಹತ್ತು ಉಪನಿಷತ್ತುಗಳನ್ನು ಯಾವುವೆಂದು ಹೇಗೆ ತಿಳಿದುಕೊಳ್ಳಬಹುದು.



ಉಪನಿಷತ್ ಎಂದರೆ ಗುರುವಿನ ಹತ್ತಿರ ವಾಸಿಸುತ್ತ ಪಡೆಯುವ ರಹಸ್ಯತ ಮವಾದ ಬ್ರಹ್ಮವಿದ್ಯೆ. ಈ ಉಪನಿಷತ್ತುಗಳು ವೇದವೇದ್ಯನಾಗಿರುವ ಬ್ರಹ್ಮನು ಹೊಂದಲ್ಲು ಮಾರ್ಗಗಳನ್ನು ಮತ್ತು ಬ್ರಹ್ಮನ ಸ್ವರೂಪನ್ನು ಹೇಳುತ್ತಾ ಪುರುಷಾರ್ಥಗಳಲ್ಲಿ ಅಂತಿಮದಾಗಿರುವ ಮೋಕ್ಷವನ್ನು ಪಡೆಯುವ ಅನೇಕ ಮಾರ್ಗಗಳನ್ನು ಹೇಳುತ್ತವೆ. ಆದರೆ ಉಪನಿಷತ್ತುಗಳು ಕೇವಲ ಆಧ್ಯಾತ್ಮಿಕ ಸಾಧನೆಗಾಗಿ ಮಾತ್ರವಲ್ಲ. ಆವುಗಳಿಂದ ಜೀವನೋಪಾಯಗಳನ್ನು ಮತ್ತು ಅನಂದಜೀವನದ ಮಾರ್ಗಗಳನ್ನು ಹೀಗೆ ಅನೇಕ ವಿವಿಧವಿಷಯಗಳನ್ನು ಸತತಾಧ್ಯಯನ ಮಾಡುವುದರ ಮೂಲಕ ತಿಳಿದು ಬರುತ್ತದೆ. ಉದಾಹರಣೆ ಇಲ್ಲಿ ತೈತ್ತರೀಯೋ ಪನಿಷತ್ತಿನಲ್ಲಿ ಬರುವ ಶಿಕ್ಷಾವಲ್ಲಿ ಎಂಬ ಮಂತ್ರಭಾಗದಲ್ಲಿ ಕೊನೆಯಲ್ಲಿ ಬರುವ ಮಂತ್ರಗಳು ಮಾನವನು ಜೀವನದಲ್ಲಿ ಹೇಗೆ ಇರಬೇಕು ಮತ್ತು ಜೀವನದಲ್ಲಿ ಪಾಲಿಸಬೇಕಾದ ನಿಯಮಗಳನ್ನು ತಿಳಿಸುತ್ತವೆ. ಇವು ಕೇವಲ ವೇದಕಾಲಕ್ಕೆ ಸಂಬಂಧಿಸಿದ್ದಲ್ಲ ಸಾರ್ವಕಾಲಿಕಕ್ಕೂ ಬೇಕಾಗಿರುವುದು.

ಹಿಂದೆ ಬಾಲ್ಯದಲ್ಲಿ ಅಧ್ಯಯನಕ್ಕಾಗಿ ಗುರುವಿನ ಮನೆಯಲ್ಲಿ ವಾಸವಾಗ ಬೇಕಾದಿತ್ತು. (ಆಂದರೆಗುರುಕುಲದಲ್ಲಿ) ಗುರುವು ಅವನನ್ನು ಪರೀಕ್ಷಿಸಿ ನಂತರ ಜ್ಞಾನವನ್ನು ಬೋಧಿಸುತ್ತಿದ್ದರು. ಗುರುವಿನಿಂದ ನಿಶಂತರ ಅಧ್ಯಯನಮಾಡಿ ಯಥಾಶಕ್ತಿ ಗುರುದಕ್ಷಿಣೆಯನ್ನು ಕೊಟ್ಟು ಪುನಃ ಸ್ವಗೃಹಕ್ಕೆ ಬಂದು ಸ್ವಜೀವನವನ್ನು ಮುಂದುವರೆಸುತ್ತಿದ್ದನು. ಆಗ ಜೀವನದಲ್ಲಿ ಬರಬಹುದಾದ ಆಡಚಣೆಗಳು, ಧರ್ಮಾಧರ್ಮವಿಚಾರಗಳ ಸಂದಿಗ್ಧ ಪರಿಸ್ಥಿತಿಯಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ಗುರು ಶಿಷ್ಯನಿಗೆ ಹೇಳುವ ಉಪದೇಶವು ಸಾರ್ವಕಾಲಿಕವಾದದ್ದು. ಅದನ್ನು ಶಿಷ್ಯಾನುಶಾಸನಮ್ ಎಂದು ಕರೆಯುತ್ತಾರೆ. ಆ ಮಂತ್ರಭಾಗವು ಹೀಗಿದೆ–

ಮಂತ್ರಭಾಗ:

ವೇದಮನೋಚ್ಯಾಚರ್ಯೋಂತೆವಾಸಿಮನುಶಾಸ್ತಿ! ಸತ್ಯಂ ವೇದ! ಧರ್ಮಂ ಚರ! ಸ್ವಾಧ್ಯಾಯಾನ್ಮಾ ಪ್ರಮದಃ! ಆಚಾರ್ಯಾರ್ಯಯ ಪ್ರಿಯಂ ಧನಮಾಹೃತ್ಯ ಪ್ರಜಾತಂತು ಮಾ ವ್ಯವಚ್ಛೇಥ್ಸೀ! ಸತ್ಯಾನ್ನಪ್ರಮದಿತವ್ಯಮ್! ಧರ್ಮನ್ನಪ್ರಮದಿತವ್ಯವ್ ಕುಶಲಾನ್ನಪ್ರಮದಿತವ್ಯವ್! ಭೂತೈನ್ನಪ್ರಮದಿತವ್ಯಮ್! ಸ್ವಾಧ್ಯಾಯ ಪ್ರವಚನನಾಭ್ಯಾಂ ನ ಪ್ರಮದಿತವ್ಯಮ್! ದೇವಪಿತೃಕಾರ್ಯಾಭ್ಯಾಂ ಪ್ರಮದಿತವ್ಯವ್! ಮಾತೃದೇವೋ ಭವ! ಪಿತೃದೇವೋ ಭವ! ಆತಿಥಿದೇವೋ ಭವ! ಯಾನ್ಯನವದ್ಯಾನಿ ಕರ್ಮಾಣಿ! ತಾನಿ ಸೇವಿತವ್ಯಾನಿ! ನೋ ಇತರಾಣಿ ಯಾನ್ಯಸ್ಮಾಕಗ್ಂ ಸುಚರಿತಾನಿ! ತಾನಿ ತ್ವಯೋಪಾಸ್ಯಾನಿ! ನೋ ಇತರಾಣಿ! ಯೇ ಕೇ ಚಾಸ್ಮಚ್ಛ್ರೇಯಾಗ್ಂ ಸೋ ಬ್ರಾಹ್ಮಣಾಃ! ತೇಷಾಂ ತ್ವಯಾಸನೇ ನ ಪ್ರಶ್ವಸಿತವ್ಯಮ್! ಶ್ರದ್ಧಯಾದೇಯಮ್! ಅಶ್ರದ್ಧೆಯಾದೇಯಮ್! ಶ್ರಿಯಾ ದೇಯಮ್! ಹ್ರಿಯಾ ದೇಯಮ್! ಭಿಯಾ ದೇಯಮ್! ಸಂವಿದಾ ದೇಯಮ್! ಅಥಯದಿ ತೇ ಕರ್ಮ ವಿಚಿಕಿಥ್ಸಾ ವಾ ಸ್ಯಾತ್! ಯೇ ತತ್ರ ಬ್ರಾಹ್ಮಣಾಸ್ಸಂಮರ್ ಶಿನಃ! ಯುಕ್ತಾ ಅಯುಕ್ತಾ! ಅಲೂಕ್ಷಾ ಧರ್ಮಕಾಮಾಸ್ಯುಃ! ಯಥಾ ತೇ ತತ್ರ ವರ್ತೇರನ್! ತಥಾ ವರ್ತೆಥಾಃ ! ಅಥಾಭ್ಯಾಖ್ಯಾತೇಷು! ಯೇ ತತ್ರ ಬ್ರಾಹ್ಮಣಾಸ್ಸಂರಾಶಿನ! ಯುಕ್ತಾ ಅಯುಕ್ತಾಃ ! ಅಲೂಕ್ಷಾ ಧರ್ಮಕಾಮಾಸ್ಸ್ಯಃ! ಯಥಾ ತೆ ತೇಷು ವರ್ತೇರನ್! ತಥಾ ತೇಷು ವರ್ತೇಥಾಃ! ಏಷ ಆದೇಶ! ಎಷ ಉಪದೇಶಃ! ಏಷಾ ವೇದೋಪನಿಷತ್! ಏತದನುಶಾಸನಮ್! ಏವಮುಪಾಸಿತವ್ಯಮ್! ಏವಮುಚ್ಯೆತದುಪಾಸ್ಯಮ್ !! ಇತಿ!!

ವೇದವನ್ನು ಅಧ್ಯಯನವನ್ನು ಮಾಡಿದ ಶಿಷ್ಯನಿಗೆ ಆಚಾರ್ಯನು ಹೇಗೆ ಅನುಶಾಸನೆಯನ್ನು ಮಾಡುತ್ತಾನೆ. ಸತ್ಯವನ್ನು ಹೇಳು. ಧರ್ಮವನ್ನು ಆಚರಿಸು,ಅಧ್ಯಯನದಲ್ಲಿ ಪ್ರಮಾದಮಾಡಬೇಡ. ಆಚಾರ್ಯನಿಗೆ ಇಷ್ಟವಾದ ಧನವನ್ನು ಕೊಟ್ಟು ತಂತತಿಯನ್ನು ವಿಚ್ಛಿನ್ನಗೊಳಿಸಿದರು. ಸತ್ಯದಿಂದ ಕದಲಬೇಡ. ಧರ್ಮದಿಂದ ಕದಲಬೇಡ. ಮಂಗಲಕರ್ಮ ಗಳನ್ನು ಮಾಡುವುದನ್ನು ಬಿಡಬೇಡ. ಸ್ವಾಧ್ಯಾಯ ಮತ್ತು ಪ್ರವಚನಗಳನ್ನು

ಬಿಡಬೇಡ. ದೇವ–ಪಿತೃಕಾರ್ಯಗಳನ್ನು ಮಾಡು. ತಾಯಿಯೇ ದೇವರು ಆಗಿರಲಿ. ತಂದೆಯೇ ನಿನಗೆ ದೇವರಾಗಲಿ. ಆಚಾಚಾರ್ಯನು ನಿನಗೆ ದೇವಸ್ವರೂಪಿಯಾಗಲಿ. ಅಥಿತಿಸತ್ಕಾರವನ್ನು ಮಾಡು. ಯಾವ ಕೆಲಸವು ಅನಿಂದಿತವೋ ಆ ಕೆಲಸವನ್ನು ಮಾಡು. ನಿಂದನೀಯ ಕೆಲಸವನ್ನು ಮಾಡಬೇಡ. ಯಾವ ಒಳ್ಳೆಯನಡತೆಗಳು ಇವೆಯೋ ಅವುಗಳನ್ನು ಬೆಳೆಸಿಕೊಳ್ಳಬೇಕು. ಬೇರೆಯದಲ್ಲ. ನಮಗಿಂತ ಉತ್ತಮರಾದವರನ್ನು ನೀನು ಗೌರವದಿಂದ ಆದರಿಸಬೇಕು, ಮತ್ತು ಅವರಿಗೆ ಆಸನಾದಿಗಳನ್ನು ಉಪಚರಿಸಬೇಕು.ಶ್ರದ್ದೆಯಿಂದ ದಾನವನ್ನು ಮಾಡಬೇಕು. ಅಶ್ರದ್ದೆಯಿಂದ ಕೊಡಬಾರದು. ತನ್ನ ಐಶ್ವರ್ಯಕ್ಕೆ ತಂಕ್ಕಂತೆ ಕೊಡಬೇಕು. ವಿನಯದಿಂದ ಕೊಡಬೇಕು. ಭಯದಿಂದ ಕೊಡಬೇಕು. ಮಿತ್ರಭಾವದಿಂದ ಕೊಡಬೇಕು. ನಿನಗೆ ಶ್ರೌತಸ್ಮಾರ್ತಕರ್ಮವಿಷಯದಲ್ಲಾಗಲಿ ಆಚಾರವಿಷಯದಲ್ಲಾಗಲಿ ಸಂಶಯವುಂಟಾದರೆ ಅಲ್ಲಿ ವಿಚಾರಕ್ಷಮರೂ. ಕರ್ಮದಲ್ಲಿ ಸಮರ್ಥರೂ, ಆದ ಬ್ರಾಹ್ಮಣರು ಹೇಗೆ ನಡೆದುಕೊಳ್ಳುತಾರೋ ಹಾಗೆ ನೀನು ನಡೆದುಕೊಳ್ಳಬೇಕು. ದೋಷವನ್ನು ಹೊರಡಿಸಲ್ಪಟ್ಟವರ ವಿಷಯದಲ್ಲಿ ವಿಚಾರಕ್ಷಮರೂ ಕರ್ಮಸಮರ್ಥರೂ ಆದವರು ಹೇಗೆ ನಡೆದುಕೊಳ್ಳುತ್ತಾರೋ ಅವರಂತಯೇ ನೀನು ವರ್ತಿಸಬೇಕು. ಇದೇ ನಿನಗೆ ಆದೇಶ. ಇದೇ ನಿನಗೆ ಉಪದೇಶ. ಇದು ವೇದರಹಸ್ಯ, ಇದು ಈಶ್ವರಾಜ್ಞೆಯಾಗಿದೆ ಇದನ್ನು ಹೀಗೆಯೇ ಉಪಾಸಿನಬೇಕು ಮತ್ತು ಅನುಷ್ಠಾನದಲ್ಲಿ ಇಟ್ಟುಕೊಳ್ಳಬೇಕು.

ಅಧ್ಯಯನ ಮಾಡಿದ ಶಿಷ್ಯನಿಗೆ ಗುರುವು ನೀಡುವ ಉಪದೇಶವಾಗಿದೆ. ಇದರಲ್ಲಿ ಗುರುವಿನ ಆಶ್ರಯದಲ್ಲಿದ್ದಂತಹ ಶಿಷ್ಯನು ಹೊಸಜೀವನವನ್ನು ಮತ್ತು ನೂತನ ಸಮಾಜವನ್ನು ಪ್ರವೇಶಿಸುತ್ತಾನೆ. ಆ ಸಮಾಜದಲ್ಲಿ ಹೇಗೆ ಇರಬೇಕಿ ಮತ್ತು ಉತ್ತಮ ಸಮಾಜವನ್ನು ಹೇಗೆ ನಿರ್ಮಾಣವಾಗುತ್ತದೆ ಹಾಗೂ ಮಾಡಬೇಕು ಎಂದು ಈ ಮಂತ್ರಭಾಗವು ಹೇಳುತ್ತದೆ. ಇದರಲ್ಲಿ ಹೇಳಿರುವ ಒಂದಿಷ್ಟು ನಿಯಮಗಳನ್ನು ನಾವು ಪಾಲಿಸಿದರೆ ನಮ್ಮ ಸುತ್ತಮುತ್ತಲಿನ ಸಮಾಜುವು ಉತ್ತಮವಾಗಿರಿಸುವುದಕ್ಕೆ ಸಾಧ್ಯವಾಗುತ್ತದೆ.

ಉದಾ– ಈ ಮಂತ್ರಭಾಗದಲ್ಲಿ ಬರುವಂತಹ ದಾನದ ವಿಷಯದಲ್ಲಿ ಶ್ರದ್ದಯಾದೇಯಮ್! ಅಶ್ರದ್ದೆಯಾದೇಯಮ್! ಶ್ರಿಯಾ ದೇಯಮ್! ಹ್ರಿಯಾ ದೇಯಮ್! ಭಿಯಾ ದೇಯಮ್! ಸಂವಿದಾ ದೇಯಮ್! ಹೇಗೆ ದಾನವನ್ನು ಮಾಡುವಾಗ ಯಾವರೀತಿಯಾಗಿ ಎಂಥವರಿಗೆ ಕೊಡಬೇಕು ಎಂದು ತಿಳಿದುಬರುತ್ತದೆ ಹಾಗೆಯೇ ನಾವು ಹೆಚ್ಚುತಿಳಿದವರೆಂದು ಕಾರ್ಯವನ್ನು ನಿರ್ವಹಿಸುವ ಸ್ಥಳದಲ್ಲಿ ನಮ್ಮ ಮನಬಂತದೆ ವರ್ತಿಸುತ್ತೇವೆ ಮತ್ತು ನಿಯಮಗಳನು ಮಾಡಿಕೊಳ್ಳುತ್ತೇವೆ. ಆದರೆ ಅದರಿಂದಾಗುವ ಪರಿಣಾಮವನ್ನು ಯೋಚಿಸಿರುವುದಿಲ್ಲ. ಅದುದರಿಂದ ಅಂತಹಸ್ಥಳಗಳಲ್ಲಿ ಹೇಗೆವರ್ತಿಸಬೇಕು ಎಂದು ಈ ಉಪದೇಶವು ಹೇಳುತ್ತದೆ.ಅಥಯದಿ ತೇ ಕರ್ಮ ವಿಚಿಕಿಥ್ಸಾ ವಾ ವೃತ್ತವಿಚಿಕಿಥ್ಸಾ ವಾ ಸ್ಯಾತ್! ಯೇ ತತ್ರ ಬ್ರಾಹ್ಮಣಾಸ್ಸಂಮರಾಶಿನಃ! ಯುಕ್ತ ಅಯುಕ್ತಾಃ! ಅಲೂಕ್ಷಾ ಧರ್ಮಕಾಮಾಸ್ಯುಃ ! ಯಥಾ ತೇ ತತ್ರ ವರ್ತೇರನ್! ತಥಾ ತತ್ರ ವರ್ತೆಥಾಃ! ಅಥಾಭ್ಯಾಖ್ಯಾತೇಷು! ಯೋ ತತ್ರ ಬ್ರಾಹ್ಮಣಾಸ್ಸಂಮರಾಶಿನ್ಃ! ಯುಕ್ತ ಅಯುಕ್ತಃ! ಅಲೂಕ್ಷಾ ಧರ್ಮಕಾಮಾಸ್ಸ್ಯುಃ! ಯಥಾ ತೇ ವರ್ತೇರನ್ ! ತಥಾ ತೇಷು ವರ್ತೇಥಾಃ! ಅದುದರಿಂದ ವೇದೋಪನಿಷತ್ತುಗಳು ಕೇವಲ ಅಧ್ಯಾತ್ಮವಿಷಯಗಳಲ್ಲದೆ ಸಾರ್ವಕಾಲಿಕಕ್ಕೆ ಉಪಯುಕ್ತವಾದಂತಹ ಲೌಕಿಕ ಅಲೌಕಿಕ ವಿಷೆಯಗಳನ್ನು ಬೋಧಿಸುತ್ತವೆ ಮತ್ತು ಉತ್ತಮಸಮಾಜವನ್ನು ರೂಪಿಸಲು ಅಥವಾ ನಿರ್ಮಾಣಮಾಡಲು ಸದಾ ಉಪಯುಕ್ತವಾಗಿರುತ್ತವೆ. ಮತ್ತು ಇದರಿಂದ ಎಲ್ಲಾ ವರ್ಗದ ಜನರು ಅನಂದದಿಂದ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಆದುದರಿಂದ ಧರ್ಮೋ ರಕ್ಷತಿ ರಕ್ಷಿತ ಎಂದು ಧರ್ಮವನ್ನು ನಾವು ಪರಿಪಾಲಿಸಿದರೇ ಧರ್ಮವು ನಮ್ಮನು ರಕ್ಷಿಸುತ್ತದೆ.

ವಿಷಯ:-03

ಭಾರತೀಯಮ್ ಸಮಾಜ-ಸಾಂಸ್ಕೃತಿಕವನ್ನೊಳ ಗೊಂಡ ಕಲೆ, ಸಂಗೀತ, ನಾಟ್ಯಶಾಸ್ತ್ರ ಮತ್ತು ವಚನ ವಿಜ್ಞಾನಗಳು

THEME:-03

BHARATEEYAM SOCIOCULTURAL SCIENCES, ARTS, MUSIC, NATYASASTRA & VACHAN VIJNANA

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಕಲಿಕಾ ಮಾಧ್ಯಮವಾಗಿ ಮಕ್ಕಳ ರಂಗಭೂಮಿ	ಗಿರೀಶ್ ಎಂ ಬಿ	205 – 208
2.	ಸಾರಾ ಅಬೂಬಕರ ಕತೆಗಳಲ್ಲಿ ದಲಿತ ಸಂವೇದನೆ	ಮಹದೇವ ನಾಯಕ. ಎಚ್.ಇ	208 – 210
3	ಜಯಂತ ಕಾಯ್ಕಿಣಿ ಅವರ ನೀರು ಕಥೆಯಲ್ಲಿನ ಮಾನವೀಯ ಅಂತಃಕರಣದ ಅನಾವರಣ	ಆಶಾ, ಎಸ್.	211 – 213
4	ಶ್ಯಾಮಲಾ ಕಥೆಗಳಲ್ಲಿ ದಲಿತ ಸಂವೇದನೆಯ ನೆಲೆಗಳು	ಮಹದೇವ ನಾಯಕ. ಎಚ್.ಇ,	213 – 216
5	ಭರತನಾಟ್ಯಕ್ಕೆ ಆಧುನಿಕ ಕನ್ನಡ ಕಾವ್ಯ ಒಂದು ಅವಲೋಕನ	ವಿದ್ವಾನ್ ಡಾ. ಎ. ಎಸ್. ಸುಧೀರ್ ಕುಮಾರ್	216 – 220
6	ಅಪರೀಕ್ಷಿತ ಕಾರಕದಲ್ಲಿ ಸಂಗೀತಶಾಸ್ತ್ರ	ಡಾ॥ ಎಂ. ಎ. ಶೃತಿಕೀರ್ತಿ	220 – 223
7	ದೇವನೂರು ಮಹಾದೇವರ ಕತೆಗಳಲ್ಲಿ ಜಾನಪದೀಯ ಚಿಂತನೆಗಳು	ಪ್ರಸನ್ನ , ಎನ್. ಅಂಬರೀಶ್	224 – 228
8	ರಾಯಚೂರುಜಿಲ್ಲೆಯಲ್ಲಿ ಪಂಡಿತ್‌ತಾರಾನಾಥರವರ ಸಾಧನೆ– ಅವಲೋಕನ	ಹೆಚ್. ಮಹದೇವಸ್ವಾಮಿ	228 – 231
9	ಮಕ್ಕಳು ಮತ್ತು ಸಂಗೀತ ಪ್ರಧಾನ ಜನಪದ ರಂಗ ಪ್ರಕಾರಗಳು–ಒಂದು ಅವಲೋಕನ	ಜನಾರ್ಧನ	232 – 236
10	ಸ್ವಾತಂತ್ರ್ಯಪೂರ್ವ ಕನ್ನಡ ಕಾವ್ಯ : ಸ್ತ್ರೀವಾದಿನೆಲೆಗಳು	ಡಾ. ಎಸ್. ಡಿ. ಶಶಿಕಲಾ	236 – 240
11	ಜನಪದ ವೈದ್ಯದಲ್ಲಿ – ಹೂವು	ಸುನೀತ ಕೆ.ಎನ್	240 – 246
12	ಕೃಷಿ ಚರಗದ ಸ್ವರೂಪ ಮತ್ತು ಆಶಯಗಳು	ರೇವಣ್ಣ. ಜಿ.	246 - 249
13	ಕರ್ನಾಟಕದ ರೈತ ಮತ್ತು ದಲಿತ ಸಂಘಟನೆಗಳ ಅವಲೋಕನ	ಮಲ್ಲಿಕೇಶ. ಹೆಚ್.ಹೆಚ್,	249 – 251
14	ಲಲಿತಕಲೆಯ ಅರ್ಥ ಮತ್ತು ಮಹತ್ವ	ಅರುಣಶ್ರೀ.ಎಂ.ಕೆ.	251 – 253
15	'ನೆತ್ತರ ಮದುವೆ' ನಾಟಕದಲ್ಲಿನ – ಸ್ತ್ರೀ ಸಂವೇದನೆ	ಸತೀಶ. ಆರ್	253 – 255
16	ಕಾ ತಾ ಚಿಕ್ಕಣ್ಣನವರ ಬರೆಹ–ಜಾನಪದ ಪ್ರಜ್ಞೆ	ಮಾಲಿನಿ ಎನ್ ಅಭ್ಯಂಕರ್	255 – 258
17	ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರ ಜಾಹೀರಾತು ಕುರಿತು – ಒಂದು ಅಧ್ಯಯನ	ನೀಲಕಂಠ ಸ್ವಾಮಿ ವೆಂಕಟೇಶ ಕಡೂನ	258 – 262
18	ಕಾ ತ ಚಿಕ್ಕಣ್ಣನವರ ಬರೆಹದ ಭಾಷೆ	ಮಾಲಿನಿ ಎನ್ ಅಭ್ಯಂಕರ್	262 – 265
19	ಜಯಂತ ಕಾಯ್ಕಿಣಿ ಅವರ ಕೆಲವು ಆಯ್ದಕಥೆಗಳಲ್ಲಿ ಅಭಿವ್ಯಕ್ತಗೊಂಡಿರುವ ಸಶಕ್ತ ಸ್ತ್ರೀ ಚಿತ್ರಣ	ಆಶಾ. ಎಸ್	265 - 258
20	ಕನ್ನಡ ನವ್ಯ ಕಾವ್ಯ ಮತ್ತು ವಿಜ್ಞಾನ	ಟಿ. ಎಂ. ಗೀತಾಂಜಲಿ	259 – 275
21	ಸಂಗೀತ ಒಂದು ವಿಜ್ಞಾನ– ಚಿಂತನ	ವಿದ್ವಾನ್ ರವಿ ಜೋಶಿ	276 – 277
22	ಸೋಲಿಗರ ಸಂಸ್ಕಾರಗಳು	ದುಂಡಯ್ಯ	278 – 280

ಕಲಿಕಾ ಮಾಧ್ಯಮವಾಗಿ ಮಕ್ಕಳ ರಂಗಭೂಮಿ

ಗಿರೀಶ್ ಎಂ ಬಿ
ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು – ೫೭೦೦೦೬
ಇ ಮೇಲ್ : girishmugthihalli8@gmail.com

ಇತ್ತೀಚಿನ ದಿನಗಳಲ್ಲಿ ಮಕ್ಕಳನ್ನು ಪೋಷಿಸದೆ ಶೋಷಿಸುತ್ತಿರುವ, ಸ್ವಾತಂತ್ರ್ಯ ಕೊಡದೆ ಮನೆಪಾಠಶಾಲೆಯಲ್ಲಿ ಬಂಧಿಸುತ್ತಿರುವ, ಅವರಂತಾಗಲು ಬಿಡದೆ ಏನೇನೋ ಮಾಡಲು ಪ್ರಯತ್ನಿಸುತ್ತಿರುವ, ಸಹಬಾಳ್ವೆಗೆ ಅವಕಾಶ ಕೊಡದೆ ಸ್ಪರ್ಧೆಗೆ ದೂಡುತ್ತಿರುವ ಮೂಲಕ ಮಕ್ಕಳ ಹಕ್ಕುಗಳನ್ನು ಹತ್ತಿಕ್ಕುತ್ತಿರುವ ಇಂಥ ಪ್ರಕ್ಷುಬ್ಧ ಕಾಲದಲ್ಲಿ ಎಲ್ಲರಿಗೂ ಮಕ್ಕಳ ಬದುಕನ್ನು ಗ್ರಹಿಸುವ ಮನೋಶಕ್ತಿ ಬೇಕಾಗಿದೆ. ಮಕ್ಕಳ ಮನಸ್ಸಿಗೆ ಎಲ್ಲವನ್ನು ಇಟ್ಟುಕೊಳ್ಳುವ ಸ್ವೀಕಾರತ್ವದ ಗುಣ ಸಹಜವಾಗಿಯೆ ಇರುವುದರಿಂದ ಮಕ್ಕಳ ಮನಸ್ಸನ್ನು ಮಹಾಮನೆಯನ್ನಾಗಿ ರೂಪಿಸಿ, ವಿಶ್ವಮಾನವರನ್ನಾಗಿ ಮಾಡುವಲ್ಲಿ ಮಕ್ಕಳಿಗೆ ಗುರುತರವಾದ ಮಾರ್ಗದರ್ಶನ ಕೊಡಬೇಕಾಗಿದೆ. ಮಕ್ಕಳು ಚಟುವಟಿಕೆ ಮೂಲಕ ಕಲಿಯುವುದರಿಂದ ಕಲಿಕೆಯ ವೇದಿಕೆಯು ಆರೋಗ್ಯಪೂರ್ಣವಾಗಿರಬೇಕು. ಆಗ ಮಕ್ಕಳು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ.

ತಾಯಿಗರ್ಭವು ಕೂಡ ಮಕ್ಕಳ ಕಲಿಕೆಯ ತಾಣವಾಗಿರುವುದರಿಂದ ಪೋಷಕರು ಸದಾ ಜಾಗರುಕರಾಗಿರಬೇಕು. ಅನಂತರದ ದಿನಗಳಲ್ಲಿ ಮಕ್ಕಳ ಕಲಿಕಾ ವೇದಿಕೆಗಳು ಅವರವರ ಭಿನ್ನರುಚಿಯ ಮೇಲೆ ತೆರೆದುಕೊಳ್ಳುತ್ತವೆ. ಆಗ ಮಕ್ಕಳ ಯೋಚನೆ ಮತ್ತು ಯೋಜನೆಗಳು ಉತ್ತಮದರ ಕಡೆಗೆ ಮನ ಒಲಿಯುವಂತೆ ವಾತಾವರಣ ಸೃಷ್ಟಿ ಮಾಡಬೇಕು. ಈ ಮೂಲಕ ಸಾತ್ವಿಕ ಪಥವು ತನ್ನಂತಾನೆ ತೆರೆದುಕೊಳ್ಳುವುದು. ಮಕ್ಕಳು ಸಮಾಜದಲ್ಲಿ ಎಲ್ಲಾ ಕಡೆ, ಎಲ್ಲರೊಡನೆ ಬೆರೆಯುವ ಅನಿವಾರ್ಯವಿರುವುದರಿಂದ ಕಲಿಕಾ ವೇದಿಕೆ ವಿಸ್ತಾರಗೊಳ್ಳುವುದು. ಇದಕ್ಕೆ ಪೂರಕವಂತೆ ರಂಗಭೂಮಿ ಮಕ್ಕಳಲ್ಲಿ ಕಲಿಕೆಯನ್ನು ಉತ್ತಮಗೊಳಿಸಿ ಅವರ ವ್ಯಕ್ತಿತ್ವವನ್ನು ಸದೃಢಗೊಳಿಸಿ, ವಿಶಾಲವಾಗಿಸುವಲ್ಲಿ ಹೇಗೆ ಸಹಕಾರಿಯಾಗುತ್ತಿದೆ ಎಂಬ ಅಂಶವನ್ನು ರಂಗಭೂಮಿ ತಜ್ಞರು, ಮನೋವಿಜ್ಞಾನಿಗಳು, ಸಮಾಜ ಚಿಂತಕರು, ಪಾಶ್ಚಾತ್ಯ ವಿದ್ವಾಂಸರುಗಳ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸಂಶೋಧನ ಲೇಖನ ಪ್ರಕಟಗೊಂಡಿದೆ.

"ನಗುಮೊಗದ ಮಕ್ಕಳಿರುವ ಶಾಲೆಯೇ, ಅರಳಿದ ಹೂಗಳ ಉದ್ಯಾನ. ಬಾಡಿರುವ ಮೋರೆಯ ಮಕ್ಕಳಿರುವ ಸ್ಥಳವೇ ಮಸಣ. ಈಗ ನಾವ್ಯಾವ ಶಾಲೆಯಲ್ಲಿ ಕಾಲಿಟ್ಟರೂ, ಮಸಣದ ಛಾಯೆಯೇ ಒಡೆದು ಕಾಣುವುದಲ್ಲದೆ, ಉದ್ಯಾನದ ಕಳೆಯು ಅದರಲ್ಲಿಲ್ಲ. ಬಾಡಿ, ಒಣಗಿದ ಗಿಡಗಳಿಗೆ ನೀರೆರೆದು ಫಲವೇನು ಬಂದೀತು?"

– ಡಾ. ಕೆ. ಶಿವರಾಮ ಕಾರಂತ

ಆಧುನೀಕರಣದ ಸಂದರ್ಭದಲ್ಲಿ ವಿದ್ಯುನ್ಮಾನ ಮಾಧ್ಯಮಗಳು ಹೆಚ್ಚು ಭರಾಟೆಯಲ್ಲಿರುವುದರಿಂದ ಮಕ್ಕಳು ಅವುಗಳ ಕಡೆಗೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಶಾಲಾ ಚಟುವಟಿಕೆಗಳಲ್ಲಿ, ಹೊರಾಂಗಣ ಆಟೋಟಗಳಲ್ಲಿ ಭಾಗವಹಿಸುವ ಮಕ್ಕಳು ಇಂಟರ್‌ನೆಟ್, ಮೊಬೈಲ್‌ಗಳಿಗೆ ಶರಣಾಗುತ್ತಿದ್ದಾರೆ. ಮಕ್ಕಳ ಮೂಲಸ್ಥಿತಿ, ಶಿಸ್ತು, ಸ್ವಭಾವಗಳು ತೀವ್ರ ಬದಲಾವಣೆ ಸ್ವರೂಪ ಪಡೆಯುತ್ತಿವೆ. ಮಕ್ಕಳು ದೊಡ್ಡವರಂತೆ ವರ್ತಿಸುತ್ತಿದ್ದಾರೆ. ಈ ಬದಲಾವಣೆ ಮಕ್ಕಳಿಗೆ ಜೀವ ಕಂಟಕವಾಗಿದೆ. ಅರಳದೆ ಇರುವ ಹೂವುಗಳಾಗುತ್ತಿದ್ದಾರೆ. ಮಕ್ಕಳ ಭಾವ, ಸ್ವಭಾವ, ಬುದ್ಧಿವಂತಿಕೆ, ಸಂಸ್ಕೃತಿ, ನಡೆ, ನುಡಿ, ಎಲ್ಲದರಲ್ಲೂ ಬದಲಾವಣೆಯಾಗುತ್ತಿದೆ. ಮಕ್ಕಳ ಆತ್ಮಹತ್ಯೆಗಳು ಸಾಲುಗಟ್ಟಿವೆ. ಇದಕ್ಕೆ ಕಾರಣಗಲು ಏನೇ ಇದ್ದರೂ ಮಕ್ಕಳಿಗೆ ಅದು ಜೀವ ತಿನ್ನುವ ದೈತ್ಯ ಕಾರಣಗಳು ಪ್ರಬಲವಾಗಿವೆ. ಆದರೆ ಹೊರಗೆ ನಿಂತು ನೋಡುವವರಿಗೆ ಶಿಕ್ಷಕರು ಮತ್ತು ಪೋಷಕರು ಅಪರಾಧಿಗಳಾಗಿ ಆತ್ಮಹತ್ಯೆಗೆ ಪರೋಕ್ಷ ಪ್ರೇರಕರೆ? ಎಂದು ಅನಿಸಬಹುದು. ಆದರೆ ಇದಕ್ಕೆ ಸ್ಪಷ್ಟ ಕಾರಣಗಳಿದ್ದು ಹುಡುಕಲಿಕ್ಕೆ ಸಾಧ್ಯವಾಗದಿದ್ದರೂ ಆಧುನಿಕ ಜೀವನ ಶೈಲಿಯನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ಊಹಾತ್ಮಕ ಕಾರಣಗಳನ್ನು ಕೊಡಬಹುದು. ಇಂದು ಮಕ್ಕಳು, ಪೋಷಕರು, ಶಿಕ್ಷಕರು ಇವರುಗಳ ನಡುವೆ ಒಂದು ಅಂತರ ಸೃಷ್ಟಿಯಾಗುತ್ತಿದೆಯೆ? ಇವರುಗಳ ಮಧ್ಯೆ ಮಾನಸಿಕವಾಗಿ, ಜೈವಿಕವಾಗಿ, ಭಾವನಾತ್ಮಕವಾಗಿ, ಬಿರುಕುಗಳು ಮಾಡುತ್ತಿವೆಯೆ? ಅಥವಾ ಬದಲಾದ ಸ್ಥಿತ್ಯಂತರಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಮೂವರಲ್ಲಿ ಅನುಸಂಧಾನದ ಕೊರತೆ ಇದೆಯೆ? ಈ ಎಲ್ಲಾ ಪ್ರಶ್ನೆಗಳಿಗೆ ಇವತ್ತಿನ ಜಾಗತಿಕ ಸಂದರ್ಭಗಳು ಉತ್ತರಿಸಬೇಕಾಗಿದೆ. ಏಕೆಂದರೆ ಗೆಲ್ಲುವ ಕುದುರೆಯಾಗಬೇಕೆಂಬ ಅವಸರದ ಮನಸ್ಸುಳ್ಳವರು ಎಲ್ಲದರಿಂದ ದೂರವಾಗುತ್ತಿದ್ದಾರೆ. ಮಕ್ಕಳ ಭಾವನಾ ಪ್ರಪಂಚಕ್ಕೆ ನಷ್ಟ ಉಂಟು ಮಾಡುತ್ತಿದ್ದಾರೆ. ರಿಯಾಲಿಟಿ ಶೋನಂತಹ ಮಕ್ಕಳ ಭಾವನೆಗಳ ಮಾರಾಟದ ಮಾಧ್ಯಮಗಳು ಸಾಧನೆಯ ಸಾಧ್ಯತೆಗಳನ್ನು ಉತ್ತುಂಗಕ್ಕೇರಿಸಿ ಸಾಧಿಸುವುದು ಇಷ್ಟೆ, ಸಾಧಿಸಬೇಕಾಗಿರುವುದು ಇದನ್ನೆ. ಇನ್ನೂ ಬೇರೆಲ್ಲೂ ಅವಕಾಶ ಇಲ್ಲ ಎಂಬಂತೆ ಸಂಪನ್ಮೂಲ ವ್ಯಕ್ತಿಗಳಿಂದ ಬಿಂಬಿಸಿ ಮಕ್ಕಳ ಮನಸ್ಸಿನಲ್ಲಿ ತುಂಬಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ತಂದೆ ತಾಯಿಗಳು ಪ್ರತಿಷ್ಠೆಯ ಕಣದಲ್ಲಿ ನಿಂತು, ಆ ಸಂದರ್ಭದಲ್ಲಿಯೇ ಹೆಮ್ಮೆಯ ಪುತ್ರ/ಪುತ್ರಿಯರಾಗಿ ಬೇಕು ಎಂಬ ಅವಸರದ ಜಂಭದ ಹೇಳಿಕೆಗಳು ಬಂದೂಕಿನ ಗುಂಡಿನ ರೀತಿಯಲ್ಲಿ ಹೊರ ಬರುತ್ತವೆ. ಆಗ ಮಕ್ಕಳ ಪ್ರತಿಭಾ ಶಕ್ತಿಯ ಜೀವಿತಾವಧಿ ರಿಯಾಲಿಟಿ ಶೋಗೆ ಮುಗಿತು. ಅಲ್ಲಿಯೇ ಎಲ್ಲದನ್ನು ಸಾಧಿಸಬೇಕೆನ್ನುವ ತಂದೆ -- ತಾಯಿಯರ ಹಂಬಲ ಇವತ್ತಿನ ಮಕ್ಕಳ ಖಿನ್ನತೆಗೆ ದಾರಿಯಾಗಿದೆ. ಗುಣಾತ್ಮಕ ಸ್ಪರ್ಧೆಗಳು ಏರ್ಪಡದೆ ಜೀವನವೇ ಮುಗೀತು ಎಂದು ತೀರ್ಮಾನಿಸುವ ಮನಸ್ಸುಗಳು ಮಕ್ಕಳ ಮನಸ್ಸನ್ನು ಕದಡುತ್ತವೆ. ಈ ಹಿನ್ನೆಲೆಯಲ್ಲಿ ಕಲಿಕೆಯ ಸ್ವರೂಪವನ್ನು ನಾವು ನೋಡಬೇಕಾಗುತ್ತದೆ.

ವ್ಯಕ್ತಿಯೊಬ್ಬನ ಕ್ರಿಯಾಶೀಲ ಬದುಕಿಗೆ ಕಲಿಕೆ ಒಂದು ಮಾನದಂಡ. ಕಲಿಕೆ ಬೌದ್ಧಿಕ, ಮಾನಸಿಕ ಮತ್ತು ಭೌತಿಕ ಚಟುವಟಿಕೆಯಾದ್ದರಿಂದ ಇದೊಂದು ನಿರಂತರ ಪ್ರಕ್ರಿಯೆ. ವ್ಯಕ್ತಿಯೊಬ್ಬ ಸದಾ ಜಾಗೃತನಾಗಿರಲು ಕಲಿಕೆ ಸಹಕಾರಿಯಾಗುತ್ತದೆ. ಕಲಿಕೆ ಎನ್ನುವುದು ವ್ಯಕ್ತಿಗತ ಕ್ರಿಯೆ

ಆದರೂ ಅದೊಂದು ಹೊರಗಿನ ಪೂರಕ ವಾತಾವರಣದಿಂದ ಪ್ರೇರಿತವಾದುದು. ಇದು ವ್ಯಕ್ತಿಯ ಆಸಕ್ತಿ, ಅಭ್ಯಾಸ ಮತ್ತು ಅನುಭವಗಳನ್ನು ಅವಲಂಬಿಸಿರುತ್ತವೆ. ಆಸಕ್ತಿ ಕಲಿಕೆಗೆ ಸಹಕಾರಿಯಾದುದರಿಂದ ಅವರ ಕ್ಷೇತ್ರಗಳು ಇಂದು ಬಹು ವಿಸ್ತಾರವಾಗಿವೆ.

ಪ್ರಸಿದ್ಧ ಮನೋವಿಜ್ಞಾನಿಗಳಾದ ಬ್ಲೇರ್ ಮತ್ತು ಸಿಂಪ್ಸನ್ ಹೇಳುವಂತೆ ಕಲಿಕೆ ಎಂದರೆ, "ಒಬ್ಬ ವ್ಯಕ್ತಿಯ ವರ್ತನೆ, ಒಳನೋಟ, ಆಸಕ್ತಿ, ಚಿಂತನೆ ಇವುಗಳಲ್ಲಿ ಉಂಟಾಗುವ ಬದಲಾವಣೆಯೆ ಕಲಿಕೆ" – ಈ ಹಿನ್ನೆಲೆಯಲ್ಲಿ ಶಿಕ್ಷಣಕ್ಷೇತ್ರದ ಪಾತ್ರ ಬಹಳ ದೊಡ್ಡದು. ಕಲಿಯುವ ವ್ಯಕ್ತಿ, ಕಲಿಯುವ ಸನ್ನಿವೇಶ, ಕಲಿಯುವ ಪ್ರಕ್ರಿಯೆ, ಕಲಿಸುವ ವ್ಯಕ್ತಿ, ಕಲಿಯುವ ವಿಷಯ ಇವು ಒಂದಕ್ಕೊಂದು ಪೂರಕ ಸಂಬಂಧ ಹೊಂದಿವೆ. ಅಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಮಕ್ಕಳ ರಂಗಭೂಮಿಯಲ್ಲಿ ಮಕ್ಕಳಿಗೆ ಪ್ರಭಾವ ಬೀರುವ ಪ್ರಮುಖಾಂಶಗಳು. ಶಿಕ್ಷಣ ಕ್ಷೇತ್ರದಲ್ಲಿ ಮಕ್ಕಳು ಇನ್ನಷ್ಟು ಸಮರ್ಥರಾಗಬೇಕೆಂದರೆ ಅವರಿಗೆ ರಂಗ ಚಟುವಟಿಕೆಗಳು ಇಂದು ತೀರ ಅನಿವಾರ್ಯವಾಗಿವೆ. ಈ ಮೂಲಕ ಅವರ ವರ್ತನೆಗಳು ಅವರ ಅನುಭವಗಳಿಂದ ಬದಲಾವಣೆ ಹೊಂದಿ ಕಲಿಕೆ ತಾನಾಗಿಯೇ ಆಗುತ್ತದೆ.

ಪೋಷಕರು – ಶಿಕ್ಷಕರು – ಮಕ್ಕಳು: ಮಕ್ಕಳ ಸುಂದರ ಬದುಕಿಗೆ ಪೋಷಕರು ಮತ್ತು ಶಿಕ್ಷಕರು ಪ್ರಧಾನ ಪಾತ್ರವಹಿಸುತ್ತಾರೆ. ಆದರೆ ಮಕ್ಕಳ ಭವಿಷ್ಯವನ್ನು ತಮ್ಮ ಆಲೋಚನೆಗಳಿಂದ ಹೀಗೆ ಆಗಬೇಕೆಂದು ನಿರ್ಧರಿಸುವವರು ಇವರಲ್ಲ. ಮಕ್ಕಳ ಅವಶ್ಯಕತೆಗಳನ್ನು ಪೂರೈಸುವವರು ಇವರಾಗಬೇಕು. ಈ ಹಿನ್ನೆಲೆಯಲ್ಲಿ ಖಲೀಲ್ ಗಿಬ್ರಾನ್ ಅವರ ಚಿಂತನೆಯನ್ನು ನೋಡಬೇಕಾಗುತ್ತದೆ. "ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ. ಜೀವನ ಸ್ವಪ್ರೇಮದ ಪುತ್ರ ಪುತ್ರಿಯರು ಅವರು. ಅವರು ನಿಮ್ಮ ಜೊತೆಗೆ ಇರುವುದಾದರೂ ಅವರು ನಿಮಗೆ ಸೇರಿದವರಲ್ಲ. ನಿಮ್ಮ ಪ್ರೀತಿಯನ್ನು ಅವರಿಗೆ ನೀಡಬಹುದು; ಆದರೆ, ನಿಮ್ಮ ಆಲೋಚನೆಗಳನ್ನಲ್ಲ. ಅವರಂತಿರಲು ನೀವು ಪ್ರಯತ್ನಿಸಬಹುದು : ಆದರೆ ಅವರನ್ನು ನಿಮ್ಮಂತೆ ಮಾಡದಿರಿ. ಜೀವನ ಹಿಮ್ಮುಖವಾಗಿ ಹರಿಯದಿರಲಿ". (ಮಕ್ಕಳ ರಂಗಭೂಮಿ – ಬೆನ್ನುಡಿ) ಈ ಮಾತುಗಳು ತಂದೆ ತಾಯಂದಿರಿಗೆ ವಿಚಿತ್ರ ಅನ್ನಿಸಬಹುದು. ಆದರೆ ಅದು ಸತ್ಯ. ಪೋಷಕರಲ್ಲಿ ಇವರು ನಮ್ಮ ಮಕ್ಕಳು, ನಮ್ಮ ಅಧಿಕಾರ ಎಂಬ ಮನೋಭಾವ ಇದ್ದರೆ ಅದು ಮಕ್ಕಳ ಬೌದ್ಧಿಕ ಬೆಳವಣಿಗೆಯ ಮೇಲೆ ಪುತ್ತು ಅಪಕ ವರ್ತನೆಯ ಮೇಲೆ ಪರಿಣಾಮ ಬೀರುತ್ತದೆ. ವ್ಯಕ್ತಿತ್ವ ವಿಕಸನಗೊಳಿಸುವ ಸಾಧ್ಯತೆಗಳು ಕಡಿಮೆಯಾಗುತ್ತವೆ. ಆದ್ದರಿಂದ ಪೋಷಕರು ತಮ್ಮ ಮಕ್ಕಳಿಗೆ ಎಷ್ಟು ಸಾಧ್ಯವೋ ಅಷ್ಟು ಪ್ರೀತಿಯನ್ನು ಕೊಡಬೇಕು. ಅವರ ಬೇಕು ಬೇಡಗಳಿಗೆ ಸ್ಪಂದಿಸಬೇಕು. ಅವರಿಗಾಗಿ ಒಂದಿಷ್ಟು ಸಮಯವನ್ನು ತೆಗೆದಿಡಬೇಕು. ಈ ಹಿನ್ನೆಲೆಯಲ್ಲಿ ಎಚ್. ಬುಶ್‌ನೆಲ್ ಎಂಬ ಮನೋವಿಜ್ಞಾನಿ ಪೋಷಕರು ಮತ್ತು ಮಕ್ಕಳ ಸಂಬಂಧ ಕುರಿತು ಈ ರೀತಿ ಹೇಳುತ್ತಾನೆ. "ಪೋಷಕರು ತಮ್ಮ ಮಕ್ಕಳಿಗೆ ಕೊಡುವ ಅತ್ಯುತ್ತಮ ಬಳುವಳಿ ಎಂದರೆ ತಮ್ಮ ಕ್ಷಣಗಳಲ್ಲಿ ಕೆಲವನ್ನು ಅವರಿಗಾಗಿ ಮೀಸಲಾಗಿಡುವುದು" (೨೧.೨.೧೪ರ ಪ್ರಜಾವಾಣಿ, ಪುಟ ೬)

'ಸಮಯ ಮೀಸಲು' ಎನ್ನುವ ಪರಿಕಲ್ಪನೆ ಬಹಳ ದೊಡ್ಡದು. ಅದೊಂದು ಬೆಲೆ ಕಟ್ಟಲಾರದ ಆಸ್ತಿ. ಇಂತಹ ಆಸ್ತಿಯನ್ನು ಮಕ್ಕಳಿಗೆ ಕೊಡದೆ ಬೆಲೆ ಕಟ್ಟುವ ಆಸ್ತಿ ಕೊಟ್ಟರೆ ಅವರ ಭವಿಷ್ಯಕ್ಕೆ ದೊಡ್ಡ ಆತಂಕ ಸೃಷ್ಟಿಸಿದಂತೆ. ಪೋಷಕರು ಮಕ್ಕಳಿಗಾಗಿ ಸಮಯ ಮೀಸಲಿಟ್ಟಾಗ ಮಕ್ಕಳ ಖಿನ್ನತೆಯನ್ನು, ಅನಾಥ ಪ್ರಜ್ಞೆಯನ್ನು ದೂರ ಮಾಡಿದಂತಾಗುತ್ತದೆ. ಪೋಷಕರು ಮಕ್ಕಳಿಗೆ ಸಮಯ ಕೊಡದೆ ಇದ್ದಾಗ ಆಗುವ ಅನಾಹುತ ಹಲವಾರು. ಇದಕ್ಕೆ ಉತ್ತಮ ಉದಾಹರಣೆ 'ಕ್ರೇಜಿಸ್ಟಾರ್' ಸಿನಿಮಾ. ಇಲ್ಲಿ ಒಬ್ಬ ಸ್ಟಾರ್ ನಿರ್ದೇಶಕನ ಮಗಳಿಗೆ ನಿರ್ದೇಶಕ ಯಾವತ್ತೂ ಅಪ್ಪ ಅಂತ ಅನಿಸುವುದಿಲ್ಲ. ಅವನೊಬ್ಬ ಸ್ಟಾರ್ ನಿರ್ದೇಶಕನಾಗಿಯೇ ಇರುತ್ತಾನೆ. ಈ ತರಹದ ಮನೋಭಾವ ಮಕ್ಕಳಲ್ಲಿ ಇದ್ದರೆ ಮುಂದೆ ದೈಹಿಕ ಮತ್ತು ಮಾನಸಿಕ ಬಲಗಳು ಅಪಾಯಕ್ಕೆ ಒಳಗಾಗುತ್ತವೆ. ಆದ್ದರಿಂದ ಬುಶ್‌ನೆಲ್ ಹೇಳುವ ಮಾತು ನಿಜ.

ಶಿಕ್ಷಕ ತಾನೊಬ್ಬ ಮಕ್ಕಳ ಪೋಷಕ ಎಂಬುದು ಗಮನದಲ್ಲಿಟ್ಟುಕೊಂಡು ಮಕ್ಕಳೊಡನೆ ಪ್ರೀತಿಯಿಂದ ಬೆರೆಯಬೇಕಾಗುತ್ತದೆ. ಶಿಕ್ಷಕ ತನ್ನ ಅಧಿಕಾರವನ್ನು ಮಗುವಿನ ಮೇಲೆ ಚಲಾಯಿಸಬಾರದು, ಮನಸ್ಸನ್ನು ಅರಳಿಸುವಂತೆ ಇರಬೇಕೆ ಹೊರತು ವಿಕಾರಗೊಳಿಸುವಂತೆ ಇರಬಾರದು. ಪ್ರಸ್ತುತ ದಿನಗಳಲ್ಲಿ ಮಕ್ಕಳಿಗೆ ಕಲಿಕಾ ಮಾಧ್ಯಮಗಳು ಹೇರಳವಾಗಿರುವುದರಿಂದ ಆಯ್ಕೆಗಳು ಬಹುವಾಗಿವೆ. ಆದ್ದರಿಂದ ಶಿಕ್ಷಕರು ಮಕ್ಕಳನ್ನು ತಮ್ಮ ಮಾನಸಿಕ ಹಿಡಿತದಲ್ಲಿ ತೆಗೆದುಕೊಳ್ಳಬೇಕಾದರೆ, ಅವರ ಪ್ರತಿಭೆಯನ್ನು ಅನಾವರಣಗೊಳಿಸಲು ರಂಗಭೂಮಿಯ ಚಟುವಟಿಕೆಗಳಲ್ಲಿ ಮಕ್ಕಳನ್ನು ಸಂಪೂರ್ಣ ತೊಡಗಿಸಬೇಕು. ಆಡುತ್ತಾ ಕಲಿಯುವ ಕ್ರಿಯೆಯಲ್ಲಿ ಮೋಜು, ಲವಲವಿಕೆ, ಖುಷಿ, ಸಂಭ್ರಮ, ಸಹಬಾಳ್ವೆ ಎಲ್ಲವೂ ಇರುವುದರಿಂದ ತಪ್ಪು ಮತ್ತು ಶಿಕ್ಷೆ ಎನ್ನುವ ಘಟನೆಗಳಿಗೆ ಅವಕಾಶಗಳು ದೂರಾಗುವ ಸಾಧ್ಯತೆಗಳು ಹತ್ತಿರವಾಗುತ್ತವೆ.

ನ್ಯೂಜಿಲ್ಯಾಂಡ್‌ನ ಫ್ಲಿನ್ (Flynn) ಎಂಬ ಮನೋವಿಜ್ಞಾನಿ ಪೋಷಕರು – ಮಕ್ಕಳು – ಶಿಕ್ಷಕರು ಈ ಮೂವರ ನಡುವಿನ ಸಂಬಂಧದ ಸ್ಥಿತಿಯನ್ನು ಈ ರೀತಿ ಹೇಳುತ್ತಾರೆ. "ಮಕ್ಕಳ ಇಂದಿನ ಸ್ಮಾರ್ಟ್‌ನೆಸ್ಸನ್ನು ಎದುರಿಸಲು ಪೋಷಕರು, ಶಿಕ್ಷಕರೂ ಗಣನೀಯವಾಗಿ ಎಡವುತ್ತಿದ್ದಾರೆ. ಅವರ ಆ ಸ್ಮಾರ್ಟ್‌ನೆಸ್‌ನ್ನು ಅರಗಿಸಿಕೊಳ್ಳಲು ನಮ್ಮ ಪೋಷಕರು ಮತ್ತು ಶಿಕ್ಷಕರು ಸಿದ್ಧಗೊಂಡಿಲ್ಲ" (ಲೈಫ್ 360, ಸಂಚಿಕೆ 12, ಏಪ್ರಿಲ್ 2014. ಪುಟ–೨೮). ಆದ್ದರಿಂದ ಪೋಷಕರು ಮತ್ತು ಶಿಕ್ಷಕರು ಮಗುವಿನ ಭಾವಲೋಕಕ್ಕೆ ತಮ್ಮನ್ನು ತಾವು ತಯಾರು ಮಾಡಿಕೊಳ್ಳಬೇಕಿದೆ. ಇಂದು ಬುದ್ಧಿವಂತ ಮಕ್ಕಳಿಗಿಂತ ಸೃಜನಶೀಲ ಮಕ್ಕಳನ್ನು ರೂಪಿಸಬೇಕಾದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಮಕ್ಕಳ ರಂಗಭೂಮಿಯನ್ನು ಕಲಿಕಾ ಮಾಧ್ಯಮದ ದೃಷ್ಟಿಯಲ್ಲಿ ಇಂದು ಕಾಣಬೇಕಾಗಿದೆ. ಇದರ ಪ್ರಯತ್ನದ ಸಾಧ್ಯತೆಯ ತುಣುಕೊಂದನ್ನು ಇಲ್ಲಿ ಅಭಿವ್ಯಕ್ತಿಸಲಾಗಿದೆ.

ಮಕ್ಕಳ ರಂಗಭೂಮಿ ಪರಿಕಲ್ಪನೆ : ಮಕ್ಕಳ ರಂಗಭೂಮಿ ಎಲ್ಲಿದೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ ಹುಡುಕಾಟ ಶುರುವಾಗುತ್ತದೆ. ದೊಡ್ಡವರ ರಂಗಭೂಮಿ ಕಣ್ಮುಂದೆ ಬಂದು ಮಕ್ಕಳ ರಂಗಭೂಮಿ ನೇಪಥ್ಯಕ್ಕೆ ಸರಿದು ಬಿಡುತ್ತದೆ. ಆದರೂ ಶಾಲೆಗಳಲ್ಲಿ ವಾರ್ಷಿಕೋತ್ಸವದ ಅಂಗವಾಗಿ ಮಕ್ಕಳ ನಾಟಕ ಇದ್ದ ನೆನಪು ಚಲನಶೀಲ ಮನಸ್ಸಿಗೆ ಚಿಂತಿಸುವ ಅವಕಾಶ ದೊರೆಯುತ್ತೆ. ಅನೇಕ ಸಲ ಮಕ್ಕಳು ಆಡುವ ನಾಟಕ ಮಕ್ಕಳ ನಾಟಕ ಆಗಿರುವುದಿಲ್ಲ. ಶಿಕ್ಷಕರು ಆಯ್ಕೆ ಮಾಡಿದ್ದೆ ನಾಟಕ. ಮಕ್ಕಳು ನಾಟಕದ ಸಂಭಾಷಣೆಯನ್ನು ಕಂಠಪಾಠ ಮಾಡಿ ಭಯಭೀತರಾಗಿ ಪ್ರೇಕ್ಷಕರ ಮುಂದೆ ಒಪ್ಪಿಸುವುದೇ ಪ್ರದರ್ಶನವಾಗಿತ್ತು. ಈ ರೀತಿ ಮಕ್ಕಳ ರಂಗಭೂಮಿ ಶೈಕ್ಷಣಿಕ ಅಂಗವಾಗಿ ರೂಪುಗೊಂಡಿತ್ತು. ಹಿಂದೆ ಶಿಕ್ಷಣ ಕ್ಷೇತ್ರದಲ್ಲಿ ಪಠ್ಯೇತರ ಚಟುವಟಿಕೆ ಎಂದು ನಾಟಕ,

ಕ್ರಾಫ್ಟ್ (ತೋಟಗಾರಿಕೆ ಇತ್ಯಾದಿ)ಗಳನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಅನಂತರದ ದಿನಗಳಲ್ಲಿ ಶಿಕ್ಷಣ ಇಲಾಖೆ ಅವುಗಳನ್ನು 'ಪಠ್ಯಪುಸ್ತಕ ಚಟುವಟಿಕೆ' ಎಂದು ತಿದ್ದುಪಡಿ ಮಾಡಿ ಮಾನ್ಯ ಮಾಡಿತು. ಹೀಗೆ ಸ್ವಲ್ಪ ಬದಲಾವಣೆಯಾಗಿ 'ಪಾಠ ನಾಟಕ'ದ ಕಲ್ಪನೆ ಬೆಳೆಯಿತು.

ಶಿಕ್ಷಣದಲ್ಲಿ ರಂಗಭೂಮಿ : ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವು ಅಕ್ಷರಗಳ ಒಟ್ಟು ಮೊತ್ತದ ದೊಡ್ಡ ಹೊರೆ ಅಲ್ಲ. ಅವರಿಗೆ ಸ್ವತಂತ್ರ್ಯದ ಅವಶ್ಯಕತೆ ಬೇಕು. ಗುಂಪಿನಲ್ಲಿ ಸೇರಿಕೊಂಡು ಒಡನಾಡಿಯಾಡುವ ಸಂದರ್ಭಗಳು ಹೆಚ್ಚಿರುವುದರಿಂದ ಶಾಲಾ ಕೊಠಡಿಯೊಳಗೆ ಅವರನ್ನು ಹೆಚ್ಚು ಕಾಲ ಬಂಧಿಸಕೂಡದು. ಅವರಿಗೆ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವ ಅವಕಾಶಗಳನ್ನು ಒದಗಿಸಿಕೊಡಬೇಕು. ಈ ನಿಟ್ಟಿನಲ್ಲಿ ಶಿವರಾಮ ಕಾರಂತರು ತಮ್ಮದೇ ಆದ ಶಿಕ್ಷಣದ ಪರಿಕಲ್ಪನೆಗಳನ್ನು ರೂಪಿಸಿದ್ದಾರೆ. ಇವುಗಳು ಸರಳವಾದವು. ಮೂಲಭೂತವಾದವು ಮತ್ತು ಇಂದಿಗೂ ಪ್ರಸ್ತುತವಾದವು. ಅವುಗಳೆಂದರೆ,

೧. ಅಭಿರುಚಿ ಬೆಳೆಸುವುದು: ಮಕ್ಕಳು ಚಟುವಟಿಕೆಗಳಲ್ಲಿ ಆಸಕ್ತಿವಹಿಸಿ ತಾನಾಗಿಯೇ ತೊಡಗುವುದು ಅಭಿರುಚಿಯ ಒಂದು ಲಕ್ಷಣ. ಆದ್ದರಿಂದ ತನ್ನ ಅನುಭವವನ್ನು ಸಮಾಜಕ್ಕೆ ಅರ್ಪಿಸಲು ತರಬೇತಿ ಮುಖ್ಯವಾಗುತ್ತದೆ. ಅಭಿರುಚಿಯನ್ನು ಬೆಳೆಸುವಲ್ಲಿ ಮುಖ್ಯವಾಗಿ ಎರಡು ಮಾರ್ಗಗಳಿವೆ. ಒಂದು ಮಕ್ಕಳು ನಿರುತ್ಸಾಹಗೊಳ್ಳದಂತೆ ನೋಡಿಕೊಳ್ಳುವುದು. ಇನ್ನೊಂದು ಪಾಠಗಳು ಅಥವಾ ಚಟುವಟಿಕೆಗಳು ಆಕರ್ಷಣೆಯಿಂದ ಕೂಡಿರುವಂತೆ ಮಾಡುವುದು.

೨. ಸೃಷ್ಟಿಕಾರತ್ವವನ್ನು ಬೆಳೆಸುವುದು : ಕಾರಂತರ ಅಭಿಪ್ರಾಯದಲ್ಲಿ "ಮಗುವಿನ ಪ್ರಪಂಚ ಮನೋಮಯ; ಅವರ ಚಟುವಟಿಕೆ ಭಾವಮಯ; ಅವರ ಕಾರ್ಯರಂಗ ಸೃಷ್ಟಿಕಾರಕ" (ಶಿವರಾಮ ಕಾರಂತರ ಲೇಖನಗಳು ಪು. ೨೨೫) – ಈ ಹಿನ್ನೆಲೆಯಲ್ಲಿ ಮಕ್ಕಳ ಮನಸ್ಸು ಸದಾ ಹೊಸದರ ಕಡೆಗೆ ತುಡಿಯುತ್ತಿರುತ್ತದೆ. ಆದ್ದರಿಂದ ಮಕ್ಕಳಿಗೆ ಸೃಷ್ಟಿಕಾರತ್ವವನ್ನು ಬೆಳೆಸಲು, ಪೋಷಿಸಲು ಶಿಕ್ಷಕರು ಮತ್ತು ಪೋಷಕರು ತಮ್ಮನ್ನು ತಾವು ಒಪ್ಪಿಸಿಕೊಳ್ಳಬೇಕಿದೆ.

೩. ವಿವೇಚನೆ ಬೆಳೆಸುವುದು : ಶಿವರಾಮ ಕಾರಂತರಿಗೆ ವಿಜ್ಞಾನ ಸಂಗತ್ಯಜ್ಞಾನದ ವಿಷಯಗಳನ್ನು ಸ್ಮರಣೆಯಲ್ಲಿ ತುಂಬಿಕೊಳ್ಳುವ ಶಿಕ್ಷಣ ಅವರಿಗೆ ಹಿಡಿಸುವುದಾಗಿರಲಿಲ್ಲ. ಏಕೆಂದರೆ ತಲೆಯಲ್ಲಿ ತುಂಬಿಕೊಂಡ ಜ್ಞಾನಕ್ಕೂ ಮುಂದಣ ಜೀವನಕ್ಕೂ ಪರಸ್ಪರ ಸಂಬಂಧ ಬಾರದಿದ್ದಾಗ ವ್ಯಕ್ತಿ ಅಪ್ರಬುದ್ಧನಾಗಿಯೇ ಉಳಿಯುವ ಅಪಾಯ ಜಾಸ್ತಿ. ಆದ್ದರಿಂದ ಮಕ್ಕಳಲ್ಲಿ ವಿವೇಚನೆ ಬೆಳೆಸುವುದು ಬಹಳ ಮುಖ್ಯ ಎಂಬುದು ಕಾರಂತರ ಅಭಿಪ್ರಾಯವಾಗಿತ್ತು.

ಶಿವರಾಮ ಕಾರಂತರ ಈ ಮೂರು ಅಂಶಗಳ ಸಾರ್ಥಕ್ಯದ ಹಾದಿಯಲ್ಲಿ ಮಕ್ಕಳ ರಂಗಭೂಮಿ ಇವತ್ತು ಕೆಲಸ ನಿರ್ವಹಿಸುತ್ತಿದೆ. ಮಕ್ಕಳ ರಂಗಭೂಮಿ ಒಂದು ವಿಶಿಷ್ಟ ಕಲಿಕಾ ಮಾಧ್ಯಮ. ಇಲ್ಲಿ ಕಲ್ಪನೆ, ವಾಸ್ತವ ಎಲ್ಲವೂ ಪ್ರದರ್ಶಿಸಲ್ಪಡುತ್ತದೆ. ಮಕ್ಕಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಪೂರ್ಣ ಬೆಂಬಲ ಮತ್ತು ಅವಕಾಶಗಳು ಇರುತ್ತದೆ. ಮಕ್ಕಳು ರೂಪಾಂತರಗೊಂಡು ಪರಕಾಯ ಪ್ರವೇಶ ಮಾಡಿ ಅಭಿನಯಿಸಿದಾಗ ಅವರುಗಳ ಸೃಷ್ಟಿಕಾರಕ ಸ್ಥಿತಿ ದ್ವಿಗುಣಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳ ರಂಗಭೂಮಿ ಒಂದು ಬೆರಗು. ಅಲ್ಲಿ ಮಕ್ಕಳನ್ನು ಸೃಜನಶೀಲಗೊಳಿಸುತ್ತದೆ. ಅಂತರ್‌ಕ್ರಿಯಾತ್ಮಕ ಬೆಳವಣಿಗೆಗೆ ಸಾಧ್ಯವಾಗುವಂತೆ ದಾರಿಯನ್ನು ಸೃಷ್ಟಿಸುತ್ತವೆ. ಇದು ಬೋಧನೆ ನೀಡುವುದಿಲ್ಲ. ಮಕ್ಕಳೊಂದಿಗೆ ಮಾತಾಡುತ್ತದೆ. ಮಕ್ಕಳು ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಮಕ್ಕಳು ಹೆಚ್ಚಿನ ಸಮಯ ಕಳೆಯಲು ಶಾಲಾ ಆವರಣವೇ ಮಕ್ಕಳ ರಂಗಭೂಮಿಯಾಗಿ ಬದಲಾದರೆ ಶಿಕ್ಷಣದ ಕಲಿಕಾ ಮಾಧ್ಯಮವಾಗಿ ರಂಗಭೂಮಿ ಇನ್ನಷ್ಟು ಬೆಳೆಯುತ್ತದೆ.

ಗ್ರಿಪ್ಸ್ ರಂಗಭೂಮಿ : ಹೆಸರಾಂತ ರಂಗನಿರ್ದೇಶಕ, ನಾಟಕಕಾರ ಕೆ.ವಿ. ಅಕ್ಷರ ಅವರು 'ಮಕ್ಕಳ ರಂಗಭೂಮಿ : ಹೊಸ ದಿಕ್ಕುಗಳು' ಲೇಖನದಲ್ಲಿ ಗ್ರಿಪ್ಸ್ ರಂಗಭೂಮಿಯ ಬಗ್ಗೆ ಪ್ರಸ್ತಾಪಿಸುತ್ತಾರೆ. "ಈ ರಂಗಭೂಮಿಗೆ ಮಕ್ಕಳ ಆಲೋಚನ ಕ್ರಮದ ದಿಕ್ಕನ್ನು ಬದಲಾಯಿಸುವ ಶಕ್ತಿ ಇದೆ. ಮಕ್ಕಳ ರಂಗಭೂಮಿಯ ಮುಂದುವರಿದ ಬೆಳವಣಿಗೆಯ ನಿರೀಕ್ಷೆಯಲ್ಲಿರುವವರಿಗೆ ಗ್ರಿಪ್ಸ್ ರಂಗಭೂಮಿ ಒಂದು ಆಶಾದಾಯಕ ಕೊಡುಗೆ". ಎಪ್ಪತ್ತರ ದಶಕದಲ್ಲಿ ಪ್ರಾರಂಭದಲ್ಲಿ ಯುರೋಪಿನಲ್ಲಿ ಮಕ್ಕಳ ರಂಗಭೂಮಿ ಕೇವಲ ಕಾಲ್ಪನಿಕ ರಂಜನೀಯ ಪ್ರದರ್ಶನಗಳಿಗೆ ಸೀಮಿತವಾಗಿತ್ತು. ಆಗ ಆ ದಿಕ್ಕಿನಿಂದ ಸಿಡಿದು ಬಂದ ಒಂದು ಮುಖ್ಯ ರಂಗಚಳವಳಿ. 'ಗ್ರಿಪ್ಸ್' . ಗ್ರಿಪ್ಸ್ ಎಂಬ ಜರ್ಮನ್ ಶಬ್ದದ ಅರ್ಥ 'ಜಾಣತನ' ಎನ್ನುವುದರ ಸಮೀಪ. ಅಲ್ಲಿಗೆ ನಾಟಕ ನೋಡಲು ಬಂದ ಹುಡುಗನೊಬ್ಬ ಸೂಚಿಸಿದ ಹೆಸರಂತೆ ಅದು. (ಮಕ್ಕಳ ರಂಗಭೂಮಿ–ಪುಟ. ೪೬)

ಗ್ರಿಪ್ಸ್ ರಂಗಭೂಮಿ ವಾಸ್ತವವಾದ ನೆಲೆಯಲ್ಲಿ ಸೃಷ್ಟಿಗೊಂಡಿರುವುದು. ಮಕ್ಕಳ ಕಾಲ್ಪನಿಕ, ರೋಮಾಂಚಕತೆಗೆ, ರಂಜಕವಾದ ಕಣ್ಣಿಗೆ ಖುಷಿಕೊಡುವ ನಾಟಕಗಳನ್ನು ಕೈಬಿಟ್ಟು, ಮಕ್ಕಳ ಕಣ್ಣೆದುರಿಗೆ ನಡೆಯುವ, ಜೀವನದಲ್ಲಿ ಘಟಿಸುವ ಘಟನೆಗಳನ್ನು ನಾಟಕದ ಚೌಕಟ್ಟಿನೊಳಗೆ ತಂದು ರಂಗಭೂಮಿಯಲ್ಲಿ ಪ್ರಯೋಗಿಸಲಾಗುತ್ತದೆ. ಸುತ್ತುವರಿದ ಮಕ್ಕಳ ನಡುವೆ ನಾಟಕ ನಡೆಯುವಂತೆ ಮಾಡುವ ಮೂಲಕ ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿತು. ೧೯೬೯ರಲ್ಲಿ ನಡೆದ ಜರ್ಮನ್ ಸಮಾಜವಾದಿ ವಿದ್ಯಾರ್ಥಿ ಚಳವಳಿಯ 'ಅಧಿಕಾರ ವಿರೋಧಿ' ಧೋರಣೆ ಗ್ರಿಪ್ಸ್ ರಂಗಭೂಮಿಯ ಸ್ಫೂರ್ತಿ. ಈ ಚಳವಳಿಯ ಮುಖ್ಯ ಘೋಷಣೆ : "ಮೂವತ್ತಕ್ಕಿಂತ ಹೆಚ್ಚಿನ ಪ್ರಾಯದವರಾರನ್ನೂ ನಂಬಬೇಡಿ". ಇಂಥ ಪ್ರತಿಭಟನೆಯ ಹಿನ್ನೆಲೆಯಲ್ಲಿ ಹುಟ್ಟಿ ಕೊಂಡ ಗ್ರಿಪ್ಸ್ ರಂಗಭೂಮಿ ತನ್ನ ಪ್ರದರ್ಶನದೊಳಗೆ ಸಂಕೀರ್ಣ ಸಮಸ್ಯೆಯನ್ನು ತರುವುದರ ಜೊತೆಗೆ ಮಕ್ಕಳನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿತು.

ಶಿಕ್ಷಣದಲ್ಲಿ ರಂಗಭೂಮಿ (Theatre in Education): ಗ್ರಿಪ್ಸ್ ರಂಗಭೂಮಿಯಂತೆ ಶಿಕ್ಷಣದಲ್ಲಿ ರಂಗಭೂಮಿ ಇಂಗ್ಲೆಂಡಿನಲ್ಲಿ ತಲೆ ಎತ್ತಿತು. ಈ ಯೋಜನೆ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಗ್ರಿಪ್ಸ್ ರಂಗಭೂಮಿ ಜೊತೆ ಕೈಜೋಡಿಸಿತು. ಶಿಕ್ಷಣದಲ್ಲಿ ರಂಗಭೂಮಿಯು ಮಕ್ಕಳನ್ನು ನಾಟಕ ಮುಗಿದ ಮೇಲೆಯೂ ಕ್ರಿಯಾಶೀಲರಾಗುವಂತೆ ಮಾಡುತ್ತಾರೆ. ಹೇಗೆಂದರೆ, "ನಾಟಕದ ನಂತರ ಆ ತಂಡದ ನಟರು ಮತ್ತೆ ನಟರಾಗಿ ಮಕ್ಕಳೊಂದಿಗೆ ಮಾತಾಡುತ್ತಾರೆ. ನಿಧಾನವಾಗಿ ಈ ಸಮಸ್ಯೆಯ ಬಗ್ಗೆ ಮಕ್ಕಳು ಬಾಯಿ ಬಿಡುವಂತೆ ಮಾಡುತ್ತಾರೆ. ಚರ್ಚೆಯ ಸಂದರ್ಭದಲ್ಲಿ ಸಂಬಂಧಿತ ನಟರು ರಂಗದಿಂದ ಹೊರಬಂದಿದ್ದರೂ ನಟರಾಗಿಯೇ ಸಮಸ್ಯೆಗೆ ಕಾರಣ ಮತ್ತು ಪರಿಣಾಮಗಳನ್ನು ಗುರುತಿಸುವ

ಮನೋಬಲವನ್ನು ಹೆಚ್ಚಿಸಿಕೊಳ್ಳುತ್ತಾರೆ. ಒಬ್ಬರಿಗೊಬ್ಬರು ಪ್ರಶ್ನಿಸುವ ಮತ್ತು ಉತ್ತರಿಸುವ ಪ್ರಕ್ರಿಯೆ ಇಲ್ಲಿ ನಡೆಯುತ್ತವೆ.

ಭಾರತೀಯ ಸಂದರ್ಭದಲ್ಲಿ ನಟರು ಮಕ್ಕಳ ಇಮೇಜಿಗೆ ತಕ್ಕಂತೆ ನಟನೆ ಮಾಡುವುದೇ ಇಲ್ಲ. ಬೇಕಾದರೆ ಮುದುಕರ ಪಾತ್ರವನ್ನು ಸಲೀಸಾಗಿ ಮಾಡುತ್ತಾರೆ. ಒಂದು ವೇಳೆ ಮಕ್ಕಳ ಪಾತ್ರವನ್ನು ಮಾಡುವುದಾದರೆ ಅವರನ್ನು ದಡ್ಡರು ಅಥವಾ ಎಳಸು ಎಂಬಂತೆ ಬಿಂಬಿಸುತ್ತಾರೆ. ಈ ಸಮಸ್ಯೆಯನ್ನು ಗ್ರಿಪ್ಸ್ ರಂಗಭೂಮಿ ಪರಿಹರಿಸಿಕೊಂಡಿದೆ. ಗ್ರಿಪ್ಸ್ ಪ್ರಕಾರ ಮಕ್ಕಳು ಎಂದರೆ 'ದೊಡ್ಡವರ ಸಣ್ಣ ರೂಪ ಅಷ್ಟೆ' – ಹಾಗಾಗಿ ದೊಡ್ಡವರು ಮಕ್ಕಳ ಪಾತ್ರವನ್ನು ಸಲೀಸಾಗಿ ಮಾಡುವ ಧೋರಣೆಗಳನ್ನು ಹೊಂದುತ್ತಾರೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಕನ್ನಡ ಮಕ್ಕಳ ರಂಗಭೂಮಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಬೇಕಿದೆ. ಅಲ್ಲಲ್ಲಿ ಮಕ್ಕಳ ಕ್ರಿಯಾಶೀಲ ಚಟುವಟಿಕೆಗೆ ಮಕ್ಕಳನ್ನು ತೊಡಗಿಸುತ್ತಿದ್ದಾರೆ. ಉದಾ: ಬೇಸಿಗೆ ಶಿಬಿರ, ಮಕ್ಕಳ ಕೂಟ, ಪ್ರತಿಭಾ ಕಾರಂಜಿ. ಇಂತಹ ಕಾರ್ಯಕ್ರಮಗಳು ಕಾಲ್ಪನಿಕ ಪ್ರಪಂಚವನ್ನು ಮೀರಿದ್ದವಾಗಬೇಕು. ಮಕ್ಕಳು ವಾಸ್ತವವನ್ನು ಅರಿಯಲು ಕನ್ನಡದಲ್ಲಿ ಮಕ್ಕಳ ನಾಟಕಗಳು ಅಲ್ಲಲ್ಲಿ ಕಂಡುಬರುತ್ತವೆ. ಉದಾಹರಣೆಗೆ ದ.ರಾ. ಬೇಂದ್ರೆಯವರ 'ಮಕ್ಕಳು ಅಡುಗೆ ಮನೆ ಹೊಕ್ಕರೆ', ಟಿ.ಪಿ. ಕೈಲಾಸಂ ಅವರ 'ಟೊಳ್ಳು ಗಟ್ಟಿ'. ಇಂತಹ ನಾಟಕಗಳು ಸಮಾಜದ ವಾಸ್ತವ ನೆಲೆಗಟ್ಟನ್ನು ಬಿಚ್ಚಿಟ್ಟು ಮಕ್ಕಳನ್ನು ರಂಗಪ್ರಯೋಗಗಳಿಗೆ ಒಳಪಡಿಸಿ ಕಲಿಕೆಯ ಸುಧಾರಣೆಯಲ್ಲಿ ರಂಗಭೂಮಿ ಮಹತ್ವದ ಪಾತ್ರವಹಿಸುತ್ತದೆ. ಇನ್ನೂ ಪರಿಣಾಮಕಾರಿಯಾಗಿ ಮುಂದುವರಿಯ ಬೇಕಾದರೆ ಮಕ್ಕಳ ರಂಗಭೂಮಿ ಎಲ್ಲಾ ವರ್ಗದ ಮಕ್ಕಳಿಗೂ ತಲುಪುವಂತದ್ದಾಗಬೇಕು. ಈ ನಿಟ್ಟಿನಲ್ಲಿ ಮಕ್ಕಳ ರಂಗಭೂಮಿ ತಿರುಗಾಟದ ಪ್ರಕ್ರಿಯೆಯಾಗಿ ಕಲಿಕಾ ಮಾಧ್ಯಮವಾಗಿ ರಂಗಭೂಮಿಯನ್ನು ಎಲ್ಲಾ ವರ್ಗದ ಮಕ್ಕಳಿಗೆ ತಲುಪುವಂತೆ ಮನಸ್ಸು ಮಾಡುವ ಅನಿವಾರ್ಯ ಇಂದಿನ ದಿನಗಳಲ್ಲಿ ಅವಶ್ಯವಾಗಿದೆ.

ಒಟ್ಟಿನಲ್ಲಿ ಮಕ್ಕಳ ರಂಗಭೂಮಿ ಮೋಜಿನ ಲೋಕ, ಕೊನೆಯಿಲ್ಲದ ಕುತೂಹಲಗಳ, ಗ್ರಹಣ, ಸೂಕ್ಷ್ಮತೆಗಳ ಒಂದು ವಿಸ್ತರಣಾ ರೂಪ. ಇದು ಕಲಿಕಾ ಮಾಧ್ಯಮವಾಗಿ ನಾಟಕದೊಳಗಿನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮಕ್ಕಳು ಒಪ್ಪಿಕೊಳ್ಳುವ, ಅದಕ್ಕೆ ನಿರ್ವಂಚನೆಯಿಂದ ಬದ್ಧರಾಗುವ ಪರಿಯೇ ಒಂದು ಅತ್ಯಂತ ರಂಜನೀಯವಾದ ಶಿಕ್ಷಣ ಮಾಧ್ಯಮ. ಇಲ್ಲಿ ಭಿನ್ನತೆಯನ್ನು ಸಹಿಸಿಕೊಳ್ಳುವ ಸಹನೆಯ ಪಾಠವಿದೆ. ಯಾವುದೋ ಒಂದು ಉದ್ದೇಶದ ಸಾಧನೆಗೆ ಅಂತರವನ್ನು ಮೀರಿ, ಆಪ್ತರಾಗಿ ಹೃದಯ ವೈಶಾಲ್ಯರಾಗುವ ಪಾಠವಿದೆ. ಒಂದು ಚಿಕ್ಕ ಪಾತ್ರಕ್ಕೂ ಘನತೆ ತುಂಬುವ ಶಕ್ತಿ ಇದೆ. ಇತರರ ಅನನ್ಯತೆಯನ್ನು ಪ್ರಶಂಸಿಸುವ ಪಾಠ ಇದೆ. ಇವೆಲ್ಲವುಗಳನ್ನು ಕಲಿಸಿಕೊಡುವ ರಂಗಭೂಮಿ ಶಿಕ್ಷಣದ ಒಂದು ಸೃಜನಶೀಲ ಮೂಲ. ಇದೇ ಒಂದು ಸಶಕ್ತ ಶಿಕ್ಷಣ ಮಾಧ್ಯಮ ಎಂದರೂ ತಪ್ಪಾಗಲಾರದು.

ಪರಾಮರ್ಶನ ಗ್ರಂಥಗಳು

1. ಆನಂದ ವಿ. ಪಾಟೀಲ – **ಮುಗುಳು** ಅಭಿನವ ಪ್ರಕಾಶನ, ಬೆಂಗಳೂರು, 2012
2. ಆನಂದ ವಿ. ಪಾಟೀಲ – **ಅಲರು** ಅಭಿನವ ಪ್ರಕಾಶನ, ಬೆಂಗಳೂರು, 2010
3. ಕಿರಣ ಭಟ್ – **ಮಕ್ಕಳ ರಂಗಭೂಮಿ** ದಿ ಚೇತನಾ ಪ್ರಿಂಟಿಂಗ್ ಮತ್ತು ಪಬ್ಲಿಕೇಷನ್ ಶಿರಸಿ, 2001
4. ಗಣಪತಿ ಭಟ್ – **ಲೈಫ್ 360,** ಸಂಚಿಕೆ – 12, ಏಪ್ರಿಲ್ 2014
5. ಗಜಾನನ ಶರ್ಮ ಕಶ್ಯಪ್ ಎಸ್.ವಿ. – **ಮಕ್ಕಳ ರಂಗಭೂಮಿ** ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು, 2011
6. ನಿಂಗು ಸೊಲಗಿ – **ಮಕ್ಕಳ ರಂಗಭೂಮಿ : ಪ್ರದರ್ಶನ ಮತ್ತು ಪ್ರಕ್ರಿಯೆ** ಚಿಲಿಪಿಲಿ ಪ್ರಕಾಶನ, ಧಾರವಾಡ 2013
7. ಸಬಿಹಾ ಭೂಮಿಗೌಡ – **ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ** ಡಾ. ಕೆ. ಶಿವರಾಂ ಕಾರಂತ ಪೀಠ ಮಂಗಳೂರು, 2009
8. ವಾಮದೇವಪ್ಪ ಎಚ್.ವಿ. – **ಶೈಕ್ಷಣಿಕ ಮನೋವಿಜ್ಞಾನ** ಶ್ರೇಯಸ್ ಪಬ್ಲಿಕೆಷನ್, ದಾವಣಗೆರೆ, 2007

ಸಾರಾ ಅಬೂಬಕರ ಕತೆಗಳಲ್ಲಿ ದಲಿತ ಸಂವೇದನೆ

ಮಹದೇವ ನಾಯಕ. ಎಚ್.ಇ
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.,
Email. mahadevnayak@yahoo.com

ಸಾರಾ ಅಬೂಬಕರು ಮೂಲತಃ ಮುಸ್ಲೀಂ ಸಂವೇದನೆಯ ಬರಹಗಾರರು. ಇವರು ತಮ್ಮ ಸುತ್ತ ಮುತ್ತಲಿನ ಪರಿಸರದಲ್ಲಿ ಸಂದರ್ಭದಲ್ಲಿ ಘಟಿಸಿದ ಘಟಾನಾವಳಿಗಳನ್ನು ಕಥಾವಸ್ತುವಾಗಿಸಿಕೊಂಡು ಕೃತಿ ರಚಿಸಿದವರು. ಇವರ ಬಹುತೇಕ ಕತೆಗಳಲ್ಲಿ ಮುಸ್ಲೀಂ ಸಮುದಾಯದಲ್ಲಿ ಕಂಡುಬರುವ ನಂಬಿಕೆ, ಸಂಪ್ರದಾಯ, ಆಚರಣೆಯಲ್ಲಿರುವ ಮೌಢ್ಯತೆಯನ್ನು ಒಡೆಯುವ ಪ್ರಯತ್ನ ಮಾಡಿದ್ದಾರೆ. ಸಾರಾ ಅವರ 'ಚಪ್ಪಲಿಗಳು' ಎಂಬ ಕಥಾಸಂಕಲನದಲ್ಲಿ ಬರುವ 'ನಿಮ್ಮೊಡನಿದ್ದೂ' ಕತೆಯು ದಲಿತ ಸಂವೇದನೆಯನ್ನೊಳಗೊಂಡದೆ. ಸಾಮಾಜಿಕ ವ್ಯವಸ್ಥೆಯೊಳಗೆ ಜಾತಿ, ಧರ್ಮಗಳ ಕಾರಣದಿಂದ ಮನುಷ್ಯ ಮನುಷ್ಯನನ್ನು ಕೀಳಾಗಿ ಕಾಣುವ, ಸಾಮಾಜಿಕ ಅಸಮಾನತೆಯನ್ನು ಪ್ರತಿಬಿಂಬಿಸುವ ನೆಲೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ.

ಸಮಾಜದ ಅತ್ಯಂತ ಕೆಳವರ್ಗದ ಬಡವರ, ಅನಕ್ಷರಸ್ಥರ ಮೇಲೆ ಶೋಷಣೆ, ದೌರ್ಜನ್ಯ, ದಬ್ಬಾಳಿಕೆಗಳು ನಿರಂತರ ನಡೆಯುತ್ತಿರುವುದು ಸತ್ಯ

ಸಂಗತಿ. ಆದರೆ ಸುಸಂಸ್ಕೃತರು, ಅಕ್ಷರಸ್ಥರು, ಸಮಾಜದಲ್ಲಿ ಉನ್ನತ ಹುದ್ದೆಯಲ್ಲಿದ್ದು, ಶ್ರೇಣಿಕೃತ ವ್ಯವಸ್ಥೆಯಲ್ಲಿ ಉತ್ತಮ ನಾಗರೀಕರೆನಿಸಿಕೊಂಡವರೂ ಜಾತಿಯ ಕಾರಣದಿಂದ ಶೋಷಣೆಗೆ ಒಳಗಾಗುವ ಸನ್ನಿವೇಶವನ್ನು ವಿಭಿನ್ನ ದೃಷ್ಟಿಕೋನದಿಂದ ನಿರ್ವಚಿಸಿರುವುದು ಲೇಖಕರ ಸೂಕ್ಷ್ಮ ಸಂವೇದನೆಯ ಮನಸ್ಥಿತಿಯನ್ನು ಧ್ವನಿಸುತ್ತದೆ. ಮೇಲು–ಕೀಳು, ಬಡವ–ಶ್ರೀಮಂತ, ಪುರಷ್ಕೃತರು–ತಿರಷ್ಕೃತರು ಎಂಬ ತಾರತಮ್ಯವನ್ನು ಬಿಟ್ಟು ಪರಸ್ಪರ ಸೌಹಾರ್ದತೆ, ಸಹಬಾಳ್ವೆ, ಸಹೋದರತೆ, ಸಮಾನತೆಯಿಂದ ನಾಗರೀಕ ಸಮಸಮಾಜದ ನಿರ್ಮಾಣ ಸಾಧ್ಯ ಎಂಬುದನ್ನು ಹಾಗೂ ಸಾಮಾಜಿಕ ಬದಲಾವಣೆಯ ಆಶಯವನ್ನು ಲೇಖನವು ಪ್ರಸ್ತುತಪಡಿಸುತ್ತದೆ. ಶೋಷಣೆಯೆಂಬುದು ಎಲ್ಲ ವಲಯದಲ್ಲಿಯೂ, ವಿಭಿನ್ನ ಸ್ಥರಗಳಲ್ಲಿ ಹೇಗೆ ಕಂಡುಬರುತ್ತದೆ ಹಾಗಿಯೇ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಕೀಳಿರಿಮೆಯನ್ನು ಹೋಗಲಾಡಿಸಬಹುದು ಎಂಬ ಮಾರ್ಮಿಕ ಸತ್ಯವನ್ನು ಸೂಚ್ಯವಾಗಿ ತಿಳಿಸುವುದು ಲೇಖನದ ಉದ್ದೇಶವಾಗಿದೆ.

ಸಾರಾ ಅಬೂಬಕರರು ಮುಸ್ಲಿಂ ಮಹಿಳಾ ಲೇಖಕಿಯರಲ್ಲಿ ಆದ್ಯರು. ಶಿಕ್ಷಣದಿಂದ ವಂಚಿತರಾಗಿದ್ದ, ಹಿಂದುಳಿದ ಸಮುದಾಯದಿಂದ ಅಕ್ಷರಲೋಕಕ್ಕೆ ತೆರೆದುಕೊಂಡು ತಮ್ಮ ಸಮುದಾಯದ ಆಸೆ, ಆಕಾಂಕ್ಷೆ, ನೋವು–ನಲಿವು, ಆಚಾರ–ವಿಚಾರ, ನಂಬಿಕೆ–ಸಂಪ್ರದಾಯದ ಅನುಭವವನ್ನು ಬರವಣಿಗೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಅದರಲ್ಲಿಯೂ ಮುಸ್ಲಿಂ ಸಮುದಾಯದಲ್ಲಿ ಬೇರೂರಿದ್ದ ಹಲವಾರು ಮೌಢ್ಯತೆಗಳನ್ನು ತಮ್ಮ ಮೊನಚಾದ ಬರವಣಿಗೆಯ ಮೂಲಕ ಖಂಡಿಸಿದ್ದಾರೆ. ಅಲ್ಲದೆ ಇವರ ಬಹುತೇಕ ಕಥೆಗಳಲ್ಲಿ ಸಾಮಾಜಿಕ ಬದಲಾವಣೆಯ ಸಾಧ್ಯತೆಗಳನ್ನು ನಿರ್ವಚಿಸಿರುವುದು ಅವರ ಪ್ರಬುದ್ಧ ಬರವಣಿಗೆಯನ್ನು ಧ್ವನಿಸುತ್ತದೆ. ವಾಸ್ತವ ಸಂಗತಿಗಳನ್ನು ತಮ್ಮ ಕಥಾವಸ್ತುವಾಗಿಸಿಕೊಂಡು ಕೃತಿ ರಚಿಸುವುದರಲ್ಲಿ ಸಿದ್ಧಹಸ್ತರು. ಜಾತಿ, ಧರ್ಮ, ಸಂಪ್ರದಾಯದ ಆಚೆಗೆ ನಿಂತು ವಸ್ತುನಿಷ್ಠ, ಸತ್ಯ ಸಂಗತಿಗಳ ವಿಚಾರ ಮಂಥನ ಸಾರಾ ಅವರ ಬರವಣಿಗೆಯ ವೈಶಿಷ್ಟ್ಯವೆಂದೇ ಹೇಳಬೇಕು. ಅವರೇ ಹೇಳುವಂತೆ "ಹಿಂದಿನ ಕಾಲದಲ್ಲಿ ಕಥೆ, ಕಾದಂಬರಿಗಳು ಕೇವಲ ಕಾಲ್ಪನಿಕ ವಸ್ತುಗಳನ್ನಾಧರಿಸುತ್ತಿದ್ದವು. ಅವುಗಳನ್ನು ಕಟ್ಟುಕಥೆಗಳೆಂದೇ ಕರೆಯುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ನಾವು ಕಂಡದ್ದನ್ನೇ ಕಥೆಯಾಗಿ ಹೆಣೆದು ಓದುಗರ ಮುಂದಿಡಬೇಕಾಗುತ್ತದೆ"[1] (ಸಾ.ರಾ.ಅ. ಸಮಗ್ರ ಕಥೆಗಳು ಭಾಗ–೨ ಹಿನ್ನುಡಿಯಿಂದ) ಎಂಬ ಮಾತುಗಳು ಅವರ ಕೃತಿಗಳಲ್ಲಿ ಅಕ್ಷರಶಃ ಮೂಡಿಬಂದಿವೆ. ಇವರು ಗೊಡ್ಡು ಸಂಪ್ರದಾಯವನ್ನು ಒಡೆಯಲು ಪ್ರಯತ್ನಿಸಿದ್ದಾರೆ, ಮಹಿಳಾ ಪರ ಚಿಂತಕರಾಗಿ, ಸ್ತ್ರೀ ಸಂವೇದನೆಯ ಬರಹಗಾರರಾಗಿ, ವ್ಯವಸ್ಥೆಯನ್ನು ಖಂಡಿಸುವ ಹೋರಾಟಗಾರರಾಗಿ, ಮಾನವೀಯ ಮೌಲ್ಯಗಳನ್ನು ಬದುಕು ಮತ್ತು ಬರಹದಲ್ಲಿ ಅಳವಡಿಸಿಕೊಂಡಿರುವ ಧೀಮಂತ ಉದಾತ್ತ ಮಹಿಳಾ ಲೇಖಕಿಯರಲ್ಲಿ ಸಾರಾ ಅವರು ಒಬ್ಬರು.

ಇವರು ಹಲವಾರು ಕಥೆ, ಕಾದಂಬರಿಗಳನ್ನು ಬರೆದಿದ್ದಾರೆ. ಬಹುತೇಕ ಬರಹ ಮುಸ್ಲಿಂ ಸಮುದಾಯದ ಸುತ್ತ ಹೆಣೆಯಲ್ಪಟ್ಟವುಗಳಾಗಿದ್ದು, ಕೆಲವೊಂದು ಕಥೆಗಳು ವಿಭಿನ್ನ ದೃಷ್ಟಿಕೋನದಿಂದ ಸಾಮಾಜಿಕ ವ್ಯವಸ್ಥೆಯೊಳಗಿನ ಅವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗುರುತಿಸಿರುವುದು ಅವರ ಪ್ರೌಢತ್ವಕ್ಕೆ ಸಾಕ್ಷಿಯಾಗಿದೆ. ಅಂತಹ ಸಾಲಿಗೆ 'ನಿಮ್ಮೊಡನಿದ್ದೂ' ಎಂಬ ಕಥೆಯು ಸೇರುತ್ತದೆ. ಈ ಕಥೆಯು ಅವರ 'ಚಪ್ಪಲಿಗಳು' ಎಂಬ ಕಥಾಸಂಕಲನದಲ್ಲಿ ಮೂಡಿಬಂದಿದೆ. ಇದರಲ್ಲಿ ದಲಿತ ಸಂವೇದನೆಯ ನೆಲೆಗಳನ್ನು ಹಿಡಿದಿಟ್ಟಿದ್ದಾರೆ. ಸಾಮಾನ್ಯವಾಗಿ ದಲಿತರು, ಶೋಷಿತರು, ಹಿಂದುಳಿದವರು ಎಂಬ ಪಟ್ಟ ಸಮಾಜದಲ್ಲಿ ಅತ್ಯಂತ ಕೆಳಸ್ಥರದ ಸಾಮಾನ್ಯ ಜನಜೀವನದಲ್ಲಿ ಕಂಡುಬರುವುದು ಸಾಮಾನ್ಯ ಸಂಗತಿ. ಆದರೆ ಶಿಕ್ಷಿತರು, ವಿದ್ಯಾವಂತರು, ಸಮಾಜದಲ್ಲಿ ಉನ್ನತ ಹುದ್ದೆಯಲ್ಲಿದ್ದು ಸುಸಂಸ್ಕೃತರೆನಿಸಿಕೊಂಡವರೂ ಇಂತಹ ಅವಮಾನಕ್ಕೆ ಒಳಗಾಗುವ ಹಾಗೂ ಒಳಗು ಮಾಡುವ ಜನರ ಹುನ್ನಾರವನ್ನು ಬಿಚ್ಚಿಟ್ಟಿರುವ ಕ್ರಮ ಔಚಿತ್ಯಪೂರ್ಣವಾದುದು.

ನಗರದ ಜನಜೀವನದ ಸ್ಥಿತಿಗತಿಯನ್ನು ವಿಭಿನ್ನ ದೃಷ್ಟಿಕೋನ ಹಾಗೂ ದಲಿತ ಸಂವೇದನೆಯ ಆಂತರ್ಯದಿಂದ ಕಟ್ಟಿಕೊಟ್ಟಿರುವುದು ಸಾರಾ ಅವರ ಸಮಗ್ರ ಚಿಂತನಾಶೀಲತೆಗೆ ಹಿಡಿದ ಕನ್ನಡಿಯಂತಿದೆ. ಕಥೆಯ ಕೇಂದ್ರಬಿಂದು ಸುಕುಮಾರ ಹಾಗೂ ಲಲಿತಾ. ಸುಕುಮಾರ, ರಾಜಣ್ಣ ಹಾಗೂ ಇಮ್ತಿಯಾಜರು ಮೂರು ಜನ ವೈದ್ಯರಾಗಿ ಒಂದೇ ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ. ಹಾಗೆ ಆಪ್ತರೂ ಸಹ ಆಗಿದ್ದರು. ಪ್ರತ್ಯೇಕ ಕ್ಲಿನಿಕ್‌ಗಳು ಇದ್ದವು. ರಾಜಣ್ಣ ಆರ್ಥಿಕವಾಗಿ ಪ್ರಬಲವಾಗಿದ್ದ. ನಗರದ ಒಂದು ಸರ್ಕಾರಿ ಮನೆಗಳಿರುವ ಬಡಾವಣೆಯಲ್ಲಿ ಎಲ್ಲಾ ದರ್ಜೆಯ ಅಧಿಕಾರಿಗಳು ಅವರವರ ದರ್ಜೆಗನುಗುಣವಾಗಿ ಮನೆಗಳು ನಿರ್ಮಾಣವಾಗಿದ್ದವು. ಅಲ್ಲಿ ಬ್ರಾಹ್ಮಣರು, ಲಿಂಗಾಯತರು, ಒಕ್ಕಲಿಗರು, ಕ್ರೈಸ್ತರು, ಮುಸ್ಲಿಂರು ಹೀಗೆ ಎಲ್ಲಾ ಜಾತಿ, ಧರ್ಮದ ಜನರಿದ್ದ ಬಡಾವಣೆ ಅದಾಗಿತ್ತು. ಮೇಲ್ವರ್ಗದ ಜನರಿರುವ ಬಡಾವಣೆಯಲ್ಲಿ ಈ ಮೂರೂ ಜನ ಸ್ನೇಹಿತರು ವಾಸವಾಗಿದ್ದರು. ಅಕ್ಕಪಕ್ಕದ ಮನೆಯಾಗಿತ್ತು. ಅದರಲ್ಲಿ ದಲಿತನಾದ ಸುಕುಮಾರನ ಮನೆಯೂ ಒಂದು. ಇದೊಂದು ಜಾತ್ಯಾತೀತ ರಾಷ್ಟ್ರ. ವಿಕತೆಯಲ್ಲಿ ಐಕ್ಯತೆಯನ್ನು ಸಾರುವ ಭಾರತದ ನೀತಿಗೆ ಸಾಕ್ಷಿಯೆಂಬಂತಿತ್ತು.

ಹೊಸದಾಗಿ ಮದುವೆಯಾಗಿದ್ದ ಸುಕುಮಾರನು ಲಲಿತಳನ್ನೂ ಆ ಮನೆಗೆ ಕರೆತಂದು ಹೇಗಿದೆ ಎಂದು ಕೇಳಿದನು. ಅದಕ್ಕೆ ಲಲಿತ "ಇದು ನನ್ನ ಕನಸಿನ ಮನೆಯೇನೋ ಹೌದು. ಆದರೆ ಈ ಮೇಲ್ಜಾತಿಯವರ ಮಧ್ಯದಲ್ಲಿ ಹಗಲೆಲ್ಲಾ ನಾನೊಬ್ಬಳೇ ಇರಲು ಭಯವಾಗುತ್ತಿದೆ. ಇನ್ನೆಲ್ಲಾದರೂ ನಮ್ಮವರೇ ಇರುವ ಕಡೆ ಮನೆ ಮಾಡಿದರಾಗದೇ?"[2] (ಪುಟ. 138) ಎಂದು ಕೇಳುವಾಗ ಎಲ್ಲೋ ಒಂದು ಕಡೆ ನಾನು ಕೆಳಸ್ತರದಿಂದ ಬಂದವಳು ಎಂಬ ಕೀಳರಿಮೆ ಲಲಿತಾಳಲ್ಲಿ ಮನೆಮಾಡಿತ್ತು. ಇದು ದಲಿತರ ದುರಂತವೆಂದೇ ಹೇಳಬೇಕು. ಮೊದಲಿಗೆ ನಾವು ಕೀಳು, ಅವರು ಮೇಲು ಎಂಬ ಭಾವನೆಯನ್ನು ಮನಸ್ಸಿನಿಂದ ಕಿತ್ತೊಗೆಯಬೇಕು. ಅಂತಹ ಆಲೋಚನೆಗಳು ಬಂದಾಗಲೇ ಇಂತಹ ಶೋಷಣೆಗೆ ಎಡೆ ಮಾಡಿಕೊಟ್ಟಂತಾಗುತ್ತದೆ. ಕೆಳವರ್ಗದ ಜನರಲ್ಲಿ ಶತಶತಮಾನಗಳಿಂದಲೂ ಇಂತಹ ಆಲೋಚನೆಗಳು ಮನಸ್ಸಿನಲ್ಲಿ ಬೇರೂರುವಂತೆ ಇಲ್ಲಿನ ವ್ಯವಸ್ಥೆ ಉಂಟುಮಾಡಿದೆ. (ಇಂದಿಗೂ) 21ನೇ ಶತಮಾನದಲ್ಲಿಯೂ ಸಂಪೂರ್ಣವಾಗಿ ಇಂತಹ ಕೀಳರಿಮೆಯ ಮನೋಭಾವವನ್ನು ಹೋಗಲಾಡಿಸಲಾಗಿಲ್ಲವೆಂಬುದು ದುಸ್ತರವೇ ಸರಿ. ಅಂತಹ

ಮೇಲು ಕೀಳು ಎಂಬ ಭಾವನೆಯನ್ನು ಬಿಡುವ ಮನಸ್ಥಿತಿ ಉಂಟಾಗುವ ವರೆಗೂ ಇಂತಹ ಅಪಮಾನ, ಅವಮಾನ, ಶೋಷಣೆಗಳು ನಿರಂತರ ವಾಗಿ ನಡೆಯುತ್ತಿರುತ್ತವೆ. ಆದ್ದರಿಂದ ಸ್ವಾಮಿ ವಿವೇಕಾನಂದರ ವಾಣಿಯನ್ನು ಬದಲಿಸಿ "ದಲಿತ ಜನರೇ ಎದ್ದೇಳಿ. ನಾವು ಮನುಜರು, ನಾವೆಲ್ಲರೂ ಒಂದೇ ಎಂಬ ಮನಸ್ಥಿತಿ, ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಿ" ಎಂಬ ವಾಣಿಯ ಅಗತ್ಯವಿದ್ದಂತೆ ಕಾಣುತ್ತದೆ. 'ಎಲ್ಲಿಯವರೆಗೆ ಕೀಳೆಂಬ ಮನೋವೈಷಮ್ಯ ಬಿಡುವುದಿಲ್ಲವೋ ಅಲ್ಲಿಯವರೆಗೂ ದಲಿತರ ಉದ್ಧಾರ ಸಾಧ್ಯವಿಲ್ಲ' ಎಂಬುದು ಸರ್ವ ಸತ್ಯ. ಆದ್ದರಿಂದ ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ.

ರಾಜಣ್ಣನ ಹೆಂಡತಿಯ ಸೀಮಂತ ಸಮಾರಂಭಕ್ಕೆ ತಮ್ಮನ್ನು ಆಮಂತ್ರಿಸು ತ್ತಾರೆ ಎಂಬ ಸುಕುಮಾರನ ನಂಬಿಕೆ, ವಿಶ್ವಾಸಕ್ಕೆ ಧಕ್ಕೆಯುಂಟಾಗುವ ಪ್ರಸಂಗ ನಡೆಯಿತು. ರಾಜಣ್ಣನ ಪರಿವಾರ ಸಮಾರಂಭಕ್ಕೆ ಎಲ್ಲರನ್ನು ಆಮಂತ್ರಿಸಿ, ಸುಕುಮಾರನ ಕುಟುಂಬವನ್ನು ನಿರಾಕರಿಸುತ್ತಾರೆ. ಇದರಿಂದ ಸುಕುಮಾರನ ನಂಬಿಕೆ, ವಿಶ್ವಾಸ, ಸ್ನೇಹಕ್ಕೆ ದೊಡ್ಡ ಪೆಟ್ಟು ಬಿದ್ದಂತಾಯಿತು. ಲಲಿತಾಳ ಮಾತುಗಳು ಅರ್ಥಗರ್ಭಿತವಾಗಿತ್ತು. "ಈ ಮೇಲ್ಜಾತಿಯವರು ಅಷ್ಟು ಸುಲಭವಾಗಿ ತಮ್ಮ ಹಿಡಿತ ಸಡಿಲಿಸುತ್ತಾರೆಂದುಕೊಂಡಿರಾ? ತಮ್ಮೆಡೆಯಲ್ಲೇ ನಮ್ಮನ್ನು ಬದುಕಲು ಬಿಟ್ಟರೂ ನಮ್ಮನ್ನು ಹೇಗೆ ದೂರವಿಡಬೇಕೆಂಬುದು ಈ ಜನರಿಗೆ ಚೆನ್ನಾಗಿ ಗೊತ್ತು!"[3] (ಪು. 142) ಎಂಬ ಲಲಿತಾಳ ಮಾತು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯ ಪ್ರತಿಬಿಂಬದಂತಿದೆ. 'ವಂದಗೆ ಉಂಡರೂ, ಅವರೆಕಾಳು ತಿನ್ನಬೇಡ' ಎಂಬ ಗಾದೆಮಾತಿನಂತೆ ಮೇಲ್ವರ್ಗದವರ ನಡತೆ ಗೋಚರಿಸುತ್ತದೆ. ನಮ್ಮ ಜೊತೆಯಲ್ಲಿಯೇ ಇರುತ್ತಾರೆ, ಚೆನ್ನಾಗಿ ಮಾತನಾಡಿಸುತ್ತಾರೆ, ಆದರೂ ಮೇಲು ಕೀಳೆಂಬ ಭಾವನೆಯನ್ನು ಹೊಂದಿರುತ್ತಾರೆ. ತಮ್ಮ ಮನೆಯ ಸಮಾರಂಭ, ಹಬ್ಬ, ಪೂಜೆಗಳಿಗೆ ಕರೆಯದೆ ದೂರವಿಡುವ ಹಾಗೂ ಇದರಿಂದ ನಾವು ತಿರಸ್ಕರಿಸಿದವರೆ ಎಂಬ ಭಾವನೆ ಮೂಡುವಂತೆ ನಡೆದುಕೊಳ್ಳುತ್ತಾರೆ. ಇದು ಇಂದಿಗೂ ನಡೆದುಕೊಂಡು ಬರುತ್ತಿರುವುದು ಸಾಮಾಜಿಕ ಅಸಮಾನತೆಯನ್ನು ಧ್ವನಿಸುತ್ತದೆ.

ಇಷ್ಟಾದರೂ ಸುಕುಮಾರನಲ್ಲಿ ನಂಬಿಕೆ ಇನ್ನೂ ಜೀವಂತವಾಗಿತ್ತು. ಹೆಂಗಸರು ಬರದಿದ್ದರೇನಾಯಿತು ತನ್ನ ಸ್ನೇಹಿತನಾದ ರಾಜಣ್ಣ ಬಂದೇ ಬರುತ್ತಾನೆ, ಸಮಾರಂಭಕ್ಕೆ ಕರೆಯುತ್ತಾನೆ ಎಂಬ ಅಚಲ ನಂಬಿಕೆ ಸುಕುಮಾರನದ್ದಾಗಿತ್ತು. ಆದರೆ ರಾಜಣ್ಣ ಮನೆಯ ಮುಂದೆ ಬಂದರೂ ಇವರನ್ನು ಆಹ್ವಾನಿಸದೆ ಹೋಗುತ್ತಾನೆ. ಆಗ ಸುಕುಮಾರ "ನೀನಂತಿದ್ದು ನಿಜ ಕಣೆ, ನಮ್ಮನ್ನು ಹೇಗೆ ಹೊರಗಿಡಬೇಕೆಂದು, ನಮ್ಮಲ್ಲಿ ಯಾವ ರೀತಿ ಕೀಳರಿಮೆ ಬೆಳೆಸಬೇಕೆಂದು ಈ ಜನರಿಗೆ ಚೆನ್ನಾಗಿ ಗೊತ್ತು. ಈ ಜನರ ಪಾಲಿಗೆ ನಾವು ತಉರಿಕೆಯ ಗಿಡಗಳು"[4] (ಪು. 142) ಎಂಬ ಅಸಹಾಯಕ ಮಾತುಗಳು ಎಲ್ಲ ದಲಿತ ಮನಸ್ಸನ್ನು ಕಲಕುವಂತದ್ದಾ ಗಿರುತ್ತದೆ. ಶೋಷಣೆಗಳು ಅನುಭವವೇ ಇಲ್ಲದವನಿಗೆ ಮೇಲ್ವರ್ಗದವರ ಈ ವರ್ತನೆ ನಿಜಕ್ಕೂ ಕೀಳರಿಮೆಯನ್ನು ಉಂಟುಮಾಡಿತು.

ಇಂತಹ ಅವಮಾನ, ಅಪಮಾನ, ನಿಂದನೆ, ಶೋಷಣೆಯಿಂದ ನೊಂದು ಬೆಂದ ಜೀವ ಅದನ್ನು ಮರೆಯಲು ಕುಡಿತಕ್ಕೆ ಶರಣಾಗುತ್ತಾನೆ. ಕುಡಿದು ಬಂದ ಸುಕುಮಾರ "ಹೂಂ...ಹೌದು, ನಾನು...ಹೊಲೆಯ ನೀನು, ನಿಮ್ಮಪ್ಪ, ನಿಮ್ಮಮ್ಮ...ಎಲ್ಲರೂ ಹೊಲೆಯರು. ಎಲ್ಲರನ್ನೂ...ಗುಂಡಿಟ್ಟು ಸುಟ್ಟಿಡ್ತೀನಿ, ನೀನು... ನೀವ್ಯಾವೋಳು ನನ್ನ...ತಡೆಯೋಕೆ...ಹೌದು ಕುಡಿತೀನಿ. ನಿನ್ನಪ್ಪನ ಗಂಟಲ್ಲ...ತಿಳಿತಾ"[5] (ಪು. 143) ಎಂಬ ಅಸಹಾಯಕ ಸ್ಥಿತಿ ತಲುಪುತ್ತಾನೆ. ಸಮಾಜದ ಕ್ರೂರ ವ್ಯವಸ್ಥೆಯ ಮೇಲಿನ ಸಿಟ್ಟನ್ನು ತನ್ನ ಹೆಂಡತಿಗೆ ಒಡೆಯುವ, ಕುಡಿತಕ್ಕೆ ಶರಣಾಗುವುದರ ಮೂಲಕ ಮೂಕಧ್ವನಿಯಾಗಿ ನಿಲ್ಲುತ್ತಾನೆ. ಜೀವನವೇ ಬೇಡ ಎಂಬ ತಾತ್ಸಾರಕ್ಕೆ ಒಳಗಾಗಿ ಬೇರೆ ಕಡೆ ವರ್ಗಾವಣೆಗೆ ಪ್ರಯತ್ನಿಸುತ್ತಾನೆ. ಇದನ್ನು ಅರಿತ ಇಮ್ತಿಯಾಜನು ಸಮಾಧಾನದ ಮಾತನ್ನಾಡಿ ಅವರ ಕೀಳರಿಕೆಯನ್ನು ಹೋಗಲಾಡಿಸಲು ಪ್ರಯತ್ನಿಸುತ್ತಾನೆ.

ಸುಕುಮಾರನ ಮನಸ್ಥಿತಿಯನ್ನು ತಿಳಿದಿದ್ದ ಇಮ್ತಿಯಾಜ್ ಬಕ್ರಿದ್ ಹಬ್ಬಕ್ಕೆ ಸುಕುಮಾರ ದಂಪತಿಗಳನ್ನು ಊಟಕ್ಕೆ ಆಹ್ವಾನಿಸುತ್ತಾನೆ. ಎಲ್ಲರೂ ಒಟ್ಟಾಗಿ ಕುಳಿತು ಭೋಜನ ಮಾಡುತ್ತಿರುವಾಗ ಇಮ್ತಿಯಾಜನು ಸುಕುಮಾರನನ್ನು ಕುರಿತು ಕೆಲವು ಧೈರ್ಯದ ಮಾತುಗಳನ್ನಾಡುತ್ತಾನೆ. ಸುಕುಮಾರನ ವರ್ಗಾವಣೆಯ ವಿಷಯ ಪ್ರಸ್ತಾಪಿಸಿ, ಸಮಸ್ಯೆಗೆ ಹೆದರಿ ದೂರ ಹೋದರೆ ಸಮಸ್ಯೆ ಬಗೆಹರಿಯುವುದೆ "ಈಸಬೇಕು ಇದ್ದು ಜೈಸಬೇಕು" ಇದು ನಿಮ್ಮೊಬ್ಬರ ಸಮಸ್ಯೆಯಲ್ಲ, ಇಡೀ ಸಮಾಜದ ಸಮಸ್ಯೆ. ದೂರ ಹೋಗುವುದಕ್ಕಿಂತ ಇಲ್ಲೆ ಇದ್ದು 'ಕ್ರಿಯಾತ್ಮಕವಾಗಿ ಏನನ್ನಾದರೂ ಮಾಡಿ' ಎಂದು ಗೆಳೆಯನಿಗೆ ಸಲಹೆ ನೀಡುತ್ತಾನೆ. ಇಮ್ತಿಯಾಜನ ಪಾತ್ರ ಸಾಮಾಜಿಕ ಬದಲಾವಣೆಯ ಆಶಯವನ್ನು ಪ್ರತಿನಿಧಿಸುತ್ತದೆ. ಪರಸ್ಪರ ಸಹಕಾರ, ಸಹಬಾಳ್ವೆ, ಸೌಹಾರ್ದತೆ, ಪ್ರೀತಿ, ವಿಶ್ವಾಸದಿಂದ ಮನುಷ್ಯನ ವ್ಯಕ್ತಿತ್ವವನ್ನು ಉತ್ತಮಪಡಿಸಬಹುದು. ಮೇಲು ಕೀಳೆಂಬ ಭೇದ ಭಾವವನ್ನು ಹೋಗಲಾಡಿಸಲು ಇಂತಹ ಮಾನವೀಯ ಮೌಲ್ಯಗಳ ಅಗತ್ಯ ಇಂದಿನ ಸಾಮಾಜಿಕ ವ್ಯವಸ್ಥೆಯೊಳಗೆ ದಿನನಿತ್ಯದ ಬದುಕಿನಲ್ಲಿ ಕಂಡುಕೊಳ್ಳುವ ಅನಿವಾರ್ಯತೆ ಇದೆ. ಬಹುಶಃ ಇಮ್ತಿಯಾಜನು ಕ್ರಾಂತಿಕಾರಕ ಬದಲಾವಣೆಯನ್ನು ಬಯಸುವ ಹರಿಕಾರನಾಗಿ, ಅಸಮಾನತೆಯನ್ನು ಹೋಗಲಾಡಿಸಲು ಒಂದು ಪ್ರೇರಕ ಶಕ್ತಿಯಾಗಿ ಕಂಡುಬರುತ್ತಾನೆ.

ಕೊನೆಗೆ ಸುಕುಮಾರನು ತನ್ನ ಮನಸ್ಸನ್ನು ಬದಲಾಯಿಸಿಕೊಂಡು ತನ್ನ ಜನರ ಉದ್ಧಾರಕ್ಕೆ, ದಲಿತ ಜನರಲ್ಲಿ ಜಾಗೃತಿಯನ್ನುಂಟುಮಾಡಲು ಶ್ರಮಿಸುವುದಾಗಿ ಪಣತೊಟ್ಟು ನಿಲ್ಲುತ್ತಾನೆ. "ನಾವು ಎಲ್ಲಿಂದಲೋ ಬಂದವರಲ್ಲ. ಈ ಮಣ್ಣಿನಲ್ಲೇ ಹುಟ್ಟಿ ಬೆಳೆದವರು. ಇಲ್ಲಿ ಎಲ್ಲರಂತೆಯೇ ಬದುಕಿ ಬಾಳುವ ಹಕ್ಕು ನಮಗಿದ್ದೇ ಇದೆ. ಇನ್ನು ನಾವೇಕೆ ಓಡಿಹೋಗಿ ತಲೆ ಮರೆಸಿಕೊಳ್ಳಬೇಕು?"[6] (ಪುಟ. 145) ಎಂಬ ಆತ್ಮವಿಶ್ವಾಸದ ಮಾತುಗಳು ಇಂದಿನ ದಲಿತ ವಿದ್ಯಾವಂತ ಯುವಕರಿಗೆ ಸ್ಫೂರ್ತಿಯ ಪ್ರೇರಕ ಶಕ್ತಿಯಾಗಿ ಕಂಡುಕೊಳ್ಳಬೇಕಾದ ಅನಿವಾರ್ಯತೆ ಇದೆ. ಪ್ರಸ್ತುತ ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಕೀಳರಿಮೆಯ ಭಾವನೆಯನ್ನು ಬೆಳೆಸುವ, ಕೀಳಾಗಿ ಕಾಣುವ, ದೂರ ಇಡಲು ಪ್ರಯತ್ನಿಸುವ ಜನರ ಮಧ್ಯದಲ್ಲೇ ಇದ್ದು ದಲಿತ, ಹಿಂದುಳಿದ ಸಮುದಾಯದ ಏಳಿಗೆಗೆ ದುಡಿಯಬೇಕಾದ ಅವಶ್ಯಕತೆಯನ್ನು ಪ್ರತಿಯೊಬ್ಬ ವಿದ್ಯಾವಂತ ದಲಿತ ಯುವಕರು ಮನಗಂಡು ಆ ನಿಟ್ಟಿನಲ್ಲಿ ಶ್ರಮಿಸಿ ತಮ್ಮ ಸಮುದಾಯವನ್ನು ಮುನ್ನಡೆಸುವ ಪ್ರಯತ್ನ ನಡೆಯಬೇಕೆಂಬುದು ಲೇಖನದ ಆಶಯವಾಗಿದೆ.

ಜಯಂತ ಕಾಯ್ಕಿಣಿ ಅವರ ನೀರು ಕಥೆಯಲ್ಲಿನ ಮಾನವೀಯ ಅಂತಃಕರಣದ ಅನಾವರಣ

ಆಶಾ, ಎಸ್.
ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ನವ್ಯಸಾಹಿತ್ಯದ ಕಿರಿಯ ತಲೆಮಾರಿನಲ್ಲಿ ಕಾಣಿಸಿಕೊಳ್ಳುವ ಬಹುಮುಖಿ ಪ್ರತಿಭೆಯ ಜಯಂತ ಕಾಯ್ಕಿಣಿ ಅವರು ಕಥೆ, ಕಾವ್ಯ, ನಾಟಕ, ಅಂಕಣಬರಹ, ಕಿರುತೆರೆ, ಪತ್ರಿಕಾರಂಗ, ಚಿತ್ರರಂಗ ಹೀಗೆ ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ತಮ್ಮ ವಿಶಿಷ್ಟ ಬರವಣಿಗೆ ಶೈಲಿಯಿಂದ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ ಎನ್ನಬಹುದು. ಅವರು ಮಧ್ಯಮ ವರ್ಗದ ನಗರಜೀವನವನ್ನು ಮತ್ತು ಜನಸಾಮಾನ್ಯರ ಸಮಸ್ಯೆಗಳನ್ನು, ಅವರ ಅತಂತ್ರ ಸ್ಥಿತಿಯ ಬದುಕಿನ ಹೋರಾಟವನ್ನು ಬಿಂಬಿಸುವುದರ ಜೊತೆಗೆ ಸೂಕ್ಷ್ಮ ಸಂವೇದನಾಶೀಲತೆಯಿಂದ ಮನುಷ್ಯನ ಭಾವನಾಲೋಕದೊಳಗೆ ಹೊಕ್ಕು ಮಾನವೀಯ ಸಂಬಂಧಗಳ ಮುಖಾಮುಖಿಗೆ, ಮಾನವೀಯ ಅಂತಃಕರಣಕ್ಕೆ ಹೆಚ್ಚು ಒತ್ತನ್ನು ನೀಡಿರುವುದರಿಂದ ಅವರ ಕಥೆಗಳು ಯಶಸ್ವಿ ಹಾದಿಯತ್ತ ಸಾಗಿತೆನ್ನಬಹುದು.

ಮಾನವೀಯತೆ ಒಂದು ಜೀವನಸ್ಪಂದ ಮಿಡಿತ. ಕೌಟುಂಬಿಕವಾಗಿಯೂ ಸಾಮಾಜಿಕವಾಗಿಯೂ ಮಾನವೀಯತೆ ಬಹಳ ಮುಖ್ಯ. ಮಾನವೀಯ ಭಾವದ ಕೊರತೆ ಆರೋಗ್ಯಕರ ಸಮಾಜವನ್ನು ನಿರ್ಮಿಸಲಾರದು. ಇದರ ಕೊಂಡಿಯೇ ಅಪರಿಚಿತತನದಲ್ಲೂ ಪರಿಚಯದ ಬೆಸುಗೆ ಹಾಕಿ ತನ್ನ ಮನುಷ್ಯತ್ವವನ್ನು ಮೆರೆಸುತ್ತದೆ. ಈ ನಿಟ್ಟಿನಲ್ಲಿ ಜಯಂತ ಕಾಯ್ಕಿಣಿ ಅವರ ಅಮೃತಬಳ್ಳಿ ಕಷಾಯ, ಸಂತೆಯ ದಿನ, ಭಾಮಿನಿ ಸಪ್ತಪದಿ, ಚಾರ್‌ಮಿನಾರ್, ನೀರು ಮುಂತಾದ ಕಥೆಗಳಲ್ಲಿ ಅಪರಿಚಿತತನದಲ್ಲೂ ಪರಿಚಿತ ಭಾವವನ್ನು ತೋರ್ಪಡಿಸುವಂತಹ ಅಂಶಗಳು ಕಂಡುಬಂದಿದ್ದು, ಮಾನವೀಯ ಮೌಲ್ಯ ಪರಾಕಾಷ್ಟತೆಯನ್ನು ಮುಟ್ಟಿ ಓದುಗರ ಗಮನ ಸೆಳೆಯುವಂತಿದೆ.

ಈ ಹಿನ್ನೆಲೆಯಲ್ಲಿ ಜಯಂತ ಕಾಯ್ಕಿಣಿ ಅವರ ಉತ್ತಮ ಕಥಾಸಂಕಲನವೆನಿಸಿರುವ ಚಾರ್‌ಮಿನಾರ್ ಕೃತಿಯಿಂದಾಯ್ದ 'ನೀರು' ಕಥೆಯನ್ನು ವಿಶ್ಲೇಷಣೆಗೊಳಪಡಿಸುವ ಮೂಲಕ ಪ್ರಸ್ತುತ ಕಥೆಯಲ್ಲಿನ ಚಂದ್ರಹಾಸ, ಕುಂಜುವಿಹಾರಿ, ಕಾಂಚುಬೆಹನ್ ಮತ್ತು ಬನಿಯಾ ಪಾತ್ರಗಳಲ್ಲಿ ಮನುಷ್ಯತ್ವ, ಮಾನವೀಯ ಅಂತಃಕರಣ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದನ್ನು ಜೊತೆಗೆ ಕಥನದ ಮುಖ್ಯ ಆಶಯವಾದ ಮಾನವೀಯ ಸಂವೇದನೆಯ ನೆಲೆಯತ್ತ ನಿಂತು ಓದುಗರನ್ನು ಗಮನ ಹರಿಸುವಂತೆ ಮಾಡಿರುವ ಜಯಂತ ಕಾಯ್ಕಿಣಿ ಅವರ ಭಾಷಾಭಿವ್ಯಕ್ತಿ ಮತ್ತು ಭಾವಾಭಿವ್ಯಕ್ತಿಯನ್ನು ಅರ್ಥೈಸುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

'ನೀರು' ಕಥೆಯು ಮಾನವೀಯ ಸಂವೇದನೆಯ ಭಾವನೆಗಳ ಮಿಡಿತದೊಂದಿಗೆ ಸಾಮಾಜಿಕ ಸ್ವರೂಪವನ್ನು ಅರ್ಥೈಸಿಕೊಡುವಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿದೆ ಎನ್ನಬಹುದು. ಯಾವುದೇ ಗುರುತು ಪರಿಚಯವಿರದ ವ್ಯಕ್ತಿಗೆ ಸಹಾನುಭೂತಿ ತೋರಿ ಮಾನವೀಯತೆಯನ್ನು ಮೆರೆಸುವುದು ಓದುಗರ ಗಮನ ಸೆಳೆಯುತ್ತದೆ. ಬೆಂಗಳೂರಿನಿಂದ ಮುಂಬಯಿಗೆ ಹೊರಟ ವಿಮಾನದಲ್ಲಿ ಚಂದ್ರಹಾಸ ಮತ್ತು ಸಂತೋಷನ್‌ರ ಪರಿಚಯವಾಗುತ್ತದೆ. ಕಾಯಿಲೆಯನ್ನು ಗುಣಪಡಿಸಿಕೊಳ್ಳಲು ಸಂತೋಷನ್ ಮುಂಬಯಿಗೆ ಬಂದ ಕಾರಣವನ್ನು ತಿಳಿಸಿದಾಗ, ವಯಸ್ಸಾದ ಆತನನ್ನು ನೋಡಿ ಒಬ್ಬನನ್ನೇ ಬಿಟ್ಟು ಹೋಗಲು ಮನಸ್ಸಾಗದೆ ಹೀಗೆ ಹೇಳುತ್ತಾನೆ. "ಸರ್ ಇರಲಿ ಅವಸರವಿಲ್ಲ, ನನಗಂಥ ಕೆಲಸವಿಲ್ಲ. ಬೇಕಿದ್ದರೆ ನಿಮ್ಮ ಅಳಿಯ ಮುಂದಿನ ಫ್ಲೈಟ್‌ನಲ್ಲಿ ಬಂದು ತಲುಪುವ ತನಕ ನಿಮ್ಮ ಜತೆ ಇರಲು ನಾನು ರೆಡಿ" (ಪುಟ ೪೫, ಚಾರ್‌ಮಿನಾರ್) ಎಂದು ಹೇಳಿ ಆಸ್ಪತ್ರೆಗೆ ಕರೆದೊಯ್ಯುತ್ತಾನೆ. ಚಂದ್ರಹಾಸನ ಈ ಮಾತಿನಲ್ಲಿ ಮಾನವೀಯ ಅಂತಃಕರಣದ ಎಳೆಯಿರುವುದು ಗಮನಾರ್ಹ. ವಯಸ್ಸಾದ ಅವರನ್ನು ಒಬ್ಬರನ್ನೇ ಕಳಿಸಲು ಮನಸ್ಸಾಗದೆ ಅವರನ್ನು ಕರೆದೊಯ್ಯಲು ಅಳಿಯ ಬರುವವರೆಗೂ ಜೊತೆಯಲ್ಲಿರುವೆನೆಂದು ಧೈರ್ಯ ತುಂಬಿ, ತಾನೇ ಸ್ವತಃ ಟ್ಯಾಕ್ಸಿಯನ್ನು ಕರೆದು ಆಸ್ಪತ್ರೆಗೆ ಕರೆದೊಯ್ಯುವಲ್ಲಿ ಅವರಿಗೆ ಸಹಾಯ ಮಾಡುತ್ತಿರುವ ಮನಸ್ಸಿನ ಹಿಂದೆ ಮನುಷ್ಯತ್ವ, ಮಾನವೀಯ ಕಾಳಜಿ ಇರುವುದು ಗೋಚರಿಸುತ್ತದೆ.

ಕುಂಜು ವಿಹಾರಿಯ ಟ್ಯಾಕ್ಸಿಯಲ್ಲಿ ಸಂತೋಷನ್‌ನನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಪಡೆದ ನಂತರ ವಿಮಾನ ನಿಲ್ದಾಣಕ್ಕೆ ಹಿಂದಿರುಗುವ ಸಂದರ್ಭದಲ್ಲಿ ಜಡೀ ಮಳೆಯಲ್ಲಿ ಸಿಲುಕಿಕೊಂಡಾಗ, ಕುಂಜುವಿಹಾರಿಯು ಯಾರೋ ಪರಿಚಯವಿರದ, ಸಂಬಂಧವಿರದ ಪ್ರಯಾಣಿಕರನ್ನು ತನ್ನ ಗೆಳೆಯನ ಮನೆಗೆ ಕರೆದೊಯ್ದು, ಗೆಳೆಯನ ಹೆಂಡತಿಯಾದ ಕಾಂಚು ಬೆಹನ್‌ಳಿಗೆ ಮೊದಲಿಗೆ ತನ್ನನ್ನು ಪತಿಯ ಸ್ನೇಹಿತನೆಂದು ಪರಿಚಯಿಸಿಕೊಂಡು ನಂತರ ಜಡೀಮಳೆಯಿಂದಾಗಿ ರಸ್ತೆ ಮುಚ್ಚಿದೆ ಅದಕ್ಕಾಗಿ ಚಂದ್ರಹಾಸ ಮತ್ತು ಸಂತೋಷನ್‌ರನ್ನು ಕರೆತಂದುದಾಗಿ ಹೇಳಿದಾಗ ಆಕೆ ಪ್ರೀತಿಯಿಂದ ಬರಮಾಡಿಕೊಂಡು ಉಪಚರಿಸುವಲ್ಲಿ ಮಾನವೀಯತೆ ಎದ್ದು ತೋರುವಂತಿದೆ.

ಕಾಂಚು ಬೆಹನ್‌ಳು ಕೊಟ್ಟ ನೀರನ್ನು ಕುಡಿದಾಗ ಸಂತೋಷನ್‌ನಿಗೆ 'ಇದುವರೆವಿಗೂ ತಾನು ಇಂತಹ ನೀರನ್ನು ಕುಡಿದಿಲ್ಲ' ಎಂಬ ಭಾವ ವ್ಯಕ್ತ ಪಡಿಸುವಲ್ಲಿ ತಾನು ಅದೇ ನೀರನ್ನು ಎಪ್ಪತ್ತು ದಶಕಗಳ ಹಿಂದೆ ಇದೇ ಮುಂಬಯಿಯಲ್ಲಿ ಹಣಕ್ಕಾಗಿ ಮಾರಿದ್ದೇನಲ್ಲವೆ, ಹಾಗೇ ಮಾರಿದ್ದರಿಂದಲೇ ತನಗೆ ಕಾಯಿಲೆ ಬಂದಿರುವುದಾಗಿ ಮನೋವಿಶ್ಲೇಷಣೆ ಮಾಡಿಕೊಳ್ಳುವಲ್ಲಿ ತನ್ನ ತಪ್ಪಿನ ಅರಿವಾಗಿರುವುದು ವ್ಯಕ್ತಗೊಂಡಿದೆ. ಹಾಗೆಯೇ ಕುಂಜುವಿಹಾರಿಯ ಗ್ರಹಿಕೆಯಂತೆ ಆತ ಹೇಳಿದ್ದ ಮಾತು "ಮುಂಬಯಿಯಲ್ಲಿ ಹಣ ನೀರಿನಂತೆ ಹರೀತದೆ ಸಾಬ್, ಕೆಲವರಿಗೆ ಕಾಣುತ್ತೆ ಅದು ಕೆಲವರಿಗೆ ಕಾಣಲ್ಲ, ಕಂಡವರು ಅದನ್ನು ಮೊಗೆದು ಮೊಗೆದು ತಮ್ಮದಾಗಿಸಿಕೊಳ್ಳುತ್ತಾರೆ. ಟ್ಯಾಕ್ಸಿಯಲ್ಲಿ ಪಯಣಿಸುತ್ತಾರೆ ಕಾಣದವರು ಟ್ಯಾಕ್ಸಿ ನಡೆಸುತ್ತಾರೆ" (ಚಾರ್‌ಮಿನಾರ್ ಪುಟ, ೪೬) ಎಂಬುದನ್ನು ನೆನೆದು ತಾನು ಕಾಣುವಂತಹ ನೀರನ್ನೇ ಹಣಕ್ಕಾಗಿ ಮಾರಿದೆನಲ್ಲ ಎಂದು ಆತನಿಗೆ ಹೇಳುತ್ತಾ ಪರಿತಪಿಸಿ, ಪಶ್ಚಾತ್ತಾಪ ಪಡುವಲ್ಲಿ ಸಂತೋಷನ್‌ನ ವ್ಯಕ್ತಿತ್ವ ಅನಾವರಣಗೊಂಡಿದೆ.

ಪ್ರಸ್ತುತ ಕಥೆಯಲ್ಲಿನ ಆಶಯ ತುಂಬಾ ಮಹತ್ವದೆನಿಸುತ್ತದೆ. ತಪ್ಪು ಮಾಡುವಾಗ ಯಾರಿಗಾದರೂ ಒಂದು ಮನಸ್ಸು ಬೇಡವೆನ್ನುತ್ತಿರುತ್ತದೆ.

ಆ ಕ್ಷಣದಲ್ಲಿ ಒಳ್ಳೆಯ ಮನಸ್ಸಿನ ಮಾತನ್ನು ಕೇಳಿ ನಡೆದರೆ ಮುಂದಿನ ಅನಾಹುತಗಳು ತಪ್ಪುತ್ತದೆ. ಇಲ್ಲವಾದರೆ ಬದುಕಿನುದ್ದಕ್ಕೂ ಆ ಒಂದು ತಪ್ಪು ನಮ್ಮನ್ನು ಕಾಡುತ್ತಿರುತ್ತದೆ. ಪಾಪ ಪ್ರಜ್ಞೆ ಪಶ್ಚಾತ್ತಾಪ ಪಡುವಂತೆ ಪರದಾಡಿಸುತ್ತದೆ ಎಂಬ ಅಂಶವನ್ನು ಸಂತೋಷನ್‌ನ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಜಯಂತ ಅವರ ಕೈಚಳಕದಲ್ಲಿ ಭಾವಾಭಿವ್ಯಕ್ತಿಗೊಂಡಿರುವ ಕಥನದಲ್ಲಿನ ಈ ಸಾಲುಗಳು ಓದುಗರ ಮನಸ್ಸನ್ನು ಸೆರೆಹಿಡಿಯುವಂತಿದೆ. ಮಾನವೀಯತೆಯನ್ನು ಮೆರೆಸುವ ನಿಟ್ಟಿನಲ್ಲಿ ಪ್ರಸ್ತುತ ಕಥೆ ಯಶಸ್ಸು ಕಂಡಿದೆ ಎಂದು ಹೇಳಬಹುದು.

'ನೀನು ಇವತ್ತು ತಿನ್ನಿಸಿದ ರೊಟ್ಟಿಗಿಂತ, ಕುಡಿಸಿದ ನೀರಿಗಿಂತ ರುಚಿಯಾದದ್ದನ್ನು ನಾನು ಈ ಜನ್ಮದಲ್ಲೇ ಪಡೆದಿಲ್ಲ. ಕುಂಜ್ ಭಯ್ಯಾ ಅದು ಅಮೃತ' .... ಅಪರಿಚಿತರು ತನಗೆ ಮಾಡಿದ ಈ ಉಪಚಾರಕ್ಕೆ ಕೃತಜ್ಞನಾಗಿ ಸಂತಸಪಡುತ್ತಾನೆ. ಹಾಗೆಯೇ ತನ್ನ ತಪ್ಪನ್ನು ನೆನೆದು "ನನಗೆ ಈ ಕಾಯಿಲೆ ಯಾಕೆ ಬಂತು ಗೊತ್ತಾ? ನನಗೆ ಗೊತ್ತಿದೆ ಅದು. ನಾನು ಈ ದೇಶದಲ್ಲಿ ನೀರು ಮಾರಿದ ಮೊದಲಿಗರಲ್ಲಿ ಒಬ್ಬ ಹೌದು ೭೦ರ ದಶಕದಲ್ಲೇ ಬಾಟಲಿಯಲ್ಲಿ ನೀರು ಮಾರಿದವ ನಾನು ತಪ್ಪು ಅದು. ನನ್ನ ಮನಸ್ಸು ಬೇಡ ಬೇಡ ಅಂತ ಹೇಳ್ತಾ ಇತ್ತು. ಆದರೂ ಕೇಳಲಿಲ್ಲ ನಾನು. ಕಾಣದ ನೀರಿನಂತೆ ದುಡ್ಡು ಹರಿಯುತ್ತದೆ. ಅಂದಿಯಲ್ಲ ಕುಂಜ್‌ಭಯ್ಯಾ, ನಾನು ಕಾಣೋ ನೀರನ್ನೇ ದುಡ್ಡಿಗೆ ಮಾರಿದೆ! ಸರಿ ಅನಿಸಿದ್ದನ್ನು ಮಾಡೋದರಲ್ಲಿ ಇರೋ ಸುಖಕ್ಕಿಂತ ಹೆಚ್ಚಿನ ದುಃಖ ತಪ್ಪು ಅನಿಸಿದ್ದನ್ನು ಮಾಡೋದರಲ್ಲಿದೆ ಪಾಪ ಅದು. ಮನಸ್ಸಿನ ಮಾತು ಕೇಳದ ತಪ್ಪಿಗೆ ನನ್ನ ದೇಹವೇ ನನಗೆ ಕೊಟ್ಟಿರುವ ಶಿಕ್ಷೆ ಇದು. ಅನುಭವಿಸುತ್ತಿದ್ದೇನೆ, ಅನುಭವಿಸಲೇಬೇಕು" (ಚಾರ ಮಿನಾರ್, ಪುಟ. ೫೫) ಎಂಬ ಸಂತೋಷನ್‌ನ ಪಶ್ಚಾತ್ತಾಪದ ಮಾತಿನ ಹಿಂದೆ ಮನಸ್ಸಿಗೆ ವಿರುದ್ಧವಾಗಿ ನಡೆದುಕೊಳ್ಳಬಾರದೆಂಬುದರ ಜೊತೆಗೆ ಮನುಷ್ಯನಿಗೆ ಮನುಷ್ಯತ್ವ ಮಾನವೀಯ ಅಂತಃಕರಣವಿರಬೇಕು. ಹಣವೇ ಎಲ್ಲಾ ಅಲ್ಲ ಎಂಬುದನ್ನು ಒತ್ತಿ ಹೇಳುತ್ತಿರುವ ಅಂಶ ಅಡಗಿದೆ.

ತಮ್ಮ ಮೊಮ್ಮಗಳ ಮದುವೆ ಆಗುವವರೆಗಾದರೂ ತಾನು ಬದುಕಬೇಕು ಎನ್ನುವ ಆಸೆ ಹೊತ್ತ ವೃದ್ಧ ಜೀವ ಸಂತೋಷನ್‌ಗೆ ವೈದ್ಯರು ಧೈರ್ಯ ತುಂಬುತ್ತಾರೆ. ಹಾಗೆಯೇ, ತನಗೆ ಸಹಾಯ ಮಾಡಿದ ಚಂದ್ರಹಾಸ, ಕುಂಜುವಿಹಾರಿ, ಕಾಂಚುಬೆಹನ್, ಹಣ್ಣು ಹಂಚುತ್ತಿರುವವರು, ಬನಿಯಾ ಎಲ್ಲರೂ ತನ್ನವರೆಂಬ ಭಾವ ಆತನಿಗಾಗುತ್ತದೆ.

ಪ್ರಸ್ತುತ ಕಥೆಯಲ್ಲಿನ ಗಮನ ಸೆಳೆದು ಮಾನವೀಯತೆ ಮೆರೆಸಿದ ಮತ್ತೊಂದು ಪಾತ್ರ ಬಿಸ್ಲೇರಿ ಬನಿಯ ಟ್ರಾಫಿಕ್‌ನಲ್ಲಿ ಜಡಿಮಳೆಗೆ ಸಿಲುಕಿದಾಗ ಕುಡಿಯುವ ನೀರಿಲ್ಲದೆ ಪರದಾಡುವ ಪರಿಸ್ಥಿತಿ ಬಂದಾಗ ಜನರೆಲ್ಲಾ ಕಂಗಾಲಾಗುತ್ತಾರೆ. ಈ ಸಂದರ್ಭದಲ್ಲಿ ಚಂದ್ರಹಾಸನು ಬಿಸ್ಲೇರಿ ಮಾರುವ ಬನಿಯಾನನ್ನು ಕೇಳುವುದು ಹೀಗೆ.

'ಈ ಬಾಟಲಿಯ ಕ್ರೇಟೇ ಕೊಟ್ಟು ಬಿಡಿ, ಬೇಕಿದ್ದರೆ ಡಬಲ್ ಹಣ ತಗೊಳ್ಳಿ' ಎಂದ. ಬನಿಯಾ ವಿಚಿತ್ರವಾದ, ವಿಷಣ್ಣವಾದ ನಗು ಕೊಟ್ಟು – ಏನಪ್ಪಾ, ಆತನ ಮಾತಿಗೆ ಪ್ರತ್ಯುತ್ತರವಾಗಿ ಬನಿಯಾ ಹೇಳುವುದು ಈ ರೀತಿ 'ನೀನೊಬ್ನೆ ಏನಪಾ ಸಿಕ್ಕಿ ಹಾಕಿಕೊಂಡೋನು? ನೋಡ್ರಾ ಇಲ್ವಾ? ಹೆಂಗಸರು .... ಮಕ್ಕಳು, ಮುದುಕರು ಎಲ್ರೂ ಸಿಕ್ಕಿ ಹಾಕಿಕೊಂಡಿದ್ದಾರೆ .... ಎಲ್ರಿಗೂ ಬೇಕಲ್ಪಪ್ಪಾ, ಇರೋದೇ ಇಷ್ಟು ನೀನು ಯುವಕ ಹಟ್ಟಾ – ಖಟ್ಟಾ ಇದೀಯಾ, ಒಂದು ಸಾಕು ನಿನಗೆ, ಗೆಳೆಯನಿಗೆ ಒಂದು ತಗೋ, ಇದು ದುಡ್ಡು ಗಳಿಸೋ ಸಮಯಾನೇ ನಪ್ಪಾ? ತಗೋ, ಎರಡು ಬಾಟಲಿ, ಮುಖಬೆಲೆ ೨೦ ರೂಪಾಯಿ ಕೊಡು" (ಪುಟ, ೫೪) ಎಂದು ಹೇಳುವ ಬನಿಯ ಎಲ್ಲರ ಮನಸ್ಸನ್ನು ಸೂರೆಗೊಳ್ಳುತ್ತಾನೆ. ಯಾವ ಸಂಬಂಧವೂ ಇಲ್ಲದಿರುವ ಜನರ ಬಗೆಗಿರುವ ಆತನ ಕಾಳಜಿ, ಮಾನವೀಯ ಅಂತಃಕರಣ ಗಮನಸೆಳೆಯುತ್ತದೆ. ಆತ ಬೇಕಾದಷ್ಟು ಹಣಕ್ಕಾಗಿ ನೀರನ್ನು ಮಾರಬಹುದಿತ್ತು. (ಸಂತೋಷನ್‌ನ ರೀತಿ) ಸದ್ಯದ ಪರಿಸ್ಥಿತಿಯಲ್ಲಿ ಚಂದ್ರಹಾಸನಂತ ಹವರು ಬೇಕಾದಷ್ಟು ಹಣವನ್ನು ಬನಿಯನಿಗೆ ನೀಡುತ್ತಿದ್ದರು, ಆತನು ಕೇಳಬಹುದಿತ್ತು. ಆದರೆ ಪ್ರಾಮಾಣಿಕನಾದ ಬನಿಯಾ ಗಳಿಸುವ ಉದ್ದೇಶ ಹೊಂದದೆ, ಮನುಷ್ಯತ್ವವನ್ನು ಮೆರೆದು ಮಾನವೀಯತೆಯ ಸಂದೇಶ ನೀಡಿದ್ದಾನೆ ಎಂಬುದನ್ನಿಲ್ಲಿ ಗಮನಿಸಬೇಕಾಗುತ್ತದೆ.

ಹಾಗೆಯೇ ಕಥನದೊಳಗೆ ಕೆಲವು ಪ್ರಸಂಗಗಳನ್ನು ಲೇಖಕರು ತಂದಿದ್ದಾರೆ. ಅಮಿತಾಭನ ಆರೋಗ್ಯ ಸುಧಾರಣೆಯಾಗಲಿ, ಚೇತರಿಸಿಕೊಳ್ಳಲೆಂದು ಸಾವಿರಾರು ಕಿಲೋಮೀಟರ್ ದೂರದಿಂದ ಸೈಕಲ್ ತುಳಿದುಕೊಂಡು ಹೋಗಿ ಗಂಗಾ ಯಮುನಾ ಸಂಗಮದ ನೀರನ್ನು ಬಿಂದಿಗೆಯಲ್ಲಿ ತರುವ ಅನಾಮಿಕ ಅಭಿಮಾನಿ ಇರುವುದು ಮತ್ತು ತನ್ನ ತಾಯಿಯ ಕಷ್ಟ, ಸಂಕಟವೆಲ್ಲವೂ ಒಂದೇ ಬಾರಿಗೆ ಅಂತ್ಯವಾಗಿ ಬಿಡಲೆಂದು ಆಲೋಚಿಸುತ್ತಾ ಪೆಪ್ಸಿಯಲ್ಲಿ ಪೆಸ್ಟಿಸೈಡ್ ಇರಬಹುದೆಂದು ಅದನ್ನೇ ಕುಡಿದು ಸಾಯಬಹುದಲ್ಲವೇ ಎಂದು ತರ್ಕಿಸುವ ಎಂಟು ವರ್ಷದ ಮುಗ್ಧ ಬಾಲಕನು ಕಥೆಯೊಳಗಿರುವುದು ಮನಸ್ಸಿಗೆ ತಾಗುವಂತಿದೆ ಎನ್ನಬಹುದು. ಕಥೆಯಲ್ಲಿ ಬರುವ ಗಂಗೆ, ಬಿಸ್ಲೇರಿ, ಪೆಪ್ಸಿ ಎಲ್ಲವೂ ಒಂದು ರೀತಿಯಲ್ಲಿ ವ್ಯಾಪಾರೀಕರಣದೊಳಗೆ ಒಂದಾಗಿರುವುದೇ ಆಗಿದೆ. ಆದರೂ ಅದರೊಳಗೆ ಒಂದು ಕಡೆ ಮಾನವೀಯ ನೆಲೆಯಲ್ಲಿ ಮೂಡಿಬಂದಿರುವಂತಹ ಮಾನವ ಪ್ರೀತಿ, ಸಹಜ, ಅಭಿಮಾನ, ಇತರರ ನೋವಿಗೆ, ಭಾವಗಳಿಗೆ ಪರಸ್ಪರ ಸ್ಪಂದಿಸುವ ಮಾನವೀಯ ಕಳಕಳಿ ಅರಳಿರುವುದನ್ನು ಕಾಣುವ ಕಣ್ಣು ಇಲ್ಲಿ ಮುಖ್ಯವಾಗಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಅದೇ ಜಯಂತ ಕಾಯ್ಕಿಣಿ ಅವರ ಬರವಣಿಗೆಯ ವಿಶೇಷತೆ ಎಂದರೆ ತಪ್ಪಾಗಲಾರದು ಎನಿಸುತ್ತದೆ.

ನೀರಿನ ಬಹುಮುಖ ಸಂವೇದನಾ ಸಾಧ್ಯತೆಗಳು ಕಥೆಯೊಳಗೆ ಬಂದಿದೆ. ಮನುಷ್ಯನ ಪ್ರಾಣಿಗಳ ಹಾಗೆ ಪ್ರತಿಯೊಂದು ಜೀವರಾಶಿಗೆ ಮೂಲಭೂತ ಅವಶ್ಯಕತೆಯಾದ ನೀರು ಪ್ರಸ್ತುತ ಕಥೆಯೊಳಗೆ ಮಾನವ ಸಂವೇದನೆಯ ಮೂಲಭೂತ ಅಂತಃಕರಣದ ಸ್ವರೂಪವಾಗಿ ರೂಪಕತೆ ಪಡೆದುಕೊಳ್ಳುವಂತೆ ಮಾಡಿ ಜೀವ – ಜೀವಗಳ ಭಾವಗಳೊಳಗೆ ಬೆರೆತು ಮಿಡಿಯುವಂತೆ ಮಾಡಿರುವ ಜಯಂತ ಕಾಯ್ಕಿಣಿ ಅವರ ಪ್ರಯತ್ನ ಯಶಸ್ವಿಯಾಗಿದೆ ಎನ್ನಬಹುದು.

ಪ್ರವಾಹವಾಗಿ ಹರಿದ ನೀರು ಮುಂಬಯಿಯ ಬದುಕನ್ನು ದಿಕ್ಕೆಡಿಸಿದ ವರ್ತಮಾನ, ಅದೇ ನೀರು ದಾರಿಯಲ್ಲಿ ಹರಿಯುವಾಗ ಸಂತಸದಿಂದ ನಲಿದಾಡುವ ಜನರು, ನೀರನ್ನೇ ಮಾರಾಟ ಮಾಡಿದ್ದಕ್ಕಾಗಿ ತನಗೆ ಕಾಯಿಲೆ ಬಂದಿದೆ ಎಂದು ವ್ಯಥೆ ಪಡುವ ಸಂತೋಷನ್, ಬಿಸ್ಲೇರಿ ನೀರನ್ನು ಮಾಶಾಟ ಮಾಡುವ ಬನಿಯಾ ಸಂಬಂಧವಿರದಿದ್ದರೂ ಎಲ್ಲರಿಗೂ ಸಮಾನವಾಗಿ ಸದ್ಬಳಕೆಯಾಗಲಿ ಎಂದು ಚಿಂತಿಸಿ ಲಾಭಕ್ಕಾಗಿ ಮಾರದೆ ಉಳಿಯುವಲ್ಲಿನ ಆತನ ಮಾನವೀಯತೆಯ ಅಂತಃಕರಣ ಎಲ್ಲವೂ ನೀರಿನ ಬಹುಮುಖ ಸಂವೇದನಾ ಸಾಧ್ಯತೆಗಳಾಗಿ ಕಾಣಿಸಿಕೊಳ್ಳುವಂತೆ ಮಾಡಿರುವ ಲೇಖಕರ ಕೈಚಳಕ, ಯೋಚನಾ

ಲಹರಿ, ಅದನ್ನು ಅಭಿವ್ಯಕ್ತಿಸುವಲ್ಲಿನ ಭಾಷಾಭಿವ್ಯಕ್ತಿ, ಭಾವಾಭಿವ್ಯಕ್ತಿ ಅರ್ಥಪೂರ್ಣವಾಗಿ ಕಥೆಯುದ್ದಕ್ಕೂ ಮೂಡಿಬಂದಿರುವುದನ್ನು ಗಮನಿಸಬಹುದಾಗಿದೆ.

"ಪ್ಯಾರೇ ಮೋಹನನ ಗೆಳೆಯನಾದ ಹಸಮುಖ್ ಆಲಿಯ ಸ್ನೇಹಿತ ನಾನು ಎಂದೇ ಪರಿಚಯಿಸಿಕೊಳ್ಳುವಾಗ ಅಪರಿಚಿತನದಲ್ಲೂ ಒಂದು ಪರಿಚಯದ ನೆಲೆ ಒಡಮೂಡುತ್ತದೆ. ಭಿನ್ನ ಸಾಂಸ್ಕೃತಿಕ, ಧಾರ್ಮಿಕ ಪರಿವೇಶಗಳ ಏಕೀಕರಣದಿಂದ ಮೂಡಿದ ಮಾನವೀಯ ಸಾಮಾಜಿಕತೆಯ ಸ್ವರೂಪ ಇದು. ಅಂತಹ ಮಾನವೀಯ ಸಂವೇದನೆಯೇ 'ಮುಂಬಯಿ' ಎಂಬ ಮಹಾಪರಿಧಿಯ ಸಾಮಾಜಿಕತೆಯಲ್ಲಿ ವಿಶಿಷ್ಟತೆಯನ್ನು, ಆಪ್ತತೆಯನ್ನು, ವಿಲಕ್ಷಣ ಸುರಕ್ಷಿತ ಭಾವವನ್ನು ಏರ್ಪಡಿಸಿರುವುದು ಎಂಬ ಗ್ರಹಿಕೆಯೇ ಕಥನದ ನಿರೂಪಣೆಯ ಹಿಂದಿರುವುದು, ಗೋಚರವಾಗುತ್ತದೆ. ಅಂತಹ ಆಪ್ತತೆಯು ಮಾತ್ರ ನಗರದ ಎಲ್ಲಾ ಜಂಜಡ, ತಾಕಲಾಟ ಮತ್ತು ಧಾವಂತದ ನಡುವೆಯೂ ನೆಮ್ಮದಿಯನ್ನೂ, ಆತ್ಮೀಯತೆಯನ್ನು ಮೂಡಿಸುವುದು. ಈ ನಿಟ್ಟಿನಲ್ಲಿ ಪ್ರಸ್ತುತ ಕಥನ ಮಾನವೀಯ ಸಂವೇದನೆಯ ನೆಲೆಯಲ್ಲಿ ಮುಂಬಯಿಯ ಎಲ್ಲಾ ಗಡಿಬಿಡಿಯ ನಡುವೆಯೂ ಮೌನವನ್ನು, ನಿರಾತಂಕ, ನೆಮ್ಮದಿಯನ್ನು ಗ್ರಹಿಸಲೆತ್ನಿಸಿದೆ" ಎಂಬುದನ್ನು ಗಮನಿಸಬೇಕಾಗುತ್ತದೆ" (ಕಥಾಸ್ವರೂಪ, ಪುಟ. ೨೬೪).

ಒಟ್ಟಾರೆಯಾಗಿ ಹೇಳುವುದಾದರೆ, ಮಾನವೀಯ ನೆಲೆಯಲ್ಲಿ ಮೂಡಿಬಂದಿರುವ ನೀರು ಕಥೆಯಲ್ಲಿನ ಚಂದ್ರಹಾಸ, ಕುಂಜುವಿಹಾರಿ, ಕಾಂಚು ಬೆಹೆನ್, ಬನಿಯಾ ಹೀಗೆ ಎಲ್ಲಾ ಪಾತ್ರಗಳಲ್ಲಿ ಜಯಂತ ಕಾಯ್ಕಿಣಿ ಅವರು ವ್ಯಕ್ತಪಡಿಸಿರುವ ಮನುಷ್ಯತ್ವ, ಮಾತೃತ್ವ, ಮಾನವೀಯ ಅಂತಃಕರಣವು ಕಥನದ ಮುಖ್ಯ ಆಶಯವಾದ ಮಾನವೀಯ ಸಂವೇದನೆಯ ನೆಲೆಯತ್ತ ನಿಂತು ಓದುಗರನ್ನು ಗಮನ ಹರಿಸುವಂತೆ ಮಾಡುತ್ತದೆ ಎಂಬುದನ್ನಿಲ್ಲಿ ಗ್ರಹಿಸಬೇಕಾಗುತ್ತದೆ.

ಪರಾಮರ್ಶನ ಗ್ರಂಥಗಳು

ಕ್ರ. ಸಂ.	ಕೃತಿ	ಲೇಖಕರು ಮತ್ತು ಪ್ರಕಾಶನ
೧.	ಜಯಂತ ಕಾಯ್ಕಿಣಿ ಕಥೆಗಳು (ಪ್ರಶಸ್ತಿ ವಿಜೇತ ಮೂರು ಪುಸ್ತಕಗಳ ಸಂಪುಟ)	ಜಯಂತ ಕಾಯ್ಕಿಣಿ ಅಂಕಿತ ಪುಸ್ತಕ ಬೆಂಗಳೂರು ೨೦೦೩
೨.	ಚಾರ್‌ಮಿನಾರ್	ಜಯಂತ ಕಾಯ್ಕಿಣಿ ಅಂಕಿತ ಪುಸ್ತಕ ಬೆಂಗಳೂರು ೨೦೧೨
೩.	ಜಯಂತ ಕಾಯ್ಕಿಣಿ ವಾಚಿಕೆ	ಸಿ.ಎನ್. ರಾಮಚಂದ್ರನ್ ನುಡಿ ಪುಸ್ತಕ ಬೆಂಗಳೂರು ೨೦೧೦
೪.	ಮಯೂರ (ಮಾಸಿಕ, ಆಗಸ್ಟ್ ೨೦೧೩)	
೫.	ಅಂತರ್ಜಾಲ ಮಾಹಿತಿ	

ಶ್ಯಾಮಲಾ ಕಥೆಗಳಲ್ಲಿ ದಲಿತ ಸಂವೇದನೆಯ ನೆಲೆಗಳು

ಮಹದೇವ ನಾಯಕ. ಎಚ್.ಇ,

ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ, ಮೈಸೂರು, Email. mahadevnayak@yahoo.com

ಶ್ಯಾಮಲಾದೇವಿ ಬೆಳಗಾಂವಕರರು ಉತ್ತರ ಕರ್ನಾಟಕದಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ ಮೊದಲ ಮಹಿಳಾ ಲೇಖಕಿ. ಆಧುನಿಕ ಮಹಿಳಾ ಸಾಹಿತ್ಯದ ಆದ್ಯರು. ಇವರ ಬರವಣಿಗೆ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದೆ. ಪತ್ರಿಕಾ ಸಂಪಾದಕರಾಗಿ, ಪ್ರಕಾಶಕರಾಗಿ, ಅಖಿಲ ಭಾರತ ಮಹಿಳಾ ಪರಿಷತ್ತಿನ ಕ್ರಿಯಾಶೀಲ ಸದಸ್ಯತ್ವ, ಮುಖಂಡತ್ವ, ನಗರ ಸಭೆಯ ಸದಸ್ಯತ್ವ, ಮಕ್ಕಳ ಕೂಟದ ನಿರ್ದೇಶಕತ್ವ, ಮಕ್ಕಳ ಉಚಿತ ವಾಚನಾಲಯದ ಸಂಪಾದಕತ್ವ ಇನ್ನೂ ಹಲವಾರು ಸಾಮಾಜಿಕ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹಾಗಿಯೇ ಉತ್ತಮ ಕತೆಗಾರರಾಗಿ, ಪತ್ರಕರ್ತರಾಗಿ, ವಿಮರ್ಶಕರಾಗಿ ಆಧುನಿಕ ಮಹಿಳಾಪರ ಹೋರಾಟಗಾರರಾಗಿ, ಸ್ತ್ರೀ ಸ್ವಾತಂತ್ರ್ಯಕ್ಕೆ ಕರೆಕೊಟ್ಟ ದಿಟ್ಟ ಮಹಿಳೆ ಶ್ಯಾಮಲಾ ಎಂದರೆ ತಪ್ಪಾಗಲಾರದು.

ಶ್ಯಾಮಲಾ ಅವರ ಬದುಕು–ಬರಹ ತೆರೆದಿಟ್ಟ ಪುಸ್ತಕದಂತೆ, ಮಹಿಳಾ ಲೇಖಕಿಯರಿಗೆ ಅವರ ಬರಹ–ಭಾಷಣಗಳು ಸ್ಫೂರ್ತಿಯ ನೆಲೆಗಳು. 1936 ರಲ್ಲಿ 'ಹೊಬಿಸಿಲು' ಹಾಗೂ 1943 ರಲ್ಲಿ 'ಹೊಂಬಿಸಿಲು' ಎಂಬ ಎರಡು ಕಥಾಸಂಕಲವನ್ನು ಹೊರತಂದಿದ್ದಾರೆ. ಇದರಲ್ಲಿ ಸುಮಾರು 22 ಕತೆಗಳಿವೆ. ಶ್ಯಾಮಲಾ ಅವರು ತಮ್ಮ ಜೀವನ ಸಂದರ್ಭದಲ್ಲಿ ಘಟಿಸಿದ ಘಟನೆಗಳನ್ನೆ ಕೇಂದ್ರೀಕರಿಸಿ ಕೃತಿ ರಚಿಸಿದ್ದಾರೆ. ವಿಭಿನ್ನ ಸನ್ನಿವೇಶಗಳು, ವಿಭಿನ್ನ ಕಥಾವಸ್ತು, ಬಹುಸ್ತರೀಯ ಆಯಾಮಗಳು ಇವರ ಸೃಜನಶೀಲ ಬರವಣಿಗೆಗೆ ಸಾಕ್ಷಿಯಾಗಿವೆ. ಇವರ ಕಥೆಗಳಲ್ಲಿ ಸಾಮಾಜಿಕ ಒತ್ತಡ, ಕೌಟುಂಬಿಕ ಜೀವನ, ಬಡವರ, ಶೋಷಿತರ, ಕೆಳವರ್ಗದ ಜೀವನ ದರ್ಶನ ಇವೇ ಮುಂತಾದವು ಶ್ಯಾಮಲ ಅವರ ಕತೆಯ ಕಥಾವಸ್ತುವಾಗಿ ನಿರ್ವಹಿಸುತ್ತವೆ.

ಶ್ಯಾಮಲಾ ಅವರ 'ನಡೆದುಬಂದ ಲಕ್ಷ್ಮಿ', 'ಕಂತಿಯ ದೇಶಾಂತರ' ಕರುಳ ಕತ್ತರಿ, ಶೇರಿನ ಪಾಟ್ಲ ಮುಂತಾದ ಕತೆಗಳಲ್ಲಿ ದಲಿತ ಸಂವೇದನೆಯ ನೆಲೆಗಳನ್ನು ಗುರುತಿಸಬಹುದು. ದಲಿತ ಬದುಕಿನ ವಿವಿಧ ಮುಖಗಳನ್ನು ಸೂಕ್ಷ್ಮ ಸಂವೇದನೆಯ ದೃಷ್ಟಿಕೋನದಿಂದ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕಥೆಗಳು ಉತ್ತರ ಕರ್ನಾಟಕದ ಆಡು ಭಾಷೆಯಲ್ಲಿ ನಿರೂಪಿತಗೊಂಡಿವೆ. ದ್ಯಾವಕ್ಕ, ಕಂತಿ, ಚಂದ್ರಿ ಮುಂತಾದ ದಲಿತ ಮಹಿಳಾ ಪಾತ್ರಗಳ ಮೂಲಕ ಸಾಮಾಜಿಕ ಮೌಢ್ಯತೆ, ಶೋಷಣೆ, ದೌರ್ಜನ್ಯ, ದಬ್ಬಾಳಿಕೆಯನ್ನು ಒಡೆಯುವ ಪ್ರಯತ್ನ ಶ್ಲಾಘನೀಯ. ಹೀಗೆ ಶ್ಯಾಮಲಾ ಅವರ ಕತೆಗಳಲ್ಲಿ ಕಂಡುಬರುವ ದಲಿತ ಪರ ಕಾಳಜಿಯ, ದಲಿತ ಸಂವೇದನೆಯ ವಸ್ತುವನ್ನೊಳಗೊಂಡ ಕತೆಗಳ ವಿಶ್ಲೇಷಣೆ ಲೇಖನದ ಆಶಯವಾಗಿದೆ.

ಆಧುನಿಕ ಕನ್ನಡ ಸಾಹಿತ್ಯದ ಮೊದಲ ಕಾಲಘಟ್ಟವಾದ ನವೋದಯ ಹೊಸ ಹೊಸ ಆಯಾಮಗಳಿಗೆ, ಹೊಸ ಹೊಸ ಆಲೋಚನೆಗಳಿಗೆ ತೆರೆದುಕೊಂಡ ಕಾಲವದು. ಇಂತಹ ಕಾಲಘಟ್ಟದಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ ಮಹಿಳಾ ಲೇಖಕಿಯರಲ್ಲಿ ಶ್ಯಾಮಲಾದೇವಿ ಬೆಳಗಾಂಕರರು ಪ್ರಮುಖರು. ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆಯನ್ನು ಸಮರ್ಥವಾಗಿ ತಮ್ಮ ಬರವಣಿಗೆಯಲ್ಲಿ ಬಳಸಿಕೊಂಡಿದ್ದಾರೆ. ಇವರ ಮೊದಲ ಹೆಸರು ಸುಭದ್ರಾ ಎಂದಿತ್ತು. ಬೆಳಗಾಂನ ರಾಮಚಂದ್ರರಾಯರನ್ನು ವಿವಾಹವಾದ ಬಳಿಕ ಶ್ಯಾಮಲಾದೇವಿ ಬೆಳಗಾಂವಕರ ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದರು. 1911ರಲ್ಲಿ ಧಾರವಾಡದಲ್ಲಿ ಜನಿಸಿದ ಇವರು ಹೂಬಿಸಿಲು (1936), ಹೊಂಬಿಸಿಲು (1943) ಎಂಬ ಎರಡು ಕಥಾಸಂಕಲನವನ್ನು ಹೊರತಂದಿದ್ದಾರೆ. ಇದರಲ್ಲಿ ಸುಮಾರು 22 ಕಥೆಗಳಿವೆ. ಕೆಲವು ಬಿಡಿಕಥೆಗಳು ಉಂಟು. ಜಯಕರ್ನಾಟಕದ ಸಂಪಾದಕರಾಗಿ, ಪ್ರಕಾಶಕರಾಗಿ, ಅಖಿಲ ಭಾರತ ಮಹಿಳಾ ಪರಿಷತ್ತಿನ ಕ್ರಿಯಾಶೀಲ ಸದಸ್ಯತ್ವ, ಮುಖಂಡತ್ವ, ಧಾರವಾಡ ನಗರಸಭೆಯ ಸದಸ್ಯತ್ವ, ಮಕ್ಕಳ ಕೂಟದ ನಿರ್ದೇಶಕತ್ವ, ಇವುಗಳ ಜೊತೆಗೆ ಕಥೆಗಾರ್ತಿಯಾಗಿ, ವಿಮರ್ಶಕಿಯಾಗಿ, ಅನುವಾದಕಿಯಾಗಿ, ಬಹುಮುಖಿ ವ್ಯಕ್ತಿತ್ವದ, ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದ್ದಾರೆ.

ಅಂದಿನ ಕಾಲಘಟ್ಟದಲ್ಲಿ ಬರವಣಿಗೆಯಲ್ಲಿ ತೊಡಗಿದ್ದ ಮಹಿಳಾ ಲೇಖಕಿಯರಿಗಿಂತ ಭಿನ್ನವಾದ ಬರವಣಿಗೆ ಶ್ಯಾಮಲಾ ಅವರದ್ದಾಗಿತ್ತು. ವೈವಿಧ್ಯಮಯವಾದ ಕಥಾವಸ್ತು ಇವರ ಕಥೆಗಳಲ್ಲಿ ವಿಭಿನ್ನ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇವರ ಕಥೆಗಳು ವಿವಿಧ ಜಾತಿ, ವರ್ಗಗಳ ಜನರ ಜೀವನಾನುಭವವನ್ನು ಒಳಗೊಂಡಿದ್ದು, ವೈವಿಧ್ಯಮಯ ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸಿವೆ. ಅಷ್ಟೇ ಅಲ್ಲದೆ ಜಾತಿ, ಧರ್ಮಗಳ ಸಂಕೋಲೆಗೆ ಸಿಲುಕಿ, ಕ್ರೂರ ವ್ಯವಸ್ಥೆಯ ದೌರ್ಜನ್ಯ, ದಬ್ಬಾಳಿಕೆಗೆ ಬಲಿಯಾದ ನೊಂದ ಜೀವಗಳ ಸಾಕ್ಷಾತ್ಕಾರ, ವ್ಯವಸ್ಥೆಯನ್ನು ಧಿಕ್ಕರಿಸಿ ಬದುಕನ್ನು ಕಟ್ಟಿಕೊಳ್ಳುವ ಗಟ್ಟಿಗಿತ್ತಿಯರು ಹಾಗೂ ವ್ಯವಸ್ಥೆಗೆ ಬಲಿಪಶುವಾಗುವ ಮುಗ್ಧ ಜನರು ಸಾಮಾಜಿಕ ಸನ್ನಿವೇಶಗಳಲ್ಲಿ ನಿರ್ವಹಿಸುವ ಜವಾಬ್ದಾರಿ ಇವರ ಕಥೆಗಳಲ್ಲಿ ಕಾಣುತ್ತೇವೆ. ಬಡವರ, ಅನಕ್ಷರಸ್ಥರ, ದಲಿತ ಪರ ಕಾಳಜಿಯ ಹಲವಾರು ಕಥೆಗಳು ಇವರ ಬರವಣಿಗೆಯಲ್ಲಿ ಮೂಡಿಬಂದಿವೆ.

ಪ್ರಸ್ತುತ ಲೇಖನದಲ್ಲಿ ದಲಿತ ಸಂವೇದನೆಯ ಕಥಾವಸ್ತುವನ್ನು ಒಳಗೊಂಡ 'ನಡೆದುಬಂದ ಲಕ್ಷ್ಮಿ', 'ಕಂತಿಯ ದೇಶಾಂತರ' ಹಾಗೂ 'ಕರುಳ ಕತ್ತರಿ' ಎಂಬ ಕಥೆಗಳನ್ನು ದಲಿತ ಸಂವೇದನೆಯ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

"ಕೆಳಜಾತಿ–ವರ್ಗಗಳ ಮಹಿಳೆಯರನ್ನು ಅವರ ಸಮಸ್ಯೆಗಳನ್ನು ನಮ್ಮ ಕಥಾಲೋಕಕ್ಕೆ ತಂದುದರಲ್ಲಿ ಶ್ಯಾಮಲ ಅವರ ಕಥೆಗಳಿಗೆ ಚಾರಿತ್ರಿಕ ಮಹತ್ವವಲ್ಲದೆ ಮೌಲಿಕ ಮಹತ್ವವೂ ಇದೆ" (ಮುನ್ನುಡಿಯಿಂದ xxviii) ಎಂಬ ವಿಜಯದಬ್ಬೆಯವರ ಗ್ರಹಿಕೆ ಸೂಕ್ತವಾಗಿದೆ. ಏಕೆಂದರೆ ಅಂದಿನ ಕಾಲದ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಕೆಳವರ್ಗದವರ ಜೀವನಕ್ರಮವನ್ನು ಕಥಾವಸ್ತುವಾಗಿಸಿಕೊಂಡು ಕೃತಿ ರಚಿಸುವುದು ಸುಲಭದ ಕೆಲಸವಾಗಿರಲಿಲ್ಲ. ಅಂತಹ ಸನ್ನಿವೇಶದಲ್ಲಿ ಮಹಿಳಾ ಲೇಖಕಿ ದಲಿತಪರ ಕಾಳಜಿಯಿಂದ ಕಥೆಯನ್ನು ರಚಿಸಿದುದು ಒಂದು ಚಾರಿತ್ರಿಕ ದಾಖಲೆ ಎಂದೇ ಹೇಳಬೇಕು. ಆ ನಿಟ್ಟಿನಲ್ಲಿ ಶ್ಯಾಮಲಾ ಅವರ ಈ ಪ್ರಯತ್ನ ಮೆಚ್ಚುವಂತದ್ದು. ಪ್ರಸುತ ಸನ್ನಿವೇಶದಲ್ಲಿಯೂ ಮಹಿಳೆ ಸಮಸ್ಯೆ, ಸವಾಲುಗಳನ್ನು ಎದುರಿಸಿ ದಿಟ್ಟತನದಿಂದ ಬದುಕನ್ನು ಕಟ್ಟಿಕೊಳ್ಳುವ, ಸ್ವತಂತ್ರವಾಗಿ, ಸ್ವಾಭಿಮಾನಿಯಾಗಿ ಬದುಕಲು ಮಹಿಳೆಯರಿಗೆ ಸ್ಫೂರ್ತಿಯ ಚಿಲುಮೆಯಾಗಿ ಇವರ ಕಥೆಗಳು ದಾರಿದೀಪವಾಗಿವೆ.

'ನಡೆದು ಬಂದ ಲಕ್ಷ್ಮಿ' ಕಥೆಯ ಕೇಂದ್ರಬಿಂದು ದ್ಯಾವಕ್ಕ. ಜೋಗತಿ ದ್ಯಾವಕ್ಕ ಗೌಡರ ಮನೆಯ ಊಳಿಗದವನಾದ ನಿಂಗನೊಂದಿಗೆ ವಿವಾಹವಾಗಿ ಸಹದೇವ ಎಂಬ ಗಂಡುಮಗುವನ್ನು ಪಡೆದಿರುತ್ತಾಳೆ. ಕುಡಿತಕ್ಕೆ ಶರಣಾಗಿದ್ದ ಗಂಡನನ್ನು ನಿರಾಕರಿಸಿ ನಾಲ್ಕುವರ್ಷದ ಮಗನೊಂದಿಗೆ ಸ್ವತಂತ್ರವಾಗಿ, ಸ್ವಾಭಿಮಾನಿಯಾಗಿ ಬದುಕನ್ನು ಕಟ್ಟಿಕೊಂಡು, ಮಗನನ್ನು ವಿದ್ಯಾವಂತನನ್ನಾಗಿ ಮಾಡುವ ಜವಾಬ್ದಾರಿ ದ್ಯಾವಕ್ಕನದ್ದಾಗಿರುತ್ತದೆ.

ಕುಡಿದು ಬಂದು ಗಂಡನನ್ನು ಮನೆಯಿಂದ ಹೊರ ಹಾಕುತ್ತಾಳೆ. ಆಗ ಗಂಡ ನಿಂಗ "ನೋಡು ಹಾಂ ದ್ಯಾವಿ. ನಂಗೆ ಹೊರಗೆ ಹಾಕಾಕ್ಹತ್ತೀ, ಬಾಳ ಜ್ವಾಕೀ ಅಂದೆ! ಮತ್ತ ಮೂರ ದಿಂದಾಗ ಹೊಟ್ಟಿಗಿಲ್ಲಾ...ಆ ನನ್ ಧಣಿ ಅಂತ ಕರಿಗಿರ್ಯಾಕ ಬಂದೀ...ನಾಯೇನ ಆಗ...ಬರಾಕಿಲ್ಲಾ" ಎಂದಾಗ ವಿಚಾರವಂತಳಾದ ದ್ಯಾವಕ್ಕ ದಿಟ್ಟತನದಿಂದ ಉತ್ತರ ಕೊಡುತ್ತಾಳೆ. "ಛೀ ಏಳ ಗಂಡ್ಸs! ನಾನ್ ಬೆದರ್‌ಸಾಕ ಬರ್ತಿಯಾ? ಏನ್ ನಿನ್ನ ಸಂಗಾಟ ಇದ್ರೂ ನನ್ ರಟ್ಟೀ ಮುರಿದು ಒಂದು ರೊಟ್ಟಿ ನಾ ತಿನ್ನೊದ ನನಗೇನ ಬಿಟ್ಟಲ್ಲಾ. ರಟ್ಯಾಗ ಬಲಾ ಇರೊತನಕಾ ಕೈಯಾಗ ನಾಕ ರೊಕ್ಕ ಮಾಡಿಕೊಂಡ, ಮಗ್ಗ ಅ್ಯಟ ಇದ್ಯೇವ ಕಲಿಸಿ, ಮುಪ್ಪಿನ್ಯಾಗ ಸುಕಾ ಉಣ್ತೀನಿ" (ಪು. 58) ಎಂಬ ದ್ಯಾವಕ್ಕನ ಮಾತುಗಳಲ್ಲಿ ಆತ್ಮಸ್ಥೈರ್ಯ, ಸ್ವತಂತ್ರವಾಗಿ ಬಾಳುವ ದಿಟ್ಟತನ, ಸಮಸ್ಯೆಯನ್ನು ಎದುರಿಸುವ ಧೈರ್ಯದ ಹೆಣ್ಣಾಗಿ ಕಂಡುಬರುತ್ತಾಳೆ. ದ್ಯಾವಕ್ಕ ಗಂಡಸರಿಗೆ ಏನ್ ಕಡಿಮೆ ಇಲ್ಲದಾಂಗ ದುಡಿಮೆ ಮಾಡಿ ನಾಲ್ಕಾರು ಹಣ ಸಂಪಾದಿಸಿರುತ್ತಾಳೆ. ಹೂವಿನ ತೋಟ, ಮಾವಿನ ತೋಟಗಳನ್ನು ಗುತ್ತಿಗೆಗೆ ಪಡೆದು ಹಗಲು ರಾತ್ರಿಯೆನ್ನದೆ ದುಡಿದು ಒಂದಿಷ್ಟು ಹಣ ಸಂಪಾದಿಸಿಕೊಂಡು ಬದುಕನ್ನು ನಿರ್ವಹಿಸುತ್ತಿರುತ್ತಾಳೆ. "ಸಾದೇವನಿಗೆ ಇಪ್ಪತ್ತು ವರುಷಗಳಾಗಿರಬೇಕು ಹತ್ತು ವರುಷಗಳ ಹಿಂದೆ, ದ್ಯಾವಕ್ಕನ ಹತ್ತಿ ಹೊಂದಿದ ಆಪ್ತೇಷ್ಟರು ತಮ್ಮ ತಮ್ಮಲ್ಲಿ ಮಕ್ಕಳ ತಮ್ಮಂದಿರ ಏಳು ಮದುವೆಗಳನ್ನು ಹೂಡಿದರಂತೆ. ಒಂದೇ ಹಂದರದಲ್ಲಿ, ಒಂದೇ ದಿವಸ, ಒಂದೇ ಮುಹೂರ್ತಕ್ಕೆ ಏಳು ಮದುವೆಗಳಾಗಬಾರದೆಂದು, ನಮ್ಮ ದ್ಯಾವಕ್ಕನೂ ತನ್ನ ಮಗ ಸಾದೇವನ ಮದುವೆಯನ್ನು ತನ್ನ ತಮ್ಮನ ಮಗಳಾದ ಮೂರು ವರುಷದ ನೀಲಿಯೊಡನೆ ಹೂಡಿ, ಎಂಟನೆಯ ಮದುವೆಯಿಂದ ಹಂದರವನ್ನು ಸರಿಪಡಿಸಿ ನಾಲ್ಕು ಜನರ ಕಡೆಯಿಂದ ಹೌದೆನಿಸಿಕೊಂಡುಬಿಟ್ಟಳಂತೆ!" (ಪು. 60) ಎಂದು ನಿರೂಪಕಿ ಹೇಳುವ ಮಾತುಗಳು ದ್ಯಾವಕ್ಕನ ಬುದ್ಧಿವಂತೆ, ವಿಚಾರವಂತೆ ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

ಅಷ್ಟೆಲ್ಲಾ ಕಷ್ಟಪಟ್ಟು ದುಡಿದು ಮಗನನ್ನು ಸಾಕಿ ಸಲಹಿದರೂ ಸಾದೇವ ತಾಯಿಗೆ ತಕ್ಕ ಮಗನಾಗದೆ ಅವ್ವನಿಗೆ ಗೊತ್ತಿಲ್ಲದಂತೆ ಶೆರೆಬಡಕ, ಗಾಂಜಿಬಡಕ ಗಡ್ಯಾನ ಹೆಂಡತಿಯಾದ ದುರ್ಪತೆ (ದ್ರೌಪದಿ)ಯ ಜೊತೆ ಸಂಬಂಧ ಹೊಂದಿ, ಅವಳ ಜೊತೆ ಓಡಿಹೋಗುತ್ತಾನೆ. ದ್ಯಾವಕ್ಕ ಸಂಪಾದಿಸಿಟ್ಟಿದ್ದ ಹಣ, ಒಡವೆಗಳನ್ನೆಲ್ಲಾ ಕದ್ದೊಯ್ದು ಮುಂಬೈಲಿ ಕೆಲ ದಿನಗಳು ಕಳೆದು ಪೋಲಿಸರ ಸೆರೆಯಾಗುತ್ತಾನೆ. ವಿಷಯ ತಿಳಿದ ದ್ಯಾವಕ್ಕ ಮಗನನ್ನು ಬಿಡಿಸಲು ಪ್ರಯತ್ನಿಸುತ್ತಾಳೆ. ಅಷ್ಟೆಲ್ಲಾ

ಅನ್ಯಾಯ, ನಂಬಿಕೆದ್ರೋಹ ಮಾಡಿದ ಮಗನನ್ನು ದ್ವೇಷಿಸದೆ ಪರವಾಗಿ ನಿಲ್ಲುತ್ತಾಳೆ. ಇತ್ತ ದುರ್ಪತಿಯ ಗಂಡ ಗಡ್ಯಾನು "ಅವರಿಬ್ಬರ್ನ ಸಾದಿಸಿದ್ರೆ ನಿನ್ನ ಸುದಕು ಬಂದಿಖಾನೆ ಕಾಣಿರಿ, ತಗಣೀ ರೊಟ್ಟಿ ತಿನ್ನಲಿಕ್ಕೆ ಹಚ್ಚುತ್ತೇನೆ" (ಪು. 68) ಎಂದು ಮೀಸೆ ಮೇಲೆ ಕೈಯಿರಿಸಿ ಹಲ್ ಮಶಾಕ್ಹತ್ಯಾನ ಎಂದಾಗ ದ್ಯಾವಕ್ಕ ದಿಟ್ಟ ಉತ್ತರವನ್ನೆ ಕೊಡುತ್ತಾಳೆ. "ಹಂತ ಪರಸಂಗ ಬಂದ್ರೆ, ನನ್ನ ದುಡ್ಡು ಹೋಗ್ಲಿ, ದುಗ್ಗಾಣೀನೂ ಹೋಗ್ಲಿ, ನನ್ನ ಹೊಲ ಹೋಗ್ಲಿ. ಆಕಿ ದಶೀಂದ ನನ್ನ ಮಗನ ಜೀವ ಹರೀತಿದ್ರ, ಆಕಿನ್ನ ಆ ಯಮನ ದವಡ್ಯಾಗಿನಿಂದ ಬಿಡಿಸಿಕ್ಯಾರಾ ತಂದು, ನನ್ ಮಗನ ಸಂಗಾಟ ಲಗಣಾ ಮಾಡಿ ನನ್ ಮನ್ಯಾಗ ತಂದಿಟಗೊಂತೇನಿ" (ಪು. 69) ಎಂದು ಸವಾಲಿನ ಮಾತುಗಳನ್ನಾಡುತ್ತಾಳೆ. ದ್ಯಾವಕ್ಕನ ಈ ಮಾತುಗಳಲ್ಲಿ ಮಗನ ಮೇಲಿನ ಕುರುಡು ಪ್ರೀತಿಯಷ್ಟೇ ಅಲ್ಲದೆ ಮಗನನ್ನು ನಂಬಿ ಬಂದ ಹೆಣ್ಣಿನ ಬದುಕನ್ನು ರೂಪಿಸುವ, ಆಕೆಗೆ ನೆಲೆಯನ್ನು ಒದಗಿಸುವ ನಿಲುವು ವ್ಯಕ್ತವಾಗಿದೆ.

ಒಂದು ಹೆಣ್ಣಿನ ಸ್ಥಿತಿಯನ್ನು ಮತ್ತೊಂದು ಹೆಣ್ಣು ಬಲ್ಲಳು ಎಂಬುದಕ್ಕೆ ದ್ರೌಪದಿಯ ಮೇಲಿನ ದ್ಯಾವಕ್ಕನ ಕಳಕಳಿ, ಸಹಾನುಭೂತಿಯೇ ಸಾಕ್ಷಿ. ಏಕೆಂದರೆ ಒಂಟಿ ಹೆಣ್ಣು ಸಮಾಜದ ದುಷ್ಟ ಜನರ ನಡುವೆ ಬದುಕನ್ನು ಕಟ್ಟಿಕೊಳ್ಳುವುದು ಎಷ್ಟು ದುಸ್ತರ ಎಂಬುದರ ಅರಿವು ದ್ಯಾವಕ್ಕನಿಗೆ ಇತ್ತು. ಆದ್ದರಿಂದ ದ್ಯಾವಕ್ಕ ಪೋಲಿಸರಿಗೆ ದುಡ್ಡು ಕೊಟ್ಟು ಕೋರ್ಟಿನಲ್ಲಿ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ವಾದವನ್ನು ಮಂಡಿಸಿ ಗಂಡನಿಂದ ಸೂಡಪತ್ರಕ್ಕೆ ಎರಡುನೂರು ರೂಪಾಯಿ ಕೊಟ್ಟು ತನ್ನ ಮಗನೊಂದಿಗೆ ಮದುವೆ ಮಾಡಿಸುವ ನಿರ್ಧಾರ ತೆಗೆದುಕೊಳ್ಳುತ್ತಾಳೆ. ಇದನ್ನೆಲ್ಲಾ ಪರಿಶೀಲಿಸಿದ ನ್ಯಾಯಮೂರ್ತಿಗಳು "ಅವ್ವಾ ನೀನೇ ನನ್ನ ಜಾಗದಲ್ಲಿದ್ದರೆ ಒಳಿತಾಗುತ್ತಿತ್ತು ನೋಡು. ಎಷ್ಟು ನಿನ್ನ ಧೈರ್ಯ, ಎಷ್ಟು ನಿನ್ನ ವಿಚಾರ ತಾಯೀ" ಎಂದು ಮೆಚ್ಚುಗೆಯ ಮಾತುಗಳನ್ನಾಡಿದಾಗ ದ್ಯಾವಕ್ಕನಿಗೆ ಅಭಿಮಾನ ಉಂಟಾಯಿತು.

ಪೋಲಿಸರು ನೀನ್ಯಾಕೆ ದುಡ್ಡು ಕೊಡುತ್ತೀಯ ಎಂದು ಕೇಳುತ್ತಾರೆ. ಆಗ ದ್ಯಾವಕ್ಕನ ಮಾತುಗಳು ನಿಜಕ್ಕೂ ಶ್ಲಾಘನೀಯ. "ದುರ್ಪದಿಯನು ಹಿಂಗೆ ಬಿಟ್ರ, ಪರದೇಶಿ ಹುಡುಗಿ ಅಡ್ನಾಡಿ ಆಗಿ ಹೋಕ್ಕೈತಿ; ಯಡ್ಡೂ ಮತ್ತೂ ಓಡಿ ಓಡಿ ಹೋಗುವ. ಅದರಕಿಂತಾ ಮದವೀ ಮಾಡಿ ಮನ್ಯಾಗಿಟಗೊಂಡಿದ್ದ ಸುಕಾ ಅಲ್ರೀ ಯಪ್ಪಾ?" ಎಂಬ ವಿವೇಚನೆ, ದೂರದೃಷ್ಟಿಯ ಗ್ರಹಿಕೆ, ಹೆಣ್ಣಿನ ಮೇಲಿನ ಮೂಸವೀಯತೆ, ಕರುಣೆ, ಅನುಕಂಪ ಎಲ್ಲಾ ಗುಣಗಳನ್ನು ದ್ಯಾವಕ್ಕನ ಪಾತ್ರದ ಮೂಲಕ ಬಿಂಬಿಸಿರುವ ಶ್ಯಾಮಲಾ ಅವರು ನಿಜಕ್ಕೂ ಸಾಮಾಜಿಕ ಕಳಕಳಿಯ, ಮಾನವೀಯ ಮೌಲ್ಯಗಳ ಹೂರಣ ಕಥೆಯಲ್ಲಿ ನಿರೂಪಿಸಿರುವುದು ಔಚಿತ್ಯಪೂರ್ಣವಾದುದಾಗಿದೆ. ದಿಟ್ಟ ಮಹಿಳೆಯ ವ್ಯಕ್ತಿತ್ವವನ್ನು ಜೋಗತಿ ದ್ಯಾವಕ್ಕನ ಪಾತ್ರದ ಮೂಲಕ ಕಟ್ಟಿಕೊಡುವಲ್ಲಿ ಉತ್ತರ ಕರ್ನಾಟಕದ ಭಾಷೆಯನ್ನು ಅತ್ಯಂತ ಸಮರ್ಥವಾಗಿ ನಿರೂಪಕಿ ಬಳಸಿಕೊಂಡಿದ್ದಾರೆ. ಇಲ್ಲಿನ ಭಾಷೆ, ಸಂವಿಧಾನ, ಧೋರಣೆ ಪರಿಣಾಮದ ದೃಷ್ಟಿಯಿಂದ ಹಾಗೂ ದಲಿತ ಸಂವೇದನೆಯ ದೃಷ್ಟಿಯಿಂದ ಮೌಲಿಕ ಮಹತ್ವವನ್ನು ಪಡೆದುಕೊಂಡ ಕತೆಯಾಗಿ ನಿಲ್ಲುತ್ತದೆ.

ಇಂತಹದ್ದೇ ದಲಿತ ಸಂವೇದನೆಯನ್ನೊಳಗೊಂಡ ಕಥೆ 'ಕಂತಿಯ ದೇಶಾಂತರ'. ಕಥೆಯ ಕೇಂದ್ರಬಿಂದು ಕಂತಿ. ದ್ಯಾವಕ್ಕನಂತೆಯೇ ಬದುಕನ್ನು ದಿಟ್ಟತನದಿಂದ ಎದುರಿಸಿ ಬದುಕನ್ನು ಕಟ್ಟಿಕೊಂಡ ಮಹಿಳೆಯ ಚಿತ್ರಣ ಕಥಾವಸ್ತುವಾಗಿದೆ. ಕುಡಿತದ ಚಟಕ್ಕೆ ಬಿದ್ದಿದ್ದ ಕಂತಿಯ ಗಂಡ ಎರಡು ಮಕ್ಕಳ ತಂದೆಯಾಗಿದ್ದರೂ ದುಡಿಯದೆ ಕುಂತು ತಿನ್ನುವ ಜಯಮಾನದವನು ಇಷ್ಟೇ ಅಲ್ಲದೆ 'ನಾ ದುಡಿದು ತಂದದ್ದನ್ನ ಎಲ್ಲ ಕಸಗೊಂಡು ಕ್ಯಾರಾ, ಹೆಂಡಾ ಕುಡಿದು ಜೋಲಿ ಹೊಡಕೊಂತ ಬರ್ತಾನ, ಮತ್ತ ಮನ್ಯಾಗ ರೊಟ್ಟಿಲ್ಲಾಂತ ನನ್ನನ್ನ ತಳಸ್ತಾನ" (ಪು. 155) ಎಂಬ ಕಂತಿಯ ಮಾತಿನಲ್ಲಿ ಸೋಮಾರಿ ಗಂಡನ ಮೇಲಿನ ತಾತ್ಸಾರ ಎದ್ದುಕಾಣುತ್ತದೆ. ಬಡವರ, ದಲಿತರ, ಹಿಂದುಳಿದವರ ಬಹುಪಾಲು ಜನಜೀವನ ಇಂತಹ ದುಶ್ಚಟಗಳಿಂದ ಜೀವನವನ್ನು ಸಂಕಷ್ಟಕ್ಕೆ ಸಿಲುಕಿಸಿ ಕಷ್ಟ-ನಷ್ಟಗಳನ್ನು ಅನುಭವಿಸುತ್ತಿರುವುದು ದಲಿತರ ದುರಂತವೇ ಸರಿ. ಕುಡಿತಕ್ಕೆ ಶರಣಾಗಿ, ದುಡಿತದಿಂದ ದೂರಾಗಿ, ತನ್ನ ಜೀವನವನ್ನೇ ನಾಶಮಾಡಿಕೊಳ್ಳುವ ಹಾಗೂ ಹೆಂಡತಿ ಮಕ್ಕಳನ್ನು ಬೀದಿಪಾಲು ಮಾಡುವ ಇಂತಹ ಗಂಡನಿಂದ ದೂರ ಹೋಗಿ ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಳ್ಳುವ ದೃಢ ನಿರ್ಧಾರ ಕಂತಿಯದು. ಹಾಗೆಯೇ ಕುಡುಕ ಗಂಡನಿಂದ ದೂರವಾಗಿ ಗೌಡರ ಮನೆಯೊಂದರಲ್ಲಿ ಗೌರಿ (ತವರು ಮನೆಯಲ್ಲಿ ಇಟ್ಟ ಹೆಸರು) ಎಂಬ ಹೆಸರಿನಿಂದ ಚಾಕರಿ ಮಾಡಿಕೊಂಡು ಗೌಡ-ಗೌಡತಿಯರ ವಿಶ್ವಾಸವನ್ನು ಗಳಿಸುತ್ತಾಳೆ.

ಮಾದೇವ ಗೌಡರ ಮನೆಯ ಆಳುಮಗನಾಗಿದ್ದ. ಕೆಲಸದಲ್ಲಿ ಪ್ರಾಮಾಣಿಕತೆ, ಗೌಡರ ಮೇಲೆ ನಿಷ್ಠೆ ಹೊಂದಿದ್ದ. ಹಾಗೆಯೇ ಗೌಡರಿಗೂ ಈತನಲ್ಲಿ ನಂಬಿಕೆ ವಿಶ್ವಾಸ ಇತ್ತು. ಆದ್ದರಿಂದಲೆ ಇವನಿಗೆ ಊಟಕ್ಕೆ ಹಾಕಿ, ಕಂಬಳಿ ಅರಿವೆ ಜೋಡುಗಳನ್ನು ಕೊಟ್ಟು, ಅವನ ಹೆಸರಿಗೆ ಬ್ಯಾಂಕಿನಲ್ಲಿ ವರ್ಷಕ್ಕೆ 40 ರೂ. ನಂತೆ 200-300 ಕೂಡಿಹಾಕಿದ್ದರು. ಇಲ್ಲಿ ಗೌಡ ಹಾಗೂ ಆಳುವಿನ ನಡುವೆ ಅವಿನಾಭಾವ ಸಂಬಂಧ ಇತ್ತು. ಮಾದೇವ ಹಾಗೂ ಗೌರಿ ಇಬ್ಬರೂ ಹೊಲ ಮನೆ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದರು. ಗದ್ದೆ ಕೆಲಸ ಮಾಡುವಾಗ ಕುಡುಗೋಲಿನಿಂದ ಕಾಲು ಕೂಯ್ದು, ಗಾಯ ಹೆಚ್ಚಾದಾಗ ಆತನ ಆರೈಕೆಯನ್ನು ಗೌರಿಯೇ ಮಾಡುತ್ತಾಳೆ. ಇದನ್ನೆಲ್ಲಾ ಗಮನಿಸಿದ ಗೌಡ-ಗೌಡತಿಯರು ಇವರಿಬ್ಬರನ್ನು ಮದುವೆ ಮಾಡಿದರೆ, ಇಬ್ಬರೂ ದಿಕ್ಕು ದೆಸೆ ಇಲ್ಲದವರಿಗೆ ಒಂದು ಬದುಕನ್ನು ಕಟ್ಟಿಕೊಟ್ಟಂಗಾಗುತ್ತದೆ. ಹಾಗೆಯೇ ದುಡಿಯಲು ಒಳ್ಳೆ ಕೆಲಸಗಾರರು ಸಿಕ್ಕುತ್ತಾರೆ ಎಂಬ ಆಲೋಚನೆ ಮಾಡಿ ಇಬ್ಬರಿಗೂ ಮದುವೆ ಮಾಡಿಸುತ್ತಾರೆ.

ಗೌರಿಯು ಮಾದೇವನನ್ನು ಮದುವೆಯಾಗಿ ಗಂಡ ಮಕ್ಕಳೊಂದಿಗೆ ಸುಖವಾಗಿದ್ದಳು. ಜಂತ್ರೆಗೆ ಹೋದಾಗ ಅಲ್ಲಿ ತನ್ನ ಮೊದಲ ಗಂಡ ಭಿಕಾರಿಯಾಗಿ, ಭಿಕ್ಷೆ ಬೇಡುತ್ತಾ ಕಂತಿಯ ಗುಣಗಾನ ಮಾಡುತ್ತಾ ಸಾಯುವ ಸ್ಥಿತಿಯಲ್ಲಿರುವುದನ್ನು ಕಂಡು ಕಂತಿಯ ಹೃದಯದಲ್ಲಿ ಹುದುಗಿದ್ದ ಪತಿಭಕ್ತಿ ಜಾಗೃತಗೊಂಡಿತು. "ಇಕಾ ನಾ ಬಂದೇನಿ. ನಾನs ಕಂತೀ...ಗೌಡರ ಮನ್ಯಾಗ ತಿಂದುಂಡ ಸುಕದಿಂದದೇನೀ ಇಕಾ ನಿನ್ನ ಮಕ್ಕಳೂ... ಆತನ ಬೆವರು, ಮೈಯ್ಯ ಹೊಲಸು, ಕೂರಿಬಿದ್ದು ನಾರುತ್ತಿದ್ದ ದೇಹದ ನಾತ, ಇವಾವುದರ ಪರಿವೇ ಇಲ್ಲವಳಿಗೆ" (ಪು. 165) ಹೃದಯದಲ್ಲಿ ಹುದುಗಿದ್ದ ಪತಿಭಕ್ತಿ ಜಾಗೃತವಾಗಿದೆ" ಎಂಬ ಮಾತುಗಳಲ್ಲಿ ಕಂತಿಗೆ ಇದ್ದ ಪತಿಭಕ್ತಿ, ಯಾವ ಸ್ಥಿತಿಯಲ್ಲಿದ್ದರೂ, ಎಷ್ಟೇ ತಪ್ಪು ಮಾಡಿದ್ದರೂ ಗಂಡನನ್ನು ಸ್ವೀಕರಿಸುವ ಮನಸ್ಥಿತಿ ಕಂತಿಯ ಮಾನವೀಯ ಅಂತರ್ಯವನ್ನು ಧ್ವನಿಸುತ್ತದೆ.

ಕೊನೆಯಲ್ಲಿ ಕಥೆಗಾರ್ತಿ ಹೇಳುವ ಮಾತು "ಜೀವನದಲ್ಲಿ ಬರೀ ಕತ್ತಲೆಯೇ ಇಲ್ಲ, ಬೆಳಕೂ ಇದೆಯೆಂದವಳಿಗೆ ಕ್ಷಣ ಹೊತ್ತು ಅನಿಸದೆ ಹೋಗಲಿಲ್ಲ" (ಪು. 166) ಎಂಬ ಮಾತಿನಲ್ಲಿ ಕತ್ತಲೆಯ ಹಿಂದೆ

ಬೆಳಕು, ಬಡತನದ ಹಿಂದೆ ಸಿರಿತನ, ಕಷ್ಟದ ಹಿಂದ ಸುಖ, ನೋವಿನ ಹಿಂದ ಸಂತೋಷ ಇದ್ದೇ ಇದೆ ಎಂಬುದನ್ನು ಸೂಚ್ಯವಾಗಿ ನಿರೂಪಿತಗೊಂಡಿವೆ.

'ಕರುಳ ಕತ್ತರಿ' ಕಥೆಯು ಇವೆರಡು ಕಥೆಗಿಂತ ಭಿನ್ನವಾದ ಸಂದರ್ಭ ಸನ್ನಿವೇಶಗಳಿಂದ ಕೂಡಿದೆ. ಇಲ್ಲಿಯೂ ಸಹ ಕುಟುಂಬದಿಂದ ದೂರಾಗಿ ಬದುಕನ್ನು ಕಟ್ಟಿಕೊಳ್ಳುವ, ಸ್ವತಂತ್ರ ಅಸ್ತಿತ್ವದ ಹುಡುಕಾಟದ ದಿಟ್ಟ ಮಹಿಳೆಯ ಪಾತ್ರವಿದೆ. ಚಂದ್ರಿ ಕಥೆಯ ಕೇಂದ್ರಬಿಂದು. ಗದ್ದಿಗೆಪ್ಪ ಹಾಗೂ ಸಣ್ಣವ್ವ ಈಕೆಯ ತಂದೆ ತಾಯಿ. ಹೆತ್ತ ತಂದೆ ತಾಯಿಯರಿಂದಲೇ ಶೋಷಣೆಗೆ ಒಳಗಾಗಿ, ನೋವು, ಸಂಕಟವನ್ನು ಅನುಭವಿಸಿ ಹುಚ್ಚಿಯಾಗಿ ಅಲೆಯುವ ಸ್ಥಿತಿಯನ್ನು ತಲುಪುತ್ತಾಳೆ. ತಂದೆ ತಾಯಿಯರ ಮೋಸದ ಜಾಲಕ್ಕೆ ಸಿಲುಕಿ ಚಂದ್ರಿ ಅವಸಾನದ ಅಂಚಿಗೆ ಹೋಗಿ 'ಹುಚ್ಚಿ ಚಂದ್ರಿ'ಯಾಗುವ ದಾರುಣ ಕಥೆ ಇದಾಗಿದೆ. ಮಗಳ ಬಳಿ ಇದ್ದ ಹಣ ಒಡವೆ ವಸ್ತ, ಬೆಳ್ಳಿ ಭಾಂಡೆ ಮೊದಲಾದವುಗಳನ್ನು ಲಪಟಾಯಿಸಲು ಚಂದ್ರಿಯನ್ನು ಮನೆಗೆ ಕರೆತಂದು (ಗದ್ದಿಗೆಪ್ಪ–ಸಣ್ಣವ್ವ) 'ಧೊತ್ರದ ಕಾಯಿ ಜಜ್ಜಿ' ಊಟದೊಂದಿಗೆ ಹಾಕಿ ಬುದ್ಧಿಭ್ರಮಣೆ ಆಗುವಂತೆ ಮಾಡುತ್ತಾರೆ. ಇದನ್ನು ನೋಡಲು ಬಂದ ರಾಯರನ್ನು "ಅಯ್ಯಯ್ಯೋ ರಾಯರ, ಈ ದುಷ್ಟರ ಮನೀಗೆ ನನ್ನನ್ನ ಯಾಕಾರ ಕಳಿಸಿದಿರಿ...ನನಗ ರಾತ್ರಿನ ಈ ಭಾಗಾದಿ ಎರದ್ಲು, ಒಬ್ಬಾಕೀಗೆ ಊಟಕ್ಕೆ ಹಾಕಿದ್ಲು...ನನಗೇನೋ ಮಾಟಾ ಮಾಡ್ಯಾರ್ರೀ...ನನ್ನ ಹೊಟ್ಟೆಯೊಳಗ ಬೆಂಕೀ ಹಾಕಿದ್ಹಾಂಗಾಗೇದ, ನನ್ನ ತಲೀಯೆಲ್ಲಾ ತಿರಿಗಿ ತಿರಿಗಿ ದಿಕ್ಕು ತಪ್ಪಿಸೇದ...ನಾಯಕರ ನನ್ನ ರಾಯ್ರ..ಅವ್ವನ್ನ ಯಾಕ ತರ್ಲಿಲ್ಲಾ...ರಾಯ್ರ..ರಾಯ್ರ..ನನ್ನ ಗತೀ" (ಪು. 49) ಎಂದು ನರಳುತ್ತಾಳೆ. ಇಲ್ಲಿ ತಂದೆ ತಾಯಿಯರಿಂದಲೇ ಮೋಸಹೋಗುವ ದುರಂತ ಬದುಕಿನ ಚಿತ್ರಣವನ್ನು ನಿರೂಪಕಿ ಕಟ್ಟಿಕೊಟ್ಟಿದ್ದಾರೆ.

ಒಟ್ಟಾರೆಯಾಗಿ ಈ ಮೂರು ಕಥೆಯಲ್ಲಿಯೂ ಬಡತನದ ಛಾಯೆ, ದಲಿತ ಬದುಕಿನ ಚಿತ್ರಣ, ದಿಟ್ಟ ಹೆಣ್ಣು ಮಕ್ಕಳ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುವ ಪರಿ. ಅಸಹಾಯಕ ಸ್ಥಿತಿಗೆ ತಲುಪುವ ಸಾಮಾಜಿಕ ವ್ಯವಸ್ಥೆಯ ಹುನ್ನಾರ ಶ್ಯಾಮಲಾ ಅವರ ಕಥೆಗಳಲ್ಲಿ ಮೂಡಿಬಂದಿವೆ. ಅಂದಿನ ಕಾಲದಲ್ಲಿ ದಲಿತ ಸಂವೇದನೆಯ ಕಥಾವಸ್ತುವನ್ನು ಬರವಣಿಗೆಗೆ ತಂದಿದುದು ನಿರೂಪಕಿ ಸಾಹಸವೇ ಸರಿ.

ಭರತನಾಟ್ಯಕ್ಕೆ ಆಧುನಿಕ ಕನ್ನಡ ಕಾವ್ಯ ಒಂದು ಅವಲೋಕನ

ವಿದ್ವಾನ್ ಡಾ. ಎ. ಎನ್. ಸುಧೀರ್ ಕುಮಾರ್
'ನೃತ್ಯ ಗಂಗೋತ್ರಿ(ರಿ.), ನಂ.೪೮, ೧ನೇ 'ಡಿ' ಕ್ರಾಸ್, ೩ನೇ ಸ್ಟೇಜ್, ೪ನೇ ಬ್ಲಾಕ್, ಸತ್ಯನಾರಾಯಣ ಲೇಔಟ್ ಬಸವೇಶ್ವರನಗರ
ಬೆಂಗಳೂರು – 79 sudhirdance12@yahoo.in

ಭಾರತದ ಎಂಟು ಶಾಸ್ತ್ರೀಯ ನೃತ್ಯ ಪದ್ಧತಿಗಳಲ್ಲಿ ಭರತನಾಟ್ಯವು ಒಂದು ಎಂದು ಪರಿಗಣಿಸಲಾಗಿದೆ. ಇದು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ. ಹದಿನೆಂಟನೆಯ ಶತಮಾನದಲ್ಲಿ ತಂಜಾವೂರು ಸಹೋದರರರಿಂದ ಹುಟ್ಟುಹಾಕಲ್ಪಟ್ಟ ಮಾರ್ಗಪದ್ಧತಿ (ಅಲಾರಿಪುವಿನಿಂದ ತಿಲ್ಲಾನದವರೆಗಿನ ಏಕವ್ಯಕ್ತಿ ಪ್ರದರ್ಶನ) ಇಂದಿಗೂ ಜಾರಿಯಲ್ಲಿದೆ. ಭರತನಾಟ್ಯ ಪದ್ಧತಿಯಲ್ಲಿ ನೃತ್ತ, ನೃತ್ಯ ಮತ್ತು ಅಭಿನಯಕ್ಕೆ ಸರಿಸಮಾನವಾದ ಅವಕಾಶವನ್ನು ಕಲ್ಪಿಸಲಾಗಿದೆ. ನೃತ್ತದಲ್ಲಿ 'ಕಥೆ, ನಿರೂಪಣೆ, ಇರುವುದಿಲ್ಲ ಮತ್ತು ಅಭಿನಯಕ್ಕೆ ಪ್ರಧಾನ್ಯತೆ ಇರುವುದಿಲ್ಲ.' ಆದ್ದರಿಂದ ನೃತ್ತವು ಸಾಹಿತ್ಯದ ಆಶ್ರಯವನ್ನು ಬಯಸದೆ ಇರುವುದರಿಂದ ಇಲ್ಲಿ ಭಾಷೆಯು ತೊಡಕಾಗಿ ಪರಿಣಮಿಸುವುದಿದ್ದಲ್ಲ. ಆದರೆ ನೃತ್ಯ ಅಭಿನಯದ ಬಂಧಗಳಲ್ಲಿ ಪ್ರಚಾರದಲ್ಲಿರುವ ಬಹುತೇಕ ಸಾಹಿತ್ಯವು ತಮಿಳು ಮತ್ತು ತೆಲುಗು ಭಾಷೆಯದಾಗಿದೆ. (ಭಕ್ತಿರಸ ಪ್ರಧಾನವಾದ ಕನ್ನಡದ ದಾಸಸಾಹಿತ್ಯವನ್ನು ಹೊರತು ಪಡಿಸಿ.) ಸ್ವಲ್ಪಮಟ್ಟಿಗೆ ಈ ಕೊರತೆಯನ್ನು ನೀಗಿಸುವ ದೃಷ್ಟಿಯಲ್ಲಿ ಭರತನಾಟ್ಯದ ಶಾಸ್ತ್ರೀಯ ಚೌಕಟ್ಟಿಗೆ ಹೊಂದುವ ಕನ್ನಡದ ರಚನೆಗಳನ್ನು ಆಧುನಿಕ ಕನ್ನಡ ಕಾವ್ಯದಿಂದ ಪಡೆಯಬಹುದಾಗಿದೆ.

ಆಧುನಿಕ ಕನ್ನಡ ಕಾವ್ಯ : ಬಿ. ಎಂ. ಶ್ರೀ ಯವರು ೧೯೨೧ ರಲ್ಲಿ ಪ್ರಕಟಿಸಿದ 'ಇಂಗ್ಲೀಷ್ ಗೀತೆಗಳು' ಆಧುನಿಕ ಕನ್ನಡ ಕಾವ್ಯಕ್ಕೆ ನಾಂದಿಯಾಯಿತು. ನವೋದಯ, ನವ್ಯ, ಬಂಡಾಯ ಮೊದಲಾದ ಕವಲುಗಳ ಸಾಹಿತ್ಯ ಪ್ರಕಾರಗಳಲ್ಲಿ ದೊರೆಯುವ ಹಾಗೂ ಭರತನಾಟ್ಯಕ್ಕೆ ಔಚಿತ್ಯಪೂರ್ಣವಾಗಿ ಹೊಂದುವ ಸಾಹಿತ್ಯವನ್ನು ಪರಿಚಯಿಸುವ ಉದ್ದೇಶದಿಂದ ನನ್ನೀ ಸಂಶೋಧನಾ ಪ್ರಬಂಧದ ಮೂಲಕ ಪರಿಚಯಿಸಲು ಪ್ರಯತ್ನಿಸಲಾಗಿದೆ.

ಭಾರತದ ಎಂಟು ಶಾಸ್ತ್ರೀಯ ನೃತ್ಯಪದ್ಧತಿಗಳಲ್ಲಿ ಭರತನಾಟ್ಯವು ಒಂದು ಎಂದು ಪರಿಗಣಿಸಲಾಗಿದೆ. ಇದು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ. ಹದಿನೆಂಟನೆಯ ಶತಮಾನದಲ್ಲಿ ತಂಜಾವೂರು ಸಹೋದರರರಿಂದ ಹುಟ್ಟುಹಾಕಲ್ಪಟ್ಟ 'ಮಾರ್ಗಪದ್ಧತಿ' ಎಂದರೆ ಭರತನಾಟ್ಯ ಪದ್ಧತಿಯ ಏಕವ್ಯಕ್ತಿ ಪ್ರದರ್ಶನ 'ಅಲಾರಿಪುವಿನಿಂದ ಪ್ರಾರಂಭವಾಗಿ ಅಂತ್ಯದಲ್ಲಿ ತಿಲ್ಲಾನದಿಂದ ಮುಕ್ತಾಯವಾಗುವ ವಿವಿಧ ನೃತ್ಯ ಬಂಧಗಳನ್ನು ಹಂತಹಂತವಾಗಿ ಪ್ರದರ್ಶಿಸುವ ಕ್ರಮವನ್ನು ಮಾರ್ಗಪದ್ಧತಿ ಎಂದು ಕರೆಯಲಾಗುತ್ತದೆ.' ಇಂದಿಗೂ ಇದು ಜಾರಿಯಲ್ಲಿದೆ. ಭರತನಾಟ್ಯ ಪದ್ಧತಿಯಲ್ಲಿ ನೃತ್ತ, ನೃತ್ಯ ಮತ್ತು ಅಭಿನಯಕ್ಕೆ ಸರಿಸಮಾನವಾದ ಅವಕಾಶವನ್ನು ಕಲ್ಪಿಸಲಾಗಿದೆ. ನೃತ್ತದಲ್ಲಿ 'ಕಥೆ, ನಿರೂಪಣೆ, ಇರುವುದಿಲ್ಲ ಮತ್ತು ಅಭಿನಯಕ್ಕೆ ಪ್ರಧಾನ್ಯತೆ ಇರುವುದಿಲ್ಲ.' ಆದ್ದರಿಂದ ನೃತ್ತವು ಸಾಹಿತ್ಯದ ಆಶ್ರಯವನ್ನು ಬಯಸದೆ ಇರುವುದರಿಂದ ಇಲ್ಲಿ ಭಾಷೆಯು ತೊಡಕಾಗಿ ಪರಿಣಮಿಸುವುದಿಲ್ಲ. ಆದರೆ ನೃತ್ಯ ಮತ್ತು ಅಭಿನಯದ ಬಂಧಗಳಲ್ಲಿ ಸಾಮಾನ್ಯವಾಗಿ ಪ್ರಚಾರದಲ್ಲಿರುವ ಬಹುತೇಕ ಪರ್ಣ ಮತ್ತು ಪದಂಗಳ ಸಾಹಿತ್ಯವು ತಮಿಳು ಮತ್ತು ತೆಲುಗು ಭಾಷೆಯದಾಗಿದೆ.

'ಯಾವುದೇ ಒಂದು ಕಲೆಗೆ ಭಾಷೆಯ ಪರಿಮಿತಿ ಇರುವುದಿಲ್ಲ' ಆದರೆ ತನ್ನ ನೆಲದ ಭಾಷೆಯನ್ನು, ಪರಿಸರದ ಪ್ರಭಾವವನ್ನು

ಅದು ಮೈಗೂಡಿಸಿಕೊಂಡಿರುತ್ತದೆ. ಆದರೆ ಕರ್ನಾಟಕದ ಭರತನಾಟ್ಯವು ಶತಶತಮಾನಗಳ ಇತಿಹಾಸವನ್ನು ಹೊಂದಿದ್ದರೂ ಅದು ಇಂದಿಗೂ ತನ್ನ ಕಚೇರಿ ಪದ್ಧತಿಯಲ್ಲಿ ಕನ್ನಡತನವನ್ನು ಪರಿಪೂರ್ಣವಾಗಿ ಮೈಗೂಡಿಸಿಕೊಳ್ಳದೆ ಇತರ ಭಾಷೆಯನ್ನು ಆಶ್ರಯಿಸಿರುವುದು ಈ ನಾಡಿನ ದೌರ್ಭಾಗ್ಯವೇಸರಿ. ಕಲೆಗೆ ಯಾವುದೇ ಭಾಷೆಯ ಪರಿದಿ ಇರುವುದಿಲ್ಲ ಎಂಬ ಮಾತು ಸರ್ವೇಸಾಮಾನ್ಯವಾಗಿ ಪ್ರಚಾರದಲ್ಲಿದೆ. ಆದರೆ ಯಾವುದೇ ಕಲೆಯು ತನ್ನ ಕಲೆಯೊಂದಿಗೆ ಯಾವುದಾದರೂ ಭಾಷೆಯನ್ನು ಆಶ್ರಯಿಸಿದರೆ ಆ ಕಲಾಪ್ರಕಾರವು ತನ್ನ ಭಾಷೆಯನ್ನು ಬಲ್ಲವರನ್ನು ತಲುಪುವಷ್ಟು ಸುಲಭಾವಾಗಿ ಇತರ ಭಾಷೆಯ ರಸಿಕರನ್ನು ಪರಿಪೂರ್ಣವಾಗಿ ತಲಪುವಲ್ಲಿ ವಿಫಲವಾಗುತ್ತದೆ. ಎಂಬ ಅಂಶವು ಕರ್ನಾಟಕದ ಭರತನಾಟ್ಯಕ್ಕೂ ಅನ್ವಯಿಸುತ್ತದೆ.

ಕರ್ನಾಟಕದಲ್ಲಿ ನೃತ್ಯದ ಪ್ರಾಚೀನತೆ: ಇಂದು ಕರ್ನಾಟಕದಲ್ಲಿ ಭರತನಾಟ್ಯ ಹೆಚ್ಚು ಪ್ರಚಾರದಲ್ಲಿರುವ ಶಾಸ್ತ್ರೀಯನೃತ್ಯವಾಗಿದೆ. ಸಾವಿರಾರು ವರುಷಗಳಿಂದಲೂ ಇಲ್ಲಿ ಪ್ರಯೋಗದಲ್ಲಿದ್ದ ನೃತ್ಯಕ್ಕೆ ಸಾಕ್ಷಿಯಾಗಿ ಈ ನಾಡಿನಾದ್ಯಂತ ದೊರೆಯುವ ಪುರಾತನ ನೃತ್ಯ ಶಿಲ್ಪವನ್ನು ಹೊಂದಿರುವ ನೂರಾರುದೇವಾಲಯಗಳು ಸಾಕ್ಷಿಯಾಗಿದೆ. ಕರ್ನಾಟಕವನ್ನಾಳಿದ ಹಲವಾರು ರಾಜವಂಶದವರಿಂದ ನಿರ್ಮಾಣವಾದ ದೇವಾಲಯಗಳಲ್ಲಿನ ನೃತ್ಯ ಶಿಲ್ಪಗಳು ವಿಶ್ವವಿಖ್ಯಾತಿಯನ್ನು ಹೊಂದಿವೆ. ದೇವಾಲಯಗಳ ಪೂಜಾವಿಧಿಗಳಲ್ಲಿ ಸಂಗೀತ, ನೃತ್ಯ, ವಾದ್ಯ ಸೇವೆಗಳಿಗಾಗಿ (ರಂಗಭೂಗ) ನೇಮಿಸಲ್ಪಟ್ಟ ಕಲಾವಿದರಿಗೆ, ದಾನ ನೀಡಿದ, ಉಂಬಳಿ ಬಿಟ್ಟ ಸಾಕಷ್ಟು ಉದಾಹರಣೆಗಳು ಶಾಸನಗಳಿಂದ ಲಭ್ಯವಾಗಿವೆ.

"ಕನ್ನಡ ನಾಡಿನಲ್ಲಿ ಕ್ರಿ.ಶ.೮೫೦ ರಷ್ಟು ಹಿಂದೆಯೇ ನೃತ್ಯ ಪಾರಂಗತನಾದ 'ಅಚಲನ್' ಎಂಬ ನರ್ತಕನ ಪ್ರಶಂಸೆಯನ್ನು ಕಾಣುತ್ತೇವೆ. ಈತ ನಟಸಿಂಹನೆಂದೂ ಉಳಿದ ನರ್ತಕರ ಮದವನ್ನು ಅಡಗಿಸುವನೆಂದು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಕಂಬದ ಮೇಲಿನ ಶಾಸನ ಸ್ಪಷ್ಟಪಡಿಸುತ್ತದೆ."[1] ಉಳಿದ ನರ್ತಕರ ಮಧವನ್ನು ಅಡಗಿಸಿದನೆಂಬ ಅಂಶದಿಂದ ಅಂದಿನ ಕಾಲದಲ್ಲಿ ಸಾಕಷ್ಟು ಶ್ರೇಷ್ಠನರ್ತಕರಿದ್ದರು. ಇತರೆ ರಾಜ್ಯಗಳ ನೃತ್ಯಪಟುಗಳೊಂದಿಗೆ ಅವರಲ್ಲಿ ಪಾಂಡಿತ್ಯದ ಸ್ಪರ್ಧೆಗಳೂ ನಡೆಯುತ್ತಿದ್ದವು ಅವರೆಲ್ಲರನ್ನೂ ಮೀರಿನಿಂತವ 'ಅಚಲನ್' ಎಂದು ಊಹಿಸಬಹುದಾಗಿದೆ.

"ಕ್ರಿ.ಶ.೮೫೦ ಶತಮಾನದಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಕಂಬದ ಹಿಂಬದಿಯಲ್ಲಿರುವ ಆ ಶಾಸನದಲ್ಲಿ 'ಅಚಲ' ಎಂಬ ಕಲಾವಿದನ ಬಗ್ಗೆ ಪ್ರಥಮವಾಗಿ ಮಾಹಿತಿಯನ್ನು ನೀಡುತ್ತದೆ ಈ ಕಲಾವಿದನು ಭರತನ ನಾಟ್ಯಶಾಸ್ತ್ರದಲ್ಲಿ ಅದ್ವಿತೀಯತೆಯನ್ನು ಪಡೆದು ನಾಟ್ಯತಾಂತ್ರಿಕತೆಯಲ್ಲಿ ನಿಪುಣನಾಗಿದ್ದನು. ಇವನು ಉತ್ತಮ ನಟ ಮತ್ತು ನರ್ತಕನೂ ಆಗಿದ್ದನು. 'ಅಚಲನು' ಶಾಸನದಲ್ಲಿ ಉಕ್ತವಾಗಿರುವ ಕರ್ನಾಟಕದ ಪ್ರಥಮ ಶ್ರೇಷ್ಠನರ್ತಕ ಮತ್ತು ನಟ, ಪೂರನೆಂಬುದಾಗಿ ಕಲಾವಿದರು ಅವನಿಗೆ ತಮ್ಮನ್ನು ಸಮರ್ಪಿಸಿಕೊಳ್ಳುತ್ತಿದ್ದರು."[2] ಅಂತೆಯೇ ಸಾಹಿತ್ಯದಲ್ಲಿ ಲಭ್ಯವಿರುವ 'ಪಂಪ'ನಿಂದ ರಚಿತವಾದ 'ಆದಿಪುರಾಣ'ದ ಆಶ್ವಾಸ ೭ರಲ್ಲಿ ಇಂದ್ರನ ಆನಂದ ನರ್ತನದ ವರ್ಣನೆ ಲಭಿಸುತ್ತದೆ. ನಂತರದ ಕವಿಗಳ ಕಾವ್ಯಗಳಲ್ಲಿಯೂ ಸಾಕಷ್ಟು ನೃತ್ಯದವರ್ಣನೆಗಳು ಲಭಿಸುತ್ತವೆ. ಈ ನಿದರ್ಶನಗಳು ಕರ್ನಾಟಕದಲ್ಲಿನ ನೃತ್ಯ ಇತಿಹಾಸದ ಪ್ರಾಚೀನತೆಯಮೇಲೆ ಸ್ಪಷ್ಟವಾಗಿ ಬೆಳಕನ್ನು ಚಲ್ಲುತ್ತವೆ.

ಇಷ್ಟೊಂದು ಪುರಾತನವಾದ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಈ ಶಾಸ್ತ್ರೀಯ ನೃತ್ಯ ಪದ್ಧತಿಯು ಸಂಪೂರ್ಣವಾಗಿ ಕನ್ನಡದ ಸಾಹಿತ್ಯವನ್ನು ತನ್ನ ಪ್ರಯೋಗದಲ್ಲಿ ಅಳವಡಿಸಿಕೊಳ್ಳುವಲ್ಲಿ ಇಂದಿಗೂ ಯಶಸ್ಸನ್ನುಸಾಧಿಸಲು ಸಾಧ್ಯವಾಗದೆ ಇರುವುದು ಕನ್ನಡನಾಡಿನ ನೃತ್ಯ ಗುರುಗಳ ಮತ್ತು ಕಲಾವಿದರ ದೌರ್ಬಲ್ಯ ಅಥವಾ ಭಾಷಾಭಿಮಾನದ ಕೊರತೆಗೆ ಸಾಕ್ಷಿಯಾಗಿದೆ. ದಾಸಸಾಹಿತ್ಯ ಹಾಗೂ ಕೆಲವು ಜಾವಳಿಗಳ ಹೊರತಾಗಿ ಭರತನಾಟ್ಯದ ಪ್ರಮುಖ ಬಂಧಗಳಾದ ವರ್ಣ, ಪದ, ಮೊದಲಾದವುಗಳ ಪ್ರಯೋಗದಲ್ಲಿ ಕನ್ನಡದಲ್ಲಿ ಪ್ರಬುದ್ಧವಾದ ರಚನೆಗಳ ಕೊರತೆಯು ಎದ್ದುಕಾಣುತ್ತದೆ. ಇಂದು ಭರತನಾಟ್ಯವು ಕೇವಲ ಪಂಡಿತವರ್ಗದವರ ಸಭಾಕಾರ್ಯಕ್ರಮಗಳಿಗೆ ಸೀಮಿತವಾಗುತ್ತಿದ್ದು ಸಾರ್ವಜನಿಕ ಪ್ರದರ್ಶನ ವಲಯದಿಂದ ದೂರ ಸರಿಯುತ್ತಿರುವುದನ್ನು ಕಾಣಬಹುದಾಗಿದೆ. ಇಂಥಹ ಸೊಗಸಾದ ಕಲೆಯೊಂದು ತನ್ನ ಜನಪ್ರಿಯತೆಯನ್ನು ಮತ್ತು ಜೀವಂತಿಕೆಯನ್ನು ಉಳಿಸಿಕೊಳ್ಳುವಲ್ಲಿ ಅದು ಪ್ರದರ್ಶನಗೊಳ್ಳುತ್ತಿರುವ ಪ್ರಾದೇಶಿಕ ಭಾಷೆಯನ್ನು ತನ್ನೊಂದಿಗೆ ಮೈಗೂಡಿಸಿಕೊಳ್ಳುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಭರತನಾಟ್ಯದ ನೃತ್ಯಸಾಹಿತ್ಯವು ಕನ್ನಡದಲ್ಲಿ ರಚನೆಯಾಗಬೇಕಾಗಿದೆ. ಹಾಗೂ ಇಂದಿನ ವಾಗ್ಗೇಯಕಾರರು ಕನ್ನಡದ ರಚನೆಗಳನ್ನು ರಚಿಸುವತ್ತ ಹೆಚ್ಚು ಪ್ರಯೋಗಶೀಲರಾಗಬೇಕಾಗಿದೆ. ಹಾಗೂ ಕನ್ನಡದ ಕಲಾವಿದರು ನೃತ್ಯಗುರುಗಳು ಇಂಥಹ ರಚನೆಗಳನ್ನು ಪ್ರಯೋಗಿಸುವಮೂಲಕ ಈ ನೃತ್ಯ ಕಲೆಯನ್ನು ಹೆಚ್ಚು ಜೀವಂತಿಕೆ ಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸ್ವಲ್ಪಮಟ್ಟಿಗೆ ಈ ಕೊರತೆಯನ್ನು ನೀಗಿಸುವ ದೃಷ್ಟಿಯಲ್ಲಿ ಭರತನಾಟ್ಯದ ಶಾಸ್ತ್ರೀಯ ಚೌಕಟ್ಟಿಗೆ ಹೊಂದುವ ಕನ್ನಡದ ರಚನೆಗಳನ್ನು ಆಧುನಿಕ ಕನ್ನಡ ಕಾವ್ಯದಿಂದ ಪಡೆಯಬಹುದಾಗಿದೆ. ಶಾಸ್ತ್ರೀಯ ಚೌಕಟ್ಟಿಗೆ ಹೊಂದುವ ಹಲವಾರು ರಚನೆಗಳನ್ನು ಆಧುನಿಕ ಕನ್ನಡ ಕಾವ್ಯದಲ್ಲಿ ಪಡೆದುಕೊಳ್ಳಬಹುದಾಗಿದ್ದು ಅದರತ್ತ ಬೆಳಕನ್ನುಚೆಲ್ಲುವ ನಿಟ್ಟಿನಲ್ಲಿ ಈ ಸಂಶೋಧನಾ ಪ್ರಬಂಧದ ಮೂಲಕ ಪ್ರಯತ್ನಿಸಲಾಗಿದೆ.

ಪ್ರಾಚೀನ ಕನ್ನಡ ಕಾವ್ಯ : ಯಾವುದೇ ಒಂದು ಭಾಷೆಯು ತನ್ನದೆ ಆದ ಅಸ್ಥಿತ್ವವನ್ನು ಪಡೆಯಲು ಬೇಕಾದರೆ ಅದು ಸಾಕಷ್ಟು ಪುರಾತನವಾದ ಇತಿಹಾಸವನ್ನು ಹೊಂದಿರುತ್ತದೆ. ಅಂತೆಯೇ ಕನ್ನಡ ಸಾಹಿತ್ಯವು ಸುಮಾರು ಸಾವಿರದ ಐದುನೂರು ವರ್ಷಗಳಿಂದ ಬೆಳೆದುಬಂದಿದೆ. ಪಂಪನಿಂದ ಕ್ರಿ.ಶ. ೯೪೧ ರಲ್ಲಿ ರಚಿತವಾದ ಆದಿಪುರಾಣ ಮುಂದಿನ ಕವಿಗಳಿಗೆ ಆದರ್ಶವಾಗಿ ಉಳಿದುದರಿಂದ ಪಂಪನು ಕನ್ನಡದ ಆದಿಕವಿಯಾಗಿ ಆದರ್ಶಕವಿಯಾಗಿ ಮಾನ್ಯನಾಗಿದ್ದಾನೆ. "ಕನ್ನಡಸಾಹಿತ್ಯದ ಪರಂಪರೆ ಭಾರತದ ಅತ್ಯಂತ ಪ್ರಾಚೀನ ಸಾಹಿತ್ಯಗಳಲ್ಲಿ ಒಂದಾಗಿದ್ದು ದಕ್ಷಿಣದಲ್ಲಿ ತಮಿಳಿನ ತರುವಾಯದ ಸ್ಥಾನವನ್ನು ಅದು ಪಡೆದಿದೆ. ಅದರ ನಿರ್ದಿಷ್ಟ ಉಗಮವನ್ನು ಹುಡುಕುವುದು ವ್ಯರ್ಥ ಸಾಹಸ." [3] ಭಾರತದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ನೀಡುವ ಅತ್ಯುನ್ನತ ಪ್ರಶಸ್ತಿಯಾದ 'ಜ್ಞಾನಪೀಠ' ವನ್ನು ಹೆಚ್ಚು (ಎಂಟು) ಬಾರಿ ಗಳಿಸಿಕೊಂಡ ಕೀರ್ತಿ ಕನ್ನಡಿಗರಿಗೆಸಲ್ಲುತ್ತದೆ.

" ಕನ್ನಡದಲ್ಲಿ ಉಪಲಬ್ಧವಾದ ಮೊಟ್ಟಮೊದಲ ಗ್ರಂಥ

'ಕವಿರಾಜಮಾರ್ಗ□ ಎನ್ನುವುದರ ಬಗ್ಗೆ ಯಾವಭಿನ್ನಾಭಿಪ್ರಾಯವೂ ಇಲ್ಲ. ರಾಷ್ಟ್ರಕೂಟ ಚಕ್ರವರ್ತಿಯಾದ ಅಮೋಘವರ್ಷ ನೃಪತುಂಗನೇ (ಕ್ರಿ.ಶ.೮೧೪-೮೭೭) ಇದನ್ನು ಬರೆದವನೆಂದು ಕೆಲವರ ಅಭಿಪ್ರಾಯವಾದರೆ ಅವನ ಆಸ್ಥಾನದಲ್ಲಿದ್ದ ಶ್ರೀ ವಿಜಯನೆಂಬುವನು ಇದರ ಕರ್ತೃವಾಗಿರಬೇಕೆಂದು ಇನ್ನು ಕೆಲವರ ಅಭಿಪ್ರಾಯ." [4] ಪ್ರಾಚೀನ ಕನ್ನಡ ಕಾವ್ಯವು ಸುಮಾರು ಒಂದು ಸಾವಿರ ವರುಷಕ್ಕೂ ಹೆಚ್ಚಿನ ಇತಿಹಾಸವನ್ನು ಹೊಂದಿದೆ.

ಆಧುನಿದ ಕನ್ನಡ ಕಾವ್ಯ : "ಬಿ.ಎಂ.ಶ್ರೀ ಇವರ ಇಂಗ್ಲೀಷ್ ಗೀತೆಗಳು ಆಧುನಿಕ ಕನ್ನಡ ಕಾವ್ಯದ ಪ್ರಮುಖ ಚಾರಿತ್ರಿಕ ಘಟ್ಟಗಳಲ್ಲೊಂದು ೧೯೨೧ ರಲ್ಲಿ ಪ್ರಕಟವಾದ ಈ ಸಂಗ್ರಹ ೬೩ ಕವನಗಳನ್ನು ಒಳಗೊಂಡಿದೆ. ಶೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್, ಬೈರನ್, ಕೋಲರಿಜ್, ಷೇಕ್ಸ್‌ಪಿಯರ್, ಮೊದಲಾದ ಕವಿಗಳ ಹಲವಾರು ಕವನಗಳ ಅನುವಾದವನ್ನು ಇದರಲ್ಲಿ ಕಾಣಬಹುದು. ಇದನ್ನು ಅನುವಾದ ಎನ್ನುವುದಕ್ಕಿಂತಲೂ 'ಅನುಸೃಷ್ಟಿ' ಎಂದು ಕರೆಯಬಹುದಾಗಿದೆ." [5] ಈ ಕವನಸಂಗ್ರಹದೊಂದಿಗೆ ಕನ್ನಡಕಾವ್ಯಲೋಕದ 'ನವೋದಯ' ಯುಗವು ಪ್ರಾರಂಭವಾಯಿತು. ಇಂಗ್ಲೀಷ್ ಪ್ರಭಾವದಿಂದ ಆಗಮಿಸಿದ 'ಲಿರಿಕ್' ಕನ್ನಡದ ಭಾವಗೀತ ಪ್ರಕಾರವಾಗಿ ಸುಮಾರು ೧೯೫೦ರ ವರೆಗಿನ ಕಾಲು ಶತಮಾನದ ಅವಧಿಯಲ್ಲಿ ಅಪಾರ ಬೆಳವಣಿಗೆ ಸಾಧಿಸಿತು. ೧೯೨೫ ರಿಂದ ೧೯೫೦ರ ವರೆಗಿನ ಅವಧಿಯನ್ನು ಕನ್ನಡ ಭಾವಗೀತೆಯ ಸುವರ್ಣಯುಗ ಎಂದು ಗುರುತಿಸಲಾಗಿದೆ. ಕುವೆಂಪು ಮತ್ತು ಬೇಂದ್ರೆಯವರು ಭಾವಗೀತೆಯ ಪ್ರಕಾರವನ್ನು ಯಶಸ್ಸಿನ ಪರಾಕಾಷ್ಠೆಗೊಯ್ದವರಲ್ಲಿ ಪ್ರಮುಖರು. ನಂತರ ನವ್ಯಕಾವ್ಯ, ಬಂಡಾಯಕಾವ್ಯ ಮೊದಲಾದ ವಿವಿಧ ಕಾವ್ಯಪ್ರಕಾರಗಳು ಆಧುನಿಕ ಕನ್ನಡ ಕಾವ್ಯವೆಂದು ಪರಿಗಣಿಸಲ್ಪಟ್ಟಿವೆ.

ಭರತನಾಟ್ಯಕ್ಕೆ ಪೂರಕ ವಾಗುವ ಆಧುನಿಕ ಕನ್ನಡ ಕಾವ್ಯ : ಸಾಮಾನ್ಯವಾಗಿ ಭರತನಾಟ್ಯದ ಸಾಹಿತ್ಯವು ಆದ್ಯಾತ್ಮಿಕ ವಿಚಾರವನ್ನು ಹೊಂದಿರುತ್ತದೆ. ದೇವರವರ್ಣನೆ, ದೇವರಲೀಲೆಗಳು, ದಶಾವತಾರ, ರಾಮಾಯಣ, ಮಹಾಭಾರತ, ಪುರಾಣದ ಕಥೆಗಳನ್ನು ಬಿಂಬಿಸುತ್ತವೆ. ಸತ್ಯ-ಧರ್ಮಕ್ಕೆ ಜಯ ಅಧರ್ಮಕ್ಕೆ ಸೋಲು ಎಂಬ ತಿರುಳನ್ನು ಈ ಸಾಹಿತ್ಯವು ಒಳಗೊಂಡಿರುತ್ತದೆ. ಪ್ರೀತಿ-ಪ್ರೇಮ ಪ್ರಣಯ ಈ ವಿಚಾರಗಳನ್ನು ಪದಂಗಳು ಹೊಂದಿದ್ದರು ಅಲ್ಲಿ ಜೀವಾತ್ಮವು ಪರಮಾತ್ಮನನ್ನು ಸೇರಲು ಇರುವ ಮಾರ್ಗದಲ್ಲಿ ಇದು ಒಂದು ಎಂದು ಪರಿಗಣಿಸಲ್ಪಟ್ಟಿದೆ. ಜಾವಳಿಗಲ್ಲಿ ಲೌಕಿ ಬದುಕಿನ ಪ್ರಣಯದ ಸಾಹಿತ್ಯವನ್ನು ಕಾಣಬಹುದು.

ಕುವೆಂಪು: ಇವರ 'ಆತ್ಮನಿವೇದನೆ' ಶೀರ್ಷಿಕೆಯ **"ಬೃಂದಾವನಕೆ ಹಾಲನು ಮಾರಲು ಹೋಗುವ ಬಾರೇ ಬೇಗ ಸಖ"** [6] ಈ ಗೀತೆಯನ್ನು ಭರತನಾಟ್ಯಕೆ ಅಳವಡಿಸಿಕೊಳ್ಳಬಹುದಾಗಿದೆ. ಈ ಹಾಲಿನ ವ್ಯಾಪಾರವು ಕೇವಲ ಹಣದಕಾಸಿನ ವ್ಯವಹಾರವಾಗಿರದೆ. ಹಾಲನ್ನು ಮಾರುವ ಕಾರಣವನ್ನು ಮುಂದಿರಿಸಿಕೊಂಡು ಬೃಂದಾವನಕೆ ಹೋಗಿ, ಶ್ರೀ ಕೃಷ್ಣನನ್ನು ಮೋಹಿಸಿ ಕರೆಯಲು ಇದೊಂದು ನೆಪಮಾತ್ರ. ಶ್ರೀಕೃಷ್ಣನು ಖಂಡಿತವಾಗಿಯೂ ಹಾಲನ್ನು ಕೊಂಡುಕೊಳ್ಳುತ್ತಾನೆ. ಹಾಲಿಗೆ ಬದಲಾಗಿ ಚಿನ್ನ, ರನ್ನ, ಒಡವೆಗಳನ್ನು ಅವನೇನು ನೀಡುವುದಿಲ್ಲ. ಅದರ ಅಗತ್ಯವೂ ತನಗಿಲ್ಲ. ಅದೆಲ್ಲಕ್ಕಿಂತ ಮಿಗಿಲಾಗಿ ತನ್ನನ್ನೇ ನೀಡುತ್ತಾನೆ. ಇಷ್ಟು ಸುಲಭವಾಗಿ ಶ್ರೀ ಹರಿಯನ್ನು ತಮ್ಮವನನ್ನಾಗಿ ಮಾಡಿಕೊಳ್ಳಬಹುದು. ಕೇವಲ ಹಾಲನ್ನು ಮಾರಿ ಹರಿಯನ್ನು ಕೊಳ್ಳುವ ನಾವು ನಿಜಕ್ಕೂ ಧನ್ಯರಲ್ಲವೆ. ಎಂಬುವುದು ನಾಯಕಿಯ ತರ್ಕ.

"ಅಭಿಸಾರಿಕೆ." [7] ಈ ಶೀರ್ಷಿಕೆಯಡಿಯಲ್ಲಿನ ಈ ಅಪರೂಪದ ರಚನೆಯಲ್ಲಿ ನಾಯಕಿಯು □ಕಿಂಕರರ ಕಳುಹಿಸಿದಳು ತನ್ನ ನಾಯಕನನ್ನು ಕರೆತರಲು ಒಬ್ಬರ ನಂತರ ಒಬ್ಬರಂತೆ ಆರುಜನ ಸಖಿಯರನ್ನು ಕಳುಹಿಸುತ್ತಾಳೆ. ಅವರು ಹಿಂದಿರುಗಿ ಬಾರದಿರಲು ಇನ್ನು ವ್ಯರ್ಥವಾಗಿ ಕಾಲಹರಣ ಮಾಡುತ್ತ ನಾಯಕನ ಬರುವಿಕೆಗಾಗಿ ಕಾಯಲಾರದೆ ತಾನು □ಅರಸಿ' ಎಂಬುವ ಬಿಂಕ ಬಿಗುಮಾನವು ವಿರಹದಲಿ ಲಯವಾಗೆ ಅರಸನಭಿಸಾರಿಕೆಯು ತಾನೇ ಅರಸನನ್ನರಸಿ ಹೊರಡುವಳು. ಇದೊಂದು ಸುಧೀರ್ಘವಾದ ಕವನವಾಗಿದ್ದು, ನೃತ್ಯಾಭಿನಯಕ್ಕೆ ಬೇಕೆನಿಸಿದ ಭಾಗಗಳನ್ನು ಆಯ್ದುಕೊಳ್ಳಬಹುದಾಗಿದೆ. ಭರತನಾಟ್ಯದಲ್ಲಿ ಅಭಿನಯಿಸಲ್ಪಡುವ ಅಷ್ಟನಾಯಿಕಾ ಅವಸ್ಥಾ ಬೇಧದಲ್ಲಿ 'ಅಭಿಸಾರಿಕಾ' ಒಂದು.

"ರಸಕಕ್ಷಿ" [8] ಅಭಿಸಾರಿಕ ನಾಯಿಕ ಭಾವದ ಅಪರೂಪದ ಇನ್ನೊಂದು ರಚನೆ. ಕಲಾವಿದರ ಪ್ರೌಢಿಮೆಗೆ ತಕ್ಕಂತೆ ಸವಿಸ್ತಾರವಾಗಿ ಅಭಿನಯಿಸಲು ಉತ್ತಮ ಅವಕಾಶಗಳಿವೆ. ಅಡಿಯಿಂದ ಮುಡಿಯವರೆಗೆ ಅಲಂಕರಿಸಿಕೊಳ್ಳಲು ಬೇಕಾದ ಸಾಹಿತ್ಯ ಸಾಮಗ್ರಿಯೂ ಕವನದಲ್ಲಿಯೇ ನಿರೂಪಿತವಾಗಿರುವುದರಿಂದ ಅಭಿನಯಕ್ಕೆ ಮತ್ತಷ್ಟು ಮೆರಗು ದೊರೆಯುತ್ತದೆ. ಈ ಕವನಗಳಲ್ಲದೆ 'ನಾಚೆ ನಾನಿನ್ನು , ಖಾಸಕ ಸಜ್ಜಿಕೆ, ವಿರಹಿಣಿ.' ಸೇರಿದಂತೆ ಇನ್ನೂ ಹಲವಾರು ಕವನಗಳನ್ನು ಉಲ್ಲೇಖಿಸಬಹುದಾಗಿದೆ.

ದ. ರಾ. ಬೇಂದ್ರೆ : "ಜಯದೇವಾ, ಜಯದೇವಾ, ಶ್ರೀಗಣಪತಿರಾಯ" [9] ಈ ಗೀತೆಯನ್ನು ಪ್ರಾರ್ಥನಾರೂಪದ ನೃತ್ಯವಾಗಿ ಸಂಯೋಜಿಸಬಹುದು. ಶ್ರೀ ಗಣಪತಿಯನ್ನು ಕುರಿತಾದ ರಚನೆ.

"ಗಂಗಾವತರಣ" [10] 'ಇಳಿದು ಬಾ ತಾಯಿ ಇಳಿದು ಬಾ' ಗಂಗೆಯನ್ನು ಕುರಿತಾದ ಅಪರೂಪದ ರಚನೆ

"ಹಿಂದ ನೋಡದ ." [11] ಒಮ್ಮೆ ತನ್ನತ್ತ ನೋಡಿ ಮೋಹಕ ನಗೆಯ ಬೀರಿ ಮುಂದೆ ಹೋದ ನಾಯಕನಲ್ಲಿ ಅನುರಕ್ತಳಾದ ನಾಯಿಕೆ ಗೆಳತಿಯಲ್ಲಿ ತನ್ನ ಮನಸ್ಸನ್ನು ಸೂರಿಗೊಂಡ ನಾಯಕನಿಗಾಗಿನು ವಿರಹವನ್ನು ನಿವೇದಿಸುವ ಸಾಹಿತ್ಯವಿದೆ.

ವಿ. ಸೀತಾ ರಾಮಯ್ಯ (ವಿ.ಸೀ) ಇವರ **"ಶಬರಿ"** [12] ಶ್ರೀ ರಾಮನ ದರ್ಶನಕ್ಕಾಗಿ ಕಾದುಕುಳಿತ ಶಬರಿಯ ಚಿತ್ರಣವಿದೆ. ನೃತ್ಯ ಸಾಹಿತ್ಯದಲ್ಲಿ ಸಂಚಾರಿಯಲ್ಲಿ ಬಳಕೆಯಲ್ಲಿರುವ ಕಥಾವಸ್ತುವಿಗೆ ನೇರ ಸಾಹಿತ್ಯವಿದಾಗಿದೆ.

ಡಿ. ವಿ. ಜಿ. (ಡಿ. ವಿ. ಗುಂಡಪ್ಪ) ಇವರ ಅಂತಃಪುರಗೀತೆಗಳು ಬಹುತೇಕ ಎಲ್ಲಾಗಿತೆಗಳು ಭರತನಾಟ್ಯಕ್ಕೆ ಅಳವಡಿಸಬಹುದಾಗಿದ್ದು ಸಾಕಷ್ಟು ಗೀತೆಗಳು ಪ್ರಯೋಗಿಸಲ್ಪಟ್ಟಿವೆ.

ಪು. ತಿ. ನ. "ಕೃಷ್ಣನ ಕೊಳಲಿನ ಕರೆ" [13] ಶ್ರೀ ಕೃಷ್ಣನ ಕೊಳಲಿನ ನಾದಕ್ಕೆ ಮೋಹಗೊಂಡು ತನ್ನ ಸರ್ವಸ್ವವನ್ನು ಮರೆತು ಕೃಷ್ಣನನ್ನು ಅರಸಿ ಹೋಗುವ ನಾಯಕಿಯ ಚಿತ್ರಣವಿದೆ. \

ಕೆ. ಎಸ್. ನಿಸಾರ್ ಅಹಮದ್ : "ಬೆಣ್ಣೆಗಳ್ಳ ಕೃಷ್ಣ" [14] ದಾಸಸಾಹಿತ್ಯದಲ್ಲಿ ಕೃಷ್ಣನ ವಿಭಿನ್ನ ವರ್ಣನೆಯನ್ನು ಕಾಣಬಹುದು

ಬೆಣ್ಣೆಯನ್ನು ಕದಿಯುವಾಗ ಜಾರಿಬಿದ್ದು ಮೊಣಕಾಲನ್ನು ಊದಿಸಿಕೊಳ್ಳಬಹುದಾದ ದೃಷ್ಟಿಕೋನದಲ್ಲಿ ಕಲ್ಪನೆಯು ವಿಭಿನ್ನವಾಗಿದೆ. ಕಥಾವಸ್ತುವು ಹಳೆಯದಾದರು ಅದನ್ನು ಚಿತ್ರಿಸಿರುವ ಆಧುನಿಕ ಕವಿಯಲ್ಲಿನ ಅಪರೂಪದ ಕಲ್ಪನೆಯು ದೇವರನಾಮದಂತೆಯೇ ನೃತ್ಯಕ್ಕೆ ಸಂಯೋಜಿಸಬಹುದು.

ಹುಲಿಮನೆ ಕಾಳಿ ತಿಮ್ಮಪ್ಪ : "ಶ್ರೀ ವಿಷ್ಣು ದಶಾವತಾರ"[15] ಈ ದಶಾವತಾರದ ರಚನೆಯು ಸರಳವಾದ ಸಾಹಿತ್ಯಪ್ರಯೋಗದಿಂದ ಜನಸಾಮಾನ್ಯರನ್ನೂ ಸುಲಭವಾಗಿ ತಲುಪುತ್ತದೆ. ಇದನ್ನು ಏಕವ್ಯಕ್ತಿ ಪ್ರದರ್ಶನಕ್ಕೂ ಮತ್ತು ನೃತ್ಯರೂಪಕಕ್ಕೂ ಬಳಸಿಕೊಳ್ಳಬಹುದಾಗಿದೆ.

ಡಾ. ಜಿ. ಎಸ್. ಶಿವರುದ್ರಪ್ಪ : "ಹೌದೇನೇ ಉಮಾ"[16] ತವರಿಗೆಬಂದ ಮಗಳು 'ಉಮೆ'ಯನ್ನು ಉದ್ದೇಶಿಸಿ ತಾಯಿ ಆಡುವ ಮಾತು, ಮಸಣವಾಸಿಯಾಗಿರುವ ಪರಶಿವನೊಂದಿಗಿನ ತನ್ನ ಮಗಳ ಬದುಕಿನ ಚಿತ್ರಣವನ್ನುನೆನೆದು ಅಳಿಯನಾದ 'ಶಿವ□ ಮಗಳನ್ನು ಕರೆಯಲು ಬಂದರೆ, ಮಗಳು ಉಮೆ ಮನೆಯಲ್ಲಿಲ್ಲವೆಂದು ಹೇಳಿ ಅಳಿಯನನ್ನು ಹಿದಿರುಗಿ ಕಳಿಸುವೆನೆಂದು ತಾಯಿ ಮಗಳೊಂದಿಗಿನ ಸಂಭಾಷಣೆ.

ಬೇಡಿಕೆ "ನನ್ನಾ ಮಾಧವನನ್ನು ಕೊಡು ಮಾಧವಿ ನನಗೆ,"[17] ಮುಗ್ಧ ನಾಯಿಕಾ ಭಾವದ ರಚನೆ ನಾಯಕಿಯು ತನ್ನ ಮಾಧವನನ್ನು ತನಗೆ ಕೊಡು. ನಿನ್ನ ಎದೆಯೊಳಗೆ ಬಚ್ಚಿಟ್ಟಿರುವ ಮಾಧವನನ್ನು ನನಗೆ ಬಿಟ್ಟುಕೊಟ್ಟರೆ ನಾನು ನಿನಗೆ ದಾಸಿಯಾಗಿ ನಿನ್ನ ಮನೆಯಲ್ಲಿ ಚಾಕರಿಯನ್ನು ಮಾಡಲು ಸಿದ್ಧ, ಎಂದು ಇನ್ನೊಬ್ಬ ನಾಯಿಕೆಯ ಮೊಹಪಾಶದಲ್ಲಿ ಸಿಲುಕಿರುವ ತನ್ನ ಮಾಧವನನ್ನು ಬಿಟ್ಟುಕೊಡು ಎಂದು ಬೇಡಿಕೊಳ್ಳುವ ಅಪರೂಪದ ಚಿತ್ರಣವು ಪದಾಭಿನಯಕ್ಕೆ ಹೊಂದಿಸಿಕೊಳ್ಳಬಹುದು.

"ಕೃಷ್ಣ ವರ್ಣದೊಳರಳಿ ಈ ತನು"[18] . ವಿರಹೊತ್ಕಂಠಿತ ನಾಯಿಕಾ ಭಾವವನ್ನು ಹೊಂದಿದ್ದು 'ಪದಂ' ನಂತೆ ಸಂಯೋಜಿಸಿಕೊಳ್ಳಬಹುದು. ಶ್ರೀ ಕೃಷ್ಣನಲ್ಲಿ ಅತಿಯಾದ ಮೋಹವನ್ನು ಹೊಂದಿರುವ ನಾಯಿಕೆಯು ಅವನ ವಿರಹದಿಂದ ಇನ್ನು ತಾನು ಬದುಕಿರಲಾರದ ಹಂತವನ್ನು ತಲುಪಿದ್ದಾಳೆ. ಸಖಿಯರನ್ನು ಕುರಿತು ಬೇಡಿಕೊಳ್ಳುವುದೇನೆಂದರೆ 'ತಾನು ಸತ್ತಮೇಲೆ ಈ ದೇಹವನ್ನು ಬೆಂಕಿಯಲ್ಲಿ ಸುಡಬೇಡಿ, ಯಮುನೆಯಲ್ಲಿ ಎಸೆಯಬೇಡಿ, ಈ ದೇಹದಲ್ಲಿ ತಾನು ಕೃಷ್ಣನನ್ನು ಒಲಿದಿದ್ದೇನೆ. ತಾನು ಕೃಷ್ಣ ವರ್ಣದವಳಾಗಿರುವುದರಿಂದ ತಮಾಲ ವೃಕ್ಷಕ್ಕೆ ನನ್ನ ಮೃತದೆಹವನ್ನು ಬಿಗಿದುಕಟ್ಟಿಬಿಡಿ. ತಮಾಲ ವೃಕ್ಷವೂ ಕೃಷ್ಣವರ್ಣದಂತೆ ಶ್ಯಾಮಲ ವಾಗಿರುವುದರಿಂದ ಅದಕ್ಕೆ ಹೊಂದಿಕೊಳ್ಳುತ್ತದೆ. ಆ ಶ್ಯಾಮನಿಗಾಗಿ ಮುಡಿಪಾಗಿರುವ ಈ ದೇಹವು ಕಡೆಯ ಪಕ್ಷ ಆ ವರ್ಣ ದಲ್ಲಿಯಾದರೂ ಲೀನವಾಗಲಿ. ಅಭಿನಯಕ್ಕೆ ಉತ್ತಮವಾದ ಅವಕಾಶವಿದೆ.

ಎಂ. ಎನ್. ವ್ಯಾಸರಾವ್ : "ಜಾರಿದೆ ಸಮಯ"[19] 'ವಾಸಕ ಸಜ್ಜಿಕೆ' ನಾಯಿಕಾ ಭಾವಕ್ಕೆ ಸೂಕ್ತವಾಗಿ ಹೊಂದುವ ಕವನ ಇನಿಯನ ಬರುವಿಕೆಗಾಗಿ ಬೆಳದಿಂಗಳೂಟಕೆಂದು ಎಲ್ಲವನ್ನು ಅಣಿಮಾಡಿ ತಾನೂಕೂಡ ನಲ್ಲನಿಗೆ ಇಷ್ಟವಾದ ಉಡುಗೆ ತೊಡುಗೆ ಅಲಂಕಾರಗಳಿಂದ ಅವನಿಗಾಗಿ ಕಾದು ಪರಿತಪಿಸುವ ಸನ್ನಿವೇಶ.

ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ : "ಹೇಗೆ ಹೋದನೇ ಹರಿ?"[20] ಗೋಕುಲವನ್ನು ತೊರೆದು ಮಧುರೆಗೆ ಶ್ರೀ ಕೃಷ್ಣನು ಹೋಗುವ ಗೋಪಿಯರ, ಪುರಜನರ ಮನಕಲಕುವ ಸನ್ನಿವೇಶ.

ಡಾ. ಚಂದ್ರಶೇಖರ ಕಂಬಾರ : "ಕಾಂತನಿಲ್ಲದ ಮ್ಯಾಲೆ"[21] ವಿರಹೋತ್ಕಂಟಿತನಾಯಿಕಾ ಭಾವದಲ್ಲಿ ಜಾವಳಿಯಂತೆ ಬಳಸಬಹುದು 'ಗಂಧಕುಸುಮಗಳ ಅಣಿಮಾಡಿದೆನಲ್ಲೆ' ಇಲ್ಲಿ ಸಂಚಾರಿಗೆ ಅವಕಾಶವಿದೆ.

ಈ ರೀತಿಯಾಗಿ ಭರತನಾಟ್ಯದಲ್ಲಿ ಅಳವಡಿಸಿಕೊಳ್ಳಬಹುದಾದ, ಅಮೂಲ್ಯವಾದ ಸಾಕಷ್ಟು ರಚನೆಗಳನ್ನು ಆಧುನಿಕ ಕನ್ನಡಕಾವ್ಯಗಳಲ್ಲಿ ಗುರುತಿಸಬಹುದಾಗಿದೆ. ಇವುಗಳಿಗೆ ಉತ್ತಮವಾದ ಸಂಗೀತದ ಜೋಡಣೆಯನ್ನು ಶಾಸ್ತ್ರೀಯ ನೃತ್ಯದ ನೆಲೆಗಟ್ಟಿನಲ್ಲಿ ಜೋಡಿಸಿಕೊಳ್ಳಬೇಕಾಗುವ ಅನಿವಾರ್ಯತೆಯಿದೆ. ಆಯ್ದು ಉತ್ತಮ ಕವನಗಳನ್ನು ಭರತನಾಟ್ಯಕ್ಕೆ ಔಚಿತ್ಯ ಪೂರ್ಣವಾಗಿ ಅಳವಡಿಸಿ ಕೊಳ್ಳುವ ಮೂಲಕ ಕರ್ನಾಟಕದ ಶಾಸ್ತ್ರೀಯ ನೃತ್ಯಕ್ಷೇತ್ರವನ್ನು ಶ್ರೀಮಂತ ಗೊಳಿಸಿಕೊಳ್ಳಬಹುದಾಗಿದೆ.

ಗ್ರಂಥಋಣ

- ಡಾ. ಲೋಕೇಶ ಅಗಸನಕಟ್ಟೆ, ಆಧುನಿಕ ಕನ್ನಡಕಾವ್ಯ. ಅಲೋಕ ಪ್ರಕಾಶನ., ೨೦೦೩.
- ಕುವೆಂಪು, ಸಮಗ್ರಕಾವ್ಯ. ಸಂಪುಟ ೧. ೨. ಹಂಪಿ : ಕನ್ನಡ ವಿಶ್ವವಿದ್ಯಾಲಯ., ೨೦೦೦.
- ದ. ರಾ. ಬೇಂದ್ರೆ, ಔದುಂಬರಗಾಥೆ. ಸಮಗ್ರಕಾವ್ಯ. ಸಂಪುಟ ೧,೨,೩,೪,೫,೬, ವರಕವಿ ಡಾ. ದಾ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ., ೨೦೦೩.
- ವಿ.ಸೀತಾರಾಮಯ್ಯ, ಸ್ನೇಹ ವಿಶ್ವಾಸ. ಸಮಗ್ರಕಾವ್ಯ (೧೮೯೯–೧೯೪೩) ವಿ.ಸಿ. ಸಂಪದ., ೧೯೯೦.
- ಹೆಚ್. ಪಲ್ಲಣ, ಸಂಪಾದಕರು ಭಾವಸಂಗಮ. ಹೊಂಬಾಳೆ ಪ್ರಕಾಶನ., ೨೦೦೫.
- ಕೆ. ಎಸ್. ನಿಸಾರ್ ಅಹಮದ್, ಸಮಗ್ರಕವಿತೆಗಳು. (೧೯೫೫–೧೯೯೦) ತರಳಬಾಳು ಜಗದ್ಗುರು ಬೃಹನ್ಮಠ., ೧೯೯೧.
- ಪು. ತಿ. ನ. ಸಮಗ್ರ ಕಾವ್ಯಗಳು. (೧೯೩೩–೪೪) ಲಿಪಿ ಪ್ರಕಾಶನ., ೧೯೪೪.
- ಹುಲಿಮನೆ ಕಾಳಿತಿಮ್ಮಪ್ಪ, ಸಮಗ್ರಕವಿತೆಗಳು. ಸಂಪಾದಕರು ಟಿ. ಮಹಾಬಲೇಶ್ವರ ಭಟ್ಟ ಹೇಮಂತ ಸಾಹಿತ್ಯ, ೨೦೦೨.
- ಡಾ. ಜಿ. ಎಸ್. ಶಿವರುದ್ರಪ್ಪ, ಸಮಗ್ರಕಾವ್ಯ. ಕಾಮದೇನು., ೧೯೯೭.
- ಡಾ. ಚಂದ್ರಶೇಖರ ಕಂಬಾರ, ಈ ವರೆಗೆ ಹೇಳತೇನ ಕೇಳ. ಸಮಗ್ರಕಾವ್ಯ ೧೯೬೪–೯೪ ಹೆಗ್ಗೋಡು: ಅಕ್ಷರ ಪ್ರಕಾಶನ., ೧೯೯೪.
- ಡಿ. ವಿ. ಗುಂಡಪ್ಪ, ಅಂತಃಪುರ ಗೀತೆ. ಕಾವ್ಯಾಲಯ, ೧೯೫೦.
- ಪು. ತಿ. ನ, ಸಮಗ್ರ ಗೇಯ ಕಾವ್ಯಗಳು. ಪುತಿನ ಟ್ರಸ್ಟ್(ರಿ.), ೧೯೯೪.
- ಡಾ. ತುಳಸಿರಾಮಚಂದ್ರ, ಪದಗತಿ ಪಾದಗತಿ. ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೧.
- ಡಾ. ಚೂಡಾಮಣಿ ನಂದಗೋಪಾಲ್, ಶಿಲೆ–ಕಲೆ. ಸುಂದರ ಪ್ರಕಾಶನ, ೨೦೦೭.

[1] ಡಾ. ತುಳಸಿರಾಮಚಂದ್ರ. 'ಪದಗತಿ ಪಾದಗತಿ', ಪು–೫

[2] ಡಾ. ಚೂಡಾಮಣಿ ನಂದಗೋಪಾಲ್ 'ಶಿಲೆ-ಕಲೆ', ಪು- ೮೧
[3] ಡಾ. ಲೊಕೇಶ ಅಗಸನಕಟ್ಟೆ. 'ಆಧುನಿಕ ಕನ್ನಡ ಕಾವ್ಯ', ಪು- xxvi
[4] ಅದೇ. ಪುಟ- xxi
[5] ಅದೇ. ಪು-೩೧೪
[6] ಕುವೆಂಪು. ಸಮಗ್ರ ಕಾವ್ಯ ಸಂಪುಟ -೧-, ಪು-೭೯೪
[7] ಕುವೆಂಪು. ಸಮಗ್ರ ಕಾವ್ಯ ಸಂಪುಟ -೧-, ಪು-೪೪೫
[8] ಕುವೆಂಪು. ಸಮಗ್ರ ಕಾವ್ಯ ಸಂಪುಟ -೧-, ಪು-೪೪೪
[9] ದ. ರಾ. ಬೇಂದ್ರೆ. 'ಸಮಗ್ರ ಕಾವ್ಯ ಸಪುಟ' -೧-, ಪು-೩೫-೩೭
[10] ದ. ರಾ. ಬೇಂದ್ರೆ. 'ಸಮಗ್ರ ಕಾವ್ಯ ಸಂಪುಟ' -೪- ಪು-೪೩
[11] ದ. ರಾ. ಬೇಂದ್ರೆ. 'ಸಮಗ್ರ ಕಾವ್ಯ ಸಂಪುಟ' -೪- ಪು-೧೪೩
[12] ವಿ. ಸೀತಾ ರಾಮಯ್ಯ (ವಿ.ಸೀ). ಸಮಗ್ರಕಾವ್ಯ, ಪು ೧೧೪
[13] ಪು. ತಿ. ನ. ಸಮಗ್ರ ಗೇಯ ಕಾವ್ಯಗಳು, ಪು ೨೨೭-೨೪
[14] ಕೆ. ಎಸ್. ನಿಸಾರ್ ಅಹಮದ್. ಸಮಗ್ರ ಕವಿತೆಗಳು, ಪು-೨೫೦
[15] ಹುಲಿಮನೆ ಕಾಳೆ ತಿಮ್ಮಪ್ಪ. ಸಮಗ್ರ ಕವಿತೆಗಳು, ಪು-೧
[16] ಡಾ. ಜಿ. ಎಸ್. ಶಿವರುದ್ರಪ್ಪ. ಸಮಗ್ರಕಾವ್ಯ, ಪು-೫೦೫
[17] ಡಾ. ಜಿ. ಎಸ್. ಶಿವರುದ್ರಪ್ಪ. ಸಮಗ್ರಕಾವ್ಯ, ಪು-೫೨೩
[18] ಅದೇ. ೧೯೯೭ ಪು-೫೨೪
[19] ಎಂ. ಎಸ್. ವ್ಯಾಸರಾವ್. 'ಗೀತಾಂಜಲಿ' ಕನ್ನಡ ಕವಿಗಳ ಆಯ್ದ ಕವನಗಳು, ಪು-೧೧೭
[20] ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ. ಸಮಗ್ರ ಕಾವ್ಯ, ಸಂಪುಟ-೨ ಪು-೧೧೫
[21] ಡಾ. ಚಂದ್ರ ಶೇಖರ ಕಂಬಾರ. ಈವರೆಗಿನ ಹೇಳತೇನ ಕೇಳ, ೧೯೯೪ ಪು-೪೭

ಅಪರೀಕ್ಷಿತ ಕಾರಕದಲ್ಲಿ ಸಂಗೀತಶಾಸ್ತ್ರ

ಡಾ॥ ಎಂ. ಎ. ಶ್ರುತಿಕೀರ್ತಿ
ಮುಖ್ಯಸ್ಥರು, ಪಿ.ಜಿ, ಸಂಸ್ಕೃತ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಸಹ್ಯಾದ್ರಿ ಕಾಲೇಜು, ಶಿವಮೊಗ್ಗ-577 203
E-Mail:mashruthikeerti@gmail.com

ವಿಷ್ಣುಶರ್ಮವಿರಚಿತ 'ಪಂಚತಂತ್ರ'ದ 'ಅಪರೀಕ್ಷಿತಕಾರಕ'ವೆಂಬ ತಂತ್ರದ 'ರಾಸಭಶೃಗಾಲಕಥೆ'ಯಲ್ಲಿ ಸಂಗೀತಶಾಸ್ತ್ರದ ಆದ್ಭುತವಾದ ನಿರೂಪಣೆಯಿದೆ. ಗುಪ್ತರ ಕಾಲದಲ್ಲಿದ್ದಿರಬಹುದೆನ್ನಲಾದ ವಿಷ್ಣುಶರ್ಮನ ಅಪಾರ ಜ್ಞಾನದ ನಿರೂಪಣೆಯನ್ನು ಇಲ್ಲಿ ಕಾಣಬಹುದು. ಮೂರ್ಖಶಿಷ್ಯರನ್ನು ವ್ಯವಹಾರ ಜ್ಞಾನಿಗಳನ್ನಾಗಿಸಬೇಕೆನ್ನುವ ನಿಟ್ಟಿನಲ್ಲಿ ಕಥೆಗಳ ಮೂಲಕ ಶಾಸ್ತ್ರಗಳನ್ನು ಹೇಳುವುದು ಪಂಚತಂತ್ರದ ವೈಶಿಷ್ಟ್ಯ. ಕಥೆಗೆ ವಶರಾಗದವರಿಲ್ಲ. ಆಟದ ಮೂಲಕ ಪಾಠ ಎನ್ನುವುದು ಹೇಗೆ ಜನಪ್ರಿಯವೋ ಹಾಗೇ ಕಥೆಗಳ ಮೂಲಕ ವ್ಯವಹಾರ ಮತ್ತು ಶಾಸ್ತ್ರಜ್ಞಾನ ಇದರ ಪ್ರಮುಖ ತಂತ್ರವಾಗಿದೆ. ಈ ತಂತ್ರದ ಮೂಲಕ ಇಲ್ಲಿ ನಿರೂಪಿತವಾಗಿರುವುದು ಸಂಗೀತಶಾಸ್ತ್ರ. ರಾತ್ರಿ ಹೊಲದಲ್ಲಿ ಸೌತೆಕಾಯಿಗಳನ್ನು ಕದ್ದು ತಿನ್ನುತ್ತಿರುವ ಆಪ್ತಮಿತ್ರರಾದ ಕತ್ತೆ ಮತ್ತು ಸರಿಗಳಲ್ಲಿ ಮದವೇರಿದ ಕತ್ತೆಗೆ ಹಾಡಬೇಕೆನ್ನುವ ತವಕವುಂಟಾದಾಗ ನರಿ ತಡೆಯುತ್ತದೆ- 'ನಿನ್ನ ಧ್ವನಿ ಸರಿಯಿಲ್ಲ, ಅದೂ ಅಲ್ಲದೆ ನಿನಗೇನು ಗೊತ್ತು ಸಂಗೀತಶಾಸ್ತ್ರ' ಎನ್ನುವ ಸಂದರ್ಭದಲ್ಲಿ ಚೋರವಿದ್ಯೆಯ ಪರಿಚಯವು ಕವಿಗೆ ಇತ್ತೆಂಬುದು ತಿಳಿಯುತ್ತದೆ. ಆದರೆ, ಕತ್ತೆ ತಾನು ಸಂಗೀತಶಾಸ್ತ್ರವನ್ನು ಬಲ್ಲೆನೆಂದು ಅದರ ಬಗ್ಗೆ ಹೇಳುತ್ತದೆ –'ಸಪ್ತಸ್ವರಾಃ ತ್ರಯೋಗ್ರಾಮಾ ಮೂರ್ಛನಾಶ್ಚೈಕ ವಿಂಶತಿಃ । ತಾನಾಸ್ತ್ರೇಕೋನ ಪಂಚಾಶತ್ತಿಸ್ರೋ ಮಾತ್ರಾ ಲಯಾಸ್ತ್ರಯಃ ॥ ಸ್ಥಾನತ್ರಯಮ್ ಯತೀನಾಂಚ ಷಡಾಸ್ಯಾನಿ ರಸಾನವ । ರಾಗಾ ಷಟ್‌ತ್ರಿಂಶತಿರ್ಭಾವಾಃ ಚತ್ವಾರಿಂಶತ್ತತಃ ಸ್ಮೃತಾಃ ॥ ಪಂಚಾಶೀತ್ಯಧಿಕಂ ಹ್ಯೇತದ್ ಗೀತಾಂಗಾನಾಂ ಶತಂ ಸ್ಮೃತಂ । ಸ್ವಯಮೇವ ಪುರಾ ಪ್ರೋಕ್ತಂ ಭರತೇನ ಶ್ರುತೇಃ ಪರಂ ॥ ನಾನ್ಯತ್ ಗೀತಾತ್‌ಪ್ರಿಯಂ ಲೋಕೇ ದೇವಾನಾಮಪಿ ದೃಶ್ಯತೇ । ಶುಷ್ಕಸ್ನಾಯುಸ್ವರಾಹ್ಲಾದಾತ್ ತ್ರ್ಯಕ್ಷಂ ಜಗ್ರಾಹ ರಾವಣಃ' ॥-'ಸ್ವರಗಳು ಏಳು, ಇಪ್ಪತ್ತೊಂದು ಮೂರ್ಛನೆಗಳು, ನಲವತ್ತೊಂಭತ್ತು ತಾನಗಳು, ಮೂರು ಮೂರು ಮಾತ್ರೆಗಳು- ಗ್ರಾಮಗಳು- ಲಯಗಳು- ಯತಿಸ್ಥಾನಗಳು, ಆರು ಆಸ್ಯಗಳು, ಒಂಭತ್ತು ರಸಗಳು, ಮೂವತ್ತಾರು ರಾಗಗಳು, ನಲವತ್ತು ಭಾವಗಳು, ನೂರಐವತ್ತಕ್ಕೂ ಹೆಚ್ಚು ಗೀತಾಂಗಗಳು ಇವೆಲ್ಲವನ್ನು ಭರತನು ಬಹಳ ಹಿಂದೆಯೇ ಹೇಳಿದ್ದಾನೆ. ಲೋಕದಲ್ಲಿ ಸಂಗೀತಕ್ಕಿಂತ ಮಧುರವಾದುದು ದೇವತೆಗಳಿಗೂ ಬೇರೆ ಇಲ್ಲ. ರಾವಣನು ಕೂಡ ಸಂಗೀತದಿಂದಲೇ ಶಿವನನ್ನು ಮೆಚ್ಚಿಸಿದ' ಎನ್ನುತ್ತದೆ. ಇಲ್ಲಿ ಸಂಗೀತಶಾಸ್ತ್ರದ ಜ್ಞಾನ ವಿಷ್ಣುಶರ್ಮನಿಗೆ ಇತ್ತೆಂಬುದನ್ನು ಈ ಮೂಲಕ ಗಮನಿಸಬಹುದು. ತತ್‌ಕ್ಷಣದಲ್ಲಿಯೇ ಆನಂದವನ್ನುಂಟು ಮಾಡುವ ಸಂಗೀತವು ಮೋಕ್ಷಸಾಧಕವೂ ಹೌದೆಂದು 'ಸಂಗೀತರತ್ನಾಕರ', 'ಯಾಜ್ಞವಲ್ಕ್ಯಸ್ಮೃತಿ' ಗ್ರಂಥಗಳಲ್ಲಿ ಹೇಳಲಾಗಿದೆ. ಪರಮಾತ್ಮನೇ 'ಮದ್ಭಕ್ತಾ ಯತ್ರಗಾಯಂತಿ ತತ್ರ ತಿಷ್ಠಾಮಿ ನಾರದ' ಎಂದಿದ್ದಾನೆ. ಸಂಗೀತದ ಆಧಾರದ ಮೇಲೆಯೇ ನಾಟ್ಯವೂ ನಿಂತಿದೆ – 'ಗೀತಂ ನಾದಾತ್ಮಕಂ ವಾದ್ಯಂ ನಾದವ್ಯಕ್ತ್ಯಾ ಪ್ರಶಸ್ಯತೇ । ತದ್‌ದ್ವಯಾನುಗಂ ನೃತ್ತಂ ನಾದಾಧೀನಮತಸ್ತ್ರಯಂ'॥ ಎಂದು 'ಸಂಗೀತರತ್ನಾಕರ'ದಲ್ಲಿ ಹೇಳಲಾಗಿದೆ. ಸಂಗೀತದಿಂದ ಸಂತೋಷ ಉಂಟಾಗುತ್ತದೆ, ದುಃಖ ದೂರಾಗುತ್ತದೆ ಎಂದಷ್ಟೇ ಭಾವಿಸಬಾರದು- ಶಾರೀರಿಕ ಹಾಗೂ ಮಾನಸಿಕ ರೋಗಗಳ ನಿವಾರಣೆಯಾಗುತ್ತದೆ. ಮನುಷ್ಯರ ಮೇಲಷ್ಟೇ ಅಲ್ಲದೆ ಪ್ರಾಣಿಗಳ ಮೇಲೆ, ಹಾಗೂ ಗಿಡ ಮರ ಬಳ್ಳಿಗಳ ಮೇಲೂ ಪರಿಣಾಮ ಉಂಟಾಗುತ್ತದೆಂಬ ಅರಿವಿದ್ದ ವಿಷ್ಣುಶರ್ಮನು ತನ್ನ ಮೂರ್ಖಶಿಷ್ಯರ ಜ್ಞಾನವೃದ್ಧಿಗಾಗಿ ಸಂಗೀತಶಾಸ್ತ್ರದ ಜ್ಞಾನದ ನೆರವನ್ನೂ ಪಡೆದಿದ್ದು ಸೂಕ್ತವಾಗಿದೆ ಎನ್ನಬಹುದು.

ಪೀಠಿಕೆ: ಮಾನವ ತನ್ನ ಭಾವನೆಯನ್ನು ಅಭಿವ್ಯಕ್ತಪಡಿಸುವ ಮಾಧ್ಯಮವೇ ಕಲೆ. ಕಲೆಯು ಮಾನವನ ಮನಸ್ಸನ್ನು ಸಂಸ್ಕರಿಸುತ್ತದೆ. ಕಲೆಯ ಮೂಲ ಪ್ರಕೃತಿ. ಪ್ರಕೃತಿಯಲ್ಲಿರುವ ನಾನಾ ಧ್ವನಿ ವಿಶೇಷಗಳು, ಪಶು – ಪಕ್ಷಿಗಳ ಕೂಗು, ಸಮುದ್ರದ ಮೊರೆತ ಇತ್ಯಾದಿಗಳು ಮಾನವನಲ್ಲಿ ಸುಪ್ತವಾಗಿದ್ದ ಸಂಗೀತವನ್ನು ಸಚೇತನಗೊಳಿಸುವ ಪರಿಕರಗಳಾಯಿತು. ಭಾರತೀಯ ಪುರಾತನ ಗ್ರಂಥಗಳು ತಿಳಿಸುವ 64 ಕಲೆಗಳನ್ನು ಸ್ಥೂಲವಾಗಿ ಲಲಿತ ಕಲೆ, ವಿಜ್ಞಾನ ಕಲೆ, ವಾಣಿಜ್ಯ ಕಲೆ ಇತ್ಯಾದಿಯಾಗಿ ವಿಂಗಡಿಸಬಹುದು. ಲಲಿತಕಲೆಯು ಸಂಸ್ಕಾರ ಮತ್ತು ಪ್ರತಿಭೆಯ ಮೂಲಕ ರೂಪುಗೊಳ್ಳುತ್ತದೆ.

ಸಂಗೀತ, ನೃತ್ಯ, ಸಾಹಿತ್ಯ, ನಾಟಕ, ಶಿಲ್ಪ, ಚಿತ್ರ ಮುಂತಾದುವು ಲಲಿತಕಲೆಗಳೆನಿಸುತ್ತವೆ. ಇವುಗಳಲ್ಲಿ ಸಂಗೀತವು ಪ್ರಥಮ ಸ್ಥಾನವನ್ನು ಪಡೆಯುತ್ತದೆ. ತೌರ್ಯತ್ರಿಕ ಅಥವಾ ಪ್ರೇಕ್ಷಕರ ಸಂತೋಷಾರ್ಥವಾಗಿ ಏರ್ಪಡುವ ನೃತ್ಯ, ಗೀತ ಮತ್ತು ವಾದ್ಯಗಳಿಂದ ಕೂಡಿದ ಹಾಡು ಎಂಬರ್ಥವಿದೆ. ಭಾರತೀಯ ಸಂಗೀತವು ವೇದ ಜನಿತವಾದುದು. [ಸಾಮವೇದ] ಸಂಗೀತದ ಜೀವಾಳವೇ – ಸುಸ್ವರ ಮತ್ತು ಸುನಾದ. ಇವುಗಳ ಮೂಲಕ ದೇವರನ್ನು ಅರ್ಚಿಸಿ, ಮೋಕ್ಷವನ್ನು ಹೊಂದುವ ಪ್ರಯತ್ನ ಹಿಂದಿನಿಂದಲೂ ಬಂದಿದೆ[1]. ಹೀಗೆ ಸಂಗೀತವು ಆಧ್ಯಾತ್ಮಿಕತೆಯ ಒಂದು ಮುಖವಾಗಿದ್ದರೆ, ನೃತ್ಯ, ಶಿಲ್ಪ, ಚಿತ್ರಾದಿ ಶಾಸ್ತ್ರಗಳೊಂದಿಗೆ ಸಂಬಂಧ ಹೊಂದಿದ ಮತ್ತೊಂದು ಮುಖವನ್ನು ಹೊಂದಿದೆ. ಅಲ್ಲದೆ, ಹಲವು ಶಾಸ್ತ್ರಪ್ರಕಾರಗಳಲ್ಲಿ ಸಂಗೀತವು ಸಂಬಂಧವನ್ನು ಹೊಂದಿದೆ– ಮಾನವನ ಪ್ರತಿ ಚಲನವಲನಗಳೂ ವೈಜ್ಞಾನಿಕವಾಗಿ ವ್ಯವಸ್ಥಿತವಾಗಿದ್ದು, ಲಯಬದ್ಧವಾಗಿವೆ. ನಮ್ಮ ಅಂಗಾಂಗಗಳೂ ಸಹ ಲಯದಿಂದಲೇ ಕೂಡಿ ಸ್ಪಂದಿಸುತ್ತವೆ. ಲಯಬದ್ಧವಾಗಿರುವ ಸಂಗೀತಕಲೆಯೂ ಸಹ ಹೀಗೆ ವೈಜ್ಞಾನಿಕ ಹಿನ್ನೆಲೆಯಲ್ಲಿಯೇ ಬೆಳೆದುಬಂದಿದೆ. ಅದು ಹೇಗೆಂದರೆ–

ಸಂಗೀತ ಮತ್ತು ಶರೀರಶಾಸ್ತ್ರ– ಮಾನವ ಶರೀರದ ಹಲವು ಅಂಗಗಳನ್ನು– ಮುಖ್ಯವಾಗಿ ಶಾರೀರ, ಶ್ರವಣೇಂದ್ರಿಯ, ಶ್ವಾಸಕೋಶಗಳನ್ನು ಸರಿಯಾಗಿ, ಅಧಿಕವಾಗಿ ಬಳಸದಿದ್ದಲ್ಲಿ, ಅವುಗಳ ಶಕ್ತಿ ಕ್ರಮೇಣ ಕುಂದುತ್ತಾ ಬಂದು, ನಶಿಸಿ ಹೋಗಲೂಬಹುದು (ಉದಾ : ಅಪೆಂಡಿಕ್ಸ್).

ಸಂಗೀತ ಭೌತಶಾಸ್ತ್ರ : ನಾದವು ಭೌತಶಾಸ್ತ್ರಕ್ಕೆ ಸಂಬಂಧಿಸಿದ್ದು. ಸಂಗೀತಕ್ಕೆ ನಾದವೇ ಮೂಲ. ಅಲ್ಲದೇ, ಧ್ವನಿವರ್ಧಕ ಯಂತ್ರ, ಧ್ವನಿ ಮುದ್ರಣಯಂತ್ರ ಇತ್ಯಾದಿಗಳೆಲ್ಲವೂ ಭೌತವಿಜ್ಞಾನ ಸಂಬಂಧಿತವಾದ ವುಗಳು.

ಸಂಗೀತ ಮತ್ತು ಗಣಿತಶಾಸ್ತ್ರ : ಸಂಗೀತದಲ್ಲಿ ತಾಳವು ಅತೀ ಅವಶ್ಯಕ. ತಾಳವಿದ್ದಲ್ಲಿ ಗಣಿತವಿದ್ದೇ ಇರುವುದು.

ಸಂಗೀತ ಮತ್ತು ಮನೋವಿಜ್ಞಾನ .: ಮನಸ್ಸಿಗೆ ನೆಮ್ಮದಿ ನೀಡುವ ಲಲಿತಕಲೆಗಳಲ್ಲಿ ಸಂಗೀತ ಪ್ರಧಾನ. ಮಾನಸಿಕ ಒತ್ತಡಗಳನ್ನು ಸಂಗೀತದ ಮೂಲಕ ಪರಿಹರಿಸುವ ಪ್ರಯೋಗಗಳು ಮನೋವಿಜ್ಞಾನದಲ್ಲಿತ್ತೀಚೆಗೆ ಅಧಿಕವಾಗುತ್ತಿದೆ.

ಸಂಗೀತ ಮತ್ತು ಸಮಾಜಶಾಸ್ತ್ರ : ಜಾತಿ, ಮತ, ಲಿಂಗ, ಅಂತಸ್ತು, ಭಾಷಾಭೇದಗಳಿಲ್ಲದ ಸಂಗೀತ ಕಲೆ ಭಾವೈಕ್ಯತೆಯ ಸಾಧನ. ಸಮಾಜದ ವಿವಿಧ ಜನರ ಅಭಿರುಚಿಗೆ ತಕ್ಕಂತೆ ಆಯಾ ಸಮಾಜಕ್ಕೆ ಅನುಗುಣವಾದ ಹಲವು ಪ್ರಕಾರಗಳಲ್ಲಿ ಸಂಗೀತ ಇಂದಿಗೂ ಬೆಳೆಯುತ್ತಿದೆ.

ಶಿಷ್ಯತೇ ಅನೇನ – 'ಶಾಸು' (ಅನುಶಿಷ್ಟೌ) 'ಷ್ಟನ್' (3.4.158) ಎಂದು ವ್ಯುತ್ಪತ್ತಿಯನ್ನು ಹೊಂದಿರುವ ಶಾಸ್ತ್ರ ಶಬ್ದಕ್ಕೆ ಆಜ್ಞೆ, ಆದೇಶ ಎಂಬರ್ಥಗಳಿವೆ. 'ಶಾಸ್ತಿ ತ್ರಾಯತೇ ಚೇತಿ ಶಾಸ್ತ್ರಂ ಇತಿ ವಾ' ಎಂಬರ್ಥವೂ ಇದೆ. ಹಲವಾರು ಪ್ರಕಾರಗಳ ಶಾಸ್ತ್ರಗಳಿರುವಂತೆಯೇ ಸಂಗೀತವು ಒಂದು ಶಾಸ್ತ್ರಪ್ರಕಾರವಾಗಿದ್ದು, ಇದನ್ನು ವಿಷ್ಣುಶರ್ಮನು ತನ್ನ 'ಪಂಚತಂತ್ರ'ದ 'ಅಪರೀಕ್ಷಿತಕಾರಕ' ಎಂಬ ತಂತ್ರದಲ್ಲಿ ಹೇಳಿದ್ದಾನೆ. ಇದರಿಂದ ವಿಷ್ಣುಶರ್ಮನಿಗೆ ಹಲವಾರು ಶಾಸ್ತ್ರಗಳ ಜ್ಞಾನವಿದ್ದು, ಅದರಲ್ಲಿ ಸಂಗೀತಶಾಸ್ತ್ರವೂ ಒಂದಾಗಿತ್ತೆಂದು ತಿಳಿದು ಬರುತ್ತದೆ. ಅಷ್ಟೇ ಅಲ್ಲದೇ, ಆನಂದವರ್ಧನಾಚಾರ್ಯರು 'ಅನೌಚಿತ್ಯಾದೃತೇ ನಾನ್ಯತ್ ರಸಭಂಗಸ್ಯ ಕಾರಣಂ' ಎನ್ನುವಂತೆ, ಯಾವುದೇ ಪ್ರಸಂಗದಲ್ಲಾದರೂ ಔಚಿತ್ಯಪ್ರಜ್ಞೆ ಇಲ್ಲದಿದ್ದಲ್ಲಿ ಆ ಪ್ರಸಂಗವೇ ಭಂಗವಾಗುವುದೆಂಬ ಪ್ರಜ್ಞೆ ವಿಷ್ಣುಶರ್ಮನಲ್ಲಿದ್ದು, ಮೂವರು ಮೂರ್ಖ ರಾಜಕುಮಾರರಿಗೆ ಇಂತಹ ಪ್ರಜ್ಞೆ ಬೆಳೆಸಿಕೊಳ್ಳಿರೆನ್ನಲು ಹಾಗೂ ವ್ಯವಹಾರ ಜ್ಞಾನ ಬೋಧಿಸಲೂ ಕೂಡ ಇದು ನೆರವಾಗಿದೆ ಎನ್ನಬಹುದು.

ಸಪ್ತಸ್ವರಾತ್ಮಕವಾದ ಸಂಗೀತವು ಪಂಚಮವೇದ ಎಂಬ ಖ್ಯಾತಿಯನ್ನೂ ಹೊಂದಿದೆ. ಅಲ್ಲದೆ ಸಪ್ತಸ್ವರಗಳಲ್ಲಿನ ದೈವಿಕತ್ವವನ್ನು ಹೀಗೆ ಹೇಳಲಾಗಿದೆ – 'ಶಿವಶಕ್ತಿ ಸಮಯೋಗಾತ್ ರಾಗಾಣಾಂ ಸಂಭವೋ ಭವೇತ್[2] –ಸಪ್ತಸ್ವರಗಳು ತಂತಮ್ಮ ಪ್ರತ್ಯೇಕರೂಪಗಳಿಂದ ದೇವಿಯನ್ನು ಆರಾಧಿಸಿ ವರ್ಣಿಸುತ್ತವೆ. ಆದಿಯಲ್ಲಿ ಮುಖ್ಯಷಡ್ರಾಗಗಳು ಶಿವ–ಪಾರ್ವತಿ ನೃತ್ಯದಲ್ಲಿ ಮಗ್ನರಾಗಿರುವಾಗ ಜನಿಸಿದವು. ಶಿವನ ಪಂಚಾನನಗಳಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನಗಳಿಂದ ಶ್ರೀರಾಗವೂ, ವಸಂತ, ಭೈರವ, ಪಂಚಮ ಮತ್ತು ಮೇಘರಾಗಗಳು ಶಿವತಾಂಡವದಲ್ಲೂ, ನಟ್ಟನಾರಾಯಣರಾಗ ಪಾರ್ವತಿಯ ಲಾಸ್ಯದಲ್ಲೂ ಹುಟ್ಟಿರುತ್ತವೆ.

ಸಪ್ತಸ್ವರಗಳ ಶ್ರುತಿಸಹಿತ ಗಾಯನ ಪ್ರಾಣಿಯ ಮನೋಪ್ರವೃತ್ತಿಯ ಮೇಲೆ ಪರಿಣಾಮವನ್ನುಂಟುಮಾಡಿ ಮೋಕ್ಷ ಸಾಧನೆಗೆ ದಾರಿದೀಪವಾಗುತ್ತದೆ. ಪಾಣಿನಿಯ 'ಶಿಕ್ಷಾ'ದಲ್ಲಿ ಉದಾತ್ತಾದಿ ವೈದಿಕ ಸ್ವರಗಳಿಂದ ಸಪ್ತಸ್ವರೋತ್ಪತ್ತಿಯನ್ನು ಹೀಗೆ ಹೇಳಲಾಗಿದೆ–'ಉದಾತ್ತೇ ನಿಷಾದ ಗಾಂಧಾರೌ, ಅನುದಾತ್ತ ಋಷಭ'ಧೈವತೌ । ಸ್ವರಿತಪ್ರಭಾವಾದ್ಯಜ್ಜೈತೇ ಷಂಜಮಧ್ಯಮ ಪಂಚಮಾಃ'॥ (ಭಾ.ಕ.ರಾಗ–ರಾ.ಪು.134-35). ಆದ್ದರಿಂದ ಸಂಗೀತಶಾಸ್ತ್ರವೂ ಕೂಡ ವೇದದಷ್ಟೇ ಪ್ರಮುಖವಾಗಿದೆ. 'ರಂಜಕಃ ಸ್ವರಸಂದರ್ಭಾ ಗೀತಮಿತ್ಯಭಿಧೀಯತೇ'[3] ರಂಜಕವಾದ ಸ್ವರಗಳನ್ನು ಹೊಂದಿರುವುದೇ ಗೀತ ಎಂದರ್ಥ. ಸಂಗೀತರತ್ನಾಕರದಲ್ಲಿ 'ಗೀತಂ, ವಾದ್ಯಂ ತಥಾ ನೃತ್ಯಂ ತ್ರಯಂ ಸಂಗೀತಮುಚ್ಯತೇ'[4] ಎನ್ನಲಾಗಿದೆ.

ಸಂಗೀತ ಪ್ರಭಾವ : 'ಅಜ್ಞಾತ ವಿಷಯಾಸ್ಯಾದೋ ಬಾಲಃ ಪರ್ಯಂಕ ಕಾಗತಃ । ರೂದನ್ ಗೀತಾಮೃತಂ ಪೀತ್ವಾ ಹರ್ಷೋತ್ಕರ್ಷಂ ಪ್ರಪದ್ಯತೇ[5] ॥ ವನೇಜರಾಸ್ತೃಣಾಹಾರಶ್ಚಿತ್ರಂ ಮೃಗಶಿಶುಃ ಪಶುಃ । ಲುಬ್ಧೋ ಲುಬ್ಧಕ ಸಂಗೀತೇ ಗೀತೇ ಯಚ್ಛತಿ ಜೀವಿತಂ'[6]॥ ಎಂದೂ, ಶ್ರೀಮದ್ಭಾಗವತದಲ್ಲಿ– 'ನಿಶಾಮ್ಯಗೀತಂ ತದನಂಗವರ್ಧನಂ ವ್ರಜಸ್ತ್ರಿಯಃ ಕೃಷ್ಣ ಗೃಹೀತಮಾನಸಾಃ। ಆಜಗ್ಮುರನ್ಯೋನ್ಯಮಲಕ್ಷಿತೋದ್ಯಮಾಃ ಸಯತ್ರ ಕಾಂತೋ ಜವಲೋಲಕುಂಡಲಾಃ'[7]॥

–ಹೀಗೆ ಸಂಗೀತ ಎಲ್ಲರ ಮನಸ್ಸನ್ನೂ ಆಕರ್ಷಿಸುವಂತಹುದೋ, ಹಾಗೆಯೇ ಕಥೆಯೂ ಕೂಡ ಎಲ್ಲರ ಚಿತ್ತಾಪಹಾರಿಯಾದುದು. ಇವೆರೆಡೂ ಸೇರಿದರೆ ಹಾಲಿನೊಂದಿಗೆ ಸಕ್ಕರೆ ಬೆರೆತಂತಾಗುತ್ತದೆ. ಆದರೆ ಅಪರೀಕ್ಷಿತಕಾರಕದಲ್ಲಿ ವಿಷ್ಣುಶರ್ಮ ಕಥೆಯೊಟ್ಟಿಗೆ ಸಂಗೀತವನ್ನು ಬೆರೆಸಲಿಲ್ಲ. ಸಂಗೀತಶಾಸ್ತ್ರವನ್ನು ಬೆರೆಸಿದ್ದಾನೆ. ಹೇಗೆ ಸಂಗೀತವು ಸರ್ವಜನಪ್ರಿಯವೋ ಹಾಗೆಯೇ, ಅಥವಾ ಅದಕ್ಕಿಂತ ಹೆಚ್ಚಿನ ಗುಣಗಳನ್ನು ಹೊಂದಿರುವ ಕಥೆಯನ್ನು ನಿರೂಪಣೆಗಾಗಿ ಬಳಸಿಕೊಂಡಿದ್ದಾನೆ. ಅಮರಶಕ್ತಿಯ ರಾಜನ ಮೂವರು ಮೂರ್ಖ ಮಕ್ಕಳ ವ್ಯವಹಾರ ಜ್ಞಾನಕ್ಕಾಗಿ ಕಥೆಗಳನ್ನು ಮೃಗ, ಪಕ್ಷಿಗಳಷ್ಟೇ ಅಲ್ಲದೇ, ಮರ–ಗಿಡ–

ಬಳಿ ಇತ್ಯಾದಿಗಳ ಮೂಲಕ ಹೇಳಿಸಿ, ಆ ಮೂಲಕ ಹಲವು ಶಾಸ್ತ್ರಗಳ ಜ್ಞಾನವನ್ನು ಅವರಲ್ಲಿ ಉಂಟುಮಾಡಲು ಪ್ರಯತ್ನಿಸಿದ್ದಾನೆ. ಒಂದು ರೀತಿ ಕಾಂತಾಸಮ್ಮಿತದ ಪ್ರಯೋಗ ಇಲ್ಲಿ ನಡೆದಿದೆ ಎನ್ನಬಹುದು. ವಿಷ್ಣುಶರ್ಮನ ಶಿಷ್ಯರಿಗೆ ಇಲ್ಲಿ ಒಂದು ಯಃಕಶ್ಚಿತ್ ಕತ್ತೆಯೂ ಕೂಡ ಇಂತಹ ಸಂಗೀತಾದಿ ಶಾಸ್ತ್ರಗಳ ಜ್ಞಾನ ಹೊಂದಿದೆ ಎಂದು ತಿಳಿದಾಗ ತಾವೂ ಕೂಡ ಇಂತಹ ಜ್ಞಾನವಂತರಾಗದಿದ್ದಲ್ಲಿ, ಕತ್ತೆಗಿಂತ ಕೀಳಾಗುತ್ತೇವೆಂಬ ಭಾವನೆ ಬರಬಹುದು. ಹಾಗಾಗಿ ಅವರು ಜಿಜ್ಞಾಸುಗಳಾಗುತ್ತಾರೆಂಬುದು ಗುರುವಿನ ಇಂಗಿತ. ಶಾಸ್ತ್ರದ ಜ್ಞಾನವನ್ನಷ್ಟೇ ಅಲ್ಲದೇ ಅವನ್ನು ಬಳಸುವಾಗ ಇರಬೇಕಾದ ಔಚಿತ್ಯ ಪ್ರಜ್ಞೆ ಕೂಡ ಇಲ್ಲಿ ಅತ್ಯಂತ ಪ್ರಮುಖ. ಆನಂದವರ್ಧನಾಚಾರ್ಯರು ಹೇಳಿದ ಮಾತಿನ ಅಂತಸ್ಸತ್ತ್ವ ಪ್ರಾಯಶಃ ಎಷ್ಟೋ ಶತಮಾನಗಳ ಹಿಂದಿದ್ದ ವಿಷ್ಣುಶರ್ಮನಿಗೆ ತಿಳಿದಿತ್ತೆಂದು ಈ ಕಥೆಯ ಮೂಲಕ ಗೋಚರವಾಗುತ್ತದೆ. ಎಂತಹ ಶಾಸ್ತ್ರಜ್ಞಾನಿಯಾದರೂ ಅವುಗಳ ಪ್ರಯೋಗ ಕಾಲದಲ್ಲಿ ತೀವ್ರವಾದ ಎಚ್ಚರಿಕೆ, ಔಚಿತ್ಯ ಜ್ಞಾನ ಬೇಕೆನ್ನುವುದು ಆತನ ಇಂಗಿತ. ಇಲ್ಲಿ ಆ ಮಾತನ್ನು ನರಿಯ ಮೂಲಕ ಹೇಳಿಸುತ್ತಾನೆ – 'ಮಾಮ ! ಕಿಮನೇನ ವೃಥಾऽನರ್ಥ ಪ್ರಚಾಲನೇನ ? ಯತಶ್ಚೌರಕರ್ಮಪ್ರವೃತ್ತಾವಾವಾಮ್, ನಿಭೃತ್ಯೈಶ್ಚ ಚೌರಜಾರ್ಯೈರತ್ರ ಸ್ಥಾತವ್ಯಂ'[8], ಮತ್ತೂ ಮುಂದುವರೆದು, 'ಕಾಸಯುಕ್ತಸ್ತ್ಯಜೇಚ್ಚೌರ್ಯಂ ನಿದ್ರಾಲುಶ್ಚೇತ್ಸ ಪುಂಶ್ಚಲೀಂ । ಜಿಹ್ವಾಲೌಲ್ಯಂ ರುಜಾಕ್ರಾಂತೋ ಜೀವಿತಂ ಯೋऽತ್ರ ವಾಂಛತಿ'[9]॥– ಎಂದು ತಿಳಿಸುತ್ತದೆ. ಅಲ್ಲದೇ 'ನಿನ್ನ ಗೀತವು ಮಧುರಸ್ವರವನ್ನುಳ್ಳದ್ದಲ್ಲ, ಶಂಖಶಬ್ದದಂತೆ ದೂರದಿಂದಲೂ ಕೇಳುತ್ತದೆ. ಈ ಹೊಲದಲ್ಲಿ ರಕ್ಷಕರು ಮಲಗಿದ್ದಾರೆ. ಅವರು ಎದ್ದು ನಮಗೆ ಹೊಡೆತವನ್ನೋ, ಬಂಧನವನ್ನೋ ಮಾಡುತ್ತಾರೆ. ಆದ್ದರಿಂದ ಈ ಅಮೃತ ಸಮಾನವಾದ ಸೌತೇಕಾಯಿಗಳನ್ನು ತಿನ್ನು. ಇಲ್ಲಿ ಈಗ ನೀನು ಹಾಡಬೇಡ' ಎಂದಾಗ, ಕತ್ತೆಯು – 'ವನದಲ್ಲಿರುವುದರಿಂದ ನೀನು ಗೀತರಸವನ್ನು ತಿಳಿದಿಲ್ಲ. ಆದ್ದರಿಂದ ಹೀಗೆ ಹೇಳುತ್ತಿರುವೆ. ಶರತ್ಕಾಲದಲ್ಲಿ ಬೆಳದಿಂಗಳಿನ ರಾತ್ರಿಯಲ್ಲಿ ಅಂಧಕಾರವು ದೂರವಾಗಿರುವಾಗ, ಹಾಗೂ ತಮ್ಮ ಪ್ರಿಯಜನರ ಸನ್ನಿಧಿಯಲ್ಲಿ ಹಾಡಲಾಗುವ ಸಂಗೀತವು ಅಮೃತದಂತೆ ಭಾಗ್ಯಶಾಲಿಗಳ ಕಿವಿಗೆ ಆಸ್ವಾದನೀಯವಾಗುತ್ತದೆ' ಎನ್ನುತ್ತದೆ. ಆಗ ನರಿಯು 'ನೀನು ಹೇಳುವುದು ಸತ್ಯ. ಆದರೆ ಮಾಮ, ನೀನು ಗೀತೆಯನ್ನು ತಿಳಿದಿಲ್ಲ. ಕೇವಲ ಅರಚುತ್ತಿ. ಹೀಗೆ ಅರಚುವುದರಿಂದೇನು ಪ್ರಯೋಜನ' ಎನ್ನುತ್ತದೆ. ಇಲ್ಲಿ ಮೂರ್ಖ ಶಿಷ್ಯರಿಗೆ ಮತ್ತೊಂದು ಉಪದೇಶಾಂಶವೆಂದರೆ ನರಿ ಮತ್ತು ಕತ್ತೆಗಳ ಸಂಬೋಧನೆ. ಪರಸ್ಪರ ಗೌರವ ಕೊಟ್ಟು, ಪಡೆಯುವ– ಸಂಬಂಧ ಸೂಚಕ– ಸಂಬೋಧನೆಯ ಮೂಲಕ – 'ಉದಾರ ಚರಿತಾನಾಂ ತು ವಸುಧೈವ ಕುಟುಂಬಕಮ್' ಎನ್ನುವುದು. ನರಿಯ ಮಾತುಗಳನ್ನು ಕೇಳಿ ಕತ್ತೆ ತನ್ನ ಸಂಗೀತಶಾಸ್ತ್ರಜ್ಞಾನವನ್ನು ತೋರಿಸುತ್ತದೆ– 'ಸ್ವರಗಳು ಏಳು [ಸ ರಿ ಗ ಮ ಪ ದ ನಿ. ಸ್ವರೋ ನಾಮ ಶ್ರುತ್ಯನಂತರಂ ಜಾಯಮಾನೋऽನುರಣನಾತ್ಮಕಂ ಸ್ನಿಗ್ಧಃ ಸ್ವರವಿಶೇಷಃ. ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ.], ಇಪ್ಪತ್ತೊಂದು ಮೂರ್ಛನೆಗಳು [ಷಡ್ಜ, ಮಧ್ಯಮ ಮತ್ತು ಗಾಂಧಾರ ರೂಪವಾದ ಸ್ವರಸಂಘಾತಗಳ ಭೇದ –'ಮೂರ್ಛಾ' (ಮೋಹಸಮುಚ್ಛ್ರಾಯಯೋಃ) 'ಯುಚ್' (3.3.128) ವ್ಯುತ್ಪತ್ತಿ ಸ್ವರವು ಕ್ರಮವಾಗಿ ಬೆಳೆದು ರಾಗವಾಗಿ ಪರಿಣಮಿಸುವುದು ಮೂರ್ಚ್ಛನೆ. ಇದು ಗ್ರಾಮದ (ಸ್ವರಗಳ ಸಮೂಹದ) 1/7ನೇ ಭಾಗ], ನಲವತ್ತೊಂಭತ್ತು ತಾನಗಳು [ತನು (ವಿಸ್ತಾರೇ) 'ಘಞ್' (3.3.121) 'ಗಾತಾ ಯುಂಯುಂ ಸ್ವರಂ ಗಚ್ಛೇತ್ತಂತಂ ವಂಶೇನ ತಾನಯೇತ್'। 'ವಿಸ್ತಾರ್ಯಂತೇ ಪ್ರಯೋಗಾಯೇ ಮೂರ್ಚ್ಛನಾ ಶೇಷ ಸಂಶ್ರಯಾಃ । ತಾನಾಸ್ತೇऽಪ್ಯೂನಪಂಚಾಶತ್ ಸಪ್ತಸ್ವರಸಮುದ್ಭವಾಃ । ತೇಭ್ಯ ಏವ ಭವಂತ್ಯನ್ಯೇ ಕೂಟತಾನಾಃ ಪೃಥಕ್ ಪೃಥಕ್ । ತೇ ಸ್ಯುಃ ಪಂಚಸಹಸ್ರಾಣಿ ತ್ರಯಸ್ತ್ರಿಂಶತ್ ಶತಾನಿ ಚ'– ಸಂ. ದಾ । 'ತಾನಸ್ತ್ವಂಶಸ್ವರೋ ಮತಃ'– ಅಭಿ.ಗು], ಮೂರು ಮಾತ್ರೆಗಳು [ಹ್ರಸ್ವ, ದೀರ್ಘ, ಪ್ಲುತ. ಸಂಗೀತ ಶಾಸ್ತ್ರದಲ್ಲಿ ಕಾಲದ ಅಳತೆ, ವರ್ಣವನ್ನುಚ್ಚರಿಸುವ ಕಾಲ], ಮೂರು ಗ್ರಾಮಗಳು [ಗ್ರಾಮಶ್ಚ ಸ್ವರಾಣಾಂ ಸಂದೋಹಃ, ಏಕೇಭಾವಃ – ಷಡ್ಜಗ್ರಾಮ, ಮಧ್ಯಮಗ್ರಾಮ ಮತ್ತು ಗಾಂಧಾರಗ್ರಾಮಗಳು], ಲಯಗಳು ಮೂರು [ಲಯೋ ಹಿ ಗೀತಾದೀನಾಂ ಕ್ರಿಯಾಕಾಲಯೋಃ ಸಾಮ್ಯಂ, ಲೀಙ್(ಶ್ಲೇಷಣೇ) 'ಅಚ್'(3.3.56) ನೃತ್ಯ–ಗೀತವಾದ್ಯಗಳ ಕಾಲಸಾಮ್ಯ–ಏಕತಾನರೂಪವಾದ ಸಾಮ್ಯ], ಯತಿಸ್ಥಾನಗಳು ಮೂರು [ಸ್ವರ ನಿರ್ಗಮಸ್ಥಾನಂ – ಹೃದಯಾದೂರ್ಧ್ವಂ ಮೂರ್ಧ್ನಶ್ಚಾಧಸ್ತಾತ್ ಯತ್ರ ಹಿ ಪ್ರಾಣಃ ಸಂಚರತಿ ತತ್ ಕಿಲ ಸ್ಥಾನಮುಚ್ಯತೇ, ತಚ್ಚ ಉರಃ ಕಂಠಃ ಶಿರಶ್ಚೇತಿ ಸ್ಥಾನತ್ರಯಂ– ಸ್ವರಾಣಾಮುತ್ಪತ್ತೇಃ ಕ್ಷೇತ್ರಂ ಕಥ್ಯತೇ. ತಾಲಶ್ಚಂದಸೋರ್ಜ್ಞಾನಾಯ ವಾದ್ಯೈರ್ಹೀನಃ ಶ್ರುತಿಸುಖೋ ಯಃ ಕಿಲ ವಿರಾಮೋ ಭವತಿ. ಸ ಏವ ಯತಿರ್ವಿಚ್ಛೇದೋ ನಾಮ. ಸುಲಭವಾಗಿ ಸುಖವಾಗಿ ಉಚ್ಚರಿಸಲು ಅನುಕೂಲವಾಗುವಂತೆ ಛಂದಸ್ಸಿನ ಮಧ್ಯೆ ಪದಗಳಿಗೆ ಕೊಡುವ ವಿರಾಮ. ಶ್ಲೋಕ, ಹಾಡು ಹೇಳುವಾಗ ಉಸಿರಾಟಕ್ಕಾಗಿ ಬಾಯಿಗೆ ಕೊಡುವ ವಿರಾಮ. ಯಮ್ಯತೇऽತ್ರ ಜಿಹ್ವಾ ಯವ(ಉಪರಮೇ) 'ಕ್ತಿನ್' (3.3.94)], ಆರು ಆಸ್ಯಗಳು [ಅಸ್ಯಂತೇ ವರ್ಣಾ ಅನೇನ ಅಸ್ಯತೇ ಗ್ರಾಸೋऽಸ್ಮಿನ್ ವಾ – ಅಸು (ಕ್ಷೇಪಣೇ) 'ಣ್ಯತ್' (3.3.113) ಮುಖ, ಬಾಯಿ – ತಾನಿ ಚಾऽತ್ರ ಷಣ್ಣಾಂ ರಾಗಾಣಾಂ ಷಡ್ ಭವಂತಿ, ಷಡ್ಜಂ ವಿಹಾಯ ಷಣ್ಣಾಂ ಸ್ವರಾಣಾಂ ವಾ ಷಣ್ಮುಖಾನಿ ಸಂತಿ], ಒಂಭತ್ತು ರಸಗಳು [ರಸ್ಯತೇ– ರಸ(ಆಸ್ವಾದನೇ), ರಂಜ (ರಾಗೇ) 'ಘಞ್' (3.3.19) ಶೃಂಗಾರ, ಹಾಸ್ಯ, ಕರುಣ, ರೌದ್ರ, ಭಯಾನಕ, ವೀರ, ಬೀಭತ್ಸ, ಅದ್ಭುತ, ಶಾಂತ], ಮೂವತ್ತಾರು ರಾಗಗಳು [ಸಂಗೀತದ ಕ್ರಮಬದ್ಧವಾದ, ಎಲ್ಲರಿಗೂ ಹೃದಯಂ ರಂಜಕವಾಗುವ ಸ್ವರವಿಶೇಷ– ವಸಂತ, ಲಲಿತ, ಶಂಕರಾಭರಣ, ತೋಡಿ, ಭೈರವಿ ಮೊದಲಾದ ರಾಗಗಳು], ನಲವತ್ತು ಭಾವಗಳು [ಭೂ(ಸತ್ತಾಯಾಂ) +ಣಿಚ್ 'ಅಚ್'(3.1.134) ಭಾವಯತಿ ಜ್ಞಾಪಯತಿ ಮನೋಗತಂ. (ನೋಡಿ ಸಾ.ದ. 3.141), ಯ ರಸಾನ್ ಭಾವಯಂತಿ/ಉದ್ಭಾವಯಂತಿ ತೇ ಭಾವಾಃ, ತಥಾಹಿ ವಿಭಾವೈಃ ಅನುಭಾವೈಃ ಸಂಚಾರಿಭಿಶ್ಚ ವ್ಯಕ್ತಃ ಆಸ್ವಾದ್ಯ ಯೋಗ್ಯತಾಂ ನೀತಃ ಸ್ಥಾಯಿಭಾವೋ ರಸಪದವೀಂ ಪ್ರಯಾತಿ. ಮನಸ್ಸಿನ ಅಭಿಪ್ರಾಯವನ್ನು ತಿಳಿಸುವ ಒಂದು ಸಾತ್ತ್ವಿಕಭಾವ], ನೂರಎಂಬತ್ತಕ್ಕೂ ಹೆಚ್ಚು ಗೀತಾಂಗಗಳಿಲ್ಲವನ್ನು ಭರತನು ಬಹಳ ಹಿಂದೆಯೇ ಹೇಳಿದ್ದಾನೆ. ಲೋಕದಲ್ಲಿ ಸಂಗೀತಕ್ಕಿಂತ ಮಧುರವಾದುದು ದೇವತೆಗಳಿಗೂ ಬೇರೆ ಇಲ್ಲ. ರಾವಣನು ಕೂಡ ಸಂಗೀತದಿಂದಲೇ ಶಿವನನ್ನು ಮೆಚ್ಚಿಸಿದ' ಎನ್ನುತ್ತದೆ.

ಶಾರ್ಙ್ಗದೇವನ ಪ್ರಕಾರ ಗೀತವೇ ಪ್ರಧಾನ. ನೃತ್ಯವು ವಾದ್ಯಾನುಕಾರೀ, ವಾದ್ಯ ಗೀತವನ್ನವಲಂಬಿಸಿರುತ್ತದೆ. ನಾದ ಮತ್ತು ಲಯ ಗೀತದ ಮುಖ್ಯ ಪರಿಕರಗಳು. ಮಾನವ ದೇಹದ ರಚನೆಯಲ್ಲೂ, ಪ್ರಾಕೃತಿಕ ಸಂಘಟನೆಯಲ್ಲೂ ಒತಪ್ರೋತವಾಗಿ ಸೇರಿ ಹೋಗಿರುವ ಎರಡನ್ನೂ ಶ್ರವಣ ಮತ್ತು ದೃಗ್ಗೋಚರವಾಗಿಸುವ ಪ್ರಯತ್ನದಲ್ಲಿ ಮೂಡಿದ್ದು–

ಸ್ವರ ಮತ್ತು ತಾಳ. ಸಪ್ತಸ್ವರಗಳ ವೈವಿಧ್ಯಮಯ ಜೋಡಣೆಯಿಂದ ಮೂರ್ಛನೆಗಳು, ಸ್ಥಾಯಿಗಳು (octave) ಸೃಷ್ಟಿಯಾಗುತ್ತವೆ. ಒಳ್ಳೆಯ ಪಲುಕುಗಳು, ಗಮಕಗಳು ಹೊಂದಿಕೊಂಡು 'ರಾಗ' (Melody Mould) ಸಿದ್ಧಿಯಾಗುತ್ತದೆ. ಸ್ವರ – ರಾಗಗಳ ಈ ಸಾಮ್ರಾಜ್ಯದ ನಿಯಂತ್ರಕ ಪ್ರಭುವಾಗಿ 'ಲಯ'ದ ಪ್ರಭಾವ ಸರ್ವವ್ಯಾಪಿಯಾದುದು. ತಾಳ – ಇದರ ಬಹಿರಾಕಾರ.

ಉಪಸಂಹಾರ: ಕಾವ್ಯಪ್ರಯೋಜನಗಳಲ್ಲೊಂದಾದ 'ಸದ್ಯಃ ಪರನಿರ್ವೃತಿ'ಯ ವಿಷಯದಲ್ಲಿ ತೀವ್ರಸ್ಪರ್ಧೆಯನ್ನೊಡ್ಡುವ ಸಂಗೀತವು ವಿಜ್ಞಾನಕಲೆಯೂ, ವಿನೋದ ಕಲೆಯೂ ಆಗಿ 'ಕಲಾರತ್ನ'ವೆನಿಸಿದೆ. ಸಂಗೀತವು ಸಾಮಾಜಿಕ ಪಿಡುಗುಗಳನ್ನೂ ಮೀರಿ, ಮಾನಸಿಕ ನೆಮ್ಮದಿ ಕೊಡುವ ಸಾಧನವಾಗಿದೆ. ಸಾಹಿತ್ಯ ರಚನೆಯಲ್ಲಿ ಈ ಪಿಡುಗು (ಬಂಡಾಯ, ಉದ್ರೇಕ, ಶೋಷಣೆ) ಕಾಣಬಹುದು. ಸಾಹಿತ್ಯವೇ ಇಲ್ಲದೇ ಸಂಗೀತ ಆಸ್ವಾದನೆ ಸಾಧ್ಯವಿದೆ. ಹಾಗಾಗಿ ಪಿಡುಗುಗಳನ್ನು ಮೀರಿ ನಿಂತ ಇದರ ಗುರಿ ಮಾನಸಿಕ ಸೌಖ್ಯ ಮಾತ್ರ. ಇದನ್ನು ಅಭ್ಯಾಸ ಮಾಡುವುದರಿಂದ ಏಕಾಗ್ರತೆ, ಗ್ರಹಣಶಕ್ತಿ, ಸ್ಮರಣಶಕ್ತಿ, ಚಿಂತನಶೀಲತೆ, ಸೃಜನಶೀಲತೆ ಹೆಚ್ಚಿ, ಬುದ್ಧಿಶಕ್ತಿಯ ಮಟ್ಟ ಹೆಚ್ಚುತ್ತದೆ. ಇತರೆ ವಿಷಯಗಳನ್ನು ಅಭ್ಯಾಸ ಮಾಡುವಾಗ ಉಂಟಾಗುವ ಬೇಸರಿಕೆ ತೊಲಗಿಸಲು ಹಾಗೂ ಮೆದುಳಿಗೆ ವಿಶ್ರಾಂತಿ ದೊರಕುವಂತೆ ಮಾಡಲು ಸಹ ಸಂಗೀತ ಸಹಾಯಕ. ಮಾನವನನ್ನು ಮಾನವತ್ವದಿಂದ ಅಮರತ್ವಕ್ಕೊಯ್ಯುವ ಮಧುರವಾದ ಲಲಿತಕಲೆಯೇ ಸಂಗೀತ. ತತ್‌ಕ್ಷಣದಲ್ಲಿಯೇ ಆನಂದವನ್ನುಂಟು ಮಾಡುವ ಸಂಗೀತವು ಮೋಕ್ಷಸಾಧಕವೂ ಹೌದೆಂದು 'ಸಂಗೀತರತ್ನಾಕರ', 'ಯಾಜ್ಞವಲ್ಕ್ಯಸ್ಮೃತಿ' ಗ್ರಂಥಗಳಲ್ಲಿ ಹೇಳಲಾಗಿದೆ. ಪರಮಾತ್ಮನೇ 'ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ' ಎಂದಿದ್ದಾನೆ. ಸಂಗೀತದ ಆಧಾರದ ಮೇಲೆಯೇ ನಾಟ್ಯವೂ ನಿಂತಿದೆ – 'ಗೀತಂ ನಾದಾತ್ಮಕಂ ವಾದ್ಯಂ ನಾದವ್ಯಕ್ತ್ಯಾ ಪ್ರಶಸ್ಯತೇ । ತದ್‌ದ್ವಯಾನುಗಂ ನೃತ್ತಂ ನಾದಾಧೀನಮತಸ್ತ್ರಯಂ'॥ ಎಂದು 'ಸಂಗೀತರತ್ನಾಕರ' ದಲ್ಲಿ ಹೇಳಲಾಗಿದೆ. 'ಪಂಚತಂತ್ರ'ದ 'ಅಪರೀಕ್ಷಿತಕಾರಕ'ವೆಂಬ ತಂತ್ರದ 'ರಾಸಭಶೃಗಾಲಕಥೆ'ಯಲ್ಲಿ ಗುಪ್ತರ ಕಾಲದಲ್ಲಿದ್ದಿರಬಹುದೆನ್ನಲಾದ ವಿಷ್ಣುಶರ್ಮನ ಅಪಾರ ಜ್ಞಾನದ ಹಾಗೂ ಸಂಗೀತಶಾಸ್ತ್ರದ ಅದ್ಭುತವಾದ ನಿರೂಪಣೆಯಿದೆ. ಮೂರ್ಖಶಿಷ್ಯರನ್ನು ವ್ಯವಹಾರ ಜ್ಞಾನಿಗಳನ್ನಾಗಿಸಬೇಕೆನ್ನುವ ನಿಟ್ಟಿನಲ್ಲಿ ಕಥೆಗಳ ಮೂಲಕ ಶಾಸ್ತ್ರಗಳನ್ನು ಹೇಳುವುದು ಪಂಚತಂತ್ರದ ವೈಶಿಷ್ಟ್ಯ. ಕಥೆಗೆ ವಶರಾಗದವರಿಲ್ಲ. ಆಟದ ಮೂಲಕ ಪಾಠ ಎನ್ನುವುದು ಹೇಗೆ ಜನಪ್ರಿಯವೋ ಹಾಗೇ ಕಥೆಗಳ ಮೂಲಕ ವ್ಯವಹಾರ ಮತ್ತು ಶಾಸ್ತ್ರಜ್ಞಾನ ಇದರ ಪ್ರಮುಖ ತಂತ್ರವಾಗಿದೆ. ಈ ತಂತ್ರದ ಮೂಲಕ ಇಲ್ಲಿ ನಿರೂಪಿತವಾಗಿರುವುದು ಸಂಗೀತಶಾಸ್ತ್ರ. ಸಂಗೀತದಿಂದ ಸಂತೋಷ ಉಂಟಾಗುತ್ತದೆ, ದುಃಖ ದೂರಾಗುತ್ತದೆಂದಷ್ಟೇ ಭಾವಿಸದೆ, ಶಾರೀರಿಕ ಹಾಗೂ ಮಾನಸಿಕ ರೋಗಗಳ ನಿವಾರಣೆಯಾಗುತ್ತದೆ, ಮನುಷ್ಯರ ಮೇಲಷ್ಟೇ ಅಲ್ಲದೆ ಪ್ರಾಣಿಗಳ ಮೇಲೆ, ಹಾಗೂ ಗಿಡ ಮರ ಬಳ್ಳಿಗಳ ಮೇಲೂ ಪರಿಣಾಮ ಉಂಟಾಗುತ್ತದೆಂಬ ಅರಿವಿದ್ದ ವಿಷ್ಣುಶರ್ಮನು ತನ್ನ ಮೂರ್ಖಶಿಷ್ಯರ ಜ್ಞಾನವೃದ್ಧಿಗಾಗಿ ಸಂಗೀತಶಾಸ್ತ್ರದ ಜ್ಞಾನದ ನೆರವನ್ನೂ ಪಡೆದಿದ್ದು ಸೂಕ್ತವಾಗಿದೆ ಎನ್ನಬಹುದು.

[1]. ವೀಣಾವಾದನ ತತ್ತ್ವಜ್ಞಃ ಶ್ರುತಿಜಾತಿವಿಶಾರದಾಃ । ತಾಲಜ್ಞಶ್ಚಾಪ್ರಯಾಸೇನ ಮೋಕ್ಷಮಾರ್ಗಂ ನಿಯಚ್ಛತಿ ॥ ಗೀತಾಜ್ಞೋಯಾದಿ ಯೋಗೇನ ನಾಪ್ನೋತಿ ಪರಮಂ ಪದಂ । ರುದ್ರಸ್ಯಾನುಚರೋ ಭೂತ್ವಾ ತೇನೈವ ಸಹ ಮೋದತೇ ॥ (ಯಾ. ಸ್ಮೃ. ಪ್ರಾಯಶ್ಚಿತ್ತಾಧ್ಯಾಯ, ಯತಿಧರ್ಮಪ್ರಕರಣ).

[2]. ಭಾರತೀಯ ಕಲಾದರ್ಶನ, ರಾಗ – ರಾಗಿಣಿ, ಶೀರ್ಷಿಕೆ. ಪಿ. ರಾಮರಾವ್ ಲೇಖನ (ಪು. 134-35)

[3]. ಡಾ ॥ ರಾ. ಸತ್ಯನಾರಾಯಣ ಅವರ ಭಾಷಾಂತರ. ಸಂಗೀತ ರತ್ನಾಕರ, ಶಾರ್ಙ್ಗದೇವ, ಅಧ್ಯಾಯ 1. ಪು. iv.

[4]. ಸಂಗೀತ ರತ್ನಾಕರ, ಶಾರ್ಙ್ಗದೇವ, ಅಧ್ಯಾಯ 1 : 21.

[5]. ಸಂಗೀತ ರತ್ನಾಕರ. ಶ್ಲೋ – 28. ಪು. 20.

[6]. ಸಂಗೀತ ರತ್ನಾಕರ. ಶ್ಲೋ. 29, ಪು. 20.

[7]. ಭಾಗವತ, ಸ್ಕಂದ10, ಅಧ್ಯಾಯ 29. ಶ್ಲೋಕ–4, ಹನುಮಾನ್ ಪ್ರಸಾದ್ ಪೋದ್ದಾರ್‌ರ ಭಾಷಾಂತರ, ಗೋಪೀಸ್ ಲವ್ ಫಾರ್ ಕೃಷ್ಣ.

[8]. ಪಂಚತಂತ್ರ – ಅಪರೀಕ್ಷಿತಕಾರಕ – ವಿಷ್ಣುಶರ್ಮ – ಡಾ॥ ಶ್ರೀ ಕೃಷ್ಣಮಣಿ ತ್ರಿಪಾಠಿ, ಚೌಖಂಬಾ ಸುರಭಾರತೀ ಪ್ರಕಾಶನ. ವಾರಾಣಾಸೀ, 2000 ಪು. 58. 9.

[9] ಪಂಚತಂತ್ರ – ಅಪರೀಕ್ಷಿತಕಾರಕ – ವಿಷ್ಣುಶರ್ಮ – ಡಾ॥ ಶ್ರೀ ಕೃಷ್ಣಮಣಿ ತ್ರಿಪಾಠಿ, ಚೌಖಂಬಾ ಸುರಭಾರತೀ ಪ್ರಕಾಶನ. ವಾರಾಣಸೀ, 2000 ಪು. 58. 9.

ಪರಾಮರ್ಶನ ಗ್ರಂಥಗಳು

1. ಸಂಗೀತ ರತ್ನಾಕರ (13ನೇ ಶತಮಾನ) ಸಂಪುಟ 1, 2. ಶಾರ್ಙ್ಗದೇವ, ಪರಿಶೋಧಕರು : ಪಂ ॥ ಎಸ್. ಸುಬ್ರಹ್ಮಣ್ಯ ಶಾಸ್ತ್ರಿ, ಪ್ರಕಾಶಕರು : ಆಡಿಯಾರ ಪುಸ್ತಕ ಭಂಡಾರ –1943.

2. ಕರ್ನಾಟಕ ಸಂಗೀತ. ಪ್ರಾಥಮಿಕ ಹಂತ – ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು – ೨೦೦೫.

3. ಯಾಜ್ಞವಲ್ಕ್ಯಸ್ಮೃತಿ. ಪ್ರತಿಭಾಗ್ರಂಥಮಾಲೆ, ಧಾರವಾಡ. 1996.

4. ಮಾಲವಿಕಾಗ್ನಿಮಿತ್ರಂ, ಕಾಶೀನಾಥ ಪಾಂಡುರಂಗಪರಬ್ (ಸಂ). ನಿರ್ಣಯಸಾಗರಪ್ರೆಸ್, ಬೊಂಬಾಯಿ– 1935

5. ಪಾಣಿನಿ ಅಷ್ಟಾಧ್ಯಾಯೀ, ಕೀಲ್‌ಹಾರ್ನ್ ಎಫ್.(ಸಂ). 3 ಸಂಪುಟಗಳು. ಬಾಂಬೆ ಸಂಸ್ಕೃತ ಸೀರೀಸ್. 19-22, 26, 28-30, ಬೊಂಬಾಯಿ – 1880 – 1906.

6. ನಾಟ್ಯಶಾಸ್ತ್ರಂ, ಗಾಯಕವಾಡ್ ಓರಿಯಂಟಲ್ ಸೀರೀಸ್, ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ. ಸಂ. 1, ರಾಮಕೃಷ್ಣ ಕವಿ, ಎಂ. (ಪ್ರಥಮ ಆವೃತ್ತಿ); ರಾಮಸ್ವಾಮಿ ಶಾಸ್ತ್ರೀ, ಕೆ. (ದ್ವಿತೀಯ ಆವೃತ್ತಿ). 36, 1956. ಸಂ. 2, 3, 4 ರಾಮಕೃಷ್ಣ ಕವಿ, ಎಂ. ಕ್ರಮವಾಗಿ 68 – 1934, 124 – 1954, 145 – 1964.

7. ಭಾಗವತ ಪುರಾಣಂ, ವಾಸುದೇವ ಶರ್ಮಾ, (ಸಂ) ನಿರ್ಣಯಸಾಗರ ಪ್ರೆಸ್, ಬೊಂಬಾಯಿ 1905 – ಕೃಷ್ಣಮಾಚಾರ್ಯ ಟಿ. ಆರ್. (ಸಂ) ಕುಂಭಕೋಣಂ 1916.

8. ಚತುಷ್ಪಷ್ಟಿ ಕಲೆ. ಪ್ರೊ. ಟಿ. ಎಸ್. ಸತ್ಯವತಿ. ಯುವಜನರಿಗಾಗಿ ಸಂಸ್ಕೃತ ವಾಙ್ಮಯ, ಭವನದ ಗಾಂಧೀ ಕೇಂದ್ರ, ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಅಧ್ಯಯನ ಪೀಠ, ಬೆಂಗಳೂರು.

9. ಶಿವತತ್ತ್ವ ರತ್ನಾಕರ : ಪ್ರಥಮ ಮತ್ತು ದ್ವಿತೀಯ ಸಂಪುಟಗಳು. ಪ್ರಾಚ್ಯವಿದ್ಯಾಸಂಶೋಧನಾಲಯ, ಮೈ. ವಿ. ವಿ. ಮೈಸೂರು – 1939.

ದೇವನೂರು ಮಹಾದೇವರ ಕತೆಗಳಲ್ಲಿ ಜಾನಪದೀಯ ಚಿಂತನೆಗಳು

ಪ್ರಸನ್ನ ಮತ್ತು ಎನ್. ಅಂಬರೀಶ್
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬. E mail: prasannananjapura@gmail.com

ದೇವನೂರ ಮಹಾದೇವ ಅವರದು ಕನ್ನಡ ಸಾಹಿತ್ಯದಲ್ಲಿ ಒಂದು ಸೋಜಿಗದ ವ್ಯಕ್ತಿತ್ವ ಇವರ ಸಾಹಿತ್ಯ ಸೃಷ್ಟಿ ಕಡಿಮೆಯಿದ್ದರೂ ಅವು ಅನಂತ ಚಿಂತನೆಗಳ ಅಗರವಾಗಿವೆ ಮತ್ತು ಹೆಚ್ಚು ದೇಸಿ ಚಿಂತನೆಗಳ ನೆಲೆಯಿಂದ ಕೂಡಿವೆ. ದಲಿತ ಬಂಡಾಯ ಸಾಹಿತ್ಯ ಚಳವಳಿಯ ಸಂದರ್ಭದ ಮುಂಚೂಣಿ ಲೇಖಕ ಮತ್ತು ಚಳವಳಿಯ ನಾಯಕರ ಸಾಲಿನಲ್ಲಿದ್ದ ಮತ್ತು ಇರುವ ದೇವನೂರು ಮಹಾದೇವ ಅವರ ಕತೆಗಳು ಗ್ರಾಮೀಣ ಪರಿಸರದ ಸಾಂಸ್ಕೃತಿಕ ಕಥನಗಳೇ ಆಗಿವೆ. ಈ ಚಿಂತನೆಗಳು ಕವಲೊಡೆದು ಸಾರ್ವತ್ರಿಕವಾದ ಜಾತ್ಯಾತೀತವಾದ ಆಯಾಮಗಳನ್ನು ಪಡೆದುಕೊಳ್ಳುತ್ತವೆ. ಭ್ರಾಷೆ ಮತ್ತು ಬಂಧ ಎರಡರಲ್ಲೂ ಈ ಗ್ರಾಮೀಣ ದಲಿತರ ಸೊಗಡನ್ನು ಉಳಿಸಿಕೊಂಡು ಬರೆದ ಇವರ ಕತೆಗಳು ಅನೇಕ ಚರ್ಚೆಗಳಿಗೆ ಒಳಗಾಗಿವೆ. ಇವರ ಕಥಾ ಶೈಲಿ ಇವರ ಮುಂದಿನ ತಲೆಮಾರು ಕೂಡ ಅನುಸರಿಸುವಷ್ಟು ಪ್ರಭಾವಶಾಲಿಯಾಗಿ ಉಳಿದುಕೊಂಡಿವೆ. ದಲಿತ ಬಂಡಾಯ ಸಾಹಿತ್ಯ ಚಳುವಳಿಯು ಬಹುಮುಖ್ಯವಾಗಿ ತಮ್ಮ ಸಾಂಸ್ಕೃತಿಕ ಸೃತಿಗಳಿಗಾಗಿ ಹಲವಾರು ವಿಧದ ಶೋಧಗಳನ್ನು ನಡೆಸಿದೆ. ಅದು ಬುದ್ಧ, ಅಂಬೇಡ್ಕರ್ ಒಂದು ಕಡೆಯಾದರೇ ಮಂಟೇಸ್ವಾಮಿ ಮಲೆ ಮಾದಪ್ಪ, ಮಾರಮ್ಮನ ಪುರಾಣ – ಹೀಗೆ ಇವರ ಕತೆಗಳಲ್ಲಿ ತಳ ಸಂಸ್ಕೃತಿಯ ಬೇರುಗಳು ಹರಿದಾಡುವುದನ್ನು ಕಾಣಬಹುದು. ದಲಿತ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಹೆಚ್ಚು ಚರ್ಚೆಗೆ ಒಳಗಾಗಿರುವುದು 'ಮಾರಮ್ಮನ ಪುರಾಣ' ಮತ್ತು 'ಅಂತರ್ಜಾತಿ ವಿವಾಹ' ಇದನ್ನು ಆಯಾ ಕಾಲಘಟ್ಟದ ಲೇಖಕರು ಪರಿಭಾವಿಸಿಕೊಂಡಿರುವ ವಿಭಿನ್ನ ನೆಲೆಗಳು ಆಯಾ ಲೇಖಕರ ಸಾಹಿತ್ಯದಲ್ಲಿ ವಿಭಿನ್ನವಾಗಿ ಕಂಡುಬರುತ್ತವೆ. ಅದರಂತೆಯೇ ದೇವನೂರು ಮಹಾದೇವರ ಅಮಾಸ ಕತೆಯಲ್ಲಿ ಈ ಕುರಿತ ಚಿಂತನೆಗಳು ಕಂಡುಬರುತ್ತವೆ. ಆ ಅಮಾಸ ಕತೆಯ ಪಾತ್ರಗಳ ಚಲನೆಯಲ್ಲೂ ಮಂಟೇಸ್ವಾಮಿ ಮಾದೇಶ್ವರರ ಸಾಂಸ್ಕೃತಿಕ ಚಲನೆಗಳು ಕಂಡುಬರುತ್ತವೆ ಮತ್ತು ಜನರ ಅವಗಣನೆಗೆ ಒಳಗಾಗಿರುವ ಕತ್ತಲು, ಶಾಪ, ಮಾಟಮಂತ್ರಗಳನ್ನು ಕುರಿತು ಮಾತನಾಡುವ ಇವರ ಕತೆಗಳು ಅವುಗಳನ್ನು ಜೀವನ್ಮುಖಿಯಾಗಿಸುವಲ್ಲಿ ಯಶಸ್ವಿಯಾಗಿವೆ. ಕುಸುಮ ಬಾಲೆಯಂತಹ ಕೃತಿ ಒಂದು ಜಾನಪದ ಮಹಾಕಾವ್ಯದಂತೆ ಕಂಡುಬಂದು ಮಾನವನ ಭೂತಕಾಲದ ಇತಿಹಾಸವನ್ನು ವರ್ತಮಾನದಲ್ಲಿ ಉಜ್ಜಿ ನೋಡುತ್ತದೆ.

ಜಾನಪದದ ಎಲ್ಲಾ ಅಂಶಗಳಲ್ಲೂ ಜೀವಪರ ನಿಲುವುಗಳೇನು ಇರುವುದಿಲ್ಲ. ಆಡಳಿತಶಾಹಿ ಮತ್ತು ಪುರೋಹಿತಶಾಹಿಗಳು ಹೇರಲ್ಪಟ್ಟಿರುವ ನಂಬಿಕೆಗಳು, ಆಚರಣೆಗಳು ಒಂದು ಕಡೆಯಾದರೇ ಜನಪದರೇ ತಮ್ಮ ಮನೋಧರ್ಮಕ್ಕನುಗುಣವಾಗಿ ಕೂಡಿಸಿಕೊಂಡಿರುವ ಅನೇಕ ನಂಬಿಕೆಗಳು, ಆಚರಣೆಗಳು ಕಂಡುಬರುತ್ತವೆ. ಇಂತಹ ವಿಚಾರಗಳು ದೇವನೂರು ಮಹಾದೇವ ಅವರ ದತ್ತ, ಅಮಾಸಗಳಂತಹ ಕತೆಗಳಲ್ಲಿ ಕಾಣಬಹುದು. ಜಾನಪದ ಎನ್ನುವುದು ಅವಿನಾಶಿ ಗುಣವನ್ನು ಹೊಂದಿದ್ದು ಅದು ಆಧುನಿಕ ಕಾಲಘಟ್ಟದಲ್ಲಿ ಕೂಡ ತನ್ನತನವನ್ನು ಬಿಟ್ಟುಕೊಡುವುದಿಲ್ಲ. (ಶ್ರಮ ಸಂಸ್ಕೃತಿ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಜನಪದ ಇದ್ದೇ ಇರುತ್ತದೆ. ಇದನ್ನು ದೇವನೂರು ಮಹಾದೇವ ಅವರ 'ಡಾಂಬರು ಬಂದುದು' ಕತೆಯಲ್ಲಿ ಕಾಣಬಹುದು. ಇದರ ಜೊತೆಗೆ ದೇವನೂರರ ಮೇಲಾಗಿರುವ ಗಾಂಧೀಜಿ ಸ್ವದೇಶಿ ತತ್ವವೂ ಕೂಡ ಈ ಕತೆಯಲ್ಲಿದೆ. ದಲಿತ ಚಳವಳಿಯ ಸಂದರ್ಭದಲ್ಲಿ ರೂಪುಗೊಂಡ ಹಿಂಸೆ, ಅಹಿಂಸೆಯ ಕುರಿತ ತಾತ್ವಿಕ ಚಿಂತನೆಗಳು ಅಮಾಸ ಪುತ್ರಗಳಂತವುಗಳಿಂದಲೋ ಇಲ್ಲ, ಕುರಿಮಯ್ಯನಂತವರಿಂದ ಅದು ಇಲ್ಲಿ ಖಚಿತವಾಗಿ ಕಾಣಿಸಿಕೊಳ್ಳುತ್ತದೆ.

ಭಾರತದಂತಹ ಜಾತ್ಯಾತೀತ ರಾಷ್ಟ್ರದಲ್ಲಿ ದಲಿತ ಸಮುದಾಯಗಳಿಗೆ ಸಾಮಾಜಿಕ ಚಲನೆಯು ಕಡಿಮೆ ಇದ್ದು ಅವು ಸ್ಥಗಿತತೆಯನ್ನು ಅನುಭವಿಸುತ್ತಿವೆ. ಆದರೆ ಸಾಂಸ್ಕೃತಿಕವಾಗಿ ಮಹತ್ತರ ಅಂಶಗಳು ಈ ಸಮಾಜದಲ್ಲಿ ಕಂಡುಬರುವ ಸಾಂಸ್ಕೃತಿಕ ಅನನ್ಯತೆಯನ್ನು ದೇವನೂರು ಮಹಾದೇವರ ಕತೆಗಳಲ್ಲಿ ಕಾಣಬಹುದು. ಮತ್ತೊಂದು ಮುಖ್ಯ ವಿಚಾರ ಎಂದರೆ ಈ ರೀತಿಯ ಸಾಂಸ್ಕೃತಿಕ ಚಲನೆಯು ಕೇವಲ ಒಂದು ಕತೆಗೆ ಸೀಮಿತವಾಗದೇ ಅದು ಅವರ ಕತೆಯಿಂದ ಕತೆಗೆ, ಜಿಗಿಯುತ್ತ ಒಡಲಾಳ ಮತ್ತು ಕುಸುಮಬಾಲೆಯಂತಹ ಕಾದಂಬರಿಗಳನ್ನು ಒಳಗೊಳ್ಳುತ್ತ ಹೋಗುತ್ತದೆ. ಆದ್ದರಿಂದ ಇವರ ಕಥಾಸಾಹಿತ್ಯವು ಸ್ಥಗಿತ ಸಮಾಜಕ್ಕೆ ಚಾಟಿಯನ್ನು ಬೀಸುವ ಸಾಂಸ್ಕೃತಿಕ ಅಂಶಗಳಿಂದ ಕೂಡಿವೆ. ಇವರ ಕಥಾ ಸಾಹಿತ್ಯ ಸಾಂಸ್ಕೃತಿಕವಾಗಿದ್ದು ಇಂತಹ ಅನೇಕ ರೀತಿಯ ಜಾನಪದ ಚಿಂತನೆಗಳು ಕಂಡುಬಂದಿವೆ.

ದಲಿತ ಬಂಡಾಯ ಸಣ್ಣಕತೆಗಳು ಪ್ರತಿಸಂಸ್ಕೃತಿಯ ನೆಲೆಯಲ್ಲಿ ಅದುವರೆಗೂ ಇದ್ದ ಒಂದು ಪ್ರಧಾನ ಚೌಕಟ್ಟಿನ ಸಂಸ್ಕೃತಿಯನ್ನು ಪಲ್ಲಟಗೊಳಿಸಿ ದಲಿತ ಬದುಕಿನ ಸಾಂಸ್ಕೃತಿಕ ಆಯಾಮಗಳ ಮೂಲಕ ಮಾನವೀಯ ಮೌಲ್ಯಗಳ ಕರಳುಬಳ್ಳಿ ಸಂಬಂಧವನ್ನು ಇರಿಸಿಕೊಂಡು ತನ್ನದೇ ಆದ ಹಾದಿಯನ್ನು ನಿರ್ಮಿಸಿಕೊಂಡಿವೆ. ಆರಂಭದಿಂದ ಹಿಡಿದು ಇತ್ತೀಚೆಗೆ ಬರೆಯುತ್ತಿರುವ ಕಥಾ ಸಾಹಿತ್ಯವನ್ನು ಗಮನಿಸಿದರೆ ಅವು ಗ್ರಾಮೀಣ ಪ್ರದೇಶದ ಜನಜೀವನ ಇಲ್ಲವೇ ಜಾತಿ ಪದ್ಧತಿಗಳ ಕರಾಳ ಮುಖಗಳನ್ನು ತೆರೆದಿಡುತ್ತವೆ, ಆ ಕಾರಣಕ್ಕಾಗಿ ಎಷ್ಟೊ ಸಾರಿ ಕಥಾ ನಿರೂಪಣೆ ಅಥವಾ ವಸ್ತು, ಶೈಲಿತಂತ್ರಗಳ ಯಾವುದಾದರಲ್ಲೋ ಜಾನಪದ ಅಂಶಗಳು ಪ್ರತ್ಯಕ್ಷವಾಗಿಯೋ ಇಲ್ಲ ಪರೋಕ್ಷವಾಗಿಯೋ ಹಾಸುಹೊಕ್ಕಾಗಿವೆ. ಈ ಜಾನಪದ ಪರಿಸರದೊಳಗಿರುವ ತನ್ನ ಸುತ್ತಲಿನ ಸಮಾಜವನ್ನು ಪರಿಸ್ಥಿತಿಗಳನ್ನು ವಿಶ್ಲೇಷಿಸುವ ಕೆಲಸವನ್ನು ದಲಿತ ಬಂಡಾಯ ಕತೆಗಳು ಮಾಡಿವೆ ಮತ್ತು ಮಾಡುತ್ತಿವೆ. ಜಾನಪದ ಕಾವ್ಯಗಳಲ್ಲಿ ಬರುವ ಮಂಟೇಸ್ವಾಮಿ ಮಲೆಮಾದಪ್ಪಗಳಂತಹವರು ಕೂಡ ಇಂತಹ ಸನ್ನಿವೇಶಗಳಲ್ಲಿ ಪ್ರತಿ ಸಂಸ್ಕೃತಿಯನ್ನು ನಿರ್ಮಾಣ ಮಾಡಿಕೊಂಡವರು ಎಂಬುದು ಗಮನಾರ್ಹವಾದ ಸಂಗತಿ. ಈ ರೀತಿಯ ಅಂಶಗಳು ದಲಿತ ಬಂಡಾಯ ಸಾಹಿತ್ಯವನ್ನು ಕಟ್ಟುವಲ್ಲಿಯೂ ಸಹ ತಮ್ಮ ಪ್ರಭಾವನ್ನು ಬೀರಿವೆ. ಇದರ ಜೊತೆ ಜೊತೆಗೆ ಶೋಷಕ ಪರಂಪರೆಯನ್ನು ದಲಿತ ಸಾಂಸ್ಕೃತಿಕದ ವಿವೇಕದ ಬೆಳಕಿನಲ್ಲಿ ಪರಿಶೀಲಿಸಿ ತನ್ನ ಖಚಿತವಾದ ಭಿನ್ನಾಭಿಪ್ರಾಯಗಳನ್ನು, ಪ್ರತಿಭಟನೆಯನ್ನು ದಾಖಲಿಸುವ ಕೆಲಸ ನಡೆದಿದೆ. ಆ ಬೆಳಕು ಬುದ್ಧ ಎನ್ನುವ ತಣ್ಣನೆಯ ದೀಪದಿಂದ ಹಿಡಿದು ಅಂಬೇಡ್ಕರ್ ಎಂಬ ಉರಿವ ಪಂಜಿನವರೆಗೂ

ವ್ಯಾಪಿಸಿಕೊಂಡಿದೆ. ಇದರೊಟ್ಟಿಗೆ ಬಸವಣ್ಣ, ಗಾಂಧೀಜಿ, ಮಾರ್ಕ್ಸ್‌ಗಳೆಂಬ ಸಾಲು ದೀಪಗಳು ಸೇರಿಕೊಳ್ಳುತ್ತವೆ. ಈ ಬೆಳಕುಗಳ ಪರಿಣಾಮ ಕತ್ತಲಿನ ಗರ್ಭವನ್ನು ಸೀಳಿಕೊಂಡು ಹೊರ ಬಂದ ದಲಿತ ಬಂಡಾಯ ಸಾಹಿತ್ಯವು ಶೋಷಕ ಪರಂಪರೆಯ ವಿರುದ್ಧ ಭಾರಿ ಪ್ರತಿಭಟನೆಯನ್ನು ದಾಖಲಿಸಿದೆ. ಸಿದ್ಧಲಿಂಗಯ್ಯನವರ 'ಹೊಲೆಮಾದಿಗೆ ಹಾಡು' ಸಂಕಲನದಲ್ಲಿ ಅದನ್ನು ನಿಚ್ಚಳವಾಗಿ ಕಾಣುತ್ತೇವೆ. ದೇವನೂರ ಮಹಾದೇವರ ಕತೆಗಳಲ್ಲಿ ಪ್ರತಿಭಟನೆಯು ನೇರವಾಗಿ ಕಾಣದೆ, ಕೆಲವು ಸಂದರ್ಭದಲ್ಲಿ ರೂಪಕಗಳನ್ನು ಆಶ್ರಯಿಸಿದೇ ಆ ರೂಪಕಗಳನ್ನು ಹೊಡೆದು ನೋಡಿದಾಗ ಪ್ರತಿಭಟನೆಯ ಸ್ವರೂಪ ಗೋಚರಿಸುತ್ತದೆ.

ಕನ್ನಡ ದಲಿತ ಸಾಹಿತ್ಯದ ಆರಂಭ ಘಟ್ಟದಲ್ಲಿ ಕನ್ನಡದ ಕಥಾ ಸಾಹಿತ್ಯಕ್ಕೆ ಒಂದು ರೀತಿಯ ಹೊಸ ಸಂಚಲನವನ್ನು ತಂದುಕೊಟ್ಟವರು ದೇವನೂರು ಮಹಾದೇವ ಅವರು "ಖಂಡವಿದೆಕೋ ಮಾಂಸವಿದೆಕೋ ಎನ್ನುತ ತಮ್ಮ ಕತೆಗಳನ್ನು ಕನ್ನಡಗರಿಗೆ ಕೊಟ್ಟವರು"[೧] ಎಂದು ಕೆ.ವಿ. ನಾರಾಯಣ್ ಅಭಿಪ್ರಾಯಪಟ್ಟಿದ್ದಾರೆ. ದಲಿತ ಸಾಹಿತ್ಯದ ಜೊತೆಗೆ ಮುಖ್ಯವಾಗಿ ಮಾನವೀಯ ನೆಲೆಯಲ್ಲಿ ಸಮಸ್ಯೆಯನ್ನು ನೋಡುವಂತಹ ಸದಾ ಸಮಾನತೆಯ ತುಡಿತವನ್ನೇ ಉಸಿರಾಡುವ ಕತೆಗಾರರು ದೇವನೂರು ಅವರು ಯಾವುದೇ ಆಡಂಬರವಿಲ್ಲದೆ ಸಹಜವಾದ ಆಡುನುಡಿಯಿಂದ ಬರೆದ ಇವರ ಕತೆಗಳು ಹೆಚ್ಚು ದೇಸಿತನದ ರಕ್ತ ಮಾಂಸಗಳಿಂದ ಕೂಡಿವೆ ಮತ್ತು ಗ್ರಾಮ್ಯ ಭಾಷೆಯ ವೈಶಿಷ್ಟ್ಯದಿಂದ ಉಸಿರಾಡುತ್ತವೆ., ಈ ಗ್ರಾಮೀಣ ಸಂಸ್ಕೃತಿಯೊಳಗೆ ಮೈತಳೆದಿರುವ ಇವರ ಕತೆಗಳು ಅನೇಕ ರೀತಿಯಲ್ಲಿ ಜಾನಪದ ಕಸುವನ್ನು ಪಡೆದುಕೊಂಡಿವೆ.

ಅಮಾಸ ಕತೆಯಲ್ಲಿ ಕತ್ತಲನ್ನು ಸೀಳಿಕೊಂಡು ಮಿಂಚಿನಂತೆ ಬರುವ ಪ್ರಮುಖ ಪಾತ್ರ 'ಅಮಾಸ' ಅಮವಾಸ್ಯೆಯ ದಿನ ಹುಟ್ಟಿದ್ದರಿಂದಲೋ ಅವನು ಕಪ್ಪುಬಣ್ಣವಾಗಿದ್ದರಿಂದಲೇ ಈ ಹೆಸರು ಬಂದಿದೆ. ಅಮವಾಸೆ ಎಂಬುದು ಕತ್ತಲೆಯ ಸಂಕೇತವಾಗಿದ್ದು ಅಪಶಕುನ ಮತ್ತು ಒಂದು ರೀತಿಯ ಭಯದ ವಾತಾವರಣವನ್ನು ಉಂಟುಮಾಡುವಂತಹದ್ದು, ಇಂತಹ ಸನ್ನಿವೇಶದಿಂದಲೇ ಕಥಾನಾಯಕನ ಹುಟ್ಟು ಪ್ರಾರಂಭವಾಗುವುದು ಸ್ಥಗಿತ ಸಮಾಜದೊಳಗೆ ಒಂದು ರೀತಿಯ ಚೈತನ್ಯವನ್ನು ಹುಟ್ಟಿಸುತ್ತದೆ "ಕತ್ತಲಲ್ಲಿ ಕರಗಿ ಹೋಗಿದ್ದ ದಲಿತರ ಬದುಕನ್ನು ಬೆಳಕಿಗೆ ತರುವುದರ ಜೊತೆಗೆಯೇ ಮಹಾದೇವ ಅವರು ಸಮಕಾಲೀನ ಜೀವನದ ಮುಖ್ಯ ಪ್ರಶ್ನೆಯಾದ ಬದುಕುಳಿಯುವ ಸಮಸ್ಯೆಯನ್ನು ಈ ಸಮಸ್ಯೆಯಿಂದ ಹುಟ್ಟಿಕೊಳ್ಳುವ ನೈತಿಕ ಸವಾಲನ್ನು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ"[೨] ಎಂಬುದು ಜಿ.ಎಸ್. ಅಮೂರ ಅವರ ಅಭಿಪ್ರಾಯವಾಗಿದೆ. ಅಂತಹ ಸವಾಲುಗಳನ್ನು ಎದುರಿಸಿಯೇ ಕುರಿಯಯ್ಯ ಮತ್ತು ಅಮಾಸನ ವ್ಯಕ್ತಿತ್ವಗಳು ಬೆಳೆಯುವುದನ್ನು ಅಮಾಸ ಕತೆಯಲ್ಲಿ ಕಾಣುತ್ತೇವೆ. ಕುರಿಯಯ್ಯ ಮತ್ತು ಅಮಾಸನಲ್ಲಿರುವ ಹುಲಿವೇಷದ ಕಲೆಯೇ ಬದುಕುಳಿಯುವ ಸಮಸ್ಯೆಯನ್ನು ಎದುರಿಸುವ ಸವಾಲಾಗಿ ಕಂಡುಬಂದಿದೆ. ಅಮಾಸ ಮತ್ತು ಕುರಿಯಯ್ಯ ಎನ್ನುವ ಹೆಸರುಗಳನ್ನು ಗಮನಿಸಿದಾಗ ಇವು ಕಟ್ಟಿದ ಹೆಸರುಗಳಂತೂ ಅಲ್ಲ ಕರೆದ ಹೆಸರುಗಳು. ಅಂದರೆ ಅಡ್ಡ ಹೆಸರುಗಳು ಅಮಾಸ ಅಮಾಸ್ಯೆಯ ದಿನ ಹುಟ್ಟಿದರಿಂದಲೂ ಕುರಿಯಯ್ಯ ಕುರಿಕಾಯುತ್ತಿದ್ದರಿಂದಲೂ ಈ ಹೆಸರುಗಳು ಇವರಿಗೆ ನಿಂತಿವೆ. ಈ ಎರಡೂ ಪಾತ್ರಗಳಿಗೂ ಹುಟ್ಟಿನ ಮೂಲ ತಿಳಿದಿಲ್ಲ. ಹಾಗಂತ ಅನಾಥ ಪ್ರಜ್ಞೆಯೂ ಇಲ್ಲ, ಹುಲಿವೇಷವೇ ಈ ಇಬ್ಬರನ್ನೂ ಮುನ್ನಡೆಸುತ್ತಿದೆ. ಈ ಪಾತ್ರಗಳ ಸ್ವರೂಪವನ್ನು ಗಮನಿಸಿದರೆ ಜನಪದ ಸಾಂಸ್ಕೃತಿಕ ನಾಯಕರುಗಳಾದ ಮಂಟೇಸ್ವಾಮಿ ಮಲೆಮಾದಪ್ಪ ಅವರುಗಳ ನೆನಪಾಗುತ್ತದೆ. ದಲಿತ ಸಮುದಾಯದ ಅಕ್ಷರಸ್ಥರು ಶೋಷಕ ಸಮಾಜದೊಳಗೆ ತಮ್ಮ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಬೇಕಾದ ಅನಿವಾರ್ಯತೆ ಮತ್ತು ಅದಕ್ಕಾಗಿ ತಮ್ಮ ಸಮುದಾಯಗಳ ಸ್ಮೃತಿ ಪರಂಪರೆಯನ್ನು ೭೦-೮೦ರ ದಶಕದಿಂದೀಚೆಗೆ ಗುರುತಿಸಿಕೊಳ್ಳುವ ಸಂದರ್ಭದಲ್ಲಿ ಮಂಟೇಸ್ವಾಮಿ ಮಲೆಮಾದಪ್ಪರು ಮುಖ್ಯರಾಗಿದ್ದಾರೆ. ಮಂಟೇಸ್ವಾಮಿಗೆ ಯಾವುದೇ ಹುಟ್ಟಿನ ಮೂಲವಾಗಲೀ ಕಟ್ಟಿದ ಹೆಸರುಗಳಾಗಲೀ ಇಲ್ಲ ಅವನನ್ನು ಆದಿ ಪರಂಜ್ಯೋತಿ ಎಂತಲೂ ಧರೆಗೆದೊಡ್ಡವರು ಎಂತಲೂ ಕರೆಯಾಲಾಗಿದೆ. ಮಲೆಮಾದಪ್ಪನ ವಿಷಯದಲ್ಲಿಯೂ ಹಾಗೇನೆ ಇವರುಗಳಿಗೆ ಲೋಕರೂಢಿಯಂತಹ ಹುಟ್ಟು ಸಾವುಗಳಿಲ್ಲ. ಹಾಗಾಗಿ ಈ ಅಮಾಸ ಮತ್ತು ಕುರಿಯಯ್ಯನ ಪಾತ್ರಗಳಿಗೆ ಸಂಬಂಧಿದಂತೆ ದೇವನೂರು ಮಹಾದೇವ ಅವರ ಚಮತ್ಕಾರವನ್ನು ಗಮನಿಸಿದರೆ ಆ ರೀತಿಯ ಮೌಖಿಕ ಪರಂಪರೆಯು ಈ ಎರಡೂ ಪಾತ್ರಗಳನ್ನು ಕಡೆದು ನಿಲ್ಲಿಸಿದಂತಿದೆ. ಅಲ್ಲದೇ ದೇವನೂರು ಅವರ ಸಾಹಿತ್ಯದೊಳಗೆ ಈ ಪಾತ್ರಗಳು ಬೆಳೆಯುವ ರೀತಿ ಶೋಷಿತ ಸಮುದಾಯಗಳಲ್ಲಿ ಸಾಂಸ್ಕೃತಿಕ ಚಲನಶೀಲತೆಯ ರೂಪಕಗಳಾಗಿವೆ. 'ಕುಸುಮಬಾಲೆ' ಕಾದಂಬರಿಯಲ್ಲಿಯೂ ಈ ಎರಡು ಪಾತ್ರಗಳು ಕಾಣಿಸಿಕೊಳ್ಳುತ್ತವೆ. ಕುರಿಯಯ್ಯ ದಲಿತ ಶೋಷಣೆಯ ಕಾರಣಗಳನ್ನು ವಿಶ್ಲೇಷಣೆ ಮಾಡುವವನಂತೆ, ಭೂತವನ್ನು ಬಗೆದು ನೋಡುವವನಂತೆ ಕಾಣಿಸಿದರೇ ಅಮಾಸ ಭವಿಷ್ಯದ ಸಾಮಾಜಿಕ ಬದಲಾವಣೆಯ ಕನಸಾಗಿ ಕಾಣಿಸುತ್ತಾನೆ. ಇವೆರೆಡರ ನಡುವಿನ ಸಮಕಾಲೀನ ವಾಸ್ತವಗಳೇ ಕುಸುಮಬಾಲೆಯಾಗಿದೆ.

ಅಮಾಸ ಕತೆಯಲ್ಲಿ ಬಹುಮುಖ್ಯವಾಗಿ ಕೇಂದ್ರವಾಗಿ ಕಾಣಿಸುವುದು ಮಾರಿಹಬ್ಬ, ಹುಲಿವೇಷ ಮತ್ತು ಬಲಿ ಕರ್ಮ. ಮೊದಲನೆಯದಾಗಿ ಮಾರಿಹಬ್ಬದ ಆಚರಣೆಗೆ ಸಿದ್ಧತೆಯನ್ನು ಮಾಡಿಕೊಳ್ಳುವಂತಹ ಸನ್ನಿವೇಶ ಮಾರಿಗುಡಿಗೆ ದುಂಬು ಧೂಳನ್ನು ಹೊಡೆದು ಸುಣ್ಣ ಕೆಮ್ಮಣ್ಣುಗಳಿಂದ ಅಲಂಕರಿಸುವುದು, ಪಂಜು ರೆಡಿ ಮಾಡುವುದು, ಬಣ್ಣ ಬಣ್ಣದ ಕಾಗದದಿಂದ ಚಿತ್ರ ಕೊರೆಯುವುದು ದೇವರ ವಸ್ತುಗಳಾದ ದೊಡ್ಡ ದೊಡ್ಡದ ಕೆಂಪು ಬಿಳಿ ಬಣ್ಣದ ಛತ್ರಿ ಚಾಮರಗಳನ್ನು ಹೊರತೆಗೆದು ಬಿಸಿಲಿಗೆ ಒಣ ಹಾಕುವುದು, ಮಾರಿಗುಡಿಯಲ್ಲಿದ್ದ ಕುರಿಯಯ್ಯನನ್ನು ಮತ್ತೊಂದು ಮೂಲಗೆ ಸ್ಥಳಾಂತರಿಸುವುದು, ಇವೆಲ್ಲ ಅಲ್ಲಿನ ಎಲ್ಲರಲ್ಲೂ ಒಂದು ರೀತಿಯ ಬೆರಗು ಮತ್ತು ಚಟುವಟಿಕೆಯನ್ನು ತೋರಿಸುತ್ತಿದೆ.

ಎರಡನೆಯದಾಗಿ ಬಲಿಕರ್ಮ, ಮಾರಿಯ ಹರಕೆ ತೀರಿಸಲು ಮಾರಿಗುಡಿ ಮುಂದೆ ನಿಲ್ಲಿಸಲಾದ ಹೋತಗಳು, ಹೋತಗಳು, ಬಲಿಕೊಡುವ ಮುನ್ನ ನಡೆಯುವ ಆಚರಣೆಯಲ್ಲಿ ಹೋತಗಳ ಕತ್ತಿಗೆ ಹೂವನ್ನು ಬಿಗಿದು, ತೀರ್ಥವನ್ನು ಹಾಕಿ ಕೈಮುಗಿದು, "ಏನಾರ ತಪ್ಪಿದರ ಹೊಟ್ಟ ಒಳಕ ಹಾಕವ್ವ, ಒಪ್ಪಿಗೆ ಕೊಡು"[೩] ಎಂದು ಕೇಳುವುದು, ಪೂಜಾರಿಯ ಆಂಗಿಕ ಭಾಷೆಗಳು ಅವನು ಕಣ್ಣುಮುಚ್ಚಿ ತುಟಿ ಅಲುಗಿಸುತ್ತಾ ವಟವಟ ಎಂದು ಏನನ್ನೋ ಮಂತ್ರ ಹೇಳುವುದು ಅವನ ಭಾವುಕ ಸನ್ನಿವೇಶವು ಮಾರಿಹಬ್ಬದ ಆಚರಣೆಗಳನ್ನು ಕುರಿತು ಹೇಳುತ್ತಿವೆ.

ಮಾರಿಹಬ್ಬದಲ್ಲಿ ಸಾಮಾನ್ಯವಾಗಿ ಕೋಣವನ್ನು ಬಲಿ ಕೊಡುವ

ಸಂಪ್ರದಾಯಗಳಿದ್ದು ಅದು ಒಂದು ಐತಿಹ್ಯವನ್ನು ಒಳಗೊಂಡಿರುವುದರಿಂದ ಮಹತ್ವಪೂರ್ಣವೆನಿಸಿದೆ. ಆದರೆ ಇಲ್ಲಿ ಕೋಣಗಳ ಬದಲಿಗೆ ಹೋತಗಳನ್ನು ಬಲಿ ಕೊಡುವುದನ್ನು ನೋಡಿದರೆ, ಅಂತರ್‌ಜಾತಿ ವಿವಾಹಕ್ಕೆ ಸಂಬಂಧಿಸಿದ ಮಿತ್ ಅನ್ನು ಮುರಿದು ಕಟ್ಟುವಂತಹ ವಿವೇಚನೆ ನಮಗೆ ಇಲ್ಲಿ ಕಾಣಿಸುತ್ತಿದೆ. ಬ್ರಾಹ್ಮಣ ಜಾತಿಯ ಮಾರಮ್ಮನನ್ನು ದಲಿತ ಹುಡುಗ ತನ್ನ ಜಾತಿಯನ್ನು ಮರೆಮಾಚಿ ಮದುವೆ ಮಾಡಿಕೊಂಡಿರುತ್ತಾನೆ. ಅವನ ಜಾತಿ ತಿಳಿದೊಡನೆ ಮಾರಮ್ಮ ಅವನನ್ನು ಕೊಲ್ಲಲು ಅಟ್ಟಿಸಿಕೊಂಡು ಹೋಗುತ್ತಾಳೆ. ಅವನು ಒಂದು ಕೋಣದ ಹೊಟ್ಟೆಯಲ್ಲಿ ಅಡಗಿಕೊಳ್ಳುತ್ತಾನೆ. ಆದರೆ ಅದನ್ನು ಪತ್ತೆ ಹಚ್ಚಿ ಕೋಣವನ್ನೆ ಕೊಲ್ಲಲಾಗುತ್ತದೆ. ಇದು ಕರ್ನಾಟಕದ ಬಹುತೇಕ ಎಲ್ಲ ಮಾರಮ್ಮನ ಪುರಾಣಗಳಲ್ಲಿ ಕಂಡುಬರುವಂತಹ ಐತಿಹ್ಯ. ಆದರೆ, "ಆಕೆ ಗಂಡನನ್ನು ಕೊಂದದ್ದೇ ನಿಜವಾಗಿದ್ದರೇ ಆ ಕೆಳವರ್ಗದ ಜನತೆ ಅವಳನ್ನು ಪೂಜಿಸದೇ ನಿರಾಕರಿಸುತ್ತಿದ್ದರು. ಆದರೆ ಇಲ್ಲಿ ಹಾಗಾಗದೆ ಆರಾಧಿಸುತ್ತಿದ್ದಾರೆ ಎಂದ ಮೇಲೆ ಮಾರಮ್ಮ ತನ್ನ ಗಂಡನನ್ನು ಕೊಲ್ಲಲು ಸಾಧ್ಯವೇ ಇಲ್ಲ. ಆಕೆ ಮನಃಪೂರ್ವಕವಾಗಿ ಅವನನ್ನು ಮದುವೆಯಾಗಿರಬೇಕು ಇಲ್ಲವೆ ಓಡಿಸಿಕೊಂಡಾದರೂ ಹೋಗಿರಬೇಕು. ಇದನ್ನು ಸಹಿಸಿಕೊಳ್ಳಲಾಗದ ಬಣ ಅವನನ್ನು ಕೊಂದಿರಬೇಕು"[೪]. ಚಾತುರ್ವರ್ಣ್ಯ ವ್ಯವಸ್ಥೆ ಬಲವಾಗಿದ್ದ ಕಾಲಘಟ್ಟದಲ್ಲಿ ತಳಜಾತಿಯವನನ್ನು ಮದುವೆಯಾದ ಮಾರಮ್ಮ ಸಹಜವಾಗಿ ಆ ಸಮುದಾಯದ ಆರಾಧನೆಯ ದೈವವಾಗಿದ್ದಾಳೆ. ಅಮಾಸ ಕತೆಯಲ್ಲಿ ಕೋಣದ ಬಲಿಯ ಪ್ರಸ್ತಾಪ ಬರುವುದಿಲ್ಲ. ಅಂದರೆ ಚಾತುರ್ವರ್ಣ ಪದ್ಧತಿಯನ್ನು ಉಲ್ಲಂಘಿಸಿವುದರಿಂದ ಉಂಟಾಗುವ ಹಿಂಸೆಯನ್ನು ಕುರಿತು ಯಾವ ಮಿತ್ ಅನ್ನು ಕಟ್ಟಲಾಗಿತ್ತೋ ಅದನ್ನು ಹೊಡೆದು ಹಾಕುವುದೇ ಕೋಣನ ಬದಲಿಗೆ ಹೋತಗಳನ್ನು ಇಲ್ಲಿ ತಂದಿರಬೇಕೆಂಬುದು ನನ್ನ ಅನಿಸಿಕೆ.

ಮೂರನೆಯ ಬಹುಮುಖ್ಯವಾದ ವಿಚಾರವೆಂದರೆ 'ಹುಲಿವೇಷ'. ಹುಲಿವೇಷ ಇಂದು ಕರ್ನಾಟಕದಾದ್ಯಂತ ಕಂಡುಬರುವ ಜಾನಪದ ಕಲೆ, ಮನರಂಜನೆಯಾಗಿ, ಹಬ್ಬ – ಜಾತ್ರೆಗಳಲ್ಲಿ ಶರೀರಕ್ಕೆ ಹುಲಿಯ ಮೈ ರೀತಿಯಲ್ಲಿ ಕಪ್ಪು ಹಳದಿ ಪಟ್ಟೆಗಳನ್ನು ಬಳಿದುಕೊಂಡು ಹುಲಿಯ ಮುಖವಾಡವನ್ನು ಧರಿಸಿ, ತಮಟೆ, ನಗಾರಿಗಳ ಸದ್ದಿನ ಗತ್ತಿಗನುಗುಣವಾಗಿ ಹೆಜ್ಜೆ ಹಾಕುತ್ತಾ ಕುಣಿಯುವ ಕಲೆಯಾಗಿದೆ. ಇದು ಮನರಂಜನೆ ಹೇಗೋ ಹಾಗೆಯೇ ಕೆಲವು ಹಬ್ಬಗಳಲ್ಲಿ ಹರಕೆಯ ಭಾಗವಾಗಿದೆ ಕೂಡ.

ಅಮಾಸ ಕತೆಯಲ್ಲಿ ಮಾರಿಹಬ್ಬದ ಸಂದರ್ಭ ಬರುವ ಈ ಹುಲಿವೇಷದ ಕುಣಿತದಲ್ಲಿ 'ಢಂಗ್ ಢಂಗು ಢಂಗು ಚುಕ್ಕಿ' ಎಂಬ ತಮಟೆಯ ಸದ್ದಿಗೆ ಅನುಗುಣವಾಗಿ ಅಮಾಸ ಹುಲಿವೇಷ ತೊಟ್ಟು ಕುಣಿಯುವ ಪರಿ ಎಲ್ಲರನ್ನು ಬೆರಗುಗೊಳಿಸುತ್ತಿದೆ. ಅವನು ಎಲ್ಲರಿಗಿಂತಲೂ ಚೆನ್ನಾಗಿಯೇ ಹೆಜ್ಜೆ ಹಾಕುತ್ತಿದ್ದಾನೆ. ಅಮಾಸನಷ್ಟು ಹುಡುಗನಿದ್ದಾಗ ಕುರಿಯಯ್ಯ ಇದೇ ರೀತಿ ಕುಣಿಯುತ್ತಿದ್ದ ಆ ಕಲೆ ಅಮಾಸನಿಗೆ ಸಾಗಿ ಬಂದಿದೆ. ಇಲ್ಲಿ ಸಾಮಾಜಿಕ ಸಂರಚನೆಯೊಳಗೆ ಸ್ಥಗಿತತೆಯನ್ನು ಅನುಭವಿಸುತ್ತಿರುವ ಸಮುದಾಯದೊಳಗೆ ಒಂದು ಸಾಂಸ್ಕೃತಿಕವಾದ ಚಲನಶೀಲತೆ ಬದುಕನ್ನು ಮುನ್ನಡೆಸುವ ಪರಿಯನ್ನು ಕಾಣಬಹುದಾಗಿದೆ. ಅಷ್ಟೇ ಆಗಿರದೆ ಗೌಡರ ಮನಸ್ಸಿನಲ್ಲಿ 'ಮರಿ ಹುಲಿ' ವೇಷಧಾರಿಯಾದ ಅಮಾಸ ಉಂಟುಮಾಡುವ ಆಶ್ಚರ್ಯ ಮತ್ತು ದಿಗಿಲುಗಳು ಸಾಮಾಜಿಕ ಸ್ಥಗಿತತೆಗೆ ಹುಲಿವೇಷದ ಮೂಲಕ ಎತ್ತಿರುವ ಚಾಟಿ ಏಟಿನ ಗುರುತು ಗಳಂತೆ ಪರಿಭಾವಿಸಿಕೊಳ್ಳಬಹುದು. ಇಲ್ಲಿ ಪ್ರಬಲವಾದ ಪ್ರತಿಭಟನೆ ಇಲ್ಲದಿದ್ದರೂ ಅದಕ್ಕೆ ಮರಿಹುಲಿ ಮತ್ತು ಮುದಿಹುಲಿಗಳ ಶಕ್ತಿ ಸಾಲದಿದ್ದರೂ ಅವುಗಳ ಸ್ವಭಾವ ಮಾತ್ರ ಆಕ್ರಮಣಶೀಲವಾಗಿರುವುದು ಆ ಪ್ರತಿಭಟನೆಯನ್ನು ಸಂಕೇತಿಸುತ್ತದೆ.

ಅಮಾಸ ಕತೆಯಲ್ಲಿ ಗುರ್ತಿಸಿಕೊಳ್ಳಬಹುದಾದ ಮತ್ತೆರಡು ಜಾನಪದ ಅಂಶಗಳೆಂದರೂ ಬಂಗಾರಿಯ ತಾಯ್ತನದ ಅಪೇಕ್ಷೆ ಮತ್ತು ಮಾಟದ ತೆಂಗಿನ ಮರ, ಜಾನಪದ ಹೆಣ್ಣು ಬಂಜೆತನವನ್ನು ಸಹಿಸಿಕೊಳ್ಳಲಾರಳು. ಅದರಿಂದ ಸಾಮಾಜಿಕ ತಲ್ಲಣಗಳನ್ನು ಅನುಭವಿಸುತ್ತಾಳೆ. ಏಕೆಂದರೆ, ಮಗುವನ್ನು ಪಡೆದಾಗಲೇ ಅವಳು ಪರಿಪೂರ್ಣ ಎಂಬ ನಂಬಿಕೆಗಳು ಬಲಗೊಂಡ ಸಮಾಜದೊಳಗೆ ಅವಳು ಕೆಲವು ಧಾರ್ಮಿಕ ಚಟುವಟಿಕೆಯಿಂದಲೂ ಕೂಡ ದೂರ ಇರಬೇಕಾಗುತ್ತದೆ. ಹಾಗಾಗಿಯೇ ಅವಳು ಬಲವಾಗಿ ಮಗುವನ್ನು ಅಪೇಕ್ಷಿಸುತ್ತಾಳೆ.

'ಕಂದಾನ ಕೊಡು ಶಿವನೆ ಬಂಧಾನ ಪಡಲಾರೆ
ಹಂಗೀನ ಬಾನ ಉಣಲಾರೆ – ಮರ್ತ್ಯದಾಗ
ಬಂಜೆಂಬ ಸಬುದ ಹೊರುಲಾರೆ॥'[೫]

ಎಂಬುದಾಗಿ ಪರಿಪರಿಯಾಗಿ ಹರಕೆ ಹೊತ್ತುಕೊಳ್ಳುವುದನ್ನು ಜಾನಪದ ಸಂಸ್ಕೃತಿಯೊಳಗೆ ಅನೇಕ ನಿದರ್ಶನಗಳನ್ನು ಕಾಣಬಹುದು. ಈ ಕತೆಯಲ್ಲಿ ಬಂಗಾರಿಗೆ ಮದುವೆಯಾಗಿ ಆರೇಳು ವರ್ಷ ಆಗಿದ್ದರೂ ಮಕ್ಕಳಿಲ್ಲದೇ ನೆರೆಹೊರೆಯವರ ಆಡಿಕೊಳ್ಳುವ ಮಾತಿಗೆ ರೋಸಿ ಹೋಗಿದ್ದಾಳೆ. ಇಲ್ಲಿ ಬಸಣ್ಣನ ತಮಟೆಯ ಸದ್ದಿಗೆ ವೈನಾಗಿ ಕುಣಿಯುವ ಅಮಾಸನನ್ನು ನೋಡಿ ಮತ್ತೆ ಅವಳಲ್ಲಿ ಅಮಾಸನ ರೀತಿಯಲ್ಲಿ ನನಗೊಬ್ಬ ಮಗನಿದ್ದರೇ ಎಂಬ ಆಸೆಗಳು ಅವಳ ಮನದಲ್ಲಿ ಮನೆಮಾಡುತ್ತ ಹೋಗುತ್ತವೆ. ಇದು ಕತೆಯ ಸಂದರ್ಭದಲ್ಲಿ ಅಷ್ಟೇನು ಮುಖ್ಯ ಅಲ್ಲದಿದ್ದರೂ ಅಮಾಸನ ಕುಣಿತದ ವರ್ಣನೆ ಮತ್ತು ಜಾನಪದ ಹೆಣ್ಣೊಬ್ಬಳ ಮಾನಸಿಕ ತುಮುಲವನ್ನು ತೆರೆದಿಡುತ್ತದೆ.

ಮಾಟಕ್ಕೆ ಸಂಬಂಧಿಸಿದಂತೆ ಮಾನವನು ಪ್ರಕೃತಿಯ ಧೋರಣೆಗಳನ್ನು ಸ್ನೇಹ, ಪ್ರೀತಿ, ವಿಶ್ವಾಸದಿಂದ ಗೆಲ್ಲದೆ ವಾಮಮಾರ್ಗವನ್ನು ತುಳಿಯುವುದಾಗಿದೆ. ಮಾಂತ್ರಿಕರು ಮತ್ತು ಪುರೋಹಿತಶಾಹಿಗಳು ಇಬ್ಬರೂ ಜನಸಾಮಾನ್ಯರ ಬದುಕನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಈ ಮಾಟ ಮಂತ್ರಗಳು ಹುಟ್ಟಿಕೊಂಡಿರಬಹುದು. ಇವುಗಳಲ್ಲಿ ಬಿಳಿ ಮಾಟ ಮತ್ತು ಕಪ್ಪು ಮಾಟಗಳೆಂದು ಎರಡು ಬಗೆಯವು ಇವೆ. ಬಿಳಿಯ ಮಾಟ ಯಾವುದೇ ಜೀವಹಾನಿ ಇಲ್ಲದೆ ಕೇವಲ ಒಲಿಸಿಕೊಳ್ಳುವ ತಂತ್ರವನ್ನು ಒಳಗೊಂಡಿರುತ್ತದೆ. ಆದರೆ ಕಪ್ಪುಮಾಟ ಜೀವಹಾನಿಯನ್ನು ಬಯಸುವಂತಹದ್ದು. ಈ ಕತೆಯಲ್ಲಿ ಯಾರೋ ಮಾಟ ಮಾಡಿಸಿ ತೆಂಗಿನಕಾಯಿಯನ್ನು ಸುಡುಗಾಡಿನಲ್ಲಿ ಹೂತುಹಾಕಿದ್ದು ಅದು ಕ್ರಮೇಣ ಚಿಗುರಿ ಗಿಡವಾಗುತ್ತದೆ. ಇದನ್ನು ಕಂಡ ಕುರಿಯಯ್ಯ ತನ್ನದೂ ಅಂತ ಒಂದು ಮರವಿರಲಿ ಎಂದು ಅದನ್ನು ಕಿತ್ತು ತಂದು ಮಾರಿಗುಡಿಯ ಮುಂದೆ ನೆಟ್ಟು ಪೋಷಿಸಿರುತ್ತಾನೆ. ಅದು ದೊಡ್ಡದಾಗಿ ಇಂದು ಫಲಭರಿತವಾದ ದೊಡ್ಡ ತೆಂಗಿನಮರವಾಗಿದೆ. ಇಲ್ಲಿ ಜೀವಹಾನಿಯಂತಹ ತಂತ್ರಗಳಿಗೆ ಕುರಿಯಯ್ಯ ತೋರುವ ಪ್ರತಿಕ್ರಿಯೆ ಅದನ್ನು ಕಿತ್ತು ತರುವುದು, ವೈಚಾರಿಕ ನಿಲುವು. ಮಾಟ ಮಂತ್ರಗಳಂತಹ ಭಯಾನಕ ವಾತಾವರಣವನ್ನು ಸೃಷ್ಟಿಸುವ ತಂತ್ರಗಳ ವಿರುದ್ಧ ದಿಕ್ಕಿನಲ್ಲಿ ಸಾಗುವ ಜೀವಪರ ಮನೋಭಾವಗಳು ಸ್ಥಗಿತವಾಗಬೇಕಿದ್ದ ಸನ್ನಿವೇಶಕ್ಕೆ ಚೈತನ್ಯವನ್ನು ತುಂಬಿದೆ. ಇಲ್ಲಿ ಈ ಲೋಕ ಎಸಗುವ ಕೆಡಕುಗಳು

ಕುರಿಯಯ್ಯನ ಮೂಲಕ ನಿಷ್ಕ್ರಿಯಗೊಂಡಿವೆ ಮಾಟಮಂತ್ರದ ಭಾಗವಾಗಿ ತಿರಸ್ಕಾರಕ್ಕೆ ಒಳಗಾದ ತೆಂಗಿನ ಕಾಯೊಂದು ಇಂದು ಮರವಾಗಿ ಮಾರಿಹಬ್ಬದ ಭಾಗವಾಗಿ ಸಿಂಗಾರಗೊಂಡಿರುವುದು ಇದನ್ನೇ ಪ್ರತಿಪಾದಿಸುತ್ತದೆ.

'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಕತೆಯಲ್ಲಿ ಬಹುಮುಖ್ಯವಾದ ಜಾನಪದ ಅಂಶಗಳು ಕಾಣಬರದಿದ್ದರೂ ರಂಗಪ್ಪನ ಮಗ ರಾಜನ ಮೂಲಕ ಆ ತರದ ಒಂದು ಸನ್ನಿವೇಶಕ್ಕೆ ಪ್ರವೇಶಿಸಬಹುದು. ಜನಪದ ಕತೆಗಳ ನಿರೂಪಕರು ಸಾಮಾನ್ಯವಾಗಿ ತಮ್ಮ ಸುತ್ತಲಿನ, ತಮ್ಮ ಜೀವನದಲ್ಲಿ ನಡೆದ, ಅಥವಾ ನಡೆಯಬೇಕಾಗಿರುವುದರ ಅಪೇಕ್ಷೆಗಳಂತ ಕತೆಗಳನ್ನು ಹೇಳುವಾಗ ಬಹುತೇಕ ಪಾತ್ರಸೃಷ್ಟಿಯು ರಾಜ ರಾಣಿಯರದಾಗಿರುತ್ತದೆ. ಆದರೆ ಸ್ವಭಾವದಲ್ಲಿ ಮಾತ್ರ ಆ ಪಾತ್ರಗಳನ್ನು ಇವರೇ ಹೊಕ್ಕಿರುತ್ತಾರೆ. ಆ ಕತೆಗಳ ಪಾತ್ರಗಳ ಏಳು ಬೀಳುಗಳು ಸಾಗಿ ಕೊನೆಯಲ್ಲಿ ಸುಖವಾಗಿದ್ದರೂ ಎಂಬಲ್ಲಿಗೆ ಮುಗಿಯುತ್ತವೆ. ಇಲ್ಲಿ ನಿರ್ಗತಿಕನಾದ ರಂಗಪ್ಪ ತನ್ನ ಮಗ ರಾಜನ ಮೂಲಕ ಆ ಆಶಯವನ್ನು ಬಯಸುವವನಾಗಿದ್ದಾನೆ. ಆದರೆ ಈ ಕತೆಯಲ್ಲಿ ರಾಜ ಎಂಬ 'ದಲಿತ ಹುಡುಗನಿಗೆ ಸವರ್ಣೀಯ ಹುಡುಗ ಹೇಗೆ ಪ್ರತಿಕ್ರಿಯಿಸುತ್ತಾನೆಂದರೆ "ಹೊಗಲೇ ನಿನ್ನ ರಾಜ ಅನ್ನಲ್ಲ ಗೀಜ ಅಂತೀನಿ'. ವಾಸ್ತವದಲ್ಲಿನ ಇಂತಹ ವರ್ತನೆಗಳಿಗೆ ದಲಿತರು ಆಂತರ್ಯದಲ್ಲಿ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದಕ್ಕೆ ಜನಪದ ಕತೆಯನ್ನು ನೋಡಬೇಕು. ರಾಜ ವೈಭವವನ್ನು ಗೇಲಿ ಮಾಡುವ ರಾಜನನ್ನು ಗೇಲಿ ಮಾಡುವ ಸಂದರ್ಭಗಳು ಜನಪದ ಕತೆಗಳಲ್ಲಿ ಹೇರಳವಾಗಿವೆ".[೬] ಆದರೆ ಇಲ್ಲಿ ಗೇಲಿಮಾಡುವಂತಹ ಯಾವ ವೈಭವಗಳು ರಾಜನಿಗೆ ಇಲ್ಲ. ಅದರ ಆಶಯಗಳಿವೆ. ಇಂತಹ ಸಂದರ್ಭದಲ್ಲಿ ರಾಜನ ಅವ್ವ ಪಾರೋತಿ ಮಗನನ್ನು "ನೀ ಜಾಣಕಪ್ಪ, ಅವ್ರ ಸಿಂತಗೆಲ್ಲ ಹೋಗ್‌ಬೇಡ"[೭] ಎಂದಷ್ಟೇ ಪ್ರತಿಕ್ರಿಯಿಸುತ್ತಾಳೆ. ಇಲ್ಲಿ ಹೆಸರಲ್ಲೂ ರಾಜನಾಗಲೂ ಬಿಡದ ಸವರ್ಣೀಯ ಮನಸುಗಳು, ತಳಸಮುದಾಯದ ಅಸಹಾಯಕ ಸ್ಥಿತಿಗಳು ಕಂಡುಬರುತ್ತವೆ.

'ದತ್ತ' ಕತೆಯು ಸಂಬಂಧಗಳು ಇದ್ದೂ ಹೊಂದಿಕೊಳ್ಳಲಾಗದ ಅನ್ಯತೆಯನ್ನು, ಪರಕೀಯತೆಯನ್ನು ಅನುಭವಿಸುವ ನವ್ಯದ ಮಾದರಿಯಲ್ಲಿ ಕಂಡುಬರುತ್ತದೆ. ದತ್ತುಮಗನಾಗಿ ಹೋಗಿ ಹನ್ನೆರಡು ವರ್ಷ ತನ್ನ ರಕ್ತ ಸಂಬಂಧಗಳಿಂದ ದೂರಯಿದ್ದ ಅನಂದು ಸಾಕು ತಂದೆ ತಾಯಿಗಳು ಸತ್ತಾಗ ಮತ್ತೆ ಹೆತ್ತವರ ಮನೆಗೆ ಬರುವುದು, ಅಲ್ಲಿ ನಡೆಯುವ ಅವನ ಮಾನಸಿಕ ತೊಳಲಾಟಗಳು ಕಂಡುಬರುತ್ತವೆ. ಜಾನಪದ ಅಂಶಗಳ ದೃಷ್ಟಿಯಿಂದ ನೋಡಿದಾಗ ಹನ್ನೆರಡು ವರ್ಷಗಳ ನಂತರ ಮಗನನ್ನು ಬರಮಾಡಿಕೊಳ್ಳುವಾಗ ನಡೆಯುವ ಆಚರಣೆಗಳು ಮುಖ್ಯ ಅನಿಸುತ್ತದೆ.

ಮಾರಿಗುಡಿಯ ಹತ್ತಿರ ಈ ಆಚರಣೆ ನಡೆಯುತ್ತದೆ. ಪಾತ್ರೆಯೊಳಗೆ ಎಣ್ಣೆಯನ್ನು ತುಂಬಿಟ್ಟು, ನಡುವೆ ತೆರೆಯೊಂದನ್ನು ಹಿಡಿದು ಆ ತೆರೆಯ ಮರೆಯಲ್ಲಿ ಎಣ್ಣೆ ಪಾತ್ರೆಯಲ್ಲಿ ಒಬ್ಬರಿಗೊಬ್ಬರ ಮುಖವನ್ನು ನೋಡುವಂತಹದ್ದು. ಹನ್ನೆರಡು ವರ್ಷದ ನಂತರ ಒಬ್ಬರ ಮುಖ ಒಬ್ಬರಿಗೆ ಪರಿಚಯವಲ್ಲವಾದ್ದರಿಂದ ಈ ಆಚರಣೆಯಿಂದ ಮೊದಲು ಮುಖ ಪರಿಚಯ ಮಾಡಿಕೊಳ್ಳುವಂತಹದ್ದು. ಇದರಿಂದ ಅವರವರ ಮುಖ ಭಾವನೆಗಳು ಪರಿಚಯವಾಗಿ ನಂತರ ಬೆರೆಯಲು ಸುಲಭವಾಗುತ್ತದೆ ಎಂಬ ನಂಬಿಕೆಯಿದೆ, ಈ ಆಚರಣೆ ನಡೆದ ಮೇಲೆ ಆನಂದುವನ್ನು ಹಟ್ಟಿಗೆ ಬರಮಾಡಿಕೊಳ್ಳುವಾಗ 'ಆರತಿ ಎತ್ತಿ ಹರಿಸಿನ ನೀರು ಹರಿಸಿ, ಬಲಗಾಲು ಹಾಕಿ ಬರಮಾಡಿಕೊಳ್ಳುವುದು ಕೂಡ ಹಳ್ಳಿ ಸಮುದಾಯಗಳು ನಂಬಿಕೊಂಡು ಬಂದಿರುವ ಸಾಂಸ್ಕೃತಿಕ ಚಹರೆಗಳಾಗಿವೆ. ಒಂದು ದಹನದ ಕಥೆಯಲ್ಲೂ ಈ ಆಚರಣೆಯ ಪ್ರಸ್ತಾಪವಿದೆ. ಈ ಕತೆಯ ನಾಯಕ ಮೇಲ್ಜಾತಿಯ ಕಮಲಿಯನ್ನು ಮದುವೆಯಾಗಿ ಹನ್ನೆರಡು ವರ್ಷದ ನಂತರ ಊರಿಗೆ ಬಂದಾಗ ಇದೇ ರೀತಿಯ ಸಂಪ್ರದಾಯದ ಪ್ರಸ್ತಾಪವಾಗಿದೆ. ಆದರೆ ಅದು ಈ ಕತೆಯಲ್ಲಿ ಆಚರಣೆಯಲ್ಲಿ ಕಾಣಿಸುವುದಿಲ್ಲ.

ಡಾಂಬರು ಬಂದುದು ಕತೆಯಲ್ಲಿ ಗ್ರಾಮೀಣ ಜನಜೀವನದ ಮೇಲೆ ಆಧುನಿಕತೆ ಉಂಟುಮಾಡಿರುವ ಸ್ಥಿತ್ಯಂತರಗಳು ಕಂಡು ಬಂದು, ಮುಖ್ಯವಾಗಿ ಅಕ್ಷರ ಕಲಿತ ಯುವ ಪೀಳಿಗೆ ಹಾಗೂ ಪರಂಪರಾಗತ ಯಜಮಾನಿಕೆ ನಡೆಸುತ್ತಿರುವ ಗೌಡಿಕೆಯ ನಡುವಿನ ಸಂಘರ್ಷಗಳು ಕಂಡುಬರುತ್ತವೆ.

ರೋಡು ಮಾಡಲು ಕಂಟ್ರ್ಯಾಕ್ಟರ್ ತೆಗೆದುಕೊಂಡಿದ್ದ ಪಟೇಲರು ಆ ದುಡ್ಡಲ್ಲಿ ಮಿಗಿಸಿ ದೇವಸ್ಥಾನ ಊರ್ಜಿತ ಮಾಡುತ್ತಾರೆಂಬ ಸುದ್ದಿಯಿಂದ ಆ ಊರಿನ ಲಕುಮ, ರಾಜಪ್ಪ, ಮಾದು, ಶಂಭು ಇವರ ಸೇರಿಕೊಂಡು ಪತ್ರಿಕೆಯಲ್ಲಿ ಆ ವಿಷಯವನ್ನು ಬರೆದು ಹಣ ದುರುಪಯೋಗವನ್ನು ತಡೆಗಟ್ಟುವಂತೆ ಕೋರಿರುತ್ತಾರೆ. ಇದರಿಂದ ಕ್ರೋಧಗೊಂಡು 'ನ್ಯಾಯಕ್ಕೆ ಮನೆಗೊಂದಾಳು ಚಾವಡಿಗೆ ಬರಬೇಕೆಂದು ಪಟೇಲರು ತಮ್ಮಟೆ ಬಡಿಸಿ ಸಾರಿದರು'[೮] ಲಾಟೀನು ಬೆಳಕಿನಲ್ಲಿ ಪಂಚಾಯಿತಿ ಸೇರಿದ ಜನರಲ್ಲಿ ಊರಿನ ಜನರಿಗೆ ಪಟೇಲರ ತೀರ್ಮಾನ ನ್ಯಾಯಯುತವಾಗಿ ಕಂಡರೂ ಈ ನಾಲ್ಕು ಹುಡುಗರಿಗೆ ಅದು ಅಪರಾಧವಾಗಿ ಕಾಣುತ್ತದೆ. ಕೊನೆಗೆ ಗುಂಪುಗುದ್ದಲವೆದ್ದು ನ್ಯಾಯ ತೀರ್ಮಾನ ಅಲ್ಲಿಗೆ ಮುರಿದು ಬೀಳುತ್ತದೆ.

ಮತ್ತೊಂದು ನ್ಯಾಯ ಇದೆ ಕತೆಯ 'ಹೊಸೂರ ಹೊಸ ಮಾತು' ಎಂಬಲ್ಲಿ ಬರುತ್ತದೆ. ಅಲ್ಲೊಬ್ಬಳು ತುಂಡು ಹೈಕಳ ಕೆಡಿಸುತ್ತ ಇದ್ದ ಕಲಕೆತ್ತಿ ಹೆಣ್ಣಿಗೆ ಎಷ್ಟು ಬೈದು ಬುದ್ಧಿ ಹೇಳಿದರೂ ಕೆಳದಿದ್ದಾಗ ನ್ಯಾಯಕ್ಕೆ ಸೇರಿಸಿ ಅವಳಿಗೆ ಹೊಟ್ಟೇಲಿ ಹುಟ್ಟಿನ ರೂಪ ಮಾಡಿ ಹುಣಸೆ ಸೆಬ್ಬದಲ್ಲಿ ಬಡಿಯಲಾಗುತ್ತದೆ. ಇದು ಆ ಊರಿನ ನ್ಯಾಯ. ಆದರೆ ಅವಳು ಪೋಲಿಸ್ ಕಂಪ್ಲೇಂಟ್ ಕೊಟ್ಟು ಊರ ಯಜಮಾನರುಗಳನ್ನು ಹಿಡಕಂಡು ಹೋಗುವರತೆ ಮಾಡುತ್ತಾಳೆ. ಇಲ್ಲಿ ಪಟ್ಟಭದ್ರ ಹಿತಾಸಕ್ತಿಯ ಪರವಾಗಿ ನಿಲ್ಲುವ ಪಾರಂಪರಿಕ ನ್ಯಾಯ ಪದ್ಧತಿಯು ಆಧುನಿಕತೆಯ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಅಪರಾಧವಾಗಿ ಕಾಣುತ್ತದೆ. ಈ ಕಾನೂನು ವ್ಯವಸ್ಥೆಯು ಅಂತಹ ಪರಂಪರೆಯಿಂದ ಬಿಡುಗಡೆಗೊಳಿಸುವ ಮಾರ್ಗವಾಗಿದೆ. ಅಂದರೆ ಜೀವ ವಿರೋಧಿ ನಿಲುವುಗಳು ಸ್ವತಂತ್ರ ಭಾರತದ ವ್ಯವಸ್ಥೆಯಲ್ಲಿ ಸೋತಾಗಲೇ ಅದಕ್ಕೆ ಒಂದು ಅರ್ಥ ಬರುತ್ತದೆ.

ಆದರೆ ಜೀವಪರ ದೇಸಿ ಸಂಸ್ಕೃತಿಯು ಈ ಆಧುನಿಕತೆಯಿದ್ದಾಗಲೂ ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳಬಹುದು ಎಂಬುದಕ್ಕೆ ಇದೇ ಕತೆಯ ಮತ್ತೊಂದು ಸನ್ನಿವೇಶವನ್ನು ನೋಡಬಹುದು. ಟಾರು ರಸ್ತೆಗಾಗಿ ಜಲ್ಲಿಕಲ್ಲು ಚಚ್ಚುತ್ತಿದ್ದ 'ಗುಂಪಲ್ಲೆ ಒಬ್ಬಳು ಸಣ್ಣ ದನಿ ಎತ್ತರಿಸಿ ಸುವ್ವಿ ಬಾ ಚನ್ನಬಸವಯ್ಯ ಮೊಳಗಿಸುತ್ತಿರುವಳು. ಉಳಿದವರ ಕುಮ್ಮಕ್ಕು ಕೊಡುವ ಸೊಲ್ಲು ಅದ ಮೀರಿಸಿಕೊಂಡು ದೂರದಲ್ಲಿ ಕೆಲಸ ಮಾಡುವವರ ಆಚೆಗೂ ಕೇಳಿಸುವಂತೆ ಕೆಲಸ ಮಾಡುವವರು ಕೆಲಸ ಮಾಡುತ್ತಾ

ಫರ್ಲಾಂಗು ಉದ್ದ ಲವಲವಿಕೆ ತುಂಬಿದೆ" ನಾಟಿ ಹಾಕುತ್ತಲೋ, ರಾಗಿ ಬೀಸುತ್ತಲೋ ಇದ್ದ ಸಂದರ್ಭದ ಶ್ರಮವನ್ನು ಕಳೆಯಲು ಹಾಡಕೊಳ್ಳುತಿದ್ದ ಹಾಡು ಇಲ್ಲೂ ಸಹಾ ಶ್ರಮವನ್ನು ಕಳೆಯಲು ಹಾಡಿಕೊಳ್ಳುವಂತದ್ದಾಗಿದೆ. ಆದರೆ ಈ ಹಾಡು ಆ ಡಾಂಬರ್ ಹಾಕುವ ಮೆಷಿನ್‌ಗಳ ಶಬ್ದವನ್ನು ಮೀರಿಸಿಕೊಂಡು ಬರುತ್ತಿದೆ. ಇಲ್ಲಿ ಶ್ರಮ ಸಂಸ್ಕೃತಿ ಎಂಬುದು ಮಾನವ ನಾಗರೀಕತೆಯೊಳಗೆ ಯಾವತ್ತೂ ಉಳಿದುಕೊಂಡಿದ್ದು ಅದು ಬೆಳೆಯುತ್ತಲೇ ಇರುತ್ತದೆ ಎಂಬುದನ್ನು ತೋರಿಸುತ್ತದೆ.

ಒಟ್ಟಿನಲ್ಲಿ ದೇವನೂರು ಮಹಾದೇವ ಅವರ ಕತೆಗಳಲ್ಲಿ ಜಾನಪದ ಅಂಶಗಳು ಸ್ಥಗಿತತೆಯನ್ನು ಅನುಭವಿಸುತ್ತಿರುವ ಸಾಮಾಜಿಕ ಸಂರಚನೆಯೊಳಗೆ ಚೈತನ್ಯವನ್ನು ತುಂಬಿವೆ. ಕತ್ತಲೆಗೂ ಕೂಡ ಚೈತನ್ಯವಿದೆ ಎಂಬುದನ್ನು ತೋರಿಸಿಕೊಟ್ಟಿವೆ. ಅದಕ್ಕಾಗಿ ಅನಾಥ ಪ್ರಜ್ಞೆ ಕಾಡದಂತೆ ತಲೆಮಾರಿನ ಸೃತಿ ಮತ್ತು ಕಲೆಗಳು ಆಚರಣೆಗಳು ಕೈಹಿಡಿದು ನಡೆಸುತ್ತವೆ.

ಕೊನೆಟಿಪ್ಪಣಿಗಳು

೧. ಕೆ.ವಿ. ನಾರಾಯಣ : ಯಾರ ಜಪ್ತಿಗೂ ಸಿಗದ ನವಿಲುಗಳು : ಪಿ. ಚಂದ್ರಿಕಾ (ಸಂ.), ೨೦೧೩, ಪುಟ. ೧೯೯.

೨. ಜಿ.ಎಸ್. ಅಮೂರ : ಯಾರ ಜಪ್ತಿಗೂ ಸಿಗದ ನವಿಲುಗಳು : ಪಿ. ಚಂದ್ರಿಕಾ (ಸಂ.), ಪುಟ. ೪೩.

೩. ದ್ಯಾವನೂರು ಮತ್ತು ಒಡಲಾಳ : ದೇವನೂರು ಮಹಾದೇವ, ೨೦೧೧, ಪುಟ. ೫೧.

೪. ಅರವಿಂದ ಮಾಲಗತ್ತಿ : ಶಿರಸಿಯ ಮಾರಿಕಾಂಬ ಮತ್ತು ಕೋಣ, ಜನಪದ ಜಗತ್ತು ಪತ್ರಿಕೆ, ಸಂಚಿಕೆ ೧ ಮತ್ತು ೨, ಮಾರ್ಚ್ – ಏಪ್ರಿಲ್ ೧೯೯೦, ಪುಟ. ೧೧.

೫. ಡಾ. ಚಕ್ಕೆರೆ ಶಿವಶಂಕರ್ : ಜಾನಪದ ತಿಳುವಳಿಕೆ, ೨೦೦೮, ಪುಟ. ೧೩೬.

೬. ಎಲ್. ಹನುಮಂತಯ್ಯ : ಮೂರು ದಲಿತ ಕಮ್ಮಟಗಳು : ಕೆ.ಆರ್. ದುರ್ಗಾದಾಸ್, ಜಿ.ವಿ. ಆನಂದಮೂರ್ತಿ (ಸಂ.), ೧೯೯೬, ಪುಟ. ೧೦೬.

೭. ದೇವನೂರು ಮಹಾದೇವ : ದ್ಯಾವನೂರು ಹಾಗೂ ಒಡಲಾಳ, ೨೦೧೧, ಪುಟ. ೪೦.

೮. ಅದೇ, ಪುಟ. ೩೨.

೯. ಅದೇ, ಪುಟ. ೩೦.

ರಾಯಚೂರುಜಿಲ್ಲೆಯಲ್ಲಿ ಪಂಡಿತ್‌ತಾರಾನಾಥರವರ ಸಾಧನೆ– ಅವಲೋಕನ

ಹೆಚ್. ಮಹದೇವಸ್ವಾಮಿ
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,
ಮೈಸೂರು– ೫೭೦ ೦೦೬. ಇ ಮೇಲ್:mahadevaswamykanda@gmail.com

ಇತಿಹಾಸದಲ್ಲಿ ಕೆಲವು ವ್ಯಕ್ತಿಗಳ ಪರಿಚಯ ಪ್ರಸಿದ್ದಿಯನ್ನು ಪಡೆದಿರುವುದಿಲ್ಲ. ರಾಯಚೂರು ಜಲ್ಲೆಯ ಇತಿಹಾಸವನ್ನು ಅವಲೋಕನ ಮಾಡಿದಾಗ ಎಲ್ಲೂ ಒಂದು ಕಡೆ ನಿಜವೆನಿಸುತ್ತದೆ. ರಾಯಚೂರು ಪ್ರದೇಶದ ಚರಿತ್ರೆಗಾಗಿ, ಹೋರಾಟ ಮಾಡಿದವರಲ್ಲಿ ತಾರಾನಾಥ್ ಪಂಡಿತರುಒಬ್ಬರು. ಇವರು 'ಎಲೆ ಮರೆ ಕಾ ಮಾಡಿದವರಲ್ಲಿ ತಾರಾನಾಥ್ ಪಂಡಿತರುಒಬ್ಬರು.ಇವರು 'ಎಲೆ ಮರೆ ಕಾಯಿ' ಇದ್ದ ಕಾಗೆ ಇವರ ಬದುಕುಅಪ್ರತಿಮದೇಶಭಕ್ತಿ, ಸುಪ್ರಸಿದ್ದ ಆರ್ಯುವೇದ ಪಂಡಿತ, ಖಾತ ಸಮಾಜ ಸೇವಕ, ಪತ್ರಕರ್ತರಾಗಿ, ಸ್ವಾತಂತ್ಯ ಸಮರದಸ ಸೇನಾನಿಯಾಗಿ ಸಂಗೀತಗಾರ ನಾಟಕಕಾರ ನಟ ಮತ್ತು ವಿಖ್ಯಾತಯೋಗಪಟು– ಹೀಗೆ ಇವರನ್ನುಗುರುತಿಸಬಹುದು.ನಿಜಾಮರ ದಬ್ಬಾಳಿಕೆಯನ್ನು ಖಂಡಿಸಿದ ಒಬ್ಬ ಮಹಾನ್ ಸಾಧಕ, ರಾಯಚೂರು ಪ್ರದೇಶದಲ್ಲಿ ರಾಚನಾತ್ಮಕ ಕಾರ್ಯಕ್ರಮಗಳ ಮೂಲಕ ಜನರಿಗೆಉಪಕಾರ ಮಾಡಿದವರಲ್ಲಿಇವರ ವ್ಯಕ್ತಿತ್ವಅಮರ. ಹಾಗೇಯೇ ರಾಯಚೂರು ಜಿಲ್ಲೆಯಲ್ಲಿ ಜನರ ಶಿಕ್ಷಣಕ್ಕಾಗಿ ಅದರಲ್ಲುಕನ್ನಡ ಶಿಕ್ಷಣಕಾಗಿ ಶ್ರಮಿಸಿದ ಶಿಕ್ಷಣತಜ್ಞರೆಂದೇ ಹೇಳಬವುದು. ಈ ರೀತಿಯಾಗಿ ಹಲವು ಕ್ಷೇತ್ರಗಳಲ್ಲಿ ಇವರ ಸಾಧನೆಗಳನ್ನು ಗುರುತಿಸಬಹುದು, ಈ ಹಿನ್ನೇಲೆಯನದನ್ನು ಗಮನ ಕೇಂದ್ರಿಕರಿಸಿಕೊಂಡು ನಾನ್ನು "ರಾಯಚೂರುಜಿಲ್ಲೆಯಲ್ಲಿ ಪಂಡಿತ್‌ತಾರಾನಾಥ್‌ರವರ ಸಾಧನೆ– ಒಂದು ಅವಲೋಕನ ಎಂಬ ವಿಷಯದದಲ್ಲಿ ಲೇಖನವನ್ನು ಬರೆಯಲು ಪ್ರಯತ್ನ ಮಾಡುತ್ತಿದ್ದೇನೆ. ಕೇವಲ ಅರೆ ಶತಮಾನ ಬಾಳಿ ಬದುಕಿದತಾರಾನಾಥರ ಸಾಧನೆಗಳು ಮೇರು ಪ್ರಾಯ ಮಹಾತ್ಮಗಾಂಧೀಜಿಯವರ ಮನಗೆದ್ದ ಮಹಾ ಚೇತನಅವರು. ಇವರ ಸಾಧನೆಗಳು ಕನ್ನಡಿಇದ್ದ ಹಾಗೆ ಎಂದು ಹೇಳಬಹುದು.

ಪಂಡಿತ ತಾರಾನಾಥ್‌ರವರು ಅಪ್ರತಿಮ ದೇಶಭಕ್ತ ಸ್ವಾತಂತ್ರ್ಯಪ್ರೇಮಿ, ಮಾನವತಾವಾದಿ. ಶ್ರೇಷ್ಠ ಅಧ್ಯಾಪಕ ಆಯುರ್ವೇದ ವೈದ್ಯಕೀಯ ಪಂಡಿತ, ಸಂಗೀತಗಾರ, ನಾಟಕಕಾರ ಮೊದಲಾದ ವಿಶಿಷ್ಟಗುಣಗಳನ್ನು ಇವರ ವ್ಯಕ್ತಿತ್ವದಿಂದ ಸಾಧನೆಯನ್ನು ಗುರುತಿಸಬಹುದು. ರಾಯಚೂರು ಜಿಲ್ಲೆಯಲ್ಲಿ ಶಿಕ್ಷಣ ವೃತ್ತಿಯನ್ನು ಪ್ರಾರಂಬಿಸಿ, ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡಿ ನಂತರ ಶಿಕ್ಷಣಸಂಸ್ಥೆಯನ್ನು ಸ್ಥಾಪಿಸಿ ಕನ್ನಡ ಬೋಧನೆಗೆ ಅವಕಾಶ ಮಾಡಿಕೊಟ್ಟ ಧೀಮಂತ ವ್ಯಕ್ತಿ ಎಂದು ಹೇಳಬಹುದು. ಇವರು ರಾಯಚೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಹೈದರಾಬಾದ್ ನಿಜಾಮನ ದುರಾಡಳಿತವನ್ನು ವಿರೋಧ ಮಾಡಿದವರಲ್ಲಿ ಮೊದಲಿಗರು ಎಂಬುದಾಗಿ ಗುರುತಿಸಬಹುದು. ಕೇವಲ ಅರೇ ಶತಮಾನ ಬಾಳಿ ಬದುಕಿದ ಪಂಡಿತ್ ತಾರಾನಾಥರ ಸಾಧನೆಗಳು ಮೇರುಪ್ರಾಯ ಆದರ್ಶಮಯವಾಗಿತ್ತು. ಇವರು ಮಹಾತ್ಮಗಾಂಧೀಜಿಯವರ ಮನಗೆದ್ದ ಮಹಾಚೇತನ. ಪಂಡಿತ್ ತಾರಾನಾಥರು ಒಬ್ಬ ಪವಾಡಪುರುಷ ಅಲ್ಲ, ಆತ ಒಬ್ಬ ದೊಡ್ಡಸಾಧಕ ಸಂತನಲ್ಲ; ಶ್ರಮಜೀವ. ಬಡವರ ಬಗ್ಗೆ ಕರುಣೆ ತೋರಿದ ಮಹಾನ್ ಮಹಾಚೇತನ. ಸ್ವಂತ ಪರಿಶ್ರಮದಿಂದ ತಮ್ಮ ಜೀವನ ರೂಪಿಸಿಕೊಂಡವರು. ಇವರ ಹೋರಾಟಗಳು ರಾಯಚೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆಯನ್ನು ಪಡೆಯಿತು. ಈ ಜಿಲ್ಲೆಯ ಜನಪರ ಕಾರ್ಯಗಳನ್ನು ಮಾಡುವ ಮೂಲಕ ಜನರ ಮನಸ್ಸಿನಲ್ಲಿ

ಇವರ ಹೆಸರು ಉಳಿಯುವಂತೆ ಆಗಿದೆ.

ನಮ್ಮ ಸುದೈವವೋ ಏನೋ ಎನ್ನುವಂತೆ ಮಂಗಳೂರಿನಲ್ಲಿ ಹುಟ್ಟಿ ಹೈದರಾಬಾದ್‌ನಲ್ಲಿ ಶಿಕ್ಷಣ ಪಡೆದು, ತನ್ನ ಕರ್ಮಭೂಮಿಯನ್ನು ರಾಯಚೂರನ್ನಾಗಿ ಮಾಡಿಕೊಂಡು ಕೆಲವು ಸಾಮಾಜಿಕ ಬದಲಾವಣೆಗಳನ್ನು ಮಾಡಿ ಆ ಪ್ರದೇಶ ಜನರಿಗೆ ಆಶಾಕಿರಣವಾಗಿ ಬಾಳಿ ಬದುಕಿದ. ಇವರ ಜೀವನ ಆದರ್ಶಮಯವಾದದ್ದು ಜೊತೆಗೆ ಇನ್ನೊಬ್ಬರಿಗೆ ದಾರಿದೀಪ ಎಂದೇ ಹೇಳಬಹುದು.

ಈ ಲೇಖನದ ಉದ್ದೇಶಗಳು: ಪಂಡಿತ ತಾರಾನಾಥ್‌ರವರು ಸ್ವಾತಂತ್ರ್ಯ ಹೋರಾಟಗಾರರು. ಇವರು ರಾಯಚೂರು ಪ್ರದೇಶದಲ್ಲಿರುವ ನಿಜಾಂಷಾಯಿ ಆಡಳಿತವನು ವಿರೋಧ ಮಾಡಿದವರು. ಇವರ ಜೀವನರಂಗವನ್ನು ಗಮನಿಸಿದ್ದಾಗ ಇತಿಹಾಸದ ಪುಟಗಳಲ್ಲಿ ಆಶ್ಚರ್ಯವನ್ನುಂಟು ಮಾಡುತ್ತದೆ. ಈ ಹಿನ್ನೆಲೆಯನ್ನು ಗಮನದಲ್ಲಿಟ್ಟು ನಾನು ಲೇಖನವನ್ನು ಬರೆಯಲು ಒಂದು ಸಣ್ಣ ಪ್ರಯತ್ನವಷ್ಟೆ ಈ ದೃಷ್ಟಿಕೋನದ ಮಹತ್ವದಿಂದ ಕೆಲವು ಉದ್ದೇಶಗಳನ್ನು ಇಟ್ಟುಕೊಂಡು ಇವರ ಸಾಧನೆಗಳನ್ನು ಪರಿಚಯ ಮಾಡುವ ಕೆಲಸ ಮಾತ್ರ.

- ಇವರ ಬಾಲ್ಯಜೀವನದ ಬಗ್ಗೆ ತಿಳಿಸುವುದು.
- ಪಂಡಿತ್ ತಾರಾನಾಥ್‌ರವರ ಸಾಮಾಜಿಕ ಸುಧಾರಣಾ ಕ್ರಮಗಳನ್ನು ಅಧ್ಯಯನ ಮಾಡುವುದು.
- ಶಿಕ್ಷಣತಜ್ಞರಾಗಿ ರಾಯಚೂರು ಭಾಗದಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.
- ನಿಜಾಂ ಸರ್ಕಾರದ ವಿರುದ್ಧ ಇವರ ಹೋರಾಟದ ಬದುಕನ್ನು ಪರಿಚಯಿಸುವುದು ಅಥವಾ ಚಿತ್ರಿಸುವುದು.
- ಮಾನವತಾವಾದಿಯಾಗಿ ಇವರ ಸಾಧನೆಗಳನ್ನು ಗುರುತಿಸುವುದು
- ಪಂಡಿತ ತಾರಾನಾಥರವರ ಕನ್ನಡ ಭಾಷೆಗೆ ನೀಡಿರುವ ಕಾಣಿಕೆಯನ್ನು ಗಮನಿಸುವುದರ ಜೊತೆಗೆ ಅವರ ಸಾಹಿತ್ಯಕ್ಕೆ ಸಲ್ಲಿರುವ ಕೊಡುಗೆಗಳನ್ನು ಸಂಕ್ಷಿಪ್ತ ಪರಿಚಯ ಮಾಡಿಕೊಡುವುದು.
- ವೈದ್ಯಕೀಯರಾಗಿ ಸೇವೆ ಮಹತ್ವದ ಸಂದೇಶವನ್ನು ತಿಳಿಸುವುದು.

ಮೇಲಿನ ಉದ್ದೇಶಗಳನ್ನು ಗಮನ ಕೇಂದ್ರೀಕರಿಸಿಕೊಂಡು ನನ್ನ ಲೇಖನವನ್ನು "ರಾಯಚೂರು ಜಿಲ್ಲೆಯಲ್ಲಿ ಪಂಡಿತ್ ತಾರಾನಾಥ್‌ರವರ ಸಾಧನೆ – ಅವಲೋಕನ" ಎಂಬ ಶೀರ್ಷಿಕೆಯಡಿಯಲ್ಲಿ ಬರೆಯುವ ಪ್ರಯತ್ನ ನನ್ನದು. ಇವರ ಸಾಧನೆಗಳು ವಿಶಾಲವ್ಯಾಪ್ತಿಯನ್ನು ಹೊಂದಿರುತ್ತದೆ. ಆ ದೃಷ್ಟಿಕೋನದಿಂದ ಸೀಮಿತ ಉದ್ದೇಶಗಳನ್ನು ಹಿಟ್ಟುಕೊಂಡಿರುತ್ತೇನೆ.

ಬಾಲ್ಯಜೀವನ : ಪಂಡಿತ್ ತಾರಾನಾಥರು 1891 ರಲ್ಲಿ ಜೂನ್ 5 ರಂದು ಮಂಗಳೂರಿನಲ್ಲಿ ಜನ್ಮತಾಳಿದರು. ಅವರ ತಂದೆ ಗೋವಿಂದರಾವ್, ತಾಯಿ ರಾಜೀವಬಾಯಿ. ಬಡತನವನ್ನೆ ಹಾಸಿ ಹೊದ್ದ ಕೊಂಕಣಿ ಕುಟುಂಬದಲ್ಲಿ ಜನಿಸಿದ ತಾರಾನಾಥರು ಹುಟ್ಟುವ ಮುನ್ನ ತಂದೆಯನ್ನು ಕಳೆದುಕೊಂಡರು. ಆತನ ಬಳವೆಯಲ್ಲಿಯೇ ತಾಯಿ ರಾಜೀವ್‌ಬಾಯಿ ಸಹ ನಿಧನರಾದರು. ಒಬ್ಬಡಮ್ಮ ಮತ್ತು ಮೂವರು ತಂಗಿಯರು ಅನಾಥರಾದರು. ಚಿಕ್ಕಮ್ಮನ ತಮ್ಮ ಸುಬ್ಬರಾಯರು ಈ ಅಸಹಾಯಕರನ್ನು ಹೈದರಾಬಾದಿನ ಕಡೆಗೊಯ್ದರು. ಅಲ್ಲಿಂದ ಜೀವನವೆಂಬ ನಾವೆಯಲ್ಲಿ ಘುಳುಗೇಳುತ್ತ ತಮ್ಮ ಅಪ್ರತಿಮ ಬದುಕನ್ನು ರೂಪಿಸಿಕೊಂಡವರು ತಾರಾನಾಥ.[1]

"ಪಂಡಿತ್ ತಾರಾನಾಥರವರ ಹೆಂಡತಿ ಸುಮತಿ. ಇವರು ಒಬ್ಬ ಮೇದಾವಿ ಬರಹಗಾರ್ತಿ. ಗಂಟೆಗಟ್ಟಲೇ ಉಪನ್ಯಾಸ ನೀಡಬಲ್ಲ ಛಾತಿ ಆಕೆಯದು. ಸ್ವಾತಂತ್ರ್ಯಪೂರ್ವ ಯುಗದ ಅತಿ ದೊಡ್ಡ ಸ್ತ್ರೀಪರ ಹೋರಾಟಗಾರ್ತಿ, ಗಂಡನಿಗೆ ಸರಿಸಮವಾಗಿ ಕೆಲಸ ಮಾಡಿದ ಈಕೆಯ ಬರಹಗಳು ಅಂದಿನ ಯೂರೋಪ್ ಪ್ರಾಂತ್ಯದ ಕೆಲವು ಪತ್ರಿಕೆಗಳನ್ನು ಕೂಡ ತಲುಪಿತ್ತಂತೆ. ಸುಮತಿ ಹುಟ್ಟಿದ್ದು ಪಾಂಡಿಚೇರಿಯ ಬೆಸ್ತರ ಕುಟುಂಬದಲ್ಲಿ ತಮಿಳು ಸಾಹಿತ್ಯವಷ್ಟೆ ಅಲ್ಲ. ಆಂಗ್ಲ ಸಾಹಿತ್ಯ ಸಹ ಆಕೆಯ ಅಂಗೈ ನೆಲ್ಲಿಕಾಯಿಯಾಗಿತ್ತಂತೆ. ಅಂತಹ ಮೇರು ಪಾಂಡಿತ್ಯದ ಪತ್ನಿ ದೊರೆತ ಪಂಡಿತರು ಇನ್ನೂ ಎತ್ತರಕ್ಕೆ ಏರಲು ಸಹಕಾರ ದೊರೆಯಿತ್ತು. ಆಕೆಯ ವಿದ್ಯಾಭ್ಯಾಸ ಕ್ವೀನ್ಸ್ ಮೇರೀಸ್ ಕಾಲೇಜಿನಲ್ಲಿ ಆಗಿತ್ತು. ಮುಂದೆ ಕೆಲ ಕಾಲ ಆಕೆ ಬರ್ಮಾದಲ್ಲಿ ಸಹ ಇದ್ದರಂತೆ. ಪಂಡಿತರ ತಂಗಿ ಲಿಲಾವತಿಬಾಯಿ ಮತ್ತು ಸುಮತಿ ಸಹಪಾಠಿಗಳಾಗಿದ್ದರಂತೆ ಸುಮತಿ ತಾರಾನಾಥರ ಆಶ್ರಮ ಹುಡುಕಿ ಬರಲು ಅದೇ ಸಲುಗೆ ಕಾರಣವಾಯಿತಂತೆ. ಸುಮತಿಯ ಆದರ್ಶ ಅಂದಿನ ತಮಿಳುನಾಡಿನ ಕ್ರಾಂತಿಕಾರಿ ಸಾಹಿತಿ ಈ.ವಿ.ರಾಮಸ್ವಾಮಿ ನಾಯರ್‌ರು ಅಥವಾ ಪೆರಿಯಾರ್ ಅವರ ವಿಚಾರಧಾರೆಗಳನ್ನು ಸುಮತಿ ಎರಕ ಹೊಯ್ದಂತೆ ಅಳವಡಿಸಿಕೊಂಡಿದ್ದರಂತೆ. ಅಂದಿನ ಸ್ತ್ರೀಧರ್ಮ ಪತ್ರಿಕೆಯ ಅಂಕಣಗಾರ್ತಿ ಯಾಗಿದ್ದ ಸುಮತಿಬಾಯಿ ತಮಗೆ ತೋಚಿದ ಸಂಗತಿಗಳನ್ನು ನಿರ್ಭಯವಾಗಿ ಬರೆಯುತ್ತಿದ್ದ ಎದೆಗಾರಿಕೆಯ ದಿಟ್ಟ ಮಹಿಳೆ"[2]

ಮೆಟ್ರಿಕ್ಯುಲೇಷನ್ ಪರೀಕ್ಷೆ ತೇರ್ಗಡೆಯಾಗಿ ಎಫ್.ವೈ.ಪರೀಕ್ಷೆಗೆ ಓದುವ ಸಂದರ್ಭದಲ್ಲಿ ಪಠ್ಯದ ಜೊತೆಗೆ ಮನಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಕಲೆ, ಸಾಹಿತ್ಯ, ಜೊತೆಗೆ ಆ ಗ್ರಂಥಾಲಯಗಳಲ್ಲಿ ಏನೆಲ್ಲಾ ಸಿಗುತ್ತಿತ್ತೋ ಅದೆನ್ನೆಲ್ಲಾ ಓದಿ ದಕ್ಕಿಸಿಕೊಂಡರು. ವೇದೋಪನಿಷತ್ತಿನ ಜೊತೆಗೆ ಬೈಬಲ್, ಖುರಾನ್‌ಕರಗತ ಸಂಗೀತ–ನಾಟಕ ಭಾಷಣ ದೈವದತ್ತವಾಗಿ ಬಂದಿದ್ದವು. ಹೀಗಾಗಿ ಕಾಲೇಜಿನಲ್ಲಿ ಪ್ರಸಿದ್ಧರಾಗಿದ್ದರು. ಇವರು ಹದಿಹರೆಯದಲ್ಲಿ ನಿಜಾಮರ ಆಳ್ವಿಕೆಯ "ಹೈದರಾಬಾದಿನ ಮೆಡಿಕಲ್ ಕಾಲೇಜಿಗೆ ಸೇರಿಕೊಂಡಿದ್ದರು. ಆದರೆ ನಿಜಾಮರ ದಬ್ಬಾಳಿಕೆಯನ್ನು ಖಂಡಿಸಿ ರೊಚ್ಚಿಗೆದ್ದ ಬಾಲಕನಿಗೆ ಗಡಿಪಾಲಿನ ಶಿಕ್ಷೆಯಾಗಿತ್ತು. ಆವಾಗ ಇವರು ಅಂತಿಮ ವರ್ಷದ ವೈದ್ಯಕೀಯ ವ್ಯಾಸಂಗವನ್ನು ಮಾಡುತ್ತಿದ್ದರು. ಇಬ್ಬರು ಆಯೋಗ್ಯ ಸಹಪಾಠಿಗಳನ್ನು ಉನ್ನತ ವ್ಯಾಸಂಗಕ್ಕೆ ಇಂಗ್ಲೆಂಡ್‌ಗೆ ಕಳುಹಿಸಲು ಕಾಲೇಜಿನಲ್ಲಿ ತೀರ್ಮಾನಿಸಿದನ್ನು ತಾರನಾಥರು ಮತ್ತು ಅವರ ಗೆಳೆಯರು ಖಂಡಿಸಿದರಂತೆ. ಕಾಲೇಜ್ ಆಡಳಿತ ವರ್ಗ ಮಣಿಯಲಿಲ್ಲ. ಅದನ್ನು ವಿರೋಧಿಸಿ ತನ್ನ ವ್ಯಾಸಂಗವನ್ನು ತೊರೆದರು. ವೈದ್ಯಕೀಯ ವ್ಯಾಸಂಗವನ್ನೆ ತೊರೆದರು. ಈ ಘಟನೆಗಳ ಆದ ಮೇಲೆ ಇವರ ಮೇಲೆ ಮೊದಲ ಗುರು ನೇಪಾಲದಿಂದ ಹೈದರಾಬಾದಿಗೆ ವಲಸೆ ಬಂದ ಹಕೀಮ ಗುರುಗೋವಿಂದಜೀ. ಇವರಿಂದ ಆಯುರ್ವೇದದ ರೋಗನಿಧಾನಶಾಸ್ತ್ರ ಮತ್ತು ಸುಲಭ ಚಿಕಿತ್ಸೆಯ

ವಿಧಾನವನ್ನು ಕಲಿತರು. ಎರಡನೆಯ ಗುರು ಧಾರ್ಮಿಕ ಚಿಂತನೆಯ ಹರಿಕಾರ ಸೂಫಿ ಸಂತ ಫಕೀರನೀತ. ಯುವಕನಿಗೆ ಲೋಕಹಿತದ ಇಚ್ಛಾಶಕ್ತಿ ಕರುಣಿಸಿದಂತ ಮೂರನೇ ಗುರು ಮಾತೃಸ್ಥಾನದ ಕೊರತೆ ತುಂಬಿದಾಕೆ ಬೀದರ ಹತ್ತಿರ ಒಬ್ಬವೇಶ್ಯೆ"[3]

ಕಾಲೇಜಿನಲ್ಲಿ ಓದುತ್ತಿರುವಾಗ ಹೈದರಾಬಾದ್‌ನಲ್ಲಿ ಪ್ರಜಾಪ್ರಭುತ್ವ ಹಾಗೂ ಜವಾಬ್ದಾರಿ ಸರ್ಕಾರ ಬಯಸಿ ನಿಜಾಮನ ವಿರುದ್ಧ ಚಳುವಳಿಗಳು ನಡೆದವು. ಆಗ ದೇಶಿಯ ಬಾಂಬುಗಳ ಸಿಡಿಸಲ್ಪಟ್ಟವು. ಆ ಬಾಂಬು ತಯಾರಿಕೆಯಲ್ಲಿ ಇವರ ಪಾತ್ರ ಇದೆ ಎಂದು ಸುಳ್ಳು ಆಪಾದನೆಯನ್ನು ಮಾಡಲಾಯಿತು. ವಿಚಾರಣೆ ನಡೆಯುತ್ತಿದ್ದಂತೆಯೇ ಕಾಲೇಜಿನಿಂದ ಬಹಿಷ್ಕೃತರಾದರು. ಆಗ ಇವರು ಅನಿವಾರ್ಯವಾಗಿ ಜನತಾ ಜಾಗೃತಿಯತ್ತ ಹೊರಳಿತು. ಶೋಷಣೆ ಪಾರತಂತ್ರ ದಾಸ್ಯ ಮನೋವೃತ್ತಿ ಇವುಗಳನ್ನು ಧಿಕ್ಕರಿಸಿ ವೈದ್ಯಕೀಯ ಬರಹಗಳು ಪಂಡಿತ ಪಾಮರನ್ನು ಆಕರ್ಷಿಸಿದವು. ಇವರು ವೈದ್ಯಕೀಯ ಕಾಲೇಜಿನ ಶರೀರಶಾಸ್ತ್ರದ ಗೌರವ ಅಧ್ಯಾಪಕರಾಗಿ ಕೆಲಕಾಲ ರಸಾಯನಶಾಸ್ತ್ರ ಅಧ್ಯಾಪಕರಾಗಿ ಕೆಲಸ ಮಾಡಿದರು.[4]

ಶಿಕ್ಷಕರಾಗಿ ಪಂಡಿತ ತಾರಾನಾಥರು: ಇವರ ಬಗ್ಗೆ ಹೈದರಾಬಾದ್‌ನಲ್ಲಿ ವೈಮನಸ್ಸುಗಳು ಬೆಳೆದ ನಂತರ ಹೈದರಾಬಾದ್ ಬಿಟ್ಟು ಶಿಕ್ಷಕ ವೃತ್ತಿ ಹಿಡಿದು ಬೀದರ್ ಜಿಲ್ಲೆ ಒಂದು ನೆಲಸಿದರು. ಈ ಜಿಲ್ಲೆಯಲ್ಲಿಯೂ ಸಹ ಇವರು ನಿಜಾಂ ಆಡಳಿತದ ವಿರುದ್ಧ ವಿದ್ಯಾರ್ಥಿಗಳನ್ನು ಸಂಘಟನೆ ಮಾಡುತ್ತಾರೆ ಎಂಬುದರ ಜೊತೆಗೆ ಲಂಚಗುಳಿತನವನ್ನು ವಿರೋಧಿಸಿ ದರು. ಎಲ್ಲಾ ಅಂಶಗಳಿಂದ ಇವರನ್ನು ರಾಯಚೂರಿಗೆ ವರ್ಗಾವಣೆ ಮಾಡಿಸಿದರು. 1914 ರಲ್ಲಿ ರಾಯಚೂರು ಪ್ರದೇಶಕ್ಕೆ ಇವರ ಪಾದಾರ್ಪಣೆಯಾಯಿತು. ಇಲ್ಲಿಂದ ಇವರ ಬದಲಾವಣೆಗಳು ಈ ಪ್ರದೇಶದಲ್ಲಿ ಕಾಣಲು ಪ್ರೇರಣೆಯಾಯಿತು.

ರಾಯಚೂರಿನ ಸರ್ಕಾರಿ ಉಸ್ಮಾನೀಯ ಮಿಡ್ಲಸ್ಕೂಲಿಗೆ ಅಧ್ಯಾಪಕರಾಗಿ ಬಂದ ಇವರು ಮೊದಲು ವಿದ್ಯಾರ್ಥಿಗಳು ಮೆಚ್ಚುವ ಶಿಕ್ಷಕರಾದರು. ತರಗತಿಯಲ್ಲಿ ಇವರ ಬೋಧನೆಯು ಉತ್ತಮವಾಗಿತ್ತು. ಪ್ರಾತ್ಯಕ್ಷಿರಕ ಪಾಠದ ಮೂಲಕ, ನಲಿಕಲಿಯುವುದರ ಮೂಲಕ ವಿದ್ಯಾರ್ಥಿಗಳ ಮನಸ್ಸನೇ ಗೆದ್ದಿದ್ದರು. ಪಾಠದ ಜೊತೆಗೆ ವಿದ್ಯಾರ್ಥಿಗಳಿಗೆ ವ್ಯಾಯಾಮ ಯೋಗ, ಕೋಲಾಟದ ಮುಖಾಂತರ ನೃತ್ಯಮಾಡಿ ಮಗ್ಗಿ ಕಲಿಸಿದರು. ಇವರ ಆದರ್ಶಗಳ ಫಲವಾಗಿ ರಾಯಚೂರಿನಲ್ಲಿ ವಿದ್ಯಾರ್ಥಿಗಳು ಉನ್ನತ ರಂಗಗಳಲ್ಲಿ ಸೇವೆಸಲ್ಲಿಸುರುವುದನ್ನು ಗಮನಿಸಬಹುದು.

ರಾಯಚೂರು ಪ್ರದೇಶದಲ್ಲಿ ಮೊದಲನೇ ಮಹಾಯುದ್ಧದ ಸಮಯದಲ್ಲಿ ನಿಜಾಮ 'ನಜರಾನ ಆದಾ' ಕಾಣಿಕೆಯನ್ನು ವಸೂಲಿ ಮಾಡುವ ಪದ್ಧತಿಯನ್ನು ಜಾರಿಗೆ ತಂದನು. ಹಾಷ್ಮೀಯಾ ಮೈದಾನದಲ್ಲಿ ನಿಜಾಮನನ್ನು ಸ್ವಾಗತಿಸಲು ಸಾರ್ವಜನಿಕರು ಕಾಣಿಕೆಯನ್ನು ಒಪ್ಪಿಸುವ ವೈಭವಯುತ ಕಾರ್ಯಕ್ರಮ ಏರ್ಪಟ್ಟಿತ್ತು. ನೂರಾರು ಸರ್ಕಾರಿ ನೌಕರು, ವಕೀಲರು, ಸಾಮಾನ್ಯ ಜನರು ರಾಜನಿಗೆ ಕಾಣಿಕೆಯನ್ನು ಅರ್ಪಿಸುತ್ತಿದ್ದರು. ಈ ಪದ್ಧತಿಯನ್ನು ಪಂಡಿತ್ ತಾರಾನಾಥ್‌ನವರು ಖಂಡಿಸಿದರು. "ಈ ನವಾಬನಿಗೆ ಭಿಕ್ಷೆಗೆ ಕಿರುಗಾಸೇ ಸಾರು" ಎಂದು ಹೀಯಾಳಿಸಿ ಬಂದು ತೂತು ಬಲ್ಲೆಯನ್ನು ಎಸೆದು ಅಲ್ಲಿಂದ ಬರಬರನೆ ಹೊರಟುಹೋದರು. ಈ ಘಟನೆಯಿಂದಾಗಿ ರಾಯಚೂರಿನಲ್ಲಿ ಮನೆಮಾತಾದರು. ಜೊತೆಗೆ ಇಡೀ ರಾಜ್ಯದ ಗಮನ ಸೆಳೆದರು.[5]

ಆಗ ಪಂಡಿತ್ ತಾರಾನಾಥರು ಶಿಕ್ಷಕ ವೃತ್ತಿಗೆ ನಿವೃತ್ತಿಯನ್ನು ಹೇಳಿದರು. ಅವರು 1920 ರಲ್ಲಿ ರಾಯಚೂರುನಲ್ಲಿ ಹಮ್ದರ್ದಶಾಲೆಯನ್ನು ಸ್ಥಾಪಿಸಿದರು. ಮುಂದೆ ಇದು ಸಮುದಾಯ ಶಾಲೆಯಾಗಿ ಹೆಸರು ಪಡೆಯಿತು. ಕ್ರಿ.ಶ. 1920 ಯುಗಾದಿ ಹಬ್ಬದಿಂದಲೇ ಈ ಶಾಲೆಯನ್ನು ತೆರೆದರು. ಈ ಸಂಸ್ಥೆಯ ಜವಾಬ್ದಾರಿಯನ್ನು ಪಿ.ಕಿಷಾನ್‌ರಾವ್ ವಕೀಲರಿಗೆ ವಹಿಸಿದರು. ಈ ಶಾಲೆಗೆ ಅಬ್ದಾರಿ ಗುತ್ತೇದಾರರಾದ ಅಬ್ದುಲ್ ಕರೀಮರು ತಮ್ಮ ಮನೆಯನ್ನು ಶಾಲೆಗಾಗಿ ದಾನ ಮಾಡಿದರು. ಈ ಶಾಲೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕಾಗಿತ್ತ. ಇದೇ ಹೆಸರಿನಲ್ಲಿಯೇ ಹಮದರ್ದ್ ಪ್ರೌಢಶಾಲೆ, ಕನ್ನಡ ಮಾಧ್ಯಮದಲ್ಲಿಯೇ ಶಾಲೆ ನಡೆಯುತ್ತಿತ್ತು. ಎಲ್‌ವಿಡಿ ಮಹಾವಿದ್ಯಾಲಯ, ಬಿ.ಆರ್.ಬಿ. ವಾಣಿಜ್ಯ ಮಹಾವಿದ್ಯಾಲಯ, ಎಸ್.ಎಸ್.ಆರ್.ಜಿ. ಮಹಿಳಾ ಮಹಾ ವಿದ್ಯಾಲಯ ಮುಂತಾದವುಗಳು ರಾಯಚೂರು ಜಿಲ್ಲೆಯಲ್ಲಿ ಜನ್ಮತಾಳುವುದಕ್ಕೆ ಕಾರಣೀಭೂತರಾದರು ಎಂದರೆ ತಪ್ಪಾಗಲಾರದು.

ಶಿಕ್ಷಣ ಪ್ರೇಮಿಗಳಾದ ಪಂಡಿತ ತಾರಾನಾಥ ಸಾಧನೆಯ ಭವ್ಯ ಸ್ಮರಣೆಗಾಗಿ ಸಂಸ್ಥೆಯ ಆಡಳಿತ ಮಂಡಳಿ ಎಸ್.ಎಸ್.ಆರ್.ಜಿ. ಮಹಿಳಾ ವಿದ್ಯಾಲಯ ಆವರಣದಲ್ಲಿ ಒಂದು ಭವನವನ್ನು ಸ್ಥಾಪಿಸಲಾಗಿದೆ. ಪಂಡಿತ ತಾರಾನಾಥ್‌ರ ಉಜ್ವಲ ನೀತಿ ಜ್ಞಾನವೆಂದರೆ 'ಪ್ರೇಮವನ್ನು ಬಿಟ್ಟು ಉಳಿದುದೆಲ್ಲವೂ ವಿಷ' ಎಂಬುದಾಗಿದೆ. ಅವರು ಕಟ್ಟಿದ ಸಂಸ್ಥೆಗಳ ಮೂಲಕ ಮೂರು ಮಹಾವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಜ್ಞಾನದಾಹವನ್ನು ರಾಯಚೂರು ಪ್ರದೇಶದಲ್ಲಿ ಇಂದಿಗೂ ನೀಡುತ್ತಿರುವ ಒಂದು ಮಹತ್ತರವಾದ ಅಂಶವೆಂದೇ ಹೇಳಬಹುದು.[6]

ಸಾಮಾಜಿಕ ಸುಧಾರಣೆಗಳು; ಪಂಡಿತ ತಾರಾನಾಥನವರು ಮೊದಲಿಗೆ ನಿಜಾಂ ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸಿದರು. ನಂತರ ರಾಯಚೂರಿಗೆ ಸಮೀಪ ಇರುವ ತುಂಗಭದ್ರಾ ಸ್ಟೇಷನ್ ಸಮೀಪ ಆಶ್ರಮವನ್ನು ಕಟ್ಟಿದರು. ಇಲ್ಲಿ ವೈದ್ಯಕೀಯ ಶುಶ್ರೂಷೆಯನ್ನು ಪ್ರಾರಂಭಿಸಿದರು. ಸಾವಿರಾರು ಜನರಿಗೆ ಉಚಿತವಾಗಿ ಸೇವೆ ಸಲ್ಲಿಸಿರುವುದು ಇವರ ಸಾಧನೆ. ಮುಂದೆ ಈ ಆಶ್ರಮಕ್ಕೆ 'ಪ್ರೇಮಾಯತನ' ಎಂದು ನಾಮಕರಣ ಮಾಡಿದರು. ಇದು ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಸಂಸ್ಥೆಯಾಗಿತ್ತು. ಅದು ಪ್ರೇಮಾವಿದ್ಯಾಪೀಠ ಎಂದು. ಪ್ರೇಮಾ ಮೆಡಿಕಲ್ ಕಾಲೇಜ್ ಎಂದು ಹೆಸರಾಯಿತು. ಈ ಸಂಸ್ಥೆಗೆ ಫ್ರಾನ್ಸ್, ಇಂಗ್ಲೆಂಡ್, ಪೋಲೆಂಡ್, ಅಮೇರಿಕಾ ಹೀಗೆ ಜಗತ್ತಿನ ವಿವಿಧ ಭಾಗಗಳಿಮದ ವೈದ್ಯರು, ವೈದ್ಯಕೀಯ ಆಸಕ್ತರು, ರೋಗಿಗಳು ಬಂದು ಪರಿಹಾರ ಉಪಚಾರ ಪಡೆದರು.[7]

ಕ್ರಿ.ಶ. 1931 ರಲ್ಲಿ ತುಂಗಭದ್ರಾ ಸಮೀಪ ರಾಮಪುರದಲ್ಲಿ ಮಲೇರಿಯಾ ಹರಡಿತು. ಆವಾಗ ಇವರು ಹಳ್ಳಿಗೆ ಹೋಗಿ ಚಿಕಿತ್ಸೆಯನ್ನು ನೀಡಿದ್ದರು. ಜೊತೆಗೆ ಸ್ವಚ್ಚತೆಯ ಪಾಠ ಹೇಳಿ ಸಂಘಟನೆ ಮಾಡಿ ಗ್ರಾಮಸ್ವಚ್ಛತೆ ಗೈದುದು ಇವರ ಮಾನವೀಯತೆಗೆ ದಾರಿದೀಪವಾಗಿದೆ. ಈ ಗ್ರಾಮವನ್ನು ಮಲೇರಿಯಾ ಪೀಡಿತ ಪ್ರದೇಶವೆಂದು ಘೋಷಿಸಿ ಸೌಲಭ್ಯ ಕಲ್ಪಿಸಲು ಹೋರಾಟ ಮಾಡಿದರು.

ಸಾಹಿತ್ಯ ಅಭಿರುಚಿ: ಪಂಡಿತ್ ತಾರಾನಾಥರವರಿಗೆ 13 ಭಾಷೆಗಳು ಬರುತ್ತಿತ್ತು. ಜೊತೆಗೆ ಕೃತಿಗಳನ್ನು ಬರೆಯಲು ಕನ್ನಡ ಭಾಷೆಯನ್ನು ಆಯ್ದು ಮಾಡಿಕೊಂಡಿದ್ದರು. ಕನ್ನಡ ಭಾಷೆಯ ಬಗ್ಗೆ ಇವರಿಗೆ ಅಭಿಮಾನವಿತ್ತು. ಈ ದಿಸೆಯಲ್ಲಿಯೇ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿಯೇ ಬೋಧನೆ ಮಾಡಿದ್ದರು. ಜೊತೆಗೆ ನಿಜಾಂ ವಿರುದ್ಧವಾಗಿ ಹೈದರಾಬಾದ್ ಸಂಸ್ಥಾನದ ರಾಯಚೂರು ಜಿಲ್ಲೆಯಲ್ಲಿ ಕನ್ನಡ ಶಾಲೆಯನ್ನು ತೆರೆದು ಕನ್ನಡ ಮಾಧ್ಯಮವನ್ನು ಅಳವಡಿಸಿಕೊಂಡಿದ್ದರು. ಪ್ರಸ್ತುತದಲ್ಲಿಯು ಇವರ ಆದರ್ಶಗಳನ್ನು ಕನ್ನಡ ನಾಡಿನ ಜನತೆ ಸರಿಯಾಗಿ ಅರ್ಥಮಾಡಿಕೊಂಡಲ್ಲಿ ಕನ್ನಡವನ್ನು ಉಳಿಸಿ ಬೆಳೆಸಬಹುದು. ಇವರ ಪ್ರಮುಖ ಕೃತಿಗಳೆಂದರೆ ಧರ್ಮಸಂಭವ, ಮೋಹನಾಸ್ತ್ರ (ನಾಟಕ), ಕಬೀರ (ಹಿಂದಿನಾಟಕ), ನಿಸರ್ಗ(ಕಥೆ), ಜಗಳ ಹಾಗೂ ಪ್ರೇಮ (ನಾಟಕ), ದೇವರ ಮಗ (ಕಥೆ) ಇತ್ಯಾದಿಗಳು.

ಪ್ರೇಮ ಎಂಬ ತ್ರೈಮಾಸಿಕ ಪತ್ರಿಕೆ 'ಪ್ರೇಮಿಸಲೆಂದೇ ಪ್ರೇಮಿಸು, ಜೀವ ಜಡಭಾವವಿರಲು' ಎನ್ನುವುದು ಆ ಪತ್ರಿಕೆಯ ಪ್ರಮುಖ ಸಂದೇಶ. ಹೆಣ್ಣು ಮಕ್ಕಳ ಸಮಸ್ಯೆಗಳ ಬಗೆಗೆ ಸಾಮಾಜಿಕ ಸುಧಾರಣೆಗಾಗಿ ತಾರಾನಾಥ ಪತ್ನಿಯ ಸಹಿತ ಪ್ರವಾಸ ಮಾಡಿ ಜನರಿಗೆ ಜಾಗೃತಿ ಮೂಡಿಸಿದರು. ಈ ಪತ್ರಿಕೆಯ ಮುಖಾಂತರವಾಗಿ ಹೆಣ್ಣುಮಕ್ಕಳ ಮತ್ತು ಅಸ್ಪೃಶ್ಯರ ಬಗೆಗೆ ಅನುಕಂಪಹೊಂದಿ ಅವರ ಏಳಿಗೆಗಾಗಿ ಹೆಣಗಿದರು. ಇದರಲ್ಲಿ ಬರೆದ ಲೇಖನಗಳ ಸಂಗ್ರಹ 'ತಾಯಂದಿರಿಗೆ' ಎಂಬ ಕೃತಿಯ ಮೂಲಕ ಹೊರಬಂದಿದೆ.[8]

ಪಂಡಿತ್ ತಾರಾನಾಥ್‌ರವರು 31-10-1942 ರಲ್ಲಿ ಇಹಲೋಕಕ್ಕೆ ಸೇರಿದರು.[9] ಇವರ ಆದರ್ಶಮಯ ಬದುಕು ಕನ್ನಡಿ ಇದ್ದಂತೆ. ಮಾನವೀಯತೆ ಅನುಕಂಪ, ದಯ, ಕರುಣೆ, ಕಷ್ಟ ಎಂದರೆ ಇನ್ನೊಬ್ಬರಿಗೆ ಸಹಾಯ ಮಾಡುವ ಗುಣಗಳಿಂದ ರಾಯಚೂರು ಜಿಲ್ಲೆಯಲ್ಲಿ ಇವರ ಹೆಸರು ಇಂದಿಗೂ ಚಿರಸ್ಮರಣೀಯವಾಗಿದೆ. ಜೊತೆಗೆ ಕನ್ನಡಗಾಗಿ, ಕನ್ನಡ ಭಾಷೆಯನ್ನು ಉಳಿಸುವ ಪ್ರಯತ್ನ ಮಾಡಿದ ಮಹಾಚೇತನ. ಕನ್ನಡದಲ್ಲಿಯೇ ಉತ್ತಮ ಲೇಖನಗಳನ್ನು ಬರೆದು, ಆ ಮೂಲಕ ಜನಜಾಗೃತಿಯನ್ನು ಮೂಡಿಸಿದ ಒಬ್ಬ ಸಾಮಾನ್ಯತ್ವ ವ್ಯಕ್ತಿತ್ವವನ್ನು ಹೊಂದಿರುವ ಮೇರುವ್ಯಕ್ತಿ. ಶಿಕ್ಷಕರಾಗಿ, ನಾಟಕಗಾರರಾಗಿ, ಪಂಡಿತನಾಗಿ, ವೈದ್ಯನಾಗಿ ವಿಭಿನ್ನ ವ್ಯಕ್ತಿತ್ವದ ನೆಲೆಗಟ್ಟಿನಲ್ಲಿ ರಾಯಚೂರು ಜಿಲ್ಲೆಯ ಜನರಿಗೆ ಆದರ್ಶಪ್ರಿಯವಾದ ಜೀವನ ನಿರೂಪಿಸಿ ಹೋರಾಟ ಮಾಡಿದವರು. ಕರ್ನಾಟಕದ ಚರಿತ್ರೆಯಲ್ಲಿ ಇವರ ಹೆಸರು ಚಿರಸ್ಮಿತವಾದದ್ದು.

ಇವರ ಚಿಂತನೆಗಳು ವಿಚಾರಗಳು, ಆಲೋಚನೆಗಳು ವಸ್ತುಸ್ಥಿತಿಯನ್ನು ಹೊಂದಿತ್ತು. ಜೊತೆಗೆ ವಿಶ್ವಶಾಂತಿಯನ್ನು ಬೆಳೆಸಲು ಪ್ರೇರಣೆ ಆಗುತ್ತಿತ್ತು. ಸಮಾಜಸೇವೆ ಅಂದಿನ ರೋಗಪಿಡುಗುಗಳಿಗೆ ಅವರು ನೀಡುತ್ತಿದ್ದ ಉಪಚಾರ ರೋಗಿಗಳಿಗೆ ಅಂದಿನ ದಿನಗಳಲ್ಲಿ ಪ್ರೇಮಾಯತನ ನಿಜ ಅರ್ಥದಲ್ಲಿ ಹೊಸ ಜೀವನ ಕಟ್ಟುಕೊಡುತ್ತಿತ್ತು. ಒಟ್ಟಾರೆ ಸಮಾಜದ ಒಳಗಡೆ ಇಂದು ಸಮಾಜಕ್ಕೆ ನೀತಿಮಾರ್ಗವನ್ನು ಸೂಚಿಸುವ ವ್ಯಕ್ತಿಯಾಗಿ ಇವರ ಬದುಕು-ಬರಹಗಳ ವಿದ್ಯಾರ್ಥಿಗಳಿಗೆ ಸಮಾಜಕ್ಕೆ ಉತ್ತಮ ಕೊಡುಗೆಯನ್ನು ನೀಡಿದೆ.

ಪರಾಮರ್ಶನ ಗ್ರಂಥಗಳು:

1. ರಾಮಣ್ಣ ಹವಳೆ : ಹೈದರಾಬಾದ್ ಸಂಸ್ಥಾನ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆಯ ಹೋರಾಟ, ಪ್ರಕಾಶಕರು ಶ್ರೀ.ಶ್ರೀ ಪಬ್ಲಿಕೇಷನ್ ಕಾಲನಿ, ರಾಯಚೂರು, 2009.
2. ಸಂಪಾದಕರು, ಮೃತ್ಯುಂಜಯ ಹೊರಕೇರಿ ಬಸವಲಿಂಗ ಸೊಪ್ಪಿಮಠ : ರಾಯಚೂರು ಜಿಲ್ಲಾದರ್ಶನ, ಪ್ರಕಾಶಕರು ಗುಲಬರ್ಗಾ ವಿಶ್ವವಿದ್ಯಾನಿಲಯ, ಗುಲಬರ್ಗಾ, 2005.
3. ಡಿ.ಕೆ.ಭಾರಾದ್ವಜ : ತಾರಾನಾಥ ರಾಯರು ಹಮ್ಮದ್ದರ್ ಹೈಸ್ಕೂಲ್ ಗೋಲ್ಡನ್ ಜುಬಲ ಸ್ಮರಣ ಸಂಚಿಕೆ.
4. ಸ್ವಾಮಿ ರಮಾನಂದ ತೀರ್ಥ : ಹೋರಾಟದ ನೆನಪುಗಳು, ಪ್ರಕಾಶಕನ ಗೀತಾ ಬುಕ್ ಹೌಸ್, ಮೈಸೂರು.
5. ಡಾ.ಸೂರ್ಯನಾಥ ಕಾಮತ್ : ಹೈದರಾಬಾದ್ ಮುಕ್ತಿ ಆಂದೋಲನದಲ್ಲಿ ಕನ್ನಡಿಗರ ಹೋರಾಟ.
6. ವಿ.ಎಚ್.ದೇಸಾಯ : ವಂದೇ ಮಾತರಂದಿಂದ ಜನಗಣಮನವರೆಗೆ, ಲೋಕಶಿಕ್ಷಣ ಟ್ರಸ್ಟ್,ಹುಬ್ಬಳ್ಳಿ.
7. ಪ್ರೊ.ಬಾಲಚಂದ್ರ ಜಯಶೆಟ್ಟಿ : ಹೈದ್ರಾಬಾದ್ ಕರ್ನಾಟಕ ವಿಮೋಚನಾ : ಕನ್ನಡ ಪರಿಷತ್ ಸಾಹಿತ್ಯ
8. ವಿಜಯ ಕರ್ನಾಟಕ ದಿನಪತ್ರಿಕೆ ಭಾನುವಾರ 1 ಜೂನ್ 2014, (ವಿಶೇಷ ಸಂಚಿಕೆ

[1] ವಿಜಯವಾಣಿ –ವಿಜಯವಿಹಾರ, ಸಿದ್ಧಸಾಧಕ ಪಂಡಿತ ತಾರಾನಾಥ (ಲೇಖನ) – ಡಾ.ಸತ್ಯನಾರಾಯಣ ಭಟ್.ಪಿ.

[2] ಅದೇ.

[3] ಅದೇ.

[4] ಡಿ.ಕೆ.ಭಾರಾದ್ವಜ : ಪಂಡಿತ ತಾರಾನಾಥ್‌ರಾಯರು ಹಮ್ಮದ್ದರ್ ಹೈಸ್ಕೂಲ್ ಗೋಲ್ಡನ್ ಜುಬಲಸ್ಮರಣ ಸಂಚಿಕೆ, ಪು-08.

[5] ಡಾ.ಎಚ್.ಎನ್.ಚಿತ್ರಗಾರ : ಪಂಡಿತ ತಾರನಾಥ ರಾಯರ ಬಿಡಿ ಲೇಖನ

[6] ರಾಯಚೂರು ಜಿಲ್ಲಾ ದರ್ಶನ– ಸಂ.ಡಾ.ಮೃತ್ಯುಂಜಯ ಹೊಲಕೇರಿ – ಪು.ಸಂ. 8

[7] ರಾಮಣ್ಣ ಹವಳೆ – ಹೈದರಾಬಾದ್ ಸಂಥಾನ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆಯ ಹೋರಾಟ – ಪು.ಸಂ. 36

[8] ಅದೇ ಪು.ಸಂ. 43

[9] ಅದೇ ಪು. ಸಂ. 44

ಮಕ್ಕಳು ಮತ್ತು ಸಂಗೀತ ಪ್ರಧಾನ ಜನಪದ ರಂಗಪ್ರಕಾರಗಳು–ಒಂದು ಅವಲೋಕನ

ಜನಾರ್ಧನ
ಸಂಶೋಧನಾ ವಿದ್ಯಾರ್ಥಿ, ಪ್ರದರ್ಶನ ಕಲಾವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–೫೬೦೦೫೬.

ಜನಪದ. ಹೆಸರೇ ಹೇಳುವಂತೆ ಜನರಿಂದ ಜನರಿಗೆ ಅನಾದಿಕಾಲದಿಂದಲೂ ಅಸ್ತಿತ್ವದಲ್ಲಿರುವ ಕಲಾಪ್ರಕಾರ. ಹಾಡು, ಕುಣಿತ, ಸಂಗೀತ, ನಾಟಕ, ರಂಗೋಲಿ, ಮೊದಲಾದ ಕಲಾಪ್ರಕಾರಗಳ ಮೂಲಕ ಒಂದು ಸಾಂಸ್ಕೃತಿಕ ಸಂಸ್ಕೃತಿಯಾಗಿರುವ ಕರ್ನಾಟಕದ ಜನಪದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸುಮಾರು ೪೦೦ಕ್ಕೂ ಹೆಚ್ಚು ಪ್ರಕಾರಗಳು ಅಸ್ತಿತ್ವದಲ್ಲಿದ್ದವೆಂಬುದಾಗಿ ಜನಪದತಜ್ಞರು ಗುರುತಿಸಿದ್ದಾರೆ. ಆದರೆ ಪ್ರಸ್ತುತ ಬಹುತೇಕ ಜನಪದ ಪ್ರಕಾರಗಳು ನಶಿಸಿ ಹೋಗಿವೆ. ಕೆಲವು ಪ್ರಕಾರಗಳು ಮೂಲತಹ ಇದ್ದ ಸ್ಥಿತಿಯಲ್ಲಿಯೇ ಇರಬಹುದಾದರೂ ಕಾಲಾನುಕ್ರಮದ ವಿಕಾಸಕ್ಕೆ ಒಳಪಟ್ಟು ಬದಲಾವಣೆಗೊಂಡಿವೆ. ಮತ್ತು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಅಂತಹ ಪ್ರಕಾರಗಳಲ್ಲಿ ಜನಪದರಂಗಪ್ರಕಾರಗಳು ಒಂದು. ಹಾಗೆಯೇ ಜನಪದ ರಂಗಪ್ರಕಾರದಲ್ಲಿ ಹಲವು ಪ್ರಕಾರಗಳು ತಮ್ಮ ಪ್ರಾದೇಶಿಕ ವೈಶಿಷ್ಟ್ಯತೆಗೆ ಅನುಗುಣವಾಗಿ ವಿವಿಧ ಹೆಸರಿನಿಂದ ಗುರುತಿಸಲ್ಪಡುತ್ತಿವೆ. ಅವುಗಳಲ್ಲಿ ಕೆಲವು ಪ್ರಕಾರಗಳು ಸಂಗೀತಪ್ರಧಾನ ರಂಗಪ್ರಕಾರಗಳಾಗಿವೆ. ಜನಪದ ಮೂಲವೇ ಸಂಗೀತ. ಸಂಗೀತದ ಮೂಲಕ ಕಲೆಗಳು ಕಲೆಗಳ ಮೂಲಕ ಒಂದಕ್ಕೊಂದು ಪೂರಕವಾಗಿ ತಮ್ಮ ಕಲಾಪ್ರದರ್ಶನವನ್ನು ವಿಕಾಸ ಮಾಡಿಕೊಳ್ಳುತ್ತಾ ಬಂದಿವೆ. ಇವುಗಳಲ್ಲಿ ಮಕ್ಕಳ ರಂಗಪ್ರಕಾರಗಳು ಬಹುತೇಕ ಸಂಗೀತದ ನೆಲೆಯಲ್ಲಿಯೇ ತಮ್ಮ ಇರುವಿಕೆಯನ್ನು ಮತ್ತು ಬೆಳವಣಿಗೆಯನ್ನು ಸಾಧಿಸುತ್ತಾ ಬಂದಿವೆ. ಅಂತಹ ಸಂಗೀತ ಪ್ರಧಾನವಾದ ಮಕ್ಕಳ ರಂಗಪ್ರಕಾರಗಳನ್ನು, ಅವುಗಳ ವೈಶಿಷ್ಟ್ಯತೆಯನ್ನು ಈ ಲೇಖನವು ವಿವಿಧ ಆಯಾಮಗಳ ಮೂಲಕ ಅವಲೋಕಿಸುವ ಪ್ರಯತ್ನ ಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಈ ಎಲ್ಲಾ ಅವಲೋಕನವನ್ನು **"ಮಕ್ಕಳು ಮತ್ತು ಸಂಗೀತ ಪ್ರಧಾನ ಜನಪದ ರಂಗಪ್ರಕಾರಗಳು–ಒಂದು ಅವಲೋಕನ"**ಎಂಬ ಶಿರೋನಾಮೆಯಡಿಯಲ್ಲಿ ತಮ್ಮ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಮಂಡಿಸುವ ಇರಾದೆ ನನ್ನದು.

ಪೀಠಿಕೆ: ಜನಪದ ಎಂಬುದು ಬಹಳ ವಿಶಾಲ ಅರ್ಥವುಳ್ಳದ್ದು, ಜನರಿಂದ ಜನರಿಗೆ ಅನಾದಿಕಾಲದಿಂದಲೂಬೆಳೆದು ಬಂದ ಕಲಾಪರಂಪರೆಯೇ ಜನಪದ. ಅಕ್ಷರಜ್ಞಾನವಿಲ್ಲದ ಅನಾಗರೀಕ ಬದುಕು ಬದುಕುತ್ತಿದ್ದ ಮಾನವ ತನ್ನ ಮನೋ ಬಯಕೆಗಳನ್ನು ಈಡೇರಿಸಿಕೊಳ್ಳಲ್ಲು ಕಂಡುಕೊಂಡ ಬಹು ದೊಡ್ಡ ಮನರಂಜನೆಯ ಕ್ಷೇತ್ರ ಜನಪದ. ಜನಪದ ಎಂಬ ಹೆಸರೇ ಹೇಳುವಂತೆ ಜನ ಎಂದರೆ ಮನುಷ್ಯ ಎಂದೂ, ಪದ ಎಂಬುದಕ್ಕೆ ಹಾಡು, ಭಾವನೆ, ಕಲ್ಪನೆ, ಕನಸು, ಅನುಕರಣೆ ಎಂಬ ಅರ್ಥವಿದೆ. ಹಾಗಾಗಿ ಜನಪದವನ್ನು ಕೇವಲ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಗುರುತಿಸಲು ಸಾಧ್ಯವಿಲ್ಲ. ಜನಪದ ಎಂಬುದು ವೈವಿಧ್ಯತೆಯ ಆಗರ. ಇದಕ್ಕೆ ಕಾರಣ ಪ್ರಾದೇಶಿಕತೆ. ಪ್ರದೇಶವೊಂದು ತನ್ನ ಭೌತಿಕ ಲಕ್ಷಣಗಳಿಗೆ ಅನುಗುಣವಾಗಿ ಮನುಷ್ಯನ ಜೀವನಶೈಲಿಯನ್ನು ರೂಪಿಸಿಕೊಡುತ್ತದೆ. ಅಂತಹ ಸಂದರ್ಭದಲ್ಲಿ ಅಲ್ಲಿನ ಜೀವನಶೈಲಿಗೆ ಅನುಗುಣವಾಗಿ ಮನುಷ್ಯನ ಇತರ ಜೀವನಪೋಷಕ ಅಂಶಗಳು ಇನ್ನಿತರ ಬೇರೆ ಬೇರೆ ಪ್ರಕಾರಗಳು ಜನ್ಮತಾಳಲು ಸಹಕರಿಸುತ್ತವೆ. ಅವುಗಳೇ ನಾನು ಹೇಳಲು ಹೊರಟಿರುವ ಕಲಾಪ್ರಕಾರಗಳು ಆಗಿವೆ. ಹೀಗೆ ಕಲೆಯೊಂದು ಉಗಮಗೊಂಡು ಜನತೆಯ ಆಗುಹೋಗುಗಳ ಜೊತೆಜೊತೆಗೆ ತಾನೂ ಸಹ ಸಾಗುವುದನ್ನು ಜನಪದ ಇತಿಹಾಸದ ಮೂಲಕ ಅರಿಯಬಹುದಾಗಿದೆ.

ಜನಪದದಲ್ಲಿ ರಂಗಭೂಮಿ: ಕರ್ನಾಟಕ ಜನಪದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕಾಲಾನುಕ್ರಮಕ್ಕೆ ಅನುಗುಣವಾಗಿ ಜನಪದ ವಿಕಾಸಗೊಂಡಿದೆ. ಒಂದು ಕಾಲದಲ್ಲಿ ಅತ್ಯಂತ ವೈಭವವನ್ನು ಪಡೆದ ಜನಪದ ಮತ್ತೊಂದು ಕಾಲದಲ್ಲಿ ಹೇಳಹೆಸರಿಲ್ಲದಂತೆ ನಶಿಸಿ ಹೋಗಿದೆ. ಅಂದರೆ ಕಾಲಘಟ್ಟದ ದಾರಿಯಲ್ಲಿ ಅದೆಷ್ಟೋ ಪ್ರಕಾರಗಳು ಜನ್ಮತೆಳೆದರೆ, ಕೆಲವು ಪ್ರಕಾರಗಳು ನಶಿಸಿ ಹೋಗಿವೆ. ಕೆಲವು ಪ್ರಕಾರಗಳು ಜನಿಸಿದಾಗ ಒಂದು ಪ್ರಕಾರವಾಗಿ ಗುರುತಿಸಿಕೊಂಡರೆ, ತಾನು ಸಾಗುವ ದಾರಿ ಮಧ್ಯೆ ಮತ್ತಾವುದೋ ಪ್ರಕಾರದ ಪ್ರಭಾವಕ್ಕೆ ಒಳಗಾಗಿ ಇನ್ನೊಂದು ಹೆಸರಿನಿಂದ ಗುರುತಿಸಿಕೊಂಡು ವಿಶೇಷತೆಯನ್ನು ಪಡೆದಿದೆ. ಇದೊಂದು ವಿಕಾಸದ ಬಯಲು, ಜನಪ್ರಿಯತೆಯನ್ನು ಹೊಂದಿದ ಪ್ರಕಾರಗಳು ಮಾತ್ರ ಈ ವ್ಯಾಪ್ತಿಗೆ ಬರುತ್ತವೆ. ಜನರಿಂದ ಜನರಿಗೆ ಅವರ ಆಸಕ್ತಿಗೆ, ಪ್ರೋತ್ಸಾಹಕ್ಕೆ ಅನುಗುಣವಾಗಿ ಜನಪದ ರಂಗಕಲೆಗಳು ಹುಟ್ಟುವುದು, ವಿಕಾಸವಾಗುವುದು, ಅಸ್ತಿತ್ವವನ್ನು ಉಳಿಸಿಕೊಳ್ಳುವುದು, ನಶಿಸುವುದು ಎಲ್ಲಾ ನಡೆದಿದೆ.

ಕರ್ನಾಟಕವು ಅತ್ಯಂತ ಪ್ರಾಚೀನ ಭೌಗೋಳಿಕ ಪ್ರದೇಶ. ಶಿಲಾಯುಗದ ಮಾನವನ ಅಸ್ತಿತ್ವ ಬಳ್ಳಾರಿ, ರಾಯಚೂರು, ಚಿತ್ರದುರ್ಗ ಮೊದಲಾದ ಪ್ರದೇಶಗಳಲ್ಲಿ ಕಂಡು ಬಂದಿದೆ. ಮುಂದೆ ನವಶಿಲಾಯುಗ ಜನ್ಮತಾಳಿದ ಪರಿಣಾಮ, ಅಲ್ಲಿಯವರೆಗೂ ಆದಿ ಮಾನವನಾಗಿ ಅನಾಗರೀಕ ಜೀವನಶೈಲಿ ನಾಗರೀಕ ಜೀವನಶೈಲಿಯ ಕಡೆಗೆ ಹೋಗಿರುವುದನ್ನು ಕಾಣಬಹುದಾಗಿದೆ. ಆತನ ಜೀವನಶೈಲಿಯಲ್ಲಿ ಆದ ಬದಲಾವಣೆಗಳೇ ಆಚಾರ ವಿಚಾರ ಅನುಕರಣೆಗೆ ಕಾರಣವಾಗಿ ಕಲಾಪ್ರಪಂಚವೊಂದು ಉಗಮವಾಯಿತು. ಮುಂದೆ ಆತನಿಂದ ಜನನವಾದ ಕಲಾಪ್ರಪಂಚವೇ ಜನಪದವಾಗಿ, ವಿವಿಧ ಜನಪದ ಕಲಾಪ್ರಕಾರಗಳಾಗಿ ಅಸ್ತಿತ್ವ ಪಡೆಯಿತು ಎಂಬುದು ಇತಿಹಾಸ. ಇಂತಹ ಇತಿಹಾಸದಲ್ಲಿ ವಿರಾಜಮಾನವಾಗಿ ನಿಂತಿದೆ ರಂಗಪ್ರಪಂಚ. ಆ ರಂಗಪ್ರಪಂಚದಲ್ಲಿದೆ ಸಾವಿರಾರು ರಂಗಪ್ರಕಾರಗಳು: ಅವುಗಳಲ್ಲಿದೆ ಮಕ್ಕಳ ರಂಗಪ್ರಕಾರ.

ಜನಪದ ರಂಗಭೂಮಿಯಲ್ಲಿ ಸಂಗೀತಪ್ರಧಾನ ಮಕ್ಕಳ ರಂಗಪ್ರಕಾರ: ರಂಗಪ್ರಕಾರದಲ್ಲಿ ಮಕ್ಕಳ ರಂಗಪ್ರಕಾರ ಎಂಬುದು ಇರುವುದು ಹವ್ಯಾಸಿ ರಂಗಭೂಮಿಯಲ್ಲಿ ಎಂದು ಇದುವರೆಗಿನ ಎಲ್ಲಾ ಅಧ್ಯಯನಗಳು ತಿಳಿಸುತ್ತವೆ. ಆದರೆ ನಮಗೆ ಅರಿವಿಲ್ಲದೆ ಸುಪ್ತವಾಗಿ ಅಡಗಿದೆ ಜನಪದದಲ್ಲಿ ಮಕ್ಕಳ ರಂಗಭೂಮಿ ಅಥವಾ ರಂಗಪ್ರಕಾರ. ಮೂಲಭೂತವಾಗಿ ಮಕ್ಕಳರಂಗಪ್ರಕಾರವೆಂದರೆ, ಮಕ್ಕಳಿಗಾಗಿ ಮಕ್ಕಳು ಮಾಡುವ ರಂಗಕ್ರಿಯೆ ಎನ್ನುತ್ತಾರೆ ವಿದ್ವಾಂಸರು. ಮತ್ತೆ ಕೆಲವರು ಮಕ್ಕಳಿಗಾಗಿ ಮಕ್ಕಳು ಮತ್ತು ದೊಡ್ಡವರು ಕೂಡಿ ಆಡುವ ಆಟ ಎಂದು ಸಹ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಹಾಗೆಯೇ ಮುಂದುವರೆದು ಮತ್ತೆ ಕೆಲವು ತಜ್ಞರು ಮಕ್ಕಳ ಪ್ರತ್ಯಕ್ಷ ಅಥವಾ ಪರೋಕ್ಷ ಭಾಗವಹಿಸುವಿಕೆಯನ್ನು ಮಕ್ಕಳ ರಂಗಭೂಮಿ ಎಂದು ವಾದಿಸುತ್ತಾರೆ. ಈ ಅರ್ಥದಲ್ಲಿ

ನೋಡಿದಾಗ ಮಕ್ಕಳ ಭಾಗವಹಿಸುವಿಕೆ ನಿಜಕ್ಕೂ ಆರ್ಥಗರ್ಭಿತವಾದದ್ದು ಯಾಕೆಂದರೆ ಮಕ್ಕಳೇ ಇಲ್ಲದ ರಂಗಕ್ರಿಯೆ ಹೇಗೆ ಮಕ್ಕಳ ರಂಗಭೂಮಿ ಎನಿಸಿಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಮಕ್ಕಳ ರಂಗಭೂಮಿಯ ಅಸ್ತಿತ್ವ ಆಧುನಿಕ ರಂಗಭೂಮಿಯಲ್ಲಿ ಕಂಡು ಬಂದಿರುವುದಲ್ಲ. ಅದು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ ಎಂಬುದು ಜನಪದ ಅಧ್ಯಯನದಿಂದ ತಿಳಿಯಬಹುದು. ಜನಪದ ಕಲೆಗಳು ದೊಡ್ಡವರು ಚಿಕ್ಕವರು ಎಂಬ ಬೇಧವನ್ನು ಮಾಡದೆ ಎಲ್ಲರನ್ನೂ ತನ್ನೊಳಗೆ ಐಕ್ಯಮಾಡಿಕೊಂಡಿರುವುದು ಅಷ್ಟೇ ಸತ್ಯವಾಗಿದೆ. ಪ್ರಸ್ತುತ ಪವ್ಯಾಸಿ ರಂಗಭೂಮಿಯಲ್ಲಿ ಇರುವ ಹಾಗೆ ಜನಪದ ರಂಗಭೂಮಿಯಲ್ಲಿಯೂ ಮಕ್ಕಳೇ ಪ್ರಧಾನಪಾತ್ರ ವಹಿಸಿದ್ದಂತಹ ಕೆಲವು ರಂಗಪ್ರಕಾರಗಳು ಅಸ್ತಿತ್ವದಲ್ಲಿದ್ದ ಮಾಹಿತಿಯಿದೆ. ಹಾಗೆಯೇ ಅವು ಸಂಗೀತ ಪ್ರಾಧನ್ಯತೆಯನ್ನು ಹೊಂದಿದ್ದವು ಎಂಬುದೂಸಹ ಅಷ್ಟೆ ಕುತೂಹಲಕರ ಸಂಗತಿಯಾಗಿದೆ. ಅವುಗಳೆಂದರೆ, ಚಿಕ್ಕಮೇಳ, ಹೂವಿನಕೋಲು, ಆಟಿಕಳೆಂಜ ಎಂಬ ರಂಗಪ್ರಕಾರಗಳು.

ಇಲ್ಲಿಮತ್ತೊಂದು ವಿಷಯವನ್ನು ಸ್ಪಷ್ಟೀಕರಿಕೊಳ್ಳಬೇಕಾಗುತ್ತದೆ. ಜನಪದವೆಂದರೆ ಹಾಡು, ಕುಣಿತ, ವಾದ್ಯದ ಸಮ್ಮಿಳನ ಎಂದೇ ಅರ್ಥ. ಯಾವುದೇ ಜನಪದ ಪ್ರಕಾರವಿರಲಿ ಅದು ಬಹುತೇಕ ಸಂಗೀತವನ್ನು ಒಳಗೊಂಡಿರುತ್ತದೆ.

ಮಕ್ಕಳ ರಂಗಪ್ರಕಾರಗಳು ಎಂದು ಗುರುತಿಸಲ್ಪಡುವ ಕಲೆಗಳು ಸಹ ಸಂಗೀತವನ್ನೇ ಹೆಚ್ಚಾಗಿ ಅವಲಂಭಿಸಿವೆ. ಹಾಗಾಗಿ ಇವುಗಳ ಸ್ಥೂಲ ಅವಲೋಕನ ಅಗತ್ಯವೆಂದು ಭಾವಿಸುತ್ತೇನೆ. ಜನಪದ ರಂಗಭೂಮಿಯಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿರುವ ಇಂದು ದೇಶ ವಿದೇಶದಲ್ಲಿಯೂ ಖ್ಯಾತಿಯನ್ನು ಪಡೆದಿರುವ ಯಕ್ಷಗಾನ ಕಲೆಯ ಉಪಕಲಾಪ್ರಕಾರಗಳೇ ಚಿಕ್ಕಮೇಳ, ಹೂವಿನಕೋಲು ಮತ್ತು ಆಟಿಕಳೆಂಜ. ಈ ಪ್ರಕಾರಗಳನ್ನು ಅಭ್ಯಸಿಸುವ ಮುನ್ನ ಯಕ್ಷಗಾನದ ಸ್ಥೂಲಪರಿಚಯ ಬಹಳ ಮುಖ್ಯ. ಏಕೆಂದರೆ, ಯಕ್ಷಗಾನ ಮೂಲತಃ ಸಂಗೀತ ಪ್ರಧಾನವಾದ ಪ್ರಕಾರ. ಕರ್ನಾಟಕ ರಾಜ್ಯದ ಯಾವುದೇ ಜನಪದದ ಪ್ರಕಾರಗಳಿರಲಿ ಅವುಗಳ ಮಧ್ಯೆ ಅತ್ಯಂತ ಹಿರಿಯ ಪ್ರಕಾರವಾಗಿ ಎದ್ದು ಕಾಣಿಸುವುದು ಯಕ್ಷಗಾನ ಕಲೆ.

ಯಕ್ಷಗಾನದ ಮೂಲ ಹಿನ್ನಲೆ: ಯಕ್ಷಗಾನವು ಸಂಗೀತಪ್ರಧಾನ ಕಲೆಯಾಗಲು ಕಾರಣ. ಆ ಕಲೆಯ ಹುಟ್ಟಿಗೆ ಕಾರಣವಾದ ಕೆಲವು ಆಚರಣಾ ಪದ್ಧತಿಗಳು, ಸಂಸ್ಕೃತಿಯಲ್ಲಿ ಆಡಗಿದ್ದ ಧಾರ್ಮಿಕ ವಿಧಿವಿಧಾನಗಳು ಎಂಬುದಾಗಿ ಹೇಳಬಹುದು. ಧರ್ಮಾಧರಿತ ಆಚರಣಾ ಪದ್ಧತಿಯಾದ ಭೂತಾರಾಧನೆ, ನಾಗಮಂಡಲದ ವಿಧಿವಿಧಾನಗಳು, ಸುಗ್ಗಿ ಸೋಭಾನೆ ಪದಗಳು, ಪಾಡ್ದನಗಳು, ಜಾಲಾಟದ ತೆರೆಕುಣಿತ, ಕೋಟಿ ಚೆನ್ನಯ್ಯನಂತಹ ಸಾಮಾಜಿಕಥೆ, ಇತ್ಯಾದಿಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ. ಪ್ರಾರಂಭದಿಂದಲೂ ಹಾಡು, ಕುಣಿತ, ಸಂಗೀತವನ್ನೇ ಮೇಳೈಸಿ ಕೊಂಡಿತ್ತು. ರಂಗರೂಢಿಯ ನೆಲೆಯಲ್ಲಿ ಯಕ್ಷಗಾನವನ್ನು ನೋಡಿದಾಗ ನಾಟ್ಯಶಾಸ್ತ್ರಕ್ಕೆ ಹತ್ತಿರವಿರುವ ಅನೇಕ ಅಂಶಗಳು ಇಲ್ಲಿವೆ. ನಾಟ್ಯಶಾಸ್ತ್ರದ ಪರಿಭ್ರಮಣದಂತಹ ನೃತ್ಯವು ಯಕ್ಷಗಾನದಲ್ಲಿ ತೆರೆಕುಣಿತವೆಂದು ಪ್ರಸಿದ್ಧಿಪಡೆದಿದೆ. ಅದೇರೀತಿ ಪಾತ್ರಪ್ರವೇಶದ ತಂತ್ರದಲ್ಲಿಯೂ ಸಾಕ್ಷಷ್ಟು ಸಾಮ್ಯತೆ ಹೊಂದಿದೆ. ಪಾತ್ರಗಳ ಪರಿಚಯವೂ ಕುಣಿತದ ಮೂಲಕವೇ ಆಗುತ್ತದೆ. ಮುಂದೆ ಪಾತ್ರಗಳು ಅಭಿನಯಿಸುವುದೂ ಸಹ ಭಾಗವತರ ಹಾಡುಗಾರಿಕೆ, ಹಿನ್ನಲೆ ವಾದ್ಯಕ್ಕೆ ಪೂರಕವಾಗಿರುತ್ತದೆ. ಇಡೀ ಪ್ರದರ್ಶನ ಹಾಡು, ಸಂಗೀತ, ನೃತ್ಯದೊಂದಿಗೆ ಸಾಗುತ್ತದೆ. ನೃತ್ಯವು ಪ್ರದರ್ಶನದ ಸನ್ನಿವೇಶದ ಭಾವನೆಗಳನ್ನು ದೇಪವನ್ನು ವಿವಿಧ ಭಂಗಿಗಳನ್ನಾಗಿಸುವ ಮೂಲಕ, ಶೈಲೀಕೃತ ಚಲನೆಗಳ ಮೂಲಕ ಸಾಗುತ್ತದೆ. ಅಭಿನಯ ನಾಟ್ಯಧರ್ಮಿ-ಲೋಕಧರ್ಮಿಗಳ ಸಮ್ಮಿಶ್ರಣ ಪಡೆದಿರುತ್ತದೆ ಆದರೆ ಅಭಿನಯ ಅಷ್ಟು ಗಾಂಭೀರ್ಯತೆಯನ್ನು ಪಡೆದುಕೊಂಡಿರುವುದಿಲ್ಲ. ಸಂಭಾಷಣೆಗಳು ಕಥಾವಸ್ತುವನ್ನು ಮುಂದುವರೆಸುವ ವಾಹಕವಾಗಿರುತ್ತದೆ. ಸಾಮಾನ್ಯವಾಗಿ ಕಥಾ ಹಂದರ ಮಹಾಕಾವ್ಯಗಳಾದ ರಾಮಯಣ, ಮಹಾಭಾರತ ಮತ್ತು ಪುರಾಣವನ್ನು ಆವಲಂಭಿಸಿದೆ. ಹಿಂದು ಧರ್ಮದ ದೇವತೆಗಳಾದ ರಾಮ, ಕೃಷ್ಣ, ವಿಷ್ಣು, ಶಿವ ಇವರ ಲೀಲೆಗಳನ್ನು ಕುರಿತಾದದ್ದು. ಇತ್ತೀಚಿನ ದಿನಗಳಲ್ಲಿ ಕಾಲೈತಸ್ಮಾಯ ನಮಃ ಎನ್ನುವಂತೆ ಸಾಮಾಜಿಕ ಕಥನಗಳೂ ಸಹ ಪ್ರದರ್ಶನಗೊಳ್ಳುತ್ತಿವೆ. ಒಟ್ಟಾರೆ ಈ ಎಲ್ಲಾ ಅಂಶಗಳ ಆಧಾರದ ಮೇಲೆ ಇದೊಂದು ಸಂಗೀತ ಆಧರಿತ ರಂಗಪ್ರಕಾರವಾಗಿದೆ ಎಂದು ತಿಳಿಯಬಹುದು.

ಯಕ್ಷಗಾನದ ಪ್ರದರ್ಶನದಲ್ಲಿ ಭಾಗವಹಿಸುವವರು ಬಹುತೇಕ ದೊಡ್ಡವರೇ. ಪ್ರದರ್ಶನಕ್ಕೆ ಅನುಗುಣವಾಗಿ ಕಥಾಹಂದರದಲ್ಲಿ ಬರುವ ಅನೇಕ ಪಾತ್ರಗಳಂತೆ ಬಾಲಪಾತ್ರಗಳು ಸಹ ಇವೆ. ಆದರೆ ಈ ಪಾತ್ರಗಳನ್ನು ನಿರ್ವಹಿಸುವುದು ಮಾತ್ರ ದೊಡ್ಡವರೇ ಆಗಿರುತ್ತಾರೆ. ಆದರೆ ಪ್ರಸ್ತುತ ಅಂತಹ ಪಾತ್ರಗಳನ್ನು ಬಾಲಕರಿಂದ ಮಾಡಿಸುವ ಪರಿಪಾಠವಿದೆ. ಹಾಗೆಂದ ಮಾತ್ರಕ್ಕೆ ಮಕ್ಕಳ ಭಾಗವಹಿಸುವಿಕೆ ಯಕ್ಷಗಾನದಲ್ಲಿ ಈ ಮೊದಲು ಇರಲೇ ಇಲ್ಲ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಮಕ್ಕಳ ಭಾಗವಹಿಸುವಿಕೆ ಬೇರೆ ಬೇರೆ ಹಂತಗಳಲ್ಲಿ ಇತ್ತು ಎಂಬುದು ಯಕ್ಷಗಾನ ಇತಿಹಾಸದಲ್ಲಿ ದಾಖಲಾಗಿದೆ. ಯಕ್ಷಗಾನ ಪ್ರಾರಂಭದ ಹಂತದಲ್ಲಿ ಸ್ಥಾನಿಕ ದೇವತೆಗಳನ್ನು ಪೂಜಿಸುವುದು ವಾಡಿಕೆ. ಅಂತೆಯೇ ಭಾಗವತರ ಆಗಮನದ ನಂತರ ಪ್ರದರ್ಶನದ ಸಿದ್ಧತೆಯಾಗುತ್ತಿದ್ದಂತೆಯೇ ಸದಾಕಾಲ ಮೊದಲ ಪೂಜೆ ಸ್ವೀಕರಿಸುವ ಗಣಪತಿಯನ್ನು ಆರಾಧಿಸಲಾಗುತ್ತದೆ. ಗಣಪತಿ ಪೂಜಾವಿಧಿವಿಧಾನಗಳ ನಂತರ ಬಾಲಗೋಪಲರು ಪ್ರವೇಶಿಸುತ್ತಾರೆ. ಅವರ ಆಗಮನ ಪ್ರದರ್ಶನಕ್ಕೊಂದು ಸಂಚಲನ ನೀಡುತ್ತದೆ. ಬಾಲಗೋಪಾಲರು ನರ್ತಿಸುತ್ತಾರೆ. ನಲಿಯುತ್ತಾರೆ. ಸಂತೋಷ ಹೊಂದುತ್ತಾರೆ. ಕೊನೆಗೆ ಭಾಗವತ ಅವರ ಒಪ್ಪಿಗೆ ಪಡೆದು ಪ್ರದರ್ಶನಕ್ಕೆ ಆಣಿಯಾಗುತ್ತಾನೆ. ಈ ಪ್ರಕ್ರಿಯೆ ಪ್ರತಿಪ್ರದರ್ಶನದಲ್ಲೂ ಸಾಗುತ್ತದೆ.

ವಿದ್ವಾಂಸರ ಅನಿಸಿಕೆಯಂತೆ ಈ ಕ್ರಿಯೆ ಮಕ್ಕಳನ್ನು ಮುಂದೊಂದು ದಿನದ ಕಲಾವಿಧರನ್ನಾಗಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇರಬಹುದು. ಅಥವಾ ಪೂರ್ವ ನಿರ್ಧರಿತ ಸಿದ್ಧತಾಕ್ರಿಯೆಯಾಗಿರಬಹುದು. ಒಟ್ಟಾರೆ ಮಕ್ಕಳ ಅಸ್ತಿತ್ವವನ್ನು ಪ್ರಾಚೀನ ಕಾಲದಲ್ಲಿಂಯೇ ಕಾಣಬಹುದು. ವಿಪರ್ಯಾಸವೆಂದರೆ ನೇರ ನಿರ್ವಹಣೆ ಮಾತ್ರ ಎಲ್ಲೂ ಸಿಗದು. ಆಧುನಿಕ ಪರಿಕಲ್ಪನೆಗಳು ರಂಗಕ್ಷೇತ್ರದಲ್ಲಿ ಮೂಡಿದ್ದು ೨೦ನೇ ಶತಮಾನದಲ್ಲಿ. ಪ್ರತಿಯೊಂದು ವಿಷಯದಲ್ಲಿಯೂ ವಿವಿಧ ಆಯಾಮಗಳಲ್ಲಿ ನೋಡುವ ಪರಿಪಾಠ ಬೆಳೆದಂತೆಲ್ಲಾ ಮಕ್ಕಳಿಗಾಗಿ ರಂಗಕಲೆಗಳು ಎಂಬ ಪರಿಕಲ್ಪನೆಗಳು ಗರಿಗೆದರಿದವು. ಪರಿಣಾಮವಾಗಿ ಎಲ್ಲಾ ಪ್ರಕಾರಗಳಲ್ಲಿ ಮಕ್ಕಳನ್ನು ಸಕ್ರಿಯವಾಗಿ ತೊಡಗಿಸುವ ಕೆಲಸಗಳು ನಡೆದವು. ಅಂತೆಯೇ ಅವರನ್ನು ಆ ನಿಟ್ಟಿನಲ್ಲಿ ಸಿದ್ಧಪಡಿಸುವ ವ್ಯಕ್ತಿಗಳು, ತಂಡಗಳು ಪ್ರಾರಂಭಗೊಂಡವು. ಯಕ್ಷಗಾನದ ಮೂಲ ನೆಲೆ ಕರಾವಳಿ ಮತ್ತು ಮಲೆನಾಡು ಆದ್ದರಿಂದ ಅಲ್ಲಿಂಯೇ ಮೊದಲು ಇಂತಹ ಕಾರ್ಯ ಪ್ರಾರಂಭಗೊಂಡಿತು ಸ್ವಾತಂತ್ರ್ಯಪೂರ್ವದಲ್ಲಿಯೇ ಪಟೇಲರಮನೆ ಎಂಬ

ತಂಡ ಮಕ್ಕಳಿಗೆ ಯಕ್ಷಪ್ರಸಂಗಗಳನ್ನು ಕಲಿಸಿ ಪ್ರದರ್ಶನ ನೀಡುವ ಪರಿಪಾಠಕ್ಕೆ ನಾಂದಿಹಾಡಿತು. ಪರಿಣಾಮ ಇಂದಿಗೂ ಆ ಸಂಸ್ಥೆ ಮಕ್ಕಳಿಂದಲೇ ಅದೇ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಇದೇ ಮಾದರಿಯನ್ನು ಅನುಸರಿಸಿದ ಅನೇಕ ತಂಡಗಳು ಅಸ್ತಿತ್ವದಲ್ಲಿವೆ ಎಂಬುದು ಪ್ರಸಂಶಾರ್ಹ ವಿಷಯವಾಗಿದೆ. ಈ ನಿಟ್ಟಿನಲ್ಲಿ ಕರಾವಳಿ ಜನತೆ ಶಾಲಾಕಾಲೇಜುಗಳಲ್ಲಿ ಯಕ್ಷಗಾನವನ್ನು ಕಲಿಕೆಯ ವಿಷಯವನ್ನಾಗಿಸಿದ್ದಾರೆ. ಮಕ್ಕಳು ಕೂಡ ಅಷ್ಟೆ ಅಷ್ಟೆಯಿಂದ ಕಲಿಕೆಯಲ್ಲಿ ತೊಡಗಿದ್ದಾರೆ. ಇದಕ್ಕೆ ಕಾರಣ ಅವರನ್ನು ಸೆಳೆದದ್ದು ಅದರಲ್ಲಿರುವ ಹಾಡು, ಕುಣಿತ, ಸಂಗೀತಗಳು ಎಂದರೆ ಅತಿಶಯೋಕ್ತಿಯಾಗಲಾರದು.

ಉಪಪ್ರಕಾರಗಳು: ಯಕ್ಷಗಾನದ ನೆರಳಿನಂತೆಯೇ ಇರುವ ಅನೇಕ ಸಂಗೀತ ಪ್ರಧಾನ ರಂಗಪ್ರಕಾರಗಳು ನಮ್ಮ ಕರ್ನಾಟಕ ಜನಪದ ರಂಗಪ್ರಕಾರಗಳಲ್ಲಿವೆ. ಅವುಗಳೆಂದರೆ ಚಿಕ್ಕಮೇಳ, ಹೂವಿನಕೋಲು, ಆಟಿಕಳೆಂಜ. ಯಕ್ಷಗಾನದ ಮಾದರಿಯಲ್ಲಿಯೇ ಪ್ರದರ್ಶನ ನೀಡುವ ಇವುಗಳನ್ನು ಯಕ್ಷಗಾನದ ಉಪಪ್ರಕಾರಗಳು ಎಂದು ಕರೆಯುತ್ತಾರೆ. ವಿಶೇಷವೆಂದರೆ ಇವುಗಳು ಮಕ್ಕಳಿಂದಲೇ ನಡೆಯುತ್ತಿರುವಂತಹುವು.

ಚಿಕ್‌ಮೇಳ: ಒಂದು ರೀತಿಯಲ್ಲಿ ನಶಿಸಿಹೋಗಿರುವ ಅದರಲ್ಲೂ ಬಾಲಕಲಾವಿದರಿಂದಲೇ ನಡೆಯುತ್ತಿದ್ದ ಆ ಕಾಲಕ್ಕೆ ಬಹಳ ಜನಪ್ರಿಯ ಸಂಗೀತ ಪ್ರಧಾನವಾದ ಕಲಾಪ್ರಕಾರವಾಗಿದ್ದ "ಚಿಕ್‌ಮೇಳ" ನವರಾತ್ರಿಯ ಸಂದರ್ಭದಲ್ಲಿ ಹಗಲು ರಾತ್ರಿ ಒಂಭತ್ತು ದಿನಗಳ ಕಾಲ ಮನೆ ಮನೆಯ ಅಂಗಳಗಳಲ್ಲಿ, ದೇವಾಲಯಗಳ ಚಾವಡಿಗಳಲ್ಲಿ, ಪುರಾಣಗಳ ಕಥಾ ಭಾಗಗಳನ್ನು ಪ್ರದರ್ಶಿಸುತ್ತಿತ್ತು. ಸಂಪೂರ್ಣವಾಗಿ ಬಾಲಕರಿಂದಲೇ ಪ್ರದರ್ಶನಗೊಳ್ಳುವ ಸಂಗೀತ ಕಲೆಯಾಗಿದೆ. ಚಿಕ್‌ಮೇಳ ಎಂಬುದಕ್ಕೆ ಅದು ಒಂದು ಚಿಕ್ಕತಂಡ ಎಂಬ ಅರ್ಥವೇ ಹೆಚ್ಚು ಇರುವುದಾದರೂ ಬಹುತೇಕ ಚಿಕ್ಕ ಅಥವಾ ಬಾಲಕರಿಂದ ಕೂಡಿದ ಸಂಗೀತ ಕಲಾಪ್ರಕಾರ ಎಂದು ಗುರುತಿಸಬಹುದು. ಇದು ಮೂಲತಃ ಯಕ್ಷಗಾನದ ಮೇಲ್ ಪಂಕ್ತಿಯನ್ನೇ ಅನುಸರಿಸುತ್ತಿತ್ತು. ಯಕ್ಷಗಾನದಲ್ಲಿರುವಂತೆ ಹಿಮ್ಮೇಳ ಅಥವಾ ಸಂಗೀತ, ಹಾಡುಗಾರಿಕೆ, ಕುಣಿತ, ಸಭಾಲಕ್ಷಣ, ವೇಷಭೂಷಣ, ಸಂಭಾಷಣೆ ಮೊದಲಾದ ಪದ್ಧತಿಗಳನ್ನು ಅನುಸರಿಸುತಿತ್ತು. ಹಾಗೆಯೇ ಒಂದು ಪುರುಷ, ಒಂದು ಸ್ತ್ರೀ ಪಾತ್ರ ಮುಖ್ಯವಾಗಿರುತ್ತಿದ್ದವು. ಈ ಎರಡು ಪಾತ್ರಗಳೇ ಪ್ರದರ್ಶನದ ತುಣಕಿನ ಅಥವಾ ಭಾಗದ ಪ್ರಮುಖ ನಾಯಕ ಮತ್ತು ನಾಯಕಿ ಪಾತ್ರಗಳನ್ನು ನಿರ್ವಹಿಸುವುದು ಪಾಡಿಕೆ. ಈ ಪ್ರದರ್ಶನಗಳು ರಾತ್ರಿಯಲ್ಲಿ ಮಾತ್ರ ನಡೆಯುತ್ತಿದ್ದು ದೊಂದಿಯ ಬೆಳಕಿನಲ್ಲಿ ಮಧ್ಯರಾತ್ರಿ ಒಂದು ಗಂಟೆಯವರೆಗೂ ನಡೆಯುತ್ತಿದ್ದವು.

ಒಂದು ಕೇರಿಗೆ ಒಂದು ದಿನದಂತೆ ತಿರುಗಾಟ ಮಾದರಿಯಲ್ಲಿ ನಡೆಯುತ್ತಿದ್ದವು. ಚಿಕ್ ಮೇಳಕ್ಕೆ ಒಬ್ಬ ತಂಡದ ನಾಯಕನಿರುತ್ತಿದ್ದನು. ಆತನು ಊರಿನ ಹಿರಿಯರಿಗೆ ಮೊದಲೇ ಪ್ರದರ್ಶನದ ಬಗ್ಗೆ ತಿಳಿಸುತ್ತಿದ್ದ ಅದರಂತೆ ಊರಿನ ಮನೆ ಮನೆಯಲ್ಲಿದ್ದ ಅಂಗಳಗಳಲ್ಲಿಯೇ ಪ್ರಸಂಗಗಳನ್ನು ಪ್ರದರ್ಶಿಸುತ್ತಿದ್ದರು. ಮೊದಲೇ ಹಲವಾರು ಪ್ರಸಂಗಗಳಿಗೆ ಈ ತಂಡಗಳು ಸಿದ್ಧವಾಗಿರುತ್ತಿದ್ದವು. ಮನೆಯ ಯಜಮಾನ, ಊರಿನ ಹಿರಿಯರು ಬೇಕಾದ ಅಥವಾ ಇಷ್ಟಪಟ್ಟ ಪ್ರಸಂಗವನ್ನು ಅಭಿನಯಿಸುತ್ತಿದ್ದರು. ಮನೆಯವರು ಅಥವಾ ಊರಿನವರು ಇಷ್ಟ ಪಟ್ಟರೆ ಇನ್ನು ಒಂದು ಪ್ರಸಂಗವನ್ನು ಅಥವಾ ಅದರ ಮುಂದುವರೆದ ಭಾಗವನ್ನು ಪ್ರದರ್ಶಿಸುತ್ತಿದ್ದರು. ಒಟ್ಟಿನಲ್ಲಿ ಜನರ ಆಶೋತ್ತರಕ್ಕನುಗುಣವಾಗಿ ಅಭಿನಯಿಸುವುದು ವಾಡಿಕೆಯಾಗಿತ್ತು. ಒಂದು ಪ್ರದರ್ಶನದ ನಂತರ ಯಜಮಾನ ಅಥವಾ ಹಿರಿಯರು ನೀಡಿದ ವೀಳ್ಯವನ್ನು ಅಥವಾ ಕಾಣಿಕೆಯನ್ನು ಪಡೆದು ಮುಂದಿನ ಮನೆಗಳಿಗೆ ಮತ್ತು ಊರಿಗೆ ಹೊರಡುತ್ತಿದ್ದರು, ಅಲ್ಲಿ ಪ್ರದರ್ಶನ ನೀಡುತ್ತಿದ್ದರು. ಇವರಿಗೆ ಸಿಕ್ಕ ಪ್ರತಿಫಲ ಹೆಚ್ಚಿರಲಿ ಅಥವಾ ಕಡಿಮೆಯಿರಲಿ ಯಾವುದೇ ಒತ್ತಡವೇರದೆ ಕೊಟ್ಟದಷ್ಟನ್ನೇ ಸ್ವೀಕರಿಸುತ್ತಿದ್ದರು. ಕೆಲವು ಸಲ ಯಾವುದೇ ಪ್ರತಿಫಲವಿಲ್ಲದೇ ತಂಡವು ನಿರಾಸೆಯಿಂದ ಮರಳುತ್ತಿತ್ತು. ರಾತ್ರಿಯಲ್ಲಾ ನಿದ್ದೆಗೆಟ್ಟು ಕ್ಲಿಷ್ಟ ಪ್ರದರ್ಶನಗಳನ್ನು ನೀಡುತ್ತಿದ್ದ ತಂಡವು ಕಷ್ಟಗಳ ನಡುವೆ ಏಕೆ ಪ್ರದರ್ಶನ ನೀಡುತ್ತಿತ್ತು ಎಂಬುದನ್ನು ಚಿಂತಿಸಿದಾಗ ಈ ಪ್ರಕಾರಗಳ ಹುಟ್ಟಿಗೆ ಕಾರಣಗಳು ಹಲವಾರು ಅವುಗಳಲ್ಲಿ ಬಹಳ ತಾರ್ಕಿಕವಾದ ಸತ್ಯ ಸಂಗತಿಯೊಂದು ತಿಳಿದು ಬರುತ್ತದೆ. ಬಹಳ ವರ್ಷಗಳ ಹಿಂದಿನಿಂದಲೂ ಯಕ್ಷಗಾನ ಅತ್ಯಂತ ಜನಪ್ರಿಯ ಕಲಾಪ್ರಕಾರವಾಗಿದ್ದು ಇದು ಕೇವಲ ಮೇಲ್‌ವರ್ಗದವರಿಗಷ್ಟೇ ಸೀಮಿತವಾದ ಕಲೆಯಾಗಿತ್ತು. ಇದನ್ನು ಕೆಳಜಾತಿಯವರು ಪ್ರದರ್ಶನ ಮಾಡುವುದಾಕ್ಕಾಗಲೀ, ನೋಡುವುದಾಕ್ಕಾಗಲೀ ಅವಕಾಶವಿರಲಿಲ್ಲ. ಇಂತಹ ಮಡಿವಂತಿಕೆಯ ಸಂದರ್ಭದಲ್ಲಿ ಕೆಳವರ್ಗದ ಜನರು ತಮ್ಮ ಮನರಂಜನೆಗಾಗಿ ಯಕ್ಷಗಾನವನ್ನು ಮಾದರಿಯಾಗಿಟ್ಟುಕೊಂಡು, ಯಕ್ಷಗಾನದ ಮಾದರಿಯಲ್ಲಿಯೇ ವೇಷ, ಭೂಷಣ, ಪ್ರಸಾದನಗಳನ್ನು ಉಪಯೋಗಿಸಿಕೊಂಡು ಸಂಗೀತ ಪ್ರಧಾನವಾದ, ಮಕ್ಕಳ ಪ್ರಧಾನವಾದ ಚಿಕ್‌ಮೇಳಗಳನ್ನು ಪ್ರಾರಂಭಿಸಿದರೆಂದು ತಿಳಿದುಬರುತ್ತದೆ.

ಆದರೆ ಇದರ ಹುಟ್ಟಿಗೆ ಇನ್ನೊಂದು ಅಭಿಪ್ರಾಯವೂ ಇದ್ದು, ಹಿಂದಿನ ಕಾಲದಲ್ಲಿ ಯಕ್ಷಗಾನವನ್ನು ಕಲಿಸುವ ಯಾವುದೇ ನೃತ್ಯ ಕೇಂದ್ರಗಳಾಗಲಿ, ಭಾಗವತಿಕಾ ಕೇಂದ್ರಗಳಾಗಲಿ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಹೊಸ ಕಲಾವಿದರನ್ನು ಸೃಷ್ಟಿಸಲಿಕ್ಕೆ ಹಾಗೂ ಮತ್ತು ಪಳಗಿದ ಕಲಾವಿದರನ್ನು ರೂಪಿಸುವುದಕ್ಕಾಗಿ ಚಿಕ್‌ಮೇಳದಂತಹ ಸಂಗೀತ ಪ್ರಕಾರಗಳನ್ನು ಪ್ರಾರಂಭಿಸಿರಬಹುದು ಎಂದು ಊಹಿಸಲಾಗಿದೆ. ಏನೇ ಇದ್ದರೂ ಒಂದು ಪ್ರಮುಖ ಅಂಶವೆಂದರೆ ಈ ಪ್ರಕಾರದಲ್ಲಿ ಬಾಲ ಕಲಾವಿದರೇ ಇದರ ಜೀವಾಳ, ಸಂಪೂರ್ಣವಾಗಿ ಮಕ್ಕಳೇ ಅಭಿನಯಿಸುತ್ತಿದ್ದದ್ದು ಮಕ್ಕಳ ರಂಗಪ್ರಕಾರಗಳು ಅಂದೇ ನಮ್ಮ ಕನ್ನಡ ನಾಡಿನ ಕರಾವಳಿ ಭಾಗದಲ್ಲಿ ಜನಜನಿತವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಮಕ್ಕಳಿಂದ ನಡೆಯುವ ಈ ಪ್ರದರ್ಶನವನ್ನು ನೋಡಲು ಮಕ್ಕಳು, ಮಹಿಳೆಯರು ಮತ್ತು ಹಿರಿಯರು ರಾತ್ರಿಪೂರ್ತಿ ಕಾಯುತ್ತಿದ್ದರು. ತಂಡದ ಆಗಮನವನ್ನೇ ನಿರೀಕ್ಷಿಸುತ್ತಾ ದೂರದಲ್ಲಿ ನಾಯಿ ಬೊಗಳಿದ ಶಬ್ದಕೇಳಿದೊಡನೆ ಹೊರ ಬಂದು ಇಣಿಕಿ ಇಣಿಕಿ ನೋಡುತ್ತಾ, ದೊಂದಿಯ ಬೆಳಕು ಕಂಡೊಡನೆ ನಿದ್ರೆಗೆ ಜಾರಿದ್ದ ಮನೆ ಮಂದಿಯೆಲ್ಲ ಗಡಿಬಿಡಿಯಲ್ಲಿ ಎದ್ದು, **'ಅಗೋ ವಾದ್ಯದವ್ ಬಂದೋ'** ಎಂದು ಕೂಗುತ್ತಾ ಆಕ್ಕ ಪಕ್ಕದವರನ್ನು ಕರೆಯುತ್ತಾ ಸಂಭ್ರಮದಲ್ಲಿ ಅಣಿಯಾಗುವ ರೀತಿ, ಪಡುವ ಸಂತೋಷಗಳು ಚಿಕ್‌ಮೇಳದ ಜನಪ್ರಿಯತೆಗೆ ಸಾಕ್ಷಿ. ಇಂತಹ ಮೇಳವು ಇಂದು ಬರಿ ಇತಿಹಾಸದ ಪುಟಗಳಲ್ಲಷ್ಟೇ ಹಾಗೂ ಹಿರಿಯರ ತಲೆಮಾರಿನಲ್ಲಷ್ಟೆ ಸಿಗುತ್ತದೆ. ಆಧುನಿಕತೆ, ನಾಗರೀಕತೆ ಬೆಳೆದಂತೆ ಪರಂಪರೆ, ಸಂಸ್ಕೃತಿಗಳು ಬದಲಾಗುತ್ತವೆ. ಪರಂಪರೆ ಸಂಸ್ಕೃತಿಗಳು ಬದಲಾದಂತೆ ಜನಪದ ಕಲಾಪ್ರಕಾರಗಳು ಹೇಗೆ ನಾಶವಾಗುತ್ತವೆ ಎಂಬುದಕ್ಕೆ ಚಿಕ್‌ಮೇಳವೇ ಸಾಕ್ಷಿ.

ಹೂವಿನ ಕೋಲು:

ನಾರಾಯಣಾಯ ನಮೊ ನಾರಾಯಣಾಯ

ನಾಭಿ ಕಮಲಕೆ ಶರಣು ನಾರಾಯಣಾಯ!
ಗುರುದೈವ ಗಣಪತಿಗೆ ಶರಣು ಶರಣೆಂದು
ಕರಗಳೆರಡನು ಮುಗಿದು ಶಿರವೆರಗಿ ನಿಂದು!!

ಇದು ಹೂವಿನಕೊಲಿನ ಚೌಪದಿ. ಪುಟ್ಟ ಬಾಲಕರೀರ್ವರು ಈ ಚೌಪದಿಯನ್ನು ಹೇಳುವಾಗ ಒಂದು ಸುಂದರ, ಸಮೃದ್ಧ, ಪ್ರಶಾಂತ ವಾತಾವರಣದ ಕಲ್ಪನೆ ಮನದಂಚಿನಲ್ಲಿ ಮೂಡುತ್ತದೆ. ಆದರೆ ಇಂದು ಈ ಹೂವಿನಕೋಲು ಪ್ರಕಾರವೇ ಕಾಣೆಯಾಗಿದೆ. ಹಾಗದರೆ ಹೂವಿನ ಕೋಲು ಎಂದರೇನು?

ಹೂವಿನಕೋಲು ನಶಿಸಿಹೋಗಿರುವ ಜಾನಪದ ಸಂಗೀತ ಕಲೆಯಾಗಿದ್ದು ಇಂದು ಇದರ ಮಾಹಿತಿ ಇತಿಹಾಸದ ಪುಟಗಳಲ್ಲಷ್ಟೇ ಸಾಧ್ಯ. ತೆಂಕು ಮತ್ತು ಬಡಗು ಎಂಬ ಪ್ರಭೇದ ಯಕ್ಷಗಾನ ಪ್ರಪಂಚಕ್ಕೆ ಮಾತ್ರ ಸೀಮಿತವಾಗಿರದೆ ಭಾಷೆ, ಭೂತಾರಾದನೆ ಮತ್ತು ಇನ್ನಿತರ ಜನಪದ ರಂಗಕಲೆಗಳ ಕ್ಷೇತ್ರಗಳಲ್ಲಿಯೂ ವ್ಯಾಪಿಸಿದೆ. ಮಹಾನವಮಿಯ ನವರಾತ್ರಿ ಕಾಲದಲ್ಲಿ ನಡೆಯುವ ಕಲೆಯಾದ್ದರಿಂದ ಇದನ್ನು ಮಹಾನವಮಿಯ ಪದಗಳು ಎಂಬ ಹೆಸರಿನಿಂದಲೂ ಸಮನಾರ್ಥಕವಾಗಿ ಕರೆಯುತ್ತಾರೆ.

ಪ್ರಸ್ತುತ ಹೂವಿನ ಕೋಲು ಸಂಗೀತ ಪ್ರಕಾರವನ್ನು ಇಲ್ಲಿ ತರುವ ಪ್ರಮೇಯ ಈ ಪ್ರಕಾರವು ಕೇವಲ ಬಾಲಕರ ಮೂಲಕ ನಡೆಯುತ್ತಿದ್ದದ್ದು. ಮಕ್ಕಳೇ ಪ್ರಮುಖ ನೆಲೆಯಾಗಿ ಕಲಾವಂತಿಕೆಯ ಮೂಲಕ ನಡೆಯುವ ಚಟುವಟಿಕೆಯಲ್ಲಿ ಹೂವಿನಕೋಲು ಸಹ ಒಂದು. ಹಾಗಾಗಿ ಇದರ ಮಾಹಿತಿಯನ್ನು ಇಲ್ಲಿ ಚರ್ಚಿಸಬೇಕಾದದ್ದು ಅತ್ಯಗತ್ಯ. ಎಂದೋ ಹುಟ್ಟಿ ನಶಿಸಿದ ಕಲೆಯಾದರೂ ಅಂಥಹ ಸಂದರ್ಭದಲ್ಲಿ ಕೇವಲ ಬಾಲಕರಿಬ್ಬರಿಂದಲೇ ಸಾಗುವ ಈ ಪ್ರಕಾರವು ಮಕ್ಕಳ ರಂಗಪ್ರಕಾರದ ನೈಜ ಇತಿಹಾಸದ ಮೂಲವಾಗಬಲ್ಲದು ಏಕೆಂದರೆ ಇಂದು ಹೆಚ್ಚು ಚರ್ಚೆಗೆ ಒಳಪಡುತ್ತಿರುವ ಮಕ್ಕಳ ರಂಗಭೂಮಿಯ ಸಂದರ್ಭದಲ್ಲಿ ಕಲಾಪ್ರಕಾರಗಳು ಶಿಷ್ಟಾಚಾರದ ನಿಬಂಧನೆಗೆ ಒಳಗಾಗಿ ಆನಾದಿ ಕಾಲದಿಂದಲೂ ಮಕ್ಕಳನ್ನು ದೂರವೇ ಇಟ್ಟಿದ್ದವು ಎಂಬುದನ್ನು ಇದು ಸುಳ್ಳು ಮಾಡಿದೆ.

ಕರಾವಳಿ ಜನರ ಧಾರ್ಮಿಕವೂ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ನೀಡುತ್ತಿದ್ದ ಐಮಠದ ಪ್ರೋತ್ಸಾಹ ಈ ಪ್ರಕಾರಕ್ಕೆ ಹೆಚ್ಚು ದೊರತಿರುವುದು ತಿಳಿದುಬರುತ್ತದೆ. ಐಗಳ ಮಠದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳು ತಾವು ಕಲಿತ ವಿದ್ಯೆಯ ಸಾರ್ಥಕತೆ ಮತ್ತು ಜ್ಞಾನ ಸಂಪಾದನೆಗೆ ಈ ಹೂವಿನಕೋಲನ್ನು ಉಪಯೋಗಿಸಿಕೊಂಡರು. ಮಠದಲ್ಲಿ ವಿದ್ಯಾರ್ಥಿಗಳು ದಿನಕ್ಕೆ ಕನಿಷ್ಟ ಹನ್ನೆರಡು ಯಕ್ಷಗಾನದ ಪದ್ಯಗಳನ್ನು ಕಲಿಯಲೇ ಬೇಕಾಗಿತ್ತು. ಪ್ರಾಪ್ತ ವಯಸ್ಕರಾಗುವಷ್ಟರಲ್ಲಿ ಸುಮಾರು ಇಪ್ಪತ್ತು ಪ್ರಸಂಗಗಳನ್ನು ಬಾಯಿಪಾಠ ಮಾಡುತ್ತಿದ್ದರು. ಇದರಿಂದಾಗಿ ಹೂವಿನಕೋಲು ಒಂದು ಕಲಾ ಪ್ರಕಾರವಾಗಿ ಬೆಳವಣಿಗೆ ಹೊಂದಲು ಇದು ಪರೋಕ್ಷ ಬೆಂಬಲ ನೀಡಿತು. ಕ್ರಮೇಣ ಯಕ್ಷಗಾನದ ಸಂಪರ್ಕಕ್ಕೆ ಒಳಗಾಗಿ ಸುಶ್ರಾವ್ಯ ಹಾಡುಗಾರಿಕೆ, ಅದಕ್ಕೆ ತಕ್ಕದಾದ ತಾಳಮದ್ದಲೆಯ ವಾದನವನ್ನು ಪಡೆಯಿತು. ಮುಂದೆ ಮೂಲ ಯಕ್ಷಗಾನದ ತಾಳಮದ್ದಲೆಗಿಂತ ತನ್ನದೇ ಆದ ಆಕಾರ ಮತ್ತು ವೈಶಿಷ್ಟ್ಯವನ್ನು ಪಡೆಯಿತು.

ಭಾಗವತಿಕೆ, ಹಾರ್ಮೋನಿಯಂ, ಶ್ರುತಿ, ಮದ್ದಲೆ ವಾದ್ಯಗಳನ್ನು ಬಳಸಿಕೊಂಡು ಕೈಯಲ್ಲಿ ಹೂವಿನಕೋಲನ್ನು ಹಿಡಿದು, ತಲೆಗೆ ಗಾಂಧಿ ಟೋಪಿ ಧರಿಸಿಕೊಂಡು, ಸಣ್ಣ ಶಾಲನ್ನು ಹೊದ್ದುಕೊಂಡು ಮೊದಲೇ ನಿರ್ಧರಿತವಾದ ಮನೆ ಮನೆಗೆ ನವರಾತ್ರಿಯ ಸಂದರ್ಭದಲ್ಲಿ ಹೋಗಿ ಪ್ರದರ್ಶನ ನೀಡುತ್ತಾರೆ. ಹಿಮ್ಮೇಳದವರು ಬಿಳಿಯ ವಸ್ತ್ರವನ್ನು, ತಲೆಗೆ ಕೆಂಪು ಮುಂಡಾಸನ್ನು ಧರಿಸಿರುತ್ತಾರೆ. ಚುರುಕು ಸಂಭಾಷಣೆಯಿಂದ ಕೂಡಿದ, ಮೊದಲೇ ಬಾಯಿಪಾಠ ಮಾಡಿಕೊಂಡ ಎರಡು ಮೂರು ಪ್ರಸಂಗಗಳನ್ನು ಆಡುತ್ತಾರೆ. ಮೊದಲಿಗೆ ಗೋಪುರಾಕಾರದ ದೇವಾಲಯದ ಶಿಖರವನ್ನು ಹೋಲುವ ಹೂವಿನಿಂದ ಶೃಂಗಾರಗೊಂಡ ಹೂವಿನ ಕೊಲನ್ನು ಹಿಡಿದುಕೊಂಡು ಎದುರು ಬದರಿನಲ್ಲಿ ಕುಳಿತ ಬಾಲಕರು ಮಹಾನವಮಿ ಚೌಪದಿಯನ್ನು ಹಾಡುತ್ತಾರೆ. ಚೌಪದಿಗಳು ಸ್ತೋತ್ರ ರೂಪದಲ್ಲಿ ನಡೆಯುತ್ತವೆ. ಮನೆಯ ಯಜಮಾನನ ಆಯುರಾರೋಗ್ಯ ಹೆಚ್ಚಲಿ, ಧನ, ಕನಕ, ವಸ್ತು, ವಾಹನಗಳು ಹೆಚ್ಚಲಿ, ಸಂತಾನ ವೃದ್ಧಿಸಲಿ, ಪುತ್ರಭಾಗ್ಯವಾಗಲಿ, ಧನ ಕರುಗಳು, ಪೈರುಪಚ್ಚೆಗಳು ಸಂವೃದ್ಧಗೊಳ್ಳಲಿ ಎಂಬ ಸದಾಶಯವನ್ನು ಹೊಂದಿರುತ್ತವೆ. ನಂತರ ಪ್ರಸಂಗವು ಭಾಗವತರ ಮೂಲಕ ಪ್ರಾರಂಭವಾಗುತ್ತದೆ.

ಪ್ರಸಂಗ ಮುಗಿಸಿ ಮುಂದಿನ ದಾರಿ ಹಿಡಿಯುವ ಈ ತಂಡವು ಬಾಲಕರಿಗೆ ಅನಾರೋಗ್ಯದಂತಹ ಅನಾನುಕೂಲ ಸಂದರ್ಭ ಬಂದಲ್ಲಿ ಬದಲಿ ವ್ಯವಸ್ಥೆಗಾಗಿ, ತಂಡವು ಮತ್ತೊಂದು ಜೊತೆ ಬಾಲಕರನ್ನು ಸಹ ಹೊಂದಿದ್ದು ಸೂಕ್ತ ಸಮಯದಲ್ಲಿ ಉಪಯೋಗಿಸಿಕೊಳ್ಳುತ್ತವೆ.

!!ನಡೆಯುಂಟು ಕೆಲವರಿಗೆ ನುಡಿವ ಗುಣವಿಲ್ಲ,
ನುಡಿಯುಂಟು ಕೆಲವರಿಗೆ ನಡೆವ ಗುಣವಿಲ್ಲ,
ನಡೆ ನುಡಿಗಳುಂಟು ಕೊಡುವ ಗುಣವಿಲ್ಲ,
ನಡೆ ನುಡಿಯು ಕೊಡುವ ಗುಣ ನಿಮಗಿಲ್ಲದಿಲ್ಲ!!

ಎಂದು ದಾನಿಗಳ ಬಗ್ಗೆ, ಯಜಮಾನನ್ನ ಒಲಿಸಿಕೊಳ್ಳುವ, ಮನುಷ್ಯಸ್ವ ಭಾವದ ಚಿತ್ರಣವನ್ನು ನಿಡುವುದರ ಮೂಲಕ ಹೂವಿನ ಕೋಲು ಕಲಾಪ್ರಕಾರದ ಜೊತೆಗಿರುವ ಇತರ ಭಾವನಾತ್ಮಕ ಸಂಬಂಧಗಳ ಸ್ವರೂಪವನ್ನು ಅನಾವರಣಗೊಳಿಸುತ್ತದೆ.

ಆಟಿಕಳೆಂಜ: ಆಟಿಕಳೆಂಜ ಎಂಬುದಕ್ಕೆ ಅದರದೇ ಆದ ವಿಶೇಷ ಅರ್ಥವಿದೆ. ಆಟಿ ಎಂದರೆ ಆಷಾಡ ಎಂದು ಕಳೆಂಜ ಎಂದರೆ ದುಷ್ಟ ಶಕ್ತಿಗಳನ್ನು ಕಳೆಯುವವ ಎಂದು ಅರ್ಥ. ಆಷಾಡದ ತಿಂಗಳಲ್ಲಿ ನಡೆಯುವ ಕುಣಿತ ಎಂದು ಅರ್ಥ. ತುಳು ನಾಡಿನಲ್ಲಿ ಕಂಡು ಬರುವ ಸಂಗೀತಪ್ರಧಾನ ವಾದ ಜನಪದ ಪ್ರಕಾರಗಳಲ್ಲಿ ಈ ಕುಣಿತವೂ ಒಂದು. ಸಾಮಾನ್ಯವಾಗಿ ತುಳು ನಾಡಿನಲ್ಲಿ ನಲಿಕೆ ಎಂಬ ಜನಾಂಗದಲ್ಲಿ ಇದು ಕಂಡು ಬರುತ್ತದೆ. ಹಾಗೆಯೇ ಬೆಳ್ತಂಗಡಿ ತಾಲ್ಲೂಕಿನಲ್ಲಿ ಇದು ಮುಗೇರ ಅಥವಾ ಮೇರ ಜನಾಂಗದಲ್ಲಿ ಕಂಡುಬರುತ್ತದೆ.

ಮನುಷ್ಯನಾಗಲಿ, ಪ್ರಾಣಿಗಳಿಗಾಗಲಿ ಬರುವ ಮಾರಿರೋಗವನ್ನು ಓಡಿಸುವುದು ಈ ಪ್ರಕಾರದ ಉದ್ದೇಶ. ಇದು ಈ ಪ್ರಕಾರದಲ್ಲಿ ಬಳಕೆಯಾಗುವ ಪಾಡ್ದನಗಳಿಂದ ತಿಳಿದು ಬರುತ್ತದೆ. ತುಳು ತಿಂಗಳಾದ ಆಟಿ ತಿಂಗಳಲ್ಲಿ ಅಂದರೆ ಆಷಾಡದ ತಿಂಗಳಲ್ಲಿ ಈ ಆಟಿಕಳಂಜನು ಬರುತ್ತಾನೆ. ಆಷಾಡದ ತಿಂಗಳಲ್ಲಿ ವಾತಾವರಣದಲ್ಲಿ ವೈತ್ಯಾಸ ಕಂಡುಬರುತ್ತದೆ. ಆಗ ಯಾವುದೇ ಕೃಷಿ ಉತ್ಪನ್ನಗಳು ಬೆಳೆದಿರುವುದಿಲ್ಲ. ಆದ್ದರಿಂದಲೇ ಈ ತಿಂಗಳನ್ನು ಬರಗಾಲದ ತಿಂಗಳು ಎಂದು ಕರೆಯುತ್ತಾರೆ. ಅಂದರೆ ಮಳೆಗಾಲದ ಆರಂಭ ಮತ್ತು ಬೇಸಿಗೆಯ ಕೊನೆಯ ಸಂಕ್ರಮಣದ ಕಾಲವಾದ್ದರಿಂದ ಆ ಸಂದರ್ಭದಲ್ಲಿ ಸಾಮಾನ್ಯವಾಗಿ ರೋಗರುಜಿನಗಳು ಹೆಚ್ಚಾಗಿ ಕಾಣಿಸಿಕೊಳ್ಳುವುದು ಸಾಮಾನ್ಯವಾದ್ದರಿಂದ ಆ ಸಂದರ್ಭದಲ್ಲಿ ಆಟಿಕಳೆಂಜನು ರೋಗಗಳನ್ನು ಕಳೆಯುವುದಕ್ಕಾಗಿ

ಅಥವಾ ಓಡಿಸುವುದಕ್ಕಾಗಿ ಮನೆ ಮನೆಗಳಿಗೆ ಬರುತ್ತಾನೆ. ಈತ ಬಂದರೆ ಊರಿಗೆ ಬಂದರೆ ರೋಗ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಜನಪದರಲ್ಲಿದೆ. ಈ ನಂಬಿಕೆಯೇ ಆಟಿಕಳೆಂಜನಿಗೆ ಆಷ್ಟು ಮಹತ್ವ ಸಿಗಲು ಕಾರಣವಾಗಿದೆ.

ಸಾಮಾನ್ಯವಾಗಿ ನಲಿಕೆ ಮತ್ತು ಮುಗೇರ ಜನಾಂಗದವರು ಆಟಿಕಳೆಂಜ ವೇಷವನ್ನು ಧರಿಸುತ್ತಾರೆ. ವೇಷವನ್ನು ಹಾಕುವಲ್ಲಿ ನಲಿಕೆಯವರು ಬಾಲಕರನ್ನು ಬಳಸುತ್ತಾರೆ ಅಂದರೆ ಇವರಲ್ಲಿ ಬಾಲಕರು ಮಾತ್ರ ವೇಷ ಹಾಕುತ್ತಾರೆ ಆದರೆ ಮುಗೇರ ಜನಾಂಗದಲ್ಲಿ ವಯಸ್ಕರಷ್ಟೇ ವೇಷ ಧರಿಸುಸುತ್ತಾರೆ. ವಿಶೇಷವೆಂದರೆ ಇವರು ಹಗಲಿನಲ್ಲಿ ಮಾತ್ರ ಇವರು ವೇಷ ಹಾಕುತ್ತಾರೆ. ನಲಿಕೆ ಯವರು ವಾದ್ಯವಾಗಿ ತೆಂಬರೆಯನ್ನು ಮುಗೇರರು ದುಡಿಯನ್ನು ಬಳಸುತ್ತಾರೆ. ಆಟಿಕಳೆಂಜ ವೇಷದ ಬಾಲಕ ಕೈಯಲ್ಲಿ ತಾಳೆಗರಿಯ ಛತ್ರಿಯನ್ನು ಹಿಡಿದುಕೊಂಡಿರುತ್ತಾನೆ. ಸೊಂಟಕ್ಕೆ ತೆಂಗಿನ ನಾರಿನ ತಿರಿ, ಕಾಲಿಗೆ ಗಗ್ಗರ ಅಥವಾ ಗೆಜ್ಜೆ, ಮೈಗೆಲ್ಲಾ ಬಣ್ಣ, ಮುಖಕ್ಕೆ ಗಡ್ಡ ಮತ್ತು ಮೀಸೆ, ತಲೆಗೆ ತೆಂಗಿನ ಹಾಳೆಯಿಂದ ಮಾಡಿದ ಹೂವಿನಿಂದ ಅಲಂಕಾರ ಮಾಡಿದ ಟೋಪಿ ಧರಿಸಿರುತ್ತಾನೆ. ಇಲ್ಲಿ ಮುಗೇರರಲ್ಲಿ ವೇಷವನ್ನ ಇಬ್ಬರು ಹಾಕುತ್ತಾರೆ. ಆದರೆ ನಳಿಕೆಯವರಲ್ಲಿ ಒಬ್ಬನೇ ವೇಷವನ್ನ ಹಾಕುತ್ತಾನೆ ಹಾಗೆಯೇ ಅವನ ಜೊತೆಯಲ್ಲಿರುವ ಮತ್ತೊಬ್ಬ ಪಾಡ್ದನಗಳನ್ನು ಹೇಳುತ್ತಿರುತ್ತಾನೆ.

ನಲಿಕೆಯವರ ಆಟಿಕಳೆಂಜ ಪ್ರಕಾರದಲ್ಲಿ ಸಂಪೂರ್ಣವಾಗಿ ಮಕ್ಕಳೇ ಪ್ರಧಾನವಾಗಿರುವ ಅಂಶ ತಿಳಿದು ಬರುತ್ತದೆ. ಜನಪದರಲ್ಲಿನ ನಂಬಿಕೆಗಳು, ಆ ನಂಬಿಕೆಗಳ ಮೇಲೆ ನಿಂತ ಆಚರಣೆಗಳು, ಆಚರಣೆಗೂ ಜನಜೀವನದ ಘಟನೆಗಳಿಗೂ ಇರುವ ಸಂಬಂಧ ಬಹಳ ನಿಕಟವಾದದ್ದು. ಅಂತಹವುಗಳಲ್ಲಿ ಆಟಿಕಳೆಂಜ ಕೂಡ ಒಂದು. ಇದರ ಬಹುಮುಖ್ಯ ಅಂಶವೆಂದರೆ ಸಂಗೀತ, ಕುಣಿತ ಮತ್ತು ಪಾಡ್ದನ. ಕುಣಿತಕ್ಕೆ ನಾಟಕೀಯ ರೂಪ ಕೊಡುವುದು ಪಾಡ್ದನಗಳು. ಪಾಡ್ದನಗಳು ವಿಶೇಷವಾಗಿ ವಿವಿಧ ಅರ್ಥಗಳನ್ನು ಒಳಗೊಂಡ ಮಾತುಗಾರಿಕೆಯ ಮಿಶ್ರಣದಿಂದ ಕಳೆಂಜದ ಸಂಭಾಷಣೆಗಳ್ಳಿಂದ್ದ ಕೂಡಿರುತ್ತದೆ. ಇದು ಒಂದು ಧಾರ್ಮಿಕ ಆಚರಣಾ ವಿಧಾನವಾದರೂ ಸಾಂಸ್ಕೃತಿಕ ಐತಿಹ್ಯವನ್ನು ಪಡೆದುಕೊಂಡ ಜನಪದ ಸಂಗೀತ ರಂಗ ಪ್ರಕಾರವಾಗಿದೆ. ರಂಗಭೂಮಿಯ ಎಲ್ಲಾ ಮಜಲುಗಳನ್ನು ಹೊಂದಿರುವ ಈ ಆಟಿಕಳೆಂಜದಲ್ಲಿ ಕಳಂಜನ ಪಾತ್ರ ನಿರ್ವಾಹಕ ಬಾಲಕ ಎಂಬುದು ಸ್ಪಷ್ಟ. ಮಕ್ಕಳಿಗಾಗಿ ಮಕ್ಕಳ ರಂಗಭೂಮಿ ಎಂಬ ಪ್ರತ್ಯೇಕ ಘಟಕದ ರೂಪ ನಿರ್ವಹಣೆಯಲ್ಲಿ ಸಾಮೂಹಿಕ ಪಾತ್ರಧಾರಿ ಕಳಂಜನ ಪಾತ್ರ ಹೆಚ್ಚು ಸಂಧರ್ಭ ಸೂಚಕವಾಗಿ ಲಭ್ಯವಿರುವ ಅಂಶವಾಗಿದೆ.

ಈ ಮೇಲೆ ಹೇಳಿರುವ ಯಕ್ಷಗಾನ ಜನಪದ ಪ್ರಕಾರ ಮತ್ತು ಅದರ ಉಪಪ್ರಕಾರಗಳು ಸಂಗೀತ ಪ್ರಧಾನವಾದ ಪ್ರಕಾರಗಳಾಗಿರುವುದು ಸ್ಪಷ್ಟವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಮಕ್ಕಳ ಭಾಗವಹಿಸುವಿಕೆಯು ಅತ್ಯಂತ ಪ್ರಮುಖವಾದ ಅಂಶವಾಗಿದ್ದು, ಅವರ ಮೂಲಕ ಒಂದು ಕಲಾಪ್ರಕಾರವೊಂದು ಶಿಷ್ಟತೆಯನ್ನು ಬದಿಗೊತ್ತಿ ಸಾಮಾಜಿಕ ಹಿತದ ನೆಲೆಯಲ್ಲಿ ಹೇಗೆ ನೆಲೆಯೂರಿತ್ತು ಮತ್ತು ರಂಗಭೂಮಿ ಹಾಗೂ ಮಕ್ಕಳು ಅದರ ನೆಲೆಯಲ್ಲಿ ಕಲೆಯೊಂದನ್ನು ಅವಲೋಕಿಸುವ, ಬೇರೆ ಬೇರೆ ದೃಷ್ಟಿಕೋನದಲ್ಲಿ ವಿಭಿನ್ನವಾಗಿ ಅರ್ಥೈಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಪರಾಮರ್ಶನ ಗ್ರಂಥಗಳು:

ಪುಸ್ತಕ: ಯಕ್ಷಗಾನ, ಲೇಖಕ: ಶಿವರಾಮಕಾರಂತ, ಮೈಸೂರು ೧೯೭೪.

ಪುಸ್ತಕ: ಭೂತಾರಾಧನೆ ಜನಪದೀಯ ಅಧ್ಯಯನ, ಲೇಖಕ: ಚನ್ನಪ್ಪಗೌಡ ಕೆ., ಮಂಗಳಗಂಗೋತ್ರಿ ೧೯೯೦.

ಪುಸ್ತಕ: ಕರ್ನಾಟಕ ರಂಗಭೂಮಿ, ಲೇಖಕ: ಆಚಾರ್ ಕೆ.ವಿ., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೬.

ಪುಸ್ತಕ: ಕನ್ನಡ ರಂಗಭೂಮಿ ವಿಕಾಸ, ಲೇಖಕ: ಹೆಚ್.ಕೆ. ರಾಮನಾಥ್, ಅಭಿನಯ ಪ್ರಕಾಶನ, ಮೈಸೂರು ೧೯೯೦.

ಪುಸ್ತಕ: ಕರ್ನಾಟಕ ಜನಪದ ಕಲೆಗಳು, ಸಂಪಾದಕರು: ಚನ್ನಬಸಪ್ಪ ಗೋ.ರು., ಕನ್ನಡ ಸಾಹಿತ್ಯ ಪರಿಷತ್ತು, ೧೯೭೭.

ಪುಸ್ತಕ: ಮನ್ವಂತರ-ಉತ್ತರ ಕರ್ನಾಟಕದ ಜನಪದ ರಂಗಭೂಮಿ, ಸಂಪಾದಕ: ಜೋಶಿ. ಜಿ.ಬಿ, ಮನ್ವಂತರ ಪ್ರಕಾಶನ, ಧಾರವಾಡ, ೧೯೭೫

ಪುಸ್ತಕ: ಯಕ್ಷಗಾನ ಬಯಲಾಟ, ಲೇಖಕ: ಶಿವರಾಮಕಾರಂತ, ಹರ್ಷ ಪ್ರಕಟಣಾಲಯ, ಪುತ್ತೂರು, ೧೯೭೩

ಪುಸ್ತಕ: ಸಮಗ್ರ ಯಕ್ಷಗಾನ ಪರಂಪರೆ ಮತ್ತು ಪ್ರಯೋಗ, ಲೇಖಕ: ಹರಿದಾಸಭಟ್ಟಾ ಕುಂಶಿ, ಗೀತಾಬುಕ್ ಹೌಸ್, ಮೈಸೂರು, ೧೯೭೮.

ಪುಸ್ತಕ: ಭರತನ ನಾಟ್ಯಶಾಸ್ತ್ರ ಕೆಲವು ವಿಮರ್ಶಾತ್ಮಕ ವಿಚಾರಗಳು, ಲೇಖಕ: ಆದ್ಯರಂಗಾಚಾರ್ಯ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೩.

ಸ್ವಾತಂತ್ರ್ಯಪೂರ್ವ ಕನ್ನಡ ಕಾವ್ಯ : ಸ್ತ್ರೀವಾದಿನೆಲೆಗಳು

ಡಾ. ಎಸ್. ಡಿ. ಶಶಿಕಲಾ

ಸಹಾಯಕ ಪ್ರಾಧ್ಯಾಪಕರು ಕನ್ನಡ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು

ಬ್ರಿಟಿಷ್ ವಸಾಹತುಶಾಹಿ ಸ್ಥಾಪನೆಗೆ ಮೊದಲು ಸನಾತನ ಮೌಲ್ಯಗಳು ಭಾರತದ ಪ್ರಧಾನ ಸಾಂಸ್ಕೃತಿಕ ಧಾರೆಗಳಾಗಿ ಭಾರತದ ಸಮುದಾಯವನ್ನು ಆಳುತ್ತಿದ್ದುದನ್ನು ನಾವು ಅಲ್ಲಗಳೆಯಲಾಗುವುದಿಲ್ಲ. ವಸಾಹತುಶಾಹಿಯ ನಂತರದ ಬೆಳವಣಿಗೆಯಲ್ಲಿ ಸನಾತನ ಮೌಲ್ಯಗಳು ಪ್ರಶ್ನಾರ್ಹವಾದವು ಮತ್ತು ಪುನರ್‌ಮೌಲ್ಯಮಾಪನಕ್ಕೆ ಒಳಗಾದವು. ಸನಾತನ ಮೌಲ್ಯಗಳ ಭಾಗವಾಗಿ ಆಸ್ತಿತ್ವದಲ್ಲಿದ್ದ ಸ್ತ್ರೀವಿರೋಧಿ ನಿಲುವುಗಳು ಚರ್ಚೆಗೆ ಒಳಗಾದವು. ಇವು ಭಾರತದ ಸಮುದಾಯದ ಮೇಲೆ ಬೀರಿದ ದುಷ್ಪರಿಣಾಮಗಳನ್ನು ಮುಖ್ಯ ನೆಪವಾಗಿಟ್ಟುಕೊಂಡು ಬ್ರಿಟಿಷ್ ಆಡಳಿತ ಭಾರತವನ್ನು ಒಡೆದು ಆಳುವ ನೀತಿಗೆ ಒಳಪಡಿಸಿತು. ಇದರಿಂದ ಭಾರತದ ಉದ್ದಗಲಕ್ಕೂ ಎಚ್ಚೆತ್ತ ಚಿಂತಕವರ್ಗ ಕಾರ್ಯ ಪ್ರವೃತ್ತವಾಯಿತು. ಈಶ್ವರಚಂದ್ರ ವಿದ್ಯಾಸಾಗರ್, ರಾಜಾರಾಂ ಮೋಹನರಾಯ್, ದಯಾನಂದ ಸರಸ್ವತಿ, ಲೋಹಿಯಾ, ಪೇರಿಯಾರ್, ವೀರೇಶಲಿಂಗಂ ಪಂತುಲು – ಮೊದಲಾದವರಿಂದಾಗಿ ಸ್ತ್ರೀ ಶಿಕ್ಷಣ, ವಿಧವಾ ವಿವಾಹ ಪ್ರತಿಪಾದನೆ ವರದಕ್ಷಿಣೆ ಸತಿ ಪದ್ಧತಿಯ ವಿರೋಧಗಳು ಕಾಣಿಸಿಕೊಂಡು ಸ್ತ್ರೀಪರವಾದ ಒಂದು ಚಳವಳಿ ಭಾರತದ ಆಂತರ್ಯದಲ್ಲಿ ಬೆಳವಣಿಗೆಯನ್ನು ಪಡೆಯಿತು.

೧೯೭೦ರ ದಶಕದ ವೇಳೆಗೆ Feminismಗೆ ಸಂವಾದಿಯಾಗಿ ಕರ್ನಾಟಕದಲ್ಲಿ ಬೆಳೆದ 'ಸ್ತ್ರೀವಾದ', ಸ್ತ್ರೀಪರ ಚಿಂತನೆಗಳಿಗೆ – ಚರ್ಚೆಗೆ ಅನುವು ಮಾಡಿತು. ನಮ್ಮ ಕಾಲದ ಸ್ತ್ರೀ ಕೇಂದ್ರಿತ ಚಿಂತನೆಗಳನ್ನು ಕನ್ನಡ ಸಾಹಿತ್ಯದ ಓದಿನ ಮೂಲಕ ಕಂಡುಕೊಳ್ಳುವ ಅರ್ಥೈಸಿಕೊಳ್ಳುವ ಅದನ್ನು ಮರು ಚಿಂತನೆಗೆ ಒಳಪಡಿಸುವ ಅಧ್ಯಯನ ಕ್ರಮಗಳು ಬೆಳೆದು ಬಂದಿತು. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಪೂರ್ವದ ಪ್ರಾತಿನಿಧಿಕ ಕಾವ್ಯಗಳನ್ನಿಟ್ಟುಕೊಂಡು ಸ್ತ್ರೀವಾದಿ ಚಿಂತನೆಯನ್ನು ಗುರುತಿಸುವ ಪ್ರಯತ್ನ ಇಲ್ಲಿದೆ.

ಸ್ವಾತಂತ್ರ್ಯಪೂರ್ವ ಕನ್ನಡ ಕಾವ್ಯ ಕುರಿತ ಹಲವು ಬರಹಗಳನ್ನು ಗಮನಿಸಿದಾಗ ಏಕಮುಖಚಿಂತನೆಗಳಾಗಿ ಕಂಡುಬರುತ್ತವೆ. ವ್ಯಾಖ್ಯಾನ ಅನುಕೂಲಕ್ಕಾಗಿ ಸಮರ್ಥನೆಗಾಗಿ ಕಾವ್ಯದ ಒಂದು ಸಾಲು, ಒಂದು ಸಂದರ್ಭವನ್ನು ಇಟ್ಟುಕೊಂಡು 'ಇದು ಈ ಕಾವ್ಯದ ಧೋರಣೆ' ಇದು ಆ ಕಾಲದ ಮೌಲ್ಯ ಎಂದು ತೀರ್ಮಾನದಂತೆ ಹೇಳುವ ಅಪಾಯವನ್ನು ಸೂಚಿಸುತ್ತದೆ. ಪಂಪನಿಂದ ಆರಂಭವಾದ ಕನ್ನಡ ಕಾವ್ಯಗಳು Heroic Poetry ಗಳಾಗಿವೆ. ನಾಯಕ ಪ್ರಧಾನವಾದ ಕಾವ್ಯಗಳು ಸ್ತ್ರೀ ಕೇಂದ್ರಿತ ನಿಲುವುಗಳನ್ನು ಆನುಷಂಗಿಕವಾಗಿ ಹೊಂದಿರಲು ಸಾಧ್ಯವೇ ಹೊರತು ಇಡಿಯಾಗಿ ಅಭಿವ್ಯಕ್ತಿಸಲು ಸಾಧ್ಯವಿಲ್ಲ. ಹಾಗಾಗಿ ಸ್ತ್ರೀ ಕೇಂದ್ರಿತ ನಿಲುವುಗಳನ್ನು ಈ ಪರಿಧಿಯಲ್ಲಿಯೇ ಗ್ರಹಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯಪೂರ್ವ ಕನ್ನಡ ಕಾವ್ಯ : ಸ್ತ್ರೀವಾದಿ ನೆಲೆಗಳು ಪ್ರಬಂಧವನ್ನು ಇಲ್ಲಿ ಮಂಡಿಸಲಾಗುತ್ತದೆ.

ಬ್ರಿಟಿಷ್ ವಸಾಹತುಶಾಹಿ ಸ್ಥಾಪನೆಗೆ ಮೊದಲು ಸನಾತನ ಮೌಲ್ಯಗಳು ಭಾರತದ ಪ್ರಧಾನ ಸಾಂಸ್ಕೃತಿಕ ಧಾರೆಗಳಾಗಿ ಭಾರತದ ಸಮುದಾಯವನ್ನು ಆಳುತ್ತಿದ್ದುದನ್ನು ನಾವು ಅಲ್ಲಗಳೆಯಲಾಗುವುದಿಲ್ಲ. ವಸಾಹತುಶಾಹಿಯ ನಂತರದ ಬೆಳವಣಿಗೆಯಲ್ಲಿ ಸನಾತನ ಮೌಲ್ಯಗಳು ಪ್ರಶ್ನಾರ್ಹವಾದವು ಮತ್ತು ಪುನರ್‌ಮೌಲ್ಯಮಾಪನಕ್ಕೆ ಒಳಗಾದವು. ಸನಾತನ ಮೌಲ್ಯಗಳ ಭಾಗವಾಗಿ ಆಸ್ತಿತ್ವದಲ್ಲಿದ್ದ ಸ್ತ್ರೀವಿರೋಧಿ ನಿಲುವುಗಳು ಚರ್ಚೆಗೆ ಒಳಗಾದವು. ಇವು ಭಾರತದ ಸಮುದಾಯದ ಮೇಲೆ ಬೀರಿದ ದುಷ್ಪರಿಣಾಮಗಳನ್ನು ಮುಖ್ಯ ನೆಪವಾಗಿಟ್ಟುಕೊಂಡು ಬ್ರಿಟಿಷ್ ಆಡಳಿತ ಭಾರತವನ್ನು ಒಡೆದು ಆಳುವ ನೀತಿಗೆ ಒಳಪಡಿಸಿತು. ಇದರಿಂದ ಭಾರತದ ಉದ್ದಗಲಕ್ಕೂ ಎಚ್ಚೆತ್ತ ಚಿಂತಕವರ್ಗ ಕಾರ್ಯ ಪ್ರವೃತ್ತವಾಯಿತು. ಈಶ್ವರಚಂದ್ರ ವಿದ್ಯಾಸಾಗರ್, ರಾಜಾರಾಂ ಮೋಹನರಾಯ್, ದಯಾನಂದ ಸರಸ್ವತಿ, ಲೋಹಿಯಾ, ಪೆರಿಯಾರ್, ವೀರೇಶಲಿಂಗಂ ಪಂತುಲು – ಮೊದಲಾದವರಿಂದಾಗಿ ಸ್ತ್ರೀ ಶಿಕ್ಷಣ, ವಿಧವಾ ವಿವಾಹ ಪ್ರತಿಪಾದನೆ ವರದಕ್ಷಿಣೆ ಸತಿ ಪದ್ಧತಿಯ ವಿರೋಧಗಳು ಕಾಣಿಸಿಕೊಂಡು ಸ್ತ್ರೀಪರವಾದ ಒಂದು ಚಳವಳಿ ಭಾರತದ ಆಂತರ್ಯದಲ್ಲಿ ಬೆಳವಣಿಗೆಯನ್ನು ಪಡೆಯಿತು.

೧೯೭೦ರ ದಶಕದ ವೇಳೆಗೆ Feminismಗೆ ಸಂವಾದಿಯಾಗಿ ಕರ್ನಾಟಕದಲ್ಲಿ ಬೆಳೆದ 'ಸ್ತ್ರೀವಾದ', ಸ್ತ್ರೀಪರ ಚಿಂತನೆಗಳಿಗೆ – ಚರ್ಚೆಗೆ ಅನುವು ಮಾಡಿತು. ನಮ್ಮ ಕಾಲದ ಸ್ತ್ರೀ ಕೇಂದ್ರಿತ ಚಿಂತನೆಗಳನ್ನು ಕನ್ನಡ ಸಾಹಿತ್ಯದ ಓದಿನ ಮೂಲಕ ಕಂಡುಕೊಳ್ಳುವ ಅರ್ಥೈಸಿಕೊಳ್ಳುವ ಅದನ್ನು ಮರು ಚಿಂತನೆಗೆ ಒಳಪಡಿಸುವ ಅಧ್ಯಯನ ಕ್ರಮಗಳು ಬೆಳೆದು ಬಂದಿತು. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಪೂರ್ವದ ಪ್ರಾತಿನಿಧಿಕ ಕಾವ್ಯಗಳನ್ನಿಟ್ಟುಕೊಂಡು ಸ್ತ್ರೀವಾದಿ ಚಿಂತನೆಯನ್ನು ಗುರುತಿಸುವ ಪ್ರಯತ್ನ ಇಲ್ಲಿದೆ.

ಸ್ವಾತಂತ್ರ್ಯಪೂರ್ವ ಕನ್ನಡ ಕಾವ್ಯ ಕುರಿತ ಹಲವು ಬರಹಗಳನ್ನು ಗಮನಿಸಿದಾಗ ಏಕಮುಖಚಿಂತನೆಗಳಾಗಿ ಕಂಡುಬರುತ್ತವೆ. ವ್ಯಾಖ್ಯಾನ ಅನುಕೂಲಕ್ಕಾಗಿ ಸಮರ್ಥನೆಗಾಗಿ ಕಾವ್ಯದ ಒಂದು ಸಾಲು, ಒಂದು ಸಂದರ್ಭವನ್ನು ಇಟ್ಟುಕೊಂಡು 'ಇದು ಈ ಕಾವ್ಯದ ಧೋರಣೆ' ಇದು ಆ ಕಾಲದ ಮೌಲ್ಯ ಎಂದು ತೀರ್ಮಾನದಂತೆ ಹೇಳುವ ಅಪಾಯವನ್ನು ಸೂಚಿಸುತ್ತದೆ. ಪಂಪನಿಂದ ಆರಂಭವಾದ ಕನ್ನಡ ಕಾವ್ಯಗಳು Heroic Poetry ಗಳಾಗಿವೆ. ನಾಯಕ ಪ್ರಧಾನವಾದ ಕಾವ್ಯಗಳು ಸ್ತ್ರೀ ಕೇಂದ್ರಿತ ನಿಲುವುಗಳನ್ನು ಆನುಷಂಗಿಕವಾಗಿ ಹೊಂದಿರಲು ಸಾಧ್ಯವೇ ಹೊರತು ಇಡಿಯಾಗಿ ಅಭಿವ್ಯಕ್ತಿಸಲು ಸಾಧ್ಯವಿಲ್ಲ. ಹಾಗಾಗಿ ಸ್ತ್ರೀ ಕೇಂದ್ರಿತ ನಿಲುವುಗಳನ್ನು ಈ ಪರಿಧಿಯಲ್ಲಿಯೇ ಗ್ರಹಿಸಬೇಕಾಗುತ್ತದೆ.

ಲಿಂಗಸಮಾನತೆಯ ಆಶಯಗಳು : ಪಂಪನ ಆದಿಪುರಾಣದಲ್ಲಿ ಶ್ರೀಮತಿ – ವಜ್ರಜಂಘರ ವಿವಾಹವಾಗಿ ಅವರನ್ನು ಕಳಿಸಿಕೊಡುವಾಗ ವಜ್ರದಂತ ಮಹಾರಾಜ ಅಳಿಯನಿಗೆ ನಿವೇದಿಸಿಕೊಳ್ಳುವ ಲಕ್ಷ್ಮೀಮತಿ ರಾಣಿ ಮಗಳು ಶ್ರೀಮತಿಗೆ ತಿಳಿಹೇಳುವ ಮಾತುಗಳನ್ನು ನಿದರ್ಶನಕ್ಕೆ ತೆಗೆದುಕೊಳ್ಳಬಹುದು. ವಜ್ರದಂತರಾಜ ಅಳಿಯ ವಜ್ರಜಂಘನಿಗೆ ಕೋರುವುದು :

"ಬಗೆದುಂ ನಿನ್ನವ್ವವಾಯೋನ್ನತಿಯಾನಿವಳತಿಸ್ನೇಹ ಸಂಬಂಧಮಂ
ನೀಂ ಬಗೆದುಂ ಸಂದೆಮ್ಮ ನಣ್ಪಂ ಬಗೆದು ಮಱೆಯದೇನಾನುಮೆಂ
ದಾಗಳುಂಮೆಲ್ಲನೆ ನೀಂ ಕಲ್ಪಿಪ್ಪುದೆಮ್ಮಂ ನೆನೆದೆರ್ದೆಗಿಡದಂತಾಗಿ
ಪಾಲಿಪ್ಪುದಿಂತೀ ಮೃಗಶಾಬೇಕ್ಷಣಿಯಂ ಮನ್ನಿಸುವುದಿನಿತನಾಂ ಬೇಡಿದೆಂ
ವಜ್ರಜಂಘಾ" (೪–೫೫)

ಲಕ್ಷ್ಮೀಮತಿ ರಾಣಿ ಮಗಳು ಶ್ರೀಮತಿಗೆ ತಿಳಿಹೇಳುವ ಮಾತು:

"ಮನಮಱಿದಂಜಿ ಬೆರ್ಚ್ಚಿ ಬೆಸಕೆಯ್ ನಿಜವಲ್ಲಭನೇನನೆಂದೊಡಂ
ಕಿನಿಸದಿರೊಂದಿದಗ್ರ ಮಹಿಷೀ ಪದದಲ್ಲಿ ಪದಸ್ಥೆಯಾಗು
ನಂದನರನಗಣ್ಯಪುಣ್ಯಧನರಂ ಪಡೆಯೆಂದಮರ್ದಪ್ಪಿಕೊಂಡುತ್ತ
ತ್ತನುಜೆಯಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ"
(೪–೫೬)

ಪುರುದೇವ ತನ್ನ ಮಕ್ಕಳಾದ ಬ್ರಾಹ್ಮಿ ಮತ್ತು ಸುಂದರಿಯರಿಗೆ ಗಣಿತ, ವ್ಯಾಕರಣ ಮೊದಲಾದ ಶಿಕ್ಷಣ ನೀಡಿದ ಉಲ್ಲೇಖಗಳಿವೆ.

ಹೆಣ್ಣು ಭೋಗದ ವಸ್ತು : ಹೆಣ್ಣನ್ನು ಭೋಗದ ವಸ್ತುವನ್ನಾಗಿ ನಮ್ಮ ಪರಂಪರೆ ಗ್ರಹಿಸಿದೆ ಎಂದು ವ್ಯಾಖ್ಯಾನ ಮಾಡಿಕೊಳ್ಳುವಾಗಲೇ ಆದಿಪುರಾಣದ ಭರತ ಬಾಹುಬಲಿಯರ ಪ್ರಸಂಗ ವೈರುಧ್ಯದ ನೆಲೆಗಳನ್ನು ತೆರೆದಿಡುತ್ತದೆ. ಬಾಹುಬಲಿಯು ಭರತನನ್ನು ಸೋಲಿಸಿದ ನಂತರ ಹೇಳುವ ಮಾತು :

"ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀಭಟಖಡ್ಗ ಮಂಡಲೋತ್ಪಲವನ
ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂವಲಯಮನಯ್ಯ
ನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀನೊಲಿದ ಲತಾಂಗಿಗಂ
ಧರೇಗಮಾಟಿಸಿದಂದು ನೆಗಳ್ತೆ ಮಾಸದೇ" ಹೆಣ್ಣು ಭೋಗದ ವಸ್ತು ಅನ್ನುವುದನ್ನು ಭರತನ ಸಂದರ್ಭದಲ್ಲಿ ಒಪ್ಪಿಕೊಳ್ಳುವ ಹೊತ್ತಿಗೇ ಬಾಹುಬಲಿಯ ಸಂದರ್ಭದಲ್ಲಿ ನಿರಾಕರಣೆಗೆ ಒಳಗಾಗುತ್ತದೆ. ಇಂದಿನ ಜಾಗತೀಕರಣದ ಭೋಗಸಂಸ್ಕೃತಿಯ ಕಾಲದಲ್ಲಿ ಬದುಕುತ್ತಿರುವ ನಮಗೆ

ಪಂಪ ಹೇಳುವ ಭೋಗದ ನಿರಾಕರಣೆ ಪ್ರಸ್ತುತವೂ ಚಿಂತನಾರ್ಹವೂ ಆಗಿದೆ.

ರಾಜ ಪ್ರಭುತ್ವ – ಪಿತೃ ಪ್ರಧಾನತೆ: ರಾಜ್ಯಪ್ರಭುತ್ವ, ಪಿತೃಪ್ರಧಾನತೆಗಳು ಹೆಣ್ಣನ್ನು ಅಧೀನತೆಯ ಅಡಿಯಲ್ಲಿ ನಡೆಸಿಕೊಳ್ಳುವ ಬಗೆ ಶಂತನು ಸತ್ಯವತಿ ಪ್ರಸಂಗದಲ್ಲಿದೆ.

"ಮೃಗಯಾ ವ್ಯಾಜದಿನೊರ್ಮೆ ಶಂತನುಂ ತೋಟಿಲ್ತರ್ಪಂಪಳಂಚಲ್ಕೆ ತನ್ನಗಶಾಬಾಕ್ಷಿಯ ಕಂಪು ತಟ್ಟಿ ಮಧುಪಂಬೋಲ್ ಸೋಲ್ತುಕಂಡೊಲ್ದು ನಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು ನೀನ್ ಬಾ ಪೋಪಮೆಂದಂಗೆ ಮೆಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೆ" (೧–೭೦)

ವೈವಾಹಿಕ ಸ್ವಾತಂತ್ರ್ಯ ಹೆಣ್ಣಿಗಿರಲಿಲ್ಲವೆಂಬುದನ್ನು ಅರಸೊತ್ತಿಗೆ ಮತ್ತು ಪಿತೃಪ್ರಧಾನತೆಯ ಈ ಸನ್ನಿವೇಶ ಕಾಣಿಸುತ್ತದೆ.

ವಿವಾಹೋತ್ತರ ಸಂಬಂಧಗಳ ಮಾನ್ಯತೆ : ವಿವಾಹೋತ್ತರ ಸಂಬಂಧಗಳು ಮಾನ್ಯತೆ ಪಡೆವ ಸಂಗತಿಗಳು ಪಂಪಭಾರತದಲ್ಲಿವೆ. ಮುನಿಕುಮಾರನ ಶಾಪಕ್ಕೆ ಗುರಿಯಾದ ಪಾಂಡು ಶತಶೃಂಗಕ್ಕೆ ಹೊರಟಾಗ ಪಾಂಡು ಕುಂತಿಗೆ ಮಕ್ಕಳನ್ನು ಪಡೆಯಲು ಸೂಚಿಸುತ್ತಾನೆ. ಮಕ್ಕಳನ್ನು ಪಡೆಯುವಲ್ಲಿ ತಾನು ಅಸಮರ್ಥ ಎಂದರಿತಾಗ ಬಂದ ಮಾತಿದು.

"ಚಿಂತೆಯಿದೇನೊ ಸಂತತಿಗೆ ಮಕ್ಕಳೆ ನೆಟ್ಟನೆ ಬಾರ್ತೆಯಪ್ಪೊಡಿನ್ನಿಂತಿರಬೇಡ ದಿವ್ಯ ಮುನಿಪುಂಗವರಂ ಬಗೆದೀರ್ಪಿನಂ ನಿಜಾತ್ಯಂತ ಪತಿವ್ರತಾ ಗುಣದಿನರ್ಚಿಸಿ ಮೆಚ್ಚಿಸು ನೀಂ ದಿಗಂತ ವಿಶ್ರಾಂತ ಯಶರ್ಕಳಂ ವರ ತನೂಭವರಂ ಪಡೆ ನೀಂ ತಳೋದರಿ"

ವಿವಾಹೋತ್ತರವಾದ ಹೆಣ್ಣಿನ ಸಂಬಂಧಗಳು ಅನೈತಿಕ ನೆಲೆಯಲ್ಲಿ ವ್ಯವಹರಿಸದೆ ಮಾನ್ಯತೆಗೆ ಒಳಪಟ್ಟಿರುವುದನ್ನು ಕಾಣಬಹುದು.

ಹೆಣ್ಣಿನ ಶೀಲ ಚಾರಿತ್ರ್ಯಗಳ ಮಾನ್ಯತೆ : ಕರ್ಣ ದುರ್ಯೋಧನ ಭಾನುಮತಿಯರ ಸಂದರ್ಭದಲ್ಲಿ ಅನಾವರಣಗೊಳ್ಳುತ್ತದೆ.

"ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ ಲಂಬಣಂ ಪಜೆಯೆ ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ ಏವಮಿಲ್ಲದೆ, ಇವಂ ಆಯ್ವುದೊ ತಪ್ಪದೆ ಪೇಟಿಮ್ ಎಂಬ ಭೂಪೋತ್ತನಂ ಬಿಸುಟ್ಟು ಇರದೆ ನಿಮ್ಮೊಳ ಪೊಕ್ಕೊಡೆ ಬೇಡನಲ್ಲೆನೆ (೯–೯೯)

ಈ ಪ್ರಸಂಗದ ಬಗ್ಗೆ ಬಂದಿರುವ ಹಲವು ಬರಹಗಳು ದುರ್ಯೋಧನ ಮತ್ತು ಕರ್ಣರ ಸ್ನೇಹದ ಪರಾಕಾಷ್ಠೆಯನ್ನು ಕುರಿತು ಹೇಳಿವೆ. ಇದರ ಆಂತರ್ಯದಲ್ಲಿಯೇ ಭಾನುಮತಿಯ ಶೀಲ ಚಾರಿತ್ರ್ಯಗಳ ಕುರಿತ ನೈತಿಕ ಚೌಕಟ್ಟಿನ ವಿಶ್ಲೇಷಣೆಯೂ ಸ್ತ್ರೀ ಸ್ವಾತಂತ್ರ್ಯದ ಧ್ವನಿಯೆ ಇಲ್ಲಿದೆ.

ಸಾಮಾಜಿಕ ನಡಾವಳಿ ಹೇರಿಕೆ: ರನ್ನನ ಅಜಿತ ತೀರ್ಥಕರ ಪುರಾಣ ತಿಲಕಲದ ಸತಿಹೋದ ಗುಂಡಮಬ್ಬೆಯ ಸಂದರ್ಭ ಸ್ತ್ರೀಯ ಮೇಲಿನ ಸಾಮಾಜಿಕ ನಡಾವಳಿಗಳ ಹೇರಿಕೆಯನ್ನು ಪ್ರತಿನಿಧಿಸಿದರೆ ಅತ್ತಿಮಬ್ಬೆಯ ಸಂದರ್ಭ ಹೆಣ್ಣಿನ ಔನ್ನತ್ಯದ ಪ್ರತೀಕವಾಗಿದೆ. ಚಾರಿತ್ರಿಕ ವ್ಯಕ್ತಿಯಾದ ಆಕೆಯ ಬಗ್ಗೆ ತಳೆದಿರುವ ಭಕ್ತಿ – ಗೌರವಗಳು ಯೆಥೇಚ್ಚವಾಗಿ ಬಂದಿದೆ. ಮಗಳಿಗೆ ಆ ಹೆಸರಿಡುವಲ್ಲಿಯೂ ಭಕ್ತಿ ವ್ಯಕ್ತವಾಗಿದೆ.

ಸಾಂಪ್ರದಾಯಿಕ ನೆಲೆಗಿಂತ ಭಿನ್ನ ನೆಲೆ : ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವ ಚಾಣಾಕ್ಷತೆಗೆ ಮತ್ತು ಹೆಣ್ಣನ್ನು ಸಾಂಪ್ರದಾಯಿಕ ವ್ಯಕ್ತಿತ್ವಕ್ಕಿಂತ ಭಿನ್ನವಾಗಿ ನೋಡುವ ಬಗೆ ರನ್ನನ ಗದಾಯುದ್ಧದ ದ್ರೌಪದಿಯಲ್ಲಿದೆ

"ಮಣಿಕನಕ ವಸ್ತು ವಿಭೂ
ಷಣಂಗಳಂ ಕೊಟ್ಟು ಪೆಂಡಿರೊಲ್ವರೆ ಗಂಡರ್
ಗುಣಮನೆ ಮೆಱೆವುದು ಶಸ್ತ
ವ್ರಣಮಂ ನಿನ್ನಂತೆ ಮೆಱೆವುದಿಱೆವಡೆಂಗಾ"

ತಾಯ್ತನದ ಪ್ರತೀಕ : ತಾಯ್ತನದ ಪ್ರತೀಕವಾಗಿ ಗಾಂಧಾರಿ ದುರ್ಯೋಧನನಿಗೆ ಹೇಳುವ ಮಾತು:

"ಸತ್ತಮಗಂದಿರ್ ಸತ್ತರ್
ನೀನೆಮಗುಳ್ಕೊಡೆ
ಸಾಲ್ವುದುವರನಂ ತಂದಪೆವೇ"
'ವೀರಶತಜನನಿಗೆ ದುಃಖಿಶತ ಜನನಿವೆಸರಾಯ್ತಿಗಳ್'

ಸ್ತ್ರೀಯ ವಿವಾಹೋತ್ತರ ಸಂಬಂಧಗಳು ನೈತಿಕ ಪ್ರಶ್ನೆ : ಇದು ಜನ್ನನ 'ಯಶೋಧರ ಚರಿತೆ'ಯ ಸಂದರ್ಭದಲ್ಲಿದೆ. ಅಮೃತಮತಿಯ ಪಾತ್ರ ಸಾಕಷ್ಟು ಚರ್ಚೆಗೊಳಗಾಗಿದ್ದು ಅಷ್ಟಾವಂಕನ ಜೊತೆಗಿನ ಸಂಬಂಧ ನಿಷೇಧಾತ್ಮಕ ನೆಲೆಯಲ್ಲಿ ಕಾಣಿಸಿಕೊಂಡಿದ್ದು. ನೈತಿಕ ಪ್ರಶ್ನೆಯಾಗಿ ಕಾಡಿದೆ. ಅಷ್ಟಾವಂಕನ ಪಾತ್ರ ಪರಸ್ತ್ರೀಯೊಬ್ಬಳಲ್ಲಿ ರಮಿಸುವ ಸಂದರ್ಭ ಚರ್ಚೆಗೆ ಗ್ರಾಸವಾಗದೆ ಕೇವಲ ಅಮೃತಮತಿಯ ನಡಾವಳಿ ಮುಖ್ಯ ಚರ್ಚೆಗೆ ಒಳಗಾಗಿದೆ. ಸಾಹಿತ್ಯ ಚರಿತ್ರೆಗಳೆಲ್ಲ ಪುನರ್ರಚನೆಗೊಳಗಾಗಬೇಕಾಗಿದೆ. ತೀನಂಶ್ರೀ 'ಜನ್ನನ ಯಶೋಧರ ಚರಿತೆಯಲ್ಲಿ ಪ್ರಣಯ ನಿರೂಪಣೆ' ಎಂಬ ಲೇಖನ ಬರೆದರೆ ಕುವೆಂಪು 'ಜನ್ನನ ಯಶೋಧರ ಚರಿತೆಯಲ್ಲಿ ಕಾಮವಿಕಾರ ನಿರೂಪಣೆಯ ಉದ್ದೇಶ' ಎಂದು ಬರೆಯುತ್ತಾರೆ. ಅಮೃತಮತಿಯ ಬಗ್ಗೆ ಅನುಕಂಪ ತೋರುವುದು ಬಾಲಿಶಾನುಕಂಪೆ, ಅಪರಾಧ ಎನ್ನುವುದಲ್ಲದೆ ಆಕೆ ಕುಲಟೆ, ಹಂದಿ ಎನ್ನುತ್ತಾರೆ. ಯಶೋಧರನ ಊರ್ಧ್ವಗಾಮಿ ನಡೆಗೆ ಅಮೃತಮತಿಯ ಅಧೋಗಾಮಿ ನಡೆಗೆ ಕಾರಣವಾಗುವುದನ್ನು ಹೇಳುತ್ತಾರೆ.

೧೨ನೇ ಶತಮಾನದ ಅಕ್ಕಮಹಾದೇವಿ: ಅಕ್ಕಮಹಾದೇವಿಯಿಂದ ರಚಿತವಾದ ವಚನಗಳಿಗಿಂತ ಅಕ್ಕನನ್ನು ಕುರಿತು ಬಂದ ಕಾವ್ಯದ ಚರ್ಚೆ ನನಗೆ ಮುಖ್ಯವಾಗುತ್ತದೆ. ೧೨ನೇ ಶತಮಾನದ ಚಳವಳಿ ಅಕ್ಕನನ್ನು ಅಮಾನವೀಯವಾಗಿ ನಡೆಸಿಕೊಂಡಿತಲ್ಲದೆ ಲಿಂಗ ಅಸಮಾನತೆಯ ಪ್ರತೀಕವಾಗಿ ಅಕ್ಕ ನಿಲ್ಲುತ್ತಾಳೆ.

ಶೂನ್ಯ ಸಂಪಾದನೆ:

ಅಕ್ಕನ identify ಪ್ರಶ್ನೆ : ಪತಿಯನ್ನು ತೋರೆಂದು ಶರಣಸನ್ನಿಹಿತ ಬಯಸಿ ಕಲ್ಯಾಣಕ್ಕೆ ಬಂದ ಅಕ್ಕಳ ಅಸ್ತಿತ್ವದ ಪ್ರಶ್ನೆ ಅಲ್ಲಮನನ್ನು ಕಾಡುವ ಬಗೆ ಹೀಗೆ : "ಉದಮದದ ಯೌವ್ವನವನೊಳಕೊಂಡ ಸತಿನೀನು ಇತ್ತಲೇಕೆ ಬಂದೆಯವ್ವ, ಸತಿ ಎಂದರೆ ಮುನಿವರು ನಮ್ಮ ಶರಣರು, ನಿನ್ನ ಪತಿಯ ಕುಱುಹ ಹೇಳಿದರೆ ಬಂದು ಕುಳ್ಳಿರು. ಅಲ್ಲದಡೆ ತೊಲಗು ತಾಯೆ. ನಮ್ಮ ಗೊಗೇಶ್ವರನ ಶರಣರಲ್ಲಿ ಸಂಗಸುಖ ಸನ್ನಿಹಿತವ ಬಯಸುವರೆ ನಿನ್ನ ಪತಿ ಯಾರೆಂಬುದು ಹೇಳಾ ಎಲೆಯವ್ವ" ಅಲ್ಲಮನ ಈ ಮಾತು ಹುಟ್ಟು ಹಾಕುವ ಪ್ರಶ್ನೆಗಳು ಹಲವು.

೧. ಅಕ್ಕಳ ಪತಿಯ ವಿಚಾರ ಶರಣರ ಸಂಗದ ಸನ್ನಿಹಿತಕ್ಕೆ ಬರಲು

ಚರ್ಚೆಗೆ ಗ್ರಾಸವಾಗುವುದರ ಹಿನ್ನೆಲೆ ಏನು?

೨. ಪತಿಯ ನಿರಾಕರಣೆ ಅಲ್ಲಮನನ್ನು ಕಾಡುವ ಅಗತ್ಯವೇನಿತ್ತು?

೩. ಸತಿ ಎಂದಾಗ ಶರಣರು ಮುನಿಯುವ ಕಾರಣವೇನು?

೪. ದಾಂಪತ್ಯದ ಪರಿಧಿಯಲ್ಲಿ ಮಾತ್ರ ಹೆಣ್ಣಿನ ಆಧ್ಯಾತ್ಮಕ್ಕೆ ಮಾನ್ಯತೆ ನೀಡುವ ಅನಧಿಕೃತ ನಿಯಮಗಳಿದ್ದವೆ?

೫. ಪುರುಷ ವರ್ಗ ತನ್ನ ಮೇಲೆ ತಾನು ನಂಬಿಕೆ ಕಳೆದುಕೊಂಡ ಹಿನ್ನೆಲೆಯಲ್ಲಿ ಮೂಡಿದ ಪ್ರಶ್ನೆಯೇ?

ಇದು ಕೇವಲ ಸ್ತ್ರೀ ಅಸ್ತಿತ್ವದ ಪ್ರಶ್ನೆಯಾಗುವುದಿಲ್ಲ ಶಿವತತ್ವವನ್ನು ವಿರೋಧಿಸಿದ ಭವಿಗಿಂತ ಶಿವತತ್ವವನ್ನು ಒಪ್ಪಿಕೊಂಡು ಅಕ್ಕ ಶ್ರೇಷ್ಠ ಎಂಬ ನಿಲುವು ಧರ್ಮ ಶ್ರೇಷ್ಠತೆಯನ್ನು ಎತ್ತಿ ಹಿಡಿಯಲು ಹೆಣಗುತ್ತದೆ.

ಅಕ್ಕ ಕಾಮಸಂಹಾರಿಯೇ ಅಲ್ಲವೆ? ಎಂಬುದನ್ನು ನಿರೂಪಿಸಬೇಕಾದ ಪ್ರಸಂಗ : ಕಿನ್ನರಿಬೊಮ್ಮಯ್ಯನಿಗೆ ಆದೇಶಿಸುವ ಅಲ್ಲಮ ಮತ್ತು ಬಸವಣ್ಣನವರ ನಿಲುವುಗಳು ಪ್ರಶ್ನಾರ್ಹವಾಗುತ್ತದೆ.

ಕಿನ್ನರಿ ಬೊಮ್ಮಯ್ಯ "ಬಾರೆಂದು ತುಡುಕಿ ಹಿಡಿಯಲಾ ಮಹಾದೇವಿ ನೀ ನೀವಿಂತು ಮುಂದುಗೆಡುವರೆ ನನ್ನ ತನುವನೊಪ್ಪಿಸಿಹೆನು ನಿನ್ನ ಮನಕ್ಕೆ ಎಂದಂತೆ ಮಾಡಿಕೊಳ್ಳೆಂದು ಒಪ್ಪಿಸಲಾತಂ..... ಯೋನಿಯೋಳಂಗುಲಿ ಪ್ರವೇಶವಂ ಮಾಡಲಲ್ಲಿ"

ಕಿನ್ನರಿ ಬೊಮ್ಮಯ್ಯನ ಪರೀಕ್ಷೆ ಅತ್ಯಾಚಾರಕ್ಕಿಂತ ಭಿನ್ನವಾಗುವುದಿಲ್ಲ. ಈ ಸಂದರ್ಭ ಅಕ್ಕನ ಚರಿತ್ರೆಯನ್ನು ಕಟ್ಟಿಕೊಡುವುದಕ್ಕಿಂತ ಪುರುಷರ ಚರಿತ್ರೆಯನ್ನು ಕಟ್ಟಿಕೊಡುತ್ತದೆ.

ಅಣ್ಣಾ ನಾನು ಹೆಂಗೂಸಲ್ಲ : ಅಣ್ಣ ನಾನು ಸೂಳೆಯಲ್ಲ
ಕಾಮನ ಗೆಲಿದೆನಯ್ಯ ಬಸವಣ್ಣಾ ನಿನ್ನ ದಯದಿಂದ
ಶ್ರೀಚರಣಕ್ಕೆಱಗಿದೆನಾಗಿ ಎನ್ನ ಹಣೆಯ ಲಿಖಿತ ತೊಡೆಯಿತ್ತು.

ಅಕ್ಕಮಹಾದೇವಿಯು ಪರೀಕ್ಷಾ ವಿಧಾನಗಳು ಸಾವಯಾಜಿಕ ಒಳಗೊಳ್ಳುವಿಕೆಯ ನೀತಿಯನ್ನು ಪ್ರತಿಮಿಸುತ್ತದೆ. (social inclusive policy)

ಈ ಒಳಗೊಳ್ಳುವಿಕೆಗೆ ಅಕ್ಕನ 'ಆಗುವಿಕೆ'ಯ ಪ್ರಕ್ರಿಯೆ (process) ಶೂನ್ಯ ಸಂಪಾದನೆಯ ಬಹುಮುಖ್ಯ ಅಂಶವಾಗಿದೆ. ಏಕೆಂದರೆ ಅವಳು ಇದ್ದಂತೆ ಇದ್ದ ಹಾಗೆ ಸಮಾಜದಲ್ಲಿ (ಶರಣರ ಸಂಗ) ಒಂದಾಗಲು ಸಾಧ್ಯವಿಲ್ಲ. ಅವಳು ತನ್ನನ್ನು ತಾನು ಸಾಬೀತು ಪಡಿಸಿ ಪುರುಷರು ಒಡ್ಡಿದ ಪರೀಕ್ಷೆಗಳಲ್ಲಿ ಗೆದ್ದು 'ಆಗುವಿಕೆ'ಗೆ ಒಳಪಡಬೇಕಾಗಿದೆ. ಕೊನೆಗೆ ಅವಳು

'ಬಸವಣ್ಣನ ಮನೆಯ ಮಗಳಾಗಿ
ಚೆನ್ನ ಬಸವೆಣ್ಣನ ತೊತ್ತಿನ ಮಗಳಾಗಿ
ಪ್ರಭುದೇವರ ತೊತ್ತಿನ ಮಗಳಾಗಿ
ಸಿದ್ಧರಾಮನ ಶಿಶುಮಗಳಾಗಿ
ಎಂಬ ಸಾಲುಗಳು ಆಗುವಿಕೆಯನ್ನು ಸೂಚಿಸುತ್ತದೆ

'ಶರಣರ ಪ್ರಸಾದದಿಂದ ಸರ್ವೇಂದ್ರಿಯಗಳು ಶುದ್ಧವಾಯಿತು 'ಎನ್ನನಾಗು' ಮಾಡಿದ ಕಾರಣ ಶರಣರಿಗೆ ತೊಡಿಗೆಯಾದೆನು (ಗೂ ಪು ೨೯೩) ಎಂಬ ಮಾತು ಇದಕ್ಕೆ ನಿದರ್ಶನ. ಹೀಗಾಗಿ ಬಸವಣ್ಣ ಹೇಳುವ ಮಾತು:

"ಹೊಗೂಸಿನಂಗವ ನೋಡಿದರೆ ಪುರಾತನರು ಬಾಲತನದಿಂಗವ ನೋಡಿರೇ ಪುರಾತನರು"..... ಬೀಸರ ವೋಗದಿಪ್ಪ ಇರವು ಎನ್ನುತ್ತಾರೆ. ಮಹಾದೇವಿಯಕ್ಕಂಗಾಯಿತು. (ಮೀಸಲಳಿಯದ ಕನ್ನೆತನ)

ಹರಿಹರನ ಅಕ್ಕಮಹಾದೇವಿರಗಳೆ : ೧. ಅಕ್ಕಮಹಾದೇವಿ ಕೌಶಿಕನೊಂದಿಗೆ ಸುಖಿಸುವ ವಿಚಾರ Romantic ಮಾದರಿಯ ಶೈಲಿಯಿದೆ (ಮೂರು ಬಾರಿ) ಅವನೇ ಬಟ್ಟೆಯನ್ನು ಕೊಡದಾಗ ನಿರ್ವಾಣದ ಸ್ಥಿತಿಯಲ್ಲಿ ಹೊರಡುವುದು

ಚಾಮರಸನ ಪ್ರಭುಲಿಂಗಲೀಲೆ: "ಮೀಸಲಳಿಯದ ಕನ್ನೆತನದಲ್ಲಿ ಶಿವನನಪ್ಪುವೊಡೆ ಲೇಸು ನಿಜಕುಲಕೋಟಿಗೆನುತವ ರೋಸರಿಸಿದರು ಬಳಿಕರತಿಸುಖ ವಾಸದಲಿ ಮಾದೇವಿ ನಡೆದಳು ಭಕ್ತಿ ಭಾವದಲಿ. ಕನ್ನೆತನದಲ್ಲಿ ಶಿವನನ್ನು ಸೇರುವಲ್ಲಿ ಅಡ್ಡಿಯಿಲ್ಲ ಎಂಬ ಮಾತು.

ಅಕ್ಕನ ವಚನ
ಚಂದನವ ಕಡಿದು ಕೊರೆದು ತೇದಡೆ
ನೊಂದೆನೆಂದು ಕಂಪ ಬಿಟ್ಟಿತೆ?
ಬಂಜೆಬೇನೆಯನರಿವಳೇ?
ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತೆಯ್ಯ

ಲಕ್ಷ್ಮೀಶ : ಸ್ವಮರುಕದ ದೃಷ್ಟಿ ಜೈಮಿನಿ ಭಾರತದ ಸೀತಾಪರಿತ್ಯಾಗದಲ್ಲಿದೆ 'ಕರುಣಾಳು ರಾಘವನಲ್ಲಿ ತಪ್ಪಿಲ್ಲ. ಕಡು ಪಾತಕಂಗೈದು ಪೆಣ್ಣಾಗಿ ಸಂಭವಿಸಿದೊಡಲಂ ಪೊರೆವುದೆನ್ನೊಳಪರಾಧಮುಂಟು' ಎನ್ನುವ ಮಾತಿನಲ್ಲಿದೆ. ಹೀಗಿದ್ದಾಗಲೂ ಜೈಮಿನಿ ಭಾರತದ ೧೬ನೇ ಸಂಧಿಗಳು ಸ್ತ್ರೀ ಸಾಮ್ರಾಜ್ಯವನ್ನು ಕುರಿತಂತೆ ವರ್ಣಿಸುತ್ತದೆ. ಇಲ್ಲಿನ ಸ್ತ್ರೀಯರು ಯುದ್ಧ ಪ್ರವೀಣರು, ಆಡಳಿತಗಾರರು, ಹೋರಾಟಗಾರರು, ಕವಿಯತ್ರಿಯರು, ಸ್ತ್ರೀ ಎಂದರೆ ಗೃಹಲಕ್ಷ್ಮಿ ಕರುಣಾಮಯಿ ..... ಮೊದಲಾದ ಪ್ರತೀಕಗಳಿಗಿಂತ ವಿಭಿನ್ನವಾಗಿ ಮೂಡಿಬಂದಿದ್ದಾರೆ. ಸ್ತ್ರೀ ರಾಜ್ಯದ ರಾಣಿ ಶಶಿಪ್ರಭೆ ಆಕೆಯ ಮಗಳು ಪ್ರಮಿಳೆ. ಶಶಿಪ್ರಭೆ ಸ್ತ್ರೀವಾದಿ ನಿಲವನ್ನು ಮೈಗೂಡಿಸಿಕೊಂಡವಳು, ಆಕೆಯ ಪ್ರಕಾರ ಜಗತ್ತಿನ ಶಾಸ್ತ್ರಗಳು, ಸ್ಥಿತಿಗಳು, ಶಾಸನಗಳೆಲ್ಲಾ ಪುರುಷ ನಿರ್ಮಿತವಾಗಿರುವುದರಿಂದ ಸ್ತ್ರೀಯರಿಗೆ ಎಲ್ಲೂ ಪ್ರಾಶಸ್ತ್ಯವಿಲ್ಲದೆ ಪುರುಷ ಪ್ರಧಾನ ಸಮಾಜವೇ ಅಸ್ತಿತ್ವದಲ್ಲಿರುವುದು. ಪುರುಷರನ್ನು ಧಿಕ್ಕರಿಸಿ ಅವರಿಗಿಂತಲೂ ಪ್ರಬಲವಾದ ಸಮೃದ್ಧವಾದ ರಾಜ್ಯವೊಂದನ್ನು ಕಟ್ಟಿ ಆಳಬೇಕೆಂಬ ಇಚ್ಛೆಯುಳ್ಳವಳು. 'ಘೋಕಕೂಪಿ' ಎಂಬ ದೈತ್ಯನ ಸಹಾಯದಿಂದ ಶಶಿಪ್ರಭೆ ಸ್ತ್ರೀ ರಾಜ್ಯವನ್ನು ನಿರ್ಮಿಸುತ್ತಾಳೆ.

'ರಾಯ ಕೇಳಾ ರಾಜ್ಯದೊಳ್ ಬರಿಯ ನಾರಿಯರ್ ಪ್ರಾಯತೆಯರಾಗಿ ಮಧುಪಾನ ಮತ್ತೆಯರಾಗಿ ಕಾಯಜ ಕಲಾಕೋವಿದೆಯರಾಗಿ ರೂಪ ಲಾವಣ್ಯ ವಿಲಸಿತೆಯರಾಗಿ ಗೇಯ ನರ್ತನ ವೇಣು ವೀಣಾ ವಿನೋದ ರವಣೀಯು ಭೋಗಾನ್ವಿತೆಯರಾಗಿ ಮತ್ತದರೊಳಾ ಸ್ತ್ರೀಯೋರ್ವಳರಸಾಗಿರಲ್ಕವಳ ಕೆಳಗಾಗಿ ಬದುಕುವರ್ ಭಾಗ್ಯದಿಂದೆ

೧೨ನೇ ಶತಮಾನದ ಸಂಚಿಹೊನ್ನಮ್ಮಳ ಹದಿಬದೆಯ ಧರ್ಮ

ಧರಣಿದೇವಿ ಮಾಲಗತ್ತಿ "ದಾಂಪತ್ಯ ಜೀವನವನ್ನು ನಡೆಸದ ಹೊನ್ನಮ್ಮ ನಿಜ ಅರ್ಥದಲ್ಲಿ ಹದಿಬದೆಯಲ್ಲ. ಪತಿಯೇ ಇಲ್ಲದ ಮೇಲೆ ಪತಿವ್ರತೆ ಎನ್ನುವ ಶಬ್ದಕ್ಕೆ ಅರ್ಥವಿಲ್ಲ. ಹಾಗಿದ್ದರೆ ಹೊನ್ನಮ್ಮ ಹೊರಗೆಡಹಿದ್ದು ಸ್ತ್ರೀಯ ಸತ್ಯವನ್ನಲ್ಲ ಪುರುಷರಿಗೆ ಪ್ರಿಯವಾದ ಕಲ್ಪನೆಯನ್ನು ..... ಪುರುಷಾನುಕೂಲದ ಸೂಕ್ತಿಗಳನ್ನು ಹೊನ್ನಮ್ಮನ ಕೈಯಿಂದ ಬರೆಸಿದ

ತಲೆ ಅಳಸಿಂಗರಾರ್ಯರದು."

ರಂ.ಶ್ರೀ.ಮುಗಳಿ : "ಹೊನ್ನಮ್ಮನೇ ಈ ಕೃತಿಯನ್ನು ರಚಿಸಿದಳೇ ಅಥವಾ ಬೇರೊಬ್ಬ ಕವಿ ಇದನ್ನು ಬರೆದು ಅವಳ ಮೇಲೆ ಕರ್ತೃತ್ವದ ಆರೋಪ ಮಾಡಿರುವನೇ ಎಂಬ ಸಂಶಯಕ್ಕೆ ಆಸ್ಪದವುಂಟಾಗಿದೆ. ಅವಳ ಗುರುವಾದ ಸಿಂಗಾರಾರ್ಯನೇ ಇದನ್ನು ಬರೆದಿರಬಹುದೆಂಬ ಅನುಮಾನಕ್ಕೆ ಎಡೆಯಿದೆ."

ಪತಿ, ಅತ್ತೆ–ಮಾವ, ತಂದೆ ತಾಯಿ ಎಲ್ಲರೂ ಹೆಣ್ಣನ್ನು ನಡೆಸಿಕೊಳ್ಳಬೇಕಾದ ರೀತಿಯನ್ನು ವಿವರಿಸಿದ್ದಾಳೆ.

ವಿಜಯಾದಬ್ಬೆ : ಹೊನ್ನಮ್ಮನ ಕವಿ ಮಾತಿಗೆ ಪ್ರತಿಕ್ರಿಯೆ: ಆತಕೊಟ್ಟ ಅನ್ನ ವಸ್ತುಗಳಿಂದ ಜೀವಿಸುವಾಗ ಅವನು ರೂಪಿಸಿದ ವ್ಯವಸ್ಥೆಯ ವಿರುದ್ಧ ನಾಲಗೆ ಎತ್ತಲಾರದೆ ಹಂಗಿನಲ್ಲಿ ಬಿದ್ದಿದ್ದರಿಂದ ಕ್ರಮೇಣ ಅವನ ಒಡೆತನದಲ್ಲಿದ್ದ ವಿಧೇಯತೆಯೇ ಭಕ್ತಿಯಾಗಿ ಮಾರ್ಪಟ್ಟಿತು. ಪ್ರತ್ನಿಯಾದವಳಿಗೆ ಪತಿವ್ರತಾಧರ್ಮವೇ ಪರಮೋತ್ಕೃಷ್ಟವಾಯಿತು. "ಇಲ್ಲಿ ವರ್ಗದ ಪ್ರಶ್ನೆ ಇದೆಯೇ ಹೊರತು ಲಿಂಗದ ಪ್ರಶ್ನೆಯಲ್ಲ. (ಪಂಪ – ಅರಿಕೇಸರಿ ರನ್ನ – ಸತ್ಯಾಶ್ರಯ ಇಲ್ಲಿ ಭಕ್ತಿ ಗೌರವವಿದೆ)

ತಿರುಮಲಾಂಬ ೧೯೧೬ – ಭದ್ರಗೀತಾವಲಿ ದಶಾವತಾರದ ವರ್ಣನೆ
ಪುರಾಣ ಕುರಿತ ಪ್ರಶ್ನೆ
'ಮಡಿವಳನ ನುಡಿಗಾಗಿ ಕಡುಮೂರ್ಖ ತಾನಾಗಿ ಅಡವಿಗೆಟ್ಟುವರೇನೆ ಮಡದಿಯನ್ನೆ ಧರ್ಮಪತ್ನಿಯುಮಂತು ಪೂರ್ಣಗರ್ಭವನಾಂತ ಅರ್ಧಾಂಗಿಯನ್ನುಳಿದ ನಿರ್ದಯಾತ್ಮ'

ಬೆಳಗೆರೆ ಜಾನಕಮ್ಮ:
"ಕಸಕಿಂತ ಕಡೆಯಾಯ್ತು
ಹೆಣ್ಣು ಜನ್ಮವು ನಿನಗೆ
ಈ ಭಾರ ಹೊರಿಸುವುದಕೆ
ಲಂಚಕೋರನು ನೀನು
ಮೃದುತನದ ಸ್ತ್ರೀವರ್ಗಕೆ
ಗಿಡವೆಂದು ಬಗೆದೆಯೊ
ಹೆಣ್ಣು ಜನ್ಮದ ಒಡಲ
ಫಲಗಳನು ಸೃಜಿಸುವುದಕೆ
ಕವಣೆ ಕಲ್ಲೊ ನಿನ್ನ
ಮಾನಸವು ಎಲೆದೇವ
ಈ ಕ್ರಿಯೆಯೆ ಸ್ತ್ರೀವರ್ಗಕೆ

ಹೆಣ್ಣು ಕೇವಲ ಸಂತಾನೋತ್ಪತ್ತಿ ಸಾಧನವಲ್ಲ' ಎಂಬ ವ್ಯಂಗ್ಯದ ನಿಲುವಿನಲ್ಲಿ ಅಭಿವ್ಯಕ್ತವಾಗಿದೆ.

ಸ್ತ್ರೀವಾದಿ ವಿಮರ್ಶಾ ನಿಲುವುಗಳು ಬದಲಾಗಬೇಕು. ಎಂ. ಎಸ್. ಆಶಾದೇವಿ 'ನಡುವೆ ಸುಳಿವ ಆತ್ಮದಲ್ಲಿ' ಕಾರಂತರ ಕನ್ಯಾಬಲಿ ಬಗೆಗೆ "ಕಾದಂಬರಿಯ ರಾಚನಿಕತೆ ಎಷ್ಟು ಶಕ್ತವಾಗಿದೆ ಎಂದರೆ ಕಾದಂಬರಿಯ ಓದುಗರಿಗೆ ಶೀಲದ ಹೆಸರಿನಲ್ಲಿ ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಜೀವವಂಚನೆಗಿಂತ ಜೀವಭರಿತವಾದ ಸೂಳೆಗಾರಿಕೆಯೇ ಮೇಲೇನೋ ಅನ್ನಿಸುವಷ್ಟು."

೧. ಸ್ವಾತಂತ್ರ್ಯ ಪೂರ್ವದ ಕಾವ್ಯದ ಸ್ತ್ರೀವಾದ ಅಧ್ಯಯನ ವಿಮರ್ಶೆಗಳು ಮುಖ್ಯ ಧರ್ಮಗಳ (ಸನಾತನ, ಜೈನ, ವೀರಶೈವ) ನೆಲೆಯಲ್ಲಿ ರಾಮಾಯಣ, ಮಹಾಭಾರತ, ಪುರಾಣಗಳ ನೆಲೆಯನ್ನು ಆಶ್ರಯಿಸಿದೆ.
೨. ಈ ಎಲ್ಲ ಧರ್ಮಗಳ ವೈರುಧ್ಯದ ನೆಲೆಯಲ್ಲಿ ಪ್ರತಿ ಸಂಸ್ಕೃತಿಗಳ ಅಧ್ಯಯನ ಚರ್ಚೆಗಳು ನಡೆಯುತ್ತಿರುವ ಈ ಹೊತ್ತಿನಲ್ಲಿ ಸ್ತ್ರೀವಾದಿ ಅಧ್ಯಯನದ ನೆಲೆಗಳು ಪರ್ಯಾಯ ಸಂಸ್ಕೃತಿಯೊಂದರ ನೆಲೆಗಳಲ್ಲಿ ಜರುಗಬೇಕಿದೆ.
೩. ತಳಸಮುದಾಯಗಳ ಸ್ತ್ರೀ ಸಾಂಗತ್ಯವೂ ಸ್ತ್ರೀವಾದದ ಪರಿಧಿಯೊಳಗೆ ಬರಬೇಕಾಗಿದೆ. ಮಾಲಗತ್ತಿಯವರ 'ಸ್ತ್ರೀವಾದದಿಂದ ದಲಿತ ಸ್ತ್ರೀವಾದ' ಒಳ್ಳೆಯ ನಿದರ್ಶನ.

ಜನಪದ ವೈದ್ಯದಲ್ಲಿ – ಹೂವು

ಸುನೀತ ಕೆ.ಎನ್
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಭಾರತೀಯ ಸಂಸ್ಕೃತಿಯಲ್ಲಿ ಹೂವಿಗೆ ಮಹತ್ವದ ಸ್ಥಾನವಿದೆ. ಸೃಷ್ಟಿಯ ಪ್ರಾಚೀನ ವಿಸ್ಮಯಗಳಲ್ಲಿ ಹೂವು ಒಂದಾಗಿದ್ದು, ಎಲ್ಲರ ಪ್ರೀತಿಗೆ ಪಾತ್ರವಾಗಿದೆ. ಹೂವಿನ ಪ್ರಾಚೀನತೆಯನ್ನು ಕುರಿತಂತೆ ಪಂಪ, ಹರಿಹರ, ರಾಘವಾಂಕ, ಕಾಳಿದಾಸ, ನೇಮಿಚಂದ್ರ, ವಾತ್ಸಾಯನ, ಲಕ್ಷ್ಮೀಶರ ಕಾವ್ಯಗಳಲ್ಲಿ ಹೂವಿನ ವರ್ಣನೆಗಳನ್ನು ನೋಡಬಹುದು. ಸುಮಾರು 125 ದಶಲಕ್ಷ ವರ್ಷಕ್ಕೂ ಹಿಂದೆಯೇ ಹೂವು ಬಿಡುವ ಸಸ್ಯಗಳ ಮೊದಲ ಪಳೆಯುಳಿಕೆಗಳು ದೊರೆತ ಬಗ್ಗೆ ಇತಿಹಾಸ ತಿಳಿಸುತ್ತದೆ. ಡಾ॥ ಅಮಿತಾಬ್ ಮುಖ್ಯೋಪಾಧ್ಯಾಯರು ತಮ್ಮ ಪುಸ್ತಕದಲ್ಲಿ 6 ಕೋಟಿ ವರ್ಷಗಳಷ್ಟು ಹಿಂದೆಯೇ ಗುಲಾಬಿ ಸೃಷ್ಟಿಗೊಂಡಿತ್ತೆಂದು ಹೇಳಿದ್ದಾರೆ. ಜೀವಿಗಳ ಪರಿಕಲ್ಪನೆಯು ನಮ್ಮ ಸಂಸ್ಕೃತಿಯನ್ನು ಹೇಗೆಲ್ಲ ಹರಡಿಕೊಂಡಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಜನಪದ ಸಾಹಿತ್ಯದ ಹಲವು ಪ್ರಕಾರಗಳಾದ ಪುರಾಣ, ಕಥೆ, ಗಾದೆ, ಒಗಟುಗಳಲ್ಲಿ ಮಲ್ಲಿಗೆ, ಪಾರಿಜಾತ, ಸೇವಂತಿಗೆ, ಕಮಲ ಇತರೆ ಹೂವುಗಳ ಸಾಲೇ ಬಂದು ನಿಲ್ಲುತ್ತದೆ. ಜೊತೆಗೆ ಜನಪದರು ತಮ್ಮ ಕೃಷಿ ನಿರತ ಭೂಮಿಯಲ್ಲಿ ಕಾಣುವ ಆಹಾರದ ಹೂವುಗಳು, ಕಾಡು ಹೂವುಗಳ ಬಗ್ಗೆ ಉಲ್ಲೇಖಿಸುತ್ತಾರೆ. ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳಲ್ಲಿ ಹೂವು ಹಲವು ರೀತಿಯಲ್ಲಿ ಮಾನವನ ಸ್ಪಂದನೆಗೆ ಸೇತುವೆಯಾಗಿದೆ. ವಾಣಿಜ್ಯ ಬೆಳೆಯಾಗಿ ಆರ್ಥಿಕ ರಂಗದಲ್ಲಿ ಇತರೆ ವಾಣಿಜ್ಯ ಬೆಳೆಗಳ ಸಾಲಿನಲ್ಲಿ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದಾಗಿದೆ. ಸೌಂದರ್ಯ, ಸುವಾಸನೆ ಮಾತ್ರವಲ್ಲದೆ ಔಷಧಿಯ ಗುಣಗಳನ್ನು ತನ್ನ ಒಡಲಿನಲ್ಲಿ ತುಂಬಿಕೊಂಡಿರುವ ಹೂವುಗಳ ಕುರಿತಂತೆ "ಜನಪದ ವೈದ್ಯದಲ್ಲಿ ಹೂವು" ಎಂಬ ವಿಷಯವಾಗಿ ಸಂಶೋಧಾನಾತ್ಮಕ ಪ್ರಬಂಧವನ್ನು ಮಂಡಿಸಲಿದ್ದೇನೆ. ಪ್ರಸ್ತುತ ನಾನು "ಕನ್ನಡ ಜಾನಪದದಲ್ಲಿ ಹೂವು" ಎಂಬ ವಿಷಯವಾಗಿ ಸಂಶೋಧನೆ ನಡೆಸುತ್ತಿದೇನೆ.

ಜನಪದ ವೈದ್ಯವು ವ್ಯಾಪಕವೂ ವಿಸ್ತಾರವೂ ಆಗಿ ಬೆಳೆದು ನಿಂತಿದೆ. ತಮ್ಮವರ ಮನಸ್ಸಿನ, ದೈಹಿಕ ಏರುಪೇರುಗಳನ್ನು ಗುಣಪಡಿಸಲು ಕಂಡುಕೊಂಡ ಜೀವನದ ಅನುಭವಗಳ, ಪ್ರಯೋಗಗಳ ಕೊಡುಗೆಯೇ 'ಜನಪದ ವೈದ್ಯ. ಇದನ್ನು ನಾಟಿ ವೈದ್ಯ, ಹಳ್ಳಿಯ ವೈದ್ಯ, ಮನೆಯ ಮದ್ದು, ಕೈ ಔಷಧಿ, ಹಸಿರು ಔಷದಿ ಎಂಬುದಾಗಿ ಹಲವು ಹೆಸರುಗಳಿಂದ ಕರೆಯಲಾಗುವ ಜನಪದ ವೈದ್ಯ ತಾಯಿ ಸ್ಥಾನದಲ್ಲಿದೆ, ಜನಪದದಂತೆ ಜನಪದ ವೈದ್ಯವು ಅನಾಮಿಕ ಸೃಷ್ಟಿ, ವ್ಯಷ್ಟಿಯಲ್ಲಿ ಹುಟ್ಟಿ ಸಮಷ್ಟಿಯಲ್ಲಿ ಬೆಳೆದು ಇಂದಿಗೂ ಉಳಿದು ಬಂದಿದೆ. ಮಾನವನ ಚಿಕಿತ್ಸೆಗೆ ಪರಿಹಾರವಾಗಿ ಆಯುರ್ವೇಧ, ಯುನಾನಿ, ಹೋಮಿಯೋಪತಿ ಆಲೋಪತಿ ಇತರೆ ವಿಧಾನಗಳು ಕಂಡು ಬಂದರೂ ಇವೆಲ್ಲಾ ಚಿಕಿತ್ಸಾ ವಿಧಾನಗಳಿಗೆ ಜನಪದರು ಬಳಸುವ ಚಿಕಿತ್ಸಾ ವಿಧಾನವೇ ಮೂಲವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಈ ಎಲ್ಲಾ ಚಿಕಿತ್ಸಾ ವಿಧಾನಗಳ ಮುಖ್ಯ ಉದ್ದೇಶ ಆರೋಗ್ಯ ರಕ್ಷಣೆಯೇ ಆದರೂ ಅದನ್ನು ಸಾಧಿಸಿಕೊಳ್ಳುವ ಕ್ರಮದಲ್ಲಿ ಭಿನ್ನ–ಭಿನ್ನ ಹಾದಿಯನ್ನು ಕಾಣುತ್ತೇವೆ.

ಆರೋಗ್ಯವನ್ನು ಕಾಪಾಡಿಕೊಳ್ಳುವುದು ಮಾನವನ ಮೂಲಭೂತವಾದ ಅಗತ್ಯಗಳಲ್ಲಿ ಒಂದು. ಆದಿಕಾಲದಿಂದಲೂ ಆರೋಗ್ಯ ರಕ್ಷಣೆ ಮಾಡಿಕೊಳ್ಳುವ ವಿಧಿವಿಧಾನಗಳನ್ನು ಮಾನವ ಗುರುತಿಸಿಕೊಳ್ಳುತ್ತಾ ಬಂದಿದ್ದಾನೆ. ಯಾವುದೇ ವಿಧಾನದಲ್ಲಿ ಆರೋಗ್ಯವನ್ನು ರಕ್ಷಣೆ ಮಾಡಿಕೊಂಡರೂ ಅದಕ್ಕೆ ಪರಿಹಾರವಾಗಿ ಸಸ್ಯದ ಉತ್ಪನ್ನಗಳನ್ನೇ ಬಳಸಿಕೊಂಡಿರುವುದು ಒಂದು ಕುತೂಹಲಕರಿಯಾದ ಸಂಗತಿ. ಆರೋಗ್ಯದಿಂದಿರಲು ಸಸ್ಯಗಳನ್ನು ಬಳಸಿಕೊಂಡಂತೆ ಅನಾರೋಗ್ಯ ಉಂಟಾದಾಗ ಮತ್ತೆ ಸಸ್ಯೋತ್ಪನ್ನಗಳನ್ನೆ ಚಿಕಿತ್ಸಾ ವಿಧಾನಗಳಾಗಿ ಬಳಸಿಕೊಂಡಿರುವುದನ್ನು ಜನಪದ ವೈದ್ಯ, ಆಯುರ್ವೇದದಲ್ಲಿ ನೋಡಿದ್ದೇವೆ. ರೋಗಗಳು ಮಾನವನ ಸೃಷ್ಟಿಯಾದರೆ, ಆರೋಗ್ಯ ನಿಸರ್ಗ ಸೃಷ್ಟಿ ನಿಸರ್ಗದಲ್ಲಿ ದೊರೆಯುವ ವಿವಿಧ ಬಗೆಯ ಸಸ್ಯೋತ್ಪನ್ನಗಳನ್ನು ಬಳಸಿ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ದೇಹದಲ್ಲಿ ಕಂಡುಬರುವ ವ್ಯತ್ಯಾಸಗಳಿಗೆ ಸಸ್ಯೋತ್ಪನ್ನಗಳನ್ನೇ ಪರಿಹಾರವಾಗಿ ಬಳಸಿಕೊಳ್ಳುವುದು ಕೂಡ ನಿಸರ್ಗದ ಹಿರಿಮೆ ಗರಿಮೆಗಳಿಗೆ ಸಾಕ್ಷಿಯಾಗಿದೆ. ಪ್ರಕೃತಿಯಲ್ಲಿ ದೊರಕುವ ಆಹಾರದ ಮೂಲವಸ್ತುಗಳನ್ನು ಅತಿಯಾಗಿ ಬಳಸಿಕೊಂಡಾಗ ಅನಾರೋಗ್ಯ ಕಂಡು ಬರುತ್ತದೆ. ಅನಾರೋಗ್ಯದಿಂದ ದೇಹವನ್ನು ಆರೋಗ್ಯ ಸ್ಥಿತಿಗೆ ತರಲು ಸಸ್ಯೋತ್ಪನ್ನಗಳು ಸಹಾಯಕವಾಗುತ್ತವೆ. ಇಂತಹ ಚಿಕಿತ್ಸಾ ವಿಧಾನಗಳು ಜನಪದರ ಬಹುದಿನದ ಶೋಧನೆಗಳಾಗಿವೆ. ಈ ಶೋಧನೆಯ ಪ್ರಯತ್ನ ಪರಿಹಾರವನ್ನು ಸೂಚಿಸುತ್ತವೆ. ಇಂತಹ ಪರಿಹಾರ ವಿಧಿಗಳನ್ನು ಜನಪದರು ಸಸ್ಯದ ಒಂದು ಬಹು ಮುಖ್ಯ ಅಂಗವಾದ ಹೂವನ್ನು ಔಷಧಿಯಾಗಿ ಬಳಸಿಕೊಳ್ಳುವಲ್ಲಿ ಕಾಣಬಹುದು. ಡಾ. ಶ್ರೀಪಾದ ತಮ್ಮಯ್ಯಭಟರವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಅನುಸರಿಸುವ ಮಾದರಿಯನ್ನೇ ಈ ಅಧ್ಯಾಯದಲ್ಲಿ ಅಳವಡಿಸಿ ಕೊಳ್ಳಲಾಗಿದೆ.[1]

1. ಆರೈಕೆ ಮತ್ತು ಮುನ್ನೆಚ್ಚರಿಕೆಯ ವಿಧಾನಗಳು
2. ಆಹಾರ ಪಾನೀಯ ವ್ಯತ್ಯಾಸಗಳಿಂದ ಉಂಟಾಗುವ ಕಾಯಿಲೆಗಳಿಗೆ ಚಿಕಿತ್ಸೆ
3. ಆಕಸ್ಮಿಕ, ಅಪಘಾತಗಳಿಂದ ಉಂಟಾಗುವ ಗಾಯ, ನೋವುಗಳಿಗೆ ಚಿಕಿತ್ಸೆ
4. ಪ್ರಾಣಿ, ವಿಷ ಜಂತುಗಳಿಗೆ ಉಂಟಾಗುವ ವಿಪತ್ತುಗಳಿಗೆ ಚಿಕಿತ್ಸೆ.

1. ಆರೈಕೆ ಮತ್ತು ಮುನ್ನೆಚ್ಚರಿಕೆಯ ವಿಧಾನಗಳು: ಜನಪದರು ದಿನನಿತ್ಯ ಆಹಾರದಲ್ಲಿ ಕೆಲವೊಂದು ಬಗೆಯ ಹೂವುಗಳನ್ನು ಮಿಶ್ರಗೊಳಿಸಿ ಸೇವಿಸುವುದರ ಮೂಲಕ ದೇಹವನ್ನು ಸಮಸ್ಥಿತಿಯಲ್ಲಿ ಇರುವಂತೆ ಕಾಪಾಡಿಕೊಳ್ಳುವರು. ಉದಾಹರಣೆಗೆ: ಕೂದಲು, ಮುಖದ ಅಂದವನ್ನು ಕಾಪಾಡಿಕೊಳ್ಳಲು ದೇಹಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಜೀವಸತ್ವವನ್ನು ಬರಿಸಿಕೊಳ್ಳಲು ಮುಂಚಿತವಾಗಿಯೇ ಉಪಯುಕ್ತ ಆಹಾರವನ್ನು ಸೇವಿಸುವರು. ಆ ಮೂಲಕ ತಮ್ಮ ದೇಹವನ್ನು ಸುರಕ್ಷಿತಗೊಳಿಸಿಕೊಳ್ಳಲು ಸಹಾಯಕವಾಗುವುದು. ದೇಹದ ಶೀತೋಷ್ಣಗಳನ್ನು ನಿಸರ್ಗ ನಿಯಮಕ್ಕನುಗುಣವಾಗಿ ಬದಲಾಗುವ ತಾಪಮಾನದೊಂದಿಗೆ ಸಮತೋಲನಗೊಳಿಸಿಕೊಳ್ಳುವ ಉದ್ದೇಶ ಇಂತಹ ಆಹಾರ ಕ್ರಮಗಳ ಹಿನ್ನೆಲೆಯಲ್ಲಿದೆ.[3] ಹೀಗೆ ಋತುಮಾನಕ್ಕೆ ತಕ್ಕ ಹಾಗೆ ದೇಹಕ್ಕೆ ಪೂರಕವಾದ ಆಹಾರ ಪಾನೀಯಗಳನ್ನು ಸೇವಿಸಬೇಕಾಗುತ್ತದೆ. ಹಾಗಾದಾಗ ಶರೀರವು ರೋಗ ನಿರೋಧಕ ಶಕ್ತಿಯನ್ನು ಪಡೆದು ಆರೋಗ್ಯಭರಿತವಾಗಿ ಉಳಿಯಲು ಅನುವುಮಾಡಿಕೊಡುತ್ತದೆ. ಇದೊಂದು ಜನಪದರ ಆಹಾರ ತಂತ್ರಗಳಲ್ಲಿ ಒಂದಾಗಿದೆ.

ದಾಸವಾಳವನ್ನು ಅಕ್ಕಿ ಜೊತೆ ಸೇರಿಸಿ, ರುಬ್ಬಿ ದೋಸೆ ಇಲ್ಲವೇ ಇಡ್ಲಿ ಮಾಡಿ ತಿನ್ನುತ್ತಾರೆ. ಹಾಗೆಯೇ ನಿಂಬೆಹಣ್ಣಿನ ಪಾನಕಮಾಡಿ ಅದರಲ್ಲಿ ದಾಸವಾಳವನ್ನು ಜಜ್ಜಿ ಹಾಕಿ ಕಲರ ಷರಬತ್ತು ಮಾಡಿ ಕುಡಿಯುವರು. ಇದೊಂದು ತಂಪುಕಾರಕ ಪಾನೀಯವಾಗಿದ್ದು ಸ್ತ್ರೀಯರು ಮುಂಜಾಗ್ರತೆಯಾಗಿಯೇ ಮುಟ್ಟಿನ ದಿನಗಳಲ್ಲಿ ಅಧಿಕ ರಕ್ತ ಸ್ರಾವವಾಗುವುದನ್ನು ತಡೆಯಲು, ಬಿಳಿಸೆರಗನ್ನು ನಿವಾರಿಸಿಕೊಳ್ಳಲು ಈ ರೀತಿಯ ಪಾನೀಯ ತಿನಿಸುಗಳನ್ನು ಸೇವಿಸುವರು.

ನಿಶ್ಯಕ್ತಿ ಇದ್ದವರು ನುಗ್ಗೆ ಹೂವಿನೊಂದಿಗೆ ಹೆಸರುಬೇಳೆ ಮತ್ತು ತೊಗರಿಬೇಳೆಯನ್ನು ಬೆರೆಸಿ ಪಲ್ಯಮಾಡಿ ಸೇವಿಸುವರು. ಇದೊಂದು ರುಚಿಕಟ್ಟಾದ ತಿನಿಸಾಗಿದ್ದು, ಪಕೋಡ, ವಡೆಯನ್ನು ತಯಾರಿಸುವಾಗ ಸಹ ನುಗ್ಗೆ ಹೂವುಗಳನ್ನು ಉಪಯೋಗಿಸುವರು. ಹೀಗೆ ಮಿಶ್ರಮಾಡಿದ ಪಲ್ಯ ಸೇವಿಸುವುದರಿಂದ ನಿಶ್ಯಕ್ತಿಯನ್ನು ಹೋಗಲಾಡಿಸಿ ವ್ಯಯವಾದ ಶಕ್ತಿಯನ್ನು ಮರಳಿ ಪಡೆದುಕೊಳ್ಳಲು ನುಗ್ಗೆ ಹೂವಿನಲ್ಲಿ ಅಡಗಿರುವ ಜೀವಸತ್ವಗಳು ಕಾರಣವಾಗಿವೆ.

ಹೃದಯಶೂಲೆಗೆ ಅಗಸೆ ಹೂವನ್ನು ಬಳಸಿ ಸಾಂಬರು ಇಲ್ಲವೆ, ಪಲ್ಯಮಾಡಿ ಆಹಾರದೊಡನೆ ಸೇವಿಸುವುದರಿಂದ ನಿವಾರಿಸಿಕೊಳ್ಳ ಬಹುದು. ವರುಷಕ್ಕೆ ಒಮ್ಮೆ ಅಗಸೆ ಹೂವಿನ ಪಲ್ಯ ಇಲ್ಲವೆ ಸಾಂಬಾರ ಸೇವಿಸಬೇಕೆಂದು ಜನಪದರು ಹೇಳುವ ಮಾತಿನಲ್ಲಿ ಸತ್ಯಾಂಶ ಅಡಗಿದೆ. ಹೃದಯ ಮತ್ತು ಮೆದುಳು ಮಾನವನಿಗೆ ಅಗತ್ಯವಾಗಿ ಕೆಲಸಮಾಡುವ ಅಂಗಗಳು ಇವುಗಳ ಬಲವರ್ಧನೆಗೆ 'ಬಿಳಿತಾವರೆ'ಯ ದಳಗಳಿಂದ ಗುಲ್ಕನ್ ತಯಾರಿಸಿ ಸೇವಿಸುವುದರಿಂದ ಪರಿಣಾಮಕಾರಿ ಬಕುಲದ ಹೂವಿನ ಚೂರ್ಣವನ್ನು ಮಾಡಿಟ್ಟುಕೊಂಡು ಆಗಾಗ ಸೇವಿಸುವುದರಿಂದ ಹೃದಯಕ್ಕೆ ಸಂಬಂಧಿಸಿದ ಯಾವುದೇ ರೋಗಗಳು ಗುಣಹೊಂದುತ್ತವೆ ಹಾಗೂ ಹೃದಯಕ್ಕೆ ಬಲ ಬರುತ್ತದೆ.

ತಾವರೆ ಹೂವಿನಿಂದ ತಯಾರಿಸಿದ ತೈಲದಿಂದ ದೇಹವನ್ನು ಮಸಾಜ್ ಮಾಡಲು ಹಾಗೂ ಉಳಿದ ತೈಲವನ್ನು ಸ್ನಾನದ ನೀರಿಗೆ ಮಿಶ್ರಗೊಳಿಸಿ ಸ್ನಾನಮಾಡಿದರೆ ಮನೋದೈಹಿಕವಾದ ಯಾವುದೇ ಕಾಯಿಲೆಗಳು ಹತ್ತಿರ ಬರುವುದಿಲ್ಲ. ಇದರಲ್ಲಿನ ಸುವಾಸನಾ ಪರಿಮಳ ಮನಸ್ಸನ್ನು ಉಲ್ಲಾಸಿತಗೊಳಿಸಿ ನವಚೈತನ್ಯವನ್ನು ನೀಡುವುದು ತಾವರೆ ರಸವು ಶೀತವನ್ನು ಹೊಂದಿರುವುದರಿಂದ ಶರೀರದಲ್ಲಿರುವ ಉರಿ, ಬಾಯಾರಿಕೆ,

ತಲೆತಿರುಗುಗಳನ್ನು ನಿವಾರಿಸುತ್ತದೆ. ಆಗಾಗಿ ಶರೀರದಲ್ಲಿ ಹೆಚ್ಚಿನ ಉಷ್ಣತೆಯುಳ್ಳವರು ಇದನ್ನು ಸೇವಿಸುವರು. ಇದರಿಂದ ಉಷ್ಣದಿಂದ ಉಂಟಾಗುವ ಯಾವುದೇ ಭಾದೆಗಳು ಉಪಶಮನ ಹೊಂದುವುವು. ಋತುಮತಿಯಾಗದೆ ಇರುವ ಹೆಣ್ಣುಮಕ್ಕಳಿಗೆ 'ಎಳ್ಳು ಹೂವಿ'ನೊಂದಿಗೆ ಬೆಲ್ಲದ ಚೂರು ಮಿಶ್ರಮಾಡಿ, ಅದನ್ನು ಸಣ್ಣ ಸಣ್ಣ ಉಂಡೆಗಳಾಗಿ ಮಾಡಿ ದಿನಕ್ಕೆ ಮೂರು ಭಾರಿ ತಿನ್ನಲು ಕೊಡುತ್ತಾರೆ. ಹಳ್ಳಿಗಳಲ್ಲಿ ಇಂದಿಗೂ ಜನಪದರು ಎಳ್ಳಿನಿಂದ ತಯಾರಿಸಿದ ಸಿಹಿ ಭಕ್ಷ್ಯವನ್ನು ಹೆಣ್ಣು ಋತುಮತಿಯಾದ ಸಂದರ್ಭದಲ್ಲಿ ಹೆಂಗಳೆಯರಿಗೆ ಕೊಡುವುದು ರೂಢಿ.

'ಆವರಿಕೆ ಹೂವಿನ' ಟೀ ತಯಾರಿಸಿ ಕುಡಿಯುವುದರಿಂದ ದೇಹದಲ್ಲಿನ ಆಲಸ್ಯಗಳೆಲ್ಲ ದೂರವಾಗಿ ಆರೋಗ್ಯ ವೃದ್ಧಿಯಾಗುವುದು.

ತಯಾರಿಸುವ ವಿಧಾನ: 'ಆವರಿಕೆ ಹೂವು'ಗಳನ್ನು ಸಂಗ್ರಹಿಸಿಟ್ಟುಕೊಂಡು, ನೆರಳಿನಲ್ಲಿ ಒಣಗಿಸಿ, ನೀರಿನೊಂದಿಗೆ ಬೇಯಿಸಿ ಸಕ್ಕರೆ ಹಾಲು ಬೆರೆಸಿ ಕುಡಿಯುವರು. ಇದೊಂದು ಬಹುಹಿತಕರವಾದ ಉತ್ತಮ ಗುಣವುಳ್ಳ ಪಾನೀಯವಾಗಿದ್ದು, ಉಷ್ಣದ ಪ್ರಮಾಣ ಕಡಿಮೆಯಾಗುವುದು ಮತ್ತು ಈ ಹೂವನ್ನು ನೆತ್ತಿಗೆ ಅರೆದು ಲೇಪಿಸುವರು ಉಷ್ಣವನ್ನು ಕಡಿಮೆಮಾಡಿಕೊಳ್ಳಲು ಜನಪದರು ಕಂಡುಕೊಂಡಿರುವ ಉತ್ತಮ ವೈದ್ಯ ಪದ್ಧತಿಯಾಗಿದೆ.

ಸ್ತ್ರೀಯರು ತಮ್ಮ ಮುಖದ ಅಂದವನ್ನು ಹೆಚ್ಚಿಸಿಕೊಳ್ಳಲು 'ಕೆಂದಾವರೆಯ' ದಳಗಳನ್ನು ಅರೆದು ಮುಖಕ್ಕೆ ಹಚ್ಚಿಕೊಳ್ಳುವರು. ಸುಗಂಧ ಚಿಕಿತ್ಸೆಯಲ್ಲಿ ಕಮಲದ ತೈಲವು ಪರಿಣಾಮಕಾರಿಯಾಗಿ ಬಳಕೆಯಾಗುವುದು. ಚರ್ಮದ ಆರೋಗ್ಯ ರಕ್ಷಣೆ ಮತ್ತು ಚರ್ಮದ ಕಾಂತಿಯನ್ನು ಕಾಪಾಡಿಕೊಳ್ಳಲು ಕಮಲದ ತೈಲ ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತದೆ. "ಮಧುರ, ಕಹಿ, ಒಗರು ರಸಗಳಿಂದ ಕೂಡಿರುವ ಕಮಲವು ತ್ವಚೆಗೆ ಕೋಮಲತೆಯನ್ನು ಕಾಂತಿಯನ್ನು ಕೊಡುತ್ತದೆ." ಆದ್ದರಿಂದ ಚರ್ಮರೋಗಿಗಳಿಗೆ ಕಮಲ, ಚಂದನ, ಸೋಗದಬೇರು, ಲಾವಂಚ ಬೆರೆಸಿ ತಯಾರಿಸಿದ ಸ್ನಾನವನ್ನು ಮಾಡಿಸುವರು ಹಾಗೂ ಈ ದ್ರವ್ಯಗಳನ್ನು ಸ್ನಾನದ ನಂತರವೂ ದೇಹಕ್ಕೆ ಸಿಂಪಡಿಸಿಕೊಳ್ಳುವುದರಿಂದ ಬೇಸಗೆಯ ಬೆವರಿನ ದುರ್ವಾಸನೆ ನಿವಾರಣೆಯಾಗುತ್ತದೆ ಎಂದು 'ಅಷ್ಟಾಂಗ ಹೃದಯ' ಎಂಬ ಆಯುರ್ವೇದ ಗ್ರಂಥದಿಂದ ತಿಳಿದುಬರುತ್ತದೆ.

ಬೇಸಿಗೆಯ ಬಿಸಿಲಿನಲ್ಲಿ ಮುಖದ ಮೇಲಿನ ಸೂರ್ಯನ ಕಲೆಗಳನ್ನು ನಿವಾರಿಸಿಕೊಳ್ಳಲು 'ಗುಲಾಬಿ'ಯಿಂದ ತಯಾರಿಸಿದ ಗುಲ್ಕನ್ ಸೇವಿಸುವರು. ಬೇಸಿಗೆಯ ದಿನಗಳಲ್ಲಿ ಉಂಟಾಗುವ ಬೆವರು ಸಾಲೆಯನ್ನು ಇದರ ಸೇವನೆಯಿಂದ ಪರಿಹರಿಸಿಕೊಳ್ಳಬಹುದು. ಇದೊಂದು ಉಪಯುಕ್ತ ಸಮ್ಮರ್ ಟಾನಿಕ್ ಆಗಿದೆ. ಚರ್ಮದ ಸುಕ್ಕು, ಚರ್ಮದ ಕಾಂತಿವರ್ಧನೆಗೆ ಗುಲಾಬಿದಳಗಳನ್ನು ಸೇರಿಸಿ ಪ್ರತಿನಿತ್ಯ ಮುಖಕ್ಕೆ ಹಚ್ಚುವುದರಿಂದ ಚರ್ಮವು ಮೃದುವಾಗುವುದು. ಮಹಿಳೆಯರು ಮುಖದ ಅಂದವನ್ನು ಹೆಚ್ಚಿಸಿಕೊಳ್ಳಲು ಇದೊಂದು ಉತ್ತಮ ವಿಧಾನವಾಗಿರುವುದರಿಂದ ಗುಲಾಬಿದಳಗಳನ್ನು "ಸ್ಕಿನ್ ಟಾನಿಕ್" ಎಂದೂ ಕೂಡ ಕರೆಯುತ್ತಾರೆ. ಹೂವಿನ ಸುಕೋಮಲತೆಯ ಸ್ತ್ರೀಯರ ಮುಖಕ್ಕೆ ಸೊಬಗನ್ನು ನೀಡುತ್ತದೆ.

ದಾಸವಾಳದಿಂದ ತಯಾರಿಸಿದ ತೈಲ ಚೆಂಪರತ್ಯಾದಿ ಕೊಕೆನೆಟ್ ಆಯಿಲ್ ಅನ್ನು ಇಂದು ಚರ್ಮರೋಗಿಗಳಿಗೆ, ಮುಖದ ಅಂದಕ್ಕೆ ಉಪಯುಕ್ತವಾಗಿ ಬಳಸುತ್ತಿದ್ದಾರೆ. ಮೊಡವೆಗಳು ಬಾರದಂತೆ, ಮುಖದ ಕಲೆಗಳು ಹೋಗಲು ಚರ್ಮಕಾಂತಿ ವರ್ಧಕವಾಗಿ ಬಳಸುತ್ತಿದ್ದಾರೆ. ಹೀಗೆ ಹೂವು ಮಹಿಳೆಯರ ಮುಖದ ಅಂದವನ್ನು ಇಮ್ಮಡಿಗೊಳಿಸಲು ಬಹು ಉಪಯುಕ್ತವಾಗಿದೆ. ಹಾಗೆಯೇ ನೈಸರ್ಗಿಕ ಸೊಬಗು ಮತ್ತಷ್ಟು ಕಾಲ ಉಳಿಯಲು ಸಾಧ್ಯವಾಗುತ್ತದೆ.

ಸ್ತ್ರೀಯರು ತಮ್ಮ ಕೂದಲಿನ ಆರೈಕೆಗೆ ವಿಭಿನ್ನವಾದ ಕ್ರಮಗಳನ್ನು ಅನುಸರಿಸುವರು. ಕೂದಲು ಕಪ್ಪಾಗಲು, ಕೂದಲು ಉದುರುವುದನ್ನು ತಡೆಗಟ್ಟಲು, ಕೂದಲು ಚೆನ್ನಾಗಿ ಬೆಳೆಯಲು ಬಾಲ ನೆರೆಯನ್ನು ತಪ್ಪಿಸಲು, ಕೂದಲು ಬಿದ್ದು ಹೋಗಿ ಹುಟ್ಟದಿರುವ ಸಂದರ್ಭದಲ್ಲಿ, ಕಣ್ಣುರಿ ತಲೆನೋವುಗಳನ್ನು ನಿವಾರಿಸಿಕೊಳ್ಳಲು ಹೂವನ್ನು ಚಿಕಿತ್ಸೆಯಾಗಿ ಬಳಸಿಕೊಳ್ಳುವರು 'ಅರಿಸಿನ ಬೂರುಗದ ಹೂ'ವನ್ನು ಎಳ್ಳೆಣ್ಣೆಯೊಡನೆ ಸೇರಿಸಿ ತಯಾರಿಸಿದ ಎಣ್ಣೆಯನ್ನು ಕೂದಲಿಗೆ ಕಪ್ಪುಬಣ್ಣವನ್ನು ಕೊಡಲು ಹಚ್ಚುವರು. ಕೂದಲು ಬೆಳೆಯಲು ಉಪಯೋಗಿಸುವಂತಹ ತೈಲಗಳಿಗೆ ಕಮಲದ ಹೂವಿನ ರಸವನ್ನು ಸೇವಿಸುತ್ತಾರೆ. ಇದು ಸುವಾಸನೆಯನ್ನು ಕೊಡುವುದರ ಜೊತೆಗೆ ಕೂದಲಿನ ಬೆಳವಣಿಗೆಯನ್ನು ಹೆಚ್ಚಿಸುತ್ತದೆ, ಬಾಲನೆರೆವುಳ್ಳವರು[4] ಬಿಳಿತಾವರೆಯ ದಳಗಳಿಂದ ತಯಾರಿಸಿದ ಗುಲ್ಕನ್ ಸೇವಿಸಲು ಕೊಡುವರು ಇದರಿಂದ ಚಿಕ್ಕ ವಯಸ್ಸಿನಲ್ಲಿ ಬರುವ ಬಿಳಿ ಕೂದಲನ್ನು ತಡೆಗಟ್ಟಬಹುದು.

ದಾಸವಾಳದ ಹೂವು ಮತ್ತು ಎಲೆಗಳನ್ನು ಮಿಶ್ರಮಾಡಿ ಅರೆದು ಕೂದಲು ಬಿದ್ದುಹೋದ ಜಾಗಕ್ಕೆ ಲೇಪಿಸುವುದರಿಂದ ಕೂದಲು ಮತ್ತೆ ಹುಟ್ಟುತ್ತದೆ ಎಂದು ಜನಪದ ವೈದ್ಯ ತಿಳಿಸುತ್ತದೆ. ಚೀನಾದಲ್ಲಿ ದಾಸವಾಳದ ದಳಗಳಿಂದ ತಯಾರಿಸಿದ ಕಪ್ಪುಬಣ್ಣವನ್ನು ತಲೆಕೂದಲಿನ ಬೆಳವಣಿಗೆಗೆ ಹಚ್ಚಿಕೊಳ್ಳುತ್ತಾರೆ. ಷೂ–ಪಾಲಿಶ್ ಆಗಿಯೂ ಬಳಸುತ್ತಾರೆ. ಹಾಗಾಗಿ ದಾಸವಾಳಕ್ಕೆ ಮತ್ತೊಂದು ಹೆಸರು 'ಷೂ–ಫ್ಲವರ್' ಆಗಿರುವಂತಹದ್ದನ್ನು ಕಾಣಬಹುದು.

ಕೂದಲನ್ನು ರಕ್ಷಿಸಲು ಆಹಾರದಂತೆ ಉಪಯುಕ್ತ ತೈಲಗಳನ್ನು ಹಚ್ಚಬೇಕಾಗುತ್ತದೆ. ಹಾಗೆ ಆಗದಿದ್ದಾಗ ಶಿರೋರೋಗಗಳು ಕಾಣಿಸಿಕೊಂಡು ವೇದನೆಯುಂಟುಮಾಡುತ್ತದೆ. ಅಂತಹ ನಿವಾರಣೆಗಳಿಂದ ಮುಕ್ತರಾಗಬೇಕಾದರೆ ಉಪಯುಕ್ತವಾದ ಎಣ್ಣೆ/ತೈಲಗಳನ್ನು ಹಚ್ಚಿ ದೇಹ ಸ್ಥಿತಿಗೆ ಹೊಂದುವಂತೆ ಕೂದಲನ್ನು ಸುರಕ್ಷಿತವಾಗಿ ನೋಡಿಕೊಳ್ಳುವುದು ಅಗತ್ಯವಾದುದಾಗಿದೆ. ಇಂದಿಗೂ ಸ್ತ್ರೀಯರು ಈ ಕ್ರಮಗಳನ್ನೇ ಅನುಸರಿಸಿ ಬರುತ್ತಿರುವುದು ಆಯಾ ವಿಧಾನಗಳ ಯಶಸ್ಸನ್ನು ತೋರಿಸುತ್ತದೆ. ನೈಸರ್ಗಿಕ ವಿಧಾನಗಳಿಂದ ದೇಹಾಂಗವನ್ನು ರಕ್ಷಿಸಿಕೊಳ್ಳಲು ಇದೊಂದು ಉತ್ತಮ ವಿಧಾನವಾಗಿದೆ. ಕಣ್ಣಿನ ರಕ್ಷಣೆಗಾಗಿ 'ನಂದಿಬಟ್ಟಲು' ಹೂವಿನಿಂದ 'ಕಾಡಿಗೆ'ಯನ್ನು ತಯಾರಿಸುತ್ತಾರೆ. ಹತ್ತಿ ಇಲ್ಲವೆ ತೆಳುವಾದ ಕಾಟನ್ ಬಟ್ಟೆಯನ್ನು ಕರವಸ್ತ್ರದಷ್ಟನ್ನು ತೆಗೆದುಕೊಂಡು ನಂದಿಬಟ್ಟಲು ಹೂವಿನ ರಸವನ್ನು ಆ ಬಟ್ಟೆಗೆ ಹಿಂಡಬೇಕು. ಅನಂತರ ಆ ಬಟ್ಟೆಯನ್ನು ನೆರಳಿನಲ್ಲಿ ಒಣಗಿಸಿ, ಮತ್ತೆ ಇದೇ ರೀತಿ ಏಳುದಿನಗಳ ಕಾಲ ಹಿಂಡಿ ಅನಂತರ ಆ ಬಟ್ಟೆಯನ್ನು ಬತ್ತಿಯಂತೆ ಮಾಡಿ ಹರಳೆಣ್ಣೆಯೊಂದಿಗೆ ದೀಪ ಹಚ್ಚುವುದು. ಅದರ ಜ್ವಾಲೆಗೆ ತಾಕುವಂತೆ ನಾಡಹೆಂಚನ್ನು ಎರಡು ಇಟ್ಟಿಗೆಗಳ ಸಹಾಯದಿಂದ ಇಡುವುದು ಅದರ ಕೆಳಗೆ ದೀಪವನ್ನು ಹಚ್ಚಿಡುವುದು. ಹೆಂಚಿನ ಒಳಭಾಗಕ್ಕೆ ಸ್ವಲ್ಪ ನೀರು ಅಕ್ಕಿಯನ್ನು ಹಾಕಿ

ಎರಡೂ ಕಡೆಗಳನ್ನು ಹಿಟ್ಟಿನಿಂದ ಮುಚ್ಚುವುದು. ದೀಪದ ಶಾಖಕ್ಕೆ ಹೆಂಚು ಕಾದು ಅಕ್ಕಿ ಬೇಯುವುದು. 'ಕಿಟ್ಟ' ಹೊರ ಹೋಗದಂತೆ ಕುಕ್ಕೆಯನ್ನು ದೀಪದ ಮೇಲೆ ಮುಚ್ಚುತ್ತಾರೆ. ಬತ್ತಿ ಉರಿಯುವವರೆಗೆ ಅಲ್ಲೆ ಇದ್ದು ಬತ್ತಿಯನ್ನೆಲ್ಲ ಉರಿಸಿ ನಂತರ ಸಿಗುವ ಕಿಟ್ಟವನ್ನು ಬೆಣ್ಣೆ ಇಲ್ಲವೆ ಹಸುವಿನ ತುಪ್ಪದಿಂದ ಸಂಗ್ರಹಿಸಿಟ್ಟುಕೊಂಡು ಅದಕ್ಕೆ ಪಚ್ಚೆಕರ್ಪೂರ ಬೆರೆಸಿ ಪುಟ್ಟದೊಂದು ಭರಣಿಗೆ ಸಂಗ್ರಹಿಸಿಕೊಟ್ಟುವುದು. ಇದನ್ನು ಕಣ್ಣಿಗೆ ಕಾಡಿಗೆಯಾಗಿ ಬಳಸುವರು ಇದರಿಂದ ಕಣ್ಣಿನ ನವೆ, ಮಲವನ್ನು ನಿವಾರಿಸುವುದು. ಕಣ್ಣಿನ ದೃಷ್ಟಿಶಕ್ತಿಯನ್ನು ಹೆಚ್ಚಿಸುವುದು ಕಣ್ಣಿನ ರೆಪ್ಪೆಯ ಕೂದಲನ್ನು ಮೃದುಗೊಳಿಸಿ ರಕ್ಷಿಸುವುದು, ಕಣ್ಣಿಗೆ ತಂಪನ್ನು ನೀಡುವಲ್ಲಿ ದೃಷ್ಟಿ ನಿವಾರಕವಾಗಿ ಈ ಕಾಡಿಗೆ ಬಳಕೆಗೊಳ್ಳುತ್ತಿದೆ. ಹೆಚ್ಚು ಉಪಯುಕ್ತತೆಯನ್ನುಳ್ಳ ಈ ಕಾಡಿಗೆಯನ್ನು ಜನಪದರು ಮಗು ಬಾಣಂತಿಯರಿಗೆ, ಋತುಮತಿಯಾದ ಹೆಣ್ಣು ಮಕ್ಕಳ ಕಣ್ಣಿಗೆ ಕಾಡಿಗೆಯಾಗಿ ಬಳಸುವರು. ಇದೊಂದು ಉಪಯುಕ್ತವಾದ ಔಷಧೀಯ ಮೌಲ್ಯವುಳ್ಳ ಕಾಡಿಗೆಯಾಗಿದೆ.

2. ಆಹಾರ – ಪಾನೀಯ ವ್ಯತ್ಯಾಸಗಳಿಂದ ಉಂಟಾದ ಕಾಯಿಲೆಗಳಿಗೆ ಚಿಕಿತ್ಸೆ: ಜನಪದರಿಗೆ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ರೋಗಗಳಾದ ನೆಗಡಿ, ಕೆಮ್ಮು, ಚಳಿಜ್ವರ, ಆಮಶಂಕೆ, ಚರ್ಮರೋಗಗಳು, ಮಲಬದ್ಧತೆ, ಅಜೀರ್ಣ, ಕಣ್ಣು ಕಾಣಿಸದಿರುವಿಕೆ ಇತರೆ ಯಾವುದೇ ತೊಂದರೆಗಳು ಉಂಟಾದಾಗ ಇವು ಆಹಾರದ ವ್ಯತ್ಯಾಸದಿಂದ ಉಂಟಾದವುಗಳೆಂದು ನಂಬುತ್ತಾರೆ. ಹಾಗೆಯೇ ಕೆಲವೊಂದು ಜೀವಸತ್ವಗಳ ಕೊರತೆಯಿಂದ, ದೇಹದಲ್ಲಿ ಏರು–ಪೇರಾದಾಗ ರೋಗ ರುಜಿನಗಳು ಬರುತ್ತವೆ ಎಂದು ನಂಬುತ್ತಾರೆ. ಹಾಗಾಗಿ ಈ ಎಲ್ಲಾ ತೊಂದರೆಗಳಿಗೆ ನಿಸರ್ಗದಲ್ಲಿ ದೊರಕುವ ವಿವಿಧ ಬಗೆಯ ಸಸ್ಯಗಳ ಹೂವನ್ನು ಚಿಕಿತ್ಸೆಗಾಗಿ ಬಳಸಿಕೊಳ್ಳುತ್ತಾರೆ. ಆ ಮೂಲಕ ರೋಗ ನಿವಾರಿಸಿಕೊಳ್ಳುವ ಜನಪದರ ಜ್ಞಾನ ನಿಜಕ್ಕೂ ಅಗಾಧವಾದುದೇ ಸರಿ.

ನೆಗಡಿ ಉಂಟಾಗಿ ಅತಿಯಾಗಿ ಸೋರುವ ಸಿಂಬಳವನ್ನು ಕಡಿಮೆ ಮಾಡಲು 'ಅಗಸೆ ಹೂ'ವಿನ ರಸವನ್ನು ಮೂಸುತ್ತಾರೆ. ಹಾಗೆಯೇ 'ಬಕುಲ'ದ ಒಣಗಿದ ಹೂವುಗಳನ್ನು ಪುಡಿಮಾಡಿ ನಶ್ಯದ ರೂಪದಲ್ಲಿ ಸೇದುವುದರಿಂದ ಮೂಗಿನಿಂದ ಸಿಂಬಳವು ದಾರಾಳವಾಗಿ ಇಳಿದುಹೋಗಿ ತಲೆನೋವು ಗುಣ ಹೊಂದುವುದು. ಈ ಎರಡು ಹೂವುಗಳ ಗುಣಗಳನ್ನು ಮನಗಂಡು ಮತ್ತಷ್ಟು ಹೊಸ ಹೊಸ ಆವಿಷ್ಕಾರಗಳನ್ನು ಹೊರತೆಗೆಯಲು ಸಹಾಯಕವಾಗುವುದು ಹಾಗೆಯೇ ಈ ಬಗೆಯ ವೈದ್ಯ ಪದ್ಧತಿಯಿಂದಾಗಿ ಎಷ್ಟೋ ಕಣ್ಮರೆಯ ಅಂಚಿನಲ್ಲಿರುವ ಔಷಧೀಯ ಸಸ್ಯಗಳು ಬೆಳಕಿಗೆ ಬರಲು ಸಾಧ್ಯವಾಗುವಂತಹದು ಆ ಮೂಲಕ ಪರಿಸರ ಸ್ನೇಹಿ ಬದುಕು ನಮ್ಮದಾಗವುದು.

ಜಂತುಹುಳುಗಳ ನಾಶಕ್ಕೆ 'ಬೇವಿನ ಹೂವ'ನ್ನು ತುಪ್ಪದಲ್ಲಿ ಹುರಿದು ನಿಯಮಿತ ಪ್ರಮಾಣದಲ್ಲಿ ಹುಣಸೆಹಣ್ಣು ಹಾಗೂ ಒಣಮೆಣಸಿನಕಾಯಿಯನ್ನು ಬೆರಸಿ ಅನ್ನದೊಂದಿಗೆ ಸೇವಿಸುವುದರಿಂದ ಜಂತುಹುಳುಗಳು ಸಾಯುತ್ತವೆ.

ಅಜೀರ್ಣದಿಂದ ಸೇವಿಸಿದ ಆಹಾರ ಜೀರ್ಣವಾಗದೆ, ಹುಳಿ, ತೇಗುಗಳು ಬರುತ್ತಿರೆ ಒಂದು ಹಿಡಿಯಷ್ಟು ಹುಣಸೆ ಹೂವುಗಳನ್ನು ಆರಿಸಿ ತಂದು ಅವುಗಳ ಕಷಾಯ ತಯಾರಿಸಿ ಕೊಡುತ್ತಾರೆ. ಇದರಿಂದ ಹಸಿವು ಉಂಟಾಗಿ ಜೀರ್ಣಶಕ್ತಿ ಹೆಚ್ಚುವುದು. 'ಈರುಳ್ಳಿ ಹೂವಿ'ನ ಪುಡಿಯನ್ನು ಒಂದು ಚಿಟಿಕೆ ತೆಗೆದುಕೊಂಡು ಜೇನುತುಪ್ಪವನ್ನು ಕಲಸಿ ಕುಡಿಸುವುದರಿಂದ ಆಹಾರ ಜೀರ್ಣವಾಗುವುದು.

ಕಣ್ಣಿಗೆ ಸಂಬಂಧಿಸಿದ ರೋಗಗಳಾದ ರಾತ್ರಿಕಣ್ಣು ಕಾಣಿಸದಿದ್ದರೆ, ಕೆಂಗಣ್ಣು, ಕಣ್ಣಿನ ಉರಿ, ಕಣ್ಣಾಗುವಿಕೆ, ಕಣ್ಣುನೋವಿಗೆ ಜನಪದರು ಹೂವಿನಿಂದ ತಯಾರಿಸಿ ಔಷಧಿಯಿಂದ ಪರಿಹಾರವನ್ನು ಕಂಡುಕೊಂಡಿದ್ದಾರೆ. ನೇತ್ರರೋಗಗಳಿಗೆ 'ಜಾಜಿ ಹೂವಿ'ನ ರಸವನ್ನು ಕಣ್ಣುಗಳ ಮೇಲೆ ಲೇಪಿಸುವುದರ ಮೂಲಕ ಉಪಶಮನ ದೊರೆಯುತ್ತದೆ. ಹಾಗೆಯೇ 'ಆಡುಸೋಗೆ' ಹೂವುಗಳನ್ನು ಬಿಡಿಸಿ ತಂದು ಕಣ್ಣಿನ ರೆಪ್ಪೆ ಮೇಲೆ ಕಟ್ಟುವುದರಿಂದ ಕಣ್ಣಿನ ರೋಗಗಳು ಕಣ್ಣುಉರಿ, ಕಣ್ಣುಕೆಂಪಾಗುವಿಕೆ ನಿವಾರಿಸಲ್ಪಡುತ್ತದೆ. ಕಣ್ಣಿನ ಉರಿ ನಿವಾರಿಸಲು ಶುದ್ಧವಾದ 'ಗುಲಾಬಿದಳಗಳ'ನ್ನು ಒಂದು ದಿನ ಶುದ್ಧವಾದ ನೀರಿನಲ್ಲಿಟ್ಟು ಆ ನೀರನ್ನು ಪ್ರತಿದಿನ ಮೂರರಿಂದ ನಾಲ್ಕುಭಾರಿ ನಾಲ್ಕು ಚಮಚದಂತೆ ಕುಡಿಸುವರು. ಇದರಿಂದ ಕಣ್ಣಿನ ಉರಿ ಕಡಿಮೆಯಾಗುವುದು. ಕಣ್ಣಿನ ರೋಗಕ್ಕೆ 'ಪಾರಿಜಾತದ ಹೂವ'ನ್ನು ಭಟ್ಟಿ ಇಳಿಸಿ ತೆಗೆದ ನೀರನ್ನು ಕಣ್ಣಿಗೆ ಹಚ್ಚುವ ಮೂಲಕ ಉಪಶಮನ ಪಡೆಯುತ್ತಾರೆ.

ಬೇಸಿಗೆಯ ಉರಿ ಬಿಸಿಲಿನಲ್ಲಿ ಕಣ್ಮುಚ್ಚಿ ಮಲಗಿ ಆಗ ತಾನೆ ಬಿಡಿಸಿತಂದ ಮಲ್ಲಿಗೆ ಹೂವನ್ನು ಕಣ್ಣಿಗೆ ಕಟ್ಟಿ ಮಲಗುತ್ತಾರೆ. ಆಗ ಕಣ್ಣಿಗೆ ತಂಪು ಮನಸ್ಸಿಗೆ ಹಾಯ್‌ಯೆನಿಸುತ್ತದೆ. ಇದರಿಂದ ಕಣ್ಣುರಿ, ಕಣ್ಣು ಕೆಂಪಾಗುವಿಕೆ ಕಡಿಮೆಯಾಗುತ್ತದೆ.

ಕಣ್ಣು ಕೆಂಪಾಗಿ ಉರಿಯುತ್ತಿರುವಾಗ 'ಹುಣಸೆ ಹೂವು'ಗಳನ್ನು ಸಂಗ್ರಹಿಸಿಕೊಂಡು ನುಣ್ಣಗೆ ಅರೆದು ಕಣ್ಣಿನ ಸುತ್ತ ಲೇಪಿಸುತ್ತಾರೆ.

ಚರ್ಮರೋಗಗಳಾದ ಕಜ್ಜಿ, ತುರಿಕೆ; ಗಾಯಗಳಲ್ಲಿ ಹೂವನ್ನು ಪೂತಿನಾಶಕವಾಗಿ (ಆ್ಯಂಟಿಸೆಪ್ಟಿಕ್) ಬಳಸುತ್ತಾರೆ. ಚರ್ಮರೋಗಗಳು ಕಂಡುಬಂದಾಗ 'ಅಗಸೆ ಹೂವ'ನ್ನು ಎಮ್ಮೆ ಹಾಲಿನಲ್ಲಿ ಕಾಯಿಸಿ ಮೊಸರು ಮಾಡಿ ಬೆಣ್ಣೆಯನ್ನು ಮೈ–ಕೈಗಳಿಗೆ ಲೇಪಿಸಿಕೊಳ್ಳುವರು. ಅಶೋಕಪುಷ್ಪವನ್ನು ನುಣ್ಣಗೆ ಅರೆದು ಕೊಬ್ಬರಿ ಎಣ್ಣೆಯಲ್ಲಿ ಕುದಿಸಿದ ನಂತರ ಬರುವ ಎಣ್ಣೆಯನ್ನು ಚರ್ಮರೋಗ ಇರುವವರು ಹಚ್ಚಿಕೊಳ್ಳುವರು. ಇದೊಂದು ಪರಿಣಾಮಕಾರಿ ತೈಲವಾಗಿ ಕೆಲಸಮಾಡುತ್ತದೆ. 'ಹೊಂಗೆಯ ಪಂಚಾಂಗ'ವನ್ನು ಅರೆದು ಅದಕ್ಕೆ ಎಳ್ಳೆಣ್ಣೆ ಸೇರಿಸಿ ಕಾಯಿಸಿ ಎಣ್ಣೆ ಮಾತ್ರ ಉಳಿಸಿಕೊಂಡು ಅದನ್ನು ಬಾಟಲಿಯಲ್ಲಿ ಶೇಖರಿಸಿಟ್ಟುಕೊಂಡು ಚರ್ಮರೋಗಗಳ ಚಿಕಿತ್ಸೆಯಲ್ಲಿ ಬಳಸುತ್ತಾರೆ. 'ಜಾಜಿ ಹೂವಿ'ನ ಅತ್ತರು ತಂಪುಕಾರಕವಾಗಿದ್ದು ಇದನ್ನು ಚರ್ಮರೋಗಿಗಳ ಚಿಕಿತ್ಸೆಯಲ್ಲಿ ಬಳಸುತ್ತಾರೆ. ಚರ್ಮದಲ್ಲಿ ತುರಿಕೆ ಇದ್ದಾಗ ಸಂಪಿಗೆ ಹೂವಿನ ರಸವನ್ನು ದಿನಕ್ಕೆರಡು ವೇಳೆಯಂತೆ ಲೇಪಿಸುವುದರಿಂದ ಚರ್ಮಕ್ಕೆ ಸಂಬಂಧಿಸಿದ ರೋಗಗಳು ಹತ್ತಿರ ಬರುವುದಿಲ್ಲ. 'ವ್ರಣ'[13]ಗಳನ್ನು ತೊಳೆಯಲು 'ದೇವಕಾಣಿಗಲೆ'ಯನ್ನು ಬಾಹ್ಯವಾಗಿ ಲೇಪಿಸುತ್ತಾರೆ. ಇದರಿಂದ ಗಾಯವು ಬಹುಬೇಗ ಮಾಗುವುದು.

ಮಗುವಿಗೆ ಹೊಸದಾಗಿ ಹುಲ್ಲು ಹುಟ್ಟುವಾಗ, ಜ್ವರ ಬರುವುದು ಸಾಮಾನ್ಯ ಅದರ ನಿವಾರಣೆಗೆ ಉದುರಿ ಬೀಳುವ ಬಾಳೆ ಹೂವುಗಳನ್ನು ನುಣ್ಣಗೆ ಅರೆದು ರಸಹಿಂಡಿ ಅದಕ್ಕೆ ಸ್ವಲ್ಪ ಜೀರಿಗೆ ಪುಡಿ ಕಲ್ಲುಸಕ್ಕರೆ ಹಾಕಿ ಏಳುದಿನ ಕೊಡುತ್ತಾರೆ. ಹಾಗೂ ಅದರ ರಸವನ್ನು ಮಗುವಿನ ಹಲ್ಲಿನ ವಸಡಿಗೆ ಹಚ್ಚುವರು. ಜ್ವರ ಕಂಡುಬಂದವರಿಗೆ ಪಾದರಿಯ ಚಕ್ಕೆಯ ಜೊತೆ ಹೂವಿನ ರಸ ತೆಗೆದು ಪಾನಕದಂತೆ ಮಾಡಿ

ಕುಡಿಸುವರು. ಇದು ತಂಪುಗುಣವನ್ನು ಹೊಂದಿದ್ದು ಬಹುಬೇಗ ಜ್ವರವು ಇಳಿಮುಖವಾಗುವುದು ಎಂದು ಜನಪದ ವೈದ್ಯರು ಅಭಿಪ್ರಾಯಪಡುತ್ತಾರೆ.

ನಿದ್ರೆಬಾರದಿರುವುದು: ಅನಿದ್ರೆಯಿಂದ ನರಳುವವರು ಮದರಂಗಿ/ ಗೋರಂಟಿ ಹೂವಿನ ಗೊಂಚಲನ್ನು ತಲೆಯ ಬಳಿ ಇಟ್ಟುಕೊಂಡು ಮಲಗುವುದರಿಂದ ನಿದ್ರೆ ಆವರಿಸುವುದು. ಹಿಸ್ಟೀರಿಯಾ[15] ರೋಗದಿಂದ ಬಳಲುತ್ತಿರುವ ಸ್ತ್ರೀಯರು ಮದರಂಗಿ ಹೂವಿನ ಗೊಂಚಲನ್ನು ಮುಡಿಯಲ್ಲಿ ಧರಿಸುವ ಅಭ್ಯಾಸ ಮಾಡಿಕೊಳ್ಳುವುದರಿಂದ ರೋಗ ಬಹುಬೇಗ ಗುಣಹೊಂದುವುದರ ಜೊತೆಗೆ ನಿದ್ರೆಯು ಬರುವುದು. ಹೂವಿನಲ್ಲಿರುವ ಸುವಾಸನೆ ನಿದ್ರೆಯಿಲ್ಲದೆ ಇಲ್ಲದಿರುವವರಿಗೆ ಮತ್ತನ್ನು ನೀಡಿ ನಿದ್ರೆಗೆ ಅವಕಾಶ ಮಾಡಿಕೊಡುವುದು.

ಸಂಧಿವಾತಕ್ಕೆ ಸಂಬಂಧಿಸಿದ ರೋಗಿಗಳು ಸಂಪಿಗೆ ಹೂವುಗಳನ್ನು ಕೊಟ್ಟು ಎಣ್ಣೆಯಲ್ಲಿ ಅರೆದು ತಯಾರಿಸಿದ ಮಿಶ್ರಣವನ್ನು ಲೇಪಿಸುವರು. ಪಿತ್ತಕ್ಕೆ ಸಂಬಂಧಿಸಿದಂತೆ ಪಿತ್ತದ ಪ್ರಮಾಣ ಹೆಚ್ಚಾದಾಗ ಒಂದು ಗಾಜಿನ ಭರಣಿಯಲ್ಲಿ ಹುಣಸೆಹೂವು, ಸಕ್ಕರೆಯನ್ನು ಮಿಶ್ರಗೊಳಿಸಿ ಬಿಸಿಲಿನಲ್ಲಿ ಎಂಟುದಿನಗಳವರೆಗೆ ಇಡುವುದರಿಂದ ಅದು ಗುಲ್ಕನ್ ಆಗಿ ಪರಿವರ್ತನೆಯಾಗುವುದು ಇದನ್ನು ಪಿತ್ತವನ್ನು ಹೋಗಲಾಡಿಸಲು ಬಳಸುವರು.

ಪಿತ್ತದೋಷದಿಂದುಂಟಾಗುವ ವಾಂತಿ, ಗರ್ಭಿಣಿಯರಿಗೆ ಆಗುವ ವಾಂತಿ ತಲೆನೋವುಗಳಲ್ಲಿ ಕಮಲದ ಹೂವಿನ ತೈಲವನ್ನು ಬಳಸಿಕೊಳ್ಳವರು ಇದೊಂದು ಉತ್ತಮ ಚಿಕಿತ್ಸೆಯಾಗಿದೆ. ಪಿತ್ತದ ಗಂದೆಗಳಿಗೆ ಪ್ರತಿನಿತ್ಯ ಒಮ್ಮೆ ಇಲ್ಲವೆ ಎರಡು ಭಾರಿ ಬೇವಿನ ಹೂವುಗಳನ್ನು ಪಲ್ಯಮಾಡಿ ಆಹಾರದೊಂದಿಗೆ ಸೇವಿಸುತ್ತಾ ಬರುವುದರಿಂದ ಗಂದೆಗಳು, ವಾಂತಿಯೂ ನಿವಾರಣೆಯಾಗುವುದು. ದೇಹವು ಆರೋಗ್ಯಪೂರ್ಣವಾಗಿರಲು ಬೇವಿನ ಹೂವು ಒಂದು ಉತ್ತಮವಾದ ಪ್ರತಿನಿತ್ಯದ ಆಹಾರವಾಗಿದೆ. ದೇಹದಲ್ಲಿನ ಉಷ್ಣವನ್ನು ಕಡಿಮೆಮಾಡಿಕೊಳ್ಳಲು ಗುಲಾಬಿ, ಕಲ್ಲುಸಕ್ಕರೆ, ಜೇನು ಹಾಕಿ ತಯಾರಿಸಿದ ಗುಲ್ಕನ್ ಸೇವಿಸುವರು. ಇದೊಂದು ಶಕ್ತಿವರ್ಧಕ ಟಾನಿಕ್ ತಿನ್ನಲು ಬಲುಸಿಹಿ. ಪ್ರತಿನಿತ್ಯ ಸೇವಿಸುವುದರಿಂದ ರಕ್ತವೃದ್ಧಿಯಾಗುವುದು. ಜೊತೆಗೆ ಬಾಯಿಹುಣ್ಣು, ಹೊಟ್ಟೆನೋವುಗಳಲ್ಲಿಯೂ ಇದರ ಸೇವನೆಯಿಂದ ಮುಕ್ತರಾಗಬಹುದು.

ಬಾಯಾರಿಕೆಯಿಂದ ಗಂಟಲು ಒಣಗಿದಾಗ 'ಕೇಪಾಳದ ಹೂ'ವುಗಳನ್ನು ಬಾಯಿಯಲ್ಲಿಟ್ಟುಕೊಂಡು ಜಗಿದಾಗ ಬಾಯಾರಿಕೆ ಕಡಿಮೆಯಾಗುವುದೆಂದು ಜನಪದರು ನಂಬುತ್ತಾರೆ.

ಬಾಯಿವಾಸನೆಯುಳ್ಳವರು ಬೆಳಗ್ಗೆ ಚೆನ್ನಾಗಿ ಅರಳಿದ ಮಲ್ಲಿಗೆ ಹೂವುಗಳನ್ನು ಒಂದು ಲೀಟರ್ ನೀರಿನಲ್ಲಿ ಕುದಿಸಿ ನಂತರ ಆ ಹೂವನ್ನು ತೆಗೆದು ಉಳಿದ ನೀರನ್ನು ದಿನಕ್ಕೆ ಒಂದೆರಡು ಭಾರಿ ಮುಂಜಾನೆ ಬಾಯಿ ಮುಕ್ಕಳಿಸುತ್ತಾ ಬರುವುದರಿಂದ ಬಾಯಿವಾಸನೆ ದೂರವಾಗುವುದು.

ಹೊಟ್ಟೆ ಉರಿಯಾದಾಗ ಸಕ್ಕರೆ ಪಾನಕದೊಂದಿಗೆ ಕೆಲವೊಂದು ಮಲ್ಲಿಗೆ ಮೊಗ್ಗುಗಳನ್ನು ಹಾಕಿ ಪಾತ್ರೆಯ ಬಾಯಿ ಮುಚ್ಚಿ ಮರುದಿನ ಮಲ್ಲಿಗೆ ಹೂವುಗಳನ್ನು ತೆಗೆದಿಟ್ಟು ಸೋಸಿದ ನೀರು ಕುಡಿಯುವುದರಿಂದ ಹೊಟ್ಟೆ ಉರಿ ಕಡಿಮೆಯಾಗುವುದು.

ಸ್ತನಪಾನಕ್ಕೆ ಸಂಬಂಧಿಸಿದಂತೆ: ಹುಟ್ಟಿದ ಮಗು ತೀರಿ ಹೋದ ಮೇಲೆ ತಾಯಿಯ ಸ್ತನಗಳಲ್ಲಿ ಹಾಲು ಇರುವುದರಿಂದ ಅವು ಕಲ್ಲಿನಂತೆ ಕಠಿಣಗೊಂಡು ನೋವುಕೊಡುತ್ತವೆ. ಇದರ ನಿವಾರಣೆಗೆ ಆಗತಾನೆ ಬಿಡಿಸಿ ತಂದ ಮಲ್ಲಿಗೆ ಹೂವುಗಳನ್ನು ಎರಡೂ ಸ್ತನಗಳಿಗೆ ಕಟ್ಟುವುದರಿಂದ ಹಾಲು ಅಲ್ಲೆ ಹಿಂಗಿ ನೋವು ನಿವಾರಣೆಯಾಗುವುದು. ಹಾಗೆಯೇ ತಾಯಿ ತನ್ನ ಮಗುವಿಗೆ ಒಂಭತ್ತು ತಿಂಗಳವರೆಗೆ ಹಾಲುಣಿಸಿ ನಂತರ ಹಾಲುತಪ್ಪಿಸುವಾಗ ಆಕೆಯ ಸ್ತನಗಳು ಹಾಲಿನಿಂದ ಭಾರವಾಗಿ ನೋವು ಕೊಡುತ್ತವೆ. ಇದಕ್ಕೂ ಮೇಲಿನ ವಿಧಾನವನ್ನೇ ಅನುಸರಿಸುತ್ತಾರೆ. ಇದರಿಂದ ಎದೆ ಹಾಲು ಕಮ್ಮಿಯಾಗಿ ಎದೆಯ ಭಾರ, ನೋವು ನಿವಾರಣೆಯಾಗುವುದು. ಸೌಂದರ್ಯದ ದೃಷ್ಟಿಯಿಂದ ಎದೆ ಕಡಿಮೆ ಇರಬೇಕು ಎನ್ನುವವರಿಗೆ ಈ ಬಗ್ಗೆ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ತುಂಬು ಎದೆಯುಳ್ಳ ಹೆಣ್ಣು ಮಕ್ಕಳಿಗೆ ಇದೊಂದು ವರಧಾನ.

ಪುರುಷತ್ವದ ಕೊರತೆ ಕಂಡು ಬಂದಾಗ ಒಂದು ಚಮಚ ಈರುಳ್ಳಿ ಹೂವಿನ ಚೂರ್ಣವನ್ನು ಒಂದು ಬಟ್ಟಲು ಹಾಲಿನಲ್ಲಿ ಕಲಸಿ ದಿನಕ್ಕೆ ಎರಡು ಭಾರಿಯಂತೆ ಕ್ರಮವಾಗಿ ಕೆಲವು ದಿನಗಳವರೆಗೆ ಸೇವಿಸುವುದರಿಂದ ಪುರುಷತ್ವದ ಕೊರತೆ ನಿವಾರಣೆಯಾಗುತ್ತದೆ.

ಲೈಂಗಿಕತೆಗೆ ಸಂಬಂಧಿಸಿದ ರೋಗಗಳಲ್ಲಿ ಹಿಪ್ಪೆ ಹೂವಿನ ರಸವನ್ನು ಹಾಲಿನಲ್ಲಿ ಬೆರೆಸಿ ಕುಡಿಯುವುದರಿಂದ ಯಾವುದೇ ಬಗೆಯ ಲೈಂಗಿಕ ರೋಗಗಳು ಗುಣಹೊಂದುವುವು. ಸಂಭೋಗಶಕ್ತಿಯನ್ನು ಹೆಚ್ಚಿಸಿಕೊಳ್ಳ ಬಯಸುವವರು ದಾಸವಾಳದ ಹೂವಿನಿಂದ ತಯಾರಿಸಿದ ಗುಲ್ಕನನನ್ನು ಸೇವಿಸುವರು.

ಹೀಗೆ ಜನಪದರು ತಮ್ಮ ದೈಹಿಕ ಏರು–ಪೇರುಗಳಿಗೆ ಸಸ್ಯಮೂಲಕ ಹೂವನ್ನು ಬಳಸಿ ಪರಿಹಾರವನ್ನು ಕಂಡುಕೊಂಡಿದ್ದಾರೆ. ಈ ಎಲ್ಲಾ ದೈಹಿಕ ರೋಗಗಳಿಗೆ ಆಹಾರದಲ್ಲಿನ ವ್ಯತ್ಯಾಸವೇ ಕಾರಣ ಎಂಬುದು ಇಲ್ಲಿ ಮುಖ್ಯವಾಗುತ್ತದೆ.

ಆಕಸ್ಮಿಕವಾಗಿ ಆಗುವ ಸುಟ್ಟಗಾಯಕ್ಕೆ, ಆಕಸ್ಮಿಕವಾಗಿ ಬಿದ್ದಾಗ ಕೆಲವೊಂದು ಪರಿಹಾರಗಳನ್ನು ಹೂವಿನ ಮೂಲಕ ಪರಿಹರಿಸಿಕೊಳ್ಳಲಾಗುತ್ತದೆ. ಅಂತಹ ಅಂಶಗಳನ್ನು ಈ ಮುಂದೆ ನೋಡಬಹುದು.

3. ಆಕಸ್ಮಿಕ ಅಪಘಾತಗಳಿಂದ ಉಂಟಾಗುವ ಗಾಯ, ನೋವುಳಿಗೆ ಚಿಕಿತ್ಸೆ : ಕೃಷಿ ನಿರತ ಜನಪದರು ಆಕಸ್ಮಿಕವಾಗಿ ಬಿದ್ದಾಗ, ಇಲ್ಲವೇ ಅಡುಗೆ ಮಾಡುವ ಸಂದರ್ಭದಲ್ಲಿ ಕೈ ಸುಟ್ಟುಕೊಂಡಾಗ ಹೂವಿನಿಂದ ಉಪಶಮನವನ್ನು ಪಡೆದುಕೊಳ್ಳುವರು. ಪೆಟ್ಟುತಾಕಿ ರಕ್ತ ಸ್ರಾವ ಉಂಟಾದಾಗ ದಾಸವಾಳದ ಹೂವಿನ ರಸವನ್ನು ಹಿಂಡಿ, ಉಳಿದ ಹೂವಿನ ಸಿಪ್ಪೆಯನ್ನು ಆ ಜಾಗಕ್ಕೆ ಲೇಪಿಸುವುದರಿಂದ ರಕ್ತಸ್ರಾವ ನಿಲ್ಲುವುದು ಹಾಗೂ ಗಾಯವು ಬಹುಬೇಗ ವಾಸಿಯಾಗುವುದು. ಸುಟ್ಟಗಾಯಗಳಿಗೆ ಹತ್ತಿ ಹೂವನ್ನು ನೀರು ಬೆರೆಸದೆ ಹಾಗೆ ನುಣ್ಣಗೆ ಅರೆದು ಗಾಯದ ಮೇಲೆ ಲೇಪಿಸುವುದರಿಂದ ಬಹುಬೇಗ ಗಾಯ ಗುಣಹೊಂದುವುದು. ಇದೇ ರೀತಿಯಲ್ಲಿ 'ಬಿಂದಿಗೆ ಗಿಡ'ದ ಎಲೆ ಮತ್ತು ಹೂವುಗಳನ್ನು ಅರೆದು. ಎಣ್ಣೆಯಲ್ಲಿ ಹಚ್ಚುವುದರಿಂದ ಸುಟ್ಟಗಾಯ ವಾಸಿಯಾಗುವುದು.

ಶಸ್ತ್ರ ಚಿಕಿತ್ಸೆಯಲ್ಲಿ: ಚೆಂಡು ಹೂವನ್ನು ನೀರಿನಲ್ಲಿಟ್ಟು ಅದರಲ್ಲಿ ಇಳಿಯುವ ಸಾರವನ್ನು ಶಸ್ತ್ರ ಕ್ರಿಯೆಯಾದ ನಂತರ ಪೂತಿನಾಶಕವಾಗಿ (ಆ್ಯಂಟಿ

ಸೆಪ್ಟಿಕ್) ಹಾಕುತ್ತಾರೆ.

ವಿಷಜಂತುಗಳು ಇತರೆ ಪ್ರಾಣಿಗಳು ಕಡಿದಾಗ ಜನಪದರು ತಮ್ಮದೇ ಆದ ವಿಧಾನವನ್ನು ಬಳಸಿಕೊಳ್ಳುತ್ತಾರೆ. ಹೂವಿನಿಂದ ತಯಾರಿಸಿದ ಔಷದಿಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

4. ಪ್ರಾಣಿ, ವಿಷ ಜಂತುಗಳಿಂದ ಉಂಟಾಗುವ ವಿಪತ್ತುಗಳಿಗೆ ಚಿಕಿತ್ಸೆ

ಪ್ರಾಣಿ ಮತ್ತು ವಿಷ ಜಂತುಗಳಿಂದ ಉಂಟಾಗುವ ಅಪಾಯಗಳಲ್ಲಿ ಮುಖ್ಯವಾಗಿ ಮೀನು, ಇಲಿ, ಚೇಳು, ಕಟ್ಟಿರುವೆ ಇತರೆ ಕ್ರಿಮಿಕೀಟಗಳು ಕಡಿದಾಗ ಉಂಟಾಗುವ ಅಪಾಯಗಳಿಗೆ ಚಿಕಿತ್ಸೆಯನ್ನು ಗಮನಿಸಬಹುದು.

ಕರಿ ಉಮ್ಮತಿ ಗಿಡದ ಒಣಗಿದ ಹೂವು ಮತ್ತು ಎಲೆಗಳಲ್ಲಿ ವಿಶಿಷ್ಟವಾದ ಔಷಧೀಯ ಗುಣವಿದ್ದು ಅವುಗಳ ರಸವನ್ನು ಮೀನು ಕಡಿದಾಗ ಬಳಸುತ್ತಾರೆ.

ನಾಗ ಸಂಪಿಗೆ ಎಲೆ ಮತ್ತು ಹೂವುಗಳನ್ನು ಔಷಧಿಯ ರೂಪದಲ್ಲಿ ಚೇಳು ಕಡಿದಾಗ ಸೇವಿಸಲು ಕೊಡುವರು.

ಕಟ್ಟಿರುವೆ ಹಾಗೂ ಇತರ ಹುಳುಗಳು ಕಡಿದಿರುವ ಜಾಗಕ್ಕೆ ಪರಂಗಿ ಹೂವುಗಳನ್ನು ಕೈಯಲ್ಲಿ ಹೊಸಕಿ ಹಚ್ಚಿದರೆ ಉರಿಕಡಿಮೆಯಾಗುವುದು.

ಉತ್ತರಾಣಿಯ ಹೂಗೊಂಚಲಿನ ಮೂಲವನ್ನು ತಯಾರಿಸಿ ವಿಷ ಕ್ರಿಮಿಗಳಾದ ಚೇಳು, ಸಾವಿರಕಾಲು ಇತರೆ ಕ್ರಿಮಿಗಳು ಕಚ್ಚಿದ ಜಾಗದಲ್ಲಿ ಹಚ್ಚುವರು.

ಇಲಿ ಕಡಿದಾಗ ಉತ್ತರಾಣಿಯ ಹೂವು, ಎಲೆಗೊಂಚಲನ್ನು ಅರೆದು ಜೇನುತುಪ್ಪದಲ್ಲಿ ಒಂದುವಾರ ತಿನ್ನಿಸುವರು.

ಉರಿಮಂಡಲದಾವಿನ ನೊರೆ ಸೋಕಿದರೆ 'ಆವರಿಕೆಹೂವಿ'ನ ಮೊಗ್ಗು ಮತ್ತು ಗಟ್ಟಿ ಮೊಸರು ಹಾಕಿ ಅರೆದು ಸೋಕಿದ ಜಾಗಕ್ಕೆ ಕಟ್ಟುವುದರಿಂದ ಉರಿಕಡಿಮೆಯಾಗಿ ತಂಪಾಗುವುದು. ಸೊಳ್ಳೆನಿವಾರಣೆಗೆ ಮಾವಿನ ಹೂವನ್ನು ಕೆಂಡದ ಮೇಲೆ ಹಾಕಿ ಹೊಗೆ ಉಂಟುಮಾಡುವುದರಿಂದ ಸೊಳ್ಳೆಗಳು ಬರದಂತೆ ನಿಯಂತ್ರಿಸಬಹುದು.

ಸಾಕು ಪ್ರಾಣಿಗಳಾದ ಹಸು, ಎಮ್ಮೆ, ದನಕರುಗಳಿಗೆ ಹೂವಿನಿಂದ ಔಷಧಿಯನ್ನು ನೀಡುವರು. ಸಾಕು ಪ್ರಾಣಿಗಳಿಗೆ ಬರುವ ಸಂಧಿವಾತಕ್ಕೆ ತಾಳೇಹೂವಿನ ಕೇಸರಗಳಿಂದ ತಯಾರಿಸಿದ ಔಷಧಿಯನ್ನು ಉಪಶಮನಕಾರಿಯಾಗಿ ಬಳಸುವರು.

ಕುದುರೆಯ ಹೊಟ್ಟೆನೋವು ನಿವಾರಣೆಗೆ ಹಿಪ್ಪೆಹೂವುಗಳಿಂದ ಸರಾಯಿಮಾಡಿ ಕುಡಿಸುವರು. ದೇವರಿಗೆ ಪೂಜಿಸಿದ ದಾಸವಾಳದ ಹೂವುಗಳನ್ನು ಹಸು, ಎಮ್ಮೆ, ಮೇಕೆಗಳಿಗೆ ತಿನ್ನಲು ಕೊಡುವರು.

ಜನಪದರು ಬಳಸುವ ವೈದ್ಯಪದ್ಧತಿಯಲ್ಲಿ ಹೂವುಗಳನ್ನು ರೋಗರುಜಿನಗಳಿಗೆ ಪರಿಹಾರವಾಗಿ ಬಳಸಿಕೊಂಡಿರುವುದು ಈ ಅಧ್ಯಾಯದಿಂದ ತಿಳಿದು ಬರುತ್ತದೆ. ಇವುಗಳ ಉಪಯುಕ್ತತೆಯನ್ನು ಮನಗಂಡು ಈ ಹಿನ್ನೆಲೆಯಲ್ಲಿ ಸಾಕಷ್ಟು ಅಧ್ಯಯನಗಳು, ಪ್ರಯೋಗಗಳು ಹೂವಿನ ಮೇಲೆ ನಡೆದಿದೆ ಕೆಲವನ್ನು ಇಲ್ಲಿ ನೋಡೋಣ.

ಅಗಸೆಹೂವಿನ ಮಹತ್ವವನ್ನರಿತ ವೈದ್ಯವಿಜ್ಞಾನ ಇದನ್ನು ಪ್ರಯೋಗಾಲಯದಲ್ಲಿ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದೆ. ಅದರಲ್ಲಿ ವಿಶಿಷ್ಟ ಅಂಶಗಳಾದ ಪ್ರೊಟೀನ್ ಲೋಹಗಳು, ಹಲವಾರು ಜೀವಸತ್ವಗಳು ಹಾಗೂ ವಿಶಿಷ್ಟ ರಾಸಾಯನಿಕ ಇರುವುದು ದೃಢಪಟ್ಟಿವೆ.

ಅಶೋಕ ಪುಷ್ಪದಲ್ಲಿ ಕೆಲವೊಂದು ಮಹತ್ವದ ಅಂಶಗಳು ಗೋಚರವಾಗಿರುವುದು ಸ್ಥಿರಪಟ್ಟಿದೆ. ಟ್ಯಾನಿನ್, ಹಿಮಟಾಕ್ಸಿಲಿನ್, ಕೆಚೆಕಾಲ್, ಒಂದು ಸುಗಂಧಿತತೈಲ, ಕೆಟೋಸ್ಟೆರಾಲ್, ಗ್ಲೈಕೊಸೈಡ್, ಸೆಪೊನಿನ್, ಕಾರ್ಬಾಲಿಕ್, ಕ್ಯಾಲ್ಸಿಯಂ ಮತ್ತು ಕಬ್ಬಿಣದ ಯೋಗಿಕಗಳು ಲಭ್ಯವಿದೆ. ಇದರ ಮುಖ್ಯ ಕ್ಷಾರವು ಸ್ಟಿರಾಯ್ಡ್ ಮತ್ತು ಕ್ಯಾಲ್ಸಿಯಂ ಲವಣದಿಂದ ನಡೆಯುತ್ತದೆ ಎಂಬುದು ಸಂಶೋಧನೆಗಳಿಂದ ಸ್ಥಿರಪಟ್ಟಿದೆ. ಇದರ ಹೂವುಗಳು ಚಿಕೀತ್ಸಕ ಗುಣಧರ್ಮವನ್ನು ಹೊಂದಿದ್ದು ಕಫಪಿತ್ತನಾಶಕವಾಗಿದೆ ಎಂಬುದಕ್ಕೆ ಪೂರಕವಾದ ಮೇಲಿನ ಅಂಶಗಳು ಇರುವುದೇ ಕಾರಣವಾಗಿದೆ. ಕಕ್ಕೆ ಹೂವುಗಳಲ್ಲಿ ಗ್ಲೈಕೋಸೈಡ್‌ಗಳಿಗೆ ಎಂದು ಸ್ಥಿರಪಟ್ಟಿದೆ.

ಮಧುಗಣಿಕೆ, ಉಮ್ಮತ್ತಿ ಎಂದು ಕರೆಯಲ್ಪಡುವ ಹತ್ತೂರ ಸ್ಟ್ರಮೋನಿಯಂನ ಹೂವು ಎಲೆಗಳಲ್ಲಿ ಕೆಲವು ಕ್ಷಾರೀಯ ಘಟಕಗಳಿವೆ. A tropine, Hyoscine, Hyoscyanmine ಇತರೆ ಘಟಕಾಂಶಗಳು ಕಂಡು ಬಂದಿದೆ.

ಮಲ್ಲಿಗೆಯನ್ನು ಆಘ್ರಾಣಿಸಿದಾಗ ನ್ಯೂರೋ ಕೆಮಿಕಲ್‌ಗಳಾದ ಸೆರೆಟೊನಿನ್ (ರಿಲ್ಯಾಕ್ಸ್ ಭಾವನಕಾರಕ) ಎನಕೆಫೆಲಿನ್ (ನೋವುನಿವಾರಕ)ಗಳು ಬಿಡುಗಡೆಯಾಗುತ್ತವೆ. ಹಾಗಾಗಿ ಮಲ್ಲಿಗೆಯನ್ನು (Emotional Invigarator) ಎಂದು ಪರಿಗಣಿಸಿದ್ದಾರೆ.

ದಾಸವಾಳವನ್ನು ಪ್ರಯೋಗಾಲಯದಲ್ಲಿ ವಿಶ್ಲೇಷಣೆಗೆ ಒಳಪಡಿಸಿದಾಗ ಸಾರಜನಕ, ನಾರಿನ ಹೊರತಾಗಿ ಕ್ಯಾಲ್ಸಿಯಂ (4.04%) ರಂಜಕ (26.68%) ಕಬ್ಬಿಣ (1.69%) ಹಾಗೂ ವಿಟಮಿನ್ 'ಬಿ' ಮತ್ತು 'ಸಿ'ಗಳು ಕಂಡು ಬಂದಿವೆ.

ಬೇವಿನ ಹೂವುಗಳಲ್ಲಿ ನಿಂಬೊಸ್ಟೆರಾಲ್, ಕ್ಯಾಪೆರಾಲ್, ಕ್ವಿರ್ಸೆಟಿನ್, ಮೈರ್‌ಸಿಟನ್ ನಿಂಬೋಸ್ಟಿರಿನ್, ನಿಮೊಸಿಟೆನ್, ಕೊಬ್ಬಿನ ಆಮ್ಲಗಳು ಮತ್ತು ಹೆಚ್ಚು ಖಾರವುಳ್ಳ ಅವಶ್ಯಕ ತೈಲಗಳಿವೆ ಎಂದೂ, ಬೇವಿನ ಒಣಹೂವುಗಳನ್ನು ಉತ್ತೇಜಕ, ಶಕ್ತಿವರ್ಧಕ ಮತ್ತು ಹೊಟ್ಟೆನೋವು ನಿವಾರಕವೆಂದು ಪರಿಗಣಿಸಿದ್ದಾರೆ. ಈ ಹೂವುಗಳು ಅಗ್ನಿಮಾಂದ್ಯ ಮತ್ತು ಸಾಮಾನ್ಯ ನಿಶ್ಯಕ್ತತೆಗಳಲ್ಲಿ ಪ್ರಯೋಜನಕಾರಿ. ಈ ಹೂವುಗಳಿಂದ ತೆಗೆದ ಕಹಿತೈಲವನ್ನು ಚರ್ಮರೋಗ ನಿವಾರಣೆಗೆ ಬಳಸಲಾಗುತ್ತದೆ.

ಮುತ್ತುಗದ ಹೂವಿಗೆ ವೈದ್ಯಕೀಯ ಪ್ರಾಮುಖ್ಯತೆಯಿದೆ. ಇದರ ಹೂವು ಕಫಪಿತ್ತ ಶಾಮಕವಾಗಿದೆ. ರಾಸಾಯನಿಕವಾಗಿ ಇದರಲ್ಲಿ ಕೈನೊಟೋನಿಕ್ ಆಸಿಡ್, ಗ್ಯಾಲಿಕ್ ಆಸಿಡ್, ಪೆಲಸೋನಿನ್ ಇತ್ಯಾದಿಗಳಿವೆ ಎಂಬುದು ಸ್ಥಿರಪಟ್ಟಿದೆ.[25]

ನುಗ್ಗೆ ಹೂವು ಮಲಬದ್ಧತೆಯ ನಿವಾರಕ, ನರದೌರ್ಬಲ್ಯ ನಾಶಕವಾಗಿದೆ. ದೇಹಕ್ಕೆ ಅಗತ್ಯವಾದ ಅಮೈನೋ ಆಮ್ಲ, ಸಾರಜನಕ, ಸುಣ್ಣಗಳನ್ನು ಯುಕ್ತ ಪ್ರಮಾಣದಲ್ಲಿ ನೀಡುತ್ತದೆ. ಹಾಗೆಯೇ ಇದರಲ್ಲಿ ಕ್ವಾರ್ಸಿಟೀನ್ ಕ್ಯಾಂಫರಾಲ್ ಎಂಬಕ್ಷಾರ ಇರುತ್ತದೆ. ಇದು ವೀರ್ಯಾಣುವನ್ನು ವೃದ್ಧಿಸುವುದಲ್ಲದೆ ತಾಯ್ತನವನ್ನು ಒದಗಿಸುತ್ತದೆ. ಎದೆಯ ಕಫ, ಪಿತ್ತರೋಗ ಮುಂತಾದವನ್ನು ತಗ್ಗಿಸಿ ಕ್ರಮೇಣ ನಿವಾರಿಸುತ್ತದೆ.[26]

ಈವರೆಗಿನ ಅಧ್ಯಯನದಿಂದ ಜನಪದರು ಹೂವನ್ನು ಚಿಕಿತ್ಸಾಕ್ರಮಗಳಲ್ಲಿ ಬಳಸಿಕೊಳ್ಳುವಲ್ಲಿ ತಮ್ಮ ಪ್ರೌಢ ಅನುಭವವನ್ನು ಹೊಂದಿದ್ದಾರೆ. ಒಂದೇ

ಚಿಕಿತ್ಸೆಗೆ ಹಲವು ಹೂವುಗಳನ್ನು ಒಂದೇ ಬಗೆಯ ಚಿಕೀತ್ಸಾಕಾರಿ ಗುಣವನ್ನು ಹೊಂದಿರುವುದನ್ನು ಕಾಣುತ್ತೇವೆ. ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಅಗತ್ಯವಾದ ಹೂವುಗಳು ಎಲ್ಲಾ ಕಾಲದಲ್ಲಿಯೂ ದೊರಕುವುದಿಲ್ಲವಾದ್ದರಿಂದ ಋತುಮಾನಕ್ಕೆ ತಕ್ಕ ಹಾಗೆ ದೊರಕುವಂತೆ ನಿಸರ್ಗ ಸೃಷ್ಟಿಯ ಅನುಕೂಲತೆಯನ್ನು ಜನಪದರು ಹೂವುಗಳ ಗುಣಧರ್ಮವನ್ನರಿತು ಬಳಸಿಕೊಂಡಿರುವುದನ್ನು ಇಲ್ಲಿ ಗಮನಿಸ ಬಹುದಾಗಿದೆ.

ಮಾನವ ಸಸ್ಯಸಂಕುಲದೊಂದಿಗೆ ತನ್ನ ಆರೋಗ್ಯವನ್ನು ರಕ್ಷಿಸಿಕೊಳ್ಳುತ್ತಾ ಬಂದಿದ್ದಾನೆ. ಅವನ ಪ್ರಕೃತಿ ಪ್ರೇಮ ಅಸಾಧಾರಣವಾದುದು. ಹಾಗೆಯೇ ನಿಸರ್ಗ ಒದಗಿಸಿದ ಸೌಲಭ್ಯಗಳನ್ನೆಲ್ಲ ಉಪಯುಕ್ತವಾಗಿ ಬಳಸಿಕೊಳ್ಳುವಲ್ಲಿ ಸಮರ್ಥನಾಗಿದ್ದಾನೆ. ಸಸ್ಯಸಂಕುಲದನಾಶ, ಪರಿಸರ ಮಾಲಿನ್ಯ ದಂತಹ ಈ ಸಮಯದಲ್ಲಿ ಜನಪದರು ಪ್ರಕೃತಿಯಲ್ಲಿನ ಗಿಡ–ಮರಗಳ ಬಗ್ಗೆ ಹೊಂದಿರುವ ವೈಜ್ಞಾನಿಕ ಕಾಳಜಿ ಆಧುನಿಕ ವೈದ್ಯ ವಿಜ್ಞಾನಕ್ಕೆ ಸಹಾಯಕವಾಗಬಲ್ಲದು.

ಭಾರತೀಯ ವೈದ್ಯ ಪರಂಪರೆ ಶತಮಾನಗಳಷ್ಟು ಹಳೆಯದು, ಅದು ಜನಪದ ವೈದ್ಯ/ಮನೆಮದ್ದು, ಸಿದ್ಧ, ಆಯುರ್ವೇದ, ಹಾಗೂ ಬುಡಕಟ್ಟು ಜನಾಂಗದವರ ವಿಶಿಷ್ಟ ಚಿಕಿತ್ಸಾ ವಿಧಾನವಾಗಿರಬಹುದು. ಆದರೆ ಇಂದು ಈ ಎಲ್ಲಾ ವೈದ್ಯ ಪದ್ಧತಿಗಳು ಮೂಲೆ ಗುಂಪಾಗಿದೆ. ಇದರ ಜೊತೆಗೆ ಆಲೋಪತಿ ವೈದ್ಯ ಪದ್ಧತಿಗಳು ಇಂದು ವೈಭವೀಕರಣಕ್ಕೊಳಪಟ್ಟಿವೆ. ಎಲ್ಲಕ್ಕಿಂತ ಮಿಗಿಲಾಗಿ ಅಮೂಲ್ಯ ಔಷಧೀಯ ಸಸ್ಯಗಳು ಕಣ್ಮರೆಯಾ ಗುತ್ತಿವೆ. ಜೊತೆಗೆ ಜನಪದರ ಚಿಕಿತ್ಸಾ ವಿಧಾನಗಳು ಇನ್ನಿಲ್ಲದಂತೆ ಕಣ್ಮರೆಯಾಗುತ್ತಿವೆ. ಇದರಿಂದ ಪರಂಪರಾಗತವಾಗಿ ಬಂದಂತಹ ಜ್ಞಾನ ನಶಿಸಿ ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ಜನಪದ ವೈದ್ಯವನ್ನು ಕುರಿತಾದ ಸಂಶೋಧನೆಗಳು ಮುಖ್ಯವಾಗುತ್ತದೆ. ವಿಶಿಷ್ಟವಾದಂತಹ ಜನಪದ ವೈದ್ಯ ಪದ್ಧತಿಗಳು ಇಂದು ಸಂಶೋಧನೆಗೆ ಒಳಪಟ್ಟು ಉತ್ತಮ ಫಲಿತಗಳು ಹೊರಬಂದಿವೆ. ಇದರಿಂದ ಆಧುನಿಕ ವೈದ್ಯ ವಿಜ್ಞಾನಕ್ಕೆ ಬೇಕಾದ ಅಕರಗಳು ದೊರಕಿ ಸಂಶೋಧನೆ ಸುಲಭವಾಗಲು ಸಹಾಯಕವಾಗುವುದು ಈ ಹಿನ್ನೆಲೆಯಲ್ಲಿ "ಜನಪದ ವೈದ್ಯದಲ್ಲಿ ಹೂವು" ಒಂದು ಮಾರ್ಗಸೂಚಿಯಾಗಲಿದೆ.

ಪರಾಮರ್ಶನ ಗ್ರಂಥಗಳು

1. ಶಿವರಾಮು ವಿ.ಎನ್ 1988, ಬುಡವೊಂದು ಕವಲೆಂಟು, ಹಾಸನ, ಅಂಕಿ ಅಂಶಿ ಪ್ರಕಾಶನ.
2. ಶ್ರೀಪಾದ್ ಭಟ್, 2002 ಕರಾವಳಿಯ ಸಿರಿಯೊಡಲು, ಮೈಸೂರು, ಚೇತನ ಬುಕ್ ಹೌಸ್.
3. ಶಂಕರ ನಾರಾಯಣ ತೀ.ನಂ 1985, ದ್ರಾವೀಡ ಜಾನಪದ, ಮೈಸೂರು, ಪ್ರಸಾರಾಂಗ, ಮಾನಸಗಂಗೋತ್ರಿ.
4. ಡಾ॥ ಎ.ಎ.ಫರೂಕಿ, ಶ್ರೀ ಬಿ.ಎಸ್.ಶ್ರೀರಾಮು, ಡಾ॥ ಕೆ.ಎನ್.ಶ್ರೀನಿವಾಸಪ್ಪ, ಶ್ರೀ ಓ.ಆರ್.ಲಕ್ಷ್ಮೀಪತಯ್ಯ 2000, ಕಾವ್ಯ ಕಲಾ ಪ್ರಕಾಶನ.
5. ನಡಿಬೈಲು ಉದಯ ಶಂಕರ 1999, ಮೂಲಿಕೆಗಳ ಮಾಯಾ ಲೋಕ, ಬೆಂಗಳೂರು ಸ್ವಪ್ನ ಬುಕ್‌ಹೌಸ್.

ಕೃಷಿ ಚರಗದ ಸ್ವರೂಪ ಮತ್ತು ಆಶಯಗಳು

ರೇವಣ್ಣ. ಜಿ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್. ಜೆ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚಂದ್ರವಳ್ಳಿ ಚಿತ್ರದುರ್ಗ-577 501

revannab12@gmail.com

ಕೃಷಿ ಬದುಕಿನ ಚರಿತ್ರೆಯಲ್ಲಿ ರೈತರು ತಮ್ಮ ಅನುಭವ ಹಾಗೂ ನಂಬಿಕೆಗಳ ಹಿನ್ನಲೆಯಲ್ಲಿ ಅನೇಕ ಜ್ಞಾನಗಳನ್ನು ಕಂಡುಕೊಂಡಿದ್ದಾರೆ, ಅಂಥ ಜ್ಞಾನಗಳಲ್ಲಿ ಈ ಚರಗ ಆಚರಣೆ ಒಂದು, ರೈತರು ತಾವು ಬೆಳೆದ ಬೆಳೆಗಳು ಫಲಕ್ಕೆ ಬಂದ ಸಂಧರ್ಭದಲ್ಲಿ ಹೊಲಕ್ಕೆ ಪೂಜೆ ಮಾಡುತ್ತಾರೆ. ಆ ಪೂಜೆಗೆ ವಿವಿದ ರೀತಿಯ ಆಹಾರ ಪದಾರ್ಥಗಳನ್ನು ತಯಾರಿಸಿ ತಂದು ಎಡೆ ಅರ್ಪಿಸಿ ಅದನ್ನು ಹೋಱಗ್ಯ ಹೋಱಗ್ಯ, ಚಲ್ಲಂಬರಗೋ ಎಂಬಿತ್ಯಾದಿ ಘೋಷ ವಾಕ್ಯಗಳನ್ನು ಕೂಗುತ್ತಾ ಹೊಲದ ಸುತ್ತಾ ಚೆಲ್ಲುತ್ತಾರೆ. ಮತ್ತೆ ತಾವು ಕೂಡ ಹೊಲದಲ್ಲಿಯೇ ಊಟಮಾಡಿ ವಾಪಾಸ್ಸಾಗುತ್ತಾರೆ. ಈ ಆಚರಣೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಸ್ವರೂಪಗಳಲ್ಲಿ ಕಂಡುಬರುತ್ತದೆ. ಚರಗ ಚೆಲ್ಲುವ ಸಂಧರ್ಭಗಳು ಕೂಡ ಬೇರೆ ಯಾಗಿರುತ್ತವೆ. ಉದಾ: ಉತ್ತರ ಕರ್ನಾಟಕದ ರೈತರು ಸೀಗೆ ಹುಣ್ಣಿಮೆ ಮತ್ತು ಎಳ್ಳು ಅಮವಾಸೆಗೆ, ಮಲೆನಾಡಿನ ರೈತರು ಭೂಮಿ ಹುಣ್ಣಿಮೆಯ ಸಂಧರ್ಭಕ್ಕೆ, ದಕ್ಷಿಣ ಕರ್ನಾಟಕದ ರೈತರು ಪಂಚಮಿ ಹಬ್ಬದ ಸಂಧರ್ಭಗಳಲ್ಲಿ ಚರಗ ಚೆಲ್ಲುವುದನ್ನು ಕಾಣಬಹುದು. ಚರಗ ಚೆಲ್ಲುವ ಈ ಕ್ರಿಯೆಯ ಹಿಂದೆ ತಾವು ಬೆಳೆದ ಪೈರಿಗೆ ಕ್ಷೇಮವಾಗಲಿ ಮತ್ತು ಪಸಲು ಉಲುಸಾಗಲಿ ಎಂಬ ಉದ್ದೇಶವಿದೆ. ಚರಗ ಆಚರಣೆಗಳು ಮೌಢ್ಯ ಸಂಪ್ರದಾಯಗಳಲ್ಲ. ಈ ಆಚರಣೆಯ ಹಿಂದೆ ವೈಜ್ಞಾನಿಕತೆಯೂ ಇದೆ. ಇಂಥ ಆಚರಣೆ ಇಂದು ತನ್ನ ಅಸ್ತಿತವನ್ನು ಮತ್ತು ಮೆರಗನ್ನು ಕಳೆದುಕೊಳ್ಳುತ್ತಿದೆ. ಹಾಗಾಗಿ ಪ್ರಸ್ತುತ ಲೇಖನದಲ್ಲಿ ಕರ್ನಾಟಕದ ಕೃಷಿಕರು ಆಚರಿಸುವ ಚರಗ ಆಚರಣೆಗಳ ಸ್ವರೂಪ ಮತ್ತು ಹಿನ್ನೆಲೆಗಳನ್ನು ಅರಿಯುವ ಪ್ರಯತ್ನಮಾಡಲಾಗಿದೆ. ಹಾಗೆಯೇ ಈ ಆಚರಣೆಗಳ ಹಿಂದಿರುವ ವೈಜ್ಞಾನಿಕ ಸಂಗತಿಗಳನ್ನು ತಿಳಿದು ಅವುಗಳ ಮಹತ್ವವನ್ನು ತಿಳಿಸುವ ಕಾರ್ಯ ಮಾಡಲಾಗಿದೆ.

ಮಾನವನ ವಿಕಾಸದ ಚರಿತ್ರೆಯನ್ನು ಪ್ರಮುಖವಾಗಿ ಆಹಾರ ಸಂಗ್ರಹಣೆ, ಪಶುಪಾಲನೆ, ಕೃಷಿ ಮತ್ತು ಕೈಗಾರಿಕೆ ಎಂಬ ನಾಲ್ಕು ಹಂತಗಳಲ್ಲಿ ಗುರುತಿಸಲಾಗಿದೆ. ಇವುಗಳಲ್ಲಿ ಪಶುಪಾಲನೆಯ ನಂತರದ ಘಟ್ಟ ಕೃಷಿ. ಕೃಷಿಯ ಅನ್ವೇಷಣೆಯಲ್ಲಿ ಮಾನವನು ತನಗೆ ಬೇಕಾಗುವ ಆಹಾರ ಪದಾರ್ಥಗಳನ್ನು ಬೆಳೆಯುದನ್ನು ಕಂಡುಕೊಂಡಿದ್ದು ಅತ್ಯಂತ ಮಹತ್ವದ್ದು. ಈ ರೀತಿಯ ಕೃಷಿ ಪದ್ಧತಿಗಳು ಪ್ರದೇಶ ಹಾಗೂ ಕಾಲಬದ್ಧವಾಗಿದ್ದು; ಶುದ್ಧಾಂಗವಾಗಿ ಅನುಭವ ಹಾಗೂ ಪ್ರಯೋಗ ಶೀಲತೆಯಿಂದ ಕೂಡಿವೆ. ಆದಿಮಾನವನ ಇಂಥ ವೃತ್ತಿಜ್ಞಾನಗಳು ನಿರಂತರವಾಗಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿವೆ. ಅಂತಹ ಪಾರಂಪರಿಕ ಜ್ಞಾನಗಳಲ್ಲಿ ತಾವು ಬೆಳೆದ ಬೆಳೆಗಳಿಗೆ ಯಾವುದೇ ರೋಗ ರುಜಿನೆಗಳು ತಗಲದಂತೆ ಮತ್ತು ಹೆಚ್ಚು ಉಲುಸು ಬರುವಂತೆ ಮಾಡುವ ಒಂದು ಪದ್ಧತಿ ಚರಗ.

ಇಂಥಾ ಅನುಭವ ಜನ್ಯಗಳ ಮೂಲಕ ಬೆಳೆ ಸಂರಕ್ಷಣೆಗಾಗಿ ರೂಪಗೊಂಡ ಜನಪದರ ವಿಧಿ-ವಿಧಾನಗಳು ತುಂಬಾ ಮಹತ್ವ ಪೂರ್ಣವಾದ ಅನುಭವ ಸತ್ಯಗಳಾಗಿವೆ. ಇಂತಹ ಅನುಭವಜನ್ಯಪೂರಿತವಾದ ದೇಶಿಯ ಜ್ಞಾನಗಳು ಇತ್ತೀಚಿನ ವಿಜ್ಞಾನ-ತಂತ್ರಜ್ಞಾನ, ಜಾಗತೀಕರಣ, ನವ-ವಸಹಾತುಶಾಹಿಗಳ ಪ್ರಭಾವದಿಂದ ಅಸ್ತಿತ್ವ ಕಳೆದುಕೊಳ್ಳುತ್ತಿರುವುದು ಆತಂಕದ ವಿಷಯವಾಗಿದೆ. ಆಧುನಿಕ ಸಂದರ್ಭದಲ್ಲಿ ದೇಶಿಯ ಪಾರಂಪರಿಕ ಜ್ಞಾನಗಳನ್ನು ಮೌಢ್ಯ ಎಂದು ಪರಿಭಾವಿಸಲಾಗಿದೆ. ಈ ಸಂದರ್ಭದಲ್ಲಿ ದೇಶಿಯ ಜ್ಞಾನಗಳ ಪರಂಪರೆ ಬಗ್ಗೆ ಗಂಭೀರವಾದ ಅಧ್ಯಯನ ಅಗತ್ಯವಾಗಿದೆ.

ಈ ಅಧ್ಯಯನಕ್ಕೆ ಮಾಹಿತಿಯನ್ನು ಪ್ರಧಾನವಾಗಿ ಕ್ಷೇತ್ರಕಾರ್ಯದ ಮೂಲಕ ಜೊತೆಗೆ ಈಗಾಗಲೇ ನಡೆದಿರುವ ಅಧ್ಯಯನಗಳ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ. ಹೀಗೆ ಪಡೆದ ಮಾಹಿತಿಯನ್ನು ದೇಶಿ ತತ್ವಗಳ ಸಹಾಯದಿಂದ ವ್ಯಾಖ್ಯಾನಿಸುವ ಪ್ರಯತ್ನ ಮಾಡಲಾಗಿದೆ. ದೇಶಿಯ ಜ್ಞಾನವನ್ನು ಮೌಢ್ಯ ಎಂದು ಪರಿಭಾವಿಸಿ ಈ ಒಂದು ಕಾರಣಕ್ಕಾಗಿ ಎಲ್ಲಾ ದೇಶಿಯ ಜ್ಞಾನಗಳನ್ನು ತಿರಸ್ಕರಿಸುವುದು ಅಷ್ಟು ಸಮಂಜಸವಲ್ಲ. ಆಧುನಿಕ ಜಗತ್ತಿಗೆ ದೇಶಿಯ ಜ್ಞಾನಗಳ ಅವಶ್ಯಕತೆ ಇದೆ. ಈ ದೃಷ್ಟಿಯಿಂದ ದೇಶಿಯ ಜ್ಞಾನಗಳ ಕುರಿತಂತೆ ಅಧ್ಯಯನಗಳು ಅಗತ್ಯವಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೃಷಿ ಬದುಕಿನಲ್ಲಿ ಆಚರಣೆಯಲ್ಲಿರುವ ಚರಗ ಚೆಲ್ಲುವ ಸಂಪ್ರದಾಯದ ಸ್ವರೂಪ ಮತ್ತು ಆಶಯಗಳನ್ನು ಅರಿಯುವುದು ಈ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ.

ಚರಗದ ಅರ್ಥ ಮತ್ತು ವಿಕಾಸ :ಚರಗ ಎಂಬುದನ್ನು ಪ್ರಾದೇಶಿಕವಾಗಿ ಸರಗ, ಸರುಗ, ಚರುಗ ಎಂಬುದಾಗಿ ಕರೆಯುತ್ತಾರೆ. 'ಚರಗ' ಎಂಬ ಪದಕ್ಕೆ ನಿಘಂಟು, ವಿಶ್ವಕೋಶ ಹಾಗೂ ಗ್ರಂಥಗಳಲ್ಲಿ ನೀಡಿರುವ ಅರ್ಥಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

1. 'ಚರಗ' (ನಾಮಪದ), ಹೊಲಗದ್ದೆಗಳಲ್ಲಿ ಪೈರು ಬೆಳೆದಾಗ ರೈತರು ಭೂಮಿ ತಾಯಿಗೆ ನೈವೇದ್ಯವೆಂದು ಕ್ಷೇತ್ರದ ತುಂಬ ಎರಚುವ ಆಹಾರ ಪದಾರ್ಥ (ಜಿ.ವಿ. ಕನ್ನಡ ನಿಘಂಟು).
2. 'ಚರಗ' ಎಂದರೆ, ರೈತರು ತಾವು ಬೆಳೆದ ಪೈರಿನ ರಕ್ಷಣೆಗಾಗಿ, ಪಶುಪಾಲಕರು ತಮ್ಮ ಪಶುಗಳ ರಕ್ಷಣೆ ಹಾಗೂ ಯೋಗಕ್ಷೇಮಕ್ಕಾಗಿ ಆಹಾರ ಪದಾರ್ಥಗಳನ್ನು ಹೊಲದ ಸುತ್ತ ಮತ್ತು ದೊಡ್ಡಿಗಳ ಸುತ್ತ ಚೆಲ್ಲುವ ಪದ್ಧತಿಗೆ 'ಚರಗ' ಎಂದು ಅರ್ಥವಿದೆ.
3. ಭೂತಾಯಿಗೆ ಸೀಮಂತ ರೂಪದಲ್ಲಿ ಭೂತಾಯಿಗೆ ಬಯಕೆ ಈಡೇರಿಸಲು ಕಡಬು, ಹೋಳಿಗೆ, ಸಜ್ಜೆರೊಟ್ಟಿ, ಮುಂತಾದ ಆಹಾರ ಪದಾರ್ಥಗಳು ಮಾಡಿ ಸಾಂಕೇತಿಕವಾಗಿ ತೃಪ್ತಿಪಡಿಸುವ ವಿಧಾನಕ್ಕೆ ಚರಗವೆಂದು ಕರೆಯುತ್ತಾರೆ.

ಈ ಎಲ್ಲಾ ವ್ಯಾಖ್ಯಾನಗಳನ್ನು ಗಮನಿಸಿದರೆ ಚರಗ ಎಂದರೆ, ಭೂಮಿ ತಾಯಿಗೆ ಅರ್ಪಿಸುವ ನೈವೇದ್ಯ, ಬೆಳೆಗಳ ರಕ್ಷಣೆಗಾಗಿ ಆಚರಿಸುವ ಒಂದು ಆಚರಣೆ ಎಂಬುದು ತಿಳಿಯುತ್ತದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಚರಕ ಕೇವಲ ಕೃಷಿಕ ಸಮುದಾಯಗಳು ಮಾತ್ರ ಆಚರಿಸುವ ಆಚರಣೆ ಎಂಬಂತೆ ಬಿಂಬಿಸಿರುದು. ಆದರೆ ಚರಗವನ್ನು ಹೊಲಗಳಿಗೆ ಮಾತ್ರ ಚೆಲ್ಲುವುದಿಲ್ಲ, ಊರಿನ ಸುತ್ತ ಹಾಗೂ ದೊಡ್ಡಿಗಳಿಗೂ ಚರಗ ಚೆಲ್ಲುವ ಪದ್ಧತಿಗಳಿರುವುದನ್ನು ಕಾಣಸಿಗುತ್ತವೆ. ಚರಗ ಆಚರಣೆ ಪ್ರಪಂಚದಾದ್ಯಂತ ಪ್ರಾಚೀನ ಕಾಲದಿಂದಲೂ ಪ್ರಚಲಿತವಿರುವ ಆಚರಣೆ ಇದಕ್ಕೆ ಪೂರಕವಾಗಿ ಕೆಲವು ನಿದರ್ಶನಗಳನ್ನು ನೀಡುವುದಾದರೆ;

1. ಪ್ರಾಚೀನ ಗ್ರಂಥ ಸುರಪಾಲನ ವೃಕ್ಷಾಯುರ್ವೇದ ಸಹ ಜನಗಳ ಕುದೃಷ್ಟ ಪರಿಹಾರಕ್ಕಾಗಿ ಬೇಯಿಸಿದ ಸಾಲಿ ಅಕ್ಕಿಯ ಗಂಜಿಯನ್ನು ಮೊಸರು ಮತ್ತು ಸೈಂಧವ ಉಪ್ಪಿನೊಡನೆ ಬೆರಸಿ ಮರಗಳ ತೋಪಿನಲ್ಲೆಲ್ಲಾ ಚೆಲ್ಲಬೇಕು (ಶ್ಲೋಕ-77) ಎಂದು ಹೇಳುತ್ತದೆ. ('ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ'- ಎಂ.ಜಿ. ಈಶ್ವರಪ್ಪ 1995 ಪುಟ.295)
2. ಎಳ್ಳು ಅಮವಾಸೆಯ ದಿನ ಭೂಮಿ ತಾಯಿಗೆ ಚರಗ ಚೆಲ್ಲುವ ಸಂಪ್ರದಾಯ ಪ್ರಾಚೀನ ಕಾಲದಿಂದಲೂ ಬಂದಿದೆ. ಮಹಾಭಾರತದಲ್ಲಿ ಬರುವ ಒಂದು ಸನ್ನಿವೇಶದಲ್ಲಿ ಪಾಂಡವರು, ಕೌರವರ ಮೇಲೆ ಯುದ್ಧ ಮಾಡಲು ಹೊರಟಾಗ ಮಾರ್ಗ ಮಧ್ಯ ಹೊಲದಲ್ಲಿ ಪಾಂಡವರೆಲ್ಲರೂ ಬನ್ನಿಮರಕ್ಕೆ ಪೂಜೆ ಸಲ್ಲಿಸಿ, ಆಹಾರವನ್ನು ಹೊಲದಲ್ಲಿ ಚೆಲ್ಲಿ ಅಲ್ಲಿಯೇ ಊಟ ಮಾಡಿ, ಯುದ್ಧಕ್ಕೆ ಹೊರಡುತ್ತಾರೆ. (ಚರಗ ಚೆಲ್ಲುವುದಕ್ಕೆ ಆಧುನಿಕ ಸೊಂಕು ಲೇಖನ, ಚಿದಂಬರ ಪ್ರಸಾದ್- ಪ್ರಜಾವಾಣಿ ಜನವರಿ 2012-2013.)

ಸಿಕ್ಕಿರುವ ಆಧಾರ ಗ್ರಂಥಗಳ ಸಹಾಯದಿಂದ ಹೇಳುವುದಾದರೆ ಚರಗ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದೆ. ಚರಗ ಆಚರಣೆ ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೆ ಅನ್ಯ ರಾಜ್ಯಗಳ ಮತ್ತು ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿಯೂ ಪ್ರಚಲಿತವಿರುವ ಆಚರಣೆಯಾಗಿದೆ. ಇದಕ್ಕೆ ನಿದರ್ಶನವಾಗಿ ಹೇಳುವುದಾದರೆ ಇಂಡೋನೇಷಿಯಾದ ಸೆಂಟ್ರಲ್ ಬೋರ್ನಿಯಾದ ಕಾಯನ್ಸ್ ಜನಾಂಗದವರು ಬಿತ್ತನೆ ಮತ್ತು ಕೊಯ್ಲು ಸಂದರ್ಭದಲ್ಲಿ ತಮ್ಮ ಸುತ್ತ ಮುತ್ತ ಬೆಳೆಯುವ, ತಿನ್ನಬಲ್ಲ, ಗಿಡಮೂಲಿಕೆಗಳನ್ನು ಬೇಯಿಸಿ ಸಿದ್ದಪಡಿಸಿದ ವಸ್ತುವನ್ನು ಸಿಂಪಡಿಸುವುದನ್ನು ಕಾಣಬಹುದು. ('ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ'- ಎಂ.ಜಿ. ಈಶ್ವರಪ್ಪ 1995 ಪುಟ.)

ಹೀಗೆ ಪ್ರಾಚೀನ ಕಾಲದಿಂದ 'ಚರಗ' ಆಚರಣೆಗಳು ಹಂತ-ಹಂತವಾಗಿ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ. ಆದರೆ ಆಧುನಿಕ ಯುಗದಲ್ಲಿ ಚರಗ ಆಚರಣೆಗಳು ಸರಿಯಾಗಿ ನಡೆಯದೆ ಕೇವಲ ಕಾಟಚಾರಕ್ಕೆ ಆಚರಿಸುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಚರಗದ ಸ್ವರೂಪ: ಈಗಾಗಲೇ ಪ್ರಸ್ತಾಪಿಸಿದಂತೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಭಿನ್ನಭಿನ್ನ ರೂಪದಲ್ಲಿ ಚಾಲ್ತಿಯಲ್ಲಿರುವ ಚರಗ ಸಂಪ್ರದಾಯವನ್ನು ಕಾಣಬಹುದಾಗಿದೆ.

- ಮಾರಿಹಬ್ಬಗಳ ಸಂದರ್ಭದಲ್ಲಿ ಊರಿನ ಕ್ಷೇಮ ಮತ್ತು ರಕ್ಷಣೆಗಾಗಿ ಕೋಣವನ್ನು ಮಾರಿದೇವಿಗೆ ಬಲಿ ಕೊಟ್ಟು ಅದರ ಕರಸು ಮತ್ತು ರಕ್ತವನ್ನು ಬೆರಸಿ ಪುಟ್ಟಿಯಲ್ಲಿ ಹೊತ್ತುಕೊಂಡು ಪ್ರದಕ್ಷಿಣೆ ಹಾಕುವುದರ ಮೂಲಕ ಚರಗವನ್ನು ಚೆಲ್ಲುತ್ತಾರೆ.
- ಪಶುಪಾಲಕರು ತಮ್ಮ ಪಶುಗಳ ಯೋಗಕ್ಷೇಮಕ್ಕಾಗಿ ಮತ್ತು ಪ್ರಾಣಿಗಳ ಸಂತಾನಾಭಿವೃದ್ಧಿಗಾಗಿ ದೊಡ್ಡಿಗಳ ಸುತ್ತಲೂ ಪ್ರಾಣಿಯ ಕರಸು ಮತ್ತು ರಕ್ತವನ್ನು ಕಲಸಿ ಚರಗವನ್ನು ಚೆಲ್ಲುತ್ತಾರೆ.
- ಕೃಷಿಕ ಸಮುದಾಯದವರು ತಮ್ಮ ಆಹಾರ ಪದಾರ್ಥಗಳಿಗೆ ಅನುಗುಣವಾಗಿ ಫಲಕ್ಕೆ ಬಂದ ಫಸಲಿನ ಹೊಲದ ಸುತ್ತಲೂ ಬೆಳೆಗಳ ರಕ್ಷಣೆಗಾಗಿ ಹಾಗೂ ಇಳುವರಿಗಾಗಿ (ಹುಲುಸಾಗಿ) ಸಸ್ಯಹಾರ ಅಥವಾ ಮಾಂಸಾಹಾರದ ರೂಪಗಳಲ್ಲಿ ಚರಗವನ್ನು

ಚೆಲ್ಲುತ್ತಾರೆ.

ಈ ಮೂರು ರೂಪಗಳಲ್ಲಿ ಚರಗವನ್ನು ಕಾಣಬಹುದು. ಪ್ರಸ್ತುತ ಲೇಖನದಲ್ಲಿ ಪ್ರಧಾನವಾಗಿ ಕೃಷಿಗೆ ಸಂಬಂಧಿಸಿದ ಚರಗ ಆಚರಣೆಗಳನ್ನು ಗಮನಿಸುತ್ತಾ ಇದರ ಮಹತ್ವವನ್ನು ಕುರಿತಂತೆ ವಿಶ್ಲೇಷಿಸಲಾಗುವುದು. ಈ ಚರಗ ಚೆಲ್ಲುವ ಕ್ರಿಯೆಯ ಹಿಂದೆ ನಂಬಿಕೆ ಮತ್ತು ಅನುಭವಜನ್ಯ ಜ್ಞಾನ ಇರುವುದನ್ನು ಗುರುತಿಸಬಹುದಾಗಿದೆ. ಬೆಳೆಗಳಿಗೆ ಅಂಟಿದ ಪೀಡೆಯ ಪರಿಹಾರಾರ್ಥವಾಗಿ, ರೋಗ ನಿವಾರಣಾರ್ಥವಾಗಿ ಚರಗ ಚೆಲ್ಲುವ ಆಚರಣೆ ವ್ಯವಸಾಯಗಾರರಲ್ಲಿ ದಟ್ಟವಾಗಿ ನೆಲೆಯೂರಿದೆ. ಈ ಸಂಪ್ರದಾಯ ಆಚರಣೆಯನ್ನು ಅನುಸರಿಸುತ್ತಾ ಬಂದಿರುವ ಜನರ ತಿಳಿವಳಿಕೆಯ ಮೂಲ ಜ್ಞಾನವನ್ನು ಅಧ್ಯಯನ ಮಾಡವುದು ಅಗತ್ಯವಾಗಿದೆ.

ಕೃಷಿ ಚರಗ ಆಚರಣೆಗಳು: ಕರ್ನಾಟಕದಾದ್ಯಂತ ಕೃಷಿಕ ಸಮುದಾಯಗಳು ಚರಗ ಆಚರಣೆಗಳನ್ನು ಭಿನ್ನ ಭಿನ್ನ ಸಂದರ್ಭಗಳಲಿ ವಿಭಿನ್ನರೂಪದಲ್ಲಿ ಆಚರಿಸುವಂತಹದು ಕಂಡುಬರುತ್ತದೆ.

ಉತ್ತರ ಕರ್ನಾಟಕದ ಭಾಗಗಳಲ್ಲಿ ಎಳ್ಳು ಅಮವಾಸೆಯಂದು ನಡೆಯುವ ಕೃಷಿ ಆಚರಣೆ ವರ್ಷಕ್ಕೊಂದು ಬಾರಿ. ತರಹೆವಾರಿ, ಭಕ್ಷ ಭೋಜನದ ಬುಟ್ಟಿ ಹೊತ್ತು, ಹೊಲದತ್ತ ಹೆಜ್ಜೆ ಹಾಕಿದ ರೈತ ಕುಟುಂಬಗಳು ಬನ್ನಿ ಮರಕ್ಕೆ ಐದು ಕಲ್ಲುಗಳನ್ನಿಟ್ಟು, ಪೂಜೆ ಸಲ್ಲಿಸಿದ ನಂತರ ನೈವೇದ್ಯ (ಚರಗ), ಎಡ ಅರ್ಪಿಸಿದ ಎಳೆನೀರು, ತೆಂಗಿನಕಾಯಿ, ಅನ್ನಮೊಸರು, ಎಲೆ ಅಡಿಕೆ, ಹಣ್ಣು–ಹಂಪಲುಗಳು, ಕುಂಕುಮ, ಇತ್ಯಾದಿಗಳನ್ನು ಬೆರೆಸಿಕೊಂಡು ಚರಗ ಚೆಲ್ಲುವುದು ಸಹ ರೂಢಿಯಲ್ಲಿದೆ.

1. ಚರಗವನ್ನು ಚೆಲ್ಲುವಾಗ ಪ್ರಮುಖವಾಗಿ ಇಬ್ಬರೂ ಕಾರ್ಯನಿರ್ವಹಿಸುವರು. ಒಬ್ಬರೂ ಕೈಯಲ್ಲಿ ಬೆಂಡುಗೊಳ್ಳಿ, ಮತ್ತೊಂದು ಕೈಯಲ್ಲಿ ಕುಡುಗೋಲು ಹಿಡಿದುಕೊಂಡು ಹೊರಟರೆ, ಮತ್ತೊಬ್ಬನು ಹಿಂದಿನಿಂದ ಚರಗದ ಕುಡಿಕೆಯನ್ನು ಹಿಡಿದುಕೊಂಡು ಅದನ್ನು ಚೆಲ್ಲುತ್ತಾ, 'ಹೊಲಿಗ್ಯ, ಹೊಲಿಗ್ಯಾ....' ಎಂದು ಘೋಷಣೆ ಕೂಗುತ್ತಾ, ಜಮೀನಿನ ಸುತ್ತಲೂ ಚರಗ ಚೆಲ್ಲುತ್ತಾರೆ.

2. ಮಲೆನಾಡಿನ ಭಾಗಗಳಲ್ಲಿ ಭೂಮಿ ಹುಣ್ಣಿಮೆಯೊಂದು ಭೂಮಿಗೆ ಎಡೆ ಅರ್ಪಿಸಿ, ರೈತರು ತಮ್ಮ ಹೊಲಗಳಿಗೆ ಅನ್ನ ಬೀರುವ ಪದ್ಧತಿ ಇದೆ.

3. ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಸಂಕ್ರಾಂತಿಯಂದು ಚರಗ ಚೆಲ್ಲುವ ಪದ್ಧತಿ ರೂಢಿಯಲ್ಲಿದೆ. 'ಪಂಚಮಿ' ಹಬ್ಬದಲ್ಲಿ ಕೇರ್ಯಾಂಬಲಿ, ಜೋಕುಮಾರನ ಹಬ್ಬದ ' ಅಳ್ಳಾಂಬಲಿ, ಶೀಗೆ ಹುಣ್ಣಿಮೆ, ಹಾಗೂ ಎಳ್ಳ ಅಮಾವಾಸೆಯಂದು 'ಚರಗ' ಚೆಲ್ಲುವುದು ಹಲವಾರು ಜಿಲ್ಲೆಯಲ್ಲಿ ಪ್ರಚಲಿತದಲ್ಲಿದೆ. (ಈರಯ್ಯ ಕಿಲ್ಲೆದಾರ್, ಚರಗ ಜೈವಿಕ ಕೀಟ ಹತೋಟಿ ವಿಧಾನ)

4. ಚಿತ್ರದುರ್ಗದ ಕೆಲವು ಭಾಗಗೆಳಲ್ಲಿ ಬೆಳೆ ನಾಟಿ ಮಾಡುವಾಗ, ಜಮೀನು ಉಳಿಮೆ ಮಾಡುವಾಗ, ಬೆಳೆ ಕಟಾವು ಮಾಡುವಾಗ 'ಮುಸರೆ ಮತ್ತು ತೀರ್ಥ' ಚೆಲ್ಲುವುದು ರೂಢಿಯಲ್ಲಿದೆ. ಅಲ್ಲದೆ ಹುಣ್ಣಿಮೆ ಮತ್ತು ಅಮವಾಸೆಯ ದಿನಗಳಲ್ಲಿಯು ಬೆಳೆಗಳಿಗೆ 'ಮುಸರೆ ಮತ್ತು ತೀರ್ಥ'ವನ್ನು ಚೆಲ್ಲುವುದನ್ನು ಕಾಣಬಹುದು. (ಕ್ಷೇತ್ರಕಾರ್ಯದ ಮಾಹಿತಿ)

ಕೃಷಿ ಚರಗದ ಉದ್ದೇಶಗಳು: ಇಲ್ಲಿ ಮುಖ್ಯವಾಗಿ ಬೆಳೆಗಳಿಗೆ ಚರಗ ಚೆಲ್ಲುವುದು; ಬೆಳೆಗಳಿಗೆ ಕಣ್ಣಾಸರಾ (ದೃಷ್ಟಿ) ಆಗದಿರಲಿ, ಪೀಡೆಗಳು ದೂರವಾಗಲಿ, ಬೆಳೆ ಎಂದರೆ ರಾವು ಇದ್ದಂತೆ, ಈ ರಾವು ನಿವಾರಣೆಯಾಗಲಿ, ರಾತ್ರಿ– ಹಗಲು ಓಡಾಡುವಂತಹ ರೈತನು ತನಗೆ ಯಾವುದೇ ತೊಂದರೆಯಾಗದಿರಲಿ, ಮತ್ತು ನೆಲಕ್ಕೆ ಗೊಬ್ಬರ ಹಾಕಿ, ಉತ್ತಿ, ಬಿತ್ತಿ, ಬೆಳೆ ಮೈತುಂಬಿಕೊಂಡು ಹುಲುಸಾಗಿ ಬರಲಿ ಎಂಬ ಉದ್ದೇಶದಿಂದಲೂ ಸಹ ಚರಗವನ್ನು ಬೆಳೆಗಳಿಗೆ ಚೆಲ್ಲುತ್ತಾರೆ. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಭೂ ತಾಯಿಗೆ ಸೀಮಂತ ಬಯಕೆ ಈಡೇರಲಿ ಎನ್ನುವ ಉದ್ದೇಶವು ಇದೆ.

ಚರಗದ ವೈಜ್ಞಾನಿಕ ಹಿನ್ನೆಲೆ : 'ಚರಗ' ಆಚರಣೆ ಮೌಢ್ಯ ಆಚರಣೆ ಅಲ್ಲ ಎನ್ನುವ ವಿಚಾರವಾಗಿ ಮಲ್ಲಿಕಾರ್ಜುನ ಹೊಸಪಾಳ್ಯ ಇವರು 'ಬೆಳೆ ಸಂಬಂಧಿ ಆಚರಣೆಗಳು' ಎನ್ನುವ ಲೇಖನದಲ್ಲಿ ಬೆಳೆಗಳಿಗೆ ರೋಗ ಪರಿಹಾರಾರ್ಥವಾಗಿ ಚರಗ ಚೆಲ್ಲುವ ಆಚರಣೆ ಕೃಷಿಕರಲ್ಲಿ ದಟ್ಟವಾಗಿ ನೆಲೆಯೂರಿದೆ ಎನ್ನುವ ವಿಚಾರವನ್ನು ವಿವರಿಸಿದ್ದಾರೆ. ಹಾಗೆಯೇ ಕರ್ನಾಟಕದ ಜಾನಪದ ಅಧ್ಯಯನ ಸಂದರ್ಭದಲ್ಲಿ ಚರಗ ಆಚರಣೆಯನ್ನು ಕುರಿತಂತೆ ಸ.ಚಿ. ರಮೇಶ್ ಅವರ 'ಕರ್ನಾಟಕ ಜಾನಪದ ಆಚರಣೆಗಳು' ಎನ್ನುವ ಕೃತಿಯಲ್ಲಿ ಚರಗ ಸಂಪ್ರದಾಯವನ್ನು ಕುರಿತಂತೆ ಪ್ರತ್ಯೇಕ ಲೇಖನವಿದೆ. ಅದರಲ್ಲಿ ಚರಗ ಆಚರಣೆಯ ವೈಜ್ಞಾನಿಕ ವಿವರಣೆಯನ್ನು ವಿವರಿಸಲಾಗಿದೆ. ಚರಗ ಸಂಪ್ರದಾಯವು ಮುಖ್ಯವಾಗಿ ಬೆಳೆಗಳಿಗೆ ತಗಲುವ ಕೀಟ ಬಾಧೆಗಳನ್ನು ತಪ್ಪಿಸುವ ಸಲುವಾಗಿ ಮಾಡಿದ ತಂತ್ರವಾಗಿದ್ದು, ಇದೊಂದು ಪಾರಂಪರಿಕ ಕೀಟ ನಾಶಕ ವಿಧಾನವಾಗಿದೆ ಎಂಬುವುದು ಅಭಿಪ್ರಾಯ ಪಡುತ್ತಾರೆ. ಚರಗ ಚೆಲ್ಲಿದ ಆಹಾರ ಪದಾರ್ಥಗಳಿಗೆ ತಿನ್ನಲು ಪಕ್ಷಿಗಳ ಸಮೂಹವು ಆಕರ್ಷಿತವಾಗಿ ಆಹಾರ ಪದಾರ್ಥಗಳನ್ನು ತಿನ್ನುತ್ತಾ, ಬೆಳೆಗಳಿಗೆ ಬಾದಿಸುವ ಕೀಟಗಳನ್ನು ತಿನ್ನುತ್ತವೆ. ಆಗ ಬೆಳೆಗಳು ರೋಗಭಾದೆಯಿಂದ ನಿವಾರಣೆಯಾಗಿ ಹೆಚ್ಚು ಇಳುವರಿಯನ್ನು ಕೊಡುತ್ತವೆ.

ಸಮಾರೋಪ : 'ಚರಗ' ಆಚರಣೆಯ ಹಿಂದೆ ವೈಜ್ಞಾನಿಕತೆಯ ಬಗ್ಗೆ ಈವರೆವಿಗೂ ನಡೆದ ಅಧ್ಯಯನಗಳಲ್ಲಿ ಕೆಲವು ಸುಳಿವುಗಳಿರುವುದನ್ನು ಕಾಣಬಹುದು. ಕೆಲವು ತಜ್ಞರು 'ಚರಗ ಬೆಳೆಗಳಿಗೆ ಬಾಧಿಸುವ ಕೀಟ ನಾಶ ವಿಧಾನ' ಎಂಬುವುದಾಗಿ ವ್ಯಾಖ್ಯಾನಿಸಿದ್ದಾರೆ. ಅವರು ಹೇಳಿರುವಂತೆ ಚರಗ ಆಚರಣೆಯು ಕೇವಲ ಸಂಪ್ರದಾಯ ಮತ್ತು ಗೊಡ್ಡು ಆಚರಣೆಯಲ್ಲ. ಇದು ಒಂದು ಪಾರಂಪರಿಕ ಜ್ಞಾನ. ಇದರಲ್ಲಿ ವೈಜ್ಞಾನಿಕ ಸಂಗತಿಗಳಿವೆ. ಆಧುನಿಕ ಸಂದರ್ಭದಲ್ಲಿ ಬೆಳೆಗಳಿಗೆ ರೋಗಬಾಧೆ ನಿವಾರಿಸಿ ಹೆಚ್ಚು ಇಳುವರಿಯನ್ನು ಪಡೆಯಲು ರಾಸಾಯನಿಕ ಗೊಬ್ಬರ, ರಾಸಾಯನಿಕ ಔಷಧಿಗಳನ್ನು ಹಾಕಿ, ಭೂಮಿಯನ್ನು ಬಂಜೆಯಾಗಿಸುತ್ತಿದ್ದಾರೆ. ಹಾಗೆಯೇ ವಿಷಪೂರಿತ ಆಹಾರ ಪದಾರ್ಥಗಳನ್ನು ಬೆಳೆಯಲಾಗುತ್ತಿದೆ. ಇಂತಹ ವಿಷಪೂರಿತ ಪದಾರ್ಥಗಳನ್ನು ಸೇವಿಸುತ್ತಿರುವುದು ಮನುಕುಲಕ್ಕೆ ಆತಂಕದ ವಿಷಯವಾಗಿದೆ. ಇಂಥ ಸಂದರ್ಭದಲ್ಲಿ ದೇಶಿಯ ಜ್ಞಾನಗಳ ಮೂಲಕ 'ಸಾವಯವ' ಮಹತ್ವವನ್ನು ಎತ್ತಿಹಿಡಿಯುವುದು ಅತೀ ಅವಶ್ಯಕವಾಗಿದೆ. ಈ ಹಿನ್ನೆಯಲ್ಲಿ ಚರಗ ಆಚರಣೆಗಳ ವೈಜ್ಞಾನಿಕ ಅಧ್ಯಯನಗಳ ತುರ್ತು ಇದೆ.

ಪರಾಮರ್ಶನ ಗ್ರಂಥಗಳು

೧. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಎಂ.ಜಿ. ಈಶ್ವರಪ್ಪ, ೧೯೯೫, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨. ಕರ್ನಾಟಕದ ದಲಿತ ಸಂಸ್ಕೃತಿ ಪರಂಪರೆ–೨ ಜಾತ್ರೆಗಳು, ಎಸ್.ಎಸ್.ಹಿರೇಮಠ, ೧೯೯೩, ಸಮತಾ ಪ್ರಕಾಶನ, ಹೊಸಪೇಟೆ.

೩. ಚರಗ ಚೆಲ್ಲುವುದಕ್ಕೂ ಆಧುನಿಕತೆ ಸೋಂಕು (ಲೇಖನ),ಚಿದಂಬರ ಪ್ರಸಾದ, ಪ್ರಜಾವಾಣಿ, ಜನವರಿ ೧೨, ೨೦೧೩.
೪. ಚರಗ ಚೆಲ್ಲಿ ವಸುಧೆಗೆ ವಂದಿಸಿದ ರೈತರು, ಉದಯವಾಣಿ, ಜನವರಿ ೧೨, ೨೦೧೩.
೫. ಓಲಗ್ಯಾ ಓಲಗ್ಯಾ ಚಲ್ಲಂ ಪೋಲಗ್ಯಾ, ಉದಯವಾಣಿ ಶನಿವಾರ, ೧೨, ಜನವರಿ, ೨೦೧೩
೬ ಚರಗ – ಜೈವಿಕ ಕೀಟ ಹತೋಟಿ ವಿಧಾನ, ಈರಯ್ಯ ಕಿಲ್ಲೇದಾರ, kanaja.in/archives/
೭ ಚರಗ (ಲೇಖನ), ಸ.ಚಿ. ರಮೇಶ್, ಇದರಲ್ಲಿ : ಕರ್ನಾಟಕದ ಜನಪದ ಆಚರಣೆಗಳು, ೨೦೦೮, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕದ ರೈತ ಮತ್ತು ದಲಿತ ಸಂಘಟನೆಗಳ ಅವಲೋಕನ

ಮಲ್ಲಿಕೇಶ. ಹೆಚ್.ಹೆಚ್,
ಸಂಶೋದಕರು, ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.
Email: mallikesh2009@gmail.com

ಕನ್ನಡನಾಡಿನ ಸಮಗ್ರ ಚರಿತ್ರೆಯಲ್ಲಿ 20ನೇ ಶತಮಾನವನ್ನು ದಾಖಲಿಸುವಾಗ ಅತ್ಯಗತ್ಯವಾಗಿ ದಾಖಲಿಸಬೇಕಾದ ಎರಡು ಪ್ರಮುಖ ಚಳುವಳಿಗಳೆಂದರೆ ದಲಿತ ಮತ್ತು ರೈತ ಚಳುವಳಿಗಳು. ಈ ಶತಮಾನದ ಕೊನೆಯ ಕಾಲು ಭಾಗವು ಕರ್ನಾಟಕದ ಪಾಲಿಗೆ ಚರಿತ್ರಾರ್ಹವಾದುದು. ದಲಿತ ಚಳುವಳಿಯು ಮೊಳಕೆಯೊಡೆದುದು, ಕರ್ನಾಟಕದ ರೈತಶಕ್ತಿ ಅಭೂತಪೂರ್ವವಾಗಿ ಮೈಕೊಡವಿಕೊಂಡು ಎದ್ದು ನಿಂತಿದ್ದು, ಬಂಡಾಯ ಸಾಹಿತ್ಯ ಸಂಘಟನೆಯ ಮೂಲಕ ನಿರೀಕ್ಷಿತ ಲೋಕದ ಅಸಂಖ್ಯ ಪ್ರತಿಭೆಗಳು ದನಿಪಡೆದಿದ್ದು ಈ ಕಾಲು ಶತಮಾನದ ಅಭೂತ ಪೂರ್ವ ಘಟನೆಗಳ ಸರಮಾಲೆಯೇ ಕಾಣುತ್ತದೆ.

ಎಪ್ಪತ್ತರ ದಶಕವು ಪ್ರಜಾಪ್ರಭುತ್ವದ ಎಚ್ಚರದ ವಿಶಿಷ್ಟ ಕಾಲಮಾನ, ಏಕಕಾಲಕ್ಕೆ ಗಾಂಧೀ, ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್ ರಂತಹ ಧೀಮಂತರ ವಿಚಾರಗಳು ಕರ್ನಾಟಕದ ಜನಸಾಮಾನ್ಯರ ಮನಸ್ಸಿನಲ್ಲಿ ಪ್ರವೇಶಗೊಂಡವು ಬಡವ, ಶ್ರೀಮಂತ, ಕಾರ್ಮಿಕ ಹಾಗೂ ಮಧ್ಯಮ ವರ್ಗಗಳ ಹಿಂದುಳಿದ ವರ್ಗಗಳು ಬುಡಕಟ್ಟು ಜನರೆ ಎಲ್ಲರೂ ತಮ್ಮ ಇರುವಿಕೆಯನ್ನು ತೋರಿಸಿಕೊಂಡವು ಇದರಿಂದಲೇ ಎಪ್ಪತ್ತರ ದಶಕವು ಕರ್ನಾಟಕದ ಮಟ್ಟಿಗೆ ಪುಟ್ಟದಾದ ಪುನರುಜ್ಜೀವನದ ಅಲೆಯನ್ನು ಸೃಷ್ಟಸಲು ಸಾಧ್ಯವಾದುದು[1] ಈ ಎಪ್ಪತ್ತರ ದಶಕದ ಪ್ರಭುತ್ವ ಮತ್ತು ಸಮಾಜ ಒಟ್ಟಿಗೆ ತಮ್ಮ ಅಸ್ಥಿತ್ವ ಸಾಧಿಸಿಕೊಳ್ಳಲು ಮೂಂದಾದ ಪರಿಣಾಮದಿಂದಲೇ ಹಿಂದೆಂದೂ ಕಾಣಲಾಗದಿದ್ದ ಚಲನಶೀಲತ ಸಾಮಾಜಿಕವಾಗಿ ಸಾಧ್ಯವಾಯಿತು[2]. ಒಂದು ತಲೆಮಾರಿನ ಜನರಿಗೆ ಕರ್ನಾಟಕದ ಇತಿಹಾಸ, ಕರ್ನಾಟಕದ ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳ ಬಗ್ಗೆ ಸ್ಪಷ್ಟ ತಿಳುವಳಿಕೆ ಬಂತು, ಜನರ ಗ್ರಹಿಕೆಯ ಶಕ್ತಿಯು ಬೆಳೆಯಿತು.[3]

ಭಾರತಕ್ಕೆ ವಸಹಾತುಷಾಹಿ ಸರ್ಕಾರದಿಂದ ಅಧಿಕಾರ ಹಸ್ತಾಂತರವಾಗಿ ಸುಮಾರು ಆರು ದಶಕಗಳು ಕಳೆದಿದರು. ಆದರೂ ಈ ಪ್ರಜಾಪ್ರಭುತ್ವದ ಆಧುನಿಕ ಸರಕಾರಗಳು ರೈತರ ಮತ್ತು ದಲಿತರ ಸಾಮಾನ್ಯ ಬೇಡಿಕೆಗಳನ್ನು ಈಡೇರಿಸಿಲಲ್ಲ. ರೈತರ ಸಮಸ್ಯೆ ಮುಖ್ಯವಾಗಿ ಕೃಷಿಗೆ ಸಂಬಂಧಿಸಿದ್ದು ಕೃಷಿಯ ಉತ್ಪಾದನೆ, ಕೃಷಿಯ ಬೆಳೆಗಳಿಗೆ ಬೆಲೆಯ ನಿರ್ಧಾರ. ಕೃಷಿ ಮಾರುಕಟ್ಟೆ, ವ್ಯವಸಾಯ ಉಪಕರಣಗಳು ಇತ್ಯಾದಿ ಸಮಸ್ಯೆಗಳು ರೈತರಿಗೆ ಸಂಬಂಧಿಸಿದರೇ, ಇನ್ನು ದಲಿತರ ಸಮಸ್ಯೆಗಳು ಇದಕ್ಕಿಂತ ಬಿನ್ನ ಅವು ಮೂಲಭೂತವಾಗಿ ಹಸಿವಿನ ಸಮಸ್ಯೆ, ಅನ್ನದಸಮಸ್ಯೆ, ಕೂಲಿ, ಸಾಮಾಜಿಕ, ಅಪಮಾನ, ದೌರ್ಜನ್ಯ, ಹಲ್ಲೆ, ಶಿಕ್ಷಣ, ಆರೋಗ್ಯ, ಗ್ರಾಮಗಳ ಸಾಮಾನ್ಯ ಅಭಿವೃದ್ಧಿ, ಕೂಲಿ ಕೆಲಸಕ್ಕೆ ಸರಿಯಾದ ಕೂಲಿ ಸಿಗದೇ ಇರುವುದು ಈ ಮುಂತಾದವು ದಲಿತರಿಗೆ ಸಂಬಂಧಿಸಿದ ಸಮಸ್ಯೆಗಳಾಗಿದ್ದವು, ಇದರ ಪರಿಣಾಮದಿಂದಾಗಿ ರೈತ ಸಮುದಾಯದಿಂದ ರೈತ ಸಂಘವು, ದಲಿತ ಸಮುದಾಯದಿಂದ ದಲಿತ ಸಂಘವು, ಈ ನೆಲದ ಒಡಲಿನ ಕಾವಿನಂದಲೆ ಹುಟ್ಟಿದವು.[4] ದಸಂಸದ ಸಾಮಾಜಿಕ ನ್ಯಾಯ ಒಂದು ಕಡೆಗಾದರೆ ರೈತ ಸಂಘದ ಹಕ್ಕೋತಾಯಗಳು ಬೇರೊಂದು ಸಂಚಲನವನ್ನು ಸೃಷ್ಟಿಸಿದವು[5]. ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ ಎರಡರಿಂದಲೂ ಬಿನ್ನವಾಗಿ ಹೋರಾಟವನ್ನು ರೋಪಿಸಿಕೊಂಡ ರೈತಸಂಘಕ್ಕೆ ಸಮಾಜವಾದಿ ಧೋರಣೆ ಸೂಕ್ಷ್ಮವಾಗಿತ್ತು.

ವಾಸ್ತವದಲ್ಲಿ ದಲಿತ ಬಂಡಾಯ ಸಾಹಿತಿಗಳು ದಲಿತ ರೈತ ಸಮೂಹಗಳ ಸಮಸ್ಯೆಗಳ ಭಾಗವಾಗಿ ತೊಡಗಿದ್ದುದು ಗಮನಾರ್ಹವಾದುದು. ಪ್ರತಿಭಟನೆಗೆ ಬೇಕಾದ ಸಾಹಿತ್ಯ ಮತ್ತು ಕಲಾ ಪ್ರಕಾರಗಳು ಅವರವರ ಚಳುವಳಿಯ ಭಾಗವಾಗಿ ಅನಾವರಣಗೊಂಡಿದ್ದರಿಂದ ಶೂದ್ರ ಸಂವೇದನೆಯ ಸಾಂಸ್ಕೃತಿಕ ಗುಣಗಳು ರೈತ ಆಂದೋಲನದಲ್ಲಿ ಪ್ರತಿಭಟನೆಯ ಹೊಸ ರೂಪಕಗಳು ಆಂದೋಲನದಲ್ಲಿ ಪ್ರತಿಫಲಿಸಿದವು. ಹೋರಾಟದ ಹಾಡುಗಳು, ಜಾಥಾಗಳು, ಬೀದಿ ನಾಟಕಗಳು ಪ್ರತಿಭಟನೆಯ ಹೊಸ ರೂಪಕಗಳು ಸೃಷ್ಟಿಯಾದವು, ದಲಿತ ಸಮುದಾಯಗಳು ಗ್ರಾಮಮಟ್ಟದಲ್ಲಿ ಹೋರಾಡಬೇಕದ್ದುದು ಭೂಮಾಲಿಕ ಜಾತಿಗಳ ವಿರುದ್ದವೇ, ಆದರೆ ದಸಂಸವು ತನ್ನ ಸಹ ಜೀವಿಗಳಾದ ರೈತರ ವಿರುದ್ಧ ದಂಗೆ ಏಳಲಿಲ್ಲ, ರಾಜಕೀಯ ಪ್ರಭುತ್ವ ಮತ್ತು ಸಾಮಾಜಿಕ ಒಟ್ಟು ವ್ಯವಸ್ಥೆಯ ವಿರುದ್ಧ ಸಮರ ಸಾರಿದರು.[6]

ಭಾರತದ ಕೃಷಿ ವಲಯದಲ್ಲಿ ಕ್ರಾಂತಿಕಾರರ ಬದಲಾವಣೆ ತಂದ 'ಹಸಿರು ಕ್ರಾಂತಿ'ಯು ಕೃಷಿ ವಿಧಾನದಲ್ಲಿ ಹೊಸ ಹೊಸ ಆಲೋಚನೆಯ ಕಡೆಗೆ ಸಾಗುವಂತೆ ಮಾಡಿತು. ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆಯಿಂದ ಭಾರತದ ಬಲಿಷ್ಠ ಜನಸಂಖ್ಯೆ ಕೃಷಿ ವಲಯದಲ್ಲಿ ಆಂಶಿಕ ನಿರುದ್ಯೋಗ ತಲೆ ಎತ್ತಿತ್ತು. ಇದು ಬಹಳವಾಗಿ ಪರಿಣಾಮ ಬೀರಿದ್ದು ದಲಿತ ಕೃಷಿ ಕೂಲಿ ಕಾರ್ಮಿಕರಿಗೆ. ಹಸಿರು ಕ್ರಾಂತಿಯ ಸಂಧರ್ಭದಲ್ಲಿ ಅಪಾರ ಪ್ರಮಾಣದ ವಿದೇಶಿ ಸಾಲವನ್ನು ಭಾರತಕ್ಕೆ ತರಲಾಯಿತು. ಇದು ಸಾಮ್ರಾಜ್ಯಶಾಹಿ ಪ್ರಭುತ್ವಕ್ಕೆ ಅಂದಿನ ಆಡಳಿತ ಪಕ್ಷ ಎಡಮಾಡಿಕೊಟ್ಟಿತು.ಇದು ರೂಪಾಯಿ ಅಪಮೌಲ್ಯಕ್ಕೆ ಅವಕಾಶವಾಯಿತು. ಇದು ಜನರಲ್ಲಿ ಆಕ್ರೋಶ ಪ್ರತಿಭಟನೆಗಳು ಬೀಜರೂಪವಾಗಿ ಮೊಳಕೆಯೊಡೆದು ಹೋರಾಟಕ್ಕೆ ಇಳಿದು ದಲಿತ ಮತ್ತು ರೈತ ಸಂಘಗಳು ಹುಟ್ಟುವುದಕ್ಕೆ ಕಾರಣವಾದವು. ಕೃಷಿಯ

ಮೇಲೆ ಸಾಮ್ರಾಜ್ಯಶಾಹಿಯ ದುಷ್ಪರಿಣಾಮ ದುಡಿವ ವರ್ಗವಾದ ದಲಿತರ ಮೇಲೆ ಕೃಷಿ ವಲಯದ ದುಷ್ಪರಿಣಾಮ ಮತ್ತು ಕೃಷಿ ವಲಯದಲ್ಲಿ ಭೂಮಾಲೀಕರ ದಬ್ಬಾಳಿಕೆಗಳು ಒಟ್ಟಿಗೆ ಸೇರುವುದರ ಮೂಲಕ ಈ ನೆಲದಲ್ಲಿ ಎರಡು ಬಗೆಯ ಹೋರಾಟಗಳು ಹುಟ್ಟಲು ಕಾರಣವಾಯಿತು. 90ರ ದಶಕದಲ್ಲಿ ಪಿ.ವಿ ನರಸಿಂಹರಾವ್ ಸರ್ಕಾರವು ಜಾರಿಗೆ ತಂದ ಜಾಗತೀಕರಣದ ಪರಿಣಾಮವಾಗಿ ಕೃಷಿ ವಲಯದಲ್ಲಿ ತೀವ್ರತರ ಸಮಸ್ಯೆಗಳು ತಲೆಎತ್ತಿವೆ. ಬಾರೀ ಭೂಮಾಲಿಕ ವರ್ಗವು ವ್ಯಾಪಾರಿ ವರ್ಗವಾಗಿ ರೂಪಾಂತರಗೊಂಡು ಅದು ತನ್ನ ಕೆಳಗಿನ ಬೇರೆ ಬೇರೆ ಸ್ತರಗಳ ರೈತರಿಗೆ ಸಾಲ ಕೊಡುವ ಮೂಲಕ ನೇರವಾಗಿ ಅವರನ್ನು ಶೋಷಣೆ ಮಾಡುತ್ತದೆ.ಈ ರೀತಿ ರೈತಾಪಿ ವಲಯದಲ್ಲಿ ವರ್ಗ ವೈರುದ್ಯಗಳು ರೂಪ ತಾಳುತ್ತಿವೆ.

ಈ ದಶಕದಲ್ಲಿ ಭಾರತಕ್ಕೆ ಕಾಲಿರಿಸಿದ ಗ್ಯಾಟ್, ಡಂಕಲ್ ಒಪ್ಪಂದಗಳ ಮೂಲಕ ಭಾರತದ ಉತ್ಪಾದನಾ ವಲಯವನ್ನು ಖಾಸಗೀಕರಣಗೊಳಿಸಿದಕ್ಕೆ ಹಾಗೂ ಮುಕ್ತ ಮಾರುಕಟ್ಟೆಯ ಮೂಲಕ ಎಲ್ಲ ಸಂಪತ್ತನ್ನು ಮತ್ತು ಸಂಪನ್ಮೂಲಗಳನ್ನು ಜಾಗತೀಕರಣ ಮಾರುಕಟ್ಟೆಗೆ ತೆರೆದಿಟ್ಟಿತು.ಕೃಷಿಕರು ಮತ್ತು ದಲಿತರು ಎಂದಿಲ್ಲದ ಸಂಕಟಗಳಿಗೆ ಒಳಗಾದರು. ರೈತರಿಗೆ ಕೃಷಿ ಉತ್ಪಾದನೆಯೇ ಮುಳುವಾಯಿತು. ದಲಿತರಿಗೆ ಕೃಷಿ ವಲಯದಲ್ಲಿ ಕೂಲಿ ಕೆಲಸ ಕೂಡ ಸಿಗಲಾರದಂತಹ ಪರಿಸ್ಥಿತಿ ಸೃಷ್ಟಿಯಾಯಿತು.

ಕರ್ನಾಟಕ ರೈತ ಸಂಘಟನೆ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆಯಲು ಕಾರಣ ಕೃಷಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳಿಗೆ ಜಾಗತೀಕರಣದ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧವೇ ರೈತ ಸಂಘ ಹೋರಾಡಲೇಬೇಕಾಗಿದೆ. ಜಾಗತೀಕರಣವು ಏಕಕಾಲದಲ್ಲಿ ರೈತರಿಗೂ ಮತ್ತು ದಲಿತರಿಗೂ ಹೇಗೆ ಪರಿಣಾಮಕಾರಿಯಾಗಿ ಕಂಡು ಬಂದಿತು ಎಂದು ಅವಲೋಕಿಸಿದಾಗ ಬಂಡವಾಳಶಾಹಿ ಮಾರುಕಟ್ಟೆಯು ಕೃಷಿಯ ಮೇಲೆ ನೇರವಾಗಿ ದಾಳಿ ಮಾಡುವುದರಿಂದ ಆಳುವ ಸರಕಾರಗಳು ಕೃಷಿ ವಲಯವನ್ನು ನೇರವಾಗಿ ಬಂಡವಾಳಶಾಹಿ ಮಾರುಕಟ್ಟೆಗೆ ಮಾರಾಟ ಮಾಡಿರುವುದರಿಂದ ಬಾರೀ ಭೂಮಾಲೀಕ ವರ್ಗವನ್ನು ಬಿಟ್ಟು ಉಳಿದ ರೈತಾಪಿ ಸಮುದಾಯ ಆರ್ಥಿಕವಾಗಿ, ಸಾಮಾಜಿಕವಾಗಿ, ಬಾರೀ ಬಿಕ್ಕಟ್ಟಿನಲ್ಲಿದೆ. ಬಾರೀ ಭೂಮಾಲೀಕರು ಸಣ್ಣ, ಅತಿಸಣ್ಣ, ರೈತಾಪಿ ವಲಯವನ್ನು ಬೇರೆ ಬೇರೆ ರೂಪಗಳಲ್ಲಿ ಶೋಷಣೆ ಮಾಡುತ್ತಲೇ ಮುಂದುವರಿದಿದ್ದಾರೆ. ಪರಿಣಾಮವಾಗಿ ಈ ವರ್ಗಗಳ ನಡುವೆ ಶತ್ರುತ್ವ ಉಂಟಾಗಿದೆ.

ಇನ್ನೊಂದು ಕಡೆ ದಲಿತ ಸಮುದಾಯದಲ್ಲಿ ಅನ್ನ ಬಟ್ಟೆ ವಸತಿ ಮುಂತಾದ ಸೌಕರ್ಯಗಳೇ ಇಲ್ಲದ ಪರಿಸ್ಥಿತಿ ಹಾಗೆ ಮುಂದುವರಿಯುತ್ತದೆ. ಇದರಿಂದ ಸಂಘಟನೆ ವಿಶಾಲವಾದ ತಳಹದಿಯ ಮೇಲೆ ಬೆಳೆಯ ಬೇಕಾಗಿತ್ತು. ಆದರೆ ದುರಂತವೆಂದರೆ ಈ ದಶಕದಲ್ಲಿ ದಲಿತ ಹೋರಾಟ ಗಳು ಛಿದ್ರ ಛಿದ್ರವಾಗಿ ಒಡೆದು, ತಮ್ಮ ಮುಂದಿನ ಸಮಸ್ಯೆಗಳನ್ನು ಯಾವ ದೃಷ್ಟಿಕೋನದಲ್ಲಿ ಗ್ರಹಿಸಬೇಕು ಎಂತಹ ಪರ್ಯಾಯವನ್ನು ದಲಿತರ ಮುಂದಿಡಬೇಕು ಎಂಬ ಬಗ್ಗೆ ಒಂದು ಸಾಮಾನ್ಯ ನಿಲುವು ದಲಿತ ಸಂಘಟನೆಗಳಿಗೆ ಕಾಣದೇ ಹೋಯಿತು, ಪರಿಣಾಮವಾಗಿ ಸರಕಾರಿ ಸೌಲತ್ತುಗಳನ್ನು ಕೇಳುವ ಏಜೆಂಟ್‌ಗಳ ಕೆಲಸಕ್ಕೆ ತನ್ನನ್ನು ಸೀಮಿತ ಮಾಡಿಕೊಂಡುದರಿಂದ ಅಲ್ಲಿ ಒಳಜಾತಿ, ಒಳಮೀಸಲಾತಿಯ ಪ್ರಶ್ನೆಗಳು ದಲಿತರ ವಿಮೋಚನೆಯ ಏಕೈಕ ದಾರಿಗಳೆಂಬಂತೆ ಬಿಂಬಿಸಲಾ ಗುತ್ತದೆ. ಆದರೆ ಇಂದು ಜಾತಿ ಮತ್ತು ಅಸ್ಪೃಶ್ಯತೆಯ ಸಮಸ್ಯೆಗಳು ಮತ್ತಷ್ಟು ಬೇರೂರಿ ಬೆಳೆಯಲು ಕಾರಣವಾಗಿದೆ. ದಲಿತರ ಮೇಲೆ ಹಲ್ಲೆ, ಕೊಲೆ, ಬಹಿಷ್ಕಾರಗಳನ್ನು ನಡೆಸಿದಾಗ ಅದಕ್ಕೆ ಒಳಗಾದವರು ಹೊಲೆಯರೊ, ಮಾದಿಗರೊ ಎಂದು ಸೀಮಿತವಾಗಿ ನೋಡುವಂತಹ ಸಂಕುಚಿತ ಮನೋಭಾವ ದಲಿತರಲ್ಲಿ ಬೆಳೆದು ನಿಂತಿದೆ.

ಕನ್ನಡ ಸಮಾಜದ ಚರಿತ್ರೆಯಲ್ಲಿ ದಲಿತ ಮತ್ತು ರೈತ ಹೋರಾಟಗಳು ಒಡೆಯ ಮತ್ತು ಜೀತಗಾರ ಇಬ್ಬರೂ ಒಟ್ಟಿಗೆ ಎಚ್ಚರಗೊಂಡರೆ ಏನಾಗಬಹುದೊ ಅದೇ ರೈತ ಮತ್ತು ದಲಿತ ಹೋರಾಟಗಳಲ್ಲೂ ಒಂಟಾಗಿದೆ .ಇವೆರಡೂ ನ್ಯಾಯಾಗಳು ಒಂದೇ ಅಲ್ಲ. ಕರ್ನಾಟಕದಲ್ಲಿ ಭೂಮಾಲೀಕ ಶಕ್ತಿಗಳೆಂದರೆ ಲಿಂಗಾಯಿತ ಹಾಗೂ ಒಕ್ಕಲಿಗ ಜಾತಿಗಳೇ, ಇವರಿಬ್ಬರ ನಿಯಂತ್ರಣದಲ್ಲಿ ಗ್ರಾಮೀಣ ದಲಿತರು ಬದುಕುತ್ತಿದ್ದಾರೆ. ವಾಸ್ತವಾಗಿ ದಲಿತ ವಿರೋದಿ ಶಕ್ತಿಗಳೇ ಈ ಎರಡು ಪ್ರಬಲ ಕೋಮುಗಳು, ವಿಚಿತ್ರ ಎಂದರೆ ರೈತರ ಜೊತೆಗೂಡಿ ಹೋರಾಟ ರೂಪಿಸಲು. ದಸಂಸದ ಹಲವು ಬಣಗಳಲ್ಲಿ ಒಂದು ಗುಂಪು ಮಾತ್ರ ರೈತ ಸಂಘದೊಂದಿಗೆ ಸೇರಲು ಮುಂದಾಗಿದೆ. ಇನ್ನುಳಿದ ಹಲವಾರು ದಲಿತ ಸಂಘಟನೆಗಳು ಈ ಪ್ರತಿಕ್ರಿಯೆಯಲ್ಲಿಲ್ಲ ಅವೆಲ್ಲ ಈಗಲೂ ಸ್ವತಂತ್ರವಾಗಿಯೇ ಹೋರಾಟ ಮುಂದುವರಿಸಿದೆ.

ಅದೇ ರೀತಿ ಇನ್ನೊಂದು ಕಡೆ ಪ್ರೊ.ನಂಜುಂಡಸ್ವಾಮಿಯವರ ನೇತೃತ್ವದ ರೈತ ಸಂಘ ಮತ್ತು ಪುಟ್ಟಣ್ಣಯ್ಯನವರ ನೇತೃತ್ವದ ರೈತ ಸಂಘ ಎಂಬ ಎರಡು ಮುಖ್ಯ ಬಣಗಳಿವೆ. ಇವುಗಳಲ್ಲಿ ಸದ್ಯಕ್ಕೆ ಪುಟ್ಟಣ್ಣಯ್ಯನವರ ಬಣ ಮಾತ್ರ ದಲಿತ ಸಂಘದ ಒಂದು ಗುಂಪಿನಲ್ಲಿ ಐಕ್ಯತೆಗೆ ಮುಂದಾಗಿದೆ ಈ ಎರಡು ಸಂಘಟನೆಯ ಒಂದುಗೂಡುವಿಕೆ ಸಮಗ್ರ ಬದಲಾವಣೆಯ ಪ್ರಕ್ರಿಯೆಯಿಂದ ಕೂಡಿಲ್ಲ ಇವು ವೈರುಧ್ಯಗಳ ನಡುವೆ ಪ್ರತ್ಯೇಕವಾಗಿ ತಮ್ಮ ಹಿತವನ್ನು ಈ ಎರಡು ಸಂಘಟನೆಗಳು ಕಾಯ್ದುಕೊಂಡಿವೆ. ಏನೇಯಾದರೂ ದಲಿತ–ರೈತ ಹೋರಾಟಗಳಲ್ಲಿ ಹೊಂದಾಣಿಕೆ ಇರದಿದ್ದರೂ ತಾತ್ವಿಕವಾಗಿ ಅದು ಅಸಾಧ್ಯವಾಗಿದ್ದರೂ ಕನ್ನಡ ಗ್ರಾಮೀಣ ಲೋಕದ ಸುಧಾರಣೆಗೆ ರೈತ ಮತ್ತು ದಲಿತ ಆಂದೋಲನಗಳು ಅನಿವಾರ್ಯವಾಗಿವೆ.

ಈ ನಾಡಿನ ರೈತ, ಭಾಷೆ ದಲಿತ–ಬಂಡಾಯ ಸಾಹಿತ್ಯ ಸಂಘಟನೆಗಳು ಹಲವು ಏಳು–ಬೀಳುಗಳನ್ನು ಕಂಡದ್ದು, ಒಂದೊಂದರಲ್ಲೂ ಹಲವು ಒಳಸುಳಿಗಳು ಕಾಣಿಸಿಕೊಂಡದ್ದು ಜನ ಹಿತ ಕಾಯಲು ಜನ್ಮತಾಳಿದ ಚಳುವಳಿಗಳೇ ಕಲಾಂತರದಲ್ಲಿ ಬಿನ್ನಮತ, ಕ್ಷುದ್ರತನ,ಅಧಿಕಾರದ ಸೆಳೆತ, ಅನುಮಾನ, ಅಪನಂಬಿಕೆ, ಆರೋಪ, ಪ್ರತ್ಯಾರೋಪಗಳ ಸುಳಿಗೆ ಸಿಕ್ಕು ತಮ್ಮ ಘೋಷಿತ ನೀತಿಯಿಂದ ನೂರಾರು ಅಡಿ ದೂರವಾಗಿ ನಿಂತಿರುವ ವಿಪರ್ಯಾಸವೇ ಒಂದು ವ್ಯವಸ್ಥೆಯ ಕಥೆ.[1]

ಕರ್ನಾಟಕದ ಇತಿಹಾಸದಲ್ಲಿ ದಲಿತ ಹಾಗೂ ರೈತ ಸಂಘಗಳ ನಿರ್ಣಾಯಕ ಪಾತ್ರವು ವರ್ತಮಾನದಲ್ಲಿ ಕುಂಟಿತವಾಗಿದ್ದರೂ ಅವು ರೂಪಿಸಿರುವ ಪರಿಣಾಮಗಳು ಬೇರೆ ಬೇರೆ ರೂಪಗಳಲ್ಲಿ ಈಗಲೂ ಜೀವಂತವಾಗಿವೆ, ಕಾಲದ ಪ್ರವಾಹ ಪತ್ತು ಪರೀಕ್ಷೆಯಲ್ಲಿ ಅವು ಕನ್ನಡ ನಾಡಿನ ಹೊಣೆಗಾರಿಕೆಯನ್ನು ಜಾಗತೀಕರಣದ ಕಾಲಘಟ್ಟದಲ್ಲಿ ಗಂಭೀರವಾಗಿ ಹೊರಬೇಕಾಗಿದೆ.

ಅಡಿ ಟಿಪ್ಪಣಿ.

1) ಮೊಗಳ್ಳಿ ಗಣೇಶ್– ನಡುಗಲದ ಕನ್ನಡನಾಡು ಏಕೀಕರಣೋತ್ತರ

ಕನ್ನಡ ಸಾಹಿತ್ಯ ಸಂಸ್ಕೃತಿ ಕಥನ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 2008. ಪುಟ.88
2) ಮೊಗಳ್ಳಿ ಗಣೇಶ್;–ಅದೇ ಪುಟ. 89
3) ಲಕ್ಷ್ಮೀನಾರಾಯಣ ನಾಗವಾರ;– ಬಿ.ಬಸವಲಿಂಗಪ್ಪ ಮತ್ತು ಬೂಸಾ ಚಳುವಳಿಯ ಕಾಲು ಶತಮಾನ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು 2000. ಪುಟ. 17
4) ಡಾ.ಬಿ.ಎಂ.ಪುಟ್ಟಯ್ಯ';– ಮುಖಾಮುಖಿ ಸಮಾಜ ಸಂಸ್ಕೃತಿ ಚಳುವಳಿ. ಸಿದ್ಧಾರ್ಥ ಪ್ರಕಾಶನ ಹೊಸಪೇಟೆ.2008 ಪುಟ.54.
5) ಅದೇ ಪುಟ. 94
6) ಮೊಗಳ್ಳಿ ಗಣೇಶ್;–ಅದೇ ಪುಟ.95
7) ಡಾ.ಬಿ.ಎಂ.ಪುಟ್ಟಯ್ಯ'; ಅದೇ ಪುಟ.59
8) ಲಕ್ಷ್ಮೀನಾರಾಯಣ ನಾಗವಾರ. ಅದೇ ಪುಟ 11.

ಲಲಿತಕಲೆಯ ಅರ್ಥ ಮತ್ತು ಮಹತ್ವ

ಅರುಣಶ್ರೀ.ಎಂ.ಕೆ.
ಸಂಶೋಧನಾ ವಿದ್ಯಾರ್ಥಿನಿ, ತತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪೀಠಿಕೆ : ಜಗತ್ತಿನಲ್ಲಿ, ಹಿಂದೂಸ್ಥಾನಕ್ಕೆ, ಲಲಿತಕಲಾ ಕ್ಷೇತ್ರದಲ್ಲಿ ಅತ್ಯಂತ ವಿಶೇಷವಾದ ಸ್ಥಾನ–ಮಾನವಿದೆ. ಸಹಜವಾಗಿ, ಮಾನವನು, ಸದಾ ಕಾಲವು ಸುಖ–ಸಂತೋಷ–ನೆಮ್ಮದಿ–ಶಾಂತಿ–ಆನಂದಗಳಿಂದ ಇರಲು ಬಯಸುತ್ತಾನೆ. ಆನಂದಮಯ ಜೀವನವನ್ನು ಸ್ವತಃ ತನ್ನಲ್ಲಿ, ತಾನಿರುವ ಜಗತ್ತಿನಲ್ಲಿ ಮತ್ತು ಜಗತ್ತನ್ನು ಸೃಷ್ಟಿಸಿದ ದೇವರ ದಿವ್ಯ ಜೀವನದಲ್ಲಿ ಕಾಣುತ್ತಿದ್ದಾನೆ. ದೇವರ ದಿವ್ಯ ಜೀವನವು ಲಲಿತಕಲೆಯಾಗಿ ಅಭಿವ್ಯಕ್ತವಾಗಿದೆ. ಲಲಿತಕಲೆಯ ಅಂತಿಮವೆ ಆನಂದ. ಈ ಆನಂದವು ಸೌಂದರ್ಯದ ಜೀವವಾಗಿದೆ. "ಆನಂದ" ಎಂಬುದು ಸೌಂದರ್ಯದಲ್ಲಿದೆ. ಸೌಂದರ್ಯ ಎಂಬುದು "ಸತ್ಯಂ–ಶಿವಂ–ಸುಂದರಂ" ಎಂಬ ದಿವ್ಯ ಜೀವನದಲ್ಲಿದೆ. "ಸೌಂದರ್ಯ"ವು, ಹಿಂದೂಸ್ಥಾನದಲ್ಲಿ, ಒಂದು "ಶಾಸ್ತ್ರ"ದ ರೂಪದಲ್ಲಿ ಅಧ್ಯಯನ ಮಾಡಲ್ಪಡುತ್ತಿದೆ. ಸೌಂದರ್ಯ ಶಬ್ದದ ಅರ್ಥದ ಮೂಲ ಎಲ್ಲಿದೆ ಮತ್ತು ಹೇಗಿದೆ? ಸೌಂದರ್ಯವು ನೋಡುವ ಮಾನವನಲ್ಲೇ ಇದೆಯೊ ಅಥವ ಹೊರಗಿನ ಜಗತ್ತಿನಲ್ಲಿ ಇದೆಯೊ? ಸೌಂದರ್ಯವು ತಾತ್ಕಾಲಿಕವೊ ಅಥವ ಶಾಶ್ವತವೊ? ಸೌಂದರ್ಯವು ಒಂದೇ ರೂಪ–ಗುಣದಿಂದ ಕೂಡಿದೆಯೊ ಅಥವ ವಿವಿಧ ರೂಪ–ಗುಣಗಳಿಂದ ಕೂಡಿದೆಯೊ? – ಮುಂತಾದ ಅನೇಕ ಪ್ರಶ್ನೆಗಳಿಗೆ ಅವಕಾಶ ಕಲ್ಪಿಸಿದೆ. ಈ ಎಲ್ಲ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಸೌಂದರ್ಯ ಶಾಸ್ತ್ರವು ಲಲಿತಕಲೆಗಳ ಮೂಲಕ ಕೊಡುತ್ತದೆ. ಸೌಂದರ್ಯಶಾಸ್ತ್ರಕ್ಕೆ ಅನೇಕ ಲಕ್ಷಣಗಳಿವೆ. ಈ ಲಕ್ಷಣಗಳು ಲಲಿತಕಲೆಗಳಾದ ಸಾಹಿತ್ಯ–ಸಂಗೀತ–ನೃತ್ಯ–ನಾಟಕ–ಚಿತ್ರ–ಶಿಲ್ಪ–ವಾಸ್ತುಕಲೆ ಮುಂತಾದ ಬೇರೆ ಬೇರೆ ರೂಪಗಳಲ್ಲಿ ಇದೆ. ಸೌಂದರ್ಯಶಾಸ್ತ್ರದ ಈ ಎಲ್ಲ ಲಕ್ಷಣಗಳನ್ನು ಸಮಗ್ರವಾಗಿ ಮತ್ತು ಸ್ಪಷ್ಟವಾಗಿ ಅರ್ಥಮಾಡಿಕೊಂಡಾಗ, "ಸೌಂದರ್ಯ" ಎಂಬುದರ ಸಂಪೂರ್ಣ ಅನುಭವವಾಗುತ್ತದೆ. ವೇದ–ಉಪನಿಷತ್ತು–ಭಗವದ್ಗೀತೆ–ಪುರಾಣ–ಮಹಾಕಾವ್ಯಗಳು ಲಲಿತಕಲಾ ಸೌಂದರ್ಯವನ್ನು ವಿವರಿಸುತ್ತಾ ಬಂದಿವೆ. ಹೀಗೆ ವಿವರಿಸುವಾಗ ಲಲಿತಕಲಾಶಾಸ್ತ್ರದ ನಿರ್ಮಾಣವಾಯಿತು.

ಲಲಿತಕಲೆಗಳ ಅರ್ಥ ಮತ್ತು ಮಹತ್ವಗಳನ್ನು ಅರ್ಥಮಾಡಿಕೊಳ್ಳಲು ಭರತಮುನಿ, ಪತಂಜಲಿಮುನಿ ಮತ್ತು ಅಭಿನವಗುಪ್ತರ ಜೀವನ ಮತ್ತು ಸಾಧನೆಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಬೇಕು. ಇವರ ಮಹಾನಗ್ರಂಥಗಳಾದ : " ಭರತನ ನಾಟ್ಯಶಾಸ್ತ್ರ, ಪತಂಜಲಿಯ ಯೋಗಸೂತ್ರಗಳು, ಅಭಿನವಗುಪ್ತನ ಅಭಿನವಭಾರತಿ" ಮೂಲಭೂತ ಆಕ್ರಗ್ರಂಥಗಳಾಗಿ ಅಧ್ಯಯನ ಮಾಡಲೇಬೇಕು.

ಲಲಿತಕಲೆಗಳು : ಮಾನವನ ಜೀವನವು ವೃತ್ತಿ–ಪ್ರವೃತ್ತಿಗಳಿಂದ ಕೂಡಿದೆ. ವೃತ್ತಿಯಿಂದಾಗಿ ದೇಹಾರೋಗ್ಯವು ಚೆನ್ನಾಗಿರುತ್ತದೆ. ಪ್ರವೃತ್ತಿಯಿಂದಾಗಿ ಮನಸ್ಸಿನ ಆರೋಗ್ಯವು ಚೆನ್ನಾಗಿರುತ್ತದೆ. ಮನಸ್ಸಿನ ಶಾಂತಿ–ನೆಮ್ಮದಿಗಳಿಗೆ, ಮಾನವನು ಲಲಿತಕಲೆಗಳನ್ನು ಸೃಷ್ಟಿಸಿಕೊಂಡನು. ಲಲಿತಕಲೆಗಳು ಸೌಂದರ್ಯದ, ಅಂದರೆ, ಆನಂದದ ನೆಲೆಗಳಾಗಿವೆ. ಲಲಿತಕಲೆಗಳಲ್ಲಿ ವಿವಿಧ ಪ್ರಕಾರಗಳಿವೆ. ಸಾಹಿತ್ಯ–ಸಂಗೀತ–ನೃತ್ಯ–ನಾಟಕ–ಚಿತ್ರ–ಶಿಲ್ಪ–ವಾಸ್ತು ಎಂಬುವೆ ಲಲಿತಕಲೆಯ ವಿವಿಧ ಪ್ರಕಾರಗಳಾಗಿವೆ. ಈ ಒಂದೊಂದು ಪ್ರಕಾರದ ಮೂಲಕವು ಸೌಂದರ್ಯದ ಅನುಭವವನ್ನು ಹಿಂದೂಸ್ಥಾನದ ಸೌಂದರ್ಯಶಾಸ್ತ್ರವು ರಸಾನುಭವ ಅಥವ ಆನಂದಾನುಭವ ಎಂದಿದೆ. ಲಲಿತಕಲೆಗಳ ಒಂದೊಂದು ಪ್ರಕಾರದ ಮೂಲಕವು ರಸಾನುಭವ ಉಂಟಾಗಲು, ಆಯಾಯ ಕಲೆಗಳಲ್ಲಿ ಅಗತ್ಯವಾದ ಕೆಲವು ಲಕ್ಷಣಗಳಿರಲೇಬೇಕು. ಅಂತಹ ಲಕ್ಷಣಗಳನ್ನು ಆಯಾಯ ಕಲೆಗಳ ಸ್ವರೂಪಗಳು ಎನ್ನಲಾಗಿದೆ.

ಸಾಹಿತ್ಯಕಲಾ ಪ್ರಕಾರದಲ್ಲಿನ ಸೌಂದರ್ಯಕ್ಕೆ ಕಾರಣವಾಗುವ ಲಕ್ಷಣಗಳು : ಸಾಹಿತ್ಯ – ಎಂಬುದನ್ನು ಸಾಹಿತಿ ಅಥವ ಕವಿ ಎಂಬ ಮಾನವನು ರಚಿಸುತ್ತಾನೆ. ಸಾಹಿತ್ಯ ಮತ್ತು ಸಾಹಿತಿ ಎಂಬ ಶಬ್ದಗಳು "ಸ" ಮತ್ತು "ಹಿತ" ಎಂಬುವುಗಳ ಐಕ್ಯತೆಯಿಂದ ಮೂಡಿವೆ. "ಸ" ಎಂಬುದು, "ಸಹ ಮಾನವರೆಲ್ಲರ" ಎಂಬುದನ್ನು ಸೂಚಿಸುತ್ತದೆ. "ಹಿತ" ಎಂಬುದು, "ಹಿತ ಸಾಧನೆ" ಎಂಬುದನ್ನು ಸೂಚಿಸುತ್ತದೆ. ಸಾಹಿತ್ಯ ನಿರ್ಮಾಣದ ಉದ್ದೇಶವು, ಸಾಹಿತಿಯ ಜೊತೆಯಲ್ಲಿ ಜೀವಿಸುತ್ತಿರುವ ಎಲ್ಲ ಮಾನವರು ಸದಾ ಆನಂದದಿಂದ ಇರಬೇಕು ಎಂಬುದೇ ಆಗಿದೆ.

ಸಾಹಿತ್ಯವು ಕತೆ–ಕಾದಂಬರಿ–ಕಾವ್ಯಗಳ ರೂಪದಲ್ಲಿ ರಚನೆಯಾಗುತ್ತದೆ. ಕಾವ್ಯ ರೂಪವು ಬಹಳ ಕಷ್ಟದ ರಚನೆಯಾಗಿದೆ. ರಾಮಾಯಣ ಮತ್ತು ಮಹಾಭಾರತಗಳೆಂಬ ಮಹಾಕಾವ್ಯಗಳ ಗಾತ್ರ–ಪಾತ್ರಗಳ ಸಂಖ್ಯೆ–ಸನ್ನಿವೇಶ–ಸಂದರ್ಭಗಳ ವೈವಿಧ್ಯತೆ–ಕಾವ್ಯದ(ಕತೆಯ)ವಸ್ತುವಿನ ಶ್ರೇಷ್ಠತೆ–ಕಾವ್ಯರಚನಾಶೈಲಿ ಮುಂತಾದುವೆಲ್ಲವನ್ನು ಗಮನಿಸಿದಾಗ ಕವಿಯ ವ್ಯಕ್ತಿತ್ವ–ಪ್ರತಿಭೆ–ಲೋಕಾನುಭವ–ಲೋಕಹಿತಸಾಧನೆಯ ಬಗ್ಗೆ ಇರುವ ಆಸಕ್ತಿಗಳಿಗಳಿಗೆ ಸಂಬಂಧಿಸಿದ ಸಮಗ್ರ–ಪೂರ್ಣದೃಷ್ಟಿಯ ಮಹತ್ವಗಳ ಅರಿವಾಗುತ್ತದೆ.

ಕಾವ್ಯವು ಸುಂದರವಾಗಲು, ಅದರಲ್ಲಿರಬೇಕಾದ ಲಕ್ಷಣಗಳು ಹೀಗಿವೆ : ರಸಾನುಭವದ ಪ್ರಭೇದಗಳಾದ ವಿಭಾವ–ಅನುಭಾವ–ಸಂಚಾರಿಭಾವ–

ಸ್ಥಾಯಿಭಾವ ಇತ್ಯಾದಿಗಳಿರಬೇಕು. ಅಭಿವ್ಯಕ್ತಿಯ, ಅಂದರೆ, ಸೌಂದರ್ಯವನ್ನು ಸಮರ್ಪಕವಾಗಿ ತೋರಿಸುವ ಅಲಂಕಾರಗಳು–ಗುಣಗಳು–ವ್ಯಂಜಕಗಳು ಇರಬೇಕು. ಸೌಂದರ್ಯವು ಯಾವ ರೀತಿಯಲ್ಲಿ ಓದುಗರ ಮೇಲೆ ಆಗುತ್ತದೆ ಎಂಬುದನ್ನು ಸೂಚಿಸುವ ವಕ್ರೋಕ್ತಿ–ಧ್ವನಿಗಳೆಂಬ ಅರ್ಥಸಿದ್ಧಾಂತದ ಆಧಾರಾಂಶಗಳು ಇರಬೇಕು.

ಸಂಗೀತಕಲಾ ಪ್ರಕಾರದಲ್ಲಿನ ಸೌಂದರ್ಯಕ್ಕೆ ಕಾರಣವಾಗುವ ಲಕ್ಷಣಗಳು : ಲಲಿತಕಲೆಯ ಸ್ವರೂಪವು ಕೆಲವು ಮೂಲಭೂತ ಲಕ್ಷಣಗಳನ್ನು ಅವಲಂಬಿಸಿದೆ. ವಿವಿಧ ಸಂದರ್ಭದಲ್ಲಿ, ಮಾನವನಲ್ಲಿ ಒಂಬತ್ತು ರೀತಿಯ ಭಾವನೆಗಳು ಮೂಡುತ್ತವೆ. ಆ ಭಾವನೆಗಳನ್ನು ಶಬ್ದದ ರೂಪದಲ್ಲಿ, ಸಂಸ್ಕರಣಗೊಂಡ ಶಾಸ್ತ್ರೀಯ ರೂಪದಲ್ಲಿ ನೋಡಿದಾಗ, ಅದು ಸಂಗೀತವಾಗುತ್ತದೆ. ಉತ್ತಮ ಸಂಗೀತವು – ಶ್ರುತಿ, ಸ್ವರ, ಗಮಕ, ತಾಳ, ಲಯ, ರಾಗ, ಭಾವಗಳೆಂಬ ವಿವಿಧ ನಾದಾಂಗಗಳ ವ್ಯವಸ್ಥಿತ ರೀತಿಯ ಹೊಂದಾಣಿಕೆಗಳಿಂದ ಹೊರಹೊಮ್ಮುತ್ತದೆ.

ನೃತ್ಯಕಲಾ ಪ್ರಕಾರದಲ್ಲಿನ ಸೌಂದರ್ಯಕ್ಕೆ ಕಾರಣವಾಗುವ ಲಕ್ಷಣಗಳು : ಲಲಿತಕಲೆಗಳಲ್ಲಿನ ನೃತ್ಯ ಪ್ರಕಾರವು, ಶರೀರದ ಅಂಗಾಂಗಳನ್ನು, ಸಂದರ್ಭ ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಚಲಿಸುವುದು, ವಿವಿಧ ಭಂಗಿಗಳಿಗೆ ಹೊಂದಿಕೊಂಡಂತೆ ಮುಖದ ಭಾವಗಳನ್ನು ಹಸ್ತಗಳ ವಿವಿಧ ಮುದ್ರೆಗಳೊಡನೆ ಸಾಂಕೇತಿಕವಾಗಿ ಪ್ರದರ್ಶಿಸುವುದು ಮತ್ತು ಅಭಿನಯಿಸುವುದು–ಮುಂತಾದ ಪ್ರಕ್ರಿಯೆಗಳನ್ನು ಒಳಗೊಂಡಿರತ್ತದೆ. ನಾಟ್ಯಶಾಸ್ತ್ರವು: ನೃತ್ತ, ನೃತ್ಯ, ನಾಟ್ಯ, ಅಭಿನಯ, ಲಾಸ್ಯ–ಮುಂತಾದ ಅನೇಕ ಭಾಗಗಳನ್ನು ಶಾಸ್ತ್ರೀಯವಾಗಿ ವಿವರಿಸುತ್ತದೆ. ಭರತಮುನಿಯ "ಭಾರತೀಯ ನಾಟ್ಯಶಾಸ್ತ್ರ" ಎಂಬ ಮಹಾನ್ ಗ್ರಂಥವು ನೃತ್ಯಕಲೆಯ ಸುಂದರ ಅಭಿವ್ಯಕ್ತಿಗೆ ಆಧಾರವಾಗಿರುವ ಎಲ್ಲ ಲಕ್ಷಣಗಳನ್ನು ಸಮಗ್ರವಾಗಿ ವಿವರಿಸುತ್ತದೆ.

ನಾಟಕ ಕಲಾ ಪ್ರಕಾರದಲ್ಲಿನ ಸೌಂದರ್ಯಕ್ಕೆ ಕಾರಣವಾಗುವ ಲಕ್ಷಣಗಳು : ನಾಟ್ಯಕಲೆಯು, ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಜೀವನವನ್ನು ಪುನಃ ಸೃಷ್ಟಿಮಾಡಿ, ಆಯಾಯ ಜೀವಿಗಳ ಜೀವನಸೌಂದರ್ಯವನ್ನು ಅಭಿನಯದ ಮೂಲಕ, ಲೋಕಕ್ಕೆ ದರ್ಶನ ಮಾಡಿಸುತ್ತಿದೆ.

ಜೀವನದ ಸಮಗ್ರ ಅನುಭವ ಮತ್ತು ಅನುಭಾವಗಳನ್ನು, ಒಂಬತ್ತು ರೀತಿಯ ಭಾವ ಪ್ರದರ್ಶನದ ಮೂಲಕ, ಪ್ರೇಕ್ಷಕರಿಗೆ ದರ್ಶನ ಮಾಡಿಸುವ ಕಾರ್ಯದಲ್ಲಿ, ನಾಟಕ ಕಲೆಯು ಅತ್ಯುತ್ತಮ ಕಲಾ ಮಾಧ್ಯಮವಾಗಿದೆ. ಆನಂದವೆ ಏಕಮಾತ್ರ ಪ್ರಯೋಜನವಾದ, ಸೌಂದರ್ಯದ ಮೂಲಕ ಆ ಆನಂದವನ್ನು ದರ್ಶನ ಮಾಡಿಸುವ, ನಾಟಕ ಕಲೆಯಲ್ಲಿ ಪವಿತ್ರವಾದ ಕಥಾವಸ್ತು, ನಿರ್ಮಲ ಜೀವನದ ಮತ್ತು ಲೋಕಹಿತ ಬಯಸುವ ನಟ–ನಟಿಯರ ಪ್ರತಿಭಾಕೌಸಲ್ಯ, ಸಹಜತೆಗೆ ತಕ್ಕಂತ ರಂಗ ಸಜ್ಜಿಕೆ, ಸಹೃದಯ ಕಲಾರಸಿಕತೆಯುಳ್ಳ ಪ್ರೇಕ್ಷಕವರ್ಗ – ಮುಂತಾದ ಲಾಕ್ಷಣಿಕ ಅಂಶಗಳು ಇರಲೇಬೇಕು. ಜೊತೆಗೆ ಮತ್ತು ಮುಖ್ಯವಾಗಿ, ನಟ–ನಟಿಯರಲ್ಲಿ : ವಾಕ್‌ಪಟುತ್ವ, ಅಭಿನಯಕ್ಕೆ ಆಧಾರವಾದ ದೇಹ ವಿಕ್ಷೇಪ(ಅಂದರೆ, ಭಾವಗಳಿಗೆ ತಕ್ಕಂತೆ ದೇಹದ ಅಂಗಾಂಗಗಳ ಭಂಗಿಗಳ ಪ್ರದರ್ಶನ ಮಾಡುವುದು, ಅವಯವಗಳ ವಿನ್ಯಾಸ, ಮುಖಮುದ್ರೆ ಅಥವ ಭಾವಪ್ರದರ್ಶನ, ನಡಿಗೆಯ ವಿವಿಧ ರೀತಿಗಳು, ಪ್ರತಿ ಸನ್ನಿವೇಶದಲ್ಲೂ ರಂಗಭೂಮಿಯ ಮೇಲೆ ನಟ–ನಟಿಯ ಚಲನ–ವಲನಗಳು, ಸ್ವರಭಾರಗಳು, ಧ್ವನಿವಿಕಾರಗಳು – ಮುಂತಾದ ಅನೇಕ ಲಕ್ಷಣಗಳ ಅಗತ್ಯಗಳು ನಾಟಕದ ಉತ್ತಮ ಪ್ರದರ್ಶನಕ್ಕೆ ಕಾರಣವಾಗುತ್ತವೆ. ಸಾಮಾನ್ಯ ಮಾನವರು, ನಾಟಕಶಾಸ್ತ್ರದ ಉತ್ತಮ ಜ್ಞಾನ ಮತ್ತು ಸಿದ್ಧಿಗಳಿದ್ದರೆ, ದೇವರಂತೆಯೆ ನಟಿಸುತ್ತಾ, ಪ್ರೇಕ್ಷಕರಿಗೆ ದಿವ್ಯಾನಂದವನ್ನುಂಟು ಮಾಡಬಲ್ಲರು.

ಚಿತ್ರಕಲಾ ಪ್ರಕಾರದಲ್ಲಿನ ಸೌಂದರ್ಯಕ್ಕೆ ಕಾರಣವಾಗುವ ಲಕ್ಷಣಗಳು : ಲಲಿತಕಲೆಗಳಲ್ಲಿ, ಚಿತ್ರಕಲೆಯು, ಮುಖ್ಯ ಸ್ಥಾನವನ್ನು ಹೊಂದಿದೆ. ಪ್ರಾಪಂಚಿಕ ಮತ್ತು ಪಾರಮಾರ್ಥಿಕವಾದ ಅಸಂಖ್ಯಾತ ಅನುಭವ ಮತ್ತು ಅನುಭಾವಗಳನ್ನು, ಚಿತ್ರ ರಚನೆಯ ಮೂಲಕ ವಾಸ್ತವತೆಗೆ ಹತ್ತಿರವಾಗಿ ಪ್ರತಿಬಂಬಿಸಿ, ಲೋಕಹಿತ ಸಾಧನೆಗೆ ಅಗತ್ಯವಾದ ಶಿಕ್ಷಣ ಮಾಧ್ಯಮವಾಗಿ ನಿಂತಿದೆ.

ಜೀವನದ ಅನುಭಾವವು, ಅತ್ಯಂತ ಪರಿಣಾಮಕಾರಿಯಾಗಿ, ಚಿತ್ರಗಳ ಕಲೆಯಾಗಿ ಮೂಡಬೇಕಾದರೆ, ಉತ್ತಮ ಕಲಾ ಲಕ್ಷಣಗಳಾದ – ರೂಪಭೇದ, ಪ್ರಮಾಣ, ಭಾವ, ಲಾವಣ್ಯ, ವರ್ಣಿಕಾಭಂಗ, ಸಾದೃಶ್ಯಗಳೇ ಮೊದಲಾದ ಷಡಂಗಗಳು ಇರಲೇ ಬೇಕು. ಜಗತ್ತಿನ ವಿವಿಧ ದೇಶಗಳಲ್ಲಿ, ವಿವಿಧ ಕಾಲಕ್ಕೆ ಸಂಬಂಧಿಸಿದಂತೆ, ವಿವಿಧ ಶೈಲಿಯ ಚಿತ್ರಕಲೆಗಳು ರೂಢಿಯಲ್ಲಿವೆ.

ಶಿಲ್ಪಕಲಾ ಪ್ರಕಾರದಲ್ಲಿ ಸೌಂದರ್ಯಕ್ಕೆ ಕಾರಣವಾಗುವ ಲಕ್ಷಣಗಳು : ಲಲಿತಕಲೆಗಳಲ್ಲಿ, ಶಿಲ್ಪಕಲೆಯು, ದೃಶ್ಯಕಲಾ ಪ್ರಕಾರದ ಒಂದು ಪ್ರಭಾವಿ ಕಲೆಯಾಗಿದೆ. ಶಿಲ್ಪ ರಚನೆಯನ್ನು ದ್ವಿಪರಿಮಾಣ ಮತ್ತು ತ್ರಿಪರಿಮಾಣಗಳ ರೂಪದಲ್ಲಿ ಮಾಡಲಾಗುತ್ತದೆ. ಶಿಲ್ಪರಚನೆಗೆ – ಸಹಜವಾದ ಪ್ರಕೃತಿಯ ಅಂಗಗಳು, ವಿವಿಧ ಭಾವಗಳನ್ನು ಪ್ರದರ್ಶಿಸುವ ಜೀವಿಗಳು – ಮಾನವರು ಮತ್ತು ದೇವ–ದೇವತೆಯರು "ವಸ್ತು"ಗಳಾಗುತ್ತಾರೆ. ಯಾವದೇ ಶಿಲ್ಪವು ಸುಂದರವಾಗಿದ್ದು, ಪ್ರೇಕ್ಷಕರಲ್ಲಿ "ಆನಂದ" ಉಂಟುಮಾಡಲು, ಅದರಲ್ಲಿ : ಶಿಲ್ಪತಳ, ಮೈವಳಿಕೆ, ಅಂಗಾಂಗಳ ಅಂಚಿನ ರೇಖೆಗಳು, ತಳಗಳ ಅಂತರ, ರಾಶಿ, ಮೇಳ, ಪ್ರಮಾಣ, ಗಾತ್ರ, ಅಂಗಾಂಗಗಳ ಅಂತರದ ಪುನರ್ಯೋಜನೆ, ಶಿಲ್ಪಕ್ಕೆ ಬಳಸುವ ಘನವಸ್ತುವಿನ ಗುಣ – ಎಂಬ ಲಕ್ಷಣಗಳು ಇರಲೇಬೇಕು.

ವಾಸ್ತುಕಲಾ ಪ್ರಕಾರದಲ್ಲಿ ಸೌಂದರ್ಯಕ್ಕೆ ಕಾರಣವಾಗುವ ಲಕ್ಷಣಗಳು : ವಾಸ್ತುಕಲೆಯು, ದೊರಕುವ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು, ಶಾಸ್ತ್ರೀಯವಾಗಿ ಯೋಚನೆ–ಯೋಜನೆ ಮಾಡಿಕೊಂಡು, ಉದ್ದೇಶಿತ ವಾಸ್ತು(ಕಟ್ಟಡ)ನಿರ್ಮಾಣ ಮಾಡುತ್ತದೆ. ಇಂತಹ ವಾಸ್ತುರಚನೆಗಳಲ್ಲಿ – ಚಿತ್ರಕಲೆ ಮತ್ತು ಶಿಲ್ಪಕಲೆಗಳನ್ನು ವಾಸ್ತುವಿನ – ಒಳ ಮತ್ತು ಹೊರ ಮೈಗಳಲ್ಲಿ – ಅಗತ್ಯವಾದ ರೀತಿಯಲ್ಲಿ ಜೋಡಿಸಿ, ಅಲಂಕರಿಸಿರುತ್ತಾರೆ. ವಾಸದ ಮನೆ, ವ್ಯಾಪಾರದ ಮಳಿಗೆಗಳು, ಕಛೇರಿಗಳ ಸಭಾಮಂದಿರಗಳು, ಸ್ಮಾರಕ ಭವನಗಳು, ಅರಮನೆಗಳು ಮತ್ತು ವಿವಿಧ ಧರ್ಮಗಳ ದೇವಸ್ಥಾನಗಳು -- ವಾಸ್ತುಶಿಲ್ಪ ಕಲೆಯ ಸುಂದರ ಆಕೃತಿಗಳಾಗಿವೆ. ಈ ವಾಸ್ತುಶಿಲ್ಪಗಳು – ಸಾಹಿತ್ಯ, ಸಂಗೀತ, ನೃತ್ಯ ಮತ್ತು ನಾಟಕ ಕಲೆಗಳ ಸೌಂದರ್ಯ ಪ್ರದರ್ಶನಗಳ ನೆಲೆಗಳಾಗಿಯು ಇವೆ.

ವಾಸ್ತುಶಿಲ್ಪ ಕಲೆಯು ಸುಂದರವಾಗಿ ರೂಪುಗೊಂಡು, ಜನರ ಮನದಲ್ಲಿ "ಆನಂದ"ವನ್ನುಂಟುಮಾಡಬೇಕಾದರೆ, ಅದು _ ಈ ಕೆಳಕಂಡ ಸೌಂದರ್ಯವರ್ಧನೆಯ ಲಕ್ಷಣಗಳನ್ನು ತನ್ನಲ್ಲಿ ಮೈದುಂಬಿಕೊಂಡಿರಬೇಕು :

೧. ವಾಸ್ತು ಪುರುಷ ತತ್ತ್ವದ ಪರಿಜ್ಞಾನ.

೨. ವಾಸ್ತು ರಚನೆ ಮಾಡುವ ಪ್ರತಿಭಾನ್ವಿತ, ಅನುಭವಿ, ಜ್ಞಾನಿ ಮತ್ತು

ನಿಜ ಸೌಂದರ್ಯೋಪಾಸಕನಾದ ಸ್ಥಪತಿ(ಪ್ರಧಾನ ಇಂಜಿನಿಯರ್).
೩. ವಾಸ್ತುರೂಪವನ್ನು ಸುಂದರಗೊಳಿಸುವ ಸಮರೂಪತೆಯ ಲಕ್ಷಣ.
೪. ವಾಸ್ತುರೂಪವನ್ನು ಕುರೂಪಗೊಳಿಸುವ ಅಸಮರೂಪತೆಯ ಲಕ್ಷಣ.
೫. ವಾಸ್ತುರೂಪದಲ್ಲಿ ಇರಬೇಕಾದ ಪ್ರಾತಿನಿಧಿಕ ಭಾವಗಳ ಲಕ್ಷಣ.
೬. ವಾಸ್ತುರೂಪದಲ್ಲಿ – ಮುಖ್ಯವಾಗಿರಬೇಕಾದ "ಭವ್ಯತೆ"ಯ ಲಕ್ಷಣ.

ಮೇಲಿನ ಈ ಆರೂ ಲಕ್ಷಣಗಳ ಸಮಗ್ರ ಜ್ಞಾನದೊಡನೆ ನಿರ್ಮಾಣವಾಗುವ ವಾಸ್ತುಗಳು ಕೀರ್ತಿ, ಗೌರವ, ಪೂಜೆಗಳಿಗೆ ಯೋಗ್ಯವಾಗುತ್ತವೆ. ಈ ರೀತಿಯಲ್ಲಿ, ಭಾರತೀಯ ಸೌಂದರ್ಯಶಾಸ್ತ್ರದಲ್ಲಿ ಲಲಿತಕಲೆಗಳ ಲಕ್ಷಣಗಳ ಸ್ವರೂಪವು, ಕಲಾವಿದರನ್ನು, ಕಲಾಕೃತಿಗಳನ್ನು ಮತ್ತು ಕಲಾಪ್ರೇಮಿಗಳನ್ನು ಸದಾ, ಎಲ್ಲೆಲ್ಲೂ, ಸುಂದರವಾಗಿರುವ ನಟರಾಜ "ಶಿವಮಹಾದೇವನ" ದರ್ಶನಮಾಡಿಸುತ್ತಾ "ಪರಮಶಾಂತಿಯಲ್ಲಿ – ಪರಮ ಆನಂದದಲ್ಲಿ" ಶಾಶ್ವತವಾಗಿ ಲೀನವಾಗಿಸುತ್ತವೆ. ಇವಿಷ್ಟೂ ಲಲಿತಕಲೆಗೆ ಸಂಬಂಧಿಸಿದ ಅರ್ಥ ಮತ್ತು ಮಹತ್ವಗಳಾಗಿವೆ.

'ನೆತ್ತರ ಮದುವೆ' ನಾಟಕದಲ್ಲಿನ – ಸ್ತ್ರೀ ಸಂವೇದನೆ

ಸತೀಶ. ಆರ್
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು,
email : sathishbangaru1916@gmail.com

ಡಾ.ಬಿ.ಎ.ವಿವೇಕ ರೈ ಅವರು ಸಾಮಾಜಿಕ ಕಾಳಜಿಯುಳ್ಳಂತಹ ಸಮರ್ಥ ಕನ್ನಡ ಬರೆಹಗಾರರು. ಸಾಂಸ್ಕೃತಿಕ ವಲಯಗಳಲ್ಲಿನ ಅನನ್ಯತೆಯನ್ನು ತಿಳಿಗೊಳಿಸುವಲ್ಲಿ ತಮ್ಮ ಬರೆಹ ಮತ್ತು ಚಿಂತನೆಗಳನ್ನು ಸದಾ ಜಾಗೃತಿಗೊಳಿಸುತ್ತಾ ಮಾಧ್ಯಮವಾದವರು. ಇವರ ನೆತ್ತರ ಮದುವೆ ನಾಟಕ ಪ್ರಸಿದ್ಧ ಜರ್ಮನ್ ಕವಿಯಾದ 'ಫೆಡರಿಕೋ ಗಾರ್ಸಿಯಾಲೋರ್ಕಾ' ಅವರ BLOOD WEDDING ನಾಟಕದ ರೂಪಾಂತರವಾಗಿ ಅಭಿವ್ಯಕ್ತಗೊಂಡಿದೆ. ಫೆಡರಿಕೋನ ಸಮಾಜಮುಖಿ ಹಾಗೂ ಮಹಿಳಾಮುಖಿ ನಿಲುವುಗಳೇ ನಾಟಕದ ಹೂರಣವಾಗಿದೆ. ಸಮಾಜ ಮತ್ತು ಸಂಸ್ಕೃತಿ ಮಹಿಳೆಯನ್ನು ನಿರ್ಬಂಧಗಳ ಕಟ್ಟುಪಾಡಿನಲ್ಲಿರಿಸಿ ಒಳಗಾಗುವ ಹಿಂಸೆ ಮತ್ತು ದ್ವಂದ್ವತೆಗಳನ್ನು ಹಪಾಹಪಿಸುತ್ತದೆ.

"ಹೆಂಗಸರ ಭಾವನೆಗಳನ್ನು ಅದುಮುವ ಯಾವುದೇ ಸಮಾಜ ಇಡೀ ಮನುಕುಲದ ಸಹಜವಿಕಾಸವನ್ನು ನಾಶಮಾಡುತ್ತದೆ" ಎನ್ನುವ ಫೆಡರಿಕೋನ ಬಲವಾದ ನಂಬಿಕೆಗಳೇ ನಾಟಕದ ಅಭಿವ್ಯಕ್ತಿ ಧೋರಣೆಯಾಗಿದೆ. ಸ್ತ್ರೀ ಸಂವೇದನೆಯನ್ನು ಅಭಿವ್ಯಕ್ತಿಸುವಂತಹ ಸೃಜನಶೀಲ ನಾಟಕ ನೆತ್ತರ ಮದುವೆ, ಪರಂಪರಾನುಗತವಾಗಿ ಬಲವಂತವಾಗಿ ಹೇರಲ್ಪಟ್ಟಂತಹ ಪುರುಷ ಪ್ರಧಾನ ಸಮಾಜದ ನಿರ್ಬಂಧಗಳನ್ನು ಸೂಕ್ಷ್ಮವಾಗಿ ಬಿಡಿಸುವ/ಬೆತ್ತಲು ಮಾಡುವಂತಹ ನೈತಿಕ ಜವಾಬ್ದಾರಿ ಈ ನಾಟಕಕ್ಕಿದೆ. ನೂರು ವರ್ಷದ ಹಿಂದಿನ ಸ್ಪೇನ್ ದೇಶದ ಹಳ್ಳಿಯ ಹೆಣ್ಣುಮಕ್ಕಳ ಸಂವೇದನಾತ್ಮಕ ಬದುಕನ್ನು ಕಟ್ಟಿಕೊಡುತ್ತಲೇ ೨೧ನೇ ಶತಮಾನವನ್ನು ವಿಮರ್ಶಾತ್ಮಕ ನೆಲೆಯಲ್ಲಿ ಭಾರತೀಯ ಸಂಸ್ಕೃತಿಯನ್ನು ಅನುಸಂಧಾನಕ್ಕೊಳಪಡಿಸುತ್ತದೆ.

ಇಲ್ಲಿ ಸ್ತ್ರೀ ತಾಯಿಯಾಗಿ, ಮದುಮಗಳಾಗಿ, ಸೇವಕಿಯಾಗಿ ಬದುಕಿನುದ್ದಕ್ಕೂ ವ್ಯವಸ್ಥೆಯ ಜೊತೆಗೆ ತನ್ನ ಮಾನಸಿಕ ತಾಕಲಾಟಗಳನ್ನು ಅದುಮಿಟ್ಟುಕೊಂಡು ಅನುಭವಿಸುವಂತಹ ಒಡಲಕಿಚ್ಚಾಗಿ ಪರಿಣಮಿಸುತ್ತದೆ. ಹೆಣ್ಣಿನ ಅಸಹಾಯಕ ಸ್ಥಿತಿ, ಪುರುಷ ಪ್ರಧಾನ ಸಂಚಿತ ವ್ಯವಸ್ಥೆಯೊಳಗೆ ಬಲಿಯಾಗುವಂತಹ ಮತ್ತು ಅದರೊಟ್ಟಿಗೆ ಸಮಾಜಕೇಂದ್ರಿತ ನಿರ್ಬಂಧಗಳು, ಹೆಣ್ಣಿನ ದನಿಯನ್ನು ಮತ್ತಷ್ಟೂ ಹಿಸುಕುವ ಮನೋವೈಕಲ್ಯಗಳ ವಿಕೃತ ಸ್ವಭಾವವನ್ನು ನಾಟಕ ಸಾಂಕೇತಿಕವಾಗಿ ದಾಖಲಿಸುತ್ತದೆ.

ನಾಟಕ ಪ್ರಮುಖವಾಗಿ ಮಹಿಳೆಯ ಪ್ರತಿಭಟನಾತ್ಮಕ ಧ್ವನಿಗಳನ್ನು ಧ್ವನಿಸುತ್ತಲೇ ಸಮಾಜ ಮತ್ತು ಪುರುಷ ಪ್ರಧಾನತೆಯನ್ನು ಪ್ರಶ್ನಿಸುವ ಹೊಣೆಗಾರಿಕೆಯನ್ನು ನಿರ್ವಹಿಸಿಕೊಳ್ಳುತ್ತದೆ. ಹೆಣ್ಣು ತನ್ನ ಸುತ್ತಲಿನ ಪ್ರತಿಬಂಧಕಗಳನ್ನು ಮೀರುವಲ್ಲಿ ಸಮಾಜ ಹೇಗೆ ಮಾರಕವಾಗುತ್ತದೆ, ಕ್ರಾಂತಿಕಾರಿ ಮತ್ತು ಪ್ರತಿಭಟನಾತ್ಮಕ ಹೋರಾಟಗಳನ್ನೆ ಆಶ್ರಯಿಸಿದ ಹೆಣ್ಣು ತನ್ನ ಭ್ರಮಾತ್ಮಕ ಲೋಕದಲ್ಲಿ ಹೇಗೆ ಪರ್ಯಾವಸನಳಾಗುತ್ತಾಳೆ ಎಂಬುದನ್ನು ಅಭಿವ್ಯಕ್ತಿಸುವುದರೊಂದಿಗೆ ವಿವೇಕ ರೈ ಅವರ ಭಾವನಾತ್ಮಕ ಸಮಾಜ ಮತ್ತು ಸಾಂಸ್ಕೃತಿಕ ಚಿಂತನೆಗಳನ್ನು ನಾಟಕ ಹೇಗೆ ಬೆಸೆದುಕೊಂಡಿದೆ ಎಂಬುದನ್ನು ನಿರ್ವಹಿಸಿಕೊಳ್ಳುವುದೇ ಅಧ್ಯಯನದ ಮುಖ್ಯ ಆಶಯವಾಗಿರುತ್ತದೆ.

ಕನ್ನಡದ ಸಾಂಸ್ಕೃತಿಕ ಬರೆಹಗಾರರಲ್ಲಿ ಪ್ರಮುಖರಾದಂಥಹ ವಿವೇಕ ರೈ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಪುಣಚದವರು. ತಂದೆ ಅಗ್ರಾಳ ಪುರಂದರ ರೈ ಅವರ ಮಾರ್ಗದರ್ಶನದಲ್ಲಿ ಎಂ.ಎಸ್ಸಿ ಪದವೀಧರರಾದ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತುಳು ಜಾನಪದ ಸಾಹಿತ್ಯದ ಮೇಲೆ ಪಿಹೆಚ್.ಡಿ ಪದವಿಯನ್ನು ಪಡೆದಿರುತ್ತಾರೆ.

ಇವರ ಸಾಹಿತ್ಯ ಮತ್ತು ಬದುಕು ಕಾರಂತರ ನೇರ ಪ್ರಭಾವದ್ದು. ಕಾರಣ ಅಗ್ರಾಳದ ಪುರಂದರ ರೈ ಕಾರಂತರ ಶಿಷ್ಯ ಮತ್ತು ಅಭಿಮಾನಿ. ವಿವೇಕ ರೈ ಅವರು ಬದುಕಿನ ಮೂಲಕ ಸಾಹಿತ್ಯವನ್ನು ಮತ್ತು ಅನುಭವನ್ನು ಪಡೆದಿದ್ದರಿಂದ ಮೇರು ವ್ಯಕ್ತಿತ್ವ ಉಳ್ಳವರಾದರು. 2004 ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ, 2007 ರಲ್ಲಿ ಮೈಸೂರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನಾಡು-ನುಡಿಯ ಬಗ್ಗೆ ದುಡಿದಿರುತ್ತಾರೆ. ಅನನ್ಯ ಭಾಷಾ ಪಾಂಡಿತ್ಯ ಮತ್ತು ಸಂಸ್ಕೃತಿ ಚಿಂತನೆಗಳು ಇವರನ್ನು ಜರ್ಮನಿಯ ವ್ಯೂತರ್ಸ್‌ಬರ್ಗ್ ವಿಶ್ವವಿದ್ಯಾನಿಲಯದ ಇಂಡಾಲಜಿ ವಿಭಾಗದಲ್ಲಿ ಅತಿಥಿ ಪ್ರಾಧ್ಯಾಪಕರಾಗಿ ನೇಮಿಸಿಕೊಂಡಿರುತ್ತದೆ.

ವಿವೇಕ ರೈ ಅವರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸ್ಥಾಪಕಾಧ್ಯಕ್ಷರು ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಸೇವೆ ಸಲ್ಲಿಸಿರುತ್ತಾರೆ. ಇನ್ನು ಇವರ ಸಾಹಿತ್ಯ

ಕೃಷಿಯನ್ನು ಗಮನಿಸುವುದಾದರೆ

- ತುಳು ಗಾದೆಗಳು
- ತುಳು ಒಗಟುಗಳು
- ತೌಲವ ಸಂಸ್ಕೃತಿ
- ತುಳು ಜನಪದ ಸಾಹಿತ್ಯ (ಪಿಹೆಚ್.ಡಿ. ಮಹಾಗ್ರಂಥ)
- ಆನ್ವಯಿಕ ಜನಪದ
- ಭಾರತೀಯ ಪರಂಪರೆ ಮತ್ತು ಸಾಹಿತ್ಯದಲ್ಲಿ ಒಗಟು
- ಗಿಳಿಸೂವೆ
- ಇರುಳ ಕಣ್ಣು
- ಹಿಂದಣ ಹೆಜ್ಜೆ
- ರಂಗದೊಳಗಣ ಬಹಿರಂಗ
- ಬ್ಲಾಗಿಲನು ತೆರೆದು
- ನೆತ್ತರ ಮದುವೆ (ಅನುವಾದ)
- ಅರಿವು ಸಾಮಾನ್ಯವೇ
- ಆರ್ಮನಿಯ ಒಳಗಿಂದ
- ರೂಪಾಂತರ
- ಕಡೆಂಗೋಂಡ್ಲು ಶಂಕರಭಟ್ಟರ ಸಮಗ್ರ ಸಾಹಿತ್ಯ (ಸಂಪಾದನೆ)

ಡಾ.ಬಿ.ಎ.ವಿವೇಕ ರೈ ಅವರು ಸಾಂಸ್ಕೃತಿಕ ವಲಯಗಳಲ್ಲಿನ ಅನನ್ಯತೆಯನ್ನು ತಿಳಿಗೊಳಿಸುವಲ್ಲಿ ತಮ್ಮ ಬರೆಹ ಮತ್ತು ಚಿಂತನೆಗಳನ್ನು ಸದಾ ಜಾಗೃತಿಗೊಳಿಸುತ್ತಾ ಮಾಧ್ಯಮವಾದವರು. ಇವರ ನೆತ್ತರ ಮದುವೆ ನಾಟಕ ಪ್ರಸಿದ್ಧ ಜರ್ಮನ್ ಕವಿಯಾದ ಫೆಡರಿಕೋ ಗಾರ್ಸಿಯಾಲೋರ್ಕಾ

ಅವರ ಞಬಔಔಆ ಘಞಆಆಞಓಉ ನಾಟಕದ ರೂಪಾಂತರವಾಗಿ ಅಭಿವ್ಯಕ್ತಗೊಂಡಿದೆ. ಫೆಡರಿಕೋನ ಸಮಾಜಮುಖಿ ಹಾಗೂ ಮಹಿಳಾಮುಖಿ ನಿಲುವುಗಳೇ ನಾಟಕದ ಹೂರಣವಾಗಿದೆ. ಸಮಾಜ ಮತ್ತು ಸಂಸ್ಕೃತಿ ಮಹಿಳೆಯನ್ನು ನಿರ್ಬಂಧಗಳ ಕಟ್ಟುಪಾಡಿನಲ್ಲಿರಿಸಿ ಒಳಗಾಗುವ ಹಿಂಸೆ ಮತ್ತು ದ್ವಂದ್ವತೆಗಳನ್ನು ಹಪಾಹಪಿಸುತ್ತದೆ.

ಹೆಂಗಸರ ಭಾವನೆಗಳನ್ನು ಅದುಮುವ ಯಾವುದೇ ಸಮಾಜ ಇಡೀ ಮನುಕುಲದ ಸಹಜ ವಿಕಾಸವನ್ನು ನಾಶಮಾಡುತ್ತದೆ ಎನ್ನುವ ಫೆಡರಿಕೋನ ಬಲವಾದ ನಂಬಿಕೆಗಳೇ ನಾಟಕದ ಅಭಿವ್ಯಕ್ತಿ ಧೋರಣೆಯಾಗಿದೆ. ಸ್ತ್ರೀ ಸಂವೇದನೆಯನ್ನು ಅಭಿವ್ಯಕ್ತಿಸುವಂತಹ ಸೃಜನಶೀಲ ನಾಟಕ ನೆತ್ತರ ಮದುವೆ, ಪರಂಪರಾನುಗತವಾಗಿ ಬಲವಂತವಾಗಿ ಹೇರಲ್ಪಟ್ಟಂತಹ ಪುರುಷ ಪ್ರಧಾನ ಸಮಾಜದ ನಿರ್ಬಂಧಗಳನ್ನು ಸೂಕ್ಷ್ಮವಾಗಿ ಬಿಡಿಸುವ/ಬೆತ್ತಲು ಮಾಡುವಂತಹ ನೈತಿಕ ಜವಾಬ್ದಾರಿ ಈ ನಾಟಕಕ್ಕಿದೆ. ನೂರು ವರ್ಷದ ಹಿಂದಿನ ಸ್ಪೇನ್ ದೇಶದ ಹಳ್ಳಿಯ ಹೆಣ್ಣುಮಕ್ಕಳ ಸಂವೇದನಾತ್ಮಕ ಬದುಕನ್ನು ಕಟ್ಟಿಕೊಡುತ್ತಲೇ 21ನೇ ಜಾಗತಿಕ ಶತಮಾನವನ್ನು ವಿಮರ್ಶಾತ್ಮಕ ನೆಲೆಯಲ್ಲಿ ಭಾರತೀಯ ಸಂಸ್ಕೃತಿಯನ್ನು ಅನುಸಂದಾನಕ್ಕೊಳಪಡಿಸುತ್ತದೆ.

ಇಲ್ಲಿ ಸ್ತ್ರೀ ತಾಯಿಯಾಗಿ, ಮದುಮಗಳಾಗಿ, ಸೇವಕಿಯಾಗಿ ಬದುಕನುದ್ದಕ್ಕೂ ವ್ಯವಸ್ಥೆಯ ಜೊತೆಗೆ ತನ್ನ ಮಾನಸಿಕ ತಾಕಲಾಟಗಳನ್ನು ಅದುಮಿಟ್ಟುಕೊಂಡು ಅನುಭವಿಸುವಂತಹ ಒಡಲಕಿಚ್ಚಾಗಿ ಪರಿಣಮಿಸುತ್ತದೆ. ಹೆಣ್ಣಿನ ಅಸಹಾಯಕ ಸ್ಥಿತಿ, ಪುರುಷ ಪ್ರಧಾನ ಸಂಚಿತ ವ್ಯವಸ್ಥೆಯೊಳಗೆ ಬಲಿಯಾಗುವಂತಹ ಮತ್ತು ಅದರೊಟ್ಟಿಗೆ ಸಮಾಜಕೇಂದ್ರಿತ ನಿರ್ಬಂಧಗಳು, ಹೆಣ್ಣಿನ ಧ್ವನಿಯನ್ನು ಮತ್ತಷ್ಟೂ ಹಿಸುಕುವ ಮನೋವೈಕಲ್ಯಗಳ ವಿಕೃತ ಸ್ವಭಾವವನ್ನು ನಾಟಕ ಸಾಂಕೇತಿಕವಾಗಿ ದಾಖಲಿಸುತ್ತದೆ.

ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿಯೂ ಮಹಿಳೆಯರನ್ನು ಸಂಸ್ಕೃತಿ ಹೆಸರಿನಲ್ಲಿ ಶೋಷಿತಗೊಳಿಸುವ ವ್ಯವಸ್ಥಿತ ಸಮಾಜದ ವಿರುದ್ಧ ದನಿಯಾಗಿ ನಿರ್ವಚಿಸಿಕೊಳ್ಳುತ್ತದೆ.

ನಾಟಕ ಜೋಗುಳದಿಂದ ಆರಂಭವಾಗಿ ಕೊನೆಗೆ ಮದುವೆಯ ಸಂಭ್ರಮದ ಅಂಗಣ ಹೆಣಗಳ ನಡುವೆ ರಕ್ತದ ರಿಂಗಣದಿಂದ ಸೂತಕವಾಗುತ್ತದೆ. ಬೆರಗು ಮಾಡುವಂತಹ ವಿಚಲಿತ ಮನಸ್ಸುಗಳ ಕೌಟುಂಬಿಕ ಕಲಹಗಳು ಪ್ರೀತಿ-ಪ್ರೇಮದ ಹೆಸರಿನಲ್ಲಿ ರಕ್ತವನ್ನು ಹೀರುವ ಸಮಾಜವನ್ನು ಪ್ರಶ್ನಿಸುತ್ತಲೇ ಹೆಣಗಳ ನಡುವೆ ರಕ್ತದ ಕಲೆಗಳಿಂದ ನಾಟಕ ತನ್ನ ಮೈಯ್ಯನ್ನು ಆವರಿಸಿಕೊಂಡು ದುರಂತವನ್ನೇ ಎದುರುನೋಡುತ್ತದೆ.

ಮದುವೆ ಎನ್ನುವ ಮಹಿಳೆಯ ಸಾಂಪ್ರದಾಯಿಕ ಪ್ರಕ್ರಿಯೆ ಹೆಣ್ಣಿನ ಬದುಕಿನ ಬಂಧನವಾಗಿ ಏರ್ಪಾಡಾಗುತ್ತಾ ಇದರ ಸುತ್ತ ಹೆಣ್ಣು ತನ್ನ ತಾರುಣ್ಯವನ್ನು ಸವೆಸುವಂಥಹ ಮಾನಸಿಕ ಅನುರಣನವನ್ನು ಅಭಿವ್ಯಕ್ತಿಸುತ್ತದೆ. ನಾಟಕದಲ್ಲಿ ಪಾತ್ರಗಳು ಇಂತದ್ದೇ ಎನ್ನುವ ನಿರ್ದಿಷ್ಟ ಹೆಸರಗಳನ್ನು ಇಟ್ಟುಕೊಳ್ಳದೆ ಪ್ರಮುಖವಾದ ಪಾತ್ರಗಳು ಹೆಂಗಸರೇ ಆಗಿರುವುದರಿಂದ ಪ್ರೀತಿ-ಸ್ನೇಹ-ಬಾಂಧವ್ಯಗಳು ದ್ವೇಷ ಮತ್ತು ಬದುಕಿನ ನಿಸ್ಸಾಹಾಯಕ ದುರಂತದಲ್ಲಿ ಆಯಾಸ ನೀಗಿಸಿಕೊಳ್ಳುತ್ತದೆ.

ಸಂಬಂಧಿಕನೊಂದಿಗೆ ತನ್ನನ್ನು ವಿವಾಹದ ನೆಪದಲ್ಲಿ ಒಪ್ಪಿಸಿಕೊಳ್ಳಲು ಸಿದ್ಧವಾದ ಯುವ ತರುಣಿ ಮದುಮಗಳಾಗಿ ಸಮಾಜದ ಎದುರು ನಿಲ್ತಾಳೆ. ಆದರೆ ಪ್ರಿಯಕರನ ಪ್ರೀತಯ ಛಾಯೆ ಇವಳ ಮನಸ್ಸನ್ನು ಸೆಳೆದು ಅವನೊಟ್ಟಿಗೆ ಓಡಿ ಹೋಗುವಂತಹ ಸನ್ನಿವೇಶಕ್ಕೆ ಮದುಮಗಳು ತುತ್ತಾಗುತ್ತಾಳೆ.

ಸಮಾಜದ ದೃಷ್ಟಿಯಲ್ಲಿ ಕಳಂಕಿತಳಾದರೂ ತನ್ನ ಪ್ರಿಯತಮ ಲಿಯೋನಾರ್ಡೋನನ್ನು ಮನವೊಲಿಸಲು ಪ್ರಯತ್ನಿಸುತ್ತಾಳೆ. ಇಲ್ಲಿ ಲಿಯೊನಾರ್ಡೋ ಈಗಾಗಲೇ ವಿವಾಹವಾಗಿದ್ದರೂ ಅವಳನ್ನು ಮೋಹಿಸುವುದರ ಮೂಲಕ ಮತ್ತೆ ಶೋಷಿತಳನ್ನಾಗಿ , ಸಮಾಜ ಭ್ರಷ್ಟಳನ್ನಾಗಿ ರೂಪಿಸಲು ಹವಣಿಸುತ್ತಾನೆ. ಮದುಮಗನ ತಾಯಿ ಕೌಟುಂಬಿಕ ದ್ವೇಷದ ಸೋಂಕಿನಿಂದ ತನ್ನ ಮಗನಿಂದಲೇ ಆತನೂ ಸೇರಿದಂತೆ ಇಬ್ಬರೂ ಕೊಲೆಯಾಗುತ್ತಾರೆ.

ಬದುಕಿನ ಆಸರೆಯೂ ಇಲ್ಲದೇ ಪ್ರೀತಿಯ ಕನಸುಗಳೂ ಕೈ ಸೇರದೆ ನರಳುವಂತಕ ಮದುಮಗಳಾದ ಹೆಣ್ಣಿನ ಸ್ಥಿತಿ ಒತ್ತಡದ ವಾತಾವರಣವನ್ನು ತಂದೊಡ್ಡುತ್ತದೆ. ತನ್ನೆಲ್ಲಾ ದುಃಖ ದುಮ್ಮಾನಗಳನ್ನು ತನ್ನಲ್ಲಿಯೇ ಅರಗಿಸಿಕೊಂಡು ಮತ್ತೆ ಸಮಾಜಕ್ಕೆ ತೆರಳುವ ಅವಳ ಮೂಕ ವೇದನೆಗಳು ತನ್ನ ಶೀಲವಂತಿಕೆಯನ್ನು ಪ್ರಶ್ನಿಸುವಂತೆ ಮಾಡುತ್ತದೆ. ಹೆಣ್ಣು ತನ್ನ ಸುತ್ತಲಿನ ಪ್ರತಿಬಂಧಕಗಳನ್ನು ಮೀರುವಲ್ಲಿ ಸಮಾಜ ಹೇಗೆ ಮಾ

ರಕವಾಗುತ್ತದೆ, ಕ್ರಾಂತಿಕಾರಿ ಮತ್ತು ಪ್ರತಿಭಟನಾತ್ಮಕ ಹೋರಾಟಗಳನ್ನೆ ಆಶ್ರಯಿಸಿದ ಹೆಣ್ಣು ತನ್ನ ಭ್ರಮಾತ್ಮಕ ಲೋಕದಲ್ಲಿ ಹೇಗೆ ಪರ್ಯವಸಾನವಾಗುತ್ತಾಳೆ ಎಂಬುದನ್ನು ಈ ನಾಟಕ ಆವರಿಸಿಕೊಂಡಿದೆ.

ಚೂರಿ ಸಂಸ್ಕೃತಿಗೆ ಬಲಿಯಾಗುವ ಮನಸ್ಸುಗಳು (ಮದುಮಗನ ತಾಯಿ), ಹೆಣ್ಣಿನ ಸಂವೇದನಾತ್ಮಕ ಗುಣ (ಮದುಮಗಳಾಗಿ, ತಾಯಿಯಾಗಿ), ಹೆಣ್ಣಿನ ಆಸೆ ಮತ್ತು ಕನಸುಗಳ ಭ್ರಮನಿರಸನ (ಮದುಮಗಳಾಗಿ), ಮಹಿಳೆ ಮತ್ತು ಸಮಾಜ (ರಕ್ತದ ಮದುವೆ), ಹೆಣ್ಣು ತನ್ನ ಪ್ರತಿಬಂಧಕಗಳನ್ನು ಮೀರುವಲ್ಲಿ ಸಮಾಜ ಹೇಗೆ ಮಾರಕವಾಗುತ್ತದೆ

ಎಂಬುದರ ಹಪಾಹಪಿ, ನಾಟಕ ಪ್ರಮುಖವಾಗಿ ಮಹಿಳೆಯ ಪ್ರತಿಭಟನಾತ್ಮಕ ಧ್ವನಿಗಳನ್ನು ಧ್ವನಿಸುತ್ತಲೇ ಸಮಾಜ ಮತ್ತು ಪುರುಷ ಪ್ರಧಾನತೆಯನ್ನು ಪ್ರಶ್ನಿಸುವ ಹೊಣೆಗಾರಿಕೆಯನ್ನು ಸಾದರಪಡಿಸಿಕೊಳ್ಳುತ್ತದೆ.

ನಾಟಕ ಪಾಶ್ಚಾತ್ಯ ಸಂಸ್ಕೃತಿಯಿಂದಲೇ ಪ್ರಭಾವಿತವಾಗಿದ್ದರೂ ಭಾರತೀಯ ಸಂಸ್ಕೃತಿಯನ್ನು ಮುಖಾಮುಖಿಗೊಳಿಸುವಲ್ಲಿ ಸಾಧ್ಯತೆಯನ್ನು ಪಡೆದುಕೊಂಡಿದೆ. ಪ್ರತಿಯೊಂದು ಪಾತ್ರ ಸನ್ನಿವೇಶಗಳು ಬದುಕಿನ ಸಹಜ ಸಂವೇದನೆಗಳಂತೆಯೇ ಕಂಡುಬಂದರೂ ವಿಶಿಷ್ಟ ಅನುಭವದ ಸಾಕ್ಷ್ಯ ಚಿತ್ರಣಗಳನ್ನು ಆವಾಹನೆ ಮಾಡಿಕೊಳ್ಳುತ್ತದೆ. ಮದುಮಗಳ ಮದುವೆಯ ಸಂಭ್ರಮ ನೆತ್ತರಲ್ಲಿ ಕೊಚ್ಚಿ ಹೋಗುವ ಕ್ರಿಯೆ ಸಾಂಕೇತಿಕವಾಗಿ ವಿಘಟನೆಗೊಂಡ ನಮ್ಮ ನಡುವಿನ ಸಾಮಾಜಿಕ ಮತ್ತು ಕೌಟುಂಬಿಕ ಸಂಬಂಧಗಳನ್ನು ವ್ಯಂಗ್ಯ ಮತ್ತು ವಿಡಂಬನೆಗಳ ಮೂಲಕ ದೃಷ್ಟೀಕರಿಸುತ್ತದೆ.

ಸಮಾಜ-ಸಂಬಂಧ-ವ್ಯಕ್ತಿ ಕ್ರಿಯಾತ್ಮಕ ಬೆಳವಣಿಗೆಗಳಿಂದ ನಿರ್ಬಂಧಿಸಲ್ಪಡುತ್ತಿದ್ದರೂ ಸ್ವಾರ್ಥಪರ ಕಾಳಜಿಗಳಿಂದಲೇ ಸಮಾಜವನ್ನು ಮತ್ತು ಸಾಂಸ್ಕೃತಿಕ ಪರಿಸರವನ್ನು ವಿಷಯುಕ್ತಗೊಳಿಸುವ ಕನಿಷ್ಟತಮ ಬದುಕಿನ ವಿವಿಧ ಆಯಾಮಗಳನ್ನು ಇಲ್ಲಿ ನೋಡುವ ಸಾಧ್ಯತೆಗಳಿವೆ. ನಾಟಕ ಸಂಬಂಧಗಳನ್ನು ಬೆಸೆಯುವ ಆಶಾದಾಯಕತ್ವದಿಂದಲೇ ಚೈತನ್ಯವನ್ನು ಪಡೆಯಲು ಹವಣಿಸಿದರೂ ಕೊನೆಗೆ ಆ ಸಂಬಂಧಗಳೇ ಮುಳುವಾಗಿ ಬಾಂಧವ್ಯಗಳನ್ನು ನುಂಗಿಕೊಂಡು ದ್ವೇಷ, ಅಸೂಯೆ ಮುಂತಾದ ಸಾಮಾಜಿಕ ವೈಷಮ್ಯಗಳಿಗೆ ತನ್ನನ್ನು ತೆರೆದುಕೊಳ್ಳುತ್ತದೆ.

ನಾಟಕದಲ್ಲಿ ಸಾಮಾಜಿಕ ಅಭಿಪ್ರಾಯಗಳು ವ್ಯಕ್ತಿನಿಷ್ಟವಾದವುಗಳೇ ಎನಿಸಿದರೂ ಸಮಾಜವನ್ನೊರತುಪಡಿಸಿ ಅಭಿವ್ಯಕ್ತಗೊಂಡ ನಿಶ್ಯಕ್ತ ಸನ್ನಿವೇಶಗಳನ್ನು ಕಾಣಲು ಸಾಧ್ಯವೇ ಇಲ್ಲ. ವಿವೇಕ ರೈ ಅವರು ಈ ನಾಟಕವನ್ನು ಅನುವಾದಿಸಿದ್ದರೂ ಕೂಡ ಇಲ್ಲಿ ಸಮಾಜದ ಸಮಕಾಲೀನ ಸಂಗತಿಗಳನ್ನು ಬೆಸೆಯುವ ಪ್ರಯತ್ನ ಮಾಡಿದ್ದಾರೆ. ನೂರು ವರ್ಷದ ಹಿಂದಿನ ಸ್ಪೇನ್ ದೇಶದ ಕತೆಯನ್ನು ದಾಖಲಿಸುವ ಈ ನಾಟಕವನ್ನು ವಿವೇಕ ರೈ ಅವರು ಸಮಕಾಲೀನ ಜಗತ್ತಿಗೆ ಸಂಗತಗೊಳಿಸಿ ಮುಖಾಮುಖಿಗೊಳಿಸುವ ಸಾರ್ಥಕ ಪ್ರಯತ್ನದಲ್ಲಿ ಗೆದಿದ್ದಾರೆ ಎಂತಲೇ ಹೇಳಬಹುದು. ಏಕೆಂದರೆ ನಾಟಕ ದುರಂತವನ್ನೇ ಎದುರು ನೋಡಿದರೂ ಅದು ಶತಮಾನ ಕಳೆದರೂ ಸವೆಯದ ಸಮಾಜದ ದುರಾದೃಷ್ಟತೆಯೇ ಆಗಿದೆ.

ಒಟ್ಟಾರೆಯಾಗಿ ನಾಟಕ ಪಾಶ್ಚಾತ್ಯ ನೆಲದ ನೆಲೆಯ ಸಂಸ್ಕೃತಿಯನ್ನೇ ಹೇಳುತ್ತಿದ್ದರೂ ಸಾಮಾಜಿಕ ವಲಯದ ಸಹಜ ವಾಸ್ತವ ಸಂಗತಿಗಳನ್ನೇ ಭಾರತೀಯ ಸಂಸ್ಕೃತಿಯಲ್ಲೂ ಕಾಣುವ ಅದೆಷ್ಟೋ ಮುಗ್ದ ಬಾಲೆಯರ ಸಂವೇದನಾತ್ಮಕ ಜಗತ್ತನ್ನು ನಮ್ಮೆದುರು ತೆರೆದುಕೊಳ್ಳುತ್ತದೆ. ಇಂತಹ ಬರೆವಣಿಗೆಯನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿದ ವಿವೇಕ ರೈ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತನೆಗಳು ಕರ್ನಾಟಕ ಸಂದರ್ಭದ ವಿವೇಚನೆಯೇ ಆಗಿದೆ.

ಕಾ ತಾ ಚಿಕ್ಕಣ್ಣನವರ ಬರೆಹ–ಜಾನಪದ ಪ್ರಜ್ಞೆ

ಮಾಲಿನಿ ಎನ್ ಅಭ್ಯಂಕರ್
ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು. Email : malini.abhyankar@gmail.com

"ಸಾಲಿಗೆ ಗದ್ದುಗೆ ಮಾಡಿ ಕೂರಿಸಿದ್ದ ದೇವರು; ಆ ದೇವರುಗಳ ಪೂಜೆ; ಸತ್ತಿಗೆ ದೇವರು ಕಾಳಮ್ಮ ಗ್ರಾಮದೇವತೆ ದೊಡ್ಡಯ್ಯನ ಅಡ್ಡೆ, ಕುಕ್ಕೆಯ ಒಳಗಿರುವ ದೊಡ್ಡಯ್ಯನ ಮಡದಿ ಮಾಳಮ್ಮ ದೊಡ್ಡಯ್ಯನ ಅಡೆಯೊಳಗೆ ಸರ್ಪಣಪ್ಪ–ಇವರು ಅಂಗುಲದವರ ಮನೆದೇವರು. ಹರುವಮ್ಮ–ದಾವಣಿಗುಲವರ ದೇವತೆ; ಬೆತ್ತದ ಕಡ್ಡಿಯ ಭೈರೇದೇವರು; ಗುರುನೈನೋರು...." ನಿಶಬುದದೆಡೆಗೆ (೨೦೦೭). ಹೀಗೆ ಗ್ರಾಮ ಸಂಸ್ಕೃತಿಯ ಪರಿಚಯವಿದೆ. ದೇವರು ಮತ್ತು ಧರ್ಮವನ್ನು ಹೊರತುಪಡಿಸಿ ಸಂಸ್ಕೃತಿಯ ಅಧ್ಯಯನ ಸಾಧ್ಯವಾಗದು. ಗ್ರಾಮ ಸಂಸ್ಕೃತಿಯ ಮೂಲ ಶಕ್ತಿಯು ದೇವರು– ಧರ್ಮವಾಗದೆ, ದೇವರು–ಧರ್ಮ, ಮಾನವನ ನಡವಳಿಕೆಯನ್ನು ಉದ್ಧರಿಸುವ ಮಾನದಂಡಗಳಾಗಿವೆ. ಜನಪದ ಜೀವನದಲ್ಲಿ ದೇವರನ್ನು ಹೊರತುಪಡಿಸಿ ಜೀವನ ನಿರ್ಮಾಣವಾಗುವುದಿಲ್ಲ. ಕಾ ತಾ ಚಿಕ್ಕಣ್ಣ ಅವರು ಹೇಳುವ

ಅಲ್ಲಿ ಗುರುಪಾದಗತಿಯೆಂದೆವೂ
ಗುರುವಿನ ಪಾದಕ್ಕೆ ಶರಣೆಂದವೂ //ನಿಶಬುದದೆಡೆಗೆ' (೨೦೦೭)

ಮಾತುಗಳು ಸಾಂಸ್ಕೃತಿಕ ಲೋಕದ ಒಳ ಸಂಗತಿಗಳಿಗೆ ಪ್ರವೇಶವೆನಿಸುವುದು. ಇಂಥ ಸಾಂಸ್ಕೃತಿಕ ಜನಪದ ಆವರಣದಲ್ಲಿ ಕಾ ತಾ ಚಿಕ್ಕಣ್ಣ ಅವರ ಬಾಲ್ಯ ಜೀವನ ಆರಂಭಗೊಂಡಿತು. ಕಾ ತಾ ಚಿಕ್ಕಣ್ಣ ಅವರ ಬರೆಹಗಳಲ್ಲಿ ಸಂಸ್ಕೃತಿಯ ಜನಪದ ಮಿಡಿತವಿದೆ. ಲೇಖಕರಾಗಿ ಅವರು ಪರಿಪೂರ್ಣತೆಯ ಸಿದ್ಧಿಗಾಗಿ ಪ್ರಯತ್ನಿಸುವರು. ಅವರ ವ್ಯಕ್ತಿತ್ವ ಮತ್ತು ಬದುಕಿಗೆ ಸಂಸ್ಕಾರವನ್ನು ಜನಪದ ಸಂಸ್ಕೃತಿ ನೀಡಿದೆ. ಅವರ ಬರೆಹಗಳಲ್ಲಿ ಜನಪದ ರೀತಿ, ನೀತಿ, ವಿಧಿ ವಿಧಾನಗಳ ಸಾಂಸ್ಕೃತಿಕ ಪ್ರತಿಬಿಂಬವಿದೆ. ಅವರ ಸಾಹಿತ್ಯದಲ್ಲಿ ಜನಪದ ಜೀವನ ಮೌಲ್ಯಗಳ ಭಾವನಾತ್ಮಕ ಬಂಧಗಳ ಮತ್ತು ಸಾಧನೆಗಳ ಹೂರಣವಿದೆ. ಲೇಖಕರು ಪೂಜೆಯ ವಿಧಿ–ವಿಧಾನಗಳನ್ನು ವಿವರವಾಗಿ ನೀಡುವರು. ಜನಪದರ ನಂಬಿಕೆಗಳು, ಕುಸ್ತಿ ಪಂದ್ಯ, ಗುಡ್ಡರ ಕುಣಿತ ಮತ್ತು ಇರುಳಿನ ಸಂಭ್ರಮದ ವಿವರಗಳು ಗ್ರಾಮ ಸಂಭ್ರಮದ ಜೊತೆ ಜೊತೆಗೆ ಜನಪದ ಸಂಸ್ಕೃತಿಯ ಅಧ್ಯಯನವೂ ಆಗಿರುವುದು ಮುಖ್ಯವೆನಿಸುವುದು.

ಕಾ ತ ಚಿಕ್ಕಣ್ಣನವರು ಗ್ರಾಮ್ಯ ಕಥೆಗಾರರೆಂದೇ ಪರಿಚಿತರು. ಅಪ್ಪಟ ಗ್ರಾಮ್ಯ ಪ್ರತಿಭೆಯ ಅವರು ಗ್ರಾಮ್ಯ ಭಾಷೆಯನ್ನೇ ತಮ್ಮ ಸಾಹಿತ್ಯದ ದ್ರವ್ಯವಾಗಿಸಿಕೊಂಡವರು. ಸಣ್ಣಕಥೆ, ನಾಟಕ, ಕಾದಂಬರಿ, ಲೇಖನ, ಕಾವ್ಯ, ವಿಮರ್ಶೆ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರಲ್ಲದೇ ಗ್ರಾಮ್ಯತೆಯ ಪೆರುಗನ್ನು ಅವರ ಬರಹಗಳಿಗೆ ಲೇಪಿಸಿದ್ದಾರೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳು, ವಸಾಹತುಶಾಹಿ ಧೋರಣೆಗಳೇ ಮುಂತಾದ ಪ್ರಭಾವಕ್ಕೊಳಗಾಗಿ ತಲ್ಲಣಗೊಳ್ಳುವ ಗ್ರಾಮ್ಯ ಹೃದಯಗಳ ಜೀವನವನ್ನು ಜಾನಪದೀಯ ದೃಷ್ಟಿಯಿಂದಲೇ ವಿವರಿಸುತ್ತಾರೆ. ಆಧುನೀಕತೆಗೆ ತೆರೆದುಕೊಳ್ಳುವ ಯುವ ಹೃದಯಗಳು, ನಗರದೆಡೆಗೆ ವಲಸೆ ಬಂದು, ನಗರ ಜೀವನಕ್ಕೆ ಹೊಂದಿಕೊಂಡು ಮತ್ತೊಮ್ಮೆ ತನ್ನ ಸ್ವಗ್ರಾಮಕ್ಕೆ ಭೇಟಿಯಿತ್ತಾಗ ಅಂತಹವರ ಮನಸ್ಸಿನಲ್ಲಿ

ಉಂಟಾಗುವ ಮನವರಿಕೆಗಳನ್ನು ವಿವರಿಸುವ ಅವರ ಕೃತಿಗಳು ಸಮಕಾಲೀನ ಜೀವನದ ಕೈಗನ್ನಡಿಯಂತಿವೆ. ಅದರಲ್ಲಿಯೂ ಆಧುನೀಕತೆಯ ಭರಾಟೆಗೆ ಸಿಲುಕುತ್ತಿರುವ ಗ್ರಾಮಗಳು ಒಂದೆಡೆ ತಮ್ಮ ದೇಸೀಯತೆಯನ್ನೇ ಕಳೆದುಕೊಂಡು ಅವನತಿಯತ್ತ ಸಾಗುತ್ತಿರುವುದರ ಬಗ್ಗೆ ಅವರಿಗಿರುವ ಆತಂಕವನ್ನು ಅವರ ಸಾಹಿತ್ಯದ ಎಳೆ ಎಳೆಯೂ ತೆರೆದಿಡುತ್ತದೆ.

ಜನಪದ ಶೈಲಿ ಮೌಖಿಕ ಆಕರವಾಗಿದ್ದು ಇಡೀ ಕಥೆ, ಕಾದಂಬರಿಗಳ ಉದ್ದಕ್ಕೂ ಸಂದರ್ಭೋಚಿತವಾಗಿ ಬಳಕೆಯಾಗಿದೆ. ಸಿನಿಮೀಯ ಮಾದರಿಯಲ್ಲಿ ಅವರ ಕಾದಂಬರಿಗಳಲ್ಲಿ ಜಾನಪದ ಗೀತೆಗಳು ಪೂರಕವಾಗಿ ಬಳಕೆಗೊಂಡಿವೆ. ಆದಿಪ್ರಾಸ, ಅಂತ್ಯಪ್ರಾಸಗಳನ್ನು ಒಳಗೊಂಡ ಈ ಗೀತೆಗಳು ಛಂದಸ್ಸಿನ ನಿಯಮಗಳಿಗೆ ಅನುಗುಣವಾಗಿ ರಚಿತವಾದವೇನೋ ಎನಿಸುವಂತಿವೆ.

ಗ್ರಾಮಗಳೆಂದರೆ ಅದೊಂದು ಅನಾಗರೀಕರಿಸುವ ಪ್ರದೇಶವೆಂದೂ ಕೇವಲ ಜಾತಿ, ಜಗಳ, ದ್ವೇಷ, ಅಸೂಯೆ, ಕೋಮುಗಲಭೆಗಳ ಕೊಂಪೆಗಳೆಂದೂ ಭಾವಿಸಿದ್ದೇವೆ. ಗ್ರಾಮಸ್ಥರೆಂದರೆ ಮೂಢನಂಬಿಕೆಗಳು, ಕಂದಾಚಾರಗಳನ್ನು ಅನುಸರಿಸುತ್ತಾ ಸಾವಿರಾರು ವರ್ಷಗಳಿಂದ ಹಾಗೆಯೇ ಉಳಿದುಕೊಂಡು ಬಂದಿರುವ ಮುಗ್ಧರೆಂದು ಭಾವಿಸಿದ್ದೇವೆ.

"ಗ್ರಾಮತತ್ವ ಪ್ರತಿಭೆ, ಪರಿಕಲ್ಪನೆಗಳನ್ನು ನಾವು ವಿಶ್ಲೇಷಿಸಿ ಅದರ ಸ್ವರೂಪವನ್ನು ಅರಿತಾಗ ಮಾತ್ರ ಗ್ರಾಮದ ಅಂತಃಸತ್ವದ ಅರಿವಾಗುತ್ತದೆ".[1] ಕಾ ತ ಚಿಕ್ಕಣ್ಣನವರ ಬರೆಹಗಳಲ್ಲಿ ಪೂಜೆ, ಧಾರ್ಮಿಕ ವಿಧಿ ವಿಧಾನಗಳು, ಜಾತ್ರೆ ಮುಂತಾದವುಗಳನ್ನೆಲ್ಲಾ ವಿವರಿಸುತ್ತಾರೆ. ಈ ಅಂಶಗಳನ್ನೆಲ್ಲಾ ಮೂಢನಂಬಿಕೆಗಳೆಂದೋ, ಕಟ್ಟು ಆಚಾರಗಳು ಎಂದೋ ಕಡೆಗಣಿಸುವಂತಿಲ್ಲ. ಅವರ ಕೃತಿಗಳಲ್ಲಿ ಬರುವ ಗ್ರಾಮ, ಗ್ರಾಮದಲ್ಲಿ ವಾಸಿಸುವ ವ್ಯಕ್ತಿ ನಿಸರ್ಗದೊಂದಿಗೆ ನಿರಂತರ ಸಂಪರ್ಕ ಹೊಂದಿರುತ್ತಾನೆ. ಲೇಖಕರ ಕೃತಿಗಳಲ್ಲಿ ಭೂಮಿ ತಾಯಿಯನ್ನು ನಂಬಿ ತನ್ನ ಕೃಷಿ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ, ಕುಂಬಾರಿಕೆ, ಕುರಿ ಸಾಕಾಣಿಕೆ ಈ ಎಲ್ಲಾ ಸಾಂಪ್ರದಾಯಿಕ ವೃತ್ತಿಯಲ್ಲಿ ತೊಡಗಿರುವುದನ್ನು ಗಮನಿಸಬಹುದು. ಅವರ ಬರೆಹಗಳಲ್ಲಿ ಕಂಡುಬರುವ ನಿಸರ್ಗದ ಆರಾಧನೆಯಲ್ಲಿ ಜಾನಪದ ಅಂಶಗಳನ್ನು ಗುರುತಿಸುತ್ತಾ ಸಾಗಬಹುದು.

ಕಾ ತ ಚಿಕ್ಕಣ್ಣನವರ ಕಾದಂಬರಿಗಳಾದ ಮುಂಜಾವು ಮತ್ತು ದಂಡೆ ಕಾದಂಬರಿಗಳು ಅಪ್ಪಟ ಗ್ರಾಮೀಣ ಬದುಕಿನ ಚಿತ್ರಣ ನೀಡುವಲ್ಲಿ ಯಶಸ್ವಿಯಾಗಿವೆ. ಮುಂಜಾವು ಕಾದಂಬರಿಯ ನಾಯಕ ಕಸ್ತೂರಿ ದೇಸೀ ಮತ್ತು ಗ್ರಾಮ ಸಂಸ್ಕೃತಿಯ ಪ್ರತಿನಿಧಿಯಾಗಿದ್ದಾನೆ. ಅವನು ಹಾಡುವ ಜಾನಪದ ಗೀತೆಗಳು, ಗ್ರಾಮೀಣ ಒಡಪುಗಳು, ಒಗಟುಗಳು, ಗ್ರಾಮ ಸಂಸ್ಕೃತಿಯ ಪ್ರತೀಕಗಳಾಗಿವೆ. ನಾಯಕ ಕಸ್ತೂರಿ ತಳವರ್ಗಕ್ಕೆ ಸೇರಿದ ವ್ಯಕ್ತಿಯಾಗಿದ್ದು, ಬಡತನದ ಬವಣೆಯಲ್ಲೂ ಊರಿನ ಜನರಿಗೆ ಕಡಿಮೆ ಬೆಲೆಗೆ, ಕಡಿಮೆ ದಿನಸಿಗೆ ಮಡಿಕೆ ಮಾಡಿ ಮಾರುವ ವ್ಯಕ್ತಿತ್ವದವನು. ತನ್ನ ಬಡತನ ಹಾಗೂ ನೋವಿನ ಸಂಕಷ್ಟದಲ್ಲೂ ಪ್ರಕೃತಿಯನ್ನು, ಸೌಂದರ್ಯವನ್ನು ಆರಾಧಿಸುವವನು. ಹಸಿವಿನ ನೋವಿನಲ್ಲೇ ನಗುವನ್ನು ತಂದುಕೊಳ್ಳುವವನು. ಜಾನಪದವನ್ನು, ಗ್ರಾಮಜೀವನವನ್ನು ಬಹುವಾಗಿ ಪ್ರೇಮಿಸುವವನು. ಆದರೆ ಇವನಿಗೆ ಭಿನ್ನ ವ್ಯಕ್ತಿತ್ವದವನಾಗಿ ಅವನ ಮಗ ತಿಮ್ಮಾಜಿ ಕಾಣಿಸಿಕೊಳ್ಳುತ್ತಾನೆ. ಇದಕ್ಕೆ ಕಾರಣವನ್ನು ಲೇಖಕರೇ ನೀಡುತ್ತಾರೆ. ಆಕಸ್ಮಿಕವಾಗಿ ಪಟ್ಟಣದ ಪ್ರಭಾವಕ್ಕೊಳಗಾದ ತಿಮ್ಮಾಜಿಯು ಆ ಪ್ರಭಾವವನ್ನು ಸಮರ್ಥವಾಗಿ ಬಳಸಿಕೊಳ್ಳಲು ಯತ್ನಿಸುತ್ತಾನೆ. ಆಧುನೀಕತೆಗೆ ತೆರೆದುಕೊಂಡ ತಿಮ್ಮಾಜಿ ನಾಲ್ಕು ಜನರಂತೆ ತಾವೂ ಮುಂದುವರೆಯಬೇಕೆಂದು ಬಯಸುತ್ತಾನೆ. ಆದರೆ ಇದರಿಂದ ಗ್ರಾಮದಲ್ಲಿ ಉಂಟಾಗುವ ಪರಿಸ್ಥಿತಿಯ ಚಿತ್ರಣವನ್ನು ಪ್ರಮುಖವಾಗಿ ಕಾದಂಬರಿಯು ಕಟ್ಟಿಕೊಡುತ್ತದೆ. ಕಾದಂಬರಿಯ ನಿರೂಪಣಾ ತಂತ್ರವೇ ಜಾನಪದ ಶೈಲಿಯದ್ದಾಗಿದೆ. ಲೇಖಕರು ಪ್ರಜ್ಞಾಪೂರ್ವಕವಾಗಿಯೇ ಇಂತಹ ಶೈಲಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಮೂಲಕಥೆಗೆ ಹೊಂದಿಕೊಂಡಂತೆ ಉಪಕಥೆಗಳು, ದೃಷ್ಟಾಂತಗಳು, ಹಾಡುಗಳು, ಒಗಟುಗಳು, ಗಾದೆಗಳು ಇವೆಲ್ಲವನ್ನೂ ಸಮರ್ಥವಾಗಿ ಬಳಸಿಕೊಂಡಿದ್ದಾರೆ.

'ಮುಂಜಾವು' ಕಾದಂಬರಿಯ ನಾಯಕ ಕಸ್ತೂರಿಯ ನಾಲಿಗೆಯಲ್ಲಿ ಅಸಂಖ್ಯ ಸಂಖ್ಯೆಯಲ್ಲಿ ಜಾನಪದ ಗೀತೆಗಳಿವೆ. ಅವನ ದೇಹವೇ ಜನಪದ ಕಥೆಗಳನ್ನು ತುಂಬಿಕೊಂಡ ಕಣಜದಂತಿದೆ. ಹಬ್ಬ, ಹುಣ್ಣಿಮೆ, ಜಾತ್ರೆ, ಉತ್ಸವಗಳಲ್ಲಿ ಮಾತ್ರವೇ ಅಲ್ಲ. ರಾಗಿ ಬೀಸುವಾಗ, ಭತ್ತ ಕುಟ್ಟುವಾಗಲೂ ಅವನ ಜಾನಪದ ಪ್ರತಿಭೆಯನ್ನು ನಾವಿಲ್ಲಿ ಗುರುತಿಸಬಹುದು.

ಎಚ್. ದಂಡಪ್ಪನವರು ಗುರುತಿಸಿರುವಂತೆ ಕಸ್ತೂರಿಗೆ ಹಣದಾಸೆ ಇಲ್ಲ. ಗ್ರಾಮದಲ್ಲಿಯೇ ಉಳಿದು ತನ್ನ ಕುಂಬಾರಿಕೆ ವೃತಿಯನ್ನು ನಡೆಸಿಕೊಂಡು ಜೀವನ ಸಾಗಿಸಬೇಕೆಂಬ ಮನಸ್ಥಿತಿಯವನು. ಗ್ರಾಮಜೀವನದ ಆಚಾರ–ನಂಬಿಕೆಗಳೊಂದಿಗೆ ಬದುಕಬೇಕೆಂದು ಆಶಿಸುತ್ತಾನೆ. ಜಾನಪದ ಜಗತ್ತಿನಲ್ಲಿ ಮಾನವ ಸಂಬಂಧಗಳೇ ಮುಖ್ಯವಾಗುತ್ತದೆ. ಆದರೆ ಹಣಪ್ರಧಾನವಾದ ಜಗತ್ತಿನಲ್ಲಿ ಸ್ವಾರ್ಥ, ಸಣ್ಣತನ, ಜಗಳ, ಮನಸ್ತಾಪ, ದ್ವೇಷ, ಅಸೂಯೆಗಳೆಲ್ಲವೂ ಕಾಣಿಸಿಗುತ್ತವೆ. ಕಸ್ತೂರಿಯ ಮಗನಾದ ತಿಮ್ಮಾಜಿಯು ಆಕಸ್ಮಿಕವಾಗಿ ನಗರ ಜೀವನಕ್ಕೆ ಸಿಲುಕುತ್ತಾನೆ. ಅವನು ಕುಂಬಾರಿಕೆ ವೃತ್ತಿಯನ್ನು ವ್ಯಾಪಾರೀ ದೃಷ್ಟಿಯಲ್ಲಿ ಕಾಣುತ್ತಾನೆ. ಜಾನಪದ ಎಂಬುದು ಗ್ರಾಮ್ಯಗಳಲ್ಲಿ ಹಾಸುಹೊಕ್ಕಾಗಿದ್ದು, ಇಂದಿನ ನಗರಗಳ ಯಾಂತ್ರಿಕ ಬದುಕಿಗೆ ಸಿಲುಕಿ ತತ್ತರಗೊಳ್ಳುತ್ತಿರುವುದು ಈ ಕಾದಂಬರಿಯ ಮೂಲಕ ನಮ್ಮ ಗಮನಕ್ಕೆ ಬರುತ್ತದೆ.

ಅವರ ಬರಹಕ್ಕೆ ಬಳಕೆಯಾದ ಭಾಷೆಯಲ್ಲಿಯೇ ಜಾನಪದೀಯ ಅಂಶಗಳನ್ನು ಗುರುತಿಸಬಹುದು. ಒಂದು ಸಾಹಿತ್ಯವೆಂಬುದು ಪ್ರಮುಖವಾಗುವುದು ಆ ಲೇಖಕ ಬಳಸಿಕೊಳ್ಳುವ ಪದ ಸಂಪತ್ತುಗಳಿಂದ. ಅದ್ಭುತ ಪದಸಂಪತ್ತುಗಳೇ ಆ ಕೃತಿಯ ಶಕ್ತಿಯಾಗಿರುತ್ತವೆ. ಕಾ ತ ಚಿಕ್ಕಣ್ಣನವರು ಆಡುನುಡಿಯನ್ನೇ ಅಂದರೆ ಮೈಸೂರು ಜಿಲ್ಲೆಯ ಗ್ರಾಮವೊಂದರಲ್ಲಿ ಬಳಸುವ ಗ್ರಾಮ್ಯ ಕನ್ನಡವನ್ನೇ ತಮ್ಮ ಕೃತಿಯ ನಿರೂಪಣೆಗೆ ಬಳಸಿಕೊಂಡಿದ್ದಾರೆ. ಈ ಮೂಲಕ ಒಂದು ವರ್ಗದ ಅಥವಾ ಒಂದು ಪರಿಸರದ ಬದುಕಿನ ವಿವರಗಳನ್ನು ಕಟ್ಟಿಕೊಡುವಂತಹ ಅವರ ಪ್ರಯತ್ನ ಹರಸಾಹಸವೇ ಸರಿ.

ಅವರ ಸಾಹಿತ್ಯದ ಪ್ರಮುಖ ತಂತ್ರವೇ ಆಡುನುಡಿಯಾಗಿದ್ದು, ಜನಪದ ಗೀತೆ, ಗಾದೆಗಳು, ಒಗಟುಗಳು, ನುಡಿಗಟ್ಟುಗಳು, ಬೈಗುಳಗಳು, ಸ್ಥಳನಾಮ, ವ್ಯಕ್ತಿನಾಮಗಳು, ಪ್ರಾಣಿಪಕ್ಷಿಗಳ ಹೆಸರುಗಳು, ನಿಸರ್ಗ ವರ್ಣನೆಗಳು ಅವರ ಸಾಹಿತ್ಯದಲ್ಲಿ

ಸಹಜವಾಗಿ ಮೂಡಿ ಬಂದಿವೆ.

ಜಡೆಮುನಿಗುಡ್ಡ, ಕಲ್ಲಾರು ಹಳ್ಳ, ಬೋರೆ ಮ್ಯಾಲೆ ಬಳೆಸರ ಬಿದ್ದವೆ, ನಾಕಕುಸರ ಕಲಿಯೋ, ಬೋರೆ, ಬಂಕ, ಮುತುಕದ ಮರ ಹೀಗಿವೆ ಮುಂಜಾವು ಕಾದಂಬರಿಯ ಉಪಶೀರ್ಷಿಕೆಗಳು.

ಸಾಲಿಗೆ ಗದ್ದುಗೆ ಮಾಡಿ ಕೂರಿಸಿದ್ದ ದೇವರು ; ಆ ದೇವರುಗಳು ಪೂಜೆ ; ಸತ್ತಿಗೆ ದೇವರು ; ಕಾಳಮ್ಮ ಗ್ರಾಮದೇವತೆ ; ದೊಡ್ಡಯ್ಯನ ಅಡ್ಡೆ; ಕುಕ್ಕೆಯ ಒಳಗಿರುವ ದೊಡ್ಡಯ್ಯನ ಮಡದಿ ಮಾಳಮ್ಮ; ದೊಡ್ಡಯ್ಯನ ಅಡ್ಡೆಯೊಳಗೆ ಸರ್ಪಣಪ್ಪ – ಇವರು ಅಂಗುಲದವರ ಮನೆದೇವರು; ಹರವಮ್ಮ – ದಾವಣಿಗುಲದವರ ದೇವತೆ; ಬೆತ್ತದ ಕಡ್ಡಿಯ ಭೈರೇದೇವರು; ಗುರುನೈನೋರು ..... ಹೀಗೆ ಗ್ರಾಮ ಸಂಸ್ಕೃತಿಯ ಪರಿಚಯವಿದೆ. ಜನಪದ ಜೀವನದಲ್ಲಿ ದೇವರನ್ನು ಹೊರತುಪಡಿಸಿ ಜೀವನ ನಿರ್ಮಾಣವಾಗುವುದಿಲ್ಲ. ಕಾ ತ ಚಿಕ್ಕಣ್ಣನವರು ಹೇಳುವ

"ಅಲ್ಲಿ ಗುರುಪಾದ ಗತಿಯೆಂದೆವೊ
ಗುರುವಿನ ಪಾದಕ್ಕೆ ಶರಣೆಂದೆವೊ"[2]

ಮಾತುಗಳು ಸಾಂಸ್ಕೃತಿಕ ಲೋಕದ ಒಳಸಂಗತಿಗಳಿಗೆ ಪ್ರವೇಶವೆನಿಸುವುದು. ಲೇಖಕರಾಗಿ ಕಾ ತ ಚಿಕ್ಕಣ್ಣ ಅವರ ಬರೆಹದಲ್ಲಿ ಜನಪದ ರೀತಿ, ನೀತಿ, ವಿಧಿ–ವಿಧಾನಗಳ ಸಾಂಸ್ಕೃತಿಕ ಪ್ರತಿಬಿಂಬವಿದೆ. ಅವರ ಸಾಹಿತ್ಯದಲ್ಲಿ ಜನಪದ ಜೀವನ ಮೌಲ್ಯಗಳ ಭಾವನಾತ್ಮಕ ಬಂಧಗಳ ಮತ್ತು ಸಾಧನೆಗಳ ಹೂರಣವಿದೆ. ಲೇಖಕರು ಪೂಜೆಯ ವಿಧಿ ವಿಧಾನಗಳನ್ನು ವಿವರವಾಗಿ ನೀಡುವರು. 'ದೇವರ ಗದ್ದುಗೆಯ ಮಂದಾರ ಕೊಂಡದ' ವರ್ಣನೆ, ಜನಪದ ನಂಬಿಕೆಗಳು, ಕುಸ್ತಿ ಪಂದ್ಯ, ಗುಡ್ಡರ ಕುಣಿತ ಮತ್ತು ಇರುಳಿನ ಸಂಭ್ರಮದ ವಿವರಗಳು ಗ್ರಾಮ ಸಂಭ್ರಮದ ಜೊತೆ ಜೊತೆಗೆ ಜನಪದ ಸಂಸ್ಕೃತಿಯ ಅಧ್ಯಯನವೂ ಆಗಿರುವುದು ಮುಖ್ಯವೆನಿಸಿದೆ. ಕ್ಯಾತನಹಳ್ಳಿಯ ಗುರುನೈನೋರು ಧಾರ್ಮಿಕ ಪ್ರತಿನಿಧಿಯಾಗಿ ಜನಪದ ಸಮೂಹಕ್ಕೆ ಮುಖ್ಯರಾಗುವರು. ಗುರುನೈನೋರು 'ದೀಕ್ಷಾ ಇಕ್ಕದೆ ದೇವರ ಅಡ್ಡೆ' ಎತ್ತುವಂತಿಲ್ಲ ಎನ್ನುವುದು ಪರಂಪರೆ ಮತ್ತು ಜನಪದ ಸಂಸ್ಕೃತಿಯ ನೇಮವಾಗಿದೆ. 'ಕೆರೆಗೆ ದೇವರು ಹೊಂಡಿಸೋ' ದಿನದ ಸಂಭ್ರಮದ ವಿವರಣೆ ಬಾಲ್ಯದ ದಿನಗಳ ಅನುಭವವನ್ನು ಸರತಸವನ್ನು ವಿವರಿಸುವುದು. ಕಥನಶೈಲಿಯ ಸಾಂಸ್ಕೃತಿಕ ಸೃತಿ ಚಿತ್ರವಾದ 'ನಿಶಬುದದೆಡೆಗೆ' ಕೃತಿಯನ್ನು ಲೇಖಕರಾದ ಕಾ ತ ಚಿಕ್ಕಣ್ಣನವರು ರಚಿಸಿದ್ದು ಇದರಲ್ಲಿ ಮುಖ್ಯವಾಗಿ ಸಾಂಸ್ಕೃತಿಕ ಮತ್ತು ಜಾನಪದ ಅಂಶಗಳು ದಾಖಲಾಗಿವೆ.

"ಇವತ್ತು ಊರು, ಹರೆಯ ತುಂಬಿದ ಮನಸಿನ ಪೂರ್ತಿ ಕನಸುಗಳನ್ನು ಹೊತ್ತುಕೊಂಡ ನವಮದುವಣಗಿತ್ತಿಯಂಗೆ ಕಂಗೊಳಿಸುತ್ತಿತ್ತು. ಮಳೆ ನಿಂತ ಮೇಲೆ ತೊಳಕೊಂಡು ಪಳಗುಡುವ ಹಸಿರು ಹಿಂಡು ಮರಗಿಡಗಳೊಳಗಿನ ಸೊಬಗು ಸೂಸುತ್ತಿತ್ತು. ದಿಬ್ಬಣ ಬಂದು ಸೇರಿದ ಮದುವೆ ಹಟ್ಟಿಯಂಗೆ ನಾನಾ ಬಗೆಯ ಸಡಗರ ಸದ್ದು ಸಂಭ್ರಮಗಳ ಮೇಳ ಸಾಗಿತ್ತು"[3] ಎಂಬಲ್ಲಿನ ಕಾವ್ಯ ಪ್ರಜ್ಞೆ ಸಾಂಸ್ಕೃತಿಕ ವಿವರಗಳು ಮತ್ತು ಅಭಿವ್ಯಕ್ತಿ ಸಾಹಿತ್ಯಕ ನಿಲುವಿನವಾಗಿವೆ. ಊರನ್ನು ನವಮದುವಣಗಿತ್ತಿಗೆ, ಮೆರವಣಿಗೆ ಸಂಭ್ರಮವನ್ನು, ಮದುವೆ ದಿಬ್ಬಣಕ್ಕೆ ಹೋಲಿಸುವ ಕಾ ತ ಚಿಕ್ಕಣ್ಣನವರ ಸೌಂದರ್ಯಪ್ರಜ್ಞೆ ಔಚಿತ್ಯಪೂರ್ಣವಾಗಿದೆ.

ಮೆರವಣಿಗೆಯಲ್ಲಿ ಮೂರು ಅಡ್ಡೆಗಳು, ಒಂದು ಸತ್ತಿಗೆ, ಮೂರು ಛತ್ರಿ ಮತ್ತು ಎರಡು ಕುಕ್ಕೆ ದೇವರುಗಳಿದ್ದವು. ಇಲ್ಲಿ ಮೆರವಣಿಗೆಯನ್ನು ನೋಡಿ ಸಂಭ್ರಮಿಸುವ ಜನರು, ಬಳೆಗಾರ ಶೀಗವಾಳು ರಾಜಶೆಟ್ಟಿ, ಶೀಗವಾಳು, ಗಾಣಿಗಶೆಟ್ರು, ಎಣ್ಣೆ ವ್ಯಾಪಾರ, ಅಪ್ಪಟ ಹುಚ್ಚೆಳ್ಳೆಣ್ಣೆಯನ್ನು ಅನ್ನ ಮತ್ತು ರೊಟ್ಟಿಗೆ ತುಪ್ಪದಂತೆ ಹಾಕಿಸಿಕೊಂಡು ಊಟ ಮಾಡುವ ರೂಢಿ ಮುಂತಾದ ಗ್ರಾಮೀಣ ವಿವರಗಳನ್ನು ನೀಡುವರು.

ಚಿಕ್ಕಣ್ಣ ಅವರ ಬಾಲ್ಯವನ್ನು ಗ್ರಾಮಸಂಸ್ಕೃತಿ ರೂಪಿಸಿದೆ. ಗ್ರಾಮದ ಜನರ ಆಚಾರ– ವಿಚಾರ, ಜೀವನ, ನಂಬಿಕೆಗಳು, ಸಂಪ್ರದಾಯ, ಹಬ್ಬ, ನಾಟಕ ಮುಂತಾದ ಅಂಶಗಳ ಒಟ್ಟು ಮೊತ್ತವೇ ಸಂಸ್ಕೃತಿಯಾಗಿದೆ. ಈ ಸಂಸ್ಕೃತಿಯೇ ಕಾ ತ ಚಿಕ್ಕಣ್ಣನವರ ಜೀವನ ಮತ್ತು ವ್ಯಕ್ತಿತ್ವವನ್ನು ರೂಪಿಸಿದೆ. ಇಲ್ಲಿ ಸಂಸ್ಕೃತಿ ಚಿಕ್ಕಣ್ಣ ಅವರನ್ನು ಮಾತ್ರವಲ್ಲದೇ ಗ್ರಾಮವೊಂದರ ನಿಲುವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಗ್ರಾಮದ ರೂಢಿ–ಸಂಪ್ರದಾಯಗಳು, ನಂಬಿಕೆ, ಆಚರಣೆಗಳು, ಹಬ್ಬ ಹರಿದಿನಗಳು, ಮೂಢನಂಬಿಕೆಗಳು– ನಂಬಿಕೆಗಳು ಇತ್ಯಾದಿ ಜಾನಪದೀಯ ಅಂಶಗಳನ್ನು ಅವರ ಕೃತಿಗಳು ಒಳಗೊಂಡಿವೆ.

"ನನ್ನಣ್ಣ ಬಂದಾರೆ ಬರಿಗೈಲಿ ಬರನಾರ
ದೊರಿಮೊಗ ತಂದಾನು ತೌರ ಸಿರಿತಂಪು ॥ದೊರಿಮೊಗಾ॥
ಬಂಡಿಮೇಲೆ ಬರೋ ನನ್ನಣ್ಣ ಬರನಾರ
ಬರಿಬಂಡಿ ಹೊಡಕೊಂಡು ತುಂಬಿ ತಂದಾನು ತೌರ
ಸಿರಿತಂಪು ॥
ಬರೋ ನನ್ನ ಅಣ್ಣಾನ ಬ್ಯಾಗೇಯ ಹೋಗೀಸು
ದಾರೀಯಾ ಆಯಾಸ ಆರಿಸು ಎಲೆ ದೇವ ....."[4]

ಇಂತಹ ಬಹಳಷ್ಟು ಜನಪದ ಗೀತೆಗಳನ್ನು ಕಾ ತ ಚಿಕ್ಕಣ್ಣನವರು ತಮ್ಮ ಕೃತಿಗಳಲ್ಲಿ ಬಳಸಿಕೊಂಡಿದ್ದಾರೆ. ಇಲ್ಲಿ ಬಂದಿರುವ ಸಾಂದರ್ಭಿಕ ಜನಪದ ಗೀತೆಯು ತೌರುಮನೆಗೆ ಅಣ್ಣ ಬರುವಾಗ ಬರಿಗೈಲಿ ಬರುವುದಿಲ್ಲ. ತನ್ನ ತೌರುಮನೆಯಿಂದ ಕಾಳು, ಕಡ್ಡಿ, ಆಹಾರಪದಾರ್ಥಗಳು, ತುಪ್ಪ, ಮೊಸರು ಮುಂತಾದವುಗಳನ್ನು ತಂದೇ ತರುತ್ತಾನೆ. ತವರು ಮನೆಯಿಂದ ಅಣ್ಣ ಏನೇ ತಂದರೂ ಅದು ಸಂಪತ್ತು. ಅದರಿಂದ ಮನ ತಣಿಯುತ್ತದೆ ಎಂಬುದನ್ನು ಸೂಚಿಸುವ ರಾಗಿ ಬೀಸುವ ಹಾಡು ಅಣ್ಣ–ತಂಗಿ–ತವರು ಈ ಸಂಬಂಧಗಳ ಪ್ರತೀಕಗಳಾಗಿವೆ. ಪ್ರೀತಿ, ಪ್ರೇಮ, ವಾತ್ಸಲ್ಯ ನಂಬಿಕೆಯ ಫಲವಾಗಿ ಅಣ್ಣ ತಂಗಿಯರ ಸಂಬಂಧವನ್ನು ಕುರಿತು ಕಟ್ಟಿದ ಪದವಾಗಿದೆ. ಇಂತಹ ಜನಪದಗೀತೆಗಳನ್ನು ಆಗಾಗ್ಗೆ ನಾಲಿಗೆಗೆ ತಂದುಕೊಳ್ಳುವ ಶ್ರಮಿಕ ಕಾರ್ಮಿಕ ವರ್ಗ ಅಥವಾ ರೈತ ಕೂಲಿಗಳ ದಣಿವನ್ನು ನೀಗಿಸಿಕೊಳ್ಳಲು ಈ ಗೀತೆಗಳು ಸಹಕರಿಸುತ್ತಿದ್ದವು. ಅಂತೆಯೇ ಜಾನಪದಗೀತೆಯು ಕೇಳಿಬಂದೊಡನೆಯೇ ಮುಂಜಾವು ಕಾದಂಬರಿಯ ನಾಯಕ ಕಸ್ತೂರಿಯ ದಣಿವೂ ಆರುತ್ತದೆ. ಆದರೆ ಇಂದು ಆಧುನಿಕ ಮಾಧ್ಯಮಗಳು ಜನಪದಗೀತೆಗಳ ಸ್ಥಾನವನ್ನೆಲ್ಲಾ ಆಕ್ರಮಿಸಿಕೊಂಡಿವೆ. ಇದರಿಂದ ಜನಪದ ಗೀತೆಗಳು, ಆಟಗಳು ಕಣ್ಮರೆಯಾಗುತ್ತಿವೆ. ಕಾ ತ ಚಿಕ್ಕಣ್ಣನವರ ಸಾಹಿತ್ಯದಲ್ಲಿ ಜನಪದ ಗೀತೆಗಳು ಸೃತಿಗೆ ಬರುತ್ತವೆ. ಮರೆತು

ಹೋಗುತ್ತಿರುವ ಜಾನಪದವನ್ನು ಮೆಲುಕು ಹಾಕುವಲ್ಲಿ ಅವರ ಸಾಹಿತ್ಯ ನೆರವು ನೀಡುತ್ತದೆ.

"ಬೋರೆಯ ಮ್ಯಾಲೆ ಬಳೆಸರ ಬಿದ್ದಾವೆ
ಬಾರತ್ತೆ ಮಗನೆ ಹುಡುಕಾನೆ।
ಬಾರತ್ತೆ ಮಗನೆ ಹುಡುಕಾನೆ ತಡಕಾನೆ
ಸಂಜೆ ಆದತಾವು ತಳುಗಾನೆ"॥[5]

ಈ ರೀತಿಯಾಗಿ ಬಳಸಿಕೊಂಡಿರುವ ಜಾನಪದ ಗೀತೆಗಳು ತಳಸಮುದಾಯಗಳ ಬದುಕಿನ ಭಾಗವಾಗಿದ್ದು, ತಮ್ಮ ನೋವು–ನಲಿವುಗಳಿಗೆ ಪೂರಕವಾಗಿ ಜನಪದರು ಇಂತಹಾ ಗೀತೆಗಳನ್ನು ಹಾಡಿಕೊಳ್ಳುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ಈ ಗೀತೆಗಳಲ್ಲಿ ಕೇವಲ ಭಕ್ತಿ, ಪ್ರೇಮ ಮುಂತಾದ ಅಂಶಗಳು ಮಾತ್ರವೇ ಅಲ್ಲದೇ ಇವು, ಹಾಸ್ಯ, ನೋವು, ನಲಿವುಗಳು, ಶ್ರಮವಹಿಸುವ ಸಂದರ್ಭಗಳು ಮುಂತಾದ ದೈನಂದಿನ ವ್ಯವಹಾರಗಳ ನಡೆನುಡಿಗಳಾಗಿರುತ್ತಿದ್ದವು.

ಕಾ ತ ಚಿಕ್ಕಣ್ಣನವರ ಕೃತಿಗಳು "ಗಾಂಧೀಜಿಯ ಗ್ರಾಮ ಸ್ವರಾಜ್ಯದ ಸ್ವರೂಪವನ್ನು ಸಮಾಜಶಾಸ್ತ್ರಜ್ಞರಾದ ಎಂ.ಎನ್. ಶ್ರೀನಿವಾಸರ ದಿ ರಿಮೆಂಬರ್ಡ್ ವಿಲೇಜ್‌ನ ವಸ್ತುನಿಷ್ಠ ನೆನಪುಗಳನ್ನು ಆರ್.ಕೆ. ನಾರಾಯಣರ ಮಾಲ್ಗುಡಿ ಡೇಸ್‌ನ ಹಳ್ಳಿಯ ತತ್ವಪ್ರಜ್ಞೆಯನ್ನು, ಸತ್ಯಜಿತ್ ರೇ ಅವರ ಪಥೇರ್ ಪಾಂಚಾಲಿಯಲ್ಲಿನ ಗ್ರಾಮಭಾರತದ ಸತ್ಯವಾದ ಚಿತ್ರಣವನ್ನು ಒಳಗೊಂಡು ರಚನೆಯಾಗಿದೆ. ಇದರಿಂದಾಗಿ ಈ ಕೃತಿಯು ಏಕಕಾಲಕ್ಕೆ ಶಾಸ್ತ್ರವೂ ಆಗುತ್ತದೆ, ಕಲೆಯೂ ಆಗುತ್ತದೆ. ಈ ಎರಡರ ಸಂಲಗ್ನತೆಯಲ್ಲಿ ಈ ಕೃತಿ ರೂಪ ಪಡೆದಿರುವುದನ್ನು ಕಾಣಬಹುದು"[6] ಎಂಬ ಎಚ್. ದಂಡಪ್ಪನವರ ಮಾತು ಇಲ್ಲಿ ಮನನೀಯ.

ಒಟ್ಟಾರೆ ಕಾ ತ ಚಿಕ್ಕಣ್ಣನವರ ಬರೆಹಗಳಲ್ಲಿ ಎಲ್ಲೆಡೆಯೂ ಗ್ರಾಮ್ಯತೆ ಮತ್ತು ಜಾನಪದ ಅಂಶಗಳನ್ನು ಗುರುತಿಸುತ್ತಾ ಸಾಗಬಹುದು. ಕೃತಿಗಳ ಶೀರ್ಷಿಕೆಗಳು, ಉಪಶೀರ್ಷಿಕೆಗಳು, ಹೆಸರುಗಳು ಎಲ್ಲವೂ ಜಾನಪದ ಅಂಶಗಳಿಂದಲೇ ಪ್ರೇರಿತವಾಗಿರುವುದನ್ನು ಕಾಣಬಹುದು. ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದ ಲೇಖಕ ಕಾ ತಾ ಚಿಕ್ಕಣ್ಣನವರು ತಮಟೆ, ಅಡ್ಡೆ, ದೀವಟಿಗೆ, ಗುರುನೈನೋರು, ಸಾಲಡ್ಡೆ, ಕೊಂಡ, ಗುಡ್ಡ, ಬಸವನ ಬಿಡೋದು, ಮೆರೆತ, ಕುರಿ ಕರೆದು ಇಂತಹಾ ಶೀರ್ಷಿಕೆಗಳನ್ನು ನೀಡಿ ತಮ್ಮ ಊರಿನ ಉತ್ಸವವನ್ನು ಮನದುಂಬಿ ವರ್ಣಿಸುತ್ತಾರೆ. ಸಂದರ್ಭೋಚಿತವಾಗಿ ಜಾನಪದ ಗೀತೆಗಳು, ಒಗಟುಗಳು, ಹಾಡುಗಳು, ಬಯಲಾಟಗಳು, ಜಾನಪದ ನೃತ್ಯಗಳು, ಗ್ರಾಮದೇವತೆಗಳ ವಿವರಗಳೆಲ್ಲವನ್ನೂ ನೀಡಿರುವುದರಿಂದಲೇ ಕಾ ತ ಚಿಕ್ಕಣ್ಣನವರ ಜಾನಪದ ಪ್ರಜ್ಞೆ ಮತ್ತಷ್ಟು ಜಾಗೃತವಾಗಿರುವುದನ್ನು ಕಾಣಬಹುದು.

ಅಡಿಟಿಪ್ಪಣಿಗಳು

1. ಕಾ ತ ಚಿಕ್ಕಣ್ಣ, ನಿಶಬುದದೆಡೆಗೆ, ಎಚ್. ದಂಡಪ್ಪ – ಗ್ರಾಮೀಣ ತತ್ವ ಪ್ರತಿಭೆಯ ಅನಾವರಣ, ಸುಮುಖ ಪ್ರಕಾಶನ, ಬೆಂಗಳೂರು, 2007, ಪುಟ 5.
2. ಕಾ ತ ಚಿಕ್ಕಣ್ಣ, ನಿಶಬುದದೆಡೆಗೆ, ಪಾಸಲೆಗೆ ಪಾದವೂರುತ ....., ಪುಟ. 27.
3. ಕಾ ತ ಚಿಕ್ಕಣ್ಣ, ನಿಶಬುದೆಡೆಗೆ, ಹಾಸರಗಳಗುಂಟೆ, ಪುಟ. 134.
4. ಕಾ ತ ಚಿಕ್ಕಣ್ಣ, ಮುಂಜಾವು, ಕೊಪ್ಪಲು ಪ್ರಕಾಶನ, ಬೆಂಗಳೂರು, 1989, ಪುಟ. 12.
5. ಅದೇ, ಪುಟ. 109.
6. ಕಾ ತ ಚಿಕ್ಕಣ್ಣ, ನಿಶಬುದದೆಡೆಗೆ, ಎಚ್. ದಂಡಪ್ಪ – ಗ್ರಾಮೀಣ ತತ್ವ ಪ್ರತಿಭೆಯ ಅನಾವರಣ, ಸುಮುಖ ಪ್ರಕಾಶನ, ಬೆಂಗಳೂರು, 2007,

ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರ ಜಾಹೀರಾತು ಕುರಿತು – ಒಂದು ಅಧ್ಯಯನ

* ನೀಲಕಂಠ ಸ್ವಾಮಿ, ** ವೆಂಕಟೇಶ ಕಡೂನ
* ಸಂಶೋಧನಾ ವಿದ್ಯಾರ್ಥಿ, ** ಅತಿಥಿ ಉಪನ್ಯಾಸಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಮಾಧ್ಯಮ ಅಧ್ಯಯನ ಸಾಂಸ್ಕೃತಿಕ ಅಧ್ಯಯನದೊಂದಿಗೆ ನಿಕಟ ಸಂಬಂಧ ಹೊಂದಿದೆ. ಜಾಗತಿಕ ಮಹಾಯುದ್ಧಾನಂತರದ ಕೈಗಾರೀಕರಣ, ಬಂಡವಾಳಶಾಹಿ, ಸಾಮಾಜಿಕ ರಚನೆ, ಸಂವಹನ ಪ್ರತಿನಿಧೀಕರಣ ಪರಿಣಾಮದಿಂದ ಮಾಧ್ಯಮ ಅಧ್ಯಯನ ಬೆಳಕಿಗೆ ಬಂದಿದ್ದು, ಸಾಂಪ್ರದಾಯಿಕ ಅಧ್ಯಯನ ಶಿಸ್ತುಗಳಾದ ಸಾಹಿತ್ಯ ಅಧ್ಯಯನ ಮತ್ತು ಇತಿಹಾಸ ಅಧ್ಯಯನಗಳಿಂತ ಭಿನ್ನವಾಗಿದೆ.

ಜನಪ್ರಿಯ ಸಂಸ್ಕೃತಿಯ ಭಾಗವಾದ ಜಾಹೀರಾತುಗಳಗನ್ನು ಮಾಧ್ಯಮದ ಮೂಲಕ ಬಹುಬೇಗ ಸಮಾಜದ ಮೇಲೆ ಪರಿಣಾಮ ಬೀರುತ್ತವೆ. ಇವು ಒಂದು ರೀತಿ ಸಮಾಜದ ಕನ್ನಡಿಗಳಾಗಿಯೂ ಕೆಲಸ ಮಾಡುತ್ತವೆ. ಆದ್ದರಿಂದ ಸಮಾಜದಲ್ಲಿ ಮೊದಲಿನಿಂದಲೂ ಹಲವು ಶ್ರೇಣೀಕರಣಗಳಿದ್ದು ಅದರಲ್ಲಿ ಒಂದಾದ ಲಿಂಗ ಶ್ರೇಣೀಕರಣವನ್ನು ಜಾಹೀರಾತು ಯಾವ ರೀತಿ ಪ್ರತಿನಿಧಿಸುತ್ತವೆ ಎಂಬುದನ್ನು ತಿಳಿಯುವ ಪ್ರಯತ್ನ ಈ ಅಧ್ಯಯನದ್ದಾಗಿದೆ.

ಸುಮಾರು 250 ವರ್ಷಗಳ ಹಿಂದೆ ನಾವು ಇಂದು ಕಾಣವ ರೀತಿಯಲ್ಲಿ ಜಾಹೀರಾತು ಬೆಳವಣಿಗೆಯನ್ನು ಕಂಡಿರಲಿಲ್ಲ. ಜಾಹೀರಾತನ್ನು ವಸ್ತು ಮತ್ತು ಸೇವೆಯ ಮಾರಾಟಕ್ಕಾಗಿ ಮೊದಲು ಬಳಿಸಿದ ಜನರೆಂದರೆ ಪುರಾತನ ಗ್ರೀಕರು ಮತ್ತು ರೋಮನ್ನರು ಗುರುತಿಸಬಹುದು. ಮುದ್ರಣ ಬಳಕೆಗೆ ಬರುವ ಮೊದಲು ಮಾರಾಟಕ್ಕಿರುವ ವಸ್ತುವಿನ ವಿಷಯವನ್ನು ಡಂಗುರ ಸಾರುವ ಮೂಲಕ ಅಥವಾ ಸಂಕೇತಗಳ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುತ್ತಿತ್ತು.

ಆಧುನಿಕ ಜಾಹೀರಾತಿನ ಪ್ರತಿಪಾದಕರು ಅಮೆರಿಕನ್ನರಾದರೂ ಅವರ ಮೂಲ ಇರುವುದು ಇಂಗ್ಲೆಂಡಿನಲ್ಲಿ. 1920ರ ದಶಕದ ಕೊನೆಗೆ

ಅಮೆರಿಕಾದಲ್ಲಿ ಜಾಹೀರಾತು ಒಂದು ಬೃಹತ್ ಉದ್ಯಮವಾಗಿ ಬೆಳೆಯಿತು. ಅನಂತರ ಹೆಚ್ಚಿನ ಆಟೋಮೊಬೈಲ್‌ಗಳು ಹಾಗು ಪಟ್ಟಣದ ಆಹಾರ ಉತ್ಪನ್ನಗಳು ಬೃಹತ್ ಪ್ರಮಾಣದಲ್ಲಿ ಜಾಹೀರಾತಿನಲ್ಲಿ ಕಾಣಿಸಿದವು. ಇದು ಜಾಹೀರಾತು ಸಂಸ್ಥೆ ಉದ್ಯಮದ ವಿಸ್ತರಣೆಗೆ ಕಾರಣವಾಯಿತು. ಅದರಲ್ಲಿ ಜಾಹೀರಾತುದಾರರಿಗೆ ವಿಭಿನ್ನ ಸೇವೆಗಳನ್ನು ಒದಗಿಸಲು ಪತ್ರಿ ಬರಹಗಾರರು, ಕಲಾವಿದರು, ಮನ:ಶಾಸ್ತ್ರಜ್ಞರು ಹಾಗು ಮಾರುಕಟ್ಟೆಗೆ ತಜ್ಞರುಗಳ ಪ್ರತಿಭೆಗಳನ್ನು ಒಟ್ಟು ಸೇರಿಸಲಾಯಿತು.

ಇಲ್ಲಿ ಮುಖ್ಯವಾಗಿ ಜಾಹೀರಾತಿನಲ್ಲಿ ಮಹಿಳಾ ಪ್ರತಿನಿಧೀಕರಣವನ್ನು ಜೊತೆಗೆ ತುಲನಾತ್ಮಕವಾಗಿ ಪುರುಷ ಪ್ರತಿನಿಧಿಯನ್ನು ನೋಡಲಾಗಿದ್ದು, ಲಿಂಗ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ನಡೆಸಿದ ಹಲವು ಅಧ್ಯಯನಗಳು, ವಿದ್ಯುನ್ಮಾನ ಸಂಬಂಧ ಪಟ್ಟ ಚಾನಲ್‌ಗಳು, ಅಂತರ್ ಜಾಲಗಳು, ಸಂಶೋಧನಾ ಲೇಖನಗಳು, ಪತ್ರಿಕಾಲೇಖನಗಳನ್ನು ಸಮೀಕ್ಷೆ ಮಾಡುವುದರ ಮೂಲಕ ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಆದ ಅಧ್ಯಯನಗಳ ಸಮೀಕ್ಷೆಯನ್ನು ಮಾಡಿ ನಂತರ ಪ್ರಸ್ತುತ ಅಧ್ಯಯನದ ಜಾಹೀರಾತು ಉದ್ದೇಶಗಳನ್ನು ಸ್ಪಷ್ಟಪಡಿಸಲಾಗಿದೆ.

ಎಲ್ಲ ಅಧ್ಯಯನ ಸಮೀಕ್ಷೆಯ ಪ್ರಕಾರ ಹೇಳುವುದಾದರೆ ಈ ಅಧ್ಯಯನಗಳು ಬಿಡಿ ಲೇಖನದಲ್ಲಿ ಮತ್ತು ಕೆಲವು ಪುಸ್ತಕಗಳ ರೂಪದಲ್ಲಿ ಇವೆ. ಆದರೆ ಸಮಗ್ರವಾದ ಅಧ್ಯಯನಗಳು ಕನ್ನಡದಲ್ಲಿ ಆಗಿಲ್ಲ ಅಂದರೆ ಜಾಹೀರಾತು ಎನ್ನುವುದೊಂದು ವಿಶಾಲ ಕ್ಷೇತ್ರವಾಗಿದ್ದು ಇದರಲ್ಲಿ ಹಲವು ಅಧ್ಯಯನಗಳನ್ನು ಮಾಡುವ ಸಾಧ್ಯತೆಗಳಿವೆ. ಆದರೆ ಇಲ್ಲಿಯ ಸಮೀಕ್ಷೇಯ ಪ್ರಕಾರ ಒಂದು ಪ್ರೌಢ ಪ್ರಬಂಧವನ್ನು ಹೊರತು ಪಡಿಸಿದಂತೆ ಉಳಿದೆಲ್ಲವೂ ಇದರಲ್ಲಿ ಲೇಖನಗಳನ್ನೊಳಗೊಂಡಂತೆ ಬೇರೆ ಬೇರೆ ಲೇಖನಗಳು, ವಿದ್ಯುನ್ಮಾನ ಜಾಹೀರಾತುಗಳಿವೆ. ಇದುವರೆಗೆ ಎಲ್ಲ ಲೇಖನಗಳು ಸಾಮಾನ್ಯವಾಗಿ ಜಾಹೀರಾತುಗಳಲ್ಲಿ ಮಹಿಳೆಯ ಪ್ರತಿನಿಧೀಕರಣ ನೋಡಿದರೂ ಹೆಚ್ಚಾಗಿ ಸೌಂದರ್ಯ ಮಾದರಿಯಲ್ಲಿ ಇವೆ.

ಇವುಗಳಲ್ಲಿ "ಸ್ಥಿರ ಮಾದರಿ" ಲೈಂಗಿಕ ವಸ್ತುವಾಗಿ ಅದರಲ್ಲೂ ಸೌಂದರ್ಯ ವರ್ಧಕಗಳಿಗೂ ಲೈಂಗಿಕ ಇರುವ ಸಂಬಂಧದ ಬಗೆಗೆ ಕೇಂದ್ರೀಕರಿಸಲಾಗಿದೆ. ವಿವಿಧ ಕಲಾವಧಿಯಲ್ಲಿ ಮಹಿಳೆಯ ಪತ್ರಿಚಿತ್ರವನ್ನು ಗುರುತಿಸುವ ಮೂಲಕ ಲಿಂಗ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲಾಗಿದೆ. ಒಟ್ಟಿನಲ್ಲಿ ಎಲ್ಲ ಅಧ್ಯಯನಗಳನ್ನು ಗಮನಿಸಿ ಈಗಾಗಲೇ ಹೇಳಿದಂತೆ ಪ್ರಸ್ತುತ ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟಪಡಿಸಿಕೊಳ್ಳಲಾಗಿದ್ದು ಪ್ರಸ್ತುತ ಅಧ್ಯಯನವು ವಿವಿಧ ಕಾಲಘಟ್ಟದಲ್ಲಿ ಮಹಿಳೆಯ ಪಾತ್ರ ಚಿತ್ರಣ ನೋಡಿದಂತೆ 2005ರ ನಂತರದ ಜಾಹೀರಾತನಲ್ಲಿ ಮಹಿಳಾ ಪ್ರತಿನಿಧೀಕರಣಗಳನ್ನು ನೋಡಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿ ಇಂದು ವಿದ್ಯುನ್ಮಾನ ಮಾಧ್ಯಮ ಜಾಹೀರಾತು ಸಮಾಜದ ಏಳಿಗೆಗೆ ಬೇಕು ಬೇ? ಎಂದರೆ ಯಾವ ವಸ್ತುಗಳನ್ನು ಕೊಂಡುಕೊಳ್ಳಬೇಕು. ಯಾವ ವಸ್ತುವಿನ ಬೆಲೆ ಎಷ್ಟು ಎಂದು ಗೋತ್ತಾಗಲ್ಲ. ಜನರಿಗೆ ಕೊಂಡುಕೊಳ್ಳಲು ಸಹ ಮನಸ್ಸಗಲ್ಲ. ಯಾವ ರೀತಿ ಕೊಂಡುಕೊಳ್ಳಬೇಕು ಎಂದು ಸಂಪೂರ್ಣ ಮಾಹಿತಿಯನ್ನು ಜಾಹೀರಾತುಗಳು ತಿಳಿಸುತ್ತವೆ. ಇದರಿಂದ ಎಷ್ಟು ಉಯೋಗವಿದೆ ಅಷ್ಟೆ ಅಪಾಯನ್ನು ಇದೆ. ಆದ್ದರಿಂದ ಅದನ್ನು ಯಾವ ರೀತಿ ಬಳಿಸಿಕೊಳ್ಳಬೇಕು ತಿಳಿಸುತ್ತದೆ.

ಜಾಹೀರಾತು ಇತಿಹಾಸ: ಆಧುನಿಕ ಹೆಚ್ಚಿನ ಪತ್ರಿಕಾ ಜಾಹೀರಾತುಗಳು ಘೋಷಣೆಯ ರೀತಿಯಲ್ಲಿದ್ದವು. ಕಾಫಿ ಬಗೆಗಿನ ಮೊದಲ ಜಾಹೀರಾತು 1652ರಲ್ಲಿ ಇಂಗ್ಲೆಂಡ್‌ನ್ನಲ್ಲಿ ಪ್ರಕಟವಾಯಿತು. ಚಾಕಲೇಟ ಮತ್ತು ಚಾಹವನ್ನು 1657 ಮತ್ತು 1658ರಲ್ಲಿ ಇಂಗ್ಲೆಂಡ್‌ನಲ್ಲಿ ಪತ್ರಿಕಾ ಜಾಹೀರಾತುಗಳು ಮೂಲಕ ಪರಿಚಯಿಸಲಾಗಿತು.

ಮುದ್ರಣಯಂತ್ರದೊಂದಿಗೆ ಪ್ರಚಾರಪತ್ರಗಳು, ಕರಪತ್ರಗಳು, ಘೋಷಣಾಪತ್ರಗಳು ಭಿತ್ತಿ ಪತ್ರಗಳು ಮೊದಲದವುಗಳ ಪ್ರಕಟಣೆ ಆರಂಭವಾಯಿತು. ಕರಪತ್ರ ಇತ್ಯಾದಿಗಳೊಂದಿಗೆ ಪತ್ರಿಕೆಗಳಲ್ಲಿ ಜಾಹೀರಾತು ಪ್ರಾರಂಭವಾಯಿತು. ನಿಖರವಾಗಿ ಹೇಳುವುದಾದರೆ ಕೈಗಾರಿಕಾ ಕ್ರಾಂತಿಯ ದಿನಗಳಿಂದ ವಸ್ತುವಿನ ಮಾರಾಟ ಹೆಚ್ಚಿಸುವ ಸಾಧನವಾಗಿ ಜಾಹೀರಾತು ಬಳಕೆ ಜಾರಿಗೆ ಬಂದಿತು. ಜಾಹೀರಾತು ದಾರರು ತಮ್ಮ ಉತ್ಪನ್ನಗಳ ಜಾಹೀರಾತಿಗೆ ಹಣ ಕೊಡುತ್ತಿದ್ದುದರಿಂದ ಪತ್ರಿಕೆಗಳು ತೆರೆದ ತೋಳುಗಳಿಂದ ಜಾಹೀರಾತು ಪ್ರಪಂಚವನ್ನು ಸ್ವಾಗತಿಸಿದವು. ಇದರಿಂದ ಓದುಗರರಿಗೆ ಕಡಿಮೆ ಬೆಲೆಯಲ್ಲಿ ಪತ್ರಿಕೆಗಳನ್ನು ಕೊಡುವುದು ಸಾಧ್ಯವಾಯಿತು. ಇದು ಇಂದಿಗೂ ಸತ್ಯ.

ಮೊದಲ ಪತ್ರಿಕೆಗಳಲ್ಲಿ ಅಗಾಧ ಸಂಖ್ಯೆಯ ಜಾಹೀರಾತುಗಳಿದ್ದವು 17ನೇ ಶತಮಾನದ ಕೊನೆಗೆ ಇಂಗ್ಲೆಂಡ್ ಮತ್ತು ಇತರ ಕಡೆಗಳಲ್ಲಿ ಬಹುಸಂಖ್ಯೆಯಲ್ಲಿ ವಾಣಿಜ್ಯ ಪತ್ರಿಕೆಗಳು ಪ್ರಕಟವಾದವು. 1840ರಲ್ಲಿ ಸುಮಾರು ಪತ್ರಿಕೆಗಳು ನಿರಂತರವಾಗಿ ಪ್ರಕಟವಾಗುತ್ತಿದ್ದ ನ್ಯೂಯಾರ್ಕ್, ಫಿಲಡೆಲ್ಫಿಯಾ ಮತ್ತು ಇತರ ಮೆಟ್ರೋ ಪಾಲಿಟನ್ ಕೇಂದ್ರಗಳಲ್ಲಿ ಜಾಹೀರಾತು ಅಸ್ತಿತ್ವಕ್ಕೆ ಬಂದರು.

ಆಧುನಿಕ ಜಾಹೀರಾತು : ಆಧುನಿಕ ಜಾಹೀರಾತಿನ ಪ್ರತಿಪಾದಕರು ಅಮೆರಿಕನ್ನರಾದರೂ ಅವರ ಮೂಲ ಇರುವುದು ಇಂಗ್ಲೆಂಡಿನಲ್ಲಿ. ಕೈಗಾರಿಕಾ ಕ್ರಾಂತಿಯು ಯೂರೋಪ್ ಮತ್ತು ಅಮೆರಿಕಾದಲ್ಲಿ ವಸ್ತುಗಳ ಬೃಹತ್ ಪ್ರಮಾಣದಲ್ಲಿ ಉತ್ಪಾದನೆಗೆ ಕಾರಣವಾಯಿತು. ಇದರಿಂದ ಮಾರುಕಟ್ಟೆ ವಿಸ್ತಾರವಾಯಿತು. ಸ್ಥಳೀಯ ಮಾರುಕಟ್ಟೆಗಳ ಸ್ಥಾನದಲ್ಲಿ ವಿಸ್ತಾರಿಸಿದ ದೇತಿಯ ರಾಷ್ಟ್ರೀಯ ಮಾರುಕಟ್ಟೆಗಳು ಮತ್ತು ಅಂತರ ರಾಷ್ಟ್ರೀಯ ಮಾರುಕಟ್ಟೆಗಳು ಅಸ್ತಿತ್ವಕ್ಕೆ ಬಂದವು. ಈ ಬೆಳವಣಿಗೆ ಉತ್ಪಾದಕ ಮತ್ತು ಬಳಿಕೆದಾರನ ಸಂಬಂಧವನ್ನು ಬದಲಾಯಿಸಿ ಜಾಹೀರಾತಿನ ಅಗತ್ಯವನ್ನು ಸೃಷ್ಟಿಸಿತು.

ಬೃಹತ್ ಉತ್ಪಾದನೆಯ ಯಾತ್ರೀಕರಣದ ಫಲವಾಗಿ ಸಂವಹನದ ಅಗತ್ಯ ಜಾಸ್ತಿಯಾಯಿತು. ಈ ಸಂವಹನಕ್ಕೆ ಜಾಹೀರಾತು ಸಾಧನ ಒದಗಿಸಿತು. ಇದರ ಅಂಶಗಳಾದ ಪತ್ರಿಕೆಗಳು, ನಿಯತಕಾಲಿಕಗಳ ಬೆಳವಣಿಗೆ, ರೇಡಿಯೊ ಮತ್ತು ಟಿಲಿವಿಷನ್‌ಗಳ ಆರಂಭಗಳ ಕೂಡಾ ಜಾಹೀರಾತು ಈಗಿನ ರೀತಿಯಲ್ಲಿ ಬೆಳೆಯಲು ಸಮಾನ ಪ್ರಾಮುಖ್ಯತೆ ಪಡೆದಿವೆ. ಆಧುನಿಕ ಜಾಹೀರಾತು ಸಂಸ್ಥೆ ವ್ಯವಸ್ಥೆಯ ಅಭಿವೃದ್ಧಿ ಆಧುನಿಕ, ಆಧುನಿಕ ಜಾಹೀರಾತು ಒಂದು ಸಂಸ್ಥೆ ಹಾಗೂ ಒಂದು ವೃತ್ತಿಯಾಗಿ ಬೆಳೆಯುವಲ್ಲಿ ಪ್ರಮುಖ ಪಾತ್ರವಾಗಿಸಿದೆ.

ಜಾಹೀರಾತು ಉತ್ಪಾತ್ತಿ : ಜಾಹೀರಾತು ಅರಬ್ಬಿಯ ಶಬ್ದ. ಅರಬ್ಬಿಯ ಝಹಿರ್ ಕನ್ನಡದಲ್ಲಿ ಜಾಹೀರು, ಜಾಹೀರಾತು ಆಗಿದೆ. ಇಂಗ್ಲೀಷ್‌ನ ಅಡ್ವರ್ಟೈಸ್‌ಮೆಂಟ್ ಎಂಬುದಕ್ಕೆ ಸಮನಾರ್ಥಕ ಪದ ಜಾಹೀರಾತು.

ಇಂಗ್ಲೀಷ್‌ನ ಈ ಪದದ ಮೂಲ ಲ್ಯಾಟಿನ್ ಭಾಷೆಯ ಅಡ್ವರ್ಟೆರಾ ಎಂದರೆ ಮನಸ್ಸನ್ನು ತಿರುಗಿಸು ಎಂದರ್ಥ. ಅಂದರೆ ಒಂದು ಉತ್ಪನ್ನದ ಬಗೆಗೆ ಗಮನ ಸೆಳೆಯಲು, ಆಸಕ್ತಿ ಕುದುರಿಸಲು, ಬಯಕೆಯನ್ನು ಸೃಷ್ಟಿಸಲು ಮನವರಿಕೆ ಮಾಡಿಕೊಳ್ಳಲು ಹಾಗೂ ಕಾರ್ಯತಾತ್ಪರರಾಗುವಂತೆ ಪ್ರಚೋದಿಸುವ ಮನಸ್ಸು ತಿರುಗಿಸುವುದೇ ಜಾಹೀರಾತು. ಸರಳವಾಗಿ ಹೇಳುವುದಾದರೆ ಜಾಹೀರಾತು ಮನಸ್ಸು ಮತ್ತು ಜೇಬಿಗಾಗಿ ಒಂದು ಯುದ್ಧವಾಗಿದೆ.

ಮಾಧ್ಯಮದಲ್ಲಿ ಮಹಿಳೆಯರ ಪಾತ್ರ: ಇಂದು ವಿದ್ಯುನ್ಮಾನ ಮಾಧ್ಯಮದಲ್ಲಿ ಪ್ರಮುಖ ಆಕರ್ಷಣೆಯೇ ಮಹಿಳೆಯರು. ಮನೆಯ ಆಡುಗೆ ಸಾಮಾನುಗಳಿಂದ ಹಿಡಿದು ಸೌಂದರ್ಯ ವಸ್ತುಗಳನ್ನು ಬಳಿಸುವವರಿಗೂ ಮಹಿಳೆರೇ ಕೇಂದ್ರ ಬಿಂದು ಯಾಕೆಂದರೆ ಒಂದು ವಸ್ತುವನ್ನು ಕಂಪನಿ ಉತ್ಪಾದಿಸಿದ ಮೇಲೆ ಅದನ್ನು ಯಾವ ರೀತಿ ಮಾರಾಟ ಮಾಡಿ ಲಾಭ ಗಳಿಸಬೇಕು. ಇದರಿಂದ ಜನರಿಗೆ ಎಷ್ಟು ಉಪಯೋಗವಾಗಬಹುದು. ಇದರ ಗುಣಮಟ್ಟ ಏನು ಎಂದು ತೋರಿಸಬೇಕಾದರೆ ಅಲ್ಲಿ ಪುರುಷನಗಿಂತ ಮಹಿಳೆಯನ್ನು ಅತಿ ಹೆಚ್ಚು ಆಕರ್ಷಕವಾಗಿ ಬಳಿಸಿಕೊಳ್ಳುತ್ತಾರೆ. ಆದ್ದರಿಂದ ಇಂದು ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿದೆ.

ಅಧ್ಯಯನದ ಉದ್ದೇಶಗಳು

- ಯಾವುದೇ ಒಂದು ಉತ್ಪನ್ನ ವಸ್ತುವಿನ ಮಾರಾಟ ಪ್ರಮಾಣವನ್ನು ಹೆಚ್ಚುಸುತ್ತದೆ.
- ಹೊಸ ಉತ್ಪನ್ನ ಅಥವಾ ಹೊಸ ಆವಿಷ್ಕಾರವನ್ನು ಮಾರುಕಟ್ಟೆಗೆ ಪರಿಚಯಿಸುವುದು.
- ಸಂಸ್ಥೆಯಲ್ಲಿ ಖಾಲಿ ಇರತಕ್ಕಂಥ ಮಾರಾಟ ಸಿಬ್ಬಂದಿಗೆ ನೇರವಾಗಿ ಅವರ ಮಾರಾಟ ದಕ್ಷತೆ ಹೆಚ್ಚಿಸಲು ಸಹಕಾರ ನೀಡುವುದು.
- ಭೌಗೋಳಿಕ ಕಾರಣಗಳಿಂದಾಗಿ ಅಥವಾ ಸಾರಿಗೆ ಸೌಕರ್ಯ ಕೊರತೆಯಿಂದಾಗಿ ದೂರ ಉಳಿದ ಗ್ರಾಹಕರನ್ನು ಸಂಪರ್ಕಿಸಿ ಅವರಿಗೆ ಉತ್ಪನ್ನಗಳ ಬಗ್ಗೆ ಮಾಹಿತಿ ತಿಳಿಸುವುದು.
- ಇಲ್ಲಿಯವರೆಗೆ ತಲುಪ್ಪದೇ ಇರತಕ್ಕಂಥ ಮಾರುಕಟ್ಟೆ ಪ್ರವೇಶಿಸಿ ಹೊಸ ಗ್ರಾಹಕರು ಹೊಸ ಮಾರಾಟಗಾರರನ್ನು ಕಂಡು ಹಿಡಿಯುವುದು.

ಈ ಮುಂಚೆ ಹೇಳಿದಂತೆ ಮಾಧ್ಯಮ ಅಧ್ಯಯನ ಇತರ ಶಿಸ್ತುಗಳಿಗಿಂತ ಭಿನ್ನವಾಗಿದೆ. ಇದು ಸಮಾಜವನ್ನು ಮತ್ತು ಸಮಾಜದಲ್ಲಾಗುವ ದಿನೇ, ದಿನೇ ಬದಲಾವಣೆಯನ್ನು ಬಹುಬೇಗ ಗ್ರಹಿಸುತ್ತದೆ ಹಾಗೂ ಸಂವಹನವನ್ನು ಮಾಡುತ್ತದೆ. ಆದ್ದರಿಂದ ಮಾಧ್ಯಮದ ಭಾಗವಾದ ಜಾಹೀರಾತುಗಳನ್ನು ಸಮಾಜವನ್ನು ಹೇಗೆ ಗ್ರಹಿಸುತ್ತವೆ? ಅದರಲ್ಲೂ ಸಮಾಜದಲ್ಲಿನ ಶ್ರೇಣಿಗಳನ್ನು, ಮುಖ್ಯವಾಗಿ ಲಿಂಗ ಶ್ರೇಣೀಕರಣವನ್ನು ಯಾವ ರೀತಿ ಗ್ರಹಿಸುತ್ತವೆ ಮತ್ತು ಗ್ರಹಿಸಿದ್ದನ್ನು ಯಾವ ರೀತಿ ಸಂವಹನ ಮಾಡುತ್ತವೆ ಎಂಬುವುದನ್ನು ತಿಳಿಯುವ ಉದ್ದೇಶ ಈ ಅಧ್ಯಯನಕ್ಕೆ ಇದೆ.

ಅಧ್ಯಯನದ ಪ್ರಾಮುಖ್ಯತೆ: ಯಾವುದೇ ಅಧ್ಯಯನವನ್ನು ಮೊದಲಿಗೆ ನಾವು ಮಾಡಬೇಕಾದರೆ ಇದರಿಂದ ಜನರಿಗೆ ಎಷ್ಟು ಮುಖ್ಯವಾಗಿರುತ್ತದೆ. ಹಿಂದೆ ಯಾವ ತರಹದ ಅಧ್ಯಯನವನ್ನು ಸಂಶೋಧಕರು ಮಾಡಿದ್ದಾರೆ. ಎಲ್ಲವನ್ನು ನಾವು ಮೊದಲಿಗೆ ತಿಳಿದುಕೊಂಡು ನಮ್ಮ ಸಂಶೋಧನೆಯಿಂದ ಜನರಿಗೆ ಹೊಸ, ಹೊಸ ಮಾಹಿತಿಯನ್ನು ನೀಡಬೇಕು. ಜೊತೆಗೆ ಉತ್ತಮ ಸಲಗೆ, ಮಾಹಿತಿ, ಅಂಕಿ, ಅಂಶಗಳು ಅದರಲ್ಲಿ ಒಳಗೊಂಡಿರಬೇಕು. ಇದರಿಂದ ಸಮಾಜದ ಮೇಲೆ ಯಾವ ರೀತಿ ಪರಿಣಾಮ ಮತ್ತು ದುಷ್ಪರಿಣಾಮ ಬಿರುತ್ತದೆ ಎಂದು ಅರಿತು ಅಧ್ಯಯನದ ಪ್ರಾಮಖ್ಯತೆ ಜನರಿಗೆ ತಿಳಸಬೇಕು ಅಷ್ಟೇ ಅಲ್ಲದೇ ನಮ್ಮ ಈ ಅಧ್ಯಯನದ ಪ್ರಮುಖ್ಯತೆ ಸಮಾಜಕ್ಕೆ ಒಳ್ಳೆಯದು ಆಗಬೇಕು.

ಈ ಒಂದು ಅಧ್ಯಯನವನ್ನು ನೋಡುಗರರಿಂದ ತಿಳಿದ ಬಂದ ಮಾಹಿತಿ ಪ್ರಕಾರ ಈ ವಿಶ್ಲೇಷಣೆಯನ್ನು ದತ್ತಾಂಶಗಳಿಂದ ವಿವರಣೆ ಮಾಡಲಾಗಿದೆ. ಇದರಲ್ಲಿ ಪುರುಷರು ಮತ್ತು ಮಹಿಳೆಯರು ತಲಾ 25 :25 ಒಟ್ಟು 50 ಜನರನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಜಾಹೀರಾತುನ್ನು ನೋಡುಗರರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಂಡು ದತ್ತಾಂಶವನ್ನು ವಿಶ್ಲೇಷಣೆ ಮಾಡಿ ಸಂವಾದಿಗಳಿಂದ ತಿಳಿದುಕೊಂಡಿದೆ. ಅವರ ವಿವರ ಸಂಪೂರ್ಣ ಮಾಹಿತಿ ಸಂಗ್ರಹಿಸಿಕೊಂಡು ಈ ಒಂದು ಅಧ್ಯಯನ ಮಾಡಲಾಗಿದೆ.

1. ವಯಸ್ಸು

ವಯಸ್ಸು	ಪುರುಷ	ಪ್ರತಿಶತ	ಮಹಿಳೆ	ಪ್ರತಿಶತ
18 ರಿಂದ 20	05	10%	05	10%
20 ರಿಂದ 30	20	40%	20	40%
ಒಟ್ಟು	25	50%	25	50%

ಮೇಲ್ಕಾಣಿಸಿದ ಕೋಷ್ಟಕದಲ್ಲಿ 18 ರಿಂದ 20 ವಯಸ್ಸಿನ ಪುರುಷ ಮತ್ತು ಮಹಿಳೆಯರು ಶೇ% 20 ರಷ್ಟು ಇದ್ದು, 20 ರಿಂದ 30 ವಯಸ್ಸಿನ ಮಹಿಳೆಯರು ಮತ್ತು ಪುರುಷರು ಶೇ% 80 ರಷ್ಟು ಇದ್ದಾರೆ. ಒಟ್ಟು ಪ್ರತಿಶತ 100 ಕ್ಕೆ ಹೋಲಿಸಲಾಗಿದೆ.

2. ಲಿಂಗ

ಲಿಂಗ	ಸಂಖ್ಯೆ	ಪ್ರತಿಶತ
ಪುರುಷರು	25	50%
ಮಹಿಳೆಯರು	25	50%
ಒಟ್ಟು	50	100%

ಮೇಲ್ಕಾಣಿಸಿದ ಕೋಷ್ಟಕದಲ್ಲಿ 25 ಪುರುಷರು, 25 ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

3. ಜಾಹೀರಾತಿನ ಬಗ್ಗೆ ಮಾಹಿತಿ ಇದೆಯೇ?

ಜಾ: ಮಾಹಿತಿ	ಪುರುಷ	ಪ್ರತಿಶತ	ಮಹಿಳೆ	ಪ್ರತಿಶತ
ಹೌದು	25	50%	23	46%
ಇಲ್ಲ	00	00%	02	04%
ಒಟ್ಟು	25	50%	25	50%

ಮೇಲಿನ ಕೋಷ್ಟಕದಲ್ಲಿ ಒಟ್ಟು ಜಾಹೀರಾತನ್ನು 96% ರಷ್ಟು ಜನರು ಮಾಹಿತಿ ಹೊಂದಿದ್ದು. ಇದರಲ್ಲಿ 50% ರಷ್ಟು ಪುರುಷರು ಹಾಗೂ ಮಹಿಳೆಯರು 46% ರಷ್ಟು ಜಾಹೀರಾತಿನ ಮಾಹಿತಿ ಹೊಂದಿದ್ದಾರೆ. ಅಲ್ಲದೆ 04% ರಷ್ಟು ಮಹಿಳೆಯರು ಮಾಹಿತಿ ಇಲ್ಲಾ ಎಂದು ತಿಳಿಸಿದ್ದಾರೆ.

4. ಕಾರ್ಯಕ್ರಮ ಮಧ್ಯ ಬರುವ ಜಾಹೀರಾತನ್ನು ವಿಕ್ಷೀಸುತ್ತಿರಿ ?

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	15	30%	20	40%
ಇಲ	10	20%	05	10%
ಒಟು	25	50%	25	50%

ಈ ಕೋಷ್ಟಕದ ಪ್ರಕಾರ ಜಾಹೀರಾತು ನೋಡುವ ಪುರುಷರು 30% ರಷು ಇದ್ದು ಮಹಿಳೆಯರು 40% ರಷ್ಟು ಜಾಹಿರಾತನ್ನು ನೋಡುತ್ತಿದ್ದಾರೆ. ಮತ್ತು 20% ಪುರುಷ ಹಾಗೂ 10% ಮಹಿಳಾ ಸಂವಾದಿಗಳು ಜಾಹಿರಾತು ವಿಕ್ಷೀಸುವುದಿಲ್ಲಾ ಎಂದು ತಿಳಿಸಿದ್ದಾರೆ.

5 ಪತ್ರಿಕಾ ಜಾಹೀರಾತು ವಿಶ್ವಾಸಾರ್ಹವೋ ಅಥವಾ ಟಿ.ವಿ ಜಾಹೀರಾತು ವಿಶ್ವಾಸರ್ಹವೊ.

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಟಿ.ವಿ	05	10%	15	30%
ಪತ್ರಿಕ	20	40%	10	20%
ಒಟ್ಟು	25	50%	25	50%

ಈ ಮೇಲಿನ ಕೋಷ್ಟಕದ ಪ್ರಕಾರ ಟಿವಿ ಯಲ್ಲಿ ಪ್ರಸಾರವಾಗುವ ಜಾಹಿರಾತು ಪುರುಷರು 10% ರಷ್ಟು ಹಾಗೂ 30% ರಷ್ಟು ಮಹಿಳಾ ಸಂವಾದಿಗಳು ವಿಶ್ವಾಸಾರ್ಹ. ಎಂದಿದ್ದರೆ ಮತ್ತು ಪತ್ರಿಕೆಯಲ್ಲಿ ಪ್ರಸಾರವಾಗುವ ಜಾಹಿರಾತು ಪುರುಷರು 40% ರಷ್ಟು ಹಾಗೂ 20% ರಷ್ಟು ಮಹಿಳಾ ಸಂವಾದಿಗಳು ವಿಶ್ವಾಸಾರ್ಹ ಎಂದಿದ್ದರೆ

6. ಕಾರ್ಯಕ್ರಮದಲ್ಲಿ ಬರುವ ಜಾಹೀರಾತು ಉಪಯೋಗ ಆಗುತ್ತದೆಯೇ ?

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	07	14%	16	32%
ಇಲ್ಲ	18	36%	09	18%
ಒಟ್ಟು	25	50%	25	50%

ಈ ಕೋಷ್ಟಕದ ಪ್ರಕಾರ ಪುರುಷರು 14% ರಷ್ಟು ಮತ್ತು ಮಹಿಳಾ 32% ರಷ್ಟು ಹೌದು ಎಂದಿದ್ದಾರೆ. ಮತ್ತು ಪುರುಷರು 36% ರಷ್ಟು ಮತ್ತು ಮಹಿಳಾ 18% ರಷ್ಟು ಇಲ್ಲಾ ಎಂದಿದ್ದಾರೆ.

7. ದೂರದರ್ಶನದ ಜಾಹೀರಾತಿನಿಂದ ನಿಮಗೆ ಸರಿಯಾದ ಮಾಹಿತಿ ದೊರೆಯುತ್ತಿದೆಯೇ ?

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	23	46%	22	44%
ಇಲ್ಲ	02	04%	03	06%
ಒಟ್ಟು	25	50%	25	50%

ಈ ಮೇಲಿನ ಕೋಷ್ಟಕ ಪ್ರಕಾರ ಪುರುಷರು 46% ರಷ್ಟು ಹಾಗೂ ಮಹಿಳೆಯರು 44% ಸರಿಯಾದ ಮಾಹಿತಿ ದೊರೆಯುತ್ತಿದೆ ಎಂದರೆ. ಉಳಿದ ಪುರುಷರು 04% ರಷ್ಟು ಹಾಗೂ ಮಹಿಳೆಯರು 06% ಸರಿಯಾದ ಮಾಹಿತಿ ದೊರೆಯುತ್ತಿಲ್ಲ ಎಂದು ತಿಳಿಸಿದ್ದಾರೆ.

8. ಜಾಹೀರಾತಿನಲ್ಲಿ ಮಹಿಳೆಯರ ಬಿಂಬಿಸುವಿಕೆ ಹೇಗಿದೆ ?

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ತಕ್ಕ ಮಟ್ಟಿಗೆ	03	06%	05	10%
ಉತ್ತಮವಾಗಿವೆ	10	20%	10	20%
ಕೆಟ್ಟದಾಗಿದೆ	07	14%	05	10%
ಚೆನ್ನಾಗಿಲ್ಲ	05	10%	05	10%
ಒಟ್ಟು	25	50%	25	50%

ಈ ಮೇಲಿನ ಕೋಷ್ಟಕದ ಪ್ರಕಾರ ತಕ್ಕ ಮಟ್ಟಿಗೆ ಎಂಬುವುದರಲ್ಲಿ ಪುರುಷರು 06%ರ ರಷ್ಟು ಹಾಗೂ ಮಹಿಳೆಯರು 10% ರಷ್ಟು ಇದೆ ಎಂದು ತಿಳಿಸಿದ್ದು, ಉತ್ತಮವಾಗಿವೆ ಎಂಬುದಕ್ಕೆ ಪುರುಷರು 20% ರಷ್ಟು ಹಾಗೂ ಮಹಿಳೆಯರು 20% ರಷ್ಟು ಇದೆ ಎಂದು ತಿಳಿಸಿದ್ದು, ಕೆಟ್ಟದಾಗಿದೆ ಎಂಬುದಕ್ಕೆ ಪುರುಷರು 14% ರಷ್ಟು ಹಾಗೂ ಮಹಿಳೆಯರು 10% ರಷ್ಟು ಇದೆ ಎಂದು ತಿಳಿಸಿದ್ದು, ಚೆನ್ನಾಗಿಲ್ಲ ಎಂಬುದಕ್ಕೆ ಪುರುಷರು 10% ರಷ್ಟು ಹಾಗೂ ಮಹಿಳೆಯರು 10% ರಷ್ಟು ಇದೆ ಎಂದು ತಿಳಿಸಿದ್ದಾರೆ.

9. ಟಿ. ವಿ ಯಲ್ಲಿ ಬರುವ ಜಾಹೀರಾತುಗಳನ್ನು ಕುಟುಂಬ ಸಹಿತ ಕುಳಿತು ನೋಡಲು ಸಾಧ್ಯವೆ ?

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	04	08%	18	36%
ಇಲ್ಲ	21	42%	12	24%
ಒಟ್ಟು	25	50%	25	50%

ಕೋಷ್ಟಕದ ಪ್ರಕಾರ ಪುರುಷರು ಮತ್ತು ಮಹಿಳೆಯರು ಕುಟುಂಬ ಸಹಿತ ನೋಡುತ್ತಾರೆ ಎಂಬ ಪ್ರಶ್ನೆಗೆ ಪುರುಷರು ಸಂವಾದಿಗಳು 08% ರಷ್ಟು ಮತ್ತು ಮಹಿಳೆಯರು ಸಂವಾದಿಗಳು 36% ರಷ್ಟು ಹೌದು ಎಂದು ಹೇಳಿದ್ದರೆ ಅಲ್ಲದೇ ಪುರುಷರು ಸಂವಾದಿಗಳು 42% ರಷ್ಟು ಮತ್ತು ಮಹಿಳೆಯರು ಸಂವಾದಿಗಳು 24% ರಷ್ಟು ಇಲ್ಲಾ ಎಂದು ಹೇಳಿದ್ದರೆ.

10. ಪ್ರಸ್ತುತ ಜಾಹೀರಾತುಗಳು ಹಣಗಳಿಕೆಗಾಗಿ ಅಶ್ಲೀಲತೆಗೆ ಮಾರು ಹೋಗಿವೆ ಎನ್ನಿಸುತ್ತದೆಯೇ ?

	ಪುರುಷರು	ಪ್ರತಿಶತ	ಮಹಿಳೆಯರು	ಪತ್ರಿಶತ
ಹೌದು	20	40%	23	46%
ಇಲ್ಲ	05	10%	02	04%
ಒಟ್ಟು	25	50%	25	50%

ಈ ಮೇಲಿನ ಕೋಷ್ಟಕದಲ್ಲಿ ಜಾಹೀರಾತುಗಳು ಹಣಗಳಿಕೆಗಾಗಿ ಅಶ್ಲೀಲತೆಗೆ ಮಾರು ಹೋಗಿವೆ ಎನ್ನು ಪ್ರಶ್ನೆಗೆ ಪುರುಷರು 40% ರಷ್ಟು ಹೌದು ಅಂದರೆ ಮಹಿಳೆಯರು 46% ರಷ್ಟು ಹೌದು ಎನ್ನುತ್ತಾರೆ. ಪುರುಷರು 10% ರಷ್ಟು ಹೌದು ಅಂದರೆ ಮಹಿಳೆಯರು 4% ರಷ್ಟು ಇಲ್ಲ ಎಂದು ಉತ್ತರಿಸಿದ್ದಾರೆ.

ಈ ಒಂದು ಅಧ್ಯಯನಕ್ಕೆ ಸಂಬಧಿಸಿದಂತೆ ಗುಲಬರ್ಗಾ ಜನರನ್ನು ಕೇಳಿದಾಗ ದೂರದರ್ಶನ, ಮತ್ತು ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರ ಜಾಹೀರಾತುಗಳು ಜನರಿಗೆ ಮನರಂಜನೆ ನೀಡುವುದರ ಜೊತೆಗೆ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯ ವಾಗಿ, ಸಾಂಪ್ರಾದಾಯಿಕವಾಗಿ ಎಲ್ಲ ರೀತಿಯ ಮಾಹಿತಿಯ ಜಾಹೀರಾ ತನ್ನು ನೀಡುತ್ತಾವೆ.

ಅಷ್ಟೇ ಅಲ್ಲದೆ ಜನರಿಗೆ ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರ ಜಾಹೀರಾತುಗಳು ಸಂತೃತ್ತಿಯನ್ನು ನೀಡಿ ಹೊಸ, ಹೊಸ ವಸ್ತುವಿನ ಮಾಹಿತಿ ನೀಡಿ ಅದರ ಗುಣ ಮಟ್ಟ, ಬೆಲೆಯನ್ನು ತಿಳಿಸುತ್ತವೆ. ಮಹಿಳೆಯರ ಜಾಹೀರಾತಿನಿಂದ ಜನರಿಗೆ ಅಷ್ಟೇ ಅಲ್ಲದೇ ಪ್ರಚಾರ ಮಾಡಿದ ಕಂಪನಿದಾರರಿಗೂ, ಉದ್ಯಮೆದಾರರಿಗೂ ಹಣವನ್ನು ಉಳಿಸಲು, ಗಳಿಸಲು ಸಾಧ್ಯವಾಗಿದೆಂದು ತಿಳಿದು ಬಂದಿದೆ.

ಉಪಸಂಹಾರ : ಇಂದು "ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರ ಜಾಹೀರಾತು ಕುರಿತು ಒಂದು ಅಧ್ಯಯನ" ದಲ್ಲಿ ಯಾವುದೇ ವಿಷಯದ ಮಾಹಿತಿ ಬೇಕಾದರು ನಾವು ಪಡೆಯಬಹುದು ಶಿಕ್ಷಣದ ಮಾಹಿತಿ, ಸೌಂದರ್ಯದ ಮಾಹಿತಿ, ಆರ್ಯೋಗದ ಮಾಹಿತಿ, ನಮ್ಮ ಹಳೆ ಸಂಸ್ಕೃತಿಕ ಮತ್ತು ಹೊಸ ಸಾಂಪ್ರದಾಯಿಕ ಮಾಹಿತಿ, ಯುವಕ, ಯುವತಿಯರಿಗೆ ಬೇಕಾಗಿರುವಂತಹ ಮಾಹಿತಿ ಒಟ್ಟಿನಲ್ಲಿ ಹೇಳುವುದಾದರೆ ಮಹಿಳೆಯರ ಜಾಹೀರಾತಿನಲ್ಲಿ ಎಲ್ಲ ರೀತಿ ಮಾಹಿತಿ ಸಿಗುತ್ತವೆ. ಆದ್ದರಿಂದ ಮಹಿಳಾ ಜಾಹೀರಾತು ಜನರ ಮನ ಗೆಲ್ಲಲು ಸಾಧ್ಯವಾಗಿದೆ ಎಂದು ಹೇಳಬಹುದಾಗಿದೆ.

ಗ್ರಂಥಋಣ

'ಭಾರತೀಯ ಪತ್ರಿಕೋದ್ಯಮ' ನಾಡಿಗ ಕೃಷ್ಣಮೂರ್ತಿ, ಮೈಸೂರು ವಿಶ್ವವಿದ್ಯಾಲಯ.

ಜಿ.ಎನ್. ರಂಗನಾಥ್ ರಾವ್, (1965) 'ಪತ್ರಿಕೋದ್ಯಮ' ಕಾಮದೇನು ಪ್ರಕಾಶನ, ಬೆಂಗಳೂರು.

'ಆಧುನಿಕ ಸಂವಹನ ಮಾಧ್ಯಮಗಳು' ಡಾ.ಸಿ.ಪೂರ್ಣಿಮಾ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ

ಬಾಲಸುಬ್ರಹ್ಮಣ್ಯಂ ಎ. ಎಸ್. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮ ಒಂದು ಅವಲೋಕನ (2009), ಪತ್ರಿಕೋದ್ಯಮ ಪುಸ್ತಕ ಮಾಲೆ, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

URL www.google history of tv.com

URL www.google www. History of women ad.

URl www.google, history of women ad in wikipidiya. Com

URl www.google mieag .com

ಕಾ ತ ಚಿಕ್ಕಣ್ಣನವರ ಬರೆಹದ ಭಾಷೆ

ಮಾಲಿನಿ ಎನ್ ಅಭ್ಯಂಕರ್

ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಜಗತ್ತಿನಾದ್ಯಂತ ಎಲ್ಲ ದೇಶಗಳ ಐತಿಹ್ಯದಲ್ಲಿ ಜನಪದ ಸಾಹಿತ್ಯದಲ್ಲಿ ಭಾಷೆಯ ಮಾಂತ್ರಿಕತೆಯ ಉಲ್ಲೇಖಗಳು ದೊರಕುತ್ತದೆ. ಮಾತಿಗೆ ಒಂದು ವಿಶಿಷ್ಟ ಅಲೌಕಿಕ ಶಕ್ತಿಯಿದೆ. ಮಾತುಗಳೇ ಬರಹ ರೂಪಕ್ಕೆ ಇಳಿದಾಗ ಅದಕ್ಕೆ ಮತ್ತಷ್ಟು ಮಾಂತ್ರಿಕತೆ ಲಭಿಸುತ್ತದೆ. ಇಂತಹ ಮಾಂತ್ರಿಕತೆಯನ್ನು ಕಾ ತ ಚಿಕ್ಕಣ್ಣನವರು ಅವರ ಬರೆಹಕ್ಕೆ ನೀಡಿದ್ದಾರೆ. ಆಡುನುಡಿಯಲ್ಲೇ ತಮ್ಮ ಕೃತಿ ರಚನೆ ಮಾಡಿದ್ದಾರೆ. ಭಾಷೆಯನ್ನು ದೇಶ ಸೂಚಕವೆಂದು ಗುರುತಿಸುವ ಸಂದರ್ಭದಲ್ಲಿ ವ್ಯಕ್ತಿಗಳಿಬ್ಬರ ನಡುವೆ ನಡೆಯುವ ಸಂಭಾಷಣೆಯನ್ನು ಆಲಿಸಿದರೆ ಆ ಭಾಷೆ ಯಾವುದು? ನಮ್ಮ ಭಾಷೆಯೋ ಅಥವಾ ಬೇರೆ ಭಾಷೆಯೋ, ಬೇರೆ ರಾಷ್ಟ್ರದ್ದೋ ಎಂಬುದನ್ನು ಗುರುತಿಸಬಹುದು. "ನಿಸರ್ಗ ಪರಿಸರ, ಗ್ರಾಮ ಪರಿಸರ, ವ್ಯಕ್ತಿ ಪರಿಸರ ಮೂರು ನೆಲೆಯನ್ನು ಒಟ್ಟಾಗಿ ಗ್ರಹಿಸಿ ಹೆಣೆದಂತಿರುವ ನಿರೂಪಣೆಗೆ ಪದ್ಯಗಂಧಿಯಾದ ಭಾಷಾಶೈಲಿ ಮೆರುಗು ನೀಡಿದೆ"[1] ಎಂಬಂತೆ ಕಾ ತ ಚಿಕ್ಕಣ್ಣನವರು ಮೈಸೂರು ಜಿಲ್ಲೆಯ ಗ್ರಾಮವೊಂದರಲ್ಲಿ ಬಳಸುವ ಗ್ರಾಮೀಣ ಕನ್ನಡವನ್ನು ಬಳಸಿ ಗ್ರಾಮ್ಯ ಭಾಷೆಯಲ್ಲೇ ತಮ್ಮ ಕೃತಿಯನ್ನು ರಚನೆ ಮಾಡಿದ್ದಾರೆ.

ಭಾಷೆ ಎಂದರೇನು ಎಂಬುದನ್ನು ಹೀಗೆಯೇ ಇರುತ್ತದೆ ಎಂಬು ದಾಗಿ ಸೂತ್ರೀಕರಿಸಿ ಹೇಳುವುದು ಸ್ವಲ್ಪ ಕಷ್ಟವೇ ಎಂದು ಹೇಳಬೇಕು. ಭಾಷೆಯನ್ನು ಸೂತ್ರರೂಪದಲ್ಲಿ ಹಿಡಿದಿಡುವ ಪ್ರಯತ್ನವನ್ನು ಹಲವು ಭಾಷಾ ವಿಜ್ಞಾನಿಗಳು ಮಾಡಿದ್ದಾರೆ. ಫರ್ಡಿನೆಂಡ್ ಡಿ ಸಸೂರ್ ಎಂಬ ವಿಜ್ಞಾನಿ "ಮಾನವನು ತನ್ನ ಅನಿಸಿಕೆಗಳನ್ನು ಅಭಿವ್ಯಕ್ತಪಡಿಸು ವುದಕ್ಕಾಗಿ ರೂಢಿಸಿಕೊಂಡಿರುವ ಸಂಕೇತಗಳ ವ್ಯವಸ್ಥೆಯೇ ಭಾಷೆ"[2] ಎನ್ನುತ್ತಾರೆ. ಆದ್ದರಿಂದ ಭಾಷೆಯು ಮಾನವ ನಿರ್ಮಿತವಾದದ್ದು ಅದನ್ನು ತನ್ನ ಅನಿಸಿಕೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಆತನೇ ಸೃಷ್ಟಿಸಿಕೊಂಡ ವ್ಯವಸ್ಥೆ ಎಂಬ ಖಚಿತ ನಿಲುವಿಗೆ ಬರಬಹುದು.

ಭಾರತ ಬಹುಸಂಸ್ಕೃತಿಯ, ಬಹುಭಾಷೆಗಳ ದೇಶ. ಭಾರತದಲ್ಲಿ ಸಂವಿಧಾನದಿಂದ ಅಂಗೀಕರಿಸಲ್ಪಟ್ಟ ಭಾಷೆಗಳೇ ಅಲ್ಲದೇ ಬಹಳಷ್ಟು ಉಪಭಾಷೆಗಳನ್ನು ಗುರುತಿಸಬಹುದಾಗಿದೆ. ಅಂತೆಯೇ ಕರ್ನಾಟಕದ ಆಡಳಿತ ಭಾಷೆ ಕನ್ನಡ. ರಾಜಕೀಯ ಸ್ಥಿತ್ಯಂತರಗಳಿಂದಾಗಿ ಕನ್ನಡ ಭಾಷೆ ಪ್ರಾಚೀನ ಕಾಲದಿಂದಲೂ ಹಲವು ಭಾಷೆಗಳ ಪ್ರಭಾವಕ್ಕೆ ಒಳಗಾಗುತ್ತಾ ಹೋಯಿತು. ಮುಸ್ಲೀಮರ ಆಳ್ವಿಕೆಯ ಪ್ರಭಾವದಿಂದಾಗಿ ಗುಲ್ಬರ್ಗಾ, ರಾಯಚೂರು ಮುಂತಾದ ಈಶಾನ್ಯ ಕರ್ನಾಟಕ ಭಾಗದ ಕನ್ನಡದ ಮೇಲೆ ಉರ್ದು ಗಾಢ ಪ್ರಭಾವ ಬೀರಿತು.

ಅಂತೆಯೇ ಇಂಗ್ಲಿಷರ ಆಳ್ವಿಕೆಗೆ ಒಳಗಾದ ಭಾರತದಲ್ಲಿ ಬ್ರಿಟಿಷರು ಭಾರತ ಬಿಟ್ಟು ತೊಲಗಿದರೂ, ಸಹಜವಾಗಿಯೇ ಅವರು ಇಲ್ಲಿ ನೆಟ್ಟ ಇಂಗ್ಲಿಷ್ ಭಾಷೆಯೆಂಬ ಬೀಜ ಮೊಳೆತು ಹೆಮ್ಮರವಾಗಿ ಬೆಳೆದು ಬಿಟ್ಟಿದೆ. ಇದರಿಂದಾಗಿ, ಪ್ರಾದೇಶಿಕ ಭಾಷೆಗಳ ಮೇಲೆ ಇಂಗ್ಲಿಷ್ ಭಾಷೆಯ ಪ್ರಭಾವವುಂಟಾಗಿರುವುದನ್ನು ಗಮನಿಸಬಹುದು. ಕನ್ನಡ ಭಾಷೆ ಪ್ರಾಚೀನ ಕಾಲದಿಂದಲೂ ಸಂಸ್ಕೃತ, ಪ್ರಾಕೃತ, ಇಂಗ್ಲಿಷ್, ಅರಬ್ಬೀ, ಉರ್ದು, ಪಾರಸಿ ಹೀಗೆ ಅನ್ಯಭಾಷೆಯ ಪ್ರಭಾವಕ್ಕೆ ಒಳಗಾಗುತ್ತಾ ಸಾಕಷ್ಟು ಶಬ್ದಗಳನ್ನು ಸ್ವೀಕರಿಸಿದೆ ಎಂಬ ಅಂಶವನ್ನು ಗಮನಿಸಬೇಕು.

ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕಿನ ಕುಗ್ರಾಮವೊಂದರಲ್ಲಿ ಜನಿಸಿದ ಕಾ ತ ಚಿಕ್ಕಣ್ಣನವರು ಪ್ರಬುದ್ಧ ಕತೆಗಾರರು, ಕಾದಂಬರಿಕಾರರು. ಅಲ್ಲದೆ ನಾಟಕ ಕ್ಷೇತ್ರಕ್ಕೂ ತಮ್ಮ ಕಾಣಿಕೆಗಳನ್ನು ನೀಡಿದ್ದಾರೆ. ಸಾಹಿತ್ಯದ ವಿವಿಧ ಪ್ರಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡ ಕಾ ತ ಚಿಕ್ಕಣ್ಣನವರು ಗ್ರಾಮ್ಯ ಕಥೆಗಾರರೆಂದೇ ಚಿರಪರಿಚಿತರು. ಗ್ರಾಮ್ಯ ಎಂದಾಗ ದೇಸಿ ಮತ್ತು ಜನಪದ ಎಂಬ ಅಂಶಗಳು ಬಹಳ ಮುಖ್ಯವಾಗುತ್ತವೆ. ಕಾ ತ ಚಿಕ್ಕಣ್ಣನವರ ಬಹುಪಾಲು ಕೃತಿಗಳೆಲ್ಲಾ ದೇಸಿ ಮತ್ತು ಗ್ರಾಮ್ಯ ಭಾಷೆಯಲ್ಲೇ ರಚನೆಗೊಂಡಿವೆ. ಅಂತಹ ದೇಸಿ ಮತ್ತು ಗ್ರಾಮ್ಯ ಸೊಗಡಿನ ಭಾಷೆಯ ಕೆಲವು ತುಣುಕುಗಳನ್ನು ಆಯ್ದು ಅವುಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

"ಜಗತ್ತಿನಾದ್ಯಂತ ಎಲ್ಲ ದೇಶಗಳ ಐತಿಹ್ಯಗಳಲ್ಲಿ ಜನಪದ ಸಾಹಿತ್ಯದಲ್ಲಿ ಭಾಷೆಯ ಮಾಂತ್ರಿಕತೆಯ ಉಲ್ಲೇಖಗಳು ದೊರಕುತ್ತವೆ".[3] ಮಾತಿಗೆ ಒಂದು ವಿಶಿಷ್ಟ ಅಲೌಕಿಕ ಶಕ್ತಿಯಿದ್ದು, ಅಂತಹಾ ಮಾತು ಅಥವಾ ಆಡುನುಡಿಗಳೇ ಬರಹ ರೂಪಕ್ಕೆ ಇಳಿದಾಗ ಅದಕ್ಕೆ ಮತ್ತಷ್ಟು ಮಾಂತ್ರಿಕ ಶಕ್ತಿ ಲಭಿಸುತ್ತದೆ. ಇಂತಹ ಮಾಂತ್ರಿಕತೆಯನ್ನು ಕಾ ತ ಚಿಕ್ಕಣ್ಣನವರು ಅವರ ಬರೆಹಕ್ಕೆ ನೀಡಿದ್ದಾರೆ. ಅಂದರೆ ಆಡುನುಡಿಯಲ್ಲೇ ಕೃತಿರಚನೆ ಮಾಡಿದ್ದಾರೆ. ಅಪ್ಪಟ ಗ್ರಾಮ್ಯ ಬರಹಗಾರರಾದ ಕಾ ತ ಚಿಕ್ಕಣ್ಣನವರು ಮಂಡ್ಯ, ಮೈಸೂರು ಪ್ರಾಂತ್ಯಗಳ ಗ್ರಾಮಗಳಲ್ಲಿ ಬಳಸುವ ಆಡುನುಡಿಯನ್ನು ತಮ್ಮ ಸಾಹಿತ್ಯ ರಚನೆಗಾಗಿ ಬಳಸಿಕೊಂಡಿದ್ದಾರೆ.

ಅವರ ಸಾಂಸ್ಕೃತಿಕ ಸ್ಮೃತಿಚಿತ್ರವಾದ 'ನಿಶಬುದದೆಡೆಗೆ' ಕೃತಿಯಿಂದ ಆಯ್ದ ಕೆಲವು ಶಬ್ದಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ. ಈ ಪದಗಳು ಅವರ ದೇಸಿ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ನಮಗೆ ಕಟ್ಟಿಕೊಡುತ್ತದೆ.

ಪಾಸಲೆ	–	ಮೈದಾನ
ಕೆರೆಹಡ್ಡಲು	–	ಕೆರೆ ಮೈದಾನ
ಹೈಕಳು	–	ಮಕ್ಕಳು
ಗುರುನೈನೋರು	–	ಗುರು ಅಯ್ಯನವರು
ಹಿನ್ಸಾಲು	–	ಹಿಂದಿನ ಸಾಲು
ಕುಂತಿದ್ದ	–	ಕುಳಿತಿದ್ದ
ಕರುಬುಗಣ್ಣು	–	ಕೆಕ್ಕರಿಸಿನೋಡು
ಅಡ್ಡಬೀಳು	–	ನಮಸ್ಕರಿಸು
ಇಳ್ಳುಗಾವಲು	–	ರಾತ್ರಿ ಪಹರೆ
ಹತಾರ	–	ಸಲಕರಣೆ
ಇಕ್ಕು	–	ಇಡು, ಬಡಿಸು
ಮುಂದಾರ	–	ಮುಂಭಾಗ
ಹೊಂಡಿಸು	–	ಹೊರಡಿಸು
ಎಸರು	–	ಸಾರು
ಬಾಡೂಟ	–	ಮಾಂಸದೂಟ
ಪತರಗುಟ್ಟು	–	ಪರದಾಡು
ಕುಡ್ಲು	–	ಕುಡುಗೋಲು
ಗೋಕುರ್ತಿ	–	ಬದುಕು
ಸರುಪ	–	ಸರ್ಪ
ಹಿಡಗಲು	–	ಪೊರಕೆ
ಮಿಟ್ಟ	–	ತಾಕೀತು
ಹಕಲೆ	–	ತಮಾಷೆ
ಪುನೈಸಿ	–	ಪುನಃ
ಅಳ್ಳಿಕುಂಚ	–	ಅಳಿಲು
ಸೈತ	–	ಸಹಿತ
ಗುಕ್ಕು	–	ತುತ್ತು
ಹಣ್ಣಾಯಿ	–	ಹಣ್ಣುಕಾಯಿ (ಬಾಳೆಹಣ್ಣು, ತೆಂಗಿನಕಾಯಿ)
ಮಾರ್ಲಮಿ	–	ಮಹಾನವಮಿ
ಇಳ್ಳೊತ್ತು	–	ರಾತ್ರಿ

ಅವರ ಕೃತಿಗಳಲ್ಲಿ ನೀಡಿರುವ ಶೀರ್ಷಿಕೆ, ಉಪಶೀರ್ಷಿಕೆಗಳು ಗ್ರಾಮ್ಯ ಭಾಷೆಯ ಪದಗಳಲ್ಲಿಯೇ ಇವೆ. ಶೀರ್ಷಿಕೆಯಿಂದಲೇ ದೇಸಿಯತೆಯನ್ನು ಗುರುತಿಸಬಹುದು. ಪಾಸಲೆಗೆ ಪಾದವೂರುತ, ಕಳ್ತನ, ಮೆರೆತ, ಒಡ್ಡು, ಹೆಚ್ಮಾಡೋದು, ಜೋಡು, ಅಡಚಲು, ನೆತ್ತಿನತ್ತು, ಕಾಚಿಮದುವೆ, ಸುಂಕಿನ ಮಾರಿ, ಪೊರ ಬಡ್ರಚಿಕ್ಕಯ್ಯನ ಹಟ್ಟಿ, ಕೋಳಿ ಎಸರು ಮುಂತಾದವು.

ಅವರ ಕೃತಿಗಳ ಹೆಸರುಗಳೂ ವಿಭಿನ್ನವಾಗಿ ತೋರುತ್ತವೆ.

ನಿಶ್ಶಬ್ದದ + ಎಡೆಗೆ – ನಿಶ್ಶಬ್ದದೆಡೆಗೆ – ನಿಶಬುದದೆಡೆಗೆ

ಕಂಡ + ಏರಿ – ಕಂಡೇರಿ

ಬಳ್ಳಿಗಳ + ಸಾಲು – ಬಳ್ಳಿಸಾಲು

ಉಕ್ಕೆಗಳ + ಸಾಲು – ಉಕ್ಕೆಸಾಲು ಉಕ್ಕೆ ಎಂದರೆ ನೇಗಿಲಿನಿಂದ ಉಳುಮೆ ಮಾಡಿದಾಗ ಮೂಡುವ ಸಾಲುಗಳೇ ಉಕ್ಕೆ ಸಾಲುಗಳು.

ಮುಂಜಾವು – ಬೆಳಿಗ್ಗೆ

ದಂಡೆ – ದಡ

ವ್ಯಕ್ತಿಗಳಿಬ್ಬರ ನಡುವೆ ನಡೆಯುವ ಸಂಭಾಷಣೆಯನ್ನು ಆಲಿಸಿದರೆ ಆ ಭಾಷೆ ಯಾವುದು, ನಮ್ಮ ದೇಶದ ಭಾಷೆಯೋ ಅಥವಾ ಬೇರೆ ದೇಶದ ಭಾಷೆಯೋ ಎಂಬುದು ನಮಗೆ ತಿಳಿಯುತ್ತದೆ. ಒಂದು ವೇಳೆ ನಮ್ಮ ರಾಜ್ಯದ ಭಾಷೆಯೇ ಆದರೂ ಕೂಡಾ ಅದು ಯಾವ ಕನ್ನಡ ಪುಂಗಳೂರು ಕನ್ನಡವೋ, ಧಾರವಾಡ ಕನ್ನಡವೋ, ಮೈಸೂರು ಕನ್ನಡವೋ ಎಂಬುದೂ ಅರಿವಿಗೆ ಬರುತ್ತದೆ. ಹಾಗೆಯೇ ಕಾ ತ ಚಿಕ್ಕಣ್ಣನವರು ತಮ್ಮ ಬರವಣಿಗೆಗೆ ಬಳಸಿರುವ ಭಾಷೆಯಿಂದಲೇ ಅದು ಗ್ರಾಮ್ಯ ಕನ್ನಡ, ಮೈಸೂರು ಪ್ರಾಂತ್ಯದ ಗ್ರಾಮಗಳಲ್ಲಿ ಬಳಸುವ ಆಡುನುಡಿ ಎಂಬುದಾಗಿ ತಿಳಿದುಬರುತ್ತದೆ. ಉದಾಹರಣೆಗೆ,

"ಅಬ್ಬಾ! ನಿನ್ನ ನೋಡ್ದೆ, ನಿನ್ನ ಸಂಗ್ತಿ ಮಾತಾಡ್ದೆ,
ನಿನ್ನ ದನಿ ಕೇಳದೇ, ನಿನ್ನ ಪರಾಕ್ರಮದ ಕಥೆ ಕೇಳ್ದೆ, ನಿನ್ನ ಕಾವ್ಯದ ಸವಿ ಉಣ್ದೆ, ಅದೇಟು ವಸಂತಗೊಳು ಹಂಗೆ ಕಳ್ದು ಹೋದೊ .....
ಉಂಡುಂಡೆಯಾಗಿ ಸುತ್ಕೊಂಡು ಕುಂತ ಆ ಒಲವಿನ ಬುತ್ತಿಗಂಟ ಹೊತ್ತು ತಂದಿವಿನಿ ನಾಯ್ಕ ..... ನೀನು ಉತ್ತು ಬಿತ್ತಿ ಬಂದ ಆ ಪ್ರೀತಿ
ಬೀಜ ಬೆಳ್ದು ಹೆಮ್ಮರ ಆಗೈತೆ. ಅದ ಕಾಪಾಡದ್ರೊಳ್ಗೇ ನನ್ನ ಆಯಸ್ಸು ಸವೆದೋಯ್ತು ....."[4]

ಇವು ವಧೂಟಿ ರೂಪಕದಿಂದ ಆಯ್ದ ಸಾಲುಗಳಾಗಿವೆ. ಕನಕದಾಸರು ಮತ್ತು ವಧೂಟಿ ಇವರ ಮಧ್ಯೆ ನಡೆಯುವ ಸಂಭಾಷಣೆಯನ್ನು ಗಮನಿಸಿದಾಗ, ಲೇಖಕರು ಕನಕದಾಸರ ಕಾಲದ ವಸ್ತುವನ್ನು ಆಯ್ದುಕೊಂಡು ಅದಕ್ಕೆ ಆಡುನುಡಿಯನ್ನು ಬಳಸಿಕೊಂಡು ರಚನೆ ಮಾಡಿರುವುದು ತಿಳಿದುಬರುತ್ತದೆ.

ಕಾ ತ ಚಿಕ್ಕಣ್ಣನವರ ಕಥೆಗಳ ಸಮಗ್ರ ಸಂಕಲನ 'ಕಂಡೇರಿ ಇದರ ಹೆಸರೇ ವಿಭಿನ್ನವಾಗಿದೆ. "ಈ ಕಂಡೇರಿ ಎಲ್ಲ ದಿಕ್ಕುದೆಸೆಗಳಿಂದಲೂ ಜನಗಳು, ದನಗಳು, ಕುರಿಗಳು, ಎಮ್ಮೆ–ಆಡುಗಳು, ಕೋಳಿ–ಕೊಕ್ಕಗಳು, ಜಲಗಳು, ಮನಗಳು, ಮಣ್ಣುಮರಳುಗಳು, ಕಡ್ಡಿಕರಟಗಳು, ಹಕ್ಕಿಪಕ್ಷಿಗಳು, ಮೀನು ನಳ್ಳಿ ಜಲಚರಗಳು ಕೂಡಿ ಆಡುವ ಕಲೆತು ಮಾತಾಡುವ ಮುನಿದು ಒಂದಾಗುವ ಕೂಡುದಾಣವಾಗಿತ್ತು. ಊರನ್ನು, ಬಯಲನ್ನು, ಆಗಸವನ್ನು ಏನನ್ನಾದರೂ ಸೈತ ಬೆಸೆಯುವ ತ್ರಾಣವಾಗಿತ್ತು. ನಮ್ಮ ಎಲ್ಲ ಏಕಲವ್ಯನಾದ ಚಿಲುಮೆಯ ತನುವಾಗಿದ್ದ ತಾವಾಗಿತ್ತು"[5]. ಊರನ್ನು, ಬಯಲನ್ನು, ಆಗಸವನ್ನು ಏನನ್ನಾದರೂ ಸೈತ ಬೆಸೆಯುವ ತಾಣವಾಗಿದ್ದ ತಮ್ಮ ಊರಿನ 'ಕಂಡೇರಿ' ಪ್ರದೇಶವೆಂದರೆ ಲೇಖಕರಿಗೆ ಅಚ್ಚುಮೆಚ್ಚು. ಆದ್ದರಿಂದಲೇ ತಮ್ಮ ಸಮಗ್ರ ಕಥಾಸಂಕಲನಕ್ಕೂ ಕಂಡೇರಿ ಎಂದೇ ಹೆಸರಿಟ್ಟಿದ್ದಾರೆ. ಕಂಡೇರಿಯೊಳಗೆ ಕವಳಿಗೆ ಎಂಬುದಾಗಿ ವಿಭಾಗ ಮಾಡಿಕೊಂಡಿದ್ದಾರೆ. ಕವಳಿಗೆ ಎಂದರೆ ಹದಿನೆಂಟು–ಇಪ್ಪತ್ತು ಎಲೆಗಳನ್ನು ಒಟ್ಟಾಗಿ ಸೇರಿಸಿ ಮಾಡಿದ ಒಂದು ಕಟ್ಟು. ಒಂದೊಂದು ಕವಳಿಗೆಯಲ್ಲೂ ಒಂದಷ್ಟು ಕಥೆಗಳನ್ನು ಸೇರಿಸುತ್ತಾರೆ. ಇಲ್ಲಿಯೂ ಗ್ರಾಮ್ಯತೆಯನ್ನು ಬಿಟ್ಟಿಲ್ಲ ಎಂಬುದು ವಿಶೇಷ.

ಕಾ ತ ಚಿಕ್ಕಣ್ಣನವರ ದಂಡೆ ಕಾದಂಬರಿಯ ನಿರೂಪಣಾ ಭಾಷೆಯೇ ಬೇರೆ, ಪಾತ್ರಗಳ ಭಾಷೆಯೇ ಬೇರೆ. ದಂಡೆ ಕಾದಂಬರಿಯ ಕಥಾವಸ್ತು ಅಂದರೆ ನಿರೂಪಣಾ ಭಾಷೆಯು ಕಾವ್ಯಾತ್ಮಕವಾಗಿದ್ದರೆ, ಪಾತ್ರಗಳ ಭಾಷೆಯು ಲೇಖಕರ ಗ್ರಾಮದ ಗ್ರಾಮ್ಯ ಕನ್ನಡವಾಗಿದೆ. ಅಂದರೆ ನಿರೂಪಣೆ ಅಥವಾ ಕಥನದ ಭಾಷೆಯೇ ಬೇರೆ. ಪಾತ್ರಗಳ ಭಾಷೆಯೇ ಬೇರೆಯಾಗಿದೆ. ಕಾದಂಬರಿಯ ನಾಯಕ ಅವ್ವಯ್ಯಳ ಪಾತ್ರವನ್ನು ಕುರಿತು ಪಿ. ಮಹಾದೇವಯ್ಯ ಈ ರೀತಿ ಅಭಿಪ್ರಾಯ ಪಡುತ್ತಾರೆ. "ದಂಡೆ ಕಾದಂಬರಿಯ ಕಥಾವಸ್ತು ರಾಷ್ಟ್ರವನ್ನು ಕಟ್ಟುವ ಮಾತುಗಳು ಒಂದು ಕಡೆಯಾದರೆ ಸಾಮಾಜಿಕ ಪರಿಸರದಲ್ಲಿರುವ ವಿವಿಧ ಬಗೆಯ ಪಾತ್ರಗಳ ಅನುಭವದ ಮಾತುಗಳು ಮತ್ತೊಂದು ಮಾದರಿಯವು. 'ಅವ್ವಯ್ಯ' ಪ್ರಸ್ತುತ ಕಾದಂಬರಿಯ ನಾಯಕಿ, ಭಾಷಿಕವಾಗಿ 'ಅವ್ವಯ್ಯ' ರಚನೆಯ ದೃಷ್ಟಿಯಿಂದ ಗಂಡನ್ನು ಪ್ರತಿನಿಧೀಕರಿಸುತ್ತದೆ. ಆದ್ದರಿಂದ ಈ ಕೃತಿಯ ನಾಯಕಿಯ ಬಗ್ಗೆ ವಿದ್ವಾಂಸರುಗಳು ತಮ್ಮ ಅಭಿಪ್ರಾಯವನ್ನು ಮಂಡಿಸುವಾಗ ಅವ್ವಯ್ಯ ಎಂದು ಪುರುಷ ಕೇಂದ್ರಿತವಾಗಿ ಸಂಬೋಧಿಸಿದರೆ ಕೆಲವರು 'ಅವ್ವಯ್ಯಳ' ಎಂದು ಸ್ತ್ರೀ ಕೇಂದ್ರಿತವಾಗಿ ಬಳಕೆ ಮಾಡಿದ್ದಾರೆ. ರಾಯಣ್ಣನ ಮತ್ತು ಗುರುರಾಜರ ಮಾತುಗಳು ರಾಷ್ಟ್ರವನ್ನು ಕುರುತಾಗಿರುವಂತಹವು".[6]

"ನೀನಲ್ಲ ನಿನ್ನಂಥೋರು ನೂರು ಜನ ಬಂದರೂ ನನ್‌ಮಗ ಕಲಿಯಾಕ್ಕೆ ಹೊಗೋದನ್ನ ತಪ್‌ಸಕ್ಕಾಗಲ್ಲ. ಈ ಕೊನೆ ಮಗಳ್ ದುರೂ ಅಯ್ಯನೋರ ಮಠ್‌ದಲ್ಲಿ ನಾಕಕ್ಷರ ಕಲೀಲಿ. ಗಂಡುಮಕ್ಕಳೇ ಕಲೀಬೇಕು ಅಂತೇನು? ಒಂದು ವ್ಯಾಳೆ ಗಂಡುಮಕ್‌ಳೇ ಕಲೀಬೇಕು ಅಂತಾದುರೆ ಇದುನ್ನೇ ನಾನು ಗಂಡು ಮಗ ಅಂತ ತಿಳ್‌ಕೊತ್ತೀನಿ.... ನೀನು ಮಾತರ ಯಾರೋ ಏನೋ ಹೇಳ್‌ತಾರೆ, ನಗ್‌ತಾರೆ ಅಂತ ಅಡ್ಡಬಾಯಿ ಹಾಕಿ ಕಣ್ಕಿಸುರು ಮಾಡ್‌ಬ್ಯಾಡ ...."[7]

ಈ ಮಾತು ಕೆಳವರ್ಗದವರು ಅದರಲ್ಲೂ ಹೆಣ್ಣುಮಕ್ಕಳು ವಿದ್ಯೆ ಕಲಿಯಬಾರದು. ಶಾಲೆಗೆ ಹೋಗಬಾರದು ಎಂಬ ಹಿಂದಿನ ಸಮಾಜದ ಅಥವಾ ಗ್ರಾಮ್ಯ ಸಮಾಜದ ಕಟ್ಟುಪಾಡುಗಳನ್ನು ಆ ಕಾಲದಲ್ಲಿ ಹೆಣ್ಣಿಗಿದ್ದ ನಿರ್ಬಂಧವನ್ನು ಸೂಚಿಸುತ್ತದೆ.

"ಕಸ್ತೂರಿ ಮನಸೊಳಗೆ ಏಳುತಿದ ಗುಮಾನಿಗಳಿಗೆ ದಾರಿ ತಡಕಾಡುತಿದ. ಎದುರುಗಡೆ ಜಗಲಿ ಮೇಲೆ ಒಟಿದ್ದ ಚಕುರ, ಕೋಲು, ಕಲ್ಲಿ ಎಲ್ಲ ಚೆಲ್ಲಾಡಿ ಹೋಗಿದ್ದು ಕಣ್ಣಿಗೆ ಬಿತ್ತು. ಅಯ್ಯಯ್ಯೋ ಯಾವ ಹಾಳುಮುಕ್ಕೋಳು ಹಿಂಗೆ ಮಾಡ್ಯವೆ ಅಂತ ಎದ್ದೋಗಿ ಆಚೆ ಬಿದ್ದಿದ್ದ ಕಲ್ಲಿ ಎತ್ತಿಟ. ಕೆಳಕ್ಕೆ ಬಿದ್ದಿದ್ದ ಚಕುರವ ನಿಧಾನಕೆತ್ತಿ ಜಗಲಿಗೆ ಒರಿಗಿಸಿಟ".[8] ಈ ರೀತಿಯ ಒತ್ತಕ್ಷರವನ್ನು ತೇಲಿಸುವ ಮಾತಿನ ಬರಹವನ್ನು ಇಲ್ಲಿ ಗುರುತಿಸಬಹುದು.

ಅನೇಕ ರೂಪಕಗಳೂ ಬಹಳಷ್ಟು ಗಾದೆ ಮಾತುಗಳು ಕೂಡ ಇಲ್ಲಿ ಪ್ರಯೋಗಗೊಂಡಿವೆ.

- ಮಣ್ಣೊಳಗಿನ ಗರಿಕೆ ಬೇರಿನ ಕಸುವಿನಂಗೆ
- ಹಳ್‌ಗರು ಹಳ್ಳ ನೆಗೆಯೊ ಪರಿ ಅದು!!
- ಬಿತ್ತಿದರೂ ಬೆಳೆಕೊಡದ ಮುಂಗಾರಾಂಭದ ಹೊಲದೊಳಗಿನ ವಿಚಿತ್ರ ದಗೆಯಂಗೆ ಈ ಎದೆ
- ಸುಮ್ಮನಿದೊನ ಭರಮುಂಗೂ ಗೆಲ್ಲುಕಾಕಿಲ್ಲ ಅಂತ
- ಕುಂಟುನ್‌ಗೆ ಎಂಟು ಜೇಸ್‌ಟೆ
- ಅಪ್ಪನ ಮಾತು ಮುಂಗಾರು ಮಳೆ – ಅವ್ವನ ಮಾತು ಆದ್ರಿ ಸೋನೆ
- ಉಚ್ಚೇಲಿ ಮೀನು ಹಿಡಿಯಾಕೆ ಬರ್‌ಬೇಡ
- ಒಬ್ಬ ಮಗ ಮಗನಲ್ಲ, ಒಂದು ಎತ್ತು ಎತ್ತಲ್ಲ
- ಕಾದ ಕಬ್ಬಿಣಕ್ಕೆ ಬಡಿದಾಗ ತಟ್ಟನೆ ಹೊಂಟ ಕಿಡಿಯಂಗೆ ಮುಂತಾದವು.

ಕಾ ತ ಚಿಕ್ಕಣ್ಣನವರ ಬರೆಹದಲ್ಲಿ ದ್ವಿರುಕ್ತಿ ಜೋಡುನುಡಿಗಳನ್ನು ಅನುಕರಣಾ ಅವ್ಯಯಗಳನ್ನು ಕೂಡಾ ಗುರ್ತಿಸಬಹುದು.

- ಚಟಾರನೆ
- ಚಿಟ್ಟನೆ ಕಾಕು ಹಾಕಿ
- ಚಣ್ಣನೆ ಮೆಲಕ್ಕೆಗರಿ
- ತೋಟ–ತುಡಿಕೆ,
- ಮನೆ–ಮಠ,
- ಹೊತ್ತು–ಗೊತ್ತು
- ಆಸ್ತಿ–ಪಾಸ್ತಿ ಇತ್ಯಾದಿ

"ಗ್ರಾಮ್ಯ ಭಾಷೆಯೆಂಬುದು ಕೇವಲ ಸಂಭಾಷಣಾ ರೂಪದಲ್ಲಿ ಮಾತ್ರ ಬಂದು ಹೋಗುತ್ತಿತ್ತು. ಆಗಿನ ಲೇಖಕರಿಗೆ–ಭಾಷೆ ಮತ್ತು ಅನುಭವದ ಸಾಧಾರಣೀಕರಣದ ಕಡೆ ನಿಗ ಇದ್ದರೆ – ಈಗ ಸಮುದಾಯದ ಅನುಭವವನ್ನು ತಾನು ಹೇಳಬೇಕಾದ ವಿಚಾರಕ್ಕೆ ಹೇಗೆ ವಿನ್ಯಾಸಗೊಳಿಸಬಹುದು ಮತ್ತು ಅಂಥ ಭಾಷೆಯನ್ನು ಎಷ್ಟೆಷ್ಟರ ಮಟ್ಟಿಗೆ ಪ್ರಾಂತೀಯ ವೈಶಿಷ್ಟ್ಯತೆಗೆ, ನಿರ್ದಿಷ್ಟೀಕರಣಕ್ಕೆ, ಆಡು

ಮಾತಿಗೆ, ಜಾನಪದೀಕರಣಕ್ಕೊಳಪಡಿಸಬಹುದೆಂಬುದರ ಕಡೆ ಹೆಚ್ಚು ಒತ್ತು ಬೀಳುತ್ತದೆ. ಏಕಕಾಲಕ್ಕೆ ಲೇಖಕ ಸಮಾಜಶಾಸ್ತ್ರಜ್ಞನೂ, ಭಾಷಾ ಸಂಶೋಧಕನೂ, ಸೃಜನಶೀಲನೂ ಆಗುತ್ತಿದ್ದಾನೆ. ಒಂದು ಸಮುದಾಯ ಬಳಸುವ, ಆ ಸಮುದಾಯಕ್ಕೆ ಮೀಸಲಾದ ಆಡು ಮಾತು, ಅದರ ಬನಿ, ಧ್ವನಿ, ಆರ್ಥ, ರೂಪಕ, ಲಯ, ಛಂದ, ಗಾದೆ, ಒತ್ತುಗಳನ್ನು ಯಥಾವತ್ತಾಗಿ ಚಿತ್ರಿಸುವ ಲೇಖಕ ಕೇವಲ ಕಥೆಯೊಂದನ್ನು ಮಾತ್ರ ಹೇಳುವುದಿಲ್ಲ. ಒಂದು ಜನಾಂಗದ, ಒಂದು ನಿರ್ದಿಷ್ಟ ಕಾಲದ ಜೈವಿಕ ಬದುಕನ್ನು ಅವರ ವಿವಿಧ ಸಂಘರ್ಷಗಳನ್ನು ಆಶಯಗಳನ್ನು ಅವನತಿಗಳನ್ನು ಹೇಳುತ್ತಿರುತ್ತಾನೆ ಎಂಬ ಪ್ರಹ್ಲಾದ ಅಗಸನಕಟ್ಟೆ ಅವರ ಮಾತನ್ನು ಇಲ್ಲಿ ಸ್ಮರಿಸಬೇಕು.

ಕಾ ತ ಚಿಕ್ಕಣ್ಣನವರ ಬರೆಹದಲ್ಲಿ ಆಟಗಳ ಹೆಸರುಗಳನ್ನು ಪಟ್ಟಿ ಮಾಡಬಹುದು. ಇಂದಿನ ವೀಡಿಯೋಗೇಮ್, ಮೊಬೈಲ್ ಗೇಮ್, ಕಂಪ್ಯೂಟರ್ ಗೇಮ್‌ಗಳು ದೇಸಿ ಆಟಗಳನ್ನೆಲ್ಲಾ ನುಂಗಿಹಾಕಿಬಿಟ್ಟಿವೆ. ಆದರೆ ಕಾ ತ ಚಿಕ್ಕಣ್ಣನವರ ಆ ಆಟಗಳ ಹೆಸರುಗಳೆಲ್ಲಾ ಸ್ಥಾನ ಪಡೆದಿವೆ. ಕಣ್ಣಾಮುಚ್ಚಾಲೆ, ಕುಂಟೆಬಿಲ್ಲೆ, ಚಿಣ್ಣೆದಾಂಡು, ಲಗೋರಿ, ಕಬಡ್ಡಿ, ದೇವರ ಆಟ, ಟೋಪಿ ಆಟ, ಕಳ್ಳಾಟ, ಚೌಕಾಬಾರ ಮುಂತಾದವು.

ಒಟ್ಟಾರೆ ಕಾ ತ ಚಿಕ್ಕಣ್ಣನವರ ಬರೆಹದ ಭಾಷೆಯನ್ನು ಕುರಿತು ಹೇಳುವುದಾದರೆ ಮೈಸೂರು ಜಿಲ್ಲೆಯ ಕೆ.ಆರ್. ನಗರದ ಸುತ್ತಮುತ್ತಲಿನಲ್ಲಿ ಗ್ರಾಮಗಳಲ್ಲಿ ಬಳಕೆಯಲ್ಲಿರುವ ಒತ್ತಕ್ಷರವನ್ನು ತೇಲಿಸಿ ಉಚ್ಚರಿಸುವ ಭಾಷೆಯನ್ನು ಬಳಕೆ ಮಾಡಿದ್ದಾರೆ.

ಹಳ್ಳಿಯ ಸಾಮಾನ್ಯನೊಬ್ಬ ಗ್ರಾಮೀಣ ಭಾಗದ ಕಥೆಗಳನ್ನು ಅಥವಾ ಗ್ರಾಮೀಣ ಬದುಕು ಬವಣೆಗಳನ್ನು ತನ್ನದೇ ಶೈಲಿಯಲ್ಲಿ ಹೇಳುತ್ತಿದ್ದಾನೆ ಎನಿಸುತ್ತದೆ. ಮೈಸೂರು ಜಿಲ್ಲೆಯ ಗ್ರಾಮ್ಯ ಕನ್ನಡದ ಅವರ ಬರೆಹವನ್ನೇ ಕರ್ನಾಟಕದ ಇತರ ಭಾಗಗಳಲ್ಲಿ ಬೇರೆ ಬೇರೆ ರೀತಿಯಾದ ಕನ್ನಡ ಬಳಕೆ ಮಾಡುವ ಕನ್ನಡಿಗರಿಗೆ ಅರ್ಥವಾಗುವುದು ಸ್ವಲ್ಪ ಕಷ್ಟವೇ. ಆರಂಭದಲ್ಲಿ ಸ್ವಲ್ಪ ಕಷ್ಟವಾದರೂ ನಂತರ ಅದು ಸುಲಭವೆನಿಸುತ್ತದೆ.

ಅಭ್ಯಸಿಸಿದಾಗ ಗ್ರಾಮಗಳಲ್ಲಿ ಗ್ರಾಮ್ಯ ಜೀವನವನ್ನು ಅನುಭವಿಸುವ, ಆನಂದಿಸುವ, ಬಡತನದಲ್ಲಿ ಬೇಯುವ, ಏನೇ ಆದರೂ ಗ್ರಾಮವೇ ತನ್ನುಸಿರು ಎಂದು ಪರಿಗಣಿಸುವ ಸಾಮಾನ್ಯ ರೈತನ ಧ್ವನಿಯಂತೆಯೂ, ಕೂಲಿಯೊಬ್ಬನನ್ನು ಪ್ರತಿನಿಧಿಸುವ ಬರೆಹವಾಗಿ ಕಂಡುಬರುತ್ತದೆ. ದಂಡೆ ಕಾದಂಬರಿಯಂತೂ ಗ್ರಾಮೀಣ ಪ್ರದೇಶದಲ್ಲಿ ಬವಣೆ ಪಡುವ ಹೆಣ್ಣುಮಗಳೊಬ್ಬಳ ಸಾಧಾರಣ ಚಿತ್ರಣವನ್ನು ನಮ್ಮ ಮುಂದೆ ತಂದಿಡುತ್ತದೆ.

ಕಾ ತ ಚಿಕ್ಕಣ್ಣನವರ ಬರಹದಲ್ಲಿ "ನಿಸರ್ಗ ಪರಿಸರ, ಗ್ರಾಮ ಪರಿಸರ, ವ್ಯಕ್ತಿ ಪರಿಸರ ಮೂರು ನೆಲೆಯನ್ನು ಒಟ್ಟಾಗಿ ಗ್ರಹಿಸಿ ಹೆಣೆದಂತಿರುವ ನಿರೂಪಣೆಗೆ ಪದ್ಯಗಂಧಿಯಾದ ಭಾಷಾಶೈಲಿ ಮೆರುಗು ನೀಡಿದೆ"[9] ಎಂಬಂತೆ ಭಾಸವಾಗುತ್ತದೆ. ಆಡುನುಡಿಯನ್ನೇ ಅಂದರೆ ಕುಗ್ರಾಮವೊಂದರಲ್ಲಿ ಬಳಕೆಯಾಗುವ ಸಾಮಾನ್ಯ ಭಾಷೆಯನ್ನೇ ಬಳಸಿಕೊಂಡು ಸಾಹಿತ್ಯ ರಚನೆಗೆ ತೊಡಗಿಕೊಂಡಿರುವುದರಿಂದ ಕಾ ತ ಚಿಕ್ಕಣ್ಣನವರ ಸಾಹಿತ್ಯದಲ್ಲಿ ಬರಹದ ಭಾಷೆ ವಿಶೇಷವಾಗಿ ನಿಲ್ಲುತ್ತದೆ.

ಅಡಿಟಿಪ್ಪಣಿಗಳು

1. ಮರುಳ ಸಿದ್ದಪ್ಪ ಕೆ., ಮುಂಜಾವಿನ ನಾವೀನ್ಯತೆ, ದಂಡಪ್ಪ ಎಚ್ (ಸಂ.), ನೀರೊಳಗಣ ಬೆಳಕು, ಸಿರಿವರ ಪ್ರಕಾಶನ, ಬೆಂಗಳೂರು, ಪುಟ. 86.
2. ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾ ಸ್ವರೂಪ, ರೂಪ ರಶ್ಮಿ ಪ್ರಕಾಶನ, ಧಾರವಾಡ, 2012, ಪುಟ. 1.
3. ನಾರಾಯಣ ಕೆ.ವಿ., ಭಾಷೆ (ಸಂ.), ಭಾಷೆಯ ಮಾಂತ್ರಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿಶ್ವಕೋಶ – 1, ಪುಟ 10.
4. ಕಾ ತ ಚಿಕ್ಕಣ್ಣ, ವಧೂಟಿ, ಸಂವಹನ ಪ್ರಕಾಶನ, ಶಿವರಾಂ ಪೇಟೆ, ಮೈಸೂರು, ಪುಟ. 13.
5. ಕಾ ತ ಚಿಕ್ಕಣ್ಣ, ನಿಶಬುದದೆಡೆಗೆ, ಕಂಡೇರಿ, ಸುಮುಖ ಪ್ರಕಾಶನ, ಬೆಂಗಳೂರು, 2007, ಪುಟ. 225.
6. ದಂಡಪ್ಪ ಎಚ್ (ಸಂ.) ದಂಡೆ ಕಾದಂಬರಿಯ ಭಾಷಿಕ ಶೈಲಿ, ಡಾ. ಪಿ. ಮಹಾದೇವಯ್ಯ, ನೀರೊಳಗಣ ಬೆಳಕು, ಸಿರಿವರ ಪ್ರಕಾಶನ, ಬೆಂಗಳೂರು, ಪುಟ. 181.
7. ಕಾ ತ ಚಿಕ್ಕಣ್ಣ, ದಂಡೆ, ಕಥನ ಪ್ರಕಾಶನ, ಬೆಂಗಳೂರು, 2002, ಪುಟ. 13.
8. ಕಾ ತ ಚಿಕ್ಕಣ್ಣ, ಮುಂಜಾವು, ಕೊಪ್ಪಲು ಪ್ರಕಾಶನ, ಬೆಂಗಳೂರು, 1989, ಪುಟ. 175.
9. ಮರಳ ಸಿದ್ದಪ್ಪ ಕೆ., ಮುಂಜಾವಿನ ನಾವೀನ್ಯತೆ, ದಂಡಪ್ಪ ಎಚ್., ದಂಡೆ (ಸ), ಸಿರಿವರ ಪ್ರಕಾಶನ, ಬೆಂಗಳೂರು, ಪುಟ. 87.

ಜಯಂತ ಕಾಯ್ಕಿಣಿ ಅವರ ಕೆಲವು ಆಯ್ದಕಥೆಗಳಲ್ಲಿ ಅಭಿವ್ಯಕ್ತಗೊಂಡಿರುವ ಸಶಕ್ತ ಸ್ತ್ರೀ ಚಿತ್ರಣ

ಆಶಾ. ಎಸ್

ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೦೬

ಮುಂಬಯಿ ನಗರದ ವಾತಾವರಣ, ಪಶ್ಚಿಮದ ಸಂಸ್ಕೃತಿ, ಸಾಹಿತ್ಯಗಳ ಗಾಢವಾದ ಪ್ರಭಾವಗಳಿಂದಾಗಿ ಜಯಂತ ಕಾಯ್ಕಿಣಿ ಅವರು ಅನೇಕ ಬಗೆಗಳಲ್ಲಿ ಪುರುಷರ ಸರಿಸಮಾನರಾಗಿ ಸಮರ್ಥತೆಯಿಂದ ಕೂಡಿದ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿಕೊಟ್ಟಿದ್ದು ನಿಜಕ್ಕೂ ಮಹತ್ವದ ಸಂಗತಿ, ಸ್ತ್ರೀಯು ಪ್ರಧಾನ ಕೇಂದ್ರವಾಗಿ ಕಥೆಯ ಓಟದೊಂದಿಗೆ ಸಾಗಿರುವುದನ್ನು ಜಯಂತ ಕಾಯ್ಕಿಣಿ ಅವರ ಸಮುದ್ರ, ತನ್ಮಯ ಸೂಜಿ, ಅಮೃತಬಳ್ಳಿ ಕಷಾಯ, ಮೋಹಿಯ ಸತ್ಸಂಗ ಮಧುಬಾಲಾ ಮುಂತಾದ ಕಥೆಗಳಲ್ಲಿ ನೋಡಬಹುದು. ಈ ನಿಟ್ಟಿನಲ್ಲಿ ಭಾಮಿನಿ ಸಪ್ತಪದಿ, ಸಮುದ್ರ ಮತ್ತು ತನ್ಮಯ ಸೂಜಿ ಕಥೆಗಳನ್ನು ವಿಶ್ಲೇಷಣೆಗೊಳಪಡಿಸುವ ಒಂದು ಪ್ರಯತ್ನ ಇಲ್ಲಿ ಮಾಡಲಾಗಿದೆ.

ಭಾಮಿನಿ ಸಪ್ತಪದಿ ಕಥೆಯು ಸಾಮಾಜಿಕ ಪರಿಪಲನೆಯಲ್ಲಿ ಭಾಗಿಯಾದ ಸ್ತ್ರೀಯ ಮನೋಗ್ರಹಿಕೆಯನ್ನು ಅವಳ ಬದ್ಧತೆಯನ್ನು ಹಿಡಿದಿಡುವ ಕಥೆಯಾಗಿದೆ,

ಪ್ರಸ್ತುತ ಕಥನದಲ್ಲಿನ ಕಥಾನಾಯಕಿ ಭಾಮಿನಿಯ ಯೋಜನೆಗೆ ವ್ಯಕ್ತಿತ್ವಕ್ಕೆ ಅವಳ ಮನೋಧೋರಣೆಗಳಿಗೆ ಮಹತ್ವ ನೀಡುವ ಮೂಲಕ ಒಬ್ಬ ಸ್ವಾಭಿಮಾನಿ ಬಿಟ್ಟ ಹೆಣ್ಣಿನ ಮನೋಭೂಮಿಕೆಯನ್ನು ಮಾನವೀಯ ಅಂತಃಕರಣವನ್ನು ತೆರೆದಿಡುವ ಲೇಖಕರ ಪ್ರಯತ್ನ ಯಶಸ್ವಿಯಾಗಿದೆ.

ಸಮುದ್ರ ಕಥೆಯಲ್ಲಿನ ಸೀತಮ್ಮನ ಜಲನವಲಗಳು ಕಾರ್ಯ ಚಟುವಟಿಕೆಗಳು ಆಕೆಯನ್ನು ಜೀವನೋತ್ಸಾಹವಿರುವ ಆತ್ಮವಿಶ್ವಾಸ ಹೊಂದಿದ ಸಶಕ್ತ ಸ್ತ್ರೀ ಎಂಬುದಾಗಿ ಕಥನ ಸಾಬೀತುಪಡಿಸುವಂತಿದೆ ಎನ್ನಬಹುದು, ಹಾಗೆಯೇ ತನ್ಮಯಿಯ ಸೂಜಿ ಕಥೆಯಲ್ಲಿನ ಕುಶೀಕಾಕಿಯು ಕೂಡ ಉನ್ನತ ಪದವಿ ಪಡೆದವಳಾಗಿದ್ದು ಎಲ್ಲರ ಮನಸ್ಸನ್ನಲಿತು ಸಂಸಾರ ನಿಭಾಯಿಸುವ ಸಬಲ ಸ್ತ್ರೀ ಎನಿಸಿದ್ದಾಳೆ.

ಒಟ್ಟಾರೆ ಪ್ರಸ್ತುತ ಕಥೆಗಳಲ್ಲಿನ ಭಾಮಿನಿ, ಸೀತಮ್ಮ ಮತ್ತು ಕುಶೀಕಾಕಿ ಪಾತ್ರಗಳ ಮೂಲಕ ಜಯಂತ ಕಾಯ್ಕಿಣಿ ಅವರು ಕೌಟುಂಬಿಕ ಹಂತದಲ್ಲಿ ಮಾತ್ರವಲ್ಲ. ಸಾಮಾಜಿಕವಾಗಿಯೂ ಸ್ತ್ರೀ ಅಂತಃಶಕ್ತಿಯನ್ನು ಎತ್ತಿಹಿಡಿದಿದ್ದಾರೆ. ಮಾನವೀಯ ಕಾಳಜಿ ಮತ್ತು ಅಂತಃಸಾಮರ್ಥ್ಯದ ಸ್ತ್ರೀಯನ್ನು ಪುರುಷರಿಗಿಂತ ಎತ್ತರ ಸ್ಥಾನದಲ್ಲಿ ನಿಲ್ಲಿಸುತ್ತದೆ ಎಂದು ಗುರುತಿಸಿದ್ದಾರೆ. ಜೊತೆಗೆ, ಈ ಪಾತ್ರಗಳು ಮಾನವೀಯ ಅಂತಃಸತ್ವದಿಂದ ಸಾಮಾಜಿಕ ಕಳಕಳಿ ಹೊಂದಿ, ಉತ್ತಮ ಸಮಾಜದ ನಿರ್ಮಾಣದ ಆಶಯವನ್ನು ಪ್ರಕಟಿಸುತ್ತಿವೆ ಎನ್ನಬಹುದು.

ನವ್ಯಸಾಹಿತ್ಯದ ಕಿರಿಯ ತಲೆಮಾರಿನಲ್ಲಿ ಕಾಣಿಸಿಕೊಳ್ಳುವ ಬಹುಮುಖ ಪ್ರತಿಭೆಯ ಜಯಂತ ಕಾಯ್ಕಿಣಿ ಅವರು ಕಥೆ, ಕಾವ್ಯ, ನಾಟಕ, ಅಂಕಣಬರಹ, ಕಿರುತೆರೆ, ಪತ್ರಿಕಾರಂಗ, ಚಿತ್ರರಂಗ ಹೀಗೆ ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ತಮ್ಮ ವಿಶಿಷ್ಟ ಬರವಣಿಗೆ ಶೈಲಿಯಿಂದ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ ಎನ್ನಬಹುದು. ಅವರು ಮಧ್ಯಮ ವರ್ಗದ ನಗರಜೀವನವನ್ನು ಮತ್ತು ಜನಸಾಮಾನ್ಯರ ಸಮಸ್ಯೆಗಳನ್ನು, ಅವರ ಅತಂತ್ರ ಸ್ಥಿತಿಯ ಬದುಕಿನ ಹೋರಾಟವನ್ನು ಬಿಂಬಿಸುವುದರ ಜೊತೆಗೆ ಸೂಕ್ಷ್ಮ ಸಂವೇದನಾಶೀಲತೆಯಿಂದ ಮನುಷ್ಯನ ಭಾವನಾಲೋಕದೊಳಗೆ ಹೊಕ್ಕು ಮಾನವೀಯ ಸಂಬಂಧಗಳ ಮುಖಾಮುಖಿಗೆ, ಮಾನವೀಯ ಅಂತಃಕರಣಕ್ಕೆ ಹೆಚ್ಚು ಒತ್ತನ್ನು ನೀಡಿರುವುದರಿಂದ ಅವರ ಕಥೆಗಳು ಯಶಸ್ವಿ ಹಾದಿಯತ್ತ ಸಾಗಿತೆನ್ನಬಹುದು.

ಮಾನವೀಯತೆ ಒಂದು ಜೀವನಸ್ಪಂದ ಮಿಡಿತ, ಪ್ರತಿಯೊಂದು ಜೀವದಲ್ಲಿಯೂ ಇರಲೇಬೇಕಾದ ಒಂದು ಜೀವದಂಶ ಮನುಷ್ಯತ್ವದ ಪ್ರತೀಕ. ಪ್ರೀತಿ, ಕರುಣೆಯಂತೆ ಮಾನವೀಯತೆಯೂ ಕೂಡ ಮನುಷ್ಯನಲ್ಲಿರಬೇಕಾದಂತಹ ಅತ್ಯಮೂಲ್ಯವಾದ ಗುಣ. ಮಾನವೀಯ ಕಳಕಳಿಯಿಲ್ಲದ ಮನೋನಿಗ್ರಹವಿಲ್ಲದ ಆದರ್ಶಕ್ಕೆ ಬೆಲೆ ಇಲ್ಲ. ಕೌಟುಂಬಿಕವಾಗಿಯೂ, ಸಾಮಾಜಿಕವಾಗಿಯೂ, ಮಾನವೀಯತೆ ಮುಖ್ಯ. ಮಾನವೀಯ ಭಾವದ ಕೊರತೆ ಆರೋಗ್ಯಕರ ಸಮಾಜವನ್ನು ನಿರ್ಮಿಸಲಾರದು. ಮಾನವೀಯತೆಯ ಕೊಂಡಿಯೇ ಅಪರಿಚಿತತನದಲ್ಲೂ ಪರಿಚಯದ ಬೆಸುಗೆ ಹಾಕಿ ತನ್ನ ಮನುಷ್ಯತ್ವವನ್ನು ಮೆರೆಸುತ್ತದೆ. ಈ ನಿಟ್ಟಿನಲ್ಲಿ ಜಯಂತ ಕಾಯ್ಕಿಣಿ ಅವರ ಅಮೃತಬಳ್ಳಿ ಕಷಾಯ, ಸಂತೆಯ ದಿನ, ಭಾಮಿನಿ ಸಪ್ತಪದಿ, ಚಾರ್‌ಮಿನಾರ್, ನೀರು ಮುಂತಾದ ಕತೆಗಳಲ್ಲಿ ಅಪರಿಚಿತತನದಲ್ಲೂ ಪರಿಚಿತ ಭಾವವನ್ನು ತೋರ್ಪಡಿಸುವಂತಹ ಅಂಶಗಳು ಕಂಡು ಬಂದಿದ್ದು ಮಾನವೀಯ ಮೌಲ್ಯ ಪರಾಕಾಷ್ಠತೆಯನ್ನು ಮುಟ್ಟಿ ಓದುಗರ ಗಮನಸೆಳೆಯುವಂತಿದೆ.

ಈ ಹಿನ್ನೆಲೆಯಲ್ಲಿ ಜಯಂತ ಕಾಯ್ಕಿಣಿ ಅವರ ಉತ್ತಮ ಕಥಾಸಂಕಲನ ವೆನಿಸಿರುವ ಚಾರ್‌ಮಿನಾರ್ ಕೃತಿಯಿಂದಾಯ್ದ 'ನೀರು' ಕಥೆಯನ್ನು ವಿಶ್ಲೇಷಣೆಗೊಳಪಡಿಸುವ ಮೂಲಕ ಪ್ರಸ್ತುತ ಕಥೆಯಲ್ಲಿನ ಚಂದ್ರಹಾಸ, ಕುಂಜುವಿಹಾರಿ, ಕಾಂಚುಬೆಹನ್ ಮತ್ತು ಬನಿಯಾ ಪಾತ್ರಗಳಲ್ಲಿ ಮನುಷ್ಯತ್ವ, ಮಾನವೀಯ ಅಂತಃಕರಣ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದನ್ನು ಜೊತೆಗೆ ಕಥನದ ಮುಖ್ಯ ಆಶಯವಾದ ಮಾನವೀಯ ಸಂವೇದನೆಯ ನೆಲೆಯತ್ತ ನಿಂತು ಓದುಗರನ್ನು ಗಮನ ಹರಿಸುವಂತೆ ಮಾಡಿರುವ ಜಯಂತ ಕಾಯ್ಕಿಣಿ ಅವರ ಭಾಷಾಭಿವ್ಯಕ್ತಿ ಮತ್ತು ಭಾವಾಭಿವ್ಯಕ್ತಿಯನ್ನು ಅರ್ಥೈಸುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

'ನೀರು' ಕಥೆಯು ಮಾನವೀಯ ಸಂವೇದನೆಯ ಭಾವನೆಗಳ ಮಿಡಿತದೊಂದಿಗೆ ಸಾಮಾಜಿಕ ಸ್ವರೂಪವನ್ನು ಅರ್ಥೈಸಿಕೊಡುವಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿದೆ ಎನ್ನಬಹುದು. ಯಾವುದೇ ಗುರುತು ಪರಿಚಯವಿರದ ವ್ಯಕ್ತಿಗೆ ಸಹಾನುಭೂತಿ ತೋರಿ ಮಾನವೀಯತೆಯನ್ನು ಮೆರೆಸುವುದು ಓದುಗರ ಗಮನ ಸೆಳೆಯುತ್ತದೆ. ಬೆಂಗಳೂರಿನಿಂದ ಮುಂಬಯಿಗೆ ಹೊರಟ ವಿಮಾನದಲ್ಲಿ ಚಂದ್ರಹಾಸ ಮತ್ತು ಸಂತೋಷನ್‌ರ ಪರಿಚಯವಾಗುತ್ತದೆ. ಕಾಯಿಲೆಯನ್ನು ಗುಣಪಡಿಸಿಕೊಳ್ಳಲು ಸಂತೋಷನ್ ಮುಂಬಯಿಗೆ ಬಂದ ಕಾರಣವನ್ನು ತಿಳಿಸಿದಾಗ, ವಯಸ್ಸಾದ ಆತನನ್ನು ನೋಡಿ ಒಬ್ಬನನ್ನೇ ಬಿಟ್ಟು ಹೋಗಲು ಮನಸ್ಸಾಗದೆ ಹೀಗೆ ಹೇಳುತ್ತಾನೆ. "ಸರ್ ಇರಲಿ ಅವಸರವಿಲ್ಲ, ನನಗಂಥ ಕೆಲಸವಿಲ್ಲ. ಬೇಕಿದ್ದರೆ ನಿಮ್ಮ ಅಳಿಯ ಮುಂದಿನ ಫ್ಲೈಟ್‌ನಲ್ಲಿ ಬಂದು ತಲುಪುವ ತನಕ ನಿಮ್ಮ ಜತೆ ಇರಲು ನಾನು ರೆಡಿ" (ಪುಟ ೪೫, ಚಾರ್‌ಮಿನಾರ್) ಎಂದು ಹೇಳಿ ಆಸ್ಪತ್ರೆಗೆ ಕರೆದೊಯ್ಯುತ್ತಾನೆ. ಚಂದ್ರಹಾಸನ ಈ ಮಾತಿನಲ್ಲಿ ಮಾನವೀಯ ಅಂತಃಕರಣದ ಎಳೆಯಿರುವುದು ಗಮನಾರ್ಹ. ವಯಸ್ಸಾದ ಅವರನ್ನು ಒಬ್ಬರನ್ನೇ ಕಳಿಸಲು ಮನಸ್ಸಾಗದೆ ಅವರನ್ನು ಕರೆದೊಯ್ಯಲು ಅಳಿಯ ಬರುವವರೆಗೂ ಜೊತೆಯಲ್ಲಿರುವೆನೆಂದು ಧೈರ್ಯ ತುಂಬಿ, ತಾನೇ ಸ್ವತಃ ಟ್ಯಾಕ್ಸಿಯನ್ನು ಕರೆದು ಆಸ್ಪತ್ರೆಗೆ ಕರೆದೊಯ್ಯುವಲ್ಲಿ ಅವರಿಗೆ ಸಹಾಯ ಮಾಡುತ್ತಿರುವ ಮನಸ್ಸಿನ ಹಿಂದೆ ಮನುಷ್ಯತ್ವ, ಮಾನವೀಯ ಕಾಳಜಿ ಇರುವುದು ಗೋಚರಿಸುತ್ತದೆ.

ಕುಂಜು ವಿಹಾರಿಯ ಟ್ಯಾಕ್ಸಿಯಲ್ಲಿ ಸಂತೋಷನ್‌ನನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಪಡೆದ ನಂತರ ವಿಮಾನ ನಿಲ್ದಾಣಕ್ಕೆ ಹಿಂದಿರುಗುವ

ಸಂದರ್ಭದಲ್ಲಿ ಜಡೀ ಮಳೆಯಲ್ಲಿ ಸಿಲುಕಿಕೊಂಡಾಗ, ಕುಂಜುವಿಹಾರಿಯು ಯಾರೋ ಪರಿಚಯವಿರದ, ಸಂಬಂಧವಿರದ ಪ್ರಯಾಣಿಕರನ್ನು ತನ್ನ ಗೆಳೆಯನ ಮನೆಗೆ ಕರೆದೊಯ್ದು, ಗೆಳೆಯನ ಹೆಂಡತಿಯಾದ ಕಾಂಚು ಬೆಹನ್‌ಳಿಗೆ ಮೊದಲಿಗೆ ತನ್ನನ್ನು ಪತಿಯ ಸ್ನೇಹಿತನೆಂದು ಪರಿಚಯಿಸಿಕೊಂಡು ನಂತರ ಜಡೀಮಳೆಯಿಂದಾಗಿ ರಸ್ತೆ ಮುಚ್ಚಿದೆ ಅದಕ್ಕಾಗಿ ಚಂದ್ರಹಾಸ ಮತ್ತು ಸಂತೋಷನ್‌ರನ್ನು ಕರೆತಂದುದಾಗಿ ಹೇಳಿದಾಗ ಆಕೆ ಪ್ರೀತಿಯಿಂದ ಬರಮಾಡಿಕೊಂಡು ಉಪಚರಿಸುವಲ್ಲಿ ಮಾನವೀಯತೆ ಎದ್ದು ತೋರುವಂತಿದೆ.

ಕಾಂಚು ಬೆಹನ್‌ಳು ಕೊಟ್ಟ ನೀರನ್ನು ಕುಡಿದಾಗ ಸಂತೋಷನ್‌ನಿಗೆ 'ಇದುವರೆವಿಗೂ ತಾನು ಇಂತಹ ನೀರನ್ನು ಕುಡಿದಿಲ್ಲ' ಎಂಬ ಭಾವ ವ್ಯಕ್ತ ಪಡಿಸುವಲ್ಲಿ ತಾನು ಅದೇ ನೀರನ್ನು ಎಪ್ಪತ್ತು ದಶಕಗಳ ಹಿಂದೆ ಇದೇ ಮುಂಬಯಿಯಲ್ಲಿ ಹಣಕ್ಕಾಗಿ ಮಾರಿದ್ದೇನಲ್ಲವೆ, ಹಾಗೇ ಮಾರಿದ್ದರಿಂದಲೇ ತನಗೆ ಕಾಯಿಲೆ ಬಂದಿರುವುದಾಗಿ ಮನೋವಿಶ್ಲೇಷಣೆ ಮಾಡಿಕೊಳ್ಳುವಲ್ಲಿ ತನ್ನ ತಪ್ಪಿನ ಅರಿವಾಗಿರುವುದು ವ್ಯಕ್ತಗೊಂಡಿದೆ. ಹಾಗೆಯೇ ಕುಂಜುವಿಹಾರಿಯ ಗ್ರಹಿಕೆಯಂತೆ ಆತ ಹೇಳಿದ್ದ ಮಾತು "ಮುಂಬಯಿಯಲ್ಲಿ ಹಣ ನೀರಿನಂತೆ ಹರೀತದೆ ಸಾಬ್, ಕೆಲವರಿಗೆ ಕಾಣುತ್ತೆ ಅದು ಕೆಲವರಿಗೆ ಕಾಣಲ್ಲ, ಕಂಡವರು ಅದನ್ನು ಮೊಗೆದು ಮೊಗೆದು ತಮ್ಮದಾಗಿಸಿಕೊಳ್ಳುತ್ತಾರೆ. ಟ್ಯಾಕ್ಸಿಯಲ್ಲಿ ಪಯಣಿಸುತ್ತಾರೆ ಕಾಣದವರು ಟ್ಯಾಕ್ಸಿ ನಡೆಸುತ್ತಾರೆ" (ಚಾರ್‌ಮಿನಾರ್ ಪುಟ, ೪೬) ಎಂಬುದನ್ನು ನೆನೆದು ತಾನು ಕಾಣುವಂತಹ ನೀರನ್ನೇ ಹಣಕ್ಕಾಗಿ ಮಾರಿದೆನಲ್ಲ ಎಂದು ಆತನಿಗೆ ಹೇಳುತ್ತಾ ಪರಿತಪಿಸಿ, ಪಶ್ಚಾತ್ತಾಪ ಪಡುವಲ್ಲಿ ಸಂತೋಷನ್‌ನ ವ್ಯಕ್ತಿತ್ವ ಅನಾವರಣಗೊಂಡಿದೆ.

ಪ್ರಸ್ತುತ ಕಥೆಯಲ್ಲಿನ ಆಶಯ ತುಂಬಾ ಮಹತ್ವದೆನಿಸುತ್ತದೆ. ತಪ್ಪು ಮಾಡುವಾಗ ಯಾರಿಗಾದರೂ ಒಂದು ಮನಸ್ಸು ಬೇಡವೆನ್ನುತ್ತಿರುತ್ತದೆ. ಆ ಕ್ಷಣದಲ್ಲಿ ಒಳ್ಳೆಯ ಮನಸ್ಸಿನ ಮಾತನ್ನು ಕೇಳಿ ನಡೆದರೆ ಮುಂದಿನ ಅನಾಹುತಗಳು ತಪ್ಪುತ್ತದೆ. ಇಲ್ಲವಾದರೆ ಬದುಕಿನುದ್ದಕ್ಕೂ ಆ ಒಂದು ತಪ್ಪು ನಮ್ಮನ್ನು ಕಾಡುತ್ತಿರುತ್ತದೆ. ಪಾಪ ಪ್ರಜ್ಞೆ ಪಶ್ಚಾತ್ತಾಪ ಪಡುವಂತೆ ಪರದಾಡಿಸುತ್ತದೆ ಎಂಬ ಅಂಶವನ್ನು ಸಂತೋಷನ್‌ನ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಜಯಂತ ಅವರ ಕೈಚಳಕದಲ್ಲಿ ಭಾವಾಭಿವ್ಯಕ್ತಿಗೊಂಡಿರುವ ಕಥನದಲ್ಲಿನ ಈ ಸಾಲುಗಳು ಓದುಗರ ಮನಸ್ಸನ್ನು ಸೆರೆಹಿಡಿಯುವಂತಿದೆ. ಮಾನವೀಯತೆಯನ್ನು ಮೆರೆಸುವ ನಿಟ್ಟಿನಲ್ಲಿ ಪ್ರಸ್ತುತ ಕಥೆ ಯಶಸ್ಸು ಕಂಡಿದೆ ಎಂದು ಹೇಳಬಹುದು.

'ನೀನು ಇವತ್ತು ತಿನ್ನಿಸಿದ ರೊಟ್ಟಿಗಿಂತ, ಕುಡಿಸಿದ ನೀರಿಗಿಂತ ರುಚಿಯಾದದ್ದನ್ನು ನಾನು ಈ ಜನ್ಮದಲ್ಲೇ ಪಡೆದಿಲ್ಲ. ಕುಂಜ್ ಭಯ್ಯಾ ಅದು ಅಮೃತ' .... ಅಪರಿಚಿತರು ತನಗೆ ಮಾಡಿದ ಈ ಉಪಚಾರಕ್ಕೆ ಕೃತಜ್ಞನಾಗಿ ಸಂತಸಪಡುತ್ತಾನೆ. ಹಾಗೆಯೇ ತನ್ನ ತಪ್ಪನ್ನು ನೆನೆದು "ನನಗೆ ಈ ಕಾಯಿಲೆ ಯಾಕೆ ಬಂತು ಗೊತ್ತಾ? ನನಗೆ ಗೊತ್ತಿದೆ ಅದು. ನಾನು ಈ ದೇಶದಲ್ಲಿ ನೀರು ಮಾರಿದ ಮೊದಲಿಗರಲ್ಲಿ ಒಬ್ಬ ಹೌದು ೭೦ರ ದಶಕದಲ್ಲೇ ಬಾಟಲಿಯಲ್ಲಿ ನೀರು ಮಾರಿದವ ನಾನು ತಪ್ಪು ಅದು. ನನ್ನ ಮನಸ್ಸು ಬೇಡ ಬೇಡ ಅಂತ ಹೇಳ್ತಾ ಇತ್ತು. ಆದರೂ ಕೇಳಲಿಲ್ಲ ನಾನು. ಕಾಣದ ನೀರಿನಂತೆ ದುಡ್ಡು ಹರಿಯುತ್ತದೆ. ಅಂದಿಯಲ್ಲ ಕುಂಜ್‌ಭಯ್ಯಾ, ನಾನು ಕಾಣೋ ನೀರನ್ನೇ ದುಡ್ಡಿಗೆ ಮಾರಿದೆ! ಸರಿ ಅನಿಸಿದ್ದನ್ನು ಮಾಡೋದರಲ್ಲಿ ಇರೋ ಸುಖಕ್ಕಿಂತ ಹೆಚ್ಚಿನ ದುಃಖ ತಪ್ಪು ಅನಿಸಿದ್ದನ್ನು ಮಾಡೋದರಲ್ಲಿದೆ ಪಾಪ ಅದು. ಮನಸ್ಸಿನ ಮಾತು ಕೇಳದ ತಪ್ಪಿಗೆ ನನ್ನ ದೇಹವೇ ನನಗೆ ಕೊಟ್ಟಿರುವ ಶಿಕ್ಷೆ ಇದು. ಅನುಭವಿಸುತ್ತಿದ್ದೇನೆ, ಅನುಭವಿಸಲೇಬೇಕು" (ಚಾರ ಮಿನಾರ್, ಪುಟ. ೫೫) ಎಂಬ ಸಂತೋಷನ್‌ನ ಪಶ್ಚಾತ್ತಾಪದ ಮಾತಿನ ಹಿಂದೆ ಮನಸ್ಸಿಗೆ ವಿರುದ್ಧವಾಗಿ ನಡೆದುಕೊಳ್ಳಬಾರದೆಂಬುದರ ಜೊತೆಗೆ ಮನುಷ್ಯನಿಗೆ ಮನುಷ್ಯತ್ವ ಮಾನವೀಯ ಅಂತಃಕರಣವಿರಬೇಕು. ಹಣವೇ ಎಲ್ಲಾ ಅಲ್ಲ ಎಂಬುದನ್ನು ಒತ್ತಿ ಹೇಳುತ್ತಿರುವ ಅಂಶ ಅಡಗಿದೆ.

ತಮ್ಮ ಮೊಮ್ಮಗಳ ಮದುವೆ ಆಗುವವರೆಗಾದರೂ ತಾನು ಬದುಕಬೇಕು ಎನ್ನುವ ಆಸೆ ಹೊತ್ತ ವೃದ್ಧ ಜೀವ ಸಂತೋಷನ್‌ಗೆ ವೈದ್ಯರು ಧೈರ್ಯ ತುಂಬುತ್ತಾರೆ. ಹಾಗೆಯೇ, ತನಗೆ ಸಹಾಯ ಮಾಡಿದ ಚಂದ್ರಹಾಸ, ಕುಂಜುವಿಹಾರಿ, ಕಾಂಚುಬೆಹನ್, ಹಣ್ಣು ಹಂಚುತ್ತಿರುವವರು, ಬನಿಯಾ ಎಲ್ಲರೂ ತನ್ನವರೆಂಬ ಭಾವ ಆತನಿಗಾಗುತ್ತದೆ.

ಪ್ರಸ್ತುತ ಕಥೆಯಲ್ಲಿನ ಗಮನ ಸೆಳೆದು ಮಾನವೀಯತೆ ಮೆರೆಸಿದ ಮತ್ತೊಂದು ಪಾತ್ರ ಬಿಸ್ಲೇರಿ ಬನಿಯ ಟ್ರಾಫಿಕ್‌ನಲ್ಲಿ ಜಡಿಮಳೆಗೆ ಸಿಲುಕಿದಾಗ ಕುಡಿಯುವ ನೀರಿಲ್ಲದೆ ಪರದಾಡುವ ಪರಿಸ್ಥಿತಿ ಬಂದಾಗ ಜನರೆಲ್ಲಾ ಕಂಗಾಲಾಗುತ್ತಾರೆ. ಈ ಸಂದರ್ಭದಲ್ಲಿ ಚಂದ್ರಹಾಸನು ಬಿಸ್ಲೇರಿ ಮಾರುವ ಬನಿಯಾನನ್ನು ಕೇಳುವುದು ಹೀಗೆ.

"'ಈ ಬಾಟಲಿಯ ಕ್ರೇಟೇ ಕೊಟ್ಟು ಬಿಡಿ, ಬೇಕಿದ್ದರೆ ಡಬಲ್ ಹಣ ತಗೊಳ್ಳಿ' ಎಂದ. ಬನಿಯಾ ವಿಚಿತ್ರವಾದ, ವಿಷಣ್ಣವಾದ ನಗು ಕೊಟ್ಟು – ಏನಪ್ಪಾ, ಆತನ ಪೂತಿಗೆ ಪ್ರತ್ಯುತ್ತರವಾಗಿ ಬನಿಯಾ ಹೇಳುವುದು ಈ ರೀತಿ 'ನೀನೊಬ್ನೆ ಏನಪಾ ಸಿಕ್ಕಿ ಹಾಕಿಕೊಂಡೋನು? ನೋಡ್ರಾ ಇಲ್ವಾ? ಹೆಂಗಸರು .... ಮಕ್ಕಳು, ಮುದುಕರು ಎಲ್ರೂ ಸಿಕ್ಕಿ ಹಾಕಿಕೊಂಡಿದ್ದಾರೆ .... ಎಲ್ರಿಗೂ ಬೇಕಲ್ವಪ್ಪಾ, ಇರೋದೇ ಇಷ್ಟು ನೀನು ಯುವಕ ಹಟ್ಟಾ – ಖಟ್ಟಾ ಇದೀಯಾ, ಒಂದು ಸಾಕು ನಿನಗೆ, ಗೆಳೆಯನಿಗೆ ಒಂದು ತಗೋ, ಇದು ದುಡ್ಡು ಗಳಿಸೋ ಸಮಯಾನೇನಪ್ಪಾ? ತಗೋ, ಎರಡು ಬಾಟಲಿ, ಮುಖಬೆಲೆ ೨೦ ರೂಪಾಯಿ ಕೊಡು" (ಪುಟ, ೫೪) ಎಂದು ಹೇಳುವ ಬನಿಯ ಎಲ್ಲರ ಮನಸ್ಸನ್ನು ಸೂರೆಗೊಳ್ಳುತ್ತಾನೆ. ಯಾವ ಸಂಬಂಧವೂ ಇಲ್ಲದಿರುವ ಜನರ ಬಗೆಗಿರುವ ಆತನ ಕಾಳಜಿ, ಮಾನವೀಯ ಅಂತಃಕರಣ ಗಮನಸೆಳೆಯುತ್ತದೆ. ಆತ ಬೇಕಾದಷ್ಟು ಹಣಕ್ಕಾಗಿ ನೀರನ್ನು ಮಾರಬಹುದಿತ್ತು. (ಸಂತೋಷನ್‌ನ ರೀತಿ) ಸದ್ಯದ ಪರಿಸ್ಥಿತಿಯಲ್ಲಿ

ಚಂದ್ರಹಾಸನಂತಹವರು ಬೇಕಾದಷ್ಟು ಹಣವನ್ನು ಬನಿಯನಿಗೆ ನೀಡುತ್ತಿದ್ದರು, ಆತನು ಕೇಳಬಹುದಿತ್ತು. ಆದರೆ ಪ್ರಾಮಾಣಿಕನಾದ ಬನಿಯಾ ಗಳಿಸುವ ಉದ್ದೇಶ ಹೊಂದದೆ, ಮನುಷ್ಯತ್ವವನ್ನು ಮೆರೆದು ಮಾನವೀಯತೆಯ ಸಂದೇಶ ನೀಡಿದ್ದಾನೆ ಎಂಬುದನ್ನಿಲ್ಲಿ ಗಮನಿಸಬೇಕಾಗುತ್ತದೆ.

ಹಾಗೆಯೇ ಕಥನದೊಳಗೆ ಕೆಲವು ಪ್ರಸಂಗಗಳನ್ನು ಲೇಖಕರು ತಂದಿದ್ದಾರೆ. ಅಮಿತಾಭನ ಆರೋಗ್ಯ ಸುಧಾರಣೆಯಾಗಲಿ, ಚೇತರಿಸಿಕೊಳ್ಳಲೆಂದು ಸಾವಿರಾರು ಕಿಲೋಮೀಟರ್ ದೂರದಿಂದ ಸೈಕಲ್ ತುಳಿದುಕೊಂಡು ಹೋಗಿ ಗಂಗಾ ಯಮುನಾ ಸಂಗಮದ ನೀರನ್ನು ಬಿಂದಿಗೆಯಲ್ಲಿ ತರುವ ಅನಾಮಿಕ ಅಭಿಮಾನಿ ಇರುವುದು ಮತ್ತು ತನ್ನ ತಾಯಿಯ ಕಷ್ಟ, ಸಂಕಟವೆಲ್ಲವೂ ಒಂದೇ ಬಾರಿಗೆ ಅಂತ್ಯವಾಗಿ ಬಿಡಲೆಂದು ಆಲೋಚಿಸುತ್ತಾ ಪೆಪ್ಸಿಯಲ್ಲಿ ಪೆಸ್ಟಿಸೈಡ್ ಇರಬಹುದೆಂದು ಅದನ್ನೇ ಕುಡಿದು ಸಾಯಬಹುದಲ್ಲವೇ ಎಂದು ತರ್ಕಿಸುವ ಎಂಟು ವರ್ಷದ ಮುಗ್ಧ ಬಾಲಕನು ಕಥೆಯೊಳಗಿರುವುದು ಮನಸ್ಸಿಗೆ ತಾಗುವಂತಿದೆ ಎನ್ನಬಹುದು. ಕಥೆಯಲ್ಲಿ ಬರುವ ಗಂಗೆ, ಬಿಸ್ಲೇರಿ, ಪೆಪ್ಸಿ ಎಲ್ಲವೂ ಒಂದು ರೀತಿಯಲ್ಲಿ ವ್ಯಾಪಾರೀಕರಣದೊಳಗೆ ಒಂದಾಗಿರುವುದೇ ಆಗಿದೆ. ಆದರೂ ಅದರೊಳಗೆ ಒಂದು ಕಡೆ ಮಾನವೀಯ ನೆಲೆಯಲ್ಲಿ ಮೂಡಿಬಂದಿರುವಂತಹ ಮಾನವ ಪ್ರೀತಿ, ಸಹಜ, ಅಭಿಮಾನ, ಇತರರ ನೋವಿಗೆ, ಭಾವಗಳಿಗೆ ಪರಸ್ಪರ ಸ್ಪಂದಿಸುವ ಮಾನವೀಯ ಕಳಕಳಿ ಅರಳಿರುವುದನ್ನು ಕಾಣುವ ಕಣ್ಣು ಇಲ್ಲಿ ಮುಖ್ಯವಾಗಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಅದೇ ಜಯಂತ ಕಾಯ್ಕಿಣಿ ಅವರ ಬರವಣಿಗೆಯ ವಿಶೇಷತೆ ಎಂದರೆ ತಪ್ಪಾಗಲಾರದು ಎನಿಸುತ್ತದೆ.

ನೀರಿನ ಬಹುಮುಖ ಸಂವೇದನಾ ಸಾಧ್ಯತೆಗಳು ಕಥೆಯೊಳಗೆ ಬಂದಿದೆ. ಮನುಷ್ಯನ ಪ್ರಾಣಿಗಳ ಹಾಗೆ ಪ್ರತಿಯೊಂದು ಜೀವರಾಶಿಗೆ ಮೂಲಭೂತ ಅವಶ್ಯಕತೆಯಾದ ನೀರು ಪ್ರಸ್ತುತ ಕಥೆಯೊಳಗೆ ಮಾನವ ಸಂವೇದನೆಯ ಮೂಲಭೂತ ಅಂತಃಕರಣದ ಸ್ವರೂಪವಾಗಿ ರೂಪಕತೆ ಪಡೆದುಕೊಳ್ಳುವಂತೆ ಮಾಡಿ ಜೀವ -- ಜೀವಗಳ ಭಾವಗಳೊಳಗೆ ಬೆರೆತು ಮಿಡಿಯುವಂತೆ ಮಾಡಿರುವ ಜಯಂತ ಕಾಯ್ಕಿಣಿ ಅವರ ಪ್ರಯತ್ನ ಯಶಸ್ವಿಯಾಗಿದೆ ಎನ್ನಬಹುದು.

ಪ್ರವಾಹವಾಗಿ ಹರಿದ ನೀರು ಮುಂಬಯಿಯ ಬದುಕನ್ನು ದಿಕ್ಕೆಡಿಸಿದ ವರ್ತಮಾನ, ಅದೇ ನೀರು ದಾರಿಯಲ್ಲಿ ಹರಿಯುವಾಗ ಸಂತಸದಿಂದ ನಲಿದಾಡುವ ಜನರು, ನೀರನ್ನೇ ಮಾರಾಟ ಮಾಡಿದ್ದಕ್ಕಾಗಿ ತನಗೆ ಕಾಯಿಲೆ ಬಂದಿದೆ ಎಂದು ವ್ಯಥೆ ಪಡುವ ಸಂತೋಷನ್, ಬಿಸ್ಲೇರಿ ನೀರನ್ನು ಮಾರಾಟ ಮಾಡುವ ಬನಿಯಾ ಸಂಬಂಧವಿರ'ದಿದ್ದರೂ ಎಲ್ಲರಿಗೂ ಸಮಾನವಾಗಿ ಸದ್ಬಳಕೆಯಾಗಲಿ ಎಂದು ಚಿಂತಿಸಿ ಲಾಭಕ್ಕಾಗಿ ಮಾರದೆ ಉಳಿಯುವಲ್ಲಿನ ಆತನ ಮಾನವೀಯತೆಯ ಅಂತಃಕರಣ ಎಲ್ಲವೂ ನೀರಿನ ಬಹುಮುಖ ಸಂವೇದನಾ ಸಾಧ್ಯತೆಗಳಾಗಿ ಕಾಣಿಸಿಕೊಳ್ಳುವಂತೆ ಮಾಡಿರುವ ಲೇಖಕರ ಕೈಚಳಕ, ಯೋಚನಾ ಲಹರಿ, ಅದನ್ನು ಅಭಿವ್ಯಕ್ತಿಸುವಲ್ಲಿನ ಭಾಷಾಭಿವ್ಯಕ್ತಿ, ಭಾವಾಭಿವ್ಯಕ್ತಿ ಅರ್ಥಪೂರ್ಣವಾಗಿ ಕಥೆಯುದ್ದಕ್ಕೂ ಮೂಡಿಬಂದಿರುವುದನ್ನು ಗಮನಿಸಬಹುದಾಗಿದೆ.

"ಪ್ಯಾರೇ ಮೋಹನನ ಗೆಳೆಯನಾದ ಹಸಮುಖ್ ಆಲಿಯ ಸ್ನೇಹಿತ ನಾನು ಎಂದೇ ಪರಿಚಯಿಸಿಕೊಳ್ಳುವಾಗ ಅಪರಿಚಿತತನದಲ್ಲೂ ಒಂದು ಪರಿಚಯದ ನೆಲೆ ಒಡಮೂಡುತ್ತದೆ. ಭಿನ್ನ ಸಾಂಸ್ಕೃತಿಕ, ಧಾರ್ಮಿಕ ಪರಿವೇಶಗಳ ಏಕೀಕರಣದಿಂದ ಮೂಡಿದ ಮಾನವೀಯ ಸಾಮಾಜಿಕತೆಯ ಸ್ವರೂಪ ಇದು. ಅಂತಹ ಮಾನವೀಯ ಸಂವೇದನೆಯೇ 'ಮುಂಬಯಿ' ಎಂಬ ಮಹಾಪರಿಧಿಯ ಸಾಮಾಜಿಕತೆಯಲ್ಲಿ ವಿಶಿಷ್ಟತೆಯನ್ನು, ಆಪ್ತತೆಯನ್ನು, ವಿಲಕ್ಷಣ ಸುರಕ್ಷಿತ ಭಾವವನ್ನು ಏರ್ಪಡಿಸಿರುವುದು ಎಂಬ ಗ್ರಹಿಕೆಯೇ ಕಥನದ ನಿರೂಪಣೆಯ ಹಿಂದಿರುವುದು, ಗೋಚರವಾಗುತ್ತದೆ. ಅಂತಹ ಆಪ್ತತೆಯು ಮಾತ್ರ ನಗರದ ಎಲ್ಲಾ ಜಂಜಡ, ತಾಕಲಾಟ ಮತ್ತು ಧಾವಂತದ ನಡುವೆಯೂ ನೆಮ್ಮದಿಯನ್ನೂ, ಆತ್ಮೀಯತೆಯನ್ನು ಮೂಡಿಸುವುದು. ಈ ನಿಟ್ಟಿನಲ್ಲಿ ಪ್ರಸ್ತುತ ಕಥನ ಮಾನವೀಯ ಸಂವೇದನೆಯ ನೆಲೆಯಲ್ಲಿ ಮುಂಬಯಿಯ ಎಲ್ಲಾ ಗಡಿಬಿಡಿಯ ನಡುವೆಯೂ ಮೌನವನ್ನು, ನಿರಾತಂಕ, ನೆಮ್ಮದಿಯನ್ನು ಗ್ರಹಿಸಲೆತ್ನಿಸಿದೆ" ಎಂಬುದನ್ನು ಗಮನಿಸಬೇಕಾಗುತ್ತದೆ" (ಕಥಾಸ್ವರೂಪ, ಪುಟ. ೨೬೪).

ಒಟ್ಟಾರೆಯಾಗಿ ಹೇಳುವುದಾದರೆ, ಮಾನವೀಯ ನೆಲೆಯಲ್ಲಿ ಮೂಡಿಬಂದಿರುವ ನೀರು ಕಥೆಯಲ್ಲಿನ ಚಂದ್ರಹಾಸ, ಕುಂಜುವಿಹಾರಿ, ಕಾಂಚು ಬೆಹೆನ್, ಬನಿಯಾ ಹೀಗೆ ಎಲ್ಲಾ ಪಾತ್ರಗಳಲ್ಲಿ ಜಯಂತ ಕಾಯ್ಕಿಣಿ ಅವರು ವ್ಯಕ್ತಪಡಿಸಿರುವ ಮನುಷ್ಯತ್ವ, ಮಾತೃತ್ವ, ಮಾನವೀಯ ಅಂತಃಕರಣವು ಕಥನದ ಮುಖ್ಯ ಆಶಯವಾದ ಮಾನವೀಯ ಸಂವೇದನೆಯ ನೆಲೆಯತ್ತ ನಿಂತು ಓದುಗರನ್ನು ಗಮನ ಹರಿಸುವಂತೆ ಮಾಡುತ್ತದೆ ಎಂಬುದನ್ನಿಲ್ಲಿ ಗ್ರಹಿಸಬೇಕಾಗುತ್ತದೆ.

ಪರಾಮರ್ಶನ ಗ್ರಂಥಗಳು

೧. ಜಯಂತ ಕಾಯ್ಕಿಣಿ ಕಥೆಗಳು (ಪ್ರಶಸ್ತಿ ವಿಜೇತ ಮೂರು ಪುಸ್ತಕಗಳ ಸಂಪುಟ) **ಜಯಂತ ಕಾಯ್ಕಿಣಿ**, ಅಂಕಿತ ಪುಸ್ತಕ ಬೆಂಗಳೂರು ೨೦೦೩

೨. ಚಾರ್‌ಮಿನಾರ್ **ಜಯಂತ ಕಾಯ್ಕಿಣಿ** ಅಂಕಿತ ಪುಸ್ತಕ ಬೆಂಗಳೂರು ೨೦೧೨

೩. ಜಯಂತ ಕಾಯ್ಕಿಣಿ ವಾಚಿಕೆ **ಸಿ.ಎನ್. ರಾಮಚಂದ್ರನ್** ನುಡಿ ಪುಸ್ತಕ ಬೆಂಗಳೂರು ೨೦೧೦

೪. ಮಯೂರ (ಮಾಸಿಕ, ಆಗಸ್ಟ್ ೨೦೧೩)

೫. ಅಂತರ್ಜಾಲ ಮಾಹಿತಿ

ಕನ್ನಡ ನವ್ಯ ಕಾವ್ಯ ಮತ್ತು ವಿಜ್ಞಾನ

ಟಿ. ಎಂ. ಗೀತಾಂಜಲಿ

ಸಾಹಿತ್ಯ ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಸೃಷ್ಟಿಯಾಗುತ್ತದೆ. ಸಂಸ್ಕೃತಿಯೆಂದರೆ ಸಮಾಜವೊಂದರ ಸಮಷ್ಟಿ. ಒಂದು ಸಂಸ್ಕೃತಿ ಅಥವಾ ಬದುಕು, ಪರಂಪರಾಗತ, ಸಾಂಪ್ರದಾಯಿಕ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ರಾಜಕೀಯ, ವೈಜ್ಞಾನಿಕ, ತಾಂತ್ರಿಕ ಹೀಗೆ ಎಲ್ಲಾ ಆಯಾಮಗಳ ಫಲಸ್ವರೂಪವಾಗಿರುತ್ತದೆ. ಮನುಷ್ಯನ ಬದುಕು ಈ ಎಲ್ಲಾ ಆಯಾಮಗಳ ಜಟಿಲ ಸಂಯೋಗವಾಗಿರುತ್ತದೆ. ಸಾಹಿತಿಯಾದವನು ತನ್ನ ಸುತ್ತಲಿನ ಬದುಕನ್ನು ತನ್ನ ಕೃತಿಯಲ್ಲಿ ಚಿತ್ರಿಸುತ್ತಾನೆ ಅಥವಾ ಒಂದು ಸಾಂಸ್ಕೃತಿಕ ಸಂದರ್ಭವೊಂದನ್ನು ಕಟ್ಟಿಕೊಡುತ್ತಾನೆ. ತನ್ನ ಸುತ್ತಲಿನ ಬದುಕಿನಲ್ಲಿ ವಿಜ್ಞಾನ ಹಾಸು ಹೊಕ್ಕಾಗಿದ್ದರೆ ಅದು ಸಾಹಿತ್ಯದಲ್ಲಿ ಪ್ರತಿಬಿಂಬಿಸುವುದು ಅನಿವಾರ್ಯ. ಈ ದಿಸೆಯಲ್ಲಿ ಕನ್ನಡದ ನವ್ಯಕವಿಗಳು ವಿಜ್ಞಾನಕ್ಕೆ ಸ್ಪಂದಿಸಿದ ರೀತಿ ಈ ಪ್ರಬಂಧದ ವಸ್ತು.ಮನುಷ್ಯನ ವೈಜ್ಞಾನಿಕ ಜೀವನ ಅಥವಾ ತಾಂತ್ರಿಕ ಕೌಶಲ್ಯತೆಯೆಂಬುದು ಆದಿಮಾನವ ಕಾಡುಪ್ರಾಣಿಗಳಂತೆ ಜೀವಿಸುವುದನ್ನು ಬಿಟ್ಟು ಒಂದೆಡೆ ನೆಲೆನಿಂತು ಬದುಕಲು ಪ್ರಾರಂಭಿಸಿದೊಡನೆ ಹುಟ್ಟಿಕೊಂಡಿದೆ. ಪ್ರಕೃತಿಯನ್ನು ತನ್ನ ಆಕಾರಕ್ಕೆ ತಕ್ಕಂತೆ ಒದಗಿಸಿಕೊಳ್ಳುವ ಸಂದರ್ಭದಲ್ಲಿ, ಕಾಡು ಪ್ರಾಣಿಗಳನ್ನು ಕೊಲ್ಲಲು, ಕಲ್ಲುಗಳನ್ನು ಹದಗೊಳಿಸುವ ಸಂದರ್ಭದಲ್ಲಿಯೇ ವಿಜ್ಞಾನ ಮತ್ತು ತಾಂತ್ರಿಕತೆ ಎಂಬುವುದು ಜನ್ಮ ತಾಳಿದೆ. ಈ ನೆಲೆಯಲ್ಲಿ ಕಲೆಗಳೂ ವಿಜ್ಞಾನ ಎನಿಸಿಕೊಳ್ಳುತ್ತವೆ. ವಿಜ್ಞಾನ ಎಂದರೆ ವಿಶಿಷ್ಟವಾದ ಜ್ಞಾನ ಎಂಬ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಕಲೆ ಮತ್ತು ವಿಜ್ಞಾನ ಎರಡರ ಅಂತಿಮ ಗುರಿಯೂ ಆನಂದ ಅಥವಾ ರಸ. ವಿಜ್ಞಾನ ಸೃಷ್ಟಿಯ ರಹಸ್ಯವನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಶೋಧಿಸುತ್ತಾ ಈ ಆನಂದಾನುಭೂತಿಯನ್ನು ಪಡೆದರೆ, ಕಲಾವಿದ ಮನುಷ್ಯನ ಬದುಕನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಶೋಧಿಸುತ್ತಾ ಈ ಆನಂದಾನುಭೂತಿಯನ್ನು ಪಡೆಯುತ್ತಾನೆ. ಈ ಎರಡು ಜ್ಞಾನಗಳು ಭಿನ್ನವಾಗುವುದು ಎಲ್ಲಿ ಎಂದರೆ ಅವುಗಳನ್ನು ಅಭ್ಯಾಸ ಮಾಡುವ ಕ್ರಮದಲ್ಲಿ. ವೈಜ್ಞಾನಿಕ ಜ್ಞಾನ, ಬೌದ್ಧಿಕ ಪರಿವೀಕ್ಷಣೆಯ ಗಡಸು ದಾರಿಯತ್ತ ಕರೆದೊಯ್ಯುತ್ತದೆ. ಕಲೆಗಳು ಆಸ್ವಾದನೆ, ಅನುಸಂಧಾನದ, ಆನಂದ ಎಂಬ ಲಲಿತ ಮಾರ್ಗದೆಡೆ ಕೊಂಡ್ಯೆಯುತ್ತದೆ.

ವಿಜ್ಞಾನ ಚರಿತ್ರೆಯನ್ನು ಜಿ.ಟಿ. ನಾರಾಯಣರಾವ್[1] ರವರು ನಿಕೊಲಾಸ್ ಕೊಪರ್ನಿಕಸ್‌ನ(1473 –1543) 'ಪರಿಭ್ರಮಣೆಗಳು' ಗ್ರಂಥದಿಂದ ಗುರುತಿಸುತ್ತಾರಾದರೂ, ಅವನ ಹಿಂದಿನ ಪ್ರಾಚೀನ ಗ್ರೀಕರನ್ನೂ, ಅರೇಬಿಯನ್ನರ ಕೊಡುಗೆಗಳನ್ನು 15 ಅಧ್ಯಾಯಗಳಲ್ಲಿ ಸ್ಮರಿಸುತ್ತಾರೆ. ಎರಟಾಸ್ತನೀಸ್‌ನ (ಕ್ರಿ.ಪೂ. ಸು. 276–196) ಮನುಷ್ಯನ ವಿಶ್ವಕೇಂದ್ರವಾದ, ಪೈತಾಗೋರಸ್‌ನ (ಕ್ರಿ.ಪೂ. 582–497) ಪೂರ್ಣಾಂಕವಾದ, ಪ್ಲೇಟೋ (ಕ್ರಿ.ಪೂ. 427–347) ನ ಗಣಿತವಾದ , ಅರಿಸ್ಟಾಟಲ್ (ಕ್ರಿ.ಪೂ. 384–322), ಕ್ಲಾಡಿಯಸ್ ಟಾಲೆಮಿ (ಕ್ರಿ.ಶ 1 ಅಥವಾ 2) ಯ ಭೂಕೇಂದ್ರವಾದವನ್ನು ಅವರು ಹಾದು ಬರುತ್ತಾರೆ. ಪಶ್ಚಿಮ ದೇಶಗಳ ಬೌದ್ಧಿಕ, ಆಧ್ಯಾತ್ಮಿಕ ಮತ್ತು ರಾಜಕೀಯ ಇತಿಹಾಸದ ಸಂಧಿಕಾಲ 15 ಮತ್ತು 16ನೇ ಶತಮಾನಗಳು. 'ದಂಗೆಕೋರ' ಮತ್ತು 'ಸಿಡಿತಲೆಗಳ' ಮುಖರಿಡ ಮಾರ್ಟಿನ್ ಲ್ಯೂಥರ್ (1483–1546) ಇವನ ಹಿರಿತನದಲ್ಲಿ ಪ್ರೊಟೆಸ್ಟೆಂಟ್ ಪಂಥದ ಜನನ (1530). ಅದು ಪುನರುಜ್ಜೀವನ ಕಾಲ (remaissance) ಕ್ಕೆ ನಾಂದಿ ಹಾಡಿದುದು. ಮೊದಲ ಜ್ಞಾನ ಕ್ರಾಂತಿ ಯೋಹನ್ ಗುಟನ್‌ಬರ್ಗ್ (1398–1468, ಜರ್ಮನಿಯ ಉಪಜ್ಞೆಕಾರ) ಯಾಂತ್ರಿಕ ವಿಧಾನದಿಂದ ಪುಸ್ತಕ ಮುದ್ರಣ ಮಾಡುವ ತಂತ್ರಶೋಧಿಸಿದ್ದು, ಕಲಡಕೂಸು ಕೊಲಂಬಸ್ (1451–1506)ನ ಅಮೇರಿಕಾನ್ವೇಷಣೆ. ಲಿಯೊನಾರ್ಡೊ ಡ ವಿಂಚಿ (1452– 1519) ಯ ಅಂಗಛೇದನ ವಿಜ್ಞಾನ (anatomy), ಚಕ್ರಯಂತ್ರ ನಿರ್ಮಾಣ. ನಿಕೊಲಾಸ್ ಕೊಪರ್ನಿಕಸ್ (1473– 1543) ನ ಕೊಪರ್ನಿಕಸ್ ಸಿದ್ಧಾಂತ ಅಥವಾ 'ಸೂರ್ಯಕೇಂದ್ರ ಸಿದ್ಧಾಂತ'ದ ಆವಿಷ್ಕಾರ, ಇದರೊಂದಿಗೆ ವೈಜ್ಞಾನಿಕ ಯುಗದ ಪ್ರವರ್ತನೆ. ಗೆಲಿಲಿಯೋ (1562–1642) ಕೊಪರ್ನಿಕಸ್ 'ಸೂರ್ಯಕೆಂದ್ರ ಸಿದ್ಧಾಂತ'ವನ್ನು ಎತ್ತಿಹಿಡಿದು 'ಡಿಸ್ಕೋರ್ಸ್‌ಸ್ ಕನ್ಸರ್ನಿಂಗ್ ನ್ಯೂ ಸೈನ್ಸಸ್' (1638) ಗ್ರಂಥ ರಚಿಸಿ ಆಧುನಿಕ ಬಲವಿಜ್ಞಾನಕ್ಕೆ ನಾಂದಿ ಹಾಡಿದುದು. ಸರ್ ಐಸಾಕ್ ನ್ಯೂಟನ್ (1642– 1727) ಚಲನೆಯ ನಿಯಮಗಳನ್ನೂ, ಗುರುತ್ವಾಕರ್ಷಣೆಯ ನಿಯಮಗಳನ್ನು ನೀಡಿದುದು. ಡಾರ್ವಿನ್ (1809-1882)The orgin of specis by means of natural section (1858) ಗ್ರಂಥವನ್ನು ರಚಿಸಿದುದು. The viyoge of the bleege ಹಾಗೂ The orgic of speacis' ಗ್ರಂಥಗಳು. 19ನೇ ಶತಮಾನದಲ್ಲಿ ಮಾನವಶಾಸ್ತ್ರ ಮನಃಶಾಸ್ತ್ರ, ಸಮಾಜಶಾಸ್ತ್ರ ಹೀಗೆ ಹಲವು ನೂತನ ಶಾಸ್ತ್ರಗಳ ಆವಿಷ್ಕಾರ. ಆಲ್ಬರ್ಟ್ ಐನ್‌ಸ್ಟೀನ್ (1879–1955) ನ ಸಾಮಾನ್ಯ ಸಾಪೇಕ್ಷ ಸಿದ್ಧಾಂತ (1915). ಹೀಗೆ ಎರಡು ಸಾವಿರ ವರ್ಷಗಳ ಇತಿಹಾಸವಿರುವ, ಬಹಕೇಕ ಪಶ್ಚಿಮ ರಾಷ್ಟ್ರಗಳ ಆವಿಷ್ಕಾರವಾದ ವಿಜ್ಞಾನ ಅಥವಾ ವೈಜ್ಞಾನಿಕ ಪರಿಕಲ್ಪನೆ ಭಾರತಕ್ಕೆ ಬರತೊಡಗಿದ್ದು ಬ್ರಿಟೀಷರ ಮೂಲಕ ವಾಸ್ಕೋಡಿಗಾಮ ಭಾರತವನ್ನು 1498 ರಲ್ಲಿ ಕಂಡು ಹಿಡಿದನು. ಭಾರತೀಯರ ಮೇಲೆ ಬ್ರಿಟೀಷರ ಅಧಿಪತ್ಯಕ್ಕೆ ಮೂಲಭೂತ ಕಾರಣ ಅವರಲ್ಲಿದ್ದ ಅತ್ಯಾಧುನಿಕ ವೈಜ್ಞಾನಿಕ ಸಲಕರಣೆಗಳು ಹಾಗೆಯೇ ಭಾರತೀಯರು ಬ್ರಿಟಿಷರ ವಿರುದ್ಧ ಮೊಟ್ಟಮೊದಲ ಸ್ವಾತಂತ್ರ ಸಂಗ್ರಾಮ (1857) ನಡೆಸಲು ಕಾರಣ ಬ್ರಿಟಿಷರು ಹೊಸದಾಗಿ ತರಿಸಿದ್ದ ಎನ್‌ಫೀಲ್ಡ್ ಬಂದೂಕುಗಳಿಗೆ ಬಳಸುವ ತೋಟಾ ಹೊರಹೊದಿಕೆಗೆ ಕೊಬ್ಬು ಸವರಿದ ಕಾಗದವನ್ನು ಸುತ್ತಿದುದು. 1857ರಲ್ಲಿ ಮುಂಬಯಿ, ಕಲ್ಕತ್ತ, ಮತ್ತು ಮದರಾಸು ವಿಶ್ವವಿದ್ಯಾಲಯ ಸ್ಥಾಪಿತವಾಯಿತು. 1919ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾಯಹಿತು.

ಪಾಶ್ಚಿಮಾತ್ಯರ ಈ ಎಲ್ಲ ವೈಜ್ಞಾನಿಕ ಚರಿತ್ರೆಗೆ ಭಿನ್ನವಾಗಿ ಕ್ರಿ.ಪೂ. 400, 500 ವರ್ಷಗಳಿಂದಲೂ (ಹರಪ್ಪ –ಮೆಹೆಂಜದಾರೋ ನಾಗರೀಕತೆ) ದೀರ್ಘಕಾಲದ ಇತಿಹಾಸ ಹೊಂದಿದ್ದ ಭಾರತದೇಶ ಖಗೋಳಶಾಸ್ತ್ರ, ಗಣಿತಶಾಸ್ತ್ರ, ರಸಾಯನಿಕ ಶಾಸ್ತ್ರ ಮತ್ತು ಭೌತಶಾಸ್ತ್ರಗಳಲ್ಲಿ ಪಶ್ಚಿಮದೇಶಗಳ ವೈಜ್ಞಾನಿಕ ಚರಿತ್ರೆಯಷ್ಟೇ ಮುಂದುವರೆದಿದ್ದಿತು. "ಮಧ್ಯಕಾಲೀನ ಕರ್ನಾಟಕ"[2] ಇತಿಹಾಸದಲ್ಲಿ ಉಲ್ಲೇಖಿತವಾಗಿರುವಂತೆ ವಿದ್ಯಾಮಾಧವ ಸೂರಿ ಎಂಬ ಖಗೋಳ ವಿಜ್ಞಾನಿಯು 'ಮುಹೂರ್ತ ದರ್ಶನ' ಅಥವಾ 'ವಿದ್ಯಾಮಾಧವೀಯ' ಎಂಬ ಕೃತಿಯನ್ನು ರಚಿಸಿದನು. ಕೆಳದಿಯ ಅರಸನಾದ ವೆಂಕಟಪ್ಪ ನಾಯಕನ ಆಶ್ರಯದಲ್ಲಿ, ಒಬ್ಬ ಅಶ್ವನಿಪುಣನು 'ಶಿವತತ್ವರತ್ನಾಕರ' ಕೃತಿಯನ್ನು ಪಶುವೈದ್ಯಕ್ಕೆ ಸಂಬಂಧಿಸಿದಂತೆ ರಚಿಸಿದನು. 'ಶಿವತತ್ತ್ವರತ್ನಾಕರವು' ರಸಾಯನಶಾಸ್ತ್ರ ಪವನಶಾಸ್ತ್ರ (meteorology)ದ ಸಂಗತಿಗಳನ್ನು ಒಳಗೊಂಡಿದೆ. ವಿಜ್ಞಾನ ಮತ್ತು ಯಂತ್ರ ವಿಜ್ಞಾನಾದಿಗಳ ಬಗ್ಗೆ ವಿವೇಚಿಸಿದೆ. ಪಾದರಸ ಮೂಲವಾದ ತಯಾರಿಕೆಗಳಿಂದ ಚಿಕಿತ್ಸೆ ಮಾಡುವುದರ ವಿವರಣೆಯಿದೆ. 1715ರಲ್ಲಿ 'ಬಾಲವೈದ್ಯದ ಚೆಂಗುವ' ಎಂಬ ಕಾವ್ಯ ನಾಮದಿಂದ ಕರೆದುಕೊಂಡ ಲೇಖಕನು ಕನ್ನಡದಲ್ಲಿ 'ಲೀಲಾವತಿ' ಎಂಬ ಕ್ಷೇತ್ರಗಣಿತ ಅಥವಾ ರೇಖಾಗಣಿತಕ್ಕೆ ಸಂಬಂಧಿಸಿದ ಕೃತಿಯನ್ನು ರಚಿಸಿದ್ದಾನೆ. ಇದೇ ಲೇಖಕನು 1715ರಲ್ಲಿ ವಜ್ರ ಮತ್ತು ನವರತ್ನಗಳ ವಿಷಯವನ್ನು ಕುರಿತ 'ರತ್ನಶಾಸ್ತ್ರ'ವೆಂಬ ಗ್ರಂಥ ಬರೆದಿದ್ದಾನೆ. ವಿಜಯನಗರದ ಕಾಲದಲ್ಲಿ ದೊರೆಯುವ ತೀರ ಮೊತ್ತಮೊದಲನೆ ವೈದ್ಯಗ್ರಂಥ 'ಆರ್ಯವೇದ ಸುಧಾನಿಧಿ' ಇದನ್ನು ಏಕಾಂಬರನಾಥನು ಬರೆದನು. ಹದಿನೈದನೇ ಶತಮಾನದಲ್ಲಿ, ಎರಡನೆ ದೇವರಾಯನ ಕಾಲದಲ್ಲಿ 'ಸಾಲಗ್ರಾಮೆ' ಎಂದು ಹೆಸರಾದ ಒಂದು ವೈದ್ಯರ ತಂಡವೇ ಇತ್ತು.

ಭಾರತವು ಬ್ರಿಟಿಷರ ವಸಾಹತುವಾಗಿ ಮ್ಲಾರ್ಘಟ್ಟ ಸಂದರ್ಭದಲ್ಲಿ ಇಂಗ್ಲೆಂಡಿನ ಕೈಗಾರಿಕೆಗಳಿಗೆ ಭಾರತ ಕಚ್ಚಾವಸ್ತುವನ್ನು ರಫ್ತು ಮಾಡುವ ರಾಷ್ಟ್ರವಾಗಿ ಮಾರ್ಪಾಟಾದ ಕಾರಣ ಭಾರತ ಮೂಲವಾದ ಈ ಎಲ್ಲ ವೈಜ್ಞಾನಿಕ ಚಟುವಟಿಕೆಗಳು ನಿರ್ನಾಮವಾಗ ತೊಡಗಿದವು. ಬದಲಿಗೆ ಬ್ರಿಟಿಷರು ಸ್ಥಾಪಿಸಿದ ಕೈಗಾರಿಕೆಗಳು, ಇಂಗ್ಲೀಷ್‌ನಲ್ಲಿ ರಚಿತವಾದ ವಿಜ್ಞಾನ ಪಠ್ಯಗ್ರಂಥಗಳು ಸಾರುವ ವಿಜ್ಞಾನವೇ ವಿಜ್ಞಾನ ನಮ್ಮದು ಅಲ್ಪಜ್ಞಾನ ಎಂಬ ನಂಬಿಕೆ ಭಾರತೀಯರಲ್ಲಿ ಬಲವಾಗಿ ಬೇರೂರಿತು. ನವೋದಯ ಕಾಲಮಾನದ ಲೇಖಕರು ಮಾತ್ರವಲ್ಲ ನವ್ಯದ ಬಹಳಷ್ಟು ಲೇಖಕರೂ ಕೂಡ ವಿಜ್ಞಾನ ಎಂಬ ಪರಿಭಾಷೆಯನ್ನು ಪಾಶ್ಚಿಮಾತ್ಯ ಮೂಲ ಪರಿಭಾಷೆಯಲ್ಲೇ ಸ್ವೀಕರಿಸುತ್ತಿದ್ದರು ಮತ್ತು ಪ್ರತಿಕ್ರಿಯಿಸುತ್ತಿದ್ದರು.

ಹೀಗೆ ಬ್ರಿಟೀಷರಿಂದ ಬ್ರಿಟೀಷ್ ಭಾಷೆ ಮತ್ತು ಪರಿಕಲ್ಪನೆಗಳ ಮೂಲಕ ಕನ್ನಡಕ್ಕೆ ಆಮದಾದ ವಿಜ್ಞಾನವನ್ನು ನವೋದಯ ಲೇಖಕರು ತುಂಬುಹೃದಯದಿಂದ ಸ್ವಾಗತಿಸಿದರು.

ಗುಡಿಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮುಟ್ಟ ಕೇಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯಬನ್ನಿ
ಓ ಬನ್ನಿ ಸೋದರರೆ ಬೇಗಬನ್ನಿ[3]

–ಕುವೆಂಪು (ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಸಂಕಲನ)

ವಿಜ್ಞಾನದೀವಿಗೆಯನ್ನು ಪ್ರತಿಯೊಬ್ಬ ಸೋದರನೂ ಹಿಡಿಯುವುದು ಬಾಳಿನಪರಮೋಚ್ಚ ಧ್ಯೇಯವಾಗಿತ್ತು ನವೋದಯ ಕಾಲದ ಲೇಖಕರಿಗೆ. ನವೋದಯದ ಯಾವ ಲೇಖಕನೂ ವಿಜ್ಞಾನದ ಕುರೂಪ ಮುಖಗಳಿಗೆ ತೆರೆದುಕೊಳ್ಳಬೇಕಾದ ಅನಿವಾರ್ಯತೆಯೂ ಇರಲಿಲ್ಲ. ಏಕೆಂದರೆ ಸಮಾಜ ವಿಜ್ಞಾನದ ಕುರೂಪಮುಖವನ್ನು ಇನ್ನೂ ಕಂಡಿರಲಿಲ್ಲ ಮತ್ತು ಕನ್ನಡ ನಾಡನ್ನುಆಧುನಿಕತೆಯತ್ತ ನಡೆಸುವ ಹೊಣೆ ಎಲ್ಲ ಲೇಖಕರ ಮೇಲೂ ಇತ್ತು. ಸ್ವಾತಂತ್ರ್ಯಾನಂತರ ಆಗಮಿಸಿದ ನವ್ಯಕಾವ್ಯ (1950)ದ ಪ್ರತಿಸ್ಪಂದನೆ ಇದಕ್ಕಿಂತ ಭಿನ್ನವಾಗಿರಲಿಲ್ಲ.

ವಿ.ಕೃ ಗೋಕಾಕ್

ನವ್ಯ ಕಾವ್ಯಕ್ಕೆ ಬುನಾದಿ ಬಿತ್ತಿದ್ದ ವಿ.ಕೃ ಗೋಕಾಖ್‌ರು 1940 ರಲ್ಲಿ ಪ್ರಕಟಿಸಿದ 'ಸಮಗ್ರ ಗೀತಗಳು' ಸಂಕಲನದಲ್ಲಿ 'ಮಾರ್ಸೈದಲ್ಲಿಯ ನಾಃತರ್‌ದಾಮ್' ಎಂಬ ಕವನದಲ್ಲಿ ಫ್ರಾನ್ಸ್ ದೇಶದ ವೈಭವವನ್ನು ಚಿತ್ರಿಸುತ್ತಾ.

ಮಾರ್ಸೈದಲ್ಲಿಳಿದು ನಿನ್ನ ವೈಭವ ನೋಡಿ ಬೆರಗು ಬಟ್ಟೆ;
ನಿನ್ನೋಣಿಗಳಲ್ಲಿ ತಿರುಗಾಡಿದೆ. ಕಾವಣಗಳಲ್ಲಿ ತಲೆಗೂಗಿದೆ;
ನಗೆಮೊಗದ ನನ್ನಿಗರೊಡನೆ ಮಾತಾಡಿದೆ; ಸಮಾಧಾನವಿರಲಿಲ್ಲ.
ಪರತಂತ್ರ ಭಾರತೀಯನ ಗಂಟಲಿಗೆ ಗಾಳವಿದೆಲ್ಲ ಸಿರಿ.
ನಿನ್ನ ನಾಃತರ್‌ದಾಮವು ಮಾತ್ರ ದಿವ್ಯದಾಮವಾಯ್ತು![4]

–ವಿ.ಕೃ. ಗೋಕಾಕ್

ಬ್ರಿಟಿಷರ ದೌರ್ಜನ್ಯದಿಂದಾಗಿ ಭಾರತೀಯರು ತಂತ್ರಜ್ಞಾನ ಕೌಶಲ ಸಮೃದ್ಧಿಯಿಂದಲೂ ವಂಚಿತರಾಗಿದ್ದರು. ಅಂದಿನ ಎಲ್ಲ ಬಡ ಭಾರತೀಯನ ಪ್ರತಿನಿಧಿ ವಿ.ಕೃ ಗೋಕಾಖ್. ಇಂತಹ ಬಡಭಾರತೀಯರಿಗೆ ಪಶ್ಚಿಮದ ವೈಜ್ಞಾನಿಕ ಪ್ರಗತಿ ಕಣ್ಣುಕಟ್ಟುವಂತಿದ್ದಿತು. ಪರತಂತ್ರದ ದಾಸ್ಯದಲ್ಲಿರುವವನಿಗೆ ಪಶ್ಚಿಮದ ವೈಜ್ಞಾನಿಕ ಪ್ರಗತಿ ಗಂಟಲಿಗೆ ಗಾಳವನ್ನು ಹಾಕುತ್ತಿತ್ತು.

ಗೋಪಾಲಕೃಷ್ಣ ಅಡಿಗ : 'ಭಾವತರಂಗ' (1946), 'ಕಟ್ಟುವೆವು ನಾವು' (1948) ಸಂಕಲನಗಳನ್ನು ರಚಿಸುವವರೆಗೂ ನವೋದಯದ ಜಳ್ಳಿನುಪ್ಪಿಟ್ಟು ಜಗಿದ' ಅಡಿಗರು 'ನಡೆದು ಬಂದ ದಾರಿ' (1952)ಯಿಂದ ಮುಂದೆ ಎಲಿಯಟ್, ಆಡೆನ್ ರಿಂದ ಸ್ಫೂರ್ತಿ ಪಡೆಯಬೇಕೆಂದು ಘೋಷಿಸಿ, ಜೊತೆಗೆ "ಕಾವ್ಯಕ್ಕೆ ಮತ್ತೆ ವಾಸ್ತವದ ರಕ್ತದಾನ ನೀಡಬೇಕು. ಕಾವ್ಯದಲ್ಲಿ ಮತ್ತೆ ಮಣ್ಣಿನ ವಾಸನೆ ಹೊಡೆಯಬೇಕು, ಈ ಜಗತ್ತನ್ನು ಬಿಟ್ಟು ಕಾವ್ಯ ಬದುಕಲಾರದು ಎಂಬುದನ್ನು ಮತ್ತೆ ಕವಿಗಳು ಅರಿಯಬೇಕಾಗುತ್ತದೆ" ಎಂದು ಘೋಷಿಸಿ, ತನ್ನ ಕಾವ್ಯದಲ್ಲಿ ಸಮಕಾಲೀನ ಬದುಕನ್ನು ಶೋಧಿಸಿ ನೋಡುವ ಧೀರಪ್ರಯತ್ನ ಮಾಡುವ ದಾರಿಯಲ್ಲಿ ದಾಪುಗಾಲನ್ನು ಇಟ್ಟರು. ಉಳಿದ ನವ್ಯ ಕವಿಗಳಿಗಿಂತ ಅಡಿಗರ ಮೇಲೆ, ಎಲಿಯಟ್‌ನ ಪ್ರಭಾವ ದಟ್ಟವಾದದ್ದು. 'ಚಂಡಮದ್ದಳೆ (1954) ಯಿಂದ 'ಭೂಮಿಗೀತ' (1959) ಸಂಕಲನಗಳವರೆಗೆ ಎಲಿಯಟ್‌ನ ಗಾಢ ಪ್ರಭಾವ ಅಡಿಗರ ಮೇಲೆ ಇದ್ದಿತು. ಎಲಿಯಟ್ ಪಶ್ಚಿಮ ದೇಶಗಳಲ್ಲಿ ಕೈಗಾರಿಕಾ ಕ್ರಾಂತಿಯಿಂದುಟಾದ ವ್ಯತ್ಯಸ್ಥವಾದ ಜನಜೀವನವನ್ನು, ನಗರಗಳ ಯಾಂತ್ರಿಕೃತ ಬದುಕನ್ನು ಬಹುಗಂಭೀರವಾಗಿ ತನ್ನ ಕಾವ್ಯಗಳಲಿ ಶೋಧಿಸಿದಾತ. ಬಹುಶಃ ಎಲಿಯಟ್‌ನ ಪ್ರಭಾವದಿಂದ ಇಂತಹದೇ ಪ್ರಯತ್ನವನ್ನು ತಮ್ಮ ಕಾವ್ಯಗಳಲ್ಲಿ ಮಾಡಹೊರಟ ಅಡಿಗರು, ಅದರಲ್ಲಿ ಯಶಸ್ವಿಯಾದರು. ಕನ್ನಡ ನವ್ಯ ಕಾವ್ಯಕ್ಕೆ ಬುನಾದಿಯನ್ನು ಬತ್ತಿದ್ದ 'ಚಂಡಮದ್ದಳೆ' ಸಂಕಲನ ಕೇವಲ ಏಳು ಕವಿತೆಗಳನ್ನು ಒಳಗೊಂಡಿದೆ. ಅದರಲ್ಲಿ 'ಹಿಮಗಿರಿಯ ಕಂದರ', 'ಗೊಂದಲಪುರ' ಮತ್ತು 'ಏನಾದರೂ ಮಾಡುತಿರು ತಮ್ಮ' ಮೂರು ಕವಿತೆಗಳೂ ನಗರದ ಬದುಕಿನ ಹೊಯ್ದಾಟವನ್ನೂ, ಜಂಜಾಟವನ್ನು ಸಂಕೇತ ಪ್ರತಿಮೆಗಳ ಮೂಲಕ ಬಿಂಬಿಸುತ್ತವೆ.

'ಗೊಂದಲಾಪುರ' ಕವಿತೆ ಹಳ್ಳಿಯ ದಟ್ಟ ಪ್ರಕೃತಿಯ ನಡುವೆ ಬೆಳೆದ ನಾಯಕನೊಬ್ಬ ತನ್ನ ಹದಿನಾರನೆ ವಯಸ್ಸಿನಲ್ಲಿ ನಗರಕ್ಕೆ ಬಂದು ಬೀಳುವ, ಅವನ ಕಣ್ಣಿಗೆ ಕಾಣುವ ಗೊಂದಲಗಳ ಸರಮಾಲೆ, ಎರ್ರಾ–ಬಿರ್ರಿ ಬದುಕು, ಎರ್ರಾ–ಬಿರ್ರಿಯಾಗಿ ಚಿತ್ರಿತವಾಗುತ್ತದೆ.

ರಸ್ತೆಯಲ್ಲೋ ಮಸ್ತು ಜನ; ಇಲ್ಲ ಪುರಸೊತ್ತು;
ಮನೆಯಿಲ್ಲದಲೆವಪಾಪೋಲಿ ಗೂಳಿಯ ಮಸ್ತಿ;
ಬೀದಿದೀಪಗಳು ಕೊಟ್ಟವು ಗಸ್ತು; ಬಾನಲ್ಲಿ
ಮೋಡಪಟದಾಚೇನೊ ಮೇಜವಾನಿ;
ಕೆಳಗೋ ವೃಥಾ ಜೀವಭಾವ ಹಾನಿ;
ನೂಕು ನುಗ್ಗಲು ಪರಿಷೆ: [5]

ನಿಮಿಷ ನಿಮಿಷಕ್ಕೊಂದು ವರಸೆ ಗುಟುರು ಗಲಾಟೆ ಮುಲುಕು ಛಳಕು, ಏನು, 'ಬೆದಿಂಗ್ ಬ್ಯೂಟಿ' ಬೀದಿಯಲ್ಲೇ ತೆರೆಗೆ ಬಂದಳೇನು?
ವಾಲಿ ಸುಗ್ರೀವ ಕಾಳಗವಯ್ಯ, ಕೋಡಂಗಿ ಆಗಲೇ ತೆರೆಯೀಚೆ ಬಂದನಯ್ಯ[1]

–'ಗೊಂದಲಪುರ'

ನಗರಗಳ ಯಾಂತ್ರಿಕ ಬದುಕಿನ ಇಂತಹ ವಿಡಂಬನೆ, ಅಡಿಗ ಸಮಗ್ರ ಕಾವ್ಯದ ಉದ್ದಕ್ಕೂ ಮುಂದುವರೆಯುತ್ತದೆ. 'ಭೂಮಿಗೀತ' ಸಂಕಲನದ 'ಶರದ್ಗೀತ' ಕವಿತೆಯಲ್ಲಿ ಕವಿ ಹೀಗೆ ವಿಜ್ಞಾನದ ಕೊಡುಗೆ ಮನುಷ್ಯನ ಬದುಕಿಗೆ ವರವಾಗುವ ಬದುಕು ಶಾಪವಾಗಿದೆಯಿಲ್ಲ ಎಂಬ ಕುದಿತವನ್ನು ಓರೆಗೆ ಹಚ್ಚಿ ನೋಡುತ್ತಾರೆ.

ಈಗ ಈ ಲೋಕ ಅಸ್ತವ್ಯಸ್ತ; ಗಡಿಯಾರ
ಬಿಚ್ಚಿ ಯಂತ್ರೋಪಯಂತ್ರಗಳ ಚೆಲ್ಲಾಪಿಲ್ಲಿ
ಚೆಲ್ಲಿ, ಕೈಕಟ್ಟಿ ಕುಳಿತ ರಿಪೇರಿಯವನಂತೆ
ಯಾವ ತಿರುಗಣೆ ಮೊಳೆಯನೆಲ್ಲಿ ಹಾಕಲಿ? ಮತ್ತೆ ಈ
ಸುರಳಿತಂತಿಯನ್ನೆಲ್ಲಿ ತುರಕಲಿ?
ಗಡಿಯಾರವಿದೆ, ಯಂತ್ರವಿದೆ, ಎಲ್ಲ ಇದೆ. ಇಲ್ಲ
ಸಾವಯವ ಶಿಲ್ಪದ ಸಮಗ್ರೀಕರಣಬಲ.
ಸುತ್ತಿದ್ದ ಉಂಡೆ ಬಿಚ್ಚುತ್ತಲಿದೆ. ಬಿಚ್ಚಿದ್ದು
ಗೋಜು ಗೋಜಲು;ಸಿಕ್ಕು, ಸಿಕ್ಕು; ಸುಮ್ಮನೆ ಸಿಟ್ಟು ಸಿಟ್ಟಾಗಿ
ಹರಿದ ದಾರದ ಚೂರುಚೂರು ಕಾಲಿಗೆ ತೊಡರಿ
ಮುಗ್ಗರಿಸಿ ಬಿದ್ದೆದ್ದು ಸುತ್ತುತ್ತಿದೆ ವಿಜ್ಞಾನ್[6]

–ಶರದ್ಗೀತ

ವಿಜ್ಞಾನದ ಆವಿಷ್ಕಾರಗಳು, ಕೈಗಾರಿಕ ಪ್ರಗತಿಗಳು ಮನುಷ್ಯನ ಬದುಕನ್ನು ವಿಕಾಸದ ಹಾದಿಯಲ್ಲಿ ಸಾಗಿಸುತ್ತಿಲ್ಲ ಎಂಬುದೇ ಅಡಿಗರ ತೀವ್ರ ಕಾಳಜಿಯಾಗಿತ್ತು. ಏಕೆಂದರೆ ವಿಜ್ಞಾನಿಕ ಪ್ರಗತಿ ಮತ್ತು ಸಾಮಾನ್ಯ ಮನುಷ್ಯನ ಬದುಕು ಸುಗಮವಾಗಿ ಹೊಂದಾಣಿಕೆಯಾಗಿ ಸಾಗುತ್ತಿಲ್ಲ. ಈ ಎರಡರ ನಡುವೆ 'ಸಾವಯವಶಿಲ್ಪದ ಸಮಗ್ರೀಕರಣಬಲ' ಇಲ್ಲ ಅಂದರೆ ವಿಜ್ಞಾನ ಮತ್ತು ಮನುಷ್ಯನ ಬದುಕು ಪರಸ್ಪರ ಹೊಂದಾಣಿಕೆಯಿಂದ ಮುಂದುವರೆಯುತ್ತಿಲ್ಲ ಎನ್ನುವ ಅಡಿಗರ ನಿರ್ಧಾರ ಮುಂದೆ ಬದಲಾವಣೆ ಹೊಂದಲಿಲ್ಲ ಎಂದೇ ಅನ್ನಿಸುತ್ತದೆ. "ಶ್ರೀರಾಮನವಮಿಯದಿವಸ" ಕವಿತೆಯಲ್ಲಿ ಕೂಡ

ನೆಲಕ್ಕಂಟಿ ಬಿದ್ದ ಆಕಾಶಯಾನದ ಕನಸು
ಜೆಟ್ ವಿಮಾನವೇರಿ ಕೊಂಚ ದೂರ
ತೇಲಿ ಮಣ್ಣಿಗೆ ಮರಳಿ, ರಾಕೆಟ್ಟು ಜಗಿದುಗುಳಿ
ತಿಂಗಳಿಗೆ ಬಡವಾಧುನಿಕ ವಿಕಾರ[7].

–ಶ್ರೀ ರಾಮನವಮಿಯ ದಿವಸ

ವಿಜ್ಞಾನ, ಯಂತ್ರನಾಗರೀಕತೆ ಎಂಬುದು ತಿಂಗಳಿಗೆ ಅಂದರೆ ಚಂದ್ರನಿಗೆ ಬಡಿವ ಆಧುನಿಕ ವಿಕಾರ. ಎಂಬ ನಿಲುವು ಅಡಿಗರಲ್ಲಿ ಎಲ್ಲೂ ಬದಲಾವಣೆ ಹೊಂದಿತೆನಿಸುವುದಿಲ್ಲ. 'ವರ್ಧಮಾನ' ಕವಿತೆಯಲ್ಲಿ ಮಾತ್ರ ಇಂತಹ ಎಲ್ಲ ವಿಜ್ಞಾನ ಮತ್ತು ವಿಕಾರಗಳನ್ನೂ ಸಹಿಸಿ ಯುವ ಜನಾಂಗ ಮುನ್ನೆಡೆಯಬಲ್ಲದು. ಆ ಶಕ್ತಿ ಅವರಲ್ಲಿ ಇದ್ದಿಯೇ ತೀರುತ್ತದೆ ಎಂಬ ಆಶಾವಾದದಲ್ಲಿ ಅಡಿಗರು ನಿಲ್ಲುತ್ತಾರೆ.

ಬಿ.ಸಿ. ರಾಮಚಂದ್ರ ಶರ್ಮ: ಗೋಪಾಲಕೃಷ್ಣ ಅಡಿಗರ ಜೊತೆ ಜೊತೆಗೇ ಕನ್ನಡ ಕಾವ್ಯ ಪ್ರಪಂಚವನ್ನು ಪ್ರವೇಶಿಸಿದ ಬಿ.ಸಿ. ರಾಮಚಂದ್ರ ಶರ್ಮ 1946ರಲ್ಲಿ ಕನ್ನಡ ರಮ್ಯವಾದ ನೆಲೆಯಲ್ಲಿ ಕೆಲವು ತೊದಲು ನುಡಿಗಳನ್ನು (ಕೆಲವು ತೊದಲುಕವನಗಳು–1946) ನುಡಿದು 1952ರಲ್ಲಿ 'ಹೃದಯಗೀತ'ದ ಮೂಲಕ ಹೃದಯವನ್ನು ತೆರೆದಿಟ್ಟವರು. ಅರ್ಥದೇವರನ್ನು ತಾನು ನಿಂತ ಮಣ್ಣಿನಿಂದ ಮುಗಿಲವರೆಗೆ, ಪಾಪಯ್ಯನ ಪಾವಿಯಿಂದ ವಿಶ್ವಸಂಸ್ಥೆಯವರೆಗೆ ಹರಸಿ ಕೊನೆಗೆ ವಿಧಿಯಿಲ್ಲದೆ ನಿರೀಶ್ವರನಾಗಿ ನಿಂತ ಶರ್ಮರು, ವಿಜ್ಞಾನಕ್ಕೆ ಸ್ಪಂದಿಸಿದ ರೀತಿ ಯಾವುದು ಎಂದು ಸಂಕೇತ, ಪ್ರತೀಕಗಳ ಜಟಿಲ ಬಲೆಗಳಾದ ಅವರ ಕಾವ್ಯದಲ್ಲಿ ಅರಸತೊಡಗಿದಾಗ, ಗೋಪಾಕೃಷ್ಣ ಅಡಿಗರಂತೆ ನೇರವಾಗಿ ಈ ಕವಿ ವಿಜ್ಞಾನವನ್ನು, ವೈಜ್ಞಾನಿಕ ಆವಿಷ್ಕಾರಗಳ ಫಲವನ್ನು ನೇರವಾಗಿ ಶೋಧಿಸಿ ಉತ್ತರದ ಶಾಸನವನ್ನು ಎಲ್ಲೂ ಬರೆದಿಟ್ಟಿಲ್ಲ ಎಂಬುದು ಮೊದಲ ನೋಟಕ್ಕೆ ತಿಳಿಯುತ್ತದೆ. ತನ್ನ ಅಂತರಂಗದಾಳದ ತುಡಿತಗಳಿಗೆ ಮನಸ್ಸಿನಾಳದ ಏಳು ಪದರಗಳ ಜಾಡನ್ನು ಹಿಡಿದು ನುಡಿಕೊಡುವ ಶರ್ಮರು, ಇಥಿಯೋಪಿಯಾ, ಅಮೇರಿಕಾ ಮತ್ತು ಲಂಡನ್ ಮೊದಲಾದ ಹೊರದೇಶಗಳಲ್ಲಿ ದೀರ್ಘಕಾಲ ವಾಸಮಾಡಿದ್ದರಿಂದ ವಿದೇಶಗಳ ಬದುಕನ್ನು ವರ್ಣಿಸುವ ಈ ಕವಿ, ವಿದೇಶಿಯರ ವೈಜ್ಞಾನಿಕ ಆವಿಷ್ಕಾರಗಳ ಮೇಲೆ ಕಟ್ಟಿದ ನಾಗರೀಕತೆಯನ್ನು ವರ್ಣಿಸುವ ಸಂದರ್ಭದಲ್ಲಿ ವಿಜ್ಞಾನವನ್ನು ಕುರಿತು

ತನ್ನ ನಿಲುವನ್ನು ಅಭಿವ್ಯಕ್ತಪಡಿಸದೆ ಇರಲು ಸಾಧ್ಯವಿರಲಿಲ್ಲ.

ಕಪ್ಪು ಕಡೆದಾಗ ಬೆಳಕು, ಮೌನವೊಡೆದಾಗ ಮಾತು,
ಕಿಡಿನುಡಿಯ ಕುಣಿಸಿತ್ತು ನಾಟ್ಯಛಂದ
ಹೆಂಗಡಲ ಹೊಂಗನಸು–ಮಗುವಿನಳುವೇ ಕವಿತೆ
ಸೃಷ್ಟಿಗೀತದ ತೊದಲು– ಮೊದಲ ಸ್ಪಂದ"[8]

–ಕವಿತೆ ಹುಟ್ಟಿತು.

ಕಪ್ಪನ್ನು ಕಡೆದು ಬೆಳಕಾಗಿ ಬರುವ ಅವರ ಕವಿತೆಗಳಲ್ಲಿ ನೇರವಾಗಿ ವಿಜ್ಞಾನ ಶೋಧಿತವಾಗಿಲ್ಲ. 'ಬುವಿನೀಡಿದ ಸ್ಫೂರ್ತಿ' (1955) ಯನಂತರ, 14 ವರ್ಷಗಳ ಅಂತರದಲ್ಲಿ 'ಹೇಸರಗತ್ತೆ' (1969) ಕವಿತಾಸಂಕಲನವನ್ನು ಶರ್ಮರು ಹೊರತಂದರು. ಈ ಸಂಕಲನದ 15 ಕವಿತೆಗಳು ಮತ್ತು 'ಬ್ರಾಹ್ಮಣ ಹುಡುಗ' (1978) ಮತ್ತು 'ಮಾತು–ಮಾಟ' (1984) ಸಂಕಲನದ ಕೆಲವು ಕವಿತೆಗಳು ಶರ್ಮರು ವಿದೇಶದಲ್ಲಿದ್ದ ಸಂದರ್ಭದಲ್ಲಿ ಬರೆದಂತಹ ಕವಿತೆಗಳು ಶರ್ಮರು ಸ್ವದೇಶದಲ್ಲಿರಲಿ ವಿದೇಶದಲ್ಲರಲಿ ಸುತ್ತಣ ಬದುಕು ತನ್ನ ವ್ಯಕ್ತಿತ್ವವನ್ನು, ಮನಸ್ಸನ್ನು ಹೇಗೆ ಮಾಗಿಸುತ್ತದೆ, ಮಾಗಿಸಬಲ್ಲದು ಎಂಬ ಜೀವ ದ್ರವ್ಯಗಳನ್ನು ಅರಸುತ್ತಿರುವ ನಿಲುವನ್ನು ಅವರ ಕವಿತೆಗಳಲ್ಲಿ ಗುರುತಿಸಬಹುದು.

ವೈಜ್ಞಾನಿಕ ಆವಿಷ್ಕಾರಗಳಿಂದ ಜಗತ್ತಿನ ಕಣ್ಣುಕುಕ್ಕಿಸುತ್ತಿರುವ ಅಮೇರಿಕಾ ಜನತೆಯ ಸಾಧನೆಯನ್ನು ಶರ್ಮರು 'ಅಮೇರಿಕನ್ ಟೂರಿಸ್ಟ್'– 1,2,3, 4 ಮತ್ತು 5 ಸಾನೆಟ್‌ಗಳಲ್ಲಿ ವರ್ಣಿಸುತ್ತಾರೆ. ಅಮೇರಿಕಾ ಜನದ ನಿಜಸತ್ವವನ್ನು ಅರಸುತ್ತ ಹೊರಟ ಕವಿಗೆ, ಅಮೇರಿಕನ್ನರ ಸಾಧನೆ ಈ ರೀತಿ ಕಂಡುಬರುತ್ತದೆ.

ಮೀನಿನ ವಿಧಾನ ಹದ ಬೇರೆ, ಮೈಯ ಕಮಾನು
ಮಾಡಿ ಮಗುಚಿ ಅನಾಮತ್ತು ಮುಳುಗುವ ಮೀನು;
ಸದ್ದಿರದೆ ನೀರೊಳಗೆ ಬರೆದ ಬಾಳಿಗೆ ಗೇಣು
ಕಣ್ಣಿಗೆ ನಿಲುಕು. ಗಾಳಿಗೆದ್ದಾಗ ಬಲೆ, ಪ್ರಾಣ
ಸೋರಿ ಬರಿದಾದರೂ ಬಿಟ್ಟ ಕಣ್ಣಿನ ಮೌನ–
ನೀನು ಮೀನಲ್ಲ; ನದಿ ಮೂಲ ಬೆದಕುವ ಚಬುಕು
ಛಲವಿರದ ಮೀನಿಗೋ ಹರಿವ ನೀರೇ ಬದುಕು'.

ಅಮೇರಿಕನ್ನರ ಸಾಧನೆ ಮೀನಿನಂತೆ ವಿಧಿ ನಡೆಸಿದಂತೆ ಎದ್ದು, ಬಿದ್ದು ಬದುಕುವ ರೀತಿಯಲ್ಲ ಅವರು ತಾವು ಬದುಕಿ–ಬಾಳುವ ಜೀವನದ ಮೂಲವನ್ನೇ, ಬದಕುವ ಚಬುಕನ್ನು, ಛಲವನ್ನು ಹೊಂದಿರುವಂತಹವರು. ಅವರ ಶಿಖರ ಸಾಧನೆಯ ಮೂಲ ಇಲ್ಲದೆ ಎಂದು ಕವಿ ಗುರುತಿಸುವಾಗ, ವಿಜ್ಞಾನದ ಸಾಧನೆಯ ಬಗ್ಗೆ ಅಪಸ್ವರ ಕೇಳಿಬರುವುದಿಲ್ಲ.

ಕನ್ನಡ ಕಾವ್ಯ ಲೋಕದಲ್ಲಿ ಅಪವಾದ ರೂಪವಾಗಿ ಕೆಲವೇ ಕೆಲವು ಯುದ್ಧ ಕವಿತೆಗಳನ್ನು ಬರೆದವರು ಶರ್ಮರವರು, "ಕ್ರಿಸ್‌ಮಸ್ ಪ್ರತಿಮೆಗಳು" "ಲಂಡಂಡೆರಿ" ಸಂಕಲನದ 'ಮೈಲಾಯ್' ಮತ್ತು 'ವಿಯಟ್ನಾಮ್' ಯುದ್ಧದ ಪ್ರತಿಮೆಗಳನ್ನು, ಕ್ರೌರ್ಯವನ್ನು ಮಂಜುಗೆಡ್ಡೆಯಷ್ಟು ತಣ್ಣಗೆ ಕಟ್ಟಿ ಕೊಡುವ ಕವಿತೆಗಳಾಗಿವೆ.

ಹಠಾತ್ತನೆ ಬಿಸಿಲು
ತಗುಲಿ ಥಳಥಳ ಹೊಳೆದ
ಪಿಸ್ತೂಲು ಕಂಡು
ಯೋಧ ಕೂಗಿದ:
ನೆಲಕ್ಕೆಸೆದು ಕೈಯೆತ್ತಿ ನಿಲ್ಲು.
ಮಾತು ಕೇಳದೇ ನಡೆದ
ಬೆನ್ನಿಂದ ಹೊರಬಂತು ಹುಟ್ಟುಕಿವುಡ ಹುಡುಗನೆದೆ ಹೊಕ್ಕ ಗುಂಡು
ಬೆನ್ನಿಂದ ಹೊರಬಂತು
ಓಡಿ ಮುಗ್ಗರಿಸಿ ಓಡೋಡಿ ಬಂದ ಮುದುಕಿ
ಕೆಂಪು ತಿರುಗುತ್ತಿದ್ದ ಹುಲ್ಲೊಳಗೆ ಹುಡುಕಿ
ಹಬ್ಬಕ್ಕೆ ಕೊಂಡು
ತಂದಿದ್ದ ನಿಗಿನಿಗಿ ಬೊಂಬೆ
ಹಿಡಿದೆದ್ದು ನಿಂತು
ತಲೆಯೆತ್ತಿದ್ದಾಗ ಸೂಜಿ ಬಿಸಿಲು
ಚುಚ್ಚಿ ಕಣ್ಣಲ್ಲಿ ನೀರೊಡೆಯಿತು.
ಅವಳ ಮುಖದ ಹತ್ತು ಕಾಲುವೆ ತುಂಬಿ
ಕೋಡಿ ಹರಿಯಿತು.[10]

–"ಕ್ರಿಸ್‌ಮಸ್ ಪ್ರತಿಮೆಗಳು–2"

ಕ್ರಿಸ್‌ಮಸ್ ಪ್ರತಿಮೆಗಳ ಕೆಳಗೆ ನಡೆವ ಕ್ರೌರ್ಯದ ಇಂತಹ ಚಿತ್ರಣಗಳಲ್ಲಿ ಕೂಡ ಶರ್ಮರು ವಿಜ್ಞಾನದ ಬಗ್ಗೆ ಎಲ್ಲೂ ಅಪಸ್ವರ ಎತ್ತಿರುವುದು ಕಂಡುಬರುವುದಿಲ್ಲ.ಬದಲಿಗೆ ವಿಜ್ಞಾನ ಮತ್ತು ವೈಜ್ಞಾನಿಕ ಸಾಧನೆ ಬದುಕಿನ ಒಂದು ಭಾಗ ಎಂಬ ಸಂಪೂರ್ಣ ಒಪ್ಪಿತವಾದ ಮನಸ್ಸು ಅವರ ಕವಿತೆಗಳಲ್ಲಿ ಕಂಡುಬರುತ್ತದೆ.

ಅಮೇರಿಕನ್ ಟೂರಿಸ್ಟ್ 1, 2 ಕವಿತೆಯಲ್ಲಿ "ಮಿಲಮಿಲನೆ ಮಣ್ಣುಹುಳ ಹೊರಳಾಡುವುದೆ ತಡ, ಕುಪ್ಪಳಿಸಿ ಬಂದು ಮಣ್ಣಿನಿಂದ ಧಾತುವನ್ನೇ ಅಗೆದು ಬಿಡುವಂತೆ ಕುಕ್ಕಿ ಖುಷಿಪಡುವ ಉತ್ಸಾಹ, ಪುಕ್ಕದ ಹಾಗೆ ಹರಿದೆಸೆದ ಚಿಕ್ಕು" ಎಂದು ಅಮೇರಿಕನ್ನರ ಜೀವನ ಉತ್ಸಾಹವನ್ನು ವರ್ಣಿಸುವ ಕವಿ ಇಲ್ಲಿ ಇತಿಹಾಸದ ಬಗೆಗಿನ ಅವರ ಕಾಳಜಿಯನ್ನು ಗುರುತಿಸುತ್ತಾರೆ.

'ಜಿಪ್ಸಿ' ಕವಿತೆಯಲ್ಲಿ ಭಾರತದ ಆಲ, ಅಶ್ವತ್ಥ, ಬೇಲ, ಮಾವು ಮೊದಲಾದ ಮರಗಳೊಂದಿಗೆ ಹುಟ್ಟಿ ಬೆಳೆದ ನಾಯಕ ಲಂಡನ್ನಿನ ಬದುಕಿಗೆ ಬಂದು ಬಿದ್ದಾಗ ಲಂಡನ್ನಿನ ಬದುಕು ಈ ರೀತಿ ಕಾಣುತ್ತದೆ:

ನೂರು ಸಾವಿರ ಕಡ್ಡಿ ಪೊಟ್ಟಣ ತಂದು ಕಟ್ಟಿದ
'ಶಹರೊಂದರಲ್ಲಿ ನಿನ್ನಿ ಜಿಪ್ಸಿ ಬದುಕು.
ಸ್ಥಳ ಮಹಿಮೆಯಿರಬೇಕು, ಎಲ್ಲ ಠಾಕೋಠಾಕು,
ನಿನ್ನ ಬದುಕು ಕೂಡಾ ಬದಲಾಗಬೇಕು.
ಗಂಟೆ ಬಡಿದ ಕ್ಷಣವೇ ಪಹರೆ ಬದಲಾದಂತೆ
ಬದಲಾಗುವುದು ಋತು, ರಾತ್ರೋರಾತ್ರಿ
ಪ್ಲಾಸ್ಟಿಕ್ ಸರ್ಜರಿ ನಡೆದು ಬೆಳಗಾಗುವಲ್ಲಿ
ನೆಲಕ್ಕೆ ಹೊಸ ಚಹರೆ ಖಾತ್ರಿ[11]

–ಜಿಪ್ಸಿ,

ಲಂಡನ್ ನಗರದ ಕೃತಕ ಪರಿಸರವನ್ನೂ ಇಲ್ಲಿ ಕವಿತೆ ವಿಡಂಬಿಸಿದೆಯಾದರೂ ಭಾರತದ ಸಹಜ ಋತುಗಳಲ್ಲಿ ಹುಟ್ಟಿ, ಕೃತಕ ಋತುಗಳು ಅವತರಿಸುವ ಲಂಡನ್ನಿನ ಜನರ ವೈಜ್ಞಾನಿಕ ಸಾಧನೆ ಬಗ್ಗೆ ಕವಿ ಮೇಲಿನ ಮಾತುಗಳಲ್ಲಿ ಬೇಸರ ವ್ಯಕ್ತ ಪಡಿಸುವುದಿಲ್ಲ. ಹೀಗೆ ಲಂಡನ್ನಿನಲ್ಲಿ ಬರೆದ 'ಜಿಪ್ಸಿ'ಯಿಂದ 'ಜಯನಗರದ ಹಿರಿಯ ಪ್ರಜೆಗಳು'ವರೆಗೆ ಶರ್ಮರು ಚಿತ್ರಿಸಿದ ಜನಜೀವನದಲ್ಲಿ, ಸಾಂಸ್ಕೃತಿಕ ಬದುಕಿನಲ್ಲಿ ವಿಜ್ಞಾನದ ಬಗ್ಗೆ ಅಪಸ್ವರ ಕೇಳಿಬರುವುದಿಲ್ಲ.

ಗಂಗಾಧರ ಚಿತ್ತಾಲ : ನವ್ಯ ಕಾವ್ಯದಲ್ಲಿ 'ಮಾನವತಾವಾದಿ' ಯೆಂದೆನಿಸಿಕೊಂಡ ಚಿತ್ತಾಲರು ಸಮಕಾಲೀನ ವಿಜ್ಞಾನಕ್ಕೆ ತೀವ್ರವಾಗಿ ಸ್ಪಂದಿಸಿರುವಂತೆ ಕಂಡುಬರುವುದಿಲ್ಲ. ಅವರ ಕೊನೆಯ ಸಂಕಲನವಾದ "ಸಂಪರ್ಕ" (1983) ಸಂಕಲದಲ್ಲಿ "ಒಡಕು" ಎಂಬ ಕವಿತೆಯಲ್ಲಿ ಬಾಂಬ್ ಒಂದನ್ನು ಸಿಡಿಸಿದ ಸುದ್ದಿಯನ್ನು ಓದಿ ಇದು ಮಾನವರ ಒಳಿತಿಗೆ ಆಗುವಂತಹದಲ್ಲ ಎಂದು ನಿರ್ಣಯಿಸುತ್ತಾರೆ.

ಓದುತಿರುವಾಗ ನನಗೇತಕೋ ನಡುಕ.
ಇದು ಒಳಿತಗಲ್ಲ, ನೆಲಗಟ್ಟನೇ ಜಡಿದೊಡೆದು
ಅಡಿಗಲ್ಲಿನೊಳಗುಟ್ಟಿನೊಳಕು ಬೆದರುವ ಚಾಳಿ
ಕೆದಕಿ ಅರಸುವ ಖಚ್ಚಿ ತುಡಿಕೆ ಕಳೆವುದರಲ್ಲಿ
ಕುರುಡು ಕೈಗಳು ದುಡುಕಿ –ನಿಯತಿಯುರಕೂ ದಾಳಿ
ಈ ಜ್ವಾಲೆ, ಈ ಭಸ್ಮ, ಈ ಕೂಗು, ಈ ಕಂಪ
ವಿದ್ರೋಹ ಕುರಿದೆದ್ದ ವಿಲಯರುದ್ರದ ಹೂಲಿ.[12]

–ಒಡಕು.

ತಮ್ಮೆಲ್ಲ ಕವಿತೆಗಳಲ್ಲಿ ಮನುಷ್ಯನನ್ನು ಕೇಂದ್ರ ಬಿಂದುವಾಗಿಟ್ಟುಕೊಂಡು ಬದುಕನ್ನು ಶೋಧಿಸುವ ಗಂಗಾಧರ ಚಿತ್ತಾಲರು ವಿಜ್ಞಾನಕ್ಕೆ ತೆರೆಯದಿರುವುದಕ್ಕೆ ಕಾರಣ ವಿಜ್ಞಾನ ಅವರ ಬದುಕಿನಲ್ಲಿ ಪರ–ವಿರುದ್ಧವಾಗಿ ತೀವ್ರವಾಗಿ ಭಾಗವಹಿಸಿಲ್ಲ ಎನ್ನಬೇಕು. ಮನುಷ್ಯನ ಸತತ ಪ್ರಗತಿಯೆಡೆ ನಡೆವ ಜೀವನದ ಗತಿಯನ್ನು 'ಹರಿವನೀರಿದು" ಕವಿತೆಯಲ್ಲಿ ಶಕ್ತವಾಗಿ ಚಿತ್ರಿಸುವ ಚಿತ್ತಾಲರು ಹೀಗೆ ಮನುಷ್ಯ ಸತತವಾಗಿ ಪ್ರಗತಿಯೆಡೆ ನಡೆಸಲು ಸೆಣಸುತ್ತಾನಲ್ಲ ಅದಕ್ಕೆ ಕಾರಣವೇನು? "ಎಲ್ಲಿ ನಿನ್ನನ್ನು ಅವಿಶ್ರಾಂತ ತಿರಗಿಸುವ ಕೈ ಎತ್ತಿಹಿಡಿದಿರುವ ಬಾಹು ಉದರದಲಾವುದೀ ಜಗತೀ ಪ್ರಸವಬೀಜ ಯಾರ ಅರ್ಭಕರು ನಾವು? ಏಕೆ ಈ ಬೆಳಕ ತೃಷೆ, ಕೆಳಕೆ ಕಲ್ಕಷದ ಕಶೆ, ಮುದಿಗೊಳುವ ಮೈಯ ನಂಟು" ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಅದಕ್ಕೆ ಚಿತ್ತಾಲರು ಕೊಡುವ ಉತ್ತರ

ಜೀವನೀಯವಿದೆಂಬಭೇದ್ಯ ಭರವಸೆ ಉರದಿ ಊರಿರುವೆ,
ಅವನೆ ಅಪ್ಪಿ
ಹೊರಟಿಹೆವು ನಿನ್ನ ಅನುನಯದಪಾರವ ನೆಚ್ಚಿ
ಮರ್ತ್ಯವನು ಮುದದೊಳೊಪ್ಪಿ.[13]

–ಹರಿವನೀರಿದು.

ಯಾವುದು ಜೀವನೀಯ ಎನಿಸುತ್ತದೋ ಅದರಲ್ಲಿ ಅಪಾರ ಭರವಸೆಯನ್ನು ಇಡುವ ಶಕ್ತಿಯನ್ನು ಮನುಷ್ಯರಲ್ಲಿ ಊರಿರುವ ವಿಧಾತ ಇದಕ್ಕೆ ಕಾರಣ ಎನ್ನುತ್ತಾರೆ ಈ ಮಾನವತಾವಾದಿ ಕವಿ.

ಪಿ. ಲಂಕೇಶ್ : ಪಿ. ಲಂಕೇಶ್‌ರ ಸಮಗ್ರ ಕಾವ್ಯದ ತುಂಬ ಅರಿಸಿದ್ದು ಶೋಧಿಸಿದ್ದು, ಹುಡುಕಾಟ ನಡೆಸಿದ್ದು ಬದುಕಿನ ಜೀವದ್ರವ್ಯಗಳನ್ನು, ಸಂತೋಷಗಳನ್ನು, ಸುಖಗಳನ್ನು. ಇಂತಹ ಜೀವನ ದ್ರವ್ಯಗಳು ಗಂಡು–ಹೆಣ್ಣಿನ ಸಂಬಂಧಿಗಳಲ್ಲಿ, ಪ್ರೇಮದಲ್ಲಿ, ಕಾಮದಲ್ಲಿ ತೀವ್ರವಾಗಿ ಅಡಗಿರುತ್ತದೆಯಾದ್ದರಿಂದ ಲಂಕೇಶರ "ಚಿತ್ರಸಮೂಹ"ದ ತುಂಬ ಪ್ರೇಮ, ಕಾಮ, ಹೆಣ್ಣಿನ ನಾನಾಮುಖಗಳ ಜೀವಂತ ಚಿತ್ರಣವನ್ನು ಕಾಣಬಹುದು. ಆಗಾಗ ಅತ್ತ–ಇತ್ತ ಹೊರಳಿ ತನ್ನ ಊರು, ತನ್ನ ಹಳ್ಳಿ, ತನ್ನದೇ ಅಂತರಂಗದ ದ್ವಂದ್ವಗಳನ್ನು ಅವರ ಕವಿತೆಗಳಲ್ಲಿ ಕಾಣಬಹುದು. 'ಅವ್ವ', 'ಅವ್ವ'–2, 'ಅಕ್ಕ –ತಮ', 'ಅನ್ನಕರೇನಿನಾ –1,2,3, ಹೀಗೆ ಇವರ ಸಮಗ್ರ ಕಾವ್ಯದ ತುಂಬ ಹೆಣ್ಣಿನ ನಾನಾಮುಖಿಗಳ ಚಿತ್ರಣ. ಹಾದರಗಿತ್ತಿ ಹೆಣ್ಣುಗಳು ಈ ಕವಿಯ ಮೂಲಭೂತ ಆಸಕ್ತಿ. ಇಂತಹ ಕವಿ ಅಪ್ಪಿ–ತಪ್ಪಿ ವಿಜ್ಞಾನಕ್ಕೆ ತನ್ನ ಸುತ್ತ ಮುತ್ತಲಿನ ವೈಜ್ಞಾನಿಕ ಪ್ರಪಂಚಕ್ಕೆ ಕಣ್ಣನ್ನು ಹೊರಳಿಸಿದ್ದಿಲ್ಲ. ಆದರೆ ತನ್ನ ಸುತ್ತ –ಮುತ್ತಲಿನ ಬದುಕಿಗೆ, ಜೀವನಕ್ಕೆ, ಜೀವಂತಿಕೆ ತೀವ್ರವಾಗಿ ಸ್ಪಂದಿಸುವ ಕವಿ ತನಗೆ ತಿಳಿಯದೇ ತನ್ನ ವೈಜ್ಞಾನಿಕ ನೀತಿಯನ್ನು ಬಹಿರಂಗೊಳಿಸಿರುತ್ತಾನೆ. "1980ರಿಂದೀಚಿಗಿನ ಕವಿತೆಗಳು" ಸಂಕಲನದ 'ಅವಮಾನವೇ ಇಲ್ಲದ ಜೀವಿಗಳು' ಕವಿತೆ ಮನುಷ್ಯ ಪ್ರಕೃತಿಯಿಂದ ಕಲಿಯಬೇಕಾದದ್ದೇನು ಎಂಬುದನ್ನು ತಿಳಿಸುತ್ತದೆ.

ಗಿಡಗಳನ್ನು ನೀವು ಕಡಿಯಬಹುದು.
ಎಲೆ ಕಿತ್ತು,
ಹೂಗಳ ಪಕಳೆಗಳನ್ನು ಕಿತ್ತು
ನೋಯಿಸಬಹುದು.
ಅಥವಾ ಇಡೀ ಹೂಗಳನ್ನು ಹರಿದು
ಮುಡಿದುಕೊಂಡು ನಿಮ್ಮ ಮೆರವಣಿಗೆಯಲ್ಲಿ
ಮೆರವಣಿಗೆ ಮಾಡಬಹುದು.
ಆದರೆ ಗಿಡಗಳು
ಎಷ್ಟು ಬೆತ್ತಲೆ ಜೀವಿಗಳೆಂದರೆ
ಅವುಗಳಿಗೆ ಅವಮಾನವಾಗುವುದಿಲ್ಲ
ಸುಮ್ಮನೆ ನೋಯುತ ನಿಲ್ಲುತ್ತವೆ
ಪ್ರಾಣಿಗಳೂ ಅಷ್ಟೇ,
ಗಿಡಗಳ ಹಾಗೆಯೇ
ನೊಂದು ಕೊರಗಿ
ನಿಮ್ಮ ಬಗ್ಗೆ ಕನಿಕರ ಪಡದೆ
ಸುಮ್ಮನೆ ಇದ್ದು
ಆತ್ಮಾರ್ಪಣೆ ಮಾಡಿಕೊಳ್ಳುತ್ತವೆ.
ಈದಗೆ ಈ ಮಾನಕ್ಕಾಗಿ ಬಟ್ಟೆಯುಟ್ಟ
ಮನುಷ್ಯ ಮಾತ್ರ ಹಾಗಲ್ಲ.
ಇವನ ಬಟ್ಟೆಗಳಿರುವುದೇ ಇವನ
ವಸ್ತ್ರಾಪಹರಣಕ್ಕಾಗಿ
ಅವಮಾನಿಸುವುದಕ್ಕಾಗಿ
ಅವಮಾನದಿಂದ ನಿದ್ರೆಗೆಡಿಸುವುದಕ್ಕಾಗಿಯೇ
ಇವರ ಸ್ಥಾನ, ಮಾನ,
ಮತ್ತು, ಉದ್ಧಟತನ.
ಸನ್ಮಾನಗಳನ್ನು ಪ್ರೀತಿಸುವ ಎಲ್ಲರೂ
ಮನುಷ್ಯನ
ಆಯಕಟ್ಟಿನ ಜಾಗವಾದ
ಅವಮಾನದ ಬಗ್ಗೆ ನೆನೆಯುತ್ತ
ಮರ ಮತ್ತು ಮೃಗಗಳ
ರಕ್ಷಣೆ ಪಡೆಯಬೇಕು[14]

–ಅವಮಾನವೇ ಇಲ್ಲದ ಜೀವಿಗಳು

ಹೀಗೆ ಮರಗಳು ಮತ್ತು ಪ್ರಾಣಿಗಳಿಂದ ಮನುಷ್ಯ ಬುದ್ದಿಕಲಿಯಬೇಕೆಂದು ಬಯಸಿದ ಕವಿ, ನಿರ್ಜೀವವಾದ ವಿಜ್ಞಾನದಕಡೆ ಕಣ್ಣೆತ್ತಿ ನೋಡುವುದು ಅಸಾಧ್ಯ. ಅದು ಅವನದಲ್ಲದ ಜಗತ್ತು. ಹೀಗೆ ಕಾಮ ಮತ್ತು ಹೆಣ್ಣು ಈ ಕವಿಯನ್ನು ಎಷ್ಟು ಆವರಿಸಿದ್ದವೆಂದರೆ 'ಅಮೆರಿಕನ್ ಜಾರಿಣಿಯರ ಸಮಸ್ಯೆ' ಎಂಬ ಕವಿತೆಯಲ್ಲಿ ಇಂದು ಕ್ರಾಂತಿ, ಕಾರ್ಮಿಕ, ಕಾರ್ಖಾನೆಗಳು,ಮಾರ್ಕ್ಸ್ ಮತ್ತು ಎಂಗೆಲ್ಸ್ ಎಲ್ಲವೂ, ಎಲ್ಲರೂ ಸೋತು, ಈ ಜಾರಿಣಿಯರು ಅವರ ಸಮಸ್ಯೆಯೇ ದೊಡ್ಡದಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಕವಿ ಲಂಕೇಶ್‌ರು ವಿಜ್ಞಾನಕ್ಕೆ ತಮ್ಮ ಅಂತರಂಗದ ಆಳದಲ್ಲಿ ಯಾವ ಸ್ಥಳ ನೀಡಿದ್ದರು ಎಂಬುದನ್ನು ಅವರ "ಕಾಡುಮೇಡಿನ ಜನರ ಹಾಡು" ಕವಿತೆಯಲ್ಲಿ ಖಚಿತವಾಗಿ ಗುರುತಿಸಬಹುದಾಗಿದೆ.

ಗೆಳೆಯರೊಂದಿಗೆ ಕಾರವಾರ ನೋಡಲು ಹೋಗಿದ್ದ ಕವಿಗೆ ಕಾರವಾರದ ಮರ ಯಾವುದೇ ಹೋಲಿಕೆಗೆ ಸಿಗದಂತೆ ಎತ್ತರ ಎಂಬುದನ್ನು ಅಚ್ಚರಿಗಣ್ಣಿನಿಂದ ನೋಡಿರುತ್ತಾರೆ.

ಕಾರವಾರದ ಮರ ಹೋಲಿಕೆಗಿಂತ ಎತ್ತರ;
ಅದನ್ನು ನಾನು ಬಯಲು ಕಲುಬುರ್ಗಿಯ ಕಪ್ಪುಕಣ್ಣಿನ
ಅಚ್ಚರಿಯ ಹುಡುಗನಂತೆ ನಿಂತು ನೋಡಿದೆ:
ಈ ಮರ ಕೊಡಗಿನ ದಢೂತಿ ಬೀಟಿಯಂತಲ್ಲ,
ಅರಬ್ಬೀ ಸಮುದ್ರದ ಅಲೆಗಳ ಸಹವಾಸದಿಂದ
ಕಾಮಕ್ಕೆ ಕೊಟ್ಟ ವಾತ್ಸಲ್ಯದ ಮುಗುಳ್ನಗೆಯಂತೆ
ವರ್ಣಿಸಲು ಕಷ್ಟವಾಗುವಷ್ಟು ಚೆಂದ.[15]

–ಕಾಡುಮೇಡಿನ ಜನರ ಹಾಡು

ಮಂಗಳ ಚೆಲುವನ್ನು, ದಿವ್ಯ ಮೌನವನ್ನು ಕವಿ ಈ ರೀತಿ ವರ್ಣಿಸುತ್ತಾರೆ.

ಗೆಳೆಯನೊಬ್ಬ ಹೇಳಿದ,
ಹಾಸಿದ ಬತ್ತಲೆ ಬಿಸಿ ಮೈಯ ಕಲಬುರ್ಗಿ ಥರವೇ
ಬಾಳೆಹೊನ್ನೂರಿನ ಕಗ್ಗವಿ ಕಾಡನ್ನು ನೀನು ನೋಡಿಲ್ಲ;
ಅಲ್ಲಿ ದಿಮ್ಮಗೆ ನಿಂತ ತೇಗ, ಹೊನ್ನೆ ಮತ್ತು
ನಮ್ಮೆಲ್ಲರಿಂದ ಬಚಾವಾದ ಜೀವಗಳು ಎಷ್ಟು ತಣ್ಣಗಿವೆ
ಸುಮ್ಮಗಿವೆ ಅಂದರೆ, ನಿಶ್ಯಬ್ದ ಕೈಗೆಟುಕುತ್ತದೆ;
ಮತ್ತು ಹಕ್ಕಿಗಾಗಿ ನೋಡುವ ನಿನ್ನನ್ನು
ಕೊಂಟೆಯಿಂದ ಉದುರುವ ಮುತ್ತುಗದ ಎಲೆ
ಚಿಲಕ್ಕನೆ ಬಿದ್ದು ಬೆಚ್ಚಿಬೀಳಿಸುತ್ತದೆ.....[16]

–ಕಾಡುಮೇಡಿನ ಜನರ ಹಾಡು

ಕಾಡಿನ ಅಧಮ್ಯ ಜೀವಂತಿಕೆಯನ್ನು ವರ್ಣಿಸುವ ಲಂಕೇಶ್ ಇಂತಹ ಪ್ರಕೃತಿಯ ಮುಂದೆ ತಮ್ಮ ಬೆಂಗಳೂರಿನ ನುಣ್ಣನೆಯ ರಸ್ತೆ, ಕಾಂಕ್ರೀಟ್ ಮನೆ, ನೈಲಾನ್ ವೇಷ, ಪುಢಾರಿಗಳ ನಗೆ, ಸಾಲಾಗಿ ಮನರಂಜನೆಗೆ ಕ್ಯೂನಿಂತ ಮಂದಿ, ಬಿಜಾಪುರ, ಕಲಬುರ್ಗಿಯ ಬತ್ತಲೆ ಸ್ವಾತಂತ್ರ್ಯ ಮತ್ತು ಬಾಳೆಹೊನ್ನೂರಿನ ಹಸಿರು ಸುಖ ಹೇಗೆ ಹೊಂದಿಕೊಳ್ಳುತ್ತದೆ ಎಂದು ಕವಿ ಪ್ರಶ್ನಿಸುತ್ತಾರೆ. ನಲವತ್ತೈದರ ವಯಸ್ಸಿನ ಆ ಇಬ್ಬರೂ ಗೆಳೆಯರು ಅನುಮಾನಗಳ ಮಧ್ಯ ತಲುಪುವ ಉತ್ತರ ಇದು:

ವಗೈರೆ ಜನರೆಲ್ಲರ ಅಹಂಕಾರ
ಕಲಬುರ್ಗಿಯ ಹಳಾವ ಮತ್ತು ಬಾಳೆಹೊನ್ನೂರಿನ
ಸಜೀವ ಮಾನವನ್ನು ಗೆದ್ದ ದಿವಸ
ಬಚಾವಾದ ಎಲ್ಲ ಜೀವಿಗಳ ಆತ್ಮ
ವಿಧಾನಸೌಧದ ಮೆಟ್ಟಿಲಿನಂತಾಗಿರುತ್ತದೆ [17]

–ಕಾಡುಮೇಡಿನ ಜನರ ಹಾಡು

ಅಂದರೆ ಪ್ರಕೃತಿ ವೈಶಿಷ್ಟ್ಯತೆ, ಸಜೀವ ಮೌನಗಳನ್ನು ಮನುಷ್ಯ ತನ್ನ ಅಹಂಕಾರದಿಂದ ಗೆದ್ದದಿನ, ಉಳಿದಿರುವ ಮನುಷ್ಯರ ಬದುಕು ಮತ್ತು ಆತ್ಮ ವಿಧಾನಸೌಧದ ಮಟ್ಟಿಲಿನಂತಾಗಿರುತ್ತದೆ. ರಾಜಕಾರಣದ ಕಾಲಿನ ಕೆಳಗಿನ ಕಲ್ಲಾಗಿರುತ್ತದೆ ಎಂಬ ಲಂಕೇಶರ ನಿಲುವು ಮನುಷ್ಯ ಪ್ರಕೃತಿಯ ಸಜೀವತೆಯನ್ನು ಕಾಪಾಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ಎತ್ತಿ ಹೇಳುತ್ತದೆ. ಲಂಕೇಶರ ಸಮಗ್ರ ದೃಷ್ಟಿಕೇಂದ್ರ ಪ್ರಕೃತಿ ಅದರ ಜೀವಂಥಿಕೆ, ಅದರ ದಿವ್ಯ ಮೌನ, ನಿರ್ಜೀವ ವಿಜ್ಞಾನದೆಡೆ ಈ ಜೀವಂತ ಕವಿ ಕಣ್ಣೆತ್ತಿ ನೋಡಿಲ್ಲ.

ಎ.ಕೆ ರಾಮಾನುಜನ್ : ಕನ್ನಡದಅಪರೂಪದ ಧೀಮಂತ ಲೇಖಕ ಎ.ಕೆ ರಾಮಾನುಜನ್. 1929 ರಲ್ಲಿ ರಾಮಾನುಜನ್ ಮೈಸೂರಿನ ತಮಿಳು ಬ್ರಾಹ್ಮಣಕುಟುಂಬದಲ್ಲಿ ಜನಿಸಿದರು. ಅವರ ಮನೆಯಲ್ಲಿ ಮೂರು ಭಾಷೆಗಳ ವಾತಾವರಣವಿದ್ದಿತು. ಮೈಸೂರಿನಲ್ಲಿಅವರ ಮನೆಯಎರಡನೆಯ ಮಹಡಿಯಲ್ಲಿ ತಮ್ಮ ತಂದೆಯ ಜೊತೆ ಮಾತಾಡುತಿದ್ದುದು ಇಂಗ್ಲಿಷ್, ಕೆಳಗಡೆ ಅಡುಗೆ ಮನೆಯಲ್ಲಿ ತಾಯಿಯ ಜೊತೆ ತಮಿಳು, ಹೊರಗಡೆ

ಬೀದಿಗಳಲ್ಲಿ ಕನ್ನಡ.ಮುಂದೆ ರಾಮಾನುಜನ್ ಈ ಮೂರು ಭಾಷೆಗಳಿಗೂ ಅಮೂಲ್ಯ ಕೊಡಿಗೆಯನಿತ್ತ ಧೀಮಂತ ಲೇಖಕರಾದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಎಂ.ಎ ಪದವಿ ಪಡೆದು ಅಮೆರಿಕಾದ ಇಂಡಿಯಾನಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ (1962) ಪದವಿ ಪಡೆದು ಷಿಕಾಗೊ, ಹಾವಾರ್ಡ್, ವಿಸ್ಕಾನ್ಸಿನ್, ಮಿಷಿಗನ್ ವಿಶ್ವವಿದ್ಯಾಲಯಗಳಲ್ಲಿ ಬೋದಿಸಿದ ರಾಮಾನುಜಂ 'ಹೊಕ್ಕಳಲ್ಲಿ ಹೂವಿಲ್ಲ', 'ಮತ್ತು ಇತರ ಪದ್ಯಗಳು', 'ಕುಂಟೋಬಿಲ್ಲೆ' ಹೀಗೆ ಮೂರು ಕವಿತಾ ಸಂಕಲನಗಳನ್ನು ಹೊರತಂದಿದ್ದಾರೆ.

ಅವರ ಸಮಗ್ರಕಾವ್ಯದ ಪ್ರತಿ ಸಾಲೂ ತೆರೆ ತೆರೆದು ತೋರಲು ಪ್ರಯತ್ನಿಸುವುದು ಬದುಕಿನ ಅಸಾಂಗತ್ಯ. ತನ್ನ ಕಾವ್ಯ ಜನರಿಗೆ ಎಂದೂ ಸಹ್ಯವಾಗುವುದಿಲ್ಲ ಎಂದು ಸಾರಿಸಾರಿ ಹೇಳುತ್ತಾ ಕಾವ್ಯ ಬರೆದವರು ಎ.ಕೆ ರಾಮಾನುಜನ್.

ಮಾತು ಮುಗಿಯುವ ಮೊದಲು
ನನ್ನಳಗಿರುವ ನನಗೆ
ನಾ ದನಿಯಾಗಲೇಬೇಕೇಂದು
ಹೊರಟು
ತಿಳಿದ ಜನ 'ಅದೋ ಬೋರು'
ಎಂದು ಮೈಲಿಮೈಲಿಯಾಚೆ
ಗಲ್ಲಿ ಬಿದ್ದು
ಸ್ವಗತ ಚಕ್ರವರ್ತಿ
ಯಾದೆ.[1]

ಎ.ಕೆ ರಾಮಾನುಜನ್‌ರವರ ಸಮಗ್ರಕಾವ್ಯ ಪರಿಶೀಲಿಸಿದಾಗ ಇವರ ಚಿಂತನೆಯ ಕೇಂದ್ರ ಬಿಂದು 'ಅಸಾಂಗತ್ಯ' ಎನಿಸುತ್ತದೆ. ಎ.ಕೆ ರಾಮಾನುಜನ್‌ರವರು ಮೈಸೂರಿನಲ್ಲಿ ಹುಟ್ಟಿ ಮನೆಯಲ್ಲಿ ತಮಿಳು, ತಂದೆಯೊಂದಿಗೆ ಇಂಗ್ಲಿಷ್, ಮನೆಯ ಹೊರಗೆ ಕನ್ನಡ ಹೀಗೆ ಮೂರು ಭಾಷೆಯಲ್ಲಿ ಏಕಕಾಲದಲ್ಲಿ ವ್ಯವಹಾರಿಸುತ್ತಾ ಬೆಳೆದವರು, ಮೂರು ಭಾಷೆಯಲ್ಲಿ ಏಕಕಾಲದಲ್ಲಿ ಬರೆಯುತ್ತಾ ಬಂದವರು. ಕನ್ನಡ ನೆಲದಲ್ಲಿ ಹುಟ್ಟಿ ಅಮೇರಿಕನ್ ನೆಲದಲ್ಲಿ ಮದುವೆಯಾಗಿ ಜೀವನ ನೆಡೆಸಿದವರು.ಇವರಿಗೆ ಮಾತೃಭೂಮಿಯ ನೆನಪುಗಳಿಗೂ, ಅಮೇರಿಕನ್ ನೆಲದ ಅನುಭವಗಳಿಗೂ ಎಂದೂ ಸಾಂಗತ್ಯ ಏರ್ಪಟ್ಟಿದ್ದಿಲ್ಲ. ಈ ಎರಡೂ ನೆಲಗಳ ಬದುಕಿನ ಪಯಣ ಕವಿಯ ಅಂತರಂಗದ ಅಸಾಂಗತ್ಯಕ್ಕೆ ಕಾರಣ:

ಯಾವುದೂ ಅಳಿಸಿ ಹೋಗುವುದಿಲ್ಲ ಸ್ಲೇಟಿ
ನಲ್ಲಿ ಬರೆದು ಅಳಿಸಿ ಬರೆದು ಅಳಿಸಿ
ದ ಅಕ್ಷರಲಕ್ಷ್ಮಿ ಮೆಕ್ಸಿಕೋನಲ್ಲಿದ್ದಾಗ ಬಾಗಿಲಿ
ಗೆ ಬಂದು ಬಾಗಿಲು ಹಾಕಿದೆ. ಅವಳ ಬೆರಳು
ಸಿಕ್ಕಿ ರಕ್ತ ಬಂತು. ನಾನು ಒಳಗೆ ಕರೆದು
ಗಾಯಕ್ಕೆ ಬ್ಯಾಂಡೇಜುಕಟ್ಟಿದೆ. ಆ ಸ್ಪಾನಿಷ್
ನಲ್ಲಿ ನನ್ನ ಇಂಗ್ಲಿಷು. ನನ್ನ ಇಂಗ್ಲಿಷಿನಲ್ಲಿ ಈ ಇವಳ
ಕನ್ನಡದ ಬ್ಯಾಂಡೇಜು ಬೆರಳು.
ಚಿಕ್ಕೆಂದು ಸತ್ತ
ಸಂಪಗೆ ಮನೆ ಹುಡುಗಿಯ ಬಾದಾಮಿ ಬಾಯಿ
ಹಾಕಾಂಗು ಸೂಳೆಯರ ಮುಖದಲ್ಲಿ.
ಯಾವುದೂ ಅಳಿಸಿ
ಹೋಗುವುದಿಲ್ಲ ಸ್ವಾಮಿ[19]

–ಯವುದೂ

ಕನ್ನಡದ ಮೈಸೂರಿನ ಬದುಕಿನ ನೆನಪುಗಳಲ್ಲಿ ಮಹಾಪೂರದೊಂದಿಗೆ ಅಮೇರಿಕಾದಲ್ಲಿ ವಾಸಿಸುವ ಎ.ಕೆ ರಾಮಾನುಜನ್‌ರವರ ವಿಜ್ಞಾನ ಕೂಡ ಇಂತಹದೇ ಅಸಾಂಗತ್ಯ, ದ್ವಂದ್ವದ ಕಣ್ಣಿನಿಂದ ಪ್ರತಿಕ್ರಿಯಿಸುತ್ತಾರೆ. "ಎರಡು ಮೊಟ್ಟೆ" ಎಂಬ ಕವನವೊಂದರಲ್ಲಿ

1. ಅದೇ ಪುಟ 71

ಅಣ್ಣತಮ್ಮರು ಬೆಳೆದ ವಾತಾವರಣದ ವಿವರ ಮೊದಲು ನೀಡುತ್ತಾರೆ. ಬಿಸಿಲಿನ ಚಿಟ್ಟೆ, ಬೆಲ್ಲದ ನೊಣ, ಸಕ್ಕರೆ ಇರುವೆಗಳನ್ನು ಪ್ರೀತಿಸುತ್ತಾ ಬೆಳೆದ ಅಣ್ಣ ಬಯಾಲಜಿ ಮೇಷ್ಟ್ರಾದರೆ, ತಮ್ಮ, ತನ್ನ ಮೂರನೇ ವಯಸ್ಸಿನಿಂದ ಮೈಸೂರಿನ ಕಿಟಕಿಯಲ್ಲಿ ಏರೋಪ್ಲೇನ್ ಕನಸು ಕಂಡು ಪೈಲಟ್ಟಾಗಿ ವಿಧಿಯಿಲ್ಲದೆ ಯುದ್ಧಕ್ಕೆ ಹೋಗುತ್ತಾನೆ.

ಅವನಿಗೆ ನಡುಮಧ್ಯ
ನನ್ನ ನೆನಪು
ಬಂತು
ಕೆಳಗೆ
ಗಟ್ಟಿನೆಲದ ಮೈಸೂರಿನಲ್ಲಿ
ಪೇಪರೋದುತ್ತ ನಾನು
ದಿನ ತಪ್ಪದೆ ಬೆಳಗ್ಗೆ ತಿಂದ
ಎರಡು ಕೋಳಿ ಮೊಟ್ಟೆ ನೆನಪು
ಬಂದು
ಆ ಕೋಪಕ್ಕೆ ಅವನು
ಇನ್ನೆರಡು ಬಾಂಬು
ಹಾಕಿ
ಅಮೃತಸರ
ದ ಒಂದು ಇಡೀ ಮೊಹಲ್ಲ
ನೆಲಸಮ
ವಾಯಿತು.[20]

–ಎರಡು ಮೊಟ್ಟೆ

ವಿಜ್ಞಾನ, ಆದರ ಆಧುನಿಕ ತಂತ್ರಜ್ಞಾನ, ಮನುಷ್ಯನ ಬದುಕು, ಮನುಷ್ಯನ ನೆನಪಗಳು ಯಾವುದಕ್ಕೂ, ಹೇಗೋ ಸಾಂಗತ್ಯ ಒಡಮೂಡಿ ಕಾಣುವುದಿಲ್ಲ ಈ ಕವಿಗೆ. ಇಂತಹದೇ ಒಂದು ಪದ್ಯದಲ್ಲಿ ಮಹಾಭಾರತದ ತುಂಬ ಚಿಪ್ಪಿನ ಹುಳ ಸಾಯುತ್ತದೆ'. ಆದರೆ ಎದುರು ಮನೆಯ ತುಂಬ ರಾಮನವಮಿಯಿಂದ ತುಂಬಿದೆ. ಆಗ ಈ ಕವಿತೆಯ ನಾಯಕನ ಅರಿವಿಗೆ ಬರುತ್ತದೆ ತಾನು ನಿಂತ ನೆಲ ಅಮೇರಿಕಾ ಎಂದು. .

ಎಲೆ ಮಿಕ್ಯವೆ
ಈ ಲೋಕ
ಅಮೇರಿಕ
ಅಪಾಯ
ಗಾಳಿ ನೀರು ಎಲ್ಲ ಬೆಂಕಿ
ಅಮೇರಿಕ ಎಲ್ಲಾ ದೇಶದ ಭವಿಷ್ಯ
ನಾಳೆ ಬೆಳಗಾದರೆ ಸರ್ವೋದಯ
ಸಂಜೆ ಮಾತ್ರ ಕಳ್ಳರ ಭಯ
ರಾತ್ರಿ ಬಾಂಬು
ನಾಡಿದ್ದು ಇನ್ನೂ ಇದ್ದರೆ ಯುಟೋಪಿಯ?

ಹಾಗೆಂದು ಅಮೇರಿಕಾ ಅಲ್ಲಿಯ ವಿಜ್ಞಾನ, ತಂತ್ರಿಕತೆ ರಾಮಾನುಜರವರ ಕವಿತೆಯ ಅಸಾಂಗತ್ಯಕ್ಕೆ ಮೂಲಭೂತ ಕಾರಣ ಎನಿಸುವುದಿಲ್ಲ. ಮೇಲಿನ ಕವಿತೆಯಲ್ಲಿ ವಿಜ್ಞಾನ ಅದು ಮನುಷ್ಯನ ಬದುಕಿಗೆ ತಂದೊಡ್ಡಿರುವ ಅತಂತ್ರ ಸ್ಥಿತಿಯ ವರ್ಣನೆ ಮಾತ್ರವಿದೆ. ಹಾಗೆಂದು ಈ ಕವಿ ವಿಜ್ಞಾನದ ಪರ–ವಿರೋಧಿಯಾಗಿ ಎಲ್ಲೂ ತಮ್ಮ ನಿಲುವನ್ನು ತಳೆದಿಲ್ಲ. ಕವಿಯ ನೋಡುವ ಕಣ್ಣೆ ಇಲ್ಲಿ ಅಸಾಂಗತ್ಯ (Absurlty) ದ್ವಂದ್ವಗಳಿಂದ ತುಂಬಿರುವುದರಿಂದ ವಿಜ್ಞಾನವನ್ನು ಅದೇ ದ್ವಂದ್ವನಿಲುವಿನಲ್ಲಿ ಕವಿ ಇಲ್ಲಿ ಕಂಡಿದ್ದಾರೆ ಎನ್ನಬಹುದು.

ಕೆ. ವಿ ತಿರುಮಲೇಶ್ : ಕೆ.ವಿ.ತಿರುಮಲೇಶ್ ಕನ್ನಡ ನವೋತ್ತರ ಕಾಲದ ಮಹತ್ವಪೂರ್ಣ ಕವಿ ಮತ್ತು ವಿಮರ್ಶಕರು ದೂರದ ಕಾಸರಗೋಡಿನಲ್ಲಿ ಹುಟ್ಟಿ ಬೆಳೆದು ಇಂಗ್ಲೀಷ್ ಅಧ್ಯಾಪಕರಾಗಿ ವಿದೇಶಗಳಲ್ಲಿ ವಾಸಿಸುತ್ತಿದ್ದ ತಿರುಮಲೇಶ್ ಕಾವ್ಯದ ಕೇಂದ್ರ ಮನುಷ್ಯ ಮನುಷ್ಯನಾಗಿ ಬಾಳಲು ಬೇಕಾದ ಮೂಲಧಾತುಗಳನ್ನು ಹುಡುಕುವತ್ತ. ಮನುಷ್ಯ ನಾಗರೀಕನಾಗುತ್ತಾ ಹೋದಂತೆ ತೆರುತ್ತಾ ಬಂದ ಬೆಲೆಯನ್ನು ಕವಿತೆಗಳು ಶೋದಿಸುವತ್ತ ಮುಖ ಮಾಡಿರುತ್ತವೆ. ಮನುಷ್ಯನ ಬದುಕಿಗೆ ಬೇಕಾದ ಜೀವಂತಿಕೆಗಾಗಿ ತಮ್ಮ ಕವಿತೆಗಳಲ್ಲಿ ಶೋಧಿಸುವತ್ತ ಸಾಗುವ ತಿರುಮಲೇಶ್ ಮನುಷ್ಯ ನಾಗರೀಕನಾಗಿ ಬದುಕಿರುವುದರಿಂದ ತೆರೆವ ಬೆಲೆ ಎಷು ದುಬಾರಿಯಾದುದು ಎಂಬುದನ್ನು "ಮುಖವಾಡ" (1998) ಸಂಕಲನದ 'ಸಮರ್ಥನೆ' ಗುಂಡಿಯಿಲ್ಲದ ಪ್ಯಾಂಟ್ಸು ಧರಿಸಿದವ', 'ವಾಸ್ತವತೆ', 'ಮುಖವಾಡಗಳು' ಕವಿತೆಗಳು ಚಿತ್ರಿಸುತ್ತವೆ.

ನನ್ನ ಹೊರಗಿನಜೀವಿತದಲ್ಲಿ
ಹೆರರ ಮುಖವಾಡಗಳ ನೆರಳು
ನನ್ನೊಳಗಿನ ಜೀವಿತದಲ್ಲಿ
ನನ್ನದೇ ಮುಖವಾಡಗಳ ನೆರಳು
ಸೋಮವಾರಕ್ಕೆ ಬೂದು ಮುಖವಾಡ
ಶನಿವಾರಕ್ಕೆ ಕಪ್ಪು ಮುಖವಾಡ
ಆದಿತ್ಯವಾರಕ್ಕೆ ರಂಗುರಂಗಿನ ಮುಖವಾಡ

ಬನ್ನಿ ನಿಮ್ಮ ಮುಖಕ್ಕೂ ಬೇಕು
ಒಂದು ಆವರಣ[22]

–'ಮುಖವಾಡಗಳು'

ಸ್ವಂತ ಮುಖವಿಲ್ಲದ ಮನುಷ್ಯ ಮುಖವಾಡಗಳ ಹಿಂದೆ ಅವಿತು ತಪ್ಪಿಸಿಕೊಳ್ಳುವುದನ್ನು ಕವಿತೆ ಇಲ್ಲಿ ಗೇಲಿ ಮಾಡುತ್ತದೆ. 'ವಠಾರ' ಸಂಕಲನದ ಮುನ್ನುಡಿಯಲ್ಲಿ ತಿರಮಲೇಶ್ 'ವಠಾರ' ಅಥವಾ 'ಪರಿಸರ' ಎಂಬ ಪದ ಕಳೆದ ಕೆಲವು ವರ್ಷಗಳಿಂದ ಹೊಸ ಅರ್ಥ ಪಡೆದುಕೊಂಡಿದ್ದು, ಕಂಡುಬರುತ್ತದೆ. ವಾತಾವರಣ ಮಾಲಿನ್ಯದ ಕುರಿತು ಹೊಸ ಜಿಜ್ಞಾಸೆ ನಡೆದಿದೆ. ನಾಗರಿಕತೆಯ ಪರಿಣಾಮವಾಗಿ ಒಂದು ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿದೆ.ಬದುಕುವುದಕ್ಕೆ ಬಿಡಿ ಎಂದು ಮನುಷ್ಯ ಕೂಗುವಂತಾಗಿದೆ. "ನಾನು 'ವಠಾರ' ಎಂಬ ಪದವನ್ನು ಈ ಪಾರಿಭಾಷಿಕ ಅರ್ಥದಲ್ಲಿ ಉಪಯೋಗಿದ್ದರು ಇದೊಂದೆ ಅರ್ಥದಲ್ಲಲ್ಲ. ಕೊಳೆಯುತ್ತಿರುವ ಪರಿಸರ ಸಮೂಹ ವ್ಯಕ್ತಿತ್ವದ ಮೇಲೆ ಯಾವ ಪರಿಣಾಮ ಉಂಟುಮಾಡುತ್ತಿದೆ? ಎಂಬಿತ್ಯಾದಿ ಪ್ರಶ್ನೆಗಳು ಒಂದಲ್ಲ ಒಂದು ಹಂತದಲ್ಲಿ ಇಲ್ಲಿನ ಕವಿತೆಗಳಲ್ಲಿ ಕಾಣಿಸಬಹುದು. ಇವುಗಳನ್ನೊದಿದಾಗ ಬಂದು ರೀತಿಯ ರೊಚ್ಚು, ಸಿಡುಕು, ತಮಾಷೆ ಅವಹೇಳನದ ಅಸಂಬದ್ಧ ಮೂಡು ಉಂಟಾದರೆ ಅದು ನಾನು ನನ್ನ ವಠಾರವನ್ನು ಅರ್ಥವಿಸುವ ಬಗೆ. ಮನುಷ್ಯ ಹುಚ್ಚನಾಗುವುದನ್ನು ತಪ್ಪಿಸುವುದು ಹೇಗೆ ಎಂಬ ವಿಚಾರವನ್ನು ಒದುಗರಲ್ಲಿ ಎಬ್ಬಿಸುವುದಕ್ಕಾಗಿ ಈ ಹೊಸ ಮುಖವಾಡ." ಎಂದು ಹೇಳುವ ತಿರುಮಲೇಶ್‌ರ ಕಾವ್ಯಗಳನ್ನು ಪರಿಶೀಲಿಸಿದರೆ ಈ ಪರಿಸರವನ್ನು ಹಾಳು ಮಾಡಿರುವುದು ಯಾವುದು? ಮನುಷ್ಯ ಪ್ರಕೃತಿಯಿಂದ ದೂರ ಸರಿದೂ, ಸರಿದೂ ನಾಗರೀಕನಾಗಿ ಬಾಳುತ್ತಿರುವುದು ಎಂಬುದು ಮಾತ್ರ ಕಂಡುಬರುತ್ತದೆ. "ಪ್ರೊ. ಬುದ್ಧಿಜೀವಿಗೆ" ಕವಿತೆಯಲ್ಲಿ ಮನುಷ್ಯ ಜ್ಞಾನದ ಬೆನ್ನು ಹತ್ತಿದರೆ ಏನಾಗುತ್ತಾನೆ ಎಂಬುದನ್ನು ವಿಡಂಬ ಮಾಡಲಾಗಿದೆ.

ನನಗೆ ಟೀ ಬೇಕು
ಟಿಫಿನ್ ಬೇಕು
ಹೊದೆಯುವುದಕ್ಕೆ ಚದ್ದರ ಬೇಕು
ಎಂದೆ
ಸೋಶಿಯೋಳಜಿ ಸೈಕಾಳಜಿ ಆಂತ್ರೋಪೋಳಜಿ
ಫಿಲಾಸಪಿ ಸಾಕು ನನಗೆ ಎಂದಿರಿ
ಎಲ್ಲಾ ಅನುಭವಿಸಬೇಕು ನನಗೆ
ಎಂದು ಕೂಗಿದೆ
ಇಂದ್ರಿಯಗಳಿಂದ ಇತ್ತ ಬಾ
ಅಳಬೇಡ ನಗಬೇಡ ಚಿಂತಿಸು
ಎಂದಿರಿ
ಚಿಂತಿಸಿದೆ ಸಣ್ಣ ತಲೆಬುರುಡೆಯೊಳಗೆ
ಬೆಳೆಸಿದೆ ಪ್ರೀತಿಸಲಿಲ್ಲ ದ್ವೇಷಿಸಲಿಲ್ಲ ಮಿದುಳು ಬ್ರಹಾಂಡವಾಗಿ
ನಿರ್ಲಿಪ್ತನಾದೆ
ಅನಾಸ್ತೇಸಿಯಾ ಆದೆ!
ಈಗಲೋ ನನಗೆ ಹಸಿವಿಲ್ಲ ರುಚಿಯಿಲ್ಲ
ಉಪ್ಪು ಖಾರ ಗೊತ್ತಿಲ್ಲ
ದೊಡ್ಡ ಬುದ್ಧಿಯ ಕೆಳಗೆ
ಸಣ್ಣ ಕೈಕಾಲುಗಳ
ವ್ಯಂಗ್ಯಚಿತ್ರ ಈ ನಾನು
ಇರಲಿ ಬಿಡಿ
ಆತ್ಮಹತ್ಯೆಯಕುರಿತು
ಏನನ್ನತ್ತವೆ ಸಾರ್ ನಿಮ್ಮ ಗ್ರಂಥಗಳು?[24]

–ಪ್ರೋ॥ ಬುದ್ಧಿಜೀವಿಗೆ.

ವಿದ್ಯ, ಬುದ್ಧಿವಂತಿಗೆ ವಿಶೇಷ ಪ್ರಾಧಾನ್ಯತೆ ನೀಡುತ್ತಾ ಹೋದರೆ ಮನುಷ್ಯನ ವ್ಯಕಿತ್ವ ಕೊನೆಗೆ ವ್ಯಂಗ್ಯಚಿತ್ರದೋಪಾದಿಯಲ್ಲಿ ರೂಪಿತವಾಗುತ್ತದೆಂದು ಹೇಳುವ ತಿರುಮಲೇಶ್ "ಅವಧದಿಂದ" (1986) "ಒಂದು ಮೋಟಾರ್ ಬೈಕನ್ನೇರಿ" ಕವಿತೆಯಲ್ಲಿ "ಒಂದು ಮೋಟಾರು ಬೈಕನ್ನೇರಿ ಸುಮ್ಮನೆ ಹೋಗುವ ಸಹಜಮಜ"ವನ್ನು ಆ ಸಂಧರ್ಭದಲ್ಲಿ ಮನುಷ್ಯ ನಿರಾತಂಕ ಮತ್ತು ಆತಂಕಗಳನ್ನು ಪ್ರಕೃತಿ ಬರೀ ಚಿತ್ರಗಳಾಗಿ ಹಿಂದೆ ಸರಿಯುವ ವಾಸ್ತವ ಚಿತ್ರಣ ಕಟ್ಟಿಕೊಡುತ್ತಾರೆ.

ಹೊಲಮನೆಗಳಾಚೀಚೆ
ಅಂಗಳದ ಮನೆ ಮುಂದೆ ಒಬ್ಬರೊಬ್ಬರತಲೆಬಾಚುವ ಹೆಂಗಸರು
ದೃಷ್ಟಿಯ ಹೊರವಲಯದಲ್ಲಿ ಕಂಡು ಕಾಣಿಸದಂತೆ ಮಾಯುವರು.
ಆಕಾಶದ ಅಂಚಿನಲ್ಲೆದ್ದ ದಬ್ಬಣದ ಕೋಡುಗಲ್ಲುಗಳು ಮಾತ್ರ
ಅಷ್ಟು ದೂರವು ಬಂದು ಮನಸ್ಸಿನಲ್ಲದೆ ಹಿಂದೆ ಸರಿಯುವವು.

–ಒಂದು ಮೋಟಾರು ಬೈಕನ್ನೇರಿ.

ಹೀಗೆ ನಾಗರೀಕತೆಯ ಅವಕಾಶಗಳು, ಯಂತ್ರಗಳು, ಸುಲಭವಾದ ರಾಜಬೀದಿಗಳು, ನಗರಸಂಸ್ಕೃತಿ ಹೆಚ್ಚಾದಷ್ಟು ಮನುಷ್ಯ ತನ್ನನ್ನು ತಾನು ಕಳೆದುಕೊಳ್ಳುವುದೇ ಹೆಚ್ಚು ಎಂಬ ಧ್ವನಿ ಅವರ ಸಮಗ್ರ ಕವಿತೆಯಿಂದ ಹೊರಡುತ್ತದೆ. ಆದರೆ ತಿರುಮಲೇಶ್ ನೇರವಾಗಿ ವಿಜ್ಞಾನಕ್ಕೆ ಮುಖ ಮಾಡಿ ಕವಿತೆ ಬರೆದುದಿಲ್ಲ. ವಿಜ್ಞಾನ ಘಾತುಕ, ಆತಂಕಕಾರಿ ಎಂದು ಎಲ್ಲೂ ಬಾಯಿಬಿಟ್ಟು ಹೇಳುವುದಿಲ್ಲ. ಅವರ ಸಮಗ್ರ ದೃಷ್ಟಿ ಕೇಂದ್ರವೆಲ್ಲ ವಿಜ್ಞಾನವನ್ನು ಬಳಸುವ ಮನುಷ್ಯನ ನಾಗರೀಕತೆಯೆಡೆ, ನಾಕರೀಕ ಬುದ್ಧಿಯಿಂದಾಗಿ ಮನುಷ್ಯ ಕಳೆದುಕೊಳ್ಳುತ್ತಾ ಸಾಗುವ ಜೀವನ ಸೌಂದರ್ಯ, ಜೀವನ ಸುಖ, ಜೀವನ ಸಂತೋಷಗಳ ಕಡೆ ಅವರದೃಷ್ಟಿಕೇಂದ್ರ ನೆಟ್ಟರುತ್ತದೆ.

ಚಂದ್ರಶೇಖರ ಕಂಬಾರ : ಜನಪದ ಲೋಕದ ಮಾಂತ್ರಿಕ ಸೃಷ್ಟಿಯ ಸಾಹಿತಿಯಾದ ಕಂಬಾರರ ಕಾವ್ಯಲೋಕ ಜನಪದ ಲೋಕದ ಕಥೆಗಳು, ಪಾತ್ರಗಳು, ಹಾಡುಗಳು, ವಚನಗಳು, ಮಟ್ಟುಗಳು, ಛಂದಸ್ಸುಗಳು,ಇವೊಗಳೊಂದಿಗೆ ಒಡನಾಡುತ್ತವೆ. ಭಾರತೀಯ ಪರಂಪರೆಯೊಂದನ್ನು ಬದುಕನ್ನು ಸೃಷ್ಟಿಸುವಾಗ ಕೂಡ ಕಂಬಾರರ ಜಗತ್ತು ಜನಪದೀಯದ್ದೇ ಆಗಿರುತ್ತದೆ. ಆದರೆ ಅವರ ಕಾವ್ಯ ಶೋಧಿಸುವ ವಸ್ತು, ಸಮಕಾಲೀನವಾಗಿರುತ್ತದೆ. ಕೊಡುವ ಸಂದೇಶ ನವ್ಯದ್ದಾಗಿರುತ್ತದೆ. ಅಂದರೆ ಸಮಕಾಲಿನ ದ್ವಂದ್ವಗಳಿಗೆ ಉತ್ತರ ನೀಡುವಂಥದ್ದಾಗಿರುತ್ತದೆ. ಶಿವಾಪುರದ ಹಳ್ಳಿಯ ಹಿನ್ನೆಲೆಯಲ್ಲಿ ಭಾರತದ, ಕನ್ನಡದ ಇತಿಹಾಸದ ನಾನಾ ಮಜಲುಗಳನ್ನು ಕುಂಬಾರರವ ಕಾವ್ಯ ಕಟ್ಟಿಕೊಡುತ್ತದೆ. ಕಾಮದ ಸೃಜನಶೀಲ ಆಯಮಗಳು, ಏಳು–ಬೀಳುಗಳು, ಕಾಮದ ಅದಮ್ಯ ಶಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಸಮಾಜದ ಏಳು–ಬೀಳುಗಳನ್ನು ಚಿತ್ರಿಸುವ ಕಂಬಾರರ ಕಾವ್ಯ ಮನುಷ್ಯನ ನಾಗರೀಕ ಬದುಕಿನ ಬಗ್ಗೆ, ಅದರಲ್ಲೂ ನಗರ ನಾಗರೀಕತೆಯ ಬಗ್ಗೆ ಬರೆದಿರುವುದು ಅತ್ಯಲ್ಪ.

ಕಂಬಾರರ'ಹೋಳತೇನ ಕೊಳ' ಎಂಬ ಕಥನ ಕಾವ್ಯದಲ್ಲಿ ಶಿವಾಪೂರ ಎಂಬ ಸ್ವಾತಂತ್ರ್ಯಪೂರ್ವದ ಹಳ್ಳಿಯೊಂದರ ಉತ್ಕೃಷ್ಟ ಬದುಕನ್ನು ಮೊದಲಿಗೆ ಕಟ್ಟಿ ಕೊಡುತ್ತದೆ.

ಜಂಬೂದ್ವೀಪದ ಪೈಕಿ ಮ್ಯಾಗಡೆ ಮಲೆನಾಡ
ಸೂಸಿ ಹರಿದಾಳಲ್ಲಿ ಘಟಪ್ರಭಾ
ಆ ದಂಡಿ ಆರ್ಯಾಣ, ಈ ದಂಡಿ ಶಿವಪೂರ,
ಕೆಂಪು ಹಂಚಿನ ಊರು ಬಲು ಶೋಭಾ.
ಹಸಿರುಕಾಂತಿ ಪಸರೀಸಿ ಮೈಚಾಚಿ ಮಲಗ್ಯದ
ನದಿಯ ಎದೆಯಾಗುನು ಅದೆ ನೆರಳಾ.
ಹೊಳೆಯ ದಂಡೆಯ ಆಲ ನೂರಾರು ಪಾರಂಭಿ
ಬುಡದಾಗ ಕರ್ರೆವ್ವ ಊರ್ಯಾಳ್ಳಳಾ.
ನೂರು ಬಂಡಿಗೆ ಇಂಬುಗೊಡುವಷ್ಟು ನೆರಳಿತ್ತು;
ಯಾರ್ಯಾರು ಸುಳಿದಿಲ್ಲ ಬಡ್ಡಿ ತನಕ,
ಉದಯಾಸ್ತಗಳ ನಡಕ, ಹೊಳಿಗುದ್ದ ಎಡಬಲಕ,
ಜಗದಾಗಿಂಥಾದಿಲ್ಲ ಬಹುತೇಕ.[25]

–ಹೇಳತೇನಕೇಳ

ಇಂತಹ ಉತ್ಕೃಷ್ಟ ಹಳ್ಳಿಯ ಬದುಕಿನಲ್ಲಿ ನಿರ್ನಾಮ ಪ್ರಕ್ರಿಯೆ ಪ್ರಾರಂಭವಾಗುವುದು ರಾಕ್ಷಸನೊಬ್ಬ ಊರ ಗೌಡನನ್ನು ಕೊಂದು, ಗೌಡನಂತೆ ಮಾರು ವೇಷಧರಿಸಿ ಊರಿಗೆ ಬಂದಾಗ. ಆ ಊರಿನ ಬದುಕಿನ ಹದ, ಸೃಜನಶೀಲತೆ ಕೆಡುತ್ತಾ ಬಂದಾಗ ಊರಿನ ಗೌಡನಂತೆ ಮಾರುವೇಷ ಧರಿಸಿದ ರಾಕ್ಷಸ ಊರಿನ ಮಕ್ಕಳಿಗಾಗಿ ಶಾಲೆ ಕಟ್ಟಿಸಲು ಹೊರಡುತ್ತಾರೆ. ಊರ ಜನರೆಲ್ಲಾ ಅದಕ್ಕೆ ತಲೆದೂಗಿ, ಪ್ರತಿಯೊಬ್ಬರೂ ಕೈಜೋಡಿಸಿ ಶಾಲೆ ಕಟ್ಟುತ್ತಾರೆ.

ಶುಕ್ರಾರ ಸುರುವಾಗಿ ಆಯ್ತಾರ ತಯ್ಯಾರ
ಬರದೀತ ಸ್ವಾಮಾರ ಬಡ್ಯಾಗನ.
ಆಲ್ಯದ ಬೇರ ಬಂದು ತೊಡರ್ಯಾವು ತೊಡಕ್ಕಾವು;
ಮೊದಲಿದನ ಎಲ್ಲಾರು ಕಡಿಯೋಣ.
ಜಾಲಿ ವರದ ಮುದುಕ ಬೇಡಿಕೊಂಡಾ
ಕೈ ಮುಗಿದು ಅಡ್ಡ ನಿಂತಕೊಂಡಾ
ಸರಿಸರಿಸಿ ಮರವ ಕಡಿದಾರ
ಸಾಲೀಯ ಪೂಜೆ ಮಾಡ್ಯಾರ

ತಾಸೇ ಹಲಗಿ ಡೊಳ್ಳ ಗರ್ದಿಲೆ ಬಾರಿಸ್ಯಾರ;
ಕರಿಯಜ್ಜ ತೀರಿಕೊಂಡ ಅದದಿನಾ,[26]

–ಹೋಳೆತೇನ ಕೇಳ

ಇಲ್ಲಿ ಆಲದ ಮರದ ಬೇರುಗಳನ್ನು ಕಡಿಯುವುದೆಂದರೆ ಆ ಊರಿನಲ್ಲಿ ಪರಂಪರಾಗತವಾಗಿ ಹರಿದು ಬಂದಿದ್ದ ಸಂಪ್ರದಾಯ ತಿಳುವಳಿಕೆಯನ್ನು ಕಡಿದುಹಾಕಿದಂತೆ. ಆಲದ ಮರದ ಬುಡದಲ್ಲಿ ತನ್ನ ಬೇರು ಬಿಟ್ಟಿದ್ದ ಕರಿಯಜ್ಜ ಊರಿನಲ್ಲಿದ್ದ ಪರಾಂಪರಾಗತ ಸಂಪ್ರಾದಯ, ನಂಬಿಕೆ, ತಿಳುವಳಿಕೆಯ ಪ್ರತೀಕ. ನಾಗರೀಕತೆಯ ಪ್ರತೀಕವಾದ ಶಾಲೆಯೊಂದರ ಆಗಮನವೆಂದರೆ ಹಳ್ಳಿಯಲ್ಲಿ ಪರಂಪರಗತವಾದ ಸೃಜನಶೀಲ ಬದುಕಿಗೆ ಇಂಬು ಕೊಡುವಂತಹ ಮೌಲ್ಯಗಳ ನಷ್ಟವಾಗುವಿಕೆ ಎಂಬುದು. ಕಂಬಾರರು ನೀಡುವ ಚಿತ್ರಣ. ಇದು ಅವರ ಬಹುತೇಕ ನಾಟಕಗಳಲ್ಲಿ ಚಿತ್ರತವಾಗುವ ಚಿತ್ರಣವೂ ಹೌದು. "ಕಾಲೆಗಾರಣ್ಣನ ಲಾವಣಿ" ಎಂಬ ಕವಿತೆಯಲ್ಲಿ ದೊಡ್ಡ ಮಹಾನಗರದ ಪುಟ್ಟಗೂಡಿನಲ್ಲಿ ವಾಸಿಸುವ ಕಲೆಗಾರನೊಬ್ಬನ ಸೃಜನಶೀಲತೆಯ ಸಂಕಷ್ಟವನ್ನು ಕಟ್ಟಿಕೊಡುತ್ತದೆ.

ಹುಸಿಯಲ್ಲ ಅಸಲ ಖರೆ ಸೋಸಿ ಹೇಳತೇವ್ರಿ
ಇದ್ದನೊಬ್ಬ ಕಲೆಗಾರ
ಭಾರಿ ಸಿಟಿಯ ಕಿರು ರೂಮಿನೊಳಗ ರೂಮಿನಂಥಾ ಗೂಡಿನೊಳಗ
ಮರೆತ ಹಾಡಿನ ತುಂಡು ಸಾಲಿನ್ಹಾಂಗ ಇದ್ದಾ
ಹೊರಗೆ ಬರಲು ರಹದಾರಿಯಿಲ್ಲದ
ಆಳ ನೋವಿನ್ಹಾಂಗ[27]॥

–ಕಲೆಗಾರಣ್ಣನ ಲಾವಣಿ

ಇಂತಹ ಹುಟ್ಟು ಕಲೆಗಾರನಿಗೆ, ಯಾರು ಏನೆಂದರೂ ಇರುವ ಜಾಗದಲ್ಲೆ ಗಿಡದ, ಮರದ ಖಾಂಡದಚಿತ್ರ ಬರೆಯುತ್ತಿದ್ದ ಚಿತ್ರಕಾರನಿಗೆ ಎಲೆಯ ಚಿತ್ರ ಬಿಡಿಸಲು ಮಾತ್ರ ಬರುವುದೇ ಇಲ್ಲ.

ತಾನು ಎಲೆಯ ಚಿತ್ರವನ್ನು ಬಿಡಿಸಲಾಗಲಿಲ್ಲ ಎಂಬ ನೋವು ಅವನ ಗಂಟಲಲಿ ಸಿಕ್ಕಿ ಬಿಕ್ಕಾಗಿ, ಒದ್ದಾಡಿದ ಸಾಯಾಲಾರದೆ ಬದುಕಲೂ ಆರದೆ. ಇಂತಹ ಕಲೆಗಾರನ ಬದುಕಿನಲ್ಲಿ ಶಿವನ ಕೃಪೆಯಿಂದ ಹಕ್ಕಿಯೊಂದು ಬಂದು ಅವನು ಬಿಡಿಸಿದ ರೆಂಬೆ, ಕಾಂಡದ ಮೇಲೆ ಕೂತು ಹಾಡಿ ಮತ್ತೆ ಜೀವಂತಿಕೆ ತರುತ್ತದೆ.

ಹಕ್ಕಿ ಹಾಡಿತಣ್ಣಾ ॥
ತುಂಬಿದೆಯ ತಂಬುಲದ ಹಾಡುಗಳ
ಕಾಡಿಗಿಡಿಸಿತಣ್ಣಾ[28] ॥

ಹೀಗೆ ಸಿಟಿಗಳಲಿ ಅರಳುವ ಕಾವ್ಯ ಅಥವಾ ಕಲೆ ಪಾರ್ಶ್ವವಿಕವಾದುದು. ಅದು ಸಂಪೂರ್ಣತೆಯನ್ನು ಎಂದು ಪಡೆಯಲಾಗದು ಎಂಬ ಕಂಬಾರರ ನಿಲುವಿನಲ್ಲಿ ಅವರು ವಿಜ್ಞಾನ, ತಂತ್ರಜ್ಞಾನಕ್ಕೆ ತೀರ ವಿರುದ್ಧವಾದ ಮನಃಸ್ಥಿತಿಯುಳ್ಳವರು ಎಂಬುದು ವ್ಯಕ್ತವಾಗುತ್ತದೆ.

ಈ ವರೆಗೆ ಗಮನಿಸಿದಂತೆ ಕನ್ನಡ ನವ್ಯ ಕವಿಗಳು ವಿಜ್ಞಾನ ಅಥವಾ ತಾಂತ್ರಿಕತೆಗೆ ಕಾವ್ಯರೂಪನಲ್ಲಿ ಸ್ಪಂದಿಸಿರುವುದು ತೀರ ಅತ್ಯಲ್ಪ. ಗೋಪಾಲಕೃಷ್ಣ ಅಡಿಗರು ತಮ್ಮ ಕಾವ್ಯದಲ್ಲಿ ನೇರವಾಗಿ ವಿಜ್ಞಾನವನ್ನು ಇಟ್ಟು ಪರಿಶೀಲಿಸಿದಂತೆ ಇನ್ನಿತರ ನವ್ಯಕವಿಗಳು ಅಂತಹ ಪರಿಶೀಲನೆ ಮಾಡುವ ಗೋಜಲಿಗೆ ಸಿಲುಕಲಿಲ್ಲ. ಗೋಪಾಲಕೃಷ್ಣ ಅಡಿಗರು ಹಾಗೆ ನೇರವಾಗಿ ವಿಜ್ಞಾನವನ್ನು ಇಟ್ಟು ಪರಿಶೀಲಿಸಿಲು ಮುಖ್ಯ ಕಾರಣ ಎಲಿಯಟ್ ಮತ್ತು ಆಡೆನ್ ಇಂತಹ ಪಶ್ಚಿಮದ ನವ್ಯ ಕವಿಗಳ ಪ್ರಭಾವವಾಗಿದೆ. 'ಭೂಮಿಗೀತ' (1959) ಸಂಕಲನದ ನಂತರ ಮತ್ತೆ ಈ ಮಣ್ಣಿನ ಸತ್ವದಿಂದ ಹಾಡುವ ಕವಿತೆಗಳಿಗೆ ಹಿಂದಿರುಗಿದ ಅವರು 'ವರ್ಧಮಾನ' (1972) ಸಂಕಲನದ ನಂತರ ಅವರೂ ಮತ್ತೆ ವಿಜ್ಞಾನವನ್ನು ನೇರವಾಗಿ ಕಾವ್ಯದಲ್ಲಿ ಪರಿಶೀಲಿಸುವ ಗೊಡವೆಗೆ ಹೋಗಲಿಲ್ಲ. ಲಂಕೇಶ್ ತಮ್ಮ ಕಾದಂಬರಿಗಳಲ್ಲಿ, ಕಥೆಗಳಲ್ಲಿ ವೈಜ್ಞಾನಿಕ ಬದುಕಿನ ಕುರೂಪಗಳನ್ನು ಚಿತ್ರಿಸುತ್ತಾರೆ. ಆದರೆ ಅವರ ಕಾವ್ಯದಲ್ಲಿ ವಿಜ್ಞಾನಕ್ಕೆ ಮುಖಾಮುಖಿಯಾಗಿರುವುದು ಅತ್ಯಲ್ಪ 50, 60, 70ರ ದಶಕಗಳಲ್ಲಿ ನಮ್ಮ ಸಮಾಜದ ಮೇಲೆ ವಿಜ್ಞಾನದ ಕುರೂಪ ಮುಖಗಳು ಇನ್ನೂ ಬದುಕನ್ನು ಕಲಕಿರಲಿಲ್ಲ. ಎಂಬುದು ಇದಕ್ಕೆ ಕಾರಣ. ವಿಜ್ಞಾನವೆಂಬುದು ಜನತೆಯ ಬದುಕಿನಲ್ಲಿ ಸಮ್ಮಿಳಿತವಾಗದೇ ಸಾಮಾನ್ಯ ಜನತೆಯ ಅಂತರಂಗಕ್ಕಿಳಿಯದೆ ಕಲೆಯಲ್ಲಿ ಅದು ಅವತರಿಸುವುದು ಸಾಧ್ಯವಿಲ್ಲ. 50,60, 70ರ ದಶಕದಲ್ಲಿ ವಿಜ್ಞಾನ ಜನತೆಯ ಬದುಕಿನ ಅವಿಭಾಜ್ಯ ಅಂಗವಾಗಿರಲಿಲ್ಲ. ರೈಲು, ವಿಮಾನ, ಮೋಟರುಗಾಡಿ ಯಂತ್ರಗಳು ಬದುಕಿನೊಳಗೆ ಪ್ರವೇಶಿಸಿ ದಾಕ್ಷಣ ವಿಜ್ಞಾನ, ವೈಜ್ಞಾನಿಕ ಮನೋಧರ್ಮ ಜನತೆಯ ಬದುಕನ್ನು ಪ್ರವೇಶಿಸಿದಂತಾಗುವುದಿಲ್ಲ. ವಿಜ್ಞಾನವೇ ಸಾಮಾನ್ಯ ಜನತೆಯ ಬದುಕನ್ನು ಪ್ರವೇಶಿಸಿಲ್ಲ ಎಂದ ಮೇಲೆ ವಿಜ್ಞಾನದ ಇನ್ನಿತರ ಆಯಾಮಗಳಿಗೆ ಜನತೆ ಎಚ್ಚೆತ್ತುಕೊಳ್ಳುವುದು ಅಸಾಧ್ಯ. ಬಹುತೇಕ ಕನ್ನಮಡ ನವ್ಯ ಕವಿಗಳು ವಿಜ್ಞಾನಕ್ಕೆ ಮುಖಾಮುಖಿಯಾಗಿಲ್ಲದಿರುವುದರ ಮೂಲಭೂತ ಕಾರಣವಿದು. ವಿಜ್ಞಾನವನ್ನು ಕುರಿತು ಆ ಕಾಲಮಾನದಲ್ಲಿ ಸಮಾಜದಲ್ಲಿ ಆರಾಧಕ ಮನೋಧರ್ಮವಿದ್ದದ್ದನ್ನು ಡಿ.ಆರ್ ನಾಗರಾಜ್ ತಮ್ಮ "ಆಧುನಿಕ ಭಾರತೀಯ ಪ್ರಭುತ್ವ ಮತ್ತು ವಿಜ್ಞಾನ, ಸಂದೋಹಿಯಾಗಿ ಸಾಹಿತ್ಯ"[29] ಎಂಬ ಲೇಖನದಲ್ಲಿ ಎತ್ತಿತೋರುತ್ತಾರೆ. ವಿಜ್ಞಾನ ತನ್ನ ಕ್ರೂರ ಮುಖಗಳನ್ನು ತೋರಿದ್ದು, ಅಣೆಕಟ್ಟುಗಳ ನಿರ್ಮಾಣದಿಂದ ನಿರಾಶ್ರಿತರಾದ ಜನಾಂಗಗಳು; ಕಾಡಿನ ನಿರ್ನಾಮದಿಂದ ತಮ್ಮ ಸಂಸ್ಕೃತಿಗೆ ಬಲವಾದ ಪೆಟ್ಟುತಿಂದ ಕಾಡು ಗೊಲ್ಲರು, ಕುರುಬರು ಈ ಜನಾಂಗಗಳು ಪಟ್ಟ ಬವಣೆಗಳಲ್ಲ. ಆದರೆ ಈ ಜನಾಂಗಗಳು ಕನ್ನಡದ ಮುಖ್ಯ ಕಾವ್ಯಧಾರೆಗೆ ಇನ್ನೂ ಪ್ರವೇಶಿಸದೆ ಹೋದ ಕಾರಣ ಕನ್ನಡ ನವ್ಯಕಾವ್ಯ ವಿಜ್ಞಾನಕ್ಕೆ ಮುಖಾಮುಖಿಯಾಗದೆ ಉಳಿಯಿತು.

ಅಡಿ ಟಿಪ್ಪಣಿಗಳು

1. ಜಿ.ಟಿ. ನಾರಾಯಣರಾವ್ : 'ನಿಕೊಲಾಸ್ ಕೊಪರ್ನಿಕಸ್', (ಮಿತ್ರ ಪ್ರಕಾಸ, 24 ಕುಮಾರ ಕೃಪಾ, ಕುವೆಂಪುನಗರ, ಮೈಸೂರು – 570009) ಪು. 2
2. ಸಂ. ಡಾ. ಶ್ರೀನಿವಾಸಹಾವನೂರ : ಮಧ್ಯಕಾಲೀನ ಕರ್ನಾಟಕ (ಜಿ.ಎಸ್. ದೀಕ್ಷಿತ್ ರವರ ಆಯ್ದ ಬರಹಗಳು) ಪ್ರಸಾರಾಂಗ, ಕ.ರಾ.ಮು.ವಿ., ಮಾನಸಗಂಗೋತ್ರಿ, ಮೈಸೂರು–570006. ಮೊದಲ ಮುದ್ರಣ 2008, ಪು.124
3. ಕುವೆಂಪು– 'ಸಮಗ್ರ ಕಾವ್ಯ' ಸಂ. 1 (ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ–583276), ಪುಟ. 372
4. ವಿ.ಕೃ. ಗೋಕಾಕ್ : 'ನವ್ಯ ಕಾವ್ಯ' (ಭಾಗ ಒಂದು) (ಐಬಿಹೆಚ್ ಪ್ರಕಾಶನ ಗಾಂಧಿನಗರ,. ಬೆಂಗಳೂರು–560009) ಮೊ.ಮು. 1988, ಪು. 52
5. ಗೋಪಾಲಕೃಷ್ಣ ಅಡಿಗ: 'ಸಮಗ್ರ ಕಾವ್ಯ' (ಸ್ವಪ್ನ ಬುಕ್ ಹೌಸ್ , ಗಾಂಧಿನಗರ, ಬೆಂಗಳೂರು–570009) ಮೊ. ಮು. 1999. ಪುಟ. 2136
6. ಅದೇ ಪುಟ ಸಂಖ್ಯೆ287.
7. ಅದೇ ಪುಟ ಸಂಖ್ಯೆ 327
8. ಬಿ.ಸಿ ರಾಮಚಂದ್ರ ಶರ್ಮ: 'ಸಮಗ್ರ ಕಾವ್ಯ' [ಸಪ್ನ ಬುಕ್ ಹೌಸ್ ಶುಂಗಾ ಕಾಂಪ್ಲೆಕ್ಸ್, ಇಂದಿರಾ ನಗರ, ಬೆಂಗಳೂರು–560009] ಮೊ. ಮು. 2001, ಪುಟ. 127
9. ಅದೇ ಪುಟ 69
10. ಅದೇ ಪುಟ: 179.
11. ಅದೇ ಪುಟ: 184
12. ಗಂಗಾಧರ ಚಿತ್ತಾಲ: ಸಮಗ್ರಕಾವ್ಯ [ಗೀತಾಬುಕ್ ಹೌಸ್, ಕೆ.ಆರ್. ಸರ್ಕಲ್, ಮೈಸೂರು–570001] ಪ್ರ.ಮು. 1985, ಪುಟ: 186.
13. ಅದೇ ಪುಟ 146
14. ಪಿ. ಲಂಕೇಶ್: ಚಿತ್ರಸಮೂಹ' [ಪತ್ರಿಕೆ ಪ್ರಕಾಶನ, ನಂ. 9, ಇಂಬಿ ರಸ್ತೆ, ಬಸವನಗುಡಿ, ಬೆಂಗಳೂರು–590004] ಪ್ರ. ಮು. 1999, ಪುಟ: 117.
15. ಅದೇ ಪುಟ: 135
16. ಅದೇ ಪುಟ: 105.
17. ಅದೇ ಪುಟ: 106.
18. ಎ.ಕೆ ರಾಮಾನುಜನ್ : 'ಎ.ಕೆ ರಾಮಾನುಜನ್ ಸಮಗ್ರ' [ಮನೋಹರಗ್ರಂಥಮಾಲಾ, ಲಕ್ಷ್ಮಿಭವನ, ಸುಭಾಸರೋಡ, ಧಾರವಾಡ–580001] ಪ್ರ.ಮು..2011, ಪುಟ : 10
19. ಅದೇ ಪುಟ 71
20. ಅದೇ ಪುಟ 42
21. ಅದೇ ಪುಟ 118
22. ಕೆ.ವಿ.ತಿರುಮಲೇಶ್ : ಆಯ್ದ ಕವಿತೆಗಳು [ಪ್ರ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಸಾಲಯ ನೃಪತುಂಗರಸ್ತೆ, ಬೆಂಗಳೂರು – 560002] ಮೊ.ಮು 1994 ಪುಟ :14
23. ಅದೇ ಪುಟ :31
24. ಅದೇ ಪುಟ : 129
25. ಚಂದ್ರಶೇಖರಕಂಬಾರ : "ಈ ವರೆಗಿನಹೇಳತೇನ ಕೇಳ" (ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ, ಕರ್ನಾಟಕ :577417) ಮೊ.ಮು 1994, ಪುಟ :27
26. ಅದೇ ಪುಟ 85
27. ಅದೇ ಪುಟ 85

ಡಿ.ಆರ್ ನಾಗರಾಜ್ : " ಸಾಹಿತ್ಯಕಥನ", ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ; ಮೊ.ಮು 1996, ಪುಟ : 250

ಸಂಗೀತ ಒಂದು ವಿಜ್ಞಾನ– ಚಿಂತನ

ವಿದ್ವಾನ್ ರವಿ ಜೋಶಿ
ಶ್ರೀ ಮಾತಾ ಸಂಸ್ಕೃತ ಕಾಲೇಜು, ಉಮ್ಮಟಗಿ ತಾಯಲ್ಲಪುರ, ಉತ್ತರಕನ್ನಡ , e-mail: raviajoshi22@gmail.com

ಪೀಠಿಕೆ: ಭಾರತೀಯ ದರ್ಶನ ಆಧ್ಯಾತ್ಮವಲ್ಲದ ವಿದ್ಯೆಯಿಲ್ಲ, ಕಲೆ ಇಲ್ಲದ ಜೀವನದ ಯವ ವಿವರವೂ ಇಲ್ಲ. ವಿದ್ಯಾಪ್ರಕಾರಗಳಲ್ಲಿ ಕಲೆ ಮಾನವರ ಹೃದಯಕ್ಕೆ ಅತ್ಮೀಯವರ್ತಿ. ಹೊರ ಜಗತ್ತಿನ ವಿವರಗಳಲ್ಲಿ ಪರತತ್ವದ ಸತ್ಯ, ಶಿವ, ಸೌಂದರ್ಯಗಳ ಹೊಳಲನ್ನು ಗುರುತಿಸಿ ಆಸ್ವಾದಿಸುವುದೇ ಕಲೆಯ ಅಶಯ.

ಭಾರತದ ಧಾರ್ಮಿಕ, ಸಾಮಾಜಿಕ ಜೀವನದಲ್ಲಿ ಜೀವನದ ಜಂಜಾಟದಿಂದ ವಿಮುಖವಾಗಿ ತಾತ್ಕಾಲಿಕ ಆನಂದವನ್ನು ಸವಿಸಲು ಮನೋರಂಜನೆಯನ್ನು ಪಡೆಯಲು ಪರಸ್ಪರಲ್ಲಿ ಭಾವ ವಿನಿಮಯವನ್ನು ಸಾಧಿಸಲು ಸಂಗೀತವೇ ಹೇತುವಾಗಿದೆ. ಮನುಷ್ಯ ಹೃದಯದ ಸುಖ, ದುಃಖಾತ್ಮಕ ಸಂವೇದನೆಗಳನ್ನು ಅವನ ಸರಸದ ವಿರಸ ಕಥೆಗಳನ್ನು ಅರುಹಲು ಸಂಗೀತವೇ ಮಾಧ್ಯವವಾಗಿದೆ. ತನ್ನ ಪ್ರಕೃತಿ ಪ್ರೇಮವನ್ನು ರಸ ದರ್ಶನವನ್ನು ತಲುಪಲೆಣಿಸಿದ್ದಾನೆ ಮಾನವ. ಪರತತ್ವದ ಕುರಿತಾದ ಜಿಜ್ಞಾಸೆ, ಹಂಬಲ, ಅನುಭೂತಿಗಳನ್ನು ದಾಖಲಿಸುಲು ಸಾಹಿತ್ಯಾತ್ಮಕ ಸಂಗೀತವೇ ಸಾಧನವಾಗಿದೆ.

ಸಂಗೀತವು ವಿವಿಧ ಭಾವಗಳನ್ನು ಮನಮುಚ್ಚಿಸಬಲ್ಲದ ಸಂಗೀತವು ಇಂದ್ರಿಯಗಳನ್ನು ರಂಜಿಸುತ್ತಲೇ ಇಂದ್ರಿಯಾತೀತ ಶಾಂತಿರಸಾನು ಭೂತಿಗಳಲ್ಲಿ ನೆಲೆಗೊಳಿಸುವುದು ಇದೊಂದು ಕಾಲಾತೀತ ಮತ್ತು ದೇಶಾತೀತವಾದ ವಿಶ್ವಭಾಷೆ.

ಡ್. ವಿ, ಜಿ ಸಂಗೀತವಿರುವುದು ಅಕ್ಷರದಲ್ಲಲ್ಲ , ಒಂದಕ್ಷಕ್ಕೂ ಇನ್ನೊಂದಕ್ಷಕ್ಕೂ ನಡುವೆ ಹುದುಗಿಕೊಂಡಿರುವ ನಾದದ ಉರುಳು ಜಾರುಗಳಲ್ಲಿ ಎನ್ನುತ್ತಾರೆ.

ಇದೇ ರೀತಿ ನಮ್ಮ ವೇದ ಸಾಹಿತ್ಯದಲ್ಲಿಯೂ ಸಾಮವೇದದ ಮಂಗಲಶ್ಲೋಕದಲ್ಲಿ ತಿಳಿಸಿದೆ.

ಸಪ್ತಸ್ವರೈಃ ಸಮಸ್ತಂ ಯೋ ಜಗದೇತಚ್ಚರಾಚರಮ್!
ಜಗತ್ತಿನ ಸಪ್ತ ಸ್ವರಗಳಿಂದ ಕೂಡಿಕೊಂಡಿದ್ದು ಚೈತನ್ಯ ರೂಪವನ್ನು ಪಡೆದಿದೆ.
ನಾದ ಸ್ವರೂಪನಾದ ಭಗವಂತನು ಈ ಮೂಲಕ ನಮ್ಮನ್ನು ಅನುಗೃಹಿಸಲ್ಲಿ.

ಸಂಗೀತವು ಮೂಲತಃ ಸಂಸ್ಕೃತಭಾಷೆಯ ಶಬ್ದವಾಗಿದ್ದು ಗೈ ಧಾತುವಿಗೆ ಕ್ತ ಪ್ರತ್ಯಯ ಬಂದು ಗೀತಾ ಎಂಬ ಶಬ್ದವೊ, ಗೀತ ಶಬ್ದಕ್ಕೆ **ಸಮ್** ಎಂಬ ಉಪಸರ್ಗ ಸೇರಿ **ಸಂಗೀತ** ಎಂಬ ಶಬ್ದವು ವ್ಯುತ್ಪನ್ನವಾಗಿದೆ. **ಸಮ್ಯಕ್ ಗೀಯತೆ ಇತಿ ಸಂಗೀತಮ್.**

ಸಂಗೀತ ಒಂದು ವಿಶ್ವ ಭಾಷೆ (Music is a Universal Language)

• ನಾದ ವಿಶ್ವದ ಅತ್ಮ ಎಂಬುದು ಭರತ ಮುನಿಯ ಸಿದ್ಧಾಂತ. ಸಂಪೂರ್ಣ ವಿಶ್ವವು ನಾದಮಯ ಎಂಬುದಕ್ಕೆ ಜ್ಞಾನಿಯೆ ಇರಲ್ಲಿ ಅಥವಾ ವಿಜ್ಞಾನಿಯೇ ಇರಲಿ ಅಲ್ಲಗಳೆಯುವದಿಲ್ಲ. ಭೌತವಿಜ್ಞಾನಿಗಳಂತೂ ವಿಶ್ವವೆಲ್ಲವೂ ತರಂಗಗಳಿಂದ ಕೂಡಿದೆ ಅಲ್ಲದೇ ನಾದಮಯವಾಗಿದೆ ಎಂದು ಒಪ್ಪಕೊಳ್ಳುತ್ತಾರೆ.

• ನಾದ ಎಂಬ ಎಆರಡಕ್ಷರದ ವಿಶ್ಲೇಷಣೆ ಇಂತಿದೆ. **ನಾ** ಎಂದರೆ ಪ್ರಾಣ **ದ** ಎಂದರೆ ಪ್ರಾಣಗ್ನಿ, ಇವೆರಡರ ಸಂಘರ್ಷಣೆಯಾದರೆ ಶಬ್ದ, ವರ್ಣ, ಪದ, ರಾಗ ಶ್ರುತಿ ಸಂಯೋಗಗೊಂಡು ನಾಭಿಯ ಹೃತ್ಕಂಠ ರಸನದಿಂದ ಮೇಲೇರಿ ಕಂಠದಿಂದ ಹೊರಬಂದ ಈ ಸಂಗೀತಕ್ಕೆ **ಮುತ್ತಯ್ಯ ಭಾಗವತರು– ಪ್ರಾಣಾಗ್ನಿ ಸಂಯೋಗದಿಂದ ಜನಿಸಿದ ಪ್ರಣವನಾದ ಸಪ್ತಸ್ವರ ರೂಪಿಣಿ** ಎಂದು ತಮ್ಮ ಕೀರ್ತನೆಯಲ್ಲಿ ತಿಳಿಸುತ್ತಾರೆ. ಮನಸ್ಸು ಅಗ್ನಿಯನ್ನು ಪ್ರೇರೇಪಿಸಿ, ಅಗ್ನಿ ವಾಯುವಿಗೆ, ವಾಯು ನಾಭಿ ಗ್ರಂಥಿಗೆ ಪ್ರಚೋದಿಸಿ ಅಲ್ಲಿಂದ ಮೇಲ್ಮುಖವಾಗಿ ನಾಭಿ ಹೃತ್ಕಂಠ ರಸನದಲ್ಲಿ ಸ್ವರಗಳ ಗಮಕ ಕಂಪನದ ಕ್ರಿಯೆ ಉಂಟಾಗಿ ಸಪ್ತಸ್ವರದ ಚಿಲುಮೆ ಹರಿದು ಆ ಸಂಗೀತ ದಿಂದಾದ ಒಳಗಿನ ಅವಯವಗಳಲ್ಲಿ ಒಂದು ಚೈತನ್ಯ ಉಂಟಾಗುತ್ತದೆ. ಇಂಥ ಸುಶ್ರಾವ್ಯಗಾಯನದಿಂದ ಹಾಡುವವನು ತಪಸ್ವಿಯಾಗುವನು. ಕೇಳುವ ಶ್ರೋತೃ ತನ್ಮಯ ಚಿತ್ತನಾಗಿ ಹೃದಯಾನದಿಂದ ಅನುಭವಿಸುತ್ತಾನೆ. ಇದು ಆರೋಗ್ಯಕರ ಮನಸ್ಸಿನ ಒಂದು ಹಂತ.

• ಸಸ್ಯಗಳು ಇಂಪಾದ, ಸುಮಧುರವಾದ ಸಂಗೀತವನ್ನು ಕೇಳಿ ಚೇನ್ನಾಗಿ ಬೆಳೆಯುತ್ತವೆ. ಅದಕ್ಕೆ ಒಂದು ವೈಜ್ಞಾನಿಕ ಪ್ರಯೋಗ. ಎಲೆಗಳಿಲ್ಲಿರುವ ಪತ್ರರಂಧ್ರಗಳ ಸತ್ತ ಇರುವ ರಕ್ಷಕ ಜೀವಕೋಶಗಳ ಮೇಲೆ ಬಡಿಯುತ್ತವೆ. ಇದರಿಂದ ಇಂಗಾಲದ ಡೈ ಆಕ್ಸೈಡ್ ಹೆಚ್ಚಿನ ಪ್ರಮಣದಲ್ಲಿ ಪೊರ್ಯೆಕೆಯಾಗಿ ಸಸ್ಯಗಳು ಚೆನ್ನಾಗಿ ಬೆಳೆಯುತ್ತವೆ.

ಸಂಗೀತದಿಂದ ಮೆದುಳಿನ ಮೇಲೆ ಪ್ರಭಾವ: ನಮಗೆ ಇಷ್ಟವಾದ ಸಂಗೀತವನ್ನು ಕೇಳುವಾಗ ನಮ್ಮಲ್ಲಿ ಅನೇಕ ರೀತಿಯ ಅನುಭೂತಿಗಳು ಉಂಟಾಗುತ್ತದೆ. ಇದಕ್ಕೆ ಸಂಗೀತದ ಗುಂಗು ಎಂದು ಕರೆಯಬಹುದು. ಅದನ್ನು ಕುರಿತು – ಸಂಗೀತ ರಸಾಸ್ವಾದನೆ ಅನುಭೂತಿಯ ಮಾತಿಗೆ ನಿಲುಕದ್ದು ಅಥವಾ ಅನಿರ್ವಚನೀಯ ಎನ್ನಬಹುದು. ಕೆಲವರ ಅಭಿಪ್ರಾಯದಲ್ಲಿ ಸಂಗೀತ ರಸಾಸ್ವಾದನೆಯಲ್ಲಿ ಮೈಮರಿತಾಗ ಕೆಲವೊಮ್ಮೆ ದೇಹದ ತನ್ನಷ್ಟಕ್ಕೆ ತಾನೆ ಕುಣಿಯಬಯಸುತ್ತದೆ. ಹಾಗೆಯೇ ಶರೀರದ ನರ ನಾಡಿಗಳನ್ನು ನಡುಕ ಉಂಟಾಗಿಸಿ ಆನಂದವನ್ನುಂಟುಮಾಡಿ ಲಯಬದ್ಧವಾಗಿ ಮಿಡಿಯುವಂತೆ ಮಾಡುತ್ತದೆ. ಇದು ಉತ್ಪ್ರೆಕ್ಷೆಯಂತೆ ಕಂಡರೂ ಯಾರೂ ಸಂಗೀತವನ್ನು ಈ ಮೇಲೆ ಹೇಳಿದಂತೆ ಗ್ರಹಿಸಿ, ಅನುಭವಿಸಿ, ತಲ್ಲೀನತೆಯಲ್ಲಿ ತೇಲಾಡಿರುತ್ತಾರೋ ಅಂತವರಿಗೆ ಮಾತ್ರ ಇದು ಉತ್ಪ್ರೆಕ್ಷೆ ಎನಿಸಲಾರದು. ಏಕೆಂದರೆ ಅತ್ಮಾನುಭವದ ಮುಂದೆ ಯಾವ ಉಪಮಾನವೂ ಸರಿ ಹೊಂದುವುದಿಲ್ಲ.

ಇಂತಹ ಸಂದರ್ಭಗಳಲ್ಲಿ ನಮ್ಮಲ್ಲಿ ಅನೇಕ ರೀತಿಯ ಸಂಶಯಗಳು ಪ್ರಶ್ನೆಗಳು ಉದ್ಭವಿಸಬಹುದು. ಅವುಗಳು:– ಇದೆಲ್ಲವೂ ನಿಜವೇ

ಸಂಗೀತವನ್ನು ತನ್ಮಯತೆಯಿಂದ ಆಲೈಸಿದಾಗ ನಿಜಕ್ಕೂ ನಮ್ಮ ದೇಹದಲ್ಲಿ ಕಂಪನಗಳು ಮಾಡಬಹುದೇ? ಮೈನವಿರೇಳಿಸುವಂತಹ, ರೋಮಾಂಚನಗೊಳಿಸುವಂತಹ ಅನುಭವ ಆಗಬಹುದೇ? ಒಂದು ವೇಳೆ ಹಾಗೆ ಆಗುವುದು ನಿಜವಾದಲ್ಲಿ ಆ ಅನುಭೂತಿಯನ್ನು ಅಥವಾ ಆಂತಹ ತನ್ಮಯತೆಯನ್ನು ಯಾವುದಾದರು ಒಂದು ಉಪಕರಣ ಅಥವಾ ಮಾದ್ಯಮಗಳ ಮೂಲಕ ಗ್ರಹಿಸಬಹುದೇ?

ಸಂಗೀತ ಒಂದು ವಿಜ್ಞಾನ– ಚಿಂತನೆ

ಸಂಗೀತ, ಶಬ್ದ, ಸ್ವರೂಪ, ವ್ಯುತ್ಪತ್ತಿ: ಮನಸ್ಸು ಅಗ್ನಿಯನ್ನು ಪ್ರೇರೇಪಿಸಿ ಅಗ್ನಿ ವಾಯುವಿಗೆ ಯಾಯು ನಾಭಿ ಗ್ರಂಥಿಗೆ ಪ್ರಚೋಧಿಸಿ ಅಲ್ಲಿಂದ ಮೇಲ್ಮುಖವಾಗಿ ನಾಭಿ ಹೃತ್ಕಂಠ ರಸನದಲ್ಲಿ ಸ್ವರಗಳ ಗಮಕ ಕಂಪನದ ಕ್ರಿಯಾ ಉಂಟಾಗಿ ಸಪ್ತಸ್ವರದ ಚಿಲುಮೆ ಹರಿದು ಆಸಂಗೀತದಿಂದಾದ ಬೆಳಗಿನ ಅವಯವಗಳಲ್ಲಿ ಒಂದು ಚೈತನ್ಯ ಉಂಟಾಗುತ್ತದೆ. ಇಂಥ ಸುಶ್ರಾವ್ಯಗಾಯದಿಂದ ಹಾಡುವವನ್ನು ತಪಸ್ವಿಯಾಗುವನ್ನು. ಕೇಳುವ ಶೋತೃ ತನ್ಮಯ ಚಿತ್ತನಾಗಿ ಹೃದಯಾನಂದ ಅನುಭವಿಸುತ್ತಾನೆ. ಮನಸ್ಸಿನ ನೋವು ಮಾಯಾವಾಗುತ್ತದೆ. ನಿರ್ಮಲತೆ, ಪ್ರಸನ್ನತೆ, ನೆಮ್ಮದಿ, ಎಲ್ಲವೂ ಅಲ್ಲಿರುತ್ತದೆ. ಇದು ಆರೋಗ್ಯಕರ ಮನಸ್ಸಿನ ಒಂದು ಹಂತ.

ಹಾಡುವವರು, ಕೇಳುವವರು, ಪದ್ಮಾಸನದಲ್ಲಿ ಕೂಳಿತು ಕೇಳುವದು ಸಹ ಪದ್ಮಾಸನದ ಒಂದು ಭಂಗಿ. ಹಾಡಿನೊಂದಿಗೆ ತಾಡಾಸನವಾದಾಗ ರಕ್ತ ಸಂಚಲನದ ಪ್ರಕೆಯೆಯಲ್ಲಿ ಚುರುಕು ಇರುತ್ತದೆ. ಸ್ವರಗಳು ಏರಿಳಿತ, ಕಂಪನ, ಆರೋಹ, ಅವರೋಹ, ಅವ್ಹಾಹ, ಪ್ರತ್ಯಾಹ, ಸ್ವರಗಳು ಸಂಚಾರದಿಂದ ಗಾಯಕನ ಹೃದಯ ನಾಳದಲ್ಲಿ ಯೋಗ ಕ್ರಿಯೆ ಎಂದರೆ ಪ್ರಾಣವಾಯುದಂತೆ ಉಛ್ವಾಸ, ನಿಶ್ವಾಸವಾಗಿ ಹೃದಯದ ಕವಾಟಗಳಲ್ಲಿ ಸುಲಲಿತವಾದ ಉಸಿರಾಟ ನಡೆದು ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಂಗೀತ ನೆರವಾಗುತ್ತದೆ.

ಸಂಗೀತ ಕೇವಲ ಸಾಮಾನ್ಯ ಕಲೆಯಲ್ಲ. ಅದು ವಿಜ್ಞಾನವೂ ಹೌದು. ಸದಾಶಿವನ ಪಂಚಮುಖದಿಂದ ಹೊರಬಂದವುಗಳು. ಈ ರಾಗಗಳು, ಭೈರವ, ಪೂರ್ವಭಾಗದಿಂದ ಹಿಂದೋಳರಾಗ ಪಶ್ಚಿಮದಿಂದ ಮೇಘರಾಗ, ಉತ್ತರದಿಂದ ದೀಪಕರಾಗ, ದಕ್ಷಿಣಬಂದ ಶ್ರೀ ರಾಗ ಆಕಾಶಮುಖದಿಂದ ಮೂಲರೂಪ, ಪಡೆದು ಜನಿಸಿವೆ. ನವರಸಗಳನ್ನು ಸೂಚಿಸುವ ರಾಗಗಳು ಪರಿಚಯ, ತಾಳ, ಲಕ್ಷಣಗಳು ಶಾಸ್ತ್ರಗ್ರಂಥಗಳು ಸಂಗೀತ ವಿಶ್ವವನ್ನೇ ನಮ್ಮ ಮುಂದೆ ತೆರೆದಿಡುತ್ತದೆ.

ಸಂಗೀತಕ್ಕೆ ಗಂಧರ್ವವೇದವು ಮೂಲವಾದರೆ, ಗಾಂಧರ್ವವೇದಕ್ಕೆ ಸಾಮವೇದವು ಮೂಲ (ಗಾಂಧರ್ವವೇದ ಸಾಮವೇದದ ಉಪಮೇದ)

ಕ್ರಿ. ಶ ೧೨–೧೩ ನೇ ಶತಮಾನದವರೆಗೂ ಒಂದೇ ತೆರದನಾದ ಸಂಗೀತವಿತ್ತೆಂದು ಸಂಗೀತ ಸಂಶೋಧಕರ ಅಭಿಪ್ರಾಯ. ದೇಶ, ಕಾಲ ಮತ್ತು ಪ್ರಾದೇಶಿಕ ಭಿನ್ನತೆಗಳಿಂದ ಸಂಗೀತ ಶೈಲಿ ಸ್ವಲ್ಪ ವಿಭಿನ್ನವಾಗಿದ್ದರೂ ಮೂಲ ಬೇರು ಒಂದೇ ಆಗಿತ್ತು.

ಕ್ರಿ.ಶ ೧೦–೨೦ ಶತಮಾನದ ನಂತರ ಉತ್ತರ ಭಾರತದಲ್ಲಿ ಮೊಘಲ್ ಸಾಮ್ರಾಜ್ಯದ ಮೂಲ ಸಂಗೀತ ಶೈಲಿ ನಿರ್ಮಾಣವಾಯಿತು. ಹಾಗೆಯೇ ಅನೇಕ ವಾದ್ಯಗಳು ಸೇರ್ಪಡೆಯಾದವು. ಎಂಟು ನೂರು ವರ್ಷಗಳ ಸತತ ಮಂಥನದಲ್ಲಿ ಇಂದು ನಮಗೆ ಹಿಂದುಸ್ಥಾನಿ ಎಂಬ ಸಂದರವಾದ ಸಂಗೀತ ಶೈಲಿ ಲಭಿಸಿತು.

ಮನುಷ್ಯನ ಕಂಠ ಸಾಮರ್ಥ್ಯ, ಕಂಠ ವೈವಿದ್ಯ ಅರಿವಿಗೆ ಬರಲು ಶಾಸ್ತ್ರೀಯ ಸಂಗೀತ ಕೇಳಬೇಕು, ಹಾಡಬೇಕು. ಶಾಸ್ತ್ರೀಯ ಸಂಗೀತದಷ್ಟು ಸಮರ್ಥವಾಗಿ ಹಾಗೂ ಸಮಗ್ರವಾಗಿ ಇನ್ನಾವುದೂ ಮನುಷ್ಯನ ಕಂಠ ಸಾಮರ್ಥವನ್ನು ಬೆಳೆಸಿಲ್ಲ. ಕಂಠವನ್ನು ಸೃಷ್ಟಿಶೀಲಗೊಳಿಸಿಲ್ಲ.

ನಾದ ಎಂಬ ಎರಡಕ್ಷರದ ವಿಶ್ಲೇಷಣೆ ಇಂತಿದೆ. ನಾ ಎಂದರೆ ಪ್ರಾಣ ದ ಎಂದರೆ ಪ್ರಾಣಾಗ್ನಿ ಇವೆರಡರ ಸಂಘರ್ಷಣೆಯಾದರೆ ಶಬ್ದ, ವರ್ಣ, ಪದ ರಾಗ ಶೃತಿ ಸಂಯೋಗಗೊಂಡು ನಾಭಿಯ ಹೃತ್ಕಂಠ ರಸನದಿಂದ ಮೇಲೇರಿ ಕಂಠದಿಂದ ಹೊರಬಂದ ಈ ಸಂಗೀತಕ್ಕೆ ಮುತ್ತಯ್ಯ ಭಾಗವತರು ಪ್ರಾಣಾಕ್ಷಿ ಸಂಯೋಗದಿಂದ ಜನಿಸಿದ ಪ್ರಣವನಾದ ಸಪ್ತಸ್ವರ ರೂಪಿಣಿ ಎಂದು ತಮ್ಮ ಕೀರ್ತನೆಯಲ್ಲಿ ತಿಳಿಸುತ್ತಾರೆ.

ಸಪ್ತಸ್ವರಗಳು ಸ್ಥಾಯಿ ಭಾವದಲ್ಲಿ ಅಯಾಮ ಪ್ರಾಣಿ–ಪಕ್ಷಿಗಳ ಪ್ರಾತಿನಿಧ್ಯ ಸೂಚಿಸಲಾಗಿದೆ.

ಸ ಷಡ್ಜ (ನವಿಲು)
ರಿ ರಿಷಭ (ಜಾತಕ ಪಕ್ಷಿ)
ಗಾ ಗಾಂಧಾರ (ಮೇಕೆ)
ಮ ಮಾಧ್ಯಮ (ಕ್ರೌಂಚ)
ಪ ಪಂಚಮ(ಕೋಗಿಲೆ)
ದ ಧೈವತ (ಕಪ್ಪೆ)
ನಿ ನಿಷಾಧ (ಆನೆ)

ಈ ರೀತಿ ಸಂಗೀತದ ಸಾಮರಸ್ಯ ಮಾನವ, ಪ್ರಾಣಿ, ದೇವರು, ಪ್ರಕೃತಿ, ವಿಜ್ಞಾನ ಇವೆಲ್ಲದರೊಂದಿಗೆ ನಿಕಟವಾಗಿರುವುದು.

ಸಂಗೀತ ಕಲೆಯೂ ಹೌದು ಹಾಗೂ ವಿಜ್ಞಾನವು ಹೌದು, ಸಂಗೀತವು ಒಂದು ಲಲಿತ ಕಲೆ ಎನ್ನುವುದು. ಈಗಾಗಲೇ ಎಷ್ಟೊ ಲೇಖನಗಳನ್ನು ಗ್ರಂಥಗಳನ್ನು ಪುಸ್ತಕಗಳನ್ನು ಓದಿ ತಿಳಿದುಕೊಂಡಿದ್ದೇವೆ. ಸಂಗೀತ ಬರದು ಮಾನವನ ಹೃದಯವನ್ನು ಆರಳಿಸುತ್ತದೆ. ಸಂಗೀತವು ಕೇವಲ ಕಲೆಯಲ್ಲ, ಅದನ್ನು ನಾನಾ ದೃಷ್ಟಿಯಿಂದ ಒಳಹೊಕ್ಕು ನೋಡಿದಾಗ ಸೊಕ್ಷ್ಮವಾಗಿ ಗಮನಿಸಿದಾಗ ಅದರಲ್ಲಿಯೂ ವಿಜ್ಞಾನದ ಅಂಶ ಸಿಗುತ್ತವೆ.

ಸಂಗೀತವು ಒಂದು ಅದ್ಬುತ ಪರಿಣಾಮವನ್ನುಂಟುಮಾಡುವ ಮಹಾ ಶಕ್ತಿಯನ್ನು ಹೊಂದಿದೆ. ಅಗೋಚರವಾದ ಈ ಮಹಾಶಕ್ತಿಯನ್ನು ವರ್ಣಿಸುವುದು ಅಸಾಧ್ಯ. ಆದ್ದರಿಂದಲೆ ಇದನ್ನು ಅನುಭವಿಸುವದರಿಂದ ಮಾತ್ರ ಇದು ಒಂದು ದಿವ್ಯೌಷಧಿ ಎಂದು ತಿಳಿದುಬರುತ್ತದೆ. ಅಳುವ ಮಗುವನ್ನು ಜೋಗುಳದ ಮೂಲಕ ಸಮಾಧಾನಗೊಳಿಸಬಹುದು. ಇಲ್ಲಿ ಸಂಗೀತವು ತನ್ನ ಸ್ವರ ತರಂಗಗಳಿಂದ ಮುಗುವಿನ ಮೇಲೆ ಪ್ರಭಾವ ಬೀರುತ್ತದೆ ಎಂಬುದು ವೈಜ್ಞಾನಿಕ ಸತ್ಯ.

ಸಸ್ಯಗಳು ಇಂಪಾದ, ಸುಮಧುರವಾದ ಸಂಗೀತವನ್ನು ಕೇಳಿ ಚೆನ್ನಾಗಿ ಬೆಳೆಯುತ್ತವೆ. ಅದಕ್ಕೆ ಒಂದು ವೈಜ್ಞಾನಿಕ ವಿವರಣೆಯ ಪ್ರಕಾರ ಸಂಗೀತ ವಾದ್ಯಗಳು ನಾದದಿಂದ ಹೊರಹೊಮ್ಮುವ ಧ್ವನಿ ತರಂಗಗಳು

ಸೋಲಿಗರ ಸಂಸ್ಕಾರಗಳು

ದುಂಡಯ್ಯ
ಸಂಶೋಧಕರು, ದಕ್ಷಿಣ ಭಾರತೀಯ ಅಧ್ಯಯನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

ಸೋಲಿಗರು ಮೂಲ ನಿವಾಸಿಗಳು 1953 ರಲ್ಲಿ ರಾಜ್ಯಗಳ ಪುನರ್ ವಿಂಗಡಣೆಯಾಗುವ ಮೊದಲು ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿಯೂ ಹಿಂದುಳಿದ ಬುಡಕಟ್ಟಿನ ಪಟ್ಟಿಯಲ್ಲಿಯೇ ಇದ್ದರು. ಆದರೆ ಇವರ ಪ್ರಮುಖ ನೆಲೆ ಕರ್ನಾಟಕ ರಾಜ್ಯಗಳ ಪುನರ್ ವಿಂಗಡಣೆಯ ನಂತರ ಮದ್ರಾಸ್ ಸರ್ಕಾರದ ವ್ಯಾಪ್ತಿಯಲ್ಲಿದ್ದಂತಹ ಸೋಲಿಗರು ಹೆಚ್ಚಾಗಿ ಕರ್ನಾಟಕಕ್ಕೆ ವಲಸೆ ಬಂದು ನೆಲೆಸಿದರು. ಇವರ ಹೆಸರು ತಮಿಳನಲ್ಲಿ 'ಸೊಲ್ಯೆ' ಅಂದರೆ 'ಪೊದರು' ಎಂಬುದರಿಂದ ಬಂದಿದೆ. ಸೋಲಿಗರು ಬಿದುರಿನಿಂದ ಹುಟ್ಟಿಬಂದವರೆಂಬ ದಂತ ಕಥೆ ಇದೆ. ಆದರೆ 'ಸೋಲಿಗ' ಎನ್ನುವುದು ತಮಿಳನ 'ಸೊಲ್ಯೆ' ಎನ್ನುವ ಪದದ 'ಅಪಭ್ರಂಶ' ವೆಂದು ಲೂಯಿಜ್ ಅಭಿಪ್ರಾಯಪಡುತ್ತಾರೆ. 'ಸೊಲ್ಯೆ' ಎಂದರೆ ಬೆಚ್ಚನೆಯ ದಪ್ಪ ಗೂಡುಗಳಲ್ಲಿ ವಾಸಿಸುವವರು ಎಂಬರ್ಥವಿದೆ. ಈ ಸೋಲಿಗರು ಇಂತಹ ಪ್ರದೇಶದಲ್ಲಿರುವ ಕಾರಣ ಇವರಿಗೆ ಈ ಹೆಸರು ಬಂದಿರುವ ಸಾಧ್ಯತೆ ಇದೆ. 'ಸೋಲಾ' ಎಂದರೆ ಬೆಟ್ಟ ಪ್ರದೇಶ ಮತ್ತು ಬಿದಿರು ತುಂಬಿದ ಕಾಡು ಎಂಬ ಅರ್ಥವೂ ಇದೆ.

ಕರ್ನಾಟಕ ಮತ್ತು ತಮಿಳುನಾಡಿನ ಉತ್ತರ ಗಡಿಯಲ್ಲಿರುವ 'ದಿಂಬಂ' ಇನ್ನುವುದೇ ಸೋಲಿಗರ ಮೂಲಸ್ಥಾನವಿರಬೇಕೆಂದು ತರ್ಕಿಸಲಾಗುತ್ತದೆ. ಲಕ್ಷ್ಮಿಪತಿಯವರ ಪ್ರಕಾರ 'ಸೋಲಿಗರು ತಮ್ಮಲ್ಲಿ ಸತ್ತವರ ಮೂಳೆಯೊಂದನ್ನು ಮಣ್ಣಿನಿಂದ ಹೊರತೆಗೆದು, ಅನ್ನದೊಂದಿಗೆ ಬೇಯಿಸಿ, ಅದನ್ನು ಪೋಡಿನ ಎಲ್ಲಾ ಜನರಿಗೂ ಹಂಚಿ ತಿನ್ನುವ ಪದ್ಧತಿ ಇಂದಿಗೂ ಆಚರಣೆಯಲ್ಲಿದೆ. ಈ ಆಚರಣೆಯ ನಂತರ ಮೂಳೆಯೊಂದನ್ನು ಯಾವ ಕಡೆಯ ಸೋಲಿಗರಾದರೂ ಸರಿಯೇ 'ದಿಂಬಂ'ನಲ್ಲಿಯೇ ತಂದು ಹೂಳುತ್ತಾರೆ. 'ದಿಂಬಂ' ತಾವು ಬಂದ ಮೂಲಸ್ಥಾನವಾದ್ದರಿಂದ ಬಹುಶಃ ಇಂದಿಗೂ ಸೋಲಿಗರಲ್ಲಿ ಈ ಬಗೆಯ ಆಚರಣೆಯನ್ನು ನಡೆಸಿಕೊಂಡು ಬಂದಿರಬೇಕು. ಆದರೆ ಕ್ಷೇತ್ರ ಕಾರ್ಯವನ್ನು ನಡೆಸಿದ ಹಲವಾರು ಮೈಸೂರು ಜಿಲ್ಲೆಯಲ್ಲಾಗಲೀ, ಬಿಳಿಗಿರಿರಂಗನಬೆಟ್ಟ, ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೆಗಾಲ ತಾಲ್ಲೂಕಿನ ಸೋಲಿಗರಲ್ಲಿ ಈ ಪದ್ಧತಿ ಇದ್ದಂತಿಲ್ಲ. ಆದರೆ ಸತ್ಯಮಂಗಲ ಅರಣ್ಯವ್ಯಾಪ್ತಿಯಲ್ಲಿ ಬರುವ 'ಉರಾಳ' ಸೋಲಿಗರು ಈ ಪದ್ಧತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಇವರು ತಮಿಳು ಮಿಶ್ರಿತ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ.

ಸೋಲಿಗ ಎಂಬ ಹೆಸರು ಬರಲು ಒಂದು ದಂತ ಕಥೆಯಿದೆ. ಒಮ್ಮೆ ಪಾರ್ವತಿ ಪರಮೇಶ್ವರರು ತಮ್ಮ ಬೆವರಿನಿಂದ ಎರಡು ಗೊಂಬೆಗಳನ್ನು ಮಾಡಿ ಅದಕ್ಕೆ ಜೀವ ತುಂಬಿದರು. ಗಂಡು ನೀಲಯ್ಯ, ಹೆಣ್ಣು ಸಂಕಮ್ಮಳಾದಳು, ಮುಂದೆ ಇವರಿಂದ ಬೆಳೆದ ಮಕ್ಕಳು ಸೋಲನ ಹಂಬಿನ ಗಡೇಯನ್ನು ತಿಂದು ಜೀವಿಸುತ್ತಿದ್ದರು. ಹೀಗೆಯೇ ಅವರು ಗೆಡೆಯನ್ನು ಕಿತ್ತು ಬೇಯಿಸಿ ತಿನ್ನುತ್ತಲೇ ಮುಪ್ಪಾದರು. ಆದರೆ ಸೋಲನ ಹಂಬು ಮಾತ್ರ ಮತ್ತೆ ಮತ್ತೆ ಚಿಗುರಿ ಹೊಸ ಹೊಸ ಗೆಡ್ಡೆ ಬಿಟ್ಟಿತು. ಈ ಮುದುಕ ಗೆಡ್ಡೆ ಕೀಳಲು ಬಂದಾಗ ಆ ಸೋಲನ ಹಂಬು 'ನಿನ್ನ ಕೈಯಿಂದ ನನ್ನ ಗೆಡ್ಡೆಯನ್ನು ನೀನು ಸಾಯೋವರೆಗೂ ಕಿತ್ತರೂ ನನ್ನ ಸೋಲಿಸಲಿಕ್ಕೆ ಆಗಲ್ಲ ಆದ್ದರಿಂದ ನನ್ನ ಗೆಡ್ಡೆ ಕಿತ್ತು ಸೋತವನು ನೀನು 'ಸೋಲಿಗ' ಎಂದು ಹೇಳೀತು. ಅಂದಿನಿಂದ ಸೋಲಿಗ ಎಂಬ ಹೆಸರು ಬಂದಿತು. ಇದೊಂದು ವಾಚಕ ಇತಿಹಾಸ ವಿವರಣಾತ್ಮಕ ಐತಿಹ್ಯ ಎಂಬಷ್ಟು ಬೆಲೆ ನೀಡಬಹುದು. ಆದರೆ ಇದರಿಂದಲೇ ಬಂತು ಎಂಬುದಾಗಿ ಹೇಳೌ ಸಾಧ್ಯವಿಲ್ಲ.

ಅರೆಯಕೋಲು ನೊರೆಯ ಗೆಣಸು
ಕಾಯಂಬು ಗೆಣಸು ಕಾಲಂಬುತ್ತಾರೆ
ಸೋತು ಹೋಗಾದು ಸೋಲನ ಗೆಣಸು

ಸೋಲಿಗರಿಗೆ ಸೋಲಿಗನೆಂಬ ಹೆಸರು ಬರಲು ನಿಖರವಾದ ಕಾರಣವನ್ನು ನೀಡಲು ಯಾವುದೇ ಆಧಾರವಿಲ್ಲದಿರುವುದರಿಂದ ಕೇವಲ ಕಲ್ಪನೆಯಾಗಿಯೇ ಉಳಿದಿದೆ.

ವಾಸ: ಸೋಲಿಗರು ಸಣ್ಣಪುಟ್ಟ ಗುಡಿಸಲನ್ನು ಕಟ್ಟಿಕೊಂಡು ಅವುಗಳಲ್ಲಿ ವಾಸಮಾಡುತ್ತಾರೆ. ಈ ಗುಡಿಸಲುಗಳು ಸುಮಾರು ೮ ಅಡಿ ಅಗಲ 10 ಅಡಿ ಉದ್ದವಾಗಿರುತ್ತದೆ. ಉದ್ದವಾದ ಕಮಾನಿನಂತೆ ಮಾಡಿ ಮೇಲುಗಡ್ಡೆ ಆನೆ ಹುಲ್ಲಿನ ಮತ್ತು ಸೊಪ್ಪಿನ ಎಲೆ ಮುಂತಾದವುಗಳನ್ನು ಹೊದಿಸುತ್ತಾರೆ. ಇವುಗಳನ್ನು ಎರಡು ಭಾಗಗಳಾಗಿ ಮಾಡಿ, ಒಂದನ್ನು ಅಡಿಗೆಮನೆ ಇನ್ನೊಂದು ಮಲಗಲು ಉಪಯೋಗಿಸುತ್ತಾರೆ. ಹೀಗೆ ಎಂಟು-ಹತ್ತು ಗುಡಿಸಲುಗು ಒಂದೇ ಕಡೆ ನೆಲೆಸಿರುತ್ತವೆ. ಇದನ್ನು ಇವರ ಭಾಷೆಯಲ್ಲಿ 'ಪೋಡು' ಎಂದು ಕರೆಯುತ್ತಾರೆ. ಪೋಡು ಎಂಬ ಪದ ಗ್ರಾಮ ಎಂಬ ಅರ್ಥ ಬರುವ ಹಾಗೆ ಉಪಯೋಗಿಸುತ್ತಾರೆ. ಎಂದು ಕೃಷ್ಣ ಅಯ್ಯಂಗರ್ (1956) ಎಂಬುವವರು ಬರೆಯುತ್ತಾರೆ. ಆಡರೆ ಈ ಬಗೆ ಹೆಚ್ಚಿನ ವಿವರಗಳು 'ಪೋಡು' ಎಂಬುದಕ್ಕೆ ಹೊಲಗಳಲ್ಲಿ ಬೆಳೆದ ಗಿಡ-ಗಂಟೆ ಸುಟ್ಟ, ಕೆತ್ತನೆ ಕೃಷಿಗೆ ಸಂಬಂಧಿಸಿವೆಯೆಂದು ಮೊರಬ್ (1970) ಅಭಿಪ್ರಾಯಪಟ್ಟಿದ್ದಾರೆ.

ಸಾಂಸ್ಕೃತಿಕ ಕುರುಹಾಗಿ ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರು ಸೋಲಿಗರ ಪಂಗಡಗಳ ಬಗ್ಗೆ ಹೀಗೆ ಬರೆಯುತ್ತಾರೆ. ಸೋಲಿಗರಲ್ಲಿ ನಾಲ್ಕು ಪಂಗಡಗಳಿವೆ ಅವುಗಳೆಂದರೆ.

1. ಉರಳಿ ಸೋಲಿಗರು: ಚಾಮರಾಜನಗರ, ಸತ್ಯಮಂಗಲ ಮುಂತಾದ ಕಡೆಗಳಲ್ಲಿನ ಕಾಡುಗಳಲ್ಲಿ ಕಂಡುಬರುತ್ತಾರೆ..
2. ಕಾಡು ಸೋಲಿಗರು: ಇವರು ಕಾಡಿನಲ್ಲಿ ವಾಸಿವುವುದು ಕಂಡುಬರುತ್ತದೆ. ಇವರು ಬಿಳಿಗಿರಿರಂಗನ ಬೆಟ್ಟ, ಮಹದೇಶ್ವರಬೆಟ್ಟ, ಸುತ್ತಮುತ್ತಲಿನ ಕಾಡುಗಳಲ್ಲಿ ಕಂಡುಬರುತ್ತಾರೆ.
3. ಮಲೆ ಸೋಲಿಗರು: ಇವರು ಬಿಳಿಗಿರಿರಂಗನ ಬೆಟ್ಟ, ಮಲೈಮಹದೇಶ್ವರ ಬೆಟ್ಟದ ಸುತ್ತಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.
4. ಉರುಬುಟ್ಟಿ ಸೋಲಿಗರು: ಇವರು ಹೆಚ್ಚಾಗಿ ಕಾನಕೋಟೆ ಕಾಡುಗಳಲ್ಲಿ ಕಂಡುಬರುತ್ತಾರೆ.
5. ಬುರುಡೆ ಸೋಲಿಗರು: ಕೊಳ್ಳೆಗಾಲ ತಾಲ್ಲೂಕಿನ ಸುತ್ತಮುತ್ತ ಕಂಡುಬರುತ್ತಾರೆ.

ಸೋಲಿಗರು ಈ ಬಗೆಯ ಪಂಗಡಗಳು ಎಷ್ಟಿದೆ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಹೆಚ್. ಡಿ. ಕೋಟೆಯ ಸುತ್ತಮುತ್ತ 'ದೇವರ ಸೋಲಿಗ' ಎಂಬ ಸೋಲಿಗರು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೂಡ ವಾಸಿಸುತ್ತಿದ್ದಾರೆ. ಸೋಲಿಗರಲ್ಲಿ ಅನೇಕ ಬಗೆಯ ಕುಲಗಳಿವೆ. ಸೋಲಿಗರಲ್ಲಿ ಯಾವುದನ್ನು ಲೆಕ್ಕಿಸದವನು ಕುಲವನ್ನು, ಕುಲ ಪಂಚಾಯಿತಿಯನ್ನು ಲೆಕ್ಕಿಸುತ್ತಾನೆ. ಇವರಲ್ಲಿ ಪ್ರಮುಖವಾಗಿ 'ಐದುಕುಲ' ಮತ್ತು 'ಏಳುಕುಲ' ದವರು ಎಂಬ ಎರಡು ರೀತಿ ಇವೆ. ಅಲ್ಲದೆ 'ಹದಿನಾಲ್ಕು ಕುಲದ' ಸೋಲಿಗರು ಇದ್ದಾರೆ. ಇವರಲ್ಲಿ ಈ ಎರಡು ಕುಲದವರು ಹೆಣ್ಣುತರುವುದು ಕೊಡುವುದು ಹಿಂದೆ ಮಾಡುತ್ತಿರಲಿಲ್ಲ ಈಗ ಇವರ ಪ್ರಮಾಣ ಕಡಿಮೆಯಾಗಿದೆ.

ಸಂಸ್ಕಾರಗಳು: ಹುಟ್ಟಿನಿಂದ ಸಾವಿನವರೆಗೆ ಗರ್ಬ-ಘೋರಿಯವರೆಗೆ ಹಲವು ಸಂಸ್ಕಾರಗಳು ಪರಂಪರಾಗತವಾಗಿ ನಡೆಸಿಕೊಂಡು ಬಂದಿದ್ದಾರೆ. ಇಲ್ಲಿ ಮುಖ್ಯವಾದ ಕೆಲವು ಸಂಸ್ಕಾರಗಳೆಂದರೆ.

ಜನನ: ಮೊದಲ ಹೆರಿಗೆಯು ಆಕೆಯ ತಾಯಿಯ ಮನೆಯಲ್ಲಿ ನಡೆಯುತ್ತದೆ. ಅವಳ ಸಹಾಯಕ್ಕೆ ತಾಯಿ/ ಹಿರಿಯ ಹೆಂಗಸು ಇರುತ್ತಾರೆ. ಹೆರಿಗೆಯ ಸ್ಥಳಕ್ಕೆ ಗಂಡಸರಿಗೆ ಪ್ರವೇಶವಿಲ್ಲ. ಅವರಲ್ಲಿ ಹೆರಿಗೆಯ ಕ್ರಮವಂತೂ ಆಧುನಿಕ ಸಮಾಜಕ್ಕೆ ತುಂಬಾ ದೂರವಾದದ್ದು. 'ಸೋಲಿಗರು ಹೆರಿಗೆ ಸಂಧರ್ಭದಲ್ಲಿ ತಾಯಿಯಾಗಲಿರುವಾಕೆಯನ್ನು ಕೂರಿಸಿ ಇಲ್ಲವೆ ನಿಲ್ಲಿಸಿ ಹೆರಿಗೆ ಮಾಡುತ್ತಾರೆ' ಹೆರಿಗೆ ಸಂಧರ್ಭದಲ್ಲಿ ಕತ್ತರಿ ಬಾಕುಗಳ ಅಗತ್ಯಗಳು ಕಂಡುಬರುವುದಿಲ್ಲ. ಕಾಡಿನಲ್ಲಿ ಕಣ್ಣಿಗೆ ಕಾಣುವ ತಮ್ಮ ಕೈ ಅಳತೆಯಲ್ಲಿ ಲಭ್ಯವಿರುವ ನಾರು-ಬೇರು ಸೊಪ್ಪುಗಳಿಂದ ಸೋಲಿಗರು ಔಷಧಗಳನ್ನು ತಯಾರಿಸಿಕೊಳ್ಳುತ್ತಾರೆ. ಮಗು ಜನಿಸಿದ ಎಂಟನೆ ದಿನಕ್ಕೆ ನಾಮಕರಣ ಮಾಡುತ್ತಾರೆ. ಮಗುವಿಗೆ ದೇವರ ಹೆಸರುಗಳಿಂದ ಕರೆಯುತ್ತಾರೆ. ಜನನವಾದಾಗ ಮತ್ತು ಪ್ರೌಢಾವಸ್ಥೆಗೆ ಬಂದಾಗ ಕೆಲವು ದಿನಗಳನ್ನು ಸೂತಕವಾಗಿ ಆಚರಿಸುತ್ತಾರೆ. ಅವಧಿ ತೀರಿದ ಬಳಿಕ ಮನೆದೇವರಿಗೆ ವಿಶೇಷ ಪೂಜೆ ಸಲ್ಲಿಸುವುದರ ಮೂಲಕ ಸೂತಕ ನಿವಾರಣೆಯಾಯಿತು ಎಂದು ತಿಳಿಯುತ್ತಾರೆ.

ವಿವಾಹ ಪದ್ಧತಿ: ಸೋಲಿಗರಲ್ಲಿ ಕುಲವು ಮದುವೆ ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಒಂದೇ ಕುಲದ ಹೆಣ್ಣು ಮತ್ತು ಗಂಡು ಅಣ್ಣ. ತಂಗಿ ಎಂಬಂತಹ ಭಾವನೆಗಳಿವೆ. ಸೋದರ ಅತ್ತೆ, ಮಾವ ಮತ್ತು ಅಕ್ಕನ ಮಗಳನ್ನು ಮಾಡಿಕೊಳ್ಳುತ್ತಾರೆ. ವಿವಾಹ ಪದ್ಧತಿ ತುಂಬಾ ಸರಳ ವಿಧಾನವಾಗಿದ್ದು, ಮತ್ತು ಕಡಿಮೆ ವೆಚ್ಚದಾಯಕವಾಗಿರುತ್ತದೆ. ಸೋಲಿಗರಲ್ಲಿ ಅನೇಕ ವಿವಾಹ ಪದ್ಧತಿಗಳನ್ನು ಕಾಣುತ್ತೇವೆ.

1. ಬಲವಂತ ವಿವಾಹ: ಬಯಸಿದ ಕನ್ಯೆಯನ್ನು ಆಕೆ ಮನೆಯವರ ಅನುಮತಿಯಿಲ್ಲದೆ ಹುಡಗ ಬಲವಂತವಾಗಿ ಹುಡುಗಿಯನ್ನು ಅಪಹರಿಸಿಕೊಂಡು ಹೋಗಿ ಮದುವೆಯಾಗುವದು. ಆದರೆ ಕುಲಪಂಚಾಯತಿ ನ್ಯಾಯದ ಪ್ರಕಾರ ಹುಡುಗ ತಪ್ಪಿತಸ್ಥನಾಗಿರುತ್ತಾನೆ. ಇದರಿಂದ ದಂಡ ತರಬೇಕಾಗಿದ್ದು. ಕುಲಸ್ಥರಿಗೆ ಊಟವನ್ನು ನೀಡಬೇಕಾಗುತ್ತದೆ. ಇದು ಪ್ರಸ್ತುತದಲ್ಲಿ ಇಲ್ಲ.

2. ಅಪಹರಣ ವಿವಾಹ: ಸೋಲಿಗರು ಆರ್ಥಿಕವಾಗಿ ದುರ್ಬಲವಾಗಿ ದ್ದರಿಂದ ಗೆಡ್ಡೆಗೆಣಸು ಕೀಳುವ ಸಲುವಾಗಿ ಸೌದೆ ತರಲು, ಜೇನುಬಿಡಿಸಲು ಮುಂತಾದ ಸಂದರ್ಭಗಳಲ್ಲಿ ಗಂಡುಹೆಣ್ಣು ಬೇಧವಿಲ್ಲದೆ ಕಾಡಿನಲ್ಲಿ ಒಟ್ಟಾಗಿ ಅಲೆಯಬೇಕಾಗಿ ಬಂದ ಸಂದರ್ಭದಲ್ಲಿ ಇಬ್ಬರಲ್ಲಿ ಸಲಿಗೆ ಬೆಳೆದು ಪರಸ್ಪರ ಮಾತನಾಡಿ ಅರ್ಥಮಾಡಿಕೊಂಡಂತೆ ಸಂಧರ್ಭದಲ್ಲಿ ಪರಸ್ಪರರು ಜೊತೆಯಗಿ ಬೇರೆ ಕಡೆ ಓಡಿ ಹೋಗುತ್ತಾರೆ. ಗಂಡು ಬಯಸಿದ ಕಡೆಗೆ ಅವಳನ್ನು ಅಪಹರಿಸಿಕೊಂಡು ಹೋಗುತ್ತಾನೆ. ಹುಡುಗಿಯೂ ಅವನ ಇಚ್ಛೆಯಂತೆ ನಡೆಯುತ್ತಾಳೆ. ಪೋಡಿನಲ್ಲಿ ಕಾಣೆಯಾಗಿರುವವರು ಯಾರು ಎಂಬುದು ಖಾತ್ರೆಯಾಗುತ್ತದೆ. ಹುಡುಗ-ಹುಡುಗಿ ಮರಳಿದ ಬಳಿಕ ಇಬ್ಬರಿಗೂ ದಂಡವಿಧಿಸಿ ಕುಲಸ್ಥರಿಗೆ ಭೋಜಕೂಟವನ್ನು ಏರ್ಪಡಿಸುವಂತೆ ಮಾಡಿದ ಬಳಿಕ ಅವರಿಬ್ಬರು ಗಂಡಹೆಂಡತಿಯರೆಂದು ಪೋಡಿನ ಜನ ಒಪ್ಪಿಕೊಳ್ಳುತ್ತಾರೆ.

3. ಸೇವಾ ವಿವಾಹ ಪದ್ಧತಿ / ಜೀತ ಪದ್ಧತಿ: ಕನ್ಯ ಶುಲ್ಕವನ್ನು ನೀಡದೆ ನಡೆಯುವಂತಹ ವಿವಾಹ ಪದ್ಧತಿ ಬಡವರಾದ ಯುವಕರು ಕನ್ಯಾಶುಲ್ಕ ತೆರಲು ಸಾಧ್ಯವಾಗದೆ ಇರುವವರು ಬಾವಿ ಅತ್ತೆ ಮಾವಂದಿರ ಮನೆಯಲ್ಲಿ ಕೆಲವು ಕಾಲ ದುಡ್ಯುತ್ತಾರೆ. ಇದನ್ನು ಎಲ್. ಕೆ. ಅನಂತಕೃಷ್ಣ ಅಯ್ಯರ್ ರವರು ಸೋಲಿಗರಲ್ಲಿ ಈ ವಿಧದ ವಿವಾಹ ಪದ್ಧತಿ ಇದೆ ಎಂದು ಹೇಳಿದರೆ ತಪ್ಪಾಗುತ್ತದೆ. ಎಂದು ಹೇಳಿದ್ದಾರೆ. ಇದು ಅಪರೂಪಕ್ಕೆ ನಡೆಯುವ ಪದ್ಧತಿಯಾಗಿದೆ.

4. ಏಕಪತ್ನಿತ್ವ: ಸೋಲಿಗರಲ್ಲಿ ಒಬ್ಬ ಗಂಡಸು ಇಬ್ಬರು ಪತ್ನಿಯರನ್ನು ಏಕ ಕಾಲದಲ್ಲಿ ಒಂದೇ ಕುಟುಂಬದಲ್ಲಿರಿ ಇಟ್ಟಕೊಂಡು ವಾಸಿಸುವ ನಿದರ್ಶನಗಳು ಅಪರೂಪ ಒಬ್ಬ ವ್ಯಕ್ತಿ ಮರುಮದುವೆ ಮಾಡಿಕೊಂಡನೆಂದರೆ ಮುಗಿಯಿತು. ಅವನ ಮೊದಲ ಹೆಂಡತಿಯನ್ನು ಬಿಟ್ಟಂತೆಯೇ ವಾಡಿಕೆ. ಆ ವ್ಯಕ್ತಿಯ ಮೊದಲ ಹೆಂಡತಿ ಬೇರೆ ಗಂದಸಿನೊಡನೆ ಕೂಡಿಕೆ ಮಾಡಿಕೊಳ್ಳೂತ್ತಾಳೆ.

5. ವಿಧಾವ ವಿಧಾನ: ಪ್ರಾಪ್ತ ವಯಸ್ಸಿನ ಗಂಡ ಅಕಾಲ ಮರಣಕ್ಕೆ ತುತ್ತಾದರೆ ತಾರುಣ್ಯ ಹೊಸ್ತಿಲಲ್ಲಿರುವ ಹೆಣ್ಣು ಮಗಳಿಗೆ ಮರುಮದುವೆಯಾಗುವಂತಹ ಅವಕಾಶವಿದೆ. ಒಂದು ವೇಳೆ ಆಕೆ ಮೊದಲ ಗಂಡನಿಂದ ಮಗುವನು ಪಡೆದಿದ್ದರೂ ಅದು ಸಹ ಎರಡನೆ ಗಂಡನ ಮನೆಯಲ್ಲಿ ಬೆಳೆಯುವ ಅವಕಾಶವಿದೆ.

6. ಮಿಶ್ರದಾಯದಿ ವಿವಾಹ: ಸಾಮಾನ್ಯ ಜನವರ್ಗದಲ್ಲಿ ಈ ವಿವಾಹ ಪದ್ಧತಿ ಇದೆ. ಅಂದರೆ ಒಬ್ಬ ಯುವಕ ತಂದೆಯ ಸೋದರನ ಮಗಳು ಆ ಯುವಕರಿಗೆ ದಾಯಾದಿ ಅಂದರೆ ತಂಗಿಯೂ ಒಂದೇ ಕುಲದ ವಳೂ ಆಗುತ್ತಾಳೆ. ಇದೇ ಮಾತು ಯುವಕನ ತಾಯಿಯ ತಂಗಿಯ ಮಗಳಿಗೂ ಅನ್ವಹಿಸುತ್ತದೆ. ಆ ಯುವಕ ತಂದೆಯ ಸೊದರಿಯ ಮಗಳು / ತಾಯಿಯ ಅಣ್ಣ/ ತಮ್ಮನ ಮಗಳನ್ನು ಹಾಗೆಯೇ ಬೇರೊಂದು ಕೆಲಸಕ್ಕೆ ಸೇರಿದವಳನ್ನು ಪತ್ನಿಯಾಗಿ ಸ್ವೀಕರಿಸಬಹುದು.

ಮರಣ ಸಂಸ್ಕಾರ: ಸೋಲಿಗರಲ್ಲಿ ಸತ್ತವರನ್ನು ಹೂಳುವ ಪದ್ಧತಿ ಆಚರಣೆಯಲ್ಲಿದೆ. ನೆಲವನ್ನು ಅಗೆದು ಗುಂಡಿ ತೆಗೆದು, ದಕ್ಷಿಣಕ್ಕೆ ಶವದ ತಲೆಯಿಟ್ಟು ಎಡದ ಮಗ್ಗಲಾಗಿ ಮಲಗಿಸಿ ಗುಂಡಿಗೆ ಮಣ್ಣು ತುಂಬುತ್ತಾರೆ. ಹೆಣವನ್ನು ಬಿಸಿ ನೀರಿನಲ್ಲಿ ಸ್ನಾನ ಮಾಡಿಸಿ, ಪೂಜೆ ಮಾಡಿ, ಹೊಸಬಟ್ಟೆ ಗಂಧ, ವಿಭೂತಿ ಹಾಕಿ ಚಟ್ಟದಲ್ಲಿ ತೆಗೆದುಕೊಂಡು ಹೋಗುತ್ತಾರೆ. ಮೂರು ದಿವಸಕ್ಕೆ ಅನ್ನ, ನೀರು 'ಹನ್ನೆರಡು ದಿವಸಕ್ಕೆ ಕಟ್ಟೆ ಮಾಡುತ್ತಾರೆ' (1956:70) "ಕೂಡಿಕೆ" (ಮರು ಮದುವೆ) ಮಾಡಿಕೊಂಡವರಿಗೆ 12 ದಿವಸಕ್ಕೆ ಕಟ್ಟೆ ಮಾಡುವುದಿಲ್ಲ. ತೊನ್ನು

ಬಂದವರನ್ನು ಸುಡುತ್ತಾರೆ. ನೀರಿನಲ್ಲಿ ಅಥವಾ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡವರನ್ನು ಸುಡುತ್ತಾರೆ. ಸತ್ತವರ ಆತ್ಮ ತೃಪ್ತಿಗಾಗಿ ಆಡು, ಕುರಿ, ಕೋಳಿ ಮುಂತಾದ ಪ್ರಾಣಿಗಳನ್ನು ಬಲಿಕೊಟ್ಟು, ಪಂಚಾಯ್ತಿ ಜನರನ್ನು ಸೇರಿಸಿ ಪ್ರತಿಯೊಂದು ಮನೆಯವರನ್ನೂ ಊಟಕ್ಕೆ ಕರೆದು ಬಡಿಸುತ್ತಾರೆ. ಊಟಕ್ಕೆ ಬಡಿಸುವ ಮೊದಲು ಕಾಗೆಗೆ ಎಡೆ ನೀಡಿ, ಅದು ಅದನ್ನು ಮುಟ್ಟಿದ ಮೇಲೆ ಇವರು ಊಟ ಮಾಡುತ್ತಾರೆ. ಸತ್ತಿರುವ ಆತ್ಮದ ತೃಪ್ತಿಗಾಗಿ ಗುಡಿಸಲ ಹೊರಗಡೆ ಆಹಾರವನ್ನು ಇಡುವರು. ಕಾಗೆಗಳು ಬಂದು ತಿನ್ನದೇ ಹೋದರೆ, ಏನೋ ಅಪಶಕುನ ಎಂಬ ಶಂಕೆ ಅವರಿಗೆ, ದೇವತೆಗಳು ಅಥವಾ ಪಿತೃಗಳು ಕೋಪಗೊಂಡಿರ ಬೇಕೆಂದು ತಿಳಿದು ಪುನಃ ಉತ್ತರ ಕ್ರಿಯೆ ಮಾಡುವುದುಂಟು". ಸತ್ತವರಿಗೆ ಸೂತಕ ಇರುವ ಪದ್ಧತಿ ಇದೆ. ಸೂತಕ ಕಳೆದ ಮೇಲೆ ಕುಲಕ್ಕೆ ಊಟ ಕೊಡುವರು.

ಬುಡಕಟ್ಟು ಜನಾಂಗಗಳಲ್ಲಿಯೇ ಅತ್ಯಂತ ಒಗ್ಗಟ್ಟಿನ ಜನಾಂಗವೆಂದರೆ ಸೋಲಿಗರು ಇವರು ಕುಲದ ಘನತೆ ಗೌರವ ಮತ್ತು ಪ್ರಾಮಾಣಿಕತೆಯನ್ನು ಮರೆಯುವಂತವರಾಗಿದ್ದಾರೆ. ಯಾವುದಾದರೂ ಗಂಡಾಂತರಗಳು ಎದುರಾದಾಗ ಒಗ್ಗಟ್ಟಿನಿಂದ ಎದುರಿಸುತ್ತಾರೆ. ಹಾಗೆಯೇ ಯಾವುದೇ ಸಂದರ್ಭದಲ್ಲಿ ಕುಲಕ್ಕೆ ಮತ್ತು ಕುಲದ ಮುಖ್ಯಸ್ತರಿಗೆ ತೆಲೆಬಾಗುತ್ತಾರೆ. ಇವರ ಸಂಸ್ಕಾರಗಳಲ್ಲಿ ಜನನ, ವಿವಾಹ ಮತ್ತು ಮರಣ ಸಂಸ್ಕಾರಗಳೆಲ್ಲವು ಕುಲದ ಮುಖ್ಯಸ್ಥನ ಸಮ್ಮುಖದಲ್ಲಿ ನಡೆಯುತ್ತದೆ. ಆದ್ದರಿಂದ ತನ್ನದೇ ಆದ ಅಸ್ತಿತ್ವವನ್ನು ಉಳಿಸಿಕೊಂಡು ಬ್ರಾಹ್ಮಣಷಾಹಿ ಪುರೋಹಿತ ಶಾಸ್ತ್ರಗಳಿಂದ ದೂರ ಉಳಿದಿರುವುದನ್ನು ನಾವು ಕಾಣಬಹುದಾಗಿದೆ.

ಗ್ರಂಥಋಣ

1. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸೋಲಿಗ ಬುಡಕಟ್ಟು ಜನಾಂಗದ ಅಭಿವೃದ್ಧಿಗೆ ಕರ್ನಾಟಕ ಸರ್ಕಾರದ ಕಾರ್ಯಕ್ರಮಗಳು ಒಂದು ವಿಮರ್ಶಾತ್ಮಕ ಅಧ್ಯಯನ– ಡಾ. ಸುನಂದಮ್ಮ ಎನ್.

2. ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ – ಡಾ. ಮಧುಗುಂಡ್ಲಪೇಟೆ

3. ಕರ್ನಾಟಕ ಬುಡಕಟ್ಟು – ಸಂಪುಟ. 1 ಮತ್ತು 2

4. ಜೇನುಕುರುಬ ಬುಡಕಟ್ಟಿನ ಜನಾಂಗದ ಅವ್ಯಕ್ತ ಸಾಂಸ್ಕೃತಿಕ ಪರಂಪರೆ – ಕಿಕ್ಕೆರ ನಾರಾಯಣ

5. ಅದಿವಾಸಿ ಅಖ್ಯಾವ ಸಮುದಾಯಗಳ ಅಧ್ಯಯನಕ್ಕೊಂದು ಆಕರ – ಸಂಪಾದಕರು ಡಾ. ಎ. ಎಸ್. ಪ್ರಭಾಕರ.

ವಿಷಯ:-04

ಕೌಟಿಲ್ಯೀಯಮ್
ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ

THEME:-04

KAUTILYEEYAM

ECONOMICS, POLITICAL SCIENCES AND ARTHASASTRA

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1	ಜಯಚಾಮರಾಜ ಒಡೆಯರ ಆಡಳಿತಾವಧಿಯ ಸುಧಾರಣೆಗಳು	ಹೆಚ್.ಎಂ. ಸುಧಾ	283 – 286
2	ದೋಅಬ್ ಪ್ರದೇಶದ ಕೃಷಿ ಉತ್ಪನ್ನಗಳು	ಹೆಚ್. ಮಹದೇವಸ್ವಾಮಿ	286 – 289
3	ಜಾಗತೀಕರಣ, ಪ್ರಜಾಪ್ರಭುತ್ವ ಮತ್ತು ಅಂಗವಿಶ್ವಾಸಿಗರ ಮಾನವ ಹಕ್ಕುಗಳು	ಡಾ. ಕೃಷ್ಣ ಹೊಂಬಳ್	289 – 296
4	ಮಂಡ್ಯ ಜಿಲ್ಲಾ ಪಂಚಾಯಿತಿಯ ರಾಜಕೀಯ ಕಾರ್ಯ ಚಟುವಟಿಕೆಯಲ್ಲಿ ಮಹಿಳಾ ಪ್ರತಿನಿಧಿಗಳ ಪಾತ್ರ	ಅಮೃತಾ. ಬಿ. ಎಸ್	297 – 300
5	ಗುಪ್ತರ ಕಾಲಾವಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ	ಡಾ॥ ಗಂಗಮ್ಮ ಹೆಚ್.ಎ	300 – 304
6	ಗ್ರಾಮೀಣ ಅಭಿವೃದ್ಧಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಪಾತ್ರ	ಅರುಣ್ ಆರ್. ಡಾ. ಜಿ.ಟಿ. ರಾಮಚಂದ್ರಪ್ಪ, ಜಗದೀಶ್ ಬಾಬು ಎಚ್.ಕೆ.	304 – 308
7	ವಸಾಹತುಷಾಹೀ ದಕ್ಷಿಣ ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ: ಒಂದು ಅವಲೋಕನ	ಎಂ.ಜಿ ಪ್ರಮೋದ್	309 – 312
8	ಕರ್ನಾಟಕದ ರೈತ ಚಳುವಳಿಗಳು	ಹೆಚ್.ಹೆಚ್. ಮಲ್ಲಿಕೇಶ	313 – 316
9	ಪ್ರಭುದ್ಧ ಭಾರತದ ನಿರ್ಮಾಣಕ್ಕೆ ಡಾ॥ ಬಿ.ಆರ್. ಅಂಬೇಡ್ಕರ್ ರವರ ಕೊಡುಗೆ	ಡಾ॥ ವಿಜಯಕುಮಾರ ಎಚ್. ಸಾಲಿಮನಿ, ಪೀರಪ್ಪ ಶೇಟ್ಟಪ್ಪ ಭಾಂಗೆ	316– 319
10	ಕರ್ನಾಟಕದಲ್ಲಿ ಬೌದ್ಧ ಧರ್ಮದ ನೆಲೆಗಳ ಒಂದು ಅಧ್ಯಯನ (ಕ್ರಿ.ಪೂ. 3ನೇ ಶತಮಾನದಿಂದ ಕ್ರಿ.ಶ. 1565 ರವರೆಗೆ)	ಡಾ. ವಿಜಯಕುಮಾರ ಸಾಲಿಮನಿ ವಿಶ್ವನಾಥರಡ್ಡಿ ಹಣಮಗೌಡ	319 – 323
11	ಬುಡಕಟ್ಟು ಮಹಿಳೆಯರ ರಾಜಕೀಯ ಮೀಸಲಾತಿ ಸವಾಲುಗಳು ಮತ್ತು ನಿರೀಕ್ಷೆಗಳು ಒಂದು ಅಧ್ಯಯನ	ದೀಪ ಎಂ.ಬಿ., ದಿವ್ಯ ಎಂ.ಬಿ	323 – 326
12	ಗಾಂಧೀಜಿ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು	ಡಾ. ಎಂ.ಡಿ ಉಮೇಶ	326 – 328
13	ಜಾಗತೀಕರಣದ ಯುಗದಲ್ಲಿ ಕಲ್ಯಾಣ ರಾಜ್ಯದ ಸ್ಥಾನ–ಮಾನ	ಶರ್ಮಿಳಾ ಟಿ.ಸಿ., ಡಾ॥ ಕೃಷ್ಣ ಆರ್ ಹೊಂಬಾಳ್	328 – 331
14	ಕರ್ನಾಟಕದಲ್ಲಿ ಮಹಿಳಾ ಹಕ್ಕುಗಳ ಸಂವರ್ದನೆಯಲ್ಲಿ ರಾಜ್ಯ ಮಹಿಳಾ ಆಯೋಗದ ಒಂದು ವಿಮರ್ಶೆ	ಶಿಲ್ಪ ಎಸ್.ಎನ್ ಡಾ॥ ಕೃಷ್ಣ ಆರ್ ಹೊಂಬಾಳ್	331 – 333
15	ನಗರ ಪ್ರದೇಶದಲ್ಲಿ ಬಾಲಕಾರ್ಮಿಕ ಪದ್ಧತಿ	ಕಾಶಿನಾಥ ಶಿವಪ್ಪ ಟಕ್ಕಳಕಿ	334 – 337
16	ಭಾರತದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರೀಕರಣ; ಹೊಸ ಸಾಧ್ಯತೆಗಳು ಮತ್ತು ಸವಾಲುಗಳು	ಡಾ. ನಂಜುಂಡ.ಡಿ.ಸಿ ನವೀನ್ ಚಂದ್ರ ಸಿ.ಬಿ	337 – 340
17	ಕರ್ನಾಟಕದಲ್ಲಿ ಬುಡಕಟ್ಟು ಜನರ ಅಭಿವೃದ್ಧಿ ಮತ್ತು ಆಂತರಿಕ ಒಕ್ಕಲೆಬ್ಬಿಸುವಿಕೆ ವಿಶೇಷವಾಗಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ: ಒಂದು ವಿಮರ್ಶೆ	ನಾಗೇಶ .ಕೆ.ಟಿ.	340 – 344
18	ಸ್ವಾತಂತ್ರೋತರ ಕಲಬುರ್ಗಿ ಜಿಲ್ಲೆಯಲ್ಲಿನ ದಲಿತ ಚಳುವಳಿಗಳು ಮತ್ತು ಸಾಮಾಜಿಕ ಪರಿವರ್ತನೆ	ಶಿವಪ್ಪ .ಎಮ್. ಭೂಸನೂರ	344 – 346
19	ಲೋಹಿಯಾ ಅವರ ಚಿಂತನೆಗಳಲ್ಲಿ ಜನ ಸಾಮಾನ್ಯರು	ಪ್ರೊ.ಜಿ.ಟಿ.ರಾಮಚಂದ್ರಪ್ಪ, ಹೇಮಾವತಿ, ಸತೀಶ್. ಆರ್	346 – 349

20	ಒತ್ತಾಯಪೂರ್ವಕ ಮಹಿಳಾ ಉದ್ಯಮ	ಚೈತನ್ಯ ಎಸ್.	349 – 352
21	ಬುಟಕಟ್ಟು ಜನಸಮುದಾಯದ ಪರಿಕಲ್ಪನೆ ಒಂದು ವಿಶ್ಲೇಷಣೆ	ದೀಪ ಎಂ.ಬಿ ಡಾ.ಕೃಷ್ಣ ಹೊಂಬಾಳ್	352 – 356
22	ಭಾರತದಲ್ಲಿ ಪ್ರಜಾಪ್ರಭುತ್ವದ ದೃಷ್ಟಿ ಕೋನಗಳು–ಒಂದು ವಿಶ್ಲೇಷಣೆ	ಚಂದ್ರೇಗೌಡ, ವೆಂಕಟೇಗೌಡ	356 – 359
23	ಭಾರತದಲ್ಲಿ ಪ್ರಜಾಪ್ರಭುತ್ವದ ಸಂವರ್ಧನೆ ಮತ್ತು ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ	ದೇವರಾಜು.ಎಸ್.ಎಸ್	359 – 363
24	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರ – ೨೦೦೦ ರಿಂದ ೨೦೧೦	ಡಾ. ಇಂದಿರಾ ಟಿ.	363 – 369
25	ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ : ಕೌಟಿಲ್ಯಂ	ಸವಿತ ಎ.ಪಿ.	369– 374
26	ಕರ್ನಾಟಕದ ರೈತ ಮತ್ತು ದಲಿತ ಚಳುವಳಿಗಳ ಅವಲೋಕನ	ಹೆಚ್.ಹೆಚ್. ಮಲ್ಲಿಕೇಶ	374 – 376
27	ಮಹಾತ್ಮ ಜ್ಯೋತಿಬಾ ಫುಲೆಯವರ ವೈಚಾರಿಕ ಚಿಂತನೆಗಳು	ಗುಂಡಪ್ಪ ಸಿ. ಸಿಂಗೆ	377 – 380
28	'ಬೃಹತ್‌ಅಭಿವೃದ್ಧಿ ಯೋಜನೆಗಳು'–ಅಭಿವೃದ್ಧಿಯ ಸಂಕೇತಗಳೇ?	ಶ್ರೀಮತಿ ಗಾಯತ್ರಿ	380 – 387
29	ಅರ್ಥಶಾಸ್ತ್ರದಲ್ಲಿ ಕೃಷಿ	ಶ್ರೀಮತಿ ಸುಧಾ ಹೆಚ್.ಎಸ್ ಅರುಣ್ ಆರ್	387 – 390
30	ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮವಾಸ್ತವ್ಯದ ಪರಿಕಲ್ಪನೆ	ಡಾ.ಜಿ.ಟಿ.ರಾಮಚಂದ್ರಪ್ಪ	391 – 395
31	ಪ್ರಜಾಪ್ರಭುತ್ವದ ಮೌಲ್ಯದ ಔನ್ನತೀಕರಣದಲ್ಲಿ ಮಾಹಿತಿ ಹಕ್ಕಿನ ಪಾತ್ರ	ಎನ್. ಆನಂದಗೌಡ ಜಗದೀಶ್ ಬಾಬು ಎಚ್. ಕೆ ಶಕುಂತಲ ಸಿ.	395 – 398
32	ಮಹಿಳೆಯರನ್ನು ಸಬಲೀಕರಿಸುವಲ್ಲಿ ಸಾಮಾಜಿಕ ಶಾಸನದ ಪಾತ್ರ	ಜಗದೀಶ್ ಬಾಬು ಎಚ್.ಕೆ. ಶಕುಂತಲ ಸಿ., ಶಶಿಕುಮಾರ್ ಟಿ.ಪಿ	398 – 403
33	ಜಾಗತೀಕರಣ ಸಂಧರ್ಭದಲ್ಲಿ ಖಾದಿ ಗ್ರಾಮೋದ್ಯೋಗ ಕೈಗಾರಿಕೆಗಳ ಸಮಸ್ಯೆ ಮತ್ತು ಸವಾಲುಗಳು	ಡಾ॥ ಟಿ. ರಮೇಶ್	403 – 405
34	ಜಾಗತೀಕರಣ ಸಂದರ್ಭದ ರಾಜಕೀಯ ಕ್ಷೇತ್ರದಲ್ಲಿ ಗ್ರಾಮೀಣ ಮಹಿಳೆಯರ ಪಾತ್ರ	ಹೆಚ್. ಪಿ. ಭವ್ಯ	405 – 407
35	ಇಂದಿನ ಭಾರತಕ್ಕೆ ಕೌಟಿಲ್ಯನ ಅರ್ಥಶಾಸ್ತ್ರದ ಪ್ರಯೋಜನಗಳು	ಶಂಭುಲಿಂಗ ಉಪಾಧ್ಯಾಯ	407 – 410
36	ಮೈಸೂರು ಸಂಸ್ಥಾನದ ರಚನಾತ್ಮಕ ಕಾರ್ಯಕ್ರಮ ಚಳುವಳಿಗಳು ಮತ್ತು ದಲಿತರು:	ಬಿಳಿಗಿರಿ. ಎನ್	411 – 412
37	ವಸಾಹತುಪಾಹೀ ದಕ್ಷಿಣ ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ: ಒಂದು ಅವಲೋಕನ	ಎಂ.ಜಿ ಪ್ರಮೋದ್	412 – 416
38	ಭಾರತದ ಕೃಷಿ ನೀತಿ	ಸ್ನೇಹ. ಡಿ. ಆರ್	416 – 420

ಜಯಚಾಮರಾಜ ಒಡೆಯರ ಆಡಳಿತಾವಧಿಯ ಸುಧಾರಣೆಗಳು

ಹೆಚ್.ಎಂ. ಸುಧಾ
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,
ಮೈಸೂರು – ೫೭೦ ೦೦೬. ಇ ಮೇಲ್: sudhahm2011@gmail.com

ಮೈಸೂರು ಸಂಸ್ಥಾನವನ್ನು ಆಳಿದ ರಾಜರುಗಳಲ್ಲಿ ಜಯಚಾಮರಾಜ ಒಡೆಯರು ಒಬ್ಬರು. ಇವರು 25ನೇ ರಾಜನಾಗಿ 1940 ರಿಂದ 1947 ರವರೆಗೆ ಆಳ್ವಿಕೆ ಮಾಡಿದರು. ಇವರ ಆಳಿತಾವಧಿಯಲ್ಲಿ ಹಲವಾರು ಅಭಿವೃದ್ದೀ ಕಾರ್ಯಗಳನ್ನು ಮಾಡಿದ್ದಾರೆ ಅವುಗಳಲ್ಲಿ ಪ್ರಮುಖವಾದವುಗಳನ್ನು ಪ್ರಸ್ತುತ ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ.

ಗ್ರಾಮೀಣ ಅಭಿವೃದ್ದೀಗೋಸ್ಕರ ಮೊದಲ ಬಾರಿಗೆ ಪಂಚವಾರ್ಷಿಕ ಯೋಜನೆಯನ್ನು 1942 ರಿಂದ 47 ರವರೆಗೆ ಜಾರಿಗೆ ತಂದರು. ಭಿಕ್ಷುಗಳಿಗಾಗಿ ಜಮೀನುಗಳನ್ನು ಕೊಟ್ಟ ಮೊದಲ ರಾಜ. ಇವರು ಇವರ ಕಾಲದಲ್ಲಿ ಹಲವಾರು ಜಲಾಶಯಗಳು, ಕಾಲುವೆಗಳು, ಕೆರೆಕಟ್ಟೆಗಳು ನಿರ್ಮಾಣವಾದವು. 1944 ರಲ್ಲಿ ಬೆಂಗಳೂರಿನಲ್ಲಿ ಹೊಸದಾಗಿ ಒಂದು ಕ್ಷಯ ಆಸ್ಪತ್ರೆ, 1943 ರಲ್ಲಿ ಶ್ರೀ ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆ, ಹಾಸನ, ಮಂಡ್ಯ, ತುಮಕೂರು, ಶಿವಮೊಗ್ಗ, ಅರಸೀಕೆರೆ, ಚೆನ್ನರಾಯಪಟ್ಟಣ, ಹೀಗೆ ಪ್ರಮುಖ ಕೇಂದ್ರಗಳಲ್ಲಿ ದೊಡ್ಡ ಸಾರ್ವಜನಿಕ ಆಸ್ಪತ್ರೆಗಳನ್ನು ಸ್ಥಾಪಿಸಲಾಯಿತು. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇಂಟರ್ ಮಿಡಿಯೇಟ್ ಮತ್ತು ಡಿಗ್ರಿ ಕಾಲೇಜುಗಳನ್ನು ಸ್ಥಾಪಿಸಲಾಯಿತು. ಚಾಮರಾಜನಗರ ಗುಂಡ್ಲುಪೇಟೆಯ ಬಳಿ ವೇಣುಗೋಪಾಲ ವನ್ಯಮೃಗ ಉದ್ಯಾನ, ಕಡೂರಿನ ಬಳಿ ಒಂದು ವನ್ಯಮೃಗ ಉದ್ಯಾನವನ್ನು ಸ್ಥಾಪಿಸಲಾಯಿತು.

ಇವರು ಲಲಿತಕಲೆಗಳಿಗೆ ನೀಡಿದ ಪ್ರೋತ್ಸಾಹ ಸ್ಮರಣೀಯ. 'ಜಯಚಾಮರಾಜಗ್ರಂಥಮಾಲಾ', ಎಂಬ ಯೋಜನೆ ರೂಪುಗೊಂಡಿತು. ಈ ಯೋಜನೆಯ ' ಅಂಗವಾಗಿ ವೇದಶಾಸ್ತ್ರ, ಪುರಾಣ, ಮುಂತಾದ ಉದ್ಗ್ರಂಥಗಳು ಪ್ರಸಿದ್ಧ ಪಂಡಿತರಿಂದ ಕನ್ನಡಕ್ಕೆ ಅನುವಾದಗೊಂಡು ಪ್ರಕಟವಾದವು. ಸ್ವಾತಂತ್ರ್ಯ ನಂತರ ಭಾರತ ಒಕ್ಕೂಟದಲ್ಲಿ ತಮ್ಮ ಸಂಸ್ಥಾನವನ್ನು ವಿಲೀನಗೊಳಿಸಲು ಮುಂದಾದವರಲ್ಲಿ ಇವರೇ ಮೊದಲಿಗರು. ಹೀಗೆ ಜಯಚಾಮರಾಜ ಒಡೆಯರು ತಮ್ಮ ಅಧಿಕಾರದ ಏಳು ವರ್ಷಗಳ ಅಲ್ಪ ಅವಧಿಯಲ್ಲಿ ಸಾಧಿಸಿದುದ್ದು ಅಪಾರ ಅದು ರಾಜಕೀಯ ದುಗುಡದ ನಡುವೆ ಎಂಬುದು ವಿಶೇಷ ಗಮನಾರ್ಹ.

ಮೈಸೂರು ಸಂಸ್ಥಾನವನ್ನು ಆಳಿದ ರಾಜರುಗಳಲ್ಲಿ ಜಯಚಾಮರಾಜ ಒಡೆಯರು ಒಬ್ಬರು ಇವರು 25ನೇ ರಾಜನಾಗಿ 1940 ರಿಂದ 1947 ರವರೆಗೆ ಆಳ್ವಿಕೆ ಮಾಡಿದರು ಯದುವಂಶದ ಕೊನೆಯ ದೊರೆ ತತ್ವಜ್ಞಾನಿ, ಸಂಗೀತಜ್ಞ, ರಾಜನೀತಿತಜ್ಞ, ಉದಾರದಾನಿ ಕೋಟಿ ಕೋಟಿ ಕನ್ನಡಿಗರ ಹೃದಯ ಸಿಂಹಾಸನಾಧೀಶ್ವರರೂ ರಾಜಋಷಿಗಳು ಆಗಿದ್ದರು ಇವರು ಹುಟ್ಟಿದ್ದು 1919ರ ಜುಲೈ 18ರಂದು ತಂದೆ ಯುವರಾಜ ಕಂಠೀರವನರಸಿಂಹರಾಜ ಒಡೆಯರು ತಾಯಿ ಕೆಂಪು ಚಲುವಾಜಮ್ಮಣ್ಣಿ ಇವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಹಿಸ್ಟಾರಿಕಲ್ ಅಸೋಸಿಯೇಷನ್ನಿನ ಗೌರವಾಧ್ಯಕ್ಷರೂ ಆಗಿದ್ದರು. ಮತ್ತೆ ಬನಾರಸ್ ವಿಶ್ವವಿದ್ಯಾನಿಲಯ ಇವರಿಗೆ ಗೌವರ ಡಾಕ್ಟರ್ ಆಫ್ ಲಾಸ್ ಪದವಿಯನ್ನು 1942 ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾಲಯ ಡಿ.ಲಿಟ್ ಪದವಿಯನ್ನು 1955 ರಲ್ಲಿ ನೀಡಿ ಗೌರವಿಸಿದವು.[1] ಇದಕ್ಕೂ ಮುನ್ನ 1937 ರಲ್ಲಿ ಲಂಡಿನಿನ ಹಾಲ್ಡ್ ಸಂಗೀತ ಶಾಲೆಯ ಲೈಸೆನಷಿಯೇಟ್ ಪದವಿಧರರಾಗಿದ್ದ ಇವರು ಲಂಡನಿನ ಟ್ರಿನಿಟಿ ಸಂಗೀತ ಕಾಲೇಜಿನ ಗೌರವ ಫೆಲೋ ಸ್ವೀಕರಿಸಿದರು.[2] 1945ರ್ಲಿ ಇವರ ಪಾಂಡಿತ್ಯ ಮತ್ತು ಪ್ರತಿಭೆಗಳನ್ನು ಮನಗಂಡು ಆಸ್ಟ್ರೇಲಿಯಾ ಕ್ವೀನ್ಸಲೆಂಡ್ ವಿಶ್ವವಿದ್ಯಾನಿಲಯ ಇವರಿಗೆ ಡಿ.ಲಿಟ್ ಪದವಿಯನ್ನು ನೀಡಿ 1936ರಲ್ಲಿ ಸನ್ಮಾನಿಸಿತು ಬ್ರಟಿಷ್ ಸರ್ಕಾರ ಇವರಿಗೆ 1945ರಲ್ಲಿ ಜಿ.ಸಿ.ಎಸ್.ಐ ಬಿರುದನ್ನು 1946ರಲ್ಲಿ ಜಿ.ಸಿ.ಬಿ ಬಿರುದನ್ನು ನೀಡಿತು.

ಇವರು ರಾಜ್ಯಶಾಸ್ತ್ರ ಚರಿತ್ರೆ ಅರ್ಥಶಾಸ್ತ್ರ ಮತ್ತು ಆಫ್ರಿಕನ್ ವಿಷಯಗಳಲ್ಲಿ ವಿಶೇಷ ಪರಿಣಿತಿ ಪಡೆದರು.[3] ಅಲ್ಲದೆ ಇವರ ಆಡಳಿತಾವಧಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಪ್ರಸ್ತುತ ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ.

ಗ್ರಾಮೀಣ ಅಭಿವೃದ್ಧಿಗೋಸ್ಕರ ಮೊದಲ ಬಾರಿಗೆ ಪಂಚವಾರ್ಷಿಕ ಯೋಜನೆಯನ್ನು 1942ರಿಂದ 1947ರ ವರೆಗೆ ಜಾರಿಗೆ ತಂದರು ಭೀಕ್ಷುಗಳಿಗಾಗಿ ಜಮೀನುಗಲನ್ನು ಕೊಟ್ಟ ಮೊದಲ ರಾಜ ಇವರು ಇವರ ಕಾಲದಲ್ಲಿ ಹಲವಾರು ಜಲಾಶಯಗಳು ಕಾಲುವೆಗಳು ಕೆರೆಕಟ್ಟೆಗಳು ನಿರ್ಮಾಣವಾದವು. 1944ರಲ್ಲಿ ಬೆಂಗಳೂರಿನಲ್ಲಿ ಹೊಸದಾಗಿ ಒಂದು ಕ್ಷಯ ಆಸ್ಪತ್ರೆ, ಹಾಸನ, ಮಂಡ್ಯ, ತುಮಕೂರು, ಶಿವಮೊಗ್ಗ, ಅರಸಿಕೇರೆ, ಚೆನ್ನರಾಯನಪಟ್ಟಣ ಹೀಗೆ ಪ್ರಮುಖ ಕೇಂದ್ರಗಳಲ್ಲಿ ದೊಡ್ಡ ಸಾರ್ವಜನಿಕ ಆಸ್ಪತ್ರೆಗಳನ್ನು ಸ್ಥಾಪಿಸಲಾಯಿತು.

1946–47ರಲ್ಲಿ ಪ್ರತಿ ತಾಲ್ಲೂಕು ಆಸ್ಪತ್ರೆಯಲ್ಲಿ ಮಹಿಳಾ ಡಾಕ್ಟರ್ ನೇಮಕ ಪ್ರತಿ ಹೋಬಳಿಯಲ್ಲಿ ದಾದಿಯರ ನೇಮಕ ತಾಲ್ಲೂಕಿನ ಮುಖ್ಯ ಪಟ್ಟಣಗಳಲ್ಲಿ ಮಹಿಳೆಯರಿಗಾಗಿ 6 ಹಾಸುಗೆಗಳುಳ್ಳ ಆಸ್ಪತ್ರೆ ಪ್ರಸೂತಿ ವಾರ್ಡ್‌ಗಳನ್ನು ನಿರ್ಮಿಸಲಾಯಿತು. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇಂಟರ್ ಮಿಡಿಯೆಟ್ ಮತ್ತು ಡಿಗ್ರಿ ಕಾಲೇಜುಗಳನ್ನು ಪ್ರಾರಂಭಿಸಲಾಯಿತು. ತಾಲ್ಲೂಕು ಕೇಂದ್ರಗಳಲ್ಲಿ ಹೆಚ್ಚು ಪ್ರೌಢಶಾಲೆಗಳನ್ನು ಸ್ಥಾಪಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಕ್ಷಯ ರೋಗಕ್ಕೆ ಸಡಂಬಂಧಿಸಿದ ಸ್ನಾತಕೋತರ ಡಿಪ್ಲೊಮಗಳನ್ನು ಮತ್ತು ಲ್ಯಾಂಟಿನ್, ಜರ್ಮನಿ, ಇಟಲಿಯನ್, ಪ್ಯಾರೀಷ್ ಭಾಷೆಗಳನ್ನು ಕಲಿಯಲು ಅವಕಾಶ ಕಲ್ಪಸಲಾಯಿತು.

ವನ್ಯಮೃಗಗಳ ಬಗ್ಗೆ ಇವರಿಗೆ ಆಸಕ್ತಿ ಇತ್ತು ಭಾರತೀಯ ವನ್ಯಮೃಗಗಳ ಮಂಡಳಿಯ ಅಧ್ಯಕ್ಷರಾಗಿದ್ದುದಲ್ಲದೆ. ಮೈಸೂರು ನಗರದಲ್ಲಿನ ತಮ್ಮ ಸ್ವಂತ ಮೃಗಾಲಯವನ್ನು ಸರ್ಕಾರದ ಅಧೀನಕ್ಕೆ ವಹಿಸಿಕೊಟ್ಟು ಅದರ ಅಭಿವೃದ್ಧಿಗೆ ಕಾರಣರಾದರು.[4] ಅಲ್ಲದೇ ವನ್ಯಮೃಗಗಳ ಸಂರಕ್ಷಣೆಗಾಗಿ ಚಾಮರಾಜನಗರ ಗುಂಡ್ಲುಪೇಟೆ ಬಳಿ ವೇಣುಗೋಪಾಲ ವನ್ಯಮೃಗ ಉದ್ಯಾನ, ಕಡೂರಿನ ಬಳಿ ಒಂದು ವನ್ಯ ಮೃಗ ಉದ್ಯಾನವನ್ನು

ಸ್ಥಾಪಿಸಲಾಯಿತು.

ಕೂಲಿ ಕಾರ್ಮಿಕರಿಗೆ ಕೆಲಸದಲ್ಲಿರುವಾಗ ಯಾವುದೇ ರೀತಿಯ ಅಪಘಾತ ಉಂಟಾದರೆ ಅಪಘಾತಕ್ಕಿಡಾದ ದಿನದಿಂದಲೇ ಅವರಿಗೆ ಪರಿಹಾರ ಯಾವುದೇ ರೀತಿಯ ಸರ್ಕಾರ ಸೇವೆಯಲ್ಲಿರುವ ಹಾಗೂ ಕೂಲಿ ಕೆಲಸ ಮಡುವ ಬಡ ಮಹಿಳೆಯರಿಗೆ ಉಚಿತ ವೈದ್ಯಕೀಯ ಸೌಲಭ್ಯ, ಶುಶೂಸೆ ರಜಾ ಮುಂತಾದ ಸೌಲಭ್ಯನ್ನು ಗಣಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೂ ವಿಸ್ತರಿಸಿದ್ದರು. ಪೌರ ಕಾರ್ಮಿಕರಿಗೆ ಉಚಿತ ಸ್ವಾವಲಂಬನೆ ಮತ್ತು ಪುನಶ್ಚೇತನಕ್ಕಾಗಿ ವಿಶೇಷ ತರಬೇತಿಗಳನ್ನು ಆಯೋಜಿಸಿದರು. ಬಿಡುಗಡೆ ಹೊಂದಿರುವ ಬಂದಿಗಳು ಗೌರವಯುತವಾಗಿ ಜೀವನ ನಡೆಸಲಿ ಎಂಬ ಉದ್ದೇಶದಿಂದ ಮುಕ್ತ ಬಂಧಿಗಳ ಸಹಾಯ ಸಂಘವನ್ನು ಸ್ಥಾಪಿಸಿದರು.

ನಾಲ್ವಡಿಯರು 1939 ಫ್ರೆ. 5 ರಂದು ಜೋಗ್ ಜಲಪಾತದ ಬಳಿ ಶರಾವತಿ ನದಿಯಿಂದ ವಿದ್ಯುತ್ ಉತ್ಪಾದನೆಗಾಗಿ ಶಿಲಾವಿನ್ಯಾಸ ಮಾಡಿದರು ಅದು ಜಯಚಾಮರಾಜ ಒಡೆಯರ ಕಾಲದಲ್ಲಿ ಪೂರ್ಣಗೊಂಡಿತ್ತು. ಈ ಜಲವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಜಯಚಾಮರಾಜ ಒಡೆಯರು ಹೆಸರು ಇಡಬೇಕಾಗಿತ್ತು. ಆದರೆ ಕೆಲವೇ ದಿನಗಳ ಮುನ್ನ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹಂತಕರ ಗುಂಡಿಗೆ ಬಲಿಯಾಗಿದ್ದರು ಆದರೆ ಗಾಂಧೀಜಿಯವರಲ್ಲಿ ಅಪಾರ ಅಭಿಮಾನವಿದ್ದ ಜಯಚಾಮರಾಜ ಒಡೆಯರು ಈ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ತಮ್ಮ ಹೆಸರು ಬೇಡ ಗಾಂಧೀಜಿಯವರ ಹೆಸರು ಇಡಲಿ ಎಂದು ಹೇಳಿ ಮಹಾತ್ಮ ಗಾಂಧೀ ಜಲವಿದ್ಯುತ್ ಉತ್ಪಾದನಾ ಕೇಂದ್ರ ಎಂದು ನಾಮಕರಣ ಮಾಡಿದರು ಇದು ಅವರ ಸಜ್ಜನಿಕೆಗೆ ಹೃದಯ ವೈಶಾಲ್ಯತೆಗೆ ಸಾಕ್ಷಿಯಾಗಿದೆ. 1948 ಫ್ರೆ 21 ರಂದು ನಾಡಿನ ಹಿತಕ್ಕಾಗಿ ಶರಾವತಿಯಿಂದ ವಿದ್ಯುತ್ ಹರಿಯಿತು. ಅದೇ ದಿನ ನಾಲ್ವಡಿಯವರ ಆಶಯದಂತೆ ಜಯಚಾಮರಾಜ ಒಡೆಯರು ಆಂತಕ ನಿವಾರಣೆ ಸಂತೋಷ ಪ್ರದಾಯಸೊಡಸಹತೆ ಶಕ್ತಿ ದೇವತೆ ದ್ವಿಮುಖ ಚಾಮುಂಡೇಶ್ವರಿ ಮೂರ್ತಿಯ ಪ್ರತಿಷ್ಠಾಪನೆಯನ್ನು ನೆರವೇರಿಸಿದರು. ಈ ಮೂರ್ತಿಯು ಏಕ ಶಿಲೆಯಿಂದ ಕೆತ್ತಲ್ಪಟ್ಟ ಅವಳಿ ವಿಗ್ರಹವಾಗಿದೆ. ಅಂದರೆ ವಿಗ್ರಹದ ಹಿಂಭಾಗ ಮತ್ತು ಮುಂಭಾಗ ಒಂದೇ ರೀತಿ ಇದೆ. ಇಂತಹ ದ್ವಿಮುಖ ಸೊಡಸಹತೆ ಶಕ್ತಿ ದೇವತೆಯ ಪ್ರತಿಷ್ಠೆ ಭಾರತದಲ್ಲಿ ಇನ್ನೂ ಎಲ್ಲಾ ಇಲ್ಲ ಎಂಬುದು ಇದರ ವೈಶಿಷ್ಟ್ಯ ಜಯಚಾಮರಾಜರು ತಮ್ಮ ಆಡಳಿತಾವಧಿಯಲ್ಲಿ ಹಲವಾರು ಜಲಶಾಯಗಳನ್ನು ಕೆರೆಕೆಟ್ಟಗಳನ್ನು ಕಾಲುವೆ ಸೇತುವೆಗಳನ್ನು ನಿರ್ಮಿಸಿದರು.

ನಾಲ್ವಡಿಯವರ ಕಾಲದಲ್ಲಿ ಪ್ರಾರಂಭವಾಗಿದ್ದ ಅಂಜಾನಪುರ ಜಲಶಾಯ ಭೀಮನ ಹಳ್ಳಿ ಜಲಾಶಯ ಗೋಪಾಲಪುರ ಜಲಶಾಯ ಇವುಗಳ ವಿಸ್ತರಣ ಕಾರ್ಯಕ್ಕೆ ಆಧ್ಯತೆ ನೀಡಲಾಯಿತು. ಲಕ್ಕವಳ್ಳಿ ಬಳಿ ಭದ್ರ ಜಲಾಶಯ, ಹೆಗ್ಗಡದೇವನ ಕೋಟೆಯ ಬಳಿ ನುಗು ಜಲಾಶಯ, ಪೇಟೆ ಬಳಿ ಭೈರ ಮಂಗಲ ಜಲಾಶಯ, ಮಾರ್ಕೋನಹಳ್ಳಿ ಜಲಾಶಯ, ನೆಲ್ಲಿಗೇರೆ ಜಲಾಶಯ, ಚನ್ನಪಟ್ಟಣ್ಣ ಕನ್ನ ಮಂಗಲ ಬಳಿ ಕಣ್ವ ಜಲಾಶಯ, ನಿರ್ಮಾಣ ಕಾರ್ಯ ಹೊಸದಾಗಿ ಪ್ರಾರಂಭವಾದವು 1948ರಲ್ಲಿ ಹಿರೇಭಾಸ್ಕರ್ ಅಣೆಕಟ್ಟು ಮತ್ತು ಕಾರ್ಗಲ್ ಅಣೆಕಟ್ಟುಗಳು ಪೂರ್ಣಗೊಂಡವು ಕುಣಿಗಲ್ ತಾಲ್ಲೂಕು ಹೊನ್ನಮಾಚನಹಳ್ಳಿ ಕೆರೆ ಚೌರಿಂಗ್ ಪೇಟೆಯ ಬಳಿ ಮಾರ್ಕಂಡಯ್ಯ ಕೆರೆ ಚಳ್ಳಕೆರೆ ಬಳಿ ಪರಸುರಾಮಪುರ ಕೆರೆ ನಿರ್ಮಾಣ ಪ್ರಾರಂಭವಾದವು.

ಶಿಂಸಾ ಎಡದಂಡೆ ಕಾಲುವೆ ಮಂದಗೆರೆ ಎಡದಂತೆ ಕಾಲುವೆ ಸೂಳೆಕೆರೆ ಜಲಾಶಯ ಹಾಗೂ ಇದರ ದಕ್ಷಿಣ ಮತ್ತು ಉತ್ತರ ದಂಡೆ ಕಾಲುವೆಗಳು ಕೊಪ್ಪಬಳಿ ಒಂದು ಜಲಾಶಯ ಮತ್ತು ಅದರ ಕಾಲುವೆಗಳು ಚಿತ್ರದುರ್ಗಜಿಲ್ಲೆ ಹಲ್ಲಪುರ ಬಳಿ ಅಲ್ಲಾಪುರ ಸೇತುವೆ ಕಾರ್ಯ ಸಂಪೂರ್ಣ ಗೊಂಡವು ಭದ್ರ ಎಡದಂಡೆ ಕಾಲುವೆ ನಾರಾಯಣ ಪುರ ಬಳಿ ವೇಧವತಿ ನದಿಗೆ ಅಣೆಕಟ್ಟು ರಾಮದೇವರು ಅಣೆಕಟ್ಟು ಉತ್ತರ ಕಾಲುವೆ ಸಕ್ಕರೆ ಬೈಲೂರು ತುಂಗ ನದಿಗೆ ಅಣೆಕಟ್ಟು ಹಾಗೂ ತೀರ್ಥಹಳ್ಳಿಗೆ ಬಳಿ ತುಂಗ ನದಿಗೆ ಸೇತುವೆ ನಿರ್ಮಾಣ ಹೊಳೆನರಸೀಪುರದ ಹೇಮಾವತಿ ನದಿಗೆ ಸೇತುವೆ ನಿರ್ಮಿಸುವ ಕಾರ್ಯವನ್ನು ಹೊಸದಾಗಿ ಪ್ರಾರಂಭಿಸಿದರು. ಮೈಸೂರು ನಗರ ಪೌರ ಸಭೆ ಮತ್ತು ನಗರಾಭಿವೃದ್ಧಿ ಸಭೆಗಳು ಪರಿಸ್ಕಾರಗೊಂಡವು ಮೈಸೂರಿನಲ್ಲಿ ರೈಲ್ವೆ ಇಲಾಖೆಯ ಕೇಂದ್ರ ಕಛೇರಿ ಹೊಸ ಕೇಂದ್ರ ಅಂಚೆ ಕಛೇರಿ ಕೃಷ್ಣರಾಜೇಂದ್ರ ಆಸ್ಪತ್ರೆಯ ನರ್ಸ್‌ಗಳಿಗಾಗಿ ವಸತಿ ನಿಲಯಗಳನ್ನು ಸ್ಥಾಪನೆ ಮಾಡಿದರು.

ಮೈಸೂರು ದೇವರಾಜ ಮಾರುಕಟ್ಟೆಯ ಪಶ್ಚಿಮ ಭಾಗದಲ್ಲಿ ಹೆಚ್ಚುವರಿ ಅಂಗಡಿ ಮಳಿಗೆಗಳು ನಿರ್ಮಾಗೊಂಡವು. ಮೈಸೂರಿನ ಪ್ರಮುಖ ವೃತ್ತದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಅಮೃತಶೀಲಾ ಪ್ರತಿಮೆ ಸ್ಥಾಪನೆಯೂ ಜಯಚಾಮರಾಜ ಒಡೆಯರಿಗೆ ಹಿರಿಯ ಬಗ್ಗೆ ಇದ್ದ ಗೌವಕ್ಕೆ ಸಾಕ್ಷಿಯಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರೊ. ಎಂ ಗೋಪಾಲಸ್ವಾಮಿ ರವರು ಮೈಸೂರಿನಲ್ಲಿ ಖಾಸಗಿಯಾಗಿ ಪ್ರಾರಂಭಿಸಿದ ಆಕಾಶವಾಣಿಯನ್ನು 1942 ಜನವರಿ1 ರಿಂದ ಮಹಾರಾಜರ ಸರ್ಕಾರವೇ ವಹಿಸಿಕೊಂಡದ್ದು ವಿಶೇಷ 1944 ರಲ್ಲಿ ಬೆಂಗಳೂರಿನಲ್ಲಿ ಹೊಸದಾಗಿ ಒಂದು ಕ್ಷಯದ ಆಸ್ಪತ್ರೆ 1943ರಲ್ಲಿ ಶ್ರೀ ಚಾಮರಾಜೇಂದ್ರ ಆರ್ಯವೇದ ಆಸ್ಪತ್ರೆ ಮತ್ತು ಶ್ರೀ ಚಾಮರಾಜೇಂದ್ರ ಆರ್ಕಿಪೇಷಿನಲ್ ಇನ್‌ಸ್ಟಿಟ್ಯೂಟ್‌ಗಳನ್ನ ಪ್ರಾರಂಭಿಸಿದರು.ಇಂಡಿಯನ್ ಟೇಲಿಫೋನ್ ಮತ್ತು HIL ಗಳ ಬೆಳವಣಿಗೆ ಆಧ್ಯತೆ ನೀಡಿದರು ಬೆಂಗಳೂರು ಚಿಕ್ಕ ಬಳ್ಳಾಪುರ ರೈಲ್ವೆವಾರ್ಗವನ್ನು ಖಾಸಗಿ ಕಂಪನಿಯಿಂದ ಸರ್ಕಾರಕ್ಕೆ ಖರೀದಿಸಲಾಯಿತು ಅಲ್ಲದೆ ಇವರು ಒಳ್ಳೆಯ ಕುದುರೆ ಸವಾರರು ಟೆನಿಸ್ ಮತ್ತು ರ್ಯಾಕೆಟ್ಸ್ ಆಟವಾಡುವುದರಲ್ಲಿ ನಿಪುಣರು ನುರಿತ ಶಿಕಾರಿಯಾಗಿದ್ದರು. ಓದಿನಂತೆ ಸಂಗೀತದಲ್ಲೂ ಇವರಿಗೆ ಅಮಿತ ಆಸಕ್ತಿ, ಪಿಯಾನೋ ಬಾರಿಸುವುದರಲ್ಲಿ ಒಳ್ಳೆಯ ಪರಿಣಿತಿ ಪಡೆದಿದ್ದರು ಪಾಶ್ಚಾತ್ಯ ಸಂಗೀತದಲ್ಲಿ ಇವರಿಗೆ ವಿಶೇಷ ಆಸಕ್ತಿ ಇತ್ತು. ಅದನ್ನು ಕುರಿತಂತೆ ಭಾರತದಲ್ಲೇ ಅತಿ ದೊಡ್ಡ ದೆನಿಸುವ ಗ್ರಂಥಭಂಡಾರವನ್ನುವರು ತಮ್ಮ ಆರಮನೆಯಲ್ಲಿ ಕೂಡಿಸಿದರು. ವಿಶ್ವದ ಹೆಸರಾಂತ ಸಗೀತಗಾರರೊಂದಿಗೆ ಇವರಿಗೆ ಸಂಪರ್ಕವಿತ್ತು, ಖ್ಯಾತ ಆಪೆರಗಳ ಕತೃವಾದ ಜರ್ಮನಿಯ ರಿಚರ್ಡ್‌ವ್ಯಾಗ್ನರ್ (1813–1883) ಪ್ರಸಿದ್ದ ಜರ್ಮನ್ ಸಂಗೀತಗಾರ ಲಡ್ವಿಗ್ ಫಾನ್ ಚೀತೋವನ್(1770–1827) ಬಾತ್ ಮನೆತನದ ಸಂಗೀತ ವಿದ್ವಾಂಸರು ಮುಂತಾದವರು ಇವರ ಮೆಚ್ಚಿನ ಸಂಗೀತಗಾರರಾಗಿದ್ದರು.

ಭಾತೀಯ ಸಂಸ್ಕೃತಿ ಮತ್ತು ತತ್ವಶಾಸ್ತದ ಅನಧಿಕೃತ ರಾಯಭಾರಿಯಾಗಿ ಇವರು ಅನೇಕ ಸಲ ದೇಶ ವಿದೇಶಗಳ ಪ್ರವಾಸ ಕೈಗೊಂಡಿದ್ದರು. ಆಗ ಇವರು ಅಲ್ಲಲ್ಲಿ ಮಾಡಿದ ಭಾಷಣಗಳು ವಿಚಾರ ಪರಿಪ್ಲುತವಾಗಿವೆ.

ಇವರು ಲಲಿತಕಲೆಗಳಿಗೆ ನೀಡಿದ ಪ್ರೋತ್ಸಾಹ ಸ್ಮರಣೀಯ ಜಯಚಾಮರಾಜ ಗ್ರಂಥಮಾಲಾ ಎಂಬ ಯೋಜನೆ ರೂಪುಗೊಂಡಿತು. ಈ ಯೋಜನೆಯ ಅಂಗವಾಗಿ ವೇದಶಾಸ್ತ್ರ ಪುರಾಣ ಮುಂತಾದ ಉದ್ದಂಥಗಳು ಪ್ರಸಿದ್ದ ಪಂಡಿತರಿಂದ ಕನ್ನಡಕ್ಕೆ ಅನುವಾದಗೊಂಡು ಪ್ರಕಟವಾದವು[5] ಮಹಾ ಮೇಧಾವಿಗಳೂ ಕವಿಗಳೂ ಸಂಗೀತ ಪ್ರಿಯರೂ ಆಗಿದದ್ರು ಅವರ ಅನೇಕ ಕೀರ್ತನೆಗಳು ಇಂದಿಗೂ ಜನಪ್ರಿಯವಾಗಿವೆ.[6] ಇವರು ಮೈಸೂರಿನ ಒಡೆಯರು ವಂಶದ ಕೊನೆಯ ಅರಸರು ಸ್ವಾತಂತ್ರ್ಯ ನಂತರ ಭಾರತ ಒಕ್ಕೂಟದಲ್ಲಿ ತಮ್ಮ ಸಂಸ್ಥಾನದಲ್ಲಿ ಹಲವು ವರ್ಷಗಳ ಕಾಲ ರಾಜ ಪ್ರಮುಖರಾಗಿಯೂ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದರು.

ಅಲ್ಲದೇ ಶ್ರೀ. ಕೆ ಗುರುದತ್ತ್ ಅವರು ಲೇಖನ ಒಂದರಲ್ಲಿ ಬರೆದಿರುವಂತೆ ಭಾರತೀಯ ದರ್ಶನಶಾಸ್ತ್ರದಲ್ಲಿ ಪರಿಪೂರ್ಣ ವಿದ್ವಾಂಸರಲ್ಲಿ ಒಬ್ಬರಾಗಿದದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ ಅವರು ಸ್ವತಃ ಹಲವು ದಾರ್ಶನಿಕ ಗ್ರಂಥಗಳನ್ನು ರಚಿಸಿದಲ್ಲದೇ ಸಂಸ್ಕೃತ ಮತ್ತು ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚಿಸಿ ವಾಗ್ಗೇಯಕಾರರ ಶ್ರೇಣಿಗೆ ಸೇರಿದರು. ಅಮೇರಿಕಾ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸ ಮಾಡಿ ವಿದ್ವತ್‌ಪೂರ್ಣ ಉಪನ್ಯಾಸಗಳನ್ನಿತ್ತರು ಅವರು ರಾಜರಾಗಿದ್ದಾಗ ಋಗ್ವೇದವನ್ನು ಪುರಾಣಗಳನ್ನು ಯೋಗವಾಸಿಷ್ಠ ಮತ್ತು ತತ್ವಶಾಸ್ತ್ರ ಗ್ರೆಂಥಗಳನ್ನು ಕನ್ನಡಕ್ಕೆ ತರ್ಜುಮಾಡಿಸಿ ಪ್ರಕಟಿಸಿದರು. ದತ್ತಾತ್ರೇಯ ಗೀತೆ ಮತ್ತು ಭಾರತೀಯ ಸಂಸ್ಕೃತಿ ಧರ್ಮ ಮತ್ತು ಮಾನವ ಮುಂತಾದ ಗ್ರಂಥಗಳು ಜಯಚಾಮರಾಜ ಒಡೆಯರ ಮಹತ್ವದ ಕೃತಿಗಳಾಗಿವೆ.[7]

ಅಲ್ಲದೇ ಮೈಸೂರು ನಗರದಲ್ಲಿರುವ ಶ್ರೀ ಜಯಚಾಮರಾಜೇಂದ್ರ ಚಿತ್ರ ಶಾಲೆಗಾಗಿ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಿಕೊಟ್ಟರು. ಕೇಂದ್ರೀಯ ಆಹಾರ ಸಂಶೋಧನಾಲಯ ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ ಮುಂತಾದವುಗಳಿಗಾಗಿ ನಿವೇಶನ ಮತ್ತು ಕಟ್ಟಡಗಳನ್ನು ಉದಾರವಾಗಿ ದಾನ ನೀಡಿದರು ಇದಲ್ಲದೆ ತಮ್ಮ ಇನ್ನಿತರ ಕಟ್ಟಡ ನಿವೇಶಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ದಾನ ಮಾಡಿರುವುದು ಉಂಟು.[8]

ಇವರು 1974ರ ಸೆಪ್ಟಂಬರ್ 25 ದಿನ ಇಡೀ ಭೂಮಂಡಲಕ್ಕೆ ಒಂದು ಕಾರಳದಿನವಾಗಿತ್ತು ಮಾನವನೊಡನೆ ಅಣುರೇಣುತೃಣಕಾಷ್ಠಗಳು ಸಹ ರೋಧಿಸಿದ್ದ ಈ ದಿನ ಪ್ರಳಯ ಪರಿಣಾಮವಾಗಿತ್ತು. ಕರುನಾಡಿನಲ್ಲಿ ಜನಿಸಿ ಕನ್ನಡಿಗರ ಒಡೆಯರಾಗಿ ಭಾರತಾಂಬೆಯ ಮುಕುಟಮನಿಯಾಗಿ ವಿಶ್ವದ ವಿಭೂತಿಪುರಷರಾಗಿ ಮರೆದ ಶ್ರೀಮಾನ್.ಜಯಚಾಮರಾಜ ಒಡೆಯರು ಹಠಾತನೆ ಈ ಇಳೆಯನ್ನು ಅಗಲಿ ನಮ್ಮಿಂದ ದೂರವಾದುದ್ದು ಪ್ರಜಾಕೋಟಿಗಳ ಚಿತ್ತಕ್ಕೆ ಸಿಡಿಲೇರಗಿದಂತಾಗಿ ದುಖಃ ಸಾಗರದಲ್ಲಿ ಮುಳುಗಿದ ಜನಕ್ಕೆ ಇಂತಹ ಪ್ರಭುಗಳು ಮತ್ತೆ ಈ ನೆಲದಲ್ಲಿ ಇನ್ನೂ ದೊರೆಯುವರೆ ಎಂದೆನಿಸಿತು,

ಹೀಗೆ ಜಯಚಾಮರಾಜ ಒಡೆಯರು ತಮಮ್ ಅಧಿಕಾರದ ಏಳು ವರ್ಷಗಳ ಅಲ್ಪ ಅವಧಿಯಲ್ಲಿ ಸಾಧಿಸಿದುದು ಅಪಾರ ಅದು ರಾಜಕೀಯ. ತುಗುಳದ ನಡುವೆ ಎಂಬುದು ವಿಶೇಷ ಗಮನಾರ್ಹ

1. ಕನ್ನಡ ವಿಶ್ವಕೋಶ ಸಂಪುಟ–7 ಪು ಸಂ 832
2. ರಾಜಋಷಿ ಜಯಚಾಮರಾಜೇಂದ್ರ ಒಡೆಯರ್ ನ.ನಾಗಲಿಂಗಸ್ವಾಮಿ ಪುಟ ಸಂ 13
3. ಕನ್ನಡ ವಿಶ್ವಕೋಶ ಸಂಪುಟ –7 ಪು . ಸಂ 832
4. ಕನ್ನಡ ವಿಶ್ವಕೋಶ ಸಂಪುಟ–7 ಪು ಸಂ 833
5. ಕನ್ನಡ ವಿಶ್ವಕೋಶ ಸಂಪುಟ–13 ಪು ಸಂ 490
6. ಕನ್ನಡ ವಿಶ್ವಕೋಶ ಸಂಪುಟ– 7 ಪು ಸಂ 833
7. ಪಾಳೆಗಾರರು ಮತ್ತು ಒಡೆಯರ ಇತಿಹಾಸ – ಎ.ಎಸ್ ನಂಜುಂಡಸ್ವಾಮಿ ಪ್ರಕಾಶಕರು ಸಮಾಜ ಪುಸ್ತಕಾಲಯ ಧಾರವಾಡ. ಪು ಸಂ 236

ದೋಅಬ್ ಪ್ರದೇಶದ ಕೃಷಿ ಉತ್ಪನ್ನಗಳು

ಹೆಚ್. ಮಹದೇವಸ್ವಾಮಿ

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,

ಮೈಸೂರು ೫೭೦ ೦೦೬. ಇ ಮೇಲ್:mahadevaswamykanda@gmail.com

ಇತಿಹಾಸದ ವಸ್ತು ವಿಷಯಗಳು ಕಾಲ ಕಾಲಕ್ಕೆ ಬದಲಾವಣೆ ಹೊಂದಿದಂತೆಅದರ ದೃಷ್ಟಿಕೋನಗಳು ವಿಭಿನ್ನ ನೆಲೆಗಟ್ಟಿನಆಲೋಚನೆಯಲ್ಲಿ ಹೊಸ ಹೊಸ ಚಿಂತನೆಗಳು ಮೂಡಿ ಬರುತ್ತಿರುವುದು ಒಂದು ಸೋಜಿಗದ ಸಂಗತಿ. ಪ್ರಾರಂಭದಲ್ಲಿಇತಿಹಾಸವೆಂಬುದುರಾಜ ಮಹಾರಾಜರಕಥೆಯಾಗಿದೆಎಂದೇ ತಿಳಿದಿದ್ದರು. ಆದರೆ ಸಂಶೋಧನೆಗಳ ಬೆಳಕಿನ ಅಡಿಯಲ್ಲಿಅಸತ್ಯ ವಿಚಾರಗಳು ಮಾಯವಾಗಿ ಸರ್ವಕಾಲಿಕ ವಸ್ತುನಿಷ್ಟ ಅಂಶಗಳು ಇತಿಹಾಸದ ಪುಟದಲ್ಲಿಕಂಡು ಬರುತ್ತಿವೆ. ಈ ಹಿನ್ನಲೆಯಲ್ಲಿ ಹಿಂದಿನ ರಾಜ ಮಹಾರಾಜರುಗಳು ಸಾಮ್ರಾಜ್ಯಕ್ಕಾಗಿ ಹೋರಾಟ ಮಾಡಿರುವುದುಚರಿತ್ರೆಯಲಿ "ಹೆಣ್ಣು, ಹೊನ್ನು, ಮಣ್ಣು" ಈ ಮೂರು ಅಂಶಗಳ ಮೇಲೆ ನಮ್ಮಇತಿಹಾಸ ನಿಂತಿರುವುದು ವಾಸ್ತವ ಅಂಶ. ಹೆಣ್ಣಿನರಾಮಾಯಣ ಮತ್ತು ಮಹಾಭಾರತ ಕಥೆಗಳು ಸೃಷ್ಟಿಯಾಗಿವೆ. ಹಾಗೆಯೇರಾಜರಇತಿಹಾಸವನ್ನು ಗಮನಿಸಿದಾಗ ಭೂಮಿಯನ್ನು ಪಡೆಯುವುದಾಗಿ ಅನೇಕ ಯುದ್ಧಗಳು ಸಂಭವಿಸಿರುವುದು ಸತ್ಯ. ಭೂಮಿಯಲ್ಲಿ ಬೆಳೆಯುವ ಉತ್ಪನ್ನಗಳೇ ಇದಕ್ಕೆಕಾರಣವಾಗಿದೆ.ಒಂದು ಸಾಮ್ರಾಜ್ಯ ಶಾಂತಿಯುತವಾಗಿ ನಿರ್ಮಾಣವಾಗಲು ಕೃಷಿ ಉತ್ಪನ್ನಗಳೇ ಪ್ರಧಾನ ಪಾತ್ರವನ್ನು ವಹಿಸುತ್ತದೆ.ಎಲ್ಲಾಜನರ ಒಳಿತು ಈ ಉತ್ಪನ್ನಗಳ ಮೇಲೆ ನಿಂತಿದೆ.ಈ ದೃಷ್ಟಿಕೋನದ ಹಿನ್ನಲೆಯಲ್ಲಿದೋಅಬ್ ಪ್ರದೇಶದ ಕೃಷಿ ಉತ್ಪನ್ನಗಳು ಎಂಬ ವಿಷಯದ ಮೇಲೆ ಲೇಖನವನ್ನು ಬರೆಯಲು ಒಂದು ಕಿರುಪ್ರಯತ್ನಹಾಗೆಯೇ ನವೀನ ವಿಚಾರದೆಡೆಗೆತೆಗೆದುಕೊಂಡು ಹೋಗುವ ಪ್ರಯತ್ನವನ್ನು ಮಾಡಿರುತ್ತೇನೆ.

ಒಂದು ದೇಶದ ಆರ್ಥಿಕ ಸ್ಥಿತಿಯು ಅದು ಹೊಂದಿರುವ ಪ್ರಾಕೃತಿಕ ಸಂಪತ್ತುಗಳಾದ ನೀರು, ಮಣ್ಣು, ಕಲ್ಲು, ಅರಣ್ಯ, ಖನಿಜ, ಹವಾಗುಣ ಮತ್ತು ಜನಸಂಪತ್ತು ಜಾನುವಾರು ಮುಂತಾದವುಗಳ ಸದ್ಬಳಕೆ ಹಾಗೂ ನಿರ್ವಹಿಸುವ ವೃತ್ತಿ ಮತ್ತು ಅವುಗಳಿಂದ ಬರುವ ಲಾಭ ನಷ್ಟಗಳ ಆಧಾರದ ಮೇಲೆ ಅವಲಂಬಿತವಾಗಿದೆ. ರಾಜ್ಯ ಮತ್ತು ಜಿಲ್ಲೆಯ ಆರ್ಥಿಕ ಪರಿಸ್ಥಿತಿಯು ಇವುಗಳಿಂದ ಹೊರತ್ತೇನು ಇಲ್ಲ. ಈ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯ ಆರ್ಥಿಕ ಹಿನ್ನೆಲೆಯಲ್ಲಿ ಅಲ್ಲಿನ ಕೃಷಿ ಉತ್ಪನ್ನಗಳು ಆ ಪ್ರದೇಶದ ಚರಿತ್ರೆ ನಿರ್ಮಾಣ ಮಾಡಲು ಏಕೇ ಸಹಾಯಕವಾಗಿದೆ ಎಂಬುದನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ರಾಯಚೂರು ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಉತ್ತಮವಾದ ಆರ್ಥಿಕ ಚಟುವಟಿಕೆಗಳಿಂದ ಕೂಡಿದೆ ಎಂಬುದಕ್ಕೆ ಈ ಪ್ರಾಂತ್ಯಗಳಲ್ಲಿ ಸಿಕ್ಕಿರುವ ಐತಿಹಾಸಿಕ ದಾಖಲೆಗಳು. ಶಾಸನಗಳು, ಪ್ರಮುಖ ಮನೆತನಗಳು ಕೃಷಿ ಉತ್ಪನ್ನಗಾಗಿ ಹೋರಾಟ ಮಾಡಿರುವ ಹೋರಾಟಗಳು ಉದಾಹರಣೆಗಳಾಗಿವೆ.

'ದೋ ಅಬ್' ಪ್ರದೇಶ ಎಂದು ಕರೆಯಲ್ಪಡುವ ರಾಯಚೂರು ಕೃಷ್ಣ–ತುಂಗಭದ್ರ ನದಿಗಳ ನಡುವಿನ ಕೆಂಪುಮಣ್ಣು, ಎರೆಮಣ್ಣು, ಎರೆಕೆಂಪು ಮಿಶ್ರಿತಮಣ್ಣು ಫಲವತ್ತಾದ ಪ್ರದೇಶವಾಗಿದೆ. ಇಲ್ಲಿ ಜೋಳ, ಭತ್ತ, ಗೋಧಿ, ಹತ್ತಿ, ಶೇಂಗಾ ಮುಂತಾದ ಆಹಾರ ಮತ್ತು ಎಣ್ಣೆ ಬೀಜಗಳ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಪ್ರಸ್ತುತ ಕರ್ನಾಟಕದ ರಾಜ್ಯ ಪ್ರಮುಖ ಮಾರುಕಟ್ಟೆಗಳಲ್ಲಿ ಹತ್ತಿ ಹಾಗೂ ಶೇಂಗಾ ಬೆಳೆಗಳಲ್ಲಿ ರಾಯಚೂರು ಜಿಲ್ಲೆಯು ಇಡೀ ಕರ್ನಾಟಕದಲ್ಲಿಯೇ ಮೊದಲನೇ ಸ್ಥಾನದಲ್ಲಿದೆ. ತೊಗರಿ ಬೇಳೆಯಲ್ಲಿ ಕೊನೆ ಸ್ಥಾನವನ್ನು ಪಡೆದಿದೆ.[1]

ಸಮಾಜದ ಎಲ್ಲಾ ವರ್ಗದವರು ಆರಂಭದಲ್ಲಿ ಭೂ ಒಡೆತನವನ್ನು ಪಡೆಯಲು ಹೆಚ್ಚಿನ ಮಹತ್ವವನ್ನು ಹೊಂದಿದ್ದರು. ಅಂದು ಪ್ರಧಾನವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಕೃಷಿಯು ಪ್ರಾಮುಖ್ಯ ಗಳಿಸಿದ್ದರಿಂದ ರಾಜನಿಂದ ಹಿಡಿದು ರೈತನವರೆಗೆ ಬಹುತೇಕರು ಒಂದಲ್ಲ ಒಂದು ರೀತಿಯಲ್ಲಿ ಭೂಮಿಯನ್ನು ಅವಲಂಬಿಸಿಕೊಂಡಿದ್ದರುವುದು ಚರಿತ್ರೆಯಲ್ಲಿ ಅಧ್ಯಯನ ಮಾಡಿದ್ದಾಗ ತಿಳಿದುಬಂದಿದೆ. ರಾಜ–ಮಹಾರಾಜರುಗಳು ಫಲವತ್ತಾದ ಭೂಮಿ ಮತ್ತು ನೀರಾವರಿ ಸೌಲಭ್ಯವುಳ್ಳ ಭೂಮಿಗಳನ್ನು ಪಡೆಯಲು ಹೆಚ್ಚಿನ ಆದ್ಯತೆಯನ್ನು ನೀಡಿರುವುದು ಸೌಜನ್ಯದ ಸಂಗತಿ.[2]

ಕೃಷಿ ಭೂಮಿಗಾಗಿ ರಾಜರುಗಳು ಇನ್ನೊಬ್ಬನ ರಾಜನ ಜೊತೆ ಹೋರಾಟ ಮಾಡಿ ಅವುಗಳನ್ನು ವಶಪಡಿಸಿಕೊಂಡು, ತಮ್ಮ ರಾಜ್ಯಗಳ ಗಡಿಯನ್ನು ನಿರ್ಮಾಣ ಹಾಕಿಕೊಂಡು ಕೃಷಿ ಚಟುವಟಿಕೆಗಳಿಗೆ ಒಳಪಡಿಸಿರುವುದು, ಶಾತವಾಹನ ಕಾಲದಿಂದ ಹಿಡಿದು ವಿಜಯನಗರ ಸಾಮ್ರಾಜ್ಯದವರೆಗೆ ನೋಡಬಹುದು. ಒಂದು ಸಾಮ್ರಾಜ್ಯ ಉತ್ತಮ ರೀತಿಯಲ್ಲಿ ಆಡಳಿತ ನಡೆಸಬೇಕಾದರೆ ಕೃಷಿಯ ಮೇಲೆ ಅವಲಂಬಿಸಿತ್ತು. ಕಾರಣ ಕೃಷಿಯು ಎಲ್ಲಾ ಕ್ಷೇತ್ರಗಳ ತಂದೆ. ಅದು ಜನರಿಗೆ ಆದಾಯ, ಆಹಾರ, ಕೈಗಾರಿಕೆ, ವ್ಯಾಪಾರ ಚಟುವಟಿಕೆ, ಹೊರದೇಶಗಳ ಜೊತೆ ವಿದೇಶಿ ವ್ಯಾಪಾರ, ಹೈನುಗಾರಿಕೆ ಮೊದಲಾದ ಕ್ಷೇತ್ರಗಳಿಗೆ ಕೃಷಿ ಆಧಾರಸ್ತಂಭವಾಗಿ ನಿಂತಿದೆ.[3] ಈ ಮಹತ್ವದಿಂದ ಕೃಷಿಯ ಅಧ್ಯಯನಗಳು ಇತ್ತೀಚಿನ ದಿನಗಳಲ್ಲಿ ಬರುವುದು ಉತ್ತಮ ಬೆಳವಣಿಗೆ. ಈ ಎಲ್ಲಾ ದೃಷ್ಟಿಕೋನದಿಂದ ನೋಡುವುದಾದರೆ ರಾಯಚೂರಿನ ಇತಿಹಾಸದಲ್ಲಿ ಕಂಡುಬಂದಿದೆ. 'ದೋ–ಅಬ್'– ಎಂದರೆ ಫಲವತ್ತಾದ ಭೂಮಿ ಎಂಬ ಅರ್ಥಹೊಂದಿದೆ.

ಉದ್ದೇಶಗಳು

1. ಭೌಗೋಳಿಕ ಪ್ರದೇಶದ ಮಹತ್ವವನ್ನು ತಿಳಿಯುವುದು.
2. ರಾಯಚೂರು ಪ್ರದೇಶವನ್ನು 'ದೊ–ಅಬ್' ಎಂದು ಕರೆಯಲು ಕಾರಣವನ್ನು ಚರ್ಚಿಸುವುದು /ವಿವರಿಸುವುದು.
3. ರಾಯಚೂರು ಪ್ರದೇಶದ ಕೃಷಿ ಬೆಳೆಗಳ ಪರಿಚಯವನ್ನು ಮಾಡಿಕೊಡುವುದು.
4. ಆರ್ಥಿಕ ಚರಿತ್ರೆಯನ್ನು ಅಭ್ಯಾಸ ಮಾಡುವುದು.
5. ಕೃಷಿಯ ಮೇಲಿನ ತೆರಿಗೆಯನ್ನು ತಿಳಿಸುವುದು.
6. ಮಹಾರಾಜರು ಭೂಮಿಯನ್ನು ಸಂಪತ್ತು ಎಂದು ತಿಳಿದುಕೊಂಡಿದ್ದರು ಎಂಬುದನ್ನು ಅರ್ಥೈಸುವುದು.
7. ರಾಯಚೂರನ್ನು ಆಳ್ವಿಕೆ ಮಾಡಿದ ರಾಜಮನೆತನಗಳನ್ನು ವಿವರಿಸುವುದು.
8. ಭೂಮಿಗಾಗಿ ಯಾಕೆ ಯುದ್ಧ ಮಾಡುತ್ತಿದ್ದರು ಎಂಬ ಅಂಶವು ವಿವರಿಸುವುದು.
9. ಕೃಷಿ ಉತ್ಪನ್ನಗಾಗಿ ರಾಜ ಮಹಾರಾಜರು ಹೋರಾಟ ಮಾಡುತ್ತಿದ್ದರು ಎಂಬುವುದು ವಿಶ್ಲೇಷಣೆ ಮಾಡುವುದು.

ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ : ಇತ್ತೀಚಿನ ದಿನಗಳಲ್ಲಿ ಒಂದು ವಿಷಯವನ್ನು ನಾನಾ ರೀತಿಯಲ್ಲಿ ಆಲೋಚನೆ ಮಾಡುವ ಕ್ರಮವನ್ನು ಗಮನಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಈ ಲೇಖನವನ್ನು ನಾನು ಆರ್ಥಿಕ ದೃಷ್ಟಿಕೋನದಿಂದ ವಿಶ್ಲೇಷಣೆ ಮಾಡುತ್ತಾ ಅದರ ಮಹತ್ವವನ್ನು ತಿಳಿಸುತ್ತೇನೆ. ಜೊತೆಗೆ ಈ ಲೇಖನದ ವ್ಯಾಪ್ತಿಯನ್ನು ನೋಡುವುದಾದರೆ ಕರ್ನಾಟಕದ ಇತಿಹಾಸದಲ್ಲಿ ರಾಯಚೂರು ಪ್ರಾಂತ್ಯವನ್ನು ಆಳ್ವಿಕೆ ಮಾಡಿದ ರಾಜಮನೆತನಗಳು ಹಾಗೂ ಈ ಪ್ರದೇಶದ ಉತ್ಪನ್ನಗಳು ಕೇಂದ್ರವಾಗಿಟ್ಟು ಅದರ ವ್ಯಾಪ್ತಿಗೆ ಚೌಕಟ್ಟು ಮಾಡಿಕೊಂಡಿರುತ್ತೇನೆ.

ಮಾಹಿತಿ ಸಂಗ್ರಹಣೆ: ಈ ಲೇಖನವನ್ನು ಬರೆಯಲು ನಾನು ಮಾರ್ಗದರ್ಶಕರೊಡನೆ ಚರ್ಚಿಸಿ ನಂತರ ಅನುಮತಿಯನ್ನು ಪಡೆದು, ಕೆಲವು ಪುಸ್ತಕಗಳನ್ನು ಸಮೀಕ್ಷೆ ಮಾಡಿ, ದಿನಪತ್ರಿಕೆಗಳನ್ನು ಓದಿಕೊಂಡು ಹಾಗೂ ಸ್ನೇಹಿತರ ಜೊತೆಗೆ ಮುಕ್ತವಾಗಿ ಚರ್ಚಿಸಿ ನಂತರ ಇದಕ್ಕೆ ಪೂರಕವಾದ ಮಾಹಿತಿಯನ್ನು ಕ್ರೂಢೀಕರಿಸಿ ಲೇಖನವನ್ನು ಬರೆದು ಒಂದು ಸಣ್ಣ ಪ್ರಯತ್ನವೆನಿಸುತ್ತದೆ.

ರಾಯಚೂರು ಜಿಲ್ಲೆ ಕೃಷಿ, ತುಂಗೆಯರ ಮಂಗಳ, ಅಂಗಳ ಎಡೆದೊರೆ ನಾಡು ಹಾಗೂ ದೋಅಬ್ ಎಂಬ ಪ್ರತೀತಿ ಪಡೆದ ಪ್ರದೇಶ. ದೋ–ಅಬ್ ಎಂದರೆ ಎರಡು ನದಿಗಳ ನಡುವಿನ ಪ್ರದೇಶ. ಈ ಜಿಲ್ಲೆಯು ಕರ್ನಾಟಕದ ಈಶಾನ್ಯ ಭಾಗದ ಉತ್ತರ ತಪ್ಪಲು ಪ್ರದೇಶದಲ್ಲಿ ನೆಲೆಸಿದೆ. ಒಣಹವೆ ಮತ್ತು ಕಪ್ಪುಮಣ್ಣಿನಿಂದ ಕೂಡಿದ ಪ್ರದೇಶವಾಗಿದೆ. ಸಮುದ್ರ ಪಾತಳಿಯಿಂದ ಇದರ ಸಾಮಾನ್ಯ ಎತ್ತರವು 1311 ಅಡಿ ಇದೆ. ಈ ಜಿಲ್ಲೆಯ ಉತ್ತರದಲ್ಲಿ ಕಲಬುರ್ಗಿ, ಪಶ್ಚಿಮದಲ್ಲಿ ವಿಜಾಪುರ ಹಾಗೂ ಧಾರವಾಡ, ಪೂರ್ವದಲ್ಲಿ ಆಂಧ್ರಪ್ರದೇಶ ಮಹಬೂಬನಗರ ಜಿಲ್ಲೆ, ದಕ್ಷಿಣದಲ್ಲಿ ಆಂಧ್ರದ ಕರ್ನೂಲ ಜಿಲ್ಲೆಯ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಆವೃತ್ತವಾಗಿದೆ. ಕೃಷ್ಣನದಿಯು ಈ ಜಿಲ್ಲೆಯ ಉತ್ತರ ಹಾಗೂ ತುಂಗಾಭದ್ರ ನದಿಯು ದಕ್ಷಿಣ ಮೇರೆಗಳಾಗಿವೆ.[4]

ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸುವಲ್ಲಿ ಕೃಷಿ ಮಹತ್ವದ ಪಾತ್ರವನ್ನು ವಹಿಸುತ್ತದೆ. 'ಕೋಟಿ ವಿದ್ಯಗಿಂತಲೂ ಮೇಟಿ

ವಿದ್ಯೆ ಮಿಗಿಲು' ಎಂದು ಸರ್ವಜ್ಞಕವಿಯು ಕೃಷಿಯ ಮಹತ್ವವನ್ನು ಬಹು ಹಿಂದೆಯೇ ಒತ್ತಿ ಹೇಳಿರುವನು. ಈ ಕೃಷಿಯು ಒಂದು ರಾಜ್ಯದ ಆಧಾರಸ್ತಂಭವಾಗಿತ್ತು. ಏಕೆಂದರೆ ಕೃಷಿಯನ್ನು ಎಲ್ಲಾ ಕ್ಷೇತ್ರಗಳ ತಂದೆ ಎಂದೆ ಹೇಳಬಹುದು. ಹಿಂದಿನ ರಾಜ ಮಹಾರಾಜರುಗಳು ಒಂದೇ ಪ್ರದೇಶ ಉತ್ತಮ ಫಲವತ್ತತೆಯಿಂದ ಕೂಡಿದೆ ಎಂದು ತಿಳಿದರೆ, ಆ ಪ್ರದೇಶಗಳಿಗಾಗಿ ಯುದ್ದಗಳು ಆಗಿರುವುದನ್ನು ಇತಿಹಾಸದ ಪುಟಗಳಲ್ಲಿ ಗಮನಿಸಬಹುದು. ಈ ಹಿನ್ನೆಲೆಯಲ್ಲಿ ನೋಡುವುದಾದರೆ ರಾಯಚೂರು ಪ್ರದೇಶವು ಫಲವತ್ತತೆಯಿಂದ ಕೂಡಿದ್ದು, ಈ ಪ್ರದೇಶವನ್ನು ಒಳಪಡಿಸಿಕೊಳ್ಳಲು ಅನೇಕ ರಾಜಮನೆತನಗಳು ಯುದ್ದದ ಮೂಲಕ ಹೋರಾಟ ಮಾಡಿರುವುದು ವಾಸ್ತವ ಸತ್ಯ. ಇದರ ಬಹುಮುಖ್ಯವಾದ ಕಾರಣವನ್ನು ಗಮನಿಸುವುದಾದರೆ ಆ ಪ್ರದೇಶದಲ್ಲಿ ಬೆಳೆಯುತ್ತಿದ್ದ ಕೃಷಿ ಉತ್ಪನ್ನಗಳೇ ಕಾರಣ ಎನ್ನಬಹುದು.

ರಾಯಚೂರು ಜಿಲ್ಲೆಯಲ್ಲಿ ಬತ್ತ, ಜೋಳ, ಸಜ್ಜೆ, ಮುಸುಕಿನ ಜೋಳ, ರಾಗಿ, ಗೋದಿ ಏಕದಳ ಧಾನ್ಯಗಳು, ತೃಣಧಾನ್ಯಗಳಾದ ನವಣೆ, ಸಾವೆ, ಹರಕ, ಬರಕ ಬೆಳೆಕಾಳುಗಳಾದ ತೊಗರಿ, ಉದ್ದು, ಹುರುಳಿ, ಹೆಸರು, ಕಡಲೆ ಆಹಾಧಾನ್ಯಗಳು ಶೇಂಗಾ, ಎಣ್ಣೆಕಾಳುಗಳು ಹರಳು, ಕುಸುಬೆ, ಲಿನ್‌ಸೀಡ್, ಸೂರ್ಯಕ್ರಾಂತಿ, ಕುಸುಬೆ, ಹುಚ್ಚೆಳ್ಳು ಮೊದಲಾದ ಕೃಷಿ ಉತ್ಪನ್ನಗಳನ್ನು ಪ್ರಾಚೀನ ಬಲದಿಂದ ಆಧುನಿಕ ಕಾಲದವರೆಗೂ ಈ ಫಲವತ್ತಾದ ಪ್ರದೇಶದಲ್ಲಿ ಉತ್ಪನ್ನ ಮಾಡಲಾಗುತ್ತಿದೆ. ಈ ಎಲ್ಲಾ ಉತ್ಪಾದನೆ ಆದಾಯವನ್ನು ಪಡೆಯುವ ಸಲುವಾಗಿ ಈ ಪ್ರದೇಶಕ್ಕಾಗಿ ಯುದ್ದಗಳು ಸಂಭವಿಸುತ್ತಿತ್ತು. ಈ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದಾಗ ಒಂದು ರಾಜ್ಯದ ಸಂಪತ್ತು ಆ ಪ್ರದೇಶದಲ್ಲಿ ಉತ್ಪನ್ನ ಮಾಡುವ ಕೃಷಿ ಉತ್ಪನ್ನಗಳ ಆಧಾರದ ಮೇಲೆ ನಿಂತಿರುವುದು ಕಂಡುಬಂದಿದೆ.

ರಾಯಚೂರು ಜಿಲ್ಲೆಯು ಭೌಗೋಳಿಕವಾಗಿ ಫಲವತ್ತಾದ ಭೂಮಿಯನ್ನು ಹೊಂದಿದೆ. ಇದಕ್ಕಾಗಿ ಅನೇಕ ರಾಜ--ಮನೆತನಗಳು ಹೋರಾಟ ಮಾಡಿರುವ ಘಟನೆಗಳು ಇತಿಹಾಸದಿಂದ ಪುಟಗಳಿಂದ ತಿಳಿಯ ಬಹುದು. ಈ ಘಟನೆಗಳಿಗೆ ಕಾರಣ ನೋಡುವುದಾದರೆ ಈ ಪ್ರದೇಶದಲ್ಲಿ ನಡೆಯುತ್ತಿದ್ದ ಕೃಷಿ ಚಟುವಟಿಕೆಗಳೇ ಮೂಲ ಆಧಾರ ಎಂದು ಕೆಲವು ಸಂಶೋಧನಾ ಗ್ರಂಥಗಳಿಂದ ತಿಳಿದು ಬಂದಿದೆ. ಈ ಕಾರಣಗಳಿಂದ ರಾಯಚೂರು ಪ್ರದೇಶವನ್ನು 'ದೋ ಅಬ್' ಪ್ರದೇಶ ಎಂದು ಕರೆಯಲಾಗಿದೆ.

ಕ್ರಿ.ಪೂ. 2000 ವರ್ಷಗಳಷ್ಟು ಪ್ರಾಚೀನ ಸಂಸ್ಕೃತಿಯನ್ನು ಹೊಂದಿರುವ ರಾಯಚೂರು ಜಿಲ್ಲೆಗೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವಿದೆ. ಅಧಿಕೃತವಾಗಿ ಕ್ರಿ.ಪೂ. 300 ರಿಂದ ವಿವಿಧ ಪ್ರಮುಖ ಮನೆತನಗಳ ಆಳ್ವಿಕೆಗೆ ಒಳಪಟ್ಟಿರುವ ರಾಯಚೂರು ಪ್ರದೇಶದ ಮಸ್ಕಿಯಲ್ಲಿ ಮತ್ತು ಕೊಪ್ಪಳದ ಗವಿಮಠ ಹಾಗೂ ಪಾಲ್ಕಿಗುಂಡಗಳಲ್ಲಿ ಅಶೋಕ ಶಾಸನಗಳು ಕಂಡುಬಂದಿದೆ. ಮೌರ್ಯರು, ಶಾತವಾಹನರು, ಕಾಕತೀಯರು, ಮಾನ್ಯಕೇಟದ ರಾಷ್ಟ್ರಕೂಟರು. ಕಲ್ಯಾಣದ ಚಾಲುಕ್ಯರು, ಕಲಾಚಾರಿಗಳು, ವಿಜಯನಗರದ ಅರಸರು, ಬಹುಮನಿ ಸುಲ್ತಾನರು, ದೇವಗಿರಿಯ ಸೇವುಣರು, ಬಿಜಾಪುರದ ಆದಿಲ್ ಶಾಹಿಗಳು ಮೊಗಲರು, ಮರಾಠರು, ಹೈದರಾಬಾದ್ ನಿಜಾಮರು ಹಾಗೂ ಬ್ರಿಟೀಷರು ಈ ಪ್ರದೇಶವನ್ನು ಆಳಿದ್ದಾರೆ.[5] ಇದಕ್ಕೆ ಮೂಲಕಾರಣ ಅಲ್ಲಿನ ಕೃಷಿ ಉತ್ಪನ್ನ ಎಂದೇ ಹೇಳಬಹುದು.

ಉಪಸಂಹಾರ: ಒಟ್ಟಾರೆ ರಾಯಚೂರು ಇತಿಹಾಸವನ್ನು ಗಮನಿಸಿದ್ದಾಗ ತಿಳಿದುಬಂದ ಪ್ರಾಮುಖ್ಯ ವಿಷಯವೆಂದರೆ ಕೃಷಿ ಉತ್ಪನ್ನಗಳೇ ಅಲ್ಲಿನ ಇತಿಹಾಸವನ್ನು ನಿರ್ಮಾಣ ಮಾಡಿತ್ತು. ಕೃಷಿ ಉತ್ಪನ್ನಗಳು ಅಭಿವೃದ್ಧೀಯಾಗಿದ್ದರೆ ಒಂದು ಸಾಮ್ರಾಜ್ಯವು ಶಾಂತಿಯುತವಾಗಿರುತ್ತದೆ. ಅಲ್ಲಿನ ಜನರು ನೆಮ್ಮದಿಯ ಜೀವನವನ್ನು ಮಾಡುತ್ತಾರೆ. ಕೃಷಿಯನ್ನು ಎಲ್ಲಾ ಕ್ಷೇತ್ರಗಳ ತಂದೆ ಎಂದರೆ ತಪ್ಪಾಗಲಾರದು. ಇಲ್ಲಿ ಆಳ್ವಿಕೆ ಮಾಡಿರುವ ರಾಜಮನೆತನಗಳ ಇತಿಹಾಸವನ್ನು ಪುನರು ಅವಲೋಕನ ಮಾಡಿದ್ದಾಗ ಅಲ್ಲಿನ ಕೃಷಿ ಉತ್ಪನ್ನಗಳೇ ಪ್ರಧಾನ ಪಾತ್ರವನ್ನು ವಹಿಸುತ್ತಿರುವುದು ಕಂಡುಬಂದಿದೆ. 'ದೋಅಬ್' ಪ್ರಾಂತ್ಯವಾದ ರಾಯಚೂರು ಪ್ರದೇಶವು ಕೃಷಿ ಆಧಾರಿತ ಚರಿತ್ರೆಯನ್ನು ಹೊಂದಿದೆ. ಸರಿಯಾದ ರೀತಿಯಲ್ಲಿ ಸಂಶೋಧನೆಗಳು ನಡೆದು ಬಂದ ಪಕ್ಷದಲ್ಲಿ ಉತ್ತಮವಾದ ಫಲಿತಗಳನ್ನು ಈ ಸಮಾಜಕ್ಕೆ ನೀಡಬಹುದು.

ಪರಾಮರ್ಶನ ಗ್ರಂಥಗಳು

1. ಡಾ.ಮೃತ್ಯುಂಜಯ ಹೂರಕೇರಿ
ಡಾ.ಬಸವಲಿಂಗ ಸೊಪ್ಪಿಮಠ : ರಾಯಚೂರು ಜಿಲ್ಲಾದರ್ಶನ ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ.

2. ಮಹಾಬಲೇಶ್ವರಪ್ಪ.ಬಿ.ಸಿ. : ಹೈದರಾಬಾದ್ ಕರ್ನಾಟಕ ಸ್ವಾತಂತ್ರ್ಯ ಚಳುವಳಿ ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾನಿಲಯ, ಗುಲ್ಬರ್ಗಾ, 1941.

3. ಅಮರೇಶ ನುಗುಡೋಣಿ : ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನಾ ಚಳುವಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2000.

4. ಅಮರೇಶ ನುಗುಡೋಣಿ : "ಹೈದರಾಬಾದ್ ಕರ್ನಾಟಕದ ಹಾಡುಪಾಡು" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

5. ಬಾಲಚಂದ್ರ ಜಯಶೆಟ್ಟಿ : ಹೈದರಾಬಾದ್ ಕರ್ನಾಟಕದ ವಿಮೋಚನಾ ಚಳುವಳಿ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು 2006.

6. ಡಾ.ಜೆ.ಬಾಲಕೃಷ್ಣ : ಕೃಷಿ ವಿಜ್ಞಾನ ಸಾಹಿತ್ಯ ನಡೆದು ಬಂದ ಹಾದಿ ಪ್ರಸಾರಾಂಗ, ಹಂಪಿ, 2010.

7. ಮಹಾಬಲೇಶ್ವರಪ್ಪ.ಬಿ.ಸಿ. : ಹೈದರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ ಪ್ರಸಾರಾಂಗ, ಗುಲ್ಬರ್ಗ

ವಿಶ್ವವಿದ್ಯಾನಿಲಯ, ಗುಲ್ಬರ್ಗ.
8. ಧ್ರುವನಾರಾಯಣ : ಸ್ವಾತಂತ್ರ್ಯಾಂದೋಲನದಲ್ಲಿ ರಾಯಚೂರು ಜಿಲ್ಲೆ ಕರ್ನಾಟಕ ಸಂಘ ರಾಯಚೂರು, 1973
9. ಗೋಪಾಲರಾವ್ ಹಜೀಬ್ : ಹೈದರಾಬಾದ್ ಮುಕ್ತಿ ಸಂಘರ್ಷ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 2001.
10. ಸುರೇಂದ್ರರಾವ್ : ಕರ್ನಾಟಕ ಚರಿತ್ರೆ : ಸಂಪುಟ2
11.ಬರ್ಟನ್‌ಸ್ಟೈನ್ : ಅಗ್ರೇರಿಯನ್ ಸ್ವಿಮ್ ಇನ್ ಸೌತ್ ಇಂಡಿಯಾ

[1] ಕರ್ನಾಟಕ ಸರ್ಕಾರ ಕೈಪಿಡಿ, 2011, ಕರ್ನಾಟಕ ಸರ್ಕಾರ.
[2] ಸುರೇಂದ್ರರಾವ್ : ಕರ್ನಾಟಕ ಚರಿತ್ರೆ : ಸಂ.2 : ಪು.153
[3] ಬರ್ಟನ್‌ಸ್ಟೈನ್ : ಅಗ್ರೇರಿಯನ್ ಸ್ವಿಮ್ ಇನ್ ಸೌತ್ ಇಂಡಿಯಾ
[4] ಪ್ರಧಾನ ಸಂಪಾದಕರು, ಪ್ರೊ.ಬಸವರಾಜ ಸಬರದ, ಡಾ.ಮೃತ್ಯುಂಜಯ ಹೊರಕೇರಿ, ಡಾ.ಬಸವಲಿಂಗ ಸೊಪ್ಪಿಮಠ ರಾಯಚೂರು ಜಿಲ್ಲಾ ದರ್ಶನ, ಪು.ಸಂ. 1
[5] ಶ್ರೀ.ಬಿ.ವಿ. ಶ್ರೀನಿವಾಸರಾವ್– ರಾಯಚೂರು ಇತಿಹಾಸ ಪು.ಸಂ. 17

ಜಾಗತೀಕರಣ, ಪ್ರಜಾಪ್ರಭುತ್ವ ಮತ್ತು ಅಂಗವಿಶ್ವಾಸಿಗರ ಮಾನವ ಹಕ್ಕುಗಳು

ಡಾ. ಕೃಷ್ಣ ಹೊಂಬಳ್ ಎಂ.ಎ,ಎಂ.ಫಿಲ್,ಪಿ.ಹೆಚ್‌ಡಿ
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ ಮೈಸೂರು–06

ಗಮನಿಸಿ : ಪ್ರಸ್ತುತ ಪ್ರಬಂಧದಲ್ಲಿ ಅಂಗವಿಕಲರು ಎಂಬ ಪದದ ಬದಲಾಗಿ 'ಅಂಗವಿಶ್ವಾಸಿಗರು' ಎಂಬ ಪದವನ್ನು ಬಳಕೆ ಮಾಡಲು ಸಲಹೆ ನೀಡಲಾಗಿದೆ. ಇದಕ್ಕೆ ಈ ಕೆಳಕಂಡ ನಿಖರ ಕಾರಣಗಳಿವೆ. ಅಂಗವಿಕಲ ವ್ಯಕ್ತಿಗಳ ಘನತೆ ಗೌರವಗಳು ಸಹ ಮೌಲ್ಯಯುತವಾಗಿವೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಗೂ ಮಾತೃ ಹೃದಯವಿದೆ. ಸಕಲಾಂಗ ವ್ಯಕ್ತಿಗಳಿಂದೊಡಗೂಡಿದ ರಾಜ್ಯ, ಸರ್ಕಾರ ಮತ್ತು ಸಮಾಜದಂತಹ ಸಂಸ್ಥೆಗಳಲ್ಲಿಯೂ ಸಾತ್ವಿಕ, ನಾಗರೀಕ ಮತ್ತು ಸಾಂಸ್ಕೃತಿಕ ಪ್ರಜ್ಞೆ ಜಾಗೃತಗೊಳ್ಳಬೇಕಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಸಕಲಾಂಗ ವ್ಯಕ್ತಿಗಳು ಮತ್ತು ವಿಕಲಾಂಗ ವ್ಯಕ್ತಿಗಳ ನಡುವಿನ ಪಾರಸ್ಪರಿಕ ಸಹಕಾರ ಒಲುಮೆ ವಿಶ್ವಾಸಗಳು ಅಂಗವಿಕಲರನ್ನು ಅಂಗವಿಶ್ವಾಸಿಗರನ್ನಾಗಿಸುತ್ತವೆ. ಎಂಬ ಸಾತ್ವಿಕ ಕನಸು ಕಾಲಕ್ರಮೇಣ ನನಸಾಗುತ್ತದೆ.

ಪ್ರಬಂಧದ ಸಾರ: ಸಮಕಾಲೀನ ರಾಜಕೀಯ ಸಂಕಥನಗಳಲ್ಲಿ ಜಾಗತೀಕರಣ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳು ಜ್ವಲಂತ ವಿವಾದಾಂಶಗಳಾಗಿವೆ. ವಸಾಹತೋತ್ತರ ಮತ್ತು ಆಧುನೀಕೋತ್ತರ ಕಾಲಘಟ್ಟಗಳಲ್ಲಿ ಸ್ಫೋಟಗೊಳ್ಳುತ್ತಿರುವ ಸಾಹಿತ್ಯದಲ್ಲಿ ಈ ಪ್ರಕ್ರಿಯಾತ್ಮಕ ವಿವಾದಾಂಶಗಳಿಗೆ ಪ್ರಾಮುಖ್ಯತೆ ನೀಡಿರುವುದು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹೆಚ್ಚು ಪ್ರಯೋಜನಕಾರಿಯು ಮತ್ತು ಪ್ರಸ್ತುತಾರ್ಹವು ಆಗಿದೆ. ಆದರೆ, ಜಾಗತೀಕರಣ ಮತ್ತು ಪ್ರಜಾಪ್ರಭುತ್ವದ ಮೂಲಭೂತ ರಾಜನೈತಿಕ ಚರ್ಚೆ ಮತ್ತು ಚಿಂತನೆಗಳಲ್ಲಿ ಸಕಲಾಂಗ ವ್ಯಕ್ತಿಗಳ ಮಾನವ ಹಕ್ಕುಗಳಿಗೆ ಅಧಿಕ ಪ್ರಾಧಾನ್ಯತೆ ನೀಡಲಾಗಿದೆ. ದುರ್ಬಲರಲ್ಲಿಯೇ ದುರ್ಬಲರೆಂದು ಪರಿಗಣಿಸಲ್ಪಟ್ಟ ಅಂಗವಿಕಲ ವ್ಯಕ್ತಿಗಳು ಅವರ ಜೀವನ, ಸಮಸ್ಯೆಗಳು ಮತ್ತು ಹಕ್ಕುಭಾದ್ಯತೆಗಳ ಕುರಿತಾದ ಅಧ್ಯಯನಗಳು ಪಾಶ್ಚಾತ್ಯ ರಾಷ್ಟ್ರಗಳಲ್ಲಾದಂತೆ ಪೌರಾತ್ಯ ರಾಷ್ಟ್ರಗಳಲ್ಲಾಗಿಲ್ಲ. ಆದ್ದರಿಂದಲೇ ಪ್ರಸ್ತುತ ಪ್ರಬಂಧ ತಕ್ಕ ಪುಟ್ಟಿಗೆ ಸಮರ್ಥನೀಯವಾಗಿದೆ.

ಜಾಗತೀಕರಣ, ಪ್ರಜಾಪ್ರಭುತ್ವಮತ್ತು ಮಾನವ ಹಕ್ಕುಗಳ ಕುರಿತು ಸ್ಫೋಟಕಗೊಳ್ಳುತ್ತಿರುವ ಸಮಕಾಲೀನ ಸಂಕಥನಗಳಲ್ಲಿ ವಿವಿಧ ಜನ ಸಮುದಾಯಗಳ ಸುಖ ದುಃಖಗಳ ಕುರಿತಾದ ವಿವಾದಾಂಶಗಳ ಚರ್ಚೆ ನಿರ್ಣಾಯಕವಾಗಿರುವುದು ಸ್ಪಷ್ಟವಾಗುತ್ತದೆ. ಈ ಚರ್ಚೆಗಳು ಪ್ರಬಳವಾಗಿ ಮತ್ತು ಪ್ರಾಯೋಗಿಕವಾಫಿ ಸಕಲಾಂಗ ವ್ಯಕ್ತಿಗಳಲ್ಲಿರುವ ದುರ್ಬಲರು ಮತ್ತು ಅವಕಾಶ ವಂಚಿತರ ಕುರಿತಾಗಿದೆ. ವಿಸ್ತೃತಗೊಳ್ಳುತ್ತಿರುವ ಜಾಗತೀಕರಣ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಪ್ರಸರಣದಿಂದಾಗಿ ಅಂಗವಿಕಲ ವ್ಯಕ್ತಿಗಳು ವಿಶೇಷ ಅಗತ್ಯವುಳ್ಳ ವ್ಯಕ್ತಿಗಳೆಂದು ಸಂಬೋಧಿಸಲ್ಪಡುವ ಜನರ ಮಾನವ ಹಕ್ಕುಗಳ ಕುರಿತಾದ ಜ್ವಲಂತ ವಿಷಯಗಳು ಅವಲೋಕನಾರ್ಹ ಮತ್ತು ಸಂಶೋಧನಾರ್ಹ ಸಂಗತಿಗಳಾಗುತ್ತಿರುವುದು ಸ್ವಾಗತಾರ್ಹ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ಸಮುದಾಯದ ಹಕ್ಕುಗಳ ಕುರಿತಾದ ಸಾಹಿತ್ಯ ಕೃಷಿ ಮತ್ತು ಸಂಶೋಧನೆ ಆದಷ್ಟು ಪೌರಾತ್ಯ ರಾಷ್ಟ್ರಗಳಲ್ಲಿ ಆಗದಿರುವುದು ಮತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇರಬಹುದಾದ ವಿಕಲಾಂಗ ಸ್ನೇಹಿ ವಾತಾವರಣ ಪೌರಾತ್ಯ ರಾಷ್ಟ್ರಗಳಲ್ಲಿ ಇಲ್ಲದಿರುವುದು ನತದೃಷ್ಟಕರ. ಅದೇನೆ ಇರಲಿ ಅಭಿವೃದ್ಧಿ ಹೊಂದಿದ , ಹೊಂದುತ್ತಿರುವ ಮತ್ತು ಹೊಂದಬೇಕಾದ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವೇತರ ವ್ಯವಸ್ಥಗಳ ಶ್ರೇಣೀಕೃತ ಶಕ್ತಿ ರಚನೆಯಲ್ಲಿ ಅಂಗವಿಕಲರು ನಿಜವಾಗಲೂ ಅಶಕ್ತರಲ್ಲಿಯೇ ಅಶಕ್ತರಾಗಿದ್ದು ಕೆಳಸ್ತರದಲ್ಲಿದ್ದಾರೆ. 21 ನೇ ಶತಮಾನದಲ್ಲಿಯೂ ಅಲಕ್ಷಿತ ಹಾಗೂ ತೀರಾ ತಿರಸ್ಕೃತ ಸಮುದಾಯವೆಂಬ ಕುಖ್ಯಾತಿಗೆ ಪಾತ್ರವಾದುದು ವಿಷಯದ ಗಾಂಭೀರ್ಯತೆಯನ್ನು ಕನ್ನಡೀಕರಿಸುತ್ತದೆ. ಮನುಕುಲದ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ನಿಬ್ಬೆರಗಾಗುವ ನಿದರ್ಶನಗಳು ಗೋಚರಿಸುತ್ತವೆ.. ಸಮಗ್ರ ಯುರೋಪಿಯನ್ ನಾಗರೀಕತೆ ಮತ್ತು ಸಂಸ್ಕೃತಿಗೆ ಭದ್ರಬುನಾದಿ ಹಾಕಿದ ಇಲಿಯಡ್ ಮತ್ತು ಓಡೆಸ್ಸಿ ಎಂಬ ಗ್ರೀಕ್ ಭಾಷೆಯ ಮಹಾಕಾವ್ಯಗಳ ಕರ್ತೃ

ಆದಿಕವಿ ಹೋಮರ್ ದೃಷ್ಟಿರಹಿತರಾಗಿದ್ದರು. ರೋಂ ಸಾಮ್ರಾಜ್ಯದ ವಿಸ್ತರಣೆಗೆ ಕಾರಣಕರ್ತರಾಗಿದ್ದ ಜೂಲಿಯಸ್ ಸೀಸರ್, ಅಪಸ್ಮಾರಕ್ಕೆ(ಮೂರ್ಚೆರೋಗ) ತುತ್ತಾಗಿದ್ದರು. ಮಧ್ಯಯುಗದಲ್ಲಿದ್ದ ಮಂಗೋಲಿಯಾದ ದೊರೆ ಚಂಗೀಸ್ಖಾನ್ ಚಲನವಿಕಲರಾಗಿದ್ದರು. ಕ್ರಿ.ಶ 1809 ರಿಇಂದ 1852 ರ ಅವಧಿಯಲ್ಲಿ ಫ್ರಾನ್ಸ್ ದೇಶದಲ್ಲಿ ಬದುಕಿದ್ದ್ ಬ್ರೈಲ್ ಲಿಪಿಯ ಅಭಿವೃದ್ಧಿಕಾರ ಲೂಯಿ ಬ್ರೈಲ್ ದೃಷ್ಟಿಬಾಧಿತರಾಗಿದ್ದರು. ಅದರಂತೆಯೇ ವಾಕ್ ಶ್ರವಣ ದೃಷ್ಟಿ ವೈಕಲ್ಯತೆ ಮಧ್ಯದಲ್ಲಿಯೂ ಜಗತ್ಪ್ರಸಿದ್ದರಾದ ಸಮುದಾಯಕ್ಕೆ ಕೊಡುಗೆ ನೀಡಿದ ಮನುಕುಲದ ಏಕಮಾತ್ರ ಅದ್ವಿತೀಯ ನಾರೀಮಣೀ ಹೆಲೆನ್ ಕೆಲರ್ 33 ಪುಸ್ತಕಗಳನ್ನು ರಚಿಸಿ ಸಂಸ್ಥಯನ್ನು ಸ್ಥಾಪಿಸಿ ಸಮಾಜವಾದಿ ಚಿಂತಕಿಯಾಗಿ ಅಮೇರಿಕಾದ ಮಾಜಿ ಅಧ್ಯಕ್ಷರಾಗಿದ್ದ ವುಡ್ರೋವಲ್ಸನ್‌ರಂತಹ ಗಣ್ಯರೆ ಗಣ್ಯರ ಜಂಗಬಲವನ್ನು ಅಡಗಿಸಿದ್ದರು.ದ್ವತೀಯ ಜಾಗತಿಕ ಮಹಾಯುದ್ದದಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಸಾರತ್ಯವಹಿಸಿ ಗೆವು ತೋದುಕೊಟ್ಟ ಧೀರೋದ್ಧಾತ ಅಂದಿನ ಅಮೇರಿಕಾದ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ ಪೋಲಿಯೋ ರೋಗದಿಂದಾಗಿ ಚಲನ ವಿಕಲರಾಗಿದ್ದರು. ಅಮೇರಿಕಾದ ರಾಷ್ಟ್ರೀಯ ವಾಯು ಮತ್ತು ಖಗೋಳ ಆಡಳಿತದಲ್ಲಿರುವ ಜಗತ್ತು ಕಂಡ ಅಪರೂಪದ ಭೌತಶಾಸ್ತ್ರಜ್ಞ ಸ್ಟೀಫನ್ ಹಾಕಿನ್ಸ್‌ವರೆಗೂ ಅನೇಕ ಅಂಗವಿಕಲ ವ್ಯಕ್ತಿಗಳು ತಮ್ಮ ತಮ್ಮ ಕಾಲಾವಧಿಯಲ್ಲದ್ದ್ ವ್ಯವಸ್ಥೆಗಳನ್ನು ಮಾರ್ಪಡಿಸಲು ಕೊಡುಗೆ ನೀಡುವುದರ ಮೂಲಕ ಮನುಕುಲದ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದಾರೆ. ಜಗತ್ತು ಅವರ ವಿಕಲತೆಗಿಂತಲೂ ಅವರು ವಿಕಲತೆಯ ಮೇಲೆ ಸಾಧಿಸಿದ ವಿಜಯವನ್ನು ಸ್ಮರಿಸುತ್ತದೆ. ಆದರೂ ನ್ಯೂನತೆಗಳುಳ್ಳ ಮನುಕುಲ ಇಂತಹ ಪೂರ್ವ ಸೂರಿಗಳನ್ನು ಕೇವಲ ಸ್ಪೂರ್ತಿಯ ಚಿ;ಲುಮೆಗಳೆಂದು ಭಾವಿಸುತ್ತದೆ. ವಾಸ್ತವವಾಗಿ ಇವರೆಲ್ಲರು ಜಾಗತೀಕ ನಾಗರೀಕತೆ ಮತ್ತು ಸಂಸ್ಕೃತಿಯ ಸದ್ಗುಣಗಳೆಂದು ಕರೆಯಲ್ಪಡುವ ಸೃಜನಶೀಲತೆ, ಸಹಾನುಭೂತಿ, ಪ್ರತಿಪಾದನೆ, ಮಾನವೀಯತೆ ಮತ್ತು ಮಾನವ ಹಕ್ಕುಗಳಿಗಾಗಿ ಮಾಡಿದ ಶಕ್ತಿಯುತ ಹೋರಾಟಗಳ ಶಕಿಸದನರಾದವರೆಂಬುದನ್ನು ಯಾರೂ ಮರೆಯುವಂತಿಲ್ಲ. ಆದರ ಜನತೆಯ ಸಾಮಾನ್ಯ ಭಾಷೆಯಲ್ಲಿ ಇಂಥಹ ಜನರನ್ನು ಘನತೆಯಿಲ್ಲದ ಅಂಗವಿಕಲರೆಂದೇ ಪರಿಭಾವಿಸಲ್ಪಟ್ಟಿರುವುದು ವೈದ್ಯವಾಗುತ್ತದೆ. ವ್ಯಕ್ತಿನಿಷ್ಟ ಅಲಶಗಳಾಧ ವ್ಯಕ್ತಿಯ ದೈಹಿಕ, ಐಂದ್ರೀಯ ಮತ್ತು ಮಾನಸಿಕ ನ್ಯೂನತೆಯ ಅಂಶಗಳು ವ್ಯಕ್ತಿಗತ ಅಂಶಗಳಾಗಿ ಉಳಿದಿಲ್ಲ. ವ್ಯಕ್ತಿ ಮತ್ತು ಸಮುದಾಯಕ್ಕಿರುವ ಪ್ರತಿಕೂಲ ಸ್ಥಿತಿಗತಿಗಳು ವಿಶ್ವವ್ಯಾಪಿಯ ಸಂಗತಿಗಳಾಗಿವೆ. ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ ಮಾನವ ಹಕ್ಕುಗಳ ಅನುಷ್ಠಾನ ಮತ್ತು ಅನುಭವಿಸುವಿಕೆಯ ಅವಕಾಶವನ್ನು ಸಂಕುಚಿತಗೊಳಿಸಿ ನಿರ್ಬಂಧಿಸುವ ಸಮಸ್ಯೆಗಳು ಸಹ ವಿಶ್ವವಿಧಿತವಾಗಿವೆ.. ಈ ಜನಸಮುದಾಯದ ಮಾನವ ಹಕ್ಕುಗಳನ್ನು ಭಾಧಿಸುವ ಸಮಸ್ಯೆಗಳಿಗೆ ಇರಬಹುದಾದ ಪರಿಹಾರಗಳು ವ್ಯಕ್ತಿ, ಸಂಸ್ಥೆ ಮತ್ತು ರಾಜ್ಯದ ಸಾಮರ್ಥ್ಯಕ್ಕೂ ಮೀರಿದವುಗಳಾಗಿವೆ.

ಸ್ಥಾನಿಕ ಮತ್ತು ಜಾಗತೀಕ ಸಂಸ್ಥೆಗಳು ಹಾಗೂ ಸಹದುಃಖಿಗಳ ಸಕಾಲಿಕ ಪ್ರಯತ್ನದಿಂದಾಗಿ ಅಂಗವಿಕಲತೆಯನ್ನು ವ್ಯಾಖ್ಯಾನಿಸಲು ಮತ್ತು ಅಂಗವಿಕಲತೆಗೆ ಸಂಬಂಧಪಟ್ಟ ಗ್ರಹಿಕೆಗಳನ್ನು ಕ್ರೂಢೀಕರಿಸಿ ನಿರೂಪಿಸಲು ವಿವಿಧ ಮಾದರಿಗಳನ್ನು ವಿಕಸನಗೊಳಿಸಲಾಗಿದೆ. ದಾನ ಧರ್ಮ ಮಾದರಿ, ವೈದ್ಯಕೀಯ ಮಾದರಿ, ಸಾಮಾಜಿಕ ಮಾದರಿ ಹಾಗೂ ಮಾನವ ಹಕ್ಕುಗಳ ಮಾದರಿಗಳು ಪ್ರಮುಖವಾಗಿವೆ. ಇವೆಲ್ಲವುಗಳಲ್ಲಿ ಯುಗಮಾನಕ್ಕೆ ತಕ್ಕಂತೆ ಪ್ರವರ್ಧಮಾನಕ್ಕೆ ಬಂದ ಮಾನವ ಹಕ್ಕುಗಳ ಮಾದರಿ ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ವಿಶ್ವದಾದ್ಯಂತ ಪ್ರಚಲಿತವೂ ಹೆಚ್ಚು ಪ್ರಯೋಜನಕಾರಿಯೂ ಆದ ಮಾದರಿ ಎಂಬ ಖ್ಯಾತಿಗೆ ಭಾಜನವಾಗಿದೆ. ಈ ಮಾದರಿಯ ಅನ್ವಯಿಕತೆಯ ಪರಿಣಾಮವಾಗಿ ಅಂಗವಿಕಲತೆ ಒಂದು ಸಾಮಾಜಿಕ ಸಮಸ್ಯೆಯಾಗಿ ಪರಿವರ್ತನೆಗೊಂಡಿದೆ. ವಿಕಲತೆಯು ಭಾಧಿತ ವ್ಯಕ್ತಿಗಿಂತಲೂ ಸಮಾಜದ ಮನೋಧೋರಣೆಯಲ್ಲಿ ಇರುವುದರಿಂದ ಸಮಾಜವೇ ಅಂಗವಿಕಲ ವ್ಯಕ್ತಿಯ ವಿಷಯದಲ್ಲಿ ತನ್ನ ಮನೋಧೋರಣೆಯನ್ನು ಸರಿಪಡಿಸಿಕೊಳ್ಳಬೇಕೆಂಬ ಸ್ಪಷ್ಟೋಕ್ತಿ ಮಾನವ ಹಕ್ಕುಗಳ ಮಾದರಿಯದ್ದಾಗಿದೆ. ಆದುದರಿಂದಲೇ ಅಂಗವಿಕಲ ಮಾನವ ಹಕ್ಕುಗಳನ್ನು ಸಾಮಾಜಿಕ ವಾಸ್ತವ ವಸ್ತುನಿಷ್ಟ ಅಂಶಗಳಿಂದ ಪ್ರತ್ಯೇಕಿಸಿ ನೋಡಬಹುದೆಂಬುದು ಪ್ರಸ್ತುತ ಪ್ರಬಂಧದ ಪ್ರಬಲ ವಾದವಾಗಿದೆ. ಮಾನವ ಹಕ್ಕುಗಳ ಚೈತನ್ಯಪೂರ್ವಕ ಪ್ರೇರಣೆಯ ತಿರುಳನ್ನುಬೀಜರೂಪದಲ್ಲಿ ಹೇಲುವುದಾದರೆ ಅಂಗವಿಕಲ ವ್ಯಕ್ತಿಗಳು ದಾನ ಧರ್ಮಗಳ ವಸ್ತುಗಳಲ್ಲಿ ಅಥವಾ ಪರರ ಅನುಕಂಪ ಅಥವಾ ಭಿಕ್ಷೆಯ ಪಾತ್ರೆಗಳಲ್ಲಿನ ಎಂಬುವದನ್ನು ಅಧಿಕಾರಯುತವಾಘಿ ಹೇಳಬಹುದು. ಈ ವ್ಯಕ್ತಿಗಳು ಸಹ ಚಲಬಲದ ಗುಣಗಳಿಂದಾಗಿ ವಿಕಲತೆಯ ಮೇಲೆ ಅದ್ವಿತೀಯ ವಿಜಯವನ್ನು ಸಾಧಿಸಿ ವಿಶ್ವಾಸಿಗರಾಗಬಲ್ಲರು. ಅವರೂ ಸಹ ಸವಾರಿ ಮಾಡಲಾಗದ ಸಮಸ್ಯೆಗಳ ಕುದುರೆಗಳನ್ನೇರಿ ಎದುರಿಸಿ ವಿಶಿಷ್ಟ ಸಾಮರ್ಥ್ಯಗಳನ್ನು ತಮ್ಮದಾಗಿಸಿಕೊಳ್ಳಬಲ್ಲರು. ಹೆಚ್ಚಿನ ಅವಕಾಶಗಳಿಗಿಂತಲೂ ಸಮಾನ ಅವಕಾಶಗಳು ಮತ್ತು ಸೌಲಭ್ಯಗಳನ್ನು ಕೊಡಿದ್ದೇ ಆದರೆ ಅವರು ಸಹ ಉತ್ಕೃಷ್ಟ ಜ್ಞಾನ ಮತ್ತು ಸಾಮರ್ಥ್ಯಭರಿತ ವ್ಯಕ್ತಿಗಳಾಗಿ ಮಾರ್ಪಟ್ಟು ದಾನಧರ್ಮಕ್ಕಿಂತಲೂ ಸಮಾನತೆಗಾಗಿ ಸೆಣಸಿ ಸ್ಪರ್ಧಿಸಬಲ್ಲರು. ನ್ಯೂನತೆಗಳು ಮತ್ತು ದೌರ್ಬಲ್ಯತೆಗಳೆಲ್ಲವೂ ಬರಿ ಸವಾಲುಗಳು ಮತ್ತು ಸಮಸ್ಯೆಗಳ ಮೂಲಾಧಾರಗಳಾಗಿರದೆ ಶುದ್ಧ ವಿವೇಕ, ನಂಬಿಕೆ ಮತ್ತು ಪರಿಹಾರಗಳ ಆಗರಗಳೂ ಆಗಿವೆ. ಇದನ್ನರಿತ ಮಾನವ ಹಕ್ಕುಗಳ ಪ್ರಸಿದ್ಧ ಚಿಂತಕ ಹೆನ್ರಿ ವಿಸ್ಕಾರ್ಡಿ ಹೇಳಿದ ಮಾತುಗಳು ಉದಾಹರಣೀಯ. 'ನಮ್ಮಲ್ಲಿ ಯಾರೂ ನ್ಯೂನತೆಗಳಿಂದ ಹೊರತಾಗಿಲ್ಲ. ಬರಿ ದೈಹಿಕ ಬಲವೇ ಸಾಮರ್ಥ್ಯದ ಸಾಧನವಲ್ಲ. ಅಂಗವಿಕಲ ಜನರೆನ್ನುವರು ಯಾರೂ ಇಲ್ಲ. ಬರಿ ಜನರಾಗಿದ್ದಾರೆ. ಮಾನವ ಹಕ್ಕುಗಳಿಗೆ ಬದಲಿಯಾಗಬಹುದಾದದ್ದು ಯಾವುದೂ ಇಲ್ಲ. ಗೌರವ ಸನ್ಮಾನಗಳಾಗಲಿ, ಮಾಸಾಸನವಾಗಲಿ, ಪ್ರಶಂಶೆಯಾಗಲಿ, ಸಹಾಯಧನವಾಗಲಿ ವಿಕಲತೆಯೊಂದಿಗೆ ಕೆಲಸ ಮಾಡುವ ಬಯಕೆಯ ಸ್ಥಾನವನ್ನು ತುಂಬಲಾರವು'

ಆದ್ದರಿಂದ ಜಾಗತೀಕರಣ, ಪ್ರಜಾಪ್ರಭುತ್ವ , ಮಾನವ ಹಕ್ಕುಗಳು , ಮುಖ್ಯವಾಹಿನಿ ಸಾವಾಜಿಕ ಒಳಗೊರ್ಳಳುವಿಕೆಯಂತಹ ಪರಿಭಾವನೆಗಳು ವಿಶೇಷ ಅಗತ್ಯವುಳ್ಳ ವ್ಯಕ್ತಿಗಳಿಂದ ಬೇರ್ಪಡೆಯಾಗಲಾರವು. ಜನತೆಯ ಔದಾರ್ಯತೆ ನಾಗರೀಕತೆ ಹೆಚ್ಚತ್ತಿರುವ ವ್ಯಕ್ತಿ ಘನತೆಯ ಪ್ರಜ್ಞೆಯಿಂದಾಗಿ ಅಂಗವಿಕಲ ವ್ಯಕ್ತಿಗಳನ್ನು ವಿಶೇಷ ಅಗತ್ಯವುಳ್ಳ ವ್ಯಕ್ತಿಗಳು, ಭಿನ್ನ ಸಾಮರ್ಥ್ಯರು ವಿಶೇಷ ವ್ಯಕ್ತಿಗಳೆಂದೆಲ್ಲಾ ಸಂಬೋಧಿಸಲಾಗುತ್ತಿದೆ. 21 ನೇ ಶತಮಾನದಲ್ಲಿ ಕ್ಷೇಮಾಭ್ಯುದ್ಯಯದಿಂದ

ಸಬಲೀಕರಣ ಮತ್ತು ಮಾನವ ಹಕ್ಕುಗಳತ್ತ ನಿದರ್ಶನಾತ್ಮಕ ತತ್ವ ಪಲ್ಲಟಕ್ಕೆ ಪ್ರಪಂಚ ಸಾಕ್ಷಿಯಾಗಿದೆ. ಭಾರತವು ಸಹ ಈ ಗಮನಾರ್ಹ ಪ್ರಕ್ರಿಯೆಯಿಂದ ಹೊರತಾಗಿಲ್ಲ. ನಿಆರಾಶಾದಾಯಕ ಸಂಗತಿಯೆಂದರೆಈ ಸಮುದಾಯವು ಆಯಾ ರಾಜ್ಯ ಜನ , ಜನಾಂಗ ಧರ್ಮ ಜಾತಿ ಮತ್ತು ಉಪಜಾತಿಗಳಲ್ಲಿ ತೀರಾ ಅಲ್ಪಸಂಖ್ಯಾತ, ಅಧಿಕಾರ ರಹಿತ ಸಮುದಾಯವಾಗಿದೆ. ಮಾನವ ಹಕ್ಕುಗಳ ಸಂವರ್ಧನೆಗಾಗಿ ಕಾಯದೆ ಕಾನೂನುಗಳು ನೀತಿ ಯೋಜನೆಗಳು ಕಾರ್ಯಕ್ರಮಗಳು ಜಾರಿಯಲ್ಲಿ ದದ್ರು ಸಮಾಜ ಮತತು ಸರ್ಕಾರದ ವಕ್ರ ಮನೋಧೋರಣೆಯಿಂದ ವಿವೇಚನೆಗೊಳ್ಳುವುದು ದೂರದ ಕನಸಾಗಿದೆ. ಜಾಗತೀಕರಣ, ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಹಗಲು ಬೆಳಕಿನ ಈ ಯುಗದಲ್ಲಿಯೂ ಕರಾಳ ಸನ್ನಿವೇಶ ಮತ್ತು ಕತ್ತಲು ಕೋಣೆಯ ಕೈದಿಗಳಂತೆ ಕರುಣಾಜನಕ ಸ್ಥಿತಿಯಲ್ಲಿ ಕೊಳೆಯುತ್ತಿರುವ ತಿರಸ್ಕೃತ ವಿಕಲಾಂಗ ವ್ಯಕ್ತಿಗಳಿಗೇನು ಕೊರತೆಯಿಲ್ಲ. ಆದ್ದರಿಂದ ಈ ನತದೃಷ್ಟ ಸಮುದಾಯದ ದೃಷ್ಟಿಯಲ್ಲಿ ಜಾಗತೀಕರಣ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಅರ್ಥ ಏನೆಂಬುದನ್ನು ತಿಳಿಯಪಡಿಸುವುದು ಕಷ್ಟಸಾಧ್ಯ. ಆದರೂ ವಿಶೇಷ ಅಗತ್ಯ ವ್ಯಕ್ತಿಗಳ ಪಾಲಿಗೆ ಬಂದ ಪಂಚಾಮೃತದಂತಿರುವ ಜಾಗತೀಕರಣ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಕುರಿತು ಸಂಕ್ಷಿಪ್ತವಾಗಿ ಸಾದರಪಡಿಸುವ ಪ್ರಯತ್ನ ಮಾಡಲಾಗಿದೆ. ಇದರೊಂದಿಗೆ ಸವಾಲುಗಳು ಮತ್ತು ವಿವಾದಾಂಶಗಳನ್ನು ಗಮನಿಸಲಾಗಿದೆ. ಸಮುದಾಯದ ಮಾನವ ಹಕ್ಕುಗಳು ಮತ್ತು ರಾಜಕೀಯ ಸಬಲೀಕರಣವನ್ನು ಬಲವರ್ಧಿಸುವ ಅಗತ್ಯತೆಯನ್ನು ಪ್ರತಿಪಾದಿಸಲಾಗಿದೆ.

ಜಗತ್ತಿನಲ್ಲಿ ಸರಿಸುಮಾರು 650 ದಶಲಕ್ಷ ಜನ ಅಂಗವಿಕಲರಿದ್ದಾರೆ ಅದರಲ್ಲಿ 2/3 ರಷ್ಟು ದಕ್ಷಿಣದ ರಾಷ್ಟ್ರದಲ್ಲಿದ್ದಾರೆ. ವೈದ್ಯಕೀಯ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಾದ ಮುನ್ನಡೆಯಿಂದಾಗಿ ವಿಕಲತೆಯ ಪತ್ತೆ ಹಚ್ಚುವಿಕೆ, ಚಿಕಿತ್ಸೆ, ನಿಯಂತ್ರಣ, ಮತ್ತು ಪುನಶ್ಚೇತನಗಳು ಸಾಧ್ಯವಾಗುತ್ತಿವೆ. ಬಡತನ, ಅಜ್ಞಾನ , ಮೌಢ್ಯ, ಪೌಷ್ಟಿಕತೆ, ಅನಾರೋಗ್ಯ, ಖಾಯಿಲೆಗಳು, ಹೆಚ್ಚುತ್ತಿರುವ ವಾಹನ ದಟ್ಟಣೆ, ಪರಿಸರ ಮಾಲಿನ್ಯ, ಅಪರಾಧ, ಹಿಂಸೆ ಮತ್ತು ಹೆಚ್ಚುತ್ತಿರುವ ಮಾನಸಿಕ ಉದ್ವಿಗ್ನತೆಗಳೆಲ್ಲವೂ ವಿಕಲತೆಯ ಮುಲ ಕಾರಣಗಳಾಗಿ ಬಿಭಿತ್ಸ ವೇಷಧರಿಸಿ ಶುಭಕೋರುತ್ತಿವೆ. ನಗರೋಪ ನಗರಗಳಲ್ಲಿ ದೊರೆಯುತ್ತಿರುವ ಅತ್ಯಧಿಕ ಬೆಲೆಯ ವೈದ್ಯಕೀಯ ಸೌಲಭ್ಯಗಳು ಗ್ರಾಮೀಣ ಭಾಗದ ಬಹತೇಕ ಬಡವರಿಗೆ ಗಗನ ಕುಸುಮಗಳಾಗಿದೆ. ಯಶಸ್ವಿನಿಯು ಸಹ ಸಾಲದ ಸಿರಿಯನ್ನು ಪ್ರಭಾವವನ್ನು ಬಳಕೆ ಮಾಡಿಕೊಳ್ಳುವ ಬಡವರಿಗೆ ಮಾತ್ರ ಪ್ರಯೋಜನ ಕಾರಿಯಾಗುತ್ತಿದೆ ಎಂಬ ಕಟುವಾಸ್ತವದ ಮಾತು ಆರೋಗ್ಯದ ನಿರ್ವಾಹಣಾ ವ್ಯವಸ್ಥೆಯ ಕರಾಳಮುಖವನ್ನು ಪರಿಚಯಿಸುತ್ತದೆ. ಆದರೂ ಮಾನವ ಹಕ್ಕುಗಳ ಸಿದ್ಧಾಂತವು ವೈದ್ಯಕೀಯ ಸೌಲಭ್ಯವನ್ನು ಹೆಚ್ಚಿಸಿ ವಿಕಲತೆಯನ್ನು ತ್ವರಿತವಾಗಿ ಪತ್ತೆ ಹಚ್ಚಿ ಸಕಾಲಿಕವಾಗಿ ಚಿಕಿತ್ಸೆ ನೀಡಲು, ಪುನಶ್ಚೇತನಗೊಳಿಸಲು, ಅಂಗವಿಕಲತೆಯನ್ನು ತಡೆಗಟ್ಟುವುದು ಶ್ರೇಯಸ್ಕರವೆಂಬುದನ್ನು ಮಾನವ ಹಕ್ಕುಗಳ ಮಾದರಿ ಪ್ರತಿಪಾದಿಸುತ್ತದೆ.

1970 ರ ದಶಕದಲ್ಲಿ ವಿಶ್ವದಾದ್ಯಂತ ಉಂಟಾದ ವಿಶೇಷ ವ್ಯಕ್ತಿಗಳ ಹಕ್ಕುಗಲ ಹೋರಾಟ ಜಾಗತೀಕ ಸಮುದಾಯವನ್ನು ಹೆಚ್ಚಿಸಿತು. ಮನುಕುಲದ ಆತ್ಮಸಾಕ್ಷಿಯಂತಿರುವ ವಿಶ್ವ ಸಂಸ್ಥೆಯು ವಿವಿಧ ಪ್ರಕಾರದ ಅಂಗವಿಕಲರಿಗೆ ಸಂಬಂಧಪಟ್ಟ ಮಾನವ ಹಕ್ಕುಗಳ ಒಡಂಬಡಿಕೆಗಳನ್ನು 1948 ರ ಡಿಸೆಂಬರ್ 10 ರಂದು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯು ಮನುಷ್ಯರೆಲ್ಲರು ಜೀವಿಸುವ ಸ್ವಾತಂತ್ರ್ಯವನ್ನು ಅನುಭವಿಸುವ ವ್ಯಕ್ತಿಘನತೆ ಮತ್ತು ಯೋಗ್ಯತೆಯ ವಿಷಯದಲ್ಲಿ ಹುಟ್ಟಿನಿಂದಲೇ ಸ್ವತಂತ್ರರು ಮತ್ತು ಸಮಾನರಾಗಿದ್ದರೆಂಬುದನ್ನು ಮಾಡಿದ ಘೋಷಣೆಯಿ ಉಳಿದೆಲ್ಲಾ ಘೋಷಣೆಗಳು ಮತತು ಒಡಂಬಡಿಕೆಗಳಿಗೆ ಪ್ರೇರಣೆಯಾಗಿದೆ. 1984 ರಲ್ಲಿ ವಿಶ್ವಸಂಸ್ಥೆಯ ಜಾಗತಿಕ ಕಾರ್ಯಕ್ರಮ ಯೊಜನೆಯು ವಿಶೇಷ ವ್ಯಕ್ತಿಗಳು ಸಹ ಸಾಮಾನ್ಯರಂತೆ ಬದುಕಲು ಅರ್ಹರಾಗಿದ್ದರೆಂದು ಪ್ರತಿಪಾದಿಸಿತು. ಕಾನೂನಿನ ದೃಷ್ಟಿಯಿಂದ ಈ ಹೇಳಿಕೆಗೆ 3 ಮುಖ್ಯ ಆಯಾಮಗಳಿದೆ. ಅವಗಳೆಂದರೆ 1.ಅಂಗವಿಕಲ ವ್ಯಕ್ತಿಗಳಿಗೂ ಸಹ ಸಖರವಾದ ಹಕ್ಕುಗಳಿವೆ.2. ಆ ಎಲ್ಲಾ ಹಕ್ಕುಗಳನ್ನು ಗೌರವಿಸತಕ್ಕದ್ದು 3. ಸಾವಮಾನ್ಯರೊಂದಿಗೆ ಸರಿಸಮರಾಗಿ ಪರಿಣಾಮಕಾರಿಯಾಗಿ ಅಂಗವಿಕಲ ವ್ಯಕ್ತಿಗಳು ಸಹ ಹಕ್ಕುಗಳನ್ನು ಅನುಭವಿಸಲು ಮತ್ತು ಚಲಾಯಿಸಲು ನೆರವಾಗುವಂತೆ ಮಾಡುವ ಹೊಣೆಗಾರಿಕೆಯು ವಿಶ್ವಸಮುದಾಯದ್ದಾಗಿದೆ. 2006 ನೇ ಇಸವಿಯಲ್ಲಿ ವಿಶ್ವಸಂಸ್ಥೆಯು ಸಮಗ್ರವಾದ ಅಂಗವಿಕಲ ವ್ಯಕ್ತಿಗಲ ಮಾನವ ಹಕ್ಕುಗಲ ಒಡಂಬಡಿಕೆಯನ್ನು ಅಂಗೀಕರಿಸಿತು. ಭಾರತವನ್ನೊಳಗೊಂಡು ಅನೇಕ ಸದಸ್ಯ ರಾಷ್ಟ್ರಗಳು ಇದನ್ನು ಸ್ವೀಕರಿಸಿದವು ತನ್ಮೂಲಕ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ವಿಷಯದಲ್ಲಿ ತಮ್ಮ ತಮ್ಮ ಜಾಗತೀಕ ಬದ್ಧತೆಯನ್ನು ಪ್ರಕಟಪಡಿಸಿದವು.

ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಜಗತ್ತಿನ ಬೃಹತ್ ಗಾತ್ರದ ಪ್ರಜಾಪ್ರಭುತ್ವ ರಾಷ್ಟ್ರವಾಗಿ ವಿಶ್ವಸಂಸ್ಥೆಯ ಉಳಿದೆಲ್ಲಾ ಮಾನವ ಹಕ್ಕುಗಳ ಘೋಷಣೆಗಳು ಮತ್ತು ಒಡಂಬಡಿಕೆಗಳನ್ನು ಸ್ವೀಕರಿಸಿದಂತೆ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಒಡಂಬಡಿಕೆಯನ್ನು ಮಾನ್ಯಮಾಡಿ ಸ್ವೀಕರಿಸಿದೆ. ಅವರ ಸಬಲೀಕರಣಕ್ಕೆ ಸಂಬಂಧಿಸಿದ ಶಾಸನಗಳನ್ನು ರೂಪಿಸಿ ಜಾರಿಗೊಳಿಸುವಲ್ಲಿ ಭಾರತ ಸರ್ಕಾರವು ಮೂರು ಮುಖ್ಯ ಕಾರಣಗಳಿಂದಾಗಿ ವಿಳಂಬನೀತಿ ಅನುಸರಿಸಿದೆ. ಮೊದಲನೆಯದಾಗಿ ಈ ಸಮುದಾಯದ ಕ್ಷೇಮಾಭ್ಯದ್ಯಯಕ್ಕೆ ಸಂಬಂಧಪಟ್ಟ ವಿಷಯವು ಕೇಂದ್ರಪಟ್ಟಿಯಲ್ಲಿಲ್ಲ. ಕೇಂದ್ರ ಸರ್ಕಾರವು ಇವರ ಹಕ್ಕುಗಳ ಬಗ್ಗೆ ಜಾಗೃತವಾಗಿರಲಿಲ್ಲ. ವಿಕಲಾಂಗಸ್ನೇಹಿ ಹಕ್ಕುಗಳಿಗೆ ಅನುಕೂಲಕರವಾದ ಶಾಸನಗಳ ಅನುಷ್ಠಾನಕ್ಕೆ ಬೇಕಾದ ಆರ್ಥಿಕ ಸಾಮರ್ಥ್ಯದ ಕೊರತೆ, ಬೃಹತ್ ಗಾತ್ರದ ಪ್ರಜಾಪ್ರಭುತ್ವದ ಸರ್ಕಾರಗಳಿಗೆ ಈ ಅಧಿಕಾರಶೂನ್ಯ ಅಂಗವಿಕಲರು ಆದ್ಯತೆಗಳಾಗಿರಲಿಲ್ಲವೆಂಬುದನ್ನು ವಾದಿಸಬಹುದಾಗಿದೆ. 1990 ರ ದಶಕದಲ್ಲಿ ವಿಕಲಾಂಗ ಸ್ನೇಹಿ ಶಾಸನಗಳ ಅನುಷ್ಠಾನಕ್ಕೆ ಭಾರತ ಮುಂದಾದುದಕ್ಕೆ ಈ ಕೆಳಕಂಡ ಕಾರಣಗಳನ್ನು ಗುರುತಿಸ ಲಾಗಿದೆ. ಅಂತರಾಷ್ಟ್ರೀಯ ಆರ್ಥಿಕ ಸಂಸ್ಥೆಗಳ ಒತ್ತಡ, ದಾನಿ ರಾಷ್ಟ್ರಗಳ ಒತ್ತಡ ಮತ್ತು ವಿಶೇಷ ವ್ಯಕ್ತಿಗಳ ಹಕ್ಕುಗಳ ಚಳುವಳಿಗಳ ಬೇಡಿಕೆಗಳು ಪ್ರಮುಖವಾಗಿವೆ. ಭಾರತ ಸರ್ಕಾರದ ಮನೋಧೋರಣೆಯಿಂದ ವ್ಯಕ್ತವಾಗುವ ಸಂಗತಿ ಎಂದರೆ ಭಾರತದೊಳಗಿನ ವಿಕಲಾಂಗ ವ್ಯಕ್ತಿಗಳೆಲ್ಲಾ ದಾನಿ ರಾಷ್ಟ್ರಗಳ ಸಾಕು ಮಕ್ಕಳು ಆಗಿರುವರೆಂಬ ಭೇಧಕರ ಭಾವನೆ ಆಳಗೊಳ್ಳುತ್ತದೆ. ತನ್ನ ಅಧಿಕ ಆರ್ಥಿಕ ವೆಚ್ಚಕ್ಕಾಗಿ ಗಡಿಯಾಚೆಯ ವಿವಿಧ ಮೂಲಗಳಿಂದ ಕ್ರೂಢೀಕರಿಸುವ ಹಣಕ್ಕಿಂತಲೂ ವಿಕಲಾಂಗ ವ್ಯಕ್ತಿಗಳು ಮತ್ತು ಅವರ ಹಕ್ಕುಗಳು ಕನಿಷ್ಟವಾದವುಗಳೆಂಬುದನ್ನು ಬಿಂಬಿಸುತ್ತದೆ. ಸಂತಸದ ಸಂಗತಿಯೆಂದರೆ ಭಾರತವು 1993 ರ

ಏಷ್ಯಾ–ಫೆಸಿಫಿಕ್ ವಲಯದ ಅಂಗವಿಕಲ ವ್ಯಕ್ತಿಗಳ ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣಭಾಗಿತ್ವದ ಘೋಷಣೇಯನ್ನು ಅಂಗೀಕರಿಸಿತು. ಭಾರತ ಸರ್ಕಾರವು ಚರಿತ್ರಾರ್ಹವೆನ್ನಬಹುದಾದ ಈ ಶಾಸನಗಳನ್ನು ಅನುಷ್ಟಾನಗೊಳಿಸಿದೆ. 1993 ರ ಭಾರತದ ಪುನಶ್ಚೇತನ ಕಾಯ್ದೆ, 1995 ರ ಕಾಯ್ದೆ ಮತ್ತು 1999 ರ ಸ್ವಲೀನತೆ, ಮಿದುಳುವಾತ ಹಾಗೂ ಬಹುವಿಧ ವಿಕಲತೆಯ ವ್ಯಕ್ತಿಗಳ ಕಲ್ಯಾಣದ ನ್ಯಾಸ ಕಾಯಿದೆ.ದೇಶದೊಳಗಿನ ವಿಕಲಾಂಗ ವ್ಯಕ್ತಿಗಳ ಚಳುವಳಿಗಳು ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿರುವ ಲೋಪ ದೋಷಗಳನ್ನು ಸರಿಪಡಿಸಿ ವಿಶ್ವ ಸಂಸ್ಥೆಯು ಅಂಗವಿಕಲ ವ್ಯಕ್ತಿಗಳ ಮಾನವ ಹಕ್ಕುಗಳ ಒಡಂಬಡಿಕೆಯ ತತ್ವೋದ್ದೇಶಗಳು, ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಸದಸ್ಯ ರಾಷ್ಟ್ರಗಳ ಬದ್ದತೆ ಮತ್ತು ಬಾಧ್ಯತೆಯನ್ನು ಧೃಢಪಡಿಸುವ ವಿಧಿ–ವಿಧಾನಗಳಿಗೆ ತಕ್ಕಂತೆ ಮಾರ್ಪಡಿಸಲು ಆಗ್ರಹಪಡಿಸುತ್ತದೆ. ಅದರ ಪರಿಣಾಮವಾಗಿ ಅಂಗವಿಕಲ ವ್ಯಕ್ತಿಗಳ ಕಾಯ್ದೆಯ ತಿದ್ದುಪಡಿ ಮಸೂದೆ 2012 ಸಂಸತ್ತಿನ ಮುಂದಿದೆ.

ಭಾರತದಲ್ಲಿ ಅಂಗವಿಕಲ ನಾಗರೀಕರ ಒಟ್ಟು ಜನಸಂಖ್ಯೆಯ ಕುರಿತಾದ ಅಲ್‌ತಾಪ್ ಅಬಿದಿ ಅವರ ಪ್ರಶ್ನೆಯು ಎಲ್ಲರೂ ಹುಬ್ಬೇರಿಸುವಂತೆ ಮಾಡಿತಲ್ಲದೆ ಇಡೀ ಅಲೆಯನ್ನು ಅಂಗವಿಕಲರತ್ತ ತಿರುಗುವಂತೆ ಮಾಡಿತು. ಏಕೆಂದರೆ 2001 ರ ಪೂರ್ವದಲ್ಲಾದ ದಶವಾರ್ಷಿಕ ಜನಗಣತಿಯ ನಮೂನೆಯಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲು ಅವಕಾಶವಿರಲಿಲ್ಲ. 2001 ರ ಜನಗಣತಿಯ ನಮೂನೆಯಲ್ಲಿ ವ್ಯಕ್ತಿಗಳ ವಿಕಲತೆಯನ್ನು ನಮೂದಿಸಲು ಅವಕಾಶ ಮಾಡಿಕೊಡಲಾಯಿತು. ಜನಗಣತಿಯ ಪಟ್ಟಿಯಿಂದ ವ್ಯಕ್ತಿಗಳ ವಿಕಲತೆಯ ಮಾಹಿತಿಯನ್ನು ಸಂಗ್ರಹಿಸಲು ಅವಕಾಶವಿರದಿದ್ದುದು ಪ್ರಜಾತಾಮತ್ರಿಕ ರಾಷ್ಟ್ರವೊಂದರಲ್ಲಿ ಸಮುದಾಯಕ್ಕೆ ಮಾಡಿದ ಪೌರತ್ವ ಮತ್ತು ಪ್ರಜಾಪ್ರಭುತ್ವದ ನಿರಾಕರಣೆಯೊಂದಿಗೆ ವ್ಯಕ್ತಿಯ ಅಸ್ಥಿತ್ವದ ನಿರಾಕರಣೆಯೂ ಆಗಿತ್ತೆಂದರೆ ಅತಶಯೋಕ್ತಿಯಾಗಲಾರದು. ಅದೇನೆ ಇರಲಿ 2001 ರ ದಶವಾರ್ಷಿಕ ಜನಗಣತಿಯ ವರದಿಯ ಪ್ರಕಾರ 2 ಕೋಟಿ 19 ಲಕ್ಷ ಅಂಗವಿಕಲರಿದ್ದಾರೆಂಬುದನ್ನು ತಿಳಿಸಿತು. ಇದು ದೇಶದ ಜನಸಂಖ್ಯೆಯ ಶೇಕಡಾ 2.13 ರಷ್ಟಾಗಿತ್ತು . 2002 ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ವರದಿಯು ಭಾರತದಲ್ಲಿಬ2 ಕೋಟಿ 8 ಲಕ್ಷ ಅಂಗವಿಕಲ ವ್ಯಕ್ತಿಗಳಿದ್ದಾರೆಂದು ತಿಳಿಸಿತು. ಅವರಲ್ಲಿ ಶೇಕಡಾ 75 ರಷ್ಟು ಗ್ರಾಮೀಣ ಭಾಗದಲ್ಲಿ ವಾಸವಾಗಿದ್ದಾರೆ. ಶೇ 49 ರಷ್ಟು ಸಾಕ್ಷರರಿದ್ದಾರೆ. ಶೇ 34 ರಷ್ಟು ಉದ್ಯೋಗದಲ್ಲಿದ್ದಾರೆ. ಈಗ ಭಾರತದ ಜನಸಂಖ್ಯೆ 12 ಕೋಟಿಯಷ್ಟಿದೆ. 2001 ರ ಜನಗಣತಿಯ ಪ್ರಕಾರ ಅಂಗವಿಕಲ ಜನಸಂಖ್ಯಾ ಪ್ರಮಾಣ □□ ರಷ್ಟಿದೆ. ಅದೇನೆ ಇರಲಿ 90 ರಿಂದ 100 ದಶಲಕ್ಷದಷ್ಟು ಅಂಗವಿಕಲರು ಭಾರತದಲ್ಲಿರುವವರೆಂದು ಅಂದಾಜಿಸಲಾಗಿದೆ. ಅಂಕಿಸಂಖ್ಯೆಗಳಲ್ಲಿ ಕಾಣಬರುವ ಈ ವ್ಯತ್ಯಾಸವು ಅಂಗವಿಕಲತೆಯನ್ನು ಗ್ರಹಿಸಿ ವ್ಯಾಖ್ಯಾನಿಸುವ ವಿನ್ಯಾಸದಲ್ಲಿರುವ ವ್ಯತ್ಯಾಸದಿಂದಾಗಿದೆ. ಎಂಬುವುದು ಸ್ಪಷ್ಟವಾಗುತ್ತದೆ. ಅದೇನೆ ಇರಲಿ ವಾಸ್ತವೀಕತೆ ತೀರಾ ಭಿನ್ನವಾದುದಾಗಿದೆ. ಅಂಗವಿಕಲ ವ್ಯಕ್ತಿಗಳ ಜನಸಂಖ್ಯೆಯ ಸಮೀಕ್ಷೆಗಳು ಮಾಡಿದ ವರದಿಗಿಂತಲೂ ಅಧಿಕವಾಗಿದೆ ಎಂಬುವುದು ಕಂಡುಬರುತ್ತದೆ. ಈ ಸಮುದಾಯದ ಜನಸಂಖ್ಯೆಯು ಸಕಲಾಂಗ ವ್ಯಕ್ತಿಗಳ ಜನಸಂಖ್ಯೆಗಿಂತಲೂ ಕಡಿಮೆ ಇದ್ದರೂ ಜಾಗತೀಕರಣ ಪ್ರಾಪ್ರಭುತ್ವ ಅಭಿವೃದ್ಧಿ ಮತ್ತು ಮಾನವ ಹಕ್ಕುಗಳ ರಾಜಕಾರಣದಲ್ಲಿ ಸಮುದಾಯವನ್ನು ಅಲಕ್ಷಿಸುವಂತಿಲ್ಲ.

ಅಂಗವಿಕಲ ವ್ಯಕ್ತಿಗಳ ಮಾನವ ಹಕ್ಕುಗಳು

ವಿಶ್ವಸಂಸ್ಥೆಯ ವಿವಿಧ ಘೋಷಣೆಗಳು ಮತ್ತು ಒಡಂಬಡಿಕೆಯನ್ನು ಮತ್ತು ಭಾರತ ಸಂವಿಧಾ ಮತ್ತು ಶಾಸನಗಳನ್ನ ಅವಲೋಕಿಸಿದರೆ ಅಂಗವಿಕಲರೂ ಸಹ ಜಾಗತೀಕರಣ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳಿಂದ ಹುಟ್ಟಿಕೊಂಡ ಸರ್ವ ಸೌಲಭ್ಯಗಳಿಗೂ ಅರ್ಹರಾಗಿದ್ದಾರೆ. ಮಾನವ ಹಕ್ಕುಗಳ ಮಾದರಿಯ ಪ್ರಕಾರ ಅಂಗವಿಕಲತೆಯು ಜಾಗತಿಕ ಜೀವ ವೈವಿಧ್ಯತೆ ಮತ್ತು ಜೀವ ಸಂಸ್ಕೃತಿಯ ಭಾಗವಾಗಿದೆ. ವಿಕಲತೆಯ ಭೇಧಭಾವವಿಲ್ಲದೆ ಎಲ್ಲರೂ ಅಂತರ್ಗತವಾದ ಮತ್ತು ಅಪರಕೀಯವಾದ ಹಕ್ಕುಗಳಿಗೆ ಬಾಧ್ಯಸ್ಥರಾಗಿದ್ದಾರೆ. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯು ಸ್ವಷ್ಟೋಕ್ತಿಯಾದ ಎಲ್ಲಾ ಮಾನವರು ಹಕ್ಕುಗಳು ಮತ್ತು ಘನತೆಯ ವಿಷಯದಲ್ಲಿ ಜನನತಃ ಸರ್ವತಂತ್ರ ಸ್ವತಂತ್ರರು ಮತ್ತು ಸಮಾನರೆಂಬುವುದು ಎಲ್ಲಾ ಮಾನವ ಹಕ್ಕುಗಳ ಕಾನೂನುಗಳು, ವ್ಯವಸ್ಥೆಗಳು ಮತ್ತು ಫಲಾನುಭವಿಗಳ ವ್ಯಾಪಕ ಪ್ರೇರಣೆಯಾಗಿದೆ.

ವಿಶ್ವ ಸಂಸ್ಥೆಯ ಅಂಗವಿಕಲರ ಮಾನವ ಹಕ್ಕುಗಳ ಬಡಂಬಡಿಕೆಯ ಮೂರನೇ ವಿಧಿಯಲ್ಲಿ ಪ್ರಸ್ತಾಪಿಸಲ್ಪಟ್ಟ ಪ್ರಮುಖ ತತ್ವಗಳು ಉಲ್ಲೇಖನಾರ್ಹ

1.ವ್ಯಕ್ತಿ ಸ್ವಾತಂತ್ರ್ಯ ಮತ್ತು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನೊಳಗೊಂಡಂತೆ ಅಂತರ್ಗತವಾದ ವ್ಯಕ್ತಿ ಘನತೆ ಹಾಗೂ ಸ್ವಾಯತ್ತತೆ. 2. ತಾರತಮ್ಯ ರಹಿತತೆ 3. ಪೂರ್ಣ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆ ಮತ್ತು ಸಾಮಾಜಿಕ ಒಳಗೊಳ್ಳುವಿಕೆ. 4. ಅಂಗವಿಕಲ ವ್ಯಕ್ತಿಗಳನ್ನು ಮನುಕುಲ ಮತ್ತು ಮಾನವೀಯ ವೈವಿಧ್ಯತೆಯ ಭಾಗವೆಂದು ಸ್ವೀಕರಿಸುವುದು ಮತ್ತು ಅವರ ಭಿನ್ನತೆಯನ್ನು ಗೌರವಿಸುವುದು. 5. ಸಮಾನ ಅವಕಾಶ 6. ಸುಗಮತೆ 7. ಲಿಂಗ ಸಮಾನತೆ 8. ಅಂಗವಿಕಲ ಮಕ್ಕಳ ಸಾಮರ್ಥ್ಯ ವಿಕಾಸ ಮತ್ತು ಅನನ್ಯತೆಯ ಸಂರಕ್ಷಣೆಗೆ ಗೌರವ

1. ಸಕಲಾಂಗ ವ್ಯಕ್ತಿಗಳಂತೆ ವಿಕಲಾಂಗ ವ್ಯಕ್ತಗಳು ಸಹ ಮನುಷ್ಯರಾಗಿರುವುದರಿಮದಲೇ ಸರ್ವತಂತ್ರ ಸ್ವತಂತ್ರರಾಗಿದ್ದು ತಮ್ಮ ನಿರ್ಣಯಗಳನ್ನು ಮತ್ತು ಅವಶ್ಯ ಆಯ್ಕೆಗಳನ್ನು ಮಾಡುವ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ಅದರಂತೆಯೇ ವ್ಯಕ್ತಿಘನತೆಗೂ ಬಾಧ್ಯಸ್ಥರಾಗಿದ್ದಾರೆ. ಭಿಕ್ಷಾವೃತ್ತಿಗೆ ಯೋಗ್ಯರೆಂಬ ನಕಾರಾತ್ಮಕ ಮನೋಭಾವನೆ ಮತ್ತು ಸಾಂಜಿಕ ಕಳಂಕ ಲೇಪನ ಸಮುದಾಯದ ಮತ್ತು ವ್ಯಕ್ತಿಗಳ ಘನತೆ ಗೌರವಕ್ಕೆ ಅಪಚಾರವನ್ನುಂಟುಮಾಡುವುದಾಗಿದೆ. ಎಲ್ಲರಂತೆ ಅಂಗವಿಕಲ ವ್ಯಕ್ತಿಗಳೂ ಸಹ ಗನತೆ ಗೌರವದಿಂದ ತಲೆ ಎತ್ತಿ ಬದುಕಲು ಅರ್ಹರಾಗಿದ್ದಾರೆಂಬುದನ್ನು ಕಾನೂನುಗಳು ಒತ್ತಿ ಹೇಳುತ್ತವೆ.

2.ತಾರತಮ್ಯರಹಿತತೆಯು ಮಾನವ ಹಕ್ಕುಗಳನ್ನು ಸಂವರ್ಧಿಸುವ ಎಲ್ಲಾ ಕಾಯ್ದೆ ಕಾನೂನುಗಳ ಅಡಿಪಾಯ ತತ್ವವಾಗಿದೆ. ತಾರತಮ್ಯವನ್ನು ಬೆಳೆಸುವ ಆಚಾರ ವಿಚಾರಗಳೆಲ್ಲವೂ ಸಮಾನತೆಗೆ ಮತ್ತು ವ್ಯಕ್ತಿಗಳ ಸರ್ವತೋಮುಖ ಬೆಳವಣಿಗೆಗೆ ಆತಂಕಕಾರಿಯಾಗಿರುವುದರಿಂದಲೂ ತಾರತಮ್ಯ ರಾಹಿತ್ಯತೆಗೆ ಅಧಿಕ ಪ್ರಾಶಸ್ತ್ಯ ನೀಡಲಾಗಿದೆ. ಅಸ್ಥಿತ್ವದಲ್ಲಿರುವ

ಶಾಸನಗಳು ಕಾರ್ಯಕ್ರಮಗಳಲ್ಲಿರುವ ತಾರತಮ್ಯ ನೀತಿಯನ್ನು ಒಡೆದು ಹಾಕುವ ಜೊತೆಗೆ ಭವಿಷ್ಯತ್ತಿನಲ್ಲಿ ರೂಪಿಸುವ ಶಾಸನಗಳು ಮತ್ತು ಯೋಜನೆಗಳಲ್ಲಿ ತಾರತಮ್ಯವನ್ನು ನಿಷೇಧಿಸುತ್ತದೆ.

3.ಪೂರ್ಣ ಮತ್ತು ಪರಿಣಾಮಕಾರಿ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯ ತತ್ವ ಮತ್ತು ಹಕ್ಕಿನ ಸನ್ನಯ ಸಮಾಜವೊಂದು ತನ್ನ ಖಾಸಾಗಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲೆಲ್ಲಾ ಅಂಗವಿಕಲ ವ್ಯಕ್ತಿಗಳನ್ನು ತನ್ನ ಅವಿಭಾಜ್ಯ ಅಂಗಗಳೆಂದು ಪರಿಭಾವಿಸಿ ಸ್ವೀಕರಿಸಿ ಗೌರವಿಸಬೇಕು. ಅವರ ಭಾಗವಹಿಸುವಿಕೆ ಮತ್ತು ಒಳಗೊಳ್ಳುವಿಕೆಯನ್ನು ಬರೀ ಸಮಾಲೋಚನಾ ಪ್ರಕ್ರಿಯೆಗೆ ಸೀಮಿತಗೊಳಿಸದೆ ಅವರಿಗೆ ಸಂಬಂಧಪಟ್ಟ ಅಗತ್ಯತೆಗಳ ವಿಷಯದಲ್ಲಿ ಅವರೇ ನಿರ್ಣಯಗಳನ್ನು ಕೈಗೊಂಡು ಅವರ ಸಂಕಲ್ಪದನುಸಾರ ಸಮಾಜ ಅನುಷ್ಠಾನಗೊಳಿಸುವಂತಾಗಬೇಕು ಎಂಬುದನ್ನು ಈ ತತ್ವ ಪ್ರತಿಪಾದಿಸುತ್ತದೆ. ಸಮಾಜದ ವಿವಿಧ ಸ್ಥರಗಳಲ್ಲಿ ಅಸ್ಥಿತ್ವದಲ್ಲಿರುವ ವಿವಿಧ ಸ್ವರೂಪದ ಸಂಬಂಧಗಳು ಮತ್ತು ಅಂತರ್‌ಕ್ರಿಯೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಹಾಗೂ ಘನತೆಯಿಂದ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳುವ ಹಕ್ಕು ಈ ವ್ಯಕ್ತಿಗಳಿಗೂ ಇದೆ.

4.ಪರಸ್ಪರ ತಿಳುವಳಿಕೆ ಅನ್ವಯ ಅನ್ಯರಲ್ಲಿರುವ ಭಿನ್ನತೆಯನ್ನು ಸ್ವೀಕರಿಸಿ ಗೌರವಿಸುವುದು ಮತ್ತು ಅವರೂ ಕೂಡ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಹಾಗೂ ಘನತೆಗೆ ಅರ್ಹರಾಗಿದ್ದಾರೆಂಬುದನ್ನು ಮನದಟ್ಟು ಮಾಡಿಕೊಳ್ಳುವುದು ವಿಹಿತ. ಅಂಗವಿಕಲ ವ್ಯಕ್ತಿಗಳನ್ನು ಸಮಸ್ಯೆಯ ಮೂಲಾಧಾರಗಳು ಮತ್ತು ದೊಡ್ಡ ತಲೆನೋವೆಂದು ಪರಿಭಾವಿಸದೆ ಅವರು ನಮ್ಮೊಳಗಿನ ಮನುಷ್ಯರೆಂಬ ತಾದ್ಯಾತ್ಮೀಯ ಭಾವದಿಂದ ನೋಡುವ ಅಗತ್ಯತೆಯನ್ನು ಇದು ಒತ್ತಿ ಹೇಳುತ್ತದೆ. ಐದು ಬೆರಳುಗಳು ಹೇಗೆ ಸರಿಸಮಾನರಾಗಿರುವುದಿಲ್ಲವೋ ಹಾಗೆಯೇ ಪ್ರಕೃತಿತಲ್ಲಿ ಸೃಷ್ಠಿಯಾಗಿರುವವೆಲ್ಲವೂ ಸರಿಸಮಾನವಾಗಿರುವುದಿಲ್ಲ. ಅರ್ಥತ್ ಭಿನ್ನತೆ/ ಸವ್ಯತ್ಯಾಸ ನೈಸರ್ಗಿಕ ಲಕ್ಷಣಗಳ ವಿಕಲತೆಯ ಪ್ರಕಾರಗಳು ಮತ್ತು ಪ್ರಕಾರಕ್ಕನುಗುಣವಾಗಿ ಅವರವರ ಅಗತ್ಯತೆಗಳು ಮತ್ತು ಬೇಡಿಕೆಗಳು ಭಿನ್ನವಾಗಿರುತ್ತವೆ. ಅವುಗಳಿಗೆ ಸ್ಪಂದಿಸುವುದು ಅವಶ್ಯ. ಏಕರೂಪತೆ ಮತ್ತು ಭಿನ್ನೆಗೆ ತಕ್ಕಂತೆ ಸ್ಪಂದಿಸಿ ಉಪಚರಿಸುವುದು ಅತ್ಯಗತ್ಯ ಮತ್ತು ಅನಿವಾರ್ಯ.

5. ಸಮಾನತೆಯ ಅವಕಾಶವು ತಾರತಮ್ಯರಹಿತತೆಗೆ ಸರಿಸಮಾನವಾಗಿದೆ. ಸಮಾಜ ಮತ್ತು ಅದರ ಪರಿಸರಗಳೆಲ್ಲವೂ ವಿಕಲಾಂಗ ವ್ಯಕ್ತಿಗಳನ್ನು ಒಳಗೊಂಡು ಎಲ್ಲರಿಗೂ ದೊರೆಯುವಂತಹ ಸನ್ನಿವೇಶವೇ ಸಮಾನ ಅವಕಾಶ. ಸಮಾನ ಅವಕಾಶವೆಂದರೆ ಸರ್ವರಿಗೂ ಒಂದೇ ತರಹದ ಅವಕಾಶವೆಂದರ್ಥವಲ್ಲ. ಜನತೆಯೊಳಗಿನ ಭಿನ್ನತೆಯನ್ನು ಗೌರವಿಸಿ ಸ್ವೀಕರಿಸಿ ಅವರೆಲ್ಲರಿಗೂ ಹಕ್ಕುಗಳ ಅನುಭವಿಸುವಿಕೆಯಲ್ಲಿ ಸಮಾನ ಅವಕಾಶವಿದೆ ಎಂಬುವುದನ್ನು ಧೃಢಪಡಿಸುವುದೇ ಸಮಾನ ಅವಕಾಶ.

6. ವಿಕಲಾಂಗ ವ್ಯಕ್ತಿಗಳ ಪ್ರಗತಿವಿಕಲಾಂಗ ವ್ಯಕ್ತಿಗಳ ಪಾಲಿಗೆ ಸಮಾನತೆಯ ಕನಸು ನನಸಾಗಬೇಕಾದರೆ ಸುಗಮತೆಯ ತತ್ವವನ್ನು ಕರಾರುವಕ್ಕಾಗಿ ಅನುಷ್ಠಾನಗೊಳಿಸಬೇಕು. ವಿಕಲಾಂಗ ವ್ಯಕ್ತಿಗಳ ಪ್ರಗತಿಗೆ ಆತಂಕಕಾರಿಯಾದ ಅಡೆತಡೆಗಳನ್ನೆಲ್ಲಾ ತೊಡೆಉದು ಹಾಕಿ ನಿರಾತಂಕ ವಾತಾವರಣವನ್ನು ಸೃಷ್ಟಿಸಿ ಹಕ್ಕುಗಳು ಕೈಗೆಟಕುವಂತೆ ಮಾಡುವುದೇ ಸುಗಮತೆಯಾಗಿದೆ. ಸುಗಮತೆಯು ಸಮಾಜದ ಎಲ್ಲಾ ರಂಗಗಳಲ್ಲಿಯು ವಿಕಲಾಂಗ ವ್ಯಕ್ತಿಗಳು ಸ್ವತಂತ್ರವಾಗಿದ್ದು ಪೂರ್ಣ ಪ್ರಮಾಣದಲ್ಲಿ ಭಾಗವಹಿಸಲು ನೆರವಾಗುತ್ತದೆ. ಜೀವನದ ಎಲ್ಲಾ ರಂಗಗಳಲ್ಲಿಯೂ ಸುಗಮತೆ ಅತ್ಯವಶ್ಯವಾದುದಾಗಿದೆ. ಕಟ್ಟಡಗಳು, ರಸ್ತೆಗಳು, ವಸತಿಗಳು, ಸಾರಿಗೆ, ಮಾಹಿತಿ ಮತ್ತು ಸಂಪರ್ಕಸೇವೆ ಸಾರ್ವಜನಿಕರಿಗೆ ನೀಡಲಾದ ಮತ್ತಿತರ ಸೌಲಭ್ಯಗಳಂತಹ ಭೌತಿಕ ಪರಿಸರದಲ್ಲಿ ಸುಗಮತೆಗೆ ಅಧಿಕ ಪ್ರಾಧಾನ್ಯತೆ ಇದೆ.

7. ಪುರುಷರಂತೇ ಮಹಿಳೆಯರೂ ಕೂಡ ಹಕ್ಕುಗಳಿಗೆ ಅರ್ಹರಾಗಿದ್ದಾರೆಂಬುದನ್ನು ಮಾನ್ಯ ಮಾಡುವುದೇ ಪುರುಷ ಮತ್ತು ಮಹಿಳೆಯರ ನಡುವಿನ ಸಮಾನತೆಯಾಗಿದೆ. ಮಹಿಲೇಯರೂ ಕೂಡ ಹಕ್ಕುಗಳನ್ನು ಚಲಾಯಿಸಲು ಅನುಕೂಲಕರವಾದ ಅವಕಾಶವನ್ನು ಸೃಷ್ಟಿಸಲು ಕ್ರಮಗಳನ್ನು ಕೈಗೊಳ್ಳಬೇಕೆಂಬುದನ್ನು ಇದು ಒತ್ತಿ ಹೇಳುತ್ತದೆ. ತಾರತಮ್ಯ ರಹಿತತೆಯ ತತ್ವವು ಅನೇಕ ಕಡೆಗಳಲ್ಲಿ ಪ್ರತಿಪದಿತವಾಗುತಿದ್ದರೂ ಅನೇಕ ಒಡಂಬಡಿಕೆಗಳಲ್ಲಿ ಸ್ತ್ರೀ–ಪುರುಷರ ನಡುವಿನ ಸಮಾನತೆಯನ್ನು ಪ್ರತ್ಯೇಕ ಪರಮೋಚ್ಚ ತತ್ವವನ್ನಾಗಿ ಸೇರ್ಪಡಿಸಲಾಗಿದೆ. ಏಕೆಂದರೆ ಮಹಿಳೆಯರು ಮತ್ತು ಅಂಗವಿಕಲ ಮಹಿಳೆಯರ ಪೂರ್ಣ ಭಾಗವಹಿಸುವಿಕೆಗೆ ಆತಂಕಕಾರಿಯಾದ ಪೂರ್ವಾಗ್ರಹಪೀಡಿತ ಮನೋಧೋರನೆಗಳು ಇನ್ನೂ ಜಗತ್ತಿನಾದ್ಯಂತ ಬೇರೂರಿದವೆ. ಅವುಗಲ ಮೂಲೋತ್ಪಾಟನೆ ಸ್ತ್ರೀ–ಸಮಾನತೆಯೊಂದಿಗೆ ಪುರುಷರ ಸ್ತ್ರೀ–ಪರ ಮನೋಪರಿವರ್ತನೆಯಾಗದೇ ಸಾಧ್ಯವಿಲ್ಲ.

8. ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಈ ತತ್ವವನ್ನು ದಾಖಲಿಸಲಾಗಿದೆ. ಮಗುವಿನ ಬೌದ್ಧಿಕ ಬೆಳವಣಿಗೆ, ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯ ಮತ್ತು ಸ್ವಯಂ ಅಭಿವ್ಯಕ್ತಿಯನ್ನು ಈ ತತ್ವವು ಬೆಂಬಲ ಪೂರ್ವಕವಾಗಿ ನೆರವಾಗುತ್ತದೆಯಾದ್ದರಿಂದ ಇದನ್ನು ಸಕಾರಾತ್ಮಕ ಪರಿಗಣಿಸಲಾಗಿದೆ. ಈ ಪ್ರಕ್ರಿಯೆಯ ಮೂಲಕ ಮಕ್ಕಳು ಪ್ರಗತಿಪರವಾಗಿ ಹಕ್ಕುಗಳ ತಿಳುವಳಿಕೆಯೊಂದಿಗೆ ಜ್ಞಾನ ಮತ್ತು ಪೈಪೋಟಿಯುತ ಸಾಮರ್ಥ್ಯವನ್ನು ಗಳಿಸುತ್ತಾರೆ. ಈ ಮಕ್ಕಳ ಸಾಮರ್ಥ್ಯ ವಿಕಾಸಕ್ಕೆ ತಕ್ಕಂತೆ ಅವರ ಅನನ್ಯತೆಯ ಸಂರಕ್ಷಣೆ ಮತ್ತು ನಿರ್ಣಯ ಕೈಗೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಬೇಕಾದ ಅವಕಾಶಗಳನ್ನು ವಿಸ್ತರಿಸಬೇಕು.

ಭಾರತದಲ್ಲಿರುವ ಅಂಗವಿಕಲ ವ್ಯಕ್ತಿಗಳು ಸಹ ಇತರೆಲ್ಲ ನಾಗರೀಕರಂತೆ ರಾಜ್ಯಾಂಗದತ್ತವಾದ ಮತ್ತು ಶಾಸನಬದ್ದವಾದ ಹಕ್ಕುಗಳಿವೆ. ಅಂಗವಿಶ್ವವಾಸಿಗರ ಸಬಲೀಕರಣ, ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಸಂವಿಧಾನದಲ್ಲಿ, ಶಾಸನಗಳಲ್ಲಿ ನೀತಿ ನಿಯೋಜನೆಗಳಲ್ಲಿ ಅವಕಾಶವಿದೆ. ಭಾರತದ ಸಂವಿಧಾನವು ಸಮಾಜದ ತುಳಿತಕ್ಕೊಳಗಾದ ಅವಕಾಶ ವಂಚಿತ ದುರ್ಬಲರಿಗೆ ಹಕ್ಕುಗಳನ್ನು ನೀಡಿದೆ. ಅವುಗಳನ್ನು ಸಂವಿಧಾನದ 14, 41, 45 ಮತ್ತು 46 ನೇ ವಿಧಿಗಳಲ್ಲಿ ತಿಳಿಸಲಾಗಿದೆ.

14 ನೇ ವಿಧಿಯನ್ವಯ ರಾಜ್ಯವು ಭಾರತದ ಭೂಪ್ರದೇಶದೊಳಗೆ ಯಾರಿಗೂ ಕಾನೂನಿನೆದುರಲ್ಲಿ ಸಮಾನತೆ ಮತ್ತು ಕಾನೂನಿನ ಸಮಾನ ರಕ್ಷಣೆಯನ್ನು ನಿರಾಕರಿಸತಕ್ಕದ್ದು. ಈ ವಿಧಿಯು ಕಾನೂನಿನ ಆಳ್ವಿಕೆಯೊಂದಿಗೆ ಕಾಯ್ದೆಯ ಸಮಾನತೆಯ ಭರವಸೆಯನ್ನು ನೀಡುತ್ತದೆ.

ಪರಿಚ್ಛೇಧ 41 ; ರಾಜ್ಯವು ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಯ

ಮಿತಿಗೊಳಪಟ್ಟು ನಿರುದ್ಯೋಗ, ವೃದ್ಧಾಪ್ಯ, ಅನಾರೋಗ್ಯ ಮತ್ತು ವಿಕಲತ್ವದ ಪ್ರಕರಣಗಳಲ್ಲಿ ಕೆಲಸದ, ಶಿಕ್ಷಣದ, ಸಾರ್ವಜನಿಕ ಸಹಾಯದ ಅವಕಾಶವನ್ನು ನೀಡಬೇಕೆಂದು ನಿರ್ದೇಶಿಸುತ್ತದೆ.

ಪರಿಚ್ಛೇಧ 45 ; ಸಂವಿಧಾನವು ಜಾರಿಗೊಂಡ 10 ವರ್ಷದೊಳಗೆ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲು ರಾಜ್ಯ ಪ್ರಯತ್ನಿಸತಕ್ಕದ್ದು.

ಪರಿಚ್ಛೇಧ 46 ; ರಾಜ್ಯ ದುರ್ಬಲ ವರ್ಗದ ಜನರನ್ನು ಅದರಲ್ಲಿಯೂ ನಿಖರವಾಗಿ ಪರಿಶಿಷ್ಟ ಜಾತಿ ಮತ್ತ ಪರಿಶಿಷ್ಟ ಪಂಗಡದವರ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಕಾಳಜಿಪೂರ್ವಕವಾಗಿ ಸಂರಕ್ಷಿಸತಕ್ಕದ್ದು ಮತ್ತು ಸಾಮಾಜಿಕ ಅನ್ಯಾಯ ಹಾಗೂ ದಬ್ಬಾಳಿಕೆಯಿಂದ ಅವರನ್ನು ರಕ್ಷಿಸತಕ್ಕದ್ದು.

ಈ ವಿಧಿಗಳೆಲ್ಲವು ಜಾತಿ, ಧರ್ಮ, ಮತ, ಲಿಂಗ, ಭಾಷೆ, ಬಣ್ಣ ಹಾಗೂ ವಿಕಲತೆಯ ತಾರತಮ್ಯತೆಯಿಲ್ಲದೆ ಎಲ್ಲರನ್ನೂ ಸಮಾನವಾಗಿ ನೋಡಬೇಕೆಂಬುದನ್ನು ಸಾರಿ ಹೇಳುತ್ತದೆ.

ವಿಕಲಾಂಗ ವ್ಯಕ್ತಿಗಳಿಗೂ ಸಮಾನ ಅವಕಾಶಗಳನ್ನು ಸಮಾನತೆಯೊಂದಿಗೆ ನೀಡಬೇಕೆಂಬ ನಿಯಮವು ಸಂವಿಧಾನದ 14 ನೇ ವಿಧಿಯಲ್ಲಿ ಧ್ವನಿತಗೊಳ್ಳುತ್ತದೆ. 45 ನೇ ಪರಿಚ್ಛೇದದನ್ವಯ ಅಂಗವಿಕಲ ಮಕ್ಕಳನ್ನೊಳಗೊಂಡು ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವೆನ್ನುವುದು ರಾಜ್ಯದ ಜವಬ್ದಾರಿಯಾಗಿದೆ.

46 ನೇ ಪರಿಚ್ಛೇದದನ್ವಯ ದುರ್ಬಲ ವರ್ಗದವರು ಮತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ಸಂವರ್ಧನೆಯೊಂದಿಗೆ ಅವರನ್ನು ಸಾಮಾಜಿಕ ಅನ್ಯಾಯ ತ್ತು ಶೋಷಣೆಯಿಂದ ಸಂರಕ್ಷಿಸುವುದು ಸಹ ರಾಜ್ಯದ ಕರ್ತವ್ಯವಾಗಿದೆ.

41 ನೇ ವಿಧಿಯಲ್ಲಿ ತಿಳಿಸಿರುವಂತೆ ಅಂಗವಿಕಲರಿಗೂ ಕೆಲಸದ ಮತ್ತು ಶಿಕ್ಷಣದ ಹಕ್ಕುಗಳ ಸಂವರ್ಧನೆಗಾಗಿ ಸಾರ್ವಜನಿಕ ಸಾರ್ವಜನಿಕ ಸಹಾಯವನ್ನು ನೀಡಬೇಕೆಂದು ನಿರ್ದೇಶಿಸುವ ಸಂಧರ್ಭದಲ್ಲಿ ರಾಜ್ಯದ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ದಿಯ ಮಿತಿಗೆ ಒಳಪಟ್ಟು ಇದೆಲ್ಲವನ್ನು ಮಾಡಬೇಕೆಂಬ ನಿರ್ದೇಶನವು ಸಪಾಜೋ-ಆರ್ಥಿಕ ಹಕ್ಕುಗಳ ನಿರ್ಬಂಧಗಳಿಗೆ ಎಡೆಮಾಡಿಕೊಟ್ಟಂತೆ ತೋರುತ್ತದೆ.

ಅದೇನೇ ಇರಲಿ ಅಂಗವಿಕಲ ವ್ಯಕ್ತಿಗಳು ಸಹ ಸಂವಿಧಾನದ 3 ನೇ ಮತ್ತು 4 ನೇ ಭಾಗದಲ್ಲಿರುವ ಮೂಲಭೂತ ಹಕ್ಕುಗಳು ಮತ್ತು ಸಮಾಜೋ-ಆರ್ಥಿಕ ಹಕ್ಕುಗಳನ್ನು ಅನುಭವಿಸಲು ಅರ್ಹರಾಗಿದ್ದಾರೆ. ಆದರೆ ಅಂಗವಿಕಲ ವ್ಯಕ್ತಿಗಳ(ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆಯ ಕಾಯ್ದೆಯಲ್ಲಿ ಹಾಗೂ ಮತ್ತಿತರ ಶಾಸನಗಳಲ್ಲಿ ಉಲ್ಲೇಖಿಸಲಾದ ಸುಗಮತೆಯ ಹಕ್ಕು, ಶೈಕ್ಷಣಿಕ ಹಕ್ಕು, ಉದ್ಯೋಗದ ಹಕ್ಕು, ಮೀಸಲಾತಿಯ ಹಕ್ಕು, ತಾರತಮ್ಯ ರಹಿತತೆಯ ಹಕ್ಕು ಅಂಗವಿಕಲ ವ್ಯಕ್ತಿಗಳಿಗಿರುವ ಮುಖ್ಯ ಆಯುಕ್ತರು ಮತ್ತು ರಾಜ್ಯಗಳ ಆಯುಕ್ತರ ಕಛೇರಿಗಳ ಮೂಲಕ ತಮ್ಮ ಸಂಕಷ್ಟಗಳ ಪರಿಹಾರದ ಹಕ್ಕುಗಳೊಂದಿಗೆ ತಡೆರಹಿತ ವಾತಾವರಣದ ಹಕ್ಕನ್ನು ಅನುಭವಿಸಲು ಬೇಕಾದ ಸ್ಥಿತಿಗತಿಗಳು, ಇನ್ನೂ ಪೂರ್ಣ ಪ್ರಮಾಣದಲ್ಲಿ ಭಾರತದಲ್ಲಿ ಸೃಷ್ಟಿಯಾಗಬೇಕಿದೆ.

ಉಪಸಂಹಾರ

ಜಾಗತೀಕರಣ, ಪ್ರಜಾಪ್ರಭುತ್ವ ಮತ್ತು ಮಾನವಹಕ್ಕುಗಳು ಅಂಗವಿಕಲ ವ್ಯಕ್ತಿಗಳ ಬದುಕು ಭಾವನೆಗಳು ಮತ್ತು ಬವಣೆಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿವೆ, ಈ ಸಮುದಾಯದ ಹಕ್ಕುಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಈ ವರೆಗೆ ಮಾಡಿದ ಪ್ರಯತ್ನಗಳು ಸ್ವಾಗತಾರ್ಹವಾಗಿದ್ದರೂ ಸಾಲದು. ಸಂವಿಧಾನ ಮತ್ತು ಶಾಸನಗಳಿಂದ ನ್ಯಾಯಯುತ, ಮಾನವೀಯ ಮತ್ತು ಒಳಗೊಳ್ಳುವಿಕೆಯ ಲಕ್ಷಣಗಳುಳ್ಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಲಕ್ಷಣಗಳುಳ್ಳ ವಿಕಲಾಂಗ ಸ್ನೇಹಿ ವ್ಯವಸ್ಥೆಯ ನಿರ್ಮಾಣಕ್ಕೆ ಹಿತಕರವೆನ್ನಬಹುದಾದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಸೃಷ್ಟಿಸುವಲ್ಲಿ ಇನ್ನೂ ಯಶಸ್ವಿಯಾಗಿಲ್ಲ. ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಜಾಗತೀಕರಣದಿಂದಾಗಿ ಸಾರ್ವಜನಿಕ ನೀತಿಗಳಲ್ಲಿ ದಾನ ಧರ್ಮ ವೈದ್ಯಕೀಯ, ಕಾರ್ಯಾತ್ಮಕ ವಿಕಲತೆ ಮತ್ತು ಕ್ಷೇಮಾಭ್ಯದ್ಯಯದಂತಹ ತತ್ವಗಳಿಂಧ ಅಭಿವೃದ್ಧಿ ಮತ್ತು ಮಾನವ ಹಕ್ಕುಗಳ ಮಾದರಿಗಳಿಗೆ ಅಧಿಕ ಪ್ರಾಶಸ್ತ್ಯ ನೀಡಲಾಗುತ್ತಿದೆ. ಆದರೂ ಮೊದಲ ಮೂರು ಮಾದರಿಗಳು ವಿಕಲಾಂಗ ವ್ಯಕ್ತಿಗಳ ಹಕ್ಕುಗಳ ಮೇಲೆ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡುವಂತೆ ಮೊದಲ ಮೂರು ಮಾದರಿಗಳು ಮಾನವ ಹಕ್ಕುಗಳ ಮಾದರಿಯ ಮೇಲೆ ಇನ್ನೂ ಅನುಚಿತ ಹಿಡಿತ ಹೊಂದಿರುವುದು ವೇದ್ಯವಾಗುತ್ತದೆ. ಈ ವ್ಯಕ್ತಿಗಳು ಸಹ ಪೂರ್ಣಪ್ರಮಾಣದ ಮಾನವ ಹಕ್ಕುಗಳನ್ನು ಅನುಭವಿಸಲು ನೆರವಾಗುವಂತೆ ಅವರ ರಾಜಕೀಯ ಮತ್ತು ಆಡಳಿತಾತ್ಮಕ ಭಾಗವಹಿಸುವಿಕೆ ಮತ್ತು ಸಬಲೀಕರಣ ಅತ್ಯಗತ್ಯ. ರಾಜಕೀಯ ಮತ್ತು ಆಡಳಿತಾತ್ಮಕ ಸಬಲೀಕರಣ ಅಗತ್ಯತೆಯು ಸಕಲಾಂಗ ಮತ್ತು ವಿಕಲಾಂಗ ವ್ಯಕ್ತಿಗಳ ನಡುವಿರುವ ಅಧಿಕಾರ ಮತ್ತು ಅವಕಾಶಗಳ ಕಂದರದಿಂದ ಉದ್ಭವಿಸುತ್ತದೆ. ಗಾಢವಾದ ರಾಷ್ಟ್ರೀಯ ಮತ್ತು ಜಾಗತಿಕ ಬದಲಾವಣೆಗಳು, ಆತಂಕಗಳು ಮತ್ತು ಅವಕಾಶಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಳ್ಳುತ್ತಿರುವ ಅಂಗವಿಕಲತೆಯ ರಾಜಕಾರಣದ ವಿವಿಧ ಹಿತಾಸಕ್ತಿಗಳಿಗೆ ಧೃಢವಾದ ಹಿತಾಸಕ್ತಿ, ಪ್ರತಿಪಾದನೆ ಮತ್ತು ಪ್ರತಿಧ್ವನಿತ್ವದ ಅಗತ್ಯತೆ ಇದೆ. ಆನತಾಂತ್ರಿಕ ಮತ್ತು ನೌಕರಶಾಹಿಯ ಮನಸ್ಥಿತಿಗಳನ್ನು ಕಿವಿತಣಿಸುವ ಸಹಾನೂಭೂತಿ ನಿರಾಕರಣ ರಾಜಕಾರಣದ ನರಕ ಸದೃಶ ಕೂಪದಿಂದ ಮೇಲೆತ್ತುವ ಅಗತ್ಯತೆ ಇದೆ.

ವಿಕಲತೆಯು ಶಕ್ತಿ ಶೂನ್ಯತೆ ಮತ್ತು ಅಧಿಕಾರ ಶೂನ್ಯತೆಗೆ ಸರಿಸಮವಾದ ಅರ್ಥ ಮತ್ತು ಸನ್ನಿವೇಶವನ್ನು ಸೂಚಿಸುತ್ತದೆ. ಅಂಗವಿಕಲ ವ್ಯಕ್ತಿಯನ್ನು ಶಕ್ತಿರಹಿತ ಮತ್ತು ಅಧಿಕಾರ ಶೂನ್ಯ ವ್ಯಕ್ತಿಯೆಂತಲೂ ಅಂಗವಿಕಲ ಸಮುದಾಯವೆಂತಲೂ ನೋಡಲಾಗಿದೆ. ನಿರ್ಣಯಗಳನ್ನು ಕೈಗೊಳ್ಳಲು ಮತ್ತು ಕ್ರಮಗಳನ್ನು ಕೈಗೊಳ್ಳಲು ಇವರು ಅಸಮರ್ಥರೆಂದು ಪರಿಭಾವಿಸಲಾಗುತ್ತಿದೆ. ಜಗತ್ತಿನ ಬೃಹತ್ ಪ್ರಜಾಪ್ರಭುತ್ವ ಮತ್ತು ರಾಷ್ಟ್ರವಾದ ಭಾರತದ ಸನ್ನಿವೇಶದಲ್ಲಿ ಅಂಗವಿಕಲ ಮತದಾರರ ಸಂಖ್ಯೆಯ ಕುರಿತಾದ ಮಾಹಿತಿಯ ಚುನಾವಣಾ ಆಯೋಗದ ಬಳಿಯೂ ಇಲ್ಲ. ಅಂಗವಿಕಲ ವ್ಯಕ್ತಿಗಳು ಸಹ ಅಲ್ಲಿಲ್ಲಿ ಚದುರಿದ ತುಂಡು ತುಂಡಾದ ಸಮುದಾಯವಾಗಿದೆ. ಯಾವುದೇ ರಾಜಕೀಯ ಪಕ್ಷ ಮತ್ತು ಅಭ್ಯರ್ಥಿಗೆ ಒಂದು ಗಣನೀಯ ಮತ್ತು ವಿಶ್ವಾಸನೀಯ ಮತಶಕ್ತಿಯಾಗಲಾರದು. ಬೇರೆ ಮಾತಿನಲ್ಲಿ ಹೇಳುವುದಾದರೆ ಸಾಮಾನ್ಯ

ಮತದಾರರ ಸಂಖ್ಯಾಬಲಕ್ಕೆ ಹೋಲಿಸಿದರೆ ಅಂಗವಿಕಲ ಸಮುದಾಯವು ತೀರಾ ಅಲ್ಪಸಂಖ್ಯಾತ ಶಕ್ತಿ ಅಥವಾ ಅಧಿಕಾರ ಶೂನ್ಯ ವರ್ಗವಾಗಿದೆ. ಇದಕ್ಕೆ ತದ್ವಿರುದ್ಧವೆನ್ನುವಂತೆ ಸಕಲಾಂಗ ವ್ಯಕ್ತಿಗಳ ಸಮುದಾಯವು ಪ್ರಬಲ ಬಹುಸಂಖ್ಯಾತ ಸ್ಥಾನಮಾನದೊಂದಿಗೆ ಆಯ್ಕೆಗಳನ್ನು ಮಾಡುವ ನಿಯಂತ್ರಿಸುವ ಪ್ರಭಾವ ಬೀರುವ ಮತ್ತು ಮಾಡಿದ ಆಯ್ಕೆಗಳನ್ನು ಅನುಷ್ಠಾನಗೊಳಿಸಲು ಬೇಕಾದ ಅಧಿಕಾರವನ್ನೆಲ್ಲಾ ಹೊಂದಿದೆ. ಅಸ್ಥಿತ್ವದಲ್ಲಿರುವ ಅಧಿಕಾರ ಕಂದರವನ್ನು ಮುಚ್ಚುವುದಕ್ಕಾಗಿ ಅಧಿಕಾರವನ್ನು ಸಮಾನಗೊಳಿಸುವುದು ಅಪೇಕ್ಷಣೀಯವಾಗಿದ್ದರೂ ಅಸಾಧ್ಯವಾದ ಸಂಗತಿಯಾಗಿದೆ. ಅಧಿಕಾರವನ್ನು ಪಡೆಯುವ ದಾರಿ ಬಹುಮಟ್ಟಿಗೆ ದುರ್ಗಮವು ಮತ್ತು ಆರ್ಥಿಕವಾಗಿ ಹೊರೆಯಾದ ಕಾರಣದಿಂದಾಗಿ ಅಧಿಕಾರವನ್ನು ಹಂಚಿಕೊಳ್ಳುವ ಮತ್ತು ನಿರ್ಮಾಣಗೊಳಿಸುವ ದೃಷ್ಟಿಯಿಂದ ಅಂಗವಿಕಲರ ರಾಜಕೀಯ ಮತ್ತು ಆಡಳಿತಾತ್ಮಕ ಸಬಲೀಕರಣ ಅತ್ಯವಶ್ಯವಾಗಿದೆ, ತುಸುಮಟ್ಟಿಗೆ ಸಕಲಾಂಗ ವ್ಯಕ್ತಿಗಳು ಮತ್ತು ವಿಕಲಾಂಗ ವ್ಯಕ್ತಿಗಳ ನಡುವಿರುವ ಶಕ್ತಿ/ ಅಧಿಕಾರದ ನಡುವೆ ಇರುವ ಅಂತರವನ್ನು ಕಿರಿದುಗೊಳಿಸಲು ಇದು ನೆರವಾಗಬಹುದು. ರಾಜಕೀಯ ಸಬಲೀಕರಣವು ಅಂಗವಿಕಲರ ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದೊಂದಿಗೆ ಹೆಚ್ಚಿನ ಪ್ರಮಾಣದಲ್ಲಿ ಸಂಬಂಧವನ್ನು ಹೊಂದಿದೆ. ತಡೆರಹಿತ ರಾಜಕೀಯದ ವಾತವರಣವನ್ನು ಸೃಷ್ಟಿಸುವುದಕ್ಕಾಗಿ ಪ್ರಾತಿನಿಧಿಕ ಪ್ರಜಾಪ್ರಭುತ್ವದ ಎಲ್ಲಾ ಸಂಸ್ಥೆಗಳಲ್ಲಿಯೂ ಸುಗಮವಾಗಿ ಭಾಗವಹಿಸಲು ಆಣಿಯಾಗುವಂತೆ ರಾಜಕೀಯ ಮೀಸಲಾತಿಗೆ ಅವಕಾಶ ನೀಡುವುದು ಅತ್ಯಗತ್ಯವಾಗಿದೆ. ಅಧಿಕಾರ ಶೂನ್ಯ ಸಮುದಾಯಕ್ಕೆ ರಾಜಕೀಯ ಅಧಿಕಾರವನ್ನು ನೀಡಲು ಪೂರಕವಾಗುವಂತೆ ಸಂಬಂಧಪಟ್ಟ ಕಾನೂನುಗಳಿಗೆ ತಿದ್ದುಪಡಿ ತರುವುದು ಸೂಕ್ತ. ಜಾಗತೀಕರಣ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಈ ಯುಗದಲ್ಲಿ ಅವರ ರಾಜಕೀಯ ಭಾಗವಹಿಸುವಿಕೆಗೆ ಇಂತಹ ತಿದ್ದುಪಡಿಯು ವರದಾನವಾಗಬಲ್ಲದು. ಜಾಗತೀಕರಣದಿಂದ ಹುಟ್ಟಿಕೊಂಡ ಅವಕಾಶಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಅಡೆತಡೆಗಳನ್ನು ಎದುರಿಸಲು ಪ್ರಜಾಪ್ರಭುತ್ವದ ನೆಲೆಯನ್ನು ಗಟ್ಟಿಗೊಳಿಸಿ ಆಳವಾಗಿ ಬೇರೂರಲು ಬೇಕಾದ ರಾಜಕೀಯ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಮತ್ತು ಮಾನವ ಹಕ್ಕುಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸಮುದಾಯದ ಮತ್ತು ರಾಷ್ಟ್ರ ನಿರ್ಮಾಣದ ಕನಸು-ಕನವರಿಕೆಗಳನ್ನು ನನಸನ್ನಾಗಿಸಲು ಈ ಕ್ರಮವು ಕೊಡುಗೆ ನೀಡಬಲ್ಲದು.

ಪರಿಕಲ್ಪನೆ

ಜಾಗತೀಕರಣ : ಪ್ರಬಂಧದಲ್ಲಿ ಜಾಗತೀಕರಣ , ಪ್ರಜಾಪ್ರಭುತ್ವ, ಮಾನವ ಹಕ್ಕುಗಳು ಮತ್ತು ಅಂಗವಿಕಲ ವ್ಯಕ್ತಿಗಃಉ ಎಂಬ ಪಾರಿಭಾಷಿಕ ಪದಗಳನ್ನು ಉಪಯೋಗಿಸಸಲಾಗಿದೆ. ಸುಸಂಬದ್ದತೆಯ ಹಿತದೃಷ್ಟಿಯಿಂದ ಅವುಗಳನ್ನು ವಿಷಯ ತಜ್ಞರ ನಿಖರ ಹೇಳಿಕೆಗಳ ಸಹಾಯದಿಂದ ವ್ಯಾಖ್ಯಾನಿಸಲಾಗಿದೆ.

ಜಾಗತೀಕರಣವು ಈ ಯುಗಮಾನದ ಚಮತ್ಕಾರಿಕ ಸಂಗತಿಯು ಮತ್ತು ನವ ಮಂತ್ರವೂ ಆಗಿದೆ. ಇದೊಂದು ವಿವಿಧ ಮಜಲುಗಳು ಪರಿಣಾಮವನ್ನುಂಟುಮಾಡಬಲ್ಲ ಪ್ರಕ್ರಿಯೆಯಾಗಿದ್ದು ಜಗತ್ತಿನ ವಿವಿಧ ರಾಷ್ಟ್ರಗಳ ಸರಕಾರಗಳು ಮತ್ತು ಪ್ರಜೆಗಳು ಮತ್ತು ಸಮುದಾಯಗಳ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನು ಹೊಂದಿದೆ. ಡೇವಿಡದ ಹೆಲ್ಡರವರ ಪ್ರಕಾರ " ಜಾಗತೀಕರಣವು ಅಸಮಾನ್ಯ ಸ್ಥಿತಿಗತಿಯು ಅಲ್ಲ, ಏಕರೂಪದ ಪ್ರಕ್ರಿಯೆಯು ಅಲ್ಲ, ಎಲ್ಲಕ್ಕಿಂತಲೂ ಮಿಗಿಲಾಗಿ ಅದೊಂದು ಬಹು ಆಯಾಮಗಳುಳ್ಳ ಸಂಗತಿಯಾಗಿದ್ದು ಆರ್ಥಿಕ, ರಾಜಕೀಯ, ತಾಂತ್ರಿಕ, ಸೈನಿಕ, ಕಾನೂನಾತ್ಮಕ, ಸಾಂಸ್ಕೃತಿಕ ಮತ್ತು ಪರಿಸರದ ಕ್ಷೇತ್ರಗಳನ್ನೊಳಗೊಂಡ ಅಂತರ್‌ಕ್ರಿಯೆಗಳು ಮತ್ತು ಚಟುವಟಿಕೆ ಗಳನ್ನೊಳಗೊಂಡ ಪ್ರಕ್ರಿಯೆಯೇ ಜಾಗತೀಕರಣ" ಶಂಶಿನಾಯಕ್ ರವರ ಪ್ರಕಾರ ಜಾಗತೀಕರಣವೆಂದರೆ " ರಾಷ್ಟ್ರೀಯ ಮತ್ತು ಸ್ಥಾನಿಕ ಹಿತಾಸಕ್ತಿಗಳನ್ನು ಮೀರಿದ ವಿವಿದಾಂಶಗಳನ್ನು ಒಳಗೊಂಡ ಅಂತರಾಷ್ಟ್ರೀಯ ವೇದಿಕೆಯಲ್ಲಿರುವ ಸ್ಥಿತಿ ಸನ್ನಿವೇಶವಾಗಿದೆ.

ಪ್ರಜಾಪ್ರಭುತ್ವ : ಜಾಗತೀಕರಣದಂತೆಯೇ ಪ್ರಜಾಪ್ರಭುತ್ವ ಸಹ ಸಿದ್ಧಾಂತ ಮತ್ತು ಆಚರಣೆಯಲ್ಲಿ ವಿವಿಧ ಮಜಲುಗಳುಳ್ಳ ಪರಿಕಲ್ಪನೆಯಾಗಿದೆ. ಪ್ರಜಾಪ್ರಭುತ್ವವು ಒಂದು ಸರ್ಕಾರದ ಪ್ಕಾರ ತತ್ವ ಮತ್ತು ಜೀವನ ಧರ್ಮವಾಗಿದೆ. ಪ್ರಜೆಗಳೇ ಪ್ರಭುಗಳಾಗಿರುವ ಈ ವ್ಯವಸ್ಥೆಯಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ವ್ಯಕ್ತಿಘನತೆಗಳಲ್ಲಿ ಸರ್ವತಂತ್ರ ಸ್ವತಂತ್ರರು ಮತ್ತು ಸಮಾರಾಗಿದ್ದಾರೆ. ಸಾರ್ವತ್ರಿಕ ಮತದಾನದ ಮೂಲಕ ತಮ್ಮನ್ನಾಳುವ ವರನ್ನು ಚುನಾಯಿಸುವ ರಾಜಕೀಯ ಅಧಿಕಾರವನ್ನು ಹೊಂದಿರುವದರೊಂದಿಗೆ ತಮ್ಮ ಸರ್ವಾಂಗೀಣ ಅಭಿವೃದ್ಧಿಗೆ ಅನುಕೂಲಕರವಾದ ಇಷ್ಟನಿಷ್ಟಗಳಿಗೆ ಸ್ಪಂದಿಸುವ ಹೊಣೆಗಾರಿಕೆಯುಳ್ಳ ಪ್ರತಿನಿಧಿಗಳಿಂದ ರಚಿತಗೊಳ್ಳುವ ಸರಕಾರದ ರಚನೆಯಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಲು. ಅವಕಾಶವಿರುವ ವ್ಯವಸ್ಥೆಯೇ ಪ್ರಜಾಪ್ರಭುತ್ವವಾಗಿದೆ. ಈ ಸ್ವರೂಪದ ಸರ್ಕಾರದ ಆಡಳಿತಕ್ಕೆ ಒಳಪಟ್ಟ ರಾಷ್ಟ್ರದ ನೈಸರ್ಗಿಕ, ಮಾನವ ಮತ್ತು ವಿತ್ತೀಯ ಸಂಪನ್ಮೂಲಗಳ ಹಂಚಿಕಾ ನ್ಯಾಯದ ಲಾಭಕ್ಕೆ ಯೋಗ್ಯಾನುಸಾರ ಪ್ರಜೆಗಳು ಅರ್ಹತೆಯನ್ನು ಪಡೆದಿರುವ ವ್ಯವಸ್ಥೆಯೇ ಇದಾಗಿದೆ. ಭೇಧಭಾವಗಳಿಲ್ಲದೇ ಎಲ್ಲರಿಗೂ ಭಾಗವಹಿಸಲು ಅವಕಾಶವಿರುವ ವ್ಯವಸ್ಥೆಯೇ ಪ್ರಜಾಪ್ರಭುತ್ವವಾಗಿದೆ. ಯಾವ ಬೇಧಭಾವವೂ ಇಲ್ಲದೇ ಎಲ್ಲರೂ ಎಲ್ಲಾ ಪ್ರಕಾರದ ಹಕ್ಕುಗಳನ್ನು ರಾಜ್ಯಾಂಗಬದ್ಧವಾಗಿ ಪಡೆದು ಚಲಾಯಿಸಲು ಮತ್ತು ತಮ್ಮ ಹಕ್ಕುಗಳಿಗೆ ರಕ್ಷಣೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಮತದಾನದ ಹಕ್ಕಿನೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು, ಮನವಿ ಸಲ್ಲಿಸುವ ಹಕ್ಕು, ಹುದ್ದೆಗಳನ್ನು ಅಲಂಕರಿಸುವ ಹಕ್ಕು ಮತ್ತು ಸರ್ಕಾರದ ನೀತಿಗಳನ್ನು ಟೀಕಿಸುವ ಹಕ್ಕುಗಳೆಲ್ಲವೂ ಪ್ರಜಾಧಿಕಾರದ ಪ್ರತಿಫಲಗಳಾಗಿವೆ. ಅಂಗವಿಕಲರ ದೃಷ್ಟಿಕೋನದಿಂದ ಪ್ರಜಾಪ್ರಭುತ್ವವನ್ನು ವಿಶ್ಲೇಸಿಸಿದರೆ ಒಳಗೊಳ್ಳುವಿಕೆಗಿಂತಲೂ ಹೊರಗಿಡುವಿಕೆ ಮತ್ತು ಪ್ರಜಾಪ್ರಭುತ್ವದ ನಿರಾಕರಣೆಯ ಅನುಭವಕ್ಕೆ ಬರುತ್ತದೆ. ಉದಾಹರಿಸುವುದಾದರೆ ಭಾರತದ ಸಂವಿಧಾನದ 326ನೇ ವಿಧಿಯನ್ವಯ ಭಾರತದಲ್ಲಿ ಸಾರ್ವತ್ರಿಕ ಮತದಾನ ಪದ್ದತಿಯ ಪ್ರಕಾರ 18 ವರ್ಷ ವಯಸಾದ ಪ್ರತಿಯೋರ್ವ ಪ್ರಜೆಗೂ ಮತಾಧಿಕಾರದ ಹಕ್ಕಿದೆ. ಆದರೆ ಮಾನಸಿಕ ಅಸ್ವಸ್ಥ ಅಥವಾ ಮತಿಭ್ರಮಣೆವುಳ್ಳವರು ಈ ಹಕ್ಕಿನಿಂದ ವಂಚಿತರಾಗಿದ್ದಾರೆ.. ಪೂವಾಗ್ರಹ

ಪೀಡಿತ ಮತದಾರರಿರುವ ಭಾರತದಲ್ಲಿ ವಿಕಲಾಂಗ ವ್ಯಕ್ತಿಗಳು ಚುನಾವಣೆಯಲ್ಲಿ ಸ್ಪರ್ಧಿಸಿ ಜನಾದೇಶ ಪಡೆಯುವ ಸಾಧ್ಯತೆ ತೀರಾ ವಿರಳ. ಅಸಂಖ್ಯಾತ ಪ್ರಾತಿನಿಧಿಕ ಸಂಸ್ಥೆಗಳುಳ್ಳ ಬೃಹತ್ ಪ್ರಜಾಪ್ರಭುತ್ವದಲ್ಲಿ ವಿಕಲಾಂಗ ವ್ಯಕ್ತಿಗಳ ಆಸೆ, ಆಕಾಂಕ್ಷೆಗಳು ಬೇಕು ಬೇಡಿಕೆಗಳು ಪ್ರತಿನಿಧಿತ್ವವಿಲ್ಲದೆ ಕಮರಿಹೋಗುತ್ತದೆ. ಸಮುದಾಯಕ್ಕೆ ಸಂಬಧಪಟ್ಟ ಹಿತಾಸಕ್ತಿಗಳು ಮತ್ತು ಸಮಸ್ಯೆಗಳ ಕೂಢೀಕರನ ಅಭಿವ್ಯಕ್ತಿ ಪ್ರತಿಪಾದನೆ ಮಾಡುವ ಪ್ರತಿನಿಧಿಗಳು ಸಹ ವಿರಳ. ಈ ಶೂನ್ಯತೆ ಅಂಗವಿಕಲರನ್ನು ಅಧಿಕಾರ ಶೂನ್ಯ, ಶಕ್ತಿರಹಿತ ಸಮುದಾಯವನ್ನಾಗಿಸಿದರೆ ಅವರ ಮಾನವ ಹಕ್ಕುಗಳು ಸಹ ಕಳಪೆಯ ನಾಣ್ಯಗಳಾಗುತ್ತವೆ. ಆದ್ದರಿಂದಲೇ ಈ ಸಮುದಾಯದ ವ್ಯಾಪಕ ಮತ್ತು ಪರಿಣಾಮಕಾರಿ ರಾಜಕೀಯ ಭಾಗವಹಿಸುವಿಕೆಗೆ ರಾಜಕೀಯ ಮೀಲಸಾತಿಯನ್ನು ನೀಡುವುದಕ್ಕಾಗಿ ಜನಪ್ರತಿನಿಧಿ ಕಾಯ್ದೆ ತಿದ್ದುಪಡಿಗೆ ತರುವ ಅಗತ್ಯವಿದೆ. ಗ್ರಾಮಪಂಚಾಯ್ತಿಯಿಂದ ಹಿಡಿದು ಎಲ್ಲಾ ಪ್ರಾತಿನಿಧಿಕ ಸಂಸ್ಥೆಗಳಲ್ಲಿಯೂ ವಿಕಲಾಂಗ ವ್ಯಕ್ತಿಗಳ ಪ್ರತಿನಿಧಿತ್ವಕ್ಕೆ ಅವಕಾಶವಾದಾಗ ಮಾತ್ರ ಭಾರತ ನಿಜವಾದ ಮಾನವೀಯ ಒಳಗೊಳ್ಳುವಿಕೆಯ ತತ್ವವನ್ನಾಧರಿಸಿದ ಸಮಗ್ರವಾಹಿನಿ ಪ್ರಜಾಪ್ರಭುತ್ವವಾಗುತ್ತದೆ. ಇಲ್ಲವಾದರೆ ಅದು ಕೂಡ ಅಸಮರ್ಥ ಪ್ರಜಾಪ್ರಭುತ್ವವಾಗುತ್ತದೆ.

ಜಾಗತೀಕರಣ: ಕಿರಿದಾದ ಪ್ರಪಂಚದಲ್ಲಿ ವಿವಿಧ ಸಮುದಾಯಗಳ ಜನಜೀವನದ ಮೇಲೆ ಪ್ರಭಾವ ಬೀರಿ ಹಿಡಿತ ಸಾಧಿಸಿರುವ ಜಾಗತೀಕರಣವು ವಿಕಲಾಂಗ ವ್ಯಕ್ತಿಗಳಿಗೆ ವರವಾಗಿದೆಯೋ ಅಥವಾ ಶಾಪವಾಗಿದೆಯೋ ಎಂಬುವುದು ಚಿಕಿತ್ಸಕ ಸಂಶೋಧನೆಗೆ ಒಳಪಡುವ ವಿಷಯವಾಗಿದೆ. ಜಾಗತೀಕ, ನಾಗರೀಕತೆ ಮತ್ತು ಸಂಸ್ಕೃತಿಯ ಭಾಗವಾದ ಅಂಗವಿಕಲರೂ ಸಹ ಇದರ ಪ್ರಭಾವದಿಂದ ಹೊರತಾಗಿಲ್ಲ. ವಸ್ತುನಿಷ್ಟ ದೃಷ್ಟಿಕೋನದಿಂದ ವಾಸ್ತವಿಕ ನೆಲೆಗಟ್ಟಿನಲ್ಲಿ ಅವಲೋಕಿಸಿದರೆ ವಿಕಲಾಂಗ ವ್ಯಕ್ತಿಗಳನ್ನು ವಿಶ್ವಾಸಿಗರನ್ನಾಗಿಸುವ ಸಾಮರ್ಥ್ಯ ಜಾಗತೀಕರಣದಲ್ಲಿದೆ ಎಂಬುದನ್ನು ರುಜುವಾತುಪಡಿಸಬಹುದು. ದೃಷ್ಟಿರಹಿತರು ಉಪಯೋಗಿಸುವ ಬ್ರೈಲ್‌ಲಿಪಿ, ತಂತ್ರಾಂಶಗಳಾದ ಜಾಸ್ ಮತ್ತು ಕುರ್ಜ್‌ವೆಲ್ ಶಿಕ್ಷಣ ಪದ್ಧತಿ, ವಿದ್ಯುನ್ಮಾನ ಬ್ರೈಲ್ ಮುದ್ರಣ ಯಂತ್ರ ಮತ್ತು ತಂತ್ರಜ್ಞಾನ ಹಾಗೂ ವಿವಿಧ ಸ್ವರೂಪದ ಅಂಗವಿಕಲ ವ್ಯಕ್ತಿಗಳು ಬಳಕೆ ಮಾಡುವ ಸುಧಾರಿತ ಕೃತಕ ಉಪಕರಣಗಳೆಲ್ಲವೂ ವಿಜ್ಞಾನ ತಂತ್ರಜ್ಞಾನದ ಮತ್ತು ಮಾಹಿತ ತಂತ್ರಜ್ಞಾನದಲ್ಲಾದ ಅಭೂತಪೂರ್ವ ಕ್ರಾಂತಿಯ ಫಲಗಳು ಇವೆಲ್ಲವುಗಳ ಉಪಯೋಗದ ಜ್ಞಾನ ಕೌಶಲ್ಯಗಳನ್ನು ಕರಗತ ಮಾಡಿಕೊಂಡ ವಿವಿಧ ಸ್ವರೂಪದ ಅಂಗವಿಕಲರು ವಿವಿಧ ರಂಗಗಳಲ್ಲಿರುವ ಉದ್ಯೋಗಾವಕಾಶಗಳನ್ನು ಪಡೆದು ತಾವು ಕೂಡ ಉತ್ಪಾದನಾ ಶೀಲರೆಂಬುದನ್ನು ಸಾಬೀತುಪಡಿಸುತಿದ್ದಾರೆ. ಉತ್ಕೃಷ್ಟಜ್ಞಾನವನ್ನು ಸಂಪಾದಿಸಿಕೊಂಡು ಸ್ವಯಂ ಮತ್ತು ಸಮಾಜ ನಿರ್ಮಾಣಕ್ಕೆ ಬೇಕಾದ ಸಮರ್ಥ ಸಂಪನ್ಮೂಲ ವ್ಯಕ್ತಿಗಳಾಗಿ ಬಲಾಢ್ಯ ರಾಷ್ಟ್ರ ಮತ್ತು ಮನುಕುಲದ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದಾರೆ. ಜೈವಿಕ ಮತ್ತು ವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಾದ ಮುನ್ನಡೆಯಿಂದಾಗಿ ವಿಕಲತ್ವವನ್ನು ನಿಯಂತ್ರಿಸಿ ತಡೆಗಟ್ಟುವುದು ಸಾಧ್ಯವಾಗುತ್ತಿದೆ. ಅದರಂತೆಯೇ ವಿಕಲಾಂಗ ವ್ಯಕ್ತಿಗಳ ಸಾಮರ್ಥ್ಯ ಸಂವರ್ಧನೆಗೆ ಪೂರಕವೆನ್ನಬಹುದಾದ ರೀತಿಯಲ್ಲಿ ಮೂಲಭೂತ ಪುನಶ್ಚೇತನ, ಶಿಕ್ಷಣ, ಉದ್ಯೋಗ, ಅಭಿವೃದ್ಧಿ ಮತ್ತು ಸಬಲೀಕರಣ ಸಾಧ್ಯವಾಗುತ್ತಿರುವುದು ಮತ್ತು ಈ ಸಮುದಾಯದ ಜನರ ಹಕ್ಕುಗಳ ಸೃಷ್ಟಿ, ಸಂರಕ್ಷಣೆ, ಸಂವರ್ಧನೆ ಮತ್ತು ಜಾಗೃತಿಯ ವಿಷಯಗಳು ವಿಶ್ವಸಂಸ್ಥೆಯಂತ ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಗಮನಾರ್ಹ ಸಂಗತಿಗಳಾಗಿ ಜಾಗತಿಕ ಚರ್ಚೆಗೆ ಗ್ರಾಸವಾಗಿರುವುದು ಜಾಗತೀಕರಣದ ಸತ್ವವೇ ಸರಿ ಅದೇನೇ ಇರಲಿ ಅಭಿವೃದ್ಧಿ ಹೊಂದುತ್ತಿರುವ ಮತ್ತು ಅನಭಿವೃದ್ಧಿ ರಾಷ್ಟ್ರಗಳಲ್ಲಿರುವ ಬಹುತೇಕ ಅಂಗವಿಕಲರು ಗ್ರಾಮೀಣ ಪ್ರದೇಶದಲ್ಲಿರುವ ಬಡವರು ಮತ್ತು ಅನಕ್ಷರಸ್ಥರಾಗಿದ್ದಾರೆ. ಜಾಗತೀಕರಣದಿಂದ ಸೃಷ್ಟಿಯಾದ ಸೌಲಭ್ಯಗಳು ಅವರ ತನುಮನಗಳಿಗೂ ತಲುಪುವ ಅಗತ್ಯತೆ ಇದೆ. ಇಲ್ಲವಾದರೆ ಇಲ್ಲಿಯೂ ಕೂಡ ಸೌಲಭ್ಯಗಳು ಮತ್ತು ಸಾಮರ್ಥ್ಯಗಳ ಅಸಮಾನತ ಹೆಚ್ಚುತ್ತದೆ. ಆಸಂದರ್ಭದಲ್ಲಿ ಜಾಗತೀಕರಣ ಬಡವರು ಮತ್ತು ಅನಕ್ಷರಸ್ಥ ಅಂಗವಿಕಲರ ಪಾಲಿಗೆ ವರವಾಗುವ ಬದಲು ಶಾಪವಾಗಬಹುದೆಂಬ ಖೇದಕರ ಸಂಗತಿಯು ಕಲ್ಪನಾತೀತವೇನಲ್ಲ.

ಅಂಗವಿಕಲ ವ್ಯಕ್ತಿ : ಅಂಗವಿಕಲತೆಯು ನಿಸರ್ಗದತ್ತ ಜೀವವೈವಿಧ್ಯತೆಯ ಪ್ರಾಕೃತಿಕ ಸಂಗತಿ . ಅಂತೆಯೇ ವ್ಯಕ್ತಿಯೊಬ್ಬನ ದೇಹದ ಒಂದು ಅಥವಾ ಒಂದಕ್ಕಿಂತಲೂ ಹೆಚ್ಚಿನ ಅಂಗ, ಇಂದ್ರೀಯ, ಮೆದುಳು, ಮನಸ್ಸು ಅಥವಾ ಅವುಗಳ ಊನತೆಯಿಂದ ವ್ಯಕ್ತಿಯು ತನ್ನ ದೈನಂದಿನ ಕಾರ್ಯಕ್ಕೆ ಪರರನ್ನು ಅವಲಂಬಿಸುವಂತಿದ್ದರೆ. ಅಂತಹ ವ್ಯಕ್ತಿಯನ್ನು ಅಂಗವಿಕಲ ಎಂದು ಕರೆಯಲಾಗುವುದು. ದೈಹಿಕ, ಐಂದ್ರೀಯ, ಮೆದುಳಿನ ಮಾನಸಿಕ ಮತ್ತು ಬೌದ್ಧಿಕ ವಿಕಲತೆಯನ್ನಾಧರಿಸಿ ವಿಶೇಷ ಅಗತ್ಯವುಳ್ಳ ವ್ಯಕ್ತಿಗಳನ್ನು ವಿವಿಧ ಬಗೆಯ ಅಂಗವಿಕಲರನ್ನಾಗಿ ವರ್ಗೀಕರಿಸಲಾಗಿದೆ, ಚಲನ ವೈಕಲ್ಯ, ಹಸ್ತವೈಕಲ್ಯ, ಅಂಧತ್ವ, ವಾಕ್–ಶ್ರವಣ ವೈಕಲ್ಯತೆ, ಮೆದುಳುವಾತ, ಮಾನಸಿಕ ಅಸ್ವಸ್ಥತೆ ಮತ್ತು ಬಹುವಿಧ ವಿಕಲತೆ ಅಂಗವಿಕಲತೆಯ ವಿವಿಧ ಪ್ರಕಾರಗಳಾಗಿವೆ. ಜೀವನಶೈಲಿ, ನಿರ್ವಹಣೆ, ಭಾಗವಹಿಸುವ ಅವಕಾಶಗಳ ಸ್ವರೂಪ ಮತ್ತು ಪ್ರಮಾಣ ಅಭಿರುಚಿ, ಅರ್ಹತೆ, ಗ್ರಹಿಕೆ, ಅನುಭವ, ಸ್ಪಂದನೆ ಮತ್ತು ಹಕ್ಕುಗಳ ಅನುಭವಿಸುವಿಕೆ ಮತ್ತು ಕರ್ತವ್ಯಗಳ ನಿರ್ವಹಣೆಗಳೆಲ್ಲವೂ ವಿಕಲತೆಯ ಸ್ವರೂಪ ಪ್ರಮಾಣದಿಂದ ನಿರ್ಧರಿಸಲ್ಪಡುತ್ತದೆ.

1. Rabindranath Tagore quoted by Coleridge Peter, 'Disability, Liberation, and Development' UK: Oxfam 1993.
2. Henry viscardi Jr quoted in; NHRC report on disability rights 2005
3. Dr. Krishna.R.Hombal "Challenges to Indian Democracy and Political Empowerment: A Disability Perspective", Karnataka Journal of Politics, Vol.12 Gulbarga 2011.
4. www.World disability report 2012
5. Disabled Persons by V.V.Krishna, etal.. New Delhi, Discovery Publishing House, 2001.
6. Persons with Disabilities (Equal Opportunities Protection of Rights and Full Participation) Act 1995-96.

ಮಂಡ್ಯ ಜಿಲ್ಲಾ ಪಂಚಾಯಿತಿಯ ರಾಜಕೀಯ ಕಾರ್ಯ ಚಟುವಟಿಕೆಯಲ್ಲಿ ಮಹಿಳಾ ಪ್ರತಿನಿಧಿಗಳ ಪಾತ್ರ

ಅಮೃತಾ. ಬಿ. ಎಸ್
ಹಿರಿಯ ಸಂಶೋಧಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ಭಾರತದಲ್ಲಿ ಜನಕಲ್ಯಾಣದ ಗುರಿಸಾಧನೆಗಾಗಿ ಗಾಂಧೀ ಕನಸಿನ ಗ್ರಾಮರಾಜ್ಯದ ನನಸಿಗಾಗಿ ಅಸ್ತಿತ್ವಕ್ಕೆ ಬಂದ ಸ್ಥಳೀಯ ಸರ್ಕಾರಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯೂ ಒಂದು. ಈ ಪಂಚಾಯತ್ ರಾಜ್ ವ್ಯವಸ್ಥೆಯೂ ಸಹ ಪ್ರಜಾರಾಜ್ಯದ ಅವಿಭಾಜ್ಯ ಅಂಗವಾಗಿರುವುದರಿಂದ ಜನಾಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಶ್ರೇಷ್ಠ ಸಾಧನವಾಗಿದೆ. ಕರ್ನಾಟಕದಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳು ಪಂಚಾಯತ್ ರಾಜ್ ವ್ಯವಸ್ಥೆಯ ವಿವಿಧ ಸ್ತರಗಳಾಗಿ ಪ್ರಜಾಪ್ರಭುತ್ವವನ್ನು ಮತ್ತು ಪ್ರಜಾಭಿವೃದ್ಧಿಯನ್ನು ಸುಭದ್ರಗೊಳಿಸಲು ಅಸ್ತಿತ್ವಕ್ಕೆ ಬಂದಿವೆ. ಜನತೆಯ ಜೀವನ ಮಟ್ಟ ಮತ್ತು ಗುಣಮಟ್ಟಕ್ಕನುಗುಣವಾಗಿ ಪ್ರತ್ಯಕ್ಷ ಪ್ರಜಾಪ್ರಭುತ್ವದ ಸಾಧನಗಳಾದ ಪಂಚಾಯತ್ ರಾಜ್ ವ್ಯವಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳ ಕಾರ್ಯವೈಖರಿಯನ್ನು ಕಾರ್ಯ ಸಾಧನೆಯನ್ನು ಪರಿಶೀಲಿಸಿದರೆ, ಜನಾಭಿಪ್ರಾಯವನ್ನು ಸಾಧಿಸುವುದರಲ್ಲಿ ಇವುಗಳ ಸಫಲತೆ ವಿಫಲತೆ ದೃಢಪಡುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆಯ ಕಾರ್ಯ-ಸಾಧನೆಯ ಮೌಲ್ಯಮಾಪನದಿಂದ ಮಾತ್ರ ಇದು ಸಾಧ್ಯವಾಗುತ್ತದೆ.

ಪ್ರಜಾಪ್ರಭುತ್ವದ ಯಶಸ್ಸಿಗೆ ಅಥವಾ ಪ್ರಜಾಭಿವೃದ್ಧಿಗೆ ಪ್ರಜೆಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಮತ್ತು ಸಾಂಸ್ಕೃತಿಕ ರಾಜಕೀಯ ಅಡಿಪಾಯವೇ ಮೂಲಾಧಾರವಾಗಿದೆ. ಪ್ರಜೆಗಳೇ ಪ್ರಭುಗಳಾಗಿರುವುದರಿಂದ ಪ್ರಜಾಭಿವೃದ್ಧಿ ಪ್ರಜಾಪ್ರಭುತ್ವದ ಪರಮೋಚ್ಚಗುರಿಯಾಗಿದೆ. ಪ್ರಜಾಭಿವೃದ್ಧಿ ಎಂದರೆ ಬರಿ ಪುರುಷರಭಿವೃದ್ಧಿಯಲ್ಲ ಮಹಿಳೆಯರು ಸಹ ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವಾಗಿರುವುದರಿಂದ ಅವರ ಅಭಿವೃದ್ಧಿಯೂ ಪುರುಷರಭಿವೃದ್ಧಿಯಷ್ಟೇ ಮುಖ್ಯ. ಈ ಹಿನ್ನೆಲೆಯಲ್ಲಿ **"ಮಂಡ್ಯ ಜಿಲ್ಲಾ ಪಂಚಾಯಿತಿಯ ರಾಜಕೀಯ ಕಾರ್ಯ ಚಟುವಟಿಕೆಯಲ್ಲಿ ಮಹಿಳಾ ಪ್ರತಿನಿಧಿಗಳ ಪಾತ್ರ"** ಎಂಬ ಪ್ರಬಂಧ ಪ್ರಸ್ತುತಾರ್ಹವಾಗಿದೆ. ಪ್ರಜಾಪ್ರಭುತ್ವದ ಸಂವಾದವನ್ನು ವಿಸ್ತೃತಗೊಳಿಸುವ ನಿಟ್ಟಿನಲ್ಲಿ ಸ್ತ್ರೀವಾದಿ ರಾಜಕೀಯ ಪಾಲ್ಗೊಳ್ಳುವಿಕೆಯ ದೃಷ್ಟಿಕೋನ ಪರಿಣಾಮಕಾರಿಯಾಗಬಲ್ಲದು ಎಂಬ ದೃಢನಂಬಿಕೆ ಇದರಲ್ಲಿ ವ್ಯಕ್ತವಾಗಿದೆ.

ಭಾರತದ ರಾಜ್ಯಾಂಗವು ಸಮಸ್ತ ಜನಸ್ತೋಮದ ಅಭಿವೃದ್ಧಿಯ ಅಡಿಪಾಯವಾಗಿದೆ. ಜನತೆಯ ಪಾಲ್ಗೊಳ್ಳುವಿಕೆ ಇಲ್ಲದೆ ಪ್ರಜಾಪ್ರಭುತ್ವವಾಗಲೀ, ಸಂಯುಕ್ತ ರಾಜ್ಯ ವ್ಯವಸ್ಥೆಯಾಗಲೀ, ಪರಿಣಾಮಕಾರಿಯಾಗಲಾರವು. ಪ್ರಜಾಭಿವೃದ್ಧಿಯನ್ನು ಗುರಿಯನ್ನಾಗಿಸಿಕೊಂಡು ಅಸ್ತಿತ್ವಕ್ಕೆ ಬಂದ ಮಾನವ ನಿರ್ಮಿತ ವ್ಯವಸ್ಥೆಗಳಲ್ಲಿ ರಾಜ್ಯವೂ ಒಂದು. ಸಮಾಜದ ಅವಿಭಾಜ್ಯ ಅಂಗವಾದ ರಾಜ್ಯ ಸಮಾಜದಲ್ಲಿರುವವರ ಸರ್ವತೋಮುಖ ಏಳಿಗೆಗೆ ಒಂದು ಪರಮೋಚ್ಚ ಸಾಧನವಾಗಿದೆ. ಒಂದೇ ನಾಣ್ಯದ ಎರಡು ಮುಖಗಳಂತಿರುವ ಪ್ರಜಾಭಿವೃದ್ಧಿ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳಾಗಿರುವುದರಿಂದ ಅವರ ತೀರ್ಪಿಗೆ ಅಧಿಕಪ್ರಾಶಸ್ತ್ಯವಿದೆ. ಈ ಪ್ರಾಶಸ್ತ್ಯಕ್ಕೆ ಪೂರಕವೆನ್ನುವಂತೆ ಪ್ರಜಾಪ್ರಭುತ್ವದ ಬೇರುಗಳನ್ನು ವಿಸ್ತರಿಸಿ ಆಳಗೊಳಿಸಿ ಸದೃಢಗೊಳಿಸುವ ದೃಷ್ಟಿಯಿಂದಲೇ ವಿವಿಧ ಹಂತಗಳಲ್ಲಿ ಸರ್ಕಾರಗಳ ರಚನೆಗೆ ಅವಕಾಶ ಮಾಡಿಕೊಡುವ ಸಂಯುಕ್ತ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

ಪ್ರಜಾಪ್ರಭುತ್ವದ ಅಡಿಪಾಯವನ್ನು ಭದ್ರಗೊಳಿಸುವ ಅಪರ ದಿಕ್ಕು-ದೆಸೆಗಳನ್ನು ನಿರ್ಧರಿಸಿ ಅಣೆಯ ಬರಹವನ್ನು ಬರೆಯುವ ಬೃಹತ್ ಸಂಖ್ಯೆಯ ಮತದಾರರು ಹಳ್ಳಿಗಳಲ್ಲಿಯೇ ವಾಸವಾಗಿದ್ದಾರೆ. ಆದ್ದರಿಂದಲೇ ಗ್ರಾಮರಾಜ್ಯದ ಭದ್ರಬುನಾದಿಯ ಮೇಲೆ ಭಾರತದ ಪ್ರಜಾಸತ್ತಾತ್ಮಕ ಗಣರಾಜ್ಯದ ಗೋಪುರ ನಿಷ್ಕಳಂಕಿತವಾಗಿ ಪ್ರಜ್ವಲಿಸಬೇಕಾದರೆ ಹಳ್ಳಿಗರ ಪಾಲ್ಗೊಳ್ಳುವಿಕೆ ಅತ್ಯಗತ್ಯ. ರಾಜಕೀಯ ನ್ಯಾಯ, ಸಮಾನತೆ, ಪ್ರತಿನಿಧಿತ್ವದ ಮತ್ತು ಅಧಿಕಾರ ವಿಕೇಂದ್ರೀಕರಣದ ಪರಮೋಚ್ಚ ಶಾಸನವಾದ ಭಾರತ ಸಂವಿಧಾನದ 40ನೇ ವಿಧಿಯ ಗ್ರಾಮರಾಜ್ಯದ ಕನಸು ನನಸಾಗುವ ಪ್ರಕ್ರಿಯೆಯಲ್ಲಿ ಅನೇಕ ಬೆಳವಣಿಗೆಗಳುಂಟಾಗಿವೆ. 1956ರಲ್ಲಿ ಪ್ರಾದೇಶಿಕ ಭಾಷೆ, ಸಂಸ್ಕೃತಿಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ರಾಜ್ಯಗಳು ಪುನರ್ ರಚನೆಗೊಂಡವು. ತತ್‌ಪರಿಣಾಮವಾಗಿ ಕನ್ನಡ ಭಾಷಿಕರ ಪ್ರದೇಶಗಳು ಹಳೆಯ ಮೈಸೂರು ರಾಜ್ಯಕ್ಕೆ ವಿಲೀನಗೊಂಡವು. ಭಾಷಾವಾರು ತತ್ವದಸ್ವಯವೇ ವಿಶಾಲ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಿತು. ರಾಜ್ಯ ಒಂದಾದರೂ ರಾಜ್ಯದೊಳಗಿನ ಗ್ರಾಮ ಪಂಚಾಯಿತಿಗಳು ಪ್ರಾದೇಶಿಕ ಭಿನ್ನತೆಗನುಗುಣವಾಗಿ ಭಿನ್ನ ಭಿನ್ನವಾಗಿದ್ದವು. ಇವುಗಳ ಅಸಮತೆಗಳ ನಿವಾರಣೆಗಾಗಿ 1959ರಿಂದ ಜಾರಿಗೆ ಬಂದ ವ್ಯವಸ್ಥೆಯ ಮುಖ್ಯ ಲಕ್ಷಣ-ಗ್ರಾಮ, ತಾಲ್ಲೂಕು, ಜಿಲ್ಲೆ ಎಂಬ ಮೂರು ಮಜಲಿನ ಅಧಿಕಾರ ಸೋಪಾನವನ್ನು ಜಾರಿಗೊಳಿಸಲಾಯಿತು.[1]

ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಸ್ಥಳೀಯ ಸರ್ಕಾರಗಳು ವಿವಿಧ ರೂಪದಲ್ಲಿವೆ. ವಿವಿಧ ಕಾಲಘಟ್ಟಗಳಲ್ಲುಂಟಾದ ಬದಲಾವಣೆಗೆ ತಕ್ಕಂತೆ ವಿಕಸಿತಗೊಂಡಿವೆ. ಬ್ರಿಟನ್‌ನಲ್ಲಿ ಇವುಗಳನ್ನು ಸ್ಥಳೀಯ ಪ್ರಾಧಿಕಾರವೆಂದು ಕರೆದರೆ ಇತರೆ ದೇಶಗಳಲ್ಲಿ ಸ್ಥಳೀಯ ಸರ್ಕಾರಗಳು ಎನ್ನುತ್ತಾರೆ. ಭಾರತದಲ್ಲಿ ಸ್ಥಳೀಯ ಸ್ವಯಂ ಸರ್ಕಾರಗಳು ಎಂದು ಕರೆಯಲಾಗುತ್ತದೆ.[2] ಸ್ಥಳೀಯ ಜನಸಮುದಾಯವು ತನ್ನದೇ ಆದ ಪದ್ಧತಿ, ಸಂಪ್ರದಾಯ, ಸಂಸ್ಕೃತಿ, ಆಸೆ-ಆಕಾಂಕ್ಷೆಗಳನ್ನು ಹೊಂದಿರುತ್ತವೆ. ಆಯಾ ಪ್ರದೇಶಗಳ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗೋಪಾಯಗಳ ಅರಿವು ಸ್ಥಳೀಯ ಮಹಿಳೆಯರಿಗೂ ಇರುತ್ತದೆ. ಸ್ಥಳೀಯರಿಗೆ ಹೆಚ್ಚಿನ ಆಸಕ್ತಿ ಇರುವುದರಿಂದ ಸ್ಥಳೀಯ ಜನರೇ ಆಯ್ಕೆ ಮಾಡಿದ ಮಹಿಳಾ ಪ್ರತಿನಿಧಿಗಳನ್ನೊಳಗೊಂಡ ಸಂಸ್ಥೆಗಳು ಕಾರ್ಯ ನಿರ್ವಹಿಸಿದರೆ ಸಮಸ್ಯೆಗಳಿಗೆ ಸೂಕ್ತ ಪರಿಹಾರ ದೊರೆಯುತ್ತದೆ. ಆದ್ದರಿಂದಲೇ ಜೆ. ಡಿ. ಐಚ್. ಕೋಲ್: "ಕೇವಲ ಒಂದು ಚಿಕ್ಕ ಪ್ರದೇಶವನ್ನಾಳುವ ಮತ್ತು ನಿಯೋಜಿತ ಅಧಿಕಾರಗಳನ್ನು ಚಲಾಯಿಸುವ ಸರಕಾರವೇ ಸ್ಥಳೀಯ ಸರ್ಕಾರವಾಗಿದೆ.[3] ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಭಾರತೀಯ ಮಹಿಳೆಯರ ಜೀವನ ಮತ್ತು ಸ್ಥಾನಮಾನಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಅನೇಕ ಸಂಗತಿಗಳು ಕಂಡುಬರುತ್ತವೆ. ಭಾರತದಲ್ಲಿ ಪುರುಷ ಪ್ರಧಾನ ಸಮಾಜವಿರುವುದರಿಂದ ಮಹಿಳೆಯರಿಗೆ ಸೂಕ್ತ ಸ್ಥಾನಮಾನಗಳು ದೊರಕಿಲ್ಲ. ಸ್ತ್ರೀಯರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ. ಹಾಗೂ ಅವರ ವಿಷಯದಲ್ಲಿ ತಾರತಮ್ಯ ಧೋರಣೆಗಳನ್ನು ಅನುಸರಿಸಲಾಗುತ್ತಿದೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಮಹಿಳೆಯರು ಅನೇಕ ಅಸಮಾನತೆಗಳನ್ನು ಎದುರಿಸುತ್ತಾ ಬಂದಿದ್ದಾರೆ. ಹೀಗಾಗಿ ಭಾರತ ಸ್ವಾತಂತ್ರ್ಯ ನಂತರ ಮಹಿಳೆಯರ ಸ್ಥಾನಮಾನಗಳನ್ನು ಉತ್ತಮಪಡಿಸುವ ಸಲುವಾಗಿ ಅನೇಕ ಶಾಸನಗಳನ್ನು ಜಾರಿಗೆ ತಂದಿದೆ. ಅದರಂತೆ ಭಾರತದಲ್ಲಿ ಮಹಿಳೆಯರ ಸ್ಥಿತಿಗತಿ ಕುರಿತು ಸಮಿತಿಯು [committee on the status of women in India (CSWI)] ತನ್ನ ವರದಿಯಲ್ಲಿ ಹೂಡಿದೆ. ಮಹಿಳೆಯರ ಮೊದಲ ದಶಕದ (1975–1985) ಅಂಗವಾಗಿ ಪ್ರಕಟಿಸಲಾದ 'ಸಮಾನತೆಯೆಡೆಗೆ' (Towards Equality)

ಎಂಬ ದಾಖಲೆಯು ಮಹಿಳಾ ಸಮಾನತೆ ಕುರಿತು ಪ್ರತಿಪಾದಿಸುತ್ತದೆ.[4] ಜನಪರ ಅಭಿವೃದ್ಧಿ ಮಾನವೀಯತೆ ಮತ್ತು ಸಮಾನತೆಯಿಂದ ಕೂಡಿದ ಸಮಾಜ ನಿರ್ಮಾಣವಾಗಬೇಕಾದರೆ ಮಹಿಳೆಯರ ಸಮಾನತೆಯ ಹಕ್ಕುಗಳನ್ನು ಖಾತ್ರಿಗೊಳಿಸಬೇಕು ಎಂದು 1980ರ ದಶಕದಲ್ಲಿ 'ಮಹಿಳಾ ಸಬಲೀಕರಣದ' ಪರಿಕಲ್ಪನೆಯೂ ಹುಟ್ಟಿತು. ಸಬಲೀಕರಣವು ಸಮಾನತೆ ಸಾಧಿಸುವುದು ಹಾಗೂ ನಿರ್ಧಾರ ಕೈಗೊಳ್ಳುವ ಹಕ್ಕನ್ನು ಪಡೆಯುವುದಲ್ಲದೆ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುವುದಾಗಿದೆ. ಆದುದರಿಂದಲೇ ಮಹಿಳಾ ಸಬಲೀಕರಣಕ್ಕೆ ಒಂದು ಸಾಮಾಜಿಕ ಮಹತ್ವವಿದೆ.[5] ಸ್ತ್ರೀಯರು ಸಹ ಪುರುಷರಂತೆ ರಾಜಕೀಯ ಜೀವಿಗಳಾಗಿದ್ದಾರೆ. ರಾಜಕೀಯ ಸಾಮಾಜೀಕರಣ, ರಾಜಕೀಯ ಸಂಸ್ಕೃತಿ ಮತ್ತು ಸಮಗ್ರ ಅಭಿವೃದ್ಧಿಯ ಸಾಧನವಾದ ಪಂಚಾಯತ್ ರಾಜ್ ವ್ಯವಸ್ಥೆಯು ಸ್ತ್ರೀಸಮಾನತೆಗೆ ವ್ಯತಿರಿಕ್ತವಾದ ಸಂಸ್ಥೆಯಾಗುತ್ತದೆ. ಸ್ಥಾನಿಕ ಹಂತದಲ್ಲಿಯೇ ಜನಾದೇಶವನ್ನು ಪಡೆದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಪುರುಷರಂತೆ ಸ್ತ್ರೀಯರು ಸಹ ರಾಜಕೀಯ ಪ್ರತಿನಿಧಿಗಳಾಗಿದ್ದಾರೆ. ಹೀಗಾಗಿ ಹರ್ಜೀತ್ ಅಹ್ಲುವಾಲಿಯವರು ಮಹಿಳೆಯರ ಸಬಲೀಕರಣ ಕಾರ್ಯ ವಿಳಂಬವಾಗುತ್ತಾ ಹೋದಷ್ಟು ಸಮಸ್ಯೆ ಇನ್ನಷ್ಟು ಗಂಭೀರವಾಗುತ್ತಾ ಹೋಗುತ್ತದೆ. ಇದರಿಂದ ಸಮಾಜದ ಬೆಳವಣಿಗೆಯೂ ಸಹ ಕುಂಠಿತಗೊಳ್ಳುತ್ತದೆ. ಇಂತಹ ನಷ್ಟವನ್ನು ಭರಿಸುವುದು ದೇಶಕ್ಕೆ ಸಾಧ್ಯವಿಲ್ಲ[6] ಎಂಬುದಾಗಿ ಹೇಳಿದ್ದಾರೆ.

ಪ್ರಜಾಪ್ರಭುತ್ವವನ್ನು ಅಮೂಲಾಗ್ರವಾಗಿ ಶಸಕ್ತಗೊಳಿಸಲು ರಾಜ್ಯಾಧಿಕಾರವನ್ನು ಸಂವಿಧಾನದತ್ತವಾಗಿಯೇ ವಿಕೇಂದ್ರೀಕರಿಸಿ ಜನತೆಯನ್ನು ರಾಜಕೀಯವಾಗಿ ಸಬಲೀಕರಣಗೊಳಿಸಲಾಗುವುದು. ಈ ತೆರನಾದ ರಾಜಕೀಯ ವಿಕೇಂದ್ರೀಕರಣದ ಪ್ರಕ್ರಿಯೆಯಲ್ಲಿ ಅಶೋಕ್ ಮೆಹ್ತಾ, ಬಲವಂತರಾಯ್ ಮೆಹ್ತಾ ಮತ್ತು ಕೊಂಡಜ್ಜಿ ಬಸಪ್ಪನವರ ಸಮಿತಿಗಳ ಶಿಫಾರಸ್ಸುಗಳಿಂದಾಗಿಯೂ ಸಹ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಪರಿವರ್ತನೆಯಾದುದು ಗಮನಾರ್ಹ. ಅವೆಲ್ಲವುಗಳ ಫಲಶೃತಿ ಎನ್ನುವಂತೆ ಅನುಷ್ಠಾನಗೊಂಡ 1983ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ದುರ್ಬಲ ವರ್ಗ ಮತ್ತು ಮಹಿಳೆಯರು ಮೀಸಲಾತಿಯ ಬಗ್ಗೆ ದಿಟ್ಟ ನಿಲುವನ್ನು ತೆಗೆದುಕೊಂಡು ಪರಿಶಷ್ಟ ಪಂಗಡಕ್ಕೆ ಶೇ ಮೂರರಷ್ಟು ಮತ್ತು ಮಹಿಳೆಯರಿಗೆ ಶೇ 25ರಷ್ಟು ಮೀಸಲಾತಿಯನ್ನು ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಕಲ್ಪಿಸಿಕೊಟ್ಟಿದೆ.[7] ಆದರೆ ಶೇ 25ರ ರಾಜಕೀಯ ಮೀಸಲಾತಿಯ ಪ್ರಮಾಣ ಮಹಿಳಾ ಜನಸಂಖ್ಯೆಯ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆಯಾಗುತ್ತದೆಂಬುದನ್ನು ಮನವರಿಕೆ ಮಾಡಿಕೊಳ್ಳಲು ಬಹುಕಾಲ ಬೇಕಾಗಲಿಲ್ಲ.

ತದ ನಂತರದ ದಿನಗಳಲ್ಲಿ ಕೇಂದ್ರ ಸರ್ಕಾರದಿಂದಲೂ ಮಹಿಳಾ ಮೀಸಲಾತಿಯ ಪ್ರಮಾಣದ ಹೆಚ್ಚಳಕ್ಕೆ ವಿಧಿಬದ್ಧವಾಗಿ ಕ್ರಮಕೈಗೊಳ್ಳಲಾಯಿತು. ಅದರಂತೆ ಸಂಸದೀಯ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತ ಅನೇಕ ತಿದ್ದುಪಡಿಗಳನ್ನು ಮಾಡಿ ಅಂತಿಮವಾಗಿ ಸಂವಿಧಾನದ 73ನೇ ತಿದ್ದುಪಡಿಯು ಏಪ್ರಿಲ್ 24, 1993 ರಿಂದ ಜಾರಿಗೆ ಬಂದಿತು.[8] ಇದರಿಂದ ಮಹಿಳೆಯರಿಗೆ ಶೇ 25ರ ರಾಜಕೀಯ ಮೀಸಲಾತಿಯ ಪ್ರಮಾಣದ ಬದಲು ಶೇ 33ರ ಪ್ರಮಾಣ ಸೂಕ್ತವೆಂದು ಪರಿಭಾವಿಸಿ ನಿಗದಿಪಡಿಸಲಾಯಿತು. ಅಂದಿನಿಂದಲೂ ಇಂದಿನವರೆಗೂ ಸ್ಥಳೀಯ ಸರ್ಕಾರದ ಹಂತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗಾಗಿ ಶೇ 33ರ ರಾಜಕೀಯ ಮೀಸಲಾತಿ ಜಾರಿಯಲ್ಲಿದೆ. ಇತ್ತೀಚಿನ ದಿನಗಳಲ್ಲಿ ಅಂದರೆ ಜುಲೈ 23, 2010 ರಿಂದ ರಾಜಕೀಯ ಮಹಿಳಾ ಮೀಸಲಾತಿ ಶೇ 33ರ ಬದಲಿಗೆ ಶೇ 50ರ ರಾಜಕೀಯ ಮಹಿಳಾ ಮೀಸಲಾತಿ ಜಾರಿಯಲ್ಲಿದೆ. ಶೇ 50ರ ಸ್ತ್ರೀಪರ ರಾಜಕೀಯ ಮೀಸಲಾತಿ ಸ್ತ್ರೀವಾದಕ್ಕಿಂತಲೂ ಪ್ರಜಾತಂತ್ರಕ್ಕೆ ಸಿಕ್ಕ ದೊಡ್ಡ ಜಯವೆಂದೇ ಅಭಿಪ್ರಾಯ ಪಡಲಾಗಿದೆ.

ರಾಷ್ಟ್ರದ ವಿವಿಧ ಸ್ತರದ ರಾಜಕೀಯ ಅಧಿಕಾರದಲ್ಲಿ ಗ್ರಾಮೀಣ ಮಹಿಳೆಯರಿಗೂ ಸಮರ್ಪಕವಾದ ಪಾಲು ದೊರಕಬೇಕೆಂಬ ಸದುದ್ದೇಶ ಇದರಲ್ಲಡಗಿದೆ. ಆದರೆ ಮೀಸಲಾತಿಯ ಕನಸು ಅಕ್ಷರಶಃ ನನಸಾಗುವ ಮಾರ್ಗದಲ್ಲಿ ಸವಾಲುಗಳ ಹುತ್ತ ಅಲ್ಲಲ್ಲಿ ಬೆಳೆದು ನಿಲ್ಲುತ್ತದೆ. ಅಷ್ಟೆ ಉತ್ತಮ ಧ್ಯೇಯೋದ್ದೇಶಗಳನ್ನೊಳಗೊಂಡ ಇದರ ಸೈದ್ಧಾಂತಿಕ ಒಳ ಹೊರನೋಟ ತುಂಬಾ ಸುಂದರವಾಗಿದೆ. ವ್ಯಾವಹಾರಿಕ ರಾಜಕಾರಣದ ಚೌಕಟ್ಟಿನಲ್ಲಿ ಸಮಸ್ಯೆಯನ್ನು ಅವಲೋಕಿಸಿದರೆ ಅಪ್ರಿಯ ಸತ್ಯಗಳೇ ಶೋದಾಂಶಗಳಾಗಿ ಹೊರಹೊಮ್ಮುತ್ತಿವೆ. ಇವು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಕುರಿತಾದ ಆರೋಗ್ಯ ಪೂರ್ಣ ಚಿಂತನೆ ಮತ್ತು ಚರ್ಚೆಗೆ ಪ್ರಚೋದನಾಂಶಗಳಾಗುತ್ತವೆ. ಎಂಬುದು ನಿರ್ವಿವಾದ.

"ಸ್ತ್ರೀ ಪುರುಷರ ಸಮಾನತೆಯ ಮೇಲೆ ಆಧಾರಿತವಾಗಿರುವ ಸ್ತ್ರೀ ಸ್ವಾತಂತ್ರ್ಯವನ್ನು ಯಾವುದೇ ಅಡ್ಡಿಗಳಿಲ್ಲದೆ ಮಾನ್ಯ ಮಾಡುವುದು ಬಹಳ ಅವಶ್ಯಕ. ಪುರುಷರಿಗಿಂತ ಸ್ತ್ರೀಯರೇ ಶ್ರೇಷ್ಠ ಎಂಬುದು ಇದಾಗಿಲ್ಲ. ಸ್ತ್ರೀ ಸ್ವಾತಂತ್ರ್ಯ ಎಂದರೆ ಸ್ತ್ರೀ–ಪುರುಷರ ನಡುವಣ ಸಂಘರ್ಷ ಆಗಿರದೆ, ರೂಢಿ ಪರಂಪರೆಗಳ ವಿರುದ್ಧದ ಹೋರಾಟ ಎಂಬುದನ್ನು ಒಪ್ಪಿಕೊಳ್ಳಬೇಕು. ಆದರೆ ಯಾವ್ಯಾವವು ಈ ರೂಢಿ ಪರಂಪರೆಯ ಬಂಧನಗಳ ಪರವಾಗಿರುವವೋ ಅವುಗಳ ವಿರುದ್ಧ ಹೋರಾಟ ಇದೇ ಅದರ ಸ್ಪಷ್ಟವಾದ ಅರ್ಥ.[9] ಹೀಗೆ ತಾರತಮ್ಯ, ಅಸಮಾನತೆ, ಅನರ್ಹತೆ ಹಾಗೂ ಇನ್ನಿತರ ಬಗೆಯ ಸಂಕಷ್ಟಗಳಿಗೆ ಒಳಗಾಗಿರುವ ಸ್ತ್ರೀಯರಿಗೂ ಕೂಡ ಪುರುಷರಿಗೆ ಸರಿ ಸಮಾನವಾದ ಅಂತಸ್ತು ಹಾಗೂ ಅವಕಾಶಗಳನ್ನು ನೀಡಿ ಅವರನ್ನು ಸಶಕ್ತರನ್ನಾಗಿಸಲು ಪುರುಷರಂತೆ ಮಹಿಳೆಯರಿಗೂ ರಾಜಕೀಯ ಸಮಸ್ಯೆಗಳು ಹಿತಾಶಕ್ತಿಗಳ ಬೇಡಿಕೆಗಳಿವೆ. ಅವೆಲ್ಲವುಗಳಿಗೆ ಸ್ಥಳೀಯ ಹಂತದಿಂದಲೂ ಜನಮನ್ನಣೆ ಪ್ರತಿನಿಧಿತ್ವ ಶಾಸನ ಬದ್ಧತೆಯ ಅಗತ್ಯತೆ ಇದೆ. ಅವೆಲ್ಲವುಗಳನ್ನು ಸ್ಥಳೀಯ ಕಾಯ್ದೆಗಳನ್ನಾಗಿ, ಧೋರಣೆಗಳನ್ನಾಗಿ ಅನುಷ್ಠಾನ ಯೋಗ್ಯ ಯೋಜನೆಗಳನ್ನಾಗಿ ಮಾರ್ಪಡಿಸುವ ಅಗತ್ಯತೆ ಇದೆ. ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಅವಶ್ಯಕತೆ ದಿನೇ ದಿನೇ ಅಧಿಕ ಗೊಳ್ಳುತ್ತಲೇ ಇದೆ ಅದಕ್ಕೆ ತಕ್ಕಂತೆ ಸವಾಲುಗಳು ಇವೆ. ಪ್ರಜಾಪ್ರಭುತ್ವದ ಸಂವಾದದಲ್ಲಿ ಸವಾಲುಗಳನ್ನು ದೂರಿಟ್ಟು ಅವಶ್ಯಕತೆಯನ್ನಷ್ಟೇ ಬಿಂಬಿಸಿದರೆ ಅದು ರಾಜಕಾರಣದ ಅರ್ಧಸತ್ಯವನ್ನೇ ಆದರ್ಶವನ್ನಾಗಿ ಬಿಂಬಿಸಿದಂತಾಗುತ್ತದೆ.

ಮಂಡ್ಯ ಜಿಲ್ಲಾ ಪಂಚಾಯಿತಿಯ ರಾಜಕೀಯ ಕಾರ್ಯ ಚಟುವಟಿಕೆಯಲ್ಲಿ ಮಹಿಳಾ ಪ್ರತಿನಿಧಿಗಳ ಪಾತ್ರ

ಸ್ಥಾನಿಕ ಪರಿಸರವು ಮಹಿಳೆಯರ ರಾಜಕೀಯ ಭಾಗವಹಿಸುವಿಕೆ, ಸಬಲೀಕರಣ, ವಿಕೇಂದ್ರೀಕರಣ ಮತ್ತು ಪಾಲ್ಗೊಳ್ಳುವಿಕೆಯ ಪ್ರಜಾಪ್ರಭುತ್ವದ ಗುಣಮಟ್ಟವನ್ನು ನಿರ್ಧರಿಸುತ್ತದೆ. ವೈವಿಧ್ಯಮಯವಾದ ಭಾರತದಲ್ಲಿ ಪ್ರತಿ 20ಕಿ.ಮೀ ವ್ಯಾಪ್ತಿಯಲ್ಲಿ ಪರಿಸರದ ಸ್ವರೂಪ ಬದಲಾಗುತ್ತದೆ. ಹೀಗಾಗಿ ಒಂದು ಜಿಲ್ಲೆಯೊಳಗಿನ ಪರಿಸರವು ಮತ್ತೊಂದು ಜಿಲ್ಲೆಯೊಳಗಿನ ಪರಿಸರಕ್ಕೆ ಸಮಾನವಾಗಿರುವುದಿಲ್ಲ. ಒಂದೇ ತೆರನಾದ ಸಮಸ್ಯೆಗಳಿದ್ದರೂ ಸಮಸ್ಯೆಗಳ ತೀವ್ರತೆಯಲ್ಲಿ ಭಿನ್ನತೆ ಇರುತ್ತದೆ. ಅದರಂತೆಯೇ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಕ್ರಮಗಳು ಒಂದೆಯಾಗಿದ್ದರೂ ಅವುಗಳನ್ನು ಉಪಯೋಗಿಸಿಕೊಳ್ಳುವ ಜನರ ಗುಣಮಟ್ಟ ಒಂದೇ ಆಗಿರುವುದಿಲ್ಲ. ರಾಜಕೀಯದಲ್ಲಿ ಭಾಗವಹಿಸುವ ಮಹಿಳೆಯ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ಹಿನ್ನೆಲೆ ಮತ್ತು ಅನುಭವ ಹಾಗೂ ಪರಿಸರ ಅವರ ರಾಜಕೀಯ ಭಾಗವಹಿಸುವಿಕೆಯ ಗುಣಮಟ್ಟವನ್ನು ನಿರ್ಧರಿಸುತ್ತದೆ. ಅದರಂತೆಯೇ ಅವರವರ ರಾಜಕೀಯ ಸಾಮಾಜೀಕರಣ ಮತ್ತು ರಾಜಕೀಯ ಸಂಸ್ಕೃತಿಗನುಗುಣವಾಗಿ ರಾಜಕೀಯದಲ್ಲಿ ಭಾಗವಹಿಸಿ ವೈಯಕ್ತಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಮಹಿಳೆಯರು ಸಾಧಿಸುತ್ತಾರೆ. ಮಹಿಳೆಯರು ಪುರುಷರಂತೆ ಸರ್ವ

ಸಮಾನರಾಗಿರುವುದರಿಂದ ಅವರೂ ಸಹ ಪ್ರಜಾಪ್ರಭುತ್ವದ ಕೇಂದ್ರಬಿಂದುಗಳಾಗಿದ್ದಾರೆ. ಆದ್ದರಿಂದಲೇ ಭಾರತದ 28 ರಾಜ್ಯಗಳಲ್ಲಿ ಒಂದಾದ ಕರ್ನಾಟಕದಲ್ಲಿ ಮತ್ತು ಕರ್ನಾಟಕದ 30 ಜಿಲ್ಲೆಗಳಲ್ಲಿ ಒಂದಾದ ಮಂಡ್ಯ ಜಿಲ್ಲೆಯಲ್ಲಿಯೂ ಸಹ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಯಲ್ಲಿದ್ದು ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುತ್ತಿರುವುದುಂಟು. ಮಂಡ್ಯ ಜಿಲ್ಲೆಯನ್ನು ಆಡಳಿತದ ದೃಷ್ಟಿಯಿಂದ 2 ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಅದರಂತೆ ಮಂಡ್ಯ ಉಪವಿಭಾಗದಲ್ಲಿ ಮಂಡ್ಯ, ಮದ್ದೂರು, ಮಳವಳ್ಳಿ ತಾಲ್ಲೂಕುಗಳು ಇವೆ. ಪಾಂಡವಪುರ ಉಪವಿಭಾಗದಲ್ಲಿ ಪಾಂಡವಪುರ, ಶ್ರೀರಂಗಪಟ್ಟಣ, ಕೆ.ಆರ್. ಪೇಟೆ, ನಾಗಮಂಗಲ ತಾಲ್ಲೂಕುಗಳು ಸೇರಿವೆ. ಮಂಡ್ಯ ಜಿಲ್ಲೆಯಲ್ಲಿ 232 ಗ್ರಾಮಪಂಚಾಯಿತಿಗಳು ಮತ್ತು 31 ಹೋಬಳಿಗಳು ಹಾಗೂ 7 ತಾಲ್ಲೂಕುಗಳು ಇರುತ್ತವೆ.[10]

ಮಂಡ್ಯ ಜಿಲ್ಲೆಯಲ್ಲಿ ಒಂದು ಜಿಲ್ಲಾ ಪಂಚಾಯಿತಿಯನ್ನೊಳಗೊಂಡ ಒಂದು ವ್ಯವಸ್ಥೆ ಇದೆ. ಅದರಂತೆ ಮಂಡ್ಯ ಜಿಲ್ಲಾ ಪಂಚಾಯಿತಿಗೆ ಜೂನ್ ತಿಂಗಳ 2000ನೇ ಸಾಲಿನಲ್ಲಿ ಸದಸ್ಯರ ಆಯ್ಕೆಗಾಗಿ ಸಾರ್ವತ್ರಿಕ ಚುನಾವಣೆ ನಡೆಸಲಾಗಿದೆ. ಈ ಚುನಾವಣೆಯಲ್ಲಿ ಒಟ್ಟು 39 ಮತಕ್ಷೇತ್ರಗಳಿಂದ 39 ಚುನಾಯಿತ ಸದಸ್ಯರು ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾಗಿ ಬಂದಿದ್ದಾರೆ. ಅವರಲ್ಲಿ 15 ಮಂದಿ ಮಹಿಳಾ ಸದಸ್ಯರು ಇದ್ದಾರೆ. 2005 ರಂದು ಸಾರ್ವತ್ರಿಕ ಚುನಾವಣೆ ನಡೆಸಲಾಗಿದ್ದು ಈ ಚುನಾವಣೆಯಲ್ಲಿ ಒಟ್ಟು 40 ಮಂದಿ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಚುನಾಯಿತರಾಗಿದ್ದಾರೆ. ಅದರಲ್ಲಿ 15 ಮಂದಿ ಮಹಿಳಾ ಸದಸ್ಯರು ಇದ್ದಾರೆ. 2010ನೇ ಸಾಲಿನಲ್ಲಿ ಮಹಿಳಾ ಮೀಸಲಾತಿ ಶೇ 33ರಿಂದ ಶೇ50 ರಷ್ಟು ಹೆಚ್ಚಾಗಿರುವುದರಿಂದ 2010–2011ನೇ ಸಾಲಿನಲ್ಲಿ ಮಂಡ್ಯ ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾದ ಮಹಿಳಾ ಸದಸ್ಯರ ಸಂಖ್ಯೆ 20 ಆಗಿದೆ. ಹೀಗೆ ಸಂವಿಧಾನಾತ್ಮಕ ರಾಜಕೀಯ ಮೀಸಲಾತಿಯಿಂದಾಗಿ ಮಹಿಳಾ ಪ್ರತಿನಿಧಿಗಳಿಗೆ ಹೆಚ್ಚಿನ ಅವಕಾಶಗಳು ದೊರಕಿದೆ. ಇದರಿಂದಾಗಿ ಮಹಿಳೆಯರಿಗೆ ಕುಟುಂಬದ ಪ್ರೇರಣೆ, ಪಕ್ಷದ ಬೆಂಬಲ, ಸಮುದಾಯದ ಸಹಕಾರವು ಸಹ ಸಿಕ್ಕಿದೆ. ಹಿಂಗಾಗಿ ಗ್ರಾಮೀಣ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ರಾಜಕೀಯವಾಗಿ ಮಹಿಳಾ ಪ್ರತಿನಿಧಿಗಳ ಪಾತ್ರ ಸಹಕಾರಿಯಾಗಿದೆ.

ಪ್ರಸ್ತುತ ರಾಜಕೀಯದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಅವಕಾಶಗಳಿದ್ದರೂ ಅವರು ಪುರುಷರ ತಾಳಕ್ಕೆ ಕುಣಿಯಬೇಕಾಗುವುದು ಇಂದಿನ ದುರಂತವೇ ಸರಿ. ಮಹಿಳೆಯರು ಎದುರಿಸುತ್ತಿರುವ ತಾರತಮ್ಯ, ಶೋಷಣೆ, ಅಸಮಾನತೆ ಮುಂತಾದವುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ, ಮುಖ್ಯವಾಗಿ ನಮ್ಮ ಕುಟುಂಬ ವ್ಯವಸ್ಥೆಯೇ ಅಸಮಾನತೆಯ ಆಧಾರದಲ್ಲಿ ನಿಂತಿದೆ. ಇಲ್ಲಿ ಹುಟ್ಟಿನಿಂದಲೇ ಗಂಡು ಮತ್ತು ಹೆಣ್ಣು ಮಕ್ಕಳನ್ನು ಬೆಳೆಸುವ ವಿಧಾನದಲ್ಲೇ ಭಿನ್ನತೆ ಇದೆ. ಹೀಗಾಗಿ ಇಲ್ಲಿಂದಲೇ ಅಸಮಾನತೆಯ ಬೀಜ ಮೊಳಕೆಯೊಡೆದು ಸಮಾಜದಲ್ಲಿ ಬೆಳೆಯುತ್ತಿದೆ. ಇಂತಹ ಅಸಮಾನತೆಗಳನ್ನು ಲಿಂಗಬೇಧವನ್ನು, ಹೋಗಲಾಡಿಸುವಲ್ಲಿ ಸರ್ಕಾರ ಹೆಚ್ಚು ಹೆಚ್ಚು ಸೂಕ್ತ ಕ್ರಮ ಕೈಗೊಳ್ಳಬೇಕು. ಮಹಿಳೆಯರ ರಾಜಕೀಯ ಮತ್ತು ಆಡಳಿತಾತ್ಮಕ ಪಾಲ್ಗೊಳ್ಳುವಿಕೆಯ ವಿನಃ ರೂಪುಗೊಂಡ ಮತ್ತು ರೂಪುಗೊಳ್ಳಬಹುದಾದ ಮಹಿಳಾಪರ ಶಾಸನಗಳು ಮತ್ತು ಯೋಜನೆಗಳು ಬರಿ ಅಲಂಕೃತ ಕಾಗದದ ಕುಸುಮಗಳಾಗಿವೆ. ತತ್ಪರಿಣಾಮವಾಗಿ ಸಭೆಯಲ್ಲಿ ಭಾಗವಹಿಸಿದ ಚುನಾಯಿತ ಮಹಿಳಾ ಪ್ರತಿನಿಧಿಗಳನ್ನು ಅಧಿಕಾರ ಶೂನ್ಯ ಉತ್ಸವ ಮೂರ್ತಿಗಳನ್ನಾಗಿ ಪುರುಷರ ಕೈಗೊಂಬೆಗಳನ್ನಾಗಿ ಮಾಡಲಾಗಿದೆ. ಮಹಿಳಾಪರ ಪ್ರಜಾಪ್ರಭುತ್ವಕ್ಕೆ ಉಂಟಾಗಬಹುದಾದ ಅಪಚಾರದಿಂದ ವ್ಯವಸ್ಥೆಯನ್ನು ಪಾರುಮಾಡಬೇಕಾದರೆ ಅಧಿಕ ಪ್ರಮಾಣದ ಮಹಿಳೆಯರ ರಾಜಕೀಯ ಭಾಗೀಕರಣವನ್ನು ಪ್ರೋತ್ಸಾಹಿಸಬೇಕಾಗಿದೆ.

ಉಪಸಂಹಾರ

ಇಂದು ನಮ್ಮ ಸಮಾಜದಲ್ಲಿ ಹೆಣ್ಣಿನ ಬದುಕು ದ್ವಂದ್ವಗಳ ನಡುವೆ ಸಿಲುಕಿದೆ. ಚರಿತ್ರೆಯ ಕಾಲಗರ್ಭದಲ್ಲಿ ಯಾವುದೇ ದೇಶವನ್ನು ಓರೆ ಹಚ್ಚಿ ನೋಡಿದಾಗ ನಮಗೆ ಸ್ತ್ರೀ ಶೋಷಣೆ ಮತ್ತು ಸ್ತ್ರೀಯರು ಎರಡನೆ ದರ್ಜೆ ಪ್ರಜೆಯಾಗಿ ಹಾಗೂ ಪುರುಷ ಸಮಾಜದ ತುಳಿತಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಭಾರತದಲ್ಲಿ ಪ್ರಾತಿನಿಧಿಕ ಪ್ರಜಾಪ್ರಭುತ್ವ ಇರುವುದರಿಂದಲೇ ಪುರುಷರಂತೆ ಮಹಿಳೆಯರು ಸಹ ಚುನಾವಣೆಗಳಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದಾರೆ. ಶಾಸಕರಾಗಿ, ಸಚಿವರಾಗಿ, ಮುಖ್ಯಮಂತ್ರಿಗಳಾಗಿ, ಪ್ರಧಾನಮಂತ್ರಿಯಾಗಿ ಹಾಗೂ ರಾಷ್ಟ್ರಪ್ರಭುಕ್ಷರಾಗಿ ಯಶಗೊಂಡ ಉದಾಹರಣೆಗಳು ಇವೆ. ಆದರೆ ಇವು ಬೆರಳೆಣಿಕೆಯಷ್ಟು ಮಾತ್ರ. ಸ್ಥಳೀಯ ಸರ್ಕಾರದ ಹಂತದಲ್ಲಿಯೇ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿ ಬೆಳೆಸಿದರೆ ಅದರಲ್ಲಿಯೂ ರಾಜ್ಯಾಡಳಿತಕ್ಕೆ ಬೇಕಾದ ಕೌಶಲ್ಯಗಳು ರೂಢಿಗತವಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಮಹಿಳೆಯರು ಸಹ ರಾಜಕೀಯ ಪ್ರತಿಭೆ ಮತ್ತು ಸಾಮರ್ಥ್ಯಗಳಿಂದ ಸಂಪದ್ಭರಿತರಾಗಿದ್ದಾರೆ. ಆದರೆ ಅವೆಲ್ಲದರ ಪೂರ್ಣ ಪ್ರಯೋಜನಕ್ಕಾಗಿ ಅವಶ್ಯವಿರುವ ಸಮರ್ಪಕ ರಾಜಕೀಯ ಅವಕಾಶಗಳು ಸಿಗದಿರುವುದು ನತದೃಷ್ಟಕರ.

ಹಾಗೆಯೇ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಗೆ ಪ್ರೇರಕವೆನ್ನಬಹುದಾದ ರಾಜಕೀಯ ಪ್ರಜ್ಞೆಯನ್ನು ಮೂಡಿಸುವಲ್ಲಿ ರಾಜಕೀಯ ಶಿಕ್ಷಣ ಅತ್ಯಗತ್ಯ. ರಾಜಕೀಯ ಪಕ್ಷಗಳನ್ನೊಳಗೊಂಡಂತೆ ವಿವಿಧ ಹಂತದಲ್ಲಿ ಅಸ್ಥಿತ್ವದಲ್ಲಿರುವ ಪ್ರಾತಿನಿಧಿಕ ಸಂಸ್ಥೆಗಳು ಮಹಿಳೆಯರಿಗೂ ರಾಜಕೀಯ ಶಿಕ್ಷಣವನ್ನು ಕೊಡುತ್ತಿವೆ. ಆದರೂ ವ್ಯವಸ್ಥೆ ಎಲ್ಲವೂ ಪುರುಷ ಪ್ರಧಾನವಾದುದರಿಂದ ಸ್ತ್ರೀಯರ ನಿಜವಾದ ರಾಜಕೀಯ ಭಾಗವಹಿಸುವಿಕೆಗೆ ಆತಂಕಗಳು ಇವೆ. ಅಲ್ಲದೆ ಭಾರತದ ಸಂವಿಧಾನದಲ್ಲಿ 1993ರಂದೀಚೆಗೆ ಕ್ರಿಯಾಶೀಲಗೊಂಡ ವಿಕೇಂದ್ರೀಕರಣದಲ್ಲಾದ ಅಭೂತಪೂರ್ಣ ಕ್ರಾಂತಿಯಿಂದಾಗಿ ಸ್ಥಾನಿಕ ಪ್ರಜಾಪ್ರಭುತ್ವದಲ್ಲಿ ಮಹಿಳಾ ಪ್ರತಿನಿಧಿಗಳರಾಜಕೀಯ ಸಹಭಾಗಿತ್ವ ಅಧಿಕಗೊಂಡಿದೆ. ಹೀಗಾಗಿ ಪ್ರಸ್ತುತ ರಾಜಕೀಯ ಕ್ಷೇತ್ರದಲ್ಲಿ ಅನೇಕ ರೀತಿಯ ಸಮಸ್ಯೆಗಳ ಪರಿಹಾರಕ್ಕೆ ಸುಶಿಕ್ಷಿತ ಪ್ರಜ್ಞಾವಂತ ಸ್ಥೈರ್ಯವುಳ್ಳಂತಹ ಮಹಿಳೆಯರ ಅವಶ್ಯಕತೆ ಇದೆ ಎಂಬುದು ಸಹ ತಿಳಿದು ಬಂದಿದೆ. ಇದರೊಂದಿಗೆ ಹಲವಾರು ಮಹಿಳೆಯರು ಸಹ ತಮ್ಮ ಕೀಳರಿಮೆ ಹಿಂಜರಿಕೆ ಮನೋಭಾವ ತೊರೆದು ರಾಜಕೀಯಕ್ಕೆ ಪ್ರವೇಶಿಸುವುದರಲ್ಲಿ ಮುಂದಾಗಬೇಕು. ಕುಟುಂಬದ ಸಹಕಾರ ಮತ್ತು ಆಡಳಿತ ನಿರ್ವಹಣೆಗೆ ಸಹ ಪುರುಷರ ಸಹಕಾರ ದೊರೆತರೆ ಸಮಾಜಮುಖಿ ಪ್ರಗತಿಗಾಮಿ ಚಟುವಟಿಕೆಗಳ ಕಾರ್ಯನಿರ್ವಹಣೆ ಸಾಧ್ಯವಾಗುವುದರಲ್ಲಿ ಸಂಶಯವಿಲ್ಲ.

ಅಡಿಟಿಪ್ಪಣಿಗಳು

1. ಡಾ. ಮಂಜುನಾಥ್ ಟಿ.ಎನ್., "ಪಂಚಾಯಿತಿ ರಾಜ್ಯ ಪದ್ಧತಿ' ಕರ್ನಾಟಕ ಗ್ರಾಮಾಭ್ಯುದಯ ಸೇವಾ ಸಂಸ್ಥೆಗಳ ಒಕ್ಕೂಟ, ಬೆಂಗಳೂರು, 1985, ಪುಟ 4.
2. ಪ್ರೊ. ರಾಜಶೇಖರ ಬಿ.ಎಸ್., "ಭಾರತ ಸಂವಿಧಾನ ಮತ್ತು ರಾಜಕೀಯ" ಶ್ರೀಮತಿ ಲಲಿತಾ ಪ್ರಕಾಶನ, 2009, ಪುಟ. 161.
3. ಲೋಹಿತಾಶ್ವ ಎಚ್.ಸಿ. 'ಪಂಚಾಯ್ತಿ ರಾಜ್ಯ ವ್ಯವಸ್ಥೆ', ವಿದ್ಯಾನಿಧಿ ಪ್ರಕಾಶನ, ಗದಗ, 2003–04, ಪುಟ. 2.
4. ಪ್ರೊ. ಒಡೆಯರ್ ಡಿ. ಹೆಗಡೆ, "ಭಾರತದಲ್ಲಿ ಮಹಿಳಾ ರಾಜಕೀಯ ಪ್ರಾತಿನಿಧ್ಯ", ಅರ್ಜುನ್ ಪಬ್ಲಿಷಿಂಗ್ ಹೌಸ್, 2007, ಪುಟ. 83.
5. ಡಾ. ಇಂದಿರಾ ಎಸ್. "ಮಹಿಳೆ ಮತ್ತು ಸವಾಲುಗಳು", ಶ್ರುತಿಲೋಕ ಪ್ರಕಾಶನ, ಮೈಸೂರು, 2010, ಪುಟ. 9.
6. ಸುಳಕೋಡೆ ಸ.ರಾ., "ಮಹಿಳೆಯರ ಜೀವನ ನಿರೀಕ್ಷೆ ವರ್ಷಗಳ

ಅವಲೋಕನ", ಕರ್ನಾಟಕ ವಿಕಾಸ, ಬೆಂಗಳೂರು, ಜುಲೈ – 2010, ಪುಟ. 27.
7. ಡಾ. ಶಂಕರಪ್ಪ ಆರ್. "ಆಡಳಿತ ವಿಕೇಂದ್ರೀಕರಣ ಮತ್ತು ಗ್ರಾಮೀಣಾಭಿವೃದ್ಧಿ" ಅನುಜನ ಪ್ರಕಾಶನ, ಬೆಂಗಳೂರು, 2007, ಪುಟ. 18.
8. ಅಸ್ಲಮ್ ಎಂ., "ಭಾರತದಲ್ಲಿ ಪಂಚಾಯಿತಿ ರಾಜ್" ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, 2010, ಪು. 38.
9. ಡಾ. ವಿಠಲರಾವ್, "ಭಾರತೀಯ ಸ್ತ್ರೀ ಜೀವನ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009, ಪುಟ. 148.
10. ಮಂಡ್ಯ ಜಿಲ್ಲಾ ಅಂಕಿ ಅಂಶಗಳ ನೋಟ 2002–2003, ಪುಟ. 38.

ಗುಪ್ತರ ಕಾಲಾವಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ

ಡಾ॥ ಗಂಗಮ್ಮ ಹೆಚ್.ಎ
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

ವೇದಗಳ ವಿಶ್ವ ತುಂಬ ಸರಳವಾಗಿತ್ತು. ಕೆಳಗೆ ಚಪ್ಪಟೆಯಾದ ವರ್ತುಲಾಕಾರದ ಭೂಮಿ, ಮೇಲೆ ಸೂರ್ಯ ಚಂದ್ರತಾರೆಗಳು ಚಲಿಸುವ ಆಕಾಶ ಅವುಗಳ ನಡುವೆ ಅಂತರಿಕ್ಷ ಪಕ್ಷಿಗಳು ಮೋಡಗಳು ಮತ್ತು ದೇವತೆಗಳ ನಿವಾಸ ಸ್ಥಾನ. ವಿಶ್ವದ ಈ ಚಿತ್ರ ನಂತರದ ಧಾರ್ಮಿಕ ಚಿಂತನೆಗಳಿಂದಾಗಿ ಗೋಜಲುಗೊಂಡಿತ್ತು. ವಿಶ್ವದ ಮೂಲ ಮತ್ತು ವಿಕಾಸವನ್ನು ಕುರಿತು ಭಾರತೀಯ ಚಿಂತನೆಗಳು, ವೈಜ್ಞಾನಿಕಕ್ಕಿಂತಲೂ ಹೆಚ್ಚಾಗಿ ಧಾರ್ಮಿಕವಾಗಿದ್ದವು. ಆದರೂ, ಎಲ್ಲಾ ಭಾರತೀಯ ಧರ್ಮಗಳು ವಿಶ್ವ ವಿಜ್ಞಾನಕ್ಕೆ ಸಂಬಂಧಿಸಿದಂತೆ ಕೆಲವು ಸಿದ್ಧಾಂತಗಳನ್ನು ಹೊಂದಿದ್ದವು. ಈ ಸಿದ್ಧಾಂತಗಳು ಭಾರತೀಯ ಚಿಂತನೆಯ ಮೂಲಭೂತ ಪೂರ್ವಗ್ರಹಿತ ಕಲ್ಪನೆಗಳು. ಪಶ್ಚಿಮದ ಚಿಂತನೆಯ ಮೇಲೆ ಬಹಳ ಕಾಲದಿಂದ ಪ್ರಭಾವ ಬೀರಿದ ಸೆಮೆಟಿಕ್ ಚಿಂತನೆಗಳಿಂದ ತೀರ ಭಿನ್ನವಾಗಿದ್ದವು. ಸೆಮೆಟಿಕ್ ಕಲ್ಪನೆಯಂತೆ ವಿಶ್ವ ಅತ್ಯಂತ ಹಳೆಯದಾಗಿದ್ದು ಅದರ ಬೆಳವಣಿಗೆ ಮತ್ತು ಅವನತಿ ನಿರಂತರವಾಗಿ ತಿರುಗುವ ಚಕ್ರರೂಪದಲ್ಲಿದೆ, ಅದರ ಅಳತೆ ಅಘಾದವಾದದ್ದು.

ಮೌರ್ಯರು ಮತ್ತು ಕುಶಾನರ ಅವನತಿಯ ನಂತರ ರಾಜಕೀಯ ಅರಾಜಕತೆ ಉಂಟಾಗಿ ಸಾಂಸ್ಕೃತಿಕ ಪ್ರಗತಿಯ ಬೆಳವಣಿಗೆ ಕುಂಠಿತ ಗೊಂಡಿದ್ದರಿಂದ ಪ್ರೊ.ವಿ.ಎಸ್ ಸ್ಮಿತ್ ರವರು ಕುಶಾನರ ಮತ್ತು ಶಾತವಾಹನರ ಪತನದಿಂದ ಗುಪ್ತರ ಕಾಲಾವಧಿಯವರೆಗಿನ ಕಾಲಾವಧಿಯನ್ನು ಕಗ್ಗತ್ತಲ ಕಾಲ ಎಂದು ಕರೆದಿರುವುದು ಸಮಂಜಸವಾಗಿದೆ. ಆದರೆ, ಕ್ರಿ.ಶ 3ನೇ ಶತಮಾನದಲ್ಲಿ ಪಾಟಲೀಪುತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು 6ನೆ ಶತಮಾನದವರೆಗೆ ಆಳ್ವಿಕೆ ಮಾಡಿದ ಗುಪ್ತರು ಹಿಂಧು ಧರ್ಮವನ್ನು ಪುನಶ್ಚೇತನಗೊಳಿಸಿ ವಿಧೇಶಿಯರನ್ನ ಭಾರತದ ಗಡಿಗಟ್ಟಿ ಧರ್ಮ, ಶಿಕ್ಷಣ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ, ಲಲಿತಕಲೆ, ಚಿತ್ರಕಲೆ, ಸಂಗೀತ, ಕಲೆ ಮತ್ತು ವಾಸ್ತುಶಿಲ್ಪಕ್ಕೆ, ಭಾರತೀಯ ಸಂಸ್ಕೃತಿಗೆ ಮಹೋನ್ನತವಾದ ಕೊಡುಗೆಯನ್ನ ನೀಡುವುದರ ಮೂಲಕ ಭಾರತದ ಚರಿತ್ರೆಯನ್ನ ಕಾರ್ಗತ್ತಲ್ಲಗವಿಯಿಂದ ಬೆಳಕಿನ ಬೆಟ್ಟದೆಡೆಗೆ ಕೊಂಡೊಯ್ದು ದೇಶದ ಚರಿತ್ರೆಯಲ್ಲಿ ಹೊಸ ದಾಖಲೆ ಸೃಷ್ಟಿಸಿ 'ಸುವರ್ಣ ಯುಗ' ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ನನ್ನ ಲೇಖನದಲ್ಲಿ ಗುಪ್ತರ ಕಾಲಾವಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವೈದ್ಯಕೀಯ ಲೋಕ, ಖಗೋಳ ಶಾಸ್ತ್ರ, ಲೋಹ ಶಾಸ್ತ್ರ, ಭೂಗೋಳ, ಗಣಿತ ಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಾದ ಪ್ರಗತಿಯನ್ನ ವಿಶ್ಲೇಷಿಸುವ ಪ್ರಯತ್ನ ನಡೆಸಿದ್ದೇನೆ.

ಆರ್ಯಭಟ್ಟ, ವರಹಮೀರ ಮತ್ತು ಬ್ರಹ್ಮಗುಪ್ತ ಇವರು ಪ್ರಪಂಚದ ಶ್ರೇಷ್ಠ ಖಗೋಳಶಾಸ್ತ್ರಜ್ಞರು ಮತ್ತು ಗಣಿತಶಾಸ್ತ್ರಜ್ಞರು. ಈ ಮೂವರು ಗುಪ್ತರ ಕಾಲದಲ್ಲಿದ್ದ ಪ್ರಮುಖ ವಿಜ್ಞಾನಿಗಳು.

ಭಾರತದ ನ್ಯೂಟನ್ ಗಣಿತ ಶಾಸ್ತ್ರದ ಪಿತಾಮಹ ಶ್ರೇಷ್ಠ ಖಗೋಳ ಶಾಸ್ತ್ರಜ್ಞ ಬ್ರಹ್ಮಗುಪ್ತ. ಗುಪ್ತರ ಕಾಲದಲ್ಲಿ ಜೀವಿಸಿದ್ದು ಈತನು ಬ್ರಹ್ಮ ಸಿದ್ಧಾಂತ ಮತ್ತು ಖಂಡ ವಾದ್ಯಕ ಎಂಬ ಕೃತಿಯನ್ನು ಬರೆದಿದ್ದಾನೆ. ಬ್ರಹ್ಮಗುಪ್ತನು ಭೂಮಿಯ ಗುರುತ್ವಾಕರ್ಷಣ ನಿಯಮವನ್ನು ಸಿದ್ಧಾಂತದ ರೂಪದಲ್ಲಿ ಪ್ರಚಾರ ಪಡಿಸಿ ನ್ಯೂಟನ್‌ಗೆ ಋಣಿಯಾಗಿದ್ದಾನೆ. ಎಲ್ಲಾ ವಸ್ತುಗಳು ಭೂಮಿಯ ಮೇಲೆ ಬೀಳುತ್ತೆ. ಅದು ಪ್ರಕೃತಿಯ ನಿಯಮ. ಅದು ಭೂಮಿಯ ಗುಣ. ವಸ್ತುಗಳನ್ನು ಆಕರ್ಷಿಸುವುದು ಮತ್ತು ವಸ್ತುಗಳನ್ನು ಭೂಮಿಯ ಮೇಲೆ ಇಟ್ಟುಕೊಳ್ಳುವುದು ಭೂಮಿಯ ಗುಣ ಆಗಿದೆ' ಜೊತೆಗೆ ಶೂನ್ಯ ಸಿದ್ಧಾಂತ ಮತ್ತು ದಶಮಾನ ಪದ್ಧತಿಯನ್ನ ಪ್ರಚಾರಕ್ಕೆ ತಂದಂತವನು. ಬ್ರಹ್ಮಗುಪ್ತ ವಿಶ್ವದ ಸುತ್ತಳತೆಯನ್ನ 5000 ಯೋಜನಗಳೆಂದು ಹೇಳಿದ್ದಾನೆ. ಬ್ರಹ್ಮ ಗುಪ್ತನ ಯೋಜನೆ 4.5 ಮೈಲು ಎಂದು ತಿಳಿದರು ಅವನ ಅಂದಾಜು ಬಹಳ ತಪ್ಪೇನಲ್ಲ. ಪ್ರಾಚೀನ ಖಗೋಳ ಶಾಸ್ತ್ರಜ್ಞರು ಕೊಟ್ಟ ಯಾವುದೇ ಅಂದಾಜಿಗೆ ಈ ಹೇಳಿಕೆ ವಿಸ್ತೀರ್ಣ ಹತ್ತಿರವಾಗಿದೆ.[2]

ಖಗೋಳ ವಿಜ್ಞಾನ : ಆಯಾ ಅವಧಿಯಲ್ಲಿ ಮಾಡಬೇಕಾದ ಯಜ್ಞಗಳ ದಿನ ಮತ್ತು ಸಮಯವನ್ನ ಗೊತ್ತುಪಡಿಸುವ ಉದ್ದೇಶದಿಂದ ರೂಪಿಸಲಾದ ಪ್ರಾಚೀನ ಜ್ಯೋತಿಷ್ಯಶಾಸ್ತ್ರವು ವೇದಭ್ಯಾಸದ ಒಂದು ಅಂಗವಾಗಿತ್ತು. ಈ ವಿಷಯದ ಮೇಲೆ ಇರುವ ಅರಿವು ಗುಪ್ತರ ಕಾಲಾವಧಿಯಲ್ಲಿ ವೈಜ್ಞಾನಿಕ ದೃಷ್ಟಿಕೋನದಲ್ಲಿ ಬದಲಾವಣೆ ತಂದಿತು. ವೈಧಿಕ ಕಾಲದ ಭಾರತೀಯ ಖಗೋಳ ವಿಜ್ಞಾನದ ನಿಜವಾದ ತಿಳುವಳಿಕೆಯನ್ನು ಸೂಚಿಸುವುದಿಲ್ಲ. ಆದರೆ, ಆ ಕಾಲದ ವ್ಯವಹಾರಿಕ ಉದ್ದೇಶಗಳಿಗಾಗಿ ಅದು ಸಾಕಾಗುವಷ್ಟಿತ್ತೆಂದು ವೈಧಿಕ ಗ್ರಂಥಗಳ ಭಾಗದಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಆರ್ಯಭಟನ ಸಮಕಾಲೀನನಾದ ವರಾಹಮೀರನು ಗುಪ್ತರ ಕಾಲದ ಮತ್ತೊಬ್ಬ ಪ್ರಸಿದ್ಧ ಖಗೋಳ ವಿಜ್ಞಾನಿ ಹಾಗೂ ಜ್ಯೋತಿಷ್ಯ ಶಾಸ್ತ್ರಜ್ಞ. ಈತ ಖಗೋಳ ಶಾಸ್ತ್ರವನ್ನ ಖಗೋಳ ಶಾಸ್ತ್ರ, ಗಣಿತ ಶಾಸ್ತ್ರ ಜಾತಕ ಶಾಸ್ತ್ರ, ಮತ್ತು ಜ್ಯೋತಿಷ್ಯ ಶಾಸ್ತ್ರ ಎಂದು ವಿಂಗಡಿಸಿದ್ದನು. ಈತ ಬೃಹತ್ ಸಂಹಿತೆ, ಬೃಹತ್ ಜಾತಕ, ಲಘು ಜಾತಕ, ಪಂಚ ಸಿದ್ಧಾಂತಿಕ, ಬೃಹತ್ ವಿವಾಹ ಪಟಲ, ಮೊದಲಾದ ಗ್ರಂಥಗಳನ್ನು ರಚಿಸಿದ್ದಾನೆ.

ಈತನ ಬೃಹತ್ ಸಂಹಿತೆ 106 ಅಧ್ಯಾಯಗಳನ್ನು ಒಳಗೊಂಡಿದ್ದು ಜ್ಞಾನದ ವಿಶ್ವಕೋಶದಂತಿದೆ. ಇದು ಖಗೋಳಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ವಾಸ್ತುಶಿಲ್ಪ, ವಿವಾಹ, ಶಕುನ, ಮೊದಲಾದ ವಿಷಯಗಳನ್ನು ಒಳಗೊಂಡಿದೆ ಇದರಲ್ಲಿ ಗ್ರೀಕ್ ಖಗೋಳಶಾಸ್ತ್ರಜ್ಞರನ್ನ ಸ್ಮರಿಸಿದ್ದಾನೆ. ಈತನು ಚಂದ್ರ ಭೂಮಿಯ ಸುತ್ತ ಸುತ್ತುವನೆಂದು ಪ್ರತಿಪಾಧಿಸಿದ್ದಾನೆ. ಈ ಕೃತಿಯನ್ನ ಖಗೋಳ ಶಾಸ್ತ್ರಜ್ಞನ ಬೈಬಲ್ ಎಂದು ಕರೆಯುತ್ತಾರೆ. ಈತನ ಪಂಚಕ ಸಿದ್ಧಾಂತವು ಖಗೋಳ ಶಾಸ್ತ್ರದ 5 ಶಾಖೆಗಳಾದ ಪೈತಾಮಹ ಸಿದ್ಧಾಂತ ರೋಮಕ ಸಿದ್ಧಾಂತ, ಪೌಲಿನ ಸಿದ್ಧಾಂತ, ವಶಿಷ್ಟ ಸಿದ್ಧಾಂತ ಮತ್ತು ಸೂರ್ಯಸಿದ್ಧಾಂತಗಳನ್ನು ಒಳಗೊಂಡಿದೆ ಈತನ ಮಗ ಪ್ರಿತ್ಯುಸನು ಹೋರಾಶತ ಪಂಚಶಿಕ ಎಂಬ ಕೃತಿಯನ್ನು ರಚಿಸಿದ್ದಾನೆ. ವರಾಹಮಿಹಿರನಿಗೆ ಗೊತ್ತಿದ್ದ 5 ಖಗೋಳ ಸಿದ್ಧಾಂತಗಳಲ್ಲಿ ಒಂದನ್ನ ರೋಮಕ ಸಿದ್ಧಾಂತವೆಂದು ಕರೆಯುತ್ತಾರೆ, ಇನ್ನೊಂದು ಪೌಲಿಶ ಸಿದ್ಧಾಂತ. ಈ ಹೆಸರು ಕ್ಲಾಸಿಕಲ್ ಖಗೋಳ ವಿಜ್ಞಾನಿ ಅಲೆಕ್ಸಾಂಡ್ರಿಯಾದ ಪೌಲ್‌ನಿಂದ ಬಂದಿದ್ದಾಗಿದೆ. ಖಗೋಳ ವಿಜ್ಞಾನವನ್ನು ಮುಖ್ಯವಾಗಿ ಮುನ್ಸೂಚನೆ ಕೊಡುವುದಕ್ಕಾಗಿ ಬಳಸಲಾಗುತ್ತಿತ್ತು. ಸಾಮಾನ್ಯ ವೀಕ್ಷಣೆ ಆಧಾರದ ಮೇಲೆ ಹಳೆ ಚಂದ್ರ–ಸೌರ ಪಂಚಾಗದ ದಿನಗಳನ್ನು ಸಿದ್ಧಪಡಿಸುವುದಕ್ಕೆ ಅದು ಸಾಕಾಗುತ್ತಿತ್ತು. ಪೂರ್ವ ಕಾಲದಲ್ಲಿ ಭಾರತೀಯರು ಭವಿಷ್ಯ ಹೇಳುವಲ್ಲಿ ಇತರ ಪ್ರಾಚೀನ ಜನರಷ್ಟೆ ಆಸಕ್ತಿಯನ್ನು ಹೊಂದಿದ್ದು ಕನಸುಗಳು, ಶಕುನಗಳು ಅದರ ಮುಖ್ಯಲಕ್ಷಣವಾಗಿತ್ತು. ಗುಪ್ತರ ಕಾಲಕ್ಕೆ ಜ್ಯೋತಿಷ್ಯ ಶಾಸ್ತ್ರಕ್ಕೆ ಹೆಚ್ಚು ಮಹತ್ವವನ್ನ ನೀಡುವುದರ ಜೊತೆಗೆ ಖಗೋಳ ಶಾಸ್ತ್ರ ಮತ್ತು ಜ್ಯೋತಿಷ್ಯ ಶಾಸ್ತ್ರಗಳು ಮಹೋನ್ನತಿಯನ್ನು ತಲುಪಿದವು. ಇಂದಿಗೂ ಕೂಡ ಭಾರತೀಯರು ಜ್ಯೋತಿಷ್ಯವನ್ನ ನಂಬಿಕೊಂಡೆ ಬದುಕುತ್ತಿದ್ದಾರೆ. ಖಗೋಳ ವಿಜ್ಞಾನದ ಈ ಮಹತ್ತರ ಬೆಳವಣಿಗೆಗೂ ಮೊದಲು ನಕ್ಷತ್ರಗಳ ಸಹಾಯದಿಂದ ಆಕಾಶದ ನಕ್ಷೆಯನ್ನು ಬರೆಯಲಾಗುತ್ತಿತ್ತು. ಋಗ್ವೇದದ ಕಾಲದಿಂದಲೂ ನಕ್ಷತ್ರಗಳ ಬಗ್ಗೆ ಜ್ಞಾನ ಹೊಂದಿದ್ದರು. ಸ್ಥಿರ ನಕ್ಷತ್ರಗಳೊಡನೆ ಚಂದ್ರನ ಸಂಬಂಧ ಅಂದಾಜು 27 ಸೌರ ದಿನಗಳು ಮತ್ತು 7 ಮುಕ್ಕಾಲು ಗಂಟೆಗಳ ಸುತ್ತಿಗೊಮ್ಮಿಯಂತೆ ಬದಲಾಗುತ್ತದೆ. ಆದ್ದರಿಂದ ಆಕಾಶವನ್ನು 27 ಭಾಗಗಳಲ್ಲಿ ವಿಭಾಗಿಸಿ ಪ್ರತಿಯೊಂದು ವಿಭಾಗಕ್ಕೂ ದಿನನಿತ್ಯ ಚಂದ್ರ ತನ್ನ ಸುತ್ತಿನಲ್ಲಿ ಆಯ್ದು ಹೋಗುವ ಕಾಂತಿ ವೃತ್ತದ ಮೇಲಿರುವ ನಕ್ಷತ್ರಗಳ ಹೆಸರು ಕೊಡಲಾಗಿದೆ. ವಾಸ್ತವದಲ್ಲಿ ನಕ್ಷತ್ರಿಕ ತಿಂಗಳು 27 ದಿನಗಳಿಗಿಂತಲೂ ಸುಮಾರು 8 ಗಂಟೆ ಹೆಚ್ಚಾಗಿರುವುದರಿಂದ ಗುಪ್ತರ ಕಾಲದ ಖಗೋಳ ವಿಜ್ಞಾನಿಗಳು ತಪ್ಪನ್ನು ಸರಿ ಪಡಿಸುವುದಕ್ಕಾಗಿ ಒಂದು ನಕ್ಷತ್ರವನ್ನ ಹೆಚ್ಚಾಗಿ ಸೇರಿಸಿದ್ದಾರೆ. ಪಾಶ್ಚಿಮಾತ್ಯ ಖಗೋಳ ವಿಜ್ಞಾನ ಭಾರತಕ್ಕೆ ರಾಶಿ ಚಕ್ರದ ಸನ್ನೆಗಳನ್ನ 7 ದಿನಗಳ ವಾರ ಗಂಟೆ ಇತ್ಯಾದಿ ಚಿಂತನೆಗಳನ್ನ ಕೊಟ್ಟಿತ್ತು. ಭಾರತೀಯ ಖಗೋಳ ವಿಜ್ಞಾನಿಗಳು ಗಣಿತ ಶಾಸ್ತ್ರದಲ್ಲಿ ಸಾಧಿಸಿದ ಅದ್ಭುತ ಬಲದಿಂದ ಗ್ರೀಕ್‌ರ ಸಾಧನೆಗಳ ಮೇಲೆ ಇನ್ನು ಹಲವಾರು ಮುನ್ನಡೆಗಳನ್ನ ಸಾಧಿಸಿ ತಮ್ಮ ಪಾಂಡಿತ್ಯವನ್ನ 7ನೇ ಶತಮಾನದಲ್ಲಿ ಅರಬ್ಬರ ಮೂಲಕ ಯುರೋಪಿಗೆ ಮರಳುವಂತೆ ಮಾಡಿದರು.[3] ಎಲ್ಲಾ ಪ್ರಾಚೀನ ಖಗೋಳ ಶಾಸ್ತ್ರಜ್ಞರಂತೆ ಭಾರತೀಯ ಶಾಸ್ತ್ರವು ದೂರದರ್ಶಕ ಯಂತ್ರವಿಲ್ಲದೆ ಬೆಳವಣಿಗೆ ಹೊಂದಲಿಲ್ಲ. ಆದರೆ ವೀಕ್ಷಣ ಪದ್ಧತಿಗಳನ್ನ ಅತ್ಯುತ್ತಮ ಪಡಿಸಿದ್ದರಿಂದ ಅತ್ಯಂತ ಕರಾರು ಹೊಕ್ಕಾಗಿ ಅಳೆವುದು ಸಾಧ್ಯವಾಯಿತು. ಸಂಖ್ಯೆಗಳ ದಶಮಾನ ಪದ್ಧತಿಯಿಂದ ಏರಿಕೆಯು ಕೂಡ ಸುಲಭ ವಾಯಿತು. ವೀಕ್ಷಣೆಗೆ ಕೇವಲ ಬರಿಗಣ್ಣನ್ನೆ ಸಾಧನವನ್ನಾಗಿ ಹೊಂದಿದ್ದ ಭಾರತೀಯರಿಗೆ ಪ್ರಾಚೀನರ 7 ಗ್ರಹಗಳು ಮಾತ್ರ ತಿಳಿದಿದ್ದವು. ಅವುಗಳೆಂದರೆ ಸೂರ್ಯ (ರವಿ), ಚಂದ್ರ (ಸೋಮ) ಬುಧ, ಶುಕ್ರ, ಮಂಗಳ, ಗುರು, ಬೃಹಸ್ಪತಿ, ಮತ್ತು ಶನಿ ಈ ಗ್ರಹಗಳಿಗೆ ರಾಹು–ಕೇತು ಎಂಬ ಇನ್ನೆರಡು ಗ್ರಹಗಳನ್ನು ಸೇರಿಸಲಾಯಿತು.

ಆರ್ಯಭಟ, ಪ್ರಾಚೀನ ಪ್ರಸಿದ್ಧ ಖಗೋಳ ವಿಜ್ಞಾನಿ ಹಾಗೂ ಗಣೀತ ಶಾಸ್ತ್ರಜ್ಞನಾಗಿದ್ದ ಇವನು ಕ್ರಿಶ 476ರಲ್ಲಿ ಪಾಟಲೀಪುತ್ರದಲ್ಲಿ ಜನಿಸಿದನು. ಗುಪ್ತರ ಕಾಲದಲ್ಲಿ ಜೀವಿಸಿದ್ದ ಈತ ಕ್ರಿಶ 499ರಲ್ಲಿ ಆರ್ಯಭಟಿಯಂ ಮತ್ತು ಸೂರ್ಯ ಸಿದ್ಧಾಂತ ಎಂಬ ಕೃತಿಯನ್ನ ರಚಿಸಿದ್ದಾನೆ. ಅವನು ತನ್ನ ಸೂರ್ಯ ಸಿದ್ಧಾಂತದಲ್ಲಿ ಭೂಮಿ ಗುಂಡಾಗಿದೆ ಅದು ತನ್ನ ಕಕ್ಷದ ಸುತ್ತಲೂ ಸುತ್ತುತ್ತದೆ ವಿಶ್ವದ ಕೇಂದ್ರ ಬಿಂದು ಸೂರ್ಯ ಮತ್ತು ಭೂಮಿ ಎಂಬುವುದನ್ನ ಪ್ರತಿಪಾದಿಸಿದ್ದಾನೆ. "ಭೂಗೋಲಂ ಸರ್ವತೋವೃತ್ತಂ" ಭೂಮಿ ದುಂಡಾಗಿದೆ ಎಂಬ ವೈಜ್ಞಾನಿಕ ಸತ್ಯವನ್ನ ಜಗತ್ತಿಗೆ ಮೊಟ್ಟ ಮೊದಲು ಸಾರಿದ ಕೀರ್ತಿ ಆರ್ಯಭಟನಿಗೆ ಸಲ್ಲುತ್ತದೆ. ಸೂರ್ಯ ವರ್ಷದ ಅವಧಿಯನ್ನು 365 ದಿನ ಎಂದು ಲೆಕ್ಕ ಹಾಕಿದನು. ಖಗೋಳ ಶಾಸ್ತ್ರದಲ್ಲಿ ಬರುವ ದೊಡ್ಡ ಸಂಖ್ಯೆಗಳನ್ನು ಸೂಚಿಸಲು ಅಕ್ಷರ ಸಂಖ್ಯಾಕ್ರಮವನ್ನ ಪ್ರಯೋಗದಲ್ಲಿ ತಂದಿದ್ದರು ಗ್ರಹಣಗಳನ್ನು ಗುರುತಿಸುವುದು, ಚಂದ್ರನ ಮೇಲೆ ಪೃಥ್ವಿಯ ನೆರಳು ಬೀಳುವುದರಿಂದ ಗ್ರಹಣಗಳು ಸಂಭವಿಸುತ್ತವೆ ಎಂಬುದನ್ನು ತಿಳಿಸಿದ್ದಾನೆ. ತನ್ನ ಮತ್ತೊಂದು ಆರ್ಯಭಟಿಯಂ ನಲ್ಲಿ ಗಣಿತ ವಿವಿಧ ಪ್ರಕಾರಗಳಾದ ಘನ ಮೂಲ, ವರ್ಗ ಮೂಲ, ಅಂಕಗಣಿತ, ರೇಖಾಗಣಿತ ಮುಂತಾದ ಸೂತ್ರಗಳನ್ನು ಬಿಡಿಸಿ ಹೇಳಿದ್ದಾನೆ. 0 ಮತ್ತು ದಶಮಾನ ಪದ್ಧತಿಯನ್ನ ಉಪಯೋಗಿಸುವ ಮೂಲಕ ಗಣಿತಶಾಸ್ತ್ರವನ್ನ ಖಗೋಳ ಶಾಸ್ತ್ರಕ್ಕಿಂತ ಅಧ್ಯಯನ ಮಾಡುವುದನ್ನು ತೋರಿಸಿಕೊಟ್ಟಿದ್ದಾನೆ. ಆದ್ದರಿಂದಲೇ ಈತನನ್ನ ಭಾರತದ ಖಗೋಳ ಶಾಸ್ತ್ರದ ಪಿತಾಮಹ ಎಂದು ಕರೆಯುತ್ತಾರೆ. [4]

5ನೇ ಶತಮಾನದಲ್ಲಿ ಆರ್ಯಭಟ, ಭೂಮಿ ತನ್ನ ಸುತ್ತಲೂ ತಿರುಗುತ್ತಾ ಸೂರ್ಯನ ಸುತ್ತಲೂ ತಿರುಗುತ್ತದೆ ಎಂದು ಸೂಚಿಸದನಾದರೂ ಲೆಕ್ಕದ ದೃಷ್ಟಿಯಿಂದ ಭೂಮಿಯನ್ನ ಕೇಂದ್ರವನ್ನಾಗಿ ಹೊಂದಿದೆ ಎಂದು ಪರಿಗಣಿಸಲಾಯಿತು, ನಂತರ ಬಂದ ಖಗೋಳ ವಿಜ್ಞಾನಿಗಳಿಗೆ ಈ ಸಿದ್ಧಾಂತಗೊತ್ತಿದ್ದರೂ ಅದು ಖಗೋಳ ವಿಜ್ಞಾನದ ರೂಡಿಯಮೇಲೆ ಯಾವುದೇ ಪರಿಣಾಮ ಬೀರಲಿಲ್ಲ.

ಗಣಿತ ವಿಜ್ಞಾನ: ಬಯಲು ಪ್ರದೇಶದಲ್ಲಿ ಯಜ್ಞದ ನಿವೇಶನವನ್ನ ಸರಿಯಾಗಿ ಗುರುತು ಮಾಡಬೇಕಾದ ಅವಶ್ಯಕತೆ ಇದ್ದುದರಿಂದ ಭಾರತೀಯರು ಒಂದು ಸುಲಭ ಭೂಮಿತಿಯನ್ನು ಹುಡುಕಿ ತೆಗೆದರು. ಆದರೆ, ಗಣಿತ ಶಾಸ್ತ್ರದ ವ್ಯವಹಾರಿಕ ತಿಳುವಳಿಕೆಯ ಕ್ಷೇತ್ರದಲ್ಲಿ ಜಗತ್ತು ಭಾರತಕ್ಕೆ ಅಪಾರವಾಗಿ ಋಣಿಯಾಗಿದೆ. ಗುಪ್ತರ ಕಾಲದಲ್ಲಿ ಗಣಿತ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಯಾವ ಪ್ರಾಚೀನ ರಾಷ್ಟ್ರವು ಸಾಧಿಸಲಾರದಷ್ಟು ಪ್ರಗತಿಯನ್ನು ಭಾರತ ಸಾಧಿಸಿತು. ಭಾರತೀಯ ಗಣಿತ ಶಾಸ್ತ್ರದ ಯಶಸ್ಸಿಗೆ ಪ್ರಾಮುಖ್ಯವಾಗಿ ಭಾರತೀಯರ ವಸ್ತುಗಳ ಮೊತ್ತ ಮತ್ತು ದೂರಗಳ ಅಂಕಿ ರೂಪದ ಕಲ್ಪನೆ ಇದ್ದ ಹಾಗೆ ಅಮೂರ್ತ ಸಂಖ್ಯೆಯ ಸ್ಪಷ್ಟ ಕಲ್ಪನೆ ಇದ್ದುದ್ದೆ ಕಾರಣ. ಗ್ರೀಕರ ಗಣಿತ ವಿಜ್ಞಾನ ಹೆಚ್ಚಾಗಿ ಮಾಪನ ಶಾಸ್ತ್ರ ಮತ್ತು ಕ್ಷೇತ್ರ ಶಾಸ್ತ್ರಕ್ಕೆ ಸಂಬಂಧಪಟ್ಟಿತು. ಭಾರತ ಬಹುಬೇಗನೆ ಈ ಕಲ್ಪನೆಗಳನ್ನು ಮೀರಿ ಸರಳ ಸಂಖ್ಯಾ ಸಂಕೇತಗಳ ಸಹಾಯದಿಂದ ಬೀಜರೂಪದ ಬೀಜಗಣಿತವನ್ನ ಕಂಡುಹಿಡಿಯಿತು,

ಆ ಮೂಲಕ ಗ್ರೀಕರಿಗೆ ಸಾಧ್ಯವಾಗದ್ದಕ್ಕಿಂತ ಹೆಚ್ಚು ಜಟಿಲವಾಗಿದ್ದ ಲೆಕ್ಕಗಳನ್ನು ಮಾಡುವುದು ಭಾರತೀಯರಿಗೆ ಸಾಧ್ಯವಾಯಿತು. ಸಂಖ್ಯೆಯನ್ನು ಸಂಖ್ಯೆಗಾಗಿ ಅಭ್ಯಸಿಸುವುದಕ್ಕೆ ಮಾರ್ಗ ತೆರೆಯಿತು. ಭಾರತದ ಅತೀ ಪ್ರಾಚೀನ ಶಿಲಾ ಲಿಪಿಗಳಲ್ಲಿ ದಿನಾಂಕಗಳನ್ನ ಮತ್ತು ಇತರ ಸಂಖ್ಯೆಗಳನ್ನ ರೋಮನ್ನರು ಗ್ರೀಕ್ ಮತ್ತು ಹೀಬ್ರೂಗಳಂತೆಯೇ 10 ಮತ್ತು 100 ಗಳಿಗೆ ಭಿನ್ನ ಭಿನ್ನ ಸಂಖ್ಯೆಗಳನ್ನು ಉಪಯೋಗಿಸಿ ಬರೆಯಲಾಗಿದೆ.[5] 9 ಅಂಕಿ ಮತ್ತು 0 ಗಳನ್ನು ಉಪಯೋಗಿಸಿ ದಿನಾಂಕವನ್ನು ದಾಖಲಿಸಿದ ಅತ್ಯಂತ ಪ್ರಾಚೀನ ಶಿಲಾ ಲೇಖನ ಗುಜರಾತಿನಲ್ಲಿ ದೊರೆತ್ತಿದ್ದು ಅದನ್ನ ಕ್ರಿಶ 595ರಲ್ಲಿ ಬರೆಯಲಾಗಿದೆ. ಸಂಖ್ಯೆಯನ್ನು ಬರೆಯುವ ಸುಲಭ ಪದ್ಧತಿಯನ್ನ ಕಂಡು ಹಿಡಿದ ಗಣಿತ ತಜ್ಞನ ಹೆಸರು ಅಜ್ಞಾತವಾಗಿದೆ. ಆದರೂ ಈಗಲೂ ಉಳಿದುಕೊಂಡಿರುವ ಅತ್ಯಂತ ಪ್ರಾಚೀನ ಗಣಿತ ಗ್ರಂಥಗಳು ಅನಾಮದೇಯ ಭಕ್ಯಾಲಿ ಹಸ್ತಪ್ರತಿ ಕ್ರಿಶ. 4ನೇ ಶತಮಾನದ ಗ್ರಂಥದ ನಕಲಾಗಿದ್ದು ಕ್ರಿಶ 499ರಲ್ಲಿ ಬರೆದ ಆರ್ಯಭಟನ ಆರ್ಯಭಟಿಯ ಅದರ ಅಸ್ಥಿತ್ವವನ್ನು ಸಾರುತ್ತದೆ. ಬಹುಕಾಲದ ವರೆಗೆ ಸಂಖ್ಯೆಗಳ ದಶಮಾಂಶ ಪದ್ಧತಿಯನ್ನು ಅರಬ್ಬರು ಕಂಡು ಹಿಡಿದರು ಎಂದು ನಂಬಲಾಗಿತ್ತು. ಆದರೆ ಅದು ವಾಸ್ತವವಲ್ಲ. ಸ್ವತಃ ಅರಬ್ಬರೇ ಗಣಿತ ಶಾಸ್ತ್ರವನ್ನ "ಭಾರತೀಯ ಕಲೆ" (ಹಿಂದಿಸತ್) ಎಂದು ಕರೆದಿದ್ದಾರೆ. ಇತರೆ ಗಣಿತ ವಿಷಯದ ಪಾಂಡಿತ್ಯದೊಡನೆ ಮುಸ್ಲಿಮರು ದಶಮಾಂಶ ಪದ್ಧತಿಯನ್ನು ಪಶ್ಚಿಮ ಭಾರತೀಯರೊಡನೆ ವ್ಯವಹರಿಸುವ ವ್ಯಾಪಾರಸ್ಥರಿಂದ ನೇರವಾಗಿ ಆಗಲಿ ಅಥವಾ ಕ್ರಿಶ 712ರಲ್ಲಿ ಸಿಂಧನ್ನು ಗೆದ್ದ ಅರಬ್ಬರಿಂದಾಗಲಿ ಕಲಿತು ಕೊಂಡರೆಂದು ತೋರುತ್ತದೆ.

ಈ ವಿಷಯದಲ್ಲಿ ಭಾರತಕ್ಕೆ ಪಾಶ್ಚಿಮಾತ್ಯ ಜಗತ್ತು ಎಷ್ಟು ಋಣಿಯಾಗಿದ್ದರೂ ಸಾಲದು. ಯುರೋಪ್ ಹೆಮ್ಮೆ ಪಡುವ ಬಹುತೇಕ ಸಂಶೋಧನೆಗಳು ಗಣಿತ ವಿಜ್ಞಾನದಲ್ಲಿ ಅಘಾದ ಪ್ರಗತಿಯಾಗಲು ಸಾಧ್ಯವಾಗುತ್ತಿರಲಿಲ್ಲ. ಹೊಸ ಪದ್ಧತಿಯನ್ನ ಕಂಡು ಹಿಡಿದ ಅಜ್ಞಾತ ವಿಜ್ಞಾನಿ ಜಗತ್ತಿನ ದೃಷ್ಟಿಯಿಂದ ಬುದ್ಧನ ನಂತರ ಭಾರತದ ಶ್ರೇಷ್ಠ ಪುತ್ರನಾಗಿದ್ದಾನೆ. ಅವನ ಸಾಧನೆಯನ್ನು ಸುಲಭವಾಗಿ ಗ್ರಹಿತವೆಂದು ಪರಿಗಣಿಸಲಾಗಿದ್ದರೂ ಅದು ವಿಶ್ಲೇಷಣಾತ್ಮಕ ಮನಸ್ಸಿನ ಅತೀ ಶ್ರೇಷ್ಠ ಕೃತಿಯಾಗಿತ್ತು. ಇಲ್ಲಿಯವರೆಗೂ ಅವನಿಗೆ ಸಿಕ್ಕ ಗೌರವಗಳಿಗಿಂತ ಹೆಚ್ಚಿನ ಗೌರವ ಸಲ್ಲಬೇಕಾಗಿದೆ. ಬ್ರಹ್ಮಗುಪ್ತ ಗುಪ್ತರ ಕಾಲದ ಶ್ರೇಷ್ಠ ಗಣಿತ ಶಾಸ್ತಜ್ಞನಾಗಿದ್ದು ಮಧ್ಯಯುಗೀನ ಗಣಿತ ತಜ್ಞರಿಗೆ ಯುರೋಪಿನ ಪುನರ್ ಜೀವನ ಚಳುವಳಿ ಅಥವಾ ಅದರ ಆಚೆ ಕೂಡ ತಿಳಿದಿರದಂತಹ ಅನೇಕ ಸಂಶೋಧನೆಗಳನ್ನ ಮಾಡಿದರು. ಅವನಿಗೆ ಧನಾತ್ಮಕ ಮತ್ತು ಋಣಾತ್ಮಕ ಮೊತ್ತಗಳ ಅರ್ಥ ತಿಳಿದಿತ್ತು. ವರ್ಗ ಮೂಲ, ಘನ ಮೂಲಗಳನ್ನು ಕಂಡು ಹಿಡಿಯುವ ನಿಖರ ಪದ್ಧತಿಯನ್ನು ಶೋಧಿಸಿದ್ದನು. ವರ್ಗೀಯ ಮತ್ತು ಕೆಲವು ಬಗೆಯ ಅನಿರ್ಣಿತ ಸಮೀಕರಣಗಳನ್ನ ಬಿಡಿಸಿದರು. π ಗೆ ಆರ್ಯಭಟ 3.1416 ಸಾಮಾನ್ಯವಾದ ಅಂದಾಜು ಬೆಲೆಯನ್ನು ಕೊಟ್ಟು ಅದನ್ನು ಅಂಶ ಛೇದಗಳ ಈ 62832/20000 ರೂಪದಲ್ಲಿ ತೋರಿಸಿದ್ದಾನೆ. π ಗೆ ಈತ ನೀಡಿದ ಬೆಲೆ ಗ್ರೀಕರು ಕೊಟ್ಟ ಬೆಲೆಗಿಂತಲೂ ಹೆಚ್ಚು ನಿಖರವಾಗಿದೆ. ನಂತರ ಬಂದ ಭಾರತೀಯ ಗಣಿತ ಶಾಸ್ತಜ್ಞರು ಈ ಬೆಲೆಯನ್ನು ದಶಾಂಶದ 9 ಸ್ಥಾನಗಳವರೆಗೆ ಒಯ್ದು ಸುಧಾರಿಸಿದರು. 0 ಮತ್ತು infinity ಗಳ ಅಂತರಾರ್ಥಗಳನ್ನು ಗ್ರಹಿಸಿದರು.

ಭೌತ ವಿಜ್ಞಾನ ಮತ್ತು ರಸಾಯನ ಶಾಸ್ತ್ರ : ಭೌತ ವಿಜ್ಞಾನವನ್ನು ಕುರಿತು ಪ್ರಾಚೀನ ಭಾರತದ ಚಿಂತನೆಗಳು ಧರ್ಮ ಮತ್ತು ದೇವತಾ ಶಾಸ್ತ್ರಕ್ಕೆ ಸಂಬಂಧಪಟ್ಟಿದ್ದ ಒಂದೊಂದು ಪಂಥವು ಒಂದೊಂದು ಬಗೆಯ ಚಿಂತನೆಗಳನ್ನು ಹೊಂದಿತ್ತು. ಬುದ್ಧನ ಕಾಲಕ್ಕೆ ವಿಶ್ವವನ್ನ ಭೂತಗಳಲ್ಲಿ ವರ್ಗೀಕರಿಸಲಾಗಿತ್ತು. ಅವುಗಳ ಪೈಕಿ ಕನಿಷ್ಟ 4 ಭೂತಗಳ ಬಗ್ಗೆ ಸರ್ವ ಸಮ್ಮತಿ ಇತ್ತು. ಭೂಮಿ ವಾಯು ಅಗ್ನಿ ಮತ್ತು ನೀರು. ಈ ನಾಲ್ಕು ಭೂತಗಳಿಗೆ ಸಾಂಪ್ರದಾಯಿಕ ಹಿಂದು ಪಂಥಗಳು ಜೈನ ಧರ್ಮವು ಸೇರಿ 5ನೇಯ ಆಕಾಶವನ್ನು ಸೇರಿಸಿದವು. ವಾಯುವಿನ ಅರವು ಅನಂತವಾಗಿರದೆ ಮಿತಿಯಿಂದ ಕೂಡಿದೆ ಎಂಬುದನ್ನು ಗ್ರಹಿಸಿದರು. ಗಾಳಿಯಿಲ್ಲದೇ ಇರುವ ಶೂನ್ಯವನ್ನ ಭಾರತೀಯ ಮನಸ್ಸಿಗೆ ಕಲ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. 5 ಭೂತಗಳನ್ನ ಜ್ಞಾನೇಂದ್ರಿಗಳ ಮಾಧ್ಯಮಗಳೆಂದು ತಿಳಿಯಲಾಗಿತ್ತು.[6] ಭೂಮಿಯ ವಾಸನೆ ವಾಯು ಅನಿಸಿಕೆ ಅಗ್ನಿ ದೃಷ್ಟಿಗೆ, ನೀರು ರುಚಿಗೆ, ಆಕಾಶ ಸಪ್ಪಳಕ್ಕೆ. ಅಣುವನ್ನ ನಿತ್ಯವೆಂದು ತಿಳಿಯಲಾಗಿತ್ತು ಮತ್ತು ಅದರ ಸಮಯಾವಧಿ ಅತ್ಯಂತ ಕಡಿಮೆ ಎಂಬ ಜ್ಞಾನವು ಅವರಿಗೆ ಗೊತ್ತಿತ್ತು ಒಂಟಿ ಅಣುವಿಗೆ ಗುಣಗಳಿಲ್ಲ ಕೇವಲ ಸಾಮರ್ಥ್ಯಗಳಿವೆ ಇತರ ವಸ್ತುಗಳೊಂದಿಗೆ ಸಂಶೋಜನೆ ಹೊಂದಿದಾಗ ಅಣುವಿನ ಸಾಮರ್ಥ್ಯಗಳು ಪ್ರಕಟಗೊಳ್ಳುತ್ತವೆ. ವಿಶೇಷವಾಗಿ ಅಣು ಸಿದ್ಧಾಂತವನ್ನು ವಿವರಿಸಿದ ಮತ್ತು ಅಣುಸಿದ್ಧಾಂತದ ಸರ್ವೋತ್ಕೃಷ್ಟ ಪಂಥವೆನಿಸಿದ ವೈಶೇಷಿಕರು ದ್ರವ್ಯರೂಪವಾಗುವುದಕ್ಕೆ ಸಂಯೋಗವಾಗುವ ಮೊದಲ ಅಣುಗಳು ಎರಡು ಮತ್ತು ಮೂರರ ಪ್ರಾಥಮಿಕ ಸಂಯೋಜನೆಯನ್ನ ಹೊಂದಿರುತ್ತವೆ ಎಂದು ನಂಬಿದ್ದರು. ಭಾರತೀಯ ಭೌತಶಾಸ್ತ್ರ ಈ ಕಾಲಾವಧಿಯಲ್ಲಿ ಬೆಳವಣಿಗೆಯನ್ನ ಕಾಣದೆ ಶೈಶಾವಸ್ಥೆತಯಲ್ಲಿಯೇ ಉಳಿದಿತ್ತು. ಭೂತಗಳಲ್ಲಿ ಭೂಮಿ ಮತ್ತು ನೀರು ಕೆಳಗೆ ಬೀಳುವ ಪ್ರವೃತ್ತಿಯನ್ನು ಹೊಂದಿವೆ ಎಂದು ಅಗ್ನಿ ಮೇಲೆ ಏರುವುದೆಂದು ನಂಬಲಾಗಿತ್ತು. ಘನ ಮತ್ತು ದ್ರವ ಪದಾರ್ಥಗಳು ಸಮಾನ್ಯವಾಗಿ ಉಷ್ಣತೆಯಿಂದ ಪ್ರಸರಣಹೊಂದುತ್ತವೆ ಎಂಬುವುದು ತಿಳಿದಿತ್ತು. ಆದರೆ, ಪ್ರಯೋಗದ ಮೂಲಕ ಈ ಸಂಗತಿಗಳನ್ನು ಅಭ್ಯಸಿಸಲು ಗಂಭೀರ ಪ್ರಯತ್ನ ಮಾಡಲಿಲ್ಲ. ಆದರೆ ಧ್ವನಿ ವಿಜ್ಞಾನದಲ್ಲಿ ಭಾರತ ಪ್ರಯೋಗವನ್ನಾಧರಿಸಿ ನಿಜವಾದ ಸಂಶೋಧನೆಗಳನ್ನ ಮಾಡಿತು. ವೇದಗಳ ಸರಿಯಾದ ಪಟನೆಗೆ ಅವಶ್ಯವಿದ್ದ ಧ್ವನಿ ವಿಜ್ಞಾನದ ಅಭ್ಯಾಸದಿಂದ ಚೆನ್ನಾಗಿ ತರಪೇತುಕೊಂಡ ಕಿವಿ, ಇತರ ಪ್ರಾಚೀನ ಸಂಗತಿ ಪದ್ಧತಿಗಳಿಗಿಂತಲೂ ಹೆಚ್ಚು ನಿಕಟವಾಗಿ ಸುಶ್ರಾವ್ಯ ಧ್ವನಿಗಳನ್ನು ಗುರುತಿಸಲು ಕಲಿಯಿತು. ಅಷ್ಟಕವನ್ನ 22 ಶೃತಿಗಳಲ್ಲಿ ಅಥವಾ ಅರೆ ಅರ್ಧ ಸ್ವರಗಳಲ್ಲಿ ವಿಭಾಗಿಸಲಾಯಿತು. ನಾದಗುಣದಲ್ಲಿಯ ವ್ಯತ್ಯಾಸಗಳು ವಾದ್ಯಗಳೊಂದಿಗೆ ಬದಲಾಗುವ ಅನುರಣನದಿಂದ ಉಂಟಾಗುತ್ತವೆ ಎಂದು ಕಂಡುಕೊಂಡಿದ್ದರು. ದಿಲ್ಲಿಯ ಮೆಹರೋಲಿ ಕಬ್ಬಿಣದ ಸ್ಥಂಭದ ಸಾಕ್ಷ್ಯದಿಂದ ಮತ್ತು ಗುಪ್ತರ ಕಾಲಾವದಿಯಲ್ಲಿ ರಚನೆಗೊಂಡ ಬುದ್ಧನ ಹಾಗೂ ಹಿಂದು ದೇವತೆಗಳ ಲೋಹ ಮೂರ್ತಿಗಳು ಅವರ ಕಾಲಾವಧಿಯ ಲೋಹ ವಿಜ್ಞಾನದ ಬಗ್ಗೆ ಸಾಕ್ಷಿಗಳಾಗಿವೆ. ಭಾರತೀಯರು ಅದಿರಿನಿಂದ ಲೋಹವನ್ನ ತೆಗೆಯುವುದರಲ್ಲಿ ಮತ್ತು ಲೋಹದಿಂದ ವಸ್ತುಗಳನ್ನು ತಯಾರಿಸುವುದರಲ್ಲಿ ತುಂಬ ಪ್ರಾವೀಣ್ಯತೆ ಸಾಧಿಸಿದ್ದು ಹಾಗೂ ಅದರ ಉತ್ಪಾದನೆಗಳು ರೋಮನ್ ಸಾಮ್ರಾಜ್ಯ ಮತ್ತು ಮಧ್ಯ ಪೂರ್ವದಲ್ಲಿ ಪರಿಚಿತವಿದ್ದ ಶ್ರೇಷ್ಠ ಗುಣಮಟ್ಟಕ್ಕಾಗಿ ಒಳ್ಳೆಯ ಹೆಸರುಗಳಿಸಿದ್ದವು. ಅತ್ಯಂತ ಮುಂದುವರೆದಂತ ಲೋಹ ವಿಜ್ಞಾನ ಮತ್ತು ವಿಜ್ಞಾನದಲ್ಲಿ

ಅಪ್ರತಿಮೆಯನ್ನು ಸಾಧಿಸಿದ್ದರು. 23.8 ಅಡಿ ಎತ್ತರ, 16.4 ಅಡಿ ತಳ ವಿನ್ಯಾಸ ಹೊಂದಿರುವ ದೆಹಲಿಯ ಮೆಹ್ರೌಲಿಯ ಕಬ್ಬಿಣದ ಸ್ಥಂಭ 6 ಟನ್ ತೂಕವಿದೆ. 16 ಶತಮಾನಗಳಿಂದ ಮಳೆ, ಗಾಳಿ, ಬಿಸಿಲಿಗೆ ಬಗ್ಗದೇ ತುಕ್ಕು ಹಿಡಿಯದೇ ನಿಂತಿರುವುದು ಗುಪ್ತರ ಕಾಲದ ಲೋಹ ವಿಜ್ಞಾನದ ಶ್ರೇಷ್ಠತೆಯನ್ನ ಮತ್ತು ಆ ಕಾಲದ ತಾಂತ್ರಿಕ ಕರಕುಶಲರ ಕೈಚಳಕವನ್ನ ಜಗತ್ತಿಗೆ ಸಾರುತ್ತಿದೆ. ಇಂತಹ ಸ್ಥಂಭವನ್ನ ಆಧುನಿಕ ಯುರೋಪಿನ ಯಾವ ಕುಲುಮೆಗಳು ತಯಾರಿಸಲು ಸಾಧ್ಯವಾಗಿಲ್ಲ. ಪ್ರಾಚೀನ ಭಾರತದಲ್ಲಿ ರಸಾಯನ ಶಾಸ್ತ್ರ ತಂತ್ರಜ್ಞಾನದ ಅಡಿಯಾಳಾಗಿರದೇ ಔಷಧಿ ಶಾಸ್ತ್ರದ ಅಡಿಯಾಳಾಗಿತ್ತು. ಭಾರತೀಯರ ರಸಾಯನ ಶಾಸ್ತ್ರರು ಮಧ್ಯಯುಗದ ಯುರೋಪಿನವರಂತೆ ನೀಚ ಲೋಹಗಳನ್ನ ಬಂಗಾರವನ್ನಾಗಿ ಪರಿವರ್ತಿಸುವುರಲ್ಲಿ ಆಸಕ್ತಿಹೊಂದಿರ ಲಿಲ್ಲ. ಅವರು ಹೆಚ್ಚಿನ ಲಕ್ಷ್ಯವನ್ನ ದೀರ್ಘಾಯುಷ್ಯಕ್ಕೆ ಸಹಕರಿಸುವ ಮತ್ತು ಕಾಮೋದ್ದೀಪನವನ್ನ ಹೆಚ್ಚಿಸುವ ಔಷಧಿಗಳು, ವಿಷಗಳು ಮತ್ತು ಅವುಗಳಿಗೆ ಪ್ರತಿರೋಧಕಗಳನ್ನ ತಯಾರಿಸುವಲ್ಲಿ ಕೇಂದ್ರಿಕರಿಸಿದ್ದರು. ಈ ಔಷಧಿ ರಸಾಯನ ಶಾಸ್ತ್ರಜ್ಞರು ಅನೇಕ ಮಹತ್ವದ ಕ್ಷಾರಗಳನ್ನ, ಆಮ್ಲಗಳನ್ನ ಮತ್ತು ಸುಲಭ ಭಸ್ಮೀಕರಣ ಹಾಗೂ ಭಟ್ಟಿ ಇಳಿಸುವ ಪದ್ಧತಿಯಿಂದ ಲೋಹ ಲವಣಗಳನ್ನ ತಯಾರಿಸುವುದರಲ್ಲಿ ಯಶಸ್ವಿ ಯಾದರೂ. ಬಹುಶಃ ಅವರು ಒಂದು ಬಗೆಯ ಸಿಡಿಮದ್ದನ ಕಂಡುಕೊಂಡಿದ್ದರೆಂದು ಹೇಳಲಾದರೂ ಅದಕ್ಕೆ ಸಾಕಷ್ಟು ಪುರಾವೆಗಳಿಲ್ಲ. 2ನೇ ನಾಗಾರ್ಜುನ ಗುಪ್ತರ ಕಾಲದ ಶ್ರೇಷ್ಠ ರಸಾಯನ ಶಾಸ್ತ್ರದ ತಜ್ಞನಾಗಿದ್ದು ರಸ ವೈದ್ಯ ಶಾಸ್ತ್ರ ಎಂಬ ಶ್ರೇಷ್ಠ ಮಟ್ಟದ ಕೃತಿಯನ್ನು ರಚಿಸಿದ್ದಾನೆ. ಹಾಗೂ ಈ ಮೇಲಿನ ರಸಾಯನ ಶಾಸ್ತ್ರದ ಅಂಶಗಳ ಬಗ್ಗೆ ಪ್ರಸ್ತಾಪಿಸಿದ್ದಾನೆ. ಭಾರತೀಯ ರಸಾಯನ ಶಾಸ್ತ್ರಜ್ಞರು ಬಹುಶಃ ಅರಬ್ಬರೊಡನೆ ಸಂಪರ್ಕದ ಮೂಲಕ ಚೀನಾ, ಮುಸ್ಲಿಂ ಜಗತ್ತು ಮತ್ತು ಯುರೋಪಿನಲ್ಲಿನ ತಮ್ಮ ಸಹಕರ್ಮಿಗಳಂತೆ ಪಾರಜದ ಅಭ್ಯಾಸದಲ್ಲಿ ತಲ್ಲೀನರಾಗಿದ್ದರೂ. ಅದ್ಭುತ ಪ್ರವಾಹಿ ಲೋಹದೊಡನೆ ಪ್ರಯೋಗ ಎಲ್ಲಾ ರೋಗಗಳಿಗೂ ಇದೇ ರಾಮಬಾಣ ಚಿರತಾರುಣ್ಯದ ಮೂಲ ಮುಕ್ತಿಗು ಖಚಿತ ಮಾರ್ಗವೆಂದು ನಿರ್ಧರಿಸಿ ಒಂದು ರಸವಿದ್ಯುತ್ ತಜ್ಞರ ಪಂತ ಆರಂಭವಾಯಿತು. ಇದರ ಮೂಲಕ ಅವರ ಚಿಂತನೆಗಳನ್ನ ಅರಬ್ಬರ ಮೂಲಕ ಮಧ್ಯ ಯುಗದ ಯುರೋಪಿಗೆ ಕೊಂಡೊಯ್ಯಲಾಯಿತು.

ಶರೀರ ಶಾಸ್ತ್ರ ಮತ್ತು ರೋಗ ಚಿಕಿತ್ಸೆ : ವೇದಗಳಲ್ಲಿ ಚಿಕ್ಸಿತೆ ಮತ್ತು ಶರೀರ ವಿಜ್ಞಾನ ಅತೀ ಆರಂಭ ಹಂತದ ಜ್ಞಾನವಾಗಿದ್ದು ಭಾರತೀಯ ಔಷಧಿಯ ವಿಜ್ಞಾನದ ಮೂಲ ಗ್ರಂಥಗಳು ಚರಕ ಮತ್ತು ಶೂಶ್ರತನನ ಸಂಹಿತೆಗಳು ಕೆಲವು ರೀತಿಯಲ್ಲಿ ಈ ಕೃತಿಗಳು ಹಿಪೋಕ್ರೆಟಿಸ್ ಮತ್ತು ಗ್ಯಾಲನ್‌ನ ಪೂರ್ಣ ಬೆಳವಣಿಗೆಗೆ ಹೊಂದಿದ ಪದ್ಧತಿಯನ್ನು ಹೋಲುತ್ತವೆ ಆದರೆ ಇನ್ನು ಕೆಲವು ರೀತಿಯಲ್ಲಿ ಮುಂದಕ್ಕೆ ಹೋಗುತ್ತವೆ. ಗುಪ್ತರ ಕಾಲದಲ್ಲಿ ವೈದ್ಯಶಾಸ್ತ್ರದಲ್ಲಿ ಅದ್ಭುತವಾದ ಪ್ರಗತಿಯಾಯಿತು. ಈ ಕಾಲದಲ್ಲಿ ಅನೇಕ ಜನ ವೈದ್ಯರು ಆರ್ಯುವೇದ ಪಂಡಿತರು ಶಸ್ತ್ರ ಚಿಕಿತ್ಸಕರು ಜೀವಿಸಿದ್ದರು. ಪ್ರಾಚೀನ ಭಾರತದ ಹೆಸರಾದಂತಹ ವೈದ್ಯರು ವೈದ್ಯ ಶಾಸ್ತ್ರದ ಜನಕರು. ಈ ಕಾಲಾವಧಿಯಲ್ಲಿ ಶೂಶೃತ ವಾರಣಾಸಿಯಲ್ಲಿ 6ನೇ ಶತಮಾನದಲ್ಲಿ ನೆಲೆಸಿದ್ದು ಆ ಕಾಲದ ಪ್ರಸಿದ್ಧ ಫಿಜಿಷಿಯನ್ಸ್ ಆಗಿದ್ದು ಶುಶ್ರತ ಸಮ್ಮಿತ ಎಂಬ ಕೃತಿಯನ್ನ ರಚಿಸಿದ್ದಾನೆ. ಈ ಕೃತಿಯಲ್ಲಿ 184 ಅಧ್ಯಾಯಗಳಿದ್ದು 1120 ರೀತಿಯ ರೋಗಗಳು 700 ಬಗೆಯ ಔಷಧಿ ಸಸ್ಯಗಳು 64 ರೀತಿಯ ಖನಿಜ ಮೂಲಗಳ ಬಗ್ಗೆ 57 ರೀತಿಯ ಪ್ರಾಣಿ ಮೂಲಗಳ ಬಗ್ಗೆ ತಿಳಿಸಿದ್ದಾರೆ. ಅದೇ ರೀತಿಯ 164 ರೀತಿಯ ಶಸ್ತ್ರ ಚಿಕಿತ್ಸೆಯ ಬಗ್ಗೆ ವಿವರಿಸಿದ್ದಾರೆ. ಆರ್ಯುವೇದ ಪಿತಾಮಹನಾದ ಧನ್ವಂತ್ರಿ ಆರ್ಯುವೇದನ್ ನಿಘಂಟು ಎಂಬ ಶ್ರೇಷ್ಠ ವೈದ್ಯಕೀಯ ಕೃತಿ ಈ ಕಾಲಾವಧಿಯಲ್ಲಿ ಸಂಗ್ರಹಿಸಲ್ಪಟ್ಟಿದೆ.[7] ಧನ್ವಂತ್ರಿಯು ಒಬ್ಬ ಪ್ರಾಚೀನ ಭಾರತದ ಪ್ರಮುಖ ಫಿಜಿಷಿಯನ್. ಇವನು ಗುಪ್ತರ ಕಾಲದವನು. ಈ ಕಾಲದಲ್ಲಿ ಪಶುವೈದ್ಯಕೀಯ ವಿಜ್ಞಾನವು ಚೆನ್ನಾಗಿ ಬೆಳವಣಿಗೆಯಾಗಿತ್ತು. ಶ್ರೇಷ್ಠ ಹೃದಯ ಶಾಸ್ತ್ರ ತಜ್ಞನಾದ ವಾಗ್ಭಟ ಅಷ್ಟಾಂಗ ಹೃದಯ ಮತ್ತು ಅಷ್ಟಾಂಗ ಸಂಗ್ರಹ ಎಂಬ ಕೃತಿಯನ್ನು ರಚಿಸಿದ್ದನು ಹೃದಯಕ್ಕೆ ಬರುವ 8 ರೀತಿಯ ರೋಗಗಳು ಹಾಗೂ ಅವುಗಳ ಚಿಕಿತ್ಸೆಯ ಬಗ್ಗೆ ವಿವರಿಸಿದ್ದ. ಮತ್ತೆ ಈ ಕೃತಿ ವೈದ್ಯಶಾಸ್ತ್ರದ 8 ಅಧ್ಯಯಗಳನ್ನ ಪರಿಚಯಿಸಿದ್ದಾನೆ. ಪಲಕಾಪ್ಯನು ಹಸ್ತ ಆರ್ಯುವೇದ ಎಂಬಕೃತಿಯನ್ನು ಬರೆದಿದ್ದು ಆ ಕೃತಿಯಲ್ಲಿ ಆನೆಗಳಿಗೆ ಬರುವ ವಿವಿಧ ರೋಗಗಳು ಹಾಗೂ ಅವುಗಳ ನಿವಾರಣೆಗಳಿಗೆ ಔಷಧಿಗಳನ್ನು ಸೂಚಿಸಿದ್ದಾನೆ. ಶಾಲಿಹೋತ್ರ ಅಶ್ವಶಾಸ್ತ್ರ ಎಂಬಕೃತಿ ರಚಿಸಿದ್ದು ಇದು ಅಶ್ವಗಳ ಚಿಕಿತ್ಸೆಗೆ ಸಂಬಂಧಿಸಿದ್ದಾಗಿದೆ. ಇದಲ್ಲದೇ ನವನೀಕತಂ ಎಂಬ ಪ್ರಸಿದ್ಧ ವೈದ್ಯಶಾಸ್ತ್ರದ ಗ್ರಂಥ ಇದೇ ಕಾಲಾವಧಿಯಲ್ಲಿ ರಚನೆಗೊಂಡಿದೆ.[8]

ಆ ಕಾಲದ ವೈದ್ಯರುಗಳು 5 ವಾಯುಗಳು ಶಾರೀರಿಕ ಕ್ರಿಯೆಗಳನ್ನು ನಿಯಂತ್ರಿಸುತ್ತಿದ್ದವು. ಉದಾನ ಗಂಟಲಿನಿಂತ ಹೊರಟು ವಾಣಿಯನ್ನು ಉಂಟು ಮಾಡುತ್ತಿತ್ತು. ಪ್ರಾಣ ಹೃದಯದಲ್ಲಿದ್ದು ಉಸಿರಾಟ ಆಹಾರವನ್ನು ನುಂಗುವುದಕ್ಕೆ ಸಹಾಯ ಮಾಡುತ್ತಿತ್ತು. ಸಮಾನ ಹೊಟ್ಟೆಯಲ್ಲಿನ ಅಗ್ನಿಯನ್ನು ಸಚೇತಗೊಳಿಸಿ ಆಹಾರದ ಪಚನಕ್ಕೆ ಸಹಕಾರಿಯಾಗುತ್ತಿತ್ತು ಎಂಬುದನ್ನು ಅರಿತ್ತಿದ್ದರು. ಮೆದುಳಿನ ಕ್ರಿಯೆಯ ಬಗ್ಗೆ ಸ್ಪಷ್ಟ ಅರಿವಿಲ್ಲದಿದ್ದರೂ ಬುದ್ಧಿಯ ಸ್ಥಾನ ಹೃದಯದಲ್ಲಿದೆ ಎಂದು ನಂಬಿದ್ದರು. ಅವರಿಗೆ ಬೆನ್ನು ಹುರಿಯ ಮಹತ್ವ ಹಾಗೂ ನರ ವ್ಯೂಹದ ಅಸ್ಥಿತ್ವವು ತಿಳಿದಿತ್ತು. ಇವರಿಗೆ ಶರೀರ ರಚನೆ ನಿಕರ ತಿಳುವಳಿಕೆ ಇಲ್ಲದಿರುವಾಗಲು ಈ ವಿಷಯದಲ್ಲಿ ಭಾರತೀಯರ ತಿಳುವಳಿಕೆ ಪ್ರಾಚೀನ ಜನಾಂಗಗಳಿಗಿಂತ ಕೆಳ ಮಟ್ಟದೇನು ಇರಲಿಲ್ಲ. ಅನುಭವಾಧಾರಿತ ಶಸ್ತ್ರ ಚಿಕಿತ್ಸೆ ಪದ್ಧತಿಯನ್ನು ಬೆಳೆಸಿದ್ದರು. ಎಲುಬುಗಳ ಜೋಡಣಾ ಕೌಶಲ್ಯ ಉನ್ನತ ಮಟ್ಟದಲ್ಲಿತ್ತು. ಶಸ್ತ್ರ ಚಿಕಿತ್ಸೆ ಮಾಡುವಾಗ ಮಧ್ಯವನ್ನ ಅನೇಸ್ಥೆಷಿಯವನ್ನಾಗಿ ಬಳಸುತ್ತಿದ್ದರು. ಆ ಕಾಲದಲ್ಲಿ ಕಂಡುಕೇಳರಿಯದ ಮಟ್ಟದಲ್ಲಿ ಪ್ಲಾಸ್ಟಿಕ್ ಶಸ್ತ್ರ ಚಿಕಿತ್ಸೆ ಮುಂದುವರೆದಿತ್ತು. ಯುದ್ಧದಲ್ಲಿ ಊನವಾದ ಮೂಗು ಕಿವಿ, ತುಟಿಗಳ ರಿಪೇರಿ ಕೆಲಸದಲ್ಲಿ ಭಾರತೀಯ ಶಸ್ತ್ರ ಚಿಕಿತ್ಸಾ ತಜ್ಞರು ಪರಿಣಿತರಾಗಿದ್ದರು. ಈ ದೃಷ್ಟಿಯಿಂದ ಭಾರತೀಯ ಶಸ್ತ್ರ ಚಿಕಿತ್ಸೆ 18ನೇ ಶತಮಾನದವರೆಗೆ ಯುರೋಪಿನ ಶಸ್ತ್ರ ಚಿಕಿತ್ಸೆಗಿಂತ ತುಂಬ ಮುಂದಿತ್ತು. 18ನೇ ಶತಮಾನದಲ್ಲಿ ಈಸ್ಟ್ ಇಂಡಿಯಾ ಕಂಪನಿ ಶಸ್ತ್ರ ಚಿಕಿತ್ಸ ತಜ್ಞರು ಭಾರತೀಯರಿಂದ ಮೂಗಿನ ಶಸ್ತ್ರ ಚಿಕಿತ್ಸೆಯನ್ನು ಕಲಿಯಲು ಸಂಕೋಚ ಪಡಲಿಲ್ಲ. ಸಮಾಜದಲ್ಲಿ ವೈದ್ಯನಿಗೆ ಗೌರವಯುತವಾದ ಸ್ಥಾನವಿತ್ತು ಅವರು ರೋಗ ವಾಸಿಯಾಗುವಲ್ಲಿ ತಾಜಾ ಹವೆ ಮತ್ತು ಬೆಳಕಿನ ಮಹತ್ವ ಅರಿತಿದ್ದರೂ ಪ್ರಾಚೀನ ಭಾರತದ ಔಷಧಗಳ ಪಟ್ಟಿ ತುಂಬಾ ಉದ್ದವಾಗಿತ್ತು ಅದರಲ್ಲಿ ಪ್ರಾಣಿ ಜನ್ಯ, ಸಸ್ಯ ಜನ್ಯ, ಗಣಿಗಳಲ್ಲಿ ಸಿಗುವ ವಸ್ತುಗಳು ಸೇರಿದ್ದವು. ಅನೇಕ ಏಷ್ಯಾದ ಔಷಧಿಗಳು ಅವರಿಗೆ ಪರಿಚಯವಿತ್ತು. ಅವುಗಳನ್ನು

ಯುರೋಪಿನಲ್ಲಿ ಪ್ರಯೋಗಿಸುವ ಬಹಳ ಮೊದಲೇ ಭಾರತದಲ್ಲಿ ಉಪಯೋಗಿಸುತ್ತಿದ್ದರು. ವಿಶೇಷವಾಗಿ ಚೌಲಮುಗ್ರಾ ಮರದ ಎಣ್ಣೆಯನ್ನು ಕುಷ್ಠರೋಗಕ್ಕೆ ಬಳಸುತ್ತಿದ್ದರು ಇಂದಿಗೂ ಕೂಡ ಆ ಎಣ್ಣೆಯನ್ನೇ ಮೂಲವಾಗಿ ಬಳಸಲಾಗುತ್ತಿದೆ. ದಯಾಳು ಅರಸರು ಮತ್ತು ಧಾರ್ಮಿಕ ಸಂಸ್ಥೆಗಳ ಆಶ್ರಯದಲ್ಲಿ ಬಡಜನರಿಗೆ ಉಚಿತ ಔಷಧೋಪಚಾರಗಳ ವ್ಯವಸ್ಥೆ ಇತ್ತು. ಮನುಷ್ಯ ಪಶುಗಳ ಚಿಕಿತ್ಸಾ ವ್ಯವಸ್ಥೆ ನಿರಂತರವಾಗಿ ಸಾಗುತ್ತಿತ್ತು. ಕ್ರಿಶ 5 ಶತಮಾನದ ಆರಂಭದಲ್ಲಿ ಚೀನಾದ ಪ್ರವಾಸಿ ಫಾಹಿಯಾನ್ ದಯಾಳು ನಾಗರೀಕ ದೇಣಿಗೆಗಳಿಂದ ನಡೆಯುತ್ತಿದ್ದ ಉಚಿತ ಚಿಕಿತ್ಸಾಲಯಗಳ ಬಗ್ಗೆ ವಿಶೇಷವಾಗಿ ನಮೂದಿಸಿದ್ದಾನೆ. ಚೀನಿಯಾತ್ರಿಕ ಫಾಹಿಯಾನ್‌ನು ಗುಪ್ತರ ಕಾಲದಲ್ಲಿ ಶ್ರೀಮಂತರು ಅಲ್ಲಿನ ರಾಜಧಾನಿಗಳಲ್ಲಿ ಉಚಿತ ಆಸ್ಪತ್ರೆಗಳನ್ನ ಸ್ಥಾಪಿಸಿದರು. ಅಲ್ಲಿಗೆ ಎಲ್ಲಾ ಬಡವ ಅಥವಾ ಸಹಾಯಕ ರೋಗಿಗಳು, ಅನಾಥರು, ವಿಧವೆಯರು ಬರುತ್ತಿದ್ದರು. ಡಾಕ್ಟರ್‌ಗಳು ಅವರ ಬಗ್ಗೆ ಹೆಚ್ಚು ಜವಾಬ್ದಾರಿಯಿಂದ ಸೇವೆಯನ್ನು ಮಾಡಿ ಅವರಿಗೆ ಅವಶ್ಯಕವಾದ ಚಿಕಿತ್ಸೆಯನ್ನು ನೀಡಿ ಖಾಯಿಲೆಯನ್ನು ವಾಸವಮಾಡುತ್ತಿದ್ದರು. ಖಾಯಿಲೆ ವಾಸಿಯಾದ ನಂತರ ಅವರು ರೋಗಿಗಳು ಅಲ್ಲಿಂದ ಹೊರಟು ಹೋಗುತ್ತಿದ್ದರು. [9]

ದುರಾದೃಷ್ಟ ಎಂದರೆ ಇಂತಹ ಸಂಸ್ಥೆಗಳ ವಿವರಗಳು ಲಭ್ಯವಾಗಿಲ್ಲ. ಪಶು ಚಿಕಿತ್ಸೆ ಅಹಿಂಸಾ ಸಿದ್ಧಾಂತಗಳ ಪ್ರಾಣಿಗಳ ವಿಶ್ರಾಂತಿ ಧಾಮಗಳನ್ನು ವಯಸ್ಸಾದ ರೋಗಿಷ್ಟ ಪ್ರಾಣಿಗಳಿಗೆ ಮನೆ ನಿರ್ಮಿಸುವುದನ್ನು ರಾಜರುಗಳು ಮಾಡುತ್ತಿದ್ದರು. ಕುದುರೆ ಮತ್ತು ಆನೆಗಳ ವೈದ್ಯರನ್ನು ಕುಶಲ ಮತ್ತು ಗೌರವಾನ್ವಿತ ವೃತ್ತಿ ಸದಸ್ಯರೆಂದು ಪರಿಗಣಿಸಲಾಗಿತ್ತು. ರಾಜನ ಆಸ್ಥಾನಗಳಲ್ಲಿ ಅವರಿಗೆ ಒಳ್ಳೆಯ ಬೇಡಿಕೆ ಇತ್ತು.

ಉಪಸಂಹಾರ: ಒಟ್ಟಿನಲ್ಲಿ ಗುಪ್ತರ ಕಾಲದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ವಿಶ್ವ ಮಟ್ಟದಲ್ಲಿ ಗುರುತಿಸಲ್ಪಡುವಂತೆ ಖಗೋಳ ಶಾಸ್ತ್ರ, ಗಣಿತ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ ಭೂಗೋಳ ಶಾಸ್ತ್ರ, ಲೋಹಶಾಸ್ತ್ರ, ವೈದ್ಯಕೀಯ ಶಾಸ್ತ್ರ, ಮೊದಲಾದ ವಿಜ್ಞಾನಗಳಲ್ಲಿ ಅಸದೃಶ್ಯವಾದ ಪ್ರಗತಿಯಾಗಿ ಈ ವೈಜ್ಞಾನಿಕ ಪ್ರಗತಿ ಅರಬ್ ರಾಷ್ಟ್ರಗಳ ಮೂಲಕ ಯುರೋಪ್ ಖಂಡಗಳಲ್ಲಿ ಪಸರಿಸಿ ಆಧುನಿಕ ಜಗತ್ತಿನ ಅನೇಕ ಅವಿಷ್ಕಾರಗಳಿಗೆ ನಾಂದಿಯಾಯಿತು. ಹಾಗಾಗಿ ಗುಪ್ತರ ಕಾಲವನ್ನ ಸುವರ್ಣ ಯುಗ ಮಟ್ಟಕ್ಕೆ ಕೊಂಡೊಯ್ದ ಅಭಿವೃದ್ಧಿಯ ಕ್ರಾಂತಿಗಳಲ್ಲಿ ಈ ವಿಜ್ಞಾನದ ಕ್ರಾಂತಿಯು ಒಂದಾಗಿದೆ.

ಪರಾಮರ್ಶಿತ ಗ್ರಂಥಗಳು

1. V.D.Mahajan, Anciant India –, P.No.275
2. A.L.Bhashyam Wonder that was India, Macmillan Publication London, P.No: 701.
3. ಆರ್.ಎಸ್.ಶರ್ಮ, ಪ್ರಾಚೀನ ಭಾರತ □, ಪು.ಸಂ.223
4. V.D Mahajanm, Early History of India – P.507
5. Lunia B.N, Life and Culture Of Ancient India - P.219
6. A.L Bashyam, Wonder that was India - P.714
7. Dr.K.S.Behera, Dr. B.P.Saha, Ancient History of India, P.No.361
8. Journal of Medical Science – The Growth of Indian Medicine, P.913
9. V.D Mahajan, Ancient India -- P.507

ಗ್ರಾಮೀಣ ಅಭಿವೃದ್ಧಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಪಾತ್ರ

* ಅರುಣ್ ಆರ್. ** ಡಾ. ಜೆ.ಟಿ. ರಾಮಚಂದ್ರಪ್ಪ, *** ಜಗದೀಶ್ ಬಾಬು ಎಚ್.ಕೆ.

* ಸಂಶೋಧಕರು, ** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು. *** ಸಹಾಯಕ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

ಪಂಚಾಯ್ತಿ ವಿಕೇಂದ್ರೀಕರಣವು ನಮ್ಮ ರಾಜ್ಯದಲ್ಲಿ ಮೂರು ಹಂತವಿರುವ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಗ್ರಾಮಪಂಚಾಯ್ತಿ ವ್ಯವಸ್ಥೆ ಜಾರಿಯಲ್ಲಿದೆ. ಈ ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಅಧಿಕಾರ, ಅನುದಾನ ಮತ್ತು ಆಡಳಿತದ ಕಾರ್ಯಕಲಾಪಗಳು ಈ ಮೇಲ್ಕಂಡ ಮೂರುಹಂತದ ಪಂಚಾಯತ್ ವ್ಯವಸ್ಥೆಯಲ್ಲಿ ಜಾರಿಯಲ್ಲಿದೆ.

ಗ್ರಾಮ ಸ್ವರಾಜ್ ಪರಿಕಲ್ಪನೆ ಆಧರಿತವಾಗಿ 2009ನೇ ವರ್ಷದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಸಚಿವರು ಮೂರುಹಂತದ ವ್ಯವಸ್ಥೆಯಲ್ಲಿ ತಳಮಟ್ಟದ ಅಭಿವೃದ್ಧಿಯೇ ಮೂಲ ಗುರಿಯಾಗಿರಿಸಿಕೊಂಡು ಪದವಿದರರನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಮಾಡಿ ತರಬೇತಿ ಕೊಡುವ ಮೂಲಕ ಗ್ರಾಮ ಪಂಚಾಯ್ತಿಗೆ ಆಯ್ಕೆ ಮಾಡಿರುವುದು ಶ್ಲಾಘನೀಯ ಮತ್ತು ಸದುದ್ದೇಶವಾಗಿದೆ.

ಗ್ರಾಮ ಪಂಚಾಯ್ತಿಗಳನ್ನು ಉನ್ನತ ದರ್ಜೆಗೆ ಏರಿಸುವ ಮೂಲಕ ಗ್ರಾಮೀಣ ಜನರಿಗೆ ಉತ್ತಮ ಸೌಲಭ್ಯ ಕಲ್ಪಿಸುವುದು. ಪಂಚಾಯ್ತಿಗಳಿಗೆ ಬರುವ ಅನುದಾನವನ್ನು ಸಮರ್ಪಕವಾಗಿ ಬೆಳೆಸುವುದು, ಗ್ರಾಮೀಣ ಜನತೆ, ಜನ ಪ್ರತಿನಿಧಿಗಳೊಂದಿಗೆ ಸೌಹರ್ದ ವಾತಾವರಣ ಸೃಷ್ಟಿಸಿ ಗ್ರಾಮೀಣ ಅಭಿವೃದ್ಧಿಯ ಕನಸು ನನಸು ಮಾಡುವಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಪಾತ್ರ ಮಹತ್ವಯುತ, ಸಮಂಜಸವಾಗಿದೆ.

ಈ ಪ್ರಬಂಧವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬರುವ ಮುನ್ನ ಏನೆಲ್ಲ ಸೌಲಭ್ಯಗಳಿದ್ದವು ಹಾಗೂ ಪಂಚಾಯಿತಿ ವ್ಯವಸ್ಥೆಯಲ್ಲಿದ್ದ ನ್ಯೂನ್ಯತೆಗಳು, ಅದರ ಪ್ರಾಮುಖ್ಯತೆಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಬಂದ ನಂತರ ಇವರಿಂದಾಗ ಅಭಿವೃದ್ಧಿಕಾರ್ಯಗಳನ್ನು ಒಳಗೊಂಡಿರುತ್ತದೆ.

ಹಿನ್ನೆಲೆ : ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮಹತ್ತರವಾದ ಜವಾಬ್ದಾರಿ ನೀಡುವ ಮೂಲಕ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಪ್ರಯತ್ನಕ್ಕೆ ನಾಂದಿ ಹೆಗ್ಗಳಿಕೆ ನಮ್ಮದು.73ನೇ ತಿದ್ದುಪಡಿ ಕಾಯ್ದೆ ಜಾರಿಗೆ ಬರುವುದಕ್ಕಿಂತ ಮುಂಚಿತವಾಗಿ ರಾಜ್ಯ ನಿರ್ದೇಶನ ತತ್ವಗಳಲ್ಲಿ ಕಂಡುಬರುವ 40ನೇ ವಿಧಿಯಲ್ಲಿ ಮಾತ್ರ ಪಂಚಾಯತ್ ಬಗೆಗಿನ ಪ್ರಸ್ತಾಪ ಕಂಡುಬರುತ್ತದೆ.1992, 73ನೇ

ತಿದ್ದುಪಡಿ ಕಾಯ್ದೆಯ ಮೂಲಕ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಂವಿಧಾನತ್ಮಕ ಸ್ಥಾನ ನೀಡುವ ಮೂಲಕ 9ನೇ ಭಾಗವನ್ನು ಸಂವಿಧಾನಕ್ಕೆ ಸೇರಿಸಲಾಯಿತು.243ರಿಂದ 243ವರೆಗಿನ ವಿಧಿಗಳು ಈ ಭಾಗದಲ್ಲಿ ಕಂಡುಬರುತ್ತದೆ.ಅಲ್ಲದೆ ಸಂವಿಧಾನಕ್ಕೆ 11ನೇ ಅನುಸೂಚಿಯನ್ನು ಸೇರಿಸಿತು.11ನೇ ಅನುಸೂಚಿಯು ಪಂಚಾಯತ್ ರಾಜ್ಯ ಸಂಸ್ಥೆಗಳು ನಿರ್ವಹಿಸುವ 29 ವಿಷಯಗಳನ್ನು ಒಳಗೊಂಡಿದೆ. 243 (ಜಿ) ವಿಧಿಯು 29 ವಿಷಯಗಳಿಗೆ ಸಂಬಂಧಿಸಿದೆ.

ಗ್ರಾಮ ಪಂಚಾಯ್ತಿಗಳು ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಸಂವಿಧಾನತ್ಮಕವಾಗಿ ಅವಕಾಶ ದೊರೆತಿದ್ದು, ಈ ನಿಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ಸ್ಥಳೀಯ ಸರ್ಕಾರದ ಪಂಚಾಯತ್ ರಾಜ್ ವ್ಯವಸ್ಥೆಯು ಪ್ರಬಲವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ 2009ನೇ ವರ್ಷದಲ್ಲಿ ಪದವಿಧರರನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಗ್ರಾಮೀಣ ಅಭಿವೃದ್ಧಿಗೆ ಇವರ ಪಾತ್ರ ಜವಾಬ್ದಾರಿಯುತ, ಮಹತ್ವಯುತವಾಗಿದೆ.

30 ಜಿಲ್ಲೆಗಳು 176 ತಾಲ್ಲೂಕುಗಳು 627 ಗ್ರಾಮಪಂಚಾಯಿತಿಗಳು ಇದ್ದು ಈ ಪಂಚಾಯ್ತಿಗಳಿಗೆ ಹಂತ ಹಂತವಾಗಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಭರ್ತಿಮಾಡಿ ಇವರಿಗೆ ಸೂಕ್ತವಾದ ತರಬೇತಿಯನ್ನು ಮೈಸೂರಿನ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾ ಅಭಿವೃದ್ಧಿ ಸಂಸ್ಥೆಯು ಹನ್ನೆರಡು ವಾರಗಳ ಬುನಾದಿ ತರಬೇತಿಯನ್ನು ಜಿಲ್ಲಾ ಪಂಚಾಯತಿಗಳ ಸಹಯೋಗದೊಡನೆ ನಡೆಸಿ ತಮ್ಮ ಸೇವಾವಧಿಯಲ್ಲಿ ಗ್ರಾಮಪಂಚಾಯತಿಗಳ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚಿನ ಸುಧಾರಣೆಗೆ ಕ್ರಮಕೈಗೊಂಡಿದೆ.

ಕರ್ನಾಟಕದಲ್ಲಿ ಗ್ರಾಮಪಂಚಾಯತಿಗಳಿಗೆ ಹೆಚ್ಚಿನ ಸಂಪನ್ಮೂಲ ಹಾಗೂ ಕಾರ್ಯಕ್ರಮಗಳನ್ನು ವರ್ಗಾಹಿಸುವ ಮೂಲಕ ತಳಹಂತದ ಸರ್ಕಾರವನ್ನು ಸಬಲೀಕರಿಸಲು ರಾಜ್ಯಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ.ಈ ನಿಟ್ಟಿನಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕ ಬಹಳ ಪ್ರಸ್ತುತವಾಗಿದೆ.

ಗ್ರಾಮೀಣ ಅಭಿವೃದ್ಧಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಪಾತ್ರ

ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮ ಪಂಚಾಯತಿಗಳ ಪಾತ್ರವು ಮಹತ್ವವಾಗಿದ್ದು, ಸದರಿ ಪಂಚಾಯತಿಗಳ ಉನ್ನತ ಅಧಿಕಾರಿಗಳಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕರ್ತವ್ಯಗಳು ಜವಾಬ್ದಾರಿಯುತವಾಗಿದೆ.ಈ ಗ್ರಾಮ ಪಂಚಾಯತಿಗಳು ಗ್ರಾಮೀಣ ಜನತೆಯ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಲ್ಲಿ ಕಾರ್ಯೋನ್ಮುಖವಾಗಿದೆ.ಅಂತಹ ಮೂಲಭೂತ ಅವಶ್ಯಕತೆಗಳು ಸೌಕರ್ಯಗಳನ್ನು ಈ ಕೆಳಗಿನಂತೆ ತಿಳಿಸಬಹುದಾಗಿದೆ.

1. ಶುದ್ಧ ಕುಡಿಯುವ ನೀರಿನ ಸೌಲಭ್ಯ :ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು ಗ್ರಾಮಪಂಚಾಯತಿಗಳ ಆದ್ಯ ಕರ್ತವ್ಯವಾಗಿದೆ. ಅನಾದಿಕಾಲದಿಂದಲೂ ಕುಡಿಯುವ ನೀರಿಗಾಗಿ ಜನರು ಕಿಲೋಮೀಟರ್‌ಗಳ ದೂರದಲ್ಲಿರುವ ಕೆರೆ, ಬಾವಿಗಳಿಂದ ಅಶುದ್ಧ ನೀರನ್ನು ತಂದು ಬಳಸುತ್ತಿದ್ದರು. ಆದರೆ ಪಂಚಾಯತಿಗಳ ಕಾರ್ಯದಕ್ಷತೆಯಿಂದಾಗಿ ಇಂದು ಹಲವಾರು ದೊಡ್ಡ-ದೊಡ್ಡ ಟ್ಯಾಂಕರ್‌ಗಳನ್ನು ನಿರ್ಮಿಸಿ ನೀರನ್ನು ಶೇಖರಿಸಿ ಶುದ್ಧೀಕರಣ ಮಾಡಿ ಪೈಪ್‌ಲೈನ್ ಮೂಲಕ ಗ್ರಾಮಗಳ ಪ್ರತಿ ಬೀದಿಗಳು, ಮನೆಗಳಿಗೂ ವ್ಯೆಯಕ್ತಿಕವಾಗಿ ಪೂರೈಸಲಾಗುತ್ತಿದೆ. ಕೆಲವು ಗ್ರಾಮಗಳಿಗೆ ಕೊಳವೆ ಬಾವಿಗಳ ಮೂಲಕ ಮತ್ತು ಕೈ ಪಂಪುಗಳ ಮೂಲಕವು ಸಹ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಇವುಗಳ ದುರಸ್ತಿ ಮತ್ತು ನಿರ್ವಹಣೆಯು ಸಂಪೂರ್ಣವಾಗಿ ಗ್ರಾಮಪಂಚಾಯತಿಗಳಿಂದಲೇ ನೆರವೇರುತ್ತಿದೆ. ಹೀಗೆ ಕುಡಿಯುವ ನೀರಿನ ಸಮಸ್ಯೆಗಳು ಎದುರಾದಾಗ ಶೀಘ್ರವಾಗಿ ಗ್ರಾಮಪಂಚಾಯತಿಗಳು ಸ್ಪಂದಿಸಿ ಸಮಸ್ಯೆ ಪರಿಹರಿಸಿ ಶುದ್ಧ ಕುಡಿಯುವ ನೀರನ್ನು ಒದಗಿಸುವ ಒಳ್ಳೆಯ ಕೆಲಸವನ್ನು ಗ್ರಾಮಪಂಚಾಯತಿಗಳಲ್ಲಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಜವಾಬ್ದಾರಿಯಿಂದ ನಿಭಾಯಿಸುತ್ತಿದ್ದಾರೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಶುದ್ಧ ಕುಡಿಯುವ ನೀರನ್ನು ಒದಗಿಸುವಲ್ಲಿ, ಸರ್ಕಾರಗಳಿಂದ ಬರುವ ಕುಡಿಯುವ ನೀರಿನ ಅನುದಾನ 13ನೇ ಹಣಕಾಸು ಅನುದಾನಗಳಿಂದ ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಕಾಯ್ದಿರಿಸಿಕೊಂಡು ಪ್ರತ್ಯೇಕವಾದ ಕುಡಿಯುವ ನೀರಿನ ಖಾತೆಯನ್ನು ತೆರೆದು ಅದರಲ್ಲಿ ಜಮೆ ಮಾಡಿ, ಕುಡಿಯುವ ನೀರಿನ ಸಮಸ್ಯೆಗಳನ್ನು ನಿವಾರಿಸಿ ಅವಶ್ಯಕತೆಗಳನ್ನು ಪೂರೈಸಲಾಗುತ್ತಿದೆ. ಹಾಗೆಯೇ ಗ್ರಾಮಪಂಚಾಯತಿಗಳು ಸ್ಥಳೀಯ ಸರ್ಕಾರಗಳಾಗಿದ್ದು ನೀರಿನ ಕಂದಾಯ, ಮನೆ ಕಂದಾಯ ಇನ್ನು ಮುಂತಾದ ತೆರಿಗೆಗಳನ್ನು ವಿಧಿಸಿ, ಸಂಗ್ರಹಿಸಿ ಈ ಹಣಕಾಸಿನಿಂದಲೂ ತನ್ನದೇ ಆದ ನೌಕರರನ್ನು ನೇಮಿಸಿಕೊಂಡು, ಇವರ ಮೂಲಕ ಸಮರ್ಪಕವಾದ ಕುಡಿಯುವ ನೀರಿನ ನಿರ್ವಹಣೆಯನ್ನು ಮಾಡಲಾಗುತ್ತಿದೆ. ಹೀಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರ ಪಾತ್ರ ಮಹತ್ವದ್ದಾಗಿದೆ.

2. ಬೀದಿ ದೀಪಗಳನ್ನು ಒದಗಿಸುವುದು :'ಅಜ್ಞಾನದಿಂದ ಜ್ಞಾನದೆಡೆಗೆ, ಕತ್ತಲಿನಿಂದ- ಬೆಳಕಿನೆಡೆಗೆ' ಎಂಬಂತೆಪ್ರತಿಗ್ರಾಮಗಳ ಬೀದಿಗಳಿಗೆ ಬೀದಿ ದೀಪಗಳನ್ನು ಅಳವಡಿಸಿ, ರಾತ್ರಿವೇಳೆಗೆ ಬೆಳಕಿನ ವ್ಯವಸ್ಥೆ ಕಲ್ಪಿಸುವುದು ಗ್ರಾಮಪಂಚಾಯತಿ ಆದ್ಯ ಕರ್ತವ್ಯದಾಗಿದ್ದು ಈ ನಿಟ್ಟಿನಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ. ಈ ಸೌಲಭ್ಯವನ್ನು ಕಲ್ಪಿಸಲು ಗ್ರಾಮ ಪಂಚಾಯತಿಗಳು ಸಂಗ್ರಹಿಸುವ ತೆರಿಗೆ ಹಣ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಶಾಸಬದ್ಧ ಅನುದಾನ, 13ನೇ ಹಣಕಾಸು ಅನುದಾನದಲ್ಲಿನ ಅನಿರ್ಬಂಧಿತ ಅನುದಾನಗಳನ್ನು ಬಳಸಿಕೊಂಡು ಸಮರ್ಪಕವಾಗಿ ಬೀದಿದೀಪದ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ. ಈ ಜವಾಬ್ದಾರಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ.

3. ಗ್ರಾಮೀಣ ನೈರ್ಮಲ್ಯೀಕರಣ ಕಾಪಾಡುವುದು : ಗ್ರಾಮಗಳನ್ನು ಶುಚಿಯಾಗಿಡುವುದು ಗ್ರಾಮಪಂಚಾಯತಿ ಆದ್ಯ ಕರ್ತವ್ಯವಾಗಿದೆ. ಚರಂಡಿಗಳನ್ನು ನಿರ್ಮಿಸುವುದು, ಚರಂಡಿಗಳಲ್ಲಿನ ಹೂಳು ತೆಗೆಸುವುದು, ರಸ್ತೆಗಳ ಇಕ್ಕೆಲಗಳಲ್ಲಿನ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವುದು, ಹಾಗೆಯೇ ರಸ್ತೆಗಳ ಇಕ್ಕೆಲಗಳಲ್ಲಿ ಮತ್ತು ಶಾಲಾ ಕಾಲೇಜುಗಳಲ್ಲಿ ಸಸಿಗಳನ್ನು ನೆಡೆಸಿ-ಬೆಳೆಸುವುದುರ ಮೂಲಕ ಗ್ರಾಮಗಳಲ್ಲಿ ಶುದ್ಧ ವಾತಾವರಣ ನಿರ್ಮಿಸಿ ನೈರ್ಮಲ್ಯೀಕರಣ ಕಾಪಾಡುವುದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಂದ ಸಾಕಾರಗೊಳ್ಳುತ್ತಿದೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ವ್ಯಾಪಾರ-ವಹಿವಾಟು, ಸೇವೆ ಹಾಗೂ ಚರಸ್ಥಿರ ಆಸ್ತಿಗಳ ಮೇಲೆ ಪಂಚಾಯತಿಯ ನಡಾವಳಿಗಳ ಮೂಲಕ ತೆರಿಗೆಯನ್ನು ವಿಧಿಸಿ ಕರವಸೂಲಿಗಾರರ ಮೂಲಕ ಸಂಗ್ರಹಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.ಹೀಗೆ ಸಂಗ್ರಹಿಸಿದ ತೆರಿಗೆ ಹಣದಿಂದ ಈ ಕೆಳಕಂಡ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕಾರ್ಯೋನ್ಮುಖರಾಗಿದ್ದಾರೆ.

1. ಗ್ರಾಮಪಂಚಾಯತಿ ವ್ಯಾಪ್ತಿಗೆ ಬರುವ ಬೀದಿದೀಪಗಳ ಬಿಲ್ ಪಾವತಿ
2. ಕುಡಿಯುವ ನೀರಿನ ಸ್ಥಾವರಗಳ ವಿದ್ಯುತ್ ಬಿಲ್ ಪಾವತಿ
3. ಕುಡಿಯುವ ನೀರಿನ ಸ್ಥಾವರಗಳ ನಿರ್ವಹಣಾ ವೆಚ್ಚ
4. ಗ್ರಾಮಪಂಚಾಯತಿ ಅಧ್ಯಕ್ಷರು, ಉಪಾಧ್ಯಾಕ್ಷರು ಮತ್ತು ಸದಸ್ಯರುಗಳ ಗೌರವ ಧನ ಹಾಗೂ ಸಭಾ ಭತ್ಯೆ ಪಾವತಿಸುವುದು.
5. ಚರಂಡಿ ದುರಸ್ಥಿ ನೈರ್ಮಲೀಕರಣ ವೆಚ್ಚ.

ತೆರಿಗೆ ವಿಧಿಸಬಹುದಾದ ಮೂಲಗಳು: ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕಾಯಿದೆ ಬದ್ಧವಾಗಿ ಬಂದಿರುವ ತೆರಿಗೆ ವಿಧಿಸುವ ಅಧಿಕಾರವನ್ನು ವೈಜ್ಞಾನಿಕವಾಗಿ ಮುಖ್ಯ ತೆರಿಗೆಯನ್ನು ಈ ಕೆಳಕಂಡ 4 ಮಾರ್ಗಗಳ ಮೂಲಕ ಪಡೆಯುತ್ತಾರೆ.

1. ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಇರುವ ಕಟ್ಟಡಗಳು, ಮನೆಗಳು, ನಿವೇಶನಗಳ ಮೇಲಿನ ತೆರಿಗೆ ಮತ್ತು ಇನ್ನಿತರ ಮೂಲದ ಶುಲ್ಕಗಳಿಂದ
2. ಗ್ರಾಮಪಂಚಾಯತಿ ತಾವು ಒದಗಿಸುವ ಸೌಲಭ್ಯಕ್ಕೆ ಬಳಕೆದಾರರಿಂದ ಪಡೆಯಬಹುದಾದ ಬಳಕೆದಾರರ ವೆಚ್ಚ
3. ಗ್ರಾಮಪಂಚಾಯತಿ ಸ್ವಂತ ಆಸ್ತಿಗಳಿಂದ ಬರುವ ವಾರ್ಷಿಕ ಉತ್ಪನ್ನ ಮತ್ತು ಆದಾಯಗಳಿಂದ
4. ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ನೀಡಿರುವ ಅಧಿಕಾರದಿಂದ ಬರುವ ಆದಾಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪಂಚಾಯ್ತಿ ಜನ ಪ್ರತಿನಿಧಿಗಳ ಸಹಕಾರದೊಂದಿಗೆ, ನಡವಳಿ ಪಾಸು ಮಾಡುವ ಮೂಲಕ ತೆರಿಗೆ ಪರಿಷ್ಕರಣೆಯನ್ನು ಮಾಡಿ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವ ಉದ್ದೇಶದಿಂದ ಈ ಕೆಳಕಂಡ ರೀತಿ ತೆರಿಗೆ ವಿಧಿಸಲಾಗಿರುತ್ತದೆ.

ಗ್ರಾಮಪಂಚಾಯತಿಗೆ ಆದಾಯದ ಮೂಲಗಳು : ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಈ ಕೆಳಕಂಡ ರೀತಿ 1993ರ ಪಂಚಾಯತ್ ರಾಜ್ ಕಾಯಿದೆ ಅನ್ವಯಕ್ರಮ ಕೈಗೊಳ್ಳುವರು.

1. ಗ್ರಾಮಪಂಚಾಯತಿ ಆಸ್ತಿಗಳು : ಗ್ರಾಮಪಂಚಾಯತಿಗೆ ಸೇರಿದ ಜಾಗವನ್ನು ಜಾತ್ರೆ, ಸಂತೆ, ನಾಟಕ ಪ್ರದರ್ಶನದಿಂದ ಬರುವ ಬಾಡಿಗೆ ಮತ್ತು ಹುಲ್ಲು ಬೆಳೆಸಿ ಹರಾಜು ಮಾಡುವಿಕೆ, ತೋಟಗಾರಿಕೆ, ನರ್ಸರಿ ಅಭಿವೃದ್ಧಿಗೆ ಹರಾಜಿನ ಮೂಲಕ ಬಾಡಿಗೆ ನೀಡಿ ವಸೂಲಿ ಮಾಡಲಾಗುತ್ತದೆ.

2. ಪಂಚಾಯತಿ ಕಟ್ಟಡದಿಂದ ಬಾಡಿಗೆ : ಗ್ರಾಮಪಂಚಾಯತಿಯು ತನ್ನ ವ್ಯಾಪ್ತಿಯಲ್ಲಿ ವಾಣಿಜ್ಯ ಸಂಕೀರ್ಣ ಅಂಗಡಿ ಮಳಿಗೆ, ವಸತಿ ಗೃಹ, ಸಹಕಾರ ಸಂಘಗಳ ಕಟ್ಟಡಗಳನ್ನು ನಿರ್ಮಿಸಿ ಹರಾಜಿನ ಮೂಲಕ ಬಾಡಿಗೆ ನಿಗದಿ ಪಡಿಸುವುದು.

3. ಪಂಚಾಯ್ತಿ ಜಾಗ ಮಾರಿ ಬರತಕ್ಕ ಆದಾಯ : ಪಂಚಾಯ್ತಿಗೆ ಸೇರಿದ ಜಾಗವನ್ನು ನಿವೇಶನ ಮಾಡಿ ಮಾರುವುದರಿಂದ ಆದಾಯಗಳಿಸಬಹುದಾಗಿದೆ.

4. ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಮರವ್ರ ಬೀಳುವ ಸ್ಥಿತಿಯಲ್ಲಿದ್ದರೆ ಅದನ್ನು ಮಾರಿ ಆದಾಯಗಳಿಸಬಹುದು

5. ಬಸ್‌ನಿಲ್ದಾಣ ಶುಲ್ಕ :ಪ್ರಯಾಣಿಕರಿಗೆ ಗ್ರಾಮಪಂಚಾಯತಿಯಿಂದ ಶೌಚಾಲಯ ಹಾಗೂ ಇತರ ಸೌಲಭ್ಯ ಒದಗಿಸಿದ್ದಲ್ಲಿ ಬಸ್ಸುಗಳು, ಟ್ಯಾಕ್ಸಿಗಳು ಮತ್ತು ಆಟೋ ಸ್ಟಾಂಡ್‌ಗಳ ಮೇಲೆ ಕಲಂ 199ರ ಪ್ರಕಾರ ಫೀಜನ್ನು ವಿಧಿಸಬಹುದು.

6. ಖಾಸಗಿ ಲೇಔಟ್‌ಗಳಿಂದ ಅಭಿವೃದ್ಧಿ ಶುಲ್ಕ : ಸರ್ಕಾರ ನೀಡತಕ್ಕ ಆದೇಶದನ್ವಯ ಗ್ರಾಮಪಂಚಾಯತಿಗಳು ಖಾಸಗಿ ಬಡಾವಣೆಗಳಿಗೆ ಅಭಿವೃದ್ಧಿ ಶುಲ್ಕ ವಸೂಲಿ ಮಾಡಬಹುದು.

ಇನ್ನಿತರ ಆದಾಯದ ಮೂಲಗಳೆಂದರೆ, ನೋಟೀಸ್ ಫೀ, ವಾರೆಂಟ್ ಫೀ, ದಂಡ ವಿಧಿಸುವುದು, ಸ್ಥಳೀಯ ಕರೆಗಳ ಮೂಲಕ ಗ್ರಾಮಪಂಚಾಯತಿಯು ಆದಾಯಗಳಿಸುತ್ತದೆ.

ಗ್ರಾಮಪಂಚಾಯತಿಗೆ ಬರುವ ಅನುದಾನ ಮತ್ತು ವಂತಿಗೆ

1. ಶಾಸನಬದ್ಧ ಅನುದಾನ : ಕಲಂ 206ರ ಪ್ರಕಾರ ಸರ್ಕಾರ ಪ್ರತಿ 8000 ಜನಸಂಖ್ಯೆ ಕಡಿಮೆ ಇರುವ ಗ್ರಾಮ ಪಂಚಾಯತಿಗೆ ವಾರ್ಷಿಕವಾಗಿ ಪ್ರಸ್ತುತ ರೂ. 10,00,000/- ಗಳಿಗೆ ಮತ್ತು ಪ್ರತಿ 8001ಕ್ಕಿಂತ ಜನಸಂಖ್ಯೆ ಕಡಿಮೆ ಹೆಚ್ಚು ಇರುವ ಗ್ರಾಮಪಂಚಾಯತಿಗೆ ವಾರ್ಷಿಕವಾಗಿ ಪ್ರಸ್ತುತ ರೂ. 12,00,000/-ಗಳಿಗೆ ಕಡಿಮೆಯಿಲ್ಲದಂತೆ ಅನುದಾನ ನೀಡತಕ್ಕದ್ದು. ಸರ್ಕಾರ ಅದನ್ನು 4 ಕಂತುಗಳಲ್ಲಿ ನೇರವಾಗಿ ಗ್ರಾಮ ಪಂಚಾಯತಿಗೆ ಬಿಡುಗಡೆ ಮಾಡುತ್ತಿದೆ.

- ಈ ಮೊಬಲಗನ್ನು ವಿದ್ಯುತ್ ಚಾರ್ಜುಗಳನ್ನು ಭರಿಸಲು, ಬೀದಿ ದೀಪಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲು, ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಳ ನಿರ್ವಹಣೆ ಮತ್ತು ಅನುಷ್ಠಾನ, ನೀರಿನ ಮೂಲ ಸಂರಕ್ಷಣೆ, ಹಾಗೂ ಇತರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಬೇಕು.
- ಅನುದಾನದ ಯಾವುದೇ ಭಾಗವನ್ನು ಮೇಲಿನ ಉದ್ದೇಶಗಳಿಗೆ ಸಂಬಂಧಪಡದ ಹಾಗೂ ಸಿಬ್ಬಂದಿ ವೆಚ್ಚಗಳಿಗೆ ಬಳಸಬಾರದು. ಆದರೆ, ಈ ಮೊಬಲಗನ್ನು ನೀರು ಮತ್ತು ನೈರ್ಮಲ್ಯ ನಿರ್ವಹಣೆ ಮಾಡುವ ಸಿಬ್ಬಂದಿಯ ವೇತನಕ್ಕೆ ಬಳಸಬಹುದು.
- 25%ರಷ್ಟು ಕಡಿಮೆ ಇಲ್ಲದಷ್ಟು ಅನುದಾನವನ್ನು ಪರಿಶಿಷ್ಟ ಜಾತಿ / ವರ್ಗಕ್ಕೆ ಸೌಲಭ್ಯಗಳನ್ನು ಕೊಡಲು ಮೀಸಲಿರಿಸಬೇಕು.

2. ಹಣಕಾಸು ಆಯೋಗದ ಅನುದಾನ : ಕಲಂ 267ರ ಪ್ರಕಾರ 13ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ

- ಸಾಮಾಜಿಕ ಆರ್ಥಿಕ ಸೂಚಕಗಳ ಆಧಾರಿತ ಮೂಲಭೂತ ಸೌಕರ್ಯ ಒದಗಿಸಲು ಈ ಅನುದಾನ ಬಳಕೆ ಮಾಡಿಕೊಳ್ಳಬೇಕು.
- ದೀರ್ಘಕಾಲ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳ ಸೃಷ್ಟಿಗೆ ಆದ್ಯತೆ ನೀಡಬೇಕು.
- ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಗುವ ಕ್ಷೇತ್ರಗಳಾದ ಕುಡಿಯುವ ನೀರು, ನೈರ್ಮಲ್ಯ, ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಅಪೌಷ್ಟಿಕತೆ ನಿವಾರಣದಂತಹ ಕ್ಷೇತ್ರಗಳಿಗೆ ಆದ್ಯತೆ ನೀಡಬೇಕು.

- ನೀರು ಸರಬರಾಜು ಯೋಜನೆಯಡಿ.

3. **ರಾಜ್ಯ ಸರ್ಕಾರದ ಕಾರ್ಯಕ್ರಮಗಳು :** ಕುಡಿಯುವ ನೀರು ಸರಬರಾಜು ಮತ್ತು ನಿರ್ವಹಣೆಗೆ ಬಿಡುಗಡೆಯಾಗುವ ಅನುದಾನ
- ಕೊಳವೆ ನೀರು ಸರಬರಾಜು ನಿರ್ವಹಣೆಗೆ – ರೂ. 8,000/
- ಕಿರುನೀರು ಸರಬರಾಜು ನಿರ್ವಹಣೆಗೆ – ರೂ. 3,500/–
- ಪಂಪುಗಳ ನಿರ್ವಹಣೆಗಾಗಿ – ರೂ. 600/–

❖ **ವಸತಿ ಯೋಜನೆಗಳು – ಅಂಬೇಡ್ಕರ್ :**ಪ್ರತಿ ಮನೆಗೆ ರೂ, 50,000/–ಗಳು ಬಸವ ವಸತಿ ಯೋಜನೆ ಪ್ರತಿ ಮನೆಗೆ ರೂ. 1,20,000/–ಗಳು
- **ಪರಿಶಿಷ್ಟ ಜಾತಿ/ ಪಂಗಡದ ಫಲಾನುಭವಿಗಳಿಗೆ ರೂ.** 50,000/ – ಈ ಮೊಬಲಗು ಧನಸಹಾಯವಾಗಿರುವುದರಿಂದ ಮರುಪಾವತಿ ಮಾಡುವ ಹಾಗಿಲ್ಲ.
- **ಫಲಾನುಭವಿಗಳಿಗೆ ರೂ.** 1,20,000/– ಎಲ್ಲಾ ಧನವು ಸಬ್ಸಿಡಿ ಆಗಿರುವುದರಿಂದ ಮರುಪಾವತಿ ಅನ್ವಯಿಸುವುದಿಲ್ಲ.

❖ **ಗ್ರಾಮ ಸ್ವರಾಜ್ ಯೋಜನೆ** (15 ಜಿಲ್ಲೆಗಳ 39 ತಾಲ್ಲೂಕುಗಳಲ್ಲಿ ಮಾತ್ರ)
- ಪಂಚಾಯತ್ ರಾಜ್ ಸಂಸ್ಥೆಗಳ ಬಲವರ್ಧನೆ
- ಜನರ ಆದ್ಯತೆಗಳಿಗನುಗುಣವಾಗಿ ಅನಿರ್ಭಂದಿತ ಅನುದಾನದ ಬಳಸಿ ಕಾರ್ಯಕ್ರಮಗಳ ಅನುಷ್ಠಾನ
- ಸೇವೆಗಳ ಪೂರೈಕೆಯಲ್ಲಿ ಸುಧಾರಣೆ

4. **ಕೇಂದ್ರ ಸರ್ಕಾರದ ಕಾರ್ಯಕ್ರಮಗಳು :** ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ
- ಪ್ರತಿ ಗ್ರಾಮೀಣ ಕುಟುಂಬದ ವಯಸ್ಕರಿಗೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ
- ದೀರ್ಘಕಾಲ ಬಾಳಿಕೆ ಬರುವಂತಹ ಆಸ್ತಿಗಳ ನಿರ್ಮಾಣ
- ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಆಧಾರ ಬಲಪಡಿಸುವುದು.

❖ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಅನುದಾನದ ಯೋಜನೆ (ಬಿ.ಆರ್.ಜಿ.ಎಫ್) (5 ಜಿಲ್ಲೆಗಳಲ್ಲಿ ಮಾತ್ರ)
- ಜನಸಹಭಾಗಿತ್ವ ಯೋಜನೆಯ ಮೂಲಕ ಯೋಜನೆ ತಯಾರಿ ಮತ್ತು ಅನುಷ್ಠಾನ
- ಸ್ಥಳೀಯ ಮೂಲಭೂತ ಸೌಕರ್ಯ ಹಾಗೂ ಇನ್ನಿತರ ಅವಶ್ಯಕತೆಗಳಿಗೆ ಈಗಾಗಲೇ ಲಭ್ಯವಿರುವ ಅನುದಾನ ಬಳಕೆ. ಈ ಅನುದಾನದ ಕೊರತೆಯಿರುವ ಸಂದರ್ಭಗಳಲ್ಲಿ ಮಾತ್ರ ಬಿ.ಆರ್.ಜಿ.ಎಫ್. ನಿಧಿ ಬಳಕೆ
- ಸೇವೆಗಳ ಪೂರೈಕೆಯ ಗುಣಮಟ್ಟ ಉತ್ತಮಪಡಿಸುವುದು.

❖ ಇಂದಿರಾ ಆವಾಜ್ : ಪ್ರತಿ ಮನೆಗೆ ರೂ. 1,20,000/–
- ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ರೂ. 1,20,000/– ಎಲ್ಲಾ ಧನವು ಸಬ್ಸಿಡಿ ಆಗಿರುವುದರಿಂದ ಮರುಪಾವತಿ ಅನ್ವಯಿಸುವುದಿಲ್ಲ.

❖ ನಿರ್ಮಲ ಭಾರತ ಅಭಿಯಾನ
- ಎಲ್ಲಾ ಗ್ರಾಮೀಣ ಕುಟುಂಬಗಳು ಶೌಚಾಲಯ ಹೊಂದುವುದರ ಮೂಲಕ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಕಾಯಿಲೆಗಳನ್ನು ತಡೆಗಟ್ಟುವುದು. ಲಭ್ಯವಿರುವ ಸೌಲಭ್ಯ :
- ವೈಯಕ್ತಿಕ ಶೌಚಾಲಯ – 9200/– ಓ:ಂ– 4700/– MGNREGS- 4500/–
- ಶಾಲಾ ಶೌಚಾಲಯ – ರೂ 35,000/–
- ಅಂಗನವಾಡಿ ಶೌಚಾಲಯ – ರೂ. 8,000/–
- ಸಮುದಾಯ ಶೌಚಾಲಯ – ರೂ. 2,00,000/–

ಈ ಮೇಲ್ಕಂಡ ಅನುದಾನ ಮತ್ತು ಕಾರ್ಯಕ್ರಮಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮಸಭೆಯಲ್ಲಿ ಅಧ್ಯಕ್ಷರು, ಸದಸ್ಯರು, ನಾಗರೀಕರ ಜೊತೆ ಚರ್ಚಿಸಿ ರೂಪುರೇಷೆ ಸಿದ್ಧಪಡಿಸುವ ಮೂಲಕ ಸಂಪೂರ್ಣ ಜವಾಬ್ದಾರಿ ಹೊಂದುವ ಮೂಲಕ ಅನುದಾನಗಳನ್ನು ಸೂಕ್ತ ರೀತಿ ಉಪಯೋಗಿಸಲು ಕ್ರಮವಹಿಸುತ್ತಾರೆ.

ಗ್ರಾಮದ ಸಮಸ್ಯೆ ನೂರು, ಪರಿಹಾರವು ಮೂನ್ನೂರು ಎಂಬ ಕಲ್ಪನೆಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿ ವರ್ಗ, ಜನಪ್ರತಿನಿಧಿಗಳೊಂದಿಗೆ ಕಾರ್ಯನ್ಮೂಕರಾಗಿ ಹಳ್ಳಿಗರ ಬದುಕನ್ನು ಹಸನುಗೊಳಿಸಲು ಗ್ರಾಮಸ್ವರಾಜ್ ಕಲ್ಪನೆಯನ್ನು ಯಶಸ್ವಿಗೊಳಿಸಲು 'ಮನಗೆದ್ದುಮಾರುಗೆಲ್ಲು' ಎಂಬ ಗಾದೆಯಂತೆ ಶ್ರದ್ಧೆ, ಪ್ರಾಮಾಣೀಕತೆಯಿಂದನಿರ್ವಹಿಸಲುಪ್ರಯತ್ನಸಾಗಿದೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಳ್ಳಿಯಲ್ಲಿ ಪ್ರತಿಯೊಬ್ಬರೂ ತಮ್ಮವರೆಂಬ ಭಾವನೆ ಮೂಲಕ ಭಾರತೀಯ ಸಂಸ್ಕೃತಿಯ ಅಭೂತಪೂರ್ವ ಕೊಡುಗೆಯಾದ ಸಂಬಂಧಗಳು ಬಾಂದವ್ಯವನ್ನು ಗಟ್ಟಿಗೊಳಿಸುವ ಮೂಲಕ ಕೆಲಸವನ್ನು ಕಟ್ಟುಪಟ್ಟು ಮಾಡದೆ ಇಷ್ಟಪಟ್ಟು ಮಾಡುವ ಮೂಲಕ ಪಂಚಾಯ್ತಿಗಳ ಕರಬಾಕಿ ಮತ್ತು ಚಾಲ್ತಿ ಕಂದಾಯಗಳನ್ನು ವಸೂಲು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇತರೆ ಮೂಲ ಆದಾಯದ ಬಗ್ಗೆ ಗಮನ ಹರಿಸಿ ಯಶಸ್ವಿಗೊಳಿಸುತ್ತಿದ್ದಾರೆ

ಮನೆ ಕಂದಾಯ, ನಿವೇಶನ ಕಂದಾಯ ಜೊತೆಗೆ ವಾಣಿಜ್ಯ ಮಳಿಗೆ, ಹೋಟೇಲ್?, ಅಂಗಡಿ ಮುಗ್ಗಟ್ಟು, ಸಣ್ಣ ಕಾರ್ಖಾನೆ (ಉದಾ: ವಿದ್ಯುತ್ ಕಂಬ ತಯಾರಿಕೆ ಘಟಕ, ಸಿಮೆಂಟ್, ಇಟ್ಟಿಗೆ ತಯಾರಿಕಾ ಘಟಕ ಇತ್ಯಾದಿ)ಗಳು, ಅಕ್ಕಿ ಗಿರಣಿ, ಶಿಕ್ಷಣ ಸಂಸ್ಥೆಗಳು ಮತ್ತಿತರೆ ಆದಾಯ ಮೂಲಗಳನ್ನು ಪತ್ತೆ ಹೆಚ್ಚಿಕೊಂಡು, ಅವುಗಳಿಂದ ಹೆಚ್ಚು ಕಂದಾಯ ವಸೂಲಿ ಮಾಡಿ, ಸಂಪನ್ಮೂಲ ವೃದ್ಧಿಸಿಕೊಳ್ಳಬೇಕು. ಈ ಮೂಲಕ ಪಂಚಾಯಿತಿಯನ್ನು ಆರ್ಥಿಕವಾಗಿ ಸಬಲಗೊಳಿಸ ಬಹುದು. ನಗರ, ಪಟ್ಟಣಕ್ಕೆ ಸಮೀಪದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇಂತಹ ವಾಣಿಜ್ಯ ಆದಾಯ ಮೂಲ ಹೆಚ್ಚಾಗಿ ಕಂಡುಬರುತ್ತವೆ. ಕಂಡುಕೊಂಡ ಆದಾಯ ಮೂಲವಾದ ಉದ್ಯಮ ಹೊಂದಿರುವ ವಿಸ್ತೀರ್ಣದ ಸರಿಯಾದ ಅಳತೆ ಮಾಡಿಸಿ, ವೈಜ್ಞಾನಿಕವಾಗಿ ಕಂದಾಯ ನಿಗದಿಪಡಿಸಬೇಕು.ಗ್ರಾಮ ಪಂಚಾಯಿತಿಗೆ ಅಂತಹ ಉದ್ಯಮಗಳಿಂದ ಆದಾಯದ ಸದೃಢ ಮೂಲವನ್ನಾಗಿ ಮಾಡಿಕೊಳ್ಳಬೇಕು.ಭೂ ಪರಿವರ್ತನೆಯಾಗಿ ಪಂಚಾಯಿತಿಗಳಲ್ಲಿ ಖಾತೆಯನ್ನು ಮಾಡಿಸಿಕೊಂಡು, ಕಂದಾಯವನ್ನು ಸರಿಯಾಗಿ ಕಟ್ಟದೆ, ಬಾಕಿ ಉಳಿಸಿಕೊಂಡ ಮಾಲೀಕರನ್ನು ಗುರುತಿಸಿ ಪಟ್ಟಿ ಮಾಡಬೇಕು.

ಅಂತಹ ಪ್ರಕರಣಗಳನ್ನು ಗುರುತಿಸಿ, ಅವುಗಳ ಮಾಲೀಕರ ಮನ ಪರಿವರ್ತಿಸಿ, ಕಂದಾಯ ಪಾವತಿಸುವಂತೆ ಅರಿವು ಮೂಡಿಸಬೇಕು. ಇಂತಹ ಸಂದರ್ಭದಲ್ಲಿ ಉದ್ಯಮ, ಕಾರ್ಖಾನೆ, ಶಿಕ್ಷಣ ಸಂಸ್ಥೆಗಳಿಗೆ ಕಂದಾಯ ನಿಗದಿಪಡಿಸುವಾಗ ಮನ ಒಲಿಸುವ ವಿಧಾನವನ್ನು ಅನುಸರಿಸಬೇಕು.ಇಷ್ಟು ಮಾಡಿದರೆ, ಪಂಚಾಯಿತಿ ಆದಾಯ ಮೂಲ ಹೆಚ್ಚಿಸಿಕೊಳ್ಳುವ ದಾರಿ ಅತ್ಯಂತ ಸುಲಭವಾಗುತ್ತದೆ.

ಕರ ವಸೂಲಿಗಾರರ ಜೊತೆಗೆ ಪಂಚಾಯಿತಿ ಸದಸ್ಯರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ನೀರುಗಂಟಿಗಳು ವಾರಕ್ಕೊಮ್ಮೆ ಒಂದೊಂದು ವಾರ್ಡ್‌ನಲ್ಲಿ ಪಾದಯಾತ್ರೆ ತೆರಳಿ, ಜನರ ಸಮಸ್ಯೆಗೆ ಸ್ಪಂದಿಸಬೇಕು.ನೀರು, ಸ್ವಚ್ಛತೆ, ಬೀದಿದೀಪ, ರಸ್ತೆ, ಚರಂಡಿ, ಶೌಚಾಲಯ ಹೀಗೆ ಜನರ ಸಮಸ್ಯೆ ಆಲಿಸುವ ಜೊತೆಗೆ ಸೌಲಭ್ಯ ಕಲ್ಪಿಸುತ್ತಲೇ, ಜನರ ಮನವನ್ನೂ ಗೆಲ್ಲಬೇಕು.

ಸರ್ಕಾರ ಸಾರ್ವಜನಿಕರಿಗಾಗಿ ಹಲವಾರು ಸೌಲಭ್ಯ, ಯೋಜನೆ ರೂಪಿಸಿ, ಅನುಷ್ಠಾನಗೊಳಿಸುತ್ತದೆ.ಉದಾಹರಣೆಗೆ ವಸತಿ ಯೋಜನೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ, ನಿವಾಸಿ ದೃಢೀಕರಣ ಪತ್ರ, ನಿರಾಪೇಕ್ಷಣಾ ಪತ್ರ ಇತ್ಯಾದಿ. ಅವುಗಳ ಜೊತೆಗೆ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಕಂದಾಯ ವಸೂಲಾತಿ ಮಾಡುತ್ತಿದ್ದೇವೆಂಬ ಭಾವನೆ ಜನರಲ್ಲಿ ತಂದು ಕಂದಾಯದ ದುಡ್ಡು ನಿಮಗಾಗಿ, ನಿಮ್ಮ ಊರಿಗಾಗಿ ಎಂಬ ಅರಿವನ್ನು ಮೂಡಿಸಿ, ಜನರಲ್ಲಿ ಪರಿವರ್ತನೆ ಮಾಡಿ ಕಂದಾಯ ವಸೂಲಾತಿ ಹೆಚ್ಚಿಸುವ ಮೂಲಕ ಜನರಲ್ಲಿ ಇಂತಹ ಅರಿವು ಮೂಡಿಸಿ ಕಂದಾಯ ವಸೂಲಾತಿಯೂ ಸುಗಮವಾಗಿ, ಸರಾಗವಾಗಿ ನಡೆಯುವಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕ್ರಮವಾಗಿಸುತ್ತಿದ್ದಾರೆ.

ಸಂತೆ, ಕೆರೆಗಳ ಹರಾಜು, ಭೂ ಪರಿವರ್ತನೆಗೆ ನಿರಪೇಕ್ಷಣಾ ಪತ್ರ, ಅಭಿವೃದ್ಧಿ ಶಿಲ್ಕು, ಕೋಳಿ ಫಾರಂ, ಉದ್ಯಮ ಇತ್ಯಾದಿಗಳು ಆದಾಯ ಮೂಲಗಳಾಗ ಸಮರ್ಪಕವಾಗಿ ಬಳಕೆಯಾಗಬೇಕು.ಗ್ರಾಮ ಪಂಚಾಯತಿಗಳು ತಮ್ಮ ಖರ್ಚಿನ ಉಳಿತಾಯಕ್ಕೂ ಹೆಚ್ಚಿನ ಗಮನ ನೀಡಬೇಕು.ಜನತೆಗೆ ಮೂಲ ಸೌಲಭ್ಯ ಒದಗಿಸುವುದು ನಮ್ಮ ಕರ್ತವ್ಯ. ಈ ಉಳಿತಾಯದ ಹಣವನ್ನು ಗ್ರಾಮದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.ಸಾಮಾಗ್ರಿಗಳ ಖರೀದಿ, ಸದ್ಬಳಕೆ ಮೂಲಕ ಅನಗತ್ಯ ಬಾಕಿ ಹಣ ಪಾವತಿ, ತಪ್ಪಿಸುವ ಮೂಲಕ ಉಳಿತಾಯ ಮಾಡಲಾಗುತ್ತಿದೆ.

ಗ್ರಾಮಪಂಚಾಯತಿ ಕರ ವಸೂಲಿಗೆ ತೆರಳಿದಾಗ ಆರಂಭದಲ್ಲಿ ಸಾಕಷ್ಟು ಪ್ರಶ್ನೆ, ಸಮಸ್ಯೆಗಳು ನಮಗೂ ಎದುರಾದವು.ಅದರಲ್ಲೂ ಪಂಚಾಯಿತಿ ನಮಗೆ ಏನು ಕೊಟ್ಟಿದೆ?ನಾವ್ಯಾಕೆ ಕಂದಾಯ ಕಟ್ಟಬೇಕು? ಚರಂಡಿ ಹೂಳನ್ನೇ ತೆಗೆದಿಲ್ಲ, ಬೀದಿ ದೀಪಗಳು ಹತ್ತುವುದೇ ಇಲ್ಲ. ಕುಡಿಯುವ ನೀರನ್ನೇ ಸರಿಯಾಗಿ ನೀಡುತ್ತಿಲ್ಲ, ರಸ್ತೆಗಳೇ ಇಲ್ಲ... ಹೀಗೆ ಒಬ್ಬೊಬ್ಬರದ್ದೂ ಹತ್ತಾರು ಸಮಸ್ಯೆ, ಆರೋಪಗಳ ಪಟ್ಟಿಯನ್ನೇ ನಮ್ಮ ಮುಂದೆ ಬಿಚ್ಚಿಟ್ಟರು.ಪ್ರತಿ ಮನೆ ಬಾಗಿಲಿಗೆ ಹೋದಾಗಲೂ ಸಮಸ್ಯೆಗಳ ಪಟ್ಟಿಯ ಸಂಖ್ಯೆಯಲ್ಲಿ ಹೊಸ ಹೊಸ ವಿಚಾರಗಳು ಸೇರ್ಪಡೆಯಾದವು.

ಹೀಗೆ ಸಮಸ್ಯೆ ಹೇಳುತ್ತಿದ್ದವರಿಗೆ ಸಮಸ್ಯೆ ಎಲ್ಲಿಂದ ಆಗುತ್ತಿದೆ ಎಂಬುದನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿ ನೀವೇ ತೆರಿಗೆ ಪಾವತಿಸದಿದ್ದರೆ, ನಿಮಗೆ ಸೌಲಭ್ಯ ಕಲ್ಪಿಸುವುದು ಹೇಗೆಂಬ ಪ್ರಶ್ನೆಯನ್ನು ಜನರ ಮುಂದಿಟ್ಟರು.ಆಯಾ ವಾರ್ಡ್‌ಗಳಲ್ಲಿ ಆದ ಕಂದಾಯ ವಸೂಲಾತಿಯ ಕೆಲ ಭಾಗವನ್ನು ಅದೇ ವಾರ್ಡ್‌ನಲ್ಲಿ ಮೂಲ ಸೌಕರ್ಯ ಕಲ್ಪಿಸಲು ಖರ್ಚು ಮಾಡಿದಲ್ಲಿ, ಜನರಿಗೂ ಸಹ ಗ್ರಾಮ ಪಂಚಾಯಿತಿ ಬಗ್ಗೆ ನಂಬಿಕೆ ಮೂಡುತ್ತದೆ. ಹಲವಾರು ಜನರ ಮನಸ್ಸಿನಲ್ಲಿರುವ ಪ್ರಶ್ನೆಯೆಂದರೆ ನಮ್ಮ ಕಂದಾಯದ ದುಡ್ಡನ್ನು ಪಂಚಾಯತಿ ಬೇರೆ ಯಾವುದೋ ಖರ್ಚಿಗೆ ಬಳಕೆ ಮಾಡುತ್ತಾರೆ ಎಂಬುದಾಗಿತ್ತು.

ನಿಮ್ಮಿಂದ ವಸೂಲಾದ ಹಣ ನಿಮ್ಮದೇ ವಾರ್ಡ್‌ನ ಅಭಿವೃದ್ಧಿಗೆ ಖರ್ಚಾಗುತ್ತದೆ ಎಂದು ಸ್ಪಷ್ಟಪಡಿಸಲಾಯಿತು.ಅಲ್ಲಿಯೇ ಕೆಲಸ ಮಾಡಿದ್ದು, ಅದಕ್ಕೆ ಜನ ಸ್ಪಂದಿಸಿದ್ದು ಇಲ್ಲಿ ಪ್ರಮುಖ ಅಂಶ. ಜನರ ನಂಬಿಕೆಗೆ ಪಾತ್ರವಾದಲ್ಲಿ ಪಂಚಾಯತಿ ಕಂದಾಯ ವಸೂಲಾತಿ ಕಾರ್ಯ ತ್ರಾಸದ್ದೇನೂ ಅಲ್ಲ.

ಜನತೆಯಿಂದ ಕೇಳಿ ಬರುವ ಮತ್ತೊಂದು ಪ್ರಶ್ನೆಯೆಂದರೆ ಸರ್ಕಾರವೇ ನಿಮಗೆ ಹಲವಾರು ಯೋಜನೆಗಳಲ್ಲಿ ಕೋಟ್ಯಾಂತರ ಹಣ ನೀಡುವಾಗ ನಾವ್ಯಾಕೆ ತೆರಿಗೆ ಪಾವತಿಸಬೇಕು ಎಂಬುದಾಗಿತ್ತು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಜನರಿಗೆ ಮೊದಲು ಅರಿವು ಮೂಡಿಸಬೇಕಾಗಿದ್ದು ಇಂತಹ ವಿಚಾರದ ಬಗ್ಗೆ, ಸರ್ಕಾರದ ವಿವಿಧ ಯೋಜನೆಯಡಿ ಬಿಡುಗಡೆಯಾಗುವ ಹಣಕ್ಕೆ ಆಯಾ ಯೋಜನೆಗಳಿಗೆ ಸರ್ಕಾರದ ಮಾರ್ಗದರ್ಶಿ ಸೂಚನೆಗಳ ಅನ್ವಯ ಬಳಸಬೇಕೆಂಬ ಆದೇಶವಿರುತ್ತದೆ.ಅದನ್ನು ಅನ್ಯ ಕಾರ್ಯಕ್ಕೆ ಬಳಸುವಂತಿಲ್ಲ ಎಂಬ ವಿಚಾರವನ್ನು ಜನ ಸಾಮಾನ್ಯರಿಗೆ, ಗ್ರಾಮೀಣ ನಿವಾಸಿಗಳಿಗೆ ಮನವರಿಕೆ ಮಾಡುವ ಮೂಲಕ ಅರಿವು ಮೂಡಿಸುತ್ತಾರೆ.

ಉಪಸಂಹಾರ : ಗ್ರಾಮೀಣಾಭಿವೃದ್ಧಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಪಾತ್ರ ಮಹತ್ವಯುತವಾಗಿದ್ದು.ತಳಮಟ್ಟದ ಸಮಸ್ಯೆಯನ್ನು ಅರಿತು ಸರ್ಕಾರದ ವಿವಿಧ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನ ಹಾಗೂ ಸ್ಥಳೀಯ ಸಂಪನ್ಮೂಲಗಳ ಆದಾಯದಿಂದ ಸ್ಥಳೀಯ ಸರ್ಕಾರವನ್ನು ಬಲಪಡಿಸುತ್ತಿದ್ದಾರೆ.ಈಗೇ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಪದವೀಧರರನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಮಾಡಿರುವುದು ಶ್ಲಾಘನೀಯ ಮತ್ತು ಸದುದ್ದೇಶವಾಗಿದೆ.

ಗ್ರಂಥಋಣ

1. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ತರಬೇತಿ ಕೈಪಿಡಿ, ಭಾಗ-2, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, 2014
2. ಭಾರತದ ಸಂವಿಧಾನ, ಡಾ. ಎಚ್.ಎಂ. ರಾಜಶೇಖರ್, 2008
3. "ಭಾರತದಲ್ಲಿ ಗ್ರಾಮೀಣಾಭಿವೃದ್ಧಿ", ಕೃಷ್ಣ ಬಿ.ಆರ್. ವಿದ್ಯಾನಿಧಿಪ್ರಕಾಶನ, ಗದಗ, 1985
4. "ಗ್ರಾಮದಾನ ಗ್ರಾಮಸ್ವರಾಜ್ಯ", ತಗಡೂರು ರಾಮಚಂದ್ರರಾವ್, ರಾಮಚಂದ್ರರಾವ್ ಟ್ರಸ್ಟ್, ವಿದ್ಯಾರಣ್ಯಪುರಂ, ಮೈಸೂರು, 1986

ವಸಾಹತುಷಾಹೀ ದಕ್ಷಿಣ ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ: ಒಂದು ಅವಲೋಕನ

ಎಂ.ಜಿ ಪ್ರಮೋದ್
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ– ದ.ಕ.

ವಸಾಹತುಷಾಹಿತ್ವ ಎಂಬುದು ರಾಜಕೀಯ–ಆರ್ಥಿಕ ಅಂಶವಾಗಿದ್ದು ಪ್ರಮುಖವಾಗಿ ಯುರೋಪಿನ ರಾಷ್ಟ್ರಗಳು ಅನ್ವೇಷಿಸಿ, ಆಕ್ರಮಣನಡೆಸಿ, ಅಲ್ಲಿ ನೆಲೆನಿಂತು ಶೋಷಿಸುವ ಅಂಶವಾಗಿದೆ. ವಸಾಹತುಷಾಹೀ ಪರಿಕಲ್ಪನೆಯು 'ಅಭಿವೃದ್ಧಿ'ಯನ್ನು ಮಾನದಂಡವಾಗಿಸಿಕೊಂಡು ವಿಜ್ಞಾನ–ತಂತ್ರಜ್ಞಾನ ಅಥವಾ ಇನ್ನಾವುದನ್ನೋ ಬಳಸಿಕೊಂಡು ಅಲ್ಲಿನ ಇತಿಹಾಸ, ಸಂಸ್ಕೃತಿ, ವೇದ–ವಿಜ್ಞಾನಗಳನ್ನು ಉಪೇಕ್ಷಿಸಿ ತಮ್ಮತನದ ಹೇರಿಕೆ ಮತ್ತು ಅವಲಂಬನೆಯ ಪರಿಸ್ಥಿತಿಯ ಸೃಷ್ಟಿಮಾಡಿ (ಹೆಜಿಮನಿ ಅಥವಾ ಡೋಮಿನೇಷನ್) ಅಧಿಪತ್ಯ ನಡೆಸುವುದಾಗಿದೆ .

ಅವಿಭಜಿತ ದಕ್ಷಿಣಕನ್ನಡ ಎಂದು ಗುರುತಿಸಲ್ಪಡುವ ಪ್ರದೇಶವು ಪ್ರಸ್ತುತ ಆಧುನಿಕ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೇರಳ ರಾಜ್ಯದ ಕಾಸರಗೋಡನ್ನು ಒಳಗೊಂಡಿದ್ದಂತಹ ಪ್ರದೇಶವಾಗಿತ್ತು. ೧೭೯೯ರ ತರುವಾಯ ಹೈದರಾಲಿ, ಟಿಪ್ಪು ಸುಲ್ತಾನರ ಅವನತಿಯೊಂದಿಗೆ ವಸಾಹತುಷಾಹೀ ಹಿಡಿತಕ್ಕೊಳಪಟ್ಟ ದಕ್ಷಿಣಕನ್ನಡ ನಂತರ ಬ್ರಿಟೀಷ್ ಆಡಳಿತದ ಪ್ರಭಾವಕ್ಕೆ ನೇರವಾಗಿ ಒಳಗೊಂಡು ಬದಲಾವಣೆಗಳಿಗೆ ನಾಂದಿ ಹಾಡಿತು. ಪಾರಂಪರಿಕ ತಂತ್ರಜ್ಞಾನದ ಬದಲಿಗೆ ಆಧುನಿಕತೆಯನ್ನೊಳಗೊಂಡ ಸಾರಿಗೆ–ಸಂಪರ್ಕ, ಬಂದರು, ಆರೋಗ್ಯ ಸೇವೆಗಾಗಿ ಆಸ್ಪತ್ರೆ, ಮುದ್ರಣಾ ಮಾಧ್ಯಮ, ಪತ್ರಿಕೆಗಳು, ಶಿಕ್ಷಣ ಸಂಸ್ಥೆಗಳು ದಕ್ಷಿಣಕನ್ನಡದಲ್ಲಿ ಆರಂಭಗೊಂಡವು. ಈ ಆಧುನಿಕ ಆಡಳಿತ ವ್ಯವಸ್ಥೆ ಸಮಾಜದಲ್ಲಿ ಹೊಸತನವನ್ನು ತಂದಿತು. ಇದರೊಂದಿಗೆ ತೆರಿಗೆ ಪದ್ಧತಿಗಳೂ ಜನರನ್ನು ಒಟ್ಟುಸೇರಿಸುವಲ್ಲಿ ಕಾರಣೀಭೂತವಾಯಿತು.

ದಕ್ಷಿಣ ಕನ್ನಡ ಅಭಿವೃದ್ಧಿಯ ಅಗತ್ಯಗಳಿಗೆ ತಕ್ಕಂತೆ ತನ್ನನ್ನು ಮಾರ್ಪಾಡು ಮಾಡಿಕೊಳ್ಳುವುದು ಒಂದೆಡೆಯಾದರೆ; ತನ್ನ ಸ್ವಂತಿಕೆಯನ್ನು, ದೇಶಪ್ರೇಮವನ್ನು, ರಾಷ್ಟ್ರೀಯತೆಯನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದುದು ಕೂಡಾ ಉಲ್ಲೇಖನೀಯ ಅಂಶವಾಗಿದೆ. ಸ್ವೀಕೃತಿ ಹಾಗೂ ಹೋರಾಟ ಜೊತೆಜೊತೆಯಾಗಿಯೇ ಸಾಗುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ಸ್ಥಳೀಯ ವಿಷಯಗಳಾದ ತುಳು ಚಳುವಳಿ, ಸಾಮಾಜಿಕ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳು ಇದನ್ನು ಪುಷ್ಟೀಕರಿಸುತ್ತವೆ.

ವಸಾಹತುಷಾಹೀ ಕೊಡುಗೆಗಳಾದ ಆಧುನಿಕ ಶಿಕ್ಷಣ ವ್ಯವಸ್ಥೆ,, ಸಾಮಾಜಿಕ ಸುಧಾರಣಾ ಚಳುವಳಿಗಳು, ಮುದ್ರಣಾ ಮಾಧ್ಯಮಗಳು, ಸಾರಿಗೆ ಸಂಪರ್ಕಗಳು ಜನರಲ್ಲಿ ಜಾಗೃತಿಯನ್ನು ಉಂಟುಮಾಡುವುದರೊಂದಿಗೆ ದೇಶಪ್ರೇಮವನ್ನೂ ಹೆಚ್ಚಿಸಿದವು. ಸ್ವಾತಂತ್ರ್ಯದ ಬಗೆಗೆ ಅರಿವನ್ನೂ ಮೂಡಿಸಿದವು. ಒಂದೆಡೆ ವಸಾಹತುಷಾಹೀ ತಂತ್ರಜ್ಞಾನದ– ಅಭಿವೃದ್ಧಿಯ ಸ್ವೀಕೃತಿ; ಇನ್ನೊಂದೆಡೆ ಸಾಮಾಜಿಕ ಜಾಗೃತಿಯೊಂದಿಗೆ ಸ್ವಾತಂತ್ರ್ಯದ ಜಾಗೃತಿ– ವಸಾಹತುಷಾಹೀ ವಿರೋಧ ಎರಡನ್ನೂ ಕಾಣಬಹುದಾಗಿದೆ. ಜನರ ಮನೋಭಾವದ ಮೇಲೇ ಆಧುನಿಕತೆಯ ಗಾಢ ಪ್ರಭಾವ ಮತ್ತು ಅದರಿಂದಾದ ತಿಳುವಳಿಕೆ ದಕ್ಷಿಣಕನ್ನಡದ ವಿಶೇಷ ಲಕ್ಷಣವಾಗಿದೆ. ಒಟ್ಟಾರೆಯಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ವಸಾಹತುಷಾಹೀ ಕಾಲಘಟ್ಟದಲ್ಲಿ ಬೀರಿದಂತಹ ಪ್ರಭಾವ, ಬದಲಾವಣೆಯ ಕುರಿತು ಇಲ್ಲಿ ಅವಲೋಕನವನ್ನು ಮಾಡಲಾಗಿದೆ.

ಈ ಅಧ್ಯಯನಕ್ಕೆ ವಸಾಹತುಷಾಹೀ ದಾಖಲೆಗಳಾದ ಆಡಳಿತಾತ್ಮಕ ನಿರ್ಣಯಗಳು, ಸರಕಾರೀ ಪತ್ರಗಳು, ನ್ಯಾಯಾಂಗೀಯ ದಾಖಲೆಗಳು, ಕಂದಾಯ ದಾಖಲೆಗಳು, ಬಾಸೆಲ್ ಮಿಷನ್ ರಿಪೋರ್ಟುಗಳು, ಪತ್ರಿಕೆಗಳು, ಈಗಾಗಲೆ ಬರೆಯಲ್ಪಟ್ಟ ಅಧಿಕೃತ ಬರವಣಿಗೆಗಳು ಹಾಗೂ ಆ ಕಾಲಘಟ್ಟದ ಚಿತ್ರಣವನ್ನು ಚಿತ್ರಿಸುವ ವಿವಿಧ ಲೇಖನಗಳು, ಕತೆಗಳು, ರೂಪಕಗಳು ಪ್ರಮುಖ ಆಕರಗಳಾಗಿವೆ. ಪ್ರಸ್ತುತ ಅಧ್ಯಯನವು ಐತಿಹಾಸಿಕ ವಿಧಾನವನ್ನು ಬಳಸಿ ವಸಾಹತುಷಾಹಿತ್ವವನ್ನು ಅರ್ಥೈಸುವುದರ ಮೂಲಕ ಆ ಸಂದರ್ಭದ ಜನಸಾಮಾನ್ಯರ, ಸಮಾಜದ ಪ್ರತಿಕ್ರಿಯೆಯನ್ನು ತಿಳಿಯುವುದಾಗಿದೆ. ಸಾಮಾನ್ಯವಾಗಿ ಬ್ರಿಟಿಷ್ ದಾಖಲೆಗಳು ವಸಾಹತುಷಾಹಿತ್ವವನ್ನು ಮತ್ತು ನೀತಿಗಳನ್ನು ಬೆಂಬಲಿಸಿರುವುದನ್ನು ನಾವು ಕಾಣುತ್ತೇವೆ. ಪತ್ರಿಕೆಗಳು ಹಾಗೂ ಸ್ಥಳೀಯ ಬರಹಗಳು ಮತ್ತು ಮೌಖಿಕ ಇತಿಹಾಸವು ವಸಾಹತುಷಾಹಿತ್ವದ ಬಗೆಗೆ ಅವಿಭಜಿತ ದಕ್ಷಿಣಕನ್ನಡದ ಪ್ರತಿಧ್ವನಿಯನ್ನು ಗುರುತಿಸಲು ನೆರವಾಗುತ್ತದೆ.

ವಸಾಹತುಷಾಹಿತ್ವ ಎಂಬುದು ಹೆಚ್ಚು ಬಲಾಢ್ಯವಾದ ಶಕ್ತಿಗಳು ದುರ್ಬಲ ಅಥವಾ ಹಿಂದುಳಿದ ಪ್ರದೇಶಗಳ ಜನರಿರುವಲ್ಲಿ ವಸಾಹತುಗಳನ್ನು ಹೊಂದುವ, ನಿರ್ವಹಿಸುವ ವಿಧಾನವಾಗಿದ್ದು ಆರ್ಥಿಕ ಶೋಷಣೆಯ ನೀತಿಯೇ ಆಗಿದೆ.[೧] ಯುರೋಪಿನ ರಾಷ್ಟ್ರಗಳಲ್ಲಿ ೧೮ನೇ ಶತಮಾನದ ಕೈಗಾರಿಕಾ ಕ್ರಾಂತಿಯ ತರುವಾಯ ಕಚ್ಚಾ ವಸ್ತುಗಳ ಅಗತ್ಯ ಹಾಗೂ ಸಿದ್ಧ ವಸ್ತುಗಳ ಮಾರುಕಟ್ಟೆಗಳ ಅವಶ್ಯಕತೆಗಳಿಗಾಗಿ ಹೆಚ್ಚು ಹೆಚ್ಚು ವಸಾಹತುಗಳನ್ನು ಹೊಂದಲು ತಮ್ಮಲ್ಲೇ ಪೈಪೋಟಿ ಏರ್ಪಟ್ಟು ಏಷ್ಯಾ, ಆಫ್ರೀಕಾ, ಲ್ಯಾಟಿನ್ ಅಮೆರಿಕಾಗಳು ಅಧೀನತೆಗೆ ಒಳಪಟ್ಟವು. ಈ ಸಂದರ್ಭದಲ್ಲಿ ಅಧಿಪತ್ಯ, ಶೋಷಣೆ, ವಿಸ್ತರಣೆ, ಆಕ್ರಮಣಗಳೊಂದಿಗೆ ಅಸಮತೋಲಿತ ಬೆಳವಣಿಗೆಯನ್ನು, ಅಧೀನ ಅಭಿವೃದ್ಧಿಯನ್ನು ನಾವು ಕಾಣಬಹುದು.[೨]

ವಸಾಹತುಷಾಹೀ ಪರಿಕಲ್ಪನೆಯು 'ಅಭಿವೃದ್ಧಿ'ಯನ್ನು ಮಾನದಂಡವಾಗಿಸಿ ಕೊಂಡು ವಿಜ್ಞಾನ–ತಂತ್ರಜ್ಞಾನ ಅಥವಾ ಇನ್ನಾವುದನ್ನೋ ಬಳಸಿಕೊಂಡು ಅಲ್ಲಿನ ಇತಿಹಾಸ, ಸಂಸ್ಕೃತಿ, ವೇದ–ವಿಜ್ಞಾನಗಳನ್ನು ಉಪೇಕ್ಷಿಸಿ ತಮ್ಮತನದ ಹೇರಿಕೆ ಮತ್ತು ಅವಲಂಬನೆಯ ಪರಿಸ್ಥಿತಿಯ ಸೃಷ್ಟಿಮಾಡಿ (ಹೆಜಿಮನಿ ಅಥವಾ ಡೋಮಿನೇಷನ್) ಅಧಿಪತ್ಯ ನಡೆಸುವುದಾಗಿದೆ.

ಅವಿಭಜಿತ ದಕ್ಷಿಣಕನ್ನಡ ಎಂದು ಗುರುತಿಸಲ್ಪಡುವ ಪ್ರದೇಶವು ಪ್ರಸ್ತುತ ಆಧುನಿಕ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೇರಳ ರಾಜ್ಯದ ಕಾಸರಗೋಡನ್ನು ಒಳಗೊಂಡಿದ್ದಂತಹ ಪ್ರದೇಶವಾಗಿದೆ.[೩] ೧೬ನೇ ಶತಮಾನದಲ್ಲಿ ವ್ಯಾಪಾರಕ್ಕಾಗಿ ಬಂದ ಪೋರ್ಚುಗೀಸರು ದಕ್ಷಿಣ ಕನ್ನಡಕ್ಕೂ ಆಗಮಿಸಿ ಅಧಿಪತ್ಯ ವಹಿಸಿಕೊಳ್ಳಲು ಮುಂದಾದಾಗ,

ಪೋರ್ಚುಗೀಸರ ಶಕ್ತಿಗೆದುರಾಗಿ ನಿಂತ ಉಳ್ಳಾಲದ ಅಬ್ಬಕ್ಕನ ಹೋರಾಟ, ಪರಕೀಯರ ಆಳ್ವಿಕೆಯನ್ನು ವಿರೋಧಿಸಿದ ಮುಂದಿನ ಹೋರಾಟಗಳಿಗೆ ತಳಹದಿಯನ್ನು, ಸ್ಫೂರ್ತಿಯನ್ನು ಒದಗಿಸಿತು.[೪] ಸಾಳುವ ರಾಣಿ ಚನ್ನಭೈರಾದೇವಿಯ ಸಾಹಸಮಯ ಹೋರಾಟವು ಕೂಡಾ ದಕ್ಷಿಣಕನ್ನಡದ ಜನರು ಎಂದೂ ಮರೆಯಲಾರರು.

ಹೈದರಾಲಿ, ಟಿಪ್ಪು ಸುಲ್ತಾನರ ಅವನತಿಯು ದಕ್ಷಿಣಕನ್ನಡವು ಬ್ರಿಟೀಷರ ವಶವಾಗಲು ಕಾರಣವಾಯಿತು.[೫] ತದನಂತರದಲ್ಲಿ ಬ್ರಿಟೀಷ್ ಅಧೀನದಲ್ಲಿ, ಮದ್ರಾಸ್ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟು ವಸಾಹತುಷಾಹಿಯ ಪ್ರಭಾವಕ್ಕೆ ನೇರವಾಗಿ ಒಳಗೊಂಡು ಹಲವಾರು ಬದಲಾವಣೆಗಳಿಗೆ, ಪ್ರತಿಸ್ಪಂದನಕ್ಕೆ, ದಕ್ಷಿಣಕನ್ನಡ ಸಾಕ್ಷಿಯಾಯಿತು.

೧೮೧೦ರಲ್ಲಿ ದಕ್ಷಿಣಕನ್ನಡದ ಕಲೆಕ್ಟರ್ ಆಗಿದ್ದ ಅಲೆಕ್ಸಾಂಡರ್ ರೀಡ್, ನಾವು ಒಳ್ಳೆಯ ನೀತಿಗೆ ಸಲ್ಲದ ದುಬಾರಿ ಭೂಕಂದಾಯವನ್ನು ರೈತರಿಂದ ವಸೂಲಿ ಮಾಡುತ್ತಿದ್ದೇವೆ. ಇದು ಎಷ್ಟು ಬೇಗ ಕೊನೆಗೊಳ್ಳುವುದೋ ಅಷ್ಟು ಒಳ್ಳೆಯದು ಎಂದು ಬರೆದಿದ್ದಾನೆ. ಭೂ ಕಂದಾಯದ ಏರಿಕೆ, ಸುಂಕಗಳು, ಕೃಷಿಬೆಳೆ ವೈಫಲ್ಯಗಳು ರೈತರನ್ನು ತೊಂದರೆಗೀಡು ಮಾಡಿತು.[೬] ನಗದು ರೂಪದ ತೆರಿಗೆ ಪದ್ದತಿ, ಬೆಲೆ ಕುಸಿತಗಳು ರೈತರ ಸ್ಥಿತಿಯನ್ನು ಮತ್ತಷ್ಟು ಶೋಚನೀಯಗೊಳಿಸಿದವು. ೧೮೧೦–೧೧ರಲ್ಲಿ ರೈತರು ಸಾಮೂಹಿಕವಾಗಿ ಸಂಘಟಿತರಾಗಿ ಭೂ ಕಂದಾಯ ಮತ್ತು ತೆರಿಗೆಗಳ ಪಾವತಿಯನ್ನು ನಿಲ್ಲಿಸಿ ಪ್ರತಿರೋಧವನ್ನು ತೋರಿದರು.[೭] ಇದರೊಂದಿಗೆ ತೆರಿಗೆ ಪದ್ದತಿಗಳು ಜನರನ್ನು ಒಟ್ಟುಸೇರಿಸುವಲ್ಲಿಯೂ ಕಾರಣೀಭೂತವಾಯಿತು. ಇದು ರೈತರ ಆರಂಭಿಕ ಪ್ರತಿರೋಧವಾದರೆ, ರೈತರು ಮಗದೊಮ್ಮೆ ೧೮೩೦–೩೧ರಲ್ಲಿ ಹೋರಾಟಕ್ಕಿಳಿದುದು ವಸಾಹತುಷಾಹಿ ವ್ಯವಸ್ಥೆಯ ಪ್ರಬಲ ಪ್ರತಿಭಟನೆಯೇ ಆಗಿದೆ.[೮] ರೈತರು ಅಲ್ಲಲ್ಲಿ ಕೂಟಗಳನ್ನು ರಚಿಸಿಕೊಂಡು ಹೋರಾಟವನ್ನು ಮಾಡಿದ್ದರು. ಕಾಸರಗೋಡಿನಿಂದ ಕುಂದಾಪುರದವರೆಗೂ, ಮಂಗಳೂರಿನಿಂದ ಬಂಟ್ವಾಳ, ಚಾರ್ಮಾಡಿಯವರೆಗೂ ಕಂದಾಯ ನಿರಾಕರಣೆಯ ಹೋರಾಟಕ್ಕೆ ರೈತರು ಮುಂದಾದರು. ಈ ಹೋರಾಟಗಳು ಯಶಗಳಿಸದಿದ್ದರೂ ಇಲ್ಲಿಂದಲೇ ವಸಾಹತುಷಾಹಿಯ ವಿರೋಧವನ್ನು ನಾವು ಕಾಣಬಹುದು.

೧೮೩೭ರಲ್ಲಿ ದಕ್ಷಿಣಕನ್ನಡ ಪ್ರದೇಶವಾದ ಪುತ್ತೂರು, ಅಮರಸುಳ್ಯಗಳಲ್ಲಿ ಜನರು ಪುನಃ ದಂಗೆ ಎದ್ದುದು ದಾಖಲೆಗಳಲ್ಲಿ ಕೆನರಾ ಬಂಡಾಯ ಎಂದು ಗುರುತಿಸಲ್ಪಟ್ಟಿತು.[೯] ಕಲ್ಯಾಣ ಸ್ವಾಮಿ, ಅಪರಂಪರ, ಬೂದಿಬಸಪ್ಪ ಎಂದೆಲ್ಲಾ ಕರೆಯಿಸಿಕೊಳ್ಳುವವರು ಈ ಬಂಡಾಯದ ನಾಯಕರಾಗಿದ್ದರು. ಬಂಟ್ವಾಳ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಬ್ರಿಟೀಷ್ ಖಜಾನೆ, ಸಂಗ್ರಹಾಗಾರಗಳು ಹೋರಾಟಗಾರರ ಗುರಿಯಾದವು. ಇದು ಮುಂದೆ ದಕ್ಷಿಣ ಕನ್ನಡ, ಕೊಡಗು ಪ್ರದೇಶಗಳಿಗೆಲ್ಲಾ ವಿಸ್ತರಿಸಲ್ಪಟ್ಟು ಬ್ರಿಟೀಷರಿಗೆ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸಿತು.[೧೦]

ಪಾರಂಪರಿಕ ತಂತ್ರಜ್ಞಾನದ ಬದಲಿಗೆ ಆಧುನಿಕತೆಯನ್ನೊಳಗೊಂಡ ಸಾರಿಗೆ–ಸಂಪರ್ಕ, ಬಂದರು, ಆರೋಗ್ಯ ಸೇವೆಗಾಗಿ ಆಸ್ಪತ್ರೆ, ಮುದ್ರಣಾ ಮಾಧ್ಯಮ, ಪತ್ರಿಕೆಗಳು, ಶಿಕ್ಷಣ ಸಂಸ್ಥೆಗಳು ದಕ್ಷಿಣಕನ್ನಡದಲ್ಲಿ ಆರಂಭಗೊಂಡವು.

ಒಂದು ಪ್ರದೇಶದ ಬೆಳವಣಿಗೆಯಲ್ಲಿ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳ ಪಾತ್ರ ಮಹತ್ವದ್ದಾಗಿರುತ್ತದೆ. ಇದು ಭಾರತದ ಪರಿಸ್ಥಿತಿಯಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಇದರೊಂದಿಗೆ ರಾಷ್ಟ್ರೀಯತೆಯ ಬೆಳವಣಿಗೆ ಈ ಎರಡು ಅಂಶಗಳಿಗೂ ಕಾರಣವಾಗುತ್ತದೆ. ಭಾರತದಲ್ಲಿ ೧೮೫೩ರ ಎಪ್ರಿಲ್ ೧೬ರಂದು ಮುಂಬಯಿಯಿಂದ ಥಾನಾಗೆ ಮೊದಲ ಬಾರಿಗೆ ರೈಲ್ವೇ ಸಂಪರ್ಕ ಕಲ್ಪಿಸಲಾಯಿತು.[೧೧] ಆದರೆ ಈ ವ್ಯವಸ್ಥೆಗಳು ಆಹಾರದ ಕೃತಕ ಅಭಾವಕ್ಕೂ ಕಾರಣವಾಗಿ ಭಾರತದ ಅರ್ಥವ್ಯವಸ್ಥೆಯ ಮೇಲೆ ಹೊಡೆತ ನೀಡಿದ್ದು ಕೂಡಾ ಸತ್ಯ.[೧೨]

ಎಪ್ರಿಲ್ ೧೮೭೦ರ ಕಾಲಘಟ್ಟದಲ್ಲೇ ಮೈಸೂರು ಹಾಗೂ ಮಂಗಳೂರು ಬಂದರಕ್ಕೂ ರೈಲ್ವೇ ಸಂಪರ್ಕ ಕಲ್ಪಿಸಬೇಕೆಂಬ ಬೇಡಿಕೆ ಇದ್ದಿತು. ಗ್ರೋವ್ಸ್ ೧೮೯೩, ೧೮೯೪ರಲ್ಲಿ; ಗಿಲ್ಕ್ರಿಸ್ಟ್ ೧೮೯೫ರಲ್ಲಿ; ರಿಚರ್ಡ್ಸ್ ೧೯೧೩ರಲ್ಲಿ ಸರ್ವೇಕ್ಷಣೆ ನಡೆಸಿದರು.[೧೩] ೧೯೦೬ರ ವೇಳೆಗಾಗಲೇ ರೈಲ್ವೇ ಕಾಸರಗೋಡನ್ನು ಸಂಪರ್ಕಿಸುತ್ತಿದ್ದು ರ‍್ಯಾಪಿಡ್ ಟ್ರಾನ್ಸಿಟ್ ಎಂದು ಕರೆಯಲಾಗುತ್ತಿದ್ದ ಮೇಲ್ ಕೋಚ್ (ಎರಡು ಜನ ಹಿಡಿಸಬಹುದಾದ ಮರದ ಪೆಟ್ಟಿಗೆಯ ಕುದುರೆ ಗಾಡಿ) ಮಂಗಳೂರಿಗೆ ಸಂಪರ್ಕ ಕಲ್ಪಿಸುತ್ತಿತ್ತು. ಮದ್ರಾಸ್ ಅಧೀನದ ಮಂಗಳೂರಿಗೆ ಕಲ್ಕತ್ತಾದಿಂದ ಮಾಹೆ, ತಲಚ್ಚೇರಿಯಾಗಿ ಹಾಗೂ ಮಂಗಳೂರು– ತಿಪಟೂರು, ಮಂಗಳೂರು– ಮೈಸೂರು– ನಂಜನಗೂಡು–ಮೂಲಕ ಈರೋಡ್ ದಾರಿಯಾಗಿ ಮೈಸೂರಿಗೆ ಸಂಪರ್ಕ ಕಲ್ಪಿಸಲು ಯೋಜನೆ ಹಾಕಿಕೊಳ್ಳಲಾಗಿತ್ತು.[೧೪] ಇದೇ ಕಾಲಘಟ್ಟದಲ್ಲಿ ನೇತ್ರಾವತಿ ಸೇತುವೆಯ ರಚನೆಯು ಮದ್ರಾಸ್ ರೈಲ್ವೇ ಇಂಜಿನಿಯರ್ ಮೆಕ್ ಲಾಡ್‌ನಿಂದ ಪ್ರಾರಂಭವಾಗಿತ್ತು ಎಂಬ ಡಬ್ಲು.ಕೆ. ಲಾಂಗ್ಲಿಯ ಉಲ್ಲೇಖವನ್ನೂ ನಾವು ಗುರುತಿಸಬಹುದು.[೧೫]

೧೮೪೪ರಲ್ಲಿ ಮುಂಬಯಿ ಸ್ಟೀಮ್ ನ್ಯಾವಿಗೇಶನ್ ಕಂಪೆನಿ ಪ್ರಾರಂಭವಾಗಿ ಆಗ ಮಂಗಳೂರು ಮುಂಬೈ ದರ ಪ್ರಥಮ ದರ್ಜೆ ೧೦೦, ದ್ವಿತೀಯ ದರ್ಜೆ ೫೦ ಹಾಗೂ ತೃತೀಯ ದರ್ಜೆ ೮ ರೂ ಎಂದು ನಿಗದಿಪಡಿಸಲಾಗಿತ್ತು. ೧೯೧೪ರಲ್ಲಿ ಕೆನರಾ ಪಬ್ಲಿಕ್ ಕನ್ವೇಯರ್ ಎಂಬ ಸಾರಿಗೆ ದಕ್ಷಿಣಕನ್ನಡದಲ್ಲಿ ಆರಂಭವಾಗಿತ್ತು.[೧೬]

ದಕ್ಷಿಣಕನ್ನಡದ ಪುತ್ತೂರಿನಲ್ಲಿ ವಾಸವಾಗಿದ್ದ ಶಿವರಾಮ ಕಾರಂತರು ೧೯೩೦–೩೧ರಲ್ಲಿ ಭೂತರಾಜ್ಯ ಮತ್ತು ಡೊಮಿಂಗೋ ಎಂಬ ಎರಡು ಮೂಕ ಚಿತ್ರಗಳನ್ನು ತಯಾರಿಸಿದ್ದರು. ಡೊಮಿಂಗೋ ಹರಿಜನರ ಕುರಿತಾದ ಸಾಮಾಜಿಕ ಚಿತ್ರಣವನ್ನು ಆಧರಿಸಿತ್ತು.[೧೭]

೧೯೦೯ರಲ್ಲಿ ದಕ್ಷಿಣಕನ್ನಡದ ಪುತ್ತೂರಿನಲ್ಲಿ ಪುತ್ತೂರು ಸಹಕಾರೀ ರೂರಲ್ ಕ್ರೆಡಿಟ್ ಸೊಸೈಟಿ ಎಂಬ ಸಂಘವನ್ನು ಮೊಳಹಳ್ಳಿ ಶಿವರಾಯರು ಮೊದಲ ಬಾರಿಗೆ ಆರಂಭಿಸಿದರು. ೧೯೧೬ರಲ್ಲಿ ಜಿಲ್ಲಾ ಕೇಂದ್ರ ಸಹಕಾರೀ ಬ್ಯಾಂಕ್ ಮತ್ತು ರೈತ ಬೆಳೆದ ಬೆಳೆಯನ್ನು ಯೋಗ್ಯ ರೀತಿಯಲ್ಲಿ ಮಾರಾಟ ಮಾಡಲು ದ. ಕ. ಕೃಷಿಕರ ಮಾರಾಟ ಸಂಘ ಎಂಬ ಸಂಸ್ಥೆಯ ಸ್ಥಾಪನೆಯೂ ಇಲ್ಲಾಯಿತು. ಭಾರತದಲ್ಲೇ ಮೊದಲ ಬಾರಿಗೆ ಗೇರು ಉದ್ದಿಮೆ ಪ್ರಾರಂಭವಾದುದು ಮಂಗಳೂರಿನಲ್ಲಿ.[೧೮] ಈ ಕಾರ್ಖಾನೆ ೧೯೩೫ರ ಸುಮಾರಿಗೆ ಗೇರುಬೀಜದ ಎಣ್ಣೆಯನ್ನೂ ತಯಾರಿಸಲಾರಂಭಿಸಿತ್ತು. ಇದಕ್ಕೂ ಪೂರ್ವದಲ್ಲಿ ಅಂದರೆ ೧೬೩೧ರಲ್ಲಿ ಬಸ್ರೂರಿನಲ್ಲಿ ಕೋಟೆ ಕಟ್ಟಲು ಇಕ್ಕೇರಿ ನಾಯಕನೊಂದಿಗೆ ಹಾಗೂ ೧೬೭೧ರಲ್ಲಿ ಮಂಗಳೂರು ಹಾಗೂ ಬಸ್ರೂರುಗಳಲ್ಲಿ ಫ್ಯಾಕ್ಟರಿ ಸ್ಥಾಪಿಸಲು ಬಿದನೂರಿನ ರಾಜರೊಂದಿಗೆ ಪೋರ್ಚುಗೀಸರು ಅಂತಿಮ ಒಪ್ಪಂದ ಮಾಡಿಕೊಂಡಿದ್ದರು.[೧೯]

ದಕ್ಷಿಣಕನ್ನಡದಲ್ಲಿ ಬಾಸೆಲ್ ಮಿಷನ್‌ನ ಆರಂಭ ಹೊಸ ಶಕೆಯನ್ನೇ ಆರಂಭಿಸಿತು. [೨೦] ಶಿಕ್ಷಣ ಹಾಗೂ ಮುದ್ರಣ ಕ್ಷೇತ್ರಗಳಲ್ಲಿ ವಿಶೇಷ ಬದಲಾವಣೆಯನ್ನು ತರುವುದರೊಂದಿಗೆ ಜನರನ್ನು, ಸಮಾಜವನ್ನು ವಿಚಾರವಂತರನ್ನಾಗಿ ಮಾಡಿತು. ತಮ್ಮ ಧರ್ಮ ಪ್ರಚಾರದೊಂದಿಗೆ ದಕ್ಷಿಣಕನ್ನಡದ ಅನೇಕ ಕಡೆಗಳಲ್ಲಿ ಶಾಲೆ, ಆಸ್ಪತ್ರೆ ಆರಂಭದೊಂದಿಗೆ, ಪುಸ್ತಕಗಳ ಪ್ರಕಟಣೆಗೆ, ಸಾಹಿತ್ಯ ಕೃಷಿಗೆ ಮುನ್ನುಡಿ ಹಾಡಿತು.[೨೧] ೧೮೯೪ರಲ್ಲಿ ಡಾ. ಕಿಟ್ಟೆಲ್ ಅವರಿಂದ ಕನ್ನಡ– ಇಂಗ್ಲೀಷ್ ನಿಘಂಟು ಪ್ರಕಟಿಸಲ್ಪಟ್ಟಿತು.

ಶಿಕ್ಷಣದ ಮೂಲಕ ಬ್ರಿಟೀಷರು ಭಾರತೀಯರನ್ನು ತಮ್ಮ ನಿಯಂತ್ರಣ ಕ್ಕೊಳಪಡಿಸುವ ಪ್ರಯತ್ನವನ್ನು ಮಾಡಿದುದು[೨೨] ಮತ್ತು ೧೮೩೮ರಲ್ಲಿ ಬಾಸೆಲ್‌ಮಿಷನ್ ಇವಾಂಜಲಿಕಲ್ ಹೈಸ್ಕೂಲ್, ಮತ್ತು ತದನಂತರದಲ್ಲಿ ಆರ್ಟ್ಸ್ ಕಾಲೇಜುಗಳು ಸ್ಥಾಪನೆಗೊಂಡುದು ದಕ್ಷಿಣಕನ್ನಡ ಹೊರಜಗತ್ತಿನೊಂದಿಗೆ ಬೆರೆಯಲು ಕಾರಣವಾಯಿತು. ಈ ಎಲ್ಲಾ ಅಂಶಗಳು ನೈಜವಾಗಿ ವಸಾಹತುಷಾಹೀ ಆಡಳಿತದ ಅನುಕೂಲತೆಗಾಗಿ ಮಾಡಿದ ಪ್ರಯತ್ನಗಳಾದರೂ ಪರೋಕ್ಷವಾಗಿ ಜನರನ್ನು ಜಾಗೃತರ ನ್ನಾಗಿಸಿದುದನ್ನು ಅಲ್ಲಗಳೆಯುವಂತಿಲ್ಲ.

ಮಂಗಳೂರಿನ ಬಾಸೆಲ್ ಮಿಸನ್‌ನ ಅಧೀನದಲ್ಲಿ ಪಶ್ಚಿಮ ಕರಾವಳಿಯ ಮೊದಲ ಹೆಂಚು ಉದ್ದಿಮೆ ಕಾರ್ಲ್ ಜಾರ್ಜ್ ಆಂಡ್ರಿಯಾಸ್ ಫ್ಲೈಬ್ಟ್ನಿಂದ ೧೮೬೫ರಲ್ಲಿ ಪ್ರಾರಂಭವಾಯಿತು.[೨೩] ಈ ಎಲ್ಲಾ ಉದ್ದಿಮೆಗಳು ಸ್ಥಳೀಯರನ್ನೂ ಬಳಸಿಕೊಂಡು ಉತ್ಪಾದನೆಯನ್ನು ಮಾಡುತ್ತಿದ್ದವು. ೧೮೪೪ರಲ್ಲಿ ಮಂಗಳೂರಿನಲ್ಲಿ ಸರಕಾರೀ ಆಸ್ಪತ್ರೆ ಸ್ಥಾಪಿಸಲ್ಪಟ್ಟು ಆಧುನಿಕ ಔಷಧಗಳು ಜನರಿಗೆ ಲಭ್ಯವಾಗತೊಡಗಿತು. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಉಡುಪಿ ಹಾಗೂ ಮಂಗಳೂರಿನಲ್ಲಿ ಪ್ರಥಮ ಬಾರಿಗೆ ೧೯೦೬ರಲ್ಲಿ ಕೆನರಾ ಬ್ಯಾಂಕ್ ಸ್ಥಾಪಿಸಲ್ಪಟ್ಟುದು ಆರ್ಥಿಕ ಚಟುವಟಿಕೆಗಳಿಗೆ ಮತ್ತಷ್ಟು ಪ್ರೇರಣೆ ನೀಡಿತು.

ಬಾಂಬೆ, ಮದ್ರಾಸ್ ಮತ್ತು ಕಲ್ಕತ್ತಾಗಳನ್ನು ಕೇಂದ್ರವಾಗಿಸಿಕೊಂಡು ಬಾರತದಲ್ಲಿ ಆಡಳಿತವನ್ನು ಹೇರಿದ ಸಂದರ್ಭದಲ್ಲಿ ನಿಯಂತ್ರಣಕ್ಕಾಗಿ ಸೈನ್ಯ, ಪೊಲೀಸ್ ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ಬ್ರಿಟೀಷರು ಬಳಸಿಕೊಂಡರು. [೨೪] ಕ್ಯಾನಿಂಗ್ ವೈಸ್‌ರಾಯ್‌ಯಾಗಿದ್ದಾಗ ಈ ವ್ಯವಸ್ಥೆಗಳನ್ನು ಪುನರ್ ಸಂಘಟಿಸಿ ಹೊಸ ರೂಪವನ್ನು ಕೊಡುತ್ತಾನೆ.[೨೫]

ಆಧುನಿಕತೆಯು ಸಮಾಜದಲ್ಲಿ ಹೊಸತನವನ್ನು ತಂದಿತು. ಬ್ರಿಟೀಷರ ವಸಾಹತುಷಾಹಿ ನೀತಿಗಳು, ಸಾಮಾಜಿಕ, ಧಾರ್ಮಿಕ ಹಸ್ತಕ್ಷೇಪಗಳು ಸಾಮಾನ್ಯರ ಪ್ರತಿರೋಧಕ್ಕೂ ಕಾರಣವಾಯಿತು.

ಗಾಂಧೀಜಿ ದಕ್ಷಿಣಕನ್ನಡಕ್ಕೆ ಬಂದಿದ್ದ ಸಂದರ್ಭದಲ್ಲಿ ಕಾರ್ನಾಡ್ ಸದಾಶಿವರಾಯರಾದಿಯಾಗಿ ಹಲವರು ನೇರ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರೆ, ಮತ್ತೆ ಹಲವರು ಸಾಮಾಜಿಕ ಮತ್ತು ಸ್ಥಳೀಯ ವಿಚಾರಧಾರೆಗಳ ಮೂಲಕ ವಸಾಹತುಷಾಹೀ ವಿರೋಧವನ್ನು ತೋರ್ಪಡಿಸಿದರು.

ದೇಶಾದ್ಯಂತ ಆರಂಭವಾದ ಸಾಮಾಜಿಕ ಬದಲಾವಣೆಗಳು ಧ್ವನಿಯಾಗಿ ಮಂಗಳೂರಿನಲ್ಲೂ ಬ್ರಹ್ಮಸಮಾಜ, ಆರ್ಯ ಸಮಾಜಗಳು ಆರಂಭವಾದವು. ಥಿಯೋಸಾಫಿಕಲ್ ಸೊಸೈಟಿಯು ಸಕ್ರಿಯವಾಗಿ ಕಾರ್ಯನಿರ್ವಹಿಸತೊಡಗಿತು. ೧೮೭೦ರ ಮೇ ತಿಂಗಳಿನಲ್ಲಿ ಕಾರ್ನಾಡು ಸದಾಶಿವರಾವ್, ಉಳ್ಳಾಲ ರಘುನಾಥಯ್ಯ, ಬಿಲ್ಲವಸಮಾಜದ ಮುಖಂಡರಾದ ಶ್ರೀ.ಎನ್.ಅರಸಪ್ಪನವರ್ ಮೊದಲ್ಗೊಂಡು ಬ್ರಹ್ಮಸಮಾಜದ ಶಾಖೆಯನ್ನು ಮಂಗಳೂರಿನಲ್ಲಿ ಆರಂಭಿಸಿದರು.

ಗಾಂಧೀಜಿಗಿಂತಲೂ ಪೂರ್ವದಲ್ಲೇ, ಶಿಕ್ಷಣ, ಸಮಾಜಸುಧಾರಣೆ, ಗುಡಿಕೈಗಾರಿಕೆ, ಭೂಮಿ ನೀಡಿಕೆಯಂತಹ ರಚನಾತ್ಮಕ ಕಾರ್ಯಗಳ ಮೂಲಕ ಹರಿಜನೋದ್ಧಾರಕರಾಗಿ ದುಡಿದು ತಮ್ಮ ಜೀವನವನ್ನೇ ಪರರಿಗಾಗಿ ಮುಡಿಪಾಗಿಟ್ಟ ವ್ಯಕ್ತಿ, ಕುದ್ಮಲ್ ರೋಗರಾಯರು. ರಂಗರಾಯರು ಖಾದಿಬಳಕೆ ಮೂಲಕ ದಕ್ಷಿಣಕನ್ನಡದಲ್ಲಿ ಸ್ವದೇಶೀ ಪ್ರೇಮವನ್ನೂ ಜಾಗೃತಿಗೊಳಿಸಿದ್ದಂತಹ ರಾಷ್ಟ್ರಪ್ರೇಮಿ. [೨೬]

ರಂಗರಾಯರು ಶಿಕ್ಷಕವೃತ್ತಿಯಲ್ಲಿದ್ದು ಮಂಗಳೂರಿನ ಬ್ರಹ್ಮಸಮಾಜ ಶಾಖೆಯ ಸ್ಥಾಪಕರಾದ ಉಳ್ಳಾಲ ರಘುನಾಥಯ್ಯನವರ ನಿಕಟ ಸಂಪರ್ಕ ಹೊಂದಿದ್ದು ಬ್ರಹ್ಮಸಮಾಜದ ಉದಾತ್ತತತ್ವ, ಧ್ಯೇಯ ಹಾಗೂ ವಿಚಾರಪೂರಿತ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. ಹಿಂದೂ ಸಮಾಜದಲ್ಲಿದ್ದ ಸಾಮಾಜಿಕ ಭಿನ್ನತೆ, ಅಸ್ಪೃಶ್ಯತೆ, ಜಾತೀಯತೆಯಂತಹ ವಿವಿಧ ಅಸಮಾನತೆಗಳು ಹಾಗೂ ಬಾಲ್ಯವಿವಾಹ, ದೇವದಾಸಿ ಪದ್ಧತಿ, ವಿಧವಾ ವಿವಾಹಗಳಿಂದ ಮನನೊಂದು ಪರಿಹಾರಕ್ಕಾಗಿ ಪ್ರಯತ್ನಿಸಿದರು. ಈ ಬದಲಾವಣೆಗಳಿಗೆ ಕಾರಣವಾದುದು ವಸಾಹತುಷಾಹೀ ಪ್ರಭಾವ ಎಂದರೆ ತಪ್ಪಾಗಲಾರದು.. ಒಂದೆಡೆ ಸಾಂಪ್ರದಾಯಿಕ ಸಾಮಾಜಿಕ ಅನಿಷ್ಟಗಳ ಬದಲಾವಣೆ ಅಂದರೆ, ಆಧುನಿಕತೆಯ ಸ್ವೀಕೃತಿ, ಇನ್ನೊಂದೆಡೆ ರಾಷ್ಟ್ರೀಯತೆಯ ಧ್ವನಿಯಾದ ಬ್ರಿಟೀಷ್ ವಿರೋಧ ಇವೆರಡೂ ಜೊತೆಜೊತೆಯಾಗಿಯೇ ಮಿಶ್ರಿತವಾ ಗಿರುವುದು ಪ್ರಮುಖ ಅಂಶವಾಗಿದೆ.

ದಕ್ಷಿಣ ಕನ್ನಡ ಅಭಿವೃದ್ಧಿಯ ಅಗತ್ಯಗಳಿಗೆ ತಕ್ಕಂತೆ ತನ್ನನ್ನು ಮಾರ್ಪಾಡು ಮಾಡಿಕೊಳ್ಳುವುದು ಒಂದೆಡೆಯಾದರೆ; ತನ್ನ ಸ್ವಂತಿಕೆಯನ್ನು, ದೇಶಪ್ರೇಮವನ್ನು, ರಾಷ್ಟ್ರೀಯತೆಯನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದುದು ಕೂಡಾ ಉಲ್ಲೇಖನೀಯ ಅಂಶವಾಗಿದೆ. ಆಧುನಿಕತೆಯ ಸ್ವೀಕೃತಿ ಹಾಗೂ ಹೋರಾಟ ಜೊತೆಜೊತೆಯಾಗಿಯೇ ಸಾಗುವುದು ಇಲ್ಲಿನ ವೈಷ್ಟ್ಯವಾಗಿದೆ. ಸ್ಥಳೀಯ ವಿಷಯಗಳಾದ ತುಳು ಚಳುವಳಿ, ಸಾಮಾಜಿಕ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳು ಇದನ್ನು ಪುಷ್ಟೀಕರಿಸುತ್ತವೆ.

ಅಸಹಕಾರ ಚಳುವಳಿಯ ಕಾಲದಲ್ಲಿ ದಕ್ಷಿಣಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ ಹೆಚ್ಚು ಬಲಿಷ್ಟತೆಯನ್ನು ಪಡೆಯಿತು. ಕಾರ್ನಾಡ್ ಸದಾಶಿವರಾವ್ ಅವರ ನಾಯಕತ್ವದಲ್ಲಿ ಕೆ.ಆರ್. ಕಾರಂತ, ಎ.ವಿ.ಬಾಳಿಗಾ, ಕೆ.ಕೆ.ಶೆಟ್ಟಿ, ಎಂ.ಆರ್ ಪೂಂಜಾ, ಎಸ್.ಯು. ಪಣಿಯಾಡಿ, ಎ.ಎಸ್. ಕುಡ್ವರಾದಿಯಾಗಿ ಹಲವರು ಬಾಗವಹಿಸಿದ್ದರು. ಸತ್ಯಾಗ್ರಹ, ಸ್ವದೇಶಾಭಿಮಾನಿ, ನವಯುಗ, ಕಂಠೀರವ, ರಾಷ್ಟ್ರಬಂಧು, ಪ್ರಭಾತ ಮುಂತಾದ ಪತ್ರಿಕೆಗಳು ಜನರಲ್ಲಿ ಜಾಗೃತಿಯನ್ನುಂಟುಮಾಡುವು ದರೊಂದಿಗೆ ದೇಶಪ್ರೇಮವನ್ನೂ ಹೆಚ್ಚಿಸಿದವು. ೧೯೩೦ರಲ್ಲಿ ಗಾಂಧೀಜಿ ಉಪ್ಪಿನ ಸತ್ಯಾಗ್ರಹಕ್ಕೆ ಕರೆಕೊಟ್ಟಾಗ ಸದಾಶಿವರಾವ್‌ರವರು ದೇಶಪಾಂಡೆ, ಕೌಜಲಗಿ ಮುಂತಾದವರೊಡಗೂಡಿ ದಕ್ಷಿಣಕನ್ನಡದಲ್ಲಿ ಸತ್ಯಾಗ್ರಹದ ಕಾವನ್ನು ಹೆಚ್ಚಿಸಿದರು. ಅಂಕೋಲೆಯು ಸತ್ಯಾಗ್ರಹದಲ್ಲೂ ಭಾಗವಹಿಸಿದರು.[೨೭] ಸುಮಾರು ೧೨೬೨ ಪುರುಷರು ಹಾಗೂ ೨೧ ಮಹಿಳೆಯರು ಅಸಹಕಾರ ಚಳುವಳಿಯಲ್ಲಿ ನೇರವಾಗಿ

ಭಾಗವಹಿಸಿದ್ದರು.[೨೮] ಮಂಗಳೂರಿನಲ್ಲಿ ೧೯೩೪-೩೫ರಲ್ಲಿ ಕಾಂಗ್ರೆಸ್ ಸಮಾಜವಾದೀ ಪಕ್ಷದ ನಾಯಕತ್ವದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರ ಉಪಸ್ಥಿತಿಯಲ್ಲಿ ಕಾರ್ಮಿಕರ ಸಂಘಟನೆಗಳು ಆರಂಭವಾದವು.[೨೯] ಕ್ವಿಟ್ ಇಂಡಿಯಾ ಚಳುವಳಿಯು ಕೂಡಾ ಇಲ್ಲಿ ಪ್ರತಿಧ್ವನಿಸಿದ್ದು ಪರಕೀಯರ ದಾಸ್ಯದ ವಿರುದ್ಧದ ಪ್ರತಿಭಟನೆಯ ಹೋರಾಟವಾಗಿದೆ.

ವಸಾಹತುಷಾಹೀ ಕೊಡುಗೆಗಳಾದ ಆಧುನಿಕ ಶಿಕ್ಷಣ ವ್ಯವಸ್ಥೆ, ಸಾಮಾಜಿಕ ಸುಧಾರಣಾ ಚಳುವಳಿಗಳು, ಮುದ್ರಣಾ ಮಾಧ್ಯಮಗಳು, ಸಾರಿಗೆ ಸಂಪರ್ಕಗಳನ್ನು ಬಳಸಿಕೊಳ್ಳುತ್ತಾ, ಮತ್ತೊಂದೆಡೆ ಜನರಲ್ಲಿ ಜಾಗೃತಿಯನ್ನು ಉಂಟುಮಾಡುವುದರೊಂದಿಗೆ ದೇಶಪ್ರೇಮವನ್ನೂ ಹೆಚ್ಚಿಸಿದವು. ಇವು ಜನರನ್ನು ಹತ್ತಿರಕ್ಕೆ ಬೆಸೆಯುವುದರೊಂದಿಗೆ ರಾಷ್ಟ್ರದ ಅಂತರವನ್ನು ಕಡಿಮೆ ಮಾಡಿದವು. ಸ್ವಾತಂತ್ರ್ಯದ ಬಗೆಗೆ ಅರಿವನ್ನೂ ಮೂಡಿಸಿದವು. ಒಂದೆಡೆ ವಸಾಹತುಷಾಹೀ ತಂತ್ರಜ್ಞಾನದ– ಅಭಿವೃದ್ಧಿಯ ಸ್ವೀಕೃತಿ; ಇನ್ನೊಂದೆಡೆ ಸಾಮಾಜಿಕ ಜಾಗೃತಿಯೊಂದಿಗೆ ಸ್ವಾತಂತ್ರ್ಯದ ಜಾಗೃತಿ ಮತ್ತು ವಸಾಹತುಷಾಹೀ ವಿರೋಧ ಎರಡನ್ನೂ ದಕ್ಷಿಣಕನ್ನಡದಲ್ಲಿ ಕಾಣಬಹುದಾಗಿದೆ. ಜನರ ಮನೋಭಾವದ ಮೇಲೇ ಆಧುನಿಕತೆಯ ಗಾಢ ಪ್ರಭಾವ ಮತ್ತು ಅದರಿಂದಾದ ತಿಳುವಳಿಕೆ ದಕ್ಷಿಣಕನ್ನಡದ ವಿಶೇಷ ಲಕ್ಷಣವಾಗಿದೆ. ಒಟ್ಟಾರೆಯಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ವಸಾಹತುಷಾಹೀ ಕಾಲಘಟ್ಟದಲ್ಲಿ ಬೀರಿದಂತಹ ಪ್ರಭಾವ, ಬದಲಾವಣೆಯ ಕುರಿತು ಇಲ್ಲಿ ಅವಲೋಕನವನ್ನು ಮಾಡಲಾಗಿದೆ.

[1] Julia Swannel (Ed), *Oxford Modern English Dictionary,* Calcutta, 1993.

[2] Bipan Chandra, *Essays on Colonialism*, Orient Longman, New Delhi, 1999.

[3] K.V. Ramesh, *A History of South Kanara (From Earliest To Vijayanagara),* Dharwar 1970.

N. Shyam Bhat, Souhth *Kanara: Colonial Administration and Regional Response, PhD* thesis, Mangalore University, 1987.

Ganapati Rao Aigal, *Dakshna Kannada Jilleya Prachina Itihasa*, Rastrakavi Govinda Pai Samshodana Kendra, Udupi, 1923. (Re- print, 2004).

[4] B.S. Shastri, 'Daakshina kannada karavaliyalli Portugeesaru' in *Sudarshana,* Adyanadka Krishna Bhat (Ed.), Vijaya College Trust, Mulki, 1977.

Rajarama tolpady, Dakshina kannada charitre, samskruti, rajakarana in *Aruhu Kuruhu* vol.20, 2014.

[5] B. Sheik Ali, *Tippu Sulthan: A Study in Diplomacy and Confrontation,* Dept. of kannada and Culture, Bangalore, 2006.

[6] Baraguru Ramachandrappa (Ed), Op.cit.

[7]B.v. Kakkillaya, Chaluvliya nenpuglu, *Poli; Canara200,* Mangalore, 2000.

[8] N. Shyam Bhat, *South Kanara: Colonial Administration and Regional Response, PhD* Thesis, Mangalore University, 1987

[9] Ibid.

[10] Director, *Karnatakadalli Swatantrya Sangrama,* mysore, 1957.

[11] Daniel Keniston, '*Railways and Famines in Colonial India'* in Economic History Journal, Massachusetts Institute of Technology 2.2.2007.

[12] Irfan Habib, *Indian Economy 1858-1914,* Alighar historian's society, 2006, re print 2008.

[13] Krishna kumar kalkur, 'Dakshina Kannadada Kaaravali hagu Bandaru' in *Sudarshana,* Adyanadka Krishna Bhat (Ed.), Vijaya College Trust, Mulki, 1977.

[14] Harlord Stuart(Ed), *South Canara Manual,* Madras District Manual Series, 1895, (Re Print2003).

[15] Adyanadka Krishna Bhat (Ed.), *Sudarshana,* Vijaya College Trust, Mulki, 1977.

[16]Mulki Gopalakrishna Kudva, 'Dakshina Kannada jilleya Raste Sarige' in *Sudarshana,* Adyanadka Krishna Bhat (Ed.), Vijaya College Trust, Mulki, 1977.

[17] Baragur Ramachandrappa (Ed), Karnataka Sangathi, An Informative of Kannada Land, Language and Culture, Kannada Development authority, Bangalore, 2002, (Re. Ed 2013).

[18]Peraje Shreenivas rao, 'Dakshina Kannadadalli sahakari Chaluvali' in *Sudarshana,* Adyanadka Krishna Bhat (Ed.), Vijaya College Trust, Mulki, 1977.

[19] Adyanadka Krishna bhat Op.cit.

[20] B. Surendra Rao *Bunts in History and Culture,* Rastrakavi Govinda Pai Samshodana Kendra, Udupi, 2010.

[21]Peter Wilson Prabhakar, *The Basel Mission in South Kanara (1834-1947),* Unpublished PhD thesis, Mangalore University, 1988.

Peter Wilson Prabhakar, Dakshina kannadadalli Basel Mission, Puttur, 1989.

[22] M. S. Rajan, The Impact of British Rule in India, Journal of Contemporary History, Vol. 4, No. 1, Colonialism and Decolonization (Jan.,1969),Sage Publications, Ltd.Stable URL: http://www.jstor.org/stable/259793.

[23] John Sturrock (Ed), *South Canara Manual,* Madras District Manual Series, 1894, (Re Print2003).

[24] Bipan Chandra(Ed), Freedom struggle, National Book trust India, 1972, (Eleventh Re. Print-2011).

[25] Murugiah k, 'Police system and madras city Police in Colonial era', *in Quest International Multi disciplinary Research journal,* 1.2(2012).

[26] Udupi Govinda Rararu, The Depressed Classes Mission, Mangalore, *Jayakarnataka* Vol.*9, Chalukya Vikrama Shake, 855*

-P. Kamalaksha, *Dalitoddaraka Kudmal Ranga Rao*, Mangalore, 1986.

-Suryanatha Kamath,(Ed.) Swatantrya Sangramada Smrutigaalu, Mysore,1974.

-M.S.Shekhar, Kudmal rangaRao, Prasaranga, Mysore University, 2009.

-Vinayanetra, Dalitara Seveyalli Kudmal RangaRao, *VijayaKarnataka*, 7 july 2013.

-Venkatesh Eganur, Sevege Mudipada Baduku, Vijayavani, 31 January 2013.

[27] Suryanatha Kamath(Ed.), Op.Cit.

[28]Jayarama poonja, *Freeedom Movement in Dakshina Kannada with special reference to Gandhian Era(191-1947)* , A Study, Un published M.Phil Thesis, Madhurai Kamaraj University, 1997.

Adyanadka Krishna bhat,(Ed.) Op cit.

[29] B.V. Kakkillaya, Op.Cit.

ಕರ್ನಾಟಕದ ರೈತ ಚಳುವಳಿಗಳು

ಹೆಚ್.ಹೆಚ್. ಮಲ್ಲಿಕೇಶ
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,
ಮೈಸೂರು – ೫೭೦ ೦೦೬. ಇ ಮೇಲ್: mallikesh2009@gmail.com

ಭೂಮಿತಾಯಿಯ ಜೊಚ್ಚಲ ಮಗನಾದ ರೈತ ನೆಮ್ಮದಿಯಿಂದ ಇದ್ದರೆ ದೇಶದ ಬದುಕು ನೆಮ್ಮದಿಯಿಂದಿರುತ್ತದೆ. ಭೂಮಿಯನ್ನು ಆರಾಧ್ಯ ದೈವವೆಂದು ನಂಬಿಕೊಂಡ ಆತ ಪ್ರತಿಕ್ಷಣ ಭೂಮಿ ಬೆಳೆಯ ಬಗ್ಗೆ ನೂರಾರು ಕನಸುಗಳನ್ನು ಹೊತ್ತು ಸಾಗುತ್ತಿರುತ್ತಾನೆ. ಆದರೆ ರೈತರ ಸ್ಥಿತಿ ಡೋಲಾಯಮಾನವಾಗಿದೆ. ಕನ್ನಡ ಶ್ರೇಷ್ಠ ಕವಿ ಕುವೆಂಪು ತನ್ನ ಸೋವಿಯತ್ ಮತ್ತು ಕೋಗಿಲೆ ಎಂಬ ಕವನ ಸಂಕಲನದಲ್ಲಿ ಉಲ್ಲೇಖಿಸುವಂತೆ.
ಕರಿಯರದೋ ಬೆಳಿಯರದೋ ಯಾರದಾದರೇ ಏನು?
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ
ಎಂಬ ಸಾಲುಗಳು ರೈತರ ಅಂದಿನ ಸ್ಥಿತಿಗಳು ಇಂದು ಕೂಡ ಪ್ರಸ್ತುತ.

ರೈತ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬು, ಆದರೆ ರೈತನಷ್ಟು ತೊಂದರೆಗಳೊಳಗಾಗಿರುವವರು ಬೇರೆ ಇಲ್ಲ. ಅನಾದಿ ಕಾಲದಿಂದಲೂ ರೈತರ ಶೋಷಣೆ ನಿರಂತರವಾಗಿ ಸಾಗುತ್ತಾ ಬಂದಿದೆ. ಭೂಮಾಲೀಕನಿಂದ ಜಮೀನ್ದಾರ ಶೋಷಕನಾದರೆ, ಗೇಣಿದಾರನಿಂದ ರೈತ ಶೋಷಿತನಾಗಿದ್ದಾನೆ. ಜಮೀನ್ದಾರರೊಂದಿಗೆ ಸರ್ಕಾರ ಅಂದರೆ ಕಂದಾಯಾಧಿಕಾರಿಗಳೂ ಸೇರುತ್ತಾರೆ. ರೈತರ ಶೋಷಣೆ ಏಕಮುಖವಾಗಿರದೇ, ಬಹುಮುಖವಾದುದು. ಅಧಿಕ ಗೇಣಿ, ಬಲಾತ್ಕಾರದ ವಸೂಲಿ, ನಗದು ರೂಪದಲ್ಲಿ ಕಂದಾಯಬೇಡಿಕೆ, ಬಿಟ್ಟಿಸೇವೆಗೆ ಬಲತ್ಕಾರ, ಊಳಿಗಮಾನ್ಯ ತೆರಿಗೆಗಳು, ದಲ್ಲಾಳಿಗಳ ಶೋಷಣೆ, ಸಾಲದ ಮೇಲಿನ ಅಧಿಕಬಡ್ಡಿ, ಅಭಾವಕಾಲದಲ್ಲಿ ಕಂದಾಯ ರಿಯಾಯಿತಿಇಲ್ಲ. ಕಂದಾಯಧಿಕಾರಿಗಳ ದಬ್ಬಾಳಿಕೆ, ಅಭಿವೃದ್ಧಿ ತೆರಿಗೆ, ರೈತರ ಬಗ್ಗೆ, ಸರ್ಕಾರದ ನಿರ್ಲಕ್ಷ್ಯ ಇವೆ ಮುಂತಾದ ಬೇಡಿಕೆಗಳು ರೈತ ಚಳುವಳಿಗೆ, ಕಾರಣಗಳಾಗಿವೆ. ಈ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಹಲವಾರು ರೈತ ಚಳುವಳಿಗಳು ಸ್ವಾತಂತ್ರ್ಯ ಪೂರ್ವದಲ್ಲಿ, ಸ್ವಾತಂತ್ರೋತ್ತರದಲ್ಲಿ ಹಾಗೂ 1980 ರ ದಶಕದ ನವ್ಯ ರೈತ ಚಳುವಳಿಗಳು ನಡೆದಿವೆ. ಇವುಗಳನ್ನು ವಿವಿಧ ಕಾಲದ ಮಜಲುಗಳೊಂದಿಗೆ, ಐತಿಹಾಸಿಕ ದೃಷ್ಟಿಕೋನದಿಂದ. ಕರ್ನಾಟಕ ರಾಜ್ಯದಲ್ಲಿ ನಡೆದ ರೈತ ಚಳುವಳಿಗಳಲ್ಲಿನ ದಾಖಲಿಸುವಂತಹ ಪ್ರಯತ್ನ ಈ ಲೇಖನದಾಗಿದೆ.

ಕೃಷಿಯ ಪ್ರಾಚೀನತೆ ಎಷ್ಟೇ ಸಹಸ್ರಮಾನಗಳಿಂದ ಬಂದಿರಲಿ ಅದರ ವಿಕಸನ ಆಧುನಿಕ ದಿನಗಳವರೆಗೂ ವಿಸ್ತರಿಸಿಕೊಂಡು ಬಂದಿದೆ. ಈ ಹಾದಿಯಲ್ಲಿ ರೈತರ ನೋವು ನಲಿವುಗಳಿಗೆ ಎಷ್ಟೋ ಮೈಲಿಗಲ್ಲುಗಳು ನಿಂತಿವೆ. ಮೊದಲಿಗೆ ರೈತ ತನ್ನ ನೋವನ್ನು, ಪ್ರಾರ್ಥಿಸಿ ಹೇಳಿಕೊಂಡ ಮನವಿಮಾಡಿ ನುಡಿದ, ಆಗ್ರಹಿಸಿದ ದೂರು ದುರ್ಮಾನಗಳ ಮೂಲಕ ದನಿ ಆಡಿದ, ಇವೆಲ್ಲಾ ಸಾತ್ವಿಕ ಬಗೆ ಎನಿಸಿದವು, ಅದಕ್ಕೆ ಸಂಬಂದಪಟ್ಟ ಆಡಳಿತ ಅಥವಾ ಯಜಮಾನ ಸ್ಪಂದಿಸದಿದ್ದಾಗ. ಸಾತ್ವಿಕ ರೋಷ ತೋರಲಾರಂಭಿಸಿದ ಅವನ ಶೋಷಣೆ ಹೆಚ್ಚಾದಾಗಲೂ ಸಂಘಟನೆಯ ಬಲವಿಲ್ಲದಿದ್ದಾಗ ಅಸಹಾಯಕನಾಗಿ ಶೋಷಣೆ, ನೋವು, ಅವಮಾನ, ಅತ್ಯಾಚಾರ, ದೌರ್ಜನ್ಯ, ಸಿಟ್ಟು, ಹತಾಶೆ, ಹಿಂಸೆ, ದಬ್ಬಾಳಿಕೆ ಎಲ್ಲಾವನ್ನು ತಡೆದುಕೊಳ್ಳುತ್ತ ಬಂದ, ಅದುಮಿಟ್ಟ ಅವೆಲ್ಲವೂ ಸಮಯ ಪಕ್ವವಾದಾಗ ಸಂಘಟನಾ ಪ್ರಜ್ಞೆ ಜಾಗೃತವಾದಾಗ ಸ್ಫೋಟಿಸಿದವು.[1]

ಭೂಮಿತಾಯಿಯ ಜೊಚ್ಚಲ ಮಗನಾದ ರೈತ ನೆಮ್ಮದಿಯಿಂದ ಇದ್ದರೆ ದೇಶದ ಬದುಕು ನೆಮ್ಮದಿಯಿಂದಿರುತ್ತದೆ, ಭೂಮಿಯನ್ನು ಆರಾಧ್ಯ ದೈವವೆಂದು ನಂಬಿಕೊಂಡ ಆತ ಪ್ರತಿಕ್ಷಣ ಭೂಮಿ ಬೆಳೆಯ ಬಗ್ಗೆ ನೂರಾರು ಕನಸುಗಳನ್ನು ಹೊತ್ತು ಸಾಗುತ್ತಿರುತ್ತಾನೆ.[2] ಆದರೆ ರೈತರ ಸ್ಥಿತಿ ಡೋಲಾಯಮಾನವಾಗಿದೆ, ಕನ್ನಡದ ಶ್ರೇಷ್ಠ ಕವಿ ಕುವೆಂಪು ತನ್ನ ಸೋವಿಯತ್ ಮತ್ತು ಕೋಗಿಲೆ ಎಂಬ ಕವನ ಸಂಕಲನದಲ್ಲಿ ಉಲ್ಲೇಖಿಸುವಂತೆ.

ಕರಿಯರದೋ ಬಿಳಿಯರದೋ ಯಾರದಾದರೇ ಏನು?
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ
ವಿಜಯ ನಗರವೋ? ಮೊಗಲರಾಳ್ವಿಕೆಯೋ? ಇಂಗ್ಲಿಷರೋ?
ಎಲ್ಲರೂ ಜಿಗಿಣಿಗಳೇ ನನ್ನ ನೆತ್ತರಿಗೆ !
ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
ನಮ್ಮವರೆ ಹದಹಾಕಿ ತಿವಿದರದು ಹೂವೆ? (ರೈತ ದೃಷ್ಟಿ 1936)

ಎಂಬ ಸಾಲುಗಳು ರೈತರ ಅಂದಿನ ಸ್ಥಿತಿಗತಿಗಳು ಇಂದು ಕೂಡ ಪ್ರಸ್ತುತ. ರೈತ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬು, ಆದರೆ ರೈತನಷ್ಟು ತೊಂದರೆಗೊಳಗಾಗಿರುವವರು ಬೇರೆ ಇಲ್ಲ, ಅನಾದಿ ಕಾಲದಿಂದಲೂ ರೈತರ ಶೋಷಣೆ ನಿರಂತರವಾಗಿ ಸಾಗುತ್ತಾ ಬಂದಿದೆ. ಭೂಮಾಲಿಕ ನಿಂದ ಜಮೀನ್ದಾರ ಶೋಷಕನಾದರೆ, ಗೇಣಿದಾರನಿಂದ ರೈತ ಶೋಷಿತನಾಗಿದ್ದಾನೆ, ಜಮೀನ್ದಾರರೊಂದಿಗೆ ಸರ್ಕಾರ ಅಂದರೆ ಕಂದಾಯಾಧಿಕಾರಿಗಳೂ ಸೇರುತ್ತಾರೆ ರೈತರ ಶೋಷಣೆ ಏಕಮುಖ ವಾಗಿರದೆ ಬಹುಮುಖವಾದುದು, ಅಧಿಕ ಗೇಣಿ, ಬಲತ್ಕಾರದ ವಸೂಲಿ, ನಗದ ರೂಪದಲ್ಲಿ ಕಂದಾಯ ಬೇಡಿಕೆ, ಬಿಟ್ಟಿ ಸೇವೆಗೆ ಬಲತ್ಕಾರ, ಊಳಿಗಮಾನ್ಯ ತೆರಿಗೆಗಳು, ದಲ್ಲಾಳಿಗಳ ಶೋಷಣೆ, ಸಾಲದ ಮೇಲಿನ ಅಧಿಕ ಬಡ್ಡಿ, ಅಭಾವಕಾಲದಲ್ಲಿ ಕಂದಾಯ ರಿಯಾಯ್ತಿ ಇಲ್ಲ, ಕಂದಾಯಾಧಿಕಾರಿಗಳ ದಬ್ಬಾಳಿಕೆ, ಅಭಿವೃದ್ಧಿ ತೆರಿಗೆ ರೈತರ ಬಗ್ಗೆ ಸರ್ಕಾದ ನಿರ್ಲಕ್ಷ್ಯ, ಇವೇ ಮುಂತಾದವು ರೈತ ಚಳುವಳಿಗೆ ಕಾರಣಗಳಾಗಿವೆ[3]. ಈ ಹಿನ್ನೆಲೆಯಲ್ಲಿಂದ ಕರ್ನಾಟಕದಲ್ಲಿ ಹಲವಾರು ರೈತ ಚಳುವಳಿಗಳು ನಡೆದಿವೆ ಅವುಗಳನ್ನು 3 ಭಾಗಗಳಾಗಿ ವರ್ಗಿಕರಿಸಬಹುದು.

1) ಸ್ವಾತಂತ್ರ ಪೂರ್ವದ ರೈತ ಚಳುವಳಿ.
2) ಸ್ವಾತಂತ್ರೋತ್ತರ ರೈತ ಚಳುವಳಿ.
3) ನವ್ಯ ರೈತ ಚಳುವಳಿ. (1980ರ ನಂತರ)

ಸ್ವಾತಂತ್ರ ಪೂರ್ವದ ರೈತ ಚಳುವಳಿಗಳು.

ಚಿಕ್ಕದೇವರಾಜ ಒಡೆಯರ ಕಾಲದ ರೈತ ಚಳುವಳಿ ಕ್ರಿ.ಶ 1683–84. ಮೈಸೂರು ಸಂಸ್ಥಾನವನ್ನು 17ನೇ ಶತಮಾನದ ಆಳ್ವಿಕೆ ನಡೆಸಿದ

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ರಾಜ್ಯದ ರಕ್ಷಣೇ ಮತ್ತು ಆಡಳಿತಾತ್ಮಕ ಕಾರಣಕ್ಕಾಗಿ ರೈತರ ಮೇಲೆ ಹೆಚ್ಚಿನ ಕಂದಾಯವನ್ನು ಹೇರಲಾಯಿತು ಇದು ಆದಾಯಕ್ಕಿಂತ ತೆರಿಗೆಯೇ ಹೆಚ್ಚಾಗಿತ್ತು. ಇದರಿಂದ ರೈತರು ಅಸಮಾಧಾನಗೊಂಡರು "ಕಾಡನು ಬಸವಣ್ಣ ಉಳುತ್ತಾನೆ; ದೇವೇಂದ್ರನು ಮಳೆಯನ್ನು ಕರೆಯುತ್ತಾನೆ; ನಾವು ಕಷ್ಟಪಟ್ಟು ಪೈರು ಮಾಡಿ ನಿಮಗೇಕೆ ತೆರಿಗೆ ಕೊಡಬೇಕು[4]. ಎಂದು ರೈತರು ರಾಜ್ಯಾಧಿಕಾರಕ್ಕೆ ಸಡ್ಡು ಹೊಡೆದು ನಿಂತರು ಈ ಹೋರಾಟಕ್ಕೆ ಮೈಸೂರು ಸೀಮೆಯ ಜಂಗಮ ಮಠ ಗುರುಗಳು ಬೆಂಬಲಕ್ಕೆ ನಿಂತರು. ಆಸ್ಥಾನದ ಸಚಿವರ ಒಳ ಸಂಚಿನಿಂದ ಜಂಗಮಠಗಳ ನಾಶ, 400. ಜಂಗಮರ ಹತ್ಯೆಯೊಂದಿಗೆ ಈ ಹೋರಾಟವನ್ನು ಹತ್ತಿಕ್ಕಲಾಯಿತೆಂದು. ಮಾರ್ಕ್ಸ್‌ವಿಲ್ಕ್ಸ್ ಹೇಳಿದ್ದಾರೆ.

ಟಿಪ್ಪು ಕಾಲದ ದಂಡದ ವಿರುದ್ಧ ರೈತರ ದೂರು : ರಾಜನಿಗಿಂತ ಅಧಿಕಾರಿಗಳು ದುಷ್ಟರಾಗಿ ಮೆರೆದು ರೈತರಿಗೆ ಹಿಂಸೆ ಕೊಟ್ಟ ಕಾರಣವೇ ರೈತರು ರಾಜನಲ್ಲಿಗೆ ದೂರು ನೀಡಲು ಕಾರಣವಾಯಿತು. ಶ್ರೀರಂಗಪಟ್ಟಣ ಸಮೀಪದ ರೈತರು ಕಂದಾಯ ಕಟ್ಟುವುದಕ್ಕಿಂತ ಅಧಿಕಾರಿಗಳಿಗೆ ಕೊಡುತ್ತಿದ್ದ ದಂಡದಿಂದ ಸಾಕಾಗಿಹೋದರು. ನೇರವಾಗಿ ಟಿಪ್ಪುಸುಲ್ತಾನನಿಗೆ ಮನವಿ ಅರ್ಪಿಸಿದರು, ಆದರೆ ಮಂತ್ರಿ ಮೀರ್‌ಸಾದಕರು ಇವರ ಮನವಿಯನ್ನು ಟಿಪ್ಪುವಿಗೆ ತಪ್ಪಾಗಿ ಅರ್ಥೈಸಿ ಹೇಳಿದರು. ಇದರಿಂದ ಸಿಟ್ಟುಗೊಂಡ ಟಿಪ್ಪು ರೈತ ಮುಖಂಡನಾದ ಪಟೇಲನನ್ನು ಗಲ್ಲಿಗೆ ಹಾಕಿಸಿದನು ಇದರಿಂದ ಹೆದರಿದ ರೈತರು ಹಿಂದೆ ಸರಿದರು ಅವರ ಅಂತರ್ಯದಲ್ಲಿ ಕಹಿ ಇಳಿಹಿತು. ಆಡಳಿತ ಮುಖ್ಯಸ್ಥರಿಂದ ಈ ಬಗ್ಗೆ ಪೂರ್ಣ ಪರಿಶಿಲನೆ ನಡೆಯಲಿಲ್ಲ.

ಕರ್ನಾಟಕದಲ್ಲಿ ವಸಾಹತುಶಾಹಿ ಆಳ್ವಿಕೆಯ ಆರಂಭ ಕಾಲದಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ (1800) ನಡೆದ ಪ್ರತಿಭಟನೆ ಇದಾಗಿದೆ. ಇದಕ್ಕು ಮುನ್ನಾ ಈ ಪ್ರಾಂತ್ಯದಲ್ಲಿ ರೈತರು ನಗದು ಅಥವಾ ದಾನ್ಯರೂಪದಲ್ಲಿ ಕಂದಾಯ ಕೊಡುತ್ತಿದ್ದರು ಆದರೆ ಮೈಸೂರಿನಲ್ಲಿ ವಸಾಹತುಶಾಹಿಗಳ ಆಳ್ವಿಕೆ ಆರಂಭವಾದ ಮೇಲೆ ಕಂದಾಯವನ್ನು ನಗದು ರೂಪದಲ್ಲೇ ಕೊಡುವಂತೆ ಬಲತ್ಕರಿಸಲಾಯಿತು ಇದೇ ರೈತ ಹೋರಾಟಕ್ಕೆ ಮೂಲ ಕಾರಣವಾಯಿತು. ಈ ಹೋರಾಟವನ್ನು ಮದ್ರಾಸ್‌ನ ಕಲೆಕ್ಟರ್ ಥಾಮಸ್‌ಮನ್ರೋ ಹತ್ತಿಕ್ಕಿದನು ಇದೇ ರೀತಿಯಲ್ಲಿ ಬಳ್ಳಾರಿಯಲ್ಲಿ ಒಂದು ರೈತ ಹೋರಾಟ ನಡೆಯಿತು.[5]

ನಗರದ ರೈತ ಬಂಡಾಯ 1830 : ಶಿವಮೊಗ್ಗ ಜಿಲ್ಲೆಯ ಬಿದನೂರು ಅಥವಾ ನಗರ ರೈತರು ಮುಮ್ಮಡಿ ಕೃಷ್ಣರಾಜ ಒಡೆಯರ್ ವಿರುದ್ಧ ಹೋರಾಟಕ್ಕೆ ಇಳಿದರು. ಇದೊಂದು ಹೋರಾಟ ಮಾತ್ರವಾಗಿರದೆ ದಂಗೆಯೂ ಆಗಿತ್ತು ಈ ಡಿವಿಷನ್ನಿನಲ್ಲಿ ಕಂದಾಯದ ನಿಗದಿ ವ್ಯವಸ್ಥೆ ತಾಲ್ಲೂಕಿನಿಂದ ತಾಲ್ಲೂಕಿಗೆ ಹಳ್ಳಿಯಿಂದ ಹಳ್ಳಿಗೆ ಬೇರೆ ಬೇರೆ ಇದ್ದು ಏಕರೂಪತೆ ಹೊಂದಿರಲಿಲ್ಲ. ವಿಜಯನಗರ ಕಾಲದಿಂದ ದಿವಾನ್ ಪೂರ್ಣಯ್ಯನ ಕಾಲದವರೆಗೂ ಕಂದಾಯ ದರಗಳು ಹೆಚ್ಚುತ್ತಲೇ ಹೋದದ್ದು ಕಂಡುಬರುತ್ತದೆ. ಇದು ಪೂರ್ಣಯ್ಯನ ಕಾಲದಲ್ಲಿ ಗರಿಷ್ಠ ಮಿತಿ ಮುಟ್ಟಿ ಜೊತೆಗೆ ಅಮಲ್ದಾರರ ಕಿರುಕುಳದ ವಸೂಲಿ ವಿಧಾನವೂ ರೈತರನ್ನು ಬಹಳ ಸಂಕಷ್ಟಕ್ಕೀಡು ಮಾಡಿತ್ತು[7]. ಇದೆ ಸಂದರ್ಭದಲ್ಲಿ ಕ್ಷಾಮ. ಹರಡಿತು, ಅಧಿಕಗೇಣಿ ಪೌಜುದಾರರ ಮೇಲಾಟ ಎಲಕ್ಕಿಂತ ಮಿಗಿಲಾಗಿ ಬೂದಿಬಸಪ್ಪನ ತಿಳಿಗೇಡಿತನ ಈ ದಂಗೆಗೆ ಕಾರಣಗಳಾಗಿ ದ್ದವು. ಒಡೆಯರು ಬ್ರಿಟೀಷರ ಸಹಾಯಕ ಸೈನ್ಯದಿಂದ ಈ ದಂಗೆಯನ್ನು ಸದೆ ಬಡಿದರು. ಇದು ಮೈಸೂರಿನ ಇತಿಹಾಸದಲ್ಲಿ ನಡೆದ ರೈತ ಹೋರಾಟಗಳಲ್ಲೆಲ್ಲಾ. ಅತ್ಯಂತ ತೀಕ್ಷ್ಣ ಪ್ರಬಲ ಹಾಗೂ ದೂರಗಾಮಿ ದಂಗೆಯಾಗಿತ್ತು. ಈ ದಂಗೆ ಮೈಸೂರಿನ ಆಡಳಿತವನ್ನು ವಸಾಹತು ಶಾಹಿಗಳ ನೇರ ಆಡಳಿತಕ್ಕೆ ತಂದಿತು.

ಇರ್ವಿನ್ ನಾಲಾ ರೈತ ಚಳುವಳಿ 1931–32 : ಇರ್ವಿನ್‌ನಾಲಾ ಪ್ರದೇಶದಲ್ಲಿ ಕೃಷ್ಣರಾಜ ಸಾಗರದಿಂದ ಹೊರ ಬರುವ ಕಾವೇರಿ ಶಾಖೆ ಹಾಗೂ ಶಿಂಷಾ ಶಾಖೆಯ ರೈತರು ಅನುಸರಿಸಬೇಕಾದ ಬ್ಲಾಕ್ ಸಿಸ್ಟಂ ವ್ಯವಸಾಯಕ್ರಮ. ನೀರಾವರಿಯಾಗುವ ಜಮೀನುಗಳಿಗೆ ಕೊಡಬೇಕಾದ ಕಂದಾಯ, ಕಾಂಟ್ರಿಬ್ಯೂಷನ್ ಹಣ ಕಟ್ಟಬೇಕಾದುದು ತಡವಾದರೆ ಅದಕ್ಕೆ ಕೊಡಬೇಕಾದ ಬಡ್ಡಿ ಬಗ್ಗೆ ಸರ್ಕಾರ ಹೊರಡಿಸಿದ ಹುಕುಂ ಇವು ರೈತರಿಗೆ ಕಷ್ಟದಾಯಕವೆನಿಸಿದವು. ಇದರಿಂದ ಮಂಡ್ಯ ಮದ್ದೂರು ಭಾಗದ ರೈತರು ಎಚ್.ಕೆ.ವೀರನ್ನಗೌಡ ಹಾಗೂ ಎಚ್.ಕೆ.ಪುಟ್ಟಣ್ಣ ನವರ ನೇತೃತ್ವದಲ್ಲಿ ಸಂಘಟಿತರಾಗಿ ನಾಲ್ಕು ಸಾವಿರ ಜನ ಚಳುವಳಿಯಲ್ಲಿ ಭಾಗವಹಿಸಿದರು. ಎಲ್ಲರೂ ಬೆಂಗಳೂರಿಗೆ ಪಾದಯಾತ್ರೆಯಲ್ಲಿ ಹೋಗಿ ದಿವಾನರಿಗೆ ಮನವಿಪತ್ರ ಸಲ್ಲಿಸಿದರು. ಇದರಿಂದಾಗಿ ರೈತರಿಗೆ ಸಾಕಷ್ಟು ಅನುಕೂಲವಾಯಿತು. ರೈತರು ಹೋರಾಟದ ಪಾಠ ಕಲಿತರು. ಇದೊಂದು ಐತಿಹಾಸಿಕ ಘಟನೆಯಾಗಿ ಮಂಡ್ಯ ಜಿಲ್ಲೆಯ ಜನರ ಮನಸ್ಸಿನಲ್ಲಿ ಉಳಿಯಿತು.

ಗಾಂಧೀಜಿ ಮತ್ತು ರೈತ ಚಳುವಳಿಗಳು : ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪಾತ್ರ ಹಿರಿದಾದುದು ಗಾಂಧೀಜಿ ಕರ್ನಾಟಕದ ರಾಷ್ಟ್ರೀಯ ಹೋರಾಟದಲ್ಲಿ ರೈತರು ಪಾಲ್ಗೋಳ್ಳುವಂತೆ ಮಾಡಿದರು. 1930ರ ದಶಕದಲ್ಲಿ ಕಾನೂನುಭಂಗ ಚಳುವಳಿ ಕಾಲಕ್ಕೆ ಗಾಂಧೀಜಿಯ ಕರೆಯಂತೆ ಉತ್ತರಕನ್ನಡ ಜಿಲ್ಲೆಯ ಅಂಕೋಲ. ಸಿಸಿ. ಸಿದ್ದಾಪುರ. ಹಿರೇಕೆರೂರು ಗಳಲ್ಲಿ ರೈತರು ಅರಣ್ಯ ಸತ್ಯಾಗ್ರಹ. ಕರ ನಿರಾಕರಣೆ ಚಳುವಳಿಗಳಲ್ಲಿ ಭಾಗವಹಿಸಿದ್ದಲ್ಲದೆ .ಸರ್ಕಾರಕ್ಕೆ ಕೊಡಬೇಕಾದ ಗೇಣಿಯನ್ನು ತಡೆಹಿಡಿದರು. ಆನಂತರ ನಡೆದ ಚಲೆಜಾವ್ ಚಳುವಳಿ ಹಾಗೂ ಮೈಸೂರು ಚಲೋ ಚಳುವಳಿಗಳ ರೈತರು. ರೈತ ಕಾರ್ಮಿಕರು ಭಾಗವಹಿಸಿದರು. ಇವುಗಳಲ್ಲದೆ ಸಂಗೊಳ್ಳಿರಾಯಣ್ಣನ ಬಂಡಾಯ 1836–37, ಉತ್ತರಕನ್ನಡ ಹುಲಬಿನ್ನಿ ಕರನಿರಾಕರಣೆ 1930, ಸಿರಸಿ. ಸಿದ್ದಾಪುರ ತಾಲ್ಲೂಕು ಕರ ನಿರಾಕರಣೆ 1931, ಚಿತ್ರದುರ್ಗ ಜಿಲ್ಲೆಯ ರೈತ ಸಮ್ಮೇಳನಗಳು 1937–39. ಈಸೂರು ಗ್ರಾಮದ ರೈತ ಚಳುವಳಿ 1939–42.[7] ಇನ್ನು ಮುಂತಾದವು ಸ್ವಾತಂತ್ರ ಪೂರ್ವದಲ್ಲಿ ನಡೆದ ಪ್ರಮುಖ ರೈತ ಬಂಡಾಯಗಳಾಗಿವೆ.

ಸ್ವಾತಂತ್ರೋತ್ತರ ರೈತ ಚಳುವಳಿ.

1..ಕಾಗೋಡು ರೈತ ಚಳುವಳಿ 1951.

ಸ್ವತಂತ್ರ ನಂತರ ಕರ್ನಾಟಕ ಭಾಗದಲ್ಲಿ ನಡೆದ ಪ್ರಮುಖ ರೈತ ಚಳುವಳಿ ಇದಾಗಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಗೇಣಿದಾರರು ಭೂಮಾಲಿಕರ ವಿರುದ್ಧ ಬಂಡಾಯ ಎದುರು. ಕಾಗೋಡಿನ ಲಿಂಗಾಯಿತ ಜಮೀನ್ದಾರರ ಶೋಷಣೆ. ದೌರ್ಜನ್ಯ, ಅನ್ಯಾಯಗಳನ್ನು ಪ್ರತಿಭಟಿಸಿದರು. 1950–51 ರಲ್ಲಿ "ಉಳುವವನೆ ಭೂಮಿ ಒಡೆಯ" ಎಂದು ಅವರು ಸಾರಿಕೊಂಡರು. ಸರಕಾರವೆ ರೈತರು ಅತಿಕ್ರಮ ಪ್ರವೇಶಿಸಿದ್ದಾರೆಂದು ರೈತರನ್ನು ಕೋರ್ಟಿಗೆಳೆದು ಶಿಕ್ಷಿಸಿ ಚಳುವಳಿಯನ್ನು ಹತ್ತಿಕ್ಕಲು ಭೂಮಾಲಿಕ ರೊಂದಿಗೆ ಶಾಮೀಲಾಯಿತು. ಈ ಚಳುವಳಿಯಲ್ಲಿ ಭಾಗವಹಿಸಿದ

ಡಾ. ರಾಮಮನೋಹರ್ ಲೋಹಿಯಾರನ್ನು ಬಂಧಿಸಲಾಯಿತು. ಕಾಗೋಡು ರೈತ ಸತ್ಯಾಗ್ರಹ ಮೈಸೂರು ರಾಜ್ಯದ ಕೃಷಿ ಕ್ಷೇತ್ರದಲ್ಲಿ ಕ್ರಾಂತಿಯ ಕಹಳೆ ಊದಿತು, ಅದು ರೈತರಲ್ಲಿ ಜಾಗೃತಿ ಮೂಡಿಸಿತು, ರೈತರು ಈಗ ಹಿಂದಿಗಿಂತಲು ರೈತ ಹೋರಾಟಕ್ಕೆ ಒಂದು ಸೈದ್ಧಾಂತಿಕ ನೆಲೆ ಒದಗಿಸಿತು, ಅಲ್ಲಿಯವರೆಗೂ 1930–31 ರಲ್ಲಿ ಮಂಡ್ಯದ ಇರ್ವಿನ್ ನಾಲಾ ರೈತರು ಬಿಟ್ಟರೇ ರಾಜ್ಯದಲ್ಲಿ ಆರ್ಥಿಕ ಹಿನ್ನಲೆಯಲ್ಲಿ ಇಂತಹ ದೊಡ್ಡ ರೈತ ಹೋರಾಟ ನಡೆದಿರಲಿಲ್ಲ. ಸತ್ಯಾಗ್ರಹಕ್ಕೆ ಮಣಿದ ಸರ್ಕಾರ ಗೇಣಿದಾರರ ಶಾಸನ ಜಾರಿಗೆ ತಂದಿತು. 1961 ರಲ್ಲಿ ಜತ್ತಿ ಸಮಿತಿ ನೀಡಿದ ವರದಿ ಆಧರಿಸಿ, ಮತ್ತೊಂದು ಗೇಣಿ ಶಾಸನವನ್ನು ರಚಿಸಲಾಯಿತು. ಈ ಕಾಯಿದೆ ಜಾರಿಗೆ ಬರಲು ಕಾರಣವಾದ ಆಗಿನ ಕಂದಾಯ ಸಚಿವ ಕಡಿದಾಳ ಮಂಜಪ್ಪ ರನ್ನು "ಮಲೆನಾಡಿನ ಗಾಂಧಿ" ಎಂದು ಕರೆಯಲಾಯಿತು, ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದ ಶಾಂತವೇರಿ ಗೋಪಾಲಗೌಡರು 1952 ರಲ್ಲಿ ಸಾಗರ ಕ್ಷೇತ್ರದಿಂದ ಸಮಾಜವಾದಿ ಪಕ್ಷದಿಂದ ವಿದಾನಸಭೆಗೆ ಸ್ಪರ್ದಿಸಿ ಗೆದ್ದರು.

2. ಬಾಗುರು ನವಿಲೆ ಹೋರಾಟ : 1976 ರಲ್ಲಿ ಹೇಮಾವತಿ ನದಿ ನೀರನ್ನು ತುಮಕೂರು, ಮಂಡ್ಯ, ತಿಪಟೂರು ಪ್ರದೇಶಗಳಿಗೆ ನೀಡಲು ಯೋಜಿಸಲಾಯಿತು. ಹಾಸನದ ಬಾಗುರಿನಿಂದ 10ಕಿ.ಮೀ. ದೂರದ ನವಿಲೆಯವರೆಗೆ ಏರು ಪ್ರದೇಶದಲ್ಲಿ ಕಾಲುವೆ ನಿರ್ಮಾಣಕ್ಕೆ 150ರಿಂದ 300 ಅಡಿಗಳ ಆಳದ ಸುರಂಗ ತೋಡಬೇಕಾಯಿತು. ಇದರಿಂದಾಗಿ ಆ ಪ್ರದೇಶದ ಅಂತರ್ ಜಲ ಭತ್ತಿ ಹೋಗಿ. ಭೂಮಿಯ ತೇವಾಂಶ ಕಳೆದುಕೊಂಡು ತೆಮಗಿನ ಮರಗಳು ಒಣಗಿ ಹೋದವು. ಅಲ್ಲದೆ ಕೊಳವೆ ಬಾವಿ, ಕೆರೆಗಳು ಬತ್ತಿ ಹೋದವು. ಇದರಿಂದ ಆತಂಕಗೊಂಡ ಬಾಗುರು–ನವಿಲೆಯ ರೈತರು ಮುಖ್ಯಮಂತ್ರಿ ಬಳಿ ಪರಿಹಾರಕ್ಕೆ ಒತ್ತಾಯಿಸಿದರು, ಇದರಿಂದ ರೈತರ ಸಮಸ್ಯೆಯನ್ನು ವರದಿ ಮಾಡಲು ಒಂದು ಸಮಿತಿಯನು ನೇಮಿಸಲಾಯಿತು, ಇದು 24 ಹಳ್ಳಿಗಳು ಸಂಕಷ್ಟದಲ್ಲಿದ್ದು 25.1/2, ಕೋಟಿ ರೂಗಳ ಪರಿಹಾರ ನೀಡುವಂತೆ ವರದಿ ಮಾಡಿತು. ಸರ್ಕಾರ ಪರಿಹಾರ ನೀಡದಿದ್ದಾಗ ಎಚ್ಚೆತ್ತ ರೈತರು ಸುರಂಗಕ್ಕೆ ಮಣ್ಣು ಸುರಿದು ಪ್ರತಿಭಟಿಸಿದರು. ಹಾಸನ್ ಬಂದ್ ಮಾಡಿದರು. ರಸ್ತೆ ತಡೆ ಚಳುವಳಿ ಹೂಡಿದರು. ಪೋಲಿಸರು ರೈತರ ಮೇಲೆ ಲಾಠಿ ಚಾರ್ಜ್ ಮಾಡಿದಾಗ ರೈತರು ಪೋಲಿಸ್ ಜೀಪ್ ಮತ್ತು ಕೆ.ಎಸ್ಆರ್.ಟಿ.ಸಿ, ಬಸ್ಸೊಂದನ್ನು ಸುಟ್ಟರು. ಇದು ಕರ್ನಾಟಕದ ಪ್ರಮುಖ ರೈತ ಹೊರಾಟವಾಗಿದೆ.

ಈ ಮೇಲಿನ ಪ್ರಮುಖ ಚಳುವಳಿಯ ಜೊತೆಗೆ ಇನ್ನು ಅನೇಕ ಸಣ್ಣ ಪುಟ್ಟ ರೈತ ಹೋರಾಟಗಳು ನಡೆದಿರುವ ನಿದರ್ಶನಗಳನ್ನು ಕಾಣಬಹುದು. ಜಮೀನ್ದಾರರಿಗೆ ಹಾಗೂ ಸರ್ಕಾರದ ನಿರ್ಲಕ್ಷತೆಯಿಂದ ಶೋಷಣೆಗೆ ಈಡಾದ ರೈತರು ಅನೇಕ ಚಳುವಳಿಗಳನ್ನು ಹೂಡಿದ್ದಾರೆ, ರೈತರು ಕಮ್ಯೂನಿಸ್ಟರ ಬೆಂಬಲದೊಂದಿಗೆ ರಾಜ್ಯದ ನಾನಾ ಕಡೆ ಪ್ರಾಂತೀಯ ರೈತ ಸಂಘಟನೆಗಳನ್ನು ಸ್ಥಾಪಿಸಿ ಹೋರಾಟ ನಡೆಸುತ್ತಿವೆ. ಒಕ್ಕಲೆಬ್ಬಿಸುವುದನ್ನು ತಡೆಯುವುದು, ಗೇಣಿಯಲ್ಲಿ ಕಡಿತ. ಉಳುವವನೇ ಭೂ ಒಡೆಯ. ನೀರಿನ ಕರದಲ್ಲಿ ಕಡಿತ. ಜಮೀನ್ದಾರಿಕೆ ನಾಶ. ಬಡ ರೈತರಿಗೆ ಭೂಮಿ ಹಂಚಿಕೆ. ಕನಿಷ್ಟ ಕೂಲಿ ನಿಗಧಿ. ಸಾಲ ಮಾಫಿ ಅವರ ಬೇಡಿಕೆಗಳಾಗಿದ್ದವು 1968 ಮತ್ತು 79 ರಲ್ಲಿ ಹಳಿಯೂಳದಲ್ಲಿ ಕಬ್ಬು ಬೆಳೆಗಾರರು ನಿರ್ದಿಷ್ಟ ಕಾರ್ಖಾನೆಗೆ ಕಬ್ಬು ಸಾಗಿಸುವುದರ ವಿರುದ್ಧ ಚಳುವಳಿ ಹೂಡಿದರು, 1972 ರಲ್ಲಿ ಕೋಲಾರದಲ್ಲಿ ಭೂ ಆಕ್ರಮಣ ಚಳುವಳಿ ನಡೆಸಿದರು. ಶಿರಾದ ರೈತರು ಬೆಳೆದಿದ್ದ ಕಡಲೆಕಾಯಿಗೆ ಶಿರಾ ಎ.ಪಿ.ಎಂ.ಸಿ ದಲ್ಲಾಳಿಗಳು ಕ್ವಿಂಟಲ್‌ಗೆ 1400 ರೂ ನಿಂದ 600 ರೂಗೆ ಇದ್ದಕ್ಕಿದ್ದಂತೆ ಇಳಿಸಿಬಿಟ್ಟರು. ಸರ್ಕಾರ ಕೂಡ ರೈತರನ್ನು ಅಲಕ್ಷಿಸಿತು. ಇದರಿಂದ ಕುಪಿತರಾದ ರೈತರು ಕಛೇರಿಯ ಗಾಜುಗಳನ್ನು ಪುಡಿ ಮಾಡಿದರು. ರಾಷ್ಟ್ರೀಯ ಹೆದ್ದಾರಿ 4ರಲ್ಲಿ "ರಸ್ತೆ ರೋಕೋ" ಚಳುವಳಿ ಹೂಡಿ ಹಲವು ವಾಹನಗಳನ್ನು ಸುಟ್ಟರು ಪರಿಸ್ಥಿತಿಯನು ನಿಯಂತ್ರಿಸಲು ಪೋಲಿಸರು ಗೋಲಿಬಾರ್ ಮಾಡಿ ಹಲವು ರೈತರನ್ನು ಕೊಂದರು, ರೈತರು ಕ್ಷುದ್ರರಾಗಿ ಒಬ್ಬ ಡಿ.ವೈ.ಎಸ್‌ಪಿ ಮತ್ತು ಒಬ್ಬ ಪೇದೆಯನ್ನು ಕೊಂದರು.

ನವ್ಯ ರೈತ ಚಳುವಳಿ 1980ರಿಂದ: 1980ರ ನಂತರ ನಡೆದ ರೈತ ಚಳುವಳಿಯನ್ನು ನವ ರೈತ ಹೋರಾಟ ಎಂದು ಕರೆಯಲಾಗಿದೆ. ಇದಕ್ಕೆ ಕಾರಣಗಳೆಂದರೆ ಇದು ಹಿಂದಿನ ಹೋರಾಟಗಳಂತೆ ಊಳಿಗಮಾನ್ಯ ಪದ್ಧತಿಯ ವಿರುದ್ಧವಾಗಿರಲಿಲ್ಲ. ಅದು ವಾಣಿಜ್ಯಗಳ ಪರವಾಗಿತ್ತು, ಆದರೆ 1981ರ ನಂತರ ರೈತ ಹೋರಾಟ ವ್ಯಾಪ್ತಿ ತುಂಬಾ ವಿಶಾಲವಾಗಿತ್ತು ಹೋರಾಟ ಪಕ್ಷಾತೀತವಾಗಿತ್ತು. ಅಲ್ಲದೆ ರಾಜಕೀಯ. ಆರ್ಥಿಕ. ಸಾಮಾಜಿಕ ಹಿನ್ನೆಲೆ ಹೊಂದಿದ್ದವು. ನವ ರೈತ ಚಳುವಳಿ ಮೊದಲಿಗೆ ಮಲಪ್ರಬಾ. ಘಟಪ್ರಬಾ ಪ್ರದೇಶದಲ್ಲಿ ಆರಂಭವಾಯಿತು.

ಕರ್ನಾಟಕದ ರೈತ ಚಳುವಳಿಯಲ್ಲಿ ರಾಜ್ಯ ರೈತ ಸಂಘದ ಪಾತ್ರ ಮಹತ್ತರವಾದುದು. ರೈತರ ಸಂಘಟನೆ. ಐಕ್ಯತೆ ಬೆಳೆಸುವುದು. ಅವರ ಉತ್ಪನ್ನಗಳಿಗೆ ಸೂಕ್ತ ಬೆಲೆ ಒದಗಿಸುವುದು, ರೈತ ವಕ್ತಾರನಾಗಿ ವರ್ತಿಸುವುದು, ಗೇಣಿ ಪದ್ಧತಿ ಮತ್ತು ಜಮೀನ್ದಾರಿಕೆ ನಿರ್ಮೂಲನೆ. ಇವೆ ಮುಂತಾದವು ರೈತ ಸಂಘದ ಉದ್ದೇಶಗಳಾಗಿದ್ದವು ಶಿವಮೊಗ್ಗ ಜಿಲ್ಲೆಯ ರೈತ ಸಂಘ ಹಾಗೂ ಕಬ್ಬು ಬೆಳೆಗಾರರ ಸಂಘದೊಡನೆ ಆರಂಭಗೊಂಡ ಈ ರೈತ ಸಂಘಟನೆಯು ಮುಂದೆ ವಿವಿದ ಜಿಲ್ಲಾ ರೈತರ ಬೇಡಿಕೆಗಳನ್ನು ಕ್ರೋಡಿಕರಿಸಿ ಅವನ್ನು ಸನ್ನದಿನ ರೂಪದಲ್ಲಿ ಮುಂದಿಟ್ಟಾಗ ಅದು ರಾಜ್ಯ ರೈತ ಸಂಘವಾಗಿ ಮಾರ್ಪಟ್ಟು. ಇಂದಿಗೂ ವಿವಿಧ ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸುತ್ತಾ ರೈತರ ಶೋಷಣೆಯ ವಿರುದ್ಧ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿದೆ.

ರಾಜ್ಯ ರೈತ ಸಂಘವು ಕೇಂದ್ರ ಸರ್ಕಾರದ ನೀತಿಯಾದ ಅಂತರಾಷ್ಟ್ರೀಯ ವಾಣಿಜ್ಯ ಒಪ್ಪಂದಕ್ಕೆ ಸಹಿ ಹಾಕಿ ಹೊರ ದೇಶದ ಉತ್ಪಾದನೆಗಳು ದೇಶಕ್ಕೆ ಬಂದು ಸ್ಥಳೀಯ ಬೆಲೆಗಳು ಕುಸಿಯುವುದನ್ನು ತಪ್ಪಿಸಲು ಹಾಗೂ ತಮ್ಮ ಬೆಳೆಗಳಿಗೆ ಬೆಲೆ ಕಡಿಮೆಯಾಗಲು ಕೇಂದ್ರದ ನೀತಿ ಜೊತೆಗೆ ಮುಕ್ತ ಮಾರುಕಟ್ಟಗೆ ತನ್ನನ್ನು ಒಪ್ಪಿಸಿಕೊಳ್ಳುತ್ತಿರುವ ಜಾಗತೀಕರಣದ ವಿರುದ್ಧದ ಹೋರಾಟ ರೈತ ಸಂಘಕ್ಕೆ ಸ್ಥಳೀಯ ಮಟ್ಟದಿಂದ ಅಂತರಾಷ್ಟ್ರೀಯ ಮಟ್ಟಕ್ಕೆ ವಿಸ್ತಾರಗೊಳ್ಳುವುದು ಅನಿವಾರ್ಯವಾಗಿತ್ತು. ಕರ್ನಾಟಕ ರಾಜ್ಯ ರೈತಸಂಘ ಇಡೀ ದೇಶದಲ್ಲಿ ವಿಶಿಷ್ಟ ರೀತಿಯಲ್ಲಿ ಈ ಕಾರ್ಪೊರೇಟ್ ಸಂಸ್ಥೆಗಳ ವಿರುದ್ಧ ಹೋರಾಟ ನಡೆಸುತ್ತಾ ಬಂದಿದೆ.

ಕನ್ನಡ ಬದುಕನ್ನು ರೈತರ ಮೂಲಕ ಕರ್ನಾಟಕದಾಚೆ ತಿಳಿ ಹೇಳುವ ಅನಿವಾರ್ಯತೆ ಹಾಗೂ ಜವಾಬ್ದಾರಿ ಚಳುವಳಿಗೆ ಇದ್ದುದ್ದನ್ನು ಜಾಗತೀಕರಣದ ಸಂದರ್ಭದಲ್ಲಿ ನೋಡಬಹುದು. ಯಾಕೆಂದರೆ ಕನ್ನಡ ಬದುಕಿಗೂ ರೈತರಿಗೂ ಅನ್ಯೋನ್ಯತೆ ಇಲ್ಲಿ ಪ್ರಮುಖವಾಗಿತ್ತು, ರೈತರು

ಅನುಭವಿಸುತ್ತಿದ್ದ ಅನೇಕ ಸಮಸ್ಯೆ ಸ್ಥಳಾಂತರದ ನೋವು. ಸಾಂಸ್ಕೃತಿಕ ಪಲ್ಲಟ, ಜೀವನ ಮೌಲ್ಯಗಳ ನಷ್ಟ ಇತ್ಯಾದಿ ಕನ್ನಡ ಬದುಕಿನಿಂದ ಹೊರತಾಗಿರಲಿಲ್ಲ ಆದರೆ ಅದನ್ನು ಕರ್ನಾಟಕದಿಂದಾಚೆ ಜಾಗತೀಕರಣದ ವಿರೋಧಿಯಾಗಿ ಹೇಗೆ ಪರಿವರ್ತಿಸಲು ಸಾಧ್ಯ ? ಎಂಬ ತೀಕಲಾಟ ಸೂಕ್ಷ್ಮವಾಗಿ ಅಡಕವಾಗಿತ್ತು.

ಪ್ರೊ. ನಂಜುಂಡಸ್ವಾಮಿಯವರ ರೈತ ಹೋರಾಟವನ್ನು ಎರಡನೇ ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯುತ್ತಾರೆ. ಈ ಸಂಗ್ರಾಮವೂ ಮಹಾತ್ಮ ಗಾಂಧಿಯವರ ವಿಚಾರಗಳಿಂದಲೇ ಸ್ಫೂರ್ತಿ ಪಡೆದಿದೆ ಎಂದು ಅವರು ಒತ್ತಿ ಹೇಳುತ್ತಾರೆ. ತಾತ್ವಿಕ ದೃಷ್ಟಿಯಿಂದ ಪ್ರೊ. ನಂಜುಂಡಸ್ವಾಮಿಯವರ ವಿಚಾರ ಸಂಕುಚಿತ ಆರ್ಥಿಕ ದೃಷ್ಟಿಕೋನವಲ್ಲಿ, ರೈತರಿಗೆ ಲಾಭದಾಯಕ ಬೆಲೆಗಳನ್ನು ಕೊಡುವುದರ ಜೊತೆಗೆ ಇಡೀ ಗ್ರಾಮದ ಅಭಿವೃದ್ಧಿಯಾಗಬೇಕು ಅದಕ್ಕಾಗಿ ಬಾರಿ ಬಂಡವಾಳ ಹಾಕಿ ಬಾರೀ ಉದ್ಯಮಗಳ ಮೇಲೆ ಅವಲಂಬಿಸುವ ಅಗತ್ಯವಿಲ್ಲ ಇದು ಅವರ ಸರ್ವೋದಯ ವಿಚಾರಧಾರೆಯಾಗಿದೆ.

ದೇಶದ ಎಲ್ಲಾ ರಾಜ್ಯದಂತೆ ಕರ್ನಾಟಕದಲ್ಲೂ ರೈತಸಂಘಟನೆಗಳು ಸೃಷ್ಟಿಗೊಂಡು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಸ್ವಾತಂತ್ರ ಪೂರ್ವದಿಂದಲೂ ಇಂದಿನವರೆವಿಗೂ ರಾಷ್ಟ್ರದ ವಿವಿದ ಭಾಗದಲ್ಲಿ ರೈತ ಹೋರಾಟಗಳು ನಡೆಯುತ್ತಲೇ ಬಂದಿವೆ ಈ ಎಲ್ಲಾ ಚಳುವಳಿಗಳು ಮಹತ್ತರವಾದ ಕ್ರಾಂತಿಯನ್ನುಂಟು ಮಾಡದೇ ಕೇವಲ ದಂಗೆ ಮತ್ತು ಬಂಡಾಯದ ರೀತಿಯಲ್ಲಿದ್ದು ಭಾರತದ ಬಡ ರೈತರ, ಕೃಷಿ ಕಾರ್ಮಿಕ, ಭೂರಹಿತರ ಬದುಕನ್ನು ಸುಧಾರಿಸುವ ಮಹತ್ತರವಾ ದಂತಹ ಬದಲಾವಣೆಯನ್ನೇನಾದರು ತಂದಾಗ ಮಾತ್ರ ರೈತ ಹೋರಾಟಕ್ಕೆ ಒಂದು ಅರ್ಥ ಬರುತ್ತದೆ[8].

ಇವತ್ತಿನ ಸಂದರ್ಭದಲ್ಲಿ ರೈತ ಚಳುವಳಿಯ ಶಕ್ತಿ ಬಹಳಷ್ಟು ಕುಂದಿದೆ. ಅದು ಚುನಾವಣೆಗೆ ನಿಂತರೆ ಅದನ್ನು ರಾಷ್ಟ್ರೀಯ ಪಕ್ಷಗಳು ಗಂಬೀರವಾಗಿ ಪರಿಗಣಿಸುವುದೇ ಇಲ್ಲ. ಅಲ್ಲದೆ ರಾಜ್ಯಮಟ್ಟದ ಪಕ್ಷಗಳು ಕೂಡ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಯಾಕೆಂದರೆ ರೈತ ಚಳುವಳಿ ಕರ್ನಾಟಕದ ರಾಜಕೀಯದ ಬದುಕನ್ನು ಅಥವಾ ಭೂಪಟವನ್ನು ಬದಲಾಯಿಸಲಾರದು ಎಂಬ ಗಟ್ಟಿಯಾದ ನಂಬಿಕೆ ಇಲ್ಲಿ ಅಡಕವಾಗಿದೆ. ಅದೇನೆ ಇದ್ದರೂ ಕನ್ನಡದ ರಾಜಕೀಯ ಬದುಕಿಗೆ ಹೊಸತನವನ್ನು ಹೊಸ ದೃಷ್ಟಿಕೋನವನ್ನು ಆಯಾಮವನ್ನು ನೀಡಿದ್ದನ್ನು ಮರೆಯಬಾರದು 1983ರಲ್ಲಿ ಕಾಂಗ್ರೆಸ್ಸೇತರ ಸರಕಾರದ ರಚನೆಗೆ ರೈತ ಚಳುವಳಿ ಕಾರನವಾದುದ್ದನ್ನು ಇಲ್ಲಿ ದಾಖಲಿಸಬೇಕು.

ಅಡಿ ಟಿಪ್ಪಣಿ.

1. ಡಾ.ಎಂ.ಜಿ. ನಾಗರಾಜ್ ; ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು, ಸಹಸ್ರಮಾನ ಸಂಪುಟ1, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ, ವಿಧಾನಸೌದ, ಬೆಂಗಳೂರು 2006 ಪುಟ.2
2. ಡಾ.ಸಂಪಿಗೆ ನಾಗರಾಜು ; ಇಪ್ಪತ್ತನೆ ಶತಮಾನದ ಕೊನೆಯ ದಶಕಗಳಲ್ಲಿ ಸಂಸ್ಕೃತಿ ಪ್ರಶ್ನೆ. ಅನ್ನಪೂರ್ಣ ಪ್ರಕಾಶನ ಸಿರಿಗೇರಿ 2008 ಪುಟ.185
3. ಕೆ.ಎಸ್ ಅಶ್ವತ್ಥಪ್ಪ ; ಸಮಗ್ರ ಕರ್ನಾಟಕ ಇತಿಹಾಸ. ಸುಭಾಷ್ ಸ್ಟೋರ್ ಅವಿನೂ ರೋಡ್ ಬೆಂಗಳೂರು.2011. ಪುಟ.882.
4. ಡಾ.ಹಿ.ಶಿ.ರಾಮಚಂದ್ರೇಗೌಡ. ಕರ್ನಾಟಕ ರೈತ ಚಳುವಳಿ. ಕನ್ನಡ ವಿಭಾಗ ಕ.ರಾ.ಮು.ವಿ. ಮಾನಸ ಗಂಗೋತ್ರಿ.2011 ಪು 11.
5. ಕೆ.ಎಸ್ ಅಶ್ವತ್ಥಪ್ಪ. ಅದೇ ಪುಟ.883.
6. ಎಂ. ಸೆಬ್ಯಾಸ್ಟಿನ್ ಜೋಸೆಫ್ ; 1830–31 ರಲ್ಲಿ ನಗರ ಡಿವಿಷನ್ನಿನಲ್ಲಿ ನಡೆದ ರೈತರದಂಗೆ. ಒಂದು ವಿವೇಚನೆ; ಸಾದನೆ. ಬೆಂಗಳೂರು ವಿಶ್ವವಿದ್ಯಾನಿಲಯ. ಸಂಪುಟ ಸಂಚಿಕೆ.3 ಏಪ್ರಿಲ್–ಜೂನ್ 1980.ಪು 119.
7. ಡಾ.ಹಿ.ಶಿ.ರಾಮಚಂದ್ರೇಗೌಡ. ಅದೇ ಪುಟ.16
8. ಡಾ ಜೋಗಸ್ ಶಂಕರ್, ಗ್ರಾಮ ಸಮಾಜ ಜೀವ ಪ್ರಕಾಶನ ಮೈಸೂರು 1995 ಪುಟ.239.
9. ಪ್ರೊ.ಒಡೆಯರ್ ಡಿ.ಹೆಗ್ಗಡೆ ; ರಾಷ್ಟ್ರೀಯವಾದಿ ಆಮದೋಲನದ ಸಾಮಾಜಿಕ–ಆರ್ಥಿಕ– ಆಯಾಮಗಳು ಅರ್ಜುನ ಪಬ್ಲಿಶಿಂಗ್ ಹೌಸ್ ಮೈಸೂರು.2010
10. ಡಿ.ಎನ್.ಧನಗೆರೆ ಭಾರತದಲ್ಲಿ ರೈತ ಚಳುವಳಿಗಳು (1920–1950) ಕ್ರಿಯಾ ಪ್ರಕಾಶನ 2012
11. ಡಾ.ಎಸ್ ಚಂದ್ರಶೇಖರ್. ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ ತಿಪಟೂರು.2002.

ಪ್ರಭುದ್ಧ ಭಾರತದ ನಿರ್ಮಾಣಕ್ಕೆ ಡಾ॥ ಬಿ.ಆರ್. ಅಂಬೇಡ್ಕರ್ ರವರ ಕೊಡುಗೆ

* ಡಾ॥ ವಿಜಯಕುಮಾರ ಎಚ್. ಸಾಲಿಮನಿ, ** ಪೀರಪ್ಪ ಶೇಟ್ಟಪ್ಪ ಭಾಂಗೆ

* ಅಸಿಸ್ಟೆಂಟ್ ಪ್ರೋಪೇಸರ್ ಮತ್ತು ಮಾರ್ಗದರ್ಶಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿತ್ತಾಪೂರ,

** ಪಿ.ಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಾಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಆದರ್ಶ ಪ್ರೀಯತೆ, ಆದರ್ಶಗಳು ಹಾಗೂ ಆದರ್ಶ ನಾಯಕರುಗಳ ಕೊರತೆ ಕಂಡು ಒಂದು ನೈತಿಕ ಶೂನ್ಯತೆಯನ್ನು ಕಾಡುತ್ತಿರುವಾಗ ಬುದ್ಧ, ಬಸವಣ್ಣ, ಅಂಬೇಡ್ಕರ್ ಮುಖ್ಯವಾಗಿರುತ್ತಾರೆ. ಆದೂನೀಏ ಭವ್ಯಭಾರತದ ಬಹುದೊಡ್ಡ ಚಿಂತಕರು, ದಾರ್ಶನಿಕರು ಮಹಾವಿದ್ವಾಂಸರು, ಇತಿಹಾಸ ತಜ್ಞರು, ನ್ಯಾಯಶಾಸ್ತ್ರಜ್ಞರು ರಾಜ್ಯ ನೀತಿ ತಜ್ಞ ಭಾರತ ಸಂವಿಧಾನ ಶೀಲ್ಪಿ ಸಂವಿದಾನ ಪೀಠಾಮಹರಾಗಿ ಡಾ॥ ಬಿ.ಆರ್. ಅಂಬೇಡ್ಕರ ರವರು ಶೋಷಿತ ವರ್ಗಗಳ ಆತ್ಮ ವಿಶ್ವಾಸ ತುಂಬಲು ಅವರು ನಡೆಸಿದಂತೆ ಪ್ರಯತ್ನ ಅದ್ಭುತವಾದವುಗಳು. ಪ್ರಬುದ್ಧ ಭಾರತದ ನಿರ್ಮಾಣಕ್ಕೆ ಅವರು ನೀಡಿದಂತ ರಾಜಕೀಯ, ಆರ್ಥಿಕ, ಸಾಮಾಜೀಕ, ಧಾರ್ಮಿಕ, ಶೈಕ್ಷಣಿಕ, ಸಂಹಾನ ಮತ್ತು ಪತ್ರಿಕೋದ್ಯ ಸಿದ್ಧಾಂತಗಳು ಅತ್ಯಂತ ಅವಿಸ್ಮರಣಿಯವಾಗೆವೆ. ವಿಶೇಷವಾಗಿ ಭಾರತದಲ್ಲಿ ಶತ ಶತಮಾನಗಲಿಂದ ಅಸಮಾನತೆ, ಅಂದಕಾರ, ಮೂಡನಂಬಿಕೆ, ಅಂದಶ್ರದ್ಧೆ ಬದಲಾವಣೆ ಮಾಡುವಲ್ಲಿ ಡಾ॥ ಬಿ.ಆರ್. ಅಂಬೇಡ್ಕರ ರವರ ಪ್ರಬುದ್ಧ ಭಾರತದ ನಿರ್ಮಾಣದ ಪ್ರಮುಖ ಗುರಿಯಾಗಿತ್ತು.

ಡಾ॥ ಬಿ.ಆರ್.ಅಂಬೇಡ್ಕರ (1891 ರಿಂದ 1956) ತಮ್ಮ ಕಾಲವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು ರಾಷ್ಟ್ರೀಯತಾ ವಾದಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತರರಾಗಿ, ಕ್ರೀಯಾಶೀಲ ಸಮಾಜೀಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರರಾಗಿ, ಮಹದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಚಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೇಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು "ಪವಾಡ ಪುರಷ" ರೆಂದೇ ಹೆಸರಿಸಬೇಕಾಗುತ್ತದೆ.

ಭಾರತೀಯ ಇತಿಹಾಸದಲ್ಲಿ ಬಿರುಗಾಳಿ ಎಬ್ಬಿಸಿದ ಮಹಾನ ವಿಂದ್ವಾಂಸ ಸಂವಿಧಾನದ ಶಿಲ್ಪಿ ಡಾ। ಬಿ.ಆರ್. ಅಂಬೇಡ್ಕರ ಇಡಿ ದೇಶ ಸ್ವತಂತ್ರ ಎಂಬ ಸಂಗ್ರಮದಲ್ಲಿ ಮುಳುಗಿದಾಗ ಭಾರತ ದೇಶಕ್ಕೆ ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯದ ಅರ್ಥವನ್ನು ತಿಳಿಯದ ಕೋಟಾಂತ ಅಸಾಯಕತೆಯ ಜನವರ್ಗಕ್ಕೆ ಸ್ವಾತಂತ್ರ ಸಮಾನತೆ ಭಾತೃತ್ವ ಸಿಗಬೇಕೆಂದು ಅವೀರತ ಹೋರಟ ನಡೆಸಿದ ಮಹಾಪುರುಷ, ಭಾರತದಲ್ಲಿ ಸಾಮಾನ ವಿದ್ಯಗಳ ನಿರಾಕರಸಿದ್ದರಿಂದ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಗಿ ಭಾರತದಲ್ಲಿ ಯಾರು ಗಳಿಸಲಾರದಷ್ಟು ವಿದ್ಯೆಯನ್ನು ಗಳಿಸಿಕೊಂಡು ಭಾರತಕ್ಕೆ ಪಾಪಸಾಗಿ ಭಾರತದಲ್ಲಿ ಇರುವಂತಹ ಸಮಾನತೆಯ ಕ್ರಾಂತಿಯ ಜ್ವಾಲೆಯನ್ನು ಎಬ್ಬಿಸಿದಂತೆ ಮಹಾಪುರಷ ಡಾ॥ ಬಿ.ಆರ್.ಅಂಬೇಡ್ಕರರವರು. ಅವರ ಪ್ರತಿಭೆ, ಅಪಾರ ಪಾಂಡಿತ್ಯ, ಪ್ರಾವೀಣತೆ, ಸ್ವಾಭಿಮಾನ, ಸ್ವಚಾರಿತ್ರ್ಯ ಜೀವನ ಶೈಲಿಗಳಿಂದ ಅವರೊಬ್ಬ ಜಗತ್ತಿನ ಅಸಾಮಾನ್ಯ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಸಾವಿರಾರು ವರ್ಷಗಳಿಂದ ನಿಂತಲೆ ನಿಂತಿದ್ದ ಭಾರತದ ಸಾಮಾಜೀಕ ವ್ಯವಸ್ಥೆಯ ದಿಕ್ಕನೂ ಬದಲಿಸಿ ಅದನ್ನು ಹರಿವಂತೆ ಮಾಡಿದ್ದರು. 40 ವರ್ಷಗಳ ಕಾಲ ಸತತವಾಗಿ ಅಸಮಾನತ್ಯ ವಿರುದ್ಧ ಹೋರಾಟವನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸಿ ಜಯ ಗಳಿಸುವಲ್ಲಿ ಯಶ್ವಸ್ವಿಯಾದರು. ಅಂಬೇಡ್ಕರರು ಎಂದು ಅನ್ಯ ಜಾತಿಯವರನ್ನು ಟೀಕಿಸಲಿಲ್ಲ ಬದಲಾಗಿ ಜಾತ್ಯಾತಿತೆಯನ್ನು ಮತ್ತು ಜಾತಿವಾದಿಗಳನನ್ನು ಮಾತ್ರ ಕಟುವಾಗಿ ಟೀಕಿಸುತ್ತಿದ್ದರು. ಇವರ ಏಳಿಗೆಗಗಿ ಅಡ್ಡಗೋಡೆಯಾಗಿರುವ ಅನಿಷ್ಟಜಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಿತ್ತಿ ಎಸೆದು ನವಭಾರತದ ನಿರ್ಮಾಣಮಾಡುವಲ್ಲಿ ಅಂಬೇಡ್ಕರರವರು ತಾವು ಬದುಕಿರುವರೆಗೂ ಅವಿರತವಾದ ಹೋರಾಟಮಾಡಿದ್ದರು. ಡಾ॥ ಬಿ.ಆರ್. ಅಂಬೇಡ್ಕರ ರವರ ವಿಶಾಲ ದೃಷ್ಟಕೋನ ಅಪ್ಪಟ್ಟ ದೇಶಪ್ರೇಮಿಯಾಗಿದ್ದರು. ನಾರ್ನೂವ ಭಾರತೀಯ ಹಾಗೂ ಭಾರತೀಯ ರಾಷ್ಟ್ರೀಯತೆ ಪ್ರತಿಪಾದಕ ಭಾರತಕ್ಕೆ ವಿಕಾತ್ಮಕ ಶಾಸನ ಭೇಕು ಎಂಬುವದರಲ್ಲಿ ಬಲವಾದ ನಂಬಿಕೆ ಉಳ್ಳವರಾಗಿದ್ದರು.

ಗುರಿ ಮತ್ತು ಉದ್ದೇತಗಳು :

- ಪ್ರಭುದ್ಧ ಭಾರತ ನಿರ್ಮಾಣ ಮಾಡುವದು ಡಾ॥ ಬಿ.ಆರ್.ಅಂಬೇಡ್ಕರ ರವರ ಪ್ರಮುಖ ಗುರಿ ಮತ್ತು ಉದ್ದೇಶವಾಗಿದೆ.
- ಶತ ಶತಮಾನಗಳಿಂದ ಗುಲಾಮಿಗಿರಿಗೆ ಸಿಕ್ಕಿರುವಂತಹ ಜನತೆಯ ಒಂದು ಪರಿವರ್ತನೆವಾಗಿರುವಂತಹದು ಈ ಪ್ರಭುದ್ಧ ಭಾರತದ ನಿರ್ಮಾಣದ ಗುರಿಯಾಗಿದೆ.
- ಬ್ರಾಹ್ಮಣಶಾಹಿಯ ಆಡಳಿತದಿಂದ ಬೆಸತ್ತಿರುವಂತಹ ಸಮಾಜದಲ್ಲಿ ಅಸಮಾನತೆಯಿಂದ ಇರುವಂತಹ ಜನರ ಆರ್ಥಿಕ, ಸಾಮಾಜೀಕ, ಧಾರ್ಮಿಕ, ಶೈಕ್ಷಣಿಕ, ಸಂಸ್ಕೃತಿಕವಾಗಿ ಅಭಿವೃದ್ಧಿಯನ್ನು ಸಾಧಿಸುವುದಾಗಿದೆ.
- ಶೋಷಣೆ ರಹತಿ ಸಮಾಜ ನಿರ್ಮಾಣ ಮಾಡಬೇಕೆನ್ನುವುದು ಸೂದ್ರ ಮತ್ತು ದಲಿತರು ಬ್ರಮಣೆಯಿಂದ ಹೋರಬರಬೇಕಾಗುತ್ತದೆ.
- ಅಂಬೇಡ್ಕರ್‌ರವರಂತೆ ದಿರುತ್ತರವಾದಂತ ಚಿಂತನೆಗಳು, ದಾರ್ಶಿನೀತಿಗಳು, ದೀಶಕ್ತಿ, ಮೌಲ್ಯಗಳು, ಪ್ರಜ್ಞನೆಗಳನ್ನು ಸಮಾನವಾಗಿ ಅಳವಡಿಸಿಕೊಂಡಾಗ ಮಾನವಿಯತೆ ಅಡಿಪಾಯವಾಗಿರುವ ಸಮಾಜವನ್ನು ನಿರ್ಮಿಸುವ ಗುರಿ ಉದ್ದೇಶಹೊಂದಬೇಕಾಗುತ್ತದೆ.
- ಡಾ॥ ಬಿ.ಆರ್. ಅಂಬೇಡ್ಕರ ರವರ ಜೀವನ ಚರಿತ್ರೆಯನ್ನು ಸಿದ್ಧಾಂತ ತತ್ವಗಳು ಅವರು ಭವ್ಯಭಾರತದ ಚರಿತ್ರೆಗೆ ನೀಡಿರುವಂತಹ ಕೊಡಿಗೆಗಯ ಕುರಿತು ಕುಲಂಕುಷವಾಗಿ ಅಧ್ಯಾಯನ ಮಾಡುವುದು.
- ಪ್ರಾಚೀನ ಕಾಲದಿಂದ ಹಿಡಿದು ಪ್ರಸ್ತುತ ಅದುನಿಕ ಕಾಲದವರೆಗೆ ಅಂಬೇಡ್ಕರ ರವರ ನೀಡಿರುವ ಕೊಡಿಗೆಗಳಿಂದ ಎಷ್ಟೋಂದು ಪರಿವರ್ತನೆಯಾಗಿವೆ ಎಂಬುವದನ್ನು ಐತಿಹಾಸಿಕವಾಗಿ ಪರಿಕ್ಷಿಸುವುದು.
- ಅಂಬೇಡ್ಕರರವರ ರಾಜೀಕಿಯ, ಸಾಮಾಜೀಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಬರಹ ಮತ್ತು ಭಾಷಣಗಳು ಸಿದ್ಧಾಂತದ ಮೇಲೆ ಬೆಳಕು ಚಲ್ಲುವಂತೆ ಮಾಡುವುದು.
- ಭಾರತ ಸಂವಿಧಾನದ ರಚನೆಯ ಪ್ರಸ್ತುತ ಈ ದೇಶದ ಆಡಳಿತ ನಡೆಸುವಂತೆ ಮಾಡಿರುವಂತದನ್ನು ಕುರಿತು ಅಧ್ಯಾಯನ.
- ಡಾ॥ ಬಿ.ಆರ್. ಅಂಬೇಡ್ಕರ ರವರ ವಿಶಾಲ ಮನೊಭಾವನೆ, ಸಮಾನತೆ, ಭಾತೃತ್ವ, ಜಾತ್ಯಾತೀತ ದೇಶವನ್ನು ಕಟುವ ಪರಿಕಲ್ಪನೆ ಹೊಂದಿದರು. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಪತ್ರಿಕ್ಯೂದಮ ಹೀಗೆ ವಿವಿಧ ಸಿದ್ಧಾಂತಗಳ ಮೇಲೆ ಅವರು ನೀಡಿರುವ ಕೊಡುಗೆ ಅವಿರತವಾಗಿದೆ.

ಸಾಮಾಜಿಕ ಪರಿವರ್ತನ ಚಳುವಳಿಯ ಉಗಮ

ಎರಡು ಸಾವಿರ ವರ್ಷಗಳ ನಂತರ ಅಧುನಿಕ ಭಾರತವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡ ಬ್ರಿಟಿಷರ ಕಾಲದಲ್ಲಿ ಶೂದ್ರಾತಿಶೂದ್ರರ ಕತ್ತಲೆಯ ಬದುಕಿನಲ್ಲಿ ಸಣ್ಣದೊಂದು ಭರವಸೆಯ ಬೆಳಕು ಮೂಡಿತು. ಮಾರ್ಚ್7, 1935 ರಲ್ಲಿ ಲಾರ್ಡ್‌ಮೆಕಾಲೆಯವರು ಜಾರಿಗೆ ತಂದ ಸಾರ್ವತ್ರಿಕ ಶಿಕ್ಷಣ ನೀತಿಯಿಂದಾಗಿ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿದ್ದ ವಿದ್ಯೆ ಗಳಿಸಿಕೊಳ್ಳುವ ಅವಕಾಶ ಶೂದ್ರರಿಗೂ ದೊರಕಿತು. ಮುಂಬೈ ಪ್ರಾಂತ್ಯದಲ್ಲಿ ಕ್ರೈಸ್ತ ಮಿಷನರಿಗಳಿಂದ ಶಿಕ್ಷಣವನ್ನು ಪಡೆದುಕೊಂಡ ಪ್ರಥಮ ಬ್ರಾಹ್ಮಣೇತರ ವ್ಯಕ್ತಿ ಮಹಾತ್ಮ ಜ್ಯೋತಿ ಬಾಫುಲೆಯವರು 1848ರ ಅವಧಿಯಲ್ಲಿ ಅಂದಿನ ಜಾತಿವ್ಯವಸ್ಥೆಯ ವಿರುದ್ಧ ಬಂಡಾಯ ಹೂಡಿದರು. ಕ್ರಿ.ಶ. 1851ರಲ್ಲಿ ಭಾರತದಲ್ಲಿ ಪ್ರಥಮ ಬಾರಿಗೆ ಅಸ್ಪೃಶ್ಯ ಸಮುದಾಯಗಳ ಹೆಣ್ಣುಮಕ್ಕಳಿಗೆ ಪೂನಾ ನಗರದಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಿದರು, ಆ ಶಾಲೆಗೆ ತಮ್ಮ ಪತ್ನಿ ಮಾತೆ

ಸಾವಿತ್ರಿಭಾಯಿಫುಲೆಯವರನ್ನು ಪ್ರಥಮ ಶಿಕ್ಷಕಿಯಾಗಿ ನೇಮಕಮಾಡಿ ಶೂದ್ರ ಮತ್ತು ಅತಿಶೂದ್ರರ ನಡುವೆ ಶಿಕ್ಷಣದ ಆಂದೋಲನವನ್ನು ಸಂಘಟನೆಯನ್ನು ಪ್ರಾರಂಭಮಾಡಿ ಜಾತೀಯತೆ, ಅಸ್ಪೃಶ್ಯತೆ ಮತ್ತು ಮಹಿಳಾ ಶೋಷಣೆ ವಿರುದ್ಧ ಹೋರಾಟ ಮಾಡಿದ ಜ್ಯೋತಿಬಾಫುಲೆಯವರು ಆಧುನಿಕ ಭಾರತದ ಸಾಮಾಜಿಕ ಪರಿವರ್ತನ ಚಳುವಳಿಯ ಪಿತಾಮಹ ಎನಿಸಿಕೊಂಡರು.

ಮೀಸಲಾತಿ ಚಳವಳಿಯ ಉಗಮ: ಸತ್ಯಶೋಧಕ ಸಮಾಜ ಚಳುವಳಿಯಿಂದ ಪ್ರೇರೇಪಿತರಾದ ಕೊಲ್ಲಾಪುರ ಪ್ರಾಂತ್ಯದ ಮಹಾರಾಜ ಛತ್ರಪತಿ ಶಾಹುಮಹಾರಾಜರು ಅಸ್ಪೃಶ್ಯರು ಮತ್ತು ಶೂದ್ರರಿಗೆ ಉಚಿತ ಪ್ರಾಥಮಿಕ ಶಿಕ್ಷಣ, ವಿದ್ಯಾರ್ಥಿವೇತನ ಮತ್ತು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಶಿಕ್ಷಣದ ಜೊತೆ ತಮ್ಮ ಸಂಸ್ಥಾನದ ಆಡಳಿತದಲ್ಲಿ ಭಾರತದಲ್ಲೇ ಪ್ರಥಮ ಬಾರಿಗೆ ಜುಲೈ 26, 1920ರಲ್ಲಿ ಬ್ರಾಹ್ಮಣೇತರ ಹಿಂದುಳಿದ ಜಾತಿಗಳಿಗೆ ಶೇಕಡ 50ರಷ್ಟು ಮೀಸಲಾತಿಯನ್ನು ಜಾರಿಗೊಳಿಸದರು. ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡಿದನ್ನು ಅಂದಿನ ಕಾಂಗ್ರೆಸ್ ಅಧ್ಯಕ್ಷರಾಗಿದ ಬಾಲಾಗಂಗಾಧರ ತಿಲಕ್ ಉಗ್ರವಾಗಿ ವಿರೋಧ ಮಾಡಿದರು. ಬಾಂಬೆ ಪ್ರಾಂತ್ಯದಲ್ಲಿ ಪ್ರಾರಂಭವಾಗಿದ ಬ್ರಾಹ್ಮಣೇತರ ಚಳುವಳಿಯು ಮದ್ರಾಸ್‌ಪ್ರಾಂತ್ಯಕ್ಕೂ ಪ್ರಭಾವ ಬೀರಿತು. ಅಂದಿನ ಮೈಸೂರು ಸಂಸ್ಥಾನವನ್ನು ಆಳ್ವಿಕೆ ಮಾಡುತ್ತಿದ್ದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಅಸ್ಪೃಶ್ಯರು ಮತ್ತು ಹಿಂದುಳಿದ ಜಾತಿಗಳಿಗೆ ಅನೇಕ ಶಿಕ್ಷಣ ಸವಲತ್ತುಗಳನ್ನು ನೀಡುವುದರ ಜೊತೆಗೆ; ಬ್ರಾಹ್ಮಣರು ಮತ್ತು ಆಂಗ್ಲೋಇಂಡಿಯನ್ನರನ್ನು ಹೊರತುಪಡಿಸಿ ಉಳಿದ ಎಲ್ಲಾ ಸಮುದಾಯಗಳನ್ನು ಹಿಂದುಳಿದವರ್ಗಗಳೆಂದು ಪರಿಗಣಿಸಿ ಮೇ 1921ರಲ್ಲಿ ಈ ಎಲ್ಲಾ ಸಮುದಾಯಗಳಿಗೆ ಶೇಕಡ 75ರಷ್ಟು ಮೀಸಲಾತಿಯನ್ನು ಜಾರಿಗೊಳಿಸಿದರು. ಹಿಂದುಳಿದ ವರ್ಗಗಳಿಗೂ ಸರ್ಕಾರಿ ಉದ್ಯೋಗಗಳಲ್ಲಿ ಸಮಾನ ಅವಕಾಶ ನೀಡಬೇಕೆಂಬ ಮಹಾರಾಜರ ತೀರ್ಮಾನವನ್ನು ಅಂದಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಮತ್ತವರ ಬ್ರಾಹ್ಮಣ ಸಮುದಾಯ ಒಕ್ಕೊರಲಿನಿಂದ ವಿರೋದ ಮಾಡಿದರು.

ಅಸ್ಪೃಶ್ಯರ ಹಕ್ಕುಗಳನ್ನು ವಿರೋಧಿಸಿದ ಗಾಂಧಿ ಮಹಾತ್ಮರು: ಬ್ರಿಟೀಷರ ಆಹ್ವಾನದ ಮೇರೆಗೆ ಬಾಬಾಸಾಹೇಬರು ನವೆಂಬರ್ 12, 1930 ಹಾಗೂ ನವೆಂಬರ್ 4, 1931ರಲ್ಲಿ ಲಂಡನ್‌ನಲ್ಲಿ ನಡೆದ ಎರಡು ದುಂಡುಮೇಜಿನ ಸಭೆಗಳಲ್ಲಿ ಶೋಷಿತ ವರ್ಗಗಳ ಪ್ರತಿನಿಧಿಯಾಗಿ ಭಾಗವಹಿಸಿದರು. ಮೊದಲ ದುಂಡುಮೇಜಿನ ಪ್ರತಿನಿಧಿಯಾಗಿ ಭಾಗವಹಿಸಿದರು. ಮೊದಲ ದುಂಡುಮೇಜಿನ ಸಭೆಯಲ್ಲಿ ಬಾಬಾಸಾಹೇಬರು ಶೋಷಿತ ವರ್ಗಗಳ ಹಾಗೂ ದೇಶದ ಎಲ್ಲಾ ಪ್ರಜೆಗಳ ಪರವಾಗಿ 7 ಪ್ರಮುಖ ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳನ್ನು ಮಂಡಿಸಿದರು.

1. ವಯಸ್ಕ ಮತದಾನ ಪದ್ಧತಿಯನ್ನು ಬ್ರಿಟಿಷ್ ಸರ್ಕಾರ ಜಾರಿಗೊಳಿಸಬೇಕು.
2. ಶೋಷಿತ ಸಮುದಾಯಗಳಿಗೆ ಪ್ರತ್ಯೇಕ ಚುನಾಯಕಗಳು.
3. ಶೋಷಿತ ಸಮುದಾಯಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ.
4. ಅಸ್ಪೃಶ್ಯತಾ ನಿಷೇಧ ಕಾಯ್ದೆ.
5. ಸಾಮಾಜಿಕ ಬಹಿಷ್ಕಾರ ನಿಷೇಧ ಕಾಯ್ದೆ.
6. ಮುಂದೆ ರಚನೆಯಾಗುವ ಮಂತ್ರಿ ಮಂಡಲದಲ್ಲಿ ಶೋಷಿತರಿಗೆ ಪ್ರಾತಿನಿಧ್ಯ.

ಈ ಮೇಲ್ಕಂಡ ಹಕ್ಕೊತ್ತಾಯಗಳನ್ನು ಬ್ರಿಟಿಷ್ ಪ್ರಧಾನಿ ರ‍್ಯಾಮ್ಸೆ ಮ್ಯಾಕ್‌ಡೊನಾಲ್ಡ್‌ರವರ ಮುಂದೆ ಬಾಬಾಸಾಹೇಬರು ಸಾಕಷ್ಟು ಸಾಕ್ಷ್ಯಾಧಾರ ಒದಗಿಸಿ ಮಂಡಿಸಿದರು. ಈ ಎಲ್ಲಾ ಒತ್ತಾಯಗಳು ನ್ಯಾಯಯುತವಾಗಿದ್ದರಿಂದ ಸಭೆಯಲ್ಲಿ ಹಾಜರಿದ್ದ ಎಲ್ಲಾ ಪ್ರತಿನಿಧಿಗಳು ಒಪ್ಪಿಕೊಂಡರು. ಮೊದಲನೆ ದುಂಡುಮೇಜಿನ ಸಭೆಗೆ ಹಾಜರಾಗದ ಕಾಂಗ್ರೆಸ್ ಮತ್ತು ಗಾಂಧೀಜಿ **" ಎರಡನೇ ದುಂಡುಮೇಜಿನ ಸಭೆಗೆ ಆಗಮಿಸಿ ಬಾಬಾ ಸಾಹೇಬರ ಎಲ್ಲಾ ಬೇಡಿಕೆಗಳನ್ನು ಸಾರಾಸಗಟಾಗಿ ವಿರೋಧಿಸಿದರು. ಅದರಲ್ಲೂ ಶೋಷಿತ ಸಮುದಾಯಗಳಿಗೆ ಪ್ರತ್ಯೇಕ ಚುನಾಯಕ ನೀಡಿದರೆ ಹಿಂದುಧರ್ಮ ಒಡೆದುಹೋಗುತ್ತದೆ."** ಎಂಬ ವಾದವನ್ನು ಮಂಡಿಸಿದರು. ಗಾಂಧೀಜಿಯವರ ಈ ವಿತಂಡವಾದಕ್ಕೆ ಉತ್ತರಿಸುತ್ತಾ... **'ಅಸ್ಪೃಶ್ಯರು ಮತ್ತು ಬುಡಕಟ್ಟು ಸಮುದಾಯಗಳು ಹಿಂದೂಧರ್ಮದಿಂದ ಪ್ರತ್ಯೇಕವಾಗಿಯೇ ಬದುಕುತ್ತಿರುವುದರಿಂದ ಹಿಂದೂಧರ್ಮ ಹೊಡೆದು ಹೋಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ'** ಎಂದು ಬಾಬಾಸಾಹೇಬರು ವಾದಮಾಡುತ್ತಾ . . . **ಶೋಷಿತ ಸಮುದಾಯಗಳು ಪ್ರತ್ಯೇಕ ಚುನಾಯಕಗಳನ್ನು ಪಡೆದುಕೊಳ್ಳುವುದರಿಂದ ಮಾತ್ರ ಅವರಿಗೆ ಸ್ವತಂತ್ರ ರಾಜ್ಯಾಧಿಕಾರ ಸಿಗುತ್ತದೆ, ತನ್ಮೂಲಕ ಅವರ ಸಾಮಾಜಿಕ, ಆರ್ಥಿಕ ಸಂಕಷ್ಟಗಳು ಪರಿಹಾರವಾಗುತ್ತವೆ** ಎಂದು ಹೇಳಿದರು. ಈ ವಾದವನ್ನು ಗಾಂಧಿಮಹಾತ್ಮರು ಖಡಾಖಂಡಿತವಾಗಿ ವಿರೋಧ ಮಾಡಿದರು. ಇವರಿಬ್ಬರ ವಾದವನ್ನು ಗೌರವಿಸಿದ ಬ್ರಿಟೀಷ್ ಸರ್ಕಾರ ಹಿಂದುಗಳೀಂದ ಪ್ರತ್ಯೇಕವು ಆಗಬಾರದು ಎಂಬ ಉದ್ದೇಶದಿಂದ ಆಗಸ್ಟ್ 17, 1932ರಲ್ಲಿ ಒಂದು ಕೋಮುವಾರು ಆದೇಶವನ್ನು ಹೊರಡಿಸಿ, ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾಯಕಗಳ ಬದಲು ವಿಶೇಷ ಚುನಾಯಕಗಳನ್ನು ಒಟುಗಳು. ಒಂದು ಓಟನ್ನು ಪ್ರತ್ಯೆಕ ಚುನಾಯ್ಕಗಳ ಮೂಲಕ ತಮ್ಮ ಪ್ರತಿನೀದಿಯನ್ನು ತಾವೇ ಸ್ವತಂತ್ರವಾಗಿ ಆಯ್ಕೆ ಮಾಡಿಕೊಳ್ಳುವುದು, ಮತ್ತೊಂದು ಓಟನ್ನು ಸಾಮಾನ್ಯ ಕ್ಷೇತ್ರದಲ್ಲಿ ಸ್ಪರ್ಧಿಸುವ ಸಾಮಾನ್ಯ ಸವರ್ಣೀಯ ಹಿಂದೂ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಚಲಾಯಿಸುವುದು. ಗಾಂಧೀಜಿ ಮತ್ತು ಅಂಬೇಡ್ಕರ್ ಇಬ್ಬರ ಬೇಡಿಕೆಗಳನ್ನು ಪೂರೈಸುವುದು ಬ್ರಿಟೀಷರ ಉದ್ದೇಶವಾಗಿತ್ತು. ಈ ಆದೇಶವನ್ನು ಬಾಬಾಸಾಹೇಬರು ಸಂತೋಷದಿಂದ ಒಪ್ಪಿಕೊಂಡರು. ಆದರೆ ಇದನ್ನು ವಿರೋಧಿಸಿ ಸೆಪ್ಟೆಂಬರ್ 20, 1932ರಂದು ಗಾಂಧೀಜಿಯವರು ಅಸ್ಪೃಶ್ಯರ ವಿಶೇಷ ಚುನಾಯಕಗಳ ವಿರುದ್ಧ ಪೂನಾದ ಯರವಾಡ ಜೈಲಿನಲ್ಲಿ ಆಮರಣಾಂತ ಉಪವಾಸ ಆರಂಭಿಸಿ ದೇಶದೆಲ್ಲೆಡೆ ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಾಣ ಮಾಡಿದರು. ಆ ಸಂದರ್ಭದಲ್ಲಿ ಬಾಬಾಸಾಹೇಬರ ವಿರುದ್ಧ ಬಂದಂತಹ ವಿಚಿತ್ರ ಸನ್ನಿವೇಶ ಹಾಗೂ ಅಸಾಮಾನ್ಯ ಒತ್ತಡಗಳ ಜೊತೆಗೆ ಗಾಂಧೀಜಿಯವರ ಪ್ರಾಣವನ್ನು ಉಳಿಸುವ ಉದ್ದೇಶದಿಂದ ಸೆಪ್ಟೆಂಬರ್ 24, 1932ರಂದು ಗಾಂಧೀಜಿ ಮತ್ತು ಬಾಬಾಸಾಹೇಬರು ನಡುವೆ ಒಂದು ಒಡಂಬಡಿಕೆ ಆಯಿತು. ಅದುವೇ **"ಪೂನಾ ಒಡಂಬಡಿಕೆ".**

ಪೂನಾ ಒಡಂಬಡಿಕೆಯಂತೆ ಅಸ್ಪೃಶ್ಯರಿಗೆ ವಿಶೇಷ ಚುನಾಯಕಗಳ ಎರಡು ಓಟಿನ ಬದಲು ಒಂದೇ ಓಟಿರುವ ಜಂಟಿ ಚುನಾಯಕಗಳು ಜಾರಿಯಾದವು. ಇದರಿಂದಾಗಿ 78 ಸ್ವತಂತ್ರ ಸ್ಥಾನಗಳ ಬದಲು 151 ಪರಾವಲಂಬಿ ಮೀಸಲು ಕ್ಷೇತ್ರಗಳು ಜಾರಿಯಾದವು. ಅಸ್ಪೃಶ್ಯರಿಗೆ

ಸ್ವತಂತ್ರ ರಾಜಕೀಯ ಶಕ್ತಿಯನ್ನು ಗಳಿಸಿಕೊಡಬೇಕೆಂದುಕೊಂಡಿದ್ದ ಬಾಬಾಸಾಹೇಬರ ಕನಸು ಗಾಂಧೀಜಿ ಮತ್ತು ಕಾಂಗ್ರೆಸ್ಸಿಗರ ಕುತಂತ್ರದಿಂದಾಗಿ ನುಚ್ಚುನೂರಾಯಿತು. ಮನುವಾದಿ ಕತ್ತಲ ಯುಗದಿಂದ ಮಾನವತಾವಾದಿ ಬೆಳಕಿನ ಯುಗಕ್ಕೆ ಚಲಿಸುತ್ತಿದ್ದ ಸಾಮಾಜಿಕ ಪರಿವರ್ತನಾ ಚಳುವಳಿಯು ಪೂನಾ ಒಡಂಬಡಿಕೆಯಿಂದಾಗಿ ಚಮಚಾಯುಗಕ್ಕೆ ತಳ್ಳಲ್ಪಟ್ಟಿತು. ಇದರಿಂದ ಫುಲೆ–ಅಂಬೇಡ್ಕರ್‌ವಾದಿ ಚಳವಳಿಗೆ ಭಾರಿ ಹಿನ್ನಡೆಯುಂಟಾಯಿತು. ಅಸ್ಪೃಶ್ಯ ಸಮುದಾಯಗಳ ನಡುವೆ ಹುಟ್ಟಿಕೊಂಡ ಗಣ್ಯ ಹಾಗೂ ಬುದ್ಧಿವಂತ ಸಮೂಹವನ್ನು ಸಾಮಾನ್ಯ ಜನತೆಯಿಂದ ದೂರ ಮಾಡಲಾಯಿತು.

ಪ್ರಬುದ್ಧ ಭಾರತ ನಿರ್ಮಾಣ ಮಾಡಲು ಬೌದ್ಧರಾಗೋಣ

"ಒಂದು ಕಡೆ ಮನುವಾದಿ ಶ್ರೇಣಿಕೃತ ಜಾತಿ ಆಧಾರಿತ ಸಾಮಾಜಿಕ, ಆರ್ಥಿಕ ಅಸಮಾನತೆ ಸಾರುವ ಹಿಂದೂಧರ್ಮ, ಮತ್ತೊಂದು ಕಡೆ ದೇಶದ ಸರ್ವರಿಗೂ ಸಾಮಾಜಿಕ–ಆರ್ಥಿಕ ಸಮಾನತೆ ಸಾಧಿಸಕೊಡಬಲ್ಲ ಭಾರತದ ಸಂವಿಧಾನ". ಇಂತಹ ವೈರುಧ್ಯಮಯ ಬದುಕಿನಿಂದ ಹೊರಬರಬೇಕಾದರೆ ಭಾರತದ ಮೂಲನಿವಾಸಿಗಳಾದ ನಾವು "ಸಂವಿದಾನ"ದ ಆಶಯಗಳನ್ನು ಒಳಗೊಂಡಿರುವ ಜೀವಪರ, ಮಾನವೀಯ ಮತ್ತು ಪ್ರಜಾಸತ್ತಾತ್ಮಕ ಧಮ್ಮವಾದ ಬೌದ್ಧಧರ್ಮಕ್ಕೆ ಅಂದರೆ ನಮ್ಮ ಮೂಲ ಧಮ್ಮಕ್ಕೆ ಮರಳಬೇಕು ಎಂಬುದು ಬಾಬಾಸಾಹೇಬರ ಮಹಾನ್ ಕನಸು. ಅವರ ಅನುಯಾಯಿಗಳಾದ ನಾವೆಲ್ಲರೂ ಅವರ ಕನಸನ್ನು ನನಸು ಮಾಡಿ ಪ್ರಬುದ್ಧ ಭಾರತವನ್ನು ನಿರ್ಮಾಣ ಮಾಡಲು ಇಂದಿನಿಂದಲೇ ಪ್ರತಿಜ್ಞೆ ಮಾಡೋಣ.

ಕರ್ನಾಟಕದಲ್ಲಿ ಬೌದ್ಧ ಧರ್ಮದ ನೆಲೆಗಳ ಒಂದು ಅಧ್ಯಯನ (ಕ್ರಿಪೂ. 3ನೇ ಶತಮಾನದಿಂದ ಕ್ರಿಶ. 1565 ರವರೆಗೆ) .

* ಡಾ. ವಿಜಯಕುಮಾರ ಸಾಲಿಮನಿ, ** ವಿಶ್ವನಾಥರಡ್ಡಿ ಹಣಮಗೌಡ
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿತ್ತಾಪೂರ, ಜಿಲ್ಲೆ ಗುಲಬರ್ಗಾ, ** ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

1. ಪ್ರಸ್ತಾವನೆ ಮತ್ತು ಬೌದ್ಧ ಧರ್ಮದ ಐತಿಹಾಸಿಕ ಹಿನ್ನಲೆ : "ಯಾವ ಪಾಪವನ್ನು ಮಾಡದಿರುವುದು ಕುಶಲವಾದವನ್ನು ವೃದ್ಧಿಪಡಿಸುವುದು ಮನಃ ಪರಿಶುದ್ಧತೆಯನ್ನು ಪಡೆಯುವುದು ಇದೇ ಬುದ್ಧರ ಸಂದೇಶ "

ಮಹಾತ್ಮ ಬುದ್ಧ ಪ್ರಣಿತವಾದ ಬೌದ್ಧ ಧರ್ಮ ಜಗತ್ತಿನ ಅತ್ಯಂತ ಪ್ರಮುಖ ಮತ್ತು ಪ್ರಗತಿಪರ ಧರ್ಮ, ಪುರಾಣ, ದೇವರು ಮುಂತಾದ ಕೊನೆಯೇ ಇಲ್ಲದ ಪರಿಕಲ್ಪನೆಗಳ, ಜಿಜ್ಞಾಸೆಗಳ, ಶುಷ್ಕ ತರ್ಕಗಳ ಜಾಲದಲ್ಲಿ ಸಿಲುಕದೆ ಮನುಷ್ಯನ ಉನ್ನತಿ, ವಿಕಾಸ, ಜಗತ್ತಿನ ಕಲ್ಯಾಣಗಳನ್ನೇ ಮುಖ್ಯ ಕೇಂದ್ರವನ್ನಾಗಿ ಇಟ್ಟುಕೊಂಡು ಅಹಿಂಸೆ, ಕರುಣೆ, ಮಾನವೀಯತೆ, ಸರ್ವೋದ್ಧಾರಗಳ ಜೀವ ಕೇಂದ್ರಗಳನ್ನು ತನ್ನ ಆತ್ಮವನ್ನಾಗಿ ಧಾರಣ ಮಾಡಿಕೊಂಡು ಭಾಷೆ, ದೇಶ, ಜಾತಿ, ಜನಾಂಗಗಳ ಸಂಕುಚಿತ ಪರಿಧಿಗಳನ್ನು ದಾಟಿ ಅಖಂಡ ಮಾನವ ಕೋಟಿಯನ್ನು ಒಂದಾಗಿ ಬೆಸೆಯುವ ಮಹಾಧ್ಯೇಯವನ್ನು ಒಳಗೊಂಡು ಹುಟ್ಟಿದ, ಬೆಳೆದ ವಿಶಿಷ್ಟ ಧರ್ಮ ಇದು. ಭಾರತದ ವರ್ಣಾಶ್ರಮ ಧರ್ಮಗಳ ಇಕ್ಕಟ್ಟು, ಬಿಕ್ಕಟ್ಟು ಮತ್ತು ದಮನಗಳಲ್ಲಿ ನುಗ್ಗುನುರಿಯಾಗಿದ್ದ ಕೆಳವರ್ಗಗಳ ಪಾಲಿಗೆ, ಅವರ ಬಿಡುಗಡೆಗೆ ಸಂಜೀವಿನಿಯಾಗಿ ಮಾರ್ಪಟ್ಟ ಈ ಧರ್ಮ ಕ್ಷಿಪ್ರ ಕಾಲದಲ್ಲಿ ಜಗತ್ತಿನ ಧರ್ಮವಾಗಿ ಮಾರ್ಪಟ್ಟಿದ್ದು ಅದರ ಉದಾರವಾದ ತತ್ವ, ದೃಷ್ಟಿ ಮತ್ತು ಕ್ರೀಯೆಗಳಿಂದಾಗಿ. ಜನ್ಮತಃ ಶ್ರೀಮಂತ ಪರಿಸರದಲ್ಲಿ ಹುಟ್ಟಿದ ಸಿದ್ಧಾರ್ಥ ಚಿಕ್ಕ ವಯಸ್ಸಿನಲ್ಲೆ ಪ್ರಪಂಚದ ನೋವುಗಳಿಗೆ, ಅಸಮಾನತೆಗಳಿಗೆ ನಶ್ವರತೆಗಳಿಗೆ ತನ್ನ ಹೃದಯವನ್ನು ಮುಕ್ತವಾಗಿ ತೆರೆದಿಟ್ಟ. ಇಂತಹ ನೈತಿಕ ಮೌಲ್ಯವನ್ನು ಹೊಂದಿದ ಬೌದ್ಧ ಧರ್ಮ ತನ್ನದೇಯಾದ ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ.

ಸುಮಾರು 2600 ವರ್ಷಗಳ ಹಿಂದೆ ಉತ್ತರ ಭಾರತದಲ್ಲಿ ಹದಿನಾರು ರಾಜ್ಯಗಳಿದ್ದವು. ಅವುಗಳಲ್ಲಿ ಮುಖ್ಯವಾದ ನಾಲ್ಕು ರಾಜ್ಯಗಳೆಂದರೆ ಮಗಧ, ವತ್ಸ, ಅವಂತಿ, ಕೋಸಲ. ಈ ಕೋಸಲದ ವಾಯುವ್ಯ ದಿಕ್ಕಿಗೆ ಹರಡಿದ್ದೇ ಸಾಕ್ಯ ರಾಜ್ಯ. ಇದರ ಒಡೆಯನಾದ ರಾಜ ಸುದ್ಧೋಧನ, ರಾಜಧಾನಿ ಕಪಿಲವಸ್ತು, ಸುದ್ಧೋಧನನಿಗೆ ಧೋತೋಧನ, ಸಕ್ಕೋಧನ, ಅಮಿತೋಧನ ಮತ್ತು ಸುಕ್ಕೋಧನ ಎಂಬ ಸಹೋದರರೂ, ಅಮಿತಾ ಮತ್ತು ಪಮಿತ ಎಂಬ ಸಹೋದರಿಯರು ಇದ್ದರು. ಕಪಿಲವಸ್ತು ನಗರವು ಕಪಿಲನೆಂಬ ಮಹಾತತ್ವಜ್ಞಾನಿ ಮುನಿಯ ಹೆಸರಿನಲ್ಲಿ ಆತನೇ ತೋರಿಸಿದ ಸ್ಥಳದಲ್ಲಿ ಕಟ್ಟಲ್ಪಟ್ಟಿತ್ತು, ಸುದ್ಧೋಧನನೆ ರಾಜ್ಯವಾಳುತ್ತಿದ್ದನು.

ಪ್ರಸ್ತಾವನೆ : ಅರಿವಿನ ದಾರಿ ಕಾಣದೆ ಜನಸಮುದಾಯ ನರಳುವಾಗ ಅರಿವಿನ ದಾರಿ ತೋರುವ ಮಹಾಪುರುಷರು ಅವತರಿಸುತ್ತಾರೆ, ಎಂಬ ನಂಬಿಕೆಯನ್ನು ನಿಜಗೊಳಿಸಿದ ಮಹಾಪುರುಷರಲ್ಲಿ ಬುದ್ಧನು ಒಬ್ಬ. ಬುದ್ಧನು ಪ್ರಪಂಚದ ಹಿರಿಯ ಧರ್ಮಗಳಲ್ಲಿ ಒಂದಾದ ಬೌದ್ಧ ಧರ್ಮದ ಸ್ಥಾಪಕ. ಸಿದ್ಧಾರ್ಥ ಅವನ ಮೂಲ ಹೆಸರು. ಸಿದ್ಧಾರ್ಥನಿಗೆ ಶಾಕ್ಯಮುನಿ, ತಥಾಗತ, ಮಹಾಜ್ಞಾನಿ ಎಂಬ ಹೆಸರುಗಳಿದ್ದವು. ಸಿದ್ಧಾರ್ಥನ ತಂದೆ ಕಪಿಲ ವಸ್ತುವನ್ನು ಆಳುತ್ತಿದ್ದ. ತಾಯಿ ಮಾಯಾದೇವಿ ಸಿದ್ಧಾರ್ಥ ಹುಟ್ಟಿದ ೭ ನೇ ದಿನ ತೀರಿಕೊಂಡಳು. ನಂತರ ಸಿದ್ಧಾರ್ಥನು ಮಲತಾಯಿ ಪ್ರಜಾಪತಿ ಗೌತಮಿಯ ಆರೈಕೆಯಲ್ಲಿ ಬೆಳೆದನು. ಸಿದ್ಧಾರ್ಥನಿಗೆ ಗೌತಮ ಎಂಬ ಹೆಸರಾಯಿತು. ಈ ದೈವಿ ಮಗುವನ್ನು ನೋಡಲು ಜನರ ಮಹಾಪುರವೇ ಹರಿಯಿತು. ಹಿಮಾಲಯದ ಮುನಿ 'ಆಶಿತನು' ಮಗುವನ್ನು ಕಂಡು ಹರ್ಷಿತನಾದ ಮರುಕ್ಷಣವೇ ಕಂಬನಿಯನ್ನಿಟ್ಟನು. ಇದಕ್ಕೆ ಕಾರಣ ಕೆಳಲಾಗಿ 'ಸಕಲರನ್ನು ಉದ್ಧರಿಸುವ ಮಹಾಜ್ಞಾನಿಯನ್ನು ಕಂಡು ಸಂತೋಷವಾಯಿತು, ಆದರೆ ಈ ದಿವ್ಯ ಪುರುಷನ ಸಂದೇಶ ಕೇಳುವ ಭಾಗ್ಯಕ್ಕೆ ನನ್ನ ವೃದ್ಯಾಪ್ಯ ಅಡ್ಡಿಯಾಗಿದೆ. ಈ ಮಗು ಮಹಾ ಧರ್ಮ ಸಂಸ್ಥಾಪಕನಾಗುತ್ತಾನೆ' ಎಂದು ಉತ್ತರಿಸಿದನು. ಮಗುವನ್ನು ಸಾಮ್ರಾಟನಾಗಿ ಮಾಡಲು ಬಯಸಿದ್ದ ಶುದ್ಧೋಧನ ಇದರಿಂದ ಕಳವಳಗೊಂಡು ಸಿದ್ಧಾರ್ಥನನ್ನು ಸಕಲ ರಾಜಭೋಗಗಳೊಂದಿಗೆ ಬೆಳೆಸಿದನು. ಅವನನ್ನು ಪ್ರಾಪಂಚಿಕ ಸುಃಖಭೋಗಕ್ಕೆ ಬಂಧಿಸಲು ೧೬ ನೇ ವಯಸ್ಸಿಗೆ ಯೋಶೋದರ ಎಂಬ ಕನ್ಯೆಯೊಡನೆ ವಿವಾಹ

ಮಾಡಿದನು. ಅವರಿಗೆ ರಾಹುಲನೆಂಬ ಮಗ ಹುಟ್ಟಿದನು. ಸಂತೋಷ ಪಡಬೇಕಾದ ಸಿದ್ಧಾರ್ಥನ ಮನಸ್ಸು ಸಾಮಾಜಿಕ ಚಿಂತನೆಯಲ್ಲಿ ತೊಡಗಿಸಿತು. ದ್ವಂದ್ವದಿಂದ ಕೂಡಿದ ಭಾರವಾದ ಮನಸ್ಸನ್ನು ಹೊತ್ತು ಚನ್ನನೊಂದಿಗೆ ಕಪಿಲವಸ್ತುವಿನ ವಿಕ್ಷಣೆಗೆ ರಾಜ ಬೀದಿಯಲ್ಲಿ ಹೋಗುತ್ತಿದ್ದಾಗ ಕೆಲವು ದೃಶ್ಯಗಳು ಅವನ ಮನಕಲಕುವಂತೆ ಮಾಡಿದವು. ಆ ದೃಶ್ಯಗಳು...

೧. ಹಿರಿಯ ವಯಸ್ಸಿನಿಂದ ಬೆನ್ನು ಬಾಗಿದ ಮುದುಕ.
೨. ಅನಾರೋಗ್ಯ ಪಿಡಿತನಾಗಿ ನರಳುತ್ತಿರುವ ಯುವಕ.
೩. ಮೋಹ ಮತ್ಸರಗಳನ್ನು ತ್ಯಜಿಸಿ ಸತ್ಯಾನ್ವೇಷಣೆಯಲ್ಲಿ ತೊಡಗಿದ ಸನ್ಯಾಸಿ.
೪. ಇಹಲೋಕವನ್ನು ತ್ಯಜಿಸಿದ ಒಂದು ಶವ.

ಈ ನಾಲ್ಕು ದೃಶ್ಯಗಳು ಸಿದ್ಧಾರ್ಥನ ಜೀವನಗತಿಯನ್ನು ಬದಲಿಸಿದವು. ಅವನಿಗೆ ಜಗತ್ತು ನಶ್ವರ, ಜಗತ್ತು ದುಃಖದಿಂದ ಕೂಡಿದೆ, ಅದಕ್ಕೆ ಪರಿಹಾರ ಕಂಡುಹಿಡಿಯಬೇಕೆಂಬ ಛಲ ಮೂಡಿತು. ಹೆಂಡತಿ, ಮಕ್ಕಳು, ರಾಜ್ಯವೆಲ್ಲವನ್ನು ತೊರೆದು ಆತ್ಮೀಯ ಸೇವಕನ ಹತ್ತಿರ ಕುದುರೆಯನ್ನು ತರಿಸಿಕೊಂಡು ರಾತ್ರಿ ವೇಳೆ ಗುಟ್ಟಾಗಿ ಹೊರಟು ಬೆಳಗಾಗುವ ವೇಳೆಗೆ ಘೋರವಾದ ಅಡವಿಯನ್ನು ಪ್ರವೇಶಿಸಿ, 'ಜನನ ಮರಣಗಳಿಂದ ಪಾರಾಗುವ ಪರಮಾರ್ಥ ಸಿದ್ಧಿ' ಯನ್ನು ಮಡಿಕೊಳ್ಳಬಯಸುವ ತನ್ನ ಉದ್ದೇಶವನ್ನು ಸೇವಕನಿಗೆ ತಿಳಿಸಿ ಅವನನ್ನು ವಾಪಸ ಕಳುಹಿಸಿದನು.

ಕಪಿಲವಸ್ತುವನ್ನು ಬಿಟ್ಟ ಸಿದ್ಧಾರ್ಥನು ರಾಜಗೃಹವನ್ನು ತಲುಪಿ ಅಲ್ಲಿ ಅನೇಕ ಪಂಡಿತರೊಂದಿಗೆ ತನ್ನ ಸತ್ಯಾನ್ವೇಷಣೆಯ ವಿಚಾರವನ್ನು ಕುರಿತು ಚರ್ಚಿಸಿದನು. ಆದರೆ, ಅವರಿಂದ ಖಚಿತ ಉತ್ತರ ಸಿಗಲಿಲ್ಲ. ನಂತರ ವೈಶಾಲಿ ನಗರದ 'ಅಲಾರ ಕಲಾಮ' ಗುರುವಿನ ಬಳಿ ಸಾಂಖ್ಯ ಸಿದ್ಧಾಂತವನ್ನು ಕಲಿತನು. ಅನಂತರ ರಾಜಗೃಹದ ರುದ್ರಕರು, ಮಪುತ್ರ ಎಂಬ ಗುರುವಿನ ಬಳಿ ತಮ್ಮ ಸಮಸ್ಯೆ ಮುಂದಿಟ್ಟರು ಪರಿಹಾರ ಸಿಗಲಿಲ್ಲ. ಅವನಿಗೆ ಸತ್ಯಾನ್ವೇಷಣೆಯ ದಾಹ ಹೆಚ್ಚಾಯಿತು. ಅರಣ್ಯದಲ್ಲಿ ಆರು ವರ್ಷಗಳ ಕಾಲ ಕಠಿಣವಾದ ತಪಸ್ಸಿನ ನಂತರ ಇಂದಿನ ಬುದ್ಧಗಯೆ ಎಂದು ಪ್ರಸಿದ್ಧವಾಗಿರುವ ಜಾಗದಲ್ಲಿ ಅಶ್ವತ್ಥ ವೃಕ್ಷದ ಕೆಳಗೆ ಕುಳಿತಿದ್ದಾಗ ಸಿದ್ಧಾರ್ಥನಿಗೆ ಜ್ಞಾನೋದಯವಾಯಿತು. ಸಿದ್ಧಾರ್ಥನು ಬುದ್ಧನಾದ ಐದು ತಿಂಗಳಲ್ಲಿ ಅವನಿಗೆ ೬೦ ಜನ ಶಿಷ್ಯರಾದರು. ಮುಂದೆ ಸಹಸ್ರಾರು ಸಂಖ್ಯೆಯಲ್ಲಿ ಜನರು ಅವನ ಅನುಯಾಯಿಗಳಾದರು. ಆಸೆಯೇ ದುಃಖಕ್ಕೆ ಮೂಲ ಕಾರಣ, ಆಸೆ ಬಿಟ್ಟವನಿಗೆ ಈ ಜನ್ಮದಲ್ಲಿ ದುಃಖವಿಲ್ಲ. ಮುಂದೆ ಜನ್ಮಗಳು ಇಲ್ಲ ಎಂಬ ಬೋಧನೆಯನ್ನು ಮಾಡುವ ಮೂಲಕ ಅಂಗುಲಿಮಾಲನಂತ ಕ್ರೂರ ಮನಸ್ಸನ್ನು ಪರಿಶುದ್ಧಗೊಳಿಸಿದನು ಹಾಗೂ ಕಿಸಾಗೌತಮಿಯಂತ [illegible] ಮನಸ್ಸನ್ನು ಶಾಂತಿ ಮತ್ತು ಸಮೃದ್ಧಗೊಳಿಸಿದ ಈ ಮಹಾನುಭಾವ ಕ್ರಿಪೂ. ೪೮೩ ರಲ್ಲಿ ದೇಹತ್ಯಾಗ ಮಾಡಿದನು.

ಕರ್ನಾಟಕದಲ್ಲಿ ಬೌದ್ಧ ಧರ್ಮದ ಪ್ರಸಾರ : ಮೌರ್ಯವಂಶದ ಅಶೋಕನು ಭರತವರ್ಷ ಕಂಡ ಅಪೂರ್ವ ರಾಜರುಗಳಲ್ಲಿ ಒಬ್ಬನು. ಅವನ್ನು ರಾಜರ್ಷಿ ಎಂದು ಕರೆಯಬಹುದು. ಅಶೋಕನ ಕಾಲ ಕ್ರಿಪೂ. ೨೭೨–೨೩೧ ಅವನು ಇಂದಿನ ಗಯಾ ಮತ್ತು ಪಾಟ್ನಾ ಪ್ರದೇಶದಲ್ಲಿ ಹರಡಿದ್ದ ಮಗಧ ದೇಶದ ಚಕ್ರವರ್ತಿಯಾಗಿದ್ದನು. ಕ್ರಿಪೂ. ೨೬೩–೬೨ ರಲ್ಲಿ ನೆರೆಯ ಕಳಿಂಗ ದೇಶದೊಡನೆ ಘೋರವಾದ ಯುದ್ಧವನ್ನು ಮಾಡಿದನು. ಆ ಯುದ್ಧದಲ್ಲಿ ಉಂಟಾದ ಅಪಾರವಾದ ಸಾವು ನೋವುಗಳಿಂದ ನೊಂದು ಜೀವದಯೆಯನ್ನು ಎತ್ತಿಹಿಡಿಯುವ ಬೌದ್ಧ ಧರ್ಮದ ಕಡೆಗೆ ಒಲವನ್ನು ಬೆಳೆಸಿಕೊಂಡ. ಕ್ರಿಪೂ. ೨೬೩ ರಲ್ಲಿ 'ಉಪಗುಪ್ತ' ಎಂಬುವವನಿಂದ ಬೌದ್ಧ ದಿಕ್ಷೆಯನ್ನು ಪಡೆದು, ಬೌದ್ಧ ಧರ್ಮದ ಏಳಿಗೆಗಾಗಿ ದುಡಿದನು. ಅಲ್ಲದೇ ಬೌದ್ಧ ಧರ್ಮದ ಪ್ರಚಾರಕರನ್ನಾಗಿ ಅನೇಕರನ್ನು ವಿವಿಧ ಭಾಗಗಳಿಗೆ ಕಳುಹಿಸಿದ. ಅದರಲ್ಲಿ,

ಕಾಶ್ಮೀರಕ್ಕೆ – ಮಜ್ಜಂಟಿಕ
ಹಿಮಾಲಯಕ್ಕೆ – ಮಜ್ಜಿಮ
ಗ್ರೀಕ ದೇಶಕ್ಕೆ – ಮಹಾರಕ್ಷಿತ
ಮಹಾರಾಷ್ಟ್ರಕ್ಕೆ – ಮಹಾಧರ್ಮರಕ್ಷಿತ
ಶ್ರೀಲಂಕಕ್ಕೆ – ಮಹೇಂದ್ರ ಮತ್ತು ಸಂಘಮಿತ್ರೆ

ಅಲ್ಲದೇ ವಿಶೇಷವಾಗಿ ಕರ್ನಾಟಕದ ವಿವಿಧ ಭಾಗಗಳಾದ
ಮೈಸೂರಕ್ಕೆ – ಮಹಾದೇವನನ್ನು
ಬನವಾಸಿಗೆ – ಮಹಾರಕ್ಷಿತನನ್ನು
ಕುಂತಳಕ್ಕೆ – ಬದ್ರಸಾರನನ್ನು

ಮುಂತಾದವರನ್ನು ಕಳುಹಿಸುವುದರ ಮೂಲಕ ಬೌದ್ಧ ಧರ್ಮದ ಪ್ರಸಾರ ಕರ್ನಾಟಕದೆಡೆಗೆ ಹರಡಲು ಅಶೋಕ ಮಹಾಶಯ ಶ್ರಮಿಸಿದ ಎಂಬುದರಲ್ಲಿ ಅನುಮಾನವಿಲ್ಲ.

ಕರ್ನಾಟಕದಲ್ಲಿ ಬೌದ್ಧ ಧರ್ಮದ ನೆಲೆಗಳು : ಅಶೊಕನ ಸಾಮ್ರಾಜ್ಯಕ್ಕೆ ಇಡೀ ಭರತಖಂಡವೆ ಸೇರಿತ್ತು. ಅಶೋಕನ ಮೂಲಕವೇ ಬೌದ್ಧ ಧರ್ಮವು ಕರ್ನಾಟಕಕ್ಕೆ ಕಾಲಿಟ್ಟಿತ್ತು ಎಂಬುದರಲ್ಲಿ ಸಂಶಯವಿಲ್ಲ. ಬುದ್ಧನ ತತ್ವಕ್ಕೆ ತಲೆಬಾಗಿದ ಅಶೋಕ ಮಹಾಶಯನ ಶಾಸನಗಳು ಕರ್ನಾಟಕದೆಡೆಗೆ ನೋಡಿದಾಗ ಸುಮಾರು ೧೭ ಶಿಲಾಶಾಸನಗಳು ಪತ್ತೆಯಾಗಿವೆ. ಇಂದಿನ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಸಿದ್ದಾಪೂರ, ಜಟಿಂಗ ರಾಮೇಶ್ವರ, ಮಸ್ಕಿ, ಸನ್ನತಿ ಪ್ರದೇಶಗಳಲ್ಲಿ ಅವನ ಪ್ರತಿನಿಧಿಗಳು ರಾಜ್ಯವಾಳುತ್ತಿದ್ದರು. ಬೌದ್ಧ ಧರ್ಮದ ಮೂಲ ತತ್ವಗಳನ್ನು ಬೋಧಿಸುವ ಶಾಸನಗಳನ್ನು ತನ್ನ ಸಾಮ್ರಾಜ್ಯದ ಎಲ್ಲೆಡೆ ಹಾಕಿಸುವುದರ ಮುಲಕ ಪ್ರಸಾರ ಮಾಡಿದನು.

೧. ಬ್ರಹ್ಮಗಿರಿ ಶಾಸನ	–	ಚಿತ್ರದುರ್ಗ	– ೦೨
೨. ಸಿದ್ದಾಪೂರ ಶಾಸನ	–	ಚಿತ್ರದುರ್ಗ	– ೦೨
೩. ಜಟಿಂಗ ರಾಮೇಶ್ವರ	–	ಚಿತ್ರದುರ್ಗ	– ೦೨
೪. ನಿಟ್ಟೂರು	–	ಬಳ್ಳಾರಿ	– ೦೨
೫.ಉದೆಗೋಳಂ	–	ಬಳ್ಳಾರಿ	– ೦೨
೬. ಮಸ್ಕಿ	–	ರಾಯಚೂರು	– ೦೧
೭. ಗವಿಮಠ	–	ಕೊಪ್ಪಳ	– ೦೧
೮. ಪಾಲ್ಕಿಗುಂಡು	–	ಕೊಪ್ಪಳ	– ೦೧
೯. ಸನ್ನತಿ	–	ಯಾದಗೀರ	– ೦೪

ಅಶೊಕನ ಶಾಸನಗಳಲ್ಲಿ ಬುದ್ಧನ ಬೋಧನೆಯ ಸಾರಾಂಶಗಳಿವೆ ಈ ಜನ್ಮದಲ್ಲಿಯೇ ಎಲ್ಲರೂ ಮೋಕ್ಷವನ್ನು ಪಡೆಯಬಹುದು, ಅದು ಪ್ರಯತ್ನದಿಂದ ಲಭಿಸುತ್ತದೆ, ಆಸೆಯೇ ದುಃಖಕ್ಕೆ ಮೂಲ, ನಮ್ಮ ನಡೆನುಡಿಗಳು ಶುದ್ಧವಾಗಿರಬೇಕು, ಜನ್ಮದಿಂದಲೇ ಯಾರೂ ಬ್ಬರೂ ಶ್ರೇಷ್ಠರಲ್ಲ, ಶುದ್ಧವಾದ ನಡತೆಯಿಂದಲೇ ಶ್ರೇಷ್ಠರಾಗಬೇಕು,

ಯಜ್ಞಯಾಗಾದಿಗಳಿಂದ ಮೋಕ್ಷ ದೊರೆಯುವುದಿಲ್ಲ, ಪ್ರಾಣಿ ಹಿಂಸೆ ಮಾಡುವುದು ಮಹಾಪಾಪ, ಎಲ್ಲ ಪ್ರಾಣಿಗಳಲ್ಲಿಯೂ ದಯೆಯನ್ನು ತೋರಿಸುವುದೇ ಉತ್ಕೃಷ್ಟವಾದ ಧರ್ಮ, ಮನುಷ್ಯರೆಲ್ಲರೂ ಸಮಾನರು, ಅವರು ಭಾತೃಭಾವದಿಂದ ನಡೆದುಕೊಳ್ಳಬೇಕು, ಇವು ಬುದ್ಧನ ಬೋಧನೆಯ ಸಾರಾಂಶವೆಂದು ಹೇಳಬಹುದು.

೧. ಬ್ರಹ್ಮಗಿರಿ ಶಾಸನ : ಮೋಳಕಾಲ್ಮೂರು ತಾಲೂಕಿನ ಸಿದ್ದಾಪೂರ ಗ್ರಾಮದ ಸಮೀಪ ಇರುವ ಒಂದು ಚಿಕ್ಕ ಬೆಟ್ಟವೇ ಬ್ರಹ್ಮಗಿರಿ ಬೆಟ್ಟ. ಇಲ್ಲಿಂದ ಉತ್ತರಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿ ಜಟಿಂಗ ರಾಮೇಶ್ವರ ಬೆಟ್ಟಗಳಿವೆ. ಇಲ್ಲಿ 'ಚಿನ್ಹಹಗರಿ' ಎಂಬ ನದಿಯು ಹರಿಯುತ್ತದೆ. ಬೆಟ್ಟದ ಸುತ್ತಲೂ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಅವಶೇಷಗಳಿವೆ. ಅಶೋಕನ ಶಾಸನಗಳನ್ನು ಬೆಟ್ಟದ ಉತ್ತರ ಭಾಗದಲ್ಲಿ ದೊಡ್ಡ ಬಂಡೆಯ ಮೇಲೆ ಕೆತ್ತಲಾಗಿದೆ. ಇದನ್ನು ಅಕ್ಷರಗುಂಡು ಎಂದು ಕರೆಯುತ್ತಾರೆ. ಈ ಬಂಡೆಯಲ್ಲಿ ಎರಡು ಶಾಸನಗಳಿವೆ. ಒಂದರಲ್ಲಿ ದೇವನಾಂ ಪಿಯದಸಿಯು (ಅಂದರೆ ಅಶೋಕ) ತಾನು ಎರಡುವರೆ ವರ್ಷಗಳಿಂದೀಚೆಗೆ ಧರ್ಮಚರಣೆಯಲ್ಲಿದ್ದು (ಬೌದ್ಧ ಧರ್ಮ) ಒಂದು ವರ್ಷದಿಂದೀಚೆಗೆ ಸಂಘವನ್ನು ಸೇರಿ (ಬೌದ್ಧ ಧರ್ಮಕ್ಕೆ ಸೇರಿ) ಈ ದಿಶೆಯಲ್ಲಿ ಹೆಚ್ಚು ಪ್ರಯತ್ನಶೀಲನಾಗಿರುವೆನೆಂದು, ಜಂಬೂ ದ್ವೀಪದಲ್ಲಿ ಜನರು ಹೆಚ್ಚು ನೀತಿವಂತರಾಗುತ್ತಿದ್ದಾರೆಂದೂ, (ಬೌದ್ಧ ಧರ್ಮಕ್ಕೆ ಸೇರಿತ್ತಿದ್ದಾರೆ) ಒಳ್ಳೆಯವನಾದರೆ ಸದ್ಗತಿಯನ್ನು ಪಡೆಯಬಹುದೆಂದು, ತನ್ನ ಸಾಮ್ರಾಜ್ಯದ ನೆರೆಹೊರೆಯವರೂ ಕೂಡಾ ಈ ವಿಷಯವನ್ನು ತಿಳಿದುಕೊಳ್ಳಬೇಕೆಂದು ಇಚ್ಚಿಸಿದ್ದಾನೆ. ಧರ್ಮ ಪ್ರಚಾರ ಕೈಗೊಂಡು ೨೫೬ ದಿನಗಳು ಪ್ರವಾಸ ಮಾಡಿದ ನಂತರ ಇದನ್ನು ಹೊರಡಿಸಿದ್ದಾನೆ.

೨. ಸಿದ್ದಾಪೂರದ ಶಾಸನಗಳು : ಸಿದ್ದಾಪೂರದ ಸಮೀಪದಲ್ಲಿರುವ ಬ್ರಹ್ಮಗಿರಿ ಬೆಟ್ಟಗಳ ಪಶ್ಚಿಮದಲ್ಲಿ ಅಲ್ಲಿಂದ ಒಂದು ಕಿ.ಮೀ. ದೂರದ ಗುಡ್ಡಗಳಲ್ಲಿ ಎಮ್ಮೆತಿಮ್ಮನ ಗುಂಡು ಎಂದು ಇದ್ದು, ಅದರ ಮೇಲೆ ೨೨ ಸಾಲುಗಳ ಎರಡು ಶಾಸನಗಳನ್ನು ಕೆತ್ತಲಾಗಿದೆ. ಶಾಸನದ ಹೆಚ್ಚು ಭಾಗ ನಾಶವಾಗಿದೆ. ಶಾಸನದ ಕೊನೆಯ ಸಾಲು ಖರೋಷ್ಠಿ ಲಿಪಿಯಲ್ಲಿದೆ. ಬ್ರಹ್ಮಗಿರಿ ಶಾಸನದಲ್ಲಿ ಹೇಳಿರುವುದನ್ನೇ ಇಲ್ಲೂ ಹೇಳಿದೆ.

೩. ಜಟ್ಟಿಂಗ ರಾಮೇಶ್ವರದ ಶಾಸನಗಳು : ಬ್ರಹ್ಮಗಿರಿಯಿಂದ ಮೂರು ಕಿ.ಮೀ. ದೂರದಲ್ಲಿ ಜಟ್ಟಿಂಗ ರಾಮೇಶ್ವರ ಬೆಟ್ಟಗಳಿವೆ. ಈ ಗುಡ್ಡದ ತುದಿಯಲ್ಲಿ ಪಶ್ಚಿಮ ಭಾಗದ ಬಂಡೆಯ ಮೇಲೆ ಈ ಶಾಸನಗಳನ್ನು ಕೆತ್ತಲಾಗಿದೆ. ಜಟ್ಟಿಂಗ ರಾಮೇಶ್ವರ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಮೆಟ್ಟಿಲುಗಳ ಮೇಲೆ ಈ ಶಾಸನ ಇರುವುದರಿಂದ ಎಲ್ಲರೂ ತುಳಿದಿರುವುದರಿಂದ ಹಾಗೂ ಕುಳಿಗಳನ್ನು ಮಾಡಿರುವುದರಿಂದ ಈ ಶಾಸನಗಳ ಬಹುಭಾಗ ಹಾಳಾಗಿದೆ. ಶಾಸನವಿರುವ ಬಂಡೆಯನ್ನು ಬಳೆಗಾರರ ಗುಂಡು ಎನ್ನುತ್ತಾರೆ. ಕಾರಣ, ಜಾತ್ರೆಯ ಕಾಲದಲ್ಲಿ ಬಳೆಗಾರರು ಇದರ ಬಳಿ ಕುಳಿತು ಬಳೆ ವ್ಯಾಪಾರ ಮಾಡುತ್ತಿದ್ದರಂತೆ ಈ ಶಾಸನಗಳಲ್ಲೂ ಬ್ರಹ್ಮಗಿರಿಯ ಶಾಸನಗಳ ಪಾಠಗಳಿವೆ.

೪. ನಿಟ್ಟೂರಿನ ಶಾಸನಗಳು : ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲೂಕಿಗೆ ಸೇರಿದ ಒಂದು ಸಣ್ಣ ಹಳ್ಳಿ ನಿಟ್ಟೂರು. ಇದು ಶಿರಗುಪ್ಪದ ಹೊಸಪೇಟೆ ರಸ್ತೆಯಲ್ಲಿದೆ. ನಿಟ್ಟೂರು ಗ್ರಾಮದಿಂದ ೨ ಕಿ.ಮೀ. ದೂರದಲ್ಲಿ ಚಿಕ್ಕೂಡ್ಡಪ್ಪನ ಬೆಟ್ಟ ಎಂಬ ಒಂದು ಸಣ್ಣ ಗುಡ್ಡವಿದೆ. ಆ ಗುಡ್ಡದ ಎರಡು ಬಂಡೆಗಳ ಮೇಲೆ ಎರಡು ಶಾಸನಗಳನ್ನು ಕೆತ್ತಲಾಗಿದೆ. ಇದನ್ನು ಮೊದಲು ವಿಶ್ವನಾಥ ಎಂಬುವವರು ಗುರುತಿಸಿದರು. ನಂತರ ವಿದ್ವಾಂಸರಾದ ಎಸ್. ಶೆಟ್ಟರ, ಎಸ್. ರಾಜಶೇಖರ ಮತ್ತು ಬೆಂಗಳೂರಿನ ಕೇಂದ್ರಿಯ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ ಅಧಿಕಾರಿಗಳಾದ ಶ್ರೀ. ಶ್ರೀನಿವಾಸನ ಮತ್ತು ಸಂಪತ್ತ ಎಂಬುವವರು ಈ ಶಾಸನಗಳನ್ನು ಪರಿಶೋಧಿಸಿ ಪ್ರಕಟಿಸಿದರು. ಮೊದಲನೆಯ ಶಾಸನದಲ್ಲಿ ೭ ಸಾಲುಗಳಿವೆ. ಈ ಶಾಸನದಲ್ಲಿ ಅಶೋಕನ ಹೆಸರು ಇರುವುದು ಮುಖ್ಯವಾದುದು, ಜಂಬೂದ್ವಿಪದ ಜನರು ಯಾರು ದೇವತೆಗಳಿಗೆ ದೂರವಾಗಿದ್ದರೋ ಈಗ ಅವರು ಹತ್ತಿರವಾಗಿದ್ದಾರೆ. ಇದು ನಾನು ಧರ್ಮ ಪ್ರಚಾರದಲ್ಲಿ ತೋರಿಸಿದ ಆಸಕ್ತಿಯ ಫಲ, ಇದು ಉನ್ನತ ವ್ಯಕ್ತಿ ಮಾತ್ರ ಸಾಧಿಸುವಂತಹದಲ್ಲ. ಸಾಮಾನ್ಯ ವ್ಯಕ್ತಿಯು ಇದನ್ನು ಸಾಧಿಸಬಹುದು ಎಂದು ಹೇಳಿದ್ದಾನೆ. ಅಂದರೆ ಉನ್ನತ ವರ್ಗದವರಂತೆ ಸಾಮಾನ್ಯ ವರ್ಗದವರೂ ಧರ್ಮದಲ್ಲಿ ಆಸಕ್ತರಾಗಬಹುದು ಎಂದು ಇದರಲ್ಲಿ ಹೇಳಿದೆ.

ಎರಡನೇ ಶಾಸನವು ಅಲ್ಲೇ ೫೦ ಅಡಿಗಳ ದೂರದಲ್ಲಿ ಇನ್ನೊಂದು ಬಂಡೆಯ ಮೇಲಿದೆ. ಐದು ಸಾಲುಗಳ ಈ ಶಾಸನವೂ ' ರಾಜಾ ಅಸೋಕೋ ಹೇವಂ ಆಹ ' ಎಂದು ಪ್ರಾರಂಭವಾಗುತ್ತದೆ. ಜೀವಿಗಳಿಗೆ ಕರುಣೆ ತೋರಿಸಬೇಕು, ಧರ್ಮಗುಣಗಳನ್ನು ರೂಢಿಸಿಕೊಳ್ಳಬೇಕು ಬಂಧುಬಳಗದವರಲ್ಲಿ ಆದರವಿರಬೇಕು, ಮಾತಾ, ಪಿತ, ಗುರು, ಬ್ರಾಹ್ಮಣ ಮೊದಲಾದವರ ಶುಶ್ರೂಷೆಯನ್ನು ಮಾಡಬೇಕೆಂದು ಇದರಲ್ಲಿ ಹೇಳಿದೆ.

೫. ಉದೇಗೋಳಂ ಶಾಸನಗಳು : ಉದೇಗೋಳಂ (ಉದೇಗೊಳ್ಳ) ಸಿರಗುಪ್ಪ ತಾಲೂಕಿನ ಒಂದು ಹಳ್ಳಿ. ತೆ'ಕ್ಕಲ ಕೋಟೆಯಿಂದ ಐದು ಕಿ.ಮೀ. ದೂರದಲ್ಲಿ ನಿಟ್ಟೂರು ತೆಕ್ಕಲಕೋಟೆ ರಸ್ತೆಯಲ್ಲಿದೆ. ಇಲ್ಲಿಯೂ ಎರಡು ಬಂಡೆಗಳ ಮೇಲೆ ಕೆತ್ತಲಾಗಿದೆ. ಮೊದಲನೆಯ ಶಾಸನ ೬ ಸಾಲಿನಲ್ಲಿದ್ದು, ಹೆಚ್ಚಾಗಿ ಅಳಿಸಿಹೋಗಿದೆ. ಎರಡನೇಯ ಶಾಸನವು ಮೊದಲನೇ ಶಾಸನದಂತೆ ೫೦ ಮೀಟರ ದೂರದಲ್ಲಿರುವ ಬಂಡೆಯ ಮೇಲಿದೆ. ಇದರಲ್ಲಿ ೭ ದೊಡ್ಡ ಸಾಲುಗಳಿದ್ದು, ಅಕ್ಷರಗಳು ಉತ್ತಮ ಸ್ಥಿತಿಯಲ್ಲಿವೆ. ಆದರೂ ಕೆಲವು ಕಡೆ ಅಳಿಸಿಹೋಗಿವೆ. ಇದೂ "ರಾಜಾ ಅಸೋಕೊ ದೇವಾನಂ ಪಿಯೆ ಹೆವಂ" ಎಂದು ಆರಂಭವಾಗುತ್ತದೆ. ಇವು ಹೆಚ್ಚಾಗಿ ನಿಟ್ಟೂರಿನ ಶಾಸನಗಳನ್ನು ಹೋಲುತ್ತವೆ. ಇದನ್ನು ೧೯೭೮ ರಲ್ಲಿ ಪತ್ತೆ ಹಚ್ಚಲಾಯಿತು.

೬. ಮಸ್ಕಿ ಶಾಸನ : ರಾಯಚೂರ ಜಿಲ್ಲೆಯ ಲಿಂಗಸೂಗುರು ತಾಲೂಕಿನ ಮಸ್ಕಿಯ ಬಳಿ ಇರುವ ಒಂದು ಬೃಹತ ಆದ ಕಲ್ಲಿನ ಬೆಟ್ಟವಿದೆ. ಆ ಬೆಟ್ಟದ ದಕ್ಷಿಣ ಭಾಗದಲ್ಲಿರುವ ಒಂದು ಗುಹೆಯ ಪ್ರವೇಶದ್ವಾರದ ಬಂಡೆಯ ಮೇಲೆ ಇದನ್ನು ಕೆತ್ತಲಾಗಿದೆ. ಎಂಟು ಸಾಲುಗಳ ಈ ಶಾಸನ ೫ ಅಡಿ ಎತ್ತರ ೮ ಅಡಿ ಉದ್ದವಾಗಿದ್ದು, ದೊಡ್ಡ ದೊಡ್ಡ ಗಾತ್ರದ ಅಕ್ಷರಗಳನ್ನು ಒಳಗೊಂಡಿದೆ. ೧೯೧೫ ರಲ್ಲಿ ಬೇಡನ್ ಎಂಬುವವರು ಪತ್ತೆ ಮಾಡಿದರು. ಜೆ.ಎಫ್. ಫ್ಲೀಟರ್ ರವರು ಇದನ್ನು ಪರಿಷ್ಕರಿಸಿ ಪ್ರಕಟಿಸಿದರು. ಮಸ್ಕಿ ಶಾಸನ ಅಶೋಕನ ಶಾಸನಗಳ ಇತಿಹಾಸದಲ್ಲಿ ಪ್ರಮುಖವಾದುದು ಕಾರಣ

ಮಸ್ಕಿ ಶಾಸನವು " ದೇವನಾಂ ಪಿಯಸ ಅಸೋಕನ " ಎಂದೇ ಆರಂಭವಾಗುವದರಿಂದ ದೇವನಾಂ ಪ್ರೀಯದರ್ಶಿ ಅಶೋಕ ಎಂದು ಮೊದಲ ಬಾರಿಗೆ ತಿಳಿದು ಬಂದಿತು.

೭. ಗವಿಮಠದ ಶಾಸನ : ಕೊಪ್ಪಳ ನಗರಕ್ಕೆ ಸೇರಿದಂತಿರುವ ಬೆಟ್ಟದ ಸಾಲುಗಳಲ್ಲಿ ಗವಿಮಠ ಮತ್ತು ಪಾಲ್ಕಿಗುಂಡ ಎಂಬ ಎರಡು ಬೆಟ್ಟಗಳಿವೆ. ಕೊಪ್ಪಳ ಈ ಬೆಟ್ಟಗಳ ಬುಡದಲ್ಲಿಯೇ ಇದೆ. ಗವಿಮಠದಲ್ಲಿ ಬಂಡೆಗಳಿಂದ ಮುಚ್ಚಲ್ಪಟ್ಟಿರುವ ನಾಲ್ಕು ಮುಖ್ಯ ಗುಹೆಗಳಿವೆ. ಅವುಗಳಲ್ಲಿ ಮುಂಭಾಗದಲ್ಲಿ ಆಧುನಿಕ ದೇವಾಲಯವಿರುವ ಒಂದು ಗುಹೆಯ ದೊಡ್ಡ ಬಂಡೆಯ ಮೇಲೆ ಜೈನ ತೀರ್ಥಂಕರರ ಚಿತ್ರಗಳನ್ನು ಕೆತ್ತಲಾಗಿದೆ. ಈ ಬಂಡೆ ೧೨೦ ಅಡಿ ಎತ್ತರವಾಗಿದ್ದು, ಅದರ ಮೇಲೆ ಎಂಟು ದೊಡ್ಡ ಸಾಲುಗಳ ಅಶೋಕನ ಶಾಸನವನ್ನು ಕೆತ್ತಲಾಗಿದೆ. ಅಕ್ಷರಗಳು ತುಂಬಾ ಚೆನ್ನಾಗಿವೆ. ಪೂರ್ಣರೂಪದಲ್ಲಿ ದೊರೆತಿರುವ ಅಶೋಕನ ಶಾಸನಗಳಲ್ಲಿ ಇದು ಎರಡನೇಯದು. ಮೊದಲನೆಯದು ರೂಪನಾಥ ಶಾಸನ ದೇವತೆಗಳೊಂದಿಗೆ ಮಿಶ್ರವಾಗದಿದ್ದ ಜಂಬೂದ್ವೀಪದ ಜನರು ದೇವತೆಗಳೊಂದಿಗೆ ಮಿಶ್ರವಾದರು ಎಂದು ಹೇಳಿದೆ. ಅಂದರೆ, ನಿಮ್ಮ ವರ್ಗದ ಜನರು ಈ ಧರ್ಮವನ್ನು ಅವಲಂಬಿಸಿ ದೇವರಿಗೆ ಹತ್ತಿರವಾದರು ಎಂದು ಅರ್ಥ.

೮. ಪಾಲ್ಕಿಗುಂಡು ಶಾಸನ : ಗವಿಮಠದಿಂದ ಎರಡು ಮೈಲಿ ದೂರದಲ್ಲಿ ಇದೇ. ಬೆಟ್ಟಗಳ ಸಾಲಿನಲ್ಲಿ ಇರುವ ಈ ಶಾಸನದ ಬಂಡೆಯು ಪಲ್ಲಕ್ಕಿ ಆಕಾರವಾಗಿರುವುದರಿಂದ ಇದಕ್ಕೆ ಪಾಲ್ಕಿಗುಂಡು ಎಂದು ಹೆಸರು ಬಂದಿದೆ.

೯. ಸನ್ನತಿಯ ಶಾಸನಗಳು : ಭೀಮಾ ನದಿಯ ದಂಡೆಯ ಮೇಲೆ ಜಿಲ್ಲಾ ಕೇಂದ್ರವಾದ ಯಾದಗೀರಿಯಿಂದ ೫೦ ಕಿ.ಮೀ. ದೂರದಲ್ಲಿರುವ ನಾಲವಾರ ರೈಲು ನಿಲ್ದಾಣದಿಂದ ೧೯ ಕಿ.ಮೀ. ದೂರದಲ್ಲಿರುವ ಸನ್ನತಿಯು ಕರ್ನಾಟಕದ ಪ್ರಸಿದ್ಧ ಬೌದ್ಧ ನಿವೇಶನಗಳಲ್ಲಿ ಅತ್ಯಂತ ಪ್ರಮುಖವಾದುದು ಮತ್ತು ವಿಸ್ತಾರವಾದುದುದ್ದಾಗಿದೆ. ಸನ್ನತಿಯಿಂದ ಕನಗನ ಹಳ್ಳಿಯವರೆಗೆ ೫–೬ ಚದರ ಕಿ.ಮೀ. ಪ್ರದೇಶದಲ್ಲಿ ಶತವಾಹನರ ಕಾಲದ ಮತ್ತು ಅವರಿಗೂ ಹಿಂದಿನ ಕಾಲದ ಅನೇಕ ಅವಶೇಷಗಳು ಬೌದ್ಧ ಸ್ತೂಪಗಳು, ಉಬ್ಬು ಶಿಲ್ಪಗಳುಳ್ಳ ನೂರಾರು ಸುಣ್ಣದ ಕಲ್ಲಿನ ಫಲಕಗಳು ಬ್ರಾಹ್ಮಿ ಲಿಪಿಯ ಸುಮಾರೂ ೪೦–೪೫ ತುಂಡು ಶಾಸನಗಳು ಇಟ್ಟಗೆಯಲ್ಲಿ ಕಟ್ಟಡ ಕೋಟೆಯ ಅವಶೇಷಗಳು ಚೆಲ್ಲಾಡಿದಂತೆ ದೊರಕಿವೆ.

ಲಿಪಿಯಿಂದ ಕೂಡಿದ ಉಬ್ಬು ಶಿಲ್ಪಗಳಲ್ಲಿ ಬುದ್ಧನ ಜೀವನದ ಪ್ರಮುಖ ಘಟನೆಗಳನ್ನು ಜಾತಕ ಕಥೆಗಳ ಘಟನೆಗಳನ್ನು ಬಿಡಿಸಲಾಗಿದೆ. ಸನ್ನತಿಯು ಭಾರತದ ಶಕ್ತಿ ಪೀಠಗಳಲ್ಲಿ ಒಂದಾಗಿದ್ದು, ಇಲ್ಲಿನ ಚಂದ್ರಲಾ ಪರಮೇಶ್ವರಿಯು ಪ್ರಸಿದ್ಧವಾಗಿದೆ. ಈ ದೇವಾಲಯದ ಆವರಣಗಳಲ್ಲಿದ್ದ ಕಾಳೀಕಾ ದೇವಿಯ ದೇವಾಲಯದಲ್ಲಿ ಹೂತು ಹೋಗಿದ್ದ ಕಾಳೀಕಾಂಬಾ ವಿಗ್ರಹವನ್ನು ಜೀರ್ಣೋದ್ಧಾರ ಕ್ಕಾಗಿ ೧೯೮೯ ರಲ್ಲಿ ಹೋರತೆಗೆದಾಗ ಅದರ ದೊಡ್ಡ ಶಿಲಾಪೀಠದ ಮೇಲೆ ಎರಡು ಕಡೆಗೆ ಬ್ರಾಹ್ಮಿ ಲಿಪಿಯ ಶಾಸನವು ಕಾಣಿಸಿತು. ದೇವಿಯ ಪೀಠಕ್ಕಾಗಿ ಶಾಸನವನ್ನು ಒಡೆದು ಬಳಸಿಕೊಂಡಿರುವುದು ಕಂಡುಬರುತ್ತದೆ. ಈ ಶಾಸನ ಪಾಠಗಳನ್ನು ಭಾರತೀಯ ಪುರಾತತ್ವ ಇಲಾಖೆಯ ಅಧಿಕಾರಿಗಳಾದ ಡಾ : ಐ.ಕೆ. ಶರ್ಮ, ಆರ್. ವೆಂಕಟಶಿವ ಶರ್ಮ, ಜೆ. ವರಪ್ರಸಾದರಾವ ಇವರು ಪರಿಷ್ಕರಿಸಿ ಪ್ರಕಟಿಸಿದರು. ಕನ್ನಡ ನಾಡಿನ ಶಾಸನ ತಜ್ಞರಾದ ಡಾ : ಕೆ.ವ್ಹಿ. ರಮೇಶ ಅವರೂ ಈ ಶಾಸನ ಪಾಠಗಳನ್ನು ಒದಿದ್ದಾರೆ. ತುಂಡಾಗಿರುವ ಚಪ್ಪಡಿಯ ಒಂದು ಭಾಗದಲ್ಲಿರುವ ಶಾಸನಗಳನ್ನು ಅಶೋಕನ ೧೨ ಮತ್ತು ೧೪ ನೇ ಮುಖ್ಯ ಶಾಸನಗಳೆಂದು ಗುರುತಿಸಲಾಗಿದೆ. ೧೨ ನೇಯ ಶಾಸನದಲ್ಲಿ ಧರ್ಮ ಸಹಿಷ್ಣತೆಯನ್ನು ಒತ್ತಿ ಹೇಳಿದೆ. ಅನ್ಯ ಮತದವರ ಅಭಿಪ್ರಾಯಗಳನ್ನು ಗೌರವಿಸಬೇಕೆಂದು ಇದರಿಂದ ಸ್ವಮತದ ಏಳಿಗೆಯಾಗುತ್ತದೆಂದು ಹೇಳಿದೆ. ಇದು ಅಶೋಕನ ದೌಲಿ (ದವಳಗಿರಿ) ಶಾಸನವನ್ನು ಹೋಲುತ್ತದೆ. ಮೊದಲನೆಯ ಶಾಸನದಲ್ಲಿ ಎಲ್ಲಾ ಪ್ರಜೆಗಳು ನನ್ನ ಮಕ್ಕಳಿದ್ದಂತೆ ಅವರಿಗೆ ಇಹಪರದಲ್ಲಿ ಹಿತವಾಗಬೇಕೆಂದು ನಾನು ಬಯಸುತ್ತೆನೆಂದು ಹೇಳಿದೆ. ಎರಡನೆಯ ಶಾಸನದಲ್ಲಿ ದೇವತೆಗಳಿಗೆ ಪ್ರೀಯನಾದವನು ಹೀಗೆ ಹೇಳುತ್ತಾನೆ. ಅವನ ಆಜ್ಞೆಯನುಸಾರ ಸಮಪಾತದಲ್ಲಿರುವ ಮಹಾಮಾತ್ರರು ಇದನ್ನು ತಿಳಿದಿರಬೇಕು ಇದರಲ್ಲಿ ಮೊದಲಿನ ವಿಷಯವೇ ಇದ್ದು, ನಾನು ಗೆಲ್ಲದೇ ಇರುವ ಗಡಿ ಪ್ರದೇಶಗಳಲ್ಲಿರುವ ಪ್ರಜೆಗಳು ನನ್ನಲ್ಲಿ ಭಯಗ್ರಸ್ಥರಾಗುವುದು ಬೇಡ. ನನ್ನಲ್ಲಿ ವಿಶ್ವಾಸವುಳ್ಳವರಾಗಿರಲಿ. ಅವರಿಗೆ ನನ್ನಿಂದ ಹಿತವಾಗುತ್ತದೆ. ದುಃಖಿವಾಗುವುದಿಲ್ಲ ಎಂಬ ಸಂದೇಶವನ್ನು ಸಾರುವ ಶಾಸನಗಳು ಅಶೋಕ ಮಹಾಶಯ ನಮಗೆ ಕಾಣಿಕೆಯಾಗಿ ಬಿಟ್ಟು ಹೋಗಿದ್ದಾನೆ.

ಅಲ್ಲದೇ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಬಳಿಯ ಬಳ್ಳಿಗಾವಿ, ಧಾರವಾಡ ಜಿಲ್ಲೆಯ ಕೋಳಿವಾಡ ಮತ್ತು ಗದಗ ಜಿಲ್ಲೆಯ ಡಂಬಳಗಳಲ್ಲಿ ಹಿಂದೆ ಬೌದ್ಧರ ತಾರಾಭಗವತ ದೇವಸ್ಥಾನಗಳಿದ್ದವು. ಯಾದಗೀರ ಜಿಲ್ಲೆಯ ಸನ್ನತಿ ಹಾಗೂ ಕನಗನಹಳ್ಳಿಯಲ್ಲಿ ನೆಲಸಮವಾಗಿರುವ ಬೌದ್ಧ ಸ್ತೂಪಗಳು ಮತ್ತು ಅಲಂಕಾರಿಕ ಫಲಕಗಳು ಇತ್ತೀಚಿಗೆ ಉತ್ಖನ್ನನದ ಪರಿಣಾಮವಾಗಿ ಬೆಳಕಿಗೆ ಬಂದಿವೆ. ಮಂಗಳೂರಿನ ಕೆದರಿಯ ಮಂಜೂನಾಥ ದೇವಸ್ಥಾನ ದಲ್ಲಿ ಕಂಚಿನ ಮೂರು ಬೌದ್ಧ ವಿಗ್ರಹಗಳಿವೆ. ಅವುಗಳಲ್ಲಿ ಒಂದಾದ ಅವಲೋಕೇಶ್ವರ ವಿಗ್ರಹವು ಐದು ಅಡಿ ಎತ್ತರವಿದ್ದು, ಒಂಬತ್ತನೇ ಶತಮಾನದ್ದಾಗಿದೆ. ಉತ್ತರ ಕನ್ನಡ ಜಿಲ್ಲೆಯ ಮಂಡಗೋಡ ಮತ್ತು ಮೈಸೂರು ಜಿಲ್ಲೆಯ ಬೈಲುಕೊಪ್ಪೆಯು ಟಿಬೆಟಿಯನ್ನರ ವಸಾಹತುಗಳು ವರ್ಣಮಯ ಸ್ತೂಪಗಳಿಂದ ಕಲಾತ್ಮಕ ಪ್ರಾರ್ಥನಾ ಮಂದಿರಗಳಿಂದ ಮೀನಿ ಟಿಬೆಟನಂತೆ ಕಾಣುತ್ತದೆ. ಬೆಂಗಳೂರಿನ ಮಹಾಬೋಧಿ ಸೊಸೈಟಿಯು ವೈಭವ ಪೂರ್ಣ ಸ್ತೂಪವನ್ನು ಒಳಗೊಂಡಿದ್ದು, ಒಳಗಡೆ ಬುದ್ಧಗಯಾದ ದೇವಸ್ಥಾನವನ್ನು ಹೋಲುವ ದೊಡ್ಡ ದೇವಸ್ಥಾನ ಉಲ್ಲೇಖಾರ್ಹ. ದೇವಸ್ಥಾನದ ಒಳಗಡೆ ಪಂಚಲೋಹದ ಬುದ್ಧನ ಮೂರ್ತಿ ಇದ್ದು, ಪ್ರಶಾಂತವಾದ ವಾತಾವರಣವನ್ನು ಒಳಗೊಂಡಿದೆ. ಅನೇಕ ಬೌದ್ಧ ಬಿಕ್ಕುಗಳು ನಿರಂತರವಾದ ಧ್ಯಾನವನ್ನು ಮಾಡುತ್ತ ಬುದ್ಧನ ತತ್ವಗಳನ್ನು ಮತ್ತು ಸಂದೇಶಗಳನ್ನು ಮೈಗೂಡಿಸಿಕೊಂಡು ಮನುಕು ಲಕ್ಕೆ ಬಿತ್ತರಿಸಲು ತಯಾರಿ ನಡೆಸಿದವರಂತೆ ಅಲ್ಲಿ ಕಂಡು ಬರುತ್ತಾರೆ.

ಉಪಸಂಹಾರ : ಬೌದ್ಧ ಧರ್ಮ ಕರ್ನಾಟಕದಲ್ಲಿ ೨೦೦೦ ವರ್ಷಗಳಿಂದಲೂ ತನ್ನ ಪ್ರಾಚೀನತೆ ಮೆರೆದಿದೆ. ಮೌರ್ಯರು, ಶಾತವಾಹನರು, ಗಂಗರು, ಕದಂಬರು, ಬಾದಾಮಿ ಚಾಲುಕ್ಯರು,

ರಾಷ್ಟ್ರಕೂಟರು ಮುಂತಾದ ರಾಜ ಮನೆತನದವರು ಬೌದ್ಧ ಧರ್ಮವನ್ನು ಬೆಳೆಸಿದರು ಮತ್ತು ಬೌದ್ಧರಿಗೆ ಆಶ್ರಯ ನೀಡಿದ್ದರು. ಅದರಲ್ಲಿ ಅಶೋಕ ಮಹಾಶಯರ ಪಾತ್ರ ಅಮೂಲ್ಯವಾದದ್ದು. ಕರ್ನಾಟಕದ ತುಂಬಾ ಬೌದ್ಧ ಧರ್ಮ ಹರಡಲು ಕಾರಣಕರ್ತರಾದರು. ಪ್ರಸ್ತುತ ಬೌದ್ಧ ಧರ್ಮ ಮನುಕುಲದ ಚರಿತ್ರೆಯಾಗಿದೆ. ಬುದ್ಧನ ಉಪದೇಶ, ಜೀವನತತ್ವ ಜಗತ್ತಿಗೆ ಸಾರಲು ಶಾಶ್ವತವಾಗಿ ಸಲು ಶಿಲ್ಪ ಸ್ತೂಪ, ವಿಹಾರಗಳನ್ನು ನಿರ್ಮಿಸಿದರು. ಇಂತಹ ಅಂಶಗಳಿಂದ ಕರ್ನಾಟಕದಲ್ಲಿ ಬೌದ್ಧ ಧರ್ಮ ಗಮನಾರ್ಹವಾಗಿ ಬೆಳೆದಿದೆ.

ಆಕಾರ ಸಾಮಗ್ರಿಗಳು :

೧) ಬುದ್ಧ ಶಾಸನ. : ವೈ.ಬಿ. ನಂದನ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೨) ಬುದ್ಧ ಚರಿತೆ ಮತ್ತು ಧಮ್ಮಸಾರ : ವೈ.ಬಿ. ನಂದನ. ಮಹಾಬೋಧಿ ಸೊಸೈಟಿ, ಬುದ್ಧ ವಚನ ಟ್ರಸ್ಟ.

೩) ಸಮಗ್ರ ಭಾರತದ ಇತಿಹಾಸ : ಕೆ.ಎನ್.ಎ. ಸುಭಾಷ ಸ್ಟೋರ, ಬೆಂಗಳೂರು.

೪) ಜನಪದ (ಕರ್ನಾಟಕದಲ್ಲಿ ಅಶೋಕನ ಶಾಸನಗಳು) (ಎನ್. ನಂಜುಡಸ್ವಾಮಿ) : ಎನ್.ಆರ್. ವಿಶುಕುಮಾರ. ಪ್ರಕಾಶಕರು ನಿರ್ದೇಶಕರು ವಾರ್ತಾ ಇಲಾಖೆ ಮಹಾವೀರ ರಸ್ತೆ, ಬೆಂಗಳೂರು. ಸಂಪುಟ ೫೩ ಸಂಚಿಕೆ–೦೨.

೫) ಸನ್ನತಿ ಒಂದು ಬೌದ್ಧ ವಿದ್ಯಾಕೇಂದ್ರ : ಜಯದೇವಿ ಗಾಯಕವಾಡ.

೬) ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ : ತಾಳ್ತಾಜೆ ವಸಂತಕುಮಾರ.

ಬುಡಕಟ್ಟು ಮಹಿಳೆಯರ ರಾಜಕೀಯ ಮೀಸಲಾತಿ ಸವಾಲುಗಳು ಮತ್ತು ನಿರೀಕ್ಷೆಗಳು ಒಂದು ಅಧ್ಯಯನ

* ದೀಪ ಎಂ.ಬಿ., **ದಿವ್ಯ ಎಂ.ಬಿ

* ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಮೈಸೂರು., ** ಅತಿಥಿ ಉಪನ್ಯಾಸಕರು, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

ಬುಡಕಟ್ಟು ಮಹಿಳೆಯರ ಸಶಕ್ತೀಕರಣವು ಆರ್ಥಿಕ, ಸಾಮಾಜಿಕ, ಮತ್ತು ರಾಜಕೀಯ ಸ್ಥಾನಮಾನಗಳನ್ನು ಸೃಷ್ಟಿಸುವಲ್ಲಿ ಒಂದು ಬಹುಮುಖ್ಯವಾದ ಅಂಶವಾಗಿದ್ದು ರಾಷ್ಟ್ರದ ನಿರ್ಮಾಣದಲ್ಲಿ ಇವರ ಪಾತ್ರ ಪ್ರಮುಖವಾಗಿದೆ. ಭಾರತದ ಸಂವಿಧಾನವು ಬುಡಕಟ್ಟು ಸಮುದಾಯವನ್ನು ಒಳಗೊಂಡಂತೆ ಬುಡಕಟ್ಟು ಮಹಿಳೆಯರಿಗೂ ಸಾಂವಿಧಾನಿಕ ಪ್ರಾಶಸ್ತ್ಯ ಮತ್ತು ಮೀಸಲಾತಿ ಒದಗಿಸಿಕೊಟ್ಟಿದೆ. ಬುಡಕಟ್ಟು ಮಹಿಳಾ ಸಶಕ್ತೀಕರಣಕ್ಕೆ ಇರುವ ಚಿಕಿತ್ಸಕ ಮಾರ್ಗವೆಂದರೆ ಅವರನ್ನು ಶಾಸಕಾಂಗದಲ್ಲಿ ಪ್ರತಿನಿಧಿಸುವಂತೆ ಮಾಡುವುದು ಅವರಿಗೆ ರಾಜಕೀಯ ಮೀಸಲಾತಿಯನ್ನು ನೀಡಿ ರಾಜಕೀಯ ನಿರ್ಣಯ ಕೈಗೊಳ್ಳುವಲ್ಲಿ ಭಾಗವಹಿಸುವಂತೆ ಮಾಡುವುದರ ಮೂಲಕ ಸಂವಿಧಾನಾತ್ಮಕ ತಳಹದಿಯನ್ನು ಕಲ್ಪಿಸಿ ಕೊಡುವುದಾಗಿದೆ ಇಂದಿನ ಬಹುತೇಕ ಸಮಸ್ಯೆಗಳಿಗೆ ಮುಖ್ಯ ಕಾರಣವೆನೆಂದರೆ ನವ ಜೀವನಕ್ಕೆ ತಕ್ಕಂತೆ ನವ ಚೈತನ್ಯವನ್ನು ತುಂಬದಿರುವುದು' ಪ್ರಪಂಚದಲ್ಲಿ ಯಾವುದೇ ಒಂದು ವಸ್ತು ಅಥವಾ ವಿಷಯ ಶಾಶ್ವತವಲ್ಲ ಪ್ರತಿಯೊಂದು ಕೂಡ ಬದಲಾವಣೆಗೆ ಒಳಪಟ್ಟಿದೆ. ಜಗತ್ತಿನಲ್ಲಿ ಶಾಶ್ವತವಾದ ಸಂಗತಿಯೆಂದರೆ ಬದಲಾವಣೆಯೊಂದೇ ಭಾರತದ ಸಂವಿಧಾನವು 242(1), 330, 332, 334, 341, 342 ವಿಧಿಗಳ ಮೂಲಕ ಸಾಂವಿಧಾನ ಸೌಲಭ್ಯವನ್ನು ನೀಡಿದೆ ಅಲ್ಲದೆ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ರಾಜಕೀಯವಾಗಿ ಭಾಗವಹಿಸಲು ಅವಕಾಶವನ್ನು ಕಲ್ಪಿಸಿಕೊಟ್ಟಿದೆ ಈ ನಿಟ್ಟಿನಲ್ಲಿ ಸಾಂವಿಧಾನಿಕ ಸೌಲಭ್ಯ, ರಾಜಕೀಯ ಮೀಸಲಾತಿಯ ಧ್ವನಿಯವ ಮೂಲಕ ಬುಡಕಟ್ಟು ಮಹಿಳೆಯರ ಸಶಕ್ತೀಕರಣ ಸಾಧಿಸುವುದು ಅನಿವಾರ್ಯವಾಗಿದೆ. ಪ್ರಸ್ತುತ ಪ್ರಬಂಧವು ರಾಜಕೀಯ ಮೀಸಲಾತಿ, ಸಂವಿಧಾನಿಕಸೌಲಭ್ಯಅವುಗಳ ಅನುಷ್ಠಾನ ಮತ್ತು ಎದುರಾಗುವ ಸವಾಲುಗಳು ಸಾಧಿಸಲಾಗಿರುವ ಸಾಧಕ ಬಾದಕ ಮೇಲೆ ಬೆಳಕು ಚೆಲ್ಲುತ್ತದೆ.

ಭಾರತವು ವಿವಿದ ಜಾತಿಯ ಸಮೂಹಗಳಿಂದ ಕೂಡಿದ ರಾಷ್ಟ್ರವಾಗಿದ್ದು ಅವುಗಳಲ್ಲಿ ವಿಭಿನ್ನ ಜೀವನ ಶೈಲಿ ವಿಭಿನ್ನ ದೈಹಿಕ ರಚನೆಗಳನ್ನೊಳಗೊಂಡ ಅನೇಕ ಬಗೆಯ ವೈವಿಧ್ಯಮಯ ಜೀವನ ಕ್ರಮಗಳನ್ನುಳ್ಳ ಜನಾಂಗಗಳ ಸಮ್ಮಿಲನ ವಾಗಿದೆ. ಭಾರತದ ಬುಡಕಟ್ಟು ವರ್ಗವು ತನ್ನದೇ ಆದ ಅಸ್ತಿತ್ವವನ್ನು ಹೊಂದಿದೆ. ಭಾರತದ ರಾಜ್ಯಾಂಗ ರಚನೆಯಲ್ಲಿ ಪ್ರತ್ಯೇಕ ಸ್ಥಾನಮಾನ ನೀಡಿನೇಯ ವಿಧಿಯ ಪ್ರಕಾರ ಆದಿವಾಸಿಗಳನ್ನು ಪರಿಶಿಷ್ಟ ಪಂಗಡಗಳು ಎಂದು ಕರೆಯಲಾಗಿದೆ. ಬುಡಕಟ್ಟು ಸಮುದಾಯವು ಸಮಾಜದ ಅವಿಭಾಜ್ಯ ಅಂಗವಾಗಿದ್ದು ಅಭಿವೃದ್ಧಿಯ ಮುಖ್ಯ ವಾಹಿನಿಯಿಂದ ದೂರ ಉಳಿದಿದ್ದಾರೆ ನಮ್ಮ ಸಮಾಜ ಸಂದರ್ಭದಲ್ಲಿ ಅಭಿವೃದ್ಧಿಯಿಂದ ವಂಚಿತವಾದ ಮತ್ತು ತೀವ್ರ ದುಸ್ಥಿತಿಯಲ್ಲಿರುವ ಜನ ಸಮುದಾಯವೇಂದರೆ ಪರಿಶಿಷ್ಟರು ಪರಿಶಿಷ್ಟರ ಪದತಲದಿಂದ ಅಭಿವೃದ್ಧಿಯ ಆರಂಭವು ನಡೆಯಬೇಕು.[2]

ಭಾರತವು ವಿಶಾಲವಾದ ರಾಜ್ಯವಾಗಿದ್ದು 2011ರ ಜನಗಣತಿಯಂತೆ ಆದಿವಾಸಿ ಜನಾಂಗಗಳ ಜನಸಂಖ್ಯೆ 84326240 ರಷ್ಟಿದೆ ಭಾರತದ ಒಟ್ಟು ಜನಸಂಖ್ಯೆಯ ಶೇ 8.08% ರಷ್ಟು ಒಳಗೊಂಡಿದೆ3.

ಸಾಮಾನ್ಯ ವರ್ಗದ ಜನರಿಂದ ಬೇರ್ಪಟ್ಟಿರುವ ಈ ಅಲ್ಪ ವರ್ಗವು ಶೋಷಣೆಗೆ ಒಳಗಾಗಿದೆ ಈ ತರಹ ಬೇರ್ಪಟ್ಟಿರುವ ಈ ಅಲ್ಪವರ್ಗವು ಶೋಷಣೆಗೆ ಒಳಗಾಗಿದೆ. ಈ ತರಹದ ಅಂತರಗಳು ಹಿಂದಿನ ಕಾಲದಿಂದಲೇ ಬೆಳೆದುಬಂದಿದೆ. ಅನ್ಯಾಯವನ್ನು ಸಹಿಸಿಕೊಂಡು ಹೋಗುತ್ತಿರುವ ಬುಡಕಟ್ಟು ವರ್ಗವು ಇತ್ತೀಚೆಗೆ ರಾಜಕೀಯ ನ್ಯಾಯಕ್ಕಾಗಿ ಹೋರಾಡುವ ಮನೋಧರ್ಮವನ್ನು ರೂಢಿಸಿಕೊಂಡಿರು

ವುದರ ಫಲವೇ ಬುಡಕಟ್ಟು ಜನರ ರಾಜಕೀಯ ಮೀಸಲಾತಿಯಾಗಿದೆ.

ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಹಾಗೂ ಅನ್ಯಾಯಗಳ ನಿವಾರಣೆಗೆ ರಾಜಕೀಯ ಅಧಿಕಾರ ಮತ್ತು ಭಾಗವಹಿಸುವಿಕೆ ಅತ್ಯಗತ್ಯ ಆದ್ದರಿಂದಲೇ ಪರಿಶಿಷ್ಟ ಪಂಗಡಗಳನ್ನೊಳ ಗೊಂಡಂತೆ ಬುಡಕಟ್ಟು ಜನರ ರಾಜಕೀಯ ಒಳಗೊಳ್ಳುವಿಕೆಗಾಗಿ ಅದರಲ್ಲೂ ವಿಶೇಷವಾಗಿ ಬುಡಕಟ್ಟು ಮಹಿಳೆಯರಿಗಾಗಿ ಪಂಚಾಯತ್ ರಾಜ್ಯ ಮಟ್ಟದಲ್ಲಿ ಸಂವಿದಾನ ಬದ್ಧವಾಗಿ ನೀಡಲಾದ ರಾಜಕೀಯ ಮೀಸಲಾತಿ ಅನುಷ್ಠಾನಗೊಂಡಿದೆ4.

ಬುಡಕಟ್ಟು ಮಹಿಳೆಯರ ಪಾಲಿಗೆ ರಾಜಕೀಯ ಮಿಸಲಾತಿ ನ್ಯಾಯ ಸಮಾನತೆ ಮತ್ತು ಅಭಿವೃದ್ಧಿಯ ತತ್ವಗಳು ಮತ್ತು ಪ್ರಕ್ರಿಯೆಗಳನ್ನೊಳ ಗೊಂಡ ಪ್ರಜಾಪ್ರಭುತ್ವದ ಬೆಳಕನ್ನು ತರುವಲ್ಲಿ ಯಶಸ್ವಿಯಾಗಿದೆಯೇ ಎಂಬ ಶೋಧನಾರ್ಹ ಪ್ರಶ್ನೆ. ಪ್ರಸ್ತುತ ಲೇಖನಕ್ಕೆ ಪ್ರೇರಣೆಯಾಗಿದೆ. ಸೈದ್ಧಾಂತಿಕ ರೂಪದ ಸಂವಿಧಾನದ ನಿಯಮಗಳು ಮತ್ತು ಅವಕಾಶ ಗಳಷ್ಟೆ ರಾಜಕೀಯ ವಾಸ್ತವಿಕತೆಯ ನೆಲೆಗಟ್ಟಿನ ಮೇಲೆ ಅನುಷ್ಠಾನ ಗೊಂಡ ರಾಜಕೀಯ ಮಿಸಲಾತಿಯಲ್ಲಿ ಪ್ರಕ್ರಿಯ ಬುಡಕಟ್ಟು ಮಹಿಳೆಯರ ಒಳಗೊಳ್ಳುವಿಕೆಗೆ ತಂದ ಸವಾಲುಗಳೆನೆಂಬುವುದು ಸಹ ಶೋಧನೀಯ ವಾಗಿದೆ ರಾಜಕೀಯ ಮೀಸಲಾತಿ ಯಿಂದ ಬುಡಕಟ್ಟು ಮಹಿಳೆಯರಿಂದ ಹುಟ್ಟಿಕೊಂಡ ನಿರೀಕ್ಷೆಗಳು ಸಹ ತಿರಸ್ಕೃತ ಸಮುದಾಯದ ಜಾಗೃತ ಮನಸ್ಸು ಮತ್ತು ರಾಜಕೀಯ ಪ್ರಬುದ್ಧತೆಗೆ ಸಾಕ್ಷಿಯಾಗುತ್ತವೆ. ಈ ಹಿನ್ನೆಲೆಯಲ್ಲಿ 'ಭಾರತದಲ್ಲಿ ಬುಡಕಟ್ಟು ಮಹಿಳೆಯರ ರಾಜಕೀಯ ಮೀಸಲಾತಿ ಸವಾಲುಗಳು ಮತ್ತು ನಿರೀಕ್ಷೆಗಳು–ಒಂದು ಅಧ್ಯಯನ' ಎಂಬ ವಿಷಯವನ್ನು ವಿಸ್ತಾರವಾಗಿ ಅಧ್ಯಯನಮಾಡುವುದು ಪ್ರಸ್ತುತವಾಗಿದೆ.

ಈ ದೇಶದ ಕೆಳಜಾತಿಗಳಿಗೆ ಮತ್ತು ಸಾಮಾಜಿಕವಾಗಿ ಶೋಷಣೆಗೆ ಒಳಗಾದ ಸಮುದಾಯಗಳಿಗೆ 'ಮೀಸಲಾತಿ' ಕಲ್ಪಿಸಿರುವುದು ಅಂಬೇಡ್ಕರ್ ಅವರ ಬಹುದೊಡ್ಡ ಕೊಡುಗೆಯಾಗಿದೆ. ಈ ದೇಶದಲ್ಲಿನ ದನಿ ಇಲ್ಲದ ಮತ್ತು ಶತಮಾನಗಳಿಂದ ಶೋಷಣೆಗೊಳಗಾದ ಸಮುದಾಯಗಳಿಗೆ 'ರಾಜಕೀಯಾರ್ಥಿಕ' ಸವಲತ್ತುಗಳನ್ನು ಒದಗಿಸುವಲ್ಲಿ ಶ್ರಮಿಸಿದರು. ಶೋಷಿತರಿಗೆ ಕನಿಷ್ಟ' ಮೀಸಲಾತಿಯನ್ನಾದರೂ ಕಲ್ಪಿಸಬೇಕೆಂದು ಪಣತೊಟ್ಟು ಅದರಲ್ಲಿ ಯಶಸ್ಸನ್ನು ಕಂಡರು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಎಂದು ನಾವೀಗ ಕರೆಯುತ್ತಿರುವ ಶೋಷಿತ ಸಮುದಾಯಗಳಿಗೆ ಅಂಬೇಡ್ಕರ್ ಕೊಟ್ಟ ಬಹು ದೊಡ್ಡ ಕೊಡುಗೆ ಎಂದರೆ ಮೀಸಲಾತಿ ಎಂಬುವುದರಲ್ಲಿ ಎರಡು ಮಾತಿಲ್ಲ5..

ವಸಾಹತು ಆಡಳಿತದ ಸಂದರ್ಭದಲ್ಲಿ ಮಾನಸಿಕವಾಗಿ ಭಾರತ ದೇಶದಿಂದ ದೂರ ಸರಿದಿದ್ದ ಆದಿವಾಸಿಗಳು ಸ್ವಾತಂತ್ರ್ಯಾನಂತರ ಸಹಜವಾಗಿಯೇ ಭಾರತ ಒಕ್ಕೂಟದಲ್ಲಿ ಪ್ರತ್ಯೇಕ ರಾಜ್ಯ ಮತ್ತು ಸ್ವಯಂ ಆಡಳಿತದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟವು. ಈಶಾನ್ಯ ಭಾರತದ ಆದಿವಾಸಿಗಳು ಈ ಸ್ವಯಂ ಆಡಳಿತದ ಕುರಿತು ಚಳುವಳಿಗಳನ್ನು ರೂಪಿಸಿದರು. ಸ್ವಾತಂತ್ರ್ಯ ನಂತರ ಜಾಗೃತರಾದ ಬುಡಕಟ್ಟು ವರ್ಗವು ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದು, ದೇಶವು ಬುಡಕಟ್ಟು ವರ್ಗವನ್ನು ಸಮಾಜದ ಮುಖ್ಯವಾಹಿನಿಗೆ ಸಂಧಿಸಲು ಶ್ರಮವನ್ನು ಪಡುತ್ತಿದೆ.

ಪ್ರಸ್ತುತ ದಿನಗಳಲ್ಲಿ ಮಹಿಳೆಯರ ಸ್ಥಿತಿಯು ಶೋಚನೀಯವಾಗಿದೆ. ಪುರಷ ಸಮಾಜದ ಮೇಲ್‌ವರ್ಗದ ದಬ್ಬಾಳಿಕೆಯಿಂದ ಬೇಸತ್ತಿರುವ ಇವರು ಎಲೆಮರೆಯ ಕಾಯಿಯಂತೆ ಜೀವನ ಸಾಗಿಸುತ್ತಿದ್ದಾರೆ. ಅದರಲ್ಲೂ ಬುಡಕಟ್ಟು ಮಹಿಳೆಯರು ತಾವೂ ಇದ್ದು ಕೂಡ ಇಲ್ಲದಂತೆ ವಾಸಿಸುತ್ತಿರುವರು. ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಾನಮಾನಗಳಿಂದ ದೂರ ಸರಿದಿರುವ ಬುಡಕಟ್ಟು ಮಹಿಳೆಯರನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಹೊಣೆ ನಮ್ಮ ಮೇಲಿದೆ. ರಾಜಕೀಯ ಸೌಲಭ್ಯಗಳು, ಯೋಜನೆಗಳು, ಕಾರ್ಯಕ್ರಮಗಳನ್ನು ಬುಡಕಟ್ಟು ಮಹಿಳೆಯರಿಗೆ ತಲುಪಿಸುವಲ್ಲಿ ದೇಶವು ಅವಿರತ ಶ್ರಮವಹಿಸಿದೆ. ಭಾರತದ ಸಂವಿಧಾನವು ಪುರುಷರನ್ನು ಒಳಗೊಂಡಂತೆ ಬುಡಕಟ್ಟು ಮಹಿಳೆಯರಿಗೆ ಸಂವಿಧಾನಿಕ ರಾಜಕೀಯ ಸೌಲಭ್ಯಗಳನ್ನು, ಮೀಸಲಾತಿಯನ್ನು ಕಲ್ಪಿಸಿದೆ.

ಭಾರತ ಸಂವಿಧಾನದ 341, 342ನೆಯ ಅನುಚ್ಛೇದಗಳ ಪ್ರಕಾರ ರಾಷ್ಟ್ರಪತಿಯವರು ಬುಡಕಟ್ಟು ವರ್ಗಗಳನ್ನು ಗುರುತಿಸಿ ಅವುಗಳ ಪಟ್ಟಿಯನ್ನು ಪ್ರಕಟಿಸುತ್ತಾರೆ. ಭಾರತ ಸಂವಿಧಾನದ ಅನುಚ್ಛೇದ 242(1) ರ ಪ್ರಕಾರ ರಾಷ್ಟ್ರಪತಿಯವರು ಹಾಗೂ 242(2) ರ ಪ್ರಕಾರ ಸಂಸತ್ತು ಅರ್ಹ ಸಮೂಹಗಳನ್ನು ಅನುಸೂಚಿತ ಬುಡಕಟ್ಟುಗಳೆಂದು ಆದೇಶಿಸಿ ಮೀಸಲಾತಿಯನ್ನು ಕಲ್ಪಿಸಬಹುದಾಗಿದೆ. ಇದಲ್ಲದೆ ಆಯಾ ರಾಜ್ಯದ ಸಮಾಜ ಕಲ್ಯಾಣ ಇಲಾಖೆ ಆಗಾಗ್ಗೆ ಅರ್ಹ ಬುಡಕಟ್ಟುಗಳನ್ನು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.[7]

ಆರಂಭಿಕ ಹಂತದಲ್ಲಿ ಭಾರತ ಸರ್ಕಾರವು ಆದಿವಾಸಿಗಳ ಅಭಿವೃದ್ಧಿಗೆ ಮೂರು ನೀತಿಗಳನ್ನು ರಚಿಸಿತು. ಅವುಗಳೆಂದರೆ ರಕ್ಷಣಾತ್ಮಕ ನೀತಿ, ಮೀಸಲಾತಿ ನೀತಿ ಮತ್ತು ಅಭಿವೃದ್ಧಿ ನೀತಿ. ರಕ್ಷಣಾತ್ಮಕ ನೀತಿಯು ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಹಕ್ಕುಗಳನ್ನು ಒಳಗೊಂಡಿದ್ದು, ಬುಡಕಟ್ಟು ಜನರ ಹಿತಾಸಕ್ತಿಗಳನ್ನು ಕಾಪಾಡುತ್ತದೆ. ಮೀಸಲಾತಿ ನೀತಿಯು ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ವಿಸ್ತರಿಸುವ ಯೋಜನೆಯನ್ನೊಳಗೊಂಡಿದೆ. ರಾಷ್ಟ್ರಪತಿಯವರ ಅನುಮೋದನ ೆಯಿಂದ ಅನುಸೂಚಿತ ಬುಡಕಟ್ಟುಗಳ ಪಟ್ಟಿಗೆ ಸೇರಿದ ಸಮುದಾಯಗಳು ಸಂವಿಧಾನಬದ್ಧವಾಗಿಯೇ ರಾಜಕೀಯ ಮೀಸಲಾತಿಯನ್ನು ಪಡೆಯ ಬಹುದಾಗಿದೆ. ಆಯಾಯ ರಾಜ್ಯಗಳು ಸಂವಿಧಾನಬದ್ಧ ಮೀಸಲಾತಿಯ ಸೌಲಭ್ಯವನ್ನು ತಮ್ಮ ತಮ್ಮ ರಾಜ್ಯದಲ್ಲಿರುವ ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಲು ಆಯಾಯಾ ರಾಜ್ಯಗಳ ರಾಜ್ಯಪಾಲರು ಗಳು ರಾಷ್ಟ್ರಪತಿಯವರ ಅನುಮೋದನೆಗೆ ಶಿಫಾರಸ್ಸು ಮಾಡಬಹುದು. ರಾಷ್ಟ್ರಪತಿಯವರು ಅನುಮೋದಿಸಿದ ನಂತರ ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರ್ಪಡೆಯಾದ ಅನುಸೂಚಿತ ಬುಡಕಟ್ಟುಗಳಿಗೆ ಸಂವಿಧಾನಬದ್ಧ ಕಾರ್ಯಕ್ರಮಗಳು, ರಾಜಕೀಯ ಮೀಸಲಾತಿಯ ಜಾರಿಯ ಹೊಣೆ ಮತ್ತು ಜವಾಬ್ದಾರಿಯು ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ.

ಭಾರತ ಸಂವಿಧಾನದ 330, 332, 334 ವಿಧಿಗಳ ಪ್ರಕಾರ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ವಿಶೇಷ ಪ್ರಾತಿನಿದ್ಯವನ್ನು ನೀಡಿ ರಾಜಕೀಯ ಮೀಸಲಾತಿಯನ್ನು ನೀಡಿದೆ. 330ನೇ ವಿಧಿಯು ಲೋಕಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಜನರಿಗೆ 'ಸಂಸತ್ತು ಮತ್ತು ಸದನಗಳ ಕ್ಷೇತ್ರಗಳ ಗೊತ್ತುಪಡಿಸುವಿಕೆ ಆಜ್ಞೆ 1976 ರ (ಡಿಲಿಮಿಟೇಷನ್ ಆಫ್ ಪಾರ್ಲಿಮೆಂಟರಿ ಅಂಡ್ ಅಸೆಂಬ್ಲಿ ಕಾನ್ಸ್‌ಟಿಟ್ಯೂಯೆನ್ಸಿಸ್ ಅರ್ಡರ್ 1976) ಪ್ರಕಾರ ಒಟ್ಟು 552 ಪರಿಶಿಷ್ಟ

ವರ್ಗಕ್ಕೆ 41 ಸ್ಥಾನಗಳನ್ನು ಮೀಸಲಿರಿಸಲಾಗಿದೆ.

ಸಂವಿಧಾನದ 332ನೇ ವಿಧಿಯ ಪ್ರಕಾರ ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳಲ್ಲಿ ಮೀಸಲಾತಿಗೆ ಆದೇಶ ನೀಡಿತು. ಗೊತ್ತುಪಡಿಸುವಿಕೆ ಆಜ್ಞೆ 1976 ರ ಅನ್ವಯ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಒಟ್ಟು 3977 ಸ್ಥಾನಗಳಲ್ಲಿ 315 ಸ್ಥಾನಗಳನ್ನು ಪರಿಶಿಷ್ಟ ಪಂಗಡಕ್ಕೆ ಮೀಸಲಿಡಲಾಗಿದೆ. 334ನೇಯ ವಿಧಿ ಅನ್ವಯ ಸಂವಿಧಾನ ಜಾರಿಗೆ ಬಂದ ನಂತರ 10 ವರ್ಷಗಳವರೆಗಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ರಾಜಕೀಯ ಮೀಸಲಾತಿಯನ್ನು 1999ರಲ್ಲಿ ಸಂವಿಧಾನಕ್ಕೆ 79ನೇ ತಿದ್ದುಪಡಿ ತಂದು ಈ ಕಾಯ್ದೆ ಪ್ರಕಾರ ಮೀಸಲಾತಿಯನ್ನು 60 ವರ್ಷಗಳು ಅಂದರೆ ಜನವರಿ 2010ರವರೆಗೆ ವಿಸ್ತರಿಸಲಾಗಿದೆ.[9] ಪ್ರಸ್ತುತವು ಕೂಡ ಮೀಸಲಾತಿಯು ಜಾರಿಯಲ್ಲಿರುವುದನ್ನೂ ಕಾಣಬಹುದಾಗಿದೆ.

ಅಧಿಕಾರವನ್ನು ವಿಕೇಂದ್ರಿಕರಣಗೊಳಿಸುವ ಉದ್ದೇಶದಿಂದ 1992ರಲ್ಲಿ ಅನುಮೋದಿಸಲ್ಪಟ್ಟ 73ನೇಯ ತಿದ್ದುಪಡಿಯ ಗ್ರಾಮೀಣ ಸ್ಥಳೀಯ ಸರ್ಕಾರ ಕಾಯ್ದೆಯು 1993ರಿಂದ ಜಾರಿಗೆ ಬಂದಿದ್ದು ತಳಮಟ್ಟದಲ್ಲಿ ಬುಡಕಟ್ಟು ವರ್ಗದ ಮಹಿಳೆಯರಿಗೆ ರಾಜಕೀಯ ಮೀಸಲಾತಿ ನೀಡಿ ಸಾಂವಿಧಾನಿಕ ಸ್ಥಾನಮಾನವನ್ನು ಕಲ್ಪಿಸಿದೆ. ಸಂವಿಧಾನದ 243–ಡಿ ವಿಧಿಯು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪರಿಶಿಷ್ಟ ಪಂಗಡಗಳಿಗೆ ಕೆಲವು ಸ್ಥಾನಗಳನ್ನು ಮೀಸಲಿಡಲು ಅವಕಾಶ ನೀಡಿದೆ. ಇದರಿಂದ ಹಿಂದುಳಿದ ಬುಡಕಟ್ಟು ಮಹಿಳೆಯರು ಬೇರು ಮಟ್ಟದ ಆಡಳಿತದಲ್ಲಿ ಭಾಗವಹಿಸಲು ಅವಕಾಶ ದೊರೆತಿದೆ.

ಉದಾ: ಕರ್ನಾಟಕ ರಾಜ್ಯವು 1993 ಮೇ 10 ರಂದು 'ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ'ಯನ್ನು ಜಾರಿಗೆ ತಂದು 73ನೇ ಸಂವಿಧಾನಿಕ ತಿದ್ದುಪಡಿಯನ್ನು ಅಧಿಕೃತವಾಗಿ ಅನುಷ್ಠಾನಕ್ಕೆ ತಂದ ದೇಶದ ಮೊಟ್ಟ ಮೊದಲ ರಾಜ್ಯವಾಗಿದೆ. ಇದರ ಪ್ರಕಾರ ವಿಧಿ 243 ಡಿ.(3) ರಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮಪಂಚಾಯಿತಿಯಲ್ಲಿ ಸದಸ್ಯ ಸ್ಥಾನಕ್ಕೆ ಬುಡಕಟ್ಟು ಮಹಿಳೆಯರನ್ನು ಒಳಗೊಂಡಂತೆ ಶೇ 3% ರಷ್ಟು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದೆ. ಅಲ್ಲದೆ ಮಹಿಳೆಯರಿಗೆ ಶೇ 1/3 ರಷ್ಟು ಮೀಸಲಾತಿಯನ್ನು ನೀಡಿದೆ. ಸಂವಿಧಾನದ ವಿಧಿ 243 ಡಿ (4) ಪ್ರಕಾರ ಪಂಚಾಯಿತಿಯ ಅಧ್ಯಕ್ಷ ಸ್ಥಾನಕ್ಕೆ ಬುಡಕಟ್ಟು ಮಹಿಳೆಯರನ್ನು ಒಳಗೊಂಡಂತೆ ಮಹಿಳೆಯರಿಗೆ 1/3 ರಷ್ಟು ಮೀಸಲಾತಿಯನ್ನು ನೀಡಿದೆ.[10]

ಬಹುಕಾಲದವರೆಗೂ ಬುಡಕಟ್ಟು ವರ್ಗಗಳಿಗೆ ರಾಜಕೀಯ ಹಕ್ಕು ಮತ್ತು ಪ್ರಾತಿನಿಧಿತ್ವವನ್ನು ನಿರಾಕರಿಸಿತ್ತು. ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಇವರಿಗೆ ಮತದಾನದ ಹಕ್ಕು ಸಿಕ್ಕಿತು. ನಂತರದಲ್ಲಿ ಪ್ರಾತಿನಿಧ್ಯದ ಹಕ್ಕು ದೊರೆಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಆದಿವಾಸಿಗಳಿಗೆ ಸಮಾಜದಲ್ಲಿ ರಾಜಕೀಯ ಅವಕಾಶ ಮತ್ತು ಹಕ್ಕುಗಳನ್ನು ನೀಡಿದೆ. ಆದಾಗ್ಯೂ ಅವರಲ್ಲಿ ಸಾಕಷ್ಟು ರಾಜಕೀಯ ಜಾಗೃತಿಯಾಗಿಲ್ಲ. ಈ ನಿಟ್ಟಿನಲ್ಲಿ ಸ್ಥಳೀಯ ಮಟ್ಟದಲ್ಲಿ ಬುಡಕಟ್ಟು ಮಹಿಳೆಯನ್ನು ರಾಜಕೀಯದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿಯನ್ನು ನೀಡಿರುವುದು ಶ್ಲಾಘನೀಯವಾಗಿದೆ.

ಸವಾಲುಗಳು: ಬುಡಕಟ್ಟು ಮಹಿಳಾ ರಾಜಕೀಯ ಮೀಸಲಾತಿಯನ್ನು ಜಾರಿಗೊಳಿಸುವಲ್ಲಿ ಅನೇಕ ಸವಾಲುಗಳು ಎದುರಾಗುತ್ತವೆ.

1. ಬುಡಕಟ್ಟು ನಾಗರೀಕರು ತಾವು ಹುಟ್ಟಿದ ನೆಲದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದು ಭಾರತದ ಸಂವಿಧಾನವು ಬುಡಕಟ್ಟು ಮಹಿಳೆಯರಿಗೆ ರಾಜಕೀಯ ಮೀಸಲಾತಿಯನ್ನೇನೋ ನೀಡಿದೆ. ಆದರೆ ಅವುಗಳ ಅನುಷ್ಠಾನ ಸಾಕಾರವಾಗುವುದರಲ್ಲಿ ಅನೇಕ ರೀತಿಯ ಸಾಧಕ ಭಾದಕಗಳು ಕಂಡುಬರುತ್ತವೆ. ಆದರೂ ಬುಡಕಟ್ಟು ಮಹಿಳಾ ಅಭಿವೃದ್ಧಿ ಆಗಬೇಕಾದದ್ದು, ರಾಜ್ಯಾಂಗದಲ್ಲಿ ಸೂಚಿಸಿದಂತೆ ಹಾಗೂ ಸಾಮಾಜಿಕ ನ್ಯಾಯಕ್ಕನುಗುಣವಾಗಿ ಕರ್ನಾಟಕ ಸರ್ಕಾರ ಈ ದಿಶೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸುವುದರಲ್ಲಿ ಮುಂದಾಗಬೇಕಾಗಿದೆ.
2. ಬುಡಕಟ್ಟು ಮಹಿಳಾ ರಾಜಕೀಯ ಮೀಸಲಾತಿಯನ್ನು ಇನ್ನೂ ಹೆಚ್ಚಿನ ಪಾರದರ್ಶಕತೆ ಮತ್ತು ದಕ್ಷತೆಯನ್ನು ಸಾಧಿಸುವುದು.
3. ಬುಡಕಟ್ಟು ಮಹಿಳೆಯರ ಹೆಸರಿನಲ್ಲಿ ಅನ್ಯವರ್ಗವು ಕಬಳಿಸುತ್ತಿರುವ ರಾಜಕೀಯ ಮೀಸಲಾತಿ ಮತ್ತು ಅಧಿಕಾರ ದುರುಪಯೋಗವನ್ನು ತಡೆಗಟ್ಟುವುದು.
4. ಬುಡಕಟ್ಟು ಮಹಿಳೆಯರ ರಾಜಕೀಯ ಮೀಸಲಾತಿಯನ್ನು ಜಾರಿಗೊಳಿಸುವಾಗ ಕೆಲವೊಂದು ಬುಡಕಟ್ಟುಗಳು ಅಧಿಕೃತ ಸ್ಥಾನಮಾನ ಪಡೆಯದೆ ಇರುವುದರಿಂದ ಹಾಗೂ ಅವರನ್ನು ಸರ್ಕಾರ ವೈಜ್ಞಾನಿಕವಾಗಿ ಗುರುತಿಸುವುದು ಕಷ್ಟಸಾಧ್ಯವಾದ್ದರಿಂದ ಮೀಸಲಾತಿಯನ್ನು ನಿರೂಪಿಸುವಾಗ ಜಾತಿ ಯಾವುದು? ಬುಡಕಟ್ಟು ಯಾವುದು? ಎಂಬ ಅರಿವಿನ ಕೊರತೆಯು ಬಹುದೊಡ್ಡ ಸವಾಲಾಗಿದೆ.

ಉದಾ: ಕರ್ನಾಟಕದ ಕಾಡುಗೊಲ್ಲರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕುಡುಬಿಗಳು ನಿಜವಾದ ಬುಡಕಟ್ಟುಗಳು. ಆದರೆ ಸರ್ಕಾರದ ಮೀಸಲಾತಿಯ ನೀತಿಯಡಿಯಲ್ಲಿ ಇವರುಗಳನ್ನು ಹಿಂದುಳಿದ ವರ್ಗಗಳೆಂದು ಪರಿಗಣಿಸಲಾಗಿದೆ. ಈ ನೀತಿಯಿಂದಾಗಿ ಸಮುದಾಯಗಳು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದ ಬುಡಕಟ್ಟಾಗಿದ್ದು, ಬುಡಕಟ್ಟಾಗದ ಸಮಸ್ಯೆಯನ್ನೆದುರಿಸುತ್ತಿದೆ.

ನಿರೀಕ್ಷೆಗಳು:

1. ರಾಷ್ಟ್ರವು ಪಂಚಾಯತ್ ರಾಜ್ ಸಂಸ್ಥೆಗಳನ್ನು ಒಳಗೊಂಡಂತೆ ಕೇಂದ್ರ, ರಾಜ್ಯಗಳಲ್ಲಿ ಬುಡಕಟ್ಟು ಆಡಳಿತಾಧಿಕಾರವನ್ನು ಇನ್ನೂ ಪ್ರಗತಿಪರವಾಗಿ ವಿಸ್ತರಣೆ ಮಾಡುವುದು.
2. ಹೊಸ ಬುಡಕಟ್ಟು ಮಹಿಳಾ ನಾಯಕತ್ವವನ್ನು ಸೃಷ್ಟಿ ಮಾಡುವುದು.
3. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ವ್ಯಾಖ್ಯಾನವನ್ನು ಬುಡಕಟ್ಟು ಮಹಿಳೆಯರ ರಾಜಕೀಯ ಅಭಿವೃದ್ಧಿಯೊಂದಿಗೆ ಪುನರ್ ವ್ಯಾಖ್ಯಾನಿಸುವುದು.
4. ಬುಡಕಟ್ಟು ರಾಜಕೀಯ ಮೀಸಲಾತಿ ಕುರಿತಂತೆ, ಬುಡಕಟ್ಟು ಮಹಿಳೆಯರಲ್ಲಿ ಸೂಕ್ತ ರಾಜಕೀಯ ಜಾಗೃತಿ, ಅರಿವು, ತಿಳುವಳಿಕೆ, ಜ್ಞಾನವನ್ನುಂಟು ಮಾಡುವುದು.
5. ಬುಡಕಟ್ಟು ಮಹಿಳಾ ರಾಜಕೀಯ ಮೀಸಲಾತಿಯನ್ನು ಯಶಸ್ವಿಗೊಳಿಸಿ ಅವರುಗಳಲ್ಲಿ ಸ್ಪರ್ಧಾತ್ಮಕತೆಯನ್ನು ಸೃಷ್ಟಿಸಿವುದು.
6. ಮಹಿಳಾ ಬುಡಕಟ್ಟುಗಳಲ್ಲಿ ರಾಜಕೀಯ ಪ್ರಜ್ಞೆಯನ್ನು ಇಮ್ಮಡಿಗೊಳಿಸಿ ಗ್ರಾಮಸಭೆಯಿಂದ ಲೋಕಸಭೆಯವರೆಗೆ ಒಂದು ಸರಣಿ ರೂಪಿಸುವುದು ಮತ್ತು ಆ ಮೂಲಕ ರಾಷ್ಟ್ರವನ್ನು ಸುಖೀ ರಾಜ್ಯವನ್ನಾಗಿ ನಿರ್ಮಾಣ ಮಾಡುವುದು.

ಈ ರೀತಿಯಾಗಿ ಬುಡಕಟ್ಟು ಮಹಿಳಾ ರಾಜಕೀಯ ಮೀಸಲಾತಿಯನ್ನು ಅನುಷ್ಠಾನಗೊಳಿಸುವಲ್ಲಿ ಸವಾಲುಗಳನ್ನು ಎದುರಿಸಬೇಕಾಗಿದೆ. ನಿರೀಕ್ಷೆಗಳನ್ನು ಯಶಸ್ವಿಯಾಗಿ ಕಾರ್ಯಚಾರಿಗೊಳಿಸಿದಾಗ ಅನುಷ್ಠಾನ ಮಾರ್ಗವು ಸುಗಮವಾಗುವುದರಲ್ಲಿ ಸಂದೇಹವಿಲ್ಲ. ಪ್ರಸ್ತುತ ದಿನಗಳಲ್ಲಿ ಬುಡಕಟ್ಟು ಕುಟುಂಬದಲ್ಲಿ ಹಲವಾರು ಕಟ್ಟುಪಾಡುಗಳು, ಮೌಢ್ಯಗಳು, ಸಂಪ್ರದಾಯಗಳು, ಪದ್ಧತಿಗಳು, ಹಾಗೂ ಸಂಕುಚಿತ ಮನೋಭಾವ, ಮತ್ತು ಚುನಾವಣಾ ವ್ಯವಸ್ಥೆಯ ಹಲವಾರು ಲೋಪದೋಷಗಳು ಇದ್ದಾಗ್ಯೂ ಕೂಡ ಚುನಾವಣೆಗಳಲ್ಲಿ ಸ್ಪರ್ಧಿಸುವವರ ಸಂಖ್ಯೆ ಹೆಚ್ಚುತ್ತಾ ಬಂದಿದೆ. ಇದು ನಿಜಕ್ಕೂ ಜಗತ್ತಿನ ಮಹಾ ಅದ್ಭುತಗಳಲ್ಲೊಂದಾಗಿದೆ. ಬುಡಕಟ್ಟು ಮಹಿಳೆಯರಿಗೆ ಸಮಾನತೆ ಮತ್ತು ಸ್ವಾತಂತ್ರ್ಯ ಎಂದರೆ ಸ್ತ್ರೀ–ಪುರಷರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದು. ಮಹಿಳೆಯರಲ್ಲಿ ಸ್ವಶಕ್ತಿ, ಸ್ವ ಅಲೋಚನೆ, ಸ್ವಾಭಿಮಾನ, ಸ್ವ ಸಾಮರ್ಥ್ಯವನ್ನು ಬೆಳೆಸಿ ಸ್ವತಂತ್ರ ಮನೋಭಾವವನ್ನು ಉಂಟು ಮಾಡಬೇಕು.

ಬುಡಕಟ್ಟು ಮಹಿಳೆಯರ ಹಿತಾಸಕ್ತಿಗಳನ್ನು ರಕ್ಷಿಸಲು ಅಗತ್ಯವಾಗಿರುವ ಹೊಸ ಕಾನೂನು ನಿಯಮಗಳನ್ನು ಜಾರಿಗೆ ತರಲು ಹಾಗೂ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮಾರ್ಪಾಡು ಮಾಡಲು ಅಥವಾ ತಿದ್ದುಪಡಿ ಮಾಡಲು ಹಾಗೂ ಅಗತ್ಯವಾದ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಮಹಿಳೆಯರಿಗೂ ಸಮಾನವಾದ ರಾಜಕೀಯ ಅಧಿಕಾರವನ್ನು ಕೊಡಬೇಕು. ಮಹಿಳೆಯರು 'ರಾಜಕೀಯ' ಅಧಿಕಾರದ ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಿಕೊಂಡು ಸ್ವಾತಂತ್ರ್ಯ, ಸಮಾನತೆ, ನ್ಯಾಯವನ್ನು ದೊರಕಿಸಿ ಕೊಂಡು ತಮ್ಮ ವ್ಯಕ್ತಿತ್ವ, ಗೌರವ, ಘನತೆಗಳನ್ನು ಎತ್ತಿಹಿಡಿಯಲು ಸಾಧ್ಯವಾಗುತ್ತದೆ. ಹಾಗಾದಾಗ ಮಾತ್ರ 'ಬುಡಕಟ್ಟು ಮಹಿಳಾ ರಾಜಕೀಯ ಮೀಸಲಾತಿಯನ್ನು ಜಾರಿಗೊಳಿಸಿರುವುದು ಫಲಪ್ರದವಾಗುತ್ತದೆ.

ಅಡಿಟಿಪ್ಪಣಿಗಳು

1. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸೋಲಿಗ–ಬುಡಕಟ್ಟು ಜನಾಗಂದ ಅಭಿವೃದ್ಧಿ ಕರ್ನಾಟಕ ಸರ್ಕಾರ ಕಾರ್ಯಕ್ರಮಗಳು ಡಾ॥ ಸುನಂದಮ್ಮ ಜಾನ್. ಅಭಿರುಚಿ ಪ್ರಕಾಶನ, ಮೈಸೂರು–2011.
2. ಆದಿವಾಸಿ ಅಭ್ಯಾಸ –"ಅಸ್ಪೃಶ್ಯತೆ ಆರ್ಥಿಕತೆ ಮತ್ತು ಅಭಿವೃದ್ಧಿ – ಟಿ. ಆರ್. ಚಂದ್ರಶೇಖರ 'ಸಂಪಾದಕ –ಡಾ॥ ಎ, ಎಸ್. ಪ್ರಭಾಕರ, ಸಿದ್ಧಾರ್ಥ. ಪ್ರಕಾಶನ ಹೊಸಪೇಟೆ –2008.
3. Indian Tribes through the Ages Constitutional Safeguards' Publications and Govt. of India. New Delhi -2011.
4. Panchayathi Raj –A study of Rural Local Government in India --Roa N.R. uppal Publishing House New Delhi -1992.
5. ಆದಿವಾಸಿ ಆಖ್ಯಾನ–ಡಾ. ಅಂಬೇಡ್ಕರ್ ಆದಿವಾಸಿಗಳ ಕುರಿತು. ಎ. ಎಸ್. ಪ್ರಭಾಕರ ಸಂಪಾದಕ –ಡಾ॥ ಎ. ಎಸ್. ಪ್ರಭಾಕರ, ಸಿದ್ಧಾರ್ಥ. ಪ್ರಕಾಶನ ಹೊಸಪೇಟೆ–2008.
6. ಅದೇ ಬುಡಕಟ್ಟು ಅಭಿವೃದ್ಧಿ; ನೆಹರು ಚಿಂತನೆಗಳು'
7. Introduction to the constitution of India –Basu DD-New Delhi -2001.
8. Constitutional law of India –J. N. Pandey. Govt publication New Delhi -2000.
9. The Constitution of India'- Bhakshi P.M. New Delhi -2000.
10. Panchayath Raj system in Karnataka' Bhargva B.S. (with Bada C.R. and Forgal V.N.) Jackson Publication New Delhi -2001.

ಗಾಂಧೀಜಿ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು

ಡಾ. ಎಂ.ಡಿ ಉಮೇಶ

ಅತಿಥಿ ಉಪನ್ಯಾಸಕರು, ಗಾಂಧಿ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು., drumeshmd@yahoo.in

ಪ್ರಜಾಪ್ರಭುತ್ವದ ವ್ಯವಸ್ಥೆ ಗಟ್ಟಿಗೊಳ್ಳದ ಹೊರತು ದೇಶದ ಭದ್ರ ಬುನಾದಿ ಸಾಧ್ಯವಿಲ್ಲ ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹೇಳಿದ್ದರು. ಅವರ ಆದರ್ಶ ಪ್ರಜಾಪ್ರಭುತ್ವ ಪರಿಕಲ್ಪನೆ ಇಂದಿಗೂ ಸಾಧ್ಯವಾಗದೇ ಇರುವುದು ದುರ್ದೈವದ ಸಂಗತಿ. ದುರಂತವೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೈತಿಕ ಮೌಲ್ಯಗಳು ಅಧಃಪತನಗೊಳ್ಳುತ್ತಿರುವ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದನ್ನು ನಾವಿಂದು ಗಮನಿಸಬಹುದಾಗಿದೆ. ಜನರಿಂದ ಆಯ್ಕೆಗೊಂಡಂತಹ ಜನ ಪ್ರತಿನಿಧಿಗಳು ಗ್ರಾಮಪಂಚಾಯಿತಿ ಚುನಾವಣೆಗಳು ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಜಿಲ್ಲಾ ಪಂಚಾಯಿತಿ ಚುನಾವಣೆಗಳು ವಿಧಾನ ಸಭಾ ಚುನಾವಣೆಗಳು ಹಾಗೂ ಲೋಕ ಸಭಾ ಚುನಾವಣೆಗಳು ಯಾವುದೇ ಚುನಾವಣೆಗಳನ್ನು ತೆಗೆದುಕೊಂಡರೆ, ಇವುಗಳಿಗೆ ನಡೆಯುವ ಏರ್ಪಾಡುಗಳ ಪರಿಯನ್ನು ಗಮನಿಸಿದರೆ ಒಂದು ಕ್ಷಣ ದಿಗ್ಭ್ರಾಂತರಾಗುವುದರಲ್ಲಿ ಸಂದೇಹವಿಲ್ಲ.ಸದಸ್ಯರುಗಳಾಗುವ ಮಹಾಪೂರವೇ ಸಜ್ಜಾಗುವಂತಿದೆ. ನಾಮ ಪತ್ರ ಸಲ್ಲಿಸುವ ಕೊನೆಯ ದಿನಗಳಲ್ಲಂತೂ ಮತ ಚಲಾಯಿಸಲು ಸಾಲಿನಲ್ಲಿ ನಿಲ್ಲವಂತಹ ದೊಡ್ಡದೊಡ್ಡ ಸಾಲುಗಳನ್ನೇ ನಾನು ಪತ್ರ ಸಲ್ಲಿಸಲು ಬರುತ್ತಿದ್ದವರ ಸಂಖ್ಯೆ ಕಾಣಬಹುದಾಗಿದೆ.

ಕಾರಣವಿಷ್ಟೆ ನಿರಾಯಾಸವಾಗಿ ಹಣಗಳಿಸಬಹುದಾದ ಕೇಂದ್ರಗಳು ಬಹುಮುಖ್ಯವಾಗಿ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಎಂಬುದು ಬಹಿರಂಗ ಸತ್ಯವೇ ಸರಿ. ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ವಿಪರೀತವಾಗಿ ಹರಿದು ಬರುವ ಯೋಜನೆಗಳ ಅನುದಾನವನ್ನು ಸಮರ್ಪಕವಾಗಿ ಬಳಸದೇ, ಆಡಳಿತದಲ್ಲಿ ಪಾರದರ್ಶಕತೆಯನ್ನು ತರದೇ ಭ್ರಷ್ಟಾಚಾರದಲ್ಲಿ ತೊಡಗಿರುವುದು ವಿಪರ್ಯಾಸದ ಸಂಗತಿ.

ಇಂತಹ ಹತ್ತು ಹಲವು ಅಂಶಗಳನ್ನು ಗಮನಿಸಿದಾಗ ತಾಲ್ಲೂಕು ಪಂಚಾಯಿತಿಗೆ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಎಂತಹವರು ಸದಸ್ಯರಾಗಬೇಕು ಎಂಬ ದೂರಾಲೋಚನೆ ಅತಿಮುಖ್ಯ. ಕೇವಲ ವಿದ್ಯಾವಂತನಾದರೆ ಸಾಲದು, ಆತ ಸೇವಾ ಮನೋಭಾವದವನಾಗಿರಬೇಕು, ಉತ್ತಮ ಕೌಟುಂಬಿಕ ಹಿನ್ನೆಲೆಯ ವ್ಯಕ್ತಿತ್ವವುಳ್ಳವನಾಗಿರಬೇಕು, ಪ್ರಜೆಗಳ ಹಿತವನ್ನು ಕಾಪಾಡುವವನಾಗಬೇಕು. ದೇಶದ ಸಮೃದ್ಧಿಯ ಹರಿಕಾರನಾಗಬೇಕು. ಇಂತಹ ಉತ್ತಮ ಆಲೋಚನೆಗಳು

ಹಾಗೂ ಪರಿಕಲ್ಪನೆಗಳನ್ನು ಮುಂದಿಟ್ಟುಕೊಂಡು ಮತದಾರರು ಯೋಚಿಸಬೇಕಾಗುತ್ತದೆ.

ಗಾಂಧೀಜಿಯವರು ಒಂದು ಕಡೆ ತುಂಬಾ ಅರ್ಥಪೂರ್ಣವಾಗಿ ಈ ವಿಚಾರವನ್ನು ಅರ್ಥೈಸಿದ್ದಾರೆ. "ಸರಳ ಜೀವನ ಮತ್ತು ಉನ್ನತ ವಿಚಾರ" (Simple Life and High Thinking) ಈಮೂಲಕ ಮತದಾರರು ಚಿಂತನೆಯನ್ನು ಮಾಡಿ ಆಲೋಚನೆ ಮಾಡಿ ನಮ್ಮೊಳಗಿನ ಯಾವ ವ್ಯಕ್ತಿಯನ್ನು ಆಯ್ಕೆಮಾಡಬೇಕು ಎಂಬ ಅರಿವು ಮೂಡಿಸಿ ಕೊಳ್ಳುವ ಹೊಣೆಗಾರಿಕೆ ಪ್ರಸ್ತುತ ಸಂದರ್ಭಗಳಲ್ಲಿ ಬಹು ಮುಖ್ಯ ವಾಗಿದೆ. ಈ ಆಲೋಚನೆಯನ್ನು ಗಂಭೀರವಾಗಿ ತೆಗೆದುಕೊಳ್ಳ ಬೇಕಾದುದು ಅತ್ಯಗತ್ಯವಾಗಿದೆ.

ಚುನಾವಣೆಗಳಲ್ಲಿ ಜಾತಿ–ಪಕ್ಷ ಹಾಗೂ ಹಣ ಮಾರಕವಾಗಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಒಂದು ವ್ಯವಸ್ಥೆ ನಿರ್ನಾಮವಾಗಲು ಈ ಮೂರು ಅಂಶಗಳೇ ಸಾಕು. ಇವುಗಳಿಂದಲೇ ಒಂದು ವ್ಯವಸ್ಥೆ ಅಸ್ತವ್ಯಸ್ತಗೊಳ್ಳುತ್ತದೆ. ಉದಾತ್ತವಾಗಿದ್ದ ಪ್ರಜಾಪ್ರಭುತ್ವದ ನೈತಿಕ ಮೌಲ್ಯಗಳು ಅಧೋಗತಿಗೆ ಇಳಿಯುತ್ತಿವೆ.ಆದರ್ಶಗಳು ಅವನತಿಯ ಹಂತವನ್ನು ತಲುಪುತ್ತಿವೆ. ಚುನಾವಣಾ ಸಮಯದಲ್ಲಿ ಕಲುಷಿತ ವಾತಾವರಣ ಉಂಟಾಗುತ್ತಿದೆ. ಆದ್ದರಿಂದಲೇ, ಚುನಾವಣಾ ಸಮಯ ಸಮೀಪಿಸಿದಾಗ ಜಾತಿ, ಪಕ್ಷ ಹಾಗೂ ಹಣವನ್ನು ಮೀರಿದ ವಾತಾವರಣವನ್ನು ಕಾಣಬಹುದಾಗಿದೆ. ಇಂತಹ ಅನಿಷ್ಟ ಪದ್ಧತಿಗಳನ್ನು ಒಟ್ಟಾರೆ ಸೇರಿ ಪ್ರತಿರೋಧ ವ್ಯಕ್ತಪಡಿಸದ ಪಕ್ಷದಲ್ಲಿ ದೇಶವನ್ನು ರಕ್ಷಿಸುವುದು ತುಂಬಾ ಕಷ್ಟವಾಗುತ್ತದೆ. ಇಂತಹ ಅನಿಷ್ಟಗಳನ್ನು ಮನಸ್ಸಿನಿಂದಲೇ ಉಚ್ಚಾಟಿಸದಿದ್ದಲ್ಲಿ ಹಿಂದಿನ ಅವ್ಯವಸ್ಥೆಯನ್ನೇ ಯಥಾಸ್ಥಿತಿ ಮುಂದುವರೆಸಿಕೊಂಡು ಬಂದಂತಾ ಗುತ್ತದೆ. ಆನಂತರ ಎದುರಾಗುವ ಸಮಸ್ಯೆಗಳನ್ನು ಮೌನವಾಗಿಯೇ ಸಹಿಸಿಕೊಳ್ಳಬೇಕಾಗುತ್ತದೆ. ಆಗ ಪಶ್ಚಾತ್ತಾಪಪಟ್ಟರೂ ಪ್ರಯೋಜನ ವಿಲ್ಲದಂತೆ ಆಗುತ್ತದೆ. ಇದನ್ನೆಲ್ಲಾ ಗಮನಿಸಿದಾಗ ಪ್ರಜಾಪ್ರಭುತ್ವದಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಿಸಬಲ್ಲಂತಹ ಉದಾತ್ತ ಆದರ್ಶಗಳು ಮತ್ತು ನೈತಿಕ ಮೌಲ್ಯಗಳು ಪ್ರತಿನಿಧಿಯಾದವನಿಗೆ ಇರಲೇ ಬೇಕು ಎಂಬ ಹಕ್ಕೊತ್ತಾಯ ಆತನನ್ನು ಆಯ್ಕೆ ಮಾಡುವವರಲ್ಲಿಯೂ ಇರಬೇಕಾದುದು ಇಂದಿನ ಸಂದರ್ಭಗಳಲ್ಲಿ ಅತ್ಯಗತ್ಯವಾಗಿದೆ.

ಪ್ರತಿನಿಧಿಗಳು ನಿರಾಯಾಸವಾಗಿ ಗಳಿಸಿದ ಹಣವನ್ನು ತಂದು ಆಮೂಲಕ ತಮ್ಮವರಿಗೆ ಅದರಲ್ಲಿ ತೊಡಗಿಸುವವರನ್ನು, ಹಕ್ಕುಗಳನ್ನು ಕೊಂಡುಕೊಳ್ಳುವವರನ್ನು ದೂರವಿಡಲೇಬೇಕು. ಈ ಸಂದರ್ಭದಲ್ಲಿ ನಿರ್ಲಿಪ್ತತೆ ಹಾಗೂ ನಿರ್ಲಕ್ಷ್ಯತೆ ತುಂಬಾ ಅಪಾಯಕಾರಿ. ಯಾರು ಆಯ್ಕೆಯಾದರೆ ನಮಗೇನು ಎಂಬ ಉದಾಸೀನತೆ ತೋರಿದರೆ ಅಥವಾ ತಟಸ್ಥವಾಗಿ ಉಳಿದರೆ ಮುಂದೆ ಎದುರಾಗುವ ಇಲ್ಲಾ ಬವಣೆಗಳಿಗೆ ನಾವುಗಳು ಪಾತ್ರಧಾರಿ ಎಂಬ ಅವಲೋಕನ ಇಲ್ಲಿ ಅತ್ಯಂತ ಮುಖ್ಯ, ಇಂತಹ ಮನಸ್ಥಿತಿಯ ಅರಿವು ಮೂಡಿಸುವುದು ಸಹ ವಿದ್ಯಾವಂತರ ಕರ್ತವ್ಯವೂ ಆಗಬೇಕು.

ಈ ದಿನ ಚುನಾವಣೆಗಳು ಮಹತ್ವ ಪಡೆದುಕೊಂಡಿರುವುದು ಮೇಲೆ ಹೇಳಿದಂತಹ ಹಣ ಲೂಟಿಗೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಪ್ರತಿನಿಧಿಗಳಲ್ಲಿ ಬಹಳಷ್ಟು ಜನ ನೈತಿಕ ಮೌಲ್ಯಗಳನ್ನು ಕಳೆದುಕೊಂಡ ವರಾಗಿದ್ದಾರೆ. ಇವರಲ್ಲಿ ಯೋಗ್ಯರೆಷ್ಟು ಎಂಬುದು ಅಲ್ಲಿನ ಎಲ್ಲರಿಗೂ ತಿಳಿದಿರುತ್ತದೆ. ಬಹಿರಂಗವಾಗಿ ಅಲ್ಲದಿದ್ದರೂ ಅಲ್ಲಲ್ಲಿ ಆತನ ಬಗ್ಗೆ ಚರ್ಚೆ ನಡೆದೇ ಇರುತ್ತದೆ. ಆದರೆ, ಅಂತಿಮವಾಗಿ ಚುನಾವಣೆಯಲ್ಲಿ ಅವನೇ ಆಯ್ಕೆಯಾಗಿ ಬರುತ್ತಾನೆ. ಆತನೇ ಅಧಿಕಾರದ ಚುಕ್ಕಾಣಿ ಹಿಡಿಯುತ್ತಾನೆ. ಇವರನ್ನು ತಿರಸ್ಕರಿಸದ ಹೊರತು ಪ್ರಜಾಪ್ರಭುತ್ವದ ಅಭ್ಯುದಯ ಸಾಧ್ಯವಿಲ್ಲ. ಇಂತವರನ್ನೇ ಪ್ರೇರೇಪಿಸುವ, ಅವರ ಆಪ್ತ ಸ್ನೇಹಿತರನ್ನಾಗಿಸಿಕೊಂಡಿರುವ ನೌಕರ ವರ್ಗ ಇಂತಹವರ ಗೆಲುವಿಗೆ ಪೂರಕವೂ ಆಗುತ್ತಾರೆ.

ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಸದಸ್ಯತ್ವಗಳು ಲಕ್ಷಾಂತರ ರೂಪಾಯಿಗಳಿಗೆ ಹರಾಜಾಗುತ್ತಿರುವುದು ನಗ್ನ ಸತ್ಯ. ಇಂತಹ ಸಂದರ್ಭದಲ್ಲಿ ಆದರ್ಶ ಪ್ರಜಾಪ್ರಭುತ್ವದ ಪರಿಕಲ್ಪನೆಯು ಕನಸೇ ಸರಿ. ಚುನಾವಣೆಗಳಲ್ಲಿ ವ್ಯಾಪಾರಿ ಮನೋಭಾವ ಖಂಡಿತ ಸುಳಿಯಬಾರದು ಆಡಳಿತದ ಎಲ್ಲ ವ್ಯವಹಾರ ಪಾರದರ್ಶಕವಾಗಿ ರಬೇಕು. ಹಾಗಿರಬೇಕಾದರೆ ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಗುರುತರ ಹೊಣೆ ಮತದಾರರದ್ದಾಗಿರುತ್ತದೆ. ಆದರೆ ಕೊಂಚ ಯೋಚನೆ ಬೇಕಷ್ಟೆ. ಈ ಕಾರ್ಯ ನೆರವೇರಿದರೆ ಮಾತ್ರ ಮಹಾತ್ಮ ಗಾಂಧೀಜಿ ಯವರ ಆದರ್ಶ ರಾಜ್ಯ– ರಾಮ ರಾಜ್ಯದ ಕನಸಿನ ಕಲ್ಪನೆ ನನಸಾಗಲು ಸಾಧ್ಯವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಗಾಂಧೀಜಿ ಮತ್ತು ಮೌಲ್ಯಗಳ ಪ್ರಸ್ತುತತೆ: ಆಧುನಿಕ ಜಗತ್ತಿನಲ್ಲಿ ಮೌಲ್ಯಗಳೆಲ್ಲ ಕುಸಿದಿರುವಾಗ ಗಾಂಧಿ ವಿಚಾರಧಾರೆಗಳು ಅತ್ಯಂತ ಪ್ರಸ್ತುತವೆನಿಸುತ್ತವೆ. ವಿಶ್ವದಿಗಂತದಲ್ಲಿ ಗಾಂಧೀಜಿಯವರದು ಎದ್ದು ಕಾಣುವಂತಹ ವ್ಯಕ್ತಿತ್ವ. ಈ ವ್ಯಕ್ತಿತ್ವ ಕೇವಲ ಪಾಂಡಿತ್ಯದಿಂದ ಮಾತ್ರ ಬಂದುದಲ್ಲ. ಸತ್ಯ ಮತ್ತು ಅಹಿಂಸೆಯ ಅನುಷ್ಠಾನದಿಂದ ಬಂದದ್ದು. ಅವರದು ತೆರೆದ ಹೃದಯ, ತೆರೆದ ಮನಸ್ಸು, ಯಾವುದೇ ಸಮಾಜ, ರಾಷ್ಟ್ರ ವಿಕಾಸ ಹೊಂದಬೇಕಾದರೆ ಮಾನವೀಯ ಮೌಲ್ಯಗಳು ಅತಿ ಮುಖ್ಯ. ಈ ಮೌಲ್ಯಗಳ ಮೆಟ್ಟಿಲು ಏರಿಯೇ ಆತ ವಿಶ್ವಮಾನವನಾ ಗಬೇಕು. ಮೌಲ್ಯಗಳ ಹೊರತಾಗಿ ಮಾನವ ಮಾನವೀಯವೆನಿಸಿ ಕೊಳ್ಳಲಾರ. ಈ ಮೌಲ್ಯಗಳು ಆತನ ಜೀವನದ ಉಸಿರಾಗಬೇಕು. ಅದನ್ನೇ ನಂಬಿ ಗಾಂಧೀಜಿ ತಮ್ಮ ಜೀವನದುದ್ದಕ್ಕೂ ಮನುಕುಲವನ್ನು ಎತ್ತಹಿಡಿಯಲು ತಮ್ಮನ್ನು ಸಮರ್ಪಿಸಿಕೊಂಡರು. ಅವರ ಮೌಲ್ಯಾಧಾರಿತ ಜೀವನವನ್ನು ಗುರುತಿಸಲು ನಾವು ಕಷ್ಟಪಡಬೇಕಾಗಿಲ್ಲ. ಸರಳ ಬದುಕಿನ ಶ್ರೀಮಂತ ಚಿಂತನೆಯ ಧೀಮಂತ ವ್ಯಕ್ತಿತ್ವ ಅವರದ್ದು. ಮಾನವೀಯ ಮೌಲ್ಯಗಳ ದಾರಿಲ್ಲಿ ಗಾಂಧೀಜಿಯವರು ನಡೆಸಿದ ಪ್ರಯೋಗಗಳು ಬಳಸಿದ ಸತ್ಯ, ಅಹಿಂಸೆಯ ಪರಿಕರಗಳು ಜಾಗತಿಕ ಇತಿಹಾಸದ ಉಜ್ವಲ ಮಾದರಿಗಳು. ಕಾಲದ ಪರೀಕ್ಷೆಗೆ ಮತ್ತೆ ಮತ್ತೆ ಒಳಗಾಗಿ ತನ್ನ ಹೊಳಪು ಹೆಚ್ಚಿಸಿಕೊಳ್ಳುತ್ತಿರುವ 'ಗಾಂಧೀ ವಿಚಾರ ಧಾರೆಗಳು' ಹಿಂದೆಂದಿಗಿಂತಲೂ ಇಂದು ನಮಗೆ ಹೆಚ್ಚು ಪ್ರಸ್ತುತ. ಗಾಂಧೀಜಿಯವರ ರಚನಾತ್ಮಕ ವಿಚಾರಗಳು ಜನರನ್ನು ದ್ವೇಷ, ಅಸೂಯೆ, ಹಿಂಸೆಯಿಂದ ಮುಕ್ತಗೊಳಿಸಿ ಮಾನವನನ್ನಾಗಿ ಮಾಡುತ್ತವೆ. ಹೀಗಾಗಿ ಜಗತ್ತಿನ ಯಾವುದೇ ವಿಚಾರ ಗಾಂಧೀ ತತ್ವಗಳನ್ನು ಹೊರತುಪಡಿಸಿ ಮೌಲಿಕವಾಗಲಾರದು. ಮಾರಕ ಅಣ್ವಸ್ತ್ರಗಳ ಅಪಾರ ರಾಶಿಯ ಮನುಕುಲದ ಸರ್ವನಾಶಕ್ಕೆ ಸಮರ ಸಾರಿರುವ ಭಯೋತ್ಪಾದನೆಯ ಸಂದರ್ಭದಲ್ಲಿ ಸರಳಯುತ ಗಾಂಧಿ ತತ್ವಗಳು ಅತ್ಯಂತ ಪ್ರಸ್ತುತವೆನಿಸುತ್ತವೆ.

ಭಾರತೀಯ ಸಂಸ್ಕೃತಿ ಅವಿಚ್ಛಿನ್ನವಾಹಿನಿ; ಅವಿರತವಾಹಿನಿ. ಅದು ಎಂದೂ ನಿಂತ ನೀರಲ್ಲ. ಪರಂಪರಾನುಗತವಾಗಿ ಬಂದ ಅಮೂಲ್ಯವಾದ ಶಾಶ್ವತ ಮೌಲ್ಯಗಳನ್ನು ಅದು ರಕ್ಷಿಸಿಕೊಂಡು ಬಂದಿದೆ. ಸತ್ಯ,

ಧರ್ಮ, ಪ್ರೇಮ, ಅಹಿಂಸೆ ಮುಂತಾದವು ಶಾಶ್ವತ ಜೀವನ ಮೌಲ್ಯಗಳು. ಪರದೇಶಗಳ ಸಂಸ್ಕೃತಿಗಳೊಡನೆ ಸಂಪರ್ಕ ಬೆಳೆದಾಗ ಆ ಸಂಸ್ಕೃತಿಗಳ ಉತ್ತಮ ಮೌಲ್ಯಗಳನ್ನು ತನ್ನದಾಗಿ ಮಾಡಿಕೊಂಡು ವೈವಿಧ್ಯತೆಯನ್ನು ಮರೆದಿರುವುದು ಭಾರತೀಯ ಸಂಸ್ಕೃತಿಯ ಹೆಗ್ಗಳಿಕೆ. ಭಾರತೀಯ ಸಂಸ್ಕೃತಿಯಲ್ಲಿ ಹಾಗೂ ಸಮಾಜದಲ್ಲಿ ದುಷ್ಟ ಸಂಪ್ರದಾಯಗಳು ತಲೆದೋರಿದಾಗ, ಹಳೆಯ ಮೌಲ್ಯಗಳು ಸವಕಲಾದಾಗ ಅವುಗಳನ್ನು ತೊಡೆದುಹಾಕುವ ಕೆಲಸ ಕಾಲಕಾಲಕ್ಕೆ ನಡೆದು ಬಂದಿದೆ. ಬೇರೆ ದೇಶಗಳಲ್ಲಿ ಸಮಾಜ ಸುಧಾರಣೆ ಅಥವಾ ಪರಿವರ್ತನೆಗೆ ತೀವ್ರ ಕ್ರಾಂತಿಗಳು, ಹಿಂಸಾತ್ಮಕ ಆಂದೋಲನಗಳು ಅಗತ್ಯವಾಗಿ ಕಂಡುಬಂದಿವೆ. ಆದರೆ ಭಾರತದಲ್ಲಿ ಸಾಮಾಜಿಕ, ರಾಜಕೀಯ ಪರಿವರ್ತನೆಗಳು ಶಾಂತಿಯುತವಾಗಿ ನಡೆದಿರುವುದು ಒಂದು ವೈಶಿಷ್ಟ್ಯ. ಹೀಗೆ ಸುಧಾರಣೆ ಅಥವಾ ಪರಿವರ್ತನೆಗಳನ್ನು ತರುವುದರಲ್ಲಿ ಮೊದಲಿನಿಂದಲೂ ಪ್ರವಾದಿಗಳು, ಸಂತರು, ಸುಧಾರಕರು ಅಪ್ರತಿಮ ಪಾತ್ರ ವಹಿಸಿದ್ದಾರೆ. ಹಳಸಿ ಹೋದ ಮೌಲ್ಯಗಳನ್ನು, ಕುರುಡು ಸಂಪ್ರದಾಯಗಳನ್ನು, ದುಷ್ಟ ಕಟ್ಟಳೆಗಳನ್ನು ಗುರುತಿಸಿ ಅವುಗಳನ್ನು ತೊಡೆದುಹಾಕಲು ಕಂಕಣಬದ್ಧರಾದವರು ಮಹಾತ್ಮರು, ಸಂತರು ಮತ್ತು ಸುಧಾರಕರು.

ತಾವು ಕಂಡ ಸತ್ಯವನ್ನು, ತಾವು ಒಪ್ಪಿದ ಹೊಸ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತಾವು ಮೊದಲು ಪರಿವರ್ತಿತರಾಗಿ ಇಡೀ ಜನತೆಯನ್ನು ಪರಿವರ್ತನೆಯ ಹಾದಿಗೆ ಎಳೆಯುವುದು ಮಹಾತ್ಮರ ಮಾರ್ಗ. ಇದು ಒಮ್ಮೊಮ್ಮೆ ನಿಧಾನದ ಮಾರ್ಗವೆಂದು ಕಂಡರೂ ಇದರ ಫಲ ಶಾಶ್ವತ. ಇದರಿಂದ ಸಮಾಜಕ್ಕೆ ಆಗುವ ಪ್ರಯೋಜನ ಅಮಿತ. ಈ ರೀತಿಯಲ್ಲಿ ಪರಿವರ್ತನೆಯ ಪ್ರಕ್ರಿಯೆಯಲ್ಲಿ ವ್ಯಕ್ತಿಗೇ ಪಾರಮ್ಯ. ವ್ಯಕ್ತಿಯ ಸುಧಾರಣೆಯಿಂದ ಸಮಾಜದ ಸುಧಾರಣೆ ಸಾಮಾಜಿಕ ಪರಿವರ್ತನೆಯ ಅಗತ್ಯವನ್ನು ಕಂಡ ಮಹಾತ್ಮರು ಹೊಸ ಮೌಲ್ಯಗಳ ಅನುಷ್ಠಾನದಿಂದ ಮೇಲ್ಪಂಕ್ತಿ ಹಾಕುತ್ತಾರೆ; ಕ್ರಾಂತಿದರ್ಶಿಗಳಾಗುತ್ತಾರೆ. ಸಮಾಜದಲ್ಲಿ ವ್ಯಕ್ತಿಗಳು ಹೆಚ್ಚುಹೆಚ್ಚಾಗಿ ನೂತನ ಮೌಲ್ಯಗಳನ್ನು ಒಪ್ಪಿಕೊಂಡು ಅನುಸರಿಸಿದಾಗ ಅವರ ಜೀವನಕ್ರಮದಲ್ಲಿ, ಜೀವನ ವಿಧಾನದಲ್ಲಿ ಬದಲಾವಣೆಯಾಗುತ್ತದೆ. ಕಡೆಗೆ ಇಡೀ ಸಮಾಜ ಪರಿವರ್ತಿತವಾಗುತ್ತದೆ.

ಮನುಷ್ಯನು ಬದುಕಿದರೆ ಮೌಲ್ಯಗಳಿಗೋಸ್ಕರ ಬದುಕಬೇಕು. ಮೌಲ್ಯಗಳು ಇಲ್ಲದ ಜೀವನವು ಜೀವನವೇ ಅಲ್ಲ. ಮನುಷ್ಯ ಯಾರೇ ಇರಲಿ, ತನ್ನ ಬದುಕಿನಲ್ಲಿ ಬೆಲೆ ಕೊಟ್ಟು ಆಚರಿಸಿಕೊಂಡು ಹೋಗಬೇಕಾದ ಮೌಲ್ಯಗಳು ಶಾಶ್ವತ ಮೌಲ್ಯಗಳು ಇದ್ದೇ ಇವೆ. ಆ ಮೌಲ್ಯಗಳ ಪ್ರಶ್ನೆ ಬಂದರೆ ಮನುಷ್ಯ ಯಾರೊಂದಿಗೂ, ಯಾವುದರೊಂದಿಗೂ ಸಂದಾನ ಮಾಡಿಕೊಳ್ಳಬಾರದು. ತಾನು ಒಬ್ಬನೇ ಆದರೂ ಚಿಂತೆಯಿಲ್ಲ. ಮನುಷ್ಯನು ತಾನು ನಂಬಿದ ಮೌಲ್ಯಗಳಿಗೆ ಅಂಟಿ ನಿಲ್ಲಬೇಕು. ಮೌಲ್ಯಗಳಿಲ್ಲದ ಮನುಷ್ಯ ಕಳೆದು ಹೋಗುವಂತೆ, ಮೌಲ್ಯಗಳು ಇರುವ ಮನುಷ್ಯ ಎಂದೂ ಕಳೆದುಹೋಗುವುದಿಲ್ಲ.

ಮನುಷ್ಯನು ಮಾಡುವ ಕಾರ್ಯಗಳಿಗೆ ಅವನು ನಂಬಿದ ಮೌಲ್ಯಗಳಿಂದಲೇ ಪ್ರೇರಣೆ ಲಭಿಸಬೇಕು. ಮನುಷ್ಯನು ಅನುಭವಿಸುವ ಸುಖ-ದುಃಖಗಳೇನೇ ಇದ್ದರು, ಅವು ಅವನು ಮಾಡುವ ಕೆಲಸದಿಂದಲೇ ಚಿಮ್ಮಿ ಬರುತ್ತವೆ. ಜೀವನವು ಕೇವಲ ಮೌಲ್ಯಗಳನ್ನು ಹೇಳುವುದರಲ್ಲಿ ಇಲ್ಲ. ಆ ಮೌಲ್ಯಗಳನ್ನು ಆಚರಣೆಗೆ ತರುವುದರಲ್ಲಿ ಇದೆ. ಮನುಷ್ಯನು ಮೌಲ್ಯಗಳನ್ನು ತಿಳಿದರೆ ಸಾಲದು, ಅವುಗಳನ್ನು ನಂಬಬೇಕು, ಪ್ರೀತಿಸಬೇಕು, ಪ್ರತ್ಯಕ್ಷಮಾಡಿ ತೋರಿಸಬೇಕು ಎಂಬುದನ್ನು ಗಾಂಧೀಜಿಯವರು ಅತ್ಯಂತ ಮನಮುಟ್ಟುವ ರೀತಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಆಕರ ಗ್ರಂಥಗಳು:

1. ಡಾ. ಹೊ. ಶ್ರೀನಿವಾಸಯ್ಯ "ಎಂ.ಕೆ. ಗಾಂಧಿಯವರ ಹಿಂದ್‌ಸ್ವರಾಜ್", ಕರ್ನಾಟಕ ಗಾಂಧೀಸ್ಮಾರಕ ನಿಧಿ, ಬೆಂಗಳೂರು-2014.
2. ಸುರೇಂದ್ರಕೌಲಗಿ "ಜನಪದ ವಿಚಾರ", ಜನಪದ ಸೇವಾಟ್ರಸ್ಟ್, ಮೇಲುಕೋಟೆ, 2013.
3. ಪಿ.ಎಸ್. ಗಂಗಾಧರ "ರಾಜ್ಯಶಾಸ್ತ್ರದ ಮೂಲತತ್ವಗಳು", ಮೈಸೂರು ಬುಕ್ ಹೌಸ್, ಮೈಸೂರು, 2013.
4. ಎಂ. ಜಯರಾಮ ರೈ "ಬಹುರೂಪಿ ಗಾಂಧೀ", ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರು, 2012.
5. ಮುಜಾಫರ್ ಅಸ್ಸಾದಿ, "ಗಾಂಧಿಯ ಹಿಂದ್ ಸ್ವರಾಜ್ – ಶತಮಾನದ ಸಂದರ್ಭದಲ್ಲಿ ವಿಮರ್ಶೆಗಳು", ವಿಸ್ಮಯ ಪ್ರಕಾಶನ, ಮೈಸೂರು, 2009.
6. ಎಂ. ಚಂದ್ರಪೂಜಾರಿ, "ರಾಜಕೀಯದ ಬಡತನ" ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, 2008.
7. ಕರ್ನಾಟಕ ವಿಕಾಸ ಮಾಸಪತ್ರಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು, ಜುಲೈ 2005.
8. ಠಾಕೂರದಾಸ್ ಬಂಗ್ "ಗ್ರಾಮಸ್ವರಾಜ್ಯ", ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ, ಬೆಂಗಳೂರು, 1998.
9. ಕೆ.ಎಸ್. ನಾರಾಣಸ್ವಾಮಿ, "ಮಹಾತ್ಮಗಾಂಧೀ ಮತ್ತು ಸಮಾಜ ಪರಿವರ್ತನೆ" ಗಾಂಧೀಶಾಂತಿ ಪ್ರತಿಷ್ಠಾನ, ಬೆಂಗಳೂರು, 1994.
10. ಎಂ.ಕೆ. ಗಾಂಧಿ, "ಹಿಂದ್ ಸ್ವರಾಜ್ ಒರ್ ಇಂಡಿಯನ್ ಹೋಮ್‌ರೂಲ್", ನವಜೀವನ ಮುದ್ರಣಾಲಯ, 1938.

ಜಾಗತೀಕರಣದ ಯುಗದಲ್ಲಿ ಕಲ್ಯಾಣ ರಾಜ್ಯದ ಸ್ಥಾನ-ಮಾನ

* ಶರ್ಮಿಳಾ ಟಿ.ಸಿ., ** ಡಾ|| ಕೃಷ್ಣ ಆರ್ ಹೊಂಬಾಳ್

* ಸಂಶೋಧನಾ ವಿದ್ಯಾರ್ಥಿ, ** ಸಂಶೋಧನಾ ಮಾರ್ಗದರ್ಶಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ ಮೈಸೂರು.

ಜಾಗತೀಕರಣದ ಉಗಮದ ಇತಿಹಾಸವು ನಿರಂತರ ಚರ್ಚೆಗೆ ಒಳಪಡುತ್ತಲೇ ಇದೆ ಕೆಲವು ವಿದ್ವಾಂಸಕರು ಜಾಗತೀಕರಣದ ಪ್ರಕ್ರಿಯೆಯು ಆಧುನಿಕ ಕಾಲದಲ್ಲಿ ಪ್ರಾರಂಭವಾಗಿದೆ ಎಂದು ಹೇಳುತ್ತಾರೆ. ಉಳಿದ ಕೆಲವು ವಿದ್ವಾಂಸಕರು ಜಾಗತೀಕರಣವು ದೊಡ್ಡ ಇತಿಹಾಸ ಹೊಂದಿರುವ ವಿದ್ಯಾಮಾನವಾಗಿದೆ ಎಂದು ವ್ಯಾಖ್ಯಾನಿಸುತ್ತಾರೆ, ಜಾಗತೀಕರಣ ವಿಶ್ವವನ್ನೇ ಒಂದು ಸಣ್ಣ ಗ್ರಾಮವನ್ನಾಗಿ ಪರಿವರ್ತನೆ

ಮಾಡುವ ಸಾಧನವಾಗಿದ್ದು, ಪರಿವರ್ತನೆ ಪ್ರಕೃತಿಯ ನಿಯಮವಾದರು ಕೂಡ ಜಾಗತಿಕರಣ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ತನ್ನದೇ ಆದ ಛಾಯೆ ಮೂಡಿಸಿದೆ, ರಾಜಕೀಯ ವ್ಯವಸ್ಥೆಯು ಕೂಡ ಇದಕ್ಕೆ ಹೊರತದುದಲ್ಲ, ಭಾರತ ಕಾವಲು ರಾಜ್ಯದಿಂದ ದ್ವೀತಿಯ ಮಹಾಯುದ್ದದ ನಂತರ ಕಲ್ಯಾಣ ರಾಜ್ಯದ ತತ್ವವನ್ನು ಅಳವಡಿಸಿಕೊಂಡು ಭಾರತ ಕಲ್ಯಾಣ ರಾಜ್ಯವಾಗಿದೆ, ಜಾಗತೀಕರಣವು ಸರಿಸುಮಾರು 1990 ರ ವೇಳೆಗೆ ಭಾರತದಂತಹ ಅಭಿವೃದ್ದಿಶೀಲಾ ರಾಷ್ಟ್ರವನ್ನು ಪ್ರಸರಿಸಿತು. ಭಾರತದ ರಾಜಕೀಯ ವ್ಯವಸ್ಥೆಯ ಮೇಲೆ ಜಾಗತೀಕರಣದ ಸಾಧಕ-ಭಾದಕ ಅಂಶಗಳೆರಡನ್ನು ಗಮನಿಸಬಹುದಾಗಿದೆ, ಜಾಗತೀಕರಣವು ಭಾರತದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕಾಗಿ ಹೊಸ ಆರ್ಥಿಕ ನೀತಿ -2005 ರಲ್ಲಿ ಜಾರಿಗೆ ತಂದಿದ್ದು ಪ್ರಸ್ತುತ ಆಡಳಿತ ವ್ಯವಸ್ಥೆಯು ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳಂತಹ ಆರ್ಥಿಕ ವ್ಯವಸ್ಥೆಗಳಿಂದಾಗಿ ಹೊಸದಾದ ಆಡಳಿತದ ಸವಾಲುಗಳನ್ನು ಎದರಿಸುವಂತಾಗಿದೆ ಹೀಗೆ ಜಾಗತೀಕರಣದ ಯುಗದಲ್ಲಿ ಕಲ್ಯಾಣ ರಾಜ್ಯದ ಸ್ಥಾನ-ಮಾನ ಯಾವ ರೀತಿ ಇದೆ ಎಂಬುದನ್ನು ಪ್ರಸ್ತುತ ಸಂದರ್ಭದಲ್ಲಿ ಚರ್ಚಿಸಬೇಕಾಗಿದೆ.

ಜಾಗತೀಕರಣದ ಯುಗದಲ್ಲಿ ಕಲ್ಯಾಣ ರಾಜ್ಯದ ಸ್ಥಾನ-ಮಾನವನ್ನು ಚರ್ಚಿಸ ಬೇಕಾದರೆ ಮೊದಲು ಜಾಗತೀಕರಣದ ಅರ್ಥ ವಿವರಣೆ ತಿಳಿಯುವುದು:

ಅರ್ಥ ವಿವರಣೆ: ಜಾಗತಿಕರಣವು ಒಂದು ಪ್ರಕ್ರಿಯೇ ಈ ವಿದ್ಯಮಾನದ ಪ್ರಭಾವವು ಆರ್ಥಿಕ ಕ್ಷೇತ್ರದಲ್ಲಿ ಎದ್ದು ಕಾಣುತ್ತದೆ. ಇತರ ಕ್ಷೇತ್ರಗಳ ಮೇಲು ಗಣನೀಯವಾಗಿ ಪರಿಣಾಮ ಬೀರುತ್ತಿದೆ. ಸಮಾಜದ ಜನರ ಜೀವನದ ಆರ್ಥಿಕ, ರಾಜಕೀಯ, ವ್ಯಾಪಾರ ವಾಣಿಜ್ಯ ಮೊದಲಾದ ಎಲ್ಲಾ ಕ್ಷೇತ್ರಗಳು ಅಂತರಾಷ್ಟ್ರೀಯ ಪ್ರಭಾವಗಳಿಗೆ ಒಳಪಡುವುದಾಗಿರುತ್ತದೆ.

ಆರ್ಥಿಕ ದೃಷ್ಟಿಕೋನದಲ್ಲಿ ಜಾಗತೀಕರಣ ಎಂದರೆ ಒಂದು ದೇಶದ ಆರ್ಥಿಕ ಕ್ಷೇತ್ರವನ್ನು ಜಾಗತೀಕ ಆರ್ಥಿಕ ವ್ಯವಸ್ಥೆಗೆ ಮುಕ್ತವಾಗಿ ತೆರೆದಿಡುವುದು, ಅಂದರೆ ದೇಶಿಯ ಆರ್ಥಿಕ ಕ್ಷೇತ್ರವನ್ನು ಜಾಗತೀಕ ಆರ್ಥಿಕ ವ್ಯವಸ್ಥೆಯೊಂದಿಗೆ ಜೋಡಿಸಲಾಗುವುದು.

ಆಕ್ಸ್‌ಫರ್ಡ್ ಆರ್ಥಶಾಸ್ತ್ರದ ನಿಘಂಟಿನ ಪ್ರಕಾರ "ಇಡೀ ವಿಶ್ವವೇ ಒಂದೇ ಮಾರುಕಟ್ಟೆಯಾಗಿ ಮಾರ್ಪಡಿಸುವ ಕ್ರಿಯೆಯೇ ಜಾಗತೀಕರಣ".

ಇನ್ನೊಂದು ಅರ್ಥದಲ್ಲಿ "ಜಾಗತೀಕರಣ ಸಾಮಾನ್ಯವಾಗಿ ಸಮಾಜದಲ್ಲಿ ಉತ್ಪಾದಿತವಾಗುವ ಜ್ಞಾನ ಮತ್ತು ವಿಚಾರಗಳು ಯಾವುದೇ ತಡೆಗಳಿಲ್ಲದೆ ಪ್ರಪಂಚದಾದ್ಯಂತ ಪ್ರಸಾರವಾಗಿ ಆಯಾ ರಾಷ್ಟ್ರಗಳ ಜನರು ಅವುಗಳನ್ನು ಅಳವಡಿಸಿಕೊಂಡು ತಮ್ಮ ಬದುಕಿಗೆ ನೆರವಾಗುವ ರೀತಿಯಲ್ಲಿ ದುಡಿಸಿಕೊಳ್ಳುವ ಪ್ರತಿಕ್ರಿಯೆ".2.

ಪೋಲಿಸ್ ರಾಜ್ಯದಿಂದ ದ್ವಿತೀಯ ಜಾಗತೀಕ ಮಹಾಯುದ್ಧದ ನಂತರ ಅನೇಕ ವಿಕಾಸ ಶೀಲ ದೇಶಗಳು ಕಲ್ಯಾಣ ರಾಜ್ಯದ ತತ್ವವನ್ನು ಆದರಿಸಿ ಸಮಾಜೋ- ಆರ್ಥಿಕ ಪರಿವರ್ತನೆಯನ್ನು ತರಲು ಯತ್ನಿಸುತ್ತಿವೆ. ಸಮಾಜ ನಿರಂತರವಾಗಿ ಬದಲಾಗುವ ಸಂಸ್ಥೆಯಾಗಿದ್ದು, ಸಮಾಜ ಬದಲಾದಂತೆ ಸಮಾಜದ ಮೌಲ್ಯಗಳು, ನ್ಯಾಯ, ನೀತಿ, ನೈತಿಕತೆ, ಸಮಾನತೆ, ಸ್ವತಂತ್ರ, ಭ್ರಾತೃತ್ವ, ಮಾನವೀಯತೆ ಎಲ್ಲಾ ಮೌಲ್ಯಗಳು ಬದಲಾಗುವುದು. ಕಲ್ಯಾಣ ರಾಜ್ಯದ ಪರಿಕಲ್ಪನೆಯು ಬದಲಾಗುವುದು. ಕಲ್ಯಾಣ ರಾಜ್ಯದ ರೂಪುರೇಷೆ ದೇಶದಿಂದ ದೇಶಕ್ಕೆ ಬೇರೆ ಬೇರೆ ರೂಪದಲ್ಲಿದ್ದು ಅದರೆ, ಪ್ರತಿಯೊಂದು ದೇಶದ ಕಲ್ಯಾಣದ ಗುರಿ ಮಾತ್ರ ಒಂದೇ ಆಗಿರುತ್ತದೆ. ಆಯಾ ದೇಶಗಳ ಎಲ್ಲಾ ಧಮನೀತ ವರ್ಗಗಳ ಸರ್ವತೋಮುಖ ಅಭಿವೃದ್ಧಿ ಹೊಂದುವುದು. ವ್ಯಕ್ತಿ ಮತ್ತು ಸಮೂಹಗಳ ತೃಪ್ತಿಕರವಾದ ಜೀವನ ಮಟ್ಟವನ್ನು ಆರೋಗ್ಯ ಮಯವಾದ ಜೀವನವನ್ನು ರೂಪಿಸುವುದೇ ಕಲ್ಯಾಣ ರಾಜ್ಯದ ಗುರಿಯಾಗಿದೆ. ರಾಜ್ಯವು ಸರ್ವತೋಮುಖ ಅಭಿವೃದ್ಧಿ ಸಾಧಿಸಬೇಕಾದರೆ ಸಮಾಜದ ಎಲ್ಲಾ ವರ್ಗಗಳಿಗೆ ಸರ್ಕಾರ ನೀಡುವ ಸೇವೆಗಳ ಫಲವು ಸಮರ್ಪಕವಾಗಿ ದೊರೆತಾಗ ಮಾತ್ರ ಸಮಾಜೋ-ಆರ್ಥಿಕ ಬೆಳವಣಿಗೆಗೆ ಸಾಕಷ್ಟು ಅವಕಾಶ ದೊರಕುತ್ತದೆ. ಸರ್ಕಾರಗಳು ಕಲ್ಯಾಣ ರಾಜ್ಯದ ನಿಯೋಗಿಗಳಾಗಿ ದೌರ್ಜನ್ಯಕ್ಕೆ (ತುಳಿತಕ್ಕೆ) ಒಳಗಾದ ಎಲ್ಲಾ ಸಮುದಾಯದ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆ ಮಾಡುವ ಉದ್ದೇಶ ಹೊಂದಿದೆ. ಉದಾಹರಣೆ: ಭಾರತ ಸರ್ಕಾರವು ವಿವಿಧ ಯೋಜನೆ ಹಮ್ಮಿಕೊಂಡಿದ್ದು. ಸಮುದಾಯ ಅಭಿವೃದ್ಧಿ ಯೋಜನೆ , ರಾಷ್ಟ್ರೀಯ ಮಾನವ ಶಕ್ತಿ ಯೋಜನೆ, ಉದ್ಯೋಗ ಭರವಸ ಯೋಜನೆ, 20 ಅಂಶಗಳ ಕಾರ್ಯಕ್ರಮ, ಪ್ರಧಾನಮಂತ್ರಿ ರೋಜ್‌ಗಾರ್ ಯೋಜನೆ , ಸ್ವರ್ಣಜಯಂತಿ. 3

ಕಲ್ಯಾಣ ರಾಜ್ಯಗಳು ವಿಕೇಂದ್ರಿಕೃತ ಆಡಳಿತಕ್ಕೆ ಒತ್ತುಕೊಟ್ಟಿದ್ದು ಸೀಮಿತ ರಾಜಕೀಯ ಅಧಿಕಾರ ಚಲಾವಣೆಗೆ ಸಾಕ್ಷಿಯಾಗಿದೆ. ಸ್ಥಳೀಯ ಜನತೆಯು ರಾಜಕೀಯದಲ್ಲಿ ಭಾಗವಹಿಸುವಂತೆ ಮಾಡಲಾಗಿದೆ. ಸ್ಥಳೀಯ ಜನತೆಗೆ ಬೇಕಾದ ರಾಜಕೀಯ ಜ್ಞಾನವನ್ನು ಕೂಡ ಸಮೂಹ ಮಾಧ್ಯಮಗಳ ಮೂಲಕ ನೀಡಲಾಗುತ್ತಿದ್ದು. ಒಟ್ಟಿನಲ್ಲಿ ಕಲ್ಯಾಣ ರಾಜ್ಯ ಪ್ರಜೆಗಳಿಗೆ ಪ್ರಶ್ನೆ ಮಾಡುವ ಜಾಗೃತಿ ಮನೋಭಾವವನ್ನು ಹುಟ್ಟು ಹಾಕಿದೆ ಕಲ್ಯಾಣ ರಾಜ್ಯವು ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ಸಮಾನವಾಗಿ ನೀಡಲಾಗಿದ್ದು ಇದರಂತೆ ಕಲ್ಯಾಣ ರಾಜ್ಯವು ಸಂಪತ್ತಿನ ಸಮಾನ ಹಂಚಿಕೆ ಪ್ರತಿಯೊಬ್ಬ ವ್ಯಕ್ತಿಯ 'ಅಭಿವೃದ್ಧಿ' ಏಳಿಗೆಯೇ ಮೂಲ ಮಂತ್ರವಾಗಿದೆ.

ಜಾಗತೀಕರಣವು ಕಲ್ಯಾಣ ರಾಜ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿದ್ದು ಈ ಕೇಳಗಿನ ಆಧಾರದ ಮೇಲೆ ಜಾಗತೀಕರಣದಿಂದ ಬದಲಾದ ಪರಿಸ್ಥಿಯನ್ನು ಅರ್ಥೈಸಿಕೊಳ್ಳಬಹುದು.

ಪ್ರಸ್ತುತ ಸಂದರ್ಭದಲ್ಲಿ ಜಾಗತೀಕರಣವು ಕಲ್ಯಾಣ ರಾಜ್ಯದ ಪಾತ್ರವನ್ನು ಸೀಮಿತಗೊಳಿಸಿ ಮುಕ್ತ ಮಾರುಕಟ್ಟೆಯ ವ್ಯಾಪ್ತಿಯನ್ನು ಹೆಚ್ಚಿಸಿವೆ. ಅಂದರೆ, ಜಾಗತೀಕರಣದ ಬೆಳವಣಿಗೆಯು ರಾಜ್ಯದ ಕನಿಷ್ಠ ರೂಪದ ಪಾತ್ರ ಅಥವಾ ಸರ್ಕಾರದ ಕುಗ್ಗುವಿಕೆಗೆ ಕಾರಣವಾಗಿದೆ. ರಾಜ್ಯದ ಹಸ್ತಕ್ಷೇಪ ವಿಮುಖವಾಗಿದೆ. ಇಂದು ರಾಜ್ಯವು ನಿಯಂತ್ರಕ ಅಥವಾ ಉತ್ಪದಕನ ಪಾತ್ರದ ಬದಲಿಗೆ ಸಹಾಯಕ ಅಥವಾ ಪ್ರವರ್ಧಕನ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಸರ್ಕಾರ ಕೆಲಸಗಾರನ ಪಾತ್ರದಿಂದ ವಿತರಕನ ಪಾತ್ರಕ್ಕೆ ಬದಲಾಗುತ್ತಿದೆ. ರಾಜ್ಯದ ಪಾತ್ರವನ್ನು ಕನಿಷ್ಠ ಮಟ್ಟಕ್ಕೆ ಇಳಿಸಿ ಸರ್ಕಾರಿ ಸಂಸ್ಥೆಗಳ ಕಾರ್ಯಗಳಲ್ಲಿ ಕಡಿತಗೊಳಿಸುವುದಲ್ಲದೆ ಸರ್ಕಾರದ ವಿವಿಧ ಕಾರ್ಯಗಳನ್ನು ಮಾರುಕಟ್ಟೆಗೆ ವರ್ಗಾವಣೆಯಾಗುತ್ತಿದೆ. ಇಂದು ಸಾಂಪ್ರದಾಯಿಕ ರಾಜ್ಯಕ್ಕೆ ಪರ್ಯಾಯವಾಗಿ ಮಾರುಕಟ್ಟೆ ವ್ಯವಸ್ಥೆ ಅಸ್ಥಿತ್ವಕ್ಕೆ ಬರುತ್ತಿದೆ. ರಾಜ್ಯವು ಪ್ರದೇಶಿಕವಾಗಿ ಗುರುತಿಸಲ್ಪಟ್ಟ ಗಡಿಯೊಳಗೆ ಕಾರ್ಯನಿರ್ವಹಿಸಿದರೆ ಮಾರುಕಟ್ಟೆಯ ಕಾರ್ಯಕ್ಷೇತ್ರ ವಿಶ್ವವ್ಯಾಪಿಯಾಗಿದೆ. [4] ಬಹುರಾಷ್ಟ್ರೀಯ ಕಂಪನಿಗಳು

ಅಂತರ್ ರಾಷ್ಟ್ರೀಯ ಸಂಸ್ಥೆಗಳಾದ ಡಬ್ಲು ಟಿ.ಒ. , ಐ.ಎಂ.ಎಫ್., ಐ.ಬಿ.ಅರ್.ಡಿ ಇವುಗಳ ಹಿಡಿತದಿಂದ ಕಲ್ಯಾಣ ರಾಜ್ಯವು ತನ್ನ ಸಾರ್ವಭೌಮತ್ವವನ್ನು ಕಳೆದುಕೊಳ್ಳುವ ಎಲ್ಲಾ ಲಕ್ಷಣಗಳಿವೆ.

ಕಲ್ಯಾಣ ರಾಜ್ಯದಲ್ಲಿ ಜಾಗತೀಕರಣದ ಪ್ರಭಾವ ಸರ್ಕಾರಿ ಮತ್ತು ಸಾರ್ವಜನಿಕ ರಂಗದ ವಿಶಾಲತೆಯಿಂದಾಗಿ ಅಧಿಕಾರ ಶಾಹಿ ವ್ಯವಸ್ಥೆಯಲ್ಲಿ ಕಡತಗಳು ಮತ್ತು ಕಾಗದ ಪತ್ರಗಳು ಬಸವನ ಹುಳುವಿನ ರೀತಿಯಲ್ಲಿ ಅತಿ ನಿಧಾನವಾಗಿ ಚಲಿಸುತ್ತದೆ. ಯಾವುದೇ ಒಂದು ವಿಷಯದಲ್ಲಿ ನಿರ್ಣಯ ಕೈಗೊಳ್ಳಬೇಕಾದರು ಅಸಾಧರಣ ವಿಳಂಬ ನೀತಿ ಅನುಸರಿಸುತ್ತದೆ. ಪ್ರಸ್ತುತ ಕಲ್ಯಾಣ ಪರ ರಾಜ್ಯವು ಉಳ್ಳವರ ಸಾಮ್ರಾಜ್ಯವಾಗಿ ಪರಿವರ್ತನೆಯಾಗಿದೆ[5].

ಜಾಗತೀಕರಣವು ಕಾನೂನು ಸಡಿಲಿಕೆಗೆ ಕಾರಣೀಭೂತವಾಗಿದೆ ಅದ್ದರಿಂದ ಕಲ್ಯಾಣ ರಾಜ್ಯದಲ್ಲಿ ಬಡವರು ದುರ್ಬಲ ವರ್ಗದವರ ಮೇಲೆ ನಿರಂತರ ದೌರ್ಜನ್ಯ ನೆಡೆಯುತ್ತಿರುವುದು ಕಲ್ಯಾಣ ರಾಜ್ಯಕ್ಕೆ ತೊಡಕಾಗಿದೆ[6]. ಪ್ರಸ್ತುತ ರಾಜಕೀಯ ವ್ಯವಸ್ಥೆ ದುಸ್ಥಿತಿಗೆ ತಲುಪಿದೆ ಜಾಗತೀಕರಣದ ಯುಗದಲ್ಲಿ ರಾಜಕೀಯ ವ್ಯಕ್ತಿಗಳಲ್ಲಿ ಮೌಲ್ಯದಾರಿತ ಆಡಳಿತ ಕಡಿಮೆಯಾಗಿರುವುದು ಅಧಿಕಾರ ದಾಹದಿಂದ ಸ್ಥಾನವನ್ನು ಅಲಂಕರಿಸಿರುವ ಆಳುವ ವ್ಯಕ್ತಿಗಳು ಹಲವಾರು ಅಗರಣಗಳಿಗೆ ಸಿಲುಕಿ ಪ್ರಜೆಗಳ ಅಭಿವೃದ್ದಿ ನಿರ್ಲಕ್ಷ್ಯ ಮಾಡಲಾಗಿದೆ. ಹೀಗೆ ಜಾಗತೀಕರಣವು ಕಲ್ಯಾಣ ರಾಜ್ಯದಲ್ಲಿ ರಾಜಕೀಯ ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲ ಮಾಡುತ್ತಿದೆ ಎಂಬುದನ್ನು ಗಮನಿಸಬೇಕಾಗಿದೆ[7].

ಒಟ್ಟಿನಲ್ಲಿ 20ನೇ ಶತಮಾನದ ಮಧ್ಯಭಾಗದಲ್ಲಿ ಜಾಗತೀಕ ಅರ್ಥವ್ಯವಸ್ಥೆಯಲ್ಲಿ ಅಳವಡಿಸಿಕೊಂಡ ಶ್ರೀಮಂತ ರಾಷ್ಟ್ರಗಳ ಪ್ರಯೋಜಿತ ನೆಲೆಗಳನ್ನು ಎಲ್.ಪಿ.ಜಿ, ಗಳೆಂದು ಕರೆಯಲಾಗುತ್ತದೆ. ಶ್ರೀಮಂತ ರಾಷ್ಟ್ರಗಳು ಜಗತ್ತಿನ ಕಲ್ಯಾಣ ರಾಜ್ಯಗಳ ಮಾರುಕಟ್ಟೆಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಸಾಮ್ರಾಜ್ಯ ಶಾಹಿನೀತಿ ಮತ್ತು ಬಂಡವಾಳ ಶಾಹಿನೀತಿಯನ್ನು ಏರಲು ಪ್ರಯತ್ನಿಸುತ್ತಿದೆ. ಈ ಜಾಗತೀಕ ಅರ್ಥವ್ಯವಸ್ಥೆಯ ಉದ್ದೇಶಗಳ ಬಗ್ಗೆ ಮತ್ತು ಪರಿಣಾಮಗಳ ಬಗ್ಗೆ ಖಚಿತವಾಗಿ ಹೇಳುವುದು ಅಷ್ಟು ಸುಲಭ ಸಾಧ್ಯವಲ್ಲ ಆ ಉದ್ದೇಶಗಳು ಮೇಲ್ನೋಟಕ್ಕೆ ವಿಕಾಸಶೀಲ ರಾಷ್ಟ್ರಗಳಿಗೆ ಅನುಕೂಲವಾಗುವಂತೆ ಕಂಡುಬಂದರು ದೂರದೃಷ್ಟಿಯಲ್ಲಿ ಈ ರಾಷ್ಟ್ರಗಳಿಗೆ ಅನಾಹುತ ತಪ್ಪಿದಲ್ಲ ಎಂಬ ಅನುಮಾನವು ಇದೆ. ಉದಾಹರಣೆ ಅರ್ಜೆಂಟೈನ ದೇಶವನ್ನು ಅಂತರ್ ರಾಷ್ಟ್ರೀಯ ಹಣಕಾಸು ಸಂಸ್ಥೆಯು ಒಂದು ಮಾದರಿ ದೇಶವೆಂದು ಘೋಷಿಸಿತ್ತು. ಆದರೆ, ಆ ದೇಶವು ಅನಂತರ ದೀವಾಳಿ ಸ್ಥಾನದಲ್ಲಿ ನಿಂತಿತ್ತು.

ಜಾಗತೀಕರಣವನ್ನು ಭಾರತ ಮಾತ್ರ ಒಪ್ಪಿಕೊಳ್ಳದೆ ಅನೇಕ ವಿಕಾಸಶೀಲ ರಾಷ್ಟ್ರಗಳು ತಮ್ಮ ನೆಲದಲ್ಲಿ ರತ್ನಕಂಬಳಿ ಹಾಸಿ ವಿದೇಶಿಸಂಸ್ಥೆಗಳನ್ನು ಅರ್ಥಾತ್ ಬಹುರಾಷ್ಟ್ರೀಯ ಸಂಸ್ಥೆಗಳನ್ನು ಅಹ್ವಾನಿಸಲಾಗಿದೆ. ಜಾಗತೀಕರಣ ಮುಖವಾಡವನ್ನು ಧರಿಸಿ ಅಭಿವೃದ್ದಿಶೀಲ ರಾಷ್ಟ್ರಗಳ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದ್ದು ರಾಜ್ಯ – ರಾಷ್ಟ್ರದ ಸಾರ್ವಭೌಮತ್ವದ ಮೇಲೆ ಹಿಡಿತವನ್ನು ಕಳುದುಕೊಳ್ಳುವ ಎಲ್ಲಾ ಲಕ್ಷಣಗಳಿವೆ. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸರಿಸುಮಾರು ಮುನ್ನೂರು ವರ್ಷಗಳ ಕಾಲ ಆಳ್ವಿಕೆಮಾಡಿ ನಮ್ಮನ್ನು ಆಳಿದ ಪ್ರೌವೃತ್ತಿ ಮತ್ತೆ ಈಸ್ಟ್ ಇಂಡಿಯಾ ಕಂಪನಿಗಿಂತ ಬಲಿಷ್ಟವಾದ ಕಂಪನಿಗಳು (ಬಹುರಾಷ್ಟ್ರೀಯ ಕಂಪನಿಗಳು) ಭಾರತದಲ್ಲಿ ಲಗ್ಗೆ ಇಟ್ಟಿದ್ದು ಭವಿಷ್ಯದಲ್ಲಿ ಭಾರತವನ್ನು ಸಂಪೂರ್ಣ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತದೆ ಎಂಬುದು ಸಂಶಯ ಹುಟ್ಟಿಸುವ ಹಾಗೂ ಆತಂಕದ ವಿಷಯವಾಗಿದೆ[8]. ಪರ್ಯಾಯ ಜಾಗತೀಕರಣ ಯು.ಎಸ್.ಎ ಕ್ಲಬ್ ಅಫ್ ರೋಮನ್‌ನ ನಿರ್ದೇಶಕರು ಡಾ॥ ಫಾನ್ಸಿಸ್ಕೋ ಸ್ಪಿಪೋ ಸಲಹೆ ಮಾಡುವಂತೆ ಜಗತ್ತಿನ ರಾಷ್ಟ್ರಗಳ ಆರ್ಥಿಕ ಮತ್ತು ರಾಜಕೀಯ ಸಮತೋಲನವನ್ನು ಜಾಗತೀಕ ಸರ್ಕಾರವು ಚಿಂತನೆ ಮಾಡಬೇಕು. ಒಂದು ಜಾಗತೀಕ ಒಕ್ಕೂಟವು ರಾಜ್ಯ ಸರ್ಕಾರಗಳ ಅಧಿಕಾರವನ್ನು ಅತಿಕ್ರಮಿಸಬಾರದು ಸ್ಪರ್ಧೆಗೆ ಜಗತ್ತಿನಾದ್ಯಂತ ಎರಡು ದೇಶಗಳಿಗೆ ಸಮಾನ ಶಕ್ತಿ–ಸಾಮರ್ಥ್ಯಗಳಿರುವಂತೆ ಪ್ರತಿಯಾಗಿ ನೆರವಾಗಬೇಕು[9].

ಉಪಸಂಹಾರ : ಕಲ್ಯಾಣ ರಾಜ್ಯವು ಜಾಗತೀಕರಣ, ಖಾಸಗೀಕರಣ, ಉದಾರೀಕರಣ ದಂತಹ ಆರ್ಥಿಕ ವ್ಯವಸ್ಥೆಗಳಿಂದಾಗಿ ಹೊಸದಾದ ರೀತಿಯ ಆಡಳಿತದ ಸವಾಲುಗಳನ್ನು ಎದುರಿಸುವಂತಾಗಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ ಬಹುತೇಕವಾಗಿ ಆಡಳಿತದ ವೈಖರಿಯು ಬದಲಾವಣೆ[5]ಗೊಳ್ಳಬೇಕಾಗಿರುತ್ತದೆ. ಆದರೆ ಪ್ರಸ್ತುತದ ಆಡಳಿತದಲ್ಲಿ ಹಳೆಯ ನಿಯಮವಳಿಗಳೆ ಇರುವುದರಿಂದ ಜಾಗತೀಕರಣಕ್ಕೆ ಪೂರಕವಾದ ಆಡಳಿತ ನಡೆಸುವುದು ಸ್ವಲ್ಪ ಕಷ್ಟದಾಯಕವಾಗುತ್ತದೆ ಏಕೆಂದರೆ ಇಂದಿನ ಆರ್ಥಿಕತೆ ಬಹುತೇಕವಾಗಿ ಭೌದ್ಧಿಕ ಆರ್ಥಿಕ ಶ್ರಮದಾರಿತ ಆರ್ಥಿಕತೆ ಯಾಗಿದ್ದು ಅದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಅಲ್ಲದೆ ಸರ್ಕಾರ ಇಂದು ಒಂದು ಉದ್ಯಮೆ ಸಂಸ್ಥೆಯಂತೆ ಜಾಗತೀಕ ಮಟ್ಟದಲ್ಲಿ ಸ್ಪರ್ಧಿಸಬೇಕಾಗಿದ್ದು ಹಳೆಯ ಮಾದರಿಯ ನೌಕರಿಶಾಹಿ ಆಡಳಿತ ವ್ಯವಸ್ಥೆಯಿಂದ ಹೊರಬರಬೇಕಾಗಿರುವುದು ತೀರಾ ಅನಿವಾರ್ಯವೆನಿಸುತ್ತದೆ ಆದರೆ ಅಂತಿಮವಾಗಿ ಹೇಳುವುದಾದರೆ ಈ ರೀತಿಯ ಹೊಸ ಆರ್ಥಿಕ ಸ್ಪರ್ಧಾತ್ಮಕ ನಿಯಮವಳಿಗಳು ರಚನೆಯಾಗಿದ್ದರು ಸಹ ಆಡಳಿತವು ನಾಗರೀಕ ಹಕ್ಕುಗಳ ರಕ್ಷಣೆಗೆ ಪೂರಕವಾಗಿರುವ ಮೂಲಕ ಜನತೆಯ ಕಲ್ಯಾಣವನ್ನು ಕೇಂದ್ರಿಕರಿಸಿದ ಆಡಳಿತ ವ್ಯವಸ್ಥೆಯಾಗಿರಬೇಕಾಗಿರುತ್ತದೆ. ಹೀಗೆ ಜನತೆಯ ಕಲ್ಯಾಣ ಒಂದು ಕಡೆ ಮತ್ತೊಂದು ಕಡೆಯಲ್ಲಿ ಜಾಗತೀಕ ಮಟ್ಟದಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಇವೆರಡನ್ನು ಸರಿದೂಗಿಸುವುದು ಆಡಳಿತದ ಮುಂದಿರುವ ಒಂದು ದೊಡ್ಡ ಸವಾಲು

ಗ್ರಂಥ ಋಣ

1. ರಾಜ್ಯಶಾಸ್ತ್ರ–ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ, 2008 ಬೆಂಗಳೂರು
2. Vijay kumar--globalization and Development Paradigms beyand development, 2003,new delhi
3. A.S.kohli and S.R .Sharma- Welfare State ,2008, new delhi
4. WWW.kn.wikipidia.org.o/ ಭಾರತದ ಜಾಗತೀಕರಣ http// www.kn.wikipidia.org.e ಭಾರತದ ಜಾಗತೀಕರಣ
5. Mahesh Chandra Prasad - globalization and Development,2009, new delhi
6. Davl hirst , Balmin carnwal, Grahame Thompson and Simon bromley -- globalization in question,2009. Greate briten.
7. ಕೆ.ಜೆ.ಸುರೇಶ್ –ಆಧುನಿಕ ಸರ್ಕಾರಗಳು 2010 ಮೈಸೂರು
8. http://www.kn.wikipidia.org.o ಜಾಗತೀಕರಣ
9. ಚ.ನ. ಶಂಕರ್ ರಾವ್– ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ದಿ 2008 ಮಂಗಳೂರು.

ಕರ್ನಾಟಕದಲ್ಲಿ ಮಹಿಳಾ ಹಕ್ಕುಗಳ ಸಂವರ್ದನೆಯಲ್ಲಿ ರಾಜ್ಯ ಮಹಿಳಾ ಆಯೋಗದ ಒಂದು ವಿಮರ್ಶೆ

* ಶಿಲ್ಪ ಎಸ್,ಎನ್, ** ಡಾ॥ ಕೃಷ್ಣ ಆರ್ ಹೊಂಬಾಳ್
* ಎಂಫಿಲ್ ವಿದ್ಯಾರ್ಥಿನಿ, **ಸಂಶೋಧನಾ ಮಾರ್ಗದರ್ಶಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ ಮೈಸೂರು.

21ನೇ ಶತಮಾನವು ಮಾನವ ಹಕ್ಕುಗಳ ಜಾಗತೀಕ ಯುಗವಾಗಿದ್ದು, ಮನುಷ್ಯನನ್ನು ಮಾನವನನ್ನಾಗಿ ಎಲ್ಲರೂ ಮನುಷ್ಯರೆಂಬ ಸಮಚಿತ್ತ ಭಾವದಿಂದ ನಡೆನುಡಿಯಲ್ಲಿ ನೋಡುವ ಜೀವನದ ಸಾರಸತ್ವದ ತತ್ವವೇ ಮಾನವ ಹಕ್ಕುಗಳ ಮೂಲ ತಿರುಳು. ಆದರೆ ವ್ಯವಸ್ಥೆಗಳ ವೈಪರಿತ್ಯದಿಂದ ಉಂಟಾಗುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯೂ ಮಾನವ ಹಕ್ಕುಗಳನ್ನು ಅನೇಕ ಸವಾಲುಗಳಿಗೆ ಈಡುಮಾಡಿರುವುದು ಕಟು ಸತ್ಯವೇ ಸರಿ. ಮಾನವ ಹಕ್ಕುಗಳಲ್ಲಿ ಅಗ್ರಗಣ್ಯವಾಗಬೇಕಾದ ಮಹಿಳಾ ಹಕ್ಕುಗಳು ಬಹುಸುಲಭವಾಗಿ ಉಲ್ಲಂಘಿಸಲ್ಪಡುತ್ತಿವೆ. ಅಸಂಖ್ಯಾತ ಮಹಿಳೆಯರ ಜೀವನ ಅತಂತ್ರದ ಸ್ಥಿತಿಯನ್ನು ತಲುಪಿವೆ. ನಾಗರಿಕತೆ ಮತ್ತು ಸಂಸ್ಕೃತಿಗಳ ಯಾಂತ್ರಿಕತೆಯ ಬದುಕಿನಲ್ಲಿ ಮಾನವೀಯತೆಯ ಸ್ಪರ್ಶವಿಲ್ಲದೆ, ನೀತಿರಹಿತ,ಸಂಸ್ಕಾರರಹಿತ ವ್ಯವಸ್ಥೆಗಳಾಗಿ ಮಾರ್ಪಾಡಗುತ್ತಿವೆ. ಇವೆಲ್ಲವೂಗಳು ಮಹಿಳಾ ಹಕ್ಕುಗಳನ್ನು ನಕಾರತ್ಮಕ ಪರಿಣಾಮವನ್ನು ಉಂಟುಮಾಡುತ್ತಿವೆ. ಮಹಿಳಾ ಹಕ್ಕುಗಳ ಬಗ್ಗೆ ಎಷ್ಟೇ ಮುತುವರ್ಜಿ ವಹಿಸಿದರು ಕೂಡ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಮೂಲೋತ್ಪಟನೆ ಮಾಡುವುದು ವಿಪರ್ಯಾಸ, ಇವರ ಹಕ್ಕುಗಳನ್ನು ಸಂರಕ್ಷಿಸಲು ಹಲವಾರು ಕಾಯಿದೆ ಕಾನೂನುಗಳಿದ್ದರು ಸಹ ಮಹಿಳಾ ವಿಮೋಚನೆ ಸಾಧ್ಯವಾಗಿಲ್ಲ. ವರದಕ್ಷಿಣೆ, ಕೌಟುಂಬಿಕ ಹಿಂಸಾಚಾರ,ಅತ್ಯಾಚಾರ ಇನ್ನೂ ಮುಂತಾದ ದೌರ್ಜನ್ಯಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದ ಸಮಾಜದಲ್ಲಿ ಹಲವಾರು ಸಮಸ್ಯೆಗಳು ತಲೆದೂರಿದ್ದು, ಅವರ ವೈಯಕ್ತಿಕ ಹಾಗೂ ಸಮಾಜಿಕ ಬದುಕು ದುಸ್ಥಿರವಾಗಿದೆ.

ಸಾಮಾಜಿಕ ವಾಸ್ತವಿಕತೆಗಳ ಮತ್ತು ಕಾಯ್ದೆ ಕಾನೂನುಗಳ ಚೌಕಟ್ಟಿನಲ್ಲಿ ಮಹಿಳೆಯರ ಸ್ಥಾನಮಾನವನ್ನು ಉನ್ನತೀಕರಿಸಲು ಅವರಿಗೆ ಬೇಕಾದ ಹಕ್ಕುಗಳನ್ನು ಅನುಭವಿಸಲು ಅವಶ್ಯವಿರುವ ಮಹಿಳಾ ಸ್ನೇಹಿ ಮಾನವ ಪರಿಸರವನ್ನು ಸಮಾಜದಲ್ಲಿ ಪುಷ್ಟಿಸುವುದ ಕ್ಕೋಸ್ಕರವೇ, ರಾಜ್ಯ ಮತ್ತು ಕಾನೂನು ಬೆಂಬಲಿತ ವ್ಯವಸ್ಥೆಗಳನ್ನು ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಸ್ಥಾಪಿಸಲಾಗಿದೆ. ವಿಸ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗ ಮತ್ತು ಮಹಿಳಾ ಸ್ಥಿತಿಗತಿಯ ಆಯೋಗ ಹಾಗೂ ಭಾರತದಂತಹ ವಿಕಾಸಶೀಲ ರಾಷ್ಟ್ರದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ರಾಷ್ಟ್ರೀಯ ಮಹಿಳಾ ಆಯೋಗ ಹಾಗೂ ಎಲ್ಲಾ ರಾಜ್ಯಗಳಲ್ಲಿಯೂ ರಾಜ್ಯ ಮಹಿಳಾ ಆಯೋಗಗಳಿರುವುದು ಇದಕ್ಕೆ ಸ್ಪಷ್ಟ ನಿದರ್ಶನ. ಅದರಂತೆಯೆ ಮಹಿಳೆಯರ ಹಕ್ಕು ಉಲ್ಲಂಘನೆಯ ಪ್ರಕರಣಗಳನ್ನು ಹಾಗೂ ಮತ್ತಿತರ ದೂರುಗಳನ್ನು ಸ್ವೀಕರಿಸಿ ಸಮಂಜಸ ನ್ಯಾಯ ಮತ್ತು ಸೂಕ್ತ ಪರಿಹಾರವನ್ನು ಒದಗಿಸಲು ಮಹಿಳಾ ಆಯೋಗಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಮಹಿಳಾ ಆಯೋಗದ ಕಾರ್ಯನೈ ಪುಣ್ಯತೆಯನ್ನು ತಿಳದುಕೊಳ್ಳುವುದು ಸಮಂಜಸವಾಗಿದೆ.

ಕರ್ನಾಟಕದಲ್ಲಿ ಮಹಿಳಾ ಆಯೋಗದ ರಚನೆ ಮತ್ತು ಅಧಿಕಾರದ ಕಾರ್ಯಗಳು: ಮಹಿಳೆಯರಿಗೆ ಸಾಮಾಜಿಕ ನ್ಯಾಯವನ್ನು ಆಧಾರ ವಾಗಿಟ್ಟುಕೊಂಡು ಕಾನೂನು ಸಲಹೆ, ವೈದ್ಯಕೀಯ ಸೌಲಭ್ಯ, ಉದ್ಯೋಗ ಬಗೆಗಿನ ಮಾಹಿತಿ, ವೃತ್ತಿಪರತೆ ಕೌಶಲ್ಯ ತರಬೇತಿ, ಕಾರ್ಯಾಗಾರಗಳ ಮೂಲಕ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಭೌದ್ಧಿಕ ಹಾಗೂ ನಿತ್ಯಾತ್ಮಕ ಹಕ್ಕುಗಳನ್ನು ಪ್ರತಿಪಾದನೆ ಮಾಡಿ,[1] ಅವುಗಳನ್ನು ಪಡೆದುಕೊಳ್ಳುವ ಪನಸ್ಥಿತಿಯನ್ನು ಸೃಷ್ಟಿಸುವಂತಹ ಕಾರ್ಯವನ್ನು ಮಹಿಳಾ ಆಯೋಗಗಳು ನಿರ್ವಹಿಸಬೇಕಾಗಿದೆ. ಕೇಂದ್ರದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ 1992 ರಲ್ಲಿ ರಚನೆಯಾಗಿದೆ. ಹಾಗೆಯೆ ಕರ್ನಾಟಕದಲ್ಲಿ 1995 ರ ಅಧಿನಿಯಮದಲ್ಲಿ 1995 ಮೇ 24 ರಂದು ರಾಜ್ಯ ಮಹಿಳಾ ಆಯೋಗವು ರಾಜ್ಯಪಾಲರ ಒಪ್ಪಿಗೆಯನ್ನು ಪಡೆದಿದ್ದು, ಇದು 1995 ಮೇ 26 ರಂದು ರಚಿಸಲಾಗಿದ್ದು, 1995 ಅಕ್ಟೋಬರ್ 8[2] ರಂದು ಜಾರಿಗೆ ಬಂದಿದೆ.

ಉದ್ದೇಶಗಳು:

1. ಮಹಿಳೆಯರ ಸಂವಿಧಾನಿಕ ಮತ್ತು ನ್ಯಾಯಬದ್ಧ ರಕ್ಷಣೆಗಳನ್ನು ಪರಿಶೀಲನೆ ಮಾಡುವುದು.
2. ಪರಿಹಾರಿಕ ನ್ಯಾಯಕ್ರಮಗಳನ್ನು ಶಿಫಾರಸ್ಸು ಮಾಡುವುದು.
3. ಮಹಿಳೆಯರ ಹಕ್ಕುಗಳನ್ನು ಸಂರಕ್ಷಣೆ ಮಾಡುವುದು.
4. ಮಹಿಳೆಯರಿಂದ ಬರುವ ದೂರುಗಳನ್ನು ಪರಿಶೀಲಿಸಿ, ಅದಕ್ಕೆ ತಕ್ಕ ಪರಿಹಾರೋಪಾಯ ವನ್ನು ಕಂಡುಕೊಳ್ಳುವುದು.
5. ಮಹಿಳೆಯರ ಸಮಾಜೋ-ಆರ್ಥಿಕ ಅಭಿವೃದ್ಧಿಯನ್ನು ತೀವ್ರಗೊಳಿಸುವುದು.

ರಚನೆ: ರಾಜ್ಯ ಮಹಿಳಾ ಆಯೋಗದ ಕೇಂದ್ರಸ್ಥಾನವು ಬೆಂಗಳೂರಿನಲ್ಲಿ ಇದೆ. ಇದರ ಅಧ್ಯಕ್ಷರು ಮತ್ತು ಸದಸ್ಯರುಗಳೆಂದರೆ, ಸರ್ಕಾರದಿಂದ ನಾಮನಿರ್ದೇಶಿಸುವ ಒಬ್ಬರು ಮಹಿಳಾ ಅಧ್ಯಕ್ಷರು ಇರುತ್ತಾರೆ. 6 ಮಂದಿ ಸರ್ಕಾರೇತರ ಸಂಘಟನೆಗಳ ಸದಸ್ಯರುಗಳಿರುತ್ತಾರೆ. ಹಾಗೆಯೇ ನಾಲ್ವರು ಪದನಿಮಿತ್ತ ಸದಸ್ಯರು ಅವರೆಂದರೆ, ಸರ್ಕಾರದ ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳು ಅಭಿವೃದ್ಧಿ ಇಲಾಖೆ, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸದಸ್ಯ ಕಾರ್ಯದರ್ಶಿಗಳು ರಾಜ್ಯ ಮಹಿಳಾ ಆಯೋಗ ಹಾಗೂ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಇವರುಗಳು ಮಹಿಳಾ ಆಯೋಗದ ಸದಸ್ಯರುಗಳಾಗಿರುತ್ತಾರೆ.[3]

ಆಯೋಗದ ಕಾರ್ಯಗಳು: ಮಹಿಳಾ ಆಯೋಗವು ಹಲವಾರು ಕಾರ್ಯಗಳನ್ನು ನಿರ್ವಹಿಸುತ್ತಿದೆ. ಅವುಗಳಲ್ಲಿ ಪ್ರಮುಖವಾದವು ಗಳೆಂದರೆ,

1. ಆಯೋಗವು ರಕ್ಷಣೋಪಾಯಗಳಿಗೆ ನಿರ್ವಹಿಸಿದ ಕಾರ್ಯಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿಯನ್ನು ಸೂಕ್ತವೆನಿಸಿದ ಕಾಲಾವಧಿಯಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸುವುದು.
2. ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಲು ಸರ್ಕಾರವು ಈ ರಕ್ಷಣೋಪಾಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಬಗ್ಗೆ ಶಿಫಾರಸ್ಸುಗಳು ಮಾಡುವುದು.
3. ಮಹಿಳೆಯರಿಗೆ ಸಂಬಂಧಿಸಿದ ಸಂವಿಧಾನಿಕ ಮತ್ತು ಇತರೆ

ಕಾನೂನುಗಳ ಉಪಬಂಧಗಳನ್ನು ಉಲ್ಲಂಘಿಸುವ ಪ್ರಕರಣಗಳನ್ನು ಸಮರ್ಪಕ ಅಧಿಕಾರಿಗಳೊಂದಿಗೆ ತೆಗೆದುಕೊಳ್ಳುವುದು.

4. ಮಹಿಳೆಯರನ್ನು ಖೈದಿಗಳಾಗಿ ಅಥವಾ ಇತರೆ ರೀತಿಯಲ್ಲಿ ಇಡಲಾದ ಬಂಧೀಖಾನೆ, ರಕ್ಷಣಾ ಗೃಹ, ಮಹಿಳಾ ಸಂಸ್ಥೆಗಳು ಅಥವಾ ಅಭರಕ್ಷೆಯ ಇಂತಹ ಸ್ಥಳಗಳನ್ನು ಪರೀಕ್ಷಿಸಿ ಅವಶ್ಯಕವೆಂದು ಕಂಡುಬಂದಲ್ಲಿ ಪರಿಹಾರ ಕ್ರಮವನ್ನು ಕೈಗೊಳ್ಳುವುದು
5. ರಾಜ್ಯದಲ್ಲಿನ ಮಹಿಳೆಯರ ಅಭವೃದ್ಧಿಯ ಪ್ರಗತಿಯನ್ನು ಮೌಲ್ಯಮಾಪನ ಮಾಡುವುದು.

ಅಲ್ಲದೆ ಮಹಿಳಾ ಆಯೋಗವು ಮಹಿಳೆಯರಿಗೆ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಅದರ ಮಾರ್ಗದರ್ಶನ ಮತ್ತು ಸಹಾಯವನ್ನು ಎಲ್ಲರೂ ಪಡೆಯಬೇಕೆಂದು ಆಶಯವನ್ನು ಹೊಂದಿದೆ. ಅಂತಹ ಕಾರ್ಯ ಚಟುವಟಿಕೆಗಳೆಂದರೆ, ಮಹಿಳಾ ಕಾನೂನುಗಳ ಬಗ್ಗೆ ಜಾಗೃತಿ ಶಿಬಿರ, ಕೌಟುಂಬಿಕ ಸಲಹಾ ಕೇಂದ್ರ, ಪಾರಿವಾರಿಕ್ ಲೋಕ್ ಅದಾಲತ್, ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆ, ಲೈಂಗಿಕ ದೌರ್ಜನ್ಯ ತಡೆಗಟ್ಟಲು ಇರುವ ದೂರುನಿವಾರಣಾ ಸಮಿತಿ ರಚನೆ ಬಗ್ಗೆ ಮೇಲ್ವಿಚಾರಣೆ, ಗರ್ಭಧಾರಣ ಪೂರ್ವ ಮತ್ತು ಪ್ರಸವ ಪೂರ್ವ ಅಂಗಪತ್ತೆ ತಂತ್ರಜ್ಞಾನ ಅನುಷ್ಠಾನದಲ್ಲಿ ಸಕ್ಷಮ ಪ್ರಾಧಿಕಾರದ ಪಾತ್ರ, ಸುರಕ್ಷಾ ಯೋಜನೆ.[4] ಇಷ್ಟೆಲ್ಲಾ ಯೋಜನೆಗಳನ್ನು ಬಳಸಿಕೊಂಡಿದ್ದರೂ ಸಹ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಪ್ರಮಾಣ ಇನ್ನೂ ಇಳಮುಖವಾಗಿಲ್ಲ ದಿರುವುದು ದುರಂತವಾಗಿದೆ. ಪ್ರಸ್ತುತ ದಿನಗಳಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಸಂಖ್ಯೆ ಹೆಚ್ಚಾಗಿದ್ದು, ರಾಜ್ಯದಲ್ಲಿ ಅತ್ಯಾಚಾರ ಪ್ರಕರಣಗಳು 3 ಪಟ್ಟು ಏರಿಕೆಯಾಗಿವೆ. ಇದಕ್ಕೆ ಈ ಕೆಳಗಿನ ಕೋಷ್ಠಕ ಸ್ಪಷ್ಟ ನಿದರ್ಶನವಾಗಿದೆ.

ಕ್ರ. ಸಂ.	ಪ್ರಕರಣಗಳು	ಅಂಕಿ-ಅಂಶಗಳ ವಿವರ		
	ವರದಿಯಾದ ಪ್ರಕರಣ	2011	2012	2013
1	ಬಂಧಿತರಾದ ಸಂಖ್ಯೆ	97	142	270
2	ಆರೋಪ ಪಟ್ಟಿ ಸಲ್ಲಿಕೆ	147	178	330
3	ಶಿಕ್ಷೆ ಪ್ರಮಾಣ	16	19	14
4	ಶಿಕ್ಷೆ ಶೇಕಡಾವಾರು ಪ್ರಮಾಣ	21	17	11

ಈ ಮೂರು ವರ್ಷಗಳಲ್ಲಿ ಕೇವಲ 49[5] ಅಪರಾಧಿಗಳಿಗೆ ಮಾತ್ರ ಶಿಕ್ಷೆಯಾಗಿರುವುದು ತುಂಬಾ ಕಳವಳಕಾರಿಯಾಗಿದೆ.

ಆಯೋಗದ ಸಾಧನೆಗಳು:

ರಾಜ್ಯ ಮಹಿಳಾ ಆಯೋಗವು ಮಹಿಳೆಯರ ದೌರ್ಜನ್ಯ ಮತ್ತು ಶೋಷಣೆಗಳಿಗೆ ಸಂಬಂಧಿಸಿದ ದೂರು ಅರ್ಜಿಗಳನ್ನು ಸ್ವೀಕರಿಸಿ ಅವುಗಳನ್ನು ಇತ್ಯರ್ಥ ಪಡಿಸಿ ನೊಂದ ಮಹಿಳೆಯರಿಗೆ ಪರಿಹಾರವನ್ನು ಒದಗಿಸಿಕೊಡುವ ಪ್ರಯತ್ನವನ್ನು ಮಾಡುತ್ತಿವೆ. ಇದಕ್ಕೆ ಸಂಬಂಧಿಸಿದಂತೆ 2009 ರಿಂದ 2011 ರವರೆಗಿನ ಅಂಕಿ-ಅಂಶಗಳ ಮಾಹಿತಿಯನ್ನು ತಿಳಿಯುವುದು ಔಚಿತ್ಯವಾಗಿದೆ.

ಕ್ರ. ಸಂ.	ಪ್ರಕರಣಗಳ ವಿವರ	2009-11 ಸ್ವೀಕೃತಿ	2009-11 ಮುಕ್ತಾಯ	2009-11 ಬಾಕಿ
1	ಸಮಾಲೋಚನೆ	455	252	203
2	ವರದಕ್ಷಿಣೆ ಕಿರುಕುಳ	31	13	18
3	ವರದಕ್ಷಿಣೆ ಸಾವು	21	16	10
4	ರಕ್ಷಣೆ	860	225	638
5	ಆಸ್ತಿ ವಿವಾದ	73	34	39
6	ಲೈಂಗಿಕ ಕಿರುಕುಳ	56	20	36
7	ಕೆಲಸದ ಸ್ಥಳದಲ್ಲಿ ಕಿರುಕುಳ	131	23	108
8	ಕೌಟುಂಬಿಕ ದೌರ್ಜನ್ಯ	258	251	07
9	ಇತರೆ	701	339	362
	ಒಟ್ಟು	2586	1173	1413

ಒಟ್ಟು ಪ್ರಕರಣಗಳಲ್ಲಿ 2586 ಪ್ರಕರಣಗಳಲ್ಲಿ ಕೇವಲ 1173 ಪ್ರಕರಣಗಳು ಮಾತ್ರ ಮುಕ್ತಾಯವಾಗಿದ್ದು, ಇನ್ನೂ 1413[6] ಪ್ರಕರಣಗಳು ಇತ್ಯರ್ಥವಾಗದೆ ಇರುವುದು ಕಳವಳಕಾರಿಯಾಗಿದೆ.

ಹಾಗೆಯೇ ಮಹಿಳಾ ಸಹಾಯ ವೇದಿಕೆಯು ರಾಜ್ಯದ 7 ಜಿಲ್ಲೆಗಳಲ್ಲಿ ರಚಿಸಲಾಗಿದ್ದು, ಅವುಗಳೆಂದರೆ, ಬೆಂಗಳೂರು, ಮೈಸೂರು, ಗುಲ್ಬರ್ಗ, ರಾಯಚೂರು, ದಾವಣಗೆರೆ, ಬೆಳಗಾಂ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ. ಈ ವೇದಿಕೆಯ ಮೂಲಕ ಹಲವಾರು ಪ್ರಕರಣಗಳು ಸಹಾಯವನ್ನು ಪಡೆದುಕೊಂಡಿವೆ. ಅದನ್ನು ಈ ಕೆಳಗಿನ ಕೋಷ್ಠಕದ ಅಂಕಿ-ಅಂಶಗಳ ಮಾಹಿತಿಯನ್ನು ತಿಳಿಯ ಬಹುದು.

ಕ್ರ. ಸಂ	ಪ್ರಕರಣಗಳ ವಿವರ	2009-11 ಸ್ವೀಕೃತಿ
1	ಜೀವನಾಂಶ	538
2	ವಿಚ್ಛೇದನ	336
3	ನ್ಯಾಯಾಲಯ ನಿಂದನೆ ಪ್ರಕರಣ	-
4	ಪುನರ್ ವಿವಾಹವನ್ನು ಸ್ಥಾಪಿಸುವ ಕುರಿತು	115
5	ಪೋಷಕರ ದತ್ತು ಕಾನೂನಿನ ಬಗ್ಗೆ	25
6	ಕೌಟುಂಬಿಕ ದೌರ್ಜನ್ಯ	528
7	ಇತರೆ(ಕಾನೂನು ಸಲಹೆ, ರಕ್ಷಣೆ, ವಸತಿ)	766
	ಒಟ್ಟು	2308[7]

ಹಲವಾರು ಪ್ರಕರಣಗಳನ್ನು ಇತ್ಯರ್ಥಪಡಿಸುತ್ತಿದ್ದರೂ, ಕೆಲವೊಂದು ಪ್ರಕರಣಗಳು ಇತ್ಯರ್ಥವಾಗದೆ ಆಯೋಗದಲ್ಲಿರುವುದನ್ನು ಸಹ ಕಾಣಬಹುದಾಗಿದೆ. ಆಯೋಗವು ಹಲವಾರು ಕಾರ್ಯಾಗಾರ ಮತ್ತು

ವಿಚಾರ ಕಮ್ಮಟಗಳನ್ನು ನಡೆಸುತ್ತಿದ್ದು, ಕಾಲಕಾಲಕ್ಕೆ ಇದರ ಉಪಯೋಗವನ್ನು ಎಲ್ಲರಿಗೂ ತಲುಪುವಂತೆ ಮಾಡಿದೆ. ವಿಶ್ವಸಂಸ್ಥೆ ಮಕ್ಕಳ ಹಕ್ಕುಗಳ ಸಮಿತಿಯ ಉಪಾಧ್ಯಕ್ಷ ಬೆನ್ಯಂ ಮೆಜ್ಮರ್ ರವರು ದೇಶದಲ್ಲಿ ನಿರಂತರವಾಗಿ ನಡೆಯುತ್ತಿರುವ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವಲ್ಲಿ ಅಧಿಕಾರಿಗಳು ಕರ್ತವ್ಯಲೋಪವನ್ನು ಎಸಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಸರ್ಕಾರಿ ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ ಪ್ರತಿ 22 ನಿಮಿಷಕ್ಕೊಂದು ಅತ್ಯಾಚಾರ ಪ್ರಕರಣ ವರದಿಯಾಗುತ್ತಿದೆ ಎಂದು ವಿಶ್ವಸಂಸ್ಥೆ ಮಕ್ಕಳ ಹಕ್ಕುಗಳ ಸಮಿತಿ ವರದಿಯನ್ನು ಮಾಡಿದೆ.[8]

ಇಂತಹ ದೌರ್ಜನ್ಯಗಳು ಪ್ರಸ್ತುತದಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಕೌಟುಂಬಿಕ ದೌರ್ಜನ್ಯಗಳೂ ಸಹ ಭಾರತದಲ್ಲಿ ಹೆಚ್ಚಾಗಿದ್ದು, ಅಂದರೆ 1,97,762 ಐಪಿಸಿ ಸೆಕ್ಷನ್ 498(ಎ) ಅಡಿ ಬಂಧಿತರಾದವರ ಸಂಖ್ಯೆಯಲ್ಲಿ 47,951 ಒಟ್ಟು ಬಂಧಿತರಲ್ಲಿ ಮಹಿಳೆಯರಾಗಿದ್ದು, 93.6% ರಷ್ಟು ಆರೋಪ ಪಟ್ಟಿಯಲ್ಲಿ ದಾಖಲಾದ ಪ್ರಮಾಣ. ಆದರೆ ಶಿಕ್ಷೆಯ ಪ್ರಮಾಣ ಮಾತ್ರ 15%[9] ಮಾತ್ರ ಇರುವುದು ಶೋಚನೀಯವಾಗಿದೆ.

ಪ್ರಸ್ತುತದಲ್ಲಿ ಮಹಿಳಾ ಆಯೋಗದ ಅಧ್ಯಕ್ಷರಾಗಿ ಮಂಜುಳಾ ಮಾನಸರವರು ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ಅಧಿಕಾರ ವಹಿಸಿಕೊಂಡ ನಂತರ ದಾಖಲಾದ 6 ಪ್ರಕರಣಗಳು ಸೇರಿ ಒಟ್ಟು 1619 ಪ್ರಕರಣಗಳನ್ನು 3[10] ತಿಂಗಳಲ್ಲಿ ಇತ್ಯರ್ಥಪಡಿಸಿ, ಜಿಲ್ಲಾವಾರು ಅದಾಲತ್ ನಡೆಸುತ್ತಿರುವುದು ಸ್ತುತ್ಯಾರ್ಹ.

ಮಹಿಳಾ ಆಯೋಗವು ಎಂತಹ ಕಾರ್ಯ ನಿರ್ವಹಿಸುತ್ತಿದ್ದರೂ, ವೈಫಲ್ಯತೆಗಳಿಂದ ಮುಕ್ತವಾಗಿಲ್ಲ. ಆಯೋಗದಲ್ಲಿ ಬಂದಂತಹ ದೂರುಗಳ ಪ್ರಕರಣಗಳಲ್ಲಿ ಸರಿಸುಮಾರು ಶೇ.50 ರಷ್ಟು ಮಾತ್ರ ಅವರ ಸಮಸ್ಯೆಗೆ ಪರಿಹಾರ ಒದಗಿಸಿಕೊಡಲಾ ಗಿದೆ. ಆದರೆ ಇನ್ನೂ ಶೇ.40 ರಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸು ವಲ್ಲಿ ವಿಫಲವಾಗಿದೆ. ಅಲ್ಲದೆ ರಾಜ್ಯದ 30 ಜಿಲ್ಲೆಗಳಲ್ಲಿ ಕೇವಲ 7 ಕಡೆ ಮಾತ್ರ ಮಹಿಳಾ ಸಹಾಯ ವೇದಿಕೆಯನ್ನು ಸ್ಥಾಪಿಸಿದೆ. ಇನ್ನುಳಿದ ಜಿಲ್ಲೆಗಳು ಇದರಿಂದ ವಂಚಿತವಾಗಿವೆ. ಹಾಗೆಯೇ ಮಹಿಳೆಯರ ಸಮಸ್ಯೆಗಳನ್ನು ಸಂಪೂರ್ಣವಾಗಿ ಮೂಲೋತ್ಪಾಟನೆ ಮಾಡಲು ವಿಫಲವಾಗಿವೆ. ಆಯೋಗದಲ್ಲಿ ಸಿಬ್ಬಂದಿಯ ಕೊರತೆಯು ಹೆಚ್ಚಾಗಿರುವುದು ಕಂಡು ಬರುತ್ತದೆ. ಹಾಗೆಯೇ ಮಹಿಳಾ ಹಕ್ಕುಗಳ ಉಲ್ಲಂಘನೆಯಾದಲ್ಲಿ ಆಯೋಗವು ಸರ್ಕಾರವನ್ನು ಜಾಗೃತಿಗೊಳಿಸು ವಂತಹ ಪ್ರಯತ್ನಗಳು ಕಡಿಮೆ ಮಟ್ಟದಲ್ಲಿ ಆಗುತ್ತಿರುವುದು ಸಹ ವಿಫಲವಾಗಿದೆ. ಭಾರತ ದೇಶದ ಬಗ್ಗೆ ವಿಶ್ವಸಂಸ್ಥೆ ಮಹಿಳಾ ವಿಭಾಗದ ಉಪಕಾರ್ಯನಿರ್ವಾಹಕ ನಿರ್ದೇಶಕಿ ಲಕ್ಷ್ಮಿ ಪುರಿ ರವರು ಲಿಂಗಾನುಪಾತ, ಲಿಂಗ ಆಯ್ಕೆ ತಾರತಮ್ಯ ಇತಿಹಾಸ ಮತ್ತು ಸವಾಲುಗಳು ವ್ಯಕ್ತವಾಗಿದೆ. ಇದು ಸಮಾಜದಲ್ಲಿನ ಹೆಣ್ಣುಮಕ್ಕಳ ಸ್ಥಿತಿಗತಿಗಳ ದ್ಯೋತಕವಾಗಿವೆ. ಇದಕ್ಕೆ ಈ ಕೆಳಗಿನ ಕೋಷ್ಟಕ ಪುಷ್ಟಿ ನೀಡುತ್ತದೆ.

ವರ್ಷ	ಲಿಂಗಾನುಪಾತ
1961	1000 : 976
2001	1000 : 927
2011	1000 : 916[11]

ಇಂದಿಗೂ ಹೆಣ್ಣುಮಗುವನ್ನು ಹೊರೆ ಎಂದು ಭಾವಿಸಲಾಗುತ್ತಿದ್ದು, ಶತಮಾನಗಳ ಹಿಂದಿನ ಭಾರತೀಯರ ಮನೋಭಾವ ಇನ್ನೂ ಬದಲಾಗಿಲ್ಲ ಎಂದು ವಿಶ್ವಸಂಸ್ಥೆ ವರದಿಯಲ್ಲಿ ಹೇಳಿರುವುದು ಸಮಂಜಸವಾಗಿದೆ.

ಉಪಸಂಹಾರ :ಮಹಿಳಾ ಹಕ್ಕುಗಳ ಉಲ್ಲಂಘನೆ ಹಾಗೂ ಲಿಂಗ ತಾರತಮ್ಯ ಎಂಬ ಸಾಮಾಜಿಕ ಪಿಡುಗು ವಿಶ್ವವ್ಯಾಪಕವಾದ ಜ್ವಲಂತ ವಿವಾದಾಂಶಗಳಾಗಿವೆ. ಏಕೆಂದರೆ ಪ್ರತಿಯೊಬ್ಬ ಮಾನವನು ಜನ್ಮತಃ ಹಕ್ಕನ್ನು ಹೊಂದಿರುತ್ತಾರೆ. ತನ್ನ ನಿರಂತರ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿಯೂ ಹಕ್ಕುಗಳನ್ನು ಹೊಂದುವಲ್ಲಿ ಸ್ವತಂತ್ರರೂ ಹೌದು. ಪುರುಷರು ಮತ್ತು ಮಹಿಳೆಯರು ಎಂಬ ತಾರತಮ್ಯವಿಲ್ಲದೆ ಎಲ್ಲರಿಗೂ ಸಮಾನವಾಗಿ ಜೀವಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ಮಹಿಳಾ ಹಕ್ಕುಗಳಗಷ್ಟೆ ಅಲ್ಲದೆ ದೇಶದ ಭವಿಷ್ಯತ್ತಿಗೆ ಗೌರವ, ಘನತೆಗಳಿಗೂ ಮಾರಕವಾಗಿದೆ. ಇಂತಹ ದೌರ್ಜನ್ಯಗಳನ್ನು ನಿವಾರಣೆ ಮಾಡಲು ಮಹಿಳಾ ಹಕ್ಕುಗಳ ಆಯೋಗಗಳು ತಮ್ಮದೇ ಆದ ಕರ್ತವ್ಯವನ್ನು ನಿರ್ವಹಿಸುತ್ತಿವೆ. ಈ ಆಯೋಗವು ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಗಟ್ಟಲು ಹಲವಾರು ಸವಲತ್ತು ಮತ್ತು ಯೋಜನೆಗಳನ್ನು ಒದಗಿಸಿಕೊಡುವುದರ ಮೂಲಕ ಕಾನೂನು ಬದ್ಧ ನ್ಯಾಯವನ್ನು ದೊರಕಿಸಿಕೊಡುತ್ತಿರುವುದು ಶ್ಲಾಘನೀಯ. ಅಲ್ಲದೆ ಆಯೋಗದಲ್ಲಿ ಬರುವ ದೂರು ಅರ್ಜಿಗಳನ್ನು ಸ್ವೀಕರಿಸಿ, ಅವರಿಗೆ ಕಾನೂನು ಅರಿವು, ಜಾಗೃತಿ, ಸಮಾವೇಶಗಳು ಮತ್ತು ಸೌಲಭ್ಯಗಳನ್ನು ಒದಗಿಸಿದ್ದು, ಇದು ರಾಜ್ಯದ ಎಲ್ಲರ ಮನ್ನಣೆಗೆ ಪಾತ್ರವಾಗಿದೆ.

ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಮತ್ತು ಶೋಷಣೆಯ ವಿರುದ್ಧ ಧ್ವನಿ ಎತ್ತುವ ಪ್ರಯತ್ನಗಳು ರಾಜ್ಯದ ಎಲ್ಲಾ ಕಡೆಯೂ ನಡೆಯಬೇಕಾಗಿದೆ. ಆಯೋಗದ ಮೂಲಕ ವಿಚಾರ ಕಮ್ಮಟಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ಮತ್ತು ಗ್ರಾಮಗಳಲ್ಲಿಯೂ ಮಹಿಳೆಯರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವಂತಹ ಪ್ರಯತ್ನಗಳು ನಡೆಯಬೇಕಾಗಿದೆ. ಬರೀ ನಗರಗಳಿಗೆ ಸೀಮಿತವಾಗದೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಹ ಮಹಿಳೆಯರ ದೌರ್ಜನ್ಯಗಳನ್ನು ತಡೆಯುವಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಇವುಗಳು ಸಲಹೆಗಳಾಗಿವೆ.

ಅಡಿ ಟಿಪ್ಪಣಿಗಳು.

1. ಸಬಲ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿಕೃತ ಮಾಸಿಕ ಜೂನ್-2010 ಪುಟ-2
2. ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ 1995 ಪುಟ-2
3. ಅದೇ ಪುಟ-3
4. ಕರ್ನಾಟಕ ರಾಜ್ಯ ಮಹಿಳಾ ಆಯೋಗ ಓದಿ ತಿಳಿಯಿರಿ.
5. ಪ್ರಜಾವಾಣಿ ಶನಿವಾರ 19ನೇ ಜುಲೈ-2014 ಪುಟ-8
6. 2009 ರಿಂದ 2011 ರ ವಾರ್ಷಿಕ ವರದಿ
7. 2009 ರಿಂದ 2011 ರ ವಾರ್ಷಿಕ ವರದಿ
8. ಪ್ರಜಾವಾಣಿ ಶನಿವಾರ 21 ಜೂನ್-2014 ಪುಟ-10
9. ಪ್ರಜಾವಾಣಿ ಅಂತರಾಳ (ಕೆ.ಎಸ್.ವಿಮಲ) ಶನಿವಾರ 12 ಜುಲೈ-2014 ಪುಟ-6
10. ಪ್ರಜಾವಾಣಿ ಮಹಿಳಾ ಆಯೋಗ ಹೇಮ ವೆಂಕಟ್ ಬುಧವಾರ 16ನೇ ಜುಲೈ20-14 ಪುಟ-5
11. ಪ್ರಜಾವಾಣಿ ಬುಧವಾರ 23 ಜುಲೈ 2014 ಪುಟ-7

ನಗರ ಪ್ರದೇಶದಲ್ಲಿ ಬಾಲಕಾರ್ಮಿಕ ಪದ್ಧತಿ

ಕಾಶಿನಾಥ ಶಿವಪ್ಪ ಟಕ್ಕಳಕಿ
ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಬಾಲಕಾರ್ಮಿಕ ಸಮಸ್ಯೆಯು ಭಾರತದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತಲಿದೆ. ಇಂದಿಗೂ ಬಾಲಕಾರ್ಮಿಕ ಪದ್ಧತಿ ಸಂಖ್ಯೆ ದಿನೆದಿನೇ ಹೆಚ್ಚುತಲೇ ಇದೇ. ಬಾಲಕಾರ್ಮಿಕ ಪದ್ಧತಿಗೆ ಹಲವಾರು ಕಾರಣಗಳನ್ನು ಇರುವುದರಿಂದ ಇಂದೂ ಮಕ್ಕಳು ಬಹಳಷ್ಟು ಹೊಟೆಲಗಳಲ್ಲಿ, ರೈಲು ನಿಲ್ದಾಣಗಳಲ್ಲಿ, ಬ್ರಹತ ಕಾರ್ಖಾನೆಗಳಲ್ಲಲಿ ದುಡಿಯುತ್ತಲಿವೆ. ಈ ಬಾಲಕಾರ್ಮಿಕ ಪದ್ಧತಿಯು ಮಕ್ಕಳ ಮೇಲೆ ಹಲವಾರು ರೀತಿಯಲ್ಲಿ ಪರಿಣಾಮಗಳ್ನು ಬೀರುತ್ತಿವೆ. ಅವರ ಮಾನಸಿಕ, ದೈಹಿಕ ಹಾಗೂ ಅವರ ಮುಂದಿನ ಭವಿಷ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಬಾಲಕಾರ್ಮಿಕರ ಸಂಖೆಯು ಭಾರತದಲ್ಲಿ ೧ ಕೋಟಿಗಳಿಗಿಂತಲೂ ಹೆಚ್ಚಾಗಿರುವುದನ್ನು ಹಲಾವರು ಸಂಸೋಧನಾ ಅಧ್ಯಯಗಳಿಂದ ತಿಳುದುಬರುತ್ತದೆ. ಈ ಬಾಲಕಾರ್ಮಿಕ ಪದ್ಧತಿಯೂ ಇದೇ ರೀತಿಯಾಗಿ ಹೀಗೆ ಮುಂದುವರೆದರೆ ದೇಶದ ಮುಂದಿನ ಭವಿಷ್ಯವು ಬಹಳ ಕಷ್ಟ ಹಾಗೂ ಚಿಂತಾಜನಕ ಸ್ಥಿಗೆ ಬರುತ್ತದೆ. ಸರ್ಕಾರವು ವಿವಿಧ ಯೋಜನೆಗಳನ್ನು ರೂಪಿಸಿ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ ಹಾಗೂ ಸರ್ಕಾರೇತರ ಸಂಸ್ಥೆಗಳು ಇದರ ಬಗ್ಗೆ ಹಗಲಿರುಳು ಶ್ರಮಿಸುತ್ತಿದೆ. ಆದ್ದರಿಂದಲೇ ಅಲ್ಪಸ್ವಲ್ಪ ಮಟ್ಟಿನ ಬಾಲಕಾರ್ಮಿ ಪದ್ಧತಿಯು ಕಡಿಮೆ ಯಾಗುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಬಹುದು. ನಮ್ಮ ದೇಶದಲ್ಲಿ ಬಹಳಷ್ಟು ಕುಟುಂಬಗಳು ಬಡತನದಲ್ಲಿ ಇರುವುದರಿಂದಲೇ ಬಾಲಕಾರ್ಮಿಕ ಪದ್ಧತಿಯು ಬಳೆಯುತ್ತಲೇ ನಡೆದಿದೆ. ಏಕೆಂದರೆ ಬಡತನದಲ್ಲಿ ಇರುವ ಮಕ್ಕಳು ಶಾಲೆಗೆ ಹೋಗದೇ ತಮ್ಮ ಕುಟುಂಬದ ಆರ್ಥಿಕ ಸ್ಥಿತಿಗೆ ನೆರವಾಗಲು ಮಕ್ಕಳು ಶಾಲೆ ಬಿಟ್ಟು ದುಡಿಯಲು ಹೋಗುತ್ತಾರೆ. ಬಾಲಕಾರ್ಮಿಕ್ ಪದ್ಧತಿಯೂ ಹೆಚ್ಚಾಗಿ ಕಂಡುಬರುವುದು ಎಂದರೆ ನಗರ ಪ್ರದೇಶದಲ್ಲಿ. ಇಲ್ಲಿ ದಿನನಿತ್ಯ ಬಾಲಕಾರ್ಮಿ ಪದ್ಧತಿಯು ಬೆಳೆಯುತ್ತಲೇ ನಡೆದಿದೆ. ಸರ್ಕಾರವು ಕಾನೂನುಗಳನ್ನು ರೂಪಿಸಿ ಜಾರಿಗೆ ತಂದರು ಆ ಕಾನೂನುಗಳನ್ನು ಯಾರೋಬ್ಬರು ಪಾಲಿಸುತ್ತಿಲ್ಲ. ಎಲ್ಲಿಯವರೆಗೂ ಕಾನೂನು ಕಾಯ್ದೆಗಳನ್ನು ಸಮರ್ಪಕವಾಗಿ ಪಾಲಿಸುವುದಿಲ್ಲವೊ ಅಲ್ಲಿಯವರೆಗೆ ಅಲ್ಲಿಯವರೆಗೆ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡುವುದು ಬಹಳ ಕಷ್ಟ.

ಬಾಲಕಾರ್ಮಿಕ ಆಗಲು ಕಾರಣಗಳು

- ಬಡತನ
- ಶಿಕ್ಷಣದ ಕೊರತೆ
- ಅನಕ್ಷರತೆ
- ಕಾನೂನಿನ ಬಗ್ಗೆ ಅರಿವೆ ಇಲ್ಲದಿರುವಿಕೆ
- ನಿರುದ್ಯೋಗ
- ಜನರ ವಲಸೆ
- ತಂದೆ–ತಾಯಿಗಳ ನಿಷ್ಕಾಳಜಿ
- ಅಧಿಕ ವೇಗದಲ್ಲಿ ಜನಸಂಖ್ಯೆಯ ಬೆಳವಣಿಗೆ
- ಸಾಮಾಜಿಕ ಪರಸ್ಥಿತಿ
- ಸರ್ಕಾರದ ವಿಳಂಬ ನೀತಿ

೧. **ಬಡತನ:** ಬಡತನವೇ ಬಾಲಕಾರ್ಮಿಕರ ಸಮಸ್ಯೆಗೆಯ ಮೂಲ ಕಾರಣವಾಗಿದೆ. ಬಡತನವು ಭಾರತದಲ್ಲಿ ಇಡೀ ಜಗತ್ತಿನ ಇತರ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರದಲ್ಲಿ ಒಂದಾಗಿದೆ. ಕಿಂಗ್‌ರವರ ಅಭಿಪ್ರಾಯದಂತೆ ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಕುಟುಂಬ ಒಂದರ ವಾರ್ಷಿಕ ವರಮಾನದ ಆದಾಯವು ೨೩೦೦ ಡಾಲರಗಿಂತ ಅಂದರೆ ಸುಮಾರು ೬೯೦೦ ರೂ. ಗಳಿಗಿಂತ ಕಡಿಮಾಯಾಗಿದ್ದರೆ ಬಡತನ ನಮ್ಮ ಭಾತನಲ್ಲಿ ವಾಷಿಕ ಆದಾಯವು ೨೦ ರೂ.ಗಳಿಗಿಂತ ಕಡಿಮೆಯಾಗಿದ್ದರೆ ಬಡತನ ಇದರಂತೆ ಲೆಕ್ಕಾಚಾರ ಮಾಡಿದರೆ ನಮ್ಮ ಭಾರದಲ್ಲಿ ಶೇಕಡಾ ೩೫ ಮಂದಿ ಜನರು ಬಡತನದ ರೇಖೆಯಿಂದ ಕೆಳಗೆ ಬರುವವರಾಗಿದ್ದಾರೆ. ಭಾರತದ ತಲಾ ಆದಾಯ ೬೭ ರೂ ಆದರೆ ಅಮೇರಿಕಾ ತಲಾ ಆದಾಯ ೧೨೦೦ ನಮ್ಮ ದೇಶದಲ್ಲಿ ಒಬ್ಬನ ಆದಾಯದಿಂದ ಅಮೇರಿಕಾ ಸಂಸ್ಥಾನಗಳಲ್ಲಿ ಅವರು ಸಾಕುತ್ತಿರುವ ಒಂದು ನಾಯಿಯನ್ನು ಸಹ ಸಾಕಲು ಸಾಧ್ಯವಾಗುವುದಿಲ್ಲ. ನಮ್ಮಲ್ಲಿ ಬಡತನವೆಂದರೆ ಬಹಳ ಮಟ್ಟಿಗೆ ಉಣ್ಣಲು ಅನ್ನವಿಲ್ಲದೆ ಶೋಚನೀಯ ಸ್ಥಿತಿಯಿಂದ ತಂದೆ ತಾಯಿಯರು ತಮ್ಮ ಮಕ್ಕಳನ್ನು ದುಡಿಯುವದಕ್ಕೆ ಹಚ್ಚುತ್ತಾರೆ.

೨. **ಶಿಕ್ಷಣದ ಕೋರತೆ:** ಶಿಕ್ಷಣದ ಕೋರತೆ ಕೂಡ ಬಾಲ ಕಾರ್ಮಿಕತನಕ್ಕೆ ಮುಖ್ಯವಾದ ಕಾರಣವಾಗಿದೆ. ಏಕೆಂದರೆ ಗ್ರಾಮಿಣ ಪ್ರದೇಶಗಳಲ್ಲಿ ಹೆಚ್ಚಾಗಿ ನಾವು ಕಾಣುವುದೇನೆಂದರೆ ಒಂದು ಶಾಲೆ ಇದು ಅದಕ್ಕೆ ಒಬ್ಬರೆ ಶಿಕ್ಷಕರಿರುತ್ತಾರೆ ಹಾಗೂ ಅಲ್ಲಿ ಕೇವಲ ಪ್ರಥಮ ಶಿಕ್ಷಣ ಮಾತ್ರ ಹೆಚ್ಚಾಗಿರುತ್ತದೆ. ಇಂತಹ ಶಾಲೆಯಲ್ಲಿ ಶಿಕ್ಷಣಕ್ಕೆ ಸಾಮಗ್ರಗಳ ಅಪರಿಪೂರ್ಣ ಇರುವುದರಿಂದ ಮಕ್ಕಳು ಶಾಲೆ ಬಿಡುವುದು ಸಹಜ. ಈ ಒಂದು ಕೊರತೆಯಿಂದ ಗೊತ್ತಿಲ್ಲದ ಹಾಗೆ ದುಡಿಯಲು ತೊಡಗುತ್ತಾರೆ. ಶಿಕ್ಷಣ ಮಕ್ಕಳಿಗೆ ಕೊಡುವ ಸುರಕ್ಷಿತ ಮತ್ತು ಶ್ರೀಮಂತ ಭವಿಷ್ಯ ಕೊಡುಗೆಯಾಗಿದೆ ಎಂದು ಈ ಜನರಿಗೆ ತಿಳಿದಿಲ್ಲ.

೩) **ಅನಕ್ಷರತೆ:** ಅಕ್ಷರತೆಗೆ ವಿರುದ್ಧವಾದುದೇ ಅನಕ್ಷರತೆ ಅನಕ್ಷರತೆಯು ವ್ಯಕ್ತಿಗೆ ಅಕ್ಷರ ಜ್ಞಾನವಿಲ್ಲದಿರುವುದನ್ನು ಸೂಚಿಸುತ್ತದೆ. ಅನಕ್ಷರತೆಯಿಂದ ಇರುವ ಕುಟುಂಬಗಳು ತಮ್ಮ ಮಕ್ಕಳ ಅಕ್ಷರಸ್ಥರನ್ನಾಗಿ ಮಾಡುವ ಜ್ಞಾನ ಅವರಿಗಿರುವುದಿಲ್ಲ. ಅವರ ಮಕ್ಕಳ ಭವಿಷ್ಯದ ಬಗ್ಗೆ ಹೆಚ್ಚಿಗೆ ತಲೆ ಕೆಡಿಸಿಕೊಳ್ಳಲಾರದು ಶಿಕ್ಷಣ ನಮ್ಮಂತ ಬಡವರಿಗೆ ಯಾಕೆ? ಎಂದು ತಮ್ಮ ಭವಿಷ್ಯವಲ್ಲದೇ ತಮ್ಮ ಮಕ್ಕಳ ಉಜ್ಜಲವಾದ ಭವಿಷ್ಯವನ್ನು ಕುಂಠಿತಗೊಳಿಸುತ್ತಿದ್ದಾರೆ.

"ಅಕ್ಷರತೆಯು ಬೆಳಕು ಎನಿಸಿದರೆ ಅನಕ್ಷರತೆಯು ಅಂಧಕಾರವನನು ಸೂಚಿಸುತ್ತದೆ" ಶಿಕ್ಷಣ ಕೇವಲ ನೌಕರರಿಗಾಗಿ ಎಂದು ತಿಳಿದು ಅವರು ತಮ್ಮ ಮಕ್ಕಳನ್ನು ಕಲಿಯಲು ಮುಂದೆ ಬರುವುದಿಲ್ಲ ಅನಕ್ಷರತೆಯು ಕೂಡಾ ಬಾಲ ಕಾರ್ಮಿಕರಾಗಲು ಕಾರಣವಾಗಿದೆ ಎಂದು ಹೇಳಬಹುದು.

೪. **ಕಾನೂನಿನ ಬಗ್ಗೆ ಅರಿವೇ ಇಲ್ಲದಿರುವಿಕೆ:** ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ ಇಂದು ಸರ್ಕಾರವು ಅನೇಕ ಕಾಯ್ದೆ ಕಾನೂನುಗಳನ್ನು ಒಳಗೊಂಡಿದೆ ಆದರೆ ಕಾನೂನಿನ ಬಗ್ಗೆ ಅರಿವಿಲ್ಲದಿರುವವುದು ಮಕ್ಕಳು

ಬಾಲಕಾರ್ಮಿಕರಾಗಲು ಕಾರಣವಾಗಿದೆ ಎನ್ನಬಹುದು. ೧೪ ವರ್ಷದೊಳಗಿನ ಬಾಲಕರನ್ನು ಗಣಿ ಕಾರ್ಖಾನೆ ಮತ್ತು ಅಪಾಯಕಾರಿ ಕೆಲಸಗಳಲ್ಲಿ ಮಕ್ಕಳನ್ನು ತೊಡಗುವುದನ್ನು ೧೯೮೬ ಕಾಯ್ದೆ ನಿಷೇದಿಸಿದ್ದರೂ ರಾಜ್ಯಾಧಿಕಾರ ನೀತಿಯ ನಿರ್ದೇಶನ ತತ್ವಗಳ ೪೫ನೇ ವಿಧಿಯ ಮೇರಿಗೆ ೧೪ ವರ್ಷಗಳ ವರೆಗೆ ಎಲ್ಲಾ ಮಕ್ಕಳು ಶಾಲೆಯಲ್ಲಿರಬೇಕೆಂದು ಹೇಳಲಾಗಿದ್ದರೂ ಅದು ಇನ್ನೂ ಈಡೇರುವುದು ಬಹಳ ದೂರ ಉಳಿದಿದೆ. ಈ ರೀಯಾಗಿ ಅರಿವಿಲ್ಲದಿದ್ದರಿಂದ ಅವರು ಬಾಲಕಾರ್ಮಿಕರಾಗಿ ದುಡಿಯುತ್ತಾರೆ.

೫, ನಿರುದ್ಯೋಗ : ಭಾರತವು ಜನಸಂಖ್ಯೆಯಲ್ಲಿ ೨ನೇ ಬಹುದೊಡ್ಡ ರಾಷ್ಟ್ರವಾಗಿದೆ. ಹಾಗೂ ೧೦೦ ಕೋಟಿ ಜನಸಂಖ್ಯೆಯನ್ನು ಕೂಡಿದ ಬೃಹತ್ ದೇಶವಾಗಿದೆ. ಇಂತಹ ದೇಶದಲ್ಲಿ ಎಲ್ಲರಿಗೂ ಉದ್ಯೋಗ ಸಿಗುವುದು ನಿರಾಯಾಸದ ಮಾತಾಗಿದೆ. ಏಕೆಂದರೆ ಬಡತನ ದೇಶವಾದ ಭಾರತದಲ್ಲಿ ಅತ್ಯಂತ ಹೆಚ್ಚು ಜನರು ನಿರುದ್ಯೋಗಿಗಳು ಮತ್ತು ಅರೆ ಉದ್ಯೋಗಿಗಳು ಹೆಚ್ಚಾಗಿ ಕಾಣುತ್ತೇವೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲೂ ಇಂತಹ ಜನರನ್ನು ಕಾಣುತ್ತೇವೆ. ಗ್ರಾಮೀಣ ಪ್ರದೇಶದಲ್ಲೂ ಕೃಷಿರಂಗದಲ್ಲೂ ಕೇವಲ ಆರು ತಿಂಗಳು ಮಾತ್ರ ಉದ್ಯೋಗವಿದ್ದು ಇನ್ನಾರು ತಿಂಗಳು ಉದ್ಯೋಗವಿಲ್ಲದೆ ಬಡತನದಲ್ಲೂ ನಲುಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ತಮ್ಮ ಮಕ್ಕಳನ್ನು ಕೆಲಸಕ್ಕೆ ನೇಮಿಸುತ್ತಾರೆ. ತಂದೆ ತಾಯಿಗಳು ಗ್ರಾಮೀಣ ಪ್ರದೇಶದಲ್ಲಿ ಭೂಮಿಯ ಹಂಚಿಕೆ ಭೂ ಒಡೆತನವೂ ಅತ್ಯಂತ ಅಸಮಾನ ರೀತಿಯಲ್ಲಿದೆ. ಕೆಳವರ್ಗದಲ್ಲಿರುವ ಸುಮಾರು ಅರ್ಧದಷ್ಟು ಜಮೀನನ್ನು ಸಾಗುವಳಿ ಮಾಡಿ ಮಕ್ಕಳನ್ನು ದುಡಿಸುತ್ತಿದ್ದಾರೆ. ನಿರುದ್ಯೋಗ ಆಗೊಮ್ಮೆ ಈಗೊಮ್ಮೆ ಸಿಗುವ ಉದ್ಯೋಗ ಅಥವಾ ಅರೆ ಉದ್ಯೋಗದಂತಹ ಪರಿಸ್ಥಿತಿಗಳು ತಮ್ಮ ಮಕ್ಕಳನ್ನು ದುಡಿಯಲು ಕಳುಹಿಸುವಂತೆ ಪೋಷಕರನ್ನು ಒತ್ತಾಯಿಸುತ್ತವೆ. ಬಡತನದ ಬೇಗೆಯಲ್ಲಿ ಬೇಯುತ್ತಿರುವ ತಂದೆ ತಾಯಿ ಸಹಜವಾಗಿಯೇ ತಮ್ಮ ಮಕ್ಕಳನ್ನು ಕುಟುಂಬದ ಆದಾಯವನ್ನು ಹೆಚ್ಚಿಸುವ ಸಾಧನವೆಂದು ಪರಿಗಣಿಸುತ್ತಾರೆ.

೬. ಜನರವಲಸೆ: ವಲಸೆ ಕಾರಣದಿಂದಲೂ ಬಾಲಕಾರ್ಮಿಕರಾಗುತ್ತಿದ್ದಾರೆ. ಗ್ರಾಮೀಣ ಜನರು ನಗರಕ್ಕೆ ವಲಸೆ ಹೋಗುತ್ತಿದ್ದಾರೆ. ಹಳ್ಳಿಯ ವ್ಯವಸಾಯಗಾರರು, ವ್ಯಾಪಾರಸ್ಥರು ಮತ್ತು ಕುಶಲಕುರ್ಮಿಗಳಾದ ಬಡಿಗ, ಚಮ್ಮಾರ, ಕಮ್ಮಾರ, ಬುಟ್ಟಿ ಹೆಣಿಯುವವರು, ಅಗಸ, ಆಚಾರಿಗಳು ನಿರುದ್ಯೋಗಳಾಗುತ್ತಿದ್ದಾರೆ. ಬೃಹತ್ ಕೈಗಾರಿಕೆಗಳು ನಗರಗಳಲ್ಲಿ ಬೆಳೆದುದರಿಂದ ಹಳ್ಳಿಯ ಜನ ಅಲ್ಲಿ ತಮ್ಮ ಜೀವನ ಸಾಗಿಸಲು ವಲಸೆ ಹೋಗುತ್ತಾರೆ ಭಾರತದಲ್ಲಿ ಗ್ರಾಮದಿಂದ ನಗರಕ್ಕೆ ವಲಸೆ ಹೋಗುವ ಪ್ರಮಾಣವು ಶೇ.೧೦.೪ ರಷ್ಟಿದೆ. ಒಂದು ಅಂದಾಜಿನ ಪ್ರಕಾರ ಪ್ರತಿವರ್ಷ ಮುಂಬಾಯಿ ನಗರಕ್ಕೆ ೧೧.೦೦ ಜನರು ಕಲ್ಕತ್ತಾಕ್ಕೆ ೧೪,೦೦೦ ಜನರು ಬೆಂಗಳೂರಿಗೆ ೯೦೦೦ ಸಾವಿರ ಜನರು ವಲಸೆ ಬರುತ್ತಿದ್ದಾರಂತೆ. ಬಡಜನರು ಉಪ ಜೀವನಕ್ಕಾಗಿ ನಗರಕ್ಕೆ ವಲಸೆ ಹೋದಾಗ ಅಲ್ಲಿ ಮಕ್ಕಳ ಶಿಕ್ಷಣ ಕುಂಠಿತವಾಗುತ್ತದೆ. ಆಗ ಮಕ್ಕಳು ಬಾಲಕಾರ್ಮಿಕರಾಗುತ್ತಾರೆ.

೭. ತಂದೆ ತಾಯಿಗಳ ನಿಷ್ಕಾಳಜಿ: ಬಡ ಮತ್ತು ನಿರ್ಗತಿಕ ಕುಟುಂಬದ ತಂದೆ ತಾಯಿಗಳು ಪರಿಸ್ಥಿತಿ ಚೆನ್ನಾಗಿಲ್ಲದ ಕಾರಣ ಇವರ ಮಕ್ಕಳಿಗೆ ಶಿಕ್ಷಣಕಲಿಸಲು ಹೆಚ್ಚಿನ ಒತ್ತು ಕೊಡುವುದಿಲ್ಲ ಅದರಲ್ಲೂ ಗ್ರಾಮೀಣ ಪ್ರದೇಶದ ತಂದೆ ತಾಯಿಗಳು ಅವರ ಮಕ್ಕಳನ್ನು ಕಲಿಸಲು ಒಪ್ಪಿಗೆ ನೀಡುವುದಿಲ್ಲ. ಏಕೆಂದರೆ ನಾವು ಮೊದಲೆ ಬಡವರು ಎಂದು ನಿರಾಯಾಸವಾಗಿ ಹೇಳುತ್ತಾರೆ. ಶಾಲೆಯನ್ನು ಕಲಿಸದೆ ಕೆಲಸಕ್ಕೆ ಹಚ್ಚಿದರೆ ಅದು ನಮ್ಮ ಮುಪ್ಪಿನ ಕಾಲದಲ್ಲಿ ಸಹಾಯವಾಗುವುದು ಎನ್ನುತ್ತಾರೆ. ಬಡತನವೆಂಬ ದಾರಿದ್ರ್ಯದಿಂದಾಗಿ ಮಕ್ಕಳನ್ನು ದುಡಿಯುವುದಕ್ಕೆ ಹಚ್ಚುತ್ತಾರೆ. ಇಂತಹ ಕುಟುಂಬಗಳ ತಂದೆ ತಾಯಿಯರಲ್ಲಿ ಹೆಚ್ಚಿನವರೆಗೆ ಮಕ್ಕಳು ವರಮಾನ ಕೊಡುವ ಆಸ್ತಿಯಾಗಿದ್ದಾರೆ. ಏಕೆಂದರೆ ಈ ಮಕ್ಕಳಿಗೆ ಕುಟುಂಬ ವರಮಾನವನ್ನು ಸುಧಾರಿಸುತ್ತದೆ.

೮. ಅಧಿಕ ವೇಗದಲ್ಲಿ ಜನಸಂಖ್ಯೆಯ ಬೆಳವಣಿಗೆ: ಭಾರತವು ಜನಸಂಖ್ಯೆಯಲ್ಲಿ ೨ನೇ ಬಹುದೊಡ್ಡ ರಾಷ್ಟ್ರವಾಗಿದೆ. ೧೦೪ ಕೋಟಿ ಜನಸಂಖ್ಯೆಯನ್ನು ಹೊಂದಿದೆ. ಇಂತಹ ಜನಸಂಖ್ಯೆಯನ್ನು ಹೊಂದಿದ ಭಾರತದಲ್ಲಿ ಶೇ. ೨೫% ಭಾಗ ಬಾಲಕಾರ್ಮಿಕರನ್ನು ಹೊಂದಿದೆ. ಪ್ರತಿ ೭ ನಿಮಿಷಕ್ಕೆ ಒಂದು ಮಗು ಜನಿಸುತ್ತಿದೆ. ಮರಣ ಬಹಳ ಮಂದಗತಿಯಲ್ಲಿ ಸಾಗುತ್ತಿದೆ. ಭಾರತವು ಬಹಳ ಸಾಂಪ್ರದಾಯಿಕ ರಾಷ್ಟ್ರವಾಗಿರುವುದರಿಂದ ಹೆಣ್ಣು ಮಕ್ಕಳಿಗೆ ೧೨ ರಿಂದ ೧೪ ವರ್ಷಕ್ಕೆ ವಿವಾಹ ಮಾಡುತ್ತಾರೆ. ಆದ್ದರಿಂದ ಅವರು ಬೇಗ ಗರ್ಭಿಣಿಯರಾಗಿ ಹೆಚ್ಚು ಮಕ್ಕಳಿಗೆ ಜನ್ಮ ನೀಡುವುದರಲ್ಲಿ ಅನುಮಾನವಿಲ್ಲ ಹಾಗೂ ಭಾರತ ಮುಸ್ಲಿಮರಲ್ಲಿ ಕುಟುಂಬ ಯೋಜನೆ ಅಳವಡಿಸದ ಕಾರಣ ಅವರಿಗೆ ಹೆಚ್ಚು ೧೦ ರಿಂದ ೧೫ ಮಕ್ಕಳವರೆಗೂ ಸಂತಾನಗಳಿದ್ದು ಇಂತಹ ಪರಿಸ್ಥಿತಿಯಲ್ಲಿ ಮಕ್ಕಳನ್ನು ಸಾಕಲು ಬಹಳ ಕಷ್ಟದ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲೂ ತಮ್ಮ ಅಧಿಕ ಮಟ್ಟವನ್ನು ಎತ್ತರಿಸಿಕೊಳ್ಳಲು ತಮ್ಮ ಮಕ್ಕಳನ್ನು ದುಡಿತಕ್ಕೆ ಹಚ್ಚುತ್ತಾರೆ. ಈ ಜನಸಂಖ್ಯೆ ಬೆಳವಣಿಗೆಯಿಂದ ಬಾಲಕಾರ್ಮಿಕರು ದಿನದಿಂದ ದಿನಕ್ಕೆ ಹೆಮ್ಮರವಾಗಿ ಬೆಳೆಯುತ್ತಿದ್ದಾರೆ.

೯. ಸಾಮಾಜಿಕ ಪರಿಸ್ಥಿತಿ: ಮೂಢನಂಬಿಕೆ ಲೋಕರೂಢಿಗಳು ನಂಬುವುದು ಅನಕ್ಷರಸ್ಥ ತಂದೆ ತಾಯಿಯರು ಸಂಪ್ರದಾಯ ಇವು ಕೂಡ ಬಾಲಕಾರ್ಮಿಕತನಕ್ಕೆ ಕಾರಣವಾಗಿದೆ. ಬಡವರು ತಮ್ಮ ಮಕ್ಕಳನ್ನು ಶಿಕ್ಷಣ ಕಲಿಸಲು ವಿಶೇಷವಾಗಿ ಹೆಣ್ಣು ಮಕ್ಕಳನ್ನು ಹೊರಗಡೆ ಬಿಡದೇ ಮನೆಯಲ್ಲಿಯೇ ಕೆಲಸಕ್ಕೆ ಹಚ್ಚುವುದರಿಂದ ಮಕ್ಕಳನ್ನು ಇತರರೊಂದಿಗೆ ಸಾಮಾನ್ಯವಾಗಿ ಜೀವಿಸಲು ಅವ್ಕಾಶ ಕೊಡದೇ ಇರುವುದರಿಂದ ಹಾಗೂ ಬಡಜನರಿಗೆ ಸರಿಯಾದ ಸ್ಥಾನಮಾನವಿಲ್ಲದಿರುವುದರಿಂದ ತಮ್ಮ ಮಕ್ಕಳನ್ನು ಕೂಡಾ ಅವರು ಮಾಡುವ ಕೆಲಸದಲ್ಲಿ ಮಕ್ಕಳನ್ನು ಕೆಲಸಕ್ಕೆ ಹಚ್ಚುತ್ತಾರೆ.

೧೦. ಸರಕಾರದ ವಿಳಂಬ ನೀತಿ: ಅಭಿವೃದ್ಧಿಯ ಹೊಣೆ ಹೊತ್ತ ಸರಕಾರವು ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣ ನಿವಾರಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತಾರಾಗಿಲ್ಲ. ಕಾನೂನುಗಳು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಅಭಿವೃದ್ಧಿ ನೀತಿ ಜನಪರವಾಗಿಲ್ಲ. ಜಾಗತೀಕರಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಮೂಲಕ ಬಾಲಕಾರ್ಮಿಕತೆ ಅಧಿಕವಾಗುತ್ತಿದೆ.

ಮಕ್ಕಳ ದುಡಿಮೆಯ ಜಾರಿಯಲ್ಲಿರುವುದರಿಂದ ಅನೇಕ ದುಷ್ಪರಿಣಾಮಗಳು ಆಗುತ್ತಲಿವೆ. ಇವೆಲ್ಲ ಗಮನಿಸಿದಾಗ ಮಾನವ ಸಂಪನ್ಮೂಲವನ್ನು ವೃತಾ ಮಾಡುತ್ತಿರುವ ಒಂದು ಸಾಮಾಜಿಕ ಅನಿಷ್ಟ ಪದ್ಧತಿ ಇದೆಂದು ಸ್ಪಷ್ಟವಾಗುತ್ತವೆ. ಈ ಪದ್ಧತಿಯ ದುಷ್ಪರಿಣಾಮ ವ್ಯಾಪಕವು ಹಾಗೂ ಗಂಭೀರ ಸ್ವರೂಪದ್ದು ಎಂಬುದು ಸ್ಪಷ್ಟ ಮಕ್ಕಳ ದುಡಿಮೆಯ ಸಂಬಂಧಪಟ್ಟ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ

ಬೀರುವುದಲ್ಲದೇ ಅವರ ಶಿಕ್ಷಣವನ್ನು ಮೊಟಕುಗೊಳಿಸುತ್ತದೆ. ಕುಟುಂಬ ಜೀವನದಲ್ಲಿ ಹಸ್ತಕ್ಷೇಪ ಮಾಡುವಿದರೊಂದಿಗೆ ಕ್ರಮೇಣ ಪರೋಕ್ಷವಾಗಿ ಸಾಮಾಜಿಕ ನಿಯಂತ್ರಣ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತದೆ.

ಮಕ್ಕಳ ದುಡಿಮೆಯ ಕೆಲವು ಕ್ಷೇತ್ರಗಳು

೧. ಕೃಷಿ
೨. ಕೈಗಾರಿಕೆ
೩. ಮನಕೆಲಸ
೪. ಗುಡಿ ಕೈಗಾರಿಕೆ
೫. ಗ್ಯಾರೇಜುಗಳಲ್ಲಿ
೬. ಹೋಟೆಲ್‌ಗಳಲ್ಲಿ
೭. ಕಟ್ಟಡ ಕೆಲಸ
೮. ರಸ್ತೆ ನಿರ್ಮಾಣ

ಮಕ್ಕಳ ದುಡಿತದ ಸಾಮಾಜಿಕ ದುಷ್ಪರಿಣಾಮಗಳು : ಈಲಿಯಟ್ ಮತ್ತು ಮೆರ್ರಿಲ್‌ರವರ ವ್ಯಾಖ್ಯಾನ ಈ ಕೆಳಗಿನಂತಿದೆ.

ಈಲಿಯಟ್ ಮತ್ತು ಮೆರ್ರಿಲ್ ಎಂಬ ಸಮಾಜಶಾಸ್ತ್ರಜ್ಞರು ಸೋಶಿಯಲ್ ದಿಸ್ ಆರ್ಗನೈಸೇಶನ್ ಎಂಬ ಪುಸ್ತಕದಲ್ಲಿ ಮಕ್ಕಳ ದುಡಿತದ ದುಷ್ಪರಿಣಾಮಗಳನ್ನು ದೈಹಿಕ ಮಾನಸಿಕ ಹಾಗೂ ನೈತಿಕ ಸಂಕಷ್ಟಗಳೆಂದು ಮೂರು ಮುಖ್ಯ ಪ್ರಕಾರಗಳಾಗಿ ವಿಂಗಡಿಸಿದ್ದಾರೆ.

೧. ಮಕ್ಕಳ ದುಡಿತದಿಂದ ಉಂಟಾಗುವ ದೈಹಿಕ ಸಂಕಷ್ಟಗಳು: ೫ ರಿಂದ ೧೫ನೇ ವರ್ಷದೊಳಗಿನ ಮಕ್ಕಳ ದುಡಿತಕ್ಕೆ ಒಳಗಾದಾಗ ಅವರ ದೈಹಿಕ ಬೆಳೆವಣಿಗೆ ಸಹಜವಾದ ಗತಿಯಲ್ಲಿ ಆಗದೆ ಅವರು ದೊಡ್ಡ ಸಂಖ್ಯೆಯಲ್ಲಿ ದೈಹಿಕ ದುರ್ಬಲತೆಗೆ ಹಾಗೂ ರೋಗರುಜಿನಗಳಿಗೆ ಒಳಗಾಗುವರು. ಪ್ರೌಢ ಕಾರ್ಮಿಕರುಗಳಿಗಿಂತಲೂ ಇವರು ಹೆಚ್ಚಿನ ಸಂಖ್ಯೆಯಲ್ಲಿ ಕಾಯಿಲೆಗಳಿಗೆ ಹಾಗೂ ಅಪಘಾತಗಳಿಗೆ ಬಲಿಯಾಗುವರು. ಉತ್ತಮ ಪೌಷ್ಟಿಕ ಆಹಾರಾಂಶಗಳನ್ನು ಸೇವಿಸುತ್ತಾ ಶಿಕ್ಷಣ ಕ್ರೀಡೆ, ವಿನೋದಗಳಲ್ಲಿ ಕಾಲ ಕಳೆಯುವ ಸಮಯದಲ್ಲಿಯೇ ಅವರುಗಳು ದುಡಿತಕ್ಕೊಳಗಾಗುತ್ತಿದ್ದರಿಂದ ಇವರ ದೈಹಿಕ ಸಾಮರ್ಥ್ಯ ಬಹು ಬೇಗನೆ ಕುಂದಿಹೋಗುವುದು ಇವರ ಹಲವು ಬಗೆಯ ರೋಗರುಜಿನಗಳಿಗೆ ಒಳಗಾಗಿ ಜೀವನ ಪರ್ಯಂತ ದುಃಖಿಸಬೇಕಾಗುವುದು ಮಕ್ಕಳನ್ನು ದುಡಿಮೆಗೆ ಬಳಸಿಕೊಳ್ಳುವ ಉದ್ಯೋಗ ಪತಿಗಳು ಯಾವಾಗಲು ತಮ್ಮ ಸಂಪತ್ತು ಹಾಗೂ ಲಾಭಾಂಶವನ್ನು ಹೆಚ್ಚಿಸಿಕೊಳ್ಳುವ ವಿಚಾರದಲ್ಲಿಯೇ ಮುಳುಗಿರುತ್ತಾರಾದ್ದರಿಂದ ಈ ಮಕ್ಕಳನ್ನು ಅಮಾನುಷವಾಗಿ ನಡೆಸಿಕೊಳ್ಳುತ್ತಾ ದಿನವೊಂದಕ್ಕೆ ೧೦-೧೨ ಗಂಟೆಗಳ ಕಾಲ ಅವರನ್ನು ದುಡಿಯುವಂತೆ ಅಡುತ್ತಾ ಕೆಲಸದ ನಡುವೆ ಮಕ್ಕಳು ಕುಳಿತಲ್ಲಿ ಇಂತಲ್ಲಿ ವಿಶ್ರಾಂತಿ ತೆಗೆದುಕೊಂಡಲ್ಲಿ ಅಂತಹವರುಗಳನ್ನು ದೈಹಿಕವಾಗಿ ದಂಡಿಸುತ್ತ ಹಲವಾರು ಬಗೆಯ ಪೀಡನಗಳಿಗೆ ಒಳಪಡಿಸುವರು.

೨. ಮಕ್ಕಳ ದುಡಿತದ ಮಾನಸಿಕ ದುಷ್ಪರಿಣಾಮಗಳು: ಎಳೆಯ ವಯಸ್ಸಿನಲ್ಲಿಯೇ ಒತ್ತಾಯದ ದುಡಿತಕ್ಕೆ ಒಲಗಾಗುವ ಮಕ್ಕಳ ಮಾನಸಿಕ ಹಾಗೂ ಭೌತಿಕ ಬೆಳವಣಿಗೆ ತೃಪ್ತಿಕರವಾಗಿರುವುದು ಸಾಧ್ಯವಿಲ್ಲ. ನಾಗರಿಕ ಜೀವನದಲ್ಲಿ ಅವಿಭಾಜ್ಯ ಅಂಗವಾಗಿರುವ ವಿದ್ಯೆಯಿಂದಲೇ ಅವರು ವಂಚಿತರಾಗಿರುವರು. ತಮ್ಮಲ್ಲಿರಬಹುದಾದ ಅಂತರಿಕ ಪ್ರತಿಭೆಯನ್ನು ವಿಕಾಸಗೊಳಿಸಿಕೊಳ್ಳಲು ಸಾಹಿತ್ಯ, ಕಲೆ, ಸೌಂದರ್ಯ, ಮನೋರಂಜನೆ, ವಿಜ್ಞಾನ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕನಿಷ್ಟ ಮಟ್ಟದ ಶಿಕ್ಷಣ ಹಾಗೂ ತರಬೇತಿಯನ್ನು ಪಡೆಯಲು ಅನರ್ಹರು ಹಾಗೂ ಅಸಮರ್ಥರೂ ಆಗಿರುವ ಈ ಮಂದಿ ಜೀವನದಲ್ಲಿ ಮಾನಸಿಕ ಸಂತೃಪ್ತಿಯನ್ನು ಪಡೆಯುವುದು ಬಹಳ ಕಷ್ಟ ಮನಸ್ಸಿನಲ್ಲಿ ವಿಭಿನ್ನ ತೆರನಾದ ಭಾವನೆಗಳನ್ನು ಮೂಡುವ ಮುನ್ನವೇ ದುಡಿಮೆಯ ಒತ್ತಡಕ್ಕೆ ಬಲಿಯಾಗಿರುವುದಿರಿಂದ ಇವರುಗಳು ಮಾನಸಿಕ ಗೊಂದಲ ಹಾಗೂ ಜಿಗುಪ್ಸೆಗೆ ಒಳಗಾಗುವ ಸಾಧ್ಯತೆಯಿರುತ್ತದೆ. ಪರಿಣಾಮವಾಗಿ ಇವರು ದಾರಿತಪ್ಪಿದ ವರ್ತನೆಗೆ ತೊಡಗುವ ಸಾಂಭಾವ್ಯತೆಯೂ ಅಧಿಕವಾಗಿದೆ.

೩. ನೈತಿಕ ದುಷ್ಪರಿಣಾಮಗಳು: ದುಡಿಯುವ ಮಕ್ಕಳ ಸಾಮಾಜಿಕಕರಣವು ಅಸಮರ್ಪಕವಾಗಿರುವುದರಿಂದ ಅವರು ಬಹು ಬೇಗನೆ ದುಷ್ಟ ಚಟಗಳಿಗೆ ಹಾಗೂ ಕೆಟ್ಟ ಸಹವಾಸಗಳಿಗೆ ಬಲಿಯಾಗುತ್ತಾರೆ. ನೈತಿಕ ಮೌಲ್ಯಗಳನ್ನು ಅವರಲ್ಲಿ ಬಲವಾಗಿ ಮೂಡಿಸುವ ಪ್ರಯತ್ನವು ನಡೆಯದೆ ಇರುವುದರಿಂದ ಈ ಮಕ್ಕಳ ಬೀಡಿ, ಸಿಗರೇಟು, ಸೇದುವುದು, ಶರಾಬುಕುಡಿಯುವುದು, ಹಣ ಕದಿಯುವುದು, ಜೂಜಾಡುವುದು, ಗಾಂಜಾ ಸೇದುವುದು, ಅನೈತಿಕವಾದ ಲೈಂಗಿಕ ಚಟುವಟಿಕೆಗಳು ದುಷ್ಚಟಗಳಿಗೆ ಒಳಗಾಗುವುದು ಮಾತ್ರವಲ್ಲ ಇಂತಹ ಮಕ್ಕಳ ಅಪ್ರಾಮಾಣಿಕವಾಗಿ ಚರಿತ್ರ ಹೀನರಾಗಿ ಸಮಾಜ ಘಾತಕರಾಗಿ ರೂಪುಗೊಳ್ಳುವರೆಂದು ಹೇಳಲಾಗದಿದ್ದರೂ ಅವರು ದುಡಿಯುವ ಪರಿಸರ ಹಾಗೂ ಪರಿಸ್ಥಿತಿಗಳಿಂದಾಗಿ ಗಣನೀಯ ಸಂಖ್ಯೆಯ ಮಕ್ಕಳು ಹಾಗೆ ಸಮಾಜಕ್ಕೊಂದು ಹರೆಯಾಗಿ ರೂಪಗೊಳ್ಳುವ ಸಾಧ್ಯತೆಯಿದೆ. ಈ ರೀತಿಯ ದುಷ್ಪರಿಣಾಮ ಬೀರುವುದಲ್ಲೇದೆ ಅವರ ಶಿಕ್ಷಣವನ್ನು ಮೊಟಕುಗೊಳಿಸುತ್ತದೆ. ಕುಟುಂಬ ಜೀವನದಲ್ಲಿ ಹಸ್ತಕ್ಷೇಪ ಮಾಡುವುದರೊಂದಿಗೆ ಕ್ರಮೇಣ ಪರೋಕ್ಷವಾಗಿ ಸಾಮಾಜಿಕ ನಿಯಂತ್ರಣ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತಿದೆ.

೪. ಬಡತನ ಮತ್ತು ಅನಕ್ಷರತೆ: ಬಡತನ ಮಕ್ಕಳ ದುಡಿಮೆ ಶಿಕ್ಷಣದ ಕೊರತೆ ಬಡತನ ಹೀಗೆ ಒಂದು ಇನ್ನೊಂದಕ್ಕೆ ಜನ್ಮಕೊಡುತ್ತದೆ. (Poverty begets child labour begets lack of education begets poverty) ಇದು UNICEF ವರದಿಯ ಒಂದು ಉದ್ಧೃತ ಹೇಳಿಕೆ, ಅಂದರೆ ಬಡತನವು ಮಕ್ಕಳ ದುಡಿಮೆಯ ಪರಿಸ್ಥಿತಿಯನ್ನು ಸೃಷ್ಟಿಸಿದರೆ, ಮಕ್ಕಳ ದುಡಿಮೆಯು ದುಡಿಯುವ ಮಕ್ಕಳನ್ನು ಕೌಶಲ ರಹಿತ ಬಡತನ ಮತ್ತು ಅನಕ್ಷರತೆಯಲ್ಲಿ ಬಂಧಿಸುತ್ತದೆ. ಹೀಗೆ ಬಡತನ ಮತ್ತು ಅನಕ್ಷರತೆ ಜೊತೆಗೂಡಿ, ಮಕ್ಕಳ ದುಡಿಮೆಯ ಅನಿವಾರ್ಯ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ.

೫. ಸಾಮಾಜಿಕ ದುಷ್ಪರಿಣಾಮಗಳು: ಮಕ್ಕಳ ದುಡಿತದ ಪರಿಣಾಮವಾಗಿ ಕೌಟುಂಬಿಕ ಸಮಸ್ಯೆಗಳು ತಲೆದೋರುತ್ತವೆ. ಈ ಸಮಸ್ಯೆಯಿಂದ ಕೌಟುಂಬಿಕ ಜೀವನದ ಶಾಂತಿ ಸಂತೃಪ್ತಿ ಹಾಗೂ ಸಾಮರಸಗಳು ಭಗ್ನಗೊಳ್ಳುತ್ತವೆ. ಕುಟುಂಬದಲ್ಲಿರಬೇಕಾದ ಹೆತ್ತವರ ಮತ್ತು ಮಕ್ಕಳು ನಡುವಿನ ಸುಮಧುರ ಬಾಂದವ್ಯವು ಒಡೆದುಹೋಗುವುದು. ಮಕ್ಕಳ ಸಾಮಾಜೀಕರಣದ ಪ್ರಕ್ರಿಯೆಯು ಗೊಂದಲಮಯವಾಗುವುದು ದುಡಿಯುವ ಮಕ್ಕಳ ಮೇಲೆ ತಾಯಿತಂದೆಯರಿಗೆ ಯಾವುದೇ ಹತೋಟಿ ಇಲ್ಲದಂತಾಗಿ ಅವರು ಲೈಂಗಿಕ ಹಾಗೂ ಸಾಮಾಜ ಘಾತಕ ಕಾರ್ಯಗಳಿಗೆ ಇಳಿಯಬಹುದಾದ ಸಾಧ್ಯತೆ ಹೆಚ್ಚುವುದು.

ಮಕ್ಕಳ ದುಡಿತಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾದ ಹಲವು ಸಮೀಕ್ಷೆಗಳು ಹಾಗೂ ಅಧ್ಯಯನಗಳು ವರದಿ ಮಾಡಿರುವಂತೆ ಮಕ್ಕಳ ದುಡಿತವು

ಮಕ್ಕಳ ಮೇಲೆಯೇ ಅನೇಕ ತೆರನಾದ ದುಷ್ಪರಿಣಾಮಗಳುಂಟಾಗುವಂತೆ ಮಾಡುವುದು. ಉದಾ: ದುಡಿಯುವ ಮಕ್ಕಳು ಕುಟುಂಬದ ಘನತೆ ಗೌರವ ಹಾಗೂ ಕೌಟುಂಬಿಕ ಮರ್ಯಾದೆಯ ಬಗ್ಗೆ ಹಾಗೂ ಸಾಮಾಜಿಕ, ನೈತಿಕ ಮೌಲ್ಯಗಳ ಬಗ್ಗೆ ಹೆಚ್ಚು ತಾತ್ಸಾರ ಭಾವನೆಯುಳ್ಳವರಾಗಿರುತ್ತಾರೆ. ತಾವು ಸ್ವತಂತ್ರ್ಯ ದುಡಿಮೆಗಾರರೆಂಬ ಅಹಂಭಾವದಿಂದ ಇವರು ಕುಟುಂಬದ ಹತೋಟಿಯಿಂದ ತಪ್ಪಿಸಿಕೊಂಡು ಕಾನೂನುಬಾಹಿರ ಕೃತ್ಯಗಳಲ್ಲಿ ತೊಡಗುವ ಸಾಧ್ಯತೆ ಅಧಿಕವಾಗಿರುತ್ತದೆ. ದುಡಿಮೆಯಲ್ಲಿ ತೊಡಗಿರುವ ಮಕ್ಕಳಲ್ಲಿ ಸ್ವೇಚ್ಛಾಚಾರದ ಪ್ರವೃತ್ತಿ ಅಧಿಕವಾಗಿರುವುದರಿಂದ ಅವರು ಗಣನೀಯ ಸಂಖ್ಯೆಯಲ್ಲಿ ಬಾಲಾಪರಾಧಿ ಚಟುವಟಿಕೆಗಳಲ್ಲಿ ತೊಡಗಿರುವರು ಸಾಮಾಜಿಕ ಮೌಲ್ಯಗಳಿಗೆ ಹಾಗೂ ನಿಯಮಗಳಿಗೆ ಗೌರವ ನೀಡದಿರುವ ಮಕ್ಕಳು ಮಕ್ಕಳು ಈ ಮಕ್ಕಳು ಮುಂದೆ ಸಮಾಜ ಘಾತುಗಳಾಗಿ ನಿಲ್ಲಬಹುದು.

೬. ಆರ್ಥಿಕ ದುಷ್ಪರಿಣಾಮಗಳು: ಮಕ್ಕಳ ದುಡಿತದಿಂದ ತಾತ್ಕಾಲದಲ್ಲಿ ಒಂದಷ್ಟು ಲಾಭವಾದ ಭ್ರಮೆ ಹುಟ್ಟಿಬಹುದಾದರೂ ಅದರಿಂದ ಸಾಮಾಜಕ್ಕೆ ಲಾಭಕ್ಕಿಂತ ನಷ್ಟವೇ ಅಧಿಕವಾಗಿರುತ್ತದೆ. ಕೆಲಸದ ಸರಿಯಾದ ಮಾಹಿತಿಯಿಂದ ಪರಿಣತಿ ಹೊಂದಿದ ಚಿಕ್ಕ ಮಕ್ಕಳು ಪ್ರೌಢ ಕಾರ್ಮಿಕರುಗಳಂತೆ ದುಡಿಯಲಾರರು ಎಳೆಯ ವಯಸ್ಸಿನಲ್ಲಿ ದುಡಿತಕ್ಕ ಒಳಗಾಗುವ ಮಕ್ಕಳು ದೈಹಿಕ ಬೆಳವಣಿಗೆ ಸಮರ್ಪಕವಾಗಿ ನಡೆಯದೇ ಕೆಲವೇ ವರ್ಷಗಳಲ್ಲಿ ಅವರು ಶಕ್ತಹೀನರಾಗಿ ದುಡಿಯುವ ಸಾಮರ್ಥ್ಯವನ್ನು ಕಳೆದುಕೊಳ್ಳುವುದುಂಟು. ನಿರೀಕ್ಷಿತ ಮಟ್ಟದ ದೈಹಿಕ ಬೆಳವಣಿಗೆ ಶಿಕ್ಷಣ ಹಾಗೂ ತರಬೇತಿ ಪಡೆಯುವ ಮುನ್ನವೇ ಈ ಮಂದಿ ಉದ್ಯೋಗ ರಂಗಕ್ಕೆ ಕಾಲಿರಿಸುವುದರಿಂದ ಅವರ ದುಡಿಯುವ ಸಾಮರ್ಥ್ಯ ದುಡಿಮೆಯ ಪಕ್ವತೆ. ಕೆಳಮಟ್ಟದ್ದಾಗಿರುತ್ತದೆ. ಅಂದರೆ ಮಕ್ಕಳ ದುಡಿತದಿಂದ ಪುಸ್ತಕ ಪರಿಸ್ಥಿತಿಯಲ್ಲಿ ಸಮಾಜಕ್ಕೆ ಒಂದು ಬಗೆಯ ಅಗೋಚರ ನಷ್ಟ ಉಂಟಾಗುವುದಲ್ಲದೇ ಭವಿಷ್ಯತ್ತಿನಲ್ಲಿ ಕೆಲವು ಬಗೆಯಲ್ಲಿ ಹಾನಿಯುಂಟಾಗುವುದು.

ಆಧಾರ ಗ್ರಂಥಗಳು
೧) ಸಾಮಾಜಿಕ ಸಮಸ್ಯೆಗಳು : ಲೇ. ಅನುಪಮಾ ನಿರಂಜನ
೨) ಸಾಮಾಜಿಕ ಸಮಸ್ಯೆಗಳು : ಲೇ.ಬೈರಪ್ಪ
೩) ದಿಕ್ಸೂಚಿ ಮಾಸ ಪತ್ರಿಕೆ : ಲೇ. ಬಸವರಾಜ ನಾಳಿಗಾಂಡ
೪) ಸ್ಪರ್ಧಾ ಚೈತ್ರಾ ಮಾಸ ಪತ್ರಿಕೆ : ಲೇ. ಕೆ ಶ್ರೀನಿವಾಸ ರೆಡ್ಡಿ
೫) ಬಾಲಚಿಗುರು : ಲೇ. ಮಿಸ್ ಸುಧಾ
೬) ಮಕ್ಕಳು ಮತ್ತು ಕಾನೂನು : ಲೇ. ಕೊಣೆಗಲ್ ರಾಘವೇಂದ್ರ ಭಟ್
೭) ಮಕ್ಕಳ ಹಕ್ಕುಗಳು : ಲೇ. ವಾಸುದೇವ ಶರ್ಮಾ
೮) ಪ್ರಮುಖ ಕನ್ನಡ ದಿನಪತ್ರಿಕೆಗಳು :

ಭಾರತದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರೀಕರಣ; ಹೊಸ ಸಾಧ್ಯತೆಗಳು ಮತ್ತು ಸವಾಲುಗಳು

ಡಾ. ನಂಜುಂಡ.ಡಿ.ಸಿ[1] ಮತ್ತು ನವೀನ್ ಚಂದ್ರ ಸಿ.ಬಿ[2]
* Centre for the study of Social Exclusion and Inclusive Policy, University of Mysore, Mysore 06,, ** Dept of Law, Mysore University

ಭಾರತವು ಪ್ರಮುಖವಾಗಿ ಕೃಷಿ ಆಧಾರಿತ ರಾಷ್ಟ್ರ, ಜಾಗತಿಕ ಮಟ್ಟದಲ್ಲಿ ಭಾರತದ ಬೆಳವಣಿಗೆಯನ್ನು ಕೃಷಿ ಒಂದೇ ನಿರ್ಧರಿಸುತ್ತದೆ. ಭಾರತದಲ್ಲಿ ಕೃಷಿ ಭೂಮಿ ಮತ್ತು ನೀರಿನ ಬಳಕೆಯ ವಿಚಾರದಲ್ಲಿ ಗರಿಷ್ಠ ಮಟ್ಟವನ್ನು ತಲುಪಿದೆ. ಕೃಷಿ ಕ್ಷೇತ್ರವು ಇಂದು ಸಂಪೂರ್ಣವಾಗಿ ತಾಂತ್ರಿಕತೆಯಿಂದ ಕೂಡಿದೆ. ಕೃಷಿ ಆಧಾರಿತ ಗ್ರಾಮೀಣ ಕ್ಷೇತ್ರವು ಇಂದು ಹಲವಾರು ಸಮಸ್ಯೆಗಳಿಂದ ಬಳಲುತ್ತಿದೆ. ಬಡತನ ನಿರ್ಮೂಲನೆ, ಅನಕ್ಷರತೆಯನ್ನು ಹೋಗಲಾಡಿಸುವುದು ಮತ್ತು ಸಮಾನ ಬೆಳವಣಿಗೆಯನ್ನು ಉಂಟುಮಾಡಲು ಇಂದು ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈಗಾಗಲೇ ಸರ್ಕಾರಗಳು ನೂರಾರು ಕೋಟಿ ರೂಪಾಯಿಗಳನ್ನು ವಿವಿಧ ಪಂಚವಾರ್ಷಿಕ ಯೋಜನೆಗಳು ಮೂಲಕ ಗ್ರಾಮೀಣ ಕ್ಷೇತ್ರಕ್ಕೆ ಖರ್ಚುಮಾಡಿದೆ. ಕೆಲವೊಂದು ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಕೆಲವೊಂದು ಕಾರ್ಯಕ್ರಮಗಳು ದಯನೀಯ ವೈಫಲ್ಯ ಕಂಡಿದೆ ಕೂಡಾ. ಐ.ಆರ್.ಡಿ.ಪಿ ಯಂತಹ ಕಾರ್ಯಕ್ರಮಗಳು ಗ್ರಾಮೀಣ ಭಾರತದಲ್ಲಿ ತಕ್ಕಮಟ್ಟಿಗೆ ಯಶಸ್ಸನ್ನು ಕಂಡಿವೆ. ಭಾರತದಲ್ಲಿ ಕಳೆದ 60 ವರ್ಷಗಳಲ್ಲಿ ಸುಮಾರು 90 ವಿವಿಧ ರೀತಿಯ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಪ್ರಪಂಚದ ಯಾವುದೇ ದೇಶದಲ್ಲೂ ಇಷ್ಟೊಂದು ಕಾರ್ಯಕ್ರಮಗಳನ್ನು ಇಷ್ಟು ಕ್ಷಿಪ್ರ ಅವಧಿಯಲ್ಲಿ ಜಾರಿಗೆ ತಂದಿರುವ ಉದಾಹರಣೆ ಇಲ್ಲ.

ಭಾರತದಲ್ಲಿ ಅಥವಾ ವಿಶ್ವದ ಯಾವುದೇ ಭಾಗದಲ್ಲಿ ಯಾವುದೇ ಯೋಜನೆಗಳನ್ನು ಜಾರಿಗೆ ತಂದರೂ ಅದರ ಯಶಸ್ಸು ನಿಂತಿರುವುದು ಸಮುದಾಯದ ಪರಿಣಾಮಕಾರಿ ಸಹಭಾಗಿತ್ವದಲ್ಲಿ ಮಾತ್ರ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಹಲವಾರು ಇಂತಹ ಸಹಭಾಗಿತ್ವದ ಯೋಜನೆಗಳಿಗೆ ಭಾರೀ ಪ್ರಾಮುಖ್ಯತೆ ನೀಡಲಾಗಿದೆ. ಸಮೂದಾಯದ ಸಹಭಾಗಿತ್ವ ಎಂದರೆ ಸಂಬಂಧಿಸಿದ ಗ್ರಾಮೀಣ ಸಮೂದಾಯವು ನಿರ್ಧಿಷ್ಟ ಕಾರ್ಯಕ್ರಮದ ಯೋಜನೆ ಮತ್ತು ಜಾರಿಯಲ್ಲಿ ಸಂಪೂರ್ಣವಾಗಿ ತನ್ನನ್ನುತಾನು ತೊಡಗಿಸಿಕೊಳ್ಳುವುದು ಎಂದರ್ಥ. ಇದರಲ್ಲಿ ಮುಖ್ಯವಾದುದು, ಸಮಸ್ಯೆಗಳನ್ನು ಗುರುತಿಸುವಿಕೆ, ಗುರಿಗಳ ನಿರ್ದೇಶನ, ಯೋಜನೆಯ ಫಲಾನುಭವಿಗಳನ್ನು ಗುರುತಿಸುವುದು, ಕಾರ್ಯಕ್ರಮಗಳ ಜಾರಿ, ಕಾರ್ಯಕ್ರಮಗಳ ಸಾದಕ–ಬಾದಕಗಳ ವಿಚಾರಣೆ ಹಾಗೂ ಹಣಕಾಸು ನಿರ್ವಹಣೆ, ಮುಂತಾದವುಗಳು ಸೇರುತ್ತದೆ. ಯಾವುದೇ ಗ್ರಾಮೀಣ ಅಭೀವೃದ್ಧಿ ಕಾರ್ಯಕ್ರಮಗಳು ಕೇವಲ ಸರ್ಕಾರದಿಂದ ಮಾತ್ರ ಯಶಸ್ವಿಯಾಗಲು ಸಾಧ್ಯವಿಲ್ಲ. ಇದರೊಂದಿಗೆ ಸಮುದಾಯವು ಕ್ರಿಯಾತ್ಮಕವಾಗಿ ಮತ್ತು ರಚನಾತ್ಮಕವಾಗಿ ಭಾಗವಹಿಸಬೇಕಾಗುತ್ತದೆ. ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳು ಕೇವಲ ಇಂತಹ ಯೋಜನೆಗಳಲ್ಲಿ ಮಧ್ಯವರ್ತಿಗಳಂತೆ ಕಾರ್ಯನಿರ್ವಹಿಸುತ್ತಾರಷ್ಟೆ. ಭಾರತದಲ್ಲಿ ಹಲವಾರು ಗ್ರಾಮೀಣ ಯೋಜನೆಗಳು ಜಾರಿಗೆ ಬಂದಿದ್ದರೂ ಜನರ ಭಾಗವಹಿಸುವಿಕೆ ತುಂಬಾ ಕಡಿಮೆ. ಇಲ್ಲಿ ಜನರನ್ನು ಕೇವಲ ಫಲಾನುಭವಿಗಳಂತೆ ಮಾತ್ರ ನೋಡಲಾಗುತ್ತದೆ. ಯೋಜನೆಯ ಯಾವ ಹಂತದಲ್ಲೂ ಸರ್ಕಾರಗಳು ಇವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ. ರಾಜಕೀಯ ಪಕ್ಷಗಳ ಮೇಲಾಟದಿಂದ ಇಂದು

ಎಷ್ಟೋ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ಹಾದಿ ತಪ್ಪಿವೆ. ಕೆಲವೊಮ್ಮೆ ಬೇರೆಬೇರೆ ಕ್ಷೇತ್ರದ ಅಭಿವೃದ್ಧಿಗೆ, ಗ್ರಾಮೀಣಾಭಿವೃದ್ಧಿಗೆ ನೀಡಿರುವ ಅನುದಾನವನ್ನು ಬಳಸಿಕೊಂಡಿರುವುದಾಹರಣೆಗಳಿವೆ. ಇದರಿಂದ ಗ್ರಾಮೀಣಾಭಿವೃದ್ಧಿಗೆ ಹಣಕಾಸಿನ ಕೊರತೆ ಬಹಳಷ್ಟುಸಲ ಉಂಟಾಗುತ್ತಿದೆ. ಅಧಿಕಾರಿಗಳ ಭ್ರಷ್ಟಾಚಾರದಿಂದ ಇಂದು ಎಷ್ಟೋ ಗ್ರಾಮೀಣ ಕಾರ್ಯಕ್ರಮಗಳು ಜನರನ್ನು ಸಕಾಲದಲ್ಲಿ ತಲುಪುತ್ತಿಲ್ಲ. ಹಲವಾರು ಗ್ರಾಮೀಣ ಯೋಜನೆಗಳು ಇನ್ನೂ ನೆನೆಗುದಿಗೆ ಬಿದ್ದಿವೆ. ಕಾರ್ಯಕ್ರಮದಲ್ಲಿ ಜನರ ಬಾಗವಹಿಸುವಿಕೆ ಮತ್ತು ಜನರನ್ನು ವಿವಿಧ ಯೋಜನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದನ್ನು ಹೆಚ್ಚುಮಾಡಲು ಕೆಳಕಂಡ ವಿಧಾನವನ್ನು ಪಾಲಿಸಬೇಕಾಗುತ್ತದೆ ಮತ್ತು ಜನರಲ್ಲಿ ಅರಿವನ್ನು ಉಂಟು ಮಾಡಬೇಕು.

1. ಜನರಿಗೆ ಕಾರ್ಯಕ್ರಮಗಳು/ ಯೋಜನೆಗಳು ತಮ್ಮದು ಎಂಬ ಭಾವನೆ ಮೂಡಿಸುವುದು,
2. ಜನರಿಗೆ ಕಾರ್ಯಕ್ರಮಗಳಲ್ಲಿ ನಂಬಿಕೆ, ಆತ್ಮೀಯತೆ, ಭಾವನ್ಮಾತ್ಮಕತೆಯನ್ನು ಬೆಳೆಸುವುದು,
3. ಕಾರ್ಯಕ್ರಮಗಳು ನಮ್ಮ ಅಭಿವೃದ್ಧಿಗೆ ಎಂಬ ಭಾವನೆ ಮೂಡಿಸುವುದು.
4. ಪ್ರಾಮಾಣಿಕವಾಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳ್ಳಲು ಸಹಕರಿಸುವಂತೆ ಮನವೊಲಿಸುವುದು.

ಇದು ಸರ್ಕಾರಗಳು/ಯೋಜನಾಧಿಕಾರಿಗಳು ಮೊದಲು ಮಾಡಬೇಕಾದ ಕೆಲಸ ಅಲ್ಲದೇ

1. ಜನರಲ್ಲಿ ತಮ್ಮ ಸ್ವಶಕ್ತಿಯಲ್ಲಿ ನಂಬಿಕೆ ಬರಿಸಿ ಸಬಲೀಕರಣದ ಮೂಲಕ ಗ್ರಾಮೀಣ ಬಡಜನರಲ್ಲಿ ಹೊಸ ಶಕ್ತಿ ಮತ್ತು ಉದಯೋನ್ಮುಖ ಬೆಳವಣಿಗೆಯನ್ನುಂಟುಮಾಡುವುದು,
2. ಆ ಮೂಲಕ ಜನರಲ್ಲಿ ಅವರ ಪಾಲ್ಗೊಳ್ಳುವಿಕೆ ಇಲ್ಲದಿದ್ದರೆ ಸರ್ಕಾರದ ಯೋಜನೆಗಳು ವೈಪಲ್ಯ ಎನ್ನುವ ಚಿತ್ರಣವನ್ನು ನೀಡುವುದು
3. ಕಾರ್ಯಕ್ರಮಗಳು ಹೇಗೆ ಅವರ ಮೂಲ ಸಮಸ್ಯೆಗಳನ್ನು ನಿವಾರಿಸಲ್ಲದು ಎಂಬುದನ್ನು ತಿಳಿಪಡಿಸುವುದು,

ಅಲ್ಲದೆ ಸರ್ಕಾರಗಳು ಯೋಜನೆಗಳನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಪ್ರಸ್ತುತ ಸನ್ನಿವೇಶ ಮತ್ತು ಸ್ಥಿತಿಗತಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳಬೇಕು. ಸರ್ಕಾರಗಳು ಸಮುದಾಯದ ಮುಂಖಂಡರುಗಳನ್ನು ಮತ್ತು ಮಾದರಿ ವ್ಯಕ್ತಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಾಗುತ್ತದೆ. ಆ ಮೂಲಕ ಪರಿಣಾಮಕಾರಿ ವಿಕೇಂದ್ರಿಕರಣಕ್ಕೆ ಹಾದಿ ಮಾಡಬೇಕಾಗುತ್ತದೆ. ಸಮುದಾಯದ ಬದಲಾವಣೆಯಲ್ಲಿ ಮತ್ತು ಸಮುದಾಯದಲ್ಲಿ ಅರಿವು ಉಂಟು ಮಾಡುವುದರಲ್ಲಿ ವಿವಿಧ ಮಾಧ್ಯಮಗಳೂ ಸಹ ಪ್ರಮುಖ ಪಾತ್ರ ವಹಿಸುತ್ತದೆ. ಮಾಧ್ಯಮಗಳಿಂದಲೇ ಜನರು ವಿವಿಧ ಸರ್ಕಾರಿ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುತ್ತಾರೆ. ಶಿಕ್ಷಣ, ತರಬೇತಿ ಮತ್ತು ಸಂವೇದನೆ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರುವುದರಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇಂದಿನ ತಾಂತ್ರಿಕ ಯುಗದಲ್ಲಿ ತಾಂತ್ರಿಕತೆ ಯಾವುದನ್ನು ಬಿಟ್ಟಿಲ್ಲ. ಹಾಗೇ ಗ್ರಾಮೀಣ ಅಭೀವೃದ್ಧಿಯಲ್ಲೂ ತಾಂತ್ರಿಕತೆ ಪ್ರಮುಖ ಪಾತ್ರ ವಹಿಸುತ್ತದೆ. ತಂತ್ರಜ್ಞಾನದ ವರ್ಗಾವಣೆ, ಅರಿವು, ಹವಾಮಾನ ವೈಪರೀತ್ಯ, ಮಾರುಕಟ್ಟೆಯ ಬೆಳವಣಿಗೆ, ಮುಂತಾದವುಗಳ ಮೂಲಕ ಪರಿಣಾಮಕಾರಿಯಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರಬಹುದಾಗಿದೆ.

ಸ್ಥಳೀಯ ಸಂಸ್ಥೂಲಗಳ ಬಳಕೆ, ನಿರ್ವಹಣೆ ಮುಂತಾದವುಗಳು ಗ್ರಾಮೀಣಾಭೀವೃದ್ಧಿಯಲ್ಲಿ ಪ್ರಮುಖಪಾತ್ರವಹಿಸುತ್ತವೆ. ಸ್ಥಳೀಯ ಸರ್ಕಾರಗಳು ಅಂದರೆ ಪಂಚಾಯತಿಗಳ ಪ್ರಜಾಪ್ರಭುತ್ವೀಕರಣ ಮತ್ತು ಸಶಕ್ತೀಕರಣದ ಮೂಲಕ ಫಲಾನುಭವಿಗಳ ಭಾಗವಹಿಸುವಿಕೆ ಮತ್ತು ನಿರ್ಧಾರ ಕೈಗೊಳ್ಳುವ ಶಕ್ತಿಯನ್ನು ಹೆಚ್ಚಿಸುವುದರತ್ತ ಯೋಜನೆಗಳಲ್ಲಿ ಸಾಕಷ್ಟು ಅವಕಾಶಗಳಿರಬೇಕಾಗುತ್ತದೆ. ಈ ಸಂಬಂಧ ಸರ್ಕಾರವು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ನಿಧಿ ಎಂಬ ಕಾರ್ಯಕ್ರಮವನ್ನು 2007ರಲ್ಲಿ ಆರಂಭಿಸಿದೆ. ಈ ಕಾರ್ಯಕ್ರಮ ಪಂಚಾಯತ್ ರಾಜ್ ವಯವಸ್ಥೆಯನ್ನು ಬಲಿಷ್ಠಗೊಳಿಸುವುದು ಮತ್ತು ಅಭೀವೃದ್ಧಿ ಯೋಜನೆಗಳಿಗೆ ಉತ್ತರದಾಯಕತ್ವವನ್ನು ನಿರೂಪಿಸುವುದು. ಈ ಯೋಜನೆಯ ಮೂಲಕ ಹಣವನ್ನು ನೇರವಾಗಿ ಪಂಚಾಯತಿಗಳಿಗೆ ಬಿಡುಗಡೆ ಮಾಡುವುದು ಹಾಗೂ ಆ ಹಣವನ್ನು ಸಮರ್ಪಕವಾಗಿ ಬಳಸುವ ನಿರ್ಧಾರವನ್ನು ಸ್ಥಳೀಯ ಜನರ ವಿವೇಚನೆಗೆ ಬಿಡುವುದು ಮುಂತಾದವುಗಳು ಸೇರಿವೆ. ಇದಕ್ಕೆ ಸಂಬಂಧಿಸಿದಂತೆ ಅವಶ್ಯಕವಾದ ಆಡಳಿತ ಮತ್ತು ತಾಂತ್ರಿಕ ನೆರವನ್ನು ಪಂಚಾಯಿತಿಗಳಿಗೆ ಒದಗಿಸಲು ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು.

ಭಾರತದಲ್ಲಿ ವಿಕೇಂದ್ರಿಕರಣದ ಕಲ್ಪನೆ 1960 ರಲ್ಲೇ ಆರಂಭವಾಯಿತು. ಕೇಂದ್ರೀಕೃತ ವ್ಯವಸ್ಥೆಯಿಂದ ರಷ್ಯಾ ಮತು ಚೈನಾದಂತಹ ದೇಶಗಳು ವೇಗವಾಗಿ ಆರ್ಥಿಕ ಬೆಳವಣಿಗೆಯನ್ನು ಕಂಡವು, ವಿಕೇಂದ್ರಿಕರಣ ತತ್ವದಿಂದ ಕ್ಷಿಪ್ರವಾದ ಅಭಿವೃದ್ಧಿ ಸಾಧ್ಯವಿಲ್ಲ. ಭಾರತದಂತಹ ಬಹು ಸಂಸ್ಕೃತಿಯ ಬಹಳ ವಿಶಲವಾದ ದೇಶಕ್ಕೆ ಕೇಂದ್ರೀಕೃತ ವ್ಯವಸ್ಥೆ ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾದುದು ಎಂಬುದು ತಜ್ಞರ ಅಭಿಪ್ರಾಯ. ಕೇಂದ್ರೀಕೃತ ವ್ಯವಸ್ಥೆಯಲ್ಲಿ ಸರ್ಕಾರ ಪ್ರಮುಖ ಪಾತ್ರವಹಿಸುತ್ತದೆ. ಇಲ್ಲಿ ಜನರಿಗೆ ಯಾವುದೇ ರೀತಿಯ ಅವಕಾಶ ಇರುವುದಿಲ್ಲ, ಕೇಂದ್ರೀಕೃತ ವ್ಯವಸ್ಥೆ ಈ ಕೆಳಗಿನ ಸಮಸ್ಯೆಗಳನ್ನು ಉಂಟು ಮಾಡುತ್ತದೆ.

1. ನಿರ್ವಹಣೆ ಸಮಸ್ಯೆ.
2. ಭ್ರಷ್ಟಾಚಾರದ ಸಮಸ್ಯೆ.
3. ಅಧಿಕಾರಶಾ ದುರ್ಬಳಕೆ.
4. ಸಂಪನ್ಮೂಲದ ದುರುಪಯೋಗ.
5. ಅಧಿಕಾರಿಶಾಹಿಗಳ ಪ್ರಾಬಲ್ಯ.
6. ಹಣಕಾಸಿನ ನಿರ್ವಹಣೆಯಲ್ಲಿ ಸಮಸ್ಯೆ.
7. ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧ.
8. ರಾಜಕೀಯ ಪಕ್ಷಗಳ ಮಧ್ಯ ಪ್ರವೇಶ.
9. ಫಲಾನುಭವಿಗಳ ಸಹಭಾಗಿತ್ವ ಶೂನ್ಯವಾಗಿರುತ್ತದೆ.
10. ಮೌಲ್ಯ ಮಾಪನ ವ್ಯವಸ್ಥೆಯಲ್ಲಿ ಅಸಮಾನತೆ.

ಕೇಂದ್ರೀಕೃತ ವ್ಯವಸ್ಥೆಯಿಂದ ಹಲವಾರು ಪ್ರಯೋಜನಗಳೂ ಸಹ ಕಂಡು ಬಂದಿವೆ.

1. ತ್ವರಿತ ಬೆಳವಣಿಗೆ ಮತ್ತು ಅಭೀವೃದ್ಧಿ
2. ಅಧಿಕಾರಶಾಹಿಗಳ ಸಂಖ್ಯೆ ಕಡಿಮೆಯಾಗುತ್ತದೆ.
3. ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.
4. ತ್ವರಿತ ವಿಲೇವಾರಿ ಮತ್ತು ಯೋಜನೆ ಜಾರಿ ಸಾಧ್ಯ.

ವಿಕೇಂದ್ರೀಕರಣ ವ್ಯವಸ್ಥೆಯ ಪ್ರಯೋಜನೆಗಳು

ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಹಲವಾರು ಉಪಯೋಗಗಳು ಕಂಡುಬರುತ್ತವೆ ಅವುಗಳಲ್ಲಿ ಕೆಲವನ್ನು ಈಮೂಲಕ ಪಟ್ಟಿಮಾಡಲಾಗಿದೆ.

1. ಪ್ರಜಾಪ್ರಭುತ್ವ ನೀತಿಯ ಪರವಾಗಿರುತ್ತದೆ.
2. ಅಧಿಕಾರ ಕೇವಲ ಒಬ್ಬ ವ್ಯಕ್ತಿಯಲ್ಲೇ ಇರುವುದಿಲ್ಲ.
3. ಒಂದು ಹಂತದವರೆಗೆ ಭ್ರಷ್ಟಾಚಾರ ನಿಗ್ರಹ ಸಾಧ್ಯ
4. ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗಲು ಸಾಧ್ಯ

ಹಲವಾರು ಅಧ್ಯಯನಗಳ ನಂತರ ಸರ್ಕಾರ ಗ್ರಾಮೀಣ ಅಭಿವೃದ್ಧಿಯಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತರಲು ಮುಂದಾಯಿತು. ಇದರಿಂದ ವಿಕೇಂದ್ರೀಕರಣ, ಆರ್ಥಿಕ ಬೆಳವಣಿಗೆ ಮತ್ತು ರಾಜಕೀಯ ಆಡಳಿತಕ್ಕೆ ಪರಸ್ಪರ ಸಹಕಾರ ಹೊಂದಿದ ಪರಿಣಾಮಕಾರಿ ಗ್ರಾಮೀಣ ಅಭಿವೃದ್ಧಿ ಸಾದ್ಯವೆಂದು ಸಂಶೋಧನೆಗಳಿಂದ ನಿರೂಪಿತವಾಗಿದೆ. ಮಾನವ ಸಂಪನ್ಮೂಲವನ್ನು ವಿಕೇಂದ್ರೀಕರಣಗೊಳಿಸಿ ಪರಿಣಾಮಕಾರಿಯಾದ ಭೌಗೋಳಿಕ ಮತ್ತು ಸಾಂಸ್ಕೃತಿಕವಾಗಿ ನಿರ್ದಿಷ್ಟಪಡಿಸಿದ ಯೋಜನೆಗಳಿಗೆ ತಕ್ಕಂತೆ ಅನುಷ್ಠಾನಕ್ಕೆ ತರಲು ಈ ಮೂಲಕ ಸಾಧ್ಯವೆಂದು ತಜ್ಞರು ಅಭಿಪ್ರಾಯಪಟ್ಟಿದಾರೆ. ಹೆಚ್ಚಿನ ವಿಕೇಂದ್ರೀಕರಣದಿಂದ ಸ್ಥಳೀಯ ಸಮಸ್ಯೆಗಳ ಪರಿಣಾಮಕಾರಿ ನಿವಾರಣೆ ಸಾದ್ಯವೆಂದು ರಾಜಕೀಯ ಶಾಸ್ತಜ್ಞರ ಅಭಿಪ್ರಾಯವಾಗಿದೆ. ಇದು ಸ್ಥಳೀಯ ಜನರಿಗೆ ಅತ್ಯುತ್ತಮವಾಗಿ ಅಭಿವೃದ್ಧಿ ಮತ್ತು ಉತ್ತರದಾಯಕತ್ವದ ಹೊಣೆನೀಡಲು ಸಾಧ್ಯವೆಂದು ಹಲವಾರು ಅಧ್ಯಯನಗಳು ದೃಡಪಡಿಸಿವೆ. ವಿಕೇಂದ್ರೀಕರಣ ವ್ಯವಸ್ಥೆಯಿಂದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಜನರನ್ನು ಸುಲಭವಾಗಿ ತಲುಪಲು ಸಾಧ್ಯ.

ಸ್ಥಳಿಯರು ಮತ್ತು ಸ್ಥಳಿಯ ಸರ್ಕಾರದ ಜಂಟಿ ಯೋಜನೆಯಲ್ಲಿ ಸಂಪನ್ಮೂಲಗಳ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದೆಂದೂ ಸಹ ಅಭಿಪ್ರಾಯಪಡಲಾಗಿದೆ. ಅಲ್ಲದೆ ವಿಕೇಂದ್ರೀಕರಣ ವ್ಯವಸ್ಥೆಯಿಂದ ಪ್ರಜಾಪ್ರಭುತ್ವ ಮತ್ತು ಸ್ವಶಕ್ತೀಕರಣದಿಂದ ಸ್ಥಳಿಯ ಸರಕಾರಗಳು ಇನ್ನು ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಸ್ಥಳಿಯ ದುರ್ಬಲವರ್ಗದ ಜನರ ಸಹಕಾರದಿಂದ ಸಾದ್ಯವಾಗುತ್ತದೆ. ವಿಕೇಂದ್ರೀಕರಣ (Bottom-up-planning) ವ್ಯವಸ್ಥೆಯಾಗಿದ್ದು ಪರಿಣಾಮಕಾರಿ ಯೋಜನೆಗಳು ಕೆಳಮಟ್ಟದಿಂದ ಕ್ರಮೇಣ ನೀತಿ ನಿರೂಪಕರಿಗೆ ತಲುಪುವ ಯೋಜನೆಯಾಗಿರುತ್ತದೆ. ಇದರಿಂದ ಸ್ಥಳಿಯ ಪ್ರದೇಶಗಳ ಅಭಿವೃದ್ಧಿಗೆ ಅತ್ಯುತ್ತಮ ಯೋಜನೆಗಳನ್ನು ರೂಪಿಸಲು ಸಾಧ್ಯ. 1967ರ ಆಡಳಿತ ಸುಧಾರಣಾ ಆಯೋಗವು ಸಹ ವಿಕೇಂದ್ರೀಕರಣ ವ್ಯವಸ್ಥೆಯಿಂದ ಸ್ಥಳೀಯ ಆಡಳಿತ ಇನ್ನೂ ಪರಿಣಾಮಕಾರಿಯಾಗಲು ಸಾಧ್ಯವೆಂದು ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

2007ರಲ್ಲಿ ಹೊಸ (ಃಖಿಉಈ) ಯೋಜನೆಯನ್ನು ದೇಶದಾದ್ಯಂತ ಜಾರಿಗೆ ತರಲಾಗಿದೆ. ಈ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಜೀವನ ಮಟ್ಟ ಸುಧಾರಣೆ ಸಾಧ್ಯವೆಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸ್ಥಳೀಯ ಜನರು ಕೆಲವು ನಿರ್ಧಾರಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯವೆಂದು ಅಭಿಪ್ರಾಯಪಡಲಾಗಿದೆ. ಇದು ಜಿಲ್ಲಾ ಯೋಜನೆಯ (District Planning) ಜಾರಿ ಮತ್ತು ಯೋಜನೆಯಲ್ಲಿನ ಅಂತರವನ್ನು ಪರಿಣಾಮಕಾರಿಯಾಗಿ ತುಂಬಲು ಸಾಧ್ಯವೆಂದು ಇನ್ನೂ ಹಲವಾರು ಆಯಾಮಗಳಲ್ಲಿ ಸಾಭಿತಾಗಿದೆ. ಯೋಜನೆಯ ವ್ಯಾಪ್ತಿಗೆ ಬಾರದ ಅಗತ್ಯ ಮೂಲ ಭೂತ ಸೌಕರ್ಯ ಮತ್ತು ಇತರೆ ಅವಶ್ಯಕತೆಗಳಿಗೆ ಃಖಿಉಇ ಯೋಜನೆಯಲ್ಲಿ ಹೆಚ್ಚಿನ ಒತ್ತು ನೀಡುವುದರಿಂದ ಪಂಚಾಯತ್ ವ್ಯವಸ್ಥೆ ಇನ್ನಷ್ಟು ಬಲಿಷ್ಟವಾಗಬಲ್ಲದು ಎಂಬುದು ತಜ್ಞರ ಅಭಿಪ್ರಾಯ. ಈ ಯೋಜನೆಯಲ್ಲಿ ಎರಡು ವಿಧಗಳಿವೆ

1. ಅಭೀವೃದ್ಧಿ ನಿಧಿ,
2. ಸಾಮರ್ಥ್ಯ ವೃದ್ಧಿ ನಿಧಿ,

ಅಭಿವೃದ್ಧಿ ನಿಧಿಯನ್ನು ಬಳಸಿಕೊಳ್ಳುವ ವಿವೇಚನೆಯನ್ನು ಪಂಚಾಯತ್ ವ್ಯವಸ್ಥೆಯ ವಿವೇಚನೆಗೆ ಬಿಡಲಾಗಿದೆ. ಅಭೀವೃದ್ಧಿನಿಧಿ ಹಲವಾರು ಯೋಜಿತ ಗುರಿಗಳನ್ನು ಹೊಂದಿದೆ. ಃಖಿಉಈ ಯೋಜನೆಯಲ್ಲಿ ಸ್ಥಳೀಯ ಮಾನವ ಸಂಪನ್ಮೂಲಗಳ ಶಕ್ತಿವರ್ಧನೆ, ತರಬೇತಿ, ಕಾರ್ಯಗಾರದ ಮೂಲಕ ಇನ್ನಷ್ಟು ತ್ವರಿತವಾಗಿ ಮತ್ತು ಅವಶ್ಯಕತೆಗನುಗುಣವಾಗಿ ಸದ್ಬಳಕೆಗೆ ಸಾಕಷ್ಟು ಅವಕಾಶಗಳನ್ನು ರೂಪಿಸಲಾಗಿದೆ. ಪ್ರತಿ ಯೋಜನೆ ಸೂಕ್ಷ್ಮ ಯೋಜನೆಯಾಗಿದ್ದು (micro planning) ಅನುಷ್ಠಾನದ ಹೊಣೆಯನ್ನು ಸ್ಥಳೀಯ ಪಂಚಾಯಿತಿಗೆ ವಹಿಸುವುದರಿಂದ ಪರಿಣಾಮಕಾರಿ ಗ್ರಾಮೀಣ ಬೆಳವಣಿಗೆ ಸಾಧ್ಯ.

ಯಾವುದೇ ಸರಕಾರಿ ಯೋಜನೆಗಳ ಯಶಸ್ಸು ಸ್ಥಳೀಯ ಜನರ ಪರಿಣಾಮಕಾರಿ ಸಹಬಾಗಿತ್ವದಲ್ಲಿ ಅಡಕವಾಗಿದೆ. ಸುದಾರಿತ ಆಡಳಿತವು ಮತ್ತು ಪೊಲಿಟಿಕಲ್ ಗವರ್ನೆನ್ಸ್ ಕಾರ್ಯಕ್ರಮಗಳ ಪರಿಣಾಮಕಾರಿ ಜಾರಿಯಲ್ಲಿ ಮುಖ್ಯಪಾತ್ರವಹಿಸುತ್ತವೆ. ಇವುಗಳ ಕೊರತೆಯಿಂದ ಇಂದು ಸಾಧ್ಯವಾಗುತ್ತಿಲ್ಲ. ಸ್ಥಳೀಯ ಜನರನ್ನು ಯೋಜನೆ ರೂಪಿಸುವಿಕೆ ಮತ್ತು ಜಾರಿಯಲ್ಲಿ ವಿಶ್ವಾಸಕ್ಕೆ ಪಡೆದಿಲ್ಲ. ನಿರ್ಧಾರ ಕೈಗೊಳಿವ ಹಕ್ಕು ಸಹ ಸ್ಥಳೀಯರಿಗೆ ನೀಡಲಾಗಿಲ್ಲ. ದೆಹಲಿಯಲ್ಲಿ ಕುಳಿತು ಹೊಸ ಹೊಸ ಯೋಜನೆಗಳನ್ನು ರವಾನಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಭಾರತದಾದ್ಯಂತ ಬಹುಸಂಸ್ಕೃತಿಯ ಸಮಾಜಕ್ಕೆ ಏಕರೂಪ ವ್ಯವಸ್ಥೆ ಮತ್ತು ನೀತಿ ನೀರೂಪಣೆಯನ್ನು ಜಾರಿಗೊಳಿಸುವುದು ಸಾದ್ಯವಿಲ್ಲ. ಸರ್ಕಾರದ ವಿಕೇಂದ್ರೀಕರಣ ವ್ಯವಸ್ಥೆಯು ಮೂಲಭೂತ ಸಮಸ್ಯೆಗಳನ್ನು ನಿವಾರಿಸಿ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಬೇಕಾಗುತ್ತದೆ.

ಹೊಸ ಗ್ರಾಮೀಣಾ ಅಭೀವೃದ್ಧಿ ಯೋಜನೆಗಳು ಹೇಗಿರಬೇಕು?

1. ಯೋಜನೆ, ಜನ ಕೇಂದ್ರೀಕೃತವಾಗಿರಬೇಕು.
2. ಸ್ಥಳಿಯ ಜನರಿಗೆ ನಿರ್ಧಾರ ಕೈಗೊಳ್ಳಲು ಸಂಪೂರ್ಣ ಹಕ್ಕು ಇರಬೇಕು.
3. ಸೂಕ್ಷ್ಮ ಯೋಜನೆಗೆ (Micro Planning) ಅವಕಾಶ ಇರಬೇಕು.
4. ಸ್ಥಳಿಯ ಸರಕಾರಗಳು ಉತ್ತರದಾಯಕತ್ವವನ್ನು ಹೊಂದಿರಬೇಕು.
5. ಪರಿಣಾಮಕಾರಿ ವಿಕೇಂದ್ರೀಕರಣ ಅಗತ್ಯ.
6. ಅಭಿವೃದ್ಧಿಯಲ್ಲಿ ತಂತ್ರಜ್ಞಾನದ ಬಳಕೆ ಅಗತ್ಯ.
7. ಸ್ಥಳಿಯ ಜನರ ಸಹಭಾಗಿತ್ವ ಅತೀ ಮುಖ್ಯ.
8. ಸುಧಾರಿತ ಮತ್ತು ಪಾರದರ್ಶಕ ಗ್ರಾಮೀಣ ಆಡಳಿತ ಅಗತ್ಯ.
9. ನಿರಂತರ ಮೌಲ್ಯಮಾಪನ ಅವಶ್ಯ.
10. ಪಂಚಾಯತ್ ವ್ಯವಸ್ಥೆಯ ಅಮೂಲಾಗ್ರ ಸುಧಾರಣೆ.

11. ಜನರಲ್ಲಿ ಅರಿವುಂಟುಮಾಡುವ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡುವಿಕೆ.
12. ಸ್ಥಳಿಯ ಜನರ ಅವಶ್ಯಕತೆಗೆ ಹೆಚ್ಚಿನ ಒತ್ತುನೀಡುವಂತೆ ಯೋಜನೆಗಳ ಜಾರಿ.
13. ಸಾಮಾನ್ಯ ಅಭಿವೃದ್ಧಿ ನಿರ್ವಹಣಾ ಕಾರ್ಯಕ್ರಮಗಳ ಜಾರಿಗೆ ಒತ್ತಾಯ.
14. ಯೋಜನೆ ಜಾರಿಯಲ್ಲಿನ ಅನವಶ್ಯಕ ವಿಳಂಬ ತಪ್ಪಿಸುವುದು.
15. ಮಾಧ್ಯಮಗಳು ಪರಿಣಾಮಕಾರಿ ಪಾತ್ರವಹಿಸುವುದು ಅವಶ್ಯಕ.

ಪ್ರಸ್ತುತ ಗ್ರಾಮೀಣ ಯೋಜನೆಯಲ್ಲಿ ಇರುವ ಸಮಸ್ಯೆಗಳೆಂದರೆ,

1. ವಿಕೇಂದ್ರೀಕರಣ ವ್ಯವಸ್ಥೆಯ ಗೂಡಾಗಿದೆ.
2. ಜನರ ಸಹಭಾಗಿತ್ವಕ್ಕೆ ಅವಕಾಶವಿಲ್ಲ.
3. ಸ್ಥಳೀಯ ಓಉಔ ಗಳ ಪಾತ್ರ ತೀರಾ ಕಡಿಮೆ.
4. ಬ್ಲಾಕ್ ಹಾಗೂ ಜಿಲ್ಲಾ ಮಟ್ಟದ ಯೋಜನೆಗಳಲ್ಲಿ ಸಮಸ್ಯೆ.
5. ಪಂಚಾಯತ್ ಸದಸ್ಯರ ಅಸಡ್ಡೆ ಮತ್ತು ಬೇಜವಾಬ್ದಾರಿ.
6. ಸ್ಥಳೀಯ ಸಂಪನ್ಮೂಲಗಳ ಪರಿಣಾಮಕಾರಿ ನಿರ್ವಹಣೆ ಮತ್ತು ಬಳಕೆ ಇಲ್ಲದಿರುವುದು.
7. ಗ್ರಾಮೀಣ ಜನರಲ್ಲಿ ಅರಿವಿನ ಕೊರತೆ.
8. NREGA ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದಲ್ಲಿ ಆಗುತ್ತಿರುವ ಸಮಸ್ಯೆ.
9. ಕಾರ್ಯಕ್ರಮದ ಜಾರಿಯಲ್ಲಿ ಲಿಂಗಬೇಧ ಸಮಸ್ಯೆ.
10. ಕೃಷಿ ವಿಶ್ವವಿದ್ಯಾಲಯಗಳ ಮತ್ತು ಬ್ಯಾಂಕ್‌ಗಳ ನಿರಾಸಕ್ತಿ.
11. ಯೋಜನೆ ಜಾರಿಯಲ್ಲಿನ ವಿಳಂಬತೆ ಮತ್ತು ಜಾತಿ ರಾಜಕೀಯ.
12. ಗ್ರಾಮೀಣಾಭಿವೃದ್ಧಿಯಲ್ಲಿ ಸಂಶೋಧನೆಗೆ ಒತ್ತು ನೀಡದಿರುವುದು.
13. ಯೋಜನೆಯ ಕೆಲವು ಹಂತಗಳಲ್ಲಿ ಉಂಟಾಗುತ್ತಿರುವ ನಿರಂತರ ಭ್ರಷ್ಟಾಚಾರ.
14. ಮೂಲಭೂತ ಸೌಕರ್ಯಗಳ ಕೊರತೆಯಿಂದ ನರಳುತ್ತಿರುವ ಗ್ರಾಮ ಪಂಚಾಯಿತಿಗಳು.
15. ಗ್ರಾಮೀಣ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಸೂಕ್ತ ಮಾನವ ಸಂಪನ್ಮೂಲ ಮತ್ತು ಅನುದಾನದ ಕೊರತೆ.

ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಉಂಟಾಗುವ ಅನಗತ್ಯ ವಿಳಂಬವನ್ನು ತಪ್ಪಿಸಲು ಸರಕಾರ ಹಲವಾರು ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಬೇಕಿದೆ. ಅದರಲ್ಲೂ ಮುಖ್ಯವಾಗಿ ಉತ್ತರದಾಯಕತ್ವದ ಹೊಣೆಯನ್ನು ಸಂಪೂರ್ಣವಾಗಿ ಸ್ಥಳೀಯ ಸರ್ಕಾರಕ್ಕೆ ವಹಿಸಬೇಕಾಗುತ್ತದೆ. ಭಾರತದಾದ್ಯಂತ ಬಹುಸಂಸ್ಕೃತಿಯ ಸಮಾಜಕ್ಕೆ ಏಕರೂಪ ವ್ಯವಸ್ಥೆ ಮತ್ತು ನೀತಿ ನೀರೂಪಣೆಯನ್ನು ಜಾರಿಗೊಳಿಸುವುದು ಸಾಧ್ಯವಿಲ್ಲ. ಸರ್ಕಾರದ ವಿಕೇಂದ್ರೀಕರಣ ವ್ಯೆವಸ್ಥೆಯು ಮೂಲಭೂತ ಸಮಸ್ಯೆಗಳನ್ನು ನಿವಾರಿಸಿ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಬೇಕಾಗುತ್ತದೆ.

ಕರ್ನಾಟಕದಲ್ಲಿ ಬುಡಕಟ್ಟು ಜನರ ಅಭಿವೃದ್ಧಿ ಮತ್ತು ಆಂತರಿಕ ಒಕ್ಕಲೆಬ್ಬಿಸುವಿಕೆ ವಿಶೇಷವಾಗಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ: ಒಂದು ವಿಮರ್ಶೆ

ನಾಗೇಶ .ಕೆ.ಟಿ. ಎಂ.ಎ, ಎಂ.ಫಿಲ್,ಬಿ.ಎಡ್(ಪಿ.ಹೆಚ್.ಡಿ)
ಸಂಶೋಧಕರು, ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಪೀಠಿಕೆ : ಅಭಿವೃದ್ಧಿ ಎಂಬುದು ಒಂದು ಬಹುಮುಖಿ ಪ್ರಕ್ರಿಯೆಯಾಗಿದ್ದು ಇದರಲ್ಲಿ ದೇಶದ ಎಲ್ಲಾ ವರ್ಗದವರ ಅಭಿವೃದ್ಧಿಯು ಸಹ ಒಳಗೊಂಡಿರುತ್ತದೆ. ಭಾರತೀಯ ಸಮಾಜದಲ್ಲಿ ಅನೇಕ ವರ್ಗಗಳಿದ್ದು ಈ ಎಲ್ಲಾ ವರ್ಗಗಳಲ್ಲೇ ತೀರಾ ಹಿಂದುಳಿದ ಹಾಗೂ ನಾಗರೀಕ ಸಮಾಜದಿಂದ ಇಂದಿಗೂ ಬಹು ದೂರವೇ ಉಳಿದಿರುವ ಒಂದು ವರ್ಗವೆಂದರೆ ಅದು ಬುಡಕಟ್ಟು ವರ್ಗ. ಸಾಮಾನ್ಯವಾಗಿ ನಿರ್ದಿಷ್ಟ ಆಡುಭಾಷೆ, ಏಕರೀತಿಯ ಸಾಂಸ್ಕೃತಿಕ ಹಿನ್ನಲೆ, ಒಂದು ಗೂಡಿದ ಸಾಮಾಜಿಕ ಸಂಸ್ಕೃತಿಯನ್ನು ಹೊಂದಿದ ಹಿನ್ನಲೆ, ಒಂದು ನಿರ್ದಿಷ್ಟ ಎಲ್ಲೆಯೊಳಗೆ ವಾಸಿಸುವ ಒಂದು ಸಾಮಾಜಿಕ ಸಮೂಹವೇ ಬುಡಕಟ್ಟುಗಳು. ಈ ಬುಡಕಟ್ಟು ಸಮುದಾಯಗಳು ಆಧುನಿಕ ಯುಗದಲ್ಲೂ ಅಭಿವೃದ್ಧಿಯ ಪಥದಿಂದ ದೂರವೇ ಉಳಿದಿರುವುದು ವಾಸ್ತವದಲ್ಲಿ ಸತ್ಯ ಸಂಗತಿಯಾಗಿದೆ. ಈ ವರ್ಗದವರ ಸ್ಥಿತಿಗತಿಗಳನ್ನು ಗಮನಿಸಿದ ವಿಶ್ವಸಂಸ್ಥೆಯು ಆದಿವಾಸಿಗಳ ವಿಶ್ವವ್ಯಾಪಿ ಘೋಷಣೆಯಲ್ಲಿ ಬುಡಕಟ್ಟುಗಳ ಸಮಾಜದ ಉನ್ನತಿಗಾಗಿ ಅವರ ಸಂಸ್ಕೃತಿ, ಭೂಮಿಯ ಒಡೆತನ ಮತ್ತು ಯಾವುದೇ ತಾರತಮ್ಯವಿಲ್ಲದ ಆರ್ಥಿಕ ಅಭಿವೃದ್ಧಿಗೆ ಅವಕಾಶಗಳನ್ನು ಒದಗಿಸಲು ಪ್ರಯತ್ನಿಸುತ್ತಿದೆ. ಹಾಗಾಗಿ 1993ನೇ ವರ್ಷವನ್ನು ವಿಶ್ವ ಆದಿವಾಸಿ ಜನರ ವರ್ಷ ಎಂದು ಘೋಷಿಸಿತ್ತು.[೧] ಸುಮಾರು 500 ಕ್ಕೂ ಹೆಚ್ಚು ಬುಡಕಟ್ಟುಗಳು ವಾಇಸಸುತ್ತಿರುವ ಭಾರತದಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಬುಡಕಟ್ಟು ಸಚಿವಾಲಯ, ಪ್ರತ್ಯೇಕ ಆಯೋಗ, ಗಿರಿಜನ ಉಪ ಯೋಜನೆ, ಅರಣ್ಯ ಹಕ್ಕು ಕಾಯ್ದೆ ಹೀಗೆ ಅನೇಕ ಯೋಜನೆಗಳ ಹೊರತಾಗಿಯೂ ಬುಡಕಟ್ಟುಗಳು ಭಾರತದಲ್ಲಿ ಬಡತನ ರೇಖೆಗಿಂತಲೂ ಕೆಳ ಮಟ್ಟದಲ್ಲಿ ಜೀವನ ಸಾಗಿಸುತಿದ್ದಾರೆ. ಬುಡಕಟ್ಟುಗಳ ವಿಷಯದಲ್ಲಿ ಅವರ ಅಭಿವೃದ್ಧಿ ಯೋಜನೆಗಳೇ ಇವರಿಗೆ ಮಾರಕವಾಗಿ ಪರಿಣಮಿಸಿದೆ. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಅಭಿವೃದ್ಧಿ ಹೆಸರಿನಲ್ಲಿ ೨೫ ಮಿಲಿಯನ್ ಜನರು ಅಭಿವೃದ್ಧಿ ಯೋಜನೆಗಳಿಗಾಗಿ ನಿರಾಶ್ರಿತರಾಗಿದ್ದಾರೆ.[೨] ಇದು ಅಭಿವೃದ್ಧಿಯ ಪಥದಲ್ಲಿ ನಾಗಾಲೋಟದಲ್ಲಿ ಚಲಿಸುತ್ತಿರುವ ಭಾರತವನ್ನು ಬಿಟ್ಟಿಲ್ಲ. ಉದಾರೀಕರಣ, ಜಾಗತೀಕರಣ ಮತ್ತು ಖಾಸಾಗೀಕರಣದ ನಂತರ ಅಭಿವೃದ್ಧಿಯೇ ಮೂಲ ಮಂತ್ರವೆಂದು ಜಪಿಸುತ್ತಿರುವ ಭಾರತದಲ್ಲಿ ಅಭಿವೃದ್ಧಿ ಯೋಜನೆಗಳಿಗೇನು ಕೋರತೆಯಿಲ್ಲ, ಪಂಚವಾರ್ಷಿಕ ಯೋಜನೆಗಳ ಮೂಲಕ ತನ್ನ ಅಭಿವೃದ್ಧಿಯ ಪಥವನ್ನು ಮುನ್ನಡೆಸುತ್ತಿದೆ. ಅಣೆಕಟ್ಟುಗಳು, ನೀರಾವರಿ ಯೋಜನೆಗಳು, ರಾಷ್ಟ್ರೀಯ ಉದ್ಯಾನವನಗಳು, ರಸ್ತೆಗಳು, ಉಷ್ಣವಿದ್ಯುತ್ ಸ್ಥಾವರಗಳಂತಹ ಬಹುತೇಕ ಅಭಿವೃದ್ಧಿ ಯೋಜನೆಗಳು ಅರಣ್ಯಗಳು, ನದಿ ಪ್ರದೇಶಗಳನ್ನೇ ಗುರಿಯನ್ನಾಗಿಸಿಕೊಂಡಿದೆ. .ಇದರ ಜೂತೆಗೆ ವನ್ಯ ಜೀವಿ ಸಂರಕ್ಷಣಾ ಕಾಯ್ದೆಗಳು ,ಅರಣ್ಯ ನೀತಿಗಳು ಲಕ್ಷಾಂತರ ಜನರನ್ನು ಆಂತರಿಕವಾಗಿ ಒಕ್ಕಲೆಬ್ಬಿಸಿ ನಿರಾಶ್ರಿತರನ್ನಾಗಿಸಿದೆ.

ಭಾರತದಲ್ಲಿ ಯುದ್ಧ , ಸಂಘರ್ಷ ,ಮಾನವ ಹಕ್ಕುಗಳ ದುರುಪಯೋಗ ಮತ್ತು ಬಲವಂತವಾಗಿ ಸ್ಥಳಾಂತರಿಸುವಿಕೆಯು ಹೆಚ್ಚು ಆಂತರೀಕ ಒಕ್ಕಲೆಬ್ಬಿಸುವಿಕೆಯನ್ನು ಸೃಷ್ಟಿಸಿದೆ . ಅಭಿವೃದ್ಧಿಯ ಹೆಸರಿನಲ್ಲಿ ಭಾರತದಲ್ಲಿ ಆಂತರೀಕ ಒಕ್ಕಲೆಬ್ಬಿಸುವಿಕೆಗೆ ಒಳಗಾದವರ ಸಂಖ್ಯೆ ಒಟ್ಟು ಬುಡಕಟ್ಟು ಸಂಖ್ಯೆಯ ಶೇಕಡಾ 40%.[3] ಇದು ಪ್ರಸ್ತುತ ಶೇಕಡಾ 60 ನ್ನು ಮೀರಿದೆ. 2012 ರ ವಿಶ್ವ ಬ್ಯಾಂಕ್ ವರದಿಯಂತೆ 2010 ರಲ್ಲಿಯೇ 650000 ಜನರನ್ನು ಒಕ್ಕಲೆಬ್ಬಿಸಲಾಗಿದೆ.[೪]

ಭಾರತದ ವಿವಿಧ ರಾಜ್ಯಗಳಲ್ಲಿ ಅನುಷ್ಠಾನಗೊಂಡಂತೆ ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯಲ್ಲಿಯೂ 1970ರಲ್ಲಿ ನಿರ್ಮಾಣಗೊಂಡ ಕಬಿನಿ ಅಣೆಕಟ್ಟು, 1972ರ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಘೋಷಣೆ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ,[೫] ಹೀಗೆ ಅನೇಕ ಅಭಿವೃದ್ಧಿ ಯೋಜನೆಗಳಿಂದ ನಿರಾಶ್ರಿತರಾದ ಬುಡಕಟ್ಟು ಜನರ ಸಂಖ್ಯೆಯು ಕಡಿಮೆಯಿಲ್ಲ. ಹಾಗಾಗಿ ಮೈಸೂರು ಜಿಲ್ಲೆಯ ಬುಡಕಟ್ಟು ಜನರೊಕ್ಕಲೆಬ್ಬಿಸುವಿಕೆಗೆ ಕಾರಣಗಳು, ಪರಿಣಾಮಗಳು ಮತ್ತು ಬುಡಕಟ್ಟುಗಳ ಪುನರ್ವಸತಿಗಾಗಿ 1994 ರಲ್ಲಿ ರಾಷ್ಟ್ರಪತಿಯವರಿಂದ ಅಂಕಿತಗೊಂಡ ಪುನರ್ವಸತಿ ಕಾನೂನು, 2005 ರಲ್ಲಿ ಅನುಷ್ಠಾನಗೊಂಡ ಅರಣ್ಯ ಹಕ್ಕು ಕಾಯ್ದೆ ಮತ್ತು ಕರ್ನಾಟಕ ರಾಜ್ಯ ಹೈಕೋರ್ಟ್ ಬುಡಕಟ್ಟುಗಳ ಅಧ್ಯಯನಕ್ಕಾಗಿ ಪ್ರೊ.ಮುಜಾಫರ್ ಅಸ್ಸಾದಿ ರವರ ನೇತೃತ್ವದ ಸಮಿತಿ ನೀಡಿರುವ ಶಿಫಾರಸ್ಸುಗಳ ಅನುಷ್ಠಾನ , ಸಲಹೆಗಳನ್ನು ಪ್ರಬಂಧದಲ್ಲಿ ಪ್ರತಿಪಾದಿಸಲಾಗಿದೆ.

ಆಂತರಿಕ ಒಕ್ಕಲೆಬ್ಬಿಸುವಿಕೆ : "ಸಶಸ್ತ್ರ ಸಂಘರ್ಷಗಳು , ನೈಸರ್ಗಿಕ ವಿಪತ್ತುಗಳು , ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಅಭಿವೃದ್ಧಿ ಪ್ರೇರಿತ ಯೋಜನೆಗಳಿಂದಾಗಿ ವ್ಯಕ್ತಿಗಳ ಅಥವಾ ವ್ಯಕ್ತಿಗಳ ಗುಂಪುಗಳು ತಮ್ಮ ಮೂಲ ಸ್ಥಾನದಿಂದ ರಾಷ್ಟರದ ಪರಿಮಿತಿ ಯಲ್ಲಿಯೇ ಬೇರೆಡೆಗೆ ಪಲಾಯನ ಹೋಗುವ ಅಥವಾ ಬಲವಂತ ವಾಗಿ ಸ್ಥಳಾಂತರಿಸುವ ಪ್ರಕ್ರಿಯೆಯೇ ಆಂತರಿಕ ಒಕ್ಕಲೆಬ್ಬಿಸುವಿಕೆ"[೬]

ಆಂತರಿಕ ಒಕ್ಕಲೆಬ್ಬಿಸುವಿಕೆಯಲ್ಲಿ ಎರಡು ರೀತಿಯ ಒಕ್ಕಲೆಬ್ಬಿಸುವಿಕೆಯನ್ನು ಕಾಣಬಹುದು

೧. ನೇರ ಒಕ್ಕಲೆಬ್ಬಿಸುವಿಕೆ: ನೀರಾವರಿ ಯೋಜನೆಗಳು , ಅಣೆಕಟ್ಟುಗಳು , ಅರಣ್ಯ ನೀತಿಗಳಂತಹ ಅಭಿವೃದ್ಧಿ ಪ್ರೇರಿತ ಯೋಜನೆಗಳಿಗಾಗಿ ಪುನರ್ವಸತಿ ನೆಪದಲ್ಲಿ ಬಲವಂತವಾಗಿ ಒಕ್ಕಲೆಬ್ಬಿಸುವದು.

೨. ಪರೋಕ್ಷ ಒಕ್ಕಲೆಬ್ಬಿಸುವಿಕೆ :ಒಂದು ಯೋಜನೆಯನ್ನು ನಿರಂತರವಾಗಿ ಬುಡಕಟು ಪ್ರದೇಶಗಲ್ಲಿ ಜಾರಿಗೂಲಿಸುತ್ತಾ ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೂಳ್ಳುವುದು . ಇದು ಬುಡಕಟ್ಟು ಜನರು ಸಂಪನ್ಮೂಲಗಳ ಕೊರತೆಯಿಂದಾಗೆ ತಾವೇ ಬೇರೆಡೆಗೆ ಸ್ಥಳಾಂತರಗೂಳ್ಳುತ್ತಾರೆ. [೧೦]

ಮೈಸೂರು ಜಿಲ್ಲೆಯ ಬುಡಕಟ್ಟು ಜನಸಂಖ್ಯೆಯ ಸಂಕ್ಷಿಪ್ತ ಚಿತ್ರಣ

ಭಾರತದಲ್ಲಿ ೫೭೩ ವಿವಿಧ ಬುಡಕ ಟ್ಟುಗಳಿಗೆ ಸೇರಿದ ಜನರಿದ್ದಾರೆ. ಇವರ ಒಟ್ಟು ಜನಸಂಖ್ಯೆಯು ಭಾರತದಲ್ಲಿ ೧೯೯೧ ರಲ್ಲಿ ೬.೭೭ ಕೋಟಿಗಳಷ್ಟಿತ್ತು. ೨೦೦೧ ರಲ್ಲಿ ಇದರ ಪ್ರಮಾಣವು ೮.೪೩ ಕೋಟಿಗಳಿಗೆ ಏರಿತು. ೨೦೧೧ರ ಜನಸಖ್ಯಾ ವರದಿಯಲ್ಲಿ ಈ ಸಂಖ್ಯೆಯು ೧೦ ಕೋಟಿಗಳನ್ನು ದಾಟಿದೆ ಎಂದು ಅಂದಾಜಿಸಲಾಗಿದೆ. ವಿಶ್ವದ ಶೇಕಡಾ ೨೩% ರಷ್ಟು ಬುಡಕಟ್ಟು ಜನರು ಭಾರತದಲ್ಲಿ ವಾಸವಾಗಿದ್ದು , ವಿಶ್ವದಲ್ಲೇ ಆಫ್ರಿಕಾ ದೇಶದ ನಂತರ ಅತಿ ಹೆಚ್ಚು ಬುಡಕಟ್ಟುಗಳನ್ನು ಹೊಂದಿರುವ ದೇಶವಾಗಿದೆ. ಬಹತೇಕ ಅರ್ಧಕ್ಕಿಂತ ಹೆಚ್ಚು ಬುಡಕಟ್ಟುಗಳನ್ನು ಮಧ್ಯಪ್ರದೇಶ , ಮಹಾರಾಷ್ಟ್ರ, ಒರಿಸ್ಸಾ, ಬಿಹಾರ, ಪಶ್ಚಿಮ ಬಂಗಾಳ ಮತ್ತ ಈಶಾನ್ಯ ರಾಜ್ಯಗಳೇ ಹೂಂದಿವೆ.[೧೧]

ದೇಶದ ಪ್ರಮುಖ ಅಭಿವೃದ್ಧಿ ಪರ ರಾಜ್ಯದಲ್ಲೊಂದಾದ ಕರ್ನಾಟಕದಲ್ಲಿ ೧೯,೧೫೫,೬೯೧ ಸಂಖ್ಯೆಯಷ್ಟು ಪರಿಶಿಷ್ಟ ಪಂಗಡದವರಿದ್ದಾರೆ. ರಾಷ್ಟ್ರದ ಶೇ.೪.೧% ಬುಡಕಟ್ಟು ಜನರಿಗೆ ಕರ್ನಾಟಕ ಆಶ್ರಯದಾನವಾಗಿದೆ. ಕರ್ನಾಟಕದ ೩೦ ಜಿಲ್ಲೆಗಳಲ್ಲಿಯೂ ಬುಡಕಟ್ಟು ಜನರಿರುವುದು ಸುಸ್ಪಷ್ಟವಾಗುತ್ತದೆ. ಬುಡಕಟ್ಟು ಜನರನ್ನು ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯ ಭಾಗವಾಗಿ ಕಾನೂನಿನ್ವಯ ಪರಿಗಣಿಸಲಾಗಿದೆ. ಈ ಮಾನದಂಡದನ್ವಯ ಭಾರತದಲ್ಲಿ ಬುಡಕಟ್ಟುಗಳ ಸಂಖ್ಯೆಯನ್ನು ಅವಲೋಕಿಸಿದಾಗ ಕರ್ನಾಟಕವು ೧೬ ನೇ ಸ್ಥಾನದಲ್ಲಿದೆ.[೧೨] ರಾಜ್ಯದ ಅಭಿವೃದ್ಧಿ ಜಿಲ್ಲೆಗಳಲ್ಲಿ ಒಂದಾದ ಮೈಸೂರು ಜಿಲ್ಲೆಯು ೨೦೦೧ ರ ಜನಗಣತಿಯ ಪ್ರಕಾರ ೨,೭೧,೦೦೦ ಪರಿಶಿಷ್ಟ ಪಂಗಡದ ಜನಸಂಖ್ಯೆಯನ್ನು ಹೂಂದಿದೆ. ಪರಿಶಿಷ್ಟ ಪಂಗಡದ ಭಾಗವಾದ ಸೋಲಿಗ, ಜೇನುಕುರುಬ, ಕಾಡುಕುರುಬ, ಯರವ, ಹಕ್ಕಿಪಿಕ್ಕಿ ಮತ್ತು ಡೊಂಗ್ರಿ ಗೆರಾಸಿಯ ಜನಾಂಗಕ್ಕೆ ಸೇರಿದ ಬುಡಕಟ್ಟುಗಳಿದ್ದಾರೆ. ೨೬೩ ಕ್ಕೂ ಹೆಚ್ಚು ಬುಡಕಟು ಹಾಡಿಗಳು ಆಥವಾ ಗ್ರಾಮಗಳು ಜಿಲ್ಲೆಯಲ್ಲಿದ್ದು , ೪೮,೦೦೦ ಕ್ಕೂ ಹೆಚ್ಚು ಬುಡಕಟ್ಟು ಜನರಿದ್ದಾರೆ.[೧೩] ಹೀಗೆ ವಾಸವಾಗಿರುವ ಜಿಲ್ಲೆಯ ಎಲ್ಲಾ ಬುಡಕಟ್ಟುಗಳು ಅಭಿವೃದ್ಧಿಯ ಹೆಸರಿನ ಯೋಜನೆಗಳಿಗೆ ತಮ್ಮ ಮೂಲ ಸ್ಥಾನವನ್ನೇ ಬಲಿಕೊಟ್ಟು ಒಕ್ಕಲೆಬ್ಬಿದ ಜನರಾಗಿದ್ದಾರೆ.

ಆಂತರಿಕ ಒಕ್ಕಲೆಬ್ಬಿಸುವಿಕೆಗೆ ಕಾರಣಗಳು

ಭಾರತದಲ್ಲಿ ಬುಡಕಟ್ಟು ಒಕ್ಕಲೆಬ್ಬಿಸುವಿಕೆಗೆ ಅನೇಕ ಕಾರಣಗಳನ್ನು ಕಾಣಬಹುದು ಭಾರತದಲ್ಲಿ ಆಂತರಿಕ ಒಕ್ಕಲೆಬ್ಬಿಸುವಿಕೆಗೆ ಪ್ರಮುಖವಾಗಿ ೪ ಕಾರಣಬಹುದು ಅವುಗಳೆಂದರೆ,

೧. ಪ್ರತ್ಯೇಕತಾವಾದಿಗಳ ಚಳುವಳಿಯನ್ನೋಳಗೂಂಡ ರಾಜಕೀಯ ಕಾರಣ :

ಅ) ಸ್ವಾತಂತ್ರದ ಸಂದರ್ಭದಲ್ಲಿ ಈಶಾನ್ಯ ಭರತದಲ್ಲಿ ಪ್ರಮುಖ ಎರಡು ಸಶಸ್ತ್ರ ಸಂಘರ್ಷಗಳನ್ನು ಕಾಣಬಹುದು ಅಸ್ಸಂನ ನಾಗಾ ಚಳುವಳಿ ಮತ್ತು ೨. ಅಸ್ಸಾಂ ವಿದ್ಯಾರ್ಥಿ ಚಳವಳಿಗಳು ಆ) ಕಾಶ್ಮೀರ ಮೂಲಭೂತವಾದಿಗಳ ಚಳುವಳಿ. ಈ ಚಳುವಳಿಗಳಲ್ಲಿ ಸಾಮಾನ್ಯವಾಗಿ ಮೂರು ಲಕ್ಷಕ್ಕೂ ಹೆಚ್ಚು ಜನರನ್ನು ಒಕ್ಕಲೆಬ್ಬಿಸಲಾಯಿತು.[೧೪] ಈ ರೀತಿಯ ಪ್ರತ್ಯೇಕತಾವಾದದ ಚಳುವಳಿಯ ಮುಖಾಂತರ ಕರ್ನಾಟಕದ ಮೈಸೂರು ಜಿಲ್ಲೆಯಲ್ಲಿ ನಿರಾಶ್ರಿತರಾದ ಅಥವಾ ಒಕ್ಕಲಿಬ್ಬಿದ ಜನರು ಕಾಣಬರುವುದಿಲ್ಲ.

೨. ಅಸ್ಮಿತೆಯ ಆಧಾರಿತ ಸ್ವಾಯತ್ತತಾ ಚಳುವಳಿಗಳು:

ಅಸ್ಮಿತೆಯ ಆಧಾರಿತ ಸ್ವಾಯತ್ತತಾ ಚಳುವಳಿಗಳು ಸಹ ಹಿಂಸೆಗೆ ದಾರಿ ಮಾಡಿಕೂಡುವುದಲ್ಲದೆ ಆಂತರಿಕ ಸ್ಥಳಾಂತರಕ್ಕೆ ಎಡೆಮಾಡಿಕೊಟ್ಟಿದೆ.ಪಶ್ಚಿಮ ಅಸ್ಸಾಂನಲ್ಲಿನ ಇಂತಹ ಬೋಡೋಗಳ ಚಳುವಳಿಗಳಿಂದಾಗಿ ಬೋಡೇತರರನ್ನು ಬಲವಂತವಾಗಿ ಒಕ್ಕಲೆಬ್ಬಿಸಲಾಗಿದೆ ಇಂದಿಗೂ ಇವರು ನಿರಾಸ್ರಿತ ಕ್ಯಾಂಪ್‌ಗಳಲ್ಲಿ ಜೀವನ

ನೆಡೆಸುತಿದ್ದಾರೆ

೩.**ಸ್ಥಳೀಯ ಹಿಂಸೆಗಳು :** ಆಂತರಿಕ ಒಕ್ಕಲೆಬ್ಬಿಸುವಿಕೆಯು ಜಾತಿಯ ಮತ್ತು ಧರ್ಮದ ಸಂಘರ್ಷಗಳಿಂದಲೂ ಏರ್ಪಡುತ್ತವೆ. ಈ ರೀತಿಯ ಸ್ಥಳಾಂತರಗಳನ್ನು ನಾವು ಬಿಹಾರ ಮತ್ತು ಉತ್ತರಪ್ರದೇಶ ಗಳಲ್ಲಿ ಕಾಣಬಹುದು. ಹಾಗೂ ಧಾರ್ಮಿಕ ಮೂಲಭೂತವಾದ ದಿಂದಲೂ ಸ್ಥಳಾಂತರಗಳು ನಡೆಯತ್ತವೆ. (ಮಹಾರಾಷ್ಟ್ರದ ಮುಂಬೈ , ತಮಿಳುನಾಡಿನ ಕೊಯಮತ್ತೂರ್ , ಮತ್ತು ಆಲಿಘರ್ ಗಳಲ್ಲಿ ಕಾಣಬಹುದು.)[೧೫]

೪.**ಪರಿಸರ ಮತ್ತು ಅಭಿವೃದ್ಧಿ ಪ್ರೇರಿತ ಒಕ್ಕಲೆಬ್ಬಿಸವಿಕೆ:** ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದಾಗಿ ಪರಿಸರ ಮತ್ತು ಆಭಿವೃದ್ಧಿ ಪ್ರೇರಿತ ಸ್ಥಳಾಂತರಗಳು ನಡೆಯುತ್ತವೆ. ಕೈಗಾರಿಕೆಗಳ , ಅಣೆಕಟ್ಟುಗಳು, ರಸ್ತೆಗಳು ,ಗಣಿಗಾರಿಕೆ , ವಿದ್ಯುತ್, ನಗರೀಕರಣ , ರಾಷ್ಟ್ರೀಯ ಉದ್ಯಾನವನಗಳು ,ವನ್ಯ ಜೀವಿ ಸಂರಕ್ಷಣೆ ಹೀಗೆ ಅನೇಕ ಕಾರಣಗಳು ಆಂತರಿಕ ಒಕ್ಕಲೆಬ್ಬಿಸುವಿಕೆಗೆ ನಾಂದಿಯಾಗಿದೆ.

ಈ ಮೇಲಿನ ಎಲ್ಲಾ ಕಾರಣಗಳು ಆಂತರಿಕ ಒಕ್ಕಲೆಬ್ಬಿಸುವಿಕೆಗೆ ಕಾರಣಗಳಾದರೂ ಕರ್ನಾಟಕದ ಮೈಸೂರು ಜಿಲ್ಲೆಯ ಬುಡಕಟು ಜನರ ಒಕ್ಕಲೆಬ್ಬಿಸುವಿಕೆಗೆ ನಾಲ್ಕನೆಯ ಕಾರಣವು ಅತ್ಯಂತ ಪ್ರಮುಖ ಕಾರಣವಾಗಿದೆ. ೧೯೭೨ ರ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಘೋಷಣೆ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ ಜೊತೆಗೆ , ಹೆಚ್.ಡಿ.ಕೋಟೆಯ ಕಬಿನಿ ಜಲಾಶಯ , ನುಗು, ತಾರಕ , ಪಿರಿಯಾಪಟ್ಟಣದ ಭೀಮನಕಟ್ಟೆ ಯಂತಹ ಜಲಾಶಯಗಳ ನಿರ್ಮಾಣ ಇವಗಳು ಜಿಲ್ಲೆಯ ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಲು ಕಾರಣವಾದ ಯೋಜನೆಗಳಾಗಿವೆ ಇದರಿಂದ ತಮ್ಮ ಅಸ್ಥಿತ್ವವನ್ನ ಕಳೆದುಕೊಂಡಿರುವ ಜಿಲ್ಲೆ ಬುಡಕಟ್ಟುಗಳ ಮೇಲಾದ ಪರಿಣಾಮ ಗಳನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

ಆಂತರಿಕ ಒಕ್ಕಲೆಬ್ಬಿಸುವಿಕೆಯಿಂದಾದ ಪರಿಣಾಮಗಳು: ೧೯೭೨ ರ ನಾಗರಹೂಳೆ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆಗಳು ಹಾಗೂ ಅರಣ್ಯ ನೀತಿಗಳು ,ಅಣೆಕಟ್ಟುಗಳು, ಮೈಸೂರು ಜಿಲ್ಲೆಯ ಬುಡಕಟ್ಟು ಜನರ ಸ್ಥಿತಿಗತಿಗಳನ್ನು ಅಸ್ಥವ್ಯಸ್ಥ ಮಾಡಿವೆ. ಈ ಅಭಿವೃದ್ಧಿ ಪ್ರೇರಿತ ಯೋಜನೆಗಳು ನೇರವಾಗಿ ಬುಡಕಟ್ಟು ಜನರ ಜೀಪನದ ಮೇಲೆ ಪರಿಣಾಮವನ್ನು ಉಂಟು ಮಾಡಿದೆ. ಅವರ ಸಾಮಾಜಿಕ , ಆರ್ಥಿಕ ಸ್ಥತಿಗತಿಗಳು ಏರುಪೇರು ಳಿಗೆ ಒಳಪಟ್ಟಿದೆ . ಸರ್ಕಾರದ ದೃಷ್ಟಿಯಲ್ಲಿ ಇವುಗಳು ಅಭಿವೃದ್ಧಿಯಾ ದರೆ ಬುಡಕಟ್ಟುಗಳ ದೃಷ್ಟಿಯಲ್ಲಿ ಅವರ ಜೀವನವನ್ನು ನಾಶಪಡಿ ಸುವ ಸಾಧನಗಳಾಗಿವೆ. ಇವುಗಳಿಂದ ಬುಡಕಟ್ಟು ಜನರ ಮೇಲಾದ ಪರಿಣಾಮಗಳನ್ನು ಇಲ್ಲಿ ಕಾಣಬಹುದು.

೧. **ಭೂರಹಿತತೆ. :** ಕಾನನದ ಮಕ್ಕಳಿಗೆ ಅರಣ್ಯವೇ ತವರು . ಕಾನನದ ಉತ್ಪನ್ನಗಳೇ ಇವರ ಬದುಕಿನ ಆಸರೆ. ಆದರೆ ೧೯೭೦ ರಲ್ಲಿ ಕಬಿನಿ ಅಣೆಕಟ್ಟು ನಿರ್ಮಾಣದಿಂದ ಸುಮಾರು ೫೦೦೦ಬುಡಕಟ್ಟು ಜನರನ್ನು ಸ್ಥಳಾಂತರದ ಹೆಸರಿನಲ್ಲಿ ಒಕ್ಕಲೆಬ್ಬಿಸಲಾಯಿತು . ನಂತರದಲ್ಲಿ ೧೯೭೨ ರಲ್ಲಿ ನಾಗರಹೂಳೆ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ ಯಡಿ ಜಿಲ್ಲೆಯ ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು ಮತ್ತು ಪಿರಿಯಾಪಟ್ಟಣದ ಸಮಾರು ೨೫೦೦೦ ಕ್ಕೂ ಹೆಚ್ಚು ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಲಾಯಿತು.[೧೬] ಜೂತೆಗೆ ಅವರು ಅರಣ್ಯಭಾಗಗಳಲ್ಲಿ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದ ಭೂಮಿಯನ್ನು ಸಹ ಕಸಿದುಕೂಳ್ಳಲಾಯಿತು.ಇದು ಅವರನ್ನು ಭೂರಹಿತರನ್ನಾಗಿಸಿತು. ಹಾಗೆಯೇ ಸ್ಥಳಾಂತರದ ಸಂದರ್ಭದಲ್ಲಿ ಭೂಮಿಯನ್ನು ನೀಡುವುದಾಗಿ ಹೇಳಿದ್ದ ಸರ್ಕಾರ ತನ್ನ ಮಾತಿನಂತೆ ನೆಡೆದುಕೂಳ್ಳಲಿಲ್ಲ. ೨೦೦೬ ರ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ೧೦ ಎಕರೆ ಭೂಮಿ ನೀಡುವುದಗಿ ಹೇಳಿದ್ದ ಸರ್ಕಾರ ಕೇವಲ ಒಂದು ಎಕರೆ ಭೂಮಿಯನ್ನು ನೀಡಲು ಸಾಧ್ಯವಾಗಿಲ್ಲ.ಈ ಯೋಜನೆಯಡಿಲ್ಲಿ ಸಲ್ಲಿಸಿದ ೫೭೦೦ ಅರ್ಜಿಗಳಲ್ಲಿ ೪೭೦೦ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.[೧೭] ಒಟ್ಟಾರೆಯಾಗಿ ಭೂಮಿ ಕಳೆದುಕೂಂಡ ಇಲ್ಲಿನ ಜನರ ಗೂಳು ಹೇಳತೀರದಾಗಿದೆ.

೨. **ನಿರುದ್ಯೋಗ :**ಭೂಮಿಯ ಒಡೆತನವನ್ನು ಕಳೆದುಕೂಂಡ ಜನರು ವ್ಯವಸಾಯವನ್ನು ಮಾಡಲು ಭೂಮಿಯಿಲ್ಲದೆ ಭೂಮಾಲಿಕರ ಜಮೀನುಗಳಲ್ಲಿ ಕೂಲಿ ಕೆಲಸ ಮಾಡುವಂತಾಗಿದೆ. ತಮ್ಮ ಮೂಲ ಕಸುಬುಗಳಾದ ಬೇಸಾಯ , ಜೇನು ಹಿಡಿಯುವಿಕೆ , ಕಾಡನ ಉತ್ಪನ್ನಗಳ ಸಂಗ್ರಹಣೆ ಮತ್ತು ಮಾರಾಟಗಳಿಗೆ ಕೂಡಲಿ ಪೆಟ್ಟು ಬಿದ್ದಿದ್ದು ನಿರುದ್ಯೋಗದ ಪ್ರಮಾಣ ಹೆಚ್ಚಾಗಿದೆ.

೩. **ನಿರ್ವಸತಿ :** ಮೈಸೂರು ಜಿಲ್ಲೆಯಲ್ಲಿ ಸುಮಾರು ೫೫೦೦ ಕುಟುಂಬಗಳು ವಾಸವಾಗಿದ್ದು ಈ ಕುಟುಂಬಗಳೆಲ್ಲವು ಜಿಲ್ಲೆಯ ಅಭಿವೃದ್ಧಿ ಯೋಜನೆಗಳಿಂದಲೇ ಒಕ್ಕಲೆಬ್ಬಿಸಿದವರಾಗಿದ್ದಾರೆ. ಜಿಲ್ಲೆಯ ಭೋಗೆಪುರ , ಶೆಟ್ಟಹಳ್ಳಿ ಮತ್ತು ನಾಗಾಪುರ ಗಿರಿಜನರ ಪುನರ್ವಸತಿ ಕೇಂದ್ರಗಳಲ್ಲಿ ಮನೆಗಳನ್ನು ನಿರ್ಮಿಸಿದರೂ ಒಕ್ಕಲೆಬ್ಬಿಸಿದ ಎಲ್ಲಾ ಬುಡಕಟ್ಟುಗಳಿಗೆ ಸೂರು ಕಲ್ಪಿಸಲು ಸಾಧ್ಯವಾ ಗಿಲ್ಲ. ಇದರ ಪರಿಣಾಮ ವರ್ತಿ, ಗಿರಗೂರು, ವೀರನಹೂಸಳ್ಳಿ ಮುಂತಾದ ಅನೇಕ ಹಾಡಿಗಳಲ್ಲಿ ವಸತಿರಹಿತ ಬುಡಕಟ್ಟು ಕುಟುಂಬಗೂ ತಾವೇ ನಿರ್ಮಿಸಿದ ಜೋಪಡಿಗಳಲ್ಲಿ ಜೀವಿಸು ತ್ತಿದ್ದಾರೆ.

೪. **ಕೆಳಮಟ್ಟದ ಜೀವನ ಮಟ್ಟ :** ಒಕ್ಕಲೆಬ್ಬಿಸುವಿಕೆಗೆ ಒಳಗಾದ ಇಲ್ಲನ ಬಹುತೇಕ ಶೇ ೮೦ ಕ್ಕಿಂತ ಹೆಚ್ಚು ಬುಡಕಟ್ಟು ಜನರು ಆರ್ಥಿಕ ಸ್ಥಿತಿಗತಿಗಳು ತೀರಾ ಕೆಳಮಟ್ಟದಲ್ಲಿದ್ದು ಬಡತನರೇಖೆಗಿಂತ ಕೆಳಗಿದ್ದಾರೆ, ಇಂದಿಗೂ ಪುನರ್ವಸತಿ ಸೌಕರ್ಯ ದೂರೆಯದ ಬುಡಕಟ್ಟು ಜನಾಂಗ ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಕುಗ್ಗಿಹೋಗಿದ್ದಾರೆ. ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿ ಜೀವಿಸುತ್ತಿ ದ್ದಾರೆ.

೫. **ಅಹಾರದ ಅಭದ್ರತೆ :** ಬಡತನ ಮತ್ತು ನಿರುದ್ಯೋಗದ ಸಮಸ್ಯಗಳಿಂದ ಜೀವನ ನಡೆಸುತ್ತಿರುವ ಇವರಿಗೆಅಹಾರದ ಅಭದ್ರತೆಯು ಕಾಡುತ್ತಿದೆ.ಮೂಲ ವೃತ್ತಿಗಳನ್ನು ಮತ್ತು ಕೌಶಲ್ಯಗಳನ್ನು ಕಳೆದುಕೂಂಡಿರುವ ಇವರು ಪಡಿತರ ಹಮಚಿಕೆಯ ವ್ಯವಸ್ಥೆಯನ್ನೇ ಅವಲಂಬಿಸಿದ್ದಾರೆ.ಅಹಾರ ಹುಡುಕಾಟಕ್ಕೆ ಅರಣ್ಯ ನಿಷೇಧವಿರುವು ದರಿಂದ ಅಹಾರ ಭದ್ರತೆಗಾಗಿ ವಲಸೆ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ.

೬. **ವ್ಯಾಪಕ ರೋಗ ಹರಡುವಿಕೆ ಮತ್ತು ಮರಣ :** ಸಾಮೂಹಿಕ

ಒಕ್ಕಲೆಬ್ಬಿಸುವಿಕೆಯಿಂದ ಅರಣ್ಯದಿಂದ ಹೊರಬಂದ ಜನರು ಆಧುನಿಕ ವೈದ್ಯ ಪದ್ದತಿಗಿಂತ , ತಮ್ಮ ಮೂಲ ನಾಟಿ ಔಷಧ ಪದ್ದತಿಯಲ್ಲೇ ಬಲವಾಗಿ ನಂಬಿಕೆಯುಳ್ಳವರಾಗಿದ್ದಾರೆ. ತಮ್ಮ ವೈದ್ಯ ಪದ್ದತಿಗೆ ಬೇಕಾದ ಗಿಡಮೂಲಿಕೆಗಳ ಸಂಗ್ರಹಣೆಗೆ ಅರಣ್ಯ ಪ್ರದೇಶಕ್ಕೆ ಪ್ರವೇಶವಿಲ್ಲದಿರುವುದು ಅವರ ರೋಗ ಹರಡುವಿಕೆ ಹೆಚ್ಚಾಗಲು ಕಾರಣವಾಗಿದೆ.

೭. ಆಸ್ತಿ ನಷ್ಟ : ಈ ಮೂದಲು ಪೂರ್ವಿಕರ ಕಾಲದಿಂದಲೂ ಬೇಸಾಯ ಮಾಡಿಕೂಂಡು ಬರುತಿದ್ದ ಬೇಸಾಯದ ಭೂಮಿ ಮತ್ತು ತಾವು ವಾಸವಾಗಿದ್ದ ಪ್ರದೇಶಗಳನ್ನು ಅರಣ್ಯನೀತಿ, ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ತಮ್ಮ ಪೂರ್ವಿಕರಿಂದ ಬಂದಂತಹ ಅಸ್ತಿಯನ್ನು ಕಳೆದುಕೂಂಡಿದ್ದಾರೆ. ಪರ್ಯಾಯ ಭೂಮಿಯ ಭರವಸೆ ನೀಡಿದ್ದ ಸರಕಾರ ಭೂಮಿಯನ್ನು ಒದಗಿಸುವಲ್ಲಿ ವಿಫಲವಾಗಿದ್ದು ಬುಡಕಟ್ಟು ಜನರ ತಮ್ಮ ಆಸ್ತಿಗಳನ್ನು ಕಳೆದುಕೂಂಡಿದ್ದಾರೆ.

೮. ಸಾಮಾಜಿಕ ವಿಭಜನೆ. : ಬುಡಕಟ್ಟುಗಳ ಒಕ್ಕಲೆಬ್ಬಿಸುವಿಕೆಯಿಂದ ಅವರ ಸಾಮಾಜಿಕ ಸಂಘಟನೆಯ ಮೇಲೆ ಅಘಾದವಾದ ಪರಿಣಾಮ ಬೀರಿದೆ. ಬಲವಂತದ ಒಕ್ಕಲೆಬ್ಬಿಸುವಿಕೆ ಅವರ ಸಂಘಟನೆಯ ಒಡೆಯುವಿಕೆಗೆ ದಾರಿಮಾಡಿಕೂಟ್ಟಿದೆ. ಅರಣ್ಯದಿಂದ ಹೊರಬಂದ ಬುಡಕಟ್ಟು ಕುಟುಂಬಗಳು ಬೇರೆ ಬೇರೆ ನೆಲೆಗಳಲ್ಲಿ ನೆಲೆಸುವುದರಿಂದ ಬುಡಕಟ್ಟುಗಳ ಸಂಘಟನೆಯು ಬಹಳ ಕಷ್ಟವಾಗಿದ್ದು ಅವರ ಸಾಮಾಜಿಕ ಸಂಘಟನೆಯು ವಿಭಜನೆಯಾಗಿರುವುದನ್ನು ಕಾಣಬಹುದು.

೯. ಮಾನವ ಹಕ್ಕುಗಳ ಉಲ್ಲಂಘನೆ. : ಬುಡಕಟ್ಟುಗಳ ಬಲವಂತದ ಒಕ್ಕಲೆಬ್ಬಿಸುವಿಕೆ ಮತ್ತು ಅವರ ಆಸ್ತಿಯ ನಷ್ಟಕ್ಕೆ ಸರಿಯಾದ ಪರಿಹಾರ ಒದಗಿಸದೇ ಇರುವದು ಬುಡಕಟ್ಟುಗಳ ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಇದರ ಜೊತೆಗೆ ಅವರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಉಲ್ಲಂಘನೆಗಳನ್ನು ಮೈಸೂರು ಜಿಲ್ಲೆಯಲ್ಲಿ ಕಾಣಬಹುದಾಗಿದೆ. ಜೊತೆಗೆ ಇಲ್ಲಿನ ಜನರನ್ನು ಅರಣ್ಯ ಪ್ರದೇಶಗಳಿಂದ ಬಲವಂತವಾಗಿ ತೆರವುಗೊಳಿಸುವುದು ಮಾತ್ರವಲ್ಲದೆ ಅವರ ಮೇಲೆ ಅರಣ್ಯ ಇಲಾಖೆಯ ದೂರುಗಳನ್ನು ಸಹ ದಾಖಲಿಸಿ ಮಾನಸಿಕ ಕಿರುಕುಳ ನೀಡುತ್ತಿರುವ ಅನೇಕ ಪ್ರಸಂಗಗಳು ಜಿಲ್ಲೆಯಲ್ಲಿ ಇಂದಿಗೂ ಜರುಗುತ್ತಿವೆ.

ಸರ್ಕಾರೇತರ ಸಂಘಟನೆಗಳ ಪಾತ್ರ: ಮೈಸೂರು ಜಿಲ್ಲೆಯ ಬುಡಕಟ್ಟು ಜನರ ಅಭಿವೃದ್ಧಿ ಮತ್ತು ಅವರ ಸಮಸ್ಯೆಗಳ ನಿವಾರಣೆಗಾಗಿ ಸಹಾಯಹಸ್ತ ಚಾಚುವುದರೂಂದಿಗೆ ತಮ್ಮದೇಯಾದ ಮಹತ್ತರ ಪಾತ್ರ ನಿರ್ವಹಿಸುತ್ತಿವೆ. ಹೆಚ್.ಡಿ.ಕೋಟೆಯಲ್ಲಿನ ವಿವೇಕಾನಂದ ಯೂತ್ ಮೂವ್‌ಮೆಂಟ್ , ಹುಣಸೂರಿನ ಡೀಡ್ ಮತ್ತು ಪರಿವರ್ತನ ಸಂಘ ಹಾಗೂ ಪಿರಿಯಾಪಟ್ಟಣದ ಹರ್ಡ್ಜ್ ಫೌಂಡೇಷನ್ ನಂತಹ ಸಂಸ್ಥೆಗಳು ಬುಡಕಟ್ಟು ಜನರಿಗೆ ಸರ್ಕಾರಿ ಸೌಲಭ್ಯಗಳನ್ನು ತಲುಪಿಸುವದರ ಜೂತೆಗೆ ಅವರ ಜೀವನ ಮಟ್ಟವನ್ನು ಉತ್ತಮಪಡಿಸಲು ಪ್ರಯತ್ನಿಸುತ್ತಿವೆ. ಡೀಡ್ ಸಂಸ್ಥೆಯು ರಾಷ್ಟ್ರೀಯ ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ಬುಡಕಟ್ಟು ಜನರಲ್ಲಿ ಜಾಗೃತಿ ಮತ್ತು ಅವರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದೆ.(ಕುಶಾಲನಗರದಲ್ಲಿ ನಡೆಸಿದ ೨೦೧೧ ಕಮ್ಯುನಿಟಿ ರೈಟ್ಸ್ , ೨೦೧೩ ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ಸಮ್ಮೇಳನಗಳು) ಇದಕ್ಕಿಂತಲೂ ಭಿನ್ನವಾಗಿ ವಿವೇಕಾನಂದ ಯೂತ್ ಮೂವ್ ಮೆಂಟ್ ಗಿರಿಜನರಿಗಾಗಿ ಆಶ್ರಮ ಶಾಲೆಗಳು , ಆಸ್ಪತ್ರೆಗಳು ಮತ್ತು ಪುನರ್ವಸತಿ ಯೋಜನೆಗಳೂಂದಿಗೆ ಅವರ ಅಭೀವೃದ್ಧಿಯಲ್ಲಿ ಇಂದಿಗೂ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಉಳಿದಂತೆ ಎಲ್ಲಾ ಸಂಘಟನೆಗಳು ಆರೋಗ್ಯ ಶಿಬಿರಗಳೂ , ಬುಡಕಟ್ಟು ಮಕ್ಕಳಿಗೆ ಉಚಿತ ಬಟ್ಟೆ, ಪುಸ್ತಕಗಳು ಮತ್ತು ಜಾಗೃತಿ ಶಿಬಿರಗಳನ್ನು ಆಯೋಜಿಸುತ್ತಾ ಬುಡಕಟ್ಟುಗಳ ಅಭವೃದ್ಧಿಗೆ ಶ್ರಮಿಸುತ್ತಿವೆ . ಏನಾದರೂ ಸರ್ಕಾರೇತರ ಸಂಘಟನೆಗಳು ಸಂಪೂರ್ಣ ಬುಡಕಟ್ಟುಗಳ ಅಭಿವೃದ್ಧಿಯನ್ನು ಸಾಧೀಸಲು ಸಾಧ್ಯವಾಗುತ್ತಿಲ್ಲ . ಆರ್ಥಿಕ ಸ್ಥಿತಿಗತಿಗಳು ಇದಕ್ಕೆ ಪ್ರಮುಖ ಕಾರಣವಾಗಿದೆ. ಈ ದಿಸೆಯಲ್ಲಿ ಸರ್ಕಾರವು ಸಹ ಪ್ರಮುಖವಾಗಿ ಗಮನಹರಿಸಬೇಕಾಗಿದೆ.

ಶೋಧನಾಂಶಗಳು : ಅಭಿವೃದ್ಧಿಯ ದೃಷ್ಟಿಕೋನದಿಂದ ಗಮನಿಸಿದಾಗ ಜಿಲ್ಲೆಯಲ್ಲಿಯೇ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ ಹಾಗೂ ಇವರು ವಾಸಿಸುವ ಹಾಡಿಗಳು (ಗ್ರಾಮಗಳು) ಅಭಿವೃದ್ಧಿಯಿಂದ ಬಹುದೂರವೇ ಉಳಿದಿವೆ. ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಇಲ್ಲಿನ ಜನರಿಗೆ ಆಧುನಿಕ ಸೌಕರ್ಯಗಳಾದ ಆಸ್ಪತ್ರೆ, ಬ್ಯಾಂಕ್, ಸಹಕಾರ ಸಂಘಗಳು, ಯಾಂತ್ರಿಕೃತ ಸೌಲಭ್ಯಗಳು, ನೀರಾವರಿ, ರಸ್ತೆಯಂತಹ ಸೌಲಭ್ಯಗಳು ಲಭ್ಯವಾಗಿಲ್ಲ. '೨೦೦೬ ರ ಅರಣ್ಯ ಗಿರಿಜನ ವಾಸಿಗಳ ಹಕ್ಕು' ಕಾಯ್ದೆಯನ್ನು ೨೦೦೮ ರಲ್ಲಿ ಕೇಂದ್ರ ಸರ್ಕಾರವು ಜಾರಿಗೊಳಿಸಿದ್ದರೂ ಮೈಸೂರು ಜಿಲ್ಲೆಯ ಬುಡಕಟ್ಟು ಜನರಿಗೆ ಈ ಹಕ್ಕುಗಳನ್ನು ಪಡೆಯಲು ಅರಣ್ಯ ಇಲಾಖೆಯು ಅಡ್ಡಪಡಿಸಿದೆ ಹಾಗೂ ಅರಣ್ಯದಲ್ಲಿ ವಾಸಿಸುತ್ತಿರುವ ಗಿರಿಜನರನ್ನು ಹೊರದೂಡಲು ಹಾಗೂ ಭೂಮಿಯ ಹಕ್ಕು ಪತ್ರಗಳಿದ್ದರೂ ವ್ಯವಸಾಯವನ್ನು ಕೈಗೊಳ್ಳಲು ಅರಣ್ಯ ಇಲಾಖೆಯು ಬಿಡುತ್ತಿಲ್ಲ. ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಅತ್ಯಂತ ಹಿಂದುಳಿದ ಹಾಡಿಗಳು ಮತ್ತು ಗ್ರಾಮಗಳನ್ನು ಬಿಟ್ಟು ಮುಂದುವರೆದಿರುವ ಗ್ರಾಮಗಳನ್ನೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇದು ಬುಡಕಟ್ಟು ಜನರ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಸರ್ಕಾರವು ಬುಡಕಟ್ಟುಗಳ ಅದರಲ್ಲೂ ನಾಗರಹೊಳೆ ಅರಣ್ಯಪ್ರದೇಶದ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸಿ ಸುಮಾರು ನಲವತ್ತು ವರ್ಷಗಳೇ ಕಳೆದರೂ ಇಂದಿಗೂ ಅವರಿಗೆ ಪುನರ್ವಸತಿ ಕಲಿಸಲು ಸಾಧ್ಯವಾಗಿಲ್ಲ. ಹಾಗಾಗಿ ಕರ್ನಾಟಕ ರಾಜ್ಯ ಹೈಕೋರ್ಟ್ ಬುಡಕಟ್ಟುಗಳ ಈ ಜನರ ಬಗ್ಗೆ ಸಮಗ್ರವಾದ ಅಧ್ಯಯನಕ್ಕಾಗಿ ಪ್ರೂ.ಮುಜಾಫರ್ ಅಸ್ಸಾದಿ ರವರ ನೇತೃತ್ವದ ಸಮಿತಿಯನ್ನು ನೇಮಿಸಿದೆ. ಈ ಸಮಿತಿಯು ೨೦೧೪ ಜುಲೈ ತಿಂಗಳಲ್ಲಿ ನೀಡಿರುವ ವರದಿಯ ೩೨ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಬೇಕು. ಏಕೆಂದರೆ ಈ ಸಮಿತಿಯಲ್ಲಿ ಬುಡಕಟ್ಟುಗಳ ಸ್ಥಿತಿಗತಿಗಳನ್ನು ಮತ್ತು ಅವರಿಗಾಗಿರುವ ಅನ್ಯಾಯಗಳನ್ನು ಸ್ಪಷ್ಟವಾಗಿ ವರದಿಯಲ್ಲಿ ಉಲ್ಲೇಖಿಸಿದೆ.

ಸಲಹೆಗಳು : ಮೇಲೆ ಚರ್ಚಿಸಿದ ಶೋಧಾನಾಂಶಗಳಿಂದ ಬುಡಕಟ್ಟುಗಳ ಅಭಿವೃದ್ಧಿಗೆ ಈ ಕೆಳಕಂಡ ಸಲಹೆಗಳು ಸೂಕ್ತವಾಗಿದೆ. ಮೈಸೂರು ಬುಡಕಟ್ಟು ಜನರು ತಮ್ಮ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸ್ವಲ್ಪ ಮಟ್ಟಿನ ಪ್ರಗತಿ ಹೊಂದಿದ್ದರು ತಮ್ಮ ಸಂಪ್ರಪ್ರಾಯಗಳು, ಮೂಢನಂಬಿಕೆ, ಆಚಾರ ವಿಚಾರಗಳನ್ನು ಸಡಿಲಿಸಿಕೊಂಡಿಲ್ಲ. ಈ ದಿಸೆಯಲ್ಲಿ ಶಿಕ್ಷಣ ನೀಡುವ ಮೂಲಕ

ಇದನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಬಹುದು. ಜಾರ್ಖಂಡ್ ರಾಜ್ಯದ ಮಾದರಿಯಲ್ಲಿ ಬುಡಕಟ್ಟು ಭಾಷೆಯಲ್ಲೇ ಶಿಕ್ಷಣ ದೊರೆಯುವಂತಾಗಬೇಕು. ಇವರಲ್ಲಿ ತಮ್ಮ ಆರ್ಥಿಕಾಭಿವೃದ್ಧಿಗಾಗಿ ಸ್ವಯಂ ಉದ್ಯೋಗಗಳನ್ನು ಕೈಗೊಳ್ಳಲು ಬೇಕಾಗುವಂತಹ ತರಬೇತಿ, ಶಿಕ್ಷಣ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಬುಡಕಟ್ಟು ಜನರು ವಾಸಿಸುತ್ತಿರುವ ಎಲ್ಲಾ ಹಾಡಿಗಳನ್ನು ಸುವರ್ಣ ಗ್ರಾಮ ಯೋಜನೆಯಲ್ಲಿ ಅಭಿವೃದಿ ಪಡಿಸುವಂತಾಗಬೇಕು. ತಮ್ಮ ಅಭಿವೃದ್ಧಿಗಾಗಿ ತಾವೇ ಸ್ವತಃ ಸ್ವಯಂ ಸೇವಾ ಸಂಘಟನೆಗಳನ್ನು ರಚಿಸಿಕೊಳ್ಳಲು ಇವರಿಗೆ ಪ್ರೋತ್ಸಾಹ ನೀಡಬೇಕು.

ಉಪಸಂಹಾರ : ಪ್ರಸ್ತುತ ಪ್ರಬಂಧವು ಲಭ್ಯ ಸಾಹಿತ್ಯಗಳನ್ನು ಆಧರಿಸಿ ರಚಿಸಿ'ದ ಒಂದು ಪರಿಚಯದ ಪ್ರಯತ್ನವಾಗಿದೆ. ಭಾರತದಲ್ಲಿ ಅಭಿವೃದ್ಧಿ ಯೋಜನೆಗಳಿಂದಾಗಿ ಆಂತರಿಕವಾಗಿ ಒಕ್ಕಲೆಬ್ಬಿಸಿರುವುದನ್ನು ನಿರಾಕರಿಸುವುದು ಸಾಧ್ಯವಿಲ್ಲ. ಈ ರೀತಿಯ ಅಭಿವೃದ್ಧಿ ಪ್ರೇರಿತ ಒಕ್ಕಲೆಬ್ಬಿಸುವಿಕೆಯು ಪುರಾತನ ಕಾಲದಿಂದಲೂ ಬಂದಿದೆ. ಸಾಮಾನ್ಯವಾಗಿ ಮೈಸೂರಿನಲ್ಲಿ ಕೈಗೂಂಡ ಅಭಿವೃದ್ಧಿ ಯೋಜನೆಗಳೆಲ್ಲವೂ ನದಿ ಪ್ರದೇಶ ಮತ್ತು ಅರಣ್ಯ ಪ್ರದೇಶಗಳನ್ನೇ ಕೇಂದ್ರೀಕರಿಸಿದ ಯೋಜನೆಗಳಾಗಿವೆ.ಇದರಲ್ಲಿ ಸಮಾಜದ ಒಂದು ಭಾಗವಾಗಿರುವ ಬುಡಕಟ್ಟು ಜನರು ವ್ಯಾಪಕವಾಗಿ ಈ ಯೋಜನೆಗಳ ಅಡಿಯಲ್ಲಿ ಸಿಲುಕಿ ನರಳುತಿದಾರೆ. ನಾಗರಹೂಳೆ ರಾಷ್ಟ್ರೀಯ ಉದ್ಯಾನವನ ,ಕಬಿನಿ ಅಣೆಕಟ್ಟು ನಿರ್ಮಾಣ ,ನುಗು ಜಲಾಶಯದಂತ ಯೋಜನೆಗಳಲ್ಲಿ ನಿರಾಶ್ರಿತರಾದ ಇಲ್ಲಿನ 5500 ಕುಟುಂಬಗಳಿಗೆ ಇಂದಿಗೂ ಪುನರ್ವಸತಿಯ ಸೌಕರ್ಯಗಳು ಪೂರ್ಣ ಪ್ರಮಾಣದಲ್ಲಿ ದೂರಕಿಲ್ಲ. 1994 ರಲ್ಲಿ ರಾಷ್ಟ್ರಪತಿಯವರಿಂದ ಅಂಕಿತಗೂಂಡ ಪುನರ್ವಸತಿ ಕಾನೂನು , 2005 ರಲ್ಲಿ ಅನುಷ್ಠಾನಗೂಂಡ ಅರಣ್ಯ ಹಕ್ಕು ಕಾಯ್ದೆ ಮತ್ತು ಕರ್ನಾಟಕ ರಾಜ್ಯ ಹೈಕೋರ್ಟ್ ಬುಡಕಟ್ಟುಗಳ ಅಧ್ಯಯನಕ್ಕಾಗಿ ಪ್ರೂ.ಮುಜಾಫರ್ ಅಸ್ಸಾದಿ ರವರ ನೇತೃತ್ವದ ಸಮಿತಿ ನೀಡಿರುವ ಶಿಫಾರಸ್ಸುಗಳನ್ನು ಪಾರದರ್ಶಕವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಟಾಗೂಳಿಸಿದರೆ ಇಲ್ಲಿನ ಬುಡಕಟ್ಟು ಜನರ ಅಭಿವೃದ್ಧಿಯನ್ನು ಕಾಣಬಹುದೆಂದು ಹೇಳಬಹುದು.

ಪರಾಮರ್ಶನ ಗ್ರಂಥಗಳು :

1. www.accp.org/sevents/0809.html
2. ^ "Internal Displacement: Global Overview of Trends and Developments in 2006" (PDF).Internal Displacement Monitoring Centre (IDMC). April 2007. Retrieved 2007-05-10-23.
3. Jeanatte schade and Thomas Faist Development projects vs. Internally displaced Populations in India pg.6
4. World bank report 2012
5. V. Vijayalakshmi, Scheduled tribes and Development - Projects from Karnataka,I.C.S.C,Bangalore,2003
6. ಡಾ॥ ಮಧುಗುಂಡ್ಲುಪೇಟೆ ಕರ್ನಾಟಕದಲ್ಲಿ ಬುಡಕಟ್ಟುಗಳ ಅಭಿವೃದ್ಧಿ, ಮೈಸೂರು,೨೦೦೨, ಪುಟ ೩
7. ಅದೇ, ಪುಟ–೪
8. ರಾಜಶೇಖರ್.ಎಸ್ ಭಾರತೀಯ ಸಮಾಜ, ಭ್ರಮರ ಪ್ರಕಾಶನ, ಶಿವಮೊಗ್ಗ, ೨೦೦೧, ಪುಟ ೨೩೯
9. Béteille, A. 1991. Society and Politics in India: Essays in a Comparative Perspective. London School of Economics Monographs on Social Anthropology. New Delhi: Oxford University Press.
10. ಮೇಲಿನದು,೦೬
11. Vaid N.K. Who cares for Trible People, New Delhi, Mattal Pub, 2007, P.6
12. ೨೦೦೧ರ ಭಾರತದ ಜನಸಂಖ್ಯೆ ವರದಿ
13. ಮೈಸೂರು ಜಿಲ್ಲಾ ಸಮಾಜ ಕಲ್ಯಾಣ ಇಲಾಖಾ ಕೈಪಿಡಿ ೨೦೧೦
14. ಮೇಲಿನದು ,ಪುಟ೧
15. ಅದೇ, ಪುಟ.೧
16. ಮೈಸೂರು ಜಿಲ್ಲಾ ಪಂಚಾಯತ್ ವರದಿ ೨೦೧೦
17. The Hindu ,March 2011,

ಸ್ವಾತಂತ್ರೋತರ ಕಲಬುರ್ಗಿ ಜಿಲ್ಲೆಯಲ್ಲಿನ ದಲಿತ ಚಳುವಳಿಗಳು ಮತ್ತು ಸಾಮಾಜಿಕ ಪರಿವರ್ತನೆ

ಶಿವಪ್ಪ .ಎಮ್. ಭೂಸನೂರ

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಡಾ॥ ಅಂಬೇಡ್ಕರ್‌ರವರ ನಂತರ ಅವರ ವಿಚಾರಧಾರೆಗಳಿಂದ ಪ್ರಭಾವಿತರಾದ ದಲಿತ ವಿದ್ಯಾವಂತರು, ಮುಖಂಡರು, ರಾಷ್ಟ್ರಾಂತ ತಮ್ಮದೆ ಆದ ಸಂಘ–ಸಂಸ್ಥೆಗಳನ್ನು ಕಟ್ಟಿಕೊಂಡು ಆ ಮೂಲಕ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪಾಲು ಪಡೆಯಲು ನಿರಂತರ ಹೋರಾಟ ಚಳುವಳಿ ರೂಪಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿಯು ಅಂಬೇಡ್ಕರ ವಿಚಾರಗಳಿಂದ ಪ್ರಭಾವಿತರಾದ ದಲಿತ ಮುಖಂಡರು ವಿದ್ಯಾರ್ಥಿಗಳು ಸಂಘಟನೆಯನ್ನು ಕಟ್ಟಲು ಮುದಾಗಿದ್ದು ಚರಿತ್ರಾರ್ಹ ಸಂಗತಿ. 70ರ ದಶಕದಲ್ಲಿ ತನ್ನ ಸಮುದಾಯದ ಕನಸುಗಳನ್ನು ಬೆನ್ನಿಗೆಟ್ಟಿಕೊಂಡು ಹುಟ್ಟಿದ ಈ ಚಳುವಳಿ 80ರ ದಶಕದ ಹೊತ್ತಿಗೆ ಕರ್ನಾಟಕದಾದ್ಯಂತ ಹರಡಿ ಅಸ್ಪಶ್ಯರಲ್ಲಿ ಅರಿವಿನ ಸ್ಫೋಟವಾಗಿ ಪರಿಣಮಿಸಿತು. 1978ರಲ್ಲಿ ಮೊದಲು ಬಾರಿಗೆ ದಲಿತ. ಲೆಖಿಕ ಕಲಾವಿದರ ಯುವ ಸಂಘಟನೆಯನ್ನು ಭದ್ರಾವತಿಯಲ್ಲಿ ಸ್ಥಾಪಿಸಲಾಯಿತು. ಇದೇ ಸಂದರ್ಭದಲ್ಲಿ ಗರಿಗಟ್ಟುತ್ತಿದ ದಲಿತ ಸಾಹಿತ್ಯ ರೂಪುಗೊಳ್ಳಲು ಅಗತ್ಯವಾದ ತಾತ್ವಿಕ ಚಿಂತನೆಗಳನ್ನು ರೂಪಿಸಲಯಿತು ಇಂತಹ ಸಂದರ್ಬದಲ್ಲಿ ದಲಿತ ಲೇಖಿಕರ ಯುವ ಸಂಘಟನೆಯನ್ನೇ ದಲಿತಸಂಘರ್ಷ ಸಮಿತಿಯಾಗಿ ಘೋಷಿಸಲಾಯಿತು. ಬಿ. ಕೃಷ್ಣಪ್ಪನವರು ಅದರ ರಾಜ್ಯ ಸಂಚಾಲಕರಾದರು ಅಕ್ಷರ ಜಗತ್ತಿಗೆ ತೆರೆದುಕೊಂಡು ಮೊದಲ ತೆಲೆಮಾರಿನ ಯುವಕರು ತಮ್ಮ ಅನುಭವಗಳ ಮೂಲಕ ಕಥೆ ಕವನ ಕಾದಂಬರಿಗಳನ್ನು ಅಭಿವ್ಯಕ್ತಿಸತೊಡಗಿದರು. ದೇವನೂರು ಮಹಾದೇವ್ ತಮ್ಮ ದ್ಯಾವನೂರ ಕತಾಸಂಕಲನದ ಮೂಲಕ ದಲಿತ ಜಗತ್ತನ್ನು ಎಚ್ಚರಿಸಿದರು.

ಇಂತಹ ಸಾಹಿತ್ಯಕ ಬೆಳವಣಿಗೆಯು ಆತ್ಮಸ್ಥೈರ್ಯವನ್ನು ಕಳೆದುಕೊಂಡಿದ "ಶೋಷಿತ ಸಮುದಾಯಗಳಿಗೆ ಹೋರಾಟದ ಪಾಠ ಕಲಿಸುವುದರ ಜೊತೆಗೆ ಪ್ರಶ್ನಿಸುವ ಧೈರ್ಯ ಮತ್ತು ಬಂಡೇಳುವ ಮನೋಭಾವವನ್ನು ಹುಟ್ಟುಹಾಕಿದವು.

ಭಾರತೀಯ ಸಮಾಜವು ತನ್ನ ವಿಸ್ತಾರ ಹಾಗೂ ಸಂಕೀರ್ಣತೆಗೆ ಅನುಗುಣವಾಗಿ ಹಲವಾರು ರೀತಿಯ ತಾರತಮ್ಯಗಳನ್ನು ತನ್ನ ತೆಕ್ಕೆಯಲ್ಲಿಟ್ಟಕೊಂಡು ಪಾಲಿಸುತ್ತಾ ಬಂದಿದೆ. ಮುಖ್ಯವಾಗಿ ಆರ್ಥಿಕ ಅಸಮಾನತೆ, ಸಾಮಾಜಿಕ ಅಸಮಾನತೆ ರಾಜಕೀಯ ಅಸಮಾನತೆ, ಲಿಂಗತಾರತಮ್ಯ, ಹೀಗೆ ಬದುಕಿನ ಎಲ್ಲಾ ಸ್ತರಗಳಲ್ಲೂ ರಾಜಾರೋಷ ವಾಗಿ ನಡೆಯುತ್ತಿದ್ದು, ಸಾರ್ವಜನಿಕವಾಗಿ ಬೇಡ ಸೈತಾನನ ವಿರುದ್ಧ ನಡೆದ ಪ್ರತಿಭಟನೆ ಮತ್ತು ಹೋರಾಟ–ಇಂದು ನಿನ್ನೆಯದಲ್ಲ. ಚಾರಿತ್ರಿಕವಾಗಿ ನೋಡಿದಾಗ ಮಾನವನ ಸಮಾಜದಲ್ಲಿ ಅಸಮಾನತೆ ಎನ್ನುವುದು ಯಾವ ಹಂತದಿಂದ ಶುರುವಾಯಿತೋ ಪ್ರತಿಭಟನೆಯೂ ಕೂಡಾ ಅಂದಿನಿಂದಲೇ ನಿರಂತರವಾಗಿ ನಡೆಯುತ್ತಲೇ ಬಂದಿದೆ.

ಜೊತೆಗೆ ಈ ಪ್ರತಿಭಟನೆ ನಿರತ ಮನಸುಗಳು ಜಾತ್ಯಾತೀತ ಪರಂಪರೆಗಾಗಿ ತುಡಿಯುತ್ತ ಬಂದಿವೆ. ಅದು ಬುದ್ಧ ಚಾವಾಕ ಬಸಣ್ಣ, ಕಟ್ಟಲ್ವಟ ಜಾತ್ಯಾತೀತ ಪರಂಪರೆ 14–15ನೇ ಮಾದೇಶ್ವರ ಮಂಟೇಸ್ವಾಮಿ ಯವರೆಗೆ ನೋಡಬಹುದು. ಇಂದಿಗೂ ಸಹ ಸಮಾನತೆಯನ್ನು ಬಯಸಿ ತುಡಿಯುತ್ತಿರುವ ಮನಸ್ಸುಗಳಿಗೆ ಇವರು ಪ್ರೇರಣೆ ಹಾಗೂ ಚಿಲುಮೆಯಾಗಿ ಕಾಣಿಸುತ್ತಾರೆ. ಈ ಸುದೀರ್ಘವಾದ ಹೋರಾಟದ ಪರಂಪರೆಯನ್ನೆ ತನ್ನ ಆತ್ಮವಾಗಿರಿಸಿಕೊಂಡು ಶೋಷಿತ ಸಮುದಾಯ ಗಳಿಗೆ ಶೋಷಣೆ ಎನ್ನುವುದ ದೈಹಿಕ ಹಾಗೂ ಮಾನಸಿಕವಾಗಿ ನಡೆಯುತ್ತಲೇ ಇದೆ. ಅಸ್ಪೃಶ್ಯತೆ ಜಾತೀಯತೆ, ದೌರ್ಜನ್ಯ ಅತ್ಯಾಚಾರ ಮುಂತಾದವುಗಳಿಗೆ ಕೊನೆಯಿಲ್ಲದಾಗಿದೆ. ಭಾತರೀಯ ಸಮಾಜ ಅಸ್ಪೃಶ್ಯತೆಯಂತಹ ಸಾಮಾಜಿಕ ಅಸಮಾನತೆಗಳನ್ನು ಅನಾದಿಕಾಲ ದಿಂದಲೂ ತಮ್ಮ ಅವಿಭಾಜ್ಯ ಅಂಗವೆಂಬಂತೆ ಶೋಷಿಸುತ್ತಿರುವ ಸಂದರ್ಭದಲ್ಲಿ ದಲಿತರ ಅಂತರಂಗದ ಬೆಳಕ್ಕಾಗಿ ಬಂದ ಅಂಬೇಡ್ಕರಿಗೆ ಕಂಡಿದ್ದು ಅಸ್ಪೃಶ್ಯತೆ ಮತ್ತು ಜಾತೀಯತೆ ಈ ಕಾಲಕ್ಕಾಗಲೇ ತನ್ನ ಬಾಲ್ಯದ ಅನುಭವಗಳೆಲ್ಲವೂ ಅನುಭವಿಸಿ ಅಂಬೇಡ್ಕರ್‌ರಲ್ಲಿ ಒಂದು ಪ್ರಜ್ಞೆಯಾಗಿ ರೂಪಗೊಂಡಿತ್ತು ಹೀಗಾಗಿ ಅಂಬೇಡ್ಕರ ತಮ್ಮ ಹೋರಟದ ಮೊದಲು ಹೆಜ್ಜೆಯಾಗಿ ಅಸ್ಪೃಶ್ಯತಾ ವಿರೋಧಿ ಚಳುವಳಿಯನ್ನು ಮುಖ್ಯ ಸಮಸ್ಯಯಾಗಿ ತೆಗದುಕೊಂಡು ಮುಂದಿನ ದಲಿತ ಚಳುವಳಿಗೆ ಪ್ರೇರಕ ಶಕ್ತಿಯಾದರು. ಹೀಗೆ ಸುಮಾರು 70ರ ದಶಕದಲ್ಲಿ ಕರ್ನಾಟಕದಲ್ಲಿ ಉದಯಿಸಿದ ದಲಿತ ಚಳುವಳಿಯು ನಂತರದ ವರ್ಷಗಳಲ್ಲಿ ಅದು ರಾಜ್ಯದ ವಿವಿಧ ಜಿಲ್ಲೆಗಳಿಗೆ ತನ್ನದೆಯಾದ ಪ್ರಭಾವವನ್ನು ಬೀರಿ ಅಸ್ಪೃಶ್ಯತಾ ಸಮುದಾಯವನ್ನು ಸಂಘಟಿಸಿ ಎಚ್ಚರಗೊಳಿಸುವ ಕಾರ್ಯದಲ್ಲಿದ ಸಮಯದಲ್ಲಿ ದಲಿತ ಚಳುವಳಿಯ ಬೇರುಗಳು ಕಲಬುರ್ಗಿ ಜಿಲ್ಲೆಗೆ ಆಗಮಿಸಲು ಪ್ರಾರಂಭಿಸಿದವು.

ಕಲಬುರ್ಗಿ ಜಿಲ್ಲೆಯಲ್ಲಿ ನಡೆಯುತ್ತಿರುವ ಅನೇಕ ಮೂಢನಂಬಿಕೆ, ಅನಿಷ್ಠ ಪದ್ಧತಿಗಳನ್ನು ಖಂಡಿಸುವುದರ ಮೂಲಕ 1978–1979ರ ಸಮಯದಲ್ಲಿ ಬಹುದೂರ ದಿಂದ ಬಂದ ಮಂಗಳೂರ ವಿಜಯರವರು ಡಾ॥ ಅಂಬೇಡ್ಕರ್ ಹಾಸ್ಟಲ್‌ನಲ್ಲಿರುವ ಮುಂದಾಳು ಯುವಕರನ್ನು ಕರೆಯಿಸಿ ದಲಿತ ಸಂಘರ್ಸ ಸಮಿತಿ ಮಾಡುವ ವಿಚಾರಕ್ಕಾಗಿ ಸಭೆ ಕರೆದರೂ, ಅದರಲ್ಲಿ ಜಿಲ್ಲಾ ಸಂಚಾಲಕರಾಗಿ ಶ್ರೀ ಡಿ.ಜಿ. ಸಾಗರ ಜಿಲ್ಲಾ ಸಂಘಟನಾ ಸಂಚಲಕರಾಗಿ ಶ್ರೀ ಬಸಣಾಸಿಂಗೆ, ಜಿಲ್ಲಾ ಖಜಾಂಚಿಯಾಗಿ ಶ್ರೀ ಶಾಂತಪ್ಪ ಹಾದಿಮನಿಯವರು ಸರ್ವ ಸಮ್ಮತದಿಂದ ಒಪ್ಪಿಗೆ ಪಡೆದು ಇನ್ನೂ ಕಾರ್ಯಕಾರಿ ಸಮಿತಿಯನ್ನಾಗಿ 11 ಜನ ಒಂದು ಕಮಿಟಿ ಮಾಡಲಾಯಿತು. ಈ ವಿಷಯವನ್ನು ಅಂದಿನ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಯಿತು. ಇಂತಹ ಒಂದು ದಲಿತ ಸಂಘಟನೆಯು ಪ್ರತಿ ರವಿವಾರ ಮಂಗಳೂರ ವಿಜಯರವರು ವಾಸವಾಗಿರುವ ಕಲ್ಯಾಣಕರ ಬಿಲ್ಡಿಂಗನಲ್ಲಿ ರೂ.ನಂ. 31 ರಲ್ಲಿ ಸಭೆ ಸೆರಿ ಹೋರಾಟದ ಹಾಡುಗಲನ್ನು ಕಲಿಯುವಂತೆ ಪ್ರೋತ್ಸಾಹ ನೀಡುತ್ತಿದ್ದರು. ಈ ಸಭೆಯಲ್ಲಿ ಹಲವಾರು ರೀತಿಯ ಹೋರಾಟದ ಹಾಡುಗಳು ಹಾಗೂ ಹೋರಾಟದ ಮಾರ್ಗಗಳ ಬಗ್ಗೆ ಚರ್ಚಿಸಲಾಗು ತಿತ್ತು, ಜೊತೆಗೆ ಹಲವಾರು (ಕ್ರಾಂತಿಕಾರಿ) ಹಾಡುಗಳನ್ನು ಸಹ ಹಾಡಲಗುತ್ತಿತ್ತು. ಅದರಲ್ಲಿ ದಲಿತ ಕವಿ ಸಿದ್ದಲಿಂಗಯ್ಯನವರು ಬರೆದ ಹಾಡುಗಳನ್ನು ಮನದಲ್ಲಿ ಆಡಿಕೊಳ್ಳುತ್ತಿದ್ದು. ಇದೇ ಸಮಯದಲ್ಲಿ ಶ್ರೀ ಎಸ್.ಪಿ. ಸುಳ್ಳದ್ ಹಾಗೂ ಅಂಬಣ್ಣಾ ಜೀವಣಗಿ ನೇತೃತ್ವದಲ್ಲಿ ದಲಿತ ಕಲಾ ಮಂಡಳಿ ರಚಿಸಲಾಯಿತು. ಹೀಗೆ ಕಲಬುರ್ಗಿ ಜಿಲ್ಲೆಯಲ್ಲಿನ ದಲಿತ ಸಂಘಟನೆಯು ನಂತರ ಮುಂದೇ ಕೆಲವೇ ದಿವಸಗಳಲ್ಲಿ ಗುಲಬರ್ಗಾ ನಗರದ ವಿದ್ಯಾರ್ಥಿಗಳು ವಾಸವಾಗಿರುವ ಹಾಸ್ಟೆಲ್‌ಗಳಿಗೆ ಪ್ರತಿ ರವಿವಾರ ಬೇಟಿ ಕೊಡುದ ಕೆಲಸ ಪ್ರಾರಂಭವಾಯಿತು. ಈ ಕಾರ್ಯದಲ್ಲಿ ಡಿ.ಜಿ.ಸಾಗರ, ಬಸಣ್ಣ ಸಿಂಗೆ, ದೇವಿಂದ್ರ ಶೆಳ್ಳಗಿ, ಶಾಂತಪ್ಪಾ ಹಾದಿಮನಿ ಅಂಬಣ್ಣಾ ಭೀಮಾಶಂಕರ ಅಳಕೇರಿ, ಹಣಮಂತರಾಯ ದೊಡ್ಡಮನಿ, ಮಂಗಳೂರು ವಿಜಯ ದೇವಿಂದ್ರ ಸಾಗರ ಮುಂತಾದ ವರು ಇರುತ್ತಿದ್ದರು.

ಹೀಗೆ ಪ್ರತಿ ಹಾಸ್ಟಲ, ತಿರುಗಾಡಿ ಸಂಗದ ಪರಿಚಯ, ಪದಾಧಿಕಾರಿಗಳ ಪರಿಚಯ ಬೆಳೆಯುತ್ತ ಜಲ್ಲಾ ಮಟ್ಟದ ವಿಚಾರ ಸಂಕೀರಣ ಮಾಡುವ ಮಟ್ಟದಲ್ಲಿ ಬೆಳೆಯಿತು.

ಮೊದಲಿಗೆ ಜಗತ ವೃತ್ತದಲ್ಲಿರುವ ಮಾಹಡಗಿ ಮಲಕಪ್ಪ ಅವರು ಬಳಸದೇ ಇದ ದೂಳಿನಿಂದ ಕೂಡಿದ ಹಳೆ ಬಿಲ್ಡಿಂಗ್‌ನ್ನು ಪಡೆದು ಸ್ವಚ್ಚಗೊಳಿಸಿ ಸಭೆ ನಡೆಸುತ್ತಿದ್ದರು.

ಪ್ರಾರಂಭದಲ್ಲಿ ಆರ್.ಪಿ.ಐ.ನ ನಾಯಕರಾದ ಶ್ರೀ ಶಿವರಾಮ ಮೋಘಾ ಶ್ರೀ ಹಣಮಂತರಾವ ಸೇಡಂ, ಶ್ರೀ ರೇವಣಸಿದ್ದಪ್ಪ ಹರಸೂರ, ಬೆಂಗಳೂರಿನಿಂದ ಪ್ರೊ॥ ಬಿ.ಕೃಷ್ಣಪ್ಪ ಎಮ್.ಡಿ. ಗಂಗಯ್ಯ ಡಾ॥ ಸಿದ್ದಲಿಂಗಯ್ಯ ಮಂಗಳೂರ ವಿಜಯ ಡಾ॥ ಚೆನ್ನಣ್ಣಾ ವಾಲಿಕರ, ದೇವನೂರ ಮಹಾದೇವ್ ಮುಂತಾದವರು ವಿಚಾರ ಸಂಕೀರಣದ ಮುಖ್ಯ ಅತಿಥಿಗಳಾಗಿದ್ದರು. ಇದರಿಂದ ದಲಿತ ಸಂಘರ್ಷ ಸಮಿತಿ ಎನ್ನುವುದು ಒಂದು ಜಿಲ್ಲೆಯ ಬೃಹತ ಸಂಘಟನೆಯಾಗಿ ನಿರ್ಮಾಣವಾಯಿತು.

ಹೀಗೆ ಉದಯಿಸಿದ ಸಂಘಟನೆಯು ಕಲಬುರ್ಗಿ ಜಿಲ್ಲೆಯಲ್ಲಿ ತನ್ನದೆಯಾದ ಹಲವಾರು ಅಸ್ಪೃಶ್ಯತಾ ವಿರೋಧಿ ಚಳುವಳಿಗಳನ್ನು ಕೈಗೊಳ್ಳವುದರ ಮೂಲಕ ಯಾವ ರೀತಿಯಲ್ಲಿ ದಲಿತ ಹಾಗೂ ಅಸ್ಪೃಶ್ಯತಾ ಸಮುದಾಯದ ಸಮಾಜದಲ್ಲಿ ಯಾವ ರೀತಿಯಿಂದ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಪರಿವರ್ತನೆಯಾಗಿದೆಂಬು ದನ್ನು ತಿಳಿಸುವುದೇ ಮುಖ್ಯ ಉದ್ದೇಶವಾಗಿದೆ.

ದಲಿತ ಚಳುವಳಿಯು ರಾಜ್ಯ ಮಟ್ಟದಿಂದ ಕಲ್ಬುರ್ಗಿ ಜಿಲ್ಲೆಗೆ ಆಗಮಿಸಿ

ಬಹುಬೆಗನೆ ತನ್ನದೆ ಆದ ಹೋರಾಟದ ಮಾರ್ಗಗಳನ್ನು ಅರಿತುಕೊಂಡು ಮುನ್ನಡೆದಿದ್ದು ಒಂದು ಐತಿಹಾಸಿಕ ವಿಚಾರವಾಗಿದೆ. ಪ್ರಾರಂಭದಿಂದಲು ಕಲ್ಬುರ್ಗಿ ಜಿಲ್ಲೆಯಲ್ಲಿನ ದಲಿತ ಚಳುವಳಿಯು ಜಿಲ್ಲೆಯ ದಲಿತರ ಸಾಮಾಜಿಕ ಜೀವನದಲ್ಲಿ ಸಾಕಷ್ಟು ಬದಲಾವಣೆಗಳನ್ನು ತರುವಲ್ಲಿ ಶ್ರಮಿಸಿತ್ತು, ದಲಿತ ಚಳುವಳಿಯು ಪ್ರಾರಂಭಕ್ಕಿಂತ ಪೂರ್ವದಲ್ಲಿ ಮತ್ತು ಪ್ರಾರಂಭ ನಂತರ ದಲಿತರ ಸ್ಥಿತಿಗತಿಗಳು ಶೂಚನೆಯವಾಗಿದ್ದು. ಅಸ್ಪೃಶ್ಯತೆಯನ್ನುವುದು ಸಾಮಾಜದಲ್ಲಿ ಸಾಕಷ್ಟು ಆಚರಣೆಯ್ಲಲಿದ್ದು, ಇಂತಹ ಅಸ್ಪೃಶ್ಯತೆ ವಿರೂಧ ಹುಟ್ಟಿಕೊಂಡ ಚಳುವಳಿಯೇ ದಲಿತ ಚಳುವಳಿಯಾಗಿ ಮುಂದೆ ರಾಜ್ಯಮಟ್ಟದಲ್ಲಿ ತನ್ನದೆಯಾದ ಪ್ರಭಾವವನ್ನು ಬೀರುವುದರ ಮೂಲಕ ರಾಜ್ಯ ಮಟ್ಟದ ಸ್ಥಾನ ಮಾನಗಳ ಪಡೆದುಕೊಂಡು ಬೃಹತ ಸಂಘಟನೆಯಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಕಲ್ಬುರ್ಗಿ ಜಿಲ್ಲೆಯಲ್ಲಿನ ದಲಿತ ಸಮುದಾಯದಲ್ಲಿ ಸಾಮಾಜಿಕ, ಆರ್ಥಿಕ, ಜೀವನದಲ್ಲಿ ಸಾಕಷ್ಟು ಬದಲಾವಣೆಗಳನ್ನು ತರುವಲ್ಲಿ ಶ್ರಮೀಸಿತ್ತು.

ಕಲ್ಬುರ್ಗಿ ಜಿಲ್ಲೆಯಲ್ಲಿ ಅನೇಕ ಹಳ್ಳಿಗಳಲ್ಲಿ ಅಸ್ಪೃಶ್ಯತೆ ಮೂಡನಂಬಿಕೆಗಳು ದೇವದಾಸಿ ಪದ್ಧತಿಗಳು ಮತ್ತು ಇನಿತರ ಅನಿಷ್ಟ ಪದ್ಧತಿಗಳು ಗಮನಿಸಿ ದಲಿತ ಚಳುವಳಿಗಳು ನೇರವಾಗಿ ಅಂತಹ ಗ್ರಾಮಗಳಿಗೆ ಬೇಟ್ಟಿನಿಡಿ ಅವುಗಳ ವಿರೂಧ ಹೋರಾಟವನ್ನು ಮಾಡುವುದರ ಮೂಲಕ ದಲಿತ ಸಮುದಾಯದಲ್ಲಿನ ಜಾಗೃತೆಗಾಗಿ ಶ್ರಮೀಸಿದವು ಮತ್ತು ದಲಿತ ಸಮುದಾಯಕ್ಕೆ ಸಂವಿಧಾನಾತ್ಮಕ ಸವಲತ್ತುಗಳನ್ನು ಒದಗಿಸಕೊಡುವಲ್ಲಿ ಶ್ರಮೀಸುತ್ತಿವೆ. ಇಂತಹ ಬೃಹತ ದಲಿತ ಚಳುವಳಿಗಳು ರಾಜ್ಯಾದಾದ್ಯಂತ ಮತ್ತು ಜಿಲ್ಲೆಗಳಲ್ಲಿದ್ದರು ಕೂಡಾ ಇನ್ನೂ ಹಲವಾರು ಕಡೆಗಳಲ್ಲಿ ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತವಾಗಿದ್ದು, ದಲಿತರ ಮೇಲೆ ದೌರ್ಜಗಳು ನಡೆಯುತ್ತಿದ್ದನ್ನು ಗಮನಿಸಿದರೆ ದಲಿತ ಚಳುವಳಿಗಳು ಪ್ರಸ್ತುತ ಸ್ಥಿತಿಯಲ್ಲಿ ಇನ್ನೂ ಜಾಗೃತಗೊಳ್ಳುವ ಅನಿವಾರ್ಯತೆ ಎದುರಾಗಿದೆಯಂದು ಹೇಳಬಹುದು.

ಆಕಾರ ಗ್ರಂಥಗಳು

1. ಎಸ್.ಪಿ.ಸುಳ್ಳದ್ : ಅಸ್ಪೃಶ್ಯನ ಭವಾನುಭವ
2. ಮುನಿವೆಂಕಟಪ್ಪ : ದಲಿತ ಚಳುವಳಿ ಒಂದು ಅವಲೋಕನ, ವಿಚಾರವಾದಿ ಪ್ರಕಾಶನ, ಮೈಸೂರು–1998
3. ಡಾ॥ ಎಚ್.ಟಿ. ಪೋತೆ : 'ದಲಿತ ಚಳುವಳಿ', ಅಂಬು ಪ್ರಕಾಶನ, ಆನಂದ ರಾಯಚೂರು–1999
4. ತೇಲ್‌ತುಂಬ್ಡೆ : ಅಂಬೇಡ್ಕರೋತ್ತರ ದಲಿತ ಸಂಘರ್ಷ, ಮುದ್ರಣ 2009
5. ಡಾ॥ ಎಸ್. ಚಿನ್ನಸ್ವಾಮಿ ಸೋಸಲೆ : ದಲಿತ ಬದುಕು ಮೇಲುಕು, ಕನ್ನಡ ವಿಶ್ವವಿದ್ಯಾಲಯ, ಹಂಪಿ–2012.
6. ಡಾ॥ ಎಸ್. ಚಿನ್ನಸ್ವಾಮಿ ಸೋಸಲೆ : ದಲಿತರ ಮೇಲೆ ದೌರ್ಜನ್ಯ ಒಂದು ನೋಟ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2006
7. ಟಿ.ಆರ್.ಚಂದ್ರಶೇಖರ : 'ದಲಿತ ಅಧ್ಯಯನ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಆರ್.ಟಿ.ವಿಠ್ಠಲ್ ಮೂರ್ತಿ : ದಲಿತ ಚಳುವಳಿಯ ನಾಳೆಗಳು, ಪ್ರಭೆ ಪ್ರಕಾಶನ, ಬೆಂಗಳೂರು–2005
9. ಡಾ॥ ದಿವಾಕರ : ಜಾಗತೀಕರಣ ಮತ್ತು ದಲಿತರು, ಕನ್ನಡ ವಿಶ್ವವಿದ್ಯಾಲಯ, ಹಂಪಿ–1999
10. ಚಂಡಾಳ : ಕರ್ನಾಟಕ ದಲಿತ ಚಳುವಳಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್, ಚೈತ್ರಾ ಪ್ರಕಾಶನ, ಬೆಂಗಳೂರು–2005
11. ಪ್ರೋ. ಲಕ್ಷ್ಮಣ ತೇಲಗಾವಿ : ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ–1999

ಲೋಹಿಯಾ ಅವರ ಚಿಂತನೆಗಳಲ್ಲಿ ಜನ ಸಾಮಾನ್ಯರು

* ಪ್ರೊ.ಜಿ.ಟಿ.ರಾಮಚಂದ್ರಪ್ಪ, ** ಹೇಮಾವತಿ, **ಸತೀಶ್. ಆರ್

* ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ** ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಸಮಾಜವಾದಿ ಸಿದ್ಧಾಂತದ ಮೂಲಕ ರಾಷ್ಟ್ರೀಯ ರಾಜಕಾರಣಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡವರು ಲೋಹಿಯಾರವರು. ಸಮಾಜ ಕೇಂದ್ರಿತ ನೆಲೆಯಲ್ಲಿ ಸಮಾಜವನ್ನು ನೋಡುವ ಮತ್ತು ಕಟ್ಟುವ ದೂರದೃಷ್ಟಿತ್ವದ ಮನೋಭಾವದ ಅಪರೂಪ ವ್ಯಕ್ತಿತ್ವ ಅವರದು. ಪ್ರಜಾ ಪ್ರಭುತ್ವದ ಅಹಂಕಾರ ಮತ್ತು ಜಡತೆಗಳನ್ನು ವಿರೋಧಿಸುತ್ತಲೆ ಮಾನವ ಕಲ್ಯಾಣದ ಕನಸು ಕಂಡವರು ಮತ್ತು ಸಾಕಾರಗೊಳಿಸಲು ಸಕ್ರಿಯವಾಗಿ ತೊಡಗಿಸಿಕೊಂಡವರು. ಯಜಮಾನ ಸಂಸ್ಕೃತಿಯನ್ನು ತಮ್ಮ ವಿರೋಧಿ ನಿಲುವಾಗಿ ಹೊಂದಿದಂತಹ ಲೋಹಿಯಾರವರು ಒಬ್ಬ ಸಮಾಜವಾದಿಗೆ ಇರಬೇಕಾದ ಅಗತ್ಯ ಗುಣಗಳಲ್ಲಿ ಪ್ರಭುತ್ವ ಮತ್ತು ಯಜಮಾನಿಕೆಗಳ ವಿರುದ್ಧ ನಿಲ್ಲುವುದು ಎಂದೇ ಭಾವಿಸಿದ್ದರು. ಲೋಹಿಯಾ ಅನ್ಯಾಯದ ವಿರುದ್ಧ ಸದಾ ಸಾಮಾನ್ಯರನ್ನು ರಕ್ಷಿಸುವ ಸಾಂವಿಧಾನಿಕ ಗುಣವುಳ್ಳಂತಹವರು.

ಜನಪರ ರಾಜಕಾರಣ ಪ್ರಭುತ್ವದ ಜೊತೆ ರಾಜಿ ಮಾಡಿಕೊಳ್ಳದೆ ಜಾತಿವ್ಯವಸ್ಥೆ, ಆರ್ಥಿಕ ವಿಕೇಂದ್ರಿಕರಣ, ಲಿಂಗ ಅಸಮಾನತೆ, ಬಂಡವಾಳಶಾಹಿ ವ್ಯವಸ್ಥೆಯನ್ನು ಬಹುವಾಗಿ ಟೀಕಿಸಿದವರು ಮತ್ತು ವಿರೋಧಿಸಿದವರು. ಸಾಮಾಜಿಕ ವಿಶಾಲತೆ ಮಾನವತೆಯ ಸಾವಯವ ಸಂಬಂಧದ ಸ್ವರೂಪವನ್ನು ಪಡೆದುಕೊಳ್ಳುತ್ತದೆ ಎಂಬ ಸಮಾಜವಾದಿ ನಿಲುವಿನಲ್ಲಿ ಜನಸಾಮಾನ್ಯರನ್ನು ಮನುಷ್ಯತ್ವದ ಮತ್ತು ಮಾನವೀಯತೆಯ ನೆಲೆಯಲ್ಲಿ ರಾಜಕೀಯ ಹೇಗೆ ನೋಡಬೇಕೆಂಬ ಎಂಬ ಮಾರ್ಗಸೂಚಿಗಳನ್ನು ಹಾಕಿಕೊಟ್ಟವರು. ಲೋಹಿಯಾರವರ ಚಿಂತನೆಗಳು ಕೇವಲ ರಾಜಕೀಯ ಸಿದ್ಧಾಂತಗಳಿಗೆ ಮೀಸಲಾದವುಗಳಲ್ಲ, ಬದಲಾಗಿ ಸ್ತ್ರೀಪರ, ದಲಿತಪರ, ಶೋಷಿತಪರ ಮತ್ತು ಜನಸಾಮಾನ್ಯಪರ ಹಪಾಹಪಿಸುವಂತಹವು.

ಸ್ವಾತಂತ್ರ ಭಾರತದಲ್ಲಿನ ಪ್ರಭುತ್ವಗಳು ವಸಾಹತುಶಾಹಿ ಆಡಳಿತಕ್ಕಿಂತ ಭಿನ್ನವಾಗಿರಲಿಲ್ಲ, ಜನಸಾಮಾನ್ಯರನ್ನು ಆಳಲು ವಸಾಹತುಶಾಹಿ ಬಳಸಿದಂತಹ ಮಾರ್ಗೋಪಾಯಗಳನ್ನೆ ವಸಾಹತ್ತೋತ್ತರ ಕಾಲದ ಪ್ರಭುತ್ವಗಳೂ ನಿರಂಕುಶವಾಗಿ ಮುಂದುವರೆಸಿಕೊಂಡು ಹೋಗಿವೆ ಎಂಬ ತಮ್ಮ ತೀಕ್ಷ್ಣ ನುಡಿಗಳಿಂದ ವ್ಯಂಗ್ಯ, ವಿಡಂಬನೆಯನ್ನು ಮಾಡುತ್ತಿದ್ದರು.

ಸಮಾಜವಾದಿ ಸಿದ್ಧಾಂತ ರೈತ ಚಳವಳಿ, ಕೃಷಿ ಕೂಲಿಗಳ ಮತ್ತು ಗೇಣಿದಾರ ರೈತರ ಹಿತ, ಭೂ ಹೀನರ ಸಾಮಾಜಿಕ ಹಿತ ಕಾಯುವ ನೆಲೆಯಲ್ಲಿಯೇ ರೂಪಿಸಿಕೊಂಡಂತಹದ್ದು ಎನ್ನುವ ಬಹು ದೊಡ್ಡ ಆಲೋಚನಾಪರತೆ ಲೋಹಿಯಾರವರದ್ದಾಗಿತ್ತು. ಇಂತಹ ಸಾಮಾಜಿಕ ನಿಲುವುಗಳನ್ನೇ ತಮ್ಮ ಸಾಂಸ್ಕೃತಿಕ ಬದುಕಾಗಿ ಹೊಂದಿದ್ದಂತಹ ಲೋಹಿಯಾರವರು ಜನಸಾಮಾನ್ಯರ ಹಿತ ಕಾಯುವಲ್ಲಿ ರೂಪಿಸಿಕೊಂಡಿದ್ದಂತಹ ತತ್ವಸಿದ್ಧಾಂತಗಳನ್ನು ರಾಜಕೀಯ ನೆಲೆಯಲ್ಲಿ ಮತ್ತು ಸಮಾಜವಾದಿ ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸುವ ಆಶಯ ಮತ್ತು ಧೋರಣೆ ಈ ಅಧ್ಯಯನದ್ದಾಗಿದೆ.

ಬುದ್ಧನ ಕರುಣೆ, ಪೈಗಂಬರರ ಪ್ರೀತಿ ಶಂಕರರ ತೀಕ್ಷ್ಣಮತಿ ಲೋಹಿಯಾರವರ ತ್ರಿನೇತ್ರಗಳಾಗಿದ್ದವು. ಅಧಿಕಾರದಾಹಿಗಳಿಗೆ, ಆಳುವ ಪ್ರಭುಗಳಿಗೆ ಸಿಂಹ ಸ್ವಪ್ನವಾಗಿದ್ದಂತೆ ಬಡವರಿಗೆ, ಧೀನದಲಿತರಿಗೆ, ತುಳಿತಕ್ಕೊಳಗಾದವರಿಗೆ ಭರವಸೆಯ ಬೆಳಕಾಗಿದ್ದರು.

ಲೋಹಿಯಾರವರ ದೃಷ್ಟಿಯಲ್ಲಿ ಮಹಿಳೆಯರು, ದಮನಿತರು, ಅಸ್ಪೃಶ್ಯಕ್ಕೊಳಗಾದವರು, ರೈತರು ಸಾಮಾಜಿಕ ಸಂಗತಿಗಳಾಗಿ ಮತ್ತು ಅವುಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸದಾ ತಮ್ಮ ಪ್ರಗತಿಪರ ಚಿಂತನೆಗಳನ್ನೊಳಗೊಂಡಿದ್ದರು.

ಅಸಾಧಾರಣ ಮಾನವ ಪ್ರೇಮಿಯಾಗಿದ್ದ ಡಾ.ರಾಮಮನೋಹರ ಲೋಹಿಯಾ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದರು. ಮಹಾತ್ಮ ಗಾಂಧಿಯವರ ನೇರ ಶಿಷ್ಯನೂ, ಮಾನಸ ಪುತ್ರನೂ ಆಗಿದ್ದ ಅವರು ತಮ್ಮ ಬದುಕಿನ ಉದ್ದಕ್ಕೂ ಬಡವರ, ಎಲ್ಲಾ ಬಗೆಯ ಅಪಮಾನಿತ ಜನವರ್ಗದ ಅಂತರಾಳದ ದನಿಯಾಗಿ ಬಾಳಿದವರು. ಶ್ರೇಷ್ಠ ಸಮಾಜವಾದಿ ಚಿಂತಕರಾದ ರಾಮಮನೋಹರರು ಭರತ ಖಂಡದ ಒಟ್ಟು ಸಾಂಸ್ಕೃತಿಕ ಬದುಕಿನಲ್ಲಿ ಅತ್ಯಂತ ಸಂವೇದನಾಶೀಲ ಚಟುವಟಿಕೆಗಳ ಮೂಲಕ ಮಹತ್ವದ ಪಾತ್ರ ವಹಿಸಿದವರು (ಲೋಹಿಯಾ ವರ್ತಮಾನದ ಮುಖಾಮುಖಿ-ಜೀವನ ಪ್ರೀತಿಯ ಹರಿಕಾರ ಮಿತ್ರ- ಕಾಳೇಗೌಡ ನಾಗವಾರ, ಪುಟ-8)

ಸ್ತ್ರೀ ಪುರುಷ ಸಮಾನತೆ, ವರ್ಣಭೇದವನ್ನು ಅನುಸರಿಸಿದ ಅಸಮಾನತೆಯ ನಾಶ, ಹುಟ್ಟಿನ ಆಧಾರವನ್ನು ಅನುಸರಿಸುವ ಅಸಮಾನತೆಯ ನಿವಾರಣೆ, ವಿದೇಶಿ ದಬ್ಬಾಳಿಕೆಯ ಅಂತ್ಯ ಹಾಗೂ ವಿಶ್ವ ಸರ್ಕಾರದ ಸ್ಥಾಪನೆ, ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆಯ ಸಾಧನೆ, ಶಸ್ತ್ರಾಸ್ತ್ರಗಳ ಬಳಕೆಯ ಮೇಲಿನ ಹತೋಟಿ ಮತ್ತು ಸಾರ್ವಜನಿಕ ಕಾನೂನು ಭಂಗ ತತ್ವದ ಪ್ರತಿಷ್ಠಾಪನೆ, ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಆಗುವ ಅತಿಕ್ರಮಣದ ವಿರುದ್ಧ ಹೋರಾಟ ಮುಂತಾದ ಅಂಶಗಳ ಬಗ್ಗೆ ನಾವು ಕಟ್ಟೆಚ್ಚರದಿಂದ ಇರಬೇಕಾದುದ್ದನ್ನು ಲೋಹಿಯಾ ಮನಗಂಡಿದ್ದರು.

ಲೋಹಿಯಾರವರು ಸ್ವಾಭಿಮಾನದ ಹೆಣ್ಣನ್ನು ಇಷ್ಟಪಡುತ್ತಿದ್ದರು, ಮೇಲೆ ಬಿದ್ದು ವರದಕ್ಷಿಣೆ ಕೊಡುವವರನ್ನು ನೀಚರೆಂದು ಕರೆಯುವುದರ ಮೂಲಕ ವರದಕ್ಷಿಣೆ ಎಂಬ ಸಾಮಾಜಿಕ ಪಿಡುಗಿನ ವಿರುದ್ಧ ಧ್ವನಿ ಎತ್ತಿದವರು.

ಭಾರತೀಯ ಹೆಣ್ಣು ದ್ರೌಪದಿಯಂತಿರಬೇಕು ಏಕೆಂದರೆ ಆಕೆ ಎಂದೂ ಬೌದ್ಧಿಕ ಮಟ್ಟದಲ್ಲಿ ಯಾವ ಗಂಡಿಗೂ ಕಡಿಮೆಯೆನಿಸಿದವಳಲ್ಲ. ಹೆಣ್ಣು ತುಂಬಿದ ಗೋಣಿಚೀಲಗಳಾಗಬಾರದು, ಸಮಯ ಬಂದರೆ ಸಮಾಜದ ಕಣ್ಣೇ ಆಗಿರುವ ಈಕೆ ಗಂಡನ್ನೆ ಗೋಣಿಚೀಲದಂತೆ ತನ್ನ ಹೆಗಲ ಮೇಲೆ ಹೊತ್ತು ನಿಶ್ಚಿಂತೆಯಂತೆ ಸಾಗಬಲ್ಲ ಶಕ್ತಿಯಾಗಿರಬೇಕು .

ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯು ಸಕ್ರಿಯವಾಗಿ ಪಾತ್ರವಹಿಸಬೇಕು. ಮಹಿಳೆಯ ಬಗ್ಗೆ ಗಾಢವಾದ ಸಹಾನುಭೂತಿ ಮತ್ತು ಪ್ರೋತ್ಸಾಹವಿತ್ತು. ಬಹುದೂರದಿಂದ ನೀರನ್ನು ಹೊತ್ತು ತರುವ ಶೌಚಾಲಯ ವ್ಯವಸ್ಥೆಯಿಲ್ಲದೆ ಸದಾ ಹೊಗೆಯನ್ನು ಹೊಮ್ಮಿಸುವ ಗ್ರಾಮೀಣ ಮಹಿಳೆಯರ ಬಗ್ಗೆ ಅತೀಯವಾದ ಆಸ್ಥೇಯವನ್ನು ಹೊಂದಿದ್ದವರು.

ಜಾತಿ ವಿನಾಶದ ಬಹು ದೊಡ್ಡ ಕನಸ್ಸನ್ನು ಕಟ್ಟಿಕೊಂಡವರು ಲೋಹಿಯಾ. ಆ ಮೂಲಕ ಜಾತಿಯ ನಿರ್ಮೂಲನೆಗಾಗಿ ಸಾಮಾಜಿಕ ಕ್ರಾಂತಿಯನ್ನೇ ಮಾಡಿದವರು. ಈ ರಾಷ್ಟ್ರದಲ್ಲಿ ಶೂದ್ರನೂ, ದ್ವಿಜನೂ ಮೂಲಭೂತವಾಗಿ ಅರೆಜೀವಿಯಾಗಿ ಬಿದ್ದಿದ್ದಾರೆ. ಶೂದ್ರನನ್ನು ದ್ವಿಜನೂ, ದ್ವಿಜನನ್ನೂ ಶೂದ್ರನೂ ಮೇಲಕ್ಕೆತ್ತಬೇಕಾಗಿದೆ. ಈತನಕ ಆಗಿರುವ ಸುಧಾರಣಾವಾದಿ ಆಂದೋಲನಗಳನ್ನು ಸನಾತನ ಹಿಂದೂ ವ್ಯವಸ್ಥೆ ಆಪೋಶನ ತೆಗೆದುಕೊಂಡಿದೆ. ಹಾಗು ಜಾತಿವಾದದ ಭಯಂಕರ ರೂಪ ಈಗಲೂ ಉಳಿದು ನಿಂತಿದೆ. ಇದು ಕೊಳೆತು ಎಷ್ಟೊಂದು ಆಳಕ್ಕೆ ಇಳಿದಿದೆ ಎಂದರೆ ಇದರ ಮೇಲೆ ದೊಡ್ಡ ಕಲ್ಲನ್ನು ಹಾಕಿದರೂ ಅದು ಈ ಕೊಳೆ ಕೆಸರಿನ ಗರ್ಭದಲ್ಲಿಳಿದು ಎಲ್ಲಿಗೆ ಹೋಗುತ್ತದೆ ಎಂದು ತಿಳಿಯುವುದೇ ಇಲ್ಲ. ಎಲ್ಲಿಯತನಕ ಈ ಆಳದಲ್ಲಿನ ಕೊಳೆ ಕೆಸರೆಲ್ಲ ಒಣಗಿ ಶುದ್ಧವಾಗುವುದಿಲ್ಲವೋ ಅಲ್ಲಿಯತನಕ ಭಾರತದಲ್ಲಿ ಜಾತಿಪದ್ಧತಿ ನಾಶವಾಗುವುದಿಲ್ಲ. ಎನ್ನುವ ನಿಲುವಿನ ಧೋರಣೆಯನ್ನು ಹೊಂದಿದ್ದರು.

ರಾಷ್ಟ್ರ ರಾಜಕಾರಣದಲ್ಲಿ ಲೋಹಿಯಾ ಸದಾ ಬಂಡವಾಳಶಾಹಿ ಆಡಳಿತದ ಬಗ್ಗೆ ವಾಚಾಳಿತನವನ್ನು ಪ್ರಯೋಗಿಸುತ್ತಿದ್ದರು. ಪ್ರಜಾಪ್ರಭುತ್ವದಲ್ಲಿ ಸಾಮಾನ್ಯನೇ ಭಗವನ್ ಮಾನ್ಯನಾಗಬೇಕೆಂಬ ಜೀವನ ದೃಷ್ಟಿ ಹೊಂದಿದ್ದವರು. ಲೋಕಸಭೆಯಲ್ಲಿನ ಲೋಹಿಯಾರವರ ಭಾಷಣಗಳು ಜನಮಾನಸಕ್ಕೆ ವೈಚಾರಿಕ ಗ್ರಾಸವಾದಂತಹವುಗಳು. ನೆಹರೂರವರ ಕುತಂತ್ರದ ರಾಜಕಾರಣವನ್ನು ವಿರುದ್ಧಿಸುತ್ತಾ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು.

ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ 16ರಿಂದ 18 ಕೋಟಿ

ಭಾರತೀಯರು ಪ್ರತಿದಿನ ಮೂರು ಇಲ್ಲಾ ನಾಲ್ಕಾಣೆಯಲ್ಲೆ ಬದುಕು ನಿರ್ವಹಿಸುತ್ತಿದ್ದರೆಂದು ಈ ಸಂಬಂಧ ಪ್ರದಾನಿ (ನೆಹರು) ಮೂರ್ನಾಲ್ಕು ಆಣೆ ಅಲ್ಲ ಹದಿನೈದು ಆಣೆ ಎಂದಿದ್ದರು.ಇದು ಸುಳ್ಳು ಹಾಗೂ ತಪ್ಪು ದಾರಿಗೆಳೆಯುವ ಹೇಳಿಕೆಯೂಗಿಬೆಯೆಂದು ಲೋಹಿಯಾ ಸ್ಪಷ್ಟವಾಗಿ ಹೇಳಿದ್ದರು . ಈ ರೀತಿಯಾಗಿ ಜನಸಾಮಾನ್ಯರ ದೃಷ್ಟಿಕೋನದಲ್ಲೇ ರಾಜಕೀಯ ಚಿಂತನೆಗಳನ್ನು ಅಭಿವ್ಯಕ್ತಿಸುತ್ತಿದ್ದರು.

ಪ್ರತಿದ್ವನಿಯಾಗುತ್ತಿದೆ ಭೂಮಿ ಆಕಾಶ ಪಾತಾಳದಲ್ಲೆಲ್ಲ ಅಧಿಕಾರ ಬಿಟ್ಟುಕೊಡು ಜವಹರಲಾಲ್! ಆಹಾರ ಪದಾರ್ಥಗಳ ಬೆಲೆಯಲ್ಲಿ ಏರಿಳಿತಕ್ಕೆ ಸೇರಿಗೊಂದಾಣೆಯ ಮಿತಿಯಿರಲಿ! ಬಂಡವಾಳಶಾಹಿಗಳಿಗೆ ಹಲವಾರು ದಲಾಲರು ಎಲ್ಲಕ್ಕೂ ದೊಡ್ಡ ದಲಾಲ್ ಜವಹರಲಾಲ್! ಅಧಿಕಾರ ಬಿಟ್ಟುಕೊಡು ಈಗಿಂದೀಗ ಲಕ್ಷಗ್ರಸ್ಥ ಜವಹರಲಾಲ್! ಎಂದು ಕಾಂಗ್ರೆಸ್ ಸರ್ಕಾರವನ್ನು ಸದಾ ಎಚ್ಚರಗೊಳಿಸುತ್ತಾ ನೆಹರೂರವರ ಪಾಲಿಗೆ ಸಿಂಹಸ್ವಪ್ನವಾಗಿದ್ದರು. ಲೋಹಿಯಾ ರವರಿಗೆ ರಾಜಕೀಯ ಹಿತಾಸಕ್ತಿಗಿಂತ ರಾಷ್ಟ್ರದ ಜನತೆಯ ಸರ್ವಾಂಗೀಣ ಅಭಿವೃದ್ಧಿಯ ಹಿತವೆ ಮುಖ್ಯವಾಗಿತ್ತು.

ಈ ರಾಷ್ಟ್ರವನ್ನು ಬಂಡವಾಳಶಾಹಿಯಿಂದ ರಕ್ಷಿಸದೆ ಹೋದರೆ ಸಾಮಾನ್ಯ ಜನತೆ ಇವರ ಕಪಿಮುಷ್ಠಿಯಲ್ಲಿ ನಲುಗಿ ಹೋಗುವ ಸಾಧ್ಯತೆಗಳೇ ಹೆಚ್ಚೆಂದು ಭಾವಿಸಿದ್ದ ಲೋಹಿಯಾ ಸಮಾಜದ ಪರಿವರ್ತನೆಗೆ 3 ಉಪಾಯಗಳನ್ನು ಸಾತ್ವೀಕರಿಸಿದ್ದರು.

1. ಕಾನೂನು
2. ಪ್ರಚಾರ
3. ನಿದರ್ಶನ

ಈ ನಿಟ್ಟಿನಲ್ಲಿ ಅಧಿಕಾರವನ್ನೇ ಜೀವನ ಪ್ರವೃತ್ತಿಯನ್ನಾಗಿ ಹೊಂದಿರುವ ದನದಾಹಿಗಳಿಗೆ ಅಧಿಕಾರ ದಾಹದಿಂದ ತಪ್ಪಿಸಿಕೊಳ್ಳಲು ಒಂದು ಉಪಾಯವನ್ನು ಕಲ್ಪಿಸಿಕೊಟ್ಟಿದ್ದರು, ಅದೇನೆಂದರೆ ಸಂಯಮ

ಭಾರತ ಹಳ್ಳಿಗಳಿಂದ ಕೂಡಿದ ಬಡರಾಷ್ಟ್ರವಾಗಿದ್ದು ಅದರಲ್ಲೂ ದಮನಿತ ವರ್ಗಗಳು ಸಮಾಜದ ನಿಕೃಷ್ಟ ವ್ಯವಸ್ಥೆಯೊಳಗೆ ಬಂಧಿಸಲ್ಪಟ್ಟಿದ್ದಾರೆ, ಹಾಗಾಗಿ ಇವರನ್ನು ಸ್ವಾಸ್ತ ಪ್ರಜೆಗಳನ್ನಾಗಿ ಪರಿವರ್ತಿಸಲು ಈ ರಾಷ್ಟ್ರದಲ್ಲಿ ಬಡತನ ನಿರ್ಮೂಲನೆ ಶೀಘ್ರವಾಗಿ ಆಗಲೇ ಬೇಕಾದ ತುರ್ತು ಸಂದರ್ಭವನ್ನು ಅರಿತಿದ್ದರು. ಸರ್ಕಾರಗಳು ಈ ನಿಟ್ಟಿನಲ್ಲಿ ಬಡತನ ನಿರ್ಮೂಲನೆ ಮಾಡಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸುವ ಅಗತ್ಯತೆಗಳನ್ನು ದಾಖಲಿಸಿದ್ದಾರೆ.

1. ಕೃಷಿ ಮತ್ತು ಕೈಗಾರಿಕಾ ಬೆಳೆಗಳ ನಡುವಿನ ಸಮತೋಲನದ ಆಧಾರದ ಮೇಲೆ ಬೆಲೆಗಳ ಇಳಿತಾಯ.
2. ಯಾರ ಆದಾಯವು ಅಥವಾ ಸಂಬಳವೂ ಮಾಹೆಯಾನ ರೂ.1000ಕ್ಕಿಂತ ಹೆಚ್ಚಾಗದ ಹಾಗೆ ಸರಳ ಜೀವನ ಮತ್ತು ತ್ಯಾಗವನ್ನು ಎಲ್ಲರೂ ಹಂಚಿಕೊಳ್ಳುವುದು.
3. ಸಣ್ಣ ಪ್ರಮಾಣದ ಯಂತ್ರಗಳ ಸಹಾಯದಿಂದ ಕೈಗಾರಿಕೀಕರಣ ರಾಜ್ಯದಿಂದ ಮತ್ತು ತಯಾರಕರ ವಿವಿಧೋದೇಶ ಸಹಕಾರ ಸಂಘಗಳಿಂದ ಅವುಗಳ ಸೃಷ್ಟಿ ಮತ್ತು ತಯಾರಿಕೆಗೆ ಉತ್ತೇಜನ ಕೊಡುವುದು.
4. ಪೂರ್ಣ ಉದ್ಯೋಗವಕಾಶ ಕಲ್ಪಿಸಲು ವಸತಿ ನಿರ್ಮಾಣ ಮತ್ತು ಇತರ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ಬಡತನವನ್ನು ಹಂತಹಂತವಾಗಿ ಕಳೆಯಬಹುದು ಎಂಬುದು ಲೋಹಿಯಾ ಅವರ ತತ್ವ ಸಿದ್ಧಾಂತಗಳಾಗಿದ್ದವು.

ರಾಷ್ಟ್ರದ ಪುಣ್ಯಭೂಮಿ ರಾಜಕೀಯ ಪ್ರಭುಗಳಿದ್ದಲ್ಲ ಬದಲಾಗಿ ಮಣ್ಣನ್ನೇ ಉಸಿರನ್ನಾಗಿ, ಅನ್ನವಾಗಿ, ಚಿನ್ನವಾಗಿ ಪೂಜಿಸುವ ರೈತನ ಹೊಣೆಗಾರಿಕೆಯದ್ದು, ಈ ನಿಟ್ಟಿನಲ್ಲಿ ಭೂಮಿಯ ನಿಜವಾದ ಒಡೆಯ ರೈತನೇ ಆಗಿರುವುದರಿಂದ ರೈತನ ಹಿತ ಕಾಯ್ದುದು ರಾಷ್ಟ್ರದ ಮನುಷ್ಯ ಧರ್ಮ ಎಂಬ ಧೋರಣೆ ಹೊಂದಿದ್ದ ಲೋಹಿಯಾ ರೀವಾದಲ್ಲಿ ನಡೆದ ಹಿಂದ್ ಕಿಸಾನ್ ಪಂಚಾಯತ್‌ನ ಅಧ್ಯಕ್ಷ ಭಾಷಣದಲ್ಲಿ ರೈತರ ಏಳ್ಗೆಗಾಗಿ 6 ಗುರಿಗಳನ್ನು ಹೇಳ್ತಾರೆ.

1. ಉಳುವವನಿಗೆ ಭೂಮಿ
2. ಸಾಗುವಳಿಯಾಗದ ಭೂಮಿಗೆ ಕೃಷಿ ಸೇನೆ
3. ಸಣ್ಣ ಸಣ್ಣ ಯಂತ್ರಗಳ ಮೂಲಕ ತಂತ್ರಜ್ಞಾನ
4.ಸಂಸಾರಕ್ಕೆ ಒಂದು ಹಸು ಮತ್ತು ಕನಿಷ್ಟ 30 ಎಕರೆ ಸಿಗುವಂತೆ ಭೂಮಿಯ ಮರು ವಿಂಗಡಣೆ
5. ಕೈಗಾರಿಕೆ ಮತ್ತು ಕೃಷಿ ಬೆಲೆಗಳಲ್ಲಿ ಸಮಾನತೆ
6. ಚತುಸ್ತಂಭ ರಾಷ್ಟ್ರ ಅಂದರೆ ಹಳ್ಳಿ, ಜಿಲ್ಲೆ, ಪ್ರಾಂತ, ಕೇಂದ್ರ ಈ ಆಧಾರದಲ್ಲಿ ಸಂವಿಧಾನ ರಚನೆಯಾಗಬೇಕು.

ಸಾಮುದಾಯಿಕ ಪ್ರಜ್ಞೆಯುಳ್ಳ ಸಮಾಜವಾದಿ ಒಲವು ಬಹುಜನರ ಹಿತ ಕಾಯುವ ಆಶಯವುಳ್ಳದ್ದು, ವಿಕೇಂದ್ರೀಕೃತ ನಿಲುವಿನಿಂದ ಅಡಿಯಿಂದ ಮುಡಿಯವರೆಗೆ ಅಧಿಕಾರ ಹಂಚಿಕೆ ಹಾಗೂ ಸಂಪತ್ತಿನ ವಿಲೇವಾರಿ ಇದರ ಪ್ರಮುಖ ನಿಲುವು ಸ್ವಾಭಿಮಾನ ಮತ್ತು ಅದನ್ನು ರೂಪಿಸುವ ಸ್ವಾಯತ್ತತೆಯ ಕಡೆಗೆ ಅದರ ಒಲವು.

1948-51ರ 3 ವರ್ಷಕಾಲಾವಧಿ ಕಾಗೋಡಿನ ಬಡಧೀವರು, ರೈತರು ತಮ್ಮ ಉಣ್ಣುವ ಅನ್ನದ ಹಕ್ಕಿಗಾಗಿ ಹೋರಾಟ ಆರಂಭಿಸಿದ್ದರು. ಗೇಣಿಗಾತ್ರದ ಕೊಳಗದ ಬಗ್ಗೆ ಆರಂಭವಾದ ಪ್ರತಿಭಟನೆ ಭೂಮಿಯ ಹಕ್ಕಿನ ಚಳವಳಿಯ ರೂಪ ಪಡೆದುಕೊಂಡದ್ದು ಆ ಹೊತ್ತಿಗಾಗಲೇವಿಸ್ಮಯ ಹಾಗು ಅದ್ಭುತ ಘಟನೆಯಾಗಿತ್ತು. ಊಳಿಗಮಾನ್ಯ ಶಕ್ತಿಗಳ ಪ್ರಭುತ್ವದ ಎದುರು ಗುಲಾಮರಂತೆ ಬಾಳಿ ಬದುಕಿದ್ದ ರೈತರು ತಮ್ಮ ಪ್ರತಿಭಟನೆಯ ಮೂಲಕ ಹತ್ತಿಕ್ಕುವ ಪ್ರಯತ್ನ ನಡೆದಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದಿತ್ತಾದರೂ ಜನತೆಗೆ ನೈಜ ಸ್ವಾತಂತ್ರ್ಯ ಲಭಿಸದೇ ಇರುವುದು ಸ್ವಾತಂತ್ರ್ಯ ಪದಕ್ಕೆ ಕ್ಲೀಷೆಯಂತ್ತಾಗಿತ್ತು. ಲೋಹಿಯಾ ನಾಯಕತ್ವವನ್ನು ನಿರಾಕರಿಸಿ ಪಕ್ಷದ ಸಾಮಾನ್ಯ ಕಾರ್ಯಕರ್ತನಂತೆ ಚಳವಳಿಗೆ ಧುಮುಕಿ ಸಾವಿರಾರು ಬೆಂಬಲಿಗರೊಂದಿಗೆ ಭೂಮಿಯ ಸುತ್ತ ಬೇಲಿ ಕಿತ್ತೆಸೆದು ಸಾಮಾನ್ಯ ನೆಲದ ಮೇಲೆ ಮಲಗುತ್ತಾರೆ. ಇದು ಲೋಹಿಯಾ ಅವರ ಜನಸಾಮಾನ್ಯಪರತೆಯ ದೃಷ್ಟಿಕೋನವನ್ನು ಅಭಿವ್ಯಕ್ತಿಸುತ್ತದೆ.

ಒಟ್ಟಾರೆಯಾಗಿ ಲೋಹಿಯಾ ಅವರ ಜನಸಾಮಾನ್ಯ ಚಿಂತನೆಗಳನ್ನು ಈ ಕೆಳಕಂಡಂತೆ ನಿರ್ವಚಿಸಿಕೊಳ್ಳಬಹುದು.

1. ಯಜಮಾನ ಸಂಸ್ಕೃತಿಯ ವಿರೋಧಿ ನಿಲುವು ಲೋಹಿಯಾ ಅವರ ಒಲವಾಗಿತ್ತು
2. ಪ್ರಜಾಪ್ರಭುತ್ವದ ಅಹಂಕಾರ ಮತ್ತು ಜಡತೆಗಳನ್ನು ವಿರೋಧಿಸುತ್ತಿದ್ದರು.
3. ಅನ್ಯಾಯದ ವಿರುದ್ಧ ಧ್ವನಿಯೇ ಅವರ ಜೀವನ ಧ್ವನಿಯೂ ಆಗಿತ್ತು.
4. ಒಬ್ಬ ಸಮಾಜವಾದಿಗೆ ಇರಬೇಕಾದ ಅಗತ್ಯ ಗುಣಗಳಲ್ಲಿ ಪ್ರಭುತ್ವ ಮತ್ತು ಯಜಮಾನಿಕೆಗಳ ವಿರುದ್ಧ ನಿಲ್ಲುವುದು ಎಂದೇ ಅವರು ಭಾವಿಸಿದ್ದರು
5. ಮಾನವ ಕಲ್ಯಾಣವೇ ಅವರ ಜೀವಮಾನದ ಆದ್ಯತೆಯ ವಿಷಯವಾಗಿತ್ತು.
6. ಅವರ ಚಿಂತನೆಗಳು ಸ್ತ್ರೀಪರ-ದಲಿತಪರ-ಶೋಷಿತಪರವಾಗಿದ್ದವು.

7. ಸಾಮಾಜಿಕ ವಿಶಾಲತೆ-ಮಾನವತೆಯ ಸಾವಯವ ಸಂಬಂಧದ ಸ್ವರೂಪವನ್ನು ಪಡೆದುಕೊಳ್ಳುತ್ತದೆ ಎಂಬ ಸಮಾಜವಾದಿ ನಿಲುವುಳ್ಳವರಾಗಿದ್ದರು.

8. ಸ್ವತಂತ್ರ್ಯ ಭಾರತದಲ್ಲಿ ಪ್ರಭುತ್ವಗಳು ವಸಾಹತುಶಾಹಿ ಆಡಳಿತಕ್ಕಿಂತ ಭಿನ್ನವಾಗಿರಲಿಲ್ಲ. ಜನಸಾಮಾನ್ಯರನ್ನು ಆಳಲು ವಸಾಹತುಶಾಹಿ ಮಾರ್ಗೋಪಾಯಗಳನ್ನೇ ವಸಹತ್ತೋತ್ತರ ಕಾಲದ ಪ್ರಭುತ್ವಗಳೂ ನಿರಂಕುಶವಾಗಿ ಮುಂದುವರೆಸಿಕೊಂಡು ಹೋಗಿವೆ. ಎಂಬುದನ್ನು ಬಲವಾಗಿ ನಂಬಿದ್ದರು ಮತ್ತು ವಿರೋಧಿಸುತ್ತಿದ್ದರು.

9. ಜನಪರ ರಾಜಕಾರಣ- ಪ್ರಭುತ್ವದ ಜೊತೆ ರಾಜಿ ಮಾಡಿಕೊಳ್ಳದೆ ಜಾತಿವ್ಯವಸ್ಥೆ, ಆರ್ಥಿಕ ವಿಕೇಂದ್ರೀಕರಣ, ಲಿಂಗ ಅಸಮಾನತೆ, ಬಂಡವಾಳಶಾಹಿ ಮತ್ತು ಮಾರ್ಕ್ಸ್‌ವಾದ ದನಿಯಾಗಿ ಹೋರಾಡಿದವರು.

ಇಂತಹ ಸಾಮಾಜಿಕ ನಿಲುವುಗಳನ್ನೇ ತಮ್ಮ ಸಾಂಸ್ಕೃತಿಕ ಬದುಕಾಗಿ ಹೊಂದಿದ್ದಂತಹ ಲೋಹಿಯಾರವರು ಜನಸಾಮಾನ್ಯರ ಹಿತ ಕಾಯುವಲ್ಲಿ ರೂಪಿಸಿಕೊಂಡಿದ್ದಂತಹ ತತ್ವಸಿದ್ಧಾಂತಗಳನ್ನು ರಾಜಕೀಯ ನೆಲೆಯಲ್ಲಿ ಮತ್ತು ಸಮಾಜವಾದಿ ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸುವ ಆಶಯ ಮತ್ತು ಧೋರಣೆ ಈ ಅಧ್ಯಯನದ್ದಾಗಿದೆ.

ಒತ್ತಾಯಪೂರ್ವಕ ಮಹಿಳಾ ಉದ್ಯಮ

ಚೈತನ್ಯ ಎಸ್.
ಸಂಶೋಧನಾ ವಿದ್ಯಾರ್ಥಿನಿ, ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಒತ್ತಾಯಪೂರ್ವಕ ಮಹಿಳಾ ಉದ್ಯಮ ಎಂಬ ವಿಷಯವು ಇಂದಿನ ಸಮಕಾಲೀನ ಸಂದರ್ಭಕ್ಕೆ ಹೆಚ್ಚು ಅನ್ವಯವಾಗುತ್ತದೆ. ಕೌಟುಂಬಿಕ ಸಾಮಾಜಿಕ ಕಾರಣಗಳಿಂದಾಗಿ ಸಮಸ್ಯೆಗೆ ಸಿಲುಕಿಕೊಳ್ಳುವ ಅನೇಕ ಮಹಿಳೆಯರು ಆರ್ಥಿಕ ನಿರ್ವಹಣೆಗೆ, ಗಂಡ ಅಥವಾ ತಂದೆಯನ್ನು ಅವಲಂಬಿಸಿದ್ದು ಅವರಿಂದ ದೂರವಾದಾಗ ಈ ಸಮಾಜದಲ್ಲಿ ಅಕ್ಷರಶಃ ಅನಾಥರಾಗುತ್ತಾರೆ. ಅವರ ಜೀವನ ನಿರ್ವಹಣೆಗೆ ಅವರಿಗೆ ಇಷ್ಟವಿರಲಿ ಬಿಡಲಿ ದುಡಿಮೆಗೆ ತೊಡಗಿಕೊಳ್ಳಲೇಬೇಕಾಗುತ್ತದೆ. ಈ ಸಂದರ್ಭದಲ್ಲಿ ಅವರ ವಿದ್ಯಾರ್ಹತೆ, ಉದ್ಯಮದಕ್ಷತೆ, ಕ್ರಿಯಾಶೀಲತೆ, ಸಾಮಾಜಿಕ ಪರಿಸ್ಥಿತಿ ಎಲ್ಲವೂ ಮಹಿಳಾ ಪರವಾಗಿಯೇ ಇರುತ್ತದೆ ಎಂದು ಪರಿಗಣಿಸಲಾಗುವುದಿಲ್ಲ. ಬದುಕಿನ ಅರ್ಧದಾರಿಯಲ್ಲಿ ದುಡಿಮೆಗೆ ತೊಡಗಿಕೊಳ್ಳುವ ಈ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರುಗಳಲ್ಲಿ ವಿಧವೆಯರು ಇರಬಹುದು, ವಿಚ್ಛೇದಿತ ಮಹಿಳೆಯರಿರಬಹುದು, ಅವಿವಾಹಿತ ಮಹಿಳೆಯರು ಹೀಗೆ ವಿಭಿನ್ನ ವರ್ಗದ ಮಹಿಳೆಯರು ಕಂಡುಬರುತ್ತಾರೆ.

ಈ ಮಹಿಳೆಯರು ಅನುಭವಿಸುವ ಎದುರಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಪರಿಹಾರಗಳನ್ನು ಹುಡುಕುವುದು ಈ ಸಂಶೋಧನಾಧ್ಯಯನದ ಉದ್ದೇಶವಾಗಿರುತ್ತದೆ.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಒತ್ತಾಯ ಪೂರ್ವಕ ಮಹಿಳಾ ಉದ್ಯಮಿ ಎಂಬ ವಿಷಯವು ಇಂದಿನ ಸಮಕಾಲೀನ ಸಂದರ್ಭಕ್ಕೆ ಹೆಚ್ಚು ಅನ್ವಯವಾಘುತ್ತದೆ. ಕೌಟುಂಬಿಕ ಸಾಮಾಜಿಕ ಕಾರಣಗಳಿಂದಾಗಿ ಸಮಸ್ಯೆಗೆ ಸಿಲಿಕಿಕೊಳ್ಳುವ ಅನೇಕ ಮಹಿಳೆಯರು ಅರ್ಥಿಕ ನಿರ್ವಹಣೆಗೆ ತಂದೆ ಅಥವಾ ಗಂಡನನ್ನು ಅಥವಾ ಮಕಳನ್ನು ಅವಲಂಬಿಸಿದ್ದು ಅವರಿಂದ ದೂರವಾದಾಗ ಈ ಸಮಾಜದಲ್ಲಿ ಅಕ್ಷರಶಃ ಅನಾಥರಾಗುತ್ತಾರೆ.

ಅವರ ಜೀವಮ ನಿರ್ವಹಣೆ ಅವರಿಗೆ ಇಷ್ಟವಿರಲಿ ಬಿಡಲಿ ದುಡಿಮೆಯನ್ನು ಕೈಗೊಳ್ಳುತ್ತಾರೆ ಈ ಸಂಧರ್ಭದಲ್ಲಿ ಅವರ ವಿದ್ಯಾರ್ಹತೆ ಉದ್ಯಮದಕ್ಷತೆ ಕ್ರಿಯಾಶೀಲತೆ ಸಾಮಾಜಿಕ ಪರಿಸ್ಥಿತಿ ಎಲ್ಲವೂ ಮಹಿಳಾ ಪರವಾಗಿಯೇ ಇರುತ್ತದೆ ಎಂದು ಪರಿಗಣಿಸಲಾಗುವುದಿಲ್ಲ ಬೆಂಬಲ, ಪ್ರೋತ್ಸಾಹ ಸಿಗುವುದಿಲ್ಲ.

ಇವರುಗಳಲ್ಲಿ ವಿಧವೆಯರು ವಿಚ್ಛೇದಿತ ಮಹಿಳೆಯರು, ಅವಿವಾಹಿತರು ಒಚಿಟಿ ಮಹಿಳೆಯರು ಹೀಗೆ ವಿಭಿನ್ನ ವರ್ಗದ ಮಹಿಳೆಯರು ಕಂಡು ಬರುತ್ತಾರೆ ಬದುಕಿನ ಅರ್ಧದಾರಿಯಲ್ಲಿ ದುಡಿಮೆಗೆ ತೊಡಗಿಸಿಕೊಳ್ಳುವ ಇಂಥಹ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ ಇಂಥಹ ಮಹಿಳೆಯರು ಅನುಭವಿಸುವ ಮತ್ತು ಎದುರಿಸುವ ಸಮಸ್ಯೆಗಳು ಹಾಗೂ ಸವಾಲುಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಪರಿಹಾರಗಳನ್ನು ಹುಡುಕುವುದು ಈ ಸಂಶೋಧನಾಧ್ಯಯದ ಉದ್ದೇಶವಾಗಿರುತ್ತದೆ.

ಈ ಉದ್ಯಮಿ ಮಹಿಳೆಯರನ್ನು ಮೂರು ಆಯಾಮಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದೇನೆ

1. ಅರ್ಥಿಕ ಸ್ಥಿತಿ
2. ಶೈಕ್ಷಣಿಕ ಸ್ಥಿತಿ
3. ಕೌಟುಂಬಿಕ ಸ್ಥಿತಿ

1. ವಿಧವೆಯರು : ವಿವಾಹದ ನಂತರ ಗಂಡನನನ್ನು ಅಗಲಿದ ಅಥವಾ ಗಂಡನು ದಿವಂಗತನಾದ ಮಹಿಳೆಯರನ್ನು ವಿಧವೆಯರೆಂದು ಪರಿಗಣಿಸಲಾಗುತ್ತದೆ, ಈ ವ್ಯಾಖ್ಯಾನವು ಪರೋಕ್ಷವಾಗಿದೆ ಕಾರಣ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ವಿಧವೆ ಎಂದು ಕರೆಯುವಂತಿಲ್ಲ ಬದಲಿಗೆ ದಿವಂಗತರ ಪತ್ನಿ ಎನ್ನಬೇಕು ಎಂದಿದೆ.

•ಅರ್ಥಿಕ ಸ್ಥಿತಿ : ಸಮಾನ್ಯವಾಗಿ ಭಾರತೀಯರು ಪರಾವಲಂಭಿಗಳಾಗಿರುತ್ತಾರೆ ಮಹಿಳೆಯರು ಭಾರತದಲ್ಲಿ ಅನೇಕರು ಅವಲಂಭಿತರು ಹುಟ್ಟಿನಿಂದ ತಂದೆ–ತಾಯಿ ನಂತರ ಗಂಡ ತದ ನಂತರ ಮಕ್ಕಳ ಮೇಲೆ ಅವಲಂಭಿತರಾಗಿರುತ್ತಾರೆ.

ಗಂಡನು ಅಗಲಿದ ನಂತರ ಇವರ ಅರ್ಥಿಕ ಸ್ಥಿತಿ ಭಿನ್ನವಾಗಿರುತ್ತದೆ. ಗಂಡನು ಸರ್ಕಾರಿ ಕೆಲಸದಲ್ಲಿದ್ದು ದಿವಂಗತನಾದರೆ ಪತ್ನಿಗೆ ಪರಿಹಾರಧನ ಪರಿಹಾರ ಉದ್ಯೋಗ ಅಥವಾ ಮಕ್ಕಳಿದ್ದರೆ ಅವರಿಗೆ ಉದ್ಯೋಗ ಒದಗುವ ಸೌಲಭ್ಯ ದೊರಗುತ್ತದೆ.

ಗಂಡನು ಖಾಸಗಿ ಉದ್ಯೋಗದಲ್ಲಿದ್ದರೆ ಅಥವಾ ಕೂಲಿ ಮಾಡುವವರಿದ್ದರೆ ಇಂಥಹ ಮಹಿಳೆಯರು ಸ್ಥಿತಿಗಂಭೀರವಾಗಿರುತ್ತದೆ, ಅವರು ಕೂಡ ಕೂಲಿ ಮಾಡಬೇಕಾಗುತ್ತದೆ. ಮನೆಯಿಂದ ದೂರವಾಗಬೇಕಾಗುತ್ತದೆ. ಇಡೀ ಕುಟುಂಬದ ಹೊರೆ ಹೊತ್ತು ಶ್ರಮಿಶಬೇಕಾಗುತ್ತದೆ,

ಇಂಥಹ ಗಂಭೀರ ಸ್ಥಿತಿಯಲ್ಲಿ ಪ್ರಾಣ ಕಳೆದುಕೊಂಡು ಉದಾಹರಣೆ ಗಳನ್ನು ಕಾಣಬಹುದು ಆರ್ಥಿಕ ಹಾಗೂ ಸದೃಢವಾಗಿ ಬದುಕಲು ಯಾವುದಾದರೊಂದು ದುಡಿಮೆಗೆ ತೊಟಗುತ್ತಾಳೆ

ಶೈಕ್ಷಣಿಕ ಸ್ಥಿತಿ : ಶಿಕ್ಷಣ ಇರುವವರು ಶಿಕ್ಷಣ ಇಲ್ಲದವರು ಉದ್ಯೋಗಸ್ಥರಲ್ಲದ ಮಹಿಳೆಯರು ಕೂಡ ಸಮಾಜವನ್ನು ಎದುರಿಸಲು ಮುಂದಾಗಲೇಕಾಗುತ್ತದೆ. ಶಿಕ್ಷಣವೆಂಬುದು ಬಹುಮುಖ್ಯವಾದದು, ಹೆಣ್ಣುಮಕ್ಕಳು ತಮ್ಮ ಸ್ವಂತಿಕೆಯಿಂದ ಶಿಕ್ಷಣ ಪಡೆಯಬೇಕು ಬಾಲ್ಯ ವಿವಾಹ ಮರು ವಿವಾಹಕ್ಕೆ ನಮ್ಮ ಸಂಸ್ಕೃತಿ ಒಪ್ಪದಿರುವುದು ಮೌಢ್ಯತೆ ೆಯನ್ನು ತುಂಬಿಕೊಂಡು ಇವರುಗಳನ್ನು ಹಿಂಸಿಸುವುದನ್ನು ತಡೆಗಟ್ಟಬೇಕು ಚಿಕ್ಕ ವಯಸ್ಸಿನವರಿಗೆ ಅವಕಾಶ ಹೆಚ್ಚು –ಮುಕ್ತ ವಿಶ್ವವಿದ್ಯಾಲಯಗಳ ಮೂಲಕ ಶಿಕ್ಷಣ ಪಡೆದುಕೊಳ್ಳಬಹುದು.

ಶಿಕ್ಷಣ ಇಲ್ಲದವರು ಮನೆಯಲ್ಲೇ ಸ್ವಂತ ಉದ್ಯೋಗ ಮಾಡಿ ತಮ್ಮ ಜೀವನವನ್ನು ಸಾಗಿಸಲು ಸಹಾಯವಾಗುತ್ತದೆ.

ಕೌಟುಂಬಿಕ ಸ್ಥಿತಿ : ವಿಧವೆಯರು ತನ್ನ ಸಂಸಾರವನ್ನು ಸಾಗಿಸಲು ಒತ್ತಡದಿಂದ ಹೊರ ಬರಲು ಮಕ್ಕಳಿಗೆ ಶಿಕ್ಷಣ ಕೊಡಿಸುವ ಸಲುವಾಗಿ ಉದ್ಯಮಕ್ಕೆ ಒಳಗಾಗುತ್ತಾರೆ ಕೌಟುಂಬಿಕ ಕಿರುಕುಳ ಗಂಡನ ಮನೆಯಿಂದ ಹೊರಬಂದು ತನ್ನ ಮನೆಯಿಂದಲೂ ದೂರವಾಗಿ ಬದುಕನ್ನು ಎದುರಿಸುವ ಸಲುವಾಗಿ ದುಡಿಮೆ ಮಾಡುತ್ತಾಳೆ ಸಮಾಜದ ಕಟ್ಟುಪಾಡು ಸವಾಲುಗಳಿಗೆ ಉತ್ತರ ನೀಡುವುದಕ್ಕಾಗಿಯಾದರು ಒತ್ತಾಯವಾಗಿ ದುಡಿಮೆಗೆ ಬರಲೇಬೇಕಾಗುತ್ತದೆ.

ವಿಚ್ಛೇದಿತ ಮಹಿಳೆಯರು : ವಿಚ್ಛೇದನವು ಸಾಮಾನ್ಯವಾಗಿ ಕೆಳಕಂಡ ಕಾರಣಗಳಿಂದಾಗಿ ಸೃಷ್ಟಿಯಾಗುತ್ತದೆ ಇದು ಒಂದು ಬಗೆಯಲ್ಲಿ ಗಂಡ ಹೆಂಡಿರ ನಡುವಿನ ಸೇಡು ತೀರಿಸಿಕೊಳ್ಳುವಿಕೆ

- ಇಬ್ಬರ ಬಡುವೆ ಹೊಂದಾಣಿಕೆ ಇಲ್ಲದಿರುವುದು
- ಅನೈತಿಕ ಸಂಬಂಧಗಳಿಂದಾಗಿ
- ವೈಯಕ್ತಿಕ ಸಮಸ್ಯೆಗಳು ವಂಚನೆಗಳು ಕಿರುಕುಳ ಅವಮಾನ ಹಿಂಸೆ
- ಸ್ವಪ್ರತಿಷ್ಟೆಯಿಂದಾಗಿ

ಆರ್ಥಿಕ ಸ್ಥಿತಿ : ಗಂಡನು ಸರ್ಕಾರಿ ನೌಕರಿಯಲ್ಲಿದ್ದು ಅಥವಾ ಸ್ವಂತ ದುಡಿಮೆಕಾರರಾಗಿದ್ದರೆ ಇವರಿಂದ ಪರಿಹಾರಧನ ಸ್ವೀಕರಿಸುತ್ತಾರೆ ಆದರೆ ಇದು ಎಲ್ಲಾ ವಿಭಾಗದ ಮಹಿಳೆಯರಿಗೆ ಅನ್ವಯಿಸುವುದಿಲ್ಲ ಇದರ ಹಣದಲ್ಲೇ ತನ್ನ ಇಡೀ ಜೀವನವನ್ನು ನಿರ್ವಹಣೆಮಾಡಲು ಸಾಧ್ಯವಾಗು ವುದಿಲ್ಲ ಇಡೀ ಕುಟುಂಬದ ಹೊರೆಯನ್ನು ಇವರೇ ಹೊರಬೇಕಾಗುತ್ತದೆ.

ಇಂಥಹ ಸಮಯದಲ್ಲಿ ಎದೆಗುಂದದೆ ಸ್ವ ಉದ್ಯೋಗವನ್ನು ಮಾಡಬೇಕಾ ಗುತ್ತವೆ ಜೇನುಸಾಕಣೆ ಟೈಲರಿಂಗ ಬ್ಯೂಟಿ ಪಾರ್ಲರ್ ರೇಷ್ಮೇಹುಳು ಸಾಕಣೆ ಅಗರಬತ್ತಿ ತಯಾರಿಸುವುದು ಹೀಗೆ ಮುಂತಾದವುಗಳಲ್ಲಿ ತೊಡಗಿಸಿಕೊಳ್ಳಬಹುದು

ಶೈಕ್ಷಣಿಕ ಸ್ಥಿತಿ : ಶಿಕ್ಷಣ ಇದ್ದರೂ ಕೆಲವರೂ ಗೃಹಿಣಿಯಾಗಿರಿತ್ತಾರೆ ಎಷ್ಟೇ ಶಿಕ್ಷಣ ಹೊಂದಿದ್ದರು ಸಹ ಮಾನಸಿಕ ಒತ್ತೆ ಅವಮಾನಗಳು ಪರಿಣಾಮ ಬೀರುತ್ತವೆ.

ಚಿಕ್ಕವಯಸ್ಸಿನಲ್ಲಿ ವಿಚ್ಛೇದಿತರಾದರೆ ಸಮಾಜವನ್ನು ಎದುರಿಸಲು ಶಿಕ್ಷಣವಿದ್ದಾಗ ಸುಲಭವಾಗುತ್ತದೆ, ಮುಖ್ಯವಾಗಿ ವಿಚ್ಛೇದನ ಪಡೆಯುವ ಸಮಯಕ್ಕೆ ಅವರುಗಳಿಗೆ ಸರ್ಕಾರಿ ನೌಕರಿ ಸಿಗುವ ವಯಸ್ಸು ಮೀರಿರುತ್ತದೆ.

ಕೌಟುಂಬಿ ಸ್ಥಿತಿ : ಕುಟುಂಬದಲ್ಲಿ ಸಾಮರಸ್ಯದ ಕೊರೆತೆ ಸಂಪ್ರಾದಾಯಕ ಕುಟುಂಬವಿರುವುದರಿಂದ ವಿಚ್ಛೇದನವನ್ನು ಅಂಗೀಕರಿಸದ ಕಾರಣದಿಂದ ಮಹಿಳರಯರು ಒತ್ತಾಯವಾಗಿ ಉದ್ಯಮಕ್ಕೆ ಹೋಗಬೇಕಾಗುತ್ತದೆ. ತವರು ಮನೆಯಿಂದಲೂದೂರವಾಗಿ ಸಮಾಜದ ಹಿಂಸೆಯನ್ನು ಅನುಭವಿಸದೆ ಎಷ್ಟೋ ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡ ಸಂದರ್ಭವೂ ಇದೆ ಕಾರಣಗಳೇನು ಎಂಬುದು ಬಹು ಮುಖ್ಯವಾಗಿರುತ್ತದೆ.

ಒಂಟಿ ಮಹಿಳೆ ಮತ್ತು ಉದ್ಯೋಗ : ಕುಂಟುಂಬದಿಂದ ದೂರರಿಸಲ್ಪಟ್ಟ ಮಹಿಳೆಯರು ವಿವಾಹದ ನಂತರವೂ ಕೂಡ ಗಂಡನ ಜೊತೆ ಬದುಕಲಾರದೆ ಹೊರಗೆ ಬಂದ ಮಹಿಳೆಯರು ವಿವಾಹವಾಗದೆ ಇದರಲ್ಲೆ 2 ವಿಧ

1. ವಿವಾಹಿತ ಮಹಿಳೆಯರು 2. ಅವಿವಾಹಿತ ಮಹಿಳೆಯರು

ಈ ಮಹಿಳೆಯರಲ್ಲಿ ಸ್ವಾಭಿಮಾನದ ಕಾರಣದಿಂದ–ಅಥವಾ ಸ್ವಪ್ರತಿಷ್ಠೆಯ ಕಾರಣದಿಂದ ತಂದೆ ಅಥವಾ ಗಂಡನ ಅಸ್ತಿ ಬಿಟ್ಟು ಹೊರಗೆ ಬಂದ ಮಹಿಳೆಯರು ನಂತರದ ಬದುಕನ್ನು ರೂಪಿಸಿಕೊಳ್ಳಲು ಉದ್ಯೋಗಕ್ಕೆ ಅವಲಂಬಿತರಾಗಬೇಕು.

ಆರ್ಥಿಕ : ಒಂಟಿಯಾಗಿ ಹೊರಬಂದ ಮಹಿಳೆಯರಿಗೆ ಯಾವುದೇ ಆರ್ಥಿಕ ಸಹಕಾರ ಇರುವುದಿಲ್ಲ ಗಂಡನಿಂದ ದೂರಾದ ಅಥವಾ ಅವನಿಂದಲೇ ಹೊರ ದೂಡಿದ ಮಹಿಳೆ ಗಂಡನ ಸ್ವತಃ ಅನೈತಿಕ ಸಂಬಂಧಗಳಿಂದಾಗಿ ಮಕ್ಕಳ ಸಮೇತ ತ್ಯಜಿಸಲ್ಪಟ್ಟವರು ಗಂಡನ ಮನೆಯವರ ಕಿರುಕುಳ ಸಹಿಸಲಾರದೆ ಹೊರ ಬಂದವರು ವರದಕ್ಷಿಣೆ ಬಂಜೆತನ ಬೇರೆ ಸಂಬಂಧಗಳು ಹೀಗೆ ಅನೇಕ ರೀತಿಯ ಕಾರಣಗಳಿಂದಾಗಿ ಹೊರಬಂದವರು ಅನಿವಾರ್ಯದಿಂದ ದುಡಿಮೆ ಮಾಡಬೇಕಾಗುತ್ತದೆ. ಇದರಿಂದ ಆರ್ಥಿಕವಾಗಿ ಸುಧಾರಣೆ ಹೊಂದಿ ಬದುಇಣತ್ತಾರೆ

ಶಿಕ್ಷಣ :ಶಿಕ್ಷಣ ಇರುವವರು ಸ್ವಯಂ ಪ್ರೇರಿತಗೊಂಡ ಸ್ವುದ್ಯೋಗವನ್ನು ಮಾಡುತ್ತಾರೆ ಪ್ರಾಯೋಗಿಕವಾಗಿ ಅನುಭವದ ಮೇರೆಗೆ ಉದ್ಯಮಿಗಳಾಗುವಂಥದ್ದು ಇವರನ್ನು women entrepreneur (ಮಹಿಳಾ ಉದ್ಯಮಿಗಳು) ಎಂದು ಕರೆಯಲಾಗಿದೆ ವಿದ್ಯೆ ಯಾರ ಸ್ವತ್ತಲ್ಲ. ಪ್ರತಿಯೊಬ್ಬರು ಶಿಕ್ಷಣ ಹೊಂದಲೇಬೇಕು ಈಗಿನ ಪ್ರಪಂಚದಲ್ಲಿ ಹೆಚ್ಚಿರುವುದರಿಂದ ಶಿಕ್ಷಣ ಪೈಪೋಟಿ ಸಾಧಜ ವಿದ್ಯೆ, ಭಾದಕ ದ್ರವ್ಯ ಎಂಬ ನುಡಿಮುತ್ತು ಇಲ್ಲಿ ಅನ್ವಯವಾಗುತ್ತದೆ ಶಿಕ್ಷಣ ಹೊಂದುವುದು ಮುಖ್ಯ ಏಕೆಂದರೆ ಬದುಕು ಹೀಗೆ ಇರುವುದು ಎಂದು ಊಹೆ ಮಾಡಲು ಸಾಧ್ಯವಿಲ್ಲ.

ಕೌಟಿಂಬಿಕ : ಒಂಟಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ನೋಡುವ ದೃಷ್ಟಿಕೋನ ಹಿಂಸೆಯದ್ದಾಗಿರುತ್ತದೆ ಕೌಟುಂಬಿಕ ಸ್ಥಿತಿ ಅಸುರಕ್ಷಿತವಾಗಿರುತ್ತದೆ ಹಾಗೂ ಯಾವುದೇ ರೀತಿಯ ಬೆಂಬಲ ಸಿಗುವುದಿಲ್ಲ ಪರವಾಲಂಬಿಗಳಾಗಲು ಸಹ ಅವಕಾಶ ಇರುವುದಿಲ್ಲ ಆರ್ಥಿಕ ಸಬಲೀಕರಣವಾಗುವಂತಹ ಒತ್ತಡ ಮತ್ತು ಪರಿಸ್ಥಿತಿ ಸೃಷ್ಟಿಯಾಗಿರುತ್ತವೆ. ಕೆಲವರು ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆ ಕಾಣಬಹುದು ಕೆಲವರು ಸಾಧನೆ ಮಾಡಿದ್ದಾರೆ ಮತ್ತು ಕೆಲವರ ಸ್ಥಿತಿ ಚಿಂತನೀಯವಾಗಿರುತ್ತದೆ, ಉದ್ಯಮ ಎನ್ನುವುದು ಆರ್ಥಿಕ

ಚಟುವಟಿಕೆ ನಮ್ಮ ಸಮಾಜ ಸ್ವರಕ್ಷಣೆಗೆ ಕುಟುಂಬ ನಿರ್ವಹಣೆಗೆ ಮತ್ತು ಆರ್ಥಿಕ ಸುಧಾರಣೆಗೆ ದೈನಂದಿನ ಜೀವನ ನಡೆಸಲು ದುಡಿಮೆಯನ್ನು ಮಾಡುತ್ತೇವೆ. ಹುಟ್ಟಿನಿಂದಲೇ ಗಂಡು ಹೆಣ್ಣು ಎಂಬ ತಾರತಮ್ಯ ಬೆಳೆದಿದ ಪುರುಷ ಪ್ರಧಾನ ಸಮಾಜವಿರುವುದರಿಂದ ಹೆಣ್ಣಿ ಎಲ್ಲಾ ಹಂತದಲ್ಲೂ ಅನಾದಿ ಕಾಲದಿಂದಲೂ ಹಿಂಸೆ ಅನುಭವಿಸುತ್ತಿದ್ದಾಳೆ ಸ್ತ್ರೀವಾದಿಗಳ ದೃಷ್ಟಿಕೋನದಲ್ಲಿ ಉದ್ಯಮ ಮತ್ತು ಮಹಿಳಾ ಉದ್ಯಮವನ್ನು ವಿಭಿನ್ನ ರೀತಿಯಲ್ಲಿ ಗುರುತಿಸಿದ್ದಾರೆ.

ಮಹಿಳಾ ಉದ್ಯಮ ಎಂದು 17ನೇ ಶತಮಾನ (1725–1993) ಅವಿಷ್ಕಾರವಾಯಿತು, ಹೆಣ್ಣಿನಲ್ಲಿರುವ ಕ್ರಿಯಾಶೀಲತೆ ಸಹನೆ ಉದ್ಯಮದಕ್ಷತೆ ಬುದ್ಧಿವಂತಿಕೆ ಸಮಾಜ ಮತ್ತು ಕುಟುಂಬವನ್ನು ನಿರ್ವಹಣೆ ಮಾಡುವ ಚೈತನ್ಯ ಸಾಮರ್ಥ್ಯ ಇವೆಲ್ಲವೂ ಮಹಿಳೆಯು ಉದ್ಯಮ ದುಡಿಮೆಯಲ್ಲಿ ಮುಂದುವರೆಯಲು ಸಾಧ್ಯವಾಯಿತು.

ಹೆಣ್ಣು ಮನೆಗೆ ಸೀಮಿತವಲ್ಲ. ಪುರುಷರು ಮಹಿಳೆಯರು ಮಕ್ಕಳು ಎಲ್ಲರು ದುಡಿಯುತ್ತಿದ್ದರು ದಿನದಲ್ಲಿ 14 ಗಂಟೆಗಳು ಕೆಲಸಮಾಡುತ್ತಿದ್ದರು ದುಡಿಮೆಗೆ ತಕ್ಕ ಸಂಭಾವನೆ ಸಿಗುತ್ತಿರಲಿಲ್ಲ ನಂತರ ಪುರುಷರು ಒಂದೂರಿಂದ ಮತ್ತೊಂದು ಊರಿಗೆ ಹೋಗಿ ದುಡಿಯಲಾರಂಭಿಸಿದರು ಹಣಕಾಸಿನ ವ್ಯವಹರದಲ್ಲಿ ಹೆಚ್ಚು ತೊಡಗಿಕೊಂಡರು ಹೀಗಾಗಿ ಹಣಕಾಸಿನ ವ್ಯವಹಾರ ಮತ್ತು ಹೊರಗೆ ಹೋಗಿ ದುಡಿಯುದಕ್ಕೆ ಪುರುಷನೇ ಸರಿ ಎಂದು ಪರಿಗಣಿಸಲಾಯಿತು ಹೆಣ್ಣು ಮನೆಯಲ್ಲೇ ಇದ್ದು ಅವರ ಆಗುಹೋಗುಗಳನ್ನು ನೋಡಿಕೊಂಡು ಜಮೀನಿನ ವ್ಯವಸಾಯ ಹೀಗೆ ಮನೆ ನೆಡೆಸಿಕೊಂಡು ಹೋಗುತ್ತಾಳೆ ಎಂದು ಅಲ್ಲಿಗೆ ಸೀಮಿತಳಾದಳು.

ಕುಟುಂಬ ಆರ್ಥಿಕ ನಿರ್ವಹಣೆಗೆ ಮಹಿಳೆಯು ಯಾವಗ ದುಡಿಯಲಾರಂಭಿಸಿದಳು ಆ ಸಮಯದಿಂದ 'ಮಹಿಳಾ ಉದ್ಯಮ' ಎಂದು ರೂಪುಗೊಂಡಿತು ಇ ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದಂಥ ಅಂಶ ಎಂದರೆ ಮಹಿಳೆಯು ಯಾವ ಕಾರಣಗಳಿಂದಾಗಿ ದುಡಿಮೆ ಮಾಡಲು ಮುಂದಾಗಿದ್ದಾಳೆ, ಅವಳಿದ್ದ ಅನಿವಾರ್ಯತೆಗಳೇನು. ಎಂಬುದು ಗಮನಾರ್ಹ.

ಜೀವನದಲ್ಲಿನ ಜಿಗುಪ್ಸೆ ಹಿಂಸೆ ಅವಮಾನಗಳು ಕೌಟುಂಬಿಕ ಸ್ಥಿತಿ ಆರ್ಥಿಕ ನಿರ್ವಹಣೆ ಸಮಾಜದ ಕಟ್ಟುಪಾಡು, ಭರವಸೆಗಳು ಹೂಡುಕು ಸ್ವಾಭಿಮಾನ ಹೀಗೆ ಅನೇಕ ಕಾರಣಗಳಿಂದಾಗಿ ದುಡಿಮೆ ಮಾಡಲು ಮುಂದಾದಳು. ಹೆಣ್ಣು ಪುರುಷನಿಗಿಂತಲೂ ಶ್ರಮ ಜೀವಿ ಎಲ್ಲವನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದವಳು ಆದರೆ ಅವಳಿಗೆ ಸಿಕ್ಕ ಧೋರಣೆಗಳು ಹಿಂಸೆ ಅವಮಾನಗಳು ಪುರುಷ ಪ್ರಧಾನವಾದ ಸಮಾಜ ಅವಳನ್ನು ಕೀಳಾಗಿ ನೋಡುತ್ತಾ ಬಂತು

1945–1962:– ಮಹಿಳಾ ಶಾಸನಾತ್ಮಕ ಸಮಾನತೆ ದೊರಕಿಸುವ ಪ್ರಯತ್ನ
1963–75 ಮಹಿಳಾ ಹಕ್ಕಿನ ರಕ್ಷಣೆಯ ಬಗ್ಗೆ ಸರ್ಕಾರದ ಬೆಂಬಲ
1976–85 ವಿಶ್ವ ಸಂಸ್ಥೆಯ ಮಹಿಳಾ ದಶಕದ ಆಚರಣೆ ಮತ್ತು ಮಹಿಳೆ ಪಾತ್ರ ಕುರಿತು ಅಂತರ್ ರಾಷ್ಟ್ರೀಯ ಸಮುದಾಯ ಅರ್ಥಗ್ರಹಿಕೆಯಲ್ಲಿ ಬದಲಾವಣೆ ಮಹಿಳಾ ಸಬಲೀಕರಣಕ್ಕೆ ಅನೇಕ ಕಾಯ್ದೆಗಳು ಮಹಿಳಾ ರಕ್ಷಣೆಗೆ ಕಾಯ್ದೆಗಳು ಪರಿಹಾರಗಳು ಎಲ್ಲವೂ ಇದ್ದರೂ ಎಷ್ಟದಮಟ್ಟಕ್ಕೆ ಇಂತಹ ಕಾಯ್ದೆಗಳು ಜನರ ಮೇಲೆ ಪರಿಣಾಮ ಬೀರಿದೆ ಗೃಹಿಣಿಯಾಗಿದ್ದ ಮಹಿಳೆ ಈಗ ವಾಣಿಜ್ಯ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿದ್ದಾಳೆ ಶಿಕ್ಷಣ ಪಡೆಯುತ್ತಿದ್ದಾಳೆ ಸ್ವ ಉದ್ಯೋಗಸ್ಥಳಾಗಿದ್ದಾಳೆ ತನ್ನ ಕುಟುಂಬ ಮತ್ತು ವ್ಯವಹಾರ ಎಲ್ಲಾವನ್ನು ಸಂಭಾಲಿಸುವ ಶಕ್ತಿ ಹೊಂದಿದ್ದಾಳೆ ಸಣ್ಣ ಕೈಗಾರಿಕೋದ್ಯಮಗಳಲ್ಲಿ ಹೆಚ್ಚು ದುಡಿಯುತ್ತಿದ್ದಾರೆ. ಇದಕ್ಕೆ ಕಾರಣ ಅವರಿಗಿರುವ ಒತ್ತಡ ಎಷ್ಟೋ ಉದ್ಯೋಗಸ್ಥ ಮಹಿಳೆಯರು, ಸಾಧಕರು ಒತ್ತಡದಿಂದಲೇ ದುಡಿಮೆಗೆ ಬಂದಿದ್ದಾರೆ ಎಂಬುದು ಗಮನೀಯ ಅಂಶ.

ಕೆಲವು ಮುಖ್ಯ ಅಂಶಗಳನ್ನು ಗುರುತಿಸಿದೆ
1. ಕೌಟುಂಬಿಕ ಬೆಂಬಲ ಇಲ್ಲದಿರುವುದು ಸಂಸ್ಕೃತಿಯ ಹೆಸರಿನಲ್ಲಿ ಮಾಡುವ ಶೋಷಣೆ
2. ಮಹಿಳೆಯರಿಗೆ ಯಾವುದೇ ಬ್ಯಾಂಕ್ ಸಾಲ ಕೊಡಲು ಹಿಂಜರಿಯುತ್ತದೆ ಕಾರಣ ಪುರುಷನನ್ನು ಸಮಾಜ ಹೆಣ್ಣಿನ ಬೆನ್ನೆಲುಬು ಎಂದು ಪರಿಗಣಿಸಿತ್ತು ಆದರೆ ಅವರೆ ಸಂರಕ್ಷಸದಿದ್ದಾಗ ಯಾರ ರಕ್ಷಣೆ ಕೇಳಬೇಕೆಂಬುದು ಪ್ರಶ್ನೆಯಾಗಿದೆ
3. ಒಂಟಿ ಮಹಿಳೆ ವಿಧವೆಯರು ವಿಚ್ಛೇದಿತರು ಹೀಗೆ ಯಾವುದೇ ಬೆಂಬಲ ಇಲ್ಲದಿದ್ದಾಗ ಮಹಿಳೆಯನ್ನು ಕೆಟ್ಟ ರೀತಿಯಲ್ಲಿ ನೋಡುತ್ತದೆ ಬೇಕಾದಂತೆ ಉಪಯೋಗಿಸಿಕೊಳ್ಳಲು ಮುಂದಾಗುತ್ತದೆ ಆದರೆ ಅವರ ಬೆಂಬಲ ಕೊಟ್ಟು ಪ್ರೋತ್ಸಾಹಿಸಲು ಈ ಸಮಾಜಕ್ಕೆ ಸಾಧ್ಯವಿಲ್ಲ
4. ನಂಬಿಕೆಯೇ ಬುನಾದಿ ಆದರೆ ಸಮಾಜದಲ್ಲಿ ಘೋಷಣೆ ಈ ನಂಬಿಕೆ ಎಂಬ ಪದಕ್ಕೆ ಅರ್ಥವಿಲ್ಲದಂತೆ ಮಾಡಿದೆ
5. ಅಸಹಾಯಕತೆ ಅವಳನ್ನು ನಿಶಕ್ತಗೊಳಿಸುತ್ತಿದೆ.
6. ಸ್ತ್ರೀ ಸಬಲೀಕರಣ ಹೆಸರಿನಲ್ಲಿ ಆಗುತ್ತಿರುವ ಶೋಷಣೆ ಅಪರಾಧ ಲೈಗಿಂಕ ದೌರ್ಜನ್ಯ ಅವಳ ಶಕ್ತಿಯನ್ನು ಕುಂದಿಸುತ್ತಿದೆ

ಬಹುತೇಕ ಮಹಿಳಾ ಉದ್ಯಮಿಗಳು ಒತ್ತಡೆ ಪೂರ್ವಕವಗಿಯೇ ದುಡಿಮೆ ಮಾಡುತ್ತಿದ್ದಾರೆ
1. ಸ್ತುತಿ ಜಲಾನ್ ನಮ್ಮ ದೇಶದಲ್ಲಿನ ಹೆಣ್ಣು ಮಕ್ಕಳು
2. ಓಪ್ರಾ ವಿನ್ ಫ್ರೇ
ಹೀಗೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾ ಅನೇಕ ಮಹಿಳೆಯರು ಒತ್ತಾಯ ಪೂರ್ವಕವಾಗಿಯೇ ದುಡಿಮೆಗೆ ಬಂದಿದ್ದಾರೆ

ಈ ಮಹಿಳೆಯರು ಅನುಭವಿಸುವ ಮತ್ತು ಎದುರಿಸುವ ಸಮಸ್ಯೆ ಹಾಗೂ ಸಾವಲುಗಳನ್ನು ವಿಶ್ಲೇಷಣೆ ಒಳಪಡಿಸಿ ಪರಿಹಾರಗಳನ್ನು ಹುಡುಕುವುದು ಈ ಸಂಶೋಧನಾಧ್ಯಯದ ಉದ್ದೇಶವಾಗಿರುತ್ತದೆ ಮಹಿಳೆಯರ ರಕ್ಷಣೆಗಿರುವ ಕಾನೂನುಗಳ ಬಗ್ಗೆ ಅರಿವು ಮೂಡಿಸುವುದು ಅಗತ್ಯವಿದೆ, ಮಹಿಳೆಯರ ಉದ್ಯಮ ಮಾಡುವುದಕ್ಕಾಗಿ ಯಾವ ಬ್ಯಾಂಕ್‌ಗಳ ಮೂಲಕ ಧನ ಸಹಾಯ ಪಡೆಯಬಹುದು ಎಂದು ತಿಳಿಸಬೇಕು.

ನಮ್ಮ ಭಾರತದ ಸಂಸ್ಕೃತಿಯಲ್ಲಿ ಹೆಣ್ಣೇ ದೇಶದ ಬೆನ್ನೆಲುಬು ಎಂಬುದು ಅಥೈಸಬೇಕು ವಿಕೃತಮನಸ್ಸಿನವರ ಮುಂದೆ ಅಸಹಾಯಕರಾಗದೆ ತಲೆ ಬಗ್ಗಿಸದೆ ಮುನ್ನುಗ್ಗಿ ದುಡಿದು ಹಾಗೂ ಎಲ್ಲಾ ಕ್ಷೇತ್ರದಲ್ಲೂ ಸಾಧಕರು ಎಂದು ನಿರೂಪಿಸಬೇಕಾಗಿದೆ.

1. ಮಹಿಳಾ ಅಧ್ಯಯನ ಮತ್ತು ಉದ್ಯಮ–ಡಾ॥ ಹೇಮಲತ ಹೆಚ್ ಎಂ
2. ಮಹಿಳಾ ಅಧ್ಯಯನ ಮಹಿಳಾ ಹಕ್ಕುಗಳು – ಮೇರಿ ವೋಲ್ಪ್ ಸ್ಟೋನ್ ಕ್ರಾಫ್ಟ್

3. ಸ್ತ್ರೀ ಮಹಿಳಾ ಸಬಲೀಕರಣ – ಪ್ರೋ ಒಡೆಯರ್ ಡಿ ಹೆಗ್ಡೆ ಮತ್ತು ಅನ್ನಪೂರ್ಣೇಶ್ವರಿ
4. ಡೋಗ್ಲಾಸದದ ಬಿ ಜೆ ಶ್ಲೀಫರ್ಡ್ ಡಿ ಎ (2002) ಸೆಲ್ಫ್ ಎಪ್ಲಾಯ್‌ಮೆಂಟ್ ಆಸ್ ಎ ಕರೀರ್ ಚಾಯ್ಸ್ ಆಟಿಟ್ಯೂಡ್ಸ್ ಎಂಟ್ರಿಪ್ರಿನ್ಯೂರ್‌ಸಿದ್ ಥೀಯರಿ ಆಂಡ್ ಪ್ರಾಕ್ಟೀಸಸ್
5. ಕೂಪರ್ ಎ ಸಿ ಸಿಎ ಕಲ್‌ಬರ್ಗ್ ಎ(1988) ಎಂಟ್ರಿಪ್ರಿನ್ಯೂರ್ಸ್ ಪಕ್ಟೀವ್ಡ್ ಚಾನ್ಸ್ನ ಫಾರ್ ಸಕ್ಸಸ್
6. ಲಾಗರ್ ಇ (1975) ದಿ ಇಲ್ಯೂಶನ್ ಕಂಟ್ರೋಲ್ ಜನರಲ್ ಆರ್ಫ ಪರ್ಸನಾಲಿಟಿ ಆಂಡ್ ಸೋಷಿಯಲ್ ಸೈಕಾಲಜಿ 32 311–328

ಬುಡಕಟ್ಟು ಜನಸಮುದಾಯದ ಪರಿಕಲ್ಪನೆ ಒಂದು ವಿಶ್ಲೇಷಣೆ

* ದೀಪ ಎಂ.ಬಿ., **ಡಾ.ಕೃಷ್ಣ ಹೊಂಬಾಳ್ ಎಂ.ಎ.ಎಂ.ಫಿಲ್.ಪಿ.ಹೆಚ್.ಡಿ.
* ಸಂಶೋಧನಾ ವಿದ್ಯಾರ್ಥಿ, ** ಸಂಶೋಧನಾ ಮಾರ್ಗದರ್ಶಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು

ಸಮಕಾಲೀನ ರಾಜಕೀಯ ಸಮಾಜಶಾಸ್ತ್ರದಲ್ಲಿ ಬುಡಕಟ್ಟು ಸಮುದಾಯಗಳ ಪಾರಿಕಾಲ್ಪನಿಕ ವಿಶ್ಲೇಷಣೆಯ ಕುರಿತಾದ ಸಾಹಿತ್ಯಕ್ಕೆ ಕೊರತೆಯೇನಿಲ್ಲ ಆದರೂ ಸೈದ್ಧಾಂತಿಕ ಚೌಕಟ್ಟನ್ನು ನಿರೂಪಿಸಲು ಬೇಕಾದ ಪಾರಿಕಾಲ್ಪನಿಕ ವಿಶ್ಲೇಷಣೆಯ ರಚನಾ ಸಾಹಿತ್ಯದ ಅಗತ್ಯತೆ ಇದೆ. ಏಕೆಂದರೆ ಭಾರತದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಿಂದ ಪ್ರಭಾವಿತಗೊಂಡು ಕಾರ್ಯನಿರ್ವಹಿಸುತ್ತಿರುವ ಪ್ರಜಾಪ್ರಭುತ್ವದಲ್ಲಿ ಜಾಗತೀಕರಣದ ಪ್ರಭಾವವು ನಿರ್ಣಾಯಕ ಅಂಶವಾಗಿ ಕಾಣಬರುತ್ತಿದೆ. ತಳಸಮುದಾಯಗಳೆಂದು ಪರಿಗಣಿಸಲ್ಪಟ್ಟ ಬುಡಕಟ್ಟು ಸಮುದಾಯಗಳು ಸಹ ಜಾಗತೀಕರಣ ಮತ್ತು ಪ್ರಜಾಪ್ರಭುತ್ವದಂತಹ ಸಾಮಾನ್ಯ ಪರಿಸರಗಳಿಂದ ದೂರ ಉಳಿಯಲಾರವು ಶಾಸ್ತ್ರಜ್ಞರಿಂದ ನಿರೂಪಿಸಲ್ಪಟ್ಟ ಪರಿಕಲ್ಪನೆಗಳು ಆಯಾ ಕಾಲಘಟ್ಟಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದಿರುತ್ತವೆ. ಬದಲಾದ ಪರಿಸರ ಮತ್ತು ಪರಿಸ್ಥಿತಿಯಲ್ಲಿ ಆ ಪರಿಕಲ್ಪನೆಗಳನ್ನು ಪರೀಕ್ಷಿಸಿ ವಿಶ್ಲೇಷಿಸುವುದು ಬುಡಕಟ್ಟು ಸಮುದಾಯಗಳು ಮತ್ತು ಅವುಗಳ ಸರ್ವೋತೋಮುಖ ಹಿತದೃಷ್ಟಿಯಿಂದ ಅತ್ಯಗತ್ಯ ಭಾರತವು ವಿವಿಧ ಜಾತಿ, ಜನಾಂಗ ಸಮುದಾಯಗಳಿಂದ ಕೂಡಿದ ಜನರನ್ನು ಹೊಂದಿದೆ. ಭಾರತದ ವಿಭಿನ್ನ ಭೌಗೋಳಿಕ ನೆಲೆಯಲ್ಲಿ ನೆಲೆಸಿರುವ ಬುಡಕಟ್ಟು ಸಮುದಾಯವು ಸಮಾಜದ ಮುಖ್ಯವಾಹಿನಿಂದ ಬೇರ್ಪಟ್ಟಿದೆ. ಬುಡಕಟ್ಟು ಸಮುದಾಯವು ತಾವು ವಾಸಿಸುತ್ತಿರುವ ಭೂನೆಲೆಯಲ್ಲಿ, ಮೂಲನಿವಾಸಿಗಳಾಗಿದ್ದು ಆ ನೆಲದ ಮಣ್ಣಿನ ಮಕ್ಕಳಾಗಿದ್ದಾರೆ.

ಭಾರತದಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯವು ಒಂದು ಸಮಾಜದಿಂದ ಮತ್ತೊಂದು ಸಮಾಜಕ್ಕೆ ಭಿನ್ನವಾಗಿದೆ. ಈ ನೆಲೆಯಲ್ಲಿ ಮಾನವ ಶಾಸ್ತ್ರಜ್ಞರು ಬುಡಕಟ್ಟು ಸಮುದಾಯದ ಪರಿಕಲ್ಪನೆಯನ್ನು ವ್ಯಾಖ್ಯಾನಿಸಿದ್ದಾರೆ ಸಾರ್ವಜನಿಕ ನೀತಿ ಮತ್ತು ಅಭಿವೃದ್ಧಿ ಅಡಳಿತವನ್ನು ಸಾಧಿಸುವಲ್ಲಿ ಬುಡಕಟ್ಟು ಜನಸಮುದಾಯ'ದ ಪರಿಕಲ್ಪನೆಯನ್ನು ವ್ಯಾಖ್ಯಾನಿಸುವ ಅಗತ್ಯತೆಯಿದ್ದು ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಬಂಧವು ಒಂದು ಪುಟ್ಟ ಪ್ರಯತ್ನವಾಗಿದೆ.

ಭಾರತವು ವಿವಿಧ ಜಾತಿಯ ಸಮುದಾಯಗಳ ರಾಷ್ಟ್ರವಾಗಿದ್ದು ಅನೇಕ ಬಗೆಯ ಜೀವನ ಕ್ರಮಗಳುಳ್ಳ ಜನಾಂಗಗಳಿಂದ ಬೆಸೆಯಲ್ಪಟ್ಟಿದೆ. ಸಮಾಜೊಐತಿಹಾಸಿಕ ಮತ್ತು ಪಾರಂಪರಿಕ ಕಾರಣಗಳಿಂದಾಗಿ ಕೆಲವು ಸಮುದಾಯಗಳು ತೀರಾ ಹಿಂದುಳಿದಿದ್ದು ಗುಡ್ಡಗಾಡು ಪ್ರದೇಶಗಳಲ್ಲಿ ಅತೀ ಕೆಳಸ್ತರದ ಜೀವನವನ್ನು ನಡೆಸುತ್ತಿದ್ದಾರೆ. ಇವರ ಪ್ರಾದೇಶಿಕತೆ, ಭಾಷೆ, ಜೀವನಕ್ರಮ ಮುಂತಾದ ವಿಷಯಗಳಲ್ಲಿ ಭಿನ್ನತೆ ಇದೆ. ಇಂತಹ ಸಮುದಾಯಗಳಲ್ಲಿ ಬುಡಕಟು ಸಮುದಾಯವು ಒಂದಾಗಿದ್ದು ಇವರ ಬಗ್ಗೆ ನಿರಂತರವಾದ ಅಧ್ಯಯನಗಳು ನಡೆಯುತ್ತಿವೆ.[1]ಬುಡಕಟ್ಟು ಅಧ್ಯಯನ ಮತ್ತು ಸಮುದಾಯ ಅಧ್ಯಯನಗಳಿಗೆ ಭಾರತದಲ್ಲಿ ಸರಿಸುಮಾರು 100 ವರ್ಷಗಳ ಇತಿಹಾಸವಿದೆ. ಜಾಗತಿಕ ಮಟ್ಟದಲ್ಲಿ ರೂಪುಗೊಂಡ ಮಾನವಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರದ ಭಾಗವಾಗಿ ಸಮುದಾಯ ಅಧ್ಯಯನಗಳು ಬೆಳೆದು ಬಂದಿದೆ. 'ಬುಡಕಟ್ಟು' ಅಥವಾ 'ಸಮುದಾಯ' ಪರಿಕಲ್ಪನೆಯ ವಿವಿಧ ಆಯಾಮ ಮತ್ತು ವಿಭಿನ್ನ ದೃಷ್ಟಿಕೋನದಲ್ಲಿ ಹಲವು ವಿದ್ವಾಂಸರಿಂದ ವ್ಯಾಖ್ಯಾನಿಸಲ್ಪಟ್ಟಿದೆ. ಸಂಕೀರ್ಣ ಸಮಾಜವಾಗಿ ಬದಲಾಗುತ್ತಿರುವ ಇಂದಿನ ಜಾಗತಿಕ ಯುಗದಲ್ಲಿ 'ಬುಡಕಟ್ಟು ಸಮುದಾಯಗಳ' ವಿಶಿಷ್ಟ ರೂಪುರೇಷೆಯನ್ನು 'ಬುಡಕಟ್ಟು ಪರಿಕಲ್ಪನೆ'ಯನ್ನು ಪುನರ್ ಪರಿಶೀಲನೆಗೆ ಒಳಪಡಿಸಿ ಸಾಮಾನ್ಯೀಕರಣಗೊಳಿಸುವ ಅಗತ್ಯತೆಯಿದೆ.

ಭಾರತದಲ್ಲಿ 461ಕ್ಕಿಂತಲೂ ಹೆಚ್ಚಿನ ಆದಿವಾಸಿ ಮತ್ತು ಆದಿವಾಸಿ ಉಪಪಂಗಡಗಳಿವೆ.[2] ಇವು ತಮ್ಮ ಸ್ವಾತಂತ್ರ್ಯ, ಸಂಸ್ಕೃತಿ, ಉದ್ಯೋಗ ಮತ್ತು ಭಾಷೆಯ ಅಸ್ತಿತ್ವವನ್ನು ನಿರಂತರವಾಗಿ ಕಾಲಕ್ರಮದಂತೆ ಕಾಯ್ದುಕೊಳ್ಳುತ್ತಾ ಕಾಡು–ಮೇಡು ಮತ್ತು ಗಿರಿಗಳಲ್ಲಿ ವಾಸಿಸುತ್ತಾ ಬಂದಿದ್ದಾರೆ. 2011 ಜನಗಣತಿಯಂತೆ ಭಾರತದಲ್ಲಿ ಆದಿವಾಸಿ ಜನಾಂಗಗಳ ಜನಸಂಖ್ಯೆ 843,26,240. ಭಾರತದ ಒಟ್ಟು ಜನಸಂಖ್ಯೆಯ ಶೇ8.08% ರಷ್ಟಿದೆ.[3] ಭಾರತದಲ್ಲಿ ಶೇ 75% ಭಾಗದಷ್ಟು ಆದಿವಾಸಿ ಬುಡಕಟ್ಟುಗಳು ಮಧ್ಯಪ್ರದೇಶ, ಓರಿಸ್ಸಾ, ಬಿಹಾರ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಇವೆ.[4]ಭಾರತದಲ್ಲಿ ವಾಸಿಸುವ ಆದಿವಾಸಿ ಸಮುದಾಯಗಳಲ್ಲಿ ದೈಹಿಕಲಕ್ಷಣ, ಭಾಷೆ, ಸಂಸ್ಕೃತಿ, ಧರ್ಮ, ಆರ್ಥಿಕಮಟ್ಟ, ವೃತ್ತಿ, ಸಾಮಾಜಿಕ ಮಟ್ಟ, ಆಚಾರ ವಿಚಾರ ಮೂಡನಂಬಿಕೆ, ಸಂಪ್ರದಾಯ ಮುಂತಾದವುಗಳಲ್ಲಿ ಒಂದು ಸಮುದಾಯದಿಂದ ಮತ್ತೊಂದು ಸಮುದಾಯಕ್ಕೆ ಭಿನ್ನತೆ ಇದೆ. ಅಲ್ಲದೆ ತನ್ನದೇ ಆದ ವೈಶಿಷ್ಟ್ಯತೆಯು ಇದೆ. ಅನೇಕ ಆದಿವಾಸಿ ಜನಾಂಗಗಳು ಅಭಿವೃದ್ಧಿಯ ಪಥದಲ್ಲಿ ಸಾಗದೇ ನಾಗರೀಕತೆಯ ಸಂಪರ್ಕವನ್ನು ಕಾಣದೇ ತಮ್ಮದೇ ಆದ ಸಂಪ್ರದಾಯ ನಂಬಿಕೆ. ಮತ್ತು ಆಚಾರ ವಿಚಾರ, ನೀತಿ ನಡತೆಗಳನ್ನು ಮುಂದುವರಿಸಿಕೊಂಡು ನೆಲೆನಿಂತ ಸಮಾಜಕ್ಕಿಂತ ವಿಭಿನ್ನ ಜೀವನ ನಡೆಸುತ್ತಿರುವುದನ್ನು ನೋಡಬಹುದಾಗಿದೆ. ಹಿಂದೂ ಸಮಾಜವು ವಿವಿಧ ಜಾತಿ ಮತ ಹಾಗೂ ಪಂಥಗಳಿಂದ ವಿಭಜನೆಯಾಗಿರುವಂತೆ ಹಲವಾರು ಆದಿವಾಸಿ ಸಮುದಾಯಗಳಲ್ಲಿಯೂ ಈ ತರಹದ ಭಿನ್ನತೆಯನ್ನು ಕಾಣಬಹು

ದಾಗಿದೆ.[5]

ಬುಡಕಟ್ಟು ಜನರು ಮತ್ತು ಬುಡಕಟ್ಟು ಸಮುದಾಯ ಎಂಬ ಪರಿಕಲ್ಪನೆಯ ಕುರಿತು ಶಾಸ್ತ್ರಜ್ಞರಲ್ಲಿ ಒಮ್ಮತ ಅಭಿಪ್ರಾಯವಿಲ್ಲ. ಸಮಾಜ ವಿಜ್ಞಾನಗಳಲ್ಲಿರುವ ವಿವಿಧ ಶಾಸ್ತ್ರದ ಶಾಸ್ತ್ರಜ್ಞರುಗಳು ತಮ್ಮ ತಮ್ಮ ಶಾಸ್ತ್ರಗಳ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಮನೋಭೂಮಿಕೆಗಳು ಮತ್ತು ವಿಧಾನಗಳ ಅನ್ವಯ ಅರ್ಥೈಸಿ ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ.ಸರ್ ಹರ್ಬರ್ಟ್ ರಿಸ್ಲೆ, ವೆರಿಯರ್ ಎಲ್ವಿನ್ ಹಾಗೂ ಎ.ವಿ. ಠಕ್ಕರ್‌ರವರು ಇವರನ್ನು ಆದಿವಾಸಿಗಳು ಅಥವಾ ಮೂಲ ನಿವಾಸಿಗಳು ಎಂದು ಕರೆದಿರುವರು.ಸಾಮಾನ್ಯವಾಗಿ ಒಂದು ದೇಶದ ಮೂಲನಿವಾಸಿಗಳನ್ನು 'ಆದಿವಾಸಿಗಳು' ಎಂದು ಕರೆಯಲಾಗುತ್ತದೆ.6 ಇವರನ್ನು ಸಂಚಾರಿ ಜನಾಂಗ, ಬುಡಕಟ್ಟು ಜನಾಂಗ, ಅರಣ್ಯವಾಸಿಗಳು, ಗಿರಿಜನರು, ಪರಿಶಿಷ್ಟ ವರ್ಗ ಸರ್ವಚೇತನಾವಾದಿಗಳು ಬುಡಕಟ್ಟು ಮುಂತಾದ ಹೆಸರುಗಳಿಂದ ಕರೆಯಲಾಗಿದೆ.[7]

ಭಾರತದ ಇಂಪೀರಿಯಲ್ ಗೆಜೆಟಿಯರ್ ಪ್ರಕಾರ "ಆದಿವಾಸಿ ಸಮುದಾಯವು ಹಲವಾರು ಕುಟುಂಬಗಳ ಸಂಗ್ರಹವಾಗಿದ್ದು ಒಂದೇ ಹೆಸರನ್ನು ಹೊಂದಿದ್ದು, ಒಂದೇ ಭಾಷೆಯನ್ನಾಡುತ್ತಾ ನಿರ್ದಿಷ್ಟ ಭೂ ಪ್ರದೇಶದಲ್ಲಿ ವಾಸಿಸುತ್ತಾ ಮೂಲತಃ ಒಳಬಾಂಧವ್ಯ ಸಮೂಹವಾಗಿರುವುದು".[8]

ಅಮೇರಿಕನ್ ವಿಶ್ವಕೋಶದ ಪ್ರಕಾರ "ನಾಡಿನ ಕಾನೂನಿಗಿಂತ ಭಿನ್ನವಾದ ಸಂಪ್ರದಾಯಗಳನ್ನು ಇಂದಿಗೂ ಪರಿಪಾಲಿಸಿಕೊಂಡು ಬರುತ್ತಿರುವ ಜನರನ್ನು ಸೂಚಿಸಲು ಬಳಸಲಾಗುತ್ತಿರುವ ಪದ".9

ಬುಡಕಟ್ಟು ಶಬ್ಧದ ಅರ್ಥವನ್ನು ಅತೀ ಸರಳವಾಗಿ ಎರಡೇ ವಾಕ್ಯಗಳಲ್ಲಿ ಸುಪ್ರಸಿದ್ಧ ಮಾನವಶಾಸ್ತ್ರಜ್ಞ ಕ್ರೋಬರ್ (1948) ಈ ರೀತಿ ವಿವರಿಸುತ್ತಾರೆ. "ಬುಡಕಟ್ಟು ಜನಾಂಗವು ಚಿಕ್ಕದಾಗಿ, ಜಂಟಿಯಾಗಿ ಹಾಗೂ ಒಂದಕ್ಕೊಂದು ಹೆಣೆದಂತಿರುವ ಸಾಮಾಜಿಕ ಸಂಬಂಧಗಳನ್ನು ಅಳವಡಿಸಿಕೊಂಡು ವ್ಯವಸ್ಥಿತವಾಗಿ ರಚಿತವಾಗಿರುವ ಸಮಾಜ.10 ಡಬ್ಲ್ಯೂ.ಹೆಚ್.ಆರ್.ರಿವರ್ಸ್ ಎಂಬ ಮಾನವ ವಿಜ್ಞಾನಿಯ ಪ್ರಕಾರ 'ಸಾಮಾನ್ಯವಾದ ಭಾಷೆಯನ್ನಾಡುವ ಒಂದೇ ರೀತಿಯ ಸಾಮಾಜಿಕ ಮತ್ತು ರಾಜಕೀಯ ರಚನೆಯನ್ನೊಳಗೊಂಡಿರುವ ಯುದ್ಧ ಹಾಗೂ ಇನ್ನಿತರ ಗಂಡಾಂತರಗಳನ್ನು ಒಂದೇ ರೀತಿಯಾಗಿ (ಸಾಮೂಹಿಕವಾಗಿ) ಎದುರಿಸುವ ಸರಳ ಸಮೂಹಗಳ ಸದಸ್ಯರೇ ಆದಿವಾಸಿಗಳು".[11] ಮಾನವಶಾಸ್ತ್ರಜ್ಞರಾದ ಕ್ರೋಬರ್ ಮತ್ತು ರಿವರ್ಸ್‌ರವರು ಬುಡಕಟ್ಟು ಜನಾಂಗವನ್ನು ಸಾಮಾಜಿಕ ಸಂಬಂಧಗಳ ಹಿನ್ನಲೆಯಲ್ಲಿ ಗುರುತಿಸಿದ್ದ ಚಿಕ್ಕದಾದ ಸಾಮಾಜಿಕ ಮತ್ತು ರಾಜಕೀಯವಾಗಿ ತನ್ನದೇ ಆದ ಸಂರಚನೆಯನ್ನು ಹೊಂದಿರುವ ಗುಂಪಾಗಿದ್ದು ತನ್ನದೇ ಆದ ಭಾಷೆಯನ್ನಾಡುತ್ತಾರೆ ಎಂದಿದ್ದಾರೆ.

ಆದರೆ ಮತ್ತೊಬ್ಬ ಮಾನವಶಾಸ್ತ್ರಜ್ಞರಾದ ಪಿಡ್ಡಿಂಗ್‌ಟನ್‌ರವರು ಬುಡಕಟ್ಟು ಸಮುದಾಯಗಳು ಹೊಂದಿರುವ ವಿಶೇಷ ಗುಣಲಕ್ಷಣಗಳ ಆಧಾರದ ಮೇಲೆ ವಿಶಾಲವಾಗಿ ಈ ರೀತಿ ವ್ಯಾಖ್ಯಾನಿಸುತ್ತಾರೆ. ಅವರ ಪ್ರಕಾರ "ಚಿಕ್ಕ ಚಿಕ್ಕ ಸಾಮಾಜಿಕ ಗುಂಪುಗಳಾಗಿ ಹಂಚಿ ತಾಂತ್ರಿಕತೆಯಲ್ಲಿ ಬಹು ಅಲ್ಪ ರೀತಿಯ ಸ್ತರದಲ್ಲಿದ್ದು, ಸಂಬಂಧ, ಪ್ರಾದೇಶಿಕತೆ ಹಾಗೂ ಆರ್ಥಿಕ ವಿಷಯಗಳಲ್ಲಿ ವೈಶಿಷ್ಟ್ಯತೆ ಹೊಂದಿದ ಇಂತಹ ಗುಣಲಕ್ಷಣಗಳಿಂದೊಡಗೂಡಿದ ಜನಾಂಗಗಳನ್ನು ಬುಡಕಟ್ಟು ಅಥವಾ ಪ್ರಾಚೀನ ಸಮುದಾಯಗಳೆಂದು ಕರೆಯಬಹುದು.[12] ಈ ರೀತಿಯ ವಿಸ್ತೃತ ವಿವರಣೆ ಭಾರತದ ಬುಡಕಟ್ಟು ಜನರಿಗೆ ಅನ್ವಯವಾಗುವುದು.ಪಿಡ್ಡಿಂಗ್‌ಟನ್‌ರವರು ಬುಡಕಟ್ಟು ಸಮುದಾಯವು ತಾಂತ್ರಿಕತೆಯಲ್ಲಿ ಬಹು ಹಿಂದುಳಿದಿರುವುದನ್ನು ಗುರುತಿಸಿದ್ದಾರೆ. ಬುಡಕಟ್ಟು ಸಮುದಾಯವು ಆರ್ಥಿಕತೆಯಲ್ಲಿ ಬಹು ವಿಶಿಷ್ಟವಾದ ಕಸುಬುಗಳನ್ನು ಹೊಂದಿದ್ದರೂ ಇಂದಿಗೂ ಅದನ್ನು ಸಂಪ್ರದಾಯವಾಗಿ ಆಚರಿಸುತ್ತಾ ಬಂದಿದ್ದಾರೆ. ತಾಂತ್ರಿಕತೆಯು ಮುಂದುವರೆಯುತ್ತಿರುವ ಇಂದಿನ ಯುಗದಲ್ಲಿಯೂ ಸಾಮಾಜಿಕ, ಸಾಂಸ್ಕೃತಿಕ ಕಟ್ಟುಪಾಡುಗಳಿಗೆ ಅನುಗುಣವಾಗಿ ಜೀವನವನ್ನು ನಡೆಸುತ್ತಿದ್ದಾರೆ.

[1] ಡಿ.ಎನ್.ಮಜಮ್‌ದಾರ್ ರವರ ಪ್ರಕಾರ "ಆದಿವಾಸಿಗಳೆಂದರೆ ಹಲವಾರು ಕುಟುಂಬಗಳ ಸಮೂಹವು ಸಾಮಾನ್ಯ ನಾಮಾಂಕಿತವನ್ನು ಹೊಂದಿರುವ ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿರುವ, ವಿಶೇಷ ಭಾಷೆಗಳನ್ನಾಡುವ ವಿವಾಹ ಉದ್ಯೋಗಗಳ ಬಗೆಗೆ ಕೆಲವೊಂದು ನಿಶ್ಚಿತ ಕ್ರಿಯಾ ವಿಧಾನವನ್ನೊಳಗೊಂಡಿರುವ ಪರಸ್ಪರ ಸಹಕಾರ ಹಾಗೂ ತಿಳುವಳಿಕೆಗಳ ಮೇಲೆ ನೆಲೆಸಿರುವ ಸಮುದಾಯವನ್ನೇ ಆದಿವಾಸಿಗಳೆಂದು ಕರೆಯಲಾಗಿದೆ.[13] ಡಿ.ಎನ್. ಮಜೂಂದಾರ್‌ರವರು ಬುಡಕಟ್ಟು ಸಮುದಾಯವನ್ನು ನಾಮಾಂಕಿತದ ನಿರ್ದಿಷ್ಟವಾದ ಭಾಷೆ, ನೆಲೆ, ವಿವಾಹ, ಉದ್ಯೋಗದ ಹಿನ್ನೆಲೆಯಲ್ಲಿ ಗುರುತಿಸಿದ್ದು ಬುಡಕಟ್ಟು ಸಮುದಾಯವು ವಿಶಿಷ್ಟ ನಾಮಾಂಕಿತವನ್ನು ಒಳಗೊಂಡು ಅಸ್ತಿತ್ವದಲ್ಲಿದೆ. ಭಾರತದಲ್ಲಿ ಸಂವಿಧಾನ ಮಾನ್ಯತೆ ಮಾಡಿರುವ 234 ಬುಡಕಟ್ಟು ಸಮುದಾಯವಿದ್ದು ಪ್ರತಿಯೊಂದು ಬುಡಕಟ್ಟು ವರ್ಗವು ತಮ್ಮದೇ ಆದ ಆಚಾರ-ವಿಚಾರ, ಭಾಷೆ, ಕಸುಬು ಒಳಭಾಂಧವ್ಯದಂತಹ ವಿವಾಹ ಪದ್ಧತಿಯನ್ನು ಹೊಂದಿದ್ದು ನೆಲೆಸಿದೆ.

ಅಂದ್ರೆ ಬಟೇಲಿ ಎಂಬ ಮಾನವಶಾಸ್ತ್ರಜ್ಞರು ಹೇಳುವಂತೆ "ಬುಡಕಟ್ಟು ಎಂಬ ಶಬ್ಧವು ಒಂದು ವಿಶಿಷ್ಟ ಸಮಾಜದ ಸದಸ್ಯನ್ನಾಗಿ ಒಬ್ಬ ವ್ಯಕ್ತಿಯು ಪಡೆದುಕೊಳ್ಳುವ ಸಾಂಪ್ರಾದಾಯಿಕ ನಂಬಿಕೆ, ಕಲೆ ಹಾಗೂ ಆಚರಣೆಗಳನ್ನು ಸೂಚಿಸುತ್ತದೆ. ಬುಡಕಟ್ಟು ಎಂಬುವುದು ತನಗೆ ಸಾಮಾನ್ಯ ಭಾಷೆ ಹಾಗೂ ಸಂಸ್ಕೃತಿಯ ಮೇಲೆ ಆಧಾರಿತವಾಗಿರುವ ಒಂದು ನಿರ್ದಿಷ್ಟ ಗುರುತು ಮತ್ತು ವ್ಯಕ್ತಿತ್ವವಿದೆ ಎಂಬ ಭಾವನೆಯನ್ನು ಹೊಂದಿರುವ ಸಮೈಕ್ಯವಾದ ಜನಾಂಗೀಯ ಸಮೂಹವಾಗಿರುತ್ತದೆ. ಮತ್ತು ಅದು ನಿಕೃಷ್ಟವಾಗಿರುತ್ತದೆ. ಹಾಗೆಯೇ ಸಾಮಾನ್ಯ ಕಾರ್ಯಾಚರಣೆಯಲ್ಲಿ ತೊಡಗುವಷ್ಟರ ಮಟ್ಟಿಗೆ ಚಿಕ್ಕದಾಗಿರುತ್ತದೆ. [14]

ಫೇರ್ ಚೈಲ್ಡ್ ಇವರು ತಮ್ಮ ಸಮಾಜಶಾಸ್ತ್ರದ ನಿಘಂಟಿನಲ್ಲಿ ಆದಿವಾಸಿ ಸಮುದಾಯವನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ. "ಸಾಮಾನ್ಯವಾಗಿ ಅಸಂಖ್ಯಾತ ರಕ್ತ ಸಂಬಂಧಿಗಳನ್ನು ತಂಡ ಹಾಗೂ ಉಪ ತಂಡಗಳನ್ನು, ನಿಶ್ಚಿತ ಭೂಪ್ರದೇಶವನ್ನು ತನ್ನದೇ ಆದ ರಾಜಕೀಯ ವ್ಯವಸ್ಥೆಯನ್ನು ಪಡೆದು ಹೊರಗಿನವರಿಗೂ ತಮಗೂ ವ್ಯತ್ಯಾಸವಿದೆ ಎಂಬ ಭಾವನೆಗಳನ್ನು ಹೊಂದಿರುವ ಸಾಮಾಜಿಕ ಸಮೂಹವೇ ಆದಿವಾಸಿ ಸಮುದಾಯ" ಎಂದಿದ್ದಾರೆ. [15] ಫೇರ್ ಚೈಲ್ಡ್ ರವರು ನೀಡಿರುವ ವ್ಯಾಖ್ಯಾನವು ವಿಭಿನ್ನವಾಗಿದ್ದು ಇವರು ರಕ್ತ ಸಂಬಂಧ, ಖಚಿತ ಭಾಷೆ, ಒಂದೇ ರಾಜಕೀಯ ವ್ಯವಸ್ಥೆ,

ಸಜಾತಿಯ ಸಂಸ್ಕೃತಿ ಲಕ್ಷಣಗಳನ್ನು ಗುರುತಿಸಿ ಬುಡಕಟ್ಟು ಸಮುದಾಯವು ಸಮಾಜದಲ್ಲಿನ ವ್ಯತ್ಯಾಸವಿದೆ ಎಂದು ತೋರಿಸಿಕೊಳ್ಳುವ ಭಾವನೆಯನ್ನು ಹೊಂದಿದ್ದಾರೆ.

ಗಿಲನ್ ಮತ್ತು ಗಿಲನ್ ರವರ ಪ್ರಕಾರ "ಆದಿವಾಸಿ ಸಮಾಜವೆಂದರೆ ನಿಶ್ಚಿತ ಪ್ರದೇಶದಲ್ಲಿ ನೆಲೆಸಿರುವ ಒಂದೇ ಭಾಷೆ ಹಾಗೂ ಏಕ ರೀತಿಯ ಸಂಸ್ಕೃತಿಯನ್ನು ಹೊಂದಿರುವ ಸಮೂಹಗಳ ಸಮೂಹ" ಎಂದಿದ್ದಾರೆ.[16]ಜಿ.ಪಿ.ಮರ್ಡಕ್ ರವರ ಪ್ರಕಾರ "ಆದಿವಾಸಿ ಎಂದರೆ ಅದು ಒಂದು ಸಾಮಾಜಿಕ ಗುಂಪು, ಅದು ಕೆಲವು ಗೋತ್ರಗಳಿಂದ ಕೂಡಿದ್ದು ಒಂದು ನಿಶ್ಚಿತವಾದ ಭೌಗೋಳಿಕ ಪ್ರದೇಶದಲ್ಲಿ ಒಂದೇ ಭಾಷೆಯನ್ನು ಹೊಂದಿದ್ದು ಒಂದೇ ಸಂಸ್ಕೃತಿ ಒಂದೇ ರಾಜಕೀಯ ರಚನೆ ಇತ್ಯಾದಿಯನ್ನೊಳಗೊಂಡ ಒಂದು ಗುಂಪು." [17] ಎಹರೆನ್ ಫಿಯಲ್ಸ್ ರವರ ಅಭಿಪ್ರಾಯದ ಮೇರೆಗೆ ಆದಿವಾಸಿ ಎಂದರೆ "ಇತರ ಜನಾಂಗದಿಂದ ಬೇರ್ಪಟ್ಟ ಒಂದು ಜನಾಂಗ ಇದು ಒಂದು ಭೌಗೋಳಿಕ ಸ್ಥಳದಲ್ಲಿ ಒಂದೇ ಭಾಷೆಯನ್ನಾಡುವ, ಒಂದೇ ಸಂಪ್ರದಾಯ, ಒಂದೇ ವೃತ್ತಿಯನ್ನು ಹೊಂದಿರುವ ಒಂದು ಸಮೂಹ".[18]

ಬುಗಾರ್ಡ್ಸ್‌ರವರು ರಕ್ಷಣೆಯ ಅವಶ್ಯಕತೆ, ರಕ್ತ ಸಂಬಂಧ, ಒಂದೇ ಧರ್ಮದ ನೆಲೆ ಇವುಗಳ ಅಧಾರವನ್ನು ಹೊಂದಿರುವವರೇ ಆದಿವಾಸಿ ಸಮೂಹವೆಂದು ಅಭಿಪ್ರಾಯ ಪಟ್ಟಿದ್ದಾರೆ. [19]

"ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಅಥವಾ ಅವನ್ನು ತನ್ನದೆಂದು ಹೇಳಿಕೊಳ್ಳುವಂತಹ ರಾಜಕೀಯವಾಗಿ ಅಥವಾ ಸಾಮಾಜಿಕವಾಗಿ ಹೊಂದಿಕೊಂಡಿರುವ ಮತ್ತು ಸ್ವಯಂ ಆಡಳಿತವುಳ್ಳ ಗುಂಪೇ ಬುಡಕಟ್ಟು" ಎಂದು ಲಂಡನ್ನಿನ ರಾಯಲ್ ಅಂಥ್ರೊಪಾಲ ಜಿಕಲ್ ಇನ್ಸ್‌ಸ್ಟಿಟ್ಯೂಟ್ ವ್ಯಾಖ್ಯಾನಿಸುತ್ತದೆ [20]

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಆದಿವಾಸಿಗಳನ್ನು ಅನುಸೂಚಿತ ಪಂಗಡದವರೆಂದು ಕರೆದು 1950ರ ಆಜ್ಞೆಯ ಪ್ರಕಾರ ಆದಿವಾಸಿಗಳ ಬಗ್ಗೆ ಈ ಕೆಳಕಂಡಂತೆ ವಿವರಿಸಲಾಗಿದೆ "ಆದಿವಾಸಿಗಳೆಂದರೆ ಒಬ್ಬರನ್ನೊಬ್ಬರು ಅವಲಂಭಿಸಿರುವ, ಆರ್ಥಿಕವಾಗಿ ಹಿಂದುಳಿದಿರುವ ಅವರ ವೃತ್ತಿಯಾದ ನಿಸರ್ಗದ ಸಂಪನ್ಮೂಲಗಳನ್ನು ಹಾಳುಮಾಡುವ ಅವರ ಆರ್ಥಿಕ ಸ್ಥಿತಿಗತಿಗಳು ಮುಂದುವರೆಯದೇ ಇರುವ ಭೌಗೋಳಿಕವಾಗಿ ಇತರರಿಂದ ಬೇರೆಯಾಗಿರುವ ಒಂದೇ ಭಾಷೆಯನ್ನು ಹೊಂದಿರುವ ಒಂದೇ ರಾಜಕೀಯ ಸಂಸ್ಥೆಯನ್ನು ಹೊಂದಿರುವ ಮತ್ತು ಸಂಪ್ರದಾಯಗಳನ್ನು ಮುಂದುವರಿಯಲಿಚ್ಚಿಸುವ ಜನಾಂಗಗಳು ಎಂದಿದೆ.[21]

ಭಾರತ ಸರ್ಕಾರದ 1950ರ ಆಜ್ಞೆಯು ಬುಡಕಟ್ಟು ಜನರು ಪರಸ್ಪರ ಒಬ್ಬರನ್ನೊಬ್ಬರು ಅವಲಂಭಿಸಿದ್ದು ಭೌಗೋಳಿಕವಾಗಿ ಇತರರಿಂದ ಬೇರೆಯಾಗಿರುವ ಒಂದೇ ಭಾಷೆ, ರಾಜಕೀಯ ಸಂಸ್ಥೆ, ಸಂಪ್ರದಾಯ ಗಳನ್ನು ಹೊಂದಿರುವರೆಂದು ತಿಳಿಸಿರುವುದು ಸ್ವೀಕಾರಾರ್ಹವಾಗಿದೆ. ಆದರೆ ಈ ಜನಾಂಗವು ಅವರ ವೃತ್ತಿಯಾದ ಪ್ರಾಕೃತಿಕ (ನಿಸರ್ಗದ) ಸಂಪನ್ಮೂಲಗಳನ್ನು ಹಾಳುಮಾಡುವ ಪ್ರವೃತ್ತಿಯನ್ನು ಹೊಂದಿರುವವರು ಎಂದು ಹೇಳಿರುವ ಮಾತನ್ನು ಕೂಲಂಕುಶವಾಗಿ ಅವಲೋಕಿಸಿ ಅಲ್ಲಗಳೆಯುವ ಅವಶ್ಯಕತೆ ಪ್ರಕೃತಿಯನ್ನೇ ಆರಾಧ್ಯ ದೇವರೆಂದು ನಂಬಿದ್ದು ಪ್ರಾಕೃತಿಕ ಸಂಪನ್ಮೂಲದ ಸಂರಕ್ಷಕರಾಗಿದ್ದಾರೆ. ಬುಡಕಟ್ಟು ಗಳು ಅರಣ್ಯದ ಪೋಷಕರಾಗಿದ್ದು ಅರಣ್ಯೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಆದಿವಾಸಿಗಳು ಕಾಡುಗಳಿಗೆ, ಹುಲ್ಲುಗಳಿಗೆ ಬೆಂಕಿಯನ್ನು ಹಚ್ಚಿ ಅರಣ್ಯವನ್ನು ನಾಶ ಮಾಡುತ್ತಾರೆಂದು ಪ್ರತೀತ ಇದೆ. ಆದರೆ ಮರಗಳನ್ನು ಬೆಳೆಸುವ ಪ್ರಕ್ರಿಯೆಯಲ್ಲಿ ಮಣ್ಣಿನೊಳಗೆ ಹುದುಗಿರುವ ಬೀಜಗಳಿಗೆ ಉಷ್ಣವನ್ನು ನೀಡುವ ಹಿನ್ನೆಲೆಯಲ್ಲಿ ಮತ್ತು ಪ್ರಾಣಿಗಳಿಗೆ ಹಾಗೂ ಆದಿವಾಸಿಗಳಿಗೆ ಆಹಾರ ಅರಣ್ಯ ಜನ್ಯ ಸಂಪನ್ಮೂಲವನ್ನು ಮರು ಪಡೆಯಲು ಬೆಂಕಿಯನ್ನು ಹಚ್ಚುತ್ತಾರೆ. ಆದಿವಾಸಿಗಳು ಅರಣ್ಯದ ಸಂಪನ್ಮೂಲವನ್ನು ನಾಶ ಮಾಡುವ ಬದಲಾಗಿ ಅವರೆಡರ ನಡುವೆ ಸಮತೋಲನವನ್ನು ಕಾಯ್ದುಕೊಂಡು ಪೋಷಿಸುತ್ತಿರುವ ಅಂಶವು ಸಂಶೋಧನೆಯಿಂದ ದೃಢಪಟ್ಟಿದೆ. ಬುಡಕಟ್ಟು ಜನರ ಹೆಸರಿನಲ್ಲಿ ಸಮಾಜದಲ್ಲಿನ ಅನ್ಯವರ್ಗದವರು ಅರಣ್ಯ ಸಂಪನ್ಮೂಲಗಳನ್ನು ಹಾಳು ಮಾಡುತ್ತಿದ್ದಾರೆ. ಅನೇಕ ಕಾಯ್ದೆ, ಸರಕಾರದ ನೀತಿಗಳನ್ನು ಜಾರಿಗೊಳಿಸಿ ಅವರ ಬದುಕುವ ಹಕ್ಕನ್ನು ಕಸಿದುಕೊಂಡಿದ್ದಾರೆ.

ಒಟ್ಟಾರೆ ಬುಡಕಟ್ಟು ಸಮುದಾಯದ ಪರಿಕಲ್ಪನೆಯನ್ನು ನೋಡಿದಾಗ 'ಬುಡಕಟ್ಟು' ಎಂಬ ಪದಕ್ಕೆ ಸಾಗರ ನಡುವಣ ದ್ವೀಪಗಳಲ್ಲಿ, ಬೆಟ್ಟಗುಡ್ಡಗಳಲ್ಲಿ, ಕಾಡುಗಳಲ್ಲಿ, ಮರಳುಗಾಡುಗಳಲ್ಲಿ ಉಳಿದೆಲ್ಲ ಜನರಿಂದಲೂ ದೂರವಾಗಿ ಪ್ರತ್ಯೇಕವಾಗಿ ವಾಸಿಸುವ, ಪ್ರತ್ಯೇಕ ಸಂಸ್ಕೃತಿಯನ್ನು ಹೊಂದಿರುವ, ನಾಗರೀಕ ಸೌಲಭ್ಯಗಳಿಂದ ದೂರವಾಗಿ ಬದುಕು ಸಾಗಿಸುತ್ತಿರುವ ಜನಸಮುದಾಯಗಳು ಎಂದು ಅರ್ಥೈಸಬಹುದಾಗಿದೆ.22 ಬುಡಕಟ್ಟು ಅಥವಾ ಆದಿವಾಸಿಗಳ ಕುರಿತ ಅಧ್ಯಯನವೆಂದರೆ ಅವರ ಕುಟುಂಬ ವ್ಯವಸ್ಥೆ, ಮದುವೆ, ಸಂಪ್ರದಾಯ, ತೊಟ್ಟಿಲ ಸಂಪ್ರದಾಯ, ಕುಲ ಸಂಪ್ರದಾಯ, ಆಚರಣೆಗಳು ಮನೆದೇವರು ಬಳಿಗಳು, ಸೂತಕ, ಅಡುಗೆ ಮುಂತಾದವುಗಳನ್ನು 'ಮಾನವಶಾಸ್ತ್ರದ' ಅಧ್ಯಯನ ಕ್ರಮದ ಸಿದ್ಧ ಮಾದರಿಯಲ್ಲಿ ಅಧ್ಯಯನ ಮಾಡಿ ದಾಖಲಿಸುವ ರೀತಿ ರೂಡಿಯಲ್ಲಿದೆ. ಬುಡಕಟ್ಟು ಸಮುದಾಯದ ಬಗೆಗೆ ಸಾಕಷ್ಟು ಅಧ್ಯಯನ, ಸಂಶೋಧನೆಗಳು ನಡೆದಿದ್ದರೂ ಸಹ 'ಬುಡಕಟ್ಟು ಸಮುದಾಯದ' ಪರಿಕಲ್ಪನೆಯ ಬಗ್ಗೆ ವಿದ್ವಾಂಸರು ಒಮ್ಮತದ ಅಭಿಪ್ರಾಯವನ್ನು ನೀಡಿಲ್ಲ. ಜೀವನಶೈಲಿ, ಆಚಾರ-ವಿಚಾರಗಳು ಭಿನ್ನವಾಗುತ್ತಿರುವ ಪ್ರಸ್ತುತ ಸಮಾಜದಲ್ಲಿ ಬುಡಕಟ್ಟು ಪರಿಕಲ್ಪನೆಯು ವಿವಿಧ ಆಯಾಮಗಳನ್ನು ಒಳಗೊಂಡು ವ್ಯಾಖ್ಯಾನಿಸಲ್ಪಡುತ್ತಿದೆ. ಈ ಹಿನ್ನಲೆಯಲ್ಲಿ ನೋಡಿದಾಗ ಸರ್.ಬೈನ್ಸ್‌ರವರು ಇವರನ್ನು ಗುಡ್ಡಗಾಡು ಬುಡಕಟ್ಟು ಗಳಾಗಿ ವರ್ಗೀಕರಿಸುವರು. ಗ್ರಿಯರ್‌ಸನ್ ಅವರು ಗುಡ್ಡಗಾಡು ಬುಡಕಟ್ಟುಗಳು ಅಥವಾ ಪಳಗದ ಆದಿವಾಸಿಗಳು (ಪೈಲ್ದರ್ ಅಬಾರಿಜಿನಲ್ಸ್) ಎಂದು ಪರಿಗಣಿಸುವರು. ಫೋಬರ್ಟ್ 'ಸರ್ವಚೇತನಾವಾದಿಗಳು' (ಅನಿಮಿಸ್ಟಸ್) ಎಂದೂ ಸೆಡ್ಡಿನ್ ಮಾರ್ಟಿನ್ ಹಾಗೂ ಹಟ್ಟನ್ 'ಅದೀಮ ಬುಡಕಟ್ಟುಗಳು' ಎಂದೂ, ಎಲ್ವಿನ್ ಬೈ ಬುಡಕಟ್ಟುಗಳನ್ನು 'ದೇಶದ ಮೂಲ ಒಡೆಯರು' ಎಂದು ಕರೆದಿರುವರು. ಇವರನ್ನು ಭಾರತದ ಸುಪ್ರಸಿದ್ಧ ಮಾನವ ವಿಜ್ಞಾನಿ ಹಾಗೂ ಸಮಾಜಶಾಸ್ತ್ರಜ್ಞ ಜಿ.ಎಸ್.ಘೊರೆ ಹಿಂದುಳಿದ ಹಿಂದೂಗಳು ಎಂದಿರುವರು ದೇಸ್ ಮತ್ತು ದಾಸ್ ಇವರನ್ನು 'ದಾರಿದ್ರ್ಯದಿಂದ ಬಳಲುತ್ತಿರುವ ಮಾನವ ಜನಾಂಗ' ಎಂದು ಹೆಸರಿಸಿದ್ದಾರೆ. ರಾಷ್ಟ್ರೀಯ ಜನಸಂಖ್ಯೆಯು ಅತ್ಯಂತ ಪ್ರಾಚೀನ ಮಾನವ ಕುಲವರ್ಗವಾಗಿರುವುದೆಂದು ಭಾವಿಸಿರುವುದರಿಂದ ಈ

ವರ್ಗಗಳನ್ನು ಸೂಚಿಸಲು ಈಚೆಗೆ ಆದಿವಾಸಿಗಳು ಎಂಬುವುದು ಪ್ರಚಲಿತವಾಗಿದೆ.

ಭಾರತ ಸಂವಿಧಾನದ 342ನೇ ವಿಧಿಯಲ್ಲಿ ಆದಿವಾಸಿಗಳನ್ನು 'ಪರಿಶಿಷ್ಟ ಪಂಗಡಗಳು' ಎಂದು ಕರೆಯಲಾಯಿತು. ಇವರನ್ನು ಗಿರಿಜನರು ಎಂದು ಕರೆದು ಸರ್ಕಾರವು ತನ್ನ ರಾಜ್ಯಾಂಗ ರಚನೆಯಲ್ಲಿ ವಿಶೇಷ ಸೌಲಭ್ಯ ಸವಲತ್ತುಗಳನ್ನು ನೀಡಿದೆ. ಆದಿವಾಸಿ ವ್ಯಾಖ್ಯಾನವನ್ನು ಪುನರ್ ಪರಿಶೀಲನೆ ಒಳಪಡಿಸಿದಾಗ ಅನೇಕ ಧ್ವಂದ್ವಾತ್ಮಕ ಅಂಶಗಳು ಹೊರಬರುತ್ತವೆ. ಸಾಮಾನ್ಯವಾಗಿ ನಾಗರೀಕರೆಂದು ಕರೆಸಿಕೊಳ್ಳುವುದರಿಂದ ದೂರವಿದ್ದು ದಟ್ಟವಾದ ಅರಣ್ಯ ಆಳವಾದ ಕಣಿವೆ ಗುಡ್ಡಗಾಡು ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುವವರು ಆದಿವಾಸಿಗಳು ಎಂದು ಕರೆಯಲ್ಪಡುತ್ತಾರೆ. ಇವರಲ್ಲಿ ಅನೇಕರು ಅಲೆಮಾರಿಗಳಾಗಿದ್ದು ತಮಗೂ ತಮ್ಮ ದನಕರುಗಳಿಗೂ ಆಹಾರ ಹುಡುಕಿಕೊಂಡು ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಹೋಗುತ್ತಾರೆ. ಜೀವನ ಸಾಗಿಸಲು ಗೆಡ್ಡೆಗೆಣಸು ಕಾಯಿ ಶೇಖರಿಸುವುದು, ಸಣ್ಣಪುಟ್ಟ ಪ್ರಾಣಿಗಳನ್ನು ಬೇಟೆಯಾಡುವುದು ಅವರಲ್ಲಿ ಸಾಮಾನ್ಯವಾಗಿದೆ. ಅವರು ಒಂಟಿಯಾಗಿ ಜೀವಿಸದೆ ಯಾವಾಗಲೂ ಹತ್ತು ಅಥವಾ ಅದಕ್ಕಿಂತಲೂ ಹೆಚ್ಚು ಮಂದಿ ಗುಂಪಿನಲ್ಲಿಯೇ ವಾಸಿಸುತ್ತಾರೆ ಕೆಲವರು ಜಾನುವಾರುಗಳನ್ನು ಪಳಗಿಸಿಕೊಂಡು ಸಾಕಿ, ಹಾಲು, ಮೊಟ್ಟೆ, ಮಾಂಸ, ಚರ್ಮ, ಜೇನು ಮೊದಲಾದವನ್ನು ಪಡೆಯುತ್ತಾರೆ. ಜೊತೆಗೆ ಪಶು ಪಾಲನೆಗಳೇ ಅವರ ಮುಖ್ಯ ಕಸುಬುಗಳು. ಆದರೆ ಇತ್ತೀಚೆಗೆ ಬೇಸಾಯವನ್ನು ಕಲಿತು ನೀರಿನ ಆಸರೆ ಇರುವ ಕಡೆ ದವಸಧಾನ್ಯ ಬೆಳೆದು ಒಂದು ಕಡೆ ನೆಲೆಸುವುದನ್ನು ಪರಿಪಾಠ ಮಾಡಿಕೊಳ್ಳುತ್ತಿದ್ದಾರೆ.

ಹಿಂದೂ ಸಮಾಜವು ವಿವಿಧ ಜಾತಿ, ಮತ ಹಾಗೂ ಪಂಥಗಳಿಂದ ವಿಭಜನೆಯಾಗಿರುವಂತೆ ಹಲವಾರು ಆದಿವಾಸಿ ಸಮುದಾಯಗಳಲ್ಲಿಯೂ ಈ ತರಹದ ಭಿನ್ನತೆಗಳನ್ನು ಕಾಣಬಹುದು. ಆರ್ಥಿಕವಾಗಿ, ಸಾಮಾಜಿಕವಾಗಿ ತುಚ್ಛೀಕರಿಸಲ್ಪಟ್ಟ ದುರ್ಬೈವಿ ಮಕ್ಕಳೆಂದು ಕರೆಯಬಹುದು. ಆದರೆ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಆ ರೀತಿ ಹೇಳಲಾಗದು. ಅವರಿಗೆ ತಮ್ಮದೇ ಆದ ಸಾಂಸ್ಕೃತಿಕ ಚೌಕಟ್ಟು, ಸಾಮಾಜಿಕ ರೀತಿ ನೀತಿ ಇರುವುದರಿಂದ ಅವರ ಸಂಸ್ಕೃತಿಯನ್ನು ಮೇಲು-ಕೀಳು ಎಂದು ವರ್ಗೀಕರಿಸಲಾಗದು. ಮಾನವಶಾಸ್ತ್ರಜ್ಞರು ಯಾವುದೇ ಸಂಸ್ಕೃತಿಯ ಬಗ್ಗೆ ಈ ತರಹದ ವರ್ಗೀಕರಣವನ್ನು ವಿರೋಧಿಸುತ್ತಾ ಬಂದಿದ್ದಾರೆ. ಪ್ರತಿಯೊಂದು ಸಂಸ್ಕೃತಿಯ ವೈಶಿಷ್ಟ್ಯತೆ ಮತ್ತು ಆಚಾರ-ವಿಚಾರ ಪರಂಪರಾಗತವಾಗಿ ನಡೆದು ಬಂದಿರುವುದರಿಂದ ಅವುಗಳ ಸ್ತರವನ್ನು ಇತರರೊಡನೆ ಹೋಲಿಸುವುದೇ ಆದಲ್ಲಿ ಅದು ಒಂದು ತರಹದ 'ಬಿಮ್ಮು' ಬರುವುದು ಸ್ವಾಭಾವಿಕ ಮತ್ತು ಇಂತಹ ವಿಷಯದಲ್ಲಿ ಭಾವನಾತ್ಮಕ ಇರಬಾರದು ಆದರೆ ಆರ್ಥಿಕವಾಗಿ ಒಂದು ಜನಾಂಗವು ಇನ್ನೊಂದಕ್ಕಿಂತ ಹಿಂದುಳಿದಿರಬಹುದು, ಇದನ್ನು ಆಯಾ ಜನಾಂಗ ಆರ್ಥಿಕ ಹಾಗೂ ಪರಿಸರದ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ ಹಿಂದಿನಿಂದಲೂ ಬುಡಕಟ್ಟು ಜನಾಂಗಗಳು ಸಾಮಾಜಿಕ ಹಾಗೂ ನೈಸರ್ಗಿಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಇವತ್ತಿಗೂ ಕೆಲವರು ಅರೆನಗ್ನ ವ್ಯವಸ್ಥೆಯಲ್ಲಿ ಅಲೆಮಾರಿಗಳಂತೆ ತಿರುಗುತ್ತಾ ಕಾಡು ಪ್ರಾಣಿಗಳನ್ನು ಬೇಟೆಯಾಡುತ್ತಾ ಜೀವನ ಸಾಗಿಸುತ್ತಿದ್ದಾರೆ.

ಬುಡಕಟ್ಟು ಸಮುದಾಯಗಳು ಸಾಮಾನ್ಯವಾಗಿ ಪ್ರಕೃತಿದತ್ತವಾದ ಅರ್ಥವ್ಯವಸಾಯ ಅಥವಾ ಸಂಘಟನೆಗೆ ಹೊಂದಿಕೊಂಡಿರುತ್ತವೆ ಎಂದರೆ ಅವು ಆದಿಮ ತಂತ್ರಜ್ಞಾನವನ್ನು ಪಡೆದಿರುತ್ತವೆ. ಇವನ್ನು ಮುಖ್ಯ ಲಕ್ಷಣಗಳ ಪೈಕಿ ಒಂದು ಎಂದು ಪರಿಗಣಿಸಲಾಗಿದೆ. ಏಕರೂಪತೆ ಅಥವಾ ಸಾಮಾಜಿಕ ಸ್ಥಳೀಕರಣದ ಕೊರತೆಯಿಲ್ಲದಿರುವುದು ಕೂಡ ಬುಡಕಟ್ಟಿನ ಮತ್ತೊಂದು ಲಕ್ಷಣವಾಗಿದೆ. ವರ್ಗಪ್ರಜ್ಞೆ ಅಥವಾ ಸಜಾತಿ ಕೇಂದ್ರಿಯತೆಯು ಕೂಡ ಬುಡಕಟ್ಟು ಜೀವನದ ಮತ್ತೊಂದು ಲಕ್ಷಣವೆಂದು ಪರಿಗಣಿಸಬಹುದು. ಈ ಬುಡಕಟ್ಟು ತೀವ್ರವಾದ ಸಮುದಾಯ (ಸಂಘಟನೆಯಿಂದ) ರೂಪಿತವಾದ 'ಒಳಬಾಂಧವ್ಯ' ವಿವಾಹ ತತ್ವಗಳಿಂದ ಮತ್ತೆ ದುರ್ಬಲಗೊಂಡಿದೆ. ಇದು ಇಂದಿನ ಬುಡಕಟ್ಟು ಪಂಚಾಯಿತಿಗಳ ರೂಪದಲ್ಲಿ ಪ್ರತಿಫಲಿತವಾಗಿದೆ ಎಂದು ಭೌಮಿಕ್‌ರ ದೃಷ್ಟಿಕೋನವಾಗಿದೆ.

ಅನೇಕ ಶತಮಾನಗಳಿಂದಲೂ ಬೆಟ್ಟಗುಡ್ಡಗಳ ಪ್ರದೇಶಗಳಲ್ಲಿ, ಕಾಡುಗಳಲ್ಲಿ, ಹಿಮ-ಪ್ರದೇಶಗಳಲ್ಲಿ, ದ್ವೀಪಗಳಲ್ಲಿ ವಾಸವಾಗಿರುವ ಸಾಮಾಜಿಕ ವರ್ಗಗಳಲ್ಲಿ ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳ ಪ್ರಭಾವಕ್ಕೆ ಸಿಕ್ಕದೇ ತಮ್ಮ ಸಂಸ್ಕೃತಿಯನ್ನು ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದಿರುವುದುಂಟು. ಈ ವರ್ಗಗಳಲ್ಲಿ ರಕ್ತ ಸಂಬಂಧ ಬಹುಮುಖ್ಯವಾದ ಅಂಶ ಇವರ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆ ರಕ್ತ ಸಂಬಂಧದ ಮೇಲೆ ಅವಲಂಬಿತವಾಗಿರುತ್ತದೆ. ಇಂತಹ ಸಾಮಾಜಿಕ ವರ್ಗಗಳು ತುಂಬಾ ಬಿಗಿಕಟ್ಟಾದ ನಿಯಮಗಳನ್ನು ಹೊಂದಿದ್ದು ಹೊರಗಿನವರನ್ನು ಅನುಮಾನದಿಂದಲೇ ನೋಡುವ ರೂಢಿಯಿರುತ್ತದೆ. ಈ ಸಾಮಾಜಿಕ ವರ್ಗಗಳ ಸಂಸ್ಕೃತಿ, ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳಿಗಿಂತ ತೀರಾ ಭಿನ್ನವಾಗಿದ್ದು ತೀರಾ ಹಿಂದುಳಿದವರಂತೆ ಕಂಡುಬರುತ್ತದೆ. ಈ ಜನ ತಮ್ಮದೇ ಪ್ರತ್ಯೇಕವಾದ ಭಾಷೆ, ಆಚಾರ, ವ್ಯವಹಾರ ಸಾಹಿತ್ಯ ಮೊದಲಾದವುಗಳನ್ನು ಹೊಂದಿರುತ್ತಾರೆ. ಇಂತಹ ಸಾಮಾಜಿಕ ವರ್ಗಗಳನ್ನು ಸಾಂಸ್ಕೃತಿಕ ಮಾನವ ವಿಜ್ಞಾನದಲ್ಲಿ ಬುಡಕಟ್ಟುಗಳು ಎಂದು ಕರೆಯುತ್ತಾರೆ.

ಬುಡಕಟ್ಟು ಸಮುದಾಯದ ಜನಸಂಖ್ಯೆಯ ಗಾತ್ರ ಎಷ್ಟಿರಬೇಕು ಎಂಬುವುದರ ಬಗ್ಗೆಯೂ ಭಿನ್ನಾಭಿಪ್ರಾಯವಿದೆ. ಸಾಮಾನ್ಯವಾಗಿ ಬುಡಕಟ್ಟಿನ ಜನಸಂಖ್ಯೆ 5000ವನ್ನು ಮೀರಬಾರದು ಆದರೆ ಭಾರತಕ್ಕೆ ಈ ಸನ್ನಿವೇಶದ ನಿಯಮವು ಅನ್ವಯವಾಗುವುದಿಲ್ಲ. ಐದು ಸಾವಿರ ಜನಸಂಖ್ಯೆಯನ್ನು ಮೀರಿದ ಹಲವಾರು ಬುಡಕಟ್ಟುಗಳಿವೆ. ಸಂತಾಲ್, ಒರೆಯಾನ್, ಮುಂಡಾ, ಬಿಲ್, ಗೋಂಡಿ, ಬೋಡ್ ಮೊದಲಾದ ಬುಡಕಟ್ಟುಗಳನ್ನು ಉದಾಹರಣೆಯಾಗಿ ಕೊಡಬಹುದು. ಇವುಗಳಲ್ಲಿಯೂ ಸಂತಾಲ್, ಬಿಲ್, ಗೋಂಡಿ ಬುಡಕಟ್ಟುಗಳಲ್ಲಿ ಹದಿನೈದು ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯಿದೆ. ಕೇವಲ 600 ಜನರನ್ನು ಮಾತ್ರ ಒಳಗೊಂಡ ತೋಡ್ ಮತ್ತು ಬಿರ್‌ಹಾರ್ ಬುಡಕಟ್ಟುಗಳೂ ಉಂಟು ಕೇವಲ ನೂರು ಜನರಿಂದ ಮಾತ್ರ ಕೂಡಿದ ಅಗೇರಿಯಾ ಬುಡಕಟ್ಟು ಉಂಟು.

ಜನಸಮುದಾಯ ಒಂದು ಬುಡಕಟ್ಟು ಜನ ಸಮುದಾಯ ಎನಿಸಿಕೊಳ್ಳಬೇಕಾದರೆ ಅದಕ್ಕೆ ಪ್ರತ್ಯೇಕವಾದ ಭಾಷೆ ಇರಬೇಕು ಎಂಬುದು ಒಂದು ಸಾಮಾನ್ಯ ವಾದ. ಆದರೆ ಭಾರತದ ಹಿನ್ನೆಲೆಯಲ್ಲಿ ಈ ವಾದವನ್ನು ಪುರಸ್ಕರಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರತ್ಯೇಕವಾದ ಭಾಷೆಯಿರುವ ಬುಡಕಟ್ಟುಗಳಿರುವಂತೆಯೇ ಪ್ರತ್ಯೇಕವಾದ ಭಾಷೆಯಿ

ಲ್ಲದಿರುವ ಬುಡಕಟ್ಟುಗಳೂ ಭಾರತದಲ್ಲಿದೆ. ಅಸ್ಸಾಂನಲ್ಲಿರುವ, ನಾಗಾಲ್ಯಾಂಡಿನಲ್ಲಿರುವ ಬುಡಕಟ್ಟುಗಳಿಗೆ ಸ್ವತಂತ್ರವಾದ ಭಾಷೆಯಿದೆ. ಆದರೆ ಉಳಿದ ಬುಡಕಟ್ಟುಗಳಿಗೆ ಈ ಮಾತು ಅನ್ವಯವಾಗುವುದಿಲ್ಲ. ತಾವು ವಾಸಿಸುವ ಪ್ರದೇಶದಲ್ಲಿ ಬಳಕೆಯಲ್ಲಿರುವ ಭಾಷೆಯ ಉಪಭಾಷೆ ಈ ಬುಡಕಟ್ಟುಗಳ ಭಾಷೆಯಾಗಿರುತ್ತದೆ.

'ಬುಡಕಟ್ಟು ಸಮುದಾಯ' ವೆಂಬ ಸಾಮಾಜಿಕ ಸಂಗತಿಯು ವಿವಿಧ ಪರಿಕಲ್ಪನೆಗಳಿಂದ ನಿರೂಪಿಸಲ್ಪಟ್ಟಿದೆ. ವಿವಿಧ ಸನ್ನಿವೇಶಗಳಲ್ಲಿ ವಿವಿಧ ದೃಷ್ಟಿಕೋನಗಳಿಂದ ವ್ಯಾಖ್ಯಾನಿಸಿ ವಿಶ್ಲೇಷಿಸಲ್ಪಟ್ಟ ಈ ಪರಿಕಲ್ಪನೆಯು ಬುಡಕಟ್ಟು ಅಧ್ಯಯನದ ಶಾಸ್ತ್ರೀಯ ಶ್ರೀಮಂತಿಕೆಗೆ ನೆರವಾಗಿದೆ. ಬುಡಕಟ್ಟು ಸಮುದಾಯದ ವಿವಿಧ ಲಕ್ಷಣಗಳನ್ನು ಪರಿಗಣಿಸಿ ಒಂದೇ ಪ್ರದೇಶ, ಒಂದೇ ಭಾಷೆ, ಒಂದೇ ಸಂಸ್ಕೃತಿ, ಒಂದೇ ರಕ್ತ ಸಂಬಂಧ, ಒಂದೇ ಸಾಮಾಜಿಕ ಮತ್ತು ರಾಜಕೀಯ ರಚನೆಯನ್ನು ಹೊಂದಿರುವ ಸಮುದಾಯವನ್ನು ಬುಡಕಟ್ಟು ಜನರೆಂದು ವ್ಯಾಖ್ಯಾನಿಸಬಹುದು. ಮುಖ್ಯವಾಗಿ ಮಾನವಶಾಸ್ತ್ರದಲ್ಲಿ ಮತ್ತು ಸಾಮಾನ್ಯವಾಗಿ ಸಾಮಾಜಿಕ ವಿಜ್ಞಾನದಲ್ಲಿ, ಸಾಮಾನೀಕೃತ ಮತ್ತು ವಿಶೇಷಾತ್ಮಕ ಸಿದ್ಧಾಂತಗಳನ್ನು ಅಭಿವೃದ್ಧಿ ಪಡಿಸಿದಾಗ ಬುಡಕಟ್ಟು ಪರಿಕಲ್ಪನೆಯು ಸ್ಪಷ್ಟವಾಗುತ್ತದೆ.

Foot Notes (ಅಡಿ ಟಿಪ್ಪಣಿಗಳು)

1. The Tribes and Castes of the Central Provinces of India Vol- II R.V. Rusell - Rai Bahudur Herbal – 1961.
2. Indian Census Report 2011.
3. Indian Census Report 2011.
4. Kroeber A.L. 'Anthropology Roll, language, culture, psychology, Roscowr – New York, 1948.
5. ಡಾ. ಭಾಮಿನಿ ರಾಘವಯ್ಯ ಕೊಡಗಿನ ಬುಡಕಟ್ಟುಗಳು ಪ್ರಚಾರ ಪುಸ್ತಕ ಮಾಲೆ ಕಮಲ ಪ್ರಕಾಶನ, ಮೈಸೂರು – 2007.
6. ನಂಜಮಣಿ ಎಂ. ಭಾರತೀಯ ಸಾಮಾಜಿಕ ಸಂಸ್ಥೆಗಳು 1982 (Page 298–328)
7. Thurton and Rangadari Castes and tribes of Southern India (Vol – 7) Madras – 1909.
8. Krober A.L 'Anthropology Race language, Culture, Psychology – Rascowr, Newyork – 1948.
9. Piddington (Ralph) 'Introduction to Social Anthropology' Vol-2 Oliver of Boyd – Edinburgh – 1960.
10. Majumdar Dhrendranath – The affairs of a tribe – A study in Tribal Dynamics – Universal Publishers – Lucknow (Page No. 5).
11. 11,12, 13, 14 ರವರೆಗಿನ ವ್ಯಾಖ್ಯಾನಗಳನ್ನು ಭಾರತೀಯ ಸಮಾಜ ಚ.ನ. ಶಂಕರ್‌ರಾವ್ – ಬೈಭಾರತ್ ಪ್ರಕಾಶನ ಮಂಗಳೂರು – 1995. (Page No. 383) ರಿಂದ ತೆಗೆದುಕೊಳ್ಳಲಾಗಿದೆ.
15. ವಾರ್ಷಿಕ ವರದಿ ಸಮಾಜ ಕಲ್ಯಾಣ ಇಲಾಖೆ – ಕರ್ನಾಟಕ ಸರ್ಕಾರ ಬೆಂಗಳೂರು – 1995–96.
16. Notes and Kaireas on Anthropology – 1954 (Page No. 66)
17. 17 ರಿಂದ 21ರ ವರೆಗಿನ ವ್ಯಾಖ್ಯಾನಗಳನ್ನು 'ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸೋಲಿಗ ಬುಡಕಟ್ಟು ಜನಾಂಗದ ಅಭಿವೃದ್ಧಿಗೆ ಕರ್ನಾಟಕದ ಸರ್ಕಾರದ ಕಾರ್ಯಕ್ರಮಗಳು ಒಂದು ವಿಮರ್ಶಾತ್ಮಕ ಅಧ್ಯಯನ, ಡಾ. ಸುನಂದಮ್ಮ.ಎಸ್. ಅಭಿರುಚಿ ಪ್ರಕಾಶನ ಮೈಸೂರು 2011 ರಿಂದ ತೆಗೆದುಕೊಳ್ಳಲಾಗಿದೆ.
22. ಲೇಖನ : ಗಡಿನಾಡು ಸಂಚಾರಿ 21.05.2012 ಕೊಡಗಿನ ಬುಡಕಟ್ಟುಗಳ ಕುರಿತ ಸಂಶೋಧನಾ ಸಾಧ್ಯತೆಗಳು ಡಾ. ಎಮ್.ಪಿ.ರೇಖಾ ಸಹಾಯಕ ಪ್ರಾಧ್ಯಾಪಕರು ಕಾವೇರಿ ಪದವಿ ಕಾಲೇಜು ಗೋಣಿಕೊಪ್ಪಲು.

ಭಾರತದಲ್ಲಿ ಪ್ರಜಾಪ್ರಭುತ್ವದ ದೃಷ್ಟಿ ಕೋನಗಳು–ಒಂದು ವಿಶ್ಲೇಷಣೆ

* ಚಂದ್ರೇಗೌಡ, ** ವೆಂಕಟೇಗೌಡ

* ಯು.ಜಿ.ಸಿ. ಎಂ.ಆರ್.ಪಿ. ಶಿಷ್ಯವೇತನದಾರರು ಮತ್ತು ಸಂಶೋಧನ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ** ಸಂಶೋಧಕರು ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, (ಕೆ.ಎಸ್.ಒ.ಯು), ಮುಕ್ತಗಂಗೋತ್ರಿ ಮೈಸೂರು. ಮೈಸೂರು

ಪ್ರಜಾಪ್ರಭುತ್ವ ಎನ್ನುವುದು ಆಧುನಿಕ ಸರ್ಕಾರಗಳ ಪ್ರಮುಖವಾದ ವಿದಾನವಾಗಿದೆ. ಆಧುನಿಕ ರಾಜಕೀಯದಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆಯು ಅತೀ ಮುಖ್ಯವಾಗಿ ಚರ್ಚಿತವಾದ ಒಂದು ವಿಷಯವಾಗಿದೆ.ರಾಜ್ಯಸೂತ್ರವನ್ನು ಹಿಡಿದು ಅಪೇಕ್ಷೆಯಂತೆ ರಾಜ್ಯಭಾರವನ್ನುಮಾಡುವುದೇ ಪ್ರಜಾಪ್ರಭುತ್ವ ಇಂದಿನ ಪ್ರಜಾಸರ್ಕಾರ, ಪ್ರಜಾಪ್ರತಿನಿಧಿ ಪ್ರಭುತ್ವ ಎಂದರೆಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದ ಪ್ರತಿನಿಧಿಗಳು ಅಧಿಕಾರರೂಢರಾಗಿ ಆಡಳಿತವನ್ನು ನಿರ್ದೇಶಿಸುತ್ತಾರೆ. ಪ್ರಜಾಪ್ರಭುತ್ವದಲ್ಲಿ ನಿರಂಕುಶ ಅಧಿಕಾರಕ್ಕೆ ಎಡೆಯಿಲ್ಲ, ಪ್ರಜಾವಾಣಿಗೆ ಮನ್ನಣೆ ಸಲ್ಲುತ್ತದೆ. ಪ್ರಜೆಗಳೇ ಅಧಿಕಾರದ ಮೂಲ ಸರ್ಕಾರದ ಆಡಳಿತ ನೀತಿಯು ಮಾರ್ಪಾಡಾಗುವುದು ಜನಗಳ ಅಭಿಪ್ರಾಯವನ್ನು ಅವಲಂಭಿಸಿರುತ್ತದೆ. ಪ್ರಜಾಪ್ರಭುತ್ವ ಜನರಿಂದ ಜನರಿಗಾಗಿರುವ ಅತೀ ದೊಡ್ಡ ಪ್ರಜಾವ್ಯವಸ್ಥೆ. ಪ್ರತಿಯೊಬ್ಬನಿಗೂ ಸಮಾನ ಹಕ್ಕುಗಳು ಇದರ ಮುಖ್ಯ ಲಕ್ಷಣವಾಗಿದೆ. ಸರ್ವಜನರ ಹಿತರಕ್ಷಣೆಯೇ ಪ್ರಜಾಪ್ರಭುತ್ವದ ಮುಖ್ಯ ಉದ್ದೇಶವಾಗಿದ್ದು ಕಾನೂನು ಮತ್ತು ಸಂವಿಧಾನದ ಅಡಿಯಲ್ಲಿ ಎಲ್ಲರೂ ಸಮಾನರು. ಅಡಳಿತವು ಪ್ರತಿಯೊಂದು ಹಳ್ಳಿಯ ಪ್ರತಿಯೊಂದು ಜನರನ್ನೂ ತಲುಪಬೇಕು ಎಂಬುವುದು ಸಮ್ಮ ಪ್ರಜಾಪ್ರಭುತ್ವದ ಗುರಿಯಾಗಿದೆ. ಮೂಲತಃ ಭ್ರಷ್ಟಚಾರವನ್ನು ತಡೆಯಲು ಹುಟ್ಟಿಕೊಂಡ ವ್ಯವಸ್ಥೆ ಇದಾಗಿದ್ದು ಪ್ರಜಾಭಿಮತವನ್ನು ಗೌರವಿಸುತ್ತದೆ. ದೇಶದ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶವನ್ನು ಒದಗಿಸಿ ಕೊಡುತ್ತದೆ. ಭಾರತವು ಪ್ರಜಾಪ್ರಭುತ್ವ ಮಾದರಿಯ ಸರ್ಕಾರವನ್ನು ಹೊಂದಿದೆ.ಮೇಲ್ನೋಟದಿಂದ ಗಮನಿಸಿದಾಗ ಅದರಲ್ಲಿ ಯಾವುದೇ ಲೋಪದೋಷಗಳು ಕಂಡುಬರುವುದಿಲ್ಲ. ಆದರೆ ಆಳವಾಗಿ ಅವಲೋಕಿಸಿದಾಗ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ದೋಷಗಳ ಅರಿವು ಉಂಟಾಗುತ್ತದೆ. ಆದರೆ ಅದನ್ನು ಸರಿಪಡಿಸುವುದು ಏಕ ವ್ಯಕ್ತಿಯಿಂದ ಸಾಧ್ಯವಿಲ್ಲ ಅದನ್ನು ಪ್ರಜಾಸಮೂಹದಿಂದ ಮಾತ್ರ ಸುವ್ಯವಸ್ಥಿತಗೊಳಿಸಬಹುದಾಗಿದೆ. ಜಾಗತೀಕರಣದಿಂದ ಬದಲಾಗುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವವು ವಿವಿಧ ದೃಷ್ಟಿಕೋನ ಅಯಾಮಗಳಿಂದ ವ್ಯಾಖ್ಯಾಲ್ಪಟ್ಟಿದೆ. ಸಮಾಜದಲ್ಲಿ ಪ್ರಜಾಪ್ರಭುತ್ವದ ಕುರಿತಾದ ಸಕಾರಾತ್ಮಕ ಮತ್ತು ನಕಾರಾತ್ಮಕ ಧೋರಣೆಗಳು, ವಾದಗಳು ಹುಟ್ಟಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಬಂಧವು □ಪ್ರಜಾಪ್ರಭುತ್ವದ' ವಿವಿಧ ದೃಷ್ಟಿಕೋನಗಳ ಮೇಲೆ ಬೆಳಕು ಚೆಲ್ಲುತ್ತದೆ.

ಜಗತ್ತಿನ ಪ್ರತಿಷ್ಠಿತ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತವು ಅಗ್ರ ಮಾನ್ಯ ಸ್ಥಾನದಲ್ಲಿದ್ದು ಭಾರತವು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಮ್ಮೆಪಡುವಂತಹ ವಿಚಾರವಾಗಿರುವುದು ನಮಗೆಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಭಾರತವು ಪ್ರಜಾಪ್ರಭುತ್ವವನ್ನು ಕೇವಲ ಪುಸ್ತಕಗಳಲ್ಲಿ ಭಾಷಣಗಳಲ್ಲಿ, ಸಾಹಿತ್ಯಗಳಲ್ಲಿ ಸೀಮಿತವಾಗಿರಿಸದೆ ಆಚರಣೆಯಲ್ಲಿ ತಂದು ಇತರ ರಾಷ್ಟ್ರಗಳಿಗೆ ಮಾದರಿಯಾಗಿದೆ.

ಉದಾರವಾದಿ ಪ್ರಭುತ್ವದ ಹಿನ್ನೆಲೆಯಲ್ಲಿ ಪ್ರಜಾಭಿವೃದ್ಧಿ ಗುರಿಯನ್ನು ಹೊಂದಿರುವ ಪ್ರಜಾಪ್ರಭುತ್ವವು ಒಂದೇ ನಾಣ್ಯದ ಎರಡು ಮುಖಗ ಳಾಗಿವೆ.[1] ಒಕ್ಕೂಟ ವ್ಯವಸ್ಥೆಯನ್ನು ಹೊಂದಿರುವ ಭಾರತದ ಆಡಳಿತ ವ್ಯವಸ್ಥೆಗೆ ಪ್ರಜಾಪ್ರಭುತ್ವ ಸಿದ್ಧಾಂತವು ಅಡಿಪಾಯವು ಅವಶ್ಯಕವೂ ಆಗಿದೆ ಎನ್ನಬಹುದು. ಪ್ರಜೆಗಳಿಂದಲೇ ಅಧಿಕಾರವನ್ನು ಪಡೆದು ಪ್ರಜೆಗಳ ಅಭಿವೃದ್ಧಿಗಾಗಿ ಅಧಿಕಾರವನ್ನು ನಡೆಸುವುದರಿಂದ ಪ್ರಜೆಗಳ ಅಭಿವೃದ್ಧಿ ಯು ವಿಕಸನಗೊಂಡು ರಾಜ್ಯದ ರಾಷ್ಟ್ರದ ಅಭಿವೃದ್ಧಿಗೂ ಪ್ರಜಾಪ್ರಭುತ್ವದ ಯಶಸ್ವಿ ಆಚರಣೆಗೂ ಸಹಾಯವಾಗುತ್ತದೆ. ಭಾರತದ ರಾಜಕೀಯ ಇತಿಹಾಸವನ್ನು ಗಮನಿಸಿದಾಗ ಭಾರತದಲ್ಲಿ ರಾಜಕೀಯ ಪಕ್ಷಗಳು ಮತ್ತು ಪಕ್ಷದ ನಾಯಕರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎನ್ನಬಹುದು.

ಭಾರತವು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಜಾಪ್ರಭುತ್ವದ ಹಿರಿಯಣ್ಣನ ಮಾನ್ಯತೆಯನ್ನು ಪಡೆಯಲು ಭಾರತವು ನಡೆಸಿಕೊಂಡು ಬಂದಿರುವ ಆಡಳಿತ ವ್ಯವಸ್ಥೆ, ಇತರೆ ರಾಷ್ಟ್ರಗಳೊಂದಿಗಿನ ಭಾಂದವ್ಯ ಪರಸ್ಪರ ಸ್ನೇಹ ಸಹಕಾರ, ರಾಷ್ಟ್ರದ ಜನತೆಯ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಆಚರಣೆಗಳಿಗೆ ಮಾನ್ಯತೆ ನೀಡಿರುವುದೇ ಇದಕ್ಕೆ ಕಾರಣ ವಾಗಿದೆ. ಜಾಗತಿಕ ಇತಿಹಾಸದಲ್ಲಿ ಯಾವುದೇ ರಾಷ್ಟ್ರ ಕಂಡುಕೊಂಡ ಅತ್ಯಂತ ಯಶಸ್ವಿ ಆಡಳಿತ ಪ್ರಯೋಗವೆಂದರೆ ಅದು ಪ್ರಜಾಪ್ರಭುತ್ವ ಪದ್ಧತಿಯೆಂಬುವುದು ನಿಚ್ಚಳ.[2]

ಪ್ರಜಾಪ್ರಭುತ್ವದ ಬಗ್ಗೆ ಭಾರತದ ಪ್ರಜೆಗಳು ಹೊಂದಿರುವ ಧನಾತ್ಮಕ ದೃಷ್ಟಿ ಕೋನವನ್ನು ತಿಳಿಯುವ ಅಗತ್ಯತೆ ಇದೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಸಾಕಷ್ಟು ಬಲಿದಾನ ಹಾಗೂ ಹೋರಾಟಗಳ ಫಲವಾಗಿ ಪ್ರಾಪ್ತವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಸಮಾನರಾಗಿದ್ದು ಸಮಾನ ಹಕ್ಕು, ಸ್ವಾತಂತ್ರ್ಯವನ್ನು ಹೊಂದಿರುವರು. ಭಾರತದ ಸಂವಿಧಾನವು ಮೂಲಭೂತ ಹಕ್ಕುಗಳನ್ನು, ಕಲ್ಪಿಸಿದ್ದು ಅವುಗಳ ರಕ್ಷಣೆಯ ಹೊಣೆಯನ್ನು ಹೊಂದಿದೆ 'ಪ್ರಜೆಗಳೆಲ್ಲಾ ಪ್ರಭುಗಳು' ಎಂಬ ಆದರ್ಶ ತತ್ವವನ್ನು ತನ್ನ ಧೈರ್ಯವಾಗಿರಿಸಿ ಯಶಸ್ವಿಯತ್ತ ದಾಪುಗಾಲು ಇಡುತ್ತಿದೆ.[3]

ಜಾಗತೀಕರಣದಿಂದ ಬದಲಾಗುತ್ತಿರುವ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವದ ಬೇರು, ಪ್ರಜಾಪ್ರಭುತ್ವದ ಅಭಿವೃದ್ಧಿ, ಸಮಗ್ರ ರಾಜಕೀಯ ಪ್ರಜೆಗಳ ಅಭಿವೃದ್ಧಿ, ಪ್ರಸ್ತುತ ಪ್ರಜಾಪ್ರಭುತ್ವವು ಸಾಗುತ್ತಾ ಬಂದಿರುವ ಹಾದಿ, ಪ್ರಜಾಪ್ರಭುತ್ವದ ಪ್ರಸ್ತುತ ಮೌಲ್ಯವನ್ನು ತಿಳಿಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ದೃಷ್ಟಿಕೋನವನ್ನು ವಿಶ್ಲೇಷಿಸಿ ವಿಮರ್ಶಿಸುವುದು ಮಹತ್ವ ಪಡೆದಿದೆ.

ಭಾರತದಲ್ಲಿ ಪ್ರಜಾಪ್ರಭುತ್ವನ್ನು ಯಶಸ್ವಿಯಾಗಿ ಮುನ್ನಡೆಸುವ ಹೊಣೆ ರಾಜಕೀಯ ಪಕ್ಷಗಳಾದ್ದಾಗಿರುತ್ತದೆ.[4] ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವದ ಗುರಿ ಸಾಧನೆಗೆ ಬೆನ್ನೆಲುಬಾಗಿ ಕಾರ್ಯನಿರ್ವಹಿಸ ಬೇಕಾಗಿದ್ದು, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಆಡಳಿತ ವ್ಯವಸ್ಥೆಯ ದಿಕ್ಕು ತಪ್ಪಿ ಹೋಗದಂತೆ ಕಾಪಾಡುವ ಜವಾಬ್ದಾರಿಯು ರಾಜಕೀಯ ಪಕ್ಷಗಳ ಮೇಲಿದೆ.

ಆದರೆ ಪ್ರಸ್ತುತ ರಾಜಕೀಯ ಪಕ್ಷಗಳು ಮತ್ತು ಸರ್ಕಾರದ ಕಾರ್ಯ ಚಟುವಟಿಕೆಯನ್ನು ಗಮನಿಸಿದಾಗ ಪ್ರಜಾಪ್ರಭುತ್ವವನ್ನು ಪುನರ್ ವ್ಯಾಖ್ಯಾನಿಸುವ ಅಗತ್ಯತೆ ಕಂಡು ಬರುತ್ತದೆ. ಪ್ರಜಾಪ್ರಭುತ್ವವೆಂದರೆ ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಎಂಬ ಅಬ್ರಹಾಂ ಲಿಂಕನ್‌ರ ಮಾತನ್ನು ಮರೆತಂತಿದೆ. ಬದಲಾಗಿ 'ಪ್ರಜಾ ಪ್ರತಿನಿಧಿಯಿಂದ, ಪ್ರಜಾಪ್ರತಿನಿಧಿಗಾಗಿ, ಪ್ರಜಾಪ್ರತಿನಿಧಿಗೋಸ್ಕರ' ಎನ್ನುವಂತಿದೆ.[5] ಏಕೆಂದರೆ ಚುನಾವಣೆಯ ಮೊದಲು ಮತ ಭಿಕ್ಷೆ, ನಂತರ ಮತ ಹಾಕಿದವರನ್ನು ಭಿಕ್ಷುಕರಂತೆ ಕಾಣುವುದು. ಇದು ನಮ್ಮನ್ನಾಳುವ ಪ್ರತಿನಿಧಿಗಳು ಅರ್ಥೈಸಿಕೊಂಡಿರುವುದಾಗಿದೆ.

ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿ, ಪ್ರಜೆಗಳ ಅಭಿವೃದ್ಧಿ ಪ್ರಜಾಪ್ರಭುತ್ವ ಯಶಸ್ವಿಯ ಮೆಟ್ಟಿಲಾಗಿದೆ. ಪ್ರಜಾಭಿವೃದ್ಧಿಗಾಗಿಯೇ ರಚಿತಗೊಂಡಿರುವ ಸಂವಿಧಾನವು ತನ್ನ ಬದ್ಧತೆಯನ್ನು ಕಾಯ್ದುಕೊಳ್ಳ ಬೇಕಾದ ಅವಶ್ಯಕತೆ ಇದೆ. ಸಂವಿಧಾನಕ್ಕೆ ವಿರುದ್ಧವಾಗಿ ಆಳ್ವಿಕೆ ನಡೆಸಿದಾಗ ಜನರು ಅಕ್ರೋಶಭರಿತರಾಗಿ ಪ್ರಜಾಪ್ರಭುತ್ವ ಸಿದ್ಧಾಂತವನ್ನು ವಿರೋಧಿಸು ವುದರಲ್ಲಿ ತಪ್ಪೇನು ಇಲ್ಲ ಎಂದು ಹೇಳಬಹುದು. ಪ್ರಜಾಪ್ರಭುತ್ವದ ಯಶಸ್ವಿಗಾಗಿ ಆಸ್ತಿತ್ವಕ್ಕೆ ಬಂದಿರುವ ರಾಜಕೀಯ ಪಕ್ಷಗಳು ತಮ್ಮ ಕರ್ತವ್ಯವನ್ನು ಅರಿತು ಕಾರ್ಯ ನಿರ್ವಹಿಸದೆ ಕೇವಲ ಅಧಿಕಾರ, ಹಣದ ಆಮೀಷಕ್ಕಾಗಿ, ಜಾಗತೀಕರಣದ ಬದಲಾವಣೆಗೆ ಒಳಪಟ್ಟು ಕಾರ್ಯ ನಿರ್ವಹಿಸಿದಾಗ ಆಡಳಿತವು ದುರಾಡಳಿತವಾಗಿ ಪರಿಣಮಿಸಿ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯ ಭುನಾದಿಯನ್ನು ಅಲುಗಾಡಿಸುವಂತೆ ಮಾಡುತ್ತಿದೆ.

ಯಾವುದೇ ಒಂದು ರಾಜಕೀಯ ವ್ಯವಸ್ಥೆಯಲ್ಲಿ ಕಂಡುಬರುವ, ಆಚರಿಸುವಂತಹ ರೀತಿ–ನೀತಿಗಳು ಸಾರ್ವತ್ರಿಕವಾದ ಸತ್ಯವಲ್ಲ. ಒಂದು ಕಾಲದಲ್ಲಿ ಸರ್ವಶ್ರೇಷ್ಠ ಎಂದು ಕಂಡು ಬರುವ ವ್ಯವಸ್ಥೆಯು, ಜನರ ದೃಷ್ಟಿಕೋನವು ಬದಲಾದಂತೆ ವ್ಯವಸ್ಥೆಯಲ್ಲಿನ ದೋಷಗಳನ್ನು ತಿಳಿಸುತ್ತದೆ.[6] ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯು ವೋಟ್ ಬ್ಯಾಂಕ್ ವ್ಯವಸ್ಥೆಯಾಗಿ ಬದಲಾಗಿದೆ. ನಾವು ನಮ್ಮ ಪ್ರತಿನಿಧಿಗಳನ್ನು ಆರಿಸಿಕೊಳ್ಳಲು ಅರ್ಹರೇ? ಎಂಬ ಪ್ರಶ್ನೆಗೆ ಉತ್ತರ ಕಂಡು ಕೊಳ್ಳುವ ದ್ವಂಧಾತ್ಮಕ ತೋಳಲಾಟದಲ್ಲಿ ಸಿಲುಕಿದ್ದೇವೆ. ರಾಜಕೀಯ ಪಕ್ಷಗಳು ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರೆ ಅದನ್ನು ಜನರ ಕಲ್ಯಾಣಕ್ಕಾಗಿ ಎಂದು ಪರಿಬಿಂಬಿಸುವ ಬದಲಿಗೆ ತಮ್ಮ ಸರ್ಕಾರದ

(ಸಂಕುಚಿತವಾದ ದೃಷ್ಟಿ / ಸ್ವಾರ್ಥತೆ) ಕಾರ್ಯಕ್ರಮವೆಂದು ಬಿಂಬಿಸುತ್ತಾರೆ.

ನಮ್ಮ ರಾಜಕೀಯ ವ್ಯವಸ್ಥೆ ದಲಿತರು, ಹಿಂದುಳಿದವರ ಏಳಿಗೆಗೆಂದು ಜಾರಿಯಾದ ಮೀಸಲಾತಿ ವ್ಯವಸ್ಥೆ ಇಂದು ರಾಜಕೀಯ ಪಕ್ಷಗಳ ಪ್ರಮುಖ ರಾಜಕೀಯ ವಿಷಯವಾಗಿದೆ. ಹಣ ಮತ್ತು ಜಾತಿಗಾಗಿ, ಹಣ ಮತ್ತು ಜಾತಿಗೋಸ್ಕರ, ಹಣ ಮತ್ತು ಜಾತಿಯ ಬೆಂಬಲದಿಂದ ಇರುವ ವ್ಯವಸ್ಥೆಯಾಗಿ ಮಾರ್ಪಟ್ಟಿದೆ.[7] ಇಲ್ಲಿ ಮತ ನೀಡಿ ಅಭ್ಯರ್ಥಿಗಳನ್ನು ಗೆಲ್ಲಿಸುವುದು ಪ್ರಜೆಗಳಾದರೂ ಕೂಡ ಅವರ ಮನೋಸ್ಥಿತಿಯನ್ನು ಸುಲಭವಾಗಿ ವಶಪಡಿಸಿಕೊಳ್ಳಲಾಗುತ್ತಿದೆ. 'ಮತಬ್ಯಾಂಕು ರಾಜಕಾರಣ' ಯಾವಾಗ ಜಾತಿ ಆಧಾರದಲ್ಲಿ ಅಭ್ಯರ್ಥಿಗಳ ಆಯ್ಕೆಗೆ ಪ್ರಾಮುಖ್ಯತೆ ನೀಡಿತೋ ಆ ಘಳಿಗೆಯಿಂದ ಇದು ಪಿಡುಗಾಗಿ ಪರಿಣಮಿಸಿದೆ.

ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯು ಕೋಮುವಾದಿ ಮತ್ತು ಜಾತಿ ರಾಜಕಾರಣದ ಪರವಾಗಿದೆ. ಇದನ್ನು ಎಷ್ಟೊ ರಾಜಕೀಯ ಪಕ್ಷಗಳು ತಮ್ಮ ಆಯುಧವನ್ನಾಗಿ ಬಳಸಿಕೊಳ್ಳುತ್ತದೆ ಆಯಾ ಪ್ರದೇಶದಲ್ಲಿ ಆಯಾ ಜಾತಿ, ಕೋಮಿನ ಗುಂಪೇ ಅಲ್ಲಿನ ನಿರ್ಣಾಯಕ ಮತವನ್ನು ನಿರ್ಧರಿಸಿ ಆ ವರ್ಗದ ವ್ಯಕ್ತಿಗಳನ್ನೇ ಅಭ್ಯರ್ಥಿಗಳನ್ನಾಗಿ ಪರಿವರ್ತಿಸುತ್ತಿದೆ. ಇದು 'ಜಾತ್ಯಾತೀತತೆ' ಸಂವಿಧಾನದ ತತ್ವಗಳಿಗೆ ವಿರೋಧಾಭಾಸವನ್ನುಂಟು ಮಾಡುತ್ತದೆ. ಇದು ದೇಶದ ಜನರಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಒಡಕಿಗೆ ಕಾರಣವಾಗುತ್ತದೆ. ಇದರಿಂದ ಪ್ರತ್ಯೇಕತಾ ಮನೋಭಾವವುಂಟಾಗುತ್ತದೆ.[8] ಇದರಿಂದಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯು ಅಸ್ಥಿರವಾಗುತ್ತದೆ.

ಉದಾ : ಪ್ರತ್ಯೇಕತೆಗಾಗಿ ಕಂಡು ಬರುತ್ತಿರುವ ಹೋರಾಟಗಳು, ಬೋಡೋಲ್ಯಾಂಡ್, ಕೊಡವ ಲ್ಯಾಂಡ್ ಹೋರಾಟ ಇತ್ಯಾದಿಗಳು ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ತಳಪಾಯವನ್ನು ಅಲುಗಾಡಿಸುತ್ತದೆ.

ಇಂದು ದಿನದಿಂದ ದಿನಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಎಷ್ಟೋ ಭ್ರಷ್ಟಾಚಾರದ ಹಗರಣಗಳು ವರದಿಯಾಗುತ್ತಲೇ ಇದೆ. ಒಂದು ವೇಳೆ ಸಮಾಜದಲ್ಲಿ ಅಂತಸ್ತಿನ ವಿಷಯದಲ್ಲಿ ಎಲ್ಲರೂ ಸಮಾನವಾಗಿದ್ದರೆ ಎಲ್ಲರ ಬಳಿಯೂ ಸಮನಾಗಿ ಸಂಪತ್ತು ಇರಬೇಕಿತ್ತು ಆದರೆ ಇದು ಎಲ್ಲೂ ಕಾಣುವುದಿಲ್ಲ. ಏಕೆಂದರೆ ಬಡಜನರ ಅಜ್ಞಾನ, ಅನಕ್ಷರತೆಯನ್ನು ದುರುಪಯೋಗ ಪಡಿಸಿಕೊಂಡು ಆಡಳಿತವನ್ನು ನಡೆಸುತ್ತಿರುವುದರಿಂದ ಶ್ರೀಮಂತ ಭ್ರಷ್ಟಾಚಾರಿಗಳು ಹೆಚ್ಚಾಗಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೈತಿಕ, ಮೌಲ್ಯಗಳಿಗೆ ಬೆಲೆ ಇಲ್ಲದಂತಾಗಿದೆ.[9] ಅಧಿಕಾರ, ಹಣ, ಜಾತಿ ಧರ್ಮದ ಬಲ ಯಾರಿಗೆ ಇದೆಯೋ ಅವರು ಮಾತ್ರ ರಾಜಕೀಯ ಮಾಡುವ ಸ್ಥಿತಿಯಲ್ಲಿ ಇರುವರು ಇದರಿಂದ ಆಡಳಿತದ ಮೇಲೆ ಜನರು ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಯಾವುದೇ ಕ್ಷೇತ್ರದಲ್ಲಿ ಶ್ರೇಷ್ಠ ಅಧಿಕಾರಿ ಎನ್ನಿಸಿಕೊಂಡವರೂ ಕೂಡ ಸರ್ಕಾರದ ನೀತಿ, ನಿಯಮಗಳಿಂದ ಅಸಂತೋಷಕ್ಕೀಡಾಗ ಬೇಕಾಗುತ್ತದೆ. ರಾಜಕೀಯ ಪ್ರಾಬಲ್ಯದಿಂದ ನಿಷ್ಕಾವಂತ ಅಧಿಕಾರಿಗಳು ಅವರು ಆಡಿಸುವ ಗೊಂಬೆಗಳಾಗಿ ಮಾರ್ಪಡಾಗಿದ್ದಾರೆ.

ಪ್ರಜೆಗಳಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಪ್ರಮುಖ ಪಾತ್ರ ವಹಿಸುವುದರಿಂದ ರಾಜಕೀಯ ಪಕ್ಷಗಳ ಕೆಸರೆರಚಾಟ, ದಿನಕ್ಕೊಂದು ಪಕ್ಷಗಳ ಉದಯ, ಗುಂಪುಗಾರಿಕೆ ಇವುಗಳು ದೇಶದ ಮಾನಸಿಕ, ಸಾಮಾಜಿಕ, ಸಾಂಸ್ಕೃತಿಕ ಸ್ವಾಸ್ಥ್ಯತೆಯನ್ನು ಕೆಡಿಸುತ್ತದೆ. ಚುನಾವಣೆಯಲ್ಲಿ ಸರಾಸರಿ ಶೇ 50%ರಷ್ಟು ಮಾತ್ರ ಮತದಾನವಾಗುವುದು ಸಾಮಾನ್ಯವಾಗಿದೆ.[10] ತನ್ನೊಬ್ಬನಿಂದ ಮಾತ್ರವೇ ಬದಲಾವಣೆಯು ಸಾಧ್ಯವಾಗದೆಂಬ ಭಾವನೆಯು ಅವನಲ್ಲಿ ಅಡಕವಾಗಿರುತ್ತದೆ. ಆದರೆ ಈ ರೀತಿಯ ನಡವಳಿಕೆಯಿಂದ ಪ್ರಜಾಪ್ರಭುತ್ವವು ಯಶಸ್ವಿಯಾಗಲಾರದು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾನ್ಯ ಜನತೆಗೆ ಸೂಕ್ತ ರಕ್ಷಣೆ ದೊರಕದೇ ಇದ್ದಾಗ. ಬದಲಾವಣೆಗಾಗಿ ಬೇರೊಂದು ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಸಂಭವವಿದೆ. ಪ್ರಜಾಪ್ರಭುತ್ವದ ದೌರ್ಬಲ್ಯದಿಂದಾಗಿ ರಾಜಕೀಯದಲ್ಲಿ ಯುವಕರ ಸಕ್ರಿಯ ಪಾತ್ರವು ಕ್ಷೀಣಿಸುತ್ತದೆ. ಇದರಿಂದ ಜನರಲ್ಲಿ ಒಡಕು ಮೂಡಿ ರಾಷ್ಟ್ರದ ಏಕತೆ ಭಾವನೆಯು ನಾಶವಾಗುತ್ತದೆ. ದೇಶದ ಆರ್ಥಿಕತೆಯನ್ನು, ಅಭಿವೃದ್ಧಿಯನ್ನು ನಾಶಗೊಳಿಸಿ ರಾಷ್ಟ್ರ ವಿರೋಧಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಾರೆ.[11]

ಈ ನಿಟ್ಟಿನಲ್ಲಿ ಪ್ರಜಾಪ್ರಭುತ್ವ ಸರ್ಕಾರವು ಪ್ರಜೆಗಳ ಸದುದ್ದೇಶ ಪೂರಿತವಾದ ಬೇಡಿಕೆಗಳಿಗೆ ಸ್ಪಂದಿಸಬೇಕು. ಆಡಳಿತ ವರ್ಗದವರು ತಮ್ಮ ಸ್ವಾರ್ಥ ಮತ್ತು ಸಂಕುಚಿತವಾದ ಮನೋಭಾವವನ್ನು ತ್ಯಜಿಸಬೇಕು. ಸರ್ಕಾರ ತಮ್ಮನ್ನು ಆರಿಸಿದವರು ಪ್ರಜೆಗಳೇ ಎಂಬುವುದನ್ನು ಮರೆಯ ಬಾರದು. ಅವರನ್ನು ಜಾಗೃತಗೊಳಿಸಿ ಒಡಕು ಮೂಡಿಸುವ ಬದಲಾಗಿ ಜನರಲ್ಲಿ ಐಕ್ಯತೆ, ರಾಷ್ಟ್ರೀಯತೆಯ ಭಾವನೆಯನ್ನು ಮೂಡಿಸಬೇಕು. ಪ್ರಜೆಗಳಿಗೆ ವ್ಯವಸ್ಥೆಯ ಮೇಲೆ ನಂಬಿಕೆಯಿರಬೇಕು. ಪ್ರಜೆಗಳು ಶಿಕ್ಷಿತರಾಗಿ ತಮ್ಮ ಜವಾಬ್ದಾರಿಯನ್ನು ತಾವು ನಿರ್ವಹಿಸಬೇಕು. ಮತದಾನವು ಆಮಿಷಗಳಿಂದ ಮುಕ್ತವಾಗಿರಬೇಕು. ಪ್ರಜೆಗಳಿಗೆ ದೇಶದ ವಾಸ್ತವ ಪರಿಸ್ಥಿತಿ ಆಗು–ಹೋಗುಗಳ ಬಗ್ಗೆ ಪರಿಜ್ಞಾನವಿರಬೇಕು. ಎಲ್ಲಾ ಪ್ರಜೆಗಳಲ್ಲೂ ಈ ರೀತಿಯ ಮನೋಸ್ಥಿತಿ ಉದ್ದೀಪನಗೊಂಡಾಗ ಪ್ರಜಾಪ್ರಭುತ್ವ ವ್ಯವಸ್ಥೆಯ ಲೋಪದೋಷವನ್ನು ಪರಿಹರಿಸಬಹುದು.

"ಪ್ರಜಾಪ್ರಭುತ್ವದಲ್ಲಿ ದೃಢವಿಶ್ವಾಸವುಳ್ಳ ಭಾರತದ ಪೌರರಾದ ನಾವು ನಮ್ಮ ದೇಶದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಮುಕ್ತ ನ್ಯಾಯ ಸಮ್ಮತ ಶಾಂತಿಯುತ ಚುನಾವಣೆಗಳ ಘನತೆಯನ್ನು ಎತ್ತಿ ಹಿಡಿಯುತ್ತಿವೆಂದೂ ಮತ್ತು ಪ್ರತಿಯೊಂದು ಚುನಾವಣೆಯಲ್ಲಿ ನಿರ್ಭಿತರಾಗಿ ಧರ್ಮ, ಜನಾಂಗ, ಜಾತಿ, ಮತ, ಭಾಷೆ ಅಥವಾ ಯಾವುದೇ ಪ್ರೇರಪಣೆ ದಾಕ್ಷಿಣ್ಯಗಳಿಂದ ಪ್ರಭಾವಿತರಾಗದೆ ಮತ ಚಲಾಯಿಸುತ್ತೆವೆಂದು ಈ ಮೂಲಕ ಪ್ರತಿಜ್ಞೆ ಸ್ವೀಕರಿಸುತ್ತೇವೆ" ಇದು ಮತದಾನದ ದಿನದಂದು ಸ್ವೀಕರಿಸಬೇಕಾದ ಪ್ರತಿಜ್ಞೆಯಾಗಿದೆ. ಎಲ್ಲಾ ಪ್ರಜೆಗಳು ಮತದಾನದಲ್ಲಿ ಭಾಗವಹಿಸುವುದು ಮತ್ತು ಯಾವುದೇ ಆಮಿಷ ಜಾತಿಯ ಪ್ರಭಾವಕ್ಕೆ ಒಳಗಾಗದೇ ನಿರ್ಬೀತಿಯಿಂದ ಮತ ಚಲಾಯಿಸಿ ಪ್ರಜಾಪ್ರಭುತ್ವದ ನೈಜ ಅರ್ಥವನ್ನು ಸಾರ್ಥಕಗೊಳಿಸಿ ನಮ್ಮನ್ನು ಆಳುವ ಪ್ರಭುವನ್ನು ಆಯ್ಕೆ ಮಾಡುವ ಹೊಣೆ ನಮ್ಮದಾಗಿದೆ.

ಭಾರತದಲ್ಲಿ ಪ್ರಜಾಪ್ರಭುತ್ವದ ಕುರಿತಾದ ಸಕರಾತ್ಮಕ ಮತ್ತು ನಕರಾತ್ಮಕ ದೃಷ್ಟಿಕೋನವನ್ನು ಕಾಣಬಹುದು. ಪ್ರಜಾಪ್ರಭುತ್ವದ ಯಶಸ್ವಿಗೆ ಮೂಲ ಪ್ರೇರಕರು ಪ್ರಜೆಗಳೇ. ಪ್ರಜೆಗಳು ಸದೃಡರಾಗಿ ದೃಢಸಂಕಲ್ಪವನ್ನು ಮಾಡಬೇಕು. ಇಲ್ಲದಿದ್ದರೆ ರಾಜ್ಯಶಾಸ್ತ್ರದ ಪಿತಾಮಹಾರಾದ ಅರಿಸ್ಟಾಟಲ್ ಎಂಬ ಜ್ಞಾನಿ ಹೇಳಿದಂತೆ "ಪ್ರಜಾಪ್ರಭುತ್ವವು ಅಧಿಕಾರಕ್ಕಾಗಿ ಕಿತ್ತಾಡುವ ಸಣ್ಣ ಜನರ ಯುದ್ಧ ಭೂಮಿ"ಯಾಗುವ ಅಪಾಯವಿದೆ. ಇದನ್ನು ತಪ್ಪಿಸಲು ಭಾರತೀಯರೆಲ್ಲರೂ ಒಗ್ಗೂಡಬೇಕಾಗಿದ್ದು ಅವಶ್ಯಕವಾಗಿದೆ. ಆಗ ಮಾತ್ರ ಪ್ರಜಾಸ್ರಭುತ್ವ ವ್ಯವಸ್ಥೆಯು ಸಫಲವಾಗುತ್ತದೆ.

ಅಡಿಟಿಪ್ಪಣಿಗಳು :

1. Dahal Robert Alan "On Democracy" yale University Press, New Delhi -2000.
2. Chand Altar " Prime Minister H D Devegowda the gain and the pain (a biographical Study) Gyan Books New Delhi 1997.
3. Chande M B "Belrayal of Indian Democracy" Attantic Publishers and Distibuters, New Delhi-1999.
4. Diamond harry Jay Gunter Richard 'Political Parties and Democracy' JHU Press, New Delhi-2001.
5. Fairfield paul : Why Democracy? Suny Press New York – 2009.
6. Atul Kohli "Democracy and Discontent : India's growing crisis of governability" Cambridge university Press, New Delhi-1990.
7. Lansford Tom "Democracy" Masshall Cavendish, New York -2007.
8. Patil Shankara Gowda Hanamantegowda "Community Dominace and Political Modernisation the Lingayats" Mittal Publications New Delhi 2002.
9. University of Rajasthan Dept. of Political Science "State. Politics in India" Meerut. Meenakshi Prakashan 1967.
10. 'ವಾದ ಸಂವಾದ' ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಧರ್ಮದ ಸವಾರಿ –ಮತದಾರರು ಎಚ್ಚೆತ್ತುಕೊಳ್ಳಬೇಕು– ಆನಂದ್‌ಪ್ರಸಾದ್ ಪ್ರಜಾಪ್ರಭುತ್ವ : ಆದರ್ಶ ಮತ್ತು ವೈರುದ್ಯಗಳು ಡಾ॥ ಬಿ.ಎಲ್. ಶಂಕರ್

ಭಾರತದಲ್ಲಿ ಪ್ರಜಾಪ್ರಭುತ್ವದ ಸಂವರ್ಧನೆ ಮತ್ತು ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ

ದೇವರಾಜು.ಎಸ್.ಎಸ್

ಸಂಶೋಧಕರು, ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

ಮಾನವ ಹಕ್ಕುಗಳು ಸಾಮಾನ್ಯವಾಗಿ ನಿಸರ್ಗದತ್ತವಾದ ಸಾರ್ವತ್ರಿಕ ನಂಬಿಕೆಯೊಂದಿಗೆ ಮಾನವನ ಪ್ರಗತಿಗಾಗಿಯೇ ಹುಟ್ಟಿಕೊಂಡಂತಾವುಗಳಾಗಿವೆ. ಈ ಮಾನವ ಹಕ್ಕುಗಳನ್ನು ಯಾರೊಬ್ಬರು ಪರಭಾರೆ ಮತ್ತು ಕಸಿದುಕೊಳ್ಳಲಾರದ ಹಕ್ಕುಗಳಾಗಿದ್ದು, ಪ್ರತಿಯೊಬ್ಬ ಮಾನವನು ಹಕ್ಕುಗಳನ್ನು ಅನುಭವಿಸುವ ಸ್ವತಂತ್ರ್ಯತೆಯನ್ನು ಹುಟ್ಟಿನಿಂದಲೇ ಪಡೆದಿರುತ್ತಾನೆ. ಅಂದರೆ ವಿಶ್ವದಲ್ಲಿರುವ ಎಲ್ಲಾ ಮಾನವ ಜೀವಿಗಳು ಸರ್ವ ಸಮಾನರು, ಯಾವುದೇ ತಾರತಮ್ಯ ಮಾಡದೇ ಸರ್ವರೂ ಸಹಬಾಳ್ವೆ ಸಂವೃದ್ಧಿಯ ಜೀವನ ಸಾಗಿಸುವುದೇ ಆಗಿದೆ. ಜಾಗತಿಕ ಇತಿಹಾಸದಲ್ಲಿ ಮಾನವ ಹಕ್ಕುಗಳು ಮಹತ್ವದ ವಿಚಾರವಾಗಿ ಮಾರ್ಪಟ್ಟಿದ್ದು ಮಾನವ ಹಕ್ಕುಗಳ ಬಗ್ಗೆ 20ನೇ ಶತಮಾನದಿಂದಿಚೆಗೆ ಕಾಳಜಿ ಮತ್ತು ಅರಿವು ಮಾಡಿದೆ, ಆದರೂ ಮಾನವ ಹಕ್ಕುಗಳ ಧಮನ ಮನುಕುಲದ ಉಗಮದೊಂದಿಗೆ ಆರಂಭವಾಗಿತ್ತು. ತದನಂತರ ಆಧುನಿಕತೆಗೆ ತನ್ನನ್ನು ಮುಕ್ತವಾಗಿ ತೆರೆದುಕೊಂಡನಂತರವೇ ಮಾನವನಿಗೆ ತನ್ನದೇ ಆದಾ ಹಕ್ಕುಗಳಿವೆ ಎಂಬುವುದು ಅರ್ಥವಾಗಿದ್ದು, ಮಾನವ ಹಕ್ಕುಗಳ ಉಲ್ಲಂಘನೆ ಜಗತ್ತಿನ ಉದ್ದಗಲಕ್ಕು ವ್ಯಾಪಿಸಿದ್ದು, ಜಾತಿ, ಜನಾಂಗ, ಧರ್ಮ, ಲಿಂಗ, ವರ್ಣ, ಭಾಷೆ, ಶೋಷಣೆ ನಡೆಯುತ್ತಲೇ ಬಂದಿದೆ. ಇವುಗಳ ವಿರುದ್ಧ ರಕ್ಷಣೆಯನ್ನು ಪಡೆದು ಸುಖಮಯವಾಗಿ ಸ್ವತಂತ್ರ್ಯವಾಗಿ ಗೌರವಾನ್ವಿತ ಜೀವನವನ್ನು ಸಾಗಿಸಲು ಕಂಡುಕೊಂಡ ಮಾರ್ಗವೇ ಮಾನವ ಹಕ್ಕುಗಳಾಗಿವೆ. ಸ್ವಾತಂತ್ರ್ಯ, ಸಮಾನತೆ, ವ್ಯಕ್ತಿಘನತೆ, ಶಿಕ್ಷಣ, ವೃತ್ತಿ, ಸತ್ಕೀರ್ತಿಯಂತಹ ಹಕ್ಕುಗಳನ್ನು ಯಾವುದೇ ನಿರ್ಭಂದಗಳಲ್ಲದೇ ಅನುಭವಿಸಿದಾಗ ಸಮಾಜದಲ್ಲಿ ಒಬ್ಬ ಸ್ವತಂತ್ರ್ಯ ನಾಗರೀಕನಾಗುತ್ತಾನೆ. ಅಲ್ಲದೇ ಸಮಾಜದಲ್ಲಿ ವ್ಯಕ್ತಿಯ ಸ್ವಾರ್ಥ, ದುರಾಸೆ, ದುರಹಂಕಾರ, ದರ್ಪತನ, ಅಧೀಕಾರಲಾಲಸೆ ಮತ್ತು ನಿರಂಕುಶದಾಹದಿಂದಾಗಿ ಮನುಷ್ಯನು ಪರರ ಹಕ್ಕುಗಳನ್ನು ಉಲ್ಲಂಘಿಸುತ್ತಾನೆ. ಇದರಿಂದ ಮಾನವ ಹಕ್ಕುಗಳ ಉಲ್ಲಂಘನೇ ದಿನೇ ದಿನೇ ಅಧಿಕವಾಗುತ್ತಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯ ಸ್ವಾಸ್ಥ್ಯ ಕದಡುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇದರಿಂದಾಗಿ ಮಾನವ ಹಕ್ಕುಗಳನ್ನು ರಕ್ಷಿಸಿ, ಪೋಷಿಸುವಲ್ಲಿ ಸರ್ಕಾರದೊಂದಿಗೆ ಸರ್ಕಾರೇತರ ಸಂಘಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಜೆಗಳ ನಾಗರೀಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಹಕ್ಕುಗಳನ್ನು ಪ್ರತಿಪಾದಿಸಿ ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಉದಾ: ಸಿಕ್ರಂ ನಂತರ ಸರ್ಕಾರೇತರ ಸಂಘಸಂಸ್ಥೆಗಳು ವಿಶ್ವದ ವಿವಿಧ ಭಾಗಗಳಲ್ಲಿ ಅಸ್ತಿತ್ವಕ್ಕೆ ಬಂದು ಕಾರ್ಯ ಪ್ರವೃತ್ತವಾಗಿವೆ.

ಪೀಠಿಕೆ: ಮಾನವ ಹಕ್ಕುಗಳು ಸಾಮಾನ್ಯವಾಗಿ ನಿಸರ್ಗದತ್ತವಾದ ಸಾರ್ವತ್ರಿಕ ನಂಬಿಕೆಯೊಂದಿಗೆ ಮಾನವನ ಪ್ರಗತಿಗಾಗಿಯೇ ಹುಟ್ಟಿಕೊಂಡಂತಾವುಗಳಾಗಿವೆ. ಈ ಮಾನವ ಹಕ್ಕುಗಳನ್ನು ಯಾರೊಬ್ಬರು ಪರಭಾರೆ ಮತ್ತು ಕಸಿದುಕೊಳ್ಳಲಾರದ ಹಕ್ಕುಗಳಾಗಿದ್ದು, ಪ್ರತಿಯೊಬ್ಬ ಮಾನವನು ಹಕ್ಕುಗಳನ್ನು ಅನುಭವಿಸುವ ಸ್ವತಂತ್ರ್ಯತೆಯನ್ನು ಹುಟ್ಟಿನಿಂದಲೇ ಪಡೆದಿರುತ್ತಾನೆ. ಆದುದರಿಂದಲೇ ಮಾನವ ಹಕ್ಕುಗಳು ವ್ಯಕ್ತಿಯ ವ್ಯಕ್ತಿತ್ವದ ಸಮಗ್ರ ವಿಕಸನದ ಸಾದನಗಳಾಗಿವೆ[1] ಅಂದರೆ ವಿಶ್ವದಲ್ಲಿರುವ ಎಲ್ಲಾ ಮಾನವ ಜೀವಿಗಳು ಸರ್ವ ಸಮಾನರು, ಯಾವುದೇ ತಾರತಮ್ಯ ಮಾಡದೇ ಸರ್ವರೂ ಸಹಬಾಳ್ವೆ ಸಂವೃದ್ಧಿಯ ಜೀವನ ಸಾಗಿಸುವುದೇ ಆಗಿದೆ. ಜಾಗತಿಕ ಇತಿಹಾಸದಲ್ಲಿ ಮಾನವ ಹಕ್ಕುಗಳು ಮಹತ್ವದ ವಿಚಾರವಾಗಿ ಮಾರ್ಪಟ್ಟಿದ್ದು ಮಾನವ ಹಕ್ಕುಗಳ ಬಗ್ಗೆ 20ನೇ ಶತಮಾನದಿಂದಿಚೆಗೆ ಕಾಳಜಿ ಮತ್ತು ಅರಿವು ಮೂಡಿದೆ, ಆದರೂ ಮಾನವ ಹಕ್ಕುಗಳ ಧಮನ ಮನುಕುಲದ ಉಗಮದೊಂದಿಗೆ ಆರಂಭವಾಗಿತ್ತು. ತದನಂತರ ಆಧುನಿಕತೆಗೆ ತನ್ನನ್ನು ಮುಕ್ತವಾಗಿ ತೆರೆದುಕೊಂಡ ನಂತರವೇ ಮಾನವನಿಗೆ ತನ್ನದೇ ಆದಾ ಹಕ್ಕುಗಳಿವೆ ಎಂಬುವುದು ಅರ್ಥವಾಗಿದ್ದು.

ಮಾನವ ಹಕ್ಕುಗಳ ಉಲ್ಲಂಘನೆ ಜಗತ್ತಿನ ಉದ್ದಗಲಕ್ಕು ವ್ಯಾಪಿಸಿದ್ದು, ಜಾತಿ, ಜನಾಂಗ, ಧರ್ಮ, ಲಿಂಗ, ವರ್ಣ, ಭಾಷೆ, ಗಳ ಮೇಲೆ ದೌರ್ಜನ್ಯ, ಶೋಷಣೆ ನಡೆಯುತ್ತಲೇ ಇದೆ. ಇವುಗಳ ವಿರುದ್ಧ ರಕ್ಷಣೆಯನ್ನು ಪಡೆದು ಸುಖಮಯವಾಗಿ ಸ್ವತಂತ್ರ್ಯವಾಗಿ ಗೌರವಾನ್ವಿತ ಜೀವನವನ್ನು ಸಾಗಿಸಲು ಕಂಡುಕೊಂಡ ಮಾರ್ಗವೇ ಮಾನವ

ಹಕ್ಕುಗಳಾಗಿವೆ. ಸ್ವಾತಂತ್ರ್ಯ, ಸಮಾನತೆ, ವ್ಯಕ್ತಿಘನತೆ, ಶಿಕ್ಷಣ, ವೃತ್ತಿ, ಸಕ್ರೀಯಂತಹ ಹಕ್ಕುಗಳನ್ನು ಯಾವುದೇ ನಿರ್ಭಂದಗಳಲ್ಲದೇ ಅನುಭವಿಸಿದಾಗ ಸಮಾಜದಲ್ಲಿ ಒಬ್ಬ ಸ್ವತಂತ್ರ್ಯ ನಾಗರೀಕನಾಗುತ್ತಾನೆ. ಅಲ್ಲದೇ ಸಮಾಜದಲ್ಲಿ ವ್ಯಕ್ತಿಯ ಸ್ವಾರ್ಥ, ದುರಾಸೆ, ದುರಹಂಕಾರ, ದರ್ಪತನ, ಅಧೀಕಾರಲಾಲಸೆ ಮತ್ತು ನಿರಂಕುಶದಾಹದಿಂದಾಗಿ ಮನುಷ್ಯನು ಪರರ ಹಕ್ಕುಗಳನ್ನು ಉಲ್ಲಂಘಿಸುತ್ತಾನೆ. ಇದರಿಂದ ಮಾನವ ಹಕ್ಕುಗಳ ಉಲ್ಲಂಘನೇ ದಿನೇ ದಿನೇ ಅಧಿಕವಾಗುತ್ತಿದೆ. ಅತಿಯಾದ ಮಾನವ ಹಕ್ಕುಗಳ ಉಲ್ಲಂಘನೆಯಿಂದ ಕರ್ನಾಟಕ ರಾಜ್ಯವು ಭಾರತ ದೇಶದಲ್ಲಿಯೇ ಹಕ್ಕುಗಳ ಉಲ್ಲಂಘನೆಯ ಶ್ರೇಣಿಯಲ್ಲಿ ದ್ವೀತಿಯ ಸ್ಥಾನದಲ್ಲಿದೆ[2].ಇದು ಭಾರತೀಯ ಸಾಮಾಜಿಕ ವ್ಯವಸ್ಥೆಯ ಸ್ವಾಸ್ಥ್ಯ ಕದಡುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇದರಿಂದಾಗಿ ಮಾನವ ಹಕ್ಕುಗಳನ್ನು ರಕ್ಷಿಸಿ, ಪೋಷಿಸುವಲ್ಲಿ ಸರ್ಕಾರದೊಂದಿಗೆ ಸರ್ಕಾರೇತರ ಸಂಘಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಜೆಗಳ ನಾಗರೀಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಪಾರಿಸಾರಿಕ, ಪ್ರಜಾಪ್ರಭುತ್ವವನ್ನು ಸಂರಕ್ಷಿಸಿ ಸಂವರ್ಧಿಸುವಲ್ಲಿ ಸರ್ಕಾರೇತರ ಸಂಘಸಂಸ್ಥೆಗಳು ಹಕ್ಕುಗಳನ್ನು ಪ್ರತಿಪಾದಿಸಿ ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.

ಪರಿಕಲ್ಪನೆ: ಮಾನವನ ವಿವೇಚನಾ ಶಕ್ತಿ ಮತ್ತು ನಾಗರೀಕತೆ ಬೆಳೆದಂತೆ ಮಾನವನು ಗೌರವಾನ್ವಿತನಾಗಿ ಮತ್ತು ನಾಗರೀಕ ಪ್ರಜ್ಞೆಉಳ್ಳವನಾಗಿ ಬದುಕಲು ಪ್ರಾರಂಭಿಸಿದ ಫಲವಾಗಿ ಕಾಲಕಾಲಕ್ಕೆ ಮಾನವ ಹಕ್ಕುಗಳ ಪರಿಕಲ್ಪನೆ ಬೆಳೆಯುತ್ತಾ ಬಂದಿದೆ.ಮಾನವ ಹಕ್ಕುಗಳಿಗೆ ವಿಸ್ತೃತವಾದ ವಿಶ್ವವ್ಯಾಪ್ತಿ ಗುಣ ವಿಶೇಷವಿದೆ.ಮಾನವ ಹಕ್ಕುಗಳು ಪ್ರಜಾಪ್ರಭುತ್ವದ ಅಮೂಲ್ಯ ಭಾಗವಾಗಿದ್ದು ವ್ಯಕ್ತಿಯ ಸ್ಥಾನಮಾನ, ಘನತೆ ಮತ್ತು ಗೌರವವನ್ನು ನಿರ್ಧರಿಸುವ ಅಂಶಗಳಾಗಿವೆ. .ಮಾನವ ಹಕ್ಕುಗಳ ವಿಚಾರದಲ್ಲಿ ಶಾಸ್ತ್ರಜ್ಞರ ಅಭಿಪ್ರಾಯ ವಿಭಿನ್ನವಾದವುಗಳಾಗಿದ್ದು,

ರಾಜ್ಯಶಾಸ್ತ್ರದ ಪಿತಮಹರಾದ ಅರಿಸ್ಟಾಟಲ್: ರವರ ಪ್ರಕಾರ ಮಾನವ ಹಕ್ಕುಗಳು ಎರಡು ಆಯಾಮಗಳನ್ನು ಹೊಂದಿವೆ. ಇವುಗಳು ಪ್ರತಿಯೊಬ್ಬನ ಸ್ವಸಾಮರ್ಥ್ಯ ಮತ್ತು ಅಭಿವೃದ್ಧಿಗೆ ಹಕ್ಕುಗಳು ಸಹಾಯಕವಾಗಿವೆ ಹಾಗೂ ಸಾಮರ್ಥ್ಯದ ಅಭಿವೃದ್ಧಿ ಹಾಗೂ ಇತರರ ಅಭಿವೃದ್ಧಿಗೆ ಅಗತ್ಯವಾದ ಪರಿಸ್ಥಿತಿಯನ್ನು ಹಕ್ಕುಗಳು ನಿರ್ಮಾಣ ಮಾಡುತ್ತವ[3].

ಬೊಸೆಂಕ್ವೆಟ್: ರವರ ಪ್ರಕಾರ, ವ್ಯಕ್ತಿಯ ಅಭಿವೃದ್ಧಿಗಾಗಿ ಸಮಾಜದಿಂದ ಮಾನ್ಯತೆ ಪಡೆದ ಮತ್ತು ರಾಜ್ಯದಿಂದ ಅಂಗೀಕೃತವಾಗಿರುವ ಹಕ್ಕುಗಳಾಗಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ[4].

ಭಾರತದ ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆ–1993: ರಪ್ರಕಾರ ಅಂತರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಮತ್ತು ಭಾರತ ಸಂವಿಧಾನದ ಮೂಲಭೂತ ಹಕ್ಕುಗಳಿಗೆಸಂಬಂಧಪಟ್ಟ 3ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟ ವ್ಯಕ್ತಿಸ್ವಾತಂತ್ರ್ಯ, ಸಮಾನತೆಮತ್ತು ಘನತೆಗೆಸಂಬಂಧಪಟ್ಟಹಕ್ಕುಗಳೆಲ್ಲವನ್ನು ಮಾನವ ಹಕ್ಕುಗಳೆಂದು 1993 ರ ಭಾರತದ ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆ ವ್ಯಾಖ್ಯಾನಿಸಿದೆ[5].

ಮಾನವ ಹಕ್ಕುಗಳ ಬೆಳೆವಣಿಗೆಯ ಪರಿಕಲ್ಪನೆಯಇತಿಹಾಸವು ಅತ್ಯಂತ ಮಹತ್ವದ ಕಾಲಘಟ್ಟಗಳಲ್ಲಿ ಬೆಳೆದು ಬಂದಿದೆ. ಇದರ ಇತಿಹಾಸವನ್ನು ಪುನರುಜ್ಜೀವನದ ಚಳುವಳಿಯ ಕಾಲದಿಂದಲೂ ಗುರುತಿಸಬಹುದು. ಪ್ರಾಚೀನ ಕಾಲದ ಗ್ರೀಕರ ರಾಜಕೀಯ ಚಿಂತನೆಯಲ್ಲಿ ಮಧ್ಯಯುಗದ ಚರ್ಚ್ ಮತ್ತು ರಾಜ್ಯಗಳ ನಡುವೆ ಶ್ರೇಷ್ಠತೆಗಾಗಿ ನಡೆದ ಹೋರಾಟದ ಸಂರ್ಭದಲ್ಲಿ 1215ರಲ್ಲಿ ವಿಶ್ವ ರಾಜಕೀಯದಲ್ಲಿಯೇ ಮೈಲುಗಲ್ಲಾದ ಮ್ಯಾಗ್ನ ಕಾರ್ಟ ದೊಂದಿಗೆ 1689 ರಲ್ಲಿ ಬ್ರಿಟನ್‌ನಲ್ಲಿ ಘೋಷಿಸಲ್ಪಟ್ಟ ಬಿಲ್ ಆಪ್ ರೈಟ್ಸ್,1776 ರ ಅಮೇರಿಕಾ ಕ್ರಾಂತಿ,1789 ರ ಫ್ರಾನ್ಸ್‌ನ ಮಹಾಕ್ರಾಂತಿ ಮತ್ತು 18 ನೇ ಶತಮಾನದಲ್ಲಿ ಆರಂಭವಾದ ರೈಟ್ಸ್ ಆಫ್ ಮ್ಯಾನ್[6] ಎಂಬ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ವಿಶ್ವಮಾನವ ಹಕ್ಕುಗಳ ಘೋಷಣೆಯೊಂದಿಗೆ ಮಾನವ ಹಕ್ಕುಗಳೆಂದು ಪ್ರವರ್ಧಮಾನಕ್ಕೆ ಬಂದಿತು.

ಪ್ರಥಮ ಜಾಗತೀಕ ಯುದ್ಧದ ನಂತರ ಅಸ್ತಿತ್ವಕ್ಕೆ ಬಂದ ರಾಷ್ಟ್ರಸಂಘದ ಯೋಜನೆಗಳು, ಮತ್ತು ತತ್ವಗಳೂ, ಮತ್ತು ದ್ವಿತೀಯ ಜಾಗತಿಕ ಯುದ್ಧದ ನಂತರ ಅಸ್ತಿತ್ವಕ್ಕೆ ಬಂದ ವಿಶ್ವಸಂಸ್ಥೆಯ ಪ್ರನಾಳಿಕೆಯ ಪ್ರಸ್ತಾವನೆ ಮತ್ತು ವಿವಿಧ ಕಲಮುಗಳ ಅಡಿಯಲ್ಲಿ ಅಳವಡಿಸಿಕೊಂಡ ವಿವಿಧ ಜಾಗತೀಕ ಮಟ್ಟದ ಮಾನವ ಹಕ್ಕುಗಳ ಘೋಷಣೆಗಳು ಮತ್ತು ಒಡಂಬಡಿಕೆಗಳು ಮಾನವ ಹಕ್ಕುಗಳಿಗೆ ಭದ್ರ ಅಡಿಪಾಯಹಾಕಿವೆ. ಅಂತರಾಷ್ಟ್ರೀಯ ಮಟ್ಟದ ವಿವಿಧ ಘೋಷಣೆಗಳು ಮತ್ತು ಒಡಂಬಡಿಕೆಗಳನ್ನು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಅಂಗೀಕರೆಸಿ, 1948 ಡಿಸೆಂಬರ್ 10 ರಂದು ಮಾನವ ಹಕ್ಕುಗಳ ಸಾರ್ವತ್ರಿಕ ವಿಶ್ವ ಘೋಷಣೆಯನ್ನು ಅಂಗೀಕರಿಸಲಾಯಿತು. ನಂತರ ಮಾನವ ಹಕ್ಕುಗಳನ್ನು ಜಾರಿಮಾಡಿ ಮತ್ತು ಅನುಷ್ಠಾನವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ,ರಾಷ್ಟ್ರೀಯ ಮಟ್ಟದಲ್ಲಿ ಮತ್ತು ಪ್ರಾಂತೀಯ ಮಟ್ಟದಲ್ಲಿ ಸಾರ್ವತ್ರಿಕ ಘೋಷಣೆ ಮಾಡಿ ವಿಶ್ವದ ಎಲ್ಲಾ ರಾಷ್ಟ್ರಗಳು ತಮ್ಮ ಸಂವಿಧಾನದಲ್ಲಿ ಅಥವಾ ಕಾನೂನಿನಲ್ಲಿ ಮಾನವೀಯ ಹಕ್ಕುಗಳನ್ನು ಅಳವಡಿಸಿಕೊಳ್ಳಲು ತನ್ನ ಸದಸ್ಯರಾಷ್ಟ್ರಗಳು ಮತ್ತು ಸಂಘಟನೆಯ ಅಂಗಗಳು ಪಾಲಿಸುವಂತೆ ಕಡ್ಡಾಯ ಜವಾಬ್ದಾರಿಕೆಯನ್ನು ನೀಡಿದೆ. ಮಾನವ ಹಕ್ಕುಗಳ ಅನುಷ್ಠಾನ ಮಾಡಿರುವುದರಿಂದ ಮಾನವ ಹಕ್ಕುಗಳು ಜಾಗತಿಕ ಸಮುದಾಯದ ಕಳಕಳಿ ಮತ್ತು ಕಾಳಜಿಯ ವಿಷಯವಾಗಿವೆ. ಇದರಿಂದಾಗಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಾನೂನುಗಳ ಭಾಗವಾಗಿ ಹಕ್ಕುಗಳಿಂದ ಪ್ರೇರಣೆಪಡೆದು ಸರ್ಕಾರೇತರ ಸಂಘ ಸಂಸ್ಥೆಗಳು ವಿಶ್ವವ್ಯಾಪ್ತಿ ಹರಡಿಕೊಂಡಿದೆ.ಆದರೂ ಮಾನವ ಹಕ್ಕುಗಳ ಉಲ್ಲಂಘನೆ ಅವ್ಯಹತವಾಗಿ ನಡೆಯುತ್ತಲೇ ಇದೆ.

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಸಂದರ್ಭದಲ್ಲಿ ವಿಶ್ವ ಸಂಸ್ಥೆಯ 58 ಸದಸ್ಯ ರಾಷ್ಟ್ರಗಳಲ್ಲಿ 48 ಸದಸ್ಯ ರಾಷ್ಟ್ರಗಳು ಅನುಮೋದಿಸಿದವು ಒಟ್ಟು 8 ರಾಷ್ಟ್ರಗಳು ಮತದಾನದಲ್ಲಿ ಭಾಗವಹಿಸಿರಲ್ಲಿಲ್ಲ ಹಾಗೂ 2 ರಾಷ್ಟ್ರಗಳು ಗೈರು ಹಾಜರಾಗಿದ್ದವು[7].ಯಾವುದೇ ರಾಷ್ಟ್ರವು ವಿರುದ್ದವಾಗಿ ಮತ ಚಲಾಯಿಸದೇ1948 ಡಿಸೆಂಬರ್ 10 ರಂದು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ವಿಶ್ವವ್ಯಾಪ್ತಿ ಘೋಷಣೆಯು ಆಧುನಿಕ ರಾಷ್ಟ್ರಗಳ ಹಕ್ಕುಗಳ ಕಾಯ್ದೆಬದ್ದತೆಗೆ ಕಾರಣವಾಯಿತು. ಹೀಗೆ ವಿಶ್ವವ್ಯಾಪ್ತಿಯಾಗಿ ಮಾನವ ಹಕ್ಕುಗಳು ವ್ಯಾಪಿಸಿದ್ದು ಅವುಗಳ ಸರಿಯಾದ ಆಚರಣೆ ನಾಗರೀಕ ಸಮಾಜದ ಮೇಲಿದೆ.ನಾಗರೀಕ ಸಮಾಜದಲ್ಲಿ ಅಗತ್ಯತೆಗೆ ಅನುಗುಣವಾಗಿ ಸರ್ಕಾರೇತರ ಸಂಘಸಂಸ್ಥೆಗಳು ಹಕ್ಕುಗಳ ರಕ್ಷಣೆಯಲ್ಲಿ ಮತ್ತು ಜಾಗೃತಿ ಮೂಡಿಸುವಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸುತ್ತಿದ್ದು, ಸಮಾನತೆ ಮತ್ತು ನ್ಯಾಯ ಸಾಧನೆಗಳು ಮಾನವ ಹಕ್ಕುಗಳ ತಿರುಳಾಗಿದೆ. ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತವು ವಿವಿಧ ಅಂತರಾಷ್ಟ್ರೀಯ

ಮಾನವ ಹಕ್ಕುಗಳ ಘೋಷಣೆ ಒಡಂಬಡಿಕೆಗೆ ಸಹಿಹಾಕಿ 1993ರ ರಾಷ್ಟ್ರೀಯ ಮಾನವ ಹಕ್ಕುಗಳ ಸಂರಕ್ಷಣೆ ಕಾಯ್ದೆಗೆ ಅನುಗುಣವಾಗಿ ರಾಜ್ಯ ಮಟ್ಟದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕು ಆಯೋಗಗಳನ್ನು ಸ್ಥಾಪಿಸಿದೆ. ಹಕ್ಕುಗಳ ಪ್ರತಿಪಾದನೆ, ಶಿಕ್ಷಣ, ಸಂರಕ್ಷಣೆ ಮತ್ತು ಅನುಷ್ಠಾನ, ಮೇಲ್ವೀಚಾರಣೆ, ಸೃಷ್ಟಿ ಮತ್ತು ಸಂವರ್ಧನೆಯಲ್ಲಿ ರಾಜ್ಯದ ಪಾತ್ರ ಎಷ್ಟು ಇದೆಯೋ ಹಾಗೆಯೇ ಸರ್ಕಾರೇತರ ಸಂಘಟನೆಗಳ ಪಾತ್ರವೂ ಕೊಡ ಹಚ್ಚುತ್ತಿರುವು ಗಮನಾರ್ಹ.

ಮಾನವ ಹಕ್ಕುಗಳ ಸಬಲೀಕರಣ: ಒಂದು ನಾಗರೀಕ ಸಮಾಜದ ನಿರ್ಮಾಣದಲ್ಲಿ ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ಸರ್ಕಾರೇತರ ಸಂಘಟನೆಗಳು ಮತ್ತು ಇತರರು ಸಮುದಾಯದ ಗುಂಪುಗಳು ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿವೆ. ಮಾನವ ಹಕ್ಕುಗಳನ್ನು ಸೃಷ್ಟಿಸುವ ವಿಸ್ಕೃತಗೊಳಿಸುವ ಉಲ್ಲಂಘನೆಯಾಗದಂತೆ ತಡೆಯುವ ಮತ್ತು ಮಾನವ ಹಕ್ಕುಗಳ ಬಗ್ಗೆ ಶಿಕ್ಷಣ ನೀಡುವ ಮೂಲಕ ಜನಜಾಗೃತಿ ಜನಜಾಗೃತಿ ಮೂಡಿಸಿ, ಮಾನವ ಹಕ್ಕುಗಳಿಗೆ ರಕ್ಷಣೆ ನೀಡುವುದಾಗಿದ್ದು, ಎಲ್ಲಿ ಹಕ್ಕುಗಳಿಗೆ ಬೆದರಿಕೆಯುಂಟಾಗುತ್ತದೆಯೋ ಅಲ್ಲಿ ಅದನ್ನು ನಿರ್ಭಯವಾಗಿ ಖಂಡಿಸಿ ನ್ಯಾಯಕ್ಕಾಗಿ ಹೋರಾಟ ಮಾಡುವ ದಿಕ್ಕಿನಲ್ಲಿ ಸರ್ಕಾರೇತರ ಸಂಘಟನೆಗಳು ಕಾರ್ಯ ಪ್ರವೃತ್ತವಾಗಿದೆ. ನಾಗರೀಕರಿಗೆ ಶಿಕ್ಷಣದಲ್ಲಿ ಮಾನವ ಹಕ್ಕುಗಳು ಮತ್ತು ರಕ್ಷಣೆಯ ಬಗ್ಗೆ ತಿಳುವಳಿಕೆ ನೀಡಿ ಮಾನವ ಹಕ್ಕುಗಳ ವಿಚಾರಣಾ ಸಂಕಿರಣಗಳು ಮತ್ತು ಮಾನವ ಹಕ್ಕುಗಳ ಬಗ್ಗೆ ತರಬೇತಿ ನೀಡಿ ನಾಗರೀಕ ಸಮಾಜದಲ್ಲಿ ಕಾರ್ಯ ಪ್ರವೃತ್ತವಾಗಿ ಮಾನವ ಹಕ್ಕುಗಳ ಸಬಲೀಕರಣಕ್ಕೆ ಪ್ರಯತ್ನಿಸುತ್ತಿವೆ.

ಸರ್ಕಾರೇತರ ಸಂಸ್ಥೆಗಳು: 20 ಮತ್ತು 21 ನೇ ಶತಮಾನಗಳು ಮಾನವ ಹಕ್ಕುಗಳು ಮತ್ತು ಪೌರಸಮಾಜದ ಭಾಗವಾಗಿ ಹುಟ್ಟಿ ಬೆಳೆದ ಸರ್ಕಾರೇತರ ಸಂಸ್ಥೆಗಳ ಸುವರ್ಣ ಯುಗವಾಗಿದೆ.ಹೆಚ್ಚುತ್ತಿರುವ ಹಕ್ಕು ಉಲ್ಲಂಘನೆಯ ಪ್ರಕರಣಗಳು, ಹಿಂಸೆ, ದೌರ್ಜನ್ಯಗಳು ಮನುಕುಲದ ವಿವಿಧ ಸ್ಥರಗಳಲ್ಲಿ ಇರುವ ವ್ಯಕ್ತಿಗಳಿಂದ ನಿರ್ಮಿತಗೊಂಡ ಸಂಘಸಂಸ್ಥೆಗಳಿಗೂ ಸವಾಲಾಗಿದೆ[9].ಇದರಿಂದಾಗಿ ಮಾನವ ಹಕ್ಕುಗಳು ಮತ್ತು ಸರ್ಕಾರೇತರ ಸಂಘಟನೆಗಳ ನಡುವೆ ಅವಿನಾಭಾವ ಸಂಬಂದ ಇರುವುದು ಸ್ಪಷ್ಟವಾಗುತ್ತದೆ. ಹಕ್ಕುಗಳ ಸೃಷ್ಟಿ, ಸಂವರ್ಧನೆ ಮತ್ತು ಸಂರಕ್ಷಣೆಯ ಜನಾಬ್ದಾರಿಯನ್ನು ಹೊತ್ತ ರಾಜ್ಯವೇ ಹಕ್ಕುಗಳ ಅನುಭವಿಸುವಿಕೆಗೆ ನಿರ್ಭಂದಗಳನ್ನು ವಿಧಿಸುತ್ತದೆ[9]. ಸರ್ಕಾರೇತರ ಸಂಘಟನೆ ಎಂಬ ಪಾರಿಭಾಷಿಕ ಪದವು ವಿಶಾಲ ವ್ಯಾಪ್ತಿಯ ಮೌಲ್ಯಾಧಾರಿತ, ಲಾಭಾರಹಿತ ಸಂಘಟನೆಗಳನ್ನೊಳಗೊಂಡಿದೆ. ಸಂಕಷ್ಟಗಳ ಪರಿಹಾರಕ್ಕಾಗಿ, ಬಡವರ ಹಿತಾಸಕ್ತಿಯ ಸಂವರ್ಧನೆ, ಪರಿಸರ ಸಂರಕ್ಷಣೆ, ಮೂಲಭೂತ ಸೇವೆಗಳ ಪೂರೈಕೆ.ಸಮುದಾಯ ಅಭಿವೃದ್ಧಿಯಂತಹ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಸಮಾಜಾಭಿವೃದ್ಧಿ ಮತ್ತು ಕಾರ್ಯದಲ್ಲಿ ಸರ್ಕಾರದಿಂದ ಸ್ವತಂತ್ರ್ಯವಾಗಿದ್ದುಕೊಂಡೆ ಕಾರ್ಯಪ್ರವೃತ್ತರಾಗುವ ಸಮಾಜಮುಖಿ ಜನಗಳ ಸಮುದಾಯವೇ ಸರ್ಕಾರೇತರ ಸಂಘಟನೆ[10].

'ಜನತೆಯ ಸಬಲೀಕರಣದ ಪ್ರಕ್ರಿಯೆಯಲ್ಲಿ ಸಹಾಯ ಮಾಡುವ ಸಾಮಾಜಿಕ ಅಭಿವೃದ್ಧಿ ಸಂಘಟನೆಗಳಾದ ಸರ್ಕಾರೇತರ ಸಂಘಟನೆಗಳೂ ಯಾವುದೇ ಸಮುದಾಯ, ಪ್ರದೇಶ, ಮತ್ತು ಸ್ಥಿತಿಗತಿಯಲ್ಲಿ ಬದಲಾವಣೆಯನ್ನು ತರುವ ಉದ್ದೇಶದಿಂದಲೂ, ನಿಖರವಾದ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಯಾವುದೇ ಬಾಹ್ಯ ನಿಯಂತ್ರಣ ವಿಲ್ಲದೇ ಕಾರ್ಯಗಳನ್ನು ಕೈಗೊಳ್ಳಲು ಅಸ್ತಿತ್ವಕ್ಕೆ ಬಂದ ಜನರ ಸ್ವತಂತ್ರ್ಯ ಸಂಘಟನೆಯೇ ಸರ್ಕಾರೇತರ ಸಂಘಟನೆಯಾಗಿದ್ದು[11]ಸಾರ್ವಜನಿಕ ಕಾಳಜಿ ಮತ್ತು ಸೇವಾ ಮನೋಭಾವದೊಂದಿಗೆ ವಿವಿಧ ರೀತಿಯ ಶೈಕ್ಷಣಿಕ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಾಗೂ ಆರೋಗ್ಯ ಸಂಬಂಧಿತ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಸಮಾಜದ ಹಿತಸಾಧನೆಗಾಗಿ, ಅದರಲ್ಲೂ ಮುಖ್ಯವಾಗಿ ದೀನದುರ್ಬಲರ ವರ್ಗಗಳ ಹಿತ ಸಂರಕ್ಷಣೆಗಾಗಿ ಸ್ವಹಿತಾಸಕ್ತಿಯಿಂದ ಪರಿಶ್ರಮಿಸುತ್ತಿರುವ ಸಂಘಟನೆಗಳೇ ಸರ್ಕಾರೇತರ ಸಂಘಟನೆ ಯಾಗಿದೆ[12,13].

ಮಾನವ ಹಕ್ಕುಗಳು ಮತ್ತು ನವ ಸಮಾಜ ಚಳುವಳಿಯ ಭಾಗವಾಗಿರುವ ಸರ್ಕಾರೇತರ ಸಂಘಟನೆಗಳು ಇತ್ತೀಚಿನ ವರ್ಷಗಳಲ್ಲಿ ಮಾನವ ಹಕ್ಕುಗಳ ರಕ್ಷಣಕಾರ್ಯದಲ್ಲಿ ಪ್ರಾಮುಖ್ಯತೆ ಪಡೆಯುತ್ತಿವೆ. ಆಧುನಿಕ ರಾಜ್ಯಗಳಲ್ಲಿ ಮಾನವ ಹಕ್ಕುಗಳನ್ನು ಪ್ರಾದೇಶೀಕ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟಗಳಲ್ಲಿ ಮಾನವ ಹಕ್ಕುಗಳ ಅಭಿವೃದ್ಧಿಯಲ್ಲಿ ಸಾರ್ಕಾರೇತರ ಸಂಸ್ಥೆಗಳು ಪ್ರಮುಖವಾದ ಪಾತ್ರ ನಿರ್ವಹಿಸುತ್ತಿವೆ. 1993ರ ಮಾನವ ಹಕ್ಕುಗಳ ಜಾಗತಿಕ ಸಮ್ಮೇಳನದಲ್ಲಿ ಮಾನವ ಹಕ್ಕುಗಳ ರಕ್ಷಣೆ ಮತ್ತು ಅಭಿವೃದ್ಧಿಯ ಬಗ್ಗೆ ನೆಡೆದ ಚರ್ಚೆ ಮತ್ತು ಸಹಕಾರವನ್ನು ಒತ್ತಿ ಹೇಳುತ್ತದೆ. ಅಂತೆಯೇ ಜಗತ್ತಿನಾದ್ಯಂತ ಅನೇಕ ಸಂಘಟನೆಗಳು ಮಾನವ ಹಕ್ಕುಗಳ ರಕ್ಷಕನಾಗಿ ಕಾರ್ಯ ನಿರ್ವಹಿಸಿಕೊಂಡು ಹೊಗುತ್ತಿರುವ ಸಂಸ್ಥೆಗಳಲ್ಲಿ ಅಮ್ನೆಸ್ಟಿ ಇಂಟರ್ ನ್ಯಾಷಿನಲ್ 1961, ನಾಗರೀಕ ಹಕ್ಕುಗಳ ಜನ ಸ್ವಾತಂತ್ರ್ಯ ಸಂಘಟನೆ 1980.ಮೆಡಿಸಿನ್ ಸ್ಯಾನ್ ಫ್ರಾಂಟೈರ್ಸ್ 1971.ಅಮೇರಿಕಾದ ಜಿಯೋನಿಸ್ಟ್ ಸಂಘಟನೆ 1987, 1995ರ ಕರ್ನಾಟಕದಲ್ಲಿರುವ ಸಿಕ್ರಂ ನಂತಹನಂತರ ಅನೇಕ ಸಂಘಟನೆಗಳು[13] ಹಕ್ಕುಗಳ ಸಂರಕ್ಷಣೆ, ಸಂವರ್ಧನೆ ಮತ್ತು ಪ್ರತಿಪಾದನೆಗಾಗಿ ಪಣ ತೊಟ್ಟು ಕಾರ್ಯನಿರ್ವಹಿಸುತ್ತಿವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 5ನೇ ಸ್ಥಂಭವೆಂದು ಪರಿಗಣಿಸಲ್ಪಡುವ ಪೌರ ಸಮಾಜ ವಿವಿಧ ಜನಾಂಗಗಳ ಹಕ್ಕುಗಳ ಸಂರಕ್ಷಣೆಗೆ ಮುಂದಾಗಬೇಕಾದ ಅನಿವಾರ್ಯತೆ ಉಂಟಾಗುತ್ತದೆ, ಪೌರ ಸಮಾಜ ಸಂಘಟನೆಗಳ ಜಾಲವಾದ ಸರ್ಕಾರೇತರ ಸಂಘಟನೆಗಳು, ಜನರ ನಾಗರೀಕ ಸಾಮಾಜಿಕ ಆರ್ಥಿಕ, ರಾಜಕೀಯ ಸಾಂಸ್ಕೃತಿಕ, ಪಾರಿಸಾರಿಕ ಹಾಗೂ ಅಭಿವೃದ್ಧಿಯಂತ ವಿವಿಧ ಪ್ರಕಾರದ ಹಕ್ಕುಗಳ ಪ್ರತಿಪಾದನೆ, ಪ್ರಚಾರ ಮತ್ತು ಸಂರಕ್ಷಣೆಗೆ ಮುಂದಾಗಬೇಕಾದ ಅನಿವಾರ್ಯತೆ ತಲೆದೂರಿರುವುದರಿಂದಲೇ ಸಹಸ್ರಾರು ಸರ್ಕಾರೇತರ ಸಂಘಟನೆಗಳು 1961 ರಿಂದೀಚೆಗೆ ಹುಟ್ಟಿಕೊಂಡಿವೆ[14]. ಸಮಕಾಲಿನ ಮಾನವ ಹಕ್ಕುಗಳೆಲ್ಲಾ ಸಂಘಟನೆಯ ರೂಪತಾಳುತ್ತಿದ್ದು, ಸರ್ಕಾರೇತರ ಸಂಘಟನೆಗಳ ಕ್ರಿಯಾಶೀಲ ಮಧ್ಯಸ್ತಿಕೆಗೆ ಮಾರ್ಗ ಮಾಡಿಕೊಡುತ್ತಿರುವುದು ಅವಲೋಕನಾರ್ಹ.ಇದು ಮಾನವ ಹಕ್ಕುಗಳ ಸ್ಥಾಪನೆ ಮತ್ತು ಕಾರ್ಯವೈಖರಿಯ ಮೇಲೆ ಸಂಘಟನೆಗಳು ತಮ್ಮ ಅಸ್ತಿತ್ವ ಮತ್ತು ಉಪಯುಕ್ತತೆಯ ಮುದ್ರೆಯನ್ನೊತ್ತುತ್ತಿವೆ[15].ಸರ್ಕಾರೇತರ ಸಂಸ್ಥೆಗಳು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಾರ್ಯಕ್ರಮಗಳ ಅಭಿವೃದ್ಧಿಯಲ್ಲಿ ಭಾಗಿಯಾಗಿ ಮಾನವ ಹಕ್ಕುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವ ಮೂಲವಾಗಿ ಕಾರ್ಯನಿರ್ವಹಿಸುತ್ತಿವೆ. ಅಲ್ಲದೇ ಮಾನವ ಹಕ್ಕುಗಳ ಶೋಷಣೆಗೆ ಗುರಿಯಾದವರಿಗೆ ಪರಿಹಾರ ದೊರಕಿಸುವುದರೊಂದಿಗೆ ಸಂತ್ರಸ್ತರ ಪಾಲಿಗೆ ಆಶಾ ಕಿರಣವಾಗುತ್ತಿವೆ.

ಸರ್ಕಾರೇತರ ಸಂಸ್ಥೆಗಳ ಕಾರ್ಯ: 1. ಮಾನವ ಹಕ್ಕುಗಳ ಉಲ್ಲಂಘನೆ

ಮತ್ತು ರಕ್ಷಣೆಯ ಬಗ್ಗೆ ಜನಜಾಗೃತಿ ಮೂಡಿಸುವುದು.
2. ಸಮಸ್ಯೆಗಳನ್ನು ಗುರ್ತಿಸಿ ಅವುಗಳ ನಿವಾರಣೆಗೆ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು.
3. ಸಮಾಜದಲ್ಲಿ ದುರ್ಬಲರು, ಮಹಿಳೆಯರು, ಮಕ್ಕಳು, ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವುದು ಮತ್ತು ಅಸಹಾಯಕರಿಗೆ ಸಹಾಯ ಮಾಡುವುದು.
4. ಉಲ್ಲಂಘನೆ ಪ್ರಕರಣಗಳ ಬಗ್ಗೆ ತನಿಖೆ ಮಾಡಿ ಸಂತ್ರಸ್ತರಿಗೆ ಸಾಮಾಜಿಕ ನ್ಯಾಯ ದೊರೆಕಿಸಿಕೊಡುವುದು.
5. ಉಲ್ಲಂಘನೆಯ ಪ್ರಕರಣದ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹುಡುಕುವುದು
6. ಎಲ್ಲಿ ಮಾನವ ಹಕ್ಕುಗಳ ದುರ್ಬಳಕೆ ನೆಡೆಯುತ್ತದೆಯೋ ಅಲ್ಲಿ ಅದನ್ನು ವಿರೋಧಿಸಿ ಮಾನವ ಹಕ್ಕುಗಳ ಉಳಿವಿಗಾಗಿ ಹೋರಾಟ ಮಾಡುವುದು.

ಸರ್ಕಾರೇತರ ಸಂಸ್ಥೆಗಳ ಪಾತ್ರ : ರಾಜ್ಯ ಮತ್ತು ಸರ್ಕಾರಗಳಂತಹ ಸಂಸ್ಥೆಗಳಿಗೆ ಸರ್ಕಾರೇತರ ಸಂಘಟನೆಗಳು ಪರ್ಯಾಯ ಶಕ್ತಿಯಾಗಿ ಬೆಳದು ನಿಲ್ಲುತ್ತಿವೆ. ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಮಾನವ ಹಕ್ಕುಗಳು ವ್ಯಕ್ತಿಗಳ ಮತ್ತು ಸಮುದಾಯದ ಹಕ್ಕುಗಳ ಪಾರಮ್ಯತೆಯನ್ನು ಅಧಿಕಾರಿಯುತವಾಗಿ ಪೋಷಿಸಿ ಸಂರಕ್ಷಿಸಲು ತನ್ನ ಕಾರ್ಯ ವ್ಯಾಪ್ತಿಗೆ ತಕ್ಕಂತೆ ಮಾನವ ಹಕ್ಕುಗಳ ಸಂವರ್ಧನೆಗೆ ಕೊಡುಗೆ ನೀಡುತ್ತಿವೆ.
1. ಮಾನವ ಹಕ್ಕುಗಳ ಕುರಿತು ಶಿಕ್ಷಣದ ಮೂಲಕ ಜಾಗೃತಿ ಮೂಡಿಸುವುದು.
2. ಮಾನವ ಹಕ್ಕುಗಳ ಶೋಷಣೆಗೆ ಗುರಿಯಾದವರಿಗೆ ಪರಿಹಾರ ದೊರಕಿಸುವುದು.
3. ಹಕ್ಕು ಉಲ್ಲಂಘಿಸಿದವರ ವಿರುದ್ಧ ನ್ಯಾಯಾಲದ ಮೊರೆ ಹೊಗುವುದು.
4. ದೀನ, ದಲಿತ ದುರ್ಬಲರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದು.
5. ನಾಗರೀಕ ಹಕ್ಕುಗಳಿಗೆ ರಕ್ಷಣೆ ಒದಗಿಸುವುದು.
6. ಮಾನವ ಹಕ್ಕು ರಕ್ಷಣೆ ಮತ್ತು ವಾಸ್ತವಿಕ ಜಗತ್ತಿಗೆ ಮಾನವ ಹಕ್ಕುಗಳು ಸೂಕ್ತ ವಾತಾವರಣವನ್ನು ನಿರ್ಮಿಸುವುದು.
7. ಪ್ರಜೆಗಳ ಮೇಲೆ ಸರ್ಕಾರದ ಹಿಡಿತವನ್ನು ಮಿತಗೊಳಿಸುತ್ತದೆ.

ಬಾಲಕಾರ್ಮಿಕತೆ, ಸಾಮಾನ್ಯ ಅಪರಾಧಗಳು, ಪೋಲಿಸರಿಂದ ಗುಂಡು, ಪೋಲಿಸ್ ದೌರ್ಜನ್ಯ, ಚಿತ್ರಹಿಂಸೆ, ಸೆರೆಮನೆಗಳಲ್ಲಿ ಕೈದಿಗಳ ಸಾವು, ಕೋಮುವಾದ, ಹಿಂಸಾಚಾರ ಮತ್ತುದಲಿತರ ಮೇಲೆ ದೌರ್ಜನ್ಯ ಇನ್ನು ಮುಂತಾದವುಗಳ ಕುರಿತು ಸರ್ಕಾರೇತರ ಸಂಘಟನೆಗಳು ಕಾರ್ಯ ಪ್ರವೃತ್ತವಾಗಿ ಮೇಲ್ವಿಚಾರಣೆ ಮಾಡಿ ನ್ಯಾಯ ದೊರಕಿಸುವಲ್ಲಿ ಕಾರ್ಯ ಪ್ರವೃತ್ತವಾಗಿವೆ.

ಪ್ರಜಾಪ್ರಭುತ್ವದ ಸಂವರ್ಧನೆ:

ಅಬ್ರಂ ಲಿಂಕನ್: ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ನಡೆಸಲ್ಪಡುವ ಸರ್ಕಾರವೇ ಪ್ರಜಾಪ್ರಭುತ್ವ ಎಂದೇಳಿದ್ದಾರೆ[16].

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಪ್ರಕಾರ, ಪ್ರಜಾಪ್ರಭುತ್ವ ಎಂದರೆ ರಕ್ತಪಾತವಿಲ್ಲದೇ ಜನಸಮುದಾಯದ ಸಾಮಾಜಿಕ, ಆರ್ಥಿಕ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಸಾಧ್ಯಮಾಡುವ ಸರ್ಕಾರದ ಸ್ವರೂಪ ಮತ್ತು ವಿಧಾನವೇ ಪ್ರಜಾಪ್ರಭುತ್ವ ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ[17].

ಮಾನವ ಹಕ್ಕುಗಳು ಪ್ರಜಾಪ್ರಭುತ್ವದ ಜೀವಾಳವಾಗಿದ್ದು ಪ್ರಜಾಪ್ರಭುತ್ವದ ಸಂಪೂರ್ಣ ಯಶಸ್ಸು ಅಲ್ಲಿನ ನಾಗರೀಕ ಸಮಾಜವನ್ನು ಅವಲಂಬಿಸಿರುತ್ತದೆ.ಪ್ರಜೆಗಳು ಹಕ್ಕು ಬಾಧ್ಯತೆಗಳನ್ನು ಸರಿಯಾದ ರೀತಿಯಲ್ಲಿ ಅನುಭವಿಸುತ್ತಿದ್ದರೆ ಮಾತ್ರ ಅಲ್ಲಿ ಪ್ರಜಾಪ್ರಭುತ್ವದ ಸಂವರ್ಧನೆಯ ಸೂಚಿತ ಅಂಶಗಳು ಗೋಚರವಾಗುತ್ತವೆ. ಪ್ರಜಾಕಲ್ಯಾಣವನ್ನು ಸಾದಿಸಬೇಕಾದರೆ, ಪ್ರಜೆಗಳು ಸ್ವತಂತ್ರ್ಯವಾಗಿ ಮತ್ತು ಸಮಾನತೆಯಿಂದ ಜೀವಿಸಿದಾಗ ಮಾತ್ರ ಸಾಧ್ಯ.ಈ ಸ್ವಾತಂತ್ರ್ಯ ಮತ್ತು ಸಮಾನತೆಯ ಹಕ್ಕುಗಳು ಮಾನವೀಯ ಹಕ್ಕುಗಳಾಗಿದ್ದು ನಿಸರ್ಗದತ್ತವಾಗಿ ಮಾನವನೊಡನೆ ಬೆಳದು ಬಂದಿರುವುದರಿಂದ ಇವುಗಳಿಗೆ ದಕ್ಕೆ ಉಂಟಾದರೆ ಮಾನವ ಹಕ್ಕುಗಳ ಉಲ್ಲಂಘನೆಯಾದಂತೆ ಆಗುತ್ತದೆ.ಭಾರತವನ್ನೊಳಗೊಂಡ ವಿವಿಧ ರಾಷ್ಟ್ರಗಳಲ್ಲಾದ ಸ್ವಾತಂತ್ರ್ಯ ಹೋರಾಟಗಳು ಮಾನವ ಹಕ್ಕುಗಳಿಗಾಗಿ ನಡೆದ ಹೋರಾಟಗಳಾಗಿವೆ. ಮಾನವ ಹಕ್ಕುಗಳೇ ಪ್ರಜಾಪ್ರಭುತ್ವದ ಜೀವಾಳವಾಗಿರುವುದರಿಂದ ಅವುಗಳ ಕುರಿತಾದ ವಿಚಾರಗಳನ್ನು ಪ್ರತಿಪಾದಿಸಿ ಪ್ರಚಾರ ಮಾಡಿ, ಸಂರಕ್ಷಿಸಿ ಪ್ರಜಾಪ್ರಭುತ್ವದ ಸಂವರ್ಧನೆಗೂ ನೇರವಾಗಬೆಕಿದೆ.

ಉಪಸಂಹಾರ: ಇಂದು ಮಾನವ ಹಕ್ಕುಗಳ ಉಲ್ಲಂಘನೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಠಕಪ್ರಾಯವಾಗಿದೆ. ಹಕ್ಕುಗಳನ್ನು ಸಂರಕ್ಷಿಸಿ ಸಂವರ್ಧಿಸುವ ಗುರುತರವಾದ ಜವಾಬ್ದಾರಿಯನ್ನು ಇಂದು ಅನೇಕ ಸರ್ಕಾರಿ ಮತ್ತು ಸರ್ಕಾರೇತರ ಸಂಘಸಂಸ್ಥೆಗಳಿಗೂ ಇದೆ. ಈ ಮೂಲಕ ಮಾನವ ಹಕ್ಕುಗಳಿಗೆ ಮಾನವಿಯ ಮೌಲ್ಯದೊರೆಯುವಂತೆ ಮಾಡಿ ನಾಗರೀಕ ಸಮಾಜದಲ್ಲಿ ಸರ್ವರ ಸಮಾನತೆಯ ಸಾಧನೆಗಾಗಿ ಶ್ರಮಿಸಲು ಪ್ರತಿಜ್ಞೆಮಾಡಿವೆ. ಮಾನವ ಹಕ್ಕುಗಳ ಉಲ್ಲಂಘನೆ ಸಮಾಜಿಕ ವ್ಯವಸ್ಥೆಗೆ ಬಹುದೊಡ್ಡ ಸವಾಲಾಗಿದ್ದು ಅವುಗಳನ್ನು ನಿಯಂತ್ರಣ ಸಾದಿಸುವಲ್ಲಿ ಸರ್ಕಾರೇತರ ಸಂಘಟನೆಗಳು ಕಾರ್ಯ ಪ್ರವೃತ್ತವಾಗಿವೆ, ವ್ಯಕ್ತಿ ಸ್ವಾತಂತ್ರ ಮತ್ತು ಪಾರಮ್ಯತೆಯನ್ನು ರಾಜ್ಯ ಮತ್ತು ಸರ್ಕಾರಗಳ ಅಧಿಕಾರಕ್ಕಿಂತಲೂ ವ್ಯಕ್ತಿ ಸ್ವಾತಂತ್ರವನ್ನು ಪ್ರತಿಪಾದಿಸುವ ಮಾನವ ಹಕ್ಕುಗಳ ಅಧಿಕಾರದ ಪಾರಮ್ಯತೆಯೇ ಪರಮ ಪವಿತ್ರವಾದುದೆಂದು ಪ್ರತಿಪಾದಿಸುವ ಸರ್ಕಾರೇತರ ಸಂಘಟನೆಗಳು ದುರ್ಬಿತ ಜನಸಮುದಾಯಗಳ ಪಾಲಿಗೆ ಪ್ರಯೋಜನಕಾರಿ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಬೇಕಿದೆ.ವ್ಯಕ್ತಿಗಳು ಮತ್ತು ಸಮುದಾಯಗಳ ಹಕ್ಕು ಪಾರಮ್ಯತೆಯನ್ನು ಅಧಿಕಾರಯುತವಾಗಿ ಪೋಷಿಸಿ ಸಂರಕ್ಷಿಸಬೇಕಾದ ಅನಿವಾರ್ಯವಿದೆ.ಪೌರ ಸಮಾಜದಲ್ಲಿ ಚಳುವಳಿಗಳ ಮೂಲಕ ಜನಜಾಗೃತಿಯನ್ನು ಉಂಟುಮಾಡಿ ನವ ಸಮಾಜ ನಿರ್ಮಾಣಮಾಡಬೇಕಿದೆ. ಭಾರತದಂತಹ ಪ್ರಜಾಸತಾತ್ಮಕ ವ್ಯವಸ್ಥೆಯಂತ ರಾಜಕೀಯ ವ್ಯವಸ್ಥೆಯಲ್ಲಿ ಸಂವಿಧಾನಾತ್ಮಕವಾಗಿ ಸಾಂಸ್ಥಿಕರಣಗೊಂಡ ಮಾನವ ಹಕ್ಕುಗಳಿಗೆ ರಾಜ್ಯ ಮತ್ತು ಸರ್ಕಾರದಂತೆಯೇ ಸರ್ಕಾರೇತರ ಸಂಘಟನೆಗಳ ಮನ್ನಣೆ.ಬಲ ಮತ್ತು ಬೆಂಬಲ ಅತ್ಯಗತ್ಯವಾಗಿದೆ.

References:

1. ಟಿ. ಡಿ ದೇವೆಗೌಡ: ಮಾನವ ಹಕ್ಕುಗಳು, ಚೇತನ್ ಬುಕ್ ಹೌಸ್, ಮೈಸೂರು. 2011–ಮಟ ಸಂ–03
2. Koccher : Statistics Of Human Rights ,Udayavani-20-03-2009
3. Satnam Sing Deol: Human Rights In India : Theory And Practice, Serial Publication, New Delhi - 2011, P-4.
4. Political Science : J.K.Chopra, Unique Publishers, New

Delhi- 2013, P-127
5. J.P. Yadav : Human Rights And Social Security, Anmol Publication, New Delhi- 2004
6. Dr. S K .Kapoor: Human Rights And International Law & Indian Law. Central Law Agency. Allahabad 2009. P-261.
7. ಡಾ.ವೈ. ಗಂಗಾಧರ ರೆಡ್ಡಿ ಮತ್ತು ಪ್ರೊ.ಜೆ.ಆರ್.ಆಶ್ಲೆಫ್ : ರಾಜಕೀಯ ಕಣ್ವ ಪಬ್ಲಿಕೇಷನ್ ಪ್ರೈ. ಲಿ., ಬೆಂಗಳೂರು– 2012
8. Sudhir Kapoor : Humanm Rights in 21st Century ,Mangaldeep Publication Jaipur-2003, p-43
9. Dr .S K. Kapoor: Human Rights and International Law & Indian Law. Central Law Agency, Allahabad -2009. p-261.
10. Pushpa Sundar : Foreign Aid for Indian NGO's Problems and Solution?, Routeledge Publication ,New York- 2010, p-2.
11. Dr. Kaushlendra : Mishra Development of NGO's Civil Society, Navying Publication, New Delhi –2008
12. www.ngo.org.in
13. Dr. S K. Kapoor: Human Rights and International Law & Indian Law. Central Law Agency, Allahabad - 2009. p-261
14. S.R. Shankaran : Bureaucracy and Human Rights: Repressive State or Responsive state, Indian Journal Of Human Rights ,(VOL.10&11. NO1&2) January 2006 To December-2007 Page No,37
15. Upendra Baxi: The State And Human Rights Movement And In India. Sage Publication New Delhi,1998,Page No-65
16. J.K. Chopra, Political Science, Unique publisher, New Delhi, 2010, p.205).
17. ಹೆಚ್.ಎಸ್. ಅನುಪಮಾ ಬಸೂ, ಭೀಮಯಾನ ಡಾ.ಬಿ.ಆರ್.ಅಂಬೇಡ್ಕರ್‌ರ ಚಿಂತನೆಗಳು ಲಡಾಯಿ ಪ್ರಕಾಶನ, ಗದಗ, ೨೦೧೨, ಪು.೫೭.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರ – ೨೦೦೦ ರಿಂದ ೨೦೧೦

ಡಾ. ಇಂದಿರಾ ಟಿ.

ಸಂ: 367, 4ನೇ ಅವೆನ್ಯೂ ಟೀಚರ್ ಕಾಲೋನಿ, 1 ನೇ ಬ್ಲಾಕ್ ಕೋರಮಂಗಲ, ಬೆಂಗಳೂರು. ಇ–ಮೇಲ್: indirathasson@gmail.com

ಭಾರತದ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಪ್ರಜೆಗಳು ಸಾಮಾಜಿಕವಾಗಿ ರಾಜ್ಯದ ವ್ಯವಹಾರದಲ್ಲಿ ಪಾಲ್ಗೊಳ್ಳ ಬೇಕಾಗುತ್ತದೆ. ದೇಶದ ಎಲ್ಲಾ ಪ್ರಜೆಗಳು ಜಾತ್ಯಾತೀತವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಪ್ರಜ್ಞಾಪೂರ್ವಕವಾಗಿ ಭಾಗವಹಿಸಿದಾಗ ಪ್ರಜಾಪ್ರಭುತ್ವ ಸದೃಢಗೊಳ್ಳುತ್ತದೆ. ಒಂದು ರೀತಿಯ ರಾಜಕೀಯ ತಿಳುವಳಿಕೆ ಮತ್ತು ಆಡಳಿತ ವ್ಯವಸ್ಥೆಯ ಮೂಲನೀತಿಗಳು ಪರಿಚಯವಾಗಬೇಕಾದರೆ ಅತ್ಯುತ್ತಮ ವಿಕೇಂದ್ರೀಕೃತ ಸ್ಥಳೀಯ ಸರ್ಕಾರಗಳ ರಚನೆ ಪ್ರಮುಖವಾಗಿದೆ. ಸ್ಥಳೀಯ ಆಡಳಿತ ವ್ಯವಸ್ಥೆಯ ಪ್ರಮುಖ ಪಂತಗಳಲ್ಲಿ ಒಂದಾದ ನಗರಪಾಲಿಕೆಗಳು ಪ್ರಮುಖ ಪ್ರಜಾಪ್ರಭುತ್ವ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಕಾಣಬಹುದಾಗಿದೆ. ಇವು ನಗರದ ಜನತೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನವನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಹೀಗೆ ಕಾರ್ಯಪ್ರವೃತ್ತವಾಗಿರುವ ನಗರಗಳಲ್ಲಿ ಬೆಂಗಳೂರು ಸಹ ಭಾರತದ ನಾಲ್ಕನೆಯ ಪ್ರಮುಖ ನಗರವಾಗಿದೆ. ಬೃಹತ ಬೆಂಗಳೂರು ಮಹಾನಗರ ಪಾಲಿಕೆಯು ಒಟ್ಟು ೧೯೪ ವಾರ್ಡ್‌ಗಳನ್ನು ಹೊಂದಿದೆ. ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣೆಯಲ್ಲಿ ಪ್ರತ್ಯಕ್ಷ ಮತದಾನದಿಂದ ಅಭ್ಯರ್ಥಿಗಳು ಆಯ್ಕೆಯಾಗುತ್ತಾರೆ. ಇದರಲ್ಲಿ ನಾಮಕರಣಗೊಂಡ ಸದಸ್ಯರು ಸಹ ಐದು ವರ್ಷ ಸದಸ್ಯರಾಗಿರುತ್ತಾರೆ. ಆಯ್ಕೆಗೊಂಡ ಸದಸ್ಯರಲ್ಲಿ ಒಬ್ಬರನ್ನು ಮೇಯರ್ ಆಗಿ ಮತ್ತೊಬ್ಬರನ್ನು ಉಪಮೇಯರ್ ಆಗಿ ಆಯ್ಕೆಗೊಂಡ ಸದಸ್ಯರು ಏಕ ಮತದಾನ ಪದ್ಧತಿಯ ಮೂಲಕ ಆಯ್ಕೆ ಮಾಡುತ್ತಾರೆ. ಮೇಯರ ಕಾಲಾವಧಿ ಒಂದು ವರ್ಷವಾಗಿದ್ದು, ಆವರ ಗೈರುಹಾಜರಿಯಲ್ಲಿ ಉಪಮೇಯರ್ ಅವರು ಮೇಯರ್ ಕಾರ್ಯವನ್ನು ನಿರ್ವಹಿಸುತ್ತಾರೆ. ಬಿ.ಬಿ.ಎಂ.ಪ್ ಕಾರ್ಯ ನಿರ್ವಹಣೆಯಲ್ಲಿ ಸಂವಿಧಾನ ಬೆಳವಣಿಗೆಯ ನಂತರದ ಬದಲಾವಣೆಯಲ್ಲಿ ವಿವಿಧ ಸಂಘಟನೆಗಳ ಹೊಂದಾಣಿಕೆ ಕಾರ್ಯಪ್ರವೃತ್ತಿ ಹಾಗೂ ರಾಜಕೀಯ ಪಕ್ಷಗಳ ಕಾರ್ಯನಿರ್ವಹಣೆಯನ್ನು ಈ ಮೂಲಕ ಚರ್ಚಿಸಲಾಗಿದೆ.

ಪೀಠಿಕೆ : ಸ್ಥಳೀಯ ಸರ್ಕಾರಗಳು ಭಾರತಕ್ಕೆ ಹೊಸದಾಗಿ ಅಸ್ತಿತ್ವಕ್ಕೆ ಬಂದ ಸಂಸ್ಥೆಗಳಲ್ಲ. ಇವು ರಾಷ್ಟ್ರದ ಇತಿಹಾಸದ ಕೊಡುಗೆ. ಇವು ಉತ್ತಮ ಆಡಳಿತ ಘಟಕಗಳಾಗಿ ಕಾರ್ಯ ನಿರ್ವಹಿಸುತ್ತಿದ್ದುದರ ಬಗ್ಗೆ ವೇದಗಳ ಕಾಲದಿಂದಲೂ ಸಾಕಷ್ಟು ಪುರಾವೆಗಳಿವೆ. ಕಾಲಾನಂತರ ಇವರು ಮಾರ್ಪಾಡು ಹೊಂದುತ್ತಾ ಬಂದು ಸಂವಿಧಾನತ್ಮಕ ಅಂಶಗಳಾಗಿ ರೂಪಾಂತರ ಹೊಂದಿದೆ. ಪ್ರಾಚೀನ ಕಾಲದ ಸ್ಥಳೀಯ ಸರ್ಕಾರಗಳು ತನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಗರ ಅಭಿವೃದ್ಧಿಗೆ ಅಡ್ಡಿಯಾಗುತ್ತಿದ್ದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ನಿವಾರಣೆಗಳಲ್ಲಿ ಅತ್ಯಂತ ಮಹತ್ತರವಾದ ಜವಬ್ದಾರಿಗಳನ್ನು ನಿರ್ವಹಿಸುತ್ತಿದ್ದವು. ಭಾರತದಲ್ಲಿ ರಾಜತ್ವವು ಅಸ್ತಿತ್ವಕ್ಕೆ ಬಂದ ಪ್ರಾರಂಭದಿಂದಲೂ ತಮ್ಮ ಪ್ರಾಮುಖ್ಯತೆಯನ್ನು ಕಾಪಾಡಿಕೊಂಡು ಬಂದಿದ್ದವು. ರಾಜಸ್ವ ಅಸ್ತಿತ್ವಕ್ಕೆ ಬಂದ ನಂತರ ನಗರಾಭಿವೃದ್ಧಿ ಆಡಳಿತ ನಿರ್ವಹಿಸಿಕೊಂಡು ಹೋಗುತ್ತಿದ್ದ ಸ್ಥಳೀಯ ಸರ್ಕಾರಿ ಸಂಸ್ಥೆಗಳು ರಾಜರ ನಿಯಂತ್ರಣದಲ್ಲಿ ಬಂದವು. ನಂತರ ಇವು ಕೇವಲ ತೆರಿಗೆ ಸಂಗ್ರಹಿಸುವ ಸಂಸ್ಥೆಗಳಾಗಿ ರೂಪುಗೊಂಡವು. ಇದು ಬ್ರಿಟೀಷರ ಕಾಲದಲ್ಲೂ ಮುಂದುವರೆದುಕೊಂಡು ಬಂದಿತು. ಸ್ವಾತಂತ್ರ ನಂತರ 1993 ರಲ್ಲಿ 73 ಮತ್ತು 74 ನೇ ತಿದ್ದುಪಡಿಯು ಜಾರಿಯಾಯಿತು. ಸಂವಿಧಾನದ 74ನೇ ತಿದ್ದುಪಡಿಯು ಪುರಸಭೆಗಳು ತಮ್ಮದೇ ಆದ ಕಾರ್ಯವ್ಯಾಪ್ತಿಯನ್ನು ಹೊಂದಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಟ್ಟಿದೆ. ಇದರಿಂದಾಗಿ ನಗರ ಸ್ಥಳೀಯ ಸರ್ಕಾರಗಳು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬುನಾದಿಯಾಗಿ ಹೊರ ಹೊಮ್ಮಿದೆ. ಹೀಗೆ ಹೊರ ಹೊಮ್ಮಿದ ನಗರಗಳಲ್ಲಿ ಬೆಂಗಳೂರು ಸಹ ಭಾರತದ ಪ್ರಮುಖ ನಗರಗಳಲ್ಲಿ ಒಂದಾಗಿದೆ. ಈ ನಗರವನ್ನು ಅಭಿವೃದ್ಧಿ ಹಾಗೂ ನಗರದಲ್ಲಿರುವ ಸಮಸ್ಯೆಗಳನ್ನು ಬಗೆಹರಿಸುವ ಜವಬ್ದಾರಿ ಬೃಹತ್

ಬೆಂಗಳೂರು ಮಹಾನಗರ ಪಾಲಿಕೆಯದಾಗಿದೆ. ಬಿಬಿಎಂಪಿಯು ಇಂದು 800 ಚದರ ಕಿ.ಮೀ. ವಿಸ್ತಾರ ಹೊಂದಿ 198 ವಾರ್ಡ್‌ಗಳನ್ನು ಹೊಂದಿದೆ. ಕೆಂಪೇಗೌಡ ಕಟ್ಟಿದ ನಗರ ಇಂದು ಇಷ್ಟು ಬೃಹತ್ತಾಗಿ ಬೆಳೆಯುತ್ತಿದೆ.

ಪ್ರಸ್ತುತ ಪ್ರಬಂಧದಲ್ಲಿ ಬಿಬಿಎಂಪಿಯಲ್ಲಿ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆ.ಡಿ.ಎಸ್ ನ ಕಾರ್ಯವಿಶ್ಲೇಷಣೆ ಮಾಡಲಾಗಿದೆ. ಬಿಬಿಎಂಪಿಯಲ್ಲಿ ನಡೆಯುವ ಚುನಾವಣೆಯನ್ನು ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ತಮ್ಮ ಪ್ರತಿಷ್ಠೆಯ ಕಣವಾಗಿರಿಸಿಕೊಂಡಿದೆ. ಪಾಲಿಕೆಗೆ ನಡೆಯುವ ಚುನಾವಣೆಯಲ್ಲಿ ಈ ಮೂರು ಪಕ್ಷಗಳಲ್ಲಿ ತೀವ್ರ ಪೈಪೋಟಿ ಇರುತ್ತದೆ. ಚುನಾವಣೆ ಸಮಯದಲ್ಲಿ ಗುಂಪುಗಾರಿಕೆ, ಹೊಡೆದಾಟ, ಜಗಳಗಳು ಸರ್ವೆ ಸಾಮಾನ್ಯವಾಗಿದೆ. ಇನ್ನೊಂದೆಡೆ ಮತದಾನ ಎಂಬ ಹಕ್ಕಿನ ಬಗ್ಗೆಯೇ ಪೂರ ನಿರ್ಲಕ್ಷ ಮುಂತಾದ ಅಂಶಗಳನ್ನು ಕಾಣಬಹುದು. ಸಂವಿಧಾನದ 74ನೇ ತಿದ್ದುಪಡಿಯ ಮೂಲಕ ನಗರ ಸ್ಥಳೀಯ ಸರ್ಕಾರಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಸರ್ಕಾರದ ಈ ನೀತಿಯಿಂದ ಸಮಾಜದ ಎಲ್ಲಾ ವರ್ಗಗಳಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಇರುವ ಅಸಮಾನತೆಗಳನ್ನು ಹೋಗಲಾಡಿಸಿ ಅಭಿವೃದ್ಧಿ ಹೊಂದಲು ಬೇಕಾದ ಅವಕಾಶ ದೊರಕಿದಂತಾಗಿದೆ. ಮೀಸಲಾತಿ ನಿಯಮದ ಮೊದಲು ಸಮಾಜದಲ್ಲಿ ರಾಜಕೀಯವಾಗಿ ಕೆಲವು ಮುಂದುವರೆದ ಪ್ರಬಲ ಜಾತಿಗಳ ಪ್ರಾಬಲ್ಯ ಹೆಚ್ಚಾಗಿದ್ದು, ಹಿಂದುಳಿದ ವರ್ಗಗಳಿಗೆ ಯಾವ ಸ್ಥಾನ-ಮಾನಗಳನ್ನು ಬಿಟ್ಟುಕೊಡದೇ ಒಂದು ರೀತಿಯ ದಬ್ಬಾಳಿಕೆ ನೀತಿಯನ್ನು ಅನುಸರಿಸುತ್ತಿದ್ದವು.

ಬೆಂಗಳೂರು ನಗರ ಹಲವಾರು ಹಳ್ಳಿಗಳಿಂದ ಕೂಡಿ ಬೆಳೆಯುತ್ತಿದೆ. ಬೆಂಗಳೂರಿನಲ್ಲಿ ಸಿಗುವ ವ್ಯಾಪಾರ, ಕೈಗಾರಿಕೆಗಳ ಚಟುವಟಿಕೆ, ಉದ್ಯೋಗಾವಕಾಶ, ವೈದ್ಯಕೀಯ ಸೌಲಭ್ಯ ಮೊದಲಾದ ಅನುಕೂಲತೆಗಳಿಂದಾಗಿ ಹೆಚ್ಚು ಜನರು ವಲಸೆ ಬರುಬಂತಾಗಿದೆ. ಹೀಗೆ ಶೀಘ್ರವಾಗಿ ಬೆಳೆಯುತ್ತಿರುವ ನಗರದಲ್ಲಿ ಹಲವಾರು ಸಮಸ್ಯೆಗಳು ಕೂಡ ಬೆಳೆಯುತ್ತಿದೆ. ಹೀಗೆ ಬೆಳೆಯುತ್ತಿರುವ ಸಮಸ್ಯೆಗಳನ್ನು ಬಗೆ ಹರಿಸುವ ಜವಬ್ದಾರಿ ಪಾಲಿಕೆಯಲ್ಲಿ ಪ್ರಮುಖವಾಗಿ ರಾಜಕೀಯ ಪಕ್ಷಗಳದ್ದಾಗಿದೆ. ಪಾಲಿಕೆಯಲ್ಲಿ ಕಳೆದ 5 ದಶಕಗಳಿಂದ ಆಡಳಿತ ನಿರ್ವಹಿಸಿದ ಪಕ್ಷಗಳೆಂದರೆ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಆಗಿದೆ. ಹೀಗಾಗಿ ಈ ಪ್ರಬಂಧದಲ್ಲಿ ಮೊದಲನೇಯದಾಗಿ ಕಾಂಗ್ರೆಸ್ ಪಕ್ಷದ ಕೆಲವು ಪ್ರಮುಖ ಕಾರ್ಯ ವಿಶ್ಲೇಷಣೆಯನ್ನು ತಿಳಿಸಲಾಗುತ್ತಿದೆ.

ಕಾಂಗ್ರೆಸ್ ಪಕ್ಷದ ಕಾರ್ಯ ವಿಶ್ಲೇಷಣೆ : ಭಾರತದ ರಾಜಕೀಯ ಪಕ್ಷಗಳಲ್ಲಿ ಕಾಂಗ್ರೆಸ್ ಹೆಚ್ಚು ಪ್ರಾಬಲ್ಯತೆಯನ್ನು ಪಡೆದುಕೊಂಡಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುವಲ್ಲಿ ಪ್ರಮುಖ ಪಾತ್ರ ವಹಿಸಿ ಕೇಂದ್ರ ರಾಜ್ಯಗಳಲ್ಲಿ ಸ್ವಾತಂತ್ರ್ಯ ನಂತರ ಕೂಡ ಹಲವಾರು ವರ್ಷಗಳು ಅಧಿಕಾರ ನಿರ್ವಹಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲೂ ಕೂಡ ಆಡಳಿತವನ್ನು ನಿರ್ವಹಿಸಿದೆ. 1950 ಜನವರಿ 26ರಂದು ಭಾರತ ಸಂವಿಧಾನ ಜಾರಿಗೆ ಬಂದ ನಂತರ 21 ವರ್ಷ ಮೇಲ್ಪಟ್ಟವರಿಗೆ ವಯಸ್ಕ ಮತದಾನ ಜಾರಿಗೆ ಬರಲು ಬೆಂಗಳೂರು ಮಹಾನಗರ ಪಾಲಿಕೆಗೆ "1950ರ ಡಿಸೆಂಬರ್ 23 ರಂದು ಪ್ರಥಮ ಭಾರಿಗೆ ಚುನಾವಣೆ ನಡೆದು ಒಟ್ಟು ಇದ್ದ 70 ಸ್ಥಾನಗಳಲ್ಲಿ ಕಾಂಗ್ರೆಸ್ 45 ಸ್ಥಾನಗಳನ್ನು ಪಡೆದು ಆಡಳಿತ ಪಕ್ಷವಾಯಿತು" [1]. ನಂತರ 1953 ರಲ್ಲಿ ಮತ್ತೆ ಚುನಾವಣೆ ನಡೆದು 43 ಸ್ಥಾನಗಳನ್ನು ಪಡೆದು ಆಡಳಿತ ಪಕ್ಷವಾಯಿತು. 1965ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಕಳೆದುಕೊಂಡಿತು. "ರಾಜ್ಯದ ಎಲ್ಲಾ ನಗರ ಕಾರ್ಪೊರೇಷನ್‌ಗಳಿಗೆ ಸಂಬಂಧಿಸಿ ಕರ್ನಾಟಕ ಮಹಾನಗರ ಪಾಲಿಕೆ ಕಾನೂನನ್ನು 1976ರಲ್ಲಿ ಮಂಜೂರು ಮಾಡಿ ಮತದಾನದ ಅಧಿಕಾರ ನೀಡುವ 21 ರಿಂದ 18 ವರ್ಷಗಳಿಗೆ ಇಳಿಸಲಾಯಿತು" [2]. ಮುಂದೆ 1995ರಲ್ಲಿ ಬೆಂಗಳೂರು ಕಾರ್ಪೊರೇಷನ್‌ಗೆ 36 ಹೊಸ ವಾರ್ಡ್‌ಗಳನ್ನು ಸೇರಿಸಿ ಒಟ್ಟು ವಾರ್ಡ್‌ಗಳ ಸಂಖ್ಯೆ 100 ವಾರ್ಡ್‌ಗಳಾಯಿತು. ಇದರ ವ್ಯಾಪ್ತಿ 150 ಚದರ ಕಿ.ಮೀ. ರಿಂದ 200 ಕಿ.ಮಿ ಆಯಿತು. ಇದರ ವ್ಯಾಪ್ತಿ 150 ಚ. ಕಿಮೀ. ನಿಂದ 225 ಆಯಿತು. 1996ರಲ್ಲಿ ಚುನಾವಣೆ ನಡೆದಾಗ ಕಾಂಗ್ರೆಸ್ 19 ಸ್ಥಾನಗಳನ್ನು ಪಡೆದುಕೊಂಡಿತು. ಹೀಗೆ ಕಾರ್ಪೊರೇಷನ್ ಸ್ಥಾಪನೆಯಾದ ನಂತರ ಕಾಂಗ್ರೆಸ್ ಪಕ್ಷವು ಆಡಳಿತ ಪಕ್ಷವಾಗಿ ಕೆಲವೊಮ್ಮೆ ವಿರೋಧಪಕ್ಷವಾಗಿ ತನ್ನ ಆಡಳಿತ ನಿರ್ವಹಿಸಿರುವುದನ್ನು ಇಲ್ಲಿ ಕಾಣಬಹುದು.

ನಂತರ 2001 ರಲ್ಲಿ ಪಾಲಿಕೆಗೆ ಚುನಾವಣೆ ನಡೆದಾಗ ಒಟ್ಟು ಇದ್ದ 100 ಸ್ಥಾನಗಳಿಗೆ ಕಾಂಗ್ರೆಸ್ 57 ಸ್ಥಾನಗಳನ್ನು ಪಡೆದು ಆಡಳಿತ ಪಕ್ಷವಾಗಿ ತನ್ನ ಕಾರ್ಯಗಳನ್ನು ನಿರ್ವಹಿಸಿತು. ಮುಂದೆ 2006ರಲ್ಲಿ ಚುನಾವಣೆ ನಡೆಯದೆ, ಪಾಲಿಕೆಯು ಅಧಿಕಾರವನ್ನು ಆಡಳಿತಾಧಿಕಾರಿಗಳು ನಿರ್ವಹಿಸಿದರು. ಈ ಸಂದರ್ಭದಲ್ಲಿ ವಾರ್ಡ್‌ಗಳ ವಿಂಗಡನೆಯಾಗಿ 100 ವಾರ್ಡ್‌ಗಳಿಂದ 198 ವಾರ್ಡ್‌ಗಳಿಗೆ ಹೆಚ್ಚಳವಾಯಿತು ಹಾಗೂ ಕ್ಷೇತ್ರ 225 ಚ. ಕಿಮೀ. ನಿಂದ 800 ಚ.ಕಿ.ಮೀಗೆ ಹೆಚ್ಚಳವಾಗಿ ಬೆಂಗಳೂರು ಮಹಾನಗರ ಪಾಲಿಕೆಯು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಯಾಯಿತು. ಮುಂದೆ ನಡೆದ 2010ರ ಚುನಾವಣೆಯಲ್ಲಿ ಒಟ್ಟು ಇದ್ದ 198 ಸ್ಥಾನಗಳಲ್ಲಿ ಕಾಂಗ್ರೆಸ್ 67 ಸ್ಥಾನಗಳನ್ನು ಪಡೆದು ವಿರೋಧ ಪಕ್ಷವಾಗಿ ತನ್ನ ಆಡಳಿತವನ್ನು ನಿರ್ವಹಿಸುತ್ತಿದೆ.

ಕಾಂಗ್ರೆಸ್ ಪಕ್ಷ ತನ್ನ ಆಡಳಿತಾವಧಿಯಲ್ಲಿ ನಿರ್ವಹಿಸಿದ ಪ್ರಮುಖ ಕಾರ್ಯಗಳೆಂದರೆ, ಅತೀ ಶೀಘ್ರಗತಿಯಿಂದ ಬೆಳೆಯುತ್ತಿರುವ ನಗರದ ಮೂಲಭೂತ ಸೌಕರ್ಯಗಳನ್ನು ಪೂರೈಸಲು ಸಹಾಯಕವಾಗುವಂತೆ ಪಾಲಿಕೆಯು ಸರ್ಕಾರದೊಂದಿಗೆ 2001ರಲ್ಲಿ ಒಡಂಬಡಿಕೆ ಮಾಡಿಕೊಂಡಿದೆ. ಇದರ ಉದ್ದೇಶ ಸಮರ್ಪಕ ಅಳತೆಗೋಲಿನ ಆಧಾರದ ಮೇಲೆ ನಿರ್ದಿಷ್ಟ ಯೋಜನೆಗಳಿಗೆ ರಾಜ್ಯ ಸರ್ಕಾರ ಆರ್ಥಿಕ ನೆರವು ಪಡೆದು ಹೆಚ್ಚಿನ ಹಣ ಸಂಗ್ರಹಣೆಗಾಗಿ ಪಾಲಿಕೆಯ ಆಂತರೀಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು. ಈ ರೀತಿಯ ಒಡಂಬಡಿಕೆ ದೇಶದಲ್ಲಿಯೇ ಪ್ರಥಮವಾಗಿತ್ತು ಮತ್ತು "ದೇಶದಲ್ಲಿಯೇ ಪ್ರಥಮ ಭಾರಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಲೆಕ್ಕಪತ್ರ ವಹಿವಾಟನ್ನು ಗಣಕೀಕರಣಗೊಳಿಸಿ ನಿಧಿ ಆಧಾರಿತ ಲೆಕ್ಕ ಪದ್ಧತಿಯನ್ನು ಜಾರಿಯಲ್ಲಿ ತರಲಾಗಿದೆ" [3] ಈ ವ್ಯವಸ್ಥೆಯಿಂದ ಪಾಲಿಕೆಯ ಅಂದಂದಿನ ಆಧಾಯ ವೆಚ್ಚಗಳನ್ನು ಅಂದೇ ತಿಳಿಯಬಹುದಾಗಿದೆ. ನೂತನ ಕಟ್ಟಡ ನಿರ್ಮಾಣವು ಬಹುಮಟ್ಟಿಗೆ ಹೊಸ ವಾರ್ಡುಗಳಲ್ಲಿ ನಡೆಯುತ್ತಿದ್ದು ಅಂತಹ ಆಸ್ತಿಗಳ ಮೇಲ್ಪಟ್ಟು ವೆಚ್ಚವನ್ನು ಸಂಗ್ರಹಿಸಿ ಪಾಲಿಕೆ ಆದಾಯವನ್ನು ಹೆಚ್ಚಿಸುವುದು, ಪಾಲಿಕೆಯ

ಗುರಿಯಾಗಿತ್ತು.

ಇದಕ್ಕೆ ಪಾಲಿಕೆಯ ಸದಸ್ಯರು "2003–04ನೇ ಸಾಲಿನಲ್ಲಿ ರೂ. 30.00 ಕೋಟಿ ಹಾಗೂ 2004–05 ನೇ ಸಾಲಿನಲ್ಲಿ ರೂ. 50.00 ಕೋಟಿ ಸಂಗ್ರಹಿಸುವ ಗುರಿಯನ್ನು ಹೊಂದಿದ್ದರು [4] ಕಾಂಗ್ರೆಸ್‌ನ ಆಡಳಿತಾವಧಿಯಲ್ಲಿ ಪಾಲಿಕೆಯ ವತಿಯಿಮದ ಕೈಗೊಂಡ ಬಿಗಿಯಾದ ಕ್ರಮಗಳಿಂದಾಗಿ ಅಲ್ಲಲ್ಲಿ ಸೋರಿಹೋಗುತ್ತಿದ್ದ ಜಾಹಿರಾತು ತೆರಿಗೆಯ ಸಂಗ್ರಹಣೆಯನ್ನು ಉತ್ತಮಪಡಿಸಿ, ಸುಧಾರಣಾ ಕ್ರಮ ಕೈಗೊಂಡರು.

ನಗರ ಯೋಜನೆಯ ವಿಭಾಗದಲ್ಲಿ ಇತ್ತೀಚೆಗೆ ಪಾಲಿಕೆ ರಾಜ್ಯ ಸರ್ಕಾರದ ಸಹಕಾರದೊಂದಿಗೆ ಮಾಡಿಕೊಂಡ ಬದಲಾವಣೆ ಎಂದರೆ ನಗರ ಪಾಲಿಕೆಗಳ ಅಧಿನಿಯಮಕ್ಕೆ ತಿದ್ದುಪಡಿಗಳನ್ನು ಮಾಡಿರುವುದು ಮಂಜೂರಾದ ಕಟ್ಟಡದ ವಿನ್ಯಾಸದ ಎಲ್ಲೆಯನ್ನು ಮೀರಿ ಅಥವಾ ನಕ್ಷೆಗೆ ವಿರುದ್ಧವಾಗಿ ನಿರ್ಮಿಸಲಾದ ಅನೇಕ ಕಟ್ಟಡಗಳ ವಿಷಯದಲ್ಲಿ ಪಾಲಿಕೆಯ ವತಿಯಿಂದ ಜಾರಿ ಕ್ರಮವನ್ನು ನಡೆಸಿ, ಹಲವಾರು ಕಾರಣಗಳಿಂದ ಈ ವಿಷಯದಲ್ಲಿ ಸಾಕಷ್ಟು ನಿಯಂತ್ರಣದಲ್ಲಿ ಸಾಧಿಸಲು ಪ್ರಯತ್ನಿಸಿರುವುದು ಪಕ್ಷದ ದಕ್ಷ ಕಾರ್ಯವನ್ನು ನಿರೂಪಿಸುತ್ತದೆ. ಜೊತೆಗೆ ನಗರಕ್ಕೆ ಉತ್ತಮ ಸಂಚಾರ ವ್ಯವಸ್ಥೆ ರೂಪಿಸಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ನೆರವಿನಿಂದ ಸುಧಾರಿತ ಕ್ರಮ ಕೈಗೊಂಡಿದ್ದಾರೆ ಮತ್ತು ಪಾದಚಾರಿ ಮಾರ್ಗಗಳ ಅಭಿವೃದ್ಧಿ, ಮಳೆ ನೀರಿನ ಚರಂಡಿ ವ್ಯವಸ್ಥೆಯ ಸುಧಾರಣೆ, ಕೊಳಚೆ ಪ್ರದೇಶಗಳ ಅಭಿವೃದ್ಧಿ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ತಮ್ಮ ಆಡಳಿತಾವಧಿಯಲ್ಲಿ ಪ್ರಯತ್ನಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾದ ನಂತರ ದಿನಾಂಕ : 28–03–2010 ರಂದು ಪಾಲಿಕೆಗೆ ನಡೆದ ಮೊದಲ ಚುನವಣೆಯಲ್ಲಿ ಒಟ್ಟು ಇದ್ದ 198 ವಾರ್ಡ್‌ಗಳಿಗೆ ಕಾಂಗ್ರೆಸ್ 65 ಸ್ಥಾನಗಳನ್ನು ಗೆದ್ದು ವಿರೋಧ ಪಕ್ಷವಾಯಿತು. ಮಹಿಳಾ ಅಭ್ಯರ್ಥಿಗಳು 27 ಹಾಗೂ ಪುರುಷ ಅಭ್ಯರ್ಥಿಗಳು 38 ಸ್ಥಾನಗಳನ್ನು ಪಡೆದುಕೊಂಡರು. ವಿರೋಧ ಪಕ್ಷವಾದ ಕಾಂಗ್ರೆಸ್ ಶ್ರೀ ಎಂ. ನಾಗರಾಜುರವರನ್ನು ತನ್ನ ನಾಯಕರನ್ನಾಗಿ ಆಯ್ಕೆ ಮಾಡಿತು. ಸ್ಥಾಯಿ ಸಮಿತಿ ರಚನೆ ವಿಳಂಬವಾದದನ್ನು ಕಾಂಗ್ರೆಸ್ ನೇರವಾಗಿ ಟೀಕಿಸಿ ಬೇಗ ಸ್ಥಾಯಿ ಸಮಿತಿ ರಚನೆ ಮಾಡಲು ಒತ್ತಾಯಿಸಿತು. ನಿರ್ದಿಷ್ಟ ವಿಷಯಗಳ ಮೇಲಿನ ಸಮಗ್ರ ಚರ್ಚೆ ಉದ್ದೇಶದಿಂದ ಆಯೋಜಿಸ ಲಾಗಿದ್ದ ಬಿಬಿಎಂಪಿ ಕೌನ್ಸಿಲ್ ಸಭೆ ಗದ್ದಲದಲ್ಲಿ ಪರ್ಯಾಯವಸನ ಗೊಂಡಿತು.

ನಿರೀಕ್ಷೆಯಂತೆ ಪ್ರತಿ ಪಕ್ಷಗಳ ಪ್ರತಿಭಟನೆ ಹಾಗೂ ತೀವ್ರ ಕೋಲಾಹಲದ ನಡುವೆಯೇ ಯಾವುದೇ ಚರ್ಚೆಯಿಲ್ಲದೇ, ಬಹುತೇಕ ನಿರ್ಣಯಗಳಿಗೆ ಅನುಮೋದನೆ ಪಡೆದುಕೊಂಡು ಕಾರ್ಯ ನಿರ್ವಹಿಸುತ್ತಿದ್ದ ಆಡಳಿತ ಪಕ್ಷವಾದ ಬಿಜೆಪಿ ಆಡಳಿತವನ್ನು "ಬಿಬಿಎಂಪಿ ಮೇಲಿನ ಅತ್ಯಾಚಾರ, ದೌರ್ಜನ್ಯ, ತುಘಲಕ್ ದರ್ಬಾರ್ ಎಂಬ ಕಠಿಣ ಶಬ್ದಗಳಲ್ಲಿ ಕಾಂಗ್ರೆಸ್ ನಾಯಕರಾದ ನಾಗರಾಜ್ ಖಂಡಿಸಿದರು"[5] . ಬಿಜೆಪಿ ಆಡಳಿತಕ್ಕೆ ಬಂದ ನಂತರ ತನ್ನ ಮೊದಲ ಬಜೆಟ್ ಅನ್ನು 30 ಆಗಸ್ಟ್ 2010 ರಂದು ಮಂಡಿಸಿತು. ಇದರಲ್ಲಿ ಬಿಜೆಪಿ ಸದಸ್ಯರಿರುವ ಕ್ಷೇತ್ರಗಳಿಗೆ ಹಲವಾರು ಅನುದಾನ ಮತ್ತು ಯೋಜನೆಗಳು ಲಭಿಸಿವೆ. ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಸದಸ್ಯರಿರುವ ಕ್ಷೇತ್ರಗಳನ್ನು ಬಿಜೆಪಿ ಕಡೆಗಣಿಸಿ ಎಂದು ವಿರೋಧಪಕ್ಷವಾದ ಕಾಂಗ್ರೆಸ್ ತಿಳಿಸಿದೆ. ಹಲವಾರು ಆರೋಪ ಪ್ರತ್ಯಾರೋಪಗಳ ನಡುವೆ ಬಿಜೆಪಿ ಆಡಳಿತ ಪಕ್ಷವಾಗಿ ಕಾಂಗ್ರೆಸ್ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುತ್ತಿದೆ. ಕಾಂಗ್ರೆಸ್ ಪಕ್ಷದ ಕಾರ್ಯನಿರ್ವಹಣೆ ಬಗ್ಗೆ ಬೆಂಗಳೂರಿನ ಆಯ್ಕೆ ಮಾಡಿದ 112 ನಾಗರೀಕರನ್ನು ಸಂದರ್ಶಿಸಿ ಕೇಳಲಾದ ಪ್ರಶ್ನೆಗೆ ಬಂದ ಮಾಹಿತಿ ಈ ಕೆಳಗಿನ ಪಟ್ಟಿಯಲ್ಲಿದೆ. (ಪಟ್ಟಿ – 1)

ಮೇಲಿನ ಪಟ್ಟಿಯಲ್ಲಿ ತಿಳಿದುಬರುವುದೇನೆಂದರೆ, ಶೇಕಡಾ 23.4 ಸಂದರ್ಶಿತರು ತೃಪ್ತಿಕರವಾಗಿಲ್ಲ ಎಂದಿದ್ದಾರೆ. ಶೇಕಡಾ 55.9 ರಷ್ಟು ಸದಸ್ಯರು ತೃಪ್ತಿಕರವಾಗಿದೆ ಎಂದಿದ್ದಾರೆ ಹಾಗೂ ಶೇಕಡಾ 20.7 ರಷ್ಟು ಸದಸ್ಯರು ಸಾಧಾರಣವಾಗಿ ಕಾರ್ಯನಿರ್ವಹಿಸುತ್ತದೆ ಎಂದಿದ್ದಾರೆ.

ಬಿಜೆಪಿ ಪಕ್ಷದ ಕಾರ್ಯವಿಶ್ಲೇಷಣೆ : ಪ್ರಸ್ತುತ ಪ್ರಬಂಧದಲ್ಲಿ ಬಿಜೆಪಿಯ ಕಾರ್ಯವಿಶ್ಲೇಷಣೆಯನ್ನು ಕ್ರ.ಶ. 2000 ದಿಂದ ಕ್ರಿ.ಶ 2010 ರ ವರೆಗೆ ತಿಳಿಸಲಾಗಿದೆ. ಈ ಅವಧಿಯಲ್ಲಿ ಪಾಲಿಕೆಗೆ ಎರಡು ಭಾರಿ ಚುನಾವಣೆ ನಡೆದು ಬಿಜೆಪಿ 2000 ರಿಂದ 2006 ವರೆಗೂ ವಿರೋಧ ಪಕ್ಷವಾಗಿ ನಂತರ 2010 ರಿಂದ ಆಡಳಿತ ಪಕ್ಷವಾಗಿ ಕಾರ್ಯನಿರ್ವಹಿ ಸುತ್ತಿದೆ.

ಭಾರತೀಯ ಜನತಾ ಪಕ್ಷವು 1980 ರಲ್ಲಿ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರ ಹುಟ್ಟು ಬೆಂಗಳೂರು ಕಾರ್ಪೊರೇಷನ್‌ನಲ್ಲೂ ತನ್ನ ಪ್ರಭಾವ ವೀರಿ 1983 ರಲ್ಲಿ ನಡೆದ ಪಾಲಿಕೆಯ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಸ್ಪರ್ಧಿಸಿ ಒಟ್ಟು ಇದ್ದ 64 ಸ್ಥಾನಗಳಲ್ಲಿ 4 ಸ್ಥಾನಗಳಲ್ಲಿ ಜಯಗಳಿಸಿತು. ನಂತರ 1996 ರಲ್ಲಿ ಚುನಾವಣೆ ನಡೆದಾಗ 26 ಸ್ಥಾನಗಳನ್ನು ವಿರೋಧ ಪಕ್ಷವಾಗಿ ಆಡಳಿತ ನಿರ್ವಹಿಸಿದೆ ನಂತರ ನಡೆದ 2001 ರ ಪಾಲಿಕೆಯು ಚುನಾವಣೆಯಲ್ಲಿ

ಬಿಬಿಎಂಪಿಯಲ್ಲಿ ಕಾಂಗ್ರೆಸ್ ಸದಸ್ಯರ ಕಾರ್ಯಾಚರಣೆ ಹೇಗಿದೆ.

ಪಟ್ಟಿ – 1

ಕ್ರಮ ಸಂಖ್ಯೆ	ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟ ಕ್ಷೇತ್ರ	ತೃಪ್ತಿಕರವಾಗಿಲ್ಲ		ತೃಪ್ತಿಕರ		ಸಾಧಾರಣ		ಒಟ್ಟು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
1	ಬೆಂಗಳೂರು ಪೂರ್ವ (38 ಜನರು)	09	8.0	21	18.8	08	7.4	38	34.2
2	ಬೆಂಗಳೂರು ಪಶ್ಚಿಮ (37 ಜನರು)	08	7.4	19	17.1	10	8.4	37	32.9
3	ಬೆಂಗಳೂರು ದಕ್ಷಿಣ (37 ಜನರು)	09	8.0	23	20.0	05	4.9	37	32.9
ಒಟ್ಟು		26	23.4	63	55.9	23	20.7	112	100.0

ಆಕರ : ಕ್ಷೇತ್ರಾಧ್ಯಯನದಿಂದ ಸಂಗ್ರಹಿಸಿದ ಮಾಹಿತಿ

ಚುನಾವಣೆ ನಡೆದಾಗ ಒಟ್ಟು ಇದ್ದ 198 ವಾರ್ಡ್‌ಗಳಲ್ಲಿ 111 ಸ್ಥಾನಗಳನ್ನು ಪಡೆದು ಆಡಳಿತ ಪಕ್ಷವಾಗಿ ಕಾರ್ಯ ನಿರ್ವಹಿಸುತ್ತಿದೆ.

2001 ರಲ್ಲಿ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸಿದ ಬಿಜೆಪಿ ತಮ್ಮ ಕ್ಷೇತ್ರಗಳಲ್ಲಿ ಸಾರ್ವಜನಿಕರ ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡುವುದಕ್ಕೆ ಹಚ್ಚಿನ ಪ್ರಾಧ್ಯಾನ್ಯತೆ ನೀಡಿ ನಗರದಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚರಿಕೆ ಕ್ರಮಗಳನ್ನು ಕೈಗೊಂಡಿದೆ ಕೊಳಚೆ ಪ್ರದೇಶದಲ್ಲಿ ವಾಸಿಸುವ ನಿವಾಸಿಗಳಿಗಾಗಿಯೇ ಉಚಿತವಾಗಿ ಔಷಧಿಗಳನ್ನು ವಿತರಿಸಿದೆ. ರಸ್ತೆ. ಅಗಲೀಕರಣಕ್ಕೆ ಹಾಗೂ ಮೂಲಭೂತ ಸೌಲಭ್ಯಗಳನ್ನು ಜಾರಿಗೊಳಿಸಲು ಕಾಂಗ್ರೆಸ್ ಪಕ್ಷಕ್ಕೆ ಒತ್ತಡವನ್ನು ತಂದಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾದ ನಂತರ ಪ್ರಥಮವಾಗಿ ನಡೆದ 2010 ರ ಚುನಾವಣೆಯಲ್ಲಿ ಒಟ್ಟು ಇದ್ದ 198 ವಾರ್ಡ್‌ಗಳಿಗೆ 111 ಸ್ಥಾನಗಳನ್ನು ಪಡೆದು ಪಾಲಿಕೆಯ 54 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಅಧಿಕಾರ ಗದ್ದುಗೆ ಹಿಡಿಯಿತು. ಅಧಿಕಾರಕ್ಕೆ ಬಂದ ಮೂರು ತಿಂಗಳ ನಂತರ ಆಡಳಿತದ ಅನುಕೂಲ ಕ್ಕಾಗಿ ಎಂಟು ಸ್ಥಾಯಿ ಸಮಿತಿಗಳಿಗೆ ಬದಲಾಗಿ 12 ಸಮಿತಿಗಳನ್ನು ರಚಿಸಿಕೊಂಡಿತು. ನಗರದ ಆರ್ಥಿಕತೆ ಮತ್ತು ನಾಗರೀಕ ದೈನಂದಿನ ಅವಶ್ಯಕತೆಗೆ ಪೂರಕವಾಗಿ ಹಲವಾರು ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿದೆ. ನಗರದ ರಸ್ತೆ ಜಾಲದ ನಿರ್ವಹಣೆ, ಬೀದಿದೀಪ, ಘನತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿಗಾಗಿ ಮೂಲಸೌಕರ್ಯ, ಉದ್ಯಾನವನಗಳ ನಿರ್ವಹಣೆ, ಚಿತಾಗಾರ ಮತ್ತು ರುದ್ರಭೂಮಿಗಳ ಉಸ್ತುವಾರಿ ನಗರ ಯೋಜನಾ ನಿಯಮಗಳ ಜಾರಿ, ಉಸ್ತುವಾರಿ ಹೋಟೇಲ್, ರೆಸ್ಟೋರೆಂಟ್ ಮತ್ತು ಇತರೆ ಆಹಾರ ಮಾರಾಟ ಕೇಂದ್ರಗಳ ನಿಯಂತ್ರಣ ಮುಂತಾದ ಕಾರ್ಯಗಳನ್ನು ಮುನ್ನಡೆಸಲು ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯಗತ ಮಾಡಲು ಪ್ರಯತ್ನಿಸುತ್ತಿದೆ. ನೈಸರ್ಗಿಕವಾಗಿ ಲಭ್ಯವಾಗುವ ಮಳೆ ನೀರನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡಗಳ ನಕ್ಷೆ ಮಂಜೂರು ಮಾಡುವಾಗ ಮಳೆ ನೀರು ಕೋಯ್ಲು ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಕಾರ್ಯಕ್ರಮ ಕೈಗೊಂಡಿದೆ. ಕಾಂಕ್ರಿಟ್ ನಗರವಾಗುತ್ತಿರುವ ಬೆಂಗಳೂರಿಗೆ ಇದು ಅಗತ್ಯವಾಗಿ ಆಗಲೇಬೇಕಿತ್ತು. "ನಗರ ಪರಿಸರ ಮತ್ತು ಸೌಂದರ್ಯ ವೃದ್ಧಿಸುವ ಸಲುವಾಗಿ ಸಾರ್ವಜನಿಕ ಸ್ಥಳಗಳಲ್ಲಿ ರಸ್ತೆ ಬದಿಯ ಪಾದಚಾರಿ ಮಾರ್ಗದಲ್ಲಿ ಕೆರೆಗಳ ಅಂಚಿನಲ್ಲಿ ಉದ್ದಯಾನವನ ಗಳಲ್ಲಿ ಮೊದಲಾದ ಸ್ಥಳಗಳಲ್ಲಿ ಕನಿಷ್ಠ 5.00 ಲಕ್ಷ ಸಸ್ಯಗಳನ್ನು ನೆಡಿಸಲು ಚಾಲನೆ ನೀಡಿದರು.

"ರಾಷ್ಟ್ರೀಯ ತಂಬಾಕು ನಿಷೇಧ ಕಾಯ್ದೆ ಅಡಿಯಲ್ಲಿ ಹಾಗೂ ಪಾಲಿಕೆ ಕೌನ್ಸಿಲ್ ಸಭೆಯ ನಿರ್ಣಯದ ಹಿನ್ನಲೆಯಲ್ಲಿ ನಡೆಯುತ್ತಿರುವ ಹುಕ್ಕ ಸೇದುವುದನ್ನು ನಿಷೇಧಿಸಲು ಪಾಲಿಕೆ ಆರೋಗ್ಯ ಇಲಾಖೆಯ ವತಿಯಿಂದ ಪಾಲಿಕೆಯ ವ್ಯಾಪ್ತಿಯಲ್ಲಿ ಕಾರ್ಯಚರಣೆಯನ್ನು ಮುಂದುವರೆಸಿದ್ದು, ಕೆಲವು ಹೊಟೇಲ್‌ಗಳ ಮೇಲೆ ದಾಳಿ ನಡೆಸಿ ಒಟ್ಟು 45 ಹುಕ್ಕ ಕೇಂದ್ರಗಳನ್ನು ವಶಪಡಿಸಿಕೊಂಡರು" ". ಹೀಗಿ ಹಲವಾರು ಸುಧಾರಿತ ಕಾರ್ಯಕ್ರಮಗಳನ್ನು ಕೈಗೊಂಡು ಪಾಲಿಕೆಯಲ್ಲಿ ಬಿಜೆಪಿ ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ. ಪಾಲಿಕೆ ನಿರ್ವಹಿಸುತ್ತಿರುವ ಕಾರ್ಯದ ಬಗ್ಗೆ ಸಂದರ್ಶಿತ ಸಾರ್ವಜನಿಕರಿಂದ ಪಡೆದ ಮಾಹಿತಿ ಈ ಕೆಳಗಿನ ಪಟ್ಟಿಯಲ್ಲಿದೆ. (ಪಟ್ಟಿ – 2)

ಬಿಬಿಎಂಪಿಯಲ್ಲಿ ಬಿಜೆಪಿ ಸದಸ್ಯರು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆಯೇ ಎಂದು ಕೇಳಲಾದ ಪ್ರಶ್ನೆಗೆ ಒಟ್ಟು 112 ಸಂದರ್ಶಿತ ಜನರಲ್ಲಿ ಶೇಕಡಾ 27.2 ರಷ್ಟು ಸಂದರ್ಶತರು ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆಂದು ಮತ್ತು ಶೇಕಡಾ 35.7 ರಷ್ಟು ಸಂದರ್ಶಿತರು ಸಾಧಾರಣ ಎಂದಿದ್ದಾರೆ ಹಾಗೂ ಶೇಕಡಾ 37.1 ರಷ್ಟು ಸಂದರ್ಶಿತರು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದಿದ್ದಾರೆ. ಮೇಲಿನ ಪಟ್ಟಿಯ ಸಹಾಯದಿಂದ ಪಾಲಿಕೆಯಲಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬಿ.ಜೆ.ಪಿ. ಸದಸ್ಯರ ಕಾರ್ಯನಿರ್ವಹ ಣೆಯ ಸ್ವಲ್ಪಭಾಗ ವಾಸ್ತವಾಂಶವನ್ನು ತಿಳಿಯಬಹುದಾಗಿದೆ.

ಜೆ.ಡಿ.ಎಸ್. ಪಕ್ಷದ ಕಾರ್ಯವಿಶ್ಲೇಷಣೆ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯನಿರ್ವಹಣೆಯಲ್ಲಿ ಪ್ರಭಾವ ಬೀರಿದ ಪ್ರಮುಖ ಪಕ್ಷಗಳಲ್ಲಿ ಜೆ.ಡಿ.ಎಸ್. ಸಹ ಪ್ರಮುಖವಾದುದು. ಜನತಾದಳ ಅಸ್ತಿತ್ವಕ್ಕೆ ಬಂದ ನಂತರ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದ 1990ರ ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ಇದರಲ್ಲಿ ಜನತಾದಳದಿಂದ 16 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. 1995 ರಲ್ಲಿ ಬೆಂಗಳೂರು ಕಾರ್ಪೊರೇನ್‌ಗೆ 36 ಹೊಸ ವಾರ್ಡ್‌ಗಳನ್ನು ಸೇರಿಸಿ ಒಟ್ಟು ವಾರ್ಡ್‌ಗಳ ಸಂಖ್ಯೆ 100 ಆಯಿತು. ಪಾಲಿಕೆಯ ವ್ಯಾಪ್ತಿ 150 ಚ.ಕಿ.ಮೀ. ಇದ್ದದ್ದು, 225 ಚ.ಕಿ.ಮೀ ಗೆ ಹೆಚ್ಚಳ ಮಾಡಿದರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಜನತಾದಳ ನಾಯಕರಾದ ಹೆಚ್.ಡಿ. ದೇವೇಗೌಡರು ಬೆಂಗಳೂರಿಗೆ ಅಭಿವೃದ್ಧಿಗೆ

ಪಟ್ಟಿ – 2 ಬಿಬಿಎಂಪಿಯಲ್ಲಿ ಬಿಜೆಪಿ ಸದಸ್ಯರ ಕಾರ್ಯ ನಿರ್ವಹಣೆ

ಕ್ರಮ ಸಂಖ್ಯೆ	ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟ ಕ್ಷೇತ್ರ	ತೃಪ್ತಿಕರವಾಗಿಲ್ಲ		ತೃಪ್ತಿಕರ		ಸಾಧಾರಣ		ಒಟ್ಟು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
1	ಬೆಂಗಳೂರು ಪೂರ್ವ (38 ಜನರು)	12	10.8	13	12.0	13	12.0	38	34.8
2	ಬೆಂಗಳೂರು ಪಶ್ಚಿಮ (37 ಜನರು)	20	17.4	10	8.9	07	6.3	37	32.6
3	ಬೆಂಗಳೂರು ದಕ್ಷಿಣ (37 ಜನರು)	10	8.9	07	6.3	20	17.4	37	32.6
ಒಟ್ಟು		42	37.1	30	27.2	40	35.7	112	100

ಆಕರ : ಕ್ಷೇತ್ರಾಧ್ಯಯನದಿಂದ ಸಂಗ್ರಹಿಸಿದ ಮಾಹಿತಿ

ಶ್ರಮಿಸಿದ್ದಾರೆ 1996 ರಲ್ಲಿ ಪಾಲಿಕೆಗೆ ಚುನಾವಣೆ ನಡೆದಾಗ ಒಟ್ಟು ಇದ್ದ 100 ಅಭ್ಯರ್ಥಿಗಳಲ್ಲಿ ಜನತಾದಳದಿಂದ 39 ಅಭ್ಯರ್ಥಿಗಳು ಆಯ್ಕೆಯಾಗಿ ಆಡಳಿತ ಪಕ್ಷವಾಯಿತು. ತನ್ನ ಆಡಳಿತಾವಧಿಯಲ್ಲಿ ಸಾಕಷ್ಟು ರಸ್ತೆಗಳನ್ನು ಅಭಿವೃದ್ಧಿಗೊಳಿಸಿತು. 2000 ನೇ ಇಸವಿಯಲ್ಲಿ ಆಸ್ತಿ ತೆರಿಗೆ ಸ್ವಯಂ ನಿರ್ಣಯ ಯೋಜನೆ ಜಾರಿಗೆ ತಂದು 2000–01 ಆಸ್ತಿ ತೆರಿಗೆ ಸಂಗ್ರಹ 157 ಕೋಟಿಗಳಿಗೆ ಹೆಚ್ಚಳವಾಯಿತು. ಜನತಾದಳದ ಇನ್ನೊಂದು ಮಹತ್ ಸಾಧನೆಯೆಂದರೆ, ಸ್ವಚ್ಚ ಬೆಂಗಳೂರು ಯೋಜನೆ ಅಡಿಯಲ್ಲಿ ಮನೆಯಿಂದ ಮನೆಗೆ ಕಸ ಸಂಗ್ರಹಿಸುವುದನ್ನು 2000 ರ ಮಾರ್ಚ್‌ನಲ್ಲಿ ಪ್ರಾರಂಭ ಮಾಡಿದ್ದು, ಇದರಿಂದ ವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಜಾರಿಗೊಳಿಸಿದರು.

ಮುಂದೆ 2001 ರಲ್ಲಿ ಪಾಲಿಕೆಗೆ ನಡೆದ ಚುನಾವಣೆಯಲ್ಲಿ ಜೆ.ಡಿ.ಎಸ್. ಒಟ್ಟು ಇದ್ದ 100 ಸ್ಥಾನಗಳಲ್ಲಿ 13 ಸ್ಥಾನಗಳನ್ನು ಮಾತ್ರ ಪಡೆದುಕೊಂಡಿತು. ಈ ಅವಧಿಯಲ್ಲಿ ಜೆ.ಡಿ.ಎಸ್. ನಾಕರಾದ ಕುಮಾರಸ್ವಾಮಿಯವರ ಸಹಕಾರದಿಂದ ಕುಡಿಯುವ ನೀರು ಪೂರೈಕೆ ಕಾವೇರಿ 5ನೇ ಹಂತದ ಯೋಜನೆಗೆ ಚಾಲನೆ ದೊರೆಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2010 ರಲ್ಲಿ ನಡೆಸಿತು ಇದರಲ್ಲಿ ಒಟ್ಟು ಇದ್ದ 198 ಸ್ಥಾನಗಳಲ್ಲಿ ಜೆ.ಡಿ.ಎಸ್. 195 ಸ್ಥಾನಗಳಿಗೆ ಸ್ಪರ್ಧಿಸಿ 15 ಸ್ಥಾನ ಪಡೆದುಕೊಂಡಿತು. ಇದರಲ್ಲಿ ಪುರಷರು 9 ಮತ್ತು ಮಹಿಳೆಯರು 6 ಮಂದಿ ಆಯ್ಕೆಯಾಗಿದ್ದಾರೆ. ಪಾಲಿಕೆಯಲ್ಲಿ ಬಿ.ಜೆ.ಪಿ. ತನ್ನ ಮೊದಲ ಬಜೆಟ್ ಮಂಡಿಸಿದಾಗ ಜೆ.ಡಿ.ಎಸ್. ನಾಕರಾದ ಪದ್ಮನಾಭರೆಡ್ಡಿ ತಿಳಿಸಿರುವುದೇನೆಂದರೆ, ಪಲಿಕೆಯಲ್ಲಿ ಬಿಜೆ.ಪಿ ಅಧಿಕಾರಕ್ಕೆ ಬಂದು ಇಷ್ಟು ದಿನಗಳಾದರೂ ಇವರ ಸಾಧನೆ ಶೂನ್ಯ ಪಾಲಿಕೆ 2010–11 ರಲ್ಲಿ ರೂ. 8,840/– ಕೋಟಿ ಬಜೆಟ್ ಮಂಡಿಸಿದ್ದರೂ ಕಾಮಗಾರಿಗಳು ಪೂರ್ಣಗೊಂಡಿಲ್ಲ.[9] ಜಾಹಿರಾತುಗಳಲ್ಲಿ ಅವರು ನಿರೀಕ್ಷಿಸಿದ ಮೊತ್ತ ಬಂದಿಲ್ಲ ಹಾಗೂ ಅಕ್ರಮ ಸಕ್ರಮದಿಂದ ಬರಬಹುದಾದ ಹಣ ನಿರೀಕ್ಷೆಯಲ್ಲಿದ್ದರು. ಆದರೆ ಅಕ್ರಮ–ಸಕ್ರಮ ಇನ್ನೂ ಜಾರಿಗೊಂಡಿಲ್ಲ ಎಂದು ತಿಳಿಸಿದ್ದಾರೆ. ಹೀಗೆ ಹಲವಾರು ಕಾರ್ಯಗಳಲ್ಲಿ ಬಿಜೆಪಿ ಹೇಗೆ ವಿಫಲವಾಗಿದೆ ಎಂದು ಜೆ.ಡಿ.ಎಸ್. ತಿಳಿಸುತ್ತಿದೆ. ಜೆ.ಡಿ.ಎಸ್. ಸದಸ್ಯರುಗಳು ಬಿಬಿಎಂಪಿಯಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆಯ್ಕೆ ಮಾಡಿದ 112 ಸಂದರ್ಶಿತರನ್ನು ಕೇಳಲಾದ ಪ್ರಶ್ನೆಗೆ ಬಂದ ಮಾಹಿತಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ತಿಳಿಸಲಾಗಿದೆ. (ಪಟ್ಟಿ – 3)

ಬಿಬಿಎಂಪಿ ಯಲ್ಲಿ ಜೆ.ಡಿ.ಎಸ್. ಸದಸ್ಯರುಗಳು ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆಯೇ ಎಂದು ಕೇಳಲಾದ ಪ್ರಶ್ನೆಗೆ ಶೇಕಡಾ 53.3 ರಷ್ಟು ಸದಸ್ಯರು ತೃಪ್ತಿಕರವಾದೆ ಎಂದಿದ್ದಾರೆ. ಶೇಕಡಾ 20.0 ರಷ್ಟು ಸದಸ್ಯರು ತೃಪ್ತಿಕರವಾಗಿಲ್ಲ ಎಂದಿದ್ದಾರೆ. ಉಳಿದಂತೆ 26.7 ರಷ್ಟು ಸದಸ್ಯರು ಸಾಧಾರಣ ಎಂದಿದ್ದಾರೆ.

ವಿಮರ್ಶೆ : ಕೆಂಪೇಗೌಡ ಕಟ್ಟಿದ ಬೆಂಗಳೂರು ಇಂದು ಹಲವಾರು ಹಳ್ಳಿಗಳು ಸೇರಿ ಬೆಳೆದು ಸಮಸ್ಯೆಗಳ ಆಗರವಾಗಿದೆ. ಅವುಗಳ ನಿರ್ವಹಣೆಗೆ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳದಿರುವುದು ಯೋಜನೆಗಳ ಅನುಷ್ಠಾನದಲ್ಲಿ ನಿಖರತೆ ಇಲ್ಲದಿರುವುದು, ಭ್ರಷ್ಟಚಾರ ಮತ್ತು ಜನಗಣತೆಯಲ್ಲಿ ತಿಳುವಳಿಕೆ ಕೊರತೆ ನಗರ ಯೋಜನೆಯಲ್ಲಿ ಪರಿಣಾಮ ಬೀರಿದೆ. ಬೆಂಗಳೂರು ನಗರದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರ ಜೆ–ನರ್ಮ್ ಮೂಲಕ ಹಾಗೂ ರಾಜ್ಯ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿವೆ. ಆದರೆ ಚುನಾಯಿತ ಸದಸ್ಯರುಗಳ ಬೇಜವಾಬ್ದಾರಿ ಯಿಂದ ಹಲವಾರು ಯೋಜನೆಗಳು ಪೂರ್ಣಗೊಂಡಿಲ್ಲ. ಕೆಲವು ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಚುನಾಯಿತ ಸದಸ್ಯರುಗಳ ಕಾರ್ಯ ನಿರ್ವಹಣೆ ಬಗ್ಗೆ ಬೆಂಗಳೂರಿನ ನಾಗರೀಕರಿಗೆ ಬೇಸರ ಉಂಟಾಗಿದೆ. ನೀರಿನ ಸಮರ್ಪಕ ಪೂರೈಕೆಯಿಲ್ಲದಿರುವುದು, ಟ್ರಾಫಿಕ್ ಜಾಮ್ ಕಡಿಮೆಯಾಗದಿರುವುದು, ಕಸವಿಲೇವಾರಿ ಸಮರ್ಪಕವಾಗಿಲ್ಲದಿ ರುವುದು, ಮಳೆ ಬಂದರೆ ರಸ್ತೆಗಳಲ್ಲಿ ನೀರು ಹರಿಯುವುದು ಮುಂತಾದ ಹಲವಾರು ಸಮಸ್ಯೆಗಳಿಂದ ಜನರು ಬೇಸರ ಪಡುತ್ತಿದ್ದಾರೆ ಹಾಗೂ ಇವರ ಕಾರ್ಯನಿರ್ವಹಣೆಯಲ್ಲಿ ಜನರ ವಿಶ್ವಾಸ ಕಡಿಮೆಯಾಗಿದೆ. ಪಾಲಿಕೆಯು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಫಲಿತಾಂಶವಿಲವಲದಿರುವುದು ಕ್ಷೇತ್ರಾಧ್ಯಯನದಿಂದ ತಿಳಿದು ಬಂದಿದೆ ಹಾಗೂ ಬಿಬಿಎಂಪಿ ಕೆಲವು ಕಾರ್ಪೊರೇಟರ್‌ಗಳು ಜನರ ಸಮಸ್ಯೆಗಳಿಗೆ ಸ್ಪಂದಿಸದೇ ಬೇಜವಾಬ್ದಾರಿಯಿಂದ ವರ್ತಿಸುವುದು ಜನರ ಬೇಸರಕ್ಕೆ ಕಾರಣವಾಗಿದೆ.

ಬೆಂಗಳೂರು ನಗರವನ್ನು ಸ್ವಚ್ಚಗೊಳಿಸುವ ಕೋಳಚೆ ಪ್ರದೇಶದ ನಿವಾಸಿಗಳು ಇಂದು ತಾವಿರುವ ಸ್ಥಳವನ್ನು ಕೊಳಚೆ ಮುಕ್ತ ಪ್ರದೇಶವನ್ನಾಗಿಲ್ಲ. ಇದಕ್ಕೆ ಕಾರಣಕರ್ತರಾದ ಜನಪ್ರತಿನಿಧಿಗಳು ಅವುಗಳ ಅಭಿವೃದ್ಧಿಗೆ ಹೆಚ್ಚು ಗಮನ ನಡೆದಿರುವುದು ಅವುಗಳ ಅಭಿವೃದ್ಧಿಗೆ ಹೆಚ್ಚು ಗಮನ ನಡೆದಿರುವುದು ಕಂಡುಬಂದಿದೆ. ಚುನಾವಣೆ ಪ್ರಣಾಳಿಕೆಗಳಲ್ಲಿ ಎಲ್ಲಾ ಪಕ್ಷದವರೂ ಬೆಂಗಳೂರನ್ನು ಕೊಳಚೆ ಪ್ರದೇಶ ನಿರ್ಮೂಲನೆ ಪ್ರದೇಶವನ್ನಾಗಿಸುತ್ತೇವೆಂದು ಆಶ್ವಾಸನೆ ನೀಡಿದರೂ

ಪಟ್ಟಿ – 3 ಬಿಬಿಎಂಪಿಯಲ್ಲಿ ಜೆ.ಡಿ.ಎಸ್. ಸದಸ್ಯರ ಕಾರ್ಯ ನಿರ್ವಹಣೆ

ಕ್ರಮ ಸಂಖ್ಯೆ	ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟ ಕ್ಷೇತ್ರ	ತೃಪ್ತಿಕರವಾಗಿಲ್ಲ		ತೃಪ್ತಿಕರ		ಸಾಧಾರಣ		ಒಟ್ಟು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
1	ಬೆಂಗಳೂರು ಪೂರ್ವ (38 ಜನರು)	06	5.7	21	18.9	11	09.8	38	34.6
2	ಬೆಂಗಳೂರು ಪಶ್ಚಿಮ (37 ಜನರು)	07	6.3	20	17.6	10	08.9	37	32.7
3	ಬೆಂಗಳೂರು ದಕ್ಷಿಣ (37 ಜನರು)	09	8.0	19	16.8	09	08.0	37	32.7
ಒಟ್ಟು		22	20.0	60	53.3	30	26.7	112	100

ಆಕಾರ : ಕ್ಷೇತ್ರಧ್ಯಯನದಿಂದ ಸಂಗ್ರಹಿಸಿದ ಮಾಹಿತಿ

ನಂತರ ಅದನ್ನು ಮರೆತಿದ್ದಾರೆ. ಬೆಂಗಳೂರು ಒಂದೆಡೆ ಕಾಂಕ್ರಿಟ್ ನಗರವನ್ನಾಗಿಸುತ್ತಿರುವುದು ಸಂತಸವಾದರೂ, ಮತ್ತೊಂದೆಡೆ ಮಳೆ ನೀರು ಇಂಗದೇ ರಸ್ತೆಯಲ್ಲಿ ನೀರು ಹರಿಯುವುದು ಸಾಮಾನ್ಯವಾಗಿದೆ. ಬಿಬಿಎಂಪಿ ಇದಕ್ಕಾಗಿ ಮಾಡಿರುವ ಪರ್ಯಾಯ ವ್ಯವಸ್ಥೆಯೆಂದರೆ ಮಳೆ ನೀರು ಕೋಯ್ಲು ಪದ್ಧತಿ ಇನ್ನು ಹೆಚ್ಚು ಸಮರ್ಪಕವಾಗಬೇಕಿದೆ. ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಅಪಾರ್ಟ್‌ಮೆಂಟ್‌ಗಳಿಂದ ಅಂತರ್ಜಲ ಕುಸಿತವಾಗಿದೆ ಮತ್ತೊಂದೆಡೆ ಕೆರೆಗಳನ್ನು ಪನರ್ಚೇತನಗೊಳಿಸದಿರುವುದು ಕಾರಣವಾಗಿದೆ. ಪಾಲಿಕೆಯ ಚುನಾಯಿತ ಜನಪ್ರತಿನಿಧಿಗಳು ಇದಕ್ಕೆ ಸೂಕ್ತವಾದ ಪರಿಹಾರಗಳನ್ನು ತಕ್ಷಣ ಕಂಡುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಬೆಂಗಳೂರು ಅಪಾಯಮಟ್ಟವನ್ನು ತಲುಪುತ್ತದೆ.

ಗಾರ್ಡನ್ ಸಿಟಿಯಾದ ಬೆಂಗಳೂರು ಇಂದು ಗಾರ್ಬೆಜ್ ಸಿಟಿಯಾಗಿದೆ. ಕೇವಲ ಕಸದ ಸಮಸ್ಯೆಗೆ ಸೂಕ್ತ ಪರಿಹಾರ ಕೊಡುತ್ತೇವೆಂದು ಪಾಲಿಕೆ ಹೇಳುತ್ತಿದ್ದರೂ ಇಂದು ಇದು ಬೃಹದಾಕಾರದ ಸಮಸ್ಯೆಯಾಗಿ ಉಳಿದಿದೆ. ಇದು ಚುನಾಯಿತ ಜನಪ್ರತಿನಿಧಿಗಳ ಬೇಜವಬ್ದಾರಿಯಾಗಿದೆ. ಬೆಂಗಳೂರಿನ ನಾಗರೀಕರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ನೀರಿನ ಸಮಸ್ಯೆಯೂ ಬಹಳ ಮುಖ್ಯವಾದುದು. ಜನಪ್ರತಿನಿಧಿಗಳು ತಮ್ಮ ಕ್ಷೇತ್ರಗಳಿಗೆ ಸಮರ್ಪಕವಾದ ನೀರು ಪೂರೈಕೆ ಮಾಡುವುದರಲ್ಲಿ ವಿಫಲರಾಗಿದ್ದಾರೆ.

ಸಿಲಿಕಾನ್ ಸಿಟಿಯಾದ ನಗರದಲ್ಲಿ ಜನಪ್ರತಿನಿಧಿಗಳು ಬಹಳ ಮುಂದಾಲೋಚನೆಯಿಂದ ಯೋಜನೆಗಳನ್ನು ಜಾರಿಗೊಳಿಸಬೇಕು. ಇಲ್ಲದಿದ್ದರೆ ನಾಗರೀಕ ಗೋಲು ತಪ್ಪಿದ್ದಲ್ಲ. ಜನತೆಯ ಎಲ್ಲಾ ಸಮಸ್ಯೆಗಳಿಗೂ ಸ್ಪಂದಿಸಬೇಕು. ಸೂಕ್ತವಾದ ಮುಂದಾಲೋನಚೆಯಿಂದ ಮಾತ್ರ ನಗರಾಭಿವೃದ್ಧಿ ಸಾಧ್ಯವಾಗುತ್ತದೆ. ಹೆಚ್ಚಾಗುತ್ತಿರುವ ಟ್ರಾಫಿಕ್ ಜಾಮ್ ನೀರಿನ ಸಮಸ್ಯೆ ಕಸವಿಲೆವಾರಿ, ಅಂತರ್ಜಲ ಕುಸಿತ ಮುಂತಾದ ಸಮಸ್ಯೆಗಳಿಗೆ ಮುಂದಾಲೋಚನೆಯಿಂದ ಪರಿಹಾರ ಕಂಡುಕೊಂಡರೆ ಮುಂದೆ ಒದಗಬಹುದಾದ ತೊಂದರೆಯಿಂದ ಬೆಂಗಳೂರನ್ನು ಕಾಪಾಡಬಹುದು. ವಾರ್ಡ್‌ಗಳನ್ನು ಸೇರ್ಪಡೆ ಮಾಡಿಕೊಳ್ಳುವಾಗಲೇ ಅವುಗಳಿಗೆ ಏನೇನು ಹೇಗೆ ಮಾಡಬೇಕು ಎಂದು ಕ್ರಮ ಕೈಗೊಳ್ಳಬೇಕು.

ನಗರಾಭಿವೃದ್ಧಿಗಾಗಿ ಇದುವರೆಗೂ ಜಾರಿಗೊಳಿಸುತ್ತಾ ಬಂದಿರುವ ಯೋಜನೆಗಳು ಹಲವಾರು ಕಾರಣಗಳಿಂದ ವೈಫಲ್ಯಗಳನ್ನು ಎದುರಿಸುತ್ತಾ ಬಂದಿರುವುದನ್ನು ಕಾಣಬಹುದು. ಇದಕ್ಕೆ ಪಕ್ಷಗಳಲ್ಲಿ ಭಿನ್ನಬೇಧಗಳಿರುವುದು ಕಾರಣವಾಗುತ್ತದೆ. ಪಕ್ಷಬೇದ ಮರೆತು ಜನಪ್ರತಿನಿಧಿಗಳು ಕಾರ್ಯ ನಿರ್ವಹಿಸಿದಾಗ ಮಾತ್ರ ನಗರದ ಸಮಸ್ಯೆಗಳನ್ನು ಬಗೆಹರಿಸಿ ನಗರಾಭಿವೃದ್ಧಿ ಸಾಧ್ಯವಾಗುತ್ತದೆ. ನಗರಾಭಿವೃದ್ಧಿಗೆ ಬರುವ ಆಧಾಯ ಮೂಲಗಳನ್ನು ಯೋಜನೆಗಳ ಲಾಭಗಳನ್ನು ಬಹಿರಂಗವಾಗಿ ಎಲ್ಲಾ ಪಕ್ಷಗಳೂ ಸೇರಿ ಸಾರ್ವಜನಿಕರೊಂದಿಗೆ ಚರ್ಚಿಸಬೇಕು. ಇದರಿಂದ ಮೂಲಗಳಿಗೆ ಎಷ್ಟು ಹಣ ಖರ್ಚಾಗಿದೆ ಎನ್ನುವ ನೈಜತೆ ತಿಳಿಯುತ್ತದೆ. ಇದರಿಂದಾಗಿ ಅವ್ಯವಹಾರಗಳು ನಡೆಯುವುದು ಕಡಿಮೆಯಾಗುತ್ತದೆ. ಪಕ್ಷಗಳು ಬಿನ್ನಬೇದ ಮರೆತು ಕಾರ್ಯನಿರ್ವಹಿಸಿದಾಗ ಕಾರ್ಯಗಳು ಸುಲಭವಾಗಿ ನಡೆಯುತ್ತದೆ.

ಬೆಂಗಳೂರು ಮಹಾನಗರ ಆಡಳಿತವು ಸಾರ್ವಜನಿಕರ ಹಿತಾಸಕ್ತಿಯ ಪರವಾಗಿರಬೇಕು. ನಗರದ ಪ್ರತಿಯೊಬ್ಬ ವ್ಯಕ್ತಿಯೂ ಆಡಳಿತ ವೈಖರಿ ಬಗ್ಗೆ ಪಾರದರ್ಶಕ ಅಭಿಪ್ರಾಯ ಹೊಂದಿರಬೇಕು. ನಗರದ ಅಭಿವೃದ್ಧಿ ವಿಚಾರವು ಜನರಿಂದಲೇ ರೂಪುಗೊಂಡು ಜನರಿಗಾಗಿ ಆಗಬೇಕು. ನಗರದ ರಕ್ಷಣೆ, ಆರೋಗ್ಯ, ಸಂಸ್ಕೃತಿ ಪರಿಸರ ಆರ್ಥಿಕ ಪರಿಸ್ಥಿತಿ ಹಾಗೂ ಸಾರಿಗೆ ಸಮಾಜದ ಎಲ್ಲಾ ವರ್ಗದವರಿಗೆ ಸವಲತ್ತು ಸಿಗುವಂತಾಗಬೇಕು.

ಒಂದೆಡೆ ನಗರದ ಚಳುವಳಿಗೆ ಅನಿವಾರ್ಯ, ಅದರ ಜೊತೆಗೆ ಹಲವಾರು ಪ್ರಶನೆಗಳು ಹುಟ್ಟುಕೊಳ್ಳುತ್ತವೆ. ಇನ್ನೊಂದೆಡೆ ಬೆಂಗಳೂರಿನದ್ದೇ ಆದ ಸೌಂದರ್ಯವನ್ನು ಕಾಪಾಡಿಕೊಳ್ಳುವುದು ಸಾಧ್ಯವೇ ಎಂಬ ಆತಂಕ ಭವಿಷ್ಯದ ಬೆಂಗಳೂರನ್ನು ನಾವು ವಿಜ್ಞಾನ ಮತ್ತು ತಾಂತ್ರಿಕತೆ, ಹೈಟೆಕ್ ಕೈಗಾರಿಕೆ ವೃತ್ತಿಪರ ಮತ್ತು ವ್ಯವಹಾರಿಕ ಸವಾಲುಗಳು ವ್ಯಾಪಾರ, ವಾಣಿಜ್ಯ ಮತ್ತು ಉನ್ನತ ಶಿಕ್ಷಣ ಇವೆಲ್ಲವುಗಳ ಚೈತನ್ಯದ ಕೇಂದ್ರವನ್ನಾಗಿ ಕಲ್ಪಿಸಿಕೊಳ್ಳುವುದು ಇಂದಿಗೆ ಅಗತ್ಯವಾಗಿದೆ.

ಸರ್ಕಾರ ಮತ್ತು ಸಾರ್ವಜನಿಕರ ಅರ್ಪಣಾ ಮನೋಭಾವನೆ ಹಾಗೂ ಯೋಜನಾ ಬದ್ಧ ಕಾರ್ಯಕ್ರಮಗಳು, ಅವುಗಳ ಸರಿಯಾದ ಅನುಷ್ಠಾನ ಆಗಬೇಕು. ಹಾಗದಲ್ಲಿ ಬೆಂಗಳೂರು ಅಭ್ಯುದಯಗೊಳ್ಳುತ್ತಿರುವ ಭವಿಷ್ಯದ ನಗರವಾಗಿ ರೂಪುಗೊಳ್ಳುತ್ತದೆ.

ಅಡಿ ಟಿಪ್ಪಣಿ :

1. ಪ್ರೋ. ಶೇಷಗಿರಿ ರಾವ್ (ಸಂ.), 'ಬೆಂಗಳೂರು ದರ್ಶನ', ಸಂಪುಟ – 1, ಪ್ರಕಾಶಕರು, ಉದಯಭಾನು ಕಲಾಸಂಘ 2005 – ಪುಟ – 53
2. ಪ್ರೋ. ಶೇಷಗಿರಿ ರಾವ್ (ಸಂ.), 'ಬೆಂಗಳೂರು ದರ್ಶನ', ಸಂಪುಟ – 1, ಪ್ರಕಾಶಕರು, ಉದಯಭಾನು ಕಲಾಸಂಘ 2005 – ಪುಟ – 54
3. ಪ್ರೋ. ಶೇಷಗಿರಿ ರಾವ್ (ಸಂ.), 'ಬೆಂಗಳೂರು ದರ್ಶನ', ಸಂಪುಟ – 1, ಪ್ರಕಾಶಕರು, ಉದಯಭಾನು ಕಲಾಸಂಘ 2005 – ಪುಟ – 130
4. ಬೆಂಗಳೂರು ಮಹಾನಗರ ಪಾಲಿಕೆ ಆಯವ್ಯಯ ಅಂದಾಜುಗಳು – 2003–04, 2004–05 – ಪುಟ – 8
5. ಕನ್ನಡಪ್ರಭ "ಪ್ರತಿ ಪಕ್ಷಗಳ ಪ್ರತಿಭಟನೆ ಗದ್ದಲದಲ್ಲೇ ಮುಕ್ತಾಯ" 30–12–2010 – ಪುಟ – 3
6. ಕನ್ನಡಪ್ರಭ "ಹುಕ್ಕ ಹೊಟೇಲ್‌ಗಳ ಮೇಲೆ ದಾಳಿ" ದಿನಾಂಕ : 02–04–2011 – ಪುಟ – 2

ಪರಾಮರ್ಶನ ಗ್ರಂಥಗಳು :

1. ಅಣ್ಣಾಸ್ವಾಮಿ – "ಬೆಂಗಳೂರು ಟು ಬೆಂಗಳೂರು, ಅರ್ಬನ್ ಹಿಸ್ಟರಿ ಆಫ್ ಬೆಂಗಳೂರು ರೊಮ ತಹೆ ಹಿಸ್ಟಾರಿಕ್ ಪೀರಿಯಡ್ ಟು ಎಂಡ್ ಆಫ್ ಟ್ರಂಟಿಯತ್ ಸೆಂಚ್ಯುರಿ, ಬೆಂಗಳೂರು – 2003.
2. ಚಂದ್ರಶೇಖರ ಟಿ.ಆರ್. – "ವಿಕೇಂದ್ರಿಕರಣ ತತ್ವ ಆಚರಣೆ" ಪ್ರಸಾರರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
3. ಡಾ॥ ದುರ್ಗಾದಾಸ್ ಬಸು – "ಇನ್‌ಟ್ರೋಡಕ್ಷನ್ ಟು ದ ಕಾನ್‌ಟಿಸ್ಟಿಟ್ಯೂಷನ್ ಆಫ್ ಇಂಡಿಯಾ", 19ನೇ ಎಡಿಷನ್ ವಾಡ್ವಾ ಅಂಡ್ ಕಂಪನಿ ಲಾ ಆಗ್ರಾ, 2001.
4. ಡಾ॥ ದೇ.ಜೆ.ಗೌಡ (ಸಂ.) "ಕರ್ನಾಟಕ ರಾಜಕೀಯ ಚಿಂತನೆ, ಪ್ರಕಾಶಕರು, ಎಸ್. ನಿಜಲಿಂಗಪ್ಪ ನ್ಯಾಷನಲ್ ಫೌಂಡೇಷನ್, 2003
5. ಪ್ರದೀಪ್ ಸಚ್‌ದೇವ – "ಲೋಕಲ್ ಗೌರ್ನಮೆಂಟ್ ಇನ್ ಇಂಡಿಯಾ ಪ್ರಕಾಶಕರು, ಡಾರ್ಲಿಂಗ್ ಕಿಂಡರ್ಲಿ (ಭಾರತ)

6. ರಾಜಶೇಕರ್ ಹೆಚ್.ಎಂ. – "ಭಾರತ ಸರ್ಕಾರ ಮತ್ತು ರಾಜಕೀಯ, ಕಿರಣ್ ಪ್ರಕಾಶನ (ಹತ್ತನೇ ಪರಿಷ್ಕೃತ ಆವೃತ್ತಿ), 2008
7. ಶೇಷಗಿರಿ ಎಲ್.ಎಸ್ – ಬೆಂಗಳೂರು ದರ್ಶನ, ಸಂಪುಟ – 1, 2, ಪ್ರಕಾಶಕರು, ಉದಯಬಾನು ಕಲಾಸಂಘ – 2005
8. ಸತ್ಯಪಾಲ್ ಪುಲಿಯಾನಿ – ಕರ್ನಾಟಕ ಪೌರ ನಿಗಮಗಳ ಕೈಪಿಡಿ ಪ್ರಕಾಶಕರು, ಕರ್ನಾಟಕ ಲಾ ಜರ್ನಲ್ 2010

ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ : ಕೌಟಿಲ್ಯೀಯಮ್

ಸವಿತ ಎ.ಪಿ.
ಎಲ್.ಎಲ್.ಎಂ., ಎಂ.ಎ., ಎಂ.ಎಸ್.ಡಬ್ಲ್ಯು, ಕಾನೂನು ಸಹಾಯಕ ಪ್ರಾಧ್ಯಾಪಕರು, ಮಹಾಜನ ಕಾನೂನು ಕಾಲೇಜು, ಮೈಸೂರು.

ಅರ್ಥಶಾಸ್ತ್ರ ಎಂದರೆ ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಜ್ಞಾನ ಎಂದರ್ಥ. ಕೌಟಿಲ್ಯನ ಪ್ರಕಾರ ರಾಜಕೀಯ ವಿಜ್ಞಾನವೇ ಅರ್ಥಶಾಸ್ತ್ರ ಮತ್ತು ಇದು ಮುಖ್ಯವಾಗಿ ಆಡಳಿತ ವ್ಯವಸ್ಥೆಯ ಬಗ್ಗೆ ತಿಳಿಸುತ್ತದೆ. ಅರ್ಥಶಾಸ್ತ್ರ ಸಂಪತ್ತಿನ ವಿಜ್ಞಾನ ಮತ್ತು ಸರ್ಕಾರ ವಿಜ್ಞಾನದ ಸಂಯೋಜನೆಯಾಗಿದೆ. ಆಡಳಿತ ವ್ಯವಸ್ಥೆಯಲ್ಲಿನ ಕಾರ್ಯಸಮರ್ಥನೆಯು ಅಧಿಕಾರಿಗಳ ಸಾಮರ್ಥ್ಯದ ಮೇಲೆ ಅವಲಂಬಿಸಿದೆ. ರಾಜ್ಯದ ಉದ್ದಲಗಕ್ಕೂ ಆಡಳಿತದಲ್ಲಿ ಏಕರೀತಿಯ ಕಾರ್ಯಚರಣೆಯನ್ನು ತರುವ ಅಗತ್ಯವಿದೆ ಎಂಬುದನ್ನು ಕೌಟಿಲ್ಯ ಸ್ಪಷ್ಟಪಡಿಸಿದ್ದಾನೆ. ಆದಾಗಿಯೂ, ಈತನು ರಾಜಕೀಯ ನೈಜಕತೆಯ ಮೇಲೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಾನೆ – ಅರ್ಥಶಾಸ್ತ್ರವು ತನ್ನ ಆಸಕ್ತಿಯನ್ನು ರಾಜಕೀಯ ತತ್ವಶಾಸ್ತ್ರದಿಂದ ರಾಜ್ಯಶಾಸ್ತ್ರ ವಿಜ್ಞಾನಕ್ಕೆ ರೂಪಾಂತರಗೊಂಡಿದೆ.

ಕೌಟಿಲ್ಯನ ದೃಷ್ಟಿಕೋನವು ಉಕೃಷ್ಟವಾದ ಶೇಷ್ಠ ವಿಚಾರಗಳಲ್ಲಿ ಬೇರೂರಿದೆ ಮತ್ತು ಈತನು ಧೈರ್ಯ, ಧೃಡಚಿತ್ತ, ಸತ್ಯ ಮುಂತಾದ ಅಂಶಗಳನ್ನು ಶ್ಲಾಘಿಸಿದ್ದಾನೆ. ಶುದ್ಧ ತತ್ವಶಾಸ್ತ್ರದ ವಿಚಾರದಲ್ಲಿ ಹೆಚ್ಚಿನ ಆಸಕ್ತ ಹೊಂದಿರಲಿಲ್ಲವಾದರೂ, ನೈತಿಕತೆಯ ಶೇಷ್ಠ ಕಾರ್ಯಾಚರಣೆಯೊಂದಿಗೆ ಹೆಚ್ಚಿನ ಗಮನ ಹೊಂದಿದ್ದನು. ಯುದ್ಧದಿಂದ ಹೊರಬಂದು ಶಾಂತಿಯನ್ನು ಸ್ಥಾಪಿಸುವುದು, ಭ್ರಷ್ಟಾಚಾರದಿಂದ ಹೊರಬಂದು ಒಂದು ಸಾರ್ವಜನಿಕ ರಾಜ್ಯವ್ಯವಸ್ಥೆಯನ್ನು ಸ್ಥಾಪಿಸುವುದು ಮತ್ತು ಅಸ್ತವ್ಯಸ್ತತೆಯಿಂದ ಹೊರಬಂದು ಒಂದು ಬಹುಮಟ್ಟಿನ ಏಕನಿರ್ವಹಣ ಆದೇಶವನ್ನು ರಚಿಸಲು ಪ್ರಯತ್ನಿಸಿದ್ದಾನೆ. ಆದುದ್ದರಿಂದಲೇ ಈತನ ವಿಚಾರಧಾರೆಗಳು ಸಂಕೀರ್ಣವಾದವು. ಅರ್ಥಶಾಸ್ತ್ರವು ಕಲೆ ಮತ್ತು ಸಾರ್ವಜನಿಕ ಆಡಳಿತ ವಿಜ್ಞಾನದ ನಡುವಿನ ಸಂಬಂಧ ನಿಕಟವಾದದ್ದು ಎಂಬುದನ್ನು ಸ್ಪಷ್ಟಪಡಿಸಿದೆ.

ಮುಖ್ಯ ಪದಗಳು: ಆಡಳಿತ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಉಕೃಷ್ಟತೆ, ರಾಜಕೀಯ ತತ್ವ

"ರಾಜನ ಸಂತೋಷ ಪ್ರಜೆಗಳ ಸಂತೋಷಲ್ಲಿದೆ, ಪ್ರಜೆಗಳ ಕಲ್ಯಾಣವೇ ರಾಜನ ಕಲ್ಯಾಣ, ಅವನಿಗೆ ಸಂತೋಷ ನೀಡುವ ಯಾವುದೇ ಒಳಿತನ್ನು ಪರಿಗಣಿಸಬಾರದು ಆದರೆ ಯಾವುದು ಅವನ ಪ್ರಜೆಗಳಿಗೆ ಸಂತೋಷ ನೀಡುತ್ತದೋ ಅದೇ ಅವನ ಒಳಿತೆಂದು ತಿಳಿಯತಕ್ಕದು"– ಕೌಟಿಲ್ಯ.

ಪೀಠಿಕೆ :

ಸಾರ್ವಜನಿಕ ಆಡಳಿತ ವಿಷಯವು ನಾಗರೀಕತೆಯಷ್ಟೇ ಹಳೆಯದಾದುದು. ಪ್ರಾಚೀನ ಭಾರತೀಯ ಆಡಳಿತದ ಇತಿಹಾಸವು ಹರಪ್ಪನ ಕಾಲದಿಂದ ಪ್ರಾರಂಭವಾಗಿ ಮೊಗಲರ ಆಡಳಿತ ಪ್ರಾರಂಭವಾಗುವವರೆಗೂ ಅಂದರೆ ಮೊದಲವರ್ಷ ಆರಂಭವಾಗುವವರೆಗೂ ಮುಂದುವರೆದಿತ್ತು. ಒಂದು ರಾಜ್ಯದ ಆಡಳಿತಕ್ಕೆ ಸಂಬಧಿಸಿದ ಸವಿವರಗಳು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಂಡುಬರುತ್ತವೆ. ಆಧುನಿಕ ಆಡಳಿತ ನಿಯಮಗಳ ಬೇರುಗಳನ್ನು ಪ್ರಾಚೀನ ಭಾರತೀಯ ಆಡಳಿತದಲ್ಲಿ ಕಾಣಬಹುದು. ಪ್ರಾಚೀನ ಭಾರತೀಯ ಆಡಳಿತ ಕ್ರಮವು ಒಂದಲ್ಲಾ ಒಂದು ರೀತಿ ಕೌಟಿಲ್ಯನ ಆಡಳಿತ ಕ್ರಮಕ್ಕೆ ಹೊಲುವಂತಿದ್ದು, ಪ್ರಾಚೀನ ಭಾರತದ ಸಾರ್ವಜನಿಕ ಆಡಳಿತ ಕೌಟಿಲ್ಯನ ಪ್ರಖ್ಯಾತ ಅರ್ಥಶಾಸ್ತ್ರದಲ್ಲಿನ ಕಾರ್ಯವಾಗಿದೆ. ಸಾರ್ವಜನಿಕ ಆಡಳಿತದ ಮೇಲೆ ಇವನ ರಾಜಕೀಯ ಸಿದ್ಧಾಂತ ಮತ್ತು ವಿಚಾರಗಳ ವಿಶೇಷವಾದ ಸಂಕಲನವೇ ಅರ್ಥಶಾಸ್ತ್ರ ಅದುದರಿಂದ ಇದು ರಾಜತಂತ್ರ ಕಲೆಯ ಮೇಲಿನ ಗ್ರಂಥವಾಗಿದೆ. ಕೌಟಿಲ್ಯನನ್ನು ವತ್ಸಾಯನ, ಮಲ್ಲಂಗ, ಚಾಣಕ್ಯ, ದರ್ಮಿಲಾ, ಪಕ್ಷಿಲಾ, ಸ್ವರ್ನಿ, ವಿಷ್ಣುಗುಪ್ತ, ಮತ್ತು ಅಂಗುಲವೆಂಬ ಹಲವಾರು ನಾಮಗಳಿಂದ ತಿಳಿಯಲಾಗಿದೆ. ಈತನು ಭಾರತದ ಮೊದಲ ಮಹಾನ್ ಸಾಮ್ರಾಜ್ಯವಾದ ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿ ಮುಖ್ಯಮಂತ್ರಿಯಾಗಿದ್ದನು. ಇವನ ಬುದ್ಧಿ ಸೂಕ್ಷ್ಮತೆ ಮತ್ತು ದೂರದೃಷ್ಟಿಯ ಆಲೋಚನೆಯಿಂದಲೇ ಪ್ರಸಿದ್ಧ. ಆದರೆ ಕೌಟಿಲ್ಯನ ಬಗ್ಗೆ ಎಲ್ಲಾ ತಿಳಿದಿದ್ದರು ಏನುತಿಳಿದಿಲ್ಲದ ಹಾಗೆ ಇದೆ, ಪ್ರಾಚೀನ ಭಾರತದಲ್ಲಿ ಬಹುಸಂಖ್ಯಾ ಪರಿಣಿತರಂತೆ ಈ ಅಸಾಧಾರಣ ಬಹು ಪ್ರತಿಭೆ ಮುಸುಕಾಗಿಯೇ ರಹಸ್ಯವಾಗಿದೆ. ಈತನು ಹುಟ್ಟಿದ ದಿನವಾಗಲಿ, ಸ್ಥಳವಾಗಲಿ ಇಲ್ಲವೇ ಈತನು ಮರಣಿಸಿದ ಸಂದರ್ಭಗಳ ಯಾವುದೇ ದಾಖಲೆಗಳಿಲ್ಲ. ಲಿಖಿತ ದಾಖಲೆಗಳ ಪ್ರಕಾರ ಈ ಸಂತ ಪ್ರಾಯಶಃ ಮಗಧ ರಾಜ್ಯಕ್ಕೆ ಸೇರಿದವನಾಗಿದ್ದು ಪಾಟಲೀಪುತ್ರದಲ್ಲಿ ಕ್ರಿಸ್ತಪೂರ್ವ 322 ರಿಂದ 298 ರವರೆಗೆ ಜೀವಿಸಿದ್ದನು ಮತ್ತು ತಕ್ಷಶಿಲೆ ಎಂಬ ಸುಪ್ರಸಿದ್ಧ ವಿಶ್ವವಿದ್ಯಾಲಯದಲ್ಲಿ ವಿದ್ಯಾಭಾಸಿಸಿದ್ದನೆಂದು ಹೇಳುತ್ತದೆ. ಈ ವಿಶ್ವವಿದ್ಯಾಲಯವು ಕಲೆ, ವಿಜ್ಞಾನ, ಜಾನಪದ, ಔಷಧಿ ವಿಚಾರಗಳಲ್ಲಿ ಪರಿಣತಿ ಹೊಂದಿದ ಉಪಾಧ್ಯಾಯರ ಅಧೀನ ಪ್ರವೀಣರು ಅಧ್ಯಾಯನ ನೆಡೆಸಲು ಇದ್ದಂತ ಉತ್ತಮ ಉನ್ನತ ಕಲಿಕಾ ಸಂಸ್ಥೆಯಾಗಿತ್ತು.

ಕೌಟಿಲ್ಯನ ಅರ್ಥಶಾಸ್ತ್ರ: ಅರ್ಥಶಾಸ್ತ್ರವು ಪ್ರಾಚೀನ ಕಾಲದಲ್ಲಿನ ವಿಜ್ಞಾನ, ರಾಜಕೀಯ, ಆಡಳಿತ ಮುಂತಾದವುಗಳ ಮೇಲಿನ ಶ್ರೇಷ್ಠವಾದ ಅನನ್ಯ ಕಾರ್ಯವಾಗಿದೆ. ಇದು ಎರಡು ಮೂಲಭೂತವಾದ ಭಾಗಗಳನ್ನು ಹೂಂದಿದೆ, ಅವುಗಳಲ್ಲಿ ಮೊದಲನೆಯದು ರಾಜ್ಯ, ರಾಜ, ಸರ್ಕಾರದ ತತ್ವ, ಸೈನ್ಯದ ಕಾರ್ಯ, ಕಲ್ಯಾಣ ಕಾರ್ಯ ಮುಂತಾದವುಗಳನ್ನು ವ್ಯವಹರಿಸಿದರೆ, ಎರಡನೇಯ ಭಾಗವು ಆಡಳಿತ ಮತ್ತು ರಾಜತಂತ್ರ ಕಲೆಯಬಗ್ಗೆ ಹೇಳುತ್ತದೆ. ಅರ್ಥಶಾಸ್ತ್ರವು 15 ಅಧಿಕರಣಗಳಾಗಿಯು, 180 ಪ್ರಭಾಕರಣಗಳಾಗಿಯು ವಿಭಾಗಿಸಲಾಗಿದ್ದು, ಇದು ಸೂತ್ರ ಮತ್ತು ದಶ್ಯಗಳ ಸಂಕಲನವಾಗಿದೆ. ಇದು ಜಾತ್ಯಾತೀತವಾದ ಲಕ್ಷಣವನ್ನು

ಹೊಂದಿದ್ದು, ಧರ್ಮಶಾಸ್ತ್ರದ ಪ್ರಾಭಾವದಿಂದ ಮುಕ್ತವಾಗಿದೆ ಮತ್ತು ರಾಜಕೀಯದ ಮೇಲಿನ ಶಾಶ್ವತ ಮೌಲ್ಯವುಳ್ಳ ಕಾರ್ಯವಾಗಿದೆ. ಅರ್ಥಶಾಸ್ತ್ರದ ವಸ್ತು ವಿಷಯವು ಬಹಳ ವಿಶಾಲದದ್ದು. ಕೌಟಿಲ್ಯನ ಅರ್ಥಶಾಸ್ತ್ರದ ಮೊದಲ ಸಾಲು ಈ ರೀತಿಯಾಗಿ ಪ್ರಾರಂಭವಾಗುತ್ತದೆ "ಅರ್ಥಶಾಸ್ತ್ರವು ಬಹುತೇಕ ಎಲ್ಲಾ ಅರ್ಥಶಾಸ್ತ್ರಗಳ ಅನುಕೂಲವಾದ ಮಾಹಿತಿಯ ಸಂಮೃದ್ಧವಾದ ಸಂಗ್ರಹವೇ ಅರ್ಥಶಾಸ್ತ್ರ". ಈ ಒಂದು ವಾಕ್ಯ ಕೌಟಿಲ್ಯನ ಮಹತ್ತರವಾದ ಸಾಧನೆಯನ್ನೇನು ಕುಂದಿಸದು. ಪ್ರಾಯಶಃ ಅರ್ಥಶಾಸ್ತ್ರವು ಪ್ರಾಚೀನ ಭಾರತದ ರಾಜಕೀಯ ಚಿಂತನೆಗಳ ಬಹು ಮುಖ್ಯವಾದ ಫಲಿತಾಂಶವಾಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಒಂದಂಶವೆಂದರೆ ಕೌಟಿಲ್ಯನೆ ಅರ್ಥಶಾಸ್ತ್ರದ ಮೇಲಿನ ಮೊದಲ ಬರಹಗಾರನಲ್ಲ, ಈವರೆಗೂ ಇಂಥಹ ಬಹುಸಂಖ್ಯಾ ಬರಹಗಾರರಲ್ಲಿ ಇವನು ಸ್ವಲ್ಪ ಮಟ್ಟಿಗೆ ಪ್ರಧಾನ ಸ್ಥಾನದಲ್ಲಿದ್ದಾನೆ. ಅಂದರೆ ಪ್ರಾಚೀನ ಭಾರತದಲ್ಲಿನ ಅರ್ಥಶಾಸ್ತ್ರದ ಎಲ್ಲಾ ಬರಹಗಾರರುಗಳಲ್ಲಿ ಪ್ರಥಮ ಸ್ಥಾನದಲ್ಲಿದ್ದಾನೆ. ಏಕೆಂದರೆ ಇವನ ಅರ್ಥಶಾಸ್ತ್ರವು ಉತ್ತರಾಧಿಕಾರಿಗಳಿಂದ ಪಾಲಿಸಲ್ಪಟ್ಟ ಆದೇಶಗಳೇ ಆಗಿದ್ದರೂ ಇನ್ನಿತರ ಬರಹಗಾರರಿಗಿಂತ ಉತ್ತಮವಾದವುಗಳಾಗಿದ್ದು, ಕಾರ್ಯಗಳ ಸಾರಾಂಶ ಮಾತ್ರವಲ್ಲದೆ ಉತ್ಕೃಷ್ಟವಾದ ವಿಷಯವಸ್ತುಗಳನ್ನು ಪುನರ್ ರಚಿಸಲ್ಪಟ್ಟಿದೆ. ಪ್ರಾಚೀನ ಭಾರತೀಯ ಬರಹ ಇತಿಹಾಸದಲ್ಲೇ ಅರ್ಥಶಾಸ್ತ್ರವು ರಾಜತಂತ್ರ ಕಲೆ ಮತ್ತು ಆಡಳಿತದ ಮೇಲಿನ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಗ್ರಂಥವಾಗಿದೆ.

ಅರ್ಥಶಾಸ್ತ್ರ ಎಂಬ ಪದವು ರಾಜಕೀಯ ವಿಜ್ಞಾನ ಎಂಬ ಪದವನ್ನು ವಿವರಿಸಲು ಬಳಸಲಾಗಿದೆ. ಸಾಮಾನ್ಯವಾಗಿ 'ಅರ್ಥ' ಎಂಬ ಪದದ ಪರಿಭಾಷೆ ಸಂಪತ್ತು ಅಥವ ಧನ. ಆದುದ್ದರಿಂದ ಅರ್ಥಶಾಸ್ತ್ರ ಎಂಬ ಪದವು ಆರ್ಥಿಕತೆ ಅಥವ ಸಂಪತ್ತಿನ ವಿಜ್ಞಾನ ಎಂಬುದನ್ನು ಸೂಚಿಸುತ್ತದೆ. ಯಾವ ರಾಜ್ಯವಾಪ್ತಿಯಲ್ಲಿ ಜನ ಒಟ್ಟಿಗೆ ಜೀವಿಸುತ್ತಾರೊ ಆ ವ್ಯಾಪ್ತಿಯನ್ನು ಅರ್ಥಶಾಸ್ತ್ರ ಎಂದು ಕೌಟಿಲ್ಯ ಪ್ರತಿಪಾದಿಸಿದ್ದಾನೆ ಮಾತ್ರವಲ್ಲ ಅರ್ಥ ಎಂಬ ಪದ ಮಾನವನ ಜೀವನೋಪಾಯ ಎಂಬ ಪದಕ್ಕೆ ಪರ್ಯಾಯವಾಗಿ ಬಳಸಿರುವ ಪದ ಎಂದು ತಿಳಿಸಿದ್ದಾನೆ. ಅರ್ಥಶಾಸ್ತ್ರ, ಜೀವನೋಪಾಯಕ್ಕೆ ಅಗತ್ಯವಿರುವುದನ್ನು ಪಡೆದುಕೊಳ್ಳುವುದು ಮತ್ತು ಸಂರಕ್ಷಣೆಗೆ ಸಂಭಂದಿಸಿದ ವಿಷಯಗಳನ್ನು ವ್ಯವಹರಿಸುವುದನ್ನು ಒಳಗೊಂಡಿರುವ ಒಂದು ವಿಜ್ಞಾನ. ಈ ಕಾರ್ಯಗಳನ್ನು ಯಾವ ರೀತಿ ಕಾರ್ಯರೂಪಕ್ಕೆ ತರಬೇಕು ಎಂಬುದನ್ನು ಇದು ತೋರಿಸಿಕೊಡುತ್ತದೆ. ಅದೇ ಸಂದರ್ಭದಲ್ಲಿ ಸಾರ್ವತ್ರಿಕವಾಗಿ ಮನುಷ್ಯನ ಉತ್ತಮ ಜೀವನದ ಬಗ್ಗೆ ಖಚಿತಪಡಿಸುವ ಅರ್ಥವನ್ನು ನೀಡುತ್ತದೆ. ಅರ್ಥಶಾಸ್ತ್ರ ಎರಡು ರೀತಿಯ ಗುರಿಯನ್ನು ಹೊಂದಿದೆ, ಮೊದಲನೆಯದು ಆಡಳಿತ ಮತ್ತು ರಾಜ್ಯದ ರಕ್ಷಣೆಯನ್ನು ಸೂಚಿಸಲ್ಪಟ್ಟರೆ ಇರಡನೆಯದು ಲಭದ ಬಗ್ಗೆ ಅಂದರೆ ರಾಜ್ಯಗಳನ್ನು ಗೆದ್ದು ರಾಜ್ಯದ ವ್ಯಾಪ್ತಿಯನ್ನು ವಿಸ್ತರಿಸಿ ಹೊಂದುವುದರ ಬಗ್ಗೆ ತಿಳಿಸುತ್ತದೆ. ಇದು ರಾಜ್ಯ ವ್ಯಪ್ತಿಯನ್ನು ನಿಯಂತ್ರಿಸುವುದು, ಆಕ್ರಮಿಸಿಕೊಳ್ಳುವುದು ಮತ್ತು ಸಂರಕ್ಷಿಸುವುದರ ಬಗ್ಗೆ ವ್ಯವಹರಿಸುತ್ತದೆ ಎಂದು ಕೌಟಿಲ್ಯ ಹೇಳಿದ್ದಾನೆ. ಅರ್ಥಶಾಸ್ತ್ರವು ಒಂದು ರಾಜ್ಯದಲ್ಲಿನ ಆಂತರಿಕ ಮತ್ತು ಬಾಹ್ಯ ವ್ಯವಹಾರವನ್ನು ವ್ಯವಹರಿಸುವ ವಿಜ್ಞಾನ ಆದುದರಿಂದ ಇದು ಆಡಳಿತ ಮತ್ತು ರಾಜ್ಯ ತಂತ್ರ ಕಲೆಯ ಅಥವಾ ರಾಜಕೀಯ ಮತ್ತು ಆಡಳಿತದ ವಿಜ್ಞಾನ.

ಕೌಟಿಲ್ಯನ ಪ್ರಕಾರ ಸಾರ್ವಜನಿಕ ಆಡಳಿತ ವಿಜ್ಞಾನವು ಒಂದು 'ಅರ್ಥವಿಜ್ಞಾನದ' ಮತ್ತು ಒಂದು 'ಸರ್ಕಾರ ವಿಜ್ಞಾನದ' ಸಂಯೋಜನೆಯಾಗಿದೆ. 'ಅರ್ಥವಿಜ್ಞಾನ' ಮತ್ತು 'ಸರ್ಕಾರ ವಿಜ್ಞಾನ'ಗಳೆರಡು ಸಾರ್ವಜನಿಕ ಆಡಳಿತ ವಿಜ್ಞಾನದ ಒಳಾಂಶಗಳಾಗಿವೆ. ಡಾ. ವಿ ಪಿ ವರ್ಮರವರ ಪ್ರಕಾರ "ಕೌಟಿಲ್ಯನ ಅರ್ಥಶಾಸ್ತ್ರವು ಒಂದು ವ್ಯವಸ್ಥೆ ಮತ್ತು ಅನುಭವವನ್ನೊಳಗೊಂಡ ಗ್ರಂಥವಾಗಿದೆ ಮತ್ತು ಇದು ಯಾವುದನ್ನು ಕುರಿತು ಹೇಳುತ್ತದೆಯೋ ಆ ವಿಷಯಗಳ ಬಗ್ಗೆಯೆ ಗಾಢವಾಗಿ ಮತ್ತು ಸಂಪೂರ್ಣ ಚರ್ಚೆಯನ್ನು ಒಳಗೊಂಡಿದೆ. ಆದಾಗಿಯೂ ಇದನ್ನು ರಾಜಕೀಯ ತತ್ವಗಳ ಮುಖ್ಯ ಪುಸ್ತಕವೆಂದು ಹೇಳಲಾಗದು ಏಕಂದರೆ ಇದು ಒಳಗೊಂಡಿರುವ ಸದ್ಧಾಂತಗಳು ಕಾನೂನು ಮತ್ತು ಆಡಳಿತ ನಿಯಮಗಳ ಬಗ್ಗೆ ಸಂಪೂರ್ಣವಾಗಿ ಗಮನಾರ್ಹವಾಗಿದೆಯಾದರೂ ಇದರಲ್ಲಿನ ಪಾಠಗಳು ಒಂದಕ್ಕೊಂದು ಸಂಬಂಧವಿಲ್ಲದ ರೀತಿಯಲ್ಲಿ ವ್ಯವಸ್ಥಿತವಾದೆಗಿ. ಎ.ಎಸ್ ಅಲ್ತೇಕರ್, ಕೌಟಿಲ್ಯನ ಅರ್ಥಶಾಸ್ತ್ರವು ಆಚರಣಾತ್ಮಕವಾದುದ್ದು, ಈತನ ಕಾರ್ಯ ಭಾರತೀಯ ವಿಚಾರಗಳ ಆಚರಣೆಗೆ ಮುಖ್ಯ ಸಾಕ್ಷಿಯೆನಿದೆ. ಇದು ರಾಜನ ಪ್ರತಿದಿನದ ಆಚರಣೆಗೆ ನಿರ್ದೇಶನ ನೀಡುವ ರಾಜತಂತ್ರ ಗ್ರಂಥ. ಪ್ರತಿ ಕ್ಷಣದ ಸಾರ್ವಜನಿಕ ಆಡಳಿತ ವಿಜ್ಞಾನ ಮತ್ತು ಆಡಳಿತ ಕಲೆಯ ನಡುವಿನ ನಿಕಟ ಸಂಬಂಧವನ್ನು ಪ್ರಾಸ್ತಾಪಿಸುವ ಕಾರ್ಯವಾಗಿದೆ. ಆಡಳಿತಗಾರ ವಿಜ್ಞಾನ ಮತ್ತು ಆಡಳಿತ ಕಲೆಯ ಜ್ಞಾನಹೊಂದಿದಾತನಾಗಿರಲೆಬೇಕು ಎಂದು ಅರ್ಥಶಾಸ್ತ್ರ ಪ್ರಧಾನವಾಗಿ ಹೇಳಿದೆ.

ಅರ್ಥಶಾಸ್ತ್ರವು ರಾಜ್ಯಶಾಸ್ತ್ರ ವಿಜ್ಞಾನ ಅಥವಾ ಸಾರ್ವಜನಿಕ ಆಡಳಿತದ ಮೇಲಿನ ತತ್ವಗಳ ಗ್ರಂಥವಲ್ಲ ಇದು ರಾಜ್ಯದ ಹುಟ್ಟು ಮತ್ತು ಅದರ ಸ್ವಭಾವ ಮತ್ತು ಕಾರ್ಯಗಳ ಬಗ್ಗೆ ನೇರವಾಗಿ ಸಂಬಂಧಿಸಿದ ಪ್ರಶ್ನೆಗಳನ್ನು ಒಳಗೊಂಡಿಲ್ಲ, ವಿವಿಧ ವಿಧಾನಗಳ ರಾಜ್ಯ ಸರ್ಕಾರಗಳನ್ನು ತಿಳಿಯಪಡಿಸಿಲ್ಲ, ರಾಜಕೀಯ ಪರಿಕಲ್ಪನೆಗಳನ್ನು ವ್ಯಾಖ್ಯಾನಿಸಿಲ್ಲ, ಪ್ರಾಥಮಿಕವಾಗಿ ಅರ್ಥಶಾಸ್ತ್ರವು ಕಾರ್ಯಗತಗೊಳಿಸಬಹುದಾದಂಥಹ ರಾಜ್ಯದ ಮತ್ತು ಸರ್ಕಾರದ ಆಡಳಿತದ ವಿಷಯಗಳಿಂದ ಪರಿಗಣಿಸಲ್ಪಟ್ಟಿದೆ. ನಿಜವಾಗಿ ಅರ್ಥಶಾಸ್ತ್ರ ರಾಜಕೀಯ ಮತ್ತು ರಾಜತಂತ್ರ ಅಂಶಗಳಿಗಿಂತ ಆಡಳಿದ ಮೇಲಿನ ಗ್ರಂಥವಾಗಿದೆ. ಇದು ರಾಜನಿಗೆ ತನ್ನ ರಾಜ್ಯಾಡಳಿತಕ್ಕೆ ಅಧಿಕಾರವನ್ನು ಹೇಗೆ ಹೊಂದಬೇಕು ಮತ್ತು ರಾಜಧಾನಿಯನ್ನು ಹೇಗೆ ರಚಿಸಬೇಕು ಎಂಬುದಕ್ಕೆ ಆಚರಣೆಗಳ ಮೂಲಕ ಸಲಹೆ ನೀಡುವ ಪುಸ್ತಕ. ಕೌಟಿಲ್ಯನ ಅರ್ಥಶಾಸ್ತ್ರ ಸಾರ್ವಜನಿಕ ಆಡಳಿತದ ಮೇಲಿನ ಉತ್ಕೃಷ್ಟವಾದ ಭಾರತೀಯ ಗ್ರಂಥ. ಇದು ಆಡಳಿತ ವಿಜ್ಞಾನದ ಮೂರು ಮುಖ್ಯ ಅಂಶಗಳನ್ನು ಚರ್ಚಿಸುತ್ತದೆ ಅವುಗಳೆಂದರೆ, ಸಾರ್ವಜನಿಕ ಆಡಳಿತ ನಿಯಮಗಳು, ಸರ್ಕಾರದ ವ್ಯವಸ್ಥೆ ಮತ್ತು ಸಾರ್ವಜನಿಕ ನೌಕರ ವ್ಯವಸ್ಥೆಯ ನಿರ್ವಹಣೆ.

ಸಾರ್ವಜನಿಕ ಆಡಳಿತದ ನಿಯಮಗಳು: ಕೌಟಿಲ್ಯನು, ತನ್ನ ಅರ್ಥಶಾಸ್ತ್ರದಲ್ಲಿ ರಾಜನಿಗೆ ವಿಶಾಲವಾದ ಅಧಿಕಾರವನ್ನು ನೀಡಿದ್ದನು. ರಾಜನು ಈ ಅಧಿಕಾರವನ್ನು ಸಾರ್ವಜನಿಕರ ಕಲ್ಯಾಣಕ್ಕಾಗಿ ಬಳಸಬೇಕಿತ್ತು. ರಾಜನ ಪ್ರಪ್ರಥಮ ಕರ್ತವ್ಯವೆಂದರೆ ಪ್ರಜೆಗಳನ್ನು ಮತ್ತು ಅವರ ಸ್ವತ್ತನ್ನು ಸಂರಕ್ಷಿಸುವುದು. ಈ ರೀತಿ ರಕ್ಷಣೆಯನ್ನು ಪಲನ ಎಂದು ಕರೆಯಲಾಗಿದೆ. ರಾಜನು ಸಾಮಾಜಿಕ ಕಂಟಕ ಅಂಶಗಳು ಮತ್ತು ನೈಸರ್ಗಿಕ ವಿಕೋಪಗಳು, ಇವೆರಡರಿಂದಲೂ ಸಂರಕ್ಷಿಸಬೇಕು.

ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸಬೇಕು ಮತ್ತು ನೋಡಿಕೊಳ್ಳ ಬೇಕು. ಇಲ್ಲಿ ಯೋಗಕ್ಷೇಮ ಎಂಬ ಪದವು ಪ್ರಜೆಗಳ ಕಲ್ಯಾಣ, ಒಳಿತು, ಅಭಿವೃದ್ಧಿ ಮತ್ತು ಸಂತೋಷ ಎಂಬ ವಿಶಾಲ ಅರ್ಥವನ್ನೊಳ ಗೊಂಡಿದೆ. ಆದ್ದರಿಂದ ಕೌಟಿಲ್ಯ "ರಾಜನ ಸಂತೋಷ ಪ್ರಜೆಗಳ ಸಂತೋಷಲ್ಲಿದೆ, ಪ್ರಜೆಗಳ ಕಲ್ಯಾಣವೇ ರಾಜನ ಕಲ್ಯಾಣ, ಅವನಿಗೆ ಸಂತೋಷ ನೀಡುವ ಯಾವುದೇ ಒಳಿತನ್ನು ಪರಿಗಣಿಸಬಾರದು ಆದರೆ ಯಾವುದು ಅವನ ಪ್ರಜೆಗಳಿಗೆ ಸಂತೋಷ ನೀಡುತ್ತದೋ ಅದೇ ಅವನ ಒಳಿತೆಂದು ತಿಳಿಯತಕ್ಕದು" ಎಂದು ಹೇಳಿದ್ದಾನೆ. ಯುದ್ಧ ಮತ್ತು ನ್ಯಾಯ ನಿರ್ವಹಣೆಯಲ್ಲಿ ರಾಜನು ಸಕ್ರೀಯವಾಗಿ ಪಾಲ್ಗೊಳಬೇಕು. ತನ್ನ ಜನತೆಗೆ ಮತ್ತು ಅವನ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತ ವಿಶಾಲವಾದ ನಿಯಮಗಳನ್ನು ರಚಿಸಿ ಗೌರವಯುತವಾದ ನೀತಿಸಂಹಿತೆಗಳನ್ನು, ಧರ್ಮನ್ಯಾಯಗಳನ್ನು ಆಗಾಗ ಜಾರಿಗೂಳಿಸಬೇಕು. ಪ್ರಜೆಗಳ ಕಲ್ಯಾಣಕ್ಕಾಗಿ ರಾಜ್ಯ ಹಲವಾರು ವೈವಿಧ್ಯಮಯ ಕಾರ್ಯಗಳಲ್ಲಿ ತೊಡಗುವುದನ್ನು ನಿರೀಕ್ಷಿಸಲಾಗಿದೆ ಅಂಥಹ ಕಾರ್ಯಗಳೆಂದರೆ ಅಣೆಕಟ್ಟುಗಳ ನಿರ್ಮಾಣ, ಭೂಶುದ್ಧತೆ, ಬ್ಯಾಂಕುಗಳ ನಿರ್ಮಾಣ ಮತ್ತು ಕಟ್ಟಡಗಳ ನಿರ್ಮಾಣ, ನೀರಾವರಿ ಕೆಲಸಗಳು, ದನಕರುಗಳಿಗೆ ಹುಲ್ಲುಗಾವಲುಗಳನ್ನು ಒದಗಿಸುವುದು ತೆರೆದ ಪಾಣಿಜ್ಯ ಮಾರುಕಟ್ಟೆ, ಖನಿಜ ಕೆಲಸ ಮಾಡುವವರಿಗೆ ರಕ್ಷಣೆ ಒದಗಿಸುವುದು. ನೈಸರ್ಗಿಕ ವಿಕೋಪಗಳುಂಟಾದಾಗ ರಾಜ್ಯ ಜನತೆಗೆ ಪರಿಹಾರ ನೀಡುವ ಸಂದರ್ಭದಲ್ಲಿ ರಾಜನು ತಂದೆಯ ಹಾಗೆ ತನ್ನ ಪ್ರಜೆಗಳ ತೊಂದರೆಯನ್ನು ಪರಿಹರಿಸಬೇಕೆಂದು ಕೌಟಿಲ್ಯ ಸೂಚಿಸಿದ್ದಾನೆ. ಯಾರಿಗೆ ಪಾಲಕರಿರುವುದಿಲ್ಲವೊ ಅಂಥಹ ಮಹಿಳೆ, ಮಕ್ಕಳು, ವೃದ್ಧರು, ಅಸಹಾಯಕರು ಮತ್ತು ರೋಗಿಗಳನ್ನು ನಿರ್ವಹಣೆ ಮಾಡುವ ಅಗತ್ಯ ರಾಜನಿಗಿದೆ. ರಾಜನು ಒಳ್ಳೆ ಗುಣಮಟ್ಟದ ಬೀಜಗಳನ್ನು ಒದಗಿಸಿ ಕೊಡಬೇಕು, ದನಕರುಗಳನ್ನು, ಹಣಸಹಾಯವನ್ನು ನೀಡಬೇಕು. ವ್ಯಾಪಾರ ವಾಣಿಜ್ಯ ಮತ್ತು ಉದ್ಯಮಗಳಿಗೆ ತನ್ನ ಸಹಾಯಕ ಕಾರ್ಯಗಳನ್ನು ವಿಸ್ತರಿಸಬೇಕು. ರಾಜನೊಬ್ಬ ಮಂತ್ರಿಗಳನ್ನು ನೇಮಕಮಾಡುವ, ಕೆಲಸದಿಂದವಜಾಗೊಳಿಸುವ ಮತ್ತು ಅವರುಗಳಿಗೆ ಕೆಲಸವನ್ನು ವಹಿಸುವ ಅಧಿಕಾರವನ್ನು ಹೊಂದಿದ್ದಾನೆ. ಆದುದ್ದರಿಂದ ಸಂಪೂರ್ಣ ಆಡಳಿತದ ನಿರ್ಮಾಣ ರಾಜನ ಮೇಲೆ ಅವಲಂಬಿತ ವಾಗಿರುತ್ತದೆ. ರಾಜನ ಸರ್ಕಾರದಲ್ಲಿ ಪ್ರತ್ಯಕ್ಷವಾದ ನಿಯಂತ್ರಣಗಳಿಲ್ಲ ದಿದ್ದರೂ ಪರೋಕ್ಷ ನಿಯಂತ್ರಣದ ಸ್ವಭಾವವನ್ನು ಹೊಂದಿದೆ.

ಸರ್ಕಾರದ ವ್ಯವಸ್ಥೆ: ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿವರಿಸಿರುವಹಾಗೆ ಪ್ರಸ್ತುತ ಆಧುನಿಕ ರಾಜಕೀಯ ವ್ಯವಸ್ಥೆ ನಿಖಿಟವಾಗಿ ಹೋಲುವಂತಿಲ್ಲದಿದ್ದರೂ, ಇದರಲ್ಲಿನ ಕೆಲವೊಂದು ನಿಯಮಗಳು ಸಾರ್ವಜನಿಕ ಆಡಳಿತ ವಿಜ್ಞಾನದ ಭಾಗಗಳಾಗಿ ಮಾರ್ಪಟ್ಟಿವೆ. 'ಏಕಾದೇಶದ ನಿಯಮ' ರಾಜನು ಏಕಾಧಿಕಾರದ ಮೂಲ ಎನ್ನುವ ಸಂಗತಿಗೆ ಪ್ರತಿಬಿಂಬಿಸುತ್ತದೆ. ಈತನ ಎಲ್ಲಾ ಮಂತ್ರಿಗಳು ಮತ್ತು ರಾಜ್ಯ ನೌಕರರುಗಳು ರಾಜನಿಂದಲೇ ಅಧಿಕಾರವನು ಪಡೆದವರು. ಮತ್ತು ಅಧಿಕಾರದಿಂದ ವಜಾಗೊಳಿಸಲ್ಪಡು ವವರಾಗಿರುತ್ತಾರೆ ಅಲ್ಲದೆ ಶಿಕ್ಷೆಗೆ ಗುರಿಪಡಿಸುವ ಅಧಿಕಾರವು ಈತನದೆ ಆಗಿರುತ್ತದೆ. 'ರಾಜನು ಸಾರ್ವಜನಿಕರಿಗೆ ಜವಾಬ್ದಾರನೆಂದು' ಕೌಟಿಲ್ಯ ತನ್ನ ಅರ್ಥಶಾಸ್ತ್ರದ ವಿಶ್ಲೆಷಣೆಯಲ್ಲಿ ಹೇಳಿದ್ದಾನೆ, ಇಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಕಾಣಬಹುದಾಗಿದೆ ಮತ್ತು ರಾಜನು ತನ್ನ ಪ್ರಜೆಗಳನ್ನು ಶಿಕ್ಷಿಸುವ ಕರ್ತವ್ಯಗಳನ್ನು ಹೊಂದಿದ್ದಾನೆ ಎಂಬುದು 'ಸಾರ್ವಜನಿಕ ಹೊಣೆಗಾರಿಕೆಯ' ಅಂಶಗಳು ಸ್ಪಷ್ಟಪಡಿಸುತ್ತವೆ. ಅಲ್ಲದೆ ಸಮಂಜಸವಾದ ಸಹಾಯ ಮತ್ತು ಸಹಕಾರದಿಂದ ಮಾತ್ರ ಸರ್ವಭೌಮತ್ವ ಅಧಿಕಾರ ಸಾಧ್ಯ. ಕೇವಲ ಒಂದೇ ಚಕ್ರದಿಂದ ರಥ ಸಾಗದು ಆದುದ್ದರಿಂದ ರಾಜ ಹಲವಾರು ಮಂತ್ರಿಗಳನ್ನು ನೇಮಿಸಿಕೊಂಡು ಸರ್ಕಾರದ ಹಲವಾರು ಇಲಾಖೆಗಳಿಗೆ ತನ್ನ ಕೆಲಸವನ್ನು ವಿಭಜಿಸಿದ್ದನು, ಪ್ರತಿಯೊಂದು ಮುಖ್ಯವಾದ ಇಲಾಖೆಗಳೂ ಮಾಡಬೇಕಾದ ಕೆಲಸಗಳನ್ನು ನಿರ್ಧರಿಸುತ್ತಿದ್ದನು. ಉದಾ: ಪುಸ್ತಕ–II ರ ಪಾಠ 24ರಲ್ಲಿ ಕೃಷಿ ಇಲಾಖೆಗೆ ಸಂಬಂಧಿಸಿದಂತೆ ವ್ಯವಹರಿಸುವತ್ತದೆ. ಈ ಇಲಾಖೆಯಲ್ಲಿ ಕೃಷಿ ನಿರ್ದೇಶಕ ಮುಖ್ಯಸ್ಥನಾಗಿ ಕಾರ್ಯನಿರ್ವಯಿಸಿ ತ್ತಾನೆ. ಕೌಟಿಲ್ಯ ಕೃಷಿ ಆಚರಣೆಗೆ ಅಗತ್ಯವಿರುವ ಎಲ್ಲಾ ಸಂಭವಗಳನ್ನು ಊಹಿಸಬೇಕೆಂದು ಅಂದರೆ ನೀರು, ಹವಾಗುಣ, ಜೀವವೈವಿದ್ಯತೆ ಮತ್ತು ಕೃಷಿಗೆ ಸಂಬಂಧಿಸಿದ ಪ್ರತಿಯೊಂದು ಕೆಲಸಗಳು ಈ ಕೃಷಿ ಇಲಾಖೆಯ ಜವಾಬ್ದಾರಿಗಳಾಗಿರುತ್ತದೆ ಎಂಬ ಸೂಕ್ಷ್ಮವಿವರ ಗಳನ್ನು ವಿವರಿಸುತ್ತಾನೆ. ಅದೇರೀತಿಯಾಗಿ ಪ್ರತಿಯೊಂದು ವಿಶೇಷ ವೃತ್ತಿಯ ನೇಮಕಾತಿಗೆ ವಿಶೇಷವಾದ ಪರೀಕ್ಷೆಗಳನ್ನು ನೆಡಸಲಾಗುತ್ತಿತ್ತು ಪ್ರತಿಯೊಂದು ಇಲಾಖೆಯಲ್ಲೂ ವಿಶೇಷವಾದ ಅಧಿಕಾರಿಗಳಿಗೆ ಕಾರ್ಯಭಾರವನ್ನು ಹಂಚಲಾಗುತ್ತಿತ್ತು. ಉದಾ: ಅರ್ಥಶಾಸ್ತ್ರ ಪುಸ್ತಕ II ರಲ್ಲಿ ಸರಿಸುಮಾರು 30 ಅಧ್ಯಕ್ಷರುಗಳು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆವಿವರಿಸಲಾಗಿದೆ ಅಲ್ಲದೆ ಈ ಎಲ್ಲಾ ಅಧ್ಯಕ್ಷರುಗಳನ್ನು ನಾಲ್ಕು ವರ್ಗಗಳಾಗಿ ವರ್ಗೀಕರಿಸಲಾಗಿದೆ ಮತ್ತು ಅವರುಗಳು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಸ್ಪಷ್ಟಪಡಿಸಿದೆ.

ಗ್ರಾಮೀಣ ಆಡಳಿತ: ಆಡಳಿತಕ್ಕೆ ಗ್ರಾಮಗಳು ಪ್ರಾಥಮಿಕ ಘಟಕಗಳಾಗಿವೆ. ಐದರಿಂದ ಹತ್ತು ಹಳ್ಳಿಗಳ ಅಧಿಕಾರವನ್ನು ಹೊಂದಿರುವ ವ್ಯಕ್ತಿಯನ್ನು ಗೋಪನೆಂದು ಗೊತ್ತುಪಡಿಸಲಾಗಿದೆ. ಆಡಳಿತ ಶ್ರೇಣಿಯಲ್ಲಿ ಗೋಪನಿಗಿಂತ ಮೇಲಿನ ಶ್ರೇಣಿಯಲ್ಲಿ ಸ್ಥಾನಿಕನಿರುತ್ತಾನೆ, ನಾಲ್ಕು ಸ್ಥಾನಿಕನ ಮೇಲಿನ ಶ್ರೇಣಿಯಲ್ಲಿ ಒಬ್ಬ ಸಾಮಹರ್ಥನಿರುತ್ತಾನೆಂದು ಅರ್ಥಶಾಸ್ತ್ರದಲ್ಲಿ ನಮೂದಿಸಲಾಗಿದೆ. ಸ್ಥಾನಿಕನು ಪಟ್ಟಣ ಪ್ರದೇಶದ ಆಡಳಿತದಲ್ಲಿ ಅಧಿಕಾರ ವಹಿಸಿಕೊಂಡಿರು ಅಧಿಕಾರಿಯಾಗಿರುತ್ತಾನೆ. ಇವರು ನಗರಿಕನ ಅಧೀನ ಕಾರ್ಯ ನಿರ್ವಹಿಸಬೇಕಾಗುತ್ತದೆ. ಗ್ರಾಮಬೃಟಿಕ, ಗ್ರಾಮಕೂಟ, ಗ್ರಾಮಿಕ, ಗ್ರಾಮಸ್ವಾಮಿನ್ ಎಂದು ನಮೂದಿಸಿದ್ದು, ಗ್ರಾಮವೃದ್ಧಾಸ್ ಎಂಬ ಹಿರಿಯ ವ್ಯಕ್ತಿ ದೇವಸ್ಥಾನದ ಸ್ವತ್ತು ಮತ್ತು ಕಾನೂನಿನ ದೃಷ್ಟಿಯಲ್ಲಿನ ಅಪ್ರಾಪ್ತಕರ ಸ್ವತ್ತನ್ನು ನೋಡಿಕೊಳ್ಳುವ ಕಾರ್ಯಮಾಡುತ್ತಾನೆ. ಹಳ್ಳಿಯ ಕಾರ್ಯಗಳು ರಾಜನ ಸರ್ಕಾರಿ ವ್ಯವಸ್ಥೆಯೊಂದಿಗೆ ಸಂಬಂಧಿಸಿದ್ದರೂ ರಾಜ ಸಾರ್ವ ಜನಿಕರ ಇಚ್ಛೆಯ ಪ್ರತಿನಿಧಿಯಾಗಿರುವುದಿಲ್ಲ. ಕೌಟಿಲ್ಯ ಹೇಳಿರುವ ಪ್ರಕಾರ ಗ್ರಾಮೀಣ ಪ್ರದೇಶದ ಆಡಳಿತವು ಅಮಾತ್ಯನ ಮೇಲೆ ಅವಲಂಬಿತವಾಗಿರುತ್ತದೆ. ಜನಪದನ ಮುಖ್ಯ ಕಾರ್ಯ ಹೊರಶತ್ರುಗಳಿಂದ ಜನರ ರಕ್ಷಣೆ, ಅಪ್ರಯೋಜಕ ಭೂಮಿಯ ಅಭಿವೃದ್ಧಿ, ಕರವನ್ನು ಮತ್ತು ದಂಡವನ್ನು ಸಂಗ್ರಹಿಸುವುದು. ಸಾಮಹರ್ಥನು ಜನಪದದ ಮುಖ್ಯಸ್ಥನಾಗಿದ್ದು, ಕರವನ್ನು ನಿರ್ಧರಿಸುವ ಜವಾಬ್ದಾರಿ ಯನ್ನು ಹೊಂದಿರುತ್ತಾನೆ. ಈ ಕೆಲಸದ ಉದ್ದೇಶಕ್ಕೆ ಸಂಪೂರ್ಣ ಸಮೀಕ್ಷೆಯನ್ನು ಮಾಡುವ ಕಾರ್ಯ ಸ್ಥಾನಿಕ ಮತ್ತು ಗೋಪನ ಕಾರ್ಯವಾಗಿರುತ್ತದೆ, ಇವರುಗಳು ಸಾಮಹರ್ಥನಿಗೆ ವಹಿಸಲ್ಪಟ್ಟ ಕಾರ್ಯಗಳಿಗೆ ಸಹಾಯಕರಾಗಿ ಕಾರ್ಯನರ್ವಹಿಸುತ್ತಿದ್ದರು. ಕೌಟಿಲ್ಯನ ಪ್ರಕಾರ ರಾಜ್ಯವೊಂದೇ ಶಾಂತಿಯನ್ನು ಕಾಪಾಡುವಾತ. ಈ ಶಾಂತಿಯನ್ನು ನಿರ್ವಹಿಸಲು ದಂಡವನ್ನು ಜಾರಿಗೊಳಿಸುವ

ಜವಾಬ್ದಾರಿಗಳು ರಾಜ್ಯದ್ದೇ. ದಂಡವಂದರೆ ಶಿಕ್ಷೆ, ಶಿಕ್ಷೆಯೊಂದರಿಂದಲೇ ಮಾನವನನ್ನು ಸರಿದಾರಿಗೆ ತರಲು ಸಾಧ್ಯ, ಈ ದಂಡಗಳನ್ನು ನ್ಯಾಯಾಲಯದಿಂದ ಅನ್ವಯಿಸಿಕೊಳ್ಳಲಾಗುತ್ತಿತ್ತು. ಸರ್ಕಾರದ ಬಹು ಉನ್ನತ ಸ್ಥಾನದಲ್ಲಿರುವ ಎಲ್ಲಾ ವ್ಯಕ್ತಿಗಳು ಅಂದರೆ ರಾಜ, ಯುವರಾಜ, ಪುರೋಹಿತ, ಮಂತ್ರಿಗಳು ಸಾರ್ವಜನಿಕ ಆಡಳಿತ ವಿಜ್ಞಾನದ ಪ್ರವೃತ್ತಿಯನ್ನು ಅನುಭವಿಸುವುದರಿಂದ ಆಡಳಿತಗಾರ ಸಾರ್ವಜನಿಕ ಆಡಳಿತ ವಿಜ್ಞಾನದ ಜ್ಞಾನವನ್ನು ಹೊಂದಿರಲೇಬೇಕೆಂದಿದ್ದಾನೆ.

ಕಂದಾಯ ಆಡಳಿತ: ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ರಾಜಧಾನಿಯ ಆರ್ಥಿಕ ತಳಪಾಯದ ಬಗ್ಗೆ ಸವಿಸ್ತಾರವಾಗಿ ಚರ್ಚಿಸದ್ದಾನೆ. ಧರ್ಮ ಮತ್ತು ಕಾಮಗಳೆರಡು ಸಂಪತ್ತಿನ ಬೇರುಗಳು, ಕೋಶತುಂಬಿದಾಗ ಮಾತ್ರ ಎಲ್ಲಾ ರೀತಿಯ ರಾಜ್ಯ ಅಭಿವೃದ್ಧಿಯ ಯೋಜನೆಗಳನ್ನು ಜಾರಿಗೊಳಿಸಬಹುದು. ಪೃಥ್ವಿ ಅಥವಾ ದೇಶದ ರಕ್ಷಣೆ ಮತ್ತು ವಶಪಡಿಸಿಕೊಳ್ಳುವ ಕಾರ್ಯವು ಅರ್ಥಕ್ಕೆ ಸಮನಾಂತರವಾಗಿದೆ. ಆದುದ್ದರಿಂದ ಕೌಟಿಲ್ಯ ರಾಜ್ಯದ ಆದಾಯಕ್ಕೆ ಹೆಚ್ಚಿನ ಗಮನ ನೀಡಿದ್ದಾನೆ ಅದಕ್ಕಾಗಿಯೇ ರಾಜ್ಯದ ದಕ್ಷ ಆಡಳಿತಕ್ಕೆ ಹೆಚ್ಚು ಮಹತ್ವವನ್ನು ನೀಡಿರುವುದು ರಾಜ್ಯವು ಬಹುದೊಡ್ಡ ಭೂಮಿ ಮತ್ತು ವ್ಯವಹಾರದ ಒಡೆಯ, ಹಡಗು, ದೋಣಿಯ ಮಾಲೀಕ, ಗಣಿಗಾರಿಕಾ ಕಾರ್ಯ ನಿರ್ವಾಹಕ, ಲವಣ ತಯಾರಿಕೆಯಲ್ಲಿ ಏಕಸ್ವಾಮ್ಯತೆಯನ್ನು ಹೊಂದಿದ್ದು ಸಂಪೂರ್ಣ ಅರಣ್ಯ ಉತ್ಪನ್ನಗಳನ್ನು ತಾನೆ ತೆಗೆದುಕೊಳ್ಳುತಿತ್ತು. ಪ್ರತಿಯೊಬ್ಬರ ಆದಾಯದಲ್ಲೂ ಭಾಗವನ್ನು ಪಡೆಯುತ್ತದೆ. ಪ್ರತಿಯೊಂದು ಸಮಯದಲ್ಲಿ ಭೂಪ್ರದೇಶದ ಮೇಲೆಯೇ ಪ್ರಾಥಮಿಕ ಕರಗಳನ್ನು ವಿಧಿಸಲಾಗುತಿದ್ದು, ಹೀಗೆ ವಿಧಿಸಲ್ಪಟ್ಟ ಕರವನ್ನು ಭಾಗ ಇಲ್ಲವೆ ಪಾಲು ಎಂದುಕರೆಯಲಾಗುತ್ತಿತ್ತು. ಈ ಭಾಗವನ್ನು ಬೆಳೆಗಳ ಮೇಲೆ ಗೊತ್ತುಪಡಿಸಿದ್ದು ಆಗಿರಬಹುದು, 1/3 ಭಾಗ ಫಲವತ್ತಾದ ಭೂಮಿಯಿಂದ ಇಲ್ಲವೆ 1/4 ಭಾಗ ಸಾಮಾನ್ಯ ಭೂಮಿಯಿಂದ ತೆಗೆದುಕೊಳ್ಳುತ್ತಿದ್ದು, ಸಾಮಾನ್ಯವಾಗಿ ಕರವನ್ನು ಕೃಷಿ ಭೂಮಿಯ ಮೇಲೆ ವಿಧಿಸಲಾಗುತ್ತಿತ್ತು ಅಲ್ಲದೆ ಇವುಗಳ ಮೇಲೆ ಹಲವಾರು ವಿನಾಯಿತಿ ಮತ್ತು ಕ್ಷಮಾಪಣೆಯನ್ನು ನೀಡಲಾಗುತ್ತಿದ್ದು, ವಿಧಿಸಲ್ಪಟ್ಟ ಕರವನ್ನು ಖಡ್ಡಾಯವಾಗಿ ಸಂಗ್ರಹಿಸಲಾಗುತ್ತಿತ್ತು. ಕರ ಸಂದಾಯ ಮಾಡಲು ತಪ್ಪಿಸಿಕೊಂಡವನಿಗೆ ಶಿಕ್ಷೆ ವಿಧಿಸಲಾಗುತಿತ್ತು ಏಕೆಂದರೆ ಇದನ್ನು ನೋಡಿ ಇತರರು ಕರವನ್ನು ಸಂದಾಯ ಮಾಡಲು ತಪ್ಪಿಸಿಕೊಳ್ಳಲು ಪ್ರೇರೆಪಿತರಾಗಬಾರದದೆಂದು. ಹೀಗೆ ಸಂಗ್ರಹಿಸಲ್ಪಟ್ಟ ಎಲ್ಲಾ ಕರಗಳ ಲೆಕ್ಕಾಚಾರವನ್ನು ಸರಿಯಾಗಿ ಇಡಲಾಗುತ್ತಿದ್ದು, ರಾಜನು ಈ ಕರಗಳ ಸಂಗ್ರಹಕ್ಕೆ ಬುದ್ಧಿವಂತರನ್ನು ನೇಮಕಮಾಡಿದ್ದನು. ರಾಷ್ಟ್ರೀಯ ಬೊಕ್ಕಸದಿಂದ ವಂತಿಕೆ ನೀಡದೆ ಯಾವುದೇ ವಸ್ತುಗಳ ತಯಾರಿಕೆ, ವಿತರಣೆ, ಮಾರಾಟ ಮತ್ತು ಉಪಯೋಗ ಮಾಡುವಹಾಗಿರಲಿಲ್ಲ. ಮದ್ಯ, ಜೂಜು ಮತ್ತು ವೆಶ್ಯಾವಟಿಕೆಯ ಮೇಲೆ ಅತೀ ಹೆಚ್ಚಿನ ಕರವನ್ನು ವಿಧಿಸುತಿದ್ದರಿಂದ ರಾಜ್ಯದ ಆದಾಯ ಹೆಚ್ಚುತ್ತಿತ್ತು ನ್ಯಾಯ ನಿರ್ವಹಣೆಯಲ್ಲಿ ಸಂಗ್ರಹಿಸಲ್ಪಟ್ಟ ದಂಡದ ಶುಲ್ಕವು ಸಹ ರಾಜ್ಯ ಆದಾಯದ ಭಾಗವಾಗಿತ್ತು.

ನ್ಯಾಯ ನಿರ್ವಹಣೆ: ಕಾನೂನು ಮತ್ತು ನ್ಯಾಯಕ್ಕೆ ಸಂಬಂಧಿಸಿದಂತೆ, ಪ್ರಾಚೀನ ಭಾರತದಲ್ಲಿ ಧರ್ಮಶಾಸ್ತ್ರ ನ್ಯಾಯಾಲಯದ ಮೂಲವಾಗಿತ್ತು ಕೌಟಿಲ್ಯನ ಪ್ರಕಾರ ಧರ್ಮನ್ಯಾಯಕ್ಕು ಪವಿತ್ರ ನ್ಯಾಯಕ್ಕು ಘರ್ಷಣೆ ಉಂಟಾದರೆ ಇದನ್ನು ಇತ್ಯರ್ಥಿಸುವಾಗ ಸಕಾರಣಗಳೇ ಪ್ರಾಧಿಕಾರವಾಗುತ್ತಿದ್ದವು. ರಾಜನು ನ್ಯಾಯಯುತವಾಗಿ ಆಡಳಿತ ನೆಡೆಸಿದರೆ ಸಂಪೂರ್ಣ ಪೃಥ್ವಿಯನ್ನೆ ನಿಯಂತ್ರಣದಲ್ಲಿಡಲು ಬದ್ದನಾಗಿರುತ್ತಾನೆಂದು ಇದಕ್ಕೆ ವ್ಯತಿರಕ್ತವಾಗಿ ರಾಜ ನ್ಯಾಯನಿರ್ವಹಣೆಯ ದುರ್ಬಳಕೆ ಮಾಡಿದರೆ ನರಕಕ್ಕೆ ಹೋಗಲು ಬದ್ದನಾಗಿರುತ್ತಾನೆಂದು ಕೌಟಿಲ್ಯ ನಂಬಿದ್ದನು. ಕೌಟಿಲ್ಯನು ನ್ಯಾಯ ನಿರ್ವಹಣಾ ಯೋಜನೆಯಲ್ಲಿ ಪಕ್ಷಾತೀತ ನ್ಯಾಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದನು. ಇವನು ಎರಡು ರೀತಿಯ ನ್ಯಾಯಾಲಯಗಳನ್ನು ಸೂಚಿಸಿದ್ದಾನೆ ಒಂದು ಧರ್ಮಾತ್ಸ್ಯ (ದಿವಾನಿ ನ್ಯಾಯಲಯಗಳು) ಇದು ಮೂರು ನ್ಯಾಯಾಧೀಶರನ್ನೊಳಗೊಂಡ ಪೀಠ, ಈ ನ್ಯಾಯಲಯಗಳು ತೇವಣಿ, ಮಾಲೀಕ–ನೌಕರನ ಸಂಬಂಧ, ಪಿತ್ರಾರ್ಜಿತ, ಕೃಷಿಯ ಹಾನಿ ಗಡಿಪ್ರದೇಶದ ವಿವಾದ, ಜೂಜು, ಮಾನಹಾನಿ ಮತ್ತು ಸಾಲದ ದಾವೆಗಳನ್ನು ಇತ್ಯರ್ಥಿಸುತ್ತಿದ್ದವು. ಎರಡನೆಯದು, ಕಂಟಕ ಶೋಧ (ಅಪರಾಧಿಕ ನ್ಯಾಯಲಯಗಳು) ಇದು ವರ್ತಕ ಮತ್ತು ಕಸುಬುದಾರರ ರಕ್ಷಣೆ, ಅನೈತಿಕ ಸಂಬಂಧ, ಗೂಢಾಚಾರಿಗಳಿಂದ ಅಪರಾಧಿಗಳ ಶೋಧ, ಮತ್ತು ಸಂಕೀರ್ಣ ಅಪರಾಧಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ನೆಡತ್ತಿದ್ದವು. ಗ್ರಾಮೀಣ ಪ್ರದೇಶದಲ್ಲಿನ ಮುಖ್ಯಸ್ಥಳಗಳಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ನ್ಯಾಯಾಲಯದ ಪ್ರಕ್ರಿಯೆ ಜರುಗುತಿತ್ತು. ಈ ನ್ಯಾಯಾಲಯಗಳ ಅಧೀನ ಗ್ರಾಮೀಣ ನ್ಯಾಯಾಧಿಕರಣಗಳಿದ್ದವು. ಮುಖ್ಯ ನ್ಯಾಯಾಧೀಶ ನ್ಯಾಯಂಗ ವ್ಯವಸ್ಥೆಯ ಮುಖ್ಯಸ್ಥ, ಇವನ ಮೇಲಾಧಿಕಾರಿ ರಾಜನಾಗಿದ್ದು ವಕೀಲರ ಮತ್ತು ಮಂತ್ರಿಗಳ ಸಹಾಯ ಪಡೆಯುತ್ತಿದ್ದನು. ಕೌಟಿಲ್ಯನ ಪ್ರಕಾರ ನ್ಯಾಯಾಧೀಶ ಉತ್ತಮ ಗುಣಗಳುಳ್ಳ, ನೈತಿಕಬಲ, ಸ್ವಯಂ ನಿರ್ಬಂಧಕ, ಸಮತೋಲನ ಮತ್ತು ಮೂಲ ಕಾನೂನಿನ ನಿಯಮಗಳಲ್ಲಿ ಜ್ಞಾನವಂತನಾಗಿರಬೇಕು. ಜನತೆ ಮತ್ತು ಅವರ ಸಂಪ್ರದಾಯಗಳೊಂದಿಗೆ ಒಡನಾಟ ಹೊಂದಿದಾಗ ಮಾತ್ರವೆ ಸರಿಯಾದ ನ್ಯಾಯನೀಡಬಲ್ಲ. ಈತನು ದುರಾಸೆ, ಗರ್ವಿತ, ಮತ್ತು ಭ್ರಷ್ಟಾಚಾರಿಯಾಗಿರಬಾರದು, ಒಳ್ಳೆಯ ಹೃದಯವಂತನಾಗಿದ್ದು ನ್ಯಾಯ ನೀಡುವ ಮತ್ತು ಅಪರಾಧ ಎಸಗಿದ್ದಕ್ಕೆ ಸೆರೆಮನೆ ಶಿಕ್ಷೆಯನ್ನು ವಿಧಿಸುವ ಸಾಮರ್ಥ್ಯವಿರಬೇಕು. ಕೌಟಿಲ್ಯ ಸಾಕ್ಷಿ ತೆಗೆದುಕಳ್ಳುವುದರ ಅಗತ್ಯದ ಬಗ್ಗೆ ಹೆಚ್ಚು ಒತ್ತು ನೀಡಿದ್ದಾನೆ. ಸಾಕ್ಷಿದಾರನು ಪ್ರಾಮಾಣಿಕ ಮತ್ತು ಚಾರಿತ್ರ್ಯವಂತನಾಗಿರಬೇಕು. ಸಾಕ್ಷಿ ನೀಡಿದ ನಂತರ ಈತನನ್ನು ಹಾನಿ ಅಥವಾ ಅವಮಾನಗಳಿಂದ ರಕ್ಷಿಸಬೇಕು. ಹಲವಾರು ವ್ಯಕ್ತಿಗಳು ಸಾಕ್ಷಿ ನೀಡಿಲು ಅನರ್ಹರೆಂದು ಪಟ್ಟಿಮಾಡಿದ್ದಾನೆ. ಉದಾ: ಹೆಂಡತಿಯ ಅಣ್ಣ, ಸಹಪಾಲುದಾರರು, ಸೆರೆಮನೆವಾಸಿ, ಸಾಲಗಾರ, ಶತ್ರು...., ಸೂಕ್ತ ಸಾಕ್ಷಿಯ ಕೊರತೆಯಿಂದ ದಾವೆಗಳು ವಜಾಗೊಳ್ಳುವ ಸಾಧ್ಯೆತಗಳಿವೆ, ಸಾಕ್ಷಿ ಶಿಕ್ಷೆ ನಿರ್ಧರಿಸುವಲ್ಲಿ ಸಹಾಯಕವಾಗುತ್ತವೆ ಎಂದು ಗುರುತಿಸಿದ್ದಾನೆ. ಅಡ್ಡ ವಿಚಾರಣೆಗಳು ನ್ಯಾಯಲಯ ಪ್ರಕ್ರಿಯೆಯ ಲಕ್ಷಣಗಳಾಗಿವೆ, ಸುಳ್ಳು ಸಾಕ್ಷಿ ನೀಡಿದ ಅಪರಾಧಕ್ಕೆ ಕೈಕಾಲುಗಳನ್ನು ಊನಗೊಳಿವ ಶಿಕ್ಷೆ ವಿಧಿಸಲಾಗುತ್ತಿತ್ತು. ಅಲ್ಲದೆ, ಕೌಟಿಲ್ಯ ಹಲವಾರು ಅಪರಾಧಗಳನ್ನು ಮತ್ತು ಅವುಗಳಿಗೆ ಸೂಕ್ತ ಶಿಕ್ಷೆಗಳನ್ನು ಸವಿವರವಾಗಿ ಚರ್ಚಿಸದ್ದಾನೆ. ಉದಾ: ಪವಿತ್ರ ಮರಕ್ಕೆ ಹಾನಿ ಉಂಟುಮಾಡಿದ ತಪ್ಪಿಗೆ ಅಥವಾ ರಾಜ ಮನೆತನದ ಮೆರವಣಿಗೆಗೆ ಅಡ್ಡಿಯುಂಟುಮಾಡಿದ ಅಪರಾಧಕ್ಕೆ ಪ್ರಧಾನ ಶಿಕ್ಷೆ ವಿಧಿಸಲಾಗಿತ್ತಿತ್ತು.

ನೌಕರರ ಆಡಳಿತ ನಿರ್ವಹಣೆ: ನೌಕರರುಗಳು ತಮ್ಮಷ್ಟಕ್ಕೆ ತಾವೆ ಸಂಘಟನೆಗೊಳ್ಳುವುದಕ್ಕಿಂತ ಯಾವುದೇ ಒಬ್ಬ ವ್ಯಕ್ತಿಯಿಂದ ಸಂಘಟಿಸಲ್ಪಟ್ಟಿದ್ದರೆ ಹೆಚ್ಚು ಪ್ರಾಮುಖ್ಯತೆಹೊಂದಿರುತ್ತದೆ ಎಂದು ಕೌಟಿಲ್ಯ

ಗುರುತಿಸದ್ದಾನೆ. ಕೌಟಿಲ್ಯ ಕೆಳದರ್ಜೆ ನೌಕರರಿಗಿಂತ ಮೇಲ್ದರ್ಜೆ ನೌಕರರಿಗೆ ಹೆಚ್ಚಿನ ಗಮನ ನೀಡಿದ್ದಾನೆ. ಏಕೆಂದರೆ, ಕೆಳದರ್ಜೆ ನೌಕರರಿಗಿಂತ ಮೇಲ್ದರ್ಜೆ ನೌಕರರು ಹೆಚ್ಚಿನ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತಾರೆಂಬ ಸಂಗತಿ ತಿಳಿದುಬರುತ್ತದೆ. ಪ್ರತಿಯೊಬ್ಬ ಮೇಲ್ದರ್ಜೆ ವರ್ಗದ ನೌಕರ ಅಂದರೆ ರಾಜನನ್ನು ಒಳಗೊಂಡಂತೆ ಮಂತ್ರಿಗಳು, ಮುಖ್ಯಮಂತ್ರಿ ಮತ್ತು ಮೇಲ್ವಿಚಾರಕರುಗಳಿಗೆ ಗೊತ್ತುಪಡಿಸಲ್ಪಟ್ಟ ಗರಿಷ್ಟಮಟ್ಟದ ಅರ್ಹತೆಗಳಿರಬೇಕೆಂದು ನಿರೀಕ್ಷಿಸಲಾಗಿದೆ ಮತ್ತು ಈ ಅರ್ಹತೆಗಳನ್ನು ವಿವಿಧ ಪರೀಕ್ಷೆಗಳಿಂದ ಪರೀಕ್ಷಿಸಲಾಗುವುದು. ಅವುಗಳಲ್ಲಿ ಮುಖ್ಯವಾಗಿ ಧರ್ಮೋಪದ, ಅರ್ಥೋಪದ, ಬಾಹ್ಯೋಪದ ಮತ್ತು ಕಾಮೋಪದ. ರಾಜನು ವಿಜ್ಞಾನ ಮತ್ತು ವಿಶೇಷ ಪ್ರಾಧಿಕಾರಹೊಂದಿದ ಉಪಾಧ್ಯಾಯರಿಂದ ವಿಷಯಾನುಭವವನ್ನು ಗ್ರಹಿಸಬೇಕೆಂದು ಕೌಟಿಲ್ಯ ಹೇಳಿದ್ದಾನೆ. ಉನ್ನತ ಹುದ್ದೆಯಲ್ಲಿರುವ ನೌಕರರು ಜ್ಞಾನ, ನೈತಿಕತೆ ಮತ್ತು ಭೌತಿಕ ಅರ್ಹತೆಗಳನ್ನು ಹೊಂದಿರಬೇಕೆಂದು ಅಪೇಕ್ಷಿಸಿದ್ದಾನೆ. ಸರ್ಕಾರದ ಎಲ್ಲಾ ಮುಖ್ಯ ನೇಮಕಾತಿಗಳು ರಾಜನಿಂದಲೇ ಮಾಡಲ್ಪಡುತ್ತವೆ, ರಾಜ್ಯ ಸೇವೆಗಾಗಿ ಯಾವ ವ್ಯಕ್ತಿ ಪ್ರಜ್ಞೆ ಮತ್ತು ವಾಕ್ (ಬುದ್ಧಿಶಕ್ತಿ ಮತ್ತು ವ್ಯಕ್ತಪಡಿಸುವ) ಚಾತುರ್ಯತೆಯನ್ನು ಹೊಂದಿರುತ್ತಾನೊ ಅಂತಹ ವ್ಯಕ್ತಿಯನ್ನು ಸೂಕ್ತ ಅರ್ಹ ವ್ಯಕ್ತಿಯೆಂದು ಪರಿಗಣಿಸಲಾಗುತಿತ್ತು. ಯಾರು ಧರ್ಮ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಾರೊ ಅವರು ನ್ಯಾಯಾಧೀಶ ಮತ್ತು ನ್ಯಾಯದಂಡಾಧಿಕಾರಿಯಾಗಿ ನೇಮಕಗೊಳ್ಳುತ್ತಾನೆ, ಅರ್ಥ ಪರೀಕ್ಷೆಯಲ್ಲಿ ತೇರ್ಗಡೆಯಾದವನು ರಾಜಸ್ವ ಅಧಿಕಾರಿಯಾಗಿಯೂ, ಬಾಹ್ಯ ಪರೀಕ್ಷೆಯಲ್ಲಿ ತೇರ್ಗಡೆಯಾದವನು ರಾಜನ ಸಾಮಿಪ್ಯದಲ್ಲಿ ಕಾರ್ಯನಿರ್ವಹಿಸುತ್ತಾನೆ. ಯಾರು ಕಾಮ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಾರೊ ಅವರು ಮನೋರಂಜನೆ ನೀಡುವಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ.

ಇಂದಿಗೂ ಸಹ ಉದ್ಯೋಗಿಗಳ ಆಡಳಿತ ನಿರ್ವಣೆಯ ಹಲವಾರು ವಿಚಾರಗಳ ದರ್ಶನ ಕಾಣಸಿಗುತ್ತವೆ ಅವುಗಳೆಂದರೆ, ಅರ್ಥಶಾಸ್ತ್ರದಲ್ಲಿ 'ನೇಮಕಾತಿ' ಎಂಬ ಪದದ ಬಳಕೆ ಸಂಕುಚಿತವಾಗಿದ್ದರೂ ಸರ್ಕಾರಿ ಸೇವೆಗೆ ಪ್ರವೇಶಿಸಲು ನಿರ್ದಿಷ್ಟ ಕನಿಷ್ಠ ಅರ್ಹತೆಯ ಅಗತ್ಯವಿದೆ ಎಂಬುದನ್ನು ಸಾಬೀತುಪಡಿಸುತ್ತದೆ ಅಲ್ಲದೆ ಪ್ರತಿಯೊಂದು ಹುದ್ದೆಗೂ ಅರ್ಹತೆಯ ಅಗತ್ಯವಿದೆ ಎಂಬುದನ್ನು ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಸ್ಪಷ್ಟಪಡಿಸಿದ್ದಾನೆ. ಅರ್ಥಶಾಸ್ತ್ರ ಪುಸ್ತಕ–V ರ 4 & 5ನೇ ಪಾಠದಲ್ಲಿ ಯಾರು ರಾಜ್ಯ ಸೇವೆಯಲ್ಲಿ ಸೇರುವ ಆಕಾಕ್ಷಿಗಳಾಗಿರುತ್ತಾರೂ ಅವರಿಗೆ, ಅದರಲ್ಲೂ ಮಂತ್ರಿಗಳಾಗಿ ಸೇವೆಗೆ ಸೇರಲಿಚ್ಛಿಸುವ ಅಭ್ಯರ್ಥಿಗಳು ಶಾಸ್ತ್ರಗಳಲ್ಲಿ, ಉಪನ್ಯಾಸಗಳಲ್ಲಿ ಪ್ರವೀಣತೆಯನ್ನು ಪಡಿದಿರಬೇಕೆಂದು ನಿರೀಕ್ಷಿಸಲಾಗುತಿತ್ತು. ಯಾವಾಗ ರಾಜನಿಂದ ಮಂತ್ರಿ ಪದವಿಗೆ ಆಹ್ವಾನ ಬಂದಿರುತ್ತದೊ ಆಗ ಅಭ್ಯರ್ಥಿಯು ತನ್ನ ಪರಿಚಯಮಾಡಿಕೊಡುವಾಗ ತನಗೆ ಇರುವ ಶಾಸ್ತ್ರ ಜ್ಞಾನದ ಬಗೆಗೆ ಪರಿಚಯ ನೀಡಲು ತಯಾರಿರಬೇಕೆಂದು ಸಲಹೆಯನ್ನು ನೀಡಿದ್ದಾನೆ. ರಾಜ್ಯ ನೌಕರರಿಗೆ ನೀಡಬೇಕಾದ 'ಸಂಬಳದ' ಬಗ್ಗೆಯೂ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ನಮೂದಿಸಲಾಗಿದೆ. ಸಾಮಾನ್ಯವಾಗಿ ರಾಜ್ಯದ ಆದಾಯದ ನಾಲ್ಕನೇ ಒಂದು ಭಾಗವನ್ನು ಸಂಬಳವನ್ನು ಸಂದಾಯಮಾಡುವುದಕ್ಕಾಗಿ ವಿನಿಯೋಗಿಸಲಾಗುತಿತ್ತು. ಕಾರ್ಯ ದಕ್ಷತೆಯನ್ನು ಹೆಚ್ಚಿಸಲು ಮತ್ತು ಅತೃಪ್ತಿಕರವಾದ ವಾತಾವರಣವನ್ನು ನಿಯಂತ್ರಿಸುವ ಉದ್ದೇಶದಿಂದ ನ್ಯಾಯಯುಕ್ತವಾದ ಸಂಬಳವನ್ನು ನೀಡಲಾಗುತಿತ್ತು. ರಾಜ ಕೋಶ ಭರ್ತಿಯಾಗಿಲ್ಲದ ಸಂದರ್ಭಗಳಲ್ಲಿ ಸಂಬಳವನ್ನು ಬಾಗಶಃ ಧನರೂಪದಲ್ಲೂ ಬಾಗಶಃ ಇತರ ವಸ್ತುರೂಪದಲ್ಲೂ ನೀಡಲಾಗುತಿತ್ತೆಂದು ಹೇಳಿದ್ದಾನೆ. ಹೀಗೆ ನೀಡಲಾಗುತಿದ್ದ ಇತರ ವಸ್ತುಗಳಲ್ಲಿ ಭೂಮಿಯನ್ನು ನೀಡಲಾಗುತಿತ್ತು ಆದರೆ ಹಾಗೆ ನೀಡಲ್ಪಟ್ಟ ಭೂಮಿಯಮೇಲೆ ಯಾವುದೇ ಸಾಲಗಳನ್ನು ನೀಡಲಾಗುತ್ತಿರಲಿಲ್ಲ.

'ನಿವೃತ್ತಿ ವೇತನ ಯೋಜನೆ'ಯ ಮೂಲವನ್ನು ಇಲ್ಲಿ ಕಾಣಬಹುದು. ಶಾಸ್ತ್ರ ಹೇಳುವ ಪ್ರಕಾರ ರಾಜ್ಯ ನೌಕರ ರಾಜ್ಯ ಸೇವೆಯಲ್ಲಿರುವಾಗಲೇ ತೀರಿಕೊಂಡರೆ ಆತನ ಹೆಂಡತಿ ಮತ್ತು ಮಕ್ಕಳು ಮೃತ ವ್ಯಕ್ತಿಯ ಸಂಬಳ ಮತ್ತು ಆಹಾರವಸ್ತುಗಳನ್ನು ಪಡೆಯುವರು. 'ಮುಂಬಡ್ತಿಯ' ಬಗ್ಗೆ ಯಾವುದೆ ನಿಖರ ನಿಯಮವಿಲ್ಲ ಆದರೆ ಯಾವ ಸರ್ಕಾರಿ ನೌಕರರುಗಳು ರಾಜ್ಯದ ಆದಾಯವನ್ನು ಹೆಚ್ಚಿಸುವ ಕಾರ್ಯವನ್ನು ಮಾಡುತ್ತಾರೊ ಮತ್ತು ಸೇವೆಯಲ್ಲಿ ಪ್ರಾಮಾಣಿಕತೆಯನ್ನು ತೋರುತ್ತಾರೊ ಅವರುಗಳನ್ನು ದೀರ್ಘ ಕಾಲದವರೆಗೂ ಸೇವೆಯಲ್ಲೇ ಉಳಿಸಿಕೊಂಡು ಅಂತವರಿಗೆ ಸಂಬಳವನ್ನು ಹೆಚ್ಚಿಸಲಾಗುತಿತ್ತು. ಸರ್ಕಾರಿ ನಿಧಿಗಳ ದುರ್ಬಳಕೆಯ ವಿರುದ್ಧ ಪರಿಹಾರ ಮತ್ತು ಮುನ್ನೆಚ್ಚರಿಕೆ ಕ್ರಮವನ್ನು ನೌಕರರುಗಳ 'ವರ್ಗಾವಣೆಯಿಂದ' ಸಾಧ್ಯ ಎಂದು ಸೂಚಿಸಲಾಗಿದೆ. ನೌಕರರುಗಳ 'ಸೇವಾವಧಿ' ಮತ್ತು 'ವಜಾ'ಗೊಳಿಸುವುದಕ್ಕೆ ಸಂಬಂಧಿಸಿದ ವಿಷಯಗಳು ರಾಜನ ಇಚ್ಛೆಗೆ ಬಿಟ್ಟಿದ್ದ ಸಂಗತಿಯೆಂದು ಅರ್ಥಶಾಸ್ತ್ರ ಸ್ಪಷ್ಟಪಡಿಸಿದೆ. ಅಧಿಕಾರಿಗಳ 'ಭ್ರಷ್ಟಾಚಾರದ' ಬಗ್ಗೆಯ ಕೌಟಿಲ್ಯನಿಗೆ ಅರಿವಿತ್ತು, ನಾಲಿಗೆಯ ಮೇಲಿನ ಜೇನಿನ ಸಿಹಿಯನ್ನು ಸ್ವಾದಿಸಿದ ಹಾಗೆ ಸರ್ಕಾರಿ ನೌಕರರು ಸಾರ್ವಜನಿಕ ಹಣವನ್ನು ದುರ್ಬಳಕೆ ಮಾಡುವುದು ಅನಿವಾರ್ಯ ಎಂದಿದ್ದಾನೆ. ಸರ್ಕಾರಿ ಹಣವನ್ನು ದುರ್ಭಳಕೆ ಮಾಡುವ ನಲವತ್ತಕ್ಕಿಂತ ಹೆಚ್ಚಿನ ದಾರಿಗಳನ್ನು ಪಟ್ಟಿಮಾಡಿದ್ದಾನೆ. ಭ್ರಷ್ಟಾಚಾರ ಕೇವಲ ವಸ್ತುಗಳನ್ನು ತೆಗೆದುಕೊಳ್ಳುದು ಮಾತ್ರವಲ್ಲದೆ ಅಧಿಕಾರದ ದುರುಪಯೋಗವನ್ನು ಒಳಗೊಂಡಿದೆ.

ಉಪಸಂಹಾರ: ಪ್ರಾಚೀನ ಭಾರತದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಸಾರ್ವಜನಿಕ ಆಡಳಿತದ ಮೇಲಿನ ಬಹುಮುಖ್ಯಕಾರ್ಯವಾಗಿದೆ. ಇಲ್ಲಿ ಅರ್ಥಶಾಸ್ತ್ರವನ್ನು ಎರಡು ವಿಧಾನಗಳಲ್ಲಿ ಅಭ್ಯಾಸಿಸಬಹುದು ಮೊದಲನೆಯದಾಗಿ ಆ ಕಾಲದ ಭಾರತದಲ್ಲಿ ಅಸ್ತತ್ವದಲ್ಲಿದ್ದ ರಾಜ್ಯ ಮತ್ತು ಸಮಾಜದ ಮೇಲೆ ಬೆಳಕನ್ನು ಬೀರುವ ಕೆಲಸಮಾಡಿದರೆ, ಎರಡನೇಯದಾಗಿ ರಾಜ್ಯ ಮತ್ತು ಸರ್ಕಾರದ ಮೇಲಿನ ಗ್ರಂಥದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ ಎಂಬುದರ ಬಗ್ಗೆ ನೋಟಹರಿಸುತ್ತದೆ. ಈ ಎರಡು ಅಂಶಗಳು ಕೌಟಿಲ್ಯನ ಅರ್ಥಶಾಸ್ತ್ರಕ್ಕೆ ಭೌಗೋಳಿಕ ಮೌಲ್ಯವನ್ನು ತಂದುಕೊಟ್ಟಿದೆ. ಆಡಳಿತಗಾರರಿಗೆ ಅರ್ಥಶಾಸ್ತ್ರವು ಹೆಚ್ಚಿನ ಕಾರ್ಯಗೊಳಿಸಬಹುದಾದ ಶಾಸ್ತ್ರವಾಗಿದೆ, ಏಕೆಂದರೆ ಮುಖ್ಯವಾಗಿ ಸರ್ಕಾರದ ಆಚರಣಾ ನ್ಯೂನ್ಯತೆಗಳು ಮತ್ತು ಸರ್ಕಾರಿ ವ್ಯವಸ್ಥೆ ಮತ್ತು ಅವುಗಳ ಕಾರ್ಯಗಳು ಶಾಂತಿ ಮತ್ತು ಯುದ್ಧದ ಸಮಯದಲ್ಲಿ ಹೇಗಿರಬೇಕೆಂಬುದರ ಬಗ್ಗೆ ಗಮನಹರಿಸಿದೆ.

ಕೌಟಿಲ್ಯನನ್ನು ಒಬ್ಬ ವ್ಯಕ್ತಿಯನ್ನಾಗಿ ನೋಡಿದಾಗ, ಹಲವು ಬರಹಗಾರರು ಈತನನ್ನು ವಿಭಿನ್ನವಾಗಿ ವಿವರಿಸಿದ್ದಾರೆ, ಈತನೊಬ್ಬ ಸಂತ, ದಯೆಇಲ್ಲದ ಆಡಳಿತ ನಿರ್ವಾಹಕ, ರಾಜನಿರ್ಮಾಣಗಾರ, ರಾಷ್ಟ್ರದ ಮೇಲೆ ಅಪಾರ ದೈವಭಕ್ತಿಯನ್ನು ಹೊಂದಿದಾತ, ಸ್ವ-ನಿಯಮಬದ್ಧಿ ಮತ್ತು ಎಲ್ಲಾ ನೈತಿಕತೆ ರಹಿತ ವ್ಯಕ್ತಿ. ಈತನ ದೃಷ್ಟಿಕೋನ

ವಿವಿಧ ಆಯಾಮಗಳ ಕಥೆಯಾಗಿದೆ. ಕೌಟಿಲ್ಯನು ಮೌರ್ಯ ಸಾಮ್ರಾಜ್ಯದಲ್ಲಿ ಮಹಾಮಾತ್ಯನಾಗಿ ಕಾರ್ಯನಿರ್ವಹಿಸಿದ್ದು, ಈಗಿನ ಪ್ರಧಾನ ಮಂತ್ರಿಯ ಸ್ಥಾನಕ್ಕೆ ಸಮನಾಂತರವಾದ ಪದವಿಯಾಗಿದೆ. ಈ ಸ್ಥಾನದಿಂದ ರಾಜಕೀಯ ಆಡಳಿತದಲ್ಲಿ ಹೆಚ್ಚಿನ ಅನುಭವ ಹೊಂದುವಂತಾಗಿ ಕೌಟಿಲ್ಯ ಬೌದ್ಧಿಕ ಬರಹಗಾರನಾದನಲ್ಲದೆ, ಭಯವಿಲ್ಲದ ಚಿಂತಕ, ದಕ್ಷ ಕಾರ್ಯದರ್ಶಿ ಮತ್ತು ಕಟಿಬದ್ಧ ರಾಜಕರಣಿ ಯಾದನು. ಅರ್ಥಶಾಸ್ತ್ರದ ಮುಖ್ಯ ಗುರಿ ರಾಜ್ಯದಲ್ಲಿ ಯಾವರೀತಿ ಆಡಳಿತ ನೆಡೆಸಬೇಕೆಂಬುದನ್ನು ತೋರಿಸಿಕೊಡುವುದಾಗಿದೆ, ಅಲ್ಲದೆ ನೈತಿಕತೆಯ ಆಯಾಮವನ್ನು ಬದಿಗಿಟ್ಟು ಕೌಟಿಲ್ಯನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಭೌತಿಕ ರಾಜ್ಯದ ಬಗ್ಗೆ ತಿಳಿಸಕೊಟ್ಟಿದೆ. ಆದುದ್ದರಿಂದ ಅರ್ಥಶಾಸ್ತ್ರವು ಯಾವ ರೀತಿ ಸರ್ಕಾರವನ್ನು ನೆಡೆಸಬೇಕೆಂದು ಆಚರಣಾಸಹಿತವಾಗಿ ತೋರಿಸಿಕೊಡುವ ಗುರಿಯನ್ನು ಹೊಂದಿದ ಲಿಖಿತ ದಾಖಲೆ. ಈ ಮಹಾನ್ ಬರಹಗಾರ ನೀಡಲ್ಪಟ್ಟಿರುವ ಆಡಳಿತ ವಿಧಾನಗಳನ್ನು ಕಲಿತು ಅನ್ವಯಿಸಿಕೊಂಡರೆ ಪ್ರಸ್ತುತ ದಿನಗಳಲ್ಲಿ ಪ್ರಪಂಚಾದ್ಯಂತ ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಂದ ಬಳಲುವುದನ್ನು ತಪ್ಪಿಸಬಹುದು ಮತ್ತು ಭವಿಷ್ಯಕ್ಕೆ ಅಗತ್ಯವಿರುವ ಉತ್ತಮ ವಿಧಾನಗಳನ್ನು ರೂಪಿಸಿಕೊಳ್ಳಬಹುದು. ಆದುದರಿಂದ ಕೌಟಿಲ್ಯನ ಕಾರ್ಯ ಪ್ರಸ್ತುತ ಭಾರತಕ್ಕೆ ಮಾತ್ರವಲ್ಲ ಸಂಪೂರ್ಣ ಪ್ರಪಂಚಕ್ಕೆ ಸೂಕ್ತವಾದುದು. ಭಾರತದ ಎಲ್ಲಾ ಕಾನೂನು ಗ್ರಂಥಗಳಲ್ಲಿಯೇ ಇದು ಅನನ್ಯವಾದುದು, ಏಕೆಂದರೆ ಇದು ನೈಜ್ಯ ರಾಜಕೀಯ ಮತ್ತು ಆರ್ಥಿಕ ನಿರ್ವಹಣೆಯ ನೀತಿ ಶಿಕ್ಷಣದ ವಕಾಲತ್ತನ್ನು ವಹಿಸುತ್ತದೆ. ಆದುದರಿಂದಲೇ ಪ್ರೋ. ಎನ್. ಸಿ. ಬಂಡೋಪಾಧ್ಯಾಯ ವಿವಾದಸ್ಥ ಕೌಟಿಲ್ಯನ ಬಗ್ಗೆ ಬರೆಯುವಾಗ ಅರ್ಥಶಾಸ್ತ್ರದಲ್ಲಿನ ಕ್ರಿಸ್ತ ಪೂರ್ವ 4ನೇ ಶತಮಾನದ ವಿಚಾರಗಳು ಪ್ರಸ್ತುತ ಕಾಲದಲ್ಲೂ ಪ್ರತಿನಿಧಿಸುತ್ತವೆ ಎಂದಿದ್ದಾರೆ.

ಪರಾಮರ್ಶನ ಗ್ರಂಥಗಳು:

1. ರಾಮಚಂದ್ರ ದೀಕ್ಷಿತರ್, ದಿ ಮೌರ್ಯ ಪೊಕಿಟಿ (ಮದ್ರಾಸ್ 1953).
2. ಡಾ. ಎಸ್, ರ್. ಮೈನಿನಿ, ಪೊಲಿಟಿಕಲ್ ಸೈನ್ಸ, ಅಲಹಬಾದ್ ಲಾ ಎಜೆನ್ಸಿ.
3. ಎಲ್. ಎನ್. ರಂಗರಾಜನ್, ಕೌಟಿಲ್ಯ: ದಿ ಅರ್ಥಶಾಸ್ತ್ರ, ಪೆಗ್ವಿನ್ ಬುಕ್ಸ, ನ್ಯೂ ಡೆಲ್ಲಿ.
4. ಎ. ಎಸ್. ಅಲ್ತೆಕರ್, ಸ್ಟೇಟ್ ಅಂಡ್ ಗೌವರ್ನಮೆಂಟ್ ಇನ್ ಎನ್ಶಿಯನ್ಟ್ ಇಂಡಿಯ (ಪಾಟ್ನಾ 1977).
5. ವಿ. ಪಿ ವರ್ಮ, ಎನ್ಶಿಯನ್ಟ್ ಅಂಡ್ ಮಿಡೀವಲ್ ಇಂಡಿಯ ಪೊಲಿಟಿಕಲ್ ಥಾಟ್ (ಆಗ್ರಾ 1986).
6. ವಿ. ಎ. ಸ್ಮಿತ್, ಆಕ್ಸಫರ್ಡ ಇಸ್ಟ್ರಿ ಆಫ್ ಇಂಡಿಯ 1919.
7. ಸೋಮನಾಥ್ ದಾರ್, ಕೌಟಿಲ್ಯ ಅಂಡ್ ಅರ್ಥಶಾಸ್ತ್ರ, (ನ್ಯೂ ಡೆಲ್ಲಿ1981).
8. ಎನ್. ಆರ್> ಇನಾಮ್ ದಾರ್, ಕೌಟಿಲ್ಯ ಇನ್ ಅಡ್ಮಿನಿಸ್ಟ್ರೇಟಿವ್ ಥಿಂಕರ್, ಡಿ. ರವೀಂದ್ರ ಪ್ರಸಾದ್ ಅಂಡ್ ವಿ ಎಸ್ ಪ್ರಸಾದ್ & ಪಿ. ಸತ್ಯನಾರಯಣ್ 1990.
9. ಎನ್. ಸಿ. ಬಂಡೋಪಾಧ್ಯಾಯ, ಡೆವಲಪ್ಮೆಂಟ್ ಆಫ್ ಹಿಂದೂ ಪೊಲಿಟಿ ಅಂಡ್ ಪೊಲಿಟಿಕಲ್ ಥಿಯರಿ (ನ್ಯೂ ಡೆಲ್ಲಿ1980).
10. http://iasecamportal.com/civilserviceslias-mains/pub-ad/evolution-of-indian-administration/kautilyas-administrative-state.
11. http:en.m.wikipedia.org/wiki/Arthashastra

ಕರ್ನಾಟಕದ ರೈತ ಮತ್ತು ದಲಿತ ಚಳುವಳಿಗಳ ಅವಲೋಕನ

ಹೆಚ್.ಹೆಚ್. ಮಲ್ಲಿಕೇಶ

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬. ಇ ಮೇಲ್: mallikesh2009@gmail.com

ಕನ್ನಡನಾಡಿನ ಸಮಗ್ರ ಚರಿತ್ರೆಯಲ್ಲಿ 20ನೇ ಶತಮಾನವನ್ನು ದಾಖಲಿಸುವಾಗ ಅತ್ಯಗತ್ಯವಾಗಿ ದಾಖಲಿಸಬೇಕಾದುದು ಎರಡು ಪ್ರಮುಖ ಚಳುವಳಿಗಳೆಂದರೆ ದಲಿತ ಮತ್ತು ರೈತಚಳುವಲಿಗಳು ಈ ಶತಮಾನದ ಕೊನೆಯ ಕಾಲುಭಾಗವು ಕರ್ನಾಟಕದ ಪಾಲಿಗೆ ಚರಿತ್ರಾರ್ಹವಾದುದು. ದಲಿತ ಚಳುವಳಿಯು ಮೊಳಕೆಯೊಡೆದುದು. ಕರ್ನಾಟಕದ ರೈತಶಕ್ತಿ, ಅಭೂತಪೂರ್ವವಾಗಿ ಮೈಕೊಡವಿಕೊಂಡು ಎದ್ದು ನಿಂತಿದ್ದು. ಬಂಡಾಯ ಸಾಹಿತ್ಯ ಸಂಘಟನೆಯ ಮೂಲಕ ನಿರ್ಲಕ್ಷಿತ ಲೋಹದ ಅಸಂಖ್ಯಾ ಪ್ರತಿಭೆಗಳು ದನಿಪಡೆದದ್ದು. ಈ ಕಾಲು ಶತಮಾನದ ಅಭೂತ ಪೂರ್ವ ಘಟನೆಗಳ ಸರಮಾಲೆಯೇ ಕಾಣುತ್ತದೆ.

ಎಪ್ಪತ್ತರ ದಶಕವು ಪ್ರಜಾಪ್ರಭುತ್ವದ ಎಚ್ಚರದ ವಿಶಿಷ್ಟ ಕಾಲಮಾನ, ಏಕಕಾಲಕ್ಕೆ ಗಾಂದಿ, ಮಾರ್ಕ್ಸ್ ಲೋಹಿಯ ಅಂಬೇಡ್ಕರ್ ರಂತಹ ಧೀಮಂತರ ವಿಚಾರಗಳು ಕರ್ನಾಟಕದ ಜನಸಾಮಾನ್ಯರ ಮನಸ್ಸಿನಲ್ಲಿ ಪ್ರವೇಶಗೊಂಡವು. ಬಡವ, ಶ್ರೀಮಂತ, ಕಾರ್ಮಿಕ, ಹಾಗೂ ಮಧ್ಯಮವರ್ಗಗಳ ಹಿಂದುಳಿದವರ್ಗಗಳು ಬುಡಕಟ್ಟು ಜನತೆ ಎಲ್ಲರೂ ತಮ್ಮ ಇರುವಿಕೆಯಲ್ಲಿ ತೋರಿಸಿಕೊಂಡವು. ಇದರಿಂದಲೇ ಎಪ್ಪತ್ತರ ದಶಕವು ಕರ್ನಾಟಕದ ಮಟ್ಟಿಗೆ ಪುಟ್ಟದಾದ ಪುನರುಜ್ಜೀವನದ ಅಲೆಯನ್ನು ಸೃಷ್ಟಿಸಲು ಸಾಧ್ಯವಾದದು. ಇದು ಒಂದು ತಲೆಮಾರಿನ ಜನರಿಗೆ ಕರ್ನಾಟಕದ ಇತಿಹಾಸ, ಕರ್ನಾಟಕದ ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳ ಬಗ್ಗೆ ಸಷ್ಟ ತಿಳುವಳಿಕೆ ಬಂತು. ಜನರ ಗ್ರಹಿಕೆಯ ಶಕ್ತಿಯು ಬೆಳೆಯಿತು. ಭಾರತಕ್ಕೆ ಸ್ವತಂತ್ರ ಬಂದು ಎರಡು ದಶಕಗಳು ಕಳೆದರು. ಈ ಪ್ರಜಾಪ್ರಭುತ್ವ ಸರ್ಕಾರಗಳು ರೈತರ ಮತ್ತು ದಲಿತರ ಸಾಮಾನ್ಯ ಬೇಡಿಕೆಗಳನ್ನು ಈಡೇರಿಸಲಿಲ್ಲ. ರೈತರ ಸಮಸ್ಯೆ ಮುಖ್ಯವಾಗಿ ಕೃಷಿಗೆ ಸಂಬಂಧಿಸಿದ್ದು. ಕೃಷಿಯ ಉತ್ಪಾದನೆ, ಕೃಷಿಯ ಬೆಳೆಗಳಿಗೆ ಬೆಲೆಯ ನಿರ್ಧಾರ, ಕೃಷಿ ಮಾರುಕಟ್ಟೆ, ವ್ಯವಸಾಯ ಉಪಕರಣ, ಇತ್ಯಾದಿ ಸಮಸ್ಯೆಗಳು ರೈತರಿಗೆ ಸಂಬಂಧಿಸಿದಂತೆ, ಇನ್ನೂ ದಲಿತರ ಸಮಸ್ಯೆಗಳು ಇದಕ್ಕಿಂತ ಭಿನ್ನ ಅವು ಮೂಲಭೂತವಾಗಿ ಹಸಿವಿನ ಸಮಸ್ಯೆ. ಅನ್ನದ ಸಮಸ್ಯೆ, ಕೂಲಿ ಸಾಮಾಜಿಕ ಬಹಿಷ್ಕಾರ, ಅಪಮಾನ, ದೌರ್ಜನ್ಯ, ಹಲ್ಲೆ, ಶಿಕ್ಷಣ ಆರೋಗ್ಯ, ಕೂಲಿಕೆಲಸಕ್ಕೆ ಸರಿಯಾದ ಕೂಲಿ ಸಿಗದೇ, ಇರುವುದು. ಈ ಮುಂತಾದವು ದಲಿತರಿಗೆ ಸಂಬಂಧಿಸಿದ ಸಮಸ್ಯೆಗಳಾಗಿದ್ದವು. ಇದರ ಪರಿಣಾಮವಾಗಿ

ರೈತ ಸಮುದಾಯದಿಂದ ರೈತಸಂಘವು ದಲಿತ ಸಮುದಾಯದಿಂದ ದಲಿತ ಸಂಘವು ಈ ನೆಲದ ಒಡಲಿನ ಕಾವಿನಿಂದಲೇ, ಹುಟ್ಟಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಾ ಬಂದಿವೆ. ಈ ಲೇಖನದಲ್ಲಿ ರೈತ ಹಾಗೂ ದಲಿತ ಚಳುವಳಿಯ ಹೋರಾಟದ ವಿವಿಧ ಮಗಲುಗಳನ್ನು ಹಾಗೂ ಈ ಸಂಘಟನೆಗಳ ಅನುಸಂದಾನದ ರೀತಿನೀತಿಗಳನ್ನು ತಿಳಿಸುವಂತಹ ಪ್ರಯತ್ನ ನನ್ನದಾಗಿದೆ.

ಕನ್ನಡನಾಡಿನ ಸಮಗ್ರ ಚರಿತ್ರೆಯಲ್ಲಿ 20ನೇ ಶತಮಾನವನ್ನು ದಾಖಲಿಸುವ ಅತ್ಯಗತ್ಯವಾಗಿ ದಾಖಲಿಸಬೇಕಾದ ಎರಡು ಪ್ರಮುಖ ಚಳುವಳಿಗಳೆಂದರೆ ದಲಿತ ಮತ್ತು ರೈತ ಚಳುವಳಿಗಳು. ಈ ಶತಮಾನದ ಕೊನೆಯ ಕಾಲು ಭಾಗವು ಕರ್ನಾಟಕದ ಪಾಲಿಗೆ ಚರಿತ್ರಹರ್ಷವಾದದು. ದಲಿತ ಚಳುವಳಿಯು ಮೊಳಕೆಯೊಡೆದುದು. ಕರ್ನಾಟಕ ರೈತಶಕ್ತಿ ಅಭೂತಪೂರ್ವವಾಗಿ ಮೈಕೊಡವಿಕೊಂಡು ಎದ್ದು ನಿಂತಿದ್ದು, ಬಂಡಾಯ ಸಾಹಿತ್ಯ ಸಂಘಟನೆಯ ಮೂಲಕ ನಿರೀಕ್ಷಿತ ಲೋಕದ ಅಸಂಖ್ಯ ಪ್ರತಿಭೆಗಳು ದನಿಪಡೆದಿದ್ದು ಈ ಕಾಲು ಶತಮಾನ ಅಭೂತ ಪೂರ್ವ ಘಟನೆಗಳ ಸರಮಾಲೆಯೇ ಕಾಣುತ್ತದೆ.

ಎಪ್ಪತ್ತರ ದಶಕವು ಪ್ರಜಾಪ್ರಭುತ್ವದ ಎಚ್ಚರದ ವಿಶಿಷ್ಟ ಕಾಲಮಾನ, ಏಕಕಾಲಕ್ಕೆ ಗಾಂಧೀ, ಮಾರ್ಕ್ಸ್, ಲೋಹಿಯಾ, ಆಂಬೇಡ್ಕರ್ ರಂತ ಧೀಮಂತರ ವಿಚಾರಗಳು ಕರ್ನಾಟಕದ ಜನಸಮಾನ್ಯರ ಮನಸ್ಸಿನಲ್ಲಿ ಪ್ರವೇಶಗೊಂಡವು ಬಡವ, ಶ್ರೀಮಂತ, ಕಾರ್ಮಿಕ ಹಾಗೂ ಮಧ್ಯಮ ವರ್ಗಗಳ ಹಿಂದುಳಿದ ವರ್ಗಗಳು ಬುಡಕಟ್ಟು ಜನರೆ ಎಲ್ಲರೂ ತಮ್ಮ ಇರುವಿಕೆಯನ್ನು ತೋರಿಸಿಕೊಂಡವು ಇದರಿಂದಲೇ ಎಪ್ಪತರ ದಶಕದ ಪ್ರಭುತ್ವ ಮತ್ತು ಸಮಾಜ ಒಟ್ಟಿಗೆ ತಮ್ಮ ಅಸ್ಥಿತ್ವ ಸಾಧಿಸಿಕೊಳ್ಳು ಮೂಂದಾದ ಪರಿಣಾಮದಿಂದಲೇ ಹಿಂದೆಂದೂ ಕಾಣಲಾಗದಿದ್ದ ಚಲನಶೀಲತ ಸಾಮಾಜಿಕವಾಗಿ ಸಾಧ್ಯವಾಯಿತು. 2 ಒಂದು ತಲೆಮಾರಿನ ಜನರಿಗೆ ಕಾರ್ನಟಕ ಇತಿಹಾಸ ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳ ಬಗ್ಗೆ ಸ್ಪಷ್ಟ ತಿಳವಳಿಕೆ ಬಂತು, ಜನರ ಗ್ರಹಿಕೆಯ ಶಕ್ತಿಯು ಬೆಳೆಯಿತು.

ಭಾರತಕ್ಕೆ ವಸಹಾತುಷಾಹಿ ಸರ್ಕಾರದಿಂದ ಅಧಿಕಾರ ಹಸ್ತಾಂತರವಾಗಿ ಸುಮಾರು ಆರು ದಶಕಗಳು ಕಳೆದಿದರು. ಆದರೂ ಈ ಪ್ರಜಾಪ್ರಭುತ್ವದ ಆಧುನಿಕ ಸರಕಾರಗಳು ರೈತರ ಮತ್ತು ದಲಿತರ ಸಾಮಾನ್ಯ ಬೇಡಿಕೆಗಳನ್ನು ಈಡೇರಿಸಲ್ಲ. ರೈತರ ಸಮಸ್ಯೆ ಮುಖ್ಯವಾಗಿ ಕೃಷಿಗೆ ಸಂಬಂಧಿಸಿದ್ದು ಕೃಷಿಯ ಉತ್ಪಾದನೆ, ಕೃಷಿಯ ಬೆಳೆಗಳಿಗೆ ಬೆಲೆಯ ನಿರ್ಧಾರ. ಕೃಷಿ ಮಾರುಕಟ್ಟೆ, ವ್ಯವಸಾಯ ಉಪಕರಣ ಇತ್ಯಾದಿ ಸಮಸ್ಯಗಳು ರೈತರಿಗೆ ಸಂಬಂಧಿಸಿದರೇ, ಇನ್ನು ದಲಿತರ ಸಮಸ್ಯೆಗಳು ಇದಕ್ಕಿಂತ ಬಿನ್ನ ಅವು ಮೂಲಭೂತವಾಗಿ ಹಸಿವಿನ ಸಮಸ್ಯೆ, ಆನ್ನದಸಮಸ್ಯೆ, ಕೂಲಿ, ಸಾಮಾಜಿಕ, ಅಪಮಾನ, ದೌರ್ಜನ್ಯ, ಹಲ್ಲೆ, ಶಿಕ್ಷಣ, ಆರೋಗ್ಯ, ಗ್ರಾಮಗಳ ಸಾಮಾನ್ಯ ಅಭಿವೃದಿ. ಕೂಲಿ ಕೆಲಸಕ್ಕೆ ಸರಿಯಾದ ಕೂಲಿ ಸಿಗದೇ ಇರುವುದು ಈ ಮುಂತಾದವು ದಲಿತರಿಗೆ ಸಂಬಂಧಿಸಿದ ಸಮಸ್ಯೆಗಳಾಗಿದ್ದವು, ಇದರ ಪರಿಣಾಮದಿಂದಾಗಿ ರೈತ ಸಮುದಾಯದಿಂದ ರೈತ ಸಂಘವು, ದಲಿತ ಸಮುದಾಯದಿಂದ ದಲಿತ ಸಂಘವು, ಈ ನೆಲದ ಒಡಲಿನ ಕಾವಿನಂದಲೆ ಹುಟ್ಟಿದವು. 4 ದಸಂಸದ ಸಾಮಾಜಿಕ ನ್ಯಾಯ ಒಂದು ಕಡೆಗಾದರೆ ರೈತ ಸಂಘದ ಹಕ್ಕೋತಾಯಗಳು ಬೇರೂಂದು ಸಂಚಲನ ಸೃಷ್ಟಿಸಿದವು ೨. ಮಾರ್ಕ್ಸವಾದ. ಅಂಬೇಡ್ಕರವಾದ ಎರಡರಿಂದಲೂ ಬಿನ್ನವಾಗಿ ಹೋರಾಟವನ್ನು ರೋಪಿಸಿಕೂಂಡು ರೈತಸಂಘಕ್ಕೆ ಸಮಾಜವಾದಿ ಧೋರಣೆ ಸೂಕ್ಷ್ಮವಾಗಿತ್ತು.

ವಾಸ್ತವದಲ್ಲಿ ದಲಿತ ಬಂಡಾಯ ಸಾಹಿತಿಗಳು ದಲಿತ ರೈತ ಸಮೂಹಗಳ ಭಾಗವಾಗಿ ತೂಡಗಿದ್ದುದು ಗಮನರ್ಹವಾದುದು. ಪ್ರತಿಭಟನೆಗೆ ಬೇಕಾದ ಸಾಹಿತ್ಯ ಮತ್ತು ಕಲಾ ಪ್ರಕಾರಗಳು ಅವರವರ ಚಳುವಳಿಯ ಭಾಗವಾಗಿ ಅನಾವರಣಗೂಂಡಿದ್ದರಿಂದ ಶೂದ್ರ ಸಂವೇದನೆಯ ಸಾಂಸ್ಕೃತಿಕ ಗುಣಗಳು ರೈತ ಆಂದೋಲನದಲ್ಲಿ ಪ್ರತಿಭಟನೆಯ ಹೂಸ ರೂಪಕಗಳು ಆಂದೋಲನದಲ್ಲಿ ಪ್ರತಿಫಲಿಸಿದವು. ಹೋರಾಟದ ಹಾಡುಗಳು, ಜಾಥಾಗಳು, ಬೀದಿ ನಾಟಕಗಳು ಪ್ರತಿಭಟನೆಯ ಹೊಸ ರೂಪಕಗಳು ಸೃಷ್ಟಿಯಾದವು, ದಲಿತ ಸಮುದಾಯಗಳು ಗ್ರಾಮಮಟ್ಟದಲ್ಲಿ ಹೋರಾಡಬೇಕದ್ದುದ ಭೂಮಾಲಿಕ ಜಾತಿಗಳ ವಿರುದ್ಧವೇ, ಆದರೆ ದಸಂಸವು ತನ್ನ ಸಹ ಜೀವಿಗಾಳಾದ ರೈತರ ವಿರುದ್ಧ ದಂಗೆ ಏಳಲಿಲ್ಲ, ರಾಜಕೀಯ ಪ್ರಭುತ್ವ ಮತ್ತು ಸಾಮಾಜಿಕ ಒಟ್ಟು ವ್ಯೆವಸ್ಥೆಯ ವಿರುದ್ಧ ಸಮರ ಸಾರಿದರು.

ಭಾರತದ ಕೃಷಿ ವಲಯದಲ್ಲಿ ಕ್ರಾಂತಿಕಾರರ ಬದಲಾವಣೆ ತಂದ ' ಹಸಿರು ಕ್ರಾಂತಿ' ಯು ಕೃಷಿ ವಿಧಾನದಲ್ಲಿ ಹೊಸ ಹೊಸ ಆಲೋಚನೆಯ ಕಡೆಗೆ ಸಾಗುವಂತೆ ಮಾಡಿತು. ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆಯಿಂದ ಭಾರತದ ಬಲಿಷ್ಟ ಜನಸಂಖ್ಯ ಕೃಶಿ ವಲಯದಲ್ಲಿ ಆಂಶಿಕ ನಿರುದ್ಯೋಗ ತಲೆ ಎತ್ತಿತು. ಇದು ಬಹಳವಾಗಿ ಪರಿಣಾಮದ ಬೀರಿದ್ದು ದಲಿತ ಕೃಷಿ ಕೂಲಿ ಕಾರ್ಮಿಕರಿಗೆ, ಹಸಿರು ಕ್ರಾಂತಿಯ ಸಂದರ್ಭದಲ್ಲಿ ಅಪಾರ ಪ್ರಮಾಣದ ವಿದೇಶಿ ಸಾಲವನ್ನು ಭಾರತಕ್ಕೆ ತರಲಾಯಿತು.

ಇದು ಪ್ರಭುತ್ವಕ್ಕೆ ಆಂದಿನ ಆಡಳಿತ ಪಕ್ಷ ಎಡಮಾಡಿಕೊಟ್ಟಿತು.ಇದು ರೂಪಾಯಿ ಅಪಮೌಲ್ಯಕ್ಕೆ ಅವಕಾಶವಾಯಿತು. ಇದು ಜನರಲ್ಲಿ ಆಕ್ರೋಶ ಪ್ರತಿಭಟನೆಗಳು ಬೀಜರೂಪಾವಾಗಿ ಮೊಳಕೆಯೂಡಿದು ಹೋರಾಟಕ್ಕೆ ಇಳದು ದಲಿತ ಮತ್ತು ರೈತ ಸಂಘಗಳು ಹುಟ್ಟಿದವುದಕ್ಕೆ ಕಾರಣವಾದವು. ಕೃಷಿ ಮೇಲೆ ಸಾಮ್ರಾಜ್ಯಶಾಹಿಯ ದುಷ್ಪರಿಣಾಮ ದುಡಿವ ವರ್ಗವಾದ ದಲಿತರ ಮೇಲೆ ಕೃಷಿ ವಲಯದಲ್ಲಿ ಭೂಮಾಲೀಕರ ದಬ್ಬಾಳಿಕೆ ಒಟ್ಟಿಗೆ ಸೇರುವುದರ ಮೂಲಕ ಈ ನೆಲದಲ್ಲಿ ಎರಡು ಬಗೆಯ ಹೋರಾಟಗಳು ಹುಟ್ಟಲು ಕಾರಣವಾಯಿತು. ೨೦ರ ದಶಕದಲ್ಲಿ ಪಿ. ವಿ. ನರಸಿಂಹರಾವ್ ಸರ್ಕಾರವು ಜಾರಿಗೆ ತಂದ ಜಾಗತೀಕಾರಣದ ಪರಿಣಾಮವಾಗಿ ಕೃಷಿ ವಲಯದಲ್ಲಿ ತೀವ್ರತರ ಸಮಸ್ಯಗಳು ತಲೆ ಎತ್ತಿವೆ. ಬಾರೀ ಭೂಮಾಲಿಕ ವರ್ಗವು ವ್ಯಾಪಾರಿ ವರ್ಗವಾಗಿ ರೂಪಾಂತರಗೂಂಡು ಅದು ತನ್ನ ಕೆಳಗಿನ ಬೇರೆ ಬೇರೆ ಸ್ತರಗಳ ರೈತರಿಗೆ ಸಾಲ ಕೂಡುವ ಮೂಲಕ ನೇರವಾಗಿ ಅವರನ್ನು ಶೋಷಣೆ ಮಾಡುತ್ತದೆ. ಈ ರೀತಿ ರೈತಾಪಿವಲಯದಲ್ಲಿ ವರ್ಗ ವ್ಯರುದ್ಯಗಳು ರೂಪ ತಾಳುತ್ತಿವೆ.

ಈ ದಶಕದಲ್ಲಿ ಭಾರತಕ್ಕೆ ಕಾಲಿರಿಸಿದ ಗ್ಯಾಟ್, ಡ್ಂಕಲ್ ಒಪ್ಪಂದಗಳ ಮೂಲಕ ಭಾರತದ ಉತ್ಪಾದನಾ ವಲಯವನ್ನು ಖಾಸಗೀಕರಣಗೂಳಿಸಿದಕ್ಕೆ ಹಾಗೂ ಮುಕ್ತ ಮಾರುಕಟ್ಟೆಯ ಮೂಲಕ

ಎಲ್ಲ ಸಂಪತ್ತನ್ನು ಮತ್ತು ಸಂಪನ್ಮೂಲಗಳನ್ನು ಜಾಗತೀಕರಣ ಮಾರುಕಟ್ಟೆ ತೆರೆದಿಟ್ಟಿತು. ಕೃಶಿಕರು ಮತ್ತು ದಲಿತರು ಎಂದಿಲ್ಲದ ಸಂಕಟಗಳಿಗೆ ಒಳಗಾದರು. ರೈತರಿಗೆ ಕೃಷಿ ಉತ್ಪಾದನೆಯೇ ಮುಳುವಾಯಿತು. ದಲಿತರ ಕೃಷಿ ವಲಯದಲ್ಲಿ ಕೂಲಿ ಕೆಲಸ ಕೂಡ ಸಿಗಲಾರದಂತಹ ಪರಿಶ್ಥಿತಿ ಸೃಷ್ಟಿಯಾಯಿತು.

ಕರ್ನಾಟಕ ರೈತ ಸಂಘಟನೆ ಅಂತರ್ ರಾಷ್ಟೀಯ ಮಟ್ಟದಲ್ಲಿ ಹೆಸರು ಪಡೆಯಲು ಕಾರಣ ಕೃಷಿಗೆ ಸಂಬಂಧಿಸಿದ ಹಲವಾರು ಸಮಸ್ಯಗಳಿಗೆ ಜಾಗತೀಕರಣ ಬಹುರಾಷ್ಟೀಯ ಕಂಪನಿಗಳ ವಿರುದ್ಧವೇ ರೈತ ಸಂಘ ಹೋರಾಡಲೇಬೇಕಾಗಿದೆ. ಜಾಗತೀಕರಣವು ಏಕಕಾಲದಲ್ಲಿ ರೈತರಿಗೂ ಮತ್ತು ದಲಿತರಿಗೂ ಹೇಗೆ ಪರಿಣಾಮಕಾರಿಯಾಗಿ ಕಂಡು ಬಂದಿತು ಎಂದು ಅವಲೋಕಿಸಿದಾಗ ಬಂಡವಾಳಶಾಹಿ ಮಾರುಕಟ್ಟೆಯು ಕೃಷಿಯ ಮೇಲೆ ನೇರವಾಗಿ ದಾಳಿ ಮಾಡುವುದರಿಂದ ಆಳುವ ಸರಕಾರಗಳು ಕೃಷಿ ವಲಯವನ್ನು ನೇರವಾಗಿ ಬಂಡವಾಳಶಾಹಿ ಮಾರುಕಟ್ಟೆ ಮಾರಟ ಮಾಡುವುದರಿಂದ ಬಾರೀ ಬಿಕ್ಕಟ್ಟಿನಲ್ಲಿದೆ. ಬಾರೀ ಭೂಮಾಲೀಕರು ಸಣ್ಣ, ಅತಿಸಣ್ಣ, ರೈತಾಪಿ ವಲಯವನ್ನು ಬೇರೆ ಬೇರೆ ರೂಪಗಳಲ್ಲಿ ಶೋಷಣೆ ಮಾಡುತ್ತಲೇ ಮುಂದುವರಿದಿದ್ದಾರೆ. ಪರಿಣಾಮವಾಗಿ ಈ ವರ್ಗಗಳ ನಡುವೆ ಶತ್ರುತ್ವ ಉಂಟಾಗಿದೆ.

ಇನ್ನೊಂದು ಕಡೆ ದಲಿತ ಸಮುದಾಯದಲ್ಲಿ ಅನ್ನ ಬಟ್ಟೆ ವಸತಿ ಮುಂತಾದ ಸೌಕರ್ಯಗಳೇ ಇಲ್ಲದ ಪರಿಶ್ಥಿತಿ ಹಾಗೆ ಮುಂದುವರಿಯುತ್ತದೆ. ಇದರಿಂದ ಸಂಘಟನೆ ವಿಶಾಲವಾದ ತಳಹದಿಯು ಮೇಲೆ ಬೆಳೆಯುಬೇಕಾಗಿತ್ತು. ಆದರೆ ದುರಂತವೆಂದರೆಂದರೆ ಈ ದಶಕದಲ್ಲಿ ದಲಿತ ಹೋರಟಗಲ್ಲು ಛಿದ್ರ ಛಿದ್ರವಾಗಿ ಒಡೆದ, ತಮ್ಮ ಮುಂದಿನ ಸಮಸ್ಯಗಳನ್ನು ಯಾವ ದೃಷ್ಟಿಕೋನದಲ್ಲಿ ಗ್ರಹಿಸಬೇಕು ಎಂತಹ ಪರ್ಯಯವನ್ನು ದಲಿತರ ಮುಂದಿಡಬೇಕು ಎಂಬ ಬಗ್ಗೆ ಒಂದು ಸಾಮಾನ್ಯ ನಿಲುವು ದಲಿತ ಸಂಘಟನೆಗಳಿಗೆ ಕಾಣದೇ ಹೋಯಿತು, ಪರಿಣಾಮವಾಗಿ ಸರಕಾರಿ ಸೌಲತ್ತುಗಳನ್ನು ಕೇಳುವ ಏಜೆಟಗಳ ಕೆಲಸಕ್ಕೆ ತನ್ನನ್ನು ಸೀಮಿತ ಮಾಡಿಕೂಂಡುದರಿಂದ ಅಲ್ಲಿ ಒಳಜಾತಿ, ಒಳಮೀಸಲಾತಿಯ ಪ್ರಶ್ನೆಗಳು ದಲಿತರ ವಿಮೋಚನೆಯ ಏಕೈಕ ದಾರಿಗಳಂತೆ ಬಿಂಬಿಸಲಾಗುತ್ತದೆ. ಅದರೆ ಇಂದು ಜಾತಿ ಮತ್ತು ಅಸ್ಪೃಶ್ಯತೆಯ ಸಮಸ್ಯೆಗಳು ಮತ್ತಷ್ಟು ಬೇರೂರಿ ಬೆಳೆಯಲು ಕಾರಣವಾಗಿದೆ. ದಲಿತರ ಮೇಲೆ ಹಲ್ಲೆ, ಕೂಲೆ, ಬಹಿಷ್ಕಾರಗಳನ್ನು ನಡೆಸಿದಾಗ ಅದಕ್ಕೆ ಒಳಗಾದವರು ಹೂಲಿಯರೂ, ಮಾದಿಗರೂ ಎಂದು ಸೀಮಿತವಾಗಿ ನೋಡುವಂತಹ ಸಂಕಿಚಿತ ಮನೋಭಾವ ದಲಿತರಲ್ಲಿ ಬೆಳೆದ ನಿಂತಿದೆ.

ಕನ್ನಡ ಸಮಾಜದ ಚರಿತ್ರೆಯಲಿ ದಲಿತ ಮತ್ತು ರೈತ ಹೋರಾಟಗಳು ಒಡೆಯ ಮತ್ತು ಜೀತಗಾರ ಇಬ್ಬರೂ ಒಟ್ಟಿಗೆ ಎಚ್ಚರಗೂಂಡರೆ ಏನಾಗಬಹುದೂ ಅದೇ ರೈತ ಮತ್ತು ದಲಿತ ಹೋರಟಗಳಲ್ಲೂ ಒಂಟಾಗಿದೆ. ಇವೆರಡೂ ನ್ಯಾಯಾಗಳು ಒಂದೇ ಅಲ್ಲ. ಕರ್ನಾಟಕದಲ್ಲಿ ಭೂಮಾಲೀಕ ಶಕ್ತಿಗಳೆಂದರೆ ಲಿಂಗಾಯಿತ ಹಾಗು ಒಕ್ಕಲಿಗ ಜಾತಿಗಳೇ, ಇವರಿಬ್ಬರ ನಿಯಂತ್ರಣದಲ್ಲಿ ಗ್ರಾಮೀಣ ದಲಿತರು ಬ್ಲುಕಿದ್ದಾರೆ. ವಾಸ್ತವಾಗಿ ದಲಿತ ವಿರೋದಿ ಶಕ್ತಿಗಳೇ ಈ ಎರಡು ಪ್ರಬಲ ಕೋಮುಗಳು, ವಿಚಿತ್ರ ಎಂದರೆ ರೈತರ ಜೊತೆಗೂಡಿ ಹೋರಾಟ ರೂಪಿಸಲು. ದಸಂಸದ ಹಲವು ಬಣಗಳಲ್ಲಿ ಒಂದು ಗುಂಪು ಮಾತ್ರ ರೈತ ಸಂಘದೂಂದಿಗೆ ಸೇರಲು ಮುಂದಾಗಿದೆ. ಇನ್ನುಳಿದ ಹಲವಾರು ದಲಿತ ಸಂಘಟನೆಗಳು ಈ ಪ್ರತಿಕ್ರಿಯೆಯಲ್ಲಿಲ್ಲ ಅವೆಲ್ಲ ಈಗಲೂ ಸ್ವತಂತ್ರವಾಗಿಯೇ ಹೋರಾಟ ಮುಂದುವರಿಸಿದೆ.

ಅದೇ ರೀತಿ ಇನ್ನೂಂದು ಕಡೆ ಪ್ರೂ. ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರೈತ ಸಂಘ ಮತ್ತು ಪುಟ್ಟಣ್ಣಯ್ಯನವರ ನೇತೃತ್ವದಲ್ಲಿ ರೈತ ಸಂಘ ಎಂಬ ಎರಡು ಮುಖ್ಯ ಬಣಗಳಿವೆ. ಇವುಗಳಲ್ಲಿ ಸದ್ಯಕ್ಕೆ ಪುಟ್ಟಣ್ಣಯ್ಯನವರ ಬಣ ಮಾತ್ರ ದಲಿತ ಸಂಘದ ಒಂದು ಗುಂಪಿನಲ್ಲಿ ಏಕತೆ ಮುಂದಾಗಿದೆ ಎರಡು ಸಂಘಟನೆಯ ಒಂದುಗೂಡುವಿಕೆ ಸಮಗ್ರ ಬದಲಾವಣೆಯ ಪ್ರಕ್ರಿಯೆಯಿಂದ ಕೂಡಿಲ್ಲ ಇವು ವೈರುಧ್ಯ ನಡುವೆ ಪ್ರತ್ಯೇಕವಾಗಿ ತಮ್ಮ ಹಿತವನ್ನು ಈ ಎರಡು ಸಂಘಟನೆಗಳು ಕಾಯ್ದುಕೊಂಡಿವೆ. ಏನೇಯಾದರೂ ದಲಿತ–ರೈತ ಹೋರಾಟಗಳಲ್ಲಿ ಹೂಂದಾಣಿಕೆ ಇರದಿದ್ದರೂ ತಾತ್ವಿಕವಾಗಿ ಅದು ಅಸಾಧ್ಯವಾಗಿದ್ದರೂ ಕನ್ನಡ ಗ್ರಾಮೀಣ ಲೋಕದ ಸುಧಾರಣೆಗೆ ರೈತ ಮತ್ತು ದಲಿತ ಆಂದೋಲನಗಳು ಅನಿವಾರ್ಯವಾಗಿವೆ. ಈ ನಾಡಿನ ರೈತ, ಭಾಷೆ ದಲಿತ–ಬಂಡಾಯ ಸಾಹಿತ್ಯ ಸಂಘಟನೆಗಳು ಹಲವು ಏಳು–ಬೀಳುಗಳನ್ನು ಕಂಡಿದ್ದು. ಒಂದೂಂದರಲ್ಲೂ ಹಲವು ಒಳಸುಗಳು ಕಾಣಿಸಿಕೂಂಡಿದಲ್ಲಿ ಜನ ಹಿತ ಕಾಯಲು ಜನ್ಮತಾಳದ ಚಳುವಳಿಗಳೇ ಕಲಾಂತರದಲ್ಲಿ ಚಿನ್ನಮತ, ಶುದ್ರತನ, ಅಧಿಕಾರದ ಸೆಳೆತ, ಅನುಮಾನ, ಅಪನಂಬಿಕೆ, ಅರೋಪ, ಪ್ರತ್ಯಾರೋಪಗಳ ಸುಳಿಗೆ ಸಿಕ್ಕು ತಮ್ಮ ಘೋಷಿತ ನೀತಿಯಿಂದ ನೂರಾರು ಅಡಿ ದೂರವಾಗಿ ನಿಂತಿರುವ ವಿಪರ್ಯಾಸವೇ ಒಂದು ವ್ಯವಸ್ಥೆಯ ಕಥೆ.

ಕರ್ನಾಟಕದ ಇತಿಹಾಸದಲ್ಲಿ ದಲಿತ ಹಾಗು ರೈತ ಸಂಘಗಳ ನಿರ್ಣಾಯಕ ಪಾತ್ರವು ವರ್ತಮಾನದಲ್ಲಿ ಕುಂಟಿತವಾಗಿದ್ದರೂ ಅವು ರೂಪಿಸಿರುವ ಪರಿಣಾಮಗಳು ಬೇರೆ ಬೇರೆ ರೂಪಗಳಲ್ಲಿ ಈಗಲೂ ಜೀವಂತವಾಗಿವೆ, ಕಾಲದ ಪ್ರವಾಹ ಮತ್ತು ಪರೀಕ್ಷೆಯಲ್ಲಿ ಅವು ಕನ್ನಡ ನಾಡಿನ ಹೂಣಿಗಾರಿಕೆಯನ್ನು ಜಾಗತೀಕರಣದ ಕಾಲಘಟ್ಟದಲ್ಲಿ ಗಂಭೀರವಾಗಿ ಹೂರಬೇಕಾಗಿದೆ.

ಅಡಿ ಟಿಪ್ಪಣಿ

1) ಮೊಗಳ್ಳಿ ಗಣೇಶ್–ನಡುಗಲದ ಕನ್ನಡನಾಡು ಏಕೀಕರಣೋತ್ತರ ಕನ್ನಡ ಸಾಹಿತ್ಯ ಸಂಸ್ಕೃತಿ ಕಥನ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ 2008. ಪುಟ.88
2) ಮೊಗಳ್ಳಿ ಗಣೇಶ್– ಅದೇ ಪುಟ 89
3) ಲಕ್ಷ್ಮಿನಾರಾಯಣ್ ನಾಗವಾರ–ಬಿ. ಬಸವಲಿಂಗ ಮತ್ತು ಬೂಸಾ ಚಳುವಳಿಯ ಕಾಲು ಶತಮಾನ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು 2000. ಪುಟ 17.
4) ಡಾ. ಬಿ. ಎಂ. ಪುಟ್ಟಯ್ಯ– ಮುಖಾಮುಖಿ ಸಮಾಜ ಸಂಸ್ಕೃತಿ ಚಳವಳಿ, ಸಿದ್ದಾರ್ಥ ಪ್ರಕಾಶನ ಹೊಸಪೇಟೆ.2008 ಪುಟ 54
5) ಅದೇ ಪುಟ.94
6) ಮೂಗಳ್ಳಿ ಗಣೇಶ್– ಅದೇ ಪುಟ 95
7) ಡಾ. ಬಿ. ಎಂ. ಪುಟ್ಟಯ್ಯ–ಅದೇ ಪುಟ 59
8) ಲಕ್ಷ್ಮಿನಾರಾಯಣ್ ನಾಗವಾರ–ಅದೇ ಪುಟ 11.

ಮಹಾತ್ಮ ಜ್ಯೋತಿಬಾ ಫುಲೆಯವರ ವೈಚಾರಿಕ ಚಿಂತನೆಗಳು

ಗುಂಡಪ್ಪ ಸಿ. ಸಿಂಗೆ
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಪ್ರಸ್ತಾವನೆ: ಜಗತ್ತಿನಲ್ಲಿ ಅಂಧಕಾರ ಮೌಢ್ಯದ ವಿರುದ್ಧ ಹೋರಾಡಿ ಹುಟ್ಟಿನಿಂದ ಯಾರು ಶ್ರೇಷ್ಠರಾಗುವುದಿಲ್ಲ. ಅವರವರ ಕಠಿಣ ಪ್ರೆಶ್ರಮಕ್ಕೆ ತಕ್ಕಂತೆ ಸಾಧನೆ ಮಾಡಬಹುದು. ಅಂತಹ ಸಾಧನೆ ಮಾಡಿದವರಲ್ಲಿ ಭಾರತೀಯ ಸಮಾಜಕ್ಕೆ ಶೋಷಿತ ವರ್ಗಕ್ಕೆ, ಮಹಿಳೆಯರಿಗೆ, ಪುರುಷರಿಗೆ ಮತ್ತು ಸ್ತ್ರೀ ಎಂಬ ಬೇಧಭಾವನೆಯಿಲ್ಲದೆ ಆಧುನಿಕ ಭಾರತದಲ್ಲಿ ಜರ್ಝರಿತ ಸಮಾಜ ರಚನೆಯ ವಿರುದ್ಧ ಬಂಡಾಯ ಸ್ವರ ಎತ್ತಿದ ಮೊದಲನೇ ಮಹಾ ಪುರುಷ ಜ್ಯೋತಿಬಾ ಫುಲೆ. ಜೀವನದಲ್ಲಿ ಸಾಕಷ್ಟು ಸಂಘರ್ಷ ಮಾಡಿ ಸ್ವತಹ ಅವರು ಶಿಕ್ಷಣ ಕಲಿಯಬೇಕೆಂಬ ಹಂಬಲವಿದ್ದರು ಮೇಲ್ವರ್ಗದವರ ಕುತಂತ್ರದಿಂದ ಶಾಲೆಬಿಡುವ ಪ್ರಸಂಗ ಅವರ ತಂದೆಯಿಂದಲೇ ಬಂತು. ಮುಂದೆ ಅವರ ತಂದೆಗೆ ಅರಿವಾದಾಗ ಮತ್ತೆ ಶಾಲೆಗೆ ಸೇರಿದ್ದುಂಟು. ಭಾರತ ದೇಶದಲ್ಲಿ ಮೊಟ್ಟಮೊದಲಬಾರಿಗೆ ಅವರವರ ವಿಚಾರವನ್ನು ವ್ಯಕ್ತಪಡಿಸುವ ಅಧಿಕಾರ ಅವರಿಗೆವಿದೆ. ಮಾನವ ಹಕ್ಕುಗಳನ್ನು ಪರಿಪೂರ್ಣವಾಗಿ ಜಾರಿಗೆ ತರುವಲ್ಲಿ ಹಾಗೂ ಶಿಕ್ಷಣವು ಸರ್ವಾಂಗೀಣ ಅಭವೃದ್ಧಿಗೆ ಹೆಬ್ಬಾಗಿಲು. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿ ಅವನ ಸಾಮಾಜಿಕ ಸೇವೆ ರಾಜಕೀಯ ಮುತ್ಸದ್ದಿ ಹಾಗೂ ಬೃಹತ್ ಉದ್ದಿಮೆದಾರನಾಗಬೇಕಾದರೆ ಶಿಕ್ಷಣ ಅವಶ್ಯವೆಂದು, ಅದು ಲಿಂಗಭೇದವಿಲ್ಲದೆ, ಜಾತಿ ಬೇಧವಿಲ್ಲದೆ ಎಲ್ಲರಿಗೂ ದೊರೆಯಬೇಕು. ಈ ಮೂಲಕ ಅವರು ದೇಶದಲಿ ಸಾಮಾಜಿಕ ಶೈಕ್ಷಣಿಕ ಸುಧಾರಣೆ ಆರ್ಥಿಕ ಸುಧಾರಣೆ ತರಲು, ಜೀವನಪೂರ್ತಿ ಶ್ರಮಪಟ್ಟು ಶ್ರಮಜೀವಿಗಳ ಪರವಾಗಿ ಅವರು ಕೆಲಸ ಮಾಡಿದರು.

ಫುಲೆಯವರು ಭಾರತದ ಶ್ರೇಷ್ಠ ಕ್ರಾಂತಿಕಾರಿ, ಅವರ ಚಿಂತನಾಕಾರ್ಯ ಗಳು ಉದಾತ್ತವಾದವುಗಳು. 19ನೇ ಶತಮಾನದಲ್ಲಿ ಅವರ ಸಾಮಾಜಿಕ, ಧಾರ್ಮಿಕ, ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸಲು ಕಾರಣರಾದರು. ಶೂದ್ರಾತಿಶೂದ್ರರಿಗೆ ನಾಯಕರಾದ ಅವರು ರಾಜವಂಶಾವಳಿ, ಜಮೀನ್ದಾರರ್ರೆ, ಪುರೋಹಿತಶಾಹಿ, ಮತ್ತು ಬೃಹತ್ ವ್ಯಾಪಾರಿ ವರ್ಗಗಳು ನಡೆಸುತ್ತಿದ್ದ ಶೋಷಣೆಯನ್ನು ದಿಕ್ಕರಿಸಿ ಜನಾಂದೋಲವನ್ನು ಕಟ್ಟಿದರು. ಧರ್ಮದ ಆಧಾರದ ಮೇಲೆ ನಡೆಯುತ್ತಿದ್ದ ಅನ್ಯಾಯ ಅತ್ಯಾಚಾರ, ಸಾಮಾಜಿಕ ಶೋಷಣೆ, ಗುಲಾಮಗಿರಿ, ಆರ್ಥಿಕ ಶೋಷಣೆ ಇದರ ವಿರುದ್ಧವಾಗಿ ಮೆಟ್ಟಿನಿಂತು ಬಾಲ್ಯವಿವಾಹ, ಬಹುಪತ್ನಿತ್ವ, ಗಂಡ ಸತ್ತಾಗ ಹೆಂಡತಿ ಕೇಶ ಮುಂಡನೆ ಮಾಡಿಕೊಳ್ಳುವುದು, ಜಾತಿಯತೆ ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ಪಾಪಗಳ ವಿರುದ್ಧ ಜೀವನಪೂರ್ತಿ ಅವರು ಸಾಮಾಜಿಕ ಆಂದೋಳನವನ್ನು ನಡೆಸಿ ಬದಲಾವಣೆ ತರುವಲ್ಲಿ ಯಶಸ್ವಿಯಾದರು. ಸ್ವಾರ್ಥವನ್ನು ಬಿಟ್ಟು ನಿಸ್ವಾರ್ಥತೆಯಿಂದ ಹೆಣ್ಣುಮಕ್ಕಳಿಗೆ ಶಿಕ್ಷಣ ಪ್ರಸಾರ ಮಾಡಿದರು. ಶಿಕ್ಷಣವನ್ನು ಪ್ರಸಾರ ಮಾಡುವ ಸಂಧರ್ಭದಲ್ಲಿ ಅವರ ಮನೆಯವರಿಂದ ವಿರೋಧ ಬಂದಾಗ ಅವರು ಮನೆಯನ್ನು ತೊರೆದು ಸಮಾಜದಲ್ಲಿರುವ ಮೌಢ್ಯ ಹೊಡೆದೋಡಿಸುವುದು ನನ್ನ ಜೀವನದ ಪೂರ್ತಿ ಹೋರಾಟ ಎಂದು ಮನಗಂಡು ಅವರ ಪತ್ನಿಗೆ ಶಿಕ್ಷಣ ಕೊಡಿಸಿ ಪತ್ನಿಗೆ ಶಿಕ್ಷಕಿಇಯಾಗಿ ಮಾಡಿ ಮಹಿಳೆಯರಿಗೆ ಶಿಕ್ಷಣದ ಪ್ರಸಾರ ಮಾಡಿದ ಕೀರ್ತಿ ತಾಯಿ ಸಾವಿತ್ರಿಬಾಯಿ ಫುಲೆ ಮಹಾತ್ಮ ಜ್ಯೋತಿಬಾ ಫುಲೆ ಯವರಿಗೆ ಸಲ್ಲುತ್ತದೆ.

ಮಹಾತ್ಮ ಜ್ಯೋತಿಬಾ ಫುಲೆಯವರ ಜನನ ಮತ್ತು ಶಿಕ್ಷಣ:– ಮಹಾತ್ಮ ಜ್ಯೋತಿಭ್ಹಾ ಫುಲೆಯವರ ಮಹಾರಾಷ್ಟ್ರ ರಾಜ್ಯದ ಸತಾರಾ ಜಿಲ್ಲೆಯ ಕಾಟುಗುನ ಎಂಬ ಹಳ್ಳಿಯಲ್ಲಿ ಗೋವಿಂದರಾವ ಫುಲೆ ಮತ್ತು ಚಿಮುನಬಾಯಿ ಫುಲೆ ಎಂಬ ಬಲಿಜ ಜನಾಂಗದ (ಹೋವಾಡಿಗ) ದಂಪತಿಗಳಿಗೆ 1827 ಏಪ್ರಿಲ್ 11 ರಂದು ಸಾಮಾನ್ಯ ಕುಟುಂಬದಲ್ಲಿ ಜನನವಾಯಿತು. ಜ್ಯೋತಿಯಂದರೆ ದೀಪ ಬಹಳ ಸುಂದರ ಹೆಸರವಿದ್ದು. ಜಗತ್ತಿನ ಕತ್ತಲೆಯನ್ನು ಅಳಸಿ ಹಾಕುವುದೇ ಜ್ಯೋತಿಯ ಕೆಲಸ ನಮ್ಮ ಜ್ಯೋತಿಕೂಡ ಅಜ್ಞಾನ ಅಂಧಕಾರವನ್ನು ಕೊನೆಗಾಣಿಸಿ, ಜ್ಞಾನದ ಪ್ರಕಾಶನದಿಂದ ಹೊಸ ಜಗತ್ತಿನ ನಿರ್ಮಿಸಬಲ್ಲವೆಂದು ಜ್ಯೋತಿ ಕುಟುಂಬದ ಸದಸ್ಯರು ಅವರ ತಂದೆತಾಯಿ ಸಂತೋಷ ಪಡುತ್ತಾರೆ. ಜ್ಯೋತಿ ಎಂಬ ಹೆಸರಿಡಲು ಅವರ ತಾಯಿಯ ಇಚ್ಛೆಯ ಮೇರೆಗೆ ಜ್ಯೋತಿಯೆಂದು ಹೆಸರಿಡುತ್ತಾರೆ.

ಫುಲೆಯವರ ಶಿಕ್ಷಣ:– ಗೋವಿಂದರಾವ್ ಫುಲೆಯವರ ಮೊದಲನೇ ಮಗ ರಾಜಾರಮ್ ಎರಡನೇ ಮಗ ಜ್ಯೋತಿಬಾ ಅವರು. ಸಾಕಷ್ಟು ವಿಮರ್ಶಾತ್ಮಕ ಪ್ರಶ್ನೆಗಳನ್ನು ಕೇಳುತ್ತಿದ್ದ. ಸಂದೇಹವಿದ್ದಿರುವಂತಹ ವಿಷಯಗಳನ್ನು ವಿಮರ್ಶಿಸಿ ಸಮಸ್ಯೆಗೆ ಇತ್ಯಾರ್ಥ ಮಾಡುತ್ತಿದ್ದ. ಮಗನಿಗೆ ಶಿಕ್ಷಣಕೊಡಿಸಬೇಕೆಂಬ ಹಂಬಲ ಅವನದಾಗಿರುತ್ತದೆ. ಅಂದಿನ ವ್ಯವಸ್ಥೆಯಲ್ಲಿ ಬ್ರಹ್ಮಕುಲದವರಿಗೆ ಮಾತ್ರ ಶಿಕ್ಷಣ ಮೀಸಲಿರುತ್ತದೆ. ಮಗನಿಗೆ ಶಾಲೆಗೆ ಸೇರಿಸಬೇಕೆಂದು ಎಷ್ಟೇ ಪ್ರಯತ್ನಮಾಡಿದರು ಜ್ಯೋತಿಗೆ ಶಾಲೆಗೆ ಪ್ರವೇಶ ದೊರಕಲಿಲ್ಲ. ಜ್ಯೋತಿಬಾ ಫುಲೆಯವರು 11 ವರ್ಷದರಿದ್ದಾಗ ಗೋವಿಂದರಾವ್ ಅಂಗಡಿಯಲ್ಲಿ ಗುಮಾಸ್ತನಾಗಿದ್ದ. ಬ್ರಾಹ್ಮಣರೊಬ್ಬರ ಪಿತೂರಿಯಿಂದಾಗಿ ಜ್ಯೋತಿಬಾರನ್ನು ಶಾಲೆಯಿಂದ ಬಿಡಿಸಲಾ ಯಿತು. 13ನೇ ವಯಸ್ಸಿನಲ್ಲಿ 8 ವರ್ಷದ ಬಾಲಕಿ ಸಾವಿತ್ರಿಬಾಯಿ ಯೊಂದಿಗೆ ವಿವಾಹವಾಯಿತು. ಶಾಲೆ ಬಿಟ್ಟು ತಮ್ಮ ಕುಲಕಸುವಿನಲ್ಲಿ ಮುಂದುವರೆದವರು. ಫುಲೆಯವರಿಗೆ ವಿದ್ಯೆಯಲ್ಲಿ ಆಸಕ್ತಿ ಕುಂದಲಿಲ್ಲ. ಇವರ ಆಸಕ್ತಿಯನ್ನು ಕಂಡು "ಗಪೂರ ಬೇಗ ಮುನ್ಷಿ" ಎಂಬ ಉರ್ದು–ಫಾರ್ಸಿ ಟೀಚರ್ ಹಾಗೂ ಲೆಗಿಟ್ ಎಂಬ ಕ್ರೈಸ್ತ ಪಾದ್ರಿಯು ಗೋವಿಂದರಾವ್ ತಮ್ಮ ಮಗನನ್ನು ಮತ್ತೆ ಶಾಲೆಗೆ ಸೇರಿಸುವಂತೆ ಒತ್ತಾಯಿಸಿದರು. 1841 ರಲ್ಲಿ ಜ್ಯೋತಿಬಾ ಫುಲೆಯವರು ಪುನಃ ಶಾಲೆಗೆ ಸೇರಿದರು (ಸ್ಕಾ ಟಿಶ್ ಮಿಷನ್ ಸ್ಕೂಲ್) 1847ರಲ್ಲಿ ಇಂಗ್ಲೀಷ್ ಶಿಕ್ಷಣವು ಪೂರ್ಣ ಗೊಂಡಿತು.

ಮಹಾತ್ಮ ಜ್ಯೋತಿಬಾ ಫುಲೆಯವರ ವೈಚಾರಿಕ ವಿಚಾರಗಳು: – ಧಾರ್ಮಿಕ ಢಾಂಬಿಕತೆಯ ವಿರುದ್ಧ ಹೋರಾಡಲು ಅವರಿಗೆ ಪ್ರೇರಣೆಯಾಗಿದ್ದು ಸುಪ್ರಸಿದ್ಧ ಬಂಡಾಯಗಾರ ಲೇಖಕ ಥಾಮಸ್ ಪೈನ್ ಅವರ Right of Man, The Age of Reason of Humanity ಹಾಗೂ Justic and Humanity ಮುಂತಾದ ಪುಸ್ತಕಗಳು ಅವರ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನು ಬೀರಿದವು. ಅವರಿಗೆ

ಈ ಮಟ್ಟಕ್ಕೆ ಅವರು ಬರಲು ಸಾಮಾಜಿಕ ಸಂಘರ್ಷ ತಳಮಟ್ಟದಲ್ಲಿ ನಡೆಯುವ ದೌರ್ಜನ್ಯವನ್ನು ತಡೆಗಟ್ಟಲು ಅವರಿಗೆ ಆದ ಅನುಭವ ಹೇಗಿದೆಯೆಂದರೆ ಅವರ ಜೀವನದ ದಿಕ್ಕನ್ನೆ ಬದಲಿಸಿತು. ಒಬ್ಬ ಬ್ರಾಹ್ಮಣ ಮಿತ್ರನ ಮದುವೆಯ ಮೆರವಣಿಗೆಯಲ್ಲಿ ಭಾಗವಹಿಸಿದ್ದ "ತಪ್ಪಿಗಾಗಿ" ಕೆಲವು ಹಿರಿಯ ಬ್ರಾಹ್ಮಣರೆಲ್ಲರೂ ಸೇರಿ ಅವರನು ಅಪಮಾನಿಸಿ, ಮೆರವಣಿಗೆಯಿಂದ ಹೊರಗುಳಿಸಿದರು. ಈ ಘಟನೆಯ ಪರಿಣಾಮವಾಗಿ, ಶೂದ್ರಾತಿಶೂದ್ರರಿಗೆ ಶಿಕ್ಷಣ ನೀಡುವ ಚಳುವಳಿಗೆ ಫುಲೆಯವರು "ನಾವು ಬ್ರೀಟೀಷರಿಗೆ ಚಿರಋಣಿಗಳಾಗಿರಬೇಕು. ಅವರ ಅನುಕಂಪವನ್ನು ನಾವು ಮರೆಯುವಂತೆಯೇ ಇಲ್ಲ. ಶತಮಾನಗಳ ಕಾಲದ ಬ್ರಾಹ್ಮಣಾದಿ ಶೋಷಣೆಯಿಂದ ನಮ್ಮನ್ನು ಬಿಡುಗಡೆಗೊಳಿಸಿ, ನಮ್ಮ ಮಕ್ಕಳಿಗೆ ಭರವಸೆಯ ಭವಿಷ್ಯವನ್ನು ನೀಡಿದವರು ಬ್ರಿಟೀಷರು. ಈ ನಾಡಿಗೆ ಬ್ರಿಟೀಷರು ದೊರೆಗಳಾಗಿ ಬಾರದೆ ಇದ್ದಲ್ಲಿ ಭಟ್ಟರು (ಬ್ರಾಹ್ಮಣರು) ನಮ್ಮನ್ನು ಸರ್ವನಾಶ ಮಾಡಿರುತ್ತಿದ್ದರು ಎಂದರು (Salvery p. xlix)

ಅವರು ಕನ್ಯಾ ಪಾಠಶಾಲೆ ಆರಂಭಿಸುವ ಸಮಯದಲ್ಲಿ ಮಾಡಿದ ಭಾಷಣ ಅವರ ಸಾಮಾಜಿಕ ಕ್ರಾಂತಿಯ ಸ್ಪಷ್ಟ ದಿಕ್ಕನ್ನು ಸೂಚಿಸಿದೆ. ಅವರು ಹೇಳಿದ "ನಮ್ಮ ಜನಾಂಗದ ಮಹಾರ, ಮಾಂಗ, ಚಮ್ಮಾರ ಮುಂತಾದ ಜಾತಿಯ ಸೋದರ-ಸೋದರಿಯರನ್ನು ದುಃಖದ ಕಗ್ಗತ್ತಲೆ ಆವರಿಸಿದೆ. ಅವರನ್ನು ಸುಧಾರಿಸುವ ಸ್ಫೂರ್ತಿ ನನ್ನಲ್ಲಿ ಅಂಕುರಿತವಾಗಿದೆ. ಮೊಟ್ಟ ಮೊದಲು ಕನ್ಯಾ ಪಾಠಶಾಲೆಯನ್ನು ಪ್ರಾರಂಭ ಮಾಡುವ ಬಯಕೆ ನನ್ನಲ್ಲಿ ಉಂಟಾಯಿತು. ಗಂಭೀರವಾಗಿ ವಿಚಾರ ಮಾಡಿದಾಗ ನನಗೆ ಗಂಡು ಮಕ್ಕಳ ಶಾಲೆಗಿಂತ ಹೆಣ್ಣುಮಕ್ಕಳ ಶಾಲೆ ಅಗತ್ಯವೆನಿಸಿತು. ಅಲ್ಲದೆ ಇದು ನನ್ನ ಜೀವನದ ಧ್ಯೇಯವೆಂದು ಬಗೆದು ಈ ದಾರಿಯಲ್ಲಿ ಮುಂದುರರಿಯುವೆ. ಇದಕ್ಕೆ ಹೆಣ್ಣು ಮಕ್ಕಳ ತಂದೆ ತಾಯಿಯರು ಸಹಕಾರ ನೀಡಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕು" ಎಂದು ಕೇಳಿಕೊಂಡರು.

1848-49ರಲ್ಲಿ ಫುಲೆಯವರು ಶೂದ್ರಾತಿಶೂದ್ರ ಹೆಣ್ಣು ಮಕ್ಕಳ ಶಾಲೆಯನ್ನು ತೆರೆದರು. ಆದರೆ ಬ್ರಾಹ್ಮಣವಾದಿಗಳು ಗೋವಿಂದರಾವ್ ರ ಮೇಲೆ ಒತ್ತಡ ಹೇರಿ, ಫುಲೆಯವರನ್ನು ಪತ್ನಿ ಸಮೇತ ಮನೆಯಿಂದ ಜುಲೈ 3, 1851 ರಂದು ಮತ್ತೊಂದು ಶಾಲೆಯನ್ನು ತೆರೆದರು. ಈ ಶಾಲೆಯಲ್ಲಿ ಆರಂಭಕ್ಕೆ 8 ಹುಡುಗಿಯರಿದ್ದು, ಬಲು ಬೇಗ ಆ ಸಂಸ್ಥೆಯು 48ಕ್ಕೆ ಏರಿತು. ಈ ಶಾಲೆಗೆ ಮಾತೆ ಸಾವಿತ್ರಿಬಾಯಿಯವರೇ ಹೆಡ್ ಮೇಡಮ್ ಆದರು. ಶೂದ್ರಾತಿ ಅತಿಶೂದ್ರರಿಗೆ ಶಿಕ್ಷಣ ನೀಡಲು ಫುಲೆ ಕೈಗೊಂಡ ಕಾರ್ಯಗಳಿಗಾಗಿ ಅವರನ್ನು ಎಲ್ಲಾ ಜಾತಿಗಳವರು ಖಂಡಿಸಿದರು. ಅವರು ಮತ್ತು ಅವರ ಪತ್ನಿ ಶಾಲೆಗೆ ಹೊಗುತ್ತಿದ್ದ ಸಮಯವನ್ನು ನೋಡಿಕೊಂಡು ಅವರ ಸೆಗಣಿ ಸುರಿಯುವ ನೀಚ ಮಟ್ಟಕ್ಕು ಕೆಲವರು ಹೋದರು. ಆದರೆ ಫುಲೆ ಮತ್ತು ಸಾವಿತ್ರಿಬಾಯಿ ತಮ್ಮ ಗುರಿ ತಲುಪುವ ಮಾರ್ಗವನ್ನು ಕೈಬಿಡಲಿಲ್ಲ. ಇಂಥ ಲೋಕಹಿತ ಕಾರ್ಯಗಳನ್ನು ಕೈಗೊಳ್ಳುತ್ತಾ ಎಲ್ಲಾ ಸಮುದಾಯಗಳವರಿಗೆ ಸರಿದಾರಿ ತೋರುತ್ತಾ ಎಲ್ಲರ ಬಾಳಲ್ಲಿ ಬೆಳಕು ತಂದ ಫುಲೆ. ಎಲ್ಲರ ಬಾಳು ಹಸನಾಗುವಂತೆ ಮಾಡಿದರು. ಹೆಣ್ಣು ಮಕ್ಕಳ ಶಾಲೆ ತೆರೆಯುವಂತೆ ಫುಲೆಯವರ ಮೇಲೆ ಪ್ರಭಾವ ಬೀರಿದರು ಅಮೇರಿಕಾ ಮಿಷನ್ನಿನ ಮಿಸ್ ಫರಾರ್ ರವರು ನಂತರ 1852ರೊಳಗೆ, ಅವರು ಮತ್ತೆರಡು ಶಾಲೆಗಳನ್ನು ತೆರೆದರು. 1882 ರಲ್ಲಿ ಸರ್ ವಿಲಿಯಂ ಹಂತರ್ ರವರ ಅಧ್ಯಕ್ಷತೆಯಲ್ಲಿ ಭಾರತಕ್ಕೆ ಭೇಟಿ ನೀಡಿದ "ಶಿಕ್ಷಣ ಅಯೋಗಕ್ಕೆ" ಮಹಾತ್ಮ ಫುಲೆಯವರು ಒಂದು ಮನವಿ ಸಲ್ಲಿಸಿದರು.

ಹಂಟರ್ ಕಮಿಷನ್ ಮುಂದಿಟ್ಟ ಬೇಡಿಕೆಗಳು: 1) ಪ್ರತಿ ಹಳ್ಳಿಯಲ್ಲಿ ಶೂದ್ರ ಮಕ್ಕಳಿಗೆ ಶಾಲೆಗಳು ತೆರೆಯಬೇಕು. 2) ಎಲ್ಲರಿಗೂ ಉಚಿತ ಪ್ರಾಥಮಿಕ ಶಿಕ್ಷಣ ಸಿಗಬೇಕು. 3) ಶಾಲೆಗಳಲ್ಲಿ ಬ್ರಾಹ್ಮಣರಲ್ಲದ ಶಿಕ್ಷಕರನ್ನು ನೇಮಕಮಾಡಬೇಕು. 4) ಆ ಬ್ರಾಹ್ಮಣ ಶಿಕ್ಷಕರು ಎಲ್ಲಾ ಮಕ್ಕಳೊಂದಿಗೆ ಯಾವುದೇ ಭೇದ ಭಾವವಿಲ್ಲದೇ ಬೆರೆಯಬೇಕು. 5) ಅಸ್ಪೃಶ್ಯರಾದ ಮಹರ್, ಮಾಂಗ್, ಮತ್ತಿತರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯುವುದು. 6) ಶಿಷ್ಯವೇತನ, ಫ್ರೀ-ಶಿಪ್ ಅಸ್ಪೃಶ್ಯರಿಗೆ ವಸತಿ ವ್ಯವಸ್ಥೆ, ಊಟವ್ಯವಸ್ಥೆ ಕಲ್ಪಿಸುವುದು. 7) ಅವರು ತರಬೇತಿ ಪಡೆದ ಶಿಕ್ಷಕರಾಗಿರಬೇಕಲ್ಲದೆ, ಬೇಸಾಯ ಮತ್ತು ನೈರ್ಮಲ್ಯದ ಬಗ್ಗೆ ತಿಳುವಳಿಕೆಯುಳ್ಳವರಾಗಿಬೇಕು, ಮಕ್ಕಳು ಕಲಿಯಬೇಕಾದ ಪಠ್ಯಕ್ರಮ, ಲೆಕ್ಕ (ಅಕೌಂಟ್), ಚರಿತ್ರೆ, ಭೂಗೋಳ, ವ್ಯಾಕರಣ, ಬೇಸಾಯದ ಮೂಲಭೂತ ತಿಳುವಳಿಕೆ, ನೀತಿ ಪಾಠ, ನೈರ್ಮಲ್ಯ, ಇಂಗ್ಲೀಷ್ ಮತ್ತು ಪ್ರಾದೇಶಿಕ ಭಾಷೆಗಳನ್ನು ಸ್ಥಳೀಯರ ಅಗತ್ಯಗಳಿಗೆ ತಕ್ಕಂತೆ ತಿದ್ದುಪಡಿ ಮಾಡುವುದು. ಪ್ರಗತಿಗೆ ಅಗತ್ಯವಾದ ತಾಂತ್ರಿಕ ಮತ್ತು ಕಲಾ ಶಿಕ್ಷಣ. 9) ಪ್ರತಿಯೊಂದು ಮುನಿಸಿಪಾಲಟಿಯು ತನ್ನ ವ್ಯಾಪ್ತಿಯೊಳಗೆ ಬರುವ ಶಾಲೆಗಳನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವಂತೆ ಕಾಯ್ಕೆ ಮಾಡುವುದು, 10) ಇಂಪೀರಿಯಲ್ ಮತ್ತು ಪ್ರವಿನ್ಷಯಲ್ ನಿಧಿಯಿಂದ ಶಿಕ್ಷಣಕ್ಕೆ ಅಗತ್ಯವಾದ ಧನಸಹಾಯ ಮತ್ತು 11) ರೈತರಿಗೆ ಇತರರಿಂದ ಆಗುವ ಕುರುಕುಳದಿಂದ ರಕ್ಷಣೆ ಮತ್ತು ಶೂದ್ರಾತಿ ಶೂದ್ರರು ಇತರ ಸಾರ್ವಜನಿಕ ಸೇವೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಫುಲೆಯವರ ವಿಚಾರಗಳು:-

1) ತನ್ನ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಖರ್ಚು ವೆಚ್ಚಗಳನ್ನು ಮುನಿಸಿಪಾಲಟಿಗಳೇ ವಹಿಸಿಕೊಂಡರೂ, ಶಿಕ್ಷಣದ ಸಂಪೂರ್ಣ ಉಸ್ತುವಾರಿಯು ಪ್ರತ್ಯೇಕ ಶಿಕ್ಷಣ ಇಲಾಖೆಗೆ ಸೇರಿಸಬೇಕು.

2) ಮುನಿಸಿಪಾಲಟಿಗಳು ಖಾಸಗಿ ಇಂಗ್ಲೀಷ್ ಶಾಲೆಗಳಿಗೆ ಗ್ರ್ಯಾಂಟ್ ನೀಡಬೇಕು. ಈ ನಿಟ್ಟಿನಲ್ಲಿ ಕಾಯ್ದೆಯಾಗಬೇಕು.

3) ಶಿಕ್ಷಣಕ್ಕೆ ನಿಗದಿಯಾದ ಹಣವು ದುರುಪಯೋಗವಾಗದಿರಲು, ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಒಂದು ಬುದ್ಧಿ ಜೀವಿಗಳ ಮಂಡಳಿಯಿರಬೇಕು.

4) ಪ್ರತಿ ಮೂರು ತಿಂಗಳಿಗೊಮ್ಮೆ ಉನ್ನತ ಅಧಿಕಾರಿಗಳಿಂದ ಶಾಲೆಗಳ ಇನ್ಸ್‌ಪೆಕ್ಷನ್ ನಡೆಯಬೇಕು.

5) ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ಮತ್ತು ಬಹುಮಾನಗಳನ್ನು ನೀಡುವಂತೆಯೇ, ಶಿಕ್ಷಕರಿಗೂ ಉತ್ತೇಜನ ನೀಡಬೇಕು.

6) ನಿರುದ್ಯೋಗಿ ಪದವಿಧರರು ಶಾಲೆಗಳನ್ನು ತೆರೆಯಲು ಪ್ರೋತ್ಸಾಹಿಸಬೇಕು

7) ಉನ್ನತ ಶಿಕ್ಷಣವನ್ನು ಅಗ್ಗಗೊಳಿಸಿ ಎಲ್ಲರ ಕೈಗೆಟುಕುವಂತೆ ಮಾಡಬೇಕು.

8) ಮೆಟ್ರಿಕ್ಯುಲೇಷನ್ನಿನ ಪಠ್ಯಪುಸ್ತಕಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಬೇಕು.

ಸತ್ಯಶೋಧಕ ಸಮಾಜ ಚಳುವಳಿ:– ಶೂದ್ರಾತಿಶೂದ್ರರಲ್ಲಿ ಶಿಕ್ಷಣವನ್ನು ಹರಡುವುದರ ಮುಖಾಂತರ ಜನತೆಗೆ, ಸಾಮಾಜಿಕ ಪರಿವರ್ತನೆಗಾಗಿ ಸತ್ಯಶೋಧಕ ಸಮಾಜ ಸಂಸ್ಥೆಯನ್ನು 1873 ಸೆಪ್ಟೆಂಬರ್ 24 ರಂದು ಮಹಾತ್ಮ ಜ್ಯೋತಿಭಾ ಫುಲೆಯವರು ಸ್ಥಾಪಿಸಿದರು ಮೂಲಕ ಸಮಾಜದಲ್ಲಿರುವ ಚಾತುರ್ ವರ್ಣ ವ್ಯವಸ್ಥೆಯನ್ನು ಧಿಕ್ಕರಿಸುವುದು, ಮೂರ್ತಿಪೂಜೆ ವಿರೋಧ, ಬ್ರಾಹ್ಮಣರ ಪೌರೋಹಿತ್ಯವಿಲ್ಲದ ಮದುವೆ ಮತ್ತಿತರ ಕಾರ್ಯಕ್ರಮವನ್ನು ಮಾಡುವುದು, ಕುಲಗಳನ್ನು ಆಧರಿಸಿ ಕಸುಬುಗಳನ್ನು ಮಾಡುವುದಕ್ಕೆ ಜ್ಯೋತಿಭಾ ಫುಲೆಯವರ ಪ್ರಬಲ ವಿರೋಧವಿತ್ತು. ಏಕೆಂದರೆ ಕುಲಕಸುಬುಗಳನ್ನು ಮಾಡುವುದರಿಂದ ಜಾತಿಯತೇ ಜೀವಂತವಿರುತ್ತದೆ. ಪ್ರತಿಭೆಗೆ ತಕ್ಕಂತೆ ಅವರವರ ಉದ್ಯೋಗ ಮಾಡಲಿ. ಆದ್ದರಿಂದ ಅವರು ಸಂಪೂರ್ಣ ಕುಲಕಸುಬಿಗೆ ವಿರೋಧವಿದ್ದರು. ವಿಧವಾ ವಿವಾಹ ಮಹಿಳೆಯರ ಸಮಾನ ಹಕ್ಕುಗಳು, ಸೇಟ್‌ಜೀಗಳ ಸರ್ವಾಧಿಕಾರದ ವಿರುದ್ಧ ಹೋರಾಡಬೇಕು. ವೇದಗಳ ಪರಮಾಧಿಕಾರವನ್ನು ಧಿಕ್ಕರಿಸುವುದು. ಅದು ಕೇವಲ ಒಂದು ವರ್ಗಕ್ಕೆ ಸೀಮಿತವಲ್ಲ ಎಂಬ ಧೃಡವಾದ ವಿಚಾರವನ್ನು ಹೊಂದಿದ್ದರು.

ಜ್ಯೋತಿಭಾ ಫುಲೆಯವರ ಕ್ರಾಂತಿಕಾರಿ ಕಾರ್ಯಗಳು:

1) ಬಾಲ್ಯ ವಿವಾಹವನ್ನು ವಿರೋಧಿಸಿದರು.

2) ಬ್ರಾಹ್ಮಣರಿಲ್ಲದ ವಿವಾಹ ನಡೆಸಿದ್ದು.

3) 1848 ರಲ್ಲಿ ಶೂದ್ರ ಬಾಲಕಿಯರಿಗಾಗಿ ಶಾಲೆ ಪ್ರಾರಂಭಿಸಿದರು. ಮೂರು ವರ್ಷಗಳ ಬಳಿಕ ದಲಿತರಿಗಾಗಿ ಮೊದಲ ಶಾಲೆ ಶುರು ಮಾಡಿದರು. ತಮ್ಮ ಪತ್ನಿ ಸಾವಿತ್ರಿಬಾಯಿಗೆ ಮನೆಯಲ್ಲೇ ಪಾಠ ಹೇಳಿ, ಅವರನ್ನು ಶಿಕ್ಷಕಿಯಾಗಿ ತರಬೇತಿಗೊಳಿಸಿದರು. ತಮ್ಮ ಬಾವಿಯಿಂದ ನೀರು ತೆಗೆದುಕೊಳ್ಳಲು ಅಸ್ಪೃಶ್ಯರಿಗೆ ಅವಕಾಶ ನೀಡಿದರು.

4) 1860ರಲ್ಲಿ ವಿಧವೆಯರ ತಲೆಬೋಳಿಸುವುದನ್ನು ವಿರೋಧಿಸಲು ಕ್ಷೌರಿಕರನ್ನು ಸಂಘಟಿಸಿದರು.

5) ವಿಧವೆಯರ ಮಕ್ಕಳನ್ನು ಪೋಷಿಸಲು 1863ರಲ್ಲಿ ಅನಾಥಾಲಯ ಪ್ರಾರಂಭಿಸಿದರು.

6) ಬಾಲ ಹತ್ಯ ನಿಷೇದಕ ಪ್ರಸೂತಿ ಗೃಹವನ್ನು ಪ್ರಾರಂಭಿಸಲಾಯಿತು. ಈ ಪ್ರಸೂತಿ ಗೃಹದಲ್ಲಿ ಗರ್ಭವತಿ ವಿಧವೆಯರ ಹೆರಿಗೆ ಗುಪ್ತವಾಗಿ ಸುಸೂತ್ರವಾಗಿ ನೆರವೇರುತ್ತಿತ್ತು. ಕಾಶಿಬಾಯಿ ಎಂಬ ವಿಧವೆ ಹೆರಿಗೆಯ ಸಮಯದಲ್ಲಿ ಸಾವಿತ್ರಿ ಬಾಯಿಯವರಿಂದ ಹೊಕ್ಕಳನ್ನು ಕತ್ತರಿಸಿದರು. ಆ ಮಗುವನ್ನೇ ಜ್ಯೋತಿಬಾ, ಸಾವಿತ್ರಿಬಾಯಿ ದಂಪತಿಗಳು ದತ್ತು ತೆಗೆದುಕೊಂಡು 'ಯಶವಂತ' ಎಂದು ನಾಮಕರಣ ಮಾಡಿದರು. ಅವನು ದೊಡ್ಡ ಡಾಕ್ಟರ್ ಆಗಿ ಹೆಸರು ಗಳಿಸಿದ.

7) ವಿಧವಾ ವಿವಾಹವನ್ನು ಸಮರ್ಥಿಸಿದರು ಮತ್ತು 1864ರಿಂದ ಅನೇಕ ವಿಧವಾ ವಿವಾಹಗಳನ್ನು ನೆರವೇರಿಸಿದರು.

8) ದಲಿತ ಹುಡುಗಿ ಮತ್ತು ಬ್ರಾಹ್ಮಣ ಹುಡುಗರ ಪ್ರೇಮ ವಿವಾಹಕ್ಕೆ ಇಂಬಾಗಿ ನಿಂತರು.

9) ಬ್ರಾಹ್ಮಣರು ತಮ್ಮ ವಿಧುವೆಯರ ತಲೆ ಬೋಳಿಸಲು ಹೋಗಬಾರದೆಂದು ಕ್ಷೌರಿಕ ಸಮುದಾಯಕೆ ಮನವಿ ಮಾಡಿಕೊಂಡರು.

10) 1873ರಲ್ಲಿ 'ಸತ್ಯಶೋಧಕ ಸಮಾಜ'ವನ್ನು ಸ್ಥಾಪಿಸಿದರು. ಈ ಮೂಲಕ ಶೂದ್ರರಲ್ಲಿ ಮತ್ತು ದಲಿತರಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳನ್ನು ಹಮ್ಮಿಕೊಂಡರು.

11) ಜಮೀನ್ದಾರರ ಸುಲಿಗೆಯನ್ನು ವಿರೋಧಿಸಿದರು; ರೈತರಿಗೆ ಮತ್ತು ರೈತ ಕೂಲಿಕಾರರಿಗೆ ನ್ಯಾಯ ಸಿಕ್ಕಬೇಕೆಂದು ಒತ್ತಾಯಿಸಿದರು.

12) ಶೂದ್ರ–ಅತಿಶೂದ್ರರಲ್ಲಿ ಜಾಗೃತಿ ಮೂಡಿಸಲು 'ತೃತೀಯ ರತ್ನ', ಬ್ರಾಹ್ಮಣರ ಕರಾಮತ್ತು; ಗುಲಾಮಗಿರಿ, 'ರೈತರ ಬಂಡಾಯ', 'ಇಶಾರಾ', 'ಸಾರ್ವಜನಿಕ ಸತ್ಯಧರ್ಮ ಪುಸ್ತಕ', ಮುಂತಾದ ಪುಸ್ತಕಗಳನ್ನು ಬರೆದರು.

13) 'ಸತ್ಕಾರ' ಎಂಬ ಪತ್ರಿಕೆಯನ್ನು ಪ್ರಾರಂಬಿಸಿ, ಶೂದ್ರ–ಅತಿಶೂದ್ರರಲ್ಲಿ ಪ್ರಸಾರ ಮಾಡಿದರು.

14) 1879ರಲ್ಲಿ 'ದೀನಬಂಧು' ವಾರಪತ್ರಿಕೆಯನ್ನು ಆರಂಭಿಸಿದರು. ಇದು ಸತ್ಯಶೋಧಕ ಸಮಾಜ ಸಂಸ್ಥೆಯ ಮುಖವಾಣಿಯಾಗಿತ್ತು.

15) 'ಗುಲಾಮಗಿರಿ', 'ಬ್ರಾಹ್ಮಣಾಚಿ ಕಸದ್' ಮತ್ತು 'ಶೇಟ್ ಕರ್ಯಾಂಚ ಅಸೋದ್' ಎಂಬ ಪುಸ್ತಕಗಳನ್ನು ಬರೆದರು.

16) ಜಸ್ಟೀಸ್ ರಾನಡೆಯವರು ಸತ್ಯಶೋಧಕ ಸಮಾಜ ಚಳುವಳಿಗೆ ತಮ್ಮನ್ನೂ ಸೇರಿಸಿಕೊಳ್ಳುವಂತೆ ಮಹಾತ್ಮ ಫುಲೆಯವರಲ್ಲಿ ವಿನಂತಿಸಿದಾಗ "ಸಮಾನತಾವಾದದ ಚಿಂತನೆಯಿಲ್ಲದ ಬದ್ಧಾಶಿ ಉದ್ದೇಶಗಳನ್ನು ಹೊಂದಿರುವ ಜನರಿಗೆ ಇಲ್ಲಿ ಅವಕಾಶವಿಲ್ಲ ನೀವು ಪ್ರತಿಪರರೇ ಆಗಿದ್ದಲ್ಲಿ ನಿಮ್ಮ ಬ್ರಾಹ್ಮಣ ಜನರ ನಡುವೆ ಕೆಲಸ ಮಾಡಿ, ಅವರನ್ನು ಪ್ರಗತಿಪರರನ್ನಾಗಿ ಮಾಡಿ" ಎಂದರು.

"ಶಿಕ್ಷಣವಿಲ್ಲದ್ದರಿಂದಾಗಿ ಬುದ್ಧಿಯು ನಾಶವಾಯಿತು, ಬುದ್ಧಿಯಿಲ್ಲದ್ದರಿಂದಾಗಿ ನೈತಿಕತೆ ನಾಶವಾಯಿತು, ನೈತಿಕತೆ ಇಲ್ಲದ್ದರಿಂದಾಗಿ ಕ್ರಿಯಾಶೀಲತೆ ನಾಶವಾಯಿತು, ಕ್ರಿಯಾಶೀಲತೆ ಇಲ್ಲದ್ದರಿಂದಾಗಿ ಸಂಪತ್ತು ನಾಶವಾಯಿತು, ಸಂಪತ್ತು ಇಲ್ಲದ್ದರಿಂದಾಗಿ ಶೂದ್ರರು ಅವನತಿಗಿಳಿದರು–ಹೀಗೆ ಶಿಕ್ಷಣವಿಲ್ಲದಿರುವುದು ಎಲ್ಲಾ ಬಗೆಯ ಅವನತಿಗೆ ಕಾರಣವಾಯಿತು".

ಜ್ಯೋತಿಭಾ ಫುಲೆಯವರ ಕೃತಿಗಳು:

1) 'ತೃತೀಯ ರತ್ನ' ನಾಟಕ (1855)

2) 'ಜಾತಿ ಭೇದ ವಿವೇಕ ಸಾರ' ಪ್ರಸ್ತಾವನೆ (1865)

3) ಛತ್ರಪತಿ ಶಿವಾಜಿ ಅವರ ಪವ್ವಾಡ (1869)

4) ಬ್ರಾಹ್ಮಣರ ಕುಯುಕ್ತಿ (1869)

5) ದಾಸ್ಯ (1873)

6) ಸತ್ಯ ಶೋಧಕ ಸಮಾಜ ರೀತ್ಯಾ ಮಂತ್ರಾದಿ ಸರ್ವ ಪೂಜಾವಿಧಿ (1887)

7) ಸಾರ್ವಜನಿಕ ಸತ್ಯ ಧರ್ಮ (1891)

ಜ್ಯೋತಿಬಾರವರ ಅಂತಿಮ ದಿನಗಳು: ಜ್ಯೋತಿಭಾ ಅವರು ತಮ್ಮ ಜೀವನದಲ್ಲಿ ಆಸ್ತಿ–ಪಾಸ್ತಿ ಮಾಡಲಿಲ್ಲ. ಮಕ್ಕಳು ಇಲ್ಲದ್ದರಿಂದ ಒಂದು ಅನಾಥ ಮಗುವನ್ನು ದತ್ತು ತೆಗೆದುಕೊಂಡು ಬೆಳೆಸಿದರು. ಇಂದಿನ ಸಂದರ್ಭದಲ್ಲಿ ಮಕ್ಕಳು ಇರದೇ ಹೋದಲ್ಲಿ ಮತ್ತೊಂದು ಮದುವೆಯನ್ನು ಮಾಡಿಕೊಳ್ಳುತ್ತಾರೆ. ತ್ಯಾಗ ಜೀವಿಯಾದ ಜ್ಯೋತಿಯವರು ಅನಾಥ ಮಗುವನ್ನು ತೆಗೆದುಕೊಂಡಿ ಆ ಮಗುವನ್ನು ಒಳ್ಳೆಯ ಶಿಕ್ಷಣ ಕೊಡಿಸಿ ಅವನಿಗೆ ವೈದ್ಯನಾಗುವಂತೆ ಮಾಡುತ್ತಾರೆ. ಆ ಮಗುವೇ ಡಾ॥ ಯಶವಂತ. ಡಾ॥ ಯಶವಂತ ಅವರ ತಂದೆ–ತಾಯಿಯು ಸಾಮಾಜಿಕ ಸೇವಾ ಕಾರ್ಯಕ್ರಮಗಳಲ್ಲಿ ಕೈ ಜೋಡಿಸುತ್ತಾನೆ. 1888 ರ ಜುಲೈನಲ್ಲಿ ಜ್ಯೋತಿಬಾಗೆ ಪಾರ್ಶ್ವವಾಯು ತಗುಲಿತು. 1888ರ ಡಿಸೆಂಬರ್ ನಲ್ಲಿ ಎರಡನೇಯ ಬಾರಿ ಪಾರ್ಶ್ವವಾಯು ತಗುಲಿತು. ಕೊನೆಗೆ 27–11–1890ರಂದು ಅವರ

ಸ್ಥಿತಿ ಗಂಭೀರವಾಯಿತು. ಅದೇ ದಿನ ಸಂಜೆ ೬:೦೦ ಗಂಟೆಗೆ ತಮ್ಮವರೆನ್ನೇಲ್ಲಾ ಕರೆದು ಕೊನೆಯದಾಗಿ ಹೀಗೆ ನುಡಿದರು. "ಗೆಳೆಯರೆ ಈಗ ನಾನು ಲೋಕ ಬಿಡುವ ಕಾಲ ಬಂದಿದೆ. ನಾನು ಕೈಗೆತ್ತಿಕೊಂಡ ಕಾರ್ಯವೆಲ್ಲಾ ಸರಿಸುಮಾರು ಯಶಸ್ವಿಯಾಗಿ ಪೂರೈಸಿದ್ದೇನೆ. ನೀವೆಲ್ಲರೂ ನನಗೆ ನೀಡಿದ ಸಹಾಯ ಸಹಕಾರಗಳಿಗೆ ಬೆಲೆ ಕಟ್ಟಲಾಗದು. ನನ್ನ ಬಾಳ ಸಂಗಾತಿ ಸಾವಿತ್ರಿ ಕ್ಷಣ ಕ್ಷಣಕ್ಕೂ ನೆರಳನಂತೆ ನನ್ನ ಜೊತೆ ಇರುತ್ತಿದ್ದಳು ಮಗ ಯಶವಂತ ಇನ್ನೂ ಚಿಕ್ಕವನು ಆಡರೆ ಕೆಲಸ ಕಾರ್ಯದಲಿನ ಅವನಿಗೆ ಅದಮ್ಯ ಉತ್ಸಾಹವಿದೆ. ನಾನು ಇವರಿಬ್ಬರನ್ನು ನಿಮ್ಮ ವಶಕೆ ಒಪ್ಪಿಸಿದ್ದೇನೆ.

ಹುಟ್ಟಿದವನಿಗೆ ಸಾವು ತಪ್ಪಿದಲ್ಲ. ಹಿಂದೆ ನಮ್ಮ ಪೂರ್ವಿಕರು ಹೋದರು ಇಂದು ನನ್ನ ಸರದಿ ನಾಳೆ ನಿಮ್ಮ ಪಾಳಿ ಶೋಕಾರ್ತರಾಗಿ ಇರಬೇಡಿ. ನೀವು ನಿಮ್ಮ ಕೆಲಸ ಮಾಡುತಾ ಹೋಗಿ, ಒಳ್ಳೆಯ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ, ನನ್ನೊಂದಿಗೆ ನೀವೆಲ್ಲಾ ನೊಂದಿದ್ದೀರಿ, ಮುಂದೆ ಇದಕ್ಕೊಂತ ಹೆಚ್ಚು ಯಾತನೆ ಅನುಭವಿಸಬೇಕಾದೀತು, ಆದರೆ ಯಾವುದಕ್ಕೂ ಹೆದರದೆ ನಿಮ್ಮ ಮೇಲೆ ನಂಬಿಕೆ ಇಟ್ಟು ನಿಮ್ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ". ಎಂದರು. ಎಲ್ಲರೂ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವಂತೆ ಕೇಳಕೊಂಡರೂ ಮರುಕ್ಷಣವೇ ಅವರು ನಿಧನರಾದರು. ಲಕ್ಷಾಂತರ ಜನರು ತಮ್ಮ ನಾಯಾಕನಿಗೆ ಶ್ರದ್ಧಾಂಜಲಿ ಅರ್ಪಿಸಿ ಶವಯಾತ್ರೆಯಲ್ಲಿ ಪಾಲ್ಗೊಂಡರು. ಮಗ ಯಶವಂತ ಚಿತೆಗೆ ಅಗ್ನಿ ಸ್ಪರ್ಷ ಮಾಡಿದರು. ಈ ರೀತಿ ಒಬ್ಬ ಧೀರ. ಕರ್ಮನಿಷ್ಠ ಬಹುಮುಖ ವ್ಯಕ್ತಿತ್ವವೊಂದು ಕಣ್ಮರೆಯಾಯಿತು.

1876-77ರ ನಂತರ ಮಹಾರಾಷ್ಟ್ರದಲ್ಲಿ ಇನ್ನೊಮ್ಮೆ ಕ್ಷಾಮ ತಲೆದೋರಿತು. ಸಾವಿತ್ರಬಾಯಿ ಜ್ಯೋತಿಬಾ ಫುಲೆಯವರು ಬರಗಾಲ ಪೀಡಿತರ ನೆರೆವಿಗೆ ಹಲವಾರು ಕೆಲಸ ಕಾರ್ಯಗಳನ್ನು ಸರ್ಕಾರ ಆರಂಭಿಸಬೇಕೆಂದು ಒತ್ತಾಯ ಮಾಡಿದರು. ಬರಗಾಲದ ಕಾಡ ತೀರಿತೆಂದು ನೆಮ್ಮದಿಯ ಉಸಿರೆಳೆಯುತ್ತಿದ್ದಂತೆ 1897ರಲ್ಲಿ ಪುಣೆಯಲ್ಲಿ ಭಯಂಕರ ಪ್ಲೇಗ್ ಹಾವಳಿ ಶುರುವಾಯಿತು. ಈ ಸೋಂಕು ಲೆಕ್ಕವೇ ಇಲ್ಲದಂತಾಯಿತು. ಆಗ ಡಾಕ್ಟರ್ ಯಶವಂತರು ಅನೇಕ ರೋಗಿಗಳ ಚಿಕಿತ್ಸೆಗೆ ನೆರವಾದರು. ಸಾವಿತ್ರಿಬಾಯಿ ಮನೆ ಮನೆಗೂ ಹೋಗಿ ರೋಗಿಗಳ ಪತ್ತೆ ಹಚ್ಚಿ ಚಿಕಿತ್ಸೆಗಾಗಿ ಡಾ॥ ಯಶವಂತರ ಬಳ ಕರೆದುಕೊಂಡು ಬರುತ್ತಿದ್ದರು. ಈ ಸೇವಾಕಾರ್ಯ ನಡೆಸುತ್ತಿದ್ದಾಗ ಸಾವಿತ್ರಿಬಾಯಿಗೂ ಸೋಂಕು ಜಾಡ್ಯ ತಗುಲಿತು. ಪ್ಲೇಗಿನ ಸೋಂಕು ತಗುಲಿ ಮಾರ್ಚ್ 10, 1897 ರಂದು ಭಾರತ ದೇಶದ ಮೊದಲ ಮಹಿಳಾ ಶಿಕ್ಷಕಿ ತೀರಿಕೊಂಡರು. ಈ ಒಂದು ಹನ್ನಲೆಯಲ್ಲಿ ಕರ್ನಾಟಕ ಸರ್ಕಾರ ಆಗಲಿ ಭಾರತ ಸರ್ಕಾರ ಆಗಲಿ ಇಲ್ಲಿಯವರೆಗೂ ಸಾವಿತ್ರಿಬಾಯಿ ಫುಲೆಯವರ ಜನ್ಮ ದಿನಾಚರಣೆ ಯಾಗಿ ಘೋಷಿಸಿದರೆ ಅರ್ಥಪೂರ್ಣವಾಗಬಲ್ಲದು. ಈ ನಿಟ್ಟಿನಲ್ಲಿ ಸರ್ಕಾರ ವೈಚಾರಿಕ ವಿಚಾರಗಳನ್ನು ಸಾರಿದ ಮಹಾತ್ಮ ಫುಲೆಯವರ ಶಿಕ್ಷಣದ ಅರ್ಥವನ್ನು ಇನ್ನಷ್ಟು ವಿಸ್ತರಿಸಬಹುದು.

ಆಧಾರ ಗ್ರಂಥಗಳು:

1) ಮಹಾತ್ಮ ಜ್ಯೋತಿರಾಮ ಫುಲೆ (ಮೂಲ ಮರಾಠಿ)– ಧನಂಜಯ ಕೀರ್, ಪಾಪ್ಯುಲರ್ ಪ್ರಾಕಾಶನ, ಮುಂಬೈ
2) ಮಹಾತ್ಮ ಫುಲೆ – ಮುರುಳಿಧರ ಜಗತಾಪ
3) ಮಹಾತ್ಮ ಜ್ಯೋತಿಬಾ ಫುಲೆ – ಬಿ. ಗೋಪಾಲ್
4) ಕನ್ನಡ ಪ್ರಮುಖ ದಿನಪತ್ರಿಕೆಗಳು.

'ಬೃಹತ್ ಅಭಿವೃದ್ಧಿ ಯೋಜನೆಗಳು'–ಅಭಿವೃದ್ಧಿಯ ಸಂಕೇತಗಳೇ?

ಶ್ರೀಮತಿ ಗಾಯತ್ರಿ.ಎಂ.ಎಸ್.ಡಬ್ಲ್ಯು
ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟುಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಬಳ್ಳಾರಿ

ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಆಧುನೀಕರಣ, ನಗರೀಕರಣ, ಔದ್ಯೋಗೀಕರಣ, ಪಾಶ್ಚ್ಯಾತೀಕರಣ, ಈ ಎಲ್ಲಾಆಧುನಿಕ ವಿದ್ಯಮಾನಗಳದ್ಯೋತಕವಾಗಿಇಂದುದೇಶದಲ್ಲೆಲ್ಲಾಅಭಿವೃದ್ಧಿಯ ಬೃಹತ್ ಯೋಜನೆಗಳು ವೇಗವಾಗಿ ತಲೆಯೆತ್ತುತ್ತಿವೆ.ಇವೆಲ್ಲಾಯೋಜನೆಗಳು ರಾಷ್ಟ್ರೀಯ ಹಿತಾಸಕ್ತಿಯ ಹೆಸರಲ್ಲಿ ಪ್ರಾರಂಭವಾಗುತ್ತವೆ.ದೇಶದಅಭಿವೃದ್ಧಿಯೇ ಈ ಯೋಜನೆಗಳ ಮೂಲಮಂತ್ರವಾಗಿರುತ್ತದೆ.ಸಣ್ಣದ್ದನ್ನು ಕಡೆಗಣಿಸಿ ಎಲ್ಲವನ್ನೂ ಬೃಹತ್ತಾಗಿಯೇ ನಿರ್ಮಾಣ ಮಾಡಿದರೆ ಮಾತ್ರಾದೇಶಅತೀ ವೇಗವಾಗಿ ಅಭಿವೃದ್ಧಿಯನ್ನು ಹೊಂದಬಹುದುಎಂಬುದು ಈ ಎಲ್ಲಾ ಯೋಜನೆಗಳ ಬಲವಾದ ನಂಬಿಕೆಯಾಗಿರುತ್ತದೆ.

ಬೃಹತ್‌ನಕಲ್ಪನೆಯನ್ನುಇಟ್ಟುಕೊಂಡಿರುವ ಭಾರತದಂತಹ ಮೂರನೇಜಗತ್ತಿನ ದೇಶಗಳುಕೂಡಾಅಭಿವೃದ್ಧಿಹೊಂದಿದರಾಷ್ಟ್ರಗಳ ಯೋಜನೆಯನ್ನು ಕಣ್ಣುಮುಚ್ಚಿಅನುಕರಣೆ ಮಾಡುತ್ತಿವೆ. ವಿದ್ಯುತ್‌ಗೆ ನಮ್ಮಲ್ಲಿ ಸಾಕಷ್ಟು ಬದಲಿ ಅವಕಾಶಗಳಿದ್ದರೂ ಇಂದು ಸಾಕಷ್ಟು ಬೃಹತ್ ಅಣೆಕಟ್ಟುಗಳು ನಮ್ಮದೇಶವನ್ನು ಜಲಾವೃತಗೊಳಿಸಿವೆ. ಸಾಕಷ್ಟು ಉಷ್ಣವಿದ್ಯುತ್ ಸ್ಥಾವರಗಳು, ಅಣುವಿದ್ಯುತ್ ಸ್ಥಾವರಗಳು ನಮ್ಮ ಪ್ರಕೃತಿಯನ್ನು ಹಾಗೂ ಅದನ್ನು ನಂಬಿಕೊಂಡು ಬಂದಿರುವಜನರನ್ನುತೂಗುಕತ್ತಿಯಡಿಗೆತಂದು ನಿಲ್ಲಿಸಿದೆ.ಪ್ರಾಣಿಗಳ ರಕ್ಷಣೆಯ ಹೆಸರಲ್ಲಿ ಪ್ರಾರಂಭವಾದರಾಷ್ಟ್ರೀಯ ಅಭಯಾರಣ್ಯಗಳು ಅಲ್ಲಿನ ಮೂಲನಿವಾಸಿಗಳ ಬದುಕನ್ನುಕಿತ್ತುಕೊಂಡಿದೆ.

ಜಾಗತೀಕರಣ, ಉದಾರೀಕರಣದಿಂದಾದ ಕೈಗಾರೀಕರಣದ ಅಟ್ಟಹಾಸದಲ್ಲಿ ನಮ್ಮ ದೇಶೀಯ ಅನ್ನದ ಸದ್ದುಅಡಗಿದೆ. ಇಲ್ಲಿನಕೌಶಲ್ಯರಹಿತಜನರಿಗೆಅನ್ನದ ಪ್ರಶ್ನೆಯೇದೊಡ್ಡ ಸವಾಲಾಗಿ ಬಿಟ್ಟಿದೆ.ಖಾಸಗೀಕರಣದಿಂದಾಗಿಇಂದು ಎಷ್ಟೋ ವಿದ್ಯಾವಂತರುಅರೆಉದ್ಯೋಗಿಗಳಾಗಿದ್ದಾರೆ.ಎಷ್ಟೋ ಬಡ ಮಕ್ಕಳು ಉನ್ನತವಿದ್ಯಾಭ್ಯಾಸದಿಂದ ವಂಚಿತರಾಗಿದ್ದಾರೆ.ನಗರೀಕರಣದಿಂದಾಗಿಎಲ್ಲೆಲ್ಲೂ ಪರಿಸರ ಮಾಲಿನ್ಯ ಹಾಗೂ ಪ್ರಕೃತಿಯ ನಾಶ ಇನ್ನೆಂದೂತುಂಬಲಾರದ ನಷ್ಟವಾಗಿ ಬಿಟ್ಟಿದೆ.ಪಾಶ್ಚಾತೀಕರಣದ ಈ ಎಲ್ಲಾ ಅವ್ಯವಸ್ಥೆಗಳು ನಮ್ಮ ದೇಶೀ ಚಿಂತನೆಯ ಸದ್ದಡಗಿಸಿಬಿಟ್ಟಿದೆ.ಇದರಿಂದಎಲ್ಲವೂ ವಿಪರೀತಕ್ಕೇರಿ ಯಾವುದನ್ನೂ ನಿಭಾಯಿಸಲಾರದಷ್ಟುದೊಡ್ಡಕಂಕಟವಾಗಿಇಂದು ನಮ್ಮ ಸಮಾಜವನ್ನು ಇಂಚು ಇಂಚಾಗಿ ಸುಡುತ್ತಿದೆ.

ನಿಜವಾಗಿಯೂ ನಮ್ಮಅಭಿವೃದ್ಧಿಯೆಂದರೆಇದೇನಾ?ಇವುಗಳಿಗೆ ಪರ್ಯಾಯ ವ್ಯವಸ್ಥೆಯಿಲ್ಲವೇ?ಈಗಾಗಿರುವ ಕೆಲವೊಂದು ತಪ್ಪುಗಳನ್ನು ಸರಿಪಡಿಸಿ

ಅವಕಾಶಗಳಿಂದ ವಂಚಿತರಾದ ಬಡಪಾಯಿಜನರಅನ್ನದ ಪ್ರಶ್ನೆಯನ್ನು ನೀಗಿಸಲಾಗುವುದಿಲ್ಲವೇ?ಪ್ರಕೃತಿಯ ಸಂರಕ್ಷಣೆ ಹಾಗೂ ದೇಶೀಯ ಬದುಕಿಗೆಒತ್ತುಕೊಡುವ ವಿಚಾರಗಳ ಬಗ್ಗೆ ಈ ಪ್ರಬಂಧದಲ್ಲಿಚರ್ಚಿಸಲಾಗುವುದು.ಅಭಿವೃದ್ಧಿ ಯೋಜನೆಗಳ ಎಲ್ಲಾರೀತಿಯಾದ ಸ್ಥಳಾಂತರಕ್ಕೆ ಪರ್ಯಾಯದ ಬಗ್ಗೆ ಈ ಪ್ರಬಂಧದಲ್ಲಿಚಿಂತನೆ ಮಾಡಲಾಗುವುದು.

*'ಎಷ್ಟು ಎತ್ತರವಾದರೇನು?ಹತ್ತಿರವಾಗದಿದ್ದರೆ'*ಇದು ಶ್ರೀ.ಶಂಕರ ದೇವನೂರು, ಯೋಜನಾ ಅಭಿಯಂತರರು, ಸೂಪಾ ,ಜಲಾಶಯ ಯೋಜನೆ ಉತ್ತರ ಕನ್ನಡ ಜಿಲ್ಲೆ ಇವರ ಉದ್ಗಾರ.ಯಾವುದೇ ಯೋಜನೆಗಳು ಎಷ್ಟು ದೊಡ್ಡದಿವೆ ಎನ್ನುವುದಕ್ಕಿಂತ ಮುಖ್ಯವಾಗಿ ಅವು ಜನರಿಗೆ ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿವೆ ಎನ್ನುವುದು ಬಹಳ ಗಂಭೀರವಾದ ವಿಚಾರ.ಯಾವುದೇ ಅಭಿವೃದ್ಧಿ ಯೋಜನೆ ಅದರ ಬಾಧಿತರಿಗೆ ಬೆಳಕು ಕೊಡುವಂತಿರಬೇಕು.ಕತ್ತಲೆಯಿಂದ ಬೆಳಕಿನೆಡೆಗೆ ಹೋಗುವುದು ದೊಡ್ಡದಲ್ಲ; ಕತ್ತಲೆಯನ್ನೇ ಬೆಳಕು ಮಾಡುವುದು ದೊಡ್ಡದು.ಪ್ರತಿಯೊಬ್ಬ ಸಂತ್ರಸ್ತರ ವಿಶ್ವಾಸವನ್ನು ತೆಗೆದುಕೊಂಡು ಯೋಜನೆಯನ್ನು ಮಾಡಬೇಕು ಎಂಬುದು ಅವರ ಬಲವಾದ ಆಶಯ.

೧೯೨೭ ರಲ್ಲಿ ಗಾಂಧೀಜಿಯವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು, ಇಲ್ಲಿನ ಪ್ರಯೋಗಾಲಯಕ್ಕೆ ಭೇಟಿ ಕೊಟ್ಟಾಗ ಎಲ್ಲವನ್ನೂ ನೋಡಿ ಖಿನ್ನರಾಗುತ್ತಾರೆ.ನಂತರ ಅವರು 'ನಾನು ಬರಬಾರದ ಜಾಗಕ್ಕೆ ಬಂದಿದ್ದೇನೆ ಈ ವಿಜ್ಞಾನ ರೈತರ ಹಿತವನ್ನು ಬಯಸಬೇಕು' ಎಂದು ಹೇಳುತ್ತಾರೆ.ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯು ರೈತರಿಗೆ ವರವಾಗಿ ಪರಿಣಮಿಸಬೇಕು. ವಿಜ್ಞಾನ, ತಂತ್ರಜ್ಞಾನ, ಬಂಡವಾಳ ಮತ್ತು ಬೃಹತ್ ಯೋಜನೆಗಳು ರೈತರ ಬದುಕನ್ನು ಕಿತ್ತುಕೊಳ್ಳುವ ಕೆಲಸ ಮಾಡಿದರೆ ಅಂತಹ ಜ್ಞಾನ ವಿಜ್ಞಾನವು ಸೈತಾನನ ಕಾರ್ಯಾಗಾರವಾಗುತ್ತದೆ ಎಂದು ಆ ದಿನಗಳಲ್ಲೇ ಗಾಂಧೀಜಿಯವರು ಅಭಿಪ್ರಾಯ ಪಟ್ಟಿದ್ದಾರೆ.ಆ ದೃಷ್ಟಿಯಿಂದಲೇ ಅವರು ಸದಾ ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಕರೆಕೊಡುತ್ತಿದ್ದರು.ಅದಲ್ಲದೇ ಪ್ರತಿಯೊಂದೂ ಗ್ರಾಮಗಳನ್ನು ಕೂಡಾ ಸ್ವಾವಲಂಬಿ ಗ್ರಾಮಗಳನ್ನಾಗಿಸುವುದು ಅವರ ಉದ್ದೇಶವಾಗಿತ್ತು.

೧೮೮೧ ರಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಶ್ರೀ.ಸಿ.ರಂಗ ಚಾರ್ಲುರವರು ಪ್ರಜಾಪ್ರತಿನಿಧಿ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಭಾರತದಲ್ಲಿ ಕೈಗಾರಿಕೆ ಮತ್ತು ಅದರ ಅಭಿವೃದ್ಧಿ ಅಗತ್ಯವನ್ನು ಒತ್ತಿ ಹೇಳಿದ್ದರು.ಯಾವುದೇ ದೇಶ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಸಮತೋಲನವನ್ನು ಸಾಧಿಸದೆ ಅಭಿವೃದ್ಧಿ ಪಥವನ್ನು ತುಳಿಯುವುದು ಕಠಿಣವೆಂಬುದು ಅವರ ಅಭಿಪ್ರಾಯವಾಗಿತ್ತು. ಸರ್.ಎಂ. ವಿಶ್ವೇಶ್ವರಯ್ಯ ರವರು ಕೂಡಾ ಈ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಗಮನಹರಿಸಿದ್ದಾರೆ. ಕೈಗಾರಿಕೆ, ವಾಣಿಜ್ಯ, ಶಿಕ್ಷಣ ಹಾಗೂ ಜನಪರ ಕಾರ್ಯಕ್ರಮಗಳ ಅನಿವಾರ್ಯತೆಯ ಬಗ್ಗೆ ಒತ್ತಿ ಹೇಳುತ್ತಾ, "ಆಧುನಿಕ ಬುದುಕಿನಲ್ಲಿ ಕೈಗಾರಿಕೆಗಳೇ ದೇಶದ ಪ್ರಗತಿ ಮತ್ತು ಅಭ್ಯುದಯಗಳ ಆಧಾರಸ್ಥಂಭ" ಎಂದು ಹೇಳಿದ್ದಾರೆ.ಹಾಗೂ ೧೯೧೧ರ ಮೇ ಐದರಂದು ಕಾವೇರಿ ಜಲಾಶಯದ ಯೋಜನಾ ವರದಿಯನ್ನು ಮಂಡಿಸುವ ಸಂದರ್ಭದಲ್ಲಿ ಯೋಜನೆಯ ನಿರೀಕ್ಷೆ ಮತ್ತು ಆಶಯಗಳ ಕುರಿತು ಈ ಯೋಜನೆಯು ಕಾರ್ಯರಂಭವಾಗುತ್ತಿದ್ದಂತೆ ರಾಜ್ಯದಲ್ಲಿ ಹೊಸ ಮೌಲ್ಯಗಳ, ಹೊಸ ಭರವಸೆಗಳ ನವ ಮನ್ವಂತರದ ಹೆಬ್ಬಾಗಿಲು ತೆರೆಯಲಿದೆ, ನೀರಾವರಿ ಯೋಜನೆಗಳಿಂದ ಅಭಿವೃದ್ಧಿಯ ಮಹಾಪೂರವೇ ಹರಿದು ಬರುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಟ್ಟು ಬೃಹತ್ ಯೋಜನೆಗಳೇ ದೇಶದ ಉದ್ಧಾರಕಗಳು ಎಂಬುದು ಅವರ ನಂಬಿಕೆಯಾಗಿತ್ತು ಅದಕ್ಕಾಗಿಯೇ ಅವರು ಸದಾ ಹಂಬಲಿಸುತ್ತಿದ್ದರು.ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಇಂತಹ ಯೋಜನೆಗಳ ಅಗತ್ಯತೆ ಆ ಕಾಲಮಾನಕ್ಕೆ ಬೇಕಾಗಿದ್ದಿರಬಹುದು.ಅಥವಾ ಅವರುಗಳು ಈ ರೀತಿಯಾದ ಬೃಹತ್ತಾದ ಯೋಜನೆಗಳು ಜನರಿಗೆ, ಸಮಾಜಕ್ಕೆ ಮಾರಕವಾಗಿ ಪರಿಣಮಿಸ ಬಹುದು ಎಂದು ಊಹಿಸಿರಲಿಕ್ಕಿಲ್ಲ ಎಂದೆನಿಸುತ್ತದೆ.

ಎರಡನೆಯ ಮಹಾಯುದ್ಧದ ನಂತರ ಹಲವಾರು ದೇಶಗಳು ವಸಾಹತುಶಾಹಿಗಳಿಂದ ಮುಕ್ತವಾಗಿ ಸ್ವಾತಂತ್ರ್ಯ ಗಳಿಸಿಕೊಂಡವು.ಶತ ಶತಮಾನಗಳ ವಸಾಹತುಶಾಹಿ ಆಡಳಿತದಿಂದ ಈ ದೇಶಗಳು ಅಭಿವೃದ್ಧಿ ಹೊಂದಿರಲಿಲ್ಲ. ಆದ್ದರಿಂದ ಸ್ವಾತಂತ್ರ್ಯ ನಂತರ ಈ ದೇಶಗಳಿಗೆ ಅಭಿವೃದ್ಧಿಯೇ ಆದ್ಯತೆಯ ವಿಷಯವಾಯಿತು.ಪ್ರಕೃತಿ ಒಂದು ಜೀವರಹಿತ ಜಡ ಪದಾರ್ಥ ಸಮೂಹ.ಅದನ್ನು ಮಾನವ ತನ್ನ ಸುಖವಿಲಾಸೀ ಸೌಲಭ್ಯಗಳನ್ನಾಗಿ ಪರಿವರ್ತಿಸುವುದೇ ನಾಗರೀಕತೆಯ ಮುಖ್ಯ ಲಕ್ಷಣ ಎಂಬರ್ಥದಲ್ಲಿ ಜ್ಞಾನಕ್ರಮಗಳು ಬೆಳೆಯುತ್ತಾ ಬಂದವು.ಯುರೋಪ್ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಾಡಿದ ಅಗಾಧ ಸಾಧನೆಯಿಂದ ತಾಂತ್ರಿಕವಾಗಿ ಅತಿ ಬೇಗ ಅಭಿವೃದ್ಧಿ ಹೊಂದಿತು.ಯಾಂತ್ರೀಕೃತ ಕೈಗಾರೀಕರಣದಿಂದ ಅವರ ಉದ್ಯಮಗಳು ಶರವೇಗದಲ್ಲಿ ಬೆಳೆದುನಿಂತು ಬಿಟ್ಟವು.ಯುರೋಪ್, ಜಗತ್ತಿನ ಕಣ್ಣಮುಂದೆ ಬಹುದೊಡ್ಡ ನಾಯಕನಾಗಿ, ಯಜಮಾನನಾಗಿ ರೂಪಾಂತರಗೊಂಡು ಬಿಟ್ಟಿತು.ಯುರೋಪಿನಲ್ಲಿ ಅಭಿವೃದ್ಧಿಯೆಂದರೆ ಬಂಡವಾಳದ ವಿಸ್ತೃತ ಬೆಳವಣಿಗೆ.ಕಡಿಮೆ ಮಾನವ ಸಂಪನ್ಮೂಲ, ಹೆಚ್ಚು ತಂತ್ರಜ್ಞಾನದ ಬಳಕೆಯಿಂದಾಗಿ ಅಲ್ಲಿನ ಬಂಡವಾಳಶಾಹಿಗಳು ಬೆಳಗಾಗುವ ಹೊತ್ತಿಗೆ, ಜಗತ್ತಿಗೇ ಅಭಿವೃದ್ಧಿಯ ಪಾಠ ಹೇಳುವ ತತ್ವಜ್ಞಾನಿಗಳಾಗಿ ಹೋದರು.ಮತ್ತು ಮೂರನೇ ಜಗತ್ತೆಂಬ ಜಗತ್ತಿಗೆ ಯುರೋಪ್ ಒಂದು ಮಾದರಿಯಾಗಿ, ಅಭಿವೃದ್ಧಿಯೆಂದರೆ, ಯುರೋಪ್ ಮಾದರಿಯೇ ಮಾದರಿ ಎಂಬಂತಾಗಿಬಿಟ್ಟಿತು. ಅದಕ್ಕೆ ತಕ್ಕಂತೆ ಯುರೋಪ್, ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ನಿಬ್ಬೆರಗಿನ ಸಾಧನೆ ಮಾಡಿತ್ತು.ಯುರೋಪಿನ ಈ ಅಭಿವೃದ್ಧಿ ಕಲ್ಪನೆಯೇ ಮೂರನೇ ಜಗತ್ತಿನ ರಾಷ್ಟ್ರಗಳಿಗೆ ಪರಮೋಚ್ಚ ಕಲ್ಪನೆಯಾಗಿ ಕಂಡು, ಯಥಾವತ್ತು ಅದನ್ನು ಮೂರನೇ ಜಗತ್ತಿನ ರಾಷ್ಟ್ರಗಳು ಅನುಸರಿಸಿದವು.ಬೃಹತ್ ಯೋಜನೆಗಳಿಗೆ ಸಾಲ ಕೊಡಲು ಅಮೇರಿಕ ನಿರ್ದೇಶಿತ ವಿಶ್ವಬ್ಯಾಂಕ್, ಐ.ಎಂ.ಎಫ್.ಗಳಂತಹ ಸಂಸ್ಥೆಗಳು ಬಾಗಿಲು ತೆರೆದು ಕೊಂಡು ಕುಳಿತವು.ಜಗತ್ತಿನ ವಿವಿಧ ರಾಷ್ಟ್ರಗಳು ಅಭಿವೃದ್ಧಿಯ ಗುರಿಗಳನ್ನು ಸಾಧಿಸಲು ಸತತ ಪ್ರಯತ್ನಗಳನ್ನು ನಡೆಸುತ್ತಾ ಬರಲಾರಂಭಿಸಿದವು. ಜಗತ್ತಿನಾದ್ಯಂತ ಬಂಡವಾಳಶಾಹಿ ವಿಸ್ತೃತಗೊಳ್ಳಲಾರಂಭಿಸಿತು.

ವಸಾಹತ್ತೋತ್ತರ ಭಾರತ ಕೂಡಾಈ ಬೃಹತ್ ಅಭಿವೃದ್ಧಿ ಯೋಜನೆಗಳ ಅನುಕರಣೆಯನ್ನು ಮಾಡಲಾರಂಭಿಸಿತು.ಸ್ವತಂತ್ರ ಭಾರತದಲ್ಲಿ ರಾಷ್ಟ್ರೀಯ ಅಭಿವೃದ್ಧಿಯನ್ನು 'ಆರ್ಥಿಕ ಅಭಿವೃದ್ಧಿ' ಹಾಗೂ 'ಮಿಗುತಾಯ' ಎಂದು ಸಮೀಕರಿಸಲಾಗಿದೆ. ಬೃಹತ್, ಕೇಂದ್ರೀಕೃತ ಕೈಗಾರಿಕೆಗಳು, ನೀರಾವರಿ ಯೋಜನೆಗಳು ರಾಷ್ಟ್ರದ ಅಭಿವೃದ್ಧಿಯ ಸಂಕೇತಗಳಾಗಿವೆ. ಭಾರತದ ಪ್ರಥಮ ಪ್ರಧಾನ ಮಂತ್ರಿ ಪಂಡಿತ್ ಜವಹರಲಾಲ್ ನೆಹರೂರವರು

೧೯೪೮ ರಲ್ಲಿ ಭಾರತದ ಪ್ರಥಮ ಪ್ರಮುಖ ನದಿ ಕಣಿವೆ ಯೋಜನೆಯಾದ ಒರಿಸ್ಸಾದ ಹಿರಾಕುಡ್ ಅಣೆಕಟ್ಟಿನ ಅಡಿಗಲ್ಲು ಹಾಕುವ ಸಂದರ್ಭದಲ್ಲಿ ಸ್ಥಳಾಂತರ ಆದವರಿಗೆ ಹೀಗೆ ಹೇಳುತ್ತಾರೆ–" If you are to suffer, you should suffer in the interest of the country"ಎಂದು ಅಂದರೆ ನೀವು ಕಷ್ಟ ಅನುಭವಿಸುತ್ತಿದ್ದಿರೆಂದರೆ ರಾಷ್ಟ್ರದ ಹಿತಕ್ಕಾಗಿ ನೀವು ಸಹಿಸಿಕೊಳ್ಳಲೇಬೇಕು ಅದೇ ರೀತಿ ಆಂಧ್ರ ಪ್ರದೇಶದ ನಾಗಾರ್ಜುನ ಸಾಗರ ಅಣೆಕಟ್ಟು ಉದ್ಘಾಟನಾ ಸಮಾರಂಭ ದಲ್ಲಿ 'ಅಣೆಕಟ್ಟುಗಳು ಭಾರತದ ಬೃಹತ್ ಜಾತ್ಯಾತೀತ ದೇವಾಲಯಗಳು' ಎಂದು ಜವಾಹರಲಾಲ್ ನೆಹರೂರವರು ಹೇಳುತ್ತಾರೆ.ಅಣೆಕಟ್ಟು, ಕಾರ್ಖಾನೆಗಳೇ ಆಧುನಿಕ ಭಾರತದ ಗುಡಿ ಗೋಪುರಗಳು ಎಂಬುದು ನೆಹರೂರವರ ಉದ್ಗಾರವಾಗಿತ್ತು.ಸ್ವಾತಂತ್ರ್ಯ ಬಂದ ಹೊಸತರಲ್ಲಿಯೇ ನೆಹರು ಹೀಗೆ ಹೇಳುತ್ತಾರೆ– 'ಯಾರು ವಿಜ್ಞಾನ–ತಂತ್ರಜ್ಞಾನಗಳ ಜೊತೆಗೆ ಸಂವಾದಿಸಬಲ್ಲರೋ ಅಂಥವರಿಗೆ ಮಾತ್ರಾ ಭವಿಷ್ಯವಿರುವುದು'ಈ ರೀತಿಯಾದ ಪ್ರಚೋದನಾಕಾರಿ ಮಾತುಗಳಿಂದ ಅವರು ಭಾರತವನ್ನು ಅಭಿವೃದ್ಧಿಯ ಕಡೆಗೆ ಒಯ್ಯುವಂತಹ ಬೃಹತ್ ಯೋಜನೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಡಲಾರಂಭಿಸಿದರು.ವಸಾಹತುಶಾಹಿಯ ಅಭಿವೃದ್ಧಿ ನೀತಿಯನ್ನೇ ಮಾದರಿಯನ್ನಾಗಿಟ್ಟುಕೊಂಡ ನೆಹರು, ಬೃಹತ್ ಯೋಜನೆ ಮಾತ್ರಾ ದೇಶದ ತೀವ್ರ ಅಭಿವೃದ್ಧಿಯನ್ನು ಸಾಧಿಸಬಲ್ಲವು ಎಂದು ನಂಬಿದ್ದರು.ಭಾರತದಲ್ಲಿ ಬೃಹತ್ ಅಭಿವೃದ್ಧಿ ಯೋಜನೆಗಳ ಹರಿಕಾರನಾಗಿ ಜವಹರಲಾಲ್‌ರವರು ಬಿಂಬಿತವಾದರು.

ಅಭಿವೃದ್ಧಿ ಎಂದರೆ ಬಹುದೊಡ್ಡ ಕಾರ್ಖಾನೆಗಳ ಸ್ಥಾಪನೆ, ಬೃಹತ್ ಅಣೆಕಟ್ಟುಗಳ ನಿರ್ಮಾಣ, ಬಂದರು ಮತ್ತು ಗಣಿಗಳ ಏಳಿಗೆ ಎಂದೇ ಭಾವಿಸಿರುವ ಭಾರತವು ಸ್ವತಂತ್ರ ಭಾರತದಲ್ಲಿ ಹಲವಾರು ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ನಿರ್ಮಾಣ ಮಾಡಲು ಪ್ರಾರಂಭಿಸಿತು. ೧೯೫೦ರ ನಂತರದ ದಶಕಗಳಲ್ಲಿ ಭಾರತದಲ್ಲಿ ನೀರಾವರಿ, ವಿದ್ಯುತ್ ಶಕ್ತಿ, ಹಾಗೂ ಕೈಗಾರಿಕಾ ಯೋಜನೆಗಳು ಭರದಲ್ಲಿ ಸಾಗಿದವು.ಈ ಎಲ್ಲಾ ಅಭಿವೃದ್ಧಿ ಯೋಜನೆಗಳು ಕೇವಲ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಯೋಜನೆಗಳಾಗಿವೆ. ಇವು ಕಡಿಮೆ ಖರ್ಚಿನಲ್ಲಿ, ಕಡಿಮೆ ಶ್ರಮದಲ್ಲಿ, ಕಡಿಮೆ ಸಮಯದಲ್ಲಿ, ಹೆಚ್ಚು ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಹೆಚ್ಚು ಸಂಪಾದನೆಮಾಡಿ ಹೆಚ್ಚು ಆದಾಯವನ್ನು ಗಳಿಸುವಂತಹ ಪ್ರಕ್ರಿಯೆಯಾಗಿದೆ.ಈ ಬೃಹತ್ ಯೋಜನೆಗಳಿಂದಾಗಿ ನಮ್ಮ ದೇಶದಲ್ಲಿ ಉತ್ಪಾದನೆ ಉನ್ನತಮಟ್ಟವನ್ನು ತಲುಪಿರಬಹುದು. ತಂತ್ರಜ್ಞಾನದಲ್ಲಿ ಕ್ರಾಂತಿ ಉಂಟಾಗಿರಬಹುದು. ಉದ್ಯೋಗಗಳು ಅಧಿಕವಾಗಿರಬಹುದು.ಸಮಾಜವು ಆಧುನಿಕಗೊಳ್ಳುತ್ತಿರಬಹುದು.ಆದರೆ ಈ ಸೂಚಿಗಳಲ್ಲಿನ ವರ್ಧನೆಯನ್ನು ಮಾತ್ರಾ ಅಭಿವೃದ್ಧಿ ಎಂದು ಪರಿಗಣಿಸುವುದು ಸರಿಯಲ್ಲ. ಅಭಿವೃದ್ಧಿಗೆ ವರಮಾನದಲ್ಲಿನ ಏರಿಕೆ, ಉತ್ಪಾದನೆಯಲ್ಲಿನ ವಿಸ್ತರಣೆ ಅಗತ್ಯ.ಆದರೆ ಅವುಗಳನ್ನೇ ಅಭಿವೃದ್ಧಿ ಯೆಂದು ಪರಿಗಣಿಸುವುದು ಉಚಿತವಲ್ಲ. ಇಂದಿನದು ಬಡವರನ್ನು ಕಡೆಗಣಿಸಿ, ಬಲಾಢ್ಯರ ಮತ್ತು ಪ್ರಭುತ್ವದ ಅಭಿವೃದ್ಧಿ ಪ್ರಕ್ರಿಯೆಯಾಗಿದೆ.ಈ ಮಾರುಕಟ್ಟೆ ನಿರ್ದೇಶಿತ ಬೃಹತ್ ಅಭಿವೃದ್ಧಿ ಯೋಜನೆಗಳಿಂದಾಗಿ ಸಾಮಾನ್ಯ ಜನರನ್ನು ಇನ್ನಷ್ಟು ಮತ್ತಷ್ಟು ತಳಸ್ತರಕ್ಕೆ ತಳ್ಳಲಾಗುತ್ತಿದೆ.ಈ ರೀತಿಯ ಬೃಹತ್ ಅಭಿವೃದ್ಧಿ ಯೋಜನೆಗಳು ತಳಸ್ತರದ ಜನರನ್ನು ಸೃಷ್ಟಿಸುವ ಸಾಂಸ್ಕೃತಿಕ ರಾಜಕೀಯವನ್ನು ಮಾಡುತ್ತಿವೆ.

ಹಾಗಾದರೆ ಅಭಿವೃದ್ಧಿ ಎಂದರೇನು ಎಂಬ ಮೂಲಭೂತವಾದ ಪ್ರಶ್ನೆ ನಮ್ಮೆಲ್ಲರನ್ನು ಕಾಡದಿರದು. ಅಭಿವೃದ್ಧಿಗೆ ನಿರ್ದಿಷ್ಟ ರೂಪ, ಅರ್ಥ, ವ್ಯಾಖ್ಯಾನ, ಸಿದ್ಧಾಂತಗಳಿಲ್ಲ. ಅಭಿವೃದ್ಧಿ ಎಂದರೇನು ಎನ್ನುವ ಪ್ರಶ್ನೆಗೆ ಯಾವೊಬ್ಬ ವಿದ್ವಾಂಸರಿಗೂ ಸರ್ವಸಮ್ಮತ ಹಾಗೂ ನಿರ್ದಿಷ್ಟವಾದ ಉತ್ತರ ನೀಡಲು ಸಾಧ್ಯವಾಗಿಲ್ಲ. ಯಾಕೆಂದರೆ ಅಭಿವೃದ್ಧಿಯೆಂಬುದು ವಿಸ್ತೃತವಾದ ಪರಿಭಾವನೆಯಾಗಿದೆ.ಸಮಾಜ ಶಾಸ್ತ್ರೀಯ ಅಧ್ಯಯನ ಕಾರರು, ಸಂಶೋಧಕರು, ವಿದ್ವಾಂಸರು ಮತ್ತು ವಿವಿಧ ಕ್ಷೇತ್ರಗಳ ತಜ್ಞರು ತಮ್ಮದೇ ಆದ ವಿಭಿನ್ನ ದೃಷ್ಟಿಕೋನಗಳಿಂದ ಅಭಿವೃದ್ಧಿ ಪದದ ಅರ್ಥ ವಿವರಣೆಯನ್ನು ನೀಡಲು ಪ್ರಯತ್ನಿಸಿದ್ದಾರೆ.ಅಭಿವೃದ್ಧಿ ಪದದ ಅರ್ಥ ವಿವರಣೆ, ವಿಶ್ಲೇಷಣೆಗಳು ಅಭಿವೃದ್ಧಿಯ ಗುರಿ ಮತ್ತು ಮಾದರಿಗಳ ಮೇಲೆ ಅವಲಂಬಿತವಾಗಿರುತ್ತವೆ. ಹಾಗೆಯೇ ಅಭಿವೃದ್ಧಿ ಭೌತಿಕ ಅಥವಾ ಆರ್ಥಿಕ ಕೇಂದ್ರೀಕೃತವಾಗಿದೆಯೇ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ.ಅಮರ್ತ್ಯಸೇನ್ ಪ್ರಕಾರ ಶಿಕ್ಷಣ, ಸಾಕ್ಷರತೆ, ಆರೋಗ್ಯ, ಮಕ್ಕಳ ಮತ್ತು ಮಹಿಳೆಯರ ಪೌಷ್ಟಿಕತೆ, ಲಿಂಗಸಮಾನತೆ, ಆಹಾರ ಭದ್ರತೆ ಅಭಿವೃದ್ಧಿಯ ಮಾನದಂಡಗಳಾಗಿವೆ.ಎವರೆಟ್ ರೋಜರ್ಸ್‌ರವರ ಪ್ರಕಾರ 'ಒಂದು ದೇಶದ ಜನರ ಕಲ್ಯಾಣ ಮತ್ತು ಸಾಮಾನ್ಯ ಪ್ರಗತಿಗಾಗಿ ಮಾನವ ಹಾಗೂ ಸಂಪನ್ಮೂಲಗಳನ್ನು ಬಳಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸುವುದು ಹಾಗೂ ಸೇವೆಗಳನ್ನು ಉತ್ತಮಪಡಿಸುವುದುಅಭಿವೃದ್ಧಿಯಾಗಿರುತ್ತದೆ. ಅಭಿವೃದ್ಧಿಯೆಂದರೆ ಕೇವಲ ತಂತ್ರಜ್ಞಾನದ ಬೆಳವಣಿಗೆ ಅಥವಾ ರಾಷ್ಟ್ರೀಯ ಉತ್ಪನ್ನದ ಹೆಚ್ಚಳವಲ್ಲ. ಅಭಿವೃದ್ಧಿಯ ಪರಿಕಲ್ಪನೆ 'ಆರ್ಥಿಕ ಅಭಿವೃದ್ಧಿ'ಯಿಂದ ವಿಸ್ತೃತಗೊಂಡು 'ಸಾಮಾಜಿಕ–ಆರ್ಥಿಕ ಅಭಿವೃದ್ಧಿ' ಹಾಗೂ 'ಮಾನವ ಅಭಿವೃದ್ಧಿ'ಯನ್ನು ಒಳಗೊಂಡಿದೆ.ಅಭಿವೃದ್ಧಿ ಎಂದರೆ 'ಒಂದು ಸಮಾಜದ ಜೀವನಮಟ್ಟವನ್ನು ಸುಧಾರಿಸುವುದು' ಎನ್ನಬಹುದಾಗಿದೆ. 'ಲಭ್ಯವಿರುವ ತಂತ್ರಜ್ಞಾನ ಹಾಗೂ ಸ್ಥಳೀಯ ಸಂಪನ್ಮೂಲಗಳನ್ನು ಇತಿಮಿತಿಯಲ್ಲಿ ಬಳಸಿಕೊಳ್ಳುವುದರಿಂದ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ'. ಅಭಿವೃದ್ಧಿಯೆಂದರೆ ಬದುಕನ್ನು 'ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಅವಕಾಶಗಳ ಆಯ್ಕೆಯ ವ್ಯಾಪ್ತಿಯನ್ನು ವಿಸ್ತೃತಗೋಳಿಸುವು ದಾಗಿದೆ.ಅಭಿವೃದ್ಧಿಯೆಂಬುದು ವರಮಾನ, ಉತ್ಪಾದನೆ, ಅನುಭೋಗ, ಬಂಡವಾಳ ಮುಂತಾದುವುಗಳನ್ನು ಒಳಗೊಂಡ ಪ್ರಕ್ರಿಯೆ ಮಾತ್ರವಾಗಬಾರದು.ಅದು ಜನರ ಭಾವನೆಗಳನ್ನು, ಅವರ ಮನಸ್ಸನ್ನು, ಜನರ ವಿದ್ವತ್ತನ್ನು, ಜನರ ಕುಶಲತೆಯನ್ನು, ಜನರ ಕರ್ತೃತ್ವವನ್ನು ಒಳಗೊಂಡ ಪ್ರಕ್ರಿಯೆಯಾಗಬೇಕು ಎಂದು ಅಭಿವೃದ್ಧಿ ತಜ್ಞರಾದ ಡಾ.ಟಿ.ಆರ್.ಚಂದ್ರಶೇಖರರವರು ಅಭಿಪ್ರಾಯಪಟ್ಟಿದ್ದಾರೆ. ಅಭಿವೃದ್ಧಿ ಯೊಂದು ಎಲ್ಲರ ಉದ್ಧಾರಕ್ಕಾಗಿ ಇರುವ ಪ್ರಕ್ರಿಯೆ. ಸಮಾಜವಾದಿ ಸಮಾಜದ ರಚನೆ ಅಭಿವೃದ್ಧಿಯ ಮೂಲಗುರಿಯಾಗಬೇಕೆಂದು ಸಂವಿಧಾನ ರಚನಾ ಸಮಿತಿಯು ೧೯೪೮ರಲ್ಲೇ ತೀರ್ಮಾನಿಸಿದೆ.ನಮ್ಮ ಸಂಪನ್ಮೂಲಗಳು ಕೆಲವರ ಸ್ವಾಧೀನ ಸಂಗ್ರಹವಾಗುವ ಬದಲು ಸಮಾಜದ ಎಲ್ಲರಿಗೂ ಗೌರವಾನ್ವಿತ ಬದುಕು ಕಲ್ಪಿಸುವ ರೀತಿಯಲ್ಲಿ ನಮ್ಮ ಅರ್ಥವ್ಯವಸ್ಥೆಯನ್ನು ಸಂಘಟಿಸಬೇಕೆಂದು ಸಂವಿಧಾನ ಸೂಚಿಸಿದೆ.ವರಮಾನದ ಏರಿಕೆಯೇ ಅಭಿವೃದ್ಧಿಯಲ್ಲ.

ಆದರೆ ಇಂದು ಸರ್ಕಾರ ಹಾಗೂ ಪ್ರಭುತ್ವವು ಸಣ್ಣದು ಸುಂದರ ಎಂಬುದನ್ನು ಮರೆತು ಪ್ರತಿಯೊಂದಕ್ಕೂ ಬೃಹತ್ತಾದ ಯೋಜನೆಗಳನ್ನು ಯೋಚಿಸಿ ನಿರ್ಮಾಣ ಮಾಡುತ್ತಿದೆ.ಇವೆಲ್ಲಾ ಪ್ರಕೃತಿಯನ್ನು ಅವಲಂಬಿಸಿರುವ ಯೋಜನೆಗಳು.ಪ್ರಾಕೃತಿಕ ಸಂಪನ್ಮೂಲಗಳು ಹೇರಳವಾಗಿರುವಂತಹ ಅದೆಷ್ಟೋ ಪ್ರದೇಶಗಳು ಕೈಗಾರಿಕಾ ಸ್ಥಾಪನೆಗೆ ಹಾಗೂ ಜಲವಿದ್ಯುದಾಗಾರ ಯೋಜನೆಗಳ ಸ್ಥಾಪನೆಗೆ ಆಶ್ರಯ

ತಾಣಗಳಾಗಿವೆ.ವಿದ್ಯುತ್ ಉತ್ಪಾದನೆಗಾಗಿ ದೊಡ್ಡ ದೊಡ್ಡ ಅಣೆಕಟ್ಟುಗಳ ನಿರ್ಮಾಣ, ಉಷ್ಣವಿದ್ಯುತ್ ಸ್ಥಾವರ, ಅಣುವಿದ್ಯುತ್ ಸ್ಥಾವರಗಳನ್ನು ನಿರ್ಮಾಣ ಮಾಡಲಾಗಿದೆ. ಹಾಗೂ ಇದರಿಂದ ಉತ್ಪನ್ನವಾಗುವ ವಿದ್ಯುತ್‌ನ ಹೆಚ್ಚಿನ ಭಾಗವನ್ನು ಬಂಡವಾಳಶಾಹಿಗಳು ನಡೆಸುತ್ತಿರುವ ಎಲ್ಲಾ ರೀತಿಯ ಬೃಹತ್ ಉದ್ಯಮಗಳಿಗೆ ಹಾಗೂ ಅವರುಗಳು ನಿರ್ಮಿಸಿರುವ ಬೃಹತ್ ಬಂಗಲೆಗಳಿಗೆ ಪೂರೈಕೆಯಾಗುತ್ತದೆ.ಈ ರೀತಿಯ ಬೃಹತ್ ವಿದ್ಯುತ್ ಯೋಜನೆಗಳಿಂದಾಗಿ ಸಾಕಷ್ಟು ಜನ ಸ್ಥಳಾಂತರವಾಗಿ ತಮ್ಮ ಮೂಲನೆಲೆ ಹಾಗೂ ಬದುಕನ್ನು ಕಳೆದುಕೊಂಡಿದ್ದಾರೆ.

ಸ್ವಾತಂತ್ರ್ಯಬಂದಾಗಿನಿಂದಲೂ ಹಲವಾರು ಯೋಜನೆಗಳು ನಮ್ಮ ಭಾರತದಲ್ಲಿ ಸ್ಥಾಪನೆಯಾಗಿವೆ. ಅವು ಸರಕಾರದಯೋಜನೆಗಳಾಗಿರ ಬಹುದುಅಥವಾ ಖಾಸಗಿಯವರು ನಡೆಸುವಂತಹ ಯೋಜನೆಯಾಗಿರ ಬಹುದು ಸಾಮಾನ್ಯವಾಗಿ ಇವು ಸಮಾಜದ ಅಭಿವೃದ್ಧಿ ಹೆಸರಲ್ಲಿ ತಲೆಯೆತ್ತುತ್ತವೆ. ಎಲ್ಲಿ ಪ್ರಕೃತಿ ಸಂಪತ್ತು ಹೇರಳವಾಗಿರುತ್ತೋ ಅಲ್ಲಿ ಈ ಯೋಜನೆಗಳು ರಾರಾಜಿಸುತ್ತಿರುತ್ತವೆ. ಇಂತಹ ಯೋಜನೆಗಳಿಂದ ಅಲ್ಲಿನ ಮೂಲನಿವಾಸಿಗಳನ್ನು ಸ್ಥಳಾಂತರ ಮಾಡಲಾಗುತ್ತದೆ ಹಾಗೂ ಅಲ್ಲಿನ ಪ್ರಾಕೃತಿಕ ಪರಿಸರವನ್ನೂ ಸಹ ಬಲಿಕೊಡಲಾಗುತ್ತದೆ. ಯೋಜನೆ ಪ್ರಾರಂಭಮಾಡುವಾಗ ಅಲ್ಲಿನ ಜನರ ಹಾಗೂ ಪರಿಸರದ ಪುನರ್ವಸತಿ ಮತ್ತು ಪುನರ್ನಿರ್ಮಾಣ ಹಾಗೆಯೇಜನರ ಅಭಿವೃದ್ಧಿಯನ್ನು ಪರಿಗಣಿಸಿ ಹಲವಾರು ಯೋಜನೆಗಳನ್ನು ಹಾಕಲಾಗುತ್ತದೆ.ಆದರೆ ಒಂದು ಸಲ ಅಲ್ಲಿ ಯೋಜನೆ ಪ್ರಾರಂಭವಾದ ನಂತರ ಅಲ್ಲಿನ ವಸ್ತುಸ್ಥಿತಿ ಏನಾಗುತ್ತದೆ?ಆ ಯೋಜನೆಯ ಪ್ರಯೋಜನವನ್ನು ಅನುಭವಿಸುವವರು ಯಾರು?ಅಲ್ಲಿಂದ ಸ್ಥಳಾಂತರಗೊಂಡ ಮೂಲ ಜನರ ಬದುಕು ಏನಾಗುತ್ತದೆ?ಅಲ್ಲಿನ ಸ್ವಚ್ಛಂದ ಪರಿಸರದ ಅವನತಿ ಹೇಗಾಗುತ್ತದೆ ಎಂಬುದನ್ನು ವಸ್ತುನಿಷ್ಟವಾಗಿ ಅಧ್ಯಯನ ಮಾಡಿದರೆ ಈ ಯೋಜನೆಗಳು ಮಾಡಿದ್ದಾದರು ಏನು ಎಂಬುದು ಹಾಗೂ ಇವು ಯಾರನ್ನು ಎಷ್ಟು ಉದ್ಧಾರ ಮಾಡಿವೆ ಹಾಗೂ ಯಾರ ಬದುಕನ್ನು ಯಾವ ಪರಿಯಾಗಿ ಕಿತ್ತುಕೊಂಡಿವೆ?ಅಭಿವೃದ್ಧಿ ಯೋಜನೆಗಳ ಲಾಭ ಯಾರಿಗೆ ಸಿಗುತ್ತಿದೆ? ದುಸ್ಥಿತಿಯ ನೋವನ್ನು ಯಾರು ಅನುಭವಿಸುತ್ತಿದ್ದಾರೆ? ಎಂಬಿತ್ಯಾದಿ ಪರಿಣಾಮ ಬೆಳಕಿಗೆ ಬರುತ್ತದೆ.

ನಮ್ಮ ದೇಶ ಅಳವಡಿಸಿಕೊಂಡಿರುವುದು ಯಜಮಾನಿಕೆಯಲ್ಲಿರುವ ಅಭಿವೃದ್ಧಿ ದೇಶಗಳ ಅಭಿವೃದ್ಧಿ ಚಿಂತನೆಗಳನ್ನು.ಇದು ಪಶ್ಚಿಮದ ಅಭಿವೃದ್ಧಿ ಮಾದರಿಯ ಅನುಕರಣೆಯಾಗಿದೆ.ಪಶ್ಚಿಮದ ಅನುಕರಣೆ ಪಾಶ್ಚಿಮಾತ್ಯ ಗುಣವನ್ನೇ ಬಿತ್ತುತ್ತದೆ.ನಮ್ಮ ರಾಷ್ಟ್ರೀಯತೆಯ ಗುಣ ಪ್ರಾಪ್ತವಾಗುವುದಿಲ್ಲ. ಹಲವರನ್ನು ನಿರ್ಗತಿಕರನ್ನಾಗಿ ಮಾಡಿ ಕೆಲವರಿಗೆ ಮಾತ್ರಾ ಉತ್ತಮ ಬದುಕು ನೀಡುವ ಬೃಹತ್ ಅಭಿವೃದ್ಧಿ ಮಾದರಿ ಇದಾಗಿದೆ.ಆದರೆ ಭಾರತದಂತಹ ಪ್ರಕೃತಿ ಸಂಪದ್ಭರಿತವಾದ, ಹಳ್ಳಿಗಳ ಕೌಶಲ್ಯಗಳಿಂದ ಕೂಡಿರುವ, ಯಥೇಚ್ಛವಾಗಿ ಮಾನವ ಸಂಪನ್ಮೂಲಗಳನ್ನು ಹೊಂದಿರುವ ದೇಶಗಳ ಸಮಗ್ರ ಅಭಿವೃದ್ಧಿಗೆ ಈ ವಿದೇಶದ ಅಭಿವೃದ್ಧಿ ಮಾದರಿಗಳು ಯಾವ ರೀತಿ ಪೂರಕವಾಗಲು ಸಾಧ್ಯ?ನಮ್ಮ ದೇಶದಲ್ಲೇ ಸಂಪತ್ತು, ಕಲಾಕೌಶಲ್ಯ, ಮುಂತಾದ ಸಂಪನ್ಮೂಲಗಳ ಸದ್ಬಳಕೆ ಮಾಡಿಕೊಂಡು ಅಭಿವೃದ್ಧಿ ಮಾಡುವುದನ್ನು ಬಿಟ್ಟು ವಿದೇಶಿ ಅಭಿವೃದ್ಧಿ ನೀತಿಯಿಟ್ಟುಕೊಂಡು ನಮ್ಮ ದೇಶದ, ಜನರ ಅಭಿವೃದ್ಧಿ ಮಾಡಲು ಸಾಧ್ಯವೇ?ಈ ಆಮದಿತ ಜ್ಞಾನವು ದೇಶೀ ಜ್ಞಾನವನ್ನು, ಜನರನ್ನು ತಮ್ಮದೇ ಪರಿಸರಕ್ಕೆ ಪರಕೀಯವಾಗಿಸಿದೆ.ನಮ್ಮ ದೇಶದ ಕೆಳವರ್ಗದ ಜನರ ಸಾಂಸ್ಕೃತಿಕ ಸಂಪನ್ಮೂಲಗಳನ್ನು ಮೂಲೆಗುಂಪಾಗಿಸಿದೆ.ನಮ್ಮ ಸಾಂಸ್ಕೃತಿಕ ಸಂಪನ್ಮೂಲಗಳನ್ನು ಮೇಲ್ವರ್ಗಗಳ ಆಸಕ್ತಿಗಳನ್ನು ಪ್ರತಿಪಾದಿಸಲು ಬಳಸಿಕೊಳ್ಳಲಾಗುತ್ತಿದೆ.ಇದರಿಂದಾಗಿ ತಳಸ್ತರದ ಜನರು ಉತ್ತಮ ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ನೀರು ಮುಂತಾದವುಗಳಿಗೆ ಪರದಾಡುವಂತಾಗಿದೆ.ನಮ್ಮ ಸಮಾಜದ ಬಹುದೊಡ್ಡ ವರ್ಗ ಸಂಪನ್ಮೂಲಗಳಿಂದ ವಂಚಿತವಾಗಿದೆ. ನಮ್ಮ ಬಡ ಜನರು ಆರ್ಥಿಕ ಸಮಾನತೆ, ಸ್ವಾತಂತ್ಯವನ್ನು ಹೊಂದದೇ ಮತದಾನದ ಹಕ್ಕನ್ನು ಮಾತ್ರಾ ಹೊಂದಿದ್ದಾರೆ ಎನ್ನುವ ಮಾತ್ರಕ್ಕೆ ಅವರು ರಾಜಕೀಯ ಸಮಾನರೆನ್ನಲು ಸಾಧ್ಯವೇ?.

ಇಂದಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ದಿನಮಾನದಲ್ಲಿ ಬಂಡವಾಳಶಾಹಿಗಳಿಗೆ, ವಿದೇಶಿ ಬಂಡವಾಳಕ್ಕೆ ಅವಕಾಶ ನೀಡುತ್ತಿರುವ ಸಂದರ್ಭದಲ್ಲಿ ಸರ್ಕಾರಗಳಿಗೆ, ರಾಜಕೀಯ ಪಕ್ಷಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ಜನರ ಹಸಿವು, ಅವರ ದುಡಿಮೆ, ಆದ್ಯತೆಯ ಸಂಗತಿಯಾಗುವುದು ಸಾಧ್ಯವಿಲ್ಲ. ಅದಕ್ಕೆ ಪ್ರತಿಯಾಗಿ ಅವರಿಗೆ ಬಂಡವಾಳಶಾಹಿ ಕಂಪನಿಗಳು ಲಾಭ ಮಾಡಿಕೊಳ್ಳಲು ಅಗತ್ಯವಾದ ವಾತಾವರಣವನ್ನು ಹೇಗೆ ನಿರ್ಮಿಸಿಕೊಡುವುದು, ಅವುಗಳಿಗೆ ಅಗತ್ಯವಾದ ನೀತಿಗಳನ್ನು ಹೇಗೆ ರೂಪಿಸುವುದು, ಅವುಗಳಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಉಚಿತವಾಗಿ ಮತ್ತು ಅನಿರ್ಬಂಧಿತವಾಗಿ ಹೇಗೆ ಒದಗಿಸುವುದು ಎಂಬ ಸಂಗತಿಗಳು ಇಂದು ಸರ್ಕಾರಗಳ ಆದ್ಯತೆಯ ಸಂಗತಿಗಳಾಗಿವೆ. ದೊಡ್ಡ ಉದ್ದಿಮೆಗಳು ಉದ್ಧಾರವಾದರೆ ನಮ್ಮ ಸಮಾಜವೇ ಉದ್ಧಾರವಾಗುತ್ತದೆಯೆಂದು ಸರ್ಕಾರ ಬಲಾಢ್ಯರಿಗೆ ನೀರು, ಭೂಮಿ, ಹಣಕಾಸು, ಕಚ್ಚಾಸಾಮಾಗ್ರಿ, ಮಾನವ ಸಂಪನ್ಮೂಲ ಎಲ್ಲವನ್ನೂ ಸಾಧ್ಯವಾದಷ್ಟು ಉಚಿತವಾಗಿ ಹಾಗೂ ಕಡಿಮೆ ದರದಲ್ಲಿ ನೀಡುತ್ತಿದೆ.ಆಸ್ಟ್ರೀಯಾದ ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರ್‌ಡಾಲ್‌ರವರು ೧೯೭೪ರಲ್ಲಿ ಬರೆದ 'ದ ಏಷಿಯನ್ ಡ್ರಾಮಾ' ಪುಸ್ತಕದಲ್ಲಿ "ಭಾರತ ದೇಶದಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಧಿಕಾರವೆಲ್ಲವೂ ಉಳ್ಳವರ ಬಳಿ ಕೇಂದ್ರೀಕೃತವಾಗಿದೆ. ಈ ಜನಕ್ಕೆ ತಮ್ಮ ಕುರ್ಚಿಯ ಮೇಲಿನ ವ್ಯಾಮೋಹ ಬಿಟ್ಟರೆ, ತಮ್ಮ ಜನರ ಬದುಕನ್ನು ಮೇಲೆತ್ತಲು ಯಾವ ಆಸಕ್ತಿಯೂ ಇಲ್ಲ. ಈ ದೇಶದಲ್ಲಿ ಸಿದ್ಧವಾಗುವ ಯೋಜನೆಗಳು, ಕೈಗೊಳ್ಳುವ ಸಾಮಾಜಿಕ ಸುಧಾರಣೆಗಳೆಲ್ಲವೂ ಬಡವರ ಹೆಸರಿನಲ್ಲಿ ಶ್ರೀಮಂತರಿಗೆ ಅನುಕೂಲವಾಗಿದೆ" ಎಂದು ತುಂಬಾ ಮಾರ್ಮಿಕವಾಗಿ ಬರೆಯುತ್ತಾರೆ. ಎಂಥಹ ವಿಪರ್ಯಾಸವಲ್ಲವೇ?ಸರ್ಕಾರ ಯಾವಾಗಲೂ ಉಳ್ಳವರ ಹಿತಾಸಕ್ತಿಯನ್ನು ಕಾಪಾಡುತ್ತದೆ.ಸರ್ಕಾರದ ಅಭಿವೃದ್ಧಿ ನೀತಿ ಸಾಮಾಜಿಕತೆಯಿಂದ ದೂರವಾಗಿದೆ.

ಸರಕು ಸೇವೆಗಳು ತಳಸ್ತರದ ಜನರಿಗೆ ತಲುಪದಿರುವುದು ಇಂದಿನ ಅಭಿವೃದ್ಧಿಯ ಮುಖ್ಯ ಸಮಸ್ಯೆಯೆಂದು ಪರಿಗಣಿಸಲಾಗಿದೆ.ಈ ರೀತಿಯ ಅಭಿವೃದ್ಧಿ ಯೋಜನೆಗಳಿಂದ ಗಳಿಸಿದ ಸಂಪನ್ಮೂಲದ ದೊಡ್ಡ ಭಾಗ ಮಧ್ಯಮ ಮತ್ತು ಶ್ರೀಮಂತರ ಅನುಭೋಗಕ್ಕೆ, ಅವರ ಆಸಕ್ತಿಗಳನ್ನು ಪೂರೈಸಲು ಬಳಕೆಯಾಗುತ್ತಿದೆ ಮತ್ತು ಅದು ಅವರಿಗೇ ಮೀಸಲಾಗಿದೆ. ಸಾಂಸ್ಕೃತಿಕ ರಾಜಕೀಯದಿಂದ ಕೆಳಸ್ತರದ ಜನರ ಭೂಮಿ, ದುಡಿಮೆ, ಬದುಕು ಕಿತ್ತುಕೊಂಡು ಸಂಪನ್ಮೂಲವನ್ನು ಬೃಹತ್ ಮಟ್ಟದಲ್ಲಿ ಶೋಷಿಸಿಕೊಂಡು ಬರುವ ಸಂಪನ್ಮೂಲವನ್ನು ಶ್ರೀಮಂತ ಜನರ ದೊಡ್ಡ ದೊಡ್ಡ ಉದ್ದಿಮೆಗಳಿಗೆ ಬಳಸಿಕೊಂಡು ಅವರು ಹೆಚ್ಚು

ಆದಾಯವನ್ನು ಗಳಿಸಿಕೊಳ್ಳುವಲ್ಲಿ ಇಂದಿನ ಅಭಿವೃದ್ಧಿ ಯೋಜನೆಗಳು ಪೂರಕವಾಗಿವೆ. ಶ್ರೀಮಂತರು ಅನುಭವಿಸುವ ಸರಕು ಸೇವೆಗಳ ಉತ್ಪಾದನೆ ಮೇಲೆ ರಾಷ್ಟ್ರೀಯ ಅಭಿವೃದ್ಧಿಯ ಹೆಸರಲ್ಲಿ ಬಂಡವಾಳ ವಿನಿಯೋಜನೆ ಮಾಡಲಾಗುತ್ತಿದೆ.

ಲಕ್ಷಗಟ್ಟಲೆ ಜನರನ್ನು ಸ್ಥಳಾಂತರ ಮಾಡಿಬಂಡವಾಳಶಾಹಿಗಳನ್ನು ಇನ್ನಷ್ಟು ಬಂಡವಾಳಿಗಳನ್ನಾಗಿ ಮಾಡುವ ಈ ಪ್ರಭುತ್ವ ಪ್ರೇರಿತಬೃಹತ್ ಅಭಿವೃದ್ಧಿ ಯೋಜನೆಗಳೇ ರಾಷ್ಟ್ರೀಯ ಅಭಿವೃದ್ಧಿಯ ಮಾದರಿಗಳಲ್ಲ. ಇದರ ಪ್ರಯೋಜನಗಳನ್ನು ಯಾವಾಗ ಸಾಮಾನ್ಯ ವರ್ಗದ ಜನರೂ ಕೂಡಾ ಅನುಭವಿಸಲು ಶಕ್ತರಾಗುತ್ತಾರೋ, ಯಾವಾಗ ಅವರು ಈ ಯೋಜನೆಗಳಿಂದ ಪ್ರಯೋಜನಗಳನ್ನು ಪಡೆದುಕೊಂಡು ತಮ್ಮ ಬಾಳನ್ನು ಹಸನಾಗಿಸಿಕೊಳ್ಳುತ್ತಾರೋ ಆವಾಗ ಈ ಅಭಿವೃದ್ಧಿ ಯೋಜನೆಗಳ ಸಾರ್ಥಕತೆಯಾಗುವುದು. ಇಲ್ಲವಾದಲ್ಲಿ ಈ ಅಭಿವೃದ್ಧಿ ಯೋಜನೆಗಳು ಬಡಪಾಯಿ ಜನಗಳಿಗೆ ಹೊರಲಾರದ ಭಾರವಾಗಿ ಪರಿಣಮಿಸುವುದು. ವ್ಯಕ್ತಿಯೊಬ್ಬ ತನಗೆ ಲಭ್ಯವಿರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳ ಬೇಕೆಂದರೆ ಅವನಿಗೆ ಮಾಹಿತಿ, ಶಿಕ್ಷಣ, ಕೌಶಲ್ಯ, ಪ್ರೇರಣೆ, ಸಾಮರ್ಥ್ಯ ಹಾಗೂ ಸ್ವಾತಂತ್ರ್ಯ ಅತೀ ಅಗತ್ಯ.ಆದರೆ ಈಗಿನ ಅಭಿವೃದ್ಧಿ ಯೋಜನೆಗಳು ಸಾಮಾನ್ಯ ಜನರ ಸ್ವಾತಂತ್ರ್ಯವನ್ನು ಹರಣ ಮಾಡಿವೆ. ಮಾನವ ಹಕ್ಕುಗಳ ಉಲ್ಲಂಘನೆ ಮಾಡಿವೆ. ಜನರ ಬದುಕನ್ನು ಇನ್ನಿಲ್ಲದಷ್ಟು ಬರಡು ಮಾಡಿವೆ. ಅವರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಬದುಕು ಹಾಗೂ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಅವರನ್ನು ತಮ್ಮ ನೆಲದಿಂದಹೊರದಬ್ಬಿ ಅನಾಥವನ್ನಾಗಿಸಿವೆ.ಕೈಗೆ ಸಿಕ್ಕ ವಸ್ತುಗಳನ್ನು ಹಿಡಿದುಕೊಂಡು ಅನಾಥವಾಗಿ ಅಲೆಮಾರಿಗಳಾಗಿ, ವಲಸಿಗರಾಗಿ ಬದುಕುವ ಪರಿಸ್ಥಿತಿ ಭೂಮಿ ತ್ಯಾಗ ಮಾಡಿದ ಸಂತ್ರಸ್ತರಿಗೆ ಬಂದೊದಗಿದೆ. ಊಟಕ್ಕೂ ಪರದಾಡುವ ಪರಿಸ್ಥಿತಿ ಈ ಸಂತ್ರಸ್ತರದ್ದು. ಇತಿಹಾಸದ ಪುಟ ತೆರೆದು ನೋಡಿದರೂ ಅಲ್ಲಿಯೂ ಕೂಡಾ ಅವರ ವಿಳಾಸವಿಲ್ಲದಷ್ಟೂ ಈ ಸಂತ್ರಸ್ತರು ಪರಕೀಯರಾಗಿದ್ದಾರೆ.ಈ ಯೋಜನೆಗಳಿಂದ ಸ್ಥಳಾಂತರವಾದ ಸಂತ್ರಸ್ತರಿಗೆ ಹಕ್ಕಿನ, ಘನತೆಯ, ಸ್ವಾತಂತ್ರ್ಯದ ಬದುಕು ಸಿಗಲಿಲ್ಲ. ಕೊನೇಪಕ್ಷ ನಮ್ಮ ಘನ ಸರ್ಕಾರ ಅವರಿಗೆ ಹಂಗಿನ ಬದುಕನ್ನು ಕೂಡಾ ನೀಡಲಿಲ್ಲ. ಬುಡ ಕಿತ್ತ ಅವರನ್ನು ಮತ್ತೆಲ್ಲೂ ನೆಲೆಗೊಳಿಸದಂತೆ ಎತ್ತಂಗಡಿ ಮಾಡಿರುವಸಾಕಷ್ಟು ಉದಾಹರಣೆಗಳು ಅಧ್ಯಯನಗಳಿಂದ ತಿಳಿದುಬರುತ್ತವೆ. ಸರ್ಕಾರ ದೊಡ್ಡ ದೊಡ್ಡ ಯೋಜನೆಗಳನ್ನು ನಿರ್ಮಿಸಿ ತನ್ನ ಇಂಜಿನಿಯರಿಂಗ್, ತಾಂತ್ರಿಕ ಕೌಶಲ್ಯ ಸಾಧನೆ ಬಗ್ಗೆ ಹೆಮ್ಮೆ ಪಡುತ್ತದೆ. ಆದರೆ ಅದರಿಂದ ನೆಲೆ ಹಾಗೂ ಬದುಕನ್ನೇ ಕಳೆದುಕೊಂಡ ಸಂತ್ರಸ್ತರ ಕಡೆಗೆ ಒಂದು ಅನುಕಂಪದ ದೃಷ್ಟಿಯೂ ಬೀರದೆ ಅವರನ್ನು ಖಾಯಂ ಸಂತ್ರಸ್ತರನ್ನಾಗಿ ಮಾಡಿಬಿಟ್ಟಿದೆ. ಬೃಹತ್ ಅಭಿವೃದ್ಧಿಯ ಸಾಧನೆಯ ಬಗ್ಗೆ ಹೆಚ್ಚು ಗಮನ ಕೇಂದ್ರೀಕರಿಸುವ ನಮ್ಮ ಸರ್ಕಾರ ಸಂತ್ರಸ್ತರ ಜೀವನ ಅಭಿವೃದ್ಧಿಯ ಸಾಧ್ಯತೆಯ ಬಗ್ಗೆ ಹೆಚ್ಚು ಗಮನ ನೀಡುವ ಅಗತ್ಯವಿದೆ. ಸಂತ್ರಸ್ತರು ಅನುಭವಿಸುತ್ತಿರುವ ಮಾನಸಿಕ ದುಗುಡಗಳು, ಕಳೆದುಕೊಂಡಿರುವ ಮನುಷ್ಯ ಸಂಬಂಧಗಳು, ಕಳೆದುಕೊಂಡಿರುವ ಮನೆ–ಮನಸ್ಥಿತಿಗಳು, ಸಾಮಾಜಿಕ ಸ್ಥಾನಮಾನವಿಲ್ಲದಿರುವುದು, ತಮಗೊಂದು ಗುರುತೇ ಇಲ್ಲದಿರುವುದು, ಜೀವನಕ್ಕೆ ಬೇಕಾಗಿರುವ ಪ್ರಾಥಮಿಕ ಸಂಪನ್ಮೂಲಗಳ ಕೊರತೆ, ದೇಶದ ಅಭಿವೃದ್ಧಿಗಾಗಿ ತಮ್ಮ ಅಭಿವೃದ್ಧಿಯ ಅವಕಾಶಗಳಿಂದ ವಂಚಿತ, ಛಿದ್ರ ಛಿದ್ರವಾಗಿರುವ ಸಂಬಂಧದ ಜಾಲ ಸರ್ಕಾರದ ಹಾಗೂ ಶ್ರೀಮಂತ ಜನರ ಗ್ರಹಿಕೆಗೂ ಸಿಗಲಾರದಷ್ಟು ಘನಘೋರವಾಗಿದೆ.ತಮ್ಮ ತಪ್ಪಿನಿಂದಾಗದ ಆ ಯಾತನಾಮಯ ಬದುಕು ಅವರಿಗೆ ಶಾಪವಾಗಿ ಕಾಡುತ್ತಿದೆ. ನಮ್ಮ ಪ್ರಜಾಪ್ರಭುತ್ವ ಭಾರತದಲ್ಲಿ ದೇಶದ ಅಭಿವೃದ್ಧಿಗಾಗಿರಬಹುದು ಅಥವಾ ಸಂತ್ರಸ್ತರ ಅಭಿವೃದ್ಧಿಗಾಗಿರಬಹುದು ಸಂಬಂಧಪಟ್ಟವರನ್ನು ಒಳಗೊಳ್ಳಿಸಲೇ ಇಲ್ಲ. ಎಲ್ಲವೂ ಪ್ರಭುತ್ವದ ಬಲಾತ್ಕಾರದ ನಡಿಗೆಯಾಗಿದೆ.ಸಂತ್ರಸ್ತರ ಬದುಕಿಗೆ ಯಾವ ರೀತಿಯ ಭದ್ರತೆ ಕೂಡಾ ಇಲ್ಲವಾಗಿದೆ. ಉತ್ಪಾದನೆಯೇ ಅಭಿವೃದ್ಧಿ ಎಂದೆನಿಸಿಕೊಂಡಿರುವ ನಮ್ಮ ಕಾರ್ಖಾನೆಗಳು ಸಂತ್ರಸ್ತರಿಗೆ ಅನ್ನದ ಉತ್ಪಾದನೆ ಮಾಡುವ ಅವಕಾಶವನ್ನು ಕೂಡಾ ಕೊಡಲಿಲ್ಲ. ಅಭಿವೃದ್ಧಿಯನ್ನು ಮಾನದಂಡಗಳಿಂದ ಅಳೆಯುವ ನಮ್ಮ ಸರ್ಕಾರ ನೆಲೆ ತ್ಯಾಗ ಮಾಡಿದವರಿಗೆ ಯಾವ ಮಾನ ಸಮ್ಮಾನವೂ ನೀಡಲಿಲ್ಲ. ಅವರ ಬದುಕು, ಬವಣೆ, ಬೆವರು, ಹಕ್ಕು ಇವನ್ನು ತಿರುಗಿ ನೋಡುವಷ್ಟು ಸಮಯ, ಸಮಾಧಾನ, ವ್ಯವಧಾನ ನಮ್ಮ ಸರ್ಕಾರಕ್ಕಿಲ್ಲ. ನಮ್ಮ ಪ್ರಭುತ್ವ ಸರ್ಕಾರವು ಸರಕು, ಸಾಮಾಗ್ರಿ, ತಂತ್ರಜ್ಞಾನ,ಉದ್ಯೋಗ, ವರಮಾನ,ಬಂಡವಾಳ, ಉಳಿತಾಯ, ಬಡ್ಡಿ ಇವನ್ನೇ ಅಭಿವೃದ್ಧಿಯ ಸಾಧನವನ್ನಾಗಿಸಿಕೊಂಡಿದೆ.ಅವುಗಳ ಅಭಿವೃದ್ಧಿಯೇ ಅಭಿವೃದ್ಧಿಯ ಮಾನದಂಡವನ್ನಾಗಿಸಿಕೊಂಡಂತೆ ಭಾಸವಾಗುತ್ತಿದೆ.ಆದರೆ ಸಂತ್ರಸ್ತರ, ಬಡ ಸಾಮಾನ್ಯ ಜನರ ದೃಷ್ಟಿಯಲ್ಲಿ ಎರಡು ಹೊತ್ತಿನ ಊಟ, ಮನೆ ಹಾಗೂ ಬಟ್ಟೆಯ ಲಭ್ಯತೆಯೇ ಅಭಿವೃದ್ಧಿಯ ಮಾನದಂಡವಾಗಿರುವುದು ಈ ಬೃಹತ್ ಯೊಜನೆಗಳ ಪರಿಣಾಮಗಳ ವಿಪರ್ಯಾಸವಾಗಿದೆ.ತಮ್ಮ ಪಾಡಿಗೆ ಸುಖ ಸಮೃದ್ಧಿಯಿಂದ ಬದುಕುತ್ತಿದ್ದ ಮುಗ್ಧ, ಅಸಹಾಯಕ ಜನರನ್ನು ಬುಡ ಸಮೇತ ಕಿತ್ತು ಬಿಸಾಡುವುದು ಶಿಷ್ಟ ಪರಂಪರೆಯ ಲಕ್ಷಣವೇ? ಭಾರತದಂತಹ ಸಾಂಸ್ಕೃತಿಕ ದೇಶಕ್ಕೆ ಇದು ಶೋಭೆಯೇ? ಇದು ನವ ಮನ್ವಂತರದ ಹೆಬ್ಬಾಗಿಲೇ.ನಮ್ಮ ಘನ ಕೇಂದ್ರ ಸರ್ಕಾರವಾದರೂ ನಮ್ಮ ದೇಶದ ಈವರೆಗಿನ ಸ್ಥಳಾಂತರಕ್ಕೆ ಕಾರಣವಾದ ಎಲ್ಲಾ ಯೋಜನಾ ಸಂತ್ರಸ್ತರಿಗೆಬದುಕು ಕಟ್ಟಿಕೊಡುವ ಕೈಂಕರ್ಯ ಮಾಡಿದರೆ ಸಂತ್ರಸ್ತರ ಬದುಕು ಸಂತಸ ಕಾಣಬಹುದು.ಸಂತ್ರಸ್ತರ ಬದುಕು, ಕಣ್ಣೀರು, ಅತಂತ್ರತೆ ಅವರಿಗಾಗಿರುವ ಅನ್ಯಾಯ ನಿಜವಾಗಿಯೂ ದೇಶಕ್ಕೆ ಮಾರಕವಾಗಿರುವುದು.ಇನ್ನು ಮುಂದೆ ನಮ್ಮ ದೇಶದಲ್ಲಿ ಜನರ ಸ್ಥಳಾಂತರಕ್ಕೆ ಕಾರಣವಾಗುವ ಯಾವುದೇ ಬೃಹತ್ ಯೋಜನೆಗಳನ್ನು ಮಾಡುವ ಅವಕಾಶ ಮಾಡಿಕೊಡದಿದ್ದರೆ ಒಳ್ಳೆಯದು.ದೇಶದ ಸಾಕಷ್ಟು ಜನರು ಈಗಾಗಲೇ ಇದರಿಂದ ನೊಂದು ಹೋಗಿದ್ದಾರೆ.

ನಮ್ಮ ಪ್ರಭುತ್ವ ವರಮಾನದ ಮೊತ್ತವೇ ಬದುಕು ಎಂದೆನಿಸಿಕೊಂಡಿದೆ. ಇಂದಿನ ಅಭಿವೃದ್ಧಿ ಪ್ರಕ್ರಿಯೆಯು ಅನುಭವಿಸಲಾರದ ಸಂಗತಿಯಾಗಿದೆ. ಅಗತ್ಯಕ್ಕಿಂತ ಹೆಚ್ಚಾಗಿ ಭೂಸ್ವಾಧೀನ ಮಾಡಿಕೊಂಡು ಮೂಲನಿವಾಸಿಗಳನ್ನು ಒಕ್ಕಲೆಬ್ಬಿಸುತ್ತಿದೆ.ಬೃಹತ್ ಅಭಿವೃದ್ಧಿಯ ಪ್ರಕ್ರಿಯೆ ಯೋಜನೆಯ ನಿರ್ಮಾಣಕ್ಕಾಗಲಿ, ಜನರ ಭೂಸ್ವಾಧೀನಗೊಳಿಸುವುದಕ್ಕಾಗಲೀ ಸಂತ್ರಸ್ತರನ್ನು ಸ್ಥಳಾಂತರಗೊಳಿಸುವುದಕ್ಕಾಗಲೀ ಸಂತ್ರಸ್ತರಲ್ಲಿ ಒಪ್ಪಿಗೆ ಪಡೆದುಕೊಳ್ಳುವುದಿಲ್ಲ. ಅವರನ್ನು ಈ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಒಳಗೊಳಿಸುವುದಿಲ್ಲ.ಈಗಿನ ಬೃಹತ್ ಅಭಿವೃದ್ಧಿ ಯೋಜನೆಗಳ ಪ್ರಕ್ರಿಯೆ ಸಂತ್ರಸ್ತರು ಅನುಭವಿಸಲಾರದ ಸಂಗತಿಯಾಗಿದೆ.ದೇಶಕ್ಕೆ, ಶ್ರೀಮಂತರಿಗೆ ಪ್ರತೀಪ್ಷೆಯ ದ್ಯೋತಕವಾಗಿದೆ.ಈ ಬೃಹತ್ ಯೋಜನೆಗಳಿಂದಾಗಿ ವರಮಾನದಲ್ಲಿ ಮತ್ತು ಉತ್ಪಾದನೆಯಲ್ಲಿ ಸಮೃದ್ಧಿ ಬರುತ್ತದೆ ನಿಜ. ಆದರೆ ಇದನ್ನು ಅನುಭವಿಸಲು ಬಡವರಿಗೆ ಹಲ್ಲಿರಬೇಕಲ್ವಾ?ಈ ಯೋಜನೆಗಳಿಂದಾಗಿ ಪ್ರಕೃತಿ ಬರಡಾಗಿದೆ ಹಾಗೂ ಅದನ್ನು ದಾನ ಮಾಡಿದ ಸಂತ್ರಸ್ತರ ಬದುಕು ಕೂಡಾ ಬರಡಾಗುತ್ತಾ ನಡೆದಿದೆ.ಸಂತ್ರಸ್ತರ

ಬದುಕು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದೆ.ಸಂತ್ರಸ್ತರ ಈ ಬದುಕು ನಮ್ಮ ಸಮಾಜಕ್ಕೆ ಶೋಭೆ ತರುವಂತಹ ವಿಚಾರವಲ್ಲ ವಿಷಯವಲ್ಲ.ಇಲ್ಲಿ ಜನರ ಭವಣೆಯನ್ನು ಯಾರೂ ಕೇಳುವವರಿಲ್ಲ ಎಂಬಂತಾಗಿದೆ.ದೇಶದ ಹೀನ ಸ್ಥಿತಿಗೆ ಇದು ಬಹುಮುಖ್ಯವಾದ ಸೂಚಿಯಾಗಿದೆ.ದೇಶದಲ್ಲಿ ಯೋಜನಾ ಸಂತ್ರಸ್ತರ ಸ್ಥಿತಿಯು ಏನೂ ಹೇಳದೇ ಇರುವುದು ಒಳ್ಳೆಯದು ಎನ್ನು ಸ್ಥಿತಿಯಲ್ಲಿದೆ.

ಅರ್ಜುನ್ ಸೆನ್ ಗುಪ್ತ ಹೇಳುವಂತೆ ಜಾಗತೀಕರಣದ ಲಾಭ ಪಡೆದುಕೊಳ್ಳುತ್ತಿರುವವರ ಪ್ರಮಾಣವು ಜನಸಂಖ್ಯೆಯ ಶೇ.೨೫ ಮೀರುವುದಿಲ್ಲ. ಈ ಮಾರುಕಟ್ಟೆ, ಈ ಜಾಗತೀಕರಣ ಈ ಉದಾರೀಕರಣ ನಮ್ಮ ಸಮಾಜದ ಶೇ.೭೫ ಜನರನ್ನು ಬದಿಗಿಟ್ಟೇ ನಡೆಯುತ್ತಿದೆ.ಭೌತಿಕ ಬಂಡವಾಳದ ಅಡಿಪಾಯವಿಲ್ಲದಿದ್ದರೆ ದೇಶದ ವರಮಾನ ಅಭಿವೃದ್ಧಿಯಾಗುವುದಿಲ್ಲ ನಿಜ. ಆದರೆ ಇದು ಲಕ್ಷಗಟ್ಟಲೆ ಸಂತ್ರಸ್ತರ ವರಮಾನವನ್ನು ಶಾಶ್ವತವಾಗಿ ಕಿತ್ತುಕೊಂಡದ್ದಂತು ಎಂದೂ ಸರಿಪಡಿಸಲಾರದ ಸ್ಥಿತಿ ತಲುಪಿದೆ.ವರಮಾನದ ಏರಿಕೆಯ ಜೊತೆಯಲ್ಲಿಯೇ ಬಡತನ, ಹಸಿವು, ಅನಾರೋಗ್ಯ, ಅಸಮಾನತೆ, ಮಾನವ ಹಕ್ಕುಗಳ ಉಲ್ಲಂಘನೆ ಮುಂತಾದವು ಜನರನ್ನು ಕಾಡುತ್ತಿವೆ. ಬೃಹತ್ ಅಭಿವೃದ್ಧಿ ಯೋಜನೆಗಳಿಂದ ಬಡತನ ನಿವಾರಣೆಯಾಗುವುದಿಲ್ಲ. ಬಹುದೊಡ್ಡ ಗಾತ್ರದ ಬಡತನ ಸೃಷ್ಟಿಯಾಗುತ್ತದೆ.

ಇಂದು ನಮ್ಮ ದೇಶದಲ್ಲಿ ಕೆಳಸ್ತರದ ಜನರು ಸಾಮಾಜಿಕ ಮೂಲಸೌಕರ್ಯಗಳಿಂದ ವಂಚಿತರಾಗಿದ್ದಾರೆ.ಯಾಕೆಂದರೆ ಈ ಸಾಮಾಜಿಕ ಮೂಲಸೌಕರ್ಯಗಳಾದ ವಸತಿ, ಕುಡಿಯುವ ನೀರು, ನೈರ್ಮಲ್ಯ, ಶಿಕ್ಷಣ, ಆರೋಗ್ಯ ಈ ಕ್ಷೇತ್ರಗಳ ಮೇಲೆ ಖಾಸಗಿ ಬಂಡವಾಳದ ಹೂಡಿಕೆಯಾಗುತ್ತಿದೆ.ಆದ್ದರಿಂದ ಜನಸಾಮಾನ್ಯರು ಮೂಲಸೌಕರ್ಯಗಳಿಂದ ವಂಚಿತರಾಗುತ್ತಿದ್ದಾರೆ.ಈ ರೀತಿಯ ಬೃಹತ್ ಅಭಿವೃದ್ಧಿ ಯೋಜನೆಗಳಿಂದ ಜನಸಾಮಾನ್ಯರಿಗೆ ದೂರಗಾಮಿ ಲಾಭಗಳಾಗುವುದಿಲ್ಲ.

ನನ್ನ ಅಧ್ಯಯನ ಕ್ಷೇತ್ರವಾದಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವಾರು ಗಣಿಗಾರಿಕೆಗಳು, ಕೈಗಾರಿಕೆಗಳು, ಅಣೆಕಟ್ಟುಗಳು, ಜಲವಿದ್ಯುಸ್ಥಾವರಗಳು, ಕೈಗಾ ಅಣುವಿದ್ಯುತ್ ಸ್ಥಾವರ, ಕೊಂಕಣ ರೈಲ್ವೇ, ಸೀ-ಬರ್ಡ್ ನೌಕಾನೆಲೆ, ಅಣಶಿ – ದಾಂಡೇಲಿ ಹುಲಿ ಅಭಯಾರಣ್ಯ, ನೀಲಗಿರಿ-ಸಾಗುವಾನಿ, ಅಕೇಶಿಯಾ ನೆಡುತೋಪುಗಳು ತಲೆಯೆತ್ತಿ ನಿಂತಿವೆ. ಇವೆಲ್ಲಾ ರಾಷ್ಟ್ರೀಯ ಅಭಿವೃದ್ಧಿಯ ಹಿತಾಸಕ್ತಿಯಲ್ಲಿ ಪ್ರಾರಂಭಿಸಲಾದ ಯೋಜನೆಗಳಾಗಿವೆ. ಆದರೆ ಇವು ಪ್ರಕೃತಿ ಸಂಪತ್ತು ಹೇರಳವಾಗಿ ದೊರೆಯುವಂತಹ ಪರಿಸರದಲ್ಲೇ ನಿರ್ಮಾಣವಾದುದು. ಇದರಿಂದಾಗಿಅಲ್ಲಿನ ಸಾಕಷ್ಟು ಪರಿಸರ ಹಾನಿಯಾಗಿದೆ.ಸಾಕಷ್ಟು ಜನರು ತಮ್ಮ ಮೂಲನೆಲೆಯನ್ನು ಕಳೆದುಕೊಂಡಿರುತ್ತಾರೆ.ಈ ಎಲ್ಲಾ ಯೋಜನೆಗಳುಅಭಿವೃದ್ಧಿಯ ಹೆಸರಲ್ಲಿ ತಲೆಯೆತ್ತಿದ್ದು ಹೌದಾದರೂ ಒಟ್ಟಾರೆಯಾಗಿ ಇದರಿಂದಾಗಿ ಜಿಲ್ಲೆಯ ಸಂತ್ರಸ್ತರಿಗಾದ ಪ್ರಯೋಜನ ವೇನು?

ಈ ಎಲ್ಲಾ ಬೃಹತ್ ಅಭಿವೃದ್ಧಿ ಯೋಜನೆಗಳಿಗಾಗಿ ಅದೆಷ್ಟು ಬಡ ಮೂಲನಿವಾಸಿಗಳು ತಮ್ಮ ಬದುಕು, ತಮ್ಮ ನೆಲವನ್ನು ಧಾರೆಯೆರೆದರೋ, ಅದೆಷ್ಟು ಜನ ಪರಿಹಾರ ಸಿಗದೇ ತಮ್ಮ ಮನಸ್ಥಿತಿ ಕೆಡಿಸಿಕೊಂಡು ಇಹಲೋಕ ತ್ಯಜಿಸಿದರೋ ಆ ನಷ್ಟವನ್ನು ಎಣಿಸಲಿಕ್ಕೂ ಆಗದು, ಗ್ರಹಿಸಲಿಕ್ಕೂ ಆಗುವುದಿಲ್ಲ ಹಾಗೂ ಮುಂದೆಂದೂ ಅದನ್ನು ಮತ್ತೆ ಭರಿಸಲಿಕ್ಕೂ ಆಗುವುದಿಲ್ಲ. ಆ ನೋವ ವೇದನೆ ಅನುಭವಿಸಿದ ಸಂತ್ರಸ್ತರ ಈಗಿನ ದೊಡ್ಡ ಆಸ್ತಿ ಏನೆಂದರೆ ಯೋಜನೆಯಿಂದ ಪ್ರಯೋಜನ ಪಡೆದುಕೊಂಡ ವ್ಯವಸ್ಥೆಯ ಸುಖವನ್ನು ದೂರದಿಂದ ನೋಡಿ ಅನುಭವಿಸುವುದಷ್ಟೇ ಆಗಿದೆ. ದೀಪದ ಕೆಳಗೆ ಕತ್ತಲು, ಆ ಕತ್ತಲಿನಲ್ಲೇ ಯಾರದೋ ಬರುವಿಕೆಗಾಗಿ ಕಾದು ಕುಳಿತಂತಿರುವ, ಯಾವುದರಲ್ಲೂ ಆಸಕ್ತಿ ಮತ್ತು ವಿಶ್ವಾಸವಿಲ್ಲದ ಜನ ನಮ್ಮ ಬದುಕು ಇಷ್ಟೇ ಅಂದುಕೊಂಡಿರುವುದನ್ನು ಅಲ್ಲಿದ್ದು ಅನುಭವಿಸಿದರೆ ನಮಗೂ ಅವರ ನೋವಿನ ಕಷ್ಟದ ಛಾಯೆ ತಟ್ಟುವುದು.ಎಲ್ಲಾ ರೀತಿಯಿಂದಲೂ ಸಂದಿಗ್ಧ ಬದುಕು ಅವರದು.ಮೂಲ ಬದುಕಿನಂತೆ ಅಲ್ಲಿ ಅವರು ಸಂತೋಷವಾಗಿ ಕಳೆಯುವಂತಿಲ್ಲ. ಎಲ್ಲಾ ರೀತಿಯ ಬಂಧನಗಳಿಗೆ ಅವರು ಅಲ್ಲಿ ಒಳಗಾಗುತ್ತಿದ್ದಾರೆ.ತನ್ನನ್ನು ತಾನು ರಕ್ಷಿಸಿಕೊಳ್ಳಲಾರದಂತಹ ಪರಿಸ್ಥಿತಿಗೆ ಸಿಲುಕಿ ಒದ್ದಾಡುತ್ತಿದ್ದಾರೆ. ಬೃಹತ್ ಅಭಿವೃದ್ಧಿ ಯೋಜನೆಗಳ ಅಭಿವೃದ್ಧಿ ಸಂಕೇತವಾಗಿ ಅಲ್ಲಿ ಸಂತ್ರಸ್ತರ ಬದುಕಿನ ಕರಾಳತೆ ನಾವು ಅಲ್ಲಿ ಹೋಗಿ ಅವರ ಜೊತೆಗೆ ಬದುಕಿದರೆ ಮಾತ್ರಾ ಅರಿವಾಗಬಹುದು. ಸಾಂಕೇತಿಕವಾಗಿ ಅವರು ತಮ್ಮ ಬದುಕಿನ ಎಲ್ಲಾ ಮಜಲುಗಳನ್ನು ದಬ್ಬುತ್ತಿದ್ದಾರೆ.ತನ್ನೆಲ್ಲಾ ಸಂತೋಷ, ಸಂಸಾರ, ಆಸ್ತಿ ಇವೆಲ್ಲವೂ ಅಭಿವೃದ್ಧಿ ಯೋಜನೆಗಳ ಗರ್ಭ ಸೇರಿ ಬಿಟ್ಟಿವೆ. ಬಹುಮುಖ್ಯವಾಗಿಕಾಳಿನದಿಯ ಜಲಾಶಯಗಳು ಸಾಕಷ್ಟು ಜನರ ಬದುಕನ್ನು ನುಂಗಿಬಿಟ್ಟಿವೆ. ಬಂಡವಾಳಶಾಷಿಯು ಬಡವರ ಬದುಕನ್ನು ವಿಘಟಿಸಿತು. ಸಂತ್ರಸ್ತರನ್ನಾಗಿಸಿ ಅವರು ಎಲ್ಲಾ ರೀತಿಯ ಮುಗ್ಗಟ್ಟುಗಳಿಂದ ಬದುಕು ಸಾಗಿಸುವಂತೆ ಮಾಡಿತು.ಇದು ವಾಸ್ತವ ಹಾಗೂ ಕಟು ಸತ್ಯ.ಆದರೆ ಸಂತ್ರಸ್ತರು ತಮ್ಮ ದೂರುಗಳನ್ನು, ಅಳಲನ್ನು ಹೇಳಿಕೊಳ್ಳುವುದು ಯಾರಲ್ಲಿ?

ಅಣಶಿ–ದಾಂಡೇಲಿ ಹುಲಿ ಅಭಯಾರಣ್ಯದ ವ್ಯಾಪ್ತಿಯಲ್ಲಿ ಬರುವ ಮೂಲನಿವಾಸಿಗಳ ಬದುಕು ಅತಂತ್ರ ಸ್ಥಿತಿಯಲ್ಲಿದೆ.ಆ ಕಾಡಿಗೆ ಹುಲಿಯ ಪ್ರವೇಶವಾಗುತ್ತಿದ್ದಂತೆಯೇ ಅಲ್ಲಿನ ಜನರು ಹೊರಗಡೆ ನಡೆಯುವುದು ಅನಿವಾರ್ಯವಾಗಿದೆ.ಒಂದಿಷ್ಟು ಹುಲಿಗಳ ಸಂರಕ್ಷಣೆಗಾಗಿ ಅಲ್ಲಿನ ಅದೆಷ್ಟೋ ಜನ ಕೊಡಬಹುದಾದಂತಹ ಒಂದಿಷ್ಟು ಪರಿಹಾರದ ಧನ ತೆಗೆದುಕೊಂಡು ಎಲ್ಲಿಗೆ ಹೋಗಬೇಕೋ ಗೊತ್ತಿಲ್ಲ. ಈ ದುಬಾರಿ ಯುಗದಲ್ಲಿ ಅವರು ಹೇಗೆ ಬದುಕು ಕಟ್ಟಿಕೊಳ್ಳಬೇಕೋ ಗೊತ್ತಿಲ್ಲ.

ನಾನು ಅಧ್ಯಯನ ಮಾಡುತ್ತಿರುವ ಸೂಪಾ ಜಲಾಶಯದ ಸಂತ್ರಸ್ತ ಕುಣಬಿಯರನ್ನೇ ಉದಾಹರಣೆಯಾಗಿ ತೆಗೆದುಕೊಂಡರೂ ಸಾಕು; ಬೃಹತ್ ಅಭಿವೃದ್ಧಿ ಯೋಜನೆಗಳಿಂದಾಗಿ ತಮ್ಮ ನೆಲ ಕಳೆದುಕೊಂಡ ಜನ ಯಾವ ರೀತಿ ಅತಂತ್ರ ಬದುಕು ಸಾಗಿಸುತ್ತಿದ್ದಾರೆ, ಬೃಹತ್ ಯೋಜನೆಗಳು ಯಾರ ಅಭಿವೃದ್ಧಿಯನ್ನು ಮಾಡಿವೆ ಎಂಬುದನ್ನು ತಿಳಿಯಲು. ಇದು ಬರೀ ಅವರ ಬದುಕಿನ ನೋವಲ್ಲ. ಪ್ರಾಯಶ: ನಮ್ಮ ದೇಶದ ಎಲ್ಲಾ ಬೃಹತ್ ಅಭಿವೃದ್ಧಿ ಯೋಜನೆಗಳಿಂದಲೂ ನೆಲ ಮತ್ತು ನೆಲೆ ಕಳೆದುಕೊಂಡ ಅಸಹಾಯಕ ಸಂತ್ರಸ್ತರ ಬದುಕಾಗಿದೆ ಎಂಬುದನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸರ್ಕಾರ ಯೋಜನೆಯನ್ನು ಅದರ ಲಾಭವನ್ನು ಉಣ್ಣಲು ಮಾತ್ರಾ ಹವಣಿಸುತ್ತಿರುತ್ತದೆ. ಅದರಿಂದ ತುತ್ತು ಕಳೆದುಕೊಂಡ ಜನರ ಉಪವಾಸದ ಬದುಕು ಅದಕ್ಕೆ ಗೊತ್ತೇ ಆಗುವುದಿಲ್ಲ. ಮೇಲಾಗಿ ಅದರ ಹಂಗೂ ಅದಕ್ಕಿಲ್ಲ. ಸೂಪಾ ಜಲಾಶಯದಪುನರ್ವಸತಿ ಕೇಂದ್ರದಲ್ಲಿ ಸಮರ್ಪಕವಾದ

ಮೂಲಭೂತ ಸೌಲಭ್ಯಗಳಿಲ್ಲ. ಮೂವತ್ತೈದು ವರ್ಷಗಳಿಂದ ಇಲ್ಲಿಯವರೆಗೂ ಅಲ್ಲಿ ಸೌಲಭ್ಯಗಳನ್ನು ನಿರ್ಮಿಸಲಾಗಿಲ್ಲ.ಸಂತ್ರಸ್ತರಿಗೆ ಮೂಲಭೂತ ಸೌಲಭ್ಯಗಳು ಗಗನಕುಸುಮವಾಗಿವೆ.ಜನರಿಗೆ ಅಲ್ಲಿ ಉದ್ಯೋಗದ ಅವಕಾಶಗಳೇ ಇಲ್ಲವಾಗಿದೆ.ಉದ್ಯೋಗದ ಅವಕಾಶಗಳು ಕೂಡಾ ವಿಸ್ತಾರಗೊಳ್ಳುವ ಸಾಧ್ಯತೆಗಳು ಅಲ್ಲಿ ಕಂಡುಬರುತ್ತಿಲ್ಲ. ಅವರಿಗೆ ನೀಡಿದ ಕೃಷಿ ಭೂಮಿ ಮಾರಾಟವಾಗಿದೆ.ಕೆಲವೊಂದು ಭೂಮಿ ಉಳುಮೆಯಿಲ್ಲದೇ ಪಾಳಾಗಿ ಬಿದ್ದಿದೆ.ಯಾಕೆಂದರೆ ಅಲ್ಲಿ ಬರೀ ಬೆಟ್ಟ, ಇಳಿಜಾರು, ಬಂಡೆ, ಕಲ್ಲು, ಮರಳು.ಮಣ್ಣಿಲ್ಲ ನೀರಿಲ್ಲ. ಒಂದು ವೇಳೆ ಕಷ್ಟಪಟ್ಟು ಏನಾದರೂ ಬೆಳೆ ಬೆಳೆದರೆ ಮಳೆಗಾಲದಲ್ಲಿ ಪಾಂಡರಿ ನದಿಯ ಮರಳು ಕೊಚ್ಚಿಕೊಂಡು ಹೋಗುತ್ತದೆ.ಬೆಳೆ ಪ್ರಾಣಿಗಳ ಪಾಲಾಗುತ್ತದೆ.ಅದಕ್ಕಾಗಿ ಸಾಕಷ್ಟು ಜನ ಅವರ ಭೂಮಿಯನ್ನು ಕಾನ್‌ಕೋನ್‌ಕರ್ ಕೋರೆಯವರಿಗೆ, ಹಾಗೂ ಇತರರಿಗೆ ಮಾರಿದ್ದಾರೆ. ರೆಡ್ಡಿ ಕಲ್ಲಿನ ಕೋರೆಯವರಿಗೆ ವಾರ್ಷಿಕ ೧೦,೦೦೦ರೂ ಗೆ ಬಾಡಿಗೆಗೆ ನೀಡುತ್ತಾರೆ. ಕೆಲವರು ಮಾತ್ರ ಕಬ್ಬು, ಗೋಡಂಬಿ ಬೆಳೆದಿರುತ್ತಾರೆ. ಹೆಚ್ಚಾಗಿ ಇಂದು ಇಲ್ಲಿ ಕೃಷಿಯನ್ನು ಮಾಡುವವರೇ ಇಲ್ಲದಂತಾಗಿದೆ. ಸಂತ್ರಸ್ತರು ಉದ್ಯೋಗಕ್ಕಾಗಿ ಗೋವಾ, ಮಹಾರಾಷ್ಟ್ರಕ್ಕೆ ಹೋಗಿದ್ದಾರೆ. ಒಟ್ಟಾರೆಯಾಗಿ ರಾಮನಗರ ಪುನರ್ವಸತಿ ಕೇಂದ್ರವು ಮೂಲಭೂತ ಸೌಲಭ್ಯಗಳಲ್ಲಿ ತೀರಾ ದುಸ್ಥಿತಿಯಲ್ಲಿರುವ, ಮಾನವ ಅಭಿವೃದ್ಧಿಯಲ್ಲಿ ತೀವ್ರ ಹಿಂದುಳಿದಿರುವ. ರಾಜಕೀಯವಾಗಿ ಹಿಂದುಳಿದಿರುವ, ಸಾಮಾಜಿಕವಾಗಿ ಮತ್ತು ಜನರ ಬದುಕಿನ ಸ್ಥಿತಿಗತಿಯ ದೃಷ್ಟಿಯಿಂದ ಸಂಕಷ್ಟದಲ್ಲಿರುವ ಪುನರ್ವಸತಿ ಕೇಂದ್ರವಾಗಿದೆ.ಇಲ್ಲಿ ಜನರಿಗೆ ವರಮಾನವೇ ಇಲ್ಲ.

ಜೋಯಿಡಾ ಟೌನ್‌ಶಿಪ್ ಪುನರ್ವಸತಿ ಕೇಂದ್ರದಲ್ಲಿ ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳಿಲ್ಲ. ಅಲ್ಲಿ ಯಾವ ವ್ಯವಸ್ಥೆಯೂ ಇಲ್ಲದಕ್ಕೆ ಮನೆನಿವೇಶನ ಹಂಚಿಕೆಯಾದ ೧೭೮ ಸಂತ್ರಸ್ತರಲ್ಲಿ ಕೇವಲ ೧೧ ಸಂತ್ರಸ್ತರು ಮನೆ ಮಾಡಿಕೊಂಡಿದ್ದಾರೆ.ಕ್ಯಾಸೆಲ್‌ರಾಕ್ ಪುನರ್ವಸತಿ ಕೇಂದ್ರದ ಕುರುಹಾಗಿ ಅಲ್ಲಿ ಏನೂ ಕಂಡುಬರುವುದಿಲ್ಲ. ಮೊದಲು ಕಾಡಾಗಿದ್ದ ಅದು ಈಗಲೂ ಕಾಡಾಗಿಯೇ ಇದೆ.ಅಲ್ಲಿ ೧೯ ಸಂತ್ರಸ್ತರಿಗೆ ಮನೆ ನಿವೇಷನ ಹಂಚಿಕೆಯಾಗಿತ್ತು.ಆದರೆ ಅಲ್ಲಿ ಯಾರೂ ವಾಸವಿರುವುದಿಲ್ಲ. ಸೂಪಾದಿಂದ ತಮ್ಮ ಮೂಲನೆಲೆಯನ್ನು ಕಳೆದುಕೊಂಡ ಈ ಎಲ್ಲಾ ಸಂತ್ರಸ್ತರು ಎಲ್ಲಿ ಹೋದರು ಎನ್ನುವುದಕ್ಕೆ ಯಾವುದೇ ಪುರಾವೆಯಿಲ್ಲ. ಇದು ನಮ್ಮ ಅಭಿವೃದ್ಧಿಯೋಜನೆಗಳ ವೈಫಲ್ಯಕ್ಕೆ ಎತ್ತಿಹಿಡಿದ ಕನ್ನಡಿಯಾಗಿದೆ.

ಸೂಪಾ ಜಲಾಶಯದಿಂದ ಸಂತ್ರಸ್ತರಿಗೆ ಯಾವುದೇ ರೀತಿಯ ಪ್ರಯೋಜನವಾಗಲಿಲ್ಲ.ಈ ಜನರು ಗೌರವ ಮತ್ತು ಸ್ವಾಭಿಮಾನದಿಂದ ಬದುಕಲು ಸಾಧ್ಯವಿಲ್ಲ ಎಂಬಂತಹ ಸ್ಥಿತಿ ನಿರ್ಮಾಣವಾಗಿದೆ.ಇಲ್ಲಿ ಆರ್ಥಿಕ ಸ್ಥಿತಿಗತಿ ತುಂಬಾ ಶೋಚನೀಯವಾಗಿದೆ.ಸಂತ್ರಸ್ತರು ಸದ್ಯದ ಅವಶ್ಯಕತೆಗಳಿಗೆ ಹಾತೊರೆಯುತ್ತಿದ್ದಾರೆ.ಶಿಕ್ಷಣವಿದ್ದರೆ ಜನರು ಸುಸ್ಥಿರಗತಿಯ ಅಭಿವೃದ್ಧಿಯನ್ನು ಹೊಂದುತ್ತಾರೆ.ಆದರೆ ಇಲ್ಲಿ ಕನ್ನಡ ಮಾಧ್ಯಮ ಶಿಕ್ಷಣದ ಕೊರತೆಯಿದೆ.ಸಂತ್ರಸ್ತರ ಅಭಿವೃದ್ಧಿಗಾಗಿ ಜಾರಿಯಾಗಿರುವ ಯೋಜನೆಗಳ ದುಡ್ಡು ತಿಜೋರಿಯಲ್ಲಿ ಮಡುಗಟ್ಟಿದೆ.ಅಭಿವೃದ್ಧಿಯ ಪ್ರಣಾಳಿಕೆಗಳಾದ ವರಮಾನ, ಉತ್ಪನ್ನ, ಉದ್ಯೋಗಗಳ ಏರಿಕೆಯೇ ಎಂಬ ಚೌಕಟ್ಟು ಇರಬೇಕಾದ ಇಲ್ಲಿ ಬಡತನ, ಹಸಿವು, ಅನಕ್ಷರತೆ, ತಾಂಡವವಾಡುತ್ತಿದೆ.ಇಲ್ಲಿ ರಾಜಕೀಯ ಅರಾಜಕತೆ, ಸಾಮಾಜಿಕ ಅಭದ್ರತೆ, ಆರ್ಥಿಕ ಸಂಕಷ್ಟ, ಸಾಂಸ್ಕೃತಿಕ ಅನಾಥತನವು ಕಾಡುತ್ತಿದೆ.ಈ ಸೂಪಾ ಜಲಾಶಯದ ನೀರು, ವಿದ್ಯುತ್ ಸಂತ್ರಸ್ತರ ಅನುಭವವಾಗಿ ಅವರ ಬದುಕಾಗಿ ಪರಿವರ್ತನೆಯಾಗಿಲ್ಲ.

ಸೂಪಾ ಜಲಾಶಯದ ಸಂತ್ರಸ್ತರಾದ ಜೋಯಿಡಾ ಟೌನ್‌ಶಿಪ್‌ನ ನಿವಾಸಿಯಾದ ಶ್ರೀ ಲಕ್ಷ್ಮಣ ದೇವುಳಿಯವರು ತುಂಬಾ ದುಃಖದಿಂದ ಒಂದು ಮಾತು ಹೇಳುತ್ತಾರೆ, "೧೯೭೮ ರ ಮೊದಲು ಸೂಪಾದ ರೈತಾಪಿ ಜನ ರಾಜರ ಹಾಗೆ ಇದ್ದರು ಅದೇ ಈಗ ಅವರ ಮಕ್ಕಳಿಗೆ ಒಂದು ಡ್ರೈವರ್ ಕೆಲಸವೂ ಇಲ್ಲ". ಅಭಿವೃದ್ಧಿಶೀಲ ಭಾರತದಲ್ಲಿ ಈ ಬೃಹತ್ ಅಭಿವೃದ್ಧಿ ಯೋಜನೆಗಳಿಂದ, ಅವು ಬಯಸಿದ ಅಗಾಧ ಸ್ಥಳಾಂತರದಿಂದ ಬದಲಾದ ನಮ್ಮ ಉತ್ಪಾದನಾ ರೀತಿ ಯಾವ ಮಟ್ಟದ್ದು ಅಂತ ಈ ಒಂದು ಮಾತನ್ನು ಗಂಭೀರವಾಗಿ ಪರಿಗಣಿಸಿದರೆ ದುಡಿಯುವ ಕೈಗಳನ್ನು ಈ ಯೋಜನೆಗಳ ಹೆಸರಲ್ಲಿ ಕಟ್ಟಿ ಯಾಕೆ ಒಂದು ಜೊಂಬು ಕೊಟ್ಟಂತೆ ಮಾಡಿದೆವು ಅನ್ನೋ ಭೀಕರತೆಯ ಎಚ್ಚರವಾಗುತ್ತದೆ. ಎತ್ತರವಾದ, ವಿಶಾಲವಾದ ಸುಂದರವಾದ, ಜಲಾಶಯ ಅದರೊಡಲ ಸಂತ್ರಸ್ತರ ಬದುಕಿನ ಮಟ್ಟವನ್ನು ಎತ್ತರಗೊಳಿಸಲು, ಸುಂದರಗೊಳಿಸಲು ವಿಫಲವಾಗಿದ್ದೇಕೆ?ಜಾಗತಿಕ ಮಟ್ಟದಲ್ಲಿ ಇಂದು ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯ ಸ್ಥಾನ ಅಲಂಕರಿಸಿರುವ ಈ ಭಾರತ ದೇಶ ಅದಕ್ಕಾಗಿ ತಮ್ಮ ಬದುಕನ್ನೇ ತ್ಯಾಗ ಮಾಡಿದ ಸಂತ್ರಸ್ತರನ್ನು ಇಂಥ ಔದಾಸೀನ್ಯ ಹಾಗೂ ನಿರ್ಲಕ್ಷತೆಯಿಂದ ನೋಡಿಕೊಳ್ಳುವುದೇಕೆ?

ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುತ್ತಿರುವ ಕ್ರಮದಲ್ಲಿ ಬದಲಾಗಬೇಕು. ನಾವು ಅಭಿವೃದ್ಧಿಯ ಸಾಧನೆ ಬಗ್ಗೆ ನೀಡಿದಷ್ಟೇ ಗಮನವನ್ನು ಅಭಿವೃದ್ಧಿಯ ಗುರಿಯ ಬಗ್ಗೆಯೂ ನೀಡಬೇಕಾದುದು ಅಗತ್ಯ. ಅಭಿವೃದ್ಧಿಯ ಮೂಲಧಾತು ಜನರೇ ವಿನಾ ಸರಕಲ್ಲ, ಸಂಪತ್ತಲ್ಲ ಎಂಬುದು ಸ್ಪಷ್ಟಾಗಬೇಕು.ಜನರು ಅಭಿವೃದ್ಧಿಯ ಸಾಧನವೂ ಹೌದು ಮತ್ತು ಅವರು ಅಭಿವೃದ್ಧಿಯ ಕರ್ತೃಗಳೂ ಹೌದು. ಅಭಿವೃದ್ಧಿಗೆ ಸಂಪನ್ಮೂಲ ಬೇಕು.ಜನರು ಕೇವಲ ಸಂಪನ್ಮೂಲವಲ್ಲ ಅವರು ಸಂಪನ್ಮೂಲವನ್ನು ಹೊಂದಿರುತ್ತಾರೆ. ಅಭಿವೃದ್ಧಿಯು ಜನರನ್ನು ಒಳಗೊಂಡಿರಬೇಕು.ದೇಶಕ್ಕಾಗಿ ತಮ್ಮ ನೆಲೆಯನ್ನು ತ್ಯಾಗ ಮಾಡಿದ ಎಲ್ಲಾ ಅಭಿವೃದ್ಧಿ ಯೋಜನೆಗಳ ಸಂತ್ರಸ್ತರು ಗೌರವಯುತವಾಗಿ ಬದುಕು ಸಾಗಿಸುವಂತಾಗಬೇಕು.ಸಂತ್ರಸ್ತರು ತಾವೇನಾಗಬೇಕೆಂದಿದ್ದಾರೋ ಅದರಂತೆ ಆಗಲು ಅಗತ್ಯವಾದ ಸಾಮರ್ಥ್ಯ ಮತ್ತು ಸ್ವಾತಂತ್ಯವನ್ನು ನಮ್ಮ ಸರ್ಕಾರ ನೀಡಬೇಕು.ಹಾಗೂ ಆ ರೀತಿಯಾಗಿ ಅವರನ್ನು ಕೈಹಿಡಿದು ಮುನ್ನಡೆಸಬೇಕು.ಒಂದು ದೇಶ ಅಥವಾ ಪ್ರದೇಶದ ಸಾಮಾಜಿಕ ರಚನೆಗೆ ಅನುಗುಣವಾಗಿ ಅಭಿವೃದ್ಧಿಯು ಸಂಭವಿಸುತ್ತದೆ. ಸಾಮಾಜಿಕ ರಚನೆಯನ್ನು ಮೀರಿ ಅಭಿವೃದ್ಧಿಯು ಸಂಭವಿಸಲು ಸರ್ಕಾರದ ಮಧ್ಯಪ್ರವೇಶ ಬೇಕಾಗುತ್ತದೆ.ಆದ್ದರಿಂದ ಯಾವುದೇ ರೀತಿಯ ಕೌಶಲ್ಯಗಳನ್ನು ಹೊಂದಿರದಂತಹ ಕುಣಬಿಯರ ಬದುಕಿನ ಪುನರ್ ನಿರ್ಮಾಣಕ್ಕಾಗಿ ಸರ್ಕಾರದ ಮಧ್ಯಪ್ರವೇಶವಾಗಬೇಕಾಗಿದೆ.ಸಂತ್ರಸ್ತರು ಸ್ವಾವಲಂಬಿ ಹಾಗೂ ಸ್ವಾಭಿಮಾನದ ಬದುಕು ಮಾಡುವಂತೆ ಮಾಡಲು ಇಲ್ಲಿ ಅನೇಕ ಕೃಷಿಯೇತರ ಉದ್ಯೋಗಗಳನ್ನು ನಿರ್ಮಿಸಬಹುದುದಾಗಿದೆ. ನಮ್ಮ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಇದಕ್ಕೆ ಪ್ರೋತ್ಸಾಹ ನೀಡಬೇಕು.ಕುಣಬಿಯರಲ್ಲಿ ಸಂಘಟನೆಯ ಅವಶ್ಯಕತೆಯಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಇವರ ನೆರವಿಗೆ ಬರಬೇಕಾಗಿದೆ.

ಸಂತ್ರಸ್ತರ ಬದುಕನ್ನು ಸಬಲೀಕರಣಗೊಳಿಸುವಂತಹ ಯೋಜನೆಗಳನ್ನು ಸರ್ಕಾರಗಳು ಜರೂರಾಗಿ ಜಾರಿಗೊಳಿಸಬೇಕು.

ಬ್ರಿಟೀಷರು ಭಾರತೀಯರಿಗೆ ಒಂದು ಘನವಂತಿಕೆಯ ಬದುಕಿನ ಸಾಧ್ಯತೆಯನ್ನು ನಿರಾಕರಿಸಿದ್ದರು.ಆದರೆ ಸ್ವಾತಂತ್ರ್ಯಾನಂತರವೂ ಈ ಜೀವಂತ ಪ್ರಜಾಪ್ರಭುತ್ವದಲ್ಲಿ ಈ ರೀತಿಯ ಅವಕಾಶಗಳಿಂದ ವಂಚಿತರಾದ, ಸೇವಾ ಸೌಲಭ್ಯಗಳಿಂದ ದೂರಾಗಿ ಮೂಲೆಗೆ ತಳ್ಳಲ್ಪಟ್ಟ ಸಂತ್ರಸ್ತರಿಗೆ ಘನತೆ, ಗೌರವ, ಬದುಕಿನ ಸಾಧ್ಯತೆಗಳನ್ನು ಕಲ್ಪಿಸಿಕೊಡಲು ವಿಫಲವಾಗಿದ್ದೇಕೆ?ಬಡತನ ರೇಖೆಯ ಕೆಳಗೆ ಜೀವನ ನಡೆಸುತ್ತಿರುವ ಈ ಸಂತ್ರಸ್ತರು ಮಾನವೀಯ ಘನತೆಯಿಂದ ಬದುಕಲು ಸಾಧ್ಯವಾಗದೇ ಇರುವ ಸ್ಥಿತಿಯಲ್ಲಿದ್ದಾರೆ.ಅಪಾರ ಸಂಪತ್ತು ಸಮೃದ್ಧಿಯ ನಡುವೆ ಎಷ್ಟು ದಿನಗಳವರೆಗೆ ಅವರು ಕಡುಬಡತನವನ್ನು ಸಹಿಸಿಕೊಂಡು ಇರಲು ಸಾಧ್ಯ?ಅಸಮಾನತೆಯನ್ನು ನಿವಾರಿಸಬೇಕಾದರೆ ಆಕಾಶದವರೆಗೆ ಏರಬೇಕು.ಸಂತ್ರಸ್ತರು ಸಮೃದ್ಧಿಯ ಕನಸು ಕಾಣಬಾರದೇಕೆ?ಅಭಿವೃದ್ಧಿಯ ಬಂಡಾಯ, ಕಲ್ಪನಾಶೀಲತೆ, ಹುಚ್ಚುತನ ಇಲ್ಲದೇ ಯಾರಾದರೂ ಏನಾದರೂ ಹೊಸದನ್ನು ಮಾಡಲಿಕ್ಕಾಗುವುದಿಲ್ಲ ಎನ್ನುವುದು ಅನುಭವದ ಕಹಿ ಸತ್ಯ.ಆದ್ದರಿಂದ ಸಂತ್ರಸ್ತರು ಸೌಲಭ್ಯಕ್ಕಾಗಿ ಅಭಿವೃದ್ಧಿ ಯೋಜನೆ ಜೊತೆಗೆ, ಸರ್ಕಾರದ ಜೊತೆಗೆ ತಮ್ಮ ಬದುಕಿನ ಹಕ್ಕಿಗಾಗಿ ಹೋರಾಟ ಮಾಡುತ್ತಲೇ ಬಂದಿದ್ದಾರೆ.ಅವರ ಬದುಕಿಗೆ ನೆಮ್ಮದಿಯ ನೆಲೆ ಸಿಗಲೆಂದು ಆಶಿಸೋಣ.ಒಟ್ಟಾರೆಯಾಗಿ ಈ ಎಲ್ಲಾ ಬೃಹತ್ ಅಭಿವೃದ್ಧಿ ಯೋಜನೆಗಳಿಂದಾಗಿ ನಾವು ಕಂಡಿರುವ ಯಶಸ್ಸು ಹಾಗೂ ನಮ್ಮವರು ಅನುಭವಿಸುತ್ತಿರುವ ಅತಂತ್ರ ಬದುಕು ಇದನ್ನೆಲ್ಲಾ ನೆನಸಿಕೊಂಡರೆ ವಜ್ರದ ಉಡುಗೊರೆ ನೀಡುವ ವಜ್ರ ಹೃದಯಿಗಿಂತ ಸಾದಾ ಹೂವೊಂದನ್ನು ನೀಡುವ ಹೂ ಮನಸ್ಸೇ ಆಪ್ತವಾಗಬಹುದಲ್ಲವೇ ಎಂದೆನಿಸದಿರದು ಅಲ್ಲವೇ? ಅಭಿವೃದ್ಧಿಯ ಆರಂಭವು ಅಲಕ್ಷಿತರ ಪದತಲದಿಂದ ನಡೆಯಬೇಕು ಎಂಬ ತತ್ವವನ್ನು ಡಾ.ಟಿ.ಆರ್. ಚಂದ್ರಶೇಖರ್‌ರವರು ಪ್ರತಿಪಾದಿಸಿದ್ದಾರೆ.ಅದು ಸಮರ್ಕವಾಗಿ ಪಾಲನೆಯಾದರೆ ಅಲಕ್ಷಿತ ಸಂತ್ರಸ್ತರ ಬದುಕು ಹಸನಾದೀತು.

"ಮನುಷ್ಯ ಮನುಷ್ಯನನ್ನು ಮನುಷ್ಯನಂತೆ ಕಾಣುವಂತಾಗಬೇಕು".– ಡಾ.ಟಿ.ಆರ್.ಚಂದ್ರಶೇಖರ್,

ಆಧಾರ ಗ್ರಂಥಗಳು

೧. ಚಂದ್ರಶೇಖರ ಟಿ.ಆರ್, ಧರೆ ಹತ್ತಿ ಉರಿದರೆ, ಪಲ್ಲವ ಪ್ರಕಾಶನ ಚನ್ನಪಟ್ಟಣ ಬಳ್ಳಾರಿ, ೨೦೧೦

೨. ಚಂದ್ರಪೂಜಾರಿ ಎಂ,ಅಭಿವೃದ್ಧಿ ಮತ್ತು ರಾಜಕೀಯ, ಪಲ್ಲವ ಪ್ರಕಾಶನ ಚನ್ನಪಟ್ಟಣ ಬಳ್ಳಾರಿ,೨೦೧೪.

೩. ಜಗದೀಶ ಕೊಪ್ಪ, ಎನ್. 'ಅಣುವೆಂಬ ಸದ್ದಿಲ್ಲದ ಸಾವ ಕುರಿತು....', ಲೋಹಿಯಾ ಪ್ರಕಾಶನ ಬಳ್ಳಾರಿ, ೧೯೯೯.

೪. ಗಜಾನನ ಶರ್ಮ(ಅನು), 'ನನ್ನ ವೃತ್ತಿ ಜೀವನದ ನೆನಪುಗಳು' (ಸರ್.ಎಂ. ವಿಶ್ವೇಶ್ವರಯ್ಯ), ಅಂಕಿತ ಪುಸ್ತಕ ಬೆಂಗಳೂರು, ೨೦೦೫.

ಅರ್ಥಶಾಸ್ತ್ರದಲ್ಲಿ ಕೃಷಿ

ಶ್ರೀಮತಿ ಸುಧಾ ಹೆಚ್.ಎಸ್.,

ಸಂಶೋಧನಾ ವಿದ್ಯಾರ್ಥಿನಿ, ಸಂಸ್ಕೃತ ವಿಭಾಗ, ಕರ್ನಾಟಕ ಯೂನಿವರ್ಸಿಟಿ, ಧಾರವಾಡ.

ಪೀಠಿಕೆ:– ಕ್ರಿ. ಪೂ. ೩೦೦ ರಷ್ಟು ಹಿಂದೆಯೇ ಕೌಟಿಲ್ಯರಿಂದ ರಚಿತವಾದ ಅರ್ಥಶಾಸ್ತ್ರವು ರಾಜಕೀಯ, ಸಾಮಾಜಿಕ ವಿಜ್ಞಾನಿಗಳು ಹಾಗೂ ಅರ್ಥಶಾಸ್ತ್ರ ವಿದ್ವಾಂಸರಲ್ಲಿ ಪಡೆದ ಹೆಮ್ಮೆಯ ಸ್ಥಾನ ಬಹುಷ: ಇತರ ಯಾವ ಗ್ರಂಥವೂ ಪಡೆದಿರಲಾರದು.

ಅರ್ಥಶಾಸ್ತ್ರದಲ್ಲಿ ಕೃಷಿಯ ಸ್ಥಾನ:– ಕೃಷಿಯನ್ನು ಕೌಟಿಲ್ಯರು ರಾಜ್ಯದ ಎಲ್ಲ ಅರ್ಥವ್ಯವಸ್ಥೆಯ ಆಧಾರವೆಂದು ಪರಿಗಣಿಸಿದ್ದರು. ಜನರಿಗೆ ಆಹಾರ ಒದಗಿಸುವುದರ ಜೊತೆಗೆ ಕೃಷಿಯು ಆದಾಯ ಮತ್ತು ಉದ್ಯೋಗವನ್ನು ಒದಗಿಸುತ್ತದೆ ಮತ್ತು ಸಮಸ್ತ ಜೀವಿಗಳಿಗೂ ಆಧಾರವಾಗಿದೆ. ಆದ್ದರಿಂದ ಕೌಟಿಲ್ಯರು ಭೂಮಿಯನ್ನು 'ಪ್ರಮುಖ ಆಸ್ತಿ' ಎಂದು ಪರಿಗಣಿಸಿದ್ದರು.

ಪೀಠಿಕೆ:– ಕ್ರಿಪೂ. ಮುನ್ನೂರರಷ್ಟು ಹಿಂದೆಯೇ ಕೌಟಿಲ್ಯರಿಂದ ರಚಿತವಾದ ಅರ್ಥಶಾಸ್ತ್ರವು ರಾಜಕೀಯ ಸಾಮಾಜಿಕ ವಿಜ್ಞಾನಿಗಳು ಹಾಗೂ ಅರ್ಥಶಾಸ್ತ್ರ ವಿದ್ವಾಂಸದಲ್ಲಿ ಪಡೆದ ಹೆಮ್ಮೆಯ ಸ್ಥಾನ ಬಹುಷ: ಇತರ ಯಾವ ಗ್ರಂಥವೂ ಪಡೆದಿರಲಾರದು. ಕೌಟಿಲ್ಯರು ಕೇವಲ ವಿದ್ವಾಂಸ ಹಾಗೂ ಒಬ್ಬ ಶ್ರೇಷ್ಠ ರಾಜಕೀಯ ಮುತ್ಸದ್ದಿ ಮಾತ್ರವಾಗಿರದೆ, ರಾಜ್ಯಶಾಸ್ತ್ರ, ಸೇನಾತಂತ್ರ ಮತ್ತು ಅರ್ಥಶಾಸ್ತ್ರಗಳಲ್ಲಿ ಪ್ರಚಂಡ ಪಂಡಿತರಾಗಿದ್ದರು. ಪ್ರಾಚೀನ ಭಾರತದಲ್ಲಿದ್ದ ಜಗತ್ಪ್ರಸಿದ್ಧ ತಕ್ಷಶಿಲಾಗುರುಕುಲದಲ್ಲಿ ರಾಜನೀತಿ ಹಾಗೂ ಅರ್ಥಶಾಸ್ತ್ರಗಳ ಪ್ರಸಿದ್ಧ ಪ್ರವಾಚಕರಾಗಿದ್ದರೆಂಬುದು ಇತಿಹಾಸದಲ್ಲಿದೆ. ಪ್ರಥಮ ಮೌರ್ಯ ದೊರೆಯಾರು ಚಂದ್ರಗುಪ್ತನಿಗೆ ಸಲಹೆಗಾರರಾಗಿದ್ದು ನಂತರ ಆತನ ರಾಜ್ಯದ ಪ್ರಧಾನ ಮಂತ್ರಿಯಾದರು. ಒಬ್ಬ ರಾಜಕೀಯ ಚಿಂತಕರಾಗಿ ಕೌಟಿಲ್ಯರು ರಾಷ್ಟ್ರದ ಕಲ್ಪನೆ ಕಂಡವರಲ್ಲಿ ಮಾನವ ಇತಿಹಾಸದಲ್ಲೇ ಪ್ರಥಮರಾಗಿರುವರು.

ಅರ್ಥಶಾಸ್ತ್ರದಲ್ಲಿ 180 ಪ್ರಕರಣಗಳನ್ನೊಳಗೊಂಡ 15 ಅಧಿಕರಣಗಳಿವೆ. ಕೌಟಿಲ್ಯದ ಅರ್ಥಶಾಸ್ತ್ರದ ಆರ್ಥಿಕ ಪರಿಕಲ್ಪನೆಗಳು ಇಂದಿನ ಆಧುನಿಕ ಅರ್ಥಶಾಸ್ತ್ರಜ್ಞರಿಗೆ ಹೊಸತಲ್ಲ. ಆದರೆ ಈ ಚಿಂತನೆಗಳು ಕೌಟಿಲ್ಯರಿಂದ ಸುಮಾರು 2400 ವರ್ಷಗಳ ಹಿಂದೆಯೇ ಅಭಿವೃದ್ಧಿಗೊಂಡಿದ್ದವು ಎಂಬುದೇ ಮುಖ್ಯವಾದ ಅಂಶ. ಆದ್ದರಿಂದ ಕೌಟಿಲ್ಯರನ್ನು "ಅರ್ಥಶಾಸ್ತ್ರದ ಪಿತಾಮಹ" ಎಂದು ಹೇಳಬಹುದಾಗಿದೆ.

ಕೃಷಿಯನ್ನು ಕೌಟಿಲ್ಯರು ರಾಜ್ಯದ ಎಲ್ಲಾ ಅರ್ಥವ್ಯವಸ್ಥೆಯ ಆಧಾರವೆಂದು ಪರಿಗಣಿಸಿದ್ದರು. ಕೃಷಿ ನಿರ್ವಹಣಾ ಕ್ಷೇತ್ರದಲ್ಲಿ ಕೌಟಿಲ್ಯರ ಕೊಡುಗೆಯು ಮಹತ್ತ್ವ ಪೂರ್ಣವಾದುದಾಗಿದೆ. ಕೃಷಿಯು ಜನರಿಗೆ ಆಹಾರ ಒದಗಿಸುವುದರ ಜೊತೆಗೆ ಆದಾಯ ಮತ್ತು ಉದ್ಯೋಗಗಳನ್ನು ಒದಗಿಸುತ್ತದೆ. ಸೇನೆಗೆ ಕೂಡ ಆಹಾರ ಒದಗಿಸುವುದರಿಂದ ಭೂಮಿಯನ್ನು 'ಪ್ರಮುಖ ಆಸ್ತಿ' ಎಂದು ಪರಿಗಣಿಸಬೇಕೆಂದು ಅಭಿಪ್ರಾಯಪಟ್ಟು ಕೌಟಿಲ್ಯರು ಅತ್ಯಂತ ವೈಜ್ಞಾನಿಕವಾಗಿ ಹಾಗೂ ಗುಣಾತ್ಮಕವಾಗಿ ವಿವರಿಸಿದ್ದಾರೆ. ಭೂಮಿಯನ್ನು ಯೋಗ್ಯ ಹಾಗೂ ಕೃಷಿಗೆ ಯೋಗ್ಯ

ವಲ್ಲದ ಪ್ರಕಾರಗಳೆಂದು ವರ್ಗೀಕರಿಸಿ ಮಾನವನ ಅಸ್ತಿತ್ವ ಹಾಗೂ ಜೀವನ ನಿರ್ವಹಣೆಯ ಆಧಾರವಾದ ಕೃಷಿಯನ್ನು ಕುರಿತಂತೆ ಕೌಟಿಲ್ಯರು ತೋರಿರುವ ದೂರದರ್ಶಿತ್ವ ಹಾಗೂ ಮುಂದಾಲೋಚನೆಗಳು ಅತ್ಯಂತ ಅದ್ಭುತವಾಗಿದೆಯೆಂದು ಹೇಳಲಾಗಿದೆ.

ಅರ್ಥಶಾಸ್ತ್ರದಲ್ಲಿ ಕೃಷಿಯ ಸ್ಥಾನ :– ಅರ್ಥಶಾಸ್ತ್ರದಲ್ಲಿ ಕೌಟಿಲ್ಯರು ಗ್ರಾಮಗಳ ಹಂತದಲ್ಲಿ ಬಲವಾದ ಆರ್ಥಿಕ ನಿರ್ವಹಣಾ ವ್ಯವಸ್ಥೆಯನ್ನು ರೂಪಿಸಬೇಕೆಂದೂ ಇವು ಸಾರ್ವಜನಿಕ ಮತ್ತು ಖಾಸಗೀ ಘಟಕಗಳೊಂದಿಗೆ ಸಂಪರ್ಕ ಹೊಂದಿರಬೇಕು, ಸರ್ಕಾರಿ ನಿಯಂತ್ರಣಕ್ಕೊಳಪಡುವ ಸಾರ್ವಜನಿಕ ನಿಗಮಗಳಲ್ಲಿ ಕೂಡ ಇಂತಹ ವ್ಯವಸ್ಥೆಗಳು ಅಸ್ತಿತ್ವದಲ್ಲಿರಬೇಕು. ಆದರೆ ಇಂತಹ ವ್ಯವಸ್ಥೆಗಳಲ್ಲಿ ಬಲವಾದ ಮತ್ತು ವಿಶ್ವಾಸಾರ್ಹವಾದ ಆಡಳಿತ ವ್ಯವಸ್ಥೆಯಿರಬೇಕು. ಇದರಿಂದ ಕೃಷಿಕರಿಗೆ ಅನುಕೂಲವಾದ ಕೃಷಿ ನೀತಿಗಳು ಕೃಷಿ ಕ್ಷೇತ್ರಕ್ಕೆ ದೊರೆಯಬೇಕೆಂದು ಹೇಳಿದ್ದಾರೆ. ಕೃಷಿಯ ಬೆಳವಣಿಗೆ ಮತ್ತು ಮೇಲ್ವಿಚಾರಣೆಗಾಗಿ ವಿಶೇಷ ಅಧಿಕಾರಿಯನ್ನು ನೇಮಿಸಬೇಕೆಂದು ಸಲಹೆ ಮಾಡಿದ್ದಾರೆ. ಈ ಅಧಿಕಾರಿಯು ಉತ್ತಮವಾದ ಬೆಳೆ ಪಡೆಯಲು ಬೀಜಗಳು ಮತ್ತು ಯಂತ್ರಗಳು ಉಪಕರಣಗಳು ಮತ್ತು ಎತ್ತುಗಳು ದೊರೆಯುವಂತೆ ನೆರವು ನೀಡಬೇಕು. ಮುಂಗಾರು ವಿಫಲವಾದಲ್ಲಿ ಅಥವಾ ನೆರೆ ಬಂದಲ್ಲಿ ಬದಲಿ ಬೆಳೆ ಬೆಳೆಯಲು ವಿಪತ್ತಿನ ಯೋಜನೆಗಳನ್ನು ಸಿದ್ಧಪಡಿಸಬೇಕು. ಬೆಳೆಗಳ ರಕ್ಷಣೆ, ಕಟಾವು, ದಾಸ್ತಾನು ಸಂಗ್ರಹ ಮಾಡಲು ಸೂಕ್ತ ವ್ಯವಸ್ಥೆ ರೂಪಿಸಬೇಕೆಂದು ಸಲಹೆ ಮಾಡಿದ್ದಾರೆ.

ಕೃಷಿ ಅಧಿಕಾರಿಯ ಪಾತ್ರ :– "ಸೀತಾಧ್ಯಕ್ಷ: ಕೃಷಿತಂತ್ರಶುಲ್ಬವೃಕ್ಷಾಯುರ್ವೇದಜ್ಞಸ್ತಜ್ಞ ಸಖೇ ವಾ ಸರ್ವದಾನ್ಯ ಪುಷ್ಪಫಲಶಾಕಕಂದ ಮೂಲವಾಲ್ಲಿಕ್ಯಕ್ಷೌಮಕಾರ್ಪಸಬೀಜಾನಿ ಯಥಾಕಾಲಂ ಗೃಹ್ಣೀಯಾತ್" ॥ (ಅಧಿ–2–ಪ್ರ–41–ಅ–45)

"ವ್ಯವಸಾಯ ಶಾಖೆಯ ಮುಖ್ಯಾಧಿಕಾರಿಯು (ಸೀತಾಧ್ಯಕ್ಷ) ಕೃಷಿ ತಂತ್ರವನ್ನೂ ಶುಲ್ಬ (ಅಳತೆ) ಶಾಸ್ತ್ರವನ್ನೂ, ವೃಕ್ಷಾಯುರ್ವೇದ ಶಾಸ್ತ್ರವನ್ನೂ ಚೆನ್ನಾಗಿ ಅರಿತು ಇಲ್ಲವೇ ಆ ಶಾಸ್ತ್ರ ಬಲ್ಲವರ ನೆರವು ಪಡೆದು ಎಲ್ಲ ದಾನ್ಯಗಳನ್ನೂ, ಹೂವು, ಹಣ್ಣು, ತರಕಾರಿ, ಕಂದಮೂಲ, ಕುಂಬಳಕಾಯಿ, ಸೌತೆಕಾಯಿ ಮುಂತಾದ ವಾಲ್ಲಕ್ಯ ಬಳ್ಳಿಗಳಲ್ಲಿ ಬಿಡುಬಹುದಾದ ಕಾಯಿಗಳನ್ನು, ರೇಷ್ಮೆ ನಾರು ಮತ್ತು ಹತ್ತಿಯ ಬೀಜಗಳನ್ನು ಕಾಲಾನುಸಾರವಾಗಿ ಸಂಗ್ರಹಿಸಬೇಕು".

ರೈತರು ಕಾರ್ಮಿಕರು ತಮ್ಮ ಕೆಲಸದಲ್ಲಿ ನಿರತರಾಗಲು ಅಡ್ಡಿಪಡಿಸದಂತೆ ಮತ್ತು ಅವರ ಕೆಲಸಗಳು ನಿಂತು ಹೋಗದಂತೆ ಅಧೀಕ್ಷಕನು ನೋಡಿಕೊಳ್ಳಬೇಕೆಂದು ಕಟ್ಟಪ್ಪಣೆ ನೀಡಲಾಗಿತ್ತು. "ಕರ್ಷಣಯಂತ್ರೋಪಕರಣ ಬಲೀವರ್ದೈಶ್ಚೈಶಾಮಸಂಗಂ ಕಾರಯೇತ್ । ಕಾರೂಭಿಶ್ಚ ಕರ್ಮಾರಿಕಟ್ಟಾಕಬೇದಕರಜ್ಜುವರ್ತಕ ಸರ್ಪಗ್ರಾಹಾದಿಭಿಶ್ಚ" ॥ (ಅಧಿ–2–ಪ್ರ–41–ಅ–45)

"ಕೃಷಿಕರ ಕೆಲಸವು ನೇಗಿಲು ಮತ್ತಿತರ ಉಪಕರಣಗಳು, ಎತ್ತುಗಳು ಸಿಗಲಿಲ್ಲವೆಂಬ ಕಾರಣಕ್ಕೆ ನಿಂತುಹೋಗುವಂತಿಲ್ಲ. ಅವರಿಗೆ ನೆರವು ನೀಡಬಲ್ಲವರಾದ ಕರ್ಮಾರರು, ಬಡಗಿಗಳು, ಬುಟ್ಟಿ ಮಾರುವವರು ಹಗ್ಗ ಹೊಸೆಯುವವರು ಹಾವುಗಳನ್ನು ಹಿಡಿಯಬಲ್ಲವರು ಮತ್ತಿತರ ವ್ಯಕ್ತಿಗಳ ನೆರವು ಪಡೆಯುವಲ್ಲಿ ಯಾವುದೇ ವಿಳಂಬ ಇರಬಾರದು".

ಇಂತಹ ವ್ಯಕ್ತಿಗಳ ನೆರವಿನ ಅಲಭ್ಯತೆಯಾಗಲಿ ಅಥವಾ ಸಮಯಕ್ಕೆ ಸರಿಯಾಗಿ ಕೃಷಿ ಉಪಕರಣಗಳು ಸಿಗದೆ ಉತ್ಪಾದನೆಯಲ್ಲಿ ನಷ್ಟವಾದಲ್ಲಿ ನಷ್ಟದ ಪ್ರಮಾಣಕ್ಕೆ ಸಮನಾದ ದಂಡ ವಿಧಿಸಬೇಕು ಎಂಬ ಎಚ್ಚರಿಕೆ ಇತ್ತು. ಈ ರೀತಿಯಾದ ಆಡಳಿತ ವ್ಯವಸ್ಥೆ ಜಾರಿಗೊಳಿಸುವುದರಿಂದ ಸರ್ಕಾರಿ ಅಧಿಕಾರಿಗಳಿಂದ ಆಡಳಿತಾತ್ಮಕ ಬೆಂಬಲ ಮತ್ತು ಕೃಷಿ ನೀತಿಗಳು ಕೃಷಿ ಕ್ಷೇತ್ರಕ್ಕೆ ದೊರೆಯುತ್ತದೆ ಎಂದು ಕೌಟಿಲ್ಯರು ಹೇಳಿದ್ದಾರೆ.

ಹವಮಾನ ಸೂಚನೆ :– ಅರ್ಥಶಾಸ್ತ್ರದಲ್ಲಿ ಹವಮಾನ ಮುನ್ಸೂಚನೆ ನೀಡುವಿಕೆ ಮಳೆಯ ಅಳತೆ ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೌಟಿಲ್ಯರು ನೀಡಿದ್ದಾರೆ. ಹವಮಾನಕ್ಕೆ ಮತ್ತು ಮಳೆಯ ಪ್ರಮಾಣಕ್ಕೆ ಅನುಗುಣವಾಗಿ ಬೆಳೆ ಬೆಳೆಯಲು ಸಲಹೆ ನೀಡಿದ್ದಾರೆ.
"ತ್ರಯಸ್ಸಾಪ್ತಾಹಿಕಾ ಮೇಘಾ: ಅಶೀತಿ ಕಣಶೀಕರಾ:। ಷಷ್ಠಿರಾತಪ ಮೇಘಾನಾಂ ವಿಷಾವೃಷ್ಟಿಸ್ಸಮಾಹಿತಾ" ॥ (ಅಧಿ–2–ಪ್ರ–41–ಅ–45)

ಮೂರು ಮೇಘಗಗಳು ಏಳು ದಿನಗಳ ಕಾಲ ಹಗಲಿರುಳೆನ್ನದೆ ಮಳೆ ಸುರಿಸುವುವು, ಎಂಭತ್ತು ಮೋಡಗಳು ತುಂತುರು ಮಳೆಗಳನ್ನು ಸುರಿಸುವುವು, ಅರವತ್ತು ಮೋಡಗಳು ಬಿಸಿಲಿನಿಂದ ಕೂಡಿದವು ಇಂತಹ ಮೇಘಗಳಿಂದ ಬೀಳುವ ಮಳೆಯು ಹೆಚ್ಚುಕಡಿಮೆಗೊಳ್ಳದೆ ಲೋಕಕ್ಕೆಲ್ಲ ಶ್ರೇಯಸ್ಸನ್ನುಂಟು ಮಾಡುವುದು.
"ವಾತಮಾ ತಪಯೋಗಂ ಚ ವಿಭಜಿನ್ ಯತ್ರವರ್ಷತಿ।
ತ್ರೀನ್‌ಕರ್ಷಕಾಂಶ್ಚಜನಯನ್ ತತ್ರಸಸ್ಯಾಗಮೋಧುವ:"॥
(ಅಧಿ–2–ಪ್ರ–41–ಅ–45)

ಗಾಳಿ ಬಿಸಿಲುಗಳ ಸಂಪರ್ಕವಿಲ್ಲದೆ ಮಳೆಯು ಬಂದು ಮೂರು ಕೃಷಿಮಾಗಳನ್ನು ಮಾಡಲು ಅವಕಾಶಕೊಡುವ ಪ್ರದೇಶಗಳಲ್ಲಿ ಸಸ್ಯೋತ್ಪತ್ತಿ ಆಗುವದರಲ್ಲಿ ಯಾವ ಸಂದೇಹವು ಇರದು.

ಮಳೆಯು ಹೆಚ್ಚಾಗಿ ಸುರಿಯುವುದೇ ಇಲ್ಲವೇ ಎಂಬುದನ್ನು ಮೇಲಿನ ಅಂಶಗಳಿಂದ ತಿಳಿದು ಬಹುಜಲ ಸಾಧ್ಯವಾದ, ಇಲ್ಲವೇ ಅಲ್ಪಜಲ ಸಾಧ್ಯವಾದ ಬೀಜಗಳನ್ನು ಬಿತ್ತಬೇಕು. ಇದರಿಂದ ಬೆಳೆ ಖಚಿತವಾಗಿ ದೊರೆಯುತ್ತದೆ ಎಂಬುದು ಕೌಟಿಲ್ಯರ ಅಭಿಪ್ರಾಯವಾಗಿದೆ.

ಮಳೆಯ ಅಳತೆ :– ಒಂದು ಹಸ್ತ ಪ್ರಮಾಣದಷ್ಟು ಬಾಯಿ ಇರುವ ಮಳೆಯ ಅಳತೆಗಾಗಿ ನಿರ್ಮಿತವಾದ ಮಡಿಕೆಯಲ್ಲಿ ಬಿದ್ದನೀರು ಹದಿನಾರು ದ್ರೋಣದಷ್ಟಿದ್ದರೆ ಮರಳಿನ ಭೂ ಭಾಗವು ಸಸ್ಯೋತ್ಪತ್ತಿಗೆ ಸಮಾರ್ಥವಾಗುವುದು. ಜಲಭರಿತವಾದ ಭೂ ಪ್ರದೇಶಗಳಲ್ಲಿ ಇಪ್ಪತ್ನಾಲ್ಕು ದ್ರೋಣಗಳಷ್ಟು ಮಳೆ ಬಿದ್ದರೆ ಅವು ಬೆಳೆ ಬೆಳೆಯಲು ಸಮರ್ಥ ಎನಿಸುವುದು. ಹದಿಮೂರುವರೆ ದ್ರೋಣಗಳು ಅಶ್ಮಕದೇಶದಲ್ಲಿಯೂ, ಇಪ್ಪತ್ತೂರು ದ್ರೋಣಗಳು ಆವಂತಿಯಲ್ಲಿಯೂ, ಪಾಶ್ಚಾತ್ಯ ದೇಶಗಳಲ್ಲಿ ಲೆಕ್ಕವಿಲ್ಲದಷ್ಟು ಮಳೆ ಬೀಳುವುದು. ಹಿಮವತ್ ಪ್ರದೇಶದಲ್ಲಿಯೂ ಕಾಲುವೆ ನೀರನ್ನು ಹಾಯಿಸಿಕೊಂಡು ಬೆಳೆ ತೆಗೆಯಬಲ್ಲ ಭೂ ಭಾಗಗಳಲ್ಲಿಯೂ ಕಾಲಾನುಗುಣವಾಗಿ ಸಸ್ಯಸಂಪತ್ತಿ ಒದಗುವುದೆಂದು ಕೌಟಿಲ್ಯರು ಹೇಳಿರುತ್ತಾರೆ.

ಬೆಳೆ ಬೆಳೆಯುವ ಕ್ರಮ :– ಬಿತ್ತನೆ ಬೀಜವನ್ನು ಸುವರ್ಣಯುಕ್ತವಾದ ನೀರಿನಲ್ಲಿ ನೆನೆಸಿ ಮೊದಲೊಂದು ಮುಷ್ಠಿ ಬೀಜವನ್ನು ಬಿತ್ತಬೇಕು,

"ಪ್ರಜಾಪತಯೇ ಕಾಶ್ಯಪಾಯ ದೇವಾಯ ಪ ನಮಸ್ಸದಾ ।
ಸೀತಾಮೇಽಯಧ್ಯತಾಂ ದೇವಿ ಬೀಜೇಷು ಚ ಧನೇಷು ಚ ॥
(ಅಧಿ–2–ಪ್ರ–41–ಅ–45)

"ಪ್ರಜಾಪತಿಯೂ, ಕಾಶ್ಯಪನೂ ಎನಿಸಿದ ಪರ್ಜನ್ಯನಿಗೆ ನಮಸ್ಕಾರ ಅವನ ಕೃಪೆಯಿಂದ ನನ್ನ ಕೃಷಿಯು ವರ್ಧಿಸಲಿ, ಆ ದೇವತೆಯು ಬೀಜಗಳಲ್ಲಿಯೂ, ಐಶ್ವರ್ಯದಲ್ಲಿಯೂ ನೆಲೆಸಲಿ ॥

ಕೌಟಿಲ್ಯರು ರೈತರಿಗೆ ವಿವಿಧ ವರ್ಗಗಳ ಬೆಳೆಗಳನ್ನು ಬೆಳೆಯುವುದರಲ್ಲಿ ಅನುಕೂಲವನ್ನು ಹೇಳಿದ್ದಾರೆ.

ಭತ್ತ, ಕೆಂಭತ್ತ, ಎಳ್ಳು, ಹಾರಕ, ನವಣೆ ಮೊದಲು ಬಿತ್ತತಕ್ಕವು, ಹೆಸರು, ಉದ್ದು, ಶೈಂಬ್ಯಗಳು ಮಧ್ಯಕಾಲದಲ್ಲಿ ಬಿತ್ತತಕ್ಕದು, ಕುಸುಂಬ, ಕಡಲೆ, ಹುರಳಿ, ಗೋಧಿ, ನೆಲಗಡಲೆ, ಅಗಸೆ ಮತ್ತು ಸಾಸುವೆ ಕೊನೆಯಲ್ಲಿ ಬಿತ್ತಬೇಕು. ಕಾಲಾನುಗುಣವಾಗಿಯೂ ಸಹ ಬೀಜಗಳನ್ನು ಬಿತ್ತಬಹುದು. ತರಕಾರಿಗಳು ಮಧ್ಯಮ ಬೆಳೆಯಾಗಿದೆ, ಕಬ್ಬು ಬೆಳೆಯಲು ಅತ್ಯಂತ ಕಠಿಣವಾಗಿದೆ ಏಕೆಂದರೆ ಅದು ಹಲವಾರು ವಿಪತ್ತುಗಳಿಗೆ ಶುತ್ತಾಗುತ್ತದೆ, ವೆಚ್ಚವೂ ಅಧಿಕವಾಗಿರುತ್ತದೆ ಮತ್ತು ಹೆಚ್ಚು ಗಮನ ಕೊಡಬೇಕು.

ಕುಂಬಳಕಾಯಿ, ಸೌತೆ ಮೊದಲಾದ ಬಳ್ಳಿಗಳಲ್ಲಿ ಬಿಡುವ ಕಾಯಿಗಳಿಗೆ ಜಲಪರ್ಯಂತ ಭೂಮಿಯನ್ನು, ಹಿಪ್ಪಲೆ, ದ್ರಾಕ್ಷಿ ಮತ್ತು ಕಬ್ಬುಗಳಿಗೆ ನೀರು ಮೇಲೇರಿ ಬರುವ ಪ್ರದೇಶಗಳೂ, ತರಕಾರಿ, ಗೆಡ್ಡೆಗೆಣಸುಗಳನ್ನು ಬಾವಿಯ ಸಮೀಪವು, ಹುಲ್ಲೇ ಮುಂತಾದವುಗಳನ್ನು ಕಾಲುವೆಯ ಸಮೀಪವೂ, ಜಟಾವಾಂಸಿ, ಕಾಡುಸಬ್ಬಸಿಗೆ, ಲಾವಂಚ ಮೊದಲಾದವುಗಳಿಗೆ ಕ್ಷೇತ್ರ ಮಧ್ಯದಲ್ಲೆಸಗಿದ ಸೇತುವೆಗಳೂ ಯೋಗ್ಯವಾದ ಸ್ಥಳವಾಗಿವೆ. ಔಷಧೀಯ ಸಸ್ಯಗಳನ್ನು ಆಯಾ ಪ್ರದೇಶಗಳಲ್ಲಿ ಮಣ್ಣಿನ ಗುಣಧರ್ಮಕ್ಕೆ ತಕ್ಕಂತೆ ಬೆಳೆ ಬೆಳೆಯಬೇಕು ಎಂಬ ಕೌಟಿಲ್ಯರ ಸಲಹೆಗಳು ಇಂದಿಗೂ ಕೂಡ ರೈತರಿಗೆ ಮತ್ತು ರಾಜ್ಯ ಕೃಷಿ ವಿಭಾಗಗಳಿಗೆ ಪ್ರಸ್ತುತವಾಗಿದೆ.

ಭೂಮಿಯ ಒಡೆತನ :– ಅರ್ಥಶಾಸ್ತ್ರದಲ್ಲಿ ಖಾಸಗಿ ಒಡೆತನದ ಭೂಮಿಗೆ ಅವಕಾಶವಿತ್ತು ಅದರೊಂದಿಗೆ ರಾಜನ ಒಡೆತನದ ಜಮೀನುಗಳು ಇದ್ದವು. ವಾರಸುದಾರರಿಲ್ಲದ ಜಮೀನು ರಾಜ್ಯದ ಒಡೆತನಕ್ಕೆ ಸೇರುತ್ತಿತ್ತು. ವಾರಸುದಾರರಿಲ್ಲದ ಜಮೀನನ್ನು ಗ್ರಾಮಗಳಿಗೆ ನೀಡಲಾಗುತ್ತಿತ್ತು. ಕೃಷಿಯೋಗ್ಯ ಜಮೀನನ್ನು ರೈತನ ಜೀವಿತಾವಧಿಗೆ ಮಾತ್ರ ನೀಡಲಾಗುತ್ತಿತ್ತು. ರೈತರಿಗೆ ಸಂಪೂರ್ಣ ಒಡೆತನವಿರಲಿಲ್ಲ, ಬಂಜರು ಭೂಮಿಯನ್ನು ಸಾಗುವಳಿ ಮಾಡುತ್ತಿರುವವರಿಂದ ಕಿತ್ತುಕೊಳ್ಳಬಾರದು.
"ಕರದೇಭ್ಯ: ಕೃತಕ್ಷೇತ್ರಾಣ್ಯೈಕ ಪುರೂಶಿಕಾಣಿ ಪ್ರಯಚ್ಚೇತ್"।
(ಅಧಿ–2–ಪ್ರ–19–ಅ–22)
ಕಂದಾಯ ಕೊಡುವ ಕೃಷಿಕನಿಗೆ ಕೃಷಿಯನ್ನು ಕೊಡಬೇಕು.
"ಅಕೃತಾನಿ ಕರ್ತೃಭ್ಯೊ ನಾ ದೇಯಾನಿ"।
(ಅಧಿ–2–ಪ್ರ–19–ಅ–22)
ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಕೃಷಿ ಮಾಡುವವನಿಗೆ ಕೊಡಬಾರದು.
"ಅಕೃತಾಮಾಚ್ಛಿದ್ಯಾನ್ಯೇಭ್ಯ: ಪ್ರಯಚ್ಚೇತ್"। (ಅಧಿ–2–ಪ್ರ–19–ಅ–22)
ಕೃಷಿ ಮಾಡದವನ ಭೂಮಿಯನ್ನು ತೆಗೆದುಕೊಂಡು ಕೃಷಿ ಮಾಡುವವನಿಗೆ ಕೊಡಬೇಕು.

ಉಪಕರಣಗಳಿಲ್ಲದೇ ವ್ಯವಸಾಯವನ್ನು ಕೈಬಿಟ್ಟವನಿಗೆ ಧಾನ್ಯ, ಪಶುಸಂಪತ್ತು, ಹಣ ಮುಂತಾದವನ್ನು ಒದಗಿಸಿಕೊಟ್ಟು ತನ್ಮೂಲಕ ಕೃಷಿಗಾರನನ್ನಾಗಿ ಮಾಡಬೇಕು. ವ್ಯವಸಾಯದ ಫಲವು ಕೈಸೇರಿದೊಡನೆ ಆ ಕೃಷಿಕನು ತನ್ನ ಜೀವನಕ್ಕೆ ಕೊರತೆ ಮಾಡಿಕೊಳ್ಳದಂತೆ ಧಾನ್ಯಾದಿ ಗಳನ್ನು ರಾಜನಿಗೆ ಹಿಂದಿರುಗಿಸಬೇಕು. ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿಯಲ್ಲಿ ಗೋಮಾಳ, ತಪೋವನ, ಹೂದೋಟ, ಮೃಗವನ ಮುಂತಾದವುಗಳನ್ನು ನಿರ್ಮಿಸಬೇಕು.

ತನಗೆ ಮಿಕ್ಕಿ ಉಳಿದ ಜಮೀನನ್ನು ಆ ಕ್ಷೇತ್ರದ ಯಜಮಾನನಿಂದ ಪಡೆದು ಬೀಜ, ಗೊಬ್ಬರಗಳನ್ನು ಸಹ ಆ ಯಜಮಾನನಿಂದಲೇ ಪಡೆದು ಸ್ವಂತ ಶ್ರಮದಿಂದ ಕೃಷಿ ಮಾಡಬಹುದಾಗಿದ್ದು, ಬಂದ ಬೆಳೆಯಲ್ಲಿ ನಾಲ್ಕನೇ ಒಂದು ಭಾಗ ಅಥವಾ ಐದನೇ ಒಂದು ಭಾಗವನ್ನು ತಾನು ಪಡೆದುಕೊಳ್ಳಬೇಕು.

ಈ ರೀತಿ ಭೂ ಒಡೆತನದ ವ್ಯವಸ್ಥೆಯಿಂದ ಭೂಮಿಯ ಸಾಗುವಳಿಯೂ ಆಗಿ ಮತ್ತು ಕೃಷಿಕನಿಗೂ ಉಪಯೋಗವಾಗುವುದು ಎಂದು ಕೌಟಿಲ್ಯರು ಸ್ಪಷ್ಟವಾಗಿ ಹೇಳಿರುತ್ತಾರೆ.

ನೀರಾವರಿ :– ಕೌಟಿಲ್ಯರ ಅರ್ಥಶಾಸ್ತ್ರದಲ್ಲಿ ಜಲಾಶಯಗಳು ಹಾಗು ಅಣೆಕಟ್ಟುಗಳನ್ನು ಕಟ್ಟುವ ನಿಯಮಗಳನ್ನು ಹೇಳಲಾಗಿದೆ. ನೀರಾವರಿ ಸೌಲಭ್ಯವಿರುವ ಹೊಲಗಳು ಮಳೆಯನ್ನಾಧರಿಸಿದ ಹೊಲಗಳಿಗಿಂತ ಹೆಚ್ಚು ಮೌಲ್ಯ ಹೊಂದಿರುವುದು ಎಂದು ಹೇಳಲಾಗಿದೆ. ನೀರಾವರಿ ಸೌಲಭ್ಯಗಳನ್ನು ನಿರ್ಮಿಸಲು ಅಥವಾ ಸುಧಾರಿಸಲು ಈ ರೀತಿಯಾಗಿ ಸಮಯ ನಿಗದಿಪಡಿಸಲಾಗಿತ್ತು.

1) ಹೊಸ ಕೆರೆಗಳು ಮತ್ತು ಒಡ್ಡುಗಳು – ಐದು ವರ್ಷಗಳು
2) ಹಾಳಾದ ಅಥವಾ ಪಾಳುಬಿದ್ದ ನೀರಾವರಿಗಳು– ನಾಲ್ಕು ವರ್ಷಗಳು
3) ಕೆರೆಕಟ್ಟೆಗಳಿಂದ ಕಳೆ ತೆಗೆಯುವುದು – ಮೂರು ವರ್ಷಗಳು

ನೀರಾವರಿಯನ್ನು ಗುತ್ತಿಗೆ ತೆಗೆದುಕೊಂಡ, ಹಂಚಿಕೊಳ್ಳುವ, ಬಾಡಿಗೆಗೆ ಪಡೆದ ಅಥವಾ ಅಡಮಾನದ ರೂಪದಲ್ಲಿ ಪಡೆಯುವ ಮತ್ತು ಅದನ್ನು ಬಳಸುವ ಹಕ್ಕು ಪಡೆದ ಯಾರೇ ಆಗಲಿ ಅದನ್ನು ಸುಸ್ಥಿತಿಯಲ್ಲಿಡುವ ಜವಾಬ್ದಾರಿ ಹೊಂದಿರಬೇಕಾಗುತ್ತದೆ. ಮಾಲಿಕನು ಕಾಲುವೆ ತೋಡುವುದರ ಮೂಲಕ ಅಥವಾ ಇತರ ಮಾರ್ಗಗಳ ಮೂಲಕ ಇತರರಿಗೆ ನೀರು ಕೊಟ್ಟು ಅದಕ್ಕೆ ಪ್ರತಿಯಾಗಿ ಹೊಲ, ಉದ್ಯಾನವನಗಳು, ತೋಟಗಳಲ್ಲಿ ಬೆಳೆದ ಉತ್ಪನ್ನದಲ್ಲಿ ಒಂದು ಪಾಲನ್ನು ಪಡೆಯಬಹುದು. ಮಾಲಿಕನಿಲ್ಲದಿದ್ದಲ್ಲಿ ದಾನಿಗಳು ಅಥವಾ ಗ್ರಾಮದ ಜನರು ಒಟ್ಟಾಗಿ ಸೇರಿ ನೀರಾವರಿಯ ಉಸ್ತುವಾರಿಯನ್ನು ನೋಡಿಕೊಳ್ಳಬೇಕು ಎಂಬುದು ಕೌಟಿಲ್ಯರ ಅಭಿಪ್ರಾಯವಾಗಿದೆ.

ಕೃಷಿಕಾರ್ಯದಲ್ಲಿ ರಾಜನ ಕರ್ತವ್ಯ :– ಗ್ರಾಮದಲ್ಲಿ ಸಮಸ್ತ ಜನಗಳ ವಿನೋದಕ್ಕೆ ಯೋಗ್ಯವಾದ ಉದ್ಯಾನವನಗಳೂ, ಪ್ರೇಕ್ಷಣೀಯ ಸ್ಥಳಗಳಿರಬಾರದು, ಅದರ ಬದಲಾಗಿ ನಟ, ಗಾಯಕ, ವಾದಕ ಮುಂತಾದವರು ಸಂಗೀತ, ನಾಟ್ಯ, ವಾದನ ಮತ್ತು ಕಥೆಗಳನ್ನು ಹೇಳುವುದು ಮುಂತಾದ ಸ್ವವೃತ್ತಿ ಪ್ರದರ್ಶನದಿಂದ ವ್ಯವಸಾಯ ಮಾಡಲು ತೊಂದರೆಯನ್ನುಂಟುಮಾಡಲಾರದು. ವಿಹಾರಸ್ಥಾನಗಳ

ಅಭಾವದಿಂದ ಗ್ರಾಮದಲ್ಲಿನ ಜನರು ತಮ್ಮ ತಮ್ಮ ಕಾರ್ಯದಲ್ಲಿ ತೊಡಗುತ್ತಾರೆ. ಇದರಿಂದ ಭಂಡಾರವು ಅಭಿವೃದ್ಧಿಗೊಳ್ಳುವುದು.
"ದಂಡವಿಷ್ಟಿಕರಾಬಾಧ್ಯೈ: ರಕ್ಷೇಯಷಹತಾಂ ಮ್ ಕೃಷಿಮ್ । ಸ್ರೇನವ್ಯಾಲ ವಿಷಗ್ರಾಹೈ: ವ್ಯಾಧಿಭಿಶ ಪಶುವ್ರಜಾನ್"॥ (ಅಧಿ–2–ಪ್ರ–19–ಅ–22)

ತೆರಿಗೆ, ಕಂದಾಯಗಳನ್ನು ಅತಿಯಾಗಿ ಹೆಚ್ಚಿಸಿದುದರಿಂದ ನಷ್ಟವಾದ ಕೃಷಿಯನ್ನು ರಕ್ಷಿಸಬೇಕು. ಕಳ್ಳಕಾಕರು, ದುಷ್ಟಜಂತುಗಳು ಮುಂತಾದವರಿಂದಲೂ, ರೋಗರುಜಿನದಿಂದಲೂ ಪಶುಸಂಪತ್ತನ್ನು ರಕ್ಷಿಸಬೇಕು.

ಕೃಷಿ ತೆರಿಗೆ :– ಅರ್ಥಶಾಸ್ತ್ರವು ಅಧಿಕ ತೆರಿಗೆ ವಿರೋಧಿಯಾಗಿದೆ. ಪೂರ್ಣವಾಗಿ ತೆರಿಗೆ ವಿಧಿಸದೇ ಇರುವುದು ಅಥವಾ ಅಧಿಕ ತೆರಿಗೆ ವಿಧಿಸುವುದು ಈ ಎರಡನ್ನೂ ತಪ್ಪಿಸಬೇಕೆಂಬುದು ಕೌಟಿಲ್ಯರ ಅಭಿಮತ. ಕೃಷಿಕರ ಮೇಲಿನ ತೆರಿಗೆಗಳು ಸನ್ನಿವೇಶಗಳಿಗನುಗುಣವಾಗಿ ಅದರ ಉತ್ಪನ್ನಗಳ ಆರನೇ ಒಂದು ಭಾಗದಷ್ಟು, ಎಂಟನೇ ಒಂದು ಭಾಗದಷ್ಟು ಮತ್ತು ಹತ್ತನೇ ಒಂದು ಭಾಗದಷ್ಟು ಇರುತ್ತಿದ್ದವು. ತೆರಿಗೆಯು ಆದಾಯದ ಏರಿಳಿತಗಳಿಗನುಗುಣವಾಗಿ ಇರುತ್ತಿತ್ತು.

ಜಲ ಸೌಕರ್ಯವನ್ನು ಅನುಸರಿಸಿ ತೆರಿಗೆ ವಿಧಿಸಬೇಕು. ಸ್ವದೇಹ ಶ್ರಮದಿಂದಲೂ, ತನ್ನ ಹಣದ ವೆಚ್ಚದಿಂದಲೂ ಕಟ್ಟಿಸಿದ ಸೇತುವೆ ಕೆರೆ ಮುಂತಾದವುಗಳಿಂದ ನೀರನ್ನು ಗಡಿಗೆಗಳಲ್ಲಿ ಕೈಗಳಿಂದ ಹೊತ್ತು ಬೆಳೆಸಿದ ಬೆಳೆಯಿಂದ ಐದನೇ ಒಂದು ಭಾಗವನ್ನೂ, ಏತ, ಕಪಿಲೆ ಮುಂತಾದವುಗಳಿಂದ ನೀರನ್ನೆತ್ತಿ ಬೆಳೆಸಿದ ಬೆಳೆಯಿಂದ ನಾಲ್ಕನೇ ಒಂದು ಭಾಗವನ್ನೂ ಕಂದಾಯವಾಗಿ ಕೊಡಬೇಕು. ಯಂತ್ರದಿಂದ ನೀರನ್ನೆತ್ತಿ ಬೆಳೆಸಿದ ಬೆಳೆಯಲ್ಲಿ ಮೂರನೇ ಒಂದು ಭಾಗವನ್ನು ನೀರಿನ ಕಂದಾಯಕ್ಕಾಗಿ ಕೊಡಬೇಕು.

ನದಿ, ಕೆರೆ, ಭಾವಿ, ಕೊಳ, ಸರೋವರ ಮುಂತಾದವುಗಳಿಂದ ತೂಬಿನ ಮೂಲಕ ನೀರನ್ನು ಹಾಯಿಸಿಕೊಂಡು ಬೆಳೆಸಿದ ಬೆಳೆಯಲ್ಲಿ ನಾಲ್ಕನೇ ಒಂದು ಭಾಗವನ್ನು ಕಂದಾಯವಾಗಿ ಕೊಡಬೇಕು. ವಸ್ತುವೊಂದರ ಬೇಡಿಕೆಗಿಂತ ಪೂರೈಕೆಯೇ ಹೆಚ್ಚಾಗಿದ್ದರೆ ರಾಜ್ಯದ ವಹಿವಾಟು ಪ್ರಧಾನ ನಿಯಂತ್ರಕರು ಮಾರುಕಟ್ಟೆ ಬೆಲೆಗಿಂತ ಅಧಿಕ ಬೆಲೆ ಕೊಟ್ಟು ಹೆಚ್ಚುವರಿ ದಾಸ್ತಾನನ್ನು ಹೊಂದಬೇಕು. ಮಾರುಕಟ್ಟೆ ಬೆಲೆಯು ಬೆಂಬಲ ಬೆಲೆಯ ಮಟ್ಟಕ್ಕೆ ಬಂದಾಗ ಸನ್ನಿವೇಶಕ್ಕನುಗುಣವಾಗಿ ಬೆಲೆಯನ್ನು ಬದಲಾಯಿಸ ಬೇಕು. ವಸ್ತುವೊಂದರೆ ಬೆಲೆಯನ್ನು ಹೂಡಿದ ಬಂಡವಾಳ, ವಿತರಿಸಬೇಕಾದ ಪ್ರಮಾಣ, ಸುಂಕ, ಬಡ್ಡಿ ಮತ್ತಿತರ ವೆಚ್ಚಗಳನ್ನು ಪರಿಗಣಿಸಿ ನಿರ್ಧರಿಸಬೇಕೆಂದು ಕೌಟಿಲ್ಯರ ಅಭಿಪ್ರಾಯವಾಗಿತ್ತು.

ಬೆಳೆಯ ರಕ್ಷಣೆ :–
"ಯಥಾಕಾಲಂಚ ಸಸ್ಯಾದಿ ಜಾತಂಜಾತಂ ಪ್ರವೇಶಯೇತ್ । ನಕ್ಷೇತ್ರೇಸ್ಥಾಪಯೇತ್ ಕಿಂಚಿತ್ ಪಲಾಪಮಪಿಪಂಡಿತ:" ॥ (ಅಧಿ–2–ಪ್ರ–41–ಅ–45)
ಆಯಾ ಕಾಲದಲ್ಲಿ ಕೈಸೇರುವ ಧಾನ್ಯಾದಿಗಳನ್ನು ಸ್ವಲ್ಪವೂ ಆಲಸ್ಯಗೊಳ್ಳದೆ ಉಗ್ರಾಣಕ್ಕೆ ಸೇರಿಸಬೇಕು. ಹೊಲಗದ್ದೆಗಳಲ್ಲಿ ಧಾನ್ಯದ ಹೊಟ್ಟು ಅಥವಾ ಹುಲ್ಲನ್ನೂ ಬಿಡಬಾರದು.

ಧಾನ್ಯಗಳನ್ನಿಡೆಲರ್ಹವಾದ ಸ್ಥಾನಗಳು ಎತ್ತರದಲ್ಲಿರಬೇಕು ಹಾಗೂ ಪಣತಗಳನ್ನಾಗಲೀ, ಕಣಜಗಳನ್ನಾಗಲೀ ಮಾಡಿಸಬಹುದು. ಬಿರುಗಾಳಿ ಮುಂತಾದ ಉಪದ್ರವಗಳನ್ನು ತಡೆಯಲು ಲೋಹ, ಕಲ್ಲು ಮುಂತಾದ ಭಾರವಸ್ತುಗಳನ್ನು ಅವುಗಳ ಮೇಲೆ ಹೇರಿರಬೇಕು.

ಧಾನ್ಯದ ಕಣವನ್ನು ಅಂಗಳದಲ್ಲಿ ಹುಲ್ಲಿನಿಂದ ಬೇರ್ಪಟ್ಟ ಸ್ಥಳದಲ್ಲಿ ಮಾಡಬೇಕು. ಸೇವಕ ಜನರು ಕಣದ ಸಮೀಪದಲ್ಲಿ ಬೆಂಕಿಯನ್ನು ಇಟ್ಟುಕೊಳ್ಳಕೂಡದು, ಒಂದು ವೇಳೆ ಬೆಂಕಿ ಬಿದ್ದಲ್ಲಿ ಅದನ್ನು ಆರಿಸಲು ನೀರನ್ನು ಪಕ್ಕದಲ್ಲಿ ಇಟ್ಟಿರಲೇಬೇಕು. ಹೀಗೆ ಕೃಷಿಕರು ತಮ್ಮ ತಮ್ಮ ಬೆಳೆಯನ್ನು ರಕ್ಷಿಸಿಕೊಳ್ಳಬೇಕೆಂದು ಕೌಟಿಲ್ಯರು ಹೇಳಿರುತ್ತಾರೆ.

ಅರ್ಥಶಾಸ್ತ್ರದಲ್ಲಿ ಕೃಷಿಯ ಮಹತ್ವ :– ಅರ್ಥಶಾಸ್ತ್ರದಲ್ಲಿ ಕೃಷಿಯ ಮಹತ್ವವನ್ನು ಗುರುತಿಸಲಾಗಿದ್ದು, ಕೃಷಿಯ ಆಂತರ್ಯವನ್ನು ರಾಜನಾದವನು ತಿಳಿದಿರಲೇಬೇಕೆಂದು ಪ್ರತಿಪಾದಿಸುತ್ತದೆ. ಕೃಷಿ ಅಧಿಕಾರಿಯ ನೇಮಕದ ಸಲಹೆ ನೀಡಲಾಗಿದೆ. ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ತೆರಿಗೆ ವಿಧಿಸಬೇಕಾದ ಮಹತ್ವವನ್ನು ಹೇಳಲಾಗಿದೆ. ಬೆಲೆ ನಿಗದಿ, ಕೃಷಿ ಉತ್ಪನ್ನಗಳನ್ನು ಮಾರಟ ಮಾಡುವುದು ಮತ್ತು ಮೂಲ ಸೌಕರ್ಯಗಳನ್ನು ಸಾಕಷ್ಟು ಒದಗಿಸುವುದು ಮಹತ್ವ ಪಡೆದಿದೆ. ಅರ್ಥಶಾಸ್ತ್ರದಲ್ಲಿ ನೀಡಿರುವ ಸಲಹೆಗಳನ್ನು ಇಂದಿನ ರೈತರಿಗೆ ಲಾಭದಾಯಕವಾಗುವಂತೆ ಬಳಸಿಕೊಳ್ಳಬಹುದಾಗಿದೆ.

ಉಪಸಂಹಾರ :– ಅರ್ಥಶಾಸ್ತ್ರವು ರಾಜಧರ್ಮದಡಿಯಲ್ಲಿ ಉಪದೇಶಿಸಲ್ಪಟ್ಟಿದ್ದು, ಅಥರ್ವಣ ವೇದದ ಉಪವೇದ ಎಂದು ಹೇಳಲ್ಪಟ್ಟಿದೆ. ಕೌಟಿಲ್ಯನು "ಮನುಷ್ಯರ ಜೀವನ ಮತ್ತು ಮನುಷ್ಯರನ್ನುಳ್ಳ ಭೂ ಪ್ರದೇಶ ಅರ್ಥವೆನಿಸುವುದೆಂದು" ಹೇಳಿರುತ್ತಾರೆ. 'ಅರ್ಥ' ಎಂಬ ಶಬ್ದವು ಅಂದು ವಿಶಾಲ ದೃಷ್ಟಿಕೋನವನ್ನು ಹೊಂದಿತ್ತು. ಇಂದು ನಾವು ಕೇವಲ ಅಚೇತನವಾದ ವಸ್ತುವಿಗೆ ಸೀಮಿತವಾಗಿರಿಸಿದ್ದೇವೆ. ಆದರೆ ಕೌಟಿಲ್ಯರು ಕೇವಲ 'ಸಂಪತ್ತು' ಎಂಬ ಅರ್ಥದಲ್ಲಿ ಅರ್ಥಶಾಸ್ತ್ರವನ್ನು ಹೇಳದೇ ಇದರೊಂದಿಗೆ ಮನುಷ್ಯನ ಜೀವನವನ್ನು ಸೇರಿಸಿಕೊಂಡಿರುವುದು ವಿಶಿಷ್ಟವಾದ ಅಂಶವಾಗಿದೆ. "ಮನುಷನು ಸಂತುಷ್ಟ ಮನಸ್ಸಿನಿಂದ ಆರೋಗ್ಯವಾಗಿದ್ದರೆ ಅದೇ ಸಂಪತ್ತು ಎನಿಸುತ್ತದೆ, ಮನಸ್ಸು ವಿಕೃತವಾಗಿದ್ದರೆ ಯಾವುದು ಅವನಿಗೆ ಪ್ರಯೋಜನಕ್ಕೆ ಬಾರದು ಎಂದೂ ಮತ್ತು 'ಅರ್ಥ' ಎಂಬ ವಿಷಯವನ್ನು ಪ್ರತಿಯೊಂದು ಕ್ಷೇತ್ರದಲ್ಲೂ ಹೇಗೆ ಯಾವ ರೀತಿ ಬಳಸಿಕೊಂಡಲ್ಲಿ ಅದು ನಮಗೆ ಉಪಯುಕ್ತ ಎನ್ನುವುದನ್ನು ತಿಳಿಸಿದ್ದಾರೆ. ಈ ಎಲ್ಲಾ ಕಾರಣಗಳಿಂದ ಕೌಟಿಲ್ಯರ ಅರ್ಥಶಾಸ್ತ್ರವು ಇಂದಿಗೂ ಅತ್ಯಮೂಲ್ಯವಾದ ಜ್ಞಾನ ಭಂಡಾರ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಆಧಾರ ಗ್ರಂಥಗಳು :–

1) ಕೌಟಿಲ್ಯನ ಅರ್ಥಶಾಸ್ತ್ರ – ಜೈಕೋ ಪಬ್ಲಿಕೇಷನ್ಸ್, ಮುಂಬಯಿ.
2) ಕೌಟಲೀಯ ಅರ್ಥಶಾಸ್ತ್ರ – ಶ್ರೀ ಕೂಡಲಿ ಜಗದ್ಗುರು ಶ್ರೀ ಸಚ್ಚಿದಾನಂದ ಭಾರತಿಗಳು, ಅಂಕಿತ ಪುಸ್ತಕ, ಬೆಂಗಳೂರು.
3) ಕೌಟಲೀಯಂ ಅರ್ಥಶಾಸ್ತ್ರ – ಡಾ॥ ರಘುನಾಥಸಿಂಗ್, ಕೃಷ್ಣದಾಸ್ ಅಕಾಡೆಮಿ, ವಾರಣಾಸಿ.
4) ಎಕನಾಮಿಕ್ಸ್ ಇನ್ ಅರ್ಥಶಾಸ್ತ್ರ – ರಾಜಕುಮಾರ್ ಸೆನ್ ಮತ್ತು ರತನ್‌ಲಾಲ್ ಬಸು, ದೀಪ್ ಮತ್ತು ದೀಪ್ ಪಬ್ಲಿಕೇಷನ್ಸ್ (ಪ್ರೈ) ಲಿ., ದೆಹಲಿ.

ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮವಾಸ್ತವ್ಯದ ಪರಿಕಲ್ಪನೆ

*ಅರುಣ್ ಆರ್, **ಡಾ.ಜಿ.ಟಿ.ರಾಮಚಂದ್ರಪ್ಪ,
*ಸಂಶೋಧಕರು, ** ಪ್ರಾಧ್ಯಪಕರು, ರಾಜ್ಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ಗ್ರಾಮ ರಾಜ್ಯ ರಾಮರಾಜ್ಯ ಎಂಬುದು ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ ಮಹಾನ್ ಕನಸು, ಗುರಿ. ರಾಜ್ಯ ಎಲ್ಲಾ ಹಳ್ಳಿಗಳಿಗೆ ಉತ್ತಮ ಮೂಲಭೂತ ಸೌಕರ್ಯ ಒದಗಿಸುವ ಮೂಲಕ ರೈತಾಪಿ ಮತ್ತು ಗ್ರಾಮೀಣ ಪ್ರದೇಶದ ಜನತೆಗೆ ಉತ್ತಮ ಬದುಕು ಕಟ್ಟಿಕೊಡುವ ಹಿನ್ನೆಲೆಯಲ್ಲಿ "ಗ್ರಾಮೀಣ ಅಭಿವೃದ್ಧಿಗೆ ಗ್ರಾಮವಾಸ್ತವ್ಯ"ದ ಪರಿಕಲ್ಪನೆ ಸಮಂಜಸವಾಗಿದೆ.

"ಗ್ರಾಮವಾಸ್ತವ್ಯ" ಪರಿಕಲ್ಪನೆ ರಾಜಕಾರಣಿಗಳು, ಅಧಿಕಾರಿಗಳು, ಗ್ರಾಮದಲ್ಲಿ ನೆಲೆಸುವ ಮೂಲಕ ಗ್ರಾಮೀಣ ಜನತೆಯ ಸಮಸ್ಯೆ ಹಾಗೂ ಭವಣೆಗಳನ್ನು ಹತ್ತಿರದಿಂದ ತಿಳಿದು ಜನತೆಗೆ ಸ್ಪಂದಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಅನುಕೂಲವಾಗಿದೆ.

ಇಂತಹ ಮಹತ್ವವಾದ ಪರಿಕಲ್ಪನೆಯನ್ನು ಮಹಾತ್ಮಗಾಂಧೀಜಿಯವರು ತನ್ನ ಆದರ್ಶ ರಾಜ್ಯದ ಕಲ್ಪನೆಯಲ್ಲಿ ಪರಿಗಣಿಸಿದ್ದರು. ಭಾರತದ ಆಧುನಿಕ ಸರ್ಕಾರದ ವ್ಯವಸ್ಥೆಯಲ್ಲಿ ಮಾಜಿ ಪ್ರಧಾನಿ ಶ್ರೀಯುತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಜಾರಿಗೆ ತಂದರು. ಕರ್ನಾಟಕ ರಾಜ್ಯದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಲ್ಲಿ ಮಾಜಿ ಮುಖ್ಯಮಂತ್ರಿ, ಹೆಚ್.ಡಿ. ಕುಮಾರಸ್ವಾಮಿಯವರ ಪಾತ್ರ ಅದ್ವಿತೀಯವಾದುದು. ಸರ್ಕಾರಿ ಕಾರ್ಯಕ್ರಮವಾಗಿ "ಗ್ರಾಮವಾಸ್ತವ್ಯ"ವನ್ನು ರೂಪಿಸಿ ಹಲವು ಗ್ರಾಮಗಳಲ್ಲಿ ಶಾಸಕರು, ಅಧಿಕಾರಿಗಳು, ಗ್ರಾಮೀಣ ಜನರೊಂದಿಗೆ ವಾಸ್ತವ್ಯ ಹೂಡಿ ಸರ್ವಶಕ್ತ, ಸದೃಢ, ಸುಸ್ಥಿರ ಗ್ರಾಮಗಳ ನಿರ್ಮಾಣಕ್ಕೆ ಪ್ರಯತ್ನಿಸಿದರು.

ಈ ಪ್ರಬಂಧವು ಈ ಕಾರ್ಯಕ್ರಮ ಹಳ್ಳಿಗಳಿಗೆ ಹೇಗೆ ಸಹಾಯಕವಾಗಿದೆ ಈ ಕಾರ್ಯಕ್ರಮದ ರೂಪುರೇಷೆಗಳೇನು, ಇದರ ಮಹತ್ವ ಹಾಗೂ ಇದನ್ನು ಜಾರಿಗೆ ತರುವಲ್ಲಿ ಕುಮಾರಸ್ವಾಮಿಯವರ ಪಾತ್ರವನ್ನು ವಿವರಿಸಲಾಗಿದೆ.

ಹಿನ್ನೆಲೆ: ಭಾರತದಲ್ಲಿ ಗ್ರಾಮೀಣಾಭಿವೃದ್ಧಿಗಾಗಿ ಹಲವಾರು ಯೋಜನೆಗಳಿವೆ. ಗ್ರಾಮೀಣಾಭಿವೃದ್ಧಿಗಾಗಿ ಮಾಡುವ ಪ್ರತಿಯೊಂದು ಪ್ರಯತ್ನವೂ ಅತ್ಯಗತ್ಯವಾದದ್ದು. ಗ್ರಾಮೀಣಾಭಿವೃದ್ಧಿಗಾಗಿ ಮಾಡುವ ಮಾನವೀಯ ಪ್ರಯತ್ನಗಳಿಗೆ ಸರ್ಕಾರದ ಜನ ಪ್ರತಿನಿಧಿಗಳು ಕಾರಣರಾಗುತ್ತಾರೆ. ಪ್ರತಿಯೊಂದು ಯೋಜನೆಯೂ ತನ್ನ ಇತಿಮಿತಿಯಲ್ಲಿ ಯಶಸ್ವಿಯತ್ತ ದಾಪುಗಾಲಿಡುತ್ತದೆ. ಗ್ರಾಮೀಣಾಭಿವೃದ್ಧಿಯ ಸಂದರ್ಭದಲ್ಲಿ ಎಲ್ಲಾ ಸಮಸ್ಯೆಗಳಿಗೂ ಪರಿಹಾರವನ್ನು ಕಂಡುಕೊಳ್ಳಲಾಗದಿದ್ದರೂ ಕಡಿವಾಣವನ್ನಂತೂ ಹಾಕಬಹುದಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿರುಪೇರುಗಳಿವೆ. ಇಲ್ಲಿನ ಮೇಲುಕೀಳು, ಕುಲ-ಅಕುಲ, ಬಡತನ-ಸಿರಿತನ ಭೇದಭಾವಗಳು ಸಮಸ್ಯೆಗಳ ಮೂಲಗಳಾಗಿವೆ. ಇವುಗಳ ನಿರ್ಮೂಲನದಿಂದ ಮಾತ್ರ ಗ್ರಾಮಗಳಲ್ಲಿ ಶಾಂತಿ ಶಾಶ್ವತವಾಗಿ ನೆಲೆಸುತ್ತದೆ. ಇಂಥ ಸಮಸ್ಯೆಗಳ ಮೂಲೋತ್ಪಾಟನೆಗೆ ಗಾಂಧಿಯುಗದಿಂದಲೂ ಜನಪ್ರತಿನಿಧಿಗಳು, ಸಮಾಜ ಸುಧಾರಕರು ಪ್ರಯತ್ನಿಸುತ್ತಿದ್ದಾರೆ. ಭಾರತದ ಗ್ರಾಮೀಣಾಭಿವೃದ್ಧಿಯ ಸಮಸ್ಯೆಯು ರಾಜಕೀಯ ಅಥವಾ ಆರ್ಥಿಕ ಸಮಸ್ಯೆ ಮಾತ್ರ ಆಗಿರದೆ ಬಹುಮುಖವಾದದ್ದೆಂದು ಮಹಾತ್ಮ ಗಾಂಧೀಜಿಯವರು ಕಂಡುಕೊಂಡಿದ್ದರು. ಭಾರತೀಯರಲ್ಲಿ ಶತಮಾನಗಳ ದಾಸ್ಯದ ಮೂಲಕ ಬೆಳೆದು ಬಂದ ಗುಲಾಮ ಮನೋಭಾವವನ್ನು ಹೋಗಲಾಡಿಸಲು ಧೈರ್ಯ ಮತ್ತು ಆತ್ಮಗೌರವವನ್ನು ತರಲು ಗ್ರಾಮೀಣಾಭಿವೃದ್ಧಿಯ ಅಗತ್ಯವಿತ್ತು. ಇಂಥ ಪರಿಸ್ಥಿತಿಯನ್ನು ಬದಲಾಯಿಸಲು ವಿದ್ಯಾಭ್ಯಾಸ, ಸಮಾಜ ಸುಧಾರಣೆ ಅರ್ಥವ್ಯವಸ್ಥೆ ಮತ್ತು ರಾಜಕೀಯವನ್ನು ಗ್ರಾಮೀಣ ಪ್ರವೃತ್ತಿ ಮತ್ತು ನೆಲದ ಸ್ವಭಾವಕ್ಕೆ ಅನುಗುಣವಾಗಿರಬೇಕೆಂದು ಆಶಿಸಲಾಗಿತ್ತು. ಈ ಹಿನ್ನೆಲೆಯಿಂದ ಮಹಾತ್ಮ ಗಾಂಧೀಜಿ ಅವರು ಮೂರು ದಶಕಗಳ ಕಾಲ ಅವಿರತವಾಗಿ ಶ್ರಮಿಸಿದ್ದರು. ಗಾಂಧೀಜಿ ಅವರು ಗ್ರಾಮ ಸ್ವರಾಜ್ಯವನ್ನು ಸಾಧಿಸಲು ಕಾರ್ಯಕಾರಿಯಾದ ಮಾರ್ಗವನ್ನು ಅನುಸರಿಸಿದ್ದರು. ಗಾಂಧೀಜಿ ಅವರ ಈ ಪ್ರಯತ್ನದ ಫಲವಾಗಿ ರಾಜಕೀಯ ಪ್ರಜ್ಞೆ ದೂರದೂರದ ಹಳ್ಳಿಗಳಿಗೂ ವ್ಯಾಪಿಸಿತು.

ಈ ಹಿನ್ನೆಲೆಯಲ್ಲಿ ನಿಜವಾಗಿಯೂ ಮಹಾತ್ಮಗಾಂಧೀಜಿಯವರ ಗ್ರಾಮಸ್ವರಾಜ್ಯ ಪರಿಕಲ್ಪನೆ ಸ್ವಾತಂತ್ರ್ಯ ಹೋರಾಟಕ್ಕೆ ವಿಸ್ತೃತವಾದ ಆಧಾರವನ್ನು ನೀಡಿತ್ತು. "ವಿದ್ಯಾಭ್ಯಾಸ ಒಂದು ಹೊಸ ಅರ್ಥವನ್ನು ಗುರಿಯನ್ನೂ ಪಡೆಯಿತು; ಸಾಮಾಜಿಕ ಜೀವನ ಹೆಚ್ಚು ಸ್ವತಂತ್ರ್ಯವೂ ನಿರಾತಂಕವೂ ಆಯಿತು. ಪರಿಸರದಲ್ಲೇ ಒಂದು ನೈತಿಕ ಉತ್ಸಾಹ ತುಂಬಿಕೊಂಡಿತು. ಅವರು ನಮ್ಮನ್ನು ಮಣ್ಣಿನಿಂದ ಮೇಲೆತ್ತಿ ಮನುಷ್ಯರನ್ನಾಗಿ ಮಾಡಿದರು. ಅದುವರೆಗೂ ಸ್ವರಾಜ್ಯದ ಬಯಕೆ ಬಲವಾಗುತ್ತ ಬಂದಿದ್ದರೂ ಅದನ್ನು ಪಡೆಯುವ ಮಾರ್ಗವನ್ನು ಯಾರೂ ತೋರಿಸಿರಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ಅಸಹಕಾರ ಹಾಗೂ ಸತ್ಯಾಗ್ರಹದ ಆಯುಧವನ್ನು ಬೆಸೆದಿದ್ದರು ಮತ್ತು ಸ್ವರಾಜ್ಯ ಸಾಧಿಸಲು ಹೊಸ ಆಯುಧವನ್ನಾಗಿ ಅದನ್ನೇ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲಕ ರಾಷ್ಟ್ರಕ್ಕೆ ನೀಡಿದರು" (ಕ.ಅ.ಸಂ: ಡಾ. ಎಚ್. ತಿಪ್ಪೇರುದ್ರಸ್ವಾಮಿ, "ಮಹಾತ್ಮಗಾಂಧಿ: 100 ವರ್ಷಗಳು", ಗಾಂಧಿಭವನ, ಮಾನಸಗಂಗೋತ್ರಿ, ಮೈಸೂರು, 1970, ಪು.51)

ಪ್ರಸ್ತುತ ಮಹಾತ್ಮಗಾಂಧೀಜಿ ಅವರ ಶ್ರಮ ಸಾರ್ಥಕವಾಗಿದೆ. ಗ್ರಾಮೀಣ ಯುವಜನಾಂಗ ವಿದ್ಯಾವಂತರಾಗುತ್ತಿದ್ದಾರೆ. ಅವರ ಆರ್ಥಿಕ-ಸಾಮಾಜಿಕ ಜೀವನ ಹೆಚ್ಚೆಚ್ಚು ಶ್ರೇಷ್ಠವಾಗತೊಡಗಿದೆ. ವಾಸ್ತವವಾಗಿ ಗ್ರಾಮೀಣಾಭಿವೃದ್ಧಿಯು ಗ್ರಾಮಸ್ವರಾಜ್ಯಕ್ಕೆ ಪ್ರೇರಕ ಶಕ್ತಿಯಾಗಿದೆ. ಗ್ರಾಮೀಣಾಭಿವೃದ್ಧಿಯ ಸೂತ್ರಗಳ ಪರಿಣಾಮ ಅಗಾಧವಾದದ್ದಾಗಿದೆ. ವಿಕಾಸಪಥದ ಬೆನ್ನೆಲುಬು ಹಳ್ಳಿಗಳೇ ಆಗಿವೆ. ಮಹಾತ್ಮಗಾಂಧೀಜಿ, ಲಾಲ್‌ಬಹದ್ದೂರ್ ಶಾಸ್ತ್ರಿ, ದೇವರಾಜ ಅರಸು ಮತ್ತು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಪ್ರಾರಂಭಿಸಿದ 'ಗ್ರಾಮವಾಸ್ತವ್ಯ' ಅಣುವಾಗಿ ಪ್ರಾರಂಭಿಸಿದುದು ಬೃಹತ್ತಾಗಿ ಪರಿಣಮಿಸುವುದಿದೆ. ಕುಮಾರಸ್ವಾಮಿ ಅವರು ಮಹಾತ್ಮಗಾಂಧೀಜಿ ಅವರ ನಿಲುವುಗಳನ್ನು ರಾಜಕೀಯ ಚಿಂತನೆಗಳಲ್ಲಿ ರೂಢಿಸಿಕೊಂಡಿದ್ದರು. ಗಾಂಧಿಜೀಯವರಿಗೆ ಅವರಿಗೆ, "ಸಣ್ಣ ಸಣ್ಣ ಗುಂಪುಗಳನ್ನಾಯ್ದು

ಯೋಜಿತ ಕಾರ್ಯಕ್ರಮಗಳ ಮೂಲಕ ಕೆಲಸ ಮಾಡುವುದೇ ಗಾಂಧಿಯವರ ತಂತ್ರ ಗಾಂಧಿಜೀಯವರು ಉದ್ದೇಶ ಉತ್ತಮವಾಗಿದ್ದಲ್ಲಿ ಯಾವ ಸಾಧನವೂ ಆಗಬಹುದೆಂಬ ವಿಚಾರವನ್ನು ಗಾಂಧೀಜಿಯವರು ತಿರಸ್ಕರಿಸಿದರು. ಸಾಧನವೂ ಸಹ ಉದ್ದೇಶದಷ್ಟೇ ಮುಖ್ಯವೆಂದು ಅವರ ಮತ. ಇಂಥ ತತ್ತ್ವವನ್ನು ಅನುಸರಿಸಿ ವ್ಯಕ್ತಿ ತಾನು ಶ್ರೇಷ್ಠನಾಗುವುದ ಲ್ಲದೆ, ಇಂತಹ ಶುದ್ಧಮಾರ್ಗವನ್ನನುಸರಿಸಿ ಇತಿಹಾಸದ ಹಾದಿಯನ್ನು ಬದಲಿಸುವನು" (ಪೂರ್ವೋಕ್ತ, ಪು.150) ಎಂಬ ವಿಚಾರಧಾರೆಯಲ್ಲಿ ನಂಬಿಕೆಯಿತ್ತು. ಈ ಹಿನ್ನೆಲೆಯಿಂದ ಹೆಚ್.ಡಿ.ಕುಮಾರಸ್ವಾಮಿಯವರು ಸಹ ಗಾಂಧಿತತ್ವವನ್ನೇ ಅನುಸರಿಸಿದರು ಎಂದು ಹೇಳಬಹುದು. ಗ್ರಾಮಸ್ವರಾಜ್ಯದ ಸ್ಥಾಪನೆ ಕುಮಾರಸ್ವಾಮಿಯವರ ಗುರಿಯಾಗಿದೆ ಅದಕ್ಕೆ ಅವರು ಕಂಡುಕೊಂಡ ಮಾರ್ಗ 'ಗ್ರಾಮವಾಸ್ತವ್ಯ'ಎಂಬುದನ್ನು ನಾವು ಸ್ಮರಿಸಬಹುದು. ಗ್ರಾಮವಾಸ್ಥವ್ಯದ ಸಂದರ್ಭದಲ್ಲಿ ಪ್ರೇಮ ಮತ್ತು ಅನುಕಂಪಗಳಿಂದ ಜನತೆಯ ಮೇಲೆ ಅಧಿಕ ಪ್ರಭಾವವನ್ನುಂಟು ಮಾಡಿದರು. ಕುಮಾರಸ್ವಾಮಿ ಅವರ ಸೇವೆ, ಪ್ರೀತಿ, ಯೋಜನೆಗಳು ಮತ್ತು ಕಾರ್ಯದಕ್ಷತೆ ಪರಿಣಾಮಕಾರಿಯಾಗಿತ್ತು. ಮುಖ್ಯಮಂತ್ರಿಯಾಗಿ 20 ತಿಂಗಳ ಅವಧಿಯಲ್ಲಿ ಹೆಚ್.ಡಿ. ಕುಮಾರಸ್ವಾಮಿಯವರು ಗ್ರಾಮೀಣರ ಕಷ್ಟಕಾರ್ಪಣ್ಯ ಅರಿತು ಮಾಡಿದ ಯೋಜನೆ ಮತ್ತು ಕಾರ್ಯಕ್ರಮ ಸಾಧನೆಗಳು ಹೀಗಿವೆ : ಜನತಾದರ್ಶನ, ಅಂಗವಿಕಲರಿಗೆ, ವೃದ್ಧರಿಗೆ ಮತ್ತು ವಿಧವೆಯರಿಗೆ ಸ್ಪಂದಿಸಿ ಮಾಶಾಸನ ಹೆಚ್ಚಿಸಿದರು. ಗ್ರಾಮವಾಸ್ತವ್ಯ, ಸುವರ್ಣ ಗ್ರಾಮ ಯೋಜನೆ, 25 ಸಾವಿರ ಕೋಟಿಯಷ್ಟು ರೈತರ ಸಾಲ ಮನ್ನಾ, ದೇವದಾಸಿಯರ ಹೆಣ್ಣುಮಕ್ಕಳ ಕಲ್ಯಾಣ ಯೋಜನೆ, ರೈತರಿಗೆ ಮತ್ತು ಸ್ತ್ರೀಶಕ್ತಿ ಕೇಂದ್ರಗಳಿಗೆ ಅತ್ಯಂತ ಕಡಿಮೆ ಬಡ್ಡಿದರದಲ್ಲಿ (4%)ರಲ್ಲಿ ಸಾಲ, ಮುಂತಾದವು. ಈ ಹಿನ್ನೆಲೆಯಿಂದ ಪ್ರಸ್ತುತ ಪ್ರಬಂಧವನ್ನು ನಿರ್ವಹಿಸಲಾಗಿದೆ.

ಗ್ರಾಮೀಣಾಭಿವೃದ್ಧಿಯಲ್ಲಿ 'ಗ್ರಾಮವಾಸ್ತವ್ಯದ ಪರಿಕಲ್ಪನೆ: ಪ್ರಸ್ತುತ ಎರಡನೆಯ ವಿಭಾಗದಲ್ಲಿ ಗ್ರಾಮೀಣಾಭಿವೃದ್ಧಿಯಲ್ಲಿ 'ಗ್ರಾಮವಾಸ್ತವ್ಯ'ದ ಪರಿಕಲ್ಪನೆಯನ್ನು ವಿವೇಚಿಸಲಾಗಿದೆ. ಅಧ್ಯಯನದ ಸಾಹಿತ್ಯ ಸಮೀಕ್ಷೆಯಲ್ಲಿ ಸೈದ್ಧಾಂತಿಕ ಪ್ರಸ್ತಾವನೆಯ ಪರಿಕ್ರಮವಿದೆ. ಸಾಮಾನ್ಯವಾಗಿ, "ಭಾರತದ ಗ್ರಾಮೀಣ ಜನತೆಯ ಬದುಕು ಸುಧಾರಿಸದೆ ಅವರು ಆರ್ಥಿಕವಾಗಿ ಸಬಲೀಕರಣವಾಗದೆ, ಭಾರತದ ನೈಜ ಆರ್ಥಿಕ ಅಭಿವೃದ್ಧಿ ಆಗಲು ಸಾಧ್ಯವಾಗದು. ನಿಜವಾದ ಭಾರತ ಹಳ್ಳಿಗಳಲ್ಲಿದೆಯೇ ಹೊರತು ಕೆಲವೇ ನಗರ ಮತ್ತು ಪಟ್ಟಣಗಳಲ್ಲಿ ಇಲ್ಲ, ಹಳ್ಳಿಗಳು ನಾಶವಾದರೆ ಭಾರತವೂ ನಾಶವಾದಂತೆ ಭಾರತ ಇದ್ದೂ ಇಲ್ಲದಂತಾಗುತ್ತದೆ. ಆದುದರಿಂದ ಗ್ರಾಮೀಣಾಭಿವೃದ್ಧಿಗೆ ಸರ್ಕಾರದ ಆರ್ಥಿಕ ನೀತಿಗಳಲ್ಲಿ ಸೂಕ್ತ ರೀತಿಯಲ್ಲಿ ಗಮನ ನೀಡಬೇಕು. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ ವೆಂದರೆ ಕೇವಲ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯಕ್ರಮಗಳು ಮಾತ್ರವಲ್ಲ. ಗ್ರಾಮದ ಬೌದ್ಧಿಕ, ಯುಕ್ತ ವೈಜ್ಞಾನಿಕ ಮತ್ತು ತಾಂತ್ರಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ನೈತಿಕ ಅಭಿವೃದ್ಧಿಗಳೂ ಇದರಲ್ಲಿ ಸೇರಬೇಕು" (ಎಂ.ಡಿ. ಉಮೇಶ, "ಗಾಂಧೀಜಿ ಯವರ ಆದರ್ಶ ಗ್ರಾಮ ಪರಿಕಲ್ಪನೆ, ದೀಪ್ತಿ ಬುಕ್‌ಹೌಸ್, ಮೈಸೂರು, 2011, ಪು.09) ಎಂಬ ಅಭಿಮತ ಸಾರ್ವತ್ರಿಕವಾದದ್ದು. ಭಾರತ ಹಳ್ಳಿಗಳ ದೇಶವಾಗಿದೆ; ಇಲ್ಲಿ 5,65,000ಕ್ಕೂ ಹೆಚ್ಚು ಹಳ್ಳಿಗಳಿವೆ. 2001ರ ಜನಗಣತಿಯ ಮೇರೆಗೆ 349 ದಶಲಕ್ಷ ಜನರು (ಶೇ. 66ರಷ್ಟು) ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಕಳೆದ ಐದು ದಶಕಗಳ ಗ್ರಾಮೀಣಾಭಿವೃದ್ಧಿಯ ಕಾರ್ಯಕ್ರಮಗಳು ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ಪರಿಪೂರ್ಣವಾಗಿ ಪರಿಹರಿಸಲಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ "ಗ್ರಾಮವಾಸ್ತವ್ಯ" ಪ್ರಸ್ತುತವೆನಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಬಡತನ, ಜನಸಂಖ್ಯಾ ಸ್ಫೋಟನೆ, ಅಪೌಷ್ಟಿಕತೆ, ಪ್ರಾದೇಶಿಕ ಅಸಮತೋಲನ ಅಭಿವೃದ್ಧಿ, ಮೂಲಭೂತ ಸೌಕರ್ಯಗಳ ಅಭಾವ, ಜಲಮಾಲಿನ್ಯ, ವಾಯುಮಾಲಿನ್ಯ ಮುಂತಾದ ಸಮಸ್ಯೆಗಳು ಬೆಳೆಯುತ್ತಿವೆ. ಮುಖ್ಯವಾಗಿ, "ಭಾರತ ಕೃಷಿ ಪ್ರಧಾನ ದೇಶವಾಗಿದ್ದರೂ, ಸಂಪತ್ತು ಗ್ರಾಮೀಣ ಭಾಗದಲ್ಲಿ ಸೃಷ್ಟಿಯಾಗುತ್ತಿದ್ದರೂ ಹಳ್ಳಿಗಳು ಉಪೇಕ್ಷೆಗೆ ಒಳಗಾಗಿವೆ. ನೈಜ ಭಾರತವನ್ನು ಹಳ್ಳಿಯಲ್ಲಿ ಕಾಣಬೇಕು ಎಂದು ರಾಷ್ಟ್ರಪಿತ ಗಾಂಧೀಜಿ ಹೇಳುತ್ತಿದ್ದರು. ಹಳ್ಳಿಗಳ ಅಭಿವೃದ್ಧಿಯೇ ಭಾರತದ ಅಭಿವೃದ್ಧಿ, ಹಳ್ಳಿಗಳನ್ನು ಅಲಕ್ಷಿಸಿ ಭಾರತ ಅಭಿವೃದ್ಧಿಗೊಳ್ಳು ವುದು ಸಾಧ್ಯವಿಲ್ಲ ಎಂಬುದು ಅವರ ಅಭಿಮತವಾಗಿದ್ದಿತು" (ಪೂರ್ವೋಕ್ತ, ಪು.10) ಹಳ್ಳಿಗಳನ್ನು ಜನಪ್ರತಿನಿಧಿಗಳು ಮುಖತಃ ಕಾಣದೆ ಯೋಜನೆಗಳನ್ನು ರೂಪಿಸುವುದರಿಂದ ಪ್ರಯೋಜನವಾಗದು. ಹಳ್ಳಿಗಳ ಅಭಿವೃದ್ಧಿಗಾಗಿ ಮುಖತಃ ವೀಕ್ಷಣೆ ಅತ್ಯಗತ್ಯ. ಸಂಪತ್ತಿನ ಉತ್ಪಾದನೆಯಲ್ಲಿ ಹಳ್ಳಿಗಳು ಪ್ರಧಾನವಾದವು. ಆದ್ದರಿಂದ ಗಾಂಧೀಜಿ ಅವರ ಅಭಿಮತದಂತೆ ಹಳ್ಳಿಗಳಲ್ಲಿ ವಾಸಿಸುವುದು ವಿಶೇಷವಾದ ಅನುಭೂತಿಯೇ ಆಗಿದೆ. ಗ್ರಾಮಗಳು ದೇಶದ ಆತ್ಮದಂತಿವೆ. ಹಳ್ಳಿಗಳ ಅಭಿವೃದ್ಧಿಗಾಗಿ 'ಗ್ರಾಮವಾಸ್ತವ್ಯ' ಸಹಕಾರಿಯಾಗಿದೆ. ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ತಜ್ಞರು ಗ್ರಾಮಗಳೊಡನೆ ನಿಕಟವಾದ ಸಂಬಂಧವನ್ನು ಇರಿಸಿಕೊಳ್ಳಲೇಬೇಕು.

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯೇ ಪ್ರಧಾನ ಕಸುಬಾಗಿದ್ದು ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳು ವ್ಯಾಪಕವಾಗಿದೆ. ಕೃಷಿಯನ್ನು ಇನ್ನಷ್ಟು ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಬೇಕಾಗಿದೆ. ವಿಶೇಷ ಗ್ರಾಮೀಣಾಭಿವೃದ್ಧಿ ಯೋಜನೆಗಳು ಫಲನೀಡಲು ಪರಿಘೀಕ್ಷಣೆಗಾಗಿ ಗ್ರಾಮವಾಸ್ತವ್ಯ ನೆರವಾಗುತ್ತದೆ. ಸೈದ್ಧಾಂತಿಕ ಹಿನ್ನೆಲೆಯ (Theoretical Background) ಅಭಿವೃದ್ಧಿ ಸಿದ್ಧಾಂತಗಳ ಯಶಸ್ಸು ಇರುವುದು ಪ್ರಾಯೋಗಿಕ ಹಿನ್ನೆಲೆಯಲ್ಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಆದರ್ಶ ಗ್ರಾಮ ನಿರ್ಮಾಣದ ಸಂದರ್ಭದಲ್ಲಿ ಅಭಿವೃದ್ಧಿ ಸಿದ್ಧಾಂತಗಳ ನೆರವು ಅತ್ಯಗತ್ಯವಾಗಿದೆ. ಅಭಿವೃದ್ಧಿಯ ಆಧುನಿಕ ಸಿದ್ಧಾಂತಗಳು (The Development of modern Theory) ಗ್ರಾಮಾಭಿವೃದ್ಧಿಗೆ ಸಹಕಾರಿ ಯಾಗಿವೆ. ಇಷ್ಟಾದರೂ ಗ್ರಾಮಗಳಲ್ಲಾಗಿರುವ ಅಭಿವೃದ್ಧಿಯನ್ನು ಕಾಣಲು ಗ್ರಾಮ ವಾಸ್ತವ್ಯದಂಥ ಕಾರ್ಯಕ್ರಮದ ಅಗತ್ಯವಿದೆ.

ಮಾಜಿ ರಾಷ್ಟ್ರಪತಿ ಭಾರತ ರತ್ನ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಭಾರತದ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ನಾಲ್ಕು ರೀತಿಯ ಸಂಪರ್ಕಗಳ ಅಗತ್ಯವನ್ನು ಹೇಳಿದ್ದಾರೆ. ಅವುಗಳೆಂದರೆ ಭೌತಿಕ ಸಂಪರ್ಕ ನೀಡುವಿಕೆ, ವಿದ್ಯುನ್ಮಾನ ಸಂಪರ್ಕ ನೀಡುವಿಕೆ, ಜ್ಞಾನದ ಸಂಪರ್ಕ ನೀಡುವಿಕೆ ಮತ್ತು ಆರ್ಥಿಕ ಸಂಪರ್ಕ ನೀಡುವಿಕೆ. ಇವುಗಳ ಬಳಕೆಯಿಂದ ಗ್ರಾಮಜೀವನ ಮೇಲುಮಟ್ಟಕ್ಕೇರಲು ಸಾಧ್ಯವಾಗುತ್ತದೆ. ವಿಶ್ವಸಂಸ್ಥೆಯು ಗ್ರಾಮೀಣ ಪ್ರದೇಶಾಭಿವೃದ್ಧಿಗೆ ಹೆಚ್ಚಿನ ಗಮನವನ್ನು ನೀಡಬೇಕೆಂದು ಆಶಿಸಿದೆ.

ಕರ್ನಾಟಕದ ಗ್ರಾಮಗಳ ಸ್ಥಿತಿಗತಿಯನ್ನರಿಯಲು ಗ್ರಾಮವಾಸ್ತವ್ಯದಿಂದ ಮಾತ್ರವೇ ಸಾಧ್ಯವಾಗುತ್ತದೆ. ವಿದ್ಯುಚ್ಛಕ್ತಿಯ ಲಭ್ಯತೆ, ಕುಡಿಯುವ ನೀರಿನ ಪೂರೈಕೆ, ಒಳಚರಂಡಿ ವ್ಯವಸ್ಥೆ, ಬಸ್ಸು-ರೈಲು ಸಾರಿಗೆ ವ್ಯವಸ್ಥೆ, ಅಂಚೆ ಮತ್ತು ಬ್ಯಾಂಕ್ ಸೌಲಭ್ಯಗಳು, ಆಸ್ಪತ್ರೆ ಸೌಲಭ್ಯಗಳು,

ಅಂಗವಿಕಲರಿಗೆ, ಹಿರಿಯ ನಾಗರಿಕರಿಗೆ ಒದಗಿಸಿರುವ ಸೌಲಭ್ಯಗಳನ್ನರಿಯಲು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕೋಷ್ಟಕಗಳನ್ನು ದಾಟಿ ಗ್ರಾಮ ವಾಸ್ತವ್ಯಕ್ಕೆ ಬರಬೇಕಾದ ಅಗತ್ಯವಿದೆ. ಗ್ರಾಮಾಭಿವೃದ್ಧಿಯಲ್ಲಿ ಅನುಸರಿಸುವ ಆರ್ಥಿಕ ಅಭಿವೃದ್ಧಿ ತಂತ್ರಗಳಲ್ಲಿ ಜನರ ಸಾಮಾಜಿಕ, ಆರ್ಥಿಕ, ಬೌದ್ಧಿಕ ಆಧುನಿಕತೆಗಳನ್ನು ತರಲು ಆರ್ಥಿಕ ಮತ್ತು ತಾಂತ್ರಿಕ ಬದಲಾವಣೆಗಳು ಬಹಳ ಪ್ರಮುಖವೆನಿಸಿವೆ. ಈ ಆರ್ಥಿಕ ಮತ್ತು ತಾಂತ್ರಿಕ ಬದಲಾವಣೆಗಳನ್ನು ಗಮನಿಸಿ ಪರಿಹಾರಗಳನ್ನು ಕೊಡಮಾಡಲು ಆರ್ಥಿಕ ಮತ್ತು ಸಾಮಾಜಿಕ ಮೂಲ ಸೌಲಭ್ಯಗಳು ಬಹಳ ಮುಖ್ಯವಾಗುತ್ತದೆ. ಇಂಥ ಮೂಲ ಸೌಲಭ್ಯಗಳನ್ನು ಗ್ರಾಮೀಣ ಪ್ರದೇಶಗಳು ಒದಗಿಸುತ್ತವೆ. ಇವುಗಳ ಅಧ್ಯಯನ ಮತ್ತು ಬಳಕೆಗಾಗಿ ಗ್ರಾಮವಾಸ್ತವ್ಯದ ಅಗತ್ಯವಿದೆ.

ಪ್ರಪಂಚದ ಪ್ರತಿಷ್ಠಿತ ಮತ್ತು ಪ್ರಗತಿಪರ ರಾಷ್ಟ್ರಗಳಲ್ಲಿ ಭಾರತವು ಒಂದೆಂದು ಪರಿಗಣಿತವಾಗಿದೆ. ಬಹುತೇಕ ಭಾರತದ ಶ್ರೇಷ್ಠ ಚಿಂತಕರು, ಸಮಾಜ ಸುಧಾರಕರು, ವಿಜ್ಞಾನಿಗಳು, ತತ್ತ್ವಜ್ಞಾನಿ, ಕಲಾವಿದರು ಮೊದಲಾದವರು ಗ್ರಾಮೀಣ ಪ್ರದೇಶದಿಂದ ಬಂದವರಾಗಿದ್ದಾರೆ. ಭಾರತದ ರಾಜಕೀಯಕ್ಕೆ ನೀತಿ–ನಿಯಮ ಹಾಗೂ ಸಾಂಸ್ಕೃತಿಕ ಚೌಕಟ್ಟನ್ನು ನೀಡಿದ ಮಹಾತ್ಮಗಾಂಧೀಜಿ, ವಿನೋಬಾಬಾವೆ, ಡಾ. ಬಿ.ಆರ್. ಅಂಬೇಡ್ಕರ್, ವಲ್ಲಬಾಯಿ ಪಟೇಲ್, ರಾಜಾಜಿ ಮೊದಲಾದವರು ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ಅರಿತಿದ್ದರು. ಗ್ರಾಮೀಣ ಸಮಾಜ–ಸಂಸ್ಕೃತಿಗಳೊಂದಿಗೆ ರಾಜಕೀಯವನ್ನು ವಿಸ್ತರಿಸಿ ರಾಷ್ಟ್ರ ಕಟ್ಟಬೇಕೆಂದು ಅವರೆಲ್ಲ ಆಶಿಸಿದ್ದರು. ಇದು ಸಾಧ್ಯವಾಗುವುದು ಗ್ರಾಮೀಣ ಪ್ರದೇಶಗಳ ನಿಕಟ ಸಂಪರ್ಕದಿಂದಾಗಿದೆ.

ಗ್ರಾಮೀಣ ಆಡಳಿತದಲ್ಲಿ ಜನರ ಪಾತ್ರ ಬಹುಮುಖ್ಯವಾದ್ದು. ಆಡಳಿತದಲ್ಲಿ ಸುಧಾರಣೆಯನ್ನು ತರಲು ಗ್ರಾಮೀಣಾಭಿವೃದ್ಧಿಗೆ ಆದ್ಯತೆಯನ್ನು ನೀಡಲೇಬೇಕು. ಗಾಂಧೀಜಿ ಅವರು ಹೇಳಿರುವಂತೆ "ಆಡಳಿತದ ಚುಕ್ಕಾಣಿಯನ್ನು ಗ್ರಾಮೀಣ ಜನರಿಗೆ ನೀಡುವ ಪ್ರಕ್ರಿಯೆಯೇ ಪಂಚಾಯತ್ ರಾಜ್ ವ್ಯವಸ್ಥೆ" ಇಂಥ ವ್ಯವಸ್ಥೆ ಪ್ರಾಚೀನತೆಯನ್ನು ಹೊಂದಿದೆ. ಬ್ರಿಟಿಷರು ಭಾರತದಲ್ಲಿರುವ 'ಗ್ರಾಮ ಸ್ವರಾಜ್ಯ' ವ್ಯವಸ್ಥೆಯನ್ನು ಅವಲೋಕಿಸಿದ್ದರು. ಛಾರ್ಲ್ಸ್ ಮಟಕಾಫ್ ಅವರು ಪ್ರಾಚೀನ ಕಾಲದ ಪಂಚಾಯತ್‌ಗಳು ಗಣರಾಜ್ಯದ ಎಲ್ಲಾ ಲಕ್ಷಣಗಳನ್ನು ಹೊಂದಿದ್ದವು ಎಂದಿದ್ದಾರೆ. ಹೀಗಾಗಿ ಗ್ರಾಮೀಣಾಭಿವೃದ್ಧಿಗಾಗಿ ಗ್ರಾಮ ಸಂಬಂಧದ ಅಗತ್ಯವಿದೆ.

ಭಾರತ ಸಂವಿಧಾನದ 73ನೆಯ ತಿದ್ದುಪಡಿಯ ಕಾಯ್ದೆ ಅನ್ವಯ ರಾಜ್ಯಗಳ ಏಕರೂಪದ ಪಂಚಾಯತ್ ರಾಜ್ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಕರ್ನಾಟಕ ಸರ್ಕಾರ 1993ರಲ್ಲಿ ಹೊಸ ಪಂಚಾಯತ್ ರಾಜ್ ಕಾಯ್ದೆಯನ್ನು ಅಂಗೀಕರಿಸಿತು. ಇದು ಮೇ 10, 1993ರಿಂದ ಜಾರಿಗೆ ಬಂದಿತು. ಸಂವಿಧಾನದ 73ನೆಯ ತಿದ್ದುಪಡಿ ಅನ್ವಯ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಧಿಕಾರ ವಿಕೇಂದ್ರೀಕರಣದ ಮೂಲಕ ನೀಡಲಾಯಿತು. ಜೊತೆಗೆ ಲಿಂಗತಾರತಮ್ಯವನ್ನು ಕಿತ್ತೊಗೆಯಲು ಸ್ಥಳೀಯ ಸರ್ಕಾರಗಳು ಪ್ರಯತ್ನಿಸುವಂತೆ ತಿಳಿಸಲಾಯಿತು. ಇದಕ್ಕೆ ಅಗತ್ಯವಿದ್ದ ಮೀಸಲು ಮಸೂದೆ ಅಂಗೀಕಾರವಾಯಿತು. ರಾಜಕೀಯ ನಿಯಮಗಳನ್ನು ರಚಿಸುವ ರಚನಕಾರರು 73ನೆಯ ಸಂವಿಧಾನ ತಿದ್ದುಪಡಿಯನ್ನು ಗುರುತಿಸಿ ಮಹಿಳೆಯರಿಗೂ ಆಡಳಿತದಲ್ಲಿ ಸಮಾನ ಅವಕಾಶ ನೀಡುವುದಷ್ಟೇ ಅಲ್ಲದೆ ಅವರ ತೀರ್ಮಾನಗಳನ್ನು ಗೌರವಿಸಿ ಅಧಿಕಾರ ನೀಡಲಾಯಿತು.

ಗ್ರಾಮವಾಸ್ತವ್ಯದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿ ಅವರ ಸತ್ಯ, ಅಹಿಂಸೆ, ಸಮೂಹ ಸುಧಾರಣೆ, ಅಸ್ಪೃಶ್ಯತೆ ನಿವಾರಣೆ, ಮಹಿಳೆಯರಿಗೆ ರಾಜಕೀಯ ಸ್ಥಾನಮಾನ, ಸರಳತೆ–ಸಮಾನತೆ, ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ, ಪರಿಸರ ಕಾಳಜಿಗಳಂಥ ಮೌಲ್ಯಗಳನ್ನು ಒಡಮೂಡಿಸಲು ಪ್ರಯತ್ನಿಸಬಹುದಾಗಿದೆ. ಮಹಾತ್ಮಗಾಂಧೀಜಿ ಅವರ ಆಶಯದಂತೆ ಗ್ರಾಮ ಸ್ವರಾಜ್ಯದ ಕಲ್ಪನೆಯಡಿಯಲ್ಲಿ ಗ್ರಾಮೀಣ ಬಡಜನರ ಅಭಿವೃದ್ಧಿಗಾಗಿ ಗ್ರಾಮವಾಸ್ತವ್ಯ ಅತ್ಯಗತ್ಯವಾಗಿದೆ.

ಪ್ರಾಚೀನ ಭಾರತದ ರಾಜನೀತಿಜ್ಞನಾದ ಕೌಟಿಲ್ಯನು ಹೇಳಿರುವಂತೆ,

"ಪ್ರಜಾಸುಖೇ ಸುಖಂ ರಾಜ್ಯಃ ಪ್ರಜಾನಾಂಚ ಹಿತೇಹಿತಂ
ನಾತ್ಮಪ್ರಿಯಂ ಹಿತ ರಾಜ್ಞಃ ಪ್ರಜಾನಾಂ ತು ಪ್ರಿಯಂ ಹಿತಃ॥

ಅಂದರೆ ರಾಜನು ರಾಷ್ಟ್ರರಕ್ಷಣೆ ಮಾಡುವುದಷ್ಟೇ ಅಲ್ಲದೆ ಪ್ರಜೆಗಳ ಸುಖವನ್ನು ಕಾಪಾಡಬೇಕು. ಪ್ರಜೆಗಳ ಸುಖವೇ ತನ್ನ ಸುಖ, ಅವರ ಹಿತವೇ ತನ್ನ ಹಿತವೆಂದು ಭಾವಿಸಬೇಕು. ಗ್ರಾಮಜನರ ಸುಖದುಃಖವನ್ನರಿಯಲು ಪ್ರಜಾಪ್ರತಿನಿಧಿಗಳು ಗ್ರಾಮವಾಸ್ತವ್ಯವನ್ನು ಮಾಡುವುದು ಅತ್ಯಗತ್ಯವಾದದ್ದು. ಇದರಿಂದ ಗ್ರಾಮಗಳಲ್ಲಿನ ಭೂಕಬಳಿಕೆ ಮತ್ತು ತೆರಿಗೆ ವಸೂಲಿ ಮುಂತಾದ ವಿಚಾರಗಳನ್ನು ಪ್ರತ್ಯೇಕ್ಷವಾಗಿ ಗಮನಿಸಬಹುದಾಗಿದೆ. ಹಳ್ಳಿಗಳ ವಾಸ್ತವ್ಯದಿಂದ ಪ್ರತಿ ಹಳ್ಳಿಗಳಲ್ಲಿಯೂ ರಾಜಕೀಯ ಪ್ರಜ್ಞೆಯನ್ನು ಮೂಡಿಸಲು ಸಾಧ್ಯವಾಗುತ್ತದೆ. ನೈಸರ್ಗಿಕ ಪರಿಸರದಲ್ಲಿ ಗ್ರಾಮೀಣ ಜನರು ಸ್ವತಂತ್ರ್ಯವಾಗಿ ತಮ್ಮದೇ ಕರ್ತವ್ಯ ಮತ್ತು ಹಕ್ಕುಗಳನ್ನು ಹೊಂದಿರುತ್ತಾರೆ. ಅವರಿಗೆ ಸರ್ಕಾರದ ಕಾನೂನುಗಳಿಂದ ಇನ್ನಷ್ಟು ಅನುಕೂಲಗಳಾಗಬೇಕು. ಪ್ರಜಾಪ್ರತಿನಿಧಿಗಳಿಗೆ ಜನತೆಯ ಕಲ್ಯಾಣವೇ ಮುಖ್ಯವಾಗಬೇಕು.

ಗ್ರಾಮೀಣಾಭಿವೃದ್ಧಿಯಲ್ಲಿ 'ಗ್ರಾಮವಾಸ್ತವ್ಯ' ಅತ್ಯಂತ ಪ್ರಮುಖವಾದದ್ದಾಗಿದೆ. ಈ ಕಾರ್ಯಕ್ರಮದಿಂದ ಹಲವು ಉದ್ದೇಶಗಳನ್ನು ಸಾಧಿಸಬಹುದಾಗಿದೆ, ಗ್ರಾಮೀಣ ಜನರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಿಂದ ಎಷ್ಟರ ಮಟ್ಟಿಗೆ ರಾಜಕೀಯ ಸಶಕ್ತೀಕರಣವಾಗಿದೆ ಎಂದು ಪರಿಶೀಲಿಸಬಹುದಾಗಿದೆ. ಆಡಳಿತ ವಿಕೇಂದ್ರೀಕರಣದಿಂದ ಗ್ರಾಮೀಣಾಭಿವೃದ್ಧಿಯಾಗಿದೆಯೇ ಎಂದು ವಿಶ್ಲೇಷಿಸಬಹುದಾಗಿದೆ. ಗ್ರಾಮೀಣ ಪ್ರದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಬದಲಾವಣೆಗಳಲ್ಲಿ ಪಂಚಾಯತ್ ರಾಜ್ ಪಾತ್ರವನ್ನು ಪಿಮರ್ಶಿಸಬಹುದಾಗಿದೆ. ಮಹಾತ್ಮಗಾಮಧೀಜಿ ಅವರ ಗ್ರಾಮಸ್ವರಾಜ್ಯ ಮತ್ತು ಆದರ್ಶ ಗ್ರಾಮವನ್ನು ಹೊಂದಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಹಾಗೂ ವಿವಿಧ ಯೋಜನೆಗಳ ಅನುಷ್ಠಾನದ ಬಗ್ಗೆ ಸ್ಥಳೀಯವಾಗಿ ಅಧ್ಯಯನ ಮಾಡುವ ಅವಕಾಶವು ದೊರೆಯುತ್ತದೆ. ತಾತ್ತ್ವಿಕವಾಗಿ ಪ್ರಸ್ತುತ ಗ್ರಾಮೀಣಾಭಿವೃದ್ಧಿಗಾಗಿ ಕೈಗೊಂಡಿರುವ ಯೋಜನೆಗಳ ಅನುಷ್ಠಾನಗಳನ್ನು ಪರಿಶೀಲಿಸಬಹುದಾಗಿದೆ. ಗ್ರಾಮೀಣ ಜನರ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್, ಬೀದಿದೀಪ, ವಸತಿ, ಶಿಕ್ಷಣ, ಉದ್ಯೋಗ ತರಬೇತಿ, ಸಾರಿಗೆ ಮತ್ತು ಸಂಪರ್ಕ – ಇವುಗಳ ಪ್ರಗತಿ ಎಷ್ಟರಮಟ್ಟಿಗಾಗಿದೆ ಎಂಬುದನ್ನು ಅರಿಯಬಹುದಾಗಿದೆ. ಸರ್ಕಾರವು ದಲಿತರು ಮತ್ತು ಬುಡಕಟ್ಟು ಜನಾಂಗಗಳಿಗೆ ನೀಡಿರುವ ಆರ್ಥಿಕಾಭಿವೃದ್ಧಿ ಅವಕಾಶಗಳ ಪರಿಶೀಲನೆ ಸಾಧ್ಯವಾಗುತ್ತದೆ. ಈ ಎಲ್ಲಾ ನೆಲೆಗಳಿಂದ 'ಗ್ರಾಮವಾಸ್ತವ್ಯವು' ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಅನುಷ್ಠಾನಕ್ಕೆ ತಂದು ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಯನ್ನು

ಸಾಧಿಸಲು ನೆರವಾಗುತ್ತದೆ.

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಗ್ರಾಮವಾಸ್ತವ್ಯದ ಆಗು–ಹೋಗುಗಳು: "ಗಾಂಧೀ ಕನಸು ನನಸಿಗೆ ಗ್ರಾಮವಾಸ್ತವ್ಯ"– ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಘೋಷಿಸಿದರು. ಅಲ್ಲದೆ ಸಾಮಾಜಿಕ ಸಮಾನತೆಯತ್ತ ಅರ್ಥಪೂರ್ಣ ಹೆಜ್ಜೆ ಇಡಲು ಕುಗ್ರಾಮಗಳ ದಲಿತರ ಮನೆಗಳಲ್ಲಿ ಕುಮಾರಸ್ವಾಮಿ ಅವರು ತಂಗಿದ್ದರು. ಗ್ರಾಮವಾಸ್ತವ್ಯದ ದಿನಗಳಲ್ಲಿ ಕುಮಾರಸ್ವಾಮಿಯವರು ಅತ್ಯುತ್ಸಾಹದಿಂದಿದ್ದರು. ಗ್ರಾಮವಾಸ್ತವ್ಯ ಕಾರ್ಯಕ್ರಮಕ್ಕೆ ಅಪಾರವಾದ ಜನಬೆಂಬಲ ದೊರೆತಿತ್ತು. ಇದರಿಂದ ಉತ್ತೇಜಿತರಾದ ಕುಮಾರಸ್ವಾಮಿ ಅವರು 'ಇದು ನನ್ನ ನೈಜ ಕಾಳಜಿ, ಇದರ ಬಗ್ಗೆ ಬೇರೆಯವರು ಏನು ಹೇಳುತ್ತಾರೆ ಎನ್ನುವುದನ್ನು ನಾನು ಗಮನಿಸುವುದಿಲ್ಲ" ಎಂದು ಹೇಳಿದ್ದರು.

ಈ ಹಿಂದೆ ಕೆಲವು ಮುಖ್ಯಮಂತ್ರಿಗಳು ಹಳ್ಳಿಗಳಿಗೆ ಭೇಟಿ ನೀಡಿ ಆದಿವಾಸಿ ಹಾಡಿಗಳಲ್ಲಿ ಮಿನಿ ಸಚಿವ ಸಂಪುಟ ಸಭೆಗಳು ನಡೆಸಿದ್ದರು. ಆದರೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಗ್ರಾಮದಲ್ಲಿ ನೆಲೆಸಿ ನೈಜ ಕಾಳಜಿ ಹೊಂದಿ ಗ್ರಾಮೀಣರ ಸಮಸ್ಯೆಗಳಿಗೆ ಶ್ರೀಘ್ರವಾಗಿ ಸ್ಪಂದಿಸಲು ಈ ಅವಶ್ಯಕವಾದ ಕಾರ್ಯಕ್ರಮ ರೂಪಿಸಿದರು. ಬೆಳಗಾವಿಯ ನಾಗನೂರು ಎಂಬ ಗ್ರಾಮದಿಂದ ಇವರ ಗ್ರಾಮವಾಸ್ತವ್ಯ ಆರಂಭವಾಗಿ ಸಾಗುತತೋಡಗಿತು. ಮೊದಲ ಬಾರಿಗೆ ದಲಿತರ ಮನೆಯಲ್ಲಿ ವಾಸಮಾಡಿದರು. ಈ ಮೂಲಕ ಹೊಸ ಇತಿಹಾಸವನ್ನು ಕುಮಾರಸ್ವಾಮಿ ಅವರು ಬರೆದರು. ದಡದ ಕಲ್ಲಹಳ್ಳಿ (ಮೈಸೂರು)ಯ ಗ್ರಾಮವಾಸ್ತವ್ಯದ ದಿನ ಕುಮಾರಸ್ವಾಮಿ ಅವರು ದೆಹಲಿಯಿಂದ ಸಂಜೆ ಬೆಂಗಳೂರಿಗೆ ಆಗಮಿಸಿ, ಅಲ್ಲಿಂದ ಕಾರಿನಲ್ಲಿ ದಡದ ಕಲ್ಲಹಳ್ಳಿಯನ್ನು ಮಧ್ಯರಾತ್ರಿ ಒಂದು ಗಂಟೆಗೆ ತಲುಪಿದರು. ಆ ವೇಳೆಯಲ್ಲಿಯೂ ಗ್ರಾಮಸ್ಥರು ಕುಮಾರಸ್ವಾಮಿ ಅವರಿಗೆ ಸಂಭ್ರಮದ ಸ್ವಾಗತವನ್ನು ಕೋರಿದರು. ದಲಿತ ಚೆಲುವಯ್ಯನ ಮನೆಯಲ್ಲಿ ಕುಮಾರಸ್ವಾಮಿ ಅವರು ಊಟ ಮಾಡಿದರು. ಅನಂತರ ಗ್ರಾಮಸ್ಥರ ಅಹವಾಲುಗಳನ್ನು ಸ್ವೀಕರಿಸಿದರು. ಆಯಾಸವನ್ನು ಮರೆತು ಬೆಳಗಿನ ಜಾವ 3 ಗಂಟೆಗೆ 'ಪ್ರಜಾವಾಣಿ'ಯೊಂದಿಗೆ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಕುಮಾರಸ್ವಾಮಿ ಅವರು ಹೀಗೆಂದರು, "ದಲಿತರ ಮನೆಯಲ್ಲಿ ವಾಸಿಸಲು ಮಹಾತ್ಮಗಾಂಧೀಜಿ ಅವರೇ ಸ್ಫೂರ್ತಿ. ಹಳ್ಳಿ ಜನರ ಒಡನಾಟಕ್ಕೆ ಬಾಲ್ಯದ ನೆನಪುಗಳು ಕಾರಣ. ಅಜ್ಜನ ಮನೆಗೆ ಗ್ರಾಮೀಣ ರಸ್ತೆಯಲ್ಲಿ 4–5 ಕಿ.ಮೀ ದೂರ ನಡೆದುಕೊಂಡು ಹೋಗಿದ್ದು ನನ್ನನ್ನು ಈಗಲೂ ಗ್ರಾಮೀಣ ಪ್ರದೇಶದತ್ತ ಹೆಜ್ಜೆ ಹಾಕುವಂತೆ ಮಾಡಿದೆ" ಇಲ್ಲಿ ನಮಗೆ ಕುಮಾರಸ್ವಾಮಿ ಅವರ ತಾತ್ವಿಕ ನಿಲುವು ಮತ್ತು ರಾಜಕೀಯ ಬದ್ಧತೆಗಳು ಕಾಣುತ್ತವೆ. ಕುಮಾರಸ್ವಾಮಿ ಅವರು "ಮುಖ್ಯಮಂತ್ರಿಯಾಗಿ ನನ್ನ ಮೊದಲ ಆದ್ಯತೆ ಬಡವರ ಮತ್ತು ಕೆಳವರ್ಗದವರ ಉದ್ಧಾರ" ಎಂಬ ಹೇಳಿಕೆಯನ್ನು ನೀಡಿದ್ದರು. ಪ್ರಥಮತಃ ಕುಮಾರಸ್ವಾಮಿ ಅವರು ಜಾತ್ಯಾತೀತ ಮನೋಭಾವದವರು. ಅವರು ಸಾರ್ವಜನಿಕ ಜೀವನವನ್ನು ಆರಂಭಿಸಿದ ಅನಂತರ ಬಡವರ ಪರವಾಗಿ ಸೇವೆಗೆ ಕಂಕಣಬದ್ಧರಾದರು.

ಪತ್ರಿಕೆಯವರು ಕೇಳುವ ಪ್ರಶ್ನೆಗಳಿಗೆ ಕುಮಾರ ಸ್ವಾಮಿ ಅವರು ಮಾನವೀಯ ಹಾಗೂ ಸಮಕಾಲೀನ ಪ್ರಜ್ಞೆಯ ಹಿನ್ನೆಲೆಯಿಂದ ಉತ್ತರಿಸುತ್ತಿದ್ದರು. ಅವರು ಅಸ್ಪೃಶ್ಯತಾಚರಣೆಯನ್ನು ಕುರಿತು, "ಅಸ್ಪೃಶ್ಯತೆ'ಯ ಮಹಾರೋಗ ಇನ್ನೂ ವಾಸಿಯಾಗದಿರುವ ಬಗ್ಗೆ ನನಗೂ ವಿಷಾದವಿದೆ. ಮಹಾತ್ಮಗಾಂಧೀಜಿ ಅವರು ಹರಿಜನ ಕೇರಿಯಲ್ಲಿ ವಾಸ್ತವ್ಯ ಮಾಡುತ್ತಿದ್ದರು" ಎಂದರು. ಅಲ್ಲದೆ "ರಾಜಕಾರಣಿಗಳು ಮತಬ್ಯಾಂಕ್ ರಾಜಕಾರಣ ಮಾಡದೆ ಜಾತಿ–ಮತ ಬಿಟ್ಟು ರಾಜಕೀಯ ಮಾಡಬೇಕು, ಅಧಿಕಾರಿಗಳು ಕನಿಷ್ಠ ತಿಂಗಳಿಗೆ 8–10 ದಿನವಾದರೂ ಗ್ರಾಮಗಳಲ್ಲಿ ವಾಸ ಮಾಡಬೇಕು; ಅಸ್ಪೃಶ್ಯತೆ ನಿವಾರಣೆಗೆ ಯುವಕರಲ್ಲಿ ಅರಿವು ಮೂಡಿಸಬೇಕು" ಎಂದು ಅಭಿಪ್ರಾಯ ಪಟ್ಟಿದ್ದರು. 'ಮುಖ್ಯಮಂತ್ರಿಯೊಬ್ಬರು ದಲಿತರ ಮನೆಯಲ್ಲಿ ವಾಸ್ತವ್ಯ ಮಾಡಿದರೆ ಅಸ್ಪೃಶ್ಯತೆ ನಿವಾರಣೆಯಾಗುತ್ತದೆಯೇ?" ಎಂಬ ಪ್ರಶ್ನೆಗೆ ಕುಮಾರಸ್ವಾಮಿ ಅವರ ಉತ್ತರ ಸ್ಪಷ್ಟವಾಗಿತ್ತು, ಅವರು "ಇಲ್ಲ, ಆದರೆ ರಾಜ್ಯ ಸರ್ಕಾರದ ಪ್ರಮುಖನಾಗಿ ನಾನು ಹೀಗೆ ಮಾಡಿದರೆ ಸಂಪುಟದ ಇತರ ಸಚಿವರಲ್ಲಿ ಹಾಗೂ ಅಧಿಕಾರಿಗಳಲ್ಲಿ ಕೆಲವರಿಗಾದರೂ ಸ್ಫೂರ್ತಿ ಬರಬಹುದು" ಎಂದರು. ಮಾಜಿ ಪ್ರಧಾನಿಯೊಬ್ಬರ ಪುತ್ರನಾಗಿಯೂ ಹಳ್ಳಿಗಳ ಸ್ಥಿತಿ–ಗತಿಗಳು ನನಗೆ ತಿಳಿದಿವೆ ಎಂದು ಕುಮಾರಸ್ವಾಮಿ ಅವರು ಅಭಿಪ್ರಾಯ ಪಟ್ಟಿದ್ದರು. ಗ್ರಾಮವಾಸ್ತವ್ಯ ಕಾರ್ಯಕ್ರಮದಿಂದ ಗ್ರಾಮಗಳಲ್ಲಿ ಉಂಟಾಗಿರುವ ಅಭಿವೃದ್ಧಿ ಕುರಿತು ವಿಸ್ತೃತವಾದ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸುವ ಉದ್ದೇಶ ಕುಮಾರಸ್ವಾಮಿ ಅವರಿಗಿತ್ತು ಗಾಂಧೀಜಿ ಅವರ ಸಂದೇಶ, ಚಿಂತನೆ ಹಾಗೂ ತತ್ತ್ವಗಳನ್ನು ಗೌರವಿಸುತ್ತಾ ಗ್ರಾಮವಾಸ್ತವ್ಯ ಮಾಡುತ್ತಿದ್ದೇವೆ ಎಂದು ಕುಮಾರಸ್ವಾಮಿ ಅವರು ಸಮರ್ಥಿಸಿಕೊಂಡಿದ್ದರು. ಗಡಿ ಜಿಲ್ಲೆಗಳಲ್ಲಿಯೂ ವಾಸ್ತವ್ಯ ಮಾಡಿದ ಕುಮಾರಸ್ವಾಮಿ ಅವರು ಸ್ಥಳೀಯ ಸಮಸ್ಯೆಗಳನ್ನು ಪರಿಶೀಲಿಸಿದ್ದರು.

ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ರಾಜಕೀಯ ಸ್ಥಿತ್ಯಂತರದ ದಿನಗಳಲ್ಲಿ ಪ್ರಯತ್ನಿಸಿದರು. ಅವರು ಸೈದ್ಧಾಂತಿಕ ನಿಲುವುಗಳು ಜನಪರವಾಗಿದ್ದವು. ರಾಷ್ಟ್ರದಲ್ಲಿ ಕರ್ನಾಟಕವನ್ನು ಒಂದು ಮಾದರಿ ರಾಜ್ಯವಾಗಿ ರೂಪಿಸಲು ಕುಮಾರಸ್ವಾಮಿ ಅವರು ಪ್ರಯತ್ನಿಸಿದರು. ವಾಸ್ತವಿಕವಾಗಿ ನೆನೆಗುದಿಗೆ ಬಿದಿದ್ದ 36 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಪ್ರಯತ್ನವನ್ನು ಮೈತ್ರಿ ಸರ್ಕಾರ ಮಾಡಿತ್ತು. ರೈತರಿಗೆ ಶೇ. 4 ರಷ್ಟು ಕಡಿಮೆ ಬಡ್ಡಿದರದಲ್ಲಿ ಕೃಷಿ ಸಾಲವನ್ನು ಒದಗಿಸಲಾಗಿತ್ತು. ಒಂದು ವರ್ಷದ ಅವಧಿಯಲ್ಲಿ 1500 ಕೋಟಿ ರೂಗಳಿಗೂ ಹೆಚ್ಚು ಕೃಷಿ ಸಾಲವನ್ನು ವಿತರಿಸಲಾಗಿತ್ತು. ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ಒಂದು ಲಕ್ಷದ ಎಪ್ಪತ್ತೈದು ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳು ಭಾಗ್ಯಲಕ್ಷ್ಮಿ ಯೋಜನೆಯ ಪ್ರಯೋಜನವನ್ನು ಪಡೆದರು. ಶಾಲೆಗೆ ಹೋಗುವ ಹೆಣ್ಣುಮಕ್ಕಳಿಗೆ ಬೈಸಿಕಲ್ ನೀಡುವ ಯೋಜನೆ ಪ್ರಯೋಜನಕಾರಿಯಾಗಿತ್ತು. ನಿಜವಾಗಿಯೂ ಗ್ರಾಮವಾಸ್ತವ್ಯಗಳು ಕುಮಾರಸ್ವಾಮಿ ಅವರನ್ನು ಬದುಕಿನ ವಾಸ್ತವ್ಯಕ್ಕೆ ಕೊಂಡೊಯ್ದು ಹಳ್ಳಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡಲು ನೆರವಾಯಿತು.

ಉಪಸಂಹಾರ: ಗ್ರಾಮೀಣಾಭಿವೃದ್ಧಿಗೆ ಗ್ರಾಮವಾಸ್ತವ್ಯ ಅಪೂರ್ವವಾದ ಕಾರ್ಯಕ್ರಮವಾಗಿದೆ. ಈ ಹಿನ್ನೆಲೆಯಿಂದ ಮಾಜಿಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ 'ಗ್ರಾಮವಾಸ್ತವ್ಯ' ಶ್ಲಾಘನೀಯವಾದದ್ದು. ಪ್ರಸ್ತುತ ಪ್ರಬಂಧದ ಮಿತಿಯಲ್ಲಿ ಗ್ರಾಮವಾಸ್ತವ್ಯದ ಇತ್ಯಾತ್ಮಕ ಪರಿಣಾಮಗಳನ್ನಷ್ಟೇ ವಿವರಿಸಲಾಗಿದೆ. ಗ್ರಾಮವಾಸ್ತವ್ಯ ಕೇವಲ ರಾಜಕೀಯ ನಿಲುವನ್ನು ಒಳಗೊಳ್ಳದೆ ನಿಜವಾದ ಗ್ರಾಮೀಣಾಭಿವೃದ್ಧಿಗೆ ಪ್ರೇರಣೆಯನ್ನೊದಗಿಸಬೇಕೆಂಬ ಆಶಯ ನನ್ನದಾಗಿದೆ.

ಗ್ರಂಥಋಣ
1. ಮಹಾತ್ಮಗಾಂಧೀ – ನೂರು ವರ್ಷಗಳು, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಗಾಂಧಿಭವನ ಮಾನಸಗಂಗೋತ್ರಿ, ಮೈಸೂರು, 1970, ಪು. 51
2. ಗಾಂಧೀಜಿಯವರ ಆದರ್ಶ ಗ್ರಾಮ ಪರಿಕಲ್ಪನೆ – ಎಂ.ಡಿ. ಉಮೇಶ, ದೀಪ್ತಿ ಬುಕ್‌ಹೌಸ್, ಮೈಸೂರು, 2011, ಪು.09
3. "ಭಾರತದಲ್ಲಿ ಗ್ರಾಮೀಣಾಭಿವೃದ್ಧಿ", ಕೃಷ್ಣ ಬಿ.ಆರ್. ವಿದ್ಯಾನಿಧಿ ಪ್ರಕಾಶನ, ಗದಗ, 1985
4. ತಗಡೂರು ರಾಮಚಂದ್ರರಾವ್, "ಗ್ರಾಮದಾನ ಗ್ರಾಮಸ್ವರಾಜ್ಯ", ರಾಮಚಂದ್ರರಾವ್ ಟ್ರಸ್ಟ್, ವಿದ್ಯಾರಣ್ಯಪುರಂ, ಮೈಸೂರು, 1986
5. "ನನ್ನ ಆದರ್ಶ ಗ್ರಾಮ ಮಹಾತ್ಮಗಾಂಧೀ", ನಾರಾಯಣಸ್ವಾಮಿ ಕೆ.ಎಸ್. ಪ್ರಕಾಶಕರು, ಶ್ರೀಮತಿ ಕೆ.ಎನ್. ಜಯಮ್ಮ, ಬೆಂಗಳೂರು 2001

ಪ್ರಜಾಪ್ರಭುತ್ವದ ಮೌಲ್ಯದ ಔನ್ನತೀಕರಣದಲ್ಲಿ ಮಾಹಿತಿ ಹಕ್ಕಿನ ಪಾತ್ರ

* ಎನ್. ಆನಂದಗೌಡ ** ಜಗದೀಶ್ ಬಾಬು ಎಚ್.ಕೆ., *** ಶಕುಂತಲ ಸಿ.
*ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ** ಸಹಾಯಕ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.
***ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವೆಂಕಟಯ್ಯನ ಛತ್ರ, ಚಾಮರಾಜನಗರ ಜಿಲ್ಲೆ.

ವಿಶ್ವ ಎರಡು ಮಹಾಯುದ್ಧಗಳನ್ನು ಕಂಡಿದೆ. ಈ ಯುದ್ಧದ ವಿಕೃತ ಅನುಭವ ಕಂಡ ಅನೇಕ ರಾಷ್ಟ್ರಗಳು ತಲ್ಲಣಗೊಳ್ಳುವುದಲ್ಲದೆ ಪ್ರಸ್ತುತ ದಿನಗಳಲ್ಲಿ ಅದರಿಂದ ಆರ್ಥಿಕನಷ್ಟತೆ, ಆರೋಗ್ಯದಲ್ಲಿ ವೈಪರಿತ್ಯತೆ, ಪರಿಸರ ಅಥವಾ ವಾತಾವರಣದ ಬದಲಾವಣೆಯಿಂದ ತತ್ತರಿಸಿ ಹೋಗಿವೆ. ಇಂತಹದರ ನಡುವೆ ವಿಶ್ವದ ಪ್ರಜೆಗಳಿಗೆ ಒಂದು ವಿಶ್ವಾಸರ್ಹ ಜೀವನ ನಡೆಸಲು ಸಂಜೀವಿನಿಯಾಗಿ ಹುಟ್ಟಿಕೊಂಡಿದ್ದೆ ಈ "ಪ್ರಜಾಪ್ರಭುತ್ವ".

ಪ್ರಜಾಪ್ರಭುತ್ವ ಜನರ ಆಶಯಗಳನ್ನು ಎತ್ತಿ ಹಿಡಿಯುವ ಒಂದು ಪ್ರಮುಖ ಸಾಧನವಾಗಿದೆ. ಏಕೆಂದರೆ ಪ್ರಜಾಪ್ರಭುತ್ವವು ಮನುಷ್ಯನು ಸ್ವತಂತ್ರನಾಗಿ, ನಿರ್ಭಯವಾಗಿ ದೇಶದೊಳಗೆ ತನ್ನ ಅಭಿರುಚಿಗೆ ತಕ್ಕಂತೆ ತನ್ನ ಬೆಳವಣಿಗೆಯನ್ನು ಸ್ವತಃ ಕಂಡುಕೊಳ್ಳುವ ವ್ಯವಸ್ಥೆಗೆ ದಿವ್ಯ ಔಷಧವಾಗಿದೆ. ಪ್ರಜಾಪ್ರಭುತ್ವ ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಇಂದು ಅಸ್ತಿತ್ವಕ್ಕೆ ಬರುವುದರ ಮುಖಾಂತರ ಪ್ರಜೆಗಳ ಬೆಳವಣಿಗೆಗೆ ಪೂರಕವಾಗಿವೆ.

ಪ್ರಜಾಪ್ರಭುತ್ವ ಬಹುಜನರ ಆಳ್ವಿಕೆ ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ಉಳಿಸುವುದಲ್ಲದೆ, ವೈಯಕ್ತಿಕ ಹಕ್ಕು ಮತ್ತು ಬಹುಜನರ ಆಳ್ವಿಕೆಯ ತತ್ವ, ಆಡಳಿತದಲ್ಲಿ ವಿಕೇಂದ್ರಿಕರಣ ಒತ್ತು ಕೊಡುತ್ತದೆ ಹಾಗೂ ರಾಜಕೀಯವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಜೀವನದಲ್ಲಿ ಮುಕ್ತವಾಗಿ ಭಾಗವಹಿಸಲು ಪ್ರಜೆಗಳಿಗೆ ಅವಕಾಶವನ್ನು ಒದಗಿಸುತ್ತದೆ. ಅಲ್ಲದೆ ಕಾಲಕಾಲಕ್ಕೆ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯ ಮೂಲಕ ಜನರು ತಮ್ಮ ಅಭಿಪ್ರಾಯ ರೂಪಿಸುವ ವಾತಾವರಣವನ್ನು ರೂಪಿಸುತ್ತದೆ.

ಇಂತಹ ಪ್ರಜಾಪ್ರಭುತ್ವ ಜನರಿಗೆ ಕಾಮಧೇನು ವಿನಂತಿದ್ದರು. ದೇಶದ ಆಡಳಿತದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜನರು ಚುನಾವಣೆಯಲ್ಲಿ ಹಣದ ಆಮಿಷಗೆ ಅಥವಾ ರಾಜಕಾರಣಿಗಳ ಆಶ್ವಾಸನೆಗೆ ಬಲಿಯಾಗಿ ಪ್ರಜಾಪ್ರಭುತ್ವದ ಮೌಲ್ಯ ಕುಸಿಯಲು ಕಾರಣವಾಗಿದ್ದಾರೆ. ಇದರಿಂದ ಪ್ರಜಾಪ್ರಭುತ್ವದ ಮೌಲ್ಯ ಕುಸಿಯಲಾರಂಭಿಸಿವೆ.

ಇಂತಹ ಮೇಲಿನ ಪರಿಸ್ಥಿತಿಯನ್ನು ಹೋಗಲಾಡಿಸಿ ಪ್ರಜಾಪ್ರಭುತ್ವ ಮೌಲ್ಯವೇನು? ಅದರ ಮಹತ್ವ ಇದರ ಮೌಲ್ಯ ಕುಸಿಯಲು ಕಾರಣವಾಗಿರುವ ಆಡಳಿತ, ರಾಜಕಾರಣದ ಪಾತ್ರ, ಅದನ್ನು ಹೋಗಲಾಡಿಸಲು ಮತ್ತು ಪ್ರಜಾಪ್ರಭುತ್ವದ ಅಭಿವೃದ್ಧಿಗೆ ಮಾಹಿತಿ ಹಕ್ಕು ಕಾಯ್ದೆ ಮಹತ್ವವೇನೆಂಬುದನ್ನು ಈ ಪ್ರಬಂಧದಲ್ಲಿ ತೋರಿಸಲಾಗಿದೆ.

ಪೀಠಿಕೆ :- ಭಾರತ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶ ಇದು ಸಮಾಜದ ದುರ್ಬಲ ವರ್ಗದ ಪುನಶ್ಚೇತನಕ್ಕೆ ಅವಕಾಶವನ್ನು ಒದಗಿಸುತ್ತದೆ ಹಾಗೂ ಅಲಕ್ಷ್ಯಕ್ಕೆ ತುತ್ತಾಗುವ ಅಪಾಯದಿಂದ ಎಚ್ಚೆತ್ತುಕೊಳ್ಳಲು ಅಗತ್ಯವಾದ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ ಈ ಪ್ರಜಾಪ್ರಭುತ್ವ.

ವಿಶ್ವ ಎರಡು ಮಹಾಯುದ್ಧಗಳನ್ನು ಕಂಡಿವೆ ಈ ಯುದ್ಧದ ವಿಕೃತ ಅನುಭವ ಕಂಡ ಅನೇಕ ರಾಷ್ಟ್ರಗಳು ತಲ್ಲಣಗೊಳ್ಳುವುದಲ್ಲದೆ ಆ ದಿನಗಳಲ್ಲಿ ಅದರಿಂದ ಆರ್ಥಿಕ ನಷ್ಟತೆ, ಆರೋಗ್ಯದಲ್ಲಿ ವೈಪರಿತ್ಯತೆ, ಯುದ್ಧದಿಂದ ಅನೇಕ ರಾಷ್ಟ್ರಗಳಲ್ಲಿ ವಾತಾವರಣದ ಬದಲಾವಣೆಯಾಗಿ ವಿಶ್ವವೇ ತತ್ತರಿಸಿ ಹೋಗಿದೆ ಇಂತಹುದರ ನಡುವೆ ವಿಶ್ವದ ಪ್ರಜೆಗಳಿಗೆ ಒಂದು ವಿಶ್ವಾಸಾರ್ಹ ಜೀವನ ನಡೆಸಲು ಸಂಜೀವಿನಿಯಾಗಿ ಹುಟ್ಟಿಕೊಂಡಿದ್ದೇ "ಪ್ರಜಾಪ್ರಭುತ್ವ".

ಪ್ರಜಾಪ್ರಭುತ್ವವು ಜನರ ಆಶಯಗಳನ್ನು ಎತ್ತಿ ಹಿಡಿಯುವ ಒಂದು ಪ್ರಮುಖ ಸಾಧನವಾಗಿದೆ, ಏಕೆಂದರೆ ಪ್ರಜಾಪ್ರಭುತ್ವವು ಪ್ರಜೆಗಳು ಸ್ವತಂತ್ರವಾಗಿ, ನಿರ್ಭಯವಾಗಿ ದೇಶದೊಳಗೆ ತನ್ನ ಅಭಿರುಚಿಗೆ ತಕ್ಕಂತೆ ತನ್ನ ಬೆಳವಣಿಗೆಯನ್ನು ಸ್ವತಃ ಕಂಡುಕೊಳ್ಳುವ ವ್ಯವಸ್ಥೆಗೆ ದಿವ್ಯ ಔಷಧವಾಗಿದೆ. ಪ್ರಜಾಪ್ರಭುತ್ವ ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಇಂದು ಅಸ್ತಿತ್ವಕ್ಕೆ ಬರುವುದರ ಮೂಲಕ ಪ್ರಜೆಗಳ ಬೆಳವಣಿಗೆಗೆ ಪೂರಕವಾಗಿದೆ. ಪ್ರಜಾಪ್ರಭುತ್ವ ಬಹುಜನರ ಆಳ್ವಿಕೆ ಮತ್ತು ಆಡಳಿತದಲ್ಲಿ ವಿಕೇಂದ್ರಿಕರಣಕ್ಕೆ ಒತ್ತು ಕೊಡುವುದು ಹಾಗೂ ರಾಜಕೀಯವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಎಲ್ಲಾ ರಂಗದಲ್ಲೂ ಮುಕ್ತವಾಗಿ ಭಾಗವಹಿಸಲು ಪ್ರಜೆಗಳಿಗೆ ಅವಕಾಶವನ್ನು ಒದಗಿಸುತ್ತದೆ. ಅಲ್ಲದೇ ಕಾಲಕಾಲಕ್ಕೆ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯ ಮೂಲಕ ಜನರು ತಮ್ಮ ಅಭಿಪ್ರಾಯ ರೂಪಿಸುವ ವಾತಾವರಣವನ್ನು ರೂಪಿಸುತ್ತದೆ.

ಇಂತಹ ಪ್ರಜಾಪ್ರಭುತ್ವ ಪ್ರಜೆಗಳಿಗೆ ಕಾಮದೇನುವಂತಿದ್ದರು ಭಾರತದಲ್ಲಿ ಆಡಳಿತಗಾರರ ದುರಾಸೆಯಿಂದ ಜನರ ಅವಿವೇಕತನದಿಂದ ಆಡಳಿತದಲ್ಲಿ ಭ್ರಷ್ಟಾಚಾರ ಸ್ವಜನ ಪಕ್ಷಪಾತ, ಜನರು ಚುನಾವಣೆಯ ಸಮಯದಲ್ಲಿ ಹಣದ

ಅಸೆಗೆ ಬಲಿಯಾಗಿ ಅಥವಾ ರಾಜಕಾರಣಿಗಳ ಆಶ್ವಾಸನೆಗೆ ಬಲಿಯಾಗಿ ಪ್ರಜಾಪ್ರಭುತ್ವದ ಮೌಲ್ಯ ಕುಸಿಯಲು ಕಾರಣವಾಗಿದ್ದಾರೆ. ಇಂತಹ ಒಂದು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ ಪ್ರಜಾಪ್ರಭುತ್ವದ ಬೆಳಕು ಪ್ರತಿಯೊಬ್ಬ ಪ್ರಜೆಗೂ ಸಿಕ್ಕುವಂತೆ ಮಾಡಿ ಪ್ರಜಾಪ್ರಭುತ್ವದ ಆಶಯ, ಉದ್ದೇಶ, ಗುರಿ ಅದರ ಮಹತ್ವಗಳನ್ನು ಈಡೇರಿಸಲು 2005ರಲ್ಲಿ ಬಂದದ್ದೆ "ಮಾಹಿತಿಹಕ್ಕು ಕಾಯ್ದೆ". ಮಾಹಿತಿ ಹಕ್ಕು ಕಾಯ್ದೆ ಉತ್ತಮ ಆಡಳಿತವನ್ನು ತರುವ ಮುಖಾಂತರ ಪ್ರಜಾಪ್ರಭುತ್ವಕ್ಕೆ ಅಂಟಿರುವ ಕೊಳೆಯನ್ನು ತೆಗೆಯುವಲ್ಲಿ ಪ್ರಜೆಗಳಿಗೆ ಉತ್ತಮ ಭವಿಷ್ಯ ಕಲ್ಪಿಸುವ ಕನಸು ಹೊತ್ತಿವೆ.

ಸಂಶೋಧನೆಯ ಉದ್ದೇಶ :-

➔ ಪ್ರಜಾಪ್ರಭುತ್ವದ ಮಹತ್ವವನ್ನು ಅರಿಯಬಹುದು.

➔ ಪ್ರಜಾಪ್ರಭುತ್ವದ ಔನ್ನತೀಕರಣಕ್ಕೆ ಮಾಹಿತಿಹಕ್ಕಿನ ಪಾತ್ರವನ್ನು ತಿಳಿಯಬಹುದು.

ಪ್ರಜಾಪ್ರಭುತ್ವದ ಅರ್ಥ ಮತ್ತು ವ್ಯಾಖ್ಯೆಗಳು :- ಪ್ರಜೆಗಳು ವ್ಯಕ್ತಿತ್ವದ ಪರಿಪೂರ್ಣ ವಿಕಾಸವಾಗಿ ಜೀವಿಸಲು ಬೇಕಾದ ನ್ಯಾಯಸಮ್ಮತ ಸಮಾನ ಅವಕಾಶ ಗಳನ್ನು ಪ್ರಜಾಪ್ರಭುತ್ವ ದೊರಕಿಸಿಕೊಡುತ್ತದೆ. ಎಲ್ಲಾ ವರ್ಗದವರಿಗೂ ತಾರತ ಮ್ಯಕ್ಕೆ ಅವಕಾಶವಿಲ್ಲದಂತೆ ಅವಕಾಶ ಕಲ್ಪಿಸಿಕೊಡುವ ಎಲ್ಲರ ಪಾಲುಗಾರಿಕೆಯ ಮೌಲ್ಯಾಧಾರಿತ ವ್ಯವಸ್ಥೆ ಇದಾಗಿದೆ. ಅಂತಹ ಪ್ರಜಾಪ್ರಭು ತ್ವದ ಮೂಲ ಪರಿಕಲ್ಪನೆಯನ್ನು ಗ್ರೀಕ್‌ನಗರ ರಾಜ್ಯವ್ಯವಸ್ಥೆಯಲ್ಲಿ ಕಾಣಬಹುದು: ಗ್ರೀಕ್‌ನಗರ ರಾಜ್ಯಗಳಾದ ಸ್ಪಾರ್ಟಾ ಮತ್ತು ಅಥೆನ್ಸ್‌ನಲ್ಲಿ ಕ್ರಮವಾಗಿ ಪ್ರತ್ಯಕ್ಷ ಪ್ರಜಾಪ್ರಭುತ್ವ ಮತ್ತು ಪರೋಕ್ಷ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿತ್ತು.

ಅರ್ಥ :- ಪ್ರಜಾಪ್ರಭುತ್ವ ಎಂಬ ಪದವು ಗ್ರೀಕ್ ಪದಗಳಾದ 'ಡೆಮೊಸ್" ಮತ್ತು 'ಕ್ರಾಟಿಯಾ' ಎಂಬ ಪದಗಳಿಂದ ಬಂದಿದೆ ಡೆಮೊಸ್ ಎಂದರೆ "ಜನ" ಮತ್ತು ಕ್ರಾಟಿಯಾ ಎಂದರೆ "ಆಳ್ವಿಕೆ" ಪ್ರಜಾಪ್ರಭುತ್ವ ಎಂದರೆ ಪ್ರಜೆಗಳ ಆಳ್ವಿಕೆ ಎಂದರ್ಥ. "ಪ್ರಜಾಪ್ರಭುತ್ವ" ಎಂಬ ಪದವನ್ನು "ಪೆಲೋಪೋನೀಸಿಯನ್ ಯುದ್ಧ ಚರಿತ್ರೆ" ಎಂಬ ಕೃತಿಯಲ್ಲಿ 'ಥೂಸಿಡೈಡಸ್'ರವರು ಮೊಟ್ಟಮೊದಲು ಬಳಸಿದ ಕೀರ್ತಿಗೆ ಭಾಜನರಾಗುತ್ತಾರೆ.

ಇಂತಹ ಪ್ರಜಾಪ್ರಭುತ್ವದ ಬಗ್ಗೆ ಹಲವಾರು ವ್ಯಕ್ತಿ ತಮ್ಮ ವ್ಯಾಖ್ಯಾನ ನೀಡುವುದ ಮುಖಾಂತರ ಪ್ರಜಾಪ್ರಭುತ್ವದ ಮಹತ್ವವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ, ಅಂತಹ ವ್ಯಾಖ್ಯಾನವನ್ನು ಈ ಕೆಳಕಂಡಂತೆ ನೋಡಬಹುದು.

➔ **ಲಾರ್ಡ್ ಬ್ರೈಸ್** :- ರವರು ಹೇಳಿರುವಂತೆ ಯಾವ ರಾಜ್ಯದಲ್ಲಿ ಅಧಿಕಾರವು ಒಂದು ವಿಶೇಷ ವರ್ಗದವರಿಗಾಗಲೀ, ಅಲ್ಪವರ್ಗದವರಿಗಾಗಲೀ ಸೇರದೆ ಇಡೀ ಸಮಾಜದ ಜನರಿಗೆ ಸೇರುತ್ತದೆಯೋ ಅದೇ ಪ್ರಜಾಪ್ರಭುತ್ವ.

➔ **ಹೆರೋಡಾಟಸ್** :- ಯಾವ ರಾಜ್ಯದಲ್ಲಿ ಪರಮಾಧಿಕಾರವೆಂಬುದು ಸಂಪೂರ್ಣವಾಗಿ ಪ್ರಜೆಗಳಿಗೆ ಸೇರಿರುತ್ತದೆಯೋ ಅದೇ ಪ್ರಜಾಪ್ರಭುತ್ವ ಎಂದು ಕ್ರಿ.ಪೂ. ಐದನೇಯ ಶತಮಾನದಲ್ಲಿ ಹೇಳಿದ್ದಾರೆ.

➔ **ಅಬ್ರಹಾಂ ಲಿಂಕನ್** :- ಪ್ರಜೆಗಳಿಂದ ಪ್ರಜೆಗಳಿಗಾಗಿ ಮತ್ತು ಪ್ರಜೆಗಳಿಗೋಸ್ಕರ ಇರುವ ಸರ್ಕಾರವೇ ಪ್ರಜಾಪ್ರಭುತ್ವ.

ಈ ಮೇಲಿ ವ್ಯಾಖ್ಯಾನ ಗಮನಿಸಿದಾಗ ಪ್ರಜಾಪ್ರಭುತ್ವವೆಂಬುದು ಪ್ರಜೆಗಳಿಂದ ಆಳ್ವಿಕೆಗೆ ಒಳಪಟ್ಟ ಪ್ರಜೆಗಳ ಆಡಳಿತ ಹಾಗೂ ಜನರ ಪರಮಾಧಿಕಾರದಿಂದ ಕೂಡಿದ ಆಳ್ವಿಕೆ ಎಂಬ ಅಂಶ ಗೊತ್ತಾಗುತ್ತದೆ.

ದೇಶ ಮತ್ತು ಪ್ರಜೆಗಳ ಅಭಿವೃದ್ಧಿಯಲ್ಲಿ ಪ್ರಜಾಪ್ರಭುತ್ವದ ಮಹತ್ವ :-

1. ಇಡೀ ದೇಶದ ಆಡಳಿತವು ಜನರ ಆಡಳಿತವಾಗುವಂತೆ ಮಾಡುವುದಲ್ಲದೆ ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತದೆ.
2. ಜಾತಿ, ಧರ್ಮ, ಲಿಂಗ, ವರ್ಣ, ವಾಸಸ್ಥಳದ ಆಧಾರದ ಮೇಲೆ ತಾರತಮ್ಯ ಮಾಡದೆ ಪ್ರತಿಯೊಬ್ಬರಿಗೂ ಮತದಾನದ ಹಕ್ಕು ನೀಡುವಂತೆ ಒತ್ತಾಯಿ ಸುತ್ತದೆ.
3. ಪ್ರತಿಯೊಬ್ಬ ಪ್ರಜೆಯೂ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅಧಿಕಾರದ ಹಕ್ಕನ್ನು ನೀಡಲು ಒತ್ತಾಯ ಮಾಡುತ್ತದೆ.
4. ಸಾರ್ವಜನಿಕ ಅಭಿಪ್ರಾಯವನ್ನು ಜುನಾವಣಾ ಸಂದರ್ಭದಲ್ಲಿ ಹುಟ್ಟುಹಾಕುತ್ತದೆ.
5. ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಸಾಮಾಜಿಕ ಜೀವನದಲ್ಲಿ ಮುಕ್ತವಾಗಿ ಭಾಗವಹಿಸಲು ಪ್ರಜೆಗಳಿಗೆ ಅವಕಾಶ ಒದಗಿಸುತ್ತದೆ.
6. ಪ್ರಜಾಪ್ರಭುತ್ವ ಸಮಾಜದ ಪ್ರಮುಖ ಮೌಲ್ಯಗಳಾದ ಸಹನೆ, ಸಹಕಾರ ಮತ್ತು ಹೊಂದಾಣಿಕೆಯ ಬದ್ಧತೆಯನ್ನು ಜನರಿಗೆ ಕಲ್ಪಿಸುತ್ತದೆ.
7. ಸರ್ಕಾರವನ್ನು ಕ್ರಾಂತಿಯುತವಾಗಿ ಬದಲಾವಣೆ ಮಾಡುವ ಬದಲು ಶಾಂತಿಯುತವಾಗಿ ಮತ್ತು ಸಂವಿದಾನತ್ಮಕವಾಗಿ ಬದಲಾಯಿಸುತ್ತದೆ.
8. ಸಮಾಜದಲ್ಲಿರುವ ಪ್ರತಿಯೊಬ್ಬ ಪ್ರಜೆಗೂ ಸಮಾನ ಕಾನೂನು ನೀಡುವ ಕಾನೂನಿನ ಆಳ್ವಿಕೆಗೆ ಒತ್ತು ನೀಡಬೇಕು.
9. ಪ್ರಜಾಪ್ರಭುತ್ವದ ತತ್ವಗಳನ್ನು. ಸರಿಯಾಗಿ ಪಾಲಿಸಲು ಸ್ವತಂತ್ರ ನ್ಯಾಯಾಂಗದ ಬೆಳವಣಿಗೆ ಮತ್ತು ವಿಕಾಸಕ್ಕೆ ಅವಕಾಶವನ್ನು ನೀಡುತ್ತದೆ.
10. ಪ್ರಜೆಗಳಿಗೆ ಕೇವಲ ಹಕ್ಕನ್ನು ನೀಡುವುದಲ್ಲದೇ ಅವರ ಜವಾಬ್ದಾರಿ ಹಾಗೂ ರಾಜಕೀಯ ಪದ್ಧತಿಯಲ್ಲಿ ಭಾಗವಹಿಸುವ ಮುಕ್ತ ಅವಕಾಶವನ್ನು ಪ್ರಜಾಪ್ರಭುತ್ವವನ್ನು ಹುಟ್ಟು ಹಾಕುತ್ತದೆ.

ಹೀಗೆ ಅನೇಕ ಮಹತ್ವವನ್ನು ಪ್ರಜಾಪ್ರಭುತ್ವ ಹೊಂದಿದೆ.

ಪ್ರಜಾಪ್ರಭುತ್ವವನ್ನು ಔನ್ನತೀಕರಿಸುವಲ್ಲಿ ಮಾಹಿತಿ ಹಕ್ಕಿನ ಪಾತ್ರ :- ಪ್ರಜಾಪ್ರಭುತ್ವ ಮೇಲ್ಕಂಡ ಮಹತ್ವವನ್ನು ಹೊಂದಿದ್ದರೂ ಅದರ ಆಚರಣೆಯಲ್ಲಿ ಅನೇಕ ಸಮಸ್ಯೆಗಳನ್ನು ಹೊಂದಿದೆ. ಪ್ರಜಾಪ್ರಭುತ್ವದ ಪ್ರಸ್ತುತ ಸ್ಥಾನಮಾನವನ್ನು ಗಮನಿಸಿದಾಗ ಜಾಗತೀಕರಣವೆಂಬುದು ಎರಡು ಅಲಗಿನ ಕತ್ತಿಯಂತ್ತದ್ದು ಪ್ರಜಾಪ್ರಭುತ್ವದ ಮೂಲೆಗಲ್ಲುಗಳೆಂದೇ ಬಿಂಬಿತವಾಗಿರುವ ಅರ್ಥವ್ಯವಸ್ಥೆ ಹಾಗೂ ಸುಖೀ ರಾಜ್ಯದ ಕಲ್ಪನೆಯನ್ನು ನಾಶಗೊಳಿಸುವಂತಹ ಅಹಿತಕರ ವಾದ ಔಷಧವಾಗಿದೆ.

ಇದರಿಂದ ಪ್ರಜಾಪ್ರಭುತ್ವವು ದಿನದಿಂದ ದಿನಕ್ಕೆ ಕುಸಿಯಲಾರಂಭಿಸಿದೆ ಅತ್ಯಂತ ಉನ್ನತ ಧ್ಯೇಯೋದ್ದೇಶ ಹಾಗೂ ಆದರ್ಶಗಳನ್ನು ಹೊಂದಿದೆ ಎಂದು ನಾವೆಲ್ಲಾ ಭಾವಿಸಿಕೊಂಡಿರುವ ಪ್ರಜಾಪ್ರಭುತ್ವವನ್ನು ವಿನ್ಸಂಟ್ ಚರ್ಚಿಲ್ "ಎಲ್ಲಾ ಪ್ರಯೋಗಗಳ ನಂತರ ಉಳಿದಿರುವ ಅತೀ ಕೆಟ್ಟ ಆಡಳಿತ ಮಾದರಿ" ಅತಿ ಕೆಟ್ಟ ವ್ಯವಸ್ಥೆಯಂತಿರುವ ಪ್ರಜಾತಂತ್ರವು 21ನೇ ಶತಮಾನದ ಅಭಿರುಚಿಯಾಗಿದೆ ಎಂದಿದ್ದಾರೆ.

ಅಮರ್ತ್ಯಸೇನ್ ಹೇಳುವಂತೆ "ಪ್ರಜಾಪ್ರಭುತ್ವ ಸರ್ಕಾರವು ಜಾಗತಿಕ ಮಟ್ಟದಲ್ಲಿ ಗೌರವ ಸಿಗುವಂತಹ ಏಕೈಕ ವ್ಯವಸ್ಥೆಯಾಗಿ ಉಳಿದಿದೆ". ವೈರುಧ್ಯವೇನೆಂದರೆ ವಿಜಯೋತ್ಸವಗಳ ನಡುವೆಯೂ ಪ್ರಜಾಪ್ರಭುತ್ವವು ಅನೇಕ ಕಡೆಗಳಲ್ಲಿ ಸಂಕಷ್ಟವನ್ನು ಎದುರಿಸುತ್ತಾ ಇದೆ. ಬರ್ಲಿನ್ ಗೋಡೆ ಕುಸಿತ ನಂತರ ಪ್ರಜಾಸತ್ತಾತ್ಮಕ ಕ್ರಾಂತಿ ನಡೆದಂತಹ ದೇಶಗಳು ಮತ್ತು ಜುನಾಯಿತ ಜನತಂತ್ರ ರಾಷ್ಟ್ರಗಳಲ್ಲಿ ಬಹಳಷ್ಟು ಹಿನ್ನಡೆ ಕಂಡಿವೆ. "ಪ್ರಜಾಪ್ರಭುತ್ವದ ಆತ್ಮ" ಬರೆದ ಲೇಖಕ ಲಾರಿ ಡೈಮಂಡ್ ಇದನ್ನು ಪ್ರಜಾಪ್ರಭುತ್ವದ ಕುಸಿತ ಎನ್ನುತ್ತಾರೆ. ತಮ್ಮ ನೆರೆ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ

ಮುಂದುವರೆಯುವುದನ್ನು ಕಂಡು ಬಳಲುತ್ತಿರುವ ಸರ್ವಾಧಿಕಾರಿ ದೋರಣೆಯ ಆಡಳಿತಗಾರರಲ್ಲಿ ಒಗ್ಗಟ್ಟು ಕಾಣಿಸುತ್ತಿದೆ. ಪ್ರಜಾಸತ್ತಾತ್ಮಕವಾಗಿ ನಾವು ಮುಂದುವರೆದಿರಬಹುದು ಆದರೆ ಜನತಂತ್ರವು ನಿಜಕ್ಕೂ ಹಿನ್ನೆಡೆ ಅನುಭವಿಸುತ್ತಾ ಸಾಗಿದೆ.

ಹೀಗೆ ಪ್ರಸ್ತುತ ಸಂದರ್ಭದಲ್ಲಿ ಪ್ರಜಾಪ್ರಭುತ್ವವೆಂಬುದು ಶ್ಲಾಘನೆಗಿಂತ ಅತೀ ಹೆಚ್ಚು ಟೀಕೆಗೆ ಹೆಸರುವಾಸಿಯಾಗಿದೆ. ಅರಿಸ್ಟಾಟಲ್‌ರವರು ಹೇಳುವಂತೆ ಪ್ರಜಾಪ್ರಭುತ್ವ ಎಂಬುದು ಜನಜಂಗುಳಿ ಸರ್ಕಾರ ಇಲ್ಲಿ ಬುದ್ಧಿವಂತರಿಗಿಂತ ಅವಿವೇಕಿಗಳು, ಅಜ್ಞಾನಿಗಳು, ಅನಕ್ಷರಸ್ಥರು, ಬಡವರು ಇವರೇ ಬಹುಸಂಖ್ಯಾತರಾಗಿರುತ್ತಾರೆ. ಇದರಿಂದ ಪ್ರಜಾಪ್ರಭುತ್ವ ತನ್ನ ಸಮಾಧಿಯನ್ನು ತಾನೇ ತೋಡಿಕೊಳ್ಳುತ್ತಿದೆ ಎನ್ನುತ್ತಾರೆ. ಈ ಅಂಶಗಳಿಂದಾಗಿ ಸರ್ಕಾರದ ಕಾರ್ಯತತ್ಪರತೆ ಕ್ಷೀಣ ತೊಡಗಿ ಜನಹಿತಾಸಕ್ತಿ ಕಡೆಗಣನೆಗೊಂಡು ಅಧಿಕಾರಿ ಹಾಗೂ ಆಡಳಿತ ವರ್ಗದವರ ದುರ್ನಡತೆಯಿಂದಾಗಿ ಶ್ರೀಮಂತರ ಆಳ್ವಿಕೆಯ ಸಾಧನವಾಗಿ ಹೋಗಿದೆ.

ಇಷ್ಟೆಲ್ಲಾ ಟೀಕೆಯಿಂದ ಪ್ರಜಾಪ್ರಭುತ್ವದ ಮೌಲ್ಯಕ್ಕೆ ಪೆಟ್ಟು ಬಿದ್ದಿದೆ ಈ ಮೇಲ್ಕಂಡ ಟೀಕೆಗಳನ್ನು ಹೋಗಲಾಡಿಸಿ ಪ್ರಜಾಪ್ರಭುತ್ವದ ಆಶಯ ಮತ್ತು ಗುರಿಯನ್ನು ಭದ್ರಗೊಳಿಸಿ ಸ್ವಚ್ಛಂದ ಆಡಳಿತಕ್ಕೆ ಮಾಹಿತಿ ಹಕ್ಕು ನಾಂದಿಯಾಡಿದೆ. ಪ್ರಜಾಪ್ರಭುತ್ವವನ್ನು *ಸಶಕ್ತಗೊಳಿಸುವಲ್ಲಿ* ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತಿದೆ. ಕಾರಣ ಆಡಳಿತದಲ್ಲಿನ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಪಾರದರ್ಶಕತೆಯಿಂದಾಗಿ ಪ್ರಜಾಪ್ರಭುತ್ವಕ್ಕೆ ಕೆಟ್ಟಹೆಸರು ಬಂದಿರುವುದು ಇದನ್ನು ಹೋಗಲಾಡಿಸಿ ಜನರು ಮಾತ್ರ ಸರ್ಕಾರದ ಕಾನೂನುಗಳನ್ನು ಪಾಲಿಸುವುದಷ್ಟೇ ಅಲ್ಲ ಜೊತೆಗೆ ಸರ್ಕಾರಿ ಸಂಸ್ಥೆಗಳು ಕಾನೂನಿಗೆ ಮತ್ತು ಜನರ ನಿಯಂತ್ರಣಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುವಂತೆ ಮಾಡುವಲ್ಲಿ ಮಾಹಿತಿ ಹಕ್ಕು ಕಾಯ್ದೆ 2005, ಮಹತ್ವದ ಪಾತ್ರ ವಹಿಸಿದೆ. ಇದು ಆಡಳಿತದಲ್ಲಿ ಪಾರದರ್ಶಕತೆ ತರುವುದರ ಜೊತೆಗೆ ಉತ್ತಮ ಆಡಳಿತ ನೀಡುವಲ್ಲಿ ಸಹಕಾರಿಯಾಗಿದೆ. ಇದರ ಮುಖಾಂತರ ಪ್ರಜಾಪ್ರಭುತ್ವದ ಉನ್ನತೀಕರಣಕ್ಕೆ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದರ ಮೂಲಕ ದಾಪುಗಾಲು ಹಾಕಿದೆ ಅವುಗಳೆಂದರೆ,

1. ಪ್ರಜಾಪ್ರಭುತ್ವ ಮುಖ್ಯ ತಿರುಳಾದ ಆಡಳಿತಾಂಗದಲ್ಲಿ ಮಾಹಿತಿ ಹಕ್ಕು ಪಾರದರ್ಶಕತೆ, ಹೊಣೆಗಾರಿಕೆ, ಉತ್ತರದಾಯಿತ್ವ ಜವಾಬ್ದಾರಿಯನ್ನು ಹುಟ್ಟುಹಾಕಿದೆ.
2. ಜನರಿಂದ ಜನರಿಗಾಗಿ ಜನರಿಗೋಸ್ಕರ ಎಂಬ ಸತ್ಯವನ್ನು ಜನರಿಗೆ ತಿಳಿಸಲು ಮಾಹಿತಿಹಕ್ಕು ಜನರನ್ನು ಆಡಳಿತದಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ಮಾಹಿತಿ ನೀಡುವ ಮುಖಾಂತರ ಪ್ರಜಾಪ್ರಭುತ್ವದ ಆಶಯವನ್ನು ನನಸುಮಾಡಿದೆ.
3. ಸರ್ಕಾರದ ಯೋಜನೆಗಳು, ನೀತಿಗಳು, ಕಾರ್ಯಕ್ರಮಗಳು ಜನರಿಗೆ ತಲುಪುತ್ತಿದೆಯೇ, ಸೇರಬೇಕಾದ ಪ್ರಜೆಗೆ ತಲುಪುತ್ತಿದೆಯೇ? ಸರ್ಕಾರದ ಈ ಯೋಜನೆಗಳ ಫಲಾನುಭವಿಗಳು ಯಾರು? ಎಂಬ ಎಲ್ಲಾ ಮಾಹಿತಿ ನೀಡುವ ಮೂಲಕ ನಿಜವಾದ ಫಲಾನುಭವಿಗಳನ್ನು ಗುರುತಿಸುವಂತೆ ಮಾಡಿದೆ.
4. ಸೂಕ್ತ ಆಡಳಿತವನ್ನು ನಡೆಸಿದ ನಾಯಕರನ್ನು ಮುಂದಿನ ಚುನಾವಣೆಯಲ್ಲಿ ಸೋಲಿಸಿ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡುವ ಬುದ್ಧಿವಂತಿಕೆಯನ್ನು ಜನರಿಗೆ ನೀಡುತ್ತದೆ.
5. ಸ್ಥಳೀಯ ಸರ್ಕಾರದಿಂದ ಗ್ರಾಮೀಣ ಜನರಿಗೆ ಸಿಗುವ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.
6. ಅನಕ್ಷರಸ್ಥರು, ಬಡವರು, ಮಧ್ಯಮವರ್ಗದವರು ಇವರೆಲ್ಲರೂ ತಮ್ಮ ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಯಾರು ಅತಿಕ್ರಮಿಸದಂತೆ ಪ್ರಜೆಗಳನ್ನು ಜಾಗೃತಗೊಳಿಸುವ ಕಾರ್ಯವನ್ನು ಮಾಹಿತಿಹಕ್ಕು ಮಾಡುತ್ತಿದೆ.
7. ಆಡಳಿತದಲ್ಲಿ ಉದ್ಭವಿಸುವ ಅನೇಕ ಹಗರಣಗಳನ್ನು ಮುಕ್ತವಾಗಿ ಪ್ರಜೆಗಳಿಗೆ ತೋರಿಸುವ ವ್ಯವಸ್ಥೆ ನಿರ್ಮಾಣ ಮಾಡಿ ಆಡಳಿತದಲ್ಲಿನ ನ್ಯೂನ್ಯತೆಯನ್ನು ಜನರಿಗೆ ತಿಳಿಸುತ್ತದೆ.
8. ಸಂವಿಧಾನ ಜನರಿಗೆ ನೀಡಿರುವ ಸವಲತ್ತು, ಹಕ್ಕು, ಸ್ವಾತಂತ್ರ್ಯಗಳನ್ನು ಪ್ರತಿಯೊಬ್ಬ ಪ್ರಜೆಗೂ ಮಾಹಿತಿ ನೀಡುವ ಮೂಲಕ ಸಂವಿಧಾನಬದ್ಧ ಎಲ್ಲಾ ವ್ಯವಸ್ಥೆಯನ್ನು ಜನರಿಗೆ ದೊರಕುವಂತೆ ಮಾಡಿದೆ.
9. ಆಡಳಿತ ಪಕ್ಷದ ಕಾರ್ಯ ವೈಖರಿಯಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗದಲ್ಲಿ ಅದನ್ನು ಪ್ರಶ್ನಿಸಿ ಆಡಳಿತ ಪಕ್ಷದ ನ್ಯೂನ್ಯತೆಯನ್ನು ಜನರಿಗೆ ತೋರಿಸಲು ವಿರೋಧ ಪಕ್ಷಗಳಿಗೆ ನಿರ್ದಿಷ್ಟ ಮಾಹಿತಿಯನ್ನು ನೀಡು ಪ್ರಬಲ ಅಸ್ತ್ರ ಮಾಹಿತಿಹಕ್ಕಾಗಿದೆ.
10. ಜನರ ಕುಂದು ಕೊರತೆಗಳಿಗೆ ಪರಿಹಾರ ನೀಡುವುದರ ಜೊತೆಗೆ ಸಾರ್ವಜನಿಕ ಆಡಳಿತವು ಜನಮುಖಿಯಾಗುವಂತೆ ಮಾಡುವ ಕೆಲಸಕ್ಕೆ ನಾಂದಿಯಾಗಿದೆ.
11. ಜನತಾ ಪರಮಾಧಿಕಾರವನ್ನು ಬಲಗೊಳಿಸುತ್ತದೆ.
12. ಆಡಳಿತಯಂತ್ರವು ಜನರ ಬೇಡಿಕೆ ಮತ್ತು ಅವರ ಆಸೆ, ಆಕಾಂಕ್ಷೆಗಳಿಗೆ ಸ್ಪಂದಿಸುವಂತೆ ಮಾಹಿತಿಹಕ್ಕು ಮಾಡುತ್ತದೆ.
13. ಪ್ರಜಾಸತ್ತಾತ್ಮಕ ಸರ್ಕಾರದಲ್ಲಿ ಪ್ರಜೆಗಳು ಆಡಳಿತದ ಬಗ್ಗೆ ಉದಾಸೀನತೆ, ನಿರುತ್ಸಾಹ ಅಥವಾ ನಿರಾಸಕ್ತಿ ತೋರದೆ ಆಡಳಿತದ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಮಾಡಿದೆ.

ಹೀಗೆ ಮೇಲ್ಕಂಡ ಅನೇಕ ಕಾರ್ಯಗಳನ್ನು ಮಾಹಿತಿಹಕ್ಕು ನಿರ್ವಹಿಸುವ ಮೂಲಕ ಪ್ರಜಾಪ್ರಭುತ್ವ ಉನ್ನತೀಕರಣಕ್ಕೆ ನಾಂದಿಯಾಡಿದೆ.

ಪರಿಸಮಾಪ್ತಿ :- ಭಾತರದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಲು ಅನೇಕ ಸಮಸ್ಯೆಗಳನ್ನು ಹೊಂದಿದೆ ಅವುಗಳೆಂದರೆ ಭ್ರಷ್ಟಾಚಾರ, ಬಡತನ, ಕೋಮುವಾದ, ಜಾತೀಯತೆ, ಅನಕ್ಷರತೆ, ಪ್ರಾಂತಿಯತೆ ಜೊತೆಗೆ ಸಂಸ್ಕೃತಿ, ಭಾಷೆ, ಆರ್ಥಿಕ ಮೌಲ್ಯ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಸವಾಲುಗಳನ್ನು ಎದುರಿಸುತ್ತಿದೆ. ಹೀಗೆ ಸಂಕಷ್ಟದಲ್ಲಿ ಸಿಲುಕಿರುವ ಪ್ರಜಾಪ್ರಭುತ್ವ ಜನರಿಗೆ ಉತ್ತಮ ಮೌಲ್ಯವನ್ನು ಒದಗಿಸುವ ಪ್ರಯತ್ನ ಮಾಡಿದ್ದರು ಅದಕ್ಕೆ ಆಡಳಿತದಿಂದ ಅನೇಕ ತೊಂದರೆಗಳು ಅದರ ಸತ್ವವೇ ನಾಶಹೊಂದುವ ಸ್ಥಿತಿಯಲ್ಲಿದ್ದಾಗ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಜೀವಂತಗೊಳಿಸಿದ ಕೀರ್ತಿಗೆ ಮಾಹಿತಿ ಹಕ್ಕು ಕಾರಣವಾಗುತ್ತದೆ. ಪ್ರಜಾಪ್ರಭುತ್ವ ಎಂಬ ವಾಹನಕ್ಕೆ ಮಾಹಿತಿ ಹಕ್ಕು ಉತ್ತಮ ಚಾಲಕನಂತೆ ಕಾರ್ಯನಿರ್ವಹಿಸುವ ಮೂಲಕ ಪ್ರಜಾಪ್ರಭುತ್ವ ಔನ್ನತೀಕರಣಕ್ಕೆ ನಾಂದಿಯಾಡಿದೆ ಎಂಬ ಆಶಾವಾದ ಈ ಪತ್ರಿಕೆಯದಾಗಿದೆ.

ಗ್ರಂಥಋಣ : -

1. "ರಾಜ್ಯಶಾಸ್ತ್ರ", ಲೇಖಕರು ಡಾ. ಎಂ.ಪಿ. ಭುವನೇಶ್ವರ ಪ್ರಸಾದ ಮುದ್ರಣ ಶಬರಿಮಲಯನ್ ಬುಕ್ ಮಂಗಳೂರು – 2012.
2. "ಭಾರತದಲ್ಲಿ ಪ್ರಜಾಸತ್ತತೆಯ ವಿಕಾಸ" ಲೇಖಕರು ಬಿ.ಎಸ್. ನಂಜುಂಡಯ್ಯ, ಭಾರತೀ ಪ್ರಕಾಶ, ಮೈಸೂರು 1998.
3. "ಯೋಜನಾ" ಮಾಸಿಕ ಪತ್ರಿಕೆ, ಆಗಸ್ಟ್ – 2013.
4. "Team Baechlr, 1995, Democracy: An analytical survey poris", UNESCO publishing.
5. "Democracy – Building in Southest Asia", Prof.

Juwonosudarsono, National defence institute.
6. **Robert Dahal (1995) Democracy and its Critics.** Quote offer the police edition Crakow: Zonak.
7. **"ಯಾವ ಮಾಹಿತಿ? ಯಾರ ಹಕ್ಕು?"**, ಲೇಖಕರು ವೈ.ಜ. ಮುರುಳಿಧರ, ಅಭಿನವ ಪ್ರಕಾಶನ – 2011
8. **"ಪ್ರಜಾಪ್ರಭುತ್ವದ ತಲ್ಲಣಗಳು"** ಲೇಖಕರು ಗಂಗಾಧರ ಕುಷ್ಟಗಿ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಪ್ರಕಾಶನ – 2011.
9. **"ಮಾಹಿತಿ ಹಕ್ಕು"** ಡಾ. ಎಂ.ಪಿ. ಭುವನೇಶ್ವರ ಪ್ರಸಾದ – 2007.

ಮಹಿಳೆಯರನ್ನು ಸಬಲೀಕರಿಸುವಲ್ಲಿ ಸಾಮಾಜಿಕ ಶಾಸನದ ಪಾತ್ರ

* ಜಗದೀಶ್ ಬಾಬು ಎಚ್.ಕೆ., ** ಶಕುಂತಲ ಸಿ., *** ಶಶಿಕುಮಾರ್ ಟಿ.ಪಿ.
*ಸಹಾಯಕ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ***ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು. **ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವೆಂಕಟಯ್ಯನ ಛತ್ರ, ಚಾಮರಾಜನಗರ ಜಿಲ್ಲೆ.

ಚಾರಿತ್ರಿಕವಾಗಿ ಸ್ತ್ರೀಯರನ್ನು "ಗೃಹಿಣಿಯರೆಂದೆ" ಪರಿಗಣಿಸಲಾಗುತ್ತಿತ್ತು. ಅವರಿಗೆ ಸಮಾಜ, ಕಛೇರಿಗಳಲ್ಲಿ ಹಾಗೂ ಪ್ರಭುತ್ವ ಮೊದಲಾದವುಗಳಲ್ಲಿ ಸಮಾನ ಸ್ಥಾನಮಾನವನ್ನು ನಿರಾಕರಿಸಲಾಗಿತ್ತು. ಇದಕ್ಕೆಲ್ಲ ಹಿಂದುಳಿದಿರುವಿಕೆ, ಬಡತನ, ಅನಕ್ಷರತೆ, ಪುರುಷ ಪ್ರತಿಷ್ಠೆ, ಆರ್ಥಿಕತೆಯ ಸ್ವಂತಿಕೆ ಇಲ್ಲದಿರುವುದು ಇವೆಲ್ಲವು ಕಾರಣಗಳಾಗಿದ್ದವು. ಮನೆ ಮತ್ತು ಸಮಾಜದಲ್ಲಿ ಸ್ತ್ರೀಯರನ್ನು ಪುರುಷರ ಅನುಯಾಯಿಗಳೆಂದು ಪರಿಗಣಿಸಲು ಕಾರಣವಾದವು.

ಆದರೆ ನಮ್ಮ ದೇಶ ಮಹಿಳೆಯರನ್ನು ಮೇಲ್ಕಂಡಂತೆ ಹೇಗೆ ಶೋಷಿಸುತ್ತದೆಯೋ ಹಾಗೆ ಅವರಿಗೆ ಪೂಜ್ಯಭಾವನೆಯನ್ನು ಕೊಟ್ಟಿದೆ. ನಮ್ಮ ಭಾರತದ ಸಂಸ್ಕೃತಿಯ ಪ್ರಕಾರ "ಸ್ತ್ರೀಯರನ್ನು ಎಲ್ಲಿ ಪೂಜಿಸಲ್ಪಡುತ್ತದೆ ಅಥವಾ ಎಲ್ಲಿ ಗೌರವಿಸಲ್ಪಡುತ್ತದೆಯೋ ಅಲ್ಲಿ ದೇವರು ನೆಲೆಸಿರುತ್ತಾನೆ" ಎಂಬ ಅಂಶವನ್ನು ನಾವು ಕಾಣಬಹುದಾಗಿದೆ.

ಸ್ತ್ರೀಯರನ್ನು ಗೌರವಿಸುವ ಮಾತುಗಳು ಭಾಷಣ ಪುಸ್ತಕದಲ್ಲಿ ಮಾತ್ರ ಕಾಣುವ ಪರಿಸ್ಥಿತಿ ಎದುರಾಗತೊಡಗಿತು. ಆದರೆ ಅವರ ನಿಜವಾದ ಸ್ಥಾನಮಾನ ನಮ್ಮ ದೇಶದ ಸಂಸ್ಕೃತಿಯನ್ನು ನಾಚಿಸುವಂತಿದೆ. ಅನಾದಿಕಾಲದಿಂದಲೂ ಸ್ತ್ರೀಯ ಮೇಲಿನ ಶೋಷಣೆ, ದಬ್ಬಾಳಿಕೆಗಳು, ಇವಳನ್ನು ಹೀನಸ್ಥಿತಿಗೆ ತಲುಪಿಸಿದ. ಇಂತಹ ಸ್ತ್ರೀಯ ಸಬಲೀಕರಣದಲ್ಲಿ ಸಾಮಾಜಿಕ ಶಾಸನಗಳ ಪಾತ್ರವನ್ನು ಇಲ್ಲಿ ವಿವರಿಸಲು ಅವಕಾಶ ನೀಡಲಾಗಿದೆ. ಸಮಾಜ ಶಾಸ್ತ್ರೀಯ ಮತ್ತು ಸಮಾಜಶಾಸ್ತ್ರೀಯವಲ್ಲದ ಎರಡೂ ಪ್ರಕಾರದ ಸ್ತ್ರೀಯರ ಅಂತಸ್ತಿನ ಬಗೆಗಿನ ಅಧ್ಯಯನಗಳನ್ನು ಈ ಪ್ರಬಂಧದಲ್ಲಿ ತಿಳಿಸಲಾಗಿದೆ. ಅವುಗಳಲ್ಲಿ ಕೆಲವು ಸಂಪ್ರದಾಯಿಕ ಮೂಲಗಳನ್ನು ಉಲ್ಲೇಖಿಸಿ ಭಾರತ ಚರಿತ್ರೆಯ ವಿಭಿನ್ನ ಕಾಲಗಳಲ್ಲಿ ಸ್ತ್ರೀಯರ ಅಂತಸ್ತಿನ ಬಗೆಗಿನ ವಾದ–ಪ್ರತಿವಾದಗಳನ್ನು ಮಂಡಿಸಿವೆ ಹಾಗೂ ಪುರುಷರ ಅಭಿವೃತ್ತಿಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳಿಂದ ಪ್ರಸಕ್ತ ಮಹಿಳೆ ಅನುಭವಿಸುತ್ತಿರುವ ತಾರತಮ್ಯ ಮತ್ತು ಅಸಮಾನತೆಯ ಮೇಲೆ ಈ ಪ್ರಬಂಧ ಗಮನವನ್ನು ಕೇಂದ್ರೀಕರಿಸಿವೆ.

ಈ ಪ್ರಬಂಧವು ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ಶಾಸನಗಳ ಪರಿಣಾಮಕಾರಿ ಸ್ತ್ರೀಯರ ಅಂತಸ್ತಿನಲ್ಲಿ ಉಂಟಾದ ಬದಲಾವಣೆಯ ವಿಶ್ಲೇಷಣೆ ಮಾಡುವುದಕ್ಕೆ ಗಮನಹರಿಸಲಾಗಿದೆ. ಈ ಸಾಮಾಜಿಕ ಶಾಸನಗಳು ನಗರದ, ಶಿಕ್ಷಿತ ಮಹಿಳೆಯರ ಸಣ್ಣ ಸಮೂಹದ ಬೇಡಿಕೆಯ ಫಲವಾಗಿ ರೂಪುಗೊಂಡವುಗಳು. ಇಂದಿನ ಸಾಮಾಜಿಕ ಸಂರಚನೆಯನ್ನು ಮತ್ತು ಸ್ತ್ರೀಯರ ಅಂತಸ್ತನ್ನು ಸರಿಯಾಗಿ ಅರ್ಥೈಸಲು ಸಮಾಜವನ್ನು ಪ್ರಭಾವಿತಗೊಳಿಸುವ, ರೂಢಿಸುವ ಚಾರಿತ್ರಿಕ, ರಾಜಕೀಯ ಮತ್ತು ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಕಾರ್ಯ ಪ್ರವೃತ್ತವಾಗಿರುವ ಬಗೆಯನ್ನು ತಿಳಿಸಲಾಗಿದೆ. ಒಟ್ಟಾರೆ ಮಹಿಳೆಯನ್ನು ಸಬಲೀಕರಿಸುವಲ್ಲಿ ಹಾಗೂ ಅವಳ ಹೀನಸ್ಥಿತಿಯನ್ನು ಮೇಲೆತ್ತುವಲ್ಲಿ ಸಾಮಾಜಿಕ ಶಾಸನಗಳು ಎಷ್ಟು ಪಾತ್ರವಹಿಸಿವೆ. ಇವುಗಳ ಸಹಾಯ ಸ್ತ್ರೀಯರಿಗೆ ಎಷ್ಟರಮಟ್ಟಿಗೆ ನೆರವಾಗಿದೆ ಎಂಬ ಸಂಪೂರ್ಣ ಮಾಹಿತಿಯನ್ನು ಈ ಪ್ರಬಂಧದಲ್ಲಿ ಕಾಣಬಹುದಾಗಿದೆ.

ಪೀಠಿಕೆ:- ಭಾರತ ದೇಶ ಸ್ವಾತಂತ್ರ್ಯ ಪಡೆದು ೬೪ ವರ್ಷಗಳಾಗಿದ್ದರು ಮಹಿಳೆಯರ ಸ್ಥಿತಿಗತಿಗಳು, ಸ್ಥಾನಮಾನಗಳು ಮತ್ತು ಬೌದ್ಧಿಕ ಪ್ರಗತಿಯಲ್ಲಿ ಹೆಚ್ಚಿನ ಬೆಳವಣಿಗೆಯೇನು ಕಂಡುಬರುತ್ತಿಲ್ಲ. ಮಹಿಳೆಯ ಬಗ್ಗೆ ನಮ್ಮ ಸಮಾಜದ ದೃಷ್ಟಿಯೇನೆಂದರೆ ಮದುವೆ, ಮಕ್ಕಳು ಮತ್ತು ಸಂಸಾರ. ಮಹಿಳೆಯರನ್ನು ಕುಟುಂಬದಿಂದಾಚೆಗೆ ಕುರಿತು ಯೋಚಿಸುವ ಯಾವೊಬ್ಬ ಪ್ರಜೆ ಇಲ್ಲದಿರುವುದು ಮಹಿಳೆಯನ್ನು ಅವಳದೇ ಆದ ವರ್ತುಲದಿಂದ ಚಿಂತಿಸುವುದು ಅಸಾಧ್ಯವಾಗಿತ್ತು ಅವಳನ್ನು ನಾಲ್ಕುಗೋಡೆಗಳ ಮಧ್ಯೆ ಚಿವುಟಿ ಹಾಕುವ ಸಂಪ್ರದಾಯವೇ ಜನರ ಯೋಚನೆಯಲ್ಲಿತ್ತು.

ಶರೀರವೇ ಹೆಣ್ಣಿಗೊಂದು ಹೊರೆ, ಶತ್ರು, ಬಂಧನ, ಮಗಳಾಗಿ, ತಾಯಿಯಾಗಿ, ವಿಧವೆಯಾಗಿ, ಅಸಹಾಯಕ ಹೆಣ್ಣಾಗಿ ಅವಳು ಸಮಾನತೆ ಸ್ವಾತಂತ್ರ್ಯವಿಲ್ಲದೆ ಅನೇಕ ಸಮಸ್ಯೆಗಳಿಗೆ ಗುರಿಯಾಗಿ "ಗೂಟಕ್ಕೆ ಕಟ್ಟಿದ ಹಸುವಿನ ಹಾಗೆ" ಬೇರೆಲ್ಲೂ ಗುರುತಿಸಿಕೊಳ್ಳಲಾಗದೆ ಜೀವನ ಸಾಗಿಸುತ್ತಿದ್ದಳು.

"ಯತ್ರಃ ನಾರ್ಯಂತು ಪೂಜ್ಯಂತು, ರಮಂತ ತತ್ರಃ ದೇವತಃ" ಅಂದರೆ ಎಲ್ಲಿ ಸ್ತ್ರೀ ಪೂಜಿಸಲ್ಪಡುತ್ತಾಳೋ ಅಲ್ಲಿ ದೇವತೆಗಳಿರುತ್ತಾರೆ ಎನ್ನುವ ಮಾತಿದೆ. ಹೆಣ್ಣನ್ನು ಪೂಜಿಸಿ ಗೌರವಿಸುವವರ ಸಂಖ್ಯೆಗಿಂತಲೂ ಅವಳನ್ನು ಕೀಳು ಮನೋಭಾವನೆಯಿಂದ ನೋಡುವವರ ಸಂಖ್ಯೆ ಹೆಚ್ಚು. ನಮ್ಮ ಸಮಾಜ ಹೆಣ್ಣಿನ ಸ್ವಾತಂತ್ರ್ಯದ ಮೇಲೆ ಅವಳ ಹಕ್ಕುಗಳ ಮೇಲೆ, ಅವಳ ಸುಂದರ ಭಾವನೆಗಳ ಮೇಲೆ ಅತಿಘೋರವಾದ ನಿರ್ಬಂಧವನ್ನು ಹಾಕುವುದು ಅವಳನ್ನು ಶೋಷಿಸುವುದು. ಪ್ರಸ್ತುತ ಹೆಣ್ಣುಮಕ್ಕಳ, ಭ್ರೂಣಹತ್ಯೆ, ಹೆಣ್ಣು ಮಕ್ಕಳ ಶಿಶುಹತ್ಯೆ, ವರದಕ್ಷಿಣಿ ಕಿರುಕುಳ, ಅತ್ಯಾಚಾರ ಇತರಹದ ಅನೇಕ ಸಮಸ್ಯೆಗಳಲ್ಲಿ ನಲುಗಿ ಹೋಗಿದ್ದಾಳೆ. ಇಷ್ಟೆಲ್ಲ ಸಮಸ್ಯೆಗಳ ನಡುವೇ ಇವರನ್ನು ಸಬಲೀಕರಿಸುವಲ್ಲಿ ಸಾಮಾಜಿಕ ಶಾಸನಗಳ ಪಾತ್ರ ಪ್ರಸ್ತುತ ಚರ್ಚೆಯ ವಿಷಯವಾಗಿದೆ.

ಈ ಶಾಸನಗಳ ಮುಖಾಂತರ ಸ್ತ್ರೀ ಮಾನಸಿಕತೆಯನ್ನು ಸಾಮಾಜಿಕ, ಧಾರ್ಮಿಕ ಕಟ್ಟುಪಾಡುಗಳಿಂದ ಹೊರಬಂದು ಇಂದು ಮಹಿಳೆ ಹೊರ ಪ್ರಪಂಚವನ್ನು ನೋಡಲಾರಂಭಿಸಿದ್ದಾಳೆ. ಈ ಸ್ತ್ರೀ ಜನ್ಮ ತನ್ನ ಪೂರ್ವ ಜನ್ಮದ

ಪಾಪದ ಪ್ರತಿರೂಪ ಎಂದು ಅರಣ್ಯರೋಧನ ಮಾಡುತ್ತಿದ್ದವಳು ಇಂದು ಪುರುಷನಿಗೆ ಸರಿಸಮಾನವಲಿ ನಿಂತು ತಾನು ಆತನಿಗೆ ಕಡಿಮೆ ಏನೂ ಇಲ್ಲವೆಂದು ಸಮಾಜದ ಹತ್ತು ಹಲವಾರು ಕ್ಷೇತ್ರಗಳಿಗೆ ದಾಪುಗಾಲನ್ನು ಇಡುತ್ತಿದ್ದಾಳೆ. ಪುರುಷ ಸಮಾಜದ ಚಕ್ರವ್ಯೂಹದಲ್ಲಿ ಸಿಲುಕಿ, ನಲುಗಿ ಹೋಗಿದ್ದವಳು ಇಂದು ಹೊರನಡೆದಿದ್ದಾಳೆ, ಧರ್ಮದ ಹೆಸರಿನಲ್ಲಿ ತೊಗಲು ಗೊಂಬೆಯಾಗಿದ್ದವಳು ಆ ಅರ್ಥಹೀನ ಸೂತ್ರದ ಹಿಡಿತದಿಂದ ಮುಕ್ತಳಾಗುತ್ತಿದ್ದಾಳೆ. ಪ್ರಸ್ತುತ ದಿನದಲ್ಲಿ ಎಷ್ಟೆ ಸಮಸ್ಯೆಗಳಿದ್ದರು ಅದನ್ನು ಎದುರಿಸಿ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕ ವಾಗಿ ಮುನ್ನಡೆ ಸಾಧಿಸಲು ಸಾಮಾಜಿಕ ಕಾನೂನುಗಳನ್ನು ಬಳಸಿಕೊಳ್ಳುವ ಮೂಲಕ ತನ್ನ ತರ್ಕ ಜೀವನವನ್ನು ಸುಭದ್ರಗೊಳಿಸಿಕೊಳ್ಳುವಲ್ಲಿ ಮುನ್ನುಗ್ಗುತ್ತಿದ್ದಾರೆ.

ಸಂಶೋಧನೆಯ ಉದ್ದೇಶ :-

- ಮಹಿಳಾ ಸಬಲೀಕರಣದ ಅರ್ಥಮತ್ತು ವ್ಯಾಖ್ಯೆಗಳನ್ನು ತಿಳಿಯಬಹುದು.
- ಮಹಿಳಾ ಸಶಕ್ತೀಕರಣಕ್ಕಿರುವ ಕೌಶಲ್ಯಗಳನ್ನು ಅರಿಯಬಹುದು.
- ಮಹಿಳೆಯ ಸಬಲೀಕರಣಕ್ಕಿರುವ ಸಮಸ್ಯೆಗಳನ್ನು ತಿಳಿಯಬಹುದು.
- ಸ್ತ್ರೀಯರ ಸಬಲೀಕರಣಕ್ಕಿರುವ ಶಾಸನಾತ್ಮಕ ಕ್ರಮಗಳು ಅರಿಯಬಹುದು.

ಮಹಿಳಾ ಸಬಲೀಕರಣದ ಅರ್ಥ :- ಮಹಿಳಾ ಸಬಲೀಕರಣ ಆರ್ಥಿಕ ಅವಕಾಶ, ಆಸ್ತಿಯ ಹಕ್ಕು, ರಾಜಕೀಯ ಪ್ರಾತಿನಿಧ್ಯತೆ, ಸಾಮಾಜಿಕ ಸಮಾನತೆ, ವೈಯುಕ್ತಿಕ ಹಕ್ಕು ಇತ್ಯಾದಿ ಅನೇಕ ಅಂಶಗಳನ್ನು ಒಳಗೊಂಡಿರುತ್ತದೆ.

ನೈರೋಬಿಯದಲ್ಲಿ ೧೯೮೫ರಲ್ಲಿ ಅಂತರಾಷ್ಟ್ರೀಯ ಮಹಿಳಾ ಕಾರ್ಯಾಗಾರದಲ್ಲಿ ಮಹಿಳಾಸಬಲೀಕರಣ ಎಂಬ ಪರಿಕಲ್ಪನೆಯನ್ನು ಪರಿಚಯಿಸಲಾಯಿತು ಈ ಒಂದು ಕಾರ್ಯಾಗಾರದಲ್ಲಿ ಮಹಿಳಾ ಸಬಲೀಕರಣದ ಬಗ್ಗೆ ವ್ಯಾಖ್ಯಾನ ಮಾಡಲಾಯಿತು ಅದೇನೆಂದರೆ ಮಹಿಳೆಯ ಪರವಾಗಿ ಸಾಮಾಜಿಕ ಮತ್ತು ನಿಯಂತ್ರಣ, ಸಂಪನ್ಮೂಲವನ್ನು ಪುನರ್ ಹಂಚಿಕೆಯಾಗುವುದೇ ಮಹಿಳಾ ಸಬಲೀಕರಣ.

ಒಟ್ಟಾರೆ ಅಂಗ ತಾರತಮ್ಯತೆ, ಅಸಮಾನತೆ, ಅನರ್ಹತೆ ಹಾಗೂ ಇನ್ನಿತರ ಬಗೆಯ ಸಂಕಷ್ಟಗಳಿಗೆ ಒಳಗಾಗಿರುವ ಸ್ತ್ರೀಯರಿಗೂ ಕೂಡ ಪುರುಷರಿಗೆ ಸರಿಸಮಾನವದ ಅಂತಸ್ತು ಹಾಗೂ ಅವಕಾಶಗಳನ್ನು ನೀಡಿ ಅವರನ್ನು ಸಶಕ್ತರನ್ನಾಗಿಸಲು ಹಮ್ಮಿಕೊಳ್ಳಲಾಗಿರುವ ಅಭಿವೃದ್ಧಾತ್ಮಕ ಕಾರ್ಯಯೋಜನೆಗಳ ಪ್ರಕ್ರಿಯೆಯನ್ನು ಮಹಿಳಾಶಕ್ತೀಕರಣ ಎನ್ನಬಹುದು.

ವ್ಯಾಖ್ಯೆಗಳು :- ಉಮಶಂಕರ್. ಜೌ.ಆರತಿ ಮೆಹ್ತಾ & ಲತಿಕ್ ಮೆನನ್: ಇವರು ಮಾತನಾಡುವಾಗ ಮಹಿಳಾ ಸಬಲೀಕರಣದ ಬಗ್ಗೆ ಗುರುತಿಸುತ್ತಾರೆ

- ಆರ್ಥಿಕ ಸ್ಥಾನವನ್ನು ಸದೃಡಗೊಳಿಸುವುದು.
- ನಿರ್ಣಯ ತೆಗೆದುಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು
- ಮುಕ್ತತೆ ಬೆಂಬಲಿಸುವುದು
- ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸುವುದು

ಇವೆಲ್ಲವನ್ನು ಪುರುಷನಷ್ಟೆ ಸ್ತ್ರೀ ಗೆ ಸಮಾನ ಸ್ಥಾನಮಾನವನ್ನು ಒದಗಿಸುವುದೇ ಸಬಲೀಕರಣ ಎಂದಿದ್ದಾರೆ.

- **ಸೈಲಾಕಜೀರ್ :-** ಮಹಿಳೆಯರು ತಮ್ಮ ಸ್ವಾವಲಂಬನೆಯನ್ನು ಹೆಚ್ಚಿಸಿಕೊಂಡು ಸ್ವಾತಂತ್ರ್ಯ ಹಕ್ಕನ್ನು ಪ್ರತಿಪಾದಿಸುವ ಆಯ್ಕೆ ಮಾಡುವ ಸಂಪನ್ಮೂಲಗಳ ಮೇಲೆ ಪ್ರಶ್ನಿಸಿ ಅದನ್ನು ಹೋಗಲಾಡಿಸಿ ಸಾಮರ್ಥ್ಯವನ್ನು ಪಡೆಯುವ ಪ್ರಕ್ರಿಯೆಯನ್ನು ಮಹಿಳಾಸಬಲೀಕರಣ ಎನ್ನುತ್ತಾರೆ.
- **ರಿಚ್ಚ ಸೋರಸನ್ ಮತ್ತು ಹಲ್ಲೆ ಪಾಲ್ಸನ್ :-** ರವರ ಪ್ರಕಾರ "ಸ್ವಾಯತ್ತೆ" ಮತ್ತು ಜೀವನ ಮೇಲೆ ಸ್ವನಿಯಂತ್ರಣ ಹೊಂದುವುದು ಮಹಿಳೆಯರು ತಮ್ಮ ಅಭಿವೃದ್ಧಿಯ ರೂವಾಲಿಗಳಾಗುವುದು, ಆಯ್ಕೆ ಹಕ್ಕನ್ನು ಪಡೆಯುವುದು, ತಮ್ಮದೇ ಕಾರ್ಯಸೂಚಿಯನ್ನು ರೂಪಿಸಿಕೊಳ್ಳುವುದು ಮತ್ತು ಸಮಾಜದಲ್ಲಿರುವ ಪರಾಧೀನ ಪರಿಸ್ಥಿತಿಯನ್ನು ಬದಲಾಯಿಸುವ ಸಾಮರ್ಥ್ಯವನ್ನು ಪಡೆಯುವುದು ಸಶಕ್ತೀಕರಣ.

ಮೇಲ್ಕಂಡ ವ್ಯಾಖ್ಯೆಯನ್ನು ಗಮನಿಸಿದಾಗ ಮಹಿಳೆಯರಿಗೆ ಎಲ್ಲಾ ರಂಗದಲ್ಲೂ ಪುರುಷನಷ್ಟೆ ಸಮಾನ ಅವಕಾಶ ದೊರೆತಾಗ ಮಾತ್ರ ಸ್ತ್ರೀ ಸಶಕ್ತೀಕರಣವನ್ನು ಕಾಣಲು ಸಾಧ್ಯವಾಗಿದೆ.

ಮಹಿಳಾ ಸಶಕ್ತೀಕರಣಕ್ಕಿರುವ ಕೌಶಲ್ಯಗಳು (Strategies for women's Empowerment): ಮಹಿಳೆಯರು ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ವ್ಯವಸ್ಥೆಗೆ ಸಿಲುಕಿ ತನ್ನ ಜೀವನವನ್ನು ತರ್ಕ ಮಾಡಿಕೊಳ್ಳುವ ಮೂಲಕ ಇನ್ನೊಬ್ಬರಿಗಾಗಿ ಬದುಕುವುದೇ ತನ್ನ ಜೀವನ ಎನ್ನುವಷ್ಟರ ಮಟ್ಟಿಗೆ ತನ್ನನ್ನು ತಾನೇ ಅರ್ಥೈಯಿಸಿಕೊಳ್ಳುವಲ್ಲಿ ವಿಫಲಳಾಗಿದ್ದಳು ಆದಕಾರಣ ಈ ರೀತಿಯ ಕೆಟ್ಟ ಸಂಪ್ರದಾಯ, ಸ್ತ್ರೀ ಮೇಲೆ ಪ್ರಭಾವ ಬೀರುವ ಕೆಟ್ಟ ಸಂಸ್ಕೃತಿಯನ್ನು ಬೇರುಮಟ್ಟದಿಂದ ತೆಗೆಯುವ ವ್ಯವಸ್ಥೆ ಸಮಾಜದ್ದಾಗಬೇಕು ಪ್ರತಿಯೊಬ್ಬರ ಕರ್ತವ್ಯವಾಗಬೇಕು. ಸ್ತ್ರೀಯರು ಸಮಾಜದಲ್ಲಿ ತನಗಾಗಿ ಬದುಕುವ ಸುಂದರ ವಾತಾವರಣ ಉಂಟಾಗಬೇಕು. ಇದನ್ನು ನಿರ್ಮಾಣ ಮಾಡಿದಾಗ ಮಾತ್ರ ಸ್ತ್ರೀಸಶಕ್ತಿಯು ಬೆಳವಣಿಗೆ ಸಾಧ್ಯ, ಇವರ ಸಬಲೀಕರಣಕ್ಕೆ ಈ ಕೆಳಕಂಡ ಕಾರ್ಯತಂತ್ರ ರೂಪಿಸಬೇಕಿದೆ, ಅವುಗಳೆಂದರೆ

1. ಸ್ತ್ರೀಯರು ರಾಜಕೀಯದಲ್ಲಿ ಪಾಲ್ಗೊಳ್ಳುವ ವ್ಯವಸ್ಥೆಯನ್ನು ಹುಟ್ಟುಹಾಕಬೇಕು.
2. ಸ್ತ್ರೀಯರ ಸ್ವಾವಲಂಬನಾ ಜೀವನವನ್ನು ಹುಟ್ಟುಹಾಕಲು, ಸ್ತ್ರೀಯರಿಗೆ ಹೆಚ್ಚು ಹೆಚ್ಚು ಶಿಕ್ಷಣಗಳನ್ನು ಕೊಡಿಸಬೇಕು.
3. ಸ್ತ್ರೀಯರಿಗಾಗಿಯೇ ಪ್ರತ್ಯೇಕ ಯೋಜನೆಗಳನ್ನು ಸರ್ಕಾರ ಹುಟ್ಟುಹಾಕುವ ಮುಖಾಂತರ ಸ್ತ್ರೀಯರನ್ನು ಆರ್ಥಿಕ ರಂಗದಲ್ಲಿ ದಾಪುಗಾಲು ಹಾಕುವಂತೆ ನೋಡಿಕೊಳ್ಳಬೇಕು.
4. ಸಮಾಜವನ್ನು ಮತ್ತು ಪ್ರಜೆಗಳನ್ನು ಸೃಜನಶೀಲರನ್ನಾಗಿಸುವ ಎಲ್ಲಾ ರಂಗದಲ್ಲೂ ಉದಾಹರಣೆಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಸರ್ಕಾರ ಸ್ಥಳೀಯ ಸರ್ಕಾರಗಳಲ್ಲಿ ತೀರ್ಮಾನಗಳನ್ನು ಕೈಗೊಳ್ಳುವ ವ್ಯವಸ್ಥೆಗೆ ಸ್ತ್ರೀಯರಿಗೂ ಅವಕಾಶ ಒದಗಿಸಬೇಕು.
5. ಸ್ತ್ರೀಯರನ್ನು ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳುವ ಮನಸ್ಸನ್ನು ಮಾಧ್ಯಮಗಳು ಬೆಳೆಸಬೇಕು. ಸ್ತ್ರೀಯರು ಸ್ವತಃ ತಾವಾಗೆ ಎಲ್ಲಾ ರಂಗದಲ್ಲೂ ಪಾಲ್ಗೊಳ್ಳುವ ಹೊಸ ಶಕ್ತಿಯನ್ನು ಮಾಧ್ಯಮಗಳು ಹೆಚ್ಚಿಸಬೇಕು ಸ್ತ್ರೀಯರಿಗೆ ಮಾರಕವಾಗಬದಲು ಮಾಧ್ಯಮಗಳು ಸ್ಫೂರ್ತಿಯಾಗಬೇಕು.
6. ಹೆಣ್ಣು ಮತ್ತು ಗಂಡಿನ ನಡುವೆ ಇರುವ ಅಂಗತಾರತಮ್ಯವನ್ನು ಕೊನೆಗಾಣಿಸಲು ಸರ್ಕಾರ ಹೊಸ ಹೊಸ ಯೋಜನೆಗಳನ್ನು ಸ್ತ್ರೀಯರಿಗಾಗಿ ತರಲಿಚ್ಛಿಸಬೇಕು.

ಮಹಿಳಾ ಸಬಲೀಕರಣಕ್ಕಿರುವ ಸಮಸ್ಯೆಗಳು :- ಮಹಿಳೆಯನ್ನು ಸಬಲೀಕರಿಸಲು ಇರುವಂತಹ ಸಮಸ್ಯೆಗಳು ಮಹಿಳೆಯರು ಮುಖ್ಯವಾಹಿನಿಗೆ ಬರದಂತೆ ಕಂದಕವನ್ನು ಹೆಣೆಯುವ ಕೆಲಸವನ್ನು ಈ ಸಮಸ್ಯೆಗಳು ಮಾಡುತ್ತಿವೆ. ಮಹಿಳೆಯರು ಸ್ವತಂತ್ರವಾಗಿ, ನಿರ್ಭಯವಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಾಗದ ಮಲಿನಚಿಕೆಯಾಗಿದೆ ಮಹಿಳೆಯರನ್ನು

ಸಬಲೀಕರಿಸಲು ಸರ್ಕಾರ ಏನೇ ಕಾರ್ಯತಂತ್ರವನ್ನು ರೂಪಿಸಿದರು ನಮ್ಮ ಸಮಾಜದ ಕಟ್ಟುಪಾಡುಗಳು ಮಹಿಳಾ ಶೋಷಣೆಗೆ ನಾಂದಿಯಾಗಿ ಈ ಕೆಳಕಂಡ ಸಮಸ್ಯೆಗಳನ್ನು ಎದುರಿಸುವಂತಾಗಿದೆ ಅವುಗಳೆಂದರೆ,

1. ಲೈಂಗಿಕ ಅತ್ಯಾಚಾರ :- ಹೆಣ್ಣು ಮಕ್ಕಳು ಸಂಸ್ಕೃತಿಯ ಪ್ರತೀಕ ಅಂತಹ ಸ್ತ್ರೀಯರ ಮೇಲೆ ಪುರುಷರಲ್ಲಿ ಕೆಲವು ವ್ಯಕ್ತಿಗಳು ಮೃಗದೋಪಾಯದಲ್ಲಿ ಲೈಂಗಿಕ ಅತ್ಯಾಚಾರ ಮಾಡುವುದಲ್ಲದೆ ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಸಮಾಧಾನ ಹೇಳಬೇಕಾದ ಸಮಾಜ ಕೀಳುಮಟ್ಟದಲ್ಲಿ ನೋಡುವುದರಿಂದ ಆತ್ಮಹತ್ಯೆ ಅಥವಾ ಸಮಾಜದಿಂದಲೇ ದೂರ ಉಳಿಯುವ ನಿರ್ಧಾರ ಮಾಡುತ್ತಿರುವುದು ಹೆಣ್ಣಿನ ಮೇಲಿನ ಶೋಷಣೆಯಾಗಿದೆ.

2. ವರದಕ್ಷಿಣಿ :- ಇದೊಂದು ಸಾಮಾಜಿಕ ಪಿಡುಗು ವರದಕ್ಷಿಣಿಯ ಭಯದಿಂದ ಹೆಣ್ಣು ಎಂದರೆ ಸಮಾಜದಲ್ಲಿ ಭಾರ ಎನ್ನುವಷ್ಟರ ಮಟ್ಟಿಗೆ ತಲೆನೋವಾಗಿದೆ ಮದುವೆಯಾದ ಹೆಣ್ಣನ್ನು ವರದಕ್ಷಿಣಿಗಾಗಿ ಮೃಗಕ್ಕಿಂತಲೂ ಕೀಳಾಗಿ ನೋಡುವ ಕೆಲವು ವ್ಯಕ್ತಿಗಳನ್ನು ಸಮಾಜದಲ್ಲಿ ಗುರುತಿಸಬಹುದಾಗಿದೆ. ಹೆಣ್ಣಿಗೆ ಹೆಣ್ಣೆ ಶತ್ರುವಾಗಿರವುದು ಮತ್ತೊಂದು ವಿಪರ್ಯಾಸ, ವರದಕ್ಷಿಣಿಗಾಗಿ ಅನೇಕ ಕಿರುಕುಳ ಬೆಂಕಿಯಲ್ಲಿ ಸುಡುವುದು, ಅವರ ತಂದೆಯ ಮನೆಗೆ ವಾಪಸ್ಸು ಕಳುಹಿಸುವುದು ಮನೆಯಲ್ಲಿ ಜೀತದಾಳಂತೆ ದುಡಿಸುವುದು, ಅನ್ನ ನೀರು ನೀಡದಂತೆ ಶೋಷಿಸುವ ಅನೇಕ ದೃಶ್ಯಗಳನ್ನು ಹೆಣ್ಣಿನ ಸ್ಥಾನವನ್ನು ಕೆಳಗಿಳಿಸಿದೆ.

3. ಶಿಕ್ಷಣದಿಂದ ವಂಚಿತಳಾಗಿರುವುದು : - ಹೆಣ್ಣೆಂದರೆ ತಂದೆ ತಾಯಿಗಳಿಗೆ ಮದುವೆಯಾದ ಮೇಲೆ ಗಂಡನ ಮನೆ ಬೆಳಗಲು ಹೋಗುವವಳಿಗೆ ಲಕ್ಷಾಂತರ ರೂಪಾಯಿಕೊಟ್ಟು ಓದಿಸಲು ಹಿಂದೆ ಸರಿಯುವ ಸಮಸ್ಯೆ ಒಂದು ಕಡೆಯದರೆ, ಎಲ್ಲಿ ಮಗಳು ಶಾಲೆಗೆ ಹೋದರೆ ಹುಡುಗರು ಚುಡಾಯಿಸಿ ಅಥವಾ ಅಪಹರಿಸುವ ಸಾಧ್ಯತೆಯಿದ್ದು ಸಮಾಜದಲ್ಲಿ ತಲೆತಗ್ಗಿಸುವ ವ್ಯವಸ್ಥೆ ನಿರ್ಮಾಣವಾಹಬಹುದು ಎಂಬ ಆತಂಕ ಸ್ತ್ರೀಯರನ್ನು ನಾಲ್ಕುಗೋಡೆಯಲ್ಲೆ ಬಂಧಿಸಿ, ಮದುವೆ ಮಾಡಿ ತಮ್ಮ ಜವಾಬ್ದಾರಿಯನ್ನು ಇನ್ನೊಂದು ಮನೆಗೆ ಹೇರಿ ನಿಟ್ಟುಸಿರು ಬಿಡುವ ಪೋಷಕರಿಂದಲೇ ಸ್ತ್ರೀಯರ ಶಿಕ್ಷಣ ಕ್ಷೀಣಿಸುತ್ತಿದೆ.

4. ಸ್ತ್ರೀ ಭ್ರೂಣ ಹತ್ಯೆ :- ಮಹಿಳೆಯರನ್ನು ಕೀಳಾಗಿ ನಡೆಸುವ ನಮ್ಮ ಸಂಸ್ಕೃತಿ ಸ್ತ್ರೀ ಭ್ರೂಣಹತ್ಯೆಗೂ ನಾಂದಿಯಾಡಿದೆ ಗರ್ಭವತಿಯಾದ ಹೆಣ್ಣನ್ನು ತಪಾಸಣೆಗೆ ಒಳಪಡಿಸಿ ಹೊಟ್ಟೆಯಲ್ಲಿರುವುದು ಹೆಣ್ಣೀ ಅಥವಾ ಗಂಡೇ ಎಂಬ ವಾಸ್ತವ ತಿಳಿದು ಹೆಣ್ಣು ಶಿಶುವನ್ನು ಹೆಣ್ಣಿಂದಲೆ ತೆಗೆಸುವ ವ್ಯವಸ್ಥೆ ಸಮಾಜದ ಅನಭಿವೃದ್ಧಿಗೆ ಪೂರಕವಾಗಿದೆ. ಪ್ರಸ್ತುತ ಭಾರತದ ಜನಗಣತಿ ಪ್ರಕಾರ 1000 ಪುರುಷರಿಗೆ 864 ಸ್ತ್ರೀಯರು ಇರುವುದು ಸ್ತ್ರೀಯರ ಸಂಖ್ಯೆ ದಿನೇ ದಿನೇ ತಗ್ಗುತ್ತಿದೆ. ಇದು ಸಮಾಜವೇ ತಲೆತಗ್ಗಿಸುವ ವ್ಯವಸ್ಥೆ ನಿರ್ಮಾಣವಾಗಿದೆ. ಹೆಣ್ಣು ಎಂದರೆ ಶಾಪ ಎನ್ನುವಷ್ಟರ ಮಟ್ಟಿಗೆ ಶೋಷಣೆಗೆ ನಾಂದಿಯಾಗಿದೆ.

5. ಬಾಲ್ಯವಿವಾಹಗಳು :- ಹೆಣ್ಣು ಸಮಾಜದ ಕಣ್ಣು ಸಮಾಜವನ್ನೇ ಬದಲಿಸುವ ಈ ಬಾಲ್ಯವಿವಾಹಗಳು ಅವರನ್ನು ಗುಲಾಮರನ್ನಾಗಿಸಿದೆ. ಪಲಿಪಕ್ವವಾಗಿ ಬುದ್ಧಿವಂತೆಯಾಗಬೇಕಾದ ಹೆಣ್ಣನ್ನು ಅರಿಯದ ವಯಸ್ಸಿನಲ್ಲಿ ವಿವಾಹ ಬಂಧನಕ್ಕೊಡ್ಡಿ ಅವರ ಆರೋಗ್ಯ ಮತ್ತು ಜ್ಞಾನದ ಮೇಲೆ ವಿಷಪೂರಿತ ಪರಿಣಾಮ ಬೀರುತ್ತಿರುವುದು ಮತ್ತೊಂದು ಸಮಸ್ಯೆಯಾಗಿದೆ. ಬಾಲ್ಯವಿವಾಹ ಆಟವಾಡಿಕೊಂಡು ಬೆಳೆಯಬೇಕಾದ ಮಗುವಿನಲ್ಲಿ ಮತ್ತೊಂದು ಮಗುವಿರುವುದು ಸಮಾಜದ ಘೋರಕೃತ್ಯವನ್ನು ನೆನಪಿಸುತ್ತದೆ. ಇವತ್ತು ಪ್ರಸ್ತುತ ಹಳ್ಳಿಗಳ ಕಡೆ ಬಾಲ್ಯವಿವಾಹಗಳು ಅಪರಾಧವೆಂಬುದು ಗೊತ್ತಿದ್ದು ನಡೆಸುತ್ತಿರುವುದು ಶೋಚನೀಯ ಸ್ಥಿತಿ ಮಹಿಳೆಯರದ್ದಾಗಿದೆ.

6. ಲೈಂಗಿಕ ಕಿರುಕುಳ :- ಇಂದು ಪುರುಷ ಮಹಿಳೆಯ ಒಡನಾಡಿಗಳಾಗಿಯೇ ಇದ್ದು ಅವಳ ಮೇಲೆ ಕಾಮದ ತೃಷೆ ಈಡೇರಿಸಿಕೊಳ್ಳುವ ಪುರುಷರಲ್ಲಿ ಕೆಲವರ ಪ್ರವೃತ್ತಿ ಅಮಾನುಷವಾಗಿ ಕಾಣುತ್ತಿದೆ. ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಪುರುಷ ಕಾಮತೃಷೆ ಇಂಗಿಸಿಕೊಳ್ಳಲು ಪೀಡಿಸುವ ಅಥವಾ ಬಲತ್ಕರಿಸುವ ರೀತಿಯೇ ಲೈಂಗಿಕ ಕಿರುಕುಳವಾಗಿದೆ. ಈ ಕಿರುಕುಳವು ಒಂದು ಆಧುನಿಕ ಪಿಡುಗಾಗಿ ಕಾಡುತ್ತಿದೆ.

ಪ್ರಸ್ತುತ ಆಧುನಿಕ ಸಮಾಜದಲ್ಲಿ ಉದ್ಯೋಗಸ್ಥ ಮಹಿಳೆಯ ಮೇಲೆ ಇತರರ ಲೈಂಗಿಕ ಕೃತ್ಯಗಳು ಸಾಮಾನ್ಯವಾಗಿಬಿಟ್ಟಿದೆ, ಅದಲ್ಲದೆ ಸಂಶೋಧನೆಗಾಗಿ ಬರುವ ವಿದ್ಯಾರ್ಥಿನಿಯರನ್ನು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ತನ್ನ ತೃಷೆಗೆ ಬಳಸಿಕೊಳ್ಳುವ ಮೂಲಕ ನೀಡುವ ಹಿಂಸೆ ನಾಚಿಕೆ ಹುಟ್ಟಿಸುವಂತಿರುತ್ತದೆ. ಇತ್ತೀಚೆಗೆ ಉನ್ನತ ಸ್ಥಾನದಲ್ಲಿ ಕುಳಿತ ನ್ಯಾಯದಾನ ಮಾಡಬೇಕಾದ ಜಸ್ಟೀಸ್ ಗಂಗೋಲಿಯವರು ವಕೀಲೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿರುವುದು ಭಾರತದಲ್ಲಿ ಪೋಲಿಸ ಮಹಾನಿರ್ದೇಶಕರಾಗಿದ್ದ ಕೆ.ಪಿ.ಎಸ್. ಗಿಲ್ ಮತ್ತು ಪೋಲಿಸ್ ಅಧಿಕಾರಿಯಾಗಿದ್ದ ಅಧಿಕಾರಿ ರಾತೋಡ್ ಇವರು ಸಮಾಜದ ಪ್ರಜೆಗಳನ್ನು ರಕ್ಷಿಸಬೇಕಾದವರು ಈಗ ತಾವೇ ಲೈಂಗಿಕ ಕಿರುಕುಳ ನೀಡುತ್ತಿರುವುದು ಬೇಲಿ ಎದ್ದು ಹೊಲಮೇದಂತೆ.

ಹೀಗೆ ಹೆಣ್ಣಿನ ಮೇಲೆ ಅನೇಕ ಶೋಷಣೆಗಳು ಜರುಗುತ್ತಲೇ ಬಂದಿರುವುದು ಈ ದೇಶದ ದುರಂತವೇ ಸರಿ ಆದರೂ ಇವರ ರಕ್ಷಣೆಗೆ ಪ್ರಸ್ತುತ ಅನೇಕ ಸಾಮಾಜಿಕ ಶಾಸನಗಳು ಬಂದಿರುವ ಮೂಲಕ ಹೆಣ್ಣಿಗೆ ರಕ್ಷಣೆಯಾಗಿ ನಿಂತಿವೆ.

ಸ್ತ್ರೀಯರನ್ನು ಸಬಲೀಕರಿಸುವಲ್ಲಿ ಶಾಸನಾತ್ಮಕ ಕ್ರಮಗಳು :- ನಮ್ಮ ದೇಶದಲ್ಲಿ ಸ್ತ್ರೀಯರ ಅಭಿವೃದ್ಧಿ ಮತ್ತು ಅವರ ಹಿತಾಶಕ್ತಿಗಳ ಸಂರಕ್ಷಣೆಗಾಗಿ ಹಲವಾರು ಕಾನೂನು ಕ್ರಮಗಳನ್ನು ಕೈಗೊಳ್ಳುವ ಮೂಲಕ ಸ್ತ್ರೀ ಸಶಕ್ತೀಕರಣಕ್ಕೆ ಭಾರತ ಸರ್ಕಾರ ನಾಂದಿಯಾಗಿದೆ. ಅಂತಹ ಶಾಸನಾತ್ಮಕ ಪರಿಹಾರ ಕ್ರಮಗಳೇನು? ಎಂಬುದನ್ನು ಈ ಕೆಳಕಂಡಂತೆ ನೋಡಬಹುದು.

ಬ್ರಿಟಿಷರು ಭಾರತದ ಆಡಳಿತ ಸೂತ್ರವನ್ನು ವಹಿಸಿಕೊಂಡಿದ್ದಾಗಲೇ ಸ್ತ್ರೀಯರ ಸಾಮಾಜಿಕ ಸ್ಥಿತಿ-ಗತಿಗಳನ್ನು ಸುಧಾರಿಸುವ ಉದ್ದೇಶದಿಂದ ಕೆಲವು ಕಾಯಿದೆಗಳನ್ನು ಜಾರಿಗೊಳಿಸಿದ್ದರು.

ಮುಂದೆ ಸ್ವಾತಂತ್ರ್ಯಾ ನಂತರ ಭಾರತ ಸರ್ಕಾರವು ಸ್ತ್ರೀಯರ ಸ್ಥಾನಮಾನವನ್ನು ಉತ್ತಮ ಪಡಿಸುವ ಉದ್ದೇಶದಿಂದ ಮತ್ತಷ್ಟು ಶಾಸನಗಳನ್ನು ಜಾರಿಗೊಳಿಸಿತು.

ಸ್ವತಂತ್ರ್ಯಾ ನಂತರ ಭಾರತದಲ್ಲಿ ಜಾರಿಗೆ ಬಂದ ಸ್ತ್ರೀಪರ ಶಾಸನಗಳು ಈ ರೀತಿ ಇವೆ.

1. ಹಿಂದೂ ವಿವಾಹ ಕಾಯಿದೆ 1955 :- ಹಿಂದೂಗಳಿಗೆ ಅನ್ವಹಿಸುವ ಈ ಶಾಸನವು 'ಹಿಂದೂ' ಎಂಬ ಪದಕ್ಕೆ ವ್ಯಾಖ್ಯೆ ನೀಡಿದೆ. ಶಾಸನದ ಮುಖ್ಯ ಉದ್ದೇಶಗಳು ಹೀಗಿವೆ.

ಅ) ಬಹುಪತ್ನಿತ್ವ ಹಾಗೂ ಬಹುಪತಿತ್ವವನ್ನು ರದ್ದುಗೊಳಿಸುವುದು.

ಆ) ಬಾಲ್ಯವಿವಾಹ ನಿಷೇದ ಹಾಗೂ ವಿವಾಹ ಪೂರ್ವ ವಯಸ್ಸನ್ನು ನಿಗಧಿಗೊಳಿಸುವುದು ಈ ಕಾನೂನಿನ್ವಯ ವಿವಾಹದ ಸಮಯದಲ್ಲಿ ವಧುವಿಗೆ 18 ಹಾಗೂ ವರನಿಗೆ 21 ವರ್ಷ ವಯಸ್ಸಾಗಿರಬೇಕು.

ಇ) ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದಂತೆ ಸ್ತ್ರೀ-ಪುರುಷರಿಗೆ ಸಮಾನ ಹಕ್ಕುಗಳು ಹಾಗೂ ತನ್ನ ಪತಿ ಲೈಂಗಿಕ ಅತ್ಯಾಚಾರ ನಡೆಸುತ್ತಿದ್ದಲ್ಲಿ ಹಾಗೂ ಕ್ರೂರಿಯಾಗಿದ್ದಲ್ಲಿ ಸ್ತ್ರೀ ವಿಚ್ಛೇದನ ಪಡೆಯಬಹುದು.

ಈ) ವಿಚ್ಛೇದನ ಪಡೆದ ಸ್ತ್ರೀ ಒಂದು ವರ್ಷದ ನಂತರ ಪುನರ್ವಿವಾಹವಾಗಬಹುದು.

ಈ) ವಿವಾಹದ ನೊಂದಣಿಗೆ ಅವಕಾಶ ನೀಡಲಾಗಿದೆ. ಆದರೆ ಈ ರೀತಿ ನೊಂದಣಿಯು ಕಡ್ಡಾಯವಲ್ಲ.

2. ಹಿಂದೂ ಉತ್ತರಾಧಿಕಾರಿ ಕಾಯ್ದೆ 1956 :- ಹಿಂದೂ ಸಂಪ್ರದಾಯದ ಪ್ರಕಾರ ಸ್ತ್ರೀಗೆ ಆಸ್ತಿಯ ಉತ್ತರಾಧಿಕಾರವಿರಲಿಲ್ಲ ಆದರೆ ಸ್ತ್ರೀಯು ಸ್ತ್ರೀ ಧನವನ್ನು ಮಾತ್ರ ಹೊಂದಿರಬಹುದಾಗಿತ್ತು. ಈ ಕಾನೂನು ಕುಟುಂಬದ ಹಿರಿಯನು ಮರಣ ಹೊಂದಿದಲ್ಲಿ ಕುಟುಂಬದ ಪಿತ್ರಾರ್ಜಿತ ಆಸ್ತಿಯನ್ನು ಆತನ ಮಗ, ಮಗಳೂ, ವಿಧವೆ, ಪತ್ನಿ ಹಾಗೂ ತಾಯಿ ಇವರನ್ನು ಉತ್ತರಾಧಿಕಾರಿಗಳನ್ನಾಗಿಸಿದೆ. ಮೃತ ವ್ಯಕ್ತಿಯ ಸ್ವಯಾರ್ಜಿತ ಆಸ್ತಿಯ ವಿಲೇವಾರಿಯ ಬಗೆಗೆ ಆತ ಉಯಿಲು (ಮರಣ ಶಾಸನ) ಮಾಡದೇ ಇದ್ದಲ್ಲ ಅವನ ಆಸ್ತಿಯನ್ನು ಸ್ತ್ರೀ - ಪುರುಷ ವಾರಸುದಾರರಿಗೆ ಸಮವಾಗಿ ಹಂಚಲ್ಪಡುತ್ತದೆ.

3. ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ 1956 :- ಈ ಕಾಯ್ದೆ ಜಾರಿಗೆ ಬರುವ ಮುನ್ನ ಕೇವಲ ಪುರುಷರಿಗೆ ಮಾತ್ರ ದತ್ತಕ ಪಡೆಯುವ ಅಧಿಕಾರವಿತ್ತು. ಆದರೆ ಈ ಕಾಯ್ದೆ ಅವಿವಾಹಿತ ಸ್ತ್ರೀ, ವಿಧವೆ ಅಥವಾ ವಿವಾಹ ವಿಚ್ಛೇದನ ಪಡೆದ ಸ್ತ್ರೀಯರಿಗೆ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕ ಅಥವಾ ಬಾಲಕಿಯನ್ನು ದತ್ತು ತೆಗೆದುಕೊಳ್ಳಲು ಅವಕಾಶ ನೀಡಿದೆ. ಇದಲ್ಲದೇ ಪತಿಯು ಬಿಡ್ಡಿ ಭ್ರಮಣಿಯಾಗಿದ್ದಲ್ಲ ಅಥವಾ ಅವನು ಸನ್ಯಾಸ ಸ್ವೀಕರಿಸಿದಲ್ಲ ಅಥವಾ ಹಿಂದೂ ಧರ್ಮವನ್ನು ತ್ಯಜಿಸಿದ್ದಲ್ಲ ತನ್ನ ಪತ್ನಿಯ ಸಮ್ಮತಿಯ ಅಗತ್ಯವಿಲ್ಲದೇ ದತ್ತು ಸ್ವೀಕಾರ ಮಾಡಬಹುದು. ಆದರೆ ಇತರೆ ಸಂದರ್ಭಗಳಲ್ಲಿ ವಿವಾಹಿತ ಸ್ತ್ರೀಯು ತನ್ನ ಜೀವಂತವಿದ್ದಲ್ಲಿ ತನ್ನ ಪತಿ ಜೀವಂತವಿದ್ದಲ್ಲಿ ಅವನ ಅನುಮತಿ ಇಲ್ಲದೇ ದತ್ತು ಸ್ವೀಕಾರ ಮಾಡುವಂತಿಲ್ಲ. ಅಷ್ಟೇ ಅಲ್ಲ ಪತ್ನಿಯ ಸಮ್ಮತಿ ಇಲ್ಲದೇ ಪತಿಯೂ ಕೂಡ ದತ್ತು ಸ್ವೀಕಾರ ಮಾಡುವಂತಿಲ್ಲ.

ಈ ಕಾಯ್ದೆಯು ವಿವಿಧ ಅಂಶಗಳ ಆಧಾರದ ಮೇಲೆ ಸ್ತ್ರೀಗೆ ಜೀವನಾಂಶಕ್ಕೆ ಅವಕಾಶ ಕಲ್ಪಿಸಿದೆ. ಈ ಕಾಯ್ದೆಯ ಇನ್ನೊಂದು ಮುಖ್ಯಾಂಶವೆಂದರೆ ದುಡಿಯುವ ಹಾಗೂ ಆಸ್ತಿ ಹೊಂದಿರುವ ಮಹಿಳೆಯು ತನ್ನನ್ನು ಅವಲಂಭಿಸಿರುವವರನ್ನು ಪೋಷಿಸುವ ಹೊಣೆಯನ್ನು ಹೊರಬೇಕೆಂದು ವಿಧಿಸಿರುವುದು. ಇದರಿಂದ ಸ್ತ್ರೀಗೆ ಪುರುಷನಿಗೆ ಸಮಾನವಾದ ಹೊಣೆಗಾರಿಕೆಯನ್ನು ಹೊರಿಸಿದಂತಾಗಿದೆ.

4. ವಿಶೇಷ ವಿವಾಹ ಕಾಯ್ದೆ 1954 :- ಈ ಕಾಯ್ದೆಯನ್ನು "ನಾಗರೀಕ ವಿವಾಹ ಕಾಯ್ದೆ" (The Civil Marrigw Act) ಜಾತಿಯ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಈ ಕಾಯ್ದೆಯು ಕೆಲಮಟ್ಟಿಗೆ ಸಡಿಲಿಸಿದೆ. ಈ ಕಾಯ್ದೆಯ ಮುಖ್ಯ ಅಂಶಗಳು ಈ ರೀತಿ ಇವೆ.

ಅ) ವಿವಾಹ ಪೂರ್ವದಲ್ಲಿ ವಧುವಿಗೆ 18 ಹಾಗೂ ವರನಿಗೆ 21 ವರ್ಷ ವಯಸ್ಕರಾಗಿರಬೇಕು ಎಂದು ನಿಗಧಿಪಡಿಸಿ ಬಾಲ್ಯ ವಿವಾಹಕ್ಕೆ ತಡೆ ಹಾಕಿರುವುದು.

ಆ) ಅಂತರ್‌ಜಾತಿಯ ವಿವಾಹಗಳಿಗೆ ಅವಕಾಶ ನೀಡುವ ಮೂಲಕ ಜಾತಿ ಆಧಾರಿತ ಕಟ್ಟುಪಾಡುಗಳನ್ನು ಸಡಿಲಗೊಳಿಸಲಾಗಿದೆ.

ಇ) ವಿವಾಹಕ್ಕೆ ಸಂಬಂಧಿಸಿದಂತೆ ಅರ್ಹತೆ ಹಾಗೂ ಅನರ್ಹತೆಗಳನ್ನು ಸ್ತ್ರೀ ಪುರುಷರಿಬ್ಬರಿಗೂ ಸಮಾನವಾಗಿರಿಸುವುದು.

ಈ) ವಿವಾಹದ ನೊಂದಣಿಗೆ ಅವಕಾಶ ನೀಡುವ ಮೂಲಕ ಪ್ರೇಮ ವಿವಾಹಗಳನ್ನು ಕಾನೂನು ಬದ್ಧಗೊಳಿಸುವುದು.

ಉ) ವೈವಾಹಿಕ ವಿಚಾರಗಳಲ್ಲಿ ಹಾಗೂ ವಿವಾಹ ವಿಚ್ಛೇದನದ ವಿಚಾರದಲ್ಲಿ ಪತಿ ಪತ್ನಿಯರಿಗೆ ಸಮಾನ ಹಕ್ಕುಗಳನ್ನು ನೀಡುವುದು.

5. ಕನ್ಯೆಯರ ಹಾಗೂ ಮಹಿಳೆಯರ ಅನೈತಿಕ ವ್ಯವಹಾರ ಪ್ರತಿಬಂಧಕ ಕಾಯ್ದೆ 1956 :- ವೇಶ್ಯಾವೃತ್ತಿಯು ಅತ್ಯಂತ ಪುರಾತನ ಪದ್ಧತಿಯಾಗಿದ್ದು, ಹಲವೊಮ್ಮೆ ಹಣದಾಸೆಯಿಂದ ಮುಗ್ಧ ಹೆಣ್ಣುಮಕ್ಕಳನ್ನು ಬಲವಂತವಾಗಿ ವೇಶ್ಯಾವೃತ್ತಿಗೆ ತಳ್ಳಲಾಗುತ್ತದೆ ಇಂತಹ ಅನೈತಿಕ ವ್ಯಾಪಾರವನ್ನು ತಡೆಗಟ್ಟಲು ಈ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಈ ಕಾಯ್ದೆಯು ಹೆಣ್ಣು ಮಕ್ಕಳನ್ನು ಅನೈತಿಕವಾಗಿ ವಿಕ್ರಯಿಸುವುದನ್ನು ಹಾಗೂ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಾಣಿಕೆ ಮಾಡುವುದನ್ನು ಪ್ರತಿಬಂಧಿಸುತ್ತದೆ. ಮುಂದೆ 1978 ಹಾಗೂ 1986ರಲ್ಲಿ ಈ ಕಾಯ್ದೆಯಲ್ಲಿ ಮತ್ತಷ್ಟು ತಿದ್ದುಪಡಿ ಮಾಡಲಾಯಿತು. 1986ರಲ್ಲಿ ಮಾಡಲಾದ ತಿದ್ದುಪಡಿಯ ಪ್ರಕಾರ ಹಣದ ಉದ್ದೇಶದಿಂದ ಸ್ತ್ರೀಯನ್ನು ಯಾವುದೇ ರೀತಿಯಲ್ಲಿ ಶೋಷಿಸುವುದನ್ನು ದಂಡನಾರ್ಹ ಅಪರಾಧವೆಂದು ಘೋಷಿಸಲಾಯಿತಲ್ಲದೇ ಅಂಥ ಶೋಷಣೆಗೊಳಗಾದ ಸ್ತ್ರೀಯರನ್ನು ರಕ್ಷಿಸಿ ಅಗತ್ಯವಾದ ವೈದ್ಯಕೀಯ ಚಿಕಿತ್ಸೆ ನೀಡಿ ಅವರನ್ನು ಪುನರ್ವಸತಿಗೊಳಿಸಲು ಸುಧಾರಣಾ ಸಂಸ್ಥೆಗಳಿಗೆ ಸೇರಿಸಬೆಕು.

6. ವರದಕ್ಷಿಣೆ ನಿಷೇದ ಕಾಯ್ದೆ 1961 :- ವರದಕ್ಷಿಣೆ ಪದ್ಧತಿಯು ಭಾರತೀಯ ವಿವಾಹ ವ್ಯವಸ್ಥೆಯಲ್ಲಿನ ಒಂದು ದೋಷವಾಗಿದೆ. ಈ ಕಾಯ್ದೆಯ ಪ್ರಕಾರ ವರದಕ್ಷಿಣೆಯನ್ನು ಕೊಡುವುದು ಹಾಗೂ ತೆಗೆದುಕೊಳ್ಳುವುದು ಎರಡನ್ನು ಅಪರಾಧವೆಂದು ಘೋಷಿಸಲಾಗಿದೆ.

ಪ್ರಾರಂಭದಲ್ಲಿ ಈ ಕಾಯ್ದೆಯು ಈ ಪದ್ಧತಿಯ ಮೇಲೆ ಅಂಥ ಪ್ರಭಾವ ಬೀರಲಿಲ್ಲವಾದ್ದರಿಂದ ಮುಂದೆ 1986ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು. ಈ ತಿದ್ದುಪಡಿಗನುಗುಣವಾಗಿ ಈ ಕಾಯ್ದೆಯನ್ನು ಉಲ್ಲಂಘಿಸಿದವರಿಗೆ 5 ವರ್ಷ ಸೆರೆಮನೆ ವಾಸ ಹಾಗೂ 15,000 ರೂ. ದಂಡವನ್ನು ವಿಧಿಸಲಾಗುತ್ತದೆ. ಅಲ್ಲದೇ ಈ ಅಪರಾಧಗಳನ್ನು ಜಾಮೀನು ರಹಿತವೆಂದು ಘೋಷಿಸಲಾಗಿದೆ.

(ಮಹಿಳೆಯರ ದೌರ್ಜನ್ಯದ ಸಂಬಂಧದಲ್ಲಿ ಸ್ವತಃ ಆಕೆಯಲ್ಲದೇ ಅವಳ ಸಂಬಂಧಿಕರು ಅಥವಾ ಮಾನ್ಯತೆ ಪಡೆದ ಸಮಾಜ ಕಲ್ಯಾಣ ಸಂಘಟನೆ ಅಥವಾ ಮಹಿಳಾ ಸಂಘಟನೆಯವರು ನೇರವಾಗಿ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಕೊಡಬಹುದು)

ಇತರ ಕಾಯ್ದೆಗಳು - (ಶಾಸನಗಳು) : ಮಹಿಳೆಯರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಇತರೆ ಕೆಲವು ಕಾಯ್ದೆಗಳನ್ನು ಮಹಿಳೆಯರು ಅನುಕೂಲಕ್ಕಾಗಿ ಜಾರಿಗೊಳಿಸಲಾಗಿದೆ. ಅವು ಈ ರೀತಿ ಇವೆ.

1. ಹೆರಿಗೆ ಸೌಲಭ್ಯ ಕಾಯ್ದೆ 1961 :-ಉದ್ಯೋಗಗಳಿಗೆ ಹೋಗುವ ಮಹಿಳೆಯರ ಸಂಖ್ಯೆ ಹೆಚ್ಚಿದಂತೆ ಅವರು ಕೌಟುಂಬಿಕ ಜವಾಬ್ದಾರಿಯನ್ನು ಹೊರಬೇಕಾಗಿರುವುದರಿಂದ ಗರ್ಭಧಾರಣೆ ಮುಂತಾದ ಸಂದರ್ಭಗಳಲ್ಲಿ ಅವರಿಗಾಗಬಹುದಾದ ಅಡಚಣೆಗಳನ್ನು ನಿವಾರಿಸುವುದಕ್ಕಾಗಿ ಈ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯ ಪ್ರಕಾರ ವಿವಾಹಿತ ಸ್ತ್ರೀಯರು ಹೆರಿಗೆಗೆ ಮುನ್ನ ಹಾಗು ಹೆರಿಗೆಯ ನಂತರ ನಿರ್ದಿಷ್ಟ ಅವಧಿಯವರೆಗೆ (ಸಾಮನ್ಯವಾಗಿ 6 ತಿಂಗಳು) ಸಂಬಳ ಸಹಿತ ರಜೆಯನ್ನು ಪಡೆಯಬಹುದಾಗಿದೆ. ಈ ಕಾಯ್ದೆಯಿಂದಾಗಿ ಉದ್ಯೋಗ ಭದ್ರತೆ ದೊರೆತಿದೆ.

2. ಸಮಾನ ವೇತನ ಕಾಯ್ದೆ 1976 :- ಈ ಕಾಯ್ದೆ ಜಾರಿಗೆ ಬರುವ ಮುನ್ನ ಒಂದೇ ಬಗೆಯ ಕೆಲಸ ಮಾಡುವ ಸ್ತ್ರೀ ಪುರುಷರ ಮಧ್ಯೆ ವೇತನದ ವಿಷಯದಲ್ಲಿ ತಾರತಮ್ಯ ಮಾಡಲಾಗುತ್ತಿತ್ತು. ಈ ಕಾಯ್ದೆಯು ಅಂಥ ಅಸಮಾನತೆಯನ್ನು ತೊಲಗಿಸಿ. ವಿವಿಧ ಕ್ಷೇತ್ರಗಳಲ್ಲಿ ಒಂದೇ ಬಗೆಯ

ಕೆಲಸ ಮಾಡುವ ಸ್ತ್ರೀ-ಪುರುಷ ಅಂಗ ಬೇದವಿಲ್ಲದೇ ಸಮಾನ ವೇತನವನ್ನು ಪಡೆಯುವಂತಾಗಿದೆ.

3. ಕಾರ್ಖಾನೆಗಳ (ತಿದ್ದುಪಡಿ) ಕಾಯಿದೆ 1976 :- ಈ ಶಾಸನದ ಅನ್ವಯ 30 ಜನ ಸ್ತ್ರೀಯರು ಒಂದೆಡೆ ದುಡಿಯುತ್ತಿದ್ದರೆ ಅವರ ಕೆಲಸದ ಅವಧಿಯಲ್ಲಿ ಅವರ ಪುಟ್ಟ ಮಕ್ಕಳನ್ನು ನೋಡಿಕೊಳ್ಳಲು "ಶಿಶು ಸಂರಕ್ಷಣಾ ಕೇಂದ್ರ"ಗಳನ್ನು ಸ್ಥಾಪಿಸಬೇಕಾಗಿದೆ. ಹಲವಾರು ಕಛೇರಿಗಳಲ್ಲಿ ಕಾರ್ಖಾನೆಗಳಲ್ಲಿ ಈ ವ್ಯವಸ್ಥೆ ಇರುವುದನ್ನು ಕಾಣಬಹುದು.

4. ವಿವಾಹ ಕಾನೂನುಗಳ (ತಿದ್ದುಪಡಿ) ಕಾಯಿದೆ 1976 :- ಈ ಕಾಯಿದೆಯ ಪ್ರಕಾರ ಕನ್ಯೆಯೊಬ್ಬಳು ತಾನು ಪ್ರೌಢಳಾಗುವುದಕ್ಕೂ ಮುಂಚೆ ತಮ್ಮ ಹಿರಿಯರು ವಿವಾಹ ಮಾಡಿಸಿದ್ದಲ್ಲಿ ಅಂತಹ ಬಾಲ್ಯ ವಿವಾಹವನ್ನು ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾಳೆ.

5. ಸ್ತ್ರೀಯರನ್ನು ಅಸಭ್ಯವಾಗಿ ಪ್ರದರ್ಶಿಸುವುದನ್ನು ನಿಷೇಧಿಸುವ ಕಾಯಿದೆ 1986 :- ಪತ್ರಿಕೆಗಳು, ದೂರದರ್ಶನ, ಮತ್ತಿತರ ಜಾಹೀರಾತುಗಳಲ್ಲಿ, ಪುಸ್ತಕಗಳು, ಭಿತ್ತಿ ಚಿತ್ರಗಳು, ಭಾವಚಿತ್ರಗಳು ಮುರಿತಾದವುಗಳ ಮೂಲಕ ಸ್ತ್ರೀಯರನ್ನು ಅನೈತಿಕ ರೂಪದಲ್ಲಿ ಅಸಭ್ಯವಾಗಿ ಪ್ರದರ್ಶಿಸುವುದನ್ನು ಕಾಯಿದೆಯು ನಿಷೇಧಿಸಿದೆ. ಸ್ತ್ರೀಯರನ್ನು ಅವಹೇಳನಾತ್ಮಕವಾಗಿ ಬಿಂಬಿಸುವ ಎಲ್ಲಾ ಸಾಧನಗಳೂ ಈ ಕಾಯ್ದೆಯನ್ವಯ ನಿಷೇಧಿಸಲ್ಪಟ್ಟಿವೆ. ಇಂತಹ ಅವಹೇಳನಕಾರಿ ಚಿತ್ರಗಳನ್ನು ಮಾರಾಟ ಮಾಡುವವರನ್ನು ಹಾಗೂ ವಿತರಿಸುವವರನ್ನು ಈ ಕಾಯ್ದೆಯ ಅಪರಾಧಿಗಳೆಂದು ಪರಿಗಣಿಸಿ, ಕಾಯಿದೆಯ ಉಲ್ಲಂಘನೆಗೆ 2 ವರ್ಷಗಳ ಕಾರಾಗೃಹವಾಸ ಹಾಗೂ 2000 ರೂ.ಗಳವರೆಗಿನ ದಂಡಕ್ಕೆ ಅವಕಾಶ ಕಲಪಿಸಿದೆ.

6. ಭಾರತೀಯ ಪುರಾವೆಗಳ ಕಾಯ್ದೆ 1983:- ಈ ಕಾಯ್ದೆಯ ಪ್ರಕಾರ ಸ್ತ್ರೀಗೆ ಅಸಾಧ್ಯವಾದ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುವುದು ಹಾಗೂ ಪತ್ನಿಗೆ ಪತಿ ಅಥವ ಅವನ ಸಂಬಂಧಿಕರು ಆತ್ಮಹತ್ಯೆ ಮಾಡಿಕೊಳ್ಳುವಂತೆ ಬಲವಂತ ಮಾಡುವುದು ಅಪರಾಧವೆನಿಸುತ್ತದೆ. ಇಂತ ಅರಾಧಕ್ಕೆ 3 ವರ್ಷಗಳವರೆಗಿನ ಜೈಲು ವಾಸವಿಲ್ಲದೇ ದಂಡವನ್ನು ವಿಧಿಸಲಾಗುತ್ತದೆ. ಇದಲ್ಲದೇ ವಿವಾಹದ ನಂತರ 7 ವರ್ಷಗಳೊಳಗೆ ಪತ್ನಿಯಾದವಳು ಅನುಮಾನಾಸ್ಪದ ರೀತಿಯಲ್ಲಿ ಮರಣಿಸಿದಲ್ಲಿ ಯಾರೂ ದೂರು ನೀಡದಿದ್ದರೂ ಕೂಡ ಪೋಲೀಸ್‌ಗೆ ಅದನ್ನು ಕುರಿತಾದ ಗಂಭೀರ ತನಿಖೆ ಮಾಡುವ ಅಧಿಕಾರವಿದೆ.

7. ಬಾಲ್ಯವಿವಾಹ ನಿಷೇದ (ತಿದ್ದುಪಡಿ) ಕಾಯಿದೆ 1978 :- ಈ ಕಾಯಿದೆಯು ವಿವಾಹ ಸಂಬಂಧಿತ ಇತರೆ ಕಾನೂನುಗಳಲ್ಲಿ ಕೆಲ ಬದಲಾವಣೆ ಮಾಡಿ, ವಿವಾಹ ಪೂರ್ವ ವಯಸ್ಸನ್ನು ವಧುವಿಗೆ 18 ಹಾಗೂ ವರನಿಗೆ 21 ಎಂದು ನಿಗಧಿ ಪಡಿಸಿದೆ.

8. ಕುಟುಂಬ ನ್ಯಾಯಾಲಯ ಕಾಯಿದೆ 1984 :- ಪತಿ-ಪತ್ನಿಯರ ಕೌಟುಂಬಿಕ ವಿವಾದಗಳಿಗೆ ಅನೌಪಚಾರಿಕ ಮಾರ್ಗಗಳನ್ನು ಕಂಡುಹಿಡಿಯುವುದು ಈ ಕಾಯಿದೆಯ ಉದ್ದೇಶವಾಗಿದೆ. ನ್ಯಾಯಪರಿಹಾರಕ್ಕಾಗಿ ನ್ಯಾಯಾಲಯವು ಸಮಾಜ ಸೇವಕರು, ಮನಶಾಸ್ತ್ರಜ್ಞರು, ಮತ್ತಿತರರ ನೆರವನ್ನು ಪಡೆಯುವ ಅವಕಾಶವಿದೆ.

9. ವೈದ್ಯಕೀಯ ಗರ್ಭ ನಿವಾರಣಾ ಕಾಯ್ದೆ 1971 :- ಹಿಂದೆ ಗರ್ಭಪಾತವು ಸಾಮಾಜಿಕ ಅವಹೇಳನಕ್ಕೆ ಕಾರಣವಾಗುತ್ತಿದ್ದುದರಿಂದ ಅನಿವಾರ್ಯ ಸಂದರ್ಭಗಳಲ್ಲಿ ಸ್ತ್ರೀಯರು ಅವೈಜ್ಞಾನಿಕ ರೀತಿಯಲ್ಲಿ, ಸೂಕ್ತ ತರಬೇತಿ ಇಲ್ಲದವರಿಂದ ಗರ್ಭಪಾತ ಮಾಡಿಸಿಕೊಂಡು ತಮ್ಮ ಪ್ರಾಣಕ್ಕೆ ಸಂಚಕಾರ ತಂದುಕೊಳ್ಳುವ ಪ್ರಕರಣಗಳು ಸಾಕಷ್ಟಿದ್ದವು. ಇದನ್ನು ತಡೆಗಟ್ಟಲು ಈ ಕಾನೂನನ್ನು ಜಾರಿಗೊಳಿಸಲಾಗಿದೆ. ಹಲವಾರು ಸಂದರ್ಭಗಳಲ್ಲಿ ಗರ್ಭಪಾತವು ಅನಿವಾರ್ಯವಾದಾಗ ಸೂಕ್ತ ವೈದ್ಯಕೀಯ ನೆರವಿನಿಂದ ಕಾನೂನುಬದ್ಧವಾಗಿ ಬೇಡದ ಗರ್ಭವನ್ನು ತೆಗೆಸಲು ಈ ಕಾನೂನಿನಲ್ಲಿ ಅವಕಾಶವಿದೆ.

10. ಮುಸ್ಲಿಂ ಮಹಿಳೆಯರ (ವಿಚ್ಛೇದನಾ ನಂತರದ ಹಕ್ಕುಗಳ ರಕ್ಷಣಾ ಕಾಯ್ದೆ 1986) :- ಈ ಕಾಯಿದೆಯು ಮುಸ್ಲಿಂ ಮಹಿಳೆಯರಿಗೆ ವಿವಾಹ ವಿಚ್ಛೇದನದ ನಂತರ 'ಇದ್ದತ್' ಅವಧಿಯಲ್ಲೂ ಕೂಡ ಜೀವನಾಂಶ ಪಡೆಯುವ ಹಕ್ಕನ್ನು ನೀಡಿದೆ. ಈ ಅವಧಿಯಲ್ಲಿ ಆಕೆಯು ತನ್ನನ್ನು ಪರಿತ್ಯಜಿಸಿದ ಪತಿಯಿಂದ ಜೀವನಾಂಶ ಪಡೆಯಬಹುದಾಗಿದೆ. ಇದ್ದತ್ ವಧಿಯ ನಂತರವೂ ಕೂಡ ಆಕೆ ಪುನರ್ ವಿವಾಹವಾಗುವವರೆಗೆ ಅಥವಾ ಆರ್ಥಿಕವಾಗಿ ಶಕ್ತಳಾಗುವವರೆಗೆ ಅಥವಾ ಜೀವನಾಂತ್ಯದವರೆಗೆ ಜೀವನಾಂಶ ಪಡೆಯಲು ಅವಕಾಶವಿದೆ.

11. ಮಹಿಳಾ ದೌರ್ಜನ್ಯ ತಡೆ ಕಾಯ್ದೆ 2005 :- ಅನ್ವಯ ಮಹಿಳೆಯ ಮೇಲೆ ಅತ್ತೆ, ಮಾವ, ಅಪ್ಪ, ಗಂಡ, ತಾಯಿ ಯಾರೇ ಆಗಲಿ ಅಸಂಬದ್ಧವಾಗಿ ವರ್ತಿಸುವುದು ಅಥವಾ ಹೆಣ್ಣನ್ನು ಕ್ರೌರ್ಯಕ್ಕೆ ಒಳಪಡಿಸಿದ್ದೆ ಆದಲ್ಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲು ಪೋಲೀಸರಿಗೆ ಅವಕಾಶ ನೀಡಿದೆ.

ಮೇಲಿನ ಶಾಸನಗಳು ಇಷ್ಟೆಲ್ಲ ಅವಕಾಶವನ್ನು ಒದಗಿಸಿದ್ದರು ಕೆಲವು ಹೆಣ್ಣುಮಕ್ಕಳಿಗೆ ಈ ಕಾನೂನಿನ ಪರಿಚಯವಿಲ್ಲ ಇನ್ನು ಕೆಲವು ಹೆಣ್ಣು ಮಕ್ಕಳು ಪರಿಚಯವಿದ್ದರು ಅದನ್ನು ಬಳಸುವುದಿಲ್ಲ ಕಾರಣ ಎಲ್ಲಿ ಗಂಡನ ಮನೆಗೂ ತನಗೂ ಸಂಬಂಧ ಕಡಿದು ಬೀದಿಗೆ ಬೀಳಬಹುದು ಎಂಬ ಭಯ ತನ್ನ ಮೇಲಾಗುವ ದೌರ್ಜನ್ಯವನ್ನು ಸಹಿಸಿಕೊಳ್ಳುವಂತೆ ಮಾಡಿದೆ. ಆದ್ದರಿಂದ ಈ ಕಾನೂನುಗಳಿಗೆ ಅರ್ಥಸಿಗಬೇಕಾದರೆ ಇದನ್ನು ಬಳಸುವವರ ಸಂಖ್ಯೆ ಹೆಚ್ಚಾಗಬೇಕು.

ಪರಿಸಮಾಪ್ತಿ :-ಹೆಣ್ಣಿನ ಮೇಲಿನ ದೌರ್ಜನ್ಯ ಹಾಗೂ ಅವಳ ಅಸಹಾಯಕತೆಯನ್ನು ತೊಡೆದು ಹಾಕುವಲ್ಲಿ ಈ ಮೇಲ್ಕಂಡ ಸಾಮಾಜಿಕ ಶಾಸನಗಳ ಅಸ್ತ್ರವಾಗಿ ಮಹಿಳೆಯರಿದ್ದರೂ ಕೆಲವು ಸಂದರ್ಭಗಳಲ್ಲಿ ಅಸಹಾಯಕರಾಗುತ್ತಾರೆ ಕಾರಣ ಅನಕ್ಷರತೆ, ಸಂಪ್ರದಾಯ ಎಲ್ಲಿ ಸಮಾಜ ತನ್ನನ್ನು ಕೀಳಾಗಿ ನೋಡುವುದು ಎಂಬ ಭಯ, ದೂರು ನೀಡಲು ಅರಕ್ಷಕರಾಣಿಗೆ ಹೋದರೆ ಅಲ್ಲಿ ನ್ಯಾಯ ಸಿಗುವುದೋ ಇಲ್ಲವೋ ಎಂಬ ಭಯ ಹೀಗೆ ಅನೇಕ ಸಮಸ್ಯೆಗಳಿಂದ ಹೆಣ್ಣು ಮಕ್ಕಳು ಕಾನೂನುಗಳು ಭದ್ರವಾಗಿದ್ದರೂ ಬಲಿಪಶುವಾಗುವ ಸಾಧ್ಯತೆಗಳು ಹೆಚ್ಚಾಗಿವೆ ಆದಕಾರಣ ಮಹಿಳೆಯರು ಅದರಲ್ಲೂ ಗ್ರಾಮೀಣ ಮಹಿಳೆಯರು ಹೆಚ್ಚು ಹೆಚ್ಚು ವಿದ್ಯಾವಂತರಾಗಬೇಕು. ಮಹಿಳೆ ಮೇಲಾಗುವ ದೌರ್ಜನ್ಯವನ್ನು ಪ್ರತಿಭಣಿಸುವ ಧೈರ್ಯ ಬೆಳೆಸಿಕೊಳ್ಳಬೇಕು ಅದಕ್ಕಾಗಿ ಸ್ತ್ರೀಯರು ಸಂಘಟಿತರಾಗಬೇಕು ಚಳವಳಿ ಪ್ರಜ್ಞೆ ಬೆಳೆಸಿಕೊಳ್ಳಬೇಕು ಹಾಗೂ ಸಮಾಜದ ಮುಖ್ಯವಾಹಿನಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಾಗ ಸ್ತ್ರೀ ಸಬಲೀಕರಣ ಸಾಧ್ಯವಾಗುತ್ತದೆ.

ಗ್ರಂಥಋಣ :-

1. "ಭಾರತದಲ್ಲಿ ಮಹಿಳಾ ಅಧ್ಯಯನ" ಲೇಖಕರು ಚ.ನ. ಶಂಕರ್‌ರಾವ್, ಜೈಭಾರತ್ ಪ್ರಕಾಶನ, ಮಂಗಳೂರು 2008-09.
2. "ಭಾರತೀಯ ಸಮಾಜ ಸಂರಚನೆ ಮತ್ತು ಬದಲಾವಣೆ" ಲೇಖಕರು ಜಿ. ಸುಬ್ರಮಣ್ಯ, ಪ್ರಕಾಶನ ಸಪ್ನ ಬುಕ್‌ಹೌಸ್ – 2007.
3. "ಜನ ಸಾಮಾನ್ಯರಿಗಾಗಿ ಕಾನೂನು" ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಪ್ರಕಟಣೆ – 2007.

4. "ಸಮಾಜಶಾಸ್ತ್ರ ಮತ್ತು ಮಹಿಳೆ" ಲೇಖಕರು ಡಾ. ಸಮತಾ ಜಿ. ದೇಶಮಾನೆ, ಪ್ರಕಾಶನ ಚೇತನ ಬುಕ್‌ಹೌಸ್, ಮೈಸೂರು – 2003.
5. "ಮಹಿಳಾ ಅಧ್ಯಯನ" ಭಾಗ – 2, ಲೇಖಕರು ಡಾ. ಹೇಮಲತಾ ಎಚ್.ಎಂ., ಪ್ರಕಾಶನ ಡಿ.ವಿ.ಕೆ. ಮೂರ್ತಿ, ಮೈಸೂರು – 2007.
6. "ಮಹಿಳಾ ಅಧ್ಯಯನ" ಭಾಗ – 6, ಲೇಖಕರು ಡಾ. ಹೇಮಲತಾ ಎಚ್.ಎಂ., ಪ್ರಕಾಶನ ಡಿ.ವಿ.ಕೆ. ಮೂರ್ತಿ, ಮೈಸೂರು – 2007.
7. "ಭಾರತ ಸರ್ಕಾರ ಮತ್ತು ರಾಜಕೀಯ", ಲೇಖಕರು ಹೆಚ್.ಎಂ. ರಾಜಶೇಖರ್, ಕಿರಣ ಪ್ರಕಾಶನ, ಮೈಸೂರು -2013.
8. "ಮಾಧ್ಯಮದ ಮುಂದಿರುವ ಸವಾಲುಗಳು" ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪುಸ್ತಕ, ಪ್ರಥಮ ಎಂ.ಎ. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ.

ಜಾಗತೀಕರಣ ಸಂಧರ್ಭದಲ್ಲಿ ಖಾದಿ ಗ್ರಾಮೋದ್ಯೋಗ ಕೈಗಾರಿಕೆಗಳ ಸಮಸ್ಯೆ ಮತ್ತು ಸವಾಲುಗಳು

ಡಾ॥ ಟಿ. ರಮೇಶ್
ಉಪನ್ಯಾಸಕರು, ಗಾಂಧಿ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಭಾರತ ದೇಶ ಎಷ್ಟೇ ಪ್ರಮಾಣದ ಆರ್ಥಿಕ ಅಭಿವೃದ್ಧಿ ಸಾಧಿಸಿದರೂ ಇನ್ನು ವಿವಿಧ ರೀತಿಯ ಗೊಂದಲಗಳಿಂದ ಕೂಡಿದೆಯೆಂದರೆ ತಪ್ಪಾಗಲಾರದು ಒಂದು ಕಡೆ ನಗರ ಪ್ರದೇಶಗಳಲ್ಲಿ ಭಾರಿ ಪ್ರಮಾಣದ ಅತ್ಯಂತ ಆಧುನಿಕವಾದ ಕೈಗಾರಿಕೆಗಳು ಸ್ಥಾಪನೆಗೊಂಡಿವೆ. ನಗರ ಪ್ರದೇಶಗಳು ವಿವಿಧ ಪೌರ ಸೌಲಭ್ಯಗಳನ್ನೊಳಗೊಂಡು ಅಭಿವೃದ್ಧಿಗೊಂಡಿವೆ. ಇನ್ನೊಂದು ಕಡೆ ಗ್ರಾಮೀಣ ಪ್ರದೇಶಗಳು ಆರ್ಥಿಕವಾಗಿ ಹಿಂದುಳಿದಿದೆ. ಬಹುತೇಕ ರೈತರ, ಕೃಷಿ ಕಾರ್ಮಿಕರ ಬದುಕು ಧಾರುಣಮಯವಾಗಿದೆ. ಅನೇಕ ಸಾಂಪ್ರದಾಯಿಕ ಮತ್ತು ಸ್ಥಳೀಯ ತಂತ್ರಜ್ಞಾನಗಳ ಆಧಾರಿತ ಕೈಗಾರಿಕೆಗಳು ಬ್ರಿಟೀಷರ ಶೋಷಣೆಯ ಕಾರಣವಾಗಿ ನಶಿಸಿಹೋಗಿವೆ. ರಾಷ್ಟ್ರದ 1/3 ಭಾಗಕ್ಕಿಂತ ಹೆಚ್ಚು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ. ಭಾರತದ ಆರ್ಥಿಕ ಬೆಳವಣಿಗೆ ಪ್ರಕ್ರಿಯೆಯು ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿ ಮಾಡುತ್ತಿದೆ ಮತ್ತು ಬಡವರನ್ನು ಇನ್ನಷ್ಟು ಬಡವರನ್ನಾಗಿಸುತ್ತದೆ. ಇಂದಿಗೂ ಸಹ ಗ್ರಾಮೀಣ ಪ್ರದೇಶದಲ್ಲಿ ಅಸಂಖ್ಯಾತ ಜನರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ. ಅನೇಕರ ಸ್ಥಿತಿಗತಿಗಳು ಇನ್ನೂ ಶೋಚನೀಯವಾಗಿವೆ. ಈ ಬಡ ಜನರು ಸಾಕಷ್ಟು ತಾಂತ್ರಿಕ ಪರಿಣಿತಿಯನ್ನು ನಿರ್ವಹಣಾ ಸಾಮಾರ್ಥ್ಯವನ್ನು ಮತ್ತು ಹಣಕಾಸಿನ ಅನುಕೂಲತೆಗಳನ್ನು ಹೊಂದಿಲ್ಲದೆ ಇರುವುದರಿಂದ ಇವರು ಕೈಗಾರಿಕೆಗಳನ್ನು ತಾಂತ್ರಿಕವಾಗಿ ಮುಂದುವರೆದ ರೀತಿಯಲ್ಲಿ ಹಾಗೂ ದೊಡ್ಡ ಪ್ರಮಾಣದಲ್ಲಿ ಸ್ಥಾಪಿಸಲು ಸಾಮರ್ಥ್ಯವನ್ನು ಹೊಂದಿಲ್ಲ. ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸಹ ಆಧುನಿಕ ರೀತಿಯಲ್ಲಿ ಸ್ಥಾಪಿಸಲು ಇವರಿಗೆ ಸಾಧ್ಯವಿಲ್ಲ. ಅನೇಕ ಗ್ರಾಮೀಣ ಕೃಷಿಕರ ಕೃಷಿಯಲ್ಲಿನ ಸೀಮಾಂತ ಉತ್ಪಾದನೆಯು ಸೊನ್ನೆಯಾಗಿದೆ. ಆದುದರಿಂದ ಅಸಂಖ್ಯಾತ ಗ್ರಾಮೀಣ ಪ್ರದೇಶದ ಬಡಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ದೊರಕಿಸುವುದು ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಅವಶ್ಯಕ ಮತ್ತು ಜರೂರಾದ ಕಾರ್ಯವಾಗಿದೆ. ಇಂತಹ ಬಡವರಿಗೆ ಖಾದಿ ಗ್ರಾಮೋದ್ಯೋಗ ಕೈಗಾರಿಕೆಗಳು (ಕೆ.ವಿ.ಐ) ಸಾಕಷ್ಟು ಪರಮಾನವನ್ನು ನೀಡುವ ಮತ್ತು ಉದ್ಯೋಗಾವಕಾಶಗಳನ್ನು ದೊರಕಿಸಿ ಕೊಡುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಗ್ರಾಮೀಣ ಅಭಿವೃದ್ಧಿಯಲ್ಲಿ ಇವುಗಳ ಪಾತ್ರ ಮಹತ್ವದ್ದಾಗಿದೆ ಎಂಬುದು ನನ್ನ ಲೇಖನದ ಪ್ರಮುಖ ಅಂಶವಾಗಿದೆ.

ಭಾರತೀಯ ಕರ-ಕುಶಲ ವಸ್ತು ಪ್ರದರ್ಶನ, ಸಹರಾ ಕರ ಕುಶಲ ವಸ್ತು ಪ್ರದರ್ಶನ, ಪರಂಪರೆ, ದೇಶಿ-ಸ್ವದೇಶಿ ಮೇಳ ಹೀಗೆ ಮೊದಲಾದ ಮೇಳ ಹಾಗೂ ವಸ್ತು ಪ್ರದರ್ಶನಗಳು ಆಗಿಂದಾಗ್ಗೆ ನಗರ ಪ್ರದೇಶಗಳಲ್ಲಿ ನಡೆಯುತ್ತಲೇ ಇರುತ್ತವೆ. ಇದು ಜಾಗತಿಕರಣಕ್ಕೆ ಹಾಕುತ್ತಿರುವ ಸವಾಲಲ್ಲದೇ ಬೇರೇನೂ ಅಲ್ಲ. ನಗರ ಪ್ರದೇಶಗಳಲ್ಲೇ ಈ ಮೇಳಗಳು ಜರುಗುತ್ತಿರುವುದಕ್ಕೆ ಕಾರಣ ಜಾಗತಿಕರಣದ ದೆಸೆಯಿಂದ ಹಳ್ಳಿಗಳು ಮಾಯವಾಗುತ್ತಿವೆ ಜೊತೆಗೆ ಹಳ್ಳಿಗಳಲ್ಲಿ ವಾಸಿಸುವವರೂ ನಗರದ ಆಕರ್ಷಣೆಗಳಿಗೆ ಒಳಗಾಗಿ ನಗರವಾಸಿಗಳೇ ಆಗುತ್ತಿದ್ದಾರೆ.

ಮರ ತಾನು ಬೆಳೆಯುವ ಸಂಭ್ರಮದಲ್ಲಿ ತನ್ನ ಬುಡದಲ್ಲಿರುವ ಸಣ್ಣ ಸಣ್ಣ ಸಸಿಗಳನ್ನೆಲ್ಲಾ ನಾಶಮಾಡುವಂತೆ, ಜಾಗತಿಕರಣ ತಾನು ಆಳವಾಗಿ ಬೇರೂರುವ ಭರದಲ್ಲಿ ಖಾದಿ ಗ್ರಾಮೋದ್ಯೋಗ, ಗುಡಿ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳ ಮೂಲಕವೇ ಕೋಟ್ಯಾಂತರ ಜನರ ಬದುಕಿಗೆ ಸ್ವಾವಲಂಬಿತನದ-ಸಂತೃಪ್ತ ಬದುಕಿನ 'ವರ' ನೀಡಿದ್ದ ಭಾರತವಂತಹ ದೇಶಗಳು ನಲುಗುವಂತೆ ಮಾಡಿದೆ. ಜಾಗತಿಕರಣದ ಈ ಪ್ರಕ್ರಿಯೆಗೆ ಸವಾಲಾಗಿ ನಿಲ್ಲುವ ಶಕ್ತಿಯನ್ನು ನಮ್ಮ ಖಾದಿ ಗ್ರಾಮೋದ್ಯೋಗದಂತಹ ಕೈಗಾರಿಕೆಗಳಿಗೆ ತುಂಬುವ ಕೆಲಸ ನಿರಂತರವಾಗಿ ನಡೆಯಬೇಕಾಗಿದೆ.

ವಿಶ್ವಬ್ಯಾಂಕು, ಅಂತಾರಾಷ್ಟ್ರೀಯ ಹಣಕಾಸು ನಿಧಿ ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕುಗಳು ಬಹುತೇಕ ಎಲ್ಲಾ ಸದಸ್ಯ ರಾಷ್ಟ್ರಗಳಲ್ಲಿ ಆರ್ಥಿಕ ಸುಧಾರಣೆಗಳನ್ನು ಜಾರಿಗೊಳಿಸಿದೆ. ಈ ಸುಧಾರಣಾ ಲಾಭ ಭಾರತಕ್ಕೂ ಲಭ್ಯವಾಗಿದೆ. ಭಾರತದ ಸ್ಥಳೀಯ ಹಾಗೂ ಕೇಂದ್ರ ಸರ್ಕಾರಗಳೂ ಈ ನಿಟ್ಟಿನಲ್ಲಿ ಸಾಕಷ್ಟು ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿವೆ, ರೂಪಿಸುತ್ತಲೇ ಇವೆ. ಇಂತಹ ವಿಚಾರ ಸಂಕಿರಣಗಳೂ ಖಾದಿ-ಗ್ರಾಮೋದ್ಯೋಗ ಕೈಗಾರಿಕೆಗಳ ಅಸ್ಥಿತ್ವಕ್ಕೆ ಬೆನ್ನೆಲುಬೆಂದೇ ಹೇಳಬೇಕು. ಹೀಗೆ ಸಾಕಷ್ಟು ಬೆಂಬಲದಿಂದ ಗಟ್ಟಿಗೊಳ್ಳುತ್ತಿರುವ ಖಾದಿ ಉದ್ಯಮವು ಜಾಗತಿಕರಣಕ್ಕೆ ಸವಾಲಾಗಿ ದೇಶೀಯತೆಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತದೆಂಬ ಭರವಸೆಯನ್ನು ಈ ಪ್ರಬಂಧದ ಮೂಲಕ ಪ್ರಸ್ತುತ ಪಡಿಸುತ್ತಿದ್ದೇನೆ.

ಖಾದಿ ಗ್ರಾಮೋದ್ಯೋಗ ಕೈಗಾರಿಕೆಗಳಗಳ ಮಹತ್ವ : ಮಹಾತ್ಮ ಗಾಂಧಿಜೀಯವರು ಕೆವಿಐಗಳ ಅಭಿವೃದ್ಧಿಗೆ ಅತ್ಯಂತ ಪ್ರಮುಖ ಸ್ಥಾನ ನೀಡಿದ್ದಾರೆ. ಏಕೆಂದರೆ, ಭಾರತವು ಗ್ರಾಮಗಳಲ್ಲಿ ವಾಸಿಸುತ್ತಿದೆ ಆದರೆ, ಭಾರತವು ನಾನ ರೀತಿಯ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಅಜ್ಞಾನ, ಅಪೌಷ್ಟಿಕತೆ, ಅನಾರೋಗ್ಯಗಳಂತಹ ಬೃಹತ್ ಸಮಸ್ಯೆಗಳಿಂದ ಕೂಡಿದೆ. ರಾಷ್ಟ್ರದ ಕೋಟ್ಯಾಂತರ ಜನರು

ಭೂ ರಹಿತರಾಗಿದ್ದಾರೆ. ಕೆಲಸವಿಲ್ಲದ ನಿರುದ್ಯೋಗಿಗಳಾಗಿದ್ದಾರೆ. ಆಶಾ ರಹಿತರಾಗಿದ್ದಾರೆ. ಅಭಾಗ್ಯರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ದುಡಿಯುವ ಕೈಗಳಿಗೆ ಕೆಲಸ ದೊರಕಿಸಿ ಕೊಡುವ ದೃಷ್ಟಿಯಿಂದ ಖಾದಿ ಗ್ರಾಮೋದ್ಯೋಗ ಕೈಗಾರಿಕೆಗಳ ಅಭಿವೃದ್ಧಿಗೆ ಬೆಳವಣಿಗೆಗೆ ಪ್ರೇರಣೆಯನ್ನು ನೀಡಿದರು.

ಸ್ವಾತಂತ್ರ್ಯೋತ್ತರ ಭಾರತ ದೇಶ ಎಷ್ಟೇ ಪ್ರಮಾಣದ ಆರ್ಥಿಕಾಭಿವೃದ್ಧಿ ಸಾಧಿಸಿದ್ದರೂ ಆರ್ಥಿಕ ಸಮಸ್ಯೆಗಳಿಂದ ಮುಕ್ತವಾಗಿಲ್ಲ. ಒಂದು ಕಡೆ ನಗರ ಪ್ರದೇಶಗಳಲ್ಲಿ ಭಾರಿ ಪ್ರಮಾಣದ ಅತ್ಯಂತ ಆಧುನಿಕವಾದ ಕೈಗಾರಿಕೆಗಳು ಸ್ಥಾಪನೆ ಗೊಂಡಿವೆ. ನಗರ ಪ್ರದೇಶಗಳು ವಿವಿಧ ಸೌಲಭ್ಯಗಳನ್ನು ಒಳಗೊಂಡು ಅಭಿವೃದ್ಧಿಗೊಂಡಿವೆ, ಇನ್ನೊಂದು ಕಡೆ ಗ್ರಾಮೀಣ ಪ್ರದೇಶಗಳು ಆರ್ಥಿಕವಾಗಿ ಹಿಂದುಳಿದು ಬಹುತೇಕ ರೈತರ, ಕೃಷಿ ಕಾರ್ಮಿಕರ ಬದುಕು ಧಾರುಣಮಯವಾಗಿದೆ. ಅನೇಕ ಸಾಂಪ್ರದಾಯಿಕ ಮತ್ತು ಸ್ಥಳಿಯ ತಂತ್ರಜ್ಞಾನಗಳ ಆಧಾರಿತ ಕೈಗಾರಿಕೆಗಳು ಸ್ಪರ್ಧೆಯ ಕಾರಣದಿಂದ ನಶಿಸಿ ಹೋಗಿವೆ. ರಾಷ್ಟ್ರದ ಮೂರನೇ ಒಂದು ಭಾಗಕಿಂತ ಹೆಚ್ಚು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ. ಭಾರತದ ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆಯು ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿ, ಬಡವರನ್ನು ಮತಷ್ಟು ಬಡವರನ್ನಾಗಿ ಮಾಡುತ್ತಿದೆ. ಗ್ರಾಮೀಣ ಪ್ರದೇಶದ ಅಸಂಖ್ಯಾತ ಜನರು ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಹಳ ಹಿಂದುಳಿದಿದ್ದಾರೆ. ಈ ಬಡ ಜನರು ಸಾಕಷ್ಟು ತಾಂತ್ರಿಕ ಪರಿಣತಿಯನ್ನು, ನಿರ್ವಾಹಣ ಹಾಗೂ ಹಣಕಾಸಿನ ಸಾಮರ್ಥ್ಯವನ್ನು ಹೊಂದಿಲ್ಲದಿರುವುದರಿಂದ ಇವರು ಕೈಗಾರಿಕೆಗಳನ್ನು ತಾಂತ್ರಿಕವಾಗಿ ಮುಂದುವರೆದ ರೀತಿಯಲ್ಲಿ ಹಾಗೂ ದೊಡ್ಡ ಪ್ರಮಾಣದಲ್ಲಿ ಸ್ಥಾಪಿಸಲು ಸಾಮರ್ಥ್ಯ ಹೊಂದಿಲ್ಲ ಜೊತೆಗೆ ಕೃಷಿ ಕ್ಷೇತ್ರದಲ್ಲಿ ಆರ್ಥಿಕವಾಗಿ ಉದ್ಯೋಗಗಳನ್ನು ಪಡೆದು ಕೊಳ್ಳಲು ಸಾಕಷ್ಟು ಅವಕಾಶಗಳಿಲ್ಲ. ಅನೇಕ ಗ್ರಾಮೀಣ ಕೃಷಿಕರ ಕೃಷಿಯಲ್ಲಿನ ಸೀಮಾಂತ ಉತ್ಪಾದನೆಯು ಸೊನ್ನೆಯಾಗಿದೆ. ಆದುದರಿಂದ ಈ ಬಡ ಜನರಿಗೆ ಕೃಷಿಕೇತರ ಉದ್ಯೋಗವಕಾಶಗಳನ್ನು ಕಲ್ಪಿಸುವುದು ಅತ್ಯಂತ ಅವಶ್ಯಕ ಮತ್ತು ಜರೂರಾದ ಕಾರ್ಯವಾಗಿದೆ.

ಕೆವಿಐಗಳು ಗಾತ್ರದಲ್ಲಿ ಚಿಕ್ಕ ಕೈಗಾರಿಕೆಗಳಾಗಿದ್ದು ಇವು ಪರಿಸರ ಸ್ನೇಹಿ– ಮಾನವ ಸ್ನೇಹಿ ಕೈಗಾರಿಕೆಗಳಾಗಿವೆ ಜೊತೆಗೆ ಅಹಿಂಸೆಯಿಂದ ಕೂಡಿದ ಯಾವುದೇಶೋಷಣೆಯನ್ನು ಮಾಡದ ಕೈಗಾರಿಕೆಗಳಾಗಿವೆ. ಉದ್ಯಮಿಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಉತ್ಪಾದನೆಯನ್ನು ಮಾಡಿ ವರಮಾನವನ್ನು ತಂದು ಕೊಡುತ್ತದೆ. ಇವು ನೈಸರ್ಗಿಕ ಸಂಪನ್ಮೂಲಗಳನ್ನು ಉತ್ಪಾದನೆಗೆ ಬಳಕೆ ಮಾಡುವುದರಿಂದ ಯಾವುದೇ ರೀತಿಯ ಅಡ್ಡ ಪರಿಣಾಮಗಳಿಗೆ ಅವಕಾಶವಿರುವುದಿಲ್ಲ. ಇಲ್ಲಿ ಉತ್ಪಾದಿಸುವ ವಸ್ತುಗಳು ಶುಚಿಯಾಗಿದ್ದು ಮನುಷ್ಯನ ಆರೋಗ್ಯವನ್ನು ಕಾಪಾಡಲು ನೆರವಾಗುತ್ತವೆ. ಈ ಕೈಗಾರಿಕೆಗಳು ದೇಶೀಯವಾಗಿ ಅಭಿವೃದ್ಧಿ ಪಡಿಸಿರುವ ಯುಕ್ತ ತಂತ್ರಜ್ಞಾನವನ್ನು ಬಳಕೆ ಮಾಡುತ್ತವೆಯೇ ಹೊರತು ಪದೇ ಪದೇ ಬದಲಾಗುವ ದುಭಾರಿ ವಿದೇಶಿ ತಂತ್ರಜ್ಞಾನವನ್ನು ಬೇಡುವುದಿಲ್ಲ. ಇವು ವಾಯುಮಾಲಿನ್ಯ, ಶಬ್ದಮಾಲಿನ್ಯ, ಜಲಮಾಲಿನ್ಯ ಅಥವಾ ಇನ್ನಾವುದೇ ರೀತಿಯ ಮಾಲಿನ್ಯ ಉಂಟುಮಾಡುವುದಿಲ್ಲ. ಆದುದರಿಂದ ಭಾರತ ದೇಶದಲ್ಲಿ ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರಗಳು ಕೆವಿಐಗಳ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡುತ್ತಾ ಬಂದಿವೆ.

ಖಾದಿ ಗ್ರಾಮೋದ್ಯೋಗಗಳ ಸಮಸ್ಯೆಗಳು ಮತ್ತು ಪರಿಹಾರ : ಖಾದಿ ಗ್ರಾಮೋದ್ಯೋಗ ಉತ್ಪನ್ನಗಳು ಜನರಿಗೆ ನಾನ ರೀತಿಯಲ್ಲಿ ಪ್ರಯೋಜನಕಾರಿಯಾಗಿವೆ ಆದರೆ ಇವುಗಳ ಉತ್ಪಾದನೆ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿವೆ. ಈ ಸಮಸ್ಯೆಗಳಿಂದಾಗಿ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿಲ್ಲ.

ಸರ್ವೇ ಜನೋ ಸುಖಿನೋ ಭವಂತು ಎಂಬಂತೆ ಎಲ್ಲರೂ ಸುಖಿವಾಗಿರ ಬೇಕೆಂಬ ಭಾರತೀಯ ಸಂಸ್ಕೃತಿಯ ಮೂಲ ತತ್ವದ ಆಧಾರದ ಮೇಲೆ ಗ್ರಾಮೀಣ ಜನರ ಆರ್ಥಿಕ ಏಳಿಗೆಗಾಗಿ ಸ್ವತಂತ್ರ ಬಂದಾಗಿನಿಂದಲೂ ಪ್ರಾಮುಖ್ಯತೆ ಕೊಡುತ್ತಾ ಬರಲಾಗಿದೆ. ಈ ಕಾರಣ ದಿಂದಾಗಿ ದೇಶದಲ್ಲಿ ಇನ್ನೂ ಈ ಕೈಗಾರಿಕೆಗಳು ಉಳಿದು ಕೊಂಡಿವೆ. ಸರ್ಕಾರದ ಪ್ರೋತ್ಸಾಹ ಹಾಗೂ ಸವಲತ್ತುಗಳು ಬಹಳಷ್ಟಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಬೆಳವಣಿಗೆ ಆಗುತ್ತಿಲ್ಲ. ಆದರೆ, ನಮ್ಮ ದೇಶದಲ್ಲಿ ಈ ಕೈಗಾರಿಕೆಗಳು ಉಳಿದು ಬೆಳೆಯುವ ಅವಶ್ಯಕತೆ ಬಹಳಷ್ಟಿದ್ದು ದುರಾದೃಷ್ಟವಶಾತ್ ಇವು ನಾನ ರೀತಿಯ ಸಮಸ್ಯೆಗಳ ಸುಳಿಗೆ ಸಿಕ್ಕಿ ಬಿದ್ದಿವೆ.

- ಕೆವಿಐ ಉದ್ಯಮಿಗಳ ಅತೀವ ಬಡತನ.
- ಹಣಕಾಸಿನ ಮುಗ್ಗಟ್ಟು.
- ದುಬಾರಿಯಾದ ಸಾರಿಗೆ ವೆಚ್ಚ.
- ನಿರ್ವಾಹಣೆಯ ಕೊರತೆ.
- ಮಾರುಕಟ್ಟೆಯ ಸಮಸ್ಯೆ

ಹಣಕಾಸೇತರ ಸಮಸ್ಯೆಗಳು :

- ಕಚ್ಚಾ ವಸ್ತುಗಳ ಸಮಸ್ಯೆ
- ವಿದ್ಯುತ್‌ಶಕ್ತಿ ಸಮಸ್ಯೆ
- ಹಳೇ ಉಪಕರಣಗಳ ಸಮಸ್ಯೆ
- ಶಿಕ್ಷಣದ ಕೊರತೆ
- ಪ್ರಚಲಿತ ಮಾರುಕಟ್ಟೆಗೆ ವಿಸ್ತರಿಸಲಾಗದ ಸಮಸ್ಯೆ
- ಜಾಗತಿಕರಣದಿಂದ ಉಂಟಾಗಿರುವ ಸ್ಪರ್ಧೆ
- ಉತ್ಪನ್ನಗಳ ತರಬೇತಿ ಕೇಂದ್ರಗಳ ಸಮಸ್ಯೆ
- ವಿದೇಶಿ ವಸ್ತುಗಳ ಬಗೆಗೆ ಅತಿಯಾದ ವ್ಯಾಮೋಹ, ದೇಶಿಯ ವಸ್ತುಗಳ ಬಗೆಗೆ ನಿರಭಿಮಾನ

ಪರಿಹಾರಗಳು : ಭಾರತದ ಜನಸಂಖ್ಯೆ ಅತ್ಯಂತ ವೇಗವಾಗಿ ಬೆಳೆಯುತ್ತಿದೆ ಹೆಚ್ಚುತ್ತಿರುವ ನಿರುದ್ಯೋಗಿಗಳಿಗೆ ಸೂಕ್ತವಾದ ಉದ್ಯೋಗವಕಾಶಗಳನ್ನು ದೊರಕಿಸಿ ಕೊಡುವ ಜವಾಬ್ದಾರಿಯನ್ನು ಯೋಗ್ಯವಾದ ರಾಷ್ಟ್ರಗಳು ಹೊತ್ತಿರುತ್ತವೆ. ಈಗಾಲೆ ಆಧುನಿಕ ಕೈಗಾರಿಕೆಗಳಲ್ಲಿ ತಾಂತ್ರಿಕ ಪರಿಣತಿಯನ್ನು ಹೊಂದಿರುವ ಅನುಭವಿ ವ್ಯಕ್ತಿಗಳಿಗೆ ಮಾತ್ರ ಉದ್ಯೋಗವಕಾಶಗಳನ್ನು ಒದಗಿಸಲು ಸಾಧ್ಯವಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅವಿದ್ಯಾವಂತ, ಅರೆ ಪರಿಣಿತಿ ಹಾಗೂ ಪರಿಣತಿ ಹೊಂದಿಲ್ಲದೇ ಇರುವ ಕೋಟ್ಯಾಂತರ ನಿರುದ್ಯೋಗಿಗಳಿಗೆ ಕೆವಿಐಗಳು ಉದ್ಯೋಗವಕಾಶಗಳನ್ನು ನೀಡುತ್ತವೆ ಆದರೆ, ಈ ಕೈಗಾರಿಕೆಗಳು ಸ್ವಂತ ಬಲದ ಮೇಲೆ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತಿಲ್ಲದ ಕಾರಣ ಸರ್ಕಾರವೇ ವಿವಿಧ

ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಮೂಲಕ ಅಭಿವೃದ್ಧಿ ಪಡಿಸಬೇಕಾಗಿದೆ. ಅವುಗಳಲ್ಲಿ ಪ್ರಮುಖವಾಗಿ

- ಮಾರುಕಟ್ಟೆ ಸೌಲಭ್ಯಗಳನ್ನು ವಿಸ್ತರಿಸುವುದು.
- ಪ್ರೋತ್ಸಾಯದಾಯಕ ಹಣಕಾಸಿನ ನೆರವು.
- ಯೋಜನೆಗಳಲ್ಲಿ ಕೆವಿಐ ಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು.
- ವಿದ್ಯುಚ್ಛಕ್ತಿ ಮತ್ತು ತೆರಿಗೆಗಳಲ್ಲಿ ರಿಯಾಯಿತಿ
- ಗ್ರಾಮಗಳಿಗೆ ಸನಿಹದಲ್ಲಿ ಪಾಗೂ ಉಚಿತವಾಗಿ ತರಬೇತಿ ಸೌಲಭ್ಯ ಕಲ್ಪಿಸುವುದು.
- ಸ್ವದೇಶಿ ವಸ್ತುಗಳ ಬಗೆಗೆ ಅಭಿಮಾನ ಹೆಚ್ಚಿಸುವುದು.

ಮಹಾತ್ಮ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಮರಳಿ ಬಂದ ನಂತರ ಭಾರತದ ಜನರ ಸ್ಥಿತಿ-ಗತಿಗಳನ್ನು ಅವಲೋಕಿಸಿ ಅವರನ್ನು ಬಡತನ, ಸೋಮಾರಿತನಗಳಂತಹ ಸ್ಥಿತಿಗಳಿಂದ ಹೊರತರುವ ಸಲುವಾಗಿ ಅನೇಕ ಅಭಿವೃದ್ಧಿ ಆಧಾರಿತ ಕಾರ್ಯಕ್ರಮಗಳನ್ನು ರೂಪಿಸಿದ್ದರ ಫಲವಾಗಿ ರೂಪುಗೊಂಡ 'ಖಾದಿ-ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ' ದೇಶೀಯತೆಯ ಪ್ರತಿಬಿಂಬವಾಗಿದೆ. 'ಚರಕದ ಖಾದಿಯು ಕೇವಲ ಬಟ್ಟೆಯಲ್ಲ, ಅದೊಂದು ಉದಾತ್ತ ವಿಚಾರದ ಸಂಕೇತ. ಅಹಿಂಸೆಯ ಪ್ರತೀಕ, ಸ್ವರಾಜ್ಯ ಪ್ರಾಪ್ತಿಯ ಹಾದಿ, ಶೋಷಣೆ ರಹಿತ ಸಮಾಜದ ಅಡಿಗಲ್ಲು, ಶ್ರಮದ ಪ್ರತಿಷ್ಠೆಯ ಗುರುತು' ಎಂದು ಗಾಂಧಿಜೀ ಭಾವಿಸಿದರು. ಸ್ವದೇಶಿಯತೆಯ ಸಂಕೇತವಾದ ಖಾದಿ ಉತ್ಪಾದನೆಗೆ ಸ್ಥಳೀಯವಾಗಿ ದೊರೆಯುವ ಸಂಪನ್ಮೂಲಗಳನ್ನು ಬಳಸಿಕೊಂಡು, ಹೆಚ್ಚಿನ ಪ್ರಮಾಣದ ಬಂಡವಾಳ ಹೂಡಿಕೆ ಇಲ್ಲದೆ ಆದಾಯವನ್ನು ಗಳಿಸಿಕೊಳ್ಳಬಹುದಾದ್ದರಿಂದ, ನಿರುದ್ಯೋಗ ಸಮಸ್ಯೆಗೆ ಬಹುದೊಡ್ಡ ಪರಿಹಾರ ಮಾರ್ಗವಾಗಿ ಕಂಡುಕೊಂಡ ಖಾದಿ ಅಭಿವೃದ್ಧಿ ಕಾರ್ಯಕ್ರಮ ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿಗೂ ಕಾಣಿಕೆಯಾಗಿತ್ತು. 1980 ರಿಂದೀಚೆಗೆ ಖಾದಿ ಉದ್ಯಮವು 'ತ್ರಿಕರಣ'ಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗದೆ ಹಿನ್ನೆಡೆ ಸಾಧಿಸುತ್ತಿದೆ. ಭಾರತದಂತಹ ಗ್ರಾಮೀಣ ಸಮಾಜದ ಬದುಕಿನ ಆಸರೆಯಾಗಿ, ಎಲ್ಲಾ ಕಾಲ-ವರ್ಗದ ಜನರ ಆರ್ಥಿಕ ಜೀವನಾಡಿಯಾಗಬಲ್ಲ ಈ ಖಾದಿ ಉದ್ಯಮವನ್ನು ಜಾಗತಿಕರಣದ ತುಳಿತಕ್ಕೆ ನಲುಗಲು ಬಿಡದೆ, ಸವಾಲಾಗಬಲ್ಲ ಧೀರತೆಯನ್ನು ತುಂಬುವ ಕೆಲಸಗಳು ಹೆಚ್ಚು-ಹೆಚ್ಚಾಗಬೇಕು ಮುಖ್ಯವಾಗಿ ಜನರ ಮನಸ್ಸು ವಿದೇಶಿ ವಸ್ತುಗಳನ್ನು ಬಳಸುವುದು ಪ್ರತಿಷ್ಠೆ ಎಂಬ ಭಾವದಿಂದ ದೂರಾಗಿ ದೇಶಿಯ ಉತ್ಪನ್ನಗಳ ಬಗೆಗೆ ಅಭಿಮಾನ ಹೆಚ್ಚಿಸಿಕೊಳ್ಳಬೇಕು ಅದು ಖಾದಿ ಗ್ರಾಮೋದ್ಯೋಗ ಕೈಗಾರಿಕೆಗಳ ಅರ್ಧ ಸಮಸ್ಯೆಯನ್ನು ಪರಿಹರಿಸುತ್ತದೆ. ಈಗಾಗಲೇ ದೇಶೀಯತೆಯನ್ನು ಎತ್ತಿಹಿಡಿಯುವ ಅನೇಕ ಕಾರ್ಯಕ್ರಮಗಳು ಚಾಲನೆಯಲ್ಲಿದ್ದು ಅವುಗಳ ಪ್ರಯತ್ನ ಯಶಸ್ವಿಯಾಗುತ್ತವೆಂಬ ಆಶಯದೊಂದಿಗೆ ನನ್ನ ಪ್ರಬಂಧವನ್ನು ಪೂರ್ಣಗೊಳಿಸುತ್ತಿದ್ದೇನೆ.

ಆಕರ ಗ್ರಂಥಗಳು :

1) ರಾಮಚಂದ್ರ ವೆಡವಿ (1983) ಕರ್ನಾಟಕದಲ್ಲಿ ಖಾದಿ ಇತಿಹಾಸ, ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿ, ಕಾವೇರಿ ಭವನ, ಬೆಂಗಳೂರು
2) ಗಾಂಧಿ, ಎಂ.ಕೆ. 1968, ರಚನಾತ್ಮಕ ಕಾರ್ಯಕ್ರಮಗಳು,
3) ಗಂಗೂಲಿ ಬಿ.ಎನ್, 1973, ಗಾಂಧೀಜಿಯವರ ಸಾಮಾಜಿಕ ತತ್ವ, ವಿಕಾಸ್ ಪಬ್ಲಿಷಿಂಗ್ ಹೌಸ್, ನವ ದೆಹಲಿ.
4) ಬಸವರಾಜ ಎಂ.ಜಿ. 2005, ಗಾಂಧೀ-ಜೆ.ಸಿ. ಕುಮಾರಪ್ಪ ಆರ್ಥಿಕಾಭಿವೃದ್ಧಿ ವಿಚಾರಗಳು, ಮಾನವಿಕ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿ.ವಿ. ಮಾರ್ಷಲ್ ಆಲ್‌ಫ್ರೆಡ್, 1980, ಅರ್ಥಶಾಸ್ತ್ರದ ತತ್ವಗಳು.

ಜಾಗತೀಕರಣ ಸಂದರ್ಭದ ರಾಜಕೀಯ ಕ್ಷೇತ್ರದಲ್ಲಿ ಗ್ರಾಮೀಣ ಮಹಿಳೆಯರ ಪಾತ್ರ

ಹೆಚ್. ಪಿ. ಭವ್ಯ
ಸಂಶೋಧಕರು, ಗಾಂಧಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು – 570009

ಭಾರತ ದೇಶವು ಹಳ್ಳಿಗಳಿಂದ ಕೂಡಿದ ದೇಶ. ಭಾರತದಲ್ಲಿ ನಗರ ಪ್ರದೇಶಗಳಿಗಿಂತ ಗ್ರಾಮಗಳು ಅಭಿವೃದ್ಧಿ ಹೊಂದಿದರೇ ಪೂರ್ತ ದೇಶದ ಅಭಿವೃದ್ಧಿ ಸಾಧ್ಯ ಎಂದು ಮಹಾತ್ಮ ಗಾಂದೀಜಿಯವರು ತಿಳಿಸಿದ್ದಾರೆ. ಗ್ರಾಮಗಳು ಅಭಿವೃದ್ಧಿಯಾಗಬೇಕಾದರೆ ಅಲ್ಲಿನ ರಾಜಕೀಯ ಅಧಿಕಾರಗಳು ಸಮರ್ಪಕವಾಗಿ ನಡೆಯಬೇಕು. ಗ್ರಾಮೀಣ ಭಾಗದ ರಾಜಕೀಯದಲ್ಲಿ ಮಹಿಳೆಯರ ಪಾತ್ರ ಅವಶ್ಯಕವಾಗಿದೆ.

ನಮ್ಮ ಭಾರತ ದೇಶದ ರಾಜಕೀಯ ರಂಗದಲ್ಲಿ ಈಗಾಗಲೇ ಅನೇಕ ಉನ್ನತ ಸ್ಥಾನಗಳನ್ನು ಅಲಂಕರಿಸಿ ನಾವು ಸಹ ಅಧಿಕಾರ ನಿರ್ವಹಿಸಲು ಸಮರ್ಥರಾಗಿದ್ದೇವೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಆ ಮೂಲಕ ಗ್ರಾಮ ಪಂಚಾಯಿತಿ ಸದಸ್ಯೆಯಿಂದ ಆರಂಭವಾಗಿ ದೇಶದ ಪ್ರಧಾನಮಂತ್ರಿ ಮತ್ತು ರಾಷ್ಟ್ರಾಧ್ಯಕ್ಷೆಯೂ ಸಹ ಆಗಿ ದೇಶದ ಅಭಿವೃದ್ಧಿಗೆ ಮಹಿಳೆಯರು ಶ್ರಮ ವಹಿಸಿದ್ದಾರೆ. ಪ್ರಸ್ತುತ ವಿಷಯವಾದ ಗ್ರಾಮೀಣ ಭಾಗದ ರಾಜಕೀಯದಲ್ಲಿ ಮಹಿಳೆಯರ ಪಾತ್ರ ಹೆಚ್ಚು ಅವಶ್ಯಕವಾಗಿದೆ ಏಕೆಂದರೆ ಗ್ರಾಮೀಣ ಭಾಗದಲ್ಲಿ ಮಹಿಳೆಯರು ಹೆಚ್ಚಾಗಿ ಶೋಷಣೆಗೆ ಒಳಗಾಗಿ ಶಿಕ್ಷಣದಿಂದ ವಂಚಿತರಾಗಿ ದಿನನಿತ್ಯದ ಜೀವನದಲ್ಲಿ ಕಷ್ಟಪಡುತ್ತ ಜೀವನವನ್ನು ನಿರ್ವಹಿಸುತ್ತಿರುತ್ತಾರೆ. ಆದ್ದರಿಂದ ಅವರು ರಾಜಕೀಯವಾಗಿ ಸಬಲರಾದರೇ ಮಹಿಳೆಯರು ಸಂಘಟಿತರಾಗಿ, ಶಿಕ್ಷಣವನ್ನು ಪಡೆದು, ಗ್ರಾಮಗಳಲ್ಲಿನ ಸಮಸ್ಯೆಗಳಿಗೆ ಪರಿಹಾರ ನೀಡಿ ಗ್ರಾಮಗಳ ಅಭಿವೃದ್ಧಿಯಲ್ಲಿ ಮಹಿಳೆಯರು ಪ್ರಮುಖ ಪಾತ್ರವು ವಹಿಸಲಿದ್ದಾರೆ. ಆ ಮೂಲಕ ಗಾಂಧೀಜಿಯವರ ಮಾತಿನ ಮತೆ ದೇಶದ ಅಭಿವೃದ್ಧಿಯು ಸಾಧ್ಯವಾಗುತ್ತದೆ.

ಭಾರತದ ರಾಜಕೀಯದಲ್ಲಿ ಮಹಿಳೆಯರನ್ನು ತರುವ ಉದ್ದೇಶದಿಂದ ಮಹಿಳೆಯರಿಗೆ ಶೇ. 30ರಷ್ಟು ಮೀಸಲಾತಿಯನ್ನು ನೀಡುವ ಮೂಲಕ ಅವರಿಗೂ ರಾಜಕೀಯ ಸಥಾನಮಾನವನ್ನು ನೀಡಲಾಗಿದೆ. ಈ ಮೂಲಕ ಮಹಿಳೆಯರು ತಮ್ಮ ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳಬಹುದಾಗಿದೆ. ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗೆ ಮೀಸಲು ನೀಡಿರುವುದರಿಂದ ಅಲ್ಲಿನ ಮಹಿಳೆಯರು ಅಧಿಕಾರ ಪಡೆದು ಕಾರ್ಯನಿರ್ವಹಿಸಲು ಅನುಕೂಲಕರವಾಗಿದೆ.

ಗ್ರಾಮೀಣ ಭಾಗದ ರಾಜಕೀಯ ಎಂದರೇ ಸ್ಥಳೀಯ ಸರ್ಕಾರಗಳಾದ

ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳು ಮುಖ್ಯವಾಗಿ ಗ್ರಾಮ ಪಂಚಾಯಿತಿಗಳಲ್ಲಿ ಸದಸ್ಯರುಗಳು, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ಕಾರಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ಗ್ರಾಮ ಪಂಚಾಯಿತಿಯ ಸದಸ್ಯರುಗಳು ಚುನಾವಣೆಗೆ ಮೂಲಕ ಆ ಗ್ರಾಮದ ಜನರು ತಮ್ಮಲ್ಲೇ ಒಬ್ಬ ನಾಯಕ / ನಾಯಕಿಯನ್ನು ಆರಿಸಿ ಕಳುಹಿಸುತ್ತಾರೆ. ಇಲ್ಲಿ ಆಯ್ಕೆಯಾದ ಸದಸ್ಯರು ತಮ್ಮಲ್ಲೇ ಒಬ್ಬ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನವನ್ನು ಅಲಂಕರಿಸುತ್ತಾರೆ. ಈ ಎಲ್ಲಾ ಹಂತಗಳಲ್ಲೂ ಮಹಿಳೆಯರಿಗೆ ಮೀಸಲಾತಿ ನೀಡಿರುವುದರಿಂದ ಅವರು ಸಹ ಇಲ್ಲಿ ಆಯ್ಕೆಯಾಗುತ್ತಾರೆ. ಆ ಮೂಲಕ ಗ್ರಾಮೀಣ ಭಾಗದ ರಾಜಕೀಯದಲ್ಲಿ ಮಹಿಳೆಯರು ಪಲ್ಗೊಳ್ಳುತ್ತಾರೆ.

ಗ್ರಾಮೀಣ ಭಾಗದಲ್ಲಿನ ಪ್ರಮುಖ ಸಮಸ್ಯೆಗಳಾದ ಕುಡಿಯುವ ನೀರಿನ ಸಮಸ್ಯೆ, ಒಳ ಚರಂಡಿ ವ್ಯವಸ್ಥೆ, ರಸ್ತೆ, ಸ್ವಚ್ಛತೆ ಮುಂತಾದ ಅನೇಕ ಮೂಲಭೂತ ಸಮಸ್ಯೆಗಳನ್ನು ಒಳಗೊಂಡಿರುತ್ತಾರೆ. ಈ ಸಮಸ್ಯೆಗಳನ್ನು ಹೆಚ್ಚಾಗಿ ಎದುರಿಸುವವರು ಮಹಿಳೆಯರೇ ಆಗಿರುತ್ತಾರೆ. ದೂರದ ಕೆರೆ, ಬಾವಿಯಿಂದ ನೀರನ್ನು ಹೊತ್ತು ತರಬೇಕು. ಸ್ವಚ್ಛತೆಗಳನ್ನು ಮಾಡುವುದು ಎಲ್ಲವು ಮಹಿಳೆಯರ ಮೇಲೆ ಹೆಚ್ಚಾಗಿ ಬೀಳುವುದರಿಂದ ಆ ಕಷ್ಟ ನಷ್ಟದ ಬಗ್ಗೆ ಸಮಸ್ಯೆಯ ಬಗ್ಗೆ ಅವರಿಗೆ ಅರಿವಿರುತ್ತದೆ. ಇಂತಹ ಮಹಿಳೆಯರಿಗೆ ರಾಜಕೀಯ ಅಧಿಕಾರ ದೊರೆತಾಗ ಕಂಡಿತವಾಗಿಯೂ ಆ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವಲ್ಲಿ ಮಹಿಳೆಯು ಶ್ರಮವಹಿಸಿ ಕರ್ತವ್ಯ ನಿರ್ವಹಿಸುತ್ತಾರೆ. ಕುಟುಂಬ ಸಂಪೂರ್ಣ ಜವಾಬ್ದಾರಿ ಹೊರುವ ಮಹಿಳೆ ಮನೆಯನ್ನು ಹೇಗೆ ನಡೆಸಿಕೊಂಡು ಬಂದು ಕೌಟುಂಬಿಕ ಅಭಿವೃದ್ಧಿಗೆ ಶ್ರಮವಹಿಸುತ್ತಾಳೆ. ಹಾಗೆಯೇ ತಮ್ಮ ಸುತ್ತಮುತ್ತಲಿನ ಪ್ರದೇಶದ ಸಮಸ್ಯೆಗಳನ್ನು ಅರಿತು ಗ್ರಾಮದ ಅಭಿವೃದ್ಧಿ ಕೆಲಸಗಳಲ್ಲಿ ಮಹಿಳೆಯರ ಪ್ರಮುಖ ಪಾತ್ರವನ್ನು ವಹಿಸುತ್ತಾರೆ.

ಗ್ರಾಮೀಣ ಭಾಗದಲ್ಲಿ ಮಹಿಳೆಯರ ಸ್ಥಿತಿ ಉತ್ತಮಗೊಳಿಸಲು ಈ ರಾಜಕೀಯ ಅಧಿಕಾರ ಉಪಯೋಗವಾಗಿದೆ. ಗ್ರಾಮೀಣ ಭಾಗದಲ್ಲಿ ಶೇ. 35ರಷ್ಟು ಮಾತ್ರ ಶಿಕ್ಷಣ ಪಡೆಯುತ್ತಾರೆ. ಉಳಿದವರು ಅದರಿಂದ ವಂಚಿತರಾಗುತ್ತಿದ್ದಾರೆ. ಎಲ್ಲರಿಗೂ ಶಿಕ್ಷಣವನ್ನು ನೀಡಲು ಭಾರತ ಸರ್ಕಾರವು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದೆ. ಮಹಿಳೆಯರು ಶಿಕ್ಷಣವನ್ನು ಪಡೆದರೆ ಅವರು ಸ್ವಪಕ್ತರಾಗಿ ಸ್ವಾಲಂಭಿಗಳಾಗಿ ಜೀವನ ನಡೆಸಬಹುದಾಗಿದ್ದು ಬೇರೆಯವರಿಂದ ಶೋಷಣೆಗೆ ಒಳಪಡುವ ಅವಕಾಶಗಳು ಕಡಿಮೆಯಾಗುತ್ತದೆ. ಗ್ರಾಮೀನ ಭಾಗದ ಮಹಿಳೆಯರು ಸಾಮಾಜಿಕವಾಗಿ ಅನೇಕ ರೀತಿಯಲ್ಲಿ ಶೋಷಣೆಗೆ ಒಳಪಡುತ್ತಿರುತ್ತಾರೆ. ಕೌಟುಂಬಿಕ ಕಲಹ, ಗಂಡನ ಕಿರುಕುಳ, ಲಿಂಗ ತಾರತಮ್ಯ, ಕೂಲಿಯ ಅಮಾನತೆ, ಹೀಗೆ ನಾನಾ ಸಮಸ್ಯೆಗಳನ್ನು ಗ್ರಾಮೀಣ ಮಹಿಳೆಯರು ಅನುಭವಿಸುತ್ತಾರೆ. ಅವ್ರಗಳನ್ನು ತಡೆಗಟ್ಟಲು ಅವರು ಶಿಕ್ಷಣ ಪಡೆಯಬೇಕು ಜೊತೆಗೆ ರಾಜಕೀಯವಾಗಿ ಪ್ರಬಲರಾಗಬೇಕು.

ಗ್ರಾಮೀಣ ಭಾಗದ ಮಹಿಳೆಯರು ರಾಜಕೀಯದಲ್ಲಿ ಪಾಲ್ಗೊಳ್ಳುವುದರಿಂದ ಸಾಮಾಜಿಕ ಸಮನತೆಯು ಅವರಿಗೆ ದೊರೆಯುತ್ತದೆ. ಶೋಷಣೆಯಿಂದ ಮುಕ್ತಿಗೊಳಗಾಗುತ್ತಾಳೆ. ಆರ್ಥಿಕವಾಗಿ ಸಬಲರಾಗುತ್ತಾರೆ. ಇಚ್ಚೀತಿನ ದಿನಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು ಸ್ವಶಕ್ತಿ ಸಂಘಗಳು, ಮಹಿಳೆಯರನ್ನು ಒಗ್ಗೂಡಿಸಿ ಅವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಗ್ರಾಮೀಣ ಭಾಗದ ಮಹಿಳೆಯರಿಗೆ ಸಾಲ ಸೌಲಭ್ಯಗಳನ್ನು ನೀಡುವುದು. ಗೃಹ ಕೈಗಾರಿಕೆ, ಗುಡಿಕೈಗಾರಿಕೆಗಳನ್ನು ಪ್ರಾರಂಭಿಸಿ ಬುಟ್ಟಿ ನೇಯುವುದು, ಗಂಧದಕಡ್ಡಿ ತಯಾರಿಕೆ, ಮೇಣದ ಬತ್ತಿ ತಯಾರಿಕೆ ಹೀಗೆ ನಾನಾ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಗಳನ್ನು ನಿರ್ಮಾಣವಾಗಿ ಮಾರಾಟಮಾಡಿ ಅವರ ಉನ್ನತಿಗೆ ಶ್ರಮಿಸುತ್ತಿವೆ. ಗ್ರಾಮೀಣ ಭಾಗದ ಮಹಿಳೆಯರಿಗೆ ಎನ್.ಜಿ.ಓ.ಗಳ ಮೂಲಕ ತರಬೇತಿ, ಕೌಶಲ್ಯ ತರಬೇತಿ, ಆರೋಗ್ಯ, ಅರಿವು ಶಿಬಿರ ಅನೇಕ ಕಾರ್ಯಕ್ರಮಗಳನ್ನು ಮಾಡಿ ಮಹಿಳೆಯರ ಅಭಿವೃದ್ಧಿಗೆ ಶ್ರಮವಹಿಸುತ್ತದೆ. ಈ ಎಲ್ಲಾ ಕಾರ್ಯಗಳು ಗ್ರಾಮಗಳಲ್ಲಿ ನಡೆಯಬೇಕಾದರೆ ಸ್ಥಳೀಯ ಸರ್ಕಾರದ ಪಾತ್ರ ಎಷ್ಟು ಅಗತ್ಯವೋ ಅಲ್ಲಿ ಮಹಿಳೆಯರು ಗ್ರಾಮಪಂಚಾಯಿತಿಗಳಲ್ಲಿ ಅಧಿಕಾರ ಪಡೆದರೆ ಈ ಮೇಲಿನ ಎಲ್ಲಾ ಕಾರ್ಯಗಳು ತುಂಬಾ ಅಚ್ಚುಕಟ್ಟಾಗಿ ನಡೆಯುತ್ತಿದೆ.

ದೇಶದ ಅಭಿವೃದ್ಧಿಗೆ ಪುರುಷರ ಪಾತ್ರ ಎಷ್ಟು ಅಗತ್ಯವೋ ಅಷ್ಟೇ ಮಹಿಳೆಯರ ಪಾತ್ರ ಮುಖ್ಯವಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಇವರಿಬ್ಬರಿಗೂ ಸಮಾನ ಕೆಲಸಗಳು, ಸಮಾನ ವೇತನಗಳು ಇರುವುದರಿಂದ ದೇಶದ ಅಭಿವೃದ್ಧಿ ವೇಗವಾಗಿ ಸಾಗುತ್ತದೆ. ಪುರುಷ ಪ್ರಧಾನವನ್ನಾಗಿ ಭಾರತದೇಶವನ್ನು ಕರೆಯುತ್ತಿದುದರಿಂದ ಮಹಿಳೆಯರಿಗೆ ಅಧಿಕಾರ, ಸ್ಥಾನ ಮಾನ ನೀಡದೆ ಅವರನ್ನು ಮೂಲೆಗುಂಪು ಮಾಡಲಾಗಿತ್ತು. ಆದರೇ ಇತ್ತೀಚ್ಚಿನ ದಿನಗಳಲ್ಲಿ ಸರ್ಕಾರದಿಂದಲೇ ಅವರಿಗೂ ಮಾನ್ಯತೆ ನೀಡಿ ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ಎಲ್ಲದರಲ್ಲೂ ಪಾಲ್ಗೊಳ್ಳುವ ಅವಕಾಶ ಹಾಗೂ ರಾಜಕೀಯದಲ್ಲಿ ಉದ್ಯೋಗಗಳು ಮೀಸಲಾತಿ ನೀಡಿರುವುದರಿಂದ ಅಭಿವೃದ್ಧಿಯು ಸಾಗುತ್ತಿದೆ. ಇದು ದೇಶದ ಅಭಿವೃದ್ಧಿಗೆ ಪೂರಕವಾಗಿದೆ. ಗ್ರಾಮಗಳು ಹೆಚ್ಚಾಗಿ ಅಭಿವೃದ್ಧಿ ಹೊಂದಿದರೆ ಕ್ರಮೇಣ ದೇಶ ಅಭಿವೃದ್ಧಿಯಾಗುತ್ತದೆ. ಆದ್ದರಿಂದ ಗ್ರಾಮಗಳಲ್ಲಿನ ಅಭಿವೃದ್ಧಿಗೆ ಮಹಿಳೆಯರ ಪಾತ್ರ ತುಂಬಾ ಅವಶ್ಯಕವಾಗಿದೆ.

ಗ್ರಾಮ ಪಂಚಾಯಿತಿಯಿಂದ ಮಹಿಳೆಯರಿಗಾಗಿ ವಿಶೇಷ ಅನುದಾನ ಅನುಕೂಲಗಳನ್ನು ಮಾಡಿಕೊಡಲಾಗಿದೆ. ಕುಟುಂಬ ಕಲ್ಯಾಣ ಯೋಜನೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಪೌಷ್ಟಿಕ ಆಹಾರ ವಿತರಣೆ, ವಿಧವಾ ವೇತನ, ವೃದ್ಧಾಪ್ಯ ವೇತನ, ಬಡವರಿಗೆ ಗೃಹ ನಿರ್ಮಾಣಕ್ಕೆ ಹಣದ ಸೌಲಭ್ಯ, ಮಹಿಳೆಯರು ಗರ್ಭಿಣಿಯರಿಗೆ, ಮಕ್ಕಳಿಗೆ ಆಹಾರ ಮತ್ತು ಬಟ್ಟೆ ಮುಂತಾದ ವಸ್ತುಗಳನ್ನು ಸರ್ಕಾರವು ಅವರಿಗೆ ತಲುಪಿಸುತ್ತಿದೆ. ಹೀಗೆ ಮೇಲಿನ ಎಲ್ಲಾ ಸೌಲಭ್ಯಗಳನ್ನು ಪಡೆಯಬೇಕಾದರ ಮಹಿಳೆಯರು ಜಾಗೃತರಾಗಬೇಕು. ಅವರು ಸಹ ಸಂಘಟಿತರಾಗಿ ಗ್ರಾಮೀಣ ಭಾಗದ ರಾಜಕೀಯದಲ್ಲಿ ಅವರು ಪಾಲ್ಗೊಳ್ಳಬೇಕು.

ಗ್ರಾಮೀಣ ಭಾಗದಲ್ಲಿ ಮಹಿಳೆಯರು ರಾಜಕೀಯ ಪ್ರವೇಶ ಮಾಡುವುದರಿಂದ ಅವರು ಸ್ಥಳೀಯ ಸರ್ಕಾರ ಮತ್ತು ಆಡಳಿತದ ಬಗ್ಗೆ ಅವರಿಗೆ ಅರಿವು ಮೂಡುತ್ತದೆ. ಗ್ರಾಮ ಪಂಚಾಯಿತಿಗಳ ಸರ್ಕಾರದ ರಚನೆ, ಅಧಿಕಾರ, ಕಾರ್ಯಗಳು ಎಲ್ಲವನ್ನು ತಿಳಿಯುವುದರ ಮೂಲಕ ಅವರು ಹಂತಹಂತವಾಗಿ ರಾಜಕೀಯದಲ್ಲಿ ಮೇಲೆ ಬಂದು ಪಂಚಾಯಿತಿ ಆಡಳಿತದಿಂದ ರಾಜ್ಯ ಆಡಳಿತ ಹಾಗೂ ದೇಶದ ರಾಜಕೀಯದಲ್ಲೂ ಭಾಗವಹಿಸುವ ಆ ಮೂಲಕ ಉನ್ನತ ಸ್ಥಾನಗಳನ್ನು ಅಲಂಕರಿಸಿ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಾರೆ. ಹೀಗೆ ಒಬ್ಬ ಮಹಿಳೆ

ದೇಶದ ರಾಜಕೀಯವನ್ನು ಪ್ರವೇಶಿಸಬೇಕಾದರೆ ಅವರಿಗೆ ರಾಜಕೀಯದ ಆಡಳಿತದ ಬಗ್ಗೆ ಜ್ಞಾನ ಬರಬೇಕು. ಅದಕ್ಕಾಗಿ ಗ್ರಾಮಗಳಿಂದ ಆಯ್ಕೆಗೊಂಡರೆ ಅನುಭವ ದೊರೆಯುತ್ತದೆ. ಅಲ್ಲದೆ ಗ್ರಾಮೀಣ ಭಾಗದ ಮಹಿಳೆಯರು ಸಹ ರಾಜಕೀಯದಲ್ಲಿ ಮುಂದೆ ಬರಲು ಇದು ಒಂದು ಒಳ್ಳೆಯ ಅವಕಾಶವಾಗಿದೆ.

ಗ್ರಾಮೀಣ ಭಾಗದ ಮಹಿಳೆಯರು ಹೆಚ್ಚಾಗಿ ದೌರ್ಜನ್ಯ ಹಾಗೂ ಶೋಷಣೆಗೆ ಒಳಗಾಗುತ್ತಾರೆ. ಅವುಗಳನ್ನು ತಡೆಯಲು ಸರ್ಕಾರವು ಸಂವಿಧಾನದಲ್ಲಿ ಅನೇಕ ಕಾಯ್ದೆಗಳನ್ನು ಜಾರಿಗೆ ತಂದಿದೆ ಉದಾಹರಣೆಗೆ: ಮಹಿಳೆಯರಿಗೆ ಆಸ್ತಿಯ ಹಕ್ಕು, ಬಾಲ್ಯವಿವಾಹ ನಿಷೇಧ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ಪ್ರಸೂತಿ ಸೌಕರ್ಯ ಕಾಯ್ದೆ, ಸಮಾನವೇತನ ಕಾಯ್ದೆ ಇವುಗಳಲ್ಲದೆ ಇತ್ತೀಚಿನ ದಿನಗಳಲ್ಲಿನ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ಅತ್ಯಾಚಾರ)ಗಳನ್ನು ನಿಯಂತ್ರಿಸಲು ಸಿಗಬೇಕಾದರೆ ಅವರು ಕಠಿಣ ಶಿಕ್ಷೆಗಳ ಕಾಯ್ದೆಯನ್ನು ಅಳವಡಿಸಲಾಗಿದೆ ಈ ಎಲ್ಲಾ ಮಾಹಿತಿಗಳು ಗ್ರಾಮೀಣ ಭಾಗದ ಮಹಿಳೆಯರಿಗೆ ಸಿಗಬೇಕಾದರೆ ಅವರು ಶಿಕ್ಷಣವನ್ನು ಪಡೆಯುವುದರ ಜೊತೆಗೆ ರಾಜಕೀಯದಲ್ಲಿ ಸಬಲರಾದರೇ ಮಾತ್ರ ಇವುಗಳ ಸಮರ್ಪಕ ಕಾರ್ಯ ನಿರ್ವಹಣೆ ಸಾಧ್ಯವಾಗುತ್ತದೆ. ಇಲ್ಲವಾದರೆ ಯಾವುದೇ ಕಾನೂನುಗಳನ್ನು ತಂದರು ಇವುಗಳ ವಿಫಲವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ರಾಜಕೀಯದಲ್ಲಿ ಹೆಚ್ಚಾಗಿ ಪಾಲ್ಗೊಳ್ಳುತ್ತಿದ್ದರು. ಆದರೆ ಇಲ್ಲಿಯೂ ಸಹ ಮಹಿಳೆಯರು ಸ್ವಾತಂತ್ರ್ಯವಾಗಿ ಅಧಿಕಾರ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಕಾರಣವೇನೆರಂದರೆ ಪುರುಷರು ಹೆಚ್ಚಾಗಿ ರಾಜಕೀಯ ಅಧಿಕಾರ ನಿರ್ವಹಿಸುತ್ತದ್ದರು. ಇತ್ತೀಚೆಗೆ ಮಹಿಳೆಯರಿಗೆ 33%ರಷ್ಟು ಮೀಸಲಾತಿ ನೀಡಿರುವುದರಿಂದ ಅಲ್ಲಿ ಪುರುಷರು, ಹೆಂಡತಿಯರು ಆ ರಾಜಕೀಯ ಕ್ಷೇತ್ರದಲ್ಲಿಬರುತ್ತಪ್ಪರು ಅವರು ನಾಮಕಾವಸ್ಯೆಎಗೆ ಗ್ರಾಮ ಪಾಂಚಾಯಿರಿಗಳಲ್ಲಿ ಸದಸ್ಯೆ, ಅಧ್ಯಕ್ಷೆ, ಉಪಾಧ್ಯಕ್ಷೆ ಇನ್ನಿತರ ಸ್ಥಾನದಲ್ಲಿದ್ದರೂ ಅವರ ನೈಜ ಅಧಿಕಾರವನ್ನು ಪತಿ ಅಥವಾ ಇತರೆ ಯಾರಾದರೂ ಅನುಭವ ಇರುವ ಪುರುಷರು ನಡೆಸುತ್ತಿರುತ್ತಾರೆ. ಇದು ಸಹ ಮಹಿಳೆಯರ ಮೇಲಿನ ರಾಜಕೀಯ ದೌರ್ಜನ್ಯವಾಗಿದೆ ಇದು ಕಡಿಮೆಯುಾಗಬೇಕು ಮಹಿಳೆಯರು ರಾಜಕೀಯೆದಲ್ಲಿ ಸ್ವಾತಂತ್ರ್ಯವಗಿ ಕಾರ್ಯನಿರ್ವಹಿಸುವಂತಾಗಬೇಕು. ಹಾಗಾದಾಗ ಮಾತ್ರ ಮಹಿಳೆಯ ಅಭಿವೃದ್ಧಿ, ಸಬಲತೆ ಜೊತೆಗೆ ಗ್ರಾಮೀಣ ಅಭಿವೃದ್ಧಿ ಸಾಧ್ಯವಾಗುತ್ತದೆ.

ಮೇಲಿನ ಎಲ್ಲಾ ವಿಷಯಗಳನ್ನು ಗಮನಿಸಿದರೆ ಮಹಿಳೆಯು ಅನಾದಿ ಕಾಲದಿಂದಲೂ ಶೋಷಣೆಗೆ ಒಳಪಡುತ್ತಿದ್ದಾಳೆ. ಇವರಿಗೆ ಸರ್ಕಾರವು ವಿಶೇಷ ಹಕ್ಕುಗಳನ್ನು, ಕಾಯ್ದೆಗಳನ್ನು ಜಾರಿಗೆ ತದಿದ್ದು ಅವರು ಸಹ ಸಬಲೀಕರಣಗೊಂಡು ಆರ್ಥಿಕವಾಗಿ, ಸಮಾಜಿಕವಾಗಿ ಸಬಲರಾಗಬೇಕಾದರೆ ಮಹಿಳೆಯರು ಅದರಲ್ಲೂ ಗ್ರಾಮೀಣ ಭಾಗದ ಮಹಿಳೆಯರು ರಾಜಕೀಯದಲ್ಲಿ ಪಾಲ್ಗೊಂಡು ದೇಶದ ಅಭಿವೃದ್ಧಿಗೆ ತನ್ನದೆ ಆದ ಕೊಡುಗೆಗಳನ್ನು ನೀಡಬೇಕಾಗಿದೆ.

ಭಾರತ ದೇಶದ ರಾಜಕೀಯದಲ್ಲಿ ಸಾಧನೆ ಮಾಡಿದ ಪ್ರಮುಖ ಮಹಿಳೆಯರು

ಭಾರತ ಪ್ರಥಮ ಮಹಿಳಾ ಪ್ರಧಾನಮಂತ್ರಿ
– ಶ್ರೀಮತಿ ಇಂದಿರಾಗಾಂಧಿ
ಭಾರತ ಪ್ರಥಮ ಮಹಿಳಾ ರಾಷ್ಟ್ರಾಧ್ಯಕ್ಷೆ
– ಪ್ರತಿಭಾ ಪಾಟೀಲ್
ಭಾರತ ಪ್ರಥಮ ಮಹಿಳಾ ಮುಖ್ಯಮಂತ್ರಿ
– ಸುಚೇತಾ ಕೃಪಲಾನಿ
ಭಾರತ ಪ್ರಥಮ ಮಹಿಳಾ ರಾಯಭಾರಿ
– ವಿಜಯಲಕ್ಷ್ಮಿ ಪಂಡಿತ್
ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮ ಮಹಿಳಾ ಅಧ್ಯಕ್ಷೆ
– ಸರೋಜಿನಿ ನಾಯ್ಡು
ಭಾರತ ಪ್ರಥಮ ಮಹಿಳಾ ದಲಿತ ಮುಖ್ಯಮಂತ್ರಿ
– ಮಾಯಾವತಿ

ಆಕರ ಗ್ರಂಥಗಳು

1) ಗಂಗೂಲಿ ಬಿ.ಎನ್, 1973, ಗಾಂಧೀಜಿಯವರ ಸಾಮಾಜಿಕ ತತ್ವ, ವಿಕಾಸ್ ಪಬ್ಲಿಷಿಂಗ್ ಹೌಸ್, ನವ ದೆಹಲಿ.
2) ಬಸವರಾಜ ಎಂ.ಜಿ. 2005, ಗಾಂಧೀ–ಜೆ.ಸಿ. ಕುಮಾರಪ್ಪ ಆರ್ಥಿಕಾಭಿವೃದ್ಧಿ ವಿಚಾರಗಳು, ಮಾನವಿಕ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿ.ವಿ.
3) ಮಾರ್ಷಲ್ ಆಲ್‌ಫ್ರೆಡ್, 1980, ಅರ್ಥಶಾಸ್ತ್ರದ ತತ್ವಗಳು.

ಇಂದಿನ ಭಾರತಕ್ಕೆ ಕೌಟಿಲ್ಯನ ಅರ್ಥಶಾಸ್ತ್ರದ ಪ್ರಯೋಜನಗಳು

ಶಂಭುಲಿಂಗ ಉಪಾಧ್ಯಾಯ
ಸಂಸ್ಕೃತ ಸಂಶೋಧನಾ ವಿದ್ಯಾರ್ಥಿ, ಮಂಗಳೂರು ವಿಶ್ವವಿದ್ಯಾನಿಲಯ

ಜಗತ್ತಿನಲ್ಲಿ ಜನಿಸಿದ ಪ್ರತಿಯೊಂದು ಜೀವಿಗೂ ಸದಾ ಸುಖದಲ್ಲಿ ಪ್ರೀತಿಯೂ, ದುಃಖದಲ್ಲಿ ದ್ವೇಷವೂ ನೈಸರ್ಗಿಕವಾದುದು. ಅದಕ್ಕಾಗಿ ಪ್ರತಿಯೊಂದು ಪ್ರಾಣಿಗೂ ಸುಖಸಾಧನೆಯಲ್ಲಿ, ದುಃಖ ನಿವಾರಣೆಯಲ್ಲಿ ಪ್ರವೃತ್ತಿ ಉಂಟಾಗುತ್ತದೆ. ಕೋಟ್ಯಂತರ ವರ್ಷಗಳಿಗಿಂತ ಪೂರ್ವದಲ್ಲಿ ಈ ವಿಶ್ವದಲ್ಲಿ ಒಂದು ದೊಡ್ಡದಾದ ಬೆಂಕಿಯ ಉಂಡೆ ವಾತಾವರಣ ದೋಂದಿಗೆ ಸಂಘರ್ಷಕ್ಕಿಳಿದು ಅನೇಕ ತುಂಡುಗಳಾಗಿ ನಾನಾ ದಿಕ್ಕಿಗೆ ಚದುರಿದವು ಎಂದು ಆಧುನಿಕ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆ ಮೂಲವಸ್ತುವನ್ನು ಭಾರತೀಯರು ಪರಮಾತ್ಮ, ಬ್ರಹ್ಮ ಎಂಬುದಾಗಿ ನಾನಾ ಹೆಸರಿನಿಂದ ಕರೆದರು. ಅದರಿಂದ ನಿಧಾನವಾಗಿ ಒಂದೊಂದೇ ಗ್ರಹ–ನಕ್ಷತ್ರಗಳು ಹುಟ್ಟಿದವು. ಈ ವಿಚಾರಗಳಿಗೆ ಮೂಲವೆಂಬಂತೆ ಸಾವಿರಾರು ವರ್ಷಗಳಷ್ಟು ಹಳೆಯದಾದ, ನಮ್ಮ ದೇಶದ ವಿಜ್ಞಾನಿಗಳೆಂದು ಕರೆಯಲ್ಪಡುವ ನಮ್ಮ ಋಷಿಗಳಿಂದ ದೃಷ್ಟವಾದ ಬ್ರಾಹ್ಮಣ ವಾಕ್ಯವು **"ಆದಿತ್ಯಾದ್ಭೂಮಿರ್ಜಾಯತೆ"** ಎಂದು ಉದ್ಘೋಷಿಸುತ್ತದೆ. ಹೀಗೆ ಉಂಟಾದ ಬೃಹತ್ಕಾಯದ ತುಂಡುಗಳಲ್ಲಿ ಭೂಮಿಯೂ ಒಂದಾಗಿ ತನ್ನ ಜೊತೆ ಜನಿಸಿದವರ ಜೊತೆ ತಾನೂ ಸಂಘರ್ಷ ಮಾಡುತ್ತಾ ಬೆಂಕಿಯ ಚೆಂಡಿನಂತಿದ್ದ ಭೂಮಿ ನಿಧಾನವಾಗಿ ತನ್ನ ಕೋಪವನ್ನು ಕಡಿಮೆ ಮಾಡಿಕೊಂಡವರಂತೆ ತಂಪಾಯಿತು. ಆದೆಷ್ಟು ತಂಪಾಯಿತೆಂದರೆ ಒಮ್ಮೆಲೆ ಭೂಮಿ ಬೆಂಕಿಯ ಪರಮ ಶತ್ರುವಾದ

ನೀರಿನ ಘನೀಕರಿಸಿದ ರೂಪಕ್ಕೆ ಹೋಗಿ ಜಗತ್ತಿನಲ್ಲಿ ಹಿಮಯುಗವೇ ಉಂಟಾಯಿತು. ಅದೆಷ್ಟೋ ವರ್ಷ ಕಳೆದ ಮೇಲೆ ಭೂಮಿ ವಾಸಯೋಗ್ಯವಾಗುವ ದಿಕ್ಕಿನಲ್ಲಿ ಬದಲಾವಣೆಯಾಗತೊಡಗಿತು. ಸೂರ್ಯನ ಶಾಖಕ್ಕೆ ನಿಧಾನವಾಗಿ ಹಿಮಗಳು ಕರಗಿ ತಗ್ಗಾದ ಪ್ರದೇಶ ಸೇರಿ ತಮ್ಮದಾದ ಮನೆಯನ್ನು ನಿರ್ಮಿಸಿಕೊಂಡು ಸಾಗರ-ಸಮುದ್ರಗಳುಂಟಾಯಿತು. ಆನಂತರವೇ ಪಂಚಭೂತಗಳ ಹದವಾದ ಮಿಶ್ರಣದಿಂದ ಏಕಕೋಶ ಜೀವಿಯಿಂದ ಜೀವೋತ್ಪತ್ತಿ ಉಂಟಾಯಿತು. ಅಲ್ಲಿಂದ ಆರಂಭವಾದ ಈ ನಿರಂತರ ಪ್ರಕ್ರಿಯೆ ಬುದ್ಧಿವಂತ ಪ್ರಾಣಿಯಾದ ಮನುಷ್ಯನ ಉತ್ಪತ್ತಿಯವರೆಗೆ ಬಂದು ನಿಂತಿತು.

"ಆಹಾರನಿದ್ರಾಭಯಮೈಥುನಂ ಚ ಸಾಮಾನ್ಯಮೇತತ್ ಪಶುಭಿರ್ನರಾಣಾಂ" ಎಂಬಂತೆ ಆಹಾರ ನಿದ್ರಾದಿಗಳಲ್ಲಿ ಸಾಮಾನ್ಯ ಪ್ರಾಣಿಗಳಂತಿದ್ದ ಮನುಷ್ಯ ಆವೆಲ್ಲವುದರ ಸಮೃದ್ಧಿಯಲ್ಲಿ ಪ್ರಾಣಿಗಳಿಗಿಂತ ಸ್ವಲ್ಪ ಭಿನ್ನವಾಗಿ ಯೋಚಿಸಲಾರಂಭಿಸಿದ. ಆಗ ಅವನಿಗೆ ತಾನು ಉಳಿದ ಪ್ರಾಣಿಗಳಿಗಿಂತ ಸ್ವಲ್ಪ ಭಿನ್ನ ಎಂಬುದು ಸಂಪೂರ್ಣವಾಗಿ ಅರಿವಾಯಿತು. ಅದಕ್ಕಾಗಿ ಯೋಚನಾಶಕ್ತಿರಹಿತವಾದ ಉಳಿದ ಪ್ರಾಣಿಗಳ ಮೇಲೆ ತನ್ನ ಹಿಡಿತವನ್ನು ಸಾಧಿಸಿ ಕೊನೆಗೆ ತನ್ನಷ್ಟೇ ಬುದ್ಧಿಶಾಲಿಯಾದ ಮನುಷ್ಯರ ಮೆಲೂ ಹಿಡಿತ ಸಾಧಿಸಲು ಪ್ರಯತ್ನಿಸಲಾರಂಭಿಸಿದ.

ಆಗ ಭಾರತದಲ್ಲಿ ಆದ್ಭುತವೆನ್ನಬಹುದಾದ ವಿಶ್ವದಲ್ಲಿ ಉಳಿದ ಕಡೆ ಮನುಷ್ಯ ನಿಧಾನವಾಗಿ ನಾಗರೀಕತೆಯ ಕಡೆಗೆ ಅಂಬೆಗಾಲನ್ನಿಡುವಾಗ ವೇದಗಳ ಉದ್ಗಮವಾಯಿತು. ಆ ವೇದಗಳು ಪ್ರತಿಯೊಂದು ಮಾನವನಿಗೆ ಅನಿವಾರ್ಯವಾದ ಚತುರ್ವಿಧ ಪುರುಷಾರ್ಥಗಳನ್ನು ಬೋಧಿಸಿತು ಅವುಗಳೆಂದರೆ **ಧರ್ಮ ಅರ್ಥ ಕಾಮ ಮೋಕ್ಷಗಳು**. ಅದರಲ್ಲಿ ಧರ್ಮ ಎಂದರೆ ಮಹಾಭಾರತದಲ್ಲಿ-

ಧಾರಣಾದ್ಧರ್ಮಮಿತ್ಯಾಹುಃ ಧರ್ಮೇಣ ವಿಧೃತಾಃ ಪ್ರಜಾಃ ।
ಯಃ ಸ್ಯಾದ್ಧಾರಣಸಂಯುಕ್ತಃ ಸ ಧರ್ಮ ಇತಿ ನಿಶ್ಚಿತಃ ॥

ಎಂದು ಉಲ್ಲೇಖಿಸಿದ್ದಾರೆ. ಯಾವುದು ನಮ್ಮನ್ನು ಹೊತ್ತುಕೊಂಡಿದೆಯೋ ಅದೇ ಧರ್ಮ ಎಂದು ಹೇಳಲಾಗಿದೆ. ಹೀಗೆ ಧರ್ಮದ ಕುರಿತಾಗಿ ಅನೇಕ ವಿಚಾರಗಳನ್ನು ವಿಮರ್ಶಿಸಿದರೂ ಪುರುಷಾರ್ಥಗಳಲ್ಲಿ ಎರಡನೆಯದಾದ ಅರ್ಥಕ್ಕೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ಮುಂದಿನವರು ಧರ್ಮಕ್ಕೆ ನೀಡಿಲ್ಲವೆಂದರೆ ತಪ್ಪಗಲಾರದು. ಆದುದರಿಂದಲೇ **"ಮನುಷ್ಯಾಣಾಂ ವೃತ್ತಿಃ ಅರ್ಥಃ । ಮನುಷ್ಯವತೀ ಭೂಮಿರಿತ್ಯರ್ಥಃ । ತಸ್ಯಾಃ ಲಾಭಪಾಲನೋಪಾಯಂ ಶಾಸ್ತ್ರಂ ಅರ್ಥಶಾಸ್ತ್ರಂ"**[1] ಎಂದು ಹೇಳಲಾಗಿದೆ. ಅಂದರೆ ಮನುಷ್ಯರ ಜೀವಿಕೆಯು ಅರ್ಥ ಅಂದರೆ ಹಣ, ಮನುಷ್ಯರುಳ್ಳ ಭೂಮಿಯೂ ಅರ್ಥ, ಆ ಭೂಮಿಯ ಲಾಭ ಮತ್ತು ಪಾಲನೆಗಳ ಉಪಾಯವನ್ನು ತಿಳಿಸುವ ಶಾಸ್ತ್ರ ಅರ್ಥಶಾಸ್ತ್ರ ಎನ್ನಲ್ಪಡುವುದು. ಈ ಅರ್ಥಶಾಸ್ತ್ರವು ಸುಮಾರು ಕ್ರಿ.ಪೂ ೩೦೦ ರ ಸುಮಾರಿಗೆ ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿದ್ದ ಕೌಟಿಲ್ಯನಿಂದ ರಚಿಸಲ್ಪಟ್ಟಿದೆ. ಭಾರತೀಯ ಇತರೆ ಪ್ರಾಚೀನ ಗ್ರಂಥಗಳಿಗೆ ಆದ ದುರ್ಗತಿಯಂತೆ ಈ ಅರ್ಥಶಾಸ್ತ್ರದಲ್ಲಿ ಪ್ರತಿಪಾದಿತವಾದ ವಿಷಯವೂ ಕೂಡ ಕೇವಲ ಯಾವುದೋ ಒಂದು ಕಾಲಘಟ್ಟಕ್ಕೆ ಮಾತ್ರ ಪ್ರಯೋಜನವಾಗಿದ್ದು ಸಾರ್ವಕಾಲಿಕವಲ್ಲ ಎಂಬ ಒಂದು ಮೂಢನಂಬಿಕೆ ಜನಮಾನಸದಲ್ಲಿದೆ. ಆದರೆ ನಮ್ಮ ಕಾಲಿನ ಬೆರಳು ನೋವಾದರೆ ಹೇಗೆ ನಾವು ಕಾಲನ್ನೇ ಕತ್ತರಿಸಿ ಕೊಳ್ಳುವುದಿಲ್ಲವೋ ಹಾಗೇ ಆಗಿನ ಕಾಲಘಟ್ಟದ ಕೆಲವು ವಿಷಯಗಳನ್ನು ಬದಿಗಿಟ್ಟು ಅರ್ಥಶಾಸ್ತ್ರದ ಸರಿಯಾದ ಅಧ್ಯಯನವು ನಡೆದರೆ, ಆಚರಣೆಗೆ ಬಂದರೆ ಗತಪೂರ್ವ ಭಾರತದ ಸ್ವರ್ಣಯುಗವನ್ನು ಮತ್ತೆ ಪ್ರತಿಷ್ಠಾಪಿಸಬಹುದು. **ಯದಿಹಾಸ್ತಿ ತದನ್ಯತ್ರ ತನ್ನೇಹಾಸ್ತಿ ನ ಕುತ್ರಚಿತ್** ಎಂಬಂತೆ ರಾಜಕೀಯ, ಆರ್ಥಿಕ, ಸಾಮಾಜಿಕ ಅಂಶಗಳ ಕೂಲಂಕುಶ ವಿವರಣೆ ನಮಗೆ ಅರ್ಥಶಾಸ್ತ್ರದಲ್ಲಿ ಮಾತ್ರ ಸಿಗಲು ಸಾಧ್ಯ.

ಅರ್ಥಶಾಸ್ತ್ರದ ಮೊದಲನೆಯ ಅಧಿಕರಣದಲ್ಲಿಯೇ ರಾಜನಾದವನ ಕೆಲಸವನ್ನು ಹೇಳುತ್ತಾನೆ. ಪ್ರಸ್ತುತ ಪ್ರಪಂಚದಲ್ಲಿ ರಾಜ್ಯವನ್ನು ನಡೆಸುವ ರಾಜಕಾರಣಿಗಳೇ ರಾಜರು. ಆ ರಾಜನಾದವನು-

ತಸ್ಮಾತ್ಸ್ವಧರ್ಮಂ ಭೂತಾನಾಂ ರಾಜಾ ನ ವ್ಯಭಿಚಾರಯೇತ್ ।
ಸ್ವಧರ್ಮಂ ಸಂದಧಾನೋ ಹಿ ಪ್ರೇತ್ಯ ಚೇಹ ನ ನಂದತಿ ॥[2]

ಎಂದು ಎಲ್ಲಾ ಪ್ರಾಣಿಗಳೂ ಧರ್ಮವನ್ನು ಮೀರದಂತೆ ನೋಡಿಕೊಳ್ಳಬೇಕು ಎಂದು. ಇಲ್ಲಿ ಧರ್ಮವೆಂದರೆ **ಅಹಿಂಸೆ, ಸತ್ಯ, ಶೌಚ, ಅಸೂಯೆಯಿಲ್ಲದಿರುವಿಕೆ, ದಂಯಿ, ಕ್ಷಮೆ** ಇವೇ ಮೊದಲಾದವುಗಳು. ಪ್ರಸ್ತುತ ಸಮಾಜದಲ್ಲಿ ಹಿಂಸೆ, ಅಸತ್ಯ, ಬೇರೆಯವರನ್ನು ಕ್ಷಮಿಸುವ ಗುಣ ಇಲ್ಲದಿರುವಿಕೆ, ಸ್ವಾರ್ಥ ಇವೆಲ್ಲವೂ ಮಿತಿ ಮೀರಿವೆ. ಕೌಟಿಲ್ಯನ ಮಾತಿನಂತೆ ರಾಜಕಾರಣಿಗಳು ನಡೆದರೆ ಸಮಾಜದಲ್ಲಿ ಶಾಂತಿ ಸ್ಥಾಪನೆ ಮಾಡುವುದು ಸುಲಭವಾಗುತ್ತದೆ. ಹಾಗೆಯೇ ಸ್ವಸ್ಥ ಸಮಾಜಕ್ಕಾಗಿ ರಾಜನಾದವನು ಕಾಮಾದಿ ಷಡ್ವೈರಿಗಳನ್ನು ತ್ಯಜಿಸಬೇಕು. ರಾಜನಾದವನು ತನ್ನ ಸಹಾಯಕರನ್ನು ನೇಮಿಸಿಕೊಳ್ಳುವಾಗ ಸರಿಯಾಗಿ ಆಲೋಚಿಸಬೇಕು. ಕೇವಲ ವಂಶಪಾರಂಪರ್ಯವಾಗಿ ಬಂದ ಅಧಿಕಾರವನ್ನು ಮುಂದುವರಿಸುವುದು ಸರಿಯಲ್ಲವೆಂದು ಆಪ್ಪಣೆ ಕೊಡಿಸುತ್ತಾನೆ. ಆದುದರಿಂದ ನಾವು ಹೊಸದಾಗಿ ಒಬ್ಬನನ್ನು ಚುನಾಯಿಸುವಾಗ ಚುನಾವಣೆಗೆ ನಿಲ್ಲುವವನನ್ನು **ಧರ್ಮ, ಅರ್ಥ, ಕಾಮ, ಭಯ** ಮೊದಲಾದ ಉಪಾಧಿಯಿಂದ ಪರೀಕ್ಷಿಸಿ ಅನಂತರು ಚುನಾಯಿಸಬೇಕು.

ಕೌಟಿಲ್ಯನು ರಾಜನ ದೈನಂದಿನ ಕಾರ್ಯಕ್ರಮಗಳನ್ನು ಬಹು ಸುಂದರವಾಗಿ ವಿವರಿಸಿದ್ದಾನೆ. ರಾಜನು ಕೇವಲ ಸುಖ ವಿಲಾಸಗಳಲ್ಲಿ ಮುಳುಗದೇ ದಿನದ ಸಮಯವನ್ನು ಒಟ್ಟು ೧೬ ಭಾಗಗಳನ್ನಾಗಿ ವಿಂಗಡಿಸಿ ಅದರಲ್ಲಿ ದಿನದ ಚಟುವಟಿಕೆಯನ್ನು ವಿವರಿಸಿದ್ದಾನೆ. ಇಂದಿನ ಜನತಾದರ್ಶನವೇ ಮೊದಲಾದ ಕಾರ್ಯದ ಮಹತ್ವವನ್ನು ಕೌಟಿಲ್ಯನು ಅಂದೇ ಕಂಡುಕೊಂಡಿದ್ದಾನೆ. ಒಟ್ಟಿನಲ್ಲಿ ರಾಜನಾದವನು-

ಪ್ರಜಾಸುಖೇ ಸುಖಂ ರಾಜ್ಞಃ ಪ್ರಜಾನಾಂ ಚ ಹಿತೇ ಹಿತಂ ।
ನಾತ್ಮಪ್ರಿಯಂ ಹಿತಂ ರಾಜ್ಞಃ ಪ್ರಜಾನಾಂ ತು ಪ್ರಿಯಂ ಹಿತಂ ॥[3]

ಎಂಬುದಾಗಿ ಪ್ರಜೆಗಳ ಸಂತೋಷವೇ ತನ್ನ ಸಂತೋಷ ಎಂದು ತಿಳಿಯಬೇಕು ಎಂಬ ಉದಾತ್ತ ವಿಚಾರವನ್ನು ಕೌಟಿಲ್ಯನು ವಿವರಿಸಿದ್ದಾನೆ.

ಜಗತ್ತಿನಲ್ಲಿ ಜನಿಸಿರುವ ಪ್ರತಿಯೊಂದು ಜೀವಿಯೂ ಆಹಾರ ಸ್ವೀಕರಣೆಯಿಂದ ಮಾತ್ರ ಬದುಕಲು ಸಾಧ್ಯ. ಸರಿಯಾಗಿಲ್ಲದ ಆಹಾರ ಸ್ವೀಕರಣೆ ಇಲ್ಲದಿದ್ದರೆ ರೋಗ-ರುಜಿನಗಳು ನಮ್ಮನ್ನಾಶ್ರಯಿಸಬಹುದು. **ಶರೀರಮಾದ್ಯಂ ಖಲು ಧರ್ಮಸಾಧನಂ** ಎಂಬಂತೆ ನಮ್ಮ ಶರೀರ ಆರೋಗ್ಯವಾಗಿದ್ದರೆ ಮಾತ್ರ ನಮ್ಮ ಮನಸ್ಸೂ ಆರೋಗ್ಯದಿಂದಿರಬಹುದು. ಯಾವುದು ಕೃಷಿಪ್ರಧಾನವಾದ ದೇಶವೋ ಅಲ್ಲಿ ಕೃಷಿಕ್ರಾಂತಿಯಿಂದ ದೇಶವನ್ನು ಸಂಪದ್ಭರಿತ ಗೊಳಿಸಬಹುದು. ಪಾಶ್ಚಾತ್ಯರ ಕೃಷಿಕ್ರಾಂತಿಯನ್ನು ನಮ್ಮದೇಶದಲ್ಲಿ ಅತಿಯಾಗಿ ಅಳವಡಿಸಿಕೊಂಡ ಪರಿಣಾಮವಾಗಿ ಇಂದು ನಾವು ರಾಸಾಯನಿಕ ಗೊಬ್ಬರ ಇತ್ಯಾದಿಗಳಿಲ್ಲದೇ ಬೆಳೆಯನ್ನು ಬೆಳೆಯುವುದನ್ನು ಮರೆತುಬಿಟ್ಟಿದ್ದೇವೆ. ಆದ್ದರಿಂದ ಅನಿವಾರ್ಯವಾಗಿ ನಾವು ಪ್ರಾಚೀನ ಭಾರತೀಯ ಕೃಷಿಪದ್ಧತಿಯನ್ನು ಆಶ್ರಯಿಸಲೇ ಬೇಕಾಗಿದೆ. ಕೌಟಿಲ್ಯನು ವ್ಯಯಸಾಯ ಯೋಗ್ಯ ಭೂಮಿ ಯಾವುದು, ಮಳೆ, ನೀರಿನ ಪ್ರಮಾಣ ಎಷ್ಟಿರಬೇಕು ಎಂಬುದನ್ನು ಅರ್ಥಶಾಸ್ತ್ರದ ಎರಡನೇ ಅಧಿಕರಣದಲ್ಲಿ ವಿಶದಪಡಿಸಿದ್ದಾನೆ. ಆಯಾ ಮಣ್ಣಿಗನುಗುಣವಾಗಿ ಅಲ್ಲಿ

ಬೆಳೆಯನ್ನು ಬೆಳೆಯಬೇಕು. ಅಲ್ಲದೇ ಕಾಲಾನುಸಾರವಾಗಿ ಬೀಳೆಯುವ ಬೆಳೆಗಳಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕು. ಮಳೆಯ ಪ್ರಮಾಣವನ್ನು ಹೇಳುತ್ತಾ– ಮಳೆಯ ಆಳತೆಗಾಗಿ ನಿರ್ಮಿತವಾದ ಮಡಿಕೆಯಲ್ಲಿ ಬಿದ್ದ ಮಳೆಯ ನೀರು ಹದಿನಾರು ದ್ರೋಣದಷ್ಟಿದ್ದರೆ ಮರಳಿನ ಭೂಭಾಗವೂ ಸಸ್ಯೋತ್ಪತ್ತಿಗೆ ಸಮರ್ಥವಾಗಿರುತ್ತದೆ ಎಂದಿದ್ದಾನೆ. ಭತ್ತ, ಎಳ್ಳು, ನವಣೆ ಮೊದಲಾದವುಗಳನ್ನು ಮಳೆಗಾಲದ ಆರಂಭದಲ್ಲೂ, ಹೆಸರು, ಉದ್ದು, ಮೊದಲಾದವುಗಳನ್ನು ಮಧ್ಯದಲ್ಲೂ, ಕಡಲೆ, ಹುರುಳಿ, ಗೋಧಿ ಮೊದಲಾದವುಗಳನ್ನು ಅಂತ್ಯದಲ್ಲಿ ಬಿತ್ತನೆ ಮಾಡಬೇಕು. ಕೀಟಬಾಧೆ ನಿವಾರಣೆಗಾಗಿ ಇಂದು ನಾವು ಬಳಸುವ ರಾಸಾಯನಿಕಕ್ಕೆ ಬದಲಾಗಿ ಅನೇಕ ಉಪಾಯಗಳು ಹೇಳಲ್ಪಟ್ಟಿವೆ. ಕಬ್ಬನ್ನು ಬಿತ್ತುವಾಗ ಜೇನು, ತುಪ್ಪ, ಹಂದಿಯ ಕೊಬ್ಬುಗಳನ್ನು ಹಸುವಿನ ಸಗಣಿಯೊಡನೆ ಬೆರೆಸಿ ಕತ್ತರಿಸಿದ ಕಬ್ಬಿನ ಭಾಗಕ್ಕೆ ಹಚ್ಚಬೇಕು, ಹೀಗೆ ಹಲವಾರು ಉಪಾಯಗಳನ್ನು ಹೇಳಿದ್ದಾನೆ. ಅಲ್ಲದೇ ಬೆಳೆದ ಬೆಳೆಯನ್ನು ಸಂಗ್ರಹಿಸುವುದಕ್ಕೂ ಸಲಹೆಯನ್ನಿತ್ತಿದ್ದಾನೆ.

ವ್ಯವಸಾಯ ಯೋಗ್ಯವಲ್ಲದ ಭೂಮಿಯಲ್ಲಿ ನಾವು ಹೊಸ ಹೊಸ ಜನವಸತಿ ನಿಲಯಗಳೂ, ಪರಿಸರಕ್ಕೆ ಮಾರಕವಾದ ಕೆಲವೊಂದು ಉದ್ಯಮಗಳೂ ಸ್ಥಾಪನೆಯಾಗಿರುವುದನ್ನು ನೋಡುತ್ತೇವೆ. ಆದರೆ ಕೌಟಿಲ್ಯನು ಪರಿಸರ ರಕ್ಷಣೆಗಾಗಿ ಮತ್ತು ಭೂಮಿಯ ಸಮತೋಲನಕ್ಕಾಗಿ ಅಲ್ಲಿ ಗೋಮಾಳ, ತಪೋವನ, ಹೂದೋಟ, ಔಷಧಿ ಸಸ್ಯಗಳ ವನ ಇತ್ಯಾದಿಗಳನ್ನು ನಿರ್ಮಿಸಬೇಕೆನ್ನುತ್ತಾನೆ. ಅಲ್ಲದೇ ಇಂದಿನ ಬಹುದೊಡ್ಡ ಸಮಸ್ಯೆಗಳಲ್ಲಿ ಒಂದಾದ ಕಾಡಾನೆಗಳ ಹಾವಳಿಯನ್ನು ತಡೆಗಟ್ಟಿ ಅವುಗಳ ರಕ್ಷಣೆಗಾಗಿ ಪ್ರತ್ಯೇಕವಾದ ಗಜವನವನ್ನೇ ನಿರ್ಮಿಸಬೇಕು ಎಂದು ಅರ್ಥಶಾಸ್ತ್ರದ ಎರಡನೇ ಅಧಿಕರಣದಲ್ಲಿ ಸ್ಪಷ್ಟಪಡಿಸಿದ್ದಾನೆ. ಇಲ್ಲಿಯೇ ಕಂದಾಯ ವಿಧಾನ ಮತ್ತು ವಸೂಲಿಯ ಬಗ್ಗೆ ಅತ್ಯಂತ ಸುಲಭವಾಗಿ ತಿಳಿಸಿದ್ದಾನೆ. **ದುರ್ಗ, ರಾಷ್ಟ್ರ, ಗಣಿ, ಸೇತು, ಕಾಡು, ಪಶುಸಮೂಹ, ಮತ್ತು ಸಂಚಾರಮಾರ್ಗಗಳಿಂದ** ಕಂದಾಯವನ್ನು ಸ್ವೀಕರಿಸಬೇಕು, ಇವೇ ದೇಶದ ಆಸ್ತಿ ಎಂದಿದ್ದಾನೆ. ಜಮೀನು, ಜೂಜು, ನಟರು, ಮನೆ ಮೊದಲಾದವುಗಳು ದುರ್ಗದಲ್ಲಿ ಸೇರಿಕೊಂಡಿವೆ. ವ್ಯಾಪಾರಿ, ಕೃಷಿ, ಮೊದಲಾದವುಗಳು ರಾಷ್ಟ್ರ ದಲ್ಲಿ ಸೇರಿದರೆ, ಚಿನ್ನ, ಬೆಳ್ಳಿ ಲೋಹ ಮೊದಲಾದವುಗಳು ಗಣಿಗಳು. ಹಣ್ಣಿನತೋಟ, ಕಬ್ಬು ಮೊದಲಾದವುಗಳು ಸೇತು. ಕಾಡುಗಳಿಂದ ಬರುವವು ವನಗಳೆನಿಸಿಕೊಳ್ಳುತ್ತವೆ. ಹಸು, ಎಮ್ಮೆ ಮೊದಲಾದವುಗಳಿಂದ ಪ್ರಾಪ್ತವಾದದ್ದು ವಜ್ರ. ಮಾರ್ಗದಿಂದ ದೊರೆತ ಆದಾಯ ವಣಿಕ್ಪಥವಾಗಿದೆ. ಹೀಗೆ ದೊರೆತ ಹಣವನ್ನು **ನಿತ್ಯ, ನಿತ್ಯೋತ್ಪಾದಿಕ, ಲಾಭ, ಲಾಭೋತ್ಪಾದಿಕ** ಎಂಬುದಾದಾಗಿ ವ್ಯಯಮಾಡಬೇಕು ಎನ್ನುತ್ತಾನೆ. ಇದೇ ಅಧಿಕರಣದಲ್ಲಿ ಸರಕು ಸಾಗಾಣಿಕೆಗಳ ಸುಂಕವನ್ನು ವಿವರಿಸಿ ನಾಶಗೊಳಿಸಬೇಕಾದ, ದೇಶಾಂತರದಿಂದ ತರಬಾರದ ವಸ್ತುಗಳು–

ರಾಷ್ಟ್ರಪೀಡಾಕರಂ ಭಾಡಮುಚ್ಛಿಂದ್ಯಾದಫಲಂ ಚ ಯತ್ ।[4]

ಎಂದು ರಾಷ್ಟ್ರಪೀಡೆಗೆ ಕಾರಣವಾದ, ಡ್ರಗ್ಸ್, ಮದ್ಯ ಮೊದಲಾದವುಗಳನ್ನು ಹೇಳುತ್ತಾನೆ. ಗೋವುಗಳ ಕುರಿತಾಗಿ ವಿವರಿಸುತ್ತಾ ಹಸುಗಳನ್ನು ಕೊಲ್ಲುವವನೂ, ಕೊಲ್ಲಿಸುವವನೂ, ಕದ್ದೊಯ್ಯುವಂತೆ ಪ್ರೇರೇಪಿಸುವ ವನೂ ವಧಾರ್ಹರು ಎಂದಿದ್ದಾನೆ. ಹಾಗೆಯೇ ಕಾರಣವಿಲ್ಲದೆ ಮಧ್ಯರಾತ್ರಿ ಯಲ್ಲಿ ಸಂಚರಿಸುವವನಿಗೆ ದಂಡವನ್ನು ವಿಧಿಸಬೇಕು ಹಾಗೂ ಪ್ರಸವಕಾಲ ದಲ್ಲಿ ನೆರವು ಕೊಡಲಿಕ್ಕೆ, ರೋಗಿಗಳಿಗೆ ಚಿಕಿತ್ಸೆ ನಡೆಸಲು, ಹೆಣವನ್ನು ಹೊರಲು, ನಾಟಕಾದಿಗಳನ್ನು ನೋಡಲು ಹೋಗುವವನನ್ನು ಹೀಗೆ ಮೊದಲಾದವರು ದಂಡಕ್ಕೆ ಅರ್ಹರಾಗುವುದಿಲ್ಲ.

ಹಾಗೆಯೇ ಪ್ರಾಣಗಳಿಗೆ ಸಂಚಕಾರ ತರುತ್ತದೆ ಎಂದು ಪೂರ್ವದಲ್ಲಿ ತಿಳಿಸದೇ ರೋಗಕ್ಕೆ ಚಿಕಿತ್ಸೆ ನೀಡುವ ವೈದ್ಯನಿಗೆ ರೋಗಿಯು ಸತ್ತರೆ ದಂಡವು. ಜೊತೆಗೆ ಬೇರೆಯವರಿಗೆ ಹೊಡೆಯಲು ಉದ್ಯುಕ್ತನಾದರೂ, ಹೊಡೆದರೂ, ಮನುಷ್ಯರನ್ನು ಇನ್ಯಾವುದೋ ರೀತಿಯಲ್ಲಾದರೂ ಹಿಂಸಿಸಿದರೆ, ಹೂವು–ಹಣ್ಣುಗಳನ್ನು ನೀಡುವ ವೃಕ್ಷಚ್ಛೇದನ ಮಾಡಿದರೂ ಅವರು ದಂಡಕ್ಕೆ ಅರ್ಹರು. ಇಂದು ಚಾಲ್ತಿಯಲ್ಲಿರುವ ಗ್ರಾಹಕ ನ್ಯಾಯಾಲಯದ ಪರಿಕಲ್ಪನೆಯು ಅಂದೇ ವ್ಯವಸ್ಥಿತವಾಗಿತ್ತೆಂದು ತೋರುತ್ತದೆ. ವ್ಯಾಪಾರದಲ್ಲಿಯೂ ನಿಕೃಷ್ಟವಾದ ಮರ, ಲೋಹ, ಮೊದಲಾದ ವಸ್ತುಗಳನ್ನು ಶ್ರೇಷ್ಠವಾದುದೆಂದು ಹೇಳಿ ಒತ್ತೆ ಇಡುವುದು ಮಾರುವುದು ಮುಂತಾದವುಗಳನ್ನು ಮಾಡಿದವನಿಗೆ ಆ ವಸ್ತುವಿನ ಎಂಟು ಪಟ್ಟು ದಂಡವನ್ನು ವಿಧಿಸಲಾಗುತ್ತಿತ್ತು. ಇದರಿಂದ ಇಂದು ಚಾಲ್ತಿಯಲ್ಲಿರುವ ಗ್ರಾಹಕ ನ್ಯಾಯಾಲಯದ ಪರಿಕಲ್ಪನೆಯು ಅಂದೇ ವ್ಯವಸ್ಥಿತವಾಗಿತ್ತೆಂದು ತೋರುತ್ತದೆ. ಅಲ್ಲದೇ ಭ್ರಷ್ಟಾಚಾರ ಲಂಚಕೋರರ ಬಗ್ಗೆ ಕೌಟಿಲ್ಯನು ಎಷ್ಟು ಕಠೋರನಗಿದ್ದನೆಂದರೆ ಅವರ ಹಣವನ್ನು ಕಿತ್ತುಕೊಂಡು ತಕ್ಷಣವೇ ಅವರನ್ನು ಗಡಿಪಾರು ಮಾಡಬೇಕೆನ್ನುತ್ತಾನೆ. ಅತ್ಯಾಚಾರಿಗಳಿಗೂ ಅವರ ಮರ್ಮಾಂಗವನ್ನು ಕತ್ತರಿಸುವ, ಸಾಯಿಸುವಂತಹ ಶಿಕ್ಷೆಗಳನ್ನೇ ಹೇಳಿದ್ದಾನೆ[5]. ಹೀಗೆ ಅನೇಕ ವಿಧವಾದ ದಂಡ ಗಳನ್ನು ಇಂದಿನ ಸಮಾಜಕ್ಕೂ ಅನ್ವಯವಾಗುವಂತೆ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ವಿಧಿಸಿದ್ದಾನೆ. ಆದರೆ ದಾನಶೀಲರೂ, ತಪಸ್ವಿಜನರೂ, ಹಸಿವುಬಾಯಾರಿಕೆಗಳಿಂದ ಬಳಲಿದವರಿಗೆ ದಂಡದಿಂದ ವಿನಾಯ್ತಿ ನೀಡಬೇಕೆನ್ನುತ್ತಾನೆ. ಅಲ್ಲದೇ ಹೆಂಗಸು, ಮುದುಕ, ರೋಗಿ, ಅನಾಥ ಮೊದಲಾದವರ ಕಾರ್ಯವನ್ನು ನ್ಯಾಯಾಲಯದಲ್ಲಿ ಬೇರೆಯವರು ವಹಿಸಿಕೊಂಡು ನಿರ್ವಹಿಸಬೇಕು ಎಂದು ಇಂದಿನ ವಕೀಲರನ್ನು ನೇಮಿಸಿಕೊಳ್ಳುವ ಪರಂಪರೆಯನ್ನು ಅಂದೇ ಕೌಟಿಲ್ಯನು ವಿವರಿಸಿದ್ದಾನೆ. ಇದರ ನಡುವೆ ಇಂದಿನ ಸಮಾಜದಲ್ಲಿ ಸತಿ–ಪತಿಯರ ನಡುವೆ ವಿವಾಹ ವಿಚ್ಛೇದನದ ಪ್ರಕರಣಗಳು ಅಧಿಕವಾಗಿದೆ. ಆ ವಿಚಾರದಲ್ಲಿಯೂ ಕೌಟಿಲ್ಯನು–

ನೀಚತ್ವಂ ಪರದೇಶಂ ವಾ ಪ್ರಸ್ಥಿತೋ ರಾಜಕಿಲ್ಬಿಷೇ ।
ಪ್ರಾಣಾಭಿಹಂತಾ ಪತಿತಃ ತ್ಯಾಜ್ಯಃ ಕ್ಲೀಬೋಽಪಿ ವಾ ಪತಿಃ ॥[6]

ಎಂದು ಹೇಳಿದ್ದಾನೆ. ಅಂದರೆ ನೀಚತ್ವ, ಷಂಡತ್ವ; ಮೊದಲಾದ ದುರ್ಗುಣಗಳನ್ನು ಹೊಂದಿರುವ ಪುರುಷನನ್ನು ಸ್ತ್ರೀಯು ಬಿಡಬಹುದು ಎಂಬುದಾಗಿ.

ಇಂದು ಸತ್ತ ನಂತರ ಮಾಡುವ ಶವಪರೀಕ್ಷೆ (ಪೋಷ್ಟಮಾರ್ಟಂ) ನ್ನು ಕೌಟಿಲ್ಯನು ಬಹಳ ಸ್ಪಷ್ಟವಾಗಿ ವಿವರಿಸಿದಾನೆ. ಯಾವ ಯಾವ ಕಾರಣದಿಂದ ವ್ಯಕ್ತಿಯು ಮರಣ ಹೋದಿರಬಹುದೆಂಬುದನ್ನು ಹಲವಾರು ಪರೀಕ್ಷೆಗಳ ಮೂಲಕ ತಿಳಿಯಬಹುದಾಗಿದೆ. ಹಾಗೆಯೇ ಅವನ ಮರಣಕ್ಕೆ ಕಾರಣನಾದವನನ್ನು ಪತ್ತೆ ಹಚ್ಚಲು ವಿಧಾನವೂ ಹೇಳಲ್ಪಟ್ಟಿದೆ. ಮೃತನ ದೇಹದ ಮೇಲಿರುವ ಎಲ್ಲಾ ವಸ್ತುಗಳನ್ನು ಕೂಲಂಕುಶವಾಗಿ ಪರಿಶೀಲಿಸಿ–

ಅನುಯುಂಜೀತ ಸಂಯೋಗಂ ನಿವಾಸಂ ವಾಸಕಾರಣಂ ।
ಕರ್ಮ ಚ ವ್ಯವಹಾರಂ ಚ ತತೋ ಮಾರ್ಗೇಣಮಾಚರೇತ್ ॥[7]

ಯಾರೊಡನೆ ಸ್ನೇಹವಿತ್ತು? ಅವನ ವೃತ್ತಿ ಯಾವುದು? ಅವನ ವ್ಯವಹಾರವೇನು? ಎಂಬುದನ್ನು ವಿಚಾರಿಸಿ ತದನಂತರ ಕೊಲೆಗಾರನನ್ನು ಹುಡುಕಬೇಕು ಎಂದಿದ್ದಾನೆ. ಹೀಗೆ ಕೌಟಿಲ್ಯನು ಎಲ್ಲಾ ಕಾಲಕ್ಕೂ ಎಲ್ಲಾ ದೇಶಕ್ಕೂ ಅನ್ವಯವಾಗುವಂತಹ ನ್ಯಾಯಗಳ ಕ್ರಮವನ್ನು ತನ್ನ ಗ್ರಂಥದಲ್ಲಿ ವಿಸ್ತಾರವಾಗಿ ವಿವರಿಸಿದ್ದಾನೆ.

ನಾವಿಂದು ದೇಶದ ಸಂಪತ್ತೆಂದರೆ ವಿದೇಶಗಳಿಂದ ಹಣ ಹರಿದುಬಂದು,

ಹಲವಾರು ಉದ್ದಿಮೆಗಳು ಸ್ಥಾಪನೆಯಾಗಿ, ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸಿ ವಾಸಮಾಡುವುದೆಂದು ತಿಳಿದಿದ್ದೇವೆ. ಆಲ್ಲದೇ ಆಹಾರ ಉತ್ಪಾದನೆಯಲ್ಲಿ ಅತಿಯಾದ ರಾಸಾಯನಿಕವನ್ನು ಬಳಸುತ್ತಿದ್ದೇವೆ. ಕಾಡು ಗಳನ್ನು ಕಡಿದು ವಾಸಯೋಗ್ಯವಾಗುವಂತೆ ಮಾಡುತ್ತಿದ್ದೇವೆ. ಹಲವಾರು ವರ್ಷಗಳಿಂದ ನೀರುಣಿಸುತ್ತಿದ್ದ ಕೆರೆ-ಬಾವಿ ಹಳ್ಳ-ಕೊಳ್ಳಗಳನ್ನು ಸ್ವಾರ್ಥಕ್ಕಾಗಿ ಬರಿದುಮಾಡುತ್ತಿದ್ದೇವೆ. ಸಮೃದ್ಧವಾಗಿ ಹರಿಯುತ್ತಿದ್ದ ನದಿ-ಸರೋವರಗಳಲ್ಲಿ ಮಾಲಿನ್ಯವನ್ನು ತುಂಬಿ ಕುಡಿಯುವ ನೀರನ್ನೂ ಕಲಿಷಿತಗೊಳಿಸುತ್ತಿದ್ದೇವೆ. ದುಡಿದು ತಿನ್ನುವ ಜನರನ್ನು ಸೋಮಾರಿಗಳನ್ನಾಗಿಸುತ್ತಿದ್ದೇವೆ. ಇವೆಲ್ಲವು ದೇಶದ ಸಂಪತ್ತನ್ನು ವೃದ್ಧಿಸುವಲ್ಲಿ ವಿಫಲವಾಗುತ್ತವೆ. ಆದರೆ ಕೌಟಿಲ್ಯನು ಅರ್ಥಶಾಸ್ತ್ರದ ಆರನೇ ಅಧಿಕರಣದಲ್ಲಿ ದೇಶದ ಗುಣಸಮೃದ್ಧಿ ಯಾವುದೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಜನರಿಗೆ ಊಟಕ್ಕೆ ಸಾಕಷ್ಟು ಧಾನ್ಯಸಂಪತ್ತನ್ನು ಪಡೆಯುವುದು, ಗಿಡ, ಔಷಧಿ ಲತೆ, ನದೀ, ಸರೋವರ, ಕೆರೆ, ತೋಟಗಳೇ ವೊದಲಾದ ರಮ್ಯವೂ ಪ್ರೇಕ್ಷಣೀಯವೂ ಆದ ಪ್ರದೇಶವನ್ನು ಹೊಂದಿರುವುದು, ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನೂ, ಗಣಿಗಳನ್ನೂ, ಮರಗಳಿಂದ ಭರಿತವಾದ ಕಾಡನ್ನೂ, ಗೋವುಗಳನ್ನೂ, ಕುರಿ-ಆಡು ವೊದಲಾದ ಪ್ರಾಣಿಸಂಪತ್ತನ್ನು ಹೊಂದಿರುವುದು, ಜನಸಾಮಾನ್ಯ ವಸ್ತುಗಳ ಬೆಲೆಗಳು ಕಡಿಮೆಯಾಗಿದ್ದೂ, ಜನರ ಯೋಗ್ಯತೆ ಗನುಸಾರವಾಗಿ ಕಂದಾಯ ವಸೂಲಿ ಮಾಡುವುದು, ಪ್ರತಿಯೊಬ್ಬರೂ ತಮ್ಮ ತಮ್ಮ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗುವ ಸಾಮರ್ಥ್ಯವನ್ನು ಹೊಂದಿರುವ ಬುದ್ಧಿವಂತ ಜನರನ್ನು ಹೊಂದಿರುವ ದೇಶವನ್ನು ಗುಣಸಮೃದ್ಧಿಯುಳ್ಳ ದೇಶ ಎಂದು ಕರೆದಿದ್ದಾನೆ. ಸುತ್ತಲೂ ಶತ್ರುರಾಜ್ಯಗಳಿದ್ದಾಗ ವಿದೇಶಾಂಗ ನೀತಿಯ ಕುರಿತಾಗಿ-

ಪ್ರಿಯೋ ಯಸ್ಯ ಭವೇದ್ಯೋವಾऽಪ್ರಿಯೋऽಸ್ಯ ಕತರಸ್ತಯೋಃ ।
ಪ್ರಿಯೋ ಯಸ್ಯ ಸ ತಂ ಗಚ್ಛೇದಿತ್ಯಾಶ್ರಯಗತಿಃ ಪರಾ ॥[8]

ಯಾರು ಯಾರಿಗೆ ಪ್ರೀತಿಪಾತ್ರನಾಗುವನೋ ಇಬ್ಬರಲ್ಲಿ ಯಾರು ಯಾರಿಗೆ ಅಪ್ರಿಯನಾಗುವನೋ ನೋಡಿಕೊಂಡು ಯಾರು ಪ್ರಿಯನೋ ಅವನನ್ನು ಆಶ್ರಯಿಸಬೇಕು ಎಂದು ಹೇಳಿದ್ದಾನೆ. ಜೊತೆ ಜೊತೆಗೆ ಕೇವಲ ಹೊರಗಿನ ಶತ್ರುಗಳಲ್ಲದೇ ಒಳಗಿನ ಶತ್ರುಗಳ ಬಗೆಗೂ ಎಚ್ಚರಿಕೆಯಿಂದಿರಬೇಕು. ಸರ್ಪಭಯದಂತೆ ಒಳಶತ್ರುಗಳ ಪ್ರಕೋಪದಿಂದುಂಟಾಗುವ ಭಯವು ಹೊರಶತ್ರುಗಳ ಭಯಕ್ಕಿಂತ ಹೆಚ್ಚು ಭಯಾನಕವಾದದ್ದು[9] ಎಂದಿದ್ದಾನೆ.

ನಮ್ಮ ದೇಶವನ್ನು ಅತ್ಯಂತವಾಗಿ ಕಾಡುವ ಸಮಸ್ಯೆಯೆಂದರೆ ವ್ಯಸನಗಳು. ಮನುಷ್ಯನು ಕ್ಷಣಿಕ ಸುಖಕ್ಕೋಸ್ಕರ ಧರ್ಮಮಾರ್ಗವನ್ನು ಬಿಟ್ಟು ಅಧರ್ಮದ ಮಾರ್ಗವನ್ನು ಅನುಸರಿಸುತ್ತಿದ್ದಾನೆ. ಅದರ ಕುರಿತು ಎಂಟನೆಯ ಅಧಿಕರಣದಲ್ಲಿ ಪುರುಷನ ವ್ಯಸನಗಳೂ ಅದರ ಪರಿತ್ಯಾಗವೂ ಹೇಳಲ್ಪಟ್ಟಿದೆ. ವಿದ್ಯೆ ಮತ್ತು ವಿನಯಗಳಿಲ್ಲದಿರುವುದು ವ್ಯಸನಕ್ಕೆ ಪ್ರಧಾನವಾದ ಕಾರಣವಾಗಿದೆ. ಕೋಪ, ಕಠಿಣ ಮಾತು, ಬೇಟೆ, ಜೂಜು, ಸ್ತ್ರೀ, ಮದ್ಯ ಎಂಬುದಾಗಿ ಮುಖ್ಯವಾಗಿ ವ್ಯಸನಗಳನ್ನು ವಿಂಗಡಿಸಲಾಗಿದೆ. ಇವೆಲ್ಲವುಗಳೂ ಒಂದಕ್ಕಿಂತ ಒಂದು ಬಲಿಷ್ಠವಾದವುಗಳು, ಆದರೆ ಕೌಟಿಲ್ಯನು ಇವೆಲ್ಲವುದರಲ್ಲಿ ಮದ್ಯಪಾನವೇ ಅತ್ಯಂತ ಕೆಟ್ಟ ವ್ಯಸನವೆಂದು ಹೇಳುತ್ತಾನೆ. ಏಕೆಂದರೆ ಮದ್ಯಪಾನವು ವ್ಯಕ್ತಿಗೆ ಮಾನಸಿಕ ಅಸಮತೋಲನದಿಂದ ಸ್ವರಾಷ್ಟ್ರದ ಯೋಗಕ್ಷೇಮ ಚಿಂತನವನ್ನು ದುರ್ಬಲಗೊಳಿಸುತ್ತದೆ. ಆದ್ದರಿಂದ ಮದ್ಯಪಾನವನ್ನು ನಿಷೇಧಿಸಬೇಕೆನ್ನುತ್ತಾನೆ. ಮಹಾತ್ಮಾ ಗಾಂಧಿಯವರೂ ಕೂಡ **"ಬೆಂಕಿಯು ಮನೆಯನ್ನು ಸುಟ್ಟರೆ ಮದ್ಯಪಾನವು ಶರೀರವನ್ನೂ, ಆತ್ಮವನ್ನೂ ಸುಡುತ್ತದೆ"** ಎಂದು ಹೇಳಿದಾರೆ. ಆದಕ್ಕಾಗಿ **"ಆತ್ಮವಾನ್ ವ್ಯಸನಾರಂಭಂ ಕಾಮಂ ಕ್ರೋಧಂ ಚ ಪರಿತ್ಯಜೇತ್"** ಎಂಬುದಾಗಿ ಈ ಎಲ್ಲಾ ವ್ಯಸನಗಳಿಗೆ ಕಾರಣವಾದ ಕಾಮ-ಕ್ರೋಧವನ್ನು ತ್ಯಜಿಸಬೇಕೆಂದಿದ್ದಾನೆ.

ಒಂದು ದೇಶದಲ್ಲಿ ವಾಸಿಸುವ ಜನರು ಸದಾ ಸುಖಿಗಳಾಗಿಯೇ ಇರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಪ್ರಕೃತಿಸಹಜವಾದ ಕೆಲವೊಂದು ವಿಕೋಪಗಳಿಗೆ ಸಿಲುಕಲೇ ಬೇಕಾಗುತ್ತದೆ. ಕೆಲವು ಪ್ರಕೃತಿಸಹಜವಾದರೆ ಇನ್ನು ಕೆಲವು ಮಾನವನ ಸ್ವಯಂಕೃತ ಅಪರಾಧದಿಂದುಂಟಾಗುತ್ತದೆ. ಅವುಗಳೆಂದರೆ ಭೂಕಂಪ, ಅತಿವೃಷ್ಟಿ-ಅನಾವೃಷ್ಟಿ, ದುರ್ಭಿಕ್ಷೆ, ರೋಗ ವೊದಲಾದವುಗಳು. ಹೀಗೆ ವಿಕೋಪಗಳುಂಟಾದಾಗ ರಾಷ್ಟ್ರದ ಜನರೆಲ್ಲರೂ ಒಮ್ಮನಸ್ಸಿನಿಂದ ಪರಿಹಾರ್ಯ ಕಾರ್ಯದಲ್ಲಿ ತೊಡಗಬೇಕು, ರಾಜನಾದವನು-

ಪೀಡನಾನಾಮನುತ್ಪತ್ತೌ ಉತ್ಪನ್ನಾನಾಂ ಚ ವಾರಣೇ ।
ಯತೇತ ದೇಶವೃದ್ಧ್ಯರ್ಥಂ ನಾಶೇ ಚ ಸ್ತಂಭಸಂಗಯೋಃ ॥[10]

ಎಂಬುದಾಗಿ ದೇಶದ ಅಭಿವೃದ್ಧಿಗೋಸ್ಕರ ಪೀಡೆಗಳು ಸಂಭವಿಸದಂತೆ, ಅಕಸ್ಮಾತಾಗಿ ಸಂಭವಿಸಿದರೂ ನಿವಾರಿಸುವದಕ್ಕೆ ಪ್ರಯತ್ನಿಸಬೇಕು ಎಂದು ಕೌಟಿಲ್ಯನು ಹೇಳಿದ್ದಾನೆ.

ಉಪಸಂಹಾರ:- ಹೀಗೆ ಕೌಟಿಲ್ಯನು ತನ್ನ ಅರ್ಥಶಾಸ್ತ್ರವನ್ನು ಯಾವುದೋ ಒಂದು ದೇಶಕ್ಕೆ, ಕಾಲಕ್ಕೆ, ವರ್ಗಕ್ಕೆ ಅನ್ವಯವಾಗುವಂತಹ ವಿಷಯಗಳನ್ನು ಪ್ರಕಾಶಪಡಿಸದೇ ಸಾರ್ವಕಾಲಿಕವಾಗಿ ಎಲ್ಲರಿಗೂ ಉಪಯೋಗವಾಗುವಂತೆ ರಚಿಸಿದ್ದಾನೆ. ಇದರಲ್ಲಿ ಪ್ರತಿಪಾದಿತವಾದ ವಿಷಯಗಳ ಬಗ್ಗೆ ಸರಿಯಾದ ಅಧ್ಯಯನ ನಡೆಯಬೇಕು ಮತ್ತು ಅಧ್ಯಯನಕ್ಕೆ ಪ್ರೋತ್ಸಾಹ ದೊರೆಯಬೇಕು. ಇಂದಿನ ಶಿಕ್ಷಣ ಪದ್ಧತಿಯಲ್ಲಿ ಅರ್ಥಶಾಸ್ತ್ರದ ಹಲವಾರು ವಿಷಯಗಳನ್ನು ಸೇರಿಸುವ ಮೂಲಕ ಪ್ರತಿಯೊಬ್ಬ ಭಾರತೀಯನಿಗೂ ಈ ಗ್ರಂಥದ ಪರಿಚಯವನ್ನು ಮಾಡಿಕೊಡಬೇಕಾದ ಅನಿವಾರ್ಯತೆ ಇದೆ. ಭಾರತ ಇಂದು ವಿಶ್ವದಲ್ಲಿ ಗುರುತಿಸಿ ಕೊಳ್ಳುತ್ತಿರುವುದೇ ನಮ್ಮ ಸಂಸ್ಕೃತ-ಸಂಸ್ಕೃತಿಯಿಂದ ಮಾತ್ರ. ಆದರೆ ಆ ಸಂಸ್ಕೃತಿ ಪರರ ಆಕ್ರಮಣದಿಂದಲೋ, ಕೆಲವೊಂದಿಷ್ಟು ಸ್ವಾರ್ಥಿಗಳಿಂದ ಹಾಳಾಗಿದೆ. ನಮ್ಮ ದೇಶದಲ್ಲಿ ನೆರೆಯೂರಿದ್ದ ಕೆಲವು ಮೂಢನಂಬಿಕೆಗಳನ್ನು ಮುಂದಿಟ್ಟು ರಾಜಕೀಯ ಮಾಡುವವರೂ ಇದ್ದಾರೆ. ಆದ್ದರಿಂದ ಅವೆಲ್ಲವೂ ಸರಿಯಾಗಬೇಕಾದರೆ ನಮ್ಮ ಸಂಸ್ಕೃತಿಯ ಪ್ರತಿಬಿಂಬದಂತಿರುವ ಅರ್ಥಶಾಸ್ತ್ರದಂತಹ ಗ್ರಂಥಗಳ ಅಧ್ಯಯನ ನಡೆಯಬೇಕು. ತನ್ಮೂಲಕ ದೇಶ ಎಲ್ಲಾ ವಿಭಾಗದಲ್ಲೂ ಅಭಿವೃದ್ಧಿಯನ್ನು ಹೊಂದಬಹುದು. **"ಸಂತಃ ಪರೀಕ್ಷ್ಯಾನ್ಯತರದ್ಭಜಂತೆ"** ಎಂಬಂತೆ ಬುದ್ಧಿಜೀವಿಗಳು ವಿಚಾರಮಾಡುತ್ತಾರಲ್ಲವೇ?

1. ಅರ್ಥಶಾಸ್ತ್ರಂ ಅಧಿ.೧೫
2. ಅ.ಶಾ- ೧-೨-೩
3. ಅ.ಶಾ-೧-೧೯-೪೩
4. ಅ.ಶಾ ೨-೪೨-೯೬
5. ಅ.ಶಾ. ೪-೯೦ಅಧ್ಯಾಯ.
6. ಅ.ಶಾ ೩-೫೯-೧೩೧
7. ಅ.ಶಾ ೪-೮೪-೧೫೯
8. ಅ.ಶಾ ೭-೧೦೦-೧೯೮
9. ಅ.ಶಾ ೮-೧೧೮ಅಧ್ಯಾಯ
10. ಅ.ಶಾ. ೮-೧೨೦-೨೯೨

ಮೈಸೂರು ಸಂಸ್ಥಾನದ ರಚನಾತ್ಮಕ ಕಾರ್ಯಕ್ರಮ ಚಳುವಳಿಗಳು ಮತ್ತು ದಲಿತರು:

ಬಿಳಿಗಿರಿ. ಎನ್
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು

ಆಧುನಿಕ ಭಾರತ ಸ್ಥೂಲವಾಗಿ ಎರಡು ಬಗೆಯ ಆಡಳಿತಕ್ಕೆ ಒಳಪಟ್ಟಿತ್ತು. ಒಂದು ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿದ್ದರೆ, ಇನ್ನೊಂದು ದೇಶಿ ಸಂಸ್ಥಾನಗಳ ಆಡಳಿತಕ್ಕೆ ಒಳಪಟ್ಟಿತ್ತು. ಈ ದೇಶಿ ಸಂಸ್ಥಾನಗಳ ಸಂಖ್ಯೆ 565ಕ್ಕೂ ಮೀರಿತ್ತು. ಅವುಗಳಲ್ಲಿ ಮೈಸೂರು ಸಂಸ್ಥಾನದ ವಿಸ್ತೀರ್ಣದಲ್ಲಿ ಎರಡನೇ ದೊಡ್ಡ ಸಂಸ್ಥಾನ, 1799ರ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಸೋತು ಕೊಲ್ಲಲ್ಪಟ್ಟ ನಂತರ, ಆತನ ರಾಜ್ಯವನ್ನು ಹರಿದು ಹಂಚಿಕೊಳ್ಳಲಾಯಿತು. ಒಂದು ಭಾಗ ಬ್ರಿಟೀಷರಿಗೆ, ಇನ್ನೊಂದು ಭಾಗ ಹೈದರಾಬಾದ್ ನಿಜಾಮನ ಪಾಲಿಗೆ ಹೋದರೆ ಉಳಿದಿದ್ದನ್ನು, 1763ರ ನಂತರ ಮೂಲೆಗುಂಪಾಗಿದ್ದ ಮೈಸೂರು ಒಡೆಯರ ಮನೆತನಕ್ಕೆ ವಹಿಸಿಕೊಡಲಾಯಿತು. ಒಡೆಯರ ವಂಶದ ಈ ಪುನಶ್ಚೇತನ, ಬ್ರಿಟೀಷರು ಹೇರಿದ ಷರತ್ತುಗಳಿಗೆ ಒಳಪಟ್ಟಿತ್ತು. ಈ ರೀತಿಯಾಗಿ, ಅದು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಒಳ ಆಡಳಿತ ನಡೆಸಲಿಕ್ಕೆ ಮಾತ್ರ ಸೀಮಿತವಾಗಿತ್ತು. ಇದು 1947ರವರೆಗೂ ಅದು ಹಾಗೆಯೇ ಉಳಿಯಿತು, ಈ ರೀತಿ ದೇಶಿಯರ ಹಿಡಿತದಿಂದ ಪಾರಾಗಲು ನಡೆಸಿದ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರಿನ ಪಾತ್ರ ಮಹತ್ತರ ಮತ್ತು ಚರಿತಾರ್ಹವಾದುದು[1], ಇದರಲ್ಲಿ ಈ ಭಾಗದ ಸಾವಿರಾರು ಅನಕ್ಷರಸ್ಥರು, ಮುಗ್ದರು, ದಲಿತರನ್ನು ಒಳಗೊಂಡಂತೆ ಹಲವಾರು ಮಹಾನ್ ದೇಶಭಕ್ತರು ಪಾಲ್ಗೊಂಡು ತಮ್ಮ ತನು, ಮನ, ಪ್ರಾಣಗಳನ್ನು ಬಲಿದಾನ ಮಾಡಿ ಮೈಸೂರು ಸಂಸ್ಥಾನ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು[2].

ಮಹಾತ್ಮಗಾಂಧಿಜಿಯವರು ಕೈಗೊಂಡ ಚಳುವಳಿಯಲ್ಲಿ ದಲಿತರನ್ನು ಆಕರ್ಷಿಸಲು ಹಲವಾರು ಕಾರಣಗಳಿದ್ದವು. ಅದರಲ್ಲಿ ಸಾಮಾಜಿಕ ಸಮಸ್ಯೆಯನ್ನು ತೆಗೆದುಕೊಂಡು 1917ರ ಕಲ್ಕತ್ತಾ ಅಧಿವೇಶನದಲ್ಲಿ ಅಸ್ಪೃಶ್ಯರ ಏಳಿಗೆಯನ್ನು ತನ್ನ ಕಾರ್ಯಕ್ರಮದಲ್ಲಿ ಕಾಂಗ್ರೇಸ್ ಸೇರಿಸಿಕೊಂಡಿತ್ತು. ದೇವಾಲಯ ಪ್ರವೇಶ ಮತ್ತು ಅಸ್ಪೃಶ್ಯರ ಸಾಮಾಜಿಕ ಮತ್ತು ಧಾರ್ಮಿಕ ಹಿಂಸೆಗಳ ನಿವಾರಣೆಗೆ ಅವರು ಚಿಂತಿಸಿದರು. ಪೂನ ಒಪ್ಪಂದದ ನಂತರ ಅಸ್ಪೃಶ್ಯರ ಪ್ರಶ್ನೆಯನ್ನು ಕೈಗೆತ್ತಿಕೊಂಡರು. ಇದು ಸ್ವಾತಂತ್ರ್ಯ ಹೋರಾಟದೊಡನೆ ಬಿಡಿಸಲಾಗದ ಸಂಬಂಧ ಹೊಂದಿದ್ದಿತ್ತು. ಗಾಂಧೀಜಿಯವರ ವ್ಯಕ್ತಿತ್ವ ದಲಿತರನ್ನು ಆಕರ್ಷಿಸಲು ಅವರು ತಂದಂತಹ ಅಸ್ಪೃಶ್ಯರ ನಿವಾರಣೆಯನ್ನೊಳಗೊಂಡ ರಚನಾತ್ಮಕ ಕಾರ್ಯಕ್ರಮಗಳಿದ್ದವು. ಇದರಿಂದಾಗಿ ದಲಿತರಿಗೆ ಹೆಚ್ಚಿನ ವಿಶ್ವಾಸ ಮೂಡತೊಡಗಿತು[3]. ರಚನಾತ್ಮಕ ಕಾರ್ಯಕ್ರಮಗಳಾದ ಸ್ವದೇಶಿ ಚಳುವಳಿ, ಖಾದಿ ಮತ್ತು ಗ್ರಾಮದ್ಯೋಗ ಪ್ರಚಾರ, ಅಸ್ಪೃಶ್ಯ ವಿರೋಧಿ ಆಂದೋಲನ, ಪಾನ ನಿರೋಧ, ರಾಷ್ಟ್ರೀಯ ಶಿಕ್ಷಣ ಮತ್ತು ಗ್ರಾಮ ಸ್ವರಾಜ್ಯ ಮುಂತಾದ ಚಟುವಟಿಕೆಗಳಿಗೆ ಕಾಂಗ್ರೇಸ್ ಅನುಮತಿ ನೀಡಿತು. ಇದರಿಂದಾಗಿ ಮೈಸೂರು ಸಂಸ್ಥಾನದಲ್ಲಿಯೂ ಈ ರಚನಾತ್ಮಕ ಕಾರ್ಯಕ್ರಮಗಳು ಪ್ರಾರಂಭವಾದವು. ಈ ಚಳುವಳಿಯ ಪ್ರಯುಕ್ತ ವಿದೇಶಿ ವಸ್ತ್ರದಹನ, ಬ್ರಿಟಿಷ್ ಶಾಲಾ ಕಾಲೇಜುಗಳ ಬಹಿಷ್ಕಾರ, ಸರ್ಕಾರಿ ಕಛೇರಿಗಳ ಮುಂದೆ ಪಿಕೆಟಿಂಗ್ ಮುಂತಾದ ಚಟುವಟಿಕೆಗಳು ಭರದಿಂದ ನಡೆದವು. ಸತ್ಯ ಮತ್ತು ಅಹಿಂಸೆ ಮೂಲಕ ಸ್ವರಾಜ್ಯವನ್ನು ಸ್ಥಾಪಿಸುವ ಪಥವೇ ರಚನಾತ್ಮಕ ಕಾರ್ಯಕ್ರಮ ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. 1927ರಲ್ಲಿ ಗಾಂಧೀಜಿಯವರು ಖಾದಿ ಪ್ರಚಾರದ ನಿಮಿತ್ತವಾಗಿ ಮೈಸೂರು ಸಂಸ್ಥಾನದಾದ್ಯಂತ ಪ್ರವಾಸ ಕೈಗೊಂಡು ಹರಿಜನ ಕೇರಿಗಳಿಗೆ ಭೇಟಿ ನೀಡಿ ಅವರಿಗೆ ಸ್ವಚ್ಚತೆಯಿಂದ ಇರಬೇಕು, ಹೆಂಡ ಕುಡಿಯುವುದನ್ನು ನಿಲ್ಲಿಸಬೇಕು ಮತ್ತು ಬಾವಿ, ಕೆರೆ, ದೇವಾಸ್ಥಾನಗಳ ಪ್ರವೇಶ ಪಡೆಯುವುದಕ್ಕೆ ಐಕ್ಯತೆಯಿಂದ ಹೋರಾಟ ನಡೆಸಬೇಕು ಎಂದು ತಿಳಿಸಿದರು[4].

ದಲಿತ ವರ್ಗದ ನಾಯಕರು ಕಾಂಗ್ರೇಸ್ಸಿನ ಮತ್ತು ರಾಷ್ಟ್ರೀಯ ಚಳುವಳಿಯ ಕಡೆಗೆ ಆಕರ್ಷಿತರಾಗಲು ಗಾಂಧೀಜಿಯವರ ಪ್ರಾಮಾಣಿಕ ಪ್ರಯತ್ನ ಒಂದು ಕಾರಣವಾದರೆ, ಇನ್ನೊಂದು ಕಾರಣ ಬ್ರಿಟೀಷರು ಆಡಳಿತದಲ್ಲಿ ಹಸ್ತಕ್ಷೇಪ ಕಡಿಮೆ ಮಾಡಿದ್ದು. ದ್ವಿಆಡಳಿತ ಪದ್ಧತಿ ಜಾರಿಗೆ ಬಂದ ಮೇಲೆ ಸ್ಥಳೀಯ ಮಂಡಳಿಗಳಲ್ಲಾಗಲಿ ಅಥವಾ ಪ್ರಾಂತೀಯ ಆಡಳಿತದಲ್ಲಾಗಲಿ ಸ್ಥಳೀಯವಾದ ಪ್ರಬಲ ಪಕ್ಷಗಳು ಹಾಗೂ ವ್ಯಕ್ತಿಗಳು ಪ್ರಮುಖರಾದರು. ಭಾರತದ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಯನ್ನು ಮೀರಿ ಗಾಂಧಿ ವ್ಯಕ್ತಿತ್ವ ನಿಮ್ನ ವರ್ಗದವರನ್ನು ಆಕರ್ಷಿಸಿತು[5]. ಅದರ ಹಿನ್ನೆಲೆಗೆ ಗಾಂಧೀಜಿಯವರ ಅಸಹಕಾರ ಚಳುವಳಿ ಹಾಗೂ ಅಸ್ಪೃಶ್ಯತಾ ನಿವಾರಣೆಯನ್ನೊಳಗೊಂಡ ರಚನಾತ್ಮಕ ಕಾರ್ಯಕ್ರಮದಲ್ಲಿ ದಲಿತರಾದ ಸಿ.ಟಿ. ಹನುಮಂತಯ್ಯ ಕೋಡಿಹಳ್ಳಿ ಹರಿಜನ ಮಠದ ಅಧಿಕಾರಿಯಾಗಿ ನೇಮಿಸಲ್ಪಟ್ಟರು ಮತ್ತು ಗಾಂಧೀಜಿಯವರು 1934ರಲ್ಲಿ ತುಮಕೂರಿಗೆ ಬಂದಾಗ ಇವರನ್ನು ಮೈಸೂರು ಹನುಮಾನ್ ಎಂದು ಕರೆದು ಬಡವರ ಸೇವೆ ಮಾಡಲು ಹೇಳಿದರು ಹಾಗೂ 1942ರ ಚಳುವಳಿಯ ಪರ ಪ್ರಚಾರ ಭಾಷಣಗಳನ್ನು ಮಾಡಿ ಜೈಲುವಾಸ ಅನುಭವಿಸಿದರು. ಇವರಂತೆಯೇ ಟಿ.ಆರ್.ಚೆನ್ನಿಗರಾಮಯ್ಯರ ಜೊತೆಗೂಡಿ ಹರಿಜನರೊಂದಿಗೆ ದೇವಾಲಯ ಪ್ರವೇಶ ಮಾಡಿದರು. ಇವರ ಪ್ರಯತ್ನದಿಂದ ಮತ್ತು 1932ರಲ್ಲಿ ಗಾಂಧೀಜಿಯವರು ಹರಿಜನರ ಸಮಸ್ಯೆಯ ಬಗ್ಗೆ ಉಪವಾಸ ಕೈಗೊಂಡಾಗ ದೇವಾಲಯ ಪ್ರವೇಶ, ಸಹ ಪಂಕ್ತಿ ಭೋಜನ, ಪಾನ ನಿರೋಧ ಮುಂತಾದ ಆಂದೋಲನಗಳಲ್ಲಿ ದಿಟ್ಟತನದಿಂದ ದುಡಿದರು. ಆದಿಜಾಂಬವ ಹಾಸ್ಟೇಲ್ ಗಳನ್ನು ಸ್ಥಾಪಿಸಿದರು. ಹರಿಜನರನ್ನು ಸಂಘಟಿಸಿ ಪ್ರಜಾ ಸಂಖ್ಯೆಗೆ ಅನುಗುಣವಾಗಿ ಶಾಸನ ಸಭೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ನೀಡಬೇಕೆಂದು ಹೋರಾಟ ನಡೆಸಿದರು ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು ಮತ್ತು 1947ರಲ್ಲಿ ಕೆ.ಸಿ.ರೆಡ್ಡಿ ಸಂಪುಟದಲ್ಲಿ ಪ್ರಥಮ ಹರಿಜನ ಮಂತ್ರಿಯಾದರು[6]. ಇವರಂತೆಯೇ ದಲಿತ ನಾಯಕರಾದ ಹೆಚ್. ಎಂ. ಗಂಗಾಧರಯ್ಯರವರು ಗಾಂಧೀಜಿ ಮತ್ತು ಅಂಬೇಡ್ಕರ್ ಕೃತಿಗಳಿಂದ ಪ್ರಭಾವಿತರಾಗಿ ದಲಿತರ ಶಿಕ್ಷಣಕ್ಕೆ ಶ್ರಮಿಸಿ ಶಾಲಾ-ಕಾಲೇಜುಗಳನ್ನು ಹಾಗೂ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದರು. ದಲಿತರಿಗೆ ಕೃಷಿ ಭೂಮಿಗಳನ್ನು ದೊರಕಿಸಿಕೊಟ್ಟರು. ಗಾಂಧೀಜಿಯವರು ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದಾಗ ಗಂಗಾಧರಯ್ಯ ಊಟ ಬಡಿಸುತ್ತಾರೆ. ಇವರು ಗಾಂಧೀಜಿಯ ಪ್ರಭಾವದಿಂದಾಗಿ ಮಾಂಸಾಹಾರ

'ವನ್ನು ವರ್ಜಿಸಿ ಕೊನೆಯತನಕ ಸಸ್ಯಾಹಾರಿಯಾಗಿರುತ್ತಾರೆ. ಹೀಗೆ ಗಾಂಧೀಜಿಯವರ ಕಾರ್ಯಕ್ರಮದಡಿಯಲ್ಲಿ ಹರಿಜನರ ಅಭಿವೃದ್ಧಿ, ಶುಚಿತ್ವ, ನೈರ್ಮಲ್ಯ ಹಾಗೂ ಸಮಾನತೆ ಒದಗಿಸಿಕೊಡುವ ಪ್ರಯತ್ನ ಮಾಡಲಾಯಿತು ಹಾಗೂ ಗೋ–ಸಂರಕ್ಷಣಾ ಕಾರ್ಯಕ್ರಮದಲ್ಲಿ ತೊಡಗಿದರು[7].

ಟಿ.ಎ. ದಾಸಪ್ಪನವರು ಹರಿಜನೋದ್ಧಾರದ ಕೆಲಸದಲ್ಲಿ ತೊಡಗಿದ ರಚನಾತ್ಮಕ ಕಾರ್ಯಕ್ರಮಗಳ ನಿಷ್ಠಾವಂತ ಕಾರ್ಯಕರ್ತರು ಇವರು ಕೂಡ ಹರಿಜನರಲ್ಲಿ ಕೀಳು ಭಾವನೆಯನ್ನು ಹೋಗಲಾಡಿಸುವ ಪ್ರಯತ್ನ ಮಾಡಿದರು. ಹಾಗೂ ತಿಪಟೂರಿನಲ್ಲಿ 1973ರಲ್ಲಿ ಒಂದು ಗೋ–ಶಾಲೆಯನ್ನು ಸ್ಥಾಪಿಸಿ ಗೋ–ಸೇವಾ ಕಾರ್ಯದಲ್ಲಿ ತೊಡಗಿದರು. ಹೀಗೆ ಅನೇಕ ದಲಿತ ವರ್ಗದವರು ಇದರಲ್ಲಿ ಭಾಗವಹಿಸಿ ಗೋ–ಮಾಂಸವನ್ನು ತ್ಯಜಿಸಿದರು[8]. ಇದೇ ರೀತಿ ದಲಿತರಾದ ಆಂಜನಪ್ಪನವರು 1927ರಲ್ಲಿ ಗಾಂಧೀಜಿಯವರು ಮಧುಗಿರಿಗೆ ಬಂದಿದ್ದಾಗ ಅವರ ಭಾಷಣದಿಂದ ಪ್ರಭಾವಿತರಾದರು. ಇದೇ ಸಂಧರ್ಭದಲ್ಲಿ ಪಾನ–ನಿರೋಧ ಸಭೆಯ ಪ್ರಚಾರವನ್ನು ತಮಟೆ ಸಾರುವುದರ ಮೂಲಕ ತೊಡಗಿಸಿಕೊಂಡು ದಲಿತರಿಗಾಗಿ ದುಡಿದರು. ಪಾನ–ನಿರೋಧ ಸಮ್ಮೇಳನದಲ್ಲಿ ತಮಿಳುನಾಡಿನಲ್ಲಿ ನಡೆದಾಗ ಇವರು ಭಾಗವಹಿಸಿದರು ಮತ್ತು ಪಾನ–ನಿರೋಧವನ್ನು ಜಾರಿಗೆ ತರುವಂತೆ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರು[9].

ಹೀಗೆ ಇನ್ನು ಮುಂತಾದ ದಲಿತರಾದ ಡಿ. ಗೋವಿಂದದಾಸ್, ಚಿಕ್ಕಲಿಂಗಯ್ಯ, ಎಸ್.ಎಂ.ಸಿದ್ದಯ್ಯ ಮತ್ತು ನಿರ್ವಣಯ್ಯ ರಚನಾತ್ಮಕ ಕಾರ್ಯಕ್ರಮ ಚಳುವಳಿಯಲ್ಲಿ ಭಾಗವಹಿಸಿರುವುದನ್ನು ತೆರೆದಿಡಲು ನನ್ನ ಅಧ್ಯಯನ ಹೆಚ್ಚಿನ ಮಹತ್ವ ನೀಡಿದೆ. ಮೇಲಿನ ಎಲ್ಲಾ ಹೋರಾಟದ ಚಳುವಳಿಗಳಲ್ಲಿ ದಲಿತರು ಕಾಂಗ್ರೇಸ್ ಚಟುವಟಿಕೆಗಳನ್ನು ಬೆಂಬಲಿಸಿದರು. ಆದರೆ ಅಂತಹ ವ್ಯಕ್ತಿಗಳನ್ನು ಇಲ್ಲಿಯವರೆವಿಗೂ ಸ್ವಾತಂತ್ರ್ಯ ಚಳುವಳಿಯ ಇತಿಹಾಸ ಪುಟಗಳಲ್ಲಿ ದಾಖಲೆಯಾಗಿಲ್ಲ. ಅಂತಹವರನ್ನು ಸಂಶೋಧಿಸಿ ಸ್ವತಂತ್ರ ಹೋರಾಟಗಾರರೆಂದು ತೆರೆದಿಡುವ ಪ್ರಯತ್ನವಾಗಿದೆ.

ದಲಿತವರ್ಗಗಳು ರಾಷ್ಟ್ರೀಯ ಮುಖ್ಯ ಪ್ರವಾಹವನ್ನು ಪ್ರವೇಶಿಸಿ ತನ್ಮೂಲಕ ಸ್ವಾತಂತ್ರ್ಯ ಸಮರಕ್ಕೆ ಧುಮುಕುವ ಕ್ರಮವನ್ನು ವಿವರಿಸಲು ಹೆಚ್ಚಿನ ಮಹತ್ವ ನೀಡಿದೆ. ಹೀಗೆ ಹೋರಾಟದ ಬೇರೆ ಬೇರೆ ಪುಟಗಳಲ್ಲಿ ಈ ದಲಿತ ವರ್ಗಗಳು ಹೇಗೆ ರಾಷ್ಟ್ರೀಯತೆಯ ಕಡೆ ಆಕರ್ಷಿತವಾದವು ಎಂಬುದನ್ನು ಸಹ ಇಲ್ಲಿ ವಿಶ್ಲೇಷಿಸಲಾಗಿದೆ. ಹೀಗೆ ರಾಷ್ಟ್ರೀಯ ಚಳುವಳಿಯು ದಲಿತರ ಅಂತರಂಗದಲ್ಲಿ ಹುದುಗಿದ ಅಗಾಧವಾದ ಚೈತನ್ಯವನ್ನು ಹೊರಗೆ ತರಲು ಒಂದು ಅವಕಾಶ ಒದಗಿಸಿತ 'ನ್ನಬಹುದು[10].

ಅಡಿ ಟಿಪ್ಪಣಿಗಳು:

1) ಚಂದ್ರಶೇಖರ, ಎಸ್., "ವಸಾಹತುಕಾಲೀನ ಕರ್ನಾಟಕ", ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. 2006, ಪುಟ.81
2) ಮಹಾತ್ಮ ಗಾಂಧಿ: ಹಿಂದೂ ಸ್ವರಾಜ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು,1987.
3) ಅದೇ ಪುಟ. 506.
4) ನಾಗರತ್ನಮ್ಮ"ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ" ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. 2006, ಪುಟ.176
5) ಅದೇ ಪುಟ. 36.
6) ಸೂರ್ಯನಾಥ್ ಯು ಕಾಮತ್ ಸಂಪುಟ, "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು" ಗೀತಾ ಬುಕ್ ಹೌಸ್, ಮೈಸೂರು, 1977, ಪುಟ.479.
7) ದೇ.ಜ.ಗೌ, "ದೇವಮಾನ್ಯರು", ಮಹರ್ಷಿ ಪ್ರಕಾಶನ, ಮೈಸೂರು,2000, ಪುಟ.97-105.
8) ಕವಿತಾ ಕೃಷ್ಣ " ಸರ್ವೋದಯ ಕಿರಣ" ಟಿ.ಎ.ದಾಸಪ್ಪ" ರಾಕ್‌ಲೈನ್ ಪ್ರಕಾಶನ, ತುಮಕೂರು, 2001, ಪುಟ144.
9) ಅದೇ ಪುಟ. 129.
10) ಅದೇ ಪುಟ. 171.

ವಸಾಹತುಷಾಹೀ ದಕ್ಷಿಣ ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ: ಒಂದು ಅವಲೋಕನ

ಎಂ.ಜಿ ಪ್ರಮೋದ್
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ– ದ.ಕ.

ವಸಾಹತುಷಾಹಿತ್ವ ಎಂಬುದು ರಾಜಕೀಯ–ಆರ್ಥಿಕ ಅಂಶವಾಗಿದ್ದು ಪ್ರಮುಖವಾಗಿ ಯುರೋಪಿನ ರಾಷ್ಟ್ರಗಳು ಅನ್ವೇಷಿಸಿ, ಆಕ್ರಮಣನಡೆಸಿ, ಅಲ್ಲಿ ನೆಲೆನಿಂತು ಶೋಷಿಸುವ ಅಂಶವಾಗಿದೆ. ವಸಾಹತುಷಾಹೀ ಪರಿಕಲ್ಪನೆಯು 'ಅಭಿವೃದ್ಧಿ'ಯನ್ನು ಮಾನದಂಡವಾಗಿಸಿಕೊಂಡು ವಿಜ್ಞಾನ–ತಂತ್ರಜ್ಞಾನ ಅಥವಾ ಇನ್ನಾವುದನ್ನೋ ಬಳಸಿಕೊಂಡು ಅಲ್ಲಿನ ಇತಿಹಾಸ, ಸಂಸ್ಕೃತಿ, ವೇದ–ವಿಜ್ಞಾನಗಳನ್ನು ಉಪೇಕ್ಷಿಸಿ ತಮ್ಮತನದ ಹೇರಿಕೆ ಮತ್ತು ಅವಲಂಬನೆಯ ಪರಿಸ್ಥಿತಿಯ ಸೃಷ್ಟಿಮಾಡಿ (ಹೆಜಿಮನಿ ಅಥವಾ ಡೋಮಿನೇಷನ್) ಅಧಿಪತ್ಯ ನಡೆಸುವುದಾಗಿದೆ .

ಅವಿಭಜಿತ ದಕ್ಷಿಣಕನ್ನಡ ಎಂದು ಗುರುತಿಸಲ್ಪಡುವ ಪ್ರದೇಶವು ಪ್ರಸ್ತುತ ಆಧುನಿಕ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೇರಳ ರಾಜ್ಯದ ಕಾಸರಗೋಡನ್ನು ಒಳಗೊಂಡಿದ್ದಂತಹ ಪ್ರದೇಶವಾಗಿತ್ತು. ೧೭೯೯ರ ತರುವಾಯ ಹೈದರಾಲಿ, ಟಿಪ್ಪು ಸುಲ್ತಾನರ ಅವನತಿಯೊಂದಿಗೆ ವಸಾಹತುಷಾಹೀ ಹಿಡಿತಕ್ಕೊಳಪಟ್ಟ ದಕ್ಷಿಣಕನ್ನಡ ನಂತರ ಬ್ರಿಟೀಷ್ ಆಡಳಿತದ ಪ್ರಭಾವಕ್ಕೆ ನೇರವಾಗಿ ಒಳಗೊಂಡು ಬದಲಾವಣೆಗಳಿಗೆ ನಾಂದಿ ಹಾಡಿತು. ಪಾರಂಪರಿಕ ತಂತ್ರಜ್ಞಾನದ ಬದಲಿಗೆ ಆಧುನಿಕತೆಯನ್ನೊಳಗೊಂಡ ಸಾರಿಗೆ–ಸಂಪರ್ಕ, ಬಂದರು, ಆರೋಗ್ಯ ಸೇವೆಗಾಗಿ ಆಸ್ಪತ್ರೆ, ಮುದ್ರಣಾ ಮಾಧ್ಯಮ, ಪತ್ರಿಕೆಗಳು, ಶಿಕ್ಷಣ ಸಂಸ್ಥೆಗಳು ದಕ್ಷಿಣಕನ್ನಡದಲ್ಲಿ ಆರಂಭಗೊಂಡವು. ಈ ಆಧುನಿಕ ಆಡಳಿತ ವ್ಯವಸ್ಥೆ ಸಮಾಜದಲ್ಲಿ ಹೊಸತನವನ್ನು ತಂದಿತು. ಇದರೊಂದಿಗೆ ತೆರಿಗೆ ಪದ್ಧತಿಗಳೂ ಜನರನ್ನು ಒಟ್ಟುಸೇರಿಸುವಲ್ಲಿ ಕಾರಣೀಭೂತವಾಯಿತು.

ದಕ್ಷಿಣ ಕನ್ನಡ ಅಭಿವೃದ್ಧಿಯ ಅಗತ್ಯಗಳಿಗೆ ತಕ್ಕಂತೆ ತನ್ನನ್ನು ಮಾರ್ಪಾಡು ಮಾಡಿಕೊಳ್ಳುವುದು ಒಂದೆಡೆಯಾದರೆ; ತನ್ನ ಸ್ವಂತಿಕೆಯನ್ನು, ದೇಶಪ್ರೇಮವನ್ನು, ರಾಷ್ಟ್ರೀಯತೆಯನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದುದು ಕೂಡಾ ಉಲ್ಲೇಖನೀಯ ಅಂಶವಾಗಿದೆ. ಸ್ವೀಕೃತಿ ಹಾಗೂ

ಹೋರಾಟ ಜೊತೆಜೊತೆಯಾಗಿಯೇ ಸಾಗುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ಸ್ಥಳೀಯ ವಿಷಯಗಳಾದ ತುಳು ಚಳುವಳಿ, ಸಾಮಾಜಿಕ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳು ಇದನ್ನು ಪುಷ್ಟೀಕರಿಸುತ್ತವೆ.

ವಸಾಹತುಷಾಹೀ ಕೊಡುಗೆಗಳಾದ ಆಧುನಿಕ ಶಿಕ್ಷಣ ವ್ಯವಸ್ಥೆ,, ಸಾಮಾಜಿಕ ಸುಧಾರಣಾ ಚಳುವಳಿಗಳು, ಮುದ್ರಣಾ ಮಾಧ್ಯಮಗಳು, ಸಾರಿಗೆ ಸಂಪರ್ಕಗಳು ಜನರಲ್ಲಿ ಜಾಗೃತಿಯನ್ನು ಉಂಟುಮಾಡುವುದರೊಂದಿಗೆ ದೇಶಪ್ರೇಮವನ್ನೂ ಹೆಚ್ಚಿಸಿದವು. ಸ್ವಾತಂತ್ರ್ಯದ ಬಗೆಗೆ ಅರಿವನ್ನೂ ಮೂಡಿಸಿದವು. ಒಂದೆಡೆ ವಸಾಹತುಷಾಹೀ ತಂತ್ರಜ್ಞಾನದ– ಅಭಿವೃದ್ಧಿಯ ಸ್ವೀಕೃತಿ; ಇನ್ನೊಂದೆಡೆ ಸಾಮಾಜಿಕ ಜಾಗೃತಿಯೊಂದಿಗೆ ಸ್ವಾತಂತ್ರ್ಯದ ಜಾಗೃತಿ– ವಸಾಹತುಷಾಹೀ ವಿರೋಧ ಎರಡನ್ನೂ ಕಾಣಬಹುದಾಗಿದೆ. ಜನರ ಮನೋಭಾವದ ಮೇಲೇ ಆಧುನಿಕತೆಯ ಗಾಢ ಪ್ರಭಾವ ಮತ್ತು ಅದರಿಂದಾದ ತಿಳುವಳಿಕೆ ದಕ್ಷಿಣಕನ್ನಡದ ವಿಶೇಷ ಲಕ್ಷಣವಾಗಿದೆ. ಒಟ್ಟಾರೆಯಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ವಸಾಹತುಷಾಹೀ ಕಾಲಘಟ್ಟದಲ್ಲಿ ಬೀರಿದಂತಹ ಪ್ರಭಾವ, ಬದಲಾವಣೆಯ ಕುರಿತು ಇಲ್ಲಿ ಅವಲೋಕನವನ್ನು ಮಾಡಲಾಗಿದೆ.

ಈ ಅಧ್ಯಯನಕ್ಕೆ ವಸಾಹತುಷಾಹೀ ದಾಖಲೆಗಳಾದ ಆಡಳಿತಾತ್ಮಕ ನಿರ್ಣಯಗಳು, ಸರಕಾರೀ ಪತ್ರಗಳು, ನ್ಯಾಯಾಂಗೀಯ ದಾಖಲೆಗಳು, ಕಂದಾಯ ದಾಖಲೆಗಳು, ಬಾಸೆಲ್ ಮಿಷನ್ ರಿಪೋರ್ಟುಗಳು, ಪತ್ರಿಕೆಗಳು, ಈಗಾಗಲೆ ಬರೆಯಲ್ಪಟ್ಟ ಅಧಿಕೃತ ಬರವಣಿಗೆಗಳು ಹಾಗೂ ಆ ಕಾಲಘಟ್ಟದ ಚಿತ್ರಣವನ್ನು ಚಿತ್ರಿಸುವ ವಿವಿಧ ಲೇಖನಗಳು, ಕತೆಗಳು, ರೂಪಕಗಳು ಪ್ರಮುಖ ಆಕರಗಳಾಗಿವೆ. ಪ್ರಸ್ತುತ ಅಧ್ಯಯನವು ಐತಿಹಾಸಿಕ ವಿಧಾನವನ್ನು ಬಳಸಿ ವಸಾಹತುಷಾಹಿತ್ವವನ್ನು ಅರ್ಥೈಸುವುದರ ಮೂಲಕ ಆ ಸಂದರ್ಭದ ಜನಸಾಮಾನ್ಯರ, ಸಮಾಜದ ಪ್ರತಿಕ್ರಿಯೆಯನ್ನು ತಿಳಿಯುವುದಾಗಿದೆ. ಸಾಮಾನ್ಯವಾಗಿ ಬ್ರಿಟಿಷ್ ದಾಖಲೆಗಳು ವಸಾಹತುಷಾಹಿತ್ವವನ್ನು ಮತ್ತು ನೀತಿಗಳನ್ನು ಬೆಂಬಲಿಸಿರುವುದನ್ನು ನಾವು ಕಾಣುತ್ತೇವೆ. ಪತ್ರಿಕೆಗಳು ಹಾಗೂ ಸ್ಥಳೀಯ ಬರಹಗಳು ಮತ್ತು ಮೌಖಿಕ ಇತಿಹಾಸವು ವಸಾಹತುಷಾಹಿತ್ವದ ಬಗೆಗೆ ಅವಿಭಜಿತ ದಕ್ಷಿಣಕನ್ನಡದ ಪ್ರತಿಧ್ವನಿಯನ್ನು ಗುರುತಿಸಲು ನೆರವಾಗುತ್ತದೆ.

ವಸಾಹತುಷಾಹಿತ್ವ ಎಂಬುದು ಹೆಚ್ಚು ಬಲಾಢ್ಯವಾದ ಶಕ್ತಿಗಳು ದುರ್ಬಲ ಅಥವಾ ಹಿಂದುಳಿದ ಪ್ರದೇಶಗಳ ಜನರಿರುವಲ್ಲಿ ವಸಾಹತುಗಳನ್ನು ಹೊಂದುವ, ನಿರ್ವಹಿಸುವ ವಿಧಾನವಾಗಿದ್ದು ಆರ್ಥಿಕ ಶೋಷಣೆಯ ನೀತಿಯೇ ಆಗಿದೆ.[೧] ಯುರೋಪಿನ ರಾಷ್ಟ್ರಗಳಲ್ಲಿ ೧೮ನೇ ಶತಮಾನದ ಕೈಗಾರಿಕಾ ಕ್ರಾಂತಿಯ ತರುವಾಯ ಕಚ್ಚಾ ವಸ್ತುಗಳ ಅಗತ್ಯ ಹಾಗೂ ಸಿದ್ಧ ವಸ್ತುಗಳ ಮಾರುಕಟ್ಟೆಗಳ ಅವಶ್ಯಕತೆಗಳಿಗಾಗಿ ಹೆಚ್ಚು ಹೆಚ್ಚು ವಸಾಹತುಗಳನ್ನು ಹೊಂದಲು ತಮ್ಮಲ್ಲೇ ಪೈಪೋಟಿ ಏರ್ಪಟ್ಟು ಏಷ್ಯಾ, ಆಫ್ರೀಕಾ, ಲ್ಯಾಟಿನ್ ಅಮೆರಿಕಾಗಳು ಅಧೀನತೆಗೆ ಒಳಪಟ್ಟವು. ಈ ಸಂದರ್ಭದಲ್ಲಿ ಅಧಿಪತ್ಯ, ಶೋಷಣೆ, ವಿಸ್ತರಣೆ, ಆಕ್ರಮಣಗಳೊಂದಿಗೆ ಅಸಮತೋಲಿತ ಬೆಳವಣಿಗೆಯನ್ನು, ಅಧೀನ ಅಭಿವೃದ್ಧಿಯನ್ನು ನಾವು ಕಾಣಬಹುದು.[೨]

ವಸಾಹತುಷಾಹೀ ಪರಿಕಲ್ಪನೆಯು 'ಅಭಿವೃದ್ಧಿ'ಯನ್ನು ಮಾನದಂಡವಾಗಿಸಿಕೊಂಡು ವಿಜ್ಞಾನ–ತಂತ್ರಜ್ಞಾನ ಅಥವಾ ಇನ್ನೂ ಏನನ್ನೋ ಬಳಸಿಕೊಂಡು ಅಲ್ಲಿನ ಇತಿಹಾಸ, ಸಂಸ್ಕೃತಿ, ವೇದ–ವಿಜ್ಞಾನಗಳನ್ನು ಉಪೇಕ್ಷಿಸಿ ತಮ್ಮತನದ ಹೇರಿಕೆ ಮತ್ತು ಅವಲಂಬನೆಯ ಪರಿಸ್ಥಿತಿಯ ಸೃಷ್ಟಿಮಾಡಿ (ಹೆಜಿಮನಿ ಅಥವಾ ಡೋಮಿನೇಷನ್) ಅಧಿಪತ್ಯ ನಡೆಸುವುದಾಗಿದೆ. ಅವಿಭಜಿತ ದಕ್ಷಿಣಕನ್ನಡ ಎಂದು ಗುರುತಿಸಲ್ಪಡುವ ಪ್ರದೇಶವು ಪ್ರಸ್ತುತ ಆಧುನಿಕ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೇರಳ ರಾಜ್ಯದ ಕಾಸರಗೋಡನ್ನು ಒಳಗೊಂಡಿದ್ದಂತಹ ಪ್ರದೇಶವಾಗಿದೆ.[೩] ೧೬ನೇ ಶತಮಾನದಲ್ಲಿ ವ್ಯಾಪಾರಕ್ಕಾಗಿ ಬಂದ ಪೋರ್ಚುಗೀಸರು ದಕ್ಷಿಣ ಕನ್ನಡಕ್ಕೂ ಆಗಮಿಸಿ ಅಧಿಪತ್ಯ ವಹಿಸಿಕೊಳ್ಳಲು ಮುಂದಾದಾಗ, ಪೋರ್ಚುಗೀಸರ ಶಕ್ತಿಗೆದುರಾಗಿ ನಿಂತ ಉಳ್ಳಾಲದ ಅಬ್ಬಕ್ಕನ ಹೋರಾಟ, ಪರಕೀಯರ ಆಳ್ವಿಕೆಯನ್ನು ವಿರೋಧಿಸಿದ ಮುಂದಿನ ಹೋರಾಟಗಳಿಗೆ ತಳಹದಿಯನ್ನು, ಸ್ಫೂರ್ತಿಯನ್ನು ಒದಗಿಸಿತು.[೪] ಸಾಳುವ ರಾಣಿ ಚನ್ನಭೈರಾದೇವಿಯ ಸಾಹಸಮಯ ಹೋರಾಟವು ಕೂಡಾ ದಕ್ಷಿಣಕನ್ನಡದ ಜನರು ಎಂದೂ ಮರೆಯಲಾರರು.

ಹೈದರಾಲಿ, ಟಿಪ್ಪು ಸುಲ್ತಾನರ ಅವನತಿಯು ದಕ್ಷಿಣಕನ್ನಡವು ಬ್ರಿಟೀಷರ ವಶವಾಗಲು ಕಾರಣವಾಯಿತು.[೫] ತದನಂತರದಲ್ಲಿ ಬ್ರಿಟೀಷ್ ಅಧೀನದಲ್ಲಿ, ಮದ್ರಾಸ್ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟು ವಸಾಹತುಷಾಹಿಯ ಪ್ರಭಾವಕ್ಕೆ ನೇರವಾಗಿ ಒಳಗೊಂಡು ಹಲವಾರು ಬದಲಾವಣೆಗಳಿಗೆ, ಪ್ರತಿಸ್ಪಂದನಕ್ಕೆ, ದಕ್ಷಿಣಕನ್ನಡ ಸಾಕ್ಷಿಯಾಯಿತು.

೧೮೧೦ರಲ್ಲಿ ದಕ್ಷಿಣಕನ್ನಡದ ಕಲೆಕ್ಟರ್ ಆಗಿದ್ದ ಅಲೆಕ್ಸಾಂಡರ್ ರೀಡ್, ನಾವು ಒಳ್ಳೆಯ ನೀತಿಗೆ ಸಲ್ಲದ ದುಬಾರಿ ಭೂಕಂದಾಯವನ್ನು ರೈತರಿಂದ ವಸೂಲಿ ಮಾಡುತ್ತಿದ್ದೇವೆ. ಇದು ಎಷ್ಟು ಬೇಗ ಕೊನೆಗೊಳ್ಳುವುದೋ ಅಷ್ಟು ಒಳ್ಳೆಯದು ಎಂದು ಬರೆದಿದ್ದಾನೆ. ಭೂ ಕಂದಾಯದ ಏರಿಕೆ, ಸುಂಕಗಳು, ಕೃಷಿಬೆಳೆ ವೈಫಲ್ಯಗಳು ರೈತರನ್ನು ತೊಂದರೆಗೀಡು ಮಾಡಿತು.[೬] ನಗದು ರೂಪದ ತೆರಿಗೆ ಪದ್ಧತಿ, ಬೆಲೆ ಕುಸಿತಗಳು ರೈತರ ಸ್ಥಿತಿಯನ್ನು ಮತ್ತಷ್ಟು ಶೋಚನೀಯಗೊಳಿಸಿದವು. ೧೮೧೦–೧೧ರಲ್ಲಿ ರೈತರು ಸಾಮೂಹಿಕವಾಗಿ ಸಂಘಟಿತರಾಗಿ ಭೂ ಕಂದಾಯ ಮತ್ತು ತೆರಿಗೆಗಳ ಪಾವತಿಯನ್ನು ನಿಲ್ಲಿಸಿ ಪ್ರತಿರೋಧವನ್ನು ತೋರಿದರು.[೭] ಇದರೊಂದಿಗೆ ತೆರಿಗೆ ಪದ್ಧತಿಗಳು ಜನರನ್ನು ಒಟ್ಟು ಸೇರಿಸುವಲ್ಲಿಯೂ ಕಾರಣೀಭೂತವಾಯಿತು. ಇದು ರೈತರ ಆರಂಭಿಕ ಪ್ರತಿರೋಧವಾದರೆ, ರೈತರು ಮಗದೊಮ್ಮೆ ೧೮೩೦–೩೧ರಲ್ಲಿ ಹೋರಾಟಕ್ಕಿಳಿದುದು ವಸಾಹತುಷಾಹಿ ವ್ಯವಸ್ಥೆಯ ಪ್ರಬಲ ಪ್ರತಿಭಟನೆಯೇ ಆಗಿದೆ.[೮] ರೈತರು ಅಲ್ಲಲ್ಲಿ ಕೂಟಗಳನ್ನು ರಚಿಸಿಕೊಂಡು ಹೋರಾಟವನ್ನು ಮಾಡಿದ್ದರು. ಕಾಸರಗೋಡಿನಿಂದ ಕುಂದಾಪುರದ ವರೆಗೂ, ಮಂಗಳೂರಿನಿಂದ ಬಂಟ್ವಾಳ, ಚಾರ್ಮಾಡಿಯ ವರೆಗೂ ಕಂದಾಯ ನಿರಾಕರಣೆಯ ಹೋರಾಟಕ್ಕೆ ರೈತರು ಮುಂದಾದರು. ಈ ಹೋರಾಟಗಳು ಯಶಗಳಿಸದಿದ್ದರೂ ಇಲ್ಲಿಂದಲೇ ವಸಾಹತುಷಾಹಿಯ ವಿರೋಧವನ್ನು ನಾವು ಕಾಣಬಹುದು.

೧೮೩೭ರಲ್ಲಿ ದಕ್ಷಿಣಕನ್ನಡ ಪ್ರದೇಶವಾದ ಪುತ್ತೂರು, ಅಮರಸುಳ್ಯಗಳಲ್ಲಿ ಜನರು ಪುನಃ ದಂಗೆ ಎದ್ದುದು ದಾಖಲೆಗಳಲ್ಲಿ ಕೆನರಾ ಬಂಡಾಯ ಎಂದು ಗುರುತಿಸಲ್ಪಟ್ಟಿತು.[೯] ಕಲ್ಯಾಣ ಸ್ವಾಮಿ, ಅಪರಂಪರ, ಬೂದಿಬಸಪ್ಪ ಎಂದೆಲ್ಲಾ ಕರೆಯಿಸಿಕೊಳ್ಳುವವರು ಈ ಬಂಡಾಯದ ನಾಯಕರಾಗಿದ್ದರು. ಬಂಟ್ವಾಳ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಬ್ರಿಟೀಷ್ ಖಜಾನೆ, ಸಂಗ್ರಹಾಗಾರಗಳು ಹೋರಾಟಗಾರರ ಗುರಿಯಾದವು. ಇದು ಮುಂದೆ

ದಕ್ಷಿಣ ಕನ್ನಡ, ಕೊಡಗು ಪ್ರದೇಶಗಳಿಗೆಲ್ಲಾ ವಿಸ್ತರಿಸಲ್ಪಟ್ಟು ಬ್ರಿಟೀಷರಿಗೆ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸಿತು.[೧೦]

ಪಾರಂಪರಿಕ ತಂತ್ರಜ್ಞಾನದ ಬದಲಿಗೆ ಆಧುನಿಕತೆಯನ್ನೊಳಗೊಂಡ ಸಾರಿಗೆ–ಸಂಪರ್ಕ, ಬಂದರು, ಆರೋಗ್ಯ ಸೇವೆಗಾಗಿ ಆಸ್ಪತ್ರೆ, ಮುದ್ರಣಾ ಮಾಧ್ಯಮ, ಪತ್ರಿಕೆಗಳು, ಶಿಕ್ಷಣ ಸಂಸ್ಥೆಗಳು ದಕ್ಷಿಣಕನ್ನಡದಲ್ಲಿ ಆರಂಭಗೊಂಡವು.[೧೧]

ಒಂದು ಪ್ರದೇಶದ ಬೆಳವಣಿಗೆಯಲ್ಲಿ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳ ಪಾತ್ರ ಮಹತ್ವದ್ದಾಗಿರುತ್ತದೆ. ಇದು ಭಾರತದ ಪರಿಸ್ಥಿತಿಯಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಇದರೊಂದಿಗೆ ರಾಷ್ಟ್ರೀಯತೆಯ ಬೆಳವಣಿಗೆ ಈ ಎರಡು ಅಂಶಗಳಿಗೂ ಕಾರಣವಾಗುತ್ತದೆ. ಭಾರತದಲ್ಲಿ ೧೮೫೩ರ ಎಪ್ರಿಲ್ ೧೬ರಂದು ಮುಂಬಯಿಯಿಂದ ಥಾನಾಗೆ ಮೊದಲ ಬಾರಿಗೆ ರೈಲ್ವೇ ಸಂಪರ್ಕ ಕಲ್ಪಿಸಲಾಯಿತು.[೧೨] ಆದರೆ ಈ ವ್ಯವಸ್ಥೆಗಳು ಆಹಾರದ ಕೃತಕ ಅಭಾವಕ್ಕೂ ಕಾರಣವಾಗಿ ಭಾರತದ ಅರ್ಥವ್ಯವಸ್ಥೆಯ ಮೇಲೆ ಹೊಡೆತ ನೀಡಿದ್ದು ಕೂಡಾ ಸತ್ಯ.[೧೩]

ಎಪ್ರಿಲ್ ೧೮೭೦ರ ಕಾಲಘಟ್ಟದಲ್ಲೇ ಮೈಸೂರು ಹಾಗೂ ಮಂಗಳೂರು ಬಂದರಕ್ಕೂ ರೈಲ್ವೇ ಸಂಪರ್ಕ ಕಲ್ಪಿಸಬೇಕೆಂಬ ಬೇಡಿಕೆ ಇದ್ದಿತು. ಗ್ರೋವ್ಸ್ ೧೮೯೩, ೧೮೯೪ರಲ್ಲಿ; ಗಿಲ್ಕಿಸ್ಟ್ ೧೮೯೫ರಲ್ಲಿ; ರಿಚರ್ಡ್ಸ್ ೧೯೧೩ರಲ್ಲಿ ಸರ್ವೇಕ್ಷಣೆ ನಡೆಸಿದರು.[೧೪] ೧೯೦೬ರ ವೇಳೆಗಾಗಲೇ ರೈಲ್ವೇ ಕಾಸರಗೋಡನ್ನು ಸಂಪರ್ಕಿಸುತ್ತಿದ್ದು ರ‍್ಯಾಪಿಡ್ ಟ್ರಾನ್ಸಿಟ್ ಎಂದು ಕರೆಯಲಾಗುತ್ತಿದ್ದ ಮೇಲ್ ಕೋಚ್ (ಎರಡು ಜನ ಹಿಡಿಸಬಹುದಾದ ಮರದ ಪೆಟ್ಟಿಗೆಯ ಕುದುರೆ ಗಾಡಿ) ಮಂಗಳೂರಿಗೆ ಸಂಪರ್ಕ ಕಲ್ಪಿಸುತ್ತಿತ್ತು. ಮದ್ರಾಸ್ ಅಧೀನದ ಮಂಗಳೂರಿಗೆ ಕಲ್ಕತ್ತಾದಿಂದ ಮಾಹೆ, ತಲಚ್ಚೇರಿಯಾಗಿ ಹಾಗೂ ಮಂಗಳೂರು– ತಿಪಟೂರು, ಮಂಗಳೂರು–ಮೈಸೂರು– ನಂಜನಗೂಡು–ಮೂಲಕ ಈರೋಡ್ ದಾರಿಯಾಗಿ ಮೈಸೂರಿಗೆ ಸಂಪರ್ಕ ಕಲ್ಪಿಸಲು ಯೋಜನೆ ಹಾಕಿಕೊಳ್ಳಲಾಗಿತ್ತು.[೧೫] ಇದೇ ಕಾಲಘಟ್ಟದಲ್ಲಿ ನೇತ್ರಾವತಿ ಸೇತುವೆಯ ರಚನೆಯು ಮದ್ರಾಸ್ ರೈಲ್ವೇ ಇಂಜಿನಿಯರ್ ಮೆಕ್ ಲಾಡ್‌ನಿಂದ ಪ್ರಾರಂಭವಾಗಿತ್ತು ಎಂಬ ಡಬ್ಲು.ಕೆ. ಲಾಂಗ್ಲಿಯ ಉಲ್ಲೇಖವನ್ನೂ ನಾವು ಗುರುತಿಸಬಹುದು.[೧೬]

೧೮೪೫ರಲ್ಲಿ ಮುಂಬಯಿ ಸ್ಟೀಮ್ ನ್ಯಾವಿಗೇಶನ್ ಕಂಪೆನಿ ಪ್ರಾರಂಭವಾಗಿ ಆಗ ಮಂಗಳೂರು ಮುಂಬೈ ದರ ಪ್ರಥಮ ದರ್ಜೆ ೧೦೦, ದ್ವಿತೀಯ ದರ್ಜೆ ೫೦ ಹಾಗೂ ತೃತೀಯ ದರ್ಜೆ ೮ ರೂ ಎಂದು ನಿಗದಿಪಡಿಸಲಾಗಿತ್ತು. ೧೯೧೪ರಲ್ಲಿ ಕೆನರಾ ಪಬ್ಲಿಕ್ ಕನ್ವೇಯರ್ ಎಂಬ ಸಾರಿಗೆ ದಕ್ಷಿಣಕನ್ನಡದಲ್ಲಿ ಆರಂಭವಾಗಿತ್ತು.[೧೭]

ದಕ್ಷಿಣಕನ್ನಡದ ಪುತ್ತೂರಿನಲ್ಲಿ ವಾಸವಾಗಿದ್ದ ಶಿವರಾಮ ಕಾರಂತರು ೧೯೩೦–೩೧ರಲ್ಲಿ ಭೂತರಾಜ್ಯ ಮತ್ತು ಡೊಮಿಂಗೋ ಎಂಬ ಎರಡು ಮೂಕ ಚಿತ್ರಗಳನ್ನು ತಯಾರಿಸಿದ್ದರು. ಡೊಮಿಂಗೋ ಹರಿಜನರ ಕುರಿತಾದ ಸಾಮಾಜಿಕ ಚಿತ್ರಣವನ್ನು ಆಧರಿಸಿತ್ತು.[೧೮]

೧೯೦೯ರಲ್ಲಿ ದಕ್ಷಿಣಕನ್ನಡದ ಪುತ್ತೂರಿನಲ್ಲಿ ಪುತ್ತೂರು ಸಹಕಾರೀ ರೂರಲ್ ಕ್ರೆಡಿಟ್ ಸೊಸೈಟಿ ಎಂಬ ಸಂಘವನ್ನು ಮೊಳಹಳ್ಳಿ ಶಿವರಾಯರು ಮೊದಲ ಬಾರಿಗೆ ಆರಂಭಿಸಿದರು. ೧೯೧೬ರಲ್ಲಿ ಜಿಲ್ಲಾ ಕೇಂದ್ರ ಸಹಕಾರೀ ಬ್ಯಾಂಕ್ ಮತ್ತು ರೈತ ಬೆಳೆದ ಬೆಳೆಯನ್ನು ಯೋಗ್ಯ ರೀತಿಯಲ್ಲಿ ಮಾರಾಟ ಮಾಡಲು ದ.ಕ. ಕೃಷಿಕರ ಮಾರಾಟ ಸಂಘ ಎಂಬ ಸಂಸ್ಥೆಯ ಸ್ಥಾಪನೆಯೂ ಇಲ್ಲಾಯಿತು. ಭಾರತದಲ್ಲೇ ಮೊದಲ ಬಾರಿಗೆ ಗೇರು ಉದ್ದಿಮೆ ಪ್ರಾರಂಭವಾದುದು ಮಂಗಳೂರಿನಲ್ಲಿ.[೧೯] ಈ ಕಾರ್ಖಾನೆ ೧೯೩೫ರ ಸುಮಾರಿಗೆ ಗೇರುಬೀಜದ ಎಣ್ಣೆಯನ್ನೂ ತಯಾರಿಸಲಾರಂಭಿಸಿತ್ತು. ಇದಕ್ಕೂ ಪೂರ್ವದಲ್ಲಿ ಅಂದರೆ ೧೬೩೧ರಲ್ಲಿ ಬಸ್ರೂರಿನಲ್ಲಿ ಕೋಟೆ ಕಟ್ಟಲು ಇಕ್ಕೇರಿ ನಾಯಕನೊಂದಿಗೆ ಹಾಗೂ ೧೬೭೧ರಲ್ಲಿ ಮಂಗಳೂರು ಹಾಗೂ ಬಸ್ರೂರುಗಳಲ್ಲಿ ಫ್ಯಾಕ್ಟರಿ ಸ್ಥಾಪಿಸಲು ಬಿದನೂರಿನ ರಾಜರೊಂದಿಗೆ ಪೋರ್ಚುಗೀಸರು ಅಂತಿಮ ಒಪ್ಪಂದ ಮಾಡಿಕೊಂಡಿದ್ದರು.[೨೦]

ದಕ್ಷಿಣಕನ್ನಡದಲ್ಲಿ ಬಾಸೆಲ್ ಮಿಷನ್‌ನ ಆರಂಭ ಹೊಸ ಶಕೆಯನ್ನೇ ಆರಂಭಿಸಿತು.[೨೧] ಶಿಕ್ಷಣ ಹಾಗೂ ಮುದ್ರಣ ಕ್ಷೇತ್ರಗಳಲ್ಲಿ ವಿಶೇಷ ಬದಲಾವಣೆಯನ್ನು ತರುವುದರೊಂದಿಗೆ ಜನರನ್ನು, ಸಮಾಜವನ್ನು ವಿಚಾರವಂತರನ್ನಾಗಿ ಮಾಡಿತು. ತಮ್ಮ ಧರ್ಮ ಪ್ರಚಾರದೊಂದಿಗೆ ದಕ್ಷಿಣಕನ್ನಡದ ಅನೇಕ ಕಡೆಗಳಲ್ಲಿ ಶಾಲೆ, ಆಸ್ಪತ್ರೆ ಆರಂಭದೊಂದಿಗೆ, ಪುಸ್ತಕಗಳ ಪ್ರಕಟಣೆಗೆ, ಸಾಹಿತ್ಯ ಕೃಷಿಗೆ ಮುನ್ನುಡಿ ಹಾಡಿತು.[೨೨] ೧೮೯೪ರಲ್ಲಿ ಡಾ. ಕಿಟ್ಟೆಲ್ ಅವರಿಂದ ಕನ್ನಡ– ಇಂಗ್ಲೀಷ್ ನಿಘಂಟು ಪ್ರಕಟಿಸಲ್ಪಟ್ಟಿತು.

ಶಿಕ್ಷಣದ ಮೂಲಕ ಬ್ರಿಟೀಷರು ಭಾರತೀಯರನ್ನು ತಮ್ಮ ನಿಯಂತ್ರಣಕ್ಕೊಳಪಡಿಸುವ ಪ್ರಯತ್ನವನ್ನು ಮಾಡಿದುದು[೨೩] ಮತ್ತು ೧೮೩೬ರಲ್ಲಿ ಬಾಸೆಲ್‌ಮಿಷನ್ ಇವಾಂಜಲಿಕಲ್ ಹೈಸ್ಕೂಲ್, ಮತ್ತು ತದನಂತರದಲ್ಲಿ ಆರ್ಟ್ಸ್ ಕಾಲೇಜುಗಳು ಸ್ಥಾಪನೆಗೊಂಡುದು ದಕ್ಷಿಣಕನ್ನಡ ಹೊರಜಗತ್ತಿನೊಂದಿಗೆ ಬೆರೆಯಲು ಕಾರಣವಾಯಿತು. ಈ ಎಲ್ಲಾ ಅಂಶಗಳು ನೈಜವಾಗಿ ವಸಾಹತುಷಾಹೀ ಆಡಳಿತದ ಅನುಕೂಲತೆಗಾಗಿ ಮಾಡಿದ ಪ್ರಯತ್ನಗಳಾದರೂ ಪರೋಕ್ಷವಾಗಿ ಜನರನ್ನು ಜಾಗೃತರನ್ನಾಗಿಸಿದುದನ್ನು ಅಲ್ಲಗಳೆಯುವಂತಿಲ್ಲ.

ಮಂಗಳೂರಿನ ಬಾಸೆಲ್ ಮಿಸನ್‌ನ ಅಧೀನದಲ್ಲಿ ಪಶ್ಚಿಮ ಕರಾವಳಿಯ ಮೊದಲ ಹೆಂಚು ಉದ್ದಿಮೆ ಕಾರ್ಲ್ ಜಾರ್ಜ್ ಆಂಡ್ರಿಯಾಸ್ ಫ್ಲೈಬ್ಟ್ಸ್‌ನಿಂದ ೧೮೬೫ರಲ್ಲಿ ಪ್ರಾರಂಭವಾಯಿತು.[೨೪] ಈ ಎಲ್ಲಾ ಉದ್ದಿಮೆಗಳು ಸ್ಥಳೀಯರನ್ನೂ ಬಳಸಿಕೊಂಡು ಉತ್ಪಾದನೆಯನ್ನು ಮಾಡುತ್ತಿದ್ದವು. ೧೮೪೮ರಲ್ಲಿ ಮಂಗಳೂರಿನಲ್ಲಿ ಸರಕಾರೀ ಆಸ್ಪತ್ರೆ ಸ್ಥಾಪಿಸಲ್ಪಟ್ಟು ಆಧುನಿಕ ಔಷಧಗಳು ಜನರಿಗೆ ಲಭ್ಯವಾಗತೊಡಗಿತು. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಉಡುಪಿ ಹಾಗೂ ಮಂಗಳೂರಿನಲ್ಲಿ ಪ್ರಥಮ ಬಾರಿಗೆ ೧೯೦೬ರಲ್ಲಿ ಕೆನರಾ ಬ್ಯಾಂಕ್ ಸ್ಥಾಪಿಸಲ್ಪಟ್ಟುದು ಆರ್ಥಿಕ ಚಟುವಟಿಕೆಗಳಿಗೆ ಮತ್ತಷ್ಟು ಪ್ರೇರಣೆ ನೀಡಿತು.

ಬಾಂಬೆ, ಮದ್ರಾಸ್ ಮತ್ತು ಕಲ್ಕತ್ತಾಗಳನ್ನು ಕೇಂದ್ರವಾಗಿಸಿಕೊಂಡು ಬಾರತದಲ್ಲಿ ಆಡಳಿತವನ್ನು ಹೇರಿದ ಸಂದರ್ಭದಲ್ಲಿ ನಿಯಂತ್ರಣಕ್ಕಾಗಿ ಸೈನ್ಯ, ಪೊಲೀಸ್ ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ಬ್ರಿಟೀಷರು ಬಳಸಿಕೊಂಡರು.[೨೫] ಕ್ಯಾನಿಂಗ್ ವೈಸ್‌ರಾಯ್‌ಆಗಿದ್ದಾಗ ಈ ವ್ಯವಸ್ಥೆಗಳನ್ನು ಪುನರ್ ಸಂಘಟಿಸಿ ಹೊಸ ರೂಪವನ್ನು ಕೊಡುತ್ತಾನೆ.[೨೬]

ಆಧುನಿಕತೆಯು ಸಮಾಜದಲ್ಲಿ ಹೊಸತನವನ್ನು ತಂದಿತು. ಬ್ರಿಟೀಷರ ವಸಾಹತುಷಾಹಿ ನೀತಿಗಳು, ಸಾಮಾಜಿಕ, ಧಾರ್ಮಿಕ ಹಸ್ತಕ್ಷೇಪಗಳು ಸಾಮಾನ್ಯರ ಪ್ರತಿರೋಧಕ್ಕೂ ಕಾರಣವಾಯಿತು.

ಗಾಂಧೀಜಿ ದಕ್ಷಿಣಕನ್ನಡಕ್ಕೆ ಬಂದಿದ್ದ ಸಂದರ್ಭದಲ್ಲಿ ಕಾರ್ನಾಡ್ ಸದಾಶಿವರಾಯರಾದಿಯಾಗಿ ಹಲವರು ನೇರ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರೆ, ಮತ್ತೆ ಹಲವರು ಸಾಮಾಜಿಕ ಮತ್ತು ಸ್ಥಳೀಯ

ವಿಚಾರಧಾರೆಗಳ ಮೂಲಕ ವಸಾಹತುಷಾಹೀ ವಿರೋಧವನ್ನು ತೋರ್ಪಡಿಸಿದರು.

ದೇಶಾದ್ಯಂತ ಆರಂಭವಾದ ಸಾಮಾಜಿಕ ಬದಲಾವಣೆಗಳು ಧ್ವನಿಯಾಗಿ ಮಂಗಳೂರಿನಲ್ಲೂ ಬ್ರಹ್ಮಸಮಾಜ, ಆರ್ಯ ಸಮಾಜಗಳು ಆರಂಭವಾದವು. ಥಿಯೋಸಾಫಿಕಲ್ ಸೊಸೈಟಿಯು ಸಕ್ರಿಯವಾಗಿ ಕಾರ್ಯನಿರ್ವಹಿಸತೊಡಗಿತು. ೧೮೭೦ರ ಮೇ ತಿಂಗಳಿನಲ್ಲಿ ಕಾರ್ನಾಡು ಸದಾಶಿವರಾವ್, ಉಳ್ಳಾಲ ರಗುನಾಥಯ್ಯ, ಬಿಲ್ಲವಸಮಾಜದ ಮುಖಂಡರಾದ ಶ್ರೀ.ಎನ್.ಅರಸಪ್ಪನವರ್ ಮೊದಲ್ಗೊಂಡು ಬ್ರಹ್ಮ ಸಮಾಜದ ಶಾಖೆಯನ್ನು ಮಂಗಳೂರಿನಲ್ಲಿ ಆರಂಭಿಸಿದರು.

ಗಾಂಧೀಜೀಗಿಂತಲೂ ಪೂರ್ವದಲ್ಲೇ, ಶಿಕ್ಷಣ, ಸಮಾಜಸುಧಾರಣೆ, ಗುಡಿಕೈಗಾರಿಕೆ, ಭೂಮಿ ನೀಡಿಕೆಯಂತಹ ರಚನಾತ್ಮಕ ಕಾರ್ಯಗಳ ಮೂಲಕ ಹರಿಜನೋದ್ಧಾರಕರಾಗಿ ದುಡಿದು ತಮ್ಮ ಜೀವನವನ್ನೇ ಪರರಿಗಾಗಿ ಮುಡಿಪಾಗಿಟ್ಟ ವ್ಯಕ್ತಿ, ಕುದ್ಮಲ್ ರೋಗರಾಯರು. ರಂಗರಾಯರು ಖಾದಿಬಳಕೆ ಮೂಲಕ ದಕ್ಷಿಣಕನ್ನಡದಲ್ಲಿ ಸ್ವದೇಶೀ ಪ್ರೇಮವನ್ನೂ ಜಾಗೃತಿಗೊಳಿಸಿದ್ದಂತಹ ರಾಷ್ಟ್ರಪ್ರೇಮಿ.[೨೭]

ರಂಗರಾಯರು ಶಿಕ್ಷಕವೃತ್ತಿಯಲ್ಲಿದ್ದು ಮಂಗಳೂರಿನ ಬ್ರಹ್ಮಸಮಾಜ ಶಾಖೆಯ ಸ್ಥಾಪಕರಾದ ಉಳ್ಳಾಲ ರಘುನಾಥಯ್ಯನವರ ನಿಕಟ ಸಂಪರ್ಕ ಹೊಂದಿದ್ದು ಬ್ರಹ್ಮಸಮಾಜದ ಉದಾತ್ತತತ್ವ, ಧ್ಯೇಯ ಹಾಗೂ ವಿಚಾರಪೂರಿತ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. ಹಿಂದೂ ಸಮಾಜದಲ್ಲಿದ್ದ ಸಾಮಾಜಿಕ ಭಿನ್ನತೆ, ಅಸ್ಪೃಶ್ಯತೆ, ಜಾತೀಯತೆಯಂತಹ ವಿವಿಧ ಅಸಮಾನತೆಗಳು ಹಾಗೂ ಬಾಲ್ಯವಿವಾಹ, ದೇವದಾಸಿ ಪದ್ಧತಿ, ವಿಧವಾ ವಿವಾಹಗಳಿಂದ ಮನನೊಂದು ಪರಿಹಾರಕ್ಕಾಗಿ ಪ್ರಯತ್ನಿಸಿದರು. ಈ ಬದಲಾವಣೆಗಳಿಗೆ ಕಾರಣವಾದುದು ವಸಾಹತುಷಾಹೀ ಪ್ರಭಾವ ಎಂದರೆ ತಪ್ಪಾಗಲಾರದು.. ಒಂದೆಡೆ ಸಾಂಪ್ರದಾಯಿಕ ಸಾಮಾಜಿಕ ಅನಿಷ್ಟಗಳ ಬದಲಾವಣೆ ಅಂದರೆ, ಆಧುನಿಕತೆಯ ಸ್ವೀಕೃತಿ, ಇನ್ನೊಂದೆಡೆ ರಾಷ್ಟ್ರೀಯತೆಯ ಧ್ವನಿಯಾದ ಬ್ರಿಟೀಷ್ ವಿರೋಧ ಇವೆರಡೂ ಜೊತೆಜೊತೆಯಾಗಿಯೇ ಮಿಶ್ರಿತವಾಗಿರುವುದು ಪ್ರಮುಖ ಅಂಶವಾಗಿದೆ.

ದಕ್ಷಿಣ ಕನ್ನಡ ಅಭಿವೃದ್ಧಿಯ ಅಗತ್ಯಗಳಿಗೆ ತಕ್ಕರತೆ ತನ್ನನ್ನು ಮುಪರ್ಾಡು ಮಾಡಿಕೊಳ್ಳುವುದು ಒಂದೆಡೆಯಾದರೆ; ತನ್ನ ಸ್ವಂತಿಕೆಯನ್ನು, ದೇಶಪ್ರೇಮವನ್ನು, ರಾಷ್ಟ್ರೀಯತೆಯನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದುದು ಕೂಡಾ ಉಲ್ಲೇಖನೀಯ ಅಂಶವಾಗಿದೆ. ಆಧುನಿಕತೆಯ ಸ್ವೀಕೃತಿ ಹಾಗೂ ಹೋರಾಟ ಜೊತೆಜೊತೆಯಾಗಿಯೇ ಸಾಗುವುದು ಇಲ್ಲಿನ ವೈಷ್ಟ್ಯವಾಗಿದೆ. ಸ್ಥಳೀಯ ವಿಷಯಗಳಾದ ತುಳು ಚಳುವಳಿ, ಸಾಮಾಜಿಕ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳು ಇದನ್ನು ಪುಷ್ಟೀಕರಿಸುತ್ತವೆ.

ಅಸಹಕಾರ ಚಳುವಳಿಯ ಕಾಲದಲ್ಲಿ ದಕ್ಷಿಣಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ ಹೆಚ್ಚು ಬಲಿಷ್ಟತೆಯನ್ನು ಪಡೆಯಿತು. ಕಾರ್ನಾಡ್ ಸದಾಶಿವರಾವ್ ಅವರ ನಾಯಕತ್ವದಲ್ಲಿ ಕೆ.ಆರ್. ಕಾರಂತ, ಎ.ವಿ.ಬಾಳಿಗಾ, ಕೆ.ಕೆ.ಶೆಟ್ಟಿ, ಎಂ.ಆರ್ ಪೂಂಜಾ, ಎಸ್.ಯು. ಪಣಿಯಾಡಿ, ಎ.ಎಸ್. ಕುಡ್ವರಾದಿಯಾಗಿ ಹಲವರು ಬಾಗವಹಿಸಿದ್ದರು. ಸತ್ಯಾಗ್ರಹ, ಸ್ವದೇಶಾಭಿಮಾನಿ, ನವಯುಗ, ಕಂಠೀರವ, ರಾಷ್ಟ್ರಬಂಧು, ಪ್ರಭಾತ ಮುಂತಾದ ಪತ್ರಿಕೆಗಳು ಜನರಲ್ಲಿ ಜಾಗೃತಿಯನ್ನುಂಟು ಮಾಡುವುದ ರೊಂದಿಗೆ ದೇಶಪ್ರೇಮವನ್ನೂ ಹೆಚ್ಚಿಸಿದವು. ೧೯೩೦ರಲ್ಲಿ ಗಾಂಧೀಜಿ ಉಪ್ಪಿನ ಸತ್ಯಾಗ್ರಹಕ್ಕೆ ಕರೆಕೊಟ್ಟಾಗ ಸದಾಶಿವರಾವ್‌ರವರು ದೇಶಪಾಂಡೆ, ಕೌಜಲಗಿ ಮುಂತಾದವರೊಡಗೂಡಿ ದಕ್ಷಿಣಕನ್ನಡದಲ್ಲಿ ಸತ್ಯಾಗ್ರಹದ ಕಾವನ್ನು ಹೆಚ್ಚಿಸಿದರು. ಅಂಕೋಲೆಯ ಸತ್ಯಾಗ್ರಹದಲ್ಲೂ ಭಾಗವಹಿಸಿದರು.[೨೮] ಸುಮಾರು ೧೨೬೨ ಪುರುಷರು ಹಾಗೂ ೨೧ ಮಹಿಳೆಯರು ಅಸಹಕಾರ ಚಳುವಳಿಯಲ್ಲಿ ನೇರವಾಗಿ ಭಾಗವಹಿಸಿದ್ದರು.[೨೯] ಮಂಗಳೂರಿನಲ್ಲಿ ೧೯೩೪–೩೫ರಲ್ಲಿ ಕಾಂಗ್ರೆಸ್ ಸಮಾಜವಾದೀ ಪಕ್ಷದ ನಾಯಕತ್ವದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರ ಉಪಸ್ಥಿತಿಯಲ್ಲಿ ಕಾರ್ಮಿಕರ ಸಂಘಟನೆಗಳು ಆರಂಭವಾದವು.[೩೦] ಕ್ವಿಟ್ ಇಂಡಿಯಾ ಚಳುವಳಿಯು ಕೂಡಾ ಇಲ್ಲಿ ಪ್ರತಿದ್ವನಿಸಿದ್ದು ಪರಕೀಯರ ದಾಸ್ಯದ ವಿರುದ್ಧದ ಪ್ರತಿಭಟನೆಯ ಹೋರಾಟವಾಗಿದೆ.

ವಸಾಹತುಷಾಹೀ ಕೊಡುಗೆಗಳಾದ ಆಧುನಿಕ ಶಿಕ್ಷಣ ವ್ಯವಸ್ಥೆ, ಸಾಮಾಜಿಕ ಸುಧಾರಣಾ ಚಳುವಳಿಗಳು, ಮುದ್ರಣಾ ಮಾಧ್ಯಮಗಳು, ಸಾರಿಗೆ ಸಂಪರ್ಕಗಳನ್ನು ಬಳಸಿಕೊಳ್ಳುತ್ತಾ, ಮತ್ತೊಂದೆಡೆ ಜನರಲ್ಲಿ ಜಾಗೃತಿಯನ್ನು ಉಂಟುಮಾಡುವುದರೊಂದಿಗೆ ದೇಶಪ್ರೇಮವನ್ನೂ ಹೆಚ್ಚಿಸಿದವು. ಇವು ಜನರನ್ನು ಹತ್ತಿರಕ್ಕೆ ಬೆಸೆಯುವುದರೊಂದಿಗೆ ರಾಷ್ಟ್ರದ ಅಂತರವನ್ನು ಕಡಿಮೆ ಮಾಡಿದವು. ಸ್ವಾತಂತ್ರ್ಯದ ಬಗೆಗೆ ಅರಿವನ್ನೂ ಮೂಡಿಸಿದವು. ಒಂದೆಡೆ ವಸಾಹತುಷಾಹೀ ತಂತ್ರಜ್ಞಾನದ– ಅಭಿವೃದ್ಧಿಯ ಸ್ವೀಕೃತಿ; ಇನ್ನೊಂದೆಡೆ ಸಾಮಾಜಿಕ ಜಾಗೃತಿಯೊಂದಿಗೆ ಸ್ವಾತಂತ್ರ್ಯದ ಜಾಗೃತಿ ಮತ್ತು ವಸಾಹತುಷಾಹೀ ವಿರೋಧ ಎರಡನ್ನೂ ದಕ್ಷಿಣಕನ್ನಡದಲ್ಲಿ ಕಾಣಬಹುದಾಗಿದೆ. ಜನರ ಮನೋಭಾವದ ಮೇಲೇ ಆಧುನಿಕತೆಯ ಗಾಢ ಪ್ರಭಾವ ಮತ್ತು ಅದರಿಂದಾದ ತಿಳುವಳಿಕೆ ದಕ್ಷಿಣಕನ್ನಡದ ವಿಶೇಷ ಲಕ್ಷಣವಾಗಿದೆ. ಒಟ್ಟಾರೆಯಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ವಸಾಹತುಷಾಹೀ ಕಾಲಘಟ್ಟದಲ್ಲಿ ಬೀರಿದಂತಹ ಪ್ರಭಾವ, ಬದಲಾವಣೆಯ ಕುರಿತು ಇಲ್ಲಿ ಅವಲೋಕನವನ್ನು ಮಾಡಲಾಗಿದೆ.

[1] Julia Swannel (Ed), *Oxford Modern English Dictionary,* Calcutta, 1993.

[2] Bipan Chandra, *Essays on Colonialism*, Orient Longman, New Delhi, 1999.

[3] K.V. Ramesh, *A History of South Kanara (From Earliest To Vijayanagara),* Dharwar 1970.

N. Shyam Bhat, Souhth *Kanara: Colonial Administration and Regional Response, PhD* thesis, Mangalore University, 1987.

Ganapati Rao Aigal, *Dakshna Kannada Jilleya Prachina Itihasa*, Rastrakavi Govinda Pai Samshodana Kendra, Udupi, 1923. (Re- print, 2004).

[4] B.S. Shastri, 'Daakshina kannada karavaliyalli Portugeesaru' in *Sudarshana,* Adyanadka Krishna Bhat (Ed.), Vijaya College Trust, Mulki, 1977.

Rajarama tolpady, Dakshina kannada charitre, samskruti, rajakarana in *Aruhu Kuruhu* vol.20, 2014.

[5] B. Sheik Ali, *Tippu Sulthan: A Study in Diplomacy and Confrontation,* Dept. of kannada and Culture, Bangalore, 2006.

[6] Baraguru Ramachandrappa (Ed), Op.cit.

[7] B.v. Kakkillaya, Chaluvliya nenpuglu, *Poli; Canara200,* Mangalore, 2000.

[8] N. Shyam Bhat, *South Kanara: Colonial Administration and Regional Response, PhD* Thesis, Mangalore University, 1987

[9] Ibid.

[10] Director, *Karnatakadalli Swatantrya Sangrama,*mysore, 1957.

[11] K. Shivarama kaaranta, Dakshina Kannada Andu-Indu, SBS Publication, Bangalore, 1990.

[12] Daniel Keniston, '*Railways and Famines in Colonial India'* in Economic History Journal, Massachusetts Institute of Technology 2.2.2007.

[13] Irfan Habib, *Indian Economy 1858-1914,* Alighar historian's society, 2006, re print 2008.

[14] Krishna kumar kalkur, 'Dakshina Kannadada Kaaravali hagu Bandaru' in *Sudarshana,* Adyanadka Krishna Bhat (Ed.), Vijaya College Trust, Mulki, 1977.

[15] Harlord Stuart(Ed), *South Canara Manual,* Madras District Manual Series, 1895, (Re Print2003).

[16] Adyanadka Krishna Bhat (Ed.), *Sudarshana,* Vijaya College Trust, Mulki, 1977.

[17]Mulki Gopalakrishna Kudva, 'Dakshina Kannada jilleya Raste Sarige' in *Sudarshana,* Adyanadka Krishna Bhat (Ed.), Vijaya College Trust, Mulki, 1977.

[18] Baragur Ramachandrappa (Ed), Karnataka Sangathi, An Informative of Kannada Land, Language and Culture, Kannada Development authority,.Bangalore, 2002, (Re. Ed 2013).

[19]Peraje Shreenivas rao, 'Dakshina Kannadadalli sahakari Chaluvali' in *Sudarshana,* Adyanadka Krishna Bhat (Ed.), Vijaya College Trust, Mulki, 1977.

[20] Adyanadka Krishna bhat Op.cit,

[21] B. Surendra Rao *Bunts in History and Culture,* Rastrakavi Govinda Pai Samshodana Kendra, Udupi, 2010.

[22]Peter Wilson Prabhakar, *The Basel Mission in South Kanara (1834-1947),* Unpublished PhD thesis, Mangalore University, 1988.

Peter Wilson Prabhakar, Dakshina kannadadalli Basel Mission, Puttur, 1989.

[23] M. S. Rajan, The Impact of British Rule in India, Journal of Contemporary History, Vol. 4, No. 1, Colonialism and Decolonization (Jan.,1969),Sage Publications, Ltd.Stable URL: http://www.jstor.org/stable/259793.

[24] John Sturrock (Ed), *South Canara Manual,* Madras District Manual Series, 1894, (Re Print2003).

[25] Bipan Chandra(Ed), Freedom struggle, National Book trust India, 1972, (Eleventh Re. Print-2011).

[26] Murugiah k, 'Police system and madras city Police in Colonial era', *in Quest International Multi disciplinary Research journal,* 1.2(2012).

[27] Udupi Govinda Rararu, The Depressed Classes Mission, Mangalore, *Jayakarnataka* Vol.*9, Chalukya Vikrama Shake, 855*

-P. Kamalaksha, *Dalitoddaraka Kudmal Ranga Rao,* Mangalore, 1986.

-Suryanatha Kamath,(Ed.) Swatantrya Sangramada Smrutigaalu, Mysore,1974.

-M.S.Shekhar, Kudmal rangaRao, Prasaranga, Mysore University, 2009.

-Vinayanetra, Dalitara Seveyalli Kudmal RangaRao, *VijayaKarnataka,* 7 july 2013.

-Venkatesh Eganur, Sevege Mudipada Baduku, Vijayavani, 31 January 2013.

[28] Suryanatha Kamath(Ed.), Op.Cit.

[29]Jayarama poonja, *Freeedom Movement in Dakshina Kannada with special reference to Gandhian Era(191-1947)* , A Study, Un published M.Phil Thesis, Madhurai Kamaraj University, 1997.

Adyanadka Krishna bhat,(Ed.) Op cit.

[30] B.V.Kakkillaya, Op.Cit.

ಭಾರತದ ಕೃಷಿ ನೀತಿ

ಸ್ನೇಹ. ಡಿ. ಆರ್

ಸಂಶೋಧನಾ ವಿದ್ಯಾರ್ಥಿನಿ, ರಾಜ್ಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇ-ಮೇಲ್: snehaananth20@gmail.com

ಭಾರತದ ಆರ್ಥ ವ್ಯವಸ್ಥೆಯಲ್ಲಿ ಕೃಷಿಯ ಸ್ಥಾನ; ಭಾರತದ ಆರ್ಥಿಕ ರಚನೆಯು ಕೃಷಿ ಕ್ಷೇತ್ರದ ಮೇಲೆ ನಿಂತಿದೆ. ಕೃಷಿ ಕ್ಷೇಟ್ರವೊಂದು ಸ್ವಾವಲಂಭನೆ ಸಾಧಿಸಿದರೆ ಇಡೀ ರಾಷ್ಟ್ರವೇ ಅಭಿವೃದ್ಧಿ ಹೊಂದಿರುತಾದೆ ಎಂಬ ಮಾತು ೧೦೦ ಕ್ಕೆ ೧೦೦ ರಷ್ಟು ಸತ್ಯ ಇಂದಿಗೂ ಶೇಕಡ ೬೫ ಕ್ಕಿಂತಲೂ ಹೆಚ್ಚಿನ ಜನರು ಕೃಷಿಯನ್ನು ತಮ್ಮ ಮೂಲ ಕಸುಬನ್ನಾಗಿಸಿಕೊಂಡಿದ್ದಾರೆ. ಕೃಷಿಯು ಭಾರತದ ಬೃಹತ್ ಜನಸಂಖ್ಯೆಗೆ ಆಹಾರವನ್ನು ಒದಗಿಸಿದೆ. ಭಾರತದ ಕೃಷಿಯು ಕೈಗಾರಿಕಾಭಿವೃದ್ಧಿಗೆ ತನ್ನದೇ ಆದ ಕೊಡುಗೆಗಳನ್ನು ಸಲ್ಲಿಸುತ್ತಿದೆ. ಕೃಷಿಯು ವಿದೇಶಿ ವಿನಿಮಯ ಗಳಿಕೆಯ ಪ್ರಮುಖ ಮೂಲವಾಗಿದೆ. ದೇಶದ ಒಟ್ಟು ರಫ್ತು ಸರಕುಗಳಲ್ಲಿ ಕೃಷಿ ಸಾಮಗ್ರಿಗಳ ಕೊಡುಗೆ ಶೇಕಡಾ ೧೦.೫ಕ್ಕಿಂತ ಹೆಚ್ಚಿದೆ. ವ್ಯಾಪಾರ, ವಾಣಿಜ್ಯ, ವಿಮೆ, ಬ್ಯಾಂಕಿಗೆ, ಸಾರಿಗೆ ಸಂಪರ್ಕ, ಅಂಚೆ ಮುಂತಾದ ತೃತೀಯ ವಲಯದ ಉದ್ಯಮಗಳ ಬೆಳವಣಿಗೆಗೆ ಕೃಷಿ ವಲಯದ ಕೋದುಗೆ ಅಪಾರವಾಗಿದೆ.

ಭಾರತದ ಅರ್ಥ ವ್ಯವಸ್ಥೆಯಲ್ಲಿ ಕೃಷಿಯ ಸ್ಥಾನ : ಭಾರತದ ಆರ್ಥಿಕ ರಚನೆಯು ಕೃಷಿ ಕ್ಷೇತ್ರದ ಮೇಲೆ ನಿಂತಿದೆ. ಕೃಷಿ ಕ್ಷೇತ್ರವೊಂದು ಸ್ವಾವಲಂಭನೆ ಸಾಧಿಸಿದರೆ ಇಡೀ ರಾಷ್ಟ್ರವೇ ಅಭಿವೃದ್ಧಿ ಹೊಂದುತ್ತದೆ ಎಂಬ ಮಾತು 100ಕ್ಕೆ 100ರಷ್ಟು ಸತ್ಯ

*. ಇಂದಿಗೂ ಶೇಕಡ 65 ಕ್ಕಿಂತಲೂ ಹೆಚ್ಚಿನ ಜನರು ಕೃಷಿಯನ್ನು ತಮ್ಮ ಮೂಲ ಕಸುಬನ್ನಾಗಿಸಿಕೊಂಡಿದ್ದಾರೆ. ಕೃಷಿಯು ಭಾರತದ ಬೃಹತ್ ಜನಸಂಖ್ಯೆಗೆ ಆಹಾರವನ್ನು ಒದಗಿಸಿದೆ. *. ಭಾರತದ ಕೃಷಿಯು ಕೈಗಾರಿಕಾಭಿವೃದ್ಧಿಗೆ ತನ್ನದೇ ಆದ ಕೊಡುಗೆಗಳನ್ನು ಸಲ್ಲಿಸುತ್ತಿದೆ. *. ಕೃಷಿಯು ವಿದೇಶಿ ವಿನಿಮಯ ಗಳಿಕೆಯ ಪ್ರಮುಖ ಮೂಲವಾಗಿದೆ. ದೇಶದ ಒಟ್ಟು ರಫ್ತು ಸರಕುಗಳಲ್ಲಿ ಕೃಷಿ ಸಾಮಗ್ರಿಗಳ

ಕೊಡುಗೆ ಶೇಕಡಾ 10.5ಕ್ಕಿಂತ ಹೆಚ್ಚಿದೆ. *. ವ್ಯಾಪಾರ, ವಾಣಿಜ್ಯ, ವಿಮೆ, ಬ್ಯಾಂಕಿಂಗ್, ಸಾರಿಗೆ ಸಂಪರ್ಕ, ಅಂಚೆ ಮುಂತಾದ ತೃತೀಯ ವಲಯದ ಉದ್ಯಮಗಳ ಬೆಳವಣಿಗೆಗೆ ಕೃಷಿ ವಲಯದ ಕೊಡುಗೆ ಅಪಾರವಾಗಿದೆ.

ಸುಧಾರಣಾ ಕ್ರಮಗಳು : ಕೃಷಿ ಭಾರತದ ಮೂಲ ಕಸುಬಾದರೂ ನಮ್ಮಲ್ಲಿ ಕೃಷಿ ಉತ್ಪಾದನೆ ಅಷ್ಟೇನೂ ಉತ್ತಮವಾಗಿಲ್ಲ. ಇನ್ನೂ ನಾವು ಕೃಷಿ ಸ್ವಾವಲಂಭನೆಯನ್ನು ಸಾಧಿಸಬೇಕಾಗಿದೆ. ಇಂದು ಕೃಷಿ ಉತ್ಪಾದನೆಯನ್ನು ಹೆಚ್ಚಿಸಲೇಬೇಕಾದ ಅನಿವಾರ್ಯತೆ ಉಂಟಾಗಿದೆ. ಕೃಷಿ ಉತ್ಪಾದನೆಯನ್ನು ಸುಧಾರಿಸಲು ಕೈಗೊಳ್ಳಬಹುದಾದ ಕ್ರಮಗಳೆಂದರೆ, *.ಭೂಸುಧಾರಣಾ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕಿದೆ. *.ನೀರಾವರಿ ಸೌಲಭ್ಯವನ್ನು ಪರಿಪೂರ್ಣವಾಗಿ ಬಳಸಿಕೊಳ್ಳಬೇಕಾಗಿದೆ. *ತಂತ್ರಜ್ಞಾನ ಮತ್ತು ವೈಜ್ಞಾನಿಕ ಬೇಸಾಯ ಕ್ರಮಗಳನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೇರೇಪಿಸುವುದು. *.ರೈತರಿಗೆ ಸರ್ಕಾರವು ಉಚಿತವಾಗಿ ಯಂತ್ರಗಳು, ಸಲಕರಣೆಗಳು, ಸುಧಾರಿತ ತಳಿಗಳು, ರಸಗೊಬ್ಬರಗಳು ಸಬ್ಸಿಡಿ ದರದಲ್ಲಿ ಸಾಲವನ್ನು ಒದಗಿಸುವುದು.

ಭಾರತದ ಕೃಷಿಯ ಬೆಳವಣಿಗೆಯ ಹಂತಗಳನ್ನು 3 ಭಾಗಗಳಾಗಿ ವಿಂಗಡಿಸಿ ಅಧ್ಯಯನ ಮಾಡಬಹುದು.

ಪ್ರಾರಂಭಿಕ ಹಂತ : 1950 ಮತ್ತು 1960 ರ ದಶಕಗಳಲ್ಲಿ ಭಾರತದ ಜನಸಂಖ್ಯಾ ಗಣನೀಯವಾಗಿ ಏರಿತು. ನಿರಾಶ್ರಿತರ ಸಂಖ್ಯೆಯ ಹೆಚ್ಚಳ, ಹವಾಮಾನ ವೈಪರೀತ್ಯ, ಬಹಳ ಕಾಲದಿಂದ ಕೃಷಿ ನೆನೆಗುದಿಗೆ ಬಿದ್ದಿದ್ದರ ಪರಿಣಾಮವಿದು. 1960 ರಲ್ಲಿ ದೇಶ ತೀವ್ರತರವಾದಂತಹ ಆಹಾರ ಕೊರತೆ ಮತ್ತು ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಯಿತು. ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯ ಭಾಗದಲ್ಲಿ ಭಾರತ ಸರ್ಕಾರ ಫುಡ್ ಫೌಂಡೇಷನ್‌ನ ಪೋಷಿತ ತಜ್ಞರ ಗುಂಪೊಂದನ್ನು ಆಹ್ವಾನಿಸಿ ಉತ್ಪಾದನಾ ಹೆಚ್ಚಳಕ್ಕೆ ಸಲಹೆ ನೀಡುವಂತೆ ಕೇಳಿಕೊಂಡಿತು. ಆಗ ತಜ್ಞರ ಗುಂಪು 1959 ರಲ್ಲಿ ಭಾರತದ ಆಹಾರ ಬಿಕ್ಕಟ್ಟು ಮತ್ತು ಅದನ್ನು ಎದುರಿಸುವುದು ಹೇಗೆ ಎಂಬ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ವರದಿಯನ್ನು ಆಧರಿಸಿ 1960 ರಲ್ಲಿ ಸರ್ಕಾರ ಏಳು ಆಯ್ದ ಜಿಲ್ಲೆಗಳಲ್ಲಿ **ಸಾಂದ್ರವಲಯ ಅಭಿವೃದ್ಧಿ ಕಾರ್ಯಕ್ರಮ** ಎಂಬ ಯೋಜನೆಯನ್ನು ಜಾರಿಗೆ ತಂದಿತು. ಈ ಜಿಲ್ಲೆಗಳಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಅವಶ್ಯಕವಾದ ಅತ್ಯಗತ್ಯ ಸೌಲಭ್ಯಗಳನ್ನು ಒದಗಿಸಲಾಯಿತು. ನಂತರ 1965 ರಲ್ಲಿ 114 ಜಿಲ್ಲೆಗಳಿಗೆ ಈ ಸಾಂದ್ರವಲಯ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು. ಈ ಸಮಯದಲ್ಲೇ ಕೃಷಿ ವಿಜ್ಞಾನಿ ಪ್ರೊ ನಾರ್ಮನ್ ಬೋಲಾಂಗ್ ನೇತೃತ್ವದ ತಂಡವೊಂದು ಮೆಕ್ಸಿಕೋದಲ್ಲಿ ಅಧಿಕ ಇಳುವರಿಯ ವೈವಿಧ್ಯಮಯ ಗೋಧಿಯನ್ನು ಕಂಡು ಹಿಡಿಯಿತು. ಇದೇ ತಳಿಯನ್ನು 1966ರ ಮುಂಗಾರುಬೆಳೆ ಕಾಲದಲ್ಲಿ 1.89 ದಶಲಕ್ಷ ಹೆಕ್ಟೇರು ಭೂಮಿಯಲ್ಲಿ ಕಾರ್ಯಗತಗೊಳಿಸಲಾಯಿತು. ಕಾಲಕ್ರಮೇಣ ಈ ಅಧಿಕ ಇಳುವರಿ ತಳಿಯ ಕಾರ್ಯಕ್ರಮವನ್ನು 79.9 ದಶಲಕ್ಷ ಹೆಕ್ಟೇರು ಭೂಮಿಗೆ ಅಳವಡಿಸಲಾಯಿತು. ಇದರಿಂದ 1960–61 ರಲ್ಲಿ ಪ್ರತಿ ಹೆಕ್ಟೇರಿಗೆ 710 ಕಿಲೋಗ್ರಾಂಗಳಿದ್ದ ಉತ್ಪಾದಕತೆ 2004–05 ಕ್ಕೆ 1703 ಕಿಲೋಗ್ರಾಂಗಳಿಗೆ ಏರಿತು. ಹೀಗಾಗಿ ಈ ಅವಧಿಯನ್ನು **ಪೂರ್ವ ಹಸಿರುಕ್ರಾಂತಿ ಕಾಲ**ವೆಂದು ಕರೆಯಲ್ಪಡುತ್ತದೆ ಮತ್ತು ಈ ಸಮಯದಲ್ಲಿ ಪ್ರಚಂಡ ಕೃಷಿ ಬದಲಾವಣೆ ಸಾಂಸ್ಥಿಕ ಬದಲಾವಣೆಗೆ ಸಾಕ್ಷಿಯಾಯಿತು. ಪ್ರಮುಖ ನೀರಾವರಿ ಯೋಜನೆಯನ್ನು ಅಭಿವೃದ್ಧಿಪಡಿಸಿ ಮಧ್ಯವರ್ತಿಗಳ ಪದ್ಧತಿಯನ್ನು ರದ್ದುಪಡಿಸಲಾಯಿತು. ಎಲ್ಲಾ ರಾಜ್ಯಗಳಲ್ಲೂ ಜಮೀನು ಒತ್ತುವರಿಯನ್ನು ತಡೆಯಲು ಕ್ರಮಕೈಗೊಂಡು ಹಿಡುವಳಿದಾರರಿಗೆ ಭೂ ಮಾಲೀಕತ್ವದ ಭದ್ರತೆಯನ್ನು ಒದಗಿಸಲಾಯಿತು.

ಎರಡನೇ ಹಂತ : ಭಾರತದ ಕೃಷಿ ನೀತಿಯ ಎರಡನೇ ಹಂತವನ್ನು 1960–80ರ ವರ್ಷಗಳೆಂದು ಗುರುತಿಸಲಾಯಿತು. ಕೃಷಿ ಪ್ರಧಾನವಾದ ಭಾರತದಲ್ಲಿ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ಯಾವುದೇ ಏರಿಳಿತಗಳುಂಟಾದರೂ ಸಾಮಾನ್ಯ ಬೆಲೆ ಮಟ್ಟದಲ್ಲೂ ಏರುಪೇರುಗಳಾಗುತ್ತದೆ. ಕಳೆದ ನಾಲ್ಕು ದಶಕಗಳ ಅವಧಿಯಲ್ಲಿ ಕೃಷಿ ಬೆಲೆ ನೀತಿಯು ಮುಖ್ಯವಾಗಿ ಎರಡು ಹಂತಗಳನ್ನು ದಾಟಿ ಬಂದಿದೆ. ಅವುಗಳೆಂದರೆ, 1. 1965 ರ ಹಿಂದಿನ ಬೆಲೆ ನೀತಿಯು ಯಾವುದೇ ವೈಜ್ಞಾನಿಕ ನೆಲೆಗಳನ್ನು ಹೊಂದಿರಲಿಲ್ಲ. ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಹೆಚ್ಚಾಗಿ ಅನುಭೋಗಿ ಪರ ಬೆಲೆ ನೀತಿಯನ್ನು ಅನುಸರಿಸಲಾಯಿತು. ಆಹಾರಧಾನ್ಯಗಳ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರ 8 ಆಹಾರ ವಲಯಗಳನ್ನು ಸೃಷ್ಟಿಸಿತು. 1964ರಲ್ಲಿ ಕೃಷಿ ಆಯೋಗ ಮತ್ತು ಬೆಲೆ ಆಯೋಗವನ್ನು ರಚಿಸಲು ಸಲಹೆ ನೀಡಿತು. 2. 1965 ರ ನಂತರ ನೀತಿ : 1965 ರ ಜನವರಿ ತಿಂಗಳಿನಲ್ಲಿ ಸರ್ಕಾರ ಕೃಷಿ ಬೆಲೆ ಆಯೋಗವನ್ನು ಸ್ಥಾಪಿಸಿತು. ಇದನ್ನು 1985 ರಲ್ಲಿ ಸರ್ಕಾರ ಕೃಷಿ ವೆಚ್ಚ ಮತ್ತು ಬೆಲೆ ಆಯೋಗ ಎಂದು ಮರು ನಾಮಕರಣ ಮಾಡಿತು. ಈ ಆಯೋಗ ಸ್ಥಾಪನೆಯಾದ ದಿನದಿಂದ ಭಾರತದಲ್ಲಿ ಒಂದು ಅರ್ಥಗರ್ಭಿತ ಬೆಲೆ ಮತ್ತು ವಿತರಣಾ ನೀತಿಯನ್ನು ಅನುಸರಿಸಲು ಪ್ರಾರಂಭಿಸಿತು.

ಈ ನೀತಿಯ ಉದ್ದೇಶಗಳೆಂದರೆ, *. ಸಾಮಾನ್ಯ ಬೆಲೆಯಲ್ಲಿನ ಸ್ಥಿರತೆ ಕಾಪಾಡುವುದು. *. ವಿವಿಧ ಕೃಷಿ ಸಾಮಗ್ರಿಗಳ ಬೆಲೆಗಳ ನಡುವಣ ಸಾಮರಸ್ಯ ಸಾಧನೆ. *. ಋತುಮಾನದ ಬೆಲೆ ಏರಿಳಿತಗಳನ್ನು ಕಡಿಮೆಗೊಳಿಸುವುದು. *. ಆರ್ಥಿಕ ಬೆಳವಣಿಗೆಯಲ್ಲಿ ವ್ಯವಸ್ಥಿತವಾದ ಬೆಳವಣಿಗೆ ಸಾಧನೆ. 1986 ರ ನವೆಂಬರ್ 14 ರಂದು ಸರ್ಕಾರ ಒಂದು ಹೊಸ ದೀರ್ಘಕಾಲಿಕ ಕೃಷಿಬೆಲೆ ನೀತಿಯನ್ನು ಜಾರಿಗೆ ತಂದಿತು. ಈ ನೀತಿಯು ರೈತರು ಮತ್ತು ಅನುಭೋಗಿಗಳ ಹಿತರಕ್ಷಣೆಯನ್ನು ಕಾಪಾಡುವ ಭರವಸೆ ನೀಡಿತು. **ಹೊಸಬೆಲೆ ನೀತಿಯ ಪ್ರಮುಖ ಲಕ್ಷಣಗಳೆಂದರೆ,** * ವಿವಿಧ ಕೃಷಿ ಸಾಮಗ್ರಿಗಳ ಉತ್ಪಾದನೆಯ ನಡುವಿನ ಅಸಮತೋಲನದ ನಿವಾರಣೆ. *ಪ್ರಾದೇಶಿಕ ಬೆಲೆ ನಿರ್ಧಾರ ನೀತಿಯನ್ನು ರದ್ದುಗೊಳಿಸುವುದು. *ಕೃಷಿ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸುವುದು. *ಬೆಲೆ ನೀತಿಯ ಅನುಷ್ಠಾನಕ್ಕಾಗಿ ಮೂಲಭೂತ ಸೌಕರ್ಯಗಳ ನಿರ್ಮಾಣ. *ಬೆಂಬಲ ಬೆಲೆ ಘೋಷಣೆಗೆ ಕಾಲಮಿತಿಯ ನಿರ್ಧಾರ. *ರಫ್ತು ಸರಕುಗಳ ಉತ್ಪಾದನೆಗೆ ಉತ್ತೇಜನ ನೀಡುವುದು.

ಮೂರನೇ ಹಂತ : ಭಾರತೀಯ ಕೃಷಿ ಕ್ಷೇತ್ರದ 3ನೇ ಹಂತ 1980–2000 ಎಂದು ಗುರುತಿಸಲಾಗಿದೆ. ಈ ಹಂತದಲ್ಲಿ ಹೊಸ ಕೃಷಿ ಬೆಲೆ ನೀತಿಯನ್ನು ಜಾರಿಗೆ ತರಲಾಯಿತು. ಈ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯ ಜೊತೆಗೆ ಹಾಲು, ಮೀನುಗಾರಿಕೆ, ಕೋಳಿ, ತರಕಾರಿ, ಹಣ್ಣುಗಳು ಮುಂತಾದ ಕೃಷಿಯೇತರ ಉತ್ಪಾದನೆಯಲ್ಲಿಯೂ

ಗಣನೀಯ ವೇಗ ಕಂಡಿತು. ಸರ್ಕಾರವು ಈ ಅವಧಿಯಲ್ಲಿ ಕೃಷಿಕರನ್ನು ಉತ್ತೇಜಿಸಲು ರಿಯಾಯಿತಿ ದರದಲ್ಲಿ ಸಾಲವನ್ನು ಒದಗಿಸಿತು. ಅಲ್ಲದೇ, ಸಾರ್ವಜನಿಕ ವಲಯದಿಂದಲೂ ಕೃಷಿಗೆ ಬೆಂಬಲ ದೊರಕಿತು.

ಭಾರತದ ಕೃಷಿ ಕ್ಷೇತ್ರದ 2000ನೇ ವರ್ಷದ ನಂತರದ ಬೆಳವಣಿಗೆಗಳು : 2000 ವರ್ಷದ ಜುಲೈ ತಿಂಗಳಿನಲ್ಲಿ ಭಾರತ ಸರ್ಕಾರವು ಹೊಸ ಕೃಷಿ ನೀತಿಯನ್ನು ಪ್ರಾರಂಭಿಸಿತು. ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಕೃಷಿ ವಲಯದಲ್ಲಿ ವಾರ್ಷಿಕ ಶೇಕಡ 4ರಷ್ಟು ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿತ್ತು. ಇದು ಸರ್ಕಾರ ರೂಪಿಸಿದ ಮೊಟ್ಟಮೊದಲ ಕೃಷಿ ನೀತಿಯಾಗಿತ್ತು. ಈ ನೀತಿಯಲ್ಲಿ ಹಿಂದಿನ ಕೃಷಿ ಪದ್ಧತಿ ಹೇಗಿತ್ತು? ಆಗಬೇಕಾಗಿರುವ ಸುಧಾರಣೆಗಳೇನು? ಹೇಗೆ ಕೃಷಿಯಲ್ಲಿ ಸ್ವಾವಲಂಭನೆಯನ್ನು ಸಾಧಿಸಬಹುದೆಂದು ಚರ್ಚಿಸಲಾಗಿತ್ತು. ಹಾಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಈ ಯೋಜನೆಯನ್ನು ಜಾರಿಗೆ ತರಲು ಸಮಯವನ್ನು ನಿಗಧಿಪಡಿಸಿದವು. ಈ ಅವಧಿಯಲ್ಲಿನ ಅಮೋಘ ಸಾಧನೆಯೆಂದರೆ, ಆಹಾರ ಧಾನ್ಯ ಸ್ವಾವಲಂಬನೆ ಪಡೆದದ್ದು ಮತ್ತು ಅತ್ಯಂತ ಪ್ರಮುಖವಾದ ಎರಡು ಸಂಸ್ಥೆಗಳು ಸೃಷ್ಟಿಯಾದದ್ದು. ಅವುಗಳೆಂದರೆ, 1. ಕೃಷಿ ಬೆಲೆ ಆಯೋಗ 2. ಫುಡ್ ಕಾರ್ಪೊರೇಷನ್ ಈ ಎರಡು ಸಂಸ್ಥೆಗಳು ಮುಂದಿನ ಹಸಿರುಕ್ರಾಂತಿಗೆ ನಾಂದಿ ಹಾಡಿದವು. ಮತ್ತು ಪ್ರತಿಕೂಲ ಪರಿಣಾಮಗಳಿಂದ ರಕ್ಷಿಸಿಕೊಳ್ಳಲು ಕೃಷಿಕರಿಗೆ ಸಹಾಯ ಮಾಡಿದವು. ದೇಶದ ಪ್ರಮುಖ ಬೆಳೆಗಳಾದ ಅಕ್ಕಿ ಮತ್ತು ಗೋಧಿ ಪೂರೈಕೆಯನ್ನು ಸಮರ್ಪಕವಾಗಿ ನಿರ್ವಹಿಸಿದವು. ಈ ನೀತಿಯಲ್ಲಿ ಕೈಗೊಂಡ ಕೆಲವು ಸುಧಾರಣಾ ಕ್ರಮಗಳೆಂದರೆ,

- ✓ ಸಮಸ್ತ ದೇಶದಲ್ಲಿ ಕೃಷಿ ಸರಕುಗಳ ಸಾಗಾಟದ ಮೇಲಿನ ನಿರ್ಭಂಧಗಳನ್ನು ತೊಡೆದು ಹಾಕುವುದು.
- ✓ ಮಾನವ ಸಂಪನ್ಮೂಲ ಅಭಿವೃದ್ಧಿ, ಸುಗ್ಗಿ ನಂತರದ ನಿರ್ವಹಣೆ, ಕೃಷಿ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು.
- ✓ ನಿಯಂತ್ರಣ ಮತ್ತು ತೆರಿಗೆ ಸಂಗ್ರಹ ವ್ಯವಸ್ಥೆಯಿಂದ ಕೃಷಿಯನ್ನು ಹೊರಗಿಡುವುದು.
- ✓ ಕೃಷಿಯಲ್ಲಿ ಒಟ್ಟಾರೆಯಾಗಿ ವಾರ್ಷಿಕ ಶೇಕಡ 4 ಕ್ಕಿಂತ ಅಧಿಕ ದರದ ಪ್ರಗತಿಯನ್ನು ಸಾಧಿಸಿ ಸ್ವಾವಲಂಬನೆ ಸಾಧನೆಯ ಜೊತೆಗೆ ರಫ್ತು ಆದಿತ್ಯವನ್ನು ಸಾಧಿಸುವುದು.
- ✓ ಕೃಷಿಯ ವ್ಯಾಪಾರದ ಕರಾರನ್ನು ಸುಧಾರಿಸುವುದು, ಆಂತರಿಕ ಮತ್ತು ಬಾಹ್ಯ ಮಾರುಕಟ್ಟೆ ಸುಧಾರಣೆ, ಆಂತರಿಕ ತೆರಿಗೆ, ಸಂರಚನೆಯ ಸುಧಾರಣೆಯೊಂದಿಗೆ ಬಲಪಡಿಸುವುದು.
- ✓ ಕೃಷಿ ಸಾಮಗ್ರಿಗಳ ರಫ್ತನ್ನು ಉತ್ತೇಜಿಸಲು ಅನುಕೂಲಕರವಾದ ವಾತಾವರಣವನ್ನು ನಿರ್ಮಿಸುವುದು ಮತ್ತು ಸಾಗರೋತ್ಪನ್ನಗಳ ರಫ್ತಿಗೆ ಆದ್ಯತೆ ನೀಡುವುದು.

ಇವುಗಳೊಂದಿಗೆ ಇನ್ನೂ ಹಲವು ಉದ್ದೇಶಗಳ ಈಡೇರಿಕೆಗಾಗಿ ಕೇಂದ್ರ ಸರ್ಕಾರವು 2004ರ ಫೆಬ್ರವರಿ 10 ರಂದು ಕೃಷಿಕರ ರಾಷ್ಟ್ರೀಯ ಆಯೋಗ (National Commission on Formers) ವನ್ನು ರಚಿಸಿತು.

2001–2002 ರಲ್ಲಿ ಭಾರತದ ಕೃಷಿ ಕ್ಷೇತ್ರದಲ್ಲಿ ಗಣನೀಯ ಬದಲಾವಣೆ ಗಳಾದವು. ಅವುಗಳೆಂದರೆ,

ಂ ಕೇಂದ್ರ ಸರ್ಕಾರ ತೆಂಗಿನಕಾಯಿ ತಂತ್ರಜ್ಞಾನ ಮಿಷನ್ ಯೋಜನೆಯನ್ನು 2001–02 ರಲ್ಲಿ ಅನುಷ್ಠಾನಕ್ಕೆ ತಂದಿತು. ಇದರ ಮೂಲಕ ತಂತ್ರಜ್ಞಾನ ಅಭಿವೃದ್ಧಿ, ಸಂಸ್ಕರಣೆ ಉತ್ಪನ್ನ ವೈವಿಧ್ಯೀಕರಣಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಶ್ರಮಿಸಲಾಯಿತು.

ಂ ಗ್ರಾಮಗಳ ನಿರ್ಮಾಣ, ನವೀಕರಣ ಮತ್ತು ಗೋದಾಮುಗಳ ನಿರ್ಮಾಣ, ನವೀಕರಣೆಗೆ ಸಂಬಂಧಪಟ್ಟ ಗ್ರಾಮೀಣ ಬಂಡಾರ ಯೋಜನೆಯನ್ನು ಸರ್ಕಾರ 2001–02 ರಲ್ಲಿ ಅನುಷ್ಠಾನಕ್ಕೆ ತಂದಿತು.

ಂ ಕೇಂದ್ರ ಸರ್ಕಾರವು ಪೂರ್ಣ ಕ್ರಿಯಾತ್ಮಕ ಸ್ವಾಯತ್ತತೆಯನ್ನು ಸಹಕಾರಿ ಸಂಸ್ಥೆಗಳಿಗೆ ನೀಡುವ ಉದ್ದೇಶದಿಂದ ಸಹಕಾರಿ ಸಂಘಗಳ ಕಾಯಿದೆಯನ್ನು 2002 ರಲ್ಲಿ ಜಾರಿಗೆ ತಂದಿತು. ಇದರ ಮೂಲಕ ರೈತರಿಗೆ ಪ್ರತಿ ಬೆಳೆಗೆ ರೂ. 50,000/– ದವರೆಗೂ ಸಾಲವನ್ನು ಶೇಕಡಾ 9 ರಷ್ಟು ಬಡ್ಡಿದರದಲ್ಲಿ ನೀಡಬೇಕೆಂಬ ನಿಯಮವನ್ನು ಜಾರಿಗೊಳಿಸಿತು.

ಂ ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳನ್ನು ತಗ್ಗಿಸಲು ಮತ್ತು ಮೂಲ ಸೌಕರ್ಯಗಳನ್ನು ಹೆಚ್ಚಿಸಲು 50,000/– ಕೋಟಿ ರೂಪಾಯಿಗಳ ಸಾಲ ನೀಡುವ ಕಾರ್ಯಕ್ರಮವನ್ನು ಘೋಷಿಸಿತು. ಇದರಲ್ಲಿ ಕೃಷಿ ಮೂಲಭೂತ ಸೌಲಭ್ಯಗಳು, ಭೂಮಿ ಅಭಿವೃದ್ಧಿ, ಸಣ್ಣ ನೀರಾವರಿ, ಸಹಕಾರ, ಕೃಷಿ ಉತ್ಪನ್ನ ಮತ್ತು ಸಂಸ್ಕರಣೆ, ಶೈತಾಲ್ಯಗಳನ್ನು ನಿರ್ಮಿಸಲು ಸಾಲ ಕೊಡುವುದಾಗಿ ತಿಳಿಸಿತು. ಈ ಕಾರ್ಯಕ್ರಮ ನಿರ್ವಹಣೆಯನ್ನು ನಬಾರ್ಡ್ ಸಂಸ್ಥೆಗೆ ವಹಿಸಿತು ಮತ್ತು ಕಡಿಮೆ ಸ್ಪರ್ಧಾತ್ಮಕ ಬಡ್ಡಿದರದಲ್ಲಿ ರೈತರಿಗೆ ಸಾಲ ಸಿಗುವಂತೆ ಮಾಡಿತು.

ಂ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯು ಬರ, ಪ್ರವಾಹ, ಆಲಿಕಲ್ಲು, ಮಳೆ, ಚಂಡಮಾರುತದಂತಹ ನೈಸರ್ಗಿಕ ವಿಕೋಪಗಳು ಮತ್ತು ಬೆಳೆನಷ್ಟದಂತಹ ಸಮಸ್ಯೆಗಳಿಂದ ರೈತರನ್ನು ಸಂರಕ್ಷಿಸುವ ಗುರಿಯನ್ನು ಹೊಂದಿದೆ. ಈ ಯೋಜನೆಯು ಪ್ರಸ್ತುತ 22 ರಾಜ್ಯ ಮತ್ತು 2 ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಯಲ್ಲಿದೆ.

ಂ ಬೆಳೆ ವಿಮೆ ಮತ್ತು ಬೀಜ ಯೋಜನೆಯು ಪ್ರಸ್ತುತ ಆಂಧ್ರಪ್ರದೇಶ, ಹರಿಯಾಣ, ಕರ್ನಾಟಕ ಮತ್ತು ಮಧ್ಯಪ್ರದೇಶ, ಛತ್ತೀಸ್‌ಘಡ್, ಮಹಾರಾಷ್ಟ್ರ, ಉತ್ತರಪ್ರದೇಶ, ಉತ್ತರಾಂಚಲ, ಗುಜರಾತ್‌ನಲ್ಲಿ ಅನುಷ್ಠಾನಗೊಳಿಸಲಾಗಿದೆ.

ಂ ರೈತರಲ್ಲಿ ವಿವಿಧ ಸಸ್ಯ ಪ್ರಬೇಧವನ್ನು ಬೆಳೆಯಲು ಪ್ರೋತ್ಸಾಹಿಸುವ ಸಲುವಾಗಿ ರೈತರ ಹಕ್ಕುಗಳ ಸಸ್ಯ ಪ್ರಬೇಧ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಇದು ಹೊಸ ತಳಿಯನ್ನು ರೈತರು ಬೆಳೆಯುವಂತೆ ಪ್ರೋತ್ಸಾಹ ನೀಡುತ್ತಿದೆ.

ಂ ರಾಷ್ಟ್ರೀಯ ಬೀಜ 2002 ಯೋಜನೆಯು ಉತ್ತಮ ಗುಣಮಟ್ಟದ ಬೀಜಗಳ ಸಕಾಲ ಲಭ್ಯತೆ, ಕಡ್ಡಾಯ ನೋಂದಣಿ, ಬೀಜ ಉದ್ಯಮಗಳ ಪ್ರಚಾರ, ಉತ್ತಮ ಬಿತ್ತನೆ ಬೀಜಗಳ ಆಮದುಗಳ ಪೂರೈಕೆಯ ಉದ್ದೇಶವನ್ನು ಹೊಂದಿದೆ.

ಂ 2001–2002 ರಲ್ಲಿ ಅಗ್ರಿ ಕ್ಲಿನಿಕ್ಸ್ ಮತ್ತು ಅಗ್ರಿಬಸ್ನೆಸ್ ಯೋಜನೆ ಪ್ರಾರಂಭವಾಯಿತು. ಇದು ಉದ್ಯೋಗರಹಿತ ಕೃಷಿ ಪದವಿದಾರರಿಗೆ ಖಾಸಗಿ ಉದ್ಯಮವನ್ನು ಸ್ಥಾಪಿಸಲು ನೆರವಾಗುತ್ತಿದೆ ಮತ್ತು ತರಬೇತಿಯನ್ನು ನೀಡುತ್ತಿದೆ.

ಮೊದಲ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1951–1956)

: ಆಹಾರ ಉತ್ಪಾದನೆ 54 ದಶಲಕ್ಷ ಟನ್ನುಗಳಿಂದ 65.8 ದಶಲಕ್ಷ ಟನ್ನುಗಳಿಗೇರಿತು. (ಗುರಿ 61.5 ದಶಲಕ್ಷ ಟನ್ನುಗಳು). ಎಣ್ಣೆಕಾಳುಗಳ ಉತ್ಪಾದನೆ ನಿರೀಕ್ಷೆಗಿಂತ ಅಧಿಕವಿತ್ತು. ಈ ಅವಧಿಯಲ್ಲಿ ಭಾಕ್ರಾನಂಗಲ್, ಕೋಸಿ, ಮಹಾನದಿ, ಹಿರಾಕುಡ್, ನಾಗಾರ್ಜುನಸಾಗರ, ತುಂಗಭದ್ರಾ, ಚಂಬಲ್ ಮುಂತಾದ ವಿವಿದೋದ್ದೇಶ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಯಿತು. ಇದರಿಂದಾಗಿ 5.7 ದಶಲಕ್ಷ ಹೆಕ್ಟೇರ್ ಭೂಮಿಗೆ ಹೊಸದಾಗಿ ನೀರಾವರಿ ಸೌಲಭ್ಯ ದೊರೆಯಿತು. ದೇಶದ ಶೇಕಡ 40 ಭಾಗದ ಹಳ್ಳಿಗಳಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಅಳವಡಿಸಲಾಯಿತು. ಜಪಾನ್ ಮಾದರಿಯ ಬೇಸಾಯ ಕ್ರಮವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲಾಯಿತು.

ಎರಡನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1956–1961) : ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ.979 ಕೋಟಿ (ಶೇಕಡ21) ಯನ್ನು ಕೃಷಿ ಮೇಲೆ ವೆಚ್ಚಮಾಡಲಾಯಿತು. ಈ ಯೋಜನೆಯ ಅವಧಿಯಲ್ಲಿ ಆಹಾರ ಉತ್ಪಾದನೆ 65.8 ದಶಲಕ್ಷ ಟನ್ನುಗಳಿಂದ 79.7 ದಶಲಕ್ಷ ಟನ್ನುಗಳಿಗೇರಿತು (80.5 ದಶಲಕ್ಷ ಟನ್ನುಗಳ ಗುರಿ). ಹತ್ತಿ, ಸೆಣಬು, ಎಣ್ಣೆಕಾಳುಗಳ ಉತ್ಪಾದನೆ ನಿರೀಕ್ಷಿತ ಪ್ರಮಾಣಕ್ಕಿಂತ ಕಡಿಮೆಯಾಯಿತು. ಇದರಿಂದಾಗಿ ಆಹಾರ ಧಾನ್ಯಗಳ ಬೆಲೆ ವಿಪರೀತವಾಗಿ ಏರಿದವು. ಒಟ್ಟಾರೆಯಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಿರೀಕ್ಷಿತ ಗುರಿ ತಲುಪಲಾಗದಿದ್ದರೂ ಸಹ ಮಹತ್ವದ ಪ್ರಗತಿಯನ್ನು ಸಾಧಿಸಲಾಯಿತು.

ಮೂರನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1961–1966) : ಮೂರನೇ ಪಂಚವಾರ್ಷಿಕ ಯೋಜನೆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಗುರಿ ಹೊಂದಿತ್ತು. ಈ ಅವಧಿಯಲ್ಲಿ ಕೃಷಿ ರಂಗದಲ್ಲಿ ರು. 1745 ಕೋಟಿ (ಶೇಕಡ 20.4) ವೆಚ್ಚ ಮಾಡಲಾಯಿತು. ಈ ಅವಧಿಯಲ್ಲಿ 80 ಲಕ್ಷ ಹೆಕ್ಟೇರು ಭೂಮಿಗೆ ಹೊಸದಾಗಿ ನೀರಾವರಿ ಸೌಲಭ್ಯ ಕಲ್ಪಿಸಲಾಯಿತು. ಆಹಾರ ಧಾನ್ಯಗಳ ಉತ್ಪಾದನೆ 100 ದಶಲಕ್ಷ ಟನ್ನುಗಳ ಗುರಿ ಬದಲಿಗೆ ಕೇವಲ 72 ದಶಲಕ್ಷ ಟನ್ನುಗಳ ಉತ್ಪಾದನೆಯಾಯಿತು. ಕಬ್ಬಿನ ಉತ್ಪಾದನೆಯೊಂದನ್ನು ಹೊರತುಪಡಿಸಿದರೆ ಬೇರೆಲ್ಲಾ ವಾಣಿಜ್ಯ ಬೆಳೆಗಳ ಉತ್ಪಾದನೆ ಕುಂಠಿತಗೊಂಡಿತು. ಆಹಾರಧಾನ್ಯಗಳ ಉತ್ಪಾದನೆಯ ಕುಂಠಿತದಿಂದಾಗಿ ಬೆಲೆಗಳು ವಿಪರೀತ ಏರಿದವು. ಹವಾಮಾನದಲ್ಲಿ ವೈಪರೀತ್ಯಗಳು, ಚೈನಾ ಮತ್ತು ಪಾಕಿಸ್ತಾನಗಳ ದಾಳಿ, ಯೋಜನೆಯಲ್ಲಿನ ದೋಷಗಳು ಮುಂತಾದುವು ಈ ಪರಿಸ್ಥಿತಿಗೆ ಕಾರಣವಾದವು.

ವಾರ್ಷಿಕ ಯೋಜನೆಗಳು (1966–1969) : 1966–67, 1967–69 ಮತ್ತು 1968–69 ರ ನಡುವಿನ ಮೂರು ವಾರ್ಷಿಕ ಯೋಜನೆಗಳಾವಧಿಯಲ್ಲಿ ಕೃಷಿಗೆ ಪುನಃ ಮೊದಲ ಆಧ್ಯತೆ ನೀಡಲಾಯಿತು, ಆಹಾರ ಮತ್ತು ಕೃಷಿ ಕಚ್ಚಾ ಸಾಮಗ್ರಿಗಳ ಉತ್ಪಾದನೆಯನ್ನು ಹೆಚ್ಚಿಸುವುದು ಈ ಯೋಜನೆಗಳ ಉದ್ದೇಶವಾಗಿದ್ದಿತು. ಈ ವೇಳೆಯಲ್ಲಿ ಒಟ್ಟು ರು. 1624 ಕೋಟಿ (ಶೇಕಡ 24) ಗಳನ್ನು ಕೃಷಿ ಮೇಲೆ ವೆಚ್ಚ ಮಾಡಲಾಯಿತು. ಈ ಅವಧಿಯಲ್ಲಿ ಆಹಾರಧಾನ್ಯಗಳ ಉತ್ಪಾದನೆ ಉದ್ದೇಶಿತ ಗುರಿ 102 ದಶಲಕ್ಷ ಟನ್ನುಗಳ ಬದಲಿಗೆ 95 ದಶಲಕ್ಷ ಟನ್ನುಗಳಷ್ಟಾಯಿತು. 1966 ರಿಂದ 69ರ ನಡುವೆ ಭಾರತದ ಕೃಷಿ ಹೊಸ ಆಯಾಮ ಪಡೆಯಿತು. ಅಧಿಕ ಇಳುವರಿಯ ತಳಿಗಳು, ರಾಸಾಯನಿಕ ಗೊಬ್ಬರಗಳು, ಕ್ರಿಮಿನಾಶಕಗಳು, ನೀರಾವರಿ ಸೌಲಭ್ಯಗಳು ಮುಂತಾದುವನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ಉತ್ಪನ್ನವನ್ನು ಹೆಚ್ಚಿಸುವ ಕರ್ತವ್ಯನಿಷ್ಠ ಕಾರ್ಯಕ್ರಮವಾದ **'ಹಸಿರುಕ್ರಾಂತಿ'** ಯನ್ನು ಜಾರಿಗೊಳಿಸಲಾಯಿತು. ಈ ವೇಳೆಯಲ್ಲಿ ಹೊಸ ಕೃಷಿ ಪದ್ಧತಿಯನ್ನು 'ಅಧಿಕ ಇಳುವರಿ ವೈವಿಧ್ಯಮಯ ಕಾರ್ಯಕ್ರಮ' (HYVP) ಎಂಬ ಹೆಸರಿನಲ್ಲಿ ಜಾರಿಗೆ ತರಲಾಯಿತು. ಸಕ್ಕರೆ, ಎಣ್ಣೆಬೀಜಗಳು, ಹತ್ತಿ ಮತ್ತು ಸೆನಬುಗಳ ಉತ್ಪಾದನೆ ಗಣನೀಯವಾಗಿ ಹೆಚ್ಚಿತು.

ನಾಲ್ಕನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1969–1974) : ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲೂ ಸಹ ಕೃಷಿಗೆ ವಿಶೇಷ ಆಧ್ಯತೆ ನೀಡಲಾಯಿತು. ಈ ಅವಧಿಯಲ್ಲಿ ರೂ. 3814 ಕೋಟಿ (ಶೇಕಡ 24) ಗಳನ್ನು ಕೃಷಿ ಮತ್ತು ನೀರಾವರಿ ಮೇಲೆ ವೆಚ್ಚ ಮಾಡಲಾಯಿತು. ಕೃಷಿ ಸಾಮಗ್ರಿಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಈ ಯೋಜನೆಯ ಗುರಿಯಾಗಿದ್ದಿತು. ಈ ಯೋಜನೆಯ ಅವಧಿಯಲ್ಲಿ ಆಹಾರಧಾನ್ಯಗಳ ಉತ್ಪಾದನೆ 129 ದಶಲಕ್ಷ ಟನ್ನುಗಳ ಉದ್ದೇಶಿತ ಗುರಿಗೆ ಬದಲಾಗಿ 103.6 ದಶಲಕ್ಷ ಟನ್ನುಗಳಷ್ಟಾಯಿತು. ಸುಮಾರು 19.5 ದಶಲಕ್ಷ ಹೆಕ್ಟೇರು ಹೆಚ್ಚುವರಿ ಭೂಮಿಗೆ ಹೊಸದಾಗಿ ನೀರಾವರಿ ಸೌಲಭ್ಯ ಒದಗಿಸಲಾಯಿತು. ಸಕ್ಕರೆ, ಸೆಣಬು, ಹತ್ತಿ ಮತ್ತು ಎಣ್ಣೆಕಾಳುಗಳ ಉತ್ಪಾದನೆ ಗಣನೀಯವಾಗಿ ಹೆಚ್ಚಿತಾದರೂ ವಿವಿಧ ಕೃಷಿ ಸಾಮಗ್ರಿಗಳ ಉತ್ಪಾದನೆಯ ಗುರಿಯನ್ನು ತಲುಪಲಾಗಲಿಲ್ಲ. ಆದರೆ ಹಸಿರುಕ್ರಾಂತಿಯ ಫಲಗಳಿಂದಾಗಿ ಗೋಧಿಯ ಉತ್ಪಾದನೆ ಗಣನೀಯವಾಗಿ ಹೆಚ್ಚಿತು. ಈ ಅವಧಿಯಲ್ಲಿ ಸುಮಾರು 16 ದಶಲಕ್ಷ ಹೆಕ್ಟೇರು ಭೂಮಿಯನ್ನು ಹೆಚ್ಚು ಇಳುವರಿಯ ತಳಿಗಳ ಪ್ರಯೋಗಕ್ಕೆ ಒಳಪಡಿಸಲಾಯಿತು.

ಐದನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1974–1979) : ಐದನೇ ಪಂಚವಾರ್ಷಿಕ ಯೋಜನೆಯೂ ಸಹ ಕೃಷಿಗೆ ಪ್ರಥಮಾಧ್ಯತೆ ನೀಡಿ ರೂ. 8084 ಕೋಟಿ (ಶೇಕಡ 20.5) ಗಳನ್ನು ಕೃಷಿ ಮೇಲೆ ತೊಡಗಿಸಿತು. ಈ ಯೋಜನೆ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಉದ್ದೇಶಗಳನ್ನೇ ಮುಂದುವರಿಸಿತು. ಈ ಯೋಜನೆಯಲ್ಲಿ ಸುಮಾರು 8.6 ದಶಲಕ್ಷ ಹೆಕ್ಟೇರು ಹೆಚ್ಚುವರಿ ಭೂಮಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಲಾಯಿತು. ಆಹಾರಧಾನ್ಯಗಳ ಉತ್ಪಾದನೆಯ ಉದ್ದೇಶಿತ ಗುರಿ 140 ದಶಲಕ್ಷ ಟನ್ನುಗಳಿಗೆ ಬದಲಾಗಿ 126 ದಶಲಕ್ಷ ಟನ್ನುಗಳಿಗೇರಿತು. ಎಣ್ಣೆಕಾಳು ಮತ್ತು ಬೇಳೆ ಕಾಳುಗಳು, ರಸಗೊಬ್ಬರ ಮತ್ತು ಅಧಿಕ ಇಳುವರಿ ಬಿತ್ತನೆ ಬೀಜಗಳ ಉತ್ಪಾದನೆಯಲ್ಲಿ ನಿರೀಕ್ಷಿತ ಗುರಿ ತಲುಪಲಾಗಲಿಲ್ಲ. ಆದರೆ ಕಬ್ಬಿನ ಉತ್ಪಾದನೆಯಲ್ಲಿ ಗುರಿ ತಲುಪವುದು ಕಷ್ಟವಾಗಲಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಐದನೇ ಯೋಜನೆಯ ಸಾಧನೆ ಅಷ್ಟೇನೂ ಸಮಾಧಾನಕರವಾಗಿರಲಿಲ್ಲ. ಹವಾಮಾನದ ವೈಪರೀತ್ಯಗಳು ಈ ಯೋಜನಾವಧಿಯಲ್ಲಿ ಪ್ರಮುಖ ತೊಡಕಾಗಿದ್ದವು.

ಆರನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1980–85) : ಈ ಅವಧಿಯಲ್ಲಿ ಆಹಾರಧಾನ್ಯಗಳ ಉತ್ಪಾದನೆ 126 ದಶಲಕ್ಷ ಟನ್ನುಗಳಿಂದ ಯೋಜನೆಯ ಅಂತ್ಯದ ವೇಳೆ 146 ದಶಕಲಕ್ಷ ಟನ್ನುಗಳಿಗೇರಿತು. ಹೊಸದಾಗಿ 11 ದಶಲಕ್ಷ ಹೆಕ್ಟೇರು ಭೂಮಿಗೆ

ನೀರಾವರಿ ಸೌಲಭ್ಯ ಒದಗಿಸಲಾಯಿತು. ಕಾಳುಗಳ ಉತ್ಪಾದನೆಯಲ್ಲಿ ನಿರೀಕ್ಷಿತ ಗುರಿಯನ್ನು ತಲುಪಲಾಯಿತು. ಕಬ್ಬು, ಹತ್ತಿ, ಸೆಣಬು ಮತ್ತು ರಾಸಾಯನಿಕ ಗೊಬ್ಬರಗಳ ಉತ್ಪಾದನೆಯಲ್ಲಿ ನಿರೀಕ್ಷಿತ ಗುರಿ ತಲುಪಲಾಗದಿದ್ದರೂ ಸಹ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ಏರಿತು. ಸುಧಾರಿತ ತಳಿಗಳು, ರಾಸಾಯನಿಕ ಗೊಬ್ಬರ ಮತ್ತು ವಿದ್ಯುತ್ತಿನ ಬಳಕೆಯಲ್ಲಿ ಗಣನೀಯ ಪ್ರಗತಿ ಸಾಧಿಸಲಾಯಿತು.

ಏಳನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1985–90) ಆಹಾರಧಾನ್ಯಗಳ ಉತ್ಪಾದನೆ 146 ದಶಲಕ್ಷ ಟನ್ನುಗಳಿಂದ ಯೋಜನೆಯ ಅಂತ್ಯದ ವೇಳೆಗೆ 172 ದಶಲಕ್ಷ ಟನ್ನುಗಳಿಗೆ ಏರಿತು. ಕಬ್ಬಿನ ಉತ್ಪಾದನೆ 210 ದಶಲಕ್ಷ ಟನ್ನುಗಳಿಗೆ ಸೆಣಬಿನ ಉತ್ಪಾದನೆ 8.9 ದಶಲಕ್ಷ ಬೇಲುಗಳಿಗೆ ಮತ್ತು ಎಣ್ಣೆಕಾಳುಗಳ ಉತ್ಪಾದನೆ 17 ದಶಲಕ್ಷ ಬೇಲುಗಳಿಗೆ ಇಳಿದವು. ಆದರೆ ಹತ್ತಿಯ ಉತ್ಪಾದನೆ ಮಾತ್ರ ಉದ್ದೇಶಿತ ಗುರಿ 9.5 ದಶಲಕ್ಷ ಬೇಲಿಗಿಂತ ಅಧಿಕ ಪ್ರಮಾಣದಲ್ಲಿ ಉತ್ಪಾದನೆಯಾಯಿತು. 8.83 ದಶಲಕ್ಷ ಹೆಕ್ಟೇರು ಭೂಮಿಗೆ ಹೊಸದಾಗಿ ನೀರಾವರಿ ಸೌಲಭ್ಯ ಕಲ್ಪಿಸಲಾಯಿತು.

ಎಂಟನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1992–97) : ಎಂಟನೇ ಪಂಚವಾರ್ಷಿಕ ಯೋಜನೆ ಈ ಹಿಂದಿನ ಕೃಷಿ ಮತ್ತು ಅದರ ಸಂಬಂಧೀ ವಲಯಗಳಿಗೆ ಪ್ರಥಮಾದ್ಯತೆ ನೀಡುವ ಸಂಪ್ರದಾಯವನ್ನು ಮುಂದುವರಿಸಿತು. ಈ ಯೋಜನಾವಧಿಯಲ್ಲಿ ಕೃಷಿಗೆ ರೂ. 22,467 ಕೋಟಿ, ಗ್ರಾಮೀಣಾಭಿವೃದ್ಧಿಗೆ ರೂ.34,425 ಕೋಟಿ, ವಿಶೇಷ ಪ್ರಾದೇಶಿಕ ಕಾರ್ಯಕ್ರಮಗಳಿಗೆ ರೂ. 6,750 ಕೋಟಿ ಮತ್ತು ನೀರಾವರಿ ಮತ್ತು ನೆರೆ ನಿಯಂತ್ರಣಕ್ಕೆ ರೂ. 32,525 ಕೋಟಿಯಷ್ಟು ಹಣವನ್ನು ವ್ಯಯ ಮಾಡಲಾಯಿತು. ಅಂದರೆ, ಒಟ್ಟು ರೂ. 96,167 ಕೋಟಿ (ಶೇಕಡ 22.2) ಯಷ್ಟು ಹಣವನ್ನು ಕೃಷಿ ಮತ್ತು ಅದರ ಸಂಬಂಧಿ ವಲಯಗಳ ಮೇಲೆ ವಿನಿಯೋಗಿಸಲಾಯಿತು.

ಒಂಬತ್ತನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1997–2002) : 9ನೇ ಪಂಚವಾರ್ಷಿಕ ಯೋಜನೆಯು (1997–2002) ಕೃಷಿ ಮತ್ತು ಸಂಬಂಧಿ ಚಟುವಟಿಕೆಗಳ ಮೇಲೆ ರೂ.4,462 ಕೋಟಿ ಮತ್ತು ನೀರಾವರಿ ಮೇಲೆ ರೂ.55,420 ಕೋಟಿ ಹಣ ಹೂಡಿ ಶೇಕಡ 4.5 ರ ಪ್ರಗತಿಯ ಗುರಿ ಹೊಂದಿತ್ತು. ಒಂಬತ್ತನೇ ಯೋಜನೆಯ ಅಂತ್ಯದ ವೇಳೆಗೆ ಆಹಾರಧಾನ್ಯಗಳ ಉತ್ಪಾದನೆ192 ದಶಲಕ್ಷ ಟನ್ನುಗಳಿಗೆ ಹೆಚ್ಚಿತು. ಆದರೆ ಹಲವಾರು ಕಾರಣಗಳಿಂದಾಗಿ ವಿವಿಧ ಕೃಷಿ ಸಾಮಗ್ರಿಗಳ ಉತ್ಪಾದನೆ ವಿಚಾರದಲ್ಲಿ ಉದ್ದೇಶಿತ ಗುರಿಸಾಧನೆ ಸಾಧ್ಯವಾಗಲಿಲ್ಲ. ನೀರಾವರಿ ವಿಚಾರದಲ್ಲೀ ಸಹ ಇದೇ ಪರಿಸ್ಥಿತಿ ತಲೆದೋರಿತು. ಒಟ್ಟಾರೆಯಾಗಿ ಈ ಯೋಜನೆಯಲ್ಲಿ ಶೇಕಡ 2.06 ರ ಪ್ರಗತಿ ಸಾಧ್ಯವಾಯಿತು.

ಹತ್ತನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (2002–2007) : ಈ ಯೋಜನೆಯ ಅವಧಿಯಲ್ಲಿ ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ರೂ.59,933 ಕೋಟಿ, ಗ್ರಾಮೀಣಾಭಿವೃದ್ಧಿಗೆ ರೂ.1,21,928 ಕೋಟಿ ಹಾಗೂ ನೀರಾವರಿ ಮತ್ತು ನೆರೆ ನಿಯಂತ್ರಣಕ್ಕೆ ರೂ. 1,03,315 ಕೋಟಿಯನ್ನು (ಶೇ.20.1) ನಿಗದಿಗೊಳಿಸಲಾಗಿದೆ. ಅದೇ ರೀತಿ ಕೃಷಿ ಪ್ರಗತಿಗೆ ವಾರ್ಷಿಕ ಶೇಕಡ 4 ರ ಗುರಿಯನ್ನು ಇರಿಸಿಕೊಳ್ಳಲಾಗಿತ್ತು.

ಹನ್ನೊಂದನೇ ಪಂಚ ವಾರ್ಷಿಕ ಯೋಜನೆಯ ಸಾಧನೆಗಳು (2007–2012) : ಈ ಯೋಜನೆಯ ಅವಧಿಯಲ್ಲಿ ವಾರ್ಷಿಕ ಶೇ.4% ರಷ್ಟು ಕೃಷಿ ಬೆಳವಣಿಗೆಗೆ ಸಲಹೆ ನೀಡಿತು. ಕೃಷಿಯು ಕೇವಲ ಸ್ಥೂಲ ಆರ್ಥಿಕ ಬೆಳವಣಿಗೆಗೆ ಮಾತ್ರವಲ್ಲದೆ ಪರಿಪೂರ್ಣ ಬೆಳವಣಿಗೆಗೆ ಕೃಷಿಯ ಅಭಿವೃದ್ಧಿ ಅತ್ಯಗತ್ಯವೆಂದು ಹೇಳಿತು. 2004–05 ರ ಕೃಷಿ ಸಾಧನೆ ಹೆಚ್ಚಾಗಿದ್ದರೆ ಇನ್ನು ಹೆಚ್ಚು ಸುಧಾರಣೆಯನ್ನು ತರಬೇಕು ಎಂಬುದನ್ನು ಈ ಯೋಜನೆ ಒತ್ತಿ ಹೇಳಿತು. ಈ ಅವಧಿಯಲ್ಲಿ ಭಾರತೀಯ ಕೃಷಿಯ ಸಮಸ್ಯೆಗಳನ್ನು ಮತ್ತು ರೈತರ ಕಲ್ಯಾಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಅಭ್ಯಸಿಸಲು ಪ್ರೊ.ಎಂ.ಸ್ವಾಮಿನಾಥನ್‌ರವರ ನೇತೃತ್ವದಲ್ಲಿ ರಾಷ್ಟ್ರೀಯ ಕೃಷಿ ಆಯೋಗವು ಐದು ವರದಿಗಳನ್ನು ಸಿದ್ಧಪಡಿಸಿತು.

12 ನೇ ಪಂಚ ವಾರ್ಷಿಕ ಯೋಜನೆ (2012–2017) : ಗುರಿಗಳು : * ಕೃಷಿ ಕ್ಷೇತ್ರದಲ್ಲಿ ಹೆಚ್ಚು ಹಣವನ್ನು R & D ಯಲ್ಲಿ ತೊಡಗಿಸುವುದು. * ಕೃಷಿ ಕ್ಷೇತ್ರದಲ್ಲಿ ಆಧಾರಿತ ತಂತ್ರಜ್ಞಾನ ಬೆಳವಣಿಗೆಯ ಅಭಿವೃದ್ಧಿ. * ಯುವ ಪದವೀಧರ ಕೃಷಿ ವಿದ್ಯಾರ್ಥಿಗಳನ್ನು ಉತ್ತೇಜನ ನೀಡುವುದು. * ಕೃಷಿ ಕ್ಷೇತ್ರದಲ್ಲಿ ಸಂಶೋಧನಾ ಉದ್ಯಮ ಪಾಲುಗಾರಿಕೆಯನ್ನು ಉತ್ತೇಜಿಸುವುದು. * ರಾಷ್ಟ್ರೀಯ ಕೃಷಿ ಶಿಕ್ಷಣ ವತಿಯಿಂದ ಕೃಷಿಕರಿಗೆ ನೀಡುವ ಶಿಕ್ಷಣಕ್ಕೆ ಆದ್ಯತೆ ನೀಡುವುದು. * ಕೀಟನಾಶಕಗಳು ಮುಂತಾದವನ್ನು ಒದಗಿಸಬೇಕು. * ರೈತರಿಗೆ ಸುಲಭವಾಗಿ ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡುವ ವ್ಯವಸ್ಥೆಯನ್ನು ಮಾಡಬೇಕು. * ಪ್ರಗತಿಪರ ರೈತರನ್ನು ಸನ್ಮಾನಿಸುವುದರ ಮೂಲಕ ಉತ್ತೇಜನವನ್ನು ಸರ್ಕಾರ ನೀಡಬೇಕು. * ಕೃಷಿ ಸಂಶೋಧನೆಗಳು ದೇಶದಾದ್ಯಂತ ವ್ಯಾಪಕವಾಗಿ ನಡೆಸಬೇಕು.

ಉಪಸಂಹಾರ : ಕೃಷಿಕರು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಮುಖಪಾತ್ರ ವಹಿಸುತ್ತಿದ್ದಾರೆ. ಇದಕ್ಕೆ ಕಾರಣ ಕೃಷಿ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆಗಳು. ಆದರೆ, ಇನ್ನೂ ಹೆಚ್ಚು ಸಹಕಾರ, ತಂತ್ರಜ್ಞಾನಗಳು ಮತ್ತು ಯೋಜನೆಗಳು ಪರಿಪೂರ್ಣವಾಗಿ ಕೃಷಿಕರಿಗೆ ಸಿಗುವಂತಾಗಬೇಕು. ಪ್ರಧಾನಮಂತ್ರಿಗಳಾದ ನರೇಂದ್ರಮೋದಿಯವರು ಆಗಸ್ಟ್ 15ರಂದು ಸ್ವತಂತ್ರ್ಯೋತ್ಸವದ ಭಾಷಣದಲ್ಲಿ ಯೋಜನಾ ಆಯೋಗವನ್ನು ರದ್ದು ಮಾಡುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈ ಬಗ್ಗೆ ವಿದ್ವಾಂಸರಲ್ಲಿಯೇ ಭಿನ್ನಾಭಿಪ್ರಾಯಗಳಿವೆ. ಇವೇನೇಯಿದ್ದರೂ 1950ರಿಂದ ಇದುವರೆವಿಗೂ ಯೋಜನಾ ಆಯೋಗ ಹಮ್ಮಿಕೊಂಡ ಕಾರ್ಯಕ್ರಮಗಳು ಸಂಪೂರ್ಣ ಯಶಸ್ವಿಯಾಗದಿದ್ದರೂ ಭಾರತ ಸ್ವಾವಲಂಬನೆ ಸಾಧಿಸುವಲ್ಲಿ ಸಫಲವಾಗಿದೆ.

References

1. A. N. Agrawal: Indian Economy problems of development and planning
2. Alak Ghosh: Indian Economy: Its nature and problems
3. H. R. Krishnamurthy: The Indian economy
4. http: planningcomission.nic.in/sectors/
5. Misra, SK and Puri V. K; Indian Economy
6. Renukarya: Yojana Ayoga, Prajavani Wednesday 27.08.2014

ವಿಷಯ:-05

ಧನ್ವಂತರೀಯಮ್
ಆಯುರ್ವೇದ ಮತ್ತು
ಆರೋಗ್ಯ ವಿಜ್ಞಾನಗಳು

THEME:-05

DHANVANTAREEYAM
AYURVEDA AND HEALTH SCIENCES

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಕಾಲೇಜು ಮಟ್ಟದ ಯುವ ಮಹಿಳೆಯರಲ್ಲಿ ದೇಹ ರಚನೆ, ಹಿಡಿತ ಶಕ್ತಿ ಹಾಗೂ ಮೂಳೆ ಗುಣಗಳ ಕುರಿತು ಒಂದು ಅಧ್ಯಯನ	ಡಾ. ಗಜಾನನ ಪ್ರಭು ಬಿ ಡಾ. ಶಿವಮೂರ್ತಿ ಎ, ಕು. ತಂಗಾರಾಣಿ	423 – 425
2	ಸೈಟೋಟಾಕ್ಸಿಕ್ ಹಾಗೂ ಪ್ರಸರಣ ವಿರೋಧಿ ಅಣುಗಳ, ಗೆಡ್ಡೆ (ಅರ್ಬುದ) ಜೀವಕೋಶಗಳ ಮೇಲಿನ ವಿಶ್ಲೇಷಣೆ ಹಾಗೂ ತನಿಖೆ	ರಕ್ಷಿತ್, ಡಾ.ಪ್ರಭಾಕರ್.ಬಿ.ಟಿ	426 – 428
3	ಆಯುರ್ವೇಧ ಐಧ್ಯಕೀಯ ವಿಜ್ಞಾನಧಲ್ಲಿ ಹೇಳಿಧ ಕೆಲವು ಆಹಾರವರ್ಗಗಳು – ಒಮ್ಮು ವೈಜ್ಞಾನಿಕ ವಿಶ್ಲೇಷಣೆ	ಕುಮಾರಿ. ರಾಜೆಶ್ವರಿ ಆಚಾರ್ಯ ಆನಮ್ಮ ಆಚಾರ್ಯ, ಡಾ. ಶ್ರೀಪಥಿ ಆಚಾರ್ಯ. ಜಿ	428 – 432
4	ತಂತಿಕೀವಿನ ಹಂತದ (ಫಿಬ್ರಿನೋಪುರಲೆಂಟ್ ಸ್ಟೇಜ್) ಎದೆಗೂಡಿನ ಒಳಕೀವಿನ (ಎಂಪಯೀಮಾ ಥೊರಾಸಿಸ್) ಪ್ರಾಥಮಿಕ ಚಿಕಿತ್ಸೆಗೆ ಪಕ್ಕೆಲು ನಡುವಣ ಬಸಿಗೊಳವೆ ಚಿಕಿತ್ಸೆ (ಇಂಟರ್ ಕಾಸ್ಟಲ್ ಡ್ರೈನೇಜ್ - ICD) ಮತ್ತು ಎದೆಗೂಡು ದರ್ಶಕದ ಶಸ್ತಚಿಕಿತ್ಸೆ (ವೀಡಿಯೋ ಅಸಿಸ್ಟೆಡ್ ಥೊರಕೋಸ್ಕೋಪಿಕ್ ಸರ್ಜರಿ-VATS) ಗಳ ನಡುವೆ ಹೋಲಿಕೆಯ ಅಧ್ಯಯನ	ಡಾ॥ ಶಿಶಿರ ಎಸ್. ರಾನಡೆ ಪ್ರೊ. ಡಾ॥ ಬಿ.ಜೆ. ಶರತ್‌ಚಂದ್ರ ಡಾ॥ ತ್ರಿಶೂಲಿ ಪಿ.ಬಿ	432 – 436
5	ಸ್ಥೌಲ್ಯ ರೋಗಧಲ್ಲಿ ಅನಿಪ್ರಭಾ, ತ್ರಿಫಲಾ ವತ ಮಥ್ಥುಪುನರ್ನವಾ ಮಮ್ಮೂರ ಔಷಧಗಳ ಚಿಕಿಥ್ಸಿಕೀಯ ಅಧ್ಯಯನ	ಡಾ. ಶ್ರೀಪಥಿ ಆಚಾರ್ಯ ಜಿ	436 - 439
6	ಸಕ್ಕರೆ ಕಾಲಿನ ಪಾದದ ಹುಣ್ಣುಗಳ ಚಿಕಿತ್ಸೆಗೆ ರೂಢಿಯಲ್ಲಿರುವ ಗಾಯಪಟ್ಟಿ (ಡ್ರೆಸ್ಸಿಂಗ್) ಮತ್ತು ಒತ್ತಡ ರಹಿತ ಗಾಯಪಟ್ಟಿ ವಿಧಾನ (ಆಫ್ ಲೋಡಿಂಗ್ ಟೆಕ್‌ನಿಕ್) ಗಳ ನಡುವಿನ ತುಲನಾತ್ಮಕ ಅಧ್ಯಯನ	ಡಾ॥ ಶಿಶಿರ ಎಸ್. ರಾನಡೆ ಪ್ರೊ. ಬಿ.ಜೆ. ಶರತ್ ಚಂದ್ರ ಡಾ॥ ತ್ರಿಶೂಲಿ ಪಿ.ಬಿ.	439 – 443
7	ಅಡು ಮುಟ್ಟದ ಸೊಪ್ಪು: ಜನಪದೀಯ ಅಧ್ಯಯನ	ಯೋಗೇಶ್. ಬಿ. ಎಸ್	444 - 446
8	ಆಹಾರೌಷಧ-ಅಯುರ್ವೇದ ನ್ಯೂಟ್ರಾಸ್ಯುಟಿಕಲ್ಸ್	ಅಶ್ವಿನಿ. ಹೆಚ್. ಎಸ್ ಡಾ॥ ಸಂದ್ಯಾರಾಣಿ. ಹೆಚ್. ವಿ	446 - 450
9	ಅಜ್ಜಿಯ ವಯಸ್ಸು ಮೊಮ್ಮಕ್ಕಳ ಆರೋಗ್ಯ – ಎತ್ತಣಿಂದ ಎತ್ತಣ ಸಂಬಂಧವಯ್ಯ	ಡಾ. ಮಾಲಿನಿ ಎಸ್. ಎಸ್	450 – 452
10	ಪುರುಷರಲ್ಲಿ ಬಂಜೆತನ ಒಂದು ಅವಲೋಕನ	ಡಾ. ಶ್ರೀನಿವಾಸ. ಜಿ ಡಾ. ಮಾಲಿನಿ. ಎಸ್. ಎಸ್	453 – 455
11	ಮರುಕಳಿಸುವ ಗರ್ಭಪಾತಕ್ಕೆ ಗಂಡಸೆಷ್ಟು ಕಾರಣ?	ಡಾ. ಮಾಲಿನಿ ಎಸ್. ಎಸ್	455 – 457
12	ನಾಟ್ಯಯೋಗದ ಮೂಲಕ ಚಿಕಿತ್ಸೆ	ಡಾ.ಚೇತನಾ ರಾಧಾಕೃಷ್ಣ.ಪಿ.ಎಂ	457 – 460
13	ಆಯುರ್ವೇದ ಮತ್ತುಕನಸ್ಸು	ರಾಚೋಟಿದೇವರು	460 – 463
14	ಬ್ರಿಟಿಷ್ ಮಲಬಾರಿನಲ್ಲಿ ಪಾಶ್ಚಿಮಾತ್ಯ ವೈದ್ಯ ಪದ್ಧತಿ ಹಾಗೂ ಆಂಯುರ್ವೇದ ವೈದ್ಯರ ಪ್ರತಿಕ್ರಿಯೆ	ಮಮತಾ. ಕೆ.	463 – 466

ಕಾಲೇಜು ಮಟ್ಟದ ಯುವ ಮಹಿಳೆಯರಲ್ಲಿ ದೇಹ ರಚನೆ, ಹಿಡಿತ ಶಕ್ತಿ ಹಾಗೂ ಮೂಳೆ ಗುಣಗಳ ಕುರಿತು ಒಂದು ಅಧ್ಯಯನ

* ಡಾ. ಗಜಾನನ ಪ್ರಭು ಬಿ., ** ಡಾ. ಶಿವಮೂರ್ತಿ ಎ, *** ಕು. ತಂಗಾರಾಣಿ

* ಸಹಾಯಕ ಪ್ರಾಧ್ಯಾಪಕರು, *** ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ದೈಹಿಕ ಶಿಕ್ಷಣ ಸಂಶೋಧನಾ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. ** ದೈಹಿಕ ಶಿಕ್ಷಣ ನಿರ್ದೇಶಕರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ,

ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಚಟುವಟಿಕೆ ಯುಕ್ತ ಮತ್ತು ಚಟುವಟಿಕೆ ರಹಿತ ಯುವ ಮಹಿಳೆಯರ ನಡುವಿನ ದೇಹದ ದ್ರವ್ಯರಾಶಿ ಸೂಚಿ, ಪ್ರಬಲ ಕೈಯ ಹಿಡಿತ ಶಕ್ತಿ ಹಾಗೂ ಮೂಳೆಯ ಗುಣಗಳನ್ನು ಹೋಲಿಸುವುದು ಪ್ರಸಕ್ತ ಅಡ್ಡ ಭೇದ ಅಧ್ಯಯನದ ಉದ್ದೇಶವಾಗಿರುತ್ತದೆ. ಯುವ ಹುಡುಗಿಯರ ಜೀವನದಲ್ಲಿ ದೈಹಿಕ ಚಟುವಟಿಕೆ ಹಾಗೂ ಕ್ರೀಡೆಗಳಿಗೆ ಇರುವ ಮಹತ್ವದ ಬಗೆಗಿನ ಅರಿವಿಗೆ ಈ ಅಧ್ಯಯನದ ಫಲಿತಾಂಶವು ಪುಷ್ಠಿ ಒದಗಿಸುತ್ತದೆ. ಬಾಲ್ಯ ಮತ್ತು ಪ್ರೌಢವಸ್ಥೆಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಮೂಳೆಯ ತೂಕಕ್ಕೂ ಮುಂಬರುವ ಜೀವನದ ಹಂತಗಳಲ್ಲಿ ಎದುರಾಗುವ ಅಸ್ಥಿ ರಂಧ್ರತೆ (ಓಸ್ಟಿಯೋಪೊರೋಸಿಸ್)ಗೂ ಸಹ ಸಂಬಂಧವಿರುವುದನ್ನು ಸಾಕ್ಷ್ಯಾಧಾರಗಳು ಸೂಚಿಸುತ್ತವೆ. ಎಲ್ಲಾ ವಯೋಮಾನದಲ್ಲಿಯೂ ಮೂಳೆಯ ತೂಕ ಹೆಚ್ಚಿಸಿಕೊಳ್ಳಲು ಅಥವಾ ಕಾಪಾಡಿಕೊಳ್ಳಲು ದೈಹಿಕ ಚಟುವಟಿಕೆಗಳ ಪ್ರಸಕ್ತತೆಯನ್ನು ಹಲವು ಅಧ್ಯಯನಗಳು ಪ್ರತಿಪಾದಿಸಿವೆ. ಆರೋಗ್ಯ ಮತ್ತು ಭವಿಷ್ಯ ಜೀವನ ಅವಕಾಶಗಳಲ್ಲಿ ದೈಹಿಕ ಚಟುವಟಿಕೆಗಳಿಂದಾಗುವ ಲಾಭದ ಅರಿವಿದ್ದರೂ ಪ್ರೌಢವಸ್ಥೆಯಲ್ಲಿ ಬಹುತೇಕರು ಪ್ರಚಲಿತ ದೈಹಿಕ ಚಟುವಟಿಕೆ ಹಾಗೂ ಸಾರ್ವಜನಿಕ ಆರೋಗ್ಯ ಶಿಫಾರಸುಗಳನ್ನು ಪರಿಪಾಲಿಸುವುದಿಲ್ಲ. ಪ್ರಸ್ತತ ಅಧ್ಯಯನಕ್ಕೆ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಕಾಲೇಜಿಗೆ ಹೋಗುವ 18 ರಿಂದ 20 ವಯೋವರ್ಗದ ತೊಂಬತ್ತೆರಡು ಯುವ ಮಹಿಳೆಯರು ಭಾಗವಹಿಸಿದ್ದರು. ಅದರಲ್ಲಿ ನಲವತ್ತೇಳು ಹುಡುಗಿಯರು ಅಂತರ ಕಾಲೇಜು ಕ್ರೀಡಾಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರಾಗಿದ್ದು, ಇನ್ನುಳಿದ 45 ಹುಡುಗಿಯರು ಯಾವುದೇ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿರಲಿಲ್ಲ. ದೇಹದ ದ್ರವ್ಯರಾಶಿ ಸೂಚಿಯನ್ನು ಕಂಡುಹಿಡಿಯಲು ನಿಂತ ಎತ್ತರ ಮತ್ತು ತೂಕವನ್ನು ಅಳೆಯಲಾಯಿತು. ಕೈಯ ಹಿಡಿತ ಶಕ್ತಿ ಮಾಪಕದ ಸಹಾಯದಿಂದ ಸಾಮಾನ್ಯ ಕುಳಿತ ಸ್ಥಿತಿಯಲ್ಲಿ ಪ್ರಬಲ ಕೈಯ ಹಿಡಿತ ಶಕ್ತಿಯನ್ನು ಮಾಪನ ಮಾಡಲಾಯಿತು. ಪ್ರತಿ ವಿದ್ಯಾರ್ಥಿನಿಯ ಹಿಮ್ಮಡಿಗಳಲ್ಲಿ ಕಂಡು ಬರುವ ದ್ವಿಪಕ್ಷೀಯ ಕ್ಯಾಲ್ಕೀನಿಯ ಮೂಳೆಗಳನ್ನು ಪರಿಮಾಣ ಸಂಬಂಧಿ ಶ್ರವಣಾತೀತ ಸಾಂದ್ರತಾ ಮಾಪಕ (ಕ್ವಾಂಟಿಟೇಟಿವ್ ಅಲ್ಟ್ರಾಸೌಂಡ್ ಡೆನ್ಸಿಟೋಮೀಟರ್)ದ ಸಹಾಯದಿಂದ ಪರೀಕ್ಷಿಸಲಾಯಿತು. ಎರಡು ಗುಂಪುಗಳನ್ನು ಹೋಲಿಸಲು ವಿವರಣಾತ್ಮಕ ಸಂಖ್ಯಾಶಾಸ್ತ್ರ ತಂತಗಳ ಜೊತೆಗೆ 't' ಪರೀಕ್ಷೆಯನ್ನು ಕೈಗೊಳ್ಳಲಾಯಿತು. ಚಟುವಟಿಕೆ ಯುಕ್ತ ಮತ್ತು ಚಟುವಟಿಕೆ ರಹಿತ ಕಾಲೇಜು ಮಟ್ಟದ ಯುವ ಮಹಿಳೆಯರಲ್ಲಿ ಹಿಡಿತ ಶಕ್ತಿ ಮತ್ತು ಮೂಳೆ ಗುಣಗಳಲ್ಲಿ ಮಹತ್ವದ ವ್ಯತ್ಯಾಸ ಕಂಡು ಬಂದಿರುವುದಾಗಿ ಫಲಿತಾಂಶ ಸೂಚಿಸುತ್ತದೆ. ಪ್ರಬಂಧದಲ್ಲಿ ಫಲಿತಾಂಶವನ್ನು ಸವಿವರವಾಗಿ ಚರ್ಚಿಸಲಾಗಿದೆ ಹಾಗೂ ಗೋಚರಿಸಿರುವ ಕೊರತೆಗಳನ್ನು ನೀಗಿಸಲು ವ್ಯಾಯಾಮ ಉಪಾಯಗಳನ್ನು ಉಲ್ಲೇಖಿಸಿದೆ.

ಪ್ರಮುಖ ಪದಗಳು: ಮೂಳೆ ಗುಣಮಟ್ಟ, ಪರಿಮಾಣ ಸಂಬಂಧಿ ಶ್ರವಣಾತೀತ ಸಾಂದ್ರತೆ, ವ್ಯಾಯಾಮ, ಅಸ್ಥಿ ರಂಧ್ರತೆ, ದೇಹದ ರಚನೆ, ದೇಹದ ದ್ರವ್ಯರಾಶಿ ಸೂಚಿ, ಕೈಯ ಹಿಡಿತ ಶಕ್ತಿ.

ಪೀಠಿಕೆ : ಸಾಮಾನ್ಯವಾಗಿ ಹೆಣ್ಣು ಮಕ್ಕಳಲ್ಲಿ ದಿನ ನಿತ್ಯದ ಕಾರ್ಯಗಳ ನಿರ್ವಹಣೆಯಿಂದ ಸೇವಿಸುವ ಆಹಾರ ಮತ್ತು ದೈಹಿಕ ಚಟುವಟಿಕೆಗಳ ನಡುವೆ ಸರಿಯಾದ ಸಮತೋಲನವನ್ನು ಕಾಣಬಹುದು. ಆದರೆ ಸೇವಿಸುವ ಆಹಾರ ಮತ್ತು ದೈಹಿಕ ಚಟುವಟಿಕೆಗಳ ನಡುವಿನ ಸಮ ತೋಲನವಿಲ್ಲದೇ ಇದ್ದಾಗ ದೇಹದ ತೂಕಕ್ಕೆ ಸಂಬಂಧಿಸಿದ ಸಮಸ್ಯೆಗಳು ಉದ್ಭವಿಸುತ್ತವೆ. ದೈಹಿಕ ದಾರ್ಢ್ಯತೆ ಹೆಚ್ಚಿಸಿಕೊಳ್ಳುವಲ್ಲಿ, ದೇಹದಲ್ಲಿನ ಬೊಜ್ಜು ಕಡಿತಗೊಳಿಸುವಿಕೆ, ಹೃದಯ ಸಂಬಂಧಿ ಕಾಯಿಲೆಗಳ ತಡೆಗಟ್ಟುವಿಕೆ ಮೂಳೆಯ ಆರೋಗ್ಯದಲ್ಲಿ ವೃದ್ಧಿ ಹಾಗೂ ಖಿನ್ನತೆ ಮತ್ತು ಉದ್ವೇಗ ನಿರ್ವಹಣೆಯಲ್ಲಿ ದೈಹಿಕ ಚಟುವಟಿಕೆಯು ಪ್ರಮುಖ ಪಾತ್ರ ವಹಿಸುತ್ತದೆ [1]. ಯುವಕ ಯುವತಿಯರಲ್ಲಿ ದೈಹಿಕ ಚಟುವಟಿಕೆಗಳ ಪ್ರಭಾವವು ಅತ್ಯಂತ ಹೆಚ್ಚಾಗಿರುವುದನ್ನು ಅಧ್ಯಯನಗಳು ಸ್ಪಷ್ಟ ಪಡಿಸುತ್ತವೆ. ಅದರಲ್ಲಿಯೂ ಚಟುವಟಿಕೆ ರಹಿತ ಜೀವನ ಕ್ರಮ ಪಾಲಿಸುವವರಲ್ಲಿ ನಿರಂತರ ದೈಹಿಕ ಚಟುವಟಿಕೆಯಿಂದ ಆರೋಗ್ಯ ಸಂಬಂಧಿ ಲಾಭಗಳು ಅತ್ಯಂತ ಹೆಚ್ಚು ಕ್ರಯಬದ್ಧ ದೈಹಿಕ ಚಟುವಟಿಕೆಯಿಂದ ಹೆಣ್ಣು ಮಕ್ಕಳ ಬಲವು ಗಣನೀಯವಾಗಿ ವೃದ್ಧಿಯಾಗಿರುವುದು ದೃಢಪಟ್ಟಿದೆ.

ದೈಹಿಕ ಚಟುವಟಿಕೆಗಳಿಂದ ಆರೋಗ್ಯದ ಮೇಲಾಗುವ ಲಾಭಗಳ ಅರಿವಿದ್ದರೂ ಸಾಕ್ಷ್ಯಾಧಾರಗಳ ಪ್ರಕಾರ ಯುವ ಜನತೆಯು ಸಾರ್ವಜನಿಕ ಆರೋಗ್ಯ ಶಿಫಾರಸ್ಸುಗಳ ಸೂಚಿತ ಮಟ್ಟದಲ್ಲಿ ದೈಹಿಕ ಚಟುವಟಿಕೆಯನ್ನು ಕೈಗೊಳ್ಳುತ್ತಿಲ್ಲ ([2],[3],[4],[5]).

ಜಗತ್ತಿನಾದ್ಯಂತ ಜನಸಂಖ್ಯೆ ಹೆಚ್ಚುತ್ತಿದ್ದಂತೆ ಹಾಗೂ ವಯಸ್ಸಾಗುತ್ತಿದ್ದಂತೆ ಅಸ್ಥಿರಂಧ್ರತೆ (ಓಸ್ಟಿಯೋಪೊರೋಸಿಸ್) ಎಂಬ ಭೌಗೋಳಿಕ ಆರೋಗ್ಯ ಸಮಸ್ಯೆಯು ವ್ಯಾಪಕವಾಗಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿದೆ [6]. ಅಸ್ಥಿರಂಧ್ರತೆಯಲ್ಲಿ ಮುಳೆಗಳ ತೂಕವು ಕ್ಷೀಣಿಸುತ್ತದೆ ಹಾಗೂ ಮೂಳೆ ಅಂಗಾಂಶದಲ್ಲಿ ಕ್ಷೀಣವಾಗುವಿಕೆಯನ್ನು ಗಮನಿಸುತ್ತೇವೆ. ಇದರಿಂದ ಮೂಳೆಗಳು ಬಲಹೀನಗೊಂಡು ಮೂಳೆ ಮುರಿತಕ್ಕೆ ತುತ್ತಾಗುವುದು [7]. ಈ ಸಮಸ್ಯೆಯಿಂದ ಬಳಲುತ್ತಿರುವವರ ಸಂಖ್ಯೆಯು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚುತ್ತಿದೆ. ಅಧ್ಯಯನಗಳ ಪ್ರಕಾರ ವ್ಯಕ್ತಿ ಭವಿಷ್ಯದಲ್ಲಿನ ಅಸ್ಥಿರಂಧ್ರತೆಯ ಅಪಾಯವು ಬಾಲ್ಯಾವಸ್ಥೆ ಹಾಗೂ ಯೌವನಾವಸ್ಥೆಯಲ್ಲಿ ಗಳಿಸಿರುವ ಮೂಳೆ ಪ್ರಮಾಣದ ಮೇಲೆ ಅವಲಂಬಿತವಾಗಿರುತ್ತದೆ. ಅಸ್ಥಿರಂಧ್ರತೆಯನ್ನು ತಡೆಗಟ್ಟಲು ಜೀವನ ಶೈಲಿಯಲ್ಲಿ ಮಾರ್ಪಾಡು ಮಾಡುವುದು ಒಂದು ತಂತ್ರವೆಂದು ನಂಬಲಾಗಿದೆ.

ಮೂಳೆಯ ಸಾಂದ್ರತೆಯು ಮುಖ್ಯವಾಗಿ ಉತ್ಪತ್ತಿಯಿಂದ ನಿರ್ಧರಿಸಲ್ಪಟ್ಟರೂ, ಆಹಾರ ಪೋಷಣೆ, ದೈಹಿಕ ಚಟುವಟಿಕೆ, ಭಾರ ಹೇರುವಿಕೆ

ಹಾಗೂ ದೇಹ ರಚನೆಗಳಿಂದ ಪ್ರಭಾವಕ್ಕೊಳಗಾಗುವುದು [8]. ಹಲವು ಆಧ್ಯಯನಗಳು ಎಲ್ಲಾ ವಯೋಮಾನದವರಿಗೂ ಮೂಳೆ ತೂಕ ಹೆಚ್ಚಿಸಿಕೊಳ್ಳುವಲ್ಲಿ ಮತ್ತು ಕಾಯ್ದುಕೊಳ್ಳುವಲ್ಲಿ ದೈಹಿಕ ಚಟುವಟಿಕೆಗಳ ಸಮಂಜಸತೆಯನ್ನು ಎತ್ತಿ ಹಿಡಿದಿವೆ. ಕೆಲವು ಅಡ್ಡ ಬೇಧ ಅಧ್ಯಯನಗಳಲ್ಲಿ ಸ್ಥಳೀಯ ಮೂಳೆ ಸಾಂದ್ರತೆ ಮತ್ತು ಸ್ನಾಯು ಬಲದ ನಡುವೆ ಸಕಾರಾತ್ಮಕ ಸಹ ಸಂಬಂಧವನ್ನು ಕಂಡು ಕೊಂಡಿವೆ [9]. ಇನ್ನೂ ಕೆಲವು ಅಧ್ಯಯನಗಳಲ್ಲಿ ಈ ರೀತಿಯ ಸಹ ಸಂಬಂಧ ಕಂಡು ಬಂದಿರುವುದಿಲ್ಲ [10]. ಪ್ರಸ್ತುತ ಅಧ್ಯಯನವು ಕಾಲೇಜು ಮಟ್ಟದ ಹುಡುಗಿಯರಲ್ಲಿ ದೈಹಿಕ ಚಟುವಟಿಕೆಗಳ ಪ್ರಾಮುಖ್ಯತೆಯ ಕುರಿತು ವಿಶ್ಲೇಷಣೆ ನೀಡುತ್ತದೆ.

ಅಧ್ಯಯನದ ಉದ್ದೇಶ : ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಚಟುವಟಿಕೆ ಯುಕ್ತ ಮತ್ತು ಚಟುವಟಿಕೆ ರಹಿತ ಯುವ ಮಹಿಳೆಯರ ನಡುವಿನ ದೇಹದ ದ್ರವ್ಯರಾಶಿ ಸೂಚಿ, ಪ್ರಬಲ ಕೈಯ ಹಿಡಿತ ಶಕ್ತಿ ಹಾಗೂ ಮೂಳೆಯ ಗುಣಗಳನ್ನು ಹೋಲಿಸುವುದು ಪ್ರಸಕ್ತ ಅಡ್ಡ ಭೇದ ಅಧ್ಯಯನದ ಉದ್ದೇಶವಾಗಿರುತ್ತದೆ.

ಪದ್ಧತಿ: ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಕಾಲೇಜಿಗೆ ಹೋಗುವ 18 ರಿಂದ 20 ವಯೋವರ್ಗದ ತೊಂಬತ್ತೆರಡು ಯುವ ಮಹಿಳೆಯರು ಭಾಗವಹಿಸಿದ್ದರು. ಅದರಲ್ಲಿ ನಲವತ್ತೇಳು ಹುಡುಗಿಯರು ಅಂತರ ಕಾಲೇಜು ಕ್ರೀಡಾಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರಾಗಿದ್ದು, ಇನ್ನುಳಿದ 45 ಹುಡುಗಿಯರು ಯಾವುದೇ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿರಲಿಲ್ಲ. ದೇಹದ ದ್ರವ್ಯರಾಶಿ ಸೂಚಿಯನ್ನು ಕಂಡುಹಿಡಿಯಲು ನಿಂತ ಎತ್ತರ ಮತ್ತು ತೂಕವನ್ನು ಅಳೆಯಲಾಯಿತು. ಕೈಯ ಹಿಡಿತ ಶಕ್ತಿ ಮಾಪಕದ ಸಹಾಯದಿಂದ ಸಾಮಾನ್ಯ ಕುಳಿತ ಸ್ಥಿತಿಯಲ್ಲಿ ಪ್ರಬಲ ಕೈಯ ಹಿಡಿತ ಶಕ್ತಿಯನ್ನು ಮಾಪನ ಮಾಡಲಾಯಿತು. ಪ್ರತಿ ವಿದ್ಯಾರ್ಥಿನಿಯ ಹಿಮ್ಮಡಿಗಳಲ್ಲಿ ಕಂಡು ಬರುವ ದ್ವಿಪಕ್ಷೀಯ ಕ್ಯಾಲ್ಕೀನಿಯ ಮೂಳೆಗಳನ್ನು ಪರಿಮಾಣ ಸಂಬಂಧಿ ಶ್ರವಣಾತೀತ ಸಾಂದ್ರತಾ ಮಾಪಕ (ಕ್ವಾಂಟಿಟೇಟಿವ್ ಅಲ್ಟ್ರಾಸೌಂಡ್ ಡೆನ್ಸಿಟೋಮೀಟರ್)ದ ಸಹಾಯದಿಂದ ಪರೀಕ್ಷಿಸಲಾಯಿತು. ಎರಡು ಗುಂಪುಗಳನ್ನು ಹೋಲಿಸಲು ವಿವರಣಾತ್ಮಕ ಸಂಖ್ಯಾ ಶಾಸ್ತ್ರ ತಂತಗಳ ಜೊತೆಗೆ 'ಟಿ' ಪರೀಕ್ಷೆಯನ್ನು ಕೈಗೊಳ್ಳಲಾಯಿತು.

ಕೋಷ್ಟಕ 1: ಅಧ್ಯಯನದಲ್ಲಿ ಒಳಪಡುವ ಯುವ ಮಹಿಳೆಯರ ಲಕ್ಷಣಗಳು (ಸರಾಸರಿ ± ವಿಚಲನ)

ಲಕ್ಷಣಗಳು	ಚಟುವಟಿಕೆ ಭರಿತ ಗುಂಪು	ಚಟುವಟಿಕೆ ರಹಿತ ಗುಂಪು
ವಯಸ್ಸು (ವರ್ಷಗಳಲ್ಲಿ)	20±2.19	19±1.01
ಎತ್ತರ (ಸೆಂ.ಮಿ.ಗಳಲ್ಲಿ)	1.58±0.06	1.56±0.05
ತೂಕ (ಕಿ.ಗ್ರಾಂ.ಗಳಲ್ಲಿ)	45±5.47	46±7.42
ಬಿ.ಎಂ.ಐ	18±1.91	19±2.58
ಕೈ ಹಿಡಿತ ಬಲ (ಕಿ.ಗ್ರಾಂ.ಗಳಲ್ಲಿ)	28±4.22	24±4.07
ಬಿರುಸು ಸೂಚ್ಯಂಕ	97.11±16.78	83.04±10.02

ಫಲಿತಾಂಶ : ಸರಾಸರಿ ಅಂಕಿ ಅಂಶಗಳಲ್ಲಿ ವಿಶೇಷ ಭಿನ್ನತೆಯನ್ನು ಪರೀಕ್ಷಿಸಲು ಜೋಡಿ ನಮೂನೆಗಳಿಗಾಗಿ 'ಟಿ' ಪರೀಕ್ಷೆಯನ್ನು ಕೈಗೊಳ್ಳಲಾಯಿತು. ಫಲಿತಾಂಶವನ್ನು ಕೋಷ್ಟಕ 2ರಲ್ಲಿ ನೀಡಲಾಗಿದೆ.

ಕೋಷ್ಟಕ 2 ಚಟುವಟಿಕೆ ಭರಿತ ಮತ್ತು ರಹಿತ ಯುವ ಹುಡುಗಿಯರಲ್ಲಿ ದೇಹದ ದ್ರವ್ಯರಾಶಿ ಸೂಚಿ, ಕೈ ಹಿಡಿತ ಬಲ ಮತ್ತು ಬಿರುಸು ಸೂಚ್ಯಂಕಗಳಿಗೆ ಸಂಬಂಧಿಸಿದಂತೆ ಟಿ ಪರೀಕ್ಷೆಯ ಸಾರಾಂಶ.

	ಜೋಡಿ ಭಿನ್ನತೆ				
	ಸರಾಸರಿ	ನಿಬಂಧನೆಯ ತಪ್ಪು ಸರಾಸರಿ	ಟಿ	ಡಿ.ಎಫ್	ವಿಶೇಷ
ಚಟುವಟಿಕೆ ಭರಿತ ಹೆಣ್ಣು ಮಕ್ಕಳ ಕೈ ಹಿಡಿತ ಬಲ – ಚಟುವಟಿಕೆ ರಹಿತ	3.9333	.8471	4.643	44	.000
ಚಟುವಟಿಕೆ ಭರಿತ ಹೆಣ್ಣು ಮಕ್ಕಳ ದೈಹಿಕ ದ್ರವ್ಯ ಸೂಚ್ಯಂಕ ರಹಿತ	-.7542	.5390	-1.399	44	.169
ಚಟುವಟಿಕೆ ಭರಿತ ಹೆಣ್ಣು ಮಕ್ಕಳ ಬಿರುಸು ಸೂಚ್ಯಂಕ	14.0667	2.3672	5.942	44	.000

ಕೋಷ್ಟಕ 2ರ ಪ್ರಕಾರ ಪ್ರಸಕ್ತ ಅಡ್ಡ ಭೇದ ಅಧ್ಯನದಲ್ಲಿ ಕೈ ಹಿಡಿತ ಬಲ (4.643) ಮತ್ತು ಮೂಳೆಯ ಬಿರುಸು ಸೂಚ್ಯಂಕ (5.942)ಗಳಿಗೆ ಸಂಬಂಧಿಸಿದಂತೆ ಚಟುವಟಿಕೆ ಭರಿತ ಮತ್ತು ರಹಿತ ಕಾಲೇಜು ಮಟ್ಟದ ಹುಡುಗಿಯರಲ್ಲಿ ಭಿನ್ನತೆಗಳು ಕಂಡು ಬಂದಿವೆ. ಅದೇ ರೀತಿ, ದೇಹದ ದ್ರವ್ಯರಾಶಿ ಸೂಚಿಯಲ್ಲಿ ವಿಶೇಷ ಬದಲಾವಣೆಗಳು ಕಂಡು ಬಂದಿರುವುದಿಲ್ಲ. ಈ ಮಾಹಿತಿಯನ್ನು ಕೆಳಕಂಡ ಚಿತ್ರದಲ್ಲಿ ಬಿಂಬಿಸಲಾಗಿದೆ.

ಚಿತ್ರ 1. ಚಟುವಟಿಕೆ ಭರಿತ ಮತ್ತು ರಹಿತ ಕಾಲೇಜು ಮಟ್ಟದ ಯುವ ಹುಡುಗಿಯರಲ್ಲಿ ಕೈ ಹಿಡಿತ ಬಲ ಮತ್ತು ಬಿರುಸು ಸೂಚ್ಯಂಕಗಳ ವಿವರ.



ಚರ್ಚೆ: ಬಹಳ ಹಿಂದಿನಿಂದಲೂ ಹಿಡಿತ ಬಲವನ್ನು ಒಟ್ಟಾರೆ ದೇಹದ ಬಲ ಸೂಚ್ಯಂಕವೆಂದೆ ಪರಿಗಣಿಸಲಾಗಿದೆ. ಹಿಡಿತ ಬಲದಲ್ಲಿ ಅಧ್ಯಯನಕ್ಕೊಳಪಟ್ಟಿರುವ ಎರಡು ಗುಂಪುಗಳ ನಡುವೆ ಅಂಕಿ ಅಂಶಗಳ ಆಧಾರದ ಮೇಲೆ ವಿಶೇಷ ವ್ಯತ್ಯಾಸವಿದೆ ಎಂದು ಫಲಿತಾಂಶ ಸೂಚಿಸುತ್ತದೆ. ಚಟುವಟಿಕೆ ಭರಿತ ಯುವ ಹುಡುಗಿಯರು ಚಟುವಟಿಕೆ ರಹಿತ ಹುಡುಗಿಯರಿಗಿಂತ ಹೆಚ್ಚು ಬಲವನ್ನು ಹೊಂದಿರುವುದು ಸ್ಪಷ್ಟವಾಗಿದೆ. ಫಲಿತಾಂಶದಲ್ಲಿ ಕಂಡು ಬಂದಿರುವ ವಿಶೇಷ ವ್ಯತ್ಯಾಸವು ದೈಹಿಕ ಚಟುವಟಿಕೆ ಹಾಗೂ ಕ್ರೀಡೆಗಳಲ್ಲಿ ಭಾಗವಹಿಸುವುದರಿಂದಾಗಿರಬಹುದು. ಸ್ನಾಯುಗಳ ಬಲವು ದಿನ ನಿತ್ಯದ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅವಶ್ಯಕ. ಎಳೆಯ ವಯಸ್ಸಿನಲ್ಲಿಯೇ ಆಟೋಟಗಳ ರೂಪದಲ್ಲಿ ಹೆಚ್ಚಿನ ಚಟುವಟಿಕೆಗಳನ್ನು ನೀಡುವುದರಿಂದ ಮುಂದಿನ ಜೀವನದಲ್ಲಿ ದೈಹಿಕ ಕಾರ್ಯಕ್ಷಮತೆಯನ್ನು ಕಾಯ್ದುಕೊಂಡು ಹೋಗಬಹುದು.

ಈ ಅಧ್ಯಯನದ ಪ್ರಕಾರ ಚಟುವಟಿಕೆ ಭರಿತ ಕಾಲೇಜು ಮಟ್ಟದ ಯುವ ಹುಡುಗಿಯರಲ್ಲಿ ಮೂಳೆಯ ಆರೋಗ್ಯವು ಚೆನ್ನಾಗಿರುತ್ತದೆ. ಹಾರಾ ಮತ್ತು ಇತರರು (2001) ಕೈಗೊಂಡಿರುವ ಅಧ್ಯಯನದ ಪ್ರಕಾರ ಪ್ರೌಢಶಾಲಾ ಮಟ್ಟದಿಂದಲೇ ನಿರಂತರವಾಗಿ ತೀವ್ರತೆ ಹೆಚ್ಚಿರುವ ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಹೆಚ್ಚಿನ ಮೂಳೆ ತೂಕವನ್ನು ಪಡೆಯಬಹುದಾಗಿದೆ. ಡುಪ್ಪೆ ಮತ್ತು ಇತರರು (1997) ನಡೆಸಿರುವ ಅಧ್ಯಯನದ ಫಲಿತಾಂಶದ ಪ್ರಕಾರ ನೈಜ ಜೀವನ ಕ್ರಮದಲ್ಲಿ ಹೆಚ್ಚಿನ ದೈಹಿಕ ಚಟುವಟಿಕೆಯನ್ನು ಕೈಗೊಳ್ಳುವುದರಿಂದ ಮೂಳೆ ಸಾಂದ್ರತೆಯ ಮೇಲೆ ಸಕಾರಾತ್ಮಕ ಪರಿಣಾಮಗಳಾಗುತ್ತವೆ. ಗರಿಷ್ಠ ಪ್ರಮಾಣದ ಮೂಳೆ ಸಾಂದ್ರತೆ ಹೊಂದಲು ಮೂಳೆಗಳು ಬೆಳೆಯುತ್ತಿರುವ ವಯೋಮಾನದಲ್ಲಿ ವ್ಯಾಯಾಮ ಮಾಡಬೇಕು. ತದನಂತರವೂ ವ್ಯಾಯಾಮವನ್ನು ಮುಂದುವರೆಸುವುದರಿಂದ ಜೀವನದ ಮುಂದಿನ ದಿನಗಳಲ್ಲಿ ಮೂಳೆ ತೂಕ ಕಳೆದುಕೊಳ್ಳುವುದನ್ನು ಕನಿಷ್ಠಗೊಳಿಸಬಹುದು (ಚಾನ್, ಆ್ಯಂಡರ್‌ಸನ್ ಮತ್ತು ಲಾವ್, 2003)

ಉಪಸಂಹಾರ: ಸ್ನಾಯುಬಲ ಮತ್ತು ಮೂಳೆ ಆರೋಗ್ಯವನ್ನು ವೃದ್ಧಿಸಿಕೊಳ್ಳಲು ಕಾಲೇಜು ಮಟ್ಟದ ಯುವ ಹುಡುಗಿಯರು ಕ್ರೀಡೆ ಮತ್ತು ಆಟೋಟಗಳನ್ನು ಒಳಗೊಂಡಿರುವ ಜೀವನ ಶೈಲಿಯನ್ನು ಪಾಲಿಸಬೇಕು.

1. Physical Activity Guidelines Advisory Committee (2008) Physical Activity Guidelines Advisory Committee Report, 2008. Washington, DC, Department of Health and Human Services.
2. Eaton DK, Kann L, Kinchen S, Ross J, Hawkins J, Harris WA, Lowry R, McManus T, Chyen D, Shanklin S, Lim C, Grunbaum JA & Wechsler H (2006) Youth risk behavior surveillance—United States, 2005. MMWR Surveill Summ 55(5): 1–108.
3. Fogelholm M, Paronen O & Miettinen M (2007) Physical Activity – A Possibility for Welfare Policy. The State and Development of Health-Enhancing Physical Activity in Finland. Helsinki, Ministry of Social Affairs and Health.
4. Tammelin T, Nayha S, Hills AP & Jarvelin MR (2003) Adolescent participation in sports and adult physical activity. Am J Prev Med 24(1): 22–28.
5. Whitt-Glover MC, Taylor WC, Floyd MF, Yore MM, Yancey AK & Matthews CE (2009) Disparities in physical activity and sedentary behaviors among US children and adolescents: prevalence, correlates, and intervention implications. J Public Health Policy 30: S309.
6. Delmas, P.D., Fraser, M. (1999) "Strong bones in later life: luxury or necessity?" Bull World Health Organ 1999, 77:416-422.
7. Lane, J.M., Riley, E.H. and Philip, Z., Osteoporosis: Diagnosis and treatment, Journal of Bone and Joint Surgery 78 (1996) 618-632.
8. Russell, G. (2003) "Pathogenesis of osteoporosis." In: Hochberg MC, Silman AJ, Smolen JS, Weinblatt ME, Weisman MH, editors. Rheumatology. 3rd edition. Edinburgh: Mosby;.p.2075-80.
9. Tamci, S., Aksu, A. C., Gulbahar, S., Bircan, C., Ozlem, El., Kizil, R., Sahin, E., Akalin, E., & Alper, S. (2009). Hand grip strength is related to bone mineral density in male athletes. World of Osteoporosis, 15, 66-9.
10. Tan, J., Cubukcu, S., and Sepici, V. (1998) Relationship between bone mineral density of the proximal femur and strength of hip muscles in postmenopausal women. American Journal of Physical and Medical Rehabilitation;77:477-82.
11. Hara, S., Yanagi, H., Amagai, H., Endoh, K., Tsuchiya, S., & Tomura, S. (2001). Effect of physical activity during teenage years, based on type of sport and duration of exercise, on bone mineral density of young, premenopausal Japanese women. Calcified tissue international, 68(1), 23-30.
12. Duppe, H., Gardsell, P., Johnell, O., Nilsson, B.E., & Ringsberg, K. (1997). Bone mineral density, muscle strength and physical activity. Acta Orthopaedica, 68(2), 97-103.

ಸೈಟೋಟಾಕ್ಸಿಕ್ ಹಾಗೂ ಪ್ರಸರಣ ವಿರೋಧಿ ಅಣುಗಳ, ಗೆಡ್ಡೆ (ಅರ್ಬುದ) ಜೀವಕೋಶಗಳ ಮೇಲಿನ ವಿಶ್ಲೇಷಣೆ ಹಾಗೂ ತನಿಖೆ

ರಕ್ಷಿತ್, ಡಾ.ಪ್ರಭಾಕರ್.ಬಿ.ಟಿ
ಅಣ್ವಿಕ ಜೈವಿಕಔಷಧ ಪ್ರಯೋಗಾಲಯ, ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ.

ಉದ್ದೇಶ: ಹೊಸಯುಗದ ಜೀವಶಾಸ್ತ್ರದಲ್ಲಿ ನಿರ್ದಿಷ್ಟ ಗುರಿ ಹೊಂದಿರುವ ಔಷಧಗಳು ಪ್ರಮುಖ ಪಾತ್ರ ವಹಿಸುತ್ತದೆ. ಈ ಪ್ರಬಂಧವು ಹೊಸ ರಕ್ತನಾಳಗಳ ಬೆಳವಣಿಗೆ ತಡೆ, ಹಾಗೂ ಗೆಡ್ಡೆಗಳ ತಡೆಗಟ್ಟುವಿಕೆಯಲ್ಲಿ ಸೈಟೋಟಾಕ್ಸಿಕ್ ಅಣುಗಳ ಬಳಕೆಯ ಬಗ್ಗೆ ಚರ್ಚಿಸಲಾಗಿದೆ.

ಪ್ರಮುಖ ವಿಧಾನಗಳು : ಬೆಂಜೋಫಿನೋನ್ ಸಾಧಿತಗಳ ಬಹುಹಂತ ಉತ್ಪಾದನೆಯನ್ನು ಮಾಡಬೇಕು. ಈ ಅಣುಗಳನ್ನು ಪ್ರಸರಣವಿರೋಧಿ ಹಾಗೂ ಸೈಟೋಟಾಕ್ಸಿಕ್ ಗುಣಗಳಿಗಾಗಿ ಸ್ತನ ಕ್ಯಾನ್ಸರ್‌ನ ದ್ರವ ರೂಪದ ಅರ್ಬುದ(ಇ.ಎ.ಸಿ) ಜೀವಕೋಶಗಳ ಮೇಲೆ ಪ್ರಯೋಗಿಸತಕ್ಕದ್ದು. ನಂತರ ಅವುಗಳನ್ನು ಹೊಸ ರಕ್ತನಾಳಗಳ ಬೆಳವಣಿಗೆ ತಡೆಗಟ್ಟುವಿಕೆಗಾಗಿ ಸಿ.ಎ.ಎಂ ಮಾದರಿ ಹಾಗೂ ಗೆಡ್ಡೆ ಪ್ರೇರಿತ ಇಲಿಗಳ ಮೇಲೆ ಪರಿಶೀಲನೆ ಮಾಡತಕ್ಕದ್ದು ಹಾಗೂ ಹೊಸ ರಕ್ತನಾಳಗಳ ಬೆಳವಣಿಗೆ ತಡೆಯುವಿಕೆಯ ಗೆಡ್ಡೆಗಳ ಮೇಲಿನ ಪರಿಣಾಮವನ್ನು ಇಲಿಗಳ ಮೇಲಿನ ಪ್ರಯೋಗದಿಂದ ವಿಶ್ಲೇಷಿಸಬೇಕು.

ಪ್ರಮುಖ ಫಲಿತಾಂಶಗಳು : ಪ್ರಸರಣ ವಿರೋಧಿ ಹಾಗೂ ಸೈಟೋಟಾಕ್ಸಿಕ್ ಫಲಿತಾಂಶಗಳಿಂದ ತಿಳಿದು ಬಂದಿರುವ ಪ್ರಕಾರ ಬೆಂಜೋಫಿನೋನ್ ಸಾಧಿತಗಳು ಶಕ್ತಿಯುತವಾಗಿ ಸೈಟೋಟಾಕ್ಸಿಕ್ ಆಗಿವೆ ಹಾಗೂ ಇನ್‌ವೈವೋ ಮಾದರಿಗಳಾದ ಸಿ.ಎ.ಎಂ. ಹಾಗೂ ಗೆಡ್ಡೆಪ್ರೇರಿತ ಇಲಿಗಳಲ್ಲಿ ನವನಾಳಗಳ ಬೆಳವಣಿಗೆ ತಡೆಯುವಿಕೆ, ಗೆಡ್ಡೆ ಜೀವಕೋಶಗಳ ಬೆಳವಣಿಗೆಯ ಮೇಲಿನ ವ್ಯತಿರಿಕ್ತ ಪರಿಣಾಮ ಬೀರುವಿಕೆಯನ್ನು ಇಲಿಗಳ ಮೇಲಿನ ಪ್ರಯೋಗ ಬಿಂಬಿಸಿದೆ.

ಮಹತ್ವ : ಈ ಪ್ರಯೋಗಾದ ಫಲಿತಾಂಶಗಳಂದ ತಿಳಿದು ಬಂದಿರುವ ಪ್ರಕಾರ ಬೆಂಜೋಫಿನೋನ್ ಸಾಧಿತಗಳು ಒಂದು ಪರಿಣಾಮಕಾರಿ ಔಷಧಿಯಾಗಿ ಅರ್ಬುದ ಚಿಕಿತ್ಸೆಯಲ್ಲಿ ಬಳಸಬಹುದಾಗಿದೆ.

ಪೀಠಿಕೆ : ಅಪೂರ್ವವಾದ ಅಣುಗುರಿಗಳನ್ನು ಗುರುತಿಸುವುದು, ಅರ್ಬುದ ಔಷಧಿ ಅಭಿವೃದ್ಧಿಯಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಿದೆ. ಇವುಗಳಲ್ಲಿ ಪ್ರಮುಖವಾಗಿ ಹೊಸ ರಕ್ತನಾಳಗಳ (ಆಂಜಿಯೋಜೆನೆಸಿಸ್) ಅಂದರೆ ಪೂರ್ವ ಆಸ್ತಿತ್ವ ರಕ್ತನಾಳಗಳಿಂದ ಹೊಸರಕ್ತನಾಳಗಳ ಬೆಳವಣಿಗೆ ಹಾಗೂ ಈ ಮೂಲಕ ಅರ್ಬುದ ಜೀವಕೋಶಗಳ ಬೆಳವಣಿಗೆಗೆ ಸಹಕಾರಿಯಾಗುವುದರ ಬಗೆಗಿನ ಅಧ್ಯಯನ ಒಂದಾಗಿದೆ.

ಹೊಸ ರಕ್ತನಾಳಗಳ (ಆಂಜಿಯೋಜೆನೆಸಿಸ್) ತಡೆಗಟ್ಟುವಿಕೆಯು ಅವಶ್ಯ ಅರ್ಬುದ ತಡೆಗಟ್ಟುವ ವಿಧಾನವಾಗಿದ್ದು, ಕೀಮೋತೆರಪಿ (ರಾಸಾಯನಿಕ ಚಿಕಿತ್ಸೆ)ಗಿಂತ ಉತ್ತಮವಾಗಿದೆ. ನಿರ್ನಾಳ ಭಾಗದ ಗೆಡ್ಡೆಕೋಶಗಳ ತಡೆಯುವಿಕೆಯ ಬಗೆಗಿನ ಔಷಧದ ನಿಶ್ಚಿತತೆಯನ್ನು ಅರ್ಬುದ ವಿರೋಧಿ ಚಿಕಿತ್ಸೆಯಲ್ಲಿ ಬಳಸಬಹುದಾಗಿದೆ. ನೈಸರ್ಗಿಕ ಹಾಗೂ ಸ್ವಾಭಾವಿಕವಾಗಿ ತಯಾರಿಸಿದ ಬೆಂಜೋಫಿನೋನ್ ಸಾಧಿತಗಳು ಔಷಧಿಯವಾಗಿ ಪರಿಣಾಮಕಾರಿಯಾಗಿವೆ ಹಾಗೂ ಗೆಡ್ಡೆ ವಿರೋಧಿ ಗುಣಗಳನ್ನು ಹೊಂದಿದೆ. ಈ ಕಾರಣದಿಂದ ಹಲವಾರು ಬೆಂಜೋಫಿನೋನ್ ಸಾಧಿತ ಗಳನ್ನು ಅಧ್ಯಾಯಿಸಲಾಗುತ್ತಿದೆ. ಈ ಮೂಲಕ ಹೊಸ ರಕ್ತನಾಳಗಳ ಬೆಳವಣಿಗೆ ಸಂಬಂಧಿ ವ್ಯಾದಿಗಳಾದ ಸ್ತನ ಅರ್ಬುದ, ಸಂಧಿವಾತಗಳನ್ನು ತಡೆಗಟ್ಟ ಬಹುದಾಗಿದೆ. ಕಾರಣ ಇವು ವಿ.ಇ.ಜಿ.ಎಫ್ ಅನ್ನು ನಿಯಂತ್ರಿಸುತ್ತದೆ ಹಾಗೂ ಹೊಸ ರಕ್ತನಾಳಗಳನ್ನು ಸೃಷ್ಟಿಸುವ ವರ್ಣ ತಂತುಗಳನ್ನು ನಿಷ್ಕ್ರಿಯಗೊಳಿಸುತ್ತದೆ.

ಈ ಎಲ್ಲಾ ಭರವಸೆಯ ಫಲಿತಾಂಶದ ಕಾರಣವಾಗಿ ಪ್ರಸ್ತುತ ಅಧ್ಯಯನದಲ್ಲಿ ೧೨ ಬೆಂಜೋಫಿನೋನ್ ಸಾಧಿತಗಳನ್ನು ಪ್ರಸರಣ ವಿರೋಧಿ ಹಾಗೂ ಗೆಡ್ಡೆ ವಿರೋಧಿ ಪರಿಣಾಮಗಳಿಗಾಗಿ ವಿಶ್ಲೇಷಿಸ ಲಾಯಿತು ಹಾಗೂ ಈ ಪ್ರಯೋಗದ ಪ್ರಮುಖ ಫಲಿತಾಂಶವಾಗಿ ಬೆಂಜೋಫಿನೋನ್ ಸಾಧಿತ-೧ ಒಂದು ಭರವಸೆಯ ಹೊಸ ರಕ್ತನಾಳ ವಿರೋಧಿ ಹಾಗೂ ಗೆಡ್ಡೆ ವಿರೋಧಿ ಸಂಯುಕ್ತವಾಗಿ ಕಂಡುಬಂದಿದೆ.

ಪ್ರಯೋಗಗಳು :

ಜೀವಕೋಶಗಳ ಬೆಳೆಸುವಿಕೆ ಹಾಗೂ ಪ್ರಯೋಗಾಲಯ ಚಿಕಿತ್ಸೆ : ಇ.ಎ.ಸಿ ಜೀವಕೋಶಗಳನ್ನು ಪ್ರಸ್ತುತ ಅಧ್ಯಯನಕ್ಕೆ ಬಳಸಲಾಗಿದೆ. ಜೀವಕೋಶಗಳನ್ನು ಬೆಳೆಸಿ, ಬೆಂಜೋಫಿನೋನ್ ಸಾಧಿತಗಳು (೧ ರಿಂದ ೧೨) ಬೇರೆ ಬೇರೆ ಸಾಂದ್ರತೆಯಲ್ಲಿ (೦, ೧೦, ೨೦, ೫೦, ೧೦೦ಮೈಕ್ರಾನ್) ಡಿ.ಎಂ.ಎಸ್.ಓದಲ್ಲಿ ೦-೪೮ ಗಂಟೆಗಳಿಗೊಮ್ಮೆ ಪರಿಚಯಿಸಲಾಯಿತು. ಈ ವೇಳೆಯಲ್ಲಿ ಸೂಕ್ತ ಮಾಧ್ಯಮವನ್ನು ಬಳಸಿ, ಪ್ರತಿಯೊಂದು ಚಿಕಿತ್ಸೆಯನ್ನು ಕನಿಷ್ಟ ೩ ಬಾರಿ ಪ್ರತ್ಯೇಕವಾಗಿ ಮಾಡಲಾಯಿತು.

ಟ್ರೈಪಾನ್ ಬ್ಲೂಡೈ ಎಕ್ಸಕ್ಲೂಷನ್ ಪರೀಕ್ಷೆ : ಇ.ಎ.ಸಿ ಜೀವಕೋಶಗಳ ಮೇಲೆ ಜೀವಕೋಶ ವಿಷಕಾರಿ (ಸೈಟೋಟಾಕ್ಸಿಕ್) ಅಣುವಿನ ಪರಿಣಾಮವನ್ನು ಟ್ರೈಪಾನ್ ಬ್ಲೂಡೈ ಎಕ್ಸ್‌ಕ್ಲೂಷನ್ ಪರೀಕ್ಷೆ ಬಳಸಿ ತಿಳಿದುಕೊಳ್ಳಲಾಯಿತು. ಚಿಕಿತ್ಸೆ ನೀಡಿದ ಹಾಗೂ ನೀಡದ ಇ.ಎ.ಸಿ ಕೋಶಗಳನ್ನು ತೆಗೆದುಕೊಂಡು ೦.೪% ಟ್ರೈಪಾನ್ ಬ್ಲೂನಲ್ಲಿ ಬೆರೆಸಲಾ ಯಿತು. ಜೀವಂತ ಜೀವಕೋಶಗಳನ್ನು ಹೀಮೋಸೈಟೋಮೀಟರ್ ಬಳಸಿ, ಲೆಕ್ಕ ಹಾಕಲಾಯಿತು. ಪ್ರತಿಬಂಧಿಸುವ ಸಾಂದ್ರತೆ (IE_{50})ಯನ್ನು ೪೮ ಗಂಟೆಗಳ ನಂತರ ಲೆಕ್ಕಿಸಲಾಯಿತು.

ಇಲಿಗಳಲ್ಲಿ ಗೆಡ್ಡೆಗಳ ಬೆಳವಣಿಗೆ ಹಾಗೂ ಬೆಂಜೋಫಿನೋನ್ ಸಂಯುಕ್ತದೊಂದಿನ ಚಿಕಿತ್ಸೆ : ದ್ರವರೂಪದ ಸ್ತನ ಅರ್ಬುದ ಜೀವಕೋಶ ಗಳನ್ನು (ಇ.ಎ.ಸಿ) ಇಲಿಗಳಲ್ಲಿ ಬೆಳೆಸಿ, ಬೆಂಜೋಫಿನೋನ್ ಸಾಧಕ ಗಳನ್ನು ಭಾಗಶಃ ಡಿ.ಎಂ.ಎಸ್.ಓದಲ್ಲಿ ಕರಗಿಸಿ ಸಾರಗುಂದಿಸಿದವು

ಹಾಗೂ 2ಹಿ ಎಂ.ಜಿ/ಕೆ.ಜಿ ೨೩ ಗೇಜ್‌ಸೂಜಿಯನ್ನು ಬಳಸಿ ದಿನಬಿಟ್ಟು ದಿನದಂತೆ ೩ ಬಾರಿ ಇಲಿಗಳಿಗೆ ಒಳಚರ್ಮ (ಇಂಟ್ರಾಪೆರಿಟೋನಿಯಮ್) ಮಾರ್ಗವಾಗಿ ನೀಡಲಾಯಿತು. ಈ ಸಮಯದಲ್ಲಿ ಸೂಕ್ತ ಮಾಧ್ಯಮವನ್ನು ಬಳಸಲಾಯಿತು. ಇಲಿಗಳ ಜೀವಿತಾವಧಿಯನ್ನು ಗಮನಿಸಬೇಕು.

ಪೆರಿಟೋನಿಯಲ್ ಆಂಜಿಯೋಜೆನೆಸಿಸ್ ಪರೀಕ್ಷೆ ಹಾಗೂ ಹೆಚ್ & ಇ ಸ್ಟೇನಿಂಗನಿಂದ ಹೊಸರಕ್ತನಾಳಗಳ ಸಾಂದ್ರತೆ ವಿಶ್ಲೇಷಣೆ : ಒಳಚರ್ಮ (ಪೆರಿಟೋನಿಯಮ್)ದಲ್ಲಿ ಹೊಸರಕ್ತನಾಳಗಳ ಬೆಳವಣಿಗೆ ನಿಯಂತ್ರಣವನ್ನು ಗೆಡ್ಡೆ ಪ್ರೇರಿತ ಚಿಕಿತ್ಸೆಗೆ ಒಳಪಟ್ಟ ಹಾಗೂ ಚಿಕಿತ್ಸೆಗೆ ಒಳಪಡದ ಇಲಿಗಳಲ್ಲಿ ವಿಶ್ಲೇಷಿಸಿ ಛಾಯಾಗ್ರಹಿಸಲಾಯಿತು.

ಫಾರ್ಮಾಲ್‌ಡಿಹೈಡ್‌ನಲ್ಲಿಟ್ಟ ಪೆರಿಟೋನಿಯಮ್ ಅನ್ನು ಹೆಚ್ & ಇ ಸ್ಟೇನಿಂಗ್‌ಗೆ ಹೊಸರಕ್ತನಾಳಗಳ ಸಾಂದ್ರತೆ ತಿಳಿಯಲು ಲಾರೆನ್ಸ್ ಮತ್ತು ಮೇರೆಗ್ ಸೂಕ್ಷ್ಮದರ್ಶಕ ಬಳಸಿ ಒಳಪಡಿಸಲಾಯಿತು.

ಲಿಪಿಡ್ ಪೆರಾಕ್ಸಿಡೇಸ್ ಪರೀಕ್ಷೆ (ಅಸ್ಸೆ) : ಚಿಕಿತ್ಸೆಗೆ ಬಳಸಿರುವ ರಾಸಾಯನಿಕಗಳಿಂದ ಯಕೃತ್ತಿಗೆ ಆಗುವ ಹಾನಿಯನ್ನು ಪರೀಕ್ಷಿಸಲಾಯಿತು. ಯಕೃತ್ತನ್ನು ಅರೆದು ದ್ರವವನ್ನು ಸಾರಗುಂದಿ ಟಿ.ಬಿ.ಎ. ನೊಂದಿಗೆ ಬೆರೆಸಿ ೨೦ ನಿಮಿಷ ಕುದಿಯುವ ನೀರಿನಲ್ಲಿಟ್ಟು ಕಾಯಿಸಲಾಯಿತು ಹಾಗೂ ಇದರಿಂದಾಗುವ ಬಣ್ಣ ಬದಲಾವಣೆಯನ್ನು ಹಿಒಹಿ ಎನ್.ಎಂ. ಬೆಳಕಿನ ಸಾಂದ್ರತೆಯಲ್ಲಿ ಗಮನಿಸಿದೆವು.

ಫಲಿತಾಂಶ : ಪ್ರಸ್ತುತ ಅಧ್ಯಯನದಲ್ಲಿ ಇ.ಎ.ಸಿ. ಕೋಶಗಳನ್ನು ಬಳಸಲಾಗಿದೆ. ಈ ಕೋಶಗಳನ್ನು ಇಲಿಗಳಲ್ಲಿ ಪರಿಚಯಿಸುವ ಮೂಲಕ ಅವುಗಳನ್ನು ಅರ್ಬುದ ಪ್ರೇರಿತವನ್ನಾಗಿಸಲಾಯಿತು. ಕೆಲವನ್ನು ಗಮನಿಕೆಗೆ ಬಿಟ್ಟು ಇನ್ನೂ ಕೆಲವು ಇಲಿಗಳಿಗೆ ವಿವಿಧ ಬೆಂಜೋಫೀನೋನ್ ಸಾಧಿತಗಳನ್ನು ದಿನಬಿಟ್ಟು ದಿನ 2ಹಿಎಂ.ಜಿ/ದೇಹ ತೂಕ ನಂತೆ ನಾಲ್ಕನೇ ದಿನದಿಂದ ನೀಡಲಾಯಿತು. ಪ್ರತೀ ದಿನವೂ ಇಲಿಗಳ ದೇಹ ತೂಕವನ್ನು ಬರೆದಿಟ್ಟುಕೊಳ್ಳಲಾಯಿತು. ಇದರಿಂದ ತಿಳಿದು ಬಂದ ಫಲಿತಾಂಶದ ಪ್ರಕಾರ, ಗಮನಿಕೆಗೆ ಬಿಟ್ಟ (ಚಿಕಿತ್ಸೆ ನೀಡದ) ಇಲಿಗಳ ದೇಹ ತೂಕವನ್ನು ಏರಿಕೆಯಾಗಿದ್ದು, ಚಿಕಿತ್ಸೆಗೆ ಒಳಪಟ್ಟ ಇಲಿಗಳಲ್ಲಿ ಬೆಂಜೋಫೀನೋನ್ ಸಾಧಿತ–೧ ಪರಿಚಯಿಸಿದ ಇಲಿಗಳ ತೂಕ ಶೇ.ಲಗರಷ್ಟು ಗಣನೀಯ ಇಳಿಕೆ ಕಂಡಿದ್ದು, ಈ ಸಂಯುಕ್ತದ ಪ್ರಸರಣ ವಿರೋಧಿ ಹಾಗೂ ಕೋಶ ವಿಷಕಾರಿ (ಸೈಟೋಟಾಕ್ಸಿಕ್)ಗುಣವನ್ನು ಸಾಬೀತುಪಡಿಸಿದೆ.

- ಬೆಂಜೋಫೀನೋನ್ ಸಾಧಿತವು ನವನಾಳಗಳ ಬೆಳವಣಿಗೆ ಹಾಗೂ ಗೆಡ್ಡೆ ಜೀವಕೋಶಗಳ ಬೆಳವಣಿಗೆಯನ್ನು ಇಲಿಗಳಲ್ಲಿ ತಡೆಯುವ ಅಂಶವಾಗಿದೆ.

ನವನಾಳಗಳ ಉತ್ಪಾದನೆ ಅಥವಾ ಸೂಕ್ಷ್ಮರಕ್ತನಾಳಗಳ ಸಾಂದ್ರತೆಯನ್ನು ಸಾಮಾನ್ಯವಾಗಿ ರೋಗ ಪತ್ತೆ ಹಚ್ಚುವ ಮಾಪನವಾಗಿ ಅರ್ಬುದದಲ್ಲಿ ಬಳಸಲಾಗುತ್ತದೆ.

ಸೂಕ್ತ ರಕ್ತನಾಳಗಳ ಸಾಂದ್ರತೆ ಹೆಚ್ಚುವಿಕೆ ಗೆಡ್ಡೆಗಳ ಬೆಳವಣಿಗೆಯ ಮೇಲೆ ನೇರ ಪ್ರಭಾವ ಬೀರುತ್ತದೆ, ಈ ಕಾರಣದಿಂದಾಗಿ ರಕ್ತನಾಳಗಳ ಪ್ರತಿಬಂದಿಸುವಿಕೆಯ ಗೆಡ್ಡೆಕೋಶಗಳ ಬೆಳವಣಿಗೆ ನಿಯಂತ್ರಿಸುತ್ತದೆ. ಹೊಸರಕ್ತನಾಳಗಳ ಬೆಳವಣಿಗೆಯನ್ನು ಗೆಡ್ಡೆ ಪ್ರೇರಿತ ಇಲಿಗಳ ಒಳಚರ್ಮ (ಪೆರಿಟೋನಿಯಮ್)ದಲ್ಲಿ ಕಾಣಬಹುದು. ಆದ್ದರಿಂದ ಇಲಿಗಳ ಒಳಚರ್ಮ (ಪೆರಿಟೋನಿಯಮ್)ದಲ್ಲಿ ಕಾಣಬಹುದು. ಆದ್ದರಿಂದ ಇಲಿಗಳ ಪೆರಿಟೋನಿಯಮ್ ಹೊಸರಕ್ತನಾಳ ಅಧ್ಯಯನಕ್ಕೆ ಸೂಕ್ತ ಮಾದರಿಯಾಗಿದೆ.

ಈ ಕಾರಣವಾಗಿ ಬೆಂಜೋಫೀನೋನ್ ಸಾಧಿತ–೧ ರಿಂದ ಚಿಕಿತ್ಸೆಗೆ ಒಳಪಟ್ಟ ಇಲಿಗಳ ಪೆರಿಟೋನಿಯಮ್‌ನ್ನು ಹೊಸರಕ್ತನಾಳಗಳ ಬೆಳವಣಿಗೆಯ ಬಗೆಗಿನ ಕಲಿಕೆಗಾಗಿ ಪರೀಕ್ಷಿಸಲಾಯಿತು. ಇದರಿಂದ ತಿಳಿದು ಬಂದ ಪ್ರಕಾರ ಬೆಂಜೋಫಿನೋನ್ ಸಾಧಿತ–೧ ರಿಂದ ಚಿಕಿತ್ಸೆ ನೀಡಿದ ಗೆಡ್ಡೆ ಪ್ರೇರಿತ ಇಲಿಗಳು ಚಿಕಿತ್ಸೆ ನೀಡದ ಇಲಿಗಳ ಹೋಲಿಕೆಯಲ್ಲಿ ಕಡಿಮೆ ಹೊಸರಕ್ತನಾಳಗಳನ್ನು ಹೊಂದಿದೆ ಹಾಗೂ ಹೆಚ್ & ಇ ಪರೀಕ್ಷೆಯಿಂದ ಕಂಡುಬಂದ ಪ್ರಕಾರ ಚಿಕಿತ್ಸೆ ನೀಡದ ಇಲಿಗಳಲ್ಲಿ ಚಿಕಿತ್ಸೆಗೆ ಒಳಪಟ್ಟ ಇಲಿಗಳ ಹೋಲಿಕೆಯಲ್ಲಿ ಹೊಸ ರಕ್ತನಾಳಗಳ ಸಾಂದ್ರತೆ ಹೆಚ್ಚಾಗಿರುವುದು ಕಾಣುತ್ತದೆ. ಇದರಿಂದ ತಿಳಿಯುವುದೇನೆಂದರೆ ಬೆಂಜೋಫೀನೋನ್ ಸಂಯುಕ್ತಗಳು ಪ್ರಾಥಮಿಕವಾಗಿ ನಿರ್ನಾಳ ಭಾಗದ ಕೋಶಗಳ ಮೇಲೆ ಪ್ರಭಾವ ಬಿರುತ್ತದೆ ಹಾಗೂ ಈ ಪ್ರಕಾರವಾಗಿ ಹೊಸ ರಕ್ತನಾಳಗಳ ಬೆಳವಣಿಗೆ ನಿಲ್ಲಿಸುತ್ತದೆ.

ಗಮನಿಕೆಗೆ ಬಿಟ್ಟ ಇಲಿ
(ಚಿಕಿತ್ಸೆ ನೀಡದ)



ಸಾಮಾನ್ಯ ಇಲಿ

ಚಿಕಿತ್ಸೆಗೆ ಒಳಪಟ್ಟ ಇಲಿ

ಗೆಡ್ಡೆಕೋಶಗಳ ಬೆಳವಣಿಗೆಗೆ ಹೊಸರಕ್ತನಾಳಗಳು ಅತಿಮುಖ್ಯವಾಗಿರುವ ಕಾರಣ, ನಮ್ಮ ಬೆಂಜೋಫೀನೋನ್ ಸಾಧಿತ–೧ ಇವುಗಳನ್ನು ನಿಯಂತ್ರಿಸುವ ಮೂಲಕ ಗೆಡ್ಡೆಕೋಶಗಳನ್ನು ನಿಯಂತ್ರಿಸುತ್ತದೆ ಹಾಗೂ ಈ ಸಂಯುಕ್ತವು ದ್ರವರೂಪದ ಅರ್ಬುದ (ಅಸೈಟಿಸ್) ಗಣನೀಯವಾಗಿ ಕಡಿಮೆಗೊಳಿಸಿದೆ. ಇದು ಕೂಡ ನವನಾಳಗಳ ಅವಲಂಬಿತವಾಗಿದ್ದು, ಗೆಡ್ಡೆಕೋಶಗಳಿಗೆ ಇದು ನೇರವಾಗಿ ಪೋಷಕಾಂಶವನ್ನು ನೀಡುತ್ತದೆ. ದ್ರವ ರೂಪದ ಅರ್ಬುದದ ಪ್ರಮಾಣ ಹೆಚ್ಚಿದಂತೆಲ್ಲಾ ಗೆಡ್ಡೆ ಜೀವಕೋಶಗಳಿಗೆ ಪೋಷಕಾಂಶವು ಭರಪೂರವಾಗಿ ಸಿಗುತ್ತದೆ. ಈ ಕಾರಣದಿಂದಾಗಿ ಅವುಗಳ ಬೆಳವಣಿಗೆ ಕೂಡ ಹೆಚ್ಚುತ್ತದೆ. ಆದ್ದರಿಂದ ದ್ರವರೂಪದ ಅರ್ಬುದದ ಪ್ರಮಾಣ ಇಳಿಕೆ ಗೆಡ್ಡೆ ಜೀವಕೋಶಗಳನ್ನು ನಿಯಂತ್ರಿಸುತ್ತದೆ.

ನಮ್ಮ ಪರೀಕ್ಷೆಗಳ ಪ್ರಕಾರ ಬೆಂಜೋಫಿನೋನ್ ಸಾಧಿತ–೧ ದ್ರವ

ರೂಪದ ಅರ್ಬುದ ಇಳಿಸಿದೆ. ಈ ಮೂಲಕ ಗೆಡ್ಡೆ ಜೀವಕೋಶಗಳ ಬೆಳವಣಿಗೆ ನಿಯಂತ್ರಿಸುತ್ತದೆ.

ಪ್ರಾಣಿಗಳ ಬದುಕುಳಿಯುವಿಕೆಯ ಹೋಲಿಕೆಯಲ್ಲೂ ಚಿಕಿತ್ಸೆಗೆ ಒಳಪಟ್ಟ ಇಲಿಯು ಗಮನಿಕೆಗೆ ಬಿಟ್ಟವುಗಳಿಗಿಂತ ಹೆಚ್ಚುಕಾಲ ಬದುಕಿದ್ದು ಫಲಿತಾಂಶವು ತೃಪ್ತಿಕರವಾಗಿದೆ.

ಚಿಕಿತ್ಸೆಯ ನಂತರ ಇಲಿಗಳ ತೂಕವನ್ನು ಪ್ರತಿದಿನವೂ ಗಮನಿಸಿರುವ ಪ್ರಕಾರ ಬೆಂಜೋಫೀನೋನ್ ಸಾಧಿತ–೧ ರಿಂದ ಚಿಕಿತ್ಸೆ ನೀಡಿದ ಇಲಿಗಳು ಶೇ.ಲಗರಷ್ಟು ಚಿಕಿತ್ಸೆ ನೀಡದ ಇಲಿಗಳಿಗಿಂತ ಕಡಿಮೆ ತೂಕವನ್ನು ತೋರಿವೆ. ಈ ಫಲಿತಾಂಶವು ಕೂಡಾ ಸಂಯುಕ್ತದ ಪೂರಕವಾಗಿದೆ.

ಹಾಗೂ ಟ್ರೈಪಾನ್ ಬ್ಲೂ ಪರೀಕ್ಷೆಯಿಂದ ತಿಳಿದುಬಂದ ಪ್ರಕಾರ ಚಿಕಿತ್ಸೆಗೆ ಒಳಪಟ್ಟ ಇಲಿಗಳಲ್ಲಿ ಗೆಡ್ಡೆಕೋಶಗಳ ಸಂಖ್ಯೆಯೂ ಕೂಡಾ ಗಮನಿಕೆಇಲಿಗಳ ಹೋಲಿಕೆಯಲ್ಲಿ ಕಡಿಮೆ ಪ್ರಮಾಣ ತೋರಿಸಿದೆ. ಯಕೃತ್ತಿಗೆ ಆಗಿರುವ ಹಾನಿಯ ಬಗೆಗಿನ ಪರೀಕ್ಷೆಯಲ್ಲೂ ಬೆಂಜೋಫೀನೋನ್ ಸಾಧಿತವು ಮಾಡಿರುವ ಹಾನಿಯ ಪ್ರಮಾಣ ತುಂಬಾ ಕಡಿಮೆಯಾಗಿದ್ದು, ಈ ಎಲ್ಲಾ ತನಿಖೆಯಲ್ಲೂ ತೆಗೆದುಕೊಂಡ ೧೨ ಸಾಧಿತಗಳಲ್ಲಿ ಸಾಧಿತ–೧ ಉತ್ತಮವಾಗಿದೆ.







ತೀರ್ಮಾನ : ಹೊಸ ರಕ್ತನಾಳಗಳ ಬೆಳವಣಿಗೆಯ ತಡೆಯುವಿಕೆಯು ಅರ್ಬುದ ಚಿಕಿತ್ಸೆಯಲ್ಲಿ ಮುಖ್ಯವಾಗಿದೆ ಹಾಗೂ ನಮ್ಮ ಪರೀಕ್ಷೆಯಲ್ಲಿ ಬಳಸಿರುವ ೧೨ ಸಾಧಿತಗಳ ಪೈಕಿ ಬೆಂಜೋಫೀನೋನ್ ಸಾಧಿತ–೧ ಜೀವಕೋಶ ವಿಷಕಾರಿ (ಸೈಟೋಟಾಕ್ಸಿಕ್) ಹಾಗೂ ಪ್ರಸರಣ ವಿರೋಧಿಯಾಗಿದ್ದು, ನವನಾಳಗಳ ಬೆಳವಣಿಗೆಯನ್ನು ತಡೆದಿದೆ. ಈ ಕಾರಣದಿಂದಾಗಿ ಅರ್ಬುದ ಚಿಕಿತ್ಸೆಯಲ್ಲಿ ಇದೊಂದು ಭರವಸೆಯ ಔಷಧಿಯಾಗಿ ಬಳಸಬಹುದಾಗಿದೆ.

ಆಯುರ್ವೇಧ ಐಧ್ಯಕೀಯ ವಿಜ್ಞಾನಧಲ್ಲಿ ಹೇಳಿಧ ಕೆಲವು ಆಹಾರವರ್ಗಗಳು – ಒಮ್ಮು ವೈಜ್ಞಾನಿಕ ವಿಶ್ಲೇಷಣೆ

* ಕುಮಾರಿ. ರಾಜೆಶ್ವರಿ ಆಚಾರ್ಯ, ** ಅನಮ್ಮ ಆಚಾರ್ಯ, *** ಡಾ. ಶ್ರೀಪಥಿ ಆಚಾರ್ಯ. ಜಿ.
* ಪೂರ್ಣಪ್ರಜ್ಞ ಪಧವಿಪೂರ್ಅ ಕಾಲೇಜು, ** ಅರೆನಾ ಇನ್ಸ್ಟ್ರಾಟ್ಯೂತ್, *** ಮುನಿಯಾಲು ಆಯುರ್ವೇಧ ಕಾಲೆಜು ಮಥ್ತು ಆಸ್ಪಥ್ರೆ, ಮಣಿಪಾಲ

ಆಉರ್ಪಧ ವೈಧ್ಯಕೀಅಧಲ್ಲಿ ಆಹಾರ ಧ್ರವ್ಯಗಳನ್ನು ವಿಭಿನ್ನ ವರ್ಗಗಳಾಗಿ ವಿಮ್ಗಡಿಸಿ ಸವಿಸ್ತಾರವಾಗಿ ಅವುಗಳ ಗುಣ ಉಪಯೋಗಗಳನ್ನು ವಿವರಿಸಲಾಗಿಧೆ. ನಾವು ಆರೋಗ್ಯವಾಗಿರಬೇಕಾಧರೆ ಆಥವಾ ರೋಗಧಿಮ್ಧ ಮುಕ್ತರಾಗಬೇಕಾಧರೆ ಆಹಾರ ನಿಯಮ ಹಾಗೂ ಪಥ್ಯಪಾಲನೆ ಮಾದಬೇಕು. ಆಹಾರ ಶುಧ್ಧಾ ಸಥ್ವಶುಧ್ಧಿಹ್ . ಆಹಾರ ಸಮ್ಭವಮ್ ವಸ್ತು– ಶರೀರಸ್ತು ಪುನರಾಹಾರ ಸಮ್ಭವಹ್ ಎಮ್ಬ ಉಕ್ತಿಗಳಮ್ತೆ ಶರೀರ ಹಾಗೂ ಮನಸ್ಸು ನಾವು ಸೇವಿಸುವ ಆಹಾರವನ್ನು ಅವಲಮ್ಬಿಸಿರುಥ್ತಧೆ. ಶರೀರಧಲ್ಲಿ ಚಯಾಪಚಯ ಪ್ರಕ್ರಿಯೆಯು ನಿರಮ್ತರವಾಗಿ ನದೆಯುಥ್ತಿಧ್ದು ಶರೀರಧ ಪೋಷಣೆ ಹಾಗೂ ಶಕ್ತಿಯ ಪೂರೈಕೆಗೆ ಉಥ್ತಮವಾಧ ಆಹಾರವು ಅಥ್ಯಗಥ್ಯವಾಗಿಧೆ. ಆಹಾರಧ ಪ್ರಮಾಣ ಹಾಗೂ ಗುಣಗಳಿಗೆ ಹೊಮ್ದಿಕೊಮ್ದು ಶರೀರ ಹಾಗೂ ಮನಸ್ಸಿನ ಕಾರ್ಯವೂ ಪ್ರಭಾವಿಥವಾಗುಥ್ತಧೆ. ಆಯುರ್ವೇಧ ಸಮ್ಹಿಥ ಹಾಗೂ ಸಮ್ಗ್ರಹ ಮಥ್ತು ಶೋಧ ಪ್ರಬಮ್ಧಗಳಲ್ಲಿ ನಾಲ್ಕು ವರ್ಗಗಳಾಧ ಧ್ರವಧ್ರವ್ಯವನ್ನು ಹಾಗೂ ಶೂಕಧಾನ್ಯ, ಶಿಮ್ಬಿಧಾನ್ಯ, ಶಾಕವರ್ಗ, ಮಾಮ್ಸವರ್ಗ, ಧುಗ್ಧವರ್ಗ, ಸ್ನೇಹವರ್ಗ, ಮೂಥ್ರವರ್ಗ, ಕೃಧಾನ್ನವರ್ಗ, ಮುಮ್ತಾಗಿ ಉಲ್ಲೇಖಿಸಿಧೆ. ಈ ಆಃಆರ ಧ್ರವ್ಯಗಳ ಗುಣ ಮಥ್ತು ಉಪಯೋಗ, ವರ್ಗೀಕರಣ, ಆಹಾರ ವಿಧಿವಿಶೇಷಾಯಥನ, ಆಹಾರ ಪರಿಣಾಮಕರ ಭಾವ ಜೀರ್ಣಾಹಾರ ಲಕ್ಷಣ, ಆಧಿ ವಿವರಣೆ ಈ ಗ್ರಮ್ಥಗಳಲ್ಲಿ ಧೊರೆಯುವುಧು. ಪ್ರಸ್ತುಥ ಈ ಲೇಖನಧಲ್ಲಿ ಆಯುರ್ವೇಧ ವೈಧ್ಯಕೀಯ ವಿಜ್ಞಾನಧಲ್ಲಿ ವಿವರಿಸಿಧ ಕೆಲವು ಆಹಾರವರ್ಗಗಳ ಹಾಗೂ ಅವುಗಳ ವೈಜ್ಞಾನಿಕ ವಿಶ್ಲೇಷಣೆಯನ್ನು ಮಾದಲಾಗುವುಧು.

೧) ಶೂಕಧಾನ್ಯ ವರ್ಗ
೨) ಶಿಂಬೀಧಾನ್ಯ ವರ್ಗ

ಮಾಂಸವರ್ಗ:

೧) ವಿಷ್ಕಿರ, ಪ್ರತುದ, ಬಿಲೇಶಯ, ಪ್ರಸಹ, ಜಾಂಗಲ, ಆನೂಪ, ಜಲೀಯ, ಇತ್ಯಾದಿ

ಮತ್ಸ್ಯವರ್ಗ:

೧) ರೋಹಿಷ, ಪಾಠೀನ, ಪಾಟಲ, ರಾಜೀವ, ವರ್ಮಿ, ಗೋಮತ್ಸ್ಯ, ಕೃಷ್ಣ ಮತ್ಸ್ಯ, ಪಾಗುಂಜಾರ, ಮುರಲ, ಸಹಸ್ರದಂಷ್ಟ್ರ, ಆದಿ

ಶಾಕವರ್ಗ:

೧) ಗರ್ಜರ, ಪಲಾಂಡು, ಲಶುನ, ಉಪೋದಿಕಾ, ತರ್ಕಾರಿ, ಕೂಷ್ಮಾಂಡ, ಏರ್ವಾರು

ಫಲವರ್ಗ:

೧) ದಾಡಿಮ, ಆಮಲಕೀ, ಬದರ, ಕೋಲ, ಕರ್ಕಂಧು ಆವಿ.

ದ್ರವದ್ರವ್ಯಗಳು:

೧) ಜಲವರ್ಗ – ಗಾಂಗೋದಕ, ನದೀಜಲ, ಕೂಪಜಲ, ತಡಾಗಜಲ
೨) ದುಗ್ಧವರ್ಗ – ಗೋಧುದ್ಧ ನಾರೀದುಗ್ಧ, ಮಾಹಿಷ, ಉಷ್ಟ್ರ, ಹಯದುಗ್ಧ, ಆದಿ
೩) ಮೂತ್ರವರ್ಗ – ಗೋಮೂತ್ರ, ಹಯಮೂತ್ರ, ಅವಿಮೂತ್ರ, ಗಜಮೂತ್ರ
೪) ಗೋರಸವರ್ಗ – ದುಗ್ಧ, ದಧಿ, ನವನೀತ, ಘೃತ, ತಕ್ರ, ದಧಿಮಂಡ
೫) ಇಕ್ಷುವರ್ಗ
೬) ತೈಲವರ್ಗ – ಏರಂಡ ತೈಲ, ಅತಸೀ ತೈಲ, ಸರ್ಷಪ ತೈಲ, ವಿಭೀತಕೀ ತೈಲ
೭) ಸ್ನೇಹ ವರ್ಗ – ವಸಾ, ಮಜ್ಜಾ, ತೈಲ, ಘೃತ
೮) ಮಧ್ಯವರ್ಗ – ಸುರಾ, ವಾರುಣೀ, ಯವಸುರಾ, ಅರಿಷ್ಟ, ದ್ರಾಕ್ಷಾಮದ್ಯ, ಸೀಧು, ಶುಕ್ತ, ಆಸುತಿ, ಶಾಂಡಾಕೀ, ಕಾಂಜೀ
೯) ಲವಣ ವರ್ಗ – ಸೈಂಧವ, ಸಾಮುದ್ರ, ಬಿಡ, ಔದ್ಭಿದ, ಸೌವರ್ಚಲ
೧೦) ಕೃತಾನ್ನ ವರ್ಗ – ಮಂಡ, ಪೇಯ, ವಿಲೇಪಿ, ಯೂಷ ಕೃತ, ಅಕೃತ, ಮಾಂಸರಸ, ರಸಾಲಾ, ಪಾನಕ, ಲಾಜಾ ಸಕ್ತು, ಪಿಣ್ಯಾಕ, ವೇಸವಾರ, ರೋಚೀ,

ಶೂಕಧಾನ್ಯ ವರ್ಗ

೧) ರಕ್ತಶಾಲಿ
೨) ಮಹಾಶಾಲಿ
೩) ಕಲಮ
೪) ಶಕುನ
೫) ತೂರ್ಣಕ
೬) ದೀರ್ಘಶೂಕ
೭) ಗೌರ
೮) ಕಲಾಂಗುಲ
೯) ಲೋಹವಾಲ
೧೦) ಸಾರಿವಾ
೧೧) ಪ್ರಮೋದಕ
೧೨) ಪತಂಗ
೧೩) ತಪನೀಯ

ಶೂಕಧಾನ್ಯಗಳ ಸಾಮಾನ್ಯ ಗುಣಗಳು

೧) ಶೀತಗುಣವುಳ್ಳದ್ದು
೨) ಮಧುರರಸವುಳ್ಳದ್ದು
೩) ಮಧುರ ವಿಪಾಕವುಳ್ಳದ್ದು
೪) ಅಲ್ಪಮಾರುತ – ವಾತವನ್ನು ಹೆಚ್ಚಾಗಿ ಪ್ರಕೋಪ ಮಾಡುವುದು
೫) ಮೂಲಬದ್ಧತೆ ಹಾಗೂ ಅಲ್ಪ ಮಲವನ್ನುಂಟು ಮಾಡುವುದು
೬) ಸ್ನಿಗ್ಧ ಗುಣವುಳ್ಳದ್ದು
೭) ಬೃಂಹಣ
೮) ಶುಕ್ರ ಹಾಗೂ ಮೂತ್ರಗಳನ್ನು ಹೆಚ್ಚಿಸುವುದು (Aphrodisiac & diuretic)

ರಕ್ತ ಶಾಲಿಯಗುಣಗಳು – ಶ್ರೇಷ್ಮವು, ತೃಷ್ಣಾಹರವು, ಪುರೀಷ, ಮೂತ್ರ ಹಾಗೂ ಸ್ವೇದಗಳನ್ನು ಕಡಿಮೆ ಮಾಡುವುದು. ಮಹಾಶಾಲಿಯ ಗುಣಗಳು, ಷಷ್ಟಿಕ – ರಕ್ತಶಾಲಿಯ ಗುಣಗಳನ್ನು ಹೊಂದಿರುವುದು.
ಯುವಕ, ಹಾಯನ ಪಾಂಸು– ಶಾಲಿಯ ಗುಣಗಳು
ಷಷ್ಟಿಕ, ಗೌರ, ಕೃಷ್ಣ ಶಾಲಿಯ ಗುಣ

೧) ಶೀತ ವೀರ್ಯವುಳ್ಳದ್ದು
೨) ಸ್ನಿಗ್ಧವು
೩) ಲಘು–ಪಚನಕ್ಕೆ ಲಘುವಾದುದು
೪) ಮಧುರಸ ಸಂಯುಕ್ತ
೫) ತ್ರಿದೋಷಹರ
೬) ಸ್ಥಿರಗುಣಯುಕ್ತ

ವರಕ, ಉದ್ದಾಲಕ, ಚೀನ, ಶಾರದ, ಉಜ್ವಲ, ದರ್ಮರ, ಗಂಧನಾ, ಕುರುವಿಂದಾ – ಇವು ಷಷ್ಟಿಕ ಶಾಲಿಯಂತೆ ಅಲ್ಪಗುಣವುಳ್ಳದ್ದು

ವ್ರೀಹಿದಾನ್ಯದ ಗುಣಗಳು:

೧) ಮಧುರರಸ
೨) ಅಮ್ಲವಿಪಾಕ
೩) ಪಿತ್ತಕಾರಕಗಳು
೪) ಪಚನಕ್ಕೆ ಗುರುವಾದುದು

ಪಾಟಲ ದಾನ್ಯಗಳು

೧) ಮೂತ್ರವನ್ನು ಹೆಚ್ಚಿಸುವುದು
೨) ಮಲವನ್ನು ಹೆಚ್ಚಿಸುವುದು
೩) ಉಷ್ಣಗುಣವುಳ್ಳದ್ದು
೪) ತ್ರಿದೋಷಕಾರಕವು

ಕೋರದೂಷ, ಶ್ಯಾಮಕಗಳ ಗುಣಗಳು

೧) ಕಷಾಯ, ಹಾಗೂ ಮಧುರ ರಸಯುಕ್ತ
೨) ಪಚನಕ್ಕೆ ಲಘುವಾದುದು
೩) ಶೋಥಕಾರಕ
೪) ವಾತಕಾರಕ
೫) ಕಫಪಿತ್ತಹರ
೬) ಶೀತವೀರ್ಯ
೭) ಗ್ರಾಹಿ

ಹಸ್ತಿಶ್ಯಾಮಕ, ನೀವಾರ, ತೋಯವರ್ಣ, ಗವೇಧುಕ, ಪ್ರಶಾಂತಿಕಾ, ಅಂಭಶ್ಯಾಮಾಕ, ಲೋಹಿತ, ಅಣುಪ್ರಿಯಂಗು, ಮುಕುಂದ, ಝಂಟಿಗವರ್ಮೂಟಿ, ವರುಕ, ವರಕ, ಶಿಬಿರ, ಉತ್ಕಟ, ಜೂರ್ಣಪ್ಯಾ, ಶ್ಯಾಮಾಕ ಧಾನ್ಯದ ಸದೃಶ ಗಣಾಯುಕ್ತವು.

ಯುವಧಾನ್ಯದ ಗುಣಗಳು: (Barley)
೧) ಶೀತವೀರ್ಯ
೨) ಗುರು
೩) ಮಧುರರಸಯುಕ್ತ
೪) ವಾತ ಹಾಗೂ ಮಲವನ್ನು ಹೆಚ್ಚಿಸುವುದು
೫) ಸ್ಥೈರ್ಯವನ್ನುಂಟು ಮಾಡುವುದು
೬) ಕಷಾಯರಸಯುಕ್ತ
೭) ಬಲ್ಯ – ಬಲವರ್ಧಕ
೮) ಕಫರೋಗಹರವು

ವೇಣು ಯವದ ಗುಣಗಳು
೧) ರೂಕ್ಷ ಗುಣಯುಕ್ತ
೨) ಕಷಾಯ ಆನುರಸಯುಕ್ತ
೩) ಮಧುರರಸ ಯುಕ್ತ
೪) ಮೇದೋಹರ
೬) ಕ್ರಿಮಿಹರ (Wormicidal)
೭) ವಿಷಹರ (Alliviate toxines)
೮) ಬಲ್ಯ – ಬಲವನ್ನು ವರ್ಧಿಸುವುದು

ಗೋಧೂಮ (ಗೋಧಿ)ಯ ಗುಣಗಳು
೧) ಸಂಧಾನಕರವು
೨) ವಾತಹರ
೩) ಮಧುರರಸಯುಕ್ತ
೪) ಶೀತವೀರ್ಯವುಳ್ಳದ್ದು
೫) ಜೀವನೀಯ
೬) ಬೃಂಹಣ (Nourishing)
೭) ವೃಷ್ಯ (Aphrodisiac)
೮) ಸ್ನಿಗ್ಧ
೯) ಸ್ಥೈರ್ಯಕರವು
೧೦) ಪಚನಕ್ಕೆ ಗುರುವು

ನಾಂದೀಮುಖಿ ಮತ್ತು ಮಧೂಲೀಧಾನ್ಯಗಳು ಗುಣಗಳು
೧) ಶೀತವೀರ್ಯವುಳ್ಳದ್ದು
೨) ಸ್ನಿಗ್ಧಗುಣಯುಕ್ತ
೩) ಮಧುರರಸಯುಕ್ತ

ಶಮೀಧಾನ್ಯವರ್ಗ: (Pulses)
೧) ಮುದ್ಗ: (Green gram)
೧) ಕಷಾಯ, ಮಧುರರಸಯುಕ್ತ
೨) ರೂಕ್ಷ
೩) ಶೀತವೀರ್ಯವುಳ್ಳದ್ದು
೪) ಕಟುವಿಪಾಕಯುಕ್ತ
೫) ಕಫಪಿತ್ತಹರವು
೬) ಸೂಪ್ಯೋತ್ರಯ – ಸಾರು ಮಾಡಿ ಸೇವಿಸುಸುವುದು ಶ್ರೇಷ್ಠವು

೨) ಮಾಷ (ಉದ್ದು) ಧಾನ್ಯದ ಗುಣಗಳು (Black gram)
೧) ವೃಷ್ಯ (Aphrodisiac)
೨) ವಾತಪರಗಳು, ಶ್ರೇಷ್ಠವು
೩) ಸ್ನಿಗ್ಧ ಗುಣಯುಕ್ತ
೪) ಉಷ್ಣವೀರ್ಯ ಉಳ್ಳದ್ದು
೫) ಮಧುರರಸಯುಕ್ತ
೬) ಗುರು – ತಡವಾಗಿ ಪಚನವಾಗುವುದು
೭) ಬಲ್ಯ – ಬಲವರ್ಧಕ (Strenght promoting)
೮) ಬಹುಮಲ – ಮಲವನ್ನು ಹೆಚ್ಚಿಸುವುದು
೯) ಪುರುಷತ್ವವನ್ನು ಬೇಗನೇ ಉಂಟಾಗುವುದು.

ಆಗತಾನೇಕರೆದ ಧಾರೋಷ್ಣ ಹಾಲಿನ ಗುಣಗಳು
೧) ಅಭಿಷ್ಯಂದಿ (Increase liquidity of doshas)
೨) ಪಚನಕ್ಕೆ ಗುರುವಾಗಿರುವುದು (Heavy for digestion)
೩) ಆಮವರ್ಧಕ (Intoxicating)
೪) ಸರಿಯಾಗಿ ಉಪಯೋಗಿಸಿದಲ್ಲಿ ಅಮೃತ ಸದೃಶವಾಗಿರುವುದು

ಮೊಸರು (ದಧಿ) ಗುಣಗಳು
೧) ಆಮ್ಲರಸಯುಕ್ತ (Sour taste)
೨) ಆಮ್ಲ ವಿಪಾಕಯುಕ್ತ
೩) ಗ್ರಾಹಿ (Antidiarrhoeal and digestive)
೪) ಪ'ಚನಕ್ಕೆ ಗುರುವಾದುದು (Heavy for digestion)
೫) ರುಚಿಪ್ರದ ಹಾಗೂ ರುಚಿಕಾರಕ (taste promoting)
೬) ಶೀತಜ್ವರದಲ್ಲಿ ಉಪಯುಕ್ತ (Cold Fever)
೭) ವಿಷಮ ಜ್ವರದಲ್ಲಿ ಉಪಯುಕ್ತ (Irregular fever)
೮) ಮೇದವರ್ಧಕ, ಶುಕ್ರ, ಬಲ, ಕಫ, ಪಿತ್ತ, ರಕ್ತ, ಅಗ್ನಿ ಹಾಗೂ ಶೋಥಕಾರಕ
೯) ರಾತ್ರಿ, ಉಷ್ಣ ಮಾಡಿ, ವಸಂತ, ಗ್ರೀಷ್ಮ, ಶರದೃತುಗಳಲ್ಲಿ ಉಪಯೋಗಿಸಬಾರದು
೧೦)ಮದ್ಯ,ಯೂಷ, ಕ್ಷೌದ್ರಯುಕ್ತ, ಘೃತ, ಕಲ್ಲುಸಕ್ಕರೆ, ನೆಲ್ಲಿಕ್ಕಾಯೊಡನೆ ಉಪಯೋಗಿಸಬೇಕು
೧೧)ಪೀನಸ (Chronic rhinorrhoea) ಮೂತ್ರಕೃಚ್ಛ್ರ (Dysuria) ಹಾಗೂ ಗ್ರಹಣಿ ರೋಗ (IBS) ದಲ್ಲಿ ರೂಕ್ಷದಧಿ ಉಪಯುಕ್ತ
೧೨) ಅತಿಯಾಗಿ ಪ್ರಯೋಗಿಸಪಲ್ಲಿ ಜ್ವರ, ರಕ್ತಪಿತ್ತ, ವಿಸರ್ಪ, ಕುಷ್ಠ, ಪಾಂಡುರೋಗ ಹಾಗೂ ಭ್ರಮವನ್ನುಂಟು ಮಾಡುವುದು

ತಕ್ರದ ಗುಣಗಳು:
೧) ಪಚನಕ್ಕೆ ಲಘುವಾದುದು (Easily digestible)
೨) ಕಷಾಯ ಹಾಗೂ ಆಮ್ಲರಸಯುಕ್ತವಾದುದು (Astrigent & Sour taste)
೩) ದೀಪನ – ಅಗ್ನಿಯನ್ನು ವೃದ್ದಿಸುವುದು (Increasing appetite digestion)
೪) ಕಫ ಹಾಗೂ ವಾತ ದೋಷ ಹರವಾಗಿರುವುದು
೫) ಶೋಥ (General anasarca)
೬) ಉದರ (Abdominal disorder and ascitis)
೭) ಅರ್ಶ (Haemorrhoides)
೮) ಗ್ರಹಣೀ ದೋಷ (IBS)
೯) ಮೂತ್ರಗ್ರಹ (Retension of urine)
೧೦) ಅರುಚಿ (Anorexia)
೧೧) ಪ್ಲೀಹರೋಗ (Spleenomegaly)

೧೨) ಗುಲ್ಮ (Abdominal lump)
೧೩) ಘೃತವ್ಯಾಪತ್ (Disorders produced due to excessive ghee in take)
೧೪) ಗರವಿಷ (Chronic poisoning)
೧೫) ಪಾಂಡುರೋಗ (Anaemia)

ದಧಿ ಮಂಡದ ಗುಣಗಳು (ಮಸ್ತು)
೧) ಸರ (Makes Feels flowing)
೨) ಸ್ರೋತಃಶೋಧಿ (Opening the channels)
೩) ವಿಷ್ಟಂಭಜಿತ್ (Alliviates constipation)
೪) ಲಘು

ನವನೀತ (ಬೆಣ್ಣೆಯ ಗುಣಗಳು)
೧) ಹೊಸತಾದರೆ ವೃಷ್ಯ
೨) ಶೀತಗುಣವುಳ್ಳದ್ದು
೩)ವರ್ಣ (Complexion) ಬಲ (Strength) ಅಗ್ನಿ (Digestive power) ಗಳನ್ನು ವರ್ಧಿಸುವುದು
೪) ಸಂಗ್ರಾಹಿ (Reduces diarhola)
೫) ವಾತ ಹಾಗೂ ಪಿತ್ತಹರ
೬) ರಕ್ತರೋಗದಲ್ಲಿ ಉಪಯುಕ್ತ
೭) ಕ್ಷಯರೋಗದಲ್ಲಿ ಉಪಯುಕ್ತ (Emaciation)
೮) ಆರ್ಶರೋಗ ಉಪಯುಕ್ತ (Haemorrhodes)
೯) ಅರ್ದಿತ (Facial Palsy)
೧೦) ಕಾಸ (Cough)

ಹಾಲಿನಿಂದ ತೆಗೆದ ಬೆಣ್ಣೆಯ ಗುಣಗಳು
೧) ಸಂಗ್ರಾಹಿ
೨) ರಕ್ತ ಪಿತ್ತಹರ
೩) ನೇತ್ರರೋಗಗಳಲ್ಲಿ ಉಪಯುಕ್ತ

ಕಿಲಾಟದ ಗುಣಗಳು
೧) ಬಲಕಾರಕ
೨) ಶುಕ್ರವರ್ಧಕ
೩) ನಿದ್ರಾಪ್ರದ
೪) ವಿಷ್ಟಂಭ
೫) ಗುರುವಾದುದು
೬) ದೋಷಗಳನ್ನುಂಟು ಮಾಡುವುದು

ಕೃತಾನ್ನವರ್ಗ (ಪಥ್ಯಾನ್ನ ವರ್ಗ)
ಅಕ್ಕಿಯ ಮಂಡದ ಗುಣಗಳು (Watery gruel)
೧) ಪಾತಾನುಲೋಮನ
೨) ಅತಿಯಾದ ನೀರಡಿಕೆಯನ್ನು ಹೋಗಲಾಡಿಸುವುದು
೩) ಗ್ಲಾನಿ (Mental faligue) ಹರ
೪) ದೋಷಶೇಷಘ್ನ – ಉಳಿದ ದೋಷ ನಾಶಕ
೫) ಪಾಚನ
೬) ಧಾತು ಸಾಮ್ಯಕಾರಕ
೭) ಸೊತೋಮಾರ್ದವಕಾರಕ
೮) ಸ್ವೇದಕಾರಕ
೯) ಅಗ್ನಿಯನ್ನು ವೃದ್ಧಿಸುವುದು. (ಹಸಿವೆಯನ್ನು ಹೆಚ್ಚು ಮಾಡುವುದು)

ಪೇಯಾದ ಗುಣಗಳು (Soft gruel)
೧) ಹಸಿವೆಯನ್ನು ಹೋಗಲಾಡಿಸುವುದು
೨) ತೃಟ್‌ಹರ
೩) ಗ್ಲಾನಿ. ನಾಶಕ
೪) ದೌರ್ಬಲ್ಯಹರ
೫) ಕುಕ್ಷಿರೋಗ ಹರವು
೬) ಜ್ವರಹರ
೭) ಮಲಾನುಲೋಮನ (ಮಲವನ್ನು ಹೊರಹಾಕುವುದು)
೮) ಪಥ್ಯ
೯) ದೀಪನ
೧೦) ಪಾಚನ

ವಿಲೇಪೀಯ ಗುಣಗಳು (Gruel)
೧)ಗ್ರಾಹಿ (ಪಚನ ಮಾಡಿ ಮಲಬದ್ಧತೆಯನ್ನು ಉಂಟು ಮಾಡುವುದು – ಅತಿಸಾರದಲ್ಲಿ)
೨) ಹೃದ್ಯ
೩) ತೃಷ್ಣಾಪರ
೪) ದೀಪನ
೫) ಹಿತಕರವು
೬) ವ್ರಣಹರ
೭) ಕಣ್ಣಿನ ರೋಗಗಳಲ್ಲಿ ಉಪಯುಕ್ತ
೮) ಶೋಧನೆ ಮಾಡಿಕೊಂಡವರಿಗೆ ಹಿತಕರವು
೯) ದುರ್ಬಲರಲ್ಲಿ ಹಿತಕರ
೧೦) ಸ್ನೇಹಸೇವನೆ ಮಾಡಿರುವಲ್ಲಿ ಹಿತಕರವು

ಅನ್ನ (ಭಾತ್)ನ ಗುಣಗಳು (Boiled Rice)
ಚೆನ್ನಾಗಿ ತೊಳೆದು ನೀರು ಸೇರಿಸಿ ಬೇಯಿಸುವ ಅನ್ನವು ಈ ಕೆಳಗಿನ ಗುಣಗಳನ್ನು ಹೊಂದಿರುವುದು.
೧) ಲಘು
೨) ಔಷಧ ಸೇರಿಸಿ ತಯಾರಿಸಿ ಅನ್ನವು ಗುರು ಗುಣವುಳ್ಳದ್ದು
೩) ಹಾಲು, ಮಾಂಸಗಳಿಂದ ತಯಾರಿಸಿದವುಗಳು ಕೂಡಾ ಗುರು ಗುಣವುಳ್ಳದ್ದು ಹಗೂ ಔಷಧಿಗುಣವುಳ್ಳದ್ದು ಆಗಿರುವುದು.

ಮಾಂಸರಸದ ಗುಣಗಳು:
೧) ಬೃಂಹಣ
೨) ಪ್ರೀಣನ
೩) ವೃಷ್ಯ
೪) ಚಕ್ಷುಷ್ಯ
೫) ವ್ರಣಹರ

ಚರ್ಚೆ: ಆಯುರ್ವೇದದಲ್ಲಿ ಮುಖ್ಯವಾಗಿ ಘನ ಹಾಗೂ ದ್ರವದ್ರವ್ಯ ಎಂದು ಎರಡು ವರ್ಗಗಳಾಗಿ ಆಹಾರ ದ್ರವ್ಯಗಳ ವಿವರಣೆ ದೊರೆಯುವುದು. ಘನ ದ್ರವ್ಯಗಳು – ಧಾನ್ಯವರ್ಗ, ಶಾಕವರ್ಗ, ಮಾಂಸವರ್ಗ ಹಾಗೂ ದ್ರವ ದ್ರವ್ಯಗಳು, ದುಗ್ಧವರ್ಗ, ಇಕ್ಷುವರ್ಗ, ಮಧುವರ್ಗ, ದ್ರವ್ಯವರ್ಗ, ಮೂತ್ರವರ್ಗ, ಸ್ನೇಹವರ್ಗ, ತೈಲವರ್ಗಗಳ ವಿತರಣೆ ದೊರೆಯುವುದು. ಇಲ್ಲಿ ವಿಭಿನ್ನ ತರಹದ ದ್ರವ್ಯಗಳ ವರ್ಗೀಕರಣ, ಗುಣದೋಷಗಳು, ಕರ್ಮ, ಹಾಗೂ ಔಷದೀಯ ಪ್ರಯೋಗವನ್ನು ವಿವರಿಸಲಾಗಿದೆ. ಕೆಲವೊಂದು

ರೋಗಗಳು ಪಥ್ಯ ಹಾಗೂ ಅಪಥ್ಯ (ಅಹಿತಕರ)ವಾಗಿಯೂ ಚರಕಾದಿ ಸಂಹಿತೆಗಳಲ್ಲಿ ಆಹಾರ ದ್ರವ್ಯಗಳನ್ನು ವಿವರಿಸಲಾಗಿದೆ. ಉದಾ : ಅಜಮಾಂಸ ಕ್ಷಯದಲ್ಲಿ ಅಜೀರ್ಣ ಆದಿಗಳಲ್ಲಿ ದೀಪನ ಪಾಚನ ಆಹಾರ ದ್ರವ್ಯಗಳು. ಕಾಮಾಲದಲ್ಲಿ ಪಿತ್ತಹರ ಮಧುರರಸಯುಕ್ತ ಆಹಾರ ದ್ರವ್ಯಗಳು ಇತ್ಯಾದಿ.

ಆಯುರ್ವೇದಯುಕ್ತ ಆಹಾರ ವರ್ಗೀಕರಣ ಮತ್ತು ಗುಣ ಉಪಯೋಗಗಳು ವಿವರಣೆಯೆ ವೈಜ್ಞಾನಿಕವಾಗಿದೆ. ಇದನ್ನು ಅನುಸರಿಸಿದಲ್ಲಿ ಸಂಭಾವ್ಯ ರೋಗಗಳನ್ನು ತಡೆಗಟ್ಟಬಹುದು ಮಾತ್ರವಲ್ಲದೆ. ಬಂದ ರೋಗಗಳಿಗೆ ಗುಣಪಡಿಸಬಹುದು. ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ಈ ಆಹಾರ ವಿಜ್ಞಾನವನ್ನು ಚಿಕಿತ್ಸೆಯಲ್ಲಿ ಅಳವಡಿಸುವುದಿಂದ ಕಡಿಮೆ ಖರ್ಚಿನಲ್ಲಿ ಉತ್ತಮವಾದ ಚಿಕಿತ್ಸೆ ವಿಧಾನಗಳನ್ನು ಪಾಲಿಸಬಹುದು.

ಉಪಸಂಹಾರ

೧) ಆಯುರ್ವೇದ ಆಹಾರ ದ್ರವ್ಯಗಳ ವರ್ಗೀಕರಣ ಹಾಗೂ ಅವುಗಳ ಗುಣಗಳು ಉಪಯೋಗಗಳು ಮತ್ತು ಚಿಕಿತ್ಸಾರ್ಥ ಪ್ರಯೋಗಗಳು ವೈಜ್ಞಾನಿಕ ಹಾಗೂ ಸಮ್ಮತವಾಗಿದೆ ಮತ್ತು ಇಂದಿನ ಆಧುನಿಕ ಯುಗದಲ್ಲಿ ಪಾಲಿಸಲು ಯೋಗ್ಯವಾಗಿದೆ.

೨) ಭಾರತದಲ್ಲಿ ಮುಂದುವರಿಯುತ್ತಿರುವ ರಾಷ್ಟ್ರಗಳು ಉದಾ: ಆಸಿಯಾನ ರಾಷ್ಟ್ರಗಳು, ಸಾರ್ಕ್ ರಾಷ್ಟ್ರಗಳು ಇವುಗಳು ಆಯುರ್ವೇದವು ನಿರ್ದೇಶಕಾರಿಯಾಗಿದ್ದು ಈ ದೇಶದ ಸಾಮಾಜಿಕ, ಆರ್ಥಿಕ ಹಾಗೂ ಆರೋಗ್ಯ ದೃಷ್ಟಿಕೋನದಲ್ಲಿ ಅಭಿವೃದ್ದಿಯನ್ನು ಹೊಂದಲು ಸಹಕಾರಿಯಾಗಿದೆ.

೩) ಮುಂದುವರಿದ ರಾಷ್ಟ್ರಗಳಾದ ಅಮೇರಿಕಾ, ಯುರೋಪಿನ ರಾಷ್ಟ್ರಗಳು, ಜಪಾನ್, ಚೈನಾ ಮೊದಲಾದವುಗಳು ಕೂಡಾ ಈ ಆಯುರ್ವೇದ ಆಹಾರವನ್ನು ತಮ್ಮ ವೈದ್ಯಕೀಯ ಅಗತ್ಯಗಳಲ್ಲಿ ಬಳಸುವುದರಿಂದ ಆ ರಾಷ್ಟ್ರಗಳ ಆರ್ಥಿಕ, ಸಾಮಾಜಿಕ, ಚಿಕಿತ್ಸಕೀಯ ಹಾಗೂ ರಾಜಕೀಯಗಳು ಬೆಳವಣಿಗೆಯನ್ನು ಕಾಣಬಹುದು. ಅಲ್ಲದೆ ವಿಶ್ವದ ಸ್ವಾಸ್ಥ್ಯದಲ್ಲಿ ಗಣನೀಯವಾದ ಉತ್ತಮತೆಯನ್ನು ಹೊಂದಬಹುದು.

ಆಧಾರಭೂತ ಗ್ರಂಥಗಳು

೧) ಚರಕ ಸಂಹಿತಾ

೨) ಸುಶ್ರುತ ಸಂಹಿತಾ

೩) ಅಷ್ಟಾಂಗ ಹೃದಯ

೪) ಭಾವ ಪ್ರಕಾಶ

೫) ಆಗ್ರೌಷಧಿಗಳು – ಡಾ। ಗುರುರಾಜ ಆಚಾರ್ಯ ೨೦೧೨

೬) ಸಾಮಾನ್ಯ ರೋಗಗಳ ಚಿಕಿತ್ಸೆಯಲ್ಲಿ ಆಯುರ್ವೇದ – ಡಾ। ಶ್ರೀಪತಿ ಆಚಾರ್ಯ ೨೦೧೩

೭) ಆಯುರ್ವೇದ ವಿಜ್ಞಾನ – ಡಾ। ಶ್ರೀಪತಿ ಆಚಾರ್ಯ – ೨೦೧೩

೮) ರಿಸರ್ಚಸ್ ಇನ್ ಆಯುರ್ವೇದ – ಡಾ। ಶ್ರೀಪತಿ ಆಚಾರ್ಯ – ೨೦೧೨

ತಂತಿಕೀವಿನ ಹಂತದ (ಫಿಬ್ರಿನೋಪುರಲೆಂಟ್ ಸ್ಟೇಜ್) ಎದೆಗೂಡಿನ ಒಳಕೀವಿನ (ಎಂಪಯೀಮಾ ಥೊರಾಸಿಸ್) ಪ್ರಾಥಮಿಕ ಚಿಕಿತ್ಸೆಗೆ ಪಕ್ಕೆಲುನಡುವಣ ಬಸಿಗೊಳವೆ ಚಿಕಿತ್ಸೆ (ಇಂಟರ್ ಕಾಸ್ಟಲ್ ಡ್ರೈನೇಜ್ - ICD) ಮತ್ತು ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆ (ವೀಡಿಯೋ ಅಸಿಸ್ಟೆಡ್ ಥೊರಕೋಸ್ಕೋಪಿಕ್ ಸರ್ಜರಿ-VATS) ಗಳ ನಡುವೆ ಹೋಲಿಕೆಯ ಅಧ್ಯಯನ

*ಡಾ॥ ಶಿಶಿರ ಎಸ್. ರಾನಡೆ , **ಪ್ರೊ. ಡಾ॥ ಬಿ.ಜೆ. ಶರತ್‌ಚಂದ್ರ, *** ಡಾ॥ ತ್ರಿಶೂಲಿ ಪಿ.ಬಿ

* ಯುವ ವಿಜ್ಞಾನಿ, ಶಸ್ತ್ರಚಿಕಿತ್ಸಕರು, ** ಶಸ್ತ್ರಚಿಕಿತ್ಸಕರು ಮತ್ತು ಘಟಕದ ಮುಖ್ಯಸ್ಥರು, *** ಶಸ್ತ್ರಚಿಕಿತ್ಸಕರು, ಸಹಾಯಕ ಪ್ರಾಧ್ಯಾಪಕರು, ಜೆ.ಎಸ್.ಎಸ್. ಆಸ್ಪತ್ರೆ, ಮೈಸೂರು– 570004

ಎದೆಗೂಡಿನ ಅಳ್ಳೆಪರೆ (ಪ್ಲೂರಾ) ಯೊಳಗೆ ಕೀವು ತುಂಬಿಕೊಳ್ಳುವುದಕ್ಕೆ ಎದೆಗೂಡಿನ ಒಳಕೀವು ಅಥವಾ ಎಂಪಯೀಮಾ ಥೊರಾಸಿಸ್ ಎನ್ನುತ್ತಾರೆ. ಈ ರೋಗದ ಅದರಲ್ಲೂ ಎರಡನೇ ಹಂತವಾದ ತಂತುಕೀವಿನ ಹಂತಕ್ಕೆ (ಫಿಬ್ರಿನೋ ಪುರಲೆಂಟ್ ಸ್ಟೇಜ್) ಸರಿಯಾದ ಚಿಕಿತ್ಸೆ ಯಾವುದು ಎಂಬುದು ವಿವಾದಾತ್ಮಕವಾಗಿದೆ. ಪಕ್ಕೆಲು ನಡುವಣ ಬಸಿಗೊಳವೆ ಚಿಕಿತ್ಸೆಯು ಕಡಿಮೆ ಪ್ರಮಾಣದ ಹಾಗೂ ಅಗ್ಗದ ಚಿಕಿತ್ಸೆ ಆದರೆ ಎದೆಗೂಡು ದರ್ಶಕದ ಚಿಕಿತ್ಸೆಯಿಂದ ಸಂಪೂರ್ಣವಾಗಿ ಕೀವನ್ನು ತೆಗೆದು ರೋಗಿಯ ರೋಗಪ್ರಮಾಣವನ್ನು ಶೀಘ್ರವಾಗಿ ಕಡಿಮೆಗೊಳಿಸಬಹುದಾಗಿದೆ.

ವಿಧಾನ : ಜೆ.ಎಸ್.ಎಸ್. ಆಸ್ಪತ್ರೆಗೆ ಅಧ್ಯಯನದ ಅವಧಿಯಲ್ಲಿ ಅಂದರೆ ಡಿಸೆಂಬರ್ 2008ರಿಂದ ನವೆಂಬರ್ 2010 ರವರೆಗೆ ಬಂದಂತಹ ರೋಗಿಗಳಲ್ಲಿ, ಒಂದೊಂದು ಗುಂಪಿನಲ್ಲೂ 20 ರೋಗಿಗಳಂತೆ 40 ರೋಗಿಗಳನ್ನು ಬಳಸಿ, ಎರಡೂ ವಿಧವಾದ ಚಿಕಿತ್ಸೆಗಳಲ್ಲಿ ಯಾವ ಚಿಕಿತ್ಸೆಯು ಫಲಕಾರಿ ಎಂದು ನೋಡುವ ಉದ್ದೇಶದಿಂದ ಹೋಲಿಕೆಯ ಅಧ್ಯಯನ ನಡೆಸಲಾಯಿತು.

ಫಲಿತಾಂಶ : ಸರಾಸರಿ ಆಸ್ಪತ್ರೆಯಲ್ಲಿರಬೇಕಾದ ದಿನಗಳು, ಎದೆಗೂಡಿನಲ್ಲಿ ಕೊಳವೆ ಇಟ್ಟಂತಹ ಸರಾಸರಿ ದಿನಗಳು, ಆಸ್ಪತ್ರೆಯ ವೆಚ್ಚ ಇತರ ತೊಂದರೆಗಳು ಮತ್ತು ಚಿಕಿತ್ಸೆಯ ವೈಫಲ್ಯ ಮುಂತಾದ ನಿಯತಾಂಶಗಳನ್ನು ತುಲನೆಮಾಡಿದಾಗ, ಅಂಕಿ ಅಂಶಗಳ ಪಟ್ಟಿಯಲ್ಲಿ ಎದೆಗೂಡುದರ್ಶಕದ ಶಸ್ತ್ರಚಿಕಿತ್ಸೆಯೇ ಉತ್ತಮ ಎಂಬ ಗಮನಾರ್ಹ ಫಲಿತಾಂಶಗಳು ದೊರಕಿದವು.

ಉಪಸಂಹಾರ : ಈ ಅಧ್ಯಯನದಿಂದ ತಂತುಕೀವಿನ ಹಂತದ ಎದೆಗೂಡಿನ ಒಳಗೀವಿನ ಪ್ರಾಥಮಿಕ ಚಿಕಿತ್ಸೆಗೆ ಪಕ್ಕೆಲುಬು ನಡುವಣ ಬಸಿಗೊಳವೆ ಚಿಕಿತ್ಸೆಗಿಂತ ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆಯೇ ಉತ್ತಮ ಎಂಬ ಫಲಿತಾಂಶ ದೊರಕಿದೆ.

ಎದೆಗೂಡಿನ ಒಳಕೀವು ಅಥವಾ ಎಂಪಯೀಮಾ ಥೊರಾಸಿಸ್ ಎಂದರೆ ಎದೆಗೂಡಿನ ಕವಚ ಅಥವಾ ಅಳ್ಳೆಪರೆ (ಪ್ಲೂರಾ) ಯೊಳಗೆ ಕೀವು ತುಂಬಿಕೊಳ್ಳುವುದು ಎಂದರ್ಥ. ಇದು ಎದೆಗೂಡಿನೊಳಗಿನ ಅಥವಾ ಅದರ ಸುತ್ತ ಮುತ್ತ ಉಂಟಾಗಬಹುದಾದಂತಹ ಸೋಂಕಿನಿಂದ

ಬರುವ ಗಂಭೀರ ಸಮಸ್ಯೆ. ಇದಕ್ಕೆ ಸರಿಯಾದ ಔಷಧೋಪಚಾರ ಇಲ್ಲವೇ ಸೂಕ್ತ ಸಮಯದಲ್ಲಿ ಕೀವನ್ನು ಶಸ್ತ್ರಚಿಕಿತ್ಸಾ ವಿಧಾನಗಳಿಂದ ತೆಗೆಯದ ಪಕ್ಷದಲ್ಲಿ ಗುಣಪಡಿಸಲು ಸಾಧ್ಯವಿಲ್ಲ.

ಪುಪ್ಪು ಸುರಿತ ಅಥವಾ ನ್ಯುಮೋನಿಯಾ ಎಂಬ ಶ್ವಾಸಕೋಶದ ರೋಗದಿಂದ ಅಳ್ಳೆಪರೆಯಲ್ಲಿ ಕೀವಾಗುವುದು ಸಾಮಾನ್ಯ. ಆದರೆ ನಮ್ಮ ದೇಶದಲ್ಲಿ ಕ್ಷಯರೋಗ ಅಥವಾ ಟ್ಯುಬರ್‌ಕ್ಯುಲೋಸಿಸ್‌ನಿಂದ ಎದೆಗೂಡಿನ ಒಳಗೀವಾಗುವ ಸಂಭವವೇ ಅಧಿಕ ಚಿಕಿತ್ಸೆ ನೀಡಿದರೂ, ನೀಡದಿದ್ದರೂ ಈ ರೋಗದಿಂದ ರೋಗಿಗಳು ನರಳುವುದು ಮತ್ತು ಸಾವನ್ನಪ್ಪುವುದು ಸಹಜ.

ಅಮೇರಿಕನ್ ಥೊರಾಸಿಕ್ ಸೊಸೈಟಿಯು ಈ ಎದೆಗೂಡಿನ ಒಳಗೀವಿನ ರೋಗವನ್ನು ಮೂರು ಹಂತಗಳಲ್ಲಿ ವಿವರಿಸಿದೆ. ಅವೆಂದರೆ,

1. ಮೊದಲ ಹಂತವಾದ ಸೋನೆ ಕೀವಿನ ಹಂತ ಅಥವಾ ಎಕ್ಸುಡೇಟಿವ್ ಫೇಸ್
2. ಎರಡನೆಯದಾದ ತಂತುಕೀವಿನ ಹಂತ ಅಥವಾ ಫಿಬ್ರಿನೋಪುರುಲೆಂಟ್ ಫೇಸ್
3. ಮತ್ತು ಮೂರನೆಯ ಹಂತವಾದ ವ್ಯವಸ್ಥಿತ ರಚನೆಯ ಹಂತ ಅಥವಾ ಆರ್ಗನೈಸ್ಡ್ ಫೇಸ್.

ಸೋನೆಕೀವಿನ ಹಂತವು ಮೊದಲ 48 ಗಂಟೆಗಳ ವರೆಗೆ ಇರಬಹುದು ನಂತರ ಕೀವು ಘನೀಕೃತಗೊಳ್ಳುತ್ತಾ ಎರಡನೇ ಹಂತ ಮತ್ತು ಮೂರನೇ ಹಂತಕ್ಕೆ ತಲುಪುತ್ತದೆ. ಎರಡನೇ ಹಂತದಲ್ಲಿ ನಾರಿನಂತಹ ಪದರಗಳು ಏರ್ಪಟ್ಟು ಅಳ್ಳೆಪರೆಯಲ್ಲಿ ಜೇನುಗೂಡಿನಂತಹ ರಚನೆಯುಂಟಾಗಿ ಅವುಗಳ ಕೋಣೆಗಳೊಳಗೆ ಕೀವು ಸೇರಿಕೊಳ್ಳುತ್ತದೆ. ಕೊನೆಯ ಹಂತದಲ್ಲಿ ಮತ್ತಷ್ಟು ಘನೀಕೃತಗೊಂಡು ಇದು ತೊಗಟೆಯ ರೀತಿಯಲ್ಲಿ ಒಂದು ಪದರವಾಗಿ ಮಾಪಘಟ್ಟು ಶ್ವಾಸಕೋಶದ ಸುತ್ತಲೂ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ ಇದರಿಂದ ಶ್ವಾಸಕೋಶದ ಹಿಗ್ಗುವಿಕೆಗೆ ತೊಂದರೆಯಾಗುತ್ತದೆ. ಮೊದಲನೇ ಹಂತಕ್ಕೆ ಕೇವಲ ಔಷಧೋಪಚಾರ ಅಥವಾ ಸೂಜಿ ಮೂಲಕವೋ ಇಲ್ಲಿವೆ ಬಸಿಗೊಳವೆ ಮೂಲಕವೂ ಕೀವನ್ನು ತೆಗೆದು ಚಿಕಿತ್ಸೆ ನೀಡಬಹುದಾಗಿದೆ ಕೊನೆಯ ಘನೀಕೃತಗೊಂಡ ಹಂತಕ್ಕೆ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇದೆ.

ಆದರೆ ಈ ರೀತಿ ಜೇನುಗೂಡಿನ ರಚನೆಯಾಕಾರದಲ್ಲಿರುವ ಎರಡನೇ ಹಂತವಾದ ತಂತುಕೀವಿನ ಹಂತದ ಎಡೆಗೂಡಿನ ಒಳಗೀವಿಗೆ ಕೇವಲ ಔಷಧೋಪಚಾರವೋ, ಸೂಜಿಯ ಮೂಲಕ ಅಥವಾ ಪಕ್ಕೆಲು ನಡುವಣ ಬಸಿಗೊಳವೆಯಿಂದ ಕೀವನ್ನು ತೆಗೆಯುವುದೋ ಅಥವಾ ಸಣ್ಣ ರಂಧ್ರಗಳ ಮೂಲಕ ಮಾಡುವ ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆಯೇ ಸೂಕ್ತವೋ ಎನ್ನುವುದು ಇನ್ನೂ ವಿವಾದಾತ್ಮಕವಾಗಿದೆ.

ಪಕ್ಕೆಲು ನಡುವಣ ಬಸಿಗೊಳವೆ ಚಿಕಿತ್ಸೆ ಹಾಗು ಔಷಧೋಪಚಾರಗಳ ಚಿಕಿತ್ಸೆಯ ಅಗ್ಗದ, ಚಿಕಿತ್ಸೆ, ಆದರೆ ಚಿಕಿತ್ಸೆ ಫಲಕಾರಿಯಾಗದಿದ್ದಲ್ಲಿ ಕೊನೆಗೆ ರೋಗಿಯನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಬೇಕಾಗುತ್ತದೆ. ಶಸ್ತ್ರಚಿಕಿತ್ಸೆಯು ಸ್ವಲ್ಪ ದುಬಾರಿಯಾದರೂ ಒಂದೇ ಬಾರಿ ಸಂಪೂರ್ಣವಾಗಿ ಕೀವನ್ನು ತೆಗೆದು ರೋಗಿಯನ್ನು ಬೇಗ ಗುಣಪಡಿಸಬಹುದಾಗಿದೆ. ನಮ್ಮ ಈ ಅಧ್ಯಯನದಲ್ಲಿ ಎರಡೂ ವಿಧವಾದ ಚಿಕಿತ್ಸೆಗಳ ನಡುವೆ, ರೋಗಪ್ರಮಾಣ, ಆಸ್ಪತ್ರೆಯ ಒಟ್ಟು ವೆಚ್ಚ ಚಿಕಿತ್ಸೆಯ ಇತರ ದುಷ್ಪರಿಣಾಮಗಳು ಮತ್ತು ಚಿಕಿತ್ಸೆಯ ವಿಫಲತೆ ಮುಂತಾದ ನಿಯತಾಂಕಗಳ ಆಧಾರದ ಮೇಲೆ ಹೋಲಿಕೆ ನಡೆಸಿ ಫಲಿತಾಂಶವನ್ನು ತರಲಾಗಿದೆ.

ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆ : ವೀಡಿಯೋ ಅಸಿಸ್ಟೆಡ್ ಥೊರಕೋಸ್ಕೋಪಿಕ್ ಸರ್ಜರಿ (ವ್ಯಾಟ್ಸ್–VATS)

1990 ರಲ್ಲಿ ಎದೆಗೂಡಿಗೆ ಸಣ್ಣರಂಧ್ರಗಳ ಮೂಲಕ ನಡೆಸುವ ಶಸ್ತ್ರಚಿಕಿತ್ಸಾ ವಿಧಾನಗಳನ್ನು ಕಂಡುಹಿಡಿದ ನಂತರ, ಎದೆಗೂಡಿನ ಅನೇಕ ಸಮಸ್ಯೆಗಳಿಗೆ ಇದೇ ವಿಧಾನದಲ್ಲಿ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ. ಸಣ್ಣ ರಂಧ್ರದ ಮೂಲಕ ತೂರಿಸಬಹುದಾದ ಎದೆಗೂಡು ದರ್ಶಕ (ಕ್ಯಾಮರಾ) ದಿಂದ ಸಂಪೂರ್ಣವಾಗಿ ಎದೆಗೂಡನ್ನು ವೀಕ್ಷಿಸಬಹುದಾಗಿದೆ. ಇನ್ನು ಎರಡು ಅಥವಾ ಮೂರು ರಂಧ್ರಗಳ ಸಹಾಯದಿಂದ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಬಳಸಿ, ಸೂಕ್ತವಾದ ಚಿಕಿತ್ಸೆಯನ್ನು ನೀಡಬಹುದಾಗಿದೆ. ಅರವಳಿಕೆ ಔಷಧಿಗಳ ಸಹಾಯದಿಂದ ರೋಗಿಯು ಸಂಪೂರ್ಣ ಪ್ರಜ್ಞಾಹೀನನಾದಾಗ ರೋಗಸ್ಥ ಭಾಗವು ಮೇಲೆ ಬರುವಂತೆ ಒಂಟೆಡೆಗೆ ತಿರುಗಿಸಿ ಮಲಗಿಸಲಾಗುತ್ತದೆ. ನಂತರ ಗಂಟಲು ಕೊಳವೆಯ ಸಹಾಯದಿಂದ ಅರೆವಳಿಕಾ ತಜ್ಞರು ಕೇವಲ ಒಂದು ಭಾಗದ ಶ್ವಾಸಕೋಶವನ್ನು ರೋಗಗ್ರಸ್ಥ ಎದೆಗೂಡಿನ ಶ್ವಾಸಕೋಶಕ್ಕೆ ಗಾಳಿ ಹೋಗದಂತೆ ನೋಡಿಕೊಳ್ಳುತ್ತಾರೆ. ಈ ರೀತಿ ಕುಗ್ಗಿದ ಶ್ವಾಸಕೋಶದ ಭಾಗದಲ್ಲಿರುವ ಎದೆಗೂಡಿಗೆ ಪಕ್ಕೆಲು ನಡುವೆ ಸಣ್ಣ ರಂಧ್ರದ ಮೂಲಕ ಎದೆಗೂಡು ದರ್ಶಕವನ್ನು ಸೇರಿಸಲಾಗುತ್ತದೆ.

ನಂತರ ತ್ರಿಕೋನಾಕಾರದಲ್ಲಿ ದರ್ಶಕದ ಸಹಾಯದಿಂದಲೇ ಇನ್ನೆರಡು ರಂಧ್ರಗಳನ್ನು ಮಾಡಿ ಅದರೊಳಗೆ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಸೇರಿಸಲಾಗುತ್ತದೆ. ಇದರಿಂದ ಉಪಕರಣಗಳಿಂದ ಶ್ವಾಸಕೋಶಕ್ಕೆ ಉಂಟಾಗಬಹುದಾದಂತಹ ತೊಂದರೆಗಳನ್ನು ತಪ್ಪಿಸಬಹುದಾಗಿದೆ. ಅಳ್ಳೆಪೊರೆ ಗೂಡಿನಲ್ಲಿ ಯಾವ ಹಂತದ ರೋಗವಿದೆ ಎಂದು ಖಚಿತ ಪಡಿಸಿ, ಹೀರುಕೊಳವೆಯ ಸಹಾಯದಿಂದ ಕೀವನ್ನುಸಂಪೂರ್ಣವಾಗಿ ತೆಗೆಯಬಹುದಾಗಿದೆ. ರೋಗವು ತಂತುಕೀವಿನ ಹಂತದಲ್ಲಿದ್ದರೆ, ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಬಳಸಿ, ತಂತುರಚನೆಯನ್ನು ಭೇದಿಸಿ, ಕೀವನ್ನು ತೆಗೆಯಲಾಗುತ್ತದೆ. ಆದರೆ ರೋಗವು ಮೂರನೇ ಹಂತದಲ್ಲಿದ್ದರೆ ಕೆಲವೊಮ್ಮೆ ಥೊರಕಾಟಮಿ ಅಥವಾ ಎದೆಗೂಡು ಕೊಯ್‌ಸೀಳಿಕೆ ಶಸ್ತ್ರಚಿಕಿತ್ಸೆ ನಡೆಸಿ, ತೊಗಟೆಯನ್ನು ಶ್ವಾಸಕೋಶದಿಂದ ಬೇರ್ಪಡಿಸಬೇಕಾಗುತ್ತದೆ.



ಎದೆಗೂಡು ದರ್ಶಕದ ಕೊಳವೆಗಳನ್ನು ಸೇರಿಸುವ ಜಾಗಗಳು

ಶಸ್ತ್ರಚಿಕಿತ್ಸೆಯಿಂದಾಗಬಹುದಾದ ತೊಂದರೆಗಳು : ಸೋಂಕಿನಿಂದ ಉರಿಊತ (ಇನ್‌ಫ್ಲಮೇಷನ್) ಆಗುವ ಕಾರಣ ಎದೆಗೂಡಿನಲ್ಲಿ ರಕ್ತ ಸಂಚಾರವು ಹೆಚ್ಚಾಗಿರುತ್ತದೆ. ಹಾಗಾಗಿ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಅಧಿಕ ರಕ್ತಸ್ರಾವವಾಗುವ ಸಾಧ್ಯತೆಯಿದೆ. ಎದೆಗೂಡು ದರ್ಶಕವನ್ನು ಹಾಕುವಾಗ ಅಥವಾ ತೊಗಟೆಯನ್ನು ಬಿಡಿಸುವಾಗ ಕೆಲವೊಮ್ಮೆ ಶ್ವಾಸಕೋಶಕ್ಕೆ ಏಟಾಗಿ ಗಾಳಿ ಸೋರುವಿಕೆಯಾಗುವ ಸಾಧ್ಯತೆಯೂ ಇದೆ. ಶಸ್ತ್ರಚಿಕಿತ್ಸೆಯ ನಂತರ ಉಳಿದ ಕೀವು ಹೊರಬರಲು ಅಥವಾ ಸಣ್ಣಪ್ರಮಾಣದ ರಕ್ತಸ್ರಾವದ ರಕ್ತವು ಅಲ್ಲಿಯೇ ಉಳಿದುಕೊಳ್ಳುವುದನ್ನು ತಡೆಗಟ್ಟಲು ಮುಂಭಾಗದಲ್ಲಿ ಹಾಗು ಹಿಂಭಾಗದಲ್ಲಿ ಒಂದೊಂದು ಬಸಿಕೊಳವೆಗಳನ್ನು ಇರಿಸುವುದು ಸೂಕ್ತ. ಇವನ್ನು ಶಸ್ತ್ರಚಿಕಿತ್ಸಾ ನಂತರ ಎರಡರಿಂದ ಮೂರು ದಿನಗಳ ಬಳಿಕ ತೆಗೆಯಬಹುದಾಗಿದೆ.

ವಿಧಾನ : ನಮ್ಮ ಅಧ್ಯಯನವು ಎರಡು ವರ್ಷಗಳ ಕಾಲ (ಡಿಸೆಂಬರ್ 2008ರಿಂದ ನವೆಂಬರ್ 2010ರ ವರೆಗೆ) ನಡೆಸಿದ ನಿರೀಕ್ಷಿತ ಅಧ್ಯಯನವಾಗಿದೆ. (ಪ್ರಾಸ್ಪೆಕ್ಟೀವ್ ಸ್ಟಡಿ) ಇದನ್ನು ಔಷಧೋಪಚಾರ, ಶಸ್ತ್ರಚಿಕಿತ್ಸಾ ವಿಭಾಗ, ಶ್ವಾಸಕೋಶವಿಭಾಗ ಮತ್ತು ಮಕ್ಕಳ ವಿಭಾಗಗಳಲ್ಲಿ ನೋಂದಣಿಗೊಂಡ ಎದೆಗೂಡಿನ ಒಳಕೀವಿನ ರೋಗಿಗಳನ್ನು ಬಳಸಿ, ಸೇರ್ಪಡಿಸಬೇಕಾದ ಮತ್ತು ಹೊರಗಿಡಬೇಕಾದ ಮಾನದಂಡಗಳನ್ನು ಪರಿಗಣಿಸಿ ನಡೆಸಲಾಯಿತು.

ಸೇರ್ಪಡಿಸುವ ಮಾನದಂಡಗಳು : ರೋಗಿಯ ವೈದ್ಯಕೀಯ ಪರೀಕ್ಷೆ ವಿಧಾನ ಚಿತ್ರಣಗಳ ಫಲಿತಾಂಶ (ಇಮೇಜಿಂಗ್ ಹಾಗೂ ಕೀವು ಪರೀಕ್ಷೆಯ ಫಲಿತಾಂಶಗಳ ಆಧಾರ ಮೇಲೆ, ರೋಗದ ಎರಡನೇ ಹಂತದಲ್ಲಿರುವುದು ಖಾತ್ರಿಯಾದ ಮಕ್ಕಳು ಮತ್ತು ವಯಸ್ಕರನ್ನು ಈ ಅಧ್ಯಯನಕ್ಕೆ ಬಳಸಲಾಯಿತು.

ಹೊರಗಿಡುವ ಮಾನದಂಡಗಳು : ಎದೆಗೂಡಿನ ಒಳಕೀವುಂಟಾಗಲು ಇರಬಹುದಾದಂತಹ ಇತರ ಕಾರಣಗಳಾದ ಅರ್ಬುದ ರೋಗ (ಕ್ಯಾನ್ಸರ್) ಇತರ ಮಾರಣಾಂತಿಕ ರೋಗಗಳು, ಅಲ್ಲದೇ ತೀವ್ರ ಉಸಿರಾಟದ ತೊಂದರೆ ಇರುವಂತಹ ರೋಗಿಗಳು, ಶಸ್ತ್ರಚಿಕಿತ್ಸೆಗೆ ಒಗ್ಗದ ರೋಗಿಗಳು, ಹೃದಯ ಸಂಬಂಧಿ ತೊಂದರೆಗಳಿರುವ ರೋಗಿಗಳು ಹಾಗು ಜೀವನಿರೋಧಕ ಶಕ್ತಿಗುಂದಿದ ರೋಗಿಗಳನ್ನು ಅಧ್ಯಯನದಿಂದ ಹೊರಗಿಡಲಾಯಿತು.

ಅಧ್ಯಯನ ಮಾದರಿ : 40 ರೋಗಿಗಳನ್ನು ಬಳಸಿ ಎರಡು ಗುಂಪುಗಳಾಗಿ ವಿಂಗಡಿಸಲಾಯಿತು. ಪ್ರತಿ ಗುಂಪಿನಲ್ಲೂ 20 ರೋಗಿಗಳಿರುವಂತೆ 'ಅ' ಗುಂಪಿನ ರೋಗಿಗಳಿಗೆ ಪಕ್ಕೆಲುಬನಡುವಣ ಬಸಿಗೊಳವೆಯಿಂದ ಚಿಕಿತ್ಸೆ ನೀಡಿದರೆ 'ಬ' ಗುಂಪಿನ ರೋಗಿಗಳಿಗೆ ಎದೆಗೂಡುದರ್ಶಕದ ಮೂಲಕ ಚಿಕಿತ್ಸೆನಡೆಸಲಾಯಿತು.

'ಅ' ಗುಂಪು : ಈ ಗುಂಪಿನ 20 ರೋಗಿಗಳಿಗೆ, ಅಗತ್ಯವಾದ ಮುನ್ನೆಚ್ಚರಿಕೆ ಕ್ರಮಗಳನ್ನು ಬಳಸಿ ಪಕ್ಕೆಲುಬನಡುವಣನ ಬಸಿಗೊಳವೆಯನ್ನು ಸೇರಿಸಲಾಯಿತು. ರೋಗಿಯು ಗುಣಮುಕ್ತನಾದರೆ, ವೈದ್ಯಕೀಯ ಪರೀಕ್ಷೆಯಲ್ಲಿ ರೋಗಿಯು ಹಾಗೂ ನಿಧಾನ ಚಿತ್ರಗಳಲ್ಲಿ ಶ್ವಾಸಕೋಶಗಳ ಹಿಗ್ಗುವಿಕೆಯು ಸಂಪೂರ್ಣವಾಗಿದ್ದರೆ, ಹಾಗು ಕೊಳವೆಯಲ್ಲಿ ದಿನವೊಂದಕ್ಕೆ 20 ಮಿಲಿಗಿಂತಲೂ ಕಡಿಮೆ ಪ್ರಮಾಣದಲ್ಲಿ

ಕೀವು/ಎದೆಗೂಡು ರಸ ಸ್ರವಿಕೆ ಇದ್ದರೆ, ಈ ಚಿಕಿತ್ಸೆಯು ಫಲಕಾರಿ ಎನ್ನಲಾಯಿತು. ಆದರೆ ವೈದ್ಯಕೀಯ ತಪಾಸಣೆಯಲ್ಲಾಗಲೀ ನಿದಾನ ಚಿತ್ರಣಗಳ ಮೂಲಕವಾಗಲೀ ರೋಗಿಯಲ್ಲಿ ಚೇತರಿಕೆಯು ಕಂಡುಬರದಿದ್ದಲ್ಲಿ ಹಾಗು ಮುಂದೆ ರೋಗಿಗೆ ಶಸ್ತ್ರಚಿಕಿತ್ಸೆಯು ಬೇಕಾದಲ್ಲಿ ಬಸಿಗೊಳವೆ ಚಿಕಿತ್ಸೆಯು ವಿಫಲವಾಗಿದೆ ಎಂದು ಪರಿಗಣಿಸಲಾಯಿತು.

'ಬ' ಗುಂಪು : ಇದರಲ್ಲಿನ 20 ರೋಗಿಗಳಿಗೆ ಸೂಕ್ತ ಅರವಳಿಕಾ ಔಷಧಿಗಳನ್ನು ಬಳಸಿ ಎದೆಗೂಡು ದರ್ಶಕದ ಸಹಾಯದಿಂದ ಶಸ್ತ್ರಚಿಕಿತ್ಸೆ ನಡೆಸಿ ಕೀವನ್ನು ಸಂಪೂರ್ಣವಾಗಿ ತೆಗೆಯಲಾಯಿತು. 'ಅ' ಗುಂಪಿನ ಮಾನದಂಡಗಳನ್ನೇ ಬಳಸಿ ರೋಗಿಯ ಚೇತರಿಕೆಯನ್ನು ಗಮನಿಸಲಾಯಿತು. ರೋಗಿಗೆ ಮುಂದೆ ಎದೆಗೂಡು ಕೊಯ್ತ (ಥೊರಕಾಟಮಿ) ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇದ್ದಲ್ಲಿ ವ್ಯಾಟ್ಸ್ ಚಿಕಿತ್ಸೆಯು ವಿಫಲವಾಗಿದೆ ಎಂದು ಪರಿಗಣಿಸಲಾಯಿತು.

ಎರಡೂ ಗುಂಪಿನ ನಡುವೆ, ಆಸ್ಪತ್ರೆಯಲ್ಲಿದ್ದಂತಹ ಒಟ್ಟು ದಿನಗಳು ಬಸಿಗೊಳವೆ ಇದ್ದಂತಹ ಒಟ್ಟು ದಿನಗಳು ಚಿಕಿತ್ಸೆಯ ಒಟ್ಟು ವೆಚ್ಚ ಚಿಕಿತ್ಸೆಯಿಂದಾದ ಇತರ ತೊಂದರೆಗಳು, ಚಿಕಿತ್ಸೆಯ ವಿಫಲತೆ, ಹಾಗೂ ರೋಗಿಯ ಮರಣ ಮುಂತಾದ ನಿಯತಾಂಕಗಳನ್ನು ಬಳಸಿ ಎರಡೂ ಗುಂಪುಗಳನ್ನು ಹೋಲಿಸಲಾಯಿತು.

ಫಲಿತಾಂಶ : 'ಅ' ಮತ್ತು 'ಬ' ಎರಡೂ ಗುಂಪುಗಳ ರೋಗಿಗಳಲ್ಲಿ ವಯಸ್ಸು ಲಿಂಗ ಮುಂತಾದ ನಿಯತಾಂಶಗಳನ್ನು ಹೋಲಿಸಿದಾಗ ಹೆಚ್ಚಿನ ಬದಲಾವಣೆ ಕಂಡುಬರಲಿಲ್ಲ. ಎರಡೂ ಗುಂಪಿನ ರೋಗಿಗಳು ಆಸ್ಪತ್ರೆಗೆ ಸಾಮಾನ್ಯವಾಗಿ ಉಸಿರಾಟದ ತೊಂದರೆ ಹಾಗು ಕೆಮ್ಮಿನ ಕಾರಣಗಳಿಂದಾಗಿ ದಾಖಲಾಗಿದ್ದರು. ಈ ರೋಗಿಗಳ ತೀವ್ರ ಪರೀಕ್ಷೆಯಿಂದ 'ಸ್ಟ್ರೆಪ್ಟೋಕಾಕಸ್ ನ್ಯುಮೋನಿಯೇ' ಮತ್ತು 'ಸ್ಟೆಫೈಲೋಕಾಕಸ್ ಆರಿಯಸ್' ಎಂಬ ಸೂಕ್ಷ್ಮಾಣುಜೀವಿಗಳೇ ಸಾಮಾನ್ಯವಾಗಿ ರೋಗಕಾರಕಗಳು ಎಂಬ ಅಂಶ ಬೆಳಕಿಗೆ ಬಂದಿತು. ಅಂಕಿಅಂಶಗಳ ಪಟ್ಟಿಯಲ್ಲಿ ಮೇಲೆ ತಿಳಿಸಿದ ನಿಯತಾಂಶಗಳನ್ನು ಹೋಲಿಸಿದಾಗ ಕೆಲವು ಗಮನಾರ್ಹ ವ್ಯತ್ಯಾಸಗಳು ಬೆಳಕಿಗೆ ಬಂದವು. 'ಅ' ಗುಂಪಿನ ಅಂದರೆ ಪಕ್ಕೆಲುಬನಡುವಣ ಬಸಿಗೊಳವೆ ಬಳಸಿದ ರೋಗಿಗಳ ಒಟ್ಟು ಆಸ್ಪತ್ರೆಯಲ್ಲಿ ಕಳೆದ ದಿನಗಳು, ಸರಾಸರಿ–25.2 ದಿನಗಳಾದರೆ, 'ಬ' ಗುಂಪಿನ ಅಂದರೆ ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಗಳ ಒಟ್ಟು ಸರಾಸರಿ ದಿನಗಳು 15.5 (ಪಿ.ಮೌಲ್ಯ–0.05)



ರೋಗಿಗಳ ಒಟ್ಟು ಆಸ್ಪತ್ರೆಯಲ್ಲಿ ಕಳೆದ ದಿನಗಳು

ಪಕ್ಕೆಲು ನಡುವಣ ಬಸಿಗೊಳವೆಯನ್ನು ರೋಗಿಗಳ ಎದೆಗೂಡಿನಲ್ಲಿ ಇರಿಸಿದ ಸರಾಸರಿ ದಿನಗಳನ್ನು ಹೋಲಿಸಿದಾಗ 'ಅ' ಗುಂಪಿನಲ್ಲಿ 17.3 ದಿನಗಳಾದರೆ 'ಬ' ಗುಂಪಿನಲ್ಲಿ 8.1 ದಿನಗಳಾಗಿತ್ತು. (ಪಿ. ಮೌಲ್ಯ – 0.05)



ಪಕ್ಕೆಲು ನಡುವಣ ಬಸಿಗೊಳವೆಯನ್ನು ರೋಗಿಗಳ ಎದೆಗೂಡಿನಲ್ಲಿ ಇರಿಸಿದ ಸರಾಸರಿ

ಆಸ್ಪತ್ರೆಯ ಒಟ್ಟು ಸರಾಸರಿ ವೆಚ್ಚವು 'ಅ' ಗುಂಪಿನಲ್ಲಿ 17,945 ರೂ.ಗಳಾದರೆ 'ಬ' ಗುಂಪಿನಲ್ಲಿ 10,579 ರೂ. ಗಳಾಗಿದ್ದವು. (ಪಿ.ಮೌಲ್ಯ – 0.05) ಅದಲ್ಲದೇ 'ಅ' ಗುಂಪಿನ ಶೇ. 65 ರೋಗಿಗಳಿಗೆ ಅಂದರೆ 20ರಲ್ಲಿ 13 ರೋಗಿಗಳಿಗೆ ಪಕ್ಕೆಲು ನಡುವಣ ಚಿಕಿತ್ಸೆಯು ವಿಫಲವಾಯಿತು. ಅಂದರೆ ರೋಗವನ್ನು ಸಂಪೂರ್ಣವಾಗಿ ಗುಣ ಪಡಿಸಲು ಈ ರೋಗಿಗಳನ್ನು ಪುನಃ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. ಇದರಿಂದಾಗಿ 'ಅ' ಗುಂಪಿನ ರೋಗಿಗಳ ಆಸ್ಪತ್ರೆಯ ಸರಾಸರಿ ವೆಚ್ಚವು ಗಮನಾರ್ಹವಾಗಿ ಏರಿಕೆ ಕಂಡಿತು. 'ಅ' ಗುಂಪಿನ ರೋಗಿಗಳಲ್ಲಿ ಪಕ್ಕೆಲು ನಡುವಣ ಬಸಿಗೊಳವೆಯ ಚಿಕಿತ್ಸೆಯಿಂದ ಆದ ಇತರ ತೊಂದರೆಗಳೆಂದರೆ, ಚರ್ಮದ ಅಡಿಭಾಗದಲ್ಲಿ ಗಳಿ ತುಂಬಿಕೊಳ್ಳುವುದು, ಹಾಗು ಕೀವನ್ನು ಸಂಪೂರ್ಣವಾಗಿ ತೆಗೆಯುವುದರಲ್ಲಿ ವಿಫಲವಾಗಿ ಮುಂದೆ ಶಸ್ತ್ರಚಿಕಿತ್ಸೆಗೆ ಒಳಪಡಿಸುವುದು. ಈ ರೀತಿ ತೊಂದರೆಗಳು ಶೇ. 80ರಷ್ಟು ರೋಗಿಗಳಲ್ಲಿ ಕಂಡುಬಂದಿತು.

'ಬ' ಗುಂಪಿನ ರೋಗಿಗಳಲ್ಲಿ, ಎದೆಗೂಡು ದರ್ಶಕದ ಶಸ್ತ್ರ ಚಿಕಿತ್ಸೆಯಿಂದಾದ ಸಾಮಾನ್ಯ ತೊಂದರೆಗಳೆಂದರೆ ರಕ್ತಸ್ರಾವ ಮತ್ತು ಶ್ವಾಸಕೋಶದ ಗಾಳಿ ಸೋರುವಿಕೆ. ಈ ರೀತಿಯ ತೊಂದರೆಗಳು ಶೇ. 50 ರೋಗಿಗಳಲ್ಲಿ ಅಂದೆ 20ರಲ್ಲಿ 10 ರೋಗಿಗಳಲ್ಲಿ ಕಂಡುಬಂದಿತು. 'ಬ' ಗುಂಪಿನ ಚಿಕಿತ್ಸೆಯು ವಿಫಲವಾಗಿ, ಮುಂದೆ ಎದೆಗೂಡು ಕೊಯ್ತೆಎತ ಅಥವಾ ಥೊರಾಟಮಿ ಶಸ್ತ್ರಚಿಕಿತ್ಸೆಯ ಮೂಲಕ ರೋಗವನ್ನು ಗುಣಪಡಿಸುವ ಪರಿಸ್ಥಿತಿ ಶೇ.20ರಷ್ಟು ಅಂದರೆ 20ರಲ್ಲಿ 4 ರೋಗಿಗಳಿಗೆ ಒದಗಿ ಬಂದಿತು. 'ಅ' ಮತ್ತು 'ಬ' ಗುಂಪಿನ ರೋಗಿಗಳ ನಡುವೆ ಈ ಅಂಕಿಅಂಶಗಳನ್ನು ಹೋಲಿಸಿದಾಗ, 'ಅ' ಗುಂಪಿನ ಶೇ. 65ರಷ್ಟು ರೋಗಿಗಳಿಗೆ ಚಿಕಿತ್ಸೆ ವಿಫಲವಾದರೆ 'ಬ' ಗುಂಪಿನ ಶೇ.20ರಷ್ಟು ರೋಗಿಗಳಿಗೆ ಚಿಕಿತ್ಸೆ ವಿಫಲವಾಯಿತು. (ಪಿ. ಮೌಲ್ಯ–0.05) ಅದಲ್ಲದೇ 'ಅ' ಗುಂಪಿನ ಶೇ.80ರಷ್ಟು ರೋಗಿಗಳಿಗೆ ಚಿಕಿತ್ಸೆಯಿಂದ ಇತರ ತೊಂದರೆಗಳಾದರೆ 'ಬ' ಗುಂಪಿನ ಶೇ. 50ರಷ್ಟು ರೋಗಿಗಳಿಗೆ ಚಿಕಿತ್ಸೆಯಿಂದ ತೊಂದರೆಗಳಾಯಿತು. (ಪಿ.ಮೌಲ್ಯ–0.05) ಅಧ್ಯಯನದ ಅವಧಿಯಲ್ಲಿ ಎರಡೂ ಗುಂಪುಗಳಲ್ಲಿ ಮರಣದ ಪ್ರಮಾಣ 0%



ಶಸ್ತ್ರಚಿಕಿತ್ಸೆಯಿಂದಾಗಬಹುದಾದ ತೊಂದರೆಗಳು

ಚರ್ಚೆ : ತಂತುಕೀವಿನ ಹಂತದ ಎದೆಗೂಡಿನ ಒಳಕೀವಿಗೆ ಸರಿಯಾದ ಚಿಕಿತ್ಸೆಯಾವುದು ಎಂಬುದು ಇನ್ನೂ ವಿವಾದಾತ್ಮಕ ವಿಷಯವಾಗಿದೆ. ಔಷಧೋಪಚಾರದಿಂದ ಗುಣಪಡಿಸುವುದೋ, ಸೂಜಿ ಅಥವಾ ಪಕ್ಕೆಲು ನಡುವಣ ಬಸಿಗೊಳವೆಯನ್ನು ಬಳಸಿ ಕೀವು ತೆಗೆಯುವುದೋ, ಅಥವಾ ಎದೆಗೂಡು ದರ್ಶಕದ ಸಹಾಯದಿಂದ ಶಸ್ತ್ರಚಿಕಿತ್ಸೆಯ ಮೂಲಕ ರೋಗ ಮುಕ್ತರನ್ನಾಗಿಸುವುದೋ ಎಂಬ ವಿಚಾರಗಳ ಮೇಲೆ ಇನ್ನೂ ಚರ್ಚೆಗಳು ನಡೆಯುತ್ತಿದೆ. ಈ ಅಧ್ಯಯನದಲ್ಲಿ 40 ರೋಗಿಗಳನ್ನು ಯಾದೃಚ್ಛೀಕರಿಸಿ (ರ್ಯಾಂಡಮೈಸೇಶನ್) 'ಅ' ಮತ್ತು 'ಬ' ಎಂಬ ಗುಂಪುಗಳನ್ನಾಗಿ ವಿಂಗಡಿಸಿ, ಎರಡೂ ಬಗೆಯ ಚಿಕಿತ್ಸೆಗಳನ್ನು ನೀಡಿ, ನಿರೀಕ್ಷೆಯೊಂದಿಗೆ ಅಧ್ಯಯನವನ್ನು ನಡೆಸಿದಾಗ, ಎದೆಗೂಡು ದರ್ಶಕದ ಚಿಕಿತ್ಸೆಯ ಪರವಾಗಿ ಫಲಿತಾಂಶಗಳು ದೊರಕಿವೆ. ಈ ಅಧ್ಯಯನದ ಫಲಿತಾಂಶಗಳಿಗೆ ಹಾಗೂ ಕೆಲವು ಮೊದಲೇ ನಡೆಸಿದ ಅಧ್ಯಯನಗಳ ಫಲಿತಾಂಶಗಳಿಗೆ ಬಹಳಷ್ಟು ಹೋಲಿಕೆಗಳು ಕಂಡುಬಂದಿವೆ.

ಆಸ್ಪತ್ರೆಯಲ್ಲಿ ಇರಬೇಕಾದಂತಹ ಸರಾಸರಿ ದಿನಗಳಲ್ಲಿ, 'ಬ' ಗುಂಪಿನ ರೋಗಿಗಳಲ್ಲಿ ಗಮನಾರ್ಹ ಇಳಿಕೆಯು ಕಂಡುಬಂದಿದೆ. ಇದು 1999ರಲ್ಲಿ 'ಹರ್ಟ್‌ಜೆನ್' ಮತ್ತು ಸಹಚರರು (9) ನಡೆಸಿದ ಅಧ್ಯನಕ್ಕೆ ಹೋಲಿಕೆಯಾಗಿದೆ. ವೈಟ್ ಮತ್ತು ಸಹಚರರು (10) ಹಾಗೂ ಡೋಸ್ಕಿ ಮತ್ತು ಸಹಚರರು (11) ನಡೆಸಿದ ಅಧ್ಯಯನದಂತೆ ನಮ್ಮ ಅಧ್ಯಯನದಲ್ಲೂ ಎದೆಗೂಡಿನಲ್ಲಿ ಬಸಿಕೊಳವೆ ಇದ್ದಂತಹ ಸರಾಸರಿ ದಿನಗಳಲ್ಲಿ 'ಬ' ಗುಂಪಿನ ರೋಗಿಗಳಲ್ಲೇ ಗಮನಾರ್ಹ ಇಳಿಕೆಯು ಕಂಡುಬಂದಿದೆ.

ಮುಂದುವರಿಯುತ್ತಿರುವ ದೇಶವಾದಂತಹ ಭಾರತದಲ್ಲಿ ಚಿಕಿತ್ಸೆಯ ಒಟ್ಟು ವೆಚ್ಚವೂ ಒಂದು ಮುಖ್ಯವಾದ ಚರ್ಚಾಸ್ಪದ ವಿಷಯವಾಗಿದೆ. 'ಅ' ಗುಂಪಿನ ರೋಗಿಗಳ ಚಿಕಿತ್ಸೆಯ ವೆಚ್ಚವು ಅಗ್ಗವಾಗಿದ್ದರೂ, ಚಿಕಿತ್ಸೆಯ ವಿಫಲತೆಯಿಂದ ಶಸ್ತ್ರಚಿಕಿತ್ಸೆಗೆ ಒಳಗಾದವರ ಸಂಖ್ಯೆಯು ಹೆಚ್ಚಿದೆ. ಇದರಿಂದ ಒಟ್ಟು ಆಸ್ಪತ್ರೆಯ ವೆಚ್ಚದಲ್ಲಿ ಗಮನಾರ್ಹ ಏರಿಕೆಯು ಕಂಡುಬಂದಿದೆ. ಆದರೆ 'ಬ' ಗುಂಪಿನ ರೋಗಿಗಳಲ್ಲಿ ಶಸ್ತ್ರಚಿಕಿತ್ಸಾ ವೆಚ್ಚವು ಮೊದಲು ಹೆಚ್ಚೆನಿಸಿದರೂ ಚಿಕಿತ್ಸೆಯ ವೈಫಲ್ಯತೆಯು ಕಡಿಮೆ ಇದ್ದ ಕಾರಣ ಹಾಗು ಬಹುಬೇಗ ರೋಗ ಮುಕ್ತರಾದ ಕಾರಣ ಆಸ್ಪತ್ರೆಯ ಒಟ್ಟು ಸರಾಸರಿ ವೆಚ್ಚದಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿದೆ. ಚಿಕಿತ್ಸೆಯಿಂದಾದ ತೊಂದರೆಗಳನ್ನು ಹೋಲಿಸಿದಾಗ 'ಅ' ಗುಂಪಿನ ಶೇ. 80ರಷ್ಟು ರೋಗಿಗಳಲ್ಲಿ ಚರ್ಮದಡಿ ಗಾಳಿ ತುಂಬಿಕೊಳ್ಳುವುದು, ಸಂಪೂರ್ಣವಾಗಿ ಕೀವು ಬಸಿಯದೇ ಇರುವುದು ಮುಂತಾದ

ತೊಂದರೆಗಳು ಕಂಡುಬಂದವು. ಚರ್ಮದಡಿಯ ಗಾಳಿ ತುಂಬಿಕೊಳ್ಳುವಿಕೆಗೆ ಕೇವಲ ಔಷಧೋಪಚಾರದಿಂದ ಚಿಕಿತ್ಸೆ ನೀಡಲಾಯಿತಾದರೂ ರೋಗ ಸಂಪೂರ್ಣ ಗುಣಮುಖವಾಗಲು ಕೆಲವು ರೋಗಿಗಳನ್ನು ಎದೆಗೂಡುದರ್ಶಕದ ಅಥವಾ ಎದೆಕೊಯ್ತೆಗೆತದ ಶಸ್ತ್ರಚಿಕಿತ್ಸೆಗಳಿಗೆ ಒಳಪಡಿಸಬೇಕಾಯಿತು. 'ಬ' ಗುಂಪಿನ ರೋಗಿಗಳಲ್ಲಿ ಶೇ. 50ರಷ್ಟು ರೋಗಿಗಳಿಗೆ ಆದ ಸಾಮಾನ್ಯ ತೊಂದರೆಗಳಾದಂತೆ ರಕ್ತಸ್ರಾವ, ಗಾಳಿಸೋರುವಿಕೆ, ಚಿಕಿತ್ಸೆ ವಿಫಲತೆ ಮುಂತಾದ ತೊಂದರೆಗಳಲ್ಲಿ ಕೇವಲ 20% ರೋಗಿಗಳಿಗೆ ಅದೂ ರೋಗವನ್ನು ಸಂಪೂರ್ಣ ಗುಣಮುಖವಾಗುವಂತೆ ಮಾಡುವ ಉದ್ದೇಶದಿಂದ ಥೊರಕಾಟಮಿ ಅಥವಾ ಎದೆಗೂಡು ಕೊಯ್ತೆಗೆತದ ಶಸ್ತ್ರಚಿಕಿತ್ಸೆಗೆ ಒಳಪಡಿಸಬೇಕಾಯಿತು. ರಕ್ತಸ್ರಾವ ಹಾಗೂ ಗಾಳಿ ಸೋರುವಿಕೆಗಳಿಗಾಗಿ ಶಸ್ತ್ರಚಿಕಿತ್ಸೆಯ ಅವಶ್ಯಕತೆಯೇ ಒದಗಿಬರಲಿಲ್ಲ.

ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆಯ ಸಾಫಲ್ಯತೆಗೆ ಇನ್ನೊಂದು ಮುಖ್ಯ ಕಾರಣವೆಂದರೆ, ಸಂಪೂರ್ಣ ಕೇವನ್ನು ದರ್ಶಕದ ಸಹಾಯದಿಂದ ಕಣ್ಣಿನಿಂದ ವೀಕ್ಷಿಸಿ ತೆಗೆಯಬಹುದಾಗಿದೆ. ಆದರೆ ಎದೆಗೂಡು ಪಕ್ಕೆಲು ನಡುವಣ ಬಸಿಗೊಳವೆಯನ್ನು 'ಕ್ಷ' ಕಿರಣ ಅಥವಾ ನಿದಾನ ಚಿತ್ರಗಳ ಆಧಾರದ ಮೇಲೆ ಒಂದು ಅಂದಾಜಿನಲ್ಲಿ ಸೇರಿಸಬೇಕಾಗುತ್ತದೆ. ನಮ್ಮ ಅಧ್ಯಯನದ ಫಲಿತಾಂಶವು 'ವೈಟ್' ಮತ್ತು ಸಹಚರರು (10) ಹಾಗೂ 'ಡೋಸ್ಕಿ' (11) ಮತ್ತು ಸಹಚರರ ಅಧ್ಯಯನದ ಫಲಿತಾಂಶಗಳಿಗೆ ಪೂರಕವಾಗಿದೆ.

ಮಿತಿಗಳು : ನಮ್ಮ ಅಧ್ಯಯನವು ಒಂದು ಸಣ್ಣ ಪ್ರಮಾಣದ ಗುಂಪಿನ ಮೇಲೆ ನಡೆಸಿದ ಅಧ್ಯಯನವಾಗಿದೆ. ಈ ರೋಗದ ಚಿಕಿತ್ಸೆಯ ಬಗ್ಗೆ ಸರಿಯಾಗಿ ತಿಳಿದುಕೊಳ್ಳಲು ಇನ್ನೂ ಹೆಚ್ಚಿನ ಪ್ರಮಾಣದ ರೋಗಿಗಳ ಮೇಲೆ ನಡೆಸಬಹುದಾದ ಯಾದೃಚ್ಛಿಕೃತ ನಿರೀಕ್ಷಿತ ಅಧ್ಯಯನಗಳ ಅವಶ್ಯಕತೆ ಇದೆ.

ಉಪಸಂಹಾರ : ಈ ಅಧ್ಯಯನದಿಂದ ತಿಳಿದುಬಂದಂತಹ ಅಂಶಗಳೆಂದರೆ, ತಂತುಕೀವಿನ ಹಂತದ ಎದೆಗೂಡಿನ ಒಳಕೀವಿನ ಚಿಕಿತ್ಸೆಗೆ ಪಕ್ಕೆಲುನಡುವಣ ಬಸಿಗೊಳವೆ ಚಿಕಿತ್ಸೆಯನ್ನು ಬಳಸುವುದರಿಂದ, ಅತೀ ಹೆಚ್ಚು ರೋಗ ಪ್ರಮಾಣ, (ಮೊರ್ಬಿಡಿಟಿ) ಚಿಕಿತ್ಸಾ ವೈಫಲ್ಯತೆಗಳು, ಅಲ್ಲದೇ, ರೋಗಿಯು ಬಸಿಗೊಳವೆಯೊಂದಿಗೆ ಇರಬೇಕಾದಂತಹ ದಿನಗಳಲ್ಲಿ ಏರಿಕೆ, ಹೆಚ್ಚಿನ ಆಸ್ಪತ್ರೆಯ ಸರಾಸರಿ ವೆಚ್ಚ ಹಾಗೂ ಆಸ್ಪತ್ರೆಯಲದಲಿ ಇರಬೇಕಾದಂತಹ ಒಟ್ಟು ದಿನಗಳಲ್ಲಿ ಏರಿಕೆ ಇರುವಂತ ಸಾಧ್ಯತೆಯಿದೆ. ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆಯಿಂದ ರೋಗವನ್ನು ಸಂಪೂರ್ಣ ಗುಣಪಡಿಸುವುದಲ್ಲದೇ ಚಿಕಿತ್ಸೆಯಿಂದಾಗುವ ತೊಂದರೆಗಳಲ್ಲಿ ಇಳಿಕೆ ಹಾಗೂ ಚಿಕಿತ್ಸಾ ವೈಫಲ್ಯತೆಯ ಇಳಿಕೆಯಾಗುವ ಸಾಧ್ಯತೆಯಿದೆ. ಆದ್ದರಿಂದ ನಮ್ಮ ಅಧ್ಯಯನದಿಂದ "ತಂತುಕೀವಿನ ಹಂತದ ಎದೆಗೂಡಿನ ಒಳಗೀವಿನ ಚಿಕಿತ್ಸೆಗೆ ಪಕ್ಕೆಲು ನಡುವಣ ಬಸಿಗೊಳವೆ ಚಿಕಿತ್ಸೆಗಿಂತ, ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆಯೇ ಉತ್ತಮ ಎಂಬ ಅಂಶವು ತಿಳಿದುಬರುತ್ತದೆ.

ಸ್ಥೌಲ್ಯ ರೋಗಧಲ್ಲಿ ಆನಿಪ್ರಭಾ, ತ್ರಿಫಲಾ ಗತಿ ಮತ್ತು ಪುನರ್ನವಾ ಮಮ್ಮೂರ ಔಷಧಗಳ ಚಿಕಿತ್ಸಕೀಯ ಅಧ್ಯಯನ

ಡಾ. ಶ್ರೀಪಥಿ ಆಚಾರ್ಯ ಜಿ
ಡೈರೆಕ್ತರ್ ಅಕದೆಮಿಕ್ ಮತ್ತು ಲೀಸರ್ಚ್ ಮುನಿಯಾಲ್ ಆಯುರ್ವೇಧ ಕಾಲೇಜು ಮತ್ತು ಆಸ್ಪತ್ರೆ, ಮಣಿಪಾಲ

ಸಾರಾಮ್ಶ : ಈಗಿನ ಜೀವನಶೈಲಿ, ಆಹಾರಕ್ರಮ, ಆಧುನಿಕ ಔಷಧಗಳ ಅವೈಜ್ಞಾನಿಕ ಪ್ರಯೋಗ ಹಾಗೂ ಭಯಾಪಚಯ ಪ್ರಕ್ರಿಯೆಗಳಿಮ್ದಾಗಿ ಸ್ಥೌಲ್ಯರೋಗಧ ಉಮ್ತಾಗುವಿಕೆಯು ಭಾರಥೀಯರಲ್ಲಿ ಗಣನೀಯವಾಗಿ ಹೆಚ್ಚಿಧೆ. ವಿಶ್ವಸ್ತರಧಲ್ಲೂ ಕೂಡಾ ಎಲ್ಲಾ ವಯಸ್ಸಿನ ವಿಭಾಗಧಲ್ಲಿ ಅಮ್ಗುಬೇಧವಿಲ್ಲಧೆ ಈ ರೋಗವು ಕಾಣಿಸಿಗುತ್ತಧೆ. ಮುಖ್ಯವಾಗಿ ಕಫಕಾರಕ ಆಹಾರ ವಿಹಾರ, ವ್ಯಾಯಮಧ ಅಭಾವ, ಅಥಿಯಾಧ ಹರ್ಷ ಯಾ ಚಿಮ್ತೆ, ಹಾರ್ಮೋನುಗಳ ವೈಪರೀತ್ಯ (ಥೈರೋಯ್ಡ್ ಹಾರ್ಮೋನಿನ ಕೊರಥೆ, ಕಾರ್ತಿಸೋಲ್ ನ ಆಧಿಕ್ಯ, ಗ್ರೋಲ್ ಹಾರ್ಮೋನಿನ ಆಧಿಕ್ಯ ಇತ್ಯಾಧಿ), ಪಾಮ್ದು ರೋಗ ಇವುಗಳಿಮ್ದಾಗಿ ಸ್ಥೌಲ್ಯ ದೋಷಗಧ ಲಕ್ಷಣಗಳು ಹೆಚ್ಚಾಗಿ ಕಮ್ಡುಬರುವುಧು. ಅಥಿಯಾಧ ಹಸಿವೆ ,ಅಥಿಯಾಧ ಬಾಯಾಲಿಕೆ, ಸಮ್ಶೋಧ ಶಕ್ತಿ ಕಥಿಮೆಯಾಗುವುಧು, ಶಲೀರಧ ಚತುವತಿಕೆಗಳು ನಿಧಾನವಾಗುವುಧು, ಸ್ವೇಧಾಧಿಕ್ಯ, ಧೌರ್ಗಮ್ಧ್ಯ, ಧೌರ್ಬಲ್ಯ, ಆಯುರ್ಹ್ರಾಸ ಈ ಎಮ್ತು ಮಹಾಧೋಷಗಳು ಈ ರೋಗಧ ಲಕ್ಷಣಗಳಾಗಿ ಕಮ್ಡುಬರುವುಧು. ಆಧುನಿಕರ ಪ್ರಕಾರ - ಶ್ವಾಸಕೋಶಧಲ್ಲಿ ವಾಯುವಿನ ಸಮ್ಚಾರ ಕಥಿಮೆಯಾಗುವುಧು, ಮಧುಮೇಹ, ಅಧಿಕ ರಕ್ತಚಾಪ, ಧಮಣಿ ಪ್ರಥಿಚಯ, ಪಕ್ಷಾಘಾಥ,ಉತ್ಥಾನ ವಾಥರಕ್ತ, ಸಮ್ಧಿಗಥ ವಾಥ, ಪಿತ್ಥಾಶ್ಮರಿ ಮೊಧಲಾಧುವುಗಳು ಸ್ಥೂಲಕಾಯರಲ್ಲಿ ಸಾಮಾನ್ಯವಾಗಿ ಕಮ್ಡುಬರುವುಧು.

ಈ ನಿತ್ತಿನಲ್ಲಿ ಸ್ಥೌಲ್ಯ ರೋಗಧ ೩೦ ರೋಗಿಗಳನ್ನು ಮುನಿಯಾಲು ಆಯುರ್ವೇಧ ಆಸ್ಪತ್ರೆಯಮ್ದ ಆರಿಸಿ ಅವರಲ್ಲಿ ಮುನಿಪ್ರಭಾ ಮಾತ್ರೆಗಳು, ತ್ರಿಫಲಾ ಗತಿ ಹಾಗೂ ಪುನರ್ನವಾ ಮಮ್ಮೂರ ಮಾತ್ರೆಗಳನ್ನು ೩ ಥಿಮ್ಗಳುಗಳವರೆಗೆ ಕೊಧಲಾಯಿಥು. ವಿಶೇಷವಾಧ ಪ್ರೋಫಾರ್ಮವನ್ನು ಥಯಾರಿಸಿ ಚಿಕಿತ್ಸಾಪೂರ್ವ ಮತ್ತು ಚಿಕಿತ್ಸಾನಮ್ತರ ಕೆಲವೊಮ್ದು ವಿಮರ್ಶನಾತ್ಮಕ ಅಮ್ಶಗಳನ್ನು ಧಾಖಲಿಸಲಾಯಿಥು.ನಮ್ತರ ವಿಮರ್ಶನಾತ್ಮಕ ಅಧ್ಯಯನ ಮಾಧಲಾಯಿಥು.

ಈ ಸಮ್ಶೋಧನೆಯಲ್ಲಿ ಮೇಲಿನ ಔಷಧಗಳು ವಿಶೇಷ ಪರಿಣಾಮಕಾರಿ ಎಮ್ದು ಕಮ್ಡುಕೊಳ್ಳಲಾಗಿಧೆ. ಪ್ರಸ್ತುಥ ಈ ಪ್ರಬಮ್ಧಧಲ್ಲಿ ಸ್ಥೌಲ್ಯ ರೋಗಧ ಮೇಲೆ ಈ ಆಯುರ್ವೇಧ ಔಷಧಗಳ ಚಿಕಿತ್ಸಕೀಯ ಅಧ್ಯಯನವನ್ನು ಮಾಧಲಾಗಿಧೆ.

ಪೀಠಿಕೆ : ಸ್ಥೌಲ್ಯ ರೋಗವು ಒಂದು ಕಫಜ ರೋಗವಾಗಿದ್ದು ಕಫ ಹಾಗೂ ಮೇಧಕಾರಕ ಆಹಾರ ವಿಹಾರ ಸೇವನೆಯಿಂದ ಉಂಟಾಗುವುಧು.

ಕಾರಣಗಳು : ೧) ಅವ್ಯಾಯಾಮ
೨) ದಿವಾಸ್ವಪ್ನ
೩) ಅಚಿಂತನ
೪) ಪರ್ಷಾಧಿಕ್ಯತ್ವ
೫) ಸಂತರ್ಪಣ
೬) ಕಫಕಾರಕ ಆಹಾರ ವಿಹಾರ
೭) ಮಧುರ, ಸ್ನಿಗ್ಧ, ಗುರು, ಆಹಾರಗಳ ಅಧಿಕ ಸೇವನೆ.
೮) ಘೃತ, ತೈಲ, ವಸಾ, ಮಜ್ಜಾ, ಆದಿಗಳ ಸೇವನೆ
೯) ಮಾಷ (ಉದ್ದು), ಗೋಧೂಮ (ಗೋಧಿ), ಪಿಣ್ಯಾಕ (ಹಿಂಡಿ),

ಮತ್ಸ್ಯ (ಸ್ನಿಗ್ಧ ಮೀನು), ಆವಿಮಾಂಸ (ಕುರಿಯ ಮಾಂಸ), ಆನೂಪ ಮಾಂಸ (Meat of Domestic animals), ಜಲಜ ಮಾಂಸ (Marine food)

೧೦) ಸಂಭೋಗ ಮಾಡದೇ ಇರುವುದು.

ಶರೀರದಲ್ಲಿ ಉಂಟಾಗುವ ವ್ಯತ್ಯಾಸಗಳು :

೧) ಅತಿ ಆಹಾರ ಸೇವನೆಯಿಂದ ಆಹಾರವು ಪಚನಾನಂತರ ಗ್ಲೂಕೋಸ್, ಅಮೈನೋ ಆಸಿಡ್, ಗ್ಲಿಸರೋಲ್, ಫ್ಯಾಟಿ ಆಸಿಡ್ ಆಗಿ ನಂತರ ಯಕೃತ್ತನ್ನು ಪ್ರವೇಶಿಸಿ ಅಲ್ಲಿ ಸ್ನೇಹತತ್ವ (Fat) ಆಗಿ ಜಮಾವಣೆಯಾಗುವುದು. (Fat Depot).

೨) ಅಧಿಕ ಸ್ನೇಹತತ್ವದ ನಿರ್ಮಾಣವಾಗಿ ನಂತರ ಅದು ತ್ವಚೆಯ ಅಧೋಭಾಗದಲ್ಲಿ (Subcutaeneous tissue) ಜಮಾವಣೆಯಾಗುವುದು.

೩) ಇತರ ಸ್ನೇಹತತ್ವ ಜಮಾವಣೆ ಉದರದ ಆಂತ್ರಾವರಣ ಕಲಾ (Peritoneum) ಸ್ಫಿಕ ಪ್ರದೇಶ (Buttocks), ಸ್ತನ ಪ್ರದೇಶ (Pectoral region), ಆದಿಗಳಲ್ಲಿ ಶೇಖರಣೆಯಾಗುವುದು.

೪) ವ್ಯಕ್ತಿಯಲ್ಲಿ ಶ್ರಮಶ್ವಾಸ (Exertional dyspnoea) ಪುಪ್ಪುಸದಲ್ಲಿ ವಾಯುಪೂರಣ ಕಡಿಮೆಯಾಗುವುದು (Hypoventilation) ರಕ್ತದಲ್ಲಿ ಸಕ್ಕರೆಯ ಅಂಶದ ಆಧಿಕ್ಯತೆ (Hyper glycemia), ರಕ್ತದಲ್ಲಿ ಮೇದತತ್ವದ ಆಧಿಕ್ಯ (Hyper cholestremia), ಧಮನೀ ಪ್ರತಿಚಯ (Atheroselerosis), ರಕ್ತ ಚಾಪಾಧಿಕ್ಯ (Hypertension) ಇತ್ಯಾದಿಗಳುಂಟಾಗುವುವು.

೫) ಯಕೃತ್‌ನಲ್ಲಿ ಮೇದತತ್ವದ ಜಮಾವಣೆ (Fatty Liver) ಉಂಟಾಗುವುದು.

೬) ಈ ರೋಗದಲ್ಲಿ ಮಾನಸಿಕ ಅವಸಾದ (Mental depression), ಮಧುಮೇಹ (Diabetes Mellilus), ಅಧಿಕ ರಕ್ತದೊತ್ತಡ (Hypertension) ಹೃದ್ರೋಗ (Ischaemic Heart Disease), ಸಂಧಿಗತ ವಾತ (Ostearthritis), ಪಿತ್ತಾಶ್ಮರಿ (Gall Stones), ಉತ್ಥಾನ ವಾತರಕ್ತ (Peripheral Vascular Disease), ಪಕ್ಷಾಘಾತ (Stroke or Hemiplegia) ಅಧಿಕವಾಗಿ ಕಂಡು ಬರುವುದು.

ಆಯುರ್ವೇದದಲ್ಲಿ ಹೇಳಿದ ಸ್ಥೌಲ್ಯ ರೋಗದ ಅಷ್ಟ ಮಹಾದೋಷಗಳು :

೧) ಆಯುಷೋಹ್ರಾಸ	Decreased life span
೨) ಜವೋಪರೋಧ	Slow activities.
೩) ಕೃಚ್ಛ್ರವ್ಯವಾಯತಾ	Impotency
೪) ಸ್ವೇದಾಧಿಕ್ಯ	Excessive sweating
೫) ದೌರ್ಬಲ್ಯ	Weakness
೬) ದೌರ್ಗಂಧ್ಯ	Bad Odour
೭) ಕ್ಷುಧಾಧಿಕ್ಯ	Excessive hunger
೮) ಪಿಪಾಸಾಧಿಕ್ಯ	Excessive thirst

ಸಂಶೋಧನಾ ಸಾಮಗ್ರಿ ಮತ್ತು ವಿಧಾನ : ಸ್ಥೌಲ್ಯ ರೋಗದ ೩೦ ರೋಗಿಗಳನ್ನು ಮುನಿಯಾಲು ಆಯುರ್ವೇದ ಆಸ್ಪತ್ರೆ ಮಣಿಪಾಲದಿಂದ ಆರಿಸಿ ಅವರಲ್ಲಿ ಈ ಕೆಳಗಿನ ಔಷಧಿಗಳನ್ನು ೩ ತಿಂಗಳುಗಳ ವರೆಗೆ ಕೊಡಲಾಯಿತು.

೧) ಮುನಿಪ್ರಭಾ ಮಾತ್ರೆಗಳು – ೪೦೦ ಮಿ.ಗ್ರಾಂ ಶರೀರೋಷ್ಣ ಜಲದೊಂದಿಗೆ ದಿನಕ್ಕೆ ಮೂರು ಬಾರಿ

೨) ತ್ರಿಫಲಾವಟಿ – ೫೦೦ ಮಿ.ಗ್ರಾಂ ದಿನಕ್ಕೆರಡು ಬಾರಿ ಪ್ರಾತಃ, ಸಾಯಂ.

೩) ಪುನರ್ನವಾ ಮಂಡೂರ ಮಾತ್ರೆಗಳು : – 350mg ದಿನಕ್ಕೆ ೩ ಬಾರಿ

ಚಿಕಿತ್ಸಾ ಸಮಯದಲ್ಲಿ ಇತರ ವಿಚಾರಗಳು (Concomittant treatment, diet) :

೧) ದಿನಕ್ಕೆ 20 ನಿಮಿಷ ನಡೆದಾಡುವುದು (Walkng) ಆದೇಶಿಸಲಾಯಿತು.

೨) ಹಗಲು ನಿದ್ದೆಯನ್ನು ನಿಷೇದಿಸಲಾಯಿತು.

೩) ಪಥ್ಯಗಳಾದ – ಹಸಿರು ಸೊಪ್ಪು, ತರಕಾರಿಗಳು, ನಾರು ಉಳ್ಳ (Fibre Containing) ಆಹಾರ ದ್ರವ್ಯಗಳ ಸೇವನೆ.

೪) ಅಪಥ್ಯಗಳು – ಮಧುರ, ಸ್ನಿಗ್ಧ, ಸ್ನೇಹತತ್ವವುಳ್ಳ ಆಹಾರಗಳನ್ನು ಆದಷ್ಟು ಕಡಿಮೆ ಸೇವಿಸಲು ನಿರ್ದೇಶಿಸಲಾಯಿತು.

೫) ಮಾನಸಿಕ ಒತ್ತಡದಿಂದ ಬಳಲುತ್ತಿರುವ ವ್ಯಕ್ತಿಗಳಲ್ಲಿ ಧ್ಯಾನ (Meditation) ಹಾಗೂ ಪ್ರಾಣಾಯಾಮ (Breathing Exercise) ಮಾಡಲು ನಿರ್ದೇಶಿಸಲಾಯಿತು.

ಧನಾತ್ಮಕ ಅಂಶಗಳು : Inclusion Criteria

೧) ೧೫ ವರ್ಷಗಳಿಂದ ೬೦ ವರ್ಷದ ವಯೋಮಾನದ ಸ್ಥೌಲ್ಯ ರೋಗಿಗಳು

೨) ಸ್ತ್ರೀ ಹಾಗೂ ಪುರುಷ ರೋಗಿಗಳು

೩) ಎಲ್ಲಾ ಸಾಮಾಜಿಕ, ಆರ್ಥಿಕ ಗುಂಪಿನ ರೋಗಿಗಳನ್ನು ಸೇರಿಸಿಕೊಳ್ಳಲಾಯಿತು.

ಋಣಾತ್ಮಕ ಅಂಶಗಳು : Exclusion Criteria

೧) ಮಧುಮೇಹ ರೋಗಿಗಳು (ರಕ್ತದಲ್ಲಿ ಅಧಿಕ ಸಕ್ಕರೆಯ ಅಂಶವುಳ್ಳವರು) (>300 mg % Glucose)

೨) ಅಧಿಕ ರಕ್ತದ ಒತ್ತಡವುಳ್ಳವರು (>160 / 100 mm of Hg)

೩) ವೃಕ್ಕ ವಿಕೃತಿ, ಯಕೃತ್ ವಿಕೃತಿ ಹಾಗೂ ಪಕ್ಷಾಘಾತ ರೋಗಿಗಳು

ಪರೀಕ್ಷಾ ಅಂಶಗಳು : (Parameters of Assessment)

I) ಲಾಕ್ಷಣಿಕ (Clinical parameters)

೧) ಶರೀರ ಭಾರ
೨) ದೌರ್ಬಲ್ಯ
೩) ದೌರ್ಗಂಧ್ಯ
೪) ಕೃಚ್ಛ್ರವ್ಯವಾಯತಾ
೫) ಕ್ಷುಧಾ
೬) ಪಿಪಾಸಾ

II) ಪ್ರಯೋಗಶಾಲೀಯ ಅಂಶಗಳು

೧) ರಕ್ತದಲ್ಲಿ ಸಕ್ಕರೆಯ ಪ್ರಮಾಣ
೨) ಲಿಪಿಡ್ ಪ್ರೊಫೈಲ್
೩) ಸೀರಮ್ ಕೊಲೆಸ್ಟ್ರಾಲ್

ಅವಲೋಕಿತ ಅಂಶಗಳು (Observation)

ಈ ಅಧ್ಯಯನದಲ್ಲಿ ಸಾಮಾನ್ಯವಾಗಿ ಪುರುಷರಿಗಿಂತ ಸ್ತ್ರೀಯರು ಹೆಚ್ಚಾಗಿ ಬಳಲುತ್ತಿರುವುದು ಕಂಡು ಬಂತು. ವಿಶೇಷವಾಗಿ ೩೦ ರಿಂದ ೬೦ ವರ್ಷದ ವ್ಯಕ್ತಿಗಳಲ್ಲಿ ಈ ರೋಗದ ಆಧಿಕ್ಯವಿತ್ತು. ಈ ರೋಗದವರಲ್ಲಿ ಶ್ರಮಶ್ವಾಸ (Excertional dyspnoea) ಸಂಧಿಗತವಾತ (Osteoarthritis of the knee joint), ಅಧಿಕ ರಕ್ತದೊತ್ತಡ (Hyper tension), ಮಧುಮೇಹ (Diabetic mellitus), ಹೃತ್‌ಶೂಲ (Ischaemic

Heart disease), ಮಲಬದ್ಧತೆ (Constipation) ಹಾಗೂ ಮನೋ ಅವಸಾದ (Mental depression) ಇರುವುದು ಕಂಡು ಬಂತು.

ಈ ಮೇಲಿನ ಆಯುರ್ವೇದ ಔಷಧಿಗಳನ್ನು ೩ ತಿಂಗಳುಗಳವರೆಗೆ ಕೊಟ್ಟಾಗ ಲಾಕ್ಷಣಿಕ ಹಾಗೂ ಪ್ರಯೋಗಶಾಲೀಯ ಅಂಶಗಳಲ್ಲಿ ಗಣನೀಯವಾದ ಪರಿಣಾಮ ಕಂಡುಕೊಳ್ಳಲಾಯಿತು. ಸೀರಮ್ ಕೊಲೆಸ್ಟರಾಲ್, ಲಿಪಿಡ್ ಪ್ರೊಪೈಲ್, ಹಿಮೋಗ್ಲೋಬಿನ್ ಪ್ರತಿಶತ ಹಾಗೂ ರಕ್ತದಲ್ಲಿ ಗ್ಲುಕೋಸ್‌ನ ಅಂಶಗಳಲ್ಲಿ ಉತ್ತಮಿಕೆಯು ಕಂಡುಬಂತು. ಲಾಕ್ಷಣಿಕ ಅಂಶಗಳಾದ ಶರೀರ ಭಾರ, ಶ್ರಮಶ್ವಾಸ, ಅಧಿಕ ರಕ್ತದೊತ್ತಡ, ಸಂಧಿಗತ ವೇದನೆ (ಜಾನು ಸಂಧಿ), ಮಲಬದ್ಧತೆ ಹಾಗೂ ಸಂಭೋಗ ಶಕ್ತಿ ಇವುಗಳಲ್ಲಿ ಉತ್ತಮಿಕೆಯು ಕಂಡುಬಂತು.











ಚರ್ಚೆ : ಸ್ಥೌಲ್ಯರೋಗವು ಜೀವನ ಸಂಬಂಧಿ ವಿಕಾರವಾಗಿದ್ದು ಶರೀರದಲ್ಲಿ ಚಯಾಪಚಯದಲ್ಲಿ ವ್ಯತ್ಯಾಸ ಉಂಟಾಗುವುದು. ನಾವು ಸೇವಿಸುವ ಆಹಾರ ಪ್ರಮಾಣವು ಅಧಿಕವಾಗಿದ್ದು ವ್ಯಾಯಾಮವು ಕಡಿಮೆಯಾಗಿದ್ದಲ್ಲಿ ಈ ರೋಗವುಂಟಾಗುವುದು. ಮಾನಸಿಕ ಒತ್ತಡ, ಮನೋ ಅವಸಾದ ಗಳಿಂದ ವ್ಯಕ್ತಿಯು ಆಹಾರವನ್ನೂ ತನಗರಿವಿಲ್ಲದೇನೇ ಅಧಿಕ ಪ್ರಮಾಣ ದಲ್ಲಿ ಸೇವಿಸಲು ಆರಂಭಿಸುವನು. ಇದರಿಂದಾಗಿ ಶರೀರದಲ್ಲಿ ಸ್ನೇಹತತ್ವದ ಜಮಾವಣೆಯಾಗಿ ಈ ರೋಗವುಂಟಾಗುವುದು. ಅನುವಂಶಿಕವಾಗಿಯೂ ಈ ರೋಗವು ಉಂಟಾಗುವುದನ್ನೂ ನಾವು ಕಾಣುತ್ತೇವೆ. ಈ ರೋಗವು ಕಫಕಾರಕ ಆಹಾರ ವಿಹಾರ ಹಾಗೂ ಮೇದುರ ಆಹಾರ. ಸೇವನೆಯಿಂದ ಉಂಟಾಗುವುದು. ಲಕ್ಷಣಗಳಾದ ಶರೀರ ಭಾರಾಧಿಕ್ಯ, ಶ್ರಮಶ್ವಾಸ, ಸಂಧಿಗತವಾತ, ಮಧುಮೇಹ, ಪಿತ್ತಾಶ್ಮರೀ, ಮನೋವಸಾದ, ಅಧಿಕ ರಕ್ತದೊತ್ತಡ, ಹೃತ್‌ಶೂಲ ಹಾಗೂ ಮಲಬದ್ಧತೆಗಳು ಸಾಮಾನ್ಯವಾಗಿ ಕಂಡುಬರುವುದು. ಇಲ್ಲಿ ಉಪಯೋಗಿಸುವ ಆಯುರ್ವೇದ ಔಷಧಿಗಳಲ್ಲಿ ಈ ಕೆಳಗಿನ ಕಾರ್ಮುಕತೆಯನ್ನೂ ನಾವು ನೋಡಬಹುದು.

೧. ಕಫಪರ – ಗುಗ್ಗುಲು, ಶಿಲಾಜತು
೨. ಮಲ ವಾತಾನುಲೋಮನ – ಹರೀತಕೀ, ತ್ರಿಫಲಾ
೩. ಮೇದೋಹರ (decreasing body fat) – ಗುಗ್ಗುಲು
೪. ಸ್ರೋತೋಶೋಧಕ – ಗುಗ್ಗುಲು, ಶಿಲಾಜತು, ಚಿತ್ರಕ
೫. ರಕ್ತಪ್ರಸಾದನ (Blood purifying) – ಸಾರಿವಾ, ಚಂದನ
೬. ಹೃದಯ ಬಲವರ್ಧಕ (Cardio Tonic) – ಹರೀತಕೀ, ಅರ್ಜುನ, ಗುಡೂಚೀ, ಅಶ್ವಗಂಧಾ
೭. ವಿರೇಚನ (Purgative) – ತ್ರಿಫಲಾ
೮. ಸ್ರಂಸನ (Mild Purgative) – ವಿಭೀತಕೀ

೯. ರಸಾಯನ (Immuno Modulator) – ಗುಗ್ಗುಲು, ಶಿಲಾಜತು
೧೦. ಮೇಧ್ಯ (Anti stress) – ಆಮಲಕೀ, ಹರೀತಕೀ
೧೧. ಒತ್ತಡ ನಿವಾರಕ (Anti Stress) – ತ್ರಿಫಲಾ, ಗುಡೂಚೀ
೧೨. ಹೊಂದಾಣಿಕೆಕಾರಕ (Adaptogenic) – ಗುಡೂಚೀ
೧೩. ಕ್ರಿಮಿಘ್ನ (Bacteria cidial, Wormicidial) – ಗುಗ್ಗುಲು
೧೪. ಧಮನೀ ಪ್ರತಿಚಯ ನಿವಾರಕ (Anti Atherogenic) – ಗುಗ್ಗುಲು, ಹರೀತಕೀ
೧೫. ರಕ್ತದ್ರಾವಕ – ಗುಗ್ಗುಲು
೧೬. Anti platelet agreagating – ಗುಗ್ಗುಲು
೧೭. Antithrombotic or Thrombolytic – ಗುಗ್ಗುಲು, ಚಿತ್ರಕ
೧೮. ಚಯಾಪಚಯ ವರ್ಧಕ ಯಾ ಧಾತ್ವಗ್ನಿವರ್ಧಕ – ಚಿತ್ರಕ, ಶುಂಠಿ
೧೯. ಥೈರಾಯ್ಡ್ ಗ್ರಂಥಿಯನ್ನು ಉತ್ತೇಜಿಸುವುದು – ಗುಗ್ಗುಲು
೨೦. ಮೇದೋತತ್ವಹರ (Hypochalestremic) – ಗುಗ್ಗುಲು
೨೧. ಮೂತ್ರಲ (Diuretic) – ಮಂಡೂರ, ಪುನರ್ನವಾ, ಸೈಂಧವ ಲವಣ

ಉಪಸಂಹಾರ :

೧. ಬದಲಾದ ಜೀವನ ಶೈಲಿ, ವಿಪರೀತ ಆಹಾರ ಕ್ರಮ, ವ್ಯಾಯಾಮ ಇಲ್ಲದೇ ಇರುವುದು ಹಾಗೂ ಕಫಮೇದಕಾರಕ ಆಹಾರ ವಿಹಾರಗಳಿಂದ ಸ್ಥೌಲ್ಯರೋಗವು ಸಾಮಾನ್ಯವಾಗಿ ಉಂಟಾಗುವುದು.
೨. ಶರೀರದಲ್ಲಿರುವ ಹಾರ್ಮೋನುಗಳ ವ್ಯತ್ಯಾಸ, ಮನೋ ಅವಸಾದ (Mental depression) ಗಳಿಂದ ಶರೀರದಲ್ಲಿ ಚಯಾಪಚಯ (Metabolism)ನಲ್ಲಿ ವ್ಯತ್ಯಾಸ ಉಂಟಾಗಿ ಮೇದೋರೋಗವು ಉಂಟಾಗುವುದು.
೩. ಈ ಅಧ್ಯಯನದಲ್ಲಿ ಸ್ತ್ರೀಯರಲ್ಲಿ ಸ್ಥೌಲ್ಯರೋಗವು ಹೆಚ್ಚಾಗಿ ಕಂಡು ಬಂತು.
೪. ಮುನಿಪ್ರಭಾ ಮಾತ್ರೆಗಳು, ತ್ರಿಫಲಾವಟಿ ಮತ್ತು ಪುನರ್ನವಾ ಮಂಡೂರ ಮಾತ್ರೆಗಳು ಸ್ಥೌಲ್ಯರೋಗದಲ್ಲಿ ಉತ್ತಮವಾದ ಪರಿಣಾಮವನ್ನು ಹೊಂದಿದೆ.
೫. ಈ ಚಿಕಿತ್ಸೆಯಲ್ಲಿ ವಿಶೇಷವಾದ ಅಡ್ಡ ಪರಿಣಾಮಗಳಿರುವುದಿಲ್ಲ.
೬. ದಿನಕ್ಕೆ ಕನಿಷ್ಠ ೨೦ ನಿಮಿಷ ನಡೆದಾಡುವುದನ್ನು (Walking) ನಿರ್ದೇಶಿಸಲಾಯಿತು.

ಆಧಾರ ಗ್ರಂಥಗಳು :

೧. ಅಗ್ರೌಷಧಿಗಳು – ಡಾ। ಗುರುರಾಜ ಆಚಾರ್ಯ – ೨೦೧೦
೨. ಆಯುರ್ವೇದ ವಿಜ್ಞಾನ – ಡಾ। ಶ್ರೀಪತಿ ಆಚಾರ್ಯ, ಮಣಿಪಾಲ – ೨೦೧೨
೩. ರಿಸರ್ಚಸ್ ಇನ್ ಆಯುರ್ವೇದ ಡಾ। ಶ್ರೀಪತಿ ಆಚಾರ್ಯ, ಮಣಿಪಾಲ – ೨೦೧೧
೪. ಅಪ್‌ಡೇಟೆಡ್ ಆಯುರ್ವೇದ – ಡಾ। ಶ್ರೀಪತಿ ಆಚಾರ್ಯ, ಮಣಿಪಾಲ – ೨೦೧೩
೫. ಚರಕಸಂಹಿತಾ – ಜಿ.ಎಸ್. ಚತುರ್ವೇದಿ, ಚೌಖಂಭಾ ಪ್ರೆಸ್, ವಾರಣಾಸಿ
೬. ಆಯುರ್ವೇದಿಕ್ ಕ್ಲಿನಿಕಲ್ ಡಯಗ್ನೊಸಿಸ್ – ಜಿ.ಡಿ. ಸಿಂಘಾಲ್, ಎಸ್.ಎನ್. ತ್ರಿಪಾಠಿ, ನ್ಯೂಡೆಲ್ಲಿ
೭. ಸುಶ್ರುತ ಸಂಹಿತಾ – ಜಿ.ಡಿ. ಸಿಂಘಲ್ ಮತ್ತಿತರರು
೮. ಟೆಕ್ಸ್‌ಬುಕ್ ಆಫ್ ಕಾಯ ಚಿಕಿತ್ಸಾ, ರಾಮಹರ್ಷಸಿಂಹ, ಚೌಖಂಬಾ ಪ್ರೆಸ್, ವಾರಣಾಸಿ
೯. ರೀಸೆಂಟ್ ಎಡ್‌ವಾನ್ಸಸ್ ಇನ್ ಕಾಯ ಚಿಕಿತ್ಸಾ – ಪ್ರೊ. ರಾಮಹರ್ಷ ಸಿಂಹ, ಚೌಖಂಬಾ ಪ್ರೆಸ್, ನ್ಯೂಡೆಲ್ಲಿ.

ಸಕ್ಕರೆ ಕಾಲಿನ ಪಾದದ ಹುಣ್ಣುಗಳ ಚಿಕಿತ್ಸೆಗೆ ರೂಢಿಯಲ್ಲಿರುವ ಗಾಯಪಟ್ಟಿ (ಡ್ರೆಸ್ಸಿಂಗ್) ಮತ್ತು ಒತ್ತಡ ರಹಿತ ಗಾಯಪಟ್ಟಿ ವಿಧಾನ (ಆಫ್ ಲೋಡಿಂಗ್ ಟೆಕ್‌ನಿಕ್) ಗಳ ನಡುವಿನ ತುಲನಾತ್ಮಕ ಅಧ್ಯಯನ

*ಡಾ॥ ಶಿಶಿರ ಎಸ್. ರಾನಡೆ, **ಪ್ರೊ. ಬಿ.ಜೆ. ಶರತ್ ಚಂದ್ರ, ***ಡಾ॥ ತ್ರಿಶೂಲಿ ಪಿ.ಬಿ.
ಯುವ ವಿಜ್ಞಾನಿ, ಶಸ್ತ್ರಚಿಕಿತ್ಸಕರು, ** ಶಸ್ತ್ರಚಿಕಿತ್ಸಕರು ಮತ್ತು ಘಟಕದ ಮುಖ್ಯಸ್ಥರು, ***ಶಸ್ತ್ರಚಿಕಿತ್ಸಕರು, ಸಹಾಯಕ ಪ್ರಾಧ್ಯಾಪಕರು,
ಜೆ.ಎಸ್.ಎಸ್. ಆಸ್ಪತ್ರೆ, ಮೈಸೂರು

ಮುನ್ನುಡಿ : ಸಕ್ಕರೆ ಪಾದದ ಹುಣ್ಣುಗಳಿಗೆ ಮೂಲ ಕಾರಣವೆಂದರೆ ನರಬೇನೆ ಅಥವಾ ನ್ಯೂರೋಪತಿ ಇದರಿಂದ ರೋಗಿಗಳಿಗೆ ಪಾದದ ಸ್ಪರ್ಶಜ್ಞಾನವು ಇಲ್ಲದಂತಾಗಿ ಪಾದದ ಒತ್ತಡ ಬೀಳುವ ಜಾಗಗಳಲ್ಲಿ ಪದೇಪದೇ ಗಾಯಗಳಾಗುತ್ತವೆ. ಈ ರೀತಿ ನರಬೇನೆಯಿಂದಾದ ಹುಣ್ಣುಗಳಿಗೆ ಸಮರ್ಪಕವಾದ ಚಿಕಿತ್ಸೆ ಎಂದರೆ, ಸರಿಯಾದ ಸಮಯದಲ್ಲಿ ಸತ್ತ ಅಂಗಾಂಶಗಳ ಕಸರು ತೆಗೆಯುವಿಕೆ (ಡಿಬ್ರಾಯ್ಡ್‌ಮೆಂಟ್) ಮತ್ತು ಸೂಕ್ತವಾದ ವಿಧಾನದಲ್ಲಿ ಹುಣ್ಣಾದ ಜಾಗಕ್ಕೆ ಒತ್ತಡ ಬೀಳದಂತೆ ಮುತುವರ್ಜಿ ವಹಿಸುವುದೇ ಆಗಿದೆ.

ವಿಧಾನ : ಜೆ.ಎಸ್.ಎಸ್. ಆಸ್ಪತ್ರೆಗೆ ಅಧ್ಯಯನದ ಅವಧಿಯಲ್ಲಿ (ಅಂದರೆ ನವೆಂಬರ್ 2010 ರಿಂದ ನವೆಂಬರ್ 2012ರ ವರೆಗೆ) ಬಂದಂತಹ ಎಲ್ಲಾ ಸಕ್ಕರೆ ಕಾಲಿನ ಪಾದದಲ್ಲಿ ಹುಣ್ಣಿರುವ ರೋಗಿಗಳನ್ನು ಬಳಸಿ ಹೋಲಿಕೆಯ ಅಧ್ಯಯನವನ್ನು ನಡೆಸಲಾಯಿತು.

ಬಂದಂತಹ 50 ರೋಗಿಗಳಿಗೆ ಸಾಮಾನ್ಯ ಗಾಯಪಟ್ಟಿಯ ಮೂಲಕ ಹಾಗೂ ಇನ್ನೂ 50 ರೋಗಿಗಳಿಗೆ ನಾವೇ ತಯಾರಿಸಿ ಬಳಸಿದ ಒತ್ತಡ ರಹಿತ ಗಾಯಪಟ್ಟಿ ವಿಧಾನದಿಂದ ಚಿಕಿತ್ಸೆ ನೀಡಿ ಫಲಿತಾಂಶವನ್ನು ಹೋಲಿಸಲಾಯಿತು.

ಫಲಿತಾಂಶ : ಈ ಅಧ್ಯಯನದಲ್ಲಿ ಸಾಮಾನ್ಯ ಗಾಯಪಟ್ಟಿ ವಿಧಾನದಿಂದ ಹಾಗು ಒತ್ತಡರಹಿತ ಗಾಯಪಟ್ಟಿ ವಿಧಾನದಿಂದ ಸಕ್ಕರೆ ಪಾದದ ಹುಣ್ಣುಗಳಿಗೆ ಚಿಕಿತ್ಸೆ ನೀಡಿದಾಗ, ಒತ್ತಡ ರಹಿತ ಚಿಕಿತ್ಸೆಯನ್ನು ಪಡೆದ ರೋಗಿಗಳ ನೋವಿನ ಪ್ರಮಾಣದಲ್ಲಿ ಇಳಿಕೆ[ಪಿ. ಮೌಲ್ಯ (ಪಿ.ವ್ಯಾಲ್ಯು)=**0.000**], ಆಸ್ಪತ್ರೆಯಲ್ಲಿ ಇರಬೇಕಾದಂತಹ ದಿನಗಳಲ್ಲಿ ಇಳಿಕೆ[ಪಿ.=**0.002**], ಕಡಿಮೆ ಗಾಯಪಟ್ಟಿಗಳ ಬಳಕೆ [ಪಿ.=0.001], ಕಡಿಮೆ ಪ್ರಮಾಣದ ಪ್ರತಿರೋಧಕಗಳ ಬಳಕೆ [ಪಿ.=**0.34**], ಅನುಸರಣೆಗೊಂಡ ರೋಗಿಗಳ ಸಂಖ್ಯೆಯಲ್ಲಿ ಏರಿಕೆ [ಪಿ.=**0.038**}, ಹಾಗು ರೋಗದ ಒಟ್ಟು ಚಿಕಿತ್ಸಾ ವೆಚ್ಚಲ್ಲಿ

ಗಮನಾರ್ಹ ಇಳಿಕೆ [ಪಿ.=0.012]ಗಳು ಕಂಡುಬಂದವು.

ಉಪಸಂಹಾರ : ಆದ್ದರಿಂದ ಎರಡೂ ವಿಧವಾದ ಗಾಯಪಟ್ಟಿಗಳ ಚಿಕಿತ್ಸೆಯನ್ನು ಹೋಲಿಸಿದಾಗ ನಮ್ಮ ಅಧ್ಯಯನವು ಒತ್ತಡ ರಹಿತ ಚಿಕಿತ್ಸೆಗೆ ಪರವಾಗಿದೆ.

ಸಕ್ಕರೆ ಕಾಯಿಲೆಯು ಪ್ರಪಂಚದಾದ್ಯಂತ ಇರುವ ಸಾಮಾನ್ಯ ಸಮಸ್ಯೆಯಾಗಿದೆ. ಸಕ್ಕರೆ ಕಾಯಿಲೆಯಿಂದ ಬಳಲುವ ರೋಗಿಗಳು ತಮ್ಮ ಜೀವಿತಾಂಶದಲ್ಲಿ ಎಂದಾದರೂ ಒಮ್ಮೆ ಪಾದಗಳಲ್ಲಿ ಗಾಯಗಳಾಗಿ ಅದರಿಂದ ಬಳಲುತ್ತಾರೆ. ಇದರಲ್ಲಿ ಅನೇಕರಿಗೆ ದೀರ್ಘಾವಧಿಯ ಆಸ್ಪತ್ರೆಯ ಚಿಕಿತ್ಸೆ ಮತ್ತು ಇನ್ನೂ ಹಲವರಿಗೆ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇರುತ್ತದೆ. ಅವುಗಳಲ್ಲಿ ಮುಖ್ಯವಾದವೆಂದರೆ, ಕೀವು ತೆಗೆಯುವುದು, ಕೊಳೆತ ಅಂಗಾಂಶಗಳ ಕುಯ್ತೆಗೆತ, ಅಲ್ಲದೇ ಕೆಲವೊಮ್ಮೆ ಕಾಲು ತೆಗೆಯುವ ಸಂಭವವೂ ಒದಗಿಬರುತ್ತದೆ. ಸಕ್ಕರೆ ಕಾಯಿಲೆಯ ರೋಗಿಗಳ ಕಾಲುಗಳಿಗೆ ಹುಣ್ಣಾಗಲು ಅನೇಕ ಕಾರಣಗಳಿರುತ್ತವೆ. ಅವೆಂದರೆ ಕಾಲಿನ ನರಗಳ ಉರಿಊತ (ನ್ಯೂರೋಪತಿ) ರಕ್ತನಾಳಗಳ ಸಮಸ್ಯೆ (ವ್ಯಾಸ್ಕುಲೋಪತಿ)ರಕ್ತದಲ್ಲಿ ಸಕ್ಕರೆ ಅಂಶದ ನಿರಂತರ ವಿರುಪೇರು ಸೂಕ್ಷ್ಮಾಣುಜೀವಿಗಳಿಂದ ಸೋಂಕಾಗುವುದು ಇತ್ಯಾದಿ. ಈ ವಿಧದ ಸಮಸ್ಯೆಗಳು ಬಹಳವಾಗಿ ಬಡತನದ ರೇಖೆಗಿಂತ ಕೆಳಗಿರುವ ರೋಗಿಗಳಲ್ಲಿ ಮುಖ್ಯವಾಗಿ ಸಾಕ್ಷರತೆಯ ಕೊರತೆ, ಬಡತನ ಹಾಗೂ ನಿರ್ಲಕ್ಷತೆಯಿಂದ ಕಂಡುಬರುತ್ತವೆ.

ಸಕ್ಕರೆ ಕಾಯಿಲೆಯ ಇತಿಹಾಸ : "ಎವರಿ ಡಯಾಬಿಟಿಕ್ ಈಸ್ ಎ ಸರ್ಜಿಕಲ್ ಡಯಾಬಿಟಿಕ್" ಎಂದರೆ ಪ್ರತಿ ಎರಡರಲ್ಲಿ ಒಬ್ಬ ಸಕ್ಕರೆ ಕಾಯಿಲೆ ರೋಗಿಯು ಶಸ್ತ್ರಚಿಕಿತ್ಸೆಗೊಳಗಾಗುವ ರೋಗಿಯಾಗಿರುತ್ತಾನೆ ಎಂದು ಜೋಸ್‌ಲಿನ್ ಎನ್ನುವವರು ನುಡಿದಿದ್ದಾರೆ. ಕ್ರಿಪೂ. 1500ರಲ್ಲಿ ಈಜಿಪ್ಟ್ ದೇಶದ ಲೇಖನಗಳಲ್ಲಿ ಸಕ್ಕರೆ ಕಾಯಿಲೆಯ ಬಗ್ಗೆ ಉಲ್ಲೇಖವಿವಿದೆ. ಇದೇ ಸಮಕಾಲದಲ್ಲಿ ಭಾರತದಲ್ಲೂ ಆಗಿನ ವೈದ್ಯರೆನ್ನಿಸಿಕೊಂಡವರು ಈ ರೋಗವನ್ನು "ಜೇನು ಮೂತ್ರ" ಎಂದು ವಿಂಗಡಿಸಿದ್ದರು. ಸಕ್ಕರೆ ರೋಗಿಯ ಮೂತ್ರಕ್ಕೆ ಇರುವೆಗಳು ಮುತ್ತಿಕೊಳ್ಳುತ್ತಿದ್ದ ಕಾರಣದಿಂದ ಈ ರೋಗವನ್ನು "ಮಧುಮೇಹ" ಎಂದು ಹೆಸರಿಸಿದ್ದರು. ಪ್ರಾಚೀನ ಭಾರತದ ಶ್ರೇಷ್ಠ ವೈದ್ಯರೆನ್ನಿಸಿಕೊಂಡ ಸುಶ್ರುತ (ಕ್ರಿ.ಪೂ.400) ಹಾಗೂ ಚರಕ (ಸುಮಾರು ಎರಡನೇ ಶತಮಾನ) ಎನ್ನುವವರು ತಮ್ಮ ಗ್ರಂಥಗಳಲ್ಲಿ ಈ ರೋಗದ ಬಗ್ಗೆ ವಿಶ್ಲೇಷಿಸಿರುತ್ತಾರೆ.

ಸಕ್ಕರೆ ಕಾಯಿಲೆಯು ತಂದೆಯಿಂದ ಮಕ್ಕಳಿಗೆ ಅನುವಂಶೀಯವಾಗಿ ಹರಡಿಕೊಳ್ಳಬಹುದು. ಅಥವಾ ನಮ್ಮ ಜೀವನ ಶೈಲಿಯ ವ್ಯತ್ಯಾಸದಿಂದ, ಅತೀ ಬೊಜ್ಜಿನಿಂದಾಗಿ ಬರಬಹುದು. ರೋಗಿಗಳ ರಕ್ತದಲ್ಲಿ ಸಕ್ಕರೆ ಪ್ರಮಾಣವು ಅಧಿಕವಾಗಿರುತ್ತದೆ. ಈ ರೋಗವು ಬರಬಹುದಾದ ಕಾರಣಗಳ ಮೇಲೆ ಇದನ್ನು ಎರಡು ಪ್ರಮುಖ ಗುಂಪುಗಳಾಗಿ ವಿಂಗಡಿಸಲಾಗಿದೆ. ಯಾವುವುವೆಂದರೆ,

ಟೈಪ್ 1 : ಮೊದಲನೇ ವಿಧದಲ್ಲಿ "ಇನ್ಸುಲಿನ್" ಎನ್ನುವ ಚೋದರ್ ರಸವನ್ನು ಸ್ರವಿಸುವ ಮೇದೋಜಿರಕ ಗ್ರಂಥಿಯಲ್ಲಿಯೇ ತೊಂದರೆ ಇರುತ್ತದೆ. "ಇನ್ಸುಲಿನ್" ಎನ್ನುವ ಚೋದರ್ ರಸವು ರಕ್ತದ ಸಕ್ಕರೆ ಪ್ರಮಾಣವನ್ನು ನಿಯಮಿತವಾಗಿ ಕಡಿಮೆಗೊಳಿಸುವ ಕಾರ್ಯನಿರ್ವಹಿಸುತ್ತದೆ.

ಟೈಪ್ 2 : ಎರಡನೇ ವಿಧದಲ್ಲಿ "ಇನ್ಸುಲಿನ್" ಚೋದರ್ ರಸವು ಸರಿಯಾಗಿ ಸ್ರವಿಸಿದರೂ, ಅನೇಕ ಕಾರಣಗಳಿಂದ ಅದು ಜೀವಕೋಶಗಳ ಮೇಲೆ ತನ್ನ ಕ್ರಿಯೆಯನ್ನು ನಡೆಸಿ ರಕ್ತದ ಸಕ್ಕರೆ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ವಿಫಲವಾಗುತ್ತದೆ. ಅಂದರೆ ಈ ರೋಗಿಗಳ ಜೀವಕೋಶಗಳಲ್ಲಿ "ಇನ್ಸುಲಿನ್" ತನ್ನ ಕ್ರಿಯೆಯನ್ನು ನಡೆಸುವ ಜಾಗಗಳಲ್ಲಿ ತೊಂದರೆ ಇರುತ್ತದೆ.

ಸಕ್ಕರೆ ಕಾಯಿಲೆಯ ಪರಿಣಾಮಗಳು : ರಕ್ತದಲ್ಲಿ ಸಕ್ಕರೆ ಪ್ರಮಾಣವು ಅಧಿಕವಾಗಿ ಸದಾಕಾಲ ಇರುವುದರಿಂದ ದೇಹದಲ್ಲಿ ಅನೇಕ ತೊಂದರೆಗಳಾಗುತ್ತವೆ. ಅವುಗಳಲ್ಲಿ ಮುಖ್ಯವಾದವೆಂದರೆ,

1. ಮೆಟಬಾಲಿಕ್ ಇಫೆಕ್ಟ್ಸ್ – ಜೀವ ವಸ್ತು ಕಣದಲ್ಲಿ ತೊಂದರೆಗಳು
2. ವ್ಯಾಸ್ಕುಲೋಪತಿ – ರಕ್ತನಾಳದ ಸಮಸ್ಯೆಗಳು
3. ನ್ಯೂರೋಪತಿ – ನರಬೇನೆ ಮತ್ತು
4. ಇನ್ಫೆಕ್ಷನ್ – ಸೋಂಕು ರೋಗಗಳು ಇತ್ಯಾದಿ

ಅಧಿಕ ರಕ್ತದ ಸಕ್ಕರೆ ಪ್ರಮಾಣವು ದೇಹದಲ್ಲಿ ಆಮ್ಲಜನಕದ ಕೊರತೆ, ಕಡಿಮೆ ಶಕ್ತಿ ಉತ್ಪಾದನೆ, ಮುಂತಾದ ತೊಂದರೆಗಳನ್ನುಂಟು ಮಾಡುವುದಲ್ಲದೇ, ಪ್ರೋಟೀನ್‌ಗಳಲ್ಲೂ ಸಕ್ಕರೆಯ ಅಂಶವು ಸೇರಿಕೊಳ್ಳುತ್ತದೆ. (ಗ್ಲೈಕೇಫ್ನ್ ಆಫ್ ಪ್ರೋವೀನ್ಸ್) ಕೆಂಪುರಕ್ತಕಣಗಳಲ್ಲಿ ಸಕ್ಕರೆ ಅಂಶ ಸೇರುವುದರಿಂದ, ರಕ್ತವು ಮಂದವಾಗುತ್ತದೆ ಹಾಗು ರಕ್ತದ ಹೆಪ್ಪುಗಟ್ಟುವಿಕೆಯ ಶಕ್ತಿ ಅಧಿಕವಾಗುತ್ತದೆ. ಇವರಿಂದಾಗಿ ದೇಹದಲ್ಲಿ ಜೀವನಿರೋಧಕ ಶಕ್ತಿಯು ಕುಂದಿ, ಸಾಮಾನ್ಯ ಸೂಕ್ಷ್ಮಾಣು ಜೀವಿಗಳಿಂದಲೇ ಸೋಂಕು ಉಂಟಾಗುತ್ತದೆ.

ರಕ್ತನಾಳಗಳಲ್ಲಿ ಸಕ್ಕರೆ ಸೇರಿದ ಪ್ರೋಟೀನ್‌ಗಳು ಸೇರಿಕೊಂಡು ಅಂಬಲಿ ಪೆಡೆಸಣೆ (ಅಥೆರೋಮಾ) ಉಂಟಾಗಿ ರಕ್ತನಾಳಗಳು ಮುಚ್ಚಿಕೊಳ್ಳುತ್ತವೆ. ಇದಲ್ಲದೇ ರಕ್ತ ಮಂದವಾಗುವ ಕಾರಣ ಆಗಲಿ ಹಾಗೂ ರಕ್ತನಾಳಗಳ ಹಿಗ್ಗುವಿಕೆ ಕಡಿಮೆಯಾಗುವ ಕಾರಣ ರಕ್ತಸಂಚಾರಕ್ಕೆ ಕುತ್ತು ಬರುತ್ತದೆ. ನರಗಳಲ್ಲಿ ಸಕ್ಕರೆ ಅಂಶವು ಸೇರಿಕೊಂಡು ನರಗಳ ಸ್ಪರ್ಶಜ್ಞಾನವು ಕಡಿಮೆ/ಇಲ್ಲದಂತಾಗುತ್ತದೆ. ನರಬೇನೆಯಿಂದಾಗಿ ಸ್ನಾಯುಗಳ ಹಿಗ್ಗು–ತಗ್ಗುವಿಕೆಯಲ್ಲಿ ವ್ಯತ್ಯಾಸವಾಗಿ ಅದರಲ್ಲೂ ಮುಖ್ಯವಾಗಿ ಪಾದಗಳಲ್ಲಿನ ಮೂಳೆಗಳಲ್ಲಿ ಹಾಗೂ ಕೀಲುಗಳಲ್ಲಿ ಸಡಿಲಿಕೆ ಕಂಡುಬರುತ್ತದೆ. ದೇಹದಲ್ಲಿ ಆಮ್ಲಜನಕದ ಕೊರತೆಯಿಂದಾಗಿ ಹಾಗೂ ಅಧಿಕ ಸಕ್ಕರೆ ಪ್ರಮಾಣದಿಂದ ಅನೇಕ ವಿಧವಾದ ಸೂಕ್ಷ್ಮಾಣು ಜೀವಿಗಳಿಂದ ಸೋಂಕಾಗುತ್ತದೆ.

ಸಕ್ಕರೆ ಪಾದ : ಸಕ್ಕರೆ ರೋಗಿಗಳು ಮೇಲೆ ತಿಳಿಸಿದ ಎಲ್ಲಾ ರೀತಿಯ ಸಮಸ್ಯೆಗಳಿಂದ ಬಳಲುತ್ತಿರುತ್ತಾರೆ. ರಕ್ತನಾಳಗಳ ಸಮಸ್ಯೆಯಿಂದ ರಕ್ತ ಸಂಚಾರದಲ್ಲಿ ವ್ಯತ್ಯಾಸವಾಗಿ ನರಬೇನೆಯಿಂದ ಸ್ಪರ್ಶಜ್ಞಾನವು ಇಲ್ಲದಂತಾಗಿ ಮತ್ತು ಮುಖ್ಯವಾಗಿ ನಿರ್ಲಕ್ಷತೆಯಿಂದ ಕಾಲುಗಳಲ್ಲಿ ಸಣ್ಣಪುಟ್ಟ ಗಾಯಗಳಾಗುವುದು ಸಹಜ. ಈ ಗಾಯಗಳನ್ನು ಗಮನಿಸದೇ ಇದ್ದಲ್ಲಿ ಸೋಂಕು ಉಂಟಾಗಿ ಅದು ಕೆಲವೊಮ್ಮೆ ಪೂರ್ತಿಕಾಲಿಗೆ ಹರಡಿ ರಕ್ತಕ್ಕೂ ನಂಜೇರುವ ಸಾಧ್ಯತೆಗಳಿರುತ್ತವೆ. ಇದಲ್ಲದೇ, ಮುಖ್ಯವಾಗಿ ಪಾದಗಳಲ್ಲಿ ದೇಹದ ಒತ್ತಡವನ್ನು

ನಿಯಮಿತವಾಗಿ ನೆಲಕ್ಕೆ ಬಿಡುವಂತಹ ಕೆಲವು ಭಾಗಗಳಿರುತ್ತವೆ. ಉದಾಹರಣೆಗೆ ಹೆಬ್ಬೆರಳಿನ ತಲೆಭಾಗ, ಹಿಮ್ಮಡಿ, ಕಿರುಬೆರಳಿನ ತಲೆಭಾಗ ಇತ್ಯಾದಿ. ನರಬೇನೆಯಿಂದ ಸ್ನಾಯುಗಳ ಹಿಗ್ಗು-ಕುಗ್ಗುವಿಕೆಯಲ್ಲಿ ತೊಂದರೆಯಾಗಿ ಪಾದದ ಮೂಳೆಗಳ ಹಾಗು ಕೀಲುಗಳಲ್ಲಿ ಸಮಸ್ಯೆಯಾಗಿ ಕಾಲುಗಳು ಸಮತಟ್ಟಾಗುತ್ತವೆ (ಫ್ಲಾಟ್ ಫೂಟ್) ಇದರಿಂದ ಒತ್ತಡ ಬೀಳುವ ಜಾಗಗಳಲ್ಲಿ ನಡೆದಾಡುವಾಗ ಸಣ್ಣ ಪುಟ್ಟ ಗಾಯಗಳಾಗಿ ಅವು ಸೋಂಕಾಗಿ ದೊಡ್ಡ ಹುಣ್ಣುಗಳಾಗಿ ಮಾರ್ಪಾಡಾಗುತ್ತವೆ.

ಚಿಕಿತ್ಸೆ : ಸಕ್ಕರೆ ಕಾಯಿಲೆಗೆ ಮುಖ್ಯವಾದ ಚಿಕಿತ್ಸೆ ಎಂದರೆ, ರಕ್ತದ ಸಕ್ಕರೆ ಪ್ರಮಾಣವನ್ನು ನಿಯಂತ್ರಣದಲ್ಲಿರುವುದೇ ಆಗಿದೆ. ಅದಲ್ಲದೇ ರಕ್ತನಾಳದ ಸಮಸ್ಯೆಗಳು ನರಬೇನೆ ಮುಂತಾದ ತೊಂದರೆಗಳಿಗೆ ಔಷಧೋಪಚಾರದ ಮೂಲಕ ಚಿಕಿತ್ಸೆ ನೀಡಲು ಸಾಧ್ಯವಿದೆ. ಕಾಲಿನ ಗಾಯಗಳಿಗೆ ಕೆಲವೊಮ್ಮೆ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇದೆ. ಪಾದದ ಹುಣ್ಣುಗಳ ಚಿಕಿತ್ಸೆಗೆ ಕಾಯಿಲೆಯ ಚಿಕಿತ್ಸೆಗಿಂತ ಮುಖ್ಯವಾಗಿ ಹುಣ್ಣುಗಳ ಮೇಲೆ ಒತ್ತಡ ಬೀಳದಂತೆ ಮುತುವರ್ಜಿ ವಹಿಸುವುದೇ ಆಗಿದೆ. (ಆಫ್ ಲೋಡಿಂಗ್ ದ ಪ್ರೆಜರ್) ಇವರೊಂದಿಗೆ ಜೀವನ ಶೈಲಿಯಲ್ಲಿ ಮಾರ್ಪಾಡು ನಿಯಮಿತ ವ್ಯಾಯಾಮ ಸರಿಯಾದ ಆಹಾರ ಕ್ರಮಗಳ ಅವಶ್ಯಕತೆ ಇದೆ.

ಒತ್ತಡ ರಹಿತ ಚಿಕಿತ್ಸೆ (ಆಫ್ ಲೋಡಿಂಗ್ ಟೆಕ್ನಿಕ್) : ಸಕ್ಕರೆ ರೋಗಿಯ ಪಾದದ ಹುಣ್ಣುಗಳ ಚಿಕಿತ್ಸೆಗೆ ಮುಖ್ಯವಾಗಿ ಕಾಯಿಲೆಯ ಚಿಕಿತ್ಸೆ ಸೋಂಕಿನ ಚಿಕಿತ್ಸೆಗಳೊಂದಿಗೆ ಹುಣ್ಣು ಇರುವ ಜಾಗದ ಮೇಲೆ ಒತ್ತಡ ಬೀಳದಂತೆ ನೋಡಿಕೊಳ್ಳುವುದೇ ಆಗಿದೆ. ಈ ರೀತಿ ಒತ್ತಡವಿಲ್ಲದಂತಾಗಿಸಲು ಅನೇಕ ವಿಧಾನಗಳನ್ನು ಕಂಡುಕೊಳ್ಳಲಾಗಿದೆ. ಉದಾಹರಣೆಗೆ ಸರಿಯಾದ ಪಾದರಕ್ಷೆಗಳ ಬಳಕೆ(ಮೈದ್ರೊ ಸೆಲ್ಯುರಾರ್ ರಬ್ಬರ್ ಚಪ್ಪಲಿಗಳು) ಪಾದರಕ್ಷೆಗಳ ಒಳಗೆ ಏರುಪೇರುಗಳನ್ನು ಬಳಸುವುದು, ಉನ್ನಾ ಪಾದರಕ್ಷೆ ಅರ್ಧಪಾದರಕ್ಷೆಗಳು ಇತ್ಯಾದಿ. ಈ ರೀತಿ ಬಳಸುವ ಅನೇಕ ಸಾಧನಗಳು ದುಬಾರಿ ನಮ್ಮ ಈ ಅಧ್ಯಯನದಲ್ಲಿ ಬಳಸಿದ ಉಪಕರಣವು (ಮಂದಾಕಿನಿ ಒತ್ತಡರಹಿತ ಸಾಧನ) ಅಗ್ಗ ಮತ್ತು ಬಳಸುವ ವಿಧಾನೂ ಸರಳ.

ಮಂದಾಕಿನಿ ಒತ್ತಡ ರಹಿತ ಚಿಕಿತ್ಸಾ ಸಾಧನ : ಈ ಸಾಧನವನ್ನು ದಿನನಿತ್ಯ ಆಸ್ಪತ್ರೆಯಲ್ಲಿ ಬಳಸುವ ವಸ್ತುಗಳಿಂದಲೇ ತಯಾಎಇಸಬಹುದಾದ್ದರಿಂದ ಇದು ಬಹಳ ಅಗ್ಗ. ಚಿತ್ರದಲ್ಲಿ ತೋರಿಸಿದಂತೆ ಬಳಸಿದ ಎರಡು ರಬ್ಬರಿನ ಕೈಚೀಲಗಳನ್ನು ಸರಿಯಾಗಿ ಮಡಚಿ ಅದನ್ನು ಒಂದು ಹಿಗ್ಗುವ ಗಾಯಪಟ್ಟಿಯಲ್ಲಿ ಸುರುಳಿ ಸುತ್ತಿ (ಎಲಾಸ್ಟೋಕ್ರೇಪ್) ದಿಂಬಿನಾಕಾರಕ್ಕೆ ಪರಿವರ್ತಿಸಲಾಗುತ್ತದೆ. ಈಗ ಈ ಸಾಧನವು ಬಳಸಲು ತಯಾರಾಗಿರುತ್ತದೆ. ಸಕ್ಕರೆ ಪಾದದ ಹುಣ್ಣಿಗೆ ರೂಢಿಯಲ್ಲಿರುವ ಗಾಯಪಟ್ಟಿಯನ್ನು ಅಳವಡಿಸಿ, ನಂತರ ಮುಂಭಾಗದ ಹುಣ್ಣಿಗೆ ಪಾದದ ಹಿಮ್ಮಡಿಯಲ್ಲೂ ಹಾಗು ಹಿಮ್ಮಡಿಯ ಹುಣ್ಣಿಗೆ ಪಾದದ ಮುಂಭಾಗದಲ್ಲೂ ಈ ಸಾಧನವನ್ನು ಅಳವಡಿಸಬೇಕಾಗುತ್ತದೆ. ಈಗ ರೋಗಿಯು ನಡೆಯುವಾಗ ಮಂದಾಕಿನಿ ಸಾಧನವು ನೆಲಕ್ಕೆ ತಾಗುವುದರಿಂದ, ಹುಣ್ಣಿರುವ ಜಾಗದಲ್ಲಿ ಒತ್ತಡ ಬೀಳದಂತಾಗುತ್ತದೆ. ಈ ಸಾಧನವನ್ನು ಗಾಯಪಟ್ಟಿಯು ತೇವವಾದರೆ, ಅಥವಾ ವಾರಕ್ಕೊಮ್ಮೆ ಬದಲಿಸಬಹುದಾಗಿದೆ.



ಕೈ ಚೀಕಗಳನ್ನು ಸುರುಳಿಸುತ್ತಿ ತ0ಯಾರಿಸಿದ ಸರ್ಳ ಒತ್ತಡರಹಿತ ಚಿಕಿತ್ಸಾ ಸಾಧನ

ವಿಧಾನ : ಸಕ್ಕರೆ ಪಾದದ ಹುಣ್ಣಿನಿಂದ ಬಳಲುವ ರೋಗಿಗಳ ಸಂಖ್ಯೆಯು ಹೆಚ್ಚಾಗುತ್ತಿದೆ. ಅನೇಕ ರೋಗಿಗಳು ಬಡತನದ ರೇಖೆಯ ಕೆಳಸ್ತರದಲ್ಲಿರುವ ಕಾರಣ ಎಲ್ಲರಿಗೂ ದುಬಾರಿ ಚಿಕಿತ್ಸೆಯು ಲಭ್ಯವಾಗುವುದಿಲ್ಲ. ಅನೇಕ ಒತ್ತಡರಹಿತ ಚಿಕಿತ್ಸಾ ಸಾಧನಗಳು ದುಬಾರಿ ಈ ಅಧ್ಯಯನವನ್ನು ನಾವೇ ತಯಾರಿಸಿ ಬಳಸಿದ ಸಾಧನದಿಂದ ಒತ್ತಡರಹಿತ ಚಿಕಿತ್ಸೆ ನೀಡಿ ಜೆ.ಎಸ್.ಎಸ್, ಆಸ್ಪತ್ರೆಗೆ ಅಧ್ಯಯನದ ಅವಧಿಯಲ್ಲಿ ಅಂದರೆ ನವೆಂಬರ್ 2010ರಿಂದ ನವೆಂಬರ್ 2012ರವರೆಗೆ ಬಂದಂತಹ ರೋಗಿಗಳನ್ನು ಬಳಸಿ ನಡೆಸಲಾಯಿತು. ಸಕ್ಕರೆ ಪಾದದ ಹುಣ್ಣಿನಿಂದ ಬಂದತಹ ರೋಗಿಗಳಲ್ಲಿ ಸೇರ್ಪಡೆ ಮತ್ತು ಹೊರಕಾಡುವ ಮಾನದಂಡಗಳ ಆಧಾರದ ಮೇಲೆ 100 ರೋಗಿಗಳನ್ನು ಆರಿಸಿ, ಪ್ರತೀ ಗುರುಪಿನಲ್ಲೂ 50 ರೋಗಿಗಳಿರುವರತೆ ಎರಡು ಗುಂಪುಗಳಾಗಿ ವಿಂಗಡಿಸಲಾಯಿತು. 'ಅ' ಗುಂಪಿನ 50 ರೋಗಿಗಳಿಗೆ ರೂಢಿಯಲ್ಲಿರುವ ಗಾಯಪಟ್ಟಿಯನ್ನು ಬಳಸಿ ಚಿಕಿತ್ಸೆ ನೀಡಲಾಯಿತು. 'ಬ' ಗುಂಪಿನಲ್ಲಿರುವ 50 ರೋಗಿಗಳಿಗೆ ಮಂದಾಕಿನಿ ಒತ್ತಡರಹಿತ ಸಾಧನವನ್ನು ಬಳಸಿ ಚಿಕಿತ್ಸೆ ನೀಡಲಾಯಿತು. ಎರಡೂ ಗುಂಪಿನ ರೋಗಿಗಳನ್ನು ಯಾದೃಚ್ಛಿಕರಿಸಿ ವಿಂಗಡಿಸಲಾಗಿತ್ತು. (ರ್ಯಾಂಡಮೈಸೇಶನ್) ಹಾಗು ಫಲಿತಾಂಶವನ್ನು ನಿರೀಕ್ಷೆಯೊಂದಿಗೆ ಅಧ್ಯಯಿಸಲಾಯಿತು.

ಸೇರ್ಪಡಿಸುವ ಮಾನದಂಡಗಳು : ಒಂದನೇ ಮತ್ತು ಎರಡನೇ ವಿಧದ ಸಕ್ಕರೆ ಕಾಯಿಲೆಯೊಂದಿಗೆ ಪಾದದ ಹುಣ್ಣುಗಳಾಗಿರುವ ರೋಗಿಗಳನ್ನು ಬಳಸಿ ಈ ಅಧ್ಯಯನವನ್ನು ನಡೆಸಲಾಯಿತು.

ಹೊರಕಾಡುವ ಮಾನದಂಡಗಳು : ಸಕ್ಕರೆ ಪಾದದ ಹುಣ್ಣಿನೊಂದಿಗೆ ಪಾದದ ಮೂಳೆಗಳ ಸೋಂಕು, ರಕ್ತನಾಳಗಳ ಸಮಸ್ಯೆ ಸಕ್ಕರೆ ಕಾಯಿಲೆಯಲ್ಲದೇ, ಇತರ ಪಾದದ ಹುಣ್ಣುಗಳು, ಮತ್ತು ಪಾದದ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನಾವರಿಸಿರುವ ಹುಣ್ಣುಗಳಿರುವ

ರೋಗಿಗಳನ್ನು ಅಧ್ಯಯನದಿಂದ ಹೊರಗಿಡಲಾಯಿತು.

ಈ ರೀತಿ ಆರಿಸಿ ಯಾದೃಚ್ಛೀಕೃತ ವಿಧಾನದಲ್ಲಿ ವಿಂಗಡಿಸಲಾದ ಗುಂಪುಗಳ ರೋಗಿಗಳಲ್ಲಿ ಕೆಲವು ನಿಯತಾಂಕಗಳ ಆಧಾರದ ಮೇಲೆ ಫಲಿತಾಂಶಗಳನ್ನು ಹೋಲಿಸಲಾಯಿತು. ಆ ನಿಯತಾಂಕಗಳೆಂದರೆ, ನೋವಿನ ಅಳತೆ ಪಟ್ಟಿಯಲ್ಲಿ ನೋವಿನ ಪ್ರಮಾಣ, ಆಸ್ಪತ್ರೆಯಲ್ಲಿ ಕಳೆದ ಒಟ್ಟು ಸರಾಸರಿ ದಿನಗಳು, ಗಾಯಪಟ್ಟಿಗಳನ್ನು ಬದಲಿಸಿದ ಸರಾಸರಿ ಸಂಖ್ಯೆ ಜೀವನಿರೋಧಕ ಔಷಾಧಿಗಳನ್ನು ನೀಡಿದ ಸರಾಸರಿ ದಿನಗಳು, ರೋಗಪ್ರಮಾಣ ರೋಗಿಗೆ ಗಾಯಪಟ್ಟಿಯಲ್ಲದೇ ನೀಡಿದ ಇತರ ಚಿಕಿತ್ಸೆಗಳು ಮುಖ್ಯವಾಗಿ ಕಾಲುಕುಯ್ತೆಗೆತ, ಸಾವನ್ನಪ್ಪಿದ ರೋಗಿಗಳು ಹಾಗೂ ಆಸ್ಪತ್ರೆಯ ಸರಾಸರಿ ವೆಚ್ಚ.

ಸಕ್ಕರೆ ಪಾದದ ಹುಣ್ಣಿನ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಿಲಾದ ಎಲ್ಲಾ ರೋಗಿಗಳಿಗೂ ಮೊದಲು ಔಷದೋಪಚಾರದ ಮೂಲಕ ಸಕ್ಕರೆ ನಿಯಂತ್ರಣ ಆಹಾರ ಪದ್ಧತಿಯ ತಿಳುವಳಿಕೆ ಅಲ್ಲದೇ ಗಾಯವಾದ ಸೂಕ್ಷ್ಮಾಣು ಜೀವಿಗಳನ್ನು ಪತ್ತೆಹಚ್ಚಿ ಅದಕ್ಕೆ ಸರಿಯಾದ ಜೀವ ನಿರೋಧಕ ಔಷಧಿಗಳ ಮೂಲಕ ಚಿಕಿತ್ಸೆ ನೀಡಲಾಯಿತು. ನಂತರ ರೋಗಿಗಳನ್ನು 'ಅ' ಮತ್ತು 'ಬ' ಗುಂಪುಗಳಾಗಿ ವಿಂಗಡಿಸಿ, 'ಅ' ಗುಂಪಿನ ರೋಗಿಗಳಿಗೆ ರೂಢಿಯಲ್ಲಿರುವ ಗಾಯಪಟ್ಟಿ ವಿಧಾನದಿಂದ ಚಿಕಿತ್ಸೆ ನೀಡಲಾಯಿತು.

'ಬ' ಗುಂಪಿನ ರೋಗಿಗಳಿಗೆ ಎರಡು ದಿನಗಳಿಗೊಮ್ಮೆ ಗಾಯಪಟ್ಟಿ ಬದಲಿಸಿದರೆ, 'ಬ' ಗುಂಪಿನ ರೋಗಿಗಳಿಗೆ 5 ರಿಂದ 7 ದಿನಗಳಿಗೊಮ್ಮೆ ಗಾಯಪಟ್ಟಿ ಬದಲಿಸಲಾಯಿತು. ಈ ನಡುವೆ ಸೋಂಕು ಹೆಚ್ಚಾದಲ್ಲಿ ಅಥವಾ ಕೀವು ಕಂಡುಬಂದಲ್ಲಿ ಕೊಳೆತ ಅಂಗಾಂಶಗಳ ಕುಯ್ತೆಗೆತ, ಮೂಳೆಗಳನ್ನು ಕೀಲಿನಿಂದ ಬೇರ್ಪಡಿಸುವುದು, ಪಾದದ ಅಥವಾ ಕಾಲುಕುಯ್ತೆಗೆತದಂತಹ ಶಸ್ತ್ರಚಿಕಿತ್ಸೆಗಳನ್ನು ಕೆಲವು ರೋಗಿಗಳಿಗೆ ನೀಡಬೇಕಾಗಿ ಬಂದಿತು.

ಫಲಿತಾಂಶ : ಎರಡೂ ಗುಂಪಿನ ರೋಗಿಗಳ ನಿಯತಾಂಶಗಳನ್ನು ತುಲನೆ ಮಾಡಿದಾಗ ಅಂತ ಅಂಶಗಳ ಪಟ್ಟಿಯಲ್ಲಿ ಗಮನಾರ್ಹ ಬದಲಾವಣೆಗಳು ಕಂಡುಬಂದವು.

ಸಕ್ಕರೆ ಪಾದದ ಹುಣ್ಣಿಗೆ ಒತ್ತಡರಹಿತ ಚಿಕಿತ್ಸೆ ನೀಡಿ ನಡೆಸಿದ ಅಧ್ಯ0ಯನದ ಫಲಿತಾಂಶ

'ಅ' ಗುಂಪಿನ ಅಂದರೆ ಸಾಮಾನ್ಯ ಗಾಯಪಟ್ಟಿ ಚಿಕಿತ್ಸೆ ಪಡೆವ ರೋಗಿಗಳ ನೋವಿನ ಪ್ರಮಾಣದ ಅಂಕಪಟ್ಟಿಯಲ್ಲಿ (5ಯಿಂದ 10ರವರೆಗೆ) ನೋವಿನ ಪ್ರಮಾಣವು ಸರಾಸರಿ 592 ಇದ್ದರೆ 'ಬ' ಗುಂಪಿನ ಅಂದರೆ ಒತ್ತಡರಹಿತ ಗಾಯಪಟ್ಟಿ ಚಿಕಿತ್ಸೆ ಪಡೆದ ರೋಗಿಗಳ ನೋವಿನ ಪ್ರಮಾಣವು ಸರಾಸರಿ 3.84ರಷ್ಟಿತ್ತು. (ಪಿ.ಮೌಲ್ಯ.0.00



ನೋವಿನ ಪ್ರಮಾಣ

'ಅ' ಗುಂಪಿನ ರೋಗಿಗಳ ಸರಾಸರಿ ಆಸ್ಪತ್ರೆಯಲ್ಲಿರಬೇಕಾದಂತಹ ದಿನಗಳು 26.84 ಆದರೆ 'ಬ' ಗುಂಪಿನ ರೋಗಿಗಳ ಸರಾಸರಿ ದಿನಗಳು 19.52 (ಪಿ. ಮೌಲ್ಯ 0.02) ರೋಗಗಳಿಗೆ ನೀಡಿದ ಸರಾಸರಿ ಜೀವನಿರೋಧಕ ಔಷಧಿಗಳ ದಿನಗಳನ್ನು ಹೋಲಿಸಿದಾಗ 'ಅ' ಗುಂಪಿಗೆ 27.2 ದಿನಗಳಾದರೆ, 'ಬ' ಗುಂಪಿಗೆ 21.5 ದಿನಗಳಾಗಿತ್ತು. (ಪಿ.ಮೌಲ್ಯ 0.34) ರೋಗಿಗಳಿಗೆ ನೀಡಿದ ಇತರ ಚಿಕಿತ್ಸೆಗಳು ಅದರಲ್ಲೂ ಮುಖ್ಯವಾಗಿ ಪಾದದ ಅಥವಾ ಮೊಣಕಾಲಿನಿಂದ ಕೆಳಗೆ ಕಾಲಿನ ಕುಯ್ತೆಗೆತದ ಶಸ್ತ್ರಚಿಕಿತ್ಸೆಯನ್ನು ಹೋಲಿಸಿದಾಗ 'ಅ' ಗುಂಪಿನ

11 ರೋಗಿಗಳಿಗೆ ಅಂದರೆ ಶೇ. 22% ರೋಗಿಗಳಿಗೆ ಇತರ ಚಿಕಿತ್ಸೆಗಳ ಅವಶ್ಯಕತೆ ಇದ್ದರೆ 'ಬ' ಗುಂಪಿನ 7 ರೋಗಿಗಳಿಗೆ ಅಂದರೆ ಶೇ. 14% ರೋಗಿಗಳಿಗೆ ಇತರ ಚಿಕಿತ್ಸೆ ನೀಡುವ ಅವಶ್ಯಕತೆ ಇತ್ತು. ಪಿ.ಮೌಲ್ಯ (0.31). 'ಬ' ಗುಂಪಿನ 68% ಅಂದರೆ 34 ರೋಗಿಗಳಿಗೆ ಸರಾಸರಿ 1 ರಿಂದ 5ಬಾರಿ ಗಾಯಪಟ್ಟಿ ಬದಲಾಯಿಸಬೇಕಾಗಿ ಬಂದರೆ, 'ಅ' ಗುಂಪಿನ 58% ಅಂದರೆ 50ರಲ್ಲಿ 29 ರೋಗಿಗಳಿಗೆ 10ಕ್ಕಿಂತಲೂ ಹೆಚ್ಚುಬಾರಿ ಗಾಯಪಟ್ಟಿ ಬದಲಿಸುವ ಪ್ರಮೇಯವು ಒದಗಿ ಬಂದಿತು. (ಪಿ.ಮೌಲ್ಯ 0.000),



ಗಾ0ಯಪಟ್ಟಿ ಬದಲಿಸಬೇಕಾದ ದಿನಗಳು

'ಅ' ಗುಂಪಿನ ರೋಗಿಗಳ ಆಸ್ಪತ್ರೆಯ ಸಾರಸರಿ ವೆಚ್ಚವ ರೂ. 8062.52 ಆದರೆ 'ಬ' ಗುಂಪಿನ ರೋಗಿಗಳ ಆಸ್ಪತ್ರೆಯ ಸರಾಸರಿ ವೆಚ್ಚವು ರೀ. 8062.52 ಆದರೆ 'ಬ' ಗುಂಪಿನ ರೋಗಿಗಳ ಆಸ್ಪತ್ರೆಯ ಸರಾಸರಿ ವೆಚ್ಚವು ರೂ. 6249.62 ಆಗಿತ್ತು. (ಪಿ. ಮೌಲ್ಯ 00.012)



ಆಸ್ಪತ್ರೆಯ ಸರಾಸರಿ ವೆಚ್ಚ

ಇದಲ್ಲದೇ, 'ಅ' ಗುಂಪಿನ 16% ರಷ್ಟು ರೋಗಿಗಳು ಅಂದರೆ, 8 ರೋಗಿಗಳು ಗಾಯಪಟ್ಟಿ ವಿಧಾನದಿಂದ ಅನುಸರಣೆಗೊಂಡರೆ (ಕಾಂಪ್ಲೆಯೆನ್ಸ್) 'ಬ' ಗುಂಪಿನ 17 ರೋಗಿಗಳು ಅಂದರೆ ಶೇ. 34ರಷ್ಟು ರೋಗಿಗಳು ಗಾಯಪಟ್ಟಿ ವಿಧಾನದಿಂದ ಅನುಸರಣೆಗೊಂಡರು (ಪಿ.ಮೌಲ್ಯ. 0.038)

ಚರ್ಚೆ : ಹುಬ್ಬಳ್ಳಿಯ ಮಂದಾಕಿಣಿ ಆಸ್ಪತ್ರೆಯಲ್ಲಿ ಡಾ॥ ಸುನಿಲ್ ವಿ. ಕಾರಿ ಮತ್ತು ಸಿಂಗಡಿಗರಿಂದ "ಮಂದಾಕಿನೀ ಒತ್ತಡರಹಿತ ಚಿಕಿತ್ಸಾ ಸಾಧನವು" ತಯಾರಿಸಿ ಬಳಸಲಾಯಿತು. ಅವರ ಅಧ್ಯನದಲ್ಲಿ ಈ ಸಾಧನವನ್ನು ಬಳಸಿದ ರೋಗಿಗಳ ನೋವಿನ ಪ್ರಮಾಣದಲ್ಲಿ ಇಳಿಕೆ ಮತ್ತು ಅನುಸರಣೆಗೊಂಡ ರೋಗಿಗಳ ಪ್ರಮಾಣದಲ್ಲಿ ಏರಿಕೆಯು ಕಂಡುಬಂದಿತ್ತು. ನಮ್ಮ ಅಧ್ಯಯನದಲ್ಲೂ ನೋವಿನ ಪ್ರಮಾಣದಲ್ಲಿ ಇಳಿಕೆ ಹಾಗೂ ಅನುಸರಣೆಗೊಂಡ ರೋಗಿಗಳ ಪ್ರಮಾಣದಲ್ಲಿ ಏರಿಕೆ ಕಂಡುಬಂದ ಕರಣ ಈ ಅಧ್ಯಯನವು ಅವರ ಅಧ್ಯಯನಕ್ಕೆ ಪೂರಕವಾಗಿದೆ. ಅಲ್ಲದೇ ಗಾಯಪಟ್ಟಿ ಬದಲಿಸಬೇಕಾದ ಒಟ್ಟು ಸರಾಸರಿ ದಿನಗಳ ಮಾಪನದಲ್ಲೂ ನಮ್ಮ ಅಧ್ಯಯನವು ಡಾ। ಸುನಿಲ್ ವಿ.ಕಾರಿ ಮತ್ತು ಸಂಗಡಿಗರ ಅಧ್ಯಯನಕ್ಕೆ ಪೂರಕವಾಗಿದೆ.

ಆಸ್ಪತ್ರೆಯಲ್ಲಿರಬೇಕಾದಂತಹ ಸರಾಸರಿ ದಿನಗಳು 'ಬ' ಗುಂಪಿನ ರೋಗಿಗಳಲ್ಲಿ ಗಮನಾರ್ಹವಾಗಿ ಇಳಿಕೆ ಕಂಡುಬಂದಿದೆ (ಪಿ.ಮೌಲ್ಯ 0.002) ಈ ಮಾಪನವು ಗೈಲ್ ಇ. ರೈಬೆರ್ ಮತ್ತು ಸಂಗಡಿಗರ ಅಧ್ಯಯನದ ಮಾಪನಕ್ಕೆ ಪೂರಕವಾಗಿದೆ. ಇದಲ್ಲದೇ ಗೈಲ್‌ರವರ ಅಧ್ಯಯನದಲ್ಲಿ ಕಾಲಿನ ಕುಯ್ತೆಗೆತವು ಸಕ್ಕರೆ ರೋಗಿಗಳಲ್ಲಿ ಹೆಚ್ಚು ಎಂದು ತೋರಿಸಲಾಗಿತ್ತು. ನಮ್ಮ ಅಧ್ಯಯನದಲ್ಲಿ ಒತ್ತಡರಹಿತ ಚಿಕಿತ್ಸೆಯಿಂದ ಕಾಲಿನ ಕುಯ್ತೆಗೆತದ ಪ್ರಮಾಣ ಕಡಿಮೆಗೊಳಿಸಬಹುದು ಎಂಬ ಅಂಶವು ಬೆಳಕಿಗೆ ಬಂದಿದೆ (ಪಿ. ಮೌಲ್ಯ 0.313).

ಭಾರತದಂತಹ ಮುಂದುವರಿಯುತ್ತಿರುವ ದೇಶಗಳಲ್ಲಿ ಸಕ್ಕರೆ ರೋಗದಿಂದಾಗುವ ಇತರ ಸಮಸ್ಯೆಗಳಿಂದ ರೋಗಿಗಳು ಬಳಲುತ್ತಿದ್ದಾರೆ. ಅದರಲ್ಲಿ ಸಕ್ಕರೆ ಪಾದದ ಹುಣ್ಣು ಒಂದು. ಇದು ಬಡತನ ರೇಖೆಯ ಕೆಳಸ್ತರದಲ್ಲಿರುವ ರೋಗಿಗಳಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಚಿಕಿತ್ಸಾ ವೆಚ್ಚವೂ, ಚಿಕಿತ್ಸೆಯ ಸಾಫಲ್ಯತೆಗೆ ಒಂದು ಮಾಪನವಾಗುತ್ತದೆ. ನಮ್ಮ ಈ ಅಧ್ಯಯನದಲ್ಲಿ ಒತ್ತಡರಹಿತ ಚಿಕಿತ್ಸಾ ವಿಧಾನವು ಅಗ್ಗದ ವಿಧಾನ ಎಂದು ಪರಿಗಣಿಸಲಾಗಿದೆ. (ಪಿ.ಮೌಲ್ಯ. 0.012).

ಉಪಸಂಹಾರ : ಈ ಅಧ್ಯಯನದಲ್ಲಿ ಸಾಮಾನ್ಯ ಗಾಯಪಟ್ಟಿ ವಿಧಾನದಿಂದ ಹಾಗೂ ಒತ್ತಡರಹಿತ ಗಾಯಪಟ್ಟಿ ವಿಧಾನದಿಂದ ಸಕ್ಕರೆ ಪಾದದ ಹುಣ್ಣುಗಳಿಗೆ ಚಿಕಿತ್ಸೆ ನೀಡಿದಾಗ, ಒತ್ತಡ ರಹಿತ ಚಿಕಿತ್ಸೆಯನ್ನು ಪಡೆದ ರೋಗಿಗಳ ನೋವಿನ ಪ್ರಮಾಣದಲ್ಲಿ ಇಳಿಕೆ ಆಸ್ಪತ್ರೆಯಲ್ಲಿ ಇರಬೇಕಾದಂತಹ ದಿನಗಳಲ್ಲಿ ಇಳಿಕೆ, ಕಡಿಮೆ ಗಾಯಪಟ್ಟಿಗಳ ಬಳಕೆ, ಕಡಿಮೆ ಪ್ರಮಾಣದ ಪ್ರತಿರೋಧಕಗಳ ಬಳಕೆ, ಅನುಸರಣೆಗೊಂಡ ರೋಗಿಗಳ ಸಂಖ್ಯೆಯಲ್ಲಿ ಏರಿಕೆ ಹಾಗೂ ರೋಗದ ಒಟ್ಟು ಚಿಕಿತ್ಸಾ ವೆಚ್ಚಲ್ಲಿ ಗಮನಾರ್ಹ ಇಳಿಕೆಗಳು ಕಂಡುಬಂದವು ಆದ್ದರಿಂದ ಎರಡೂ ವಿಧವಾದ ಗಾಯಪಟ್ಟಿಗಳ ಚಿಕಿತ್ಸೆಯನ್ನು ಹೋಲಿಸಿದಾಗ ನಮ್ಮ ಅಧ್ಯಯನವು ಒತ್ತಡ ರಹಿತ ಚಿಕಿತ್ಸೆಗೆ ಪರವಾಗಿದೆ.

ಆಡು ಮುಟ್ಟದ ಸೊಪ್ಪು: ಜನಪದೀಯ ಅಧ್ಯಯನ

*.ಯೋಗೇಶ್. ಬಿ. ಎಸ್

* ಉಪಾನ್ಯಾಸಕರು, ಕನ್ನಡ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ, yogi8141@gmail.com

'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಮಾತು ಪ್ರಚಾರದಲ್ಲಿರುವಾಗಲೇ ಆಡು ಮುಟ್ಟದಿರುವ ಸೊಪ್ಪು (ಬಳ್ಳಿ) ಕರೆಯಲಾಗುವ TYLOPHORA INDICA ಗಿಡದ ಹೆಸರು ಕೇಳಬರುತ್ತಿರುವುದು ಮೇಲಿನ ಮಾತಿಗೆ ವಿಪರ್ಯಾಸವೆನಿಸುವುದು ಸಹಜ, ಆದರೆ ಈ ಬಳ್ಳಿಯನ್ನು ಜನಪದರು ತಮ್ಮ ಬದುಕಿನುದ್ದಕ್ಕೂ ಬಳಕೆಯ ವಸ್ತುಗಳನ್ನಾಗಿಸಿ ಕೊಂಡಿದ್ದಾರೆ. ಈ ಗಿಡವು ಔಷಧೀಯ ಗುಣವನ್ನು ಹೊಂದಿರುವುದರಿಂದ, ಇದನ್ನು ಜನರ ಮತ್ತು ಪಶುಗಳ ವ್ಯಾಧಿಗಳ ಶಮನಕ್ಕೆ ಮದ್ದನ್ನಾಗಿ ಬಳಸುತ್ತಿರುವುದನ್ನು ಕಾಣಬಹುದು. ಇಂಥಾ ಗಿಡಮೂಲಿಕೆಯಲ್ಲಿರುವ ವೈಜ್ಞಾನಿಕ ಅಂಶಗಳ ತಿಳಿಯುವುದರ ಜೊತೆಗೆ ಜನಪದರು ಅದನ್ನು ಯಾವ ಯಾವ ಸಂಧರ್ಭದಲ್ಲಿ ಬಳಸುವರು, ಅವರ ದೇಸಿ ವೈದ್ಯ ಪದ್ಧತಿಯಲ್ಲಿ ಈ ಆಡು ಮುಟ್ಟಾದ ಸೊಪ್ಪಿನ ಪಾತ್ರವೆಂತದ್ದು ಎಂಬುದನ್ನು ಗಮನಿಸಬಹುದು.

ಮನುಷ್ಯ ತನ್ನ ಆಲೋಚನ ಕ್ರಮ, ತಾರ್ಕಿಕ ಶಕ್ತಿ ಮತ್ತು ವಾಕ್ ಶಕ್ತಿಯ ಕಾರಣ ಇತರೆ ಪ್ರಾಣಿಗಳಿಂದ ಭಿನ್ನವೆನಿಸಿದ ಮನುಷ್ಯ ತಾನು ಇರುವ ಪರಿಸರಕ್ಕೆ ಹೊಂದಿಕೊಂಡು ಬದುಕು ಸವೆಸಿದ್ದಾನೆ. ಈ ಬದುಕಿನ ಹೋರಾಟದಲ್ಲಿ ಎಷ್ಟೋ ಅನುಭವಗಳನ್ನು, ಜ್ಞಾನಗಳನ್ನು ತನ್ನದಾಗಿಸಿಕೊಂಡು ಬದುಕು ಸರಿಯಾದ ಪಥದಲ್ಲಿ ನಡೆಯುವಂತೆ ಮಾಡಿದ್ದಾನೆ. ಅಲ್ಲದೆ ಆ ಅನುಭವದ ಬುತ್ತಿಯನ್ನು ತನ್ನ ಸಮಕಾಲೀನ ಮತ್ತು ಭವಿಷ್ಯದ ಮನುಕುಲಕ್ಕೆ ಬಳುವಳಿಯಾಗಿ ಕೊಡಲು ಸಾಹಿತ್ಯದ ಅಂದರೆ ಗಾದೆ, ಕಥೆ, ಹಾಡು, ಒಗಟು ಮುಂತಾದ ಪ್ರಕಾರಗಳನ್ನು ಆಶ್ರಯಿಸಿದ್ದಾನೆ. ಆ ಮೂಲಕ ತಾನು ಕಂಡುಕೊಂಡ ಜ್ಞಾನವನ್ನು ತಲೆಮಾರಿನಿಂದ ತಲೆಮಾರಿಗೆ ರವಾನಿಸುವಲ್ಲಿ ಯಶಸ್ವಿಯಾಗಿದ್ದಾನೆ. ಈ ರೀತಿ ರವಾನಿಸಿದ ಜ್ಞಾನಗಳಲ್ಲಿ ವೈದ್ಯ ಪದ್ಧತಿಯು ಒಂದಾಗಿದೆ.

ಜನಪದ ವೈದ್ಯವು ವಿಸ್ತಾರವೂ, ವ್ಯಾಪಕವೂ ಆದ ವಿಜ್ಞಾನ ತನಗೆ ತನ್ನ ಸುತ್ತಲಿನವರಿಗೆ ಉಂಟಾದ ಮಾನಸಿಕ, ದೈಹಿಕ ರೋಗರುಜಿನಗಳನ್ನು ವಾಸಿಮಾಡಲು ತನ್ನ ಜೀವನದ ದೀರ್ಘಾನುಭವಗಳ ಹಾಗೂ ಪ್ರಯೋಗಗಳ ಮೂಲಕ ಕಂಡುಕೊಂಡ ಪರಿಹಾರ ಕ್ರಮವೇ ಜನಪದ ವೈದ್ಯ ಪದ್ಧತಿ. ಈ ವೈದ್ಯ ಪದ್ಧತಿಗೆ ನಾಟಿವೈದ್ಯ, ಹಳ್ಳಿವೈದ್ಯ, ಮುಂತಾದ ಹೆಸರುಗಳಿವೆ ಆಸ್ಪತ್ರೆಯ ಕಲ್ಪನೆ ಇಲ್ಲದಿರುವ ಕಾಲದಲ್ಲಿಯೇ ತನಗೆ ಮತ್ತು ತನ್ನೊಡನೆ ಬದುಕುವ ಪ್ರಾಣಿಗಳಿಗೆ ತಗುಲುವ ರೋಗರುಜಿನ ಗಳಿಗೆ ತನ್ನ ಸುತ್ತಮುತ್ತ ದೊರೆಯಬಹುದಾದ ಪ್ರಾಕೃತಿಕ ವಸ್ತುಗಳ, ಗಿಡಮರಗಳಲ್ಲಿರುವ ಔಷಧೀಯ ಗುಣಗಳನ್ನು ಪತ್ತೆ ಮಾಡಿಕೊಂಡು, ಇಂತಿಂಥಾ ಕಾಯಿಲೆಗೆ ಇಂತಿಂಥಾ ಮದ್ದು ಎಂಬುದನ್ನು ಕಂಡು ಕೊಂಡರು.

ಜನಪದ ವೈದ್ಯ ಪದ್ಧತಿಯನ್ನು ಮುಖ್ಯವಾಗಿ 'ಮಾನವ ಸಂಬಂಧಿ ವೈದ್ಯ ಪದ್ಧತಿ', 'ಪಶು ಸಂಬಂಧಿ ವೈದ್ಯ ಪದ್ಧತಿ' ಮತ್ತು 'ಸಸ್ಯ ಸಂಬಂಧಿ ವೈದ್ಯಪದ್ಧತಿ' ಎಂಬುದಾಗಿ ವಿಭಾಗಿಸಬಹುದು. ಈ ವಿಭಾಗ ಕ್ರಮವನ್ನು ಪ್ರಕ್ರಿಯೆಯ ಆಧಾರದ ಮೇಲೆ 'ಸ್ವಾಭಾವಿಕ ಸಹಜ ಜನಪದ ವೈದ್ಯ ಪದ್ಧತಿ' ಮತ್ತು 'ಮಂತ್ರ ತಂತ್ರ ಜನಪದ ವೈದ್ಯ ಪದ್ಧತಿ' ಎಂದು ಎರಡು ಪ್ರಕಾರಗಳಾಗಿ ನೋಡಬಹುದು. ಇದರಲ್ಲಿ ಮಂತ್ರ ತಂತ್ರ ಪದ್ಧತಿಯು ಕೇವಲ ವ್ಯಕ್ತಿಯ 'ನಂಬಿಕೆ ಮತ್ತು ಆಚರಣೆಗಳಿಗೆ ಬಿಟ್ಟಿದ್ದು'. ಆದರೆ ಸ್ವಾಭಾವಿಕ ಅಥವಾ ಸಹಜ ಜನಪದ ವೈದ್ಯ ಪದ್ಧತಿಯು ಕೃಷಿ ಬದುಕಿನಿಂದ ಪ್ರೇರೇಪಿಸಲ್ಪಟ್ಟು ಸ್ವಾಭಾವಿಕವಾಗಿ ದೊರೆಯುವ ಗಿಡಮೂಲಿಕೆ, ಲೋಹ ಮತ್ತು ಪ್ರಾಣಿಜನ್ಯ ವಸ್ತುಗಳಲ್ಲಿರುವ ಔಷಧಿ ಗುಣವನ್ನು ಪತ್ತೆ ಮಾಡಿಕೊಂಡು ಬಳಸಿಕೊಳ್ಳುತ್ತದೆ. ಇದರ ಫಲ ಮತ್ತು ನಿಷ್ಫಲಗಳು ವಸ್ತುನಿಷ್ಠವಾಗಿರುತ್ತವೆ.

ಈ ಸ್ವಾಭಾವಿಕ ಜನಪದ ವೈದ್ಯ ಪದ್ಧತಿಯಲ್ಲಿ ಮದ್ದಿನ ತಯಾರಿಕೆಗೆ ಸುಲಭವಾಗಿ ಲಭ್ಯವಾಗುವ ವಿಳ್ಳೆದೆಲೆ, ಬೆಳ್ಳುಳ್ಳಿ, ದತ್ತೂರಿ, ಕುಗ್ಗೆ, ಅಂತರಗಂಗೆ, ಅಮೃತಬಳ್ಳಿ, ಲಂಟಾನ, ಲೋಳೆಸರ, ಬ್ಯಾಲ, ತುಂಬೆ, ಚಿತ್ರಮೂಲ ಮುಂತಾದ ಸಸ್ಯಗಳನ್ನು ಬಳಕೆ ಮಾಡುತ್ತಾ ಬಂದಿದ್ದಾನೆ ಅದರಲ್ಲಿ 'ಆಡು ಮುಟ್ಟದ ಸೊಪ್ಪು' ಕೂಡ ಒಂದು. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ನಾಣ್ನುಡಿಗೆ ಅಪವಾದವೆನ್ನುವಂತೆ ಕಂಡುಬರುವುದು ಈ ಆಡುಮುಟ್ಟದ ಬಳ್ಳಿ ಇದನ್ನು ಆಡು (ಮೇಕೆ) ತಿನ್ನುವುದಿರಲಿ ಹತ್ತಿರಕ್ಕೂ ಸುಳಿಯುವುದಿಲ್ಲ. ಜನಪದರ ವೈದ್ಯ ಪದ್ಧತಿಯಲ್ಲಿ ಔಷಧಿಯಾಗಿ ಬಳಕೆಯಾಗುತ್ತಾ ಜನಪದರ ಬದುಕಿನಲ್ಲಿ ಅದು ನಿರ್ವಹಿಸುವ ಪಾತ್ರವನ್ನು ಅವಲೋಕಿಸುವ ಮುನ್ನ ಆ ಗಿಡದ ಪರಿಚಯ ಮಾಡಿಕೊಳ್ಳುವುದು ಮತ್ತು ಜನಪದೀಯ ಹಿನ್ನೆಲೆಯಲ್ಲಿ ಅದರ ಗುಣಾವಗುಣಗಳನ್ನು ಗಮನಿಸುವುದು ಬಹುಮುಖ್ಯವಾದುದ್ದಾಗಿದೆ.

ಆಡು ಮುಟ್ಟದ ಸೊಪ್ಪು – *Tylophora indica*: ಆಡು ಮುಟ್ಟದ ಸೊಪ್ಪಿಗೆ ಇರುವ ವೈಜ್ಞಾನಿಕ ಹೆಸರು '*Tylophora indica*' ಎಂದು ಇದನ್ನು ಪ್ರಾದೇಶಿಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯಲಾಗುತ್ತದೆ. ಕನ್ನಡದಲ್ಲಿ 'ಆಡು ಮುತ್ತಡ', 'ಅಂತಮೂಲ', 'ಕಿರುಮಂಜಿ' ಮತ್ತು 'ಆಡು ಮುಟ್ಟದ ಬಳ್ಳಿ' ಎಂದು, ಸಂಸ್ಕೃತದಲ್ಲಿ 'ಅನಂತ ಮೂಲ', 'ಆಂತ್ರಪಾಚಕ', ತಮಿಳಿನಲ್ಲಿ 'ಪೈಪ್ಪಾಲೈ', 'ನಾಯ್ ಪಾಲೈ', 'ನಾಚೊ ಹೊರಪ್ಪನ್' ಎಂದರೆ ತೆಲುಗಿನಲ್ಲಿ 'ಕಾಕಪಾಲ', 'ಕುಕ್ಕಪಾಲ', 'ವೆಟ್ಟಿಪಾಲ', 'ವೇರಿಫಲ' ಎಂಬ ಹೆಸರುಗಳಿಂದ ಕರೆಯಲಾಗುತ್ತದೆ.

ಈ ಬಳ್ಳಿಯು ಸಾಮಾನ್ಯವಾಗಿ ಬೀಳು ಭೂಮಿಯಲ್ಲಿ ಮತ್ತು ಹಾದಿ ಬದಿಯಲ್ಲಿ ಬೆಳೆಯುತ್ತದೆ ಈ ಬಳ್ಳಿಯು 'ಸರಳವಾದ ಉದ್ದ ಅಂಡಾಕಾರದ ಮತ್ತು ಸ್ವಲ್ಪ ದಪ್ಪನೆಯ ಎಲೆಗಳು ಕಾಂಡದ ಮೇಲೆ ಅಭಿಮುಖವಾಗಿ ಜೋಡಣೆಯಾಗಿರುತ್ತವೆ. ಎಲೆಯ ಮೇಲ್ಭಾಗದಲ್ಲಿ ಹೊಳಪಿನಿಂದ ಕೂಡಿರುತ್ತದೆ ಮತ್ತು ಕೆಳಭಾಗದಲ್ಲಿ ಸೂಕ್ಷ್ಮ ಮೃದು ರೋಮಗಳಿರುತ್ತವೆ. ಎಲೆ ಮತ್ತು ಕಾಂಡದ ಮಧ್ಯೆಭಾಗದಲ್ಲಿ ಹೂಗಳನ್ನು ಕಾಣಬಹುದು. ಈ ಹೂವುಗಳು ಛತ್ರಿಯಾಕಾರದಲ್ಲಿದ್ದು ಎಕ್ಕದ ಹೂವನ್ನು ಹೋಲುವ ಹಳದಿ ಬಣ್ಣದಿಂದ ಕೂಡಿರುತ್ತವೆ. ಒಂದು ಹೂತೊಟ್ಟಿನ ಮೇಲೆ ಎರಡು ಕಾಯಿಗಳು ಅಭಿಮುಖವಾಗಿರುತ್ತವೆ.

ಜನಪದರು ಮತ್ತು ಆಡುಮುಟ್ಟದ ಸೊಪ್ಪು: ಜನಪದರು ಬಳಸುವ ಔಷಧಿ ಸಸ್ಯಗಳಲ್ಲಿ ಆಡು ಮುಟ್ಟದ ಸೊಪ್ಪು ಮಹತ್ವದ ಸ್ಥಾನ ಪಡೆದಿದೆ. ಅನೇಕ ಕಾಯಿಲೆಗಳಿಗೆ ಮದ್ದನ್ನಾಗಿ ಬಳಸುವ ಜನಪದರು ಸಾಮಾನ್ಯವಾಗಿ ಇದನ್ನು ಗುರುತಿಸುವುದು 'ಆಡು ಮುಟ್ಟದ ಸೊಪ್ಪು' ಎಂದೇ ಆಡು ಮುಟ್ಟದ ಸೊಪ್ಪು ಎಂಬ ಹೆಸರು ಏಕೆ ಬಂತು?

ಎಂಬುದನ್ನು ಅರಿಯ ಹೊರಟಾಗ ನಮಗೆ ವಕ್ತ್ರಗಳಿಂದ ಲಭಿಸುವುದು ಸಿದ್ಧ ಉತ್ತರ ಒಂದೇ 'ಆಡು ಎಲ್ಲಾ ಗಿಡ ಬಳ್ಳಿಗಳನ್ನು ತಿನ್ನುತ್ತದೆ ಆದರೆ ಈ ಬಳ್ಳಿಯನ್ನೊಂದನ್ನು ತಿನ್ನುವುದಿರಲೀ ಹತ್ತಿರಕ್ಕೂ ಸುಳಿಯುವುದಿಲ್ಲ' ಆದ ಕಾರಣ ಇದಕ್ಕೆ ಆಡು ಮುಟ್ಟದ ಬಳ್ಳಿ ಎಂಬ ಹೆಸರು ಬಂತು, ಎಂಬುದು.

ಮುಂದುವರಿದು ಯಾವ ಕಾರಣಕ್ಕಾಗಿ ಮುಟ್ಟುವುದಿಲ್ಲ ಎಂಬ ಪ್ರಶ್ನೆಗೆ ಒಂದಿಷ್ಟು ಭಿನ್ನಭಿನ್ನ ಉತ್ತರಗಳು ಲಭಿಸುತ್ತವೆ. ಅವುಗಳೆಂದರೆ, 'ಆಡು ಮುಟ್ಟದ ಸೊಪ್ಪು ನಂಜು ಅಥವಾ ವಿಷ ಆದಕಾರಣ ಅದನ್ನು ಮುಟ್ಟುವುದಿಲ್ಲ' ಎಂಬ ಉತ್ತರ ಒಂದಾದರೆ; ಮತ್ತೊಂದು 'ಈ ಯತೇಚ್ಛವಾಗಿ ಔಷಧಿಯ ಗುಣವನ್ನು ಹೊಂದಿದ್ದು ಇದರ ಲಭ್ಯತೆ ತುಂಬಾ ಕಡಿಮೆ ಎಂದರೆ ಎಲ್ಲೆಂದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಗುವುದಿಲ್ಲ. ಆದಕಾರಣ ಭಗವಂತ ಇದನ್ನು ಸಂರಕ್ಷಿಸುವ ಉದ್ದೇಶದಿಂದ ಎಲ್ಲವನ್ನೂ ತಿನ್ನುವ ಇದನ್ನು ಮುಟ್ಟದಂತೆ ಮಾಡಿದ್ದಾನೆ ಎನ್ನುವುದು.

ಇವುಗಳಲ್ಲಿ ಮೊದಲನೆಯದು ಸತ್ಯಕ್ಕೆ ಹತ್ತಿರವೆನ್ನಿಸಬಹುದು. ಅಂದರೆ ಈ ಬಳ್ಳಿಯು ಅರುಚಿಯಾಗಿರಬಹುದು ಅಥವಾ ಅದರ ದೇಹಕ್ಕೆ ಒಗ್ಗದೇ ಇರಬಹುದು. ಇದೇ ಸತ್ಯವೆಂದಲ್ಲ ಇದನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅವಲೋಕಿಸಿ ಕಾರಣವನ್ನು ಕಂಡುಕೊಳ್ಳಬೇಕು. ಇನ್ನು ಎರಡನೇ ಕಾರಣ ಒಂದಿಷ್ಟು ಕಟ್ಟು ಕಥೆ ಇದರಲ್ಲಿ ಹುರುಳಿಲ್ಲ ಎನ್ನಿಸುತ್ತದೆ ಅದು ನಿಜವೂ ಹೌದು. ಇಲ್ಲಿ ಅಲ್ಲಗಳೆದು ಅಪಹಾಸ್ಯ ಮಾಡುವುದಕ್ಕಿಂತ ಇದರ ಹಿಂದಿರುವ ಬಳ್ಳಿಯನ್ನು ರಕ್ಷಿಸುವ ತಂತ್ರ ಮೆಚ್ಚುವಂತದ್ದು. ಜನಪದರು ಬಳ್ಳಿಯೊಂದಿಗೆ ದೈವ ಸಂಬಂಧವನ್ನು ಬೆಸೆದು ಯಾರೂ ಕೂಡಾ ಆ ಬಳ್ಳಿಯನ್ನು ನಾಶಮಾಡದಂತೆ ನೋಡಿಕೊಳ್ಳುವ ಜಾಣ್ಮೆಯ ಪ್ರತೀಕವೇ ಈ ಕಥೆಗಳು.

ಈ ಬಳ್ಳಿಯನ್ನು ಕುರಿತು ಜನಪದರ ಅರಿವು ಏನೇ ಇರಲಿ ಇದರಲ್ಲಿ ಇರಬಹುದಾದ ಔಷಧೀಯ ಗುಣವನ್ನು ಪತ್ತೆ ಮಾಡಿಕೊಂಡು ತನ್ನ ಕುಲಕ್ಕೆ ಎದುರಾದ ರೋಗರುಜಿನಗಳನ್ನು ಮತ್ತು ತನ್ನ ಒಡನಾಡಿಗಳಾದ ಪ್ರಾಣಿಪಕ್ಷಿಗಳಿಗೆ ಬರುವ ಕೆಲ ಕಾಯಿಲೆಗಳನ್ನು ಹಿಮ್ಮೆಟ್ಟಿಸುವಲ್ಲಿ ಬಳಸಿಕೊಂಡಿರುವುದು ಅವರ ವೈದ್ಯಕೀಯ ಜ್ಞಾನ ಸಂಪತ್ತಿಗೆ ಹಿಡಿದ ಕೈಗನ್ನಡಿ. ಈ ಆಡು ಮುಟ್ಟದ ಸೊಪ್ಪು ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿದೆ.

ಜನಪದರ ಔಷಧೀಯ ಸಸ್ಯವಾಗಿ – ಆಡುಮುಟ್ಟದ ಸೊಪ್ಪು : ವಕ್ತ್ರಗಳ ಮಾಹಿತಿಯಂತೆ 'ಆಡು ಮುಟ್ಟದ ಸೊಪ್ಪು' ಒಂದು ಅಪರೂಪದ ಔಷಧಿಯ ಸಸ್ಯವಾಗಿದ್ದು ಇದನ್ನು ಅನೇಕ ರೋಗರುಜಿನಗಳ ನಿವಾರಣೆಯ ಸಲುವಾಗಿ ಬಳಸಲಾಗುತ್ತದೆ. ಆಡು ಮುಟ್ಟದ ಬಳ್ಳಿಯಲ್ಲಿ ಎಲೆಗಿಂತ ಬೇರು ಹೆಚ್ಚಿನ ಔಷಧೀಯ ಅಂಶವನ್ನು ಹೊಂದಿದೆ.

ಮಕ್ಕಳಲ್ಲಿ ಮತ್ತು ದೊಡ್ಡವರಲ್ಲಿ ಕಂಡುಬರುವ ಗೂರಲು (ಕೆಮ್ಮು) ಮತ್ತು ದಮ್ಮಿಗೆ (ಅಸ್ತಮಾ) ಆಡು ಮುಟ್ಟದ ಬಳ್ಳಿಯ ಬೇರನ್ನು ಅರೆದು ಕುಡಿಸುವುದರಿಂದ ಅವುಗಳನ್ನು ಉಪಶಮನ ಮಾಡಬಹುದು ಆದರೆ ಪ್ರಮಾಣ ವಯಸ್ಸಿಗನುಗುಣವಾಗಿ ಹತ್ತರಿಂದ ಇಪ್ಪತ್ತು ಹನಿಗಳಷ್ಟಿರಬೇಕು ಎಂದು ಹೇಳುತ್ತಾರೆ. ಅಂತೆಯೇ ಬೇದಿ, ರಕ್ತಬೇದಿಯಂತಹ ಕಾಯಿಲೆಗಳಲ್ಲಿ ಇದರ ಬೇರನ್ನು ಅರೆದು ಕುಡಿಸುವುದರಿಂದ ವಾಸಿ ಮಾಡಬಹುದು.

ಕಫ ಮತ್ತು ಪಿತ್ತವಾದಾಗ ಇದರ ಬೇರಿನ ರಸವನ್ನು ಕುಡಿಸುವುದರಿಂದ ವಾಂತಿಯಾಗುತ್ತದೆ. ಇದರಿಂದ ಪಿತ್ತದಿಂದ ಕೂಡಿದ ಕಫವು ಹೊರಬರುತ್ತದೆ.

ಹಾವು ಕಡಿತಕ್ಕೆ ಒಳಗಾದವರಿಗೆ ಆಡು ಮುಟ್ಟದ ಬಳ್ಳಿ, ಮುತ್ತುಗದ ಚಕ್ಕೆ, ತುಂಬೆ ಸೊಪ್ಪು ಇವುಗಳನ್ನು ನೀರಿನಲ್ಲಿ ಅರೆದು ಕುಡಿಸುವುದರಿಂದ ವಿಷ ಪರಿಹಾರವಾಗುತ್ತದೆ ಅಲ್ಲದೇ ಆಡು ಮುಟ್ಟದ ಬಳ್ಳಿಯ ಬೇರನ್ನು ಅರೆದು ಹಾವು ಕಡಿದ ಜಾಗಕ್ಕೆ ಹಚ್ಚಲಾಗುತ್ತದೆ.

ಕೈಮಸುಕು* ಆದವರಿಗೆ ಇದರ ಬೇರನ್ನು ಅರೆದು ಕುಡಿಸುವುದರಿಂದ ಕೈಮಸುಕಿನಿಂದ ಗುಣವಾಗುತ್ತಾರೆ. ಈ ಸಂದರ್ಭದಲ್ಲಿ ರೋಗಿಯು ಪತ್ಯೆಯನ್ನು ಅನುಸರಿಸಬೇಕು. ಒಂದು ವಾರಗಳ ಕಾಲ ಮಜ್ಜಿಗೆ ಅನ್ನವನ್ನು ಮಾತ್ರ ತಿನ್ನಬೇಕಾಗುತ್ತದೆ.

ಕೇವಲ ಮನುಷ್ಯರಿಗೆ ಅಷ್ಟೇ ಅಲ್ಲದೇ ಜಾನುವಾರುಗಳ ರೋಗಬಾದೆಯ ನಿವಾರಣೆಗೂ ಕೂಡಾ ಮದ್ದನ್ನಾಗಿ ಬಳಸಲಾಗುತ್ತದೆ. ರೈತರು ತಮ್ಮ ಜೀವನಾಡಿಗಳಾದ ದನ, ಕರು, ಕುರಿ, ಎತ್ತುಗಳಿಗೆ ಸಂಭವಿಸಬಹುದಾದ ವ್ಯಾದಿಗಳಿಗೆ ಆಡು ಮುಟ್ಟದ ಸೊಪ್ಪನ್ನು ಪರಮ ಔಷಧವಾಗಿ ಬಳಸುತ್ತಾರೆ.

ಜಾನುವಾರುಗಳಲ್ಲಿ ಕಂಡುಬರುವ ಕಟ್ಲಾಲ್ಡು** ರೋಗಕ್ಕೆ ಆಡು ಮುಟ್ಟದ ಸೊಪ್ಪು, ಕುಗ್ಗೆ ಬೇರು (ಕಾಡು ಮೆಂತ್ಯ– *Trigonella foenum graceum*) ಹಾಗೂ ಕಡಜದ ಗೂಡಿನ ಮಣ್ಣನ್ನು ಸೇರಿಸಿ ಅರೆದು ಮೂರು ಗೊಟ್ಟ ಕುಡಿಸುವುದು ಇದರಿಂದ ಕಟ್ಲಾಲ್ಡು ರೋಗ ವಾಸಿಯಾಗುತ್ತದೆ. ಅಲ್ಲದೇ ಜಾನುವಾರುಗಳಲ್ಲಿ ಕಾಣಬರುವ ತಲೆದೂಗುವ ರೋಗಕ್ಕೆ ಆಡು ಮುಟ್ಟದ ಸೊಪ್ಪು, ಲಕ್ಕಿ ಸೊಪ್ಪು, ತುಂಬೆ ಸೊಪ್ಪು, ಆಲವಾಣದ ಸೊಪ್ಪು, ಬೆಳ್ಳುಳ್ಳಿ, ಕಾಳುಮೆಣಸುಗಳನ್ನು ಸೇರಿಸಿ ಅರೆದು ಬೆಳಗ್ಗೆ ಮತ್ತು ಸಂಜೆ ಮೂರು ದಿನಗಳ ಕಾಲ ಕುಡಿಸಬೇಕು.

* **ಕೈಮಸುಕು :** ಹಳ್ಳಿ ಪರಿಭಾಷೆಯಲ್ಲಿ ಮದ್ದಿಕ್ಕುವುದು ಎಂದರ್ಥ. ಇದರಿಂದ ವ್ಯಕ್ತಿ ಊಟಬಿಟ್ಟು ಕೃಶನಾಗುತ್ತಾ ಹೋಗುತ್ತಾನೆ.

** **ಕಟ್ಲಾಲ್ಡು :** ಜಾನುವರುಗಳಲ್ಲಿ ಕಂಡುಬರುವ ಒಂದು ರೋಗ. ಈ ರೋಗದ ಪರಿಣಾಮ ರಾಸುಗಳ ಎದೆ ಒಣಗಿ ನೇವು ಬಿಡುವುದು.

ಹೀಗೆ ಜನಪದರ ಬದುಕಿನುದ್ದಕ್ಕೂ ವ್ಯಾದಿಬಾಧೆಗಳಿಂದ ಮುಕ್ತರಾಗಿ ಉತ್ತಮ ಆರೋಗ್ಯ ಪಡೆದುಕೊಳ್ಳುವಲ್ಲಿ ಇರದ ಪಾತ್ರ ಮಹತ್ವದ್ದು. ಇನ್ನು ವಿಶೇಷವೆಂದರೆ ಆಡು (ಮೇಕೆ)ಗೆ ತಗಲಬಹುದಾದ ರೋಗಗಳಿಗೆ ಈ ಆಡು ಮುಟ್ಟದ ಸೊಪ್ಪನ್ನೇ ಮದ್ದಾಗಿ ಬಳಸುವುದು. ಸ್ವಾಭಾವಿಕವಾಗಿ ಆಡು ತಿನ್ನದೇ ಬಿಟ್ಟ ಬಳ್ಳಿಯೊಂದು ರೋಗ ನಿವಾರಣೆಯ ಮದ್ದಾಗಿ ಅದರ ಉದರವನ್ನು ಸೇರುತ್ತದೆ. ಏನೇ ಇರಲಿ ಇದು ಕೃಷಿ ಅವಲಂಬಿತ ಗ್ರಾಮೀಣ ಬದುಕಿನ ಔಷಧಿಯಾಗಿ ಇಂದಿಗೂ ಬಳಕೆಯಾಗುತ್ತಿರುವುದು ಆಡು ಮುಟ್ಟದ ಬಳ್ಳಿಯ ವಿಶೇಷ. "ಕಲ್ಲೆಂಬೋದೆಲ್ಲಾ ದೇವರೆ, ಗಿಡ ಎಂಬೋದೆಲ್ಲಾ ವೈದ್ಯವೆ" ಎಂಬ ಮಾತಿನಂತೆ ಜನಪದ ವೈದ್ಯ ಬಹು ಭಾಗ ಸಸ್ಯವನ್ನು ಅವಲಂಭಿಸಿರುವಂತದ್ದಾಗಿದೆ. ಆದ್ದರಿಂದ ಜನಪದರು ಸಸ್ಯಗಳನ್ನು ದೇವರಂತೆ ಆರಾಧಿಸುತ್ತಾರೆ, ಪೂಜಿಸುತ್ತಾರೆ. ಸಸ್ಯದ ಪ್ರತಿಯೊಂದು ಭಾಗವೂ ಮನುಷ್ಯನಿಗೆ ಉಪಯುಕ್ತವಾಗಿದೆ. ಸಸ್ಯ ಪ್ರಪಂಚ ಜನಪದ

ವೈದ್ಯರಿಗೆ ಸಂಜೀವಿನ ಪರ್ವತವಿದ್ದಂತೆ. ಇಂತ ಸಂಪದ್ಭರಿತ ಸಸ್ಯ ಪ್ರಪಂಚದಲ್ಲಿ ಆಡು ಮುಟ್ಟದ ಸೊಪ್ಪಿನ ಪಾತ್ರವು ಗಣನೀಯವಾದುದು. ಸುಲಭವಾಗಿ ಲಭ್ಯವಾಗುವ ಈ ಗಿಡಮೂಲಿಕೆಯನ್ನು ವ್ಯಾದಿಗೆ ಸಂಬಂಧಿಸಿದಂತೆ ಬಳಸುವ ವಿಧಾನಗಳನ್ನು ಅರಿತು ಬಳಕೆ ಮಾಡುವುದರಿಂದ ಯಾವುದೇ ಅಡ್ಡ ಪರಿಣಾಮಗಳಿಲ್ಲದಂತೆ ರೋಗಗಳನ್ನು ವಾಸಿಮಾಡಿಕೊಳ್ಳಬಹುದು. ಜನಪದರ ವೈದ್ಯ ಪದ್ಧತಿಯು ನಮ್ಮ ಜನರ ಆಸ್ತಿ ಮತ್ತು ಅವರು ಕಂಡುಕೊಂಡ ಅದ್ಭುತ ಜ್ಞಾನಸಂಪತ್ತು. ಇದನ್ನು ಉಳಿಸುವ ಬೆಳೆಸುವ ಮೂಲಕ ಜಾಗತೀಕರಣ ಪ್ರಕ್ರಿಯೆಯ ನಡುವೆ ರಸಾಯನಿಕ ಔಷಧಿಗಳ ದಾವಂತದಲ್ಲಿ ಜನಪದ ಔಷಧಿಗಳು ಕೊಚ್ಚಿಹೋಗದಂತೆ ಉಳಿಸುವ ಪ್ರಯತ್ನ ಮಾಡಬೇಕಾಗಿದೆ. ಅಲ್ಲದೇ ನಮ್ಮ ಪ್ರಾದೇಶಿಕ ಜನಪದ ವೈದ್ಯ ಪದ್ಧತಿಯನ್ನು ಜಗತ್ತಿನ ಉದ್ದಗಲಕ್ಕೂ ಪ್ರಸರಿಸುವ ಕಾರ್ಯವನ್ನು ಮಾಡಬೇಕಾದ ತುರ್ತಿದೆ ಅಲ್ಲದೇ ಔಷಧೀಯ ಸಸ್ಯಗಳನ್ನು ಸಂರಕ್ಷಿಸುವಲ್ಲಿ ಬಹುಮುಖ್ಯ ಪಾತ್ರವಹಿಸಬೇಕಾಗಿದೆ.

ಪರಾಮರ್ಶನ ಗ್ರಂಥಗಳು

1. ಜಾನಪದ : ಕೆಲವು ಅಧ್ಯಯನಗಳು – ಡಾ. ಅಂಬಳಿಕೆ ಹಿರಿಯಣ್ಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಕಟಣೆ, ಬೆಂಗಳೂರು. 1994
2. ಜಾನಪದ ಮತ್ತು ಪೂರಕ ಕ್ಷೇತ್ರಗಳು – ಸಂ. ಲಕ್ಕಪ್ಪಗೌಡ, ಕನ್ನಡ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಬಿ.ಆರ್ ಪ್ರಾಜೆಕ್ಟ್, 1991
3. ಮಲೆನಾಡ ಜನಪದ – ಸಂ.ಲಕ್ಕಪ್ಪಗೌಡ, ಕನ್ನಡ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಬಿ.ಆರ್ ಪ್ರಾಜೆಕ್ಟ್, 1983
4. ಜೀಶಂಪ ಅವರ ಜಾನಪದ ಬರಹಗಳು – ಸಂ. ಪ್ರೊ ಕಾಳೇಗೌಡ ನಾಗವಾರ ಮತ್ತು ಅಂಬಳಿಕೆ ಹಿರಿಯಣ್ಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು. 2000
5. ಜನಪದ ಸಾಹಿತ್ಯ ಪ್ರಕಾರಗಳು– ಸಂ. ತೀ.ನಂ. ಶಂಕರನಾರಾಯಣ ಮತ್ತು ಡಾ. ಎಂ.ಎನ್. ವೆಂಕಟೇಶ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. 2004
6. ಕರ್ನಾಟಕದ ಔಷಧಿಯ ಸಸ್ಯಗಳು. ಡಾ. ಮಾಗಡಿ ಆರ್ ಗುರುದೇವ, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು. 1998

ಆಹಾರೌಷಧ-ಆಯುರ್ವೇದ ನ್ಯೂಟ್ರಾಸ್ಯುಟಿಕಲ್ಸ್

*ಅಶ್ವಿನಿ. ಹೆಚ್. ಎಸ್ ಮತ್ತು **ಡಾ॥ ಸಂದ್ಯಾರಾಣಿ. ಹೆಚ್. ವಿ

*ಕಲಿಕಾ ವೈದ್ಯೆ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು., **ವೈದ್ಯಾಧಿಕಾರಿ, ಡಾ. ವಿಜಯ ರವರ ಆಯುರ್ವೇದ ಸಂಶೋಧನಾ ಮತ್ತು ಚಿಕಿತ್ಸಾ ಕೇಂದ್ರ, ಮೈಸೂರು.

ಪ್ರಾಚೀನ ಭಾರತೀಯ ಋಷಿಮುನಿಗಳ ಕೊಡುಗೆಯನ್ನು ಐತಿಹಾಸಿಕ ದೃಷ್ಠಿಯಿಂದಷ್ಟೇ ಅಧ್ಯಯನ ಮಾಡದೆ. ಸರ್ವರನ್ನೂ ಪರಿಪೂರ್ಣ ಆರೋಗ್ಯದತ್ತ ಕೊಂಡೊಯ್ಯುವ ಅದಮ್ಯ ಉದ್ದೇಶದಿಂದ ಅಧ್ಯಯನ ಮಾಡಿದಾಗ ವಿಜ್ಞಾನ ಹಾಗೂ ಕಲೆಯ ವಿವಿಧ ಪ್ರಕಾರಗಳ ಪರಾಕಷ್ಠೆಯನ್ನು ಇವರು ತಲುಪಿದ್ದರೆಂದು ಬಹಳ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತೇವೆ. ಆರೋಗ್ಯ ಪೂರ್ಣ ಆಹಾರ, ಔಷಧೀಯ ಗುಣವುಳ್ಳ ಆಹಾರದ ವಿಶಿಷ್ಟ ವೈವಿಧ್ಯತೆಗಳು-ಹೀಗೆ ಹಲವು ಹತ್ತು ವಿಶೇಷಗಳನ್ನು ಮನಗಾಣುತ್ತೇವೆ.

'ಅನ್ನ ಬ್ರಹ್ಮ' ಎನ್ನುವ ಭಾರತೀಯ ನಂಬಿಕೆಯು, ನಾವು ಭುಜಿಸುವ ಪ್ರತಿಯೊಂದು ಕಣವೂ ಭಗವಂತನಿಗರ್ಪಿಸಿದ ನೈವೇದ್ಯವೆಂದು, ವ್ಯಕ್ತಿಗೆ ಪರಿಪೂರ್ಣ ಆರೋಗ್ಯವನ್ನೂ ಹಾಗೂ ದೈವತ್ವವನ್ನು ಕೊಡುವ ಸಾಧನವೆಂದು ಶತಮಾನಗಳಿಂದಲೂ ನಂಬಲಾಗಿದೆ. ಆಹಾರ ಮತ್ತು ಔಷಧ ಬಹಳ ಸಾಮ್ಯತೆಯನ್ನು ಹೊಂದಿದೆ. ನಮ್ಮ ಭಾರತೀಯ ಆಹಾರ ಪದ್ಧತಿ ವೈಜ್ಞಾನಿಕವಾಗಿದ್ದು. ತಿನ್ನುವ ಆಹಾರವೇ ಔಷಧೀಯಷ್ಟು ಪರಿಣಾಮಕಾರಿಯಾಗಿರುವುದು ಹಾಗೂ ಯಾವುದೇ ಅಡ್ಡಪರಿಣಾಮವನ್ನು ಉಂಟು ಮಾಡದೇ ಇರುವುದು ಆಯುರ್ವೇದದ ಉತ್ತಮ ಕೊಡುಗೆಯಾಗಿದೆ. ಔಷಧ ರೂಪೀ ಆಹಾರವು ಮತು ಆಹಾರ ರೂಪೀ ಔಷಧವು ಆಯುರ್ವೇದ ಉದ್ಗ್ರಂಥಗಳಲ್ಲಿ ಹೇರಳವಾಗಿದ್ದು ಇನ್ನೂ ಹೆಚ್ಚಿನ ವೈಜ್ಞಾನಿಕ ವಿಶ್ಲೇಷಣೆ ಮಾಡಾಬೇಕಾಗಿರುವ ವಿಷಯಗಳು ಸಾಗರದಷ್ಟಿವೆ.

Nutraceuticals ಔಷಧಾಹಾರ: ಇದು ಆರ್ಯುವೇದದಲ್ಲಿ ಹಾಗೂ ಭಾರತೀಯ ಆಹಾರ ಪದ್ಧತಿಯಲ್ಲಿ ಪ್ರಾಮುಖ್ಯತೆಯನ್ನು ಹೋಂದಿದ್ದು ಈ ಪ್ರಬಂಧದಲ್ಲಿ ಆಯುರ್ವೇದದ ಎಲ್ಲಾ ಪ್ರಮುಖ ಆಹಾರ ಭೆಧಗಳ ಉದಾಹರಣೆಗಳನ್ನು ಸೂಕ್ಷಮವಾಗಿ ವಿವರಿಸಿ ವಿಶ್ಲೇಷಿಸಲಾಗಿದೆ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ದಿನನಿತ್ಯ ಬಳಸಬೇಕಾದ ಆಹಾರ ಹಾಗೂ ರೋಗಾವಸ್ಥೆಯಲ್ಲಿ ಗುಣಮುಖರಾಗಲು ಬಳಸಬೇಕಾದ ಕೆಲವು ಆಹಾರಗಳನ್ನು ವೈಜ್ಞಾನಿಕವಾಗಿ ಇಂದಿನ ಪ್ರಪಂಚ ಬಯಸುವಂತೆ ಸಂಶೋಧನೆಗಳ ಪುರಾವೆ ಸಹಿತ ವಿಶ್ಲೇಷಿಸಲಾಗಿದೆ.

ಆರೋಗ್ಯವನ್ನು ಕಾಪಾಡಿಕೊಳ್ಳಲು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಆಹಾರ ವೈವಿಧ್ಯತೆಗಳು, ಋತುವಿಗನುಸಾರವಾಗಿ ಹಾಗೂ ವಯಸ್ಸಿಗನುಸಾರವಾಗಿ ಆಹಾರ ಮತ್ತು ಜೀವನ ಶೈಲಿಗೆ ಅನುಗುಣವಾಗಿ ಔಷಧರೂಪಿ ಆಹಾರವನ್ನು ದಿನನಿತ್ಯ ಬಳಸಲು ಸೂಚಿಸಲಾಗಿದೆ. ರೋಗಿಗಳಲ್ಲಿ ಆಹಾರರೂಪೀ ಔಷಧವನ್ನು ರೋಗಕ್ಕೆ ಮತ್ತು ರೋಗಿಗೆ ಸೂಕ್ತವಾಗುವಂತೆ ಬಹಳ ಪ್ರಮುಖ ಮತ್ತು ನಿಶ್ಚಿತ ನಿಯಮಗಳನ್ನೋಳಗೊಂಡು ತಯಾರಿಸಿ ನೀಡುವದರಿಂದ ರೋಗ ಶೀಘ್ರದಲ್ಲೇ ಹತೋಟಿಗೆ ಬರುತ್ತದೆ ಅಲ್ಲದೇ ಯಾವುದೇ ಉಪದ್ರವಗಳಿಲ್ಲದೆ ಗುಣವಾಗುವಂತೆ ಮಾಡುತ್ತದೆ.

ಶತಶತಮಾನಗಳಿಂದಲೂ, ವೈಜ್ಞಾನಿಕ ಅಳತೆಗೋಲುಗಳಿಂದ ಸತ್ಯಾಸತ್ಯತೆಯ ಪರೀಕ್ಷೆಗೊಳಪಟ್ಟು, ಸರ್ವತೋಮುಖ ಶ್ರೇಷ್ಠತೆಯನ್ನು ತನ್ನದಾಗಿಸಿಕೊಂಡಿದ್ದ ವಿವಿಧ ಪ್ರಕಾರದ ಕಲೆಗಳು, ವಿಜ್ಞಾನದ ವಿಭಾಗಗಳು ಪ್ರಾಚೀನ ಭಾರತೀಯರ ಕೊಡುಗೆ ಎಂಬುದನ್ನು ಜಾಗತಿಕ ಮಟ್ಟದಲ್ಲಿ ಬಹಳ ತಡವಾದರೂ ಒಪ್ಪಿಕೊಳ್ಳಲಾಗುತ್ತಿದೆ. ನಳಂದಾ, ತಕ್ಷಶಿಲಾ ವಿಶ್ವವಿಖ್ಯಾತ ಜ್ಞಾನ ಬೀಡಾದಂತಹ ಐತಿಹಾಸಿಕವಾಗಿರುವಂತಹ ಈ ಜ್ಞಾನದ ಆಗರಗಳು ಬಹಳ ಶತಮಾನಗಳಿಂದ ಭಾರತೀಯರಲ್ಲಿದ್ದಿದ್ದು ಸರ್ವರಿಗೂ ವೇದ್ಯವಾದ

ವಿಷಯವಾಗಿದೆ. ಶಿಲ್ಪಶಾಸ್ತ್ರ, ನಾಟ್ಯಶಾಸ್ತ್ರ, ಪಾಕಶಾಸ್ತ್ರ, ಖಗೋಳಶಾಸ್ತ್ರ, ರಸಾಯನಶಾಸ್ತ್ರ ಇತ್ಯಾದಿ ೬೪ ಕಲೆಗಳ ಪ್ರಾವೀಣ್ಯತೆಯು ಭಾರತೀಯರ ಕೊಡುಗೆ ಎಂದೂ ಬಲ್ಲೆವು. ಭೀಮ, ನಳಮಹರಾಜ ಇವರ ಹೆಸರು ಪಾಕಶಾಸ್ತ್ರದೊಂದಿಗೂ ಪ್ರಖ್ಯಾತವಾಗಿದೆ.

ಭಾರತೀಯ ಶಾಸ್ತ್ರಗಳಲ್ಲಿ ಜ್ಞಾನೇಂದ್ರಿಯಗಳಿಗೆ ತುಂಬಾ ಪ್ರಾಮುಖ್ಯತೆ ಕೊಡಲಾಗಿದೆ. ಒಂದು ಚಕ್ಕುಲಿಯನ್ನು ತಿನ್ನುವಾಗ ಬೆಣ್ಣೆಯ ಘಮ ಮೂಗಿಗೂ, ಆಕರ್ಷಕ ಆಕಾರ ಕಣ್ಣಿಗೂ, ಚಕ್ಕುಲಿಯ ಬಿಸಿ ಮತ್ತು ಸ್ಪರ್ಶ ಚರ್ಮಕ್ಕೂ, ಕಚ್ಚಿತಿನ್ನುವಾಗ ಕರಕರನಾದ ಕಿವಿಗೂ, ಸ್ವಾದ ನಾಲಿಗೆಗೂ ಅತ್ಯಂತ ಆಪ್ಯಾಯಮಾನವಾಗಿರುತ್ತದೆ. ಈ ಐದೂ ಜ್ಞಾನೇಂದ್ರಿಯಗಳು ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ. ಈ ಭಾರತೀಯ ಅಡುಗೆಯಂತೆ ಸಾವಿರಾರು ವೈವಿಧ್ಯಪೂರ್ಣ ಆಹಾರದ ಶ್ರೇಷ್ಠ ಕೊಡುಗೆಯನ್ನು ವಂಶಪಾರಂಪರ್ಯವಾಗಿ ನಾವು ಪಡೆದಿರುತ್ತೇವೆ.

'ಅನ್ನಂ ಬ್ರಹ್ಮ' ಎನ್ನುವ ನಂಬಿಕೆ ಭಾರತೀಯ ವೈದ್ಯಕೀಯ ಶಾಸ್ತ್ರವಾದ ಆಯುರ್ವೇದದಲ್ಲಿ ಪ್ರತಿಪಾದಿಸಲಾಗಿದೆ. ಆಹಾರವೆಂದರೆ ಯಾವುದು ತತ್‌ಕ್ಷಣ ಮನಸ್ಸಂತುಷ್ಟಿಯನ್ನು, ಶಕ್ತಿಯನ್ನು, ನಂತರದಲ್ಲಿ ಪುಷ್ಟಿಯನ್ನು ನೀಡುತ್ತದೆಯೋ ಅದೇ ಆಗಿದೆ. ಸುಶ್ರುತ ಸಂಹಿತೆಯಲ್ಲಿ ಆಹಾರ ಶಕ್ತಿಯನ್ನು, ಬಣ್ಣವನ್ನು, ಬಲವನ್ನೂ ನೀಡುತ್ತದೆಂದು, ಬ್ರಹ್ಮನಂತೆ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾಗುತ್ತದೆಂದು ತಿಳಿಸಲಾಗಿದೆ. ಆಹಾರವನ್ನು ನಿಯಮಾನುಸಾರ ಭುಂಜಿಸಿದರೆ ಆರೋಗ್ಯವೂ ಇಲ್ಲವಾದರೆ ಅನಾರೋಗ್ಯವು ನಿಶ್ಚಿತವೆಂದು ಕಂಡುಕೊಂಡಿದ್ದರು. ನಾವು ಭುಂಜಿಸುವ ಆಹಾರದಲ್ಲಿ ದೈವಾಂಶವಿದೆಯೆಂದು, ಅದು ದೇವರಿಗೆ ಅರ್ಪಿಸಿದ ನೈವೇದ್ಯವೆಂದು ಭಾವಿಸಿದಾಗ ಔಷಧಗಳ ಅವಶ್ಯಕತೆ ಇರುವುದಿಲ್ಲವೆಂದೂ ತಿಳಿದಿದೆ.

ಹಿಪೊಕ್ರೆಟಿಸನು ಬೆಂಬಲಿಸುವ ವಾಕ್ಯ ಆಹಾರವೇ ಔಷಧದಂತೆಯೂ, ಔಷಧಿಯು ಆಹಾರದಂತೆಯೂ ಇರಬೇಕೆಂಬುದಾಗಿದೆ. ಅಂದರೆ ತೀಕ್ಷ್ಣ ವೀರ್ಯವುಳ್ಳಂತಹ, ಅಡ್ಡಪರಿಣಾಮಗಳನ್ನು ಉಂಟುಮಾಡ ಬಹುದಾದಂತಹ ಔಷಧಗಳ ಬದಲಾಗಿ ಸಮತೋಲನ ಉಂಟು ಮಾಡಬಲ್ಲಂತಹ, ಆರೂ ರಸಗಳುಳ್ಳಂತಹ, ಸುಲಭವಾಗಿ ಜೀರ್ಣ ವಾಗುವಂತಹ ಆಹಾರವೇ ಔಷಧಿಯಾಗಬಲ್ಲದು. ಆಹಾರವನ್ನು ತಯಾರು ಮಾಡುವ ಮುನ್ನವೇ ಅನೇಕ ವಿಷಯಗಳತ್ತ ಗಮನಹರಿಸುವುದು ಅತ್ಯವಶ್ಯವೆಂದು ಹೇಳಲಾಗಿದೆ. ಆರೋಗ್ಯಪೂರ್ಣ ಬಿತ್ತನೆ, ಫಲವತ್ತಾದ ಭೂಮಿ, ಸೂಕ್ತಪೋಷಕಾಂಶಗಳನ್ನು ಪಡೆದು ಬೆಳೆದಿರುವಂತಹ ಧವಸಧಾನ್ಯ ಖಾದ್ಯಾಂಶಗಳನ್ನು ಸೂಕ್ತರೀತಿಯಲ್ಲಿ ಕಟಾವು ಮಾಡಿ ಸಂಸ್ಕರಿಸಿ, ಸಂತೋಷದಿಂದ ಭಗವನ್ನಾಮ ಸ್ಮರಣೆಯನ್ನು ಮಾಡುತ್ತಾ ತಯಾರಿಸಲಾದ ಆಹಾರವು ಶ್ರೇಷ್ಠ ಪರಿಣಾಮವನ್ನುಂಟು ಮಾಡುತ್ತದೆ. ಚರಕಸಂಹಿತೆಯ □ಅನ್ನ□ ಎಂಬುವ ಪದ ಎಲ್ಲವನ್ನೂ ಒಳಗೊಂಡಿದೆ ಅಂದರೆ ಅನ್ನವು ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕವಾಗಿಯೂ ಕೃಪೆಮಾಡ ಬಲ್ಲುದೆಂದು ಹೇಳಲಾಗಿದೆ.

ಅನ್ನಪಾನವಿಧಿ ಅಧ್ಯಾಯದಲ್ಲಿ ಆಹಾರವನ್ನು ಋತುವಿಗನುಸಾರವಾಗಿ ಹಿತವಾಗಿಯೂ, ಮಿತವಾಗಿಯೂ ಭುಂಜಿಸಬೇಕೆಂದು, ಅದೊಂದು ಪುಣ್ಯ ಕಾರ್ಯವೆಂದು, ಅಗ್ನಿಗೆ ಹವಿಸ್ಸನ್ನು ನೀಡುವ ಪೂಜ್ಯ ಕರ್ಮವೆಂದೂ, ಪ್ರಣವಪಠನವನ್ನು ಮಾಡುತ್ತಾ ಮೂವತ್ತಾರುಸಾವಿರ ರಾತ್ರಿಗಳು ಪಾಲಿಸಬೇಕು– ಇದರಂತೆ ನಿಯಮಿತವಾಗಿ ಅನುಸರಿಸಿದರೆ ಜನ್ಮಜನ್ಮಾಂತರಗಳವರೆಗೂ ಇದರ ಪ್ರಭಾವ ಬೀರುತ್ತದೆಯೆಂದು ಹೇಳಲಾಗಿದೆ. ಆಯುರ್ವೇದದಲ್ಲಿ ಮೂರು ಸ್ಥಂಭಗಳನ್ನು ಆರೋಗ್ಯಕ್ಕೆ ಅತ್ಯಾವಶ್ಯಕವೆಂದು ತಿಳಿಸಿ ಆಹಾರ, ನಿದ್ರೆ ಮತ್ತು ಬ್ರಹ್ಮಚರ್ಯವೆಂದು ಗುರುತಿಸಲಾಗಿದೆ. ಆಹಾರವನ್ನು ಸೂಕ್ತಸಮಯ ದಲ್ಲಿ ಆಯುರ್ವೇದದಲ್ಲಿ ಹೇಳಿರುವ ಎಲ್ಲಾ ನಿಯಮಗಳನ್ನು ಪಾಲಿಸಿದ್ದೇ ಆದರೆ ಪರಿಪೂರ್ಣ ಆರೋಗ್ಯದಿಂದ ಸಹಸ್ರಾರು ವರ್ಷ ಜೀವಂತವಾಗಿರಬಹುದೆಂದು ಬೃಹತ್ರಯಿಯಲ್ಲಿ ಹೇಳಲಾಗಿದೆ. ಆಧುನಿಕ ಸಮಾಜದಲ್ಲಿ ನ್ಯೂಟ್ರಾಸುಟಿಕಲ್ಸ್, ಫಂಕ್ಷನಲ್ ಫುಡ್ಸ್, ವೆಲ್‌ನೆಸ್ ಫುಡ್ಸ್, ಮೆಡಿಸಿನಲ್ ಫುಡ್ಸ್, ಫಾರ್ಮಾ ಫುಡ್ಸ್ ಎಂಬ ಪದಗಳು ಪ್ರಚಲಿತವಾಗಿವೆ. ನ್ಯೂಟ್ರಾಸುಟಿಕಲ್ಸ್ ಬಗ್ಗೆ ಅತಿಹೆಚ್ಚು ಸಂಶೋಧನೆಗಳನ್ನು ಮಾಡಿರುವ ಸ್ಟೀಫನ್ ಡೆಫೆಲಿಸ್ ಅವರ ಪ್ರಕಾರ ಯಾವ ಆಹಾರ ಅಥವಾ ಆಹಾರ ಪದಾರ್ಥಗಳು ಔಷಧಿಯಂತೆಯೂ ಆರೋಗ್ಯಕ್ಕೆ ಪೂರಕವಾಗಿಯೂ ರೋಗಗಳನ್ನು ತಡೆಗಟ್ಟುವಲ್ಲಿ ಚಿಕಿತ್ಸೆಯಾಗಿಯೂ ಇರಬಲ್ಲುದೋ ಅವುಗಳನ್ನು ನ್ಯೂಟ್ರಾಸುಟಿಕಲ್ಸ್ ಎಂದು ವರ್ಗೀಕರಿಸಲಾಗಿದೆ.

ಆಹಾರಗಳ ತಯಾರಿಕಾ ವಿಧಾನ, ಆಹಾರವನ್ನು ಭುಜಿಸುವ ನಿಯಮಗಳು, ಆಹಾರಪದ್ಧತಿಯ ಬಗ್ಗೆ ಕೂಲಂಕಷವಾದ ವಿವರಣೆ, ವೈಜ್ಞಾನಿಕ ಅನುಮೋದನೆ ಆಯುರ್ವೇದದಲ್ಲಿ ಮಾತ್ರ ಲಭ್ಯವಾಗಿದೆ ಎಂಬುದು ಪ್ರಪಂಚದಾದ್ಯಂತ ವೈದ್ಯ ಪದ್ಧತಿಯನ್ನು ವಿಶ್ಲೇಷಿಸಿದಾಗ ಕಂಡುಬರುವ ನಿಚ್ಚಳ ಸತ್ಯವಾಗಿದೆ.

ಮೇಲಿನ ನಮ್ಮ ಹೇಳಿಕೆಯನ್ನು ಅನುಮೋದಿಸಲು ಕೆಲವು ಉದಾಹರಣೆಗಳನ್ನು ನಮೂದಿಸಿರುತ್ತೇವೆ.

- ಒಂದೇ ರಸವುಳ್ಳ ಆಹಾರವನ್ನು ಸೇವಿಸುವುದರಿಂದ ಅನಾರೋಗ್ಯವೂ ಅಲ್ಪ ರೋಗನಿರೋಧಕ ಶಕ್ತಿಯೂ ಉಂಟಾದರೆ, ಶಾಸ್ತ್ರೋಕ್ತ ರೀತಿಯಲ್ಲಿ ಆರೂ ರಸಗಳ ದಿನನಿತ್ಯ ಬಳಕೆಯಿಂದ ದೀರ್ಘ ಆರೋಗ್ಯವನ್ನು, ಆಯಸ್ಸನ್ನು ಪಡೆಯಬಹುದು.
- ಹಾಲು, ಮುಜ್ಜಿಗೆ, ಜೇನುತುಪ್ಪ, ತುಪ್ಪ, ಕಬ್ಬಿನಿಂದ ತಯಾರಿಸಲಾದ ಖಾದ್ಯಗಳು, ಪಾನೀಯಗಳು– ಇವುಗಳ ರಸ, ಗುಣ, ವೀರ್ಯ, ವಿಪಾಕ, ಕರ್ಮಗಳ ತರತಮ ಭಾವಗಳ ತಿಳುವಳಿಕೆ.
- ಪಶು ಪಕ್ಷಿಗಳ ಮೊಟ್ಟೆ, ಮಾಂಸ ಇತ್ಯಾದಿಗಳನ್ನು ಬಳಸಿ ಪುಪೂಲಿಕ, ಉತ್ಕಾರಿಕ, ಸಂಧಾನಕಲ್ಪಗಳು, ವಟಕ, ಶಾಕಾಹಾರ, ಖಾದ್ಯಗಳಾದ ಗೋಧೂಮ, ಲಡ್ಡುಕ, ಕ್ಷೀರಸಕ್ತು, ಆಪೂಪ, ಜಲೇಬಿ, ಸೇವಿಕ.
- ದೀರ್ಘಾಯುಸ್ಸಿಗಾಗಿ ಆಹಾರ, ಸೂಕ್ತ ಸಂತಾನಕ್ಕಾಗಿ ಆಹಾರ, ಬೊಜ್ಜು ಕರಗಲು ಆಹಾರ, ಮೈತೂಕ ಇಳಿಸಲು ಆಹಾರ.
- ಮದ್ಯವರ್ಗ, ಧಾನ್ಯವರ್ಗ, ಕುಧಾನ್ಯ ವರ್ಗ, ಮಾಂಸವರ್ಗ, ಶಾಕಾ ವರ್ಗ ಇತ್ಯಾದಿ ವಿವಿಧ ಆಹಾರ ಪದಾರ್ಥಗಳ ತಿಳುವಳಿಕೆ.

ಶತಾವರ್ಯಾದಿ ಜಲಂ: ಶತಾವರಿಯನ್ನು ಬಿಸಿ ನೀರಿನಲ್ಲಾಗಲೀ ಅಥವಾ ತಣ್ಣೀರಿನಲ್ಲಾಗಲೀ ನೆನೆಸಿಟ್ಟು ಸಾರವನ್ನು ಪಡೆದು ಜ್ವರ, ಮೈ ಕೈಕಾಲು ನೋವು, ವಿವಿಧ ರಕ್ತಸ್ರಾವಗಳಲ್ಲಿ ಔಷಧವಾಗಿ ನೀಡಲಾಗುತ್ತಿತ್ತು.

ನಾರಿಕೇಳಾಮೃತಂ: ಬಲಿತ ತೆಂಗಿನಕಾಯಿಯಲ್ಲಿ ಲವಣವನ್ನು ತುಂಬಿ ಅಗ್ನಿ ಸಂಸ್ಕಾರ ಮಾಡಿ ಶೇಖರಿಸುವ ವಿಶೇಷ ಉಪ್ಪನ್ನು ಬಳಸುವುದರಿಂದ ಜಾಠರಾಗ್ನಿಯ ವೈಪರೀತ್ಯದಿಂದುಂಟಾಗುವ ಕರುಳಿನ ಹುಣ್ಣುಗಳ ಮೇಲೆ ಸತ್ಪರಿಣಾಮವನ್ನುಂಟು ಮಾಡುವುದೆಂದು ತಿಳಿಯಬಹುದಾಗಿದೆ.

ಖರ್ಜೂರಾದಿ ಮಂಥ: ಖರ್ಜೂರ, ದ್ರಾಕ್ಷಿ, ದಾಳಿಂಬೆ ಇತ್ಯಾದಿಗಳನ್ನು ವಿಶೇಷವಾಗಿ ಬೆರೆಸಿ ತಯಾರಿಸಲಾದ ಖರ್ಜೂರಾದಿ ಮಂಥವನ್ನು ಅತಿ ಮದ್ಯಪಾನದಿಂದುಂಟಾದ ತೊಂದರೆಗಳಲ್ಲಿ ಔಷಧಾಹಾರವಾಗಿ ವಿವರಿಸಲಾಗಿದೆ. ಇದು ಔಷಧವಾಗಿಯೂ, ಪುಷ್ಟಿದಾಯಕ ಆಹಾರವಾಗಿಯೂ ತಿಳಿಸಲಾಗಿದೆ.

ದೇಹದ ತೂಕವನ್ನಿಳಿಸಲು ಬಳಸಬೇಕಾದಂಥಹ ಆಹಾರಗಳು ಬೇರೆ ಧಾತುಗಳಿಗೆ ತೊಂದರೆಯಾಗದಂತೆ ಬರೀ ಕೊಬ್ಬನ್ನು ಕಡಿಮೆ ಮಾಡುತ್ತದೆ.

ಹುಟ್ಟಲಿರುವ ಮಗುವಿಗೆ, ಗರ್ಭಿಣಿಗೆ, ಪ್ರಸೂತಾ ಸ್ತ್ರೀಗೆ ಆಹಾರೌಷಧಗಳನ್ನು ತಿಳಿಸಲಾಗಿದೆ.

ಗರ್ಭಿಣಿ ಆಹಾರ: ಗರ್ಭಿಣಿ ಸೇವಿಸುವ ಆಹಾರ, ಆಹಾರ ಸೇವಿಸುವಾಗಿನ ಮನಸ್ಥಿತಿ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ಪ್ರತೀ ಗರ್ಭಿಣಿಗೂ ವಿಶಿಷ್ಟ ಆಹಾರ, ಜೀವನ ಶೈಲಿಯನ್ನು ತಿಳಿಸಲಾಗಿದೆ.

ಮಾದೀಫಲ ರಸಾಯನ:ಮಾದೀಫಲ, ಮೆಣಸು, ಹಿಪ್ಪಲಿ, ಜೇನುತುಪ್ಪ, ಕಲ್ಲುಸಕ್ಕರೆ ಇತ್ಯಾದಿಗಳನ್ನು ಸಮಂಜಸವಾಗಿ ಬೆರೆಸಿ ತಯಾರು ಮಾಡಲಾಗುತ್ತದೆ. ಗರ್ಭಿಣಿಗೆ ಉಂಟಾಗಬಹುದಾದಂಥಹ ವಾಕರಿಕೆ, ವಾಂತಿ ಇತ್ಯಾದಿಗಳನ್ನು ತಡೆಯಬಹುದಾದಂಥಹ ಗರ್ಭಿಣಿಗೆ ಪೌಷ್ಟಿಕಾಂಶಗಳನ್ನು ಕೊಡುವುದಲ್ಲದೆ ಗರ್ಭಸ್ಥ ಶಿಶುವಿಗೂ ಪೋಷಣೆಯನ್ನೊದಗಿಸುತ್ತದೆ. ಎಫ್.ಡಿ.ಎ ಇದನ್ನು ಲಾಭದಾಯಕ, ಹಾನಿಕರವಲ್ಲವೆಂದು ಅನುಮೋದಿಸಿದೆ. ಗರ್ಭಿಣಿಯ ಅನೇಕ ತೊಂದರೆಗಳನ್ನು ಇದು ಹೋಗಲಾಡಿಸುವುದಲ್ಲದೇ, ಮಲಬದ್ಧತೆ, ವಾಂತಿ, ಯಕೃತ್ ತೊಂದರೆಗೊಳು, ಅಜೀರ್ಣ ಇತ್ಯಾದಿ ತೊಂದರೆಗೊಳಪಟ್ಟವರೂ ಕೂಡ ಈ ವಿಶೇಷ ಆಹಾರೌಷಧವನ್ನು ಬಳಸಬಹುದಾಗಿದೆ.

ಘೃತ / ತುಪ್ಪ: ದಿನನಿತ್ಯ ತುಪ್ಪವನ್ನು ಬಳಸುವುದು ಭಾರತೀಯ ಆಹಾರ ಪದ್ಧತಿಯ ವೈಶಿಷ್ಟ್ಯ. "ಸಾಲ ಮಾಡಿಯಾದರೂ ತುಪ್ಪ ತಿನ್ನು"ಎಂಬ ಜಾಣ್ನುಡಿಯಿದೆ. ತುಪ್ಪವು ಆಯಸ್ಸನ್ನು ವರ್ಧಿಸುತ್ತದೆ, ಇಂದ್ರಿಯಗಳ ಪಟುತ್ವವನ್ನು ಹೆಚ್ಚಿಸುತ್ತದೆ, ಬುದ್ಧಿ ಹಾಗೂ ಮನಸ್ಸಿನ ಸರ್ವತೋಮುಖ ಶ್ರೇಷ್ಠತೆಗೆ ಕಾರಣವಾಗುತ್ತದೆ, ಸ್ಥಿರ ಯೌವ್ವನವನ್ನು ಕಾಪಾಡಿಕೊಳ್ಳಲು ಸಹಾಯಕ, ಚರ್ಮದ ಕಾಂತಿ ಹಾಗು ಸೌಕುಮಾರ್ಯವನ್ನು ಉಳಿಸಿಕೊಡುತ್ತದೆ – ಇತ್ಯಾದಿ ಅನೇಕ ಉಪಯುಕ್ತತೆಯನ್ನು ಹೇಳಲಾಗಿದೆ. ಬೇರೆ ಬೇರೆ ಪ್ರಾಣಿಗಳ ತುಪ್ಪವನ್ನು, ಅವುಗಳ ಗುಣ, ಕರ್ಮವನ್ನು ಕಂಡುಕೊಂಡಿದ್ದರಲ್ಲದೆ, ಆಹಾರೌಷಧಿಯಾಗಿ ಔಷಧೀಯ ತುಪ್ಪವನ್ನು ಅನೇಕ ರೋಗಗಳಲ್ಲಿ ರೋಗ ಪರಿಹಾರಾರ್ಥವಾಗಿ ಮತ್ತು ರೋಗ ತಡೆಗಟ್ಟುವಿಕೆಗಾಗಿ, ಸೂಕ್ತವಾಗಿ ಬಳಸಬಹುದಾಗಿದೆ.

ರಸಾಯನ– ಆಯುರ್ವೇದದಲ್ಲಿ ಹೇಳಲಾಗಿರುವ ಅತ್ಯುತ್ತಮ ನ್ಯೂಟ್ರಾಸುಟಿಕಲ್

ಪರಮೋತ್ಕೃಷ್ಟ ಆರೋಗ್ಯ ಸಿದ್ಧಿಸಿ ಕಾಪಾಡಿಕೊಳ್ಳಲು ಅಥವಾ ರೋಗ ಬಂದರೆ ಹೋಗಲಾಡಿಸುವ ಶಕ್ತಿ ಇರುವಂತಹ, ಆಹಾರಕ್ಕಿಂತ ಪುಷ್ಟಿದಾಯಕವಾಗಿರುವ, ಪರಿಪೂರ್ಣ ಸ್ವಾಸ್ಥ್ಯ ಹೊಂದಿ, ಮುಪ್ಪನ್ನು ತಡೆಗಟ್ಟುವ ನೂರಾರು ಗುಣಗಳನ್ನು ಹೊಂದಿರುವ ಈ ವಿಶಿಷ್ಟ ಔಷಧ ಆಯುರ್ವೇದದಲ್ಲಿ ತಿಳಿಸಲಾಗಿರುವ ಅತ್ಯಮೂಲ್ಯ ನ್ಯೂಟ್ರಾಸುಟಿಕಲ್.

ಕ್ರ. ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಿಗೆ ಸೂಚಿಸಲಾಗಿದೆ
೧	ಬ್ರಾಹ್ಮೀ ಘೃತ (ಬುದ್ಧಿ, ನೆನಪಿನ ಶಕ್ತಿ ವರ್ಧನೆಗೆ)	ಚ.ಚಿ.	ಬ್ರಾಹ್ಮೀ, ವಚಾ, ಕುಷ್ಟ, ಶಂಖಪುಷ್ಪಿ, ಪುರಾಣ ಘೃತ	ಉನ್ಮಾದ, ಅಪಸ್ಮಾರ
೨	ಸುಕುಮಾರ ಘೃತ (ಜಠರಾಗ್ನಿ ವಿಕಾರ ತಡೆಗಟ್ಟಲು)	ಭೈ.ರ.	ದಶಮೂಲ, ಶತಾವರಿ, ಅಮೃತಬಳ್ಳಿ, ಬೆಲ್ಲ, ದ್ರಾಕ್ಷಿ ಇತ್ಯಾದಿ	ಮೂತ್ರ ವಿಕಾರ, ಸೊಂಟನೋವು, ಯೋನಿಶೂಲ
೩	ತ್ರಿಫಲಾ ಘೃತ (ನೇತ್ರ ಆರೋಗ್ಯಕರ)	ಭೈ.ರ.	ತ್ರಿಫಲಾ, ಕ್ಷೀರ, ಘೃತ	ನೇತ್ರ ರೋಗ.
೪	ಚಾಂಗೇರಿ ಘೃತ (ಗುದರೋಗಗಳನ್ನು ತಡೆಗಟ್ಟಲು)	ಭೈ.ರ.	ಚಾಂಗೇರಿ, ಗೋಘೃತ, ಕೋಲ, ದಧಿ, ಶುಂಠಿ	ಗುದಭ್ರಂಶ
೫	ಶತಾವರಿ ಘೃತ (ಗರ್ಭಿಣಿ, ಪ್ರಸೂತಾ ಸ್ತ್ರೀಯರಿಗೆ)	ಚ.ದ.	ಶತಾವರಿ ಮೂಲ, ಘೃತ, ಕ್ಷೀರ	ಆಮ್ಲಪಿತ್ತ, ತೃಷ್ಣ, ರಕ್ತಪಿತ್ತ
೬	ದ್ರಾಕ್ಷಾ ಘೃತ (ರಕ್ತ ಪುಷ್ಟಿ)	ಚ.ದ.	ದ್ರಾಕ್ಷಿ, ಪುರಾಣ ಘೃತ	ಕಾಮಾಲೆ, ರಕ್ತಹೀನತೆ, ಜ್ವರ, ಮೇಹ, ಉದರ
೭	ಚಿತ್ರಕ ಘೃತ	ಚ.ಚಿ.	ಚಿತ್ರಕ ಮೂಲ, ಗೋಘೃತ	ಊತ, ಮೊಳಕೆರೋಗ, ಭೇದಿ, ಮಧುಮೇಹ

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧	ಭೃಗು ರಸಾಯನ (ರೋಗ ಪ್ರತಿಬಂಧಕವಾಗಿ)	ಭೈ.ರ.	ಆಮಲಕಿ, ಅಮೃತ, ಅಳಲೇಕಾಯಿ, ಮಧು, ಗೋಕ್ಷುರ, ಕೇಸರ, ಹಿಪ್ಪಲಿ ಇತ್ಯಾದಿ	ಶ್ವಾಸ, ಕಾಸ, ಹೃದ್ರೋಗ, ಉರೋರೋಗ, ವಾತರಕ್ತ
೨	ಕೂಷ್ಮಾಂಡ ಅವಲೇಹ (ಬಲ ಧಾತು ಪುಷ್ಟಿ)	ಭೈ.ರ.	ಕೂಷ್ಮಾಂಡ ಫಲ, ಗೋಕ್ಷೀರ, ಮಧು, ನಾರಿಕೇಲ ಜಲ, ಆತ್ಮಗುಪ್ತ ಇತ್ಯಾದಿ	ರಕ್ತಪಿತ್ತ, ಆಮ್ಲಪಿತ್ತ, ವಿಸರ್ಪ, ಉಪದಂಶ, ಕಾಮಲ, ಪಾಂಡು, ವಿಷಮಜ್ವರ
೩	ದ್ರಾಕ್ಷಾದಿ ಲೇಹ	ಚ.ದ.	ದ್ರಾಕ್ಷಿ, ಆಮಲಕಿ, ಖರ್ಜೂರ, ಹಿಪ್ಪಲಿ, ಮರೀಚ, ಮಧು	ಪಿತ್ತಜ ಕಾಸ
೪	ಖರ್ಜೂರಾದಿ ಲೇಹ	ಚ.ದ.	ಖರ್ಜೂರ, ಹಿಪ್ಪಲಿ, ದ್ರಾಕ್ಷಿ, ಲಾಜಾ, ಮಧು, ಘೃತ	ಪಿತ್ತಜ ಕಾಸ
೫	ಆಮಲಕಾವಲೇಹ	ಚ.ಚಿ.	ಆಮಲಕಿ, ಹಿಪ್ಪಲಿ, ಮಧು, ಶರ್ಕರ, ಘೃತ	ಉತ್ತಮ ರಸಾಯನ

ಕ್ವಾಥ / ಕಷಾಯ: ಸುಮಾರು ಆರೇಳು ದಶಕಗಳಿಂದ ಭಾರತೀಯರಲ್ಲಿ ಮುಂಜಾನೆ ಕುಡಿಯುವ ಪಾನೀಯ ಬದಲಾಗಿರುವುದು ಸತ್ಯ. ಬಹಳ ಹಿಂದಿನಿಂದಲೂ ಪುಷ್ಟಿದಾಯಕ ಪಾನೀಯ ಹಾಲು – ಕಷಾಯಗಳನ್ನು ಮನೆಮಂದಿಯೆಲ್ಲಾ ಸೇವಿಸುತ್ತಿದ್ದುದು ಈಗ ಬದಲಾಗಿದೆ. ಜೀರಿಗೆ, ಕೊತ್ತಂಬರಿ, ಲವಂಗ, ಏಲಕ್ಕಿ, ಅತಿಮಧುರ, ಬೆಲ್ಲ ಇತ್ಯಾದಿಗಳನ್ನು ಹಿತವಾಗಿ ಹಾಲಿನಲ್ಲಿ ಕಾಯಿಸಿ ಕುಡಿಯಲಾಗುತ್ತಿತ್ತು. ಇವುಗಳು ಮನಸ್ಸಿಗೆ ಆಹ್ಲಾದಕರವಾಗಿದ್ದು ಆರೋಗ್ಯ ವೃದ್ಧಿಗೆ ಬಹಳ ಸಹಕಾರಿಯಾಗಿರುತ್ತಿತ್ತು. ದಿನನಿತ್ಯ ಆಹಾರದಲ್ಲಿ ಯಥೇಚ್ಚವಾಗಿ ಬಳಸುವ ಕೊತ್ತಂಬರಿಸೊಪ್ಪು, ಕರಿಬೇವಿನ ಸೊಪ್ಪು, ಅರಿಶಿನ, ಬೆಳ್ಳುಳ್ಳಿ, ಹಿಂಗು, ತೆಂಗಿನಕಾಯಿ ಮತ್ತಿತರೆ ಮಸಾಲೆ ಪದಾರ್ಥಗಳು ಕ್ಯಾನ್ಸರ್‌ನಂಥಹ ರೋಗಗಳನ್ನು ತಡೆಗಟ್ಟಲು ಯಶಸ್ವಿಯಾದ ಆಹಾರಗಳು.

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧.	ನಾಗರ ಕ್ವಾಥ (ಹೃದಯದ ಆರೋಗ್ಯಕ್ಕಾಗಿ)	ಭ.ದ.	ಶುಂಠಿ, ಜಲ	ಹೃದ್ರೋಗ, ಕಾಸ, ಶ್ವಾಸ, ಶೂಲ
೨	ಧಾನ್ಯಕ ಕ್ವಾಥ (ಜಠರದ ಆರೋಗ್ಯಕ್ಕಾಗಿ)	ಚ.ದ.	ಕೊತ್ತಂಬರಿಬೀಜ, ಶುಂಠಿ,ಜಲ	ಬಹುಬಗೆಯ ದ್ರವಮಲ ಪ್ರವೃತ್ತಿ
೩	ಪಿಪ್ಪಲಿ ಜಲ (ಜೀರ್ಣಶಕ್ತಿ ಹೆಚ್ಚಿಸಲು)	ಚ.ದ.	ಹಿಪ್ಪಲಿ, ಜಲ	ವಾತಕಫ ವಿಕಾರ, ಜ್ವರ

ಖಂಡ ಕಲ್ಪನ:

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧	ಹರಿದ್ರಾ ಖಂಡ	ಭೈ.ರ.	ಪಾರಿಭದ್ರ, ಸಿತಾ, ಘೃತ, ಹರಿದ್ರಾ, ದಾರ್ವೀ, ವಿಡಂಗ, ಸಾರಿವ, ಮುಸ್ತ ಮುಂತಾದವು	ಕ್ರಿಮಿ, ವ್ರಣ, ಕುಷ್ಠ,ಚರ್ಮದ ಸುಕ್ಕು, ಬಾಲನೆರೆ, ಕಾಮಲಾ ಇತ್ಯಾದಿ
೨	ನಾರಿಕೇಳಖಂಡ (ಪಿತ್ತ ಶಾಮಕ)	ಭೈ.ರ.	ನಾರಿಕೇಳ ಫಲ, ಸರ್ಪಿ, ಪಯ, ಗುಡ,ಧಾನ್ಯಕ, ಹಿಪ್ಪಲಿ, ಜೀರಕ ದ್ವಯ	ಅಮ್ಲಪಿತ್ತ, ಬಾಯಿರುಚಿ ಇಲ್ಲದಿರುವುದು, ಕ್ಷಯ, ರಕ್ತಪಿತ್ತ

ಮಂಥ ಕಲ್ಪನ:

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧	ಖರ್ಜೂರಾದಿ ಮಂಥ (ಬಲ ಧಾತು ವರ್ಧಕ)	ಚ.ದ.	ಖರ್ಜೂರ, ದ್ರಾಕ್ಷಿ, ದಾಡಿಮ, ಆಮಲಕಿ ಮುಂತಾದವು	ಅತಿ ಮದ್ಯಪಾನದಿಂದ ಉಂಟಾದ ರೋಗ
೨	ಪಿಪ್ಪಲ್ಯಾದಿ ಮಂಥ (ಜೀರ್ಣಶಕ್ತಿ ಹೆಚ್ಚಿಸಲು)	ಚ.ದ.	ಹಿಪ್ಪಲಿ, ಶರ್ಕರ, ಕ್ಷೀರ, ಘೃತ, ಕ್ಷೌದ್ರ	ವಿಷಮಜ್ವರ

ಕ್ಷೀರಪಾಕ:

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧	ಲಶುನ ಕ್ಷೀರಪಾಕ	ಚ.ಚಿ.	ಲಶುನ, ಕ್ಷೀರ, ಜಲ	ವಾತಗುಲ್ಮ, ಉದಾವರ್ತ, ವಿಷಮಜ್ವರ, ಹೃದ್ರೋಗ
೨	ಅರ್ಜುನ ಕ್ಷೀರಪಾಕ		ಅರ್ಜುನ ತ್ವಕ್, ಪಯ, ಜಲ	ಹೃದ್ರೋಗ

ಪೇಯ:

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧	ಪಂಚಕೋಲ ಪೇಯ	ಚ.ಚಿ.	ಪಂಚಕೋಲ	ಅಜೀರ್ಣ
೨	ಲಾಜಾ ಪೇಯ	ಚ.ದ.	ಲಾಜಾ, ಜಲ, ಪಿಪ್ಪಲಿ, ನಾಗರ	ಜ್ವರ, ಅಗ್ನಿಮಾಂದ್ಯ

ಸಕ್ತು, ವಿಲೇಪಿ, ತಕ್ರಾರಿಷ್ಟ,ಕುಲ್ಮಾಷ, ಮಾಂಸ ಪ್ರಯೋಗದಲ್ಲಿ ಮಾಂಸರಸ, ವೇಶಾವರ, ಪುಪೂಲಿಕ ಮುಂತಾದವು ಹೀಗೆ ಹಲವು ಬಗೆಯ ಆಹಾರ ವೈವಿಧ್ಯಗಳನ್ನು ವಿವರಿಸಲಾಗಿದೆ.
ಹೀಗೆ ಆಯುರ್ವೇದೋಕ್ತ ರೀತಿಯ ದಿನನಿತ್ಯ ಬಳಸುವ ಆಹಾರ ವೈವಿಧ್ಯಗಳನ್ನು ತಯಾರಿಸುವಾಗ ಉಪಯೋಗಿಸುವ ಮೆಣಸು, ಶುಂಠಿ, ಅರಿಶಿಣ, ಈರುಳ್ಳಿ, ಬೆಳ್ಳುಳ್ಳಿ ಇತ್ಯಾದಿ ದ್ರವ್ಯಗಳೂ ಸಹ ಅತೀ ಮಹತ್ವದ ಔಷಧೀಯ ಗುಣಗಳನ್ನು ಹೊಂದಿದೆ. ಇದಕ್ಕೆ ಪೂರಕವಾಗಿ ನಡೆಸಿರುವಸಂಶೋಧನೆಗಳ ದಾಖಲೆಗಳು ನಮಗೆ ಲಭ್ಯವಿದೆ.

ಉಪಸಂಹಾರ : ಆಯುರ್ವೇದದಲ್ಲಿ "ವಯಃ ಪ್ರಕೃತಿ ಸಾತ್ಮ್ಯಜ್ಞ"ಎಂಬುವ ಸಂಸ್ಕೃತ ಪದ ಯಾವ ವಯಸ್ಸಿಗೆ(ಬಾಲ, ಕೌಮಾರ್ಯ, ಯೌವ್ವನ, ವೃದ್ಧಾಪ್ಯ ಇತ್ಯಾದಿ), ಪ್ರಕೃತಿ(ವಾತ, ಪಿತ್ತ, ಕಫ ಇತ್ಯಾದಿ), ಸಾತ್ಮ್ಯ(ನಮಗೆ ಒಗ್ಗಿರುವಂಥಹ ಆಹಾರ. ಉದಾ: ದಿನಾ ಹಾಲು, ತುಪ್ಪ, ಮಜ್ಜಿಗೆ, ಬೆಣ್ಣೆ ಸೇವಿಸುವುದು). 'ಜ್ಞ'ಎಂದರೆ ತಿಳಿದಿರುವವನು, ಇವುಗಳೆಲ್ಲದರ ಬಗ್ಗೆ ಜ್ಞಾನ ಹೊಂದಿರುವವನು. ಇಷ್ಟೆಲ್ಲವನ್ನರಿತ ಆಚಾರ್ಯರು ತಿಳಿಸಿರುವ ಆಹಾರ ಪದ್ಧತಿಯನ್ನು ಪಾಲಿಸಿದರೆ "ಊಟ ಬಲ್ಲವನಿಗೆ ರೋಗವಿಲ್ಲ" ಎನ್ನುವ ಜಾಣ್ನುಡಿಗೆ ,"ನ್ಯೂಟ್ರಾಸುಟಿಕಲ್ಸ್ ಬಲ್ಲವನಿಗೆ ರೋಗವಿಲ್ಲ" ಎನ್ನಬಹುದೇ.

ಉಲ್ಲೇಖಗಳು:

ಚರಕ ಸಂಹಿತ – ಸೂತ್ರಸ್ಥಾನ – ೫, ೨೫, ೨೭, ೨೮ ನೇ ಅಧ್ಯಾಯಗಳು
ಚರಕ ಸಂಹಿತ – ಚಿಕಿತ್ಸಾಸ್ಥಾನ –೨, ೫, ೧೫ ನೇ ಅಧ್ಯಾಯಗಳು
ಸುಶ್ರುತ ಸಂಹಿತ – ಸೂತ್ರಸ್ಥಾನ – ೪೬ ನೇ ಅಧ್ಯಾಯ
ಅಷ್ಟಾಂಗ ಹೃದಯ
ಚಕ್ರದತ್ತ
ಭೈಷಜ್ಯ ರತ್ನಾವಳಿ
ಕ್ಷೇಮ ಕುತೂಹಲ

ಸಂಕ್ಷಿಪ್ತ ರೂಪ :

ಚ.ದ. – ಚಕ್ರದತ್ತ
ಚ. – ಚರಕ ಸಂಹಿತ
ಸು. – ಸುಶ್ರುತ ಸಂಹಿತ
ಸೂ. – ಸೂತ್ರಸ್ಥಾನ
ಚಿ.– ಚಿಕಿತ್ಸಾ ಸ್ಥಾನ
ಭೈ.ರ. – ಭೈಷಜ್ಯ ರತ್ನಾವಳಿ

ಅಜ್ಜಿಯ ವಯಸ್ಸು ಮೊಮ್ಮಕ್ಕಳ ಆರೋಗ್ಯ – ಎತ್ತಣಿಂದ ಎತ್ತಣ ಸಂಬಂಧವಯ್ಯ

ಡಾ. ಮಾಲಿನಿ ಎಸ್. ಎಸ್

ಸಹಾಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಜಾಗತೀಕರಣವು ನಮ್ಮ ದೇಶದ ಆರ್ಥಿಕ ಸಾಮಾಜಿಕ, ಶೈಕ್ಷಣಿಕ ವೈಜ್ಞಾನಿಕ ಕ್ಷೇತ್ರದ ಮೇಲೆ ಪ್ರಭಾವ ಬೀರಿರುವುದರ ಪರಿಣಾಮವಾಗಿ ಇಂದು ನಾವು ವೈಜ್ಞಾನಿಕ ಮುನ್ನಡೆ ನಡೆಸಿ ಸಾಂಕ್ರಾಮಿಕ ರೋಗಗಳ ಮೇಲೆ ಹಿಡಿತ ಸಾಧಿಸಿದರೂ ಸಹ ಬಹುವಿಧ ಅಸ್ವಸ್ಥತೆಗಳಾದ ಮಾನಸಿಕ ತೊಂದರೆಗಳು, ಮಧುಮೇಹ, ಕ್ಯಾನ್ಸರ್, ಬೊಜ್ಜು ಹಾಗೂ ಅನೇಕ ರೀತಿಯ ರೋಗಗಳನ್ನು ನಿಯಂತ್ರಿಸಲು ಹೆಣಗುತ್ತಿದ್ದೇವೆ. ಕಾರಣ ಬದಲಾದ ನಮ್ಮ ಜೀವನ ಶೈಲಿ. ವೈಯಕ್ತಿಕ ಬೆಳವಣಿಗೆಗಳಿಗೆ, ಸಾಧನೆಗಳಿಗೆ ಗಮನ ಹರಿಸುತ್ತಿರುವ ನಾವು ನಮ್ಮ ಮುಂದಿನ ಪೀಳಿಗೆಯನ್ನು ಕತ್ತಲಿನೆಡೆಗೆ ದೂಡುತ್ತಿರುವುದರ ಪರಿವೆಯೇ ನಮಗಿಲ್ಲ. ಇದರ ಒಂದು ಫಲಿತಾಂಶವೇ ಹೆಚ್ಚುತ್ತಿರುವ ದೈಹಿಕ ಹಾಗೂ ಮಾನಸಿಕ ಕಾಯಿಲೆಗಳು. ಮುಂದುವರೆದ ದೇಶಗಳಾದ ಅಮೇರಿಕಾ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಮುನ್ನಡೆಯುಲ್ಲಿರುವ ವೈದ್ಯಕೀಯ ಸಂಶೋಧನೆ ಹಾಗೂ ಸವಲತ್ತಿನಿಂದಾಗಿ ತಂದೆ ತಾಯಿಗಳು ಆರೋಗ್ಯವಂತ ಮಗುವನ್ನು ಪಡೆಯುವ ಸಾಧ್ಯತೆ ಅಧಿಕ. ಆದರೆ ನಾವಿನ್ನೂ ಆ ಮಟ್ಟವನ್ನು ತಲುಪಿಲ್ಲ. ಇಂದು ಸಹ ನಮ್ಮ ದೇಶದಲ್ಲಿ ನವಜಾತ ಶಿಶುಗಳಲ್ಲಿ ವರ್ಣತಂತುಗಳ ವ್ಯತ್ಯಯದ ಕಾಯಿಲೆಗಳು, ಅಂಗ ವಿಕಲತೆ, ಹೃದಯ ಸಂಬಂಧಿ ಕಾಯಿಲೆಗಳು, ಬುದ್ಧಿ ಮಾಂದ್ಯತೆ ಮುಂತಾದ ತೊಂದರೆಗಳು ಸಾಮಾನ್ಯವಾಗಿರುತ್ತವೆ.

ವರ್ಣತಂತುಗಳ ವ್ಯತ್ಯಯದ ಅಸ್ವಸ್ಥತೆಗಳಿಗೆ ಕಾರಣಗಳು ಹಲವಾರು. ಅರಿವಿದ್ದೋ ಅರಿವಿಲ್ಲದೆಯೋ ಅತಿನೇರಳೆ ಕಿರಣಗಳ ಹೀರುವಿಕೆ, ಕಲಬೆರಕೆ ಆಹಾರ ಮುಖ್ಯವಾಗಿ ವಿಷಯುಕ್ತ ರಾಸಾಯನಿಕ ಪದಾರ್ಥಗಳ ಸೇವನೆ, ಧೂಮಪಾನ, ಮದ್ಯಪಾನ, ರಕ್ತಸಂಬಂಧದ ವಿವಾಹಗಳು ದ್ವಿತೀಯ ಹಂತದ ಕಾರಣಗಳಾದರೆ ತಂದೆ ತಾಯಿಗಳ ವಯಸ್ಸಿನ ಹೆಚ್ಚಳ ವರ್ಣತಂತುಗಳ ಅಸ್ವಸ್ಥತೆಗಳಿಗೆ ಮೂಲ ಕಾರಣವಾಗಿದೆ. ಆದ್ದರಿಂದ ಮೂವತ್ತೈದು ವರ್ಷ ಮೇಲ್ಪಟ್ಟ ದಂಪತಿಗಳು ಅಸ್ವಸ್ಥ ಮಕ್ಕಳನ್ನು ಪಡೆಯುವ ಸಾಧ್ಯತೆ ಅಧಿಕವಾಗಿರುತ್ತದೆ. ವರ್ಣತಂತುಗಳ ವ್ಯತ್ಯಯಕ್ಕೆ ತಂದೆ ತಾಯಿಗಳ ವಯಸ್ಸು ಹೇಗೆ ಕಾರಣವಾಗುತ್ತದೆ? ಅಜ್ಜಿಯ ವಯಸ್ಸಿನ ಹೆಚ್ಚಳಕ್ಕೂ ಅಸ್ವಸ್ಥ ಮೊಮ್ಮಕ್ಕಳ ಜನನಕ್ಕೂ ಇರುವ ಸಂಬಂಧವೇನು? ಹಾಗಾದರೆ ಈ ಸಮಸ್ಯೆಗೆ ಪರಿಹಾರವೇನು? ಮುಂತಾದುವುಗಳ ಕುರಿತು ಸಮ್ಮೇಳನದಲ್ಲಿ ಈ ಪ್ರಬಂಧದ ಮೂಲಕ ಚರ್ಚಿಸಲಾಗುವುದು.

ವರ್ಣತಂತುಗಳ ವ್ಯತ್ಯಯದ ಕಾಯಿಲೆಗಳ ಮೂಲ ಕಾರಣಗಳು: ವರ್ಣತಂತುಗಳ ವ್ಯತ್ಯಯದ ಅಸ್ವಸ್ಥತೆಗಳಿಗೆ ಕಾರಣಗಳು ಹಲವಾರು. ಅರಿವಿದ್ದೋ ಅರಿವಿಲ್ಲದೆಯೋ ಅತಿನೇರಳೇ ಕಿರಣಗಳ ಸೋಂಕು, ಕಲಬೆರಕೆ ಆಹಾರ, ಮುಖ್ಯವಾಗಿ ವಿಷಯುಕ್ತ ರಾಸಾಯನಿಕ ಪದಾರ್ಥಗಳ ಸೇವನೆ, ಧೂಮಪಾನ, ಮದ್ಯಪಾನ, ರಕ್ತಸಂಬಂಧದ ವಿವಾಹಗಳು ದ್ವಿತೀಯ ಹಂತದ ಕಾರಣಗಳಾದರೆ ತಂದೆ ತಾಯಿಗಳ ವಯಸ್ಸಿನ ಹೆಚ್ಚಳ ವರ್ಣತಂತುಗಳ ಅಸ್ವಸ್ಥತೆಗಳಿಗೆ ಮೂಲ ಕಾರಣ ವಾಗಿದೆ. ಆದ್ದರಿಂದ ಮೂವತ್ತೈದು ವರ್ಷ ಮೇಲ್ಪಟ್ಟ ದಂಪತಿಗಳು ಅಸ್ವಸ್ಥ ಮಕ್ಕಳನ್ನು ಪಡೆಯುವ ಸಾಧ್ಯತೆ ಅಧಿಕವಾಗಿರುತ್ತದೆ.

ವರ್ಣತಂತುಗಳ ವ್ಯತ್ಯಯಕ್ಕೆ ತಂದೆ ತಾಯಿಗಳ ವಯಸ್ಸು: ತಾಯಿಯ ವಯಸ್ಸು ಹೆಚ್ಚಾದಾಗ ಹುಟ್ಟುವ ಮಕ್ಕಳಲ್ಲಿ ಅಂಗ ವೈಕಲ್ಯತೆ, ಬುದ್ಧಿ ಮಾಂದ್ಯತೆ, ವರ್ಣತಂತುಗಳ ವ್ಯತ್ಯಯವಿರುವುದು ಈಗಾಗಲೇ ವೈದ್ಯಕೀಯ ಸಂಶೋಧನೆಗಳಿಂದ ದೃಢಪಟ್ಟಿರುವ ಸಂಗತಿ. ಉದಾಹರಣೆ ಡೌನ್ಸ್ ಸಿಂಡ್ರೋಮ್, ಟರ್ನರ್, ಕ್ಲೈನ್ ಫಿಲ್ಟರ್, ಕ್ರೈ-ಡು-ಕ್ಯಾಟ್ ಮುಂತಾದ ಅಸ್ವಸ್ಥತೆಗಳು ವಯಸ್ಸಾದ ತಂದೆ ತಾಯಿಯರು ಜನುಮ ನೀಡುವ ಮಕ್ಕಳಲ್ಲಿ ಸಾಮಾನ್ಯವಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ತಾಯಿಯಲ್ಲಿ ಮಿಯಾಟಿಕ್ ಕೋಶ ವಿಭಜನೆ ನಡೆಯುವಾಗ ವರ್ಣತಂತುಗಳು ಸಮ ಸಂಖ್ಯೆಯಲ್ಲಿ ಎರಡು ವಿರುದ್ಧ ದಿಕ್ಕಿನೆಡೆಗೆ ಸಾಗುತ್ತವೆ. ಇದರಿಂದ ಎರಡು ಆರೋಗ್ಯಕರವಾದ ಜೀವಕೋಶಗಳು ಬೆಳವಣಿಗೆಯಾಗುತ್ತವೆ. ಈ ಕೋಶವಿಭಜನೆ ಕರಾರುವಕ್ಕಾಗಿ ನಡೆಯ ಬೇಕಾದರೆ ಸ್ಪಿಂಡಲ್ ಎಳೆಗಳ ಪಾತ್ರ ಅತಿ ಮುಖ್ಯವಾದುದು. ಈ ಸ್ಪಿಂಡಲ್ ದಾರಗಳು ವರ್ಣತಂತುಗಳ ಮಧ್ಯ ಭಾಗವನ್ನು ಕಚ್ಚಿ ಹಿಡಿದು ಒಂದೇ ವೇಗದಲ್ಲಿ ಎಳೆಯುವುದರಿಂದ ಬಹುಶಃ ವರ್ಣತಂತುಗಳು ಸರಿಯಾದ ಕ್ರಮದಲ್ಲಿ ಸಂಖ್ಯೆಯಲ್ಲಿ ಹೊಸ ಜೀವ ಪಡೆಯುತ್ತಿರುವ ಜೀವಕೋಶಗಳಲ್ಲಿ ಹಂಚಿಕೆಯಾಗುತ್ತದೆ. ವಯಸ್ಸಾದ ತಾಯಂದಿರಲ್ಲಿ ಸ್ಪಿಂಡಲ್ ದಾರ ಅಥವಾ ಸ್ಪಿಂಡಲ್ ಎಳೆಗಳ ಉತ್ಪಾದನೆಗೆ ಬೇಕಾದ ಪ್ರೋಟೀನ್‌ಗಳ ಕೊರತೆಯಿರುತ್ತದೆ, ಆದ್ದರಿಂದ ವರ್ಣತಂತುಗಳು ಜೀವ ಪಡೆಯುತ್ತಿರುವ ಹೊಸ ಕೋಶಗಳಲ್ಲಿ ಸಮ ಸಂಖ್ಯೆಯಲ್ಲಿ ಹಂಚಿಕೆಯಾಗದೆ ಒಂದು ಕೋಶದಲ್ಲಿ ಹೆಚ್ಚು ಮತ್ತೊಂದು ಕೋಶದಲ್ಲಿ ಕಡಿಮೆಯಾಗುವುದರಿಂದ ವರ್ಣತಂತುಗಳ ಹಂಚಿಕೆಯಲ್ಲಿ ಅಪಸಾಮ್ಯತೆಯುಂಟಾಗಿ ಅನಾರೋಗ್ಯದಿಂದ ಕೂಡಿದ ಜೀವ ಕೋಶಗಳ ಉತ್ಪಾದನೆಯಾಗುತ್ತದೆ. ಇವು ಅಂಡಾಣುವಾಗಿರಬಹುದು ಅಥವಾ ವೀರ್ಯಾಣುವಾಗಿರಬಹುದು, ಇಂತಹ ಅಂಡಾಣುಗಳು ವೀರ್ಯಾಣುಗಳ ಜೊತೆ ಸೇರಿ ಬುದ್ಧಿಮಾಂದ್ಯ ಮಕ್ಕಳ ಹುಟ್ಟಿಗೆ ಕಾರಣವಾಗುತ್ತವೆ.

ಇದೇ ರೀತಿ ವಯಸ್ಸಾದ ಗಂಡಸರಲ್ಲಿ ವೀರ್ಯಾಣುಗಳ ಉತ್ಪಾದನೆಯ ಸಮಯದಲ್ಲಿ ನಡೆಯುವ ಮಿಯಾಟಿಕ್ ಕೋಶ ವಿಭಜನೆಯ ಕ್ರಮದಲ್ಲಿ ಏರು ಪೇರು ಉಂಟಾದಾಗ ಹೆಚ್ಚಿನ ವರ್ಣತಂತುಗಳನ್ನು ಹೊಂದಿರುವ ಅಥವಾ ಕಡಿಮೆ ವರ್ಣತಂತುಗಳನ್ನು ಹೊಂದಿರುವ ಜೀವಕೋಶಗಳು (ವೀರ್ಯಾಣು) ಉತ್ಪಾದನೆಯಾಗುವುದರಿಂದ ಅಸ್ವಸ್ಥ ಮಕ್ಕಳು ಜನಿಸುತ್ತವೆ. ಈ ಎರಡೂ ಸಂದರ್ಭಗಳಲ್ಲಿ ತಂದೆ ಹಾಗೂ ತಾಯಿಯರು ಸಂಪೂರ್ಣ ಆರೋಗ್ಯವಂತರಾಗಿದ್ದರೂ ಸಹ ವಯಸ್ಸಿನ ಹೆಚ್ಚಳದ ಕಾರಣದಿಂದಾಗಿ ಅಸ್ವಸ್ಥ ಮಕ್ಕಳನ್ನು ಪಡೆಯುವ ಸಾಧ್ಯತೆ ಅಧಿಕವಾಗಿರುತ್ತದೆ. ಹಾಗಾಗಿ ಅಮೇರಿಕಾ, ಜಪಾನ್ ಮುಂತಾದ ದೇಶಗಳಲ್ಲಿ ಮಕ್ಕಳನ್ನು ಪಡೆಯಲಿಚ್ಛಿಸುವ ಮುವತ್ತು ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ದಂಪತಿಗಳು ಕಡ್ಡಾಯವಾಗಿ ಹತ್ತು ಹಲವು ತಪಾಸಣೆಗೊಳಪಟ್ಟು ಬೆಳೆಯುತ್ತಿರುವ ಭ್ರೂಣದ ಆರೋಗ್ಯವನ್ನು ತಿಳಿದುಕೊಂಡು, ಮಗುವಿನಲ್ಲಿ ನ್ಯೂನತೆ ಏನಾದರೂ ಇದ್ದರೆ ಮಗುವನ್ನು ಉಳಿಸಿಕೊಳ್ಳಬೇಕೆ? ಬೇಡವೆ? ಎಂಬ ನಿರ್ಧಾರ ತೆಗೆದು ಕೊಳ್ಳುತ್ತಾರೆ.

ವಿಶ್ಲೇಷಣೆ:

ಅಜ್ಜಿಯ ವಯಸ್ಸಿನ ಹೆಚ್ಚಳಕ್ಕೂ ಅಸ್ವಸ್ಥ ಮೊಮ್ಮಕ್ಕಳ ಜನನ: ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ? ಎಂಬಂತೆ ಅಜ್ಜಿಯ ವಯಸ್ಸಿನ ಹೆಚ್ಚಳಕ್ಕೂ ಅವರ ಮೊಮ್ಮಕ್ಕಳ ಆರೋಗ್ಯಕ್ಕೂ ಏನು ಸಂಬಂಧ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ವರ್ಣ ತಂತುಗಳ ಅಸ್ವಸ್ಥ ಮಕ್ಕಳ ಜನನಕ್ಕೆ ಮೂಲ ಕಾರಣ ದಂಪತಿಗಳ ವಯಸ್ಸಿನ ಹೆಚ್ಚಳ ಆದರೆ ಭಾರತದಲ್ಲಿ ಕಾನೂನು ಬದ್ಧವಾಗಿ ಹೆಣ್ಣು ಮಕ್ಕಳ ಮದುವೆಯ ವಯಸ್ಸು ಹದಿನೆಂಟು ಹಾಗೂ ಗಂಡಸರಿಗೆ ಇಪ್ಪತ್ತೊಂದು ವರ್ಷ ನಿಗಧಿಯಾಗಿರುವುದರಿಂದ ಶೇಕಡಾ ಎಂಭತ್ತರಷ್ಟು ಹೆಣ್ಣು ಮಕ್ಕಳು ತಮ್ಮ ಮುವತ್ತು ವರ್ಷದೊಳಗೆ ಮದುವೆಯಾಗಿ ಮಕ್ಕಳನ್ನು ಪಡೆದಿರುತ್ತಾರೆ, ಕಾರಣ ತಂದೆ ತಾಯಂದಿರು ಬಹು ಬೇಗನೆ ತಮ್ಮ ಜವಾಬ್ದಾರಿಯನ್ನ ಕಳೆದುಕೊಳ್ಳುವ ಆತುರದಲ್ಲಿರುವುದರಿಂದ ಎಲ್ಲಾ ಧರ್ಮ, ಜಾತಿ, ಉಪಜಾತಿ, ಪಂಗಡಗಳಲ್ಲಿ ಹೆಣ್ಣು ಮಕ್ಕಳಿಗೆ ಅವರ ವಿದ್ಯಾಭ್ಯಾಸ ಮುಗಿದ ತಕ್ಷಣ ಮದುವೆ ನಡೆಯುವುದು ಸರ್ವೇ ಸಾಮಾನ್ಯ, ಆದರೂ ನಮ್ಮ ದೇಶದಲ್ಲಿ ವರ್ಣತಂತುಗಳ ಅಸ್ವಸ್ಥತೆಯಿಂದ ಜನಿಸುವ ಮಕ್ಕಳ ಸಂಖ್ಯೆಯೇನು ಕಡಿಮೆ ಇಲ್ಲ. ಇದಕ್ಕೆ ಕಾರಣವೇನು? ನಮ್ಮ ಅಧ್ಯಯನದಲ್ಲಿ ಶೇಕಡಾ ಎಂಭತ್ತರಷ್ಟು ಕಿರಿಯ ವಯಸ್ಸಿನ (ಮುವತ್ತರೊಳಗಿನ) ಮಹಿಳೆಯರು ಅಸ್ವಸ್ಥ ಮಕ್ಕಳಿಗೆ ಜನ್ಮ ನೀಡಿರುವುದನ್ನು ನಾವು ಆಸ್ಪತ್ರೆಗಳ ದಾಖಲಾತಿಯಿಂದ ಪಡೆದಿರುವು ದಲ್ಲದೇ ಈ ವಿಷಯದಲ್ಲಿ ಸ್ವತಃ ನಾವೇ ಸಂಶೋಧನೆ ನಡೆಸಿದ್ದೇವೆ. ಕಿರಿಯ ವಯಸ್ಸಿನ ದಂಪತಿಗಳ ಅಸ್ವಸ್ಥ ಮಕ್ಕಳಿಗೆ ಜನ್ಮ ನೀಡುವುದು ಸೋಜಿಗದ ವಿಷಯವಾದರೂ ಸೂಕ್ಷ್ಮ ಅಧ್ಯಯನದಿಂದ ತಿಳಿದು ಬಂದ ವಿಚಾರಗಳು ಅತ್ಯಂತ ಆತಂಕಕಾರಿಯಾದುದು. ಅದು ಅಜ್ಜಿಯ ವಯಸ್ಸಿನ ಹೆಚ್ಚಳಕ್ಕೂ ಮೊಮ್ಮಕ್ಕಳ ಆರೋಗ್ಯಕ್ಕೂ ಇರುವ ಸಂಬಂಧ.

ಹೆಣ್ಣು ಮಕ್ಕಳಲ್ಲಿ ಅಂಡಾಣುಗಳ ಉತ್ಪಾದನೆಗೆ ಕಾರಣವಾಗುವ ಜೀವ ಕೋಶಗಳು (ಜರ್ಮ ಸೆಲ್) ಅಸ್ವಸ್ಥ ಮಗುವಿನ ತಾಯಿಯು ಅವರ ತಾಯಿಯ ಗರ್ಭದಲ್ಲಿರುವಾಗಲೇ ಮಿಯಾಟಿಕ್ ಕೋಶ ವಿಭಜನೆಯನ್ನು ಪ್ರವೇಶಿಸಿ ಡಿಪ್ಲೋಟಿನ್ ಎಂಬ ಸ್ಥಿತಿಯಲ್ಲಿ ಸಮಾಧಿಯಾಗಿರುತ್ತವೆ. ಆ ಹೆಣ್ಣು ಭ್ರೂಣವು ಮಗುವಾಗಿ ಹುಟ್ಟಿ ತರುಣಿಯಾಗಿ ಮಾರ್ಪಾಡಾಗುವ ಸಂದರ್ಭದಲ್ಲಿ ಋತು ಕ್ರಿಯೆಯು ಆರಂಭವಾಗುವ ಮೊದಲು ಹರ್ಮೋನುಗಳ ಪ್ರಭಾವದಿಂದ ಡಿಪ್ಲೋಟಿನ್ ಕೋಶಾವಸ್ಥೆಯಲ್ಲಿರುವ ಜೀವಕೋಶಗಳು ತಮ್ಮ ಸಮಾಧಿಯಿಂದ ಹೊರ ಬಂದು ಮೊದಲ ಮಿಯಾಟಿಕ್ ವಿಭಜನೆಯನ್ನು ಮುಂದುವರೆಸಿ ಎರಡನೆ ಮಿಯಾಟಿಕ್ ಕೋಶ ವಿಭಜನೆಯನ್ನು ಪ್ರವೇಶಿಸುತ್ತದೆ. ಮೊದಲ ಮಿಯಾಟಿಕ್ ಅತ್ಯಂತ ದೀರ್ಘವಾಗಿದ್ದು ಭ್ರೂಣಾವಸ್ಥೆಯಿಂದ ತರುಣಾವಸ್ಥೆಯವರೆಗೆ ಮುಂದುವರೆಯುತ್ತದೆ. ಆದರೆ ಎರಡನೆ ಮಿಯಾಟಿಕ್ ವಿಭಜನೆಯು ಅಲ್ಪಾವಧಿಯಲ್ಲಿ ಪೂರ್ಣಗೊಂಡು ಅಂಡಾಣುಗಳನ್ನು ಬಿಡುಗಡೆ ಮಾಡಲು ಪ್ರಾರಂಭಿಸುವುದನ್ನು ನಾವು ಋತುಸ್ರಾವ ಎನ್ನುತ್ತೇವೆ.

ಅಸ್ವಸ್ಥ ಮಕ್ಕಳ ತಾಯಿಯು ತನ್ನ ಭ್ರೂಣಾವಸ್ಥೆಯಲ್ಲಿರುವಾಗಲೇ ಅವಳ ತಾಯಿಯ ವಯಸ್ಸು ಮುವತ್ತೈದಕ್ಕಿಂತ ಹೆಚ್ಚಿರುವ ಸಂಧರ್ಭದಲ್ಲಿ ಮಿಯಾಟಿಕ್ ವಿಭಜನೆಯು ಸರಿಯಾಗಿ ಆಗದೇ ಭ್ರೂಣದ ಜೀವಕೋಶಗಳಿಗೆ ಹಾನಿಯಾಗುತ್ತದೆ. ಆದ್ದರಿಂದ ತರುಣಿಯಾಗಿ ಬೆಳೆಯುವ ಈ ಭ್ರೂಣವು ಆರೋಗ್ಯವಾಗಿದ್ದರೂ ಸಹ ಆಕೆಯ ಜರ್ಮ ಜೀವಕೋಶಗಳಲ್ಲಿ ಅಪಸಾಮ್ಯತೆಯಿದೆ. ಆದ್ದರಿಂದ ನಮ್ಮ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಿರಿಯ ವಯಸ್ಸಿನ ಯುವತಿಯರೇ ವರ್ಣ ತಂತುಗಳ ಅಸ್ವಸ್ಥ ಮಕ್ಕಳಿಗೆ ಜನ್ಮ ನೀಡುತ್ತಾರೆ.

ತಾಯಿಯ ತಾಯಿ (ಅಜ್ಜಿ)ಯ ವಯಸ್ಸು ಮತ್ತು ಆಕೆಯ ಹೆಣ್ಣು ಮಕ್ಕಳ ಮಕ್ಕಳ ತೊಂದರೆ: ವರ್ಣತಂತುಗಳ ಅಸ್ವಸ್ಥತೆಯಿಂದ ಕೂಡಿದ ಮಕ್ಕಳ ತಾಯಿಯು ಅವಳ ಕುಟುಂಬದಲ್ಲಿ ಐದು ಅಥವಾ ಆರನೇಯ ಸಾಲಿಗೆ ಸೇರಿದ ಮಗಳಾಗಿರುತ್ತಾಳೆ. ಈಕೆಯ ತಾಯಿ ಬಹಳ ವರ್ಷಗಳ ಕಾಲ ಮಕ್ಕಳಿಲ್ಲದೆ ಆನಂತರ ಈಕೆಯನ್ನು ಪಡೆದಿರಬಹಳು, ಅಥವಾ ಇವಳ ಅಣ್ಣಂದಿರು, ಅಕ್ಕಂದಿರು ಕಾರಣಾಂತರದಿಂದ ಶಿಶುವಾಗಿದ್ದಾಗಲೇ ಮರಣವನಪ್ಪಿ ನಂತರ ಇವಳನ್ನು ಪಡೆದಿರಬಹುದು ಅಥವಾ ಕುಟುಂಬ ಕಲ್ಯಾಣ ಯೋಜನೆಗಳು ಇನ್ನೂ ಸರಿಯಾಗಿ ಅನುಷ್ಠಾನಕ್ಕೆ ಬರದೆ ಈಕೆಯ ತಾಯಿಯು ಹಲವಾರು ಮಕ್ಕಳಿಗೆ ಜನ್ಮನೀಡಿರಬಹುದು. ಒಟ್ಟಿನಲ್ಲಿ ಅಸ್ವಸ್ಥ ಮಕ್ಕಳ ತಾಯಿಯು ಆಕೆಯ ತಾಯಿಗೆ ಹುಟ್ಟಿದ ಮಕ್ಕಳಲ್ಲಿ ಕೊನೆಯ ಮಗಳಾಗಿರುವ ಸಾಧ್ಯತೆ ಜಾಸ್ತಿ ಮತ್ತು ಆ ಸಮಯದಲ್ಲಿ ಆಕೆಯ ತಾಯಿಯ ವಯಸ್ಸು ಮೂವತ್ತೈದು ದಾಟಿರುವ ಸಂಬಂಧ ಅಧಿಕವಾಗಿರುತ್ತದೆ. ಇವಳ ಗರ್ಭಧಾರಣೆಯ ಸಮಯದಲ್ಲಿ ಇವಳ ತಾಯಿಯ ವಯಸ್ಸು ಮೂವತ್ತೈದಕ್ಕಿಂತ ಹೆಚ್ಚಾಗಿರುತ್ತದೆ. ಆದ್ದರಿಂದ ಇವಳ ತಾಯಿಯಲ್ಲಿನ ತೊಂದರೆಗಳು ಇವಳ ಜರ್ಮ (germ cell) ಜೀವಕೋಶಗಳ ಮೇಲೆ ಪ್ರಭಾವ ಬೀರುತ್ತದೆ. ಆದರೆ ಸೋಮ್ಯಾಟಿಕ್ ಜೀವಕೋಶಗಳಿಗೆ ಯಾವುದೇ ತೊಂದರೆಯಾಗದ ಕಾರಣ ಈ ಹೆಣ್ಣು ಮಗಳು ಆರೋಗ್ಯವಂತೆಯಾಗಿದ್ದರೂ ಸಹ ಅಂಡಾಣುಗಳಲ್ಲಿ ವರ್ಣತಂತುಗಳ ಅಪನಾಮ್ಯತೆಯಿರುವುದರಿಂದ ಈ ಮಹಿಳೆ ಕಿರಿಯ ವಯಸ್ಸಿನವಳಾಗಿದ್ದರೂ ಅಸ್ವಸ್ಥ ಮಕ್ಕಳಿಗೆ ಜನುಮ ನೀಡುವ ಹೆಚ್ಚಿನ ಸಾಧ್ಯತೆಯನ್ನು ಹೊಂದಿರುತ್ತಾಳೆ.

ಹಾಗಾದರೆ ಈ ಸಮಸ್ಯೆಗೆ ಪರಿಹಾರವೇನು?: ಭ್ರೂಣದ ಬೆಳವಣಿಗೆಯ ವಿವಿಧ ಹಂತಗಳನ್ನು ಪರಿಶೀಲಿಸುವುದರಿಂದ ಬೆಳೆಯುತ್ತಿರುವ ಭ್ರೂಣದ ಆರೋಗ್ಯವನ್ನು ತಿಳಿದುಕೊಳ್ಳಬಹುದು. ಗರ್ಭಿಣಿ ಸ್ತ್ರೀಯರನ್ನು ಸ್ಕ್ಯಾನಿಂಗ್ ಪರೀಕ್ಷೆಗೆ ಒಳಪಡಿಸುವುದರಿಂದ ವರ್ಣತಂತು ವ್ಯತ್ಯಯದ ಅಸ್ವಸ್ಥತೆಗಳೇನಾದರು ಇದ್ದರೆ ಅವುಗಳನ್ನು ಅತಿ ಸುಲಭವಾಗಿ ಗುರುತಿಸಬಹುದು. ಉದಾ: ಜಾರಿದ ಕಿವಿಗಳು, ಚಪ್ಪಟೆಯಾದ ಮೂಗಿನ ಮೂಳೆ ನ್ಯೂಕಲ್‌ನ ಉದ್ದ ಮುಂತಾದವುಗಳು. ಉತ್ತಮ ರೇಡಿಯಾಲಜಿಸ್ಟ್ ಈ ಎಲ್ಲಾ ಅತಿ ಸೂಕ್ಷ್ಮವಾದ ವಿವರಗಳನ್ನು ನೀಡುವುದರಿಂದ ಇದು ಯಾವ ವರ್ಣತಂತುವಿಗೆ ಸಂಬಂಧಿಸಿದ ಕಾಯಿಲೆಯೆಂದು ಗುರುತಿಸಿ ಆನಂತರ ಇನ್ನೂ ಹೆಚ್ಚಿನ ಪರೀಕ್ಷೆಗಳಿಗೆ ಒಳಪಡಿಸಬಹುದು. ಆದರೆ ಮಾನವ ತಳಿ ವಿಜ್ಞಾನದ ಬಗ್ಗೆ ಅರಿವಿಲ್ಲದ ಕೆಲವು ವೈದ್ಯರು ಗರ್ಭಧರಿಸಿರುವ ಮಹಿಳೆಯರಿಗೆ ಮೂರನೇ ಹಂತದ ಗರ್ಭಾವಸ್ತೆ ಅಂದರೆ ಏಳರಿಂದ ಒಂಭತ್ತು ತಿಂಗಳವರೆಗೆ ಅವರನ್ನು ಒಂದು ಬಾರಿಯೂ ಸ್ಕ್ಯಾನಿಂಗ್ ಪರೀಕ್ಷೆಗೆ ಒಳಪಡಿಸುವುದಿಲ್ಲ. ಪರೀಕ್ಷೆಗೆ ಒಳಪಡಿಸಿದರೂ ಸಹ ಅಂಗವೈಕಲ್ಯತೆ, ಭ್ರೂಣದ ಸಂಖ್ಯೆ ಮುಂತಾದ ವಿಷಯಗಳ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಾರೆ. ಆದ್ದರಿಂದ ಮಕ್ಕಳನ್ನು ಪಡೆಯಲಿಚ್ಛಿಸಿ ಹಿರಿಯ ಹಾಗೂ ಕಿರಿಯ ವಯಸ್ಸಿನ ಮಹಿಳೆಯನ್ನು ಅವರು ಗರ್ಭಧರಿಸಿದ ಮೂರನೇ ತಿಂಗಳಿನಿಂದ ಐದನೆ ತಿಂಗಳಿನೊಳಗೆ ಕಡ್ಡಾಯವಾಗಿ ಸ್ಕ್ಯಾನಿಂಗ್ ಪರೀಕ್ಷೆಗೆ ಒಳಪಡಿಸಿ ಅನುಮಾನವಿದ್ದರೆ ಜೀವರಸಾಯನಿಕ ಪರೀಕ್ಷೆಗಳು ಹಾಗೂ ವರ್ಣತಂತುಗಳ ಪರೀಕ್ಷೆಗಳನ್ನು ನಡೆಸಿ ಭ್ರೂಣದ ಆರೋಗ್ಯದ ಬಗ್ಗೆ ಮಾಹಿತಿ ಪಡೆಯಬಹುದು. ಈ ವಿಷಯದ ಬಗ್ಗೆ ವೈದ್ಯರು ಹಾಗೂ ದಂಪತಿಗಳು ಹೆಚ್ಚಿನ ತಿಳುವಳಿಕೆಯನ್ನು ಪಡೆದರೆ ಸಮಾಜಕ್ಕೆ ಹೊರೆಯಾಗುತ್ತಿರುವ ವರ್ಣತಂತುಗಳ ಅಸ್ವಸ್ಥತೆಯನ್ನು ಸಂಪೂರ್ಣವಾಗಿ ತಡೆಯಬಹುದು.



ಚಿತ್ರ:1 : ಪೋಷಕರ ವಯಸ್ಸು



ಚಿತ್ರ 2: ತಾಯಿಯ ತಾಯಿ ವಯಸ್ಸು



ಚಿತ್ರ 3: ತಾಯಿಯ ವಂಶವೃಕ್ಷ

ಪುರುಷರಲ್ಲಿ ಬಂಜೆತನ ಒಂದು ಅವಲೋಕನ

ಡಾ. ಶ್ರೀನಿವಾಸ. ಜಿ ಮತ್ತು ಡಾ. ಮಾಲಿನಿ. ಎಸ್. ಎಸ್.
ಪ್ರಾಣೀಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಭಾರತವು ಜನಸಂಖ್ಯಾ ಸ್ಫೋಟದಲ್ಲಿ ಪ್ರಪಂಚದಲ್ಲೇ ಎರಡನೆಯ ರಾಷ್ಟ್ರ ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ಜೊತೆಗೆ ಇತ್ತೀಚಿನ ದಿನಗಳಲ್ಲಿ ಬಂಜೆತನದಿಂದ ಬಳಲುವ ಪುರುಷ ಹಾಗೂ ಮಹಿಳೆಯರ ಸಂಖ್ಯೆಯೂ ಹೆಚ್ಚುತ್ತಿದೆ. ಇದಕ್ಕೆ ಕಾರಣ ಜಾಗತೀಕರಣದಿಂದಾಗಿ ಮುಂಚೂಣಿಯಲ್ಲಿರುವ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುವ ಯುವಕರು ಮತ್ತು ಅವರ ಜೀವನ ಶೈಲಿ. ಸುಮಾರು ಐವತ್ತು ವರ್ಷಗಳ ಹಿಂದೆ WHO ವರದಿಯ ಪ್ರಕಾರ ಒಬ್ಬ ಸಾಮಾನ್ಯ ಆರೋಗ್ಯವಂತ ಪುರುಷನ ವೀರ್ಯಾಣುವಿನ ಪ್ರಮಾಣವು ಸುಮಾರು 200 ಮಿಲಿಯನ್/ಎಮ್.ಎಲ್‌ಯೆಂದು ನಿಗಧಿಯಾಗಿತ್ತು. ನಂತರದ ದಿನಗಳಲ್ಲಿ ಈ ಪ್ರಮಾಣವು ಕಡಿಮೆಯಾಗುತ್ತಾ ಬಂದು ಕೊನೆಗೆ 20 ಮಿಲಿಯನ್ನಿಗೆ ನಿಂತಿತು. ಆದರೆ 2010ರಲ್ಲಿ ಈ ಪ್ರಮಾಣವು ಪುನ: ಪರಿಷ್ಕರಿಣೆಗೊಂಡು 15 ಮಿಲಿಯನ್ನಿಗೆ ನಿಂತಿದೆ. ಮುಂದಿನ 10–20 ವರ್ಷಗಳಲ್ಲಿ ಗಂಡಸರ ಪುರುಷತ್ವವು ಪೂರ್ಣ ಪ್ರಮಾಣದಲ್ಲಿ ನಶಿಸಬಹುದೆಂದು ವೈಜ್ಞಾನಿಕ ಸಂಶೋಧನೆಗಳು ತಿಳಿಸಿವೆ. ಬಂಜೆತನಕ್ಕೆ ಕಾರಣಗಳು ಹಲವಾರು ಇವುಗಳಲ್ಲಿ ಮುಖ್ಯವಾಗಿ ದೈಹಿಕ ಅಂಗಾಂಗಗಳ ರಚನೆ ಹಾಗೂ ಕಾರ್ಯ ವಿಧಾನದ ತೊಂದರೆ, ವರ್ಣತಂತುಗಳ ಅಸ್ವಸ್ಥತೆ ಹಾರ್ಮೋನುಗಳ ಏರಿಳಿತ, ರೋಗ ನಿರೋಧಕಗಳ ಕೊರತೆ, ಸೋಂಕುಗಳು, ಜೀನ್‌ಗಳ ರೂಪಾಂತರ ಹಾಗೂ 'ವೆರಿಕೋಸೀಲ್' ನರದ ಸಮಸ್ಯೆಗಳು ಬಹು ಮುಖ್ಯವಾದವು. ಇತ್ತೀಚಿನ ದಿನಗಳಲ್ಲಿ ಪುರುಷರಲ್ಲಿ ಬಂಜೆತನ ಹೆಚ್ಚುತ್ತಿದೆ ಎಂಬ ವಿಚಾರ ನಿಜವೇ? ಹೆಚ್ಚುತ್ತಿರುವ ಪುರುಷರ ಬಂಜೆತನಕ್ಕೆ ಮತ್ಯಾವುದಾದರೂ ಕಾರಣಗಳಿವೆಯೇ? ಇದರ ಅಂಕಿ ಅಂಶಗಳೇನು? ವೀರ್ಯಾಣುವಿನಲ್ಲಿ ಯಾವ ರೀತಿ ಮಾರ್ಪಾಡುಗಳು ಬಂಜೆತನಕ್ಕೆ ಕಾರಣವಾಗಿವೆ? ವೀರ್ಯಾಣುವಿನಿಂದಾಗುವ ತೊಂದರೆಗಳನ್ನು ಯಾವ ಪರೀಕ್ಷೆಗಳ ಮೂಲಕ ತಿಳಿದುಕೊಳ್ಳಬಹುದು? ಮುಂತಾದುವುಗಳ ಕುರಿತು ಸಮ್ಮೇಳನದಲ್ಲಿ ಪ್ರಬಂಧರೂಪದಲ್ಲಿ ಮಂಡಿಸಲಾಗುವುದು.

ಪೀಠಿಕೆ:

ಹೆಚ್ಚುತ್ತಿರುವ ಪುರುಷರಲ್ಲಿ ಬಂಜೆತನ: WHO ವರದಿಯ ಪ್ರಕಾರ ಕಳೆದ 50 ವರ್ಷಗಳಲ್ಲಿ, ಒಬ್ಬ ಸಾಮಾನ್ಯ ಪುರುಷನ ವೀರ್ಯಾಣುವಿನ ಪ್ರಮಾಣವು ಸುಮಾರು 200 ಮಿಲಿಯನ್/ಎಮ್.ಎಲ್‌ಯೆಂದು ನಿಗಧಿಯಾಗಿತ್ತು. ನಂತರದ ದಿನಗಳಲ್ಲಿ ಈ ಪ್ರಮಾಣವು ಕಡಿಮೆಯಾಗುತ್ತಾ ಬಂದು ಕೊನೆಗೆ 20 ಮಿಲಿಯನ್ನೆ ನಿಂತಿತು. ಆದರೆ 2010ರಲ್ಲಿ ಈ ಪ್ರಮಾಣವು ಪುನ: ಪರಿಷ್ಕರಿಣೆಗೊಂಡು 15 ಮಿಲಿಯನ್ನೆ ನಿಂತಿದೆ. ಮುಂದಿನ 10–20 ವರ್ಷಗಳಲ್ಲಿ ಗಂಡರ ಪುರುಷತ್ವವು ಪೂರ್ಣ ಪ್ರಮಾಣದಲ್ಲಿ ನಶಿಸಬಹುದೆಂದು ವೈಜ್ಞಾನಿಕ ಸಂಶೋಧನೆಗಳು ತಿಳಿಸಿವೆ.

ಭಾರತದಲ್ಲಿ ಬಂಜೆತನದ ಚಿತ್ರಣ: ಭಾರತವು ಜನಸಂಖ್ಯಾ ಸ್ಫೋಟದಲ್ಲಿ ಪ್ರಪಂಚದಲ್ಲೇ ಎರಡನೆಯ ರಾಷ್ಟ್ರ ಎಂಬ ಕೀರ್ತಿಗೆ ಪಾತ್ರವಾಗಿದ್ದರೂ ಸಹ ಇತ್ತೀಚಿನ ದಿನಗಳಲ್ಲಿ ಬಂಜೆತನದಿಂದ ಬಳಲುವ ಪುರುಷ ಹಾಗೂ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ ಇದಕ್ಕೆ ಕಾರಣ ಜಾಗತೀಕರಣದಿಂದಾಗಿ ಮುಂಚೂಣಿಯಲ್ಲಿರುವ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುವ ಯುವಕರು ಮತ್ತು ಅವರ ಜೀವನ ಶೈಲಿ.

ವಿಶ್ಲೇಷಣೆ:

ಪುರುಷರ ಬಂಜೆತನದ ಇತರ ಮುಖ್ಯ ಕಾರಣಗಳು: ಬಂಜೆತನಕ್ಕೆ ಕಾರಣಗಳು ಹಲವಾರು ಇವುಗಳಲ್ಲಿ ಮುಖ್ಯವಾಗಿ ದೈಹಿಕ ಅಂಗಾಂಗಗಳ ರಚನೆ ಹಾಗೂ ಕಾರ್ಯ ವಿಧಾನದ ತೊಂದರೆ, ವರ್ಣತಂತುಗಳ ಅಸ್ವಸ್ಥತೆ ಹಾರ್ಮೋನುಗಳ ಏರಿಳಿತ, ರೋಗ ನಿರೋಧಕಗಳ ಕೊರತೆ, ಸೋಂಕುಗಳು, ತಳಿಗುಣಗಳ ರೂಪಾಂತರ ಹಾಗೂ 'ವೆರಿಕೋಸೀಲ್' ನರದ ಸಮಸ್ಯೆಗಳು ಬಹು ಮುಖ್ಯವಾದವು. ಮೇಲೆ ವಿವರಿಸಿದ ಕಾರಣಗಳು ನಮ್ಮ ದೇಹದ ಪ್ರತಿಕ್ರಿಯೆಯಿಂದುಂಟಾಗಿರುವಂತಹದ್ದು, ಆದರೆ ಇದರ ಜೊತೆಯಲ್ಲಿ ದೇಹದ ಹೊರಗೆ ಪರಿಸರದ ಪ್ರಚೋದನೆಯು ಮುಖ್ಯ ಪಾತ್ರವಹಿಸುತ್ತದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಕೃತಿಯ ಅಸಮತೋಲನ, ಪರಿಸರ ಮಾಲಿನ್ಯ, ಬದಲಾದ ಜೀವನ ಶೈಲಿ, ಬದಲಾದ ಆಹಾರ ಸೇವನೆ, ಒತ್ತಡದ ಪರಿಸ್ಥಿತಿಗಳು ಮುಖ್ಯ ಕಾರಣಗಳಾಗಿವೆ.

ಜಾಗತೀಕರಣದಿಂದಾಗಿ ಹೆಚ್ಚುತ್ತಿರು ಕೈಗಾರಿಕೆಗಳು ಇವುಗಳಿಂದಾಗಿ ಅರಣ್ಯನಾಶ, ಹೆಚ್ಚುತ್ತಿರುವ ಭೌಗೋಳಿಕ ತಾಪಮಾನ ಪರಿಸರದಲ್ಲಿ ಅಸಮತೋಲನವನ್ನುಂಟು ಮಾಡುತ್ತಿದೆ, ಅಲ್ಲದೇ ಕೈಗಾರಿಕೆಗಳ ರಾಸಾಯನಿಕ ಪದಾರ್ಥಗಳು ಕುಡಿಯುವ ನೀರು, ಆಹಾರದಲ್ಲಿ ಮಿಶ್ರವಾಗಿ ಹಾರ್ಮೋನುಗಳಲ್ಲಿ ಏರುಪೇರು ಮಾಡಿ ವೀರಾಣ್ಯುವಿನ ಉತ್ಪಾದನೆಯನ್ನು ಕಡಿತಗೊಳಿಸುತ್ತದೆ. ಭಾರತೀಯರು ಆಯಾ ಪ್ರದೇಶ, ವಾತಾವರಣ, ತಾಪಮಾನಗಳಿಗನುಗುಣವಾಗಿ ಜೀವನ ಶೈಲಿಯನ್ನು ಹೊಂದಿದ್ದರು. ಉದಾ:– ಬಿಸಿಲು ಹೆಚ್ಚಿರುವ ಪ್ರದೇಶಗಳಲ್ಲಿ ವಾತಾವರಣದ ಶಾಖದಿಂದ ದೇಹದಲ್ಲುಂಟಾಗುವ ದುಷ್ಪರಿಣಾಮಗಳನ್ನು ತಡೆಗಟ್ಟಲು ಸಡಿಲವಾದ ಹತ್ತಿಬಟ್ಟೆಗಳನ್ನು ಧರಿಸುತ್ತಿದ್ದರು ಅಲ್ಲದೇ ತಣ್ಣೀರಿನ ಸ್ನಾನವು ಆ ಪ್ರದೇಶದಲ್ಲಿ ಸಾಮಾನ್ಯವಾಗಿದ್ದು ದೇಹದ ಉಷ್ಣತೆಯನ್ನು ಕಡಿಮೆ ಮಾಡಲು ಸಹಾಯವಾಗುತ್ತಿತ್ತು. ವೀರ್ಯಾಣುವಿನ ಉತ್ಪಾದನೆಯು ಅತ್ಯಂತ ಸೂಕ್ಷ್ಮವಾಗಿದ್ದು ದೇಹದ ಶಾಖ ಹೆಚ್ಚಾದಂತೆ ವೀರ್ಯಾಣುಗಳ ಉತ್ಪಾದನೆಯಲ್ಲಿ ಏರಿಳಿತವುಂಟಾಗುತ್ತದೆ. ಕುಗ್ಗುತ್ತಿರುವ ವೀರ್ಯಾಣು ಸಂಖ್ಯೆಗೆ ನಮ್ಮ ಯುವಕರು ಧರಿಸುವ ಬಿಗಿಯಾದ ಜೀನ್ಸ್ ಮತ್ತಿತ್ತರ ಉಡುಪುಗಳು ಕಾರಣ.

ಆಹಾರ ಶೈಲಿಗೂ ಬಂಜೆತನಕ್ಕೂ ಇರುವ ಸಂಬಂಧ: ಭಾರತೀಯ ಆಹಾರ ಶೈಲಿಯು ಅತ್ಯಂತ ಉತ್ಕೃಷ್ಟವಾಗಿದ್ದು ನಮ್ಮ ಆಹಾರದಲ್ಲಿ ಪ್ರೋಟೀನು, ಪಿಷ್ಟ, ಸಕ್ಕರೆ, ವಿಟಮಿನುಗಳು, ಲವಣಗಳು ಮತ್ತು ಆ್ಯಂಟಿ ಆಕ್ಸಿಡೆಂಟುಗಳ ಪ್ರಮಾಣವು ಸಮತೋಲನವಾಗಿರುತ್ತಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಜಂಕ್ ಪುಡ್‌ಗಳನ್ನು ತಮ್ಮ ಆಹಾರದ ಮುಖ್ಯ ಭಾಗವಾಗಿ ಪರಿಗಣಿಸಿರುವ ನಮ್ಮ ಯುವ ಜನಗೆ ಸ್ಥೂಲತೆ, ಬೊಜ್ಜುತನ, ಅರ್ಬುದ ರೋಗ (ಕ್ಯಾನ್ಸರ್) ಸಕ್ಕರೆ ಕಾಯಿಲೆ ಹಾಗೂ ಬಂಜೆತನ ಮುಂತಾದ ಅಸ್ವಸ್ಥತೆಗಳಿಗೆ ತುತ್ತಾಗುತ್ತಿದ್ದಾರೆ.

ಜಂಕ್ ಪುಡ್‌ಗಳು ಹೆಚ್ಚಿನ ಕ್ಯಾಲರಿ ಹೊಂದಿದ್ದು ಇವುಗಳ ಸಂರಕ್ಷಣೆಗಾಗಿ ಹಲವಾರು ವಿಷಕಾರಕ ರಾಸಾಯನಿಕಗಳನ್ನು ಬಳಸುತ್ತಾರೆ. ಇವು ದೇಹದಲ್ಲಿ ಫ್ರೀ ರ್ಯಾಡಿಕಲ್ ಅಥವಾ ರಿಯಾಕ್ಟಿವ್ ಆಕ್ಸಿಜನ್

ಸ್ಪೀಶಿಸ್ (ROS) ಗಳನ್ನು ಬಿಡುಗಡೆ ಮಾಡುತ್ತವೆ. ಇದರ ಜೊತೆಯಲ್ಲಿ ದೇಹದಲ್ಲೂ ಈ ಅಪಾಯಕಾರಿ ವಸ್ತುಗಳು ಹಲವಾರು ಜೈವಿಕ ರಾಸಾಯನಿಕ ಕ್ರಿಯೆಗಳಿಂದಾಗಿ ಸ್ವಲ್ಪ ಪ್ರಮಾಣದಲ್ಲಿ ಬಿಡುಗಡೆಯಾಗುತ್ತವೆ. ಈ ವಿಷಯುಕ್ತ ಪದಾರ್ಥಗಳಿಂದುಂಟಾಗುವ ತೊಂದರೆಯಿಂದ ಹೊರ ಬರಲು ನಮಗೆ ಹೆಚ್ಚಿನ 'ಆ್ಯಂಟಿ ಆಕ್ಸಿಡೆಂಟ್‌ಗಳು'ಬೇಕು. ವೀರಾಣುಗಳ ಉತ್ಪಾದನೆಯು ಸೂಕ್ಷ್ಮವಾಗಿರುವುದರಿಂದ ಫ್ರೀ ರ್ಯಾಡಿಕಲ್ಸ್ ಹೆಚ್ಚಾದಂತೆ ವೀರಾಣುಗಳ ಪ್ರಮಾಣವು ಕಡಿಮೆಯಾಗುತ್ತದೆ.

ಬೊಜ್ಜುತನ ಮತ್ತು ಬಂಜೆತನ: ಹೊಟ್ಟೆಯ ಮೇಲೆ ಶೇಖರಣೆಯಾಗುವ ಕೊಬ್ಬು 'ಅಡಿಪೊಕೈನೆಸ್' ಎಂಬ ಹಾರ್ಮೋನನ್ನು ಉತ್ಪಾದನೆ ಮಾಡುತ್ತದೆ. ಈ ಹಾರ್ಮೋನುಗಳು ಅತ್ಯಂತ ಅಪಾಯಕಾರಿಯಾಗಿದ್ದು ದೇಃಅದಲ್ಲಿ ಶ್ರವಿಸುವ ಇತರೆ ಹಾರ್ಮೋನುಗಳಲ್ಲಿ ವ್ಯತ್ಯಾಯವನ್ನುಂಟು ಮಾಡುವುದರಿಂದ ಮುಖ್ಯವಾಗಿ ಸಕ್ಕರೆ ಕಾಯಿಲೆ ಮತ್ತು ಬಂಜೆತನವನ್ನುಂಟು ಮಾಡುತ್ತದೆ. ಬೊಜ್ಜುತನ ಹಾಗೂ ಸ್ತ್ರೀಯರಲ್ಲಿ ಬಂಜೆತನಕ್ಕೆ ನೇರವಾದ ಸಂಬಂಧವಿರುವುದು ಹಲವಾರು ದಶಕಗಳ ಹಿಂದೆ ದೃಢಪಟ್ಟಿದ್ದರೆ, ಇತ್ತೀಚಿನ ಸಂಶೋಧನೆಗಳು ಗಂಡಸರಲ್ಲಿ ಬೊಜ್ಜುತನ ಹಾಗೂ ಬಂಜೆಗನಕ್ಕಿರುವ ಸಂಬಂಧವನ್ನು ದೃಢಪಡಿಸುತ್ತವೆ.

ಮೊಬೈಲ್ ಫೋನುಗಳ ಬಳಕೆ ಪುರುಷರ ಬಂಜೆತನ: ಇತ್ತೀದಿನ ದಿನಗಳಲ್ಲಿ ಮೊಬೈಲ್ ಫೋನುಗಳ ಬಳಕೆ ಶರವೇಗದಿಂದ ಸಾಗುತ್ತಿದೆ. ಇದು ಸಂಪರ್ಕಸಾಧನವಾಗಬೇಕೆ ಹೊರತು ಅಲಂಕಾರಿಕ ವಸ್ತುವಾಗಬಾರದು. ಮೊಬೈಲ್‌ಗಳಿಂದ ಹೊರ ಬರುವ ರೇಡಿಯೊ ಫ್ರಿಕ್ವೆನ್ಸಿ ಎಲೆಕ್ಟ್ರೋ ಮ್ಯಾಗನಟಿಕ್ ಅಲೆಗಳು ವೀರ್ಯದ ಗುಣಮಟ್ಟವನ್ನು ಕಡಿಮೆ ಮಾಡುತ್ತದೆಂಬುದು ಸಂಶೋಧನೆಗಳಿಂದ ದೃಢಪಟ್ಟಿದೆ. ಇಂತಹ ವೀರ್ಯದಲ್ಲಿ ಫ್ರೀ ರ್ಯಾಡಿಕಲ್ಸ್‌ನ ಪ್ರಮಾಣವು ಹೆಚ್ಚಾಗಿದ್ದು ವೀರ್ಯದ ಚಲನೆ ಹಾಗೂ ಸಂಖ್ಯೆ, ಶಕ್ತಿಯನ್ನು ಕುಗ್ಗಿಸುತ್ತದೆ. ಆದರೆ ವಂಶವಾಹಿಯಾದ ಡಿ.ಎನ್.ಎಗೆ ಯಾವುದೇ ರೀತಿಯ ತೊಂದರೆಯನ್ನು ಇನ್ನೂ ಯವ ಸಂಶೋಧನೆಗಳು ದೃಢಪಡಿಸಿಲ್ಲ. ಈ ಸಂಶೋಧನೆಯಲ್ಲಿ ಮೊಬೈಲ್ ಫೋನಿಗೂ ದೇಹಕ್ಕೂ ಇವರು ಸಂಪರ್ಕದ ದೂರ 2.5 ಸೆಂಟಿ ಮೀಟರ್ ಆದರೆ 3,4, 5, ಸೆಂಟಿ ಮೀಟರ್ ದೂರವಿರುವ ಮೊಬೈಲ್‌ಗಳಿಂದ ತೊಂದರೆಯಾಗುತ್ತದೆ ಅಥವಾ ಇಲ್ಲವೇ ಎಂಬುದಕ್ಕೂ ಯಾವ ಸಂಶೋಧನಾ ಮಾಹಿತಿಯು ಲಭ್ಯವಿಲ್ಲ.

ಪರಿಸರ ಮಾಲಿನ್ಯ ಮತ್ತು ಪುರುಷರ ಬಂಜೆತನ : ಪರಿಸರ ಮಾಲಿನ್ಯದ ರಾಸಾಯನಿಕ ವಿಷಯುಕ್ತ ವಸ್ತುಗಳಾದ ಕೀಟನಾಶಕಗಳು, ಕೆಲವು ಕೃತಕ ಬಣ್ಣಗಳಲ್ಲದೆ ರಾಸಾಯನಿಕ ರಸಗೊಬ್ಬರಗಳು, ತಿಂಡಿ ತಿನಿಸುಗಳಲ್ಲಿ ಬಳಸುವ ಬಣ್ಣಗಳು, ಆಹಾರ ಪದಾರ್ಥಗಳು ಕೆಡದಂತೆ ಕಾಪಾಡುವ ರಾಸಾಯನಿಕಗಳು ಬಂಜೆತನವನ್ನುಂಟು ಮಾಡುತ್ತವೆ. ಇದಲ್ಲದೆ ಅತಿಯಾದ ಮಧ್ಯಸೇವನೆ, ಧೂಮಪಾನವು ಸಹ ಪ್ರಮುಖ ಪಾತ್ರವಹಿಸುತ್ತವೆ.

ಪುರುಷರ ಬಂಜೆತನದ ನಿರ್ವಹಣೆ: ಬಂಜೆತನದ ಕಾರಣವು ಅಂಗಾಂಗಳ ರಚನೆಯಿಂದುಂಟಾಗಿದ್ದರೆ ನಿವಾರಣೆ ಸ್ವಲ್ಪ ಮಟ್ಟಿಗೆ ಕಷ್ಟಕರವಗಿದ್ದರೂ ಸಹ ಸೂಕ್ತ ಶಸ್ತ್ರ ಚಿಕಿತ್ಸೆಯಿಂದ ಬಂಜೆತನವನ್ನು ನಿವಾರಿಸಬಹುದು. ಹಾರ್ಮೋನಿನ ಏರುಪೇರು, ರಾಸಾಯನಿಕ ವಸ್ತುಗಳ ಬಳಕೆ, ಮೊಬೈಲ್ ಫೋನ್ ಮತ್ತು ಲ್ಯಾಪ್‌ಟಾಪ್‌ಗಳ ಬಳಕೆಯಿಂದಾಗುವ ಬಂಜೆತನವು ತಾತ್ಕಲಿಕವಾಗಿದ್ದು ಇವುಗಳ ನಿವಾರಣೆ ಸುಲಭ ಸಾಧ್ಯ. ಆದರೆ ತೊಂದರೆಯು ಅನುವಂಶೀಯವಾಗಿದ್ದು, ವರ್ಣತಂತುಗಳ ಅಪಸರಣೆಯಿಂದಾದರೆ ಹಾಗೂ ಗಂಡಸರ 'ಜ' ವರ್ಣತಂತುವಿನಲ್ಲಿರುವ ತಳಿಗುಣಗಳ ರೂಪಾಂತರದಿಂದಾದರೆ ತೊಂದರೆಯನ್ನು ಸರಿಪಡಿಸಲು ಸಾಧ್ಯವಿಲ್ಲ.

ಸಮತೋಲನ ಆಹಾರ ಸೇವನೆ ಅತಿ ಸುಲಭವಾದ ನಿರ್ವಹಣೆಯಾಗಿದ್ದು ಆಹಾರದಲ್ಲಿ ವಿಟಮಿನುಗಳ ಪ್ರಮಾಣ ಸರಿಯಾದ ಪ್ರಮಾಣದಲ್ಲಿದ್ದರೆ ಅವು ವೀರ್ಯಾಣುಗಳ ಉತ್ಪಾದನೆಗೆ ಧಕ್ಕೆಯುಂಟು ಮಾಡುವ ಫ್ರೀರ್ಯಾಡಿಕಲ್‌ಗಳನ್ನು ನಾಶಮಾಡುತ್ತವೆ. ಇದಲ್ಲದೆ ಸತು ಕ್ಯಾಡ್‌ಮಿಯಮ್, ಮೆಗ್ನಿಷಿಯಂ ಮುಂತಾದ ಖನಿಜಗಳು ಹಾಗೂ ಸೋಡಿಯಂ, ಕ್ಯಾಲ್ಸಿಯಂ, ಪೊಟ್ಯಾಷಿಯಂ ನಂತಹ ಲವಣಗಳು ವೀರ್ಯಾಣುಗಳ ಉತ್ಪಾದನೆಗೆ ಸಹಾಯ ಮಾಡುತ್ತವೆ. ಇದಲ್ಲದೆ ನಿರಂತರವಾದ ಯೋಗಾಭ್ಯಾಸ, ವ್ಯಾಯಾಮ ಧ್ಯಾನ, ಚಿಂತನೆ, ಮುಂತಾದವುಗಳಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಅತ್ಯಂತ ಮುಖ್ಯವಾಗಿ ಎಲೆಕ್ಟ್ರಾನಿಕ್ ಉಪಕರಣಗಳ ಮಿತವಾದ ಬಳಕೆಯು ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ ಇದರ ಜೊತೆಯಲ್ಲಿ ಒತ್ತಡ ರಹಿತವಾದ ಬದುಕನ್ನು ಅಳವಡಿಸಿಕೊಳ್ಳವುದರಿಂದ ಸಾಮಾನ್ಯ ಆರೋಗ್ಯವನ್ನು ಕಾಪಾಡಿಕೊಳ್ಳವುದರ ಜೊತೆಯಲ್ಲಿ ಬಂಜೆತನವನ್ನು ತಡೆಗಟ್ಟಬಹುದು.



ಚಿತ್ರ1: ವಿರೂಪಗೊಂಡ ಪುರುಷರ ವೀರ್ಯಾಣುಗಳು



ಚಿತ್ರ2: ಮೊಬೈಲ್ ಫೋನುಗಳ ಹಾಗೂ ಲ್ಯಾಪ್ ಟಾಪ್‌ಗಳ ಬಳಕೆ ಮತ್ತು ಅದರ ಪರಿಣಾಮ



ಚಿತ್ರ3: ಫ್ರೀ ರ್ಯಾಡಿಕಲ್ಸ್‌ನ ಪರಿಣಾಮ:

ವರ್ಣತಂತುಗಳ ವ್ಯತ್ಯಾಸ	ಟಿ=200	%\
ಸಂಖ್ಯಾತ್ಮಕ ಲಿಂಗ ವರ್ಣತಂತುಗಳ ಬದಲಾವಣೆ	04	2
ರಚನಾತ್ಮಕ ವರ್ಣತಂತುಗಳ ಬದಲಾವಣೆ	02	1
ರಚನಾತ್ಮಕ ಲಿಂಗ ವರ್ಣತಂತುಗಳ ಬದಲಾವಣೆ	09	4.5
ಒಟ್ಟು ವರ್ಣತಂತುಗಳ ವ್ಯತ್ಯಾಸ	15	7.5
ಸರಿಯಾದ ಕ್ಯಾರಿಯೋಟೈಪ್	185	92.5

ಕೋಷ್ಟಕ 1: ವರ್ಣತಂತುವಿನಲ್ಲಿರುವ ತಳಿಗುಣಗಳ ರೂಪಾಂತರದ ಮಾಹಿತಿ

ಮರುಕಳಿಸುವ ಗರ್ಭಪಾತಕ್ಕೆ ಗಂಡಸೆಷ್ಟು ಕಾರಣ?

ಡಾ. ಮಾಲಿನಿ ಎಸ್. ಎಸ್

ಸಹಾಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಅನಾದಿ ಕಾಲದಿಂದಲೂ ಕಾಟುಂಬಿಕ ಕಷ್ಟ ಅನಿಷ್ಟಗಳಿಗೆ ಹೆಣ್ಣನ್ನು ದೂರುವ ಪ್ರವೃತ್ತಿ ಇದೆ. ಮಕ್ಕಳಾಗದ ದಂಪತಿಗಳಲ್ಲಿ ಹೆಣ್ಣಿಗೆ ಬಂಜೆಯೆಂಬ ಪಟ್ಟಸಟ್ಟಿ ಗಂಡಸು ಮ್ಮರು ಮದುವೆಯಾಗಿರುವ ನಿದರ್ಶನಗಳು ನೂರಾರು. ಮಕ್ಕಳಿಲ್ಲದ ಹೆಂಗಸನ್ನು ಬಂಜೆಯೆಂದು ಮೂದಲಿಸುವ ಸಮಾಜ ಅದಕ್ಕೆ ಹೆಂಗಸೇ ನೇರ ಕಾರಣವೆಂದು ಗುರುತಿಸುತ್ತದೆ. ಆದರೆ ದಂಪತಿಗಳ ಬಂಜೆತನ ಹಾಗೂ ಮರುಕಳಿಸುವ ಗರ್ಭಪಾತಕ್ಕೆ ಹೆಂಗಸಿನಷ್ಟೇ ಗಂಡಸು ಕಾರಣನೆಂಬುದು ಅಕ್ಷರಶಃ ಸತ್ಯ. ಮೂರು ಅಥವಾ ಮೂರಕ್ಕಿಂತ ಹೆಚ್ಚಿನ ಗರ್ಭಪಾತಗಳನ್ನು ನಾವು ಮರುಕಳಿಸುವ ಗರ್ಭಪಾತವೆನ್ನುತ್ತೇವೆ. ಮನುಷ್ಯರಲ್ಲಿ ಶೇಕಡಾ 15–20ರಷ್ಟು ಗರ್ಭಧಾರಣೆಗಳು ಗರ್ಭಪಾತದಲ್ಲಿ ಕೊನೆಯಾಗುತ್ತದೆ. ಗರ್ಭಪಾತವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗುತ್ತದೆ. ಮೊದಲನೆಯದು ಐದು ವಾರಕ್ಕೆ ಮೊದಲಿನ, ಐದರಿಂದ – ಹತ್ತುವಾರದ ಒಳಗಿನ ಹಾಗೂ ಹತ್ತುವಾರದ ನಂತರದ ಗರ್ಭಪಾತಗಳು. ಮರುಕಳಿಸುವ ಗರ್ಭಪಾತವು ಒಂದು ಕ್ಲಿಷ್ಟಕರವಾದ ಭಾವನಾತ್ಮಕ ಮೇದನೆಯಾದರೂ ಬಹುಪಾಲು ಗರ್ಭಪಾತಗಳಿಗೆ ನಿಖರವಾರ ಕಾರಣ ದೊರಕುವುದಿಲ್ಲ.

ಮಹಿಳೆಯರಿಗೆ ವಯಸ್ಸು ಹೆಚ್ಚಾದ ಹಾಗೆ ಗರ್ಭಧರಿಸುವ ಸಂಭವ ಕಡಿಮೆಯಿರುತ್ತದೆ. ಗರ್ಭಧರಿಸಿದರೂ ಅದು ಉಳಿಯುವ ಸಾಧ್ಯತೆ ಕಡಿಮೆ. ಹಾಗಾಗಿ ಹೆಚ್ಚಾದ ವಯಸ್ಸು ಗರ್ಭಪಾತಕ್ಕೆ ಕಾರಣವಾಗಬಹುದು. ಇದಲ್ಲದೆ ಆಹಾರ ಪದಾರ್ಥಗಳಿಗೆ ಬಣ್ಣ ನೀಡಲು ಬಳಸುವ ರಾಸಾಯನಿಕಗಳು, ಆಹಾರ ಕೆಡದಂತೆ ಬಳಸುವ ಕೆಲವು ಹಾನಿಕಾರಕ ರಾಸಾಯನಿಕಗಳು ಹಾಗೂ ಆಹಾರದ ರುಚಿಯನ್ನು ಹೆಚ್ಚಿಸಲು ಬಳಸುವ ರಾಸಾಯನಿಕ ಪದಾರ್ಥಗಳಿಂದ ಬೆಳೆಯುತ್ತಿರುವ ಭ್ರೂಣಕ್ಕೆ ಹಾನಿಯಾಗಿ ಗರ್ಭಪಾತವಾಗಬಹುದು. ಅಲ್ಲದೆ ಹಾರ್ಮೋನುಗಳ ಏರುಪೇರು, ವರ್ಣತಂತುಗಳ ವ್ಯತ್ಯಾಸ ಹಾಗೂ ಬೆಳೆಯುತ್ತಿರುವ ಭ್ರೂಣದಲ್ಲಿ ವರ್ಣತಂತುಗಳು ಹಾಗೂ ಜೀನ್‌ಗಳ ಸಂಖ್ಯೆ ಹಾಗೂ ಆಕಾರದ ವ್ಯತ್ಯಾಸದಿಂದ ಗರ್ಭಪಾತವಾಗಬಹುದು. ಮರುಕಳಿಸುವ ಗರ್ಭಪಾತದಲ್ಲಿ ಸುಮಾರು ಶೇಕಡಾ ಐವತ್ತರಷ್ಟು ಗರ್ಭಪಾತಗಳು, ವರ್ಣತಂತುಗಳ ವ್ಯತ್ಯಾಸದಿಂದ ಉಂಟಾಗುತ್ತದೆ. ಮರುಕಳಿಸುವ ಗರ್ಭಪಾತಕ್ಕೆ ಗಂಡಸು ಹೇಗೆ ಕಾರಣ ಕರ್ತನಾಗುತ್ತಾನೆ? ವೀರ್ಯಾಣುವಿನಲ್ಲಿ ಯಾವ ರೀತಿ ಮಾರ್ಪಾಡುಗಳು ಮರುಕಳಿಸುವ ಗರ್ಭಪಾತಕ್ಕೆ ಕಾರಣವಾಗಿವೆ? ಇದಲ್ಲದೆ ವೀರ್ಯಾಣುವಿನಲ್ಲಿ ಕಂಡುಬರುವ ಇತರೆ ತೊಂದರೆಗಳು ಹೇಗೆ ಮರುಕಳೀಸುವ ಗರ್ಭಪಾತಕ್ಕೆ ಕಾರಣವಾಗಿದೆ? ಮರುಕಳಿಸುವ ಗರ್ಭಪಾತದಲ್ಲಿ ಗಂಡಸಿನ ಪಾತ್ರವನ್ನು ಹೇಗೆ ದೃಢಪಡಿಸಬಹುದು? ವೀರ್ಯಾಣುವಿನಿಂದಾಗುವ ತೊಂದರೆಗಳನ್ನು ಯಾವ ಪರೀಕ್ಷೆಗಳ ಮೂಲಕ ತಿಳಿದುಕೊಳ್ಳಬಹುದು? ಮುಂತಾದುವುಗಳ ಕುರಿತ ಸಂಶೋಧನೆಗಳ ಸಾರವನ್ನು ಈ ಪ್ರಬಂಧದ ರೂಪದಲ್ಲಿ ಸಮ್ಮೇಳನದಲ್ಲಿ ಮಂಡಿಸಲಾಗುವುದು.

ಪೀಠಿಕೆ: ಅನಾದಿ ಕಾಲದಿಂದಲೂ ಕೌಟುಂಬಿಕ ಕಷ್ಟ ಅನಿಷ್ಟಗಳಿಗೆ ಹೆಣ್ಣನ್ನು ದೂರುವ ಪ್ರವೃತ್ತಿ ಇದೆ. ಮಕ್ಕಳಾಗದ ದಂಪತಿಗಳಲ್ಲಿ ಹೆಣ್ಣಿಗೆ ಬಂಜೆಯೆಂಬ ಪಟ್ಟಕಟ್ಟಿ ಗಂಡಸು ಮರು ಮದುವೆಯಾಗಿರುವ ನಿದರ್ಶನಗಳು ನೂರಾರು ಮಕ್ಕಳಿಲ್ಲದ ಹೆಂಗಸನ್ನು ಬಂಜೆಯೆಂದು ಮೂದಲಿಸುವ ಸಮಾಜ ಅದಕ್ಕೆ ಹೆಂಗಸೇ ನೇರ ಕಾರಣವೆಂದು ಗುರುತಿಸುತ್ತದೆ. ಆದರೆ ದಂಪತಿಗಳ ಬಂಜೆತನ ಹಾಗೂ ಮರುಕಳಿಸುವ ಗರ್ಭಪಾತಕ್ಕೆ ಹೆಂಗಸಿನಷ್ಟೇ ಗಂಡಸು ಕಾರಣನೆಂಬುದು ಅಕ್ಷರಶಃ ಸತ್ಯ.

ಮೂರು ಅಥವಾ ಮೂರಕ್ಕಿಂತ ಹೆಚ್ಚಿನ ಗರ್ಭಪಾತಗಳನ್ನು ನಾವು ಮರುಕಳಿಸುವ ಗರ್ಭಪಾತವೆನ್ನುತ್ತೇವೆ. ಮನುಷ್ಯರಲ್ಲಿ ಶೇಕಡಾ 15–20ರಷ್ಟು ಗರ್ಭಧಾರಣೆಗಳು ಗರ್ಭಪಾತದಲ್ಲಿ ಕೊನೆಯಾಗುತ್ತದೆ. ಗರ್ಭಪಾತವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗುತ್ತದೆ. ಮೊದಲನೆಯದು ಐದು ವಾರಕ್ಕೆ ಮೊದಲಿನ, ಐದರಿಂದ – ಹತ್ತುವಾರದ ಒಳಗಿನ ಹಾಗೂ ಹತ್ತುವಾರದ ನಂತರದ ಗರ್ಭಪಾತಗಳು.

ಮರುಕಳಿಸುವ ಗರ್ಭಪಾತವು ಒಂದು ಕ್ಲಿಷ್ಟಕರವಾದ ಭಾವನಾತ್ಮಕ ಮೇದನೆಯಾದರೂ ಬಹುಪಾಲು ಗರ್ಭಪಾತಗಳಿಗೆ ನಿಖರವಾರ ಕಾರಣ ದೊರಕುವುದಿಲ್ಲ.

ಮರುಕಳಿಸುವ ಗರ್ಭಪಾತಗಳಿಗೆ ಕಾರಣಗಳು: ಮಹಿಳೆಯರಿಗೆ ವಯಸ್ಸು ಹೆಚ್ಚಾದ ಹಾಗೆ ಗರ್ಭಧರಿಸುವ ಸಂಭವ ಕಡಿಮೆಯಿರುತ್ತದೆ. ಗರ್ಭಧರಿಸಿದರೂ ಅದು ಉಳಿಯುವ ಸಾಧ್ಯತೆ ಕಡಿಮೆ. ಹಾಗಾಗಿ ಹೆಚ್ಚಾದ ವಯಸ್ಸು ಗರ್ಭಪಾತಕ್ಕೆ ಕಾರಣವಾಗಬಹುದು. ಇದಲ್ಲದೆ ಆಹಾರ ಪದಾರ್ಥಗಳಿಗೆ ಬಣ್ಣ ನೀಡಲು ಬಳಸುವ ರಾಸಾಯನಿಕಗಳು, ಆಹಾರ ಕೆಡದಂತೆ ಬಳಸುವ ಕೆಲವು ಹಾನಿಕಾರಕ ರಾಸಾಯನಿಕಗಳು ಹಾಗೂ ಆಹಾರದ ರುಚಿಯನ್ನು ಹೆಚ್ಚಿಸಲು ಬಳಸುವ ರಾಸಾಯನಿಕ ಪದಾರ್ಥಗಳಿಂದ ಬೆಳೆಯುತ್ತಿರುವ ಭ್ರೂಣಕ್ಕೆ ಹಾನಿಯಾಗಿ ಗರ್ಭಪಾತವಾಗಬಹುದು. ಇವೆಲ್ಲವು ಹಾರ್ಮೋನುಗಳ ಏರುಪೇರು, ವರ್ಣತಂತುಗಳ ವ್ಯತ್ಯಾಸ ಹಾಗೂ ಬೆಳೆಯುತ್ತಿರುವ ಭ್ರೂಣದಲ್ಲಿ ವರ್ಣತಂತುಗಳು ಹಾಗೂ ಜೀನ್‌ಗಳ ಸಂಖ್ಯೆ ಹಾಗೂ ಆಕಾರದ ವ್ಯತ್ಯಾಸದಿಂದ ಗರ್ಭಪಾತವಾಗಬಹುದು. ಮರುಕಳಿಸುವ ಗರ್ಭಪಾತದಲ್ಲಿ ಸುಮಾರು ಶೇಕಡಾ ಐವತ್ತರಷ್ಟು ಗರ್ಭಪಾತಗಳು, ವರ್ಣತಂತುಗಳ ವ್ಯತ್ಯಾಸದಿಂದ ಉಂಟಾಗುತ್ತದೆ. ಮರುಕಳಿಸುವ ಗರ್ಭಪಾತಕ್ಕೆ ಗಂಡಸು ಹೇಗೆ ಕಾರಣ ಕರ್ತವಾಗುತ್ತಾನೆ? ವೀರ್ಯಾಣುವಿನಲ್ಲಿ ಯಾವ ರೀತಿ ಮಾರ್ಪಾಡುಗಳು ಮರುಕಳಿಸುವ ಗರ್ಭಪಾತಕ್ಕೆ ಕಾರಣವಾಗಿವೆ? ಇದಲ್ಲದೆ ವೀರ್ಯಾಣುವಿನಲ್ಲಿ ಕಂಡುಬರುವ ಇತರೆ ತೊಂದರೆಗಳು ಹೇಗೆ ಮರುಕಳೀಸುವ ಗರ್ಭಪಾತಕ್ಕೆ ಕಾರಣವಾಗಿದೆ? ಮರುಕಳಿಸುವ ಗರ್ಭಪಾತದಲ್ಲಿ ಗಂಡಸಿನ ಪಾತ್ರವನ್ನು ಹೇಗೆ ದೃಢಪಡಿಸಬಹುದು? ವೀರ್ಯಾಣುವಿನಿಂದಾಗುವ ತೊಂದರೆಗಳನ್ನು ಯಾವ ಪರೀಕ್ಷೆಗಳ ಮೂಲಕ ತಿಳಿದುಕೊಳ್ಳಬಹುದು?

ವಿಶ್ಲೇಷಣೆ:

ಮರುಕಳಿಸುವ ಗರ್ಭಪಾತಕ್ಕೆ ಗಂಡಸು ಹೇಗೆ ಕಾರಣ: ಭ್ರೂಣವು ವೀರ್ಯಾಣು ಹಾಗೂ ಅಂಡಾಣುವಿನ ಮಿಲನದಿಂದ ಹುಟ್ಟುತ್ತದೆ. ಭ್ರೂಣದಲ್ಲಿ ಶೇಕಡಾ 50% ತಂದೆಯ ಜೀನೋಮ್ ಇದ್ದು ಇದು ಪ್ಲಾಸೆಂಟಿದ ಬೆಳವಣಿಗೆ ಹಾಗೂ ಭ್ರೂಣದ ಬೆಳವಣಿಗೆಗೆ ಸಹಾಯ ಮಾಡುತ್ತದೆ. ವೀರ್ಯಾಣುವಿನಲ್ಲಿನ ವರ್ಣತಂತುಗಳು ಹಾಗೂ ಅನುವಂಶೀಯ ವಸ್ತು ಡಿ.ಎನ್.ಎ. ನಲ್ಲಿ ಏನಾದರೂ ಏರುಪೇರಾದರೂ ಗರ್ಭಧಾರಣೆಯಾದಾಗ ಅದು ಗರ್ಭಪಾತದಲ್ಲಿ ಕೊನೆಯಾಗುತ್ತದೆ. ತಂದೆ ತಾಯಿಗಳಲ್ಲಿ ಕಂಡು ಬರುವ ವರ್ಣತಂತುಗಳ ವ್ಯತ್ಯಾಸವು ಮೊದಲ ಮೂರು ತಿಂಗಳೊಳಗಾಗುವ ಗರ್ಭಪಾತದ ಬಹು ಮುಖ್ಯ ಕಾರಣಗಳಲ್ಲೊಂದು.

ಮರುಕಳಿಸುವ ಗರ್ಭಪಾತಕ್ಕೆ ವೀರ್ಯಾಣುವಿನ ಮಾರ್ಪಾಡುಗಳು: ವೀರ್ಯಾಣುವಿನಲ್ಲಿರುವ ವರ್ಣತಂತುಗಳ ಸೆಂಟ್ರೋಮಿಯರ್‌ನ ವ್ಯತ್ಯಾಸಗಳು, ಟೆಲೋಮಿಯರ್‌ನ ಕುಬ್ಜತೆ, ಆರ್. ಎನ್. ಎನ್ ಕೊರತೆ ಅಥವಾ ಇಲ್ಲದಿರುವಿಕೆ, ಕ್ರೋಮ್ಯಾಟಿನ್ ಜೋಡಣೆಯಲ್ಲಿ ವ್ಯತ್ಯಾಸಗಳು ವೀರ್ಯಾಣುವನ್ನು ನಿಷ್ಕ್ರಿಯಗೊಳಿಸುತ್ತದೆ. ಇಂಥ ವೀರ್ಯಾಣು ಅಂಡಾಣುವಿನ ಜೊತೆ ಸೇರಿ ಭ್ರೂಣದ ಜನನಕ್ಕೆ ಕಾರಣವಾದರೆ ಅದರ ಬೆಳವಣಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮರುಕಳಿಸುವ ಗರ್ಭಪತವಾಗುವ ಮಹಿಳೆಯರ ಗಂಡಂದಿರಲ್ಲಿ ವೀರ್ಯಾಣುವಿನ ವರ್ಣತಂತುಗಳಲ್ಲಿ ವ್ಯತ್ಯಾಯ, ಕ್ರೋಮ್ಯಾಟಿನ್ ಜೋಡಣೆಯಲ್ಲಿ ಅಪಸರಣಿ, ಡಿ.ಎನ್.ಎ ತುಂಡಾಗುವಿಕೆ, ಹೆಚ್ಚಿದ ಜೀವಕೋಶಗಳ ಇಚ್ಚಾಮರಣ (ಅಪೋಪ್‌ಟಾಸಿಸ್) ಮತ್ತು ವೀರ್ಯಾಣುವಿನ ಆಕಾರ, ಗುಣ, ಗಾತ್ರ ಕಾರ್ಯದಲ್ಲಿ ವ್ಯತ್ಯಾಸವು ಕಂಡು ಬರುತ್ತವೆ. ಇತ್ತೀಚಿನ ಸಂಶೋಧನೆಗಳು ಹೆಚ್ಚಿನ ವೀರ್ಯಾಣುವಿನಲಿ ಕುಗ್ಗುವಿಕೆ, ಕೋಶಾವಕಾಶ ಹೆಚ್ಚಳ, ಕ್ರೊಮ್ಯಾಟಿನ್ ಕುಗ್ಗುವಿಕೆಯಂಥ ವ್ಯತ್ಯಾಸಗಳೂ ಮರುಕಳಿಸುವ ಗರ್ಭಪಾತಕ್ಕೆ ಕಾರಣವೆಂದು ಪತ್ತೆಹಚ್ಚಿವೆ.

ಇದಲ್ಲದೆ ವೀರ್ಯಾಣುವಿನಲ್ಲಿ ಕಂಡುಬರುವ ಇತರೆ ತೊಂದರೆಗಳು ಹೇಗೆ ಮರುಕಳೀಸುವ ಗರ್ಭಪಾತಕ್ಕೆ ಕಾರಣವಾಗಿದೆ?: ವೀರ್ಯಾಣುಗಳು ಅತ್ಯಂತ ಸೂಕ್ಷ್ಮ ಜೀವಕೋಶಗಳಾಗಿದ್ದು ಅತಿ ಸುಲಭವಾಗಿ ತೊಂದರೆಗಳಾಗುತ್ತದೆ. ಜೀವಕೋಶದ ಕೋಶಪೊರೆಯು ಅತಿ ಹೆಚ್ಚಿನ **ಪಾಲಿ ಅನ್ಸ್ಯಾಚುರೇಟೆಡ್ ಫ್ಯಾಟಿ ಆಸಿಡ್** ಹೊಂದಿರುವುದರಿಂದ **ರಿಯಾಕ್ಟಿವ್ ಆಕ್ಸಿಜನ್ ಸ್ಪೀಷಿಸ್** ಅವುಗಳೊಂದಿಗೆ ಪ್ರತಿಕ್ರಯಿಸಿ ಜೀವಕೋಶಗಳನ್ನು ನಾಶಮಾಡುತ್ತದೆ. ಹಾಗಾಗಿ ರಿಯಾಕ್ಟಿವ್ ಆಕ್ಸಿಜನ್ ಸ್ಪೀಶೀಸ್‌ನಿಂದ ವೀರ್ಯಾಣು ಹೆಚ್ಚಿನ ತೊಂದರೆಗೆ ಒಳಪಡುತ್ತದೆ. ಇದಲ್ಲದೆ ವೀರ್ಯಾಣುವಿನಲ್ಲಿ ಡಿ.ಎನ್.ಎ. ಯನ್ನು ಹಾಳು ಮಾಡುವುದನ್ನು ತಡೆಗಟ್ಟುವ ಕಿಣ್ವಗಳು ಹೆಚ್ಚಿನ ಮಟ್ಟಿಗೆ ಇರುವುದು ಮತ್ತು ದುರ್ಬಲವಾಗಿರುವುದರಿಂದ ವೀರ್ಯಾಣುಗಳು ಬಹು ಬೇಗ ನಶಿಸುವುದಲ್ಲದೆ ಅವುಗಳ ಫಲವತ್ತತೆಯು ಕುಂಠಿತವಾಗುತ್ತದೆ. ಆದ್ದರಿಂದ ವೀರ್ಯಾಣುವಿನ ಪ್ಲಾಸ್ಮಾದಲ್ಲಿ ಆಂಟಿಆಕ್ಸಿಡೆಂಟ್‌ಗಳು ಹೆಚ್ಚಿನ ಪ್ರಮಾಣದಲ್ಲಿದ್ದು ಇದು ವೀರ್ಯಾಣುವಿನ ಡಿ.ಎನ್.ಎ. ಛಿದ್ರವಾಗುವುದನ್ನು ತಡೆಗಟ್ಟುತ್ತದೆ. ಆದರೆ ಮುಖ್ಯವಾಗಿ **7–hydro-8-oxyzo** deoxy guanosis (8-oxoder) ಎಂಬ ಮುಖ್ಯ **ಆಕ್ಸಿಡೇಟಿವ್ ಪ್ರಾಡಕ್ಟ್** ವೀರ್ಯಾಣುವಿನಲ್ಲಿರುವ ಡಿ.ಎನ್.ಎ.ಯನ್ನು ಛಿದ್ರಮಾಡುತ್ತದೆ. ಇದಲ್ಲದೆ ವಿರೂಪಗೊಂಡ ವೀರ್ಯಾಣುಗಳು ಮತ್ತು ಹೆಚ್ಚಿರುವ ಬಿಳಿ ರಕ್ತಕಣಗಳು ವೀರ್ಯಾಣುವನ್ನು ವಿರೂಪಗೊಳಿಸುವುದರಿಂದ ವೀರ್ಯಾಣುವಿನ ಕಾರ್ಯ ಮತ್ತು ಗುಣ ಇಳಿಮುಖವಾಗಿ ಇಂತಹ ವೀರ್ಯಾಣುಗಳು ಗರ್ಭಧಾರಣೆಯಲ್ಲಿ ಭಾಗವಹಿಸಿದಾಗ ಗರ್ಭಪಾತವಾಗುವ ಸಂಭವವು ಹೆಚ್ಚಾಗಿರುತ್ತದೆ.

ಇದಲ್ಲದೆ ಧೂಮಪಾನ, ಮದ್ಯಪಾನ ಸೋಂಕುಗಳು, ವೃರಿಕೋಸೀಲ್ ಎಂಬ ನರದ ತೊಂದರೆಗಳು ಗಂಡಸಿನಲ್ಲಿ ಕಂಡು ಬಂದಾಗ ಅದು ಅವರ ಸಂಗಾತಿಯಲ್ಲಿ ಗರ್ಭಪಾತವನ್ನುಂಟು ಮಾಡುತ್ತದೆ.

ವೀರ್ಯಾಣು ಪರೀಕ್ಷೆಗಳಿಂದ ಗರ್ಭಪಾತದಲ್ಲಿ ಗಂಡಸಿನ ಪಾತ್ರವೇನು ಎಂಬುದನ್ನು ಬಹಳ ಸುಲಭವಾಗಿ ತಿಳಿದುಕೊಳ್ಳಬಹುದು. ವೀರ್ಯಾಣುಗಳ ಚಲನೆ, ಕಾರ್ಯನಿರ್ವಹಣೆಗಳನ್ನು ಪರೀಶೀಲನೆ ಮಾಡುವುದರ ಜೊತೆಯಲ್ಲಿ 'ವೈ' ವರ್ಣತಂತುವಿನಲ್ಲಿ ಏನ್ನಾದರೂ ತೊಂದರೆ ಇದೆಯೇ ಎಂಬುದನ್ನು ಪರಿಶೀಲನೆ ಮಾಡುವುದರಿಂದ ನಮಗೆ ಕಾರಣ ತಿಳಿದು ಬರುತ್ತದೆ.

ವೀರ್ಯಾಣುವಿನಿಂದಾಗುವ ತೊಂದರೆಗಳು ಮತ್ತು ಲಭ್ಯವಿರುವ ಪರೀಕ್ಷೆಗಳು: ಭೌತಿಕ ಗುಣಲಕ್ಷಣಗಳು, ರಾಸಾಯನಿಕ ಗುಣಲಕ್ಷಣಗಳು, ಚಲನೆ,

ಕಾರ್ಯನಿರ್ವಹಣೆಗಳ ಪರೀಕ್ಷೆಗಳು, ವರ್ಣತಂತುಗಳ ಪರೀಕ್ಷೆಗಳು, ವೈ ವರ್ಣತಂತುವಿನ ಪರೀಕ್ಷೆ, ಜೀವರಸಾಯನಿಕ, ಕಿಣ್ವಗಳ ಪರೀಕ್ಷೆ, ವೀರ್ಯಾಣು ಪ್ಲಾಸ್ಮದಲ್ಲಿ ಪ್ರಕ್ಯೋಸ್, ಸಿಟ್ರಿಕ್ ಆಮ್ಲ, ಇನ್‌ಹಿಬಿನ್‌ಗಳ ಪರೀಕ್ಷೆ, ಇಸ್ಟ್ರೋಜನ್, ಎಫ್.ಎಸ್.ಹೆಚ್, ಎಲ್. ಎಚ್. ಮತ್ತು ಹಲವು ಹಾರ್ಮೋನುಗಳ ಪರೀಕ್ಷೆಗಳು, ಆಂಟಿಸ್ಪರ್ಮ್ ಆಂಟಿ ಪ್ರತಿಕಾಯ ಪತ್ತೆ ಹಚ್ಚುವಿಕೆ, ಸೂಪರ್ ಆಕ್ಸೈಡ್ ಡಿಸ್‌ಮ್ಯುಟೇಸ್, ಕ್ಯಟಲೇಸ್ ಮುಂತಾದ ಕಿಣ್ವಗಳ ಅಧ್ಯಯನವು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವೀರ್ಯಾಣುವಿನ ಸಂಖ್ಯೆ, ಚಲನೆ, ಕಾರ್ಯನಿರ್ವಹಣೆ ಮತ್ತು ಗುಣಲಕ್ಷಣಗಳ ಬಗ್ಗೆ ಮಾಹಿತಿ ನೀಡುತ್ತದೆ. ಈ ಪರೀಕ್ಷೆಗಳ ಫಲಿತಾಂಶ ದೊರೆತ ನಂತರ ಸಮಸ್ಯೆಯೇನಾದರೂ ಇದ್ದ ಪಕ್ಷದಲ್ಲಿ ಇನ್ನೂ ಹೆಚ್ಚಿನ ಆಧುನಿಕ ಪರೀಕ್ಷೆಗಳ ಮೊರೆ ಹೋಗಬಹುದು.



ಚಿತ್ರ 1: ವಿರೂಪಗೊಂಡ ವೀರ್ಯಾಣುಗಳು



ಚಿತ್ರ 2: ವಿರೂಪಗೊಂಡ ವೀರ್ಯಾಣುಗಳು

ಪರೀಕ್ಷೆಗಳು		ಸಂಖ್ಯೆ	ಸರಾಸರಿ
ಪ್ರಮಾಣ (Volume)	RPL	10	2.3
	Control	13	3.6
ಮೀರ್ಯಾಣು ಸಂಖ್ಯೆ (sperm count)	RPL	10	24.8
	Control	13	44.4
ಕಾರ್ಯಸಾಧ್ಯತೆ (viability)	RPL	10	41.4
	Control	13	57.5
ವೀರ್ಯಾಣು ಪೊರೆಯ ಪರೀಕ್ಷೆ	RPL	10	45.1
	Control	13	71.6
ವೀರ್ಯಾಣುಗಳು ಕ್ರೊಮಾಟಿನ್ ಪರೀಕ್ಷೆ	RPL	10	63
	Control	13	80

ಕೋಷ್ಟಕ 1: ಕ್ರಿಯಾತ್ಮಕ ವೀರ್ಯಾಣುಗಳ ಪರೀಕ್ಷೆ

ನಾಟ್ಯಯೋಗದ ಮೂಲಕ ಚಿಕಿತ್ಸೆ

ಡಾ.ಚೇತನಾ ರಾಧಾಕೃಷ್ಣ.ಪಿ.ಎಂ
ಅತಿಥಿ ಉಪನ್ಯಾಸಕರು, ಕೆ.ಎಸ್.ಜಿ.ಹಚ್. ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳಿಗೆ ಪ್ರಮುಖವಾಗಿರುವ ಶಾಸ್ತ್ರೀಯ ನೃತ್ಯಪ್ರಕಾರಗಳು, ಮಾನವ ಜೀವನ ಶೈಲಿಯ ಕ್ರಮವನ್ನು ಸಮೀಕರಿಸುವಲ್ಲಿ ಅತ್ಯುನ್ನತ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಮಾನವನ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಪ್ರತ್ಯಕ್ಷವಾಗಿ ಉತ್ತಮ ಪರಿಣಾಮವನ್ನು ಬೀರಿರುವುದು ನಾವು ಕಂಡುಕೊಳ್ಳಬಹುದು.

ವೇದೋಪವೇದೈಃ ಸಂಬಂಧೋ
ನಾಟ್ಯವೇದ ಮಹಾತ್ಮನಾ
ಏವಂ ಭಗವತಃ ಸೃಷ್ಟೋ
ಬ್ರಹ್ಮಣಾ ಸರ್ವವೇದಿನಃ

ನಾಟ್ಯಶಾಸ್ತ್ರವು ನಾಟ್ಯವೇದದಿಂದ ಬಂದಂತಹದ್ದು. ನಾಟ್ಯವೇದವು ಚತುರ್ವಿಧ ವೇದಗಳಿಂದ ಬಂದಂತಹ ಉಪವೇದ. ಆರ್ಯುವೇದ, ವಾಸ್ತು ಇತ್ಯಾದಿ ಉಪವೇದಗಳಂತೆಯೇ ಇದು ಸಹ ಒಂದು ಉಪವೇದ. ಋಗ್‌ವೇದ, ಶಬ್ದಗಳನ್ನು ಹಾಗೂ ಅವುಗಳ ಪರಿಣಾಮಗಳನ್ನು ಸೂಚಿಸುತ್ತವೆ.

ವಿಶ್ವದ ಲಯ ಹಾಗೂ ಅವುಗಳ ಪರಿಣಾಮಗಳನ್ನು ಸಾಮವೇದದಲ್ಲಿ ಕಾಣಬಹುದು. ಯಜುರ್ವೇದ ಏಕಾಗ್ರತೆ ಅಥವಾ ಮಾನಸಿಕ ಸಾಮರ್ಥ್ಯಗಳ ಬಗ್ಗೆ ಸೂಚಿಸುತ್ತದೆ. ಅಥರ್ವವೇದವು ಶರೀರದ ಅಂಶಗಳನ್ನು, ಮಾನವ ದೇಹದ ಅಂಶಗಳನ್ನು ಸೂಚಿಸುತ್ತದೆ. ಇತರ ಮೂರು ವೇದಗಳ ಆಧಾರದಿಂದ ಈ ವೇದವು ನಿಲುವು ಗೊಳ್ಳುತ್ತದೆ. ಆತ್ಮದ ಪಾವಿತ್ರ್ಯತೆಯನ್ನು ಸಾಧಿಸಿ ಪರಮಾತ್ಮನಲ್ಲಿ ಆತ್ಮವನ್ನು ಲೀನಮಾಡುವುದಕ್ಕೆ ಮಾನವ ಶರೀರ ಒಂದು ಮಾಧ್ಯಮ. 'ಯೋಗ' ಎಂಬ ಪದ ಆತ್ಮದ ಪರಿಪೂರ್ಣತೆ ಯನ್ನು ಸೂಚಿಸುತ್ತದೆ. ಮಾನವ ಶರೀರವೇ 'ಯೋಗ'ಕ್ಕೆ ಸಾಧನವಾಗಿದ್ದರಿಂದ ಮಾನವ ಶರೀರದ ಸೌಷ್ಠವ ಹಾಗೂ ಆರೋಗ್ಯವು ಪ್ರತಿಯೊಬ್ಬ ಮಾನವನ ಹಕ್ಕು. ಮನಸ್ಸು–ದೇಹ–ಆತ್ಮಗಳ ಒಂದು ಸಮತೋಲನತ್ವ, ಆರೋಗ್ಯಕರ ಜೀವನಕ್ಕೆ ಸಹಾಯಕವಾಗುತ್ತದೆ. ಮನಸ್ಸು–ದೇಹ–ಆತ್ಮಗಳ ಸಮತೋಲನವಿಲ್ಲದಾಗ ಅನಾರೋಗ್ಯಕಂಡುಬರುತ್ತದೆ. ನಾಟ್ಯಯೋಗ ಅಥವಾ ನಾಟ್ಯವೇದ ಈ ಸಾಧನೆಗೆ ಮಾರ್ಗದರ್ಶಿಯಾಗಿದೆ. ಈ ಒಂದು ಪರಿಕಲ್ಪನೆಯ ಆಧಾರದಮೇಲೆ ನಾಟ್ಯಯೋಗದ ಮೂಲಕ ಚಿಕಿತ್ಸೆ ಕೊಡುವುದರ ಬಗ್ಗೆ ಈ ಒಂದು ಪ್ರಬಂಧವನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

ಸಮತೋಲನದ ಸುಧಾರಣೆ: ಎಲ್ಲಾ ಶಾಸ್ತ್ರೀಯ ನೃತ್ಯಗಳಲ್ಲಿ ವಿವಿಧ

ಭಂಗಿಗಳು ಇರುತ್ತವೆ. ನೃತ್ಯಗಾರರು ತಮ್ಮ ಪ್ರದರ್ಶನದುದ್ದಕ್ಕು ನಾಜೂಕಾದ ಸಮತೋಲನ ಕಾಯ್ದುಕೊಳ್ಳುವ ಅಗತ್ಯವಿರುತ್ತದೆ. ನೃತ್ಯಗಾರರ ವಿವಿಧ ದೇಹ ಚಲನೆಗಳ ಸಮತೋಲನ ಸುಧಾಸಲು ಕರಣಗಳು ಬಹಳ ಉಪಯೋಗವಾಗುತ್ತದೆ. ಕರಣಗಳನ್ನು ಮಾಡುವಾಗ ನೃತ್ಯಪಟುವು ಕೆಲವು ಸಮಯ ಒಂದೇ ಭಂಗಿಯಲ್ಲಿ ಉಳಿಯುವ ಅಗತ್ಯವಿರುತ್ತದೆ, ಕೆಲವು ಸಲ ನೃತ್ಯ ಪಟುವು ಕೆಲವು ಸೆಕೆಂಡುಗಳ ಕಾಲ ವಿವಿಧ ಭಂಗಿಗಳಲ್ಲಿ ಒಂದೇ ಕಾಲಿನಲ್ಲಿ ನಿಂತು ಸಮತೋಲನ ಪ್ರದರ್ಶಿಸಬೇಕಾಗುತ್ತದೆ.

ನೃತ್ಯಪಟು ಅಲ್ಲದವರು ಆರಂಭಿಕ ಕೆಲವು ಆಚರಣೆಗಳೊಂದಿಗೆ ತಮ್ಮ ದೇಹದ ಸಮತೋಲನ ನಿರ್ವಹಿಸಲು ಸಹಕಾರಿಯಾಗುತ್ತದೆ. ವೈದ್ಯಕೀಯ ಪರಿಭಾಷೆಯಲ್ಲಿ ದೇಹದ ಸಮತೋಲನ ಕಿವಿಯ ಒಳಭಾಗದಲ್ಲಿರುವ 'ಆಂತರಿಕ ವ್ಯವಸ್ಥೆ' ಯನ್ನು ಸಂಬಂಧಿಸಿದೆ. ಇದು ಪ್ರಮುಖ ಬಾಹ್ಯ ಸಂವೇದನಾ ಅಂಗ ಮತ್ತು ಕೇಳುವ ಮತ್ತು ನೋಡುವ ಗುಣಮಟ್ಟವು ಕರಣಗಳಿಂದ ಉತ್ತಮಗೊಳ್ಳುತ್ತದೆ. ಯೋಗ ವಿಜ್ಞಾನದ ಪ್ರಕಾರ, 'ಮಣಿಪೂರಕ ಚಕ್ರ' ಅಥವಾ ಹೊಕ್ಕಳು ಸ್ಥಳದಲ್ಲಿ ನರದ ಕೇಂದ್ರ ಬಿಂದುವು ಮಾನವನ ದೇಹದ ಸಮತೋಲನದ ಮುಖ್ಯಭಾಗವಾಗಿದೆ. ಇದು ಸಂಗೀತದ ಏಳು ಸ್ವರಗಳಲ್ಲಿ ಗಂಧಾರಾ ಅಥವಾ ಗಾಂಧಾರ ಎಂದು ಹೇಳಲ್ಪಟ್ಟಿದೆ. ಈ ವಿಭಾಗದಿಂದ ಗಂಧಾರ ಸಂವೇದನೆಗೆ ಮುಖ್ಯ ಪ್ರಾತಿನಿಧ್ಯ ಮತ್ತು ಸಂವೇದನಾ ಪದ್ಧತಿ ಮುಖ್ಯವಾಗಿ ಹೊರಡುತ್ತದೆ. ಕರಣದ ಆಚರಣೆಯಿಂದ ಈ ಶಕ್ತಿ ಕೇಂದ್ರದ ಶಕ್ತಿಯನ್ನು ತುಂಬಲು ಬಹಳ ಸಹಾಯಕವಾಗುತ್ತದೆ ಮತ್ತು ಇದು ಉತ್ತಮ ಭೌತಿಕ ದೇಹದ ಹಾರ್ಮೋನ್ ಸಮತೋಲನ ಮತ್ತು ನಿಯಂತ್ರಿಸಲು ಉತ್ತಮ ಸಹಕಾರಿಯಾಗುತ್ತದೆ.

ಆರಂಭಿಕ ಹಂತದ ನೃತ್ಯ ಆಭ್ಯಾಸಗಳಲ್ಲಿ ವಿವಿಧ ರೀತಿಯ ಉತ್ತಮ ಸಮತೋಲನದಿಂದ ದೇಹದ ಅಭಿವೃದ್ಧಿಗೆ ಮತ್ತು ನಿಯಂತ್ರಣಕ್ಕೆ ಬಳಸಬಹುದು. ಉನ್ನತ ಮಟ್ಟದ ಅಭ್ಯಾಸವು, ದೇಹದ ಅಭಿವೃದ್ಧಿಗೆ ಹಾಗೂ ಸಮತೋಲನಕ್ಕೆ ಉತ್ತಮ ಸಹಕಾರಿಯಾಗುತ್ತದೆ.

ಸಮತೋಲನದ ಸುಧಾರಣೆ: ಶಾಸ್ತ್ರೀಯ ನೃತ್ಯವು ಮುಖದ ಅಭಿನಯ ಮತ್ತು ಮತ್ತು ಮೂಕಾಭಿನಯಕ್ಕೆ ಸಂಬಂಧಿಸಿದೆ. ಈ ನೃತ್ಯ ಪ್ರಕಾರಗಳಲ್ಲಿ ಹಾವಭಾವಗಳು ಮತ್ತು ಮುಖದ ಅಭಿನಯಗಳ ಸಂವಹನ ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಬಳಸಲಾಗುತ್ತದೆ, ನೃತ್ಯದಲ್ಲಿ ವಿವಿಧ ಮುದ್ರೆಗಳನ್ನು ಬಳಸಲಾಗುತ್ತದೆ. ಮುದ್ರೆಗಳಿಂದ ದೇಹದ ವಿವಿಧ ಅಂಗಾಂಗಗಳ ಕೆಲಸ ಮತ್ತು ಸಾಮ್ಯತೆ ಸುಧಾರಿಸುತ್ತದೆ. ನೃತ್ಯ ರೂಪದಲ್ಲಿ ಈ ಮುಖಭಾವಗಳನ್ನು ವ್ಯಕ್ತಪಡಿಸುವುದು ಸ್ನಾಯುಗಳ ಚಲನೆಗಳ ಅಭ್ಯಾಸದಿಂದ. ಇದು ಮನಸ್ಸು ಮತ್ತು ಅದರ ಗುಣಗಳಿಗೆ ಸಂಬಂಧಿಸಿದೆ. ಇದನ್ನು ನವರಸ ಎಂದು ಕರೆಯಲಾಗುತ್ತದೆ. ಇದು ದೇಹದ ಸ್ಥಿತಿಯನ್ನು ನಿಯಂತ್ರಣದಲ್ಲಿಡಲು ಮತ್ತು ವಿವಿಧ ಹಾರ್ಮೋನುಗಳನ್ನು ಸೃಷ್ಟಿಸಲು ಸಹಕಾರಿಯಾಗಿದೆ. ಇದು ಅಭಿನಯವನ್ನು ಕೂಡ ನಿಯಂತ್ರಿಸಲು ಸಹಕಾರಿಯಾಗಿದೆ. ನರ್ತನ ಮಾಡದಿರುವವರು, ಈ ರೀತಿಯ ಸ್ನಾಯುಗಳ ಚಲನೆಗಳ ಅಭ್ಯಾಸ ಮಾಡುವುದರಿಂದ ತಮ್ಮ ದೇಹದ ಮನಸ್ಥಿತಿ ಮತ್ತು ಜಾಗೃತ ಮನೋಭಾವವನ್ನು ಬೆಳಸಿಕೊಳ್ಳುವುದು ಸಾಧ್ಯ. ಇದರಿಂದ ದೇಹದ ಹಲವು ಹಾರ್ಮೋನ್‌ಗಳ ಅಭಿವೃದ್ಧಿಯಲ್ಲಿ ಕೂಡ ಸಹಕಾರಿಯಾಗುತ್ತದೆ. ಇದರ ಜೊತೆಗೆ ದೇಹದ ಸ್ನಾಯುಗಳ ಸಾಮ್ಯತೆ ಸುಧಾರಿಸಲು ಸಹಕಾರಿಯಾಗುತ್ತದೆ. ಕೆಲವು ಮುದ್ರೆಗಳು ಮತ್ತು ಕರಣಗಳಿಂದ ದೇಹದ ಚಲನವಲನಗಳ ಮಟ್ಟವನ್ನು ಸುಧಾರಿಸಲು ಮತ್ತು ಧೇಹದ ಪರಿಪೂರ್ಣ ಚೈತನ್ಯವನ್ನು ಮತ್ತು ದೇಹದಲ್ಲಿ ಉತ್ತಮ ರಕ್ತಸಂಚಾರವನ್ನು ವೃದ್ಧಿಯಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ.

ದೇಹದ ಶಕ್ತಿ ಸುಧಾರಣೆ: ಶಾಸ್ತ್ರೀಯ ನೃತ್ಯಗಳಲ್ಲಿ ವಿವಿಧ ಸ್ನಾಯುಗಳ ಮತ್ತು ಅಂಗಾಂಗಗಳ ಚಲನೆಗಳನ್ನು ಬಹಳವಾಗಿ ಬಳಸಲಾಗುತ್ತದೆ.

ತ್ರಾಣ ಸುಧಾರಣೆ: ಶಾಸ್ತ್ರೀಯ ನೃತ್ಯದ ಚಲನೆಗಳು ದೇಹದ ವಿವಿಧ ಸ್ನಾಯುಗಳು ಮತ್ತು ಅಂಗಾಂಗಗಳನ್ನು ಬಳಸುತ್ತವೆ. ನೃತ್ಯಾಭ್ಯಾಸದ ವೇಳೆ ನಮಗೆ ಉತ್ತಮ ವ್ಯಾಯಾಮ ಮತ್ತು ತ್ರಾಣ ಸುಧಾರಣೆ ಯಾಗುತ್ತದೆ. ನೃತ್ಯ ನಮ್ಮ ದೇಹದ ಸಹಿಷ್ಣುತೆ ಹೆಚ್ಚಿಸುತ್ತದೆ. ನೃತ್ಯ ಪಟುವಿನ ಚಲನವಲನಗಳು ಅವರ ಕೈ ಕಾಲುಗಳ ಚಲನೆ ಅದಕ್ಕೆ ತಕ್ಕಂತೆ ಅವರ ಕಣ್ಣುಗಳ ಚಲನೆಗಳಿಗೆ ಉತ್ತಮ ತ್ರಾಣ (Stamina) ಬೇಕಾಗುತ್ತದೆ. ಸರಿಯಾದ ಗತಿಯಲ್ಲಿ ನೃತ್ಯ ಪಟುವು ತನ್ನ ಚಲನೆಗಳನ್ನು ಮಾಡಿದರೆ ತ್ರಾಣವು ತನ್ನಿಂದತಾನೆ ದೇಹದೊಳಗೆ ವೃದ್ಧಿಸುತ್ತದೆ. ಚೈತನ್ಯ ತ್ರಾಣ ಸುಧಾರಣೆ ಮತ್ತು ಅಭಿವೃದ್ಧಿಗೆ ಅನೇಕ ಆಧುನಿಕ ಯಂತ್ರೋಪಕರಣಗಳು ಬಳಕೆಯಲ್ಲಿವೆ. ಆದರೆ ಇದಕ್ಕೆಂದೇ ದೇಹದ ಕ್ಯಾಲೋರಿಗಳನ್ನು ಸರಿದೂಗಿಸಲು ಮತ್ತು ದೇಹದ ಕೊಬ್ಬಿನಾಂಶವನ್ನು ನಿಯಂತ್ರಿಸಲು ನೃತ್ಯವು ಬಹಳ ಸಹಾಯಕವಾಗಿದೆ.

ಏರೋಬಿಕ್ಸ್: ಶಾಸ್ತ್ರೀಯ ನೃತ್ಯ ಅಭ್ಯಾಸವು ನಾವು ಮಾಡುವ ಏರೋಬಿಕ್ಸ್ ಮಾಡುವುದರಿಂದ ಪಡೆಯುವ ಎಲ್ಲಾ ಲಾಭವನ್ನು ಪಡೆಯಬಹುದು. ಈ ನೃತ್ಯ ಮಾದರಿಯ ಕ್ಷಿಪ್ರ ಚಲನೆಗಳಿಂದ ದೇಹದಲ್ಲಿ ರಕ್ತ ಸಂಚಾರ ಸುಗಮವಾಗಿ ಆಗುತ್ತದೆ ಹಾಗೂ ಈ ರೀತಿಯಿಂದ ಆರೋಗ್ಯಕರ ಜೀವನ ಹಾಗೂ ದೀರ್ಘ ಆಯುಷ್ಯ ಲಭಿಸುತ್ತದೆ ಎಂಬುದು ವೈಜ್ಞಾನಿಕವಾಗಿ ಸಾಭಿತಾಗಿರುತ್ತದೆ. ನೃತ್ಯಗಾರರು ನಿರ್ದಿಷ್ಟ ಆರೋಗ್ಯ ಸಮಸ್ಯೆಗಳಿಗೆ ಕೆಲವು ರೀತಿಯ ಚಲನೆಗಳನ್ನು ಮಾಡುವ ಮೂಲಕ ದೇಹದ ಹಲವು ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದು. ಮನಸ್ಸು ಮತ್ತು ದೇಹದ ಸಮನ್ವಯ ಚಲನೆಗಳ ಮೂಲಕ ದೇಹದ ವಿವಿಧ ಭಾಗಗಳ ಮೇಲೆ ಹತೋಟಿ ಮತ್ತು ಏಕಾಗ್ರತಾ ಶಕ್ತಿ ಸುಧಾರಿಸಲು ಸಹಾಯ ಮಾಡುತ್ತದೆ.

ಮನಸ್ಸಿನ ಏಕಾಗ್ರತೆಯ ಸುಧಾರಣೆ: ಶಾಸ್ತ್ರೀಯ ನೃತ್ಯ ದೇಹ ಮತ್ತು ಮನಸ್ಸಿಗೆ ಉಲ್ಲಾಸವನ್ನುಂಟು ಮಾಡುತ್ತದೆ. ನೃತ್ಯಗಾರರು ಇದರ ಜೊತೆಗೆ ಹಸ್ತ ಮುದ್ರೆಗಳು ಮತ್ತು ಕರಣಗಳನ್ನು ಮಡುವುದರಿಂದ ಮನಸ್ಸಿಗೆ ಮತ್ತಷ್ಟು ಉಲ್ಲಾಸ ಕೊಡುತ್ತದೆ. ನೃತ್ಯಪಟುವು ಎಲ್ಲಾ ರೀತಿಯ ಚಲನವಲನಗಳನ್ನು ಮತ್ತು ಸಂಗೀತಗಳನ್ನು ನೆನಪಿಟ್ಟುಕೊಳ್ಳುವ ಅಗತ್ಯವಿದೆ. ಈ ಎಲ್ಲದರ ಜೊತೆಗೆ ನೃತ್ಯ ಪಟುವು ದೇಹದ ಚಲನೆಗಳು, ಹೊಂದಾಣಿಕೆಗಳ ಮೇಲೆ ತೀವ್ರವಾದ ನಿಗಾ ಹೊಂದಿರಬೇಕು. ಇದರಿಂದ ಮನಸ್ಸಿನ ಏಕಾಗ್ರತೆಯ ಸುಧಾರಣೆಯಾಗುತ್ತದೆ.

ನರ್ತನ ಮಾಡದಿರುವವರು ಕಣ್ಣಿನ ಚಲನೆ, ಮುಖದ ಸ್ನಾಯುಗಳ ಚಲನೆಗಳ (ಅಭಿನಯ) ಅಭ್ಯಾಸದಿಂದ ಅಧಿಕ ಶಕ್ತಿ ಸಂವಹನವನ್ನು ಪಡೆಯಬಹುದು. ಇದರಿಂದ ಮನಸ್ಸಿಗೆ ಹೆಚ್ಚು ಶಾಂತತೆ ಮತ್ತು ಸಾಂದ್ರತೆಯ ಸಾಮರ್ಥ್ಯವನ್ನು ಪಡೆಯಲು ಸಹಕಾರಿಯಾಗುತ್ತದೆ.

ಆರೋಗ್ಯವಂತ ಹೃದಯ: ನೃತ್ಯ ಮತ್ತು ಫಿಟ್ನೆಸ್ ಯವಾಗಲು ಒಂದಕ್ಕೊಂದು ಜೊತೆಯಾಗಿರುತ್ತದೆ. ನೃತ್ಯವು ಎಲ್ಲಾ ವಿಧಗಳಲ್ಲಿಯೂ ನಮ್ಮ ಹೃದಯಕ್ಕೆ ಬಹಳ ಪ್ರಯೋಜನಕಾರಿಯಾಗಿದೆ. ನೃತ್ಯ ಮಾಡುವಾಗ ನಮ್ಮ ದೇಹದೊಳಗೆ ರಕ್ತ ಸಂಚಾರವು ಬಹಳ ವೇಗವಾಗಿ ಹೃದಯಕ್ಕೆ ಹರಿದು ಬರುತ್ತದೆ ಮತ್ತು ದೇಹದಲ್ಲಿ ರಕ್ತ ಪರಿಚಲನೆ ಹೆಚ್ಚಿಸುತ್ತದೆ. ಕೆಲವು ಚಲನೆಗಳು ಹಲವಾರು ರೋಗನಿರೋಧಕ ಗುಣಗಳನ್ನು ಹೊಂದಿರುತ್ತವೆಂದು ಹಲವಾರು ಪ್ರಯೋಗಗಳಿಂದ ತಿಳಿದುಬಂದಿರುತ್ತದೆ. ಹಲವಾರು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳಲ್ಲಿ ನೃತ್ಯದ ಪ್ರಭಾವ ಹೆಚ್ಚು. ವಿವಿಧ ನೃತ್ಯಗಳಿಂದ ದೇಹದಲ್ಲಿರುವ ಕೊಬ್ಬಿನಾಂಶವನ್ನು ಕರಗಿಸಬಹುದೆಂದು ಮತ್ತು ಹೃದಯಸಂಬಂಧ ಶಸ್ತ್ರಚಿಕಿತ್ಸೆಯಾಗಿರುವ ಮಂದಿಯಲ್ಲೂ ನೃತ್ಯಾಭ್ಯಾಸದಿಂದ ಹೃದಯವನ್ನು ಹತೋಟಿಯಲ್ಲಿಡ ಬಹುದಾಗಿ ಅನೇಕ ಪ್ರಯೋಗಗಳಿಂದ ತಿಳಿದು ಬಂದಿರುತ್ತದೆ.

ಶಾಸ್ತ್ರೀಯ ನೃತ್ಯದ ಪ್ರತಿಯೊಬ್ಬ ವಿದ್ಯಾರ್ಥಿಯು ಅಭ್ಯಾಸದ ಪ್ರಯೋಜನವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ನೃತ್ಯದ ಅಭ್ಯಾಸ ಶ್ರದ್ಧೆಯಿಂದ ಮಾಡಿದಲ್ಲಿ ಅಭ್ಯಾಸವೆ ಮನುಷ್ಯನು ಪರಿಪೂರ್ಣತೆಯನ್ನು ಹೊಂದುತ್ತಾನೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಸಾಧನೆಯು ಉನ್ನತ ಪದವಿಯ ಏರಿಕೆಗೆ ಸಹಾಯ ಮಾಡುತ್ತದೆ.

ವಿಶ್ವ ಆರೋಗ್ಯ ಸಂಘಟನೆಯ ಪ್ರಕಾರ ಈಗಿನ ಬಹಳಷ್ಟು ಜನರು ಹೈಪರ್ ಟೆನ್ಷನ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ನೃತ್ಯದ ಮುದ್ರಾಭ್ಯಾಸ ಮತ್ತು ಅದರ ಆಚರಣೆಗಳಿಂದ ದೇಹ ಮತ್ತು ಮನಸ್ಸುಗಳಿಗೆ ರೋಗನಿರೋಧಕವಾಗಿರುವುದು ಹಲವಾರು ಪ್ರಯೋಗಗಳಿಂದ ತಿಳಿದುಬರುತ್ತದೆ. ಆಧುನಿಕ ಜೀವನಶೈಲಿಯ ಒತ್ತಡವನ್ನು ತಡೆಯಲು ಮತ್ತು ಮುಕ್ತ ಜೀವನಶೈಲಿಯನ್ನು ಆಚರಿಸಲು ಇದು ತುಂಬ ಸಹಕಾರಿಯಾಗುತ್ತದೆ. ಈಗಿನ ಆಧುನಿಕ ಉಪಕರಣಗಳ ಆಧಾರಿತ ಜೀವನದಲ್ಲಿ ಶಾಸ್ತ್ರೀಯ ಮಾದರಿಯ ಜೀವನ ಶೈಲಿಯ ನಿರ್ವಹಣೆಗೆ ಕೆಲವು ಶಾಸ್ತ್ರೀಯ ವಿಧಾನಗಳನ್ನು ಬಳಸಬಹುದು.

ತೂಕ ನಿಯಂತ್ರಣ: ಶಾಸ್ತ್ರೀಯ ನೃತ್ಯಗಳು ದೇಹದ ಸ್ನಾಯುಗಳನ್ನು ಸಕ್ರಿಯ ಮಾಡುತ್ತವೆ. ಶಾಸ್ತ್ರೀಯ ನೃತ್ಯದ ಉತ್ತಮ ಪ್ರದರ್ಶನ ನೀಡಲು ಉತ್ತಮ ಅಭ್ಯಾಸ ಅತ್ಯಾವಶ್ಯಕ. ನಿಯಮಿತವಾಗಿ ಮಾಡುವ ನೃತ್ಯಾಭ್ಯಾಸದಿಂದ ದೇಹದ ತೂಕ ಕಳೆದುಕೊಳ್ಳಬಹುದು. ನೃತ್ಯ ಮಾಡುವಾಗ ಅಂಗಾಂಗಗಳ ಚಲನೆಗಳ ಮೂಲಕ ದೇಹದಿಂದ ಕ್ಯಾಲೋರಿಗಳನ್ನು ಕರಗಿಸಬಹುದು. ದೇಹವು ಅತಿಯಾಗಿ ದಪ್ಪಗಿದ್ದರೆ ಅಥವಾ ಬೊಜ್ಜು ಅತಿಯಾಗಿದ್ದರೆ ಇದನ್ನು ನಿಯಂತ್ರಿಸಲು ನೃತ್ಯ ಉತ್ತಮ ಸಾಧನ. ಉತ್ತಮ ಮೈಕಾಂತಿ ಮತ್ತು ಶಕ್ತಿಯನನು ಪಡೆಯಲು ಇದು ಸಹಾಯಕ.

ಆರೋಗ್ಯಕರ ಮತ್ತು ಹೊಳಪಿನ ಮೈಕಾಂತಿ: ಶಾಸ್ತ್ರೀಯ ನೃತ್ಯ ಪಟುಗಳು ನೃತ್ಯ ಮಾಡುವಾಗ ತಮ್ಮ ಕಣ್ಣಿನ ಹುಬ್ಬುಗಳು, ಕಣ್ಣುಗಳು, ಕುತ್ತಿಗೆ, ತುಟಿಗಳನ್ನು ಸಂತೋಷ, ಕೋಪ, ಆಶ್ಚರ್ಯ, ದುಃಖ, ಅಸೂಯೆ ಮತ್ತು ಪ್ರೀತಿಯ ತೋರ್ಪಡಿಕೆಗೆ ಬಳಸುತ್ತಾರೆ. ನೃತ್ಯ ಪಟುಗಳ ಮುಖದ ಸ್ನಾಯುಗಳ ನಿರಂತರ ಚಲನೆಗಳಿಂದ ಮುಖದ ಕಾಂತಿಯು ಉತ್ತಮವಾಗಿರುವಂತೆ ಮಾಡುತ್ತದೆ. ಅವರಿಗೆ ಸುಂದರವಾದ ಕಣ್ಣುಗಳು ಇರುತ್ತವೆ. ಅವರ ಆಕರ್ಷಕವಾದ ಕಣ್ಣುಗಳ ಚಲನೆಗಳ ಪ್ರತಿಯಾಗಿ ಸ್ಪಷ್ಟ ದೃಷ್ಟಿ ಮತ್ತು ಕಣ್ಣುಗಳ ಆರೋಗ್ಯ ಮತ್ತು ಸೌಂದರ್ಯವು ವೃದ್ಧಿಸುತ್ತವೆ. ಕಣ್ಣಿನ ಸ್ನಾಯುಗಳು ಬಲವಾಗುತ್ತವೆ. ಆದುದರಿಂದ ಈ ಭಾರತೀಯ ಶಾಸ್ತ್ರೀಯ ನೃತ್ಯಗಳಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತಹ ಹಲವಾರು ಸಮಸ್ಯೆಗಳಿಗೆ ಪರಿಹಾರ ದೊರಕುತ್ತವೆ. ಭಾರತೀಯ ಶಾಸ್ತ್ರೀಯ ನೃತ್ಯ ಪ್ರಕರಗಳು ಹಿಂದಿನ ಕಾಲದಿಂದಲೂ ನೃತ್ಯಗಾರರ ಆರೋಗ್ಯದೆಡೆಗೆ ಸ್ಪಂದಿಸುತ್ತಾ ಬಂದಿರುತ್ತದೆ. ಅನೇಕ ಸಂದರ್ಭಗಳಲ್ಲಿ ಅವರ ದೈಹಿಕ ಮತ್ತು ಮಾನಸಿಕ ವ್ಯಾಯಾಮಗಳನ್ನು ಯೋಗಿಗಳಿಗೆ ಹೋಲಿಸುತ್ತಾರೆ. ಭರತನಾಟ್ಯ, ಕಥಕ್, ಒಡಿಸ್ಸಿ, ಕೂಚಿಪುಡಿ, ಕಥಕ್ಕಳಿ, ಮೋಹಿನಿಯಾಟ್ಟಂ ಮಣಿಪುರಿ ಭಾರತೀಯ ನೃತ್ಯ ಶೈಲಿಯ ಪ್ರಮುಖ ಏಳು ರೀತಿಯ ವರ್ಗಗಳು. ಈಗ ಸತ್ರೀಯಾ ನೃತ್ಯವನ್ನು ಸಹ ಈ ಶಾಸ್ತ್ರೀಯ ನೃತ್ಯಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಸರಿಯಾದ ರೀತಿಯಲ್ಲಿ ನೃತ್ಯಾಭ್ಯಾಸ ಮಾಡಿದಲ್ಲಿ ದೈಹಿಕ ಮತ್ತು ಮಾನಸಿಕವಾಗಿ ಶಕ್ತಿಬರುವಂತಾಗುತ್ತದೆ. ದೇಹ ಮತ್ತು ಮನಸ್ಸಿನ ಸಂಬಂಧವನ್ನು ಇದು ಇನ್ನಷ್ಟು ಗಟ್ಟಿಗೊಳಿಸುತ್ತದೆ.

ಕಥಕ್ ನೃತ್ಯ: ಕಥಕ್ ಉತ್ತರ ಭಾರತೀಯ ಮೂಲದಿಂದ ಬಂದಂತಹ ಒಂದು ಶಾಸ್ತ್ರೀಯ ನೃತ್ಯ ಪ್ರಕಾರವಾಗಿದೆ. ಈ ಥ್ರಾಬ್ ಮದರಿಯ ನೃತ್ಯವು ಚಿಕಿತ್ಸೆಗೆ ಬಳಸುವಂತಹದಾಗಿದ್ದು ಇದು ದೈಹಿಕ ವ್ಯಾಯಾಮವಾದ ಒಂದು ರೂಪವಾಗಿ ಇಂದಿಗೂ ಕೂಡ ಬಳಸ ಲಾಗುತ್ತಿದೆ.

ಮಣಿಪುರಿ: ಉತ್ತರ ಭಾರತದ ಈಶಾನ್ಯ ಪ್ರದೇಶವಾದ ಮಣಿಪುರದಲ್ಲಿ ಹುಟ್ಟಿದ ನೃತ್ಯ ಮಣಿಪುರಿ ನೃತ್ಯ. ಹೊರನೋಟಕ್ಕೆ ಈ ನೃತ್ಯ ಮೃದು ಎನಿಸಿದರೂ ನೃತ್ಯದ ಹಿಂದೆ ಬಹಳ ಕಠಿಣ ಕ್ರಮವಿರುತ್ತದೆ. ಮಣಿಪುರಿ ನೃತ್ಯಗಾರರು ದುಂಡಾಗಿ ಚಲಿಸುತ್ತಾ ಮತ್ತು ಯಾವುದೇ ತಳಮಳ ವಿಲ್ಲದೆ, ಚೂಪಾದ ಅಂಚುಗಳು ಮತ್ತು ಸರಳ ರೇಖೆಗಳನ್ನು ತಪ್ಪಿಸುತ್ತಾ ನರ್ತಿಸುವರು. ಇದು ನೃತ್ಯಗಾರರಿಗೆ ಮನಸ್ಸಿನ ಶಾಂತಿ ಮತ್ತು ದೇಹದ ಸಮರ್ಪಣವನ್ನು ಒದಗಿಸುತ್ತದೆ.

ಕಥಕ್ಕಳಿ: ಕಥಕ್ಕಳಿ ಭಾರತೀಯ ಶಾಸ್ತ್ರೀಯ ನೃತ್ಯದ ಒಂದು ಅಂಗ. ದಕ್ಷಿಣ ಭಾರತದ ಕೇರಳ ರಾಜ್ಯದಲ್ಲಿ ಹುಟ್ಟಿಕೊಂಡ ನೃತ್ಯ.

ಕಥಕ್ಕಳಿಯ ಸಿದ್ಧಾಂತದ ಪ್ರಕಾರ, ಮಾನವ ದೇಹವನ್ನು ಸೂಕ್ಷ್ಮವಾದ ಅಂಗರಚನಾ ಪದ್ಧತಿಯಲ್ಲಿ ವಿಭಜನೆ ಮಾಡಲಾಗಿದೆ. ಅವುಗಳು ಪ್ರತೇಕ್ಯವಾಗಿ ಕಾರ್ಯನಿರ್ವಹಿಸುವುವು ಅಥವಾ ಒಟ್ಟುಗೂಡಿ ಕಾರ್ಯನಿರ್ವಹಿಸುವವು. ಕಥಕ್ಕಳಿ ನೃತ್ಯಪಟುಗಳು ಚೌಕಟ್ಟು ಆಕಾರದಲ್ಲಿ ಅಥವಾ ಆಯತಾಕಾರದ ಆಕರಗಳಲ್ಲಿ ನೃತ್ಯವನ್ನು ಮಾಡುತ್ತಾರೆ. ಈ ನೃತ್ಯದಲ್ಲಿ ಜಿಗಿತ, ಹಾರುವಿಕೆ ಇತ್ಯಾದಿ ಪ್ರಕಾರಗಳು ಇರುತ್ತವೆ. ನೃತ್ಯಪಟುಗಳು ತಮ್ಮ ಒಂದು ಕಾಲಿನ ಮೇಲಿರುವ ಬಾರವನ್ನು ಮತ್ತೊಂದು ಕಾಲಿಗೆ ವರ್ಗಾಯಿಸುತ್ತ ನೃತ್ಯವನ್ನು ಮಾಡುತ್ತಾರೆ. ಇದನ್ನು ಮಾಡುವಾಗ ತಮ್ಮ ಅಭಿನಯವನ್ನು ಕೂಡಾ ವಿಸ್ತಾರವಾಗಿ ಮಾಡುತ್ತಾರೆ. ಇತರೆ ಶಾಸ್ತ್ರೀಯ ನೃತ್ಯಗಳಂತೆಯೇ ಇದ್ದರೂ ಸಹ, ಕಥಕ್ಕಳಿಯಲ್ಲಿ ಹೆಚ್ಚು ಸ್ನಾಯುಗಳಿಗೆ ಒತ್ತಡ ನೀಡುವ ಭಂಗಿಗಳು ಇರುತ್ತವೆ. ಮುಖದ ಸ್ನಾಯುಗಳ ಚಲನೆ, ಕಣ್ಣಿನ ಹುಬ್ಬುಗಳು, ಕಣ್ಣಿನ ಚೆಂಡುಗಳು,

ಕಣ್ಣಿನ ರೆಪ್ಪೆಯ ಚಲನೆಗಳು ಇತ್ಯಾದಿಗಳು ನೃತ್ಯ ಪ್ರದರ್ಶನದ ಪ್ರಮುಖ ಭಾಗವಾಗಿದೆ.

ಒಡಿಸ್ಸಿ: ಒಡಿಸ್ಸಿ ನೃತ್ಯವು ಈಶಾನ್ಯ ಭಾರತದ ಒರಿಸ್ಸಾ ರಾಜ್ಯದ ದೇವಸ್ಥಾನಗಳಲ್ಲಿ ಮಾಡುವ ನೃತ್ಯವಾಗಿರುತ್ತದೆ. ಈ ನೃತ್ಯ ಪ್ರಕಾರವು ಕುಳಿತು, ಜಿಗಿಯುತ್ತಾ, ನಡೆದಾಡುತ್ತಾ ಮಾಡುವ ನೃತ್ಯವಾಗಿರುತ್ತದೆ. ಇದರಲ್ಲಿ ಭಂಗಿಗಳು ಮುಖ್ಯವಾದ್ದರಿಂದ ಈ ನೃತ್ಯ ಪ್ರಕಾರವನ್ನು ಸ್ತ್ರೀಯರು ದೀರ್ಘಕಲ ಅಭ್ಯಾಸ ಮಾಡಿದಲ್ಲಿ ಉತ್ತಮ ದೇಹದ ಅಕಾರ, ತೆಳುವಾದ ಸೊಂಟ, ಕೋಮಲ ನೋಟ ಮುಂತಾದ ಗುಣಗಳನ್ನು ಪಡೆಯಬಹುದು. ಪ್ರಸ್ತುತ ಅಧ್ಯಯನದಲ್ಲಿ ಒಡಿಸ್ಸಿ ನರ್ತನವನ್ನು ಮಡುವುದರಿಂದ ಉತ್ತಮ ಕಾರ್ಯನಿರ್ವಹಿಸುವ ಶ್ವಾಸಕೋಶ, ಸೊಂಟದ, ತೊಡೆಯ ಸ್ನಾಯುಗಳಲ್ಲಿ ಉತ್ತಮ ನಿಯಂತ್ರಣ ಸಾಧ್ಯ ಎಂದು ಸಂಶೋಧಕರಿಂದ ತಿಳಿದುಬಂದಿರುತ್ತದೆ.

ಕೂಚಿಪುಡಿ: ದಕ್ಷಿಣ ಭಾರತದ ಆಂಧ್ರಪ್ರದೇಶದಿಂದ ಬಂದಂತಹ ನೃತ್ಯ ಪ್ರಕಾರವೇ ಕೂಚಿಪುಡಿ. ಕೂಚಿಪುಡಿ ನೃತ್ಯದ ಚಿಕಿತ್ಸಕ ಗುಣಗಳು ಅದರ ಲಾಸ್ಯದಲ್ಲಿ ಹುದುಗಿದೆ. ನೃತ್ಯಗಾರರ ಮೇಲೆ ನಡೆಸಿದ ಸಮೀಕ್ಷೆಯಲ್ಲಿ ದೇಹದ ರೆಕ್ಟಸ್ ಅಬ್ಡೋಮಿನಸ್, ಹೊಟ್ಟೆಯ ಹೊರಭಾಗದ ಸ್ನಾಯುಗಳು, ಲಾಟಿಸಿಮಸ್ ಡೋರ್ಸಿ (ಪಕ್ಕೆ ಸ್ನಾಯುಗಳು), ನಿತಂಬ ಸ್ನಾಯುಗಳು ಮ್ಯಾಕ್ಸಿಮಸ್ ಸೇರಿದಂತೆ ಇನ್ನಿತರ ಸ್ನಾಯುಗಳ ಮೇಲೆ ಬಲವಾದ ಪರಿಣಾಮವನ್ನು ತೋರಿಸಿದೆ.

ಮೋಹಿನಿಯಾಟ್ಟಂ: ಮೋಹಿನಿಯಾಟ್ಟಂ ದಕ್ಷಿಣ ಭಾರತದ ಕೇರಳದಲ್ಲಿ ಹುಟ್ಟಿದ ಶಾಸ್ತ್ರೀಯ ನೃತ್ಯ ಪ್ರಕಾರ. ಈ ನೃತ್ಯದಲ್ಲಿ ಬರುವ ಲಾಸ್ಯಭರಿತವಾದ ಕಣಚಲನೆಗಳು ಮತ್ತು ಪಕ್ಕೆಗಳ ಚಲನೆಗಳು ಬಹಳ ಮುಖ್ಯವಾದುವು. ಈ ನೃತ್ಯವನ್ನು ಮಾಡುವಾಗ ಅಡಕ್ಟರ್ ಸ್ನಾಯುಗಳು (ಥೈ ಜಾಯಿಂಟ್), ಕ್ವಾಡ್ರಿಸೆಪ್ (ಮಂಡಿಯ ಮೇಲಿನ ಸ್ನಾಯುಗಳು), ಫಮೋರಿಸ್ (ತೊಡೆಯಲ್ಲಿರುವ ಸ್ನಾಯುಗಳು), ಸೋಲೆಸ್ (ಕಾಫ್ ಮಸಲ್ಸ್), ಪೆರೊನಿಯಸ್ ಲಾಂಗಸ್ (ಕಾಫ್ ಮಸಲ್ಸ್ ನ ಮೇಲೆ) ಇತ್ಯಾದಿ ಸ್ನಾಯುಗಳಲ್ಲಿ ಬಲವು ಅವಶ್ಯಕತೆ ಇರುತ್ತದೆ. ಅಂಗಾಂಗ ಚಲನೆಗಳು, ಅಂಗಾಂಗಗಳ ಸಮತೋಲನ, ಅಭಿನಯ, ಸ್ನಾಯುಗಳ ಚಲನೆ, ಸ್ನಾಯುಗಳ ಕುಗ್ಗುವಿಕೆ ಹಾಗೂ ಹಿಗ್ಗುವಿಕೆಗಳು ದೇಹದ ಆರೋಗ್ಯದ ಮೇಲೆ ಉತ್ತಮ ಪರಿಣಾಮವನ್ನು ಬೀರುತ್ತದೆ. ಭರತನಾಟ್ಯ ಭಾರತೀಯ ಶಾಸ್ತ್ರೀಯ ನೃತ್ಯಗಳಲ್ಲಿ ಒಂದಾಗಿದೆ. ಇದು ದಕ್ಷಿಣ ಭಾರತದ ತಮಿಳುನಾಡಿನ ತಂಜಾವೂರಿನಿಂದ ಹೊರಹೊಮ್ಮಿದೆ. ಭರತನಾಟ್ಯದಲ್ಲಿ ಮುದ್ರೆಗಳು, ಅಭಿನಯ, ಪದಂಗಳು ಮುಖ್ಯವಾದ ಅಂಶಗಳು. ಭರತನಾಟ್ಯ ನೃತ್ಯ ಪ್ರಕಾರದಲ್ಲಿ ಕೈಗಳು ಹಗೂ ಕಣ್ಣಿನ ಚಲನೆಗಳ ಮೂಲಕ ನೃತ್ಯಗಾರರು ವಿಭಿನ್ನ ಭಾವನೆಗಳನ್ನು ವ್ಯಕ್ತಪಡಿಸುವರು. ಸಂಗೀತ, ಭಾವನೆ, ತಾಳ ಹಾಗೂ ಅಭಿನಯದ ಸಮ್ಮಿಲನವನ್ನು ಇಲ್ಲಿ ಕಾಣಬಹುದು. ಮುದ್ರೆಗಳೇ ಮುಖ್ಯವಾಗಿರುವಂತಹ ಈ ನೃತ್ಯ ಪ್ರಕಾರದಲ್ಲಿ ಸಾಹಿತ್ಯದ ಒಂದೊಂದು ಪದದ ಅರ್ಥವನ್ನು ಮುದ್ರೆಗಳ ಮೂಲಕ ವ್ಯಕ್ತಪಡಿಸಲಾಗುತ್ತದೆ. ನವರಸದಲ್ಲಿ ನೃತ್ಯಗಾರರು ತಮ್ಮ ಮನಸ್ಸಿನಿಂದ ಬರುವಂತಹ ಸಾತ್ವಿಕ ಅಭಿನಯಗಳನ್ನು ವ್ಯಕ್ತಪಡಿಸುತ್ತಾರೆ. ಮಾನಸಿಕ ಹಾಗೂ ಭಾವನಾತ್ಮಕ ಚಿಕಿತ್ಸೆಗಳಲ್ಲಿ ಇದು ಮುಖ್ಯವಾಗುತ್ತವೆ. ಈ ನೃತ್ಯದ ಮೂಲಕ ಸೆಮಿಐಂಡಿನೋಸಸ್ (ನಿತಂಬದ ಕೆಳಗೆ), ಬೈಸೆಪ್ಸ್ (ತೋಳುಗಳ ಸ್ನಾಯುಗಳು), ಫೆಮೋರೆಸ್ (ತೊಡೆಯ ಸ್ನಾಯುಗಳು) ಸೇರಿದಂತೆ ಹ್ಯಾಮ್‌ಸ್ಟ್ರಿಂಗ್ ಸ್ನಾಯುಗಳಿಗೆ (ಮಂಡಿಯ ಹಿಂದೆ) ಬಲದೊರೆಯುತ್ತದೆ.

ಮುದ್ರೆಯಲ್ಲಿರುವ ಚಿಕಿತ್ಸಕ ಅಂಶಗಳು: ಮುದ್ರೆಗಳು ಮನಸ್ಸಿನ ಹಾಗೂ ಮೆದುಳಿನ ನಿಯಂತ್ರಣವನ್ನು ಸಾಧಿಸಲು ಸಹಾಯಕವಾಗಿದೆ. ಮುದ್ರೆಗಳನ್ನು ಮಾಡುವಾಗ ನರಗಳ ತುದಿಗಳ ಮೇಲೆ ಉತ್ತಮ ಪರಿಣಾಮ ಬೀರುತ್ತದೆ. ಆಕ್ಯುಪ್ರಜರ್ ಚಿಕಿತ್ಸೆಯಲ್ಲಿ ಪ್ರತಿಯೊಂದು ಬೆರಳ ತುದಿಗಳಲ್ಲಿರುವ ರಿಫ್ಲೆಕ್ಸ್ ಪಾಯಿಂಟ್ಸ್‌ಗಳ ಮೇಲೆ ನಿಯಮಿತ ಒತ್ತಡ ನೀಡಿದಾಗ ಆಗುವಂತಹ ಪರಿಣಾಮಗಳು ಮುದ್ರೆಯನ್ನು ಮಾಡಿದಾಗಲೂ ಆಗುತ್ತದೆ. ಉದಾಹರಣೆಗೆ ಕಟಕಾಮುಖ ಮುದ್ರಾ. ಹೆಬ್ಬೆರಳು, ತೋರುಬೆರಳು ಮತ್ತು ಮಧ್ಯದ ಬೆರಳುಗಳ ತುದಿಗಳನ್ನು ಸೇರಿಸಿ ಉಳಿದ ಎರಡು ಬೆರಳುಗಳಾದ ಅನಾಮಿಕಾ ಹಾಗೂ ಕಿರುಬೆರಳುಗಳನ್ನು ಉದ್ದಕ್ಕೆ ಚಾಚಿದರೆ ಕಟಕಾಮುಖ ಮುದ್ರೆ ಆಗುತ್ತದೆ. ಆಕ್ಯುಪ್ರಜರ್ ಚಿಕಿತ್ಸೆಯ ಪ್ರಕಾರ ಹೆಬ್ಬೆರಳು ಮಿದುಳನ್ನು ಪ್ರತಿನಿಧಿಸುವುದರಿಂದ, ಕಟಕಾಮುಖ ಮುದ್ರೆಯನ್ನು ಮಾಡುವುದರ ಮೂಲಕ ಮೆದುಳಿಗೆ ಸಂಬಂಧಿತ ಸಮಸ್ಯೆಗಳನ್ನು ಸರಿಪಡಿಸ ಬಹುದು. ಈ ಪರಿಕಲ್ಪನೆಯ ಆಧಾರದ ಮೇಲೆ ನಾಟ್ಯ ಯೋಗದ ಮೂಲಕ ಚಿಕಿತ್ಸೆಯನ್ನು ಯಾವ ರೀತಿ ನೀಡಬಹುದೆಂದು ಒಂದು ಚಿಕ್ಕ ಪ್ರಬಂಧದ ಮೂಲಕ ಸಾದರ ಪಡಿಸಿದ್ದೇನೆ. ಶಾಸ್ತ್ರೀಯ ನೃತ್ಯವು ಮಾನವನ ಶರೀರದ ಎಲ್ಲಾ ಅಂಗಾಂಗಗಳ ಮೇಲೂ ಉತ್ತಮ ಪರಿಣಾಮ ಬೀರುವುದಲ್ಲದೇ ಮನಸ್ಸಿನ ಪರಿಶುದ್ಧತೆ – ಪರಿಪೂರ್ಣತೆಗಳನ್ನು ನೀಡುತ್ತದೆ. ಹೀಗಾಗಿ ಮಾನಸಿಕ – ದೈಹಿಕ ಆರೋಗ್ಯದ ಸಮಸ್ಯೆಗಳು ಬಂದಾಗ ಕೆಲವು ಮುದ್ರೆಗಳ ಅಥವಾ ಚಲನೆಗಳ ಸತತ ಅಭ್ಯಾಸ ಮಾಡಿದಲ್ಲಿ ಸಮಸ್ಯೆಗಳು ಬಗೆಹರಿಯುತ್ತವೆ ಎಂದು ಈ ಮೂಲಕ ತಿಳಿಯಪಡಿಸುತ್ತೇನೆ.

ಆಯುರ್ವೇದ ಮತ್ತುಕನಸ್ಸು

ರಾಚೋಟಿದೇವರು [ಶ್ರೀ ಷ.ಬ್ರ. ರಾಚೋಟಿ ಶಿವಾಚಾರ್ಯ ಸ್ವಾಮಿಗಳು]
ಸಂಶೋಧನ ವಿದ್ಯಾರ್ಥಿ, ಸಂಸ್ಕೃತಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾಲಯಮಾನಸಗಂಗೋತ್ರಿ, ಮೈಸೂರು ೦೬.

•ಪಿಠಿಕೆ : ಪ್ರಂಚವುಜ್ಞಾನದಕಣ್ಣುತೆರೆಯುವ ಮುನ್ನ ಭಾರತದಲ್ಲಿಇಲ್ಲಿಯ ಋಷಿಮುನಿಗಳು ಯಥಾರ್ಥಜ್ಞಾನಕ್ಕೆತಮ್ಮಜೀವನವನ್ನು ಸವೆದಿರುವದು ನಾವು ಕಾಣುತ್ತೇವೆ. ಅವರ ಸತ್ವಯುತವಾದ ತಪಸ್ಸಿನ ಫಲವೇ ಭಾರತೀಯಜ್ಞಾನರಾಶಿಗಳಲ್ಲಿ ಅತ್ಯಂತ ಪ್ರಾಚೀನ ಮತ್ತು ಪ್ರಬುದ್ಧವಾದ ಗ್ರಂಥಗಳು ಚತುರ್ವೇದಗಳು ಎಂದು ಜಗಜ್ಜಾಹಿರವಾಗಿವೆ. ನಾಲ್ಕು ವೇದಗಳು ಎಷ್ಟುಪ್ರಬುದ್ಧವೋ ಅಷ್ಟೇ ಪ್ರಬಲವಾದ ಹಾಗು ಜ್ಞಾನಯುತವಾದ ನಾಲ್ಕು ಉಪವೇದಗಳು ಲೌಕಿಕ ಸಾಹಿತ್ಯದಲ್ಲಿ ಬೆಳೆದುನಿಂತಿರುವುದು ನಾವು ಅರಿಯು ಬಹುದು. ಉಪವೇದವೆಂದರೆ **ಉಪಮಿತೋವೇದೇನ** ಅರ್ಥಾತ್ ಪ್ರಧಾನವೇದಾತಿರಿಕ್ತವೇದಃ, ವೇದಗಳಿಂದ ಉಪಕರಿಸಲ್ಪಟಿರುವುದುಮತ್ತು ಪ್ರಧಾನವೇದಾತಿರಿಕ್ತವಾದ ವೇದವುಉಪವೇದವೆಂದು ಶಬ್ದಕಲ್ಪದ್ರುಮದಲ್ಲಿಉಲ್ಲೇಖಿಸಲಾಗಿದೆ.

* **ಆ ಉಪವೇದಗಳು**
- ಆರ್ಯುವೇದ
- ಧನುರ್ವೇದ
- ಗಂಧರ್ವವೇದ
- ಸ್ಥಾಪತ್ಯ(ಶಸ್ತ್ರಶಾಸ್ತ್ರ)ವೇದ

ಎಂದು ನಾಲ್ಕು ಉಪವೇದಗಳು ಪ್ರಸಿದ್ಧವಾಗಿವೆ. ಮೇಲಿನ ಎಲ್ಲಾ ಉಪವೇದಗಳುಒದೋಂದು ವೇದದಿಂದಉಪಕರಿಸಲ್ಪಟಿದೆ. ಋಗ್ವೇದದ ಉಪವೇದವುಆರ್ಯುವೇದ, ಯಜುರ್ವೇದದ ಉಪವೇದವುಧ ನುರ್ವೇಧ, ಸಾಮವೇದದಉಪವೇದವುಗಂಧರ್ವವೇದ, ಅಥರ್ವವೇದದ ಉಪವೇದವು ಸ್ಥಾಪತ್ಯ {ಶಸ್ತ್ರಶಾಸ್ತ್ರ} ವೇದವೆಂದು, ಚರಣವ್ಯೂಹಕಾರರ ಅಭಿಪ್ರಾಯವೆಂಬುದು ಶಬ್ದಕಲ್ಪದ್ರುಮದಲ್ಲಿ ಉಲ್ಲೇಖಿಸಲಾಗಿದೆ. ಅವುಗಳು ಲೋಕಜನರ ಹಿತರಕ್ಷಣೆ ಸುಖ ಸಮೃದ್ಧಿಯ ಸಿದ್ದಿಗಾಗಿ ಒಂದುಗೂಡಿಸಿ ಜಗತ್ತಿನಕಲ್ಯಾಣಕ್ಕಾಗಿಬೆಳೆದು ನಿಂತಿರುವ ಮಹಾನ್‌ಜ್ಞಾನರಾಶಿಗಳೆಂಬುದು ನಿರ್ವಿವಾದ. ಆನಾಲ್ಕು ಉಪವೇದಗಳಲ್ಲಿ ಸರ್ವಜನರಿಗೂ ಉಪಯುಕ್ತವು ಆದರಣೀಯವಾದದ್ದು ಆಯುರ್ವೇದ.

ಆಯುರ್ವೇದವೆಂದರೆ **ಆಯುರನೇನ ವಿಂದತಿ ವೇತ್ತಿವಾ ಇತ್ಯಾಯುರ್ವೇದಃ** ಎಂಬ ಶಬ್ದದವ್ಯುತ್ಪತ್ತಿಯಿಂದಅರಿಯ ಬಹುದಾಗಿದೆ. ಆಯುವನ್ನುಕುರಿತು ಅಧ್ಯಯನ ಮಾಡುವದರಿಂದ ಅಥವಾ ಆಯುವನ್ನು ಇದರಿಂದ ಹೊಂದಬಹುದಾದ್ದರಿಂದಇದಕ್ಕೆಆಯುರ್ವೇದವೆಂದುಕರೆಯುತ್ತಾರೆ.

ಆಯುರ್ವೇದವುಅಷ್ಟಾದಶ ವಿದ್ಯಾಂತರ್ಗತವಾದಧನ್ವಂತರಿ ಪ್ರಣೀತವಾದ ವಿದ್ಯೆಎಂದು ಹೇಳುವುದುಂಟು, ಇದು ವೈದ್ಯಶಾಸ್ತ್ರ, ಚಿಕಿತ್ಸಾಶಾಸ್ತ್ರವೆಂಬ ನಾಮಾಂತರದಿಂದಕರೆಯಲ್ಪಡುತ್ತದೆ.ಪ್ರಸ್ತುತಆಯುರ್ವೇದವುಯಾವ ವೇದದಉಪವೇದವೆಂಬುವ ವಿಷಯದಲ್ಲಿ ಮತಬೇದವಿವುದನ್ನು ನಾವು ಕಾಣಬಹುದು.ಚರಣವ್ಯೂಹಕಾರನ ಅಭಿಪ್ರಾಯದಂತೆ ಋಗ್ವೇದದ ಉಪವೇದವು ಆಯುರ್ವೇದವೆಂದು ಪ್ರತಪಾದಿಸುತ್ತಾನೆ. ಆದರೆ ಭಾವ ಪ್ರಕಾಶಕಾರನು ಇದುಅಥರ್ವವೇದಾಂತರ್ಗತವಾದಉಪವೇದವೆಂದು ಪ್ರತಿಪಾದಿಸುತ್ತಾನೆ.

ವಿಧಾತಾಥರ್ವ ಸರ್ವಸ್ವಮಾಯುರ್ವೇದಂ ಪ್ರಕಾಶಯನ್ ।
ಸ್ವನಾಮ್ನಾ ಸಂಹಿತಾಂಚಕ್ರೇ ಲಕ್ಷ ಶ್ಲೋಕ ಮಯಿಮ್ಮಜವಮ್ ॥
(ಭಾವಪ್ರಕಾಶ)

ಪ್ರಸ್ತುತಇಲ್ಲಿ **ವಿಧಾತಾಥರ್ವಸರ್ವಸ್ವಂ**ಎನ್ನುವ ಮೂಲಕ ಇದುಅಥರ್ವ ವೇದಾಂತರ್ಗತವಾದಉಪವೇದವೆಂದು ತಿಳಿಸುತ್ತಾರೆ. ಆದ್ದರಿಂದ ಈ ಮೇಲ್ಕಂಡ ಭಿನ್ನಾಭಿಪ್ರಾಯಗಳಲ್ಲಿ ಯಾವುದು ಸರಿಎನ್ನುವಜಿಜ್ಞಾಸೆಯಲ್ಲಿ ತೊಡಗಿದಾಗ ಭಾವಪ್ರಕಾಶಕಾರರ ಅಭೀಪ್ರಾಯವೇ ಸರಿಎಂದುತೋರುತ್ತದೆ. ಏಕೆಂದರೆಅಥರ್ವವೇದದ(ಸಂಹಿತೆ)ಯಲ್ಲಿ ಮಣಿ, ಮಂತ್ರ, ಔಷಧಿಗಳ ವಿವರಣೆ ಹೆಚ್ಚಾಗಿ ಉಪಲಬ್ಧವಾಗಿದ್ದು ಈವಿಷಯವುಋಗ್ವೇದದಲ್ಲಿ ಅತ್ಯಲ್ಪಪ್ರಮಾಣವಿರುವದರಿಂದ ಮತ್ತು ಭಾವಪ್ರಕಾಶಕಾರರ ಮೂಲ ಉದ್ದೇಶ ಆಯುರ್ವೇದಶಾಸ್ತ್ರದ ಪ್ರತಿಪಾದನೆಯೇ ಆಗಿರುವದರಿಂದ ಚರಣವ್ಯೂಹಕಾರರ ಗಿಂತಲೂ ಭಾವಪ್ರಕಾಶಕಾರರ ಸಿದ್ಧಾಂತವೇ ಪ್ರಧಾನವೆಂದು ಭಾವಿಸಿ ಇದು ಅಥರ್ವವೇದದ ಉಪವೇದವೆಂದು ಹೇಳುವುದು ಸರಿ.

* **ಆಯುರ್ವೇದದ ಸ್ವರೂಪ :** ಆಯುರ್ವೇದದ ಸ್ವರೂಪ ಹಾಗೂ ಅದರ ಲಕ್ಷಣವನ್ನುಚರಕಸಂಹಿಯಲ್ಲಿ ಹೀಗೆ ಹೇಳುತ್ತಾರೆ.

ಹಿತಾಹಿತಮ್ ಸುಖಮ್ ದುಃಖಮಾಯುಸ್ತಸ್ಯ ಹಿತಾಹಿತಮ್ ।
ಮಾನಂ ಚ ತಚ್ಚಯತ್ರೋಕ್ತಮ್‌ಆಯುರ್ವೇದಃ ಸ ಉಚ್ಯತೇ ॥
(ಚ.ಸ. ಸೂ.1.41)

ಆಯುರ್ವೇದ ಶಾಸ್ತ್ರವುಯಾವುದು ಹಿತಾಯುಯಾವುದು ಅಹಿತಾಯು ಎನ್ನುವುದು ಹಾಗೂ ಸುಖಾಯು ಮತ್ತು ದುಃಖಾಯುಗಳ ಪರಿಣಾಮವನ್ನು ಪ್ರಮಾಣಪೂರ್ವಕವಾಗಿ ನಿರ್ಣಯ ಮಾಡುವದರಿಂದಇದುಆಯುರ್ವೇದ ಶಾಸ್ತ್ರವೆಂದುಚರಕನಅಭಿಪ್ರಾಯ.

ಪ್ರಸ್ತುತ ಈಶಾಸ್ತ್ರವುಮನುಷ್ಯನ ಶರೀರದಅಭಿವೃದ್ಧಿ ಹಾಗು ರೋಗಗಳ ಉಪಶಮನಕ್ಕೆ ಔಷಧಿಗಳ ಜ್ಞಾನವನ್ನು ನೀಡುವ ಮೂಲಕ ಸುಖಸಮೃದ್ಧಿ ಜೀವನ ನಡೆಸಲು ಸಹಕಾರಿಯಾಗಿರತ್ತದೆ. ಮನುಷ್ಯನಲ್ಲಿರುವ ವಾತ, ಪಿತ್ತ, ಕಫಾದಿಗಳ ಸಾಮ್ಯತೆಯೇಆರೋಗ್ಯವೆಂದು ಅವುಗಳ ವಿಷಮತೆಯೇ ಆನಾರೋಗ್ಯವೆಂದುಆಯುರ್ವೇದಶಾಸ್ತ್ರಕಾರರಅಭಿಪ್ರಾಯ.

ವಾತ, ಪಿತ್ತ, ಕಫಾದಗಳ ಸಾಮ್ಯತೆ ಹಾಗೂ ವಿಷಮತೆಯನ್ನುಅರಿಯಲು ಹಲವು ಉಪಾಯಗಳು ಹೇಳಿರುವುದು ಸರಿಯಷ್ಟೇ. ಅವುಗಲಲ್ಲಿ ಶಾರೀರಿಕಧಾತುಜನ್ಯ ದೋಷಗಳನ್ನು ಗುರುತಿಸುವಲ್ಲಿ ಹೇತುರೂಪವಾದ ಮಾಧ್ಯಮ ಸ್ವಪ್ನವೆಂಬುವುದುಆಯುರ್ವೇದ ವೈದ್ಯರಅಭಿಪ್ರಾಯ.ಆದ್ದರಿಂದ ಸ್ವಪ್ನವುಆಯುರ್ವೇದದಲ್ಲಿಯ ಸಾಧನಗಳಲ್ಲಿ ಒಂದೆನ್ನಬಹುದು. ಆದ್ದರಿಂದಅದರಅರಿವುಅತ್ಯಾವಶ್ಯವಾದ್ದರಿಂದಅದನ್ನುಕುರಿತಾಗಿ ಪ್ರವೃತ್ತಿಸೋಣ.

* ಸ್ವಪ್ನೋತ್ಪತ್ತಿಯ ಸ್ವರೂಪ :

ಆ ಸ್ವಪ್ನವನ್ನು ಕುರಿತು ಚರಕನ ಅಭಿಪ್ರಾಯ ಈ ರೀತಿಯಿದೆ.

ಮನೋವಹಾನಾಂ ಪೂರ್ಣತ್ವಾದ್ದೋಷೈರತಿ ಬಲೈಸ್ತ್ರಿಭಿಃ ।
ಸ್ರೋತಸಾಂದಾರುಣಾನ್ ಸ್ವಪ್ನಾನ್ ಕಾಲೇ ಪಶ್ಯತಿದಾರುಣೇ॥
ನಾತಿಪ್ರಸುಪ್ತಃ ಪುರುಷಃ ಸಫಲಾನಫಲಾನಪಿ ।
ಇಂದ್ರಿಯೇಶೇನ ಮನಸಾ ಸ್ವಪ್ನಾನ್ ಪಶ್ಯತ್ಯನೇಕಧಾ ॥
(ಚ.ಸಂ.ಇಂ. 5.41-42)

ಮನೋವಾಹಕಗಳಾದ ನಾಡಿಗಳೂ ದೋಷಯುಕ್ತವಾದಾಗಅಂದರೆಧಾತು ತ್ರಯಗಳಾದ ವಾತ, ಪಿತ್ತ, ಕಫಾದಿಗಳ ವೈಷಮ್ಯತೆಉಂಟಾದಾಗ ಮನುಷ್ಯನು ಹಲವು ದಾರುಣ ಸ್ವಪ್ನಗಳನ್ನು ಕಾಣುತ್ತಾನೆ. ಗಾಡ ನಿದ್ರೆಇಲ್ಲದ ಸಮಯಜಾಗ್ರತಾವಸ್ಥೆಯಲ್ಲಿ ಇಂದ್ರಿಯಗಳ ಒಡೆಯನಾದ ಮನುಷ್ಯ(ಜೀವ)ನು ಮನಸ್ಸಿನ ಸಹಾಯದಿಂದ ಹಲವು ರೀತಿಯ ಶುಭಾಶುಭ ಸ್ವಪ್ನಗಳನ್ನು ಕಾಣುತ್ತಾನೆ. ಪ್ರಸ್ತುತಇಲ್ಲಿ ಸ್ವಪ್ನಉತ್ಪತ್ತಿಯ ಬಗ್ಗೆ ವ್ಯವಸ್ಥಿತ ಕಾರ್ಯಕಾರಣ ಬಾವವನ್ನು ನಾವು ಕಾಣಬಹುದಾಗಿದೆ. ಅತಿ ಸೂಕ್ಷ್ಮವಾದದ್ದು ಮನಸ್ಸು. ನ್ಯಾಯದಾರ್ಶನಿಕರು ಹೇಳುವಂತೆ ಅದುಅಣುರೂಪವಾಗಿದ್ದುಅಂತಹ ಮನಸ್ಸು ನಾಡಿಯ ಸಹಾಯದಿಂದ ಸದಾ ಕ್ರಿಯಾಶೀಲವಾಗಿ ಜಾಗ್ರತ್ ಸ್ವಪ್ನ ಸುಷುಪ್ತಿ ಅವಸ್ಥೆಗಳಿಗೆಕಾರಣಕರ್ತ್ರವಾಗಿದೆ.ಜಾಗ್ರತ್ ಹಾಗೂ ಸುಷುಪ್ತಿಯು ಸಂಧಿಸುವ ಸಂಧ್ಯಾವಸ್ಥೆಯನ್ನುಸ್ವಪ್ನಾವಸ್ಥೆಎನ್ನುವುದು ನಿರ್ವಿವಿವಾದ. ಆದ್ದರಿಂದಲೇ ಬಾದರಾಯಣನು **ಸಂಧ್ಯೇಸೃಷ್ಟರಾಹಃ ಹಿ**(ಬ್ರ.ಸೂ.3-2-10) ಎಂದು ಹೇಳಿದಾರೆ.

ಈ ಮೂರು ಅವಸ್ಥಗಳಿಗೆ ಭಿನ್ನವಾದ ಮತ್ತೊಂದು ಮೂರ್ಚ್ಛಾವಸ್ಥೆಉಟೆಂದು ಕೆಲವರು ಹೇಳುವದುಂಟು.ಅದಲ್ಲದೆಇನ್ನೂ ಕೆಲವರು ವೇದಾಂತಿಗಳು ಹಾಗೂ ಯೋಗದಾರ್ಶನಿಕರು, ಇವರು ತುರೀಯತುರೀಯಾ ತೀತವೆನ್ನುವಂತಃ ಅವಸ್ಥಾ ಪಂಚಕ ಹೇಳಿರುವುದು ಆಕರ ಗ್ರಂಥಗಳಲ್ಲಿ ನಾವು ಕಾಣುತ್ತೇವೆ. ಮೂರ್ಚ್ಛಾದಿ ಈ ಮೂರು ಅವಸ್ಥೆಗಳು ಕೆಲವರಿಗೆ ಮಾತ್ರ ಸೀಮಿತವಾಗಿದ್ದು ಹಲವರು ಇವಗಳನ್ನು ವಿರೋಧಿಸಿರುವುದುಂಟು. ಅವುಗಳಲ್ಲಿ ಪ್ರಧಾನವಾದವಗಳು ಅವಸ್ಥಾತ್ರಯಗಳು ಅಂದರೆಜಾಗ್ರತ್, ಸ್ವಪ್ನ,

ಸುಷುಪ್ತಿ(ನಿದ್ರಾವಸ್ಥೆ)ಅವಸ್ಥೆಗಳು. ಎಲ್ಲಾ ಜ್ಞಾನಿಗಳು ಮತ್ತು ವಿಜ್ಞಾನಿಗಳು ದಾರ್ಶನಿಕರು, ಅನುಭಾವಿಗಳು ಮುಂತಾಗಿಎಲ್ಲರಿಗೂ ಸಮ್ಮತವಾರುವುದರಿಂದ ಇವು ಸರ್ವಜನಗ್ರಾಹ್ಯವಾಗಿವೆ.

ಪ್ರಸ್ತುತ ಸ್ವಪ್ನವು ಜಾಗ್ರತಾವಸ್ಥೆಗಳಿಗಿಂತ ಭಿನ್ನವಾಗಿರುವುದರಿಂದ ಸ್ವಪ್ನವನ್ನುಕಂಡ ವ್ಯಕ್ತಿಯುಜಾಗ್ರತಾ ವಸ್ಥೆಯಲ್ಲಿ ಭಯಭೀತಿಗಳಿಗೆ ಒಳಗಾಗುವುದುಂಟು. ಹಾಗೂ ಕೆಲವೊಮ್ಮೆ ಸ್ವಪ್ನದರ್ಶನದ ನಂತರಆತನು ನೆಮ್ಮದಿ ಶಾಂತತೆಯನ್ನು ಅನುಭವಿಸುವದನ್ನೂ ಸಹ ಕಾಣುತ್ತೇವೆ. ಆದ್ದರಿಂದ ಸ್ವಪ್ನಜ್ಞಾನವುಅತ್ಯಾವಶ್ಯ ವೆಂದುಅರಿತುಆಯುರ್ವೇದ ಶಾಸ್ತ್ರಕಾರರೂಕೂಡ ಸ್ವಪ್ನದ ವಿವೇಚನೆಯನ್ನು ತಮ್ಮ ಗ್ರಂಥಗಳಲ್ಲಿ ಮಾಡಿರುತ್ತಾರೆ. ಸ್ವಪ್ನಗಳು ಧಾತುದೋಷಜನ್ಯವೆಂದು ಈ ಹಿಂದೆ ತಿಳಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಸ್ವಪ್ನಗಳೆಲ್ಲವು ಧಾತುದೋಷಜನ್ಯವಲ್ಲ, ಕೆಲವು ಸ್ವಪ್ನಗಳ ಮುಖಾಂತರ ರೋಗಗಳನ್ನೂ ಸಹ ಗುರುತಿಸಬಹುದು. ಆದರೆ ಎಲ್ಲಾಸ್ವಪ್ನಗಳೂ ರೋಗ ಸೂಚಕವಲ್ಲ. ಅವುಗಳಲ್ಲಿ ಹಲವು ಪ್ರಭೇಧಗಳು ಉಂಟೆಂದುಚರಕ ಸಂಹಿತೆಯಲ್ಲಿ ವಿವರಿಸುತ್ತಾರೆ.

* ಸ್ವಪ್ನ ಪ್ರಭೇಧಗಳು

ದೃಷ್ಟವಮ್ ಶ್ರುತಾನುಭೂತಂಚ ಪ್ರಾರ್ಥಿತಂಕಲ್ಪಿತಂತಥಾ ।
ಭಾವಿಕಮ್‌ದೋಷಜಂ ಚೈವ ಸ್ವಪ್ನಂ ಸಪ್ತವಿಧಂ ವಿದುಃ॥
(ಚ.ಸಂ. ಇ.5-43)

➢ ಅವುಗಳು

1. ದೃಷ್ಟಸ್ವಪ್ನ
2. ಶ್ರುತಸ್ವಪ್ನ
3. ಅನುಭೂತಸ್ವಪ್ನ
4. ಪ್ರಾರ್ಥಿತಸ್ವಪ್ನ
5. ಕಲ್ಪಿತಸ್ವಪ್ನ
6. ಭಾವಿಕಸ್ವಪ್ನ
7. ದೋಷಜಸ್ವಪ್ನವೆಂದುಸ್ವಪ್ನಗಳು ಏಳುವಿಧವಾಗಿ ವಿಭಾಗಿಸುತ್ತಾರೆ.

* ಸಪ್ತವಿಧ ಸ್ವಪ್ನಗಳ ವಿಶ್ಲೇಷಣೆ.

1. ದೃಷ್ಟ ಸ್ವಪ್ನ :-ಜಾಗ್ರತಾಸ್ಥೆಯಲ್ಲಿ ನೋಡಿದ ವಸ್ತು, ವ್ಯಕ್ತಿ ವಿಷಗಳು ಯಥಾವತ್ತಾಗಿ ಸ್ವಪ್ನದಲ್ಲಿಕಂಡರೆಅಂತಹ ಸ್ವಪ್ನಗಳನ್ನು ದೃಷ್ಟಸ್ವಪ್ನಗಳೆಂದು ಕರೆಯುತ್ತಾರೆ.

2. ಶ್ರುತ ಸ್ವಪ್ನ :-ಜಾಗ್ರತಾವಸ್ಥೆಯಲ್ಲಿ ಶ್ರವಣೇಂದ್ರಿಯದಿಂದ ಗ್ರಾಹ್ಯವಾಗಿದ್ದು ಅಂದರೆ ಸ್ನೇಹಿತರುಗುರುಹಿರಿಯರು ಹೇಳಿದ ಮಾತುಗಳು ಹಾಗು ಕಥೆಗಳು ಯಥಾವತ್ತಾಗಿ ಸ್ವಪ್ನದಲ್ಲಿ ಕೇಳಲ್ ಪಟ್ಟರೆಅಥವಾತತ್‌ಕಥಾವಿಷಯಕ ವಸ್ತುವು ಪ್ರತ್ಯಕ್ಷಗೋಚರವಾದರೆ ಅಂತಹ ಸ್ವಪ್ನಗಳನ್ನು ಶ್ರುತ ಸ್ವಪ್ನಗಳೆಂದು ಕರೆಯುತ್ತಾರೆ.

3. ಅನುಭೂತಸ್ವಪ್ನ :-ಜೀವಿಯು(ಮನುಷ್ಯನು) ಜಾಗ್ರತಾವಸ್ಥೆಯಲ್ಲಿ ಹಲವು ಅನುಭವಗಳನ್ನು ಹೊಂದಿ ಅನುಭಾವಗಳ ಆಗರವಾಗಿದ್ದಾನೆ. ಆದ್ದರಿಂದತಾನುಅನುಭವಿಸಿದ ವಿಷಯಗಳೇ ಮತ್ತೊಮ್ಮೆ ಅನುಭವಿಸಿದ ಹಾಗೆ ಕನಸ್ಸುಗಳು ಕಂಡರೆಅಂತಹ ಕನಸ್ಸುಗಳು ಅನುಭೂತ ಸ್ವಪ್ನಗಳಾಗುತ್ತವೆ.

4. ಪ್ರಾರ್ಥಿತ ಸ್ವಪ್ನ :-ಮನನಾತ್ ಮನುಷ್ಯಃಎನ್ನುವಾಗೆ ಸದಾಚಿಂತನ ಶೀಲನಾದ ಮನುಷ್ಯಜಾಗ್ರದಾವಸ್ಥೆಯಲ್ಲಿ ಹಲವು ವಿಷಯ ಆಮಿಷಗಳಿಗೆ ಒಳಗಾಗಿ ಅವುಗಳನ್ನು ಪಡಿಯುವ ಬಯಕೆಯಿಂದದೇವರಲ್ಲಿಗುರುಹಿರೆಯರಲ್ಲಿ ಪ್ರಾರ್ಥನೆ ಮಾಡುವುದುಇದು ಮನುಷ್ಯರ ಸಹಜ ಸ್ವಭಾವವಾಗಿದೆ. ಆದರೆ ಆವನು ಪ್ರಾರ್ದಿಸಿದ ವಿಷಯಗಳು ಜಾಗ್ರದಾವಸ್ಥೆಯಲ್ಲಿ ಫಲ ನೀಡದೆ ಆ ವಿಷಯರೂಪ ಫಲವು ಕನಸ್ಸಿನಲ್ಲಿ ಕಂಡಾಗಅಂತಃ ಸ್ವಪ್ನಗಳನ್ನು ಪ್ರಾರ್ದಿತ ಸ್ವಪ್ನಗಳೆಂದು ಕರೆಯುತ್ತಾರೆ. ತಂತ್ರಶಾಸ್ತ್ರೋಕ್ತವಾದ ಸ್ವಪ್ನದೇವತಾ ಉಪಾಸನಾ ವಿಚಾರವುಇದರಲ್ಲಿಅಂತರ್ಗತವಾಗುತ್ತದೆ.

5. ಕಲ್ಪಿತ ಸ್ವಪ್ನ :- ಭವಿಷ್ಯತ್ಕಾಲದಲ್ಲಿ ಪ್ರಾಪ್ತವಾಗಲಿರುವ ಸುಖ ದುಃಖಿಗಳ ಮತ್ತು ಅವುಗಳ ಹೇತುಗಳ ಕುರಿತು ಮಾಡುವಚಿಂತನೆಯೇಕಲ್ಪನೆ. ಕಲ್ಪನೆಗಳ ಕಲ್ಪದಲ್ಲಿತೇಲಾಡುವುದು ಮನುಷ್ಯನಲ್ಲಿಇದು ಸರ್ವೇಸಾಮಾನ್ಯ. ಕಲ್ಪನಾಲೋಕದಲ್ಲಿಆನಂದವನ್ನುಅನುಭವಿಸುವುದು ಮನುಷ್ಯಮಾಡಿಕೊಳ್ಳುವ ಕಲ್ಪನೆಗಳಿಗೆ ಎಣೆಯಿಲ್ಲ,ಅವುಗಳು ಅನಂತ. ಅಂತಹ ಕಲ್ಪನೆಗಳು ಸ್ವಪ್ನಗಳಲ್ಲಿ ಸತ್ಯದಂತೆಕಾಣುವುದನ್ನುಕಲ್ಪಿತ ಸ್ವಪ್ನಗಳೆಂದು ವಿಭಾಗಿಸುತ್ತಾರೆ.

6. ಭಾವಿಕ ಸ್ವಪ್ನ :- ಮನುಷ್ಯಜೀವನದಲ್ಲಿ ನಡೆಯುವ ಶುಭಾಶುಭ ಘಟನೆಗಳನ್ನು ಆಧಾರೀಕರಿಸಿ ಮುಂದೆ ನಡೆಯುವ ವಿಷಯಕ್ಕೆ ಸೂಚನೆ ನೀಡುವ ಕನಸ್ಸುಗಳು ಉದಾ:- ಛಾಂದೋಗ್ಯೋಪನೀಷತ್ತಿನಲ್ಲಿ ಹಿಗೆ ವಿವರಿಸುತ್ತಾರೆ. ಯದಾಕರ್ಮಸುಕಾಮ್ಯೇಷು ಸ್ತ್ರಿಯಂ ಸ್ವಪ್ನೇಭಿಪಶ್ಯತಿ। ಸಮೃದ್ಧಿ ತತ್ರ ಜಾನೀಯಾತ್ತಸ್ಮಿನ್ ಸ್ವಪ್ನನಿದರ್ಶನೇ (5-2 8) ಇತ್ಯಾದಿ ಸ್ವಪ್ನಗಳು ಬಾವಿಕ ಸ್ವಪ್ನಗಳಾಗುತ್ತವೆ ಎನ್ನುತ್ತಾರೆ.

7. ದೋಷಜ ಸ್ವಪ್ನ :- ವಾತ, ಪಿತ್ತ, ಕಫಾದಿಗಳ ಸಾಮ್ಯತೆಯೇ ಶರೀರಶುದ್ಧಿ (ಆರೋಗ್ಯ). ಮತ್ತು ವಾತ ಪಿತ್ತ, ಕಫಾದಿಗಳ ವಿಷಮತೆಯೇರೋಗಉಲ್ಬಣಕ್ಕೆಕಾರಣವೆಂದು ಪ್ರಸ್ತುತ ಈಶಾಸ್ತ್ರಕಾರರ ಅಭಿಪ್ರಾಯ. ಇಂತಹ ವಾತಾದಿ ಧಾತುಗಳ ದೋಷದಿಂದಉಂಟಾಗಾವ ಕನಸ್ಸುಗಳು ಉದಾ:-ಆಕಾಶದಲ್ಲಿತೇಲಿದ ಹಾಗೆ, ಬೆಂಕಿಯಲ್ಲಿ ಬೆಂದ ಹಾಗೆ ನೀರಿನಲ್ಲಿ ಮುಳುಗಿದ ಹಾಗೆ ಇತ್ಯಾದಿ ಕನಸ್ಸುಗಳು ಕಂಡರೆಅಂತಹ ಕನಸ್ಸುಗಳನ್ನು ದೋಷಜ ಸ್ವಪ್ನಗಳೆಂದು ಕರೆಯುತ್ತಾರೆ.

ಈ ಮೇಲಿನ ವಿಚಾರಗಳು ಚರಕನಅಭಿಪ್ರಾಯ ಮಾತ್ರವಾಗಿದೆ. ಆದರೆ ಭಾರತೀಯ ವೈದ್ಯಕೀಯ ಶಾಸ್ತ್ರದಲ್ಲಿಚರಕನಂತೆಧನ್ವಂತರಿ ಹಾಗು ಸುಶ್ರುತ ಮೋದಲಾದವರುಅತ್ಯಂತ ಪ್ರಾಚೀನರುಅವರಿಂದರಚಿತವಾದಸುಶ್ರುತಾದಿ ಆಕರ ಗ್ರಂಥಗಳು ಸಮಗ್ರ ಹಾಗು ಪ್ರಾಚೀನವೆಂಬುದುಸರ್ವಸಮ್ಮತವಾಗಿದೆ.ಆದ್ದರಿಂದ ಸುಶ್ರುತ ಮೋದಲಾದವರುಕೂಡ ಈ ಸ್ವಪ್ನ ವಿಷಯವನ್ನುಕುರಿತು ಪ್ರಾಮಾಣಿಕವಾಗಿ ಉಲ್ಲೇಖಿಸಿದ್ದಾರೆ ಎನ್ನುವುದು ಅಲ್ಲಗಳೆಯುವಂತಿಲ್ಲ .ಅದನ್ನುಉತ್ತರೋತ್ತರ ಸಂಶೋಧಕರುಅನ್ವೇಷಣೆಗೈಲು ಸಾಧ್ಯ. ಪ್ರಸ್ತುತ ಲೇಖನ ವಿಸ್ತಾರ ಭಯದಿಂದದನ್ನಿಲ್ಲಿ ಉಲ್ಲೇಖಿಸಿರುವದಿಲ್ಲ.

*** ಉಪಸಂಹಾರ:-** ಆಯುರ್ವೇದ ಶಾಸ್ತ್ರವು ಮನುಷ್ಯನ ರೋಗಗಳು ಉಲ್ಬಣಗೋಡಾಗ ಆ ರೋಗಗಳುಪಶಮನಕ್ಕೆ ಔಷಧಿಗಳನ್ನು ನೀಡುವುದರ ಮೂಲಕ ಸ್ವಾಸ್ಥ್ಯಜೀವನವನ್ನು ನಡೆಸಲು ಅನುವು ಮಾಡಿಕೊಟ್ಟಿದೆ.ಮನುಷ್ಯತನಗೆ ಬಂದ ರೋಗಗಳನ್ನು ಗುರುತಿಸಿಕೊಳ್ಳಬೇಕಾದರೆ ವೈದ್ಯರ ಸಾನಿಧ್ಯಕ್ಕೆ ಹೋಗಿ ಪರೀಕ್ಷೆಗೆ ಒಳಪಡಬೇಕು.ಆಗ ಮಾತ್ರ ಅವನ ರೋಗಅರಿಯಲು ಸಾಧ್ಯ.ಆದರೆ ವೈದ್ಯರ ಸಹಕಾರವಿಲ್ಲದೆ ಕೆಲವೊಮ್ಮೆ ನಮ್ಮ ರೋಗಗಳನ್ನು ನಾವು ಅರಿಯಲು ಸಾಧ್ಯ. ಅದು ಹೇಗೆಂದರೆ ನಮಗೆ ಬಿಳುವ ಸ್ವಪ್ನಗಳನ್ನು ಆಧಾರಿಕರಿಸಿ ನಮ್ಮರೋಗಗಳನ್ನು ಗುರುತಿಸ ಬಹುದುಎನ್ನುವುದುಆಯುರ್ವೇದ.ಆಂದ ಮಾತ್ರಕ್ಕೆಎಲ್ಲಾ ಸ್ವಪ್ನಗಳು ರೋಗಸೂಚಕವಲ್ಲ.ಆದ್ದರಿಂದ ಮನುಷ್ಯನಿಗೆ ಸ್ವಪ್ನದಜ್ಞಾನಅವಶ್ಯವೆಂದುಅರಿತಆಯರ್ವೇದ ಶಾಸ್ತ್ರಕಾರರು ಸ್ವಪ್ನಗಳನ್ನು ಈ ಮೇಲ್ಕಂಡರೀತಿಯಲ್ಲಿ ವಿಭಾಗಿಸಿ ಅವುಗಳ ಜ್ಞಾನದ ಮುಖಾಂತರ ಸ್ವಾಸ್ಥ್ಯ ಹಾಗೂ ಸುಖಜೀವನವನ್ನು ನಡೆಸಬೇಕೆನ್ನುವದೃಷ್ಟಿಯಿಂದ ಸ್ವಪ್ನ ವಿಚಾರವನ್ನು ಚರ್ಚಿಸಿರುತ್ತಾರೆ.

*** ಪರಾಮರ್ಶನ ಗ್ರಂಥಗಳು**

೧. **ಚರಕ ಸಂಹಿತೆ**. ಪಂಡಿತತಾರಾದತ್ತ ಪಂತ್‌ಪ್ರಕಾಶನ: ಚೌಖಾಂಬಾ ಸಂಸ್ಕೃತ ಸೀರಿಜ ಆಫಿಸ್ ವಾರಾಣಾಸಿ ೨೦೧೦

೨. **ಯೋಗದರ್ಶನ ಸಮೀಕ್ಷಾ**ಲೇಖಕರು. ಶ್ರೀ ಕೃಷ್ಣ ತ್ರಿಪಾಟಿ. ಪ್ರಕಾಶನ: ಕೃಷ್ಣದಾಸಅಕಾಡೆಮಿ ವಾರಣಾಸಿ
೩. **ಪತಂಜಲಿ ಯೋಗಸೂತ್ರ ವೃತ್ತಿ**. ಸಂಪಾದಕರು: ಡಾ॥ ವಿಮಲಾ ಕರ್ನಾಟಕ. ಪ್ರಕಾಶನ: ಚೌಕಂಬಾ ಕೃಷ್ಣದಾಸಅಕಾಡೆಮಿ ವಾರಣಾಸಿ
೪. **ಉಪನಿಷತ್ತ ಸಂಗ**ಸಂಪಾದಕರು: ಪಂಡಿತಜಗದಿಶ ಶಾಸ್ತ್ರಿ. ಪ್ರಕಾಶನ: ಮೋತಿಲಾಲ ಬನರಸಿದಾಸ ನವದೆಹಲಿ ಮತ್ತು ವಾರಣಾಸಿ
೫. **ಸರ್ವದರ್ಶನ ಸಂಗ್ರಹ**. ಅನುವಾದಕರು: ಡಾ॥ ಶಿವಬಸವ ಮಹಾಸ್ವಾಮಿಗಳು. ಪ್ರಕಾಶನ: ಜೆ. ಎಸ್. ಎಸ್. ಮಹಾವಿದ್ಯಾಪೀಠ ಮೈಸೂರು.

ಬ್ರಿಟಿಷ್ ಮಲಬಾರಿನಲ್ಲಿ ಪಾಶ್ಚಿಮಾತ್ಯ ವೈದ್ಯ ಪದ್ಧತಿ ಹಾಗೂ ಆಯುರ್ವೇದ ವೈದ್ಯರ ಪ್ರತಿಕ್ರಿಯೆ

ಮಮತಾ. ಕೆ.
ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

ಹತ್ತೊಂಬತ್ತನೆಯ ಶತಮಾನದಲ್ಲಿ ಮಲಬಾರ್ ಜಿಲ್ಲೆಯಲ್ಲಿ ಬ್ರಿಟೀಷ್ ಆಡಳಿತ ಪ್ರಾರಂಭವಾಯಿತು ಹಾಗೂ ಇದು ಒಂದು ನೂತನ ಆಭಿವೃದ್ಧಿಗೆ ನಾಂದಿ ಹಾಡಿತು. ಬ್ರಿಟಿಷ್ ಆಡಳಿತವು ನೂತನ ವ್ಯವಸ್ಥೆಗಳನ್ನು ರೂಪಿಸುವುದಲ್ಲದೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ತಮ್ಮ ಸರ್ವಾಧಿಕಾರವನ್ನು ಸ್ಥಾಪಿಸಿತು. ಅದಲ್ಲದೆ ಬ್ರಿಟಿಷರು ತಮ್ಮದೇ ಆದ ಒಂದು ಪರಿಸರವನ್ನು ಪರಿಸ್ಥಿತಿಗೆ ಅನುಗುಣವಾಗಿ ಸೃಷ್ಟಿಸಿದರು. ತಮ್ಮ ಆಡಳಿತದ ಸಂದರ್ಭದಲ್ಲಿ ಬ್ರಿಟಿಷರು ಕೇವಲ ಇಲ್ಲಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಮುನ್ನಡೆ ಸಾಧಿಸಿದ್ದು ಮಾತ್ರವಲ್ಲದೆ ತಮ್ಮ ಆಡಳಿತಕ್ಕೆ ಸಮಸ್ಯೆಯನ್ನು ತಂದೊಡ್ಡಿದ ಇಲ್ಲಿನ ಸಾಂಕ್ರಾಮಿಕ (Epidemic) ಹಾಗೂ ಸ್ಥಳೀಯ ರೋಗಗಳನ್ನು (Endemic) ಯಶಸ್ವಿಯಾಗಿ ಎದುರಿಸಿದರು. ಬ್ರಿಟಿಷ್ ವೈದ್ಯ ಪದ್ಧತಿಯ ಉಗಮದ ಕಾಲಘಟ್ಟದಲ್ಲಿ ಬ್ರಿಟೀಷರು ಆಯುರ್ವೇದ ವೈದ್ಯ ವ್ಯವಸ್ಥೆಯ ಬಗ್ಗೆ ಯಾವ ರೀತಿಯ ನಿಲುವನ್ನು ಹೊಂದಿದ್ದರು? ಬ್ರಿಟಿಷ್ ಆಡಳಿತವು ಸಾಂಕ್ರಾಮಿಕ ರೋಗಗಳಾದ ಸಿಡುಬು, ಮಲೇರಿಯಾ, ಆನೆಕಾಲು ರೋಗ, ಕಾಲೆರಾ ಮೊದಲಾದ ರೋಗಗಳಿಗೆ ಆಯುರ್ವೇದ ವ್ಯವಸ್ಥೆಯಲ್ಲಿ ಪರಿಹಾರವಿದೆ ಎನ್ನುವ ವಾದವನ್ನು ಒಪ್ಪಿಕೊಂಡಿದ್ದರೆ? ಇದು ಹೌದಾದಲ್ಲಿ ಮಲಬಾರಿನ ಸ್ಥಳೀಯರು ಯಾವ ರೀತಿಯಲ್ಲಿ ಹೊಸ ಪಾಶ್ಚಿಮಾತ್ಯ ವೈದ್ಯ ವ್ಯವಸ್ಥೆಯ ಪ್ರವೇಶಕ್ಕೆ ಪ್ರತಿಕ್ರಿಯಿಸಿದರು?

ವಸಾಹತುಶಾಹಿ ವ್ಯವಸ್ಥೆಯಲ್ಲಿ ಬ್ರಿಟೀಷ್ ವೈದ್ಯ ವ್ಯವಸ್ಥೆ ಹಾಗೂ ಭಾರತೀಯ ಸಮೂಹವು ವ್ಯತ್ಯಸ್ಥವಾದ ರೂಪವನ್ನು ಪಡೆದುಕೊಂಡಿದೆ. ಬ್ರಿಟೀಷರು ತಮ್ಮದೇ ಆದ ಹಿತಾಸಕ್ತಿಯನ್ನು ಸಂರಕ್ಷಿಸಲು ಹಾಗೂ ಭಾರತೀಯರ ಜನರ ಆರೋಗ್ಯವನ್ನು ಉತ್ತಮಗೊಳಿಸುವ ಉದ್ದೇಶದಿಂದ ಭಾರತದ ಹಲವೆಡೆಗಳಲ್ಲಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಿದರು. ಇದರಿಂದಾಗಿ ಭಾರತೀಯ ವೈದ್ಯಲೋಕ ಒಂದು ಹೊಸ ಯುರೋಪಿಯನರ ವೈದ್ಯ ವ್ಯವಸ್ಥೆಯನ್ನು 'ಆಂಗೀಕರಿಸು'ವಂತೆ ಆಯಿತು. ಮಾತ್ರವಲ್ಲದೆ ವಿದೇಶೀ ವೈದ್ಯ ವ್ಯವಸ್ಥೆಯ ಕುರಿತಾಗಿ ಆಸಕ್ತಿ ಇಲ್ಲದ ಹಾಗೂ ಉದಾಸೀನತೆಯನ್ನು ಹೊಂದಿದ ಜನ ಇದಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು. ಇದರಲ್ಲಿ ಬ್ರಾಹ್ಮಣರು ಹಾಗೂ ಮುಸಲ್ಮಾನರು ಮೊದಲಿಗರಾಗಿದ್ದರು.

ಈ ಕಿರುಲೇಖನದಲ್ಲಿ ಪ್ರಧಾನವಾಗಿ ಚರ್ಚಿಸುವ ವಿಷಯಗಳೆಂದರೆ ಮಲಬಾರ್ ಜಿಲ್ಲೆಯಲ್ಲಿ ಬ್ರಿಟೀಷರ ಆಡಳಿತ ಕಾಲಘಟ್ಟದಲ್ಲಿ ಬದಲಾವಣೆಗೆ ಒಳಗಾದ ಆಯುರ್ವೇದ ವೈದ್ಯ ವ್ಯವಸ್ಥೆ ಹಾಗೂ ಇದರ ಸುಧಾರಿತ ಸ್ಥಾನಮಾನಗಳು. ಮಲಬಾರಿನಲ್ಲಿ ವಿದೇಶಿ ವೈದ್ಯ ಪದ್ಧತಿಯ ಪ್ರವೇಶದಿಂದ ಆಯುರ್ವೇದ ವೈದ್ಯಪದ್ಧತಿಯಲ್ಲಿ ಯಾವ ರೀತಿಯ ಬದಲಾವಣೆಗಳು ಸಂಭವಿಸಿತು? ಬ್ರಿಟಿಷ್ ವೈದ್ಯ ಪದ್ಧತಿ ಹಾಗೂ ಆಯುರ್ವೇದ ಪದ್ಧತಿಯ ಕುರಿತಾಗೆ ಸ್ಥಳೀಯ ಜನರು ಯಾವ ರೀತಿಯ ನಿಲುವನ್ನು ಹೊಂದಿದ್ದರು? ಮಲಬಾರಿನಲ್ಲಿದ್ದಂತಹ ವೈದ್ಯವ್ಯವಸ್ಥೆಗಳು ಹಾಗೂ ಸ್ಥಳೀಯ ಸಮೂಹದ ಪ್ರತಿಕ್ರಿಯೆಗಳು ಮೊದಲಾದ ವಿಷಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಪತ್ರಾಗಾರಗಳಲ್ಲಿ ಲಭ್ಯವಾಗುವ ಮೂಲ ದಾಖಲೆಗಳನ್ನು ಹಾಗೂ ಲಿಖಿತ ಗ್ರಂಥಗಳನ್ನು ಆಕರಗಳಾಗಿ ಬಳಸಲಾಗಿದೆ. ಈ ಕಿರುಪ್ರಬಂಧದಲ್ಲಿ ನಾನು ಮಲಬಾರ್ ಜಿಲ್ಲೆಯಲ್ಲಿ ಆಯುರ್ವೇದ ವೈದ್ಯಪದ್ಧತಿಯ ರಂಗಗಳಲ್ಲಿ ಆದ ಆಭಿವೃದ್ಧಿಯ ಕುರಿತಾದ ಒಂದು ಸಮಗ್ರವಾದ ವಿವರಣೆಯನ್ನು ನೀಡಿರುತ್ತೇನೆ.

ರೋಗಗಳ ತಡೆಗಟ್ಟುವಿಕೆ ಹಾಗೂ ನಿವಾರಣೆಗೆ ಆಧುನಿಕ ವೈಧ್ಯ ಪದ್ಧತಿ ತನ್ನದೇ ಆದ ಒಂದು ಕೊಡುಗೆಯನ್ನು ನೀಡಿದೆ, ಆಧುನಿಕ ವೈದ್ಯ ಪದ್ಧತಿಯು ಇತರ ವೈದ್ಯ ಪದ್ಧತಿಗಳಿಗೆ ಹೋಲಿಸಿದರೆ ರೋಗ ತಡೆಗಟ್ಟುವಿಕೆ ಹಾಗೂ ನಿವಾರಣೆಯಲ್ಲಿ ವಿಶೇಷವಾದ ಚಾಪು ಮೂಡಿಸಿದೆ. ನಮ್ಮ ದೇಶದ ಸ್ಥಳೀಯ ಜನರು ಅನುಸರಿಸುವ ಆರೋಗ್ಯ ವ್ಯವಸ್ಥೆಯ ಮಾದರಿಯನ್ನು ಅವಲಂಭಿಸಿದೆ. 19ನೇ ಶತಮಾನದಲ್ಲಿ ಬೆಳಕಿಗೆ ಬಂದ Innoculation ಮತ್ತು ನಿರ್ಮಲೀಕರಣ ದಲ್ಲಿ ಉಂಟಾದ ಬದಲಾವಣೆಗಳನ್ನು ಇತಿಹಾಸಕಾರರು ದಾಖಲೆ ಸಹಿತ ಉಲ್ಲೇಖಿಸಿದ್ದಾರೆ.[1]

ವಿದೇಶಿ ವೈದ್ಯ ಪದ್ಧತಿಯು ಭಾರತದಾದ್ಯಂತ ಹರಡಲು ಇಲ್ಲಿಯ ವಿದೇಶಿ ವಿದ್ಯಾಬ್ಯಾಸ ಪಡೆದ ಭಾರತೀಯ ಸಮೂಹವು ಮಧ್ಯಸ್ಥಿಕೆ ಯನ್ನು ಹೊಂದಿದ್ದರು. 'ಆಧುನಿಕ ರೂಪಾಂತರ' ಮಾಡುವುದರಲ್ಲಿ ಇವರು ನಿಯೋಗಿಗಳಾಗಿ ವರ್ತಿಸಿದ್ದಾರೆ. ಮಾತ್ರವಲ್ಲದೆ ವಿವಿಧ ಆಹಾರ ಪದ್ಧತಿ, ಪಾನಿಯಗಳು, ವಸ್ತ್ರ ವಿನ್ಯಾಸ, ಗೃಹ ನಿರ್ಮಾಣ, ಕೊಳಚೆ ನಿರ್ವಹಣೆ, ಕ್ರೀಡೆ, ವಿನೋದ ಹಾಗೂ ಬೌಧಿಕ ಬೆಳವಣಿಗೆಯನ್ನು, ನಿತ್ಯಜೀವನದ ಪ್ರತಿಯೊಂದು ವಿಷಯಗಳನ್ನೂ ಬ್ರಿಟೀಷರು ನಿರ್ಮಲೀಕರಣದ ದೃಷ್ಟೀಕೋನದಿಂದ ಅಳೆಯುತ್ತಿದ್ದರು[2], ಅದರಲ್ಲಿ ಪ್ರಥಮವಾಗಿ ವಿದೇಶೀ ಜ್ಞಾನವನ್ನು ಭಾರತದ ಜನರಲ್ಲಿ ಬಿತ್ತುವುದರಲ್ಲಿ ಹಾಗೂ ಭಾರತೀಯ ಸಮೂಹ ಇದನ್ನು ಸ್ವೀಕರಿಸುವಂತೆ ಮಾಡುವಲ್ಲಿ ಇಲ್ಲಿನ ಪ್ರಜ್ಞಾವಂತ ಗುಂಪಿನ ಜನ (Elite class) ಪ್ರಯತ್ನಿಸಿದ್ದಾರೆ. 1870 ರಿಂದ 1890 ರ ನಡುವಿನ ಕಾಲಘಟ್ಟದಲ್ಲಿ ಯುನೈಟೆಡ್ ಪ್ರೋವಿಯ್ಸಸ್ ಬಾಂಬೆ ಹಾಗೂ ಮದರಾಸು ಪ್ರೆಸಿಡೆನ್ಸಿಯಲ್ಲಿ ಕಂಡು

ಬಂದ ಸಾಂಕ್ರಾಮಿಕ (Epidemic) ರೋಗಗಳಾದ ಸಿಡುಬು, ಕಾಲರ ಹಾಗೂ ಪ್ಲೇಗ್ ರೋಗಗಳನ್ನು ಭಾರತದ ವಿದೇಶಿ ಸಮೂಹವು ಆಧುನಿಕ ವೈದ್ಯ ಪದ್ಧತಿಯ ಪ್ರಯೋಗವನ್ನು ಬಳಸಿ ಸುಸೂತ್ರವಾಗಿ ನಿರ್ವಹಿಸಿದೆ. ಮಾತ್ರವಲ್ಲದೆ ಇದರಲ್ಲಿ ಯಶಸ್ವಿಯನ್ನು ಕಂಡಿದೆ. ಆಧುನಿಕ ವಸಹಾತುಶಾಹಿ ವೈದ್ಯ ಪದ್ಧತಿಯ ತಿಳುವಳಿಕೆಗಳು ಹಾಗೂ ನೀತಿಗಳು ಶರೀರವನ್ನು ಕೇಂದ್ರಿಕೃತವಾಗಿಸಿಕೊಂಡಿದೆ. ಅವರ ಅಭಿಪ್ರಾಯದ ಪ್ರಕಾರ ಮಾನವ ಶರೀರದ ಮೂಲಭೂತ ಅಂಶಗಳಾದ ಕೊಳೆ, ಸಂಖ್ಯಾಶಾಸ್ತ್ರ, ಅನಾರೋಗ್ಯಕವಾದ ಅಭ್ಯಾಸಗಳು ಹಾಗೂ ಮೂಢನಂಬಿಕೆ ಭಾರತದಲ್ಲಿ ರೋಗವನ್ನು ಎಲ್ಲೆಡೆಗಳಲ್ಲಿ ಹರಡಿಸಲು ಪ್ರಧಾನವಾದ ಕಾರಣಗಳು ಎಂದು ವಾದಿಸುತ್ತಾರೆ. ಮಾತ್ರವಲ್ಲದೆ ಭಾರತೀಯರಿಗೆ ತಮ್ಮ 'ಶರೀರ'ದ ಕುರಿತಾಗಿ ಸರಿಯಾದ ತಿಳುವಳಿಕೆಯಾಗಲೀ ಇಲ್ಲ ಹಾಗೂ ಅವರು ತಮ್ಮ ಶರೀರ ಆರೋಗ್ಯ ನಿಯಮಗಳನ್ನು ಕಡೆಗಣಿಸುತ್ತಾರೆ ಎಂದು ಟೀಕಿಸಿದ್ದಾರೆ[3].

ಬ್ರಿಟೀಷರು ಭಾರತದಲ್ಲಿ ಪ್ರಚಾರಪಡಿಸಿಚ ವಿದೇಶಿ ವೈದ್ಯ ಪದ್ಧತಿಯು ಭಾರತೀಯರ ಒಳಿತನ್ನು ಕಾಪಾಡುವ ಉದ್ದೇಶದಿಂದ ಆಗಿರಲಿಲ್ಲ ಅದರ ಬದಲಾಗಿ ಇದು ಅವರ ಎರಡು ಅವಶ್ಯಕತೆಗಳನ್ನು ಪೂರೈಸುವ ಉದ್ದೇಶದಿಂದ ಅಗಿತ್ತು. ಒಂದನೆಯದಾಗಿ ಬ್ರಿಟಿಷ್ ಸೈನ್ಯದ ಆರೋಗ್ಯವನ್ನು ಸಂರಕ್ಷಿಸುವುದು ಹಾಗೂ ಸಾರ್ವಜನಿಕ ಆರೋಗ್ಯವನ್ನು ಸಂರಕ್ಷಿಸುವುದು ಮತ್ತು ಆ ಮೂಲಕ ವಿದೇಶಿ ವೈದ್ಯಕೀಯ ಪದ್ಧತಿಯನ್ನು ಪ್ರಚಾರಪಡಿಸುವುದು ಹಾಗೂ ಆ ಮೂಲಕ ಮರಣ ಪ್ರಮಾಣವನ್ನು ಕಡಿಮೆಗೊಳಿಸುವುದು.

ಬ್ರಿಟೀಷ್ ಆಳ್ವಿಕೆಯ ಕಾಲದ ಸಾಂಸ್ಕೃತಿಕ ಇತಿಹಾಸವನ್ನು ನೋಡುವಾಗ ಹಾಗೂ ಅದರ ಕುರಿತಾಗಿ ಚರ್ಚಿಸುವಾಗ ಜನರ ಮೇಲೆ ವಸಾಹತುಶಾಹಿ ಆಡಳಿತದ ಪ್ರಭಾವವು ಒಂದೆಡೆಯಾದರೆ, ಇನ್ನೊಂದೆಡೆ ವೈಚಾರಿಕ ಸಿದ್ಧಾಂತಗಳು ಬ್ರಿಟಿಷ್ ಆಡಳಿತವನ್ನು ಸಮರ್ಥಿಸಿಕೊಳ್ಳುವಂತೆ ರೂಪಿಸಿದರು. ಮೊದಲಿಗೆ ಬ್ರಿಟೀಷರು ಭಾರತದ ಸಾಂಸ್ಕೃತಿಕ, ರಾಜಕೀಯ ಮತ್ತು ವೈದ್ಯಕೀಯ ರಂಗಗಳಲ್ಲಿ ಪ್ರವೇಶಮಾಡಿ ಇಲ್ಲಿನ ಸಂಪನ್ಮೂಲಗಳನ್ನೇ ಬಳಸಿಕೊಂಡು ತಮ್ಮ ವಸಹಾತುಶಾಹಿ ವಿಚಾರಧಾರೆಗಳನ್ನು ಕಾರ್ಯಗತಗೊಳಿಸಿದರು.

ಬ್ರಿಟೀಷರು ತಮ್ಮ ವಸಾಹತುಶಾಹಿ ಆಸಕ್ತಿಯನ್ನು ಹೆಚ್ಚಿಸಲು ಉಪಯೋಗಿಸಿದ ಕಲ್ಪನೆ ಹಾಗೂ ವಿಚಾರಗಳು ಮತ್ತು ಅವರು ತೆಗೆದುಕೊಂಡು ನಿರ್ಧಾರಗಳು ಕೊನೆಗೆ ಅವರಿಗಿ ಸಹಕರಿಸಿದವೇ ಅಥವಾ ಹಿನ್ನಡೆ ಉಂಟುಮಾಡಿದವೇ ಎನ್ನುವುದು ಚರ್ಚಾಸ್ಪದವಾಗಿದೆ.

ಎರಡನೆಯದಾಗಿ ವಸಹಾತುಶಾಹಿ ನೀತಿಯು ಸ್ಥಳೀಯ ಸಂಪ್ರದಾಯಗಳ ಮೇಲೆ, ಸಾಮಾಜಿಕ ಸಂಘಟನೆಗಳ ಮೇಲೆ ತಮ್ಮದೇ ಆದ ಪ್ರಭಾವನ್ನು ಬೀರಿದೆ ಹಾಗೂ ಭಾರತೀಯರನ್ನು ತಮ್ಮ ಗುಲಾಮರನ್ನಾಗಿಸಿದೆ. ಪ್ರಾರಂಭ ಕಾಲಘಟ್ಟದಲ್ಲಿ ಸಾಮಾಜಿಕವಾಗಿ ಮೇಲುಕೈಯನ್ನು ಸಾಧಿಸಿದ ಮಂದಿ ವಿದೇಶಿ ನೀತಿಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಇದರ ಫಲವಾಗಿ ಸರಕಾರ ಮಧ್ಯ ಪ್ರವೇಶಮಾಡಿ ಕಟ್ಟು ನಿಟ್ಟಿನ ಕ್ರಮವನ್ನು ಕೈಗೊಂಡಿತು.

ಇಪ್ಪತ್ತನೇ ಶತಮಾನದಲ್ಲಿ ಭಾರತವು ರಾಷ್ಟ್ರೀಯ ಸಾಂಗ್ರಾಮದ ತುತ್ತತುದಿಯಲ್ಲಿತ್ತು. ಇತರ ರಾಷ್ಟ್ರಗಳಂತೆಯೇ ಭಾರತದಲ್ಲಿ ವಿದ್ಯಾವಂತರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದಂತೆಯೇ ರಾಜಕೀಯ ಸಂಘಟನೆಗಳ ಉದಯಗೊಂಡವು ಹಾಗೂ ಇವರು ಜನರ ಮೇಲೆ ವಿಶೇಷ ರೀತಿಯಲ್ಲಿ ಪ್ರಭಾವವನ್ನು ಬೀರಿದರು. ಆದರೆ ದಕ್ಷಿಣ ಭಾರತದಲ್ಲಿ ಅದರಲ್ಲೂ ಮಲಬಾರ್ ಪ್ರದೇಶಗಳ ಮೇಲೆ ರಾಜಕೀಯ ಅಂಶಗಳು ನಿಧಾನವಾಗಿಯೇ ಪ್ರಭಾವನ್ನು ಬೀರಿತು.

ಮಲಬಾರ್ ನಲ್ಲಿ ಬ್ರಿಟೀಷ ಆಳ್ವಿಕೆಯ ಪ್ರಾರಂಭ ಘಟ್ಟದಲ್ಲಿ ಸ್ಥಳೀಯ ಜನರ ತಿಳುವಳಿಕೆ ಹಾಗೂ ಪ್ರಾದೇಶಿಕ ಸಂಪ್ರದಾಯಗಳಲ್ಲಿ ಬದಲಾವಣೆಗಳು ಉಂಟಾದವು. ವಸಾಹತುಶಾಹಿ ಬೆಳವಣಿಗೆಯ ಫಲವಾಗಿ ಸ್ಥಳೀಯ ಸಾಂಸ್ಕೃತಿಕ ಅಂಶಗಳು ಕಡೆಗಣಿಸಲ್ಪಟ್ಟವು. ವಿದ್ಯಾವಂತ ಸಮೂಹವು ವಿದೇಶಿ ಸಂಸ್ಕೃತಿಯ ಫಲವಾಗಿ ತಮ್ಮನ್ನು ಜಾಗತಿಕ ವಿದ್ಯಮಾನಗಳಿಗೆ ತೆಗೆದುಕೊಂಡರು. ಮಾತ್ರವಲ್ಲದೆ ಕೆಲವೊಂದು ಭಾರತೀಯ ಅಂಶಗಳನ್ನು ತಿರಸ್ಕರಿಸಿದರು ಮತ್ತು ಕೆಲವೊಂದು ವಿಚಾರಗಳಲ್ಲಿ ಸುಧಾರಣೆಯನ್ನು ತಂದರು. ವ್ಯತಿಪರ, ನಿಯಮಬದ್ಧ ಸಂಸ್ಥೆಯನ್ನು ಆಧರಿತವಾದ ವೈದ್ಯಕೀಯ ವ್ಯವಸ್ಥೆಯೂ ಕೂಡ ಇಲ್ಲಿನ ಸ್ಥಳೀಯ ವೈದ್ಯಕೀಯ ಪದ್ಧತಿಯ ಅವನತಿಗೆ ಕಾರಣವಾಯಿತು. ಈ ಕಾರಣದಿಂದಾಗಿ ಭಾರತೀಯ ಅಂಶಗಳು ಅವನತಿಯನ್ನು ಹೊಂದಿದವು.

ಬ್ರಿಟೀಷ್ ವೈದ್ಯ ಪದ್ಧತಿಯ ಹೊಸ ಹೊಸ ಅಂಶಗಳು ವಸಾಹತು ಶಾಹಿ ಕಾಲದಲ್ಲಿ ಸ್ಥಳೀಯ ಔಷಧಗಳ ಉಳಿವಿದೆ ಅಡ್ಡಿ ಉಂಟುಮಾಡಿದವು. ಆದರೆ ಸ್ಥಳೀಯ ವೈದ್ಯ ಪದ್ಧತಿಯ ಪ್ರತಿಪಾದಕರು ಮುಂದಿಟ್ಟ ವಿಚಾರವೆಂದರೆ ವಿದೇಶಿ ವೈದ್ಯ ಪದ್ಧತಿಯು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಆದರೆ ಸ್ಥಳೀಯ ವೈದ್ಯ ಪದ್ಧತಿಯ ಸಿದ್ಧಾಂತಗಳು ಎಂದಿಗೂ ಸ್ಥಿರವಾಗಿರುತ್ತದೆ. ಆಯುರ್ವೇದವು ಪ್ರಕೃತಿಯ ನಿಯಮಗಳಿಗೆ ಅನುಸಾರವಾಗಿದೆ ಹಾಗೂ ವೈಜ್ಞಾನಿಕವಾಗಿದೆ ಎಂದು ಪ್ರತಿಪಾಧಿಸಿದರು.

ಬ್ರಿಟೀಷ್ ಆಡಳಿತಗಾರರು ಸ್ಥಳೀಯ ವೈದ್ಯಪದ್ಧತಿ ವಿದೇಶಿ ವೈದ್ಯ ಪದ್ಧತಿಗಿಂತ ಕಡಿಮೆ ಪರಿಣಾಮಕಾರಿ ಎಂದು ದೂರಿದರು. ಆದರೆ ಹೆಚ್ಚಿನ ಭಾರತೀಯ ಜನರು ಸ್ಥಳೀಯ ವೈದ್ಯಪದ್ಧತಿಯಲ್ಲಿ ನಂಬಿಕೆ ಇರಿಸಿದ್ದರು ಮತ್ತು ಇಲ್ಲಿನ ಸ್ಥಳೀಯ ವೈದ್ಯರಿಂದ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಬ್ರಿಟೀಷ್ ಆಡಳಿತಗಾರರಿಗೆ ತಿಳಿದಿತ್ತು. ಇದಕ್ಕೆ ಪ್ರಧಾನಕಾರಣವೆಂದರೆ ಸ್ಥಳೀಯ ಔಷಧಗಳು ಅಗ್ಗದ ಬೆಲೆಗೆ ದೊರಕುತ್ತಿದ್ದವು, ದುಬಾರಿ ಬೆಲೆಯ ವಿದೇಶಿ ಔಷಧಗಳು ಕೋಟ್ಯಾಂತರ ಭಾರತೀಯರಿಗೆ ಲಭ್ಯಬಾಗುತ್ತಿರಲಿಲ್ಲವಾದ್ದರಿಂದ ಬ್ರಿಟೀಷ್ ಆಡಳಿತವು ಗ್ರಾಮೀಣ ಪ್ರದೇಶದಲ್ಲಿ ಸ್ಥಳೀಯ ವೈದ್ಯರಿಗೆ ಚಿಕಿತ್ಸೆಯನ್ನು ನೀಡಲು ಅವಕಾಶವನ್ನು ನೀಡಿದವು[5].

ಬ್ರಿಟೀಷ್ ಆಡಳಿತಗಾರರಿಗೆ ಭಾರತೀಯರು ಸ್ಥಳೀಯ ವೈದ್ಯಕೀಯ ವ್ಯವಸ್ಥೆಯನ್ನು ಬಳಸುವುದರ ಬಗ್ಗೆ ಯಾವುದೇ ರೀತಿಯಲ್ಲಿ ವಿರೋಧವಿರಲಿಲ್ಲ. ಆದರೆ ಸ್ಥಳೀಯ ವೈದ್ಯ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಲು, ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ತಗಲುವ ವೆಚ್ಚವನ್ನು ಭರಿಸಲು ಅವರು ಸಿದ್ಧರಿರಲಿಲ್ಲ[6]. ಆದರೆ ಪ್ರೊವಿನ್‌ಶಿಯಲ್ ಮೆಡಿಕಲ್ ಕೌನ್ಸಿಲ್ ವೈದ್ಯರ ನೊಂದಾಪಣೆಯನ್ನು ಕಡಾಯಗೊಳಿಸುವುದರ ಫಲವಾಗಿ ಸ್ಥಳೀಯ ವೈದ್ಯರು ಸಮಸ್ಯೆಗಳನ್ನು ಎದುರಿಸುವಂತಾಯಿತು[7].

ದೇಶದ ರಾಜಕೀಯವನ್ನು ಪ್ರವೇಶಿಸಬೇಕಾದರೆ ಅವರಿಗೆ ರಾಜಕೀಯದ ಆಡಳಿತದ ಬಗ್ಗೆ ಜ್ಞಾನ ಬರಬೇಕು. ಅದಕ್ಕಾಗಿ ಗ್ರಾಮಗಳಿಂದ ಆಯ್ಕೆಗೊಂಡರೆ ಅನುಭವ ದೊರೆಯುತ್ತದೆ. ಅಲ್ಲದೆ ಗ್ರಾಮೀಣ ಭಾಗದ ಮಹಿಳೆಯರು ಸಹ ರಾಜಕೀಯದಲ್ಲಿ ಮುಂದೆ ಬರಲು ಇದು ಒಂದು ಒಳ್ಳೆಯ ಅವಕಾಶವಾಗಿದೆ.

ಗ್ರಾಮೀಣ ಭಾಗದ ಮಹಿಳೆಯರು ಹೆಚ್ಚಾಗಿ ದೌರ್ಜನ್ಯ ಹಾಗೂ ಶೋಷಣೆಗೆ ಒಳಗಾಗುತ್ತಾರೆ. ಅವುಗಳನ್ನು ತಡೆಯಲು ಸರ್ಕಾರವು ಸಂವಿಧಾನದಲ್ಲಿ ಅನೇಕ ಕಾಯ್ದೆಗಳನ್ನು ಜಾರಿಗೆ ತಂದಿದೆ ಉದಾಹರಣೆಗೆ: ಮಹಿಳೆಯರಿಗೆ ಆಸ್ತಿಯ ಹಕ್ಕು, ಬಾಲ್ಯವಿವಾಹ ನಿಷೇಧ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ಪ್ರಸೂತಿ ಸೌಕರ್ಯ ಕಾಯ್ದೆ, ಸಮಾನವೇತನ ಕಾಯ್ದೆ ಇವುಗಳಲ್ಲದೆ ಇತ್ತೀಚಿನ ದಿನಗಳಲ್ಲಿನ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ಅತ್ಯಾಚಾರ)ಗಳನ್ನು ನಿಯಂತ್ರಿಸಲು ಸಿಗಬೇಕಾದರೆ ಅವರು ಕಠಿಣ ಶಿಕ್ಷೆಗಳ ಕಾಯ್ದೆಯನ್ನು ಅಳವಡಿಸಲಾಗಿದೆ ಈ ಎಲ್ಲಾ ಮಾಹಿತಿಗಳು ಗ್ರಾಮೀಣ ಭಾಗದ ಮಹಿಳೆಯರಿಗೆ ಸಿಗಬೇಕಾದರೆ ಅವರು ಶಿಕ್ಷಣವನ್ನು ಪಡೆಯುವುದರ ಜೊತೆಗೆ ರಾಜಕೀಯದಲ್ಲಿ ಸಬಲರಾದರೇ ಮಾತ್ರ ಇವುಗಳ ಸಮರ್ಪಕ ಕಾರ್ಯ ನಿರ್ವಹಣೆ ಸಾಧ್ಯವಾಗುತ್ತದೆ. ಇಲ್ಲವಾದರೆ ಯಾವುದೇ ಕಾನೂನುಗಳನ್ನು ತಂದರು ಇವುಗಳ ವಿಫಲವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ರಾಜಕೀಯದಲ್ಲಿ ಹೆಚ್ಚಾಗಿ ಪಾಲ್ಗೊಳ್ಳುತ್ತಿದ್ದರು. ಆದರೆ ಇಲ್ಲಿಯೂ ಸಹ ಮಹಿಳೆಯರು ಸ್ವಾತಂತ್ರ್ಯವಾಗಿ ಅಧಿಕಾರ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಕಾರಣವೇನೆರಂದರೆ ಪುರುಷರು ಹೆಚ್ಚಾಗಿ ರಾಜಕೀಯ ಅಧಿಕಾರ ನಿರ್ವಹಿಸುತ್ತಿದ್ದರು. ಇತ್ತೀಚೆಗೆ ಮಹಿಳೆಯರಿಗೆ 33%ರಷ್ಟು ಮೀಸಲಾತಿ ನೀಡಿರುವುದರಿಂದ ಅಲ್ಲಿ ಪುರುಷರು, ಹೆಂಡತಿಯರು ಆ ರಾಜಕೀಯ ಕ್ಷೇತ್ರದಲ್ಲಿಬರುತ್ತಿದ್ದರು ಅವರು ನಾಮಕಾವಸ್ಥೆಎಗೆ ಗ್ರಾಮ ಪಾಂಚಾಯಿರಿಗಳಲ್ಲಿ ಸದಸ್ಯೆ, ಅಧ್ಯಕ್ಷೆ, ಉಪಾಧ್ಯಕ್ಷೆ ಇನ್ನಿತರ ಸ್ಥಾನದಲ್ಲಿದ್ದರೂ ಅವರ ನೈಜ ಅಧಿಕಾರವನ್ನು ಪತಿ ಅಥವಾ ಇತರೆ ಯಾರಾದರೂ ಅನುಭವ ಇರುವ ಪುರುಷರು ನಡೆಸುತ್ತಿರುತ್ತಾರೆ. ಇದು ಸಹ ಮಹಿಳೆಯರ ಮೇಲಿನ ರಾಜಕೀಯ ದೌರ್ಜನ್ಯವಾಗಿದೆ ಇದು ಕಡಿಮೆಯಾಗಬೇಕು ಮಹಿಳೆಯರು ರಾಜಕೀಯದಲ್ಲಿ ಸ್ವಾತಂತ್ರ್ಯವಗಿ ಕಾರ್ಯನಿರ್ವಹಿಸುವಂತಾಗಬೇಕು. ಹಾಗಾದಾಗ ಮಾತ್ರ ಮಹಿಳೆಯ ಅಭಿವೃದ್ಧಿ, ಸಬಲತೆ ಜೊತೆಗೆ ಗ್ರಾಮೀಣ ಅಭಿವೃದ್ಧಿ ಸಾಧ್ಯವಾಗುತ್ತದೆ.

ಮೇಲಿನ ಎಲ್ಲಾ ವಿಷಯಗಳನ್ನು ಗಮನಿಸಿದರೆ ಮಹಿಳೆಯು ಅನಾದಿ ಕಾಲದಿಂದಲೂ ಶೋಷಣೆಗೆ ಒಳಪಡುತ್ತಿದ್ದಾಳೆ. ಇವರಿಗೆ ಸರ್ಕಾರವು ವಿಶೇಷ ಹಕ್ಕುಗಳನ್ನು, ಕಾಯ್ದೆಗಳನ್ನು ಜಾರಿಗೆ ತದಿದ್ದು ಅವರು ಸಹ ಸಬಲೀಕರಣಗೊಂಡು ಆರ್ಥಿಕವಾಗಿ, ಸಮಾಜಿಕವಾಗಿ ಸಬಲರಾಗಬೇಕಾದರೆ ಮಹಿಳೆಯರು ಅದರಲ್ಲೂ ಗ್ರಾಮೀಣ ಭಾಗದ ಮಹಿಳೆಯರು ರಾಜಕೀಯದಲ್ಲಿ ಪಾಲ್ಗೊಂಡು ದೇಶದ ಅಭಿವೃದ್ಧಿಗೆ ತನ್ನದೆ ಆದ ಕೊಡುಗೆಗಳನ್ನು ನೀಡಬೇಕಾಗಿದೆ.

ಭಾರತ ದೇಶದ ರಾಜಕೀಯದಲ್ಲಿ ಸಾಧನೆ ಮಾಡಿದ ಪ್ರಮುಖ ಮಹಿಳೆಯರು

ಭಾರತ ಪ್ರಥಮ ಮಹಿಳಾ ಪ್ರಧಾನಮಂತ್ರಿ
– ಶ್ರೀಮತಿ ಇಂದಿರಾಗಾಂಧಿ
ಭಾರತ ಪ್ರಥಮ ಮಹಿಳಾ ರಾಷ್ಟ್ರಾಧ್ಯಕ್ಷೆ
– ಪ್ರತಿಭಾ ಪಾಟೀಲ್
ಭಾರತ ಪ್ರಥಮ ಮಹಿಳಾ ಮುಖ್ಯಮಂತ್ರಿ
– ಸುಚೇತಾ ಕೃಪಲಾನಿ
ಭಾರತ ಪ್ರಥಮ ಮಹಿಳಾ ರಾಯಭಾರಿ
– ವಿಜಯಲಕ್ಷ್ಮಿ ಪಂಡಿತ್
ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮ ಮಹಿಳಾ ಅಧ್ಯಕ್ಷೆ
– ಸರೋಜಿನಿ ನಾಯ್ಡು
ಭಾರತ ಪ್ರಥಮ ಮಹಿಳಾ ದಲಿತ ಮುಖ್ಯಮಂತ್ರಿ
– ಮಾಯಾವತಿ

ಆಕರ ಗ್ರಂಥಗಳು

1) ಗಂಗೂಲಿ ಬಿ.ಎನ್, 1973, ಗಾಂಧೀಜಿಯವರ ಸಾಮಾಜಿಕ ತತ್ವ, ವಿಕಾಸ್ ಪಬ್ಲಿಷಿಂಗ್ ಹೌಸ್, ನವ ದೆಹಲಿ.
2) ಬಸವರಾಜ ಎಂ.ಜಿ. 2005, ಗಾಂಧೀ–ಜೆ.ಸಿ. ಕುಮಾರಪ್ಪ ಆರ್ಥಿಕಾಭಿವೃದ್ಧಿ ವಿಚಾರಗಳು, ಮಾನವಿಕ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿ.ವಿ.
3) ಮಾರ್ಷಲ್ ಆಲ್‌ಫ್ರೆಡ್, 1980, ಅರ್ಥಶಾಸ್ತ್ರದ ತತ್ವಗಳು.

ಇಂದಿನ ಭಾರತಕ್ಕೆ ಕೌಟಿಲ್ಯನ ಅರ್ಥಶಾಸ್ತ್ರದ ಪ್ರಯೋಜನಗಳು

ಶಂಭುಲಿಂಗ ಉಪಾಧ್ಯಾಯ
ಸಂಸ್ಕೃತ ಸಂಶೋಧನಾ ವಿದ್ಯಾರ್ಥಿ, ಮಂಗಳೂರು ವಿಶ್ವವಿದ್ಯಾನಿಲಯ

ಜಗತ್ತಿನಲ್ಲಿ ಜನಿಸಿದ ಪ್ರತಿಯೊಂದು ಜೀವಿಗೂ ಸದಾ ಸುಖದಲ್ಲಿ ಪ್ರೀತಿಯೂ, ದುಃಖದಲ್ಲಿ ದ್ವೇಷವೂ ನೈಸರ್ಗಿಕವಾದುದು. ಅದಕ್ಕಾಗಿ ಪ್ರತಿಯೊಂದು ಪ್ರಾಣಿಗೂ ಸುಖಸಾಧನೆಯಲ್ಲಿ, ದುಃಖ ನಿವಾರಣೆಯಲ್ಲಿ ಪ್ರವೃತ್ತಿ ಉಂಟಾಗುತ್ತದೆ. ಕೋಟ್ಯಂತರ ವರ್ಷಗಳಿಗಿಂತ ಪೂರ್ವದಲ್ಲಿ ಈ ವಿಶ್ವದಲ್ಲಿ ಒಂದು ದೊಡ್ಡದಾದ ಬೆಂಕಿಯ ಉಂಡೆ ವಾತಾವರಣ ದೋಂದಿಗೆ ಸಂಘರ್ಷಕ್ಕಿಳಿದು ಅನೇಕ ತುಂಡುಗಳಾಗಿ ನಾನಾ ದಿಕ್ಕಿಗೆ ಚದುರಿದವು ಎಂದು ಆಧುನಿಕ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆ ಮೂಲವಸ್ತುವನ್ನು ಭಾರತೀಯರು ಪರಮಾತ್ಮ, ಬ್ರಹ್ಮ ಎಂಬುದಾಗಿ ನಾನಾ ಹೆಸರಿನಿಂದ ಕರೆದರು. ಅವರಿಂದ ನಿಧಾನವಾಗಿ ಒಂದೊಂದೇ ಗ್ರಹ–ನಕ್ಷತ್ರಗಳು ಹುಟ್ಟಿದವು. ಈ ವಿಚಾರಗಳಿಗೆ ಮೂಲವೆಂಬಂತೆ ಸಾವಿರಾರು ವರ್ಷಗಳಷ್ಟು ಹಳೆಯದಾದ, ಸಮ್ಮ ದೇಶದ ವಿಜ್ಞಾನಿಗಳೆಂದು ಕರೆಯಲ್ಪಡುವ ಸಮ್ಮ ಋಷಿಗಳಿಂದ ದೃಷ್ಟವಾದ ಬ್ರಾಹ್ಮಣ ವಾಕ್ಯವು **"ಆದಿತ್ಯಾದ್ಭೂಮಿರ್ಜಾಯತೆ"** ಎಂದು ಉದ್ಘೋಷಿಸುತ್ತದೆ. ಹೀಗೆ ಉಂಟಾದ ಬೃಹತ್ಕಾಯದ ತುಂಡುಗಳಲ್ಲಿ ಭೂಮಿಯೂ ಒಂದಾಗಿ ತನ್ನ ಜೊತೆ ಜನಿಸಿದವರ ಜೊತೆ ತಾನೂ ಸಂಘರ್ಷ ಮಾಡುತ್ತಾ ಬೆಂಕಿಯ ಚೆಂಡಿನಂತಿದ್ದ ಭೂಮಿ ನಿಧಾನವಾಗಿ ತನ್ನ ಕೋಪವನ್ನು ಕಡಿಮೆ ಮಾಡಿಕೊಂಡವರಂತೆ ತಂಪಾಯಿತು. ಅದೆಷ್ಟು ತಂಪಾಯಿತೆಂದರೆ ಒಮ್ಮೆಲೆ ಭೂಮಿ ಬೆಂಕಿಯ ಪರಮ ಶತ್ರುವಾದ

ಬೆಳೆಯನ್ನು ಬೆಳೆಯಬೇಕು. ಅಲ್ಲದೇ ಕಾಲಾನುಸಾರವಾಗಿ ಬೀಳೆಯುವ ಬೆಳೆಗಳಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕು. ಮಳೆಯ ಪ್ರಮಾಣವನ್ನು ಹೇಳುತ್ತಾ– ಮಳೆಯ ಆಳತೆಗಾಗಿ ನಿರ್ಮಿತವಾದ ಮಡಿಕೆಯಲ್ಲಿ ಬಿದ್ದ ಮಳೆಯ ನೀರು ಹದಿನಾರು ದ್ರೋಣದಷ್ಟಿದ್ದರೆ ಮರಳಿನ ಭೂಭಾಗವೂ ಸಸ್ಯೋತ್ಪತ್ತಿಗೆ ಸಮರ್ಥವಾಗಿರುತ್ತದೆ ಎಂದಿದ್ದಾನೆ. ಭತ್ತ, ಎಳ್ಳು, ನವಣೆ ಮೊದಲಾದವುಗಳನ್ನು ಮಳೆಗಾಲದ ಆರಂಭದಲ್ಲೂ, ಹೆಸರು, ಉದ್ದು, ಮೊದಲಾದವುಗಳನ್ನು ಮಧ್ಯದಲ್ಲೂ, ಕಡಲೆ, ಹುರುಳಿ, ಗೋಧಿ ಮೊದಲಾದವುಗಳನ್ನು ಅಂತ್ಯದಲ್ಲಿ ಬಿತ್ತನೆ ಮಾಡಬೇಕು. ಕೀಟಬಾಧೆ ನಿವಾರಣೆಗಾಗಿ ಇಂದು ನಾವು ಬಳಸುವ ರಾಸಾಯನಿಕಕ್ಕೆ ಬದಲಾಗಿ ಅನೇಕ ಉಪಾಯಗಳು ಹೇಳಲ್ಪಟ್ಟಿವೆ. ಕಬ್ಬನ್ನು ಬಿತ್ತುವಾಗ ಜೇನು, ತುಪ್ಪ, ಹಂದಿಯ ಕೊಬ್ಬುಗಳನ್ನು ಹಸುವಿನ ಸಗಣಿಯೊಡನೆ ಬೆರೆಸಿ ಕತ್ತರಿಸಿದ ಕಬ್ಬಿನ ಭಾಗಕ್ಕೆ ಹಚ್ಚಬೇಕು, ಹೀಗೆ ಹಲವಾರು ಉಪಾಯಗಳನ್ನು ಹೇಳಿದ್ದಾನೆ. ಅಲ್ಲದೇ ಬೆಳೆದ ಬೆಳೆಯನ್ನು ಸಂಗ್ರಹಿಸುವುದಕ್ಕೂ ಸಲಹೆಯನ್ನಿತ್ತಿದ್ದಾನೆ.

ವ್ಯವಸಾಯ ಯೋಗ್ಯವಲ್ಲದ ಭೂಮಿಯಲ್ಲಿ ನಾವು ಹೊಸ ಹೊಸ ಜನವಸತಿ ನಿಲಯಗಳೂ, ಪರಿಸರಕ್ಕೆ ಮಾರಕವಾದ ಕೆಲವೊಂದು ಉದ್ಯಮಗಳೂ ಸ್ಥಾಪನೆಯಾಗಿರುವುದನ್ನು ನೋಡುತ್ತೇವೆ. ಆದರೆ ಕೌಟಿಲ್ಯನು ಪರಿಸರ ರಕ್ಷಣೆಗಾಗಿ ಮತ್ತು ಭೂಮಿಯ ಸಮತೋಲನಕ್ಕಾಗಿ ಅಲ್ಲಿ ಗೋಮಾಳ, ತಪೋವನ, ಹೂದೋಟ, ಔಷಧಿ ಸಸ್ಯಗಳ ವನ ಇತ್ಯಾದಿಗಳನ್ನು ನಿರ್ಮಿಸಬೇಕೆನ್ನುತ್ತಾನೆ. ಅಲ್ಲದೇ ಇಂದಿನ ಬಹುದೊಡ್ಡ ಸಮಸ್ಯೆಗಳಲ್ಲಿ ಒಂದಾದ ಕಾಡಾನೆಗಳ ಹಾವಳಿಯನ್ನು ತಡೆಗಟ್ಟಿ ಅವುಗಳ ರಕ್ಷಣೆಗಾಗಿ ಪ್ರತ್ಯೇಕವಾದ ಗಜವನವನ್ನೇ ನಿರ್ಮಿಸಬೇಕು ಎಂದು ಅರ್ಥಶಾಸ್ತ್ರದ ಎರಡನೇ ಅಧಿಕರಣದಲ್ಲಿ ಸ್ಪಷ್ಟಪಡಿಸಿದ್ದಾನೆ. ಇಲ್ಲಿಯೇ ಕಂದಾಯ ವಿಧಾನ ಮತ್ತು ವಸೂಲಿಯ ಬಗ್ಗೆ ಅತ್ಯಂತ ಸುಲಭವಾಗಿ ತಿಳಿಸಿದ್ದಾನೆ. **ದುರ್ಗ, ರಾಷ್ಟ್ರ, ಗಣಿ, ಸೇತು, ಕಾಡು, ಪಶುಸಮೂಹ, ಮತ್ತು ಸಂಚಾರಮಾರ್ಗಗಳಿಂದ** ಕಂದಾಯವನ್ನು ಸ್ವೀಕರಿಸಬೇಕು, ಇವೇ ದೇಶದ ಆಸ್ತಿ ಎಂದಿದ್ದಾನೆ. ಜಮೀನು, ಜೂಜು, ನಟರು, ಮನೆ ಮೊದಲಾದವುಗಳು ದುರ್ಗದಲ್ಲಿ ಸೇರಿಕೊಂಡಿವೆ. ವ್ಯಾಪಾರಿ, ಕೃಷಿ, ಮೊದಲಾದವುಗಳು ರಾಷ್ಟ್ರ ದಲ್ಲಿ ಸೇರಿದರೆ, ಚಿನ್ನ, ಬೆಳ್ಳಿ ಲೋಹ ಮೊದಲಾದವುಗಳು ಗಣಿಗಳು. ಪಣ್ಣಿನತೋಟ, ಕಬ್ಬು ಮೊದಲಾದವುಗಳು ಸೇತು. ಕಾಡುಗಳಿಂದ ಬರುವವು ವನಗಳೆನಿಸಿಕೊಳ್ಳುತ್ತವೆ. ಹಸು, ಎಮ್ಮೆ ಮೊದಲಾದವುಗಳಿಂದ ಪ್ರಾಪ್ತವಾದದ್ದು ವಜ್ರ. ಮಾರ್ಗದಿಂದ ದೊರೆತ ಆದಾಯ ವಣಿಕ್ಪಥವಾಗಿದೆ. ಹೀಗೆ ದೊರೆತ ಪಣವನ್ನು **ನಿತ್ಯ, ನಿತ್ಯೋತ್ಪಾದಿಕ, ಲಾಭ, ಲಾಭೋತ್ಪಾದಿಕ** ಎಂಬುದಾದಾಗಿ ವ್ಯಯಮಾಡಬೇಕು ಎನ್ನುತ್ತಾನೆ. ಇದೇ ಅಧಿಕರಣದಲ್ಲಿ ಸರಕು ಸಾಗಾಣಿಕೆಗಳ ಸಂಕವನ್ನು ವಿವರಿಸಿ ನಾಶಗೊಳಿಸಬೇಕಾದ, ದೇಶಾಂತರದಿಂದ ತರಬಾರದ ವಸ್ತುಗಳು–

ರಾಷ್ಟ್ರಪೀಡಾಕರಂ ಭಾಡಮುಚ್ಚಿಂದ್ಯಾದಫಲಂ ಚ ಯತ್ ।[4]

ಎಂದು ರಾಷ್ಟ್ರಪೀಡೆಗೆ ಕಾರಣವಾದ, ಡ್ರಗ್ಸ್, ಮದ್ಯ ಮೊದಲಾದವುಗಳನ್ನು ಹೇಳುತ್ತಾನೆ. ಗೋವುಗಳ ಕುರಿತಾಗಿ ವಿವರಿಸುತ್ತಾ ಹಸುಗಳನ್ನು ಕೊಲ್ಲುವವನೂ, ಕೊಲ್ಲಿಸುವವನೂ, ಕದ್ದೊಯ್ಯುವಂತೆ ಪ್ರೇರೇಪಿಸುವವನೂ ವಧಾರ್ಹರು ಎಂದಿದ್ದಾನೆ. ಹಾಗೆಯೇ ಕಾರಣವಿಲ್ಲದೆ ಮಧ್ಯರಾತ್ರಿಯಲ್ಲಿ ಸಂಚರಿಸುವವನಿಗೆ ದಂಡವನ್ನು ವಿಧಿಸಬೇಕು ಹಾಗೂ ಪ್ರಸವಕಾಲದಲ್ಲಿ ನೆರವು ಕೊಡಲಿಕ್ಕೆ, ರೋಗಿಗಳಿಗೆ ಚಿಕಿತ್ಸೆ ನಡೆಸಲು, ಹೆಣವನ್ನು ಹೊರಲು, ನಾಟಕಾದಿಗಳನ್ನು ನೋಡಲು ಹೋಗುವವನನ್ನು ಹೀಗೆ ಮೊದಲಾದವರು ದಂಡಕ್ಕೆ ಅರ್ಹರಾಗುವುದಿಲ್ಲ.

ಹಾಗೆಯೇ ಪ್ರಾಣಗಳಿಗೆ ಸಂಚಕಾರ ತರುತ್ತದೆ ಎಂದು ಪೂರ್ವದಲ್ಲಿ ತಿಳಿಸದೇ ರೋಗಕ್ಕೆ ಚಿಕಿತ್ಸೆ ನೀಡುವ ವೈದ್ಯನಿಗೆ ರೋಗಿಯು ಸತ್ತರೆ ದಂಡವು. ಜೊತೆಗೆ ಬೇರೆಯವರಿಗೆ ಹೊಡೆಯಲು ಉದ್ಯುಕ್ತನಾದರೂ, ಹೊಡೆದರೂ, ಮನುಷ್ಯರನ್ನು ಇನ್ಯಾವುದೋ ರೀತಿಯಲ್ಲಾದರೂ ಹಿಂಸಿಸಿದರೆ, ಹೂವು–ಹಣ್ಣುಗಳನ್ನು ನೀಡುವ ವೃಕ್ಷಚ್ಛೇದನ ಮಾಡಿದರೂ ಅವರು ದಂಡಕ್ಕೆ ಅರ್ಹರು. ಇಂದು ಚಾಲ್ತಿಯಲ್ಲಿರುವ ಗ್ರಾಹಕ ನ್ಯಾಯಾಲಯದ ಪರಿಕಲ್ಪನೆಯು ಅಂದೇ ವ್ಯವಸ್ಥಿತವಾಗಿತ್ತೆಂದು ತೋರುತ್ತದೆ. ವ್ಯಾಪಾರದಲ್ಲಿಯೂ ನಿಕೃಷ್ಟವಾದ ಮರ, ಲೋಹ, ಮೊದಲಾದ ವಸ್ತುಗಳನ್ನು ಶ್ರೇಷ್ಠವಾದುದೆಂದು ಹೇಳಿ ಒತ್ತೆ ಇಡುವುದು ಮಾರುವುದು ಮುಂತಾದವುಗಳನ್ನು ಮಾಡಿದವನಿಗೆ ಆ ವಸ್ತುವಿನ ಎಂಟು ಪಟ್ಟು ದಂಡವನ್ನು ವಿಧಿಸಲಾಗುತ್ತಿತ್ತು. ಇದರಿಂದ ಇಂದು ಚಾಲ್ತಿಯಲ್ಲಿರುವ ಗ್ರಾಹಕ ನ್ಯಾಯಾಲಯದ ಪರಿಕಲ್ಪನೆಯು ಅಂದೇ ವ್ಯವಸ್ಥಿತವಾಗಿತ್ತೆಂದು ತೋರುತ್ತದೆ. ಅಲ್ಲದೇ ಭ್ರಷ್ಟಾಚಾರ ಲಂಚಕೋರರ ಬಗ್ಗೆ ಕೌಟಿಲ್ಯನು ಎಷ್ಟು ಕಠೋರನಗಿದ್ದನೆಂದರೆ ಅವರ ಪಣವನ್ನು ಕಿತ್ತುಕೊಂಡು ತಕ್ಷಣವೇ ಅವರನ್ನು ಗಡಿಪಾರು ಮಾಡಬೇಕೆನ್ನುತ್ತಾನೆ. ಅತ್ಯಾಚಾರಿಗಳಿಗೂ ಅವರ ಮರ್ಮಾಂಗವನ್ನು ಕತ್ತರಿಸುವ, ಸಾಯಿಸುವಂತಹ ಶಿಕ್ಷೆಗಳನ್ನೇ ಹೇಳಿದ್ದಾನೆ[5]. ಹೀಗೆ ಅನೇಕ ವಿಧವಾದ ದಂಡಗಳನ್ನು ಇಂದಿನ ಸಮಾಜಕ್ಕೂ ಅನ್ವಯವಾಗುವಂತೆ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ವಿಧಿಸಿದ್ದಾನೆ. ಆದರೆ ದಾನಶೀಲರೂ, ತಪಸ್ವಿಜನರೂ, ಹಸಿವುಬಾಯಾರಿಕೆಗಳಿಂದ ಬಳಲಿದವರಿಗೆ ದಂಡದಿಂದ ವಿನಾಯ್ತಿ ನೀಡಬೇಕೆನ್ನುತ್ತಾನೆ. ಅಲ್ಲದೇ ಹೆಂಗಸು, ಮುದುಕ, ರೋಗಿ, ಅನಾಥ ಮೊದಲಾದವರ ಕಾರ್ಯವನ್ನು ನ್ಯಾಯಾಲಯದಲ್ಲಿ ಬೇರೆಯವರು ವಹಿಸಿಕೊಂಡು ನಿರ್ವಹಿಸಬೇಕು ಎಂದು ಇಂದಿನ ವಕೀಲರನ್ನು ನೇಮಿಸಿಕೊಳ್ಳುವ ಪರಂಪರೆಯನ್ನು ಅಂದೇ ಕೌಟಿಲ್ಯನು ವಿವರಿಸಿದ್ದಾನೆ. ಇದರ ನಡುವೆ ಇಂದಿನ ಸಮಾಜದಲ್ಲಿ ಸತಿ–ಪತಿಯರ ನಡುವೆ ವಿವಾಹ ವಿಚ್ಛೇದನದ ಪ್ರಕರಣಗಳು ಅಧಿಕವಾಗಿದೆ. ಆ ವಿಚಾರದಲ್ಲಿಯೂ ಕೌಟಿಲ್ಯನು–

ನೀಚತ್ವಂ ಪರದೇಶಂ ವಾ ಪ್ರಸ್ಥಿತೋ ರಾಜಕಿಲ್ಬಿಷೀ ।
ಪ್ರಾಣಾಭಿಹಂತಾ ಪತಿತಃ ತ್ಯಾಜ್ಯಃ ಕ್ಲೀಬೋಽಪಿ ವಾ ಪತಿಃ ॥[6]

ಎಂದು ಹೇಳಿದ್ದಾನೆ. ಅಂದರೆ ನೀಚತ್ವ, ಷಂಡತ್ವ, ಮೊದಲಾದ ದುರ್ಗುಣಗಳನ್ನು ಹೊಂದಿರುವ ಪುರುಷನನ್ನು ಸ್ತ್ರೀಯು ಬಿಡಬಹುದು ಎಂಬುದಾಗಿ.

ಇಂದು ಸತ್ತ ನಂತರ ಮಾಡುವ ಶವಪರೀಕ್ಷೆ (ಪೋಷ್ಟಮಾರ್ಟಂ) ನ್ನು ಕೌಟಿಲ್ಯನು ಬಹಳ ಸ್ಪಷ್ಟವಾಗಿ ವಿವರಿಸಿದಾನೆ. ಯಾವ ಯಾವ ಕಾರಣದಿಂದ ವ್ಯಕ್ತಿಯು ಮರಣ ಹೋದಿರಬಹುದೆಂಬುದನ್ನು ಹಲವಾರು ಪರೀಕ್ಷೆಗಳ ಮೂಲಕ ತಿಳಿಯಬಹುದಾಗಿದೆ. ಹಾಗೆಯೇ ಅವನ ಮರಣಕ್ಕೆ ಕಾರಣನಾದವನನ್ನು ಪತ್ತೆ ಹಚ್ಚಲು ವಿಧಾನವೂ ಹೇಳಲ್ಪಟ್ಟಿದೆ. ಮೃತನ ದೇಹದ ಮೇಲಿರುವ ಎಲ್ಲಾ ವಸ್ತುಗಳನ್ನು ಕೂಲಂಕುಶವಾಗಿ ಪರಿಶೀಲಿಸಿ–

ಅನುಯುಂಜೀತ ಸಂಯೋಗಂ ನಿವಾಸಂ ವಾಸಕಾರಣಂ ।
ಕರ್ಮ ಚ ವ್ಯವಹಾರಂ ಚ ತತೋ ಮಾರ್ಗೇಣಮಾಚರೇತ್ ॥[7]

ಯಾರೊಡನೆ ಸ್ನೇಹವಿತ್ತು? ಅವನ ವೃತ್ತಿ ಯಾವುದು? ಅವನ ವ್ಯವಹಾರವೇನು? ಎಂಬುದನ್ನು ವಿಚಾರಿಸಿ ತದನಂತರ ಕೊಲೆಗಾರನನ್ನು ಹುಡುಕಬೇಕು ಎಂದಿದ್ದಾನೆ. ಹೀಗೆ ಕೌಟಿಲ್ಯನು ಎಲ್ಲಾ ಕಾಲಕ್ಕೂ ಎಲ್ಲಾ ದೇಶಕ್ಕೂ ಅನ್ವಯವಾಗುವಂತಹ ನ್ಯಾಯಗಳ ಕ್ರಮವನ್ನು ತನ್ನ ಗ್ರಂಥದಲ್ಲಿ ವಿಸ್ತಾರವಾಗಿ ವಿವರಿಸಿದ್ದಾನೆ.

ನಾವಿಂದು ದೇಶದ ಸಂಪತ್ತೆಂದರೆ ವಿದೇಶಗಳಿಂದ ಹಣ ಹರಿದುಬಂದು,

ಮೈಸೂರು ಸಂಸ್ಥಾನದ ರಚನಾತ್ಮಕ ಕಾರ್ಯಕ್ರಮ ಚಳುವಳಿಗಳು ಮತ್ತು ದಲಿತರು:

ಬಿಳಿಗಿರಿ. ಎನ್
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು

ಆಧುನಿಕ ಭಾರತ ಸ್ಥೂಲವಾಗಿ ಎರಡು ಬಗೆಯ ಆಡಳಿತಕ್ಕೆ ಒಳಪಟ್ಟಿತ್ತು. ಒಂದು ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿದ್ದರೆ, ಇನ್ನೊಂದು ದೇಶಿ ಸಂಸ್ಥಾನಗಳ ಆಡಳಿತಕ್ಕೆ ಒಳಪಟ್ಟಿತ್ತು. ಈ ದೇಶಿ ಸಂಸ್ಥಾನಗಳ ಸಂಖ್ಯೆ 565ಕ್ಕೂ ಮೀರಿತ್ತು. ಅವುಗಳಲ್ಲಿ ಮೈಸೂರು ಸಂಸ್ಥಾನದ ವಿಸ್ತೀರ್ಣದಲ್ಲಿ ಎರಡನೇ ದೊಡ್ಡ ಸಂಸ್ಥಾನ, 1799ರ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಸೋತು ಕೊಲ್ಲಲ್ಪಟ್ಟ ನಂತರ, ಆತನ ರಾಜ್ಯವನ್ನು ಹರಿದು ಹಂಚಿಕೊಳ್ಳಲಾಯಿತು. ಒಂದು ಭಾಗ ಬ್ರಿಟೀಷರಿಗೆ, ಇನ್ನೊಂದು ಭಾಗ ಹೈದರಾಬಾದ್ ನಿಜಾಮನ ಪಾಲಿಗೆ ಹೋದರೆ ಉಳಿದಿದ್ದನ್ನು, 1763ರ ನಂತರ ಮೂಲೆಗುಂಪಾಗಿದ್ದ ಮೈಸೂರು ಒಡೆಯರ ಮನೆತನಕ್ಕೆ ವಹಿಸಿಕೊಡಲಾಯಿತು. ಒಡೆಯರ ವಂಶದ ಈ ಪುನಶ್ಚೇತನ, ಬ್ರಿಟೀಷರು ಹೇರಿದ ಷರತ್ತುಗಳಿಗೆ ಒಳಪಟ್ಟಿತ್ತು. ಈ ರೀತಿಯಾಗಿ, ಅದು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಒಳ ಆಡಳಿತ ನಡೆಸಲಿಕ್ಕೆ ಮಾತ್ರ ಸೀಮಿತವಾಗಿತ್ತು. ಇದು 1947ರವರೆಗೂ ಅದು ಹಾಗೆಯೇ ಉಳಿಯಿತು, ಈ ರೀತಿ ದೇಶಿಯರ ಹಿಡಿತದಿಂದ ಪಾರಾಗಲು ನಡೆಸಿದ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರಿನ ಪಾತ್ರ ಮಹತ್ತರ ಮತ್ತು ಚರಿತಾರ್ಹವಾದುದು[1], ಇದರಲ್ಲಿ ಈ ಭಾಗದ ಸಾವಿರಾರು ಅನಕ್ಷರಸ್ಥರು, ಮುಗ್ದರು, ದಲಿತರನ್ನು ಒಳಗೊಂಡಂತೆ ಹಲವಾರು ಮಹಾನ್ ದೇಶಭಕ್ತರು ಪಾಲ್ಗೊಂಡು ತಮ್ಮ ತನು, ಮನ, ಪ್ರಾಣಗಳನ್ನು ಬಲಿದಾನ ಮಾಡಿ ಮೈಸೂರು ಸಂಸ್ಥಾನ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು[2].

ಮಹಾತ್ಮಗಾಂಧಿಜಿಯವರು ಕೈಗೊಂಡ ಚಳುವಳಿಯಲ್ಲಿ ದಲಿತರನ್ನು ಆಕರ್ಷಿಸಲು ಹಲವಾರು ಕಾರಣಗಳಿದ್ದವು. ಅದರಲ್ಲಿ ಸಾಮಾಜಿಕ ಸಮಸ್ಯೆಯನ್ನು ತೆಗೆದುಕೊಂಡು 1917ರ ಕಲ್ಕತ್ತಾ ಅಧಿವೇಶನದಲ್ಲಿ ಅಸ್ಪೃಶ್ಯರ ಏಳಿಗೆಯನ್ನು ತನ್ನ ಕಾರ್ಯಕ್ರಮದಲ್ಲಿ ಕಾಂಗ್ರೇಸ್ ಸೇರಿಸಿಕೊಂಡಿತ್ತು. ದೇವಾಲಯ ಪ್ರವೇಶ ಮತ್ತು ಅಸ್ಪೃಶ್ಯರ ಸಾಮಾಜಿಕ ಮತ್ತು ಧಾರ್ಮಿಕ ಹಿಂಸೆಗಳ ನಿವಾರಣೆಗೆ ಅವರು ಚಿಂತಿಸಿದರು. ಪೂನ ಒಪ್ಪಂದದ ನಂತರ ಅಸ್ಪೃಶ್ಯರ ಪ್ರಶ್ನೆಯನ್ನು ಕೈಗೆತ್ತಿಕೊಂಡರು. ಇದು ಸ್ವಾತಂತ್ರ್ಯ ಹೋರಾಟದೊಡನೆ ಬಿಡಿಸಲಾಗದ ಸಂಬಂಧ ಹೊಂದಿದ್ದಿತ್ತು. ಗಾಂಧೀಜಿಯವರ ವ್ಯಕ್ತಿತ್ವ ದಲಿತರನ್ನು ಆಕರ್ಷಿಸಲು ಅವರು ತಂದಂತಹ ಅಸ್ಪೃಶ್ಯರ ನಿವಾರಣೆಯನ್ನೊಳಗೊಂಡ ರಚನಾತ್ಮಕ ಕಾರ್ಯಕ್ರಮಗಳಿದ್ದವು. ಇದರಿಂದಾಗಿ ದಲಿತರಿಗೆ ಹೆಚ್ಚಿನ ವಿಶ್ವಾಸ ಮೂಡತೊಡಗಿತು[3]. ರಚನಾತ್ಮಕ ಕಾರ್ಯಕ್ರಮಗಳಾದ ಸ್ವದೇಶಿ ಚಳುವಳಿ, ಖಾದಿ ಮತ್ತು ಗ್ರಾಮೋದ್ಯೋಗ ಪ್ರಚಾರ, ಅಸ್ಪೃಶ್ಯ ವಿರೋಧಿ ಆಂದೋಲನ, ಪಾನ ನಿರೋಧ, ರಾಷ್ಟ್ರೀಯ ಶಿಕ್ಷಣ ಮತ್ತು ಗ್ರಾಮ ಸ್ವರಾಜ್ಯ ಮುಂತಾದ ಚಟುವಟಿಕೆಗಳಿಗೆ ಕಾಂಗ್ರೇಸ್ ಅನುಮತಿ ನೀಡಿತು. ಇದರಿಂದಾಗಿ ಮೈಸೂರು ಸಂಸ್ಥಾನದಲ್ಲಿಯೂ ಈ ರಚನಾತ್ಮಕ ಕಾರ್ಯಕ್ರಮಗಳು ಪ್ರಾರಂಭವಾದವು. ಈ ಚಳುವಳಿಯ ಪ್ರಯುಕ್ತ ವಿದೇಶಿ ವಸ್ತ್ರದಹನ, ಬ್ರಿಟಿಷ್ ಶಾಲಾ ಕಾಲೇಜುಗಳ ಬಹಿಷ್ಕಾರ, ಸರ್ಕಾರಿ ಕಛೇರಿಗಳ ಮುಂದೆ ಪಿಕೆಟಿಂಗ್ ಮುಂತಾದ ಚಟುವಟಿಕೆಗಳು ಭರದಿಂದ ನಡೆದವು. ಸತ್ಯ ಮತ್ತು ಅಹಿಂಸೆ ಮೂಲಕ ಸ್ವರಾಜ್ಯವನ್ನು ಸ್ಥಾಪಿಸುವ ಪಥವೇ ರಚನಾತ್ಮಕ ಕಾರ್ಯಕ್ರಮ ಎಂಬುದು ಗಾಂಧೀಜಿಯವರ ಅಭಿಪ್ರಾಯ ವಾಗಿತ್ತು. 1927ರಲ್ಲಿ ಗಾಂಧೀಜಿಯವರು ಖಾದಿ ಪ್ರಚಾರದ ನಿಮಿತ್ತವಾಗಿ ಮೈಸೂರು ಸಂಸ್ಥಾನದಾದ್ಯಂತ ಪ್ರವಾಸ ಕೈಗೊಂಡು ಹರಿಜನ ಕೇರಿಗಳಿಗೆ ಭೇಟಿ ನೀಡಿ ಅವರಿಗೆ ಸ್ವಚ್ಚತೆಯಿಂದ ಇರಬೇಕು, ಹೆಂಡ ಕುಡಿಯುವುದನ್ನು ನಿಲ್ಲಿಸಬೇಕು ಮತ್ತು ಬಾವಿ, ಕೆರೆ, ದೇವಾಸ್ಥಾನಗಳ ಪ್ರವೇಶ ಪಡೆಯುವುದಕ್ಕೆ ಐಕ್ಯತೆಯಿಂದ ಹೋರಾಟ ನಡೆಸಬೇಕು ಎಂದು ತಿಳಿಸಿದರು[4].

ದಲಿತ ವರ್ಗದ ನಾಯಕರು ಕಾಂಗ್ರೇಸ್ಸಿನ ಮತ್ತು ರಾಷ್ಟ್ರೀಯ ಚಳುವಳಿಯ ಕಡೆಗೆ ಆಕರ್ಷಿತರಾಗಲು ಗಾಂಧೀಜಿಯವರ ಪ್ರಾಮಾಣಿಕ ಪ್ರಯತ್ನ ಒಂದು ಕಾರಣವಾದರೆ, ಇನ್ನೊಂದು ಕಾರಣ ಬ್ರಿಟೀಷರು ಆಡಳಿತದಲ್ಲಿ ಹಸ್ತಕ್ಷೇಪ ಕಡಿಮೆ ಮಾಡಿದ್ದು. ದ್ವಿಆಡಳಿತ ಪದ್ಧತಿ ಜಾರಿಗೆ ಬಂದ ಮೇಲೆ ಸ್ಥಳೀಯ ಮಂಡಳಿಗಳಲ್ಲಾಗಲಿ ಅಥವಾ ಪ್ರಾಂತೀಯ ಆಡಳಿತದಲ್ಲಾಗಲಿ ಸ್ಥಳೀಯವಾದ ಪ್ರಬಲ ಪಕ್ಷಗಳು ಹಾಗೂ ವ್ಯಕ್ತಿಗಳು ಪ್ರಮುಖರಾದರು. ಭಾರತದ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಯನ್ನು ಮೀರಿ ಗಾಂಧಿ ವ್ಯಕ್ತಿತ್ವ ನಿಮ್ನ ವರ್ಗದವರನ್ನು ಆಕರ್ಷಿಸಿತು[5]. ಅದರ ಹಿನ್ನೆಲೆಗೆ ಗಾಂಧೀಜಿಯವರ ಅಸಹಕಾರ ಚಳುವಳಿ ಹಾಗೂ ಅಸ್ಪೃಶ್ಯತಾ ನಿವಾರಣೆಯನ್ನೊಳಗೊಂಡ ರಚನಾತ್ಮಕ ಕಾರ್ಯಕ್ರಮದಲ್ಲಿ ದಲಿತರಾದ ಸಿ.ಟಿ. ಹನುಮಂತಯ್ಯ ಕೋಡಿಹಳ್ಳಿ ಹರಿಜನ ಮಠದ ಅಧಿಕಾರಿಯಾಗಿ ನೇಮಿಸಲ್ಪಟ್ಟರು ಮತ್ತು ಗಾಂಧೀಜಿಯವರು 1934ರಲ್ಲಿ ತುಮಕೂರಿಗೆ ಬಂದಾಗ ಇವರನ್ನು ಮೈಸೂರು ಹನುಮಾನ್ ಎಂದು ಕರೆದು ಬಡವರ ಸೇವೆ ಮಾಡಲು ಹೇಳಿದರು ಹಾಗೂ 1942ರ ಚಳುವಳಿಯ ಪರ ಪ್ರಚಾರ ಭಾಷಣಗಳನ್ನು ಮಾಡಿ ಜೈಲುವಾಸ ಅನುಭವಿಸಿದರು. ಇವರಂತೆಯೇ ಟಿ.ಆರ್.ಚೆನ್ನಿಗರಾಮಯ್ಯರ ಜೊತೆಗೂಡಿ ಹರಿಜನರೊಂದಿಗೆ ದೇವಾಲಯ ಪ್ರವೇಶ ಮಾಡಿದರು. ಇವರ ಪ್ರಯತ್ನದಿಂದ ಮತ್ತು 1932ರಲ್ಲಿ ಗಾಂಧೀಜಿಯವರು ಹರಿಜನರ ಸಮಸ್ಯಯ ಬಗ್ಗೆ ಉಪವಾಸ ಕೈಗೊಂಡಾಗ ದೇವಾಲಯ ಪ್ರವೇಶ, ಸಹ ಪಂಕ್ತಿ ಭೋಜನ, ಪಾನ ನಿರೋಧ ಮುಂತಾದ ಆಂದೋಲನಗಳಲ್ಲಿ ದಿಟ್ಟತನದಿಂದ ದುಡಿದರು. ಆದಿಜಾಂಬವ ಹಾಸ್ಟೇಲ್ ಗಳನ್ನು ಸ್ಥಾಪಿಸಿದರು. ಹರಿಜನರನ್ನು ಸಂಘಟಿಸಿ ಪ್ರಜಾ ಸಂಖ್ಯೆಗೆ ಅನುಗುಣವಾಗಿ ಶಾಸನ ಸಭೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ನೀಡಬೇಕೆಂದು ಹೋರಾಟ ನಡೆಸಿದರು ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು ಮತ್ತು 1947ರಲ್ಲಿ ಕೆ.ಸಿ.ರೆಡ್ಡಿ ಸಂಪುಟದಲ್ಲಿ ಪ್ರಥಮ ಹರಿಜನ ಮಂತ್ರಿಯಾದರು[6]. ಇವರಂತೆಯೇ ದಲಿತ ನಾಯಕರಾದ ಹೆಚ್. ಎಂ. ಗಂಗಾಧರಯ್ಯರವರು ಗಾಂಧೀಜಿ ಮತ್ತು ಅಂಬೇಡ್ಕರ್ ಕೃತಿಗಳಿಂದ ಪ್ರಭಾವಿತರಾಗಿ ದಲಿತರ ಶಿಕ್ಷಣಕ್ಕೆ ಶ್ರಮಿಸಿ ಶಾಲಾ–ಕಾಲೇಜುಗಳನ್ನು ಹಾಗೂ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದರು. ದಲಿತರಿಗೆ ಕೃಷಿ ಭೂಮಿಗಳನ್ನು ದೊರಕಿಸಿಕೊಟ್ಟರು. ಗಾಂಧೀಜಿಯವರು ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದಾಗ ಗಂಗಾಧರಯ್ಯ ಊಟ ಬಡಿಸುತ್ತಾರೆ. ಇವರು ಗಾಂಧೀಜಿಯ ಪ್ರಭಾವದಿಂದಾಗಿ ಮಾಂಸಾಹಾರ

ಹೋರಾಟ ಜೊತೆಜೊತೆಯಾಗಿಯೇ ಸಾಗುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ಸ್ಥಳೀಯ ವಿಷಯಗಳಾದ ತುಳು ಚಳುವಳಿ, ಸಾಮಾಜಿಕ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳು ಇದನ್ನು ಪುಷ್ಟೀಕರಿಸುತ್ತವೆ.

ವಸಾಹತುಷಾಹೀ ಕೊಡುಗೆಗಳಾದ ಆಧುನಿಕ ಶಿಕ್ಷಣ ವ್ಯವಸ್ಥೆ,, ಸಾಮಾಜಿಕ ಸುಧಾರಣಾ ಚಳುವಳಿಗಳು, ಮುದ್ರಣಾ ಮಾಧ್ಯಮಗಳು, ಸಾರಿಗೆ ಸಂಪರ್ಕಗಳು ಜನರಲ್ಲಿ ಜಾಗೃತಿಯನ್ನು ಉಂಟುಮಾಡುವುದರೊಂದಿಗೆ ದೇಶಪ್ರೇಮವನ್ನೂ ಹೆಚ್ಚಿಸಿದವು. ಸ್ವಾತಂತ್ರ್ಯದ ಬಗೆಗೆ ಅರಿವನ್ನೂ ಮೂಡಿಸಿದವು. ಒಂದೆಡೆ ವಸಾಹತುಷಾಹೀ ತಂತ್ರಜ್ಞಾನದ– ಅಭಿವೃದ್ಧಿಯ ಸ್ವೀಕೃತಿ; ಇನ್ನೊಂದೆಡೆ ಸಾಮಾಜಿಕ ಜಾಗೃತಿಯೊಂದಿಗೆ ಸ್ವಾತಂತ್ರ್ಯದ ಜಾಗೃತಿ– ವಸಾಹತುಷಾಹೀ ವಿರೋಧ ಎರಡನ್ನೂ ಕಾಣಬಹುದಾಗಿದೆ. ಜನರ ಮನೋಭಾವದ ಮೇಲೇ ಆಧುನಿಕತೆಯ ಗಾಢ ಪ್ರಭಾವ ಮತ್ತು ಅದರಿಂದಾದ ತಿಳುವಳಿಕೆ ದಕ್ಷಿಣಕನ್ನಡದ ವಿಶೇಷ ಲಕ್ಷಣವಾಗಿದೆ. ಒಟ್ಟಾರೆಯಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ವಸಾಹತುಷಾಹೀ ಕಾಲಘಟ್ಟದಲ್ಲಿ ಬೀರಿದಂತಹ ಪ್ರಭಾವ, ಬದಲಾವಣೆಯ ಕುರಿತು ಇಲ್ಲಿ ಅವಲೋಕನವನ್ನು ಮಾಡಲಾಗಿದೆ.

ಈ ಅಧ್ಯಯನಕ್ಕೆ ವಸಾಹತುಷಾಹೀ ದಾಖಲೆಗಳಾದ ಆಡಳಿತಾತ್ಮಕ ನಿರ್ಣಯಗಳು, ಸರಕಾರೀ ಪತ್ರಗಳು, ನ್ಯಾಯಾಂಗೀಯ ದಾಖಲೆಗಳು, ಕಂದಾಯ ದಾಖಲೆಗಳು, ಬಾಸೆಲ್ ಮಿಷನ್ ರಿಪೋರ್ಟುಗಳು, ಪತ್ರಿಕೆಗಳು, ಈಗಾಗಲೆ ಬರೆಯಲ್ಪಟ್ಟ ಅಧಿಕೃತ ಬರವಣಿಗೆಗಳು ಹಾಗೂ ಆ ಕಾಲಘಟ್ಟದ ಚಿತ್ರಣವನ್ನು ಚಿತ್ರಿಸುವ ವಿವಿಧ ಲೇಖನಗಳು, ಕತೆಗಳು, ರೂಪಕಗಳು ಪ್ರಮುಖ ಆಕರಗಳಾಗಿವೆ. ಪ್ರಸ್ತುತ ಅಧ್ಯಯನವು ಐತಿಹಾಸಿಕ ವಿಧಾನವನ್ನು ಬಳಸಿ ವಸಾಹತುಷಾಹಿತ್ವವನ್ನು ಅರ್ಥೈಸುವುದರ ಮೂಲಕ ಆ ಸಂದರ್ಭದ ಜನಸಾಮಾನ್ಯರ, ಸಮಾಜದ ಪ್ರತಿಕ್ರಿಯೆಯನ್ನು ತಿಳಿಯುವುದಾಗಿದೆ. ಸಾಮಾನ್ಯವಾಗಿ ಬ್ರಿಟಿಷ್ ದಾಖಲೆಗಳು ವಸಾಹತುಷಾಹಿತ್ವವನ್ನು ಮತ್ತು ನೀತಿಗಳನ್ನು ಬೆಂಬಲಿಸಿರುವುದನ್ನು ನಾವು ಕಾಣುತ್ತೇವೆ. ಪತ್ರಿಕೆಗಳು ಹಾಗೂ ಸ್ಥಳೀಯ ಬರಹಗಳು ಮತ್ತು ಮೌಖಿಕ ಇತಿಹಾಸವು ವಸಾಹತುಷಾಹಿತ್ವದ ಬಗೆಗೆ ಅವಿಭಜಿತ ದಕ್ಷಿಣಕನ್ನಡದ ಪ್ರತಿಧ್ವನಿಯನ್ನು ಗುರುತಿಸಲು ನೆರವಾಗುತ್ತದೆ.

ವಸಾಹತುಷಾಹಿತ್ವ ಎಂಬುದು ಹೆಚ್ಚು ಬಲಾಢ್ಯವಾದ ಶಕ್ತಿಗಳು ದುರ್ಬಲ ಅಥವಾ ಹಿಂದುಳಿದ ಪ್ರದೇಶಗಳ ಜನರಿರುವಲ್ಲಿ ವಸಾಹತುಗಳನ್ನು ಹೊಂದುವ, ನಿರ್ವಹಿಸುವ ವಿಧಾನವಾಗಿದ್ದು ಆರ್ಥಿಕ ಶೋಷಣೆಯ ನೀತಿಯೇ ಆಗಿದೆ.[೧] ಯುರೋಪಿನ ರಾಷ್ಟ್ರಗಳಲ್ಲಿ ೧೮ನೇ ಶತಮಾನದ ಕೈಗಾರಿಕಾ ಕ್ರಾಂತಿಯ ತರುವಾಯ ಕಚ್ಚಾ ವಸ್ತುಗಳ ಅಗತ್ಯ ಹಾಗೂ ಸಿದ್ಧ ವಸ್ತುಗಳ ಮಾರುಕಟ್ಟೆಗಳ ಅವಶ್ಯಕತೆಗಳಿಗಾಗಿ ಹೆಚ್ಚು ಹೆಚ್ಚು ವಸಾಹತುಗಳನ್ನು ಹೊಂದಲು ತಮ್ಮಲ್ಲೇ ಪೈಪೋಟಿ ಏರ್ಪಟ್ಟು ಏಷ್ಯಾ, ಆಫ್ರೀಕಾ, ಲ್ಯಾಟಿನ್ ಅಮೆರಿಕಾಗಳು ಅಧೀನತೆಗೆ ಒಳಪಟ್ಟವು. ಈ ಸಂದರ್ಭದಲ್ಲಿ ಅಧಿಪತ್ಯ, ಶೋಷಣೆ, ವಿಸ್ತರಣೆ, ಆಕ್ರಮಣಗಳೊಂದಿಗೆ ಅಸಮತೋಲಿತ ಬೆಳವಣಿಗೆಯನ್ನು, ಅಧೀನ ಅಭಿವೃದ್ಧಿಯನ್ನು ನಾವು ಕಾಣಬಹುದು.[೨]

ವಸಾಹತುಷಾಹೀ ಪರಿಕಲ್ಪನೆಯು 'ಅಭಿವೃದ್ಧಿ'ಯನ್ನು ಮಾನದಂಡವಾಗಿಸಿಕೊಂಡು ವಿಜ್ಞಾನ–ತಂತ್ರಜ್ಞಾನ ಅಥವಾ ಇನ್ನಾವುದನ್ನೋ ಬಳಸಿಕೊಂಡು ಅಲ್ಲಿನ ಇತಿಹಾಸ, ಸಂಸ್ಕೃತಿ, ವೇದ–ವಿಜ್ಞಾನಗಳನ್ನು ಉಪೇಕ್ಷಿಸಿ ತಮ್ಮತನದ ಹೇರಿಕೆ ಮತ್ತು ಅವಲಂಬನೆಯ ಪರಿಸ್ಥಿತಿಯ ಸೃಷ್ಟಿಮಾಡಿ (ಹೆಜಿಮನಿ ಅಥವಾ ಡೋಮಿನೇಷನ್) ಅಧಿಪತ್ಯ ನಡೆಸುವುದಾಗಿದೆ. ಅವಿಭಜಿತ ದಕ್ಷಿಣಕನ್ನಡ ಎಂದು ಗುರುತಿಸಲ್ಪಡುವ ಪ್ರದೇಶವು ಪ್ರಸ್ತುತ ಆಧುನಿಕ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೇರಳ ರಾಜ್ಯದ ಕಾಸರಗೋಡನ್ನು ಒಳಗೊಂಡಿದ್ದಂತಹ ಪ್ರದೇಶವಾಗಿದೆ.[೩] ೧೬ನೇ ಶತಮಾನದಲ್ಲಿ ವ್ಯಾಪಾರಕ್ಕಾಗಿ ಬಂದ ಪೋರ್ಚುಗೀಸರು ದಕ್ಷಿಣ ಕನ್ನಡಕ್ಕೂ ಆಗಮಿಸಿ ಅಧಿಪತ್ಯ ವಹಿಸಿಕೊಳ್ಳಲು ಮುಂದಾದಾಗ, ಪೋರ್ಚುಗೀಸರ ಶಕ್ತಿಗೆದುರಾಗಿ ನಿಂತ ಉಳ್ಳಾಲದ ಅಬ್ಬಕ್ಕನ ಹೋರಾಟ, ಪರಕೀಯರ ಆಳ್ವಿಕೆಯನ್ನು ವಿರೋಧಿಸಿದ ಮುಂದಿನ ಹೋರಾಟಗಳಿಗೆ ತಳಹದಿಯನ್ನು, ಸ್ಫೂರ್ತಿಯನ್ನು ಒದಗಿಸಿತು.[೪] ಸಾಳುವ ರಾಣಿ ಚನ್ನಭೈರಾದೇವಿಯ ಸಾಹಸಮಯ ಹೋರಾಟವು ಕೂಡಾ ದಕ್ಷಿಣಕನ್ನಡದ ಜನರು ಎಂದೂ ಮರೆಯಲಾರರು.

ಹೈದರಾಲಿ, ಟಿಪ್ಪು ಸುಲ್ತಾನರ ಅವನತಿಯು ದಕ್ಷಿಣಕನ್ನಡವು ಬ್ರಿಟೀಷರ ವಶವಾಗಲು ಕಾರಣವಾಯಿತು.[೫] ತದನಂತರದಲ್ಲಿ ಬ್ರಿಟೀಷ್ ಅಧೀನದಲ್ಲಿ, ಮದ್ರಾಸ್ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟು ವಸಾಹತುಷಾಹಿಯ ಪ್ರಭಾವಕ್ಕೆ ನೇರವಾಗಿ ಒಳಗೊಂಡು ಹಲವಾರು ಬದಲಾವಣೆಗಳಿಗೆ, ಪ್ರತಿಸ್ಪಂದನಕ್ಕೆ, ದಕ್ಷಿಣಕನ್ನಡ ಸಾಕ್ಷಿಯಾಯಿತು.

೧೮೧೦ರಲ್ಲಿ ದಕ್ಷಿಣಕನ್ನಡದ ಕಲೆಕ್ಟರ್ ಆಗಿದ್ದ ಅಲೆಕ್ಸಾಂಡರ್ ರೀಡ್, ನಾವು ಒಳ್ಳೆಯ ನೀತಿಗೆ ಸಲ್ಲದ ದುಬಾರಿ ಭೂಕಂದಾಯವನ್ನು ರೈತರಿಂದ ವಸೂಲಿ ಮಾಡುತ್ತಿದ್ದೇವೆ. ಇದು ಎಷ್ಟು ಬೇಗ ಕೊನೆಗೊಳ್ಳುವುದೋ ಅಷ್ಟು ಒಳ್ಳೆಯದು ಎಂದು ಬರೆದಿದ್ದಾನೆ. ಭೂ ಕಂದಾಯದ ಏರಿಕೆ, ಸುಂಕಗಳು, ಕೃಷಿಬೆಳೆ ವೈಫಲ್ಯಗಳು ರೈತರನ್ನು ತೊಂದರೆಗೀಡು ಮಾಡಿತು.[೬] ನಗದು ರೂಪದ ತೆರಿಗೆ ಪದ್ಧತಿ, ಬೆಲೆ ಕುಸಿತಗಳು ರೈತರ ಸ್ಥಿತಿಯನ್ನು ಮತ್ತಷ್ಟು ಶೋಚನೀಯಗೊಳಿಸಿದವು. ೧೮೧೦–೧೧ರಲ್ಲಿ ರೈತರು ಸಾಮೂಹಿಕವಾಗಿ ಸಂಘಟಿತರಾಗಿ ಭೂ ಕಂದಾಯ ಮತ್ತು ತೆರಿಗೆಗಳ ಪಾವತಿಯನ್ನು ನಿಲ್ಲಿಸಿ ಪ್ರತಿರೋಧವನ್ನು ತೋರಿದರು.[೭] ಇದರೊಂದಿಗೆ ತೆರಿಗೆ ಪದ್ಧತಿಗಳು ಜನರನ್ನು ಒಟ್ಟು ಸೇರಿಸುವಲ್ಲಿಯೂ ಕಾರಣೀಭೂತವಾಯಿತು. ಇದು ರೈತರ ಆರಂಭಿಕ ಪ್ರತಿರೋಧವಾದರೆ, ರೈತರು ಮಗದೊಮ್ಮೆ ೧೮೩೦–೩೧ರಲ್ಲಿ ಹೋರಾಟಕ್ಕಿಳಿದುದು ವಸಾಹತುಷಾಹಿ ವ್ಯವಸ್ಥೆಯ ಪ್ರಬಲ ಪ್ರತಿಭಟನೆಯೇ ಆಗಿದೆ.[೮] ರೈತರು ಅಲ್ಲಲ್ಲಿ ಕೂಟಗಳನ್ನು ರಚಿಸಿಕೊಂಡು ಹೋರಾಟವನ್ನು ಮಾಡಿದ್ದರು. ಕಾಸರಗೋಡಿನಿಂದ ಕುಂದಾಪುರದ ವರೆಗೂ, ಮಂಗಳೂರಿನಿಂದ ಬಂಟ್ವಾಳ, ಚಾರ್ಮಾಡಿಯ ವರೆಗೂ ಕಂದಾಯ ನಿರಾಕರಣೆಯ ಹೋರಾಟಕ್ಕೆ ರೈತರು ಮುಂದಾದರು. ಈ ಹೋರಾಟಗಳು ಯಶಗಳಿಸದಿದ್ದರೂ ಇಲ್ಲಿಂದಲೇ ವಸಾಹತುಷಾಹಿಯ ವಿರೋಧವನ್ನು ನಾವು ಕಾಣಬಹುದು.

೧೮೩೭ರಲ್ಲಿ ದಕ್ಷಿಣಕನ್ನಡ ಪ್ರದೇಶವಾದ ಪುತ್ತೂರು, ಅಮರಸುಳ್ಯಗಳಲ್ಲಿ ಜನರು ಪುನಃ ದಂಗೆ ಎದ್ದುದು ದಾಖಲೆಗಳಲ್ಲಿ ಕೆನರಾ ಬಂಡಾಯ ಎಂದು ಗುರುತಿಸಲ್ಪಟ್ಟಿತು.[೯] ಕಲ್ಯಾಣ ಸ್ವಾಮಿ, ಅಪರಂಪರ, ಬೂದಿಬಸಪ್ಪ ಎಂದೆಲ್ಲಾ ಕರೆಯಿಸಿಕೊಳ್ಳುವವರು ಈ ಬಂಡಾಯದ ನಾಯಕರಾಗಿದ್ದರು. ಬಂಟ್ವಾಳ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಬ್ರಿಟೀಷ್ ಖಜಾನೆ, ಸಂಗ್ರಹಾಗಾರಗಳು ಹೋರಾಟಗಾರರ ಗುರಿಯಾದವು. ಇದು ಮುಂದೆ

ವಿಚಾರಧಾರೆಗಳ ಮೂಲಕ ವಸಾಹತುಷಾಹೀ ವಿರೋಧವನ್ನು ತೋರ್ಪಡಿಸಿದರು.

ದೇಶಾದ್ಯಂತ ಆರಂಭವಾದ ಸಾಮಾಜಿಕ ಬದಲಾವಣೆಗಳು ಧ್ವನಿಯಾಗಿ ಮಂಗಳೂರಿನಲ್ಲೂ ಬ್ರಹ್ಮಸಮಾಜ, ಆರ್ಯ ಸಮಾಜಗಳು ಆರಂಭವಾದವು. ಥಿಯೋಸಾಫಿಕಲ್ ಸೊಸೈಟಿಯು ಸಕ್ರಿಯವಾಗಿ ಕಾರ್ಯನಿರ್ವಹಿಸತೊಡಗಿತು. ೧೮೭೦ರ ಮೇ ತಿಂಗಳಿನಲ್ಲಿ ಕಾರ್ನಾಡು ಸದಾಶಿವರಾವ್, ಉಳ್ಳಾಲ ರಘುನಾಥಯ್ಯ, ಬಿಲ್ಲವಸಮಾಜದ ಮುಖಂಡರಾದ ಶ್ರೀ.ಎನ್.ಅರಸಪ್ಪನವರ್ ಮೊದಲ್ಗೊಂಡು ಬ್ರಹ್ಮ ಸಮಾಜದ ಶಾಖೆಯನ್ನು ಮಂಗಳೂರಿನಲ್ಲಿ ಆರಂಭಿಸಿದರು.

ಗಾಂಧೀಜೀಗಿಂತಲೂ ಪೂರ್ವದಲ್ಲೇ, ಶಿಕ್ಷಣ, ಸಮಾಜಸುಧಾರಣೆ, ಗುಡಿಕೈಗಾರಿಕೆ, ಭೂಮಿ ನೀಡಿಕೆಯಂತಹ ರಚನಾತ್ಮಕ ಕಾರ್ಯಗಳ ಮೂಲಕ ಹರಿಜನೋದ್ಧಾರಕರಾಗಿ ದುಡಿದು ತಮ್ಮ ಜೀವನವನ್ನೇ ಪರರಿಗಾಗಿ ಮುಡಿಪಾಗಿಟ್ಟ ವ್ಯಕ್ತಿ, ಕುದ್ಮಲ್ ರೋಗರಾಯರು. ರಂಗರಾಯರು ಖಾದಿಬಳಕೆ ಮೂಲಕ ದಕ್ಷಿಣಕನ್ನಡದಲ್ಲಿ ಸ್ವದೇಶೀ ಪ್ರೇಮವನ್ನೂ ಜಾಗೃತಿಗೊಳಿಸಿದ್ದಂತಹ ರಾಷ್ಟ್ರಪ್ರೇಮಿ.[೨೭]

ರಂಗರಾಯರು ಶಿಕ್ಷಕವೃತ್ತಿಯಲ್ಲಿದ್ದು ಮಂಗಳೂರಿನ ಬ್ರಹ್ಮಸಮಾಜ ಶಾಖೆಯ ಸ್ಥಾಪಕರಾದ ಉಳ್ಳಾಲ ರಘುನಾಥಯ್ಯನವರ ನಿಕಟ ಸಂಪರ್ಕ ಹೊಂದಿದ್ದು ಬ್ರಹ್ಮಸಮಾಜದ ಉದಾತ್ತತತ್ವ, ಧ್ಯೇಯ ಹಾಗೂ ವಿಚಾರಪೂರಿತ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. ಹಿಂದೂ ಸಮಾಜದಲ್ಲಿದ್ದ ಸಾಮಾಜಿಕ ಭಿನ್ನತೆ, ಅಸ್ಪೃಶ್ಯತೆ, ಜಾತೀಯತೆಯಂತಹ ವಿವಿಧ ಅಸಮಾನತೆಗಳು ಹಾಗೂ ಬಾಲ್ಯವಿವಾಹ, ದೇವದಾಸಿ ಪದ್ಧತಿ, ವಿಧವಾ ವಿವಾಹಗಳಿಂದ ಮನನೊಂದು ಪರಿಹಾರಕ್ಕಾಗಿ ಪ್ರಯತ್ನಿಸಿದರು. ಈ ಬದಲಾವಣೆಗಳಿಗೆ ಕಾರಣವಾದುದು ವಸಾಹತುಷಾಹೀ ಪ್ರಭಾವ ಎಂದರೆ ತಪ್ಪಾಗಲಾರದು.. ಒಂದೆಡೆ ಸಾಂಪ್ರದಾಯಿಕ ಸಾಮಾಜಿಕ ಅನಿಷ್ಟಗಳ ಬದಲಾವಣೆ ಅಂದರೆ, ಆಧುನಿಕತೆಯ ಸ್ವೀಕೃತಿ, ಇನ್ನೊಂದೆಡೆ ರಾಷ್ಟ್ರೀಯತೆಯ ಧ್ವನಿಯಾದ ಬ್ರಿಟೀಷ್ ವಿರೋಧ ಇವೆರಡೂ ಜೊತೆಜೊತೆಯಾಗಿಯೇ ಮಿಶ್ರಿತವಾಗಿರುವುದು ಪ್ರಮುಖ ಅಂಶವಾಗಿದೆ.

ದಕ್ಷಿಣ ಕನ್ನಡ ಅಭಿವೃದ್ಧಿಯ ಅಗತ್ಯಗಳಿಗೆ ತಕ್ಕಂತೆ ತನ್ನನ್ನು ಮಾರ್ಪಾಡು ಮಾಡಿಕೊಳ್ಳುವುದು ಒಂದೆಡೆಯಾದರೆ; ತನ್ನ ಸ್ವಂತಿಕೆಯನ್ನು, ದೇಶಪ್ರೇಮವನ್ನು, ರಾಷ್ಟ್ರೀಯತೆಯನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದುದು ಕೂಡಾ ಉಲ್ಲೇಖನೀಯ ಅಂಶವಾಗಿದೆ. ಆಧುನಿಕತೆಯ ಸ್ವೀಕೃತಿ ಹಾಗೂ ಹೋರಾಟ ಜೊತೆಜೊತೆಯಾಗಿಯೇ ಸಾಗುವುದು ಇಲ್ಲಿನ ವೈಷ್ಟ್ಯವಾಗಿದೆ. ಸ್ಥಳೀಯ ವಿಷಯಗಳಾದ ತುಳು ಚಳುವಳಿ, ಸಾಮಾಜಿಕ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳು ಇದನ್ನು ಪುಷ್ಟೀಕರಿಸುತ್ತವೆ.

ಅಸಹಕಾರ ಚಳುವಳಿಯ ಕಾಲದಲ್ಲಿ ದಕ್ಷಿಣಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ ಹೆಚ್ಚು ಬಲಿಷ್ಟತೆಯನ್ನು ಪಡೆಯಿತು. ಕಾರ್ನಾಡ್ ಸದಾಶಿವರಾವ್ ಅವರ ನಾಯಕತ್ವದಲ್ಲಿ ಕೆ.ಆರ್. ಕಾರಂತ, ಎ.ವಿ.ಬಾಳಿಗಾ, ಕೆ.ಕೆ.ಶೆಟ್ಟಿ, ಎಂ.ಆರ್ ಪೂಂಜಾ, ಎಸ್.ಯು. ಪಣಿಯಾಡಿ, ಎ.ಎಸ್. ಕುಡ್ವರಾದಿಯಾಗಿ ಹಲವರು ಬಾಗವಹಿಸಿದ್ದರು. ಸತ್ಯಾಗ್ರಹ, ಸ್ವದೇಶಾಭಿಮಾನಿ, ನವಯುಗ, ಕಂಠೀರವ, ರಾಷ್ಟ್ರಬಂಧು, ಪ್ರಭಾತ ಮುಂತಾದ ಪತ್ರಿಕೆಗಳು ಜನರಲ್ಲಿ ಜಾಗೃತಿಯನ್ನುಂಟು ಮಾಡುವುದ ರೊಂದಿಗೆ ದೇಶಪ್ರೇಮವನ್ನೂ ಹೆಚ್ಚಿಸಿದವು. ೧೯೩೦ರಲ್ಲಿ ಗಾಂಧೀಜಿ ಉಪ್ಪಿನ ಸತ್ಯಾಗ್ರಹಕ್ಕೆ ಕರೆಕೊಟ್ಟಾಗ ಸದಾಶಿವರಾವ್‌ರವರು ದೇಶಪಾಂಡೆ, ಕೌಜಲಗಿ ಮುಂತಾದವರೊಡಗೂಡಿ ದಕ್ಷಿಣಕನ್ನಡದಲ್ಲಿ ಸತ್ಯಾಗ್ರಹದ ಕಾವನ್ನು ಹೆಚ್ಚಿಸಿದರು. ಅಂಕೋಲೆಯ ಸತ್ಯಾಗ್ರಹದಲ್ಲೂ ಭಾಗವಹಿಸಿದರು.[೨೮] ಸುಮಾರು ೧೨೬೨ ಪುರುಷರು ಹಾಗೂ ೨೧ ಮಹಿಳೆಯರು ಅಸಹಕಾರ ಚಳುವಳಿಯಲ್ಲಿ ನೇರವಾಗಿ ಭಾಗವಹಿಸಿದ್ದರು.[೨೯] ಮಂಗಳೂರಿನಲ್ಲಿ ೧೯೩೪–೩೫ರಲ್ಲಿ ಕಾಂಗ್ರೆಸ್ ಸಮಾಜವಾದೀ ಪಕ್ಷದ ನಾಯಕತ್ವದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರ ಉಪಸ್ಥಿತಿಯಲ್ಲಿ ಕಾರ್ಮಿಕರ ಸಂಘಟನೆಗಳು ಆರಂಭವಾದವು.[೩೦] ಕ್ವಿಟ್ ಇಂಡಿಯಾ ಚಳುವಳಿಯು ಕೂಡಾ ಇಲ್ಲಿ ಪ್ರತಿಧ್ವನಿಸಿದ್ದು ಪರಕೀಯರ ದಾಸ್ಯದ ವಿರುದ್ಧದ ಪ್ರತಿಭಟನೆಯ ಹೋರಾಟವಾಗಿದೆ.

ವಸಾಹತುಷಾಹೀ ಕೊಡುಗೆಗಳಾದ ಆಧುನಿಕ ಶಿಕ್ಷಣ ವ್ಯವಸ್ಥೆ, ಸಾಮಾಜಿಕ ಸುಧಾರಣಾ ಚಳುವಳಿಗಳು, ಮುದ್ರಣಾ ಮಾಧ್ಯಮಗಳು, ಸಾರಿಗೆ ಸಂಪರ್ಕಗಳನ್ನು ಬಳಸಿಕೊಳ್ಳುತ್ತಾ, ಮತ್ತೊಂದೆಡೆ ಜನರಲ್ಲಿ ಜಾಗೃತಿಯನ್ನು ಉಂಟುಮಾಡುವುದರೊಂದಿಗೆ ದೇಶಪ್ರೇಮವನ್ನೂ ಹೆಚ್ಚಿಸಿದವು. ಇವು ಜನರನ್ನು ಹತ್ತಿರಕ್ಕೆ ಬೆಸೆಯುವುದರೊಂದಿಗೆ ರಾಷ್ಟ್ರದ ಅಂತರವನ್ನು ಕಡಿಮೆ ಮಾಡಿದವು. ಸ್ವಾತಂತ್ರ್ಯದ ಬಗೆಗೆ ಅರಿವನ್ನೂ ಮೂಡಿಸಿದವು. ಒಂದೆಡೆ ವಸಾಹತುಷಾಹೀ ತಂತ್ರಜ್ಞಾನದ– ಅಭಿವೃದ್ಧಿಯ ಸ್ವೀಕೃತಿ; ಇನ್ನೊಂದೆಡೆ ಸಾಮಾಜಿಕ ಜಾಗೃತಿಯೊಂದಿಗೆ ಸ್ವಾತಂತ್ರ್ಯದ ಜಾಗೃತಿ ಮತ್ತು ವಸಾಹತುಷಾಹೀ ವಿರೋಧ ಎರಡನ್ನೂ ದಕ್ಷಿಣಕನ್ನಡದಲ್ಲಿ ಕಾಣಬಹುದಾಗಿದೆ. ಜನರ ಮನೋಭಾವದ ಮೇಲೇ ಆಧುನಿಕತೆಯ ಗಾಢ ಪ್ರಭಾವ ಮತ್ತು ಅದರಿಂದಾದ ತಿಳುವಳಿಕೆ ದಕ್ಷಿಣಕನ್ನಡದ ವಿಶೇಷ ಲಕ್ಷಣವಾಗಿದೆ. ಒಟ್ಟಾರೆಯಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ವಸಾಹತುಷಾಹೀ ಕಾಲಘಟ್ಟದಲ್ಲಿ ಬೀರಿದಂತಹ ಪ್ರಭಾವ, ಬದಲಾವಣೆಯ ಕುರಿತು ಇಲ್ಲಿ ಅವಲೋಕನವನ್ನು ಮಾಡಲಾಗಿದೆ.

[1] Julia Swannel (Ed), *Oxford Modern English Dictionary,* Calcutta, 1993.

[2] Bipan Chandra, *Essays on Colonialism*, Orient Longman, New Delhi, 1999.

[3] K.V. Ramesh, *A History of South Kanara (From Earliest To Vijayanagara),* Dharwar 1970.

N. Shyam Bhat, Souhth *Kanara: Colonial Administration and Regional Response, PhD* thesis, Mangalore University, 1987.

Ganapati Rao Aigal, *Dakshna Kannada Jilleya Prachina Itihasa*, Rastrakavi Govinda Pai Samshodana Kendra, Udupi, 1923. (Re- print, 2004).

[4] B.S. Shastri, 'Daakshina kannada karavaliyalli Portugeesaru' in *Sudarshana,* Adyanadka Krishna Bhat (Ed.), Vijaya College Trust, Mulki, 1977.

Rajarama tolpady, Dakshina kannada charitre, samskruti, rajakarana in *Aruhu Kuruhu* vol.20, 2014.

[5] B. Sheik Ali, *Tippu Sulthan: A Study in Diplomacy and Confrontation,* Dept. of kannada and Culture, Bangalore, 2006.

[6] Baraguru Ramachandrappa (Ed), Op.cit.

[7] B.v. Kakkillaya, Chaluvliya nenpuglu, *Poli; Canara200,* Mangalore, 2000.

ಕೊಡುಗೆ ತೇಕಡಾ 10.5ಕ್ಕಿಂತ ಹೆಚ್ಚಿದೆ. *. ವ್ಯಾಪಾರ, ವಾಣಿಜ್ಯ, ವಿಮೆ, ಬ್ಯಾಂಕಿಂಗ್, ಸಾರಿಗೆ ಸಂಪರ್ಕ, ಅಂಚೆ ಮುಂತಾದ ತೃತೀಯ ವಲಯದ ಉದ್ಯಮಗಳ ಬೆಳವಣಿಗೆಗೆ ಕೃಷಿ ವಲಯದ ಕೊಡುಗೆ ಅಪಾರವಾಗಿದೆ.

ಸುಧಾರಣಾ ಕ್ರಮಗಳು : ಕೃಷಿ ಭಾರತದ ಮೂಲ ಕಸುಬಾದರೂ ನಮ್ಮಲ್ಲಿ ಕೃಷಿ ಉತ್ಪಾದನೆ ಅಷ್ಟೇನೂ ಉತ್ತಮವಾಗಿಲ್ಲ. ಇನ್ನೂ ನಾವು ಕೃಷಿ ಸ್ವಾವಲಂಭನೆಯನ್ನು ಸಾಧಿಸಬೇಕಾಗಿದೆ. ಇಂದು ಕೃಷಿ ಉತ್ಪಾದನೆಯನ್ನು ಹೆಚ್ಚಿಸಲೇಬೇಕಾದ ಅನಿವಾರ್ಯತೆ ಉಂಟಾಗಿದೆ. ಕೃಷಿ ಉತ್ಪಾದನೆಯನ್ನು ಸುಧಾರಿಸಲು ಕೈಗೊಳ್ಳಬಹುದಾದ ಕ್ರಮಗಳೆಂದರೆ, *.ಭೂಸುಧಾರಣಾ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕಿದೆ. *.ನೀರಾವರಿ ಸೌಲಭ್ಯವನ್ನು ಪರಿಪೂರ್ಣವಾಗಿ ಬಳಸಿಕೊಳ್ಳಬೇಕಾಗಿದೆ. *ತಂತ್ರಜ್ಞಾನ ಮತ್ತು ವೈಜ್ಞಾನಿಕ ಬೇಸಾಯ ಕ್ರಮಗಳನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೇರೇಪಿಸುವುದು. *.ರೈತರಿಗೆ ಸರ್ಕಾರವು ಉಚಿತವಾಗಿ ಯಂತ್ರಗಳು, ಸಲಕರಣೆಗಳು, ಸುಧಾರಿತ ತಳಿಗಳು, ರಸಗೊಬ್ಬರಗಳು ಸಬ್ಸಿಡಿ ದರದಲ್ಲಿ ಸಾಲವನ್ನು ಒದಗಿಸುವುದು.

ಭಾರತದ ಕೃಷಿಯ ಬೆಳವಣಿಗೆಯ ಹಂತಗಳನ್ನು 3 ಭಾಗಗಳಾಗಿ ವಿಂಗಡಿಸಿ ಅಧ್ಯಯನ ಮಾಡಬಹುದು.

ಪ್ರಾರಂಭಿಕ ಹಂತ : 1950 ಮತ್ತು 1960 ರ ದಶಕಗಳಲ್ಲಿ ಭಾರತದ ಜನಸಂಖ್ಯಾ ಗಣನೀಯವಾಗಿ ಏರಿತು. ನಿರಾಶ್ರಿತರ ಸಂಖ್ಯೆಯ ಹೆಚ್ಚಳ, ಹವಾಮಾನ ವೈಪರೀತ್ಯ, ಬಹಳ ಕಾಲದಿಂದ ಕೃಷಿ ನೆನೆಗುದಿಗೆ ಬಿದ್ದಿದ್ದರ ಪರಿಣಾಮವಿದು. 1960 ರಲ್ಲಿ ದೇಶ ತೀವ್ರತರವಾದಂತಹ ಆಹಾರ ಕೊರತೆ ಮತ್ತು ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಯಿತು. ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯ ಭಾಗದಲ್ಲಿ ಭಾರತ ಸರ್ಕಾರ ಫುಡ್ ಫೌಂಡೇಷನ್‌ನ ಪೋಷಿತ ತಜ್ಞರ ಗುಂಪೊಂದನ್ನು ಆಹ್ವಾನಿಸಿ ಉತ್ಪಾದನಾ ಹೆಚ್ಚಳಕ್ಕೆ ಸಲಹೆ ನೀಡುವಂತೆ ಕೇಳಿಕೊಂಡಿತು. ಆಗ ತಜ್ಞರ ಗುಂಪು 1959 ರಲ್ಲಿ ಭಾರತದ ಆಹಾರ ಬಿಕ್ಕಟ್ಟು ಮತ್ತು ಅದನ್ನು ಎದುರಿಸುವುದು ಹೇಗೆ ಎಂಬ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ವರದಿಯನ್ನು ಆಧರಿಸಿ 1960 ರಲ್ಲಿ ಸರ್ಕಾರ ಏಳು ಆಯ್ದ ಜಿಲ್ಲೆಗಳಲ್ಲಿ **ಸಾಂದ್ರವಲಯ ಅಭಿವೃದ್ಧಿ ಕಾರ್ಯಕ್ರಮ** ಎಂಬ ಯೋಜನೆಯನ್ನು ಜಾರಿಗೆ ತಂದಿತು. ಈ ಜಿಲ್ಲೆಗಳಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಅವಶ್ಯಕವಾದ ಅತ್ಯಗತ್ಯ ಸೌಲಭ್ಯಗಳನ್ನು ಒದಗಿಸಲಾಯಿತು. ನಂತರ 1965 ರಲ್ಲಿ 114 ಜಿಲ್ಲೆಗಳಿಗೆ ಈ ಸಾಂದ್ರವಲಯ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು. ಈ ಸಮಯದಲ್ಲೇ ಕೃಷಿ ವಿಜ್ಞಾನಿ ಪ್ರೊ ನಾರ್ಮನ್ ಬೋಲಾಂಗ್ ನೇತೃತ್ವದ ತಂಡವೊಂದು ಮೆಕ್ಸಿಕೋದಲ್ಲಿ ಅಧಿಕ ಇಳುವರಿಯ ವೈವಿಧ್ಯಮಯ ಗೋಧಿಯನ್ನು ಕಂಡು ಹಿಡಿಯಿತು. ಇದೇ ತಳಿಯನ್ನು 1966ರ ಮುಂಗಾರುಬೆಳೆ ಕಾಲದಲ್ಲಿ 1.89 ದಶಲಕ್ಷ ಹೆಕ್ಟೇರು ಭೂಮಿಯಲ್ಲಿ ಕಾರ್ಯಗತಗೊಳಿಸಲಾಯಿತು. ಕಾಲಕ್ರಮೇಣ ಈ ಅಧಿಕ ಇಳುವರಿ ತಳಿಯ ಕಾರ್ಯಕ್ರಮವನ್ನು 79.9 ದಶಲಕ್ಷ ಹೆಕ್ಟೇರು ಭೂಮಿಗೆ ಅಳವಡಿಸಲಾಯಿತು. ಇದರಿಂದ 1960–61 ರಲ್ಲಿ ಪ್ರತಿ ಹೆಕ್ಟೇರಿಗೆ 710 ಕಿಲೋಗ್ರಾಂಗಳಿದ್ದ ಉತ್ಪಾದಕತೆ 2004–05 ಕ್ಕೆ 1703 ಕಿಲೋಗ್ರಾಂಗಳಿಗೆ ಏರಿತು. ಹೀಗಾಗಿ ಈ ಅವಧಿಯನ್ನು **ಪೂರ್ವ ಹಸಿರುಕ್ರಾಂತಿ ಕಾಲವೆಂದು** ಕರೆಯಲ್ಪಡುತ್ತದೆ ಮತ್ತು ಈ ಸಮಯದಲ್ಲಿ ಪ್ರಚಂಡ ಕೃಷಿ ಬದಲಾವಣೆ ಸಾಂಸ್ಥಿಕ ಬದಲಾವಣೆಗೆ ಸಾಕ್ಷಿಯಾಯಿತು. ಪ್ರಮುಖ ನೀರಾವರಿ ಯೋಜನೆಯನ್ನು ಅಭಿವೃದ್ಧಿಪಡಿಸಿ ಮಧ್ಯವರ್ತಿಗಳ ಪದ್ಧತಿಯನ್ನು ರದ್ದುಪಡಿಸಲಾಯಿತು. ಎಲ್ಲಾ ರಾಜ್ಯಗಳಲ್ಲೂ ಜಮೀನು ಒತ್ತುವರಿಯನ್ನು ತಡೆಯಲು ಕ್ರಮಕೈಗೊಂಡು ಹಿಡುವಳಿದಾರರಿಗೆ ಭೂ ಮಾಲೀಕತ್ವದ ಭದ್ರತೆಯನ್ನು ಒದಗಿಸಲಾಯಿತು.

ಎರಡನೇ ಹಂತ : ಭಾರತದ ಕೃಷಿ ನೀತಿಯ ಎರಡನೇ ಹಂತವನ್ನು 1960–80ರ ವರ್ಷಗಳೆಂದು ಗುರುತಿಸಲಾಯಿತು. ಕೃಷಿ ಪ್ರಧಾನವಾದ ಭಾರತದಲ್ಲಿ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ಯಾವುದೇ ಏರಿಳಿತಗಳುಂಟಾದರೂ ಸಾಮಾನ್ಯ ಬೆಲೆ ಮಟ್ಟದಲ್ಲೂ ಏರುಪೇರುಗಳಾಗುತ್ತದೆ. ಕಳೆದ ನಾಲ್ಕು ದಶಕಗಳ ಅವಧಿಯಲ್ಲಿ ಕೃಷಿ ಬೆಲೆ ನೀತಿಯು ಮುಖ್ಯವಾಗಿ ಎರಡು ಹಂತಗಳನ್ನು ದಾಟಿ ಬಂದಿದೆ. ಅವುಗಳೆಂದರೆ, 1. 1965 ರ ಹಿಂದಿನ ಬೆಲೆ ನೀತಿಯು ಯಾವುದೇ ವೈಜ್ಞಾನಿಕ ನೆಲೆಗಳನ್ನು ಹೊಂದಿರಲಿಲ್ಲ. ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಹೆಚ್ಚಾಗಿ ಅನುಭೋಗಿ ಪರ ಬೆಲೆ ನೀತಿಯನ್ನು ಅನುಸರಿಸಲಾಯಿತು. ಆಹಾರಧಾನ್ಯಗಳ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರ 8 ಆಹಾರ ವಲಯಗಳನ್ನು ಸೃಷ್ಟಿಸಿತು. 1964ರಲ್ಲಿ ಕೃಷಿ ಆಯೋಗ ಮತ್ತು ಬೆಲೆ ಆಯೋಗವನ್ನು ರಚಿಸಲು ಸಲಹೆ ನೀಡಿತು. 2. 1965 ರ ನಂತರ ನೀತಿ : 1965 ರ ಜನವರಿ ತಿಂಗಳಿನಲ್ಲಿ ಸರ್ಕಾರ ಕೃಷಿ ಬೆಲೆ ಆಯೋಗವನ್ನು ಸ್ಥಾಪಿಸಿತು. ಇದನ್ನು 1985 ರಲ್ಲಿ ಸರ್ಕಾರ ಕೃಷಿ ವೆಚ್ಚ ಮತ್ತು ಬೆಲೆ ಆಯೋಗ ಎಂದು ಮರು ನಾಮಕರಣ ಮಾಡಿತು. ಈ ಆಯೋಗ ಸ್ಥಾಪನೆಯಾದ ದಿನದಿಂದ ಭಾರತದಲ್ಲಿ ಒಂದು ಅರ್ಥಗರ್ಭಿತ ಬೆಲೆ ಮತ್ತು ವಿತರಣಾ ನೀತಿಯನ್ನು ಅನುಸರಿಸಲು ಪ್ರಾರಂಭಿಸಿತು.

ಈ ನೀತಿಯ ಉದ್ದೇಶಗಳೆಂದರೆ, *. ಸಾಮಾನ್ಯ ಬೆಲೆಯಲ್ಲಿನ ಸ್ಥಿರತೆ ಕಾಪಾಡುವುದು. *. ವಿವಿಧ ಕೃಷಿ ಸಾಮಗ್ರಿಗಳ ಬೆಲೆಗಳ ನಡುವಣ ಸಾಮರಸ್ಯ ಸಾಧನೆ. *. ಋತುಮಾನದ ಬೆಲೆ ಏರಿಳಿತಗಳನ್ನು ಕಡಿಮೆಗೊಳಿಸುವುದು. *. ಆರ್ಥಿಕ ಬೆಳವಣಿಗೆಯಲ್ಲಿ ವ್ಯವಸ್ಥಿತವಾದ ಬೆಳವಣಿಗೆ ಸಾಧನೆ. 1986 ರ ನವೆಂಬರ್ 14 ರಂದು ಸರ್ಕಾರ ಒಂದು ಹೊಸ ದೀರ್ಘಕಾಲಿಕ ಕೃಷಿಬೆಲೆ ನೀತಿಯನ್ನು ಜಾರಿಗೆ ತಂದಿತು. ಈ ನೀತಿಯು ರೈತರು ಮತ್ತು ಅನುಭೋಗಿಗಳ ಹಿತರಕ್ಷಣೆಯನ್ನು ಕಾಪಾಡುವ ಭರವಸೆ ನೀಡಿತು. **ಹೊಸಬೆಲೆ ನೀತಿಯ ಪ್ರಮುಖ ಲಕ್ಷಣಗಳೆಂದರೆ,** * ವಿವಿಧ ಕೃಷಿ ಸಾಮಗ್ರಿಗಳ ಉತ್ಪಾದನೆಯ ನಡುವಿನ ಅಸಮತೋಲನದ ನಿವಾರಣೆ. *ಪ್ರಾದೇಶಿಕ ಬೆಲೆ ನಿರ್ಧಾರ ನೀತಿಯನ್ನು ರದ್ದುಗೊಳಿಸುವುದು. *ಕೃಷಿ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸುವುದು. *ಬೆಲೆ ನೀತಿಯ ಅನುಷ್ಠಾನಕ್ಕಾಗಿ ಮೂಲಭೂತ ಸೌಕರ್ಯಗಳ ನಿರ್ಮಾಣ. *ಬೆಂಬಲ ಬೆಲೆ ಘೋಷಣೆಗೆ ಕಾಲಮಿತಿಯ ನಿರ್ಧಾರ. *ರಫ್ತು ಸರಕುಗಳ ಉತ್ಪಾದನೆಗೆ ಉತ್ತೇಜನ ನೀಡುವುದು.

ಮೂರನೇ ಹಂತ : ಭಾರತೀಯ ಕೃಷಿ ಕ್ಷೇತ್ರದ 3ನೇ ಹಂತ 1980–2000 ಎಂದು ಗುರುತಿಸಲಾಗಿದೆ. ಈ ಹಂತದಲ್ಲಿ ಹೊಸ ಕೃಷಿ ಬೆಲೆ ನೀತಿಯನ್ನು ಜಾರಿಗೆ ತರಲಾಯಿತು. ಈ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯ ಜೊತೆಗೆ ಹಾಲು, ಮೀನುಗಾರಿಕೆ, ಕೋಳಿ, ತರಕಾರಿ, ಹಣ್ಣುಗಳು ಮುಂತಾದ ಕೃಷಿಯೇತರ ಉತ್ಪಾದನೆಯಲ್ಲಿಯೂ

: ಆಹಾರ ಉತ್ಪಾದನೆ 54 ದಶಲಕ್ಷ ಟನ್ನುಗಳಿಂದ 65.8 ದಶಲಕ್ಷ ಟನ್ನುಗಳಿಗೇರಿತು. (ಗುರಿ 61.5 ದಶಲಕ್ಷ ಟನ್ನುಗಳು). ಎಣ್ಣೆಕಾಳುಗಳ ಉತ್ಪಾದನೆ ನಿರೀಕ್ಷೆಗಿಂತ ಅಧಿಕವಿತ್ತು. ಈ ಅವಧಿಯಲ್ಲಿ ಭಾಕ್ರಾನಂಗಲ್, ಕೋಸಿ, ಮಹಾನದಿ, ಹಿರಾಕುಡ್, ನಾಗಾರ್ಜುನಸಾಗರ, ತುಂಗಭದ್ರಾ, ಚಂಬಲ್ ಮುಂತಾದ ವಿವಿದೋದ್ದೇಶ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಯಿತು. ಇದರಿಂದಾಗಿ 5.7 ದಶಲಕ್ಷ ಹೆಕ್ಟೇರ್ ಭೂಮಿಗೆ ಹೊಸದಾಗಿ ನೀರಾವರಿ ಸೌಲಭ್ಯ ದೊರೆಯಿತು. ದೇಶದ ಶೇಕಡ 40 ಭಾಗದ ಹಳ್ಳಿಗಳಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಅಳವಡಿಸಲಾಯಿತು. ಜಪಾನ್ ಮಾದರಿಯ ಬೇಸಾಯ ಕ್ರಮವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲಾಯಿತು.

ಎರಡನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1956–1961) : ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ.979 ಕೋಟಿ (ಶೇಕಡ21) ಯನ್ನು ಕೃಷಿ ಮೇಲೆ ವೆಚ್ಚಮಾಡಲಾಯಿತು. ಈ ಯೋಜನೆಯ ಅವಧಿಯಲ್ಲಿ ಆಹಾರ ಉತ್ಪಾದನೆ 65.8 ದಶಲಕ್ಷ ಟನ್ನುಗಳಿಂದ 79.7 ದಶಲಕ್ಷ ಟನ್ನುಗಳಿಗೇರಿತು (80.5 ದಶಲಕ್ಷ ಟನ್ನುಗಳ ಗುರಿ). ಹತ್ತಿ, ಸೆಣಬು, ಎಣ್ಣೆಕಾಳುಗಳ ಉತ್ಪಾದನೆ ನಿರೀಕ್ಷಿತ ಪ್ರಮಾಣಕ್ಕಿಂತ ಕಡಿಮೆಯಾಯಿತು. ಇದರಿಂದಾಗಿ ಆಹಾರ ಧಾನ್ಯಗಳ ಬೆಲೆ ವಿಪರೀತವಾಗಿ ಏರಿದವು. ಒಟ್ಟಾರೆಯಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಿರೀಕ್ಷಿತ ಗುರಿ ತಲುಪಲಾಗದಿದ್ದರೂ ಸಹ ಮಹತ್ವದ ಪ್ರಗತಿಯನ್ನು ಸಾಧಿಸಲಾಯಿತು.

ಮೂರನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1961–1966) : ಮೂರನೇ ಪಂಚವಾರ್ಷಿಕ ಯೋಜನೆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಗುರಿ ಹೊಂದಿತ್ತು. ಈ ಅವಧಿಯಲ್ಲಿ ಕೃಷಿ ರಂಗದಲ್ಲಿ ರು. 1745 ಕೋಟಿ (ಶೇಕಡ 20.4) ವೆಚ್ಚ ಮಾಡಲಾಯಿತು. ಈ ಅವಧಿಯಲ್ಲಿ 80 ಲಕ್ಷ ಹೆಕ್ಟೇರು ಭೂಮಿಗೆ ಹೊಸದಾಗಿ ನೀರಾವರಿ ಸೌಲಭ್ಯ ಕಲ್ಪಿಸಲಾಯಿತು. ಆಹಾರ ಧಾನ್ಯಗಳ ಉತ್ಪಾದನೆ 100 ದಶಲಕ್ಷ ಟನ್ನುಗಳ ಗುರಿ ಬದಲಿಗೆ ಕೇವಲ 72 ದಶಲಕ್ಷ ಟನ್ನುಗಳ ಉತ್ಪಾದನೆಯಾಯಿತು. ಕಬ್ಬಿನ ಉತ್ಪಾದನೆಯೊಂದನ್ನು ಹೊರತುಪಡಿಸಿದರೆ ಬೇರೆಲ್ಲಾ ವಾಣಿಜ್ಯ ಬೆಳೆಗಳ ಉತ್ಪಾದನೆ ಕುಂಠಿತಗೊಂಡಿತು. ಆಹಾರಧಾನ್ಯಗಳ ಉತ್ಪಾದನೆಯ ಕುಂಠಿತದಿಂದಾಗಿ ಬೆಲೆಗಳು ವಿಪರೀತ ಏರಿದವು. ಹವಾಮಾನದಲ್ಲಿ ವೈಪರೀತ್ಯಗಳು, ಚೈನಾ ಮತ್ತು ಪಾಕಿಸ್ತಾನಗಳ ದಾಳಿ, ಯೋಜನೆಯಲ್ಲಿನ ದೋಷಗಳು ಮುಂತಾದುವು ಈ ಪರಿಸ್ಥಿತಿಗೆ ಕಾರಣವಾದವು.

ವಾರ್ಷಿಕ ಯೋಜನೆಗಳು (1966–1969) : 1966–67, 1967–69 ಮತ್ತು 1968–69 ರ ನಡುವಿನ ಮೂರು ವಾರ್ಷಿಕ ಯೋಜನೆಗಳಾವಧಿಯಲ್ಲಿ ಕೃಷಿಗೆ ಪುನಃ ಮೊದಲ ಆಧ್ಯತೆ ನೀಡಲಾಯಿತು, ಆಹಾರ ಮತ್ತು ಕೃಷಿ ಕಚ್ಚಾ ಸಾಮಗ್ರಿಗಳ ಉತ್ಪಾದನೆಯನ್ನು ಹೆಚ್ಚಿಸುವುದು ಈ ಯೋಜನೆಗಳ ಉದ್ದೇಶವಾಗಿದ್ದಿತು. ಈ ವೇಳೆಯಲ್ಲಿ ಒಟ್ಟು ರು. 1624 ಕೋಟಿ (ಶೇಕಡ 24) ಗಳನ್ನು ಕೃಷಿ ಮೇಲೆ ವೆಚ್ಚ ಮಾಡಲಾಯಿತು. ಈ ಅವಧಿಯಲ್ಲಿ ಆಹಾರಧಾನ್ಯಗಳ ಉತ್ಪಾದನೆ ಉದ್ದೇಶಿತ ಗುರಿ 102 ದಶಲಕ್ಷ ಟನ್ನುಗಳ ಬದಲಿಗೆ 95 ದಶಲಕ್ಷ ಟನ್ನುಗಳಷ್ಟಾಯಿತು. 1966 ರಿಂದ 69ರ ನಡುವೆ ಭಾರತದ ಕೃಷಿ ಹೊಸ ಆಯಾಮ ಪಡೆಯಿತು. ಅಧಿಕ ಇಳುವರಿಯ ತಳಿಗಳು, ರಾಸಾಯನಿಕ ಗೊಬ್ಬರಗಳು, ಕ್ರಿಮಿನಾಶಕಗಳು, ನೀರಾವರಿ ಸೌಲಭ್ಯಗಳು ಮುಂತಾದುವನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ಉತ್ಪನ್ನವನ್ನು ಹೆಚ್ಚಿಸುವ ಕರ್ತವ್ಯನಿಷ್ಠ ಕಾರ್ಯಕ್ರಮವಾದ **'ಹಸಿರುಕ್ರಾಂತಿ'** ಯನ್ನು ಜಾರಿಗೊಳಿಸಲಾಯಿತು. ಈ ವೇಳೆಯಲ್ಲಿ ಹೊಸ ಕೃಷಿ ಪದ್ಧತಿಯನ್ನು 'ಅಧಿಕ ಇಳುವರಿ ವೈವಿಧ್ಯಮಯ ಕಾರ್ಯಕ್ರಮ' (HYVP) ಎಂಬ ಹೆಸರಿನಲ್ಲಿ ಜಾರಿಗೆ ತರಲಾಯಿತು. ಸಕ್ಕರೆ, ಎಣ್ಣೆಬೀಜಗಳು, ಹತ್ತಿ ಮತ್ತು ಸೆನಬುಗಳ ಉತ್ಪಾದನೆ ಗಣನೀಯವಾಗಿ ಹೆಚ್ಚಿತು.

ನಾಲ್ಕನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1969–1974) : ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲೂ ಸಹ ಕೃಷಿಗೆ ವಿಶೇಷ ಆಧ್ಯತೆ ನೀಡಲಾಯಿತು. ಈ ಅವಧಿಯಲ್ಲಿ ರೂ. 3814 ಕೋಟಿ (ಶೇಕಡ 24) ಗಳನ್ನು ಕೃಷಿ ಮತ್ತು ನೀರಾವರಿ ಮೇಲೆ ವೆಚ್ಚ ಮಾಡಲಾಯಿತು. ಕೃಷಿ ಸಾಮಗ್ರಿಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಈ ಯೋಜನೆಯ ಗುರಿಯಾಗಿದ್ದಿತು. ಈ ಯೋಜನೆಯ ಅವಧಿಯಲ್ಲಿ ಆಹಾರಧಾನ್ಯಗಳ ಉತ್ಪಾದನೆ 129 ದಶಲಕ್ಷ ಟನ್ನುಗಳ ಉದ್ದೇಶಿತ ಗುರಿಗೆ ಬದಲಾಗಿ 103.6 ದಶಲಕ್ಷ ಟನ್ನುಗಳಷ್ಟಾಯಿತು. ಸುಮಾರು 19.5 ದಶಲಕ್ಷ ಹೆಕ್ಟೇರು ಹೆಚ್ಚುವರಿ ಭೂಮಿಗೆ ಹೊಸದಾಗಿ ನೀರಾವರಿ ಸೌಲಭ್ಯ ಒದಗಿಸಲಾಯಿತು. ಸಕ್ಕರೆ, ಸೆಣಬು, ಹತ್ತಿ ಮತ್ತು ಎಣ್ಣೆಕಾಳುಗಳ ಉತ್ಪಾದನೆ ಗಣನೀಯವಾಗಿ ಹೆಚ್ಚಿತಾದರೂ ವಿವಿಧ ಕೃಷಿ ಸಾಮಗ್ರಿಗಳ ಉತ್ಪಾದನೆಯ ಗುರಿಯನ್ನು ತಲುಪಲಾಗಲಿಲ್ಲ. ಆದರೆ ಹಸಿರುಕ್ರಾಂತಿಯ ಫಲಗಳಿಂದಾಗಿ ಗೋಧಿಯ ಉತ್ಪಾದನೆ ಗಣನೀಯವಾಗಿ ಹೆಚ್ಚಿತು. ಈ ಅವಧಿಯಲ್ಲಿ ಸುಮಾರು 16 ದಶಲಕ್ಷ ಹೆಕ್ಟೇರು ಭೂಮಿಯನ್ನು ಹೆಚ್ಚು ಇಳುವರಿಯ ತಳಿಗಳ ಪ್ರಯೋಗಕ್ಕೆ ಒಳಪಡಿಸಲಾಯಿತು.

ಐದನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1974–1979) : ಐದನೇ ಪಂಚವಾರ್ಷಿಕ ಯೋಜನೆಯೂ ಸಹ ಕೃಷಿಗೆ ಪ್ರಥಮಾಧ್ಯತೆ ನೀಡಿ ರೂ. 8084 ಕೋಟಿ (ಶೇಕಡ 20.5) ಗಳನ್ನು ಕೃಷಿ ಮೇಲೆ ತೊಡಗಿಸಿತು. ಈ ಯೋಜನೆ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಉದ್ದೇಶಗಳನ್ನೇ ಮುಂದುವರಿಸಿತು. ಈ ಯೋಜನೆಯಲ್ಲಿ ಸುಮಾರು 8.6 ದಶಲಕ್ಷ ಹೆಕ್ಟೇರು ಹೆಚ್ಚುವರಿ ಭೂಮಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಲಾಯಿತು. ಆಹಾರಧಾನ್ಯಗಳ ಉತ್ಪಾದನೆಯ ಉದ್ದೇಶಿತ ಗುರಿ 140 ದಶಲಕ್ಷ ಟನ್ನುಗಳಿಗೆ ಬದಲಾಗಿ 126 ದಶಲಕ್ಷ ಟನ್ನುಗಳಿಗೇರಿತು. ಎಣ್ಣೆಕಾಳು ಮತ್ತು ಬೇಳೆ ಕಾಳುಗಳು, ರಸಗೊಬ್ಬರ ಮತ್ತು ಅಧಿಕ ಇಳುವರಿ ಬಿತ್ತನೆ ಬೀಜಗಳ ಉತ್ಪಾದನೆಯಲ್ಲಿ ನಿರೀಕ್ಷಿತ ಗುರಿ ತಲುಪಲಾಗಲಿಲ್ಲ. ಆದರೆ ಕಬ್ಬಿನ ಉತ್ಪಾದನೆಯಲ್ಲಿ ಗುರಿ ತಲುಪವುದು ಕಷ್ಟವಾಗಲಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಐದನೇ ಯೋಜನೆಯ ಸಾಧನೆ ಅಷ್ಟೇನೂ ಸಮಾಧಾನಕರವಾಗಿರಲಿಲ್ಲ. ಹವಾಮಾನದ ವೈಪರೀತ್ಯಗಳು ಈ ಯೋಜನಾವಧಿಯಲ್ಲಿ ಪ್ರಮುಖ ತೊಡಕಾಗಿದ್ದವು.

ಆರನೇ ಪಂಚವಾರ್ಷಿಕ ಯೋಜನೆಯ ಸಾಧನೆಗಳು (1980–85) : ಈ ಅವಧಿಯಲ್ಲಿ ಆಹಾರಧಾನ್ಯಗಳ ಉತ್ಪಾದನೆ 126 ದಶಲಕ್ಷ ಟನ್ನುಗಳಿಂದ ಯೋಜನೆಯ ಅಂತ್ಯದ ವೇಳೆ 146 ದಶಕಲಕ್ಷ ಟನ್ನುಗಳಿಗೇರಿತು. ಹೊಸದಾಗಿ 11 ದಶಲಕ್ಷ ಹೆಕ್ಟೇರು ಭೂಮಿಗೆ

ವಿಷಯ:-05

ಧನ್ವಂತರೀಯಮ್
ಆಯುರ್ವೇದ ಮತ್ತು
ಆರೋಗ್ಯ ವಿಜ್ಞಾನಗಳು

THEME:-05

DHANVANTAREEYAM
AYURVEDA AND HEALTH SCIENCES

ಕಾಲೇಜು ಮಟ್ಟದ ಯುವ ಮಹಿಳೆಯರಲ್ಲಿ ದೇಹ ರಚನೆ, ಹಿಡಿತ ಶಕ್ತಿ ಹಾಗೂ ಮೂಳೆ ಗುಣಗಳ ಕುರಿತು ಒಂದು ಅಧ್ಯಯನ

* ಡಾ. ಗಜಾನನ ಪ್ರಭು ಬಿ., ** ಡಾ. ಶಿವಮೂರ್ತಿ ಎ, *** ಕು. ತಂಗಾರಾಣಿ

* ಸಹಾಯಕ ಪ್ರಾಧ್ಯಾಪಕರು, *** ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ದೈಹಿಕ ಶಿಕ್ಷಣ ಸಂಶೋಧನಾ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. ** ದೈಹಿಕ ಶಿಕ್ಷಣ ನಿರ್ದೇಶಕರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ,

ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಚಟುವಟಿಕೆ ಯುಕ್ತ ಮತ್ತು ಚಟುವಟಿಕೆ ರಹಿತ ಯುವ ಮಹಿಳೆಯರ ನಡುವಿನ ದೇಹದ ದ್ರವ್ಯರಾಶಿ ಸೂಚಿ, ಪ್ರಬಲ ಕೈಯ ಹಿಡಿತ ಶಕ್ತಿ ಹಾಗೂ ಮೂಳೆಯ ಗುಣಗಳನ್ನು ಹೋಲಿಸುವುದು ಪ್ರಸಕ್ತ ಅಡ್ಡ ಭೇದ ಅಧ್ಯಯನದ ಉದ್ದೇಶವಾಗಿರುತ್ತದೆ. ಯುವ ಹುಡುಗಿಯರ ಜೀವನದಲ್ಲಿ ದೈಹಿಕ ಚಟುವಟಿಕೆ ಹಾಗೂ ಕ್ರೀಡೆಗಳಿಗೆ ಇರುವ ಮಹತ್ವದ ಬಗೆಗಿನ ಅರಿವಿಗೆ ಈ ಅಧ್ಯಯನದ ಫಲಿತಾಂಶವು ಪುಷ್ಠಿ ಒದಗಿಸುತ್ತದೆ. ಬಾಲ್ಯ ಮತ್ತು ಪ್ರೌಢವಸ್ಥೆಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಮೂಳೆಯ ತೂಕಕ್ಕೂ ಮುಂಬರುವ ಜೀವನದ ಹಂತಗಳಲ್ಲಿ ಎದುರಾಗುವ ಅಸ್ಥಿ ರಂಧ್ರತೆ (ಓಸ್ಟಿಯೋಪೊರೋಸಿಸ್)ಗೂ ಸಹ ಸಂಬಂಧವಿರುವುದನ್ನು ಸಾಕ್ಷ್ಯಾಧಾರಗಳು ಸೂಚಿಸುತ್ತವೆ. ಎಲ್ಲಾ ವಯೋಮಾನದಲ್ಲಿಯೂ ಮೂಳೆಯ ತೂಕ ಹೆಚ್ಚಿಸಿಕೊಳ್ಳಲು ಅಥವಾ ಕಾಪಾಡಿಕೊಳ್ಳಲು ದೈಹಿಕ ಚಟುವಟಿಕೆಗಳ ಪ್ರಸಕ್ತತೆಯನ್ನು ಹಲವು ಅಧ್ಯಯನಗಳು ಪ್ರತಿಪಾದಿಸಿವೆ. ಆರೋಗ್ಯ ಮತ್ತು ಭವಿಷ್ಯ ಜೀವನ ಅವಕಾಶಗಳಲ್ಲಿ ದೈಹಿಕ ಚಟುವಟಿಕೆಗಳಿಂದಾಗುವ ಲಾಭದ ಅರಿವಿದ್ದರೂ ಪ್ರೌಢವಸ್ಥೆಯಲ್ಲಿ ಬಹುತೇಕರು ಪ್ರಚಲಿತ ದೈಹಿಕ ಚಟುವಟಿಕೆ ಹಾಗೂ ಸಾರ್ವಜನಿಕ ಆರೋಗ್ಯ ಶಿಫಾರಸುಗಳನ್ನು ಪರಿಪಾಲಿಸುವುದಿಲ್ಲ. ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಕಾಲೇಜಿಗೆ ಹೋಗುವ 18 ರಿಂದ 20 ವಯೋವರ್ಗದ ತೊಂಬತ್ತೆರಡು ಯುವ ಮಹಿಳೆಯರು ಭಾಗವಹಿಸಿದ್ದರು. ಅದರಲ್ಲಿ ನಲವತ್ತೇಳು ಹುಡುಗಿಯರು ಅಂತರ ಕಾಲೇಜು ಕ್ರೀಡಾಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರಾಗಿದ್ದು, ಇನ್ನುಳಿದ 45 ಹುಡುಗಿಯರು ಯಾವುದೇ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿರಲಿಲ್ಲ. ದೇಹದ ದ್ರವ್ಯರಾಶಿ ಸೂಚಿಯನ್ನು ಕಂಡುಹಿಡಿಯಲು ನಿಂತ ಎತ್ತರ ಮತ್ತು ತೂಕವನ್ನು ಅಳೆಯಲಾಯಿತು. ಕೈಯ ಹಿಡಿತ ಶಕ್ತಿ ಮಾಪಕದ ಸಹಾಯದಿಂದ ಸಾಮಾನ್ಯ ಕುಳಿತ ಸ್ಥಿತಿಯಲ್ಲಿ ಪ್ರಬಲ ಕೈಯ ಹಿಡಿತ ಶಕ್ತಿಯನ್ನು ಮಾಪನ ಮಾಡಲಾಯಿತು. ಪ್ರತಿ ವಿದ್ಯಾರ್ಥಿನಿಯ ಹಿಮ್ಮಡಿಗಳಲ್ಲಿ ಕಂಡು ಬರುವ ದ್ವಿಪಕ್ಷೀಯ ಕ್ಯಾಲ್ಕೀನಿಯ ಮೂಳೆಗಳನ್ನು ಪರಿಮಾಣ ಸಂಬಂಧಿ ಶ್ರವಣಾತೀತ ಸಾಂದ್ರತಾ ಮಾಪಕ (ಕ್ವಾಂಟಿಟೇಟಿವ್ ಅಲ್ಟ್ರಾಸೌಂಡ್ ಡೆನ್ಸಿಟೋಮೀಟರ್)ದ ಸಹಾಯದಿಂದ ಪರೀಕ್ಷಿಸಲಾಯಿತು. ಎರಡು ಗುಂಪುಗಳನ್ನು ಹೋಲಿಸಲು ವಿವರಣಾತ್ಮಕ ಸಂಖ್ಯಾಶಾಸ್ತ್ರ ತಂತಗಳ ಜೊತೆಗೆ 't' ಪರೀಕ್ಷೆಯನ್ನು ಕೈಗೊಳ್ಳಲಾಯಿತು. ಚಟುವಟಿಕೆ ಯುಕ್ತ ಮತ್ತು ಚಟುವಟಿಕೆ ರಹಿತ ಕಾಲೇಜು ಮಟ್ಟದ ಯುವ ಮಹಿಳೆಯರಲ್ಲಿ ಹಿಡಿತ ಶಕ್ತಿ ಮತ್ತು ಮೂಳೆ ಗುಣಗಳಲ್ಲಿ ಮಹತ್ವದ ವ್ಯತ್ಯಾಸ ಕಂಡು ಬಂದಿರುವುದಾಗಿ ಫಲಿತಾಂಶ ಸೂಚಿಸುತ್ತದೆ. ಪ್ರಬಂಧದಲ್ಲಿ ಫಲಿತಾಂಶವನ್ನು ಸವಿವರವಾಗಿ ಚರ್ಚಿಸಲಾಗಿದೆ ಹಾಗೂ ಗೋಚರಿಸಿರುವ ಕೊರತೆಗಳನ್ನು ನೀಗಿಸಲು ವ್ಯಾಯಾಮ ಉಪಾಯಗಳನ್ನು ಉಲ್ಲೇಖಿಸಿದೆ.

ಪ್ರಮುಖ ಪದಗಳು: ಮೂಳೆ ಗುಣಮಟ್ಟ, ಪರಿಮಾಣ ಸಂಬಂಧಿ ಶ್ರವಣಾತೀತ ಸಾಂದ್ರತೆ, ವ್ಯಾಯಾಮ, ಅಸ್ಥಿ ರಂಧ್ರತೆ, ದೇಹದ ರಚನೆ, ದೇಹದ ದ್ರವ್ಯರಾಶಿ ಸೂಚಿ, ಕೈಯ ಹಿಡಿತ ಶಕ್ತಿ.

ಪೀಠಿಕೆ : ಸಾಮಾನ್ಯವಾಗಿ ಹೆಣ್ಣು ಮಕ್ಕಳಲ್ಲಿ ದಿನ ನಿತ್ಯದ ಕಾರ್ಯಗಳ ನಿರ್ವಹಣೆಯಿಂದ ಸೇವಿಸುವ ಆಹಾರ ಮತ್ತು ದೈಹಿಕ ಚಟುವಟಿಕೆಗಳ ನಡುವೆ ಸರಿಯಾದ ಸಮತೋಲನವನ್ನು ಕಾಣಬಹುದು. ಆದರೆ ಸೇವಿಸುವ ಆಹಾರ ಮತ್ತು ದೈಹಿಕ ಚಟುವಟಿಕೆಗಳ ನಡುವಿನ ಸಮ ತೋಲನವಿಲ್ಲದೇ ಇದ್ದಾಗ ದೇಹದ ತೂಕಕ್ಕೆ ಸಂಬಂಧಿಸಿದ ಸಮಸ್ಯೆಗಳು ಉದ್ಭವಿಸುತ್ತವೆ. ದೈಹಿಕ ದಾರ್ಢ್ಯತೆ ಹೆಚ್ಚಿಸಿಕೊಳ್ಳುವಲ್ಲಿ, ದೇಹದಲ್ಲಿನ ಬೊಜ್ಜು ಕಡಿತಗೊಳಿಸುವಿಕೆ, ಹೃದಯ ಸಂಬಂಧಿ ಕಾಯಿಲೆಗಳ ತಡೆಗಟ್ಟುವಿಕೆ ಮೂಳೆಯ ಆರೋಗ್ಯದಲ್ಲಿ ವೃದ್ಧಿ ಹಾಗೂ ಖಿನ್ನತೆ ಮತ್ತು ಉದ್ವೇಗ ನಿರ್ವಹಣೆಯಲ್ಲಿ ದೈಹಿಕ ಚಟುವಟಿಕೆಯು ಪ್ರಮುಖ ಪಾತ್ರ ವಹಿಸುತ್ತದೆ [1]. ಯುವಕ ಯುವತಿಯರಲ್ಲಿ ದೈಹಿಕ ಚಟುವಟಿಕೆಗಳ ಪ್ರಭಾವವು ಅತ್ಯಂತ ಹೆಚ್ಚಾಗಿರುವುದನ್ನು ಅಧ್ಯಯನಗಳು ಸ್ಪಷ್ಟ ಪಡಿಸುತ್ತವೆ. ಅದರಲ್ಲಿಯೂ ಚಟುವಟಿಕೆ ರಹಿತ ಜೀವನ ಕ್ರಮ ಪಾಲಿಸುವವರಲ್ಲಿ ನಿರಂತರ ದೈಹಿಕ ಚಟುವಟಿಕೆಯಿಂದ ಆರೋಗ್ಯ ಸಂಬಂಧಿ ಲಾಭಗಳು ಅತ್ಯಂತ ಹೆಚ್ಚು ಕ್ರಯಬದ್ಧ ದೈಹಿಕ ಚಟುವಟಿಕೆಯಿಂದ ಹೆಣ್ಣು ಮಕ್ಕಳ ಬಲವು ಗಣನೀಯವಾಗಿ ವೃದ್ಧಿಯಾಗಿರುವುದು ದೃಢಪಟ್ಟಿದೆ.

ದೈಹಿಕ ಚಟುವಟಿಕೆಗಳಿಂದ ಆರೋಗ್ಯದ ಮೇಲಾಗುವ ಲಾಭಗಳ ಅರಿವಿದ್ದರೂ ಸಾಕ್ಷ್ಯಾಧಾರಗಳ ಪ್ರಕಾರ ಯುವ ಜನತೆಯು ಸಾರ್ವಜನಿಕ ಆರೋಗ್ಯ ಶಿಫಾರಸ್ಸುಗಳ ಸೂಚಿತ ಮಟ್ಟದಲ್ಲಿ ದೈಹಿಕ ಚಟುವಟಿಕೆಯನ್ನು ಕೈಗೊಳ್ಳುತ್ತಿಲ್ಲ ([2],[3],[4],[5]).

ಜಗತ್ತಿನಾದ್ಯಂತ ಜನಸಂಖ್ಯೆ ಹೆಚ್ಚುತ್ತಿದ್ದಂತೆ ಹಾಗೂ ವಯಸ್ಸಾಗುತ್ತಿದ್ದಂತೆ ಅಸ್ಥಿರಂಧ್ರತೆ (ಓಸ್ಟಿಯೋಪೊರೋಸಿಸ್) ಎಂಬ ಭೌಗೋಳಿಕ ಆರೋಗ್ಯ ಸಮಸ್ಯೆಯು ವ್ಯಾಪಕವಾಗಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿದೆ [6]. ಅಸ್ಥಿರಂಧ್ರತೆಯಲ್ಲಿ ಮುಳೆಗಳ ತೂಕವು ಕ್ಷೀಣಿಸುತ್ತದೆ ಹಾಗೂ ಮೂಳೆ ಅಂಗಾಂಶದಲ್ಲಿ ಕ್ಷೀಣವಾಗುವಿಕೆಯನ್ನು ಗಮನಿಸುತ್ತೇವೆ. ಇದರಿಂದ ಮೂಳೆಗಳು ಬಲಹೀನಗೊಂಡು ಮೂಳೆ ಮುರಿತಕ್ಕೆ ತುತ್ತಾಗುವುದು [7]. ಈ ಸಮಸ್ಯೆಯಿಂದ ಬಳಲುತ್ತಿರುವವರ ಸಂಖ್ಯೆಯು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚುತ್ತಿದೆ. ಅಧ್ಯಯನಗಳ ಪ್ರಕಾರ ವ್ಯಕ್ತಿ ಭವಿಷ್ಯದಲ್ಲಿನ ಅಸ್ಥಿರಂಧ್ರತೆಯ ಅಪಾಯವು ಬಾಲ್ಯಾವಸ್ಥೆ ಹಾಗೂ ಯೌವನಾವಸ್ಥೆಯಲ್ಲಿ ಗಳಿಸಿರುವ ಮೂಳೆ ಪ್ರಮಾಣದ ಮೇಲೆ ಅವಲಂಬಿತವಾಗಿರುತ್ತದೆ. ಅಸ್ಥಿರಂಧ್ರತೆಯನ್ನು ತಡೆಗಟ್ಟಲು ಜೀವನ ಶೈಲಿಯಲ್ಲಿ ಮಾರ್ಪಾಡು ಮಾಡುವುದು ಒಂದು ತಂತ್ರವೆಂದು ನಂಬಲಾಗಿದೆ.

ಮೂಳೆಯ ಸಾಂದ್ರತೆಯು ಮುಖ್ಯವಾಗಿ ಉತ್ವತ್ತಿಯಿಂದ ನಿರ್ಧರಿಸಲ್ಪಟ್ಟರೂ, ಆಹಾರ ಪೋಷಣೆ, ದೈಹಿಕ ಚಟುವಟಿಕೆ, ಭಾರ ಹೇರುವಿಕೆ

ಚರ್ಚೆ: ಬಹಳ ಹಿಂದಿನಿಂದಲೂ ಹಿಡಿತ ಬಲವನ್ನು ಒಟ್ಟಾರೆ ದೇಹದ ಬಲ ಸೂಚ್ಯಂಕವೆಂದೆ ಪರಿಗಣಿಸಲಾಗಿದೆ. ಹಿಡಿತ ಬಲದಲ್ಲಿ ಅಧ್ಯಯನ ಕ್ಕೊಳಪಟ್ಟಿರುವ ಎರಡು ಗುಂಪುಗಳ ನಡುವೆ ಅಂಕಿ ಅಂಶಗಳ ಆಧಾರದ ಮೇಲೆ ವಿಶೇಷ ವ್ಯತ್ಯಾಸವಿದೆ ಎಂದು ಫಲಿತಾಂಶ ಸೂಚಿಸು ತ್ತದೆ. ಚಟುವಟಿಕೆ ಭರಿತ ಯುವ ಹುಡುಗಿಯರು ಚಟುವಟಿಕೆ ರಹಿತ ಹುಡುಗಿಯರಿಗಿಂತ ಹೆಚ್ಚು ಬಲವನ್ನು ಹೊಂದಿರುವುದು ಸ್ಪಷ್ಟವಾಗಿದೆ. ಫಲಿತಾಂಶದಲ್ಲಿ ಕಂಡು ಬಂದಿರುವ ವಿಶೇಷ ವ್ಯತ್ಯಾಸವು ದೈಹಿಕ ಚಟುವಟಿಕೆ ಹಾಗೂ ಕ್ರೀಡೆಗಳಲ್ಲಿ ಭಾಗವಹಿಸುವುದರಿಂದಾಗಿರಬಹುದು. ಸ್ನಾಯುಗಳ ಬಲವು ದಿನ ನಿತ್ಯದ ಚಟುವಟಿಕೆಗಳನ್ನು ಪರಿಣಾಮಕಾರಿ ಯಾಗಿ ನಿರ್ವಹಿಸಲು ಅವಶ್ಯಕ. ಎಳೆಯ ವಯಸ್ಸಿನಲ್ಲಿಯೇ ಆಟೋಟ ಗಳ ರೂಪದಲ್ಲಿ ಹೆಚ್ಚಿನ ಚಟುವಟಿಕೆಗಳನ್ನು ನೀಡುವುದರಿಂದ ಮುಂದಿನ ಜೀವನದಲ್ಲಿ ದೈಹಿಕ ಕಾರ್ಯಕ್ಷಮತೆಯನ್ನು ಕಾಯ್ದುಕೊಂಡು ಹೋಗಬಹುದು.

ಈ ಅಧ್ಯಯನದ ಪ್ರಕಾರ ಚಟುವಟಿಕೆ ಭರಿತ ಕಾಲೇಜು ಮಟ್ಟದ ಯುವ ಹುಡುಗಿಯರಲ್ಲಿ ಮೂಳೆಯ ಆರೋಗ್ಯವು ಚೆನ್ನಾಗಿರುತ್ತದೆ. ಹಾರಾ ಮತ್ತು ಇತರರು (2001) ಕೈಗೊಂಡಿರುವ ಅಧ್ಯಯನದ ಪ್ರಕಾರ ಪ್ರೌಢಶಾಲಾ ಮಟ್ಟದಿಂದಲೇ ನಿರಂತರವಾಗಿ ತೀವ್ರತೆ ಹೆಚ್ಚಿರುವ ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಹೆಚ್ಚಿನ ಮೂಳೆ ತೂಕವನ್ನು ಪಡೆಯಬಹುದಾಗಿದೆ. ಡುಪ್ಪೆ ಮತ್ತು ಇತರರು (1997) ನಡೆಸಿರುವ ಅಧ್ಯಯನದ ಫಲಿತಾಂಶದ ಪ್ರಕಾರ ನೈಜ ಜೀವನ ಕ್ರಮದಲ್ಲಿ ಹೆಚ್ಚಿನ ದೈಹಿಕ ಚಟುವಟಿಕೆಯನ್ನು ಕೈಗೊಳ್ಳುವುದರಿಂದ ಮೂಳೆ ಸಾಂದ್ರತೆಯ ಮೇಲೆ ಸಕಾರಾತ್ಮಕ ಪರಿಣಾಮಗಳಾಗುತ್ತವೆ. ಗರಿಷ್ಠ ಪ್ರಮಾಣದ ಮೂಳೆ ಸಾಂದ್ರತೆ ಹೊಂದಲು ಮೂಳೆಗಳು ಬೆಳೆಯುತ್ತಿರುವ ವಯೋಮಾನದಲ್ಲಿ ವ್ಯಾಯಾಮ ಮಾಡಬೇಕು. ತದನಂತರವೂ ವ್ಯಾಯಾಮವನ್ನು ಮುಂದುವರೆಸುವುದರಿಂದ ಜೀವನದ ಮುಂದಿನ ದಿನಗಳಲ್ಲಿ ಮೂಳೆ ತೂಕ ಕಳೆದುಕೊಳ್ಳುವುದನ್ನು ಕನಿಷ್ಠಗೊಳಿಸಬಹುದು (ಚಾನ್, ಆ್ಯಂಡರ್‌ಸನ್ ಮತ್ತು ಲಾವ್, 2003)

ಉಪಸಂಹಾರ: ಸ್ನಾಯುಬಲ ಮತ್ತು ಮೂಳೆ ಆರೋಗ್ಯವನ್ನು ವೃದ್ಧಿಸಿ ಕೊಳ್ಳಲು ಕಾಲೇಜು ಮಟ್ಟದ ಯುವ ಹುಡುಗಿಯರು ಕ್ರೀಡೆ ಮತ್ತು ಆಟೋಟಗಳನ್ನು ಒಳಗೊಂಡಿರುವ ಜೀವನ ಶೈಲಿಯನ್ನು ಪಾಲಿಸಬೇಕು.

1. Physical Activity Guidelines Advisory Committee (2008) Physical Activity Guidelines Advisory Committee Report, 2008. Washington, DC, Department of Health and Human Services.
2. Eaton DK, Kann L, Kinchen S, Ross J, Hawkins J, Harris WA, Lowry R, McManus T, Chyen D, Shanklin S, Lim C, Grunbaum JA & Wechsler H (2006) Youth risk behavior surveillance – United States, 2005. MMWR Surveill Summ 55(5): 1–108.
3. Fogelholm M, Paronen O & Miettinen M (2007) Physical Activity – A Possibility for Welfare Policy. The State and Development of Health-Enhancing Physical Activity in Finland. Helsinki, Ministry of Social Affairs and Health.
4. Tammelin T, Nayha S, Hills AP & Jarvelin MR (2003) Adolescent participation in sports and adult physical activity. Am J Prev Med 24(1): 22–28.
5. Whitt-Glover MC, Taylor WC, Floyd MF, Yore MM, Yancey AK & Matthews CE (2009) Disparities in physical activity and sedentary behaviors among US children and adolescents: prevalence, correlates, and intervention implications. J Public Health Policy 30: S309.
6. Delmas, P.D., Fraser, M. (1999) "Strong bones in later life: luxury or necessity?" Bull World Health Organ 1999, 77:416-422.
7. Lane, J.M., Riley, E.H. and Philip, Z., Osteoporosis: Diagnosis and treatment, Journal of Bone and Joint Surgery 78 (1996) 618-632.
8. Russell, G. (2003) "Pathogenesis of osteoporosis." In: Hochberg MC, Silman AJ, Smolen JS, Weinblatt ME, Weisman MH, editors. Rheumatology. 3rd edition. Edinburgh: Mosby;.p.2075-80.
9. Tamci, S., Aksu, A. C., Gulbahar, S., Bircan, C., Ozlem, El., Kizil, R., Sahin, E., Akalin, E., & Alper, S. (2009). Hand grip strength is related to bone mineral density in male athletes. World of Osteoporosis, 15, 66-9.
10. Tan, J., Cubukcu, S., and Sepici, V. (1998) Relationship between bone mineral density of the proximal femur and strength of hip muscles in postmenopausal women. American Journal of Physical and Medical Rehabilitation;77:477-82.
11. Hara, S., Yanagi, H., Amagai, H., Endoh, K., Tsuchiya, S., & Tomura, S. (2001). Effect of physical activity during teenage years, based on type of sport and duration of exercise, on bone mineral density of young, premenopausal Japanese women. Calcified tissue international, 68(1), 23-30.
12. Duppe, H., Gardsell, P., Johnell, O., Nilsson, B.E., & Ringsberg, K. (1997). Bone mineral density, muscle strength and physical activity. Acta Orthopaedica, 68(2), 97-103.

ಹಾಗೂ ೭ಹಿ ಎಂ.ಜಿ/ಕೆ.ಜಿ ೨೬ ಗೇಜ್‌ಸೂಜಿಯನ್ನು ಬಳಸಿ ದಿನಬಿಟ್ಟು ದಿನದಂತೆ ೩ ಬಾರಿ ಇಲಿಗಳಿಗೆ ಒಳಚರ್ಮ (ಇಂಟ್ರಾಪೆರಿಟೋನಿಯಮ್) ಮಾರ್ಗವಾಗಿ ನೀಡಲಾಯಿತು. ಈ ಸಮಯದಲ್ಲಿ ಸೂಕ್ತ ಮಾಧ್ಯಮವನ್ನು ಬಳಸಲಾಯಿತು. ಇಲಿಗಳ ಜೀವಿತಾವಧಿಯನ್ನು ಗಮನಿಸಬೇಕು.

ಪೆರಿಟೋನಿಯಲ್ ಆಂಜಿಯೋಜೆನೆಸಿಸ್ ಪರೀಕ್ಷೆ ಹಾಗೂ ಹೆಚ್ & ಇ ಸ್ಟೇನಿಂಗನಿಂದ ಹೊಸರಕ್ತನಾಳಗಳ ಸಾಂದ್ರತೆ ವಿಶ್ಲೇಷಣೆ : ಒಳಚರ್ಮ (ಪೆರಿಟೋನಿಯಮ್)ದಲ್ಲಿ ಹೊಸರಕ್ತನಾಳಗಳ ಬೆಳವಣಿಗೆ ನಿಯಂತ್ರಣವನ್ನು ಗೆಡ್ಡೆ ಪ್ರೇರಿತ ಚಿಕಿತ್ಸೆಗೆ ಒಳಪಟ್ಟ ಹಾಗೂ ಚಿಕಿತ್ಸೆಗೆ ಒಳಪಡದ ಇಲಿಗಳಲ್ಲಿ ವಿಶ್ಲೇಷಿಸಿ ಛಾಯಾಗ್ರಹಿಸಲಾಯಿತು.

ಫಾರ್ಮಲ್‌ಡಿಹೈಡ್‌ನಲ್ಲಿಟ್ಟ ಪೆರಿಟೋನಿಯಮ್ ಅನ್ನು ಹೆಚ್ & ಇ ಸ್ಟೇನಿಂಗ್‌ಗೆ ಹೊಸರಕ್ತನಾಳಗಳ ಸಾಂದ್ರತೆ ತಿಳಿಯಲು ಲಾರೆನ್ಸ್ ಮತ್ತು ಮೇರೆಗ್ ಸೂಕ್ಷ್ಮದರ್ಶಕ ಬಳಸಿ ಒಳಪಡಿಸಲಾಯಿತು.

ಲಿಪಿಡ್ ಪೆರಾಕ್ಸಿಡೇಸ್ ಪರೀಕ್ಷೆ (ಅಸ್ಸೆ) : ಚಿಕಿತ್ಸೆಗೆ ಬಳಸಿರುವ ರಾಸಾಯನಿಕಗಳಿಂದ ಯಕೃತ್ತಿಗೆ ಆಗುವ ಹಾನಿಯನ್ನು ಪರೀಕ್ಷಿಸಲಾಯಿತು. ಯಕೃತ್ತನ್ನು ಅರೆದು ದ್ರವವನ್ನು ಸಾರಗುಂದಿ ಟಿ.ಬಿ.ಎ. ನೊಂದಿಗೆ ಬೆರೆಸಿ ೨೦ ನಿಮಿಷ ಕುದಿಯುವ ನೀರಿನಲ್ಲಿಟ್ಟು ಕಾಯಿಸಲಾಯಿತು ಹಾಗೂ ಇದರಿಂದಾಗುವ ಬಣ್ಣ ಬದಲಾವಣೆಯನ್ನು ೫೩೫ ಎನ್.ಎಂ. ಬೆಳಕಿನ ಸಾಂದ್ರತೆಯಲ್ಲಿ ಗಮನಿಸಿದೆವು.

ಫಲಿತಾಂಶ : ಪ್ರಸ್ತುತ ಅಧ್ಯಯನದಲ್ಲಿ ಇ.ಎ.ಸಿ. ಕೋಶಗಳನ್ನು ಬಳಸಲಾಗಿದೆ. ಈ ಕೋಶಗಳನ್ನು ಇಲಿಗಳಲ್ಲಿ ಪರಿಚಯಿಸುವ ಮೂಲಕ ಅವುಗಳನ್ನು ಅರ್ಬುದ ಪ್ರೇರಿತವನ್ನಾಗಿಸಲಾಯಿತು. ಕೆಲವನ್ನು ಗಮನಿಕೆಗೆ ಬಿಟ್ಟು ಇನ್ನೂ ಕೆಲವು ಇಲಿಗಳಿಗೆ ವಿವಿಧ ಬೆಂಜೋಫೀನೋನ್ ಸಾಧಿತಗಳನ್ನು ದಿನಬಿಟ್ಟು ದಿನ ೭ಹಿಎಂ.ಜಿ/ದೇಹ ತೂಕ ನಂತೆ ನಾಲ್ಕನೇ ದಿನದಿಂದ ನೀಡಲಾಯಿತು. ಪ್ರತೀ ದಿನವೂ ಇಲಿಗಳ ದೇಹ ತೂಕವನ್ನು ಬರೆದಿಟ್ಟುಕೊಳ್ಳಲಾಯಿತು. ಇದರಿಂದ ತಿಳಿದು ಬಂದ ಫಲಿತಾಂಶದ ಪ್ರಕಾರ, ಗಮನಿಕೆಗೆ ಬಿಟ್ಟ (ಚಿಕಿತ್ಸೆ ನೀಡದ) ಇಲಿಗಳ ದೇಹ ತೂಕವನ್ನು ಏರಿಕೆಯಾಗಿದ್ದು, ಚಿಕಿತ್ಸೆಗೆ ಒಳಪಟ್ಟ ಇಲಿಗಳಲ್ಲಿ ಬೆಂಜೋಫೀನೋನ್ ಸಾಧಿತ-೧ ಪರಿಚಯಿಸಿದ ಇಲಿಗಳ ತೂಕ ಶೇ.೮೧ರಷ್ಟು ಗಣನೀಯ ಇಳಿಕೆ ಕಂಡಿದ್ದು, ಈ ಸಂಯುಕ್ತದ ಪ್ರಸರಣ ವಿರೋಧಿ ಹಾಗೂ ಕೋಶ ವಿಷಕಾರಿ (ಸೈಟೋಟಾಕ್ಸಿಕ್)ಗುಣವನ್ನು ಸಾಬೀತುಪಡಿಸಿದೆ.

- ಬೆಂಜೋಫೀನೋನ್ ಸಾಧಿತವು ನವನಾಳಗಳ ಬೆಳವಣಿಗೆ ಹಾಗೂ ಗೆಡ್ಡೆ ಜೀವಕೋಶಗಳ ಬೆಳವಣಿಗೆಯನ್ನು ಇಲಿಗಳಲ್ಲಿ ತಡೆಯುವ ಅಂಶವಾಗಿದೆ.

ನವನಾಳಗಳ ಉತ್ಪಾದನೆ ಅಥವಾ ಸೂಕ್ಷ್ಮರಕ್ತನಾಳಗಳ ಸಾಂದ್ರತೆಯನ್ನು ಸಾಮಾನ್ಯವಾಗಿ ರೋಗ ಪತ್ತೆ ಹಚ್ಚುವ ಮಾಪನವಾಗಿ ಅರ್ಬುದದಲ್ಲಿ ಬಳಸಲಾಗುತ್ತದೆ.

ಸೂಕ್ತ ರಕ್ತನಾಳಗಳ ಸಾಂದ್ರತೆ ಹೆಚ್ಚುವಿಕೆ ಗೆಡ್ಡೆಗಳ ಬೆಳವಣಿಗೆಯ ಮೇಲೆ ನೇರ ಪ್ರಭಾವ ಬೀರುತ್ತದೆ, ಈ ಕಾರಣದಿಂದಾಗಿ ರಕ್ತನಾಳಗಳ ಪ್ರತಿಬಂದಿಸುವಿಕೆಯ ಗೆಡ್ಡೆಕೋಶಗಳ ಬೆಳವಣಿಗೆ ನಿಯಂತ್ರಿಸುತ್ತದೆ. ಹೊಸರಕ್ತನಾಳಗಳ ಬೆಳವಣಿಗೆಯನ್ನು ಗೆಡ್ಡೆ ಪ್ರೇರಿತ ಇಲಿಗಳ ಒಳಚರ್ಮ (ಪೆರಿಟೋನಿಯಮ್)ದಲ್ಲಿ ಕಾಣಬಹುದು. ಆದ್ದರಿಂದ ಇಲಿಗಳ ಒಳಚರ್ಮ (ಪೆರಿಟೋನಿಯಮ್)ದಲ್ಲಿ ಕಾಣಬಹುದು. ಆದ್ದರಿಂದ ಇಲಿಗಳ ಪೆರಿಟೋನಿಯಮ್ ಹೊಸರಕ್ತನಾಳ ಅಧ್ಯಯನಕ್ಕೆ ಸೂಕ್ತ ಮಾದರಿಯಾಗಿದೆ.

ಈ ಕಾರಣವಾಗಿ ಬೆಂಜೋಫೀನೋನ್ ಸಾಧಿತ-೧ ರಿಂದ ಚಿಕಿತ್ಸೆಗೆ ಒಳಪಟ್ಟ ಇಲಿಗಳ ಪೆರಿಟೋನಿಯಮ್‌ನ್ನು ಹೊಸರಕ್ತನಾಳಗಳ ಬೆಳವಣಿಗೆಯ ಬಗೆಗಿನ ಕಲಿಕೆಗಾಗಿ ಪರೀಕ್ಷಿಸಲಾಯಿತು. ಇದರಿಂದ ತಿಳಿದು ಬಂದ ಪ್ರಕಾರ ಬೆಂಜೋಫಿನೋನ್ ಸಾಧಿತ-೧ ರಿಂದ ಚಿಕಿತ್ಸೆ ನೀಡಿದ ಗೆಡ್ಡೆ ಪ್ರೇರಿತ ಇಲಿಗಳು ಚಿಕಿತ್ಸೆ ನೀಡದ ಇಲಿಗಳ ಹೋಲಿಕೆಯಲ್ಲಿ ಕಡಿಮೆ ಹೊಸರಕ್ತನಾಳಗಳನ್ನು ಹೊಂದಿದೆ ಹಾಗೂ ಹೆಚ್ & ಇ ಪರೀಕ್ಷೆಯಿಂದ ಕಂಡುಬಂದ ಪ್ರಕಾರ ಚಿಕಿತ್ಸೆ ನೀಡದ ಇಲಿಗಳಲ್ಲಿ ಚಿಕಿತ್ಸೆಗೆ ಒಳಪಟ್ಟ ಇಲಿಗಳ ಹೋಲಿಕೆಯಲ್ಲಿ ಹೊಸ ರಕ್ತನಾಳಗಳ ಸಾಂದ್ರತೆ ಹೆಚ್ಚಾಗಿರುವುದು ಕಾಣುತ್ತದೆ. ಇದರಿಂದ ತಿಳಿಯುವುದೇನೆಂದರೆ ಬೆಂಜೋಫೀನೋನ್ ಸಂಯುಕ್ತಗಳು ಪ್ರಾಥಮಿಕವಾಗಿ ನಿರ್ನಾಳ ಭಾಗದ ಕೋಶಗಳ ಮೇಲೆ ಪ್ರಭಾವ ಬಿರುತ್ತದೆ ಹಾಗೂ ಈ ಪ್ರಕಾರವಾಗಿ ಹೊಸ ರಕ್ತನಾಳಗಳ ಬೆಳವಣಿಗೆ ನಿಲ್ಲಿಸುತ್ತದೆ.



ಗಮನಿಕೆಗೆ ಬಿಟ್ಟ ಇಲಿ
(ಚಿಕಿತ್ಸೆ ನೀಡದ)



ಸಾಮಾನ್ಯ ಇಲಿ



ಚಿಕಿತ್ಸೆಗೆ ಒಳಪಟ್ಟ ಇಲಿ

ಗೆಡ್ಡೆಕೋಶಗಳ ಬೆಳವಣಿಗೆಗೆ ಹೊಸರಕ್ತನಾಳಗಳು ಅತಿಮುಖ್ಯವಾಗಿರುವ ಕಾರಣ, ನಮ್ಮ ಬೆಂಜೋಫೀನೋನ್ ಸಾಧಿತ-೧ ಇವುಗಳನ್ನು ನಿಯಂತ್ರಿಸುವ ಮೂಲಕ ಗೆಡ್ಡೆಕೋಶಗಳನ್ನು ನಿಯಂತ್ರಿಸುತ್ತದೆ ಹಾಗೂ ಈ ಸಂಯುಕ್ತವು ದ್ರವರೂಪದ ಅರ್ಬುದ (ಅಸೈಟಿಸ್) ಗಣನೀಯವಾಗಿ ಕಡಿಮೆಗೊಳಿಸಿದೆ. ಇದು ಕೂಡ ನವನಾಳಗಳ ಅವಲಂಬಿತವಾಗಿದ್ದು, ಗೆಡ್ಡೆಕೋಶಗಳಿಗೆ ಇದು ನೇರವಾಗಿ ಪೋಷಕಾಂಶವನ್ನು ನೀಡುತ್ತದೆ. ದ್ರವ ರೂಪದ ಅರ್ಬುದದ ಪ್ರಮಾಣ ಹೆಚ್ಚಿದಂತೆಲ್ಲಾ ಗೆಡ್ಡೆ ಜೀವಕೋಶಗಳಿಗೆ ಪೋಷಕಾಂಶವು ಭರಪೂರವಾಗಿ ಸಿಗುತ್ತದೆ. ಈ ಕಾರಣದಿಂದಾಗಿ ಅವುಗಳ ಬೆಳವಣಿಗೆ ಕೂಡ ಹೆಚ್ಚುತ್ತದೆ. ಆದ್ದರಿಂದ ದ್ರವರೂಪದ ಅರ್ಬುದದ ಪ್ರಮಾಣ ಇಳಿಕೆ ಗೆಡ್ಡೆ ಜೀವಕೋಶಗಳನ್ನು ನಿಯಂತ್ರಿಸುತ್ತದೆ.

ನಮ್ಮ ಪರೀಕ್ಷೆಗಳ ಪ್ರಕಾರ ಬೆಂಜೋಫಿನೋನ್ ಸಾಧಿತ-೧ ದ್ರವ

೧) ಶೂಕಧಾನ್ಯ ವರ್ಗ
೨) ಶಿಂಬೀಧಾನ್ಯ ವರ್ಗ

ಮಾಂಸವರ್ಗ:

೧) ವಿಷ್ಕಿರ, ಪ್ರತುದ, ಬಿಲೇಶಯ, ಪ್ರಸಹ, ಜಾಂಗಲ, ಆನೂಪ, ಜಲೀಯ, ಇತ್ಯಾದಿ

ಮತ್ಸ್ಯವರ್ಗ:

೧) ರೋಹಿಷ, ಪಾಠೀನ, ಪಾಟಲ, ರಾಜೀವ, ವರ್ಮಿ, ಗೋಮತ್ಸ್ಯ, ಕೃಷ್ಣ ಮತ್ಸ್ಯ, ವಾಗುಂಜಾರ, ಮುರಲ, ಸಹಸ್ರದಂಷ್ಟ್ರ, ಆದಿ

ಶಾಕವರ್ಗ:

೧) ಗರ್ಜರ, ಪಲಾಂಡು, ಲಶುನ, ಉಪೋದಿಕಾ, ತರ್ಕಾರಿ, ಕೂಷ್ಮಾಂಡ, ವಿರ್ವಾರು

ಫಲವರ್ಗ:

೧) ದಾಡಿಮ, ಆಮಲಕೀ, ಬದರ, ಕೋಲ, ಕರ್ಕಂಧು ಆವಿ.

ದ್ರವದ್ರವ್ಯಗಳು:

೧) ಜಲವರ್ಗ – ಗಾಂಗೋದಕ, ನದೀಜಲ, ಕೂಪಜಲ, ತಡಾಗಜಲ
೨) ದುಗ್ಧವರ್ಗ – ಗೋಧುದ್ಧ ನಾರೀದುಗ್ಧ, ಮಾಹಿಷ, ಉಷ್ಟ್ರ, ಹಯದುಗ್ಧ, ಆದಿ
೩) ಮೂತ್ರವರ್ಗ – ಗೋಮೂತ್ರ, ಹಯಮೂತ್ರ, ಅವಿಮೂತ್ರ, ಗಜಮೂತ್ರ
೪) ಗೋರಸವರ್ಗ – ದುಗ್ಧ, ದಧಿ, ನವನೀತ, ಘೃತ, ತಕ್ರ, ದಧಿಮಂಡ
೫) ಇಕ್ಷುವರ್ಗ
೬) ತೈಲವರ್ಗ – ಏರಂಡ ತೈಲ, ಅತಸೀ ತೈಲ, ಸರ್ಷಪ ತೈಲ, ವಿಭೀತಕೀ ತೈಲ
೭) ಸ್ನೇಹ ವರ್ಗ – ವಸಾ, ಮಜ್ಜಾ, ತೈಲ, ಘೃತ
೮) ಮದ್ಯವರ್ಗ – ಸುರಾ, ವಾರುಣೀ, ಯವಸುರಾ, ಅರಿಷ್ಟ, ದ್ರಾಕ್ಷಾಮದ್ಯ, ಸೀಧು, ಶುಕ್ತ, ಆಸುತಿ, ಶಾಂಡಾಕೀ, ಕಾಂಜೀ
೯) ಲವಣ ವರ್ಗ – ಸೈಂಧವ, ಸಾಮುದ್ರ, ಬಿಡ, ಔದ್ಭಿದ, ಸೌವರ್ಚಲ
೧೦) ಕೃತಾನ್ನ ವರ್ಗ – ಮಂಡ, ಪೇಯ, ವಿಲೇಪಿ, ಯೂಷ ಕೃತ, ಅಕೃತ, ಮಾಂಸರಸ, ರಸಾಲಾ, ಪಾನಕ, ಲಾಜಾ ಸಕ್ತು, ಪಿಣ್ಯಾಕ, ವೇಸವಾರ, ರೋಚೀ,

ಶೂಕಧಾನ್ಯ ವರ್ಗ

೧) ರಕ್ತಶಾಲಿ
೨) ಮಹಾಶಾಲಿ
೩) ಕಲಮ
೪) ಶಕುನ
೫) ತೂರ್ಣಕ
೬) ದೀರ್ಘಶೂಕ
೭) ಗೌರ
೮) ಕಲಾಂಗುಲ
೯) ಲೋಹವಾಲ
೧೨) ಸಾರಿವಾ
೧೩) ಪ್ರಮೋದಕ
೧೪) ಪತಂಗ
೧೫) ತಪನೀಯ

ಶೂಕಧಾನ್ಯಗಳ ಸಾಮಾನ್ಯ ಗುಣಗಳು

೧) ಶೀತಗುಣವುಳ್ಳದ್ದು
೨) ಮಧುರರಸವುಳ್ಳದ್ದು
೩) ಮಧುರ ವಿಪಾಕವುಳ್ಳದ್ದು
೪) ಅಲ್ಪಮಾರುತ – ವಾತವನ್ನು ಹೆಚ್ಚಾಗಿ ಪ್ರಕೋಪ ಮಾಡುವುದು
೫) ಮೂಲಬದ್ಧತೆ ಹಾಗೂ ಅಲ್ಪ ಮಲಪನ್ನುಂಟು ಮಾಡುವುದು
೬) ಸ್ನಿಗ್ಧ ಗುಣವುಳ್ಳದ್ದು
೭) ಬೃಂಹಣ
೮) ಶುಕ್ರ ಹಾಗೂ ಮೂತ್ರಗಳನ್ನು ಹೆಚ್ಚಿಸುವುದು (Aphrodisiac & diuretic)

ರಕ್ತ ಶಾಲಿಯಗುಣಗಳು – ಶ್ರೇಷ್ಠವು, ತೃಷ್ಣಾಹರವು, ಪುರೀಷ, ಮೂತ್ರ ಹಾಗೂ ಸ್ವೇದಗಳನ್ನು ಕಡಿಮೆ ಮಾಡುವುದು. ಮಹಾಶಾಲಿಯ ಗುಣಗಳು, ಷಷ್ಟಿಕ – ರಕ್ತಶಾಲಿಯ ಗುಣಗಳನ್ನು ಹೊಂದಿರುವುದು.
ಯುವಕ, ಹಾಯನ ಪಾಂಸು– ಶಾಲಿಯ ಗುಣಗಳು
ಷಷ್ಟಿಕ, ಗೌರ, ಕೃಷ್ಣ ಶಾಲಿಯ ಗುಣ

೧) ಶೀತ ವೀರ್ಯವುಳ್ಳದ್ದು
೨) ಸ್ನಿಗ್ಧವು
೩) ಲಘು–ಪಚನಕ್ಕೆ ಲಘುವಾದುದು
೪) ಮಧುರಸ ಸಂಯುಕ್ತ
೫) ತ್ರಿದೋಷಹರ
೬) ಸ್ಥಿರಗುಣಯುಕ್ತ

ವರಕ, ಉದ್ದಾಲಕ, ಚೀನ, ಶಾರದ, ಉಜ್ವಲ, ದರ್ಮರ, ಗಂಧನಾ, ಕುರುವಿಂದಾ – ಇವು ಷಷ್ಟಿಕ ಶಾಲಿಯಂತೆ ಅಲ್ಪಗುಣವುಳ್ಳದ್ದು

ವ್ರೀಹಿದಾನ್ಯದ ಗುಣಗಳು:

೧) ಮಧುರರಸ
೨) ಅಮ್ಲವಿಪಾಕ
೩) ಪಿತ್ತಕಾರಕಗಳು
೪) ಪಚನಕ್ಕೆ ಗುರುವಾದುದು

ಪಾಟಲ ದಾನ್ಯಗಳು

೧) ಮೂತ್ರವನ್ನು ಹೆಚ್ಚಿಸುವುದು
೨) ಮಲವನ್ನು ಹೆಚ್ಚಿಸುವುದು
೩) ಉಷ್ಣಗುಣವುಳ್ಳದ್ದು
೪) ತ್ರಿದೋಷಕಾರಕವು

ಕೋರದೂಷ, ಶ್ಯಾಮಕಗಳ ಗುಣಗಳು

೧) ಕಷಾಯ, ಹಾಗೂ ಮಧುರ ರಸಯುಕ್ತ
೨) ಪಚನಕ್ಕೆ ಲಘುವಾದುದು
೩) ಶೋಥಕಾರಕ
೪) ವಾತಕಾರಕ
೫) ಕಫಪಿತ್ತಹರ
೬) ಶೀತವೀರ್ಯ
೭) ಗ್ರಾಹಿ

ಹಸ್ತಿಶ್ಯಾಮಕ, ನೀವಾರ, ತೋಯವರ್ಣ, ಗವೇಧುಕ, ಪ್ರಶಾಂತಿಕಾ, ಅಂಭಶ್ಯಾವಾಕ, ಲೋಹಿತ, ಅಣುಪ್ರಿಯಂಗು, ಮುಕುಂದ, ಝಂಟಿಗಮೂರ್ಟಿ, ವರುಕ, ವರಕ, ಶಿಬಿರ, ಉತ್ಕಟ, ಜೂರ್ಣಪ್ಲಾ, ಶ್ಯಾಮಾಕ ಧಾನ್ಯದ ಸದೃಶ ಗಣಾಯುಕ್ತವು.

೧೨) ಗುಲ್ಮ (Abdominal lump)
೧೩) ಘೃತವ್ಯಾಪತ್ (Disorders produced due to excessive ghee in take)
೧೪) ಗರವಿಷ (Chronic poisoning)
೧೫) ಪಾಂಡುರೋಗ (Anaemia)

ದಧಿ ಮಂಡದ ಗುಣಗಳು (ಮಸ್ತು)
೧) ಸರ (Makes Feels flowing)
೨) ಸ್ರೋತಃಶೋಧಿ (Opening the channels)
೩) ವಿಷ್ಟಂಭಜಿತ್ (Alliviates constipation)
೪) ಲಘು

ನವನೀತ (ಬೆಣ್ಣೆಯ ಗುಣಗಳು)
೧) ಹೊಸತಾದರೆ ವೃಷ್ಯ
೨) ಶೀತಗುಣವುಳ್ಳದ್ದು
೩)ವರ್ಣ (Complexion) ಬಲ (Strength) ಅಗ್ನಿ (Digestive power) ಗಳನ್ನು ವರ್ಧಿಸುವುದು
೪) ಸಂಗ್ರಾಹಿ (Reduces diarhola)
೫) ವಾತ ಹಾಗೂ ಪಿತ್ತಹರ
೬) ರಕ್ತರೋಗದಲ್ಲಿ ಉಪಯುಕ್ತ
೭) ಕ್ಷಯರೋಗದಲ್ಲಿ ಉಪಯುಕ್ತ (Emaciation)
೮) ಅರ್ಶರೋಗ ಉಪಯುಕ್ತ (Haemorrhodes)
೯) ಅರ್ದಿತ (Facial Palsy)
೧೦) ಕಾಸ (Cough)

ಹಾಲಿನಿಂದ ತೆಗೆದ ಬೆಣ್ಣೆಯ ಗುಣಗಳು
೧) ಸಂಗ್ರಾಹಿ
೨) ರಕ್ತ ಪಿತ್ತಹರ
೩) ನೇತ್ರರೋಗಗಳಲ್ಲಿ ಉಪಯುಕ್ತ

ಕಿಲಾಟದ ಗುಣಗಳು
೧) ಬಲಕಾರಕ
೨) ಶುಕ್ರವರ್ಧಕ
೩) ನಿದ್ರಾಪ್ರದ
೪) ವಿಷ್ಟಂಭ
೫) ಗುರುವಾದುದು
೬) ದೋಷಗಳನ್ನುಂಟು ಮಾಡುವುದು

ಕೃತಾನ್ನವರ್ಗ (ಪಥ್ಯಾನ್ನ ವರ್ಗ)
ಅಕ್ಕಿಯ ಮಂಡದ ಗುಣಗಳು (Watery gruel)
೧) ವಾತಾನುಲೋಮನ
೨) ಅತಿಯಾದ ನೀರಡಿಕೆಯನ್ನು ಪೋಗಲಾಡಿಸುವುದು
೩) ಗ್ಲಾನಿ (Mental faligue) ಹರ
೪) ದೋಷಶೇಷಘ್ನ – ಉಳಿದ ದೋಷ ನಾಶಕ
೫) ಪಾಚನ
೬) ಧಾತು ಸಾಮ್ಯಕಾರಕ
೭) ಸೊತೋಮಾರ್ದವಕಾರಕ
೮) ಸ್ವೇದಕಾರಕ
೯) ಅಗ್ನಿಯನ್ನು ವೃದ್ಧಿಸುವುದು. (ಹಸಿವೆಯನ್ನು ಹೆಚ್ಚು ಮಾಡುವುದು)

ಪೇಯಾದ ಗುಣಗಳು (Soft gruel)
೧) ಹಸಿವೆಯನ್ನು ಪೋಗಲಾಡಿಸುವುದು
೨) ತೃಟ್‌ಹರ
೩) ಗ್ಲಾನಿ ನಾಶಕ
೪) ದೌರ್ಬಲ್ಯಹರ
೫) ಕುಕ್ಷಿರೋಗ ಹರವು
೬) ಜ್ವರಹರ
೭) ಮಲಾನುಲೋಮನ (ಮಲವನ್ನು ಪೊರಹಾಕುವುದು)
೮) ಪಥ್ಯ
೯) ದೀಪನ
೧೦) ಪಾಚನ

ವಿಲೇಪೀಯ ಗುಣಗಳು (Gruel)
೧)ಗ್ರಾಹಿ (ಪಚನ ಮಾಡಿ ಮಲಬದ್ಧತೆಯನ್ನು ಉಂಟು ಮಾಡುವುದು – ಅತಿಸಾರದಲ್ಲಿ)
೨) ಹೃದ್ಯ
೩) ತೃಷ್ಣಾಪರ
೪) ದೀಪನ
೫) ಹಿತಕರವು
೬) ವ್ರಣಪರ
೭) ಕಣ್ಣಿನ ರೋಗಗಳಲ್ಲಿ ಉಪಯುಕ್ತ
೮) ಶೋಧನೆ ಮಾಡಿಕೊಂಡವರಿಗೆ ಹಿತಕರವು
೯) ದುರ್ಬಲರಲ್ಲಿ ಹಿತಕರ'
೧೦) ಸ್ನೇಹಸೇವನೆ ಮಾಡಿರುವಲ್ಲಿ ಹಿತಕರವು

ಅನ್ನ (ಭಾತ್)ನ ಗುಣಗಳು (Boiled Rice)
ಚೆನ್ನಾಗಿ ತೊಳೆದು ನೀರು ಸೇರಿಸಿ ಬೇಯಿಸುವ ಅನ್ನವು ಈ ಕೆಳಗಿನ ಗುಣಗಳನ್ನು ಹೊಂದಿರುವುದು.
೧) ಲಘು
೨) ಔಷಧ ಸೇರಿಸಿ ತಯಾರಿಸಿ ಅನ್ನವು ಗುರು ಗುಣವುಳ್ಳದ್ದು
೩) ಹಾಲು, ಮಾಂಸಗಳಿಂದ ತಯಾರಿಸಿದವುಗಳು ಕೂಡಾ ಗುರು ಗುಣವುಳ್ಳದ್ದು ಹಗೂ ಔಷಧಿಗುಣವುಳ್ಳದ್ದು ಆಗಿರುವುದು.

ಮಾಂಸರಸದ ಗುಣಗಳು:
೧) ಬೃಂಹಣ
೨) ಪ್ರೀಣನ
೩) ವೃಷ್ಯ
೪) ಚಕ್ಷುಷ್ಯ
೫) ವ್ರಣಹರ

ಚರ್ಚೆ: ಆಯುರ್ವೇದದಲ್ಲಿ ಮುಖ್ಯವಾಗಿ ಘನ ಹಾಗೂ ದ್ರವದ್ರವ್ಯ ಎಂದು ಎರಡು ವರ್ಗಗಳಾಗಿ ಆಹಾರ ದ್ರವ್ಯಗಳ ವಿವರಣೆ ದೊರೆಯುವುದು. ಘನ ದ್ರವ್ಯಗಳು – ಧಾನ್ಯವರ್ಗ, ಶಾಕವರ್ಗ, ಮಾಂಸವರ್ಗ ಹಾಗೂ ದ್ರವ ದ್ರವ್ಯಗಳು, ದುಗ್ಧವರ್ಗ, ಇಕ್ಷುವರ್ಗ, ಮಧುವರ್ಗ, ದ್ರವ್ಯವರ್ಗ, ಮೂತ್ರವರ್ಗ, ಸ್ನೇಹವರ್ಗ, ತೈಲವರ್ಗಗಳ ವಿತರಣೆ ದೊರೆಯುವುದು. ಇಲ್ಲಿ ವಿಭಿನ್ನ ತರಹದ ದ್ರವ್ಯಗಳ ವರ್ಗೀಕರಣ, ಗುಣದೋಷಗಳು, ಕರ್ಮ, ಹಾಗೂ ಔಷದೀಯ ಪ್ರಯೋಗವನ್ನು ವಿವರಿಸಲಾಗಿದೆ. ಕೆಲವೊಂದು

ಬರುವ ಗಂಭೀರ ಸಮಸ್ಯೆ. ಇದಕ್ಕೆ ಸರಿಯಾದ ಔಷಧೋಪಚಾರ ಇಲ್ಲವೇ ಸೂಕ್ತ ಸಮಯದಲ್ಲಿ ಕೀವನ್ನು ಶಸ್ತ್ರಚಿಕಿತ್ಸಾ ವಿಧಾನಗಳಿಂದ ತೆಗೆಯದ ಪಕ್ಷದಲ್ಲಿ ಗುಣಪಡಿಸಲು ಸಾಧ್ಯವಿಲ್ಲ.

ಪುಪ್ಪು ಸುರಿತ ಅಥವಾ ನ್ಯುಮೋನಿಯಾ ಎಂಬ ಶ್ವಾಸಕೋಶದ ರೋಗದಿಂದ ಅಳ್ಳೆಪರೆಯಲ್ಲಿ ಕೀವಾಗುವುದು ಸಾಮಾನ್ಯ. ಆದರೆ ನಮ್ಮ ದೇಶದಲ್ಲಿ ಕ್ಷಯರೋಗ ಅಥವಾ ಟ್ಯುಬರ್‌ಕ್ಯುಲೋಸಿಸ್‌ನಿಂದ ಎದೆಗೂಡಿನ ಒಳಗೀವಾಗುವ ಸಂಭವವೇ ಅಧಿಕ ಚಿಕಿತ್ಸೆ ನೀಡಿದರೂ, ನೀಡದಿದ್ದರೂ ಈ ರೋಗದಿಂದ ರೋಗಿಗಳು ನರಳುವುದು ಮತ್ತು ಸಾವನ್ನಪ್ಪುವುದು ಸಹಜ.

ಅಮೇರಿಕನ್ ಥೊರಾಸಿಕ್ ಸೊಸೈಟಿಯು ಈ ಎದೆಗೂಡಿನ ಒಳಗೀವಿನ ರೋಗವನ್ನು ಮೂರು ಹಂತಗಳಲ್ಲಿ ವಿವರಿಸಿದೆ. ಅವೆಂದರೆ,

1. ಮೊದಲ ಹಂತವಾದ ಸೋನೆ ಕೀವಿನ ಹಂತ ಅಥವಾ ಎಕ್ಸುಡೇಟಿವ್ ಫೇಸ್

2. ಎರಡನೆಯದಾದ ತಂತುಕೀವಿನ ಹಂತ ಅಥವಾ ಫಿಬ್ರಿನೋಪುರು ಲೆಂಟ್ ಫೇಸ್

3. ಮತ್ತು ಮೂರನೆಯ ಹಂತವಾದ ವ್ಯವಸ್ಥಿತ ರಚನೆಯ ಹಂತ ಅಥವಾ ಆರ್ಗನೈಸ್ಡ್ ಫೇಸ್.

ಸೋನೆಕೀವಿನ ಹಂತವು ಮೊದಲ 48 ಗಂಟೆಗಳ ವರೆಗೆ ಇರಬಹುದು ನಂತರ ಕೀವು ಘನೀಕೃತಗೊಳ್ಳುತ್ತಾ ಎರಡನೇ ಹಂತ ಮತ್ತು ಮೂರನೇ ಹಂತಕ್ಕೆ ತಲುಪುತ್ತದೆ. ಎರಡನೇ ಹಂತದಲ್ಲಿ ನಾರಿನಂತಹ ಪರರಗಳು ಏರ್ಪಟ್ಟು ಅಳ್ಳೆಪರೆಯಲ್ಲಿ ಜೇನುಗೂಡಿನಂತಹ ರಚನೆಯುಂಟಾಗಿ ಅವುಗಳ ಕೋಣೆಗಳೊಳಗೆ ಕೀವು ಸೇರಿಕೊಳ್ಳುತ್ತದೆ. ಕೊನೆಯ ಹಂತದಲ್ಲಿ ಮತ್ತಷ್ಟು ಘನೀಕೃತಗೊಂಡು ಇದು ತೊಗಟೆಯ ರೀತಿಯಲ್ಲಿ ಒಂದು ಪದರವಾಗಿ ಮಾಪಘಟ್ಟು ಶ್ವಾಸಕೋಶದ ಸುತ್ತಲೂ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ ಇದರಿಂದ ಶ್ವಾಸಕೋಶದ ಹಿಗ್ಗುವಿಕೆಗೆ ತೊಂದರೆಯಾಗುತ್ತದೆ. ಮೊದಲನೇ ಹಂತಕ್ಕೆ ಕೇವಲ ಔಷಧೋಪಚಾರ ಅಥವಾ ಸೂಜಿ ಮೂಲಕವೋ ಇಲ್ಲಿವೆ ಬಸಿಗೊಳವೆ ಮೂಲಕವೂ ಕೀವನ್ನು ತೆಗೆದು ಚಿಕಿತ್ಸೆ ನೀಡಬಹುದಾಗಿದೆ ಕೊನೆಯ ಘನೀಕೃತಗೊಂಡ ಹಂತಕ್ಕೆ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇದೆ.

ಆದರೆ ಈ ರೀತಿ ಜೇನುಗೂಡಿನ ರಚನೆಯಾಕಾರದಲ್ಲಿರುವ ಎರಡನೇ ಹಂತವಾದ ತಂತುಕೀವಿನ ಹಂತದ ಎಡೆಗೂಡಿನ ಒಳಗೀವಿಗೆ ಕೇವಲ ಔಷಧೋಪಚಾರವೋ, ಸೂಜಿಯ ಮೂಲಕ ಅಥವಾ ಪಕ್ಕೆಲು ನಡುವಣ ಬಸಿಗೊಳವೆಯಿಂದ ಕೀವನ್ನು ತೆಗೆಯುವುದೋ ಅಥವಾ ಸಣ್ಣ ರಂಧ್ರಗಳ ಮೂಲಕ ಮಾಡುವ ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆಯೇ ಸೂಕ್ತವೋ ಎನ್ನುವುದು ಇನ್ನೂ ವಿವಾದಾತ್ಮಕವಾಗಿದೆ.

ಪಕ್ಕೆಲು ನಡುವಣ ಬಸಿಗೊಳವೆ ಚಿಕಿತ್ಸೆ ಹಾಗು ಔಷಧೋಪಚಾರಗಳ ಚಿಕಿತ್ಸೆಯ ಅಗ್ಗದ, ಚಿಕಿತ್ಸೆ, ಆದರೆ ಚಿಕಿತ್ಸೆ ಫಲಕಾರಿಯಾಗದಿದ್ದಲ್ಲಿ ಕೊನೆಗೆ ರೋಗಿಯನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಬೇಕಾಗುತ್ತದೆ. ಶಸ್ತ್ರಚಿಕಿತ್ಸೆಯು ಸ್ವಲ್ಪ ದುಬಾರಿಯಾದರೂ ಒಂದೇ ಬಾರಿ ಸಂಪೂರ್ಣವಾಗಿ ಕೀವನ್ನು ತೆಗೆದು ರೋಗಿಯನ್ನು ಬೇಗ ಗುಣಪಡಿಸಬಹುದಾಗಿದೆ. ನಮ್ಮ ಈ ಅಧ್ಯಯನದಲ್ಲಿ ಎರಡೂ ವಿಧವಾದ ಚಿಕಿತ್ಸೆಗಳ ನಂಬೆ, ರೋಗಪ್ರಮಾಣ, ಆಸ್ಪತ್ರೆಯ ಒಟ್ಟು ವೆಚ್ಚ ಚಿಕಿತ್ಸೆಯ ಇತರ ದುಷ್ಪಣಾಮಗಳು ಮತ್ತು ಚಿಕಿತ್ಸೆಯ ವಿಫಲತೆ ಮುಂತಾದ ನಿಯತಾಂಕಗಳ ಆಧಾರದ ಮೇಲೆ ಹೋಲಿಕೆ ನಡೆಸಿ ಫಲಿತಾಂಶವನ್ನು ತರಲಾಗಿದೆ.

ಎದೆಗೂಡು ದರ್ಶಕದ ಶಸ್ತ್ರಚಿಕಿತ್ಸೆ : ವೀಡಿಯೋ ಅಸಿಸ್ಟೆಡ್ ಥೊರಕೋಸ್ಕೋಪಿಕ್ ಸರ್ಜರಿ (ವ್ಯಾಟ್ಸ್–VATS)

1990 ರಲ್ಲಿ ಎದೆಗೂಡಿಗೆ ಸಣ್ಣರಂಧ್ರಗಳ ಮೂಲಕ ನಡೆಸುವ ಶಸ್ತ್ರಚಿಕಿತ್ಸಾ ವಿಧಾನಗಳನ್ನು ಕಂಡುಹಿಡಿದ ನಂತರ, ಎದೆಗೂಡಿನ ಅನೇಕ ಸಮಸ್ಯೆಗಳಿಗೆ ಇದೇ ವಿಧಾನದಲ್ಲಿ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ. ಸಣ್ಣ ರಂಧ್ರದ ಮೂಲಕ ತೂರಿಸಬಹುದಾದ ಎದೆಗೂಡು ದರ್ಶಕ (ಕ್ಯಾಮರಾ) ದಿಂದ ಸಂಪೂರ್ಣವಾಗಿ ಎದೆಗೂಡನ್ನು ವೀಕ್ಷಿಸಬಹುದಾಗಿದೆ. ಇನ್ನು ಎರಡು ಅಥವಾ ಮೂರು ರಂಧ್ರಗಳ ಸಹಾಯದಿಂದ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಬಳಸಿ, ಸೂಕ್ತವಾದ ಚಿಕಿತ್ಸೆಯನ್ನು ನೀಡಬಹುದಾಗಿದೆ. ಅರವಳಿಕೆ ಔಷಧಿಗಳ ಸಹಾಯದಿಂದ ರೋಗಿಯು ಸಂಪೂರ್ಣ ಪ್ರಜ್ಞಾಹೀನನಾದಾಗ ರೋಗಸ್ಥ ಭಾಗವು ಮೇಲೆ ಬರುವಂತೆ ಒಂದೆಡೆಗೆ ತಿರುಗಿಸಿ ಮಲಗಿಸಲಾಗುತ್ತದೆ. ನಂತರ ಗಂಟಲು ಕೊಳವೆಯ ಸಹಾಯದಿಂದ ಅರೆವಳಿಕಾ ತಜ್ಞರು ಕೇವಲ ಒಂದು ಭಾಗದ ಶ್ವಾಸಕೋಶವನ್ನು ರೋಗಗ್ರಸ್ಥ ಎದೆಗೂಡಿನ ಶ್ವಾಸಕೋಶಕ್ಕೆ ಗಾಳಿ ಹೋಗದಂತೆ ನೋಡಿಕೊಳ್ಳುತ್ತಾರೆ. ಈ ರೀತಿ ಕುಗ್ಗಿದ ಶ್ವಾಸಕೋಶದ ಭಾಗದಲ್ಲಿರುವ ಎದೆಗೂಡಿಗೆ ಪಕ್ಕೆಲು ನಡುವೆ ಸಣ್ಣ ರಂಧ್ರದ ಮೂಲಕ ಎದೆಗೂಡು ದರ್ಶಕವನ್ನು ಸೇರಿಸಲಾಗುತ್ತದೆ.

ನಂತರ ತ್ರಿಕೋನಾಕಾರದಲ್ಲಿ ದರ್ಶಕದ ಸಹಾಯದಿಂದಲೇ ಇನ್ನೆರಡು ರಂಧ್ರಗಳನ್ನು ಮಾಡಿ ಅದರೊಳಗೆ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಸೇರಿಸಲಾಗುತ್ತದೆ. ಇದರಿಂದ ಉಪಕರಣಗಳಿಂದ ಶ್ವಾಸಕೋಶಕ್ಕೆ ಉಂಟಾಗಬಹುದಾದಂತಹ ತೊಂದರೆಗಳನ್ನು ತಪ್ಪಿಸಬಹುದಾಗಿದೆ. ಅಳ್ಳೆಪೊರೆ ಗೂಡಿನಲ್ಲಿ ಯಾವ ಹಂತದ ರೋಗವಿದೆ ಎಂದು ಖಚಿತ ಪಡಿಸಿ, ಹೀರುಕೊಳವೆಯ ಸಹಾಯದಿಂದ ಕೀವನ್ನುಸಂಪೂರ್ಣವಾಗಿ ತೆಗೆಯಬಹುದಾಗಿದೆ. ರೋಗವು ತಂತುಕೀವಿನ ಹಂತದಲ್ಲಿದ್ದರೆ, ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಬಳಸಿ, ತಂತುರಚನೆಯನ್ನು ಭೇದಿಸಿ, ಕೀವನ್ನು ತೆಗೆಯಲಾಗುತ್ತದೆ. ಆದರೆ ರೋಗವು ಮೂರನೇ ಹಂತದಲ್ಲಿದ್ದರೆ ಕೆಲವೊಮ್ಮೆ ಥೊರಾಟಮಿ ಅಥವಾ ಎದೆಗೂಡು ಕೊಯ್ಸೀಳಿಕೆ ಶಸ್ತ್ರಚಿಕಿತ್ಸೆ ನಡೆಸಿ, ತೊಗಟೆಯನ್ನು ಶ್ವಾಸಕೋಶದಿಂದ ಬೇರ್ಪಡಿಸಬೇಕಾಗುತ್ತದೆ.



ಎದೆಗೂಡು ದರ್ಶಕದ ಕೊಳವೆಗಳನ್ನು ಸೇರಿಸುವ ಜಾಗಗಳು



ಪಕ್ಕೆಲು ನಡುವಣ ಬಸಿಗೊಳವೆಯನ್ನು ರೋಗಿಗಳ ಎದೆಗೂಡಿನಲ್ಲಿ ಇರಿಸಿದ ಸರಾಸರಿ

ಆಸ್ಪತ್ರೆಯ ಒಟ್ಟು ಸರಾಸರಿ ವೆಚ್ಚವು 'ಅ' ಗುಂಪಿನಲ್ಲಿ 17,945 ರೂ.ಗಳಾದರೆ 'ಬ' ಗುಂಪಿನಲ್ಲಿ 10,579 ರೂ. ಗಳಾಗಿದ್ದವು. (ಪಿ.ಮೌಲ್ಯ – 0.05) ಅದಲ್ಲದೇ 'ಅ' ಗುಂಪಿನ ಶೇ. 65 ರೋಗಿಗಳಿಗೆ ಅಂದರೆ 20ರಲ್ಲಿ 13 ರೋಗಿಗಳಿಗೆ ಪಕ್ಕೆಲು ನಡುವಣ ಚಿಕಿತ್ಸೆಯು ವಿಫಲವಾಯಿತು. ಅಂದರೆ ರೋಗವನ್ನು ಸಂಪೂರ್ಣವಾಗಿ ಗುಣ ಪಡಿಸಲು ಈ ರೋಗಿಗಳನ್ನು ಪುನಃ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾ ಯಿತು. ಇದರಿಂದಾಗಿ 'ಅ' ಗುಂಪಿನ ರೋಗಿಗಳ ಆಸ್ಪತ್ರೆಯ ಸರಾಸರಿ ವೆಚ್ಚವು ಗಮನಾರ್ಹವಾಗಿ ಏರಿಕೆ ಕಂಡಿತು. 'ಅ' ಗುಂಪಿನ ರೋಗಿಗಳಲ್ಲಿ ಪಕ್ಕೆಲು ನಡುವಣ ಬಸಿಗೊಳವೆಯ ಚಿಕಿತ್ಸೆಯಿಂದ ಆದ ಇತರ ತೊಂದರೆಗಳೆಂದರೆ, ಚರ್ಮದ ಅಡಿಭಾಗದಲ್ಲಿ ಗಳಿ ತುಂಬಿಕೊಳ್ಳುವುದು, ಹಾಗು ಕೀವನ್ನು ಸಂಪೂರ್ಣವಾಗಿ ತೆಗೆಯುವುದರಲ್ಲಿ ವಿಫಲವಾಗಿ ಮುಂದೆ ಶಸ್ತ್ರಚಿಕಿತ್ಸೆಗೆ ಒಳಪಡಿಸುವುದು. ಈ ರೀತಿ ತೊಂದರೆಗಳು ಶೇ. 80ರಷ್ಟು ರೋಗಿಗಳಲ್ಲಿ ಕಂಡುಬಂದಿತು.

'ಬ' ಗುಂಪಿನ ರೋಗಿಗಳಲ್ಲಿ, ಎದೆಗೂಡು ದರ್ಶಕದ ಶಸ್ತ್ರ ಚಿಕಿತ್ಸೆಯಿಂ ದಾದ ಸಾಮಾನ್ಯ ತೊಂದರೆಗಳೆಂದರೆ ರಕ್ತಸ್ರಾವ ಮತ್ತು ಶ್ವಾಸಕೋಶದ ಗಾಳಿ ಸೋರುವಿಕೆ. ಈ ರೀತಿಯ ತೊಂದರೆಗಳು ಶೇ. 50 ರೋಗಿಗಳಲ್ಲಿ ಅಂದೆ 20ರಲ್ಲಿ 10 ರೋಗಿಗಳಲ್ಲಿ ಕಂಡುಬಂದಿತು. 'ಬ' ಗುಂಪಿನ ಚಿಕಿತ್ಸೆಯು ವಿಫಲವಾಗಿ, ಮುಂದೆ ಎದೆಗೂಡು ಕೊಯ್ತೆಎತ ಅಥವಾ ಥೊರಕಾಟಮಿ ಶಸ್ತ್ರಚಿಕಿತ್ಸೆಯ ಮೂಲಕ ರೋಗವನ್ನು ಗುಣಪಡಿಸುವ ಪರಿಸ್ಥಿ: ಶೇ.20ರಷ್ಟು ಅಂದರೆ 20ರಲ್ಲಿ 4 ರೋಗಿಗಳಿಗೆ ಒದಗಿ ಬಂದಿತ. 'ಅ' ಮತ್ತು 'ಬ' ಗುಂಪಿನ ರೋಗಿಗಳ ನಡುವೆ ಈ ಅಂಕಿಅಶಗಳನ್ನು ಹೋಲಿಸಿದಾಗ, 'ಅ' ಗುಂಪಿನ ಶೇ. 65ರಷ್ಟು ರೋಗಿಳಿಗೆ ಚಿಕಿತ್ಸೆ ವಿಫಲವಾದರೆ 'ಬ' ಗುಂಪಿನ ಶೇ.20ರಷ್ಟು ರೋಗಿಗಾಗೆ ಚಿಕಿತ್ಸೆ ವಿಫಲವಾಯಿತು. (ಪಿ. ಮೌಲ್ಯ–0.05) ಅದಲ್ಲದೇ 'ಅ' ಗುಪಿನ ಶೇ.80ರಷ್ಟು ರೋಗಿಗಳಿಗೆ ಚಿಕಿತ್ಸೆಯಿಂದ ಇತರ ತೊಂದಗಳಾದರೆ 'ಬ' ಗುಂಪಿನ ಶೇ. 50ರಷ್ಟು ರೋಗಿಗಳಿಗೆ ಚಿಕಿತ್ಸೆಯಿದ ತೊಂದರೆಗಳಾಯಿತು. (ಪಿ.ಮೌಲ್ಯ–0.05) ಅಧ್ಯಯನದ ಅವಧಿಯಲ್ಲಿ ಎರಡೂ ಗುಂಪುಗಳಲ್ಲಿ ಮರಣದ ಪ್ರಮಾಣ 0%



ಶಸ್ತ್ರಚಿಕಿತ್ಸೆಯಿಂದಾಗಬಹುದಾದ ತೊಂದರೆಗಳು

ಚರ್ಚೆ : ತಂತುಕೀವಿನ ಹಂತದ ಎದೆಗೂಡಿನ ಒಳಕೀವಿಗೆ ಸರಿಯಾದ ಚಿಕಿತ್ಸೆಯಾವುದು ಎಂಬುದು ಇನ್ನೂ ವಿವಾದಾತ್ಮಕ ವಿಷಯವಾಗಿದೆ. ಔಷಧೋಪಚಾರದಿಂದ ಗುಣಪಡಿಸುವುದೋ, ಸೂಜಿ ಅಥವಾ ಪಕ್ಕೆಲು ನಡುವಣ ಬಸಿಗೊಳವೆಯನ್ನು ಬಳಸಿ ಕೀವು ತೆಗೆಯುವುದೋ, ಅಥವಾ ಎದೆಗೂಡು ದರ್ಶಕದ ಸಹಾಯದಿಂದ ಶಸ್ತ್ರಚಿಕಿತ್ಸೆಯ ಮೂಲಕ ರೋಗ ಮುಕ್ತರನ್ನಾಗಿಸುವುದೋ ಎಂಬ ವಿಚಾರಗಳ ಮೇಲೆ ಇನ್ನೂ ಚರ್ಚೆಗಳು ನಡೆಯುತ್ತಿದೆ. ಈ ಅಧ್ಯಯನದಲ್ಲಿ 40 ರೋಗಿಗಳನ್ನು ಯಾದೃಚ್ಛೀಕರಿಸಿ (ರ್ಯಾಂಡಮೈಸೇಶನ್) 'ಅ' ಮತ್ತು 'ಬ' ಎಂಬ ಗುಂಪುಗಳನ್ನಾಗಿ ವಿಂಗಡಿಸಿ, ಎರಡೂ ಬಗೆಯ ಚಿಕಿತ್ಸೆಗಳನ್ನು ನೀಡಿ, ನಿರೀಕ್ಷೆಯೊಂದಿಗೆ ಅಧ್ಯಯನವನ್ನು ನಡೆಸಿದಾಗ, ಎದೆಗೂಡು ದರ್ಶಕದ ಚಿಕಿತ್ಸೆಯ ಪರವಾಗಿ ಫಲಿತಾಂಶಗಳು ದೊರಕಿವೆ. ಈ ಅಧ್ಯಯನದ ಫಲಿತಾಂಶಗಳಿಗೆ ಹಾಗೂ ಕೆಲವು ಮೊದಲೇ ನಡೆಸಿದ ಅಧ್ಯಯನಗಳ ಫಲಿತಾಂಶಗಳಿಗೆ ಬಹಳಷ್ಟು ಹೋಲಿಕೆಗಳು ಕಂಡುಬಂದಿವೆ.

ಆಸ್ಪತ್ರೆಯಲ್ಲಿ ಇರಬೇಕಾದಂತಹ ಸರಾಸರಿ ದಿನಗಳಲ್ಲಿ, 'ಬ' ಗುಂಪಿನ ರೋಗಿಗಳಲ್ಲಿ ಗಮನಾರ್ಹ ಇಳಿಕೆಯು ಕಂಡುಬಂದಿದೆ. ಇದು 1999ರಲ್ಲಿ 'ಹರ್ಟ್‌ಜೆನ್' ಮತ್ತು ಸಹಚರರು (9) ನಡೆಸಿದ ಅಧ್ಯನಕ್ಕೆ ಹೋಲಿಕೆಯಾಗಿದೆ. ವೈಟ್ ಮತ್ತು ಸಹಚರರು (10) ಹಾಗೂ ಡೋಸ್ಕಿ ಮತ್ತು ಸಹಚರರು (11) ನಡೆಸಿದ ಅಧ್ಯಯನದಂತೆ ನಮ್ಮ ಅಧ್ಯಯನದಲ್ಲೂ ಎದೆಗೂಡಿನಲ್ಲಿ ಬಸಿಕೊಳವೆ ಇದ್ದಂತಹ ಸರಾಸರಿ ದಿನಗಳಲ್ಲಿ 'ಬ' ಗುಂಪಿನ ರೋಗಿಗಳಲ್ಲೇ ಗಮನಾರ್ಹ ಇಳಿಕೆಯು ಕಂಡುಬಂದಿದೆ.

ಮುಂದುವರಿಯುತ್ತಿರುವ ದೇಶವಾದಂತಹ ಭಾರತದಲ್ಲಿ ಚಿಕಿತ್ಸೆಯ ಒಟ್ಟು ವೆಚ್ಚವೂ ಒಂದು ಮಖ್ಯವಾದ ಚರ್ಚಾಸ್ಪದ ವಿಷಯವಾಗಿದೆ. 'ಅ' ಗುಂಪಿನ ರೋಗಿಗಳ ಚಿಕಿತ್ಸೆಯ ವೆಚ್ಚವು ಅಗ್ಗವಾಗಿದ್ದರೂ, ಚಿಕಿತ್ಸೆಯ ವಿಫಲತೆಯಿಂದ ಶಸ್ತ್ರಚಿಕಿತ್ಸೆಗೆ ಒಳಗಾದವರ ಸಂಖ್ಯೆಯು ಹೆಚ್ಚಿದೆ. ಇದರಿಂದ ಒಟ್ಟು ಆಸ್ಪತ್ರೆಯ ವೆಚ್ಚದಲ್ಲಿ ಗಮನಾರ್ಹ ಏರಿಕೆಯು ಕಂಡುಬಂದಿದೆ. ಆದರೆ 'ಬ' ಗುಂಪಿನ ರೋಗಿಗಳಲ್ಲಿ ಶಸ್ತ್ರಚಿಕಿತ್ಸಾ ವೆಚ್ಚವು ಮೊದಲು ಹೆಚ್ಚಿನಿಸಿದರೂ ಚಿಕಿತ್ಸೆಯ ವೈಫಲ್ಯತೆಯು ಕಡಿಮೆ ಇದ್ದ ಕಾರಣ ಹಾಗು ಬಹುಬೇಗ ರೋಗ ಮುಕ್ತರಾದ ಕಾರಣ ಆಸ್ಪತ್ರೆಯ ಒಟ್ಟು ಸರಾಸರಿ ವೆಚ್ಚದಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿದೆ. ಚಿಕಿತ್ಸೆಯಿಂದಾದ ತೊಂದರೆಗಳನ್ನು ಹೋಲಿಸಿದಾಗ 'ಅ' ಗುಂಪಿನ ಶೇ. 80ರಷ್ಟು ರೋಗಿಗಳಲ್ಲಿ ಚರ್ಮದಡಿ ಗಾಳಿ ತುಂಬಿಕೊಳ್ಳುವುದು, ಸಂಪೂರ್ಣವಾಗಿ ಕೀವು ಬಸಿಯದೇ ಇರುವುದು ಮುಂತಾದ

ಮತ್ಸ್ಯ (ಸ್ನಿಗ್ಧ ಮೀನು), ಆವಿಮಾಂಸ (ಕುರಿಯ ಮಾಂಸ), ಆನೂಪ ಮಾಂಸ (Meat of Domestic animals), ಜಲಜ ಮಾಂಸ (Marine food)

೧೦) ಸಂಭೋಗ ಮಾಡದೇ ಇರುವುದು.

ಶರೀರದಲ್ಲಿ ಉಂಟಾಗುವ ವ್ಯತ್ಯಾಸಗಳು :

೧) ಅತಿ ಆಹಾರ ಸೇವನೆಯಿಂದ ಆಹಾರವು ಪಚನಾನಂತರ ಗ್ಲೂಕೋಸ್, ಅಮೈನೋ ಆಸಿಡ್, ಗ್ಲಿಸರೋಲ್, ಫ್ಯಾಟಿ ಆಸಿಡ್ ಆಗಿ ನಂತರ ಯಕೃತ್ತನ್ನು ಪ್ರವೇಶಿಸಿ ಅಲ್ಲಿ ಸ್ನೇಪತತ್ವ (Fat) ಆಗಿ ಜಮಾವಣೆಯಾಗುವುದು. (Fat Depot).

೨) ಅಧಿಕ ಸ್ನೇಪತತ್ವದ ನಿರ್ಮಾಣವಾಗಿ ನಂತರ ಅದು ತ್ವಚೆಯ ಅಧೋಭಾಗದಲ್ಲಿ (Subcutaeneous tissue) ಜಮಾವಣೆಯಾಗುವುದು.

೩) ಇತರ ಸ್ನೇಪತತ್ವ ಜಮಾವಣೆ ಉದರದ ಆಂತ್ರಾವರಣ ಕಲಾ (Peritoneum) ಸ್ಫಿಕ ಪ್ರದೇಶ (Buttocks), ಸ್ತನ ಪ್ರದೇಶ (Pectoral region), ಆದಿಗಳಲ್ಲಿ ಶೇಖರಣೆಯಾಗುವುದು.

೪) ವ್ಯಕ್ತಿಯಲ್ಲಿ ಶ್ರಮಶ್ವಾಸ (Exertional dyspnoea) ಪುಪ್ಪುಸದಲ್ಲಿ ವಾಯುಪೂರಣ ಕಡಿಮೆಯಾಗುವುದು (Hypoventilation) ರಕ್ತದಲ್ಲಿ ಸಕ್ಕರೆಯ ಅಂಶದ ಅಧಿಕ್ಯತೆ (Hyper glycemia), ರಕ್ತದಲ್ಲಿ ಮೇದತತ್ವದ ಅಧಿಕ್ಯ (Hyper cholestremia), ಧಮನೀ ಪ್ರತಿಚಯ (Atheroselerosis), ರಕ್ತ ಚಾಪಾಧಿಕ್ಯ (Hypertension) ಇತ್ಯಾದಿಗಳುಂಟಾಗುವುವು.

೫) ಯಕೃತ್‌ನಲ್ಲಿ ಮೇದತತ್ವದ ಜಮಾವಣೆ (Fatty Liver) ಉಂಟಾಗುವುದು.

೬) ಈ ರೋಗದಲ್ಲಿ ಮಾನಸಿಕ ಅವಸಾದ (Mental depression), ಮಧುಮೇಹ (Diabetes Mellilus), ಅಧಿಕ ರಕ್ತದೊತ್ತಡ (Hypertension) ಹೃದ್ರೋಗ (Ischaemic Heart Disease), ಸಂಧಿಗತ ವಾತ (Osteartritis), ಪಿತ್ತಾಶ್ಮರಿ (Gall Stones), ಉತ್ಥಾನ ವಾತರಕ್ತ (Peripheral Vascular Disease), ಪಕ್ಷಾಘಾತ (Stroke or Hemiplegia) ಅಧಿಕವಾಗಿ ಕಂಡು ಬರುವುದು.

ಆಯುರ್ವೇದದಲ್ಲಿ ಹೇಳಿದ ಸ್ಥೌಲ್ಯ ರೋಗದ ಅಷ್ಟ ಮಹಾದೋಷಗಳು :

೧) ಆಯುಷೋಹ್ರಾಸ	Decreased life span
೨) ಜವೋಪರೋಧ	Slow activities.
೩) ಕೃಚ್ಛ್ರವ್ಯವಾಯತಾ	Impotency
೪) ಸ್ವೇದಾಧಿಕ್ಯ	Excessive sweating
೫) ದೌರ್ಬಲ್ಯ	Weakness
೬) ದೌರ್ಗಂಧ್ಯ	Bad Odour
೭) ಕ್ಷುಧಾಧಿಕ್ಯ	Excessive hunger
೮) ಪಿಪಾಸಾಧಿಕ್ಯ	Excessive thirst

ಸಂಶೋಧನಾ ಸಾಮಗ್ರಿ ಮತ್ತು ವಿಧಾನ : ಸ್ಥೌಲ್ಯ ರೋಗದ ೩೦ ರೋಗಿಗಳನ್ನು ಮುನಿಯಾಲು ಆಯುರ್ವೇದ ಆಸ್ಪತ್ರೆ ಪಣಿಪಾಲದಿಂದ ಆರಿಸಿ ಅವರಲ್ಲಿ ಈ ಕೆಳಗಿನ ಔಷಧಿಗಳನ್ನು ೩ ತಿಂಗಳುಗಳ ವರೆಗೆ ಕೊಡಲಾಯಿತು.

೧) ಮುನಿಪ್ರಭಾ ಮಾತ್ರೆಗಳು – ೪೦೦ಮಿ ಶರೀರೋಷ್ಣ ಜಲದೊಂದಿಗೆ ದಿನಕ್ಕೆ ಮೂರು ಬಾರಿ

೨) ತ್ರಿಫಲಾವಟಿ – ೫೦೦ಮಿ ದಿನಕ್ಕೆರಡು ಬಾರಿ ಪ್ರಾತಃ, ಸಾಯಂ.

೩) ಪುನರ್ನವಾ ಮಂಡೂರ ಮಾತ್ರೆಗಳು : – 350mg ದಿನಕ್ಕೆ ೩ ಬಾರಿ

ಚಿಕಿತ್ಸಾ ಸಮಯದಲ್ಲಿ ಇತರ ವಿಚಾರಗಳು (Concomittant treatment, diet) :

೧) ದಿನಕ್ಕೆ 20 ನಿಮಿಷ ನಡೆದಾಡುವುದು (Walkng) ಆದೇಶಿಸಲಾಯಿತು.

೨) ಪಗಲು ನಿದ್ದೆಯನ್ನು ನಿಷೇದಿಸಲಾಯಿತು.

೩) ಪಥ್ಯಗಳಾದ – ಪಸಿರು ಸೊಪ್ಪು, ತರಕಾರಿಗಳು, ನಾರು ಉಳ್ಳ (Fibre Containing) ಆಹಾರ ದ್ರವ್ಯಗಳ ಸೇವನೆ.

೪) ಅಪಥ್ಯಗಳು – ಮಧುರ, ಸ್ನಿಗ್ಧ, ಸ್ನೇಪತತ್ವವುಳ್ಳ ಆಹಾರಗಳನ್ನು ಆದಷ್ಟು ಕಡಿಮೆ ಸೇವಿಸಲು ನಿರ್ದೇಶಿಸಲಾಯಿತು.

೫) ಮಾನಸಿಕ ಒತ್ತಡದಿಂದ ಬಳಲುತ್ತಿರುವ ವ್ಯಕ್ತಿಗಳಲ್ಲಿ ಧ್ಯಾನ (Meditation) ಹಾಗೂ ಪ್ರಾಣಾಯಾಮ (Breathing Exercise) ಮಾಡಲು ನಿರ್ದೇಶಿಸಲಾಯಿತು.

ಧನಾತ್ಮಕ ಅಂಶಗಳು : Inclusion Criteria

೧) ೧೫ ವರ್ಷಗಳಿಂದ ೬೦ ವರ್ಷದ ವಯೋಮಾನದ ಸ್ಥೌಲ್ಯ ರೋಗಿಗಳು

೨) ಸ್ತ್ರೀ ಹಾಗೂ ಪುರುಷ ರೋಗಿಗಳು

೩) ಎಲ್ಲಾ ಸಾಮಾಜಿಕ, ಆರ್ಥಿಕ ಗುಂಪಿನ ರೋಗಿಗಳನ್ನು ಸೇರಿಸಿಕೊಳ್ಳಲಾಯಿತು.

ಋಣಾತ್ಮಕ ಅಂಶಗಳು : Exclusion Criteria

೧) ಮಧುಮೇಪ ರೋಗಿಗಳು (ರಕ್ತದಲ್ಲಿ ಅಧಿಕ ಸಕ್ಕರೆಯ ಅಂಶವುಳ್ಳವರು) (>300 mg % Glucose)

೨) ಅಧಿಕ ರಕ್ತದ ಒತ್ತಡವುಳ್ಳವರು (>160 / 100 mm of Hg)

೩) ವೃಕ್ಕ ವಿಕೃತಿ, ಯಕೃತ್ ವಿಕೃತಿ ಹಾಗೂ ಪಕ್ಷಾಘಾತ ರೋಗಿಗಳು

ಪರೀಕ್ಷಾ ಅಂಶಗಳು : (Parameters of Assessment)

I) ಲಾಕ್ಷಣಿಕ (Clinical parameters)

೧) ಶರೀರ ಭಾರ
೨) ದೌರ್ಬಲ್ಯ
೩) ದೌರ್ಗಂಧ್ಯ
೪) ಕೃಚ್ಛ್ರವ್ಯವಾಯತಾ
೫) ಕ್ಷುಧಾ
೬) ಪಿಪಾಸಾ

II) ಪ್ರಯೋಗಶಾಲೀಯ ಅಂಶಗಳು

೧) ರಕ್ತದಲ್ಲಿ ಸಕ್ಕರೆಯ ಪ್ರಮಾಣ
೨) ಲಿಪಿಡ್ ಪ್ರೊಪೈಲ್
೩) ಸೀರಮ್ ಕೊಲೆಸ್ಟರಾಲ್

ಅವಲೋಕಿತ ಅಂಶಗಳು (Observation)

ಈ ಅಧ್ಯಯನದಲ್ಲಿ ಸಾಮಾನ್ಯವಾಗಿ ಪುರುಷರಿಗಿಂತ ಸ್ತ್ರೀಯರು ಹೆಚ್ಚಾಗಿ ಬಳಲುತ್ತಿರುವುದು ಕಂಡು ಬಂತು. ವಿಶೇಷವಾಗಿ ೩೦ ರಿಂದ ೬೦ ವರ್ಷದ ವ್ಯಕ್ತಿಗಳಲ್ಲಿ ಈ ರೋಗದ ಆಧಿಕ್ಯವಿತ್ತು. ಈ ರೋಗದವರಲ್ಲಿ ಶ್ರಮಶ್ವಾಸ (Excertional dyspnoea) ಸಂಧಿಗತವಾತ (Osteoarthritis of the knee joint), ಅಧಿಕ ರಕ್ತದೊತ್ತಡ (Hyper tension), ಮಧುಮೇಪ (Diabetic mellitus), ಹೃತ್‌ಶೂಲ (Ischaemic

೯. ರಸಾಯನ (Immuno Modulator) – ಗುಗ್ಗುಲು, ಶಿಲಾಜತು
೧೦. ಮೇಧ್ಯ (Anti stress) – ಆಮಲಕೀ, ಹರೀತಕೀ
೧೧. ಒತ್ತಡ ನಿವಾರಕ (Anti Stress) – ತ್ರಿಫಲಾ, ಗುಡೂಚೀ
೧೨. ಹೊಂದಾಣಿಕೆಕಾರಕ (Adaptogenic) – ಗುಡೂಚೀ
೧೩. ಕ್ರಿಮಿಘ್ನ (Bacteria cidial, Wormicidial) – ಗುಗ್ಗುಲು
೧೪. ಧಮನೀ ಪ್ರತಿಚಯ ನಿವಾರಕ (Anti Atherogenic) – ಗುಗ್ಗುಲು, ಹರೀತಕೀ
೧೫. ರಕ್ತದ್ರಾವಕ – ಗುಗ್ಗುಲು
೧೬. Anti platelet agreagating – ಗುಗ್ಗುಲು
೧೭. Antithrombotic or Thrombolytic – ಗುಗ್ಗುಲು, ಚಿತ್ರಕ
೧೮. ಚಯಾಪಚಯ ವರ್ಧಕ ಯಾ ಧಾತ್ವಗ್ನಿವರ್ಧಕ – ಚಿತ್ರಕ, ಶುಂಠಿ
೧೯. ಫೈರಾಯ್ಡ್ ಗ್ರಂಥಿಯನ್ನು ಉತ್ತೇಜಿಸುವುದು – ಗುಗ್ಗುಲು
೨೦. ಮೇದೋತತ್ವಹರ (Hypochalestremic) – ಗುಗ್ಗುಲು
೨೧. ಮೂತ್ರಲ (Diuretic) – ಮಂಡೂರ, ಪುನರ್ನವಾ, ಸೈಂಧವ ಲವಣ

ಉಪಸಂಹಾರ :

೧. ಬದಲಾದ ಜೀವನ ಶೈಲಿ, ವಿಪರೀತ ಆಹಾರ ಕ್ರಮ, ವ್ಯಾಯಾಮ ಇಲ್ಲದೇ ಇರುವುದು ಹಾಗೂ ಕಫಮೇದಕಾರಕ ಆಹಾರ ವಿಹಾರಗಳಿಂದ ಸ್ಥೌಲ್ಯರೋಗವು ಸಾಮಾನ್ಯವಾಗಿ ಉಂಟಾಗುವುದು.

೨. ಶರೀರದಲ್ಲಿರುವ ಹಾರ್ಮೋನುಗಳ ವ್ಯತ್ಯಾಸ, ಮನೋ ಅವಸಾದ (Mental depression) ಗಳಿಂದ ಶರೀರದಲ್ಲಿ ಚಯಾಪಚಯ (Metabolism)ನಲ್ಲಿ ವ್ಯತ್ಯಾಸ ಉಂಟಾಗಿ ಮೇದೋರೋಗವು ಉಂಟಾಗುವುದು.

೩. ಈ ಅಧ್ಯಯನದಲ್ಲಿ ಸ್ತ್ರೀಯರಲ್ಲಿ ಸ್ಥೌಲ್ಯರೋಗವು ಹೆಚ್ಚಾಗಿ ಕಂಡು ಬಂತು.

೪. ಮುನಿಪ್ರಭಾ ಮಾತ್ರೆಗಳು, ತ್ರಿಫಲಾವಟಿ ಮತ್ತು ಪುನರ್ನವಾ ಮಂಡೂರ ಮಾತ್ರೆಗಳು ಸ್ಥೌಲ್ಯರೋಗದಲ್ಲಿ ಉತ್ತಮವಾದ ಪರಿಣಾಮವನ್ನು ಹೊಂದಿವೆ.

೫. ಈ ಚಿಕಿತ್ಸೆಯಲ್ಲಿ ವಿಶೇಷವಾದ ಅಡ್ಡ ಪರಿಣಾಮಗಳಿರುವುದಿಲ್ಲ.

೬. ದಿನಕ್ಕೆ ಕನಿಷ್ಠ ೨೦ ನಿಮಿಷ ನಡೆದಾಡುವುದನ್ನು (Walking) ನಿರ್ದೇಶಿಸಲಾಯಿತು.

ಆಧಾರ ಗ್ರಂಥಗಳು :

೧. ಆಸ್ಟ್ರೌಷಧಿಗಳು – ಡಾ। ಗುರುರಾಜ ಆಚಾರ್ಯ – ೨೦೧೦
೨. ಆಯುರ್ವೇದ ವಿಜ್ಞಾನ – ಡಾ। ಶ್ರೀಪತಿ ಆಚಾರ್ಯ, ಮಣಿಪಾಲ – ೨೦೧೨
೩. ರಿಸರ್ಚಸ್ ಇನ್ ಆಯುರ್ವೇದ ಡಾ। ಶ್ರೀಪತಿ ಆಚಾರ್ಯ, ಮಣಿಪಾಲ – ೨೦೧೧
೪. ಅಪ್‌ಡೇಟೆಡ್ ಆಯುರ್ವೇದ – ಡಾ। ಶ್ರೀಪತಿ ಆಚಾರ್ಯ, ಮಣಿಪಾಲ – ೨೦೧೩
೫. ಚರಕಸಂಹಿತಾ – ಜಿ.ಎನ್. ಚತುರ್ವೇದಿ, ಚೌಖಂಭಾ ಪ್ರೆಸ್, ವಾರಣಾಸಿ
೬. ಆಯುರ್ವೇದಿಕ್ ಕ್ಲಿನಿಕಲ್ ಡಯಗ್ನೊಸಿಸ್ – ಜಿ.ಡಿ. ಸಿಂಘಾಲ್, ಎಸ್.ಎನ್. ತ್ರಿಪಾಠಿ, ನ್ಯೂಡೆಲ್ಲಿ
೭. ಸುಶ್ರುತ ಸಂಹಿತಾ – ಜಿ.ಡಿ. ಸಿಂಘಲ್ ಮತ್ತಿತರರು
೮. ಟೆಕ್ಸ್ಟ್ ಬುಕ್ ಆಫ್ ಕಾಯ ಚಿಕಿತ್ಸಾ, ರಾಮಪರ್ಷಸಿಂಹ, ಚೌಖಂಬಾ ಪ್ರೆಸ್, ವಾರಣಾಸಿ
೯. ರೀಸೆಂಟ್ ಎಡ್‌ವಾನ್ಸಸ್ ಇನ್ ಕಾಯ ಚಿಕಿತ್ಸಾ – ಪ್ರೊ. ರಾಮಪರ್ಷ ಸಿಂಘ, ಚೌಖಂಭಾ ಪ್ರೆಸ್, ನ್ಯೂಡೆಲ್ಲಿ.

ಸಕ್ಕರೆ ಕಾಲಿನ ಪಾದದ ಹುಣ್ಣುಗಳ ಚಿಕಿತ್ಸೆಗೆ ರೂಢಿಯಲ್ಲಿರುವ ಗಾಯಪಟ್ಟಿ (ಡ್ರೆಸ್ಸಿಂಗ್) ಮತ್ತು ಒತ್ತಡ ರಹಿತ ಗಾಯಪಟ್ಟಿ ವಿಧಾನ (ಆಫ್ ಲೋಡಿಂಗ್ ಟೆಕ್‌ನಿಕ್) ಗಳ ನಡುವಿನ ತುಲನಾತ್ಮಕ ಅಧ್ಯಯನ

*ಡಾ॥ ಶಿಶಿರ ಎಸ್. ರಾನಡೆ, **ಪ್ರೊ. ಬಿ.ಜೆ. ಶರತ್ ಚಂದ್ರ, ***ಡಾ॥ ತ್ರಿಶೂಲಿ ಪಿ.ಬಿ.
ಯುವ ವಿಜ್ಞಾನಿ, ಶಸ್ತ್ರಚಿಕಿತ್ಸಕರು, ** ಶಸ್ತ್ರಚಿಕಿತ್ಸಕರು ಮತ್ತು ಘಟಕದ ಮುಖ್ಯಸ್ಥರು, ***ಶಸ್ತ್ರಚಿಕಿತ್ಸಕರು, ಸಹಾಯಕ ಪ್ರಾಧ್ಯಾಪಕರು,
ಜೆ.ಎಸ್.ಎಸ್. ಆಸ್ಪತ್ರೆ, ಮೈಸೂರು

ಮುನ್ನುಡಿ : ಸಕ್ಕರೆ ಪಾದದ ಹುಣ್ಣುಗಳಿಗೆ ಮೂಲ ಕಾರಣವೆಂದರೆ ನರಬೇನೆ ಅಥವಾ ನ್ಯೂರೋಪತಿ ಇದರಿಂದ ರೋಗಿಗಳಿಗೆ ಪಾದದ ಸ್ಪರ್ಶಜ್ಞಾನವು ಇಲ್ಲದಂತಾಗಿ ಪಾದದ ಒತ್ತಡ ಬೀಳುವ ಜಾಗಗಳಲ್ಲಿ ಪದೇಪದೇ ಗಾಯಗಳಾಗುತ್ತವೆ. ಈ ರೀತಿ ನರಬೇನೆಯಿಂದಾದ ಹುಣ್ಣುಗಳಿಗೆ ಸಮರ್ಪಕವಾದ ಚಿಕಿತ್ಸೆ ಎಂದರೆ, ಸರಿಯಾದ ಸಮಯದಲ್ಲಿ ಸತ್ತ ಅಂಗಾಂಶಗಳ ಕಸರು ತೆಗೆಯುವಿಕೆ (ಡಿಬ್ರಾಯ್ಡ್‌ಮೆಂಟ್) ಮತ್ತು ಸೂಕ್ತವಾದ ವಿಧಾನದಲ್ಲಿ ಹುಣ್ಣಾದ ಜಾಗಕ್ಕೆ ಒತ್ತಡ ಬೀಳದಂತೆ ಮುತುವರ್ಜಿ ವಹಿಸುವುದೇ ಆಗಿದೆ.

ವಿಧಾನ : ಜೆ.ಎಸ್.ಎಸ್. ಆಸ್ಪತ್ರೆಗೆ ಅಧ್ಯಯನದ ಅವಧಿಯಲ್ಲಿ (ಅಂದರೆ ನವೆಂಬರ್ 2010 ರಿಂದ ನವೆಂಬರ್ 2012ರ ವರೆಗೆ) ಬಂದಂತಹ ಎಲ್ಲಾ ಸಕ್ಕರೆ ಕಾಲಿನ ಪಾದದಲ್ಲಿ ಹುಣ್ಣಿರುವ ರೋಗಿಗಳನ್ನು ಬಳಸಿ ಹೋಲಿಕೆಯ ಅಧ್ಯಯನವನ್ನು ನಡೆಸಲಾಯಿತು.

ಬಂದಂತಹ 50 ರೋಗಿಗಳಿಗೆ ಸಾಮಾನ್ಯ ಗಾಯಪಟ್ಟಿಯ ಮೂಲಕ ಹಾಗೂ ಇನ್ನೂ 50 ರೋಗಿಗಳಿಗೆ ನಾವೇ ತಯಾರಿಸಿ ಬಳಸಿದ ಒತ್ತಡ ರಹಿತ ಗಾಯಪಟ್ಟಿ ವಿಧಾನದಿಂದ ಚಿಕಿತ್ಸೆ ನೀಡಿ ಫಲಿತಾಂಶವನ್ನು ಹೋಲಿಸಲಾಯಿತು.

ಫಲಿತಾಂಶ : ಈ ಅಧ್ಯಯನದಲ್ಲಿ ಸಾಮಾನ್ಯ ಗಾಯಪಟ್ಟಿ ವಿಧಾನದಿಂದ ಹಾಗು ಒತ್ತಡರಹಿತ ಗಾಯಪಟ್ಟಿ ವಿಧಾನದಿಂದ ಸಕ್ಕರೆ ಪಾದದ ಹುಣ್ಣುಗಳಿಗೆ ಚಿಕಿತ್ಸೆ ನೀಡಿದಾಗ, ಒತ್ತಡ ರಹಿತ ಚಿಕಿತ್ಸೆಯನ್ನು ಪಡೆದ ರೋಗಿಗಳ ನೋವಿನ ಪ್ರಮಾಣದಲ್ಲಿ ಇಳಿಕೆ[ಪಿ. ಮೌಲ್ಯ (ಪಿ.ವ್ಯಾಲ್ಯು)=**0.000**], ಆಸ್ಪತ್ರೆಯಲ್ಲಿ ಇರಬೇಕಾದಂತಹ ದಿನಗಳಲ್ಲಿ ಇಳಿಕೆ[ಪಿ.=**0.002**], ಕಡಿಮೆ ಗಾಯಪಟ್ಟಿಗಳ ಬಳಕೆ [ಪಿ.=0.001], ಕಡಿಮೆ ಪ್ರಮಾಣದ ಪ್ರತಿರೋಧಕಗಳ ಬಳಕೆ [ಪಿ.=**0.34**], ಅನುಸರಣೆಗೊಂಡ ರೋಗಿಗಳ ಸಂಖ್ಯೆಯಲ್ಲಿ ಏರಿಕೆ [ಪಿ.=**0.038**}, ಹಾಗು ರೋಗದ ಒಟ್ಟು ಚಿಕಿತ್ಸಾ ವೆಚ್ಚಲ್ಲಿ

ನಿಯಮಿತವಾಗಿ ನೆಲಕ್ಕೆ ಬಿಡುವಂತಹ ಕೆಲವು ಭಾಗಗಳಿರುತ್ತವೆ. ಉದಾಹರಣೆಗೆ ಹೆಬ್ಬೆರಳಿನ ತಲೆಭಾಗ, ಹಿಮ್ಮಡಿ, ಕಿರುಬೆರಳಿನ ತಲೆಭಾಗ ಇತ್ಯಾದಿ. ನರಬೇನೆಯಿಂದ ಸ್ನಾಯುಗಳ ಹಿಗ್ಗು-ಕುಗ್ಗುವಿಕೆಯಲ್ಲಿ ತೊಂದರೆಯಾಗಿ ಪಾದದ ಮೂಳೆಗಳ ಹಾಗು ಕೀಲುಗಳಲ್ಲಿ ಸಮಸ್ಯೆಯಾಗಿ ಕಾಲುಗಳು ಸಮತಟ್ಟಾಗುತ್ತವೆ (ಫ್ಲಾಟ್ ಫೂಟ್) ಇದರಿಂದ ಒತ್ತಡ ಬೀಳುವ ಜಾಗಗಳಲ್ಲಿ ನಡೆದಾಡುವಾಗ ಸಣ್ಣ ಪುಟ್ಟ ಗಾಯಗಳಾಗಿ ಅವು ಸೋಂಕಾಗಿ ದೊಡ್ಡ ಹುಣ್ಣುಗಳಾಗಿ ಮಾರ್ಪಾಡಾಗುತ್ತವೆ.

ಚಿಕಿತ್ಸೆ : ಸಕ್ಕರೆ ಕಾಯಿಲೆಗೆ ಮುಖ್ಯವಾದ ಚಿಕಿತ್ಸೆ ಎಂದರೆ, ರಕ್ತದ ಸಕ್ಕರೆ ಪ್ರಮಾಣವನ್ನು ನಿಯಂತ್ರಣದಲ್ಲಿರುವುದೇ ಆಗಿದೆ. ಅದಲ್ಲದೇ ರಕ್ತನಾಳದ ಸಮಸ್ಯೆಗಳು ನರಬೇನೆ ಮುಂತಾದ ತೊಂದರೆಗಳಿಗೆ ಔಷಧೋಪಚಾರದ ಮೂಲಕ ಚಿಕಿತ್ಸೆ ನೀಡಲು ಸಾಧ್ಯವಿದೆ. ಕಾಲಿನ ಗಾಯಗಳಿಗೆ ಕೆಲವೊಮ್ಮೆ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇದೆ. ಪಾದದ ಹುಣ್ಣುಗಳ ಚಿಕಿತ್ಸೆಗೆ ಕಾಯಿಲೆಯ ಚಿಕಿತ್ಸೆಗಿಂತ ಮುಖ್ಯವಾಗಿ ಹುಣ್ಣುಗಳ ಮೇಲೆ ಒತ್ತಡ ಬೀಳದಂತೆ ಮುತುವರ್ಜಿ ವಹಿಸುವುದೇ ಆಗಿದೆ. (ಆಫ್ ಲೋಡಿಂಗ್ ದ ಪ್ರೆಜರ್) ಇವರೊಂದಿಗೆ ಜೀವನ ಶೈಲಿಯಲ್ಲಿ ಮಾರ್ಪಾಡು ನಿಯಮಿತ ವ್ಯಾಯಾಮ ಸರಿಯಾದ ಆಹಾರ ಕ್ರಮಗಳ ಅವಶ್ಯಕತೆ ಇದೆ.

ಒತ್ತಡ ರಹಿತ ಚಿಕಿತ್ಸೆ (ಆಫ್ ಲೋಡಿಂಗ್ ಟೆಕ್ನಿಕ್) : ಸಕ್ಕರೆ ರೋಗಿಯ ಪಾದದ ಹುಣ್ಣುಗಳ ಚಿಕಿತ್ಸೆಗೆ ಮುಖ್ಯವಾಗಿ ಕಾಯಿಲೆಯ ಚಿಕಿತ್ಸೆ ಸೋಂಕಿನ ಚಿಕಿತ್ಸೆಗಳೊಂದಿಗೆ ಹುಣ್ಣು ಇರುವ ಜಾಗದ ಮೇಲೆ ಒತ್ತಡ ಬೀಳದಂತೆ ನೋಡಿಕೊಳ್ಳುವುದೇ ಆಗಿದೆ. ಈ ರೀತಿ ಒತ್ತಡವಿಲ್ಲದಂತಾಗಿಸಲು ಅನೇಕ ವಿಧಾನಗಳನ್ನು ಕಂಡುಕೊಳ್ಳಲಾಗಿದೆ. ಉದಾಹರಣೆಗೆ ಸರಿಯಾದ ಪಾದರಕ್ಷೆಗಳ ಬಳಕೆ(ಮೈದ್ರೊ ಸೆಲ್ಯುರಾರ್ ರಬ್ಬರ್ ಚಪ್ಪಲಿಗಳು) ಪಾದರಕ್ಷೆಗಳ ಒಳಗೆ ಏರುಪೇರುಗಳನ್ನು ಬಳಸುವುದು, ಉನ್ನಾ ಪಾದರಕ್ಷೆ ಅರ್ಧಪಾದರಕ್ಷೆಗಳು ಇತ್ಯಾದಿ. ಈ ರೀತಿ ಬಳಸುವ ಅನೇಕ ಸಾಧನಗಳು ದುಬಾರಿ ನಮ್ಮ ಈ ಅಧ್ಯಯನದಲ್ಲಿ ಬಳಸಿದ ಉಪಕರಣವು (ಮಂದಾಕಿನಿ ಒತ್ತಡರಹಿತ ಸಾಧನ) ಅಗ್ಗ ಮತ್ತು ಬಳಸುವ ವಿಧಾನೂ ಸರಳ.

ಮಂದಾಕಿನಿ ಒತ್ತಡ ರಹಿತ ಚಿಕಿತ್ಸಾ ಸಾಧನ : ಈ ಸಾಧನವನ್ನು ದಿನನಿತ್ಯ ಆಸ್ಪತ್ರೆಯಲ್ಲಿ ಬಳಸುವ ವಸ್ತುಗಳಿಂದಲೇ ತಯಾಎಇಸಬಹುದಾದ್ದರಿಂದ ಇದು ಬಹಳ ಅಗ್ಗ. ಚಿತ್ರದಲ್ಲಿ ತೋರಿಸಿದಂತೆ ಬಳಸಿದ ಎರಡು ರಬ್ಬರಿನ ಕೈಚೀಲಗಳನ್ನು ಸರಿಯಾಗಿ ಮಡಚಿ ಅದನ್ನು ಒಂದು ಹಿಗ್ಗುವ ಗಾಯಪಟ್ಟಿಯಲ್ಲಿ ಸುರುಳಿ ಸುತ್ತಿ (ಎಲಾಸ್ಟೋಕ್ರೇಪ್) ದಿಂಬಿನಾಕಾರಕ್ಕೆ ಪರಿವರ್ತಿಸಲಾಗುತ್ತದೆ. ಈಗ ಈ ಸಾಧನವು ಬಳಸಲು ತಯಾರಾಗಿರುತ್ತದೆ. ಸಕ್ಕರೆ ಪಾದದ ಹುಣ್ಣಿಗೆ ರೂಢಿಯಲ್ಲಿರುವ ಗಾಯಪಟ್ಟಿಯನ್ನು ಅಳವಡಿಸಿ, ನಂತರ ಮುಂಭಾಗದ ಹುಣ್ಣಿಗೆ ಪಾದದ ಹಿಮ್ಮಡಿಯಲ್ಲೂ ಹಾಗು ಹಿಮ್ಮಡಿಯ ಹುಣ್ಣಿಗೆ ಪಾದದ ಮುಂಭಾಗದಲ್ಲೂ ಈ ಸಾಧನವನ್ನು ಅಳವಡಿಸಬೇಕಾಗುತ್ತದೆ. ಈಗ ರೋಗಿಯು ನಡೆಯುವಾಗ ಮಂದಾಕಿನಿ ಸಾಧನವು ನೆಲಕ್ಕೆ ತಾಗುವುದರಿಂದ, ಹುಣ್ಣಿರುವ ಜಾಗದಲ್ಲಿ ಒತ್ತಡ ಬೀಳದಂತಾಗುತ್ತದೆ. ಈ ಸಾಧನವನ್ನು ಗಾಯಪಟ್ಟಿಯು ತೇವವಾದರೆ, ಅಥವಾ ವಾರಕ್ಕೊಮ್ಮೆ ಬದಲಿಸಬಹುದಾಗಿದೆ.



ಕೈ ಚೀಕಗಳನ್ನು ಸುರುಳಿಸುತ್ತಿ ತಯಾರಿಸಿದ ಸರಳ ಒತ್ತಡರಹಿತ ಚಿಕಿತ್ಸಾ ಸಾಧನ

ವಿಧಾನ : ಸಕ್ಕರೆ ಪಾದದ ಹುಣ್ಣಿನಿಂದ ಬಳಲುವ ರೋಗಿಗಳ ಸಂಖ್ಯೆಯು ಹೆಚ್ಚಾಗುತ್ತಿದೆ. ಅನೇಕ ರೋಗಿಗಳು ಬಡತನದ ರೇಖೆಯ ಕೆಳಸ್ತರದಲ್ಲಿರುವ ಕಾರಣ ಎಲ್ಲರಿಗೂ ದುಬಾರಿ ಚಿಕಿತ್ಸೆಯು ಲಭ್ಯವಾಗುವುದಿಲ್ಲ. ಅನೇಕ ಒತ್ತಡರಹಿತ ಚಿಕಿತ್ಸಾ ಸಾಧನಗಳು ದುಬಾರಿ ಈ ಅಧ್ಯಯನವನ್ನು ನಾವೇ ತಯಾರಿಸಿ ಬಳಸಿದ ಸಾಧನದಿಂದ ಒತ್ತಡರಹಿತ ಚಿಕಿತ್ಸೆ ನೀಡಿ ಜೆ.ಎಸ್.ಎಸ್, ಆಸ್ಪತ್ರೆಗೆ ಅಧ್ಯಯನದ ಅವಧಿಯಲ್ಲಿ ಅಂದರೆ ನವೆಂಬರ್ 2010ರಿಂದ ನವೆಂಬರ್ 2012ರವರೆಗೆ ಬಂದಂತಹ ರೋಗಿಗಳನ್ನು ಬಳಸಿ ನಡೆಸಲಾಯಿತು. ಸಕ್ಕರೆ ಪಾದದ ಹುಣ್ಣಿನಿಂದ ಬಂದತಹ ರೋಗಿಗಳಲ್ಲಿ ಸೇರ್ಪಡೆ ಮತ್ತು ಹೊರಕಾಡುವ ಮಾನದಂಡಗಳ ಆಧಾರದ ಮೇಲೆ 100 ರೋಗಿಗಳನ್ನು ಆರಿಸಿ, ಪ್ರತೀ ಗುಂಪಿನಲ್ಲೂ 50 ರೋಗಿಗಳಿರುವಂತೆ ಎರಡು ಗುಂಪುಗಳಾಗಿ ವಿಂಗಡಿಸಲಾಯಿತು. 'ಅ' ಗುಂಪಿನ 50 ರೋಗಿಗಳಿಗೆ ರೂಢಿಯಲ್ಲಿರುವ ಗಾಯಪಟ್ಟಿಯನ್ನು ಬಳಸಿ ಚಿಕಿತ್ಸೆ ನೀಡಲಾಯಿತು. 'ಬ' ಗುಂಪಿನಲ್ಲಿರುವ 50 ರೋಗಿಗಳಿಗೆ ಮಂದಾಕಿನಿ ಒತ್ತಡರಹಿತ ಸಾಧನವನ್ನು ಬಳಸಿ ಚಿಕಿತ್ಸೆ ನೀಡಲಾಯಿತು. ಎರಡೂ ಗುಂಪಿನ ರೋಗಿಗಳನ್ನು ಯಾದೃಚ್ಛಿಕರಿಸಿ ವಿಂಗಡಿಸಲಾಗಿತ್ತು. (ರ್ಯಾಂಡಮೈಸೇಶನ್) ಹಾಗು ಫಲಿತಾಂಶವನ್ನು ನಿರೀಕ್ಷೆಯೊಂದಿಗೆ ಅಧ್ಯಯಿಸಲಾಯಿತು.

ಸೇರ್ಪಡಿಸುವ ಮಾನದಂಡಗಳು : ಒಂದನೇ ಮತ್ತು ಎರಡನೇ ವಿಧದ ಸಕ್ಕರೆ ಕಾಯಿಲೆಯೊಂದಿಗೆ ಪಾದದ ಹುಣ್ಣುಗಳಾಗಿರುವ ರೋಗಿಗಳನ್ನು ಬಳಸಿ ಈ ಅಧ್ಯಯನವನ್ನು ನಡೆಸಲಾಯಿತು.

ಹೊರಕಾಡುವ ಮಾನದಂಡಗಳು : ಸಕ್ಕರೆ ಪಾದದ ಹುಣ್ಣಿನೊಂದಿಗೆ ಪಾದದ ಮೂಳೆಗಳ ಸೋಂಕು, ರಕ್ತನಾಳಗಳ ಸಮಸ್ಯೆ ಸಕ್ಕರೆ ಕಾಯಿಲೆಯಲ್ಲದೇ, ಇತರ ಪಾದದ ಹುಣ್ಣುಗಳು, ಮತ್ತು ಪಾದದ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನಾವರಿಸಿರುವ ಹುಣ್ಣುಗಳಿರುವ

11 ರೋಗಿಗಳಿಗೆ ಅಂದರೆ ಶೇ. 22% ರೋಗಿಗಳಿಗೆ ಇತರ ಚಿಕಿತ್ಸೆಗಳ ಅವಶ್ಯಕತೆ ಇದ್ದರೆ 'ಬ' ಗುಂಪಿನ 7 ರೋಗಿಗಳಿಗೆ ಅಂದರೆ ಶೇ. 14% ರೋಗಿಗಳಿಗೆ ಇತರ ಚಿಕಿತ್ಸೆ ನೀಡುವ ಅವಶ್ಯಕತೆ ಇತ್ತು. ಪಿ.ಮೌಲ್ಯ (0.31) 'ಬ' ಗುಂಪಿನ 68% ಅಂದರೆ 34 ರೋಗಿಗಳಿಗೆ ಸರಾಸರಿ 1 ರಿಂದ 5ಬಾರಿ ಗಾಯಪಟ್ಟಿ ಬದಲಾಯಿಸಬೇಕಾಗಿ ಬಂದರೆ, 'ಅ' ಗುಂಪಿನ 58% ಅಂದರೆ 50ರಲ್ಲಿ 29 ರೋಗಿಗಳಿಗೆ 10ಕ್ಕಿಂತಲೂ ಹೆಚ್ಚುಬಾರಿ ಗಾಯಪಟ್ಟಿ ಬದಲಿಸುವ ಪ್ರಮೇಯವು ಒದಗಿ ಬಂದಿತು. (ಪಿ.ಮೌಲ್ಯ 0.000),



ಗಾ0ಯಪಟ್ಟಿ ಬದಲಿಸಬೇಕಾದ ದಿನಗಳು

'ಅ' ಗುಂಪಿನ ರೋಗಿಗಳ ಆಸ್ಪತ್ರೆಯ ಸಾರಸರಿ ವೆಚ್ಚವ ರೂ. 8062.52 ಆದರೆ 'ಬ' ಗುಂಪಿನ ರೋಗಿಗಳ ಆಸ್ಪತ್ರೆಯ ಸರಾಸರಿ ವೆಚ್ಚವು ರೀ. 8062.52 ಆದರೆ 'ಬ' ಗುಂಪಿನ ರೋಗಿಗಳ ಆಸ್ಪತ್ರೆಯ ಸರಾಸರಿ ವೆಚ್ಚವು ರೂ. 6249.62 ಆಗಿತ್ತು. (ಪಿ. ಮೌಲ್ಯ 00.012)



ಆಸ್ಪತ್ರೆಯ ಸರಾಸರಿ ವೆಚ್ಚ

ಇದಲ್ಲದೇ, 'ಅ' ಗುಂಪಿನ 16% ರಷ್ಟು ರೋಗಿಗಳು ಅಂದರೆ, 8 ರೋಗಿಗಳು ಗಾಯಪಟ್ಟಿ ವಿಧಾನದಿಂದ ಅನುಸರಣೆಗೊಂಡರೆ (ಕಾಂಪ್ಲೆಯೆನ್ಸ್) 'ಬ' ಗುಂಪಿನ 17 ರೋಗಿಗಳು ಅಂದರೆ ಶೇ. 34ರಷ್ಟು ರೋಗಿಗಳು ಗಾಯಪಟ್ಟಿ ವಿಧಾನದಿಂದ ಅನುಸರಣೆಗೊಂಡರು (ಪಿ.ಮೌಲ್ಯ. 0.038)

ಚರ್ಚೆ : ಹುಚ್ಚಳ್ಳಿಯ ಮಂದಾಕಿಣಿ ಆಸ್ಪತ್ರೆಯಲ್ಲಿ ಡಾ॥ ಸುನಿಲ್ ವಿ. ಕಾರಿ ಮತ್ತು ಸಿಂಗಡಿಗರಿಂದ "ಮಂದಾಕಿನೀ ಒತ್ತಡರಹಿತ ಚಿಕಿತ್ಸಾ ಸಾಧನವು" ತಯಾರಿಸಿ ಬಳಸಲಾಯಿತು. ಅವರ ಅಧ್ಯನದಲ್ಲಿ ಈ ಸಾಧನವನ್ನು ಬಳಸಿದ ರೋಗಿಗಳ ನೋವಿನ ಪ್ರಮಾಣದಲ್ಲಿ ಇಳಿಕೆ ಮತ್ತು ಅನುಸರಣೆಗೊಂಡ ರೋಗಿಗಳ ಪ್ರಮಾಣದಲ್ಲಿ ಏರಿಕೆಯು ಕಂಡುಬಂದಿತ್ತು. ನಮ್ಮ ಅಧ್ಯಯನದಲ್ಲೂ ನೋವಿನ ಪ್ರಮಾಣದಲ್ಲಿ ಇಳಿಕೆ ಹಾಗೂ ಅನುಸರಣೆಗೊಂಡ ರೋಗಿಗಳ ಪ್ರಮಾಣದಲ್ಲಿ ಏರಿಕೆ ಕಂಡುಬಂದ ಕರಣ ಈ ಅಧ್ಯಯನವು ಅವರ ಅಧ್ಯಯನಕ್ಕೆ ಪೂರಕವಾಗಿದೆ. ಅಲ್ಲದೇ ಗಾಯಪಟ್ಟಿ ಬದಲಿಸಬೇಕಾದ ಒಟ್ಟು ಸರಾಸರಿ ದಿನಗಳ ಮಾಪನದಲ್ಲೂ ನಮ್ಮ ಅಧ್ಯಯನವು ಡಾ। ಸುನಿಲ್ ವಿ.ಕಾರಿ ಮತ್ತು ಸಂಗಡಿಗರ ಅಧ್ಯಯನಕ್ಕೆ ಪೂರಕವಾಗಿದೆ.

ಆಸ್ಪತ್ರೆಯಲ್ಲಿರಬೇಕಾದಂತಹ ಸರಾಸರಿ ದಿನಗಳು 'ಬ' ಗುಂಪಿನ ರೋಗಿಗಳಲ್ಲಿ ಗಮನಾರ್ಹವಾಗಿ ಇಳಿಕೆ ಕಂಡುಬಂದಿದೆ (ಪಿ.ಮೌಲ್ಯ 0.002) ಈ ಮಾಪನವು ಗೈಲ್ ಇ. ರೈಬೆರ್ ಮತ್ತು ಸಂಗಡಿಗರ ಅಧ್ಯಯನದ ಮಾಪನಕ್ಕೆ ಪೂರಕವಾಗಿದೆ. ಇದಲ್ಲದೇ ಗೈಲ್‌ರವರ ಅಧ್ಯಯನದಲ್ಲಿ ಕಾಲಿನ ಕುಯ್ತೆಗೆತವು ಸಕ್ಕರೆ ರೋಗಿಗಳಲ್ಲಿ ಹೆಚ್ಚು ಎಂದು ತೋರಿಸಲಾಗಿತ್ತು. ನಮ್ಮ ಅಧ್ಯಯನದಲ್ಲಿ ಒತ್ತಡರಹಿತ ಚಿಕಿತ್ಸೆಯಿಂದ ಕಾಲಿನ ಕುಯ್ತೆಗೆತದ ಪ್ರಮಾಣ ಕಡಿಮೆಗೊಳಿಸಬಹುದು ಎಂಬ ಅಂಶವು ಬೆಳಕಿಗೆ ಬಂದಿದೆ (ಪಿ. ಮೌಲ್ಯ 0.313).

ಭಾರತದಂತಹ ಮುಂದುವರಿಯುತ್ತಿರುವ ದೇಶಗಳಲ್ಲಿ ಸಕ್ಕರೆ ರೋಗದಿಂದಾಗುವ ಇತರ ಸಮಸ್ಯೆಗಳಿಂದ ರೋಗಿಗಳು ಬಳಲುತ್ತಿದ್ದಾರೆ. ಅದರಲ್ಲಿ ಸಕ್ಕರೆ ಪಾದದ ಹುಣ್ಣು ಒಂದು. ಇದು ಬಡತನ ರೇಖೆಯ ಕೆಳಸ್ತರದಲ್ಲಿರುವ ರೋಗಿಗಳಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಚಿಕಿತ್ಸಾ ವೆಚ್ಚವೂ, ಚಿಕಿತ್ಸೆಯ ಸಾಫಲ್ಯತೆಗೆ ಒಂದು ಮಾಪನವಾಗುತ್ತದೆ. ನಮ್ಮ ಈ ಅಧ್ಯಯನದಲ್ಲಿ ಒತ್ತಡರಹಿತ ಚಿಕಿತ್ಸಾ ವಿಧಾನವು ಅಗ್ಗದ ವಿಧಾನ ಎಂದು ಪರಿಗಣಿಸಲಾಗಿದೆ. (ಪಿ.ಮೌಲ್ಯ. 0.012).

ಉಪಸಂಹಾರ : ಈ ಅಧ್ಯಯನದಲ್ಲಿ ಸಾಮಾನ್ಯ ಗಾಯಪಟ್ಟಿ ವಿಧಾನದಿಂದ ಹಾಗೂ ಒತ್ತಡರಹಿತ ಗಾಯಪಟ್ಟಿ ವಿಧಾನದಿಂದ ಸಕ್ಕರೆ ಪಾದದ ಹುಣ್ಣುಗಳಿಗೆ ಚಿಕಿತ್ಸೆ ನೀಡಿದಾಗ, ಒತ್ತಡ ರಹಿತ ಚಿಕಿತ್ಸೆಯನ್ನು ಪಡೆದ ರೋಗಿಗಳ ನೋವಿನ ಪ್ರಮಾಣದಲ್ಲಿ ಇಳಿಕೆ ಆಸ್ಪತ್ರೆಯಲ್ಲಿ ಇರಬೇಕಾದಂತಹ ದಿನಗಳಲ್ಲಿ ಇಳಿಕೆ, ಕಡಿಮೆ ಗಾಯಪಟ್ಟಿಗಳ ಬಳಕೆ, ಕಡಿಮೆ ಪ್ರಮಾಣದ ಪ್ರತಿರೋಧಕಗಳ ಬಳಕೆ, ಅನುಸರಣೆಗೊಂಡ ರೋಗಿಗಳ ಸಂಖ್ಯೆಯಲ್ಲಿ ಏರಿಕೆ ಹಾಗೂ ರೋಗದ ಒಟ್ಟು ಚಿಕಿತ್ಸಾ ವೆಚ್ಚಲ್ಲಿ ಗಮನಾರ್ಹ ಇಳಿಕೆಗಳು ಕಂಡುಬಂದವು ಆದ್ದರಿಂದ ಎರಡೂ ವಿಧವಾದ ಗಾಯಪಟ್ಟಿಗಳ ಚಿಕಿತ್ಸೆಯನ್ನು ಹೋಲಿಸಿದಾಗ ನಮ್ಮ ಅಧ್ಯಯನವು ಒತ್ತಡ ರಹಿತ ಚಿಕಿತ್ಸೆಗೆ ಪರವಾಗಿದೆ.

ಎಂಬುದನ್ನು ಅರಿಯ ಹೊರಟಾಗ ನಮಗೆ ವಕ್ತ್ರಗಳಿಂದ ಲಭಿಸುವುದು ಸಿದ್ಧ ಉತ್ತರ ಒಂದೇ 'ಆಡು ಎಲ್ಲಾ ಗಿಡ ಬಳ್ಳಿಗಳನ್ನು ತಿನ್ನುತ್ತದೆ ಆದರೆ ಈ ಬಳ್ಳಿಯನ್ನೊಂದನ್ನು ತಿನ್ನುವುದಿರಲೀ ಹತ್ತಿರಕ್ಕೂ ಸುಳಿಯುವುದಿಲ್ಲ' ಆದ ಕಾರಣ ಇದಕ್ಕೆ ಆಡು ಮುಟ್ಟದ ಬಳ್ಳಿ ಎಂಬ ಹೆಸರು ಬಂತು, ಎಂಬುದು.

ಮುಂದುವರಿದು ಯಾವ ಕಾರಣಕ್ಕಾಗಿ ಮುಟ್ಟುವುದಿಲ್ಲ ಎಂಬ ಪ್ರಶ್ನೆಗೆ ಒಂದಿಷ್ಟು ಭಿನ್ನಭಿನ್ನ ಉತ್ತರಗಳು ಲಭಿಸುತ್ತವೆ. ಅವುಗಳೆಂದರೆ, 'ಆಡು ಮುಟ್ಟದ ಸೊಪ್ಪು ನಂಜು ಅಥವಾ ವಿಷ ಆದಕಾರಣ ಅದನ್ನು ಮುಟ್ಟುವುದಿಲ್ಲ' ಎಂಬ ಉತ್ತರ ಒಂದಾದರೆ; ಮತ್ತೊಂದು 'ಈ ಯತೇಚ್ಛವಾಗಿ ಔಷಧಿಯ ಗುಣವನ್ನು ಹೊಂದಿದ್ದು ಇದರ ಲಭ್ಯತೆ ತುಂಬಾ ಕಡಿಮೆ ಎಂದರೆ ಎಲ್ಲೆಂದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಗುವುದಿಲ್ಲ. ಆದಕಾರಣ ಭಗವಂತ ಇದನ್ನು ಸಂರಕ್ಷಿಸುವ ಉದ್ದೇಶದಿಂದ ಎಲ್ಲವನ್ನೂ ತಿನ್ನುವ ಇದನ್ನು ಮುಟ್ಟದಂತೆ ಮಾಡಿದ್ದಾನೆ ಎನ್ನುವುದು.

ಇವುಗಳಲ್ಲಿ ಮೊದಲನೆಯದು ಸತ್ಯಕ್ಕೆ ಹತ್ತಿರವೆನ್ನಿಸಬಹುದು. ಅಂದರೆ ಈ ಬಳ್ಳಿಯು ಅರುಚಿಯಾಗಿರಬಹುದು ಅಥವಾ ಅದರ ದೇಹಕ್ಕೆ ಒಗ್ಗದೇ ಇರಬಹುದು. ಇದೇ ಸತ್ಯವೆಂದಲ್ಲ ಇದನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅವಲೋಕಿಸಿ ಕಾರಣವನ್ನು ಕಂಡುಕೊಳ್ಳಬೇಕು. ಇನ್ನು ಎರಡನೇ ಕಾರಣ ಒಂದಿಷ್ಟು ಕಟ್ಟು ಕಥೆ ಇದರಲ್ಲಿ ಹುರುಳಿಲ್ಲ ಎನ್ನಿಸುತ್ತದೆ ಅದು ನಿಜವೂ ಹೌದು. ಇಲ್ಲಿ ಅಲ್ಲಗಳೆದು ಅಪಹಾಸ್ಯ ಮಾಡುವುದಕ್ಕಿಂತ ಇದರ ಹಿಂದಿರುವ ಬಳ್ಳಿಯನ್ನು ರಕ್ಷಿಸುವ ತಂತ್ರ ಮೆಚ್ಚುವಂತದ್ದು. ಜನಪದರು ಬಳ್ಳಿಯೊಂದಿಗೆ ದೈವ ಸಂಬಂಧವನ್ನು ಬೆಸೆದು ಯಾರೂ ಕೂಡಾ ಆ ಬಳ್ಳಿಯನ್ನು ನಾಶಮಾಡದಂತೆ ನೋಡಿಕೊಳ್ಳುವ ಜಾಣ್ಮೆಯ ಪ್ರತೀಕವೇ ಈ ಕಥೆಗಳು.

ಈ ಬಳ್ಳಿಯನ್ನು ಕುರಿತು ಜನಪದರ ಅರಿವು ಏನೇ ಇರಲಿ ಇದರಲ್ಲಿ ಇರಬಹುದಾದ ಔಷಧೀಯ ಗುಣವನ್ನು ಪತ್ತೆ ಮಾಡಿಕೊಂಡು ತನ್ನ ಕುಲಕ್ಕೆ ಎದುರಾದ ರೋಗರುಜಿನಗಳನ್ನು ಮತ್ತು ತನ್ನ ಒಡನಾಡಿಗಳಾದ ಪ್ರಾಣಿಪಕ್ಷಿಗಳಿಗೆ ಬರುವ ಕೆಲ ಕಾಯಿಲೆಗಳನ್ನು ಹಿಮ್ಮೆಟ್ಟಿಸುವಲ್ಲಿ ಬಳಸಿಕೊಂಡಿರುವುದು ಅವರ ವೈದ್ಯಕೀಯ ಜ್ಞಾನ ಸಂಪತ್ತಿಗೆ ಹಿಡಿದ ಕೈಗನ್ನಡಿ. ಈ ಆಡು ಮುಟ್ಟದ ಸೊಪ್ಪು ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿದೆ.

ಜನಪದರ ಔಷಧೀಯ ಸಸ್ಯವಾಗಿ – ಆಡುಮುಟ್ಟದ ಸೊಪ್ಪು : ವಕ್ತ್ರಗಳ ಮಾಹಿತಿಯಂತೆ 'ಆಡು ಮುಟ್ಟದ ಸೊಪ್ಪು' ಒಂದು ಅಪರೂಪದ ಔಷಧಿಯ ಸಸ್ಯವಾಗಿದ್ದು ಇದನ್ನು ಅನೇಕ ರೋಗರುಜಿನಗಳ ನಿವಾರಣೆಯ ಸಲುವಾಗಿ ಬಳಸಲಾಗುತ್ತದೆ. ಆಡು ಮುಟ್ಟದ ಬಳ್ಳಿಯಲ್ಲಿ ಎಲೆಗಿಂತ ಬೇರು ಹೆಚ್ಚಿನ ಔಷಧೀಯ ಅಂಶವನ್ನು ಹೊಂದಿದೆ.

ಮಕ್ಕಳಲ್ಲಿ ಮತ್ತು ದೊಡ್ಡವರಲ್ಲಿ ಕಂಡುಬರುವ ಗೂರಲು (ಕೆಮ್ಮು) ಮತ್ತು ದಮ್ಮಿಗೆ (ಅಸ್ತಮಾ) ಆಡು ಮುಟ್ಟದ ಬಳ್ಳಿಯ ಬೇರನ್ನು ಅರೆದು ಕುಡಿಸುವುದರಿಂದ ಅವುಗಳನ್ನು ಉಪಶಮನ ಮಾಡಬಹುದು ಆದರೆ ಪ್ರಮಾಣ ವಯಸ್ಸಿಗನುಗುಣವಾಗಿ ಹತ್ತರಿಂದ ಇಪ್ಪತ್ತು ಹನಿಗಳಷ್ಟಿರಬೇಕು ಎಂದು ಹೇಳುತ್ತಾರೆ. ಅಂತೆಯೇ ಬೇದಿ, ರಕ್ತಬೇದಿಯಂತಹ ಕಾಯಿಲೆಗಳಲ್ಲಿ ಇದರ ಬೇರನ್ನು ಅರೆದು ಕುಡಿಸುವುದರಿಂದ ವಾಸಿ ಮಾಡಬಹುದು.

ಕಫ ಮತ್ತು ಪಿತ್ತವಾದಾಗ ಇದರ ಬೇರಿನ ರಸವನ್ನು ಕುಡಿಸುವುದರಿಂದ ವಾಂತಿಯಾಗುತ್ತದೆ. ಇದರಿಂದ ಪಿತ್ತದಿಂದ ಕೂಡಿದ ಕಫವು ಹೊರಬರುತ್ತದೆ.

ಹಾವು ಕಡಿತಕ್ಕೆ ಒಳಗಾದವರಿಗೆ ಆಡು ಮುಟ್ಟದ ಬಳ್ಳಿ, ಮುತ್ತುಗದ ಚಕ್ಕೆ, ತುಂಬೆ ಸೊಪ್ಪು ಇವುಗಳನ್ನು ನೀರಿನಲ್ಲಿ ಅರೆದು ಕುಡಿಸುವುದರಿಂದ ವಿಷ ಪರಿಹಾರವಾಗುತ್ತದೆ ಅಲ್ಲದೇ ಆಡು ಮುಟ್ಟದ ಬಳ್ಳಿಯ ಬೇರನ್ನು ಅರೆದು ಹಾವು ಕಡಿದ ಜಾಗಕ್ಕೆ ಹಚ್ಚಲಾಗುತ್ತದೆ.

ಕೈಮಸುಕು* ಆದವರಿಗೆ ಇದರ ಬೇರನ್ನು ಅರೆದು ಕುಡಿಸುವುದರಿಂದ ಕೈಮಸುಕಿನಿಂದ ಗುಣವಾಗುತ್ತಾರೆ. ಈ ಸಂದರ್ಭದಲ್ಲಿ ರೋಗಿಯು ಪತ್ಯೆಯನ್ನು ಅನುಸರಿಸಬೇಕು. ಒಂದು ವಾರಗಳ ಕಾಲ ಮಜ್ಜಿಗೆ ಅನ್ನವನ್ನು ಮಾತ್ರ ತಿನ್ನಬೇಕಾಗುತ್ತದೆ.

ಕೇವಲ ಮನುಷ್ಯರಿಗೆ ಅಷ್ಟೇ ಅಲ್ಲದೇ ಜಾನುವಾರುಗಳ ರೋಗಬಾದೆಯ ನಿವಾರಣೆಗೂ ಕೂಡಾ ಮದ್ದನ್ನಾಗಿ ಬಳಸಲಾಗುತ್ತದೆ. ರೈತರು ತಮ್ಮ ಜೀವನಾಡಿಗಳಾದ ದನ, ಕರು, ಕುರಿ, ಎತ್ತುಗಳಿಗೆ ಸಂಭವಿಸಬಹುದಾದ ವ್ಯಾದಿಗಳಿಗೆ ಆಡು ಮುಟ್ಟದ ಸೊಪ್ಪನ್ನು ಪರಮ ಔಷಧವಾಗಿ ಬಳಸುತ್ತಾರೆ.

ಜಾನುವಾರುಗಳಲ್ಲಿ ಕಂಡುಬರುವ ಕಟ್ಲಾಲ್ಡು** ರೋಗಕ್ಕೆ ಆಡು ಮುಟ್ಟದ ಸೊಪ್ಪು, ಕುಗ್ಗೆ ಬೇರು (ಕಾಡು ಮೆಂತ್ಯ– *Trigonella foenum graceum*) ಹಾಗೂ ಕಡಜದ ಗೂಡಿನ ಮಣ್ಣನ್ನು ಸೇರಿಸಿ ಅರೆದು ಮೂರು ಗೊಟ್ಟ ಕುಡಿಸುವುದು ಇದರಿಂದ ಕಟ್ಲಾಲ್ಡು ರೋಗ ವಾಸಿಯಾಗುತ್ತದೆ. ಅಲ್ಲದೇ ಜಾನುವಾರುಗಳಲ್ಲಿ ಕಾಣಬರುವ ತಲೆದೂಗುವ ರೋಗಕ್ಕೆ ಆಡು ಮುಟ್ಟದ ಸೊಪ್ಪು, ಲಕ್ಕಿ ಸೊಪ್ಪು, ತುಂಬೆ ಸೊಪ್ಪು, ಆಲವಾಣದ ಸೊಪ್ಪು, ಬೆಳ್ಳುಳ್ಳಿ, ಕಾಳುಮೆಣಸುಗಳನ್ನು ಸೇರಿಸಿ ಅರೆದು ಬೆಳಗ್ಗೆ ಮತ್ತು ಸಂಜೆ ಮೂರು ದಿನಗಳ ಕಾಲ ಕುಡಿಸಬೇಕು.

* **ಕೈಮಸುಕು :** ಹಳ್ಳಿ ಪರಿಭಾಷೆಯಲ್ಲಿ ಮದ್ದಿಕ್ಕುವುದು ಎಂದರ್ಥ. ಇದರಿಂದ ವ್ಯಕ್ತಿ ಊಟಬಿಟ್ಟು ಕೃಶನಾಗುತ್ತಾ ಹೋಗುತ್ತಾನೆ.

** **ಕಟ್ಲಾಲ್ಡು :** ಜಾನುವರುಗಳಲ್ಲಿ ಕಂಡುಬರುವ ಒಂದು ರೋಗ. ಈ ರೋಗದ ಪರಿಣಾಮ ರಾಸುಗಳ ಎದೆ ಒಣಗಿ ನೇವು ಬಿಡುವುದು.

ಹೀಗೆ ಜನಪದರ ಬದುಕಿನುದ್ದಕ್ಕೂ ವ್ಯಾದಿಬಾದೆಗಳಿಂದ ಮುಕ್ತರಾಗಿ ಉತ್ತಮ ಆರೋಗ್ಯ ಪಡೆದುಕೊಳ್ಳುವಲ್ಲಿ ಇರದ ಪಾತ್ರ ಮಹತ್ವದ್ದು. ಇನ್ನು ವಿಶೇಷವೆಂದರೆ ಆಡು (ಮೇಕೆ)ಗೆ ತಗಲಬಹುದಾದ ರೋಗಗಳಿಗೆ ಈ ಆಡು ಮುಟ್ಟದ ಸೊಪ್ಪನ್ನೇ ಮದ್ದಾಗಿ ಬಳಸುವುದು. ಸ್ವಾಭಾವಿಕವಾಗಿ ಆಡು ತಿನ್ನದೇ ಬಿಟ್ಟ ಬಳ್ಳಿಯೊಂದು ರೋಗ ನಿವಾರಣೆಯ ಮದ್ದಾಗಿ ಅದರ ಉದರವನ್ನು ಸೇರುತ್ತದೆ. ಏನೇ ಇರಲಿ ಇದು ಕೃಷಿ ಅವಲಂಬಿತ ಗ್ರಾಮೀಣ ಬದುಕಿನ ಔಷಧಿಯಾಗಿ ಇಂದಿಗೂ ಬಳಕೆಯಾಗುತ್ತಿರುವುದು ಆಡು ಮುಟ್ಟದ ಬಳ್ಳಿಯ ವಿಶೇಷ. "ಕಲ್ಲೆಂಬೋದೆಲ್ಲಾ ದೇವರೆ, ಗಿಡ ಎಂಬೋದೆಲ್ಲಾ ವೈದ್ಯವೆ" ಎಂಬ ಮಾತಿನಂತೆ ಜನಪದ ವೈದ್ಯ ಬಹು ಭಾಗ ಸಸ್ಯವನ್ನು ಅವಲಂಭಿಸಿರುವಂತದ್ದಾಗಿದೆ. ಆದ್ದರಿಂದ ಜನಪದರು ಸಸ್ಯಗಳನ್ನು ದೇವರಂತೆ ಆರಾಧಿಸುತ್ತಾರೆ, ಪೂಜಿಸುತ್ತಾರೆ. ಸಸ್ಯದ ಪ್ರತಿಯೊಂದು ಭಾಗವೂ ಮನುಷ್ಯನಿಗೆ ಉಪಯುಕ್ತವಾಗಿದೆ. ಸಸ್ಯ ಪ್ರಪಂಚ ಜನಪದ

ವಿಷಯವಾಗಿದೆ. ಶಿಲ್ಪಶಾಸ್ತ್ರ, ನಾಟ್ಯಶಾಸ್ತ್ರ, ಪಾಕಶಾಸ್ತ್ರ, ಖಗೋಳಶಾಸ್ತ್ರ, ರಸಾಯನಶಾಸ್ತ್ರ ಇತ್ಯಾದಿ ೬೪ ಕಲೆಗಳ ಪ್ರಾವೀಣ್ಯತೆಯು ಭಾರತೀಯರ ಕೊಡುಗೆ ಎಂದೂ ಬಲ್ಲೆವು. ಭೀಮ, ನಳಮಹರಾಜ ಇವರ ಹೆಸರು ಪಾಕಶಾಸ್ತ್ರದೊಂದಿಗೂ ಪ್ರಖ್ಯಾತವಾಗಿದೆ.

ಭಾರತೀಯ ಶಾಸ್ತ್ರಗಳಲ್ಲಿ ಜ್ಞಾನೇಂದ್ರಿಯಗಳಿಗೆ ತುಂಬಾ ಪ್ರಾಮುಖ್ಯತೆ ಕೊಡಲಾಗಿದೆ. ಒಂದು ಚಕ್ಕುಲಿಯನ್ನು ತಿನ್ನುವಾಗ ಬೆಣ್ಣೆಯ ಘಮ ಮೂಗಿಗೂ, ಆಕರ್ಷಕ ಆಕಾರ ಕಣ್ಣಿಗೂ, ಚಕ್ಕುಲಿಯ ಬಿಸಿ ಮತ್ತು ಸ್ಪರ್ಶ ಚರ್ಮಕ್ಕೂ, ಕಚ್ಚಿತಿನ್ನುವಾಗ ಕರಕರನಾದ ಕಿವಿಗೂ, ಸ್ವಾದ ನಾಲಿಗೆಗೂ ಅತ್ಯಂತ ಆಪ್ಯಾಯಮಾನವಾಗಿರುತ್ತದೆ. ಈ ಐದೂ ಜ್ಞಾನೇಂದ್ರಿಯಗಳು ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ. ಈ ಭಾರತೀಯ ಅಡುಗೆಯಂತೆ ಸಾವಿರಾರು ವೈವಿಧ್ಯಪೂರ್ಣ ಆಹಾರದ ಶ್ರೇಷ್ಠ ಕೊಡುಗೆಯನ್ನು ವಂಶಪಾರಂಪರ್ಯವಾಗಿ ನಾವು ಪಡೆದಿರುತ್ತೇವೆ.

'ಅನ್ನಂ ಬ್ರಹ್ಮ' ಎನ್ನುವ ನಂಬಿಕೆ ಭಾರತೀಯ ವೈದ್ಯಕೀಯ ಶಾಸ್ತ್ರವಾದ ಆಯುರ್ವೇದದಲ್ಲಿ ಪ್ರತಿಪಾದಿಸಲಾಗಿದೆ. ಆಹಾರವೆಂದರೆ ಯಾವುದು ತತ್‌ಕ್ಷಣ ಮನಸ್ಸಂತುಷ್ಟಿಯನ್ನು, ಶಕ್ತಿಯನ್ನು, ನಂತರದಲ್ಲಿ ಪುಷ್ಟಿಯನ್ನು ನೀಡುತ್ತದೆಯೋ ಅದೇ ಆಗಿದೆ. ಸುಶ್ರುತ ಸಂಹಿತೆಯಲ್ಲಿ ಆಹಾರ ಶಕ್ತಿಯನ್ನು, ಬಣ್ಣವನ್ನು, ಬಲವನ್ನೂ ನೀಡುತ್ತದೆಂದು, ಬ್ರಹ್ಮನಂತೆ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾಗುತ್ತದೆಂದು ತಿಳಿಸಲಾಗಿದೆ. ಆಹಾರವನ್ನು ನಿಯಮಾನುಸಾರ ಭುಂಜಿಸಿದರೆ ಆರೋಗ್ಯವೂ ಇಲ್ಲವಾದರೆ ಅನಾರೋಗ್ಯವು ನಿಶ್ಚಿತವೆಂದು ಕಂಡುಕೊಂಡಿದ್ದರು. ನಾವು ಭುಂಜಿಸುವ ಆಹಾರದಲ್ಲಿ ದೈವಾಂಶವಿದೆಯೆಂದು, ಅದು ದೇವರಿಗೆ ಅರ್ಪಿಸಿದ ನೈವೇದ್ಯವೆಂದು ಭಾವಿಸಿದಾಗ ಔಷಧಗಳ ಅವಶ್ಯಕತೆ ಇರುವುದಿಲ್ಲವೆಂದೂ ತಿಳಿದಿದೆ.

ಹಿಪೊಕ್ರೆಟಿಸನು ಬೆಂಬಲಿಸುವ ವಾಕ್ಯ ಆಹಾರವೇ ಔಷಧದಂತೆಯೂ, ಔಷಧಿಯು ಆಹಾರದಂತೆಯೂ ಇರಬೇಕೆಂಬುದಾಗಿದೆ. ಅಂದರೆ ತೀಕ್ಷ್ಣ ವೀರ್ಯವುಳ್ಳಂತಹ, ಅಡ್ಡಪರಿಣಾಮಗಳನ್ನು ಉಂಟುಮಾಡ ಬಹುದಾದಂತಹ ಔಷಧಗಳ ಬದಲಾಗಿ ಸಮತೋಲನ ಉಂಟು ಮಾಡಬಲ್ಲಂತಹ, ಆರೂ ರಸಗಳುಳ್ಳಂತಹ, ಸುಲಭವಾಗಿ ಜೀರ್ಣ ವಾಗುವಂತಹ ಆಹಾರವೇ ಔಷಧಿಯಾಗಬಲ್ಲದು. ಆಹಾರವನ್ನು ತಯಾರು ಮಾಡುವ ಮುನ್ನವೇ ಅನೇಕ ವಿಷಯಗಳತ್ತ ಗಮನಹರಿಸುವುದು ಅತ್ಯವಶ್ಯವೆಂದು ಹೇಳಲಾಗಿದೆ. ಆರೋಗ್ಯಪೂರ್ಣ ಬಿತ್ತನೆ, ಫಲವತ್ತಾದ ಭೂಮಿ, ಸೂಕ್ತಪೋಷಕಾಂಶಗಳನ್ನು ಪಡೆದು ಬೆಳೆದಿರುವಂತಹ ಧವಸಧಾನ್ಯ ಖಾದ್ಯಾಂಶಗಳನ್ನು ಸೂಕ್ತರೀತಿಯಲ್ಲಿ ಕಟಾವು ಮಾಡಿ ಸಂಸ್ಕರಿಸಿ, ಸಂತೋಷದಿಂದ ಭಗವನ್ನಾಮ ಸ್ಮರಣೆಯನ್ನು ಮಾಡುತ್ತಾ ತಯಾರಿಸಲಾದ ಆಹಾರವು ಶ್ರೇಷ್ಠ ಪರಿಣಾಮವನ್ನುಂಟು ಮಾಡುತ್ತದೆ. ಚರಕಸಂಹಿತೆಯ □ಅನ್ನ□ ಎಂಬುವ ಪದ ಎಲ್ಲವನ್ನೂ ಒಳಗೊಂಡಿದೆ ಅಂದರೆ ಅನ್ನವು ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕವಾಗಿಯೂ ಕೃಪೆಮಾಡ ಬಲ್ಲುದೆಂದು ಹೇಳಲಾಗಿದೆ.

ಅನ್ನಪಾನವಿಧಿ ಅಧ್ಯಾಯದಲ್ಲಿ ಆಹಾರವನ್ನು ಋತುವಿಗನುಸಾರವಾಗಿ ಹಿತವಾಗಿಯೂ, ಮಿತವಾಗಿಯೂ ಭುಂಜಿಸಬೇಕೆಂದು, ಅದೊಂದು ಪುಣ್ಯ ಕಾರ್ಯವೆಂದು, ಅಗ್ನಿಗೆ ಹವಿಸ್ಸನ್ನು ನೀಡುವ ಪೂಜ್ಯ ಕರ್ಮವೆಂದೂ, ಪ್ರಣವಪಠನವನ್ನು ಮಾಡುತ್ತಾ ಮೂವತ್ತಾರುಸಾವಿರ ರಾತ್ರಿಗಳು ಪಾಲಿಸಬೇಕು– ಇದರಂತೆ ನಿಯಮಿತವಾಗಿ ಅನುಸರಿಸಿದರೆ ಜನ್ಮಜನ್ಮಾಂತರಗಳವರೆಗೂ ಇದರ ಪ್ರಭಾವ ಬೀರುತ್ತದೆಯೆಂದು ಹೇಳಲಾಗಿದೆ. ಆಯುರ್ವೇದದಲ್ಲಿ ಮೂರು ಸ್ಥಂಭಗಳನ್ನು ಆರೋಗ್ಯಕ್ಕೆ ಅತ್ಯಾವಶ್ಯಕವೆಂದು ತಿಳಿಸಿ ಆಹಾರ, ನಿದ್ರೆ ಮತ್ತು ಬ್ರಹ್ಮಚರ್ಯವೆಂದು ಗುರುತಿಸಲಾಗಿದೆ. ಆಹಾರವನ್ನು ಸೂಕ್ತಸಮಯ ದಲ್ಲಿ ಆಯುರ್ವೇದದಲ್ಲಿ ಹೇಳಿರುವ ಎಲ್ಲಾ ನಿಯಮಗಳನ್ನು ಪಾಲಿಸಿದ್ದೇ ಆದರೆ ಪರಿಪೂರ್ಣ ಆರೋಗ್ಯದಿಂದ ಸಹಸ್ರಾರು ವರ್ಷ ಜೀವಂತವಾಗಿರಬಹುದೆಂದು ಬೃಹತ್ರಯಿಯಲ್ಲಿ ಹೇಳಲಾಗಿದೆ. ಆಧುನಿಕ ಸಮಾಜದಲ್ಲಿ ನ್ಯೂಟ್ರಾಸುಟಿಕಲ್ಸ್, ಫಂಕ್ಷನಲ್ ಫುಡ್ಸ್, ವೆಲ್‌ನೆಸ್ ಫುಡ್ಸ್, ಮೆಡಿಸಿನಲ್ ಫುಡ್ಸ್, ಫಾರ್ಮಾ ಫುಡ್ಸ್ ಎಂಬ ಪದಗಳು ಪ್ರಚಲಿತವಾಗಿವೆ. ನ್ಯೂಟ್ರಾಸುಟಿಕಲ್ಸ್ ಬಗ್ಗೆ ಅತಿಹೆಚ್ಚು ಸಂಶೋಧನೆಗಳನ್ನು ಮಾಡಿರುವ ಸ್ಟೀಫನ್ ಡೆಫೆಲಿಸ್ ಅವರ ಪ್ರಕಾರ ಯಾವ ಆಹಾರ ಅಥವಾ ಆಹಾರ ಪದಾರ್ಥಗಳು ಔಷಧಿಯಂತೆಯೂ ಆರೋಗ್ಯಕ್ಕೆ ಪೂರಕವಾಗಿಯೂ ರೋಗಗಳನ್ನು ತಡೆಗಟ್ಟುವಲ್ಲಿ ಚಿಕಿತ್ಸೆಯಾಗಿಯೂ ಇರಬಲ್ಲುದೋ ಅವುಗಳನ್ನು ನ್ಯೂಟ್ರಾಸುಟಿಕಲ್ಸ್ ಎಂದು ವರ್ಗೀಕರಿಸಲಾಗಿದೆ.

ಆಹಾರಗಳ ತಯಾರಿಕಾ ವಿಧಾನ, ಆಹಾರವನ್ನು ಭುಜಿಸುವ ನಿಯಮಗಳು, ಆಹಾರಪದ್ಧತಿಯ ಬಗ್ಗೆ ಕೂಲಂಕಷವಾದ ವಿವರಣೆ, ವೈಜ್ಞಾನಿಕ ಅನುಮೋದನೆ ಆಯುರ್ವೇದದಲ್ಲಿ ಮಾತ್ರ ಲಭ್ಯವಾಗಿದೆ ಎಂಬುದು ಪ್ರಪಂಚದಾದ್ಯಂತ ವೈದ್ಯ ಪದ್ಧತಿಯನ್ನು ವಿಶ್ಲೇಷಿಸಿದಾಗ ಕಂಡುಬರುವ ನಿಚ್ಚಳ ಸತ್ಯವಾಗಿದೆ.

ಮೇಲಿನ ನಮ್ಮ ಹೇಳಿಕೆಯನ್ನು ಅನುಮೋದಿಸಲು ಕೆಲವು ಉದಾಹರಣೆಗಳನ್ನು ನಮೂದಿಸಿರುತ್ತೇವೆ.

- ಒಂದೇ ರಸವುಳ್ಳ ಆಹಾರವನ್ನು ಸೇವಿಸುವುದರಿಂದ ಅನಾರೋಗ್ಯವೂ ಅಲ್ಪ ರೋಗನಿರೋಧಕ ಶಕ್ತಿಯೂ ಉಂಟಾದರೆ, ಶಾಸ್ತ್ರೋಕ್ತ ರೀತಿಯಲ್ಲಿ ಆರೂ ರಸಗಳ ದಿನನಿತ್ಯ ಬಳಕೆಯಿಂದ ದೀರ್ಘ ಆರೋಗ್ಯವನ್ನು, ಆಯಸ್ಸನ್ನು ಪಡೆಯಬಹುದು.
- ಹಾಲು, ಮಜ್ಜಿಗೆ, ಜೇನುತುಪ್ಪ, ತುಪ್ಪ, ಕಬ್ಬಿನಿಂದ ತಯಾರಿಸಲಾದ ಖಾದ್ಯಗಳು, ಪಾನೀಯಗಳು– ಇವುಗಳ ರಸ, ಗುಣ, ವೀರ್ಯ, ವಿಪಾಕ, ಕರ್ಮಗಳ ಪರಿಚಯ ಭಾವಗಳ ತಿಳುವಳಿಕೆ.
- ಪಶು ಪಕ್ಷಿಗಳ ಮೊಟ್ಟೆ, ಮಾಂಸ ಇತ್ಯಾದಿಗಳನ್ನು ಬಳಸಿ ಪುಪೂಲಿಕ, ಉತ್ಕಾರಿಕ, ಸಂಧಾನಕಲ್ಪಗಳು, ವಟಕ, ಶಾಕಾಹಾರ, ಖಾದ್ಯಗಳಾದ ಗೋಧೂಮ, ಲಡ್ಡುಕ, ಕ್ಷೀರಸಕ್ತು, ಆಪೂಪ, ಜಲೇಬಿ, ಸೇವಿಕ.
- ದೀರ್ಘಾಯುಸ್ಸಿಗಾಗಿ ಆಹಾರ, ಸೂಕ್ತ ಸಂತಾನಕ್ಕಾಗಿ ಆಹಾರ, ಬೊಜ್ಜು ಕರಗಲು ಆಹಾರ, ಮೈತೂಕ ಇಳಿಸಲು ಆಹಾರ.
- ಮದ್ಯವರ್ಗ, ಧಾನ್ಯವರ್ಗ, ಕುಧಾನ್ಯ ವರ್ಗ, ಮಾಂಸವರ್ಗ, ಶಾಕಾ ವರ್ಗ ಇತ್ಯಾದಿ ವಿವಿಧ ಆಹಾರ ಪದಾರ್ಥಗಳ ತಿಳುವಳಿಕೆ.

ಶತಾವರ್ಯಾದಿ ಜಲಂ: ಶತಾವರಿಯನ್ನು ಬಿಸಿ ನೀರಿನಲ್ಲಾಗಲೀ ಅಥವಾ ತಣ್ಣೀರಿನಲ್ಲಾಗಲೀ ನೆನೆಸಿಟ್ಟು ಸಾರವನ್ನು ಪಡೆದು ಜ್ವರ, ಮೈ ಕೈಕಾಲು ನೋವು, ವಿವಿಧ ರಕ್ತಸ್ರಾವಗಳಲ್ಲಿ ಔಷಧವಾಗಿ ನೀಡಲಾಗುತ್ತಿತ್ತು.

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧	ಭೃಗು ರಸಾಯನ (ರೋಗ ಪ್ರತಿಬಂಧಕವಾಗಿ)	ಭೈ.ರ.	ಆಮಲಕಿ, ಅಮೃತ, ಅಳಲೇಕಾಯಿ, ಮಧು, ಗೋಕ್ಷುರ, ಕೇಸರ, ಹಿಪ್ಪಲಿ ಇತ್ಯಾದಿ	ಶ್ವಾಸ, ಕಾಸ, ಹೃದ್ರೋಗ, ಉರೋರೋಗ, ವಾತರಕ್ತ
೨	ಕೂಷ್ಮಾಂಡ ಅವಲೇಹ (ಬಲ ಧಾತು ಪುಷ್ಟಿ)	ಭೈ.ರ.	ಕೂಷ್ಮಾಂಡ ಫಲ, ಗೋಕ್ಷೀರ, ಮಧು, ನಾರಿಕೇಲ ಜಲ, ಆತ್ಯಗುಪ್ತ ಇತ್ಯಾದಿ	ರಕ್ತಪಿತ್ತ, ಆಮ್ಲಪಿತ್ತ, ವಿಸರ್ಪ, ಉಪದಂಶ, ಕಾಮಲ, ಪಾಂಡು, ವಿಷಮಜ್ವರ
೩	ದ್ರಾಕ್ಷಾದಿ ಲೇಹ	ಚ.ದ.	ದ್ರಾಕ್ಷಿ, ಆಮಲಕಿ, ಖರ್ಜೂರ, ಹಿಪ್ಪಲಿ, ಮರೀಚ, ಮಧು	ಪಿತ್ತಜ ಕಾಸ
೪	ಖರ್ಜೂರಾದಿ ಲೇಹ	ಚ.ದ.	ಖರ್ಜೂರ, ಹಿಪ್ಪಲಿ, ದ್ರಾಕ್ಷಿ, ಲಾಜಾ, ಮಧು, ಘೃತ	ಪಿತ್ತಜ ಕಾಸ
೫	ಆಮಲಕಾವಲೇಹ	ಚ.ಚಿ.	ಆಮಲಕಿ, ಹಿಪ್ಪಲಿ, ಮಧು, ಶರ್ಕರ, ಘೃತ	ಉತ್ತಮ ರಸಾಯನ

ಕ್ವಾಥ / ಕಷಾಯ: ಸುಮಾರು ಆರೇಳು ದಶಕಗಳಿಂದ ಭಾರತೀಯರಲ್ಲಿ ಮುಂಜಾನೆ ಕುಡಿಯುವ ಪಾನೀಯ ಬದಲಾಗಿರುವುದು ಸತ್ಯ. ಬಹಳ ಹಿಂದಿನಿಂದಲೂ ಪುಷ್ಟಿದಾಯಕ ಪಾನೀಯ ಹಾಲು – ಕಷಾಯಗಳನ್ನು ಮನೆಮಂದಿಯೆಲ್ಲಾ ಸೇವಿಸುತ್ತಿದ್ದುದು ಈಗ ಬದಲಾಗಿದೆ. ಜೀರಿಗೆ, ಕೊತ್ತಂಬರಿ, ಲವಂಗ, ಏಲಕ್ಕಿ, ಅತಿಮಧುರ, ಬೆಲ್ಲ ಇತ್ಯಾದಿಗಳನ್ನು ಹಿತವಾಗಿ ಹಾಲಿನಲ್ಲಿ ಕಾಯಿಸಿ ಕುಡಿಯಲಾಗುತ್ತಿತ್ತು. ಇವುಗಳು ಮನಸ್ಸಿಗೆ ಆಹ್ಲಾದಕರವಾಗಿದ್ದು ಆರೋಗ್ಯ ವೃದ್ಧಿಗೆ ಬಹಳ ಸಹಕಾರಿಯಾಗಿರುತ್ತಿತ್ತು. ದಿನನಿತ್ಯ ಆಹಾರದಲ್ಲಿ ಯಥೇಚ್ಚವಾಗಿ ಬಳಸುವ ಕೊತ್ತಂಬರಿಸೊಪ್ಪು, ಕರಿಬೇವಿನ ಸೊಪ್ಪು, ಅರಿಶಿನ, ಬೆಳ್ಳುಳ್ಳಿ, ಹಿಂಗು, ತೆಂಗಿನಕಾಯಿ ಮತ್ತಿತರೆ ಮಸಾಲೆ ಪದಾರ್ಥಗಳು ಕ್ಯಾನ್ಸರ್‌ಸಂಭಹ ರೋಗಗಳನ್ನು ತಡೆಗಟ್ಟಿಲು ಯಶಸ್ವಿಯಾದ ಆಹಾರಗಳು.

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧.	ನಾಗರ ಕ್ವಾಥ (ಹೃದಯದ ಆರೋಗ್ಯಕ್ಕಾಗಿ)	ಚ.ದ.	ಶುಂಠಿ, ಜಲ	ಹೃದ್ರೋಗ, ಕಾಸ, ಶ್ವಾಸ, ಶೂಲ
೨	ಧಾನ್ಯಕ ಕ್ವಾಥ (ಜಠರದ ಆರೋಗ್ಯಕ್ಕಾಗಿ)	ಚ.ದ.	ಕೊತ್ತಂಬರಿಬೀಜ, ಶುಂಠಿ,ಜಲ	ಬಹುಬಗೆಯ ದ್ರವಮಲ ಪ್ರವೃತ್ತಿ
೩	ಪಿಪ್ಪಲಿ ಜಲ (ಜೀರ್ಣಶಕ್ತಿ ಹೆಚ್ಚಿಸಲು)	ಚ.ದ.	ಹಿಪ್ಪಲಿ, ಜಲ	ವಾತಕಫ ವಿಕಾರ, ಜ್ವರ

ಖಂಡ ಕಲ್ಪನ:

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧	ಹರಿದ್ರಾ ಖಂಡ	ಭೈ.ರ.	ಪಾರಿಭದ್ರ, ಸಿತಾ, ಘೃತ, ಹರಿದ್ರಾ, ದಾರ್ವೀ, ವಿಡಂಗ, ಸಾರಿವ, ಮುಸ್ತ ಮುಂತಾದವು	ಕ್ರಿಮಿ, ವ್ರಣ, ಕುಷ್ಠ,ಚರ್ಮದ ಸುಕ್ಕು, ಬಾಲನೆರೆ, ಕಾಮಲಾ ಇತ್ಯಾದಿ
೨	ನಾರಿಕೇಳಖಂಡ (ಪಿತ್ತ ಶಾಮಕ)	ಭೈ.ರ.	ನಾರಿಕೇಳ ಫಲ, ಸರ್ಪಿ, ಪಯ, ಗುಡ,ಧಾನ್ಯಕ, ಹಿಪ್ಪಲಿ, ಜೀರಕ ದ್ವಯ	ಅಮ್ಲಪಿತ್ತ, ಬಾಯಿರುಚಿ ಇಲ್ಲದಿರುವುದು, ಕ್ಷಯ, ರಕ್ತಪಿತ್ತ

ಮಂಥ ಕಲ್ಪನ:

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧	ಖರ್ಜೂರಾದಿ ಮಂಥ (ಬಲ ಧಾತು ವರ್ಧಕ)	ಚ.ದ.	ಖರ್ಜೂರ, ದ್ರಾಕ್ಷಿ, ದಾಡಿಮ, ಆಮಲಕಿ ಮುಂತಾದವು	ಅತಿ ಮದ್ಯಪಾನದಿಂದ ಉಂಟಾದ ರೋಗ
೨	ಪಿಪ್ಪಲ್ಯಾದಿ ಮಂಥ (ಜೀರ್ಣಶಕ್ತಿ ಹೆಚ್ಚಿಸಲು)	ಚ.ದ.	ಹಿಪ್ಪಲಿ, ಶರ್ಕರ, ಕ್ಷೀರ, ಘೃತ, ಕ್ಷೌದ್ರ	ವಿಷಮಜ್ವರ

ಕ್ಷೀರಪಾಕ:

ಕ್ರ.ಸಂ.	ಹೆಸರು	ಉಲ್ಲೇಖ	ದ್ರವ್ಯಗಳು	ಕೆಳಕಂಡ ರೋಗಗಳಲ್ಲಿ ಸೂಚಿಸಲಾಗಿದೆ
೧	ಲಶುನ ಕ್ಷೀರಪಾಕ	ಚ.ಚಿ.	ಲಶುನ, ಕ್ಷೀರ, ಜಲ	ವಾತಗುಲ್ಮ, ಉದಾವರ್ತ, ವಿಷಮಜ್ವರ, ಹೃದ್ರೋಗ
೨	ಅರ್ಜುನ ಕ್ಷೀರಪಾಕ		ಅರ್ಜುನ ತ್ವಕ್, ಪಯ, ಜಲ	ಹೃದ್ರೋಗ

ವರ್ಣತಂತುಗಳ ವ್ಯತ್ಯಯದ ಕಾಯಿಲೆಗಳ ಮೂಲ ಕಾರಣಗಳು: ವರ್ಣತಂತುಗಳ ವ್ಯತ್ಯಯದ ಅಸ್ವಸ್ಥತೆಗಳಿಗೆ ಕಾರಣಗಳು ಹಲವಾರು. ಅರಿವಿದ್ದೋ ಅರಿವಿಲ್ಲದೆಯೋ ಅತಿನೇರಳೇ ಕಿರಣಗಳ ಸೋಂಕು, ಕಲಬೆರಕೆ ಆಹಾರ, ಮುಖ್ಯವಾಗಿ ವಿಷಯುಕ್ತ ರಾಸಾಯನಿಕ ಪದಾರ್ಥಗಳ ಸೇವನೆ, ಧೂಮಪಾನ, ಮದ್ಯಪಾನ, ರಕ್ತಸಂಬಂಧದ ವಿವಾಹಗಳು ದ್ವಿತೀಯ ಹಂತದ ಕಾರಣಗಳಾದರೆ ತಂದೆ ತಾಯಿಗಳ ವಯಸ್ಸಿನ ಹೆಚ್ಚಳ ವರ್ಣತಂತುಗಳ ಅಸ್ವಸ್ಥತೆಗಳಿಗೆ ಮೂಲ ಕಾರಣ ವಾಗಿದೆ. ಆದ್ದರಿಂದ ಮೂವತ್ತೈದು ವರ್ಷ ಮೇಲ್ಪಟ್ಟ ದಂಪತಿಗಳು ಅಸ್ವಸ್ಥ ಮಕ್ಕಳನ್ನು ಪಡೆಯುವ ಸಾಧ್ಯತೆ ಅಧಿಕವಾಗಿರುತ್ತದೆ.

ವರ್ಣತಂತುಗಳ ವ್ಯತ್ಯಯಕ್ಕೆ ತಂದೆ ತಾಯಿಗಳ ವಯಸ್ಸು: ತಾಯಿಯ ವಯಸ್ಸು ಹೆಚ್ಚಾದಾಗ ಹುಟ್ಟುವ ಮಕ್ಕಳಲ್ಲಿ ಅಂಗ ವೈಕಲ್ಯತೆ, ಬುದ್ಧಿ ಮಾಂದ್ಯತೆ, ವರ್ಣತಂತುಗಳ ವ್ಯತ್ಯಯವಿರುವುದು ಈಗಾಗಲೇ ವೈದ್ಯಕೀಯ ಸಂಶೋಧನೆಗಳಿಂದ ದೃಢಪಟ್ಟಿರುವ ಸಂಗತಿ. ಉದಾಹರಣೆ ಡೌನ್ಸ್ ಸಿಂಡ್ರೋಮ್, ಟರ್ನರ್, ಕ್ಲೈನ್ ಫಿಲ್ಟರ್, ಕ್ರೈ–ಡು–ಕ್ಯಾಟ್ ಮುಂತಾದ ಅಸ್ವಸ್ಥತೆಗಳು ವಯಸ್ಸಾದ ತಂದೆ ತಾಯಿಯರು ಜನುಮ ನೀಡುವ ಮಕ್ಕಳಲ್ಲಿ ಸಾಮಾನ್ಯವಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ತಾಯಿಯಲ್ಲಿ ಮಿಯಾಟಿಕ್ ಕೋಶ ವಿಭಜನೆ ನಡೆಯುವಾಗ ವರ್ಣತಂತುಗಳು ಸಮ ಸಂಖ್ಯೆಯಲ್ಲಿ ಎರಡು ವಿರುದ್ಧ ದಿಕ್ಕಿನೆಡೆಗೆ ಸಾಗುತ್ತವೆ. ಇದರಿಂದ ಎರಡು ಆರೋಗ್ಯಕರವಾದ ಜೀವಕೋಶಗಳು ಬೆಳವಣಿಗೆಯಾಗುತ್ತವೆ. ಈ ಕೋಶವಿಭಜನೆ ಕರಾರುವಕ್ಕಾಗಿ ನಡೆಯ ಬೇಕಾದರೆ ಸ್ಪಿಂಡಲ್ ಎಳೆಗಳ ಪಾತ್ರ ಅತಿ ಮುಖ್ಯವಾದುದು. ಈ ಸ್ಪಿಂಡಲ್ ದಾರಗಳು ವರ್ಣತಂತುಗಳ ಮಧ್ಯ ಭಾಗವನ್ನು ಕಚ್ಚಿ ಹಿಡಿದು ಒಂದೇ ವೇಗದಲ್ಲಿ ಎಳೆಯುವುದರಿಂದ ಬಹುಶಃ ವರ್ಣತಂತುಗಳು ಸರಿಯಾದ ಕ್ರಮದಲ್ಲಿ ಸಂಖ್ಯೆಯಲ್ಲಿ ಹೊಸ ಜೀವ ಪಡೆಯುತ್ತಿರುವ ಜೀವಕೋಶಗಳಲ್ಲಿ ಹಂಚಿಕೆಯಾಗುತ್ತದೆ. ವಯಸ್ಸಾದ ತಾಯಂದಿರಲ್ಲಿ ಸ್ಪಿಂಡಲ್ ದಾರ ಅಥವಾ ಸ್ಪಿಂಡಲ್ ಎಳೆಗಳ ಉತ್ಪಾದನೆಗೆ ಬೇಕಾದ ಪ್ರೋಟೀನ್‌ಗಳ ಕೊರತೆಯಿರುತ್ತದೆ, ಆದ್ದರಿಂದ ವರ್ಣತಂತುಗಳು ಜೀವ ಪಡೆಯುತ್ತಿರುವ ಹೊಸ ಕೋಶಗಳಲ್ಲಿ ಸಮ ಸಂಖ್ಯೆಯಲ್ಲಿ ಹಂಚಿಕೆಯಾಗದೆ ಒಂದು ಕೋಶದಲ್ಲಿ ಹೆಚ್ಚು ಮತ್ತೊಂದು ಕೋಶದಲ್ಲಿ ಕಡಿಮೆಯಾಗುವುದರಿಂದ ವರ್ಣತಂತುಗಳ ಹಂಚಿಕೆಯಲ್ಲಿ ಅಪಸಾಮ್ಯತೆಯುಂಟಾಗಿ ಅನಾರೋಗ್ಯದಿಂದ ಕೂಡಿದ ಜೀವ ಕೋಶಗಳು ಉತ್ಪಾದನೆಯಾಗುತ್ತದೆ. ಇವು ಅಂಡಾಣುವಾಗಿರಬಹುದು ಅಥವಾ ವೀರ್ಯಾಣುವಾಗಿರಬಹುದು, ಇಂತಹ ಅಂಡಾಣುಗಳು ವೀರ್ಯಾಣುಗಳ ಜೊತೆ ಸೇರಿ ಬುದ್ಧಿಮಾಂದ್ಯ ಮಕ್ಕಳ ಹುಟ್ಟಿಗೆ ಕಾರಣವಾಗುತ್ತವೆ.

ಇದೇ ರೀತಿ ವಯಸ್ಸಾದ ಗಂಡಸರಲ್ಲಿ ವೀರ್ಯಾಣುಗಳ ಉತ್ಪಾದನೆಯ ಸಮಯದಲ್ಲಿ ನಡೆಯುವ ಮಿಯಾಟಿಕ್ ಕೋಶ ವಿಭಜನೆಯ ಕ್ರಮದಲ್ಲಿ ಏರು ಪೇರು ಉಂಟಾದಾಗ ಹೆಚ್ಚಿನ ವರ್ಣತಂತುಗಳನ್ನು ಹೊಂದಿರುವ ಅಥವಾ ಕಡಿಮೆ ವರ್ಣತಂತುಗಳನ್ನು ಹೊಂದಿರುವ ಜೀವಕೋಶಗಳು (ವೀರ್ಯಾಣು) ಉತ್ಪಾದನೆಯಾಗುವುದರಿಂದ ಅಸ್ವಸ್ಥ ಮಕ್ಕಳು ಜನಿಸುತ್ತವೆ. ಈ ಎರಡೂ ಸಂದರ್ಭಗಳಲ್ಲಿ ತಂದೆ ಹಾಗೂ ತಾಯಿಯರು ಸಂಪೂರ್ಣ ಆರೋಗ್ಯವಂತರಾಗಿದ್ದರೂ ಸಹ ವಯಸ್ಸಿನ ಹೆಚ್ಚಳದ ಕಾರಣದಿಂದಾಗಿ ಅಸ್ವಸ್ಥ ಮಕ್ಕಳನ್ನು ಪಡೆಯುವ ಸಾಧ್ಯತೆ ಅಧಿಕವಾಗಿರುತ್ತದೆ. ಹಾಗಾಗಿ ಅಮೇರಿಕಾ, ಜಪಾನ್ ಮುಂತಾದ ದೇಶಗಳಲ್ಲಿ ಮಕ್ಕಳನ್ನು ಪಡೆಯಲಿಚ್ಛಿಸುವ ಮುವತ್ತು ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ದಂಪತಿಗಳು ಕಡ್ಡಾಯವಾಗಿ ಹತ್ತು ಹಲವು ತಪಾಸಣೆಗೊಳಪಟ್ಟು ಬೆಳೆಯುತ್ತಿರುವ ಭ್ರೂಣದ ಆರೋಗ್ಯವನ್ನು ತಿಳಿದುಕೊಂಡು, ಮಗುವಿನಲ್ಲಿ ನ್ಯೂನತೆ ಏನಾದರೂ ಇದ್ದರೆ ಮಗುವನ್ನು ಉಳಿಸಿಕೊಳ್ಳಬೇಕೆ? ಬೇಡವೆ? ಎಂಬ ನಿರ್ಧಾರ ತೆಗೆದು ಕೊಳ್ಳುತ್ತಾರೆ.

ವಿಶ್ಲೇಷಣೆ:

ಅಜ್ಜಿಯ ವಯಸ್ಸಿನ ಹೆಚ್ಚಳಕ್ಕೂ ಅಸ್ವಸ್ಥ ಮೊಮ್ಮಕ್ಕಳ ಜನನ: ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ? ಎಂಬಂತೆ ಅಜ್ಜಿಯ ವಯಸ್ಸಿನ ಹೆಚ್ಚಳಕ್ಕೂ ಅವರ ಮೊಮ್ಮಕ್ಕಳ ಆರೋಗ್ಯಕ್ಕೂ ಏನು ಸಂಬಂಧ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ವರ್ಣ ತಂತುಗಳ ಅಸ್ವಸ್ಥ ಮಕ್ಕಳ ಜನನಕ್ಕೆ ಮೂಲ ಕಾರಣ ದಂಪತಿಗಳ ವಯಸ್ಸಿನ ಹೆಚ್ಚಳ ಆದರೆ ಭಾರತದಲ್ಲಿ ಕಾನೂನು ಬದ್ಧವಾಗಿ ಹೆಣ್ಣು ಮಕ್ಕಳ ಮದುವೆಯ ವಯಸ್ಸು ಹದಿನೆಂಟು ಹಾಗೂ ಗಂಡಸರಿಗೆ ಇಪ್ಪತ್ತೊಂದು ವರ್ಷ ನಿಗಧಿಯಾಗಿರುವುದರಿಂದ ಶೇಕಡಾ ಎಂಭತ್ತರಷ್ಟು ಹೆಣ್ಣು ಮಕ್ಕಳು ತಮ್ಮ ಮುವತ್ತು ವರ್ಷದೊಳಗೆ ಮದುವೆಯಾಗಿ ಮಕ್ಕಳನ್ನು ಪಡೆದಿರುತ್ತಾರೆ, ಕಾರಣ ತಂದೆ ತಾಯಂದಿರು ಬಹು ಬೇಗನೆ ತಮ್ಮ ಜವಾಬ್ದಾರಿಯನ್ನ ಕಳೆದುಕೊಳ್ಳುವ ಆತುರದಲ್ಲಿರುವುದರಿಂದ ಎಲ್ಲಾ ಧರ್ಮ, ಜಾತಿ, ಉಪಜಾತಿ, ಪಂಗಡಗಳಲ್ಲಿ ಹೆಣ್ಣು ಮಕ್ಕಳಿಗೆ ಅವರ ವಿದ್ಯಾಭ್ಯಾಸ ಮುಗಿದ ತಕ್ಷಣ ಮದುವೆ ನಡೆಯುವುದು ಸರ್ವೇ ಸಾಮಾನ್ಯ, ಆದರೂ ನಮ್ಮ ದೇಶದಲ್ಲಿ ವರ್ಣತಂತುಗಳ ಅಸ್ವಸ್ಥತೆಯಿಂದ ಜನಿಸುವ ಮಕ್ಕಳ ಸಂಖ್ಯೆಯೇನು ಕಡಿಮೆ ಇಲ್ಲ. ಇದಕ್ಕೆ ಕಾರಣವೇನು? ನಮ್ಮ ಅಧ್ಯಯನದಲ್ಲಿ ಶೇಕಡಾ ಎಂಭತ್ತರಷ್ಟು ಕಿರಿಯ ವಯಸ್ಸಿನ (ಮುವತ್ತರೊಳಗಿನ) ಮಹಿಳೆಯರು ಅಸ್ವಸ್ಥ ಮಕ್ಕಳಿಗೆ ಜನ್ಮ ನೀಡಿರುವುದನ್ನು ನಾವು ಆಸ್ಪತ್ರೆಗಳ ದಾಖಲಾತಿಯಿಂದ ಪಡೆದಿರುವು ದಲ್ಲದೇ ಈ ವಿಷಯದಲ್ಲಿ ಸ್ವತಃ ನಾವೇ ಸಂಶೋಧನೆ ನಡೆಸಿದ್ದೇವೆ. ಕಿರಿಯ ವಯಸ್ಸಿನ ದಂಪತಿಗಳ ಅಸ್ವಸ್ಥ ಮಕ್ಕಳಿಗೆ ಜನ್ಮ ನೀಡುವುದು ಸೋಜಿಗದ ವಿಷಯವಾದರೂ ಸೂಕ್ಷ್ಮ ಅಧ್ಯಯನದಿಂದಿ ತಿಳಿದು ಬಂದ ವಿಚಾರಗಳು ಅತ್ಯಂತ ಆತಂಕಕಾರಿಯಾದುದು. ಅದು ಅಜ್ಜಿಯ ವಯಸ್ಸಿನ ಹೆಚ್ಚಳಕ್ಕೂ ಮೊಮ್ಮಕ್ಕಳ ಆರೋಗ್ಯಕ್ಕೂ ಇರುವ ಸಂಬಂಧ.

ಹೆಣ್ಣು ಮಕ್ಕಳಲ್ಲಿ ಅಂಡಾಣುಗಳ ಉತ್ಪಾದನೆಗೆ ಕಾರಣವಾಗುವ ಜೀವ ಕೋಶಗಳು (ಜರ್ಮ ಸೆಲ್) ಅಸ್ವಸ್ಥ ಮಗುವಿನ ತಾಯಿಯು ಅವರ ತಾಯಿಯ ಗರ್ಭದಲ್ಲಿರುವಾಗಲೇ ಮಿಯಾಟಿಕ್ ಕೋಶ ವಿಭಜನೆಯನ್ನು ಪ್ರವೇಶಿಸಿ ಡಿಪ್ಲೋಟಿನ್ ಎಂಬ ಸ್ಥಿತಿಯಲ್ಲಿ ಸಮಾಧಿಯಾಗಿರುತ್ತವೆ. ಆ ಹೆಣ್ಣು ಭ್ರೂಣವು ಮಗುವಾಗಿ ಹುಟ್ಟಿ ತರುಣಿಯಾಗಿ ಮಾರ್ಪಾಡಾಗುವ ಸಂದರ್ಭದಲ್ಲಿ ಋತು ಕ್ರಿಯೆಯು ಆರಂಭವಾಗುವ ಮೊದಲು ಹರ್ಮೋನುಗಳ ಪ್ರಭಾವದಿಂದ ಡಿಪ್ಲೋಟಿನ್ ಕೋಶಾವಸ್ಥೆಯಲ್ಲಿರುವ ಜೀವಕೋಶಗಳು ತಮ್ಮ ಸಮಾಧಿಯಿಂದ ಹೊರ ಬಂದು ಮೊದಲ ಮಿಯಾಟಿಕ್ ವಿಭಜನೆಯನ್ನು ಮುಂದುವರೆಸಿ ಎರಡನೆ ಮಿಯಾಟಿಕ್ ಕೋಶ ವಿಭಜನೆಯನ್ನು ಪ್ರವೇಶಿಸುತ್ತದೆ. ಮೊದಲ ಮಿಯಾಟಿಕ್ ಅತ್ಯಂತ ದೀರ್ಘವಾಗಿದ್ದು ಭ್ರೂಣಾವಸ್ಥೆಯಿಂದ ತರುಣಾವಸ್ಥೆಯವರೆಗೆ ಮುಂದುವರೆಯುತ್ತದೆ. ಆದರೆ ಎರಡನೆ ಮಿಯಾಟಿಕ್ ವಿಭಜನೆಯು ಅಲ್ಪಾವಧಿಯಲ್ಲಿ ಪೂರ್ಣಗೊಂಡು ಅಂಡಾಣುಗಳನ್ನು ಬಿಡುಗಡೆ ಮಾಡಲು ಪ್ರಾರಂಭಿಸುವುದನ್ನು ನಾವು ಋತುಸ್ರಾವ ಎನ್ನುತ್ತೇವೆ.

ಪುರುಷರಲ್ಲಿ ಬಂಜೆತನ ಒಂದು ಅವಲೋಕನ

ಡಾ. ಶ್ರೀನಿವಾಸ. ಜಿ ಮತ್ತು ಡಾ. ಮಾಲಿನಿ. ಎಸ್. ಎಸ್.
ಪ್ರಾಣೀಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಭಾರತವು ಜನಸಂಖ್ಯಾ ಸ್ಫೋಟದಲ್ಲಿ ಪ್ರಪಂಚದಲ್ಲೇ ಎರಡನೆಯ ರಾಷ್ಟ್ರ ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ಜೊತೆಗೆ ಇತ್ತೀಚಿನ ದಿನಗಳಲ್ಲಿ ಬಂಜೆತನದಿಂದ ಬಳಲುವ ಪುರುಷ ಹಾಗೂ ಮಹಿಳೆಯರ ಸಂಖ್ಯೆಯೂ ಹೆಚ್ಚುತ್ತಿದೆ. ಇದಕ್ಕೆ ಕಾರಣ ಜಾಗತೀಕರಣದಿಂದಾಗಿ ಮುಂಚೂಣಿಯಲ್ಲಿರುವ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುವ ಯುವಕರು ಮತ್ತು ಅವರ ಜೀವನ ಶೈಲಿ. ಸುಮಾರು ಐವತ್ತು ವರ್ಷಗಳ ಹಿಂದೆ WHO ವರದಿಯ ಪ್ರಕಾರ ಒಬ್ಬ ಸಾಮಾನ್ಯ ಆರೋಗ್ಯವಂತ ಪುರುಷನ ವೀರ್ಯಾಣುವಿನ ಪ್ರಮಾಣವು ಸುಮಾರು 200 ಮಿಲಿಯನ್/ಎಮ್.ಎಲ್‌ಯೆಂದು ನಿಗಧಿಯಾಗಿತ್ತು. ನಂತರದ ದಿನಗಳಲ್ಲಿ ಈ ಪ್ರಮಾಣವು ಕಡಿಮೆಯಾಗುತ್ತಾ ಬಂದು ಕೊನೆಗೆ 20 ಮಿಲಿಯನ್ನಿಗೆ ನಿಂತಿತು. ಆದರೆ 2010ರಲ್ಲಿ ಈ ಪ್ರಮಾಣವು ಪುನ: ಪರಿಷ್ಕರಿಣೆಗೊಂಡು 15 ಮಿಲಿಯನ್ನಿಗೆ ನಿಂತಿದೆ. ಮುಂದಿನ 10–20 ವರ್ಷಗಳಲ್ಲಿ ಗಂಡಸರ ಪುರುಷತ್ವವು ಪೂರ್ಣ ಪ್ರಮಾಣದಲ್ಲಿ ನಶಿಸಬಹುದೆಂದು ವೈಜ್ಞಾನಿಕ ಸಂಶೋಧನೆಗಳು ತಿಳಿಸಿವೆ. ಬಂಜೆತನಕ್ಕೆ ಕಾರಣಗಳು ಹಲವಾರು ಇವುಗಳಲ್ಲಿ ಮುಖ್ಯವಾಗಿ ದೈಹಿಕ ಅಂಗಾಂಗಗಳ ರಚನೆ ಹಾಗೂ ಕಾರ್ಯ ವಿಧಾನದ ತೊಂದರೆ, ವರ್ಣತಂತುಗಳ ಅಸ್ವಸ್ಥತೆ ಹಾರ್ಮೋನುಗಳ ಏರಿಳಿತ, ರೋಗ ನಿರೋಧಕಗಳ ಕೊರತೆ, ಸೋಂಕುಗಳು, ಜೀನ್‌ಗಳ ರೂಪಾಂತರ ಹಾಗೂ 'ವೆರಿಕೋಸೀಲ್' ನರದ ಸಮಸ್ಯೆಗಳು ಬಹು ಮುಖ್ಯವಾದವು. ಇತ್ತೀಚಿನ ದಿನಗಳಲ್ಲಿ ಪುರುಷರಲ್ಲಿ ಬಂಜೆತನ ಹೆಚ್ಚುತ್ತಿದೆ ಎಂಬ ವಿಚಾರ ನಿಜವೇ? ಹೆಚ್ಚುತ್ತಿರುವ ಪುರುಷರ ಬಂಜೆತನಕ್ಕೆ ಮತ್ಯಾವುದಾದರೂ ಕಾರಣಗಳಿವೆಯೇ? ಇದರ ಅಂಕಿ ಅಂಶಗಳೇನು? ವೀರ್ಯಾಣುವಿನಲ್ಲಿ ಯಾವ ರೀತಿ ಮಾರ್ಪಾಡುಗಳು ಬಂಜೆತನಕ್ಕೆ ಕಾರಣವಾಗಿವೆ? ವೀರ್ಯಾಣುವಿನಿಂದಾಗುವ ತೊಂದರೆಗಳನ್ನು ಯಾವ ಪರೀಕ್ಷೆಗಳ ಮೂಲಕ ತಿಳಿದುಕೊಳ್ಳಬಹುದು? ಮುಂತಾದುವುಗಳ ಕುರಿತು ಸಮ್ಮೇಳನದಲ್ಲಿ ಪ್ರಬಂಧರೂಪದಲ್ಲಿ ಮಂಡಿಸಲಾಗುವುದು.

ಪೀಠಿಕೆ:

ಹೆಚ್ಚುತ್ತಿರುವ ಪುರುಷರಲ್ಲಿ ಬಂಜೆತನ: WHO ವರದಿಯ ಪ್ರಕಾರ ಕಳೆದ 50 ವರ್ಷಗಳಲ್ಲಿ, ಒಬ್ಬ ಸಾಮಾನ್ಯ ಪುರುಷನ ವೀರ್ಯಾಣುವಿನ ಪ್ರಮಾಣವು ಸುಮಾರು 200 ಮಿಲಿಯನ್/ಎಮ್.ಎಲ್‌ಯೆಂದು ನಿಗಧಿಯಾಗಿತ್ತು. ನಂತರದ ದಿನಗಳಲ್ಲಿ ಈ ಪ್ರಮಾಣವು ಕಡಿಮೆಯಾಗುತ್ತಾ ಬಂದು ಕೊನೆಗೆ 20 ಮಿಲಿಯನ್ನಿಗೆ ನಿಂತಿತು. ಆದರೆ 2010ರಲ್ಲಿ ಈ ಪ್ರಮಾಣವು ಪುನ: ಪರಿಷ್ಕರಿಣೆಗೊಂಡು 15 ಮಿಲಿಯನ್ನಿಗೆ ನಿಂತಿದೆ. ಮುಂದಿನ 10–20 ವರ್ಷಗಳಲ್ಲಿ ಗಂಡರ ಪುರುಷತ್ವವು ಪೂರ್ಣ ಪ್ರಮಾಣದಲ್ಲಿ ನಶಿಸಬಹುದೆಂದು ವೈಜ್ಞಾನಿಕ ಸಂಶೋಧನೆಗಳು ತಿಳಿಸಿವೆ.

ಭಾರತದಲ್ಲಿ ಬಂಜೆತನದ ಚಿತ್ರಣ: ಭಾರತವು ಜನಸಂಖ್ಯಾ ಸ್ಫೋಟದಲ್ಲಿ ಪ್ರಪಂಚದಲ್ಲೇ ಎರಡನೆಯ ರಾಷ್ಟ್ರ ಎಂಬ ಕೀರ್ತಿಗೆ ಪಾತ್ರವಾಗಿದ್ದರೂ ಸಹ ಇತ್ತೀಚಿನ ದಿನಗಳಲ್ಲಿ ಬಂಜೆತನದಿಂದ ಬಳಲುವ ಪುರುಷ ಹಾಗೂ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ ಇದಕ್ಕೆ ಕಾರಣ ಜಾಗತೀಕರಣದಿಂದಾಗಿ ಮುಂಚೂಣಿಯಲ್ಲಿರುವ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುವ ಯುವಕರು ಮತ್ತು ಅವರ ಜೀವನ ಶೈಲಿ.

ವಿಶ್ಲೇಷಣೆ:

ಪುರುಷರ ಬಂಜೆತನದ ಇತರ ಮುಖ್ಯ ಕಾರಣಗಳು: ಬಂಜೆತನಕ್ಕೆ ಕಾರಣಗಳು ಹಲವಾರು ಇವುಗಳಲ್ಲಿ ಮುಖ್ಯವಾಗಿ ದೈಹಿಕ ಅಂಗಾಂಗಗಳ ರಚನೆ ಹಾಗೂ ಕಾರ್ಯ ವಿಧಾನದ ತೊಂದರೆ, ವರ್ಣತಂತುಗಳ ಅಸ್ವಸ್ಥತೆ ಹಾರ್ಮೋನುಗಳ ಏರಿಳಿತ, ರೋಗ ನಿರೋಧಕಗಳ ಕೊರತೆ, ಸೋಂಕುಗಳು, ತಳಿಗುಣಗಳ ರೂಪಾಂತರ ಹಾಗೂ 'ವೆರಿಕೋಸೀಲ್' ನರದ ಸಮಸ್ಯೆಗಳು ಬಹು ಮುಖ್ಯವಾದವು. ಮೇಲೆ ವಿವರಿಸಿದ ಕಾರಣಗಳು ನಮ್ಮ ದೇಹದ ಪ್ರತಿಕ್ರಿಯೆಯಿಂದುಂಟಾಗಿರುವಂತಹದ್ದು, ಆದರೆ ಇದರ ಜೊತೆಯಲ್ಲಿ ದೇಹದ ಹೊರಗೆ ಪರಿಸರದ ಪ್ರಚೋದನೆಯು ಮುಖ್ಯ ಪಾತ್ರವಹಿಸುತ್ತದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಕೃತಿಯ ಅಸಮತೋಲನ, ಪರಿಸರ ಮಾಲಿನ್ಯ, ಬದಲಾದ ಜೀವನ ಶೈಲಿ, ಬದಲಾದ ಆಹಾರ ಸೇವನೆ, ಒತ್ತಡದ ಪರಿಸ್ಥಿತಿಗಳು ಮುಖ್ಯ ಕಾರಣಗಳಾಗಿವೆ.

ಜಾಗತೀಕರಣದಿಂದಾಗಿ ಹೆಚ್ಚುತ್ತಿರು ಕೈಗಾರಿಕೆಗಳು ಇವುಗಳಿಂದಾಗಿ ಅರಣ್ಯನಾಶ, ಹೆಚ್ಚುತ್ತಿರುವ ಭೌಗೋಳಿಕ ತಾಪಮಾನ ಪರಿಸರದಲ್ಲಿ ಅಸಮತೋಲನವನ್ನುಂಟು ಮಾಡುತ್ತಿದೆ, ಅಲ್ಲದೇ ಕೈಗಾರಿಕೆಗಳ ರಾಸಾಯನಿಕ ಪದಾರ್ಥಗಳು ಕುಡಿಯುವ ನೀರು, ಆಹಾರದಲ್ಲಿ ಮಿಶ್ರವಾಗಿ ಹಾರ್ಮೋನುಗಳಲ್ಲಿ ಏರುಪೇರು ಮಾಡಿ ವೀರಾಣ್ಯುವಿನ ಉತ್ಪಾದನೆಯನ್ನು ಕಡಿತಗೊಳಿಸುತ್ತದೆ. ಭಾರತೀಯರು ಆಯಾ ಪ್ರದೇಶ, ವಾತಾವರಣ, ತಾಪಮಾನಗಳಿಗನುಗುಣವಾಗಿ ಜೀವನ ಶೈಲಿಯನ್ನು ಹೊಂದಿದ್ದರು. ಉದಾ:– ಬಿಸಿಲು ಹೆಚ್ಚಿರುವ ಪ್ರದೇಶಗಳಲ್ಲಿ ವಾತಾವರಣದ ಶಾಖದಿಂದ ದೇಹದಲ್ಲುಂಟಾಗುವ ದುಷ್ಪರಿಣಾಮಗಳನ್ನು ತಡೆಗಟ್ಟಲು ಸಡಿಲವಾದ ಹತ್ತಿಬಟ್ಟೆಗಳನ್ನು ಧರಿಸುತ್ತಿದ್ದರು ಅಲ್ಲದೇ ತಣ್ಣೀರಿನ ಸ್ನಾನವು ಆ ಪ್ರದೇಶದಲ್ಲಿ ಸಾಮಾನ್ಯವಾಗಿದ್ದು ದೇಹದ ಉಷ್ಣತೆಯನ್ನು ಕಡಿಮೆ ಮಾಡಲು ಸಹಾಯವಾಗುತ್ತಿತ್ತು. ವೀರ್ಯಾಣುವಿನ ಉತ್ಪಾದನೆಯು ಅತ್ಯಂತ ಸೂಕ್ಷ್ಮವಾಗಿದ್ದು ದೇಹದ ಶಾಖ ಹೆಚ್ಚಾದಂತೆ ವೀರ್ಯಾಣುಗಳ ಉತ್ಪಾದನೆಯಲ್ಲಿ ಏರಿಳಿತವುಂಟಾಗುತ್ತದೆ. ಕುಗ್ಗುತ್ತಿರುವ ವೀರ್ಯಾಣು ಸಂಖ್ಯೆಗೆ ನಮ್ಮ ಯುವಕರು ಧರಿಸುವ ಬಿಗಿಯಾದ ಜೀನ್ಸ್ ಮತ್ತಿತ್ತರ ಉಡುಪುಗಳು ಕಾರಣ.

ಆಹಾರ ಶೈಲಿಗೂ ಬಂಜೆತನಕ್ಕೂ ಇರುವ ಸಂಬಂಧ: ಭಾರತೀಯ ಆಹಾರ ಶೈಲಿಯು ಅತ್ಯಂತ ಉತ್ಕೃಷ್ಟವಾಗಿದ್ದು ನಮ್ಮ ಆಹಾರದಲ್ಲಿ ಪ್ರೋಟೀನು, ಪಿಷ್ಟ, ಸಕ್ಕರೆ, ವಿಟಮಿನುಗಳು, ಲವಣಗಳು ಮತ್ತು ಆ್ಯಂಟಿ ಆಕ್ಸಿಡೆಂಟುಗಳ ಪ್ರಮಾಣವು ಸಮತೋಲನವಾಗಿರುತ್ತಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಜಂಕ್ ಪುಡ್‌ಗಳನ್ನು ತಮ್ಮ ಆಹಾರದ ಮುಖ್ಯ ಭಾಗವಾಗಿ ಪರಿಗಣಿಸಿರುವ ನಮ್ಮ ಯುವ ಜನಗೆ ಸ್ಥೂಲತೆ, ಬೊಜ್ಜುತನ, ಅರ್ಬುದ ರೋಗ (ಕ್ಯಾನ್ಸರ್) ಸಕ್ಕರೆ ಕಾಯಿಲೆ ಹಾಗೂ ಬಂಜೆತನ ಮುಂತಾದ ಅಸ್ವಸ್ಥತೆಗಳಿಗೆ ತುತ್ತಾಗುತ್ತಿದ್ದಾರೆ.

ಜಂಕ್ ಪುಡ್‌ಗಳು ಹೆಚ್ಚಿನ ಕ್ಯಾಲರಿ ಹೊಂದಿದ್ದು ಇವುಗಳ ಸಂರಕ್ಷಣೆಗಾಗಿ ಹಲವಾರು ವಿಷಕಾರಕ ರಾಸಾಯನಿಕಗಳನ್ನು ಬಳಸುತ್ತಾರೆ. ಇವು ದೇಹದಲ್ಲಿ ಫ್ರೀ ರ‍್ಯಾಡಿಕಲ್ ಅಥವಾ ರಿಯಾಕ್ಟಿವ್ ಆಕ್ಸಿಜನ್



ಚಿತ್ರ2: ಮೊಬೈಲ್ ಫೋನುಗಳ ಹಾಗೂ ಲ್ಯಾಪ್ ಟಾಪ್‌ಗಳ ಬಳಕೆ ಮತ್ತು ಅದರ ಪರಿಣಾಮ



ಚಿತ್ರ3: ಫ್ರೀ ರ್ಯಾಡಿಕಲ್ಸ್‌ನ ಪರಿಣಾಮ:

ವರ್ಣತಂತುಗಳ ವ್ಯತ್ಯಾಸ	ಟಿ=200	%\
ಸಂಖ್ಯಾತ್ಮಕ ಲಿಂಗ ವರ್ಣತಂತುಗಳ ಬದಲಾವಣೆ	04	2
ರಚನಾತ್ಮಕ ವರ್ಣತಂತುಗಳ ಬದಲಾವಣೆ	02	1
ರಚನಾತ್ಮಕ ಲಿಂಗ ವರ್ಣತಂತುಗಳ ಬದಲಾವಣೆ	09	4.5
ಒಟ್ಟು ವರ್ಣತಂತುಗಳ ವ್ಯತ್ಯಾಸ	15	7.5
ಸರಿ0ಯಾದ ಕ್ಯಾರಿ0ಯೋಟೈಪ್	185	92.5

ಕೋಷ್ಟಕ 1: ವರ್ಣತಂತುವಿನಲ್ಲಿರುವ ತಳಿಗುಣಗಳ ರೂಪಾಂತರದ ಮಾಹಿತಿ

ಮರುಕಳಿಸುವ ಗರ್ಭಪಾತಕ್ಕೆ ಗಂಡಸೆಷ್ಟು ಕಾರಣ?

ಡಾ. ಮಾಲಿನಿ ಎಸ್. ಎಸ್
ಸಹಾ0ಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾಲ0ಯ, ಮೈಸೂರು

ಅನಾದಿ ಕಾಲದಿಂದಲೂ ಕೌಟುಂಬಿಕ ಕಷ್ಟ ಅನಿಷ್ಟಗಳಿಗೆ ಹೆಣ್ಣನ್ನು ದೂರುವ ಪ್ರವೃತ್ತಿ ಇದೆ. ಮಕ್ಕಳಾಗದ ದಂಪತಿಗಳಲ್ಲಿ ಹೆಣ್ಣಿಗೆ ಬಂಜೆಯೆಂಬ ಪಟ್ಟಕಟ್ಟಿ ಗಂಡಸು ಷ್ಟೂರು ಮದುವೆಯಾಗಿರುವ ನಿದರ್ಶನಗಳು ನೂರಾರು. ಮಕ್ಕಳಿಲ್ಲದ ಹೆಂಗಸನ್ನು ಬಂಜೆಯೆಂದು ಮೂದಲಿಸುವ ಸಮಾಜ ಅದಕ್ಕೆ ಹೆಂಗಸೇ ನೇರ ಕಾರಣವೆಂದು ಗುರುತಿಸುತ್ತದೆ. ಆದರೆ ದಂಪತಿಗಳ ಬಂಜೆತನ ಹಾಗೂ ಮರುಕಳಿಸುವ ಗರ್ಭಪಾತಕ್ಕೆ ಹೆಂಗಸಿನಷ್ಟೇ ಗಂಡಸು ಕಾರಣನೆಂಬುದು ಅಕ್ಷರಶಃ ಸತ್ಯ. ಮೂರು ಅಥವಾ ಮೂರಕ್ಕಿಂತ ಹೆಚ್ಚಿನ ಗರ್ಭಪಾತಗಳನ್ನು ನಾವು ಮರುಕಳಿಸುವ ಗರ್ಭಪಾತವೆನ್ನುತ್ತೇವೆ. ಮನುಷ್ಯರಲ್ಲಿ ಶೇಕಡಾ 15–20ರಷ್ಟು ಗರ್ಭಧಾರಣೆಗಳು ಗರ್ಭಪಾತದಲ್ಲಿ ಕೊನೆಯಾಗುತ್ತದೆ. ಗರ್ಭಪಾತವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗುತ್ತದೆ. ಮೊದಲನೆಯದು ಐದು ವಾರಕ್ಕೆ ಮೊದಲಿನ, ಐದರಿಂದ – ಹತ್ತುವಾರದ ಒಳಗಿನ ಹಾಗೂ ಹತ್ತುವಾರದ ನಂತರದ ಗರ್ಭಪಾತಗಳು. ಮರುಕಳಿಸುವ ಗರ್ಭಪಾತವು ಒಂದು ಕ್ಲಿಷ್ಟಕರವಾದ ಭಾವನಾತ್ಮಕ ಮೇದನೆಯಾದರೂ ಬಹುಪಾಲು ಗರ್ಭಪಾತಗಳಿಗೆ ನಿಖರವಾರ ಕಾರಣ ದೊರಕುವುದಿಲ್ಲ.

ಮಹಿಳೆಯರಿಗೆ ವಯಸ್ಸು ಹೆಚ್ಚಾದ ಹಾಗೆ ಗರ್ಭಧರಿಸುವ ಸಂಭವ ಕಡಿಮೆಯಿರುತ್ತದೆ. ಗರ್ಭಧರಿಸಿದರೂ ಅದು ಉಳಿಯುವ ಸಾಧ್ಯತೆ ಕಡಿಮೆ. ಹಾಗಾಗಿ ಹೆಚ್ಚಾದ ವಯಸ್ಸು ಗರ್ಭಪಾತಕ್ಕೆ ಕಾರಣವಾಗಬಹುದು. ಇದಲ್ಲದೆ ಆಹಾರ ಪದಾರ್ಥಗಳಿಗೆ ಬಣ್ಣ ನೀಡಲು ಬಳಸುವ ರಾಸಾಯನಿಕಗಳು, ಆಹಾರ ಕೆಡದಂತೆ ಬಳಸುವ ಕೆಲವು ಹಾನಿಕಾರಕ ರಾಸಾಯನಿಕಗಳು ಹಾಗೂ ಆಹಾರದ ರುಚಿಯನ್ನು ಹೆಚ್ಚಿಸಲು ಬಳಸುವ ರಾಸಾಯನಿಕ ಪದಾರ್ಥಗಳಿಂದ ಬೆಳೆಯುತ್ತಿರುವ ಭ್ರೂಣಕ್ಕೆ ಹಾನಿಯಾಗಿ ಗರ್ಭಪಾತವಾಗಬಹುದು. ಅಲ್ಲದೆ ಹಾರ್ಮೋನುಗಳ ಏರುಪೇರು, ವರ್ಣತಂತುಗಳ ವ್ಯತ್ಯಾಸ ಹಾಗೂ ಬೆಳೆಯುತ್ತಿರುವ ಭ್ರೂಣದಲ್ಲಿ ವರ್ಣತಂತುಗಳು ಹಾಗೂ ಜೀನ್‌ಗಳ ಸಂಖ್ಯೆ ಹಾಗೂ ಆಕಾರದ ವ್ಯತ್ಯಾಸದಿಂದ ಗರ್ಭಪಾತವಾಗಬಹುದು. ಮರುಕಳಿಸುವ ಗರ್ಭಪಾತದಲ್ಲಿ ಸುಮಾರು ಶೇಕಡಾ ಐವತ್ತರಷ್ಟು ಗರ್ಭಪಾತಗಳು, ವರ್ಣತಂತುಗಳ ವ್ಯತ್ಯಾಸದಿಂದ ಉಂಟಾಗುತ್ತದೆ. ಮರುಕಳಿಸುವ ಗರ್ಭಪಾತಕ್ಕೆ ಗಂಡಸು ಹೇಗೆ ಕಾರಣ ಕರ್ತನಾಗುತ್ತಾನೆ? ವೀರ್ಯಾಣುವಿನಲ್ಲಿ ಯಾವ ರೀತಿ ಮಾರ್ಪಾಡುಗಳು ಮರುಕಳಿಸುವ ಗರ್ಭಪಾತಕ್ಕೆ ಕಾರಣವಾಗಿವೆ? ಇದಲ್ಲದೆ ವೀರ್ಯಾಣುವಿನಲ್ಲಿ ಕಂಡುಬರುವ ಇತರೆ ತೊಂದರೆಗಳು ಹೇಗೆ ಮರುಕಳೀಸುವ ಗರ್ಭಪಾತಕ್ಕೆ ಕಾರಣವಾಗಿದೆ? ಮರುಕಳಿಸುವ ಗರ್ಭಪಾತದಲ್ಲಿ ಗಂಡಸಿನ ಪಾತ್ರವನ್ನು ಹೇಗೆ ದೃಢಪಡಿಸಬಹುದು? ವೀರ್ಯಾಣುವಿನಿಂದಾಗುವ ತೊಂದರೆಗಳನ್ನು ಯಾವ ಪರೀಕ್ಷೆಗಳ ಮೂಲಕ ತಿಳಿದುಕೊಳ್ಳಬಹುದು? ಮುಂತಾದುವುಗಳ ಕುರಿತ ಸಂಶೋಧನೆಗಳ ಸಾರವನ್ನು ಈ ಪ್ರಬಂಧದ ರೂಪದಲ್ಲಿ ಸಮ್ಮೇಳನದಲ್ಲಿ ಮಂಡಿಸಲಾಗುವುದು.

ಕಾರ್ಯನಿರ್ವಹಣೆಗಳ ಪರೀಕ್ಷೆಗಳು, ವರ್ಣತಂತುಗಳ ಪರೀಕ್ಷೆಗಳು, ವೈ ವರ್ಣತಂತುವಿನ ಪರೀಕ್ಷೆ, ಜೀವರಸಾಯನಿಕ, ಕಿಣ್ವಗಳ ಪರೀಕ್ಷೆ, ವೀರ್ಯಾಣು ಪ್ಲಾಸ್ಮದಲ್ಲಿ ಪ್ರಕ್ಟೋಸ್, ಸಿಟ್ರಿಕ್ ಆಮ್ಲ, ಇನ್‌ಹಿಬಿನ್‌ಗಳ ಪರೀಕ್ಷೆ, ಇಸ್ಟ್ರೋಜನ್, ಎಫ್.ಎಸ್.ಹೆಚ್, ಎಲ್. ಎಚ್. ಮತ್ತು ಹಲವು ಹಾರ್ಮೋನುಗಳ ಪರೀಕ್ಷೆಗಳು, ಆಂಟಿಸ್ಪರ್ಮ್ ಆಂಟಿ ಪ್ರತಿಕಾಯ ಪತ್ತೆ ಹಚ್ಚುವಿಕೆ, ಸೂಪರ್ ಆಕ್ಸೈಡ್ ಡಿಸ್‌ಮ್ಯುಟೇಸ್, ಕ್ಯಟಲೇಸ್ ಮುಂತಾದ ಕಿಣ್ವಗಳ ಅಧ್ಯಯನವು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವೀರ್ಯಾಣುವಿನ ಸಂಖ್ಯೆ, ಚಲನೆ, ಕಾರ್ಯನಿರ್ವಹಣೆ ಮತ್ತು ಗುಣಲಕ್ಷಣಗಳ ಬಗ್ಗೆ ಮಾಹಿತಿ ನೀಡುತ್ತದೆ. ಈ ಪರೀಕ್ಷೆಗಳ ಫಲಿತಾಂಶ ದೊರೆತ ನಂತರ ಸಮಸ್ಯೆಯೇನಾದರೂ ಇದ್ದ ಪಕ್ಷದಲ್ಲಿ ಇನ್ನೂ ಹೆಚ್ಚಿನ ಆಧುನಿಕ ಪರೀಕ್ಷೆಗಳ ಮೊರೆ ಹೋಗಬಹುದು.



ಚಿತ್ರ 1: ವಿರೂಪಗೊಂಡ ವೀರ್ಯಾಣುಗಳು



ಚಿತ್ರ 2: ವಿರೂಪಗೊಂಡ ವೀರ್ಯಾಣುಗಳು

ಪರೀಕ್ಷೆಗಳು		ಸಂಖ್ಯೆ	ಸರಾಸರಿ
ಪ್ರಮಾಣ	RPL	10	2.3
(Volume)	Control	13	3.6
ಮೀರ್ಯಾಣು ಸಂಖ್ಯೆ	RPL	10	24.8
(sperm count)	Control	13	44.4
ಕಾರ್ಯಸಾಧ್ಯತೆ (viability)	RPL	10	41.4
	Control	13	57.5
ವೀರ್ಯಾಣು ಪೊರೆಯ ಪರೀಕ್ಷೆ	RPL	10	45.1
	Control	13	71.6
ವೀರ್ಯಾಣುಗಳು	RPL	10	63
ಕ್ರೊಮಾಟಿನ್ ಪರೀಕ್ಷೆ	Control	13	80

ಕೋಷ್ಟಕ 1: ಕ್ರಿಯಾತ್ಮಕ ವೀರ್ಯಾಣುಗಳ ಪರೀಕ್ಷೆ

ನಾಟ್ಯಯೋಗದ ಮೂಲಕ ಚಿಕಿತ್ಸೆ

ಡಾ.ಚೇತನಾ ರಾಧಾಕೃಷ್ಣ.ಪಿ.ಎಂ
ಅತಿಥಿ ಉಪನ್ಯಾಸಕರು, ಕೆ.ಎಸ್.ಜಿ.ಹಚ್. ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳಿಗೆ ಪ್ರಮುಖವಾಗಿರುವ ಶಾಸ್ತ್ರೀಯ ನೃತ್ಯಪ್ರಕಾರಗಳು, ಮಾನವ ಜೀವನ ಶೈಲಿಯ ಕ್ರಮವನ್ನು ಸಮೀಕರಿಸುವಲ್ಲಿ ಅತ್ಯುನ್ನತ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಮಾನವನ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಪ್ರತ್ಯಕ್ಷವಾಗಿ ಉತ್ತಮ ಪರಿಣಾಮವನ್ನು ಬೀರಿರುವುದು ನಾವು ಕಂಡುಕೊಳ್ಳಬಹುದು.

ವೇದೋಪವೇದೈಃ ಸಂಬಂಧೋ
ನಾಟ್ಯವೇದ ಮಹಾತ್ಮನಾ
ಏವಂ ಭಗವತಃ ಸೃಷ್ಟೋ
ಬ್ರಹ್ಮಣಾ ಸರ್ವವೇದಿನಃ

ನಾಟ್ಯಶಾಸ್ತ್ರವು ನಾಟ್ಯವೇದದಿಂದ ಬಂದಂತಹದ್ದು. ನಾಟ್ಯವೇದವು ಚತುರ್ವಿಧ ವೇದಗಳಿಂದ ಬಂದಂತಹ ಉಪವೇದ. ಆರ್ಯುವೇದ, ವಾಸ್ತು ಇತ್ಯಾದಿ ಉಪವೇದಗಳಂತೆಯೇ ಇದು ಸಹ ಒಂದು ಉಪವೇದ. ಋಗ್‌ವೇದ, ಶಬ್ದಗಳನ್ನು ಹಾಗೂ ಅವುಗಳ ಪರಿಣಾಮಗಳನ್ನು ಸೂಚಿಸುತ್ತವೆ.

ವಿಶ್ವದ ಲಯ ಹಾಗೂ ಅವುಗಳ ಪರಿಣಾಮಗಳನ್ನು ಸಾಮವೇದದಲ್ಲಿ ಕಾಣಬಹುದು. ಯಜುರ್ವೇದ ಏಕಾಗ್ರತೆ ಅಥವಾ ಮಾನಸಿಕ ಸಾಮರ್ಥ್ಯಗಳ ಬಗ್ಗೆ ಸೂಚಿಸುತ್ತದೆ. ಅಥರ್ವವೇದವು ಶರೀರದ ಅಂಶಗಳನ್ನು, ಮಾನವ ದೇಹದ ಅಂಶಗಳನ್ನು ಸೂಚಿಸುತ್ತದೆ. ಇತರ ಮೂರು ವೇದಗಳ ಆಧಾರದಿಂದ ಈ ವೇದವು ನಿಲುವು ಗೊಳ್ಳುತ್ತದೆ. ಆತ್ಮದ ಪಾವಿತ್ರ್ಯತೆಯನ್ನು ಸಾಧಿಸಿ ಪರಮಾತ್ಮನಲ್ಲಿ ಆತ್ಮವನ್ನು ಲೀನಮಾಡುವುದಕ್ಕೆ ಮಾನವ ಶರೀರ ಒಂದು ಮಾಧ್ಯಮ. 'ಯೋಗ' ಎಂಬ ಪದ ಆತ್ಮದ ಪರಿಪೂರ್ಣತೆ ಯನ್ನು ಸೂಚಿಸುತ್ತದೆ. ಮಾನವ ಶರೀರವೇ 'ಯೋಗ'ಕ್ಕೆ ಸಾಧನವಾದ್ದರಿಂದ ಮಾನವ ಶರೀರದ ಸೌಷ್ಠವ ಹಾಗೂ ಆರೋಗ್ಯವು ಪ್ರತಿಯೊಬ್ಬ ಮಾನವನ ಹಕ್ಕು. ಮನಸ್ಸು–ದೇಹ–ಆತ್ಮಗಳ ಒಂದು ಸಮತೋಲನತ್ವ, ಆರೋಗ್ಯಕರ ಜೀವನಕ್ಕೆ ಸಹಾಯಕವಾಗುತ್ತದೆ. ಮನಸ್ಸು–ದೇಹ–ಆತ್ಮಗಳ ಸಮತೋಲನವಿಲ್ಲದಾಗ ಅನಾರೋಗ್ಯಕಂಡುಬರುತ್ತದೆ. ನಾಟ್ಯಯೋಗ ಅಥವಾ ನಾಟ್ಯವೇದ ಈ ಸಾಧನೆಗೆ ಮಾರ್ಗದರ್ಶಿಯಾಗಿದೆ. ಈ ಒಂದು ಪರಿಕಲ್ಪನೆಯ ಆಧಾರದಮೇಲೆ ನಾಟ್ಯಯೋಗದ ಮೂಲಕ ಚಿಕಿತ್ಸೆ ಕೊಡುವುದರ ಬಗ್ಗೆ ಈ ಒಂದು ಪ್ರಬಂಧವನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

ಸಮತೋಲನದ ಸುಧಾರಣೆ: ಎಲ್ಲಾ ಶಾಸ್ತ್ರೀಯ ನೃತ್ಯಗಳಲ್ಲಿ ವಿವಿಧ

ಆರೋಗ್ಯವಂತ ಹೃದಯ: ನೃತ್ಯ ಮತ್ತು ಫಿಟ್ನೆಸ್ ಯವಾಗಲು ಒಂದಕ್ಕೊಂದು ಜೊತೆಯಾಗಿರುತ್ತದೆ. ನೃತ್ಯವು ಎಲ್ಲಾ ವಿಧಗಳಲ್ಲಿಯೂ ನಮ್ಮ ಹೃದಯಕ್ಕೆ ಬಹಳ ಪ್ರಯೋಜನಕಾರಿಯಾಗಿದೆ. ನೃತ್ಯ ಮಾಡುವಾಗ ನಮ್ಮ ದೇಹದೊಳಗೆ ರಕ್ತ ಸಂಚಾರವು ಬಹಳ ವೇಗವಾಗಿ ಹೃದಯಕ್ಕೆ ಹರಿದು ಬರುತ್ತದೆ ಮತ್ತು ದೇಹದಲ್ಲಿ ರಕ್ತ ಪರಿಚಲನೆ ಹೆಚ್ಚಿಸುತ್ತದೆ. ಕೆಲವು ಚಲನೆಗಳು ಹಲವಾರು ರೋಗನಿರೋಧಕ ಗುಣಗಳನ್ನು ಹೊಂದಿರುತ್ತವೆಂದು ಹಲವಾರು ಪ್ರಯೋಗಗಳಿಂದ ತಿಳಿದುಬಂದಿರುತ್ತದೆ. ಹಲವಾರು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳಲ್ಲಿ ನೃತ್ಯದ ಪ್ರಭಾವ ಹೆಚ್ಚು. ವಿವಿಧ ನೃತ್ಯಗಳಿಂದ ದೇಹದಲ್ಲಿರುವ ಕೊಬ್ಬಿನಾಂಶವನ್ನು ಕರಗಿಸಬಹುದೆಂದು ಮತ್ತು ಹೃದಯಸಂಬಂಧ ಶಸ್ತ್ರಚಿಕಿತ್ಸೆಯಾಗಿರುವ ಮಂದಿಯಲ್ಲೂ ನೃತ್ಯಾಭ್ಯಾಸದಿಂದ ಹೃದಯವನ್ನು ಹತೋಟಿಯಲ್ಲಿಡ ಬಹುದಾಗಿ ಅನೇಕ ಪ್ರಯೋಗಗಳಿಂದ ತಿಳಿದು ಬಂದಿರುತ್ತದೆ.

ಶಾಸ್ತ್ರೀಯ ನೃತ್ಯದ ಪ್ರತಿಯೊಬ್ಬ ವಿದ್ಯಾರ್ಥಿಯು ಅಭ್ಯಾಸದ ಪ್ರಯೋಜನವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ನೃತ್ಯದ ಅಭ್ಯಾಸ ಶ್ರದ್ಧೆಯಿಂದ ಮಾಡಿದಲ್ಲಿ ಅಭ್ಯಾಸವೆ ಮನುಷ್ಯನು ಪರಿಪೂರ್ಣತೆಯನ್ನು ಹೊಂದುತ್ತಾನೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಸಾಧನೆಯು ಉನ್ನತ ಪದವಿಯ ಏರಿಕೆಗೆ ಸಹಾಯ ಮಾಡುತ್ತದೆ.

ವಿಶ್ವ ಆರೋಗ್ಯ ಸಂಘಟನೆಯ ಪ್ರಕಾರ ಈಗಿನ ಬಹಳಷ್ಟು ಜನರು ಹೈಪರ್ ಟೆನ್ಷನ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ನೃತ್ಯದ ಮುದ್ರಾಭ್ಯಾಸ ಮತ್ತು ಅದರ ಆಚರಣೆಗಳಿಂದ ದೇಹ ಮತ್ತು ಮನಸ್ಸುಗಳಿಗೆ ರೋಗನಿರೋಧಕವಾಗಿರುವುದು ಹಲವಾರು ಪ್ರಯೋಗಗಳಿಂದ ತಿಳಿದುಬರುತ್ತದೆ. ಆಧುನಿಕ ಜೀವನಶೈಲಿಯ ಒತ್ತಡವನ್ನು ತಡೆಯಲು ಮತ್ತು ಮುಕ್ತ ಜೀವನಶೈಲಿಯನ್ನು ಆಚರಿಸಲು ಇದು ತುಂಬ ಸಹಕಾರಿಯಾಗುತ್ತದೆ. ಈಗಿನ ಆಧುನಿಕ ಉಪಕರಣಗಳ ಆಧಾರಿತ ಜೀವನದಲ್ಲಿ ಶಾಸ್ತ್ರೀಯ ಮಾದರಿಯ ಜೀವನ ಶೈಲಿಯ ನಿರ್ವಹಣೆಗೆ ಕೆಲವು ಶಾಸ್ತ್ರೀಯ ವಿಧಾನಗಳನ್ನು ಬಳಸಬಹುದು.

ತೂಕ ನಿಯಂತ್ರಣ: ಶಾಸ್ತ್ರೀಯ ನೃತ್ಯಗಳು ದೇಹದ ಸ್ನಾಯುಗಳನ್ನು ಸಕ್ರಿಯ ಮಾಡುತ್ತವೆ. ಶಾಸ್ತ್ರೀಯ ನೃತ್ಯದ ಉತ್ತಮ ಪ್ರದರ್ಶನ ನೀಡಲು ಉತ್ತಮ ಅಭ್ಯಾಸ ಅತ್ಯಾವಶ್ಯಕ. ನಿಯಮಿತವಾಗಿ ಮಾಡುವ ನೃತ್ಯಾಭ್ಯಾಸದಿಂದ ದೇಹದ ತೂಕ ಕಳೆದುಕೊಳ್ಳಬಹುದು. ನೃತ್ಯ ಮಾಡುವಾಗ ಅಂಗಾಂಗಗಳ ಚಲನೆಗಳ ಮೂಲಕ ದೇಹದಿಂದ ಕ್ಯಾಲೋರಿಗಳನ್ನು ಕರಗಿಸಬಹುದು. ದೇಹವು ಅತಿಯಾಗಿ ದಪ್ಪಗಿದ್ದರೆ ಅಥವಾ ಬೊಜ್ಜು ಅತಿಯಾಗಿದ್ದರೆ ಇದನ್ನು ನಿಯಂತ್ರಿಸಲು ನೃತ್ಯ ಉತ್ತಮ ಸಾಧನ. ಉತ್ತಮ ಮೈಕಾಂತಿ ಮತ್ತು ಶಕ್ತಿಯನನು ಪಡೆಯಲು ಇದು ಸಹಾಯಕ.

ಆರೋಗ್ಯಕರ ಮತ್ತು ಹೊಳಪಿನ ಮೈಕಾಂತಿ: ಶಾಸ್ತ್ರೀಯ ನೃತ್ಯ ಪಟುಗಳು ನೃತ್ಯ ಮಾಡುವಾಗ ತಮ್ಮ ಕಣ್ಣಿನ ಹುಬ್ಬುಗಳು, ಕಣ್ಣುಗಳು, ಕುತ್ತಿಗೆ, ತುಟಿಗಳನ್ನು ಸಂತೋಷ, ಕೋಪ, ಆಶ್ಚರ್ಯ, ದುಃಖ, ಅಸೂಯೆ ಮತ್ತು ಪ್ರೀತಿಯ ತೋರ್ಪಡಿಕೆಗೆ ಬಳಸುತ್ತಾರೆ. ನೃತ್ಯ ಪಟುಗಳ ಮುಖದ ಸ್ನಾಯುಗಳ ನಿರಂತರ ಚಲನೆಗಳಿಂದ ಮುಖದ ಕಾಂತಿಯು ಉತ್ತಮವಾಗಿರುವಂತೆ ಮಾಡುತ್ತದೆ. ಅವರಿಗೆ ಸುಂದರವಾದ ಕಣ್ಣುಗಳು ಇರುತ್ತವೆ. ಅವರ ಆಕರ್ಷಕವಾದ ಕಣ್ಣುಗಳ ಚಲನೆಗಳ ಪ್ರತಿಯಾಗಿ ಸ್ಪಷ್ಟ ದೃಷ್ಟಿ ಮತ್ತು ಕಣ್ಣುಗಳ ಆರೋಗ್ಯ ಮತ್ತು ಸೌಂದರ್ಯವು ವೃದ್ಧಿಸುತ್ತವೆ. ಕಣ್ಣಿನ ಸ್ನಾಯುಗಳು ಬಲವಾಗುತ್ತವೆ. ಆದುದರಿಂದ ಈ ಭಾರತೀಯ ಶಾಸ್ತ್ರೀಯ ನೃತ್ಯಗಳಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತಹ ಹಲವಾರು ಸಮಸ್ಯೆಗಳಿಗೆ ಪರಿಹಾರ ದೊರಕುತ್ತವೆ. ಭಾರತೀಯ ಶಾಸ್ತ್ರೀಯ ನೃತ್ಯ ಪ್ರಕರಗಳು ಹಿಂದಿನ ಕಾಲದಿಂದಲೂ ನೃತ್ಯಗಾರರ ಆರೋಗ್ಯದೆಡೆಗೆ ಸ್ಪಂದಿಸುತ್ತಾ ಬಂದಿರುತ್ತದೆ. ಅನೇಕ ಸಂದರ್ಭಗಳಲ್ಲಿ ಅವರ ದೈಹಿಕ ಮತ್ತು ಮಾನಸಿಕ ವ್ಯಾಯಾಮಗಳನ್ನು ಯೋಗಿಗಳಿಗೆ ಹೋಲಿಸುತ್ತಾರೆ. ಭರತನಾಟ್ಯ, ಕಥಕ್, ಒಡಿಸ್ಸಿ, ಕೂಚಿಪುಡಿ, ಕಥಕ್ಕಳಿ, ಮೋಹಿನಿಯಾಟ್ಟಂ ಮಣಿಪುರಿ ಭಾರತೀಯ ನೃತ್ಯ ಶೈಲಿಯ ಪ್ರಮುಖ ಏಳು ರೀತಿಯ ವರ್ಗಗಳು. ಈಗ ಸತ್ರೀಯಾ ನೃತ್ಯವನ್ನು ಸಹ ಈ ಶಾಸ್ತ್ರೀಯ ನೃತ್ಯಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಸರಿಯಾದ ರೀತಿಯಲ್ಲಿ ನೃತ್ಯಾಭ್ಯಾಸ ಮಾಡಿದಲ್ಲಿ ದೈಹಿಕ ಮತ್ತು ಮಾನಸಿಕವಾಗಿ ಶಕ್ತಿಬರುವಂತಾಗುತ್ತದೆ. ದೇಹ ಮತ್ತು ಮನಸ್ಸಿನ ಸಂಬಂಧವನ್ನು ಇದು ಇನ್ನಷ್ಟು ಗಟ್ಟಿಗೊಳಿಸುತ್ತದೆ.

ಕಥಕ್ ನೃತ್ಯ: ಕಥಕ್ ಉತ್ತರ ಭಾರತೀಯ ಮೂಲದಿಂದ ಬಂದಂತಹ ಒಂದು ಶಾಸ್ತ್ರೀಯ ನೃತ್ಯ ಪ್ರಕಾರವಾಗಿದೆ. ಈ ಥ್ರಾಬ್ ಮದರಿಯ ನೃತ್ಯವು ಚಿಕಿತ್ಸೆಗೆ ಬಳಸುವಂತಹದಾಗಿದ್ದು ಇದು ದೈಹಿಕ ವ್ಯಾಯಾಮವಾದ ಒಂದು ರೂಪವಾಗಿ ಇಂದಿಗೂ ಕೂಡ ಬಳಸ ಲಾಗುತ್ತಿದೆ.

ಮಣಿಪುರಿ: ಉತ್ತರ ಭಾರತದ ಈಶಾನ್ಯ ಪ್ರದೇಶವಾದ ಮಣಿಪುರದಲ್ಲಿ ಹುಟ್ಟಿದ ನೃತ್ಯ ಮಣಿಪುರಿ ನೃತ್ಯ. ಹೊರನೋಟಕ್ಕೆ ಈ ನೃತ್ಯ ಮೃದು ಎನಿಸಿದರೂ ನೃತ್ಯದ ಹಿಂದೆ ಬಹಳ ಕಠಿಣ ಶ್ರಮವಿರುತ್ತದೆ. ಮಣಿಪುರಿ ನೃತ್ಯಗಾರರು ದುಂಡಾಗಿ ಚಲಿಸುತ್ತಾ ಮತ್ತು ಯಾವುದೇ ತಳಮಳ ವಿಲ್ಲದೆ, ಚೂಪಾದ ಅಂಚುಗಳು ಮತ್ತು ಸರಳ ರೇಖೆಗಳನ್ನು ತಪ್ಪಿಸುತ್ತಾ ನರ್ತಿಸುವರು. ಇದು ನೃತ್ಯಗಾರರಿಗೆ ಮನಸ್ಸಿನ ಶಾಂತಿ ಮತ್ತು ದೇಹದ ನಿಯಂತ್ರಣವನ್ನು ಒದಗಿಸುತ್ತದೆ.

ಕಥಕ್ಕಳಿ: ಕಥಕ್ಕಳಿ ಭಾರತೀಯ ಶಾಸ್ತ್ರೀಯ ನೃತ್ಯದ ಒಂದು ಅಂಗ. ದಕ್ಷಿಣ ಭಾರತದ ಕೇರಳ ರಾಜ್ಯದಲ್ಲಿ ಹುಟ್ಟಿಕೊಂಡ ನೃತ್ಯ.

ಕಥಕ್ಕಳಿಯ ಸಿದ್ಧಾಂತದ ಪ್ರಕಾರ, ಮಾನವ ದೇಹವನ್ನು ಸೂಕ್ಷ್ಮವಾದ ಅಂಗರಚಾನಾ ಪದ್ಧತಿಯಲ್ಲಿ ವಿಭಜನೆ ಮಾಡಲಾಗಿದೆ. ಅವುಗಳು ಪ್ರತೇಕ್ಯವಾಗಿ ಕಾರ್ಯನಿರ್ವಹಿಸುವುವು ಅಥವಾ ಒಟ್ಟುಗೂಡಿ ಕಾರ್ಯನಿರ್ವಹಿಸುವವು. ಕಥಕ್ಕಳಿ ನೃತ್ಯಪಟುಗಳು ಚೌಕಟ್ಟು ಆಕಾರದಲ್ಲಿ ಅಥವಾ ಆಯತಾಕಾರದ ಆಕರಗಳಲ್ಲಿ ನೃತ್ಯವನ್ನು ಮಾಡುತ್ತಾರೆ. ಈ ನೃತ್ಯದಲ್ಲಿ ಜಿಗಿತ, ಹಾರುವಿಕೆ ಇತ್ಯಾದಿ ಪ್ರಕಾರಗಳು ಇರುತ್ತವೆ. ನೃತ್ಯಪಟುಗಳು ತಮ್ಮ ಒಂದು ಕಾಲಿನ ಮೇಲಿರುವ ಬಾರವನ್ನು ಮತ್ತೊಂದು ಕಾಲಿಗೆ ವರ್ಗಾಯಿಸುತ್ತ ನೃತ್ಯವನ್ನು ಮಾಡುತ್ತಾರೆ. ಇದನ್ನು ಮಾಡುವಾಗ ತಮ್ಮ ಅಭಿನಯವನ್ನು ಕೂಡಾ ವಿಸ್ತಾರವಾಗಿ ಮಾಡುತ್ತಾರೆ. ಇತರೆ ಶಾಸ್ತ್ರೀಯ ನೃತ್ಯಗಳಂತೆಯೇ ಇದ್ದರೂ ಸಹ, ಕಥಕ್ಕಳಿಯಲ್ಲಿ ಹೆಚ್ಚು ಸ್ನಾಯುಗಳಿಗೆ ಒತ್ತಡ ನೀಡುವ ಭಂಗಿಗಳು ಇರುತ್ತವೆ. ಮುಖದ ಸ್ನಾಯುಗಳ ಚಲನೆ, ಕಣ್ಣಿನ ಹುಬ್ಬುಗಳು, ಕಣ್ಣಿನ ಚೆಂಡುಗಳು,

ಇಪ್ಪತ್ತನೆಯ ಶತಮಾನದ ಆದಿಯಲ್ಲಿ, ವಿದ್ಯಾವಂತ ಭಾರತೀಯರು ಮತ್ತು ವಿದೇಶಿ ಮಾದರಿಯಲ್ಲಿ ಸ್ಥಳೀಯ ಶಿಕ್ಷಣವನ್ನು ಪಡೆದ ವೈದ್ಯಯರು ಸ್ಥಳೀಯ ವೈದ್ಯ ಪದ್ಧತಿಯ ಕುಂದುಕೊರತೆಗಳನ್ನು ಸರಿಯಾಗಿ ತಿಳದುಕೊಂಡಿದ್ದರು[9]. 1923 ರಲ್ಲಿ ಕವಿರಾಜ[9] ಗಣನಾಥ್ ಸೇನ್ ಅವರು ಆಯುರ್ವೇದ ವೈದ್ಯಕೀಯ ಪದ್ಧತಿ ಹಾಗೂ ಇದರ ಎರಡು ಅವನತಿಯ ಕಾರಣಗಳನ್ನು ವಿವರಿಸುತ್ತಾರೆ. ಒಂದನೆಯ ದಾಗಿ ಆಳುವ ವರ್ಗದ ಸಹಕಾರ ಹಾಗೂ ಪ್ರೋತ್ಸಾಹದ ಕೊರತೆ ಮತ್ತು ಅವರನ್ನು ಸ್ವೀಕರಿಸುವುದರ ಕುರಿತಾದ ಗೊಂದಲಗಳು.

ಎರಡನೆಯದಾಗಿ ವಿದೇಶಿ ವೈದ್ಯ ಪಧತಿಯ ಅಭಿವೃದ್ಧಿ ಮತ್ತು ಇದಕ್ಕೆ ಸರಕಾರದಿಂದ ಲಭಿಸುವ ಸವಲತ್ತುಗಳು, ಪ್ರೋತ್ಸಾಹ ಹಾಗೂ ವಿದೇಶಿ ಮಾದರಿಯ ಸರಕಾರಿ ಆಸ್ಪತ್ರೆಗಳು, ಶೂಶ್ರೂಷಾ ಕೇಂದ್ರಗಳು ಇವು ಸಾರ್ವಜನಿಕ ರಂಗದಲ್ಲಿ ತಮ್ಮ ಪ್ರಭಾವವನ್ನು ಬೀರಲು ಹಾಗೂ ಏಕಅಸಾಮ್ಯತ್ವವನ್ನು ಸಾಧಿಸುವುದರಲ್ಲಿ ಯಶಸ್ವಿಯಾಗಿದೆ.

ಭಾರತದ ಬುದ್ಧಿವಂತ ಹಾಗೂ ವಿಚಾರವಂತ ಜನರಿಗೆ ವೈದ್ಯಕೀಯ ವಿದ್ಯಾಭ್ಯಾಸ ಆಯ್ಕೆಗೆ ಎರಡು ಅವಕಾಶಗಳು ಇದ್ದವು. ಒಂದು ಅವರಿಗೆ ಸಮಾಜದಲ್ಲಿ ಘನತೆ, ಗೌರವ ಹಾಗೂ ಉತ್ತಮ ಸವಲತ್ತುಗಳನ್ನು ತಂದುಕೊಡುವ ವಿದೇಶಿ ವೈದ್ಯಕೀಯ ಶಿಕ್ಷಣವಾದರೆ ಇನ್ನೊಂದು ಸರಕಾರ ಮತ್ತು ಜನರಿಂದ ಕಡೆಗಣಿಸಲ್ಪಟ್ಟ ಭಾರತೀಯ ವೈದ್ಯಕೀಯ ಶಿಕ್ಷಣ, ಚಿಕಿತ್ಸೆಯಲ್ಲಿ ಏನಾದರೂ ಸಮಸ್ಯೆಗಳು ಉದ್ಭವಿಸಿದರೆ ಬ್ರಿಟೀಷ್ ಆಡಳಿತವು ಸ್ಥಳೀಯ ವೈದ್ಯರನ್ನೇ ಹೊಣೆಗಾರರನ್ನಾಗಿಸುತ್ತಿತ್ತು. ಆದರೆ ವಿದೇಶಿ ಮಾದರಿಯ ಚಿಕಿತ್ಸೆಯಲ್ಲಿ ಏನಾದರೂ ತೊಂದರೆಯಾದಲ್ಲಿ ಸರಕಾರವು ವೈದ್ಯರ ಪರವಾಗಿ ವಾದಿಸುತ್ತಿತ್ತು[10].

ಭಾರತ ದೇಶದಲ್ಲಿ ವಸಹಾತುಶಾಹಿ ಆಡಳಿತ ಮೊದಲು ಮೇಲ್ವರ್ಗದ ಜನರು ಆಯುರ್ವೇದ ಪದ್ಧತಿಯ ಪೂರ್ವೋತ್ಸಾಹ ಪಡೆಯಾಗಿತ್ತು ಮತ್ತು ಸ್ಥಳೀಯ ವೈದ್ಯರಾದ ನಾಟಿ ವೈದ್ಯರನ್ನು ಕೀಳಾಗಿ ನೋಡಲಾಗುತ್ತಿತ್ತು. ಇಂತಹ ಜಾತ್ಯಾಧರಿತ ವ್ಯವಸ್ಥೆಯಲ್ಲಿ ಕೆಳವರ್ಗದ ವೈದ್ಯರನ್ನು 'ಡೋಂಗಿ ವೈದ್ಯರೆಂದು' ಬಿಂಬಿಸಲಾಗಿತ್ತು[11]. ವಸಹಾತುಶಾಹಿ ಕಾಲದಲ್ಲಿ ಮತ್ತು ಅದರ ನಂತರದ ಕಾಲಘಟ್ಟದಲ್ಲಿ ಆಯುರ್ವೇದ ವೈದ್ಯರು ಹಾಗೂ ಸ್ಥಳೀಯ ವೈದ್ಯರು ಜೊತೆಗೂಡಿ ಚಿಂತನೆಗಳನ್ನು ಹಂಚಿಕೊಂಡರು. ಅವರು ವೈದ್ಯರೇ[13] ಆಗಲಿ ಹಕೀಮರೇ[12] ಆಗಲಿ ಪರಸ್ಪರ ಗೌರವಿಸುವ ತೊಡಗಿದರು. ಭಾರತೀಯ ವೈದ್ಯ ಪದ್ಧತಿಯು ಜನರ ಸಂಸ್ಕೃತಿಯ ಒಂದು ಭಾಗವಾಗಿ ಮಾರ್ಪಟ್ಟಿತು.

ವಸಾಹತುಶಾಹಿ ಆಡಳಿತ ವ್ಯವಸ್ಥೆಯು ತಾರ್ಕಿಕ ವಿಷಯಗಳನ್ನುಂಟು ಮಾಡುವುದಲ್ಲದೆ ಭಾರತೀಯ ಶರೀರವನ್ನೇ ವಸಹಾತೀಕರಿಸಿತು. ವಿದೇಶಿ ವೈದ್ಯ ಪದ್ಧತಿ ಭಾರತದಲ್ಲಿ ಶರೀರದ ಕುರಿತಾಗಿ ವ್ಯತ್ಸಸ್ಥವಾದ ಹಾಗೂ ಪರಸ್ಪರ ವಿರುದ್ಧವಾದ ಹೇಳಿಕೆಗಳಿಗೆ ಪ್ರಾಮುಖ್ಯತೆ ನೀಡಿತ್ತು. ಹೇಗೆಂದರೆ ರೋಗ ಎನ್ನುವುದು ಒಂದು ಕೇವಲವಾದ ವಿಷಯವಲ್ಲದೆ ಇದು ವೈವಿಧ್ಯವಾದ ಲಕ್ಷಣಗಳಿಂದ ಕೂಡಿದ ಅರ್ಥವನ್ನು ನೀಡುತ್ತದೆ.

ವಸಹಾತುಶಾಹಿತ್ವದ ಬಲ ಎನ್ನುವುದು ಸಾಮ್ರಾಜ್ಯಶಾಹಿತ್ವ ತಂತ್ರವಲ್ಲದೆ ಅದು ಅವರ ಆಡಳಿಶಾಹಿಯ ಆಯುಧವಾಗಿತ್ತು. ವಿದೇಶಿ ವೈದ್ಯ ಪದ್ಧತಿಯು ಬಗೆಹರಿಸಲ್ಪಡದ ವಿವಾದಗಳು, ಖಂಡನೀಯ ವಿಷಯಗಳು ಮತ್ತು ಪೌರಸ್ತಗೊಳಿಸಿದ ಸಮಸ್ಯೆಗಳಿಂದ ಕೂಡಿ ಗೊಂದಲದ ಗೂಡಾಗಿತ್ತು. ವೈದ್ಯಕೀಯ ವಿಜ್ಞಾನವು ಒಂದು ಸಾರ್ವತ್ರಿಕ ವರ ಹಾಗೂ ಸತ್ಯ ಮಾತ್ರವಲ್ಲದೆ ಅದು ಮಾನವ ಶರೀರದ ಮೇಲೆ ಏಕಾಧಿಪತ್ಯವನ್ನು ಸಾಧಿಸಿತು. ವಿದೇಶಿ ವೈದ್ಯಪದ್ಧತಿಯು ಯುರೋಪಿಯನರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಆದರೆ ಇದು ಕೇವಲವಾಗಿಯುರೋಪಿಯನ್ನರ ವೈದ್ಯಪದ್ಧತಿಯ ಕಾರ್ಬನ್ ಪ್ರತಿಯಂತೆ ಇತ್ತು[14]. ವಸಹಾತುಶಾಹಿಗಳು ಕಾನೂನು ರೀತಿಯಾಗಿ ಮತ್ತು ವೈಜ್ಞಾನಿಕವಾಗಿ ಅಪರಿಚಿತ ಪ್ರದೇಶದಲ್ಲಿ (ಭಾರತದಲ್ಲಿ) ಪ್ರಧಾನ್ಯತೆಯನ್ನು ಪಡೆದುಕೊಂಡರು. ಇಲ್ಲಿನ ಪ್ರತಿಕೂಲ ಹವಾಮಾನವನ್ನು ಗಣನೆಗೆ ತೆಗೆದುಕೊಳ್ಳದೆ ಯುರೋಪಿಯನರ ಔಷಧ ಪದ್ಧತಿಯನ್ನು ಭಾರತೀಯರ ಶರೀರದ ಮೇಲೆ ಪ್ರಯೋಗಿಸಿದರು. ರೋಗಗಳ ಬಗ್ಗೆ ಸರಕಾರದ ನಿರ್ವಚನೆಗಳು ಹಾಗೂ ಜನರ ಭಾವನೆಗಳು ವ್ಯವಸ್ಥಪ್ರಾಗಿತ್ತು. ರೋಗಗಳ ನಿಯಂತ್ರಣ, ಅದನ್ನು ದಮನ ಮಾಡುವ ವಿಧಾನ ಮುಂತಾದವುಗಳ ಹಿಂದೆ ಹಲವಾರು ಸಾಂಸ್ಕೃತಿಕ ಹಾಗೂ ರಾಜಕೀಯ ಸತ್ಯಗಳು ಅಡಗಿದ್ದವು[15].

ರಾಷ್ಟ್ರೀಯ ವಾದಿಗಳು, ತಮ್ಮ ರಾಷ್ಟ್ರೀಯ ಹೋರಾಟ ಮತ್ತು ಸ್ವದೇಶಿ ದಂಗೆಯ ಭಾಗವಾಗಿ, ಸಾಂಪ್ರದಾಯಿಕ ವೈದ್ಯ ಪದ್ಧತಿಯನ್ನು ಸಮರ್ಥಿಸಿಕೊಂಡರು. ಆದರೆ ಇವರೆಡೆಯಲ್ಲೆ ಒಂದು ಗುಂಪು ವಿದೇಶಿ ಜ್ಞಾನ ಹಾಗೂ ವಿಚಾರಗಳನ್ನು ಪ್ರತಿಪಾಧಿಸಿದರು. ಇವರಲ್ಲಿ ಮೊದಲಿಗರೆಂದರೆ ರಾಜರಾಮ್ ಮೋಹನ್ ರಾಯ್, ಬಾಲಗಂಗಧರ ತಿಲಕರು ಹಾಗೂ ಇನ್ನೂ ಕೆಲವರು.

1902 ರಲ್ಲಿ ಪಿ.ಯಸ್ ವಾರಿಯರ್ ಅವರು ಆರ್ಯವೈದ್ಯ ಶಾಲವನ್ನು ನಿರ್ಮಿಸಿದರು ಹಾಗೂ ತನ್ಮೂಲಕವಾಗಿ ವಿದೇಶಿ ಮಾದರಿಯಲ್ಲಿ ರೋಗಿಗಳಿಗೆ ಉತ್ತಮ ಗುಣಮಟ್ಟದ ಸಿದ್ಧ ಔಷಧಗಳು ಲಭ್ಯವಾಗುವಂತೆ ಮಾಡಿದರು, ಅವರು ವಿದೇಶಿ ಮಾದರಿಯ ತಂತ್ರಗಳನ್ನು ಮತ್ತು ಸಂಸ್ಕರಣೆಯನ್ನು ವಿದೇಶಿ ವೈದ್ಯ ಪದ್ಧತಿಯಿಂದ ಪಡೆದುಕೊಂಡರು. ಮಾತ್ರವಲ್ಲ 'ಧನವಂತರೆ' ಎನ್ನುವ ವೈದ್ಯಕೀಯ ಪತ್ರಿಕೆಯನ್ನು ಪ್ರಾರಂಭಿಸಿದರು ಹಾಗೂ ಆ ಮೂಲಕ ವೈದ್ಯಕೀಯ ರಂಗದಲ್ಲಿ ವೈದ್ಯರು ಹಾಗೂ ಜನಸಾಮಾನ್ಯರ ನಡುವೆ ಉತ್ತಮ ಸಂವಹನವನ್ನು ಕಲ್ಪಿಸಿದರು. ಅವರು ಔಷಧಗಳ ತಯಾರಿಕೆ ಹಾಗೂ ಬಳಕೆಯ ಕುರಿತಾಗಿ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಈ ಒಂದು ಸಾಮಾಜಿಕ ಪ್ರಕ್ರಿಯೆ ಜನಸಾಮಾನ್ಯರಿಂದ ಅವಿತು ಕೊಂಡಿದ್ದು ಆಯುರ್ವೇದದ ಜ್ಞಾನವನ್ನು ಸಾಮಾನ್ಯ ಜನರಲ್ಲಿ ತುಂಬುವಲ್ಲಿ ಹಾಗೂ ಅವರು ಆಯುರ್ವೇದವನ್ನು ವೈಜ್ಞಾನಿಕ ಚಿಕಿತ್ಸಾ ಪದ್ಧತಿಯನ್ನಾಗಿ ಸ್ವೀಕರಿಸುವಂತೆ ಮಾಡಿದರು. ಶ್ರೀ ವಾರಿಯರ್ ಅವರು ಆಯುರ್ವೇದ ವೈದ್ಯಕೀಯ ಸಂಘಟನೆಯನ್ನು ಸ್ಥಾಪಿಸಿದರು. ಮಾತ್ರವಲ್ಲದೆ ಅದರ ವಾರ್ಷಿಕ ಸಮ್ಮೇಳನಗಳು ವೈದ್ಯಕೀಯ ಸಂವಾದಗಳ ವೇದಿಕೆಯಾಗಿದ್ದವು. ಅವರು ವಿದೇಶಿ ಮಾದರಿಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಿದರು ಹಾಗೂ ಆಧುನಿಕ ರೀತಿಯ ಪಠ್ಯ ವಿಷಯಗಳಾದಂತಹ ಶರೀರ ರಚನಾಶಾಸ್ತ್ರ ಮೊದಲಾದವುಗಳನ್ನು ಅಳವಡಿಸಿದರು[16].

ಕ್ರೈಸ್ತ ಮಿಷನರಿಗಳು ತಮ್ಮ ಚಿಕಿತ್ಸಾಲಯಗಳಲ್ಲಿ ಶುಶ್ರೂಷೆಯನ್ನು

ಮಾಡುವ ಸಂದರ್ಭದಲ್ಲಿ ಬೈಬಲ್ ನ ಹೇಳಿಕೆಗಳಿಗೆ ಅನುಗುಣವಾಗಿ ಚಿಕಿತ್ಸೆಯನ್ನು ನೀಡುತ್ತಿದ್ದರು. ಮಾತ್ರವಲ್ಲದೆ ತಮ್ಮೂಲಕವಾಗಿ ಮತಾಂತರಗಳನ್ನೂ ಮಾಡುತ್ತಿದ್ದರು. ಅವರು 'ಸಾಮಾಜಿಕ ಕೆಡುಕುಗಳ ವಿರುದ್ಧ ಹೋರಾಟ' ಎನ್ನುವ ನೆಪದಲ್ಲಿ ಇತರ ಸಂಸ್ಕೃತಿಯ ಮೇಲೆ ದಾಳಿ ಮಾಡುತ್ತಿದ್ದರು. ವೈದ್ಯಕೀಯತೆಯ ಬಗ್ಗೆ ಹೇಳುವುದಾದರೆ ಭಾರತೀಯ ಜನರು ವೈದ್ಯಕೀಯ ವ್ಯವಸ್ಥೆಯನ್ನು ಸಂಸ್ಕೃತಿಯ ಭಾಗವಾಗಿ ಪರಿಗಣಿಸಿದ್ದರು. ಅದರೆ ಮಿಷನರಿಗಳು ಇಲ್ಲಿನ ಆಚರಣೆಗಳನ್ನು ಮೂಢನಂಬಿಕೆಗಳು ಎಂದು ಕರೆದರು. ಆದರೆ ಇದು ಸ್ಥಳೀಯ ವೈದ್ಯಕೀಯ ವ್ಯವಸ್ಥೆಯನ್ನು ಪುನರ್ ವಿಮರ್ಶೆ ಮಾಡಲು ಸಹಕಾರಿಯಾಯಿತು.

ಉಪಸಂಹಾರ: ವಿದೇಶಿ ವೈದ್ಯಪದ್ಧತಿ ಹಾಗೂ ಸ್ಥಳೀಯ (ಆಯುರ್ವೇದ ಸೇರಿಕೊಂಡು) ವೈದ್ಯಪದ್ಧತಿ ಇವೆರಡೂ ಸಾಮಾಜಿಕ ವ್ಯವಸ್ಥೆಯ ಅಂಗವಾಗಿರುತ್ತದೆ. ಇವುಗಳು ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಯಲ್ಲೂ ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ವೈದ್ಯಕೀಯ ಪದ್ಧತಿಯಲ್ಲಿ ಧಾರ್ಮಿಕ ಹಾಗೂ ವೈಜ್ಞಾನಿಕ ಅಂಶಗಳು ಇನ್ನೂ ಸ್ಪಷ್ಟವಾಗಿಲ್ಲದಿದ್ದರೂ ವಿದೇಶಿ ವೈದ್ಯಕೀಯ ಪದ್ಧತಿಯ ಪ್ರಕಾರ ಅದು ವೈಜ್ಞಾನಿಕ ಸತ್ಯಗಳನ್ನು ಒಳಗೊಂಡಿದೆ. ಆದಾಗ್ಯೂ 'ಆರೋಗ್ಯ' (Helath) ಎನ್ನುವ ಪದವು ಕ್ರೈಸ್ತಧರ್ಮದ 'ಸಾಲ್ವೇಶನ್' ಎಂಬ ಪದದಿಂದ ಹುಟ್ಟಿಕೊಂಡಿದೆ. ವೈದ್ಯಕೀಯ ಪದ್ಧತಿಯಲ್ಲಿ ಶರೀರ ಮತ್ತು ಮನಸ್ಸು, ಆರೋಗ್ಯ ಮತ್ತು ಅನಾರೋಗ್ಯ ಎನ್ನುವ ಅಂಶಗಳು ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಐತಿಹಾಸಿಕವಾಗಿ ಕಾಲ ಕ್ರಮೇಣ ಬೆಳೆದುಬಂದವು. ವಸಾಹತುಶಾಹಿ ನಂತರದ ಕಾಲಘಟ್ಟದಲ್ಲಿ ವಿದೇಶಿ ವೈದ್ಯಪದ್ಧತಿಯ ಗುಣಾವಗುಣಗಳಿಂದಾಗಿ ಆಯುರ್ವೇದ ವೈದ್ಯ ಪದ್ಧತಿಯು ಹೊಸ ಆಯಾಮವನ್ನು ಪಡೆದುಕೊಂಡಿತು. ವಿದೇಶಿ ವೈದ್ಯ ಪದ್ಧತಿಯು ಆಡಳಿತ ವರ್ಗದ ಯಜಮಾನಿಕೆಯನ್ನು ಹೊಂದಿದ್ದರಿಂದ ವೈಜ್ಞಾನಿಕತೆಯನ್ನು ಸಾಬೀತುಪಡಿಸುವುದರ ಹೊರತಾಗಿ ಇದು ಸಾಮಾಜಿಕ, ಆರ್ಥಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ರಂಗದಲ್ಲಿ ತನ್ನ ಹಿಡಿತವನ್ನು ಸಾಧಿಸಿತು. ಆಯುರ್ವೇದ ಮತ್ತು ವಿದೇಶಿ ವೈದ್ಯ ಪದ್ಧತಿಯು ಶರೀರ ಹಾಗೂ ಮನಸ್ಸು ಎನ್ನುವ ಹಿಡಿತವನ್ನು ಸಾಧಿಸಿತು. ಆಯುರ್ವೇದ ಮತ್ತು ವಿದೇಶಿ ವೈದ್ಯ ಪದ್ಧತಿಯು ಶರೀರ ಹಾಗೂ ಮನಸ್ಸು ಎನ್ನುವ ವಿಷಯಗಳಲ್ಲಿ ಭೌತಿಕ ಮತ್ತು ಭೌತಿಕವಲ್ಲದ ಅಂಶಗಳನ್ನು ವ್ಯತ್ಯಸ್ಥವಾಗಿ ಪ್ರಸುತಪಡಿಸುತ್ತದೆ. ಆಯುರ್ವೇದ ವೈದ್ಯ ಪದ್ಧತಿಯು ಭಾವನೆಗಳ ಮೂಲಕ ಭೌತಿಕ ಶರೀರವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿತ್ತು. ಆದರೆ ವಿದೇಶಿ ವೈದ್ಯ ಪದ್ಧತಿಯು ಶರೀರವನ್ನು ಯಂತ್ರಕ್ಕೆ ಹೋಲಿಸಿತು. ಮಾತ್ರವಲ್ಲದೆ ಇದು ಭಾವನೆಗಳಿಗೆ ಯಾವುದೇ ಪ್ರಾಮುಖ್ಯತೆಯನ್ನು ನೀಡಲಿಲ್ಲ[17].

ವಸಹಾತುಶಾಹಿ ಕಾಲಘಟ್ಟದಲ್ಲಿ ರೂಪುಗೊಂಡ ಸಾರ್ವಜನಿಕ ಆರೋಗ್ಯ ಸೇವೆಯು ಜನರಿಗೆ ಒಂದು ವರವಾಗಿತ್ತು. ವಸಹಾತುಶಾಹಿ ಆಡಳಿತದ ಪ್ರಾರಂಭದಲ್ಲೇ ಅವರು ಶರೀರವನ್ನು ವಸಹಾತೀಕರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದರು. 19ನೇ ಶತಮಾನದ ಉತ್ತರಾರ್ಧದಲ್ಲಿ ಭಾರತೀಯ ಜನರಿಗೆ ಆರೋಗ್ಯ ಸೇವೆಯನ್ನು ಒದಗಿಸಲು ಗ್ರಾಮೀಣ ಪ್ರದೇಶ ಮತ್ತು ನಗರಗಳಲ್ಲಿ ಆಸ್ಪತ್ರೆಗಳು ಪ್ರಾರಂಭವಾದವು ಹಾಗೂ ಇದು ಭಾರತೀಯರಲ್ಲಿ ಶುಚಿತ್ವದ ಪ್ರಜ್ಞೆಯನ್ನು ಮೂಡಿಸಿತು. ಇದು ಯುರೋಪಿಯನ್ನರ ಅವಶ್ಯಕತೆಯಾಗಿತ್ತು ಮತ್ತು ಭಾರತೀಯ ಜನಸಾಮಾಯರಿಗೂ ಪ್ರಯೋಜನವನ್ನುಂಟು ಮಾಡಿತು.

ಅಡಿ ಟಿಪ್ಪಣಿಗಳು:

1. ಡೆವಿಡ್ ಅರ್ನಾಲ್ಡ್, ಕೊಲೊನೈಸಿಂಗ್ ದಿ ಬಾಡಿ: ಸ್ಟೇಟ್ ಮೆಡಿಸಿನ್ ಎಂಡ್ ಎಪಿಡಮಿಕ್ ಡಿಸೀಸ್ ಇನ್ ನೈನಟೀನ್ತ್ ಸೆಂಚುರಿ, ಬರ್‌ಕೆಲಿ, ಕಾಲಿಫೋರ್ನಿಯ, 1993, ಪುಟಗಳು, 141–1.
2. ಗ್ಯಾನ್ ಪ್ರಕಾಶ್, ಎನದರ್ ರೀಸನ್, ಸೈಯನ್ಸ್ ಎಂಡ್ ಇಮೇಜಿನೇಶನ್ ಇನ್ ಮೊಡರ್ನ್ ಇಂಡಿಯಾ, ಆಕ್ಸ್‌ಫರ್ಡ್ , ನ್ಯೂ ಡೆಲ್ಲಿ, 2000, ಪುಟ. 144.
3. ಅದೇ ಪುಟ. 145
4. ಬರ್ಯನ್ ಕ್ಲೀಟಸ್, ಇಂಡಿಜೀನಸ್ ಟ್ರೆಡಿಶನ್ಸ್ ಎಂಡ್ ಪ್ರಾಕ್ಟೀಸಸ್ ಇನ್ ಮೆಡಿಸಿನ್ ಎಡ್ ದಿ ಇಮ್‌ಪೆಕ್ಟ್ ಆಫ್ ಕೊಲೋನಿಯಾಲಿಸಂ ಇನ್ ಕೇರಳ 1900–1950, ಪಿ. ಎಚ್. ಡಿ. ಮಹಾಪ್ರಬಂಧ ಜವಹರಲಾಲ್ ನೆಹರು ವಿಶ್ವವಿದ್ಯಾನಿಲಯ, 2007, ಪುಟ.92.
5. ಜಾಗಿ ಓ.ವಿ. ಹಿಸ್ಟರಿ ಆಫ್ ಸೈಯನ್ಸ್, ಟೆಕ್‌ನೋಲೊಜಿ ಎಂಡ್ ಮೆಡಿಸಿನ್ ಇನ್ ಇಚಿಡಿಯಾ; ವೆಸ್ಟನ್ ಇಂಡಿಯಾ ಎಂಡ್ ಸೊಜಿಯಲ್ ಇಂಪಾಕ್ಟಸ್, ಬ್ಲಾಕ್‌ವೆಲ್, 1997, ಪುಟ. 11
6. ಅದೇ ಪುಟ. 12.
7. ಅದೇ
8. ಅದೇ, ಪುಟ, 13
9. ಪೂರ್ವ ಭಾರತದ ಆಯುರ್ವೇದ ವೈದ್ಯರನ್ನು 'ಕವಿರಾಜ' ರೆಂದು ಕರೆಯುತ್ತಾರೆ.
10. ಅದೇ, ಪುಟ. 15.
11. ಬರ್ಬನ್ ಕ್ಲೀಟಸ್, ಪೂರ್ವೋಕ್ತ, ಪುಟ. 100.
12. 'ಹಕೀಯರ್' ಎಂದರೆ ಇಸ್ಲಾಮಿಕ್ ಅಥವಾ ಯುನಾನಿ ವೈದ್ಯ ಪದ್ಧತಿಯನ್ನು ಅನುಸರಿಸುವವರು.
13. 'ವೈದ್ಯರು' ಎಂದರೆ ಭಾರತೀಯ ವೈದ್ಯ ಪದ್ಧತಿಯನ್ನು ಅನುಸರಿಸುವವರು.
14. ರಾಘವ ವಾರಿಯರ್ ಯಂ. ಆರ್., ದಿಸ್ಕವರಿ ಆಫ್ ಅಯುರ್ವೇದ: ದಿ ಸ್ಟೋರಿ ಆಫ್ ಆಯುರ್ವೈದ್ಯ ಶಾಲಾ ಕೋಟಕಲ್, ಪೆರ್ವಿನ್, ಕೋಟಕಲ್, 2002, ಪುಟ. 13.
15. ಬರ್ಬನ್, ಪೂರ್ವೋಕ್ತ. ಪುಟ. 236.
16. ಪೌಲೋಸ್. ಕೆ. ಜಿ., 'ಪಿ. ಯಸ್ ವಾರಿಯರ್ – ಎ ಮಲ್ಟಪೆಸೆಟೆಡ್ ಪರ್ಸನಾಲಿಟಿ, ಕಿರುಲೇಖವು. ಮುರಳೀಧರನ್ ಟಿ. ಯಸ್. ಮತ್ತು ರಾಘವ ವಾರಿಯರ್ ಯಂ. ಆರ್." (ಸಂಪಾದಕರು). ಆಯುರ್ವೇದ ಇನ್ ಟ್ರಾನ್ಸಿಶನ್ ಯಸ್ಸೇಸ್ ಇನ್ ಮೆಮೊರೀ ಆಫ್ ಆರ್ಯುವೈದ್ಯನ್ ಪಿ. ಯಸ್. ವಾರಿಯರ್. ಆರ್ಯ ವೈದ್ಯಶಾಲಾ. ಕೋಟಕಲ್. 2010, ಪುಟ. 148
17. ಕೊರ್ಟೀಸ್ ಜೆ. ಮೆರೀನೋ ಅಗ್ವಿಜಾಮೋನ್, ಡಿಸ್ಕವರೀಸ್ ಇನ್ ವೆಸ್ಟರ್ನ್ ಬಯೋಮೆಡಿಸಿನ್ ಎಂಡ್ ಆಯುರ್ವೇದ ಹೆಲ್ತ್–ಇಲ್‌ನೆಸ್ ಎಂಡ್ ಬಾಡಿ – ಮೈಂಡ್, ಇಕನಾಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿ, ಜುಲೈ 23, 2005, ಪುಟ. 3310

ವಿಷಯ:–06

ಪರಾಶರೀಯಮ್

ಕೃಷಿ, ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ ಮತ್ತು ಮೀನುಗಾರಿಕೆ

THEME:-06

PARASHAREEYAM
AGRICULTURAL, HORTICULTURAL AND ANIMAL SCIENCES, FISHERIES, FORESTRY

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಚಿತ್ರದುರ್ಗ ಜಿಲ್ಲೆಯ ಕೆಂಪು ಗೋಡು ಮಣ್ಣಿನಲ್ಲಿನ ಸಾವಯವ ಆಧಾರಿತ ಪೋಶಕಾಂಶಗಳಿಂದ ಹಿಪ್ಪುನೇರಳೆ ಬೆಳವಣಿಗೆ ಹಾಗೂ ಇಳುವರಿಯ ಗುಣಲಕ್ಷಣಗಳ ಮೇಲೆ ಒಂದು ಪರಿಣಾಮಕಾರಿ ಅಧ್ಯಯನ	ಎ. ಉಮೇಶ, ಬಿ. ಸಣ್ಣಪ್ಪ	471 – 478
2	ಹಿಪ್ಪುನೇರಳೆ ಸೊಪ್ಪು ಮತ್ತು ಆಯುರ್ವೇಧ ಔಷಧಿಗಳ ಮಿಶ್ರಣ ದಿಂದಾದ ಆಹಾರದ ಬಳಕೆ ಹಾಗೂ ಧ್ವಿತಳಿ ರೇಷ್ಮೆ ಹುಳು (ಬಾಂಬಿಕ್ಸ್ ಮೋರಿಎಲ್.) ಸಾಕಾಣಿಕಾ ನಿಯತಾಂಕಗಳು ಮತ್ತು ಜೀವ–ರಸಾಯನಿಕಗಳ ಸಂಯೋಜನೆಯ ಒಂದು ಅಧ್ಯಯನ	ಶಬ್ನಮ್, ಬಿ.ಸಣ್ಣಪ್ಪ, ಬಿ.ಕೆ.ಪ್ರಕಾಶ್ , ಕೆ.ಜಿ. ಮಂಜುನಾಥ್	478 – 485
3	ಸಾವಯವ ಕೃಷಿ ಪದ್ಧತಿಯಲ್ಲಿ ಆಧುನಿಕತೆ	ಡಾ.ಪದ್ಮಿನಿ ಎಸ್.ವಿ	485 - 489
4	ಸಾವಯವ ಕೃಷಿಯಲ್ಲಿ ಭತ್ತದ ಬೇಸಾಯ	ಸೌಮ್ಯಲತ, ಬಿ. ಎಸ್., , ಸುನಿತ, ಎ. ಬಿ. ಸುರೇಶ್‌ಕುಮಾರ. ಬಿ	489 – 490
5	ಉದಯವಾಣಿ ಪತ್ರಿಕೆಯ ಕೃಷಿ ಪುರವಣಿಯಲ್ಲಿನ ಲೇಖನಿಗಳ ಕುರಿತು ಒಂದು ಅಧ್ಯಯನ	ವಿಜಯಕುಮಾರ ಮೇಟಿ	490 – 494
6	ಜೇನು ಸಾಕಾಣಿಕೆ –ಲಾಭದಾಯಕ ಉಪಕಸುಬು	ಜಯಲಕ್ಷ್ಮೀ ನಾರಾಯಣ ಹೆಗಡೆ, ಎಂ. ಕೆ. ನಾಗಮಣಿ, ಪುಷ್ಪಾ ಪಿ. ಭಾರತಿ ಬಿ.	495 – 497
7	ಮಿಡಿ ಮಾವುಗಳ ರಸದಲ್ಲಿ ಸೂಕ್ಷ್ಮಜೀವಿಯ ಸಂತಾನೋತ್ಪತ್ತಿತಡೆಯುವ ಶಕ್ತಿ ಇದಿಯೇ?	ಬಿ. ತಾಂಬಟ್, ಮಹಮ್ಮದ ಸನಾವುಲ್ಲಾ ಕೆ. ಹುದ್ದಾರ, ಚೈತ್ರ ಜಿ. ಎನ್. ಗಿರೀಶ ಹೆಚ್. ಸಿ.	497 – 500
8	ಸಂಖ್ಯಾಶಾಸ್ತ್ರದ ಮಹತ್ವ ಹಾಗು ವಿವಿಧ ಕ್ಷೇತ್ರಗಳಲ್ಲಿ ಅದರ ಪ್ರಮುಖ ಪಾತ್ರ	ಎಂ.ಕೆ. ನಾಗಮಣಿ ಸಿ. ಉಮಾಶಂಕರ	500 – 503
9	ಸಾವರಿಯವ ಕೋಳಿ ಸಾಕಣೆಯಲ್ಲಿ ಭಾರತದ ನಾಟಿಕೋಳಿ ತಳಿಗಳು	ಡಾ. ಸಿ.ಆರ್. ಗೋಪಿನಾಥ್ ಡಾ. ಎಚ್.ಎನ್. ನರಸಿಂಹಮೂರ್ತಿ ಡಾ.ರಾಜಕುಮಾರ್ ನಾಗರಹಳ್ಳಿ	503 – 506
10	ಕರ್ನಾಟಕದ ವಿವಿದ ಜಿಲ್ಲೆಗಳ ನಾಟಿ ಕೋಳಿಗಳ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಒಂದು ತುಲನಾತ್ಮಕ ಅಧ್ಯಯನ	ಡಾ. ಸಿ.ಆರ್. ಗೋಪಿನಾಥ್ ಡಾ. ಎಚ್.ಎನ್. ನರಸಿಂಹಮೂರ್ತಿ ಡಾ.ರಾಜಕುಮಾರ್ ನಾಗರಹಳ್ಳಿ	506 – 508
11	ಸಾವಯವಕೃಷಿಯಲ್ಲಿಆಧುನಿಕತೆ	ಶ್ರೀ ಜನಾರ್ಧನ್ ಡಿ.ಎಸ್ ಡಾ. ಕೆ.ವಿ. ಶಿವಕುಮಾರ್ ಡಾ. ಮಹದೇವ್‌ಜೆ ಡಾ.ಎ.ಡಿ. ರಂಗನಾಥ್	508 – 513
12	ತೆಂಗಿನ ನಾಡಿನಲ್ಲಿ ನಿರುದ್ಯೋಗಯುವಕ್ಕೆತರಿಗೆ ವರದಾನ–ಮರ ಹತ್ತುವ ಸಾಧನ	ವೈ.ಎನ್. ಶಿವಲಿಂಗಯ್ಯ ಎಂ.ಹೆಚ್. ಶಂಕರ ಕೆ.ಎಂ. ಶ್ರೀನಿವಾಸ ರೆಡ್ಡಿ	513 – 515

13	ರೇಷ್ಮೆಕೃಷಿಯಲ್ಲಿ ಯಂತ್ರೋಪಕರಣಗಳ ಮಹತ್ವ	ವಿ.ಪಿ. ಭಾರತಿ, ರಾಮಕೃಷ್ಣ ನಾಯ್ಕ ಚಂದ್ರಶೇಖರ ಎಸ್. ಕಳ್ಳಿಮನಿ ಪಲ್ಲವಿ	515 – 516
14	ಅವರೆಯ ಮೊಸಾಯಿಕ್ ನಂಜುರೋಗದ ಲಕ್ಷಣಗಳು ಮತ್ತು ನಂಜಾಣುವಿನ ಹರಡುವಿಕೆಯ ಅಧ್ಯಯನ	ರೇಣುಕ, ಹೆಚ್. ಎಮ್., ರಾಮಪ್ಪ, ಹೆಚ್. ಕೆ ಪಲ್ಲವಿ, ಎಮ್. ಎಸ್	516 – 519
15	ಮಿಡಿ ಸೌತೆಕಾಯಿ(ಗರ್ಕಿನ್) ಹಾನಿ ಮಾಡುವ ಸೌತೆಕಾಯಿ ಮೊಸಾಯಿಕ್ ನಂಜಾಣು ರೋಗದ ತೀವ್ರತೆಯೆ ಸಮೀಕ್ಷೆ, ಸೋಂಕಿನ ದೃಡತೆ, ವಂಶವಾಹಿಗಳ ಪ್ರತಿಕ್ರಿಯೆ ಮತ್ತು ರೋಗದ ಸಾವಯವ ನಿರ್ವಹಣೆ	ಕಾವ್ಯಶ್ರೀ, ವಿ.ವಿ. ಪುಷ್ಪ, ಆರ್. ಎನ್ ನಾಗರಾಜು, ಎನ್. ರಾಧಾ, ಎಮ್.ಆರ್	519 – 521
16	ರೋಗ ನಿರ್ವಹಣೆಯಲಿ ಟ್ರೈಕೋಡರ್ಮದ ಮಹತ್ವ	ಬಿ. ಶಿವಣ್ಣ, ಕೆ.ಎಂ. ಶ್ರೀನಿವಾಸ ರೆಡ್ಡಿ, ಟಿ. ರುದ್ರಮುನಿ, ಎಮ್. ಹೆಚ್. ಶಂಕರ	522 – 525
17	ಆಂಬ್ರೋಸಿಯ ಪ್ಲಿಲೋಸ್ಟೇಕಿಯ – ಭಾರತದಲ್ಲಿ, ತುರುವೇಕೆರೆ ತಾಲ್ಲೂಕಿನಲ್ಲಿ ಪ್ರಪ್ರಥಮ ಭಾರಿಗೆ ಕಂಡು ಬಂದ ಹೊಸ ದಿಗ್ಬಂಧನ ಕಳೆ	ಎಂ.ಟಿ.ಸಂಜಯ್ ಟಿ.ವಿ.ರಾಮಚಂದ್ರ ಪ್ರಸಾದ್ ಪಿ.ಅಶೋಕ, ಬಸವರಾಜ ಕುಂಬಾರ ವಿರೇಶ ಹತ್ತಿ	525 – 531
18	ದೇಸಿ ಕೋಳಿಗಳಲ್ಲಿ ಕೋಲಿಬ್ಯಾಸಿಲ್ಲೋಸಿಸ್ ರೋಗ: ಒಂದು ವರದಿ	ಡಾ. ರವಿಕುಮಾರ್ ಪಿ ಡಾ. ಹೇಮಂತ್ ಗೌಡ ಕೆ ಡಾ. ಮಧುಸೂಧನ್ ಹೆಚ್.ಎಸ್	532 – 534
19	ಕೋಳಿ ಆಹಾರದಲ್ಲಿ ಹಲವು ಗಿಡಮೂಲಿಕೆಗಳ ಬಳಕೆಯಿಂದ ಕೋಳಿ ಮೊಟ್ಟೆಯಲ್ಲಿನ ಕೊಬ್ಬಿನಾಂಶದ ಮೇಲೆ ಉಂಟಾಗುವ ಪರಿಣಾಮಗಳು	ಡಾ. ಹೆಬ್ಬಾರ್, ಎ. ಡಾ. ಗೆಹಲೌಟ್, ಬಿ.ಎಸ್ ಡಾ. ಹೇಮಂತ್ ಗೌಡ, ಕೆ. ಡಾ. ರವಿಕುಮಾರ್, ಪಿ.	534-536
20	ಪರಿಣಾಮಕಾರಿ ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ಬಳಕೆಯಿಂದ ಕಾಫಿಹಣ್ಣು ಸಂಸ್ಕರಿಸಿದ ಕಲುಷಿತ ನೀರಿನ ಶುದ್ಧೀಕರಣ	ಡಾ. ಹೇಮಂತ್ ಗೌಡ, ಕೆ ಡಾ. ರವಿಕುಮಾರ್, ಪಿ, ಡಾ. ಮಧುಸೂಧನ್, ಹೆಚ್.ಎಸ್.	536 – 539
21	ಪ್ರಾಚೀನ ಭಾರತೀಯರ ಕೃಷಿ	ಕಾಶೀನಾಥ ಶಾಸ್ತ್ರಿ ಹೆಚ್.ವಿ.	539 – 542
22	ಸೂಕ್ಷ್ಮ ಪಾಚಿಗಳಿಂದ ಜೈವಿಕ ಡೀಸೆಲ್ ಉತ್ಪಾದನೆ	ಹರಿಣಿ ಕುಮಾರ್, ಕೆ.ಎಮ್ ರಾಧಿಕ, ಎನ್., ರಮ್ಯಶ್ರೀ, ಕೆ.ಆರ್., ಹರೀಶ್,ಜೆ	542 - 545
23	ಉಡುಪಿ ಮಲ್ಲಿಗೆಯಲ್ಲಿ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆ	ಜಯಲಕ್ಷ್ಮೀ ನಾರಾಯಣ ಹೆಗಡೆ, ಎಂ. ಕೆ. ನಾಗಮಣಿ, ³ಪುಷ್ಪಾ ಪಿ. ಭಾರತಿ ಬಿ.	545 – 547
24	**ಕರ್ನಾಟಕದ ಕೃಷಿಗೆ ಕಾಲಿಟ್ಟ ಆಧುನಿಕ ಮತ್ತು ನಿಖರವಾದ ಲೇಸರ್ ತಂತ್ರಜ್ಞಾನ**	ಪಿ. ಎಸ್. ಕಾಣನ್ನವರ ಡಾ. ಪಿ. ಬಾಲಕೃಷ್ಣನ್ ರುದ್ರಗೌಡ ಸಿ., ರವೀಂದ್ರ ವೈ ಡಾ. ಅನುರಾಜ್ ಬಿ	547 – 552

25	ಅಳವಿನಂಚಿನಲ್ಲಿರುವ ಮರದ ವಿಶಿಷ್ಟ ಗುರುತ್ವದ ಮೇಲೆ ತೊಂದರೆ ಪ್ರಭಾವ	ಬಿ. ತಾಂಬಟ್ ಎಸ್ ರಾಜಶೇಖರಮೂರ್ತಿ ಎಮ್. ಮಹಾದೇವ ಮೂರ್ತಿ	552 – 556
26	ಜೈವಿಕ ಡೀಸೆಲ್ ಉತ್ಪಾದಿಸುವ ಸಾಮರ್ಥ್ಯವಿರುವ ಸೂಕ್ಷ್ಮ ಪಾಚಿಗಳ ಗುರುತಿಸುವಿಕೆ ಮತ್ತು ಅಪಿಡ್ ಪ್ರೊಫೈಲಿಂಗ್	ಹಲಣಿ ಕುಮಾರ್, ಕೆ.ಎಮ್. ಕ್ರಿಸ್ಟಿ ಸಾರ ಜಾರ್ಜ್ ರಮ್ಯಶ್ರೀ, ಕೆ.ಆರ್, ಹಲೀಶ್,ಜೆ	556 – 560
27	ಪೀಡೆ ನಿರ್ವಹಣೆಗೆ ಲಭ್ಯವಿರುವ ಹೊಸ ಕೀಟನಾಶಕಗಳು	ಕೆ. ಎಂ. ಶ್ರೀನಿವಾಸ ರೆಡ್ಡಿ, ಬಿ. ಶಿವಣ್ಣ, ಶ್ರೀ. ಟಿ. ರುದ್ರಮುನಿ ಕೆ. ಎಲ್. ವಿಜಯ್ ಕುಮಾರ್	561 - 564
28	ತೆಂಗನ್ನು ಬಾಧಿಸುವ ರೋಗಗಳು ಮತ್ತು ಕೀಟಗಳು ಹಾಗೂ ಅವುಗಳ ಸಮಗ್ರ ಹತೋಟಿ ಕ್ರಮಗಳು	ಕೆ. ಎಂ. ಶ್ರೀನಿವಾಸ ರೆಡ್ಡಿ, ಬಿ. ಶಿವಣ್ಣ, ಶ್ರೀ. ಟಿ. ರುದ್ರಮುನಿ, ಎಂ. ಎಚ್. ಶಂಕರ	565 - 568
29	ಚಾಮರಾಜನಗರ ಜಿಲ್ಲೆಯಲ್ಲಿ ಮಳೆಯ ಅಭಾವದ ಪರಿಣಾಮವಾಗಿ ಅಂತರ್ಜಲ ಕುಸಿತ-ಒಂದು ಅಧ್ಯಯನ	ಭರತೇಶ. ಎಸ್	569 - 571
29	ಮಿಡಿ ಮಾವುಗಳ ಬಾಹ್ಯ ಆಂಗ ರಚನೆಯ ವಿಶ್ಲೇಷಣೆ ಮತ್ತು ಸಂಬಂಧಗಳ ಅನ್ವೇಷಣೆ	ಬಿ. ತಾಂಬಟ್, ಚೈತ್ರ ಜಿ. ಎನ್ ಶ್ಯಾಮಗುಂಡು, ಶ್ರೀನಿವಾಸ ಸಿ.	572 – 576
30	ನ್ಯೂಕ್ಲಿಯಸ್ ನ ಇ ಟಿ ಎಸ್ ಭಾಗವನ್ನು ಉಪಯೋಗಿಸಿ ಮಾವು ಮತ್ತು ಮಿಡಿ ಮಾವಿನ ನಡುವೆ ಇರುವ ಅನುವಂಶೀಯ ಸಂಬಂಧದ ಅನ್ವೆಶಣೆ	ಚೈತ್ರ ಜಿ. ಎನ್., ಬಿ. ತಾಂಬಟ್ ಚೈತ್ರ ಹೆಚ್. ಪ್ಹಿ	576 – 581
31	ಬದನೆ ಸಸ್ಯದಲ್ಲಿನ ಬ್ಯಾಕ್ಟೀರಿಯಾ ಸೊರಗು ರೋಗ ಮತ್ತು ಅದರ ತಡೆಯುವಿಕೆ	ಅವಿನಾಶ್ ಪಿ. ಉಮೇಶ್. ಎಸ್.	581

ಚಿತ್ರದುರ್ಗ ಜಿಲ್ಲೆಯ ಕೆಂಪು ಗೋಡು ಮಣ್ಣಿನಲ್ಲಿನ ಸಾವಯವ ಆಧಾರಿತ ಪೋಶಕಾಂಶಗಳಿಂದ ಹಿಪ್ಪುನೇರಳೆ ಬೆಳವಣಿಗೆ ಹಾಗೂ ಇಳುವರಿಯ ಗುಣಲಕ್ಷಣಗಳ ಮೇಲೆ ಒಂದು ಪರಿಣಾಮಕಾರಿ ಅಧ್ಯಯನ

ಎ. ಉಮೇಶ ಮತ್ತು ಬಿ. ಸಣ್ಣಪ್ಪ
ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು 570006, ಭಾರತ.
ಇ ಮೇಲ್: umeshacsb@gmail.com &drbsannappa@gmail.com

ಹಿಪ್ಪುನೇರಳೆ ಬೆಳವಣಿಗೆ, ಇಳುವರಿ ಮತ್ತು ಗುಣಮಟ್ಟ, ಮಣ್ಣಿನ ವಿಧ, ತಳಿ ಮತ್ತು ಮಣ್ಣಿನಲ್ಲಿರುವಪೋಷಕಾಂಶಗಳು, ಬೇಸಾಯದ ಕ್ರಮಗಳು ಮತ್ತು ಹವಾಮಾನದಲ್ಲಾಗುವ ಬದಲಾವಣೆಗಳು ವಾತಾವರಣದ ಮೇಲೆ ಅವಲಂಬಿತವಾಗಿದೆ.ಆದ್ದರಿಂದ ಹಿಪ್ಪುನೇರಳೆ ಸೊಪ್ಪಿನ ಪ್ರಮಾಣ ಮತ್ತು ಗುಣಮಟ್ಟವು ಸ್ಥಳೀಯ ಮಣ್ಣಿನ ಫಲವತ್ತತೆಗೆ ಮಾತ್ರಅವಲಂಬಿತವಾಗಿರುವುದಿಲ್ಲ. ಇದನ್ನು ಹೊರತುಪಡಿಸಿ ಮಣ್ಣಿಗೆ ಸಾವಯವ ಮತ್ತು ರಾಸಾಯನಿಕ ಗೊಬ್ಬರಗಳನ್ನು ಬಾಹ್ಯ ಮೂಲಗಳ ಮುಖಾಂತರ ಪುನಃಸೇರ್ಪಡೆ ಮಾಡುವುದು. ಈ ಅಂಶಗಳನ್ನು ಗಣನೆಗೆತೆಗೆದುಕೊಂಡುಕ್ಷೇತ್ರ ಸಂಶೋಧನೆಯನ್ನು 2013–14 ನೇ ಸಾಲಿನ ಮುಂಗಾರಿನಲ್ಲಿ (ಜೂನ್–ಸೆಪ್ಟಂಬರ್) ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಕೆಂಪು ಗೋಡು ಮಣ್ಣಿನಲ್ಲಿ ಸಾವಯವ ಆಧಾರಿತ ಪೋಶಕಾಂಶಗಳ ಉಪಯೋಗದಿಂದ ಹಿಪ್ಪುನೇರಳೆ ಬೆಳವಣಿಗೆ ಹಾಗೂ ಇಳುವರಿಯ ಗುಣಲಕ್ಷಣಗಳ ಮೇಲಿನ ಪರಿಣಾಮಗಳ ಅಧ್ಯಯನವನ್ನುಹಿಪ್ಪುನೇರಳೆ ಸೊಪ್ಪಿಗೆ ಶೇ. 100 ರಷ್ಟು ಸಾರಜನಕವನ್ನುಒದಗಿಸುವಉದ್ದೇಶವಾಗಿದೆ.ಈ ಸಂಶೋಧನೆಯಲ್ಲಿ ಹಿಪ್ಪುನೇರಳೆ ಬೆಳವಣಿಗೆ ಮತ್ತು ಇಳುವರಿಯ ಗುಣಲಕ್ಷಣಗಳಲ್ಲಿ ಆಗುವ ಪರಿಣಾಮಗಳು ಅಂಕಿ ಅಂಶಗಳ ಪ್ರಕಾರ ಶೇ.5 ರ ಸಂಭಾನೀಯತೆಯಲ್ಲಿ ವಿಶ್ಲೇಶಿಸಲಾಗಿದೆ.

ಈ ಸಂಶೋಧನೆಯ ಪ್ರಕಾರ, ಎರೆಹುಳು ಗೊಬ್ಬರವನ್ನು (ಕೊಟ್ಟಿಗೆಗೊಬ್ಬರದ ಶಿಫಾರಸ್ಸಿನ ಶೇ. 50 ರ ಸಮನಾಗಿ) + ಕೊಟ್ಟಿಗೆ ಗೊಬ್ಬರ (ಕೊಟ್ಟಿಗೆಗೊಬ್ಬರದ ಶಿಫಾರಸ್ಸಿನ ಶೇ. 50 ರ ಸಮನಾಗಿ) + ಸಾರಜನಕವುಳ್ಳ ಜೈವಿಕ ಗೊಬ್ಬರ + ರಂಜಕಯುಕ್ತ ಜೈವಿಕ ಗೊಬ್ಬರ + 200 ಕಿ. ಗ್ರಾಂ.ಸಾರಜನಕ + 110 ಕಿ. ಗ್ರಾಂ.ರಂಜಕ + 140 ಕಿ. ಗ್ರಾಂ. ಪೊಟ್ಯಾಷ್ (T_6) ಒದಗಿಸಿದಾಗ ಹಿಪ್ಪುನೇರಳೆ ಗಿಡದಎತ್ತರಅತ್ಯಧಿಕವಾಗಿ ದಾಖಲಾಗಿದೆ (96.86, 120.3, ಮತ್ತು 149.1 ಸೆಂ.ಮೀ.), ತದನಂತರಕುರಿಗೊಬ್ಬರವನ್ನು (ಕೊಟ್ಟಿಗೆಗೊಬ್ಬರದ ಶಿಫಾರಸ್ಸಿನ ಶೇ.50 ರ ಸಮನಾಗಿ) + ಕೊಟ್ಟಿಗೆ ಗೊಬ್ಬರ (ಕೊಟ್ಟಿಗೆಗೊಬ್ಬರದ ಶಿಫಾರಸ್ಸಿನ ಶೇ. 50 ರ ಸಮನಾಗಿ) + ಸಾರಜನಕವುಳ್ಳ ಜೈವಿಕ ಗೊಬ್ಬರ + ರಂಜಕಯುಕ್ತ ಜೈವಿಕ ಗೊಬ್ಬರ + 200 ಕಿ. ಗ್ರಾಂ.ಸಾರಜನಕ + 110 ಕಿ. ಗ್ರಾಂ.ರಂಜಕ + 140 ಕಿ. ಗ್ರಾಂ. ಪೊಟ್ಯಾಷ್ (T_7) (93.40, 116.8 ಮತ್ತು 144.2 ಸೆಂ.ಮೀ.).ಆದಾಗ್ಯೂಗಿಡದಎತ್ತರವನ್ನುT_0ನಲ್ಲಿ (ಕೊಟ್ಟಿಗೆಗೊಬ್ಬರದ ಶಿಫಾರಸ್ಸಿನ ಪ್ರಕಾರ) + 350 ಕಿ. ಗ್ರಾಂ.ಸಾರಜನಕ + 140 ಕಿ. ಗ್ರಾಂ.ರಂಜಕ + 140 ಕಿ. ಗ್ರಾಂ. ಪೊಟ್ಯಾಷ್) (75.33, 91.10 ಮತ್ತು 112.6 ಸೆಂ.ಮೀ.)ಕ್ರಮವಾಗಿ ಕಟಾವಾದ 30, 45 ಮತ್ತು 60 ದಿವಸಗಳ ನಂತರದಲ್ಲಿ ಕಡಿಮೆ ದಾಖಲಾಗಿದೆ.ಅದೇರೀತಿಯಾಗಿ ಹಿಪ್ಪುನೇರಳೆ ಎಲೆಯ ಅಳತೆ, ಎಲೆಯ ಅಳತೆಯ ಸೂಚ್ಯಂಕಕೂಡ ಅಂಕಿ ಅಂಶಗಳ ಪ್ರಕಾರ T_6(15002 ಚ.ಸೆಂ.ಮೀ.ಮತ್ತು 2.084)ನಲ್ಲಿ ಗಣನೀಯವಾಗಿ ಏರಿಕೆಯಾಗಿದ್ದು, T_0(12450 ಚ.ಸೆಂ.ಮೀ.ಮತ್ತು 1.729 ಕ್ರಮವಾಗಿ) ನಲ್ಲಿ ಕಟಾವಾದ 45 ದಿನಗಳ ನಂತರದಲ್ಲಿ ಕಡಿಮೆ ದಾಖಲಾಗಿದೆ.ಹಿಪ್ಪುನೇರಳೆ ಎಲೆಯ ಅಳತೆಯ ಅವಧಿT_6ನಲ್ಲಿ ದೀರ್ಘಾವಧಿವರೆಗೆದಾಖಲಾಗಿದೆ (973.5 ಮತ್ತು 1067) ನಂತರವಾಗಿT_7(952.1 ಮತ್ತು 1050) ನಲ್ಲಿ ಹಾಗೂ ಅಲ್ಪಾವಧಿವರೆಗೆ T_0ನಲ್ಲಿ (798.7 ಮತ್ತು 894.3 ಕ್ರಮವಾಗಿ) ಕಟಾವಾದ 45 ಮತ್ತು 60 ದಿವಸಗಳ ನಂತರದಲ್ಲಿ ದಾಖಲಾಗಿದೆ.ಹಿಪ್ಪುನೇರಳೆ ಸೊಪ್ಪಿನ ಇಳುವರಿ ಪ್ರತಿಗಿಡಕ್ಕೆ (886 ಗ್ರಾಂ.)ಮತ್ತು ಪ್ರತಿ ಹೆಕ್ಟೇರ್‌ಗೆ ಪ್ರತಿ ಬೆಳೆಗೆ (12,071 ಕಿ.ಗ್ರಾಂ.)T_6ನಲ್ಲಿ ಅಧಿಕವಾಗಿಕಂಡು ಬಂದುನಂತರT_7(865.1ಗ್ರಾಂ.ಮತ್ತು 11,776ಕಿ.ಗ್ರಾಂ.ಕ್ರಮವಾಗಿ) ನಲ್ಲಿ ದಾಖಲಾಗಿದೆ, ಹಾಗೂ ಕಡಿಮೆ ಇಳುವರಿಯು T_0ನಲ್ಲಿ (744.8 ಗ್ರಾಂ.ಮತ್ತು 10,138ಕಿ.ಗ್ರಾಂ.ಕ್ರಮವಾಗಿ) ಧಾಖಲಾಗಿದೆ.ವಿವರವಾದ ಮಾಹಿತಿಯನ್ನು ಪ್ರಬಂಧ ಮಂಡನೆಯ ಸಮಯದಲ್ಲಿ ಚರ್ಚಿಸಲಾಗುವುದು.

ಪ್ರಮುಖ ಪದಗಳು: ಹಿಪ್ಪುನೇರಳೆ, ಸಾವಯವ ಆಧಾರಿತ ಪೋಶಕಾಂಶಗಳು, ಮುಂಗಾರು, ಜೈವಿಕ ಗೊಬ್ಬರ, ಬೆಳವಣಿಗೆ ಮತ್ತು ಇಳುವರಿಯ ಗುಣಲಕ್ಷಣಗಳು.

ಸಾವಯವ ಕೃಷಿ ಒಂದು ಪರಿಸರ ಸ್ನೇಹಿಯಾಗಿದ್ದು, ಆರೋಗ್ಯಕರವಾದ ಗಿಡಗಳನ್ನು ಬೆಳೆಯಲು ಸಾಂಪ್ರದಾಯಿಕ ಮತ್ತು ಸಾವಯವ ಗೊಬ್ಬರದ ಬಳಕೆಯಿಂದ ಸಸ್ಯಗಳ ಸಂರಕ್ಷಣೆ ಹಾಗೂ ಬೆಳವಣಿಗೆಯ ಶಕ್ತಿಯನ್ನು ಹೆಚ್ಚಿಸುವುದಲ್ಲದೆ, ಸಸ್ಯಗಳಿಗೆ ಸ್ವತಃ ಶಕ್ತಿಯನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಸಾವಯವ ಗೊಬ್ಬರಗಳು ಸಸ್ಯಗಳ ಬೆಳವಣಿಗೆಗೆ ಸಹಕಾರಿಯಾಗಿದ್ದು, ಇವುಗಳನ್ನು ಒದಗಿಸುವ ಮೂಲಗಳು ದೊಡ್ಡ ಪ್ರಮಾಣದಲ್ಲಿದ್ದರು ಸಹ ಪೋಷಕಾಂಶಗಳು ಮಾತ್ರ ಅಲ್ಪ ಪ್ರಮಾಣದಲ್ಲಿರುತ್ತವೆ. ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಎಣ್ಣೆಹಿಂಡಿ, ಇತ್ಯಾದಿ, ಸಾವಯವ ಗೊಬ್ಬರದ ಮೂಲಗಳಾಗಿವೆ (ಶಿವಪ್ರಕಾಶ್ ಮತ್ತು ನಾರಾಯಣಗೌಡ, 2006). ಸಾವಯವ ಗೊಬ್ಬರದ ಮೂಲಗಳಿಂದ ಒದಗಿಸಿದಂತಹ ಪೋಷಕಾಂಶಗಳು ಸಸ್ಯಗಳಿಗೆ ನಿಧಾನ ಗತಿಯಲ್ಲಿ ತಲುಪಬಹುದು ಅಥವಾ ಮಣ್ಣಿನ ಅಡ್ಡಪರಿಣಾಮಗಳಿಂದ ತಲುಪದೇ ಇರಬಹುದು. ಆದ ಕಾರಣ ಗೊಬ್ಬರಗಳನ್ನು ಪುನರಾವರ್ತನೆಗೊಳಿಸಿ ಮಣ್ಣಿಗೆ ಸೇರಿಸುವುದರಿಂದ ಬೇಸಾಯ ಮಾಡಿದ ಮಣ್ಣಿನಲ್ಲಿ ಸಾವಯವ ಅಂಶಗಳು ಹೆಚ್ಚಾಗಿ ಸಸ್ಯಗಳಿಗೆ ಒದಗಿಸುತ್ತವೆ (ರೆಡ್ಡಿ ಮತ್ತು ರೆಡ್ಡಿ, 2010). ಹಿಪ್ಪುನೇರಳೆ ಒಂದು ಆಳವಾದ ಬೇರೂರುವ, ಬಹುವಾರ್ಷಿಕ ಬೆಳೆಯಾಗಿದ್ದು ರೇಷ್ಮೆಹುಳುವಿಗೆ ಮೂಲ ಆಹಾರವಾಗಿದೆ. ಭಾರತದಲ್ಲಿ ಹಿಪ್ಪುನೇರಳೆ ಬೇಸಾಯವನ್ನು ಹೆಚ್ಚಾಗಿ ಉತ್ತಮವಾದ ಸೊಪ್ಪಿನ ಉತ್ಪಾದನೆಗೋಸ್ಕರ ಮಾಡಲಾಗುತ್ತದೆ. ಈಗಿನ ಜಾಗತಿಕ ಸನ್ನಿವೇಶದಲ್ಲಿ ಭಾರತ ದೇಶ, ಕಚ್ಚಾರೇಷ್ಮೆ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದ್ದು (23,679 ಮೆ.ಟನ್) ಗಣತಂತ್ರದ ಚೀನಾ ದೇಶ ಮೊದಲನೇ ಸ್ಥಾನದಲ್ಲಿದೆ

(ಅನಾಮಧೇಯ, 2013). ರೇಷ್ಮೆಹುಳುವು ತನ್ನ ದೇಹದಲ್ಲಿ ಉತ್ಪಾದನೆಯಾಗುವ ಸುಮಾರು ಶೇ. 70 ರಷ್ಟು ಪ್ರೋಟೀನ್‌ಯುಕ್ತ ರೇಷ್ಮೆ ಅಂಶವನ್ನು ಹಿಪ್ಪುನೇರಳೆ ಎಲೆಯ ಪ್ರೋಟೀನ್ ಅಂಶದಿಂದ ನೇರವಾಗಿ ಪಡೆದುಕೊಂಡಿರುತ್ತದೆ. ಮಿಯಾಶಿತ (1986) ರವರ ಪ್ರಕಾರ, ರೇಷ್ಮೆ ಗೂಡಿನ ಉತ್ಪಾದನೆಗೆ ಹಿಪ್ಪುನೇರಳೆ ಸೊಪ್ಪಿನ ಕೊಡುಗೆ ಶೇ. 38.20 ರಷ್ಟಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಹಿಪ್ಪುನೇರಳೆ ಸೊಪ್ಪಿನ ಇಳುವರಿಗೆ ಮಣ್ಣಿನ ವಿಧ, ಸಸ್ಯದ ವಿಧಗಳು, ಸಸ್ಯಗಳಲ್ಲಿರುವ ಪೋಷಕಾಂಶಗಳ ಲಭ್ಯತೆ ಮತ್ತು ಪರಿಸರದ ಅಂಶಗಳು ಪ್ರಭಾವ ಬೀರುತ್ತವೆ. ಒಟ್ಟಾರೆಯಾಗಿ ಮೇಲಿನ ಅಂಶಗಳೆಲ್ಲವು ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದನೆಯಲ್ಲಿ ಪಾಲ್ಗೊಳ್ಳುತ್ತವೆ. ಹಿಪ್ಪುನೇರಳೆ ಸೊಪ್ಪಿನ ಉತ್ಪಾದನೆಯು ಸಸ್ಯಗಳಲ್ಲಿನ ಪೋಷಕಾಂಶಗಳ ಆಧಾರದ ಮೇಲೆ ನಿರ್ಧಾರವಾಗಿದ್ದು, ಸಾವಯವ, ರಾಸಾಯನಿಕ ಮತ್ತು ಜೈವಿಕ ಗೊಬ್ಬರಗಳ ಮೇಲೆ ಅವಲಂಬಿತವಾಗಿರುತ್ತದೆ. ರಾಸಾಯನಿಕ ಗೊಬ್ಬರಗಳ ಬೇಡಿಕೆ ಜೊತೆಗೆ ದರ ಹೆಚ್ಚಾಗಿದ್ದು ದಿನದಿಂದ ದಿನಕ್ಕೆ ಅವುಗಳ ಲಭ್ಯತೆ ಕಡಿಮೆಯಾಗುವುದರ ಜೊತೆಗೆ ಬಳಕೆಯು ಕೂಡ ಕಡಿಮೆಯಾಗಿದೆ. ರಾಸಾಯನಿಕವುಳ್ಳ ಕೀಟನಾಶಕಗಳು ಬಳಸುತ್ತಿರುವು ದರಿಂದ ಮಣ್ಣಿನ ಫಲವತ್ತತೆ ಕ್ಷೀಣಿಸಿ, ಮಣ್ಣಿನ ಸಾರ ಹೆಚ್ಚಾಗಿರುವುದು ಗಮನಿಸಲಾಗಿದೆ. ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಾವಯವ ಆಧಾರಿತದ ಪೋಷಕಾಂಶಗಳನ್ನು ಕೆಂಪು ಗೋಡು ಮಣ್ಣಿನಲ್ಲಿ ಬೆಳೆದ ಹಿಪ್ಪುನೇರಳೆ ಗಿಡಗಳಿಗೆ ಒದಗಿಸಿ ಮೌಲ್ಯದ ತುಲನಾತ್ಮಕ ಅಭ್ಯಾಸವನ್ನು ಮಾಡಿ ಗಿಡದ ಬೆಳವಣಿಗೆ ಮತ್ತು ಸೊಪ್ಪಿನ ಇಳುವರಿ ಮುಂಗಾರಿನಲ್ಲಿ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಈ ಪತ್ರಿಕೆಯಲ್ಲಿ ನಮೂದಿಸಲಾಗಿದೆ.

ವಸ್ತುಗಳು ಮತ್ತು ವಿಧಾನಗಳು

ಅಧ್ಯಯನ ಪ್ರದೇಶ: ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಕೆಂಪು ಗೋಡು ಮಣ್ಣಿನಲ್ಲಿ ಬೆಳೆದ ರೈತನ ಹಿಪ್ಪುನೇರಳೆ (ತಳಿ–ವಿ$_1$) ತೋಟವನ್ನು 2013–14 ಸಾಲಿನ ಮುಂಗಾರುವಿನಲ್ಲಿ ಪ್ರಯೋಗಕ್ಕೊಳಪಡಿಸಲಾಗಿದೆ. ಸಾವಯವ ಗೊಬ್ಬರಗಳ ದಕ್ಷತೆ (ಕೊಟ್ಟಿಗೆ ಗೊಬ್ಬರ, ಎರೆಹುಳು ಗೊಬ್ಬರ, ಕುರಿ ಗೊಬ್ಬರ ಮತ್ತು ಜೈವಿಕ ಗೊಬ್ಬರ) ಯನ್ನು ಗಿಡದ ಬೆಳವಣಿಗೆ ಮತ್ತು ಸೊಪ್ಪಿನ ಉತ್ಪಾದನೆಗೆ ನೀರಾವರಿಯಲ್ಲಿ ಸಾಲಿನಿಂದ ಸಾಲಿಗೆ 150+90 ಸೆಂ.ಮೀ. ಮತ್ತು ಗಿಡದಿಂದ ಗಿಡಕ್ಕೆ 60 ಸೆಂ.ಮೀ. ಅಂತರದಲ್ಲಿ ಬೆಳೆದ ಹಿಪ್ಪುನೇರಳೆ ತೋಟವನ್ನು ಪುನರಾವರ್ತನ ಬ್ಲಾಕ್ ವಿನ್ಯಾಸದ (ಆರ್‌ಸಿಬಿಡಿ) ಮುಖೇನ 8 ಉಪಚಾರಗಳ ಮೂಲಕ 3 ಬಾರಿ ಪುನರಾವರ್ತನೆಗೊಳಪಡಿಸಲಾಗಿದೆ. ಶಿಫಾರಿತ ಕೊಟ್ಟಿಗೆ ಗೊಬ್ಬರವನ್ನು ವಾರ್ಷಿಕವಾಗಿ 20 ಮೆಟ್ರಿಕ್ ಟನ್/ಹೆಕ್ಟೇರಿಗೆ ಬಳಸಿದ್ದು, ಜೊತೆಗೆ ಕಾಂಪೋಸ್ಟ್, ಎರೆಹುಳು ಮತ್ತು ಕುರಿ ಗೊಬ್ಬರಗಳನ್ನು ಶಿಫಾರಿತ ಕೊಟ್ಟಿಗೆ ಗೊಬ್ಬರದ ಆಧಾರದ ಮೇಲೆ ಬಳಸಲಾಗಿದೆ. ಸಾವಯವ ಗೊಬ್ಬರಗಳ ಜೊತೆಯಲ್ಲಿ ಸಾರಜನಕ–ಜೈವಿಕ ಗೊಬ್ಬರ (ಅಜೋಸ್ಪಿರಿಲ್ಲಂ ಬ್ರಾಸಿಲೆನ್ಸ್) ವಾರ್ಷಿಕವಾಗಿ 20 ಕಿ.ಗ್ರಾಂ./ಹೆಕ್ಟೇರ್, ರಂಜಕ–ಜೈವಿಕ (ಅಸ್ಪರ್ಜಿಲ್ಲಸ್ ಅವಮೋರಿ) ಗೊಬ್ಬರ ವಾರ್ಷಿಕವಾಗಿ 05 ಕಿ.ಗ್ರಾಂ./ಹೆಕ್ಟೇರ್ ಮತ್ತು ರಾಸಾಯನಿಕ ಗೊಬ್ಬರಗಳನ್ನು ವಾರ್ಷಿಕವಾಗಿ 350:140:140 ಎನ್.ಪಿ.ಕೆ. ಕಿ.ಗ್ರಾಂ./ಹೆಕ್ಟೇರ್‌ಗೆ ಬಳಸಲಾಗಿದೆ. ಹಿಪ್ಪುನೇರಳೆ ಬೇಸಾಯವನ್ನು ನೀರಾವರಿ ಪ್ರದೇಶದಲ್ಲಿ ನಿರ್ದೇಶಿಸಿದ ರೀತಿಯಲ್ಲಿ ಬೆಳೆಯಲಾಗಿದೆ (ದಂಡಿನ್ ಮತ್ತು ಗಿರಿಧರ್, 2010).

ಉಪಚಾರಗಳು

T_0: ಶಿಫಾರಿತ ಕೊಟ್ಟಿಗೆ ಗೊಬ್ಬರ + ವಾರ್ಷಿಕ 350 ಸಾರಜನಕ + 140 ರಂಜಕ + 140 ಪೊಟ್ಯಾಷ್ (ಉಪಚಾರವಲ್ಲದ).

T_1: ಶಿಫಾರಿತ ಕೊಟ್ಟಿಗೆ ಗೊಬ್ಬರ + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200 ಸಾರಜನಕ + 110 ರಂಜಕ + 140 ಪೊಟ್ಯಾಷ್.

T_2: ಕಾಂಪೋಸ್ಟ್ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + 350 ಸಾರಜನಕ + 140 ರಂಜಕ + 140 ಪೊಟ್ಯಾಷ್.

T_3: ಎರೆಹುಳು ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + 350 ಸಾರಜನಕ + 140 ರಂಜಕ + 140 ಪೊಟ್ಯಾಷ್.

T_4: ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + 350 ಸಾರಜನಕ + 140 ರಂಜಕ + 140 ಪೊಟ್ಯಾಷ್.

T_5: ಕಾಂಪೋಸ್ಟ್ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200 ಸಾರಜನಕ + 110 ರಂಜಕ + 140 ಪೊಟ್ಯಾಷ್.

T_6: ಎರೆಹುಳು ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200 ಸಾರಜನಕ + 110 ರಂಜಕ + 140 ಪೊಟ್ಯಾಷ್.

T_7: ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200 ಸಾರಜನಕ + 110 ರಂಜಕ + 140 ಪೊಟ್ಯಾಷ್.

ದಾಖಲಿಸಿದ ನಿಯತಾಂಕಗಳು: ಹಿಪ್ಪುನೇರಳೆ ಬೆಳವಣಿಗೆಯ ನಿಯತಾಂಕಗಳನ್ನು 30, 45 ಮತ್ತು 60ನೇ ದಿನಗಳ ಅಂತರದಲ್ಲಿ ಮತ್ತು ಸೊಪ್ಪಿನ ಇಳುವರಿಯನ್ನು ಕಟಾವು ಮಾಡಿದ 60ನೇ ದಿನಗಳ ಅಂತರದಲ್ಲಿ ದಾಖಲು ಮಾಡಲಾಗಿದೆ.

ಗಿಡದ ಎತ್ತರ (ಸೆಂ.ಮೀ.): ಗಿಡದ ಎತ್ತರವನ್ನು ಅಳೆಯುವಾಗ, ನಾಮಾಂಕಿತವಾಗಿ ಗುರುತಿಸಿದ 5 ಗಿಡಗಳ ಬುಡದಿಂದ ತುದಿಗೆ ಹರಡಿಕೊಂಡಿರುವ ಎಲೆಗಳ ಎತ್ತರವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಗಿಡದ ಎತ್ತರವನ್ನು ಅಳತೆ ಮಾಡುವಾಗ ಗಿಡ ಕಟಾವಾಗಿ 30, 45 ಮತ್ತು 60ನೇ ದಿನಗಳ ಅಂತರದಲ್ಲಿ ಅಳತೆ ಮಾಡಿ ನಂತರ ಗಿಡದ ಸರಾಸರಿ ಉದ್ದವನ್ನು ಈ ಕೆಳಗೆ ಕೊಟ್ಟಿರುವ ಸಮೀಕರಣದ ಮುಖಾಂತರ ಲೆಕ್ಕಾಚಾರ ಮಾಡಲಾಗಿದೆ.

$$\text{ಗಿಡದ ಸರಾಸರಿ ಎತ್ತರ (ಸೆಂ.ಮೀ.)} = \frac{\text{ಗಿಡದ ಒಟ್ಟು ಎತ್ತರ}}{\text{ಗಿಡಗಳ ಸಂಖ್ಯೆ}}$$

ರೆಂಬೆಗಳ ಸಂಖ್ಯೆ/ಗಿಡಕ್ಕೆ: ನಾಮಾಂಕಿತವಾಗಿ ಗುರುತಿಸಿದ 5 ಗಿಡಗಳಲ್ಲಿನ ರೆಂಬೆಗಳ ಸಂಖ್ಯೆಯ ಎಣಿಕೆಯನ್ನು ಕಟಾವಾಗಿ 30, 45 ಮತ್ತು

60ನೇ ದಿನಗಳ ಅಂತರದಲ್ಲಿ ದಾಖಲಿಸಲಾಗಿದೆ ಮತ್ತು ಗಿಡಗಳಲ್ಲಿನ ರೆಂಬೆಗಳ ಸರಾಸರಿ ಸಂಖ್ಯೆಗಳನ್ನು ಈ ಕೆಳಗೆ ಕೊಟ್ಟಿರುವ ಸೂತ್ರದ ಮುಖಾಂತರ ಲೆಕ್ಕಾಚಾರ ಮಾಡಲಾಗಿದೆ.

$$\text{ರೆಂಬೆಗಳ ಸಂಖ್ಯೆ/ಗಿಡಕ್ಕೆ} = \frac{\text{ಒಟ್ಟು ರೆಂಬೆಗಳ ಸಂಖ್ಯೆ}}{\text{ಗಿಡಗಳ ಸಂಖ್ಯೆ}}$$

ಎಲೆಗಳ ಸಂಖ್ಯೆ/ಗಿಡಕ್ಕೆ: ನಾಮಾಂಕಿತವಾಗಿ ಗುರುತಿಸಿದ 5 ಗಿಡಗಳಲ್ಲಿನ ಎಲೆಗಳ ಎಣಿಕೆಯನ್ನು ಕಟಾವಾಗಿ 30, 45 ಮತ್ತು 60ನೇ ದಿನಗಳ ಅಂತರದಲ್ಲಿ ದಾಖಲು ಮಾಡಲಾಗಿದೆ ಮತ್ತು ಗಿಡಗಳಲ್ಲಿನ ಎಲೆಗಳ ಸರಾಸರಿ ಸಂಖ್ಯೆಗಳನ್ನು ಈ ಕೆಳಗೆ ಕೊಟ್ಟಿರುವ ಸೂತ್ರದ ಮುಖಾಂತರ ಲೆಕ್ಕಾಚಾರ ಮಾಡಲಾಗಿದೆ.

$$\text{ಎಲೆಗಳ ಸಂಖ್ಯೆ/ಗಿಡಕ್ಕೆ} = \frac{\text{ಗಿಡಗಳಲ್ಲಿನ ಎಲೆಗಳ ಒಟ್ಟು ಸಂಖ್ಯೆ}}{\text{ಗಿಡಗಳ ಸಂಖ್ಯೆ}}$$

ಎಲೆಯ ವಿಸ್ತೀರ್ಣ/ಗಿಡಕ್ಕೆ (ಚ.ಸೆಂ.ಮೀ.): ಎಲೆಯ ವಿಸ್ತೀರ್ಣವು ಎಲೆಯ ಉದ್ದ, ಅಗಲ ಮತ್ತು ಇವೆರಡಕ್ಕೆ ಸಂಬಂಧಿಸಿದ ಅಳತೆಯ ಮಾಪನವಾಗಿದೆ. ಎಲೆಯ ವಿಸ್ತೀರ್ಣವನ್ನು ಅರ್ಥೈಸಲು ಈ ಕೆಳಗಿನ ಸಮೀಕರಣವನ್ನು ಬಳಸಲಾಗಿದೆ.

ಎಲೆಯ ವಿಸ್ತೀರ್ಣ = ಉದ್ದ x ಅಗಲ x ತಿದ್ದುಪಡಿ ಅಂಶ (0.6898)

ಎಲೆಯ ವಿಸ್ತೀರ್ಣವು, ಎಲೆಗಳ ಸಂಖ್ಯೆಯ ಜೊತೆ ಗುಣಾಕಾರ ಮಾಡಿದಾಗ, ಗಿಡಗಳಲ್ಲಿನ ಎಲೆಯ ವಿಸ್ತೀರ್ಣ ದೊರೆಯುತ್ತದೆ.

ಎಲೆಯ ವಿಸ್ತೀರ್ಣದ ಸೂಚ್ಯಾಂಕ: ಗಿಡಗಳ ಅಂತರ ಮತ್ತು ಎಲೆಯ ವಿಸ್ತೀರ್ಣದ ಸಂಬಂಧವನ್ನು ಸೂಚಿಸುವುದಕ್ಕೆ ಎಲೆಯ ವಿಸ್ತೀರ್ಣದ ಸೂಚ್ಯಾಂಕ ಎನ್ನುತ್ತೇವೆ. ಎಲೆಯ ವಿಸ್ತೀರ್ಣದ ಸೂಚ್ಯಾಂಕವನ್ನು ಅರ್ಥೈಸಲು ಈ ಕೆಳಗಿನ ಸಮೀಕರಣವನ್ನು ಬಳಸಲಾಗಿದೆ.

$$\text{ಎಲೆಯ ವಿಸ್ತೀರ್ಣದ ಸೂಚ್ಯಾಂಕ} = \frac{\text{ಎಲೆಯ ವಿಸ್ತೀರ್ಣ (ಚ.ಸೆಂ.ಮೀ.)}}{\text{ಗಿಡದ ಅಂತರ (ಚ.ಸೆಂ.ಮೀ.)}}$$

ಎಲೆಯ ವಿಸ್ತೀರ್ಣದ ಅವಧಿ: ಎಲೆಯ ವಿಸ್ತೀರ್ಣದ ಸೂಚ್ಯಾಂಕ ಮತ್ತು ಅವಧಿಯ ಸಂಬಂಧವನ್ನು ಕಲ್ಪಿಸುವುದಕ್ಕೆ ಎಲೆಯ ವಿಸ್ತೀರ್ಣದ ಅವಧಿ ಎನ್ನುತ್ತಾರೆ. ಎಲೆಯ ವಿಸ್ತೀರ್ಣದ ಅವಧಿಯನ್ನು ಅರ್ಥೈಸಲು ಈ ಕೆಳಗಿನ ಸಮೀಕರಣವನ್ನು ಬಳಸಲಾಗಿದೆ.

$$\text{ಎಲೆಯ ವಿಸ್ತೀರ್ಣದ ಅವಧಿ (ದಿನಗಳಲ್ಲಿ)} = \frac{\text{ಎಲ್}_1 + \text{ಎಲ್}_2}{2\ (\text{ಟಿ}_2 - \text{ಟಿ}_1)}$$

ಎಲ್_1 = ಮೊದಲಿನ ಎಲೆಯ ವಿಸ್ತೀರ್ಣದ ಅವಧಿ
ಎಲ್_2 = ನಂತರದ ಎಲೆಯ ವಿಸ್ತೀರ್ಣದ ಅವಧಿ
ಟಿ_1 = ಮೊದಲು ಗಮನಿಸಿದ ಅವಧಿ
ಟಿ_2 = ನಂತರದಲ್ಲಿ ಗಮನಿಸಿದ ಅವಧಿ

ಎಲೆ : ರೆಂಬೆ ಅನುಪಾತ: ಎಲೆ ಮತ್ತು ರೆಂಬೆಯ ಅನುಪಾತವನ್ನು ಲೆಕ್ಕಾಚಾರ ಮಾಡಲು ಕೆಳಗೆ ನಮೂದಿಸಿರುವ ಸಮೀಕರಣವನ್ನು ಉಪಯೋಗಿಸಲಾಗಿದೆ.

$$\frac{\text{ಎಲೆಗಳ ತೂಕ}}{\text{ಒಟ್ಟು ರೆಂಬೆಗಳ ತೂಕ}} \times 100 \quad \frac{\text{ರೆಂಬೆಗಳ ತೂಕ}}{\text{ಒಟ್ಟು ರೆಂಬೆಗಳ ತೂಕ}} \times 100$$

ಸೊಪ್ಪಿನ ಇಳುವರಿ/ಗಿಡಕ್ಕೆ: ನಾಮಾಂಕಿತವಾಗಿ ಆಯ್ಕೆ ಮಾಡಿದ 5 ಗಿಡಗಳ ಸೊಪ್ಪನ್ನು ಕಟಾವು ಮಾಡಿ, ಆ ಸೊಪ್ಪಿನ ಸರಾಸರಿ ತೂಕವನ್ನು ತಾಜಾ ಆಧಾರದಲ್ಲಿ ಮಾಡಲಾಗಿದೆ.

ಸೊಪ್ಪಿನ ಇಳುವರಿ (ಕಿ.ಗ್ರಾಂ./ಹೆ.) = ಒಟ್ಟು ಗಿಡಗಳ ಸಂಖ್ಯೆ x ಸರಾಸರಿ ಸೊಪ್ಪಿನ ಇಳುವರಿಯು ತೂಕ/ಗಿಡಕ್ಕೆ . (ಕಿ.ಗ್ರಾಂ.)

ಈ ಎಲ್ಲಾ ಅಂಕಿಅಂಶಗಳನ್ನು ಪಿ = 0.05 ರ ಫಿಶರ್–ಪರೀಕ್ಷೆಯ ಮುಖಾಂತರ ಗಮನಾರ್ಹವಾದ ಮಟ್ಟದಲ್ಲಿ ಕೊಚ್‌ರನ್ ಮತ್ತು ಕಾಕ್ಸ್ (2000) ರವರ ರೂಪುರೇಖೆಯ ವಿಧಾನದಲ್ಲಿ ವಿಶ್ಲೇಷಿಸಲಾಗಿದೆ.

ಫಲಿತಾಂಶ: ಸಾವಯವ ಆಧಾರಿತ ಪೋಷಕಾಂಶಗಳ ಸಾಮರ್ಥ್ಯದಿಂದ ಕೆಂಪು ಗೋಡು ಮಣ್ಣಿನಲ್ಲಿ ಬೆಳೆದ ಹಿಪ್ಪನೇರಳೆ ಗಿಡಗಳ ಬೆಳವಣಿಗೆ ಮತ್ತು ಸೊಪ್ಪಿನ ಇಳುವರಿಯ ಫಲಿತಾಂಶವನ್ನು ಕೋಷ್ಟಕ 1 ರಿಂದ 4 ರಲ್ಲಿ ತಿಳಿಸಲಾಗಿದೆ.

ಗಿಡದ ಎತ್ತರ (ಸೆಂ.ಮೀ.) : ಗಿಡದ ಎತ್ತರ ಬೆಳವಣಿಗೆಯ ನಿಯತಾಂಕವಾಗಿದ್ದು ಇದು ಸೊಪ್ಪಿನ ಇಳುವರಿ ಮೇಲೆ ಹಾಗೂ ಹಿಪ್ಪನೇರಳೆ ಬೇಸಾಯದ ಮೇಲೆ ಗರಿಷ್ಠ ಮಟ್ಟದ ಕೊಡುಗೆಯನ್ನು ನೀಡುತ್ತದೆ. ಹಿಪ್ಪನೇರಳೆ ತೋಟಕ್ಕೆ, ಎರೆಹುಳು ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ./ಹೆ/ವರ್ಷಕ್ಕೆ) ಗಳನ್ನು ಒದಗಿಸಿದಾಗ ಗಿಡದ ಎತ್ತರ ಗಣನೀಯವಾಗಿ ಹೆಚ್ಚಾಗಿದೆ, ನಂತರ ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ./ಹೆ/ವರ್ಷಕ್ಕೆ) ಗಳನ್ನು ಕಟಾವು ಮಾಡಿದ 30, 45 ಮತ್ತು 60ನೇ ದಿನಗಳ ಅಂತರದಲ್ಲಿ ಕಂಡುಬಂದಿದೆ. ಆದಾಗ್ಯೂ, ಗಿಡದ ಎತ್ತರ ಉಪಚಾರ ಮಾಡದ ಹಿಪ್ಪನೇರಳೆ ತೋಟದಲ್ಲಿ ಅಂದರೆ ಶಿಫಾರಿತ ಕೊಟ್ಟಿಗೆ ಗೊಬ್ಬರ (20 ಮೆಟ್ರಿಕ್ ಟನ್/ಹೆ/ವರ್ಷಕ್ಕೆ) + 350:140:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳಲ್ಲಿ ಕಡಿಮೆಯಾಗಿದೆ (ಕೋಷ್ಟಕ 1).

ರೆಂಬೆಗಳ ಸಂಖ್ಯೆ/ಗಿಡಕ್ಕೆ: ರೆಂಬೆಗಳ ಸಂಖ್ಯೆ ಗಿಡಗಳಲ್ಲಿನ ಇಳುವರಿಯನ್ನು ಸೂಚಿಸುವುದರಿಂದ ಇದು ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಹಿಪ್ಪನೇರಳೆಯಲ್ಲಿ ರೆಂಬೆಗಳ ಸಂಖ್ಯೆಯನ್ನು ಸಂಖ್ಯಾನುಗುಣವಾಗಿ ಹೆಚ್ಚಿಸಲು, ಹಿಪ್ಪನೇರಳೆ ತೋಟಕ್ಕೆ ಎರೆಹುಳು ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳನ್ನು

ಒದಗಿಸಿದಾಗ ರೆಂಬೆಗಳ ಸಂಖ್ಯೆ/ಗಿಡಕ್ಕೆ ಗಣನೀಯವಾಗಿ ಹೆಚ್ಚಾಗಿದ್ದು, ನಂತರ ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳನ್ನು ಕಟಾವು ಮಾಡಿದ 30, 45 ಮತ್ತು 60ನೇ ದಿನಗಳ ಅಂತರದಲ್ಲಿ ಕಂಡುಬಂದಿದೆ. ಆದಾಗ್ಯೂ, ಪ್ರತಿ ಗಿಡಕ್ಕೆ ರೆಂಬೆಗಳ ಸಂಖ್ಯೆಗಳು ಉಪಚಾರ ಮಾಡದ ಹಿಪ್ಪುನೇರಳೆ ತೋಟದಲ್ಲಿ ಅಂದರೆ ಶಿಫಾರಿತ ಕೊಟ್ಟಿಗೆ ಗೊಬ್ಬರ (20 ಮೆಟ್ರಿಕ್ ಟನ್/ಹೆ/ವರ್ಷಕ್ಕೆ) + 350:140:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ದಲ್ಲಿ ಕಂಡುಬಂದಿದೆ (ಕೋಷ್ಟಕ 1).

ಎಲೆಗಳ ಸಂಖ್ಯೆ/ಗಿಡಕ್ಕೆ: ಹಿಪ್ಪುನೇರಳೆ ಸೊಪ್ಪನ್ನು ರೇಷ್ಮೆಹುಳುವಿಗೆ ಆಹಾರವಾಗಿ ನೀಡುವುದರಿಂದ ಪ್ರತಿ ಗಿಡದ ಸೊಪ್ಪಿನ ಇಳುವರಿ ಪ್ರಮುಖ ಪಾತ್ರವಹಿಸುತ್ತದೆ. ಹಿಪ್ಪುನೇರಳೆ ತೋಟಕ್ಕೆ ಎರೆಹುಳು ಗೊಬ್ಬರವನ್ನು (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಉಪಚಾರ ಮಾಡಿದಾಗ ಎಲೆಗಳ ಸಂಖ್ಯೆ/ಗಿಡಕ್ಕೆ ಗಮನಾರ್ಹವಾಗಿ ಏರಿಕೆಯಾಗಿದ್ದು, ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳನ್ನು ಕಟಾವು ಮಾಡಿದ 30, 45 ಮತ್ತು 60ನೇ ದಿನಗಳ ಅಂತರದಲ್ಲಿ ಕಂಡುಬಂದಿದೆ. ಆದರೆ, ಪ್ರತಿ ಗಿಡದ ಎಲೆಗಳ ಸಂಖ್ಯೆಗಳು ಉಪಚಾರ ಮಾಡದ ಹಿಪ್ಪುನೇರಳೆ ತೋಟದಲ್ಲಿ (ಶಿಫಾರಿತ ಕೊಟ್ಟಿಗೆ ಗೊಬ್ಬರ (20 ಮೆಟ್ರಿಕ್ ಟನ್/ಹೆ/ವರ್ಷಕ್ಕೆ) + 350:140:140 ಎನ್.ಪಿ.ಕೆ. (ಕಿ.ಗ್ರಾಂ/ಹೆ./ವರ್ಷಕ್ಕೆ) ಗಮನಾರ್ಹವಾಗಿ ಇಳಿಮುಖವಾಗಿದೆ (ಕೋಷ್ಟಕ 2).

ಎಲೆಗಳ ವಿಸ್ತೀರ್ಣ/ಗಿಡಕ್ಕೆ (ಚ.ಸೆಂ.ಮೀ.): ದ್ಯುತಿಸಂಶ್ಲೇಷಣೆ ಕ್ರಿಯೆಯಲ್ಲಿ ಎಲೆಗಳ ವಿಸ್ತೀರ್ಣ ಪ್ರಮುಖ ಪಾತ್ರವಹಿಸುತ್ತದೆ. ಇದು ಗಿಡದ ಬೆಳವಣಿಗೆ ಮತ್ತು ಎಲೆಗಳ ವಿಸ್ತೀರ್ಣವನ್ನು ಮೈಗೂಡಿಸುವ ಕಾರ್ಯವನ್ನು ನಿರ್ಧರಿಸುತ್ತದೆ. ಪ್ರತಿ ಗಿಡದ ಎಲೆಗಳ ವಿಸ್ತೀರ್ಣಕ್ಕಿಂತ ಪ್ರತಿ ಘಟಕದ ಎಲೆಗಳ ವಿಸ್ತೀರ್ಣ ಹೆಚ್ಚಾಗುವುದು ಬಹಳ ಮುಖ್ಯ. ಗಿಡದ ವಿಸ್ತೀರ್ಣ ಕಟಾವಾಗಿ 45ನೇ ದಿನದ ಅಂತರದಲ್ಲಿ ಗಣನೀಯವಾಗಿ ಹೆಚ್ಚಾಗಿರುವುದು ಕಂಡುಬಂದಿದೆ. ಆದಾಗ್ಯೂ, ಕಟಾವಾಗಿ 30 ಮತ್ತು 60ನೇ ದಿನಗಳ ಅಂತರದಲ್ಲಿ ಎಲೆಗಳ ವಿಸ್ತೀರ್ಣ ಕಡಿಮೆ ಪ್ರಭಾವ ಬೀರಿದೆ. ಹಿಪ್ಪುನೇರಳೆ ತೋಟವನ್ನು ಎರೆಹುಳು ಗೊಬ್ಬರದಿಂದ + (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಉಪಚಾರ ಮಾಡಿದಾಗ ಎಲೆಗಳ ವಿಸ್ತೀರ್ಣ/ಗಿಡಕ್ಕೆ ಗಮನಾರ್ಹವಾಗಿ ಹರಡಿಕೊಂಡಿದ್ದು, ನಂತರ ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳಲ್ಲಿ ಕಟಾವಾಗಿ 45ನೇ ದಿನಗಳ ಅಂತರದಲ್ಲಿ ಕಂಡುಬಂದಿದೆ. ಆದರೆ, ಪ್ರತಿ ಗಿಡದ ಎಲೆಗಳ ವಿಸ್ತೀರ್ಣ ಉಪಚಾರ ಮಾಡದ ಹಿಪ್ಪುನೇರಳೆ ತೋಟದಲ್ಲಿ ಅಂದರೆ ಶಿಫಾರಿತ ಕೊಟ್ಟಿಗೆ ಗೊಬ್ಬರ (20 ಮೆಟ್ರಿಕ್ ಟನ್/ಹೆ/ವರ್ಷಕ್ಕೆ) + 350:140:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಮನಾರ್ಹವಾಗಿ ಕುಂಠಿತವಾಗಿದೆ (ಕೋಷ್ಟಕ 2).

ಎಲೆಗಳ ವಿಸ್ತೀರ್ಣದ ಗುಣಾಂಕ : ಎಲೆಗಳ ವಿಸ್ತೀರ್ಣದ ಗುಣಾಂಕವು, ಎಲೆಗಳ ವಿಸ್ತೀರ್ಣ ಮತ್ತು ಗಿಡವು ಹರಡಿಕೊಂಡಿರುವ ಪ್ರದೇಶದ ಮೇಲೆ ನಿರ್ಧಾರಿತಗೊಂಡಿರುತ್ತದೆ. ಎರೆಹುಳು ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳಿಂದ ಉಪಚಾರ ಮಾಡಿದಾಗ ಎಲೆಗಳ ವಿಸ್ತೀರ್ಣದ ಗುಣಾಂಕ ಗಣನೀಯವಾಗಿ ಹೆಚ್ಚಾಗಿದ್ದು, ನಂತರ ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:240 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳಲ್ಲಿ ಕಟಾವಾಗಿ 45ನೇ ದಿನಗಳ ಅಂತರದಲ್ಲಿ ಹೆಚ್ಚಾಗಿರುವುದು ಕಂಡುಬಂದಿದೆ. ಆದರೆ, ಕಟಾವಾಗಿ 30 ಮತ್ತು 60ನೇ ದಿನಗಳ ಅಂತರದಲ್ಲಿ ಎಲೆಗಳ ವಿಸ್ತೀರ್ಣದ ಗುಣಾಂಕ ಉಪಚಾರ ಮಾಡದ ಹಿಪ್ಪುನೇರಳೆ ತೋಟದಲ್ಲಿ (ಶಿಫಾರಿತ ಕೊಟ್ಟಿಗೆ ಗೊಬ್ಬರ (20 ಮೆಟ್ರಿಕ್ ಟನ್/ಹೆ/ವರ್ಷಕ್ಕೆ) + 350:140:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಮನಾರ್ಹವಾಗಿಲ್ಲದ ಪರಿಣಾಮ ಬೀರಿದೆ (ಕೋಷ್ಟಕ 3).

ಎಲೆಗಳ ವಿಸ್ತೀರ್ಣದ ಅವಧಿ: ಹಿಪ್ಪುನೇರಳೆ ಗಿಡಗಳಿಗೆ ಎರೆಹುಳು ಗೊಬ್ಬರವನ್ನು ಒದಗಿಸಿದಾಗ ಎಲೆಯ ವಿಸ್ತೀರ್ಣದ ಅವಧಿಯಲ್ಲಿ ಗಮನಾರ್ಹವಾಗಿ ಏರಿಕೆ ಕಂಡು ಬಂದಿದೆ. ಹಿಪ್ಪುನೇರಳೆ ತೋಟಕ್ಕೆ ಎರೆಹುಳು ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳನ್ನು ಉಪಚಾರ ಮಾಡಿದಾಗ ಎಲೆಗಳ ವಿಸ್ತೀರ್ಣದ ಅವಧಿ ಗಣನೀಯವಾಗಿ ವಿಸ್ತಾರವಾಗಿದ್ದು, ನಂತರ ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳನ್ನು ಉಪಚಾರ ಮಾಡಿದಾಗ ಎಲೆಗಳ ವಿಸ್ತೀರ್ಣದ ಅವಧಿ ಗಿಡ ಕಟಾವಾಗಿ 45 ಮತ್ತು 60ನೇ ದಿನಗಳ ಅಂತರದಲ್ಲಿ ಹೆಚ್ಚಾಗಿರುವುದು ಕಂಡುಬಂದಿದ್ದು, ಇದು ಉಪಚಾರ ಮಾಡದ ಹಿಪ್ಪುನೇರಳೆ ತೋಟದಲ್ಲಿ (ಶಿಫಾರಿತ ಕೊಟ್ಟಿಗೆ ಗೊಬ್ಬರ (20 ಮೆಟ್ರಿಕ್ ಟನ್/ಹೆ/ವರ್ಷಕ್ಕೆ) + 350:140:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಣನೀಯವಾಗಿ ಕಡಿಮೆಯಾಗಿದೆ (ಕೋಷ್ಟಕ 3).

ಎಲೆ : ರೆಂಬೆ ಅನುಪಾತ : ಹೆಚ್ಚು ಸಂಖ್ಯೆಯ ಎಲೆಗಳು ಆ ಗಿಡದ ಎಲೆಯ ಇಳುವರಿಯನ್ನು ಸೂಚಿಸುತ್ತದೆ. ಸಂಯೋಜಿಸಿದ ವಿವಿಧ ಸಾವಯವ, ರಾಸಾಯನಿಕ ಮತ್ತು ಜೈವಿಕ ಗೊಬ್ಬರಗಳನ್ನು ಬಳಕೆ ಮಾಡಿದಾಗ ಸಹ ಎಲೆ : ರೆಂಬೆ ಅನುಪಾತವನ್ನು ಗರಿಷ್ಠ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಯಾವುದೇ ಪರಿಣಾಮ ಬೀರಿರುವುದಿಲ್ಲ (ಕೋಷ್ಟಕ 4)..

ಸೊಪ್ಪಿನ ಇಳುವರಿ (ಗ್ರಾಂ./ಗಿಡಕ್ಕೆ ಮತ್ತು ಕಿ.ಗ್ರಾಂ./ಹೆ/ಬೆಳೆಗೆ): ಹಿಪ್ಪುನೇರಳೆ ಸೊಪ್ಪಿನ ಇಳುವರಿ ಕೊನೆ ಅವಧಿಯಲ್ಲಿ ಉತ್ಪತ್ತಿಯಾದ ಎಲೆಯ ಸಾಂದ್ರತೆ ಮತ್ತು ಗಿಡದ ಬೆಳವಣಿಗೆಯ ನಿಯತಾಂಕಗಳ ಮೇಲೆ ಅವಲಂಬಿತವಾಗಿರುತ್ತದೆ. ಹಿಪ್ಪುನೇರಳೆ ತೋಟಕ್ಕೆ ಎರೆಹುಳು ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ./ಹೆ/ವರ್ಷಕ್ಕೆ) ಉಪಯೋಗಿಸಿದಾಗ ಸೊಪ್ಪಿನ ಇಳುವರಿಯಲ್ಲಿ ಗಮನಾರ್ಹವಾದ ಏರಿಕೆ ಕಂಡಿದ್ದು, ನಂತರ ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳನ್ನು ಉಪಚಾರ ಮಾಡಿದಾಗ ಸೊಪ್ಪಿನ ಇಳುವರಿ ಗಣನೀಯವಾಗಿದೆ. ಆದರೆ, ಉಪಚಾರ ಮಾಡದ ಹಿಪ್ಪುನೇರಳೆ ತೋಟದಲ್ಲಿ (ಶಿಫಾರಿತ ಕೊಟ್ಟಿಗೆ ಗೊಬ್ಬರ (20 ಮೆಟ್ರಿಕ್ ಟನ್/ಹೆ/ವರ್ಷಕ್ಕೆ) + 350:140:140 ಎನ್.ಪಿ.ಕೆ. (ಕಿ.ಗ್ರಾಂ./ಹೆ/ವರ್ಷಕ್ಕೆ) ಗಣನೀಯವಾಗಿ ಕಡಿಮೆಯಾಗಿದೆ (ಕೋಷ್ಟಕ 4).

ಚರ್ಚೆ: ಪ್ರಸ್ತುತ ಅಧ್ಯಯನದ ಪ್ರಕಾರ, ವಿವಿಧ ರೀತಿಯ ಸಂಯೋಜಿತ ಸಾವಯವ, ರಾಸಾಯನಿಕ ಮತ್ತು ಜೈವಿಕ ಗೊಬ್ಬರಗಳನ್ನು ಶಿಫಾರಿತ ಪ್ರಮಾಣದಲ್ಲಿ V_1 ತಳಿಯ ಹಿಪ್ಪುನೇರಳೆ ತೋಟಕ್ಕೆ (ಕೆಂಪು ಗೋಡು ಮಣ್ಣಿಗೆ) ಉಪಯೋಗಿಸಲಾಗಿದೆ. ಈ ಪ್ರಯೋಗದಿಂದ ಕಂಡುಬಂದಂತಹ ಫಲಿತಾಂಶವೇನೆಂದರೆ, ಹಿಪ್ಪುನೇರಳೆ ತೋಟಕ್ಕೆ ಎರೆಹುಳು ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳನ್ನು ಬಳಸಿದಾಗ ಉತ್ತಮ ಸೊಪ್ಪಿನ ಇಳುವರಿ ಜೊತೆಗೆ ಗಿಡದ ಬೆಳವಣಿಗೆಯ ನಿಯತಾಂಕಗಳಾದ ಗಿಡದ ಎತ್ತರ, ರೆಂಬೆಗಳ ಸಂಖ್ಯೆ, ಎಲೆಗಳ ಸಂಖ್ಯೆ, ಎಲೆಗಳ ವಿಸ್ತೀರ್ಣ ಗಿಡಕ್ಕೆ, ಎಲೆಗಳ ವಿಸ್ತೀರ್ಣದ ಗುಣಾಂಕ ಮತ್ತು ಅವಧಿಯು ಸಹ ಹೆಚ್ಚಾಗಿದೆ. ನಂತರ ಕುರಿ ಗೊಬ್ಬರ (ಶೇ. 50 ರ ಸಮನಾಗಿ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಕೊಟ್ಟಿಗೆ ಗೊಬ್ಬರ (ಶೇ. 50 ರ ಶಿಫಾರಿತ ಕೊಟ್ಟಿಗೆ ಗೊಬ್ಬರ) + ಸಾರಜನಕ–ಜೈವಿಕ ಗೊಬ್ಬರ + ರಂಜಕ–ಜೈವಿಕ ಗೊಬ್ಬರ + 200:110:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಳಲ್ಲಿ ಏರಿಕೆ ಕಂಡುಬಂದಿದೆ. ಆದಾಗ್ಯೂ, ಉಪಚಾರ ಮಾಡದ ಹಿಪ್ಪುನೇರಳೆ ತೋಟದಲ್ಲಿ (ಶಿಫಾರಿತ ಕೊಟ್ಟಿಗೆ ಗೊಬ್ಬರ (20 ಮೆಟ್ರಿಕ್ ಟನ್/ಹೆ/ವರ್ಷಕ್ಕೆ) + 350:140:140 ಎನ್.ಪಿ.ಕೆ. (ಕಿ.ಗ್ರಾಂ/ಹೆ/ವರ್ಷಕ್ಕೆ) ಗಣನೀಯವಾಗಿ ಇಳಿಕೆಯಾಗಿದೆ. ಹಿಪ್ಪುನೇರಳೆ ತೋಟಕ್ಕೆ ಸಂಯೋಜಿತ ಸಾವಯವ, ರಾಸಾಯನಿಕ ಮತ್ತು ಜೈವಿಕ ಗೊಬ್ಬರಗಳ ಮಿಶ್ರಣವನ್ನು ಒದಗಿಸಿದಾಗ ಗಿಡದ ಬೆಳವಣಿಗೆಯ ನಿಯತಾಂಕಗಳು ಮತ್ತು ಸೊಪ್ಪಿನ ಇಳುವರಿಯಲ್ಲಿ ಉತ್ತಮ ಬೆಳವಣಿಗೆ ಕಂಡಿದೆ. ಜೈವಿಕ ಗೊಬ್ಬರಗಳ ಬಳಕೆಯಿಂದ ವಾತಾವರಣದಲ್ಲಿರುವ ಸಾರಜನಕವನ್ನು ಬಿಡುಗಡೆಗೊಳಿಸಿ ಮಣ್ಣಿನಲ್ಲಿರುವ ಸಾರಜನಕ ಮತ್ತು ರಂಜಕಗಳನ್ನು ಸರಳೀಕರಣಗೊಳಿಸಿ ಗಿಡಗಳಿಗೆ ಒದಗಿಸುತ್ತವೆ. ಜನಾರ್ಧನ (2011) ರವರ ಪ್ರಕಾರ, ಹಿಪ್ಪುನೇರಳೆ ತೋಟಕ್ಕೆ ಶಿಫಾರಿತ ಕೊಟ್ಟಿಗೆ ಮತ್ತು ರಾಸಾಯನಿಕ ಗೊಬ್ಬರಗಳನ್ನು ಒದಗಿಸಿದಾಗ ಗಿಡದ ಬೆಳವಣಿಗೆಯ ನಿಯತಾಂಕಗಳು ಸಮೃದ್ಧವಾಗಿ ಬೆಳೆದು ಸೊಪ್ಪಿನ ಇಳುವರಿಯಲ್ಲಿ ಏರಿಕೆ ಕಂಡಿದ್ದು, ಉಪಚಾರವಿಲ್ಲದ ಹಿಪ್ಪುನೇರಳೆ ತೋಟದಲ್ಲಿ ಸೊಪ್ಪಿನ ಇಳುವರಿ ಕ್ಷೀಣಿಸಿದೆ.

ಸಾವಯವ ಮತ್ತು ರಾಸಾಯನಿಕ ಗೊಬ್ಬರಗಳನ್ನು ಬಳಸಿದ ಹಿಪ್ಪುನೇರಳೆ ತೋಟದಲ್ಲಿ ಗಿಡದ ಬೆಳವಣಿಗೆ ಮತ್ತು ಸೊಪ್ಪಿನ ಇಳುವರಿಯಲ್ಲಿ ಅಭಿವೃದ್ಧಿ ಕಂಡಿದೆ. ಈ ಗೊಬ್ಬರಗಳಿಂದ ಬಿಡುಗಡೆಗೊಂಡಂತಹ ಪೋಷಕಾಂಶಗಳು ಸಸ್ಯಗಳಿಗೆ ಬೇಕಾಗುವ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಪೋಷಕಾಂಶಗಳನ್ನು ಒದಗಿಸಿ ಸಾರಜನಕವನ್ನು ಸರಳಗೊಳಿಸಿ ಗಿಡಗಳಿಗೆ ಒದಗಿಸಿ ಹಾಗೂ ರಂಜಕವನ್ನು ಕರಗುವಂತೆ ಮಾಡಿ, ಜೈವಿಕ ಅಂಶಗಳನ್ನು ಸಸ್ಯಗಳಿಗೆ ಅನುಕೂಲವಾಗುವ ರೀತಿಯಲ್ಲಿ ಸಹಕಾರಿಯಾಗಿವೆ (ರಶ್ಮಿ ಮತ್ತಿತರರು, 2006). ನಾರಾಯಣಸ್ವಾಮಿ ಮತ್ತಿತರರ (2006) ಪ್ರಕಾರ, $ಎಸ್_{36}$ ಹಿಪ್ಪುನೇರಳೆ ತೋಟಕ್ಕೆ ರಾಸಾಯನಿಕ ಗೊಬ್ಬರಗಳನ್ನು ಮಾತ್ರ ಬಳಸಿ ಹೋಲಿಕೆ ಮಾಡಿ ವಿವಿಧ ರೀತಿಯ ಸಾವಯವ ಗೊಬ್ಬರಗಳನ್ನು ರಾಸಾಯನಿಕ ಗೊಬ್ಬರಗಳ ಜೊತೆಗೆ ಸಂಯೋಜಿಸಿ ಉಪಯೋಗಿಸಿದ ತೋಟದಲ್ಲಿ ಗಣನೀಯವಾಗಿ ಸೊಪ್ಪಿನ ಇಳುವರಿಯಲ್ಲಿ ಏರಿಕೆ ಕಂಡುಬಂದಿದೆ. ಸಂಯೋಜಿತ ಜೈವಿಕ ಗೊಬ್ಬರಗಳು + ಸಾವಯವ ಗೊಬ್ಬರಗಳು (ಕಾಂಪೋಸ್ಟ್, ಎರೆಹುಳು ಗೊಬ್ಬರ, ಹಸಿರು ಗೊಬ್ಬರ ಮತ್ತು ಹರಳು ಹಿಂಡಿ) + ರಾಸಾಯನಿಕ ಗೊಬ್ಬರಗಳನ್ನು $ಎಂ_5$ ಹಿಪ್ಪುನೇರಳೆ ತೋಟಕ್ಕೆ ಬಳಸಿದಾಗ ಸೊಪ್ಪಿನ ಇಳುವರಿಯಲ್ಲಿ ಗಮನಾರ್ಹವಾಗಿ ಏರಿಕೆಯಾಗಿರುವುದು ಕಂಡುಬಂದಿದೆ (ರಶ್ಮಿ ಮತ್ತಿತರರು, 2009).

ಶಶಿಧರ್ ಮತ್ತಿತರರ (2009) ಪ್ರಕಾರ, $ಎಸ್_{36}$ ಹಿಪ್ಪುನೇರಳೆ ತೋಟಕ್ಕೆ ಸಂಯೋಜಿತ ಸಾವಯವ, ಜೈವಿಕ, ಹಸಿರೆಲೆ ಮತ್ತು ರಾಸಾಯನಿಕ ಗೊಬ್ಬರಗಳನ್ನು ಬಳಸಿದಾಗ ಸೊಪ್ಪಿನ ಇಳುವರಿ ಗಣನೀಯವಾಗಿ ಅಧಿಕವಾಗಿರುವುದು ಕಂಡಿದೆ. ರಾವ್ ಮತ್ತಿತರರ (2011) ಪ್ರಕಾರ, ಹಿಪ್ಪುನೇರಳೆ ತೋಟಕ್ಕೆ ರಾಸಾಯನಿಕ ಗೊಬ್ಬರಗಳ ಜೊತೆಗೆ ಕೊಟ್ಟಿಗೆ, ಹಸಿರೆಲೆ ಮತ್ತು ರೇಷ್ಮೆ ಕೃಷಿ ತ್ಯಾಜ್ಯದ ಗೊಬ್ಬರಗಳನ್ನು ಬಳಸಿದಾಗ ಸೊಪ್ಪಿನ ಇಳುವರಿ ಗರಿಷ್ಠ ಮಟ್ಟದಲ್ಲಿ ದಾಖಲಾಗಿದೆ. ಸಂಗೀತ ಮತ್ತಿತರರ (2012) ಪ್ರಕಾರ, ಹಿಪ್ಪುನೇರಳೆ ತೋಟಕ್ಕೆ ರೇಷ್ಮೆಹುಳುವಿನ ಹಿಕ್ಕೆ ಹಾಗೂ ಕೋಶದ ಕಾಂಪೋಸ್ಟ್ + ಎರೆಹುಳು ಗೊಬ್ಬರವನ್ನು ಬಳಸಿದಾಗ ಸೊಪ್ಪಿನ ಇಳುವರಿ ಗಮನಾರ್ಹವಾಗಿ ಹೆಚ್ಚಾಗಿದೆ.

ಪ್ರಸ್ತುತ ಅಧ್ಯಯನದ ಪ್ರಕಾರ, V_1 ತಳಿಯ ಹಿಪ್ಪುನೇರಳೆ ತೋಟಕ್ಕೆ ಸಾವಯವ ಅಥವಾ ರಾಸಾಯನಿಕ ಗೊಬ್ಬರಗಳನ್ನು ಮಾತ್ರ ಬಳಕೆ ಮಾಡದೆ ಸಂಯೋಜಿತ ಸಾವಯವ ಗೊಬ್ಬರಗಳ ಜೊತೆಗೆ ರಾಸಾಯನಿಕ

ಹಾಗೂ ಜೈವಿಕ ಗೊಬ್ಬರಗಳನ್ನು ಬಳಸುವುದರಿಂದ ಗಿಡದ ಬೆಳವಣಿಗೆಯ ನಿಯತಾಂಕಗಳು ಹಾಗೂ ಸೊಪ್ಪಿನ ಇಳುವರಿ ಪರಿಣಾಮಕಾರಿಯಾಗಿ ಹೆಚ್ಚಾಗಿರುವುದು ಕಂಡುಬಂದಿದೆ.

ಆಧಾರ ಗ್ರಂಥಗಳು (References)

ಅನಾಮಧೇಯ (2013) ಸಿರಿಕಲ್ಚರ್ ಅಂಡ್ ಸಿಲ್ಕ್ ಇಂಡಸ್ಟ್ರಿ. ಕೇಂದ್ರ ರೇಷ್ಮೆ ಮಂಡಳಿ, ಬೆಂಗಳೂರು, ಪುಟ ಸಂಖ್ಯೆ 52.

ಕೊಚ್‌ರನ್ ಮತ್ತು ಕಾಕ್ಸ್ (2000) ಎಕ್ಸ್‌ಪೆರಿಮೆಂಟಲ್ ಡಿಸೈನ್, ಪ್ರೊಸೀಝುರ್ ಫಾರ್ ದಿ ಬಿಹೇವಿಯರಲ್ ಸೈನ್ಸಸ್. ಕೋಲ್ ಪಬ್ಲಿಷಿಂಗ್ ಕಂಪನಿ, ಪುಟಗಳ ಸಂಖ್ಯೆ 319–380.

ಜನಾರ್ಧನ, ಜಿ. (2011) ಪಿಹೆಚ್.ಡಿ. ಮಹಾಪ್ರಬಂಧ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಪುಟ ಸಂಖ್ಯೆ 89.

ದಂಡಿನ್, ಎಸ್.ಬಿ. ಮತ್ತು ಗಿರಿಧರ್, ಕೆ. (2010) ಹ್ಯಾಂಡ್ ಬುಕ್ ಆಫ್ ಸಿರಿಕಲ್ಚರ್ ಟೆಕ್ನಾಲಜೀಸ್. ಕೇಂದ್ರ ರೇಷ್ಮೆ ಮಂಡಳಿ, ಬೆಂಗಳೂರು, ಪುಟ ಸಂಖ್ಯೆ 427.

ನಾರಾಯಣಸ್ವಾಮಿ, ಟಿ.ಕೆ., ರಾಜೇಗೌಡ., ಶಂಕರ್, ಎಂ.ಎ., ಮತ್ತು ಶ್ರೀರಾಮುಲು, ಕೆ.ಪಿ. (2006) ರಿಸರ್ಚ್ ಆನ್ ಕ್ರಾಪ್ಸ್, 7(2): 541–543.

ಮಿಯಾಶಿತ, ವೈ. (1986) ಎ ರಿಪೋರ್ಟ್ ಆನ್ ಮಲ್ಬರ್ರಿ ಕಲ್ಟಿವೇಷನ್ ಅಂಡ್ ಟ್ರೈನಿಂಗ್ ಮೆಥಡ್ಸ್ ಸೂಟಬಲ್ ಟು ಬೈವೋಲ್ಟೈನ್ ರಿಯರಿಂಗ್ ಇನ್ ಕರ್ನಾಟಕ, ಪುಟಗಳ ಸಂಖ್ಯೆ 1–7.

ರಶ್ಮಿ, ಕೆ., ಶಂಕರ್, ಎಂ.ಎ., ಶಶಿಧರ್, ಕೆ.ಆರ್. ನಾರಾಯಣಸ್ವಾಮಿ, ಟಿ.ಕೆ. ಶ್ರೀರಾಮುಲು, ಕೆ.ಪಿ. ಮತ್ತು ರಾಜೇಗೌಡ (2006) ನ್ಯಾಷನಲ್ ಕಾನ್ಫರೆನ್ಸ್ ಆನ್ ನ್ಯೂ ಸ್ಟ್ರಾಟಜೀಸ್ ಫಾರ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಇನ್ ಸಿರಿಕಲ್ಚರಲ್–ಇಂಡಿಯನ್ ಪರ್ಸ್ಪೆಕ್ಟೀವ್, 09–10 ನೇ ಮಾರ್ಚ್, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ಪುಟಗಳ ಸಂಖ್ಯೆ 36–37.

ರಶ್ಮಿ, ಕೆ., ಶಂಕರ್, ಎಂ.ಎ., ಶಶಿಧರ್, ಕೆ.ಆರ್. ಮತ್ತು ನಾರಾಯಣಸ್ವಾಮಿ, ಟಿ.ಕೆ. (2009) ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಇಂಡಸ್ಟ್ರಿಯಲ್ ಎಂಟಮೋಲಜಿ, **19**(1): 165–169.

ರಾವ್, ಡಿ.ಎಂ.ಆರ್., ಚಿಕ್ಕಣ್ಣ, ವಿಂಧ್ಯ, ಜಿ.ಎಸ್., ರೆಡ್ಡಿ, ಎಂ.ಎಂ., ದಾಸಪ್ಪ ಮತ್ತು ಖಾದ್ರಿ, ಎಸ್.ಎಂ.ಹೆಚ್. (2011) ಗ್ರೀನ್ ಫಾರ್ಮಿಂಗ್, **2**(3): 290–293.

ರೆಡ್ಡಿ, ಟಿ.ವೈ. ಮತ್ತು ಶಂಕರ ರೆಡ್ಡಿ, ಜಿ.ಹೆಚ್. (2010) ಪ್ರಿನ್ಸಿಪಲ್ಸ್ ಆಫ್ ಆಗ್ರೋನಮಿ. ಕಲ್ಯಾಣಿ ಪಬ್ಲಿಷರ್ಸ್, ನವದೆಹಲಿ, ಪುಟ ಸಂಖ್ಯೆ 526.

ಶಶಿಧರ್, ಕೆ.ಆರ್., ನಾರಾಯಣಸ್ವಾಮಿ, ಟಿ.ಕೆ., ಭಾಸ್ಕರ್, ಆರ್.ಎನ್., ಜಗದೀಶ್, ಬಿ.ಆರ್., ಮಹೇಶ್, ಎಂ. ಮತ್ತು ಕೃಷ್ಣ, ಕೆ.ಎಸ್. (2009) ಇ ಜರ್ನಲ್ ಆಫ್ ಬಯಲಾಜಿಕಲ್ ಸೈನ್ಸಸ್, **1**(1): 94–100.

ಶಿವಪ್ರಕಾಶ್, ಆರ್.ಎಂ. ಮತ್ತು ನಾರಾಯಣಗೌಡ, ಎಸ್.ಎನ್. (2006) ಸಿರಿಕೊಲಾಜಿಯ, **6**(3): 241–249.

ಸಂಗೀತ, ಆರ್., ಮಹಾಲಿಂಗಂ, ಸಿ.ಎ. ಮತ್ತು ಪ್ರಿಯದರ್ಶಿನಿ, ಪಿ. (2012) ಇ ಜರ್ನಲ್ ಆಫ್ ಬಯಲಾಜಿಕಲ್ ಸೈನ್ಸಸ್, **5**(1): 1–5.

ಕೋಷ್ಟಕ 1: ಸಾವಯವ ಆಧಾರಿತ ಪೋಷಕಾಂಶಗಳ ಉಪಯೋಗದಿಂದ ಹಿಪ್ಪುನೇರಳೆ ಗಿಡದ ಎತ್ತರ ಮತ್ತು ರೆಂಬೆಗಳ ಸಂಖ್ಯೆಗಳಿಗೆ (ಕಟಾವು ಮಾಡಿದ ವಿವಿಧ ದಿನಗಳಲ್ಲಿ) ಆಗುವ ಪರಿಣಾಮಗಳು

ಉಪಚಾರ	ಗಿಡದ ಎತ್ತರ (ಸೆಂ.ಮೀ.)			ರೆಂಬೆಗಳ ಸಂಖ್ಯೆ (ಪ್ರತಿ ಗಿಡಕ್ಕೆ)		
	30ನೇ ದಿನ	45ನೇ ದಿನ	60ನೇ ದಿನ	30ನೇ ದಿನ	45ನೇ ದಿನ	60ನೇ ದಿನ
T_0	75.33±0.620	91.10±1.226	112.6±1.234	10.64±0.258	11.88±0.191	12.61±0.100
T_1	80.65±1.179	98.27±0.543	120.1±1.257	11.69±0.249	12.98±0.284	13.46±0.272
T_2	83.39±0.635	102.3±0.520	126.7±0.897	11.81±0.350	13.12±0.203	13.63±0.059
T_3	86.01±0.833	106.7±1.290	131.6±1.273	11.55±0.459	12.85±0.202	13.28±0.333
T_4	91.59±0.492	112.7±0.819	140.6±1.194	12.28±0.035	13.63±0.113	13.98±0.274
T_5	88.16±0.965	109.7±0.867	135.4±0.433	12.01±0.339	13.32±0.345	13.81±0.345
T_6	96.86±0.673	120.3±0.634	149.1±0.876	12.60±0.082	13.96±0.154	14.36±0.272
T_7	93.40±0.729	116.8±1.299	144.2±0.938	12.42±0.127	13.78±0.074	14.14±0.246
ಎಫ್ ಟೆಸ್ಟ್	*	*	*	*	*	*
ಎಸ್.ಇ(ಎಂ) ±	0.793	0.952	1.048	0.274	0.212	0.257
ಎಸ್.ಇ(ಡಿ) ±	1.121	1.346	1.482	0.387	0.300	0.363
ಸಿ.ಡಿ.@ 5%	2.397	2.877	3.170	0.828	0.641	0.776
ಸಿ.ವಿ.(ಶೇ.)	1.580	1.537	1.370	3.996	2.785	3.253

± ಸ್ಟಾಂಡರ್ಡ್ ಎರರ್ (ಎಸ್.ಇ) ಮೌಲ್ಯ *: ಪಿ = 0.05

ಕೋಷ್ಟಕ 2: ಸಾವಯವ ಆಧಾರಿತ ಪೋಷಕಾಂಶಗಳ ಉಪಯೋಗದಿಂದ ಹಿಪ್ಪುನೇರಳೆ ಎಲೆಗಳ ಸಂಖ್ಯೆ ಮತ್ತು ಎಲೆಯ ವಿಸ್ತೀರ್ಣಕ್ಕೆ (ಕಟಾವು ಮಾಡಿದ ವಿವಿಧ ದಿನಗಳಲ್ಲಿ) ಆಗುವ ಪರಿಣಾಮಗಳು

ಉಪಚಾರ	ಎಲೆಗಳ ಸಂಖ್ಯೆ (ಪ್ರತಿ ಗಿಡಕ್ಕೆ)			ಎಲೆಯ ವಿಸ್ತೀರ್ಣ (ಪ್ರತಿ ಗಿಡಕ್ಕೆ) (ಚ.ಸೆಂ.ಮೀ.)		
	30ನೇ ದಿನ	45ನೇ ದಿನ	60ನೇ ದಿನ	30ನೇ ದಿನ	45ನೇ ದಿನ	60ನೇ ದಿನ
T_0	130.7±0.800	146.6±0.637	155.3±2.067	11,512±395	12,450±66.7	14,377±710.8
T_1	142.7±0.820	159.7±1.124	168.1±2.088	12,431±608	13,433±285	15,521±614.7
T_2	147.3±0.529	165.3±1.299	172.5±0.670	12,685±879	13,673±100	15,735±614.7
T_3	151.6±0.671	169.8±1.249	176.6±0.894	12,926±380	13,928±184	16,027±707.1
T_4	158.5±0.752	177.2±1.267	184.3±0.634	13,552±613	14,438±244	16,550±602.9
T_5	155.4±0.493	174.6±0.568	181.1±1.965	13,213±910	14,229±242	16,249±254.1
T_6	166.3±0.693	185.0±1.193	193.5±0.473	14,202±544	15,002±89.6	17,011±264.4
T_7	161.7±1.157	181.2±1.126	189.5±0.462	13,805±500	14,760±67.9	16,747±226.9
ಎಫ್ ಟೆಸ್ಟ್	*	*	*		*	
ಎಸ್.ಇ(ಎಂ) ±	0.764	1.092	1.350	631.6	180.3	537.4
ಎಸ್.ಇ(ಡಿ) ±	1.080	1.544	1.909	893.3	255.0	760.0
ಸಿ.ಡಿ.@5%	2.310	3.301	4.082	NS	545.2	NS
ಸಿ.ವಿ.(ಶೇ.)	0.872	1.113	1.317	8.389	2.232	5.808

±ಸ್ಟಾಂಡರ್ಡ್ ಎರರ್ (ಎಸ್.ಇ) ಮೌಲ್ಯ *: ಪಿ = 0.05

ಕೋಷ್ಟಕ 3: ಸಾವಯವ ಆಧಾರಿತ ಪೋಷಕಾಂಶಗಳ ಉಪಯೋಗದಿಂದ ಹಿಪ್ಪುನೇರಳೆ ಎಲೆಯ ವಿಸ್ತೀರ್ಣದ ಸೂಚ್ಯಾಂಕ ಮತ್ತು ಅವಧಿಗೆ (ಕಟಾವು ಮಾಡಿದ ವಿವಿಧ ದಿನಗಳಲ್ಲಿ) ಆಗುವ ಪರಿಣಾಮಗಳು

ಉಪಚಾರ	ಎಲೆಯ ವಿಸ್ತೀರ್ಣದ ಸೂಚ್ಯಾಂಕ			ಎಲೆಯ ವಿಸ್ತೀರ್ಣದ ಅವಧಿ	
	30ನೇ ದಿನ	45ನೇ ದಿನ	60ನೇ ದಿನ	45ನೇ ದಿನ	60ನೇ ದಿನ
T_0	1.599±0.055	1.729±0.009	1.997±0.099	798.7±15.34	894.3±25.01
T_1	1.727±0.084	1.866±0.039	2.156±0.085	862.1±21.41	965.1±23.06
T_2	1.762±0.122	1.899±0.014	2.185±0.085	878.6±26.27	980.3±23.09
T_3	1.796±0.053	1.934±0.026	2.226±0.098	895.1±17.56	998.5±29.30
T_4	1.882±0.085	2.005±0.034	2.299±0.084	933.0±15.35	1033±23.07
T_5	1.835±0.127	1.976±0.034	2.257±0.035	914.7±27.72	1016±11.50
T_6	1.973±0.075	2.084±0.012	2.363±0.037	973.5±15.22	1067±7.878
T_7	1.917±0.070	2.050±0.010	2.326±0.032	952.1±17.73	1050±5.203
ಎಫ್ ಟೆಸ್ಟ್		*		*	*
ಎಸ್.ಇ(ಎಂ) ±	0.088	0.025	0.075	20.13	20.32
ಎಸ್.ಇ(ಡಿ) ±	0.124	0.035	0.106	28.47	28.73
ಸಿ.ಡಿ.@5%	NS	0.076	NS	60.88	61.44
ಸಿ.ವಿ.(ಶೇ.)	8.393	2.231	5.808	3.870	3.517

±ಸ್ಟಾಂಡರ್ಡ್ ಎರರ್ (ಎಸ್.ಇ) ಮೌಲ್ಯ *: ಪಿ = 0.05

ಕೋಷ್ಟಕ 4: ಸಾವಯವ ಆಧಾರಿತ ಪೋಷಕಾಂಶಗಳ ಉಪಯೋಗದಿಂದ ಹಿಪ್ಪುನೇರಳೆ ಎಲೆ – ರೆಂಬೆಯ ಅನುಪಾತ ಮತ್ತು ಸೊಪ್ಪಿನ ಇಳುವರಿಗೆ ಆಗುವ ಪರಿಣಾಮಗಳು

ಉಪಚಾರ	ಎಲೆ – ರೆಂಬೆಯ ಅನುಪಾತ	ಸೊಪ್ಪಿನ ಇಳುವರಿ (ಗ್ರಾಂ./ಗಿಡಕ್ಕೆ)	ಸೊಪ್ಪಿನ ಇಳುವರಿ (ಕಿ.ಗ್ರಾಂ./ಹೆ./ಬೆಳೆಗೆ)
T_0	47.03 ± 0.088 : 52.97 ± 0.769	744.8 ± 17.49	10138 ± 237.8
T_1	47.21 ± 0.287 : 52.79 ± 0.263	839.2 ± 16.70	11423 ± 227.2
T_2	47.35 ± 0.134 : 52.65 ± 0.082	843.5 ± 5.216	11482 ± 70.87
T_3	47.52 ± 0.090 : 52.48 ± 0.112	846.0 ± 13.70	11516 ± 186.5
T_4	47.73 ± 0.057 : 52.27 ± 0.075	853.5 ± 15.57	11617 ± 212.0
T_5	47.61 ± 0.459 : 52.39 ± 0.169	848.8 ± 6.319	11554 ± 86.00
T_6	48.05 ± 0.203 : 51.95 ± 0.194	886.7 ± 5.847	12071 ± 79.41
T_7	47.84 ± 0.016 : 52.16 ± 0.012	865.1 ± 8.024	11776 ± 109.3
ಎಫ್ ಟೆಸ್ಟ್		*	*
ಎಸ್.ಇ(ಎಂ) ±	0.216 : 0.307	12.15	165.3
ಎಸ್.ಇ(ಡಿ) ±	0.305 : 0.434	17.18	233.7
ಸಿ.ಡಿ.@ 5%	NS	36.73	499.8
ಸಿ.ವಿ.(ಶೇ.)	0.785 : 1.012	2.502	2.501

±ಸ್ಟಾಂಡರ್ಡ್ ಎರರ್ (ಎಸ್.ಇ) ಮೌಲ್ಯ *: ಪಿ = 0.05

ಹಿಪ್ಪುನೇರಳೆ ಸೊಪ್ಪು ಮತ್ತು ಆಯುರ್ವೇದ ಔಷಧಿಗಳ ಮಿಶ್ರಣದಿಂದಾದ ಆಹಾರದ ಬಳಕೆ ಹಾಗೂ ದ್ವಿತಳಿ ರೇಷ್ಮೆ ಹುಳು (ಬಾಂಬಿಕ್ಸ್ ಮೋರಿಎಲ್.) ಸಾಕಾಣಿಕಾ ನಿಯತಾಂಕಗಳು ಮತ್ತು ಜೀವ–ರಸಾಯನಿಕಗಳ ಸಂಯೋಜನೆಯ ಒಂದು ಅಧ್ಯಯನ

ಶಬ್ನಮ್, ಬಿ.ಸಣ್ಣಪ್ಪ, ಬಿ.ಕೆ.ಪ್ರಕಾಶ್ ಮತ್ತು ಕೆ.ಜಿ. ಮಂಜುನಾಥ್
ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು –570 006, ಭಾರತ.
ಇ–ಮೇಲ್: drbsannappa@gmail.com

ಹಿಪ್ಪುನೇರಳೆ ಸೊಪ್ಪು ರೇಷ್ಮೆ ಹುಳುವಿನ ಪ್ರಧಾನ ಆಹಾರವಾಗಿದ್ದು, ಇದು ರೇಷ್ಮೆ ಹುಳುವಿನ ಬೆಳವಣಿಗೆಗೆ ಮೂಲ ಪೋಷಕಾಂಶಗಳನ್ನು ಒದಗಿಸಿ ಬೆಳವಣಿಗೆಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ.ರೇಷ್ಮೆ ಹುಳುವು ಅತೀ ಸೂಕ್ಷ್ಮಜೀವಿಯಾಗಿದ್ದು ಹಿಪ್ಪುನೇರಳೆಯ ಪೋಷಕಾಂಶಗಳಲ್ಲಿ ವ್ಯತ್ಯಾಸವಾದರೆ ಅದು ರೇಷ್ಮೆ ಹುಳುವಿನ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತದೆ.ಆದ್ದರಿಂದ ಹಿಪ್ಪು ನೇರಳೆಯ ಸೊಪ್ಪಿನ ಗುಣಮಟ್ಟ ಉತ್ಕೃಷ್ಟವಾಗಿದ್ದರೆ ಉತ್ತಮ ರೇಷ್ಮೆ ಗೂಡಿನ ಇಳುವರಿಯನ್ನು ಪಡೆಯಬಹುದು. ಪ್ರಸ್ತುತ ಸಂಶೋಧನೆಯಲ್ಲಿ ಹಿಪ್ಪುನೇರಳೆ ಸೊಪ್ಪನ್ನು ಆಯುರ್ವೇದ ಔಷಧಿಗಳ (ಅಭಯರಿಷ್ಟಮ್, ಅರವಿಂದಸಾವಮ್ ಮತ್ತು ದ್ರಾಕ್ಷಾರಿಷ್ಟಮ್) (ಶೇ. 5%) ಮೂಲಕ ಬಲವರ್ಧನೆಗೊಳಿಸಿ, ದ್ವಿತಳಿ ರೇಷ್ಮೆ ಹುಳುಗಳಿಗೆ (ಸಿಎಸ್ಆರ್$_{46}$, ಸಿಎಸ್ಆರ್$_{47}$, ಸಿಎಸ್ಆರ್$_{50}$, ಸಿಎಸ್ಆರ್$_{51}$, ಜೆನ್$_2$ ಮತ್ತು ಜೆನ್$_3$) ನೀಡಿ ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಸಂಶೋಧನೆಯ ಫಲಿತಾಂಶವನ್ನು ಗಮನಿಸಿದಾಗ, ಹಿಪ್ಪುನೇರಳೆ ಸೊಪ್ಪಿಗೆ ಅಭಯರಿಷ್ಟಮ್ ಬೆರೆಸಿದ ಸೊಪ್ಪನ್ನು ನೀಡಿದಾಗ ಸಿಎಸ್ಆರ್$_{51}$ ರೇಷ್ಮೆ ಹುಳುವಿನ ತೂಕವು ಹೆಚ್ಚಾಗಿದ್ದು, ರೇಷ್ಮೆ ಗೂಡು ಮತ್ತು ಕೋಶದ ತೂಕವು ಹಿಪ್ಪುನೇರಳೆ ಸೊಪ್ಪಿಗೆ ಬೆರೆಸಿದ ಅಭಯರಿಷ್ಟಮ್ ತಿಂದ ಜೆನ್$_2$ರೇಷ್ಮೆ ಹುಳುವಿನಲ್ಲಿ ಗಣನೀಯವಾಗಿ ಏರಿಕೆ ಕಂಡಿದೆ. ಆದರೆ ಆಯುರ್ವೇದ ಔಷಧ ಬಳಸದ ಎಲೆಯನ್ನು ತಿಂದ ರೇಷ್ಮೆ ಹುಳುವು ಗಣನೀಯವಾಗಿ ಗೂಡು ಮತ್ತು ಕೋಶದ ತೂಕದಲ್ಲಿ ಇಳಿಕೆ ತೋರಿಸುತ್ತದೆ.ಗೂಡಿನ ಕವಚ ಹಾಗೂ ರೇಷ್ಮೆಯ ಉತ್ಪಾದನೆಯು ಅಭಯರಿಷ್ಟಮ್ ಆಯುರ್ವೇದ ಔಷಧ ಬಳಸಿದ ಎಲೆಯನ್ನು ತಿಂದ ಸಿಎಸ್ಆರ್$_{50}$ ಹುಳುವಿನಲ್ಲಿ ಏರಿಕೆ ಕಂಡಿದ್ದು, ರೇಷ್ಮೆಯ ಅನುಪಾತವು ದ್ರಾಕ್ಷಾರಿಷ್ಟಮ್ಆಯುರ್ವೇದ ಔಷಧ ಸಿಂಪಡಿಸಿದ ಎಲೆಯನ್ನು ತಿಂದ ಜೆನ್$_3$ ಹುಳುವಿನಲ್ಲಿ ಗಣನೀಯವಾಗಿ ಏರಿಕೆ ದಾಖಲಾಗಿದೆ.ಅಂಕಿ ಅಂಶಗಳ ಪ್ರಕಾರ ರೇಷ್ಮೆ ದಾರದ ಉದ್ದ ಹಾಗೂ ಕಚ್ಚಾ ರೇಷ್ಮೆಯು ಅಭಯರಿಷ್ಟಮ್ ಆಯುರ್ವೇದ ಔಷಧ ಸಿಂಪಡಿಸಿದ ಎಲೆಯನ್ನು ತಿಂದ ಜೆನ್$_3$ ಹುಳುವಿನಲ್ಲಿ ಗಮನಾರ್ಹವಾಗಿ ಏರಿಕೆ ಕಂಡಿದ್ದು, ಔಷಧ ಸಿಂಪಡಿಸದ ಎಲೆಯನ್ನು ತಿಂದ ಸಿಎಸ್ಆರ್$_{47}$ ಹುಳುವಿನಲ್ಲಿ ರೆಂಡಿಟ್ಟ ಉತ್ತಮವಾಗಿದೆ. ಜೀವ–ರಸಾಯನಿಕಗಳ ಸಂಯೋಜನೆಯ ಅಧ್ಯಯನದ ಪ್ರಕಾರ ರೇಷ್ಮೆ ಹುಳುವಿನ ರಕ್ತದಲ್ಲಿನಪ್ರೋಟೀನ್‌ಗಳು, ಕಾರ್ಬೋಹೈಡ್ರೇಟ್‌ಗಳು, ಅಲನೈನ್ ಮತ್ತು ಆಸ್ಪರ್ಟೇಟ್ ಅಮೈನೋ ಟ್ರಾನ್ಸಪರೇಸ್‌ಗಳು ಹಾಗೂ ಪ್ರೋಟಿಯೇಸ್ ಚಟುವಟಿಕೆಗಳು ಗಮನಾರ್ಹವಾಗಿ ಹೆಚ್ಚಾಗಿರುವುದನ್ನು ಅಭಯರಿಷ್ಟಮ್ ಆಯುರ್ವೇದ

ಔಷಧ ಸಿಂಪಡಿಸಿದ ಎಲೆಯನ್ನು ತಿಂದ ಸಿಎಸ್ಆರ್$_{51}$ ಹುಳುವಿನಲ್ಲಿ ನೋಡಬಹುದಾಗಿದೆ. ಈ ಮೇಲಿನ ಪ್ರಯೋಗದಿಂದ ತಿಳಿಯಬಹುದೇನೆಂದರೆ, ಪ್ರಬಲ ತಳಿಗಳ ರೇಷ್ಮೆ ಹುಳು ಸಾಕಾಣಿಕಾ ನಿಯತಾಂಕಗಳು ಮತ್ತು ಜೀವ–ರಾಸಾಯನಿಕಗಳು ಉತ್ತಮ ರೀತಿಯಲ್ಲಿದ್ದು, ಅಭಯರಿಷ್ಟಮ್ ಸಂಯೋಗದ ಆಯುರ್ವೇದ ಔಷಧವು ಹೆಚ್ಚಿನ ರೇಷ್ಮೆ ಗೂಡಿನ ಇಳುವರಿಯನ್ನು ಉತ್ಪಾದಿಸುವಲ್ಲಿ ಸಹಕಾರಿಯಾಗುತ್ತದೆ.ಈ ದಿಶೆಯಲ್ಲಿ ಆಳವಾಗಿ ಅಭ್ಯಾಸ ಮಾಡಿದ ವಿಷಯವನ್ನು ಲೇಖನ ಮಂಡಿಸುವಾಗ ಚರ್ಚಿಸಲಾಗುವುದು.

ಪ್ರಮುಖ ಪದಗಳು: ಆಯುರ್ವೇದ ಔಷಧಗಳು, ಬಾಂಬಿಕ್ಸ್ ಮೋರಿ, ದ್ವಿತಳಿಗಳು, ಸಾಕಾಣಿಕಾ ನಿಯತಾಂಕಗಳು, ಜೀವ–ರಸಾಯನಿಕಗಳು.

ಹಿಪ್ಪುನೇರಳೆ ಸೊಪ್ಪು, ಬಾಂಬಿಕ್ಸ್ ಮೋರಿ ಎಲ್. ರೇಷ್ಮೆಹುಳುವಿನ ಪೋಷಣೆಗೆ ಮೂಲಭೂತ ಆಹಾರವಾಗಿದ್ದು, ಅದರ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಪ್ರಮುಖ ನಿಯಂತ್ರಣಾ ಅಂಶವಾಗಿದೆ. ಉತ್ತಮ ಗುಣಮಟ್ಟದ ಸೊಪ್ಪಿನಿಂದ ಅಧಿಕ ರೇಷ್ಮೆಗೂಡನ್ನು ಪಡೆಯಬಹುದೆಂದು ಕುಮಾರರಾಜ್ ಮತ್ತಿತರರು (1972) ಅಭಿಪ್ರಾಯ ಪಟ್ಟಿರುತ್ತಾರೆ. ರೇಷ್ಮೆಗೂಡಿನ ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಪಾತ್ರಗಳು, ಸೊಪ್ಪಿನ ಗುಣಮಟ್ಟ ಮತ್ತು ಪ್ರಮಾಣದ ಮೇಲೆ ಅವಲಂಬಿತವಾಗಿರುತ್ತದೆ (ಕೌಲ್, 1989; ಚೆಂತಿಲ್‌ನಾಯಕಿ ಮತ್ತಿತರರು, 2004).

ಪ್ರಾಣಿ ಮಾದರಿಗಳಲ್ಲಿ ಬೆಳವಣಿಗೆ ಹಾಗೂ ವೃದ್ಧಿಯನ್ನು ಖಚಿತ ಪಡಿಸಿಕೊಳ್ಳಲು ಔಷಧಿಗಳ ಚಿಕಿತ್ಸಕ ಪರಿಣಾಮಗಳ ಅರ್ಹತೆ ನಿರ್ಣಯಿಸುವ ಸಲುವಾಗಿ ಪೂರ್ವ–ವೈದ್ಯಕೀಯ ಪರೀಕ್ಷೆಗಳ ಅಗತ್ಯವಿರುತ್ತದೆ. ಸಸ್ತನಿಗಳಾದ ಇಲಿ, ಮೊಲ, ನಾಯಿ, ಮಂಗ ಮತ್ತಿತರೆ ಪ್ರಾಣಿಗಳನ್ನು ಸಾಮಾನ್ಯವಾಗಿ ರಾಸಾಯನಿಕಗಳನ್ನು ಪರೀಕ್ಷಿಸಲು ಔಷಧಿ–ಪರೀಕ್ಷಣೀಯ ಮಾದರಿಗಳಾಗಿ ಬಳಸುತ್ತಾರೆ. ಔಷಧಿಗಳ ಅಭಿವೃದ್ಧಿಯಲ್ಲಿ ಸಸ್ತನಿಗಳ ಬಳಕೆಯು ದುಬಾರಿ ಹಾಗೂ ನೈತಿಕ ವಿಷಯಗಳಲ್ಲಿ ಸಮಸ್ಯಾತ್ಮಕವಾಗಿದೆ (ಜಿರ್ಲನ್ಸ್ ಮತ್ತಿತರರು, 1998). ಆದ್ದರಿಂದ, ಔಷಧಿಗಳ ಪರೀಕ್ಷಣೀಯ ಮಾದರಿಗಳಾಗಿ ಅಕಶೇರುಕಗಳಾದ ಕೀಟಗಳ ಬಳಕೆಯು ಈ ಸಮಸ್ಯೆಯನ್ನು ನಿವಾರಿಸುತ್ತದೆ.

ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಆಯುರ್ವೇದ ಔಷಧಿಗಳನ್ನು ಹಿಪ್ಪುನೇರಳೆ ಎಲೆಗಳಿಗೆ ಸಿಂಪಡಿಸಿ ಸಾಕಾಣಿಕಾ ಮತ್ತು ರೇಷ್ಮೆಗೂಡಿನ ನಿಯತಾಂಕಗಳ ಅಭಿವೃದ್ಧಿ ಹಾಗೂ ದ್ವಿತಳಿ ರೇಷ್ಮೆಹುಳಗಳಲ್ಲಿ ಜೀವ–ರಾಸಾಯನಿಕಗಳ ಸ್ಥಿತಿಯನ್ನು ತಿಳಿದುಕೊಳ್ಳಲು ಪ್ರಸ್ತುತ ಪ್ರಯೋಗವನ್ನು ಹಮ್ಮಿಕೊಳ್ಳಲಾಗಿದೆ.

ವಸ್ತುಗಳು ಮತ್ತು ವಿಧಾನಗಳು

ಪೂರ್ವಪಾಲನೆ ಕಾರ್ಯಚರಣೆಗಳು: ರೇಷ್ಮೆಹುಳು ಸಾಕಾಣಿಕೆ ಪ್ರಾರಂಭವಾಗುವ ಒಂದು ವಾರದ ಮೊದಲು, ಪಾಲನಾ ವಸ್ತುಗಳ ಜೊತೆಗೆ ಪಾಲನೆ ಕೊಠಡಿಯನ್ನು ಶೇ. 5% ಬ್ಲೀಚಿಂಗ್ ಪುಡಿ ದ್ರಾವಣದಿಂದ ಶುದ್ಧೀಕರಿಸಲಾಯಿತು. ಎರಡನೇ ಬಾರಿಗೆ ಶೇ. 4% ಫಾರ್ಮಲಿನ್ ದ್ರಾವಣವನ್ನು 1.5 ಲೀ./ಚ.ಮೀ. ಪ್ರಮಾಣದಲ್ಲಿ ಉಪಯೋಗಿಸಿ ಪರಿಣಾಮಕಾರಿ ಶುದ್ಧೀಕರಣಕ್ಕಾಗಿ ಕೊಠಡಿಯನ್ನು 36 ಗಂಟೆಗಳವರೆಗೆ ಮುಚ್ಚಲಾಗಿತ್ತು (ದಂಡಿನ್ ಮತ್ತು ಗಿರಿಧರ್, 2010).

ಸದೃಢ ದ್ವಿತಳಿ ರೇಷ್ಮೆಹುಳು ತಳಿಗಳ (ಸಿಎಸ್ಆರ್$_{46}$, ಸಿಎಸ್ಆರ್$_{47}$, ಸಿಎಸ್ಆರ್$_{50}$, ಸಿಎಸ್ಆರ್$_{51}$, ಜೆನ್$_2$ ಮತ್ತು ಜೆನ್$_3$) ರೋಗ ಉಚಿತ ಮೊಟ್ಟೆಗಳನ್ನು ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು, ಇವರಿಂದ ಪಡೆದು, 25±1^{0}C ತಾಪಮಾನ ಹಾಗೂ ಶೇ. 75±5% ಆರ್ದ್ರತೆಯಲ್ಲಿ ಕಾವು ನೀಡಲಾಗಿದೆ. ಮೊಟ್ಟೆಗಳು ಸಮಾನವಾಗಿ ಹೊಡೆಯಲು ಕಪ್ಪುಕಾಗದದ ವಿಧಾನವನ್ನು ಅಳವಡಿಸಲಾಗಿದೆ. ಮೊಟ್ಟೆ ಹೊಡೆಯುವ ದಿನ, ಮೊಟ್ಟೆಗಳನ್ನು ಚದುರಿದ ಬೆಳಕಿಗೆ ಒಡ್ಡಲಾಯಿತು ಮತ್ತು ಮೊಟ್ಟೆಗಳು ಹೊಡೆದ ಎರಡು ಗಂಟೆಗಳ ನಂತರ ಹುಳಗಳಿಗೆ ಎಸ್$_{36}$ ತಳಿಯ ಹಿಪ್ಪುನೇರಳೆ ಸೊಪ್ಪಿನ ಎಳೆಯ ಎಲೆಗಳನ್ನು ಆಹಾರವಾಗಿ ನೀಡಲಾಗಿದೆ.

500 ಮಿ.ಲೀ. ದ್ರಾವಣದಲ್ಲಿ ಲಭ್ಯವಿರುವ ಮೂರು ಆಯುರ್ವೇದ ಔಷಧಿಗಳನ್ನು (ಅಭಯಾರಿಷ್ಟಮ್, ಅರವಿಂದಾಸವಮ್ ಮತ್ತು ದ್ರಾಕ್ಷಾರಿಷ್ಟಮ್) ಪ್ರಸ್ತುತ ತನಿಖೆಯಲ್ಲಿ ಬಳಸಲಾಗಿದೆ. ಈ ಮೂರು ಆಯುರ್ವೇದ ಔಷಧಿಗಳು ಅರಗಬಲ್ಲಿಕೆ ಮತ್ತು ಸೇವನಾ ದಕ್ಷತೆಯನ್ನು ವೃದ್ಧಿಸುವ ಅಂಶವನ್ನೊಳಗೊಂಡಿದೆ.

ರೇಷ್ಮೆಹುಳು ಸಾಕಾಣಿಕೆ: ಆರು ಸಧೃಡ ದ್ವಿತಳಿ ರೇಷ್ಮೆಹುಳು ತಳಿಗಳನ್ನು ಮೂರನೇ ಅವಾಂತರ ರೂಪದವರೆಗೆ ಎಸ್$_{36}$ ತಳಿಯ ಹಿಪ್ಪುನೇರಳೆ ಸೊಪ್ಪನ್ನು ನೀಡಿ, ನಾಲ್ಕನೇ ಮತ್ತು ಐದನೇ ಅವಾಂತರ ರೂಪದಲ್ಲಿ ವಿ$_1$ ತಳಿಯ ಸೊಪ್ಪನ್ನು ನೀಡಿ ಬೆಳೆಸಲಾಗಿದೆ. ಐದನೇ ಅವಾಂತರ ರೂಪದಲ್ಲಿ ದಿನಕ್ಕೊಮ್ಮೆ ಆಯುರ್ವೇದ ಔಷಧಿಗಳನ್ನು ಶೇ. 5% ಸಾಂದ್ರತೆಯಲ್ಲಿ ಹಿಪ್ಪುನೇರಳೆ ಎಲೆಗಳ ಮೇಲೆ ಸಿಂಪಡಿಸಿ, ನೆರಳಿನಲ್ಲಿ ಒಣಗಿಸಿ ಹುಳಗಳಿಗೆ ನೀಡಲಾಗಿದೆ. ಶೋಧಿಸಿದ ನೀರು ಮತ್ತು ಉಪಚಾರವಲ್ಲದ ಸೊಪ್ಪನ್ನು ಹೋಲಿಕೆ ಮಾಡಲು ನಿಯಂತ್ರಣಗಳಾಗಿ ಬಳಸಲಾಗಿದೆ.

ಉಪಚಾರಗಳನ್ನು ಸಂಪೂರ್ಣವಾಗಿ ಯಾದೃಚ್ಛಿಕ ವಿನ್ಯಾಸವನ್ನಳವಡಿಸಿ ಮೂರು ಮರುರೂಪಗಳಾಗಿ ವಿಂಗಡಿಸಲಾಗಿದೆ. ಹುಳಗಳು ಗೂಡು ಕಟ್ಟಿದ ನಂತರ ಗೂಡಿನ ತೂಕ, ಕೋಶದ ತೂಕ, ಕವಚದ ತೂಕ, ಕವಚದ ಅನುಪಾತ, ರೇಷ್ಮೆಯ ಎಳೆಯ ಉದ್ದ, ಡೀನಿಯರ್, ರೆಂಡಿಟ ಮತ್ತು ಶೇಕಡವಾರು ಕಚ್ಚಾ ರೇಷ್ಮೆ ನಿಯತಾಂಕಗಳನ್ನು ವಿಶ್ಲೇಷಿಸಲಾಗಿದೆ. ಪಾಲನೆ ಸಮಯದಲ್ಲಿ ಸರಾಸರಿ 31^{0}C ತಾಪಮಾನ ಹಾಗೂ ಶೇ. 55% ಆರ್ದ್ರತೆಯನ್ನು ದಾಖಲು ಮಾಡಲಾಗಿದೆ.

ರೇಷ್ಮೆಹುಳುವಿನ ರಕ್ತದ ಜೀವ–ರಾಸಾಯನಿಕ ಸಂಯೋಜನೆ : ಒಂದು ಚಿಟಿಕೆಯಷ್ಟು ಥಯೋಯೂರಿಯ ಬಳಸಿ ಐದನೇ ಅವಾಂತರ ರೂಪದಲ್ಲಿರುವ ಐದನೇ ದಿನದ ಹುಳುವಿನ ಕಾಲುಗಳನ್ನು ಕತ್ತರಿಸುವ ಮೂಲಕ ರಕ್ತವನ್ನು ಸಂಗ್ರಹಿಸಿ –20^{0}C ತಾಪಮಾನದಲ್ಲಿ ಇರಿಸಿ 10 ನಿಮಿಷದವರೆಗೆ 3000 ಆರ್‌ಪಿಎಂ ವೇಗದಲ್ಲಿ ಅಪಕೇಂದ್ರಿಕರಿಸಿ, ದ್ರವದ ಮೇಲೆ ತೇಲುವ ಅಂಶದಲ್ಲಿ (Supernatant) ಶೋಧಿಸಿದ

ನೀರನ್ನು ಬೆರೆಸಿ ಒಟ್ಟು ಪ್ರೋಟೀನ್ ಪ್ರಮಾಣ (ಲೌರಿ ಮತ್ತಿತರರು, 1951), ಒಟ್ಟು ಕಾರ್ಬೋಹೈಡ್ರೇಟ್‌ಗಳನ್ನು ಆಂಥ್ರೋನ್ ವಿಧಾನದಿಂದ (ಸದಾಶಿವಂ ಮತ್ತು ಮಣಿಕ್ಕಂ, 2008), ಅಲನೈನ್ ಮತ್ತು ಆಸ್ಪರ್ಟೇಟ್ ಅಮೈನೋ ಟ್ರಾನ್ಸ್‌ಫರೇಸ್ ಚಟುವಟಿಕೆ (ರೀತ್ಮನ್ ಮತ್ತು ಫ್ರಾಂಕಲ್, 1957) ಮತ್ತು ಪ್ರೋಟಿಯೇಸ್ ಚಟುವಟಿಕೆಗಳನ್ನು ತಿಳಿಯಲು ಉಪಯೋಗಿಸಲಾಗಿದೆ.

ಅಂಕಿಅಂಶಗಳ ವಿಶ್ಲೇಷಣೆ: ತನಿಖೆಯಲ್ಲಿ ಪಡೆದ ಮಾಹಿತಿಯನ್ನು ಚೌಧರಿ ಚರಣ್ ಸಿಂಗ್ ಕೃಷಿ ವಿಶ್ವವಿದ್ಯಾನಿಲಯ, ಹಿಸಾರ್, ಅಭಿವೃದ್ಧಿ ಪಡಿಸಿರುವ ದ್ವಿಮುಖ ಅಪವರ್ತನೀಯ, ಸಂಪೂರ್ಣ ಯಾದೃಚ್ಛಿಕ ವಿನ್ಯಾಸದಿಂದ ಶೇ. 5% ಮಟ್ಟದಲ್ಲಿ ಪ್ರಾಮುಖ್ಯತೆ ಹೊಂದಿರುವ ಆನ್ಲೈನ್ ಸರಾಸರಿ ಅಂಕಿ ಅಂಶಗಳ ಪ್ಯಾಕೇಜ್ (OPSTAT) ಬಳಸಿಕೊಂಡು ವಿಶ್ಲೇಷಿಸಲಾಗಿದೆ.

ಫಲಿತಾಂಶಗಳು ಮತ್ತು ಚರ್ಚೆ: ಆಯುರ್ವೇದ ಔಷಧಿ ಪೂರಕವಾದ ಹಿಪ್ಪುನೇರಳೆ ಸೊಪ್ಪನ್ನು ಆಹಾರವಾಗಿ ಸಧೃಡ ರೇಷ್ಮೆಹುಳು ತಳಿಗಳಿಗೆ ನೀಡುವುದರಿಂದ ಆರ್ಥಿಕ ನಿಯತಾಂಕಗಳು ಮತ್ತು ಜೀವ–ರಾಸಾಯನಿಕ ರಚನೆಗಳ ಮೇಲಾಗುವ ಪರಿಣಾಮಗಳನ್ನು ಕೋಷ್ಟಕ 1 ರಿಂದ 8 ರವರೆಗೆ ಪ್ರಸ್ತುತ ಪಡಿಸಿ, ವಿಸ್ತೃತವಾಗಿ ಚರ್ಚಿಸಲಾಗಿದೆ.

ಹುಳುವಿನ ತೂಕ ಮತ್ತು ಅವಧಿ: ಅಭಯಾರಿಷ್ಟಮ್ ಸಿಂಪಡಿಸಿದ ಸೊಪ್ಪನ್ನು ಸೇವಿಸಿದ CSR_{51} ರೇಷ್ಮೆಹುಳಗಳಲ್ಲಿ ಗರಿಷ್ಠ ಪ್ರೌಢ ಹುಳು ತೂಕ ನೋಂದಾಯಿಸಲಾದರೆ, ಉಪಚಾರವಲ್ಲದ ಸೊಪ್ಪನ್ನು ಸೇವಿಸಿದ CSR_{46} ತಳಿಯಲ್ಲಿ ಕನಿಷ್ಠ ತೂಕ ದಾಖಲಾಗಿದೆ. ಇದಲ್ಲದೇ, ಐದನೇ ಅವಾಂತರ ರೂಪ ಮತ್ತು ಒಟ್ಟು ಹುಳುವಿನ ಅವಧಿಯು ಕ್ರಮವಾಗಿ 7.00 ಮತ್ತು 24.00 ದಿನಗಳಾಗಿ ದಾಖಲು ಮಾಡಲಾಗಿದೆ.

ಶೇ.2% ಜ಼ಾಂಥಿಯಂ ಇಂಡಿಕಂನ್ನು ಹಿಪ್ಪುನೇರಳೆ ಸೊಪ್ಪಿಗೆ ಸಿಂಪಡಿಸಿ ರೇಷ್ಮೆಹುಳಗಳಿಗೆ ನೀಡಿದಾಗ ಹುಳಗಳ ತೂಕ ಏರಿಕೆಯಾಗಿದೆ (ತಖ್ಲಿಖ್, 2012; ಪರದೇಶಿ ಮತ್ತು ಬಜದ್, 2014).

ರೇಷ್ಮೆಗೂಡಿನ ತೂಕ, ಕವಚದ ತೂಕ ಮತ್ತು ಕೋಶದ ತೂಕ: ಅಭಯಾರಿಷ್ಟಮ್ ಎಂಬ ಆಯುರ್ವೇದ ಔಷಧಿ ಬಲಪಡಿಸಿದ ಸೊಪ್ಪನ್ನು ಸೇವಿಸಿದ CSR_2 ತಳಿಯಲ್ಲಿ ರೇಷ್ಮೆಗೂಡು, ಕವಚ ಹಾಗೂ ಕೋಶದ ತೂಕ ಗಮನಾರ್ಹವಾಗಿ ಏರಿಕೆ ಕಂಡಿದೆ. ಆದರೆ, ಉಪಚಾರ ಮಾಡದ ಸೊಪ್ಪನ್ನು ತಿಂದ CSR_{46} ರೇಷ್ಮೆಹುಳಗಳಲ್ಲಿ ಕಡಿಮೆ ತೂಕ ಕಂಡುಬಂದಿದೆ.

ಕವಚದ ಅನುಪಾತ ಮತ್ತು ರೇಷ್ಮೆ ಉತ್ಪಾದಕತೆ : ಕವಚದ ಅನುಪಾತ ಮತ್ತು ರೇಷ್ಮೆ ಉತ್ಪಾದಕತೆ ಅಭಯಾರಿಷ್ಟಮ್ ಪೂರಕವಾದ ಸೊಪ್ಪನ್ನು ಸೇವಿಸಿದ CSR_2 ರೇಷ್ಮೆಹುಳಗಳಲ್ಲಿ ಗಮನಾರ್ಹ ವ್ಯತ್ಯಾಸಗಳನ್ನು ಗಮನಿಸಲಾಗಿದೆ. ಆದರೆ, ಇವು ಉಪಚಾರವಲ್ಲದ ಸೊಪ್ಪನ್ನು ತಿಂದ CSR_{46} ತಳಿಯಲ್ಲಿ ಕನಿಷ್ಠವಾಗಿದೆ.

ಸಸ್ಯ ಮೂಲಗಳನ್ನು ಆಹಾರವಾಗಿ ಸೇವಿಸುವುದರಿಂದ ರೇಷ್ಮೆಹುಳಗಳ ಬೆಳವಣಿಗೆ ಮತ್ತು ರೇಷ್ಮೆಗೂಡಿನ ನಿಯತಾಂಕಗಳನ್ನು ಸುಧಾರಿಸಬಹುದೆಂದು ಖ್ಯಾದೆ ಮತ್ತು ಸಾಕ್ಡಿಯೋ (2012) ತಾವು ಕೈಗೊಂಡ ಸಂಶೋಧನೆಯಲ್ಲಿ ಪ್ರಚುರ ಮಾಡಿದ್ದಾರೆ.

ರೇಷ್ಮೆ ಎಳೆಯ ಉದ್ದ ಮತ್ತು ಡೀನಿಯರ್: ಅಭಯಾರಿಷ್ಟಮ್ ಸಿಂಪಡಿಸಿದ ಸೊಪ್ಪನ್ನು ಸೇವಿಸಿದ CSR_3 ರೇಷ್ಮೆಹುಳಗಳಲ್ಲಿ ಉದ್ದನೆಯ ರೇಷ್ಮೆ ಎಳೆ ಮತ್ತು ತೆಳುವಾದ ಡೀನಿಯರ್ ಗಮನಿಸಲಾಯಿತು ಮತ್ತು ಉಪಚಾರವಲ್ಲದ ಸೊಪ್ಪಿನ ಬಳಕೆಯಿಂದ CSR_{46} ತಳಿಯಲ್ಲಿ ಕನಿಷ್ಠವಾಗಿದೆ.

ಶೇ. 1% ಅರಿಶಿನ ಸಿಂಪಡಿಸಿದ ಸೊಪ್ಪನ್ನು ರೇಷ್ಮೆಹುಳಗಳಿಗೆ ನೀಡಿದಾಗ ಉದ್ದನೆಯ ಎಳೆ ಮತ್ತು ತೆಳ್ಳನೆಯ ಡೀನಿಯರ್ ಸಿಗುತ್ತದೆಂದು ದೇವಿ ಮತ್ತು ಎಲ್ಲಮ್ಮ (2013) ರವರು ತಮ್ಮ ಸಂಶೋಧನೆಯಲ್ಲಿ ತಿಳಿಸಿದ್ದಾರೆ.

ರೆಂಡಿಟ ಮತ್ತು ಶೇಕಡವಾರು ಕಚ್ಚಾ ರೇಷ್ಮೆ : ಉಪಚಾರವಲ್ಲದ ಸೊಪ್ಪಿನ ಸೇವನೆಯಿಂದ ಉತ್ತಮ ರೆಂಡಿಟ ಮತ್ತು ಶೇಕಡವಾರು ಕಚ್ಚಾ ರೇಷ್ಮೆ CSR_{46} ತಳಿಯಲ್ಲಿ ನೋಂದಣಿಯಾಗಿದೆ. ಆದರೆ, ಅಭಯಾರಿಷ್ಟಮ್ ಸಿಂಪಡಿಸಿದ ಸೊಪ್ಪನ್ನು ತಿಂದ CSR_2 ರೇಷ್ಮೆಹುಳಗಳಲ್ಲಿ ಕಡಿಮೆಯಾಗಿದೆ.

ರೇಷ್ಮೆಹುಳುವಿನ ರಕ್ತದಲ್ಲಿನ ಒಟ್ಟು ಪ್ರೋಟೀನ್ ಮತ್ತು ಕಾರ್ಬೋಹೈಡ್ರೇಟ್‌ಗಳು: ಅಭಯಾರಿಷ್ಟಮ್ ಸಿಂಪಡಿಸಿದ ಎಲೆಗಳಿಂದ CSR_{51} ತಳಿಯಲ್ಲಿ ಒಟ್ಟು ಪ್ರೋಟೀನ್ ಮತ್ತು ಕಾರ್ಬೋಹೈಡ್ರೇಟ್ ಅಂಶಗಳು ಅಧಿಕವಾದರೆ, ಉಪಚಾರವಲ್ಲದ ಸೊಪ್ಪನ್ನು ಸೇವಿಸಿದ CSR_{50} ತಳಿಯಲ್ಲಿ ಕಡಿಮೆಯಾಗಿರುವುದು ಕಂಡುಬಂದಿದೆ.

ಕೀಟಗಳಲ್ಲಿ ಪ್ರೋಟೀನ್, ಕಾರ್ಬೋಹೈಡ್ರೇಟ್‌ಗಳು, ಅಮೈನೋ ಆಮ್ಲಗಳು, ನ್ಯೂಕ್ಲಿಕ್ ಆಮ್ಲಗಳು ಇತ್ಯಾದಿ ಜೀವ–ರಾಸಾಯನಿಕ ಘಟಕಗಳು ಅಧಿಕವಾಗಿ ಗುಣಮಟ್ಟದ ಆಹಾರ ಮತ್ತು ಅದರ ಬಳಕೆಯನ್ನು ಅವಲಂಬಿಸಿರುತ್ತವೆ (ಹೋರಿ, 1961).

ರೇಷ್ಮೆಹುಳಗಳ ರಕ್ತದಲ್ಲಿನ ಅಲನೈನ್ ಮತ್ತು ಆಸ್ಪರ್ಟೇಟ್ ಅಮೈನೋ ಟ್ರಾನ್ಸ್‌ಫರೇಸ್ ಹಾಗೂ ಪ್ರೋಟಿಯೇಸ್ ಚಟುವಟಿಕೆ: ಅಭಯಾರಿಷ್ಟಮ್ ಸಿಂಪಡಿಸಿದ ಸೊಪ್ಪಿನಿಂದ CSR_{51} ತಳಿಯ ರಕ್ತದಲ್ಲಿ ಕಿಣ್ವ ಚಟುವಟಿಕೆಯು ಹೆಚ್ಚಾಯಿತು ಆದರೆ ಉಪಚಾರವಲ್ಲದ ಸೊಪ್ಪಿನ ಬಳಕೆಯಿಂದ ಕಡಿಮೆ ಚಟುವಟಿಕೆ CSR_{46} ತಳಿಯಲ್ಲಿ ಕಂಡುಬಂದಿದೆ.

ಅಲನೈನ್ ಅಮೈನೋ ಟ್ರಾನ್ಸ್‌ಫರೇಸ್ ಪ್ರಮುಖ ಸಂವಹನ ಪ್ರತಿಕ್ರಿಯೆಗಳನ್ನು ನೆರವೇರಿಸುತ್ತದೆ (ಲೆಹ್ನಿಂಜರ್, 1993) ಮತ್ತು ರೇಷ್ಮೆಹುಳುವಿನ ಭ್ರೂಣ ಅಭಿವೃದ್ಧಿಯಲ್ಲಿ ಆಸ್ಪರ್ಟೇಟ್ ಅಮೈನೋ ಟ್ರಾನ್ಸ್‌ಫರೇಸ್ ಪ್ರಮುಖವಾಗಿದೆ (ಪಂತ್ ಮತ್ತು ಕುಮಾರ್, 1979). ಪ್ರಸ್ತುತ ಅಧ್ಯಯನದ ಫಲಿತಾಂಶಗಳಿಂದ ತಿಳಿಯುವುದೇನೆಂದರೆ, ಆಯುರ್ವೇದ ಔಷಧಿಗಳು (ಅಭಯಾರಿಷ್ಟಮ್, ಅರವಿಂದಾಸವಮ್ ಮತ್ತು ದ್ರಾಕ್ಷಾರಿಷ್ಟಮ್) ಹಾಗೂ ಶುದ್ಧೀಕರಿಸಿದ ನೀರನ್ನು ಹಿಪ್ಪುನೇರಳೆ ಸೊಪ್ಪಿಗೆ ಸಿಂಪಡಿಸಲು ಉಪಯೋಗಿಸುವುದರಿಂದ ಆರು ಸಧೃಡವಾದ ದ್ವಿತಳಿ ರೇಷ್ಮೆಹುಳು ತಳಿಗಳ ಪಾಲನೆ ಮತ್ತು ರೇಷ್ಮೆ ಗೂಡಿನ ನಿಯತಾಂಕಗಳ ಮೇಲೆ ಧನಾತ್ಮಕ ಪ್ರಭಾವ ಬೀರುತ್ತದೆ. ಆದ್ದರಿಂದ, ಆಯುರ್ವೇದ ಔಷಧಿಗಳನ್ನು ಅನುಕೂಲಕರವಾಗಿ ಹಿಪ್ಪುನೇರಳೆ

ರೇಷ್ಮೆಹುಳುವಿನ ಆರ್ಥಿಕ ನಿಯತಾಂಕಗಳ ವರ್ಧನೆಗೆ ಬಳಸಬಹುದು.

ಆಧಾರ ಗ್ರಂಥಗಳು: ಜಿರ್ಲನ್ಸ್, ಎಫ್.ಬಿ., ಬ್ಯೂಚಾಂಪ್, ಟಿ.ಎಲ್., ಡ್ರೆಸ್ಸರ್, ಆರ್., ಮಾರ್ಟನ್, ಡಿ.ಬಿ. ಮತ್ತು ಗ್ಲಕ್, ಜೆ.ಪಿ. 1998. ದಿ ಹ್ಯೂಮನ್ ಯೂಜ್ ಆಫ್ ಅನಿಮಲ್ : ಕೇಸ್ ಸ್ಟಡೀಸ್ ಇನ್ ಎಥಿಕಲ್ ಚಾಯ್ಸ್, ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಮುದ್ರಣಾಲಯ, ನ್ಯೂಯಾರ್ಕ್.

ಕುಮಾರರಾಜ್, ಎಸ್., ವಿಜಯರಾಘವನ್, ಎಸ್. ಮತ್ತು ಕೃಷ್ಣಸ್ವಾಮಿ, ಎಸ್. 1972. ಇಂಡಿಯನ್ ಜರ್ನಲ್ ಆಫ್ ಸೆರಿಕಲ್ಚರ್, **11**: 68–72.

ಕೌಲ್, 1989. ಅಗ್ರಿಕಲ್ಚರಲ್ ಸೈನ್ಸ್ ಡೈಜೆಸ್ಟ್, **9**(4): 208–209.

ಖ್ಯಾದೆ, ಬಿ.ವಿ. ಮತ್ತು ಸಾಕ್ಡಿಯೊ, ಎಂ.ಬಿ. 2012. ಇಂಟರ್ನ್ಯಾಷನಲ್ ಜರ್ನಲ್ ಆಫ್ ಬಯೊ ಅಸ್ಸೇಸ್, **1**(12): 166–169.

ಚೆಂತಿಲ್‌ನಾಯಕಿ, ಎನ್., ಸೆಲ್ವಿಸಭನ್ಯಾಕಂ, ಮಥಿವನನ್, ವಿ. 2004. ಜರ್ನಲ್ ಆಫ್ ಕರೆಂಟ್ ಸೈನ್ಸ್, **5**: 49–54.

ತಖ್ಲಿಖ್, ಎಂ. 2012. ಇಂಟರ್ನ್ಯಾಷನಲ್ ಜರ್ನಲ್ ಆಫ್ ಗ್ರೀನ್ ಅಂಡ್ ಹರ್ಬಲ್ ಕೆಮಿಸ್ಟ್ರಿ, **1**(3): 391–339.

ದಂಡಿನ್, ಎಸ್.ಜಿ. ಮತ್ತು ಗಿರಿಧರ್, ಕೆ. 2010. ಹ್ಯಾಂಡ್ ಬುಕ್ ಆಫ್ ಸೆರಿಕಲ್ಚರ್ ಟೆಕ್ನಾಲಜೀಸ್, ಕೇಂದ್ರ ರೇಷ್ಮೆ ಮಂಡಳಿ, ಬೆಂಗಳೂರು, ಪುಟ ಸಂಖ್ಯೆ. 420.

ದೇವಿ, ಕೆ.ಎಲ್. ಮತ್ತು ಎಲ್ಲಮ್ಮ, ಕೆ. 2013. ಜರ್ನಲ್ ಆಫ್ ಬಯೊಲಾಜಿಕಲ್ ಇನ್ನೊವೇಶನ್ಸ್, **2**(5): 260–284.

ಪಂತ್, ಆರ್. ಮತ್ತು ಕುಮಾರ್, ಎಸ್. 1979. ಇಂಡಿಯನ್ ಜರ್ನಲ್ ಆಫ್ ಎಕ್ಸ್‌ಪೆರಿಮೆಂಟಲ್ ಬಯಾಲಜಿ. **17**(7): 708–710.

ಪರದೇಶಿ, ಎ.ಬಿ. ಮತ್ತು ಬಜದ್, ಪಿ.ಎನ್. 2014. ಇಂಟರ್ನ್ಯಾಷನಲ್ ಜರ್ನಲ್ ಆಫ್ ರೀಸೆಂಟ್ ಸೈಂಟಿಫಿಕ್ ರೀಸರ್ಚ್, **5**(3): 683–686.

ರೀತ್ಮನ್, ಎಸ್. ಮತ್ತು ಫ್ರಾಂಕಲ್, ಎಸ್. 1957. ಆನುಯಲ್ ಜರ್ನಲ್ ಆಫ್ ಕ್ಲಿನಿಕಲ್ ಪೆಥಾಲಜಿ, **28**: 53–56.

ಲೆಹ್ನಿಂಜರ್, ಎ.ಎಲ್. 1993. ಬಯೊಕೆಮಿಸ್ಟ್ರಿ, 2ನೇ ಎಡಿಷನ್, ಕಲ್ಯಾಣಿ ಪಬ್ಲಿಷರ್ಸ್, ಲುಧಿಯಾನ, ನವ ದೆಹಲಿ.

ಲೌರಿ, ಓ.ಹೆಚ್., ರೋಜ್‌ಬ್ರೌಫ್, ಎನ್.ಜೆ., ಫರ್, ಎ.ಎಲ್. ಮತ್ತು ರಂಡಾಲ್. ಆರ್.ಜೆ. 1951. ಜರ್ನಲ್ ಆಫ್ ಬಯೊಲಾಜಿಕಲ್ ಕೆಮಿಸ್ಟ್ರಿ, **193**: 265–275.

ಸದಾಶಿವಂ, ಎಸ್. ಮತ್ತು ಮಣಿಕ್ಕಂ, ಎ. 2008. ಬಯೊಕೆಮಿಕಲ್ ಮೆಥಡ್ಸ್, ನ್ಯೂ ಏಜ್ ಇಂಟರ್ನ್ಯಾಷನಲ್ (ಪ್ರೈ.) ಲಿಮಿಟೆಡ್ ಪಬ್ಲಿಷರ್ಸ್, ನವ ದೆಹಲಿ, ಪುಟಸಂಖ್ಯೆ 270.

ಹೋರಿ, ವೈ. 1961. ಬುಲೆಟಿನ್ ಆಫ್ ದಿ ಸೆರಿಕಲ್ಚರಲ್ ಎಕ್ಸ್‌ಪೆರಿಮೆಂಟ್ ಸ್ಟೇಶನ್, ಜಪಾನ್, **16**: 287–309.

ಕೋಷ್ಟಕ 1: ಅಯೋರ್ಟದ ಪೆಪ್ಟಿಡಿನ ಪ್ರಭಾವದಿಂದ ಪ್ರಭಾವಿತಗೊಂಡ ಸಧ್ಯದ ಪೆಪ್ಟೈಡುಗಳ ಕಳೆಗಳ ಸಾಮಾನ್ಯ ನಿಯತಾಂಕಗಳು

ಅಯೋರ್ಟದ ಪೆಪ್ಟಿಡಿನ (ಪ್ರ)	ಪೆಪ್ಟೈಡುಗಳ ಹೆಸರು (ಗ್ರಾ.)							ಪೆಪ್ಟೈಡುಗಳ ಕೊಡ (ಗ್ರಾ.)						
	ಪೆಪ್ಟೈಡುಗಳ ಪ್ರಮಾಣ (ಪ್ರ)							ಪೆಪ್ಟೈಡುಗಳ ಪ್ರಮಾಣ (ಪ್ರ)						
	ಸಮಸಂಖ್ಯೆ46	ಸಮಸಂಖ್ಯೆ47	ಸಮಸಂಖ್ಯೆ50	ಸಮಸಂಖ್ಯೆ51	ಜಿಂಕ್ಸ್	ಜಿಂಕ್ಸ್	ಸಾಮಾನ್ಯ	ಸಮಸಂಖ್ಯೆ46	ಸಮಸಂಖ್ಯೆ47	ಸಮಸಂಖ್ಯೆ50	ಸಮಸಂಖ್ಯೆ51	ಜಿಂಕ್ಸ್	ಜಿಂಕ್ಸ್	ಸಾಮಾನ್ಯ
1. ಆಫಿಯಹಿಷ್ಟುಲ್	3.650	3.971	4.044	4.095	4.026	4.065	3.975	1.757	1.980	2.030	1.930	2.065	2.016	1.963
2. ಆಸಿಯಾಹಿಷ್ಟುಲ್	3.644	3.839	3.669	3.956	3.925	3.899	3.822	1.753	1.670	1.843	1.911	1.969	1.946	1.849
3. ಥ್ರಾಕ್ಷಿಷ್ಟುಲ್	3.523	3.651	3.655	3.942	3.832	3.632	3.706	1.669	1.888	1.773	1.742	1.964	1.884	1.820
4. ಪೆಪಿಸಿಡ ನಿಡಾ	3.490	3.525	3.380	3.919	3.799	3.628	3.623	1.644	1.759	1.771	1.738	1.940	1.661	1.785
5. ಬಾಸ್ಟಿಯಹಿಷ್ಟುಲ್	3.409	3.392	3.321	3.603	3.637	3.469	3.472	1.630	1.667	1.718	1.695	1.927	1.813	1.742
ಸರಾಸರಿ	3.543	3.675	3.614	3.903	3.844	3.739		1.691	1.793	1.827	1.803	1.973	1.904	
ಹೊಸದಕ್ಕೆ ಮಾರ್ಪಡಿಸಿದ	ಅಂಕಿಅಂಶಗಳು (ಪ್ರಮಿತಿ)							ಅಂಕಿಅಂಶಗಳು (ಪ್ರಮಿತಿ)						
	ವಿಶ್ವಾಸ್ಯತೆ		ವ್ಯತ್ಯಾಸ±		ವ್ಯತ್ಯಾಸ±		ಸ.ದೋ. 5%	ವಿಶ್ವಾಸ್ಯತೆ		ವ್ಯತ್ಯಾಸ±		ವ್ಯತ್ಯಾಸ±		ಸ.ದೋ. 5%
ಅ	*		0.005		0.008		0.015	*		0.006		0.009		0.018
ಬ	*		0.005		0.007		0.014	*		0.006		0.008		0.017
ಅ x ಬ	*		0.012		0.017		0.034	*		0.014		0.020		0.041

ಕೋಷ್ಟಕ 2: ಆಯುರ್ವೇದ ಔಷಧಿಗಳ ಮಿಶ್ರಣದಿಂದ ಪ್ರಭಾವಗೊಂಡ ಸದೃಢ ರೆಡ್ಡೆಹುಳು ತಳಿಗಳ ಗೂಡಿನ ನಿಯತಾಂಕಗಳು

ಆಯುರ್ವೇದ ಔಷಧಿಗಳು (ಅ)	ಕೋಶದ ತೂಕ (ಗ್ರಾಂ.)						
	ರೆಡ್ಡೆಹುಳುವಿನ ತಳಿಗಳು (ಬ)						
	ಸಿಎಸ್‌ಆರ್‌46	ಸಿಎಸ್‌ಆರ್‌47	ಸಿಎಸ್‌ಆರ್‌50	ಸಿಎಸ್‌ಆರ್‌51	ಜೆಸ್ಟ್‌1	ಜೆಸ್ಟ್‌3	ಸಾಮಾನ್ಯ
1. ಅಭಯಹರಿದ್ರಾ	1.382	1.557	1.594	1.508	1.631	1.600	1.545
2.ಆರಾಂದಾಮಾಲಕಿ	1.411	1.352	1.552	1.530	1.544	1.528	1.486
3. ದ್ರಾಕ್ಷಾಬಿಲ್ವಾದಿ	1.344	1.509	1.429	1.404	1.556	1.472	1.452
4. ಪೆಜರಿಸಿದ ನೀರು	1.333	1.415	1.424	1.401	1.537	1.491	1.434
5.ಉಪಚಾರವಲ್ಲದ	1.327	1.348	1.405	1.387	1.528	1.468	1.411
ಸಾಮಾನ್ಯ	1.359	1.436	1.481	1.446	1.559	1.512	
ಪೋಲಿಕೆ ಮಾಡಿದಾಗ	ಅಂಕಅಂಶಗಳು (ಅನೋವ)						
	ವಿಘ್ನ-ಬಸ್ಟ್	ಎಸ್‌ಇಎಂ±		ಎಸ್‌ಇಡಿ±		ಸಿ.ಡಿ. 5%	
ಅ	*	0.009		0.013		0.026	
ಬ	*	0.008		0.012		0.023	
ಅ x ಬ	*	0.020		0.028		0.057	

ಕವಚ ತೂಕ (ಗ್ರಾಂ.)						
ರೆಡ್ಡೆಹುಳುವಿನ ತಳಿಗಳು (ಬ)						
ಸಿಎಸ್‌ಆರ್‌46	ಸಿಎಸ್‌ಆರ್‌47	ಸಿಎಸ್‌ಆರ್‌50	ಸಿಎಸ್‌ಆರ್‌51	ಜೆಸ್ಟ್‌1	ಜೆಸ್ಟ್‌3	ಸಾಮಾನ್ಯ
0.375	0.423	0.436	0.422	0.434	0.418	0.418
0.342	0.317	0.291	0.380	0.426	0.417	0.362
0.325	0.378	0.344	0.338	0.408	0.411	0.367
0.311	0.343	0.347	0.337	0.403	0.370	0.352
0.303	0.318	0.312	0.308	0.399	0.346	0.331
0.331	0.356	0.346	0.357	0.414	0.392	
ಅಂಕಅಂಶಗಳು (ಅನೋವ)						
ವಿಘ್ನ-ಬಸ್ಟ್	ಎಸ್‌ಇಎಂ±		ಎಸ್‌ಇಡಿ±		ಸಿ.ಡಿ. 5%	
*	0.005		0.007		0.014	
*	0.005		0.006		0.013	
*	0.011		0.016		0.031	

ಕೋಷ್ಟಕ 3: ಆಯುರ್ವೇದ ಔಷಧಿಗಳ ಮಿಶ್ರಣದಿಂದ ಪ್ರಭಾವಗೊಂಡ ಸದೃಢ ರೆಡ್ಡೆಹುಳು ತಳಿಗಳ ಗೂಡಿನ ನಿಯತಾಂಕಗಳು

ಆಯುರ್ವೇದ ಔಷಧಿಗಳು (ಅ)	ಕವಚ ಅನುಪಾತ (%)						
	ರೆಡ್ಡೆಹುಳುವಿನ ತಳಿಗಳು (ಬ)						
	ಸಿಎಸ್‌ಆರ್‌46	ಸಿಎಸ್‌ಆರ್‌47	ಸಿಎಸ್‌ಆರ್‌50	ಸಿಎಸ್‌ಆರ್‌51	ಜೆಸ್ಟ್‌1	ಜೆಸ್ಟ್‌3	ಸಾಮಾನ್ಯ
1. ಅಭಯಹರಿದ್ರಾ	21.34	21.35	21.48	21.87	21.00	20.72	21.29
2. ಆರಾಂದಾಮಾಲಕಿ	19.51	19.01	15.81	19.92	21.62	21.46	19.55
3. ದ್ರಾಕ್ಷಾಬಿಲ್ವಾದಿ	19.48	20.05	19.38	19.41	20.79	21.91	20.17
4. ಪೆಜರಿಸಿದ ನೀರು	18.91	19.52	19.57	19.39	20.77	19.91	19.68
5. ಉಪಚಾರವಲ್ಲದ	18.58	19.11	18.20	18.16	20.71	19.08	18.97
ಸಾಮಾನ್ಯ	19.56	19.81	18.89	19.75	20.98	20.62	
ಪೋಲಿಕೆ ಮಾಡಿದಾಗ	ಅಂಕಅಂಶಗಳು (ಅನೋವ)						
	ವಿಘ್ನ-ಬಸ್ಟ್	ಎಸ್‌ಇಎಂ±		ಎಸ್‌ಇಡಿ±		ಸಿ.ಡಿ. 5%	
ಅ	*	0.290		0.410		0.823	
ಬ	*	0.265		0.375		0.751	
ಅ x ಬ	*	0.649		0.918		1.840	

ರೆಡ್ಡೆ ಉತ್ಪಾದನೆ (ಎಣ್ಣೆ/ದಿನ)						
ರೆಡ್ಡೆಹುಳುವಿನ ತಳಿಗಳು (ಬ)						
ಸಿಎಸ್‌ಆರ್‌46	ಸಿಎಸ್‌ಆರ್‌47	ಸಿಎಸ್‌ಆರ್‌50	ಸಿಎಸ್‌ಆರ್‌51	ಜೆಸ್ಟ್‌1	ಜೆಸ್ಟ್‌3	ಸಾಮಾನ್ಯ
6.250	7.047	7.267	7.033	7.228	6.969	6.966
5.700	5.290	4.855	6.335	7.094	6.958	6.039
5.418	6.308	5.725	5.639	6.808	6.855	6.125
5.180	5.723	5.775	5.619	6.714	6.174	5.864
5.046	5.306	5.206	5.128	6.652	5.764	5.517
5.519	5.935	5.765	5.951	6.899	6.544	
ಅಂಕಅಂಶಗಳು (ಅನೋವ)						
ವಿಘ್ನ-ಬಸ್ಟ್	ಎಸ್‌ಇಎಂ±		ಎಸ್‌ಇಡಿ±		ಸಿ.ಡಿ. 5%	
*	0.083		0.117		0.235	
*	0.076		0.107		0.214	
*	0.185		0.262		0.525	

ಕೋಷ್ಟಕ 4: ಆಯುರ್ವೇದ ಔಷಧಿಗಳ ಮಿಶ್ರಣದಿಂದ ಪ್ರಭಾವಗೊಂಡ ಸದ್ಯಕ ರೆಡ್ಕೆಹುಳು ತಳಿಗಳ ನೂಲು ಬಿಚ್ಚಾಣಿಕೆ ನಿಯತಾಂಕಗಳು

ಆಯುರ್ವೇದ ಔಷಧಿಗಳು (ಅ)	ಎಳೆಯ ಉದ್ದ (ಮಿಮೀ)							ಡೆನಿಯರ್						
	ರೆಪ್ಲಿಕೇಷನ್ ಗಳಿಗಾಗಿ (ಬ)							ರೆಪ್ಲಿಕೇಷನ್ ಗಳಿಗಾಗಿ (ಬ)						
	S_{46}	S_{47}	S_{50}	S_{51}	J_2	J_3	ಸರಾಸರಿ	S_{46}	S_{47}	S_{50}	S_{51}	J_2	J_3	ಸರಾಸರಿ
1. ಅಧಮಸಿಪ್ಪಮ್	849.3	886.8	903.1	929.6	936.5	957.3	910.4	2.914	2.823	2.707	2.696	2.711	2.588	2.740
2. ಅಮಿಂಡಾಮಮ್	847.3	882.0	856.9	839.9	888.5	922.3	872.8	2.815	2.738	2.748	2.878	2.754	2.594	2.755
3. ದ್ರಾಕ್ಷಾದಿಪ್ಪಮ್	798.3	849.3	840.5	837.3	873.8	909.3	851.4	2.901	2.761	2.725	2.806	2.722	2.549	2.744
4. ಪೆಜಡ್ಡಿಪದ ನೀರು	782.9	832.5	831.1	806.5	866.6	843.9	827.3	2.964	2.828	2.753	2.925	2.746	2.750	2.828
5. ಉಪಚಾವಲ್ಲದ	753.6	750.1	812.7	792.3	782.1	809.3	783.3	3.101	3.159	2.846	2.991	3.066	2.891	3.009
ಸರಾಸರಿ	806.3	840.1	848.9	841.1	869.5	888.4		2.939	2.862	2.756	2.859	2.800	2.674	

ಹೋಲಿಕೆ ಮಾಡಿದಾಗ	ಅಂತರಾಂಶಗಳು (ಅನೋವ)				ಅಂತರಾಂಶಗಳು (ಅನೋವ)			
	ಎಫ್-ಟೆಸ್ಟ್	ಎಸ್‌ಇಎಂ±	ಎಸ್‌ಇಡಿ±	ಸಿ.ಡಿ. 5%	ಎಫ್-ಟೆಸ್ಟ್	ಎಸ್‌ಇಎಂ±	ಎಸ್‌ಇಡಿ±	ಸಿ.ಡಿ. 5%
ಅ	*	5.905	8.351	16.75	*	0.050	0.071	0.142
ಬ	*	5.390	7.623	15.29	*	0.046	0.064	0.129
ಅ x ಬ	*	13.20	18.67	37.44	--	0.112	0.158	NS

ಕೋಷ್ಟಕ 5: ಆಯುರ್ವೇದ ಔಷಧಿಗಳ ಮಿಶ್ರಣದಿಂದ ಪ್ರಭಾವಗೊಂಡ ಸದ್ಯಕ ರೆಡ್ಕೆಹುಳು ತಳಿಗಳ ನೂಲು ಬಿಚ್ಚಾಣಿಕೆ ನಿಯತಾಂಕಗಳು

ಆಯುರ್ವೇದ ಔಷಧಿಗಳು (ಅ)	ರೀಲಿಂಗ್							ಹೊಣಬಾವಿ ಜ್ಯಾ ರೆಷ್ಟ್ (%)						
	ರೆಪ್ಲಿಕೇಷನ್ ಗಳಿಗಾಗಿ (ಬ)							ರೆಪ್ಲಿಕೇಷನ್ ಗಳಿಗಾಗಿ (ಬ)						
	S_{46}	S_{47}	S_{50}	S_{51}	J_2	J_3	ಸರಾಸರಿ	S_{46}	S_{47}	S_{50}	S_{51}	J_2	J_3	ಸರಾಸರಿ
1. ಅಧಮಸಿಪ್ಪಮ್	6.394	7.123	7.478	6.932	7.334	7.335	7.099	15.65	14.05	13.38	14.44	13.64	13.64	14.14
2. ಅಮಿಂಡಾಮಮ್	6.620	6.230	7.051	7.122	7.252	7.341	6.936	15.12	16.06	14.21	14.08	13.80	13.63	14.48
3. ದ್ರಾಕ್ಷಾದಿಪ್ಪಮ್	6.508	7.268	7.003	6.700	7.461	7.347	7.048	15.42	13.80	14.33	14.97	13.45	13.71	14.28
4. ಪೆಜಡ್ಡಿಪದ ನೀರು	6.412	6.773	6.996	6.689	7.364	7.249	6.914	15.68	14.83	14.37	15.04	13.62	13.86	14.57
5. ಉಪಚಾವಲ್ಲದ	6.298	6.362	6.711	6.451	7.249	6.998	6.678	15.94	15.79	14.92	15.53	13.82	14.34	15.06
ಸರಾಸರಿ	6.447	6.751	7.048	6.779	7.332	7.254		15.56	14.91	14.24	14.81	13.67	13.84	

ಹೋಲಿಕೆ ಮಾಡಿದಾಗ	ಅಂತರಾಂಶಗಳು (ಅನೋವ)				ಅಂತರಾಂಶಗಳು (ಅನೋವ)			
	ಎಫ್-ಟೆಸ್ಟ್	ಎಸ್‌ಇಎಂ±	ಎಸ್‌ಇಡಿ±	ಸಿ.ಡಿ. 5%	ಎಫ್-ಟೆಸ್ಟ್	ಎಸ್‌ಇಎಂ±	ಎಸ್‌ಇಡಿ±	ಸಿ.ಡಿ. 5%
ಅ	*	0.114	0.161	0.322	*	0.237	0.336	0.673
ಬ	--	0.104	0.147	NS	*	0.217	0.306	0.614
ಅ x ಬ	--	0.254	0.359	NS	--	0.531	0.751	NS

ಕೋಷ್ಟಕ 6: ಅಯುರ್ವೇದ ಔಷಧಿಗಳ ಮಿಶ್ರಣದಿಂದ ಪ್ರಭಾವಗೊಂಡ ಸದೃಢ ರೆಡ್ಕೆಮಲು ತಳಿಗಳ ಜೀವ-ರಾಸಾಯನಿಕಗಳ ಸಂಯೋಜನೆ

ಆಯುರ್ವೇದ ಔಷಧಿಗಳು (ಅ)	ಒಟ್ಟು ಪ್ರೋಟೀನ್ (ಮಿಗ್ರಾ./ಮಿಲೀ.)						
	ರೆಡ್ಕೆಮಾಮಿನ ತಳಿಗಳು (ಬ)						
	ಸಿಎಸ್‌ಆರ್46	ಸಿಎಸ್‌ಆರ್47	ಸಿಎಸ್‌ಆರ್50	ಸಿಎಸ್‌ಆರ್51	ಜೆನ್1	ಜೆನ್3	ಸರಾಸರಿ
1. ಅಧಮಪಿಷ್ಟಾದಿ	33.73	32.93	30.59	33.52	33.34	34.65	33.13
2.ಅರವಿಂದಾಸವ	30.72	32.21	29.75	33.11	33.18	32.79	31.96
3. ದಶಮೂಲಿಘೃತ	30.57	31.04	28.97	32.70	32.91	30.68	31.14
4. ಶೋಧಿತ ನೀರು	28.21	29.77	28.46	32.64	31.84	29.95	30.15
5. ಉಷಾದಿಮಲ್ಲಿಕ	26.68	27.25	27.29	30.65	30.51	28.17	28.42
ಸರಾಸರಿ	29.98	30.64	29.01	32.53	32.35	31.25	

ಹೋಲಿಕೆ ಮಾಡಿದವರು	ಅಂತರಂಡಗಳು (ಅನೋವ)			
	ವಿಘ್-ಬೆಸ್ಟ್	ಎಸ್‌ಇಎಂ±	ಎಸ್‌ಇಡಿ±	ಸಿ.ಡಿ. 5%
ಅ	*	0.310	0.438	0.879
ಬ	*	0.283	0.401	0.802
ಅ x ಬ	--	0.693	0.980	NS

ಕಾರ್ಬೋಹೈಡ್ರೇಟ್‌ಗಳು (ಮಿಗ್ರಾ./ಮಿಲೀ.)						
ರೆಡ್ಕೆಮಾಮಿನ ತಳಿಗಳು (ಬ)						
ಸಿಎಸ್‌ಆರ್46	ಸಿಎಸ್‌ಆರ್47	ಸಿಎಸ್‌ಆರ್50	ಸಿಎಸ್‌ಆರ್51	ಜೆನ್1	ಜೆನ್3	ಸರಾಸರಿ
16.05	15.97	13.91	16.37	15.69	15.34	15.55
15.15	14.17	13.69	15.69	15.57	14.83	14.85
13.99	14.07	13.42	15.33	15.20	13.73	14.29
13.93	13.09	13.24	15.24	14.55	13.59	13.94
13.34	12.58	13.08	13.90	13.80	12.15	13.14
14.49	13.97	13.47	15.31	14.96	13.93	

ಅಂತರಂಡಗಳು (ಅನೋವ)			
ವಿಘ್-ಬೆಸ್ಟ್	ಎಸ್‌ಇಎಂ±	ಎಸ್‌ಇಡಿ±	ಸಿ.ಡಿ. 5%
*	0.118	0.168	0.336
*	0.108	0.153	0.307
*	0.265	0.375	0.751

ಕೋಷ್ಟಕ 7: ಆಯುರ್ವೇದ ಔಷಧಿಗಳ ಮಿಶ್ರಣದಿಂದ ಪ್ರಭಾವಗೊಂಡ ಸದೃಢ ರೆಡ್ಕೆಮಲು ತಳಿಗಳ ಜೀವ-ರಾಸಾಯನಿಕಗಳ ಸಂಯೋಜನೆ

ಆಯುರ್ವೇದ ಔಷಧಿಗಳು (ಅ)	ಅಲನೈನ್ ಅಮೈನೋ ಟ್ರಾನ್ಸ್‌ಫರೇಸ್						
	ರೆಡ್ಕೆಮಾಮಿನ ತಳಿಗಳು (ಬ)						
	ಸಿಎಸ್‌ಆರ್46	ಸಿಎಸ್‌ಆರ್47	ಸಿಎಸ್‌ಆರ್50	ಸಿಎಸ್‌ಆರ್51	ಜೆನ್1	ಜೆನ್3	ಸರಾಸರಿ
1. ಅಧಮಪಿಷ್ಟಾದಿ	115.3	122.9	125.7	126.4	125.4	125.1	123.5
2. ಅರವಿಂದಾಸವ	112.2	119.6	122.6	125.1	121.9	117.3	119.8
3. ದಶಮೂಲಿಘೃತ	107.2	115.8	112.0	124.6	119.3	114.3	115.5
4. ಶೋಧಿತ ನೀರು	104.9	109.2	105.1	121.9	117.3	112.5	111.8
5. ಉಷಾದಿಮಲ್ಲಿಕ	101.8	104.9	101.1	115.5	109.9	108.7	107.0
ಸರಾಸರಿ	108.3	114.5	113.3	122.7	118.8	115.6	

ಹೋಲಿಕೆ ಮಾಡಿದವರು	ಅಂತರಂಡಗಳು(ಅನೋವ)			
	ವಿಘ್-ಬೆಸ್ಟ್	ಎಸ್‌ಇಎಂ±	ಎಸ್‌ಇಡಿ±	ಸಿ.ಡಿ. 5%
ಅ	*	2.462	3.481	6.981
ಬ	*	2.247	3.178	6.373
ಅ x ಬ	--	5.505	7.785	NS

ಆಸ್ಪರ್ಟೇಟ್ ಅಮೈನೋ ಟ್ರಾನ್ಸ್‌ಫರೇಸ್						
ರೆಡ್ಕೆಮಾಮಿನ ತಳಿಗಳು (ಬ)						
ಸಿಎಸ್‌ಆರ್46	ಸಿಎಸ್‌ಆರ್47	ಸಿಎಸ್‌ಆರ್50	ಸಿಎಸ್‌ಆರ್51	ಜೆನ್1	ಜೆನ್3	ಸರಾಸರಿ
199.9	217.8	218.9	225.2	223.3	224.7	218.3
196.0	206.8	196.1	220.6	216.4	218.9	209.1
191.9	198.3	189.7	218.6	200.4	214.2	202.2
187.0	184.8	184.5	217.8	193.0	206.0	195.5
165.8	183.1	177.1	184.2	192.2	195.0	182.9
188.1	198.2	193.3	213.3	205.1	211.8	

ಅಂತರಂಡಗಳು (ಅನೋವ)			
ವಿಘ್-ಬೆಸ್ಟ್	ಎಸ್‌ಇಎಂ±	ಎಸ್‌ಇಡಿ±	ಸಿ.ಡಿ. 5%
*	3.267	4.621	9.266
*	2.983	4.218	8.459
--	7.306	10.333	NS

ಕೋಷ್ಟಕ 8: ಆಯುರ್ವೇದ ಔಷಧಿಗಳ ಮಿಶ್ರಣದಿಂದ ಪ್ರಭಾವಗೊಂಡ ಸದೃಢ ರೆಪ್ಟೆಮುಲು ತಳಿಗಳ ಜೀವ-ರಾಸಾಯನಿಕಗಳ ಸಂಯೋಜನೆ

ಆಯುರ್ವೇದ ಔಷಧಿಗಳು (ಅ)	ಪ್ರೋಟಿಯೋಮ್						
	ರೆಪ್ಟೆಮುಲಿನ ತಳಿಗಳು (ಬ)						
	CSR_{46}	CSR_{47}	CSR_{50}	CSR_{51}	ಜೆನ್$_2$	ಜೆನ್$_3$	ಸಾಮಾನ್ಯ
1. ಅಭಯಾಹಿಷ್ಟಮ್	15.70	17.19	17.44	17.80	17.21	17.51	17.14
2. ಅರವಿಂದಾಸವಮ್	15.18	16.64	15.53	17.08	16.89	16.42	16.29
3. ದ್ರಾಕ್ಷಾರಿಷ್ಟಮ್	14.78	15.36	15.43	16.96	16.85	15.68	15.84
4. ಹೊದ್ರಿಸದ ನೀರು	14.65	14.69	14.32	16.89	16.15	15.38	15.35
5. ಉಪಚಾರವಿಲ್ಲದ	13.71	14.43	13.70	15.38	15.34	14.65	14.53
ಸಾಮಾನ್ಯ	14.81	15.66	15.29	16.82	16.49	15.93	

ಹೋಲಿಕೆ ಮಾಡಿದಾಗ	ಅಂಕಿಅಂಶಗಳು (ಅನೋವಾ)			
	ಎಫ್-ಟೆಸ್ಟ್	ಎಸ್.ಇಎಂ±	ಎಸ್.ಇಡಿ±	ಸಿ.ಡಿ. 5%
ಅ	*	0.099	0.140	0.280
ಬ	*	0.090	0.127	0.255
ಅ x ಬ	*	0.221	0.312	0.626

ಸಾವಯವ ಕೃಷಿ ಪದ್ಧತಿಯಲ್ಲಿ ಆಧುನಿಕತೆ

ಡಾ.ಪದ್ಮಿನಿ ಎಸ್.ವಿ
ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ ಮತ್ತು ಸಂಶೋಧನೆ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
Email: sugoormuth@gmail.com

ಸಾವಯವ ಕೃಷಿಯು ಕೃಷಿಯ ಒಂದು ರೂಪವಾಗಿದ್ದು ಇದು ತಾಂತ್ರಿಕ ಅಂಶಗಳಾದ ಪರ್ಯಾಯ ಬೆಳೆ, ಹಸಿರೆಲೆಗೊಬ್ಬರ, ದನದ ಸಗಣಿ ಮತ್ತು ಜೈವಿಕ ಕೀಟನಾಶಕಗಳನ್ನು ಒಳಗೊಂಡಿದೆ. ಸಾವಯವ ಕೃಷಿಯಲ್ಲಿ ರಸಗೊಬ್ಬರಗಳು, ಕೀಟನಾಶಕಗಳು ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಇದು ರಾಸಾಯನಿಕ ಗೊಬ್ಬರಗಳನ್ನು ಒಳಗೊಳ್ಳುವುದಿಲ್ಲ.

ಸಾವಯವ ಕೃಷಿಯು ಜೀವಿಪರಿಸ್ಥಿತಿ ಉತ್ಪಾದನಾ ನಿರ್ವಹಣಾ ವ್ಯವಸ್ಥೆಯಾಗಿದ್ದು, ಇದು ಪ್ರಬೇಧ ವೈವಿಧ್ಯತೆ, ಜೈವಿಕ ಆವರ್ತಗಳು ಮತ್ತು ಜೈವಿಕ ಕ್ರಿಯೆಗಳನ್ನು ತನ್ನಲ್ಲಿ ಒಳಗೊಂಡಿರುತ್ತದೆ. ಇದು ಜೀವಿ ಪರಿಸ್ಥಿತಿಯ ಸಾಮರಸ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತದೆ.

ಈ ಅಧ್ಯಯನವು ಪ್ರತ್ಯೇಕ ಉದ್ದೇಶಗಳನ್ನು ಹೊಂದಿದೆ. ಭಾರತದಲ್ಲಿ ವಿವಿಧ ಬೆಳೆಗಳ ವಿಧಗಳಲ್ಲಿ ಕೃಷಿ ಉತ್ಪನ್ನಗಳನ್ನು ಅಧ್ಯಯನ ಮಾಡುವ ಸಲುವಾಗಿ, ಕೃಷಿ ಉತ್ಪನ್ನಗಳಲ್ಲಿ ವಯಕ್ತಿಕ ಬೆಳೆಗಳನ್ನು ವಿಶ್ಲೇಷಿಸುವ ಸಲುವಾಗಿ, ಅಕ್ಕಿಯನ್ನು ಆಹಾರವಾಗಿ ಅನುಭೋಗ ಮಾಡುವ ರಾಷ್ಟ್ರಗಳನ್ನು ಪರೀಕ್ಷಿಸುವ ಸಲುವಾಗಿ, ಪ್ರಮುಖವಾದ ಬೆಳೆಗಳ ಆರ್ಥಿಕ ಮೌಲ್ಯವನ್ನು ಪರೀಕ್ಷಿಸುವ ಸಲುವಾಗಿ, ಭಾರತದಲ್ಲಿ ಕೃಷಿ ಉತ್ಪಾದಕತೆಯನ್ನು ಪರೀಕ್ಷಿಸುವ ಸಲುವಾಗಿ, 1970 ರಿಂದ 2010 ರವರೆಗೆ ಸರಾಸರಿ ಇಳುವರಿಯ ಬೆಳೆವಣಿಗೆ ಪಂಜಾಬ್, ಬಿಹಾರ ಮತ್ತು ಕರ್ನಾಟಕಗಳಲ್ಲಿ ಸರಾಸರಿ ಕೃಷಿಯ ಇಳುವರಿಯನ್ನು ಪರೀಕ್ಷಿಸುವ ಸಲುವಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಅಧ್ಯಯನವನ್ನು ನಿಯತಕಾಲಿಕೆಗಳು, ವರದಿಗಳು ಮತ್ತು ಅಂತರ್ಜಾಲದ ಸಹಾಯದಿಂದ ಮಾಧ್ಯಮಿಕ ಅಂಕಿ ಅಂಶಗಳ ಸಹಾಯದಿಂದ ಕೈಗೊಳ್ಳಲಾಗಿದೆ. ಈ ಅಧ್ಯಯನವು ವಿಶ್ಲೇಷಣಾತ್ಮಕವಾದದ್ದಾಗಿದೆ.

ಸಾವಯವ ಕೃಷಿಯು ಅಮೂಲಾಗ್ರವಾದ ಉತ್ಪಾದನಾ ನಿರ್ವಹಣಾ ವ್ಯವಸ್ಥೆಯಾಗಿದ್ದು, ಕೃಷಿ ಜೀವಿ ಪರಿಸ್ಥಿತಿಯ ಆರೋಗ್ಯ, ಪ್ರಬೇಧ ವೈವಿಧ್ಯ, ಜೀವಿಶಾಸ್ತ್ರೀಯ ವರ್ತುಲಗಳು ಮತ್ತು ಮಣ್ಣಿನ ಜೀವಿಶಾಸ್ತ್ರೀಯ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಇದು ನಿರ್ವಹಣಾ ಪದ್ಧತಿಗಳ ಬಳಕೆ, ಕೃಷಿ ಹೂಡುವಳಿ (ಆದಾನಗಳ) ಬಳಕೆ, ಪ್ರಾಂತೀಯ ಪರಿಸ್ಥಿತಿಗಳು ಸ್ಥಳೀಯ ಪದ್ಧತಿಗಳ ಅಳವಡಿಕೆಯನ್ನು ಅಪೇಕ್ಷಿಸುತ್ತದೆ. ಇದು ಕೃಷಿ ಸಾಗುವಳಿ ಸಂಬಂಧಿ, ಜೀವಶಾಸ್ತ್ರೀಯ ಮತ್ತು ಯಾಂತ್ರಿಕ ವಿಧಾನಗಳನ್ನು ವ್ಯವಸ್ಥೆಯೊಳಗೆ ಒಂದು ಪ್ರತ್ಯೇಕವಾದ ಕಾರ್ಯ ಚಟುವಟಿಕೆಯನ್ನು ಈಡೇರಿಸುವ ಸಲುವಾಗಿ ಕೃಷಿ ಭೂಮಿಗೆ ಹಾನಿಯನ್ನುಂಟು ಮಾಡುವ ಕೃಷಿ ಪದ್ಧತಿಯನ್ನು (ರಾಸಾಯನಿಕ ರಸಗೊಬ್ಬರಗಳು ಇತ್ಯಾದಿ) ಪ್ರತಿಬಂಧಿಸುತ್ತದೆ.

'ಸಾವಯವ ಕೃಷಿ' ಎಂಬ ಪರಿಕಲ್ಪನೆಯನ್ನು ಮೊಟ್ಟಮೊದಲ ಬಾರಿಗೆ ಲಾರ್ಡ್ ನಾರ್ತ್‌ಬೋರ್ನ್ ಎನ್ನುವವರು 'ಲುಕ್ ಟು ದಿ ಲ್ಯಾಂಡ್'

ಎಂಬ ತಮ್ಮ ಪುಸ್ತಕದಲ್ಲಿ ಪ್ರಥಮ ಬಾರಿಗೆ ನಮೂದಿಸಿರುವುದನ್ನು ಕಾಣಬಹುದಾಗಿದೆ. (ಲಂಡನ್ ಡೆಂಟ್, 1940). ಸಾವಯವ ಕೃಷಿಯು ಜೆ.ಜೆ.ರೊಡಾಲೆ ಎಂಬುವವರಿಂದ ಮೊದಲ ಬಾರಿಗೆ ಯಶಸಿಯಾಗಿ 1940ರ ಮಧ್ಯಭಾಗದಲ್ಲಿ ಆಚರಣೆಗೆ ಬಂದಿತು. ಸಾವಯವ ಕೃಷಿಕ ಮತ್ತು ತೋಟದ ಸಂರಕ್ಷಣೆ ಮಾಡುವವರು ಗೊಬ್ಬರವೊಂದೇ ಯಶಸ್ಸಿಗೆ ಕಾರಣವಾದ ಅಂಶವಲ್ಲ ಎಂಬುದನ್ನು ಮನಗಾಣಬೇಕಿದೆ. ಅವರು ಮಣ್ಣನ್ನು ಉಸಿರಾಟ ನಡೆಸುವ ಒಂದು ಅಂಶವಾಗಿ ಪರಿಗಣಿಸಬೇಕು. ಅವರು ಬೆಳೆಯನ್ನು ಪರ್ಯಾಯವಾಗಿ ಬಳಕೆ ಮಾಡಬೇಕು. ಅವರು ಕ್ರಮಬದ್ಧವಾಗಿ, ನಿರಂತರವಾಗಿ ಸಮಯದ ಅಂತರ ಕೊಟ್ಟು ಸಾಗುವಳಿ ಮಾಡಬೇಕು. ಸಾವಯವ ಕೃಷಿಕರು ಒಂದು ಬೆಳೆಯನ್ನು ಬೆಳೆಯುವ ಬದಲಾಗಿ ಕೃಷಿ ಚಟುವಟಿಕೆ ಮತ್ತು ಹಸು (ಪಶು ಸಂಗೋಪನೆ)ಯೊಂದಿಗೆ ಸಾಮಾನ್ಯ ಕಾರ್ಯಕ್ರಮದ ಸಮತೋಲನ ಕೃಷಿಯಲ್ಲಿ ತೊಡಗಿಕೊಳ್ಳಬೇಕು. ಅವರು ಮಣ್ಣು ಮತ್ತು ಬೆಳೆಗಳ ವಿಧಾನಗಳ ಬಗ್ಗೆ ಹೆಚ್ಚಿನ ತಿಳುವಳಿಕೆ (ಅರಿವನ್ನು) ಹೊಂದಿರಬೇಕು. ಮಾನವನ ಪ್ರಯತ್ನಗಳಿಗೆ ಕೃಷಿಭೂಮಿಯನ್ನೂ ಕೈಗೊಳ್ಳಬೇಕು, ಯಾವಾಗ ಕೊಯಿಲು ಮಾಡಬೇಕು ಮತ್ತು ಯಾವ ವಿಧವಾದ ಬೀಜಗಳನ್ನು ಉಪಯೋಗಿಸಬೇಕು ಎಂಬುದರ ಬಗೆಗೆ ಸಂಪೂರ್ಣ ಜ್ಞಾನ ಹೊಂದಿರಬೇಕು. ಕಾಂಪೋಸ್ಟ್ ಒಂದೇ ಕೃಷಿಕರನ್ನು ಯಶಸ್ವಿಯುತವಾದ ಬೆಳೆಗಾರರನ್ನಾಗಿ ಮಾಡುವುದಿಲ್ಲ, ಆದರೆ, ಕಾಂಪೋಸ್ಟ್ ಇಲ್ಲದೆಯೂ ಸಾಗುವಳಿಯನ್ನು ಮಾಡಬಹುದಾಗಿದೆ. (ದಿ ಆರ್ಗಾನಿಕಲ್ಚರಿಸ್ಟ್ ಕ್ರೀಡ್, ದಿ ಆರ್ಗಾನಿಕ್ ಫ್ರಂಟ್‌ದಲ್ಲಿ, ಅಧ್ಯಾಯ 8, (ಎಮ್ಮುಸ್. ದಿ.ಎ.ರೊಡಾಲೆ ಪ್ರೆಸ್, 1948), ಸಾವಯವ ಕೃಷಿ ಎಂದರೆ ವೈಜ್ಞಾನಿಕ ರೀತಿಯ ಸಾಗುವಳಿ ಕ್ರಮವಾಗಿದೆ. ಸಾವಯವ ಕೃಷಿಯು ಒಂದು ಉತ್ಪಾದನಾ ವಿಧಾನವಾಗಿದ್ದು ರಾಸಾಯನಿಕ ರಸಗೊಬ್ಬರಗಳನ್ನು, ಕ್ರಿಮಿಕೀಟನಾಶಕಗಳನ್ನು ಹೊರತಾಗಿಸಿರುತ್ತದೆ. ಸಾವಯವ ಕೃಷಿಯು ಬೆಳೆ ಪರ್ಯಾಯ, ಉಳಿದಿರುವ ಬೆಳೆ, ಪ್ರಾಣಿಗಳ ಗೊಬ್ಬರಗಳನ್ನು, ಹಸಿರೆಲೆ ಗೊಬ್ಬರಗಳನ್ನು, ಸಾವಯವ ತ್ಯಾಜ್ಯಗಳನ್ನು ಯಾಂತ್ರಿಕ ಸಾಗುವಳಿ, ಖನಿಜಾಂಶ ಹೊಂದಿರುವ ಬಂಡೆಗಳನ್ನು ಮತ್ತು ಜೀವಿಶಾಸ್ತ್ರೀಯ ಕೀಟನಾಶಕಗಳನ್ನು ಮಣ್ಣಿನ ಉತ್ಪಾದಕತೆಯನ್ನು ಮತ್ತು ಸಸ್ಯ ಸಂರಕ್ಷಣ ಪೋಷಕಾಂಶಗಳ ನೀಡಿಕೆ ಮತ್ತು ಕಳೆಗಳು ಮತ್ತು ಕೀಟಗಳು ಮತ್ತು ರೋಗಗಳ ನಿಯಂತ್ರಣಕ್ಕೆ ಉಪಯೋಗಿಸಲಾಗುತ್ತದೆ. (ಯು ಎಸ್ ಡಿ ಎ ಅಧ್ಯಯನ, ಸಾವಯವ ಕೃಷಿಯ ತಂಡ). ಸಾವಯವ ಕೃಷಿಯು ಜೀವಿ ಪರಿಸ್ಥಿತಿಯ ಉತ್ಪಾದನಾ ನಿರ್ವಹಣಾ ವ್ಯವಸ್ಥೆಯಾಗಿದ್ದು, ಇದು ಜೀವಿ ವೈವಿದ್ಯ, ಜೀವಿಶಾಸ್ತ್ರೀಯ ವರ್ತುಲಗಳು ಮತ್ತು ಮಣ್ಣಿನ ಜೀವಿಶಾಸ್ತ್ರೀಯ ಕಾರ್ಯ ಚಟುವಟಿಕೆಯನ್ನು ಹೆಚ್ಚಿಸುತ್ತದೆ.

ಸಂಶೋಧನಾ ವಿಧಾನ:- ಈ ಅಧ್ಯಯನವು ಪ್ರತ್ಯೇಕ ಉದ್ದೇಶಗಳನ್ನು ಹೊಂದಿದೆ. ಭಾರತದಲ್ಲಿ ವಿವಿಧ ಬೆಳೆಗಳ ವಿಧಗಳಲ್ಲಿ ಉನ್ನತ ಮಟ್ಟದ ಕೃಷಿ ಉತ್ಪನ್ನಗಳನ್ನು ಅಧ್ಯಯನ ಮಾಡುವ ಸಲುವಾಗಿ, ಕೃಷಿ ಉತ್ಪನ್ನಗಳಲ್ಲಿ ವಯಕ್ತಿಕ ಬೆಳೆಗಳನ್ನು ವಿಶ್ಲೇಷಿಸುವ ಸಲುವಾಗಿ, ಅಕ್ಕಿಯನ್ನು ಆಹಾರವಾಗಿ ಅನುಭೋಗ ಮಾಡುವ ರಾಷ್ಟ್ರಗಳನ್ನು ಪರೀಕ್ಷಿಸುವ ಸಲುವಾಗಿ, ಪ್ರಮುಖವಾದ ಬೆಳೆಗಳ ಆರ್ಥಿಕ ಮೌಲ್ಯವನ್ನು ಪರೀಕ್ಷಿಸುವ ಸಲುವಾಗಿ, ಭಾರತದಲ್ಲಿ ಕೃಷಿ ಉತ್ಪಾದಕತೆಯನ್ನು ಪರೀಕ್ಷಿಸುವ ಸಲುವಾಗಿ, 1970 ರಿಂದ 2010 ರವರೆಗೆ ಸರಾಸರಿ ಇಳುವರಿಯ ಬೆಳೆವಣಿಗೆ, ಪಂಜಾಬ್, ಬಿಹಾರ್, ಕರ್ನಾಟಕಗಳಲ್ಲಿ ಸರಾಸರಿ ಕೃಷಿಯ ಇಳುವರಿಯನ್ನು ಪರೀಕ್ಷಿಸುವ ಸಲುವಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಅಧ್ಯಯನವನ್ನು ನಿಯತಕಾಲಿಕೆಗಳು, ವರದಿಗಳು ಮತ್ತು ಅಂತರ್ಜಾಲದ ಸಹಾಯದಿಂದ ಮಾಧ್ಯಮಿಕ ಅಂಕಿ ಅಂಶಗಳ ಸಹಾಯದಿಂದ ಕೈಗೊಳ್ಳಲಾಗಿದೆ. ಈ ಅಧ್ಯಯನವು ವಿಶ್ಲೇಷಣಾತ್ಮಕವಾದದ್ದಾಗಿದೆ.

ಭಾರತದಲ್ಲಿ ಕೃಷಿ ಉತ್ಪನ್ನಗಳ ಉತ್ಪಾದನೆಯು ವಿಕದಳ ಧಾನ್ಯಗಳ ಉತ್ಪಾದನೆಯಲ್ಲಿ ಅತ್ಯಧಿಕವಾಗಿದ್ದು, ಅನಂತರದ ಸ್ಥಾನದಲ್ಲಿ ತರಕಾರಿಗಳು ಮತ್ತು ಮೆಲಾನ್ಸ್, ಬೇರುಗಳು, ಗೆಡ್ಡೆಗಳು, ಹಾಲು, ಹಣ್ಣು, ಮಾಂಸ, ಎಣ್ಣೆಕಾಳು, ನಾರಿನ ತರಕಾರಿಗಳು ಈ ಕ್ರಮಾನುಗತಿಯಲ್ಲಿವೆ [ಭಾರತದಲ್ಲಿ ವಿವಿಧ ಬೆಳೆ ವಿಧಗಳಲ್ಲಿ ಕೃಷಿ ಉತ್ಪನ್ನಗಳು (ಮಿಲಿಯನ್ ಟನ್‌ಗಳಲ್ಲಿ),2004ರ ಅಂಕಿಅಂಶ).

'ಕಬ್ಬಿನ ಉತ್ಪಾದನೆಯು ಅತೀ ಹೆಚ್ಚಿನ ಪ್ರಮಾಣದಲ್ಲಿದ್ದು, ಅನಂತರದಲ್ಲಿ ಮೆಕ್ಕೆಜೋಳ, ಅಕ್ಕಿ, ಗೋಧಿ, ಆಲೂಗೆಡ್ಡೆ, ಶುಗರ್ ಬೀಟ್, ಸೋಯಾಬೀನ್ಸ್, ಟೊಮೆಟೋ, ಬಾರ್ಲಿ, ಈ ಕ್ರಮಾನುಗತಿಯಲ್ಲಿದೆ(ವಯಕ್ತಿಕ ಬೆಳೆಗಳ ಕೃಷಿ ಉತ್ಪನ್ನಗಳು,(ಮಿಲಿಯನ್ ಟನ್) 2011ರ ಅಂಕಿಅಂಶಗಳು, ಮೂಲ: ಆಹಾರ ಮತ್ತು ಕೃಷಿ ಸಂಘಟನೆ (ಎಫ್ ಎ ಒ).

ಪಟ್ಟಿ 1 2009ರಲ್ಲಿ ರಾಷ್ಟ್ರಗಳಲ್ಲಿ ಅಕ್ಕಿ ಆಹಾರದ ಅನುಭೋಗ. (ಭತ್ತಕ್ಕೆ ಸರಿಹೊಂದುವಂತೆ ಮಿಲಿಯನ್ ಮೆಟ್ರಿಕ್ ಟನ್‌ಗಳಲ್ಲಿ)

ರಾಷ್ಟ್ರ	ಅಕ್ಕಿಯ ಅನುಭೋಗ (ಭತ್ತಕ್ಕೆ ಸರಿಹೊಂದುವಂತೆ ಮಿಲಿಯನ್ ಮೆಟ್ರಿಕ್ ಟನ್‌ಗಳಲ್ಲಿ
ಪ್ರಪಂಚದ ಒಟ್ಟು	531.6
ಚೈನಾ	156.3
ಭಾರತ	123.5
ಇಂಡೋನೇಶಿಯಾ	45.3
ಬಾಂಗ್ಲಾದೇಶ	38.2
ವಿಯಟ್ನಾಂ	18.4
ಪಿಲಿಫೈನ್ಸ್	17.0
ಥೈಲ್ಯಾಂಡ್	13.7
ಜಪಾನ್	10.2
ಬರ್ಮಾ	10.0
ಬ್ರೆಜಿಲ್	10.0
ದಕ್ಷಿಣ ಕೊರಿಯಾ	5.8
ನೈಜೀರಿಯಾ	4.8
ಈಜಿಪ್ಟ್	4.6
ಪಾಕಿಸ್ತಾನ	4.3
ಯು ಎಸ್ ಎ	3.8
ನೇಪಾಳ	3.5
ಕಾಂಬೋಡಿಯ	3.4
ಮಡಗಾಸ್ಕರ್	3.2
ಶ್ರೀಲಂಕಾ	3.2
ಮಲೇಶಿಯಾ	3.1
ಉತ್ತರ ಕೊರಿಯಾ	2.8

ಮೂಲ: ಆಹಾರ ಮತ್ತು ಕೃಷಿ ಸಂಘಟನೆ (ಎಫ್ ಎ ಒ)

ಅಕ್ಕಿ ಉತ್ಪಾದನೆಯು ಚೈನಾದಲ್ಲಿ ಅತ್ಯಧಿಕವಾಗಿದ್ದು, ಅನಂತರದಲ್ಲಿ ಭಾರತ, ಇಂಡೋನೇಶಿಯಾ, ವಿಯಟ್ನಾಂ, ಥೈಲ್ಯಾಂಡ್, ಬಾಂಗ್ಲಾದೇಶ, ಬರ್ಮಾ, ಪಿಲಿಫೈನ್ಸ್, ಬ್ರೆಜಿಲ್, ಜಪಾನ್, ಪಾಕಿಸ್ತಾನ, ಕಾಂಬೋಡಿಯ, ಅಮೇರಿಕಾ, ದಕ್ಷಿಣ ಕೊರಿಯಾ, ಈಜಿಪ್ಟ್, ನೇಪಾಳ, ನೈಜಿರಿಯಾ, ಮೆಡಗಾಸ್ಕರ್, ಶ್ರೀಲಂಕಾ ಮತ್ತು ಲಾವೋಸ್ ಈ ಕ್ರಮಾನುಗತಿಯಲ್ಲಿವ (ಮೂಲ: ಆಹಾರ ಮತ್ತು ಕೃಷಿ ಸಂಘಟನೆ (ಎಫ್ ಎ ಒ).

ಪಟ್ಟಿ 2 ಭಾರತದಲ್ಲಿ ಕೃಷಿ, ಪ್ರಮುಖ ಬೆಳೆಗಳಲ್ಲಿ ಆರ್ಥಿಕ ಮೌಲ್ಯ

ಶ್ರೇಣಿ (ರ್ಯಾಂಕ್)	ಉತ್ಪನ್ನ	(2009ರಲ್ಲಿ ಬೆಲೆಗಳಲ್ಲಿ ಯುಎಸ್ ಡಾಲರ್‌ಗಳಲ್ಲಿ)	ಆರ್ಥಿಕ ಮೌಲ್ಯ (ಯುಎಸ್ ಡಾಲರ್ ಕಿಲೋಗ್ರಾಂ)	ಘಟಕ ಬೆಲೆ	ಸರಾಸರಿ ಇಳುವರಿ ಭಾರತ (2010)	ಪ್ರಪಂಚದ ಅತೀ ಹೆಚ್ಚಿನ ಉತ್ಪಾದಕತೆ ಹೊಂದಿದ ಕೃಷಿ ಭೂಮಿಗಳು (2010)
1	ಅಕ್ಕಿ	$38.42 ಬಿಲಿಯನ್	0.27	3.3	10.8	ಆಸ್ಟ್ರೇಲಿಯಾ
2	ಬಫೆಲೋ ಹಾಲು	$24.86 ಬಿಲಿಯನ್	0.4	1.7	1.9	ಪಾಕಿಸ್ತಾನ
3	ಹಸುವಿನ ಹಾಲು	$17.13 ಬಿಲಿಯನ್	0.31	1.2	10.3	ಇಸ್ರೇಲ್
4	ಗೋಧಿ	$12.14 ಬಿಲಿಯನ್	0.15	2.8	8.9	ನೆದರ್ ಲ್ಯಾಂಡ್ಸ್
5	ಮಾವಿನ ಹಣ್ಣು	%9 ಬಿಲಿಯನ್	0.6	6.3	40.6	ಕೇಪ್‌ವರ್ದ್
6	ಕಬ್ಬು	$8.92 ಬಿಲಿಯನ್	0.03	66	125	ಪೆರು
7	ಬಾಳೆಹಣ್ಣುಗಳು	$8.38 ಬಿಲಿಯನ್	0.28	37.8	59.3	ಇಂಡೋನೇಶಿಯಾ
8	ಹತ್ತಿ	$8.13 ಬಿಲಿಯನ್	1.43	1.6	4.6	ಇಸ್ರೇಲ್
9	ತಾಜಾ ತರಕಾರಿಗಳು	$5.97 ಬಿಲಿಯನ್	0.19	13.4	76.8	ಯುಎಸ್‌ಎ
10	ಆಲೂಗೆಡ್ಡೆ	$5.67 ಬಿಲಿಯನ್	0.15	19.9	44.3	ಯುಎಸ್‌ಎ
11	ಟೊಮೆಟೋ	$4.59 ಬಿಲಿಯನ್	0.37	19.3	524.9	ಬೆಲ್ಜಿಯಂ
12	ಬಫೆಲೋ ಮಾಂಸ	$4 ಬಿಲಿಯನ್	2.69	0.138	0.424	ಥೈಲ್ಯಾಂಡ್
13	ಸೋಯಾಬೀನ್	$3.33 ಬಿಲಿಯನ್	0.26	1.1	3.7	ಟರ್ಕಿ
14	ಈರುಳ್ಳಿ	$3.17 ಬಿಲಿಯನ್	0.21	16.6	67.3	ಐರ್ಲಾಂಡ್
15	ಚಿಕನ್ ಮಾಂಸ	$3.12 ಬಿಲಿಯನ್	0.64	10.6	20.2	ಸೈಪ್ರಸ್
16	ಚಿಕ್‌ಪೀಸ್	$3.11 ಬಿಲಿಯನ್	0.4	0.9	2.8	ಚೈನಾ
17	ಓಕ್ರಾ	$3.07 ಬಿಲಿಯನ್	0.35	7.6	23.9	ಇಸ್ರೇಲ್
18	ದನದ ಮಾಂಸ	$2.93 ಬಿಲಿಯನ್	2.7	0.1	0.42	ಜೋರ್ಡಾನ್
19	ಮೊಟ್ಟೆಗಳು	$2.80 ಬಿಲಿಯನ್	2.7	0.1	0.42	ಜಪಾನ್
20	ಬೀನ್ಸ್	$2.57 ಬಿಲಿಯನ್	0.42	1.1	5.5	ನಿಕಾರಗುವಾ

ಮೂಲ: ಆಹಾರ ಮತ್ತು ಕೃಷಿ ಸಂಘಟನೆ (ಎಫ್ ಎ ಒ)

ಈ ಮೇಲಿನ ಪಟ್ಟಿಯಲ್ಲಿ ನಮೂದಿಸಿರುವಂತೆ ಅಕ್ಕಿಯ ಬೆಲೆಯು ಅತೀ ಹೆಚ್ಚಿನದಾಗಿದೆ. ಬಫೆಲೋ ಹಾಲು, ಹಸುವಿನ ಹಾಲು, ಗೋಧಿ, ಮಾವಿನಹಣ್ಣು, ಕಬ್ಬು, ಬಾಳೆಹಣ್ಣು, ಹತ್ತಿ, ತಾಜಾ ತರಕಾರಿಗಳು, ಆಲೂಗೆಡ್ಡೆಗಳು, ಟೊಮೆಟೋ, ಬಫೆಲೋ ಮಾಂಸ, ಸೋಯಾಬೀನ್, ಈರುಳ್ಳಿ, ಕೋಳಿಮಾಂಸ, ಚಿಕ್‌ಪೀಸ್, ಓಕ್ರಾ, ದನದ ಮಾಂಸ, ಮೊಟ್ಟೆಗಳು ಮತ್ತು ಬೀನ್ಸ್ ಈ ಕ್ರಮಾನುಗತಿಯಲ್ಲಿವೆ.

ಇದರ ಜೊತೆಗೆ ಕಬ್ಬಿನ ಬೆಲೆಯು ಅತೀ ಹೆಚ್ಚಿನದಾಗಿದೆ, ಅನಂತರದಲ್ಲಿ ಬಾಳೆಹಣ್ಣು, ಆಲೂಗೆಡ್ಡೆ, ಟೊಮೆಟೋ, ಈರುಳ್ಳಿ, ದನದ ಮಾಂಸ, ಚಿಕನ್ ಮಾಂಸ, ಓಕ್ರಾ, ಮಾವಿನಹಣ್ಣು, ಅಕ್ಕಿ, ಗೋಧಿ, ಬಫೆಲೋ ಹಾಲು, ಹತ್ತಿ, ದನದ ಹಾಲು, ಸೋಯಾಬೀನ್, ಬೀನ್ಸ್, ಚಿಕ್‌ಪೀಸ್ ಮತ್ತು ಮೊಟ್ಟೆಗಳು ಈ ಕ್ರಮಾನುಗತಿಯಲ್ಲಿವೆ.

ಇದರ ಜೊತೆಗೆ ಸರಾಸರಿ ಇಳುವರಿಗೆ ಸಂಬಂಧಿಸಿದಂತೆ ಟೊಮೆಟೋ ಇಳುವರಿಯು ಅತ್ಯಧಿಕವಾಗಿದ್ದು ಇದರ ಅನಂತರದಲ್ಲಿ ಕಬ್ಬು, ತಾಜಾ ತರಕಾರಿಗಳು, ಮಾವಿನಹಣ್ಣು, ಈರುಳ್ಳಿ, ಬಾಳೆಹಣ್ಣುಗಳು, ಆಲೂಗೆಡ್ಡೆ, ದನದ ಮಾಂಸ, ಓಕ್ರಾ, ಕೋಳಿ ಮಾಂಸ, ಅಕ್ಕಿ, ಹಸುವಿನ ಹಾಲು, ಗೋಧಿ, ಬೀನ್ಸ್, ಹತ್ತಿ, ಸೋಯಾಬೀನ್, ಚಿಕ್‌ಪೀಸ್, ಬಫೆಲೋ ಹಾಲು, ಬಫೆಲೋ ಮಾಂಸ ಮತ್ತು ಮೊಟ್ಟೆಗಳು ಈ ಕ್ರಮಾನುಗತಿಯಲ್ಲಿವೆ. ಇದರ ಜೊತೆಗೆ ವಿವಿಧ ಬೆಳೆಗಳಿಗೆ ಸಂಬಂಧಿಸಿದಂತೆ ಅತೀ ಹೆಚ್ಚಿನ ಉತ್ಪಾದಕತೆಯನ್ನು ಹೊಂದಿರುವ ಕೃಷಿ ಭೂಮಿಗಳೆಂದರೆ, ಆಸ್ಟ್ರೇಲಿಯಾವು ಅತೀ ಹೆಚ್ಚಿನ ಅಕ್ಕಿ ಉತ್ಪಾದನೆಯ ಕೃಷಿ ಭೂಮಿಯನ್ನು ಹೊಂದಿದೆ. ಪಾಕಿಸ್ತಾನವು ಅತೀ ಹೆಚ್ಚಿನ ಬಫೆಲೋ ಹಾಲಿನ ಉತ್ಪಾದನೆ ಮಾಡುವ ರಾಷ್ಟ್ರವಾಗಿದ್ದು, ನೆದರ್‌ಲ್ಯಾಂಡ್ಸ್ ಅತೀ ಹೆಚ್ಚಿನ ಗೋಧಿ ಉತ್ಪಾದನೆ ಮಾಡುವುದಾಗಿದ್ದು, ಕೇಪ್‌ವರ್ದ್ ಅತೀ ಹೆಚ್ಚಿನ ಮಾವಿನ ಉತ್ಪಾದನೆಯನ್ನು,

ಪೆರು ಕಬ್ಬಿನ ಉತ್ಪಾದನೆಯಲಿ ಅತೀ ಹೆಚ್ಚಿನ ಉತ್ಪಾದಕತೆಯನ್ನು, ಇಂಡೋನೇಶಿಯಾ ಅತೀ ಹೆಚ್ಚಿನ ಬಾಳೆಹಣ್ಣಿನ ಉತ್ಪಾದನೆಯನ್ನು, ಇಸ್ರೇಲ್ ಅತೀ ಹೆಚ್ಚಿನ ಹತ್ತಿ ಉತ್ಪಾದನೆಯನ್ನು, ಯುಎಸ್‌ಏ ಅತೀ ಹೆಚ್ಚಿನ ತಾಜಾ ತರಕಾರಿ ಮತ್ತು ಆಲೂಗೆಡ್ಡೆ ಉತ್ಪಾದನೆಯನ್ನು, ಥೈಲ್ಯಾಂಡ್ ಅತೀ ಹೆಚ್ಚಿನ ಬಫೆಲೋ ಮಾಂಸವನ್ನು, ಟರ್ಕಿ, ಅತೀ ಹೆಚ್ಚಿನ ಸೋಯಾಬೀನ್ ಉತ್ಪಾದನೆಯನ್ನು, ಐರ್ಲಾಂಡ್ ಅತೀ ಹೆಚ್ಚಿನ ಈರುಳ್ಳಿ ಉತ್ಪಾದನೆಯನ್ನು, ಸೈಪ್ರಸ್ ಅತೀ ಹೆಚ್ಚಿನ ಕೋಳಿ ಮಾಂಸದ ಉತ್ಪಾದನೆಯನ್ನು, ಚೈನಾ ಅತೀ ಹೆಚ್ಚಿನ ಚಿಕ್‌ಪೀಸ್ ಉತ್ಪಾದನೆಯನ್ನು, ಇಸ್ರೇಲ್ ಅತೀ ಹೆಚ್ಚಿನ ಓಕ್ರಾ ಕೃಷಿ ಭೂಮಿಯನ್ನು, ಜೋರ್ಡಾನ್ ಅತೀ ಹೆಚ್ಚಿನ ದನದ ಮಾಂಸದ ಉತ್ಪಾದಕತೆಯನ್ನು, ಜಪಾನ್ ಅತೀ ಹೆಚ್ಚಿನ ಮೊಟ್ಟೆ ಉತ್ಪಾದಕತೆಯನ್ನು ನಿಕಾರಗುವಾ ಪ್ರಪಂಚದ ಅತೀ ಹೆಚ್ಚಿನ ಬೀನ್ಸ್ ಉತ್ಪಾದನೆಯನ್ನು ಹೊಂದಿದೆ.

ಇತರೆ ಜೀವಶಾಸ್ತ್ರೀಯ ಅಂಶಗಳೊಂದಿಗೆ ಬಳಕೆ ಮಾಡುವುದಾಗಿದೆ. ಪರಿಸರಸ್ನೇಹಿ, ಮಾಲಿನ್ಯರಹಿತ ವಾತಾವರಣದಲ್ಲಿ ಬೆಳೆಗಳಿಗೆ ಪೋಷಕಾಂಶಗಳನ್ನು ಒದಗಿಸಿ ಸುಸ್ಥಿರ ಉತ್ಪಾದನೆಯನ್ನು ಹೆಚ್ಚು ಮಾಡುವುದಾಗಿದೆ.

ಸಾವಯವ ಕೃಷಿಯು ವಿಕಪ್ರಕಾರದ ಉತ್ಪಾದನಾ ನಿರ್ವಹಣಾ ವ್ಯವಸ್ಥೆಯಾಗಿದ್ದು, ಕೃಷಿ-ಜೀವಿಪರಿಸ್ಥಿತಿ ಆರೋಗ್ಯವನ್ನು ಹೆಚ್ಚು ಮಾಡುತ್ತದೆ. ಜೀವಿವೈವಿಧ್ಯತೆ, ಜೀವಶಾಸ್ತ್ರೀಯ ವರ್ತುಲಗಳು ಮತ್ತು ಮಣ್ಣಿನ ಜೀವಿಶಾಸ್ತ್ರೀಯ ಕಾರ್ಯಚಟುವಟಿಕೆಗಳು ಇತ್ಯಾದಿಗಳನ್ನು ತನ್ನಲ್ಲಿ ಒಳಗೊಂಡಿರುತ್ತದೆ ಮತ್ತು ರಾಸಾಯನಿಕ ರಸಗೊಬ್ಬರಗಳು ಇತ್ಯಾದಿ ಬಳಕೆಯನ್ನು ಇದು ತನ್ನಲ್ಲಿ ಒಳಗೊಳ್ಳುವುದಿಲ್ಲ. (ಆಹಾರ ಮತ್ತು ಕೃಷಿ ಸಂಘಟನೆ).

ಪಟ್ಟಿ 3 1970 ರಿಂದ 2010 ರವರೆಗೆ ಭಾರತದಲ್ಲಿ ಕೃಷಿ ಉತ್ಪಾದಕತೆ ಮತ್ತು ಸರಾಸರಿ ಇಳುವರಿಯ ಬೆಳವಣಿಗೆ:

ಬೆಳೆ	ಸರಾಸರಿ ಇಳುವರಿ (1970-71) ಪ್ರತೀ ಹೆಕ್ಟೇರ್‌ಗೆ ಕಿಲೋಗ್ರಾಂ	ಸರಾಸರಿ ಇಳುವರಿ (1990-91) ಪ್ರತೀ ಹೆಕ್ಟೇರ್‌ಗೆ ಕಿಲೋಗ್ರಾಂ	ಸರಾಸರಿ ಇಳುವರಿ (2010-11) ಪ್ರತೀ ಹೆಕ್ಟೇರ್‌ಗೆ ಕಿಲೋಗ್ರಾಂ
ಅಕ್ಕಿ	1123	1740	2240
ಗೋಧಿ	1307	2281	2938
ದ್ವಿದಳ ಧಾನ್ಯಗಳು	524	578	689
ಎಣ್ಣೆ ಕಾಳುಗಳು	579	771	1325
ಕಬ್ಬು	48322	65395	68596
ಟೀ	1182	1652	1669
ಹತ್ತಿ	106	225	510

ಈ ಮೇಲಿನ ಪಟ್ಟಿಯಲ್ಲಿ ನಮೂದಿಸಿರುವಂತೆ 1970-71ರಲ್ಲಿ ಸರಾಸರಿ ಇಳುವರಿಯ ಪ್ರಮಾಣವು ಕಬ್ಬಿನ ಉತ್ಪಾದನೆಯಲ್ಲಿ ಗರಿಷ್ಠವಾಗಿದ್ದು, ಗೋಧಿ, ಟೀ, ಅಕ್ಕಿ, ಎಣ್ಣೆಕಾಳುಗಳು, ದ್ವಿದಳಧಾನ್ಯಗಳು ಮತ್ತು ಹತ್ತಿ ಈ ಕ್ರಮಾನುಗತಿಯಲ್ಲಿವೆ. 1990-91ರಲ್ಲಿ ಸರಾಸರಿ ಇಳುವರಿಯ ಪ್ರಮಾಣವು ಕಬ್ಬಿನ ಉತ್ಪಾದನೆಯಲ್ಲಿ ಅತ್ಯಧಿಕವಾಗಿದ್ದು, ಗೋಧಿ, ಅಕ್ಕಿ, ಟೀ, ಎಣ್ಣೆಕಾಳುಗಳು, ದ್ವಿದಳಧಾನ್ಯಗಳು ಮತ್ತು ಹತ್ತಿ ಈ ಕ್ರಮಾನುಗತಿಯಲ್ಲಿವೆ.

2010-11ರಲ್ಲಿ ಇಳುವರಿಯ ಪ್ರಮಾಣವು ಕಬ್ಬಿನ ಉತ್ಪಾದನೆಯಲ್ಲಿ ಅತ್ಯಧಿಕವಾಗಿದ್ದು, ಗೋಧಿ, ಅಕ್ಕಿ, ಟೀ, ಎಣ್ಣೆಕಾಳುಗಳು, ದ್ವಿದಳಧಾನ್ಯಗಳು ಮತ್ತು ಹತ್ತಿ ಈ ಕ್ರಮಾನುಗತಿಯಲ್ಲಿವೆ.

ಈ ಮೇಲಿನ ಪಟ್ಟಿಯಲ್ಲಿ ನಮೂದಿಸಿರುವಂತೆ ಸರಾಸರಿ ಕೃಷಿ ಇಳುವರಿಗೆ ಸಂಬಂಧಿಸಿದಂತೆ ಗೋಧಿ ಉತ್ಪಾದನೆಯಲ್ಲಿ ಪಂಜಾಬ್, ಕರ್ನಾಟಕ, ಬಿಹಾರ್ ಈ ಕ್ರಮಾನುಗತಿಯಲ್ಲಿವೆ. ದ್ವಿದಳಧಾನ್ಯಗಳ ಉತ್ಪಾದನೆಯಲ್ಲಿ ಪಂಜಾಬ್, ಕರ್ನಾಟಕ, ಬಿಹಾರ್ ಈ ಕ್ರಮಾನುಗತಿಯಲ್ಲಿವೆ. ಎಣ್ಣೆಕಾಳುಗಳ ಉತ್ಪಾದನೆಯಲ್ಲಿ ಪಂಜಾಬ್, ಕರ್ನಾಟಕ, ಬಿಹಾರ್ ಈ ಕ್ರಮಾನುಗತಿಯಲ್ಲಿವೆ. ಕಬ್ಬಿನ ಸರಾಸರಿ ಉತ್ಪಾದಕತೆಯಲ್ಲಿ ಕರ್ನಾಟಕ, ಪಂಜಾಬ್, ಬಿಹಾರ್ ಈ ಕ್ರಮಾನುಗತಿಯಲ್ಲಿವೆ.

ಮುಕ್ತಾಯ:- ಭಾರತದಲ್ಲಿ ಸಾವಯವ ಕೃಷಿಯ ಪದ್ಧತಿಯು ಹೊಸತೇನಲ್ಲ. ಇದು ಪುರಾತನ ಕಾಲದಿಂದಲೂ ಆಚರಣೆಯಲ್ಲಿದೆ. ಈ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುವುದರಿಂದ ಸಾವಯವ ತ್ಯಾಜ್ಯಗಳನ್ನು

ಈ ಅಧ್ಯಯನದ ಫಲಿತಾಂಶಗಳಿಂದ ತಿಳಿದು ಬರುವಂತೆ ಸಾವಯವ ಕೃಷಿಯು ಸುಸ್ಥಿರ ಕೃಷಿಯ ಮೇಲೆ ತನ್ನದೇ ಆದ ಪ್ರಭಾವ ಮತ್ತು ಪರಿಣಾಮವನ್ನು ಬೀರಿದೆ. ವಿವಿಧ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚು ಮಾಡಲು ಸಾಧ್ಯವಿದೆ. ಕೃಷಿವಲಯದ ಅಭಿವೃದ್ಧಿಗೆ, ಸಾವಯವ ಕೃಷಿಯಲ್ಲಿ ಆಧುನಿಕ ತಾಂತ್ರಿಕತೆಯ ಅನ್ವಯಕತೆ ಅತ್ಯಾವಶ್ಯಕವಾಗಿದೆ. ಸಾವಯವ ಕೃಷಿಯಲ್ಲಿ ಆಧುನಿಕತೆಯು ಆದಾಯವನ್ನು ವೃದ್ಧಿಸುತ್ತದೆ. ಸಣ್ಣ, ಮಧ್ಯಮ ಮತ್ತು ದೊಡ್ಡ ರೈತರ ಆರ್ಥಿಕತೆಗೆ ಇದು ಅವಶ್ಯವಾಗಿದೆ.

ಸಲಹೆಗಳು:-

1. ಸರ್ಕಾರವು ರೈತರಿಗೆ ಅದರಲ್ಲೂ ಸಣ್ಣ ರೈತರಿಗೆ ಸಾವಯವ ಕೃಷಿಯಲ್ಲಿ ನೂತನ ತಾಂತ್ರಿಕತೆಯನ್ನು ಪರಿಚಯಿಸುವುದರ ಮೂಲಕ ಅವಶ್ಯಕ ಪ್ರೋತ್ಸಾಹ ನೀಡಬೇಕು.
2. ಸಣ್ಣ ರೈತರು, ಅವರ ಕೃಷಿ ಸಾಗುವಳಿಗೆ ಸಂಬಂಧಿಸಿದಂತೆ ದೊಡ್ಡ ರೈತರ ಸಾಗುವಳಿ ಕ್ರಮಗಳನ್ನು ಅನುಸರಣೆ ಮಾಡುವ ಮೂಲಕ ಅತೀ ಹೆಚ್ಚಿನ ಆದಾಯಗಳಿಸಬಹುದಾಗಿದೆ.
3. ಕೃಷಿಯು ಕೈಗಾರಿಕೆಯಾಗಿ ಮಾರ್ಪಡಬೇಕು. ಉದ್ಯಮಶೀಲರು ಕೃಷಿವಲಯದಲ್ಲಿ ಉತ್ಪಾದಕತೆಯನ್ನು ಹೆಚ್ಚು ಮಾಡುವ ಸಲುವಾಗಿ ಟ್ರಾಕ್ಟರ್, ಟಿಲ್ಲರ್, ವಿವಿಧ ಕೃಷಿ ಪರಿಕರಗಳು ಮತ್ತು ಸಲಕರಣೆಗಳನ್ನು ಉತ್ಪಾದನೆ ಮಾಡುವ ಉತ್ಪಾದನಾ ಘಟಕಗಳನ್ನು ಸ್ಥಾಪಿಸಬೇಕು.
4. ದೊಡ್ಡ ರೈತರು ಉನ್ನತ ಮಟ್ಟದ ಸಾಮರ್ಥ್ಯವನ್ನು ಹೊಂದಿರುವುದರಿಂದ ಅವರು ಸಾವಯವ ಕೃಷಿ ಪದ್ಧತಿಯಲ್ಲಿ ಸಮರ್ಪಕವಾದ ಕ್ರಮಗಳನ್ನು

ಕೈಗೊಳ್ಳುವುದರಿಂದ ಸಣ್ಣ ರೈತರು ನೂತನ ಕೃಷಿ ಪದ್ಧತಿಗಳ ಬಗೆಗೆ ಹೆಚ್ಚಿನ ಅರಿವನ್ನು ಹೊಂದುವರು.

ಮುಂದಿನ ಸಂಶೋಧನೆಗೆ ಅವಕಾಶ:- ನೂತನ ಕೃಷಿ ಸಾಗುವಳಿ ಪರಿಕರಗಳ ಆವಿಷ್ಕಾರ, ಕೊಯಿಲು ಮಾಡುವ ಯಂತ್ರಗಳು, ಪರಿಕರಗಳು ಮತ್ತು ಯಂತ್ರೋಪಕರಣಗಳ ಸಂಶೋಧನೆಯಲ್ಲಿ ತೊಡಗುವುದು ಅವಶ್ಯವಿದೆ.

ಆಕರ ಗ್ರಂಥಗಳು:-

1. ಚೇನರಿ.ಆರ್.ಎಲ್ (2012), ಫುಡ್ ಸೇಫ್ಟಿ ಇಶ್ಯೂಸ್ ಫಾರ್ ಮಿನರಲ್ ಎಂಡ್ ಆರ್ಗಾನಿಕ್ ಫರ್ಟಿಲೈಜರ್ಸ್ ಅಡ್ವಾನ್ಸಸ್ ಇನ್ ಆಗ್ರೋನಮಿ 117:51-99.
2. ಮೂರೆ, ಜಿಯೋಫ್ (2001); ಸಾಯಿಲ್‌ಗೈಡ್-ಎ ಹ್ಯಾಂಡ್‌ಬುಕ್ ಫಾರ್ ಅಂಡರ್‌ಸ್ಟಾಂಡಿಂಗ್ ಎಂಡ್ ಮ್ಯಾನೇಜಿಂಗ್ ಅಗ್ರಿಕಲ್ಚರಲ್ ಸಾಯಿಲ್ಸ್, ಪೆರ್ತ್, ವೆಸ್ಟರ್ನ್ ಆಸ್ಟ್ರೇಲಿಯಾ, ಅಗ್ರಿಕಲ್ಚರ್ ವೆಸ್ಟರ್ನ್ ಆಸ್ಟ್ರೇಲಿಯಾ, ಪುಟ 161-207, ಐಎಸ್‌ಬಿಎನ್: 7307, 00577.
3. ಎಫ್.ಎ.ಒ (2012), ಕರೆಂಟ್ ವರ್ಲ್ಡ್ ಫರ್ಟಿಲೈಜರ್ ಟ್ರೆಂಡ್ಸ್ ಎಂಡ್ ಔಟ್‌ಲುಕ್ ಟು 2016, ರೋಮ್, ಫುಡ್ ಎಂಡ್ ಅಗ್ರಿಕಲ್ಚರ್ ಆರ್ಗನೈಸೇಷನ್ ಆಫ್ ದಿ ಯುನೈಟೆಡ್ ನೇಷನ್ಸ್, ಪುಟ 13, ರಿಟ್ರೀವ್ಡ್ 3, ಜುಲೈ 2014.
4. ಮಾಡೆರ್, ಪೌಲ್, ಆನ್‌ಡ್ರೆಸ್ ಫೈಲ್‌ಬ್ಯಾಕ್, 1 ಡೇವಿಡ್ ಡುಬೋಯ್ಸ್, 2 ಲೂಸಿ ಗನ್ಸ್ಟ್, 2 ಪಾಡ್‌ರೌಟ್ ಫ್ರೈಡ್, 2 ವುರ್ಸ್ ನಿಗ್ಗಿಲ್, (31 ಮೇ 2002) ಸಾಯಿಲ್ ಫರ್ಟಿಲಿಟಿ ಎಂಡ್ ಬಯೋಡೈವರ್ಸಿಟಿ ಇನ್ ಆರ್ಗಾನಿಕ್ ಫಾರ್ಮಿಂಗ್, ಸೈನ್ಸ್ 296 (5573), 1694-1697
5. ರೈಸ್ ಈಸ್ ಲೈಫ್; ಫುಡ್ ಎಂಡ್ ಅಗ್ರಿಕಲ್ಚರ್ ಆರ್ಗನೈಸೇಷನ್ ಆಫ್ ದಿ ಯುನೈಟೆಡ್ ನೇಷನ್ಸ್, 2004.

ಸಾವಯವ ಕೃಷಿಯಲ್ಲಿ ಭತ್ತದ ಬೇಸಾಯ

ಸೌಮ್ಯಲತ, ಬಿ. ಎಸ್., ಸುನಿತ, ಎ. ಬಿ. ಮತ್ತು ಸುರೇಶ್‌ಕುಮಾರ, ಬಿ.
ಸ್ನಾತಕೊತ್ತರ ಪದವಿದರರು, ಕೃಷಿ ವಿಶ್ವವಿದ್ಯಾನಿಲಯ, ಜಿ. ಕೆ. ವಿ. ಕೆ., ಬೆಂಗಳೂರು, -೫೬೦೦೬೫
Email:sowmyalatha.vinu@gmail.com

ಭಾರತ ಕೃಷಿ ಕ್ಷೇತ್ರದಲ್ಲಿ ಉಂಟಾದ ಹಸಿರು ಕ್ರಾಂತಿಯ ಪರಿಣಾಮವಾಗಿ ಅಧಿಕ ಇಳುವರಿ ಕೊಡುವ ತಳಿ ಹಾಗೂ ರಸಗೊಬ್ಬರಗಳ ಬಳಕೆಯಿಂದ ಉತ್ಪಾದನೆ ಹೆಚ್ಚಿಸಿ ಸ್ವಾವಲಂಬನೆ ಸಾಧಿಸಲು ಸಾಧ್ಯವಾಯಿತು. ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಇತಿ ಮಿತಿಗಳಿಲ್ಲದೆ ರಸಗೊಬ್ಬರ ಮತ್ತು ಪೀಡೆನಾಶಕಗಳ ಬಳಕೆಯಿಂದಾಗಿ ಭೂಮಿಯ ಫಲವತ್ತತೆ ನಾಶವಾಗಿ, ಮಣ್ಣಿನ ಸತ್ವ ಬರಿದಾಗಿ ಕಟ್ಟಕಡೆಗೆ ಬೆಳೆ ಬೆಳೆಯುವುದು ಕಷ್ಟಕರವಾಗಬಹುದು. ನಮ್ಮ ದೇಶದಲ್ಲಿ ಹಸಿರು ಕ್ರಾಂತಿಯ ಪರಿಣಾಮದಿಂದ ಆಹಾರೋತ್ಪದನೆಯಲ್ಲಿ ಸ್ವಾವಲಂಬನೆ ಹೊಂದಿದ ನಂತರ ಈಗ ನಮ್ಮ ಮುಂದಿರುವ ಸವಾಲೆಂದರೆ ಕೃಷಿಯಲ್ಲಿ ಸುಸ್ಥಿರತೆಯನ್ನು ತರುವುದು. ಈ ನಿಟ್ಟಿನಲ್ಲಿ ಸಾವಯವ ಕೃಷಿ ಮಹತ್ವ ಪಡೆಯುತ್ತಿದೆ.

ಸಾವಯವ ವಸ್ತುಗಳನ್ನು ಬಳಸಿ ರಸಗೊಬ್ಬರ ಮತ್ತು ಪೀಡೆನಾಶಕಗಳ ಬಳಕೆ ಮಾಡದೇ ಮಾಡುವ ವ್ಯವಸಾಯ ಪದ್ಧತಿ. ಇದು ಒಂದು ಕೃಷಿ ಉತ್ಪಾದನಾ ನಿರ್ವಹಣಾ ಪದ್ಧತಿಯಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿ ಮಣ್ಣಿನ ಫಲವತ್ತತ್ತೆಯನ್ನು ಕಾಪಾಡಿಕೊಂಡು ಬರುವ ಹಾಗೂ ಪರಿಸರ ಸ್ನೇಹಿ ಜೈವಿಕ ವಿಧಾನಗಳಿಂದ ಕೀಟ ಮತ್ತು ರೋಗ ನಿರ್ವಹಣೆ ಕೈಗೊಂಡು ಗುಣಮಟ್ಟದ ಆಹಾರ ಉತ್ಪಾದನೆ ಕೈಗೊಳ್ಳುವ ಸುಸ್ಥಿರ ಬೇಸಾಯ ಪದ್ಧತಿ. ಸೂಕ್ಷ್ಮಾಣು ಜೀವಿಗಳು ಹಾಗೂ ಜೀವದ ವೈವಿಧ್ಯತೆಯ ಸಂರಕ್ಷಣೆ ಇದರ ಮೂಲತತ್ವ.

ಸಾವಯವ ಭತ್ತ ಬೇಸಾಯ ಪದ್ಧತಿಗಳು

ವ್ಯವಸಾಯದ ಭೂಮಿಯಲ್ಲಿ ಸಾವಯವ ಗೊಬ್ಬರಗಳು ಮಣ್ಣಿನ ಫಲವತ್ತತೆ ಮತ್ತು ಉತ್ಪಾದಕತೆಯನ್ನು ಕಾಪಾಡುತ್ತವೆ. ಹೆಚ್ಚಾಗಿ ಪೋಷಕಾಂಶಗಳು ಗೊಬ್ಬರಗಳ ಮೂಲಕವೇ ಬೆಳೆಗಳಿಗೆ ಪೂರೈಸಲ್ಪಡುವುದರಿಂದ ಬೆಳೆ ಇಳುವರಿಯ ಮಟ್ಟ ಕಾಪಾಡಲು ಸಾವಯವ ಗೊಬ್ಬರಗಳು ಮುಖ್ಯ ಪಾತ್ರ ವಹಿಸುತ್ತವೆ.

ಭತ್ತದ ಬೆಳೆಯಲ್ಲಿ ಬಳಸಬಹುದಾದ ಸಾವಯವ ಗೊಬ್ಬರಗಳು

- ಕೊಟ್ಟಿಗೆ ಗೊಬ್ಬರ –ಎಕರೆಗೆ 5–6 ಟನ್ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್‌ನ್ನು ನಾಟಿ ಮಾಡುವ 3 ವಾರಗಳ ಮೊದಲೇ ಮಣ್ಣಿನಲ್ಲಿ ಬೆರೆಸಬೇಕು
- ಎರೆ ಗೊಬ್ಬರ – ಎಕರೆಗೆ 2 ಟನ್ ಎರೆ ಗೊಬ್ಬರವನ್ನು ಎರಚಿದ ತಕ್ಷಣ ಉಳುಮೆ ಮಾಡಿ ಭೂಮಿಯಲ್ಲಿ ಸೇರಿಸುವುದು ಹಾಗೂ ಮೇಲು ಗೊಬ್ಬರವಾಗಿ ಎರೆಹುಳು ಗೊಬ್ಬರ ಬಳಸುವುದು ಸೂಕ್ತ (ಎಕರೆಗೆ 200 ಕಿ.ಗ್ರಾಂ.).
- ಹಸಿರೆಲೆ ಗೊಬ್ಬರ -- ಸಸ್ಬೇನಿಯ (ಸೆಣಬು) ಅಥವಾ ಡಯಂಚ

ಹಸಿರೆಲೆ ಗೊಬ್ಬರದ ಬೆಳೆಗಳನ್ನು ಮೇ–ಜೂನ್ ತಿಂಗಳಲ್ಲಿ ಗದ್ದೆಯಲ್ಲಿ ಚಿತ್ತಿ ಭತ್ತವನ್ನು ನಾಟಿ ಮಾಡುವ 3 ವಾರಗಳ ಮೊದಲು ಕಟಾವು ಮಾಡಿ ಮಣ್ಣಿನಲ್ಲಿ ಸೇರಿಸಬೇಕು. ಹಿಂದಿನ ಕಾಲದಿಂದಲೂ ಗದ್ದೆಗಳಲ್ಲಿ ಗೊಬ್ಬರ ಗಿಡ, ಎಕ್ಕದೆಲೆ, ಹೊಂಗೆ, ಉಗಣಿ ಇತ್ಯಾದಿ ಹಸಿರೆಲೆಗಳನ್ನು ಗೊಬ್ಬರಗಳಾಗಿ ಬಳಸುತ್ತಿದ್ದಾರೆ (ಎಕರೆಗೆ 5–6 ಟನ್). ಸಾಮಾನ್ಯವಾಗಿ ಹಸಿರುಗೊಬ್ಬರದ ಗಿಡಗಳು (ಸೆಣಬು, ಡಯಂಚ, ಅಲಸಂದೆ, ಉದ್ದು, ಹೆಸರು, ಹುರುಳಿ ಸೊಯಾಬೀನ್, ಬಟಾಣಿ, ನೆಲಗಡಲೆ) ದ್ವಿದಳ ಧಾನ್ಯಗಳ ವರ್ಗಕ್ಕೆ ಸೇರಿರುವುದರಿಂದ ಅವುಗಳ ಬೇರುಗಳ ಗಂಟುಗಳಲ್ಲಿ ರೈಜೋಬಿಯಂ ಎಂಬ ಸೂಕ್ಷ್ಮಾಣು ಜೀವಿಯು ಕ್ರಿಯೆಯಿಂದ ವಾತಾವರಣದಲ್ಲಿರುವ ಅನಿಲರೂಪದ ಸಾರಜನಕವನ್ನು ಹೀರಿ ಘನರೂಪಕ್ಕೆ ಮಾರ್ಪಾಡಿಸುವುದಲ್ಲದೆ, ಬೆಳೆಗಳಿಗೆ ನೇರವಾಗಿ ಲಭ್ಯವಾಗುವಂತೆ ಮಾಡುತ್ತವೆ.

- **ಬೇವಿನ ಹಿಂಡಿ**

ಇದು ಉತ್ತಮ ಸಾವಯವ ಗೊಬ್ಬರ ಹಾಗೂ ರೋಗ ನಿವಾರಕ ಕೂಡಾ ಆಗಿದೆ. ಬೇವಿನ ಹಿಂಡಿಯು ಸಸ್ಯಗಳಿಗೆ ಬರುವಂತಹ ಹೆಚ್ಚಿನ ಎಲ್ಲಾ ರೋಗಗಳನ್ನು ಪ್ರತಿರೋಧಿಸುತ್ತದೆ. ಉತ್ತಮ ಗುಣಮಟ್ಟದ ಬೇವಿನ

ಹಿಂಡಿಯ ಬಳಕೆಯಿಂದ ಮಣ್ಣು ಫಲವತ್ತಾಗುವುದಲ್ಲದೆ ಬೇರಿನ ಮುಖಾಂತರ ಸಸ್ಯಗಳಿಗೆ ಆಕ್ರಮಿಸುವ ಎಲ್ಲಾ ಕೀಟಗಳನ್ನು ನಿವಾರಿಸುತ್ತದೆ. ಭತ್ತದ ಬೆಳೆಯಲ್ಲಿ ಮೂಲಗೊಬ್ಬರವಾಗಿ ಎಕರೆಗೆ 200 ಕಿ.ಗ್ರಾಂ.ಬೇವಿನ ಹಿಂಡಿ ಗೊಬ್ಬರವನ್ನು ಬಳಸಬಹುದು.

❖ **ಜೈವಿಕ ಗೊಬ್ಬರ :** ಸೂಕ್ಷ್ಮಜೀವಾಣುಗಳಿಂದ ತಯಾರು ಮಾಡಿದ ಗೊಬ್ಬರಕ್ಕೆ ಜೈವಿಕ ಗೊಬ್ಬರ ಅಥವಾ ಅಣುಜೀವಿಗೊಬ್ಬರ ಎಂದು ಕರೆಯಲಾಗುತ್ತದೆ. ಸೂಕ್ಷ್ಮಾಣು ಜೀವಿಗಳಾದ ಅಜಟೊಬ್ಯಾಕ್ಟರ್, ರೈಜೋಬಿಯಂ, ಅಜಸ್ಪೈರಿಲಂ ಹಾಗೂ ಕೆಲವು ಉಪಯುಕ್ತ ಬ್ಯಾಕ್ಟೀರಿಯಗಳು ಗಿಡಗಳಿಗೆ ಸಾರಜನಕ, ರಂಜಕ, ಪೊಟ್ಯಾಶ್ ಮತ್ತು ಗಂಧಕಗಳನ್ನು ದೊರಕಿಸಿಕೊಡುತ್ತವೆ. ಭತ್ತದ ಬೆಳೆಯಲ್ಲಿ ಅಜೋಸ್ಪೈರಿಲಂ ಜೈವಿಕ ಗೊಬ್ಬರ ಬಳಕೆ

❖ **ಮೇಲು ಗೊಬ್ಬರ :** ಭತ್ತದ ಬೆಳೆಯ ಬೆಳವಣಿಗೆ ಹಂತದಲ್ಲಿ ಮೇಲುಗೊಬ್ಬರವಾಗಿ ಬಳಸಬಹುದಾದ ದ್ರವರೂಪ ಗೊಬ್ಬರಗಳು – ಬಯೋಡೈಜೆಸ್ಟರ್, ಗಂಜಲದ ಮಿಶ್ರಣ, ಎರೆಜಲ, ಜೀವಾಮೃತ ಇವುಗಳನ್ನು ಸಾರಜನಕ ಪೋಷಕಾಂಶಗಳ ಆಧಾರದ ಮೇಲೆ ಬೆಳಗಳನ್ನು ಬೆಳೆಸಬಹುದು.

❖ **ನೀರಾವರಿಯೊಂದಿಗೆ ಗಂಜಲದ ಮಿಶ್ರಣ:** ರೈತರು ಗಂಜಲವನ್ನು ನೀರಾವರಿಯೊಂದಿಗೆ ಮಿಶ್ರ ಮಾಡಿ ವಿವಿಧ ಬೆಳೆಗಳಿಗೆ ಬಳಸುತ್ತಿದ್ದಾರೆ. ಉದಾ : ಗಂಜಲ (580 ಲೀಟರ್) ಬಳಸುವುದರಿಂದ ಭತ್ತದ ಇಳುವರಿಯು 41 ರಿಂದ 54 ಕ್ವಿಂಟಾಲ್ / ಹೆಕ್ಟೇರಿಗೆ ಜಾಸ್ತಿಯಾಯಿತು.

❖ **ಜೀವಾಮೃತ: ತಯಾರಿಸುವ ವಿಧಾನ:** ಪ್ಲಾಸ್ಟಿಕ್ ಡ್ರಂ ಬಳಸಿ 200 ಲೀಟರ್ ನೀರಿನಲ್ಲಿ 10 ಕೆ.ಜಿ. ಸಗಣಿ ಮತ್ತು 10 ಲೀಟರ್ ಗಂಜಲ ಹಾಕಿ ಚೆನ್ನಾಗಿ ಮಿಶ್ರಣವಾಗುವಂತೆ ಒಂದು ಕೋಲಿನಿಂದ ಕಲಸಿ. ಇದಕ್ಕೆ 2 ಕೆ.ಜಿ. ಬೆಲ್ಲ ಮತ್ತು 2 ಕೆ.ಜಿ. ದ್ವಿದಳ ಧಾನ್ಯದ ಹಿಟ್ಟನ್ನು ಸೇರಿಸಿ ಹಾಗೂ ಜಮೀನಿನ ಒಂದು ಹಿಡಿ ಮಣನ್ನು ಹಾಕಿ, ಕೋಲಿನಿಂದ ಚೆನ್ನಾಗಿ ತಿರುಗಿಸಿ. ನಂತರ ಪ್ಲಾಸ್ಟಿಕ್ ಡ್ರಂನ ಮೇಲ್ಭಾಗವನ್ನು ಗಾಳಿಯಾಡದಂತೆ ಒಂದು ಗೋಣಿ ಚೀಲದಿಂದ ಮುಚ್ಚಬೇಕು. ಇದನ್ನು ಒಂದು ವಾರ ಕೊಳೆಯಲು ಬಿಡಬೇಕು. ಪ್ರತಿ ದಿನ ಬೆಳಿಗ್ಗೆ ಮಧ್ಯಾಹ್ನ ಮತ್ತು ಸಂಜೆ ಈ ದ್ರಾವಣವನ್ನು ಕೋಲಿನಿಂದ ಕದಡುತ್ತಿರಬೇಕು.

❖ **ಎರೆ ಜಲ:** ಎರೆ ಹುಳುಗಳು ತಮ್ಮ ಮೈಮೇಲೆ ಇರುವ ಪೋರಸ್‌ನಂತಹ ರಂಧ್ರಗಳಿಂದ ಆಗಾಗ ತೇವಂಶವನು ಹೊರ ಹಾಕುತ್ತಿರುತ್ತವೆ. ಅಲ್ಲದೆ ಎರೆಹುಳು ತೊಟ್ಟಿಯಲ್ಲಿ ತೇವಂಶ ಕಾಪಾಡಲು ನೀರು ಚಿಮುಕಿಸುವುದರಿಂದ ಎರೆಹುಳು ಮೈತೊಳೆದ ಹೆಚ್ಚಾದ ನೀರು ತೊಟ್ಟಿಯ ಕೊಳವೆಯ ಮೂಲಕ ಮಡಿಕೆಯಲ್ಲಿ ಸಂಗ್ರಹವಾಗುತ್ತದೆ, ಇದೆ ಎರೆಜಲ.

❖ **ಪಂಚಗವ್ಯ:** ಪಂಚಗವ್ಯವು ನಾಟಿ ಹಸುವಿನಿಂದ ಸಿಗುವ ಸಗಣಿ, ಗಂಜಲ, ಹಾಲು, ಮೊಸರು ಮತ್ತು ತುಪ್ಪ ಈ ಐದು ವಸ್ತುಗಳಿಂದ ತಯಾರಾಗಿದೆ. ಪಂಚಗವ್ಯವು ಸಸ್ಯಗಳ ಬೆಳವಣಿಗೆಗೆ ವರ್ಧಕವಾಗಿ ಮತ್ತು ರೋಗ ನಿರೋಧಕ ಔಷಧಿಯಾಗಿ ಕೆಲಸ ಮಾಡುತ್ತದೆ. ದ್ರವ ರೂಪದ ಪಂಚಗವ್ಯವನ್ನು ಶೋಧಿಸುವಾಗ ಬಟ್ಟೆಯ ಮೇಲೆ ನಿಂತ ಘನ ಪದಾರ್ಥವನ್ನು ಗೊಬ್ಬರವಂತೆ ಉಪಯೋಗಿಸಬಹುದಾಗಿದೆ. 10 ಕೆ.ಜಿ. ದನದ ಸಗಣಿ + 5 ಲೀ. ಗೋಮೂತ್ರ + 2 ಲೀ. ಹಾಲು + 1 ಲೀ. ಮೊಸರು 4 ಲೀ. ತುಪ್ಪವನ್ನು ಒಂದು ಆಗಲವಾದ ಬಾಯಿಯುಳ್ಳ ಪಾತ್ರೆ / ಮಡಿಕೆ / ಬಕೆಟ್ಟಲ್ಲಿ ಹಾಕಿ ಕದಡಿ 2 ವಾರ ಬಿಡಬೇಕು. ಪತಿದಿನ ಬೆಳಿಗ್ಗೆ ಮತ್ತು ಸಂಜೆ ಚೆನ್ನಾಗಿ ಮಿಶ್ರಣ ಮಾಡುತ್ತಿರಬೇಕು. 15 ದಿವದ ನಂತರ ಒಂದು ಬಟ್ಟೆಯ ಮೂಲಕ ಶೋಧಿಸಿ, ದ್ರಾವಣಕ್ಕೆ ನೀರು ಹಾಕಿ ಹತ್ತು ಪಟ್ಟು ಮಾಡಿಕೊಳಬೇಕು. ಹೀಗೆ ತಯಾರು ಮಾಡಿದ ಪಂಚಗವ್ಯವನ್ನು 2–3 ದಿನಗಳಲ್ಲಿ ಬಳಸಬೇಕು.

ಉದಯವಾಣಿ ಪತ್ರಿಕೆಯ ಕೃಷಿ ಪುರವಣಿಯಲ್ಲಿನ ಲೆಖನಿಗಳ ಕುರಿತು ಒಂದು ಅಧ್ಯಯನ

ವಿಜಯಕುಮಾರ ಮೇಟಿ
ಪಿ.ಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಜ್ಞಾನ ಗಂಗೋತ್ರಿ, ಗುಲಬರ್ಗಾ 585106 ಇಮೇಲ್: vijaymeti007@gmail.com

ಪತ್ರಿಕೋದ್ಯಮ ಆಧುನಿಕ ಪ್ರಪಂಚದ ಕೈಗನ್ನಡಿಯಾಗಿದೆ, ಮತ್ತು ಸರ್ಕಾರದ ನಡುವೆ ಸೇತುವೆಯಂತೆ ರಾಷ್ಟ್ರದ ಅಭಿವೃದ್ಧಿಗೆ ಸಂಸ್ಕೃತಿಯ ಪ್ರಸಾರಕ್ಕೆ ಮತು ಒಟ್ಟಾರೆ ಸಮಾಜದ ಓರೆ ಕೋರೆಗಳನ್ನು ತಿದ್ದುವ ಕೆಲಸವನ್ನು ನಿರ್ವಹಿಸುತ್ತದೆ. ಪತ್ರಿಕೋದ್ಯಮ ಒಂದು ಕಲೆಯಾಗಿದ್ದು, ಅದು ಸೃಜನಾತ್ಮಕ ಮತ್ತು ಸಮುದಾಯಾತ್ಮಕ ಕ್ರಿಯೆಗೆ ಬಳಸಲ್ಪಡುತ್ತಿರುವ ಪ್ರಮುಖ ಸಂಪರ್ಕ ಮಾಧ್ಯಮವಾಗಿ ಬೆಳೆದು ನಿಂತಿದೆ.

"ಸಾವಿರ ಯುದ್ದ ಸೈನಿಕರನ್ನು ಎದುರಿಸುವುದಕ್ಕಿಂತ ವಿರೋಧ ಮಾಡುವ ನಾಲ್ಕು ಪತ್ರಿಕೆಗಳನ್ನು ಎದುರಿಸುವುದಕ್ಕೆ ಭಯವಾಗುತ್ತದೆ" ಎಂದಿರುವ ನೆಪೋಲಿಯನ್ ಹೇಳಿಕೆಯೊಂದು ಪತ್ರಿಕೋದ್ಯಮದ ಪ್ರಭಾವವನ್ನು ಸಾರುತ್ತದೆ. ಒಂದು ಸಾಮಾಜಿಕ ವ್ಯವಸ್ಥೆಗೆ ಪರಿಪೂರ್ಣವಾದ ರೂಪರೇಷಗಳನ್ನು ರಚನಾತ್ಮಕವಾಗಿ ಹಾಗೂ ಯೋಜನಾ ಬದ್ಧವಾಗಿ ರೂಪಿಸುವ ಪತ್ರಿಕೋದ್ಯಮ ಸಾಮಾಜಿಕ ಮಾರ್ಗದರ್ಶನ ಮಾಡುತ್ತದೆ. ವರದಿಗಳ ಮುಖಾಂತರ ಪ್ರಪಂಚದ ಮಾಹಿತಿಯನ್ನು ಓದುಗ ಸಮೂಹಕ್ಕೆ ತಲುಪಿಸುತ್ತಿರುವ ಪತ್ರಿಕೆಗಳು ರಾಷ್ಟ್ರ ಪುನರ್‌ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿವೆ. ಅದರೆ ಇಂದಿನ ಪತ್ರಿಕೆಗಳು ರಾಜಕೀಯ ಸುದ್ದಿಗಳಿಗೆ ನೀಡುವಷ್ಟು ಮಹತ್ವ ಇನ್ನುಳಿದ ವಿಷಯಗಳಿಗೆ ನೀಡುತ್ತಿಲ್ಲ ಎಂಬ ಮಾತನ್ನು ಒಪ್ಪಿಕೊಳ್ಳಬೇಕಾಗಿದೆ.

ಅದರೂ ಕನ್ನಡ ಪತ್ರಿಕೋದ್ಯಮದ ಇತ್ತೀಚಿನ ಬದಲಾವಣೆಗಳಲ್ಲಿ ಕೃಷಿ ಸಂಬಂಧಿತ ಪುರವಣಿಗಳನ್ನು ಅರಂಭಿಸಿ ಮತ್ತೊಂದು ಓದುಗರ ಬಳಗವನ್ನು ರೂಪಿಸಿದೆ ಎಂದು ಹೇಳಬಹುದು. ಕೃಷಿ ಸಂಬಂಧಿತ ಪುರವಣಿಗಳ ಪ್ರಭಾವದಿಂದಲೇ ಯುವ ಜನತೆ ಕೃಷಿಯತ್ತ ಮುಖ ಮಾಡುತ್ತಿದೆ ಜೊತೆಗೆ ರೈತರಿಗೆ ಉತ್ತಮ ಮಾರ್ಗದರ್ಶನ ಒದಗಿಸುತ್ತಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ನಿರ್ದಿಷ್ಟ ದಿನವನ್ನು ಗುರಿಯಾಗಿಸಿಕೊಂಡು ಪುರವಣಿಗಳನ್ನು ಪ್ರಕಟಿಸುವ ಹೊಸ ಕಾರ್ಯಕ್ಕೆ ಪತ್ರಿಕೆಗಳು ಕೈ ಹಾಕುತ್ತಿವೆ. ರೈತರನ್ನು ಗುರಿಯಾಗಿಸಿಕೊಂಡು

ಪ್ರಕಟಿಸುವ ಇಂತಹ ಪತ್ರಿಕೆಗಳಿಂದ ಮತ್ತೊಂದು ಓದುಗ ವರ್ಗ ರೂಪಗೊಂಡಿದೆ ಮತ್ತು ದೇಶದ ಅರ್ಥಿಕ ಬೆಳವಣಿಗೆಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಬಹುದು.

ಪತ್ರಿಕೆಗಳು ಸಾಂಸ್ಕೃತಿಕ, ಶೈಕ್ಷಣಿಕ, ಕೃಷಿ, ವಿಜ್ಞಾನ, ವಾಣಿಜ್ಯ, ವ್ಯಾಪಾರ, ರಾಜಕೀಯ, ತಂತ್ರಜ್ಞಾನ ಕ್ಷೇತ್ರಗಳ ಮಾಹಿತಿಯನ್ನು ಪ್ರಕಟಿಸುವುದರ ಜೊತೆಗೆ ಛಾಯಾಚಿತ್ರ, ಕಲೆ, ಸಾಹಿತ್ಯ, ಲೇಖನ, ವ್ಯಂಗಚಿತ್ರ, ಇನ್ನಿತರ ರಂಗಗಳ ಸುದ್ದಿಗಳನ್ನು ಕಂಪ್ಯೂಟರ ಮೂಲಕ ಅಂದವಾಗಿ ಮುದ್ರಿಸಿ ಓದುಗರ ಮನೆ ಬಾಗಿಲಿಗೆ ತಲುಪಿಸುತ್ತವೆ. ಪತ್ರಿಕಾ ವೃತ್ತಿಯು ಇಂದು ಇತರೆ ಎಲ್ಲಾ ವಾಣಿಜ್ಯೋದ್ಯಮಗಳಂತೆ ಒಂದು ವ್ಯಾಪಾರವಾಗಿವೆ.

ಅಧ್ಯಯನಕ್ಕೆ ಸಂಬಂಧಿಸಿದಂತೆ ನಾವು ಸಂಪೂರ್ಣವಾಗಿ ಪತ್ರಿಕೋದ್ಯಮದ ಪರಿಚಯ ಮತ್ತು ಅದು ಬೆಳೆದು ಬಂದ ರೀತಿಯನ್ನು ಅರಿಯಲು ಸಾಧ್ಯವಾಗುತ್ತದೆ. ಮತ್ತು ಉದಯವಾಣಿ ಪತ್ರಿಕೆಯ ಇತಿಹಾಸದ ಜೊತೆಗೆ ಅದು ಪ್ರಕಟಿಸುತ್ತಿರುವ ಪುರವಣಿಯ ಸಾಧಕ ಬಾಧಕಗಳನ್ನು ಅರಿಯಲು ಸಾಧ್ಯವಾಗಿದೆ.

ಪೀಠಿಕೆ : ಒಂದು ಸಾಮಾಜಿಕ ವ್ಯವಸ್ಥೆಗೆ ಪರಿಪೂರ್ಣವಾದ ರೂಪರೇಷಗಳನ್ನು ರಚನಾತ್ಮಕವಾಗಿ ಹಾಗೂ ಯೋಜನಾ ಬದ್ಧವಾಗಿ ರೂಪಿಸುವ ಪತ್ರಿಕೋದ್ಯಮ ಸಾಮಾಜಿಕ ಮಾರ್ಗದರ್ಶನ ಮಾಡುತ್ತದೆ. ವರದಿಗಳ ಮುಖಾಂತರ ಪ್ರಪಂಚದ ಮಾಹಿತಿಯನ್ನು ಓದುಗ ಸಮೂಹಕ್ಕೆ ತಲುಪಿಸುತ್ತಿರುವ ಪತ್ರಿಕೆಗಳು ರಾಷ್ಟ್ರ ಪುನರ್‌ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿವೆ. ಸರ್ಕಾರದ ನಾಲ್ಕನೇ ಅಂಗವಾಗಿರುವ ಪತ್ರಿಕಾರಂಗ ಒಂದು ಉದ್ಯಮವಾಗಿ ತನ್ನ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ. ಇಂದು ಪತ್ರಿಕೆ ಇಲ್ಲದ ಸಮಾಜವನ್ನು ಊಹಿಸಲು ಸಾಧ್ಯವಿಲ್ಲ, ಪತ್ರಿಕೆಗಳು ಬಹಳ ಪರಿಣಾಮ ಕರಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಸಮಾಜಕ್ಕೆ ಉಪಯುಕ್ತವಾದ ಮಾರ್ಗದರ್ಶನ ನೀಡುವುದರ ಜೊತೆಗೆ ಓದುಗನನ್ನು ಜಾಗೃತಗೊಳಿಸುವ ಕಾರ್ಯವನ್ನು ಮಾಡುತ್ತದೆ. ಪತ್ರಿಕಾ ರಂಗವನ್ನು ಪ್ರಜಾಪ್ರಭುತ್ವವನ್ನು ಕಾವಲು ನಾಯಿ ಎಂದು ಕರೆಯುತ್ತೆವೆ ಅದು ಶಾಸಕಾಂಗ, ಕಾರ್ಯಂಗ ಮತ್ತು ನ್ಯಾಯಾಂಗದ ಕಾರ್ಯ ಕಲಾಪಗಳ ಬಗೆಗೆ ಎಚ್ಚರ ವಹಿಸುತ್ತದೆ.

ಕೃಷಿ ಮತ್ತು ಕನ್ನಡ ಪತ್ರಿಕೋದ್ಯಮ ಇಂದು ಗಾಢವಾದ ಸಂಬಂಧವನ್ನು ಹೊಂದಿವೆ ಎಂದು ಹೇಳಬಹುದು. ಅದರೆ ಇಂದಿನ ಪತ್ರಿಕೆಗಳು ರಾಜಕೀಯ ಸುದ್ದಿಗಳಿಗೆ ನೀಡುವಷ್ಟು ಮಹತ್ವ ಇನ್ನುಳಿದ ವಿಷಯಗಳಿಗೆ ನೀಡುತ್ತಿಲ್ಲ ಎಂಬ ಮಾತನ್ನು ಒಪ್ಪಿಕೊಳ್ಳಬೇಕಾಗಿದೆ. ಅದರೂ ಕನ್ನಡ ಪತ್ರಿಕೋದ್ಯಮದ ಇತ್ತೀಚಿನ ಬದಲಾವಣೆಗಳಲ್ಲಿ ಕೃಷಿ ಸಂಬಂಧಿತ ಪುರವಣಿಗಳನ್ನು ಅರಂಭಿಸಿ ಮತ್ತೊಂದು ಓದುಗರ ಬಳಗವನ್ನು ರೂಪಿಸಿದೆ ಎಂದು ಹೇಳಬಹುದು. ಕೃಷಿ ಸಂಬಂಧಿತ ಪುರವಣಿಗಳ ಪ್ರಭಾವದಿಂದಲೇ ಯುವ ಜನತೆ ಕೃಷಿಯತ್ತ ಮುಖ ಮಾಡುತ್ತಿದೆ ಜೊತೆಗೆ ರೈತರಿಗೆ ಉತ್ತಮ ಮಾರ್ಗದರ್ಶನ ಒದಗಿಸುತ್ತಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ನಿರ್ದಿಷ್ಟ ದಿನವನ್ನು ಗುರಿಯಾಗಿಸಿಕೊಂಡು ಪುರವಣಿಗಳನ್ನು ಪ್ರಕಟಿಸುವ ಹೊಸ ಕಾರ್ಯಕ್ಕೆ ಪತ್ರಿಕೆಗಳು ಕೈ ಹಾಕುತ್ತಿವೆ. ರೈತರನ್ನು ಗುರಿಯಾಗಿಸಿಕೊಂಡು ಪ್ರಕಟಿಸುವ ಇಂತಹ ಪತ್ರಿಕೆಗಳಿಂದ ಮತ್ತೊಂದು ಓದುಗ ವರ್ಗ ರೂಪಗೊಂಡಿದೆ ಮತ್ತು ದೇಶದ ಅರ್ಥಿಕ ಬೆಳವಣಿಗೆಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಬಹುದು.

ಪತ್ರಿಕೋದ್ಯಮದ ಮತ್ತು ಸಮಾಜ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕೋದ್ಯಮವು ಸಮಾಜಿಕ ಜನ ಸಂಪರ್ಕ ಮಾಧ್ಯಮವಾಗಿ ಬೆಳೆದಿದೆ. ಪತ್ರಿಕಾ ರಂಗವು 17ನೇ ಶತಮಾನದಲ್ಲಿ ಭಾರತಕ್ಕೆ ಪದಾರ್ಪಣೆ ಮಾಡಿತ್ತು. ಪತ್ರಿಕಾ ಕ್ಷೇತ್ರವು ಜನತೆಗೆ ಶಿಕ್ಷಣ, ಮಾಹಿತಿ ಮತ್ತು ಮನರಂಜನೆಯನ್ನು ಒದಗಿಸಿ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾ ಬಂದಿದೆ. 21ನೇ ಶತಮಾನದ ಆಧುನಿಕ ತಂತ್ರಜ್ಞಾನ ಈ ಯುಗದಲಿ ಪತ್ರಿಕಾ ಮಾಧ್ಯಮ ವಿಲ್ಲದೆ ಸಮಾಜ ಸುಧಾರಣೆಯಾಗಲು ಸಾಧ್ಯವಿಲ್ಲ, ಅಂತೆಯೇ ಮಾಧ್ಯಮಗಳು ದೇಶದ ಅಭಿವೃದ್ಧಿಯಲ್ಲಿ ಆಧಾರ ಸ್ಥಂಭವಾಗಿವೆ. ಇಡೀ ಜಗತ್ತನ್ನೇ ಬರವಣಿಗೆಯ ಮೂಲಕ ಬದಲಿಸುವ ಶಕ್ತಿ ಮಾಧ್ಯಮಕಿದೆ.

ಪತ್ರಿಕಾ ಮಾಧ್ಯಮ ರಾಷ್ಟ್ರದ ಸರ್ವಾಗೀಣ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸ್ವಾತಂತ್ರ ಪೂರ್ವ ಮತ್ತು ಸ್ವಾತಂತ್ರ ನಂತರದ ಸಂಧರ್ಭದಲ್ಲಿ ಆರಂಭಗೊಂಡು ಸುಧೀರ್ಘವಾಗಿ ಪತ್ರಿಕೆಗಳು ಬೆಳೆದು ನಿಂತಿವೆ. ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಹೀಗೆ ವಿವಿಧ ಕ್ಷೇತ್ರಗಳ ಕುರಿತಾದ ಮಾಹಿತಿಗಳನ್ನು ಹೊತ್ತುತರುವ ಪತ್ರಿಕೆಗಳು ಓದುಗರ ಜ್ಞಾನದಾಹವನ್ನು ತಣಿಸುತ್ತಿವೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸಮೂಹ ಮಾಧ್ಯಮಗಳಾದ ಪತ್ರಿಕೆಗಳು, ಟಿ.ವಿ.ವಾಹಿನಿಗಳು, ಮತ್ತು ರೇಡೀಯೋಗಳ ಪಾತ್ರ ಬಹು ಮುಖ್ಯವೆನಿಸಿವೆ.

ಪ್ರಜಾಪ್ರಭುತ್ವ ಸರಕಾರದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಗಳಂತೆ ಪತ್ರಿಕಾರಂಗವನ್ನು ನಾಲ್ಕನೇ ಅಂಗವೆಂದು ಕರೆಯಲಾಗುತ್ತಿದೆ. ಸರಕಾರದ ಕಾರ್ಯಗಳನ್ನು ಮೂರು ಅಂಗಗಳು ಹೇಗೆ ಒಂದಕ್ಕೊಂದು ಪರಸ್ಪರ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಿವೆಯೋ ಹಾಗೆಯೇ ಮಾಧ್ಯಮಗಳು ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸಂಪರ್ಕ ಸೇತುವೆಯಾಗಿ ತನ್ನ ಮಹತ್ವದ ಸೇವೆ ಸಲ್ಲಿಸುತ್ತಿವೆ.

ಪತ್ರಿಕೆಗಳು ವಿಶ್ವದ ನಾಲ್ಕು ದಿಕ್ಕುಗಳಲ್ಲಿ ದಿನ ನಿತ್ಯ ನಡೆಯುವ ಘಟನೆಗಳ ಸುದ್ದಿಗಳನ್ನು ಹೊತ್ತು ತರುವ ಸಂಪರ್ಕ ಮಾಧ್ಯಮಗಳಾಗಿ ಬೆಳೆಯುತ್ತಿವೆ. ದಿನನಿತ್ಯ ಪ್ರಕಟವಾಗುವ ಸುದ್ದಿಗಳು, ಲೇಖನಗಳು ಓದುಗರಿಗೆ ವಿಶ್ವದರ್ಶನ ಮಾಡಿಸುತ್ತಿವೆ. ಓದುಗನಿಗೆ ಇಷ್ಟವಾಗುವ ಸುದ್ದಿ, ಲೇಖನಗಳು, ಸಂಪಾದಕೀಯಗಳು, ಉತ್ತಮ ತನಿಖಾ ವರದಿಗಳು, ಜಾಹಿರಾತುಗಳು ಮತ್ತು ಛಾಯಾ ಚಿತ್ರಗಳು ಪತ್ರಿಕೆಯ ಮಹತ್ವವನ್ನು ಹೆಚ್ಚಿಸಿವೆ. ಪತ್ರಿಕೆಗಳು ಕೇವಲ ದಿನನಿತ್ಯದ ಸುದ್ದಿ ಪ್ರಕಟಣೆಗೆ ಸೀಮಿತ ವಾಗದೆ, ಶಿಕ್ಷಣ, ಮಾಹಿತಿ, ಮನರಂಜನೆ, ಸಂಸ್ಕೃತಿ, ಕ್ರೀಡೆ, ಸಿನಿಮಾ, ಉದ್ಯೋಗ ಮತ್ತು ಆರೋಗ್ಯಕ್ಕೆ ಸಂಬಂದಿಸಿದ ಲೇಖನಗಳಿಂದ ಓದುಗರ ಜ್ಞಾನದಾಹ ತೀರಿಸುವ ಅತ್ಯಂತ ಪ್ರಮುಖ,ಪರಿಣಾಮಕಾರಿ ಮತ್ತು ಸುಲಭವಾಗಿ ಕೈಗೆಟುಕುವ ಸಾಧನವಾಗಿ ಪತ್ರಿಕೆಗಳು ಜನಪ್ರಿಯವಾಗಿವೆ.

ಪತ್ರಿಕೆಯ ಪುರವಣಿಗಳ ವೈಶಿಷ್ಟ್ಯ : ಪತ್ರಿಕೆಯ ಪುರವಣಿಗಳಲ್ಲಿ ಪ್ರತಿ ವಾರ ನಿರ್ದಿಷ್ಟ ದಿನದಂದು ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ

ವಿಶೇಷ ಪುರವಣಿಗಳನ್ನು ಪ್ರಕಟಿಸುತ್ತವೆ. ಪುರವಣಿಗಳ ವೈಶಿಷ್ಟ್ಯವೆಂದರೆ ವಿವಿಧ ಕ್ಷೇತ್ರಗಳ ಆಗು–ಹೋಗುಗಳ ಅಧ್ಯಯನದ ದೃಷ್ಟಿಯಿಂದ, ತಂತ್ರಜ್ಞಾನ ಬದಲಾವಣೆಗಳ ಅಭಿವೃದ್ಧಿಯನ್ನು ಸವಿಸ್ತಾರವಾಗಿ ತಿಳಿಯಪಡಿಸುತ್ತವೆ. ಐತಿಹಾಸಿಕ, ಮನೋರಂಜನೆ, ಕೃಷಿ, ಶಿಕ್ಷಣ, ಕ್ರೀಡೆ, ವಿಜ್ಞಾನ, ವಾಣಿಜ್ಯ, ವ್ಯಾಪಾರ, ತಂತ್ರಜ್ಞಾನ, ಯುವಜನತೆಗೆ ಸಂಬಂಧಿಸಿದ, ಸ್ತ್ರೀಯರಿಗಾಗಿ ವಿಶೇಷ ಪುರವಣಿಗಳು ಇತ್ಯಾದಿ ವಿಷಯಗಳು ಅಂಶಗಳನ್ನು ಒಳಗೊಂಡು ಪುರವಣಿಗಳು ಆಯಾ ಕ್ಷೇತ್ರಗಳ ಆಗು–ಹೋಗುಗಳ, ಅಧ್ಯಯನ ದೃಷ್ಟಿಯಿಂದ, ಸಾಧನೆ, ತಂತ್ರಜ್ಞಾನ, ಬದಲಾವಣೆಗಳ ಅಭಿವೃದ್ಧಿಯ ಮಾಹಿತಿಯನ್ನು ಸಂಪೂರ್ಣವಾಗಿ ಓದುಗರಿಗೆ ತಿಳಿಸುತ್ತದೆ.

ಪತ್ರಿಕೆಗಳು ಸಾಂಸ್ಕೃತಿಕ, ಶೈಕ್ಷಣಿಕ, ಕೃಷಿ, ವಿಜ್ಞಾನ, ವಾಣಿಜ್ಯ, ವ್ಯಾಪಾರ, ರಾಜಕೀಯ, ತಂತ್ರಜ್ಞಾನ ಕ್ಷೇತ್ರಗಳ ಮಾಹಿತಿಯನ್ನು ಪ್ರಕಟಿಸುವುದರ ಜೊತೆಗೆ ಛಾಯಾಚಿತ್ರ, ಕಲೆ, ಸಾಹಿತ್ಯ, ಲೇಖನ, ವ್ಯಂಗಚಿತ್ರ, ಇನ್ನಿತರ ರಂಗಗಳ ಸುದ್ದಿಗಳನ್ನು ಕಂಪ್ಯೂಟರ ಮೂಲಕ ಅಂದವಾಗಿ ಮುದ್ರಿಸಿ ಓದುಗರ ಮನೆ ಬಾಗಿಲಿಗೆ ತಲುಪಿಸುತ್ತವೆ. ಪತ್ರಿಕಾ ವೃತ್ತಿಯು ಇಂದು ಇತರೆ ಎಲ್ಲಾ ವಾಣಿಜ್ಯೋದ್ಯಮಗಳಂತೆ ಒಂದು ವ್ಯಾಪಾರವಾಗಿವೆ.

ಉದಯವಾಣಿ ಪತ್ರಿಕೆಯ ಇತಿಹಾಸ: ಜಿಲ್ಲಾ ಕೇಂದ್ರದಿಂದ ಪ್ರಕಟವಾಗುತ್ತಿರುವ ಪ್ರಮುಖ ದಿನಪತ್ರಿಕೆ ಉದಯವಾಣಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಣಿಪಾಲದ ಪ್ರಿಂಟರ್ಸ ಅಂಡ್ ಪಬ್ಲಿಷರ್ಸ 1970 ಜನವರಿ 1 ರಂದು ಪ್ರಕಟಣೆ ಆರಂಭಿಸಿತು. ಅತ್ಯಾಧುನಿಕ ಮುದ್ರಣಕ್ಕಾಗಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಉದಯವಾಣಿ ವೈಶಿಷ್ಟ ಸ್ಥಳೀಯ ಸುದ್ದಿಗಳಿಗೆ ಮಹತ್ವ ನೀಡುವುದು ಹಾಗೂ ಸ್ಥಳಿಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸ್ಥಳಿಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರಾಮುಖ್ಯತೆ ನೀಡುವುದು.

ಈ ಪತ್ರಿಕೆ ಅರಬ್ ರಾಷ್ಟ್ರಗಳಲ್ಲಿರುವ ಕನ್ನಡಿಗರಿಗಾಗಿಯೇ ವಿಶೇಷ ಪುರವಣಿ ತರುತ್ತಿದೆ. ಒಂದು ಲಕ್ಷ ಪ್ರಸಾರ ಮುಟ್ಟಿದ ಜಿಲ್ಲಾ ಪತ್ರಿಕೆ ಎಂಬುಂದು ಇದರ ಹೆಗ್ಗಳಿಕೆ. ಸಾಹಿತ್ಯ ಕ್ಷೇತ್ರದಲ್ಲಿ ಉದಯವಾಣಿ ತನ್ನ ವಾರ್ಷಿಕ ದೀಪಾವಳಿ ಸಂಚಿಕೆ ಮೂಲಕ ವಿಶಿಷ್ಟ ಛಾಪು ಮೂಡಿಸಿದೆ.

ತರಂಗ ವಾರ ಪತ್ರಿಕೆ ತುಷಾರ ಮಾಸಪತ್ರಿಕೆ ರೂಪತಾರ ಉದಯವಾಣಿ ಬಳಗದ ಪತ್ರಿಕೆಗಳು. ಪತ್ರಿಕೆಯ ಪ್ರಸಾರ ವ್ಯಾಪ್ತಿಯೂ ಸಹ ಸಾಕಷ್ಟು ವಿಸ್ತರಿಸಿದೆ ಸುಮಾರು 3 ಲಕ್ಷ ಪತ್ರಿಕೆಗಳು ಪ್ರಸಾರ ವ್ಯಾಪ್ತಿಯನ್ನು ಹೊಂದಿವೆ ಎಂದು ಎಬಿಸಿ ಎಂಬ ಸಂಸ್ಥೆ ತನ್ನ ವರದಿಯಲ್ಲಿ ತಿಳಿಸಿದೆ. ಮತ್ತು ಪತ್ರಿಕೆಯೂ ಗುಣಮಟ್ಟದಲ್ಲಿ ಯಾವುದೇ ರೀತಿಯ ನ್ಯೂನತೆಗಳು ಕಾಣದಂತೆ ದಿನೇ ದಿನೇ ರೂಪಗೊಳ್ಳುತ್ತಿದೆ.

ಅಧ್ಯಯನದ ಪ್ರಾಮುಖ್ಯತೆ : ಪತ್ರಿಕೆಗಳು ಇಂದು ವಿಶೇಷ ಸುದ್ದಿ, ಅಂಕಣ, ಸಂಪಾದಕೀಯ, ದೇಶ–ವಿದೇಶ ವಾಣಿಜ್ಯ, ಕ್ರೀಡೆ, ವಿವಿಧ ತರಹದ ಸುದ್ದಿಗಳನ್ನು ಪ್ರಕಟಿಸಿ ಓದುಗರಿಗೆ ಮಾಹಿತಿಯನ್ನು ಒದಗಿಸುತ್ತಿದೆ. ಅದರೆ ಇಷ್ಟೆಲ್ಲಾ ಪ್ರಶಂಸನೀಯ ಕೆಲಸಗಳನ್ನು ಮಾಡುತ್ತಿರುವ ಪತ್ರಿಕೆ ದೇಶದ ಬೆನ್ನೆಲುಬು ರೈತನ ಬಗೆಗೆ ಪತ್ರಿಕೆಗಳು ಉದಾಸೀನತೆಯಿಂದ ನಡೆದುಕೊಳ್ಳುತ್ತಿವೆ ಎಂಬುವ ಅನುಮಾನ ಗಾಢವಾಗಿ ಅರಳುತ್ತದೆ. ದೇಶದ ಒಟ್ಟು ಜನಸಂಖ್ಯೆಯ ಶೇ.70 ರಷ್ಟು ಜನ ಕೃಷಿಯಲ್ಲಿ ತೊಡಗಿಕೊಂಡಿದ್ದರು ಸಹ ಅಂತಂಹ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡದೇ ಇರುವುದು ವಿಪರ್ಯಾಸದ ಸಂಗತಿ.

ಬಡತನದ ಕಾರಣದಿಂದಾಗಿ ಇಂದು ಅನೇಕ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಅಂತಂಹ ರೈತನ ಸುದ್ದಿಗಳು ಮುಖಪುಟದಲ್ಲಿ ಪ್ರಕಟಗೊಂಡು ಲೀಡ್ ನ್ಯೂಸ್‌ಗಳಾಗಿ ಅಡಳಿತದ ಸರ್ಕಾರವನ್ನು ಎಚ್ಚರಿಸಬೇಕಾಗಿತ್ತು ಅದರೆ ಇಂತಂಹ ಸುದ್ದಿಗಳು ಒಳ ಪುಟಗಳಲ್ಲಿ ಸರಿದು ಹೋಗುತ್ತಿರುವುದು ಈ ನೆಲದ ನಿಜವಾದ ಮಗನಿಗೆ ಮಾಧ್ಯಮಗಳು ಮಾಡುತ್ತಿರುವ ಅವಮಾನವೇ ಸರಿ ಎಂದು ಹೇಳಬಹುದು.

ಅದರೆ ಇತ್ತೀಚಿನ ದಿನಮಾನಗಳಲ್ಲಿ ಪತ್ರಿಕೆಗಳು ವಿಶೇಷ ಪುರವಣಿಗಳನ್ನು ಓದುಗನಿಗೆ ಪೂರೈಸುತ್ತಿರುವುದರಿಂದ ನಿರ್ದಿಷ್ಟ ವಾರದ ದಿನದಂದು ಕೃಷಿ ಪುರವಣೀ ಪ್ರಕಟಗೊಳ್ಳುತ್ತಿರುವುದು ನಿಜಕ್ಕೂ ರೈತನ ಸಂಗಾತಿಯಾಗಿ ಮಾರ್ಗದರ್ಶನ ಮಾಡುವ ಕಾರ್ಯವನ್ನು ಮಾಡುತ್ತಿದೆ.

ಉದಯವಾಣಿ ಪತ್ರಿಕೆಯೂ ಮಂಗಳವಾರದ ದಿನದಂದು ಐಸಿರಿ ಎಂಬ ಕೃಷಿ ಪುರವಣಿಯನ್ನು ಪ್ರಕಟಿಸುತ್ತಿದ್ದು ಅದರ ಮೂಲಕ ಅನೇಕ ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತಿದೆ. ಬೆಳೆಗಳನಿರ್ವಹಣೆ, ಸಾವಯವ ಕೃಷಿಯ ಪ್ರತ್ಯಕ್ಷಿಕತೆ, ಯುವಕರ ಕೃಷಿ ಪ್ರವೇಶ ವಿಶೇಷ ಸಾಧಕರ ಪರಿಚಯ, ವಿವಿಧ ಪ್ರಾಣಿ ಪಕ್ಷಿಗಳನ್ನು ಸಾಕಿ ಅದರ ಮೂಲಕ ತಮ್ಮ ಅದಾಯವನ್ನು ಹೆಚ್ಚಿಸಿಕೊಂಡ ಉದಾಹರಣೆಗಳನ್ನು ನಾವು ನೋಡಬಹುದಾಗಿದೆ. ಇಂತಂಹ ಒಂದು ದಿನಪತ್ರಿಕೆಯ ಮೇಲೆ ನಾನು ಪ್ರೌಢಪ್ರಬಂಧವನ್ನು ರೂಪಿಸುತ್ತಿದ್ದೇನೆ ಅ ಮೂಲಕ ರೈತನಿಗೆ ಉದಯವಾಣಿ ಪತ್ರಿಕೆ ಹೇಗೆ ಕೊಡುಗೆ ನೀಡುತ್ತಿದೆ ಎಂಬುಂದನ್ನು ತಿಳಿಸುವ ಉದ್ದೇಶವನ್ನು ಹೊಂದಿದ್ದೆನೆ.

ಅಧ್ಯಯನದ ಉದ್ದೇಶಗಳು: ಯಾವುದೇ ಒಂದು ಅಧ್ಯಯನ ಕೈಗೊಂಡಾಗ ಅದರ ಸಾಧಕ ಬಾಧಕಗಳ ಕುರಿತು ಕುಲಕುಂಷವಾಗಿ ಪರಿಶೀಲಿಸಬೇಕಾಗುತ್ತದೆ. ಯಾವದೇ ಸಂಸ್ಥೆಯ ಪರವಾಗಿ ಅಥವಾ ಸ್ವ ಹಿತಾಸಕ್ತಿಯಿಂದ ಕೂಡಿದ ಸಂಶೋಧನೆಯಿಂದಲೂ ಸಹ ಅನೇಕ ಉದ್ದೇಶಗಳು ಅಡಕವಾಗಿರುತ್ತವೆ. ಇನ್ನೂ ಭಾರತ ಸಮಸ್ಯೆಗಳ ತವರು ಎಂದೆಹೇಳಬಹುದು ಇಂತಂಹ ದೇಶದಲ್ಲಿ ಸಮಸ್ಯೆಗಳ ಕುರಿತಂತೆ ನಿರಂತರವಾಗಿ ಅಧ್ಯಯನ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಸಾಮಾಜಿಕ, ಅರ್ಥಿಕ, ರಾಜಕೀಯ ಆಗುಹೋಗುಗಳ ಕುರಿತಂತೆ ಇನ್ನೂ ಅತಿ ಹೆಚ್ಚು ಸಂಶೋಧನೆಗಳು ಬೆಳಕಿಗೆ ಬರುವುದು ಅವಶ್ಯವಾಗಿದೆ. ಸಮಾಜದಲ್ಲಿ ಪ್ರಮುಖವಾಗಿ ಇಂದು ಸಾಮಾಜಿಕ ಸಮಸ್ಯೆಗಳು ರುದ್ರತಾಂಡವವನ್ನು ನಿರಂತರವಾಗಿ ಮುಂದುವರಿಸುತ್ತಿರುವುದರಿಂದ ಸಂಶೋಧನೆಗಳು ದಿನದಿಂದ ದಿನಕ್ಕೆ ಅನೇಕ ಮಾರ್ಪಡುಗಳನ್ನು ಹೊಂದಿ ಸಮಾಜವನ್ನು ಸುಸ್ಥಿರ ಅಭಿವೃದ್ಧಿಯತ್ತ ಕೊಂಡಯ್ಯುಬೇಕಾಗಿರುವುದು ಇಂದಿನ ತುರ್ತು ಕಾರ್ಯಗಳಲ್ಲಿ ಒಂದು ಎಂದು ಹೇಳಬಹುದು.

- ಉದಯವಾಣಿ ಪತ್ರಿಕೆಯ ಮಹತ್ವ ಮತ್ತು ಇತಿಹಾಸ ತಿಳಿಯುವುದು.
- ಓದುಗರ ಮೇಲೆ ಉದಯವಾಣಿಯ ಕೃಷಿ ಪುರವಣಿ ಪ್ರಭಾವ ತಿಳಿಯುವುದು.
- ಉದಯವಾಣಿ ಪತ್ರಿಕೆಯ ಕೃಷಿ ಪುರವಣಿಯ ವಿಷಯ ಮತ್ತು ವಿಶೇಷತೆಯನ್ನು ಅವಲೋಕಿಸುವುದು.

• ಉದಯವಾಣಿ ಪತ್ರಿಕೆಯಿಂದ ಕೃಷಿಕರಿಗೆ ಆಗುವ ಪ್ರಯೋಜನಗಳ ಕುರಿತು ಅಧ್ಯಯನ ಮಾಡುವುದು.

ಅಧ್ಯಯನದ ಕಾರ್ಯಕ್ಷೇತ್ರ : ಒಂದು ಸಂಶೋಧನೆಯಲ್ಲಿ ಪ್ರಮುಖವಾಗಿ ತನ್ನದೆ ಆದ ಕಾರ್ಯಕ್ಷೇತ್ರ ಹೊಂದಿರುತ್ತದೆ. ಸಂಶೋಧನೆಯು ಯಾವ ವಿಷಯವಾಗಿ ಸಂಶೋಧನೆಗೆ ಒಳಪಟ್ಟಿದೆ ಎಂಬುದನ್ನು ತಿಳಿದಿರಬೇಕು. ಅಲ್ಲದೇ ಆ ಒಂದು ಸಂಶೋಧನೆಯು ಯಾವ ವ್ಯಾಪ್ತಿಯಲ್ಲಿ ತನ್ನ ಕಾರ್ಯಕ್ಷೇತ್ರವನ್ನು ಹೊಂದಿದೆ ಎಂಬುದನ್ನು ಗುರುತಿಸಬೇಕು. ಈ ನಿಟ್ಟಿನಲ್ಲಿ ನನ್ನ ಸಂಶೋಧನಾ ವಿಷಯವಾದ "ಉದಯವಾಣಿ ಪತ್ರಿಕೆಯ ಕೃಷಿ ಪುರವಣಿಯಲ್ಲಿನ ಲೆಖನೆಗಳ ಕುರಿತು ಒಂದು ಅಧ್ಯಯನ" ಎಂಬ ವಿಷಯವು ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲುಕಿನ ಅಯ್ದ ಗ್ರಾಮಗಳನ್ನು ಅಯ್ದುಕೊಳ್ಳಲಾಗಿದೆ. ಕೃಷಿಯ ಕುರಿತಾಗಿ ಓದುಗರು ಯಾವ ಭಾವನೆಯನ್ನು ಹೊಂದಿದ್ದಾರೆ ಎಂಬುದನ್ನು ತಿಳಿಯುವುದು ಈ ಸಂಶೋಧನೆಯ ತಿರುಳಾಗಿದೆ.

ಅಧ್ಯಯನದ ವಿಧಾನ : ಈ ಅಧ್ಯಯನದ ಸಂಶೋಧನೆಗಾಗಿ ಒಟ್ಟು 50 ಜನರ ಅಭಿಪ್ರಾಯಗಳನ್ನು ಬಳಸಿಕೊಳ್ಳಲಾಗಿದೆ. ಪುರುಷರು 25, ಮತ್ತು ಮಹಿಳೆಯರು 25 ಜನರನ್ನು ಆಯ್ಕೆ ಮಾಡಲಾಗಿದೆ. ಇಲ್ಲಿ 25 ಪುರುಷ ಸಂವಾದಿಗಳು ಮತ್ತು 25 ಮಹಿಳಾ ಸಂವಾದಿಗಳನ್ನು ಭೇಟಿ ಮಾಡಿ ಅವರಿಗೆ ನಿರ್ದಿಷ್ಟ ಹಾಗೂ ವಸ್ತುನಿಷ್ಠ ಪ್ರಶ್ನೆಗಳನು ಕೇಳುವ ಮೂಲಕ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗುತ್ತದೆ.

ಮಾಹಿತಿ ವಿಶ್ಲೇಷಣೆ

ಕೋಷ್ಟಕ 1: ಸಂವಾದಿಗಳ ಪತ್ರಿಕೆ ಓದುವ ವಿವರ.

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	20	40%	15	30%
ಇಲ್ಲ	05	10%	10	20%
ಒಟ್ಟು	25	50%	25	50 %

ಈ ಒಂದು ಕೋಷ್ಟಕದಲ್ಲಿ ಪುರುಷರು ಮತ್ತು ಮಹಿಳೆಯರು ಪ್ರತಿಶತ 70% ರಷ್ಟು ಪತ್ರಿಕೆಯನ್ನು ಓದುತ್ತೆವೆ ಎಂದು ತೀಳಿದು ಬಂದಿದೆ. ಅದೇ ರೀತಿ ಶೇಕಡಾ 30% ರಷ್ಟು ಪತ್ರಿಕೆಯನ್ನು ಓದುವುದಿಲ್ಲ ಎಂದು ತಿಳಿಸಿದ್ದಾರೆ.

ಕೋಷ್ಟಕ 2: ಸಂವಾದಿಗಳ ಉದಯವಾಣಿ ಪತ್ರಿಕೆ ಓದುವ ವಿವರ.

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	18	36%	15	30%
ಇಲ್ಲ	07	14%	10	20%
ಒಟ್ಟು	25	50%	25	50%

ಈ ಒಂದು ಕೋಷ್ಟಕದಲ್ಲಿ ಪುರುಷರು ಮತ್ತು ಮಹಿಳೆಯರು ಪ್ರತಿಶತ 66% ರಷ್ಟು ಉದಯವಾಣಿ ದಿನಪತ್ರಿಕೆಯನ್ನು ಓದುತ್ತಾರೆ ಎಂದು ತಿಳಿದು ಬಂದಿದೆ.ಅದೇ ರೀತಿ ಶೇಕಡಾ 34 ರಷ್ಟು ಉದಯವಾಣಿ ದಿನಪತ್ರಿಕೆಯನ್ನು ಓದುವುದಿಲ್ಲ ಎಂದು ತಿಳಿಸಿದ್ದಾರೆ.

ಕೋಷ್ಟಕ 3: ಸಂವಾದಿಗಳು ಉದಯವಾಣಿ ಪತ್ರಿಕೆ ಓದುವ ಅವದಿ (ವರ್ಷಗಳಲ್ಲಿ).

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
1 ರಿಂದ 2 ವರ್ಷ	10	20%	10	20%
3 ರಿಂದ 5 ವರ್ಷ	07	14%	06	12%
5 ರಿಂದ 7 ವರ್ಷ	06	12%	07	14%
7ಕ್ಕಿಂತ ಜಾಸ್ತಿ	02	04%	02	04%
ಒಟ್ಟು	25	50%	25	50%

ಈ ಒಂದು ಕೋಷ್ಟಕದಲ್ಲಿ ವಿವರಿಸಿದಂತೆ 1 ರಿಂದ 2 ವರ್ಷದವರೆಗೆ ಪ್ರತಿಶತಃ 40 ರಷ್ಟು ಪುರುಷ ಮತ್ತು ಮಹಿಳಾ ಸಂವಾದಿಗಳು ಉದಯವಾಣಿ ಪತ್ರಿಕೆಯನ್ನು ಓದುತ್ತಾರೆ ಮತ್ತು 3 ರಿಂದ 5 ವರ್ಷದವರೆಗೆ ಪ್ರತಿಶತ 26% ಪುರುಷರು ಮತ್ತು ಮಹಿಳೆಯರು ಉದಯವಾಣಿ ಪತ್ರಿಕೆಯನ್ನು ಓದುತ್ತಾರೆ 5 ರಿಂದ 7 ವರ್ಷದವರೆಗೆ ಪ್ರತಿಶತ 26 ಪುರುಷರು ಮತ್ತು ಮಹಿಳೆಯರು ಪತ್ರಿಕೆಯನ್ನು ಓದುತ್ತಾರೆ, 7ಕ್ಕಿಂತ ಹೆಚ್ಚು ವರ್ಷದವರೆಗೆ ಉದಯವಾಣಿ ಪತ್ರಿಕೆಯನ್ನು ಪ್ರತಿಶತ 8 ರಷ್ಟು ಪುರುಷರು ಮತ್ತು ಮಹಿಳೇಯರು ಓದುತ್ತಾರೆ ಎಂದು ತಿಳಿದುಬಂದಿದೆ.

ಕೋಷ್ಟಕ 4: ಸಂವಾದಿಗಳು ಉದಯವಾಣಿ ಪತ್ರಿಕೆಯಲ್ಲಿ ಪ್ರಕಟಿಸುವ ಕೃಷಿ (ಐಸಿರಿ) ಪುರವಣಿಯನ್ನು ಓದುವ ವಿವರ.

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	18	36%	10	20%
ಇಲ್ಲ	07	14%	15	30%
ಒಟ್ಟು	25	50%	25	50%

ಈ ಒಂದು ಕೋಷ್ಟಕದಲ್ಲಿ ವಿವರಿಸಿದಂತೆ ಉದಯವಾಣೀ ಪತ್ರಿಕೆ ಪ್ರಕಟಿಸುವ ಕೃಷಿ ಪುರವಣಿಯನ್ನು ಪುರುಷರು ಮತ್ತು ಮಹಿಳೆಯರು ಪ್ರತಿಶತ 56 ರಷ್ಟು ಓದುತ್ತಾರೆ ಎಂದು ಮತ್ತು ಪ್ರತಿಶತ 44 ರಷ್ಟು ಸಂವಾದಿಗಳು ಇಲ್ಲ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ 5: ಐಸಿರಿ ಪುರವಣಿಯಲ್ಲಿನ ಅಂಕಣಗಳ ಅಂಕಣಗಳು ನಿಮಗೆ ಇಷ್ಟವಾಗಿದೆಯೇ.

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	20	40%	10	20%
ಇಲ್ಲ	05	10%	15	30%
ಒಟ್ಟು	25	50%	25	50%

ಈ ಒಂದು ಕೋಷ್ಟಕದಲ್ಲಿ ವಿವರಿಸಿದಂತೆ ಪತ್ರಿಕೆಯಲ್ಲಿ ಪ್ರಕಟವಾಗುವ ಕೃಷಿ ಅಂಕಣಗಳು ಇಷ್ಟವಾಗಿದೆ ಎಂದು ಪ್ರತಿಶತ 60 ರಷ್ಟು ಪುರುಷರು ಮತ್ತು ಮಹಿಳೆಯರು ಹಾಗೂ ಪ್ರತಿಶತಃ 40 ರಷ್ಟು ಸಂವಾದಿಗಳು ಇಲ್ಲ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ 6: ಐಸಿರಿ ಪುರವಣಿಯಲ್ಲಿ ಬರುವ ಲೇಖನಿಗಳು ಉಪಯುಕ್ತವಾಗಿವೆಯೆ.

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	15	30%	10	20%
ಇಲ್ಲ	10	20%	15	30%
ಒಟ್ಟು	25	50%	25	50%

ಈ ಒಂದು ಕೋಷ್ಟಕದಲ್ಲಿ ವಿವರಿಸಿದಂತೆ ಐಸಿರಿ ಪುರವಣಿಯಲ್ಲಿ ಬರುವ ಲೇಖನಗಳು ಉಪಯುಕ್ತವಾಗಿದೆ ಎಂದು ಪ್ರತಿಶತಃ 50 ರಷ್ಟು ಪುರುಷರು ಮತ್ತು ಮಹಿಳೆಯರು ಹಾಗೂ ಉಪಯುಕ್ತ ಇಲ್ಲ ಎಂದು ಪ್ರತಿಶತಃ 50 ರಷ್ಟು ಇಲ್ಲ ಎಂದು ಅಭಿಪ್ರಾಯವ್ಯಕ್ತಪಡಿಸಿದ್ದಾರೆ.

ಕೋಷ್ಟಕ 7: ಕೃಷಿ ಅಭಿವೃದ್ಧಿಗೆ ಐಸಿರಿ ಪುರವಣಿ ಯಾವ ರೀತಿ ಸಹಾಯಕವಾಗಿದೆ ?

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೊಸ ಯೋಜನೆಗಳ ಅರಿವು	03	06%	05	10%
ಸಮಸ್ಯೆಗಳಿಗೆ ಪರಿಹಾರ	07	14%	05	10%
ಆಭಿವೃದ್ಧಿಗೆ ಆಧ್ಯತೆ	05	10%	10	20%
ಮೇಲಿನ ಎಲ್ಲವೂ	10	20%	05	10%
ಒಟ್ಟು	25	50%	25	50%

ಈ ಒಂದು ಕೊಷ್ಟಕದಲ್ಲಿ ವಿವರಿಸಿದಂತೆ ಹೊಸ ಯೋಜನೆಯ ಅರಿವು ಕುರಿತಾಗಿ ಪುರುಷ ಮತ್ತು ಮಹಿಳಾ ಸಂವಾದಿಗಳು ಪ್ರತಿಶತ 16 ರಷ್ಟು ಹಾಗೂ ಸಮಸ್ಯೆಗಳಿಗೆ ಪರಿಹಾರದ ಉದ್ದೇಶಕ್ಕಾಗಿ ಕ್ರಮವಾಗಿ 24 ರಷ್ಟು ಜನ ಹಾಗೂ ಅಭಿವೃದ್ಧಿಯ ಅದ್ಯತೆಗಾಗಿ ಕ್ರಮವಾಗಿ 30 ರಷ್ಟು ಜನ ಹಾಗೂ ಮೇಲಿನ ಎಲ್ಲ ಉದ್ದೇಶಕ್ಕಾಗಿ 30 ಪ್ರತಿಶತಃ ಮಹಿಳಾ ಮತ್ತು ಪುರುಷ ಸಂವಾದಿಗಳು ಹೇಳಿರುವುದು ತಿಳಿದುಬಂದಿದೆ.

ಕೋಷ್ಟಕ 8: ಕೃಷಿಯಲ್ಲಿ ಆಗುತ್ತಿರುವ ಬದಲಾವಣೆ ಕುರಿತು ಐಸಿರಿ ಪುರವಣಿ ನಿಮಗೆ ಮಾಹಿತಿ ನಿಡುತ್ತಿದೆಯೇ

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	20	40%	07	14%
ಇಲ್ಲ	05	10%	18	36%
ಒಟ್ಟು	25	50%	25	50%

ಈ ಕೊಷ್ಟಕದಂತೆ ಕೃಷಿಯಲ್ಲಿ ಅಗುತ್ತಿರುವ ಬದಲಾವಣೆ ಕುರಿತಂತೆ ಮಾಹಿತಿ ನೀಡುತ್ತದೆ ಎಂದು ಪ್ರ ತಿಶತಃ 54 ರಷ್ಟು ಪುರುಷ ಮತ್ತು ಮಹಿಳಾ ಸಂವಾದಿಗಳು ಹೌದು ಎಂದು ಮತ್ತು ಪ್ರತಿಶತಃ 46 ಇಲ್ಲ ಎಂದು ಹೇಳಿದ್ದಾರೆ.

ಕೋಷ್ಟಕ 9: ಹೊಸ ಯಂತ್ರಗಳ ಬಳಕೆಯ ಕುರಿತು ಐಸಿರಿ ನೀಡುವ ಮಾಹಿತಿ ನಿಮಗೆ ಉಪಯುಕ್ತವಾಗಿದೆಯೆ

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಹೌದು	15	30%	12	24%
ಇಲ್ಲ	10	20%	13	26%
ಒಟ್ಟು	25	50%	25	50%

ಈ ಕೊಷ್ಟಕದಂತೆ ಕೃಷಿಯಲ್ಲಿ ಅಗುತ್ತಿರುವ ಬದಲಾವಣೆ ಕುರಿತಂತೆ ಮಾಹಿತಿ ನೀಡುತ್ತದೆ ಎಂದು ಪ್ರ ತಿಶತಃ 54 ರಷ್ಟು ಪುರುಷ ಮತ್ತು ಮಹಿಳಾ ಸಂವಾದಿಗಳು ಹೌದು ಎಂದು ಮತ್ತು ಪ್ರತಿಶತಃ 46 ಇಲ್ಲ ಎಂದು ಹೇಳಿದ್ದಾರೆ.

ಕೋಷ್ಟಕ 10: ಕೃಷಿ ಅಭಿವೃದ್ಧಿ ವಿಷಯದಲ್ಲಿ ಉದಯವಾಣಿ ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು.?

	ಪುರುಷರು	ಪ್ರತಿಶತ	ಮಹಿಳೆಯರು	ಪ್ರತಿಶತ
ಸಾದಾರಣವಾಗಿದೆ	05	10%	04	08%
ಚೆನ್ನಾಗಿದೆ	07	14%	08	16%
ತುಂಬಾ ಚೆನ್ನಾಗಿದೆ	05	10%	07	14%
ಉಪಯುಕ್ತವಾಗಿದೆ	08	16%	06	12%
ಒಟ್ಟು	25	50	25	50%

ಕೃಷಿ ಅಭಿವೃದ್ಧಿ ವಿಷಯದಲ್ಲಿ ಉದಯವಾಣಿ ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು ಕುರಿತಾಗಿ ಪುರುಷ ಮತ್ತು ಮಹಿಳಾ ಸಂವಾದಿಗಳು ಪ್ರತಿಶತ 18% ರಷ್ಟು ಸಾದಾರಣವಾಗಿದೆ ಹಾಗೂ ಚೆನ್ನಾಗಿದೆ ಎಂದು 30% ರಷ್ಟು ಜನ ಹಾಗೂ ತುಂಬಾ ಚೆನ್ನಾಗಿದೆ ಎಂದು 24% ರಷ್ಟು ಜನ ಹಾಗೂ ಉಪಯುಕ್ತವಾಗಿದೆ ಎಂದು 28% ಮಹಿಳಾ ಮತ್ತು ಪುರುಷ ಸಂವಾದಿಗಳು ಹೇಳಿರುವುದು ತಿಳಿದುಬಂದಿದೆ.

ಉಪಸಂಹಾರ: ಸಂವಾದಿಗಳ ಉತ್ತರಾವಳಿಗಳನ್ನು ಗಮನಿಸಿದಾಗ ಪತ್ರಕೆಯಲ್ಲಿ ಕೃಷಿಗೆ ಸಂಬಧಿಸಿದಂತೆ ಉತ್ತಮವಾದ ಲೇಖನಿಗಳನ್ನು ಪ್ರಕಟಿಸುತ್ತಿದ್ದು, ಐಸಿರಿ ಪುರವಣಿಯಲ್ಲಿ ಉತ್ತಮ ಮಾಹಿತಿಯೊಂದಿಗೆ ಹೊಸ ತಂತ್ರಜ್ಞಾನಗಳ ಮಾಹಿತಿ ನಿಡುತ್ತಿದೆ ಎಂದು ತಿಳಿದು ಬಂದಿದೆ. ಉದಯವಾಣಿಯ ಐಸಿರಿ ಪುರವಣಿಯ ಪ್ರಕಟವಾಗುತ್ತಿದ್ದು ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಹಿತಿ ನೀಡುತ್ತಾ ಉತ್ತಮವಾಗಿ ಮೂಡಿ ಬರಲಿ ಎಂಬುದು ಸಂವಾದಿಗಳ ಅಭಿಪ್ರಾಯವಾಗಿದೆ.

ಗ್ರಂಥಸೂಚಿ

1. ಜಿ. ಎನ್. ರಂಗನಾಥ್ ರಾವ್, (1965) 'ಪತ್ರಿಕೋದ್ಯಮ' ಕಾಮದೇನು ಪ್ರಕಾಶನ, ಬೆಂಗಳೂರು.
2. ನಾಡಿಗ ಕೃಷ್ಣಮೂರ್ತಿ 'ಭಾರತೀಯ ಪತ್ರಿಕೋದ್ಯಮ', ಮೈಸೂರು ವಿಶ್ವವಿದ್ಯಾಲಯ.
3. ಬಾಲಸುಬ್ರಹ್ಮಣ್ಯಂ ಎ. ಎಸ್. (2009), 'ಮುದ್ರಣ ಮತ್ತು ವಿದ್ಯುನ್ಮಾನ ಮಾದ್ಯಮ ಒಂದು ಅವಲೋಕನ', ಪತ್ರಿಕೋದ್ಯಮ ಪುಸ್ತಕ ಮಾಲೆ, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.
4. ಡಾ. ಸಿ. ಪೂರ್ಣಿಮಾ 'ಆಧುನಿಕ ಸಂವಹನ ಮಾಧ್ಯಮಗಳು', ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
5. ಡಿ. ಯಶೋಧ (2009), 'ಸುದ್ದಿಬಿಂಬ' ಸಂಪಾದಕಿ ಪ್ರಸರಾಂಗ, ಮೈಸೂರು ವಿಶ್ವವಿದ್ಯಾಲಯ ಮುದ್ರಣಾಲಯ.
6. ಡಾ. ನಯನಾ ಗಂಗಾಧರ (2008), 'ಮಾಧ್ಯಮ ಅನುಭಾವಿ' ನೀಲಪರ್ವತ ಪ್ರಕಾಶನ ಧಾರವಾಡ.

ಜೇನು ಸಾಕಾಣಿಕೆ –ಲಾಭದಾಯಕ ಉಪಕಸುಬು

[1]ಜಯಲಕ್ಷ್ಮೀ ನಾರಾಯಣ ಹೆಗಡೆ, [2]ಎಂ. ಕೆ. ನಾಗಮಣಿ [3]ಪುಷ್ಪಾ ಪಿ. ಮತ್ತು [4] ಭಾರತಿ ಬಿ.
[1]ಕಾರ್ಯಕ್ರಮ ಸಂಯೋಜಕರು, ಬ್ರಹ್ಮಾವರ, ಉಡುಪಿ ಜಿಲ್ಲೆ [2] ಸಹ ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು [3] ಸಹಾಯಕ ಪ್ರಾಧ್ಯಾಪಕರು, ತೋಟಗಾರಿಕಾ ಮಹಾವಿದ್ಯಾಲಯ, ಶಿರಸಿ, ಉತ್ತರ ಕನ್ನಡ, [4] ಹಿರಿಯ ಸಂಶೋಧನಾ ಸಹಭಾಗಿ, ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆ ಯೋಜನೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಜೇನು ಮತ್ತು ಜೇನು ಸಾಕಾಣಿಕೆ ಭಾರತದಲ್ಲಿ ತುಂಬಾ ಹಳೆಯದಾದ ಇತಿಹಾಸವನ್ನು ಹೊಂದಿದೆ. ನಾಗರಿಕತೆ ಬೆಳೆದಂತೆಲ್ಲಾ ಜೇನುತುಪ್ಪಕ್ಕೆ ಹೆಚ್ಚಿನ ಒಲವು ಮತ್ತು ಆದ್ಯತೆ ಸಿಗುತ್ತಿದೆ. ಜೇನು ಒಂದು ಪೌಷ್ಠಿಕ ಆಹಾರವಾಗಿದ್ದು, ದಿನನಿತ್ಯ ಆಹಾರದಲ್ಲಿ ಹಾಗೂ ಆರೋಗ್ಯದಲ್ಲಿ ಅದರ ಪಾತ್ರ ಬಹುಮುಖ್ಯವಾಗಿದೆ. ದೇಶದ ಆರ್ಥಿಕ ಸುಧಾರಣೆಗೆ ಜೇನು ಸಾಕಾಣಿಕೆ ಉತ್ತಮ ಪಾಲುಗಾರಿಕೆ ವಹಿಸುತ್ತದೆ. ಜೇನು ಎಂದ ಕೂಡಲೇ ಅದರ ಸಿಹಿ ನೆನಪು ಬರುವುದು, ಬಾಯಲ್ಲಿ ನೀರೂರುವುದು. ಇದರಲ್ಲಿ ಜೇನುಹುಳುವಿನ ಪಾತ್ರ ಬಹಳ ಮಹತ್ವವಾಗಿದೆ. ಜೇನುಸಾಕಾಣಿಕೆ ಹೆಚ್ಚು ಆದಾಯ ತರುವ ಕೃಷಿ ಉದ್ಯಮ. ಕೃಷಿ ಮತ್ತು ತೋಟಗಾರಿಕೆಯಲ್ಲಿ ಜೇನು ಸಾಕಾಣಿಕೆ ಮುಖ್ಯವಾದ ಪಾತ್ರವನ್ನು ಪಡೆಯುತ್ತದೆ. ಬೆಳೆಗಳಲ್ಲಿ ಪರಾಗಸ್ಪರ್ಶಕ್ಕೆ (ಕಾಳು ಕಟ್ಟಲು ಮತ್ತು ಜೀಜ ಉತ್ಪತ್ತಿಯಾಗಲು) ಇದು ಸಹಾಯ ಮಾಡುತ್ತದೆ. ಪರಾಗಸ್ಪರ್ಶ ಮಾಡುವಾಗ ಒಂದು ಜಾತಿಯ ಹೂವಿನಿಂದ, ಅದೇ ಜಾತಿಯ ಮತ್ತೊಂದು ಹೂವಿಗೆ ಹೋಗುವುದು. ಜೇನು ಸಾಕಾಣಿಕೆ ಮಾಡುವವರು, ಜೇನಿನ ಕಾರ್ಯಚಟುವಟಿಕೆಯನ್ನು ತಿಳಿದು, ಬೆಳೆಯ ಹಂಗಾಮಿನಲ್ಲಿ ಹೆಚ್ಚಿನ ಜೇನು ಸಿಗುವಂತೆ ಸಕಾಲಕ್ಕೆ ಸರಿಯಾಗಿ ಹೊಂದಾಣಿಕೆಯನ್ನು ಮಾಡಿ, ಜೇನಿನ ಹೆಚ್ಚಿನ ಇಳುವರಿಯನ್ನು ಪಡೆದು ಲಾಭದಾಯಕ ಜೇನುಕೃಷಿಯನ್ನು ಮಾಡಬಹುದಾಗಿದೆ. ಜೇನು ಸಾಕಾಣಿಕೆಗೆ ಮುಖ್ಯವಾಗಿ ಬೇಕಾಗಿರುವುದು ಮಕರಂದ ಮತ್ತು ಪರಾಗ. ಜೇನು ಸಾಕಾಣಿಕೆ ಹೆಚ್ಚಿನ ಸ್ಥಳಾವಕಾಶ ಬಯಸದ ಮತ್ತು ಹೆಚ್ಚಿನ ಪರಿಕರಗಳನ್ನು ಅವಲಂಬಿಸದ ಒಂದು ಕೃಷಿ ಆಧಾರಿತ ಉಪಕಸುಬು. ಭಾರತದಲ್ಲಿ ಜೇನು ಸಾಕಾಣಿಕೆಗೆ ಸಾಕಷ್ಟು ಅವಕಾಶಗಳಿದ್ದು, ಸುಮಾರು 120 ಮಿಲ್ಲಿಯನ್‌ಗಿಂತ ಹೆಚ್ಚು ಜೇನುಕುಟುಂಬವನ್ನು ಸಾಕಬಹುದಾಗಿದೆ. ಇದರಿಂದ 6 ಮಿಲ್ಲಿಯನ್ ಗ್ರಾಮೀಣ ಮತ್ತು ನಗರ ಪ್ರದೇಶದ ಕುಟುಂಬಗಳಿಗೆ ಸ್ವ–ಉದ್ಯೋಗಾವಕಾಶವನ್ನು ಒದಗಿಸಬಹುದಾಗಿದೆ. ಇದರಿಂದ ಸುಮಾರು 1.2 ಮಿಲ್ಲಿಯನ್ ಟನ್‌ನಷ್ಟು ಜೇನು ತುಪ್ಪ ಮತ್ತು 15 ಟನ್‌ನಷ್ಟು ಜೇನು ಮೇಣವನ್ನು ಉತ್ಪಾದಿಸಬಹುದಾಗಿದೆ. ಕೃಷಿಯ ಉತ್ಪಾದನೆ ಹೆಚ್ಚಿಸಲು ಜೇನುಸಾಕಾಣಿಕೆಯನ್ನು ಒಂದು ಉತ್ತಮ ಮಾಧ್ಯಮವಾಗಿ ಬಳಸಿ, ಕೃಷಿಯ ಇಳುವರಿಯನ್ನು ಹೆಚ್ಚಿಸಬಹುದಾಗಿದೆ. ಸುಮಾರು ಶೇ. 85 ಕ್ಕೂ ಹೆಚ್ಚಿನ ಬೆಳೆಗಳು ಪರಕೀಯ ಪರಾಗಸ್ಪರ್ಶವನ್ನು ಹೊಂದಿದ್ದು, ಅವುಗಳಲ್ಲಿ ಪರಾಗಸ್ಪರ್ಶ ಕ್ರಿಯೆ ನಡೆಯಬೇಕಾದರೆ, ಜೇನು ಕುಟುಂಬಗಳ ಅಗತ್ಯವಿದೆ. ಬೆಳೆಗಳು ಹೂಬಿಡುವ ಹಂತದಲ್ಲಿರುವಾಗ ಜೇನು ಕುಟುಂಬಗಳನ್ನು ಬೆಳೆಗಳ ತೋಟದಲ್ಲಿಟ್ಟು, ಬೆಳೆಗಳಲ್ಲಿ ಬೇಗ ಕಾಳು ಕಟ್ಟುವಂತೆ ಮಾಡಿ ಹೆಚ್ಚಿನ ಇಳುವರಿಯನ್ನು ಪಡೆಯಬಹುದಾಗಿದೆ. ಕಡಿಮೆ ಆಳುಗಳು ಮತ್ತು ಹೆಚ್ಚಿನ ಉದ್ಯೋಗ ಸೃಷ್ಟಿಸುವ ಜೇನು ಸಾಕಾಣಿಕೆಯಲ್ಲಿ ಮಹಿಳೆಯರು ಸಹ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಲಿಕ್ಕೆ ಹೆಚ್ಚಿನ ಮಾರ್ಗ ಕಲ್ಪಿಸುತ್ತದೆ. ಗಂಡಸರು ಸಾಮಾನ್ಯವಾಗಿ ಜೇನು ಕುಟುಂಬಗಳ ನಿರ್ವಹಣೆಯಲ್ಲಿ ತೊಡಗಿಕೊಳ್ಳುತ್ತಿದ್ದು, ಹೆಂಗಸರು ಜೇನು ತುಪ್ಪದ ನಿರ್ವಹಣೆಯನ್ನು ಮಾಡುತ್ತಾರೆ. ಅದರ ಪ್ಯಾಕಿಂಗ್, ಮೌಲ್ಯವರ್ಧನೆ, ಬ್ರಾಂಡಿಗ್, ಇತ್ಯಾದಿ ಮಹಿಳೆಯರ ಕೆಲಸ. ಜೇನು ಸಾಕಾಣಿಕೆಯನ್ನು ಸಮಗ್ರ ಕೃಷಿ ಪದ್ಧತಿಯ ಒಂದು ಅಂಗವಾಗಿ ಅಳವಡಿಸಿ, ಕೃಷಿಕರು ತಮ್ಮ ಕೃಷಿ ಆದಾಯವನ್ನು ಹೆಚ್ಚಿಸಬಹುದಾಗಿದೆ. ಪ್ರಾರಂಭದಲ್ಲಿ ಎರಡು ಪೆಟ್ಟಿಗೆಯನ್ನಿಟ್ಟು ಜೇನು ಸಾಕಾಣಿಕೆಯನ್ನು ಮಾಡಬೇಕು. ಹೆಚ್ಚಿನ ಅನುಭವ ಪಡೆದು, ನಂತರ ಜೇನು ಸಾಕಾಣಿಕೆಯನ್ನು ವಾಣಿಜ್ಯ ಉದ್ಯಮವಾಗಿ ಮಾಡಿದರೆ, ಜೇನು ಸಾಕಾಣಿಕೆ ಲಾಭದಾಯಕವಾಗುತ್ತದೆ. ಎಕರೆಗೆ ಬೇಕಾಗುವ ಜೇನು ಪೆಟ್ಟಿಗೆ ಬೆಳೆಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಒಂದು ಎಕರೆಗೆ 2–3 ಜೇನು ಪೆಟ್ಟಿಗೆ ಬೇಕಾಗುತ್ತದೆ. ಒಂದು ಜೇನು ಪೆಟ್ಟಿಗೆಯಿಂದ ಪ್ರತಿ ವರ್ಷಕ್ಕೆ 6–7 ಕೆ.ಜಿ. ಜೇನು ತುಪ್ಪ ಸಿಗುತ್ತದೆ. ಪ್ರತಿ ಜೇನು ಕುಟುಂಬದಿಂದ ಪ್ರತಿ ವರ್ಷಕ್ಕೆ ಸಿಗುವ ಒಟ್ಟಾರೆ ಲಾಭವನ್ನು ರೂ. 6000–8000 ಅಂದಾಜು ಮಾಡಬಹುದು.

ಪೀಠಿಕೆ : ಜೇನು ಮತ್ತು ಜೇನು ಸಾಕಾಣಿಕೆ ಭಾರತದಲ್ಲಿ ತುಂಬಾ ಹಳೆಯದಾದ ಇತಿಹಾಸವನ್ನು ಹೊಂದಿದೆ. ನಾಗರಿಕತೆ ಬೆಳೆದಂತೆಲ್ಲಾ ಜೇನುತುಪ್ಪಕ್ಕೆ ಹೆಚ್ಚಿನ ಒಲವು ಮತ್ತು ಆದ್ಯತೆ ಸಿಗುತ್ತಿದೆ. ಜೇನು ಒಂದು ಪೌಷ್ಠಿಕ ಆಹಾರವಾಗಿದ್ದು, ದಿನನಿತ್ಯ ಆಹಾರದಲ್ಲಿ ಹಾಗೂ ಆರೋಗ್ಯದಲ್ಲಿ ಅದರ ಪಾತ್ರ ಬಹುಮುಖ್ಯವಾಗಿದೆ. ದೇಶದ ಆರ್ಥಿಕ ಸುಧಾರಣೆಗೆ ಜೇನು ಸಾಕಾಣಿಕೆ ಉತ್ತಮ ಪಾಲುಗಾರಿಕೆ ವಹಿಸುತ್ತದೆ.

ಜೇನು ಎಂದ ಕೂಡಲೇ ಅದರ ಸಿಹಿ ನೆನಪು ಬರುವುದು, ಬಾಯಲ್ಲಿ ನೀರೂರುವುದು. ಇದರಲ್ಲಿ ಜೇನುಹುಳುವಿನ ಪಾತ್ರ ಬಹಳ ಮಹತ್ವ ಉಳ್ಳದ್ದು. ಜೇನು ಇಂದು ಜನಪ್ರಿಯವಾಗುತ್ತಿದೆ. ಬಹಳ ಉಪಯೋಗ ಉಳ್ಳದ್ದು. ಜೊತೆಗೆ ಜೇನುಸಾಕಾಣಿಕೆ ಹೆಚ್ಚು ಆದಾಯ ತರುವ ಉದ್ಯಮ. ಕೃಷಿ ಮತ್ತು ತೋಟಗಾರಿಕೆಯಲ್ಲಿ ಜೇನು ಸಾಕಾಣಿಕೆ ಮುಖ್ಯವಾದ ಪಾತ್ರವನ್ನು ಪಡೆಯುತ್ತದೆ.

ಜೇನುಕೃಷಿಯ ಪ್ರಯೋಜನಗಳು

- ✓ ಬೆಳೆಗಳಲ್ಲಿ ಪರಾಗಸ್ಪರ್ಶಕ್ಕೆ (ಕಾಳು ಕಟ್ಟಲು ಮತ್ತು ಜೀಜ ಉತ್ಪತ್ತಿಯಾಗಲು) ಸಹಾಯ ಮಾಡುತ್ತದೆ. ಪರಾಗಸ್ಪರ್ಶ ಮಾಡುವಾಗ ಒಂದು ಜಾತಿಯ ಹೂವಿನಿಂದ, ಅದೇ ಜಾತಿಯ ಮತ್ತೊಂದು ಹೂವಿಗೆ ಹೋಗುವುದು.
- ✓ ಬೆಳೆಗಳಲ್ಲಿ ಇಳುವರಿ ಹೆಚ್ಚಿಸುತ್ತದೆ (ಶೇ. 20–80 ರಷ್ಟು).
- ✓ಜೇನುತುಪ್ಪ ಮತ್ತು ಉಪ ಉತ್ಪನ್ನಗಳು ದೊರಕುತ್ತವೆ.

ಜೇನು ಸಾಕಾಣಿಕೆ ಮಾಡುವವರು, ಜೇನಿನ ಕಾರ್ಯಚಟುವಟಿಕೆಯನ್ನು ತಿಳಿದು, ಬೆಳೆಯ ಹಂಗಾಮಿನಲ್ಲಿ ಹೆಚ್ಚಿನ ಜೇನು ಸಿಗುವಂತೆ ಸಕಾಲಕ್ಕೆ ಸರಿಯಾಗಿ ಹೊಂದಾಣಿಕೆಯನ್ನು ಮಾಡಿ, ಜೇನಿನ ಹೆಚ್ಚಿನ ಇಳುವರಿಯನ್ನು ಪಡೆದು ಲಾಭದಾಯಕ ಜೇನುಕೃಷಿಯನ್ನು ಮಾಡಬಹುದಾಗಿದೆ. ಜೇನು ಸಾಕಾಣಿಕೆಗೆ ಮುಖ್ಯವಾಗಿ ಬೇಕಾಗಿರುವುದು ಮಕರಂದ ಮತ್ತು ಪರಾಗ. ಜೇನು ಸಾಕಾಣಿಕೆ ಹೆಚ್ಚಿನ ಸ್ಥಳಾವಕಾಶ ಬಯಸದ ಮತ್ತು ಹೆಚ್ಚಿನ ಪರಿಕರಗಳನ್ನು ಅವಲಂಬಿಸದ ಒಂದು

ಕೃಷಿ ಆಧಾರಿತ ಉಪಕಸುಬು. ಭಾರತದಲ್ಲಿ ಜೇನು ಸಾಕಾಣಿಕೆಗೆ ಸಾಕಷ್ಟು ಅವಕಾಶಗಳಿದ್ದು, ಸುಮಾರು 120 ಮಿಲ್ಲಿಯನ್‌ಗಿಂತ ಹೆಚ್ಚು ಜೇನುಕುಟುಂಬವನ್ನು ಸಾಕಬಹುದಾಗಿದೆ. ಇದರಿಂದ 6 ಮಿಲ್ಲಿಯನ್ ಗ್ರಾಮೀಣ ಮತ್ತು ನಗರ ಪ್ರದೇಶದ ಕುಟುಂಬಗಳಿಗೆ ಸ್ವ-ಉದ್ಯೋಗಾವಕಾಶವನ್ನು ಒದಗಿಸಬಹುದಾಗಿದೆ. ಇದರಿಂದ ಸುಮಾರು 1.2 ಮಿಲ್ಲಿಯನ್ ಟನ್‌ನಷ್ಟು ಜೇನು ತುಪ್ಪ ಮತ್ತು 15 ಟನ್‌ನಷ್ಟು ಜೇನು ಮೇಣವನ್ನು ಉತ್ಪಾದಿಸಬಹುದಾಗಿದೆ. ಕೃಷಿಯ ಉತ್ಪಾದನೆ ಹೆಚ್ಚಿಸಲು ಜೇನುಸಾಕಾಣಿಕೆಯನ್ನು ಒಂದು ಉತ್ತಮ ಮಾಧ್ಯಮವಾಗಿ ಬಳಸಿ, ಕೃಷಿಯ ಇಳುವರಿಯನ್ನು ಹೆಚ್ಚಿಸಬಹುದಾಗಿದೆ. ಸುಮಾರು ಶೇ. 85 ಕ್ಕೂ ಹೆಚ್ಚಿನ ಬೆಳೆಗಳು ಪರಕೀಯ ಪರಾಗಸ್ಪರ್ಶವನ್ನು ಹೊಂದಿದ್ದು, ಅವುಗಳಲ್ಲಿ ಪರಾಗಸ್ಪರ್ಶ ಕ್ರಿಯೆ ನಡೆಯಬೇಕಾದರೆ, ಜೇನು ಕುಟುಂಬಗಳ ಅಗತ್ಯವಿದೆ. ಬೆಳೆಗಳು ಹೂಬಿಡುವ ಹಂತದಲ್ಲಿರುವಾಗ ಜೇನು ಕುಟುಂಬಗಳನ್ನು ಬೆಳೆಗಳ ತೋಟದಲ್ಲಿಟ್ಟು, ಬೆಳೆಗಳಲ್ಲಿ ಬೇಗ ಕಾಳು ಕಟ್ಟುವಂತೆ ಮಾಡಿ ಹೆಚ್ಚಿನ ಇಳುವರಿಯನ್ನು ಪಡೆಯಬಹುದಾಗಿದೆ. ಕಡಿಮೆ ಆಳುಗಳು ಮತ್ತು ಹೆಚ್ಚಿನ ಉದ್ಯೋಗ ಸೃಷ್ಟಿಸುವ ಜೇನು ಸಾಕಾಣಿಕೆಯಲ್ಲಿ ಮಹಿಳೆಯರು ಸಹ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಲಿಕ್ಕೆ ಹೆಚ್ಚಿನ ಮಾರ್ಗ ಕಲ್ಪಿಸುತ್ತವೆ. ಗಂಡಸರು ಸಾಮಾನ್ಯವಾಗಿ ಜೇನು ಕುಟುಂಬಗಳ ನಿರ್ವಹಣೆಯಲ್ಲಿ ತೊಡಗಿಕೊಳ್ಳುತ್ತಿದ್ದು, ಹೆಂಗಸರು ಜೇನು ತುಪ್ಪದ ನಿರ್ವಹಣೆಯನ್ನು ಮಾಡುತ್ತಾರೆ. ಅದರ ಪ್ಯಾಕಿಂಗ್, ಮೌಲ್ಯವರ್ಧನೆ, ಬ್ರಾಂಡಿಗ್, ಇತ್ಯಾದಿ ಮಹಿಳೆಯರ ಕೆಲಸ. ಜೇನು ಸಾಕಾಣಿಕೆಯನ್ನು ಸಮಗ್ರ ಕೃಷಿ ಪದ್ಧತಿಯ ಒಂದು ಅಂಗವಾಗಿ ಅಳವಡಿಸಿ, ಕೃಷಿಕರು ತಮ್ಮ ಕೃಷಿ ಆದಾಯವನ್ನು ಹೆಚ್ಚಿಸಬಹುದಾಗಿದೆ.

ಪ್ರಾರಂಭದಲ್ಲಿ ಎರಡು ಪೆಟ್ಟಿಗೆಯನ್ನಿಟ್ಟು ಜೇನು ಸಾಕಾಣಿಕೆಯನ್ನು ಮಾಡಬೇಕು. ಹೆಚ್ಚಿನ ಅನುಭವ ಪಡೆದು, ನಂತರ ಜೇನು ಸಾಕಾಣಿಕೆಯನ್ನು ವಾಣಿಜ್ಯ ಉದ್ಯಮವಾಗಿ ಮಾಡಿದರೆ, ಜೇನು ಸಾಕಾಣಿಕೆ ಲಾಭದಾಯಕವಾಗುತ್ತದೆ.

ಜೇನಿನ ಉತ್ಪನ್ನಗಳ ಉಪಯೋಗಗಳು

ಜೇನುತುಪ್ಪದ ಉಪಯೋಗಗಳು

* ಇದೊಂದು ಆರೋಗ್ಯಕರ ಆಹಾರ.
* 100 ಗ್ರಾಂ. ಜೇನುತುಪ್ಪದಿಂದ 350 ಕ್ಯಾಲರಿಗಳಷ್ಟು ಉಷ್ಣತೆ ದೊರೆಯುತ್ತದೆ.
* ಪ್ರತಿದಿನ ಒಂದು ಚಮಚ ಜೇನುತುಪ್ಪ ಸೇವಿಸುವುದರಿಂದ ಪಚನಕ್ರಿಯೆ, ಆರೋಗ್ಯ, ಶಕ್ತಿ, ದೃಢತೆ, ಆಯಸ್ಸು ಹೆಚ್ಚುತ್ತದೆ.
* ಇದನ್ನು ಎಲ್ಲಾ ಧಾರ್ಮಿಕ ಪೂಜೆ ಮತ್ತು ಪುರಸ್ಕಾರಗಳಲ್ಲಿ ಬಳಸಲಾಗುತ್ತದೆ.
* ಆಯುರ್ವೇದಿಕ್, ಹೋಮಿಯೋಪತಿ, ಯುನಾನಿ ಔಷಧಿಗಳಲ್ಲಿ ಇದನ್ನು ಬಳಸಲಾಗುತ್ತದೆ.
* ಜೇನುತುಪ್ಪ ರಕ್ತವನ್ನು ಶುದ್ಧೀಕರಿಸುತ್ತದೆ.
* ಶೀತ, ಕೆಮ್ಮು, ಜ್ವರ, ಗಂಟಲು ಉರಿ, ಸುಟ್ಟ ಗಾಯಗಳಲ್ಲಿ ಉಪಯೋಗಿಸಲಾಗುತ್ತದೆ.
* ಜೇನುತುಪ್ಪ ರೋಗ ನಿರೋಧಕ ಶಕ್ತಿ ಹೊಂದಿದೆ.

ಜೇನುಮೇಣ : ಕೆಲಸಗಾರ ನೊಣವು ಮೇಣದ ಗ್ರಂಥಿಯಿಂದ ಇದನ್ನು ಉತ್ಪಾದಿಸುತ್ತದೆ. ಜೇನುತುಪ್ಪ, ಪರಾಗ, ಮುಂತಾದವುಗಳನ್ನು ಸಂಗ್ರಹಿಸಲು ಜೇನುನೊಣವು ಎರಿಗಳನ್ನು ಕಟ್ಟುತ್ತದೆ. ಎರಿಗಳನ್ನು ಕಟ್ಟಲು ಜೇನುಮೇಣ ಬೇಕಾಗುತ್ತದೆ.

ಉಪಯೋಗಗಳು

*ಮೇಣದ ಹಾಳೆಗಳ ತಯಾರಿಕೆಯಲ್ಲಿ
*ಕಾಂತಿವರ್ಧಕಗಳ ತಯಾರಿಕೆಯಲ್ಲಿ
*ಔಷಧಿಗಳ ತಯಾರಿಕೆಯಲ್ಲಿ
*ಕ್ಯಾಂಡಲ್, ವ್ಯಾಸಲಿನ್, ಚರ್ಮದ ಮುಲಾಮುಗಳ ತಯಾರಿಕೆಯಲ್ಲಿ
* ಪೀಠೋಪಕರಣಗಳಿಗೆ ಹೊಳಪನ್ನು ಕೊಡಲ ಜೇನುಮೇಣವನ್ನು ಬಳಸುತ್ತಾರೆ.

ರಾಜಶಾಯಿ ರಸ: ಕೆಲಸಗಾರ ನೊಣಗಳು ಮೊದಲಿನ ಎರಡು ವಾರಗಳ ವಯಸ್ಸಿನಲ್ಲಿ ಹಾಲಿನ ಬಣ್ಣದ " ರಾಜಶಾಯಿರಸ" ವನ್ನು ಸ್ರವಿಸುತ್ತವೆ. ಮರಿ ಹುಳುಗಳಿಗೆ "ರಾಜಶಾಯಿ ರಸ" ಆಹಾರವಾಗಿ ನೀಡಿದಾಗ ರಾಣಿನೊಣವಾಗಿ ಬೆಳೆಯುತ್ತವೆ.

ಉಪಯೋಗಗಳು

✓ ಮಲಬದ್ಧತೆ, ರಕ್ತದ ಒತ್ತಡ, ನೆಗಡಿ ಇತ್ಯಾದಿಗೆ ಔಷಧಿಯಾಗಿದೆ.
✓ ರೋಗ ನಿರೋಧಕ ಶಕ್ತಿ ಕೊಡುತ್ತದೆ.

ಜೇನು ಅಂಟು: ಇದು ಮೆತ್ತಿಕೊಳ್ಳುವ ವಸ್ತುವಾಗಿದೆ. ಗೂಡಿನಲ್ಲಿ ಬೇಡದ ಜಾಗದಲ್ಲಿ ಖಾಲಿ ಎರಿಗಳಲ್ಲಿ ಪೆಟ್ಟಿಗೆಯ ಸಂದುಗಳಲ್ಲಿ ಶೇಖರಿಸುತ್ತವೆ. ಕುಟುಂಬದ ರಕ್ಷಣೆಗೆ ಇದು ಅಗತ್ಯ. ತುಡುವೆ ಜೇನು ಇದನ್ನು ಸಂಗ್ರಹಿಸುವುದಿಲ್ಲ.

ಉಪಯೋಗಗಳು

• ಔಷಧೀಯ ಗುಣ ಹೊಂದಿದೆ.
• ಅಂಟನ್ನು ಚರ್ಮರೋಗ, ಹುಣ್ಣು, ಸುಟ್ಟಗಾಯ, ಸುಟ್ಟ, ಚರ್ಮಗಳಿಗೆ ಉಪಯೋಗಿಸುತ್ತಾರೆ.
• ಸೌಂದರ್ಯವರ್ಧಕಗಳಲ್ಲೂ ಬಳಸುತ್ತಾರೆ.

ಜೇನು ವಿಷ: ಜೇನು ವಿಷವು ಪಾರದರ್ಶಕವಾಗದೆ. ಕಟುವಾದ ವಾಸನೆ ಕಹಿ ಅಂಶ ಹೊಂದಿದೆ.

ಉಪಯೋಗಗಳು

*ಊತದ ಖಾಯಿಲೆಯಲ್ಲಿ, ಹೃದ್ರೋಗಕ್ಕೆ, ಸಂಧಿವಾತದಲ್ಲಿ ಇದನ್ನು ಉಪಯೋಗಿಸುತ್ತಾರೆ.
ಜೇನು ವಿಷದ ಅಲರ್ಜಿ ಇರುವವರು 25 ಮಿಲಿಗ್ರಾಂ ಅವಿಲ್ ಮಾತ್ರೆ ತೆಗೆದುಕೊಳ್ಳಬೇಕು.

ಜೇನು ಪರಾಗ: ಇದು ವಿವಿಧ ಸಸ್ಯಗಳಿಂದ ಸಂಗ್ರಹಿಸಿದ ನೈಸರ್ಗಿಕ ವಸ್ತು. ಇದು ಜೇನುನೊಣಗಳ ಪ್ರಮುಖ ಆಹಾರ.

ಉಪಯೋಗಗಳು

* ಮನುಷ್ಯನಿಗೆ ಪೌಷ್ಟಿಕ ಆಹಾರವಾಗಿ ಬಳಸಬಹುದು. ಒಂದು ಜೇನು ಕುಟುಂಬವು ಸರಾಸರಿ 40–50 ಕೆ.ಜಿ. ಪರಾಗವನ್ನು ಶೇಖರಿಸುತ್ತದೆ.

ಒಂದು ಎಕರೆಗೆ ಬೇಕಾಗುವ ಜೇನು ಪೆಟ್ಟಿಗೆಯ ವಿವರ ಮತ್ತು ಅದರಿಂದ ಬರುವ ಲಾಭ

• ಎಕರೆಗೆ ಬೇಕಾಗುವ ಜೇನು ಪೆಟ್ಟಿಗೆ ಬೆಳೆಯನ್ನು ಅವಲಂಬಿಸಿರುತ್ತದೆ.

ಸಾಮಾನ್ಯವಾಗಿ ಒಂದು ಇಕರೆಗೆ 2–3 ಜೇನು ಪೆಟ್ಟಿಗೆ ಬೇಕಾಗುತ್ತದೆ. ಒಂದು ಜೇನು ಪೆಟ್ಟಿಗೆಯಿಂದ ಪ್ರತಿ ವರ್ಷಕ್ಕೆ 6–7 ಕೆ.ಜಿ. ಜೇನು ತುಪ್ಪ ಸಿಗುತ್ತದೆ.

- ಪ್ರತಿ ಕೆ.ಜಿ. ಜೇನು ತುಪ್ಪದ ದರ: ರೂ. 200/– ಒಟ್ಟಾರೆ ಆದಾಯ: ರೂ. 1200– 1400/–
- ಪ್ರತಿ ಜೇನು ಕುಟುಂಬದಿಂದ ಪ್ರತಿ ವರ್ಷ ಇನ್ನೊಂದು ಕುಟುಂಬವನ್ನು ಮಾಡಬಹುದು.
- ಪ್ರತಿ ಜೇನು ಕುಟುಂಬದ ದರ : ರೂ. 1600/–
- ಪ್ರತಿ ಜೇನು ಕುಟುಂಬದಿಂದ ಪ್ರತಿ ವರ್ಷ ಸಿಗುವ ಜೇನು ಮೇಣ: 500 ಗ್ರಾಂ. ಅದರಿಂದ ಸಿಗುವ ಆದಾಯ: ರೂ. 150/–
- ಪರಾಗಸ್ಪರ್ಷದಿಂದ ಬೆಳೆಯ ಇಳುವರಿಯಲ್ಲಿ ಹೆಚ್ಚಳ: ಶೇ. 20–60
- ಪ್ರತಿ ಜೇನು ಪಟ್ಟಿಗೆಯಿಂದ ಪ್ರತಿ ವರ್ಷ ಸಿಗುವ ಲಾಭ: ರೂ 2950–3240/–. ಇದರ ಜೊತೆ ಬೆಳೆಯ ಇಳುವರಿ ಶೇ. 20–80 ರಷ್ಟು ಹೆಚ್ಚಾಗುತ್ತದೆ. ಒಟ್ಟಾರೆ ನಿವ್ವಳ ಲಾಭವನ್ನು ಬೆಳೆಯ ಇಳುವರಿಯನ್ನು ಸಹ ತೆಗೆದುಕೊಂಡರೆ ಕನಿಷ್ಟ ರೂ. 6000–8000 ಅಂದಾಜು ಮಾಡಬಹುದು.

ಮಿಡಿ ಮಾವುಗಳ ರಸದಲ್ಲಿ ಸೂಕ್ಷ್ಮಜೀವಿಯ ಸಂತಾನೋತ್ಪತ್ತಿತಡೆಯುವ ಶಕ್ತಿ ಇದಿಯೇ?

ಬಿ. ತಾಂಬಟ್, ಮಹಮ್ಮದ ಸನಾವುಲ್ಲಾ ಕೆ. ಹುದ್ದಾರ, ಚೈತ್ರ ಜಿ. ಎನ್. ಮತ್ತು ಗಿರೀಶ ಹೆಚ್. ಸಿ.
ಬೆಳ ಶರೀರ ಕ್ರಿಯಾಶಾಸ್ತ್ರ ವಿಭಾಗ, ಕೃಷಿ ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, (ಕೃ.ವಿ.ವಿ.ಬೆಂ.) ಕಾರೆಕೆರೆ, ಹಾಸನ

ಮಿಡಿ ಮಾವು ಮಲೆನಾಡಿನಲ್ಲಿ ಉಪ್ಪಿನಕಾಯಿಗೆ ಹೆಸರು ವಾಸಿಯಾಗಿರುವ ಒಂದು ಜಾತಿಯ ಮಾವು. ಅದರ ಉಪ್ಪಿನಕಾಯಿ ವಿಶೇಷವಾದ ರುಚಿ, ಪರಿಮಳ, ಹಾಗೂ ಸುವಾಸನೆಯನ್ನು ಹೊಂದಿರುತ್ತದೆ. ಮಿಡಿ ಮಾವು ಮರಗಳು ಸಾಮಾನ್ಯವಾಗಿ ನದಿ, ಹಳ್ಳ, ಇತ್ಯಾದಿ ಪ್ರದೇಶಗಳ ದಡದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕೆಲವರು ಮಿಡಿ ಮಾವನ್ನು ಸಂಗ್ರಹಿಸಿ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಅಂತೆಯೇ ಮಿಡಿಮಾವು ಹಲವಾರು ಅರಣ್ಯದ ಉಪ ಉತ್ಪನ್ನಗಳಲ್ಲಿ ಒಂದು. ಈ ಜಾತಿಯ ಮರಗಳು ಪಶ್ಚಿಮ ಘಟ್ಟಗಳಿಗೆ ಸಿಮೀತವಾಗಿವೆ ಮತ್ತು ಅವುಗಳ ಅಧಿಕ ಬಳಕೆಯಿಂದ ನಸಿಶಿ ಹೋಗುತ್ತಿವೆ ಅಂತ ಕೆಲವರ ಅಭಿಪ್ರಾಯ. ಇತರ ಮಾವಿನ ಉಪ್ಪಿನಕಾಯಿ ಹಲವು ತಿಂಗಳವರೆಗೆ ಕೆಡದೆ ಉಳಿದರೆ ಮಿಡಿಮಾವಿನ ಉಪ್ಪಿನಕಾಯಿ ಹಲವು ವರ್ಷಗಳವರೆಗೆ ಸಂಗ್ರಹಿಸಿಡಬಹುದು. ಅದು ಕೂಡ ಯಾವುದೇ ರಾಸಾಯನಿಕ ವಸ್ತುವಿನ (ಪ್ರಿಜರ್‌ವೆಟೀವ್) ಸಹಾಯವಿಲ್ಲದೆ!. ಈ ವಿಶೇಷ ಗುಣವನ್ನು ಗಮನಿಸಿ, ಮಿಡಿ ಮಾವಿನಲ್ಲಿ ಸೂಕ್ಷ್ಮಜೀವಿ ನಿರೋಧಕ ಶಕ್ತಿ ಇರಬಹುದು ಅಂತ ಊಹಿಸಿದೆವು ಮತ್ತು ಅದನ್ನು ಅರಿಯಲು (ಪರೀಕ್ಷಿಸಲು) ಒಂದು ಪ್ರಯೋಗವನ್ನು ಕೈಗೊಂಡೆವು. ಅದರಲ್ಲಿ ನಾಲ್ಕು ವೈವಿಧ್ಯಮಯ ವಂಶವಾಹಿಗಳುಳ್ಳ ಮಿಡಿಮಾವು ಮತ್ತು ಎರಡು ಮಾವಿನ ಹಣ್ಣಿನ ತಳಿಗಳನ್ನು ಪರೀಕ್ಷಾರ್ಥವಾಗಿ ಬಳಸಿಕೊಳ್ಳಲಾಯಿತು. ಮೊದಲಿಗೆ ಮಿಡಿ ಜಾತಿಯ ಹಾಗೂ ಹಣ್ಣಿನ ಮಾವಿನ ಜಾತಿಯ ಕಾಯಿಗಳನ್ನು ಪ್ರಯೋಗಾಲಯಕ್ಕೆ ತಂದು ಅವುಗಳಿಂದ ರಸವನ್ನು (ಸೊನೆ) ಸಂಗ್ರಹಿಸಿದೆವು. ನಂತರ ಪೆಟ್ರಿಪ್ಲೆಟ್‌ನಲ್ಲಿ ಎರಡು ಜಾತಿಯ ಶಿಲೀಂಧ್ರಗಳನ್ನು ಆಲೂಗೆಡ್ಡೆಮಿಶ್ರಿತ ಮಾಧ್ಯಮದಲ್ಲಿ (ಪೊಟ್ಯಾಟೊ ಡೆಕ್ಸ್ಟ್ರೋಸ್ ಅಗಾರ್) ಬೆಳೆಸಲಾಯಿತು. ಈ ಶಿಲೀಂಧ್ರಗಳಲ್ಲಿ ಮೊದಲನೆಯದು, ಫೂಜೇರಿಯ್ ಓಕ್ಸಿಸ್ಪೊರಮ್ ಇದು ಟೊಮ್ಯಾಟೊ, ಕರಿ ಮೆಣಸು, ಕಡಲೆ, ಮುಂತಾದ ಬೆಳೆಗಳಲ್ಲಿ ಸೊರಗು ರೋಗ ಬಠಲು ಕಾರಣವಾಗುವ ಸೂಕ್ಷ್ಮಜೀವಿ. ಮತ್ತೊಂದು ಟ್ರೈಕೊಡರ್ಮ ವಿರಿಡೇ, ಇದು ಇತರ ಹಾನಿಕಾರಕ ಸೂಕ್ಷ್ಮಜೀವಿ ನಿಯಂತ್ರಿಸಲು ಬಳಸುವ ನೈಸರ್ಗಿಕ ಶಿಲೀಂಧ್ರನಾಶಕ. ಮಿಡಿ ಮಾವಿನಲ್ಲಿನ ಸೂಕ್ಷ್ಮಜೀವಿ ನಿರೋಧಕ ಶಕ್ತಿ ತಿಳಿಯಲು, ದ್ವಿವಿಧ ಪದ್ಧತಿಯನ್ನು ಅಳವಡಿಸಲಾಯಿತು. ಆಲೂಗಡ್ಡೆಮಿಶ್ರಿತ ಮಾಧ್ಯಮದಲ್ಲಿ ಶಿಲೀಂಧ್ರಗಳನ್ನು ಬಳಸಿ ಸೋಂಕು ಸೇರಿಸಲಾಯಿತು. ತದನಂತರ 3, 5 ಮತ್ತು 10ನೇ ದಿನ ದಂದು ಸೂಕ್ಷ್ಮಜೀವಿಗಳ ಬೆಳವಣಿಗೆಯನ್ನು ಗಮನಿಸಲಾಯಿತು. ಮಿಡಿ ಮಾವಿನ ಸೊನೆಯನ್ನು ಆಲೂಗಡ್ಡೆಮಿಶ್ರಿತ ಮಾಧ್ಯಮದಲ್ಲಿ ಬೆರೆಸುವುದರಿಂದ ನಾವು ಬಳಸಿದ ಎರಡೂ ಶಿಲೀಧ್ರಗಳ ಬೆಳವಣಿಗೆ ಕುಂಠಿತಗೊಂಡು ಸಂತಾನೋತ್ಪತ್ತಿ ನಿಂತು ಹೋಗಿರುವುದನ್ನು ಗಮಿನಿಸಿದೆವು. ಆದರೆ ಇಂತಹ ಬೆಳವಣಿಗೆ ನಮಗೆ ಹಣ್ಣಿನ ಮಾವಿನ ರಸದಿಂದ ಕಂಡುಬರಲಿಲ್ಲ. ನಮ್ಮ ಪ್ರಯೋಗ ಮಿಡಿ ಮಾವುಗಳ ರಸದಲ್ಲಿ ಸೂಕ್ಷ್ಮಜೀವಿಯ ಸಂತಾನೋತ್ಪತ್ತಿ ತಡೆಯುವ ಶಕ್ತಿ ಇದೆ ಎಂದು ಸೂಚಿಸುತ್ತಿದೆ. ಹಾಗಾಗಿ ಮಿಡಿ ಮಾವಿನ ರಸದಿಂದ ಕರಿ ಮೆಣಸಿನಲ್ಲಿ ಬರುವ ಸೊರಗು ರೋಗವನ್ನು ನಿಯಂತ್ರಿಸಬಹುದು ಅಂತ ಭಾವಿಸುತ್ತೆವೆ. ಜೊತೆಗೆ ಹೆಚ್ಚಿನ ಸಂಶೋಧನೆ ಮೂಲಕ ಮಿಡಿ ಮಾವಿನಲ್ಲಿರುವ ಸೂಕ್ಷ್ಮಜೀವಿ ನಿರೋಧಕ ಶಕ್ತಿಇರುವ ಅಂಶ ಯಾವುದೆಂದು ಕಂಡು ಹಿಡಿಯುವುದು ಹಾಗೂ ಇತರ ಸೂಕ್ಷ್ಮಜೀವಿಗಳ ಮೇಲೆ ಆಗುವ ಪರಿಣಾಮವನ್ನು ತಿಳಿಯಬಹುದು.

ಪರಿಚಯ: ಪ್ರಾಚೀನ ಕಾಲದಿಂದಲೂ ಜನ ಊಟಕ್ಕೆ ಉಪ್ಪಿನಕಾಯಿ ಇಲ್ಲದೆ ಸಂಪೂರ್ಣವಾಗುವುದಿಲ್ಲ ಎಂದು ಹೇಳುತ್ತಾರೆ. ಕರ್ನಾಟಕದ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಪ್ರಸಿದ್ಧವಾದ ಮಿಡಿಮಾವು ತುಂಬಾ ರುಚಿಕರವಾದ ವಿಶಿಷ್ಟ ಪರಿಮಳ ಹೊಂದಿದ ಉಪ್ಪಿನಕಾಯಿಗೆ ಹೆಸರುವಾಸಿಯಾಗಿದೆ. ಮಿಡಿಮಾವು ಉಪ್ಪಿನಕಾಯಿ ಬಗ್ಗೆ ಕುತುಹಲಕಾರಿ ವಿಷಯವೇನೆಂದರೆ ಸಾಮಾನ್ಯ ಉಪ್ಪಿನಕಾಯಿಯ ಹಾಗೆ ಇದು ಬೇಗ ಕೆಡುವುದಿಲ್ಲ ಅದರೆ ಮಿಡಿಉಪ್ಪಿನಕಾಯಿ 1–3 ವರ್ಷ ಕಾಲ ಯಾವುದೇ ರಾಸಾಯನಿಕ ಸಂರಕ್ಷಕಗಳಿಲ್ಲದೇ (ಪ್ರಿಜರ್‌ವೆಟೀವ್) ಇಡಬಹುದು. ಮಾವಿನ ವಿವಿಧ ಜಾತಿಗಳನ್ನು ಆಧರಿಸಿ ಅನುಕ್ರಮ ವಾಗಿ ಸಿಪ್ಪೆ ಮತ್ತು ಬೀಜ ಸುಮಾರು 15–20% ಮತ್ತು ಇಡೀ ಹಣ್ಣಿನ ತೂಕದ 10–25% ರಷ್ಟು ಹೊಂದಿರುತ್ತದೆ. ಮಾವಿನ ಕೈಗಾರಿಕಾ ಪ್ರಕ್ರಿಯೆಯ ನಂತರ ಸಿಪ್ಪೆ ಮತ್ತು ಬೀಜ ಗಣನೀಯ ಪ್ರಮಾಣದ ಆರ್ಥಿಕ ತಯಾರಕ ನಷ್ಟ ಹಾಗೂ ಪರಿಸರದ ಮೇಲೆ ಪ್ರಭಾವ ಬೀರುತ್ತದೆ (ಪುರವಾಂಕರ ಮತ್ತು ಇತರರು, 2007) ಉದಾಹರಣೆಗೆ ಭಾರತದ ಮಾವಿನ ಉದ್ಯಮವು ವಾರ್ಷಿಕವಾಗಿ ಸುಮಾರು (3–15 ಟನ್ ಬೀಜಗಳನ್ನು ಉತ್ಪಾದಿಸುತ್ತದೆ). ಹಲವಾರು ಅಧ್ಯಯನಗಳ ಪ್ರಕಾರ

ಸಸ್ಯರಾಸಾಯನಿಕ ಸಂಯುಕ್ತಗಳು ತಿನ್ನುವ ಹಣ್ಣಿಗೆ ಹೋಲಿಸಿದರೆ ಸಿಪ್ಪೆ ಮತ್ತು ಬೀಜದಲ್ಲಿ ಹೆಚ್ಚಿರುತ್ತದೆ. ಇತರ ಮಾವಿನ ಉಪ್ಪಿನಕಾಯಿ ಹಲವು ತಿಂಗಳವರೆಗೆ ಕೆಡದೆ ಉಳಿದರೆ ಮಿಡಿಮಾವಿನ ಉಪ್ಪಿನಕಾಯಿ ಹಲವು ವರ್ಷಗಳವರೆಗೆ ಸಂಗ್ರಹಿಸಿಡಬಹುದು. ಅದು ಕೂಡ ಯಾವುದೇ ರಾಸಾಯನಿಕ ವಸ್ತುವಿನ (ಪ್ರಿಜರ್‌ವೆಟೀವ್) ಸಹಾಯ ವಿಲ್ಲದೆ. ಜೊತೆಗೆ ನಮ್ಮ ಇತರ ಅಧ್ಯಯನದ ಸಮಯದಲ್ಲಿ ಗಮನಿಸಿದಂತೆ ಇಡಿ ಮಿಡಿಮಾವು ಹಣ್ಣುಗಳ ಮೇಲೆ ಸೂಕ್ಷ್ಮಾಣು ಜೀವಿಗಳ ಪ್ರಭಾವ ಕಡಿಮೆ ಇತ್ತು. ಅದ್ದರಿಂದ ಈ ಹಣ್ಣುಗಳು ಕೆಲವು ಸೂಕ್ಷ್ಮಾಣುಜೀವಿ ನಿರೋಧಕ ಸಂಯುಕ್ತಗಳನ್ನು ಹೊಂದಿವೆ ಎಂಬ ಕಲ್ಪನೆಯಿಂದ ನಾವು ಪ್ರಯೋಗಾಲಯದಲ್ಲಿ ಕೆಲವು ಮಣ್ಣಿನ ಮೂಲದ ಶಿಲೀಂಧ್ರಗಳ ವಿರುದ್ಧ ಹಣ್ಣಿನ ಸೊನೆಯ ಸೂಕ್ಷ್ಮದರ್ಶಕೀಯ ಜೀವಿ ಚಟುವಟಿಕೆಯನ್ನು ಪರೀಕ್ಷಿಸಲು ಪ್ರಯೋಗ ನಡೆಸಿದೆವು.

ವಸ್ತುಗಳು ಮತ್ತು ವಿಧಾನ : ಕರ್ನಾಟಕದ ಪಶ್ಚಿಮ ಘಟ್ಟಗಳಿಂದ ಅಪ್ಪೆ, ಜೀರಿಗೆ ಮತ್ತು ಸಾದಾ ಮಿಡಿ ಎಂಬ ಮೂರು ಮಿಡಿಮಾವಿನ ತಳಿಗಳನ್ನು ಸಂಗ್ರಹಿಸಿ ಎರಡು ಸಾಮಾನ್ಯ ಮಾವುಗಳನ್ನು ವ್ಯತ್ಯಾಸ ಗುರುತಿಸಲು ಉಪಯೋಗಿಸಿಕೊಂಡೆವು. ಆರಂಭದಲ್ಲಿ ಕಾಯಿಗಳನ್ನು ಪ್ರತ್ಯೇಕವಾಗಿ ಹಿಸುಕಿ ಎಲ್ಲ ತಳಿಗಳ ತಾಜಾ ಸೊನೆಯನ್ನು ಪಡೆದುಕೊಂಡೆವು. ಸೊನೆಯನ್ನು ನಂತರ ಪಿಚಕಾರಿ ಶೋಧಕಗಳ (0.22 ಮೈಕ್ರೋ. ಲೀ.) ಮೂಲಕ ಕ್ರೀಮಿ ಶುದ್ಧೀಕರಿಸಿದ ನಳಿಕೆಗಳಲ್ಲಿ ಶೇಖರಿಸಲಾಯಿತು. ಎರಡು ಜಾತಿಯ ಶಿಲೀಂಧ್ರ, ಪ್ಯೂಸೇರಿಯಂ ಆಕ್ಸಿಸ್ಪೋರಮ್ ಮತ್ತು ಟ್ರೈಕೊಡರ್ಮಾ ವಿರಿಡೆಗಳ ಸೂಕ್ಷ್ಮದರ್ಶಕೀಯ ಜೀವಿ ಚಟುವಟಿಕೆಗಳನ್ನು ಪರೀಕ್ಷಿಸಲು ಆಯ್ಕೆ ಮಾಡಲಾಯಿತು. ಸುಮಾರು 100 ಮಿ. ಲೀ. ಶೋಧಿಸಿದ ಸೊನೆಯನ್ನು ಆಲೂಗಡ್ಡೆ ಡೆಕ್ಸ್ಟ್ರೋಸ್ ಅಗಾರನಲ್ಲಿ ಹಾಕಿ 5 ಮಿ. ಮೀ. ನಷ್ಟು ಅಗಾರ ಬಿಲ್ಲೆಯಲ್ಲಿರುವ ಪರೀಕ್ಷಾ ಶಿಲೀಂಧ್ರದ ಬಿಲ್ಲೆಗಳನ್ನು ಅಗಾರ್ ಬಾವಿಗಳಿಗೆ ಕರ್ಣೀಯವಾಗಿ ಎದುರಾಗಿ 3 ಸೆಂ.ಮೀ. ದೂರದಲ್ಲಿ ಇಟ್ಟು ಇದನ್ನೂ 30^0 ಸಿ ಉಷ್ಣಾಂಶದಲ್ಲಿ ಕಾವಿಡಲಾಯಿತು. ಇದೇ ತರಹ ಪ್ರತಿ ಶಿಲೀಂಧ್ರಕ್ಕೆ ಹಣ್ಣಿನ ಸೊನೆಯ ಬದಲು ಬಟ್ಟಿಇಳಿಸಿದ ನೀರನ್ನು ಹಾಕಿ ನಿಯಂತ್ರಣಕ್ಕೆಂದು ಇಡಲಾಯಿತು. ಜೊತೆಗೆ ತುಲನೆ ಮಾಡಲು ಹಣ್ಣಿನ ಮಾವುಗಳ ರಸವನ್ನು ಸಹ ಇಡಲಾಯಿತು. ಈ ಪ್ರಯೋಗವನ್ನು 3 ಪ್ರತಿಕೃತಿಗಳಲ್ಲಿ ಮಾಡಲಾಲಾಯಿತು. ಪರೀಕ್ಷಾ ಶಿಲೀಂಧ್ರದ ಬೆಳವಣಿಗೆಯನ್ನು 3, 5 ಮತ್ತು 10 ದಿನಗಳ ನಂತರ ವಸಾಹತು ಪ್ರದೇಶ ಅಳೆಯುವ ಮೂಲಕ ಸೊನೆ ಹಾಕಿದ್ದ ತಟ್ಟೆ ಹಾಗೂ ನಿಯಂತ್ರಣ ತಟ್ಟೆಗಳ ಜೊತೆ ಹೋಲಿಸಲಾಯಿತು.

ಫಲಿತಾಂಶಗಳು ಮತ್ತು ಚರ್ಚೆ: ಪ್ಯೂಸೇರಿಯಂ ಆಕ್ಸಿಸ್ಪೋರಮ್ ಮತ್ತು ಟ್ರೈಕೊಡರ್ಮಾ ವಿರಿಡೆ ಸೂಕ್ಷ್ಮಜೀವಿಗಳ ಬೆಳವಣಿಗೆಯನ್ನು 3, 5 ಮತ್ತು 10ನೇ ದಿನ ದಂದು ಬೇರೆ ಬೇರೆ ಮಿಡಿಮಾವು ತಳಿಗಳ ಸೊನೆಯನ್ನು ಹಾಕಿ ಇಟ್ಟ ಅಗಾರ್ ತಟ್ಟೆಗಳಲ್ಲಿ ಗಮನಿಸಲಾಯಿತು. 3 ಮತ್ತು 5ನೆ ದಿನ ದಂದು ಮಿಡಿ ಮಾವಿನ ಸೊನೆಯನ್ನು ಆಲೂಗಡ್ಡೆಮಿಶ್ರಿತ ಮಾಧ್ಯಮದಲ್ಲಿ ಬೆರೆಸುವುದರಿಂದ ಎರಡೂ ಶಿಲೀಧ್ರಗಳ ಬೆಳವಣಿಗೆ ಕುಂಠಿತಗೊಳ್ಳುವುದನ್ನು ಗಮಿನಿಸಿದೆವು. ಇಂತಹ ಬೆಳವಣಿಗೆ ಹಣ್ಣಿನ ಮಾವಿನಲ್ಲು ಕಂಡಿತು, ಆದರೆ ಮಿಡಿಮಾವಿನ ತುಲನೆಯಲ್ಲಿ ಕಡಿಮೆ ಎನಿಸಿತು (ಚಿತ್ರ 1, 3 ಮತ್ತು 3). 5ನೆ ದಿನದ ನಂತರ ಮಿಡಿಮಾವುಗಳಾದ ಸಾದಾಮಿಡಿ, ಅಪ್ಪೆ ಮಿಡಿ, ಜೀರಿಗೆ ಇಟ್ಟ ಮಾವುಗಳಲ್ಲಿ ಸೂಕ್ಷ್ಮಜೀವಿಗಳ ಬೀಜಕ ಆಗುವುದನ್ನು ಅಡ್ಡಿಪಡಿಸಿದ್ದವು. ಆದರೆ 3ನೆ ದಿನದ ನಂತರ ಎರಡು ಹಣ್ಣಿನ ಮಾವುಗಳ ರಸ ಹಾಕಿದ ತಟ್ಟೆಗಳಲ್ಲಿ ಶಿಲೀಂಧ್ರಗಳ ಬೀಜಕ ಬೆಳವಣಿಗೆಯನ್ನು ಗಮನಿಸಲಾಯಿತು. ಅಂದರೆ, ಹಣ್ಣಿನ ಮಾವು 3 ದಿನದ ವರೆಗೆ ಶಿಲೀಂಧ್ರಗಳ ಬೀಜೋತ್ಪಾದನೆಯನ್ನು ತಡಯಬಲ್ಲದು ಆದರೇ, ಮಿಡಿಮಾವು 5 ನೇ ದಿನದವರೆಗೆ ತಡಯಬಲ್ಲದು. ಹಣ್ಣಿನ ಮಾವಿನ ಈ ಗುಣವನ್ನು ಈಗಾಗಲೇ ನೇಗಿ ಮತ್ತು ಇತರರು, (2002) ಗಮನಿಸಿರುತ್ತಾರೆ. 10 ನೆ ದಿನ ದಂದು ಎಲ್ಲ ತಟ್ಟೆಗಳಲ್ಲಿ ಗಮನಾರ್ಯ ಪ್ರಮಾಣದಲ್ಲಿ ಶಿಲೀಧ್ರಗಳ ಬೆಳವಣಿಗೆಯನ್ನು ಕಂಡೆವು.

ಹೀಗಾಗಲು ಕಾರಣವೆನೆಂದರೆ, ಮಿಡಿಮಾವಿನ ಹಣ್ಣಿನ ಸೊನೆಯಲ್ಲಿ ಕೆಲವು ಸೋಕ್ಷ್ಮಾಣು ನಿರೊಧಕ ಶಕ್ತಿಹೋಂದಿರುವ ಹಾರಿಹೋಗುವ ಪದಾರ್ಥಗಳಿರಬಹುದು. ಹಾಗಾಗಿ, ಆ ಪದಾರ್ಥಗಳು ಇರುವವರೆಗೆ ಪೆಟ್ರಿ ತಟ್ಟೆಯಲ್ಲಿರುವ ಸೂಕ್ಷ್ಮ ಜೀವಿಗಳ ಬೆಳವಣಿಗೆಯನ್ನು ತಡೆ ಹಿಡಿದಿದ್ದವು (ಕುಂಠಿತಗೊಳಿಸು). ಆದರೆ, ಆ ಪದರ್ಥಗಳು ಕೆಲ ದಿನಗಳ ನಂತರ ಹಾರಿ ಹೊಗುವುದರಿಂದ ಆ ಪೆಟ್ರಿ ತಟ್ಟೆಗಳಲ್ಲಿ ನಾವು ಪರಿಕ್ಷಿಸಿದ ಎರಡು ಸೊಕ್ಷ್ಮಾಣು ಜೀವಿಗಳ ಬೆಳವಣಿಗೆ ಕಂಡಿತು. ಮಿಡಿಮಾವಿನ ರಸ ಸೋಕ್ಷ್ಮಾಣು ಜೀವಿಗಳ ಆಗಮನವನ್ನು ಮತ್ತು ಆವುಗಾಲ ನಿಯಂತ್ರಣದಲ್ಲಿಯೊ ಸಹಕಾರಿಯಾಗಬಹುದು.

ಎಲ್ಲ ಮಿಡಿಮಾವುಗಳು ಶಿಲೀಂಧ್ರದ ಬೆಳವಣಿಗೆಯನ್ನು ತೋರಿಸಿದವು, ಅದರೆ ಅದೆಲ್ಲ ಬೇರೆ ಬೇರೆ ಸಮಯದಲ್ಲಿ ಬೆಳವಣಿಗೆಯಾಗಿದ್ದುದು ವಿಶೇಷವಾಗಿ ಮಿಡಿಮಾವಿನ ತಳಿಗಳಲ್ಲಿ ಬೀಜಕ ಉತ್ಪಾದನೆ ಹಾಗೂ ಬೆಳವಣಿಗೆ ವಿಳಂಬ ಮಾಡುವ ಗುಣವನ್ನು ಗಮನಿಸಿದೆವು ಹಾಗೂ ಬೆಳವಣಿಗೆಯನ್ನು ವಿಳಂಬ ಮಾಡಿದವು ಆದ್ದರಿಂದ ಮಿಡಿಮಾವಿನಲ್ಲಿ ಅನೇಕ ಗುಣವಿಶೇಷಗಳಿರುವುದರಿಂದ ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವಿರುವುದೆಂದು ನಮ್ಮ ಭಾವನೆ. ನಮ್ಮ ಉಹೇ ನಿಜವಾದಲ್ಲಿ ಮಿಡಿಮಾವಿನ ರಸದಿಂದ ಹಲವಾರು ಸೋಕ್ಷ್ಮಾಣು ಜೀವಿಗಳ ಬೆಳವಣಿಗೆಯನ್ನು ಕುಂಠಿತಗೊಳಿಸಿ ನಿಯಂತ್ರಿಸಬಹುದು. ಅದು ಕೂಡ ಜೈವಿಕವಾಗಿ. ಜೊತೆಗೆ ಸೋಕ್ಷ್ಮಾಣು ಜೀವಿಗಳನ್ನು ತಡೆದು ಕೃಷಿ ಉತ್ಪನ್ನವನ್ನು ಅಭಿವೃದ್ಧಿಸಿ ಹೆಚ್ಚಿನ ಆದಾಯವನ್ನು ಪಡೆಯಬಹುದು



ಚಿತ್ರ 1: ವಿವಿಧ ಮಿಡಿಮಾವು ಮತ್ತು ಮಾವು ತಳಿಗಳ ಸೊನೆಯನ್ನು ಹಾಕಿ ಪ್ಯೂಸೇರಿಯಂ ಆಕ್ಸಿಸ್ಪೋರಮ್ ಮತ್ತು ಟ್ರೈಕೊಡರ್ಮಾ ವಿರಿಡೆ ಬೆಳವಣಿಗೆಯನ್ನು ಗಮನಿಸಲು ಇಟ್ಟ ಅಗಾರ್ ತಟ್ಟೆಗಳು (3 ನೇ ದಿನ).



ಚಿತ್ರ 2: ಅಪ್ಪೆ ಮಿಡಿಮಾವು (ಮೊದಲನೆಯ ಕಾಲಂ) ಮತ್ತು ಹಣ್ಣಿನ ಮಾವು (ಎರಡನೆಯ ಕಾಲಂ) ತಳಿಗಳ ಸೊನೆಯನ್ನು ಹಾಕಿ ಫ್ಯೂಸೇರಿಯಂ ಆಕ್ಸಿಸ್ಪೋರಮ್ ಮತ್ತು ಟ್ರೈಕೊಡರ್ಮಾ ವಿರಿಡೆ ಬೆಳವಣಿಗೆಯನ್ನು ಗಮನಿಸಲು ಇಟ್ಟ ಅಗಾರ್ ತಟ್ಟೆಗಳು (3 ನೇ ದಿನ ದಂದು ಹಣ್ಣಿನಮಾವಿನ ತುಲನೆಯಲ್ಲಿ ಮಿಡಿಯಲ್ಲಿ ಬೆಳವಣಿಗೆ ಕಡಿಮೆ ಇರುವುದನ್ನು ಗಮನಿಸಬಹುದು).



ಚಿತ್ರ 3: ಮಿಡಿಮಾವು (ಮೊದಲನೆಯ ಮತ್ತು ಮೂರನೆ ಕಾಲಂ) ಮತ್ತು ಹಣ್ಣಿನ ಮಾವು (ಎರಡನೆಯ ಕಾಲಂ) ತಳಿಗಳ ಸೊನೆಯನ್ನು ಹಾಕಿ ಫ್ಯೂಸೇರಿಯಂ ಆಕ್ಸಿಸ್ಪೋರಮ್ (ಮೊದಲನೆಯ ಸಾಲು) ಮತ್ತು ಟ್ರೈಕೊಡರ್ಮಾ ವಿರಿಡೆ (ಎರಡನೆಯ ಸಾಲು) ಬೆಳವಣಿಗೆಯನ್ನು ಗಮನಿಸಲು ಇಟ್ಟ ಅಗಾರ್ ತಟ್ಟೆಗಳು (3 ನೇ ದಿನ ದಂದು ಹಣ್ಣಿನಮಾವಿನ ತುಲನೆಯಲ್ಲಿ ಮಿಡಿಯಲ್ಲಿ ಬೆಳವಣಿಗೆ ಕಡಿಮೆ ಇರುವುದನ್ನು ಗಮನಿಸಬಹುದು).

ಅಂತಿಮ ತೀರ್ಮಾ : ನಮ್ಮ ಪ್ರಯೋಗ ಮಿಡಿ ಮಾವುಗಳ ರಸದಲ್ಲಿ ಸೂಕ್ಷ್ಮಜೀವಿಯ ಸಂತಾನೋತ್ಪತ್ತಿ ತಡೆಯುವ ಶಕ್ತಿ ಇದೆ ಎಂದು ಸೂಚಿಸುತ್ತಿದೆ. ಹಾಗಾಗಿ ಮಿಡಿ ಮಾವಿನ ರಸದಿಂದ ಕರಿ ಮೆಣಸಿನಲ್ಲಿ ಬರುವ ಸೊರಗು ರೋಗವನ್ನು ನಿಯಂತ್ರಿಸಬಹುದು ಅಂತ ಭಾವಿಸುತ್ತೆವೆ. ಜೊತೆಗೆ ಹೆಚ್ಚಿನ ಸಂಶೋಧನೆ ಮೂಲಕ ಮಿಡಿ ಮಾವಿನಲ್ಲಿರುವ ಸೂಕ್ಷ್ಮಜೀವಿ ನಿರೋಧಕ ಶಕ್ತಿಇರುವ ಆಂಶ ಯಾವುದೆಂದು ಕಂಡು ಹಿಡಿಯುವುದು ಹಾಗೂ ಇತರ ಸೂಕ್ಷ್ಮಜೀವಿಗಳ ಮೇಲೆ ಆಗುವ ಪರಿಣಾಮವನ್ನು ತಿಳಿಯಬಹುದು.

ಉಲ್ಲೇಖಗಳು: (ಸೂಚನೆ: ಈ ಎಲ್ಲ ಉಲೇಖಗಳು ಆಂಗ್ಲಭಾಷೆಯಲ್ಲಿ ಪ್ರಕಟಗೊಂಡಿವೆ ಅವುಗಳನ್ನು ತರ್ಜುಮೆ ಮಾಡಿ ಬಳಸಲಾಗಿದೆ):

ಅಬ್ದಲ್ಲಾ, ಏ. ಇ. ಎಮ್., ದರ್‌ವಿಶ್, ಎಸ್. ಎಮ್., ಅಯದ್, ಇ. ಹೆಚ್. ಇ., ಇಲ್–ಹಮಹ್ಮೆಮಿ, ಅರ್.ಎಂ 2007: ಇಜಿಪ್ಟಿಯನ್ ಮಾವಿನ ಉಪ ಉತ್ಪನ 1. ಮಾವಿನ ಬೀಜದ ತಿರುಳಿನ ಸಂಯೋಜಿತ ಗುಣಮಟ್ಟ. ಆಹಾರ ರಸಾಯನ 103: 1134–1140.

ಬೆರಾರದಿನಿ, ಎನ್., ಕ್ನೋಡ್ಲರ್, ಎಂ., ಸ್ಕೈಬರ್, ಏ.ಕಾರ್ಲೇ,ಅರ್. 2005: ಪೆಕ್ಟಿನ್ ಮತ್ತು ಪಾಲಿಫಿನೊಲಿಕ್ ಮೂಲವಾಗಿ ಮಾವಿನ ತೊಗಟೆಯ ಉಪಯೋಗ. ಫೂಡ್ ಸೈನ್ಸ ಮತ್ತು ಟೆಕ್ನಾಲಜಿ, 6: 442–452.

ಕಬುಕಿ, ಟಿ., ನಕಾಜಿಮ, ಹೆಚ್., ಅರೈ, ಎಂ., ಯುಡ, ಎಸ್., ಕುವಬಾರ, ವೈ., ದೊಸಕೊ, ಎಸ್., 2000; ಮಾವಿನ ಬೀಜದ ತೊಗಟೆಯಿಂದ ಅಪೂರ್ವ ಸೂಕ್ಷ್ಮಜೀವಿ ಪ್ರತಿಬಂದ ಸಂಯುಕ್ತಗಳ ಮೂಲ(ಮ್ಯಾಂಜಿಫೆರಾ ಇಂಡಿಕಾ). ಫೂಡ್‌ಕೆಮಿಕಲ್. 71: 61–66.

ಕಿಮ್, ವೈ., ಬ್ರೆಚ್ಟ್, ಜೆ.ಕೆ., ತಾಲಕೋಟ್, ಎಸ್.ಟಿ., 2007: ಬಿಸಿ ನೀರಿನಲ್ಲಿ ಅದ್ದಿದಾಗ ಹಾಗೂ ನಿಯಂತ್ರಿತ ವಾತಾವರಣದಲ್ಲಿ ಸಂಗ್ರಹಿಸಿದಾಗ ಮಾವಿನ ಹಣ್ಣಿನ ಆಕ್ಸಿಡೀಕರಣ ಸಸ್ಯರಸಾಯನಿಕ ಹಾಗೂ ಹಣ್ಣಿನ ಗುಣಮಟ್ಟದಲ್ಲಿ ಬದಲಾವಣೆ (ಮ್ಯಾಂಜಿಫೆರಾ ಇಂಡಿಕಾ). ಫೂಡ್ ಕೆಮ್. 105: 1327–1334.

ಪೂರವಂನಕರ,ಡಿ., ಭೋಗ್ರಾ,ವಿ., ಶರ್ಮಾ, ಅರ್.ಎಸ್., 2007, ಮಾವಿನ ಬೀಜದ ತೊಗಟೆಯಿಂತೆಗೆಯಲ್ಪಟ್ಟ ಆಕ್ಸಿಡೀಕರಣ ತತ್ವ ವಸ್ತುಗಳು ಹೇಗೆ ಎಮ್ಮೆಯ ತುಪ್ಪದ ಉತ್ಕರ್ಷಣಶೀಲ ಸ್ಥಿರತೆ ಮೇಲೆ ಪರಿಣಾಮ ಬೀರುತ್ತವೆ (ಮ್ಯಾಜಿಫೆರಾ ಇಂಡಿಕಾ). ಜೆ. ಸೈನ್ಸ. ಫೂಡ್ ಅಗ್ರಿ. 80: 522–526.

ರಿಬಿರೋ, ಎಸ್. ಎಂ. ಅರ್., ಬಾರ್ಬೋಸ, ಎಲ್. ಸಿ ಎ., ಕ್ಯೂರೋಜ, ಜೆ.ಎಚ್., ಕ್ನೋಡ್ಲರ್, ಎಂ., ಸ್ಕೈಬರ್, ಏ., 2008: ಬ್ರೆಜಿಲ್ ಮಾವಿನ ಸಂಯುಕ್ತ ಮತ್ತು ಆಕ್ಸಿಡಿಕರಣ ಸಾಮರ್ಥ್ಯ (ಮ್ಯಾಂಜಿಫೆರಾ ಇಂಡಿಕಾ) ಫೂಡ್ ಕೆಮ್. 110: 620–626.

ನೆಗಿ, ಪಿ. ಎಸ್. ಸಬಿಜಾನ್ ಕೆ., ಪ್ರಸಾದ್ ರಾವ್ ಯು. ಏ. ಎಸ್., 2002: ಮಾವಿನ ಸೊನೆಯ ಸೂಕ್ಷ್ಮದರ್ಶನ ಜೀವಿ ಚಟುವಟಿಕೆ ನಿಯಂತ್ರಣ ಶಕ್ತಿ. ಯುರೋ ಫೂಡ್ ರೆಸ್ ಟೆಕ್ನಾಲಜಿ, 214: 327–330.

ಸಂಖ್ಯಾಶಾಸ್ತ್ರದ ಮಹತ್ವ ಹಾಗು ವಿವಿಧ ಕ್ಷೇತ್ರಗಳಲ್ಲಿ ಅದರ ಪ್ರಮುಖ ಪಾತ್ರ

*ಎಂ.ಕೆ. ನಾಗಮಣಿ, **ಸಿ. ಉಮಾಶಂಕರ,
*ಸಹ ಪ್ರಾಧ್ಯಾಪಕರು (ಸಂಖ್ಯಾಶಾಸ್ತ್ರ), **ಸಹ ಪ್ರಾಧ್ಯಾಪಕರು, ಕೃವಿವಿ, ಜಿಕೆವಿಕೆ, ಬೆಂಗಳೂರು

ಜನಾಂಗವು ಪ್ರಗತಿಪಥದಲ್ಲಿ ಮುನ್ನಡೆದೆಂತೆ ಜನಸಾಮಾನ್ಯರ ಜೀವನವೂ ಕ್ಲಿಷ್ಟಕರನಾಗುತ್ತ ನಡೆಯುವುದು. ಹಿಂದಿನ ಕಾಲದಲ್ಲಿ ಒಬ್ಬ ಕಛೇರಿಯ ನಿರ್ವಾಹಕನು ಕಾರ್ಖಾನೆಯ ವಿವಿಧ ಶಾಖೆಗಳ ಸಂಪೂರ್ಣ ಮಾಹಿತಿಯನ್ನು ತನ್ನ ಮನಸ್ಸಿನಲ್ಲಿ ಇಟ್ಟುಕೊಳ್ಳಲು ಶಕ್ಯವಿತ್ತು. ಈಗ ಅದೇ ಕೆಲಸಕ್ಕೆ ಗಣಕ ಯಂತ್ರ (Computer) ಮತ್ತು ತಜ್ಞರ ಸಹಾಯವನ್ನು ಪಡೆಯಬೇಕಾಗುವುದು. ಹಿಂದಿನ ಕಾಲದಲ್ಲಿ ಒಮ್ಮೆ ಜನಗಣತಿ ಮಾಡಿ ಅದರಿಂದ ಆಯ್ದ ಜನರ ಮಾಹಿತಿಯನ್ನು ಹತ್ತು ವರ್ಷಗಳವೆರೆಗೆ ಉಪಯೋಗಿಸಿದರೆ ಸಾಕಾಗುತ್ತಿತ್ತು. ಆದರೆ ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಶೀಘ್ರಗತಿಯಲ್ಲಿ ಮಾರ್ಪಾಡಾಗುತ್ತಿರುವಾಗ ಆಡಳಿತ ವರ್ಗದವರು ಹತ್ತು ವರ್ಷಗಳ ಹಿಂದಿನ ಮಾಹಿತಿಯನ್ನು ಉಪಯೋಗಿಸುವುದು ತಪ್ಪಾಗುವುದು. ಅದಕ್ಕಾಗಿ ಅವರು ಲಗುಬಗೆಯಲ್ಲಿ ನಿರ್ದೇಶಕಗಳ ಸಹಾಯದಿಂದ ಜನರ ಮಾಹಿತಿಯನ್ನು ಪಡೆಯುವುದು ಅವಶ್ಯವಿದೆ. ಇದನ್ನು ಶಾಸ್ತ್ರೀಯವಾಗಿ ಆರಿಸಲು ಸಂಖ್ಯಾಶಾಸ್ತ್ರದ ನೆರವು ಅಗತ್ಯ.

ಸಂಖ್ಯಾಶಾಸ್ತ್ರವು ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಭೌತಶಾಸ್ತ್ರಗಳ ಬೆಳವಣಿಗೆಗೂ ನೆರವಾಗುತ್ತ ಇದೆ. ಸಮಾಜಶಾಸ್ತ್ರಜ್ಞರು ನಡೆಸುವ ಪರಿಶೀಲನೆಗಳು ಶಾಸ್ತ್ರೀಯವಾಗಿದ್ದು, ಅವುಗಳಿಂದ ದೊರೆತ ನಿರ್ಧಾರಗಳು ನಂಬಿಗೆಗೆ ಯೋಗ್ಯವಾಗಿರಬೇಕಾದರೆ, ಸಂಖ್ಯಾಶಾಸ್ತ್ರದ ನೆರವು ಬೇಕೇಬೇಕು. ಒಂದು ಯಂತ್ರವು ಮಾನವಬದ್ಧವಾದ ವಸ್ತುಗಳನ್ನು ತಯಾರಿಸುವುದೇ ಇಲ್ಲವೇ ಎಂಬುದನ್ನು ತಿಳಿಯಲು ಕಾರ್ಖಾನೆಗಳಲ್ಲಿ ಸಂಖ್ಯಾಶಾಸ್ತ್ರವನ್ನು ಬಳಸುತ್ತಾರೆ. ರಸ್ತೆ, ಸೇತುವೆಗಳನ್ನು ನಿರ್ಮಿಸುವ ಅಭಿಯಂತರರಿಗೂ, ಪ್ರಾಣಿಗಳ ಪ್ರಯೋಗ ನಡೆಸುವ ವೈದ್ಯನಿಗೂ, ಪೈರುಗಳ ಮೇಲೆ ಪ್ರಯೋಗ ಮಾಡುವ ಕೃಷಿ ಪಂಡಿತನಿಗೂ ಸಂಖ್ಯಾಶಾಸ್ತ್ರದ ನೆರವು ಅನಿವಾರ್ಯ.

ಸಾಂಖ್ಯಿಕ ಶಾಸ್ತ್ರವು ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನಗಳಿಗೆ ಅಡಿಪಾಯವಾಗಿದೆ ಎನ್ನಬಹುದು. ಸಮಾಜಶಾಸ್ತ್ರಜ್ಞರು ನಿರಕ್ಷರತೆಗೂ ರೋಗರುಜಿನೆಗಳಿಗೂ ಸಂಬಂಧವನ್ನು ಅಂಕಿ ಅಂಶಗಳಿಂದ ಕಂಡುಹಿಡಿಯಬಹುದು. ಇದೇ ರೀತಿ ಅರ್ಥಶಾಸ್ತ್ರಜ್ಞ ಪ್ರಜೆಗಳ ಆದಾಯಕ್ಕೂ ಸರಕಾರದ ತೆರಿಗೆಗಳಿಗೂ ಸಂಬಂಧವನ್ನು ಸೂಕ್ತ ಅಂಶಗಳ ಆಧಾರದ ಮೇಲೆ ಪರಿಶೀಲಿಸಿ, ನ್ಯಾಯಯುತವಾದ ತೆರಿಗೆ ಪದ್ಧತಿಯನ್ನು ಸೂಚಿಸಬಹುದು. ಪರೋಕ್ಷ ತೆರಿಗೆಗಳು ದೇಶದ ಒಳ ವ್ಯಾಪಾರ ಮತ್ತು ಹೊರ ವ್ಯಾಪಾರದ ಮೇಲೆ ಯಾವ ರೀತಿ ಪರಿಣಾಮವನ್ನು ಉಂಟುಮಾಡುತ್ತಿವೆ ಎಂಬುದನ್ನೂ, ಕಾರ್ಮಿಕರ ವೇತನಮಟ್ಟ ಹಾಗೂ ಅವರ ಜೀವನಮಟ್ಟ ಇವುಗಳಿಗಿರುವ ಸಂಬಂಧವನ್ನೂ ಸಾಂಖ್ಯಿಕ ವಿಧಾನಗಳಿಂದಲೇ ಪರಿಶೀಲಿಸಬಹುದಾಗಿದೆ. ಸಾಂಖ್ಯಿಕ ಅಂಶಗಳ ಆಧಾರವಿಲ್ಲದಿದ್ದರೆ ನಾವು ಮಾಡುವ ಅಂದಾಜುಗಳು ದೋಷಪೂರಿತ ವೀಕ್ಷಣೆ ಮತ್ತು ಅಪರಿಪೂರ್ಣ ತೀರ್ಮಾನಗಳನ್ನು ಸಾಂಖ್ಯಿಕ ವಿಧಾನಗಳು ಬೆಳಕಿಗೆ ತರುತ್ತವೆ. ಅರ್ಥಶಾಸ್ತ್ರಜ್ಞ ಹಾಗೂ ಸಮಾಜಶಾಸ್ತ್ರಜ್ಞರು ತಮ್ಮ ಸಂಶೋಧನೆಗಳಿಗೆ ಸಾಂಖ್ಯಿಕ ವಿಧಾನಗಳನ್ನು ಬಳಸುವುದು ಎಷ್ಟು ಮುಖ್ಯವೆಂಬುದು ಈಗ ಸ್ಪಷ್ಟವಾಯಿತು.

ಸಂಖ್ಯಾಶಾಸ್ತ್ರದ ಈ ಎಲ್ಲಾ ಉಪಯೋಗಗಳನ್ನು ಪರಿಗಣಿಸಿ, ವಿವಿಧ ಕ್ಷೇತ್ರಗಳಲ್ಲಿ ಸಂಖ್ಯಾಶಾಸ್ತ್ರದ ಪ್ರಾಮುಖ್ಯತೆಯನ್ನು ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಜೀವಶಾಸ್ತ್ರ, ಎಲ್ಲಾ ವಿಜ್ಞಾನಶಾಸ್ತ್ರ ಮತ್ತು ವ್ಯಾಪಾರ ಹಾಗೂ ಷೇರು ಮಾರುಕಟ್ಟೆ ವ್ಯವಹಾರ, ವಾಣಿಜ್ಯ ಶಾಸ್ತ್ರಗಳಲ್ಲಿ ಅದರ ಪ್ರಮುಖ ಪಾತ್ರ ಮಹತ್ವ ಕಂಡುಬಂದಿದೆ.

ಜನಾಂಗವು ಪ್ರಗತಿಪಥದಲ್ಲಿ ಮುನ್ನಡೆದೆಂತೆ ಜನಸಾಮಾನ್ಯರ ಜೀವನವೂ ಕ್ಲಿಷ್ಟಕರನಾಗುತ್ತ ನಡೆಯುವುದು. ಹಿಂದಿನ ಕಾಲದಲ್ಲಿ ಒಬ್ಬ ಕಛೇರಿಯ ನಿರ್ವಾಹಕನು ಕಾರ್ಖಾನೆಯ ವಿವಿಧ ಶಾಖೆಗಳ ಸಂಪೂರ್ಣ ಮಾಹಿತಿಯನ್ನು ತನ್ನ ಮನಸ್ಸಿನಲ್ಲಿ ಇಟ್ಟುಕೊಳ್ಳಲು ಶಕ್ಯವಿತ್ತು. ಈಗ ಅದೇ ಕೆಲಸಕ್ಕೆ ಗಣಕ ಯಂತ್ರ (Computer) ಮತ್ತು ತಜ್ಞರ ಸಹಾಯವನ್ನು ಪಡೆಯಬೇಕಾಗುವುದು. ಹಿಂದಿನ ಕಾಲದಲ್ಲಿ ಒಮ್ಮೆ ಜನಗಣತಿ ಮಾಡಿ ಅದರಿಂದ ಆಯ್ದ ಜನರ ಮಾಹಿತಿಯನ್ನು ಹತ್ತು ವರ್ಷಗಳವರೆಗೆ ಉಪಯೋಗಿಸಿದರೆ ಸಾಕಾಗುತ್ತಿತ್ತು. ಆದರೆ ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಶೀಘ್ರಗತಿಯಲ್ಲಿ ಮಾರ್ಪಾಡಾಗುತ್ತ ಇರುವಾಗ ಆಡಳಿತ ವರ್ಗದವರು ಹತ್ತು ವರ್ಷಗಳ ಹಿಂದಿನ ಮಾಹಿತಿಯನ್ನು ಉಪಯೋಗಿಸುವುದು ತಪ್ಪಾಗುವುದು. ಅದಕ್ಕಾಗಿ ಅವರು ಲಗುಬಗೆಯಲ್ಲಿ ನಿರ್ದೇಶಕಗಳ ಸಹಾಯದಿಂದ ಜನರ ಮಾಹಿತಿಯನ್ನು ಪಡೆಯುವುದು ಅವಶ್ಯವಿದೆ. ಇದನ್ನು ಶಾಸ್ತ್ರೀಯವಾಗಿ ಆರಿಸಲು ಸಂಖ್ಯಾಶಾಸ್ತ್ರದ ನೆರವು ಅಗತ್ಯ.

ಸಂಖ್ಯಾಶಾಸ್ತ್ರವು ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಭೌತಶಾಸ್ತ್ರಗಳ ಬೆಳವಣಿಗೆಗೂ ನೆರವಾಗುತ್ತ ಇದೆ. ಸಮಾಜಶಾತ್ರಜ್ಞರು ನಡೆಸುವ ಪರಿಶೀಲನೆಗಳು ಶಾಸ್ತ್ರೀಯವಾಗಿದ್ದು, ಅವುಗಳಿಂದ ದೊರೆತ ನಿರ್ಧಾರಗಳು ನಂಬಿಗೆಗ್ ಯೋಗ್ಯವಾಗಿರಬೇಕಾದರೆ, ಸಂಖ್ಯಾಶಾಸ್ತ್ರದ ನೆರವು ಬೇಕೇಬೇಕು. ಒಂದು ಯಂತ್ರವು ಮಾನವಬದ್ಧವಾದ ವಸ್ತುಗಳನ್ನು ತಯಾರಿಸುವುದೇ ಇಲ್ಲವೇ ಎಂಬುದನ್ನು ತಿಳಿಯಲು ಕಾರ್ಖಾನೆಗಳಲ್ಲಿ ಸಂಖ್ಯಾಶಾಸ್ತ್ರವನ್ನು ಬಳಸುತ್ತಾರೆ. ರಸ್ತೆ, ಸೇತುವೆಗಳನ್ನು ನಿರ್ಮಿಸುವ ಇಂಜಿನಿಯರನಿಗೂ, ಪ್ರಾಣಿಗಳ ಪ್ರಯೋಗ ನಡೆಸುವ ವೈದ್ಯನಿಗೂ, ಪೈರುಗಳ ಮೇಲೆ ಪ್ರಯೋಗ ಮಾಡುವ ಕೃಷಿ ಪಂಡಿತನಿಗೂ ಸಂಖ್ಯಾಶಾಸ್ತ್ರದ ನೆರವು ಅನಿವಾರ್ಯ.

ಸರ್ಕಾರೀ ನೌಕರರ ತುಟ್ಟಿಭತ್ಯೆಯು ನಿರ್ವಾಹ ವ್ಯಯ ಸೂಚ್ಯಾಂಕವನ್ನು (Cost of living index) ಅವಲಂಬಿಸಿದೆ. ಜೀವವಿಮಾ ಕಂತುಗಳನ್ನು ತುಂಬಿದವರು ಯಾರುರುವರು? ಆದರೆ ಇವುಗಳ ಬೆಲೆಗಳನ್ನು ಹೇಗೆ ನಿರ್ಧರಿಸುವರು ಎಂದು ತಿಳಿದ ಜನರು ತೀರ ವಿರಳ. ಇವುಗಳನ್ನು ಕಲಿಯಲು ಸಂಖ್ಯಾಶಾಸ್ತ್ರವನ್ನು ಅಭ್ಯಸಿಸಬೇಕಾಗುವುದು. ಹೀಗೆ ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಸಂಖ್ಯಾಶಾಸ್ತ್ರದ ಉಪಯೋಗವನ್ನು ಹೆಚ್ಚುಹೆಚ್ಚಾಗಿ ಪಡೆಯುತ್ತ ಇದ್ದೇವೆ.

ಸಂಖ್ಯಾಶಾಸ್ತ್ರದ ಈ ಎಲ್ಲಾ ಉಪಯೋಗಗಳನ್ನು ಪರಿಗಣಿಸಿ, ವಿವಿಧ ಕ್ಷೇತ್ರಗಳಲ್ಲಿ ಸಂಖ್ಯಾಶಾಸ್ತ್ರದ ಪ್ರಾಮುಖ್ಯತೆಯನ್ನು ಕೆಳಕಂಡಂತೆ ವಿವರಿಸಬಹುದಾಗಿದೆ.

ಸಂಖ್ಯಾಶಾಸ್ತ್ರವೆಂದರೆ ಕೇವಲ ಅಂಕಿ ಸಂಖ್ಯೆಗಳ ಸಂಗ್ರಹಣೆ (Collecti on) ಯಷ್ಟೇ ಆಗಿರುವುದಿಲ್ಲ. ಕಲೆಹಾಕಿದ ಅಂಕಿ–ಸಂಖ್ಯೆಗಳನ್ನು ಅಭ್ಯಸಿಸಲು ಬೇಕಾಗುವ ವಿಧಾನಗಳನ್ನು ಕಂಡುಹಿಡಿಯುವುದು ಸಂಖ್ಯಾಶಾಸ್ತ್ರ ಉದ್ದೇಶವಾಗಿರುತ್ತದೆ. ಸಂಖ್ಯಾಶಾಸ್ತ್ರ ಇಂತಹ ಅನೇಕ ವಿಧಾನಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ಸಾಮಾನ್ಯನಿಗೆ ತಿಳಿಯುವಂತಹ ವಿಧಾನಗಳು ಹಾಗೂ ತಜ್ಞರೇ ಗ್ರಹಿಸಬಲ್ಲ ವಿಧಾನಗಳೂ ಉಂಟು.

ಸಂಖ್ಯಾಶಾಸ್ತ್ರದ ಕಾರ್ಯಗಳು ಹಾಗೂ ಮಹತ್ವ : ಸಂಖ್ಯಾಶಾಸ್ತ್ರದ ರೀತಿಗಳು ಮನುಷ್ಯನ ನಿತ್ಯಜೀವನದ ವ್ಯವಹಾರಗಳಿಗೆ ನಿಕಟವಾಗಿ ಹೊಂದಿಕೊಂಡಿರುತ್ತವೆ. ಉತ್ತಮ ಬೆಳೆ ಬರಲಿಕ್ಕೆ ಉತ್ತಮ ಮಳೆ ಬೇಕೆಂದು ರೈತನು ಹಾರೈಸುತ್ತಿರುವಾಗ, ಅವನು ಸಾಂಖ್ಯಿಕ ರೀತಿಗಳ ಬಗ್ಗೆ ಅಜ್ಞಾನಿಯಾಗಿರಬಹುದಾದರೂ, ಅವನ ಮನಸ್ಸಿನಲ್ಲಿ ಮಳೆ ಹಾಗೂ ಬೆಳೆಗಳ ನಡುವೆ ಇರುವ ಸಹಸಂಬಂಧ (Correlation) ದ ಸ್ಪಷ್ಟ ಕಲ್ಪನೆ ಇರುತ್ತದೆ. ಸಂಖ್ಯಾಶಾಸ್ತ್ರದ ಮಹತ್ವವು ಅನೇಕ ಕಾರಣಗಳ ಮೂಲಕ ಹೆಚ್ಚುತ್ತನಡೆದಿದೆ. ಈ ಕಾರಣಗಳನ್ನು ತಿಳಿಯಬೇಕಾದರೆ ಸಂಖ್ಯಾಶಾಸ್ತ್ರದ ಕಾರ್ಯಗಳನ್ನು ತಿಳಿಯಬೇಕು.

ಸಂಖ್ಯಾಶಾಸ್ತ್ರದ ಕಾರ್ಯಗಳು: ಅಂಕಿ–ಸಂಖ್ಯೆಗಳ ರೂಪದಲ್ಲಿರುವ ತಥ್ಯ (Fact) ಗಳನ್ನು ತಿಳಿಯುವುದು ಸುಲಭವಲ್ಲ. ತಥ್ಯಗಳ ವಿಭಿನ್ನತೆ ಹಾಗೂ ಅವುಗಳ ಅಧಿಕ ಸಂಖ್ಯೆಗಳಿಂದಾಗಿ ಅವುಗಳನ್ನು ತಿಳಿಯುವುದು ದುಸ್ತರವಾಗುತ್ತದೆ. ಸಂಖ್ಯಾಶಾಸ್ತ್ರದ ರೀತಿಗಳು ಈ ತಥ್ಯಗಳನ್ನು ತಿಳಿಯುವಂತೆ ನಿರೂಪಿಸುತ್ತವೆ. ಸಂಖ್ಯಾಶಾಸ್ತ್ರವು ಹೀಗೆ ಪ್ರಸ್ತುತಪಡಿಸಿದ ಸಾಮಗ್ರಿಗಳ ತುಲನೆ ಮಾಡಿ ಅವುಗಳ ನಡುವೆ ಸಂಬಂಧವನ್ನು ಸ್ಥಾಪಿಸುತ್ತದೆ; ಹಾಗೂ ಘಟನೆಗಳ ನಡುವಿರುವ ಕಾರ್ಯ ಕಾರಣ ಸಂಬಂಧವನ್ನು ಅಭ್ಯಸಿಸುತ್ತದೆ.

ವರ್ತಮಾನ ಕಾಲದ ವಸ್ತುಸ್ಥಿತಿಯನ್ನು ವಿಶ್ವಸನೀಯವಾಗಿ ಆಗಣನೆ (Estimate) ಮಾಡುವುದಲ್ಲದೇ ಸಂಖ್ಯಾಶಾಸ್ತ್ರವು ಭವಿಷ್ಯತ್ಕಾಲದ ಸ್ಥಿತಿಯಬಗ್ಗೆ ಪೂರ್ವಾನುಮಾನ (Forecast) ವನ್ನೂ ಮಾಡಬಲ್ಲದು. ಉದಾಹರಣೆಗಾಗಿ, ಒಂದು ವ್ಯಾಪಾರ ಕಂಪನಿಗೆ ಅದರ ಸರಕುಗಳ ಸರಾಸರಿ ಬೇಡಿಕೆಯನ್ನು ಮುಂದೆ ಅವುಗಳಿಗಿರಬಹುದಾದ ಬೇಡಿಕೆಯನ್ನು ಸಂಖ್ಯಾಶಾಸ್ತ್ರದ ಸಹಾಯದಿಂದ ತಿಳಿಯಬಹುದು.

ಸಂಖ್ಯಾಶಾಸ್ತ್ರದ ಮಹತ್ವ: ರಾಜ್ಯಗಳಿಗೆ ಜನತೆಯ ಕಲ್ಯಾಣ (Welfare) ವನ್ನು ಸಾಧಿಸುವಾಗ ಬರುವ ಎರಡುತೊಡರುಗಳನ್ನು ನಿವಾರಿಸಲು ಸಂಖ್ಯಾಶಾಸ್ತ್ರವು ಸಹಾಯವಾಗುದು. ದಾರಿದ್ರ್ಯ, ಜನರ ಅನಾರೋಗ್ಯ ಮುಂತಾದ ಅನೇಕ ಸಮಸ್ಯೆಗಳ ಕಾರಣಗಳು ಹಾಗೂ ವ್ಯಾಪ್ತಿ (extent) ಗಳ ಬಗ್ಗೆ ಅಂಕಿ ಅಂಶಗಳ ರೂಪದಲ್ಲಿ ತಥ್ಯಗಳ ಜ್ಞಾನ ಅವಶ್ಯಕವಾಗಿರುತ್ತದೆ. ಮೇಲಿಂದ ಮೇಲೆ ಜನತೆಯ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳನ್ನು ಅರಿಯಲು ರಾಜ್ಯಗಳು ಸಮೀಕ್ಷೆಗಳನ್ನು ಮಾಡಬೇಕಾಗುತ್ತದೆ. ಈ ಸಮೀಕ್ಷೆಗಳಿಂದ ಪ್ರಾಪ್ತವಾದ ನ್ಯಾಸಗಳ (Data) ವಿಶ್ಲೇಷಣೆ ಮಾಡಿ, ಸಮಸ್ಯೆಗಳ ಕಾರಣಗಳು, ಅವುಗಳ ವ್ಯಾಪ್ತಿಯನ್ನು ಸಂಖ್ಯಾಶಾಸ್ತ್ರದ ಮೂಲಕ ಅಭ್ಯಸಿಸಿ, ಈ ಸಮಸ್ಯೆಗಳನ್ನು ಬಿಡಿಸುವ ಉಪಾಯಗಳನ್ನು ತರ್ಕಿಸಬೇಕಾಗುತ್ತದೆ. ಊಜ್ಯಗಳು ಆರ್ಥಿಕ ಯೋಜನೆಗಳನ್ನು ಕೈಗೊಳ್ಳುವುದರಿಂದ, ಅಂಕಿ– ಅಂಶಗಳ ಉಪಯೋಗವು ಹೆಚ್ಚು ಮಹತ್ವ ಪೂರ್ಣವಾಗಿರುತ್ತದೆ. ಯಾವುದೇ ಪ್ರಕಾರದ ಯೋಜನೆಯನ್ನಾಗಲೀ, ಅಂಕಿ–ಸಂಖ್ಯೆಗಳಿಲ್ಲದೆ ಕೈಗೊಳ್ಳುವುದು ಅಶಕ್ಯವಿದೆ. ಯಾವ ಕ್ಷೇತ್ರದಲ್ಲಿ ಎಷ್ಟರಮಟ್ಟಿಗೆ ಸಫಲತೆ ಸಿಕ್ಕಿದೆ, ಎಂಬುದನ್ನು ಅರಿಯಲು ಅಂಕಿ–ಸಂಖ್ಯೆಗಳು ಹಾಗೂ ಅವುಗಳ ವಿಶೇಷಣೆಯು ಅವಶ್ಯಕವಾಗಿರುತ್ತವೆ. ರಾಜ್ಯದ ಆಯವ್ಯಯ ಕರಗಳ ನೀತಿ ಮುಂತಾದ ವಿಷಯಗಳನ್ನು ತಿಳಿಯಲು ಅಂಕಿ–ಸಂಖ್ಯೆಗಳು

ಅವಶ್ಯಕವಾಗಿರುತ್ತದೆ.

ಸಂಖ್ಯಾಶಾಸ್ತ್ರವನ್ನು ಸಾಮಾನ್ಯವಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಉಪಯೋಗಿಸುವುದರಿಂದ, ಅದರ ಮಹತ್ವವನ್ನು ನಾವು ಮನಗಾಣಬಹುದು. ಉದಾಹರಣೆಗಾಗಿ, ಪ್ರತಿಯೊಬ್ಬ ಉತ್ಪಾದಕನಿಗೆ ತಾವು ಉತ್ಪಾದಿಸುವ ವಸ್ತುವಿನ ಬೇಡಿಕೆಯ ಅಂದಾಜನ್ನು ಮಾಡಬೇಕಾಗುತ್ತದೆಯಲ್ಲದೆ, ತನ್ನ ವಸ್ತುವಿನ ಕೂಡ ಸ್ಪರ್ಧಿಸಬಲ್ಲ ಇತರ ವಸ್ತುಗಳ ಮೌಲ್ಯಗಳು, ವ್ಯಕ್ತಿಗಳ ಅಭಿರುಚಿಗಳ ಪ್ರಭಾವ ಮುಂತಾದ ವಿಷಯಗಳ ಬಗ್ಗೆಯೂ ಅಂದಾಜನ್ನು ಮಾಡಬೇಕಾಗುತ್ತದೆ. ಆದ್ದರಿಂದ ವ್ಯಾಪಾರ ಹಾಗೂ ವಾಣಿಜ್ಯಗಳಲ್ಲಿ ಅಂಕಿ–ಸಂಖ್ಯೆಗಳ ಮಹತ್ವ ನಿರ್ವಿವಾದವಾಗಿದೆ. ವ್ಯಾಪಾರ ಹಾಗೂ ವಾಣಿಜ್ಯಗಳನ್ನು ವಿಶೇಷ ರೂಪದಿಂದ ತಿಳಿಯುವುದಕ್ಕಾಗಿ 'ವ್ಯಾಪಾರ ಸಂಖ್ಯಾಶಾಸ್ತ್ರ" ಎಂಬ ಸಂಖ್ಯಾಶಾಸ್ತ್ರದ ಭಾಗವು ಅಸ್ತಿತ್ವದಲ್ಲಿ ಬಂದಿದೆ. ಸಾಮಾಜಿಕ ಅಧ್ಯಯನಗಳಲ್ಲಿ ಸಂಖ್ಯಾಶಾಸ್ತ್ರದ ಉಪಯೋಗ ಅನಿವಾರ್ಯವಾಗಿದೆ. ಉದಾಹರಣಾರ್ಥವಾಗಿ, ಬಡತನ ಹಾಗೂ ದುಶ್ಚಟಗಳ ಸಂಬಂಧವನ್ನು ಸಂಖ್ಯಾಶಾಸ್ತ್ರದ ರೀತಿಯಿಂದ ಅಭ್ಯಸಿಸಬೇಕಾಗುವುದು.

ವಾಸ್ತವಿಕತೆಯನ್ನು ಸಾಂಖ್ಯಿಕ ರೀತಿಗಳಿಂದ ಅರಿಯುವ ಪ್ರಯತ್ನ ಹೆಚ್ಚುತ್ತಲೇ ನಡೆದಿದೆ. ವಿವಿಧ ಕ್ಷೇತ್ರಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸಂಗ್ರಹಿಸಲಾಗುತ್ತಿರುವ ಸಾಮಾಗ್ರಿ ಹಾಗೂ ಆ ಸಾಮಗ್ರಿಯಿಂದ ದೊರೆತ ಅಂಕಿ ಸಂಖ್ಯೆಗಳು. ಈ ಅಂಕಿ–ಸಂಖ್ಯೆಗಳ ಆಧಾರದ ಮೇಲೆ ಸಂಖ್ಯಾಶಾಸ್ತ್ರದ ಮೂಲಕ ಆಗುವ ಉಪಯೋಗಗಳು, ಈ ಮಾತನ್ನು ಪುಷ್ಟೀಕರಿಸುತ್ತವೆ.

ಸಂಖ್ಯಾಶಾಸ್ತ್ರ ಹಾಗೂ ಉಳಿದ ವಿಷಯಗಳ ಸಂಬಂಧ: ಇಂದಿನ ಯುಗದಲ್ಲಿ ಸಂಖ್ಯಾಶಾಸ್ತ್ರವನ್ನು ಬೇರೆ ಬೇರೆ ಶಾಸ್ತ್ರಗಳಲ್ಲಿಯ ಸಂಶೋಧಕರು ಬಳಸುತ್ತಾರೆ. ಸಂಖ್ಯಾಶಾಸ್ತ್ರದ ರೀತಿಗಳು ವಿವಿಧ ಪರಿಸ್ಥಿತಿಗಳಿಗೆ ಒಗ್ಗುವಂತಹವಾಗಿರುತ್ತವೆ. ಒಂದು ವೇಳೆ ಉಪಲಬ್ಧ ಸಾಂಖ್ಯಿಕ ರೀತಿಗಳು ಒಂದು ವಿಶಿಷ್ಟ ಪರಿಸ್ಥಿತಿಗೆ ಒಗ್ಗದಿದ್ದಲ್ಲಿ ಹೊಸ ಹೊಸ ರೀತಿಗಳನ್ನು ಕಂಡುಹಿಡಿದು ಅವುಗಳನ್ನು ಉಪಯೋಗಿಸಲಾಗುತ್ತದೆ. ಹೀಗೆ ಸಂಖ್ಯಾಶಾಸ್ತ್ರಕ್ಕೆ ಎಷ್ಟೋ ಅರ್ಥಶಾಸ್ತ್ರಜ್ಞರು, ಔತಶಾಸ್ತ್ರಜ್ಞರು, ತಳಿಶಾಸ್ತ್ರಜ್ಞರು ಮುಂತಾದ ಅನೇಕ ಶಾತ್ರಜ್ಞರು ತಮ್ಮ ಅಮೂಲ್ಯ ಕೊಡುಗೆಯನ್ನು ಸಲ್ಲಿಸಿದ್ದಾರೆ. ಸಂಖ್ಯಾಶಾಸ್ತ್ರದ ಅಭ್ಯಾಸ ಹಾಗೂ ಇತರ ಶಾಸ್ತ್ರಗಳ ಅಭ್ಯಾಸ ಒಂದಕ್ಕೊಂದು ಪೂರಕವಾಗಿರುತ್ತವೆ. ಇದರಿಂದಾಗಿ ಸಂಖ್ಯಾಶಾಸ್ತ್ರ ಹಾಗೂ ಉಳಿದ ಶಾಸ್ತ್ರಗಳ ನಡುವಿರುವ ಸಂಬಂಧವನ್ನು ಅರಿಯುವುದು ಉಚಿತವಾಗಿದೆ. ಉದಾಹರಣೆಗಾಗಿ ಸಂಖ್ಯಾಶಾಸ್ತ್ರ ಹಾಗೂ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಜೀವಶಾಸ್ತ್ರ ಇವುಗಳ ನಡುವಿರುವ ಸಂಬಂಧವನ್ನು ವಿವರಿಸಿದ್ದೇವೆ.

ಸಂಖ್ಯಾಶಾಸ್ತ್ರ ಹಾಗೂ ಅರ್ಥಶಾಸ್ತ್ರ: ಅರ್ಥಶಾಸ್ತ್ರದ ಪರಿಶೀಲನೆಗಳಲ್ಲಿ ಸಂಖ್ಯಾಶಾಸ್ತ್ರದ ಉಪಯೋಗ ಮಾಡಲೇಬೇಕಾಗುವುದು. ಆರ್ಥಿಕ ಯೋಜನೆಗಳಲ್ಲಿ ಸಂಖ್ಯಾಶಾಸ್ತ್ರದ ಪಾತ್ರವು ಅತಿ ಮಹತ್ವಪಾದದ್ದು. ಅರ್ಥಶಾತ್ರವು ಮುಖ್ಯವಾಗಿ ಪ್ರಾಯೋಗಿಕ ವಿಜ್ಞಾನವಾಗಿದೆ. ಪ್ರಾಯೋಗಿಕ ವಿಜ್ಞಾನಗಳಲ್ಲಿ ಯಾವುದೇ ಸಿದ್ಧಾಂತವನ್ನು ವ್ಯವಹಾರದಿಂದ ಸಮರ್ಥಿಸಲಾಗದಿದ್ದರೆ, ಅದು ನಿರುಪಯುಕ್ತವೆಂದು ಗಣಿಸಲಾಗುತ್ತದೆ. ಯಾವುದೇ ಆರ್ಥಿಕ ನಿಯಮ ಅಥವಾ ಸಿದ್ಧಾಂತದಿಂದ ವ್ಯವಹಾರಿಕ ಜಗತ್ತಿನ ಮೇಲಾಗುವ ಪರಿಣಾಮವನ್ನು ತಿಳಿಯಬೇಕಾದರೆ ಸಂಖ್ಯಾಶಾಸ್ತ್ರದ ಅವಶ್ಯಕತೆ ಇರುತ್ತದೆ. ಆರ್ಥಿಕ ನೀತಿಯನ್ನು ನಿಶ್ಚಿತ ಮಾಡಬೇಕಾದಾಗ, ಸಂಖ್ಯಾಶಾಸ್ತ್ರದ ಉಪಯೋಗ ಅನಿವಾರ್ಯವಾಗಿರುತ್ತದೆ. ವಸ್ತುಸ್ಥಿತಿಯನ್ನು ಯೋಗ್ಯವಾಗಿ ಅಭ್ಯಸಿಸದೇ, ಅದರ ಪ್ರಣಾಲಿಗಳ ಯೋಗ್ಯ ಮಾಪನಮಾಡದೇ, ಯಾವುದೇ ಪ್ರಕಾರದ ಆರ್ಥಿಕ ನೀತಿಯನ್ನು ನಿರೂಪಿಸುವುದು ಅಯೋಗ್ಯವಾದದ್ದು, ಆರ್ಥಿಕ ಯೋಜನೆಯಲ್ಲಿ ಅಂಕಿ–ಸಂಖ್ಯೆಗಳ ಪೂರ್ಣ ಜ್ಞಾನವಿಲ್ಲದೇ ಏನನ್ನೂ ಮಾಡಲಿಕ್ಕಾಗುವುದಿಲ್ಲ. ಯೋಜನೆಯ ಆರಂಭದಿಂದ ಅಂತ್ಯದವರೆಗೆ ಅಂಕಿ ಸಂಖ್ಯೆಗಳ ಸಂಗ್ರಹಣೆ, ವಿಶ್ಲೇಷಣೆ ಹಾಗೂ ನಿರ್ವಚನಗಳ ಕಾರ್ಯ ನಡದೇ ಇರುತ್ತದೆ.

ಸಂಖ್ಯಾಶಾಸ್ತ್ರ ಹಾಗೂ ಅರ್ಥಶಾಸ್ತ್ರಗಳ ನಿಕಟ ಸಂಬಂಧದ ಫಲವಾಗಿ ಅರ್ಥಶಾತ್ರದ ಒಂದು ಹೊಸ ಶಾಖೆ ಅಸ್ತಿತ್ವದಲ್ಲಿ ಬಂದಿದೆ. ಇದಕ್ಕೆ ಎಕಾನೋಮೆಟ್ರಿಕ್ಸ್ ಎಂದು ಕರೆಯುತ್ತಾರೆ. ಈ ಶಾಖೆಯಲ್ಲಿ ಅರ್ಥಶಾಸ್ತ್ರ ಹಾಗೂ ಸಂಖ್ಯಾಶಾಸ್ತ್ರಗಳ ಪ್ರಯೋಗ ಮಾಡಲಾಗುತ್ತದೆ. ಇತ್ತೀಚೆಗೆ ಈ ಶಾಖೆ ಬಹಳೇ ಬೆಳೆಯುತ್ತಿದೆ.

ಸಂಖ್ಯಾಶಾಸ್ತ್ರ ಹಾಗೂ ಸಮಾಜಶಾಸ್ತ್ರ: ಸಮಾಜಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಅಭ್ಯಸಿಸಬೇಕಾದರೆ ಸಾಮಾಜಿಕ ಪರಿಶೀಲನೆ ಅಗತ್ಯವಿರುತ್ತದೆ. ಸಾಮಾಜಿಕ ಪರಿಶೀಲನೆಯಲ್ಲಿ ಎಷ್ಟೋ ವಿಷಯಗಳಿಗೆ ಸಂಬಂಧಿಸಿದ ಅಂಕಿ–ಸಂಖ್ಯೆಗಳನ್ನು ಕಲೆಹಾಕಲಾಗುತ್ತದೆ. ಈ ಪರಿಶೀಲನೆಗಳಲ್ಲಿರುವ ಅಂಕಿ–ಸಂಖ್ಯೆಗಳನ್ನು ವರ್ಗೀಕರಿಸಿ ಸಾರಣಿಗಳನ್ನು ತಯಾರಿಸುತ್ತಾರೆ. ಈ ಸಾರಣಿಗಳಲ್ಲಿರುವ ಅಂಶಗಳನ್ನು ಸಾಂಖ್ಯಿಕ ವಿಶೇಷಣೆಗೆ ಒಳಪಡಿಸುತ್ತಾರೆ. ಈ ವಿಶ್ಲೇಷಣೆ ಮಾಡುವಾಗ ಮುಂದಿನ ಅಧ್ಯಾಯಗಳಲ್ಲಿ ಹೇಳಿದ ಸಾಂಖ್ಯಿಕ ರೀತಿಗಳನ್ನು ಬಳಸಬಹುದು. ಮಧ್ಯಮ ಪ್ರವೃತ್ತಿಯ ಮಾಪನಗಳು, ಅಪಕಿರಣದ ಮಾಪನಗಳು, ಸಹಸಂಬಂಧದ ವಿಚಾರಗಳು ಇವುಗಳಲ್ಲಿ ಮುಖ್ಯವಾದವುಗಳು. ಇಷ್ಟೇ ಅಲ್ಲದೇ ಸಾಂಖ್ಯಿಕ ಅನುಮಾನವನ್ನು ಬಳಸಬಹುದು. ಉದಾಹರಣೆಗಾಗಿ, ಎರಡು ಗುಂಪುಗಳಲ್ಲಿಯ ಉತ್ಪನ್ನವನ್ನು ತುಲನೆಮಾಡಬೇಕಾದಾಗ ಮಧ್ಯಮ ಪ್ರವೃತ್ತಿಯ ಮಾಪನಗಳನ್ನು ಉಪಯೋಗಿಸಬಹುದು. ಕುಟುಂಬಯೋಜನೆಯ ಬಗ್ಗೆ ಅಭ್ಯಸಿಸುವಾಗ, ಗಂಡ ಹೆಂಡರಾಗಿ ಬಾಳುತ್ತಿರುವ ವರ್ಷಗಳು ಹಾಗೂ ಅವರಿಗಿರುವ ಮಕ್ಕಳ ಸಂಖ್ಯೆ, ಇವುಗಳ ನಡುವಿನ ಸಹ ಸಂಬಂಧವನ್ನು ಒಂದೇ ಇದೆಯೇ ಎಂಬುದನ್ನು ಸಾಂಖ್ಯಿಕ ಅನುಮಾನದಿಂದ ತೀರ್ಮಾನಿಸಬೇಕಾಗಬಹುದು. ಹೀಗೆ ಅನೇಕ ವಿಧಗಳಲ್ಲಿ ಸಂಖ್ಯಾಶಾಸ್ತ್ರದ ಉಪಯೋಗವನ್ನು ಸಮಾಜಶಾಸ್ತ್ರದಲ್ಲಿ ಮಾಡಲಾಗುತ್ತದೆ.

ಸಂಖ್ಯಾಶಾಸ್ತ್ರ ಹಾಗೂ ಜೀವಶಾಸ್ತ್ರ: ಜೀವಶಾಸ್ತ್ರದ ಎಷ್ಟೋ ಸಿದ್ಧಾಂತಗಳನ್ನು ಸಂಖ್ಯಾಶಾಸ್ತ್ರದ ಅಧಾರದ ಮೇಲೆ ಮಾಡಿರುತ್ತಾರೆ. ಪ್ರೊ. ಕಾರ್ಲ ಪಿಯರಸನ್ನರು ಜೀವಶಾಸ್ತ್ರಕ್ಕೆ ಸಂಬಂಧಿದ ಸಾಕಷ್ಟು ಸಿದ್ಧಾಂತಗಳಿಗೆ ಸಾಂಖ್ಯಿಕ ಆಧಾರವನ್ನು ಕೊಟ್ಟಿರುತ್ತಾರೆ. ಸಂಖ್ಯಾಶಾಸ್ತ್ರದಲ್ಲಿ ಪ್ರಸಿದ್ಧಿ ಪಡೆದ ಸಹಸಂಬಂಧ ಗುಣಕ, ಹಾಗೂ ಸಮಾಶ್ರಯಣಶಾಸ್ತ್ರ ಇವು ಜೀವಶಾಸ್ತ್ರವನ್ನು ಅಭ್ಯಸಿಸುವಾಗ ಶೋಧಿಸಲ್ಪಟ್ಟಿವೆ.

ಸಂಖ್ಯಾಶಾಸ್ತ್ರವನ್ನು ಭೂಗೋಲ, ಭೌತಶಾಸ್ತ್ರ, ರಸಾಯನಶಾಸ್ತ್ರ ಮುಂತಾದ ಅನೇಕ ವಿಷಯಗಳಲ್ಲಿಯೂ ಉಪಯೋಗಿಸುತ್ತಾರೆ. ಸಂಖ್ಯಾಶಾಸ್ತ್ರ ಹಾಗೂ ಗಣಿತ ಶಾಸ್ತ್ರಗಳು ಬಹಳೇ ನಿಕಟ

ಸಂಬಂಧವನ್ನು ಹೊಂದಿದೆ.

ಸಾಂಖ್ಯಿಕ ಶಾಸ್ತ್ರವು ಸಾರ್ವಜನಿಕ ಯೋಗಕ್ಷೇಮದ ಗಣಿತ: ಹಿಂದೆ ದೊರೆಗಳ ಗಣಿತ ವೆಂದು ಹೆಸರಾಗಿದ್ದು ಕೇವಲ ಜನಗಳ ಆದಾಯವನ್ನು ಲೆಕ್ಕ ಹಾಕುವುದರಲ್ಲಿ ತೊಡಗಿದ್ದ ಈ ಶಾಸ್ತ್ರವು ಇಂದು ಜನಜೀವನದ ವಿವಿಧ ಮುಖಗಳಾದ ನಿರುದ್ಯೋಗ, ರೋಗರುಜಿನಗಳು, ವಸತಿ ಸೌಲಭ್ಯ, ವೈದ್ಯಕೀಯ ಸೌಲಭ್ಯ, ಇತ್ಯಾದಿ ವಿಚಾರಗಳಿಗೆ, ಅನ್ವಯವಾಗುತ್ತಿದ್ದು, ಆ ಸಮಸ್ಯೆಗಳ ಪರಿಹಾರೋಪಾಯಗಳನ್ನು ಸೂಚಿಸಿ ಮಾನವನ ಕಲ್ಯಾಣವನ್ನು ಸಾಧಿಸಲು ಆಧಾರವಾಗಿದೆ.

ಸಾಂಖ್ಯಿಕ ಆಧಾರವಿಲ್ಲದೆ ಆರ್ಥಿಕ ಯೋಜನೆಗಳ ಕಾರ್ಯ ಸಾಧ್ಯವಿಲ್ಲ. ಯಾವ ಆರ್ಥಿಕ ಯೋಜನೆಯು ಕಾರ್ಯಗತವಾಗುವುದೂ ಅದರ ಸಫಲತೆಯನ್ನು ಅಂದಾಜುಮಾಡುವುದೂ ಸಾಂಖ್ಯಿಕ ಸಾಧಗಳಲ್ಲದೆ ಅಸಾಧ್ಯ. ನಮ್ಮ ಪಂಚವಾರ್ಷಿಕ ಯೋಜನೆಗಳೂ ಅವುಗಳ ಗುರಿಸಾಧನೆಗಳ ವರದಿಗಳೂ ಈ ವಿಚಾರದಲ್ಲಿ ಸೂಕ್ತವಾದ ಉದಾಹರಣೆಗಳೆನ್ನಬಹುದು.

ಸಾಂಖ್ಯಿಕ ಅಂಶಗಳು ಪರಸ್ಪರ ಸಂಬಂಧಿಸಿದ ವಿಷಯಗಳನ್ನು ಸ್ಪಷ್ಟಪಡಿಸುತ್ತವೆ : ಉದಾಹರಣೆಗೆ. ಕಾರ್ಮಿಕರ ವೇತನಕ್ಕೂ, ಮುಷ್ಕರಗಳಿಗೂ ಸಹ ಸಂಬಂಧವಿದ್ದರೆ ಅದು ಸಂಬಂಧಿಸಿದ ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ವೇತನ ಹೆಚ್ಚಿದಂತೆ ಮುಷ್ಕರಗಳ ಸಂಖ್ಯೆ ಕಡಿಮೆಯಾಗಿರಬಹುದು.

ಸಾಂಖ್ಯಿಕ ಅಂಶಗಳು ಆಡಳಿತ ಆಧಾರಸ್ತಂಭ: ಸಾಂಖ್ಯಿಕ ಅಂಶಗಳಿಲ್ಲದೆ ಯಾವ ಆಡಳಿತಗಾರನೂ, ದೇಶವು ಎದುರಿಸುತ್ತಿರುವ ಸಮಸ್ಯೆಗಳಾದ ನಿರುದ್ಯೋಗ, ಅನಕ್ಷರತೆ, ಕ್ಷಾಮ, ಮುಂತಾದವುಗಳ ವಿವರಣೆಯ ಯೋಜನೆಗಳನ್ನು ರಚಿಸಲು ಸಾಧ್ಯವಿಲ್ಲ. ಅಂತೆಯೇ ದೇಶದ ಆಯವ್ಯಯ ಪಟ್ಟಿಯನ್ನು ರಚಿಸಬೇಕಾದರೂ ಅಂಕಿ ಅಂಶಗಳ ಆಧಾರ ಅತ್ಯಗತ್ಯ.

ಸಾಂಖ್ಯಿಕ ಅಂಶಗಳು ಮೇಲ್ವಿಚಾರಣೆಗೆ ಸಾಧಕವಾಗಿದೆ : ಇಂದಿನ ಬೃಹತ್ ಉದ್ಯಮಗಳ ಆಡಳಿತದಲ್ಲಿ ಕಾರ್ಯದಕ್ಷತೆ, ಮಿತವ್ಯಯ ಹಾಗೂ ಸಾಮರ್ಥ್ಯಗಳನ್ನು ಹೊಂದಲು ಉದ್ಯಮದ ಆಡಳಿತಗಾರರಿಗೆ ಅಂಕಿ ಅಂಶಗಳೇ ಆಧಾರ, ಪ್ರತಿ ವರ್ಷದ ಉತ್ಪಾದನೆ, ವೆಚ್ಚ, ಲಾಭ ಕಾರ್ಮಿಕರ ಸಂಖ್ಯೆ ಮತ್ತು ಅವರ ವೇತನಗಳ ಅಂಶಗಳು ಉದ್ಯಮ ನೀತಿಯ ರಚನೆಗೆ ಆಧಾರ. ಉದಾಹರಣೆಗೆ, ವ್ಯಾಪಾರೋದ್ಯಮಿಯು ತನ್ನ ಸರಕುಗಳ ಬಳಕೆದಾರರ ಬೇಡಿಕೆಯನ್ನು ಅಂದಾಜು ಮಾಡದಿದ್ದ ಪಕ್ಷದಲ್ಲಿ ತನ್ನ ಸರಕು ದಾಸ್ತಾನನ್ನು ಮಿತಿಮೀರಿ ಇಟ್ಟುಕೊಂಡು ಅವುಗಳಿಗೆ ಬೇಡಿಕೆ ಇಳಿಮುಖವಾದರೆ, ನಷ್ಟಕ್ಕೊಳಗಾಗುತ್ತಾನೆ ಅಥವಾ ದಾಸ್ತಾನು ಬೇಡಿಕೆಗಿಂತ ಕೆಳಮಟ್ಟದಲ್ಲಿದ್ದರೆ ಅಧಿಕ ಲಾಭ ಬರುವ ಅವಕಾಶ ಕಳೆದುಕೊಳ್ಳುವನು. ನಿಜವಾಗಿ ವಾಣಿಜ್ಯೋದ್ಯಮ, ನಿಖರವಾದ ಅಂದಾಜುಗಳ ಹಾಗೂ ವಹಿವಾಟುಗಳ ಸಂಭವನೀಯತೆಗಳ ಮೇಲೆ ನಿಂತಿದೆ. ಕೈಗಾರಿಕೋದ್ಯಮಿಯು ಮಾರುಕಟ್ಟೆಗಳಲ್ಲಿ ಬೆಲೆಗಳ ಏರುಪೇರು ಗಳನ್ನು ನಿರ್ಧರಿಸಲೂ ಹಾಗೂ ಅವುಗಳಿಗನುಗುಣವಾಗು ತನ್ನ ಉತ್ಪಾದನೆಯನ್ನು ರೂಪಿಸಿಕೊಳ್ಳಲು ಸಂಬಂಧಪಟ್ಟ ಅಂಕಿ ಅಂಶಗಳನ್ನು ಪರಿಶೀಲಿಸುತ್ತಾನೆ. ಅಂತೆಯೇ ಹೊಸ ಮಾರುಕಟ್ಟೆಗಳಲ್ಲಿ ಕಂಡುಬರಬಹುದಾದ ಬೇಡಿಕೆಗಳನ್ನು. ನೂತನವಾಗಿ ತಯಾರಾದ ವಸ್ತುವಿನ ವಿಚಾರವಾಗಿ ಬಳಕೆದಾರರ ಅಭಿಪ್ರಾಯವನ್ನು ಸ್ಥೂಲವಾಗಿ ಯಾದರೂ ಅಂದಾಜುಮಾಡಲು ಸಾಂಖ್ಯಿಕ ಅಂಶಗಳ ನೆರವನ್ನು ಉದ್ಯಮಿ ಪಡೆಯಬೇಕು. ಒಟ್ಟಿನಲ್ಲಿ, ಸಾಂಖ್ಯಿಕ ಅಂಶಗಳು ವಾಣಿಜ್ಯ ಮತ್ತು ವ್ಯಾಪಾರಗಳ ಜೀವನಾಡಿ.

- ಷೇರು ವ್ಯಾಪಾರ
- ರೈಲ್ವೆ ಅಥವಾ ಮೋಟಾರ್ ಬಸ್ಸು ಉದ್ಯಮ
- ಜೀವವಿಮೆ
- ಬ್ಯಾಂಕಿಂಗ್

ಇತ್ಯಾದಿ ವಿಚಾರಗಳಲ್ಲಿ ಸಂಬಂಧಪಟ್ಟ ಸಾಂಖ್ಯಿಕ ಅಂಶಗಳ ಪರಿಶೀಲನೆಯನ್ನು ನಡೆಸಬೇಕು.

ಸಾಂಖ್ಯಿಕ ಶಾಸ್ತ್ರವು ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನಗಳಿಗೆ ಅಡಿಪಾಯವಾಗಿದೆಯನ್ನಬಹುದು. ಸಮಾಜಶಾಸ್ತ್ರಜ್ಞರು ನಿರಕ್ಷರತೆಗೂ ರೋಗರುಜಿನೆಗಳಿಗೂ ಸಂಬಂಧವನ್ನು ಅಂಕಿ ಅಂಶಗಳಿಂದ ಕಂಡುಹಿಡಿಯಬಹುದು. ಇದೇ ರೀತಿ ಅರ್ಥವಿಜ್ಞಾನಿ ಪ್ರಜೆಗಳ ಆದಾಯಕ್ಕೂ ಸರಕಾರದ ತೆರಿಗೆಗಳಿಗೂ ಸಂಬಂಧವನ್ನು ಸೂಕ್ತ ಅಂಶಗಳ ಆಧಾರದ ಮೇಲೆ ಪರಿಶೀಲಿಸಿ, ನ್ಯಾಯಯುತವಾದ ತೆರಿಗೆ ಪದ್ಧತಿಯನ್ನು. ಸೂಚಿಸಬಹುದು. ಪರೋಕ್ಷ ತೆರಿಗೆಗಳು ದೇಶದ ಒಳ ವ್ಯಾಪಾರ ಮತ್ತು ಹೊರ ವ್ಯಾಪಾರದ ಮೇಲೆ ಯಾವ ರೀತಿ ಪರಿಣಾಮವನ್ನುಂಟಿಮಾಡುತ್ತಿವೆ. ಎಂಬುದನ್ನೂ, ಕಾರ್ಮಿಕರ ವೇತನಮಟ್ಟ ಹಾಗೂ ಅವರ ಜೀವನಮಟ್ಟ ಇವುಗಳಿಗಿರುವ ಸಂಬಂಧವನ್ನೂ ಸಾಂಖ್ಯಿಕ ವಿಧಾನಗಳಿಂದಲೇ ಪರಿಶೀಲಿಸಬಹುದಾಗಿದೆ. ಸಾಂಖ್ಯಿಕ ಅಂಶಗಳ ಆಧಾರವಿಲ್ಲದಿದ್ದರೆ ನಾವು ಮಾಡುವ ಅಂದಾಜುಗಳು ದೋ ಷಪೂರಿತ ವೀಕ್ಷಣೆ ಮತ್ತು ಅಪರಿಪೂರ್ಣ ತೀರ್ಮಾನಗಳನ್ನು ಸಾಂಖ್ಯಿಕ ವಿಧಾನಗಳು ಬೆಳಗಿಕೆ ತರುತ್ತವೆ. ಅರ್ಥವಿಜ್ಞಾನಿ ಹಾಗೂ ಸಮಾಜಶಾತ್ರಜ್ಞರು ತಮ್ಮ ಸಂಶೋಧನೆಗಳಿಗೆ ಸಾಂಖ್ಯಿಕ ವಿಧಾನಗಳನ್ನು ಬಳಸುವುದು ಎಷ್ಟು ಮುಖ್ಯವೆಂಬುದು ಈಗ ಸ್ಪಷ್ಟವಾಯಿತು.

ಸಾವಯವ ಕೋಳಿ ಸಾಕಣೆಯಲ್ಲಿ ಭಾರತದ ನಾಟಿಕೋಳಿ ತಳಿಗಳು

ಡಾ. ಸಿ.ಆರ್. ಗೋಪಿನಾಥ್[೧], ಡಾ. ಎಚ್.ಎನ್. ನರಸಿಂಹಮೂರ್ತಿ[೨] ಮತ್ತು ಡಾ.ರಾಜಕುಮಾರ್ ನಾಗರಹಳ್ಳಿ[೩]
೧. ಸಹಾಯಕ ಪ್ರಾಧ್ಯಾಪಕರು ಹಾಗು ವ್ಯವಹರಿಸಬೇಕಾದ ಲೇಖಕರು, ಕುಕ್ಕುಟ ಶಾಸ್ತ್ರ ವಿಬಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, ೨. ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ, ೩. ಪಶುವೈದ್ಯಾಧಿಕಾರಿ, ಪ.ಚಿ. ಮಂಟೂರ, ಮುದೋಳ (ತಾ), ಬಾಗಲಕೊಟ(ಜಿ), ಕೆ.ವಿ.ಎ.ಎಫ್.ಎಸ್.ಯು (ಬಿ), ಕರ್ನಾಟಕ

ನಾಟಿಕೋಳಿ ಅರ್ತಾಥ್ ಸಾವಯವ ಕೋಳಿ ಗ್ರಾಹಕರಿಗೆ ಬಹಳ ಅಚ್ಚು-ಮೆಚ್ಚು ಹಾಗು ಕೊಂಡು ಕೊಳ್ಳಲು ಅಪಾರ ಬೇಡಿಕೆ ಇದೆ ಆದ್ದರಿಂದ ನಮ್ಮ ದೇಶದ ಉದ್ದಗಲಕ್ಕೂ ಹರಡಿರುವ ನಾಟಿಕೊಳಿ ತಳಿಗಳ ಬಗ್ಗೆ ಅರಿವು ಮೂಡಿಸುವ ಹಾಗು ಸಂರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರ

ಮೇಲಿದೆ, ನಾಟಿಕೋಳಿಉತ್ಪನ್ನ ಸಾವಯವ ಪ್ರಾಮುಖ್ಯತೆ ಪಡೆಯಲು ಮುಖ್ಯ ಕಾರಣ ಇವು ಸಹಜವಾಗಿ ಹುಟ್ಟಿ, ಬೆಳೆಯುತ್ತಾ, ಸ್ವಾಭಾವಿಕವಾಗಿ ಸಿಗುವ ಅಳಿದುಳಿದ ಅಹಾರ ಪದಾರ್ಥ್ ಹಾಗು ಕಡ್ಡಿಕಾಳು ತಿಂದು, ರೈತರಿಗೆ ಹೊರೆಯಾಗದೆ, ಅಲ್ಪವೆಚ್ಚದಲ್ಲಿ ಸಾಕಲಾಗುವ ಹಾಗು ಉತ್ಕೃಷ್ಟ ಮಟ್ಟದ ಮಾಂಸ ಮತ್ತು ಮೊಟ್ಟೆಯನ್ನು ಕೊಡುವ ಸ್ವಾಬಾವಿಕ ಕೋಳಿಗಳು. ಬಾರತದಲ್ಲಿ ಅಧಿಕ್ರುತವಾಗಿ ವಿವಿದ ೨೦ ಜಾತಿಯ ನಾಟಿ ಕೋಳಿಗಳಿವೆ, ಅವುಗಳೆಂದರೆ ಅಸೀಲ್, ಅಂಕಲೇಶ್ವರ್, ಭರ್ಸಾ, ಬ್ರೋನ್‌ದೇಶೀ, ಚಿತ್ತಗಾಂಗ್/ ಮಲಯ್, ದೋಶ್ಕಿರ್, ಡಾಂಕಿ, ಗ್ಯಾಗಸ್, ಹರಿನ್‌ಘಟ್ಟಾಬ್ಲಾಕ್, ಕಡಕ್‌ನಾತ್, ಕಲಸ್ತಿ, ಕಾಶ್ಮೀರ್ ಫೆವೆರೊಲ್ಲಾ, ಮಿರಿ, ನೇಕೇಡ್‌ನೆಕ್, ನಿಕೋಬಾರಿ, ಲೊಲ್ಯಬ್, ಪಂಜಾಬ್ ಬ್ರೊನ್, ತಿತ್ರಿ ಮತ್ತು ತಾನಿ. ಈ ಕೋಳಿಗಳು ಸ್ವಾಭಾವಿಕವಾಗಿ ಆಯಾ ಪ್ರದೇಶದಲ್ಲಿ ವಾಸಿಸುತ್ತಾ ಇಂದಿಗೂ ಸಹ ಸಾವಯವ ಕೋಳಿಗಾಳಾಗಿಯೇ ಉಳಿದಿವೆ, ವಯಸ್ಕ ಗಂಡುಕೋಳಿ ಸುಮಾರು ೨.೫ ರಿಂದ ೩.೫ ಕೆ.ಜಿ ತೂಗಿದರೆ ಹೆಣ್ಣು ಕೋಳಿಗಳು ೧.೫ ರಿಂದ೨.೫ ಕೆ.ಜಿ ರವರೆಗೆ ತೂಗುತ್ತವೆ ಒಂದು ವರ್ಷದಲ್ಲಿ ಸುಮಾರು ೪೦ ರಿಂದ ೭೦ ಮೊಟ್ಟೆ ಉತ್ಪಾದಿಸುವ ಸಾಮರ್ಥ್ಯ ಹೊಂದಿರುತ್ತವೆ. ಇವುಗಳನ್ನ ಗಾತ್ರದ ಆದಾರದಲ್ಲಿ ವಿಂಗಡಿಸಿ ದೊಡ್ಡ ಗಾತ್ರದ ಕೋಳಿಗಳು, ಸಣ್ಣಗಾತ್ರದ ಕೋಳಿಗಳು, ಮತ್ತು ಗುರುತಿಸಲಾಗದ ಸಣ್ಣ ಕೋಳಿಗಳ ಗುಂಪೆಂದು ಕರೆಯಲಾಗುತ್ತದೆ. ಈ ನಮ್ಮ ನಾಟಿಕೋಳಿಗಳನ್ನ ಸಂಕರಣಕ್ಕೊಳಪಡಿಸಿದರೆ ಹೆಚ್ಚು ಸಾವಯವ ಮಾಂಸ ಹಾಗು ಮೊಟ್ಟೆ ಉತ್ಪಾದಿಸಬಹುದಾಗಿದೆ ಜೋತೆಗೆ ನಸಿಸಿಹೋಗುತ್ತಿರುವ ನಮ್ಮದೇ ನಾಟಿ ಕೋಳಿಗಳನ್ನ ಸಂರಕ್ಶಿಸಿದಂತಾಗುತ್ತದೆ. ಈಗಿನ ವಾಣಿಜ್ಯ ಕುಕ್ಕುಟ ಉತ್ಪನ್ನಗಳಲ್ಲಿನ ರಸಾಯನಿಕಗಳು ಹಾಗು ರೊಗ ಹರಡುವ ಸೂಕ್ಷ್ಮ ಜೀವಿಗಳನ್ನು ಕಡಿಮೆ ಮಾಡಬೇಕಾದ ಅವಶ್ಯಕತೆ ಬಹಳ ಇದೆ, ಇದರ ಜೊತೆ ಜೊತೆಗೆ ಪ್ರಾಣಿಹಕ್ಕು ಕಾಯ್ದೆ ಸಹ ಪರಿಣಾಮಕಾರಿಯಾಗಿ ಜಾರಿಯಾಗುತ್ತಿರುವ ಈ ದಿನಗಳಲ್ಲಿ ನಾವು ಸಾವಯವ ಕೋಳಿ ಉತ್ಪಾದನೆ ಬಗ್ಗೆ ಗಮನ ಹರಿಸಬೆಕಾದರೆ ನಮ್ಮದೇ ನಾಟಿ ಕೋಳಿಗಳ ಅಮೂಲಾಗ್ರ ಬೆಳವಣಿಗೆಯತ್ತ ಹೆಜ್ಜೆ ಹಾಕುವುದು ಅವಶ್ಯಕ, ಇದರಿಂದ ಸಾಮಾನ್ಯ ಜನರಿಗೆ ಕೈಗೆಟಕುವ ದರದಲ್ಲಿ ಪ್ರಾಣಿಜನ್ಯ ಸಸಾರಜನಕವನ್ನ ಕೊಟ್ಟಂತಾಗಿ ಆರೋಗ್ಯವಂತ ಹಾಗು ಸದ್ರುಡ ಸಮಾಜ ಕಟ್ಟಲು ಸಹಕಾರಿಯಾಗಲಿದೆ.

ಪೀಠಿಕೆ: ಗ್ರಾಹಕರಿಗೆ ನಾಟಿಕೋಳಿ ಅರ್ತಾಥ್ ಸಾವಯವ ಕೋಳಿ ಬಹಳ ಅಚ್ಚು-ಮೆಚ್ಚು ಹಾಗು ಕೊಂಡು ಕೊಳ್ಳಲು ಅಪಾರ ಬೇಡಿಕೆ ಇದೆ ಆದ್ದರಿಂದ ನಮ್ಮದೇಶದ ಉದ್ದಗಲಕ್ಕೂ ಹರಡಿರುವ ನಾಟಿಕೊಳಿ ತಳಿಗಳ ಬಗ್ಗೆ ಅರಿವು ಮೂಡಿಸುವ ಹಾಗು ಸಂರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರೆ ತಪ್ಪಾಗಲಾರದು ಇದರ ಮೊದಲ ಹೆಜ್ಜೆಯಾಗಿ ಬಾರತದ ವಿವಿದ ಜಾತಿಯ ನಾಟಿ ಕೋಳಿ ಗಳ ಚಿತ್ರಣ ಇಲ್ಲಿದೆ.

ನಾಟಿ ಕೋಳಿಯ ಸಾವಯವ ನೋಟ : ನಾಟಿಕೋಳಿಉತ್ಪನ್ನ ಸಾವಯವ ಪ್ರಾಮುಖ್ಯತೆ ಪಡೆಯಲು ಮುಖ್ಯ ಕಾರಣ ಇವು ಸಹಜವಾಗಿ ಹುಟ್ಟಿ, ಬೆಳೆಯುತ್ತಾ, ಸ್ವಾಬಾವಿಕವಾಗಿ ಸಿಗುವ ಅಳಿದುಳಿದ ಅಹಾರ ಪದಾರ್ಥ್ ಹಾಗು ಕಡ್ಡಿಕಾಳು ತಿಂದು, ರೈತರಿಗೆ ಹೊರೆಯಾಗದೆ, ಅಲ್ಪವೆಚ್ಚದಲ್ಲಿ ಸಾಕಲಾಗುವ ಹಾಗು ಉತ್ಕೃಷ್ಟ ಮಟ್ಟದ ಮಾಂಸ ಮತ್ತು ಮೊಟ್ಟೆಯನ್ನು ಕೊಡುವ ಸ್ವಾಬಾವಿಕ ಕೋಳಿಗಳು.

ವಿದಾನ ಮತ್ತು ಅಳವಡಿಕೆ : ಮುಖ್ಯವಾಗಿ ಆಯಾಬಾಗದಲ್ಲಿ ಸಾಮಾನ್ಯವಾಗಿ ವಾಸಿಸುವ ನಾಟಿಕೋಳಿಗಳನ್ನು ಗುರುತಿಸಿ, ಉಳಿಸಿ ಬೆಳೆಸುವುದರ ಜೊತೆಗೆ ಪ್ರಕ್ರುತಿಯಲ್ಲಿ ಸರ್ವತೊಮುಖ ಸಮತೊಲ ನವನ್ನು ಕಾಪಾಡುವುದು ಸಾವಯವ ಕೋಳಿ ಸಾಕಣೆಯ ಮುಖ್ಯ ಉದ್ದೇಶ (ನಾರಾಯಣ್,೨೦೦೫). ನಾಟಿ ಕೋಳಿ ಉತ್ಪಾದನೆಗೆ ತಗಲುವ ಅಲ್ಪ ಸಮಯ ಮತ್ತು ಆಲ್ಪ ವೆಚ್ಚ ಹಾಗು ಬೆಲೆ ಶೇ ೨೦ ರಷ್ಟು ಮಾತ್ರ ಹೆಚ್ಚಿರುತ್ತದೆ ಆದರೆ ಬೇರೆ ನಾಟಿ ಪ್ರಾಣಿಗಳ ಮಾಂಸದ ಉತ್ಪನ್ನಗಳಲ್ಲಿ ಶೇ ೩೦-೪೦ ರಷ್ಟು ಹೆಚ್ಚಿಗೆ ಬೆಲೆ ಇರುತ್ತದೆ (ಹೆಲ್ಲ್ ರ್, ೨೦೦೬). ಸ್ತಳೀಯ ಕೋಳಿಗಳಿಗೆ ಆದ್ಯತೆ ಕೊಟ್ಟು ಅವುಗಳು ಸ್ವಾಬಾವಿಕವಾಗಿ ಬೆಳೆಯಲು ಅನುವಾಗುವ ಪರಿಸರ ಸ್ರುಷ್ಟಿಸಬೇಕು, ನಾಟಿಕೋಳಿತಳಿ ಸಂವರ್ದನೆ ಹಾಗು ಮುಂದುವರಿಸುವಿಕೆ ಬಹುಮುಖ್ಯ (ಚಂದರ್ ಎಟ್ ಆಲ್ ೨೦೦೬).

ಭಾರತದ ವಿವಿದ ನಾಟಿ ಕೋಳಿ ತಳಿಗಳ ವಿವರಣೆ:

(ಅ) ದೊಡ್ಡ ಗಾತ್ರದ ದೇಹ ಹೊಂದಿರುವ ಭಾರತದ ನಾಟಿಕೋಳಿ ತಳಿಗಳು

ನಾಟಿಕೋಳಿ ಹೆಸರು	ಮೂಲ ಸ್ಥಳ	ವಿವರಣೆ	ಉತ್ಪಾದನಾ ಸಾಮರ್ಥ್ಯ		
			ದೇಹ ತೂಕ (ಕೆ.ಜಿ ಗಳಲ್ಲಿ)		ಮೊಟ್ಟೆ ಸೆಂಖ್ಯೆ ವರುಷಕ್ಕೆ
			ಗಂಡು	ಹೆಣ್ಣು	
ಅಸೀಲ್	ಆಂದ್ರ ಪ್ರದೇಶ ಹಾಗು ದೇಶದ ಬಹುಬಾಗದಲ್ಲಿ	ಬಹು ಬಣ್ಣದಿಂದ ಕೂಡಿದ್ದು ಅತ್ಯಾಕರ್ಶಕ ವಾಗಿರುತ್ತದೆ, ಬಿಳಿ, ಕೆಂಪು, ಕಪ್ಪು ಹೀಗೆ ಎಳು ಬಗೆ ಇವೆ	೩.೦೦-೪.೦೦	೨.೫೦	೬೦-೯೦
ಚಿತ್ತಗಾಂಗ್/ ಮಲಾಯ್	ಪೂರ್ವಕಡಲು ತೀರ	ಕಪ್ಪುಮಿಶ್ರಿತ ಕೆಂಪು ಬಣ್ಣ, ಕಡುಗೆಂಪು ಹಾಗು ಕಪ್ಪು, ಗಾಜಿನ ತರಹದ ಪುಕ್ಕ	೨.೫-೩.೫	೨-೨.೫	೪೦-೬೦
ದೋಶ್ಕಿರ್	ಆಸ್ಸಾಂ	ಕಪ್ಪು ಹಾಗು ಬಿಳಿ ಮಿಶ್ರಿತ ಪಟ್ಟೆಯುಳ್ಳ ಪುಕ್ಕ	೧.೭೫	೧.೫	೬೦ - ೭೦
ಡಾಂಕಿ	ಆಂದ್ರ ಪ್ರದೇಶ	ಕಪ್ಪುಮಿಶ್ರಿತ ಕೆಂಪು ಬಣ್ಣ, ಕಡುಗೆಂಪು ಹಾಗು, ಒದ್ದನೆಯ ಕತ್ತು ಮತ್ತು ಗಾಜಿನ ತರಹದ ತುಂಬು ಪುಕ್ಕ ಇದೆ	೩.೦೦	೨.೦೦	೩೫-೪೦

ಗಾಗಸ್	ಆಂಧ್ರ ಪ್ರದೇಶ ಹಾಗು ಕರ್ನಾಟಕ	ಬ್ರೌನ್ ಮತ್ತು ಕಪ್ಪು ಮಿಶ್ರಿತ ಕೆಂಪು ಬಣ್ಣ,	೨.೦೦	೧.೫೦	೪೫-೬೦
ತೆಲ್ಲಿಚೇರಿ	ಕೇರಳ	ಕಪ್ಪು ಮಿಶ್ರಿತ ಕಡು ಕೆಂಪು ಬಣ್ಣ	೧.೬೨	೧.೪೨	೬೦-೮೦
ಪಂಜಾಬ್ ಬ್ರೌನ್	ಪಂಜಾಬ್	ಬೂದು ಬಣ್ಣ	೨.೫	೨.೦೦	೬೦-೮೦

(ಆ) ಸಾಮಾನ್ಯ ಗಾತ್ರದ ದೇಹ ಹೊಂದಿರುವ ಭಾರತದ ನಾಟಿಕೋಳಿ ತಳಿಗಳು

ನಾಟಿಕೋಳಿ ಹೆಸರು	ಮೂಲ ಸ್ಥಳ	ವಿವರಣೆ	ಉತ್ಪಾದನಾ ಸಾಮರ್ಥ್ಯ		
			ದೇಹ ತೂಕ (ಕೆ.ಜಿ ಗಳಲ್ಲಿ)		ಮೊಟ್ಟೆ ಸಂಖ್ಯೆ ವರುಷಕ್ಕೆ
			ಗಂಡು	ಹೆಣ್ಣು	
ಅಂಕಲೇಶ್ವರ್	ಗುಜರಾತ್	ಕಪ್ಪು ಹಾಗು ಬಿಳಿ ಮಿಶ್ರಿತ ಪಟ್ಟೆಯುಳ್ಳ ಮತ್ತು ಕೆಂಪು ಬಣ್ಣದ ಪುಕ್ಕ	೧.೫೦	೧.೫	೮೦-೮೩
ಬ್‌ರ್‌ಸಾ	ಮಹಾರಾಷ್ಟ್ರ ಮತ್ತು ಗುಜರಾತ್	ಕಪ್ಪು ಮಿಶ್ರಿತ ಸಾದ ಬಿಳಿ ಪುಕ್ಕ	೧.೨೦	೦.೮೫೦	೪೦-೫೫
ಹರಿಂಘಟ್ಟ ಬ್ಲಾಕ್	ಪಶ್ಚಿಮ ಬಂಗಾಳ	ಅಪ್ಪಟ ಕಪ್ಪು ಬಣ್ಣ	೧.೩೦	೧.೦೦	೪೫-೬೦
ಕಡಕನಾಥ್	ಮಧ್ಯಪ್ರದೇಶ	ಕಪ್ಪು ಮಿಶ್ರಿತ ಗೋಲ್ಡ್ ಪೆನ್ಸಿಲ್ಡ್ ಪುಕ್ಕ	೧.೨೫	೧.೦೦	೮೦-೮೫
ಕಾಶ್ಮೀರ್ ಫ್ಲೆವೆರೊಲ್ಲಾ	ಆಮ್ಮು ಮತ್ತು ಕಾಶ್ಮೀರ	ಕಪ್ಪು ಹಾಗು ಬಿಳಿ ಮಿಶ್ರಿತ ಪಟ್ಟೆಯುಳ್ಳ ಮತ್ತು ಕೆಂಪು ಬೂದು ಬಣ್ಣದ ಪುಕ್ಕ	೧.೭೫	೧.೨೫	೬೦-೭೦
ಮಿರಿ	ಅಸಾಂ	ಕೆಂಪು ಬೂದು ಬಣ್ಣದ ಪುಕ್ಕ	೧.೩೦	೧.೦೦	೬೦-೭೦
ಕಲಸ್ಥಿ	ಆಂದ್ರಪ್ರದೇಶ	ಕೆಂಪು ಮತ್ತು ಕಡುಗೆಂಪು ಮಿಶ್ರಿತ ಬೂದು ಬಣ್ಣದ ಪುಕ್ಕ	೧.೯೦	೧.೫೦	೩೦-೪೦
ನೇಕೇಡ್ ನೆಕ್	ಪಶ್ಚಿಮ ಕಡಲು ತೀರ	ಬೂದು ಮಿಶ್ರಿತ ಬಿಳಿ	೧.೮೦	೧.೫೦	೧೦೦-೧೦೪
ನಿಕೋಬಾರಿ	ಅಂಡಮಾನ್ ಮತ್ತು ನಿಕೋಬಾರ್ ದ್ವೀಪ	ಬೂದುಮಿಶ್ರಿತ ಕಪ್ಪು ಬಣ್ಣದ ಪುಕ್ಕ	೧.೬೦	೧.೨೦	೧೪೦-೧೫೦

(ಇ) ಭಾರತದಲ್ಲಿರುವ ಗುರುತಿಸಿಲ್ಲದ ಇತರೆ ನಾಟಿ ಕೋಳಿ ತಳಿಗಳು

ಇವು ಸಹ ಸಣ್ಣ ಗಾತ್ರದ ದೇಹಹೊಂದಿದ್ದು ಬಹುಬಣ್ಣದಿಂದ ಕೂಡಿವೆ ಹಾಗು ನಮ್ಮ ದೇಶದ ಎಲ್ಲಾ ಬಾಗಗಳಲ್ಲಿ ಹರಡಿವೆ.

ನಾಟಿಕೋಳಿ ಹೆಸರು	ಮೂಲ ಸ್ಥಳ	ವಿವರಣೆ	ಉತ್ಪಾದನಾ ಸಾಮರ್ಥ್ಯ		
			ದೇಹ ತೂಕ (ಕೆ.ಜಿ ಗಳಲ್ಲಿ)		ಮೊಟ್ಟೆ ಸಂಖ್ಯೆ ವರುಷಕ್ಕೆ
			ಗಂಡು	ಹೆಣ್ಣು	
ತಾನಿ	ಉತ್ತರ ಪ್ರದೇಶ	ಬಹು ಬಣ್ಣದಿಂದ ಕೂಡಿವೆ	೧.೨-೧.೫	೧-೧.೨	೪೦-೫೦
ತಿತ್ರಿ	ಉತ್ತರ ಪ್ರದೇಶ	ಬಹು ಬಣ್ಣದಿಂದ ಕೂಡಿವೆ	೧.೨-೧.೫	೧-೧.೨	೪೦-೫೦
ಲೋಲ್ಯಾಬ್	ಉತ್ತರ ಪ್ರದೇಶ	ಬಹು ಬಣ್ಣದಿಂದ ಕೂಡಿವೆ	೧.೨-೧.೫	೧-೧.೨	೪೦-೫೦
ಬ್ರೌನ್ ದೇಶಿ	ಉತ್ತರ ಪ್ರದೇಶ	ಬಹು ಬಣ್ಣದಿಂದ ಕೂಡಿವೆ	೧.೨-೧.೫	೧-೧.೨	೪೦-೫೦

ಮೇಲೆ ವಿವರಿಸಿದ ನಾಟಿಕೋಳಿಗಳ ಜ್ಯೋತೆಗೆ ನಮ್ಮಲ್ಲಿ ಇನ್ನೂ ಬಹಳಷ್ಟು ಪ್ರದೇಶಾವಾರು ನಾಟಿ ಕೋಳಿಗಳಿವೆ ಉದಾ:– ದುಮಾಸಿಲ್, ಅನ್ಸಲಿ, ಗೌರ್, ಹಾಗು ನಮ್ಮ ದೇಶದ ಕಾಡಿನಲ್ಲಿ ಹಾಗು ಕಾಡಿನಂಚಿನ ಊರುಗಳಲ್ಲಿ ವಾಸಿಸುವ ಕಾಡುಕೋಳಿಗಳು, ಇವುಗಳ ಬಗ್ಗೆಯೂ ಸಹ ಗಮನಹರಿಸಿ ಸಂರಕ್ಷಣೆ ಮಾಡುವ ಅಗತ್ಯತೆ ಬಹಳ ಇದೆ.

ಸಾರಾಂಶ ಮತ್ತು ನಿರ್ಣಯ : ನೈಸರ್ಗಿಕವಾಗಿ ವಾಸಿಸುವ ನಾಟಿಕೋಳಿಗಳೇ ಸಾವಯವ ಕೋಳಿಗಳು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಆದ್ದರಿಂದ;

- ನಮ್ಮಲ್ಲಿರುವ ಪ್ರದೇಶಾವಾರು ನಾಟಿ ಕೋಳಿಗಳ ಅಭಿವೃದ್ಧಿಯತ್ತ ವಿಶೇಷ ಗಮನ ಹರಿಸಬೇಕು.
- ಪ್ರದೇಶಾವಾರು ನಾಟಿ ಕೋಳಿಗಳ ಉತ್ಪಾದನಾ ಸಾಮರ್ಥ್ಯ, ಇತರೆ ಪೌಷ್ಟಿಕಾಂಶಗಳು, ಆರೋಗ್ಯದಾಯಕ ಅಂಶಗಳು ಹಾಗು ವಿವಿದ ಔಷದಿ ಗುಣಗಳ ಬಗ್ಗೆ ಸಂಶೊದನೆ ಮತ್ತು ಅಭಿವೃದ್ಧಿ

ಅತ್ಯಗತ್ಯ.

- ನಾಟಿಕೋಳಿ ಸಾಕುವ ರೈತರಿಗೆ ವಿಶೇಷ ರಿಯಾಯಿತಿ ಸೌಲಭ್ಯ ಸರ್ಕಾರದ ವತಿಯಿಂದ ಆಗಬೇಕು.
- ಸಣ್ಣ ಹಾಗು ಅತಿ ಸಣ್ಣ ನಾಟಿಕೋಳಿ ಸಾಕಣೆ ದಾರರಿಗೆ ಹೆಚ್ಚು ಮನ್ನಣೆ ಸಿಗಬೇಕು.
- ಕುಟುಂಬಗಳು ನಾಟಿಕೋಳಿಸಾಕಣೆಯಲ್ಲಿ ತೊಡಗುವಂತೆ ಮಾಡಬೇಕು ಇದರಿಂದ ಪ್ರದೇಶಾವಾರು ನಾಟಿಕೋಳಿ ಸಾಂದ್ರತೆ ಹೆಚ್ಚಾಗಿ, ಪ್ರಾಣಿಜನ್ಯ ಸಸಾರಜನಕ ಲಬ್ಯತೆ ಹಾಗು ಮಾರುಕಟ್ಟೆ ವಿಸ್ತರಣೆ ಸಾಧ್ಯತೆ ಹೆಚ್ಚು.

ಆದಾರ ಗ್ರಂಥಗಳು

೧ ಚಂದರ್. ಎಮ್, ಸುಬ್ರಮನೇಷ್ವರಿ .ಬಿ. ಮತ್ತು ಪಾಟಕ್.ಪಿ.ಕೆ. ೨೦೦೬. ಸಾವಯಾವ ಪ್ರಾಣೀ ಹಾಗು ಕೋಳಿ ಉತ್ಪಾದನೆ, ಎ ರೆಫ್ಟೆರೆನ್ಸ್ ಮ್ಯಾನುಅಲ್, ಡಿವಿಸನ್ ಆಫ್ ಎಕ್ಸ್ ಟೇನ್ ಏಜುಕೇಶನ್ ಐ.ವಿ.ಆರ್.ಐ. ಇಜ್ಞತ್ ನಗರ್ ಬರೇಲಿ.

೨ ಕ್ರಪೊರ್ಡ್.ಡಿ.೧೯೯೦. ಒರಿಜಿನ್ ಅನ್ಡ್ ಹಿಸ್ಟ್ರಿ ಆಫ್ ಪೌಲ್ಟ್ರಿ ಸ್ಪೀಶೀಸ್ ಆನ್ಡ್ ಪೌಲ್ಟ್ರೀಜೆನಿಟಿಕ್ ರಿಸೊರ್ಸ್.ಪು.ಸೆಂ ೧–೫೯ ಆಮ್ಸ್ಟರ್‌ಡಾಮ್, ಎಲ್ಸ್ವಿಯರ್ ಸೈನ್ಸ್ ಪಬ್ಲಿಕೆಶ್ನ್.

೩ ಹೆಲ್ರ್.೨೦೦೬. ಸಾವಯವ ಮಾಂಸ ಮಾರುಕಟ್ಟೆ .ಫುಡ್ ನ್ಯಾವಿಗೇಟರ್. ಯು.ಎಸ್.ಎ. ಮೇ, ೨೦೦೬.

೪ ಮಹಾಪತ್ರ ಎಸ್.ಸಿ ಅನ್ಡ್ ಪಾಂಡಾ.ಬಿ ೧೯೮೧. ಪೌಲ್ಟ್ರಿ ಜೆನಿಟಿಕ್ ರಿಸೊರ್ಸ್ ಇನ್ ಇಚಿಡಿಯಾ, ಇಂಡಿಯನ್ ಪೌಲ್ಟ್ರಿ ಇಂಡಸ್ಟ್ರೀ ಇಯರ್ ಬುಕ್ ಪು.ಸೆ.೫೦–೫೮.

೫ ನಾರಾಯಣ್.೨೦೦೫. ಭಾರತದಲ್ಲಿ ಸಾವಯವ ಕೃಷಿ, ತೊಂದರೆಗಳು ಹಾಗು ಅವಶ್ಯಕತೆ. ಒಕೇಶನಲ್ ಪೇಪರ್–೩೮.

ಕರ್ನಾಟಕದ ವಿವಿದ ಜಿಲ್ಲೆಗಳ ನಾಟಿ ಕೋಳಿಗಳ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಒಂದು ತುಲನಾತ್ಮಕ ಅಧ್ಯಯನ

ಡಾ. ಸಿ.ಆರ್. ಗೋಪಿನಾಥ್[೧], ಡಾ. ಎಚ್.ಎನ್. ನರಸಿಂಹಮೂರ್ತಿ[೨] ಮತ್ತು ಡಾ.ರಾಜಕುಮಾರ್ ನಾಗರಹಳ್ಳಿ[೩]

೧. ಸಹಾಯಕ ಪ್ರಾಧ್ಯಾಪಕರು ಹಾಗು ವ್ಯವಹರಿಸಬೇಕಾದ ಲೇಖಕರು, ಕುಕ್ಕುಟ ಶಾಸ್ತ್ರ ವಿಬಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, ೨. ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ, ೩. ಪಶುವೈದ್ಯಾಧಿಕಾರಿ, ಪ.ಚಿ. ಮಂಟೂರ, ಮುದೋಳ (ತಾ), ಬಾಗಲಕೊಟ(ಜಿ), ಕೆ.ವಿ.ಎ.ಎಫ್.ಎಸ್.ಯು (ಬಿ), ಕರ್ನಾಟಕ

ಪ್ರಸ್ತುತ ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ನಾಟಿಕೋಳಿ ಅಚ್ಚು ಮೆಚ್ಚು ಹಾಗು ಕೊಂಡು ಕೊಳ್ಳಲು ಅಪಾರ ಬೇಡಿಕೆ ಇದೆ ನಾಟಿಕೊಳಿ ತಳಿಗಳ ಬಗ್ಗೆ ಅರಿವು ಮೂಡಿಸುವ ಹಾಗು ಸಂರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ, ಇದಕ್ಕೆ ಪೂರಕವಾಗಿ ಕರ್ನಾಟಕದ ವಿವಿದ ಜಿಲ್ಲೆಗಳ ನಾಟಿಕೋಳಿಗಳ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಹಿತ್ತಲಲ್ಲಿ ಸಾಕಾಣಿಕೆ ಮತ್ತು ಮನೆಯೊಳಗೆ /..ವಾಣಿಜ್ಯೋದ್ಯಮದ ರೀತಿ ಸಾಕುವುದರಿಂದ ಅವುಗಳ ಉತ್ಪಾದನಾ ಸಾಮರ್ಥ್ಯದಲ್ಲಿ ಕಂಡುಬರುವ ವೆತ್ಯಾಸದ ಬಗ್ಗೆ ಅಧ್ಯಯನ ಕೈಗೊಳ್ಳಲಾಯ್ತು. ಈ ಕೆಲಸಕ್ಕಾಗಿ ಕರ್ನಾಟಕದ ಮೈಸೂರು ಪ್ರಾಂತ್ಯದ ಮೂರು ಜಿಲ್ಲೆಗಳಾದ ಚಾಮರಾಜನಗರ, ಮೈಸೂರು ಮತ್ತು ಮಂಡ್ಯದ ವ್ಯಾಪ್ತಿಯಲ್ಲಿ ಬರುವ ಕೆಲವು ಆಯ್ದ ಹಳ್ಳಿಗಳ್ಳಿಂದ ಸುಮಾರು ೧೮೦೦ ರೈತರನ್ನು ಆಯ್ಕೆಮಾಡಿ ಅವರಿಂದ ಅವರಲ್ಲಿರುವ ನಾಟಿ ಕೊಳಿಗಳ ಮೊಟ್ಟೆ ಉತ್ಪಾದಿಸುವ ಸಾಮರ್ಥ್ಯ, ಮೊಟ್ಟೆ ತೂಕ, ಮಾರಾಟದ ದೇಹ ತೂಕ ಮತ್ತು ಮಾಂಸ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಮಾಹಿತಿ ಪಡೆಯಲಾಯ್ತು. ಅದೇ ರೀತಿ ಬೆಂಗಳೂರು ಪ್ರಾಂತ್ಯದ ಮೂರು ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ ಕೆಲವು ಆಯ್ದ ಹಳ್ಳಿಗಳ್ಳಿಂದ ಸುಮಾರು ೧೮೦೦ ರೈತರನ್ನು ಆಯ್ಕೆಮಾಡಿ ಅವರಿಂದ ಮೇಲಿನ ಮಾಹಿತಿ ಕ್ರೂಡೀಕರಿಸಿ ಹಿತ್ತಲಲ್ಲಿಕೊಳಿ ಸಾಕಣೆ ಪದ್ದತಿ ಹಾಗು ವಾಣಿಜ್ಯೋದ್ಯಮದ ರೀತಿ ನಾಟಿ ಕೋಳಿ ಸಾಕಣೆ ಮಾಡಿ ಅವುಗಳ ಉತ್ಪಾದನಾ ಸಾಮರ್ಥ್ಯ ಅಧ್ಯಯನ ಮಾಡಿ ಎರಡೂ ಪದ್ದತಿ ಕ್ಕೋಳಿ ಸಾಕಣೆ ತುಲನೆ ಮಾಡಿದಾಗ ಮೈಸೂರು ವಿಬಾಗದಲ್ಲಿ ವಾಣಿಜ್ಯೋದ್ಯಮದ ರೀತಿಯಲ್ಲಿ ಮೊಟ್ಟೆ ಉತ್ಪಾದಿಸುವ ಸಾಮರ್ಥ್ಯ, ಮೊಟ್ಟೆ ತೂಕ, ಮಾರಾಟದ ದೇಹ ತೂಕ ಮತ್ತು ಮಾಂಸ ಉತ್ಪಾದನಾ ಸಾಮರ್ಥ್ಯ ಕ್ರಮವಾಗಿ ೭೦, ೪೫.೫೨ಗ್ರಾಂ, ೧೫೫೯ಗ್ರಾಂ ಮತ್ತು ಶೇ ೮೧.೮೧ ರಶ್ಟು ಹಾಗು ಹಿತ್ತಲಲ್ಲಿಕೊಳಿ ಸಾಕಣೆ ಪದ್ದತಿಯಲ್ಲಿ ಕ್ರಮವಾಗಿ ೬೦, ೪೨ಗ್ರಾಂ, ೧೫೦೫ಗ್ರಾಂ, ಮತ್ತು ಶೇ ೭೬ ರಶ್ಟು ಕಂಡು ಬಂತು. ಅದೇ ರೀತಿ ಬೆಂಗಳೂರು ಪ್ರಾಂತ್ಯದಲ್ಲಿ ವಾಣಿಜ್ಯೋದ್ಯಮದ ರೀತಿಯಲ್ಲಿ ಮೊಟ್ಟೆ ಉತ್ಪಾದಿಸುವ ಸಾಮರ್ಥ್ಯ, ಮೊಟ್ಟೆ ತೂಕ, ಮಾರಾಟದ ದೇಹ ತೂಕ ಮತ್ತು ಮಾಂಸ ಉತ್ಪಾದನಾ ಸಾಮರ್ಥ್ಯ ಕ್ರಮವಾಗಿ ೫೭; ೪೬.೫೦ಗ್ರಾಂ, ೨೦೪೬ಗ್ರಾಂ ಮತ್ತು ಶೇ ೮೨.೪೫ ರಶ್ಟು ಹಾಗು ಹಿತ್ತಲಲ್ಲಿಕೊಳಿ ಸಾಕಣೆ ಪದ್ದತಿಯಲ್ಲಿ ಕ್ರಮವಾಗಿ ೫೦, ೪೫ಗ್ರಾಂ, ೨೨೦೦ಗ್ರಾಂ ಮತ್ತು ಶೇ ೭೮ ರಶ್ಟು ಕಂಡು ಬಂತು.

ಪೀಠಿಕೆ : ನಮ್ಮ ದೇಶದ ಉದ್ದಗಲಕ್ಕೂ ಹರಡಿರುವ ನಾಟಿಕೊಳಿ ತಳಿಗಳ ಬಗ್ಗೆ ಅರಿವು ಮೂಡಿಸುವ ಹಾಗು ಸಂರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ, ಇದಕ್ಕೆ ಪೂರಕವಾಗಿ ಕರ್ನಾಟಕದ ವಿವಿದ ಜಿಲ್ಲೆಗಳ ನಾಟಿಕೋಳಿಗಳ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಹಿತ್ತಲಲ್ಲಿ ಸಾಕಾಣಿಕೆ ಮತ್ತು ಮನೆಯೊಳಗೆ /..ವಾಣಿಜ್ಯೋದ್ಯಮದ ರೀತಿ ಸಾಕುವುದರಿಂದ ಅವುಗಳ ಉತ್ಪಾದನಾ ಸಾಮರ್ಥ್ಯದಲ್ಲಿ ಕಂಡುಬರುವ ವೆತ್ಯಾಸದ ಬಗ್ಗೆ ಅಧ್ಯಯನ ಕೈಗೊಳ್ಳಲಾಯ್ತು.

ಅಧ್ಯಯನದ ವಿದಾನ ಮತ್ತು ಅಳವಡಿಕೆ : ಆಯಾಬಾಗದಲ್ಲಿ ಸಾಮಾನ್ಯವಾಗಿ ವಾಸಿಸುವ ನಾಟಿಕೋಳಿ ಸಾಕಣೆ ಮಾಡುವ ರೈತರನ್ನು ಗುರುತಿಸಿ, ಅವರಿಂದ ಮಾಹಿತಿ ಪಡೆಯಲಾಯ್ತು, ಈ ಕೆಲಸಕ್ಕಾಗಿ ಕರ್ನಾಟಕದ ಮೈಸೂರು ಪ್ರಾಂತ್ಯದ ಮೂರು ಜಿಲ್ಲೆಗಳಾದ ಚಾಮರಾಜನಗರ, ಮೈಸೂರು ಮತ್ತು ಮಂಡ್ಯದ ವ್ಯಾಪ್ತಿಯಲ್ಲಿ ಬರುವ ಕೆಲವು ಆಯ್ದ ಹಳ್ಳಿಗಳ್ಳಿಂದ ಸುಮಾರು ೧೮೦೦ ರೈತರನ್ನು ಆಯ್ಕೆಮಾಡಿ ಅವರಿಂದ ಅವರಲ್ಲಿರುವ ನಾಟಿ ಕೊಳಿಗಳ ಮೊಟ್ಟೆ ಉತ್ಪಾದಿಸುವ ಸಾಮರ್ಥ್ಯ, ಮೊಟ್ಟೆ ತೂಕ, ಮಾರಾಟದ ದೇಹ ತೂಕ ಮತ್ತು ಮಾಂಸ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಮಾಹಿತಿ

ಪಡೆಯಲಾಯ್ತು. ಅದೇ ರೀತಿ ಬೆಂಗಳೂರು ಪ್ರಾಂತ್ಯದ ಮೂರು ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ ಕೆಲವು ಆಯ್ದ ಹಳ್ಳಿಗಳಿಂದ ಸುಮಾರು ೧೮೦೦ ರೈತರನ್ನು ಆಯ್ಕೆಮಾಡಿ ಅವರಿಂದ ಮೇಲಿನ ಮಾಹಿತಿ ಕ್ರೂಡೀಕರಿಸಲಾಯ್ತು, ಈ ತರಹ ದೊರಕಿದ ಮಾಹಿತಿಯು ಹಿತ್ತಲಲ್ಲಿಕೊಳಿ ಸಾಕಣೆ ಪದ್ದತಿ / ಸಾಮಾನ್ಯ ಕೋಳಿ ಸಾಕಣೆಗೆ ಸೇರಿದ್ದೆಂದು ಪರಿಗಣಿಸಲಾಯ್ತು.

ವಾಣಿಜ್ಯೋದ್ಯಮದ ರೀತಿ ನಾಟಿ ಕೋಳಿ ಸಾಕಣೆ ಮಾಡಿ ಅವುಗಳ ಉತ್ಪಾದನಾ ಸಾಮರ್ಥ್ಯ ಅದ್ಯಯನ ಮಾಡಿ ಇದನ್ನು ಹಿತ್ತಲಲ್ಲಿಕೊಳಿ ಸಾಕಣೆ ಪದ್ದತಿ / ಸಾಮಾನ್ಯ ಕೋಳಿ ಸಾಕಣೆ ಜ್ಯೊತೆ ತುಲನೆ ಮಾಡುವ ಸಲುವಾಗಿ ಮೈಸೂರು ಪ್ರಾಂತ್ಯದ ಮೂರು ಜಿಲ್ಲೆಗಳಾದ ಚಾಮರಾಜನಗರ, ಮೈಸೂರು ಮತ್ತು ಮಂಡ್ಯದ ವ್ಯಾಪ್ತಿಯಲ್ಲಿ ಬರುವ ಕೆಲವು ಆಯ್ದ ಹಳ್ಳಿಗಳಿಂದ ಮೊಟ್ಟೆಗಳನ್ನು ಕ್ರಮವಾಗಿ ೪೩೨, ೫೩೦ ಮತ್ತು ೫೫೦ ತಂದು ಕೃತಕವಾಗಿ ಕಾವು ಕೊಟ್ಟು ಕ್ರಮವಾಗಿ ೨೦೦, ೨೪೮ ಹಾಗು ೨೨೩ ಮರಿಗಳನ್ನು ಪಡೆಯಲಾಯ್ತು.

ಅದೇ ರೀತಿ ಬೆಂಗಳೂರು ಪ್ರಾಂತ್ಯದ ಮೂರು ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಕೆಲವು ಆಯ್ದ ಹಳ್ಳಿಗಳಿಂದ ಮೊಟ್ಟೆಗಳನ್ನು ಕ್ರಮವಾಗಿ ೫೯೮, ೫೩೦ ಮತ್ತು ೫೪೭ ತಂದು ಕ್ರಮವಾಗಿ ೨೬೮, ೨೮೩ ಹಾಗು ೨೬೮ ಮರಿಗಳನ್ನು ಪಡೆಯಲಾಯ್ತು. ಎಲ್ಲಾ ಆರು ಜಿಲ್ಲೆಗಳ ಮರಿಗಳನ್ನು ದಪ್ಪಸೆತ್ತೆ ವಿದಾನದಲ್ಲಿ ಬೇರೆ ಬೇರೆಯಾಗಿ ವಿಂಗಡಿಸಿ ಒಂದನೇ ದಿನದಿಂದ ೫೨ ವಾರದ ವರೆಗೆ ಸಾಕಿ ವಿವಿದ ಉತ್ಪಾದನಾ ಪಲಿತಾಂಶವನ್ನು ಪಡೆಯಲಾಯ್ತು.

ವಿವಿದ ಉತ್ಪಾದನಾ ವಿಷಯಗಳ ಪಲಿತಾಂಷವನ್ನು ಕೋಷ್ಟಕ ೧ ಹಾಗು ೨ ರಲ್ಲಿ ನೀಡಲಾಗಿದೆ.

ಕೋಷ್ಟಕ ೧ ಮೈಸೂರು ಪ್ರಾಂತ್ಯ

ಜಿಲ್ಲೆಗಳು	ಒಟ್ಟು ಮೊಟ್ಟೆ ಉತ್ಪಾದನೆ		ಮೊಟ್ಟೆ ತೂಕ (ಗ್ರಾಂ)		ದೇಹ ತೂಕ (ಗ್ರಾಂ)		ಶೇ. ಮಾಂಸ ಊತ್ಪಾದನೆ	
	ವಾಣಿಜ್ಯೋದ್ಯಮದರೀತಿ	ಹಿತ್ತಲಲ್ಲಿ ಕೊಳಿ ಸಾಕಣೆ	ವಾಣಿಜ್ಯೋದ್ಯಮದರೀತಿ	ಹಿತ್ತಲಲ್ಲಿ ಕೊಳಿ ಸಾಕಣೆ	ವಾಣಿಜ್ಯೋದ್ಯಮದರೀತಿ	ಹಿತ್ತಲಲ್ಲಿ ಕೊಳಿಸಾಕಣೆ	ವಾಣಿಜ್ಯೋದ್ಯಮದರೀತಿ	ಹಿತ್ತಲಲ್ಲಿ ಕೊಳಿ ಸಾಕಣೆ
ಚಾಮರಾಜನಗರ	೫೭	೫೦	೪೫	೪೧	೧೪೪೫	೧೪೧೦	೭೯	೭೫
ಮೈಸೂರು	೭೧	೬೦	೪೫	೪೦	೧೪೯೧	೧೫೦೦	೪೧	೭೪
ಮಂಡ್ಯ	೪೨	೭೦	೪೬	೪೩	೧೬೪೨	೧೬೦೫	೪೨	೭೪
ಪ್ರಾಂತೀಯ ಸರಾಸರಿ	೭೧	೬೦	೪೫	೪೨	೧೫೫೯	೧೫೦೫	೪೧	೭೬

ಕೊಷ್ಟಕ ೨ ಬೆಂಗಳೂರು ಪ್ರಾಂತ್ಯ

ಜಿಲ್ಲೆಗಳು	ಒಟ್ಟು ಮೊಟ್ಟೆ ಉತ್ಪಾದನೆ		ಮೊಟ್ಟೆ ತೂಕ (ಗ್ರಾಂ)		ದೇಹ ತೂಕ (ಗ್ರಾಂ)		ಶೇ. ಮಾಂಸ ಊತ್ಪಾದನೆ	
	ವಾಣಿಜ್ಯೋದ್ಯಮದರೀತಿ	ಹಿತ್ತಲಲ್ಲಿ ಕೊಳಿ ಸಾಕಣೆ	ವಾಣಿಜ್ಯೋದ್ಯಮದರೀತಿ	ಹಿತ್ತಲಲ್ಲಿ ಕೊಳಿ ಸಾಕಣೆ	ವಾಣಿಜ್ಯೋದ್ಯಮದರೀತಿ	ಹಿತ್ತಲಲ್ಲಿ ಕೊಳಿಸಾಕಣೆ	ವಾಣಿಜ್ಯೋದ್ಯಮದರೀತಿ	ಹಿತ್ತಲಲ್ಲಿ ಕೊಳಿ ಸಾಕಣೆ
ಬೆಂಗಳೂರು ಗ್ರಾಮಾಂತರ	೫೯	೫೪	೪೭	೪೪	೨೦೪೬	೨೩೦೦	೪೨	೭೯
ರಾಮನಗರ	೫೯	೫೧	೪೩	೪೬	೨೦೩೩	೨೧೦೦	೪೧	೭೪
ಚಿಕ್ಕಬಳ್ಳಾಪುರ	೫೪	೪೪	೪೪	೪೬	೨೦೫೯	೨೩೦೦	೪೩	೭೭
ಪ್ರಾಂತೀಯ ಸರಾಸರಿ	೫೭	೫೧	೪೬	೪೫	೨೦೪೬	೨೨೦೦	೪೨	೭೪

ಪಲಿತಾಂಷದ ವಿವರಣೆ: ಮೇಲೆ ವಿವರಿಸಿದ ಕೊಶ್ಟಕಗಳಲ್ಲಿ ನಾಟಿಕೋಳಿಗಳ ವಿವಿದ ಉತ್ಪಾದನಾ ಸಾಮರ್ಥ್ಯ ಅದ್ಯಯನ ವಿಷಯಗಳ ಪಲಿತಾಂಷವನ್ನು ಕೋಷ್ಟಕ ೧ ಹಾಗು ೨ ರಲ್ಲಿರುವಂತೆ ತುಲನೆಮಾಡಿದಾಗ ಒಂದು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ,

ವಾಣಿಜ್ಯೋದ್ಯಮದ ರೀತಿ ನಾಟಿ ಕೋಳಿ ಸಾಕಣೆ ಅಥವಾ ಹಿತ್ತಲಲ್ಲಿ ಕೊಳಿ ಸಾಕಣೆ / ಸಾಮಾನ್ಯ ಕೋಳಿ ಸಾಕಣೆ ಪದ್ದತಿ ಗಳಲ್ಲಿ ಗುರುತರ ವೆತ್ಯಾಸಗಳು ಕಂಡುಬಂದಿಲ್ಲ, ಆದ್ದರಿಂದ ಹಿತ್ತಲಲ್ಲಿಕೊಳಿ ಸಾಕಣೆ / ಸಾಮಾನ್ಯ ಕೋಳಿ ಸಾಕಣೆ ಪದ್ದತಿಯಲ್ಲಿಯೇ ನಾಟಿಕೋಳಿಗಳನ್ನು ಸಾಕುವುದು ಉತ್ತಮ ಹಾಗು ಹೆಚ್ಚು ಸಾವಯವ ಕ್ರಮವಾಗುತ್ತದೆ.

ಸಾರಾಂಶ ಮತ್ತು ನಿರ್ಣಯ : ನಮ್ಮಲ್ಲಿನ ನಾಟಿ ಕೋಳಿಗಳ ಅಭಿವ್ರುದ್ದಿಯತ್ತ ಹೆಚ್ಚು ಮನ್ನಣೆ ಕೊಟ್ಟು ರೈತರು ನಾಟಿಕೋಳಿಸಾಕಣೆಯಲ್ಲಿ ತೊಡಗುವಂತೆ ಮಾಡಬೇಕು ಇದರಿಂದ ಕಡಿಮೆ ವೆಚ್ಚದಲ್ಲಿ ಸಾಮಾನ್ಯ ಜನರಿಗೆ ಸಾವಯವ ಪ್ರಾಣಿಜನ್ಯ ಸಸಾರಜನಕವನ್ನು ಒದಗಿಸಿದಂತಾಗುತ್ತದೆ ಹಾಗು ಹಳ್ಳಿಗಾಡಿನ ಯುವಸಮಾಜಕ್ಕೆ ಉದ್ಯೋಗ ಒದಗಿಸಿ,

ಆರೋಗ್ಯವಂತ ಸಮಾಜ ಕಟ್ಟಲು ಸಹಕಾರಿಯಾಗಲಿದೆ. ಇವೆಲ್ಲಾ ಸಾಧ್ಯತೆಗೆ ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳು ಹಾಗು ವಿಜ್ಞಾನಿಗಳು ತಮ್ಮಲ್ಲಿನ ಸಂಶೋದನೆಯ ಪಲ ರೈತರಿಗೆ ತಲುಪುವಂತೆ ಕ್ರಮವಹಿಸುವುದು ಅತ್ಯಗತ್ಯ.

ಆದಾರ ಗ್ರಂಥಗಳು

೧ ಚಂದರ್. ಎಮ್, ಸುಬ್ರಮನೇಷ್ವರಿ .ಬಿ. ಮತ್ತು ಪಾಟಕ್.ಪಿ.ಕೆ. ೨೦೦೬. ಸಾವಯಾವ ಪ್ರಾಣೀ ಹಾಗು ಕೋಳಿ ಉತ್ಪಾದನೆ, ಎ ರೆಫ್ಲೆರೆನ್ಸ್ ಮ್ಯಾನುಅಲ್, ಡಿವಿಸನ್ ಆಫ್ ಎಕ್ಸ್ ಟೇನ್ ಏಜುಕೇಶನ್ ಐ.ವಿ.ಆರ್.ಐ. ಇಜ್ಞತ್ ನಗರ್ ಬರೇಲಿ.

೨ ಕ್ರಫೊರ್ಡ್.ಡಿ.೧೯೯೦. ಒರಿಜಿನ್ ಅನ್ಡ್ ಹಿಸ್ಟ್ರಿ ಆಫ್ ಪೌಲ್ಟ್ರಿ ಸ್ಪೀಶೀಸ್ ಆನ್ಡ್ ಪೌಲ್ಟ್ರೀಜೆನಿಟಿಕ್ ರಿಸೊರ್ಸ್.ಪು.ಸೆಂ ೧–೫೯ ಆಮ್ಸ್ಟರ್‌ಡಾಮ್, ಏಲ್ಸ್ವಿಯರ್ ಸೈನ್ಸ್ ಪಬ್ಲಿಕೆಶ್ನ್.

೩ ಹೆಲ್ರ್.೨೦೦೬. ಸಾವಯವ ಮಾಂಸ ಮಾರುಕಟ್ಟೆ .ಫುಡ್ ನ್ಯಾವಿಗೇಟರ್. ಯು.ಎಸ್.ಎ. ಮೇ, ೨೦೦೬.

೪ ಮಹಾಪತ್ರ ಎಸ್.ಸಿ ಅನ್ಡ್ ಪಾಂಡಾ.ಬಿ ೧೯೮೧. ಪೌಲ್ಟ್ರಿ ಜೆನಿಟಿಕ್ ರಿಸೊರ್ಸ್ ಇನ್ ಇಜಿಡಿಯಾ, ಇಂಡಿಯನ್ ಪೌಲ್ಟ್ರಿ ಇಂಡಸ್ಟ್ರೀ ಇಯರ್ ಬುಕ್ ಪು.ಸೆ.೫೦–೫೮.

೫ ನಾರಾಯಣ್.೨೦೦೫. ಭಾರತದಲ್ಲಿ ಸಾವಯವ ಕೃಷಿ, ತೊಂದರೆಗಳು ಹಾಗು ಅವಶ್ಯಕತೆ. ಒಕೇಶನಲ್ ಪೇಪರ್–೩೮.

ಸಾವಯವಕೃಷಿಯಲ್ಲಿಆಧುನಿಕತೆ

ಶ್ರೀ ಜನಾರ್ಧನ್ಡಿ.ಎಸ್.,ಡಾ. ಕೆ.ವಿ. ಶಿವಕುಮಾರ್, ಡಾ. ಮಹದೇವ್‌ಜೆ, ಡಾ.ಎ.ಡಿ. ರಂಗನಾಥ್
ಸಹಾಯಕ ಪ್ರಾಧ್ಯಾಪಕರು, ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯ.

ನಮ್ಮದೇಶ ಕೃಷಿ ಪ್ರಧಾನವಾದದೇಶ, ವಾಣಿಜ್ಯಔದ್ಯಮಿಕ ಹಾಗೂ ಸೇವಾ ಕ್ಷೇತ್ರಗಳಲ್ಲಿ ಆಗುತ್ತಿರುವ ಬೆಳೆವಣಿಗೆಗೆ ಸರಿಸಮನಾಗಿ ಕೃಷಿ ಕ್ಷೇತ್ರವೂಕೂಡ ಬೆಳವಣಿಗೆಯಾದರೆ ಮಾತ್ರದೇಶದ ಸಮಗ್ರಅಭಿವೃದ್ಧಿ ಸಾದ್ಯ.ನಮ್ಮರೈತಇಂದುತನ್ನ ಕೃಷಿ ಅವಶ್ಯಕತೆಗಳನ್ನು ಪೂರೈಸಲು ಪ್ರತಿಯೊಂದುಕೃಷಿ ಪರಿಕರಗಳಾದ ಬೀಜಗೊಬ್ಬರ, ಕೀಟನಾಶಕಗಳು, ಇಂಧನ, ನೀರಾವರಿ, ಇತ್ಯಾದಿಗಳಿಗಾಗಿ ಮಾರುಕಟ್ಟೆಯ ಹಾಗೂ ಇತರರ ಮೇಲೆ ಅವಲಂಬಿಸಿ ತನ್ನ ಸ್ವಾವಲಂಬನೆ ಕಳೆದುಕೊಳ್ಳುತ್ತಿದ್ದಾನೆ.ಅಲ್ಲದೆ ಇವುಗಳ ಅಸಮರ್ಪಕ ಹಾಗೂ ಅತಿಯಾದ ಬಳಕೆಯಿಂದ ನಮ್ಮ ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು ಜೀವಗಳಲ್ಲಿ ವೈವಿದ್ಯತೆಕ್ಷೀಣಿಸುತ್ತಿದೆ.ರಾಸಾಯನಿಕಕೀಟನಾಶಕಗಳ ಬಳಕೆಯಿಂದ ಆಹಾರದಗುಣಮಟ್ಟ ಹಾಳಾಗುತ್ತಿದೆ. ಹಾಗೂ ವಾತಾವರಣ ಕುಲಷಿತಗೊಳ್ಳುತ್ತಿದೆ. ನಮ್ಮಗ್ರಾಮೀಣ ಪ್ರದೇಶಗಳು ಪುನರುಜ್ಜೀವನಗೊಂಡು ಕೃಷಿ ಸುಸ್ಥಿಯಾಗಲು ರಾಸಾಯನ ಕೃಷಿಗೆ ಪರ್ಯಾಯವಾಗಿ ಸಾವಯವ ಕೃಷಿ ಅಭಿವೃದ್ಧಿ ಹೊಂದುತ್ತಾಇದೆ.

ಸಾವಯವಕೃಷಿಯನ್ನು ನಾವು ಇಂದು ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ನೈಸರ್ಗಿಕ ತತ್ವಗಳ ಆಧಾರದ ಮೇಲೆ ಅಭಿವೃದ್ಧಿ ಪಡಿಸಬೇಕಾಗಿದೆ. ಸಾವಯವಕೃಷಿಯು ಪಾರಂಪರಿಕಕೃಷಿಯಾಗಿರದೆಒಂದು ಸಮಗ್ರಕೃಷಿಯಾಗಿದೆ ವಿವಿಧ ಬೆಳೆಗಳಲ್ಲಿ ಸಮಗ್ರ ಸಾವಯವ ಪೋಷಕಾಂಶಗಳ ನಿರ್ವಹಣೆ ಹಾಗೂ ಜೈವಿಕಪೀಡೆ ನಿರ್ವಹಣೆಕೈಗೊಂಡು ನಿರಂತರವಾಗಿಅಧಿಕ ಇಳುವರಿ ಪಡೆಯಬಹುದುಎಂದು ವಿವಿಧ ಬೆಳೆಗಳಲ್ಲಿ ಕಂಡು ಕೊಳ್ಳಲಾಗಿದೆ. ಸಾವಯವರೈತರ ಸಂಪರ್ಕ ಸ್ಥಾಪಿಸಿ,ಅವರ ತಾಂತ್ರಿಕತೆಗಳನ್ನು ಹಾಗೂ ಯಶೋಗಾಥೆಗಳನ್ನು ಪ್ರಕಟಿಸಿ ಪ್ರಸಾರಕಾರ್ಯಕೈಗೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ.

ಸಾವಯವ ಕೃಷಿ ಎಂದರೆ ಪರಿಸರದ ಸಮತೋಲನವನ್ನು ಕಾಪಾಡಿಕೊಂಡು ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆಯನ್ನು ಮಾಡಿಕೊಂಡು ಪ್ರಾಣಿ ಮತ್ತು ಸಸ್ಯ ಸಂಬಂಧಿತ ಬೇಸಾಯ ಪದ್ಧತಿಗಳ ಮೂಲಕ ಕೃಷಿಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವುದೇ ಆಗಿದೆ. ಮಣ್ಣಿನ ಆರೋಗ್ಯ ಹಾಗೂಫಲವತ್ತತೆಯನ್ನು ಕಾಪಾಡಿಕೊಂಡು ಮಿಶ್ರಬೆಳೆ, ಪರ್ಯಾಯ ಬೆಳೆ ಅಥವಾ ಬೆಳೆ ಪರಿವರ್ತನೆ ಮಾಡಿಕೊಂಡು ನೀರಿನ ನಿರ್ವಹಣೆ, ಮಾಗೀ ಉಳುಮೆ, ಪ್ರಾಣಿ ಹಾಗೂ ಸಸ್ಯಜನ್ಯ ವಸ್ತುಗಳ ಪರಸ್ಪರ ಸಮ್ಮಿಲನ ಹಾಗೂ ಅವುಗಳ ಸಮಗ್ರತೆಯ ಮೂಲಕ ರೋಗ ಹಾಗೂ ಕೀಟ ಭಾದೆಗಳನ್ನು ತಡೆಗಟ್ಟಿ ಕೃಷಿಯನ್ನು ಸುಸ್ಥಿರತೆಗೆ ಕೊಂಡೊಯ್ಯುವುದೇ ಈ ಕೃಷಿ ಪದ್ಧತಿಯ ಮುಖ್ಯ ಉದ್ದೇಶ.

ಸಾವಯವ ಕೃಷಿಯ ಅವಶ್ಯಕತೆ : ಆಧುನಿಕ ಬೇಸಾಯದ ಕೆಲವು ನೂನ್ಯತೆಗಳು, ಸುಸ್ಥಿರ ಕೃಷಿಗೆ ತಕ್ಕದಲ್ಲವೆಂದು ಹಾಗೂ ಬೆಳೆ ಉತ್ಪಾದ ಕತೆಯಲ್ಲಿ ಇಳಿಮುಖ ಮತ್ತು ಆಸ್ಥಿರತೆ ಕಂಡು ಬರುವುದು ಸ್ವಾಭಾವಿಕ ಮತ್ತು ರಾಸಾಯನಿಕ ಗೊಬ್ಬರಗಳ ಅಸಮತೋಲನ ಬಳಕೆ ಹಾಗೂ ಆದರಿಂದ ಭೂಮಿಯ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಧರ್ಮಗಳ ಮೇಲೆ ಆಗುವ ದುಷ್ಪರಿಣಾಮ, ರಾಸಾಯನಿಕ ಕೀಟಗಳನಾಶಕಗಳಿಂದ ಪರಿಸರದಲ್ಲಿ ನೈಸರ್ಗಿಕ ಶತ್ರುಗಳ ಅಸಮ ತೋಲನ, ಜನ ಜಾನುವಾರುಗಳ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮ ಹಾಗೂ ಪರಿಸರ ಮಾಲಿನ್ಯ, ಸತತವಾಗಿ ಏಕಬೆಳೆ ಪದ್ಧತಿಯ ಅನುಕರಣೆಯಿಂದ, ಸ್ವಾಭಾವಿಕ ಕ್ರಿಯೆಗಳಮೇಲಾಗುವ ದುಷ್ಪರಿಣಾಮ, ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ, ನೀರು, ಸಸ್ಯ ಹಾಗೂ ಪ್ರಾಣಿ ಸಂಕುಲಗಳ ಅಸಮರ್ಪಕ ಬಳಕೆ, ಉತ್ತೇಜಕ ಆಧುನಿಕ ಕೃಷಿ ಪದ್ಧತಿಯು ದುಬಾರಿ ವೆಚ್ಚವೂ ಹೌದು ಹಾಗೂ ಆಹಾರ ಭದ್ರತೆಗೆ ಅತೀವ ಅಪಾಯವನ್ನು ಉಂಟುಮಾಡುತ್ತದೆ.

ಸಾವಯವ ಕೃಷಿಯ ಮೂಲಗಳು

- ಸಮಗ್ರ ಕೃಷಿ ಪದ್ಧತಿಗಳ ಅನುಸರಣೆ ಹಾಗೂ ಮಿಶ್ರ ಬೇಸಾಯ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಮಳೆ ನೀರು ಸಂಗ್ರಹಣೆ ಹಾಗೂ ದಕ್ಷ ಉಪಯೋಗ, ಕಡಿಮೆ ಉಳುಮೆ, ಭೂ ಮೇಲ್ಪೈ ಸಾವಯವ ಹೊದಿಕೆ ಹಾಗೂ ಮಣ್ಣಿನಲ್ಲಿ ಉತ್ಕೃಷ್ಟವಾದ ಸಾವಯವ ಅಂಶದ ಅಭಿವೃದ್ಧಿ ಅಲ್ಲದೆ ನೈಸರ್ಗಿಕ ಸೂಕ್ಷ್ಮ ಜೀವಿಗಳ ಪಾಲನೆ ಮತ್ತು ಸಂರಕ್ಷಣೆ.
- ಸಾವಯವ ಗೊಬ್ಬರಗಳು : ಉದಾಹರಣೆಗೆ ಕೊಟ್ಟಿಗೆ ಗೊಬ್ಬರ,

ಎರೆಹುಳು ಗೊಬ್ಬರ, ಕುರಿಗೊಬ್ಬರ, ಕೋಳಿ ಗೊಬ್ಬರ, ಹಿಂಡಿಗಳು, ಗೊಬ್ಬರ್ ಅನಿಲ ಯಂತ್ರದ ಬಗ್ಗಡ,ಹಸಿರೆಲೆಗಳು ಇತ್ಯಾದಿ ಹಾಗೂ ಬೆಳೆ ಉಳಿಕೆಗಳಾದ ಬೇರು ಮತ್ತು ಕಾಂಡ ಬಳಕೆಯಿಂದ ವಿವಿಧ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ ಹಾಗೂ ಮಣ್ಣಿನ ಫಲವತ್ತತೆ ಕಾಪಾಡುವುದು.

• ಜೈವಿಕ ಗೊಬ್ಬರಗಳ ಬಳಕೆ, ಜೈವಿಕ ಕೀಟನಾಶಕಗಳ ಬಳಕೆ, ಬೆಳೆ ಪರಿವರ್ತನೆ ಹಾಗೂ ದ್ವಿದಳ ಬೆಳೆ ಆಧಾರಿತ ಪದ್ಧತಿಗಳಿಂದ ಮಣ್ಣಿನ ಫಲವತ್ತತೆ ನಿರ್ವಹಣೆ, ಸಮಗ್ರ ಕೃಷಿ ಪದ್ಧತಿ, ಅರಣ್ಯ ತೋಟಗಾರಿಕೆ, ಪದ್ಧತಿ ಇತ್ಯಾದಿಗಳ ಅಳವಡಿಕೆ.

ಜೈವಿಕ ಗೊಬ್ಬರಗಳು : ಜೈವಿಕ ಗೊಬ್ಬಗಳು ಸಾವಯವ ಕೃಷಿಯ ಅವಿಭಾಜ್ಯ ಅಂಗ, ಸಾವಯವ ಕೃಷಿಯಲ್ಲಿ ಅತ್ಯವಶ್ಯಕವಾಗಿ ಉಪಯೋಗಿಸಲೇಬೇಕಾದ ಪರಿಕರವಾಗಿದೆ. ಜೈವಿಕ ಗೊಬ್ಬರಗಳನ್ನು ಪ್ರಯೋಜನಕಾರಿ ಅಣುಜೀವಿಗಳ ಸಹಾಯದಿಂದ ಸಸ್ಯಗಳಿಗೆ ಅಗತ್ಯವಿರುವ ಪೋಷಕಾಂಶಗಳನ್ನು ಪೂರೈಕೆ ಮಾಡಬಹುದು. ಇವು ಸಸ್ಯಗಳ ಬೆಳವಣಿಗೆಗೆ ಅಗತ್ಯವಿರುವಂತಹ ಪ್ರಚೋದನಕಾರಿ ವಸ್ತುಗಳನ್ನು ಈ ಅಣುಜೀವಿಗಳು ಉತ್ಪಾದನೆ ಮಾಡುತ್ತವೆ. ಮತ್ತು ಮಣ್ಣಿನಲ್ಲಿರುವ ರೋಗಾಣುಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ ವಸ್ತುಗಳನ್ನು ಉತ್ಪಾದನೆ ಮಾಡಿ ಸಸ್ಯಗಳಿಗೆ ರಕ್ಷಣೆ ಒದಗಿಸುತ್ತದೆ.

ಪ್ರಯೋಜನಕಾರಿ ಅಣುಜೀವಿಗಳನ್ನು ಉಪಯೋಗಿಸಿ ಬೆಳೆಗಳಿಗೆ ಬರುವ ಅನೇಕ ರೋಗಗಳು ಮತ್ತು ಕೀಟಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು.ಉದಾ:ಪಿಥಿಯಂ ಪೈಟೊಪ್ತೆರಾ, ಸ್ಲೇರೋಷಿಯ ರೋಗಾಣುಗಳಿಂದ ಆಗುವ ಹಾನಿಯನ್ನು ಮೈಕೋರೈಜಾ ಅಣು ಜೀವಿ ಬಳಸಿ ನಿಯಂತ್ರಿಸಬಹುದು. ಅದೇ ರೀತಿ ಟ್ರೈಕೋಡರ್ಮ ಹಾರ್ಜಿಯಾನಂ ಬಳಸಿ ಬಾಡುವ ರೋಗ ಮತ್ತು ಬುಡ ಕೊಳೆ ರೋಗವನ್ನು ನಿಯಂತ್ರಣ ಮಾಡಬಹುದು.ಸುಡೋಮಾನಾಸ್ ಪ್ಲಾರೆಸೆನ್ಸ್, ಮಣ್ಣಿನಿಂದ ಅಥವಾ ಬೀಜದಿಂದ ಹರಡುವ ರೋಗಾಣುಗಳನ್ನು ನಿಯಂತ್ರಣ ಮಾಡುತ್ತದೆ.

ಕೀಟಗಳನ್ನು ಸಹ ಅಣುಜೀವಿಗಳನ್ನು ಬಳಸಿ ಹತೋಟಿ ಮಾಡಬಹುದು. ಉದಾ: ಎನ್.ಪಿ.ವಿ. ಒಂದು ವೈರಾಣು ಇದನ್ನು ಹತ್ತಿ ಬೆಳೆಯ ಕಾಯಿಕೊರಕದ ಬಾದೆ ನಿಯಂತ್ರಿಸಲುಬಳಸುತ್ತೇವೆ.ಇವುಗಳನ್ನು ಜೈವಿಕ ಪೀಡೆನಾಶಕಗಳೆಂದು ಕರೆಯುತ್ತಾರೆ.

ಜೈವಿಕ ಗೊಬ್ಬರದಲ್ಲಿ 4 ವಿಧಗಳಿವೆ.

1. ಸಾರಜನಕವನ್ನು ಪೂರೈಸುವ ಜೀವಾಣು ಗೊಬ್ಬರಗಳು
2. ರಂಜಕವನ್ನು ಕರಗಿಸಿ ಪೂರೈಸುವ ಜೀವಾಣು ಗೊಬ್ಬರಗಳು
3. ಮೈಕೋರೈಜಾ (ಶಿಲೀಂಧ್ರ) ಮತ್ತು
4. ಕಾಂಪೋಸ್ಟ್ ತಯಾರಿಕೆಯಲ್ಲಿ ಉಪಯೋಗಿಸುವ ಜೀವಾಣುಗಳು

1. ಸಾರಜನಕವನ್ನು ಪೂರೈಸುವ ಜೀವಾಣು ಗೊಬ್ಬರಗಳು : ನಾವು ಉಸಿರಾಡುತ್ತಿರುವ ಗಾಳಿಯಲ್ಲಿ ಶೇಕಡಾ 78ರಷ್ಟು ಸಾರಜನಕ ಅನಿಲರೂಪದಲ್ಲಿದೆ. ಅನಿಲರೂಪದ ಸಾರಜನಕವನ್ನು ನೈಟ್ರೇಟ್ ರೂಪಕ್ಕೆ ಅಣು ಜೀವಿಗಳು ಪರಿವರ್ತಿಸಿ ಸಸ್ಯಗಳಿಗೆ ಪೂರೈಸುತ್ತದೆ. ದ್ವಿದಳ ಧಾನ್ಯಗಳಾದ ಹೆಸರು, ತೊಗರಿ, ಉದ್ದು, ಅಲಸಂದೆ, ನೆಲಗಡಲೆ, ಸೋಯಾ ಅವರೆಬೆಳೆಗಳಿಗೆ ರೈಜೋಬಿಯಂ ಅಣುಜೀವಿಯಿಂದ ಬೀಜೋಪಚಾರ ಮಾಡುವುದರಿಂದ ಈ ಬೆಳೆಗಳಿಗೆ ಅಗತ್ಯವಿರುವ ಸಾರಜನಕವನ್ನು ಒದಗಿಸಬಹುದು. ಏಕದಳ ಮತ್ತು ತೃಣಧಾನ್ಯಗಳಾದ, ರಾಗಿ, ಜೋಳ, ಮುಸುಕಿನ ಜೋಳ, ನವಣೆ ಸಾಮೆ ಹಾಗೂ ತರಕಾರಿಗಳಲ್ಲಿ ಅಜೋಸ್ಪೈರಿಲಂ ಅಣುಜೀವಿಯನ್ನು ಬಳಸಿ ಸಾರಜನಕ ಪೂರೈಕೆ ಮಾಡಬಹುದು.

ಭತ್ತದ ಬೆಳೆಗೆ ಅಜೋಲ್ಲಾ ಮತ್ತು ನೀಲಿ ಹಸಿರು ಪಾಚಿ ಉತ್ತಮವಾದ ಜೈವಿಕ ಗೊಬ್ಬರವಾಗಿದ್ದು ಶೇ (10%) ಸಾರಜನಕವನ್ನು ಒದಗಿಸುತ್ತದೆ ಅದೇ ರೀತಿ ಕಬ್ಬಿನ ಬೆಳೆಗೆ ಅಸಿಟೋಬ್ಯಾಕ್ಟರ್, ಟೊಮ್ಯಾಟೋ, ಮೆಣಸಿನಕಾಯಿ, ಬದನೆ ಬೆಳೆಯಲ್ಲಿ ಅಜೋಸ್ಪೆರಿಲಂ, ಜೀವಾಣು ಗೊಬ್ಬರವನ್ನು ನೀರಿನಲ್ಲಿ ಬೇರೆಸಿ ಸಸಿಗಳ ಬೇರನ್ನು ಎರಡು ನಿಮಿಷ ಅದ್ದಿ ನಾಟಿ ಮಾಡುವುದರಿಂದ ಬೆಳೆಗಳಿಗೆ ಬರುವ ರೋಗ ಹಾಗೂ ಸಾರಜನಕವನ್ನು ಒದಗಿಸಬಹುದು.

2. ರಂಜಕವನ್ನು ಕರಗಿಸುವ ಜೀವಾಣುಗಳ ಬಳಕೆ :ರಂಜಕ ಪೋಷಕಾಂಶವು ಭೂಮಿಯಲ್ಲಿ ಹೇರಳವಾಗಿದೆ. ಆದರೆ ಅದು ನೇರವಾಗಿ ಬೆಳೆಗಳಿಗೆ ಸಿಗುವುದಿಲ್ಲ. ರಂಜಕವನ್ನು ಕರಗಿಸಿ ಪೂರೈಸುವ ಸುಡೋಮಾನ್ಹಾಸ್ ಸ್ಟ್ರಯಟ,ಪೆನಿಸಿಲಿಯಂ ಫಿನಿಕ್ಯುಲೋಸಂ ಅಣುಜೀವಿಗಳಿಂದ ಉಪಚರಿಸುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದಾಗಿದೆ.

3. ಮೈಕೋರೈಜಾ :ಈ ಅಣುಜೀವಿಯು ಪ್ರಕೃತಿಯಲ್ಲಿ ಸಸ್ಯಗಳ ಬೇರುಗಳನ್ನು ಆಶ್ರಯಿಸಿ ಬೆಳೆಯುತ್ತದೆ ಇದು ಸಸ್ಯದ ಬೇರಿನ ಜೊತೆ ಸಹ ಜೀವನ (Symbiosis) ನೆಡೆಯುವ ಪರೋಪಕಾರಿ ಶಿಲೀಂಧ್ರವಾಗಿದ್ದು ತೇವಾಂಶ ಹೆಚ್ಚಿದ್ದಾಗ ಅಣುಜೀವಿಗಳ ಸಂಖ್ಯೆ ಕೂಡ ಹೆಚ್ಚಾಗಿರುತ್ತದೆ. ಈ ಶಿಲೀಂಧ್ರವು ಗಿಡಕ್ಕೆ ಕರಗಿದ ರೂಪದಲ್ಲಿರುವ ರಂಜಕವನ್ನು ನೇರವಾಗಿ ಒದಗಿಸುವುದಲ್ಲಿ ಲಘು ಪೋಷಕಾಂಶಗಳಾದ ತಮ್ರ, ಕಬ್ಬಿಣ, ಸತು, ಮೆಗ್ನಿಷಿಯಂ ಮತ್ತು ಗಂಧಕವನ್ನು ಒದಗಿಸುತ್ತದೆ.

ಹಸಿರೆಲೆ ಗೊಬ್ಬರಗಳು :ಹಸಿರೆಲೆ ಗೊಬ್ಬರಗಳು ಮಣ್ಣಿನ, ಬೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಧರ್ಮಗಳ ಮೇಲೆ ಅನುಕೂಲಕರವಾದ ಬದಲಾವಣೆಗೆ ಸಹಕಾರಿಯಾಗಿದೆ.ಮತ್ತು ಇವು ಮಣ್ಣಿನ ಫಲವತ್ತತೆ ಕಾಪಾಡುವಲ್ಲಿ ಹೆಚ್ಚಿನ ಕೆಲಸ ಮಾಡುತ್ತವೆ.

• ಮಣ್ಣಿನಲ್ಲಿ ಸಾವಯವ ಅಂಶವನ್ನು ಹೆಚ್ಚಿಸುತ್ತದೆ. ಹಾಗೂ ಕ್ಷಾರ ಮಣ್ಣಿನ ಸುಧಾರಣೆ

• ವಾತಾವರಣದಲ್ಲಿರುವ ಸಾರಜನವನ್ನು ಮಣ್ಣಿಗೆ ಸೇರಿಸುತ್ತದೆ. ಹಾಗೂ

• ಜಂತು ಹುಳುವಿನ ಭಾದೆಯನ್ನು ಹಸಿರೆಲೆಗೊಬ್ಬರಗಳು ನಿಯಂತ್ರಿಸುವಲ್ಲಿ ಸಹಾಯ ಮಾಡುತ್ತವೆ.

• ಇವುಗಳು ಮಣ್ಣಿನ ಮೇಲೆ ಹೊದಿಕೆಯಾಗುವುದರಿಂದ ಮಳೆಯ ನೀರು ಹಿಂಗಿ ಮಣ್ಣು ಕೊಚ್ಚಿ ಹೋಗುವುದನ್ನು ತಡೆಯುತ್ತವೆ.

ಹಸಿರೆಲೆ ಗೊಬ್ಬರವಾಗಿ ಸೆಣಬು, ಡಯಾಂಚ, ಸೆಸ್‌ಬೇನಿಯ, ಹೆಸರು, ಉದ್ದು, ಅಲಸಂದೆ, ಗ್ಲಿರಿಸಿಡಿಯಾ ಹೊಂಗೆ, ಉಗನಿ, ಎಕ್ಕ, ತುಂಬೆ, ಲಂಟಾನ ಇತ್ಯಾದಿ ಗಿಡಗಳನ್ನುಉಪಯೋಗಿಸಬಹುದಾಗಿದೆ.

ಕೆರೆಯ ಗೋಡು ಮಣ್ಣು :ಕೆರೆಗಳು ಹಳ್ಳಿಯ ಬೆನ್ನೆಲುಬು ಕೆರೆಗಳಿಂದ ಅಚ್ಚು ಕಟ್ಟಿನ ಪ್ರದೇಶಗಳಲ್ಲಿಯ ನೀರಿನ ಮಟ್ಟ ಮೇಲೇರುತ್ತದೆ. ಕೆರೆ ಅಂಗಳದ ಸುತ್ತ ಮರಗಳು ಮತ್ತು ಹುಲ್ಲುಗಾವಲು ಇದ್ದಲ್ಲಿ ದನಕರುಗಳಿಗೆ ಮೇವು ಒದಗಿಸುತ್ತದೆ.ಕೆರೆಯ ಹೂಳಿನಲ್ಲಿ ಸಾರಜನಕ, ರಂಜಕ,

ಪೋಟ್ಯಾಶ್ ಅಂಶ ಮತ್ತು ಸಾವಯವ ಅಂಶ ಹೆಚ್ಚಾಗಿರುತ್ತದೆ. ಕೆರೆಯ ಹೂಳನ್ನು ಉಪಯೋಗಿಸುವುದರಿಂದ ಮಣ್ಣಿನ ಜೈವಿಕ, ರಾಸಾಯನಿಕ ಗುಣಗಳು ಉತ್ತಮಗೊಳ್ಳುತ್ತದೆ. ಮಣ್ಣಿನ ರಚನೆ, ಸಾವಯವ ಅಂಶ, ಪೋಷಕಾಂಶ ಹಾಗೂ ನೀರನ್ನು ಹಿಡಿದಿರುವ ಶಕ್ತಿ ಹೆಚ್ಚಾಗುತ್ತದೆ.

ಸಾವಯವ ಗೊಬ್ಬರವಾಗಿ ಎಣ್ಣೆ ಬೀಜಗಳ ಹಿಂಡಿಗಳ ಬಳಕೆ : ಎಣ್ಣೆಬೀಜಗಳಿಂದ ಎಣ್ಣೆಯನ್ನು ತೆಗೆದ ನಂತರ ಬರುವ ವಸ್ತುವೇ ಹಿಂಡಿ.ಹರಳು, ಹೊಂಗೆ, ಬೇವು ಹಿಪ್ಪೆ ಇವುಗಳಲ್ಲಿ ಎಣ್ಣೆಯನ್ನು ಬೇರ್ಪಡಿಸಿದ ನಂತರ ಹಿಂಡಿಯನ್ನು ಮಣ್ಣಿನಲ್ಲಿ ಬೆರೆಸುವುದರಿಂದ ಬೆಳೆಗಳಿಗೆ ಉತ್ಕೃಷ್ಟವಾದ ಗೊಬ್ಬರವಾಗಿ ಸಸ್ಯಗಳಿಗೆ ಬೇಕಾದ ಪೋಷಕಾಂಶಗಳು ಸುಲಭವಾಗಿ ದೊರೆಯುತ್ತದೆ.

ಎರೆಗೊಬ್ಬರ : ಬೆಳೆಗಳ ಕಟಾವಿನ ನಂತರ ಉಳಿಯುವ ಕೂಳೆಗಳು ಹಾಗೂ ಉಳಿಕೆಗಳು ಕಸಕಡ್ಡಿ ಸೊಪ್ಪು ಸೆದೆ ಕಳೆಗಳು, ಕೃಷಿ, ತೋಟಗಾರಿಕೆ, ರೇಷ್ಮೆ ಮುಂತಾದವುಗಳ ತ್ಯಾಜ್ಯವಸ್ತುಗಳು, ಜೈವಿಕ ಅನಿಲದ ಒಗ್ಗಡ, ಹುಲ್ಲು ಸೊಪ್ಪು ಅನುಪಯುಕ್ತವಾದ ಕಾಗದ, ಸೋಗೆ, ಸಗಣಿ, ಹಿಕ್ಕೆ, ತರಗು, ಸಿಪ್ಪೆ, ತೆಂಗಿನ ನಾರಿನ ಪುಡಿ, ಹಣ್ಣು ತರಕಾರಿಗಳ ತ್ಯಾಜ್ಯ ಭಾಗಗಳು, ಬೇಕರಿ ಮತ್ತು ಸಂಸ್ಕರಣಾ ಕೇಂದ್ರದಲ್ಲಿ ಲಭಿಸುವ ಸಾವಯವ ನಿರರ್ಥಕ ವಸ್ತುಗಳು ಇನ್ನು ಮುಂತಾದ ವಸ್ತುಗಳನ್ನು ಸರಿಯಾದ ವಿಧದಲ್ಲಿ ಸಂಗ್ರಹಿಸಿ ತೊಟ್ಟಿಗಳಲ್ಲಿ ತುಂಬಿ ಎರೆ ಹುಳುಗಳನ್ನು ಬಿಟ್ಟಲ್ಲಿ ಅವು ತಿಂದು ಜೀರ್ಣಿಸಿಕೊಂಡು ಸಾವಯವ ಗೊಬ್ಬರವಾಗಿ ಹಿಕ್ಕೆಯನ್ನು ಉತ್ಪತ್ತಿ ಮಾಡಬಲ್ಲವುಇದನ್ನು ವರ್ಮಿಕಾಂಪೋಸ್ಟ್ ಎನ್ನುತ್ತಾರೆ.

ಹಾಗೆಯೇ ತೆಂಗಿನನಾರಿಂದ ತಯಾರಿಸಿದ ಕಾಂಪೋಸ್ಟ್ ತಯಾರಿಕೆ, ಕಬ್ಬಿನ ಸೋಗೆ ಮತ್ತು ಮಡ್ಡಿ ಬಳಸಿ ಕಾಂಪೋಸ್ಟ್ ತಯಾರಿಕೆ, ದನ, ಎಮ್ಮೆ, ಕುರಿ, ಮೇಕೆ, ಕುದುರೆ, ಓಂಟೆ, ಮುಂತಾದವುಗಳ ಸಗಣಿ, ಕೋಳಿ ಗೊಬ್ಬರ, ಮೀನು ಗೊಬ್ಬರ, ಮೊಟ್ಟೆ ಗೊಬ್ಬರ, ಕಾಫಿ ಸಿಪ್ಪೆಗಳ ಗೊಬ್ಬರ, ಜೈವಿಕ ಅನಿಲ ಸ್ಥಾವರಗಳ ಬಗ್ಗಡ ಮತ್ತು ಗಂಜಲಗಳನ್ನು ಬಳಸಿಕೊಂಡು ಉನ್ನತ ಮಟ್ಟದ ಕಾಂಪೋಸ್ಟ್ ತಯಾರಿಸಿಕೊಂಡು ಸಾವಯವ ಗೊಬ್ಬರವಾಗಿ ಬಳಸಬಹುದು.

ಕೋಷ್ಟಕ 1: ಸಾಮಾನ್ಯವಾಗಿ ಬಳಸುವ ಜೈವಿಕ ರೋಗನಾಶಕಗಳು

ಅ.ಸ.	ಸಸ್ಯರೋಗ	ಬೆಳೆ	ಜೈವಿಕ ಸಸ್ಯ ರೋಗನಾಶಕ ಬಳಸುವ ವಿಧಾನ
1	ಸ್ಕ್ಲೆರೋಶಿಯಂ ರಾಲ್ಫಸೈ	ಟೂಮ್ಯೊಟೊ, ಬೀನ್ಸ್, ಶೇಂಗಾ, ಸೊಯಾ ಅವರೆ,	ಟ್ರೈಕೊಡರ್ಮಾ ವಿರಿಡೆ/ ಟ್ರೈಕೊಡರ್ಮಾ ಹರ್ಜಿಯಾನಂ / ಟ್ರೈಕೊಡರ್ಮಾ
		ಮೆಣಸಿನಕಾಯಿ, ಆಲೂಗಡ್ಡೆ, ಬದನೆ, ಗೋದಿ ಇತ್ಯಾದಿ	ಹೆಮಾಟಮ್ ಬೀಜೋಪಚಾರ 5 ಗ್ರಾಂ. ಕೆ.ಜಿ. ಬೀಜಕ್ಕೆ ಅಥವಾ ಮಣ್ಣಿನಲ್ಲಿ ಬೆರೆಸುವುದು 130–160 ಕೆ.ಜಿ / ಹೆ
2	ರೈಜೊಕ್ಟೊನಿಯಾ ಸೂಲನ್ಯೆ	ಹೆಸರು, ಉದ್ದು	ವಿ.ಎ. ಎಮ್ / ಮೈಕೊರೈಜಾ / ಗ್ಲೊಮಸ್ ಪೆಸಿಕೂಲೆಟಮ್
3	ಬೊಟ್ರೈಟೆಸ್ ಸಿನೆರಾ	ದ್ರಾಕ್ಷಿ	ಟ್ರೈಕೊಡರ್ಮಾ ವಿರಿಡೆ ಸಿಂಪರಣೆ 10 ಸಿ.ಎಫ್.ಯು /ಮಿ.ಲೀ.
4	ಪ್ಯೂಜೇರಿಯಂ	ತೊಗರಿ, ಕಡಲೆ	ಟ್ರೈಕೊಡರ್ಮಾ ವಿರಿಡೆ ಬೀಜೋಪಚಾರ 4–5 ಗ್ರಾಂ/ ಕೆ.ಜಿ ಬೀಜಕ್ಕೆ
5	ಗ್ಯಾಮಿನೊ ಮೈಸಿಸ್ ಗ್ರಾಮಿಸಿಸ್	ಗೋದಿ	ಸಿಡೊಮೆನಾಸ್ ಪ್ಲೊರೆಸೆನ್ಸ್ ಸಾಲಿನಲ್ಲಿ ಹಾಕುವುದು

ಕೋಷ್ಟಕ2: ಶಿಲೀಂಧ್ರ ದಂಡಾಣು ಹಾಗೂ ನಂಜು ರೋಗ ನಾಶಕ ಗುಣ ಹೊಂದಿರುವ ಸಸ್ಯಗಳು

ಅ.ಸ.	ಸಸ್ಯದ (ಹೆಸರು) ಸಾಮಾನ್ಯ	ವೈಜ್ಞಾನಿಕ ಹೆಸರು	ಸಸ್ಯರೋಗ ಹತೋಟ	ಉಪಯೋಗಿಸುವ ಭಾಗ
1	ತುಳಸಿ	ಆಸಿಮಮ್ ಸ್ಯಾಂಕ್ಟಮ್	ಎಲೆ ಮುಟುಗು ರೋಗ ಹತೋಟಿ, ಬದನೆ ಮೆಣಸಿನಕಾಯಿ, ಈರುಳ್ಳಿ, ಆಲೂಗಡ್ಡೆ ಇತ್ಯಾದಿ	ಎಲೆಯ ರಸವನ್ನು ಉಪಯೋಗಿಸುವುದು
2	ಹುಲುಗಲ	ಪೊಂಗೆಮಿಯಾ ಪಿನ್ನೆಟಾ	–	ಎಣ್ಣೆ ಪ್ರತಿಶತ 2 ರಂತೆ
3	ಚೆಂಡು ಹೂ	ಟೆಗ್ಯಾಟಸ್	ಜಂತುಹುಳು ನಿವಾರಕ, ಭತ್ತ, ಗೋದಿಯ ತುಕ್ಕುರೋಗ, ಬೇರು ಕೊಳೆ ರೋಗ, ನಿವಾರಕ	ಬೇರು ಮತ್ತು ಎಲೆಯ ರಸವನ್ನು ಉಪಯೋಗಿಸಬೇಕು
4	ಮಹೂವಾ	ಮುದುಕಾ ಲಾಂಜಿಫೊಲಿಯಾ	ಬೇರು ಮತ್ತು ಕಾಂಡ ಕೊಳೆ ರೋಗಗಳನ್ನು ಜೂಟ, ಶೇಂಗಾ, ಆಲೂಗಡ್ಡೆ ಇತ್ಯಾದಿ ಬೆಳೆಗಳಲ್ಲಿ	ಎಣ್ಣೆ 2–3% ಅಥವಾ ಎಲೆಯ ರಸ
5	ಈರುಳ್ಳಿ	ಆಲಿಯಂ ಸಿಪಾ	ಶೀಲಿಂಧ್ರದಿಂದ ಹಾಗೂ ದಂಡಾಣುಗಳಿಂದ ಬರುವ ವಿವಿಧ ರೋಗಗಳ ಹತೋಟಿ ಭತ್ತ, ಗೋಧಿ, ಹಣ್ಣಿನ ಬೆಳೆಗಳು	ಗಡ್ಡೆಯಿಂದ ತೆಗೆದ ರಸ

ಕೋಷ್ಟಕ3:ಅಂತರ ಬೆಳೆಯಿಂದ ನಿರ್ವಹಣೆ ಮಾಡಬಹುದುದಾದ ಕೀಟ ಪೀಡೆಗಳು

ಮುಖ್ಯ ಬೆಳೆ	ಅಂತರ ಬೆಳೆ	ಕೀಟ ಪೀಡೆ
ಹತ್ತಿ	ಶೇಂಗಾ, ಸೋಯಾ, ಅವರೆ, ಅಲಸಂಧಿ, ಕುದರಿ ಮೆಂತೆ	ಹೆಲಿಕೋವರ್ಪ
ಟೊಮ್ಯಾಟೋ	ಮೂಲಂಗಿ, ಕೊತಂಬರಿ, ಈರುಳ್ಳಿ,	ಹೆಲಿಕೋವರ್ಪ
ಶೇಂಗಾ	ತೊಗರಿ, ಹೆಸರು	ಹೆಲಿಕೋವರ್ಪ
ತೊಗರಿ	ಜೋಳ, ಸೆಜ್ಜೆ, ಸೋಯಾ ಅವರೆ	ಹೆಲಿಕೋವರ್ಪ
ಅಲಸಂದೆ	ಮೆಕ್ಕೆಜೋಳ	ಹೆಲಿಕೋವರ್ಪ
ಶೇಂಗಾ	ಅಲಸಂದೆ, ಸಜ್ಜೆ, ಜೋಳ, ನವಣೆ	ಸುರಳಿ, ಪ್ರಚಿ, ತಂಬಾಕಿನ ಕೀಡೆ
ತೊಗರಿ	ಜೋಳ	ಹೆಲಿಕೋವರ್ಪ
ಎಲೆಕೋಸು	ಟೂಮ್ಯಾಟೋ	ವಜ್ರಾ ಕೃತಿ ಪತಂಗ
ಭತ್ತ	ನಾರು	ಕಾಂಡ ಕೊರಕ
ಅಲಸಂದೆ	ಮೆಕ್ಕೆ ಜೋಳ	ಥ್ರಿಪ್ಸ್ ನುಶಿ
ಜೋಳ	ಅಲಸಂದಿ	ಕಾಂಡ ಕೊರಕ
ನವಣೆ	ಎಳ್ಳು	ಎಲೆ ಸುತ್ತುವ ಕೀಡೆ
ಅಲಸಂದೆ	ಜೋಳ	ಕಾಂಡದ ನೊಣ

ಕೋಷ್ಟಕ4 :ವಿವಿಧ ಬೆಳೆಗಳ ಪೀಡೆ ನಿರ್ವಹಣೆಗೆ ಬಳಸಬಹುದಾದ ಪರತಂತ್ರ ಜೀವಿಗಳ ಪ್ರಮಾಣ ಮತ್ತು ಬಿಡುವ ವಿಧಾನ

ಅ.ಸ.	ಬೆಳೆ	ಪೀಡೆ	ಪರತಂತ್ರ ಜೀವಿಗಳು	ಪ್ರಮಾಣ ಮತ್ತು ವಿಧಾನ
1	ಭತ್ತ	ಕಾಂಡ ಕೊರೆಕೆ ಗರಿ ಮಡಚುವ ಹುಳು	ಟ್ರೈಕೊಗ್ರಾಮ ಕಿಲೊನಿಸ್	ನಾಟಿ ಮಾಡಿದ 30 ದಿನಗಳ ಟಿ ಜಪಾನಿಕಮ್ ಹೆಕ್ಟೇರಿಗೆ 50,000 ದಂತೆ ಒಂದು ವಾರದ ಅಂತರದಲ್ಲಿ 4–6 ಬಿಡಬೇಕು
2	ಜೋಳ ಮೆಕ್ಕೆಜೋಳ	ಕಾಂಡ ಕೊರಕ	ಟ್ರೈಕೊಗ್ರಾಮ ಕಿಲೊನಿಸ್	ಬಿತ್ತಿದ 15 ದಿನಗಳ ನಂತರ ಹೆಕ್ಟೇರಿಗೆ 75000 ದಂತೆ ಪ್ರತಿ ಐದು ದಿನಗಳ ಅಂತರದಲ್ಲಿ 6 ಬಾರಿ ಬಿಡಬೇಕು
3	ಹತ್ತಿ	ಹತ್ತಿ ಕಾಯಿ (ಕೆಂಪು)ಕೊರಕಗಳು ಕಾಯಿ ಕೊರಕ	ಟ್ರೈಕೊಗ್ರಾಮ ಕಿಲೊನಿಸ್	ಬಿತ್ತಿದ 30–40 ದಿನಗಳ ನಂತರ ಹೆಕ್ಟೇರಿಗೆ 50000 ದಂತೆ ಪ್ರತಿ ಐದು ದಿನಗಳ ಅಂತರದಲ್ಲಿ 6–8 ಬಾರಿ ಬಿಡಬೇಕು
4	ಕಬ್ಬು	ಸಸಿಕಾಂಡ ಕೊರಕ, ಸುಳಿ ಕೊರಕ ಹಾಗೂ ಗಿಣ್ಣು ಕೊರವ ಕೀಟ	ಟ್ರೈಕೊಗ್ರಾಮ ಕಿಲೊನಿಸ್	ನಾಟಿ ಮಾಡಿದ 45 ದಿನಗಳ ನಂತರ ಹೆಕ್ಟೇರಿಗೆ 50000 ದಂತೆ ಒಂದು ವಾರದ ಅಂತರದಲ್ಲಿ 6 ಬಾರಿ ಬಿಡಬೇಕು
5	ಕಬ್ಬು	ಪೈರಿಲ್ಲಾ ರಸ ಹಿರುವ ಕೀಟ	ಎಪಿರಿಕೆನಿಯಾ ಮಲೆನೊಲ್ಯೂಕಾ	ಪ್ರತಿ ಹೆಕ್ಟೇರಿಗೆ 4–5 ಲಕ್ಷ ತತ್ವಿಗಳನ್ನು ಅಥವಾ 400–500 ಕೋಶಗಳನ್ನು ಬಿಡಬೇಕು
6	ಟೊಮೆಟೋ	ಹಣ್ಣುಕೊರಕ	ಟ್ರೈಕೊಗ್ರಾಮ ಬೆಸಿಲಿಯೆನ್ಸಸ್	ನಾಟಿ ಮಾಡಿದ 45 ದಿನಗಳ ನಂತರ ಹೆಕ್ಟೇರಿಗೆ 50000 ರಂತೆ ಒಂದು ವಾರದ ಅಂತರದಲ್ಲಿ 6 ಬಾರಿ ಬಿಡಬೇಕು
7	ಬದನೆ	ಕುಡಿ ಹಾಗೂ ಕಾಯಿ ಕೊರಕ	ಟ್ರೈಕೊಗ್ರಾಮ ಕಿಲೊನಿಸ್	ನಾಟಿ ಮಾಡಿದ 45 ದಿನಗಳ ನಂತರ ಹೆಕ್ಟೇರಿಗೆ 50000 ರಂತೆ ಒಂದು ವಾರದ ಅಂತರದಲ್ಲಿ 6 ಬಾರಿ ಬಿಡಬೇಕು
8	ತೆಂಗು	ಕಪ್ಪು ತಲೆ ಹುಳು	ಗೋನಿಯೋಜಿಸ್ ನೆಫಂಟಡಿಸ್ ಬ್ರಕಿಮೈರಿಯಾ ನೆಫಂಡ್ರೆನಿಸ್	ಪ್ರತಿ ಗಿಡಕ್ಕೆ 8–10 ಪ್ರೌಢ ಪರತಂತ್ರ ಹುಳುಗಳು ಅಥವಾ ಕೀಟಗಳು / ಹೆಕ್ಟೇರಿಗೆ

ಕೋಷ್ಟಕ5 :ವಿವಿಧ ಕೀಟ ಪೀಡೆಗಳ ನಿರ್ವಹಣೆಗೆ ಬಳಸಬಹುದಾದ ಪರಭಕ್ಷಕಗಳ ಪ್ರಮಾಣ ಮತ್ತು ವಿಧಾನ

ಅ.ಸ.	ಪರಭಕ್ಷಕ	ಬೆಳೆ	ಪೀಡೆ	ಪ್ರಮಾಣ ಮತ್ತು ವಿಧಾನ
1	ಕ್ರೈಸೋಪರ್ಲಾ ಕಾರ್ನಿಯಾ	ಹತ್ತಿ ಎಣ್ಣೆಕಾಳು, ತಂಬಾಕು ಹಾಗೂ ಹಣ್ಣಿನ ಬೆಳೆಗಳು ಇತ್ಯಾದಿ	ಹೇನು ಥ್ರಿಪ್ಸ ನುಶಿ ಮೈಟ್ ನುಶಿ ತತ್ತಿ ಹಾಗೂ ಮರಿ ಕೀಡೆಗಳು	ಪ್ರತಿ ಹೆಕ್ಟೇರಿಗೆ 10,000 ರಿಂದ 20,000 ಅಥವಾ ಮರಿಹುಳುಗಳು
2	ಕ್ರಿಪ್ಟೋಲೆಮಸ್ ಮಾಂಟ್ರೋಜರಿ	ದ್ರಾಕ್ಷಿ, ಲಿಂಬೆ, ಪೇರಲ, ಮಾವು ಇತ್ಯಾದಿ	ಹಿಟ್ಟು ತಿಗಣೆ	ಪ್ರತಿ ಹೆಕ್ಟೇರಿಗೆ 2500–3000 ದುಂಬಿಗಳು ಅಥವಾ ಪ್ರತಿ ಗಿಡಕ್ಕೆ 15 ದುಂಬಿಗಳು
3	ಕೈಲೋಕೋರಿಸ್ ನಿಗ್ರಾಸ್ಟ್ರೆ	ಲಿಂಬೆ, ಮೊಸಂಬಿ	ಕೆಂಪು ಶಲ್ಕ ಕೀಟ	ಪ್ರತಿ ಗಿಡಕ್ಕೆ 15 ದುಂಬಿಗಳು
4	ಕಿಲೋಮೆನಸ್ ಸೆಕ್ಸಮ್ಮಾಕುಲೇಟಸ್	ಎಲ್ಲಾ ಬೆಳೆಗಳಲ್ಲಿ	ಸಸ್ಯ ಹೇನುಗಳು	ಪ್ರತಿ ಹೆಕ್ಟೇರಿಗೆ 50000 ಮರಿ ಹುಳುಗಳು
5	ಕೋರಿನಸ್ ಸೆರುಲಿಯಸ್	ಸುಬಾಬುಲ್	ಸಿಲ್ಲಡ್ ರಸ ಹಿರುವ ಕೀಟ	ಪ್ರತಿ ಹೆಕ್ಟೇರಿಗೆ 5000 ಪ್ರೌಢ, ಮರಿ ಹುಳುಗಳು
6	ಸಿರ್ಟೋರೈನಸ್ ಲಿವಿಡಿಪೆನ್ನಿಸ್	ಭತ್ತ	ಕಂದು ಜಿಗಿ ಹುಳು	ಹೆಕ್ಟೇರಿಗೆ 70000 ಪ್ರೌಢ ತಿಗಣೆಗಳಂತೆ ನಾಟಿ ಮಾಡಿದ ಸುಮಾರು 45–55 ಹಾಗೂ 65 ದಿನಗಳ ನಂತರ ಕೀಟದ ಬಾಧೆ ಕಂಡು ಬಂದಾಗ ಬಿಡುವುದು
7	ಮೈಕ್ರೋಮಸ್ ಇಗರೋಟಸ್	ಕಬ್ಬು	ಬಿಳಿ ಉಣ್ಣೆ ಹೇನು	ಹೆಕ್ಟೇರಿಗೆ 1000–1500 ಕೋಶಗಳನ್ನು ಬಿಳಿ ಉಣ್ಣೆ ಹೇನು ಕಂಡು ಬಂದ ಬೆಳೆಯಲ್ಲಿ ಬಿಡುವುದು
8	ಡೈಫಾ ಎಪಿಡಿವೋರಾ	ಕಬ್ಬು	ಬಿಳಿ ಉಣ್ಣೆ ಹೇನು	ಹೆಕ್ಟೇರಿಗೆ 1000–1500 ಕೋಶಗಳನ್ನು ಬಿಳಿ ಉಣ್ಣೆ ಹೇನು ಕಂಡು ಬಂದ ಬೆಳೆಯಲ್ಲಿ ಬಿಡುವುದು

ಕೋಷ್ಟಕ6 :ಕೀಟ ಪೀಡೆಗಳ ನಿರ್ವಹಣೆಗೆ ಲಭ್ಯವಿರುವ ಶಿಲೀಂಧ್ರ ದುಂಡಾಣು ಹಾಗೂ ನಂಜಾಣುಗಳ ವಿವರ

ಅ.ಸ.	ಶಿಲಿಂಧ್ರಗಳು	ಪೀಡೆ	ಬೆಳೆ ಪ್ರಮಾಣ	ಮತ್ತು ವಿಧಾನ
1	ನೊಮೊರಿಯ ರಿಲೈ	ತಂಬಾಕಿನ ಕೀಡೆ ಹೆಲಿಕೋವರ್ಪ ಕೀಡೆ ಕೊಂಡಲಿ ಹುಳಗಳ ಕಾಂಡ ಕತ್ತರಿಸುವ ಹುಳು ಬತ್ತದ ಎಲೆ ಮಡಿಚಿ ಚುವ ಹುಳು, ಕಪ್ಪು ತಲೆ ಕಂಬಳಿ ಹುಳು, ಇತ್ಯಾದಿ	ಶೇಂಗಾ, ಹತ್ತಿ , ಸೋಯಾ, ಅಪರೆ ಟೊಮೆಟೋ, ಕಡಲೆ ಹೆಸರು, ಜೋಳ, ಭತ್ತ ಹಾಗೂ ಹಸಿರು ಮನೆಗಳಲ್ಲಿ ಬರುವ ಎಲೆ ತಿನ್ನುವ ಕೀಡೆಗಳು	50.ಲೀ ನೀರಿಗೆ 100 ಮೀ.ಲಿ ಟ್ವಿನ್ 80 ದ್ರಾವಣವನ್ನು ಸೇರಿಸಿ ಇದಕ್ಕೆ 1 ಕೆ.ಜಿ. ಶಿಲಿಂಧ್ರವನ್ನು ಕೂಡಿಸಿ ದ್ರಾವಣವನ್ನು ತಯಾರಿಸಿಕೊಳ್ಳಬೇಕು ಪ್ರತಿ 10 ಲೀ ನೀರಿಗೆ ಒಂದು ಲೀ ಮೇಲಿನ ದ್ರಾವಣವನ್ನು ಸೇರಿಸಿ ಸಂಜೆಯ ವೇಳೆ ಸಿಂಪರಿಸಬೇಕು. ಹೆಕ್ಟೇರಿಗೆ 500 ಲೀ ಸಿಂಪರಣಾ ದ್ರಾವಣ ಉಪಯೋಗಿಸಬೇಕು.
2	ಮೆಟರೈಜಿಯಂ ಅನಿಸೊಪಿಯಾ	ವಜ್ರಾಕೃತಿಯ ಬೆನ್ನಿನ ಪತಂಗ ಹಿಲಿಯೋಥಿಸ್ ಕೀಡೆ, ಜಿಗಿ ಹುಳು, ಗೆದ್ದಲು ಗೊಣ್ಣೆಹುಳು ರೈನಾಸರಸ್ ದುಂಬಿ, ಕಂದು ಜಿಗಿಹುಳುಗಳು ಇತ್ಯಾದಿ	ಕೋಸು ತರಕಾರಿಗಳು ಹತ್ತಿ ಶೇಂಗಾ, ಟೊಮೆಟೊ, ಅಡಿಕೆ ಕಡಲೆ, ತೊಗರಿ ಭತ್ತ ಕಬ್ಬು, ಇತ್ಯಾದಿ ಬೆಳೆಗಳಲ್ಲಿ	ಸದರಿ
3	ವರ್ಟಿಸಿಲಿಯಂ ಲೆಕಾನಿ	ಹಲವು ಬೆಳೆಗಳು	ರಸಹಿರುವ ಕೀಟಗಳು	ಸದರಿ

4	ಬೆವರಿಯಾ ಬಸ್ಸಿಯಾನ್	ವಜ್ರಾಕೃತಿಯ ಬೆನ್ನಿನ ಪತಂಗ ಎಲೆ ತಿನ್ನುವ ಕೀಟಗಳು, ಗೆದ್ದಲು ಜಿಗಿಹುಳುಗಳು, ಇತ್ಯಾದಿ	ಕೋಸು ತರಕಾರಿಗಳೂ ಕಾಫಿ, ಇತ್ಯಾದಿ ಬೆಳೆಗಳಲ್ಲಿ	ಸದರಿ
5	ನಂಜಾಣುಗಳು (ಬಹುದೇಹಿ ಕೋಶ ಕೇಂದ್ರ ನಂಜಾಣುಗಳು) ಹಲಿಕೊವರ್ಸ್ ನಂಜಾಣು ಸ್ಪೋಡಾಪ್ಟೆರಾ ನಂಜಾಣು, ಲದ್ದಿ, ಹುಳದ ನಂಜಾಣು,ಲದ್ದಿ, ಹುಳದ ನಂಜಾಣು	ಹೆಲಿಕೊವರ್ಪಾ, ಸ್ಪೋಡಾಪ್ಟರಾ, ಲದ್ದಿಹುಳು	ವಿವಿಧ ಬೆಳೆಗಳು	ಪ್ರತಿ ಹೆಕ್ಟೇರಿಗೆ 250 ಎಲ್.ಇ. (ಹತ್ತಿಯಲ್ಲಿ 500 ಎಲ್.ಇ. ನಂಜಾಣು ಶೇ 0.1 ಬೋರಿಕ್ ಪೌಡರ್ ಮತ್ತು ಶೇ 0.5 ಬೆಲ್ಲವನ್ನು ಕೂಡಿಸಿ ಸಂಜೆಯ ವೇಳೆ ಸಿಂಪಡಿಸಬೇಕು.

ಆಧಾರ : 1. ಸಾವಯವ ಕೃಷಿ ಗ್ರಾಮೀಣ ಅಭಿವೃದ್ಧಿಗೆ ದಾರಿ : ಲೇಖಕರು : ಡಾ॥ ಎಸ್. ಎ. ಪಾಟೀಲ್ ಡಾ॥ ಹೆಚ್. ಬಿ. ಪಾಟೀಲ್ ಡಾ॥ ಆರ್. ಕ.ಎ ಪಾಟೀಲ್
2. ಸಾವಯವ ಕರಷಿ ಕೈಪಿಡಿ : ಎಸ್. ಮೃತ್ಯುಂಜಯ
3. ಸಾವಯವ ಕೃಷಿ ಒಂದು ಅವಲೋಕನ : ಡಾ॥ ಬಿ.ಎಸ್. ಸಿದ್ದರಾಮಯ್ಯ ಡಾ॥ ಉಷಾ ಕಿರಣ್

ತೆಂಗಿನ ನಾಡಿನಲ್ಲಿ ನಿರುದ್ಯೋಗಯುವರೈತರಿಗೆ ವರದಾನ–ಮರ ಹತ್ತುವ ಸಾಧನ

*ವೈ.ಎನ್. ಶಿವಲಿಂಗಯ್ಯ, **ಎಂ.ಹೆಚ್. ಶಂಕರ ಮತ್ತು***ಕೆ.ಎಂ. ಶ್ರೀನಿವಾಸ ರೆಡ್ಡಿ
*ಕೃಷಿ ವಿಸ್ತೀರ್ಣ ವಿಭಾಗ, ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳೂರು,**ಕೃಷಿ ವಿಜ್ಞಾನಕೇಂದ್ರ, ಬಿದರೆಗುಡಿ ಕಾವಲು, ತುಮಕೂರು,
*** ಕೀಟ ಶಾಸ್ತ್ರ ವಿಭಾಗ, ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳ್ರರು

ಕೇಳಿದ್ದೆಲ್ಲಾ ಕೊಡುವಕಲ್ಪವೃಕ್ಷಎಂದೇ ಪ್ರಖ್ಯಾತಿ ಪಡೆದಿರುವತೆಂಗಿನ ಮರವುಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆ ವೈಫಲ್ಯದಜೊತೆಗೆಕಪ್ಪುತಲೆ ಹುಳು, ಕೆಂಪು ತಲೆ ಹುಳು, ರಸ ಸೋರುವರೋಗ, ಅಣಬೆ ರೋಗಗಳ ಬಾಧೆಗೆಒಳಗಾಗಿರುವುದಲ್ಲದೇ ಹಲವಾರು ಹವಾಮಾನ ವೈಪರೀತ್ಯಗಳಿಗೆ ತುತ್ತಾಗಿ ಮರ ಸೊರಗಿ ಫಲ ಕೊಡದೆರೈತನಜೀವನವನ್ನೇ ನಶಿಸುವಂತೆ ಮಾಡುತ್ತಿದೆ. ತೆಂಗಿನ ಕಾಯಿ ಕೀಳಿಸಲು ಕೂಲಿ/ಕೆಲಸದವರು ಸಿಗದೆ, ಇದ್ದಅಲ್ಪ ಸ್ವಲ್ಪ ಕಾಯಿಗಳನ್ನು ಸಹ ಮರದಲ್ಲೇ ಬಿಡುವಂತಾಗಿದೆ. ಈ ತೆಂಗಿನ ಸಮಸ್ಯೆಯುತುಮಕೂರುಜಿಲ್ಲೆಗೆ ಹೊರತಾಗದೆಎಲ್ಲಾ ಜಿಲ್ಲೆಗಳಲ್ಲೂ ಸಹ ವ್ಯಾಪಕವಾದ ಸಮಸ್ಯೆಯಾಗಿದ್ದು, ಅದರಲ್ಲೂತುಮಕೂರುಜಿಲ್ಲೆಅತಿ ಹೆಚ್ಚಿನತೆಂಗು ಬೆಳೆಯ ವಿಸ್ತೀರ್ಣವನ್ನು ಹೊಂದಿದ್ದುಜೊತೆಗೆ ಪೀಡೆ ಹಾವಳಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಮೈಗೂಡಿಸಿಕೊಂಡಿದೆ.

ಕೃಷಿ ವಿಜ್ಞಾನಕೇಂದ್ರಬಿದರೆಗುಡಿ ಕಾವಲು, ತುಮಕೂರು, ಸರ್ಕಾರದಅಭಿವೃದ್ಧಿ ಇಲಾಖೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಜೊತೆಗೂಡಿ ಪೀಡೆ ನಿರ್ವಹಣೆ ಬಗ್ಗೆ ತಂತ್ರಜ್ಞಾನ ವಿಧಾನಗಳನ್ನೊಳಗೊಂಡ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು, ಅರಿವು ಮೂಡಿಸುವತರಭೇತಿ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಯಶಸ್ವಿಯಾಗಿದ್ದುತೆಂಗುಅಭಿವೃದ್ಧಿ ಮಂಡಳಿ, ಬೆಂಗಳೂರು ಇವರೊಡಗೂಡಿಜ್ಞಾನ ಮತ್ತುಕೌಶಲ್ಯ ವರ್ಧನೆಕುರಿತತೆಂಗು ಮರ ಹತ್ತುವ ಸಾಧನ ಮತ್ತು ಸಸ್ಯ ಸಂರಕ್ಷಣೆ ಬಗ್ಗೆ ಒಂದು ವಾರದಅವಧಿಯ ಮೂರುತರಭೇತಿ ಕಾರ್ಯಕ್ರಮಗಳನ್ನು ಕೃಷಿ ವಿಜ್ಞಾನಕೇಂದ್ರ ಬಿದರೆಗುಡಿ ಕಾವಲಿನಲ್ಲಿಇತ್ತೀಚಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕೇಂದ್ರದಿಂದತರಬೇತಿ ಪಡೆದ 40 ರೈತರಲ್ಲಿತುರುವೇಕೆರೆತಾಲ್ಲೂಕಿನರಾಯಸಂದ್ರಗ್ರಾಮದ 12 ಜನರೈತರುಭಾಗವಹಿಸಿದ್ದರು.ತರಬೇತಿ ಸಮಯದಲ್ಲಿಅತಿಆತ್ಮವಿಶ್ವಾಸದಿಂದ ಭಗವಹಿಸಿದ ಈ ರೈತರುತರಬೇತಿ ನಂತರ "ತೆಂಗಿನ ಮರ ಹತ್ತುವವರ ಬಳಗ"ವನ್ನು ಸ್ಥಾಪಿಸಿದ್ದಾರೆ.ತಮ್ಮಜಮೀನಿನಲ್ಲಿ ಸ್ವತಃತೆಂಗಿನಕಾಯಿ ಕೀಳುವುದರ ಜೊತೆಗೆ ಪರರೈತರಜಮೀನಿನಲ್ಲಿತೆಂಗಿನ ಮರ ಹತ್ತುವ ಸಾಧನ ಬಳಸಿ ಆರ್ಥಿಕವಾಗಿಉತ್ತಮಆದಾಯ (ತಿಂಗಳಿಗೆ ಸುಮಾರು 1500/– ರೂ) ಪಡೆಯುತ್ತಿರುವುದುಅತೀವ ಸಂತಸದ ವಿಷಯವಾಗಿದೆ, ಇದಲ್ಲದೇ ಸಸ್ಯ ಸಂರಕ್ಷಣೆ ಬಗ್ಗೆ ಸಹ ರೈತರಿಗೆ ತಿಳಿ ಹೇಳುತ್ತಿರುವುದು ಶ್ಲಾಘನೀಯ ಹಾಗೂ ಸ್ವಾಗತಾರ್ಹ.ಬಳಗವನ್ನು ಕಟ್ಟಿಕೊಂಡುತಾಲ್ಲೂಕಿನಇತರೆ ಹಳ್ಳಿಗಳಲ್ಲೂ ಸಹ ಕಾಯಿ, ಎಳನೀರು ಕೀಳುವುದರ ಮತ್ತುರೋಗ/ಕೀಟ ಸಂರಕ್ಷಣೆಯಲ್ಲಿತೊಡಗಿಕೊಂಡುಆರ್ಥಿಕ ಮಟ್ಟ ಸುಧಾರಿಸಿಕೊಳ್ಳುವುದರ ಜೊತೆಗೆಅಲ್ಪ ಮಟ್ಟಿಗಾದರೂ ಕೂಲಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸುತ್ತಿದ್ದಾರೆ.

ಕೇಳಿದ್ದೆಲ್ಲಾ ಕೊಡುವ ಕಲ್ಪವೃಕ್ಷ ಎಂದೇ ಪ್ರಖ್ಯಾತಿ ಪಡೆದಿರುವ ತೆಂಗಿನ ಮರವು ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆ ವೈಫಲ್ಯದ ಜೊತೆಗೆ ಕಪ್ಪು ತಲೆ ಹುಳು, ಕೆಂಪು ತಲೆ ಹುಳು, ರಸ ಸೋರುವ ರೋಗ, ಅಣಬೆ ರೋಗಗಳ ಬಾಧೆಗೆ ಒಳಗಾಗಿರುವುದಲ್ಲದೇ ಹಲವಾರು ಹವಾಮಾನ ವೈಪರೀತ್ಯಗಳಿಗೆ ತುತ್ತಾಗಿ ಮರ ಸೊರಗಿ ಫಲ ಕೊಡದೆ ರೈತನ ಜೀವನವನ್ನೇ ನಶಿಸುವಂತೆ ಮಾಡುತ್ತಿದೆ. ತೆಂಗಿನ ಕಾಯಿ ಕೀಳಿಸಲು ಕೂಲಿ/ಕೆಲಸದವರು ಸಿಗದೆ, ಇದ್ದ ಅಲ್ಪ ಸ್ವಲ್ಪ ಕಾಯಿಗಳನ್ನು ಸಹ ಮರದಲ್ಲೇ ಬಿಡುವಂತಾಗಿದೆ. ಈ ತೆಂಗಿನ ಸಮಸ್ಯೆಯು ತುಮಕೂರು ಜಿಲ್ಲೆಗೆ ಹೊರತಾಗದೆ ಎಲ್ಲಾ ಜಿಲ್ಲೆಗಳಲ್ಲೂ ಸಹ ವ್ಯಾಪಕವಾದ ಸಮಸ್ಯೆಯಾಗಿದ್ದು, ಅದರಲ್ಲೂ ತುಮಕೂರು ಜಿಲ್ಲೆ ಅತಿ ಹೆಚ್ಚಿನ ತೆಂಗು ಬೆಳೆಯ ವಿಸ್ತೀರ್ಣವನ್ನು ಹೊಂದಿದ್ದು ಜೊತೆಗೆ ಪೀಡೆ ಹಾವಳಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಮೈಗೂಡಿಸಿಕೊಂಡಿದೆ.

ಕೃಷಿ ವಿಜ್ಞಾನ ಕೇಂದ್ರವು ಸರ್ಕಾರದ ಅಭಿವೃದ್ಧಿ ಇಲಾಖೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಜೊತೆಗೂಡಿ ಪೀಡೆ ನಿರ್ವಹಣೆ ಬಗ್ಗೆ ತಂತ್ರಜ್ಞಾನ ವಿಧಾನಗಳನ್ನೊಳಗೊಂಡ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು, ಅರಿವು ಮೂಡಿಸುವ ತರಭೇತಿ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಯಶಸ್ವಿಯಾಗಿದ್ದು ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು ಇವರೊಡಗೂಡಿ ಜ್ಞಾನ ಮತ್ತು ಕೌಶಲ್ಯ ವರ್ಧನೆ ಕುರಿತ ತೆಂಗು ಮರ ಹತ್ತುವ ಸಾಧನ ಮತ್ತು ಸಸ್ಯ ಸಂರಕ್ಷಣೆ ಬಗ್ಗೆ ಒಂದು ವಾರದ ಅವಧಿಯ ಮೂರು ತರಭೇತಿ ಕಾರ್ಯಕ್ರಮಗಳನ್ನು ಕೃಷಿ ವಿಜ್ಞಾನ ಕೇಂದ್ರ ಬಿದರೆಗುಡಿ ಕಾವಲಿನಲ್ಲಿ ಇತ್ತೀಚಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಇತ್ತೀಚಿಗೆ ಗ್ರಾಮೀಣ ಯುವಕರು ನಗರ ಪ್ರದೇಶಗಳಿಗೆ ಗುಳೆ ಹೋಗುತ್ತಿರುವ ಹಿನ್ನಲೆಯಲ್ಲಿ ಯುವ ರೈತರನ್ನು ಆಕರ್ಷಿಸಿ ಅವರನ್ನು ಸ್ವಂತ ಉದ್ಯೋಗಸ್ಥರನ್ನಾಗಿ ಮಾಡುವುದು ತರಭೇತಿ ಕಾರ್ಯಕ್ರಮದ ಮೂಲ ಉದ್ದೇಶವಾಗಿದ್ದು, ತೆಂಗಿನ ಮರ ಹತ್ತುವ ಸಾಧನ ಬಳಸಿ ಮರ ಹತ್ತುವವರ ಗುಂಪುಗಳ ರಚಿಸಿ ತಮ್ಮ ತೋಟದ ಜೊತೆಗೆ ಬೇರೆ ಪ್ರದೇಶಗಳಿಗೂ ಗುಂಪಾಗಿ ಹೋಗಿ ಕಾಯಿ ಕೀಳುವುದರ ಜೊತೆಗೆ ಸಸ್ಯ ಸಂರಕ್ಷಣೆ ಕೈಗೊಳ್ಳುವ ಒಂದು ಉತ್ತಮ ಪಡೆಯನ್ನಾಗಿಸಬೇಕೆಂಬ ಪ್ರಯತ್ನವು ಸಹ ತರಬೇತಿ ಕಾರ್ಯಕ್ರಮದ್ದಾಗಿತ್ತು. ಒಂದು ವಾರದ ಅವಧಿಯ ಪ್ರತಿ ಕಾರ್ಯಕ್ರಮದಲ್ಲಿ ತಲಾ 20 ಜನ ರೈತರಂತೆ ಮೂರು ತರಭೇತಿ ಕಾರ್ಯಕ್ರಮಗಳಲ್ಲಿ 60 ರೈತ ಭಾಂಧವರು ಭಾಗವಹಿಸಿದ್ದು, ಇದರಲ್ಲಿ ಶೇಕಡಾ 83.34 ರಷ್ಟು ರೈತರು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದು ತರಭೇತಿ ಕಾರ್ಯಕ್ರಮದಲ್ಲಿ ಹೆಚ್ಚಿನ ಆಸಕ್ತಿ ಹಾಗೂ ಉತ್ಸುಕತೆಯಿಂದ ಭಾಗವಹಿಸಿದ್ದು ವಿಶೇಷ ಸಂಗತಿಯಾಗಿತ್ತು.

ಈ ತರಭೇತಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಬಿದರಮ್ಮನಗುಡಿ ಕಾವಲು ಮತ್ತು ಹಿರೇಹಳ್ಳಿ, ಕೃಷಿ ಸಂಶೋಧನ ಕೇಂದ್ರ, ಕೊನೆಹಳ್ಳಿ ಮತ್ತು ಅರಸೀಕೆರೆ, ಸ್ಥಳೀಯ ಪ್ರಗತೀಪರ ಹಾಗೂ ನೂತನ ತಂತ್ರಜ್ಞಾನ ಕಂಡುಕೊಂಡ ರೈತರೊಂದಿಗೆ ಸಮಸ್ಯೆ ಪರಿಹರಿಸುವ ತಂತ್ರಜ್ಞಾನದ ನುರಿತಾದ ತರಭೇತಿ ಕಾರ್ಯಕ್ರಮವಾಗಿತ್ತು. ತರಭೇತಿ ಕಾರ್ಯಕ್ರಮದ ಅವಧಿಯಲ್ಲಿ ಪ್ರತಿ ದಿನ ಮುಂಜಾನೆ ಹಾಗೂ ಸಂಜೆ ಸುಮಾರು ಎರಡು ಘಂಟೆಗಳ ಕಾಲ ಮರ ಹತ್ತುವ ಸಾಧನದಿಂದ ಮರ ಹತ್ತುವ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿತ್ತು. ಈ ಕೌಶಲ್ಯಭರಿತ ಚಟುವಟಿಕೆಯನ್ನು ನುರಿತ ಮರ ಹತ್ತುವ ಪರಿಣಿತರಿಂದ ಕೊಡಿಸಲಾಯಿತು. ಮೊದ ಮೊದಲು ರೈತ ಬಾಂಧವರು ಸಾಧನ ಬಳಸಿ ಮರ ಏರಿ ಇಳಿಯಲು ಅಧಿಕ ಸಮಯ ತೆಗೆದುಕೊಂಡು ತರುವಾಯ ದಿನಕಳೆದಂತೆ ಹೆಚ್ಚಿನ ಪ್ರಯತ್ನ ಹಾಕಿ ಈ ಸಮಯದ ಅವಧಿಯನ್ನು ಕಡಿತಗೊಳಿಸಿಕೊಂಡಿದ್ದು ಅವರಲ್ಲಿ ಆತ್ಮ ವಿಶ್ವಾಸ ಮೂಡಿರುವ ದ್ಯೋತಕವಾಗಿ ಹೊರ ಹೊಮ್ಮಿದ್ದು ಹಾಗೂ ಸಾಧನ ಉಪಯೋಗಿಸಿ ಮರ ಹತ್ತುವುದರಲ್ಲಿ ಉತ್ತಮ ಜ್ಞಾನ ಮತ್ತು ಕೌಶಲ್ಯವನ್ನು ಮೈಗೂಡಿಸಿಕೊಂಡಿದ್ದು ವಿಶೇಷವಾಗಿ ಕಂಡುಬಂದಿತು. ತರಭೇತಿ ಕಾರ್ಯಕ್ರಮದ ಕಡೆಯಲ್ಲಿ ಮರ ಹತ್ತುವ ಸಾಧನ ಉಪಯೋಗಿಸಿ ಕಡಿಮೆ ಅವಧಿಯಲ್ಲಿ ತೆಂಗಿನ ಮರ ಹತ್ತಿ ಕಾಯಿ ಕಿತ್ತು ಇಳಿಯುವ ಸ್ಪರ್ಧೆ ಏರ್ಪಡಿಸಿ ವಿಜೇತರಿಗೆ ನಗದು ಬಹುಮಾನ ಕೊಟ್ಟು ಸನ್ಮಾನಿಸಲಾಯಿತು.

ರೈತರು ಮರ ಹತ್ತುವ ಸಾಧನದ ನಂಟನ್ನು ಖಾಯಂಯಾಗಿ ತಮ್ಮ ಜೊತೆಗೆ ಇಟ್ಟುಕೊಂಡು ಇನ್ನು ಹೆಚ್ಚಿನ ಆತ್ಮವಿಶ್ವಾಸದಿಂದ ಸಾಧನ ಬಳಸಿ ಮರ ಹತ್ತಿ ಇಳಿಯುವ ಪರಿಣಿತಿ ಹೊಂದಬ್ಬೇಕೆಂಬ ಸದುದ್ದೇಶದಿಂದ ಭಾಗವಹಿಸಿದ ರೈತರೆಲ್ಲರಿಗೂ ತೆಂಗಿನ ಮರ ಹತ್ತುವ ಸಾಧನವನ್ನು ವಿತರಿಸಲಾಯಿತು.

ತೆಂಗಿನ ಮರ ಹತ್ತುವ ಸಾಧನದ ಪ್ರಾತ್ಯಕ್ಷಿಕೆಯಲ್ಲದೆ ತರಭೇತಿ ಕಾರ್ಯಕ್ರಮದಲ್ಲಿ ತೆಂಗಿನ ಸಸಿ ಮಡಿ ಮಾಡುವಲ್ಲಿ ಉತ್ತಮ ಕಾಯಿಗಳ ಆಯ್ಕೆ ತೆಂಗು ಆಧಾರಿತ ಬೆಳೆ ವೈವಿಧ್ಯತೆ, ತೆಂಗಿನ ತಳಿಗಳು ಮತ್ತು ಅವುಗಳ ಗುಣಲಕ್ಷಣಗಳು ಹಾಗೂ ಸುಧಾರಿತ ಬೇಸಾಯ ಕ್ರಮಗಳು, ಸಮಗ್ರ ಪೋಷಕಾಂಶ ನಿರ್ವಹಣೆ ಮತ್ತು ತೆಂಗಿನಲ್ಲಿ ಮೌಲ್ಯವರ್ಧನೆಯ ಬಗ್ಗೆ ಸಮಗ್ರ ಮಾಹಿತಿ ನೀಡಿ, ಪದ್ಧತಿ ಪ್ರಾತ್ಯಕ್ಷಿಕೆ, ಗುಂಪು ಚರ್ಚೆ, ಕ್ಷೇತ್ರ ಭೇಟಿಯಂತಹ ವಿಸ್ತರಣಾ ವಿಧಾನಗಳ ಮೂಲಕ ತೆಂಗು ಬೆಳೆಗೆ ತಗಲುವ ರೋಗ ಮತ್ತು ಕೀಟಗಳ ಸಮಗ್ರ ನಿರ್ವಹಣಾ ಕ್ರಮಗಳ ಬಗ್ಗೆ ವಿಶೇಷವಾದ ಒತ್ತು ನೀಡಿದ್ದು ರೈತರಿಂದ ಪ್ರಶಂಸೆಗೆ ಒಳಪಟ್ಟಿತು. ಇದಲ್ಲದೆ ಬೆಳೆ ವಿಮೆ, ಸಾಲ ಹಾಗೂ ಮರುಪಾವತಿ, ಪಿಂಚಣಿ ಸೌಲಭ್ಯ ಮತ್ತು ಸಂವಹನ ಕೌಶಲ್ಯದಂತಹ ವಿಶೇಷ ವಿಷಯಗಳ ಬಗ್ಗೆ ನುರಿತ ಸಾಮಾಜಿಕ ಜ್ಞಾನಿಗಳಿಂದ ಉಪನ್ಯಾಸ ನೀಡಿಸಿದ್ದು ಶಿಬಿರಾರ್ಥಿಗಳಲ್ಲಿ ಹೊಸ ಸಂಚಲನ ಮೂಡಿಸಿತು.

ತರಬೇತಿ ಕಾರ್ಯಕ್ರಮದ ನಂತರದ ದಿನಗಳಲ್ಲಿ ಕೇಂದ್ರದಿಂದ ತರಭೇತಿ ಪಡೆದ ರೈತರ ಆರ್ಥಿಕ ವಿಮರ್ಶಾತ್ಮಕರ ವಿಶ್ಲೇಷಣೆಯಿಂದ ಹೊರ ಬಂದ ಸಂಗತಿಗಳು ತರಭೇತಿ ನೀಡಿದ ಕೇಂದ್ರದ ವಿಜ್ಞಾನಿಗಳ ಹುಮ್ಮಸ್ಸನ್ನು ಇಮ್ಮಡಿಗೊಳಿಸಿದ್ದು, ಕೇಂದ್ರದಿಂದ ತರಬೇತಿ ಪಡೆದ 40 ರೈತರಲ್ಲಿ ತುರುವೇಕೆರೆ ತಾಲ್ಲೂಕಿನ ರಾಯಸಂದ್ರ ಗ್ರಾಮದ 12 ಜನ ರೈತರು ಭಾಗವಹಿಸಿದ್ದರು. ತರಬೇತಿ ಸಮಯದಲ್ಲಿ ಅತಿ ಆತ್ಮವಿಶ್ವಾಸದಿಂದ ಭಗವಹಿಸಿದ ಈ ರೈತರು ತರಬೇತಿ ನಂತರ "ತೆಂಗಿನ ಮರ ಹತ್ತುವವರ ಬಳಗ"ವನ್ನು ಸ್ಥಾಪಿಸಿದ್ದಾರೆ. ತಮ್ಮ ಜಮೀನಿನಲ್ಲಿ ಸ್ವತಃ ತೆಂಗಿನಕಾಯಿ ಕೀಳುವುದರ ಜೊತೆಗೆ ಪರ ರೈತರ ಜಮೀನಿನಲ್ಲಿ ತೆಂಗಿನ ಮರ ಹತ್ತುವ ಸಾಧನ ಬಳಸಿ ಆರ್ಥಿಕವಾಗಿ ಉತ್ತಮ ಆದಾಯ (ತಿಂಗಳಿಗೆ ಸುಮಾರು 1500/– ರೂ) ಪಡೆಯುತ್ತಿರುವುದು ಅತೀವ ಸಂತಸದ ವಿಷಯವಾಗಿದೆ, ಇದಲ್ಲದೇ ಸಸ್ಯ ಸಂರಕ್ಷಣೆ ಬಗ್ಗೆ ಸಹ ರೈತರಿಗೆ ತಿಳಿ ಹೇಳುತ್ತಿರುವುದು ಶ್ಲಾಘನೀಯ ಹಾಗೂ ಸ್ವಾಗತಾರ್ಹ. ಇತ್ತೀಚೆಗೆ ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು ವತಿಯಿಂದ ತಿಪಟೂರು, ಗುಬ್ಬಿ ಮತ್ತು ತುರುವೇಕೆರೆ ತಾಲ್ಲೂಕಿನ

ತೆಂಗಿನ ಮರದಲ್ಲಿ ಕಾಯಿ/ಎಳನೀರು ಎಣಿಸುವ ಯೋಜನೆಯಲ್ಲಿ ಪಾಲ್ಗೊಂಡು ಮರಕ್ಕೆ 30 ರೂ ರಂತೆ ಬಳಗದ ಎಲ್ಲಾ (12) ರೈತರು ಭಾಗವಹಿಸಿ 3 ದಿನದಲ್ಲಿ 1800 ಮರಗಳನ್ನು ಹತ್ತಿ ಕಾಯಿ ಎಣಿಸಿದ್ದಾರೆ. ಒಬ್ಬರಿಗೆ ಸುಮಾರು 4500/– ರೂಪಾಯಿ ಸಂಭಾವನೆ ಸಹ ಪಡೆದಿರುತ್ತಾರೆ. ಬಳಗವನ್ನು ಕಟ್ಟಿಕೊಂಡು ತಾಲ್ಲೂಕಿನ ಇತರೆ ಹಳ್ಳಿಗಳಲ್ಲೂ ಸಹ ಕಾಯಿ, ಎಳನೀರು ಕೀಳುವುದರ ಮತ್ತು ರೋಗ/ಕೀಟ ಸಂರಕ್ಷಣೆಯಲ್ಲಿ ತೊಡಗಿಕೊಂಡು ಆರ್ಥಿಕ ಮಟ್ಟ ಸುಧಾರಿಸಿಕೊಳ್ಳುವುದರ ಜೊತೆಗೆ ಅಲ್ಪ ಮಟ್ಟಿಗಾದರೂ ಕೂಲಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸುತ್ತಿದ್ದಾರೆ.

ರೇಷ್ಮೆಕೃಷಿಯಲ್ಲಿ ಯಂತ್ರೋಪಕರಣಗಳ ಮಹತ್ವ

ವಿ.ಪಿ. ಭಾರತಿ, ರಾಮಕೃಷ್ಣ ನಾಯ್ಕ, ಚಂದ್ರಶೇಖರ ಎಸ್. ಕಳ್ಳಿಮನಿ ಮತ್ತು ಪಲ್ಲವಿ
ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಭಾರತದ ಕೃಷಿಯಲ್ಲಿನ ಹಲವಾರು ತೊಡಕುಗಳಿಂದ ಅಂದರೆ ಸರಿಯಾದ ವೇಳೆಗೆ ಮಳೆಯಾಗದಿರುವುದು, ನೀರಿನ ಅಭಾವ, ವಿದ್ಯುಚ್ಛಕ್ತಿ ಕೊರತೆ, ಬರಗಾಲ, ಬೆಲೆ ಹೆಚ್ಚಳಗಳಿಂದ ರೈತಾಪಿ ಜನರು ಅದರಲ್ಲೂ ಗಂಡಸರು ನಗರಕ್ಕೆ ವಲಸೆ ಹೋಗುತ್ತಿದ್ದು, ಇದರಿಂದ ಕೂಲಿ ಮಾಡುವ ಜನರ ಲಭ್ಯತೆ ತೀವ್ರ ರೀತಿಯಲ್ಲಿ ಬಾದೆಗೊಂಡಿದ್ದು ಜೊತೆಗೆ ಕೂಲಿ ವೆಚ್ಚವು ಏರುತ್ತಿರುವ ಕಾರಣ ಉತ್ಪಾದನಾ ವೆಚ್ಚವೂ ಬಹಳ ಹೆಗಿ, ಲಾಭಾಂಶವು ಕಡಿಮೆಯಾಗುತ್ತಿದೆ.ಆದ್ದರಿಂದ ಯಂತ್ರಗಳನ್ನು ಬಳಸಿ ಉತ್ಪಾದಕತೆಯನ್ನು ಹೆಚ್ಚಿಸುವ್ಯದರಿಂದ ಶ್ರಮದ ಕೆಲಸ ನಿರಾಳವಾಗಿ ಮಾಡವುದರ ಜೊತೆಗೆ ಉತ್ತಮ ಕೆಲಸ ನಿರ್ವಹಿಸುವ ವಾತಾವರಣ ನಿರ್ಮಾಣವಾಗಿ ಕೆಲಸದ ಒತ್ತಡಗಳು ಕಡಿಮೆಯಾಗಿ ಯುವಕರು ಕೃಷಿಯಲ್ಲಿ ಆಸಕ್ತಿ ಹೊಂದಲು ಸಾಧ್ಯವಾಗಿ ಹೆಚ್ಚಿನ ಮಹಿಳೆಯರು ಕೃಷಿಯಲ್ಲಿನ ಕೆಲಸಗಳನ್ನು ನಿರಾಯಾಸವಾಗಿ ಮಾಡಬಹುದಾಗಿದೆ. ಭಾರತದಲ್ಲಿ ರೇಷ್ಮೆಕೃಷಿಯು ತನ್ನದೇ ಆದ ಇತಿಹಾಸ ಮತ್ತು ಬೇಡಿಕೆಯನ್ನು ಹೊಂದಿದೆ. ನಮ್ಮ ದೇಶದಲ್ಲಿ 6 ಲಕ್ಷ ಹಳ್ಳಿಗಳ ಪೈಕಿ ಸುಮಾರು 50,000 ಹಳ್ಳಿಗಳಲ್ಲಿ ರೇಷ್ಮೆಕೃಷಿಯನ್ನು ಅಳವಡಿಸಿಕೊಂಡಿದ್ದಾರೆ. ಅಂದರೆ ಪ್ರತಿ 12 ಹಳ್ಳಿಗಳಲ್ಲಿ 1 ಹಳ್ಳಿಯಲ್ಲಿ ರೇಷ್ಮೆಯ ಅಸ್ತಿತ್ವ ಕಾಣಬಹುದು. ಉತ್ತಮ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪಿನಿಂದ ಗುಣಮಟ್ಟದ ರೇಷ್ಮೆ ಗೂಡನ್ನು ಬೆಳೆಯಬಹುದು, ಗೂಡಿನ ಉತ್ಪಾದನಾ ವೆಚ್ಚದಲ್ಲಿ ಹಿಪ್ಪುನೇರಳೆ ಬೇಸಾಯಕ್ಕೆ ಶೇ. 55 ರಿಂದ 60 ಭಾಗ ಖರ್ಚಾಗುವುದು. ಅದರಲ್ಲಿ ಶೇ. 65–70 ರಷ್ಟು ಕೂಲಿಗೆ ವೆಚ್ಚವಾಗುವುದು. ಆದ್ದರಿಂದ ಉಪಕರಣಗಳು, ಸಲಕರಣೆಗಳು ಮತ್ತು ಯಂತ್ರಗಳನ್ನು ಬಳಸಿ ಶೇ. 35–40 ರಷ್ಟು ಉತ್ಪಾದನೆ ವೆಚ್ಚವನ್ನು ಕಡಿತಗೊಳಿಸಬಹುದಾಗಿದೆ. ರೇಷ್ಮೆಹುಳು ಸಾಕಾಣಿಕೆಯೂ ಸಹ ಹೆಚ್ಚಿನ ಕೂಲಿ ಆಧಾರಿತ ಕೆಲಸವಾಗಿದೆ. ಸಾಕಾಣಿಕೆಗೆ ತಗಲುವ ಒಟ್ಟು ಖರ್ಚು ವೆಚ್ಚಗಳಲ್ಲಿ ಶೇ.40 ರಷ್ಟು ಕೂಲಿಗೆ ವ್ಯಯವಾಗುವುದು. ವಿವಿಧ ಕೆಲಸಗಳಾದ ಹುಳು ಮನೆಯ ಸ್ವಚ್ಛತೆ ಮತ್ತು ಸೋಂಕು ನಿವಾರಣೆ ಮಾಡುವುದು, ಚಾಕಿ ಹುಳುಗಳ ಸೊಪ್ಪನ್ನು ಕತ್ತರಿಸುವುದು, ಬೆಳೆದ ಹುಳುಗಳಿಗೆ ರೆಂಬೆ ಹಾಕುವುದು, ಹಣ್ಣು ಹುಳುಗಳನ್ನು ಆಯಿಸಿ ಚಂದ್ರಿಕೆಗಳಿಗೆ ಬಿಡುವುದು, ಗೂಡಿನ ವಿಂಗಡಣೆ ಹಾಗೂ ಜುಂಜು ಬಿಡಿಸುವುದು ಈ ಎಲ್ಲಾ ಕೆಲಸಗಳನ್ನು ಮಾಡಲು ಹೆಚ್ಚಿನ ಸಮಯ ಹಾಗೂ ಶ್ರಮ ವಹಿಸಬೇಕಾಗುತ್ತದೆ. ಈ ಕೆಲಸಗಳನ್ನು ತ್ವರಿತಗತಿಯಲ್ಲಿ ಮಾಡಬಹುದಾದ ಯಂತ್ರೋಪಕರಣಗಳನ್ನು ಆವಿಷ್ಕಾರ ಮಾಡಲಾಗಿದ್ದು ಅವುಗಳನ್ನು ಸುಲಭವಾಗಿ ಅಳವಡಿಸಿ ಸಕಾಲಿಕವಾಗಿ ಕಾರ್ಯನಿರ್ವಹಣೆ ಮಾಡಬಹುದು.

ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ನೂಲನ್ನು ಬಿಚ್ಚುವ ಮೊದಲು ಹಲವಾರು ಕ್ರಿಯೆಗಳನ್ನು ಮಾಡಬೇಕಾಗುತ್ತದೆ. ಅಲ್ಲಿಯೂ ಸಹ ಮಾನವ ಕೆಲಸ ಮಾಡಿದರೆ ಹೆಚ್ಚಿನ ಸಮಯ ಹಾಗೂ ಹಣ ವೆಚ್ಚವಾಗುತ್ತದೆ. ಗೂಡಿನ ವಿಂಗಡಣೆ ಕೈಯಿಂದ ಮಾಡಿದರೆ ಕೇವಲ ಗೂಡಿನ ಮೇಲ್ಮೈಯಲ್ಲಿರುವ ಕಳಪೆಯನ್ನು ತೆಗೆದು ಹಾಕಬಹುದು, ಆದರೆ ಗೂಡಿನ ಒಳಗಡೆ ಪದರಗಳಲ್ಲಾದ ಹಾನಿಯನ್ನು ಕರಿಡು ಹಿಡಿಯಲು ಅಸಾಧ್ಯ. ಈ ತೊಡಕನ್ನು ನಿವಾರಿಸಲು ಗೂಡು ವರ್ಗೀಕರಿಸುವ ಮೇಜನ್ನು ಬಳಸಿದಲ್ಲಿ ನಿಖರವಾಗಿ ಗೂಡಿನ ವಿಂಗಡಣೆ ತ್ವರಿತಗತಿಯಲ್ಲಿ ಮಾಡಿ ಮುಗಿಸಬಹುದು.

ಯಂತ್ರೋಪಕರಣಗಳ ಅಳವಡಿಕೆಯಿಂದ ಉತ್ಪಾದನಾ ವೆಚ್ಚ ಕಡಿಮೆ ಆಗುವುದರ ಜೊತೆಗೆ ಸರಿಯಾದ ಸಮಯಕ್ಕೆ ಕೈಗೊಳ್ಳಬೇಕಾದ ಕಾರ್ಯವನ್ನು ಹೆಚ್ಚಿನ ಶ್ರಮವಿಲ್ಲದೆ ಹಾಗೂ ಕಡಿಮೆ ಕೂಲಿ ಆಳುಗಳನ್ನು ಬಳಸಿ ಅಧಿಕ ಲಾಭ ಪಡೆಯಬಹುದು.

ಕೃಷಿ ಒಂದು ಕಷ್ಟದ ಕಾಯಕ, ಅದನ್ನು ಹೆಚ್ಚಾಗಿ ಅವಲಂಬಿಸಿದರೆ ಸುಖಕ್ಕಿಂತ ದುಃಖವೇ ಹೆಚ್ಚು, ಆದ್ದರಿಂದ ಹಳ್ಳಿಯ ಜೀವನ ಮತ್ತು ಕೃಷಿಯನ್ನು ತೊರೆದು ಪಟ್ಟಣಗಳಿಗೆ ವಲಸೆ ಹೋಗುವವರೆ ಅಧಿಕವಾಗಿರುವ ಈ ಜಮಾನದಲ್ಲಿ ಹಳ್ಳಿಯಲ್ಲೇ ಉಳಿದು ಕೃಷಿಯ ಜೊತೆಗೆ ಕೃಷಿಯೇತರ ಚಟುವಟಿಕೆಯನ್ನು ಮಾಡುತ್ತಾ ಆ ಕಾಯಕವನ್ನು ಉದ್ದಿಮೆಯನ್ನಾಗಿಸಬೇಕೆಂದು ಪಟತೊಟ್ಟು ಸಫಲತೆಯಾಗಿರುವವರು ಬಹಳ ವಿರಳ. ಇಂತಹ ಜವಬ್ದಾರಿಯನ್ನು ಕೌಶಲ್ಯದಿಂದ ನಿಭಾಹಿಸುವ ನಿಪುಣತೆಯು ಸಹ ಬಹಳ ಮುಖ್ಯ, ಹೀಗೆ ನಿಪುಣತೆಯನ್ನು ಹೊಂದಿರುವವರಲ್ಲಿ 'ದೇವ'ರಾಜ ಸಹ ಒಬ್ಬರು. ಶ್ರೀಯುತ ದೇವರಾಜ್ ರವರು ಕೃಷಿ ವಿಜ್ಞಾನ ಕೇಂದ್ರದಿಂದ ಸುಮಾರು 15 ಕಿ.ಮೀ. ದೂರದಲ್ಲಿರುವ ರಂಗಾಪುರ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ರಂಗಾಪುರ ಗ್ರಾಮವು ಮಠ ಮಾನ್ಯಗಳಿಂದ ಪ್ರಾಮುಖ್ಯತೆ ಪಡೆದದಿರುವ ಜೊತೆಗೆ ಪ್ರಗತಿಪರ ಮತ್ತು ಕೃಷಿ ಚಿಂತಕರಂತಹ ದೇವರಾಜ್ ರನ್ನು ಸಹ ಸಲಹುತ್ತಿದ್ದು ಹೆಚ್ಚಿನ ಪ್ರಶಂಸೆಗೆ ಭಾಜನವಾಗಿದೆ.

ಸುಮಾರು 42 ವಯಸ್ಸಿನ ಆಸುಪಾಸಿನಲ್ಲಿರುವ ದೇವರಾಜ್ ತನ್ನ ಜೀವನಕ್ಕೆ ನಂಬಿರುವುದು ಕೃಷಿ ಕ್ಷೇತ್ರವನ್ನು ತನ್ನ ಒಟ್ಟಾರೆ 10 ಎಕರೆ ಜಮೀನಿನಲ್ಲಿ 7 ಎಕರೆ ಭೂಮಿಯಲ್ಲಿ ಖುಷ್ಕಿ ಬೇಸಾಯ ಮಾಡುತ್ತಿದ್ದು ಉಳಿದ 3 ಎಕರೆ ಭೂಮಿಯಲ್ಲಿ ಸಮಗ್ರ ಕೃಷಿಯನ್ನು ಅಳವಡಿಸಿ

ಕೊಂಡಿದ್ದಾರೆ. ಜೊತೆಗೆ ಸಾವಯವ ಕೃಷಿಗೆ ಒತ್ತು ನೀಡಿದ್ದಾರೆ. ತನ್ನ 3 ಎಕರೆ ಜಮೀನಿನಲ್ಲಿ ಸುಮಾರು 200 ತೆಂಗು, 350 ಅಡಿಕೆ, 100 ಬಾಳೆಯ ಜೊತೆಗೆ ಉಳಿದ ತೋಟಗಾರಿಕಾ ಬೆಳೆಗಳಾದ ಮೆಣಸು, ಎಲೆ ಹಂಬು, 20 ಸಪೋಟ, 3 ದಾಳಿಂಬೆ, 5 ಮಾವು, 2 ಹಲಸಿನ ಮರ ಮತ್ತು 50 ಪಪ್ಪಾಯ ಗಿಡಗಳನ್ನು ಬೆಳೆದಿದ್ದಾರೆ. ಹೈನುಗಾರಿಕೆ ಭಾಗವಾಗಿ 5 ಹೆಚ್.ಎಫ್ ಹಸುಗಳು, 2 ಎತ್ತು ಹಾಗೂ 2 ಕರುಗಳನ್ನು ಸಾಕುವುದರ ಜೊತೆಗೆ 5 ಭಾತುಕೋಳಿ, 30 ಪಾರಿವಾಳ, 2 ನಾಯಿ, 7 ಲವ್ ಬರ್ಡ್ಸ್, 50 ಮೊಲ, 3 ಗಿಳಿ, ಕೋಳಿ ಫಾರಂ, ಬಿಳಿ ಇಲಿಗಳನ್ನು ಸಾಕುವುದರ ಜೊತೆಗೆ ಮಾರಾಟ ಸಹ ಮಾಡುತ್ತಿದ್ದಾರೆ.

ಶ್ರೀಯುತ ದೇವರಾಜ್ ರವರು ತಮ್ಮ ಜಮೀನಿನಲ್ಲಿ ಸುಮಾರು 3000 ಚದರ ಅಡಿ ಈಜುಕೊಳವನ್ನು ಹೊಂದಿದ್ದು, ಒಬ್ಬರಿಗೆ ರೂ. 25 ರಂತೆ ಶುಲ್ಕವನ್ನು ಪಡೆಯುತ್ತಿದ್ದಾರೆ. ಇದರಿಂದ ಬೇಸಿಗೆಯ ನಾಲ್ಕು ತಿಂಗಳಲ್ಲಿ (ಮಾರ್ಚ್– ಜೂನ್) ಸರಿ ಸುಮಾರು ರೂ ಒಂದು ಲಕ್ಷವನ್ನು ಗಳಿಸುತ್ತಿದ್ದಾರೆ. ನಂತರ ಈಜಲು ಬರುವ ಜನರಿಗೆ ಶೌಚಾಲಯ ವ್ಯವಸ್ಥೆ ಕಲ್ಪಿಸಿದ್ದು ಅದರ ತ್ಯಾಜ್ಯವನ್ನು ಬಯೋಡೈಜಸ್ಟರ್ ಮೂಲಕ ತಮ್ಮ ಜಮೀನಿಗೆ ಉಪಯೋಗಿಸುತ್ತಿದ್ದಾರೆ. ಈಜು ಕೊಳದ ಕಲುಷಿತ ನೀರನ್ನು ಪುನಃ ಬೆಳೆಗಳಿಗೆ ಉಣಬಡಿಸುತ್ತಿದ್ದಾರೆ. ಈಜಲು ಬರುವ ಜನರಿಗೆ ಕಣ್ಣು ಮತ್ತು ಮನಸ್ಸನ್ನು ತಂಪಾಗಿಸಲು ಆಕರ್ಷಕ ಹಾಗೂ ಔಷಧಿಯ ತೋಟಗಾರಿಕೆ ಗಿಡಗಳು ಮತ್ತು ಪಕ್ಷಿಗಳ ಜೊತೆಗೆ ಹಸಿವಾದಾಗ ಊಟ ಸಹ ದೊರೆಯುತ್ತದೆ.

ಶ್ರೀಯುತರು ಎರೆಹುಳು ಗೊಬ್ಬರ ಘಟಕ, ಬಯೋಡೈಜಸ್ಟರ್, ಗೋಬರ್ ಗ್ಯಾಸ್, ಬೆಳೆಗಳ ತ್ಯಾಜ್ಯಗಳಿಂದ ಹೊಲಗಳಿಗೆ ಹೊದಿಕೆ ಮಾಡುವುದು, ತರಕಾರಿಯ ಕೈತೋಟ ಸಹ ಇದ್ದು ನರ್ಸರಿಯಲ್ಲಿ ತರಕಾರಿ ಗಿಡಗಳನ್ನು ಬೆಳೆಯುತ್ತಿದ್ದು ಮಾರಾಟ ಮಾಡುತ್ತಿದ್ದಾರೆ. ಕೊಳವೆಬಾವಿಯ ರೀಚಾರ್ಜ್‌ಗಾಗಿ ಹಿಂಗು ಗುಂಡಿಯನ್ನು ಮಾಡಿದ್ದಾರೆ. ಇಂತೆಲ್ಲಾ ಚಟುವಟಿಕೆಗಳನ್ನು ಮಾಡುತ್ತಿರುವ ದೇವರಾಜ್ ರವರು ಸುಮಾರು 5 ಜನರಿಗೆ ವರ್ಷಪೂರ್ತಿ ಕೂಲಿ ಕೆಲಸ ನೀಡುತ್ತಿದ್ದಾರೆ. ಇಂತಹ ಒಂದು ಜಮೀನಿನಲ್ಲಿ ತಮ್ಮ ಮನೆ ದೇವರಾದ ಈಶ್ವರನ ಪ್ರತಿಮೆಯನ್ನು ಕೂರಿಸಿ ಭಕ್ತಿಯ ಪರಕಾಷ್ಠೆಯನ್ನು ಮೆರೆದಿದ್ದಾರೆ. ಈ ಎಲ್ಲಾ ಚಟುವಟಿಕೆಗಳನ್ನು ಸಕ್ರಿಯವಾಗಿ ಮಾಡುತ್ತಿರುವ ದೇವರಾಜ್‌ರವರು ಒಂದು ವರ್ಷಕ್ಕೆ ಖರ್ಚು ಕಳೆದು ಸುಮಾರು 6 ರಿಂದ 8 ಲಕ್ಷ ವರೆಗೆ ಲಾಭ ಗಳಿಸುತ್ತಿದ್ದಾರೆ. ದೇವರಾಜ್ ರವರ ತೋಟದಲ್ಲಿ ಅನೇಕ ಸಂಘ ಸಂಸ್ಥೆಗಳು ಕೃಷಿ ಮತ್ತು ಕೃಷಿಯೇತ್ತರ ಚಟುವಟಿಕೆಗಳ ಕುರಿತು ತರಬೇತಿಯನ್ನು ಸಹ ಆಯೋಜಿಸುತ್ತಿದ್ದು ಪ್ರತ್ಯಕ್ಷ ದರ್ಶನದ ಮೂಲಕ ರೈತ ಭಾಂದವರಿಗೆ ಸಮಗ್ರ ಕೃಷಿ ಪದ್ಧತಿ ಹಾಗೂ ಸಾವಯವ ಕೃಷಿಯ ಕುರಿತು ತಿಳುವಳಿಕೆ ನೀಡಲಾಗುತ್ತಿದೆ. ರಂಗಾಪುರ ಮಠದ ಜಾತ್ರೆಯ ಸಮಯದಲ್ಲಿ ಅನೇಕ ರೈತ ಮತ್ತು ರೈತ ಮಹಿಳೆಯರು ಈ ತೋಟಕ್ಕೆ ಭೇಟಿ ನೀಡಿ ಅಲ್ಲಿನ ತಂತ್ರಜ್ಞಾನಗಳಾದ ಎರೆಹುಳು ಗೊಬ್ಬರ ತಯಾರಿಕೆ, ಕಾಂಪೋಸ್ಟ್ ತಯಾರಿಕೆ, ಬಯೋಡೈಜಸ್ಟರ್, ತರಕಾರಿ ಸಸಿ ಬೆಳೆಯುವ ನರ್ಸರಿ ಜೊತೆಗೆ ಸಾವಯವ ಕೃಷಿಯ ಕುರಿತು ಹೆಚ್ಚಿನ ಮಾಹಿತಿಯನ್ನು ತಿಳಿದುಕೊಂಡು ತಮ್ಮ ಜಮೀನಿನಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗಿದೆ.

ನನ್ನ ಈ ಸಾಧನೆಗೆ ನಮ್ಮ ಮನೆಯ ಸದಸ್ಯರು, ಕೃಷಿ ವಿಜ್ಞಾನ ಕೇಂದ್ರ, ಕೊನೆಹಳ್ಳಿ, ಪ್ರಗತಿಪರ ಹಾಗೂ ಸಾವಯವ ಕೃಷಿಕ ಮಾರಗೊಂಡನಹಳ್ಳಿ ಸದಾಶಿವಯ್ಯನವರ ಸಹಕಾರವೇ ಕಾರಣವಾವೆನ್ನುತ್ತಾರೆ ನಮ್ಮ ಈ ಸಾಧಕ 'ದೇವ'ರಾಜ.

ಅವರೆಯ ಮೊಸಾಯಿಕ್ ನಂಜುರೋಗದ ಲಕ್ಷಣಗಳು ಮತ್ತು ನಂಜಾಣುವಿನ ಹರಡುವಿಕೆಯ ಅಧ್ಯಯನ

ರೇಣುಕ, ಹೆಚ್. ಎಮ್.,[1] ರಾಮಪ್ಪ, ಹೆಚ್. ಕೆ.,[2] ಮತ್ತು ಪಲ್ಲವಿ, ಎಮ್. ಎಸ್ [1]
[1] – ಸಸ್ಯರೋಗ ಶಾಸ್ತ್ರ ವಿಭಾಗ, [2] – ಪ್ರಾಧ್ಯಾಪಕರು, ಸಸ್ಯರೋಗ ಶಾಸ್ತ್ರ, ಎ.ಐ.ಸಿ.ಅರ್.ಪಿ, ತೊಗರಿ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು

ಅವರೆ ಮುಖ್ಯವಾದ ದ್ವಿದಳ ಧಾನ್ಯದ ಬೆಳೆಗಳಲ್ಲೊಂದು. ಅವರೆಯಲ್ಲಿ ನಂಜುರೋಗವನ್ನು ಉಂಟುಮಾಡುವ ಮೊಸಾಯಿಕ್ ನಂಜಾಣು ಪೂಟಿ ನಂಜಾಣು ಗುಂಪಿಗೆ ಸೇರಿದ್ದು, ಶೇ. 40 ರಷ್ಟು ಇಳುವರಿಯನ್ನು ಕಡಿಮೆ ಮಾಡುತ್ತದೆ. ನಂಜು ಸೋಂಕಿತ ಗಿಡದ ಎಲೆಗಳು ವೈನ್ ಕ್ಲಿಯರಿಂಗ್, ವೈನ್ ಬ್ಯಾಂಡಿಂಗ್, ಅಸಮ ಎಲೆ ಪತ್ರಗಳು, ಕಡು ಮತ್ತು ತಿಳಿ ಹಸಿರು ಬಣ್ಣಗಳಿಂದ ಕೂಡಿದ್ದು, ಎಲೆಗಳು ಅಂಕುಡೊಂಕಾಗಿ, ಸುಕ್ಕಾಗಿ, ಉಬ್ಬಿದಂತೆ ಕಾಣುತ್ತವೆ. ಈ ನಂಜಾಣು ಸುಲಭವಾಗಿ ಸಸ್ಯಾಗಾರದಲ್ಲಿ 8 – 10 ದಿನಗಳ ಹೆಚ್. ಎ – 4 ತಳಿಗೆ ಸಸ್ಯ ಜೀವರಸವನ್ನು ಒಳಹೋಗಿಸುವ ಮೂಲಕ ಪರಿವೀಕ್ಷಿಸಿದಾಗ ಶೇಕಡಾ 88 ರಿಂದ 93 ರಷ್ಟು ಹರಡುವಿಕೆ ಕಂಡುಬಂದಿದೆ. ಎರಡು ರೀತಿಯ ಸಸ್ಯಹೇನುಗಳಾದ ಎಫಿಸ್ ಕ್ರಾಕ್ಸಿವೋರ ಕೋಚ್ ಮತ್ತು ಮೈಜಸ್ ಪರ್ಸಿಕೆ ಸಲ್ಜ್ ಈ ನಂಜಾಣುವನ್ನು ಹರಡುತ್ತಿದ್ದು ಕ್ರಮವಾಗಿ ಶೇ. 33 ರಿಂದ 72 ರವರೆಗೆ ಹರಡುವಿಕೆ ಕಂಡು ಬಂದಿದೆ. ಮೈಜಸ್ ಪರ್ಸಿಕೆ ಸಲ್ಜ್ ಸಸ್ಯಹೇನು ಅತಿ ಹೆಚ್ಚು ಪ್ರಮಾಣದ ಹರಡುವಿಕೆಯನ್ನು ಹೊಂದಿದೆ. ಈ ನಂಜಾಣು ಬೀಜಗಳ ಮುಖಾಂತರವು ಸಹ ಹರಡುತ್ತಿದ್ದು ಅದರ ಪ್ರಸರಣ ಶೇಕಡ 10. 33 ರವರಗೆ ಕಂಡು ಬಂದಿರುತ್ತದೆ.

ಪರಿಚಯ: ಅವರೆಯು ದ್ವಿದಳ ಧಾನ್ಯದ ಬೆಳೆಯಾಗಿದ್ದು, ಇದರ ವೈಜ್ಞಾನಿಕ ಹೆಸರು ಲ್ಯಾಬ್‌ಲ್ಯಾಬ್ ಪರ್ಪ್ಯೂರಿಯಸ್ ಎಲ್ ಸ್ವೀಟ್ ಎಂದು ಕರೆಯತ್ತಾರೆ. ಈ ಬೆಳೆಯ ಮೂಲ ಸ್ಥಾನ ಭಾರತವಾಗಿದ್ದು, ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ಮಹರಾಷ್ಟ್ರಗಳ ದಕ್ಷಿಣ ಒಣ ಪ್ರದೇಶ ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ (ಫುಲ್ಲರ್, 2003), ಕರ್ನಾಟಕದಲ್ಲಿ, ಪ್ರಸ್ತುತವಾಗಿ ಈ ಬೆಳೆಯನ್ನು 85 ಸಾವಿರ ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತಿದ್ದು, ಇದರ ಉತ್ಪಾದನೆಯು ಅಂದಾಜು 18000 ಟನ್ ರಷ್ಟಿದೆ. ದಕ್ಷಿಣ ಭಾರತದಲ್ಲಿ ಅವರೆಕಾಯಿಯನ್ನು ಹಸಿರು ತರಕಾರಿಯಾಗಿ, ಒಣ ಬೀಜಗಳು ಶೇ. 20 ರಿಂದ 28 ರಷ್ಟು ಪ್ರೋಟಿನ್ ಹೊಂದಿದ್ದು, ಆಹಾರದಲ್ಲಿ ಉಪಯೋಗಿಸಲು ಬೆಳೆಯತ್ತಾರೆ (ಸ್ಟಾಫ್‌ಹಾಸನ್, 1963). ಈ ಬೆಳೆಯು ಶಿಲೀಂಧ್ರ, ಬ್ಯಾಕ್ಟೀರಿಯಾ ಮತ್ತು ನಂಜಾಣುಗಳಿಂದ ಹಲವಾರು ರೋಗಗಳ ಭಾದೆಗೆ ತುತ್ತಾಗುತ್ತದೆ. ಅವರೆಗೆ ಹಾನಿ ಮಾಡುವ ರೋಗಗಳಲ್ಲಿ ಅವರೆಯ ಮೊಸಾಯಿಕ್ ನಂಜುರೋಗವೂ

ಒಂದಾಗಿದ್ದು ಶೇ. 40 ರಷ್ಟು ಇಳುವರಿಯನ್ನು ಕಡಿಮೆ ಮಾಡುತ್ತದೆ. ಪ್ರಸ್ತುತ ಪ್ರಭಂದದಲ್ಲಿ ಸಂಶೋಧನೆ ನಡೆಸಿದ ರೋಗದ ಲಕ್ಷಣಗಳು ಮತ್ತು ಈ ರೋಗವನ್ನು ಉಂಟುಮಾಡುವ ನಂಜಾಣುವಿನ ಹರಡುವಿಕೆಯ ಬಗ್ಗೆ ವಿವರಿಸಲಾಗಿದೆ.

ವಸ್ತು ಮತ್ತು ವಿಧಾನ: ಕೀಟ ರಹಿತ ಹಸಿರು ಮನೆ, ಸಸ್ಯರೋಗ ಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರಿನಲ್ಲಿ ಈ ಪ್ರಯೋಗವನ್ನು ಮಾಡಲಾಗುತ್ತದೆ.

1. ಸೋಂಕಿನ ನಿರ್ವಹಣೆ ಮತ್ತು ರೋಗದ ಲಕ್ಷಣಗಳು: ಈ ಪ್ರಯೋಗಕ್ಕೆ ಅವರೆಯ ಮೊಸಾಯಿಕ್ ನಂಜುರೋಗದ ಲಕ್ಷಣಗಳನ್ನು ಹೊಂದಿರುವ ಹೆಚ್. ಎ – 4 ತಳಿಯ ಸಸ್ಯಗಳಿಂದ ನಂಜಾಣುಗಳು ಇರುವ ಸಸ್ಯ ಜೀವ ರಸವನ್ನು ತೆಗೆದು 8 – 10 ದಿನಗಳ ಆರೋಗ್ಯಕರ ಅವರೆ ಸಸ್ಯಗಳಿಗೆ ಈ ರಸವನ್ನು ಒಳಹೋಗಿಸುವುದಕ್ಕೆ ಬಳಸಲಾಗಿದೆ. ಈ ರೀತಿ ಸಸ್ಯ ಜೀವ ರಸವನ್ನು ಒಳಹೋಗಿಸಿದ ಸಸ್ಯಗಳನ್ನು ಹಸಿರುಮನೆಯಲ್ಲಿಟ್ಟು ರೋಗದ ಲಕ್ಷಣಗಳು ಕಾಣಿಸಿ ಕೊಳ್ಳುವುದನ್ನು ಆಗಾಗ್ಗೆ ಸಮಯಕ್ಕೆ ಸರಿಯಾಗಿ ನೋಡಿಕೊಳ್ಳಲಾಯಿತು.

ಈ ರೀತಿ ಮೊಸಾಯಿಕ್ ನಂಜುರೋಗದ ಲಕ್ಷಣಗಳನ್ನು ಹೊಂದಿರುವ ಸೋಂಕಿನ ಸಸ್ಯಗಳನ್ನು ಹಸಿರುಮನೆಯಲ್ಲಿಟ್ಟು ಮುಂದಿನ ಪ್ರಯೋಗಕ್ಕೆ ಉಪಯೋಗಿಸಿಕೊಳ್ಳಲು ನಿರ್ವಹಣೆ ಮಾಡಲಾಯಿತು.

2. ಸಸ್ಯಜೀವ ರಸದ ಮೂಲಕ ನಂಜಾಣುವಿನ ಹರಡುವಿಕೆ: ಮೊಸಾಯಿಕ್ ಲಕ್ಷಣಗಳನ್ನು ಹೊಂದಿರುವ ಎಳಸು ಅವರೆ ಎಲೆಗಳನ್ನು ತಂದು, ಪಿಂಗಾಣಿಯಲ್ಲಿ ಪ್ರತೀ ಒಂದು ಮಿ. ಲೀ. ಪೊಟ್ಯಾಷಿಯಮ್ ಫಾಸ್ಫೇಟ್ ಬಫರ್‌ಗೆ (ಪಿ ಹೆಚ್. 7.00, 0.05 ಮೋ.) ಒಂದು ಗ್ರಾಂ ನಂತೆ ಸೇರಿಸಿ ಅರೆಯಬೇಕು. ನಂತರ ತಿರುಳನ್ನು ಹೀರುವ ಹತ್ತಿಯ ಮೂಲಕ ಹಿಂಡಿ ತೆಗೆದು, ಬರುವ ರಸಕ್ಕೆ ಸಿಲೈಟ್ 0.025 ಗ್ರಾಂ/ ಮಿ. ಲೀ, ಮತ್ತು ಮರ್ಕೆಪ್ಟ ಎಥನಾಲ್ 0.02% ನ್ನು ಹಾಕಬೇಕು. ನಂಜಾಣುವನ್ನು ಹೊಂದಿರುವ ಈ ರಸವನ್ನು ನಂಜಾಣು ಹರಡುವಿಕೆಯ ಅಧ್ಯಯನ ಮಾಡಲು ಉಪಯೋಗಿಸಲಾಗುತ್ತದೆ. ಹೀರಿಕೊಳ್ಳುವ ಹತ್ತಿಯ ಮೂಲಕ ನಂಜಾಣುವನ್ನು ಹೊಂದಿರುವ ಸಸ್ಯ ಜೀವ ರಸವನ್ನು ಆರೋಗ್ಯಕರ ಅವರೆ ಎಲೆಗಳ ಮೇಲೆ ಸವರಬೇಕು. 1 – 2 ನಿಮಿಷಗಳ ನಂತರ ಈ ರೀತಿ ಸವರಿದ ಎಲೆಗಳನ್ನು ಶುದ್ಧ ನೀರಿನಿಂದ ತೊಳೆಯಬೇಕು. ಆ ಮೇಲೆ ಈ ಸಸ್ಯಗಳನ್ನು ಹಸಿರು ಮನೆಯಲ್ಲಿ 15 – 20 ದಿನಗಳವರೆಗೆ ಇಟ್ಟು, ರೋಗದ ಲಕ್ಷಣಗಳು ಬರುವುದನ್ನು ಪರಿಶೀಲಿಸಬೇಕು.

3. ಸಸ್ಯಹೇನುಗಳ ಮೂಲಕ ಹರಡುವಿಕೆ

3.1. ಸಸ್ಯಹೇನುಗಳ ನಿರ್ವಹಣೆ: ಸಸ್ಯಹೇನುಗಳ ಮೂಲಕ ನಂಜಾಣು ಹರಡುವಿಕೆ ಅಧ್ಯಯನಕ್ಕೆ ನಂಜಾಣು ರಹಿತ ಸಸ್ಯಹೇನುಗಳನ್ನು ಕೇಜ್ ನಲ್ಲಿಟ್ಟು ಸಾಕಬೇಕು. ಎರಡು ರೀತಿಯ ಹೆಣ್ಣು ಸಸ್ಯಹೇನುಗಳು, ಅಲಸಂದೆ ಸಸಿಗಳ ಮೇಲೆ ಎಫಿಸ್ ಕ್ರಾಕ್ಸಿವೋರ ಕೋಚ್ ಮತ್ತು ಮೂಲಂಗಿ ಸಸಿಗಳ ಮೇಲೆ ಮೈಜಸ್ ಪರ್ಸಿಕೆ ಸಲ್ಜ್ ನ್ನು ಸಾಕಲಾಗುತ್ತದೆ.

3.2. ಹರಡುವಿಕೆ : ರೆಕ್ಕೆಳಿಲ್ಲದ ಪ್ರಬುದ್ಧ ಹೆಣ್ಣು ಸಸ್ಯಹೇನುಗಳನ್ನು ಕಪ್ಪುಬಟ್ಟೆ ಹೊದಿಕೆಯ ಪೆಟ್ರಿಪ್ಲೇಟ್‌ನಲ್ಲಿ ಸಂಗ್ರಹಿಸಿ ನಂತರ 2 ಗಂಟೆಗಳು ಹಸಿವಿನಲ್ಲಿಡಬೇಕು. ಹಸಿದ ಸಸ್ಯ ಹೇನುಗಳನ್ನು ನಂಜು ಸೋಂಕಿತ ಎಲೆಗಳ ಮೇಲೆ 30 ನಿಮಿಷ ಬಿಡಬೇಕು. ನಂತರ ಪ್ರತೀ ಆರೋಗ್ಯಕರ ಅವರೆ ಸಸ್ಯಕ್ಕೆ 10 ಸಸ್ಯ ಹೇನುಗಳಂತೆ ಬಿಡಬೇಕು. ನಂತರ ಮೊನೊಕ್ರೊಟೊಫಾಸ್ 0.2 % ನ್ನು ಸಿಂಪಡಿಸುವ ಮೂಲಕ ಈ ಸಸ್ಯಹೇನುಗಳನ್ನು ಸಾಯಿಸಬೇಕು. ನಂಜಾಣುವನ್ನು ಒಳಹೋಗಿಸಿದ ನಂತರ ಸಸ್ಯಗಳನ್ನು ಕೀಟ ರಹಿತ ಹಸಿರು ಮನೆಯಲ್ಲಿಟ್ಟು ರೋಗದ ಲಕ್ಷಣಗಳು ಬರುವುದನ್ನು ವೀಕ್ಷಿಸಬೇಕು.

4. ಬೀಜಗಳ ಮೂಲಕ ಹರಡುವಿಕೆ: ನಂಜು ಸೋಂಕಿತ ಅವರೆ ಸಸ್ಯಗಳಿಂದ ಬೀಜಗಳನ್ನು ಸಂಗ್ರಹಿಸಿ ಪ್ರತೀ ಪಾಲಿಥೀನ್ ಬ್ಯಾಗ್‌ಗೆ 2 – 3 ಬೀಜಗಳನ್ನು ಬಿತ್ತಬೇಕು. ಇದೇ ರೀತಿ 10 ಪ್ರತಿಗಳನ್ನು ಮಾಡಿ, ಕೀಟ ರಹಿತ ಹಸಿರು ಮನೆಯಲ್ಲಿಡಬೇಕು. ನಾಲ್ಕು ವಾರಗಳ ನಂತರ ಈ ಸಸ್ಯಗಳಲ್ಲಿ ರೋಗದ ಗುಣಲಕ್ಷಣಗಳನ್ನು ಪರಿವೆಯಿನ್‌ಕ್ಷಿಸಿ ಶೇಕಡಾವಾರು ಬೀಜದ ಮೊಳಕೆ ಮತ್ತು ಬೀಜಗಳ ಮೂಲಕ ಹರಡಿರುವ ನಂಜು ಸೋಂಕಿತ ಗಿಡಗಳ ಬಗ್ಗೆ ಪರಿವೀಕ್ಷಿಸಬೇಕು.

ಫಲಿತಾಂಶಗಳು : ಈ ರೋಗದ ಗುಣಲಕ್ಷಣಗಳನ್ನು ಅಧ್ಯಯನ ಮಾಡುವುದಕ್ಕೆ 8 – 10 ದಿನಗಳ ಆರೋಗ್ಯಕರ ಸಸಿಗಳಿಗೆ ನಂಜಾಣುವನ್ನು ಹೊಂದಿರುವ ಸಸ್ಯ ಜೀವ ರಸವನ್ನು ಒಳಹೋಗಿಸಿ ನಂತರ ರೋಗದ ಬೆಳವಣಿಗೆಯನ್ನು ನೋಡಲಾಯಿತು. ಈ ರೋಗದ ಲಕ್ಷಣಗಳನ್ನು ಚಿತ್ರ.1 ರಲ್ಲಿ ಇಡಲಾಗಿದೆ. ನಂಜು ಸೋಂಕಿತ ಗಿಡದ ಎಲೆಗಳು ರೋಗದ ಲಕ್ಷಣಗಳಾದ ವೆಯಿನ್ ಕ್ಲಿಯರಿಂಗ್, ವೆಯಿನ್ ಬ್ಯಾಂಡಿಂಗ್, ಕಡು ಮತ್ತು ತಿಳಿ ಹಸಿರು ಬಣ್ಣಗಳಿಂದ ಕೂಡಿದ್ದು, ಅಸಮ ಎಲೆ ಪತ್ರಗಳು, ಎಲೆಗಳು ಅಂಕುಡೊಂಕಾಗಿ, ಸುಕ್ಕಾಗಿ, ಕೆಲವು ಎಲೆಗಳು ಮುದುರಿಕೊಂಡು, ಉಬ್ಬಿದಂತೆ ಕಾಣುವುದನ್ನು ನೋಡಬಹುದು. ಬಸವರಾಜ ಮತ್ತು ಕೇಶವಮೂರ್ತಿ, 1992 ರಲ್ಲಿ, ಉದಯಶಂಕರ ಮತ್ತು ಸಹಚರರು, 2011 ರಲ್ಲಿ, ಇದೇ ರೀತಿಯ ಅವರೆಯ ಮೊಸಾಯಿಕ್ ನಂಜುರೋಗದ ಲಕ್ಷಣಗಳನ್ನು ವಿವರಿಸಿದ್ದಾರೆ.

ಸಸ್ಯ ಜೀವರಸದ ಮೂಲಕ ಹರಡುವ ಅವರೆಯ ಮೊಸಾಯಿಕ್ ನಂಜುರೋಗದ ನಂಜಾಣುವಿನ ಫಲಿತಾಂಶ ವನ್ನು ಕೋಷ್ಟಕ 1 ರಲ್ಲಿ ಇಡಲಾಗಿದೆ. ಈ ನಂಜಾಣು ಸುಲಭವಾಗಿ ಸಸ್ಯಾಗಾರದಲ್ಲಿ ಹೆಚ್. ಎ – 4 ತಳಿಗೆ ಸಸ್ಯ ಜೀವರಸವನ್ನು ಒಳಹೋಗಿಸುವ ಮೂಲಕ ಪರಿವೀಕ್ಷಿಸಿದಾಗ ಶೇಕಡಾ 88 ರಿಂದ 93 ರಷ್ಟು ಹರಡುವಿಕೆ ಕಂಡುಬಂದಿದೆ. ಈ ವಿಧಾನದಲ್ಲಿ ನಂಜಾಣು ಹೆಚ್ಚು ಸ್ಥಿರವಾಗಿರುವುದರಿಂದ ನಂಜಾಣುವಿನ ಹರಡುವಿಕೆಯ ಪ್ರಮಾಣ ಹೆಚ್ಚಾಗಿರುತ್ತದೆ. ಬಸವರಾಜ ಮತ್ತು ಕೇಶವಮೂರ್ತಿ (1992) ವರದಿ ಮಾಡಿರುವ ಪ್ರಕಾರವೂ ಈ ನಂಜಾಣು ಸಸ್ಯ ಜೀವರಸದ ಮೂಲಕ ಹರಡುತ್ತದೆ.

ಎರಡು ರೀತಿಯ ಸಸ್ಯಹೇನುಗಳಾದ ಎಫಿಸ್ ಕ್ರಾಕ್ಸಿವೋರ ಕೋಚ್ ಮತ್ತು ಮೈಜಸ್ ಪರ್ಸಿಕೆ ಸಲ್ಜ್ ಈ ನಂಜಾಣುವನ್ನು ಹರಡುತ್ತಿದ್ದು ಕ್ರಮವಾಗಿ ಶೇ. 33 ರಿಂದ 72 ರವರೆಗೆ ಹರಡುವಿಕೆ ಕಂಡು ಬಂದಿದೆ. ಮೈಜಸ್ ಪರ್ಸಿಕೆ ಸಲ್ಜ್ ಸಸ್ಯಹೇನು ಅತಿ ಹೆಚ್ಚು ಪ್ರಮಾಣದ ಹರಡುವಿಕೆಯನ್ನು ಹೊಂದಿದೆ. ಈ ರೀತಿ ಸಸ್ಯಹೇನುಗಳ ಮೂಲಕ ಹರಡುವ ಅವರೆಯ ಮೊಸಾಯಿಕ್ ನಂಜುರೋಗದ ನಂಜಾಣುವಿನ ಫಲಿತಾಂಶ ವನ್ನು ಕೋಷ್ಟಕ. 2 ರಲ್ಲಿ ಇಡಲಾಗಿದೆ. ಇದೇ ತರಹದ ಅವರೆಯ ಮೊಸಾಯಿಕ್ ನಂಜುರೋಗ ಉಂಟು ಮಾಡುವ ನಂಜಾಣು ಹರಡುವಿಕೆಯನ್ನು ಬಸವರಾಜ ಮತ್ತು ಕೇಶವಮೂರ್ತಿ (1992)

ರಲ್ಲಿ ದಾಖಲಿಸಿದ್ದಾರೆ.

ಈ ನಂಜಾಣು ಬೀಜಗಳ ಮುಖಾಂತರವು ಸಹ ಹರಡುತ್ತಿದ್ದು ಅದರ ಶೇಕಡಾ ಪ್ರಸರಣ 10.30 ರಷ್ಟು ಕಂಡು ಬಂದಿರುತ್ತದೆ. ಬೀಜಗಳ ಮುಖಾಂತರ ಹರಡುವ ಈ ನಂಜಾಣು, ರೋಗದ ಲಕ್ಷಣಗಳಾದ ವೆಯಿನ್ ಕ್ಲಿಯರಿಂಗ್, ವೆಯಿನ್ ಬ್ಯಾಂಡಿಂಗ್, ನಂಜು ಸೋಂಕಿತ ಗಿಡದ ಎಲೆಗಳು ಕಡು ಮತ್ತು ತಿಳಿ ಹಸಿರು ಬಣ್ಣಗಳಿಂದ ಕೂಡಿದ್ದು, ಅಸಮ ಎಲೆ ಪತ್ರಗಳನ್ನು ಹೊಂದಿರುತ್ತವೆ. ಇದರ ಫಲಿತಾಂಶವನ್ನು ಕೋಷ್ಟಕ. 3 ರಲ್ಲಿ ಇಡಲಾಗಿದೆ. ಉದಯಶಂಕರ ಮತ್ತು ಸಹಚರರು, 2011 ರಲ್ಲಿ ದಾಖಲಿಸಿರುವ ಪ್ರಕಾರ ಶೇ. 6.5 ರಷ್ಟು ಈ ನಂಜಾಣು ಬೀಜಗಳ ಮುಖಾಂತರ ಹರಡುತ್ತದೆ.

ಉಲ್ಲೇಖಗಳು : ಉದಯಶಂಕರ್. ಎ.ಸಿ, ಚಂದ್ರನಾಯಕ ಎಸ್, ನಿರಂಜನ ಎಸ್. ಅರ್, ಲಂಡ್ ಒ. ಎಸ್. ಅಂಡ್ ಪ್ರಕಾಶ್ ಹೆಚ್. ಎಸ್., 2011, ಫಸ್ಟ್ ರಿಪೋರ್ಟ್ ಅಫ್ ಬೀನ್ ಕಾಮನ್ ಮೊಸಾಯಿಕ್ ವೈರಸ್ ಇನ್ ಫೆಕ್ಟಿಂಗ್ ಲ್ಯಾಬ್‌ಲ್ಯಾಬ್ ಪರ್ಪ್ಯೂರಿಯಸ್ ಇನ್ ಇಂಡಿಯಾ. ಪ್ಲಾಂಟ್ ಡಿಸೀಸ್, **95** (7): 881.

ಫುಲ್ಲರ್ ಡಿ. ಕ್ಯೂ., 2003, ಆಫ್ರಿಕಾನ್ ಕ್ರಾಪ್ಸ್ ಇನ್ ಪ್ರಿ ಹಿಸ್ಟೋರಿಕ್ ಸೌತ್ ಏಷ್ಯಾ. ಎ ಕ್ರಿಟಿಕಲ್ ರಿವೆಯಿನ್‌ವ್. ಇನ್ ನ್ಯೂಮನ್, ಎ. ಬಟ್ಲರ್ ಅಂಡ್ ಕಾಲ್ ಹೆಬರ್ (ಎಡಿಎಸ್). ಫುಡ್ ಫ್ಯೂಯಲ್ ಅಂಡ್ ಫುಡ್ಸ್ : ಪ್ರೊಗ್ರೆಸ್ ಇನ್ ಆಫ್ರಿಕಾನ್ ಆರ್ಕಿಯೋಬೊಟನಿ, ಹೆನ್ರಿಕ್–ಭರ್ತ್ ಇನ್ಸ್ಟಿಟ್ಯೂಟ್, ಕೋನ್. ಜರ್ಮನಿ. ಪ್ರೆಹಿಸ್ಟೋರಿಕ **15**: 239–271.

ಬಸವರಾಜ, ಎಮ್. ಕೆ ಅಂಡ್ ಕೇಶವ ಮೂರ್ತಿ, 1992, ಸ್ಪಡೀಸ್ ಆನ್ ಐಡೆಂಟಿಫಿಕೇಷನ್ ಅಫ್ ಎ ವೈರಸ್ ಕಾಜಿಂಗ್ ಮೋಸಾಯಿಕ್ ಇನ್ ಫೀಲ್ಡ್ ಬೀನ್. ಎಮ್. ಎಸ್ಸಿ (ಅಗ್ರಿ) ತೀಸಿಸ್, ಯೂನಿವ್. ಅಗ್ರಿ. ಸೈ. ಬೆಂಗಳೂರು. 198 ಪಿಪಿ.

ಸ್ಟಾಫ್‌ಹಾಸನ್, ಅರ್. ವಿ., 1963, ದೊಲಿಖಾಸ್ ಲ್ಯಾಬ್‌ಲ್ಯಾಬ್ ಅರ್ ಹಯಸಿಂತ್ ಬೀನ್, ಇಟ್ಸ್ ಯೂಸ್ ಫಾರ್ ಫೀಡ್, ಫುಡ್ ಅಂಡ್ ಸೊಯಲ್ ಇಮ್ಯೂಮೆಂಟ್ಸ್. ಎಕಾನ್. ಬಾಟ್., **17**: 146 – 153.

ಕೋಷ್ಟಕ 1: ಸಸ್ಯಜೀವರಸದ ಮೂಲಕ ಅವರೆಯ ಮೊಸಾಯಿಕ್ ನಂಜುರೋಗದ ನಂಜಾಣುವಿನ ಹರಡುವಿಕೆ

ಪ್ರಯೋಗಗಳ ಸಂಖ್ಯೆ	ನಂಜಾಣುವನ್ನು ರಸದ ಮೂಲಕ ಒಳಹೋಗಿಸಿದ ಸಸ್ಯಗಳ ಸಂಖ್ಯೆ	ಭಾದೆಗೊಳಗಾದ ಸಸ್ಯಗಳ ಸಂಖ್ಯೆ	ಹರಡುವಿಕೆ (ಶೇ.)
1	20	19	95.00
2	15	14	93.00
3	18	16	88.00
4	15	15	100
5	15	14	93.00
ಸರಾಸರಿ	16.6	15	93.80

ಕೋಷ್ಟಕ 2: ಸಸ್ಯ ಹೇನುಗಳಾದ ಎಫಿಸ್ ಕ್ರಾಸ್ಸಿವೋರ ಕೋಚ್ ಮತ್ತು ಮೈಜಸ್ ಪರ್ಸಿಕೆ ಸಲ್ಜ್ ಮೂಲಕ ಅವರೆಯ ಮೊಸಾಯಿಕ್ ನಂಜುರೋಗದ ನಂಜಾಣುವಿನ ಹರಡುವಿಕೆ

ಪ್ರಯೋಗಗಳ ಸಂಖ್ಯೆ	ಮೈಜಸ್ ಪರ್ಸಿಕೆ			ಎಫಿಸ್ ಕ್ರಾಸ್ಸಿವೋರ		
	ನಂಜಾಣು ಒಳಹೋದ ಸಸ್ಯಗಳ ಸಂಖ್ಯೆ	ಭಾದೆಗೊಳಗಾದ ಸಸ್ಯಗಳ ಸಂಖ್ಯೆ	ಹರಡುವಿಕೆ (ಶೇ.)	ನಂಜಾಣು ಒಳಹೋದ ಸಸ್ಯಗಳ ಸಂಖ್ಯೆ	ಭಾದೆಗೊಳಗಾದ ಸಸ್ಯಗಳ ಸಂಖ್ಯೆ	ಹರಡುವಿಕೆ (ಶೇ.)
1	10	7	70.00	14	4	28.57
2	15	11	73.00	12	4	33.33
3	9	6	66.66	10	3	30.00
4	10	8	80.00	13	5	38.46
5	12	9	75.00	11	4	36.36
ಸರಾಸರಿ	11	8	72.00	12	4	33.34

ಅವರೆ ತಳಿ ಹೆಚ್. ಎ–4
ಪ್ರತೀ ಸಸ್ಯಕ್ಕೆ ಹೇನುಗಳ ಸಂಖ್ಯೆ – 10
ಪ್ರಿ–ಅಕ್ವಿಸಿಷನ್ ಸ್ಪಾರ್ವೆಷನ್ –2 ಗಂಟೆ
ಅಕ್ವಿಸಿಷನ್ ಅಕ್ಸೆಸ್ ಪಿರಿಯಡ್ – 30 ನಿಮಿಷ
ಇನ್ಯಾಕುಲೇಷನ್ ಅಕ್ಸೆಸ್ ಪಿರಿಯಡ್– 12 ಗಂಟೆ

ಕೋಷ್ಟಕ 3: ಬೀಜಗಳ ಮೂಲಕ ಹರಡುವ ಅವರೆಯ ಮೊಸಾಯಿಕ್ ನಂಜುರೋಗ

ಪ್ರಯೋಗಗಳ ಸಂಖ್ಯೆ	ಬಿತ್ತಿದ ಬೀಜಗಳ ಸಂಖ್ಯೆ	ಅಂಕುರಿಸಿದ ಬೀಜಗಳ ಸಂಖ್ಯೆ	ಭಾದೆಗೊಳಗಾದ ಸಸ್ಯಗಳ ಸಂಖ್ಯೆ	ಶೇಕಡಾ ಹರಡುವಿಕೆ
1	75	60	7	11.66
2	80	58	7	12.06
3	60	51	3	5.80
4	55	43	5	11.62
5	90	77	8	10.38
ಸರಾಸರಿ	72	57.8	6	10.30



ಚಿತ್ರ .1: ಅವರೆಯ ಮೊಸಾಯಿಕ್ ನಂಜುರೋಗದ ವಿವಿಧ ಲಕ್ಷಣಗಳು

ಮಿಡಿ ಸೌತೆಕಾಯಿ(ಗರ್ಕಿನ್) ಹಾನಿ ಮಾಡುವ ಸೌತೆಕಾಯಿ ಮೊಸಾಯಿಕ್ ನಂಜಾಣು ರೋಗದ ತೀವ್ರತೆಯೆ ಸಮೀಕ್ಷೆ, ಸೋಂಕಿನ ದೃಡತೆ, ವಂಶವಾಹಿಗಳ ಪ್ರತಿಕ್ರಿಯೆ ಮತ್ತು ರೋಗದ ಸಾವಯವ ನಿರ್ವಹಣೆ

ಕಾವ್ಯಶ್ರೀ, ವಿ.ವಿ.,[ಅ] ಪುಷ್ಪ, ಆರ್. ಎನ್.,[ಅ] ನಾಗರಾಜು, ಎನ್. [ಅ] ಮತ್ತು ರಾಧಾ, ಎಮ್.ಆರ್..[ಆ]
[ಅ] ಸಸ್ಯರೋಗಶಾಸ್ತ್ರ ವಿಭಾಗ, [ಆ] ಅನುವಂಶಿಯತೆ ಮತ್ತು ತಳಿ ಅಭಿವೃದ್ಧಿ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು–65

ಮಿಡಿಸೌತೇಕಾಯಿಯಲ್ಲಿ, ಸೌತೇಕಾಯಿ ಮೊಸಾಯಿಕ್ ನಂಜಾಣು ರೋಗವು ಅತ್ಯಂತ ವಿನಾಶಕಾರಿ ರೋಗ. 2013–14 ಅವಧಿಯ ಸಮೀಕ್ಷೆಯ ಪ್ರಕಾರ, ಮಿಡಿಸೌತೆಕಾಯಿ ಬೆಳೆಯುವ ಜಿಲ್ಲೆಗಳಲ್ಲಿ, ರೋಗದ ತೀವ್ರತೆಯು ಶೇ. 16–59.65 ರವರೆಗೆ ಕಂಡುಬಂದಿದೆ. ಅತಿ ಹೆಚ್ಚು ರೋಗದ ತೀವ್ರತೆ ಕೋಲಾರ ಜಿಲ್ಲೆಯಲ್ಲಿ (51.27%), ತುಮಕೂರು ಜಿಲ್ಲೆಯಲ್ಲಿ (35.62%), ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ (31.45%), ಬೆಂಗಳೂರು ನಗರ ಜಿಲ್ಲೆಯಲ್ಲಿ (23.34%) ಮತ್ತು ಅತಿ ಕಡಿಮೆ ರೋಗದ ತೀವ್ರತೆ ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ (17.15%) ದಾಖಲಾಗಿದೆ. ನಂಜು ಸೋಂಕಿತ ಗಿಡದ ಎಲೆಗಳು, ಕಡು ಮತ್ತು ತಿಳಿ ಹಸಿರು ತೇಪೆಗಳಿಂದ ಅಥವಾ ಕಡು ಹಸಿರು ಮತ್ತು ಹಳದಿ ತೇಪೆಗಳಿಂದ ಕೂಡಿ ಎಲೆಗಳು ಮುದುಡುತ್ತವೆ. ಡಾಸ್ ಎಲಿಸ ತಂತ್ರಜ್ಞಾನದಲ್ಲಿ ಈ ನಂಜಾಣು ಕುಕುಮೊ ನಂಜಾಣಿನ ಪ್ರತಿರಕ್ತಸಾರಕ್ಕೆ ಪ್ರಭಲವಾಗಿ ವರ್ತಿಸಿದೆ.

ರೋಗದ ನಿರ್ವಹಣೆಗೆ ಆರ್ಫಿಕನ್‌ಟಾಲ್ ಮೆಕ್ಕೆ ಜೋಳವನ್ನು ತಡೆಬೆಳೆಯಾಗಿ ಬೆಳೆದು + ಪ್ರತಿಫಲಿತ ಪ್ಲಾಸ್ಟಿಕ್ ಬೆಳ್ಳಿ ಹಾಳೆ ಹಾಸಿ + ಶೇ. 0.5 ಲಾಸ್ಸ್ರಾ + ಶೇ. 0.5 ನೀಮಾರ್ಕ್+ ಶೇ. 1 ಕಡಲೆಕಾಯಿ ಎಣ್ಣೆಯನ್ನು 15 ದಿನಗಳ ಅಂತರದಲ್ಲಿ ಸಿಂಪರಣೆ ಮಾಡಿದಾಗ, ಕಡಿಮೆ ರೋಗದ ತೀವ್ರತೆ ಕೇವಲ ಶೇ.8.05 ರಷ್ಟುಕಂಡುಬಂದಿದೆ. ಶೋಧಿಸಿದ 28 ವಂಶವಾಹಿಗಳಲ್ಲಿ, 11 ವಂಶವಾಹಿಗಳು ರೋಗನಿರೋಧಕ ಕ್ರಿಯೆಯನ್ನು, 7 ವಂಶವಾಹಿಗಳು ಅಲ್ಪ ರೋಗನಿರೋಧಕ ಕ್ರಿಯೆಯನ್ನು, 9 ವಂಶವಾಹಿಗಳು ಅಲ್ಪ ಅನಿರೋಧಕ (ಸಸ್ಸೆಪ್ಟಬಲ್) ಕ್ರಿಯೆಯನ್ನು ಹಾಗೂ ಒಂದು ವಂಶವಾಹಿಯು ಅನಿರೋಧಕ (ಸಸ್ಸೆಪ್ಟಬಲ್) ಕ್ರಿಯೆಯನ್ನು ತೋರಿಸಿದೆ.

ಪರಿಚಯ: ಕರ್ನಾಟಕ ರಾಜ್ಯದಲ್ಲಿ ಗರ್ಕಿನ್ (ಮಿಡಿ ಸೌತೆ) ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಒಪ್ಪಂದ ಕೃಷಿ ಮೇರೆಗೆ ಬೆಳೆಯುವ ಒಂದು ಪ್ರಮುಖ ವಾಣಿಜ್ಯ ಬೆಳೆಯಾಗಿದೆ, ಇದನ್ನು ಅಂದಾಜು 40 ಸಾವಿರ ಎಕರೆ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಪ್ರಸ್ತುತ ಈ ಬೆಳೆಯ ಸರಾಸರಿ ಇಳುವರಿ ಪ್ರತಿ ಎಕರೆಗೆ ಮುಂಗಾರಿನಲ್ಲಿ 4 ರಿಂದ 5 ಟನ್ ಹಾಗೂ ಹಿಂಗಾರು ಮತ್ತು ಬೇಸಿಗೆಯಲ್ಲಿ 3 ರಿಂದ 4 ಟನ್ ರಷ್ಟಿದೆ. ಪ್ರಪಂಚದ ಪ್ರಮು ಖ ಗರ್ಕಿನ್ ಬೆಳೆಯುವ ಅಮೇರಿಕಾ, ಸ್ಪೇನ್, ಮೊರೊಕ್ಕೊ, ಬಲ್ಗೇರಿಯಾ, ಟರ್ಕಿ, ಹಂಗೇರಿ, ಬ್ರೆಜಿಲ್, ವಿಯೆಟ್ನಾಂ, ರೊಮೇನಿಯಾ ದೇಶಗಳಲ್ಲಿ ಸರಾಸರಿ ಇಳುವರಿಯು 10 ರಿಂದ 12 ಟನ್‌ಗಳು ಇದ್ದು ಜರ್ಮನಿಯಲ್ಲಿ ಅತಿಹೆಚ್ಚು ಅಂದರೆ 30 ರಿಂದ 40 ಟನ್‌ಗಳಷ್ಟು ಇದೆ. ಗರ್ಕಿನ್ ಅಥವಾ ಮಿಡಿಸೌತೆಯು ಕುಂಬಳ (ಕುಕುರ್ಬಿಟೇಸಿಯೆ) ಕುಟುಂಬಕ್ಕೆ ಸೇರಿದ ಕುಕುಮಿಸ್ ಸಟೈವಸ್ ಎಲ್ ಸ್ವೀಟ್ ಪ್ರಬೇಧದ ಒಂದು ಬಳ್ಳಿ ಜಾತಿಯ ಬೆಳೆ. ವಿದೇಶಗಳಲ್ಲಿ ಗರ್ಕಿನ್ ಕಾಯಿಗಳನ್ನು ಸಣ್ಣ ಸೌತೆ ಅಥವಾ ಉಪ್ಪಿನಕಾಯಿ ಸೌತೆ ಎಂದೂ ಸಹ ಕರೆಯುತ್ತಾರೆ. ಉಪ್ಪು ದ್ರಾವಣ ಅಥವಾ ವಿನಿಗರ್ ರಸದಲ್ಲಿ ಸಂಸ್ಕರಿಸಿದ ಕಾಯಿಗಳಿಗೆ ಅಮೇರಿಕಾ, ಯೂರೋಪ್ ಹಾಗೂ ಇತರೆ ದೇಶಗಳಲ್ಲಿ ಬಹಳ ಬೇಡಿಕೆ ಇದೆ.

ಹೊರ ದೇಶಗಳಿಗೆ ಹೋಲಿಸಿದಾಗ ಭಾರತದಲ್ಲಿ ಗರ್ಕಿನ್ ಕಾಯಿಗಳ ಇಳುವರಿ ಅತಿ ಕಡಿಮೆ. ಇದಕ್ಕೆ ಮುಖ್ಯವಾಗಿ ನೀರು, ಗೊಬ್ಬರದ ನಿರ್ವಹಣೆ, ಗಿಡಗಳ ಕಡಿಮೆ ಸಾಂದ್ರತೆ, ಅಲ್ಪಾವದಿ ಕೊಯ್ಲು ಹಾಗೂ ಗರ್ಕಿನ್ ಬೆಳೆಯನ್ನು ಭಾದಿಸುವ ರೋಗ ಮತ್ತು ಕೀಟಗಳು ಪ್ರಮೂಖವಾದವುಗಳೆಂದು ಗುರುತಿಸಬಹುದು. ಗರ್ಕಿನ್ ಬೆಳೆಯೂ ಸಹ ಇತರ ಕುಂಬಳ ಜಾತಿಗೆ ಸೇರಿದ ಬೆಳೆಗಳ ಹಾಗೆ ಹಲವಾರು ರೋಗಗಳಿಗೆ ತುತ್ತಾಗುತ್ತದೆ. ಇತ್ತೀಚೆಗೆ ಗರ್ಕಿನ್ ಬೆಳೆಗೆ ನಂಜು (ವೈರಸ್) ರೋಗಗಳು ಬಹಳ ವ್ಯಾಪಕವಾಗಿ ಹರಡಿ, ಗರ್ಕಿನ್ ಕಾಯಿ ಇಳುವರಿಯ ಮೇಲೆ ನೇರವಾಗಿ ದುಷ್ಪರಿಣಾಮ ಬೀರಿವೆ (ಮಲ್ಲಿಕ್ ಮತ್ತು ಸಹಚರರು, 2013). ಗರ್ಕಿನ್ ಹಾನಿಮಾಡುವ ರೋಗಗಳಲ್ಲಿ ಸೌತೆಕಾಯಿ ಮೊಸಾಯಿಕ್ ನಂಜಾಣು ರೋಗವು ಅತ್ಯಂತ ವಿನಾಶಕಾರಿ ರೋಗ. ಈ ರೋಗವು ಪಮುಖವಾಗಿ ಸಸ್ಯ ಹೇನು ಕುಟುಂಬಕ್ಕೆ ಸೇರಿದ ಎಫಿಸ್ ಗಾಸ್ಸಿಪಿ ಮತ್ತು ಮೈಜಸ್ ಪರ್ಸಿಕೆ ಯಿಂದ ಸಸ್ಯಗಳಿಗೆ ಹರಡುತ್ತದೆ (ಚಂದನ್‌ಕರ್ ಮತ್ತು ಸಹಚರರು, 2013). ಈ ರೋಗಕ್ಕೆ ತುತ್ತಾದ ಗರ್ಕಿನ್ ಗಿಡದ ಎಲೆಗಳು ಸಾಮಾನ್ಯವಾಗಿ ಕಡು ಮತ್ತು ತಿಳಿ ಹಸಿರು ತೇಪೆಗಳಿಂದ ಅಥವಾ ಕಡು ಹಸಿರು ಮತ್ತು ಹಳದಿ ತೇಪೆಗಳಿಂದ ಕೂಡಿದ ಎಲೆಗಳು ಮುದುಡುತ್ತವೆ (ಪಿನಕಿ ಆಚಾರ್ಯ, 1999).

ಈ ರೋಗವನ್ನು ನಿಯಂತ್ರಿಸಲು ಕೇವಲ ಸಾಧಾರಣ ಬೇಸಾಯ ಕ್ರಮಗಳಿಂದ ಸಾಧ್ಯವಿಲ್ಲ ಆದುದರಿಂದ, ಸಮಗ್ರ ಕೃಷಿ ಬೇಸಾಯ ಕ್ರಮಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ನಿಯಂತ್ರಿಸಬಹುದಾಗಿದೆ. ಪ್ರಸ್ತುತ ಪ್ರಭಂದದಲ್ಲಿ ಸಂಶೋಧನೆ ನಡೆಸಿದ ರೋಗದ ಸಮೀಕ್ಷೆ ಹಾಗೂ ನಿರ್ವಹಣಾ ಕ್ರಮಗಳ ಬಗ್ಗೆ ವಿವರಿಸಲಾಗಿದೆ.

ವಸ್ತು ಮತ್ತು ವಿಧಾನ

ಅ) ರೋಗ ಸಮೀಕ್ಷೆ ಮಾಡಿದ ವಿಧಾನ : ರೋಗ ಸಮೀಕ್ಷೆಯನ್ನು 2013ನೇ ಹಿಂಗಾರು ಅವಧಿಯಲ್ಲಿ, ಗರ್ಕಿನ್ ಬೆಳೆಯುವ ಪ್ರದೇಶಗಳಾದ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಸಮೀಕ್ಷೆಯನ್ನು ನಡೆಸಲಾಯಿತು. ಪ್ರತಿ ಜಿಲ್ಲೆಯಲ್ಲಿ ಮೂರು ಗರ್ಕಿನ್ ಬೆಳೆಯುವ ಹಳ್ಳಿಗಳನ್ನು ಆಯ್ಕೆಮಾಡಿ ಸಮೀಕ್ಷೆಯನ್ನು ನಡೆಸಲಾಯಿತು. ಈ ಸಮೀಕ್ಷೆಯಲ್ಲಿ ಸೌತೆಕಾಯಿ ಮೊಸಾಯಿಕ್‌ನಂಜು ಗರ್ಕಿನ್ ಮೇಲೆ ಭರಿಸುವ ಲಕ್ಷಣಗಳು, ಶೇಕಡಾವಾರು ರೋಗದ ತೀವ್ರತೆ ಯನ್ನು ಸಮೀಕ್ಷಿಸ ಲಾಯಿತು. ಅಂದರೆ ಸೋಂಕಿತ ಗಿಡದ ಎಲೆಗಳು, ಕಡು ಮತ್ತು ತಿಳಿ ಹಸಿರು ತೇಪೆಗಳಿಂದ ಅಥವಾ ಕಡು ಹಸಿರು ಮತ್ತು ಹಳದಿ ತೇಪೆಗಳಿಂದ ಕೂಡಿದ ಎಲೆಗಳು ಮುದುಡುತ್ತವೆ. ಶೇಕಡಾವಾರು ರೋಗದ ತೀವ್ರತೆಯನ್ನು ಈ ಕೆಳಕಂಡ ಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಲಾಯಿತು.

$$\text{ರೋಗದ ತೀವ್ರತೆ (\%)} = \frac{\text{ಒಟ್ಟು ರೋಗ ಭಾದಿತ ಗಿಡಗಳು}}{\text{ಒಟ್ಟು ವೀಕ್ಷಿಸಿದ ಗಿಡಗಳು}} \times 100$$

ಆ) ಸೌತೆಕಾಯಿ ಮೊಸಾಯಿಕ್ ನಂಜಾಣು ಸೋಂಕಿನ ದೃಡತೆ: ಸಮೀಕ್ಷೆ ನಡೆಸಿದ ಪ್ರದೇಶದಿಂದ ತರುವಂತಹ ರೋಗಕ್ಕೆ ತುತ್ತಾದ ಗರ್ಕಿನ್ ಎಲೆಗಳನ್ನು ಪ್ರಯೋಗಾಲದಲ್ಲಿ ಸೌತೆಕಾಯಿ ಮೊಸಾಯಿಕ್ ನಂಜಾಣುವಿಗೆ ಸೀಮಿತವಾದ ಆಂಟಿಬಾಡಿಯ ಸಹಾಯದಿಂದ ಎಲಿಸ ತಂತ್ರಜ್ಞಾನವನ್ನು ಅಳವಡಿಸಿ ರೋಗದ ಸೋಂಕಿನ ದೃಡತೆಯನ್ನು ತಿಳಿಯಲು ಪ್ರಯೋಗವನ್ನು ಮಾಡಿದೆವು.

ಆ) ರೋಗದ ಸಮಗ್ರ ನಿರ್ವಹಣೆ : ರೋಗದ ಸಮಗ್ರ ನಿರ್ವಹಣೆಯನ್ನು ಗರ್ಕಿನ್ ತಳಿ ಗ್ರೀನ್ ಲಾಂಗ್‌ನಲ್ಲಿ ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಮುಖ್ಯ ಸಂಶೋಧನಾ ಕೇಂದ್ರ, ಹೆಬ್ಬಾಳದಲ್ಲಿ, ಸಾವಯವ ಕೃಷಿ ಪದ್ಧತಿಗಳ ಮೂಲಕ ಯಾವುದೇ ರಾಸಾಯನಿಕಗಳನ್ನು ಬಳಸದೇ ಹಮ್ಮಿಕೊಳ್ಳಲಾಯಿತು. ಈ ಪ್ರಯೋಗವು ಏಳು ಉಪಚಾರಗಳನ್ನು ಒಳಗೊಂಡಿದ್ದು ಮೂರು ಭಾರಿ ಪುನರಾವರ್ತಿಸ ಲಾಗಿದೆ (ಕೋಷ್ಠಕ 1).

- ತಡೆ ಬೆಳೆ ಬೆಳೆಯುವುದು: 3 ರಿಂದ4 ಸಾಲು ಆರ್ಫಿಕನ್ ಟಾಲ್ ಮೆಕ್ಕೆ ಜೋಳವನ್ನು ತಡೆಬೆಳೆಯಾಗಿ ಮುಖ್ಯ ಬೆಳೆ ಬಿತ್ತನೆ ಮಾಡುವ 40 ದಿನಗಳ ಮುಂಚೆ ಬೆಳೆಯುವುದು.
- ಪ್ರತಿಫಲಿತ ಪ್ಲಾಸ್ಟಿಕ್ ಬೆಳ್ಳಿ ಹಾಳೆ ಉಪಯೋಗ : ಏರುಮಡಿಯನ್ನು ಪ್ರತಿಫಲಿತ ಪ್ಲಾಸ್ಟಿಕ್ ಬೆಳ್ಳಿ ಹಾಳೆಯನ್ನು ಹೊದಿಸಿ ಅದರಲ್ಲಿ ರಂಧ್ರಮಾಡಿ ಗರ್ಕಿನ್ ಬೀಜಗಳನ್ನು ಬಿತ್ತುವುದು
- ಸಾವಯವ ನಿರ್ವಹಣೆ: ಸಾವಯವ ಉಪ್ಪುಲಾಸ್ಯಾ (ಶೇ. 0.5), ಬೇವಿನ ಮೂಲದ ಕೀಟನಾಶಕ (ಶೇ. 0.5 ನೀಮಾರ್ಕ್) ಮತ್ತು ಶೇ. 1.0 ಕಡಲೆಕಾಯಿ ಎಣ್ಣೆಯನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ 15 ದಿನಗಳ ಅಂತರದಲ್ಲಿ ಸಿಂಪರಣೆ ಮಾಡುವುದು.

ರೋಗದ ತೀವ್ರತೆಯ ಪ್ರಮಾಣವನ್ನು 15 ದಿನಗಳ ಅಂತರದಲ್ಲಿ ಅವಲೋಕಿಸಿ, ಶೇಕಡಾವಾರು ರೋಗದ ನಿಯಂತ್ರಣವನ್ನು ವಿನ್ಸೆಂಟ್ (1927) ನೀಡಿದ ಸೂತ್ರವನ್ನು ಪ್ರಯೋಗಿಸಿ ರೋಗದ ತೀವ್ರತೆಯನ್ನು ಕಂಡು ಹಿಡಿಯಲಾಯಿತು.

$$\text{ಶೇಕಡಾವಾರು ರೋಗದ ನಿಯಂತ್ರಣ} = \frac{\text{ಸಿ–ಟಿ}}{\text{ಸಿ}} \times 100$$

ಸಿ= ಉಪಚಾರವಿಲ್ಲದ (ಕಂಟ್ರೋಲ್)ತಾಕಿನಲ್ಲಿ ಶೇಕಡಾವಾರು ರೋಗ
ಟಿ= ಉಪಚರಣೆಯ ತಾಕಿನಲ್ಲಿ ಶೇಕಡಾವಾರು ರೋಗ

ಕೋಷ್ಟಕ 1: ಮಿಡಿ ಸೌತೆಕಾಯಿಯಲ್ಲಿ ರೋಗದ ನಿಯಂತ್ರಣೆಗೆ ಉಪಯೋಗಿಸಲಾದ ಉಪಚರಣೆಗಳ ವಿವರ

ಕ್ರ. ಸಂ.	ಉಪಚರಣೆಗಳು	ವಿವರ
1.	ತಡೆಬೆಳೆ ಬೆಳೆಯುವುದು	3–4 ಸಾಲುಗಳ ಆರ್ಫಿಕನ್ ಟಾಲ್ ಮೆಕ್ಕೆ ಜೋಳ ಹೊಲದ ಸುತ್ತಾ ಮುಖ್ಯ ಬೆಳೆ ಬಿತ್ತನೆಗೆ 40 ದಿನಗಳ ಮುಂಚೆ ಬಿತ್ತುವುದು
2.	ಪ್ರತಿಫಲಿತ ಪ್ಲಾಸ್ಟಿಕ್ ಬೆಳ್ಳಿ ಹಾಳೆ ಉಪಯೋಗ	ಏರುಮಡಿಯನ್ನು ಪ್ರತಿಫಲಿತ ಪ್ಲಾಸ್ಟಿಕ್ ಬೆಳ್ಳಿ ಹಾಳೆಯಿಂದ ಹೊದಿಸುವುದು
3.	ಸಾವಯವ ಉಪ್ಪು	ಶೇ. 0.5 ಲಾಸ್ಟ್ರಾವನ್ನು 3 ಭಾರಿ 15 ದಿನಗಳ ಅಂತರದಲ್ಲಿ ಸಿಂಪರಣೆ ಮಾಡುವುದು
4.	ಬೇವಿನ ಮೂಲದ ಕೀಟನಾಶಕ ಬಳಕೆ	ಶೇ. 0.5 ನೀಮಾರ್ಕ್‌ನ್ನು 3 ಭಾರಿ 15 ದಿನಗಳ ಅಂತರದಲ್ಲಿ ಸಿಂಪರಣೆ ಮಾಡುವುದು
5.	ಕಡಲೇಕಾಯಿ ಎಣ್ಣೆ ಬಳಕೆ	ಶೇ. 1 ಕಡಲೆಕಾಯಿ ಎಣ್ಣೆಯನ್ನು 3 ಭಾರಿ 15 ದಿನಗಳ ಅಂತರದಲ್ಲಿ ಸಿಂಪರಣೆ ಮಾಡುವುದು
6.	ಒಟ್ಟುಗೂಡಿಸಿದ ಉಪಚರಣೆ	ಆರ್ಫಿಕನ್ ಟಾಲ್ ಮೆಕ್ಕೆ ಜೋಳವನ್ನು ತಡೆಬೆಳೆಯಾಗಿ ಬೆಳೆದು + ಪ್ರತಿಫಲಿತ ಪ್ಲಾಸ್ಟಿಕ್ ಬೆಳ್ಳಿ ಹಾಳೆ ಹಾಸಿ + ಶೇ. 0.5 ಲಾಸ್ಟ್ರಾ + ಶೇ. 0.5 ನೀಮಾರ್ಕ್+ ಶೇ. 1 ಕಡಲೆಕಾಯಿ ಎಣ್ಣೆಯನ್ನು 15 ದಿನಗಳ ಅಂತರದಲ್ಲಿ ಸಿಂಪರಣೆ ಮಾಡುವುದು
7.	ಉಪಚಾರವಿಲ್ಲದ(ಕಂಟ್ರೋಲ್)	□□

ಇ) ವಂಶವಾಹಿಗಳನ್ನು ಶೋಧಿಸುವುದು: ಪ್ರಸ್ತುತ ಅಧ್ಯಯನದಲ್ಲಿ 28 ಮಿಡಿಸೌತೆಕಾಯಿ ವಂಶವಾಹಿಗಳನ್ನು ಮಿಡಿಸೌತೆಕಾಯಿ ಮೊಸಾಯಿಕ್ ನಂಜಾಣುವಿನ ಸಸ್ಯ ಜೀವರಸವನ್ನು ಒಳಹೋಗಿಸುವ ತಂತ್ರಜ್ಞಾನದವನ್ನು ಗಾಜಿನ ಮನೆಯಲ್ಲಿ ಪ್ರಯೋಗ ಮಾಡಲಾಯಿತು. ಶೇಕಡಾವಾರು ರೋಗದ ತೀವ್ರತೆ ಪ್ರಮಾಣ (ಪಿಡಿಐ)ವನ್ನು 10 ದಿನಗಳ ಅಂತರದಲ್ಲಿ ರೋಗದ ಲಕ್ಷಣದ 0–5 ಅಳತೆಯ (ಬಾಸ್, 1982) ಆಧಾರದ ಮೇಲೆ ತಿಳಿದುಕೊಳ್ಳಲಾಯಿತು. 0= ರೋಗದ ಯಾವುದೇ ಲಕ್ಷಣಗಳು ಇಲ್ಲದಿರುವುದು, 1= ವಯಸ್ಸಾದ ಎಲೆಗಳು ಮುದುಡುವುದು ಹಾಗೂ ಚಿಗುರು ಎಲೆಗಳು ಕಡು ಹಸಿರು ಬಣ್ಣದಿಂದ ಕೂಡಿರುವುದು, 2= ಕಡು ಮತ್ತು ತಿಳಿ ಹಸಿರು ತೇಪೆಗಳಿಂದ ಎಲೆಗಳು ಕೂಡಿರುವುದು, 3= ಮೊಸಾಯಿಕ್ ಲಕ್ಷಣ ಮತ್ತು ಎಲೆಗಳು ಮುದುಡುವುದು, 4= ಎಲೆಗಳ ಆಕಾರ ಬದಲಾವಣೆಯಾಗುವುದು, 5= ಗಿಡದ ಬೆಳವಣಿಗೆ ಕುಂಠಿತಗೊಂಡು ಹೂ ಬಿಡದಿರುವುದು. ಶೇಕಡಾವಾರು ರೋಗದ ತೀವ್ರತೆ ಪ್ರಮಾಣವನ್ನು ಸಿಲ್ಬರ್ನಜೆಲ್ ಮತ್ತು ಜಫಾರಿ (1974) ಅಳವಡಿಸಿಕೊಂಡ ಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಲಾಯಿತು.

$$\text{ಪಿಡಿಐ} = \frac{0\text{ಎನ್}_0+1\text{ಎನ್}_1+2\text{ಎನ್}_2+3\text{ಎನ್}_3+4\text{ಎನ್}_4+5\text{ಎನ್}_5}{\text{ಎನ್ಟಿ}\ \ (\text{ಎನ್ಸಿ}-1)} \times 100$$

ಎನ್_0, ಎನ್_1, ಎನ್_2, ..., ಎನ್_5 = ಕ್ರಮವಾಗಿ 0, 1, 2,..., 5, ಸ್ಕೋರ್ ಪಡೆದ ಒಟ್ಟು ಗಿಡಗಳ ಸಂಖ್ಯೆ

ಎನ್ಟಿ = ಒಟ್ಟು ಗಿಡಗಳ ಸಂಖ್ಯೆ

ಎನ್ಸಿ= ಒಟ್ಟು ವರ್ಗಗಳ ಸಂಖ್ಯೆ

ಶೇಕಡಾವಾರು ರೋಗದ ತೀವ್ರತೆಯ ಪ್ರಮಾಣದ ಆಧಾರದ ಮೇಲೆ ವಂಶವಾಹಿಗಳನ್ನು ಐದು ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ, ರೋಗಪ್ರತಿರೋಧಕ (ಪಿಡಿಐ=0), ರೋಗನಿರೋಧಕ (ಪಿಡಿಐ=1–25%), ಅಲ್ಪ ರೋಗ ನಿರೋಧಕ (ಪಿಡಿಐ=26–50%), ಅಲ್ಪ ಅನಿರೋಧಕ(ಸಸ್ಸೆಪ್ಟಬಲ್) (ಪಿಡಿಐ=51–75%) ಮತ್ತು ಅನಿರೋಧಕ (ಸಸ್ಸೆಪ್ಟಬಲ್) (ಪಿಡಿಐ=76–100%) (ಹವ್ವೆ, 1996).

ಫಲಿತಾಂಶಗಳು: ಗರ್ಕಿನ್ ಬೆಳೆದ ಪ್ರದೇಶಗಳಾದ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಕಂಡುಬಂದತಹ ರೋಗದ ತೀವ್ರತೆಯನ್ನು ಕೋಷ್ಟಕ 2ರಲ್ಲಿ ನೀಡಲಾಗಿದೆ. ಸಮೀಕ್ಷೆಯ ಪ್ರಕಾರ, ಮಿಡಿಸೌತೆಕಾಯಿ ಬೆಳೆಯುವ ಜಿಲ್ಲೆಗಳಲ್ಲಿ, ರೋಗದ ತೀವ್ರತೆಯು ಶೇ. 16–59.65 ರವರೆಗೆ ಕಂಡುಬಂದಿದೆ. ಅತಿ ಹೆಚ್ಚು ರೋಗದ ತೀವ್ರತೆ ಕೋಲಾರ ಜಿಲ್ಲೆಯಲ್ಲಿ (51.27%), ತುಮಕೂರು ಜಿಲ್ಲೆಯಲ್ಲಿ (35.62%), ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ (31.45%), ಬೆಂಗಳೂರು ನಗರ ಜಿಲ್ಲೆಯಲ್ಲಿ (23.34%) ಮತ್ತು ಅತಿ ಕಡಿಮೆ ರೋಗದ ತೀವ್ರತೆ ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ (17.15%) ದಾಖಲಾಗಿದೆ.

ಇದೇ ತರಹದ ಸಮೀಕ್ಷೆಯನ್ನು ಬ್ರಂಕ ಮತ್ತು ಸಹಚರರು (2002)ರವರು ಸೆರೆಬಿಯಾದಲ್ಲಿ ದಾಖಲಿಸಿದ್ದಾರೆ. ಜುಲೈ 2001ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಕುಂಬಳಕಾಯಿಯಲ್ಲಿ ಅತಿ ಹೆಚ್ಚು ಝುಡ್.ವೈ.ಎಮ್.ವಿ (62.0%) ಮತ್ತು ಸಿ.ಎಮ್.ವಿ (58.0%) ರೋಗವು ಕಂಡುಬಂದಿದೆ.

ರೋಗದ ನಿಯಂತ್ರಣೆಗೆ ಸೂಕ್ತ ನಿಯಂತ್ರಣಾ ಕ್ರಮಗಳನ್ನು ಕಂಡು ಕೊಳ್ಳುವುದಕ್ಕಾಗಿ ಸಮಗ್ರ ನಿರ್ವಹಣಾ ಕ್ರಮಗಳನ್ನು ಅನುಸರಿಸಿ, ರೋಗ ನಿಯಂತ್ರಣೆಯನ್ನು ಮಾಡಲಾಯಿತು (ಕೋಷ್ಟಕ 3). ಸಿಂಪರಣೆ ಮಾಡಿದ 14 ದಿನಗಳ ನಂತರ ಕಂಟ್ರೋಲ್ ತಾಕಿನಲ್ಲಿ ಶೇ. 10.00 ರಷ್ಟು ಕಂಡುಬಂದಿದ್ದು, ತಡೆಬೆಳೆ ಬೆಳೆಯುವುದರಲ್ಲಿ, ಪ್ರತಿಫಲಿತ ಪ್ಲಾಸ್ಟಿಕ್ ಬೆಳ್ಳಿ ಹಾಳೆ ಉಪಯೋಗ ಮಾಡಿದುದರಲ್ಲಿ ಮತ್ತು ಒಟ್ಟುಗೂಡಿಸಿದ ಉಪಚರಣೆಯಲ್ಲಿ ರೋಗದ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ. 70 ದಿನಗಳ ನಂತರ ಕಡಿಮೆ ರೋಗದ ತೀವ್ರತೆಯು ಒಟ್ಟುಗೂಡಿಸಿದ ಉಪಚರಣೆಯಲ್ಲಿ ಕಂಟ್ರೋಲ್ ತಾಕಿಗೆ ಹೋಲಿಸಿದಾಗ ಕೇವಲ ಶೇ. 8.05 ರಷ್ಟು ಕಂಡುಬಂದಿದೆ. ಪೋಲ್‌ಬೀನ್ ಹಳದಿ ಮೊಸಾಯಿಕ್ ನಂಜಾಣು ರೋಗದ ನಿರ್ವಹಣೆಗೆ, ಆರ್ಫಿಕನ್ ಟಾಲ್ ಮೆಕ್ಕೆ ಜೋಳವನ್ನು ತಡೆಬೆಳೆಯಾಗಿ ಬೆಳೆದು + ಪ್ರತಿಫಲಿತ ಪ್ಲಾಸ್ಟಿಕ್ ಬೆಳ್ಳಿ ಹಾಳೆ ಹಾಸಿ + ರಾಸಾಯನಿಕಗಳಾದ ಟ್ರೈಯಜೋ

ಪಾಸ್ ಮತ್ತು ಪೈಯೋಮೆಥಾಕ್ಸಾಮ್ ಜೊತೆಗೆ ಶೇ. 0.5 ಲಾಸ್ಸಾ ಸಿಂಪರಣೆ ಮಾಡಿ ಕಂಟ್ರೋಲ್ ತಾಕಿಗೆ ಹೋಲಿಸಿದಾಗ ಶೇಕಡಾವಾರು ಕಡಿಮೆ ಸರಾಸರಿ ರೋಗದ ತೀವ್ರತೆ 5.71 ರಷ್ಟು ಕಂಡುಬಂದಿದೆ (ಜೀವನ್, 2013).

ಶೋಧಿಸುವ ಪ್ರಯೋಗವನ್ನು ಗರ್ಕಿನ್‌ನಲ್ಲಿ ರೋಗನಿರೋಧಕ ಮೂಲವನ್ನು ಕಂಡುಹಿಡಿಯುವುದಕ್ಕಾಗಿ ನಡೆಸಲಾಯಿತು. ಎಲ್ಲಾ ವಂಶವಾಹಿಗಳಲ್ಲಿ ಪಿಡಿಐಯು ಶೇ. 11.11– 100 ರವರೆಗೆ ಕಂಡುಬಂದಿದ್ದು 11 ವಂಶವಾಹಿಗಳು ರೋಗನಿರೋಧಕ ಕ್ರಿಯೆಯನ್ನು, 7 ವಂಶವಾಹಿಗಳು ಅಲ್ಪ ರೋಗನಿರೋಧಕ ಕ್ರಿಯೆಯನ್ನು, 9 ವಂಶವಾಹಿಗಳು ಅಲ್ಪ ಅನಿರೋಧಕ(ಸಸ್ಸೆಪ್ಟಬಲ್) ಕ್ರಿಯೆಯನ್ನು ಹಾಗೂ ಒಂದು ವಂಶವಾಹಿಯು ಅನಿರೋಧಕ (ಸಸ್ಸೆಪ್ಟಬಲ್) ಕ್ರಿಯೆಯನ್ನು ತೋರಿಸಿದೆ (ಕೋಷ್ಟಕ 4 & 5). ಇದೇ ತರಹ ಮೆಣಸಿನ ವಂಶವಾಹಿಗಳನ್ನು ಸಿ.ಎಮ್.ವಿ ವಿರುದ್ಧ ಶೋಧಿಸಿದಾಗ ಪಿ.ಬಿ.ಸಿ. 535 ವಂಶವಾಹಿಯು ರೋಗನಿರೋಧಕ ಶಕ್ತಿಯನ್ನು ಹೊಂದಿರುವುದು ದಾಖಲಾಗಿದೆ (ಹಾಬ್ಸ್ ಮತ್ತು ಸಹಚರರು, 1996).

ಉಲ್ಲೇಖಗಳು: ಚಂದನ್ಕರ್, ವಿ. ಡಿ., ಮೊಂಡೆ, ಎಮ್. ಕೆ., ಬೋಯಾರ್, ಪಿ. ಆರ್., ನಿನಾವೆ, ಬಿ. ಎನ್. ಮತ್ತು ಜಡೇಶ, ಜಿ., 2013, ಬೈಯೋಪಿಸಿಕಲ್ ಕಾರೆಕ್ಟರೈಜೇಶನ್, ಹೋಸ್ಟ್ ರೇಂಜ್ ಅಂಡ್ ಟ್ರಾನ್ಸ್‌ಮಿಸನ್ ಸ್ಟಡೀಸ್ ಆಫ್ ಕುಕುಂಬರ್ ಮೊಸಾಯಿಕ್ ವೈರಸ್. ದಿ ಬೈಯೋಸ್ಕಾನ್, 8(2): 437–441.

ಜೀವನ್, ಬಿ., 2013, ಮಾಲಿಕುಲಾರ್ ಕಾರೆಕ್ಟರೈಜೇಶನ್ ಆಫ್ ಯೆಲ್ಲೊ ಮೊಸಾಯಿಕ್ ವೈರಸ್ ಆನ್ ಪೋಲ್ ಬೀನ್ (ಪಸೆಯೋಲಸ್ ವಲ್ಗಾರಿಸ್ ಎಲ್.) ಅಂಡ್ ಇಟ್ಸ ಡಿಸೀಸ್ ಮ್ಯಾನೇಜ್‌ಮೆಂಟ್. ಎಮ್. ಎಸ್‌ಸಿ. (ಅಗ್ರಿ) ತೀಸಿಸ್, ಯುನಿವೆರ್‌ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್, ಬೆಂಗಳೂರು, 67ಪಿಪಿ

ಪಿನಕಿ ಆಚಾರ್ಯ, 1999, ಸ್ಕ್ರೀನಿಂಗ್ ಆಫ್ ಚಿಲ್ಲಿ ಜೆರ್ಮಪ್ಲಾಸಮ್ ಎಗೆನೆಷ್ಟ್ ಸ್ಟ್ರೇನ್ಸ್ ಆಫ್ ಕುಕುಂಬರ್ ಮೊಸಾಯಿಕ್ ವೈರಸ್. ಎನ್ವಿರಾನ್‌ಮೆಂಟ್ ಅಂಡ್ ಎಕಾಲಜಿ, 17(2): 484–487.

ಬಾಸ್, ಎಲ್., 1982, ಕ್ರಾಪ್ ಲಾಸೆಸ್ ಕಾಸಡ್ ಬೈ ವೈರಸೆಸ್. ಕ್ರಾಪ್ ಪ್ರೊಟೆಕ್ಷನ್, 1: 263–282.

ಬ್ರಂಕ, ಕೆ.ಬಿ., ಡುಕಿಯ, ಎನ್.ಡಿ., ಕಟಿಸ್, ಎನ್.ಐ., ಬೆರೆಂಜಿ, ಜೆ.ಬಿ., ವಿಕೊ, ಐ.ಎಮ್. ಆಂಡ್ ಪಪವಸ್ಸಿಲಿಯು, ಸಿ.ಸಿ., 2012, ಐಡೆಂಟಿಫಿಕೇಷನ್ ಆಫ್ ವೈರಸೆಸ್ ಇನ್ಫೆಕ್ಟಿಂಗ್ ಪಮ್ಕಿನ್ಸ್ (ಕುಕುರ್ಬಿಟಾ ಪೆಪೊ ಎಲ್.) ಇನ್ ಸೆರೆಬಿಯಾ. ಪ್ರೊಸೀಡಿಂಗ್ಸ್ ಫಾರ್ ನ್ಯಾಚುರಲ್ ಸೈನ್ಸಸ್,, 103: 67–79.

ಮಲ್ಲಿಕ್, ಬಿ., ವಿರಕ್ತಮಠ, ಸಿ.ಎ., ಚಂದ್ರಶೇಖರ್, ಎಸ್.ಸಿ., ಲಿಂಗಯ್ಯ, ಹೆಚ್.ಬಿ., ಪುಟ್ಟರಾಜು, ಟಿ.ಬಿ., ಕೃಷ್ಣಮನೋಹರ್, ಆರ್., ಚಿನ್ನಪ್ಪ ರೆಡ್ಡಿ, ಬಿ.ವಿ., ರಾಮಕೃಷ್ಣ, ಬಿ.ವಿ. ಮತ್ತು ಪ್ರವೀಣ್, ಹೆಚ್.ಎಮ್., 2013, ಮಿಡಿ ಸೌತೆಕಾಯಿ (ಗರ್ಕಿನ್) ಬೆಳೆಯ ಸುಧಾರಿತ ಬೇಸಾಯ, ಪ್ರಕಾಶಕರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ವಿನ್ಸೆಂಟ್, ಜೆ.ಎಮ್., 1927, ಡಿಸ್ಟಾರ್‌ಷನ್ ಆಪ್ ಫನ್ಗಲ್ ಹೈಫೆ ಇನ್ ದಿ ಸರ್ಟೇನ್ ಇನ್‌ಹಿಬಿಟರ್ಸ್. ನೇಚರ್, 159: 850.

ಹವ್ವೆ, ಎಮ್.ಜೆ., 1996, ಸಿಎಮ್ವಿ ರೆಸಿಸ್ಟನ್ಸ್ ಇನ್ ತ್ರಿ ಸೋರ್ಸೆಸ್ ಆಪ್ ಕುಕುಂಬರ್. ಕುಕುರಬಿಟ್ ಜೆನೆಟಿಕ್ಸ್ ಕೋಆಪರೇಶನ್19: 32–33.

ಹಾಬ್ಸ್, ಹೆಚ್. ಎ., ವಲ್ವರ್ಡೆ, ಆರ್. ಎ., ಬ್ಲಾಕ್, ಎಲ್. ಎಲ್. ಅಂಡ್ ಡುಫ್ರೆಸ್ನೆ, ಡಿ. ಜೆ., 1996, ರೆಸಿಸ್ಟನ್ಸ್ ಇನ್ ಕ್ಯಾಪ್ಸಿಕಮ್ ಆನುಮ್ ಎಲ್. ಪೆಪ್ಪರ್ ಲೈನ್ ಟು ಸೆವೆನ್ ಜಿಯೋಗ್ರಫಿಕಲೀ ಡೈವರ್ಸ ಕುಕುಂಬರ್ ಮೊಸಾಯಿಕ್ ವೈರಸ್ ಐಸೋಲೇಟ್ಸ್. ರೆವಿಸ್ಟ ಮೆಕ್ಸಿಕಾನ ಡೆ ಫೈಟೊಪತೊಲಾಜಿಯ, 14(2): 132–134.

ಸಿಲ್ಬರ್ನಜೆಲ್, ಎಮ್.ಜೆ. ಅಂಡ್ ಜಫಾರಿ, ಎ.ಎಮ್., 1974, ಟೆಮ್ಪೆರೇಚರ್ ಎಫೆಕ್ಟ್ಸ ಆನ್ ಕರ್ಲೀ ಟಾಪ್ ರೆಸಿಸ್ಟನ್ಸ್ ಇನ್ ಪಸೆಯೋಲಸ್ ವಲ್ಗಾರಿಸ್. ಫೈಟೊಪಾತಾಲಜಿ. 64: 825–827.

ರೋಗ ನಿರ್ವಹಣೆಯಲಿ ಟ್ರೈಕೋಡರ್ಮದ ಮಹತ್ವ

ಬಿ. ಶಿವಣ್ಣ, ಕೆ.ಎಂ. ಶ್ರೀನಿವಾಸ ರೆಡ್ಡಿ, *ಟಿ. ರುದ್ರಮುನಿ ಮತ್ತು **ಎಮ್. ಹೆಚ್. ಶಂಕರ
ಸಹಾಯಕ ಪ್ರಾಧ್ಯಾಪಕರು (ಕೀಟಶಾಸ್ತ್ರ), ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು, * ವಲಯ ಕೃಷಿ ಮತ್ತು ತೋಟಗಾರಿಕ ಸಂಶೋಧನ ಕೇಂದ್ರ, ಹಿರಿಯೂರು, ಕೃಷಿ ಮತ್ತು ತೋಟಗಾರಿಕ ವಿಶ್ವವಿದ್ಯಾನಿಲಯ, ಶಿವಮೊಗ್ಗ, **ಕೃಷಿ ವಿಜ್ಞಾನ ಕೇಂದ್ರ, ಬಿದರಮ್ಮನಗುಡಿ ಕಾವಲ್, ತಿಪಟೂರು, ತುಮಕೂರು (ಜಿ)

ಆಧುನಿಕ ಕೃಷಿಯಲ್ಲಿ ಬೆಳೆಗಳಿಗೆ ಬರುವ ರೋಗ ಮತ್ತು ಕೀಟಗಳ ಹತೋಟಿಗೆ ಬಳಸುವ ಪೀಡೆನಾಶಕಗಳಿಂದ ಪ್ರಕೃತಿಯಲ್ಲಿ ಅನೇಕ ರೀತಿಯ ದುಷ್ಪರಿಣಾಮಗಳು ಉಂಟಾಗುತ್ತಿವೆ ಮತ್ತು ಬೆಳೆಗಳ ನಿರ್ವಹಣೆ ವೆಚ್ಚವು ಸಹ ಅಧಿಕವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ಬರುತ್ತಿದ್ದು ಪ್ರತಿಯೊಂದು ಬೆಳೆಯನ್ನು ಸಾವಯವ ವಿಧಾನದಲ್ಲಿ ಬೆಳೆಸಲು ಹೆಚ್ಚಿನ ಆದ್ಯತೆ ಕೊಡುವುದರಿಂದ ಸಸ್ಯರೋಗ ನಿರ್ವಹಣೆಯಲ್ಲಿ ಜೈವಿಕ ಪೀಡೆನಾಶಕಗಳು ಮಹತ್ತರವಾದ ಪಾತ್ರವಹಿಸುತ್ತಿವೆ.

ಟ್ರೈಕೋಡರ್ಮವು ಒಂದು ಜೈವಿಕ ಪೀಡೆನಾಶಕವಾಗಿದ್ದು ವಿವಿಧ ಬೆಳೆಗಳಲ್ಲಿ ಬೇರು ಹಾಗೂ ಮಣ್ಣಿನ ಮುಖಾಂತರ ಬರುವ ಆನೇಕ ಮಾರಕವಾದ ರೋಗಗಳನ್ನು ನಿರ್ವಹಣೆ ಮಾಡುವಲ್ಲಿ ಮಹತ್ತರವಾದ ಪಾತ್ರವಹಿಸುತ್ತದೆ. ಈ ಟ್ರೈಕೋಡರ್ಮ ಶೀಲಿಂಧ್ರದಲ್ಲಿ ಆನೇಕ ಪ್ರಭೇದಗಳಿವೆ ಅವುಗಳಲ್ಲಿ ಟ್ರೈಕೋಡರ್ಮ ವಿರಿಡೆ ಮತ್ತು ಟ್ರೈಕೋಡರ್ಮ ಅರ್ಜಿಯಾನಮ್‌ಗಳು ಹೆಚ್ಚಿನ ಬಳಕೆಯಲ್ಲಿದ್ದು ಬಹಳ ಉಪಯುಕ್ತವಾಗಿವೆ. ಟ್ರೈಕೋಡರ್ಮವು ಪರಿಸರ ಸ್ನೇಹಿಯಾಗಿದ್ದು ಸಾವಯವಗೊಬ್ಬರದ ಜೊತೆ / ಬೇವಿನ ಹಿಂಡಿಯ ಜೊತೆ ಉಪಯೋಗಿಸಬಹುದು. ರೋಗ ನಿಯಂತ್ರಿಸುವುದರ ಜೊತೆಗೆ ಸಸ್ಯಜಂತು ಹುಳುವನ್ನು ನಿಯಂತ್ರಿಸುವಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಬಹಳ ದಿನಗಳವರೆಗೆ ಪರಿಣಾಮಕಾರಿಯಾಗಿರುತ್ತದೆ. ಕಡಿಮೆಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೃದ್ಧಿಗೊಂಡು ಮಣ್ಣಿನಲ್ಲಿ ಇರುವ ಸಾವಯವ ವಸ್ತುಗಳನ್ನು ಕಳೆಸಿ

ಪೋಷಕಾಂಶಗಳ ಬಿಡುಗಡೆಗೆ ಸಹಕಾರಿಯಾಗುತ್ತದೆ. ವ್ಯವಸಾಯದ ಖರ್ಚು ಕಡಿಮೆ ಮಾಡುವುದರ ಜೊತೆಗೆ ಇಳುವರಿಯನ್ನು ಮತ್ತು ನಿವ್ವಳ ಲಾಭವನ್ನು ಹೆಚ್ಚಿಸುತ್ತದೆ. ಬೆಳೆಗಳ / ಗಿಡಗಳ ಬೆಳವಣಿಗೆಯನ್ನು ವೃದ್ಧಿಸುತ್ತದೆ. ಗಿಡಗಳಿಗೆ / ಬೆಳೆಗಳಿಗೆ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಟ್ರೈಕೋಡರ್ಮವು ಆಹಾರಕೋಸ್ಕರ ರೋಗಾಣುವಿನ ಜೊತೆ ಸ್ಪರ್ಧಿಸುತ್ತದೆ ಹಾಗೂ ರೋಗಾಣುವನ್ನು ಆಹಾರವಾಗಿ ಬಳಸಿಕೊಳ್ಳುತ್ತದೆ. ರೋಗಾಣುವಿನಲ್ಲಿ ಸೋಂಕನ್ನು ಉತ್ಪತ್ತಿಮಾಡಿ ಕೊಲ್ಲುತ್ತದೆ. ಕೆಲವು ವಿಷ ವಸ್ತುಗಳನ್ನು ಉತ್ಪತ್ತಿಮಾಡಿ ರೋಗಕಾರಕಗಳನ್ನು ನಾಶಪಡಿಸುತ್ತದೆ. ರೋಗಕಾರಕಗಳಿಗೆ ನಿರೋಧಕ ಶಕ್ತಿಯನ್ನು ವೃದ್ಧಿಸಿಕೊಳ್ಳಲು ಅವಕಾಶ ಕೊಡುವುದಿಲ್ಲ. ಟ್ರೈಕೋಡರ್ಮವನ್ನು ಬೀಜೋಪಚಾರಕ್ಕೆ, ಸಸಿಗಳನ್ನು ನೆನೆಸಿ ನಾಟಿಮಾಡುವುದಕ್ಕೆ, ಮಣ್ಣಿಗೆ ಮಿಶ್ರಣಮಾಡುವುದಕ್ಕೆ ಮತ್ತು ಕೊಟ್ಟಿಗೆಗೊಬ್ಬರ / ಬೇವಿನ ಹಿಂಡಿಜೊತೆ ಉಪಯೋಗಿಸಬಹುದು.

ಆಧುನಿಕ ಕೃಷಿಯಲ್ಲಿ ಬೆಳೆಗಳಿಗೆ ಬರುವ ರೋಗ ಮತ್ತು ಕೀಟಗಳ ಹತೋಟಿಗೆ ಬಳಸುವ ಪೀಡೆನಾಶಕಗಳಿಂದ ಪ್ರಕೃತಿಯಲ್ಲಿ ಅನೇಕ ರೀತಿಯ ದುಷ್ಪರಿಣಾಮಗಳುಂಟಾಗುತ್ತಿವೆ ಮತ್ತು ಬೆಳೆಗಳ ನಿರ್ವಹಣೆವೆಚ್ಚವು ಸಹ ಅಧಿಕವಾಗುತ್ತದೆ.ಇತ್ತೀಚಿನ ದಿನಗಳಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ಬರುತ್ತಿದ್ದು ಪ್ರತಿಯೊಂದು ಬೆಳೆಯನ್ನು ಸಾವಯವ ವಿಧಾನದಲ್ಲಿ ಬೆಳೆಸಲು ಹೆಚ್ಚಿನ ಆದ್ಯತೆ ಕೊಡುವುದರಿಂದ ಸಸ್ಯರೋಗ ನಿರ್ವಹಣೆಯಲ್ಲಿ ಜೈವಿಕ ಪೀಡೆನಾಶಕಗಳು ಮಹತ್ತರವಾದ ಪಾತ್ರವಹಿಸುತ್ತಿವೆ.

ಟ್ರೈಕೋಡರ್ಮವು ಒಂದು ಜೈವಿಕ ಪೀಡೆನಾಶಕವಾಗಿದ್ದು ವಿವಿಧ ಬೆಳೆಗಳಲ್ಲಿ ಬೇರು ಹಾಗೂ ಮಣ್ಣಿನ ಮುಖಾಂತರ ಬರುವ ಅನೇಕ ಮಾರಕವಾದ ರೋಗಗಳನ್ನು ನಿರ್ವಹಣೆ ಮಾಡುವಲ್ಲಿ ಮಹತ್ತರವಾದ ಪಾತ್ರವಹಿಸುತ್ತದೆ. ಈ ಟ್ರೈಕೋಡರ್ಮ ಶೀಲಿಂಧ್ರದಲ್ಲಿ ಅನೇಕ ಪ್ರಭೇದಗಳಿವೆ. ಅವುಗಳಲ್ಲಿ ಟ್ರೈಕೋಡರ್ಮ ವಿರಿಡೆ ಮತ್ತು ಟ್ರೈಕೋಡರ್ಮ ಅರ್ಜಿಯಾನಮ್‌ಗಳು ಹೆಚ್ಚಿನ ಬಳಕೆಯಲ್ಲಿದ್ದು ಬಹಳ ಉಪಯುಕ್ತವಾಗಿವೆ.

ಉಪಯೋಗಗಳು:

1. ಪರಿಸರ ಸ್ನೇಹಿ
2. ಕಡಿಮೆ ಖರ್ಚು
3. ಸಾವಯವಗೊಬ್ಬರದ ಜೊತೆ / ಬೇವಿನ ಹಿಂಡಿಯ ಜೊತೆ ಉಪಯೋಗಿಸಬಹುದು
4. ರೋಗ ನಿಯಂತ್ರಿಸುವುದರ ಜೊತೆಗೆ ಸಸ್ಯಜಂತು ಹುಳು (Plant Parasitic Nematode) ಅನ್ನು ನಿಯಂತ್ರಿಸುವಲ್ಲಿ ಮಹತ್ತರ ಪಾತ್ರವಹಿಸುತ್ತದೆ.
5. ಬಹಳ ದಿನಗಳವರೆಗೆ ಪರಿಣಾಮಕಾರಿಯಾಗಿರುತ್ತದೆ.
6. ಕಡಿಮೆ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೃದ್ಧಿಗೊಂಡು ಮಣ್ಣಿನಲ್ಲಿ ಇರುವ ಸಾವಯವ ವಸ್ತುಗಳನ್ನು ಕಳೆಸಿ ಪೋಷಕಾಂಶಗಳ ಬಿಡುಗಡೆಗೆ ಸಹಕಾರಿಯಾಗುತ್ತದೆ.
7. ಹಸಿರು ನಾಶಕವಾಗಿರುವುದಿಲ್ಲ
8. ವ್ಯವಸಾಯದ ಖರ್ಚು ಕಡಿಮೆ ಮಾಡುವುದರಜೊತೆಗೆ ಇಳುವರಿಯನ್ನು ಮತ್ತು ನಿವ್ವಳ ಲಾಭವನ್ನು ಹೆಚ್ಚಿಸುತ್ತದೆ.
9. ಬೆಳೆಗಳ / ಗಿಡಗಳ ಬೆಳವಣಿಗೆಯನ್ನು ವೃದ್ಧಿಸುತ್ತದೆ
10. ಗಿಡಗಳಿಗೆ / ಬೆಳೆಗಳಿಗೆರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಉಪಯೋಗಿಸುವ ವಿಧಾನ:

1. ಬೀಜೋಪಚಾರ
2. ಸಸಿಗಳನ್ನು ನೆನೆಸಿ ನಾಟಿ ಮಾಡುವುದು
3. ಮಣ್ಣಿಗೆ ಮಿಶ್ರಣ ಮಾಡುವುದು
4. ಕೊಟ್ಟಿಗೆ ಗೊಬ್ಬರ / ಬೇವಿನ ಹಿಂಡಿಜೊತೆ ವೃದೀಕರಿಸಿ ಉಪಯೋಗಿಸುವುದು.

ಟ್ರೈಕೋಡರ್ಮವು ರೋಗ / ರೋಗಕಾರಕಗಳನ್ನು ಹತೋಟಿ ಮಾಡುವ ವಿಧಾನ / ರೀತಿ (Mode of action)

1. ಟ್ರೈಕೋಡರ್ಮವು ಆಹಾರಕೋಸ್ಕರ ರೋಗಾಣುವಿನ ಜೊತೆ ಸ್ಪರ್ಧಿಸುತ್ತದೆ ಹಾಗೂ ರೋಗಾಣುವನ್ನು ಆಹಾರವಾಗಿ ಬಳಸಿಕೊಳ್ಳುತ್ತದೆ.
2. ರೋಗಾಣುವಿನಲ್ಲಿ ಸೋಂಕನ್ನು ಉತ್ಪತ್ತಿಮಾಡಿ ಕೊಲ್ಲುತ್ತದೆ.
3. ಕೆಲವು ವಿಷ ವಸ್ತುಗಳನ್ನು ಉತ್ಪತ್ತಿ ಮಾಡಿ ರೋಗಕಾರಕಗಳನ್ನು ನಾಶಪಡಿಸುತ್ತದೆ.
4. ರೋಗಕಾರಕಗಳಿಗೆ ನಿರೋಧಕ ಶಕ್ತಿಯನ್ನು ವೃದ್ಧಿಸಿಕೊಳ್ಳಲು ಅವಕಾಶ ಕೊಡುವುದಿಲ್ಲ.

ವಿವಿಧ ಬೆಳೆಗಳಲ್ಲಿ ಟ್ರೈಕೋಡರ್ಮದ ಬಳಕೆಯಿಂದ ಹತೋಟಿ ಮಾಡಬಹುದಾದ ರೋಗಗಳು

ಅ. ದ್ವಿದಳ ಧಾನ್ಯಗಳು			
ಕ್ರಮ ಸಂಖ್ಯೆ	ಬೆಳೆ	ರೋಗ	ಪ್ರಮಾಣ / ವಿಧಾನ
1	ಹೆಸರು	ಸಸಿ ಸಾಯುವುದು ಒಣ ಬೇರು ಕೊಳೆ ರೋಗ	ಬೀಜೋಪಾಚರವನ್ನು4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
2.	ಕಡಲೆ	ಸೊರಗುರೋಗ, ಬೀಜಕೊಳೆ, ಬೇರುಕೊಳೆ	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5
		ಮತ್ತು ಕತ್ತುಕೊಳೆ ರೋಗ.	ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
3.	ಅಲಸಂದಿ	ಬೇರುಕೊಳೆ ಮತ್ತು ಸೊರಗುರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
4.	ಉದ್ದು	ಬೇರುಕೊಳೆ ರೋಗ	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.

5.	ಬಟಾಣಿ	ಬೇರುಕೊಳೆ ರೋಗ	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
6.	ತೊಗರಿ	ಬೇರುಕೊಳೆ ಮತ್ತು ಸೊರಗುರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
7.	ಅವರೆ	ಬೇರುಕೊಳೆ ಮತ್ತು ಸೊರಗುರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
ಆ. ಎಣ್ಣೆಕಾಳು ಬೆಳೆಗಳು			
1.	ಶೇಂಗಾ	ಬೇರುಕೊಳೆ ಮತ್ತು ಕತ್ತುಕೊಳೆ ರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
2.	ಸಾಸಿವೆ	ಸಸಿಕೊಳೆ ರೋಗ	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
3.	ಕುಸುವೆ	ಬೇರುಕೊಳೆ ರೋಗ	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
4.	ಎಳ್ಳು	ಬೇರುಕೊಳೆ ರೋಗ	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
5.	ಸೂರ್ಯಕಾಂತಿ	ಬೇರುಕೊಳೆ ಮತ್ತು ಕತ್ತುಕೊಳೆ ರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
ಇ. ತರಕಾರಿ ಬೆಳೆಗಳು			
1.	ಟೊಮ್ಯೊಟೊ	ಸಸಿಕೊಳೆ, ಬೇರುಕೊಳೆ ಮತ್ತು ಸೊರಗುರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು ಮತ್ತು ಸಸಿಗಳನ್ನು ನೆನೆಸಿ ನಾಟಿ ಮಾಡುವುದು.
2.	ಮೆಣಸಿನಕಾಯಿ	ಸಸಿಕೊಳೆ, ಬೇರುಕೊಳೆ ಮತ್ತು ಸೊರಗುರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು ಮತ್ತು ಸಸಿಗಳನ್ನು ನೆನೆಸಿ ನಾಟಿ ಮಾಡುವುದು.
3.	ಬದನೆ	ಸಸಿಕೊಳೆ, ಬೇರುಕೊಳೆ ಸೊರಗು ಮತ್ತು ಕತ್ತುಕೊಳೆ ರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು ಮತ್ತು ಸಸಿಗಳನ್ನು ನೆನೆಸಿ ನಾಟಿ ಮಾಡುವುದು.
4.	ಎಲೆಕೋಸು	ಸಸಿಕೊಳೆ ರೋಗ	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು ಮತ್ತು ಸಸಿಗಳನ್ನು ನೆನೆಸಿ ನಾಟಿ ಮಾಡುವುದು.
5.	ಆಲೂಗೆಡ್ಡೆ	ಕಪ್ಪುಕೊಳೆ ರೋಗ	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು ಮತ್ತು ಸಸಿಗಳನ್ನು ನೆನೆಸಿ ನಾಟಿ ಮಾಡುವುದು.
ಈ. ವಾಣಿಜ್ಯ ಬೆಳೆಗಳು			
1.	ಹತ್ತಿ	ಸಸಿಕೊಳೆ, ಬೇರುಕೊಳೆ ರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
2.	ಕಬ್ಬು	ಬೇರುಕೊಳೆ, ಸೊರಗುರೋಗ	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
3.	ತಂಬಾಕು	ಸಸಿಕೊಳೆ ರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.

4.	ರೇಷ್ಮೆ	ಕತ್ತುಕೊಳೆ ರೋಗ.	ಬೀಜೋಪಾಚರವನ್ನು 4.00 ಗ್ರಾಂ./ಕೆ.ಜಿ. ಅಥವಾ 2.5 ರಿಂದ 3.00 ಕೆ.ಜಿ./ಹೆ ಮಣ್ಣಿಗೆ ಸೇರಿಸುವುದು.
ಊ. ತೋಟಗಾರಿಕೆ ಬೆಳೆಗಳು			
1.	ಕರಿಮೆಣಸು	ಪಾದಕೊಳೆ (Foot rot) ಮತ್ತು ಬೇರುಕೊಳೆ	50 ಗ್ರಾಂ.+5.00 ಕೆ.ಜಿ. ಬೇವಿನ ಹಿಂಡಿ/ಮರಕ್ಕೆ 25
		ರೋಗ	ರಿಂದ 30 ಗ್ರಾಂ.+2.5 ರಿಂದ 3.00 ಗ್ರಾಂ ಬೇವಿನ ಹಿಂಡಿ/ಮರಕ್ಕೆ ಮಣ್ಣಿಗೆ ಸೇರಿಸುವುದು
2.	ತೆಂಗು	ಅಣಬೆರೋಗ	50 ಗ್ರಾಂ.+5.00 ಕೆ.ಜಿ. ಬೇವಿನ ಹಿಂಡಿ/ಮರಕ್ಕೆ 25 ರಿಂದ 30 ಗ್ರಾಂ.+2.5 ರಿಂದ 3.00 ಗ್ರಾಂ ಬೇವಿನ ಹಿಂಡಿ/ಮರಕ್ಕೆ ಮಣ್ಣಿಗೆ ಸೇರಿಸುವುದು
3.	ಅಡಿಕೆ	ಅಣಬೆರೋಗ	50 ಗ್ರಾಂ.+5.00 ಕೆ.ಜಿ. ಬೇವಿನ ಹಿಂಡಿ/ಮರಕ್ಕೆ 25 ರಿಂದ 30 ಗ್ರಾಂ.+2.5 ರಿಂದ 3.00 ಗ್ರಾಂ ಬೇವಿನ ಹಿಂಡಿ/ಮರಕ್ಕೆ ಮಣ್ಣಿಗೆ ಸೇರಿಸುವುದು
4.	ಕಾಫಿ	ಬೇರು ರೋಗಗಳು	50 ಗ್ರಾಂ.+5.00 ಕೆ.ಜಿ. ಬೇವಿನ ಹಿಂಡಿ/ಮರಕ್ಕೆ 25 ರಿಂದ 30 ಗ್ರಾಂ.+2.5 ರಿಂದ 3.00 ಗ್ರಾಂ ಬೇವಿನ ಹಿಂಡಿ/ಮರಕ್ಕೆ ಮಣ್ಣಿಗೆ ಸೇರಿಸುವುದು

ಆಂಬ್ರೋಸಿಯ ಪ್ಸಿಲೋಸ್ಟೇಕಿಯ – ಭಾರತದಲ್ಲಿ, ತುರುವೇಕೆರೆ ತಾಲ್ಲೂಕಿನಲ್ಲಿ ಪ್ರಪ್ರಥಮ ಭಾರಿಗೆ ಕಂಡು ಬಂದ ಹೊಸ ದಿಗ್ಬಂಧನ ಕಳೆ

ಎಂ.ಟಿ.ಸಂಜಯ್[ಂ], ಟಿ.ವಿ.ರಾಮಚಂದ್ರ ಪ್ರಸಾದ್[ಎ], ಪಿ.ಅಶೋಕ [ಸಿ], ಬಸವರಾಜ ಕುಂಬಾರ [ಬಿ] ಮತ್ತು ವಿರೇಶ ಹತ್ತಿ [ಜಿ]

ಂ. ಕಿರಿಯ ಬೇಸಾಯ ಶಾಸ್ತ್ರಜ್ಞರು, ಕಳೆ ನಿರ್ವಹಣೆ ವಿಭಾಗ, ಕೃವಿವಿ, ಬೆಂಗಳೂರು, ಎ. ನಿವೃತ್ತ ಪ್ರಾಧ್ಯಾಪಕರು, ಕಳೆ ನಿರ್ವಹಣೆ ವಿಭಾಗ, ಕೃವಿವಿ, ಬೆಂಗಳೂರು, ಸಿ. ಬೇಸಾಯ ಶಾಸ್ತ್ರಜ್ಞರು, ಕೃವಿವಿ, ಧಾರವಾಡ, ಬಿ. ಪಿ.ಹೆಚ್.ಡಿ (ಬೇಸಾಯ ಶಾಸ್ತ್ರ) ವಿದ್ಯಾರ್ಥಿ, ಕೃವಿವಿ, ಬೆಂಗಳೂರು. ಜಿ. ಪಿ.ಹೆಚ್.ಡಿ (ಬೇಸಾಯ ಶಾಸ್ತ್ರ) ವಿದ್ಯಾರ್ಥಿ, ಕೃವಿವಿ, ಬೆಂಗಳೂರು. ಇ–ಮೇಲ್ : ಎಂಟಿ.ಸಂಜಯ್@ಜಿಮೇಲ್.ಕಾಮ್

ದಕ್ಷಿಣ ಕರ್ನಾಟಕದ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೋಕಿನ ಮುನಿಯೂರು, ಎಂ. ಬೇವಿನಹಳ್ಳಿ, ಶ್ರೀರಾಮಪುರ, ಪುರ ಮತ್ತು ಗೊಟ್ಟೀಗೆರೆ ಹಳ್ಳಿಗಳಲ್ಲಿ ಹೊಸ ವಿದೇಶಿ ಕಳೆ – *ಆಂಬ್ರೊಸಿಯ ಪ್ಸಿಲೋಸ್ಟೇಕಿಯ* ಡಿಸಿ – ಕ್ಯುಮನ್ ರ್‍ಯಾಗ್‌ವೀಡ್ ಅಥವಾ ಬಹು ವಾರ್ಷಿಕ ರ್‍ಯಾಗ್‌ವೀಡ್ ಅಥವಾ ಪಾಶ್ಚಿಮಾತ್ಯ ರ್‍ಯಾಗ್‌ವೀಡ್; ಸೂರ್ಯಕಾಂತಿ ಜಾತಿ (ಆಸ್ಟರೇಸಿಯಿ) ಕಳೆಯು ಕಾಣಿಸಿಕೊಂಡಿದೆ. ಈ ಕಳೆಯು ಪ್ರಾರಂಭದಲ್ಲಿ ಮುನಿಯೂರಿನಲ್ಲಿ 15 ರಿಂದ 20 ವರ್ಷದ ಹಿಂದೆ ಕಾಣಿಸಿಕೊಂಡು ಈಗ ಮುನಿಯೂರು, ಎಂ. ಬೇವಿನಹಳ್ಳಿ, ಶ್ರೀರಾಮಪುರ ಹಳ್ಳಿಗಳಲ್ಲಿ ಸುಮಾರು 200 ರಿಂದ 250 ಎಕರೆಗಳಿಗೆ ಹರಡಿದೆ. ಈ ಕಳೆಯು ಬಹು ವಾರ್ಷಿಕ ಕಳೆಯಾದುದರಿಂದ ಕ್ರಮೇಣ ಎಲ್ಲಾ ಜಾಗಕ್ಕೆ ಹರಡಿ ಕೃಷಿ, ತೋಟಗಾರಿಕೆ ಬೆಳೆಗಳಿಗೆ ತೊಂದರೆ ಮಾಡಿ, ರಸ್ತೆ ಹಾಗೂ ಬೆಳೆಯಿಲ್ಲದ ಜಾಗದಲ್ಲಿ ಹರಡಿ ಹುಲ್ಲು ಮತ್ತಿತರೆ ಸಸ್ಯ ವರ್ಗದ ಗಿಡಗಳು ಬಾರದಂತೆ ಮಾಡಿದೆ. *ಆಂಬ್ರೊಸಿಯ ಪ್ಸಿಲೋಸ್ಟೇಕಿಯ* ಕಳೆಯ ಹೂವಿನ ಪರಾಗವು ಹೆಚ್ಚು ಪ್ರಮಾಣದಲ್ಲಿ ಉತ್ಪತಿಯಾಗಿ ಗಾಳಿಯಲ್ಲಿ ಸೇರಿ ಹೆಚ್ಚಿನ ಜನರಿಗೆ ಜ್ವರ ಬರಲು ಕಾರಣವಾಗುವುದು ಹಾಗೂ ಅಲರ್ಜಿಯಾಗುವ ಸಂಭವ ಹೆಚ್ಚು. ಈ ಕಳೆಯು ಬಹು ವಾರ್ಷಿಕ ಕಳೆ. ಇದು ಬೇರಿನಿಂದ ಪ್ರಸಾರವಾಗಿ ಗರಿಕೆ ಹರಡಿದಂತೆ ಎಲ್ಲಾ ಜಾಗದಲ್ಲಿ ಬೇರನ್ನು ಬಿಟ್ಟು ಗಿಡವು 1.5 ರಿಂದ 2 ಅಡಿಯಷ್ಟು ಎತ್ತರ ಬೆಳೆದು ಹುಲ್ಲು, ಇತರೆ ಸಸ್ಯ ವರ್ಗದ ಗಿಡಗಳು ಬಾರದಂತೆ ಮಾಡಿದೆ. ಈ ಕಳೆ ಹರಡಿರುವ ಕಡೆ ಕೃಷಿ, ತೋಟಗಾರಿಕೆ ಬೆಳೆಗಳಿಗೆ ಬಹಳಷ್ಟು ಬೆಳವಣಿಗೆಯಲ್ಲಿ ತೊಂದರೆಯುಂಟು ಮಾಡಿ ಇಳುವರಿ ಕಡಿಮೆ ಮಾಡುತ್ತದೆ ಮತ್ತು ಸಾಗುವಳಿ ಖರ್ಚು ಬಹಳ ಜಾಸ್ತಿ ಮಾಡುತ್ತದೆ. ಹುಲ್ಲು ಕಾಣೆಯಾಗಿ ಸಾಕು ಪ್ರಾಣಿಗಳಿಗೆ ಮೇವಿಲ್ಲದಾಗಿದೆ, ರೈತರು ಮೇವಿಗಾಗಿ ಪರದಾಡಿ ಈ ಬರಗಾಲದಲ್ಲಿ ಹೆಚ್ಚು ದುಡ್ಡು ಕೊಟ್ಟು ಕೊಳ್ಳುವಂತಾಗಿದೆ. ಕೈಯಿಂದ ಕಳೆಯನ್ನು ಕೀಳುವುದು ಬಹಳ ದುಬಾರಿ. ಹೆಕ್ಟೇರಿಗೆ ಸುಮಾರು ರೂ. 5000 ದಿಂದ 8000/–ದವರೆಗೆ ಖರ್ಚು ತಗಲುತ್ತದೆ. ಕಳೆನಾಶಕಗಳಾದ ಗ್ಲೈಫೋಸೇಟ್ 41 ಎಸ್ ಎಲ್ 10 ರಿಂದ 15 ಮಿ.ಲೀ. ಅಥವಾ ಗ್ಲೈಫೋಸೇಟ್ 71 ಡಬ್ಲ್ಯು ಪಿ 5 ರಿಂದ 7.5 ಗ್ರಾಂ ಅನ್ನು ಒಂದು ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ, ಎರಡು ತೊಟ್ಟು ನಿಂಬೆ ಹುಳಿ ರಸ ಹಾಕಿ ಕಳೆಯ ಮೇಲೆ ಬೀಳುವ ಹಾಗೆ ಸಿಂಪಡಿಸಿ. ನಂತರ ಕಳೆ ಮತ್ತೆ ಚಿಗುರು ಬರುವುದರಿಂದ ಮತ್ತೊಮ್ಮೆ ಸಿಂಪರಣೆ ಅಗತ್ಯ ಇದೆ. ಈ ಕೆಟ್ಟ ದವನವು ನಾಲ್ಕು ಹಳ್ಳಿಗಳಲ್ಲಿ ಹರಡಿ ಸಾಗುವಳಿ ಜಮೀನಿನಲ್ಲಿ ಹಾಗೂ ಸಾಗುವಳಿ ಮಾಡದ ಜಮೀನಿನಲ್ಲಿ ಕಾಣಿಸಿ ಕೊಂಡಿರುವುದರಿಂದ, ಹಳ್ಳಿಯ ಎಲ್ಲಾ ವರ್ಗದ ಜನರು ಸೇರಿ ನಿಯಂತ್ರಣೆ ಕಾರ್ಯದಲ್ಲಿ ಸಕ್ರೀಯವಾಗಿ ಬಾಗವಹಿಸಿ ಕಳೆಯನ್ನು ಸಂಪೂರ್ಣವಾಗಿ ನಾಶಪಡಿಸಬೇಕು. ಇದು ಸಾಮೂಹಿಕ ನಿರ್ವಹಣೆಯ ಜವಾಬ್ದಾರಿ.

ಪೀಠಿಕೆ: ದಕ್ಷಿಣ ಕರ್ನಾಟಕದ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೋಕಿನ ಮುನಿಯೂರು, ಎಂ. ಬೇವಿನಹಳ್ಳಿ, ಶ್ರೀರಾಮಪುರ, ಗೊಟ್ಟೀಕೆರೆ ಮತ್ತು ಪುರ ಹಳ್ಳಿಗಳಲ್ಲಿ ಈ ಕಳೆಯು ಕಾಣಿಸಿಕೊಂಡಿದೆ. ಉತ್ತರ ಅಮೇರಿಕಾದ ದೇಶಗಳಾದ ದಕ್ಷಿಣ ಕೆನಡಾ, ಅಮೇರಿಕ ಹಾಗೂ ಉತ್ತರ ಮೆಕ್ಸಿಕೊ ಈ ಕಳೆಯ ಉಗಮ ಸ್ಥಳವಾಗಿರುತ್ತದೆ.

ಕಳೆಯ ವಿಶೇಷತೆ : ಕಳೆಯ ಎಲೆಯು ಪಾರ್ಥೇನಿಯಂ ಕಳೆಯ ಎಲೆಯನ್ನು ಹೋಲುತ್ತದೆ. ಕಾಡು ದವನದ ಎಲೆಯು ಅಗಲಕಡಿಮೆ ಇದ್ದು ಸ್ವಲ್ಪ ಉದ್ದವಿರುತ್ತದೆ. ಗಿಡವು ಸಾದಾರಣ ಒಂದು ಅಡಿಯಿಂದ ಎರಡು ಅಡಿಯಷ್ಟು ಎತ್ತರವಿದ್ದು, ಗಿಡದ ಮೇಲ್ಬಾಗ ರೆಂಬೆಗಳು ಕವಲೊಡೆದಿರುತ್ತದೆ. ಗಿಡದ / ಕೊಂಬೆಯ ತಳ ಭಾಗದಲ್ಲಿ ಎಲೆಗಳು ಎದಿರು ಬದಿರಾಗಿದ್ದು, ಮೇಲು ಭಾಗದಲ್ಲಿ ಒಂದರ ಮೇಲೋಂದಿರುತ್ತದೆ (ಲೇವಿಸ್ ಎ.ಜೆ.). ಗಿಡದ ತುದಿಯಲ್ಲಿ ಹಾಗೂ ರೆಂಬೆಯ ತುದಿಯಲ್ಲಿ ಗಂಡು ಹೂವಿನ ಗೊಂಚಲು ಹಸಿರು ಬಣ್ಣದಿಂದ ಕೂಡಿರುತ್ತದೆ. ಹೆಣ್ಣು ಹೂವು ಎಲೆಯ ಕಂಕಳಲ್ಲಿರುತ್ತದೆ. ಪರಾಗ ಸ್ಪರ್ಶವು ಗಾಳಿಯಿಂದ ಆಗುವುದು. ಈ ಗಿಡದ ಹೂವಿಗೆ ಜೇನು ಹುಳಗಳು ಜೇನು ಹನಿಯನ್ನು ಹೀರಲು ಆಕರ್ಷಿತವಾಗುವುದಿಲ್ಲ ಹಾಗೂ ಪರಾಗ ಸ್ಪರ್ಶ ಮಾಡುವುದಿಲ್ಲವೆಂದು ತಿಳಿದು ಬಂದಿದೆ. ಬೀಜವು ಕಂದು ಬಣ್ಣದಿಂದ ಕೂಡಿದ್ದು ರೋಮವಿರುತ್ತದೆ, ಮತ್ತು ತುದಿಯಲ್ಲಿ ಚಿಕ್ಕ ಮುಳ್ಳಿರುತ್ತದೆ. ಆದರೆ, ಕಳೆಯು ಈ ಪ್ರದೇಶದಲ್ಲಿ ಬೀಜವನ್ನು ಬಹುಷಃ ಬಿಡುತ್ತಿಲ್ಲ ಮತ್ತು ಮೊಳಕೆಯೂಗುತ್ತಿಲ್ಲ. ಆದುದರಿಂದ, ಕಳೆಯು -ಬೇರಿನಿಂದ ಹರಡಿ ಚಿಕ್ಕ ಪ್ರದೇಶವಾದ 300 ಎಕರೆಗಳ ಮೇಲೆ ಹರಡಿದೆ. ಇಲ್ಲವಾದಲ್ಲಿ, ಬೀಜದಿಂದ ಪ್ರಸಾರವಾಗಿದ್ದಲ್ಲಿ, 15 ರಿಂದ 20 ವರ್ಷಗಳಲ್ಲಿ ಇಡೀ ಕರ್ನಾಟಕದಲ್ಲಿ ಹರಡಿ, ನಮ್ಮ ದೇಶದಲ್ಲಿ ಹರಡುವ ಸಾಧ್ಯತೆ ಹೆಚ್ಚಿರುತ್ತಿತ್ತು. ದೇವರವಶಾತ್ ಅದು ಸಾಧ್ಯವಾಗಿಲ್ಲ.

ಒಂದು ಗಿಡದ ಬೇರು ಮಣ್ಣಿನಲ್ಲಿ ಕಡಿಮೆ ಆಳದಲ್ಲಿ (6 ರಿಂದ 9 ಅಂಗುಲದವರೆಗೆ) ಹರಡಿ, ಸುಮಾರು 1.0 ಮಿ. ಉದ್ದವಿದ್ದು ಬೇರಿನಿಂದ 15 – 20 ಹೊಸಗಿಡಗಳು ಚಿಗುರುವುದು ಕಂಡು ಬಂದಿದೆ. ಅದ್ದರಿಂದ ಈ ಕಳೆಯನ್ನು ಕೀಳಲು ಬಹಳ ಸುಲಭ, ಆದರೆ ಬೇರು ಪೂರ್ತಿಯಾಗಿ ಬರದೆ ಭೂಮಿಯಲ್ಲಿ ಚೂರು ಉಳಿದು ಪುನಃ ಚಿಗುರುತ್ತದೆ (ಹಜ್ರ ಪಿ.ಕೆ, ರಾವ್ ಆರ್.ಆರ್ ಮತ್ತು ಉನಿಯಾಲ್ ಬಿ.ಪಿ.).

ಕಳೆಯಿಂದಾಗುವ ತೊಂದರೆ: ಕಳೆಯು ಬಹು ವಾರ್ಷಿಕ ಕಳೆ. ಇದು ಬೇರಿನಿಂದ ಪ್ರಸಾರವಾಗಿ ಭೂಮಿಯಲ್ಲಿ ಗರಿಕೆ ಕಳೆಯು ಹರಡಿದಂತೆ ಎಲ್ಲಾ ಜಾಗದಲ್ಲಿ ಬೇರನ್ನು ಬಿಟ್ಟು ಗಿಡವು 1 ರಿಂದ 1 1/2 ಅಡಿಯಷ್ಟು ಎತ್ತರ ಬೆಳೆದು ಹುಲ್ಲು, ಇನ್ನಿತರೆ ಸಸ್ಯ ವರ್ಗದ ಗಿಡಗಳು ಬಾರದಂತೆ ಮಾಡಿದೆ (ಫೇನ್, ಡಬ್ಲೂ. ಡಬ್ಲೂ.). ಈ ಕಳೆಯು ಮುನಿಯೂರಿನಲ್ಲಿರುವ ಸಾಮಾನ್ಯ ಅರಣ್ಯದಲ್ಲಿ ಕಂಡುಬಂದಿದೆ. ಈ ಕಳೆ ಹರಡಿರುವ ಕಡೆ ಕೃಷಿ, ತೋಟಗಾರಿಕೆ ಬೆಳೆಗಳಿಗೆ ಬಹಳಷ್ಟು ಬೆಳವಣಿಗೆಯಲ್ಲಿ ತೊಂದರೆಯುಂಟು ಮಾಡಿ, ಇಳುವರಿ ಕಡಿಮೆಯಾಗಿದೆ ಹಾಗೂ ಸಾಗುವಳಿ ಖರ್ಚು ಬಹಳ ಜಾಸ್ತಿ ಮಾಡುತ್ತಿದೆ. ಈ ಪ್ರದೇಶದಲ್ಲಿ ಬೆಳೆಯುವ ಬೆಳೆಗಳಾದ ರಾಗಿ, ಜೋಳ, ಮುಸುಕಿನ ಜೋಳ, ಅವರೆ, ತೊಗರಿ, ಹುಚ್ಚೆಳ್ಳು, ಹಿಪ್ಪುನೇರಳೆಯಲ್ಲಿ ಈ ಕಳೆಯ ಹಾವಳಿಯಿಂದ ಬೆಳೆ ಕುಂಟಿತವಾಗಿ ಇಳುವರಿ ಕಡಿಮೆಯಾಗಿದೆ. ಈ ಕಳೆಯು ಬದುಗಳಲ್ಲಿ, ನೀರು ಕಾಲುವೆ ಹಾಗೂ ಬೆಳೆಯಿಡದ ಪ್ರದೇಶಗಳಲ್ಲಿ ಹೆಚ್ಚು ವತ್ತಾಗಿ ಕಂಡುಬಂದು ಹುಲ್ಲು ಕಾಣೆಯಾಗಿ ಸಾಕು ಪ್ರಾಣಿಗಳಿಗೆ ಮೇವಿಲ್ಲದಾಗಿದೆ, ರೈತರು ಮೇವಿಗಾಗಿ ಪರದಾಡಿ ಈ ಬರಗಾಲದಲ್ಲಿ ಹೆಚ್ಚು ದುಡ್ಡು ಕೊಟ್ಟು ಕೊಳ್ಳುವಂತಾಗಿದೆ. ಮತ್ತೆ ಈ ಕಳೆಯನ್ನು ಜಾನುವಾರುಗಳು ತಿನ್ನುವುದಿಲ್ಲ.

ಪಾಶ್ಚಿಮಾತ್ಯ ದೇಶಗಳಲ್ಲಿ ಈ ಕಾಡು ದವನ ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಯಾಗಿ ಗಾಳಿಯಲ್ಲಿ ಸೇರಿ ಹೆಚ್ಚಿನ ಜನರಿಗೆ ಜ್ವರ, ಆಸ್ತಮ, ಇನ್ನಿತರೆ ಅಲರ್ಜಿಯಾಗುವ ಸಂಭವವಿದೆ. ಈ ಪರಿಣಾಮ ಮುಂದೆ ನಮ್ಮ ದೇಶದಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಜನರಿಗೆ ಕಾಡಿಸಬಹುದು. ಇತ್ತೀಚೆಗೆ ರೈತರು ಈ ಕಳೆಯನ್ನು ಕಿತ್ತಾಗ ಮೈ ತುರಿಸುವುದು, ನೆಗಡಿ, ಕೆಮ್ಮು, ಬಾಯಿ ಕಹಿಯಾಗುವುದು, ಊಟ ಸೇರದಿರುವುದು ಮತ್ತು ಮೈ ಭಾರವಾಗುವುದು ಕಂಡು ಬಂದಿದೆ (ಬಝಾರುಝ್ ಎಫ್.ಎ.).

ವಸ್ತುಗಳು ಮತ್ತು ವಿಧಾನಗಳು: ಈ ಪ್ರಯೋಗವನ್ನು ದಕ್ಷಿಣ ಕರ್ನಾಟಕದ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೋಕಿನ ಮುನಿಯೂರು, ಎಂ. ಬೇವಿನಹಳ್ಳಿ, ಶ್ರೀರಾಮಪುರ, ಪುರ ಮತ್ತು ಗೊಟ್ಟೀಗೆರೆ ಹಳ್ಳಿಗಳಲ್ಲಿ ಯಾದ್ರಿಚ್ಚಿಕ ಸಂಪೂರ್ಣ ವಿನ್ಯಾಸದಲ್ಲಿ 3 ಪರಿವರ್ತನೆಗಳೊಂದಿಗೆ ಪರೀಕ್ಷಿಸಲಾಯಿತು. ಪ್ರಯೋಗ 1 ರ ಆಂಬ್ರೋಸಿಯ ನಿರ್ವಹಣಾ ಉಪಚಾರಗಳು ಹೀಗಿವೆ:

$ಉ_1$– ಗ್ಲೈಫೋಸೇಟ್ 41 ಎಸ್ ಎಲ್ 10ಮಿ.ಲೀ. / ಲೀಟರ್ ನೀರಿಗೆ

$ಉ_2$: ಗ್ಲೈಫೋಸೇಟ್ 41 ಎಸ್ ಎಲ್ 15 ಮಿ.ಲೀ. / ಲೀಟರ್ ನೀರಿಗೆ

$ಉ_3$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 5 ಮಿ.ಲೀ. / ಲೀಟರ್ ನೀರಿಗೆ

$ಉ_4$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 7.5 ಮಿ.ಲೀ. / ಲೀಟರ್ ನೀರಿಗೆ

$ಉ_5$: ಗ್ಲೈಫೋಸೇಟ್ 71 ಡಬ್ಲ್ಯು ಪಿ 5 ಗ್ರಾಂ / ಲೀಟರ್ ನೀರಿಗೆ

$ಉ_6$: ಗ್ಲೈಫೋಸೇಟ್ 71 ಡಬ್ಲ್ಯು ಪಿ 7.5 ಗ್ರಾಂ / ಲೀಟರ್ ನೀರಿಗೆ

$ಉ_7$: ಉಪಚಾರವಿಲ್ಲದ ನಿಯಂತ್ರಣ

ಪ್ರಯೋಗ 2 ರ ಆಂಬ್ರೋಸಿಯ ನಿರ್ವಹಣಾ ಉಪಚಾರಗಳು ಹೀಗಿವೆ:

$ಉ_1$– ಗ್ಲೈಫೋಸೇಟ್ 41 ಎಸ್ ಎಲ್ 10 ಮಿ.ಲೀ. / ಲೀಟರ್ ನೀರಿಗೆ + ಆಕ್ಸಿಫ್ಲೋರೋಫೆನ್ 23.5 ಇಸಿ 0.5 ಮಿ.ಲೀ. / ಲೀಟರ್ ನೀರಿಗೆ

$ಉ_2$: ಗ್ಲೈಫೋಸೇಟ್ 41 ಎಸ್ ಎಲ್ 15 ಮಿ.ಲೀ. / ಲೀಟರ್ ನೀರಿಗೆ + ಆಕ್ಸಿಫ್ಲೋರೋಫೆನ್ 23.5 ಇಸಿ 0.5 ಮಿ.ಲೀ. / ಲೀಟರ್ ನೀರಿಗೆ

$ಉ_3$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 5 ಮಿ.ಲೀ. / ಲೀಟರ್ ನೀರಿಗೆ + ಅಟ್ರಾಸಿನ್ 50 ಡಬ್ಲೂ ಪಿ 2 ಗ್ರಾಂ / ಲೀಟರ್ ನೀರಿಗೆ

$ಉ_4$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 7.5 ಮಿ.ಲೀ. / ಲೀಟರ್ ನೀರಿಗೆ + ಅಟ್ರಾಸಿನ್ 50 ಡಬ್ಲೂ ಪಿ 2 ಗ್ರಾಂ / ಲೀಟರ್ ನೀರಿಗೆ

$ಉ_5$: ಗ್ಲೈಫೋಸೇಟ್ 71 ಡಬ್ಲೂ ಪಿ 5 ಗ್ರಾಂ / ಲೀಟರ್ ನೀರಿಗೆ

$ಉ_6$: ಗ್ಲೈಫೋಸೇಟ್ 71 ಡಬ್ಲೂ ಪಿ 7.5 ಗ್ರಾಂ / ಲೀಟರ್ ನೀರಿಗೆ
$ಉ_7$: 2,4–ಡಿ ಸೋಡಿಯಂ ಲವಣ 80 ಡಬ್ಲೂ ಪಿ 2 ಗ್ರಾಂ / ಲೀಟರ್ ನೀರಿಗೆ
$ಉ_8$: 2,4–ಡಿ ಸೋಡಿಯಂ ಲವಣ 80 ಡಬ್ಲೂ ಪಿ 4 ಗ್ರಾಂ / ಲೀಟರ್ ನೀರಿಗೆ
$ಉ_9$:ಕ್ಲೋರಿಮ್ಯೂರಾನ್ ಈಥೈಲ್+ ಮೆಟಸಲ್ಫೂರಾನ್ ಮೀಥೈಲ್ 20 ಡಬ್ಲೂ ಪಿ 0.15 ಗ್ರಾಂ / ಲೀಟರ್ ನೀರಿಗೆ
$ಉ_{10}$: ಉಪಚಾರವಿಲ್ಲದ ನಿಯಂತ್ರಣ

ಪ್ರಯೋಗ 1: ಆಂಬ್ರೋಸಿಯ ನಿರ್ವಹಣೆಗೆ ಉದಯೋತ್ತರ ಕಳೆನಾಶಕಗಳ ಬಳಕೆ

ಮೂರು ಕಳೆನಾಶಕಗಳಾದ ಗ್ಲೈಫೋಸೇಟ್ 41 ಎಸ್ ಎಲ್, ಗ್ಲೈಫೋಸೇಟ್ 71 ಡಬ್ಲ್ಯು ಪಿ ಮತ್ತು ಪ್ಯಾರಾಕ್ವಾಟ್ 24 ಎಸ್ ಎಲ್ ಅನ್ನು ಕಳೆಯ ಮೇಲ್ಭಾಗವನ್ನು ನಿಯಂತ್ರಿಸುವ ಜೈವಿಕ ಸಫಲತೆಯ ಹೋಲಿಸಲಾಗುತ್ತದೆ. ಈ ಪ್ರಯೋಗವನ್ನು ಯಾದ್ರಿಚ್ಛಿಕ ಸಂಪೂರ್ಣ ವಿನ್ಯಾಸದಲ್ಲಿ 3 ಪರಿವರ್ತನೆಗಳೊಂದಿಗೆ ಪರೀಕ್ಷಿಸಲಾಯಿತು. ಕಳೆನಾಶಕಗಳ ಸಿಂಪರಣೆಯಾದ 67 ದಿನಗಳ ನಂತರ, ಒಣಗಿದ ಮತ್ತು ಹೊಸ ಕಿಡಿಗಳ ಎಣಿಕೆಯನ್ನು ದಾಖಲಿಸಿ ಮತ್ತು ಕೋಷ್ಟಕ 1 ರಲ್ಲಿ ಪ್ರಸ್ತುತಪಡಿಸಲಾಗಿದೆ.

ಪ್ರಯೋಗ 2: ಆಂಬ್ರೋಸಿಯ ನಿರ್ವಹಣೆಗೆ ಉದಯೋತ್ತರ ಕಳೆನಾಶಕಗಳ ಬಳಕೆ

ಆರಂಭಿಕ ಪ್ರಯೋಗದ ವಿಚಾರಣೆಯ ಆಧಾರದ ಮೇಲೆ, ಎಂ. ಬೇವನಹಳ್ಳಿಯಳ್ಳಿ ಆಂಬ್ರೋಸಿಯಾ ಕಳೆಯ ಮೇಲ್ಭಾಗದ ಒಣಗುವಿಕೆಯನ್ನು ಉಂಟುಮಾಡಲು ಹೊಸ ಉದಯೋತ್ತರ ಕಳೆನಾಶಕಗಳನ್ನು ಅಂದರೆ 2,4–ಡಿ ಸೋಡಿಯಂ ಲವಣ ಮತ್ತು ಕ್ಲೋರಿಮ್ಯೂರಾನ್ ಈಥೈಲ್ + ಮೆಟಸಲ್ಫೂರಾನ್ ಮೀಥೈಲ್ 20 (ಶೇ.60–80) ಉಂಟಾಗಿದ್ದು, ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 7.5 ಮಿ.ಲೀ./ಲೀಟರ್ ನೀರಿಗೆ ಶೇ.52ರಷ್ಟು ಮಾತ್ರ ಕುಡಿಗಳ ಮೇಲ್ಭಾಗ ಒಣಗುವಿಕೆ ಉಂಟಾಗಿರುತ್ತದೆ. ಎಲ್ಲಾ ಸಿಂಪರಣೆ ಮಾಡಿದ ಮಡಿಗಳಲ್ಲಿ ಆರಂಭಿಕ ನಿರ್ಜಲೀಕರಣದ ನಂತರ ಕಳೆಯ ಪುನರ್ಜನ್ಮ ಗಮನಿಸಲಾಗಿದೆ. ಹೀಗಾಗಿ, ಕಳೆ ಇರುವ ಪ್ರದೇಶದಲ್ಲಿ ಕಳೆಯನ್ನು ಸಂಪೂರ್ಣವಾಗಿ ನಾಶಮಾಡಲು ನಿಯತಕಾಲಿಕವಾಗಿ 2 ರಿಂದ 3 ತಿಂಗಳಿಗೊಮ್ಮೆ ಕಳೆನಾಶಕದ ಸಿಂಪರಣೆ ಅಗತ್ಯವಿದೆ.

ಕೋಷ್ಟಕ 1: ಆಂಬ್ರೋಸಿಯ ನಿರ್ವಹಣೆಯಲ್ಲಿ ಉದಯೋತ್ತರ ಕಳೆನಾಶಕಗಳ ಜೈವಿಕ ಸಫಲತೆ

ಕಳೆನಾಶಕಗಳ ಉಪಚಾರಗಳು	ಒಟ್ಟು ಗಿಡಗಳ ಸಂಖ್ಯೆ/ ಮೀ.			ಒಣಗಿದ ಮೇಲ್ಭಾಗದ ಶೇಕಡ (67 ದಿ.ನಂ)
	ಅ	ಆ	ಸರಾಸರಿ	
$ಉ_1$– ಗ್ಲೈಫೋಸೇಟ್ 41 ಎಸ್ ಎಲ್ 10ಮಿ.ಲೀ./ಲೀಟರ್ ನೀರಿಗೆ	64	82	73.0	49.7
$ಉ_2$: ಗ್ಲೈಫೋಸೇಟ್ 41 ಎಸ್ ಎಲ್ 15 ಮಿ.ಲೀ./ಲೀಟರ್ ನೀರಿಗೆ	51	58	54.5	62.4
$ಉ_3$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 5 ಮಿ.ಲೀ./ಲೀಟರ್ ನೀರಿಗೆ	78	83	80.5	44.5
$ಉ_4$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 7.5 ಮಿ.ಲೀ./ಲೀಟರ್ ನೀರಿಗೆ	48	91	69.5	52.1
$ಉ_5$: ಗ್ಲೈಫೋಸೇಟ್ 71 ಡಬ್ಲ್ಯು ಪಿ 5 ಗ್ರಾಂ/ಲೀಟರ್ ನೀರಿಗೆ	31	56	43.5	70.0
$ಉ_6$: ಗ್ಲೈಫೋಸೇಟ್ 71 ಡಬ್ಲ್ಯು ಪಿ 7.5 ಗ್ರಾಂ/ಲೀಟರ್ ನೀರಿಗೆ	28	31	29.5	79.7
$ಉ_7$: ಉಪಚಾರವಿಲ್ಲದ ನಿಯಂತ್ರಣ	132	158	145.0	12.8#

#– ಆರಂಭಿಕ ಎಣಿಕೆಯ ಕುಡಿಗಳ ಮೇಲೆ 128.5/ಚ.ಮೀ ಏರಿಕೆ, ಅ ಮತ್ತು ಆ– ತಾಣಗಳ ಸಂಖ್ಯೆ, ದಿ.ನಂ– ದಿನಗಳ ನಂತರ, ಸಿಂಪರಣೆಯ ದಿನಾಂಕ: 25–02–2012 ಮತ್ತು ಎಣಿಕೆ: 03–05–2012 ರಂದು

ವಿವರಗಳು: ಗ್ಲೈಫೋಸೇಟ್ 41 ಎಸ್ ಎಲ್ 10 ಮಿ.ಲೀ./ಲೀಟರ್ ನೀರಿಗೆ ಅಥವಾ ಗ್ಲೈಫೋಸೇಟ್ 71 ಡಬ್ಲ್ಯು ಪಿ 7.5 ಗ್ರಾಂ/ಲೀಟರ್ ನೀರಿಗೆ ಸಿಂಪರಣೆಯಿಂದ ಹೆಚ್ಚಿನ ಕುಡಿಗಳ ಮೇಲ್ಭಾಗ ಒಣಗುವಿಕೆ ಡಬ್ಲೂ ಪಿ ಗಳನ್ನು ಗ್ಲೈಫೋಸೇಟ್ (41 ಎಸ್ ಎಲ್ & 71 ಡಬ್ಲೂ ಪಿ) ಮತ್ತು ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ ಗಳೊಂದಿಗೆ ಪರೀಕ್ಷಿಸಲಾಯಿತು. ಈ ಪ್ರಯೋಗವನ್ನು ಯಾದ್ರಿಚ್ಛಿಕ ಸಂಪೂರ್ಣ ವಿನ್ಯಾಸದಲ್ಲಿ 3 ಪರಿವರ್ತನೆಗಳೊಂದಿಗೆ ಪರೀಕ್ಷಿಸಲಾಯಿತು. ಕಳೆನಾಶಕಗಳ ಜೈವಿಕ ಪರಿಣಾಮಕಾರಿತ್ವದ ಫಲಿತಾಂಶವನ್ನು ಕೋಷ್ಟಕ 2 ಮತ್ತು ಕಳೆ ಸಸ್ಯದ ಎತ್ತರ, ಒಟ್ಟು ಎಲೆಗಳ ಸಂಖ್ಯೆ/ಸಸ್ಯ ಮತ್ತು ಒಟ್ಟು ಕವಲುಗಳ ಸಂಖ್ಯೆ/ಸಸ್ಯ ಕೋಷ್ಟಕ 3 ರಲ್ಲಿ ಒದಗಿಸಲಾಗಿದೆ.

ಕೋಷ್ಟಕ 2: ಆಂಬ್ರೋಸಿಯ ಕಳೆಯ ಮೇಲ್ಭಾಗದ ಒಣಗುವಿಕೆಯಲ್ಲಿ ಉದಯೋತ್ತರ ಕಳೆನಾಶಕಗಳ ಜೈವಿಕ ಸಫಲತೆ

ಕಳೆನಾಶಕಗಳ ಉಪಚಾರಗಳು	ಒಟ್ಟು ಗಿಡಗಳ ಸಂಖ್ಯೆ/ ಚ.ಮೀ.			ಒಣಗಿದ ಮೇಲ್ಭಾಗದ ಶೇಕಡ (50 ದಿ. ನಂ)
	ಅ	ಆ	ಸರಾಸರಿ	
$ಉ_1$– ಗ್ಲೈಫೋಸೇಟ್ 41 ಎಸ್ ಎಲ್ 10 ಮಿ.ಲೀ./ ಲೀಟರ್ ನೀರಿಗೆ + ಆಕ್ಟಿಪ್ಲೋರೋಫೆನ್ 23.5 ಇಸಿ 0.5 ಮಿ.ಲೀ./ ಲೀಟರ್ ನೀರಿಗೆ	65	23	44.0	61.9
$ಉ_2$: ಗ್ಲೈಫೋಸೇಟ್ 41 ಎಸ್ ಎಲ್ 15 ಮಿ.ಲೀ./ಲೀಟರ್ ನೀರಿಗೆ + ಆಕ್ಟಿಪ್ಲೋರೋಫೆನ್ 23.5 ಇಸಿ 0.5 ಮಿ.ಲೀ./ ಲೀಟರ್ ನೀರಿಗೆ	32	86	59.0	48.9
$ಉ_3$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 5 ಮಿ.ಲೀ./ಲೀಟರ್ ನೀರಿಗೆ + ಅಟ್ರಾಸಿನ್ 50 ಡಬ್ಲ್ಯೂ ಪಿ 2 ಗ್ರಾಂ/ ಲೀಟರ್ ನೀರಿಗೆ	72	123	97.5	15.6
$ಉ_4$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 7.5 ಮಿ.ಲೀ./ಲೀಟರ್ ನೀರಿಗೆ + ಅಟ್ರಾಸಿನ್ 50 ಡಬ್ಲ್ಯೂ ಪಿ 2 ಗ್ರಾಂ/ ಲೀಟರ್ ನೀರಿಗೆ	89	96	92.5	19.9
$ಉ_5$: ಗ್ಲೈಫೋಸೇಟ್ 71 ಡಬ್ಲ್ಯೂ ಪಿ 5 ಗ್ರಾಂ/ಲೀಟರ್ ನೀರಿಗೆ	35	58	46.5	59.7
$ಉ_6$: ಗ್ಲೈಫೋಸೇಟ್ 71 ಡಬ್ಲ್ಯೂ ಪಿ 7.5 ಗ್ರಾಂ/ಲೀಟರ್ ನೀರಿಗೆ	52	19	35.5	69.3
$ಉ_7$: 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 2 ಗ್ರಾಂ/ಲೀಟರ್ ನೀರಿಗೆ	48	12	30.0	74.0
$ಉ_8$: 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 4 ಗ್ರಾಂ/ಲೀಟರ್ ನೀರಿಗೆ	26	30	28.0	75.8
$ಉ_9$: ಕ್ಲೋರಿಮ್ಯೂರಾನ್ ಈಥೈಲ್+ ಮೆಟಸಲ್ಫೂರಾನ್ ಮೀಥೈಲ್ 20 ಡಬ್ಲ್ಯೂ ಪಿ 0.15 ಗ್ರಾಂ/ಲೀಟರ್ ನೀರಿಗೆ	78	69	73.5	36.4
$ಉ_{10}$: ಉಪಚಾರವಿಲ್ಲದ ನಿಯಂತ್ರಣ	98	133	115.5	□

#– ಆರಂಭಿಕ ಎಣಿಕೆ 142.5 / ಚ.ಮೀ ಏರಿಕೆ, ಅ ಮತ್ತು ಆ– ತಾಣಗಳ ಸಂಖ್ಯೆ / ಉಪಚಾರ, ದಿ. ನಂ– ದಿನಗಳ ನಂತರ ಸಿಂಪರಣೆಯ ದಿನಾಂಕ: 03–05–2012 ಮತ್ತು ಎಣಿಕೆ: 22–06–2012 ರಂದು

ಕೋಷ್ಟಕ 3: ಎಂ.ಬೇವನಹಳ್ಳಿಯಲ್ಲಿ ಕಳೆನಾಶಕಗಳ ಸಿಂಪರಣೆ (50 ದಿ. ನಂ) ಆಂಬ್ರೋಸಿಯ ಕಳೆ ಸಸ್ಯದ ಎತ್ತರ (ಸೆಂ.ಮೀ.), ಒಟ್ಟು ಎಲೆಗಳ ಸಂಖ್ಯೆ ಮತ್ತು ಒಟ್ಟು ಕವಲುಗಳ ಸಂಖ್ಯೆ/ಸಸ್ಯ

ಕಳೆನಾಶಕಗಳ ಉಪಚಾರಗಳು	ಕಳೆಯ ಎತ್ತರ (ಸೆಂ.ಮೀ.)	ಒಟ್ಟು ಎಲೆಗಳ ಸಂಖ್ಯೆ	ಒಟ್ಟು ಕವಲುಗಳ ಸಂಖ್ಯೆ/ಸಸ್ಯ
$ಉ_1$– ಗ್ಲೈಫೋಸೇಟ್ 41 ಎಸ್ ಎಲ್ 10 ಮಿ.ಲೀ./ ಲೀಟರ್ ನೀರಿಗೆ + ಆಕ್ಟಿಪ್ಲೋರೋಫೆನ್ 23.5 ಇಸಿ 0.5 ಮಿ.ಲೀ./ ಲೀಟರ್ ನೀರಿಗೆ	31.7	16.8	1
$ಉ_2$: ಗ್ಲೈಫೋಸೇಟ್ 41 ಎಸ್ ಎಲ್ 15 ಮಿ.ಲೀ./ಲೀಟರ್ ನೀರಿಗೆ + ಆಕ್ಟಿಪ್ಲೋರೋಫೆನ್ 23.5 ಇಸಿ 0.5 ಮಿ.ಲೀ./ ಲೀಟರ್ ನೀರಿಗೆ	34.1	17.2	0
$ಉ_3$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 5 ಮಿ.ಲೀ./ಲೀಟರ್ ನೀರಿಗೆ + ಅಟ್ರಾಸಿನ್ 50 ಡಬ್ಲ್ಯೂ ಪಿ 2 ಗ್ರಾಂ/ ಲೀಟರ್ ನೀರಿಗೆ	39.4	21.8	1
$ಉ_4$: ಪ್ಯಾರಾಕ್ವಾಟ್ ಡೈಕ್ಲೋರೈಡ್ 24 ಎಸ್ ಎಲ್ 7.5 ಮಿ.ಲೀ./ಲೀಟರ್ ನೀರಿಗೆ + ಅಟ್ರಾಸಿನ್ 50 ಡಬ್ಲ್ಯೂ ಪಿ 2 ಗ್ರಾಂ/ ಲೀಟರ್ ನೀರಿಗೆ	35.6	22.1	1
$ಉ_5$: ಗ್ಲೈಫೋಸೇಟ್ 71 ಡಬ್ಲ್ಯೂ ಪಿ 5 ಗ್ರಾಂ/ಲೀಟರ್ ನೀರಿಗೆ	28.6	21.4	0
$ಉ_6$: ಗ್ಲೈಫೋಸೇಟ್ 71 ಡಬ್ಲ್ಯೂ ಪಿ 7.5 ಗ್ರಾಂ/ಲೀಟರ್ ನೀರಿಗೆ	22.7	16.4	1

$ಉ_7$: 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 2 ಗ್ರಾಂ/ಲೀಟರ್ ನೀರಿಗೆ	27.2	12.0	0
$ಉ_8$: 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 4 ಗ್ರಾಂ/ಲೀಟರ್ ನೀರಿಗೆ	26.1	14.7	0
$ಉ_9$:ಕ್ಲೋರಿಮ್ಯೂರಾನ್ ಈಥೈಲ್+ ಮೆಟಸಲ್ಫೂರಾನ್ ಮೀಥೈಲ್ 20 ಡಬ್ಲ್ಯೂ ಪಿ 0.15 ಗ್ರಾಂ/ಲೀಟರ್ ನೀರಿಗೆ	35.3	16.7	1
$ಉ_{10}$: ಉಪಚಾರವಿಲ್ಲದ ನಿಯಂತ್ರಣ	64.3	28.1	1

ವಿವರಗಳು:: ಕಳೆನಾಶಕಗಳ ಸಿಂಪರಣೆಯ 50 ದಿನಗಳ ನಂತರ, ಗ್ಲೈಫೋಸೇಟ್ 41 ಎಸ್ ಎಲ್ 10ಮಿ.ಲೀ./ ಲೀಟರ್ ನೀರಿಗೆ + ಆಕ್ಸಿಪ್ಲೋರೋಫೆನ್ 23.5 ಇಸಿ 0.5 ಮಿ.ಲೀ./ ಲೀಟರ್ ನೀರಿಗೆ, ಗ್ಲೈಫೋಸೇಟ್ 71 ಡಬ್ಲ್ಯೂ ಪಿ 7.5 ಗ್ರಾಂ/ಲೀಟರ್ ನೀರಿಗೆ ಸಿಂಪರಣೆಯಿಂದ ಶೇ.62–69ರಷ್ಟು ಆಂಬ್ರೋಸಿಯಾ ಕಳೆಯ ಮೇಲ್ಭಾಗದ ಒಣಗುವಿಕೆಯನ್ನು ಹೋಲಿಸಿದರೆ 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 2–4 ಗ್ರಾಂ/ಲೀಟರ್ ನೀರಿಗೆ ಸಿಂಪರಣೆಯಿಂದ ಹೆಚ್ಚಿನ (ಶೇ.74–76ರಷ್ಟು) ಕಳೆಯ ಮೇಲ್ಭಾಗದ ಒಣಗುವಿಕೆಯನ್ನು ಉಂಟುಮಾಡುರುತ್ತದೆ. ಉಪಚಾರವಿಲ್ಲದ ನಿಯಂತ್ರಣದಲ್ಲಿ, ಆಂಬ್ರೋಸಿಯಾ ಕಳೆಯಲ್ಲಿ ಯಾವುದೇ ಚಿಗುರುಗಳ ಸಂಖ್ಯೆಯ ಏರಿಕೆ ಕಂಡುಬಂದಿರುವುದಿಲ್ಲ (115.5/ಚ. ಮೀ. 22–06–2012 ರಂದು 142.5/ಚ. ಮೀ. 03–05–2012ರ ವಿರುದ್ಧ). ಹೀಗಾಗಿ, ಗ್ಲೈಫೋಸೇಟ್ 41 ಎಸ್ ಎಲ್ 10ಮಿ.ಲೀ./ ಲೀಟರ್ ನೀರಿಗೆ, ಗ್ಲೈಫೋಸೇಟ್ 71 ಡಬ್ಲ್ಯೂ ಪಿ 7.5 ಗ್ರಾಂ/ಲೀಟರ್ ನೀರಿಗೆ ಮತ್ತು 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 2–4 ಗ್ರಾಂ/ಲೀಟರ್ ನೀರಿಗೆ ಸಿಂಪರಣೆಯಿಂದ ಕಳೆ ಹಾವಳಿಯ ಪ್ರಮಾಣದಲ್ಲಿ ಕಡಿಮೆ ಕಂಡುಬಂದಿದೆ.

ಪ್ರಯೋಗ 3: ಆಂಬ್ರೋಸಿಯಾ ನಿರ್ವಹಣೆಯಲ್ಲಿ ಉದಯೋತ್ತರ ಕಳೆನಾಶಕಗಳ ಮೌಲ್ಯಮಾಪನ

ವಿವರಗಳು: ಆರಂಭಿಕ ಪ್ರಯೋಗದ ವಿಚಾರಣೆಯ ಆಧರಿಸಿ, ಎಂ.ಬೇವನಹಳ್ಳಿಯಲ್ಲಿ ಆಂಬ್ರೋಸಿಯಾ ಕಳೆಯ ಮೇಲೆ ಉದಯೋತ್ತರ ಕಳೆನಾಶಕಗಳಾದ ಗ್ಲೈಫೋಸೇಟ್ 41 ಎಸ್ ಎಲ್ & 71 ಡಬ್ಲ್ಯೂ ಪಿ, 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ, 2,4–ಡಿ ಅಮೈನ್ ಲವಣ 80 ಡಬ್ಲ್ಯೂ ಪಿ, ಗ್ಲೈಫೋಸೇಟ್ 41 ಎಸ್ ಎಲ್ & 71 ಡಬ್ಲ್ಯೂ ಪಿ ಜೊತೆ 2,4–ಡಿ ಸೋಡಿಯಂ ಲವಣನ್ನು, ಕಳೆಯನ್ನು ಬೇರುಸಹಿತವಾಗಿ ತೆಗೆದು ಹಾಗೂ ಉಪಚಾರವಿಲ್ಲದ ನಿಯೋತ್ರಣ ದೊಂದಿಗೆ ಪರೀಕ್ಷಿಸಲಾಯಿತು. ಈ ಪ್ರಯೋಗದ ಉಪಚಾರಗಳನ್ನು ಯಾದ್ರಿಚ್ಛಿಕ ಸಂಪೂರ್ಣ ವಿನ್ಯಾಸದಲ್ಲಿ 3 ಪರಿವರ್ತನೆಗಳೊಂದಿಗೆ ಪರೀಕ್ಷಿಸಲಾಯಿತು. ಕಳೆನಾಶಕಗಳ ಜೈವಿಕ ಪರಿಣಾಮಕಾರಿತ್ವದ ಫಲಿತಾಂಶವನ್ನು ಕೋಷ್ಟಕ 4 ರಲ್ಲಿ 23, 37 ಮತ್ತು 65 ದಿನಗಳ ಹಂತಗಳ ಅವಧಿಯಲ್ಲಿ ಒದಗಿಸಲಾಗಿದೆ. ಈ ಕೋಷ್ಟಕದಲ್ಲಿ ಪ್ರತೀ ಹಂತದಲ್ಲಿನ ಒಣಗಿದ ಕಾಂಡಗಳ ಸಂಖ್ಯೆ ಒದಗಿಸಲಾಗಿದೆ ಮತ್ತು ಕಾಂಡದ ಮೇಲ್ಭಾವದ ಒಣಗುವಿಕೆಯ ಶೇಕಡಾವಾರನ್ನು ಒಟ್ಟು ಒಣಗಿದ ಕಾಂಡಗಳ ಸಂಖ್ಯೆ/ ಚ. ಮೀ. ಆಧಾರದ ಮೇಲೆ ವಿವಿಧ ಒಪಚಾರಗಳನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ.

ಫಲಿತಾಂಶಗಳು: ಸಿಂಪರಣೆ ಮಾಡಿದ 23 ದಿನಗಳ ನಂತರ, ಎಲ್ಲಾ ಕಳೆನಾಶಕ ಅವುಗಳೆಂದರೆ ಗ್ಲೈಫೋಸೇಟ್ 41 ಎಸ್ ಎಲ್ 7.5 ರಿಂದ 12.5 ಮಿ.ಲೀ./ ಲೀಟರ್ ನೀರಿಗೆ, ಗ್ಲೈಫೋಸೇಟ್ 71 ಡಬ್ಲ್ಯೂ ಪಿ 5 ರಿಂದ 6.25 ಗ್ರಾಂ/ ಲೀಟರ್ ನೀರಿಗೆ, 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 2 ರಿಂದ 2.5 ಗ್ರಾಂ/ ಲೀಟರ್ ನೀರಿಗೆ, 2,4–ಡಿ ಅಮೈನ್ ಲವಣ 58 ಇಸಿ 2.75 ರಿಂದ 3.45 ಮಿ. ಲೀ./ ಲೀಟರ್ ನೀರಿಗೆ, ಗ್ಲೈಫೋಸೇಟ್ 41 ಎಸ್ ಎಲ್ 10 ಮಿ.ಲೀ./ ಲೀಟರ್ ನೀರಿಗೆ, ಅಥವಾ ಗ್ಲೈಫೋಸೇಟ್ 71 ಡಬ್ಲ್ಯೂ ಪಿ 5.0 ಗ್ರಾಂ/ ಲೀಟರ್ ನೀರಿಗೆ ಜೊತೆ 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 2.0 ಗ್ರಾಂ/ಲೀಟರ್ ನೀರಿಗೆ ಶೇಕಡ 95 ರಿಂದ 99 ರವರೆಗೆ ಕಳೆಯ ಮೇಲ್ಭಾಗವನ್ನು ನಾಶಮಾಡುತ್ತದೆ. ಕಳೆಯನ್ನು ಬೇರುಸಹಿತವಾಗಿ ತೆಗೆದು ಹಾಗೂ ಉಪಚಾರವಿಲ್ಲದ ನಿಯೋತ್ರಣದೊಂದಿಗೆ ಪರೀಕ್ಷೆಯಲ್ಲಿ, ಒಟ್ಟು ಕಾಂಡಗಳ ಸಂಖ್ಯೆ/ಚ. ಮೀ. ಗೆ ಆರಂಭಿಕ 52.0/ ಚ. ಮೀ. ಮತ್ತು 36/ ಚ. ಮೀ. ರಿಂದ 161ಕ್ಕೆ ಏರಿಕೆಯಾಗಿದೆ (ಕೋಷ್ಟಕ 4). ಆದಾಗ್ಯೂ, ಸಿಂಪರಣೆಯಾದ 37 ದಿನಗಳ ನಂತರ ಎಲ್ಲಾ ಉಪಚಾರಗಳಲ್ಲಿ ಕಾಂಡಗಳ ಸಂಖ್ಯೆ ಹೆಚ್ಚಾಗಿರುವುದು ಬಹುಶಃ ಸ್ವಲ್ಪ ಮಳೆಯಾದ ಕಾರಣ ಬೇರಿನ ಕುಡಿಗಳ ಹುಟ್ಟಿನಿಂದ ಎಂದು ಸೂಚಿಸುತ್ತದೆ. ಈ ಹಂತದಲ್ಲಿ, 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 2.0 ರಿಂದ 2.5 ಗ್ರಾಂ/ ಲೀಟರ್ ನೀರಿಗೆ, 2,4–ಡಿ ಅಮೈನ್ ಲವಣ 58 ಇಸಿ 2.75 ರಿಂದ 3.45 ಮಿ. ಲೀ./ ಲೀಟರ್ ನೀರಿಗೆ ಮತ್ತು 2,4–ಡಿ ಸೋಡಿಯಂ ಲವಣ 80 ಡಬ್ಲ್ಯೂ ಪಿ 2.0 ಗ್ರಾಂ/ ಲೀಟರ್ ನೀರಿಗೆ ಜೊತೆಯಲ್ಲಿ ಗ್ಲೈಫೋಸೇಟ್ 71 ಡಬ್ಲ್ಯೂ ಪಿ 5.0 ಗ್ರಾಂ/ ಲೀಟರ್ ನೀರಿಗೆ ಶೇಕಡ 62 ರಿಂದ 82ರಷ್ಟು ಕಳೆಯ ಮೇಲ್ಭಾಗ ನಶಿಶುರುತ್ತದೆ, 2,4–ಡಿ ಸೋಡಿಯಂ ಲವಣ ಅಥವಾ ಅಮೈನ್ ಲವಣವು ಆಂಬ್ರೋಸಿಯಾದ ಹೊಸ ಕಾಂಡದ ಚಿಗುರನ್ನು ಕಡಿಮೆ ಮಾಡುವಲ್ಲಿ ಹೆಚ್ಚು ಪರಿಣಾಮಕಾರಿ ಎಂದು ಸೂಚಿಸುತ್ತದೆ. ಈ ಹಂತದಲ್ಲಿ, ಕಳೆಯನ್ನು ಬೇರುಸಹಿತವಾಗಿ ತೆಗೆಯುವ ಹಾಗೂ ಉಪಚಾರವಿಲ್ಲದ ನಿಯೋತ್ರಣದಲ್ಲಿ, ಕಾಂಡಗಳ ಸಂಖ್ಯೆ/ ಚ. ಮೀ. 104 ಮತ್ತು 278/ ಚ. ಮೀ. ಸಿಂಪರಣೆಯಾದ 23 ದಿನಗಳ ನಂತರದ 36 ಮತ್ತು 161 ಕಾಂಡ/ ಚ. ಮೀ. ವಿರುದ್ಧ ಗಮನಿಸಲಾಯಿತು.

ಕಳೆನಾಶಕ ಸಿಂಪರಣೆ ಮಾಡಿದ 65 ದಿನಗಳ ನಂತರ, ಗ್ಲೈಫೋಸೇಟ್ 12.5 ಮಿ.ಲೀ./ ಲೀಟರ್ ನೀರಿಗೆ, 2,4–ಡಿ ಅಮೈನ್ ಲವಣ 3.45 ಮಿ.ಲೀ./ ಲೀಟರ್ ನೀರಿಗೆ, ಗ್ಲೈಫೋಸೇಟ್ 71 ಡಬ್ಲ್ಯೂ ಪಿ 6.25 ಗ್ರಾಂ/ ಲೀಟರ್ ನೀರಿಗೆ ಜೊತೆ 2,4–ಡಿ ಸೋಡಿಯಂ ಲವಣ 80

ಡಬ್ಲೂ ಪಿ 2.0 ಗ್ರಾಂ/ ಲೀಟರ್ ನೀರಿಗೆ ಜೊತೆಯಲ್ಲಿ ಗ್ಲೈಫೋಸೇಟ್ 41 ಎಸ್ ಎಲ್ 10 ಮಿ.ಲೀ./ ಲೀಟರ್ ನೀರಿಗೆ ಮತ್ತು 2,4–ಡಿ ಸೋಡಿಯಂ ಲವಣ 80 ಡಬ್ಲೂ ಪಿ 2.5 ಗ್ರಾಂ/ ಲೀಟರ್ ನೀರಿಗೆ ಶೇ.72 ರಿಂದ 97ರಷ್ಟು ಆಂಬ್ರೋಸಿಯಾ ಕಾಂಡವನ್ನು ಸಾಯಿಸುತ್ತದೆ. ಕಳೆಯನ್ನು ಬೇರುಸಹಿತವಾಗಿ ತೆಗೆಯುವ ಹಾಗೂ ಉಪಚಾರವಿಲ್ಲದ ನಿಯಂತ್ರಣದಲ್ಲಿ, ಕಾಂಡಗಳ ಸಂಖ್ಯೆ ಹೆಚ್ಚಾಗಿರುತ್ತದೆ.

ಸಾರಾಂಶ: ಉದಯೋತ್ತರ ಕಳೆನಾಶಕಗಳಾದ ಗ್ಲೈಫೋಸೇಟ್ 12.5 ಮಿ.ಲೀ./ ಲೀಟರ್ ನೀರಿಗೆ, 2,4–ಡಿ ಅಮೈನ್ ಲವಣ 3.45 ಮಿ.ಲೀ./ ಲೀಟರ್ ನೀರಿಗೆ, ಗ್ಲೈಫೋಸೇಟ್ 71 ಡಬ್ಲೂ ಪಿ 6.25 ಗ್ರಾಂ/ ಲೀಟರ್ ನೀರಿಗೆ, 2,4–ಡಿ ಸೋಡಿಯಂ ಲವಣ 80 ಡಬ್ಲೂ ಪಿ 2.0 ಗ್ರಾಂ/ ಲೀಟರ್ ನೀರಿಗೆ ಜೊತೆಯಲ್ಲಿ ಗ್ಲೈಫೋಸೇಟ್ 41 ಎಸ್ ಎಲ್ 10 ಮಿ.ಲೀ./ ಲೀಟರ್ ನೀರಿಗೆ ಅಥವಾ ಗ್ಲೈಫೋಸೇಟ್ 71 ಡಬ್ಲೂ ಪಿ 5 ಗ್ರಾಂ/ ಲೀಟರ್ ನೀರಿಗೆ ಮತ್ತು 2,4–ಡಿ ಸೋಡಿಯಂ ಲವಣ 80 ಡಬ್ಲೂ ಪಿ 2.5 ಗ್ರಾಂ/ ಲೀಟರ್ ನೀರಿಗೆ ಬಳಸುವುದರಿಂದ ಆಂಬ್ರೋಸಿಯಾ ಕಳೆಯ ಕಾಂಡಗಳ ಸಂಖ್ಯೆಯನ್ನು ಸಿಂಪರಣೆ ಮಾಡಿದ 65 ದಿನಗಳ ನಂತರ ನವೆಂಬರ್–ಡಿಸೆಂಬರ್ ತಿಂಗಳಿನ ಅವಧಿಯಲ್ಲಿ ಕಡಿಮೆಗೊಳಿಸುವಲ್ಲಿ ಹೆಚ್ಚು ಪರಿಣಾಮಕಾರಿ ಎಂದು ಸೂಚಿಸುತ್ತದೆ. ಈ ಕಳೆನಾಶಕಗಳ ಬಳಕೆಯಿಂದ 23 ದಿನಗಳಲ್ಲಿ ಶೇ. 96 ರಷ್ಟು ಕಳೆಯ ಮೇಲ್ಭಾಗವು ನಾಶವಾದರೂ ಸಹ, ಮಳೆಯ ಕಾರಣದಿಂದ ಭೂಮಿಯ ಹೊಳಭಾಗದ ಬೇರಿನ ಚಿಗುರಿನಿಂದ ಹೊಸ ಕಾಂಡಗಳು ಹೊರಬರುತ್ತವೆ.

ಚಿತ್ರ 1: ಕಾಡು ದವನದ ಗಿಡ – ತುದಿಯಲ್ಲಿ ಗಂಡು ಹೂವು, ಕೆಳ ಭಾಗದಲ್ಲಿ ಹೆಣ್ಣು ಹೂವು, ಬೀಜವು ಮೊಳಕೆಯಾಗುತ್ತಿಲ್ಲ



ಚಿತ್ರ 2. ಕಾಡು ದವನವು ಬೇರಿನ ಮುಖಾಂತರ ಹರಡುತ್ತಿದೆ – ಬೇರಿನಿಂದ ಹೊಸ ಚಿಗುರು ಬಂದಿರುವುದು ಕಾಣಬಹುದು

ಚಿತ್ರ 3. ಆಬ್ರೋಸಿಯಾ ಕಳೆ ಇರುವ ಪ್ರದೇಶಗಳಲ್ಲಿ ಕಳೆನಾಶಕದ ಸಿಂಪರಣೆ ಮಾಡುತ್ತಿರುವುದು

ಚಿತ್ರ 4. ಉದಯೋತ್ತರ ಕಳೆನಾಶಕದ ಸಿಂಪರಣೆಯಿಂದ ಆಬ್ರೋಸಿಯಾ ಕಳೆ ಒಣಗಿರುವುದು.

ಆಧಾರಗಳು: ಬಝೂಝ್ ಎಫ್.ಎ., 1970. ಸೆಕೆಂಡರೀ ಡಾರ್ಮೆನ್ಸಿ ಇನ್ ದಿ ಸೀಡ್ಸ್ ಆಫ್ ದಿ ಕಾಮನ್ ರಾಗ್‌ವೀಡ್–ಆಬ್ರೋಸಿಯಾ ಆರ್ಟೆಮಿಸೀಫೋಲಿಯಾ. ಬುಲ್ಲೆಟಿನ್ ಆಫ್ ದಿ ಟೊರ್ರೆ ಬಟಾನಿಕಲ್ ಕ್ಲಬ್, 97:302–305.

ಹಜ್ರ ಪಿ.ಕೆ, ರಾವ್ ಆರ್.ಆರ್ ಮತ್ತು ಉನಿಯಾಲ್ ಬಿ.ಪಿ. 1995. ಫ್ಲೋರಾ ಆಫ್ ಇಂಡಿಯಾ. ಆಸ್ಟರೇಸಿಯೆ ಆನ್ಥೆಮಿಡೆಯೆ ಹೆಲಿನಥೆಯೆ. ಬಟಾನಿಕಲ್ ಸರ್ವೆ ಆಫ್ ಇಂಡಿಯಾ, ಕಲ್ಕತ್ತ, ವಾಲ್.12,ಪಿಪಿ.1–454.

ಲೇವಿಸ್ ಎ.ಜೆ., 1973. ರ್ಯಾಗ್‌ವೀಡ್ ಕಂಟ್ರೋಲ್ ಟೆಕ್ನಿಕ್ಸ್:ಎಫೆಕ್ಟ್ ಆನ್ ಒಲ್ಡ್–ಫೀಲ್ಡ್ ಪ್ಲಾಂಟ್ ಪಾಪುಲೇಷನ್. ಬುಲ್ಲೆಟಿನ್ ಆಫ್ ದಿ ಟೊರ್ರೆ ಬಟಾನಿಕಲ್ ಕ್ಲಬ್, 1000(6):333–338.

ಫೇನ್, ಡಬ್ಲೂ. ಡಬ್ಲೂ, 1963. ದಿ ಮಾರ್ಫಾಲಜಿ ಆಫ್ ದಿ ಇನ್ವೋರೆಸೆನ್ಸ್ ಆಫ್ ರ್ಯಾಗ್‌ವೀಡ್ಸ್ (ಆಬ್ರೋಸಿಯಾ–ಫ್ರನೇರಿಯಾ:ಕಾಂಪೋಸಿಟೆ). ಅಮೇರಿಕನ್ ಜರ್ನಲ್ ಆಫ್ ಬಾಟನಿ 50(9):872–80.

ದೇಸಿ ಕೋಳಿಗಳಲ್ಲಿ ಕೋಲಿಬ್ಯಾಸಿಲ್ಲೋಸಿಸ್ ರೋಗ: ಒಂದು ವರದಿ

ಡಾ. ರವಿಕುಮಾರ್ ಪಿ., ಡಾ. ಹೇಮಂತ್ ಗೌಡ ಕೆ., ಮತ್ತು ಡಾ. ಮಧುಸೂಧನ್ ಹೆಚ್.ಎಸ್.
ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

ಹಾಸನದ ಹತ್ತಿರದ ಖಾಸಗಿ ಕುಕ್ಕುಟ ಕ್ಷೇತ್ರವೊಂದರಲ್ಲಿ ದೇಸಿ ಕೋಳಿಗಳಲ್ಲಿ ಕಂಡುಬಂದ ಕೋಲಿಬ್ಯಾಸಿಲ್ಲೋಸಿಸ್ ಎಂಬ ರೋಗದ ಬಗ್ಗೆ ಈ ಅಧ್ಯಯನದಲ್ಲಿ ವರದಿ ಮಾಡಲಾಗಿದೆ. ಈ ಕುಕ್ಕುಟ ಕ್ಷೇತ್ರದಲ್ಲಿ ಸುಮಾರು 1000 ದೇಸಿ ಕೋಳಿಗಳನ್ನು ಸಾಕಲಾಗುತ್ತಿದ್ದು ಒಂದು ವಾರದಿಂದ ಅನೇಕ ಕೋಳಿಗಳು ಆಹಾರ ಸೇವಿಸಲು ನಿರಾಸಕ್ತ ತೋರಿಸಿ ತೀವ್ರವಾದ ಉಸಿರಾಟದ ತೊಂದರೆ ಹಾಗೂ ಭೇದಿಯಿಂದ ಬಳಲುತ್ತಿರುವುದು ಮತ್ತು ಕೋಳಿಗಳ ಸಾವಿನ ಪ್ರಮಾಣದಲ್ಲಿ ಗಣನೀಯ ಏರಿಕೆಯಾಗಿದುವುದು ಕಂಡುಬಂದಿತು. ಕುಕ್ಕುಟ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಕೋಳಿಮನೆಯಲ್ಲಿ ಕೋಳಿಗಳ ಸಾಂದ್ರತೆ ಹೆಚ್ಚಾಗಿರುವುದು ಹಾಗೂ ಸಾಕುವಿಕೆಯಲ್ಲಿ ನೈರ್ಮಲ್ಯದ ಕೊರತೆ ಎದ್ದು ಕಾಣುವಂತಿತ್ತು. ಶೇ. 10 ಕ್ಕೂ ಹೆಚ್ಚಿನ ಕೋಳಿಗಳು ಸಾಧಾರಣದಿಂದ ತೀವ್ರವಾದ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದು ಊದಿಕೊಂಡ ಮುಖ, ಮುಚ್ಚಿಕೊಂಡ ಕಣ್ಣುಗಳು, ಆಹಾರ ಸೇವನೆಯಲ್ಲಿ ನಿರಾಸಕ್ತಿ, ಭೇದಿ, ಮಂಕಾಗಿರುವಿಕೆ ಮುಂತಾದ ಲಕ್ಷಣಗಳನ್ನು ತೋರಿಸುತ್ತಿದ್ದವು. ಸತ್ತ/ ಸಾಯುವ ಸ್ಥಿತಿಯಲ್ಲಿದ್ದ ಕೋಳಿಗಳನ್ನು ಸಂಪೂರ್ಣವಾಗಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿದಾಗ ಕೋಲಿಬ್ಯಾಸಿಲ್ಲೋಸಿಸ್ ರೋಗದ ನಿರ್ದಿಷ್ಟ ಗುಣಲಕ್ಷಣಗಳು ಕಂಡುಬಂದವು– ಊದಿಕೊಂಡ ಹಾಗೂ ರಕ್ತವೇರಿದ ಶ್ವಾಸಕೋಶ, ಹೃದಯ, ಯಕೃತ್ತು, ಮೂತ್ರಪಿಂಡ ಹಾಗೂ ಗಾಳಿ ಚೀಲಗಳು, ಹೃದಯ ಹಾಗೂ ಯಕೃತ್ತಿನ ಹೊರಭಾಗದಲ್ಲಿ ಮತ್ತು ಗಾಳಿ ಚೀಲಗಳಲ್ಲಿ ಫೈಬ್ರಿನ್ ಹೊದಿಕೆ, ಸಣ್ಣಕರುಳಿನ ಉರಿಯೂತ ಮುಂತಾದ ಲಕ್ಷಣಗಳು ಗೋಚರಿಸಿದವು. ಯಕೃತ್ತು, ಹೃದಯ, ಗಾಳಿ ಚೀಲ ಹಾಗೂ ಸಣ್ಣಕರುಳಿನಿಂದ ಸಂಗ್ರಹಿಸಲಾದ ಮಾದರಿಗಳನ್ನು ಪ್ರಯೋಗಾಲಯದಲ್ಲಿ ಮೆಕಾಂಕಿ ಮತ್ತು ಇ.ಎಂ.ಬಿ. ಅಗಾರ್‌ಗಳ ಮೇಲೆ ಬೆಳಸಿದಾಗ ಇ.ಕೋಲಿ ಗುಂಪಿಗೆ ಸೇರಿದ ಸೂಕ್ಷ್ಮಾಣುಜೀವಿಗಳು ಇರುವುದು ಧೃಡಪಟ್ಟಿತು. ಸತ್ತ ಕೋಳಿಗಳಿಂದ ಸಂಗ್ರಹಿಸಿದ ವಿವಿಧ ಅಂಗಾಂಗಗಳನ್ನು ಮಾಪಕರೋಗಶಾಸ್ತ್ರದ (Histopathology) ಪದ್ಧತಿಗಳ ಪ್ರಕಾರ ಅಧ್ಯಯನ ಮಾಡಿದಾಗ ಯಕೃತ್ತಿನ ಮಧ್ಯದ ಅಪಧಮನಿ ಹಾಗೂ ಇತರೇ ಸಣ್ಣ ರಕ್ತನಾಳಗಳಲ್ಲಿ ಕೆಂಪುರಕ್ತಕಣಗಳು ಹೆಚ್ಚಾಗಿರುವುದು, ಯಕೃತ್ತಿನ ಜೀವಕೋಶಗಳ ಕ್ಷಯಿಸುವಿಕೆ, ಸಣ್ಣಕರುಳಿನ ಅಪಧಮನಿಗಳ ರಕ್ತವೇರುವಿಕೆ, ಗಾಬ್ಲೆಟ್ ಜೀವಕೋಶಗಳ ಅತಿವೃದ್ಧಿ, ಹೃದಯದ ಹೊರಚೀಲ ಹಾಗೂ ಸ್ನಾಯುಗಳ ಉರಿಯೂತ ಮತ್ತು ಗಾಳಿ ಚೀಲಗಳಲ್ಲಿ ರಕ್ತವೇರುವಿಕೆ ಹಾಗೂ ರಕ್ತಸ್ರಾವದ ಲಕ್ಷಣಗಳು ಕಂಡುಬಂದವು. ಈ ಎಲ್ಲಾ ಕಾರಣಗಳಿಂದಾಗಿ ಸದರೀ ದೇಸಿ ಕೋಳಿಗಳಲ್ಲಿ ನೈರ್ಮಲ್ಯದ ಕೊರತೆ ಹಾಗೂ ಅಧಿಕ ಸಾಂದ್ರತೆಯ ಕಾರಣದಿಂದಾಗಿ ಕೋಲಿಬ್ಯಾಸಿಲ್ಲೋಸಿಸ್ ರೋಗವು ಉಲ್ಬಣಗೊಂಡಿದೆಯೆಂದು ತೀರ್ಮಾನಿಸಲಾಯಿತು.

ಪೀಠಿಕೆ: ಭಾರತದಾದ್ಯಂತ ಕೋಳಿ ಸಾಕಾಣಿಕೆ ಒಂದು ಬೃಹತ್ ಉದ್ಯಮವಾಗಿ ಬೆಳೆದಿದ್ದು ಲಕ್ಷಾಂತರ ಜನರಿಗೆ ಜೀವನೋಪಾಯಕ್ಕೆ ದಾರಿಯಾಗಿರುವುದಲ್ಲದೇ ದೇಶದ ಆಂತರಿಕ ಉತ್ಪನ್ನಕ್ಕೆ ಗಣನೀಯ ಕೊಡುಗೆ ನೀಡುತ್ತಿದೆ. ಇತ್ತೀಚಿನ ದಿನಗಳಲ್ಲಿ ದೇಸಿ ಕೋಳಿಗಳ ಮಾಂಸ ಹಾಗೂ ಮೊಟ್ಟೆಗಳಿಗೆ ಭಾರೀ ಬೇಡಿಕೆಯಿದ್ದು ಬಹಳಷ್ಟು ರೈತರು ದೇಸಿ ಕೋಳಿಗಳನ್ನು ಸಾಂಪ್ರದಾಯಿಕ/ ಆಧುನಿಕ ಪದ್ಧತಿಗಳಲ್ಲಿ ಬೆಳೆಯುತ್ತಿದ್ದಾರೆ. ಕೋಳಿಗಳ ಜೀರ್ಣಾಂಗದಲ್ಲಿ ಇಸ್ಚಿರಿಷಿಯಾ ಕೋಲಿ ಮುಂತಾದ ರೋಗಾಣುಗಳು ಸಾಮಾನ್ಯವಾಗಿ ಕೂಡುಜೀವಿಗಳಾಗಿ ಬೀಡುಬಿಟ್ಟಿರುತ್ತವೆ. ಆದರೆ ಕೋಳಿಮನೆಗಳಲ್ಲಿ ಅಧಿಕ ಸಾಂದ್ರತೆ, ನೈರ್ಮಲ್ಯದ ಕೊರತೆ, ಗಾಳಿಯ ಕೊರತೆ, ವಾತಾವರಣದ ಏರುಪೇರು ಮುಂತಾದ ಕಾರಣಗಳಿಂದಾಗಿ ಇವೇ ಸೂಕ್ಷ್ಮಾಣುಜೀವಿಗಳು ರೋಗಕಾರಕ ಜೀವಾಣುಗಳಾಗಿ ಪರಿವರ್ತನೆ ಹೊಂದಿ ಗಾಳಿಚೀಲಗಳ ಉರಿಯೂತ, ಹೃದಯದ ಹೊರಕವಚದ ಉರಿಯೂತ, ಉದರಾವರಣ ಪೊರೆಯ ಉರಿಯೂತ, ಯಕೃತ್ತು ಹಾಗೂ ಮೂತ್ರಪಿಂಡದ ಉರಿಯೂತ, ಜೀವಕೋಶಗಳ ಕ್ಷಯಿಸುವಿಕೆಯನ್ನು ಉಂಟುಮಾಡುತ್ತವೆ (Goswami *et al.*, 2004).

ವಿದೇಶಿ ಕೋಳಿಗಳಿಗೆ ಹೋಲಿಸಿದರೆ ದೇಸಿ ಕೋಳಿಗಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿದ್ದರೂ ಸಹಾ ಕೆಲವು ಭಾರಿ ಈ ರೀತಿಯ ರೋಗಗಳು ಕಂಡುಬರುತ್ತವೆ (Gangane *et al.*, 2006). ಹಾಸನ ನಗರದ ಸುತ್ತಮುತ್ತ ಗಣನೀಯ ಪ್ರಮಾಣದಲ್ಲಿ ದೇಸಿ ಕೋಳಿಗಳನ್ನು ಸಾಕಲಾಗುತ್ತಿದ್ದು ಅಂತಹಾ ದೇಸಿ ಕೋಳಿ ಕ್ಷೇತ್ರವೊಂದರಲ್ಲಿ ತಲೆದೋರಿದ ಕೋಲಿಬ್ಯಾಸಿಲ್ಲೋಸಿಸ್ ಸಮಸ್ಯೆಯ ಬಗ್ಗೆ ಈ ಲೇಖನದಲ್ಲಿ ವಿವರಿಸಲಾಗಿದೆ.

ರೋಗದ ವರದಿ / ಪರಿಶೀಲನೆ: ಹಾಸನ ನಗರದಿಂದ ಸುಮಾರು 8 ಕಿ.ಮೀ. ದೂರದಲ್ಲಿದ್ದ ದೇಸಿ ಕೋಳಿಗಳಲ್ಲಿ ಆಹಾರ ಸೇವನೆಯಲ್ಲಿ ನಿರಾಸಕ್ತಿ, ಉಸಿರಾಟದ ತೊಂದರೆ ಹಾಗೂ ರಕ್ತಮಿಶ್ರಿತ ಬೇಧಿ ಮುಂತಾದ ಲಕ್ಷಣಗಳು ಕಾಣಿಸಿಕೊಂಡು ಸಾವಿನ ಪ್ರಮಾಣದಲ್ಲಿ ಗಣನೀಯ ಏರಿಕೆಯಾಗಿರುವುದಾಗಿ ಕುಕ್ಕುಟ ಕ್ಷೇತ್ರದ ಮಾಲೀಕರು ವರದಿ ಮಾಡಿದರು. ಸದರೀ ಕ್ಷೇತ್ರದಲ್ಲಿ 6–8 ವಾರಗಳ ಸುಮಾರು 1000 ದೇಸಿ ಕೋಳಿಗಳನ್ನು ಸಾಕಲಾಗುತ್ತಿದ್ದು ಪ್ರತಿನಿತ್ಯ 10 –20 ಕೋಳಿಗಳು ಖಾಯಿಲೆಯಿಂದ ಬಳಲಿ ಸಾವನ್ನಪ್ಪುತ್ತಿರುವುದಾಗಿ ತಿಳಿದು ಬಂದಿತು. ಸದರೀ ಕುಕ್ಕುಟ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ದೇಸಿ ಕೋಳಿಗಳನ್ನು ಕಚ್ಚಾ ಮನೆಯೊಂದರಲ್ಲಿ ದಪ್ಪಸತ್ತೆ ಪದ್ಧತಿಯಲ್ಲಿ ಸಾಕಲಾಗುತ್ತಿದ್ದು ಕೋಳಿ ಮನೆಯಲ್ಲಿ ನೈರ್ಮಲ್ಯದ ಕೊರತೆ ಹಾಗೂ ಅಧಿಕ ಸಾಂದ್ರತೆಯಿರುವುದು ಮೇಲ್ನೋಟಕ್ಕೆ ಕಂಡುಬಂದಿತು. ಆ ಸಮಯದಲ್ಲಿ ಸಾಕಷ್ಟು ಮಳೆಯಾಗುತ್ತಿದ್ದು ಕೋಳಿಗಳನ್ನು ಶೀತದಿಂದ ರಕ್ಷಿಸಲು ಸೂಕ್ತ ವ್ಯವಸ್ಥೆಯಿರಲ್ಲಿಲ್ಲ. ರೋಗದಿಂದ ಬಳಲುತ್ತಿದ್ದ ಕೋಳಿಗಳನ್ನು ಪರೀಕ್ಷಿಸಿದಾಗ ಅವುಗಳಲ್ಲಿ ತೀವ್ರವಾದ ಉಸಿರಾಟದ ತೊಂದರೆ, ಊದಿಕೊಂಡ ಮುಖ, ಕಣ್ಣುಗಳು, ಆಹಾರ ಸೇವನೆಯಲ್ಲಿ ನಿರಾಸಕ್ತಿ, ಮಂಕಾಗಿರುವಿಕೆ, ಕಣ್ಣಿನ ಕೊಡ್ಡರೆಯ ಉರಿಯೂತ, ರಕ್ತಮಿಶ್ರಿತ / ಲೋಳೆಯಾದ ಬೇಧಿ ಮುಂತಾದ ಗುಣಲಕ್ಷಣಗಳು ಕಂಡುಬಂದವು.

ಮರಣೋತ್ತರ ಪರೀಕ್ಷೆ: ರೋಗದಿಂದ ಮೃತಪಟ್ಟ ಕೋಳಿಗಳನ್ನು ಸಂಪೂರ್ಣ ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಯಿತು. ಈ

ಸಂದರ್ಭದಲ್ಲಿ ಬಹುತೇಕ ಎಲ್ಲಾ ಕೋಳಿಗಳಲ್ಲಿ ಕೋಲಿಬ್ಯಾಸಿಲ್ಲೋಸಿಸ್ ರೋಗದ ನಿರ್ದಿಷ್ಟ ಗುಣಲಕ್ಷಣಗಳು ಕಂಡುಬಂದವು – ಊದಿಕೊಂಡಿದ್ದ ಹಾಗೂ ರಕ್ತವೇರಿದ ಶ್ವಾಸಕೋಶಗಳು, ರಕ್ತವೇರಿದ ಗಾಳಿಚೀಲಗಳು, ಊದಿಕೊಂಡ ಹೃದಯ ಹಾಗೂ ಹೃದಯದ ಹೊರಪೊರೆಯ ಮೇಲೆ ಬಿಳೀ ಬಣ್ಣದ ಫೈಬ್ರಿನ್ ಹೊದಿಕೆ, ರಕ್ತವೇರಿದ ಯಕೃತ್ತು ಹಾಗೂ ಹೊರಪದರದ ಮೇಲೆ ಬಿಳೀ ಫೈಬ್ರಿನ್ ಹೊದಿಕೆ, ಸಣ್ಣಕರುಳಿನ ಉರಿಯೂತ, ಸಣ್ಣಕರುಳಿನ ಒಳಭಾಗದಲ್ಲಿ ಲೋಳೆ ಹಾಗೂ ರಕ್ತಮಿಶ್ರಿತ ಒಸರು ಮುಂತಾದ ಲಕ್ಷಣಗಳು ಕಂಡುಬಂದವು.

ಊತಕರೋಗಶಾಸ್ತ್ರ: ಮರಣೋತ್ತರ ಪರೀಕ್ಷೆಯ ಸಂದರ್ಭದಲ್ಲಿ ಸತ್ತ ಕೋಳಿಗಳ ದೇಹದಿಂದ ಶ್ವಾಸಕೋಶ, ಯಕೃತ್ತು, ಹೃದಯ, ಸಣ್ಣಕರುಳು ಮುಂತಾದ ಅಂಗಾಂಗಗಳನ್ನು ತೆಗೆದು ಶೇ. 10 ರ ಫಾರ್ಮಲಿನ್ ದ್ರಾವಣದಲ್ಲಿ ಸಂರಕ್ಷಿಸಿ ತದನಂತರ ಮಾಪಕ ರೋಗ ಶಾಸ್ತ್ರಕ್ಕೆ ಒಳಪಡಿಸಿದಾಗ ಈ ಅಂಗಾಂಗಗಳಲ್ಲಿ ಕೆಳಕಂಡ ಸೂಕ್ಷ್ಮಬದ ಲಾವಣೆಗಳು ಕಂಡುಬಂದವು.

ಯಕೃತ್ತು: ಮಧ್ಯದ ಅಪಧಮನಿ ಹಾಗೂ ಇತರೇ ಸಣ್ಣರಕ್ತನಾಳಗಳ ರಕ್ತವೇರಿರುವಿಕೆ, ಜೀವಕೋಶಗಳ ಕ್ಷಯಿಸುವಿಕೆ ಹಾಗೂ ಅವನತಿ, ಹೊರಪದರದ ಮೇಲೆ ಫೈಬ್ರಿನ್ ತಂತುಗಳ ಹೊದಿಕೆ, ರಕ್ತನಾಳಗಳ ಹೊರಭಾಗದ ಉರಿಯೂತ, ಕುಫರ್ ಜೀವಕೋಶಗಳ ಹೆಚ್ಚಳ ಇತ್ಯಾದಿ.

ಸಣ್ಣ ಕರುಳು: ಕರುಳಿನ ಒಳಭಾಗದಲ್ಲಿ ಉದುರಿದ ಲೋಳೆಪದರದ ಅವಶೇಷಗಳು, ಲೋಳೆಪದರದ ಉರಿಯೂತ, ಗಾಬ್ಲೆಟ್ ಜೀವಕೋಶಗಳ ಹೆಚ್ಚಳ, ಬಿಳಿರಕ್ತಕಣಗಳ ಪರ್ಯಾವರಣ ಇತ್ಯಾದಿ.

ಹೃದಯ: ಹೃದಯದ ಹೊರಪದರ ಹಾಗೂ ಸ್ನಾಯುಪದರದ ತೀವ್ರ ಉರಿಯೂತ, ಹೊರಪದರದ ಮೇಲೆ ಫೈಬ್ರಿನ್ ತಂತುಗಳ ಹೊದಿಕೆ, ಸ್ನಾಯುಪದರದ ಸ್ನಾಯುಕೋಶಗಳ ಅವಸಾನ ಹಾಗೂ ಬಿಳೀರಕ್ತಕಣಗಳ ಸಂಖ್ಯೆಯಲ್ಲಿ ಹೆಚ್ಚಳ ಇತ್ಯಾದಿ.

ಶ್ವಾಸಕೋಶಗಳು: ಬಹುತೇಕ ಸಂದರ್ಭಗಳಲ್ಲಿ ಶ್ವಾಸಕೋಶಗಳಲ್ಲಿ ಅನೇಕ ಹಂತದ ರಕ್ತವೇರಿರುವಿಕೆ, ರಕ್ತಸ್ರಾವ, ಗಾಳಿಕೋಶಗಳ ಮಧ್ಯೆ ಗಣನೀಯ ಪ್ರಮಾಣದ ಬಿಳೀರಕ್ತಕಣಗಳು ಹಾಗೂ ಕೆಂಪುರಕ್ತಕಣಗಳು ಕಂಡುಬರುದವು.

ಪ್ರಯೋಗಾಲಯ ಪರೀಕ್ಷೆಗಳು: ಮರಣೋತ್ತರ ಪರೀಕ್ಷೆಯ ಸಂದರ್ಭದಲ್ಲಿ ಯಕೃತ್ತು, ಹೃದಯ, ಗಾಳಿಚೀಲ, ಸಣ್ಣಕರುಳು ಮುಂತಾದ ಅಂಗಾಂಗಳಿಂದ ಸಂಗ್ರಹಿಸಿದ ಮಾದರಿಗಳನ್ನು ಸೂಕ್ಷ್ಮಾಣುರೋಗ ಜೀವಿಗಳ ಪತ್ತೆಗಾಗಿ ಪರೀಕ್ಷೆಗೊಳಪಡಿಸಲಾಯಿತು. ವಿಶೇಷವಾಗಿ ಈ ಮಾದರಿಗಳನ್ನು ಮೆಕಾಂಕಿ ಹಾಗೂ ಇ.ಎಂ.ಬಿ. ಅಗಾರ್ ಗಳ ಮೇಲೆ ಬೆಳೆಸಿದಾಗ ಕೋಲಿಫಾರ್ಮ್ ಗುಂಪಿನ ರೋಗಾಣುಗಳು ಇರುವುದನ್ನು ಧೃಡಪಡಿಸಲಾಯಿತು.

ಚಿತ್ರ. 1

ಚಿತ್ರ. 2

ಚಿತ್ರ. 3



ಚಿತ್ರ. 4

ಚಿತ್ರ. 5



ಚಿತ್ರ. 6



ಚಿತ್ರ. 7



ಚಿತ್ರ. 8

ಚಿತ್ರಗಳ ವಿವರಣೆ:

ಚಿತ್ರ 1. ರೋಗ ಪೀಡಿತ ಕೋಳಿಯಲ್ಲಿ ಊದಿದ ಮುಖ ಹಗೂ ಮುಚ್ಚಿದ ಕಣ್ಣು.

ಚಿತ್ರ 2. ಹೃದಯ ಹಾಗೂ ಯಕೃತ್ತಿನ ಮೇಲೆ ಫೈಬ್ರಿನ್ ಹೊದಿಕೆ.

ಚಿತ್ರ 2. ಸಣ್ಣಕರುಳಿನ ಒಳಭಾಗದಲ್ಲಿ ಲೋಳೆ ಹಾಗೂ ರಕ್ತಮಿಶ್ರಿತ ಒಸರು.

ಚಿತ್ರ 4. ಶ್ವಾಸಕೋಶದ ಮೇಲ್ಭಾಗದಲ್ಲಿ ಉರಿಯೂತ.

ಚಿತ್ರ 5: ಹೃದಯ: ಹೊರಕವಚದ ತೀವ್ರ ಉರಿಯೂತ – ಅಪಧಮನಿಗಳಲ್ಲಿ ರಕ್ತವೇರುವಿಕೆ, ಫೈಬ್ರಿನ್ ತಂತುಗಳು ಹಾಗೂ ಕೆಂಪುರಕ್ತಕಣಗಳನ್ನು ಗಮನಿಸಿ.

ಚಿತ್ರ. 6: ಹೃದಯ: ಮಾಂಸದಭಾಗ– ತೀವ್ರವಾದ ಕ್ಷಯಿಸುವಿಕೆ – ಮಾಂಸಕೋಶಗಳು ಬಿಡಿಬಿಡಿಯಾಗಿರುವುದು ಗಮನಿಸಿ.

ಚಿತ್ರ. 7: ಪಿತ್ತಜನಕಾಂಗ: ಮಧ್ಯದ ಅಪಧಮನಿಯಲ್ಲಿ ರಕ್ತವೇರುವಿಕೆ ಹಾಗೂ ಅಧಿಕ ಫೈಬ್ರಿನ್ ತಂತುಗಳಿಂದ ಕೂಡಿರುವುದು, ಜೀವಕೋಶಗಳು ತೀವ್ರವಾಗಿ ಕ್ಷಯಿಸುವಿಕೆಗೆ ಒಳಗಾಗಿದುವುದು ಹಾಗೂ ಸಣ್ಣಸಣ್ಣ ರಕ್ತನಾಳಗಳಲ್ಲಿ ರಕ್ತವೇರುವಿಕೆ.

ಚಿತ್ರ. 8: ಶ್ವಾಸಕೋಶ: ರಕ್ತನಾಳಗಳಲ್ಲಿ ತೀವ್ರ ರಕ್ತವೇರಿರುವಿಕೆ, ಗಾಳಿಚೀಲಗಳ ಮಧ್ಯೆ ತೀವ್ರವಾದ ಉರಿಯೂತ, ರಕ್ತನಾಳಗಳ

ಸುತ್ತಲಿನ ಉರಿಯೂತ ಗಮನಿಸಿ.

ಚರ್ಚೆ: ಈ ಅಧ್ಯಯನದಲ್ಲಿ ಕೋಳಿಗಳಲ್ಲಿ ಗಮನಿಸಲಾದ ರೋಗಲಕ್ಷಣಗಳು ಹಾಗೂ ಮರಣೋತ್ತರ ಪರೀಕ್ಷೆಯ ಸಂದರ್ಭದಲ್ಲಿ ಕಂಡುಬಂದ ಲಕ್ಷಣಗಳು ಕೋಲಿಬ್ಯಾಸಿಲ್ಲೋಸಿಸ್ ರೋಗವನ್ನು ಬಹುವಾಗಿ ಹೋಲುತ್ತಿದ್ದವು. ಶ್ವಾಸಕೋಶ ಹಾಗೂ ಗಾಳಿಚೀಲಗಳಲ್ಲಿ ಕಂಡುಬಂದ ರಕ್ತವೇರಿವುಕೆ, ಶ್ವಾಸಕೋಶದ ಊತ, ಗಾಳಿಚೀಲಗಳಲ್ಲಿ ಫೈಬ್ರಿನ್ ತಂತುಗಳ ಹೊದಿಕೆ, ಹೃದಯದ ಉರೊಯೂತ, ಹೃದಯದ ಹೊರಪರದೆಯ ಮೇಲೆ ಫೈಬ್ರಿನ್ ತಂತುಗಳ ಹೊದಿಕೆ, ಯಕೃತ್ತಿನ ಉರಿಯೂತ ಹಾಗೂ ಫೈಬ್ರಿನ್ ತಂತುಗಳ ಹೊದಿಕೆ, ಸಣ್ಣಕರುಳಿನ ಉರಿಯೂತ ಇತ್ಯಾದಿ ಲಕ್ಷಣಗಳನ್ನು ಸ್ವಾಭಾವಿಕ/ ಪ್ರಯೋಗಾತ್ಮಕ ಕೋಲಿಬ್ಯಾಸಿಲ್ಲೋಸಿಸ್ ರೋಗದಲ್ಲಿ ಈ ಹಿಂದಿನ ಬಹುತೇಕ ವಿಜ್ಞಾನಿಗಳು ವರದಿ ಮಾಡಿರುತ್ತಾರೆ (Gangane *et al.*, 2006; Goyal *et al.*, 2004 and Vegad, 2004)

ಅದೇ ರೀತಿಯಲ್ಲಿ ರೋಗದಿಂದ ಸತ್ತಕೋಳಿಗಳ ಶ್ವಾಸಕೋಶ, ಹೃದಯ, ಯಕೃತ್ತು ಹಾಗೂ ಸಣ್ಣಕರುಳಿನಲ್ಲಿ ಕಂಡುಬಂದ ಸೂಕ್ಷ್ಮಬದಲಾವಣೆಗಳು ಸಹಾ ಕೋಲಿಬ್ಯಾಸಿಲ್ಲೋಸಿಸ್ ರೋಗದ ಲಕ್ಷಣಗಳನ್ನೇ ಬಹುವಾಗಿ ಹೋಲುತ್ತಿದ್ದು ಈ ಬದಲಾವಣೆಗಳು ಈ ಹಿಂದೆ ವಿಜ್ಞಾನಿಗಳು ಈ ರೋಗದ ಸ್ವಾಭಾವಿಕ/ ಪ್ರಯೋಗಾತ್ಮಕ ಅಧ್ಯಯನದಲ್ಲಿ ದೃಢಪಡಿಸಿದ್ದ ಲಕ್ಷಣಗಳಿಗೆ ಸರಿಸಮವಾಗಿದ್ದವು (Goswami *et al.*, 2004; Gangane *et al.*, 2006 and Goyal *et al.*, 2004).

ಸೂಕ್ಷ್ಮಾಣುಜೀವಿಗಳ ಸಂವರ್ಧನ ಮಾಧ್ಯಮಗಳಾದ ಮೆಕಾಂಕಿ ಅಗಾರ್, ಇ.ಎಂ.ಬಿ ಅಗಾರ್‌ಗಳನ್ನು ಬಳಸಿ ರೋಗ ಪೀಡಿತ ಕೋಳಿಗಳಿಂದ ಮಾದರಿಗಳನ್ನು ಸೂಕ್ಷ್ಮಾಣುಜೀವಿಗಳ ಅಧ್ಯಯನ ಕೊಳಪಡಿಸಿದಾಗ ಕೋಲಿಫಾರ್ಮ್ ಗುಂಪಿನ ರೋಗಾಣುಗಳಿಂದಲೇ ಈ ರೋಗ ಹರಡಿರುವುದು ಧೃಡಪಟ್ಟಿತು.

ಈ ಎಲ್ಲಾ ಅಂಶಗಳಿಂದಾಗಿ ದೇಸಿ ಕೋಳಿಗಳಲ್ಲಿಯೂ ಸಹಾ ವಾತಾವರಣದ ಏರುಪೇರಿನಿಂದ ಹಾಗೂ ಆರೈಕೆಯ ದೋಶಗಳಾದ ಅಧಿಕ ಸಾಂದ್ರತೆ ಹಾಗೂ ನೈರ್ಮಲ್ಯದ ಕೊರತೆಯಿಂದ ಕೋಲಿಬ್ಯಾಸಿಲ್ಲೋಸಿಸ್‌ನ ರೋಗವು ತೀವ್ರವಾಗಿ ಕಂಡುಬರಬಹುದೆಂದು ನಿರ್ಧರಿಸಲಾಯಿತು.

References:

1. Gangane, G.R., Kulkarni, G.B. and Yeotikar, P.V. 2006. Studies on Experimental colibacillosis in chicks. *Indian Veterinary Journal*, 83: 118-119.
2. Goswami, P., Chakraborty, A., Das, R., Sarkar, P. and Som, T.L. 2004. Isolation and identification of Escherichia coli from poultry from field cases. *Indian Veterinary Journal, 81: 951-952.*
3. Goyal, D., Singh, A., Sood, N., Gupta, K., Rai, T.S. and Sood, N.K. 2004. Bacterial isolation and their antibiogram from hepatic diseases/ affections in poultry and quails. *Indian Journal of Comparative Microbiology, Immunology and Infectious Diseases*, 25: 137-139.
4. Vegad, J.L. 2004. Poultry Diseases: A guide for farmers and Poultry Professionals. 1st edn. International book distributing co., Lucknow, India.

ಕೋಳಿ ಆಹಾರದಲ್ಲಿ ಹಲವು ಗಿಡಮೂಲಿಕೆಗಳ ಬಳಕೆಯಿಂದ ಕೋಳಿಮೊಟ್ಟೆಯಲ್ಲಿನ ಕೊಬ್ಬಿನಾಂಶದ ಮೇಲೆ ಉಂಟಾಗುವ ಪರಿಣಾಮಗಳು

ಡಾ. ಹೆಬ್ಬಾರ್, ಎ., ಡಾ. ಗೆಹಲೌಟ್, ಬಿ.ಎಸ್., ಡಾ. ಹೇಮಂತ್ ಗೌಡ, ಕೆ. ಮತ್ತು ಡಾ. ರವಿಕುಮಾರ್, ಪಿ.
ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

ಗಿಡಮೂಲಿಕೆಗಳಾದ ಆಮ್ಲ (*Emblica officinalis*), ತುಳಸಿ (*Ocimum sanctum*), ಅಶ್ವಗಂಧ (*Withania somnifera*) ಮತ್ತು ಗಿಲಾಯ್ (*Tinospora cordifolia*) ಇವುಗಳನ್ನು 3:3:3:1 ರ ಪ್ರಮಾಣದಲ್ಲಿ 38 ವಾರದ 30 ಆರೋಗ್ಯವಂತ ಜಬಲ್ಪುರ ಬಣ್ಣದ ಕೋಳಿಗಳಿಗೆ ನೀಡಿ ಅವುಗಳ ಮೊಟ್ಟೆಗಳಲ್ಲಿನ ಕೊಲೆಸ್ಟರಾಲ್ ಪ್ರಮಾಣದ ಮೇಲೆ ಈ ಗಿಡಮೂಲಿಕೆಗಳ ಪರಿಣಾಮವನ್ನು ಆಭ್ಯಸಿಸಲಾಯಿತು. ಈ ಪ್ರಯೋಗದಲ್ಲಿ 30 ಕೋಳಿಗಳನ್ನು ತಲಾ 6 ಕೋಳಿಗಳ 5 ಗುಂಪುಗಳಾಗಿ ವಿಂಗಡಿಸಿ 56 ದಿನಗಳ ಕಾಲ ಅಭ್ಯಾಸ ನಡೆಸಲಾಯಿತು. ಮೊದಲನೇ ಗುಂಪನ್ನು (T_1) ಕಂಟ್ರೋಲ್ ಗುಂಪಾಗಿ ಬಳಸಿಕೊಂಡು ಉಳಿದ 4 ಗುಂಪಿನ ಕೋಳಿಗಳಿಗೆ (T_2, T_3, T_4 ಮತ್ತು T_5) ಗಿಡಮೂಲಿಕೆಗಳ ಮಿಶ್ರಣವನ್ನು ಪ್ರತಿ ಕೆ.ಜಿ. ಆಹಾರದಲ್ಲಿ ಕ್ರಮವಾಗಿ 750, 1500, 3000 ಮತ್ತು 4500 ಮಿ.ಗ್ರಾಂ. ನಂತೆ ಮಿಶ್ರಣಮಾಡಿ ನೀಡಲಾಯಿತು. 56 ದಿನಗಳ ನಂತರ ಎಲ್ಲಾ ಕೋಳಿಗಳಿಂದ ಮೊಟ್ಟೆಗಳನ್ನು ಸಂಗ್ರಹಿಸಿ ಕೊಲೆಸ್ಟರಾಲ್ ಮಟ್ಟವನ್ನು ಕಂಡುಹಿಡಯಲಾಯಿತು. ಗಿಡಮೂಲಿಕೆ ಮಿಶ್ರಣ ಸೇವಿಸಿದ ಕೋಳಿಗಳ ಮೊಟ್ಟೆಗಳಲ್ಲಿ ಕೊಲೆಸ್ಟರಾಲ್ ಅಂಶ ಗಣನೀಯವಾಗಿ ತಗ್ಗಿದ್ದು ಕಂಡು ಬಂದಿತು. ಮೇಲ್ಕಂಡ ಗಿಡಮೂಲಿಕೆಗಳ ಬಳಕೆಯಿಂದ ಕೋಳಿಮೊಟ್ಟೆಹಳಲ್ಲಿ ಕೊಲೆಸ್ಟರಾಲ್ ಅಂಶವನ್ನು ಗಣನೀಯವಾಗಿ ತಗ್ಗಿಸಿ ತನ್ಮೂಲಕ ಮನುಷ್ಯರಲ್ಲಿ ಹೃದಯಸಂಬಂಧೀ ರೋಗಗಳ ಪ್ರಮಾಣವನ್ನು ಕಡಿಮೆಮಾಡಬಹುದಾಗಿದೆ.

ಪೀಠಿಕೆ: ಸಂತೃಪ್ತ ಕೊಬ್ಬು ದೇಹದಲ್ಲಿ ಕೊಲೆಸ್ಟೆರಾಲ್ ಅಂಶವನ್ನು ಹೆಚ್ಚಿಸುವುದರಿಂದ ಹೃದಯ ಸಂಬಂಧೀ ಕಾಯಿಲೆಗಳನ್ನು ಆಹ್ವಾನಿಸುತ್ತದೆ. ಮಾನವನ ರಕ್ತದಲ್ಲಿ ಸಾಮಾನ್ಯವಾಗಿ 150–250 mg/dl ನಷ್ಟು ಕೊಲೆಸ್ಟೆರಾಲ್ ಕಂಡುಬರುವುದು. ಈ ಕೊಲೆಸ್ಟೆರಾಲ್ ಪ್ರಮಾಣ 250 mg/dl ಗಿಂತಲೂ ಹೆಚ್ಚಾದ ಸಂದರ್ಭಗಳಲ್ಲಿ ಹೃದಯ ಸಂಬಂಧೀ ಕಾಯಿಲೆಗಳು ಉಂಟಾಗುತ್ತವೆ. ಪ್ರಾಣಿ ಕೊಬ್ಬು (ಸಂತೃಪ್ತ ಕೊಬ್ಬಿನ ಆಮ್ಲಗಳು) ಹಾಗೂ ಹೆಚ್ಚಿನ ಕೊಲೆಸ್ಟೆರಾಲ್ ಇರುವ ಆಹಾರ ಪದಾರ್ಥಗಳು, ಉದಾಹರಣೆಗೆ ಮೊಟ್ಟೆ ಸೇವನೆಯಿಂದ ರಕ್ತದ

ಕೊಲೆಸ್ಟೆರಾಲ್ ಅಂಶ ಹೆಚ್ಚಾಗುವುದು.

ಕೋಳಿಮೊಟ್ಟೆಯಲ್ಲಿ ಎಲ್ಲಾ ರೀತಿಯ ಅಗತ್ಯವಾದ ಸಸಾರಜನಕ, ಖನಿಜ–ಲವಣಾಂಶಗಳು ಹಾಗೂ ಜೀವಸತ್ವಗಳಿದ್ದರೂ ಸಹಾ ಮೊಟ್ಟೆಯಲ್ಲಿ 200– 250 mg/dl ನಷ್ಟು ಕೊಲೆಸ್ಟೆರಾಲ್ ಇರುತ್ತದೆ (Griffin *et al*., 1992). ಮೊಟ್ಟೆಯ ಭಂಡಾರದಲ್ಲಿರುವ ಸಂತೃಪ್ತ ಮತ್ತು ಸಂತೃಪ್ತವಲ್ಲದ ಕೊಬ್ಬಿನ ಆಮ್ಲದ ಪ್ರಮಾಣವನ್ನು ಕೋಳಿಗಳಿಗೆ ನೀಡುವ ಆಹಾರದ ಮೂಲಕ ನಿಯಂತ್ರಿಸಬಹುದು (Milinsk, 2003). ಆದ್ದರಿಂದ ಕಡಿಮೆ ಕೊಲೆಸ್ಟೆರಾಲ್ ಇರುವ ಕೋಳಿಮೊಟ್ಟೆಗಳ ಉತ್ಪಾದನೆಗೆ ಅನ್ವೇಷಣೆ ಅಗತ್ಯವಾಗಿದೆ. ಇತ್ತೀಚೆಗೆ ದೇಸಿ ಸಸ್ಯಗಳಾದ ಆಮ್ಲ (ನೆಲ್ಲಿಕಾಯಿ), ಅಶ್ವಗಂಧ ಹಾಗೂ ತುಳಸಿ ಇತ್ಯಾದಿಗಳ ಮೇಲೆ ಸಾಕಷ್ಟು ಸಂಶೋಧನೆಗಳು ನಡೆದಿದ್ದು ವಿಜ್ಞಾನಿಗಳು ಇವುಗಳ ಕೊಲೆಸ್ಟೆರಾಲ್ ಹಾಗೂ ಕೊಬ್ಬಿನಾಂಶ ಕಡಿಮೆ ಮಾಡುವ ಗುಣಗಳ ಬಗ್ಗೆ ಸಾಕಷ್ಟು ಅಭ್ಯಸಿಸಿದ್ದಾರೆ. ಇದರ ಮೂಲಕ ಹೃದಯ ಸಂಬಂಧೀ ಕಾಯಿಲೆಗಳನ್ನು ಕಡಿಮೆಗೊಳಿಸುವ ಬಗ್ಗೆ ಯೋಚಿಸಿದ್ದಾರೆ. ಹಲವು ವಿಜ್ಞಾನಿಗಳು ಪ್ರತ್ಯೇಕ ಸಸ್ಯಗಳ ಔಷಧೀಯ ಗುಣಗಳ ಬಗ್ಗೆ ಸಂಶೋಧನೆ ನಡೆಸಿದ್ದರೂ ಕೆಲವೇ ವಿಜ್ಞಾನಿಗಳು ಹಲವು ಸಸ್ಯಗಳನ್ನು ಒಟ್ಟು ಸೇರಿಸಿ (Polyherbal preparation) ಸಂಶೋಧನೆ ನಡೆಸಿದ್ದಾರೆ. ಅಲ್ಲದೇ ಕಡಿಮೆ ಕೊಲೆಸ್ಟೆರಾಲ್ ಇರುವ ಮೊಟ್ಟೆಗಳ ಉತ್ಪಾದನೆಯ ಬಗ್ಗೆಯೂ ಆಲೋಚಿಸಬೇಕಾದ ಅಗತ್ಯ ಇದೆ (Stewart, 1988). ಆದ್ದರಿಂದ ಇವುಗಳನ್ನೆಲ್ಲಾ ಗಮನಿಸಿಕೊಂಡು ಈ ಕೆಳಗಿನ ಬಹುಮೂಲಿಕಾ ಮಿಶ್ರಣವನ್ನು ಬಳಕೆಯಿಂದ ಕೋಳಿಮೊಟ್ಟೆಯ ಕೊಬ್ಬಿನಾಂಶದ ಮೇಲೆ ಉಂಟಾಗುವ ಪರಿಣಾಮಗಳನ್ನು ಅಭ್ಯಸಿಸಲಾಗಿದೆ.

ಪ್ರಯೋಗದ ವಿಧಾನ: 1. ಪ್ರಯೋಗದ ಕೋಳಿಗಳು ಮತ್ತು ಅವುಗಳ ನಿರ್ವಹಣೆ: ಈ ಅಧ್ಯಯನದಲ್ಲಿ 38 ವಾರವಯಸ್ಸಿನ 30 ಆರೋಗ್ಯವಂತ ಜಬಲ್‌ಪುರಬಣ್ಣದ ಕೋಳಿಗಳ ಮೇಲೆ ನಡೆಸಲಾಯಿತು. ಪ್ರತ್ಯೇಕವಾಗಿ ಗೂಡುಗಳಲ್ಲಿ 56 ದಿನಗಳವರೆಗೆ ಸೂಕ್ತವಾದ ಗಾಳಿ, ಬೆಳಕಿನ ವ್ಯವಸ್ಥೆಯೊಂದಿಗೆ ಜಬಲ್‌ಪುರ್‌ನ ಪಶುವೈದ್ಯಕೀಯ ಮಹಾವಿದ್ಯಾಲಯದ ಕೋಳಿಫಾಮಿಶನಲ್ಲಿ ಸಾಕಲಾಯಿತು. ಕೋಳಿಗಳನ್ನು 5 ಗುಂಪುಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿನಲ್ಲಿ 6 ಕೋಳಿಗಳಂತೆ ಸೂಕ್ತ ವ್ಯವಸ್ಥೆಯೊಂದಿಗೆ ಇರಿಸಲಾಯಿತು. ಒಂದನೇ ಗುಂಪಾದ T_1 ನ್ನು ಕಂಟ್ರೋಲ್ ಆಗಿ ಇರಿಸಿ ಅವುಗಳಿಗೆ ಸಾಮಾನ್ಯವಾಗಿ ಕೊಡುವ ಆಹಾರವನ್ನು ನೀಡಲಾಯಿತು. ಆದರೆ T_2, T_3, T_4 ಮತ್ತು T_5 ಗುಂಪುಗಳಿಗೆ ಸಾಮಾನ್ಯವಾಗಿ ಕೊಡುವ ಆಹಾರಗಳ ಜೊತೆಯಲ್ಲಿ ಬಹುಸಸ್ಯಗಳ ಮಿಶ್ರಣವನ್ನು ಪ್ರತೀ ಕೆ.ಜಿ ಆಹಾರದಲ್ಲಿ 750, 1500, 3000 ಮತ್ತು 4500 ಮಿ.ಗ್ರಾಂ. ನಂತೆ ಕ್ರಮವಾಗಿ ಬೆರೆಸಿ ನೀಡಲಾಯಿತು. ಕೋಳಿಗಳ ಮೂಲ ಆಹಾರವು 2650 Kcal ME / Kg ಹಾಗೂ 18 % ಸಸಾರಜನಕವನ್ನು ಹೊಂದಿತ್ತು.

2. ಬಹುಸಸ್ಯಗಳ ಮಿಶ್ರಣ: ಈ ಪ್ರಯೋಗದಲ್ಲಿ ಬಳಸಿದ ಬಹುಸಸ್ಯ ಮಿಶ್ರಣವು ತುಳಸಿ ಎಲೆಗಳು, ನೆಲ್ಲಿಕಾಯಿ ಹಣ್ಣು, ಅಶ್ವಗಂಧದ ಬೇರು ಹಾಗೂ ಗಿಲಾಯಿಯ ಕಾಂಡವನ್ನು 3:3:3:1 ಅನುಪಾತದಲ್ಲಿ ಒಳಗೊಂಡಿತ್ತು.

3. ಕೊಲೆಸ್ಟೆರಾಲ್ ಪ್ರಮಾಣದ ಅಳತೆ: ಪ್ರತಿಯೊಂದು ಗುಂಪಿನಿಂದ ತಲಾ 6 ಮೊಟ್ಟೆಗಳನ್ನು 0, 14, 28, 42 ಮತ್ತು 56 ದಿನಗಳಲ್ಲಿ ಸಂಗ್ರಹಿಸಲಾಯಿತು. ಮೊಟ್ಟೆಗಳನ್ನು ಒಡೆದು ಅದರ ಕೊಬ್ಬನ್ನು ತೆಗೆದು ಅದರಲ್ಲಿನ ಕೊಲೆಸ್ಟೆರಾಲ್‌ನ ಮಟ್ಟವನ್ನು ಕಂಡುಹಿಡಿಯಲಾಯಿತು.

4. ಅಂಕೆ–ಅಂಶ ವಿಜ್ಞಾನದ ಅಳವಡಿಕೆ: ಈ ಪ್ರಯೋಗದಲ್ಲಿ ದಾಖಲಾದ ಮಾಹಿತಿಯನ್ನು ಸೂಕ್ತವಾದ ಅಂಕಿಅಂಶ ವಿಜ್ಞಾನದ ಪದ್ಧತಿಯಲ್ಲಿ ವಿಶ್ಲೇಷಣೆಗೊಳಪಡಿಸಲಾಯಿತು.

ಫಲಿತಾಂಶ ಹಾಗೂ ಚರ್ಚೆ: ವಿವಿಧ ಗುಂಪುಗಳ ಮೊಟ್ಟೆಗಳ ಸರಾಸರಿ ಕೊಲೆಸ್ಟೆರಾಲ್ ಅಂಕಿಅಂಶಗಳನ್ನು ಕೋಷ್ಟಕ 1 ರಲ್ಲಿ ತೋರಿಸಲಾಗಿದೆ. ಮೊಟ್ಟೆಯ ಸರಾಸರಿ ಕೊಲೆಸ್ಟೆರಾಲ್ ಅಂಶವು 14, 28, 42 ಹಾಗೂ 52 ದಿನಗಳಲ್ಲಿ T_2, T_3 ಮತ್ತು T_4 ಗುಂಪುಗಳಲ್ಲಿ 3.65, 4.27, 4.73 ಹಾಗೂ 8.61 ಪ್ರತಿಶತದಷ್ಟು, 2.50, 4.64, 8.93 ಹಾಗೂ 15.01 ಪ್ರತಿಶತದಷ್ಟು ಹಾಗೂ 2.74, 4.23, 10.10 ಮತ್ತು 19.45 ಪ್ರತಿಶತದಷ್ಟು ಕ್ರಮವಾಗಿ ಕಡಿಮೆಗೊಂಡಿತ್ತು. ಇದರಂತೆಯೇ T_5 ಗುಂಪಿನಲ್ಲಿ ಕೋಡ 5.63, 8.22, 13.98 ಹಾಗೂ 20.25 ಪ್ರತಿಶತದಷ್ಟು ಕೊಲೆಸ್ಟೆರಾಲ್ ಅಂಶವು 14, 28, 42 ಹಾಗೂ 56 ದಿನಗಳಂದು ಕ್ರಮವಾಗಿ ಕಡಿಮೆಯಾಯಿತು. ಮಹಾಜನ (2009) ಅವರು ಕಲರ್ ಡ್ವಾರ್ಫ್ ಎಂಬ ತಳಿಯಲ್ಲಿ ಮೊಟ್ಟೆಯ ಕೊಲೆಸ್ಟೆರಾಲ್ 17.49 ಪ್ರತಿಶತದಷ್ಟು ಇಳಿಕೆಯನ್ನು ನೆಲ್ಲಕಾಯಿ, ಅಶ್ವಗಂಧ, ತುಳಸಿ ಮತ್ತು ಗಿಲಾಯಿ ಮಿಶ್ರಣವನ್ನು 750 ಮಿ.ಗ್ರಾಂ. ನಷ್ಟು ಕೆಜಿವೊಂದರಂತೆ 42 ದಿನಗಳವರೆಗೆ ನೀಡುವುದರಿಂದ ಕಡಿಮೆಯಾಗುವುದೆಂದು ಧೃಡಪಡಿಸಿದ್ದಾರೆ. Chowdhury *et al.* (2002) ಅವರು ಮೊಟ್ಟೆಯಿಡುವ ಕೋಳಿಗಳಲ್ಲಿ 2, 4, 6, 8 ಮತ್ತು 10 ವಾರಗಳಲ್ಲಿ ಮೊಟ್ಟೆಯ ಕೊಲೆಸ್ಟೆರಾಲ್ ಅಂಶದಲ್ಲಿ 5, 9, 14, 20 ಮತ್ತು 24 ಪ್ರತಿಶತದಷ್ಟು ಇಳಿಕೆಯನ್ನು ಬೆಳ್ಳುಳ್ಳಿ ಮಿಶ್ರಣವನ್ನು ನೀಡುವುದರೊಂದಿಗೆ ಧೃಡಪಡಿಸಿದ್ದಾರೆ. Sharma (2005) ಅವರು 17.5 ಹಾಗೂ 18.6 ರಷ್ಟು ಕೊಲೆಸ್ಟೆರಾಲ್ ಅಂಶದಲ್ಲಿ ಇಳಿಕೆಯನ್ನು ನೆಲ್ಲಿಕಾಯಿಯೊಂದನ್ನೇ ನೀಡುವುದರಿಂದ ಹಾಗೂ ನೆಲ್ಲಿಕಾಯಿ, ಅರ್ಜುನ, ಗುಗ್ಗುಲು ಮತ್ತು ಎಳ್ಳಿನ ಮಿಶ್ರಣ ನೀಡುವುದರಿಂದ ಕಂಡುಹಿಡಿದಿದ್ದಾರೆ. Elangovan *et al.* (2004) ಗೌಜುಗನ ಹಕ್ಕಿಯ ಮೊಟ್ಟೆಯ ಕೊಬ್ಬಿನಲ್ಲಿ ಕೊಲೆಸ್ಟೆರಾಲ್ ಅಂಶದ ಇಳಿಕೆಯನ್ನು 1 % ಪ್ರತಿಶತದಷ್ಟು ಬೆಳ್ಳುಳ್ಳಿಯ ಪುಡಿಯನ್ನು ಆಹಾರದೊಂದಿಗೆ ಮಿಶ್ರಣಮಾಡಿ ಕಂಡುಕೊಂಡಿದ್ದಾರೆ. Yigit *et al.* (2000) ವಿಟಮಿನ್ ಸಿ ಯನ್ನು ಪ್ರತೀ ಕೆ.ಜಿ ಆಹಾರದಲ್ಲಿ 50, 100 ಮತ್ತು 200 ಮಿಲಿಗ್ರಾಮಿನಷ್ಟು ಬಳಸಿ ರಕ್ತ ಮತ್ತು ಮೊಟ್ಟೆಯ ಕೊಲೆಸ್ಟೆರಾಲ್‌ನಲ್ಲಿ ಇಳಿಕೆಯನ್ನು ಮೊಟ್ಟೆಯಿಡುವ ಕೋಳಿಯಲ್ಲಿ ಕಂಡುಹಿಡಿದಿದ್ದಾರೆ. ಇದಕ್ಕೆ ವಿರುದ್ಧವಾಗಿ Kim *et al.* (2004) ರವರ ಲೋವಸ್ಟಾಟಿನ್ ಬಳಕೆಯಲ್ಲಿ ಯಾವುದೇ ರೀತಿಯ ಇಳಿಕೆ ಕಂಡುಬಂದಿಲ್ಲ.

ಕೋಷ್ಟಕ 1. ಪ್ರಯೋಗದಲ್ಲಿ ಬಳಸಿದ ಜಬಲ್ಪುರ ಬಣ್ಣದ ಕೋಳಿಗಳ ವಿವಿಧ ಗುಂಪುಗಳ ಸರಾಸರಿ ಕೊಲೆಸ್ಟೆರಾಲ್ ಪ್ರಮಾಣ (ಚಿಕಿತ್ಸೆಯ ವಿವಿಧ ಹಂತಗಳಲ್ಲಿ)

ಚಿಕಿತ್ಸಾ ಗುಂಪುಗಳು	ದಿನಗಳು				
	ದಿನ 0	ದಿನ 14	ದಿನ 28	ದಿನ 42	ದಿನ 56
T1	17.43^{ab}+0.54	17.11^{ab}+0.56	16.71^{a}+0.66	17.50^{ab}+0.56	17.88^{b}+0.50
T2	17.30^{b}+0.74	16.66^{ab}+0.63	16.56^{ab}+0.71	16.48^{ab}+0.64	15.81^{a}+0.47
T3	16.78^{b}+0.64	16.36^{b}+0.62	16.01^{b}+0.58	15.28^{ab}+0.52	14.26^{a}+0.50
T4	18.20^{c}+0.33	17.70^{c}+0.42	17.43^{bc}+0.44	16.36^{b}+0.41	14.66^{a}+0.48
T5	17.38^{c}+0.15	16.40^{c}+0.21	15.95^{bc}+0.24	14.95^{b}+0.48	13.86^{a}+0.44

ಉಪಸಂಹಾರ: ಈ ಪ್ರಯೋಗದ ಫಲಿತಾಂಶದ ಅನುಸಾರ ತುಳಸಿ, ನೆಲ್ಲಿ, ಅಶ್ವಗಂಧ, ಗಿಲಾಯಿಯನ್ನೊಳಗೊಂಡ ಬಹುಮೂಲಿಕೆಗಳನ್ನು ಆಹಾರದಲ್ಲಿ ಪ್ರತೀ ಕೆ.ಜಿ.ಗೆ 4500 ಮಿಗ್ರಾನಷ್ಟು ಬೆರೆಸಿ ಕೋಳಿಗಳಿಗೆ ನೀಡುವುದರಿಂದ ಗಣನೀಯ ಪ್ರಮಾಣದಲ್ಲಿ ಕೊಲೆಸ್ಟೆರಾಲ್ ಅಂಶವು ಕಡಿಮೆಯಾಗುವುದು. ಆದುದರಿಂದ ಈ ಬಹುಮೂಲಿಕೆ ಔಷಧಿಗಳನ್ನು ಕೋಳಿಗಳ ಆಹಾರದಲ್ಲಿ ನಿಯಮಿತವಾಗಿ ಬಳಸುವ ಮೂಲಕ ಮೊಟ್ಟೆಗಳಲ್ಲಿನ ಕೊಲೆಸ್ಟೆರಾಲ್ ಅಂಶವನ್ನು ಗಣನೀಯವಾಗಿ ತಗ್ಗಿಸಿ ತನ್ಮೂಲಕ ಮೊಟ್ಟೆ ತಿನ್ನುವವರಲ್ಲಿ ಹೃದಯ ಸಂಬಂಧೀ ರೋಗಗಳನ್ನು ನಿಯಂತ್ರಿಸಬಹುದು.

References

1. Chowdhury, S.R., S. D. Chowdhur, and T. K. Smith. 2002. Effect of dietary garlic on cholesterol, metabolism in laying hens. Poult. Sci.81: 1856- 1862.
2. Elangovan, A. V., A. B Mandal, and P. K Tyagi. 2004. Effect of dietary supplementation of certain herbal agents and cholesterol lowering drug on egg production performance and egg quality of Japanese quail layers. Annual Report. CARI-Izatnagar.
3. Griffin, H.D. 1992. Manipulation of egg yolk cholesterol: a physiologist's view. World Poult.Sci.48: 101-112.
4. Kim, J. H. , S. T. Hong, H. S. Lee, and H.J. Kim..2004. Oral administration of pravastain reduces egg cholesterol but not plasma cholesterol in laying hens. Poult.Sci., 83: 1539-1543.
5. Mahajan,C.2009.Relative lipid profile among various genotypes of adult layer birds on polyherbal dietary supplementation. M.V.Sc. Thesis, JNKVV, Jabalpur (M.P.)
6. Milinsk,M.C.,A.E. Murakami. S.T.M.,Gomes., M.Matsushita, and N.E. Desouza,2003.Fatty acid profile of egg yolk lipids from hens fed diets rich in n-3 fatty acids.Food Chem., 83: 287-292.
7. Sharma, R. (2005). Modulation of cholesterol concentration in chicken eggs through dietary herbal supplements. M.V.Sc. Thesis, IVRI, Izatnagar (U.P.).
8. Stewart, P. H. 1988. Modifying egg yolk cholesterol in the domestic fowl- a review. World Poult. Sci. J., 44: 17-29.
9. Yigit, A.A., Dikicioglu, T. and E.Ozdemir. 2000. The effects of vitamin C supplementation to the layer ration on egg quality and cholesterol levels. Lalahan Hayvan Arastirma Enstitusu Dergisi 40(1): 65-75.

ಪರಿಣಾಮಕಾರಿ ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ಬಳಕೆಯಿಂದ ಕಾಫಿಹಣ್ಣು ಸಂಸ್ಕರಿಸಿದ ಕಲುಷಿತ ನೀರಿನ ಶುದ್ಧೀಕರಣ

ಡಾ. ಹೇಮಂತ್ ಗೌಡ, ಕೆ., ಡಾ. ರವಿಕುಮಾರ್, ಪಿ. ಮತ್ತು ಡಾ. ಮಧುಸೂಧನ್, ಹೆಚ್.ಎಸ್.
ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

ಭಾರತದಲ್ಲಿ ಉತ್ಪಾದನೆಯಾಗುವ ಕಾಫಿಯ ಶೇ. 58 ರಷ್ಟನ್ನು ಕರ್ನಾಟಕದಲ್ಲೇ ಉತ್ಪಾದನೆಯಾಗುತ್ತಿದ್ದು ರಾಜ್ಯದಾದ್ಯಂತ 2,20,000 ಹೆಕ್ಟೇರ್‌ಗಳಲ್ಲಿ ಕಾಫಿಯನ್ನು ಬೆಳೆಯಲಾಗುತ್ತಿದೆ. ಬಹುತೇಕ ಕಾಫಿ ತೋಟಗಳಲ್ಲಿ ಕಾಫಿಹಣ್ಣನ್ನು ಯಥೇಚ್ಛವಾಗಿ ನೀರು ಬಳಸಿ ಸಂಸ್ಕರಿಸಲಾಗುತ್ತಿದ್ದು ಇದು ಭಾರೀ ಪ್ರಮಾಣದ ಕಲುಷಿತ ನೀರಿನ ಉತ್ಪಾದನೆಗೆ ಕಾರಣವಾಗುತ್ತಿದೆ. ಇಂತಹ ಕಲುಷಿತ ನೀರನ್ನು ನೇರವಾಗಿ ಹತ್ತಿರದ ಜಲಮೂಲಗಳಿಗೆ ಹರಿಯಬಿಡುವುದರಿಂದ ಇದು ತೀವ್ರ ಜಲಮಾಲಿನ್ಯವುಂಟುಮಾಡುತ್ತಿದೆ. ಈ ಹಿನ್ನಲೆಯಲ್ಲಿ ಕಾಫಿಹಣ್ಣನ್ನು ಸಂಸ್ಕರಿಸಿದ ಕಲುಷಿತ ನೀರನ್ನು ಪರಿಣಾಮಕಾರಿ ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ಬಳಕೆಯಿಂದ ಶುದ್ಧೀಕರಿಸಲು ಪ್ರಯತ್ನ ನಡೆಸಲಾಯಿತು. ಕಾಫಿ ತೋಟಗಳಿಂದಲೇ ಸಂಸ್ಕರಿಸಿದ ಸೂಕ್ಷ್ಮಾಣುಜೀವಿಗಳನ್ನೇ ಬಳಸಿ ಕಲುಷಿತ ನೀರನ್ನು ಸಂಸ್ಕರಿಸಿ ಅದರಲ್ಲಿನ ಜೈವಿಕ ಆಮ್ಲಜನಕದ ಬೇಡಿಕೆ (BOD) ಯನ್ನು ಗಣನೀಯವಾಗಿ ತಗ್ಗಿಸಿ ಕರಗಿದ ಆಮ್ಲಜನಕ (DO) ವನ್ನು ಹೆಚ್ಚಿಸುವುದು ಈ ಪ್ರಯೋಗದ ಉದ್ದೇಶವಾಗಿತ್ತು. ಮೊದಲಿಗೆ ಕಲುಷಿತ ನೀರನ್ನು ಆಮ್ಲೀಯ ಕೊಳದಲ್ಲಿ 6 ಗಂಟೆಗಳ ಕಾಲ ನಿಲ್ಲಿಸುವ ಮೂಲಕ ಅದರ pH ಅನ್ನು 5.9–6.1 ಕ್ಕೆ ಏರಿಸಲಾಯಿತು. ಮೂರನೇ ಹಂತದಲ್ಲಿ ಈ ನೀರನ್ನು ನಿಗದಿತ ಪ್ರಮಾಣದ ಪರಿಣಾಮಕಾರಿ ಸೂಕ್ಷ್ಮಾಣುಜೀವಿಗಳು ಬೆರೆತ ಗಾಳಿಭರಿತ ಚಿಕಿತ್ಸಾಕೊಳಗಳಿಗೆ ಹರಿಸಿ ಸಂಸ್ಕರಿಸಲಾಯಿತು. ಇದರಿಂದಾಗಿ ಕಲುಷಿತ ನೀರಿನ ಜೈವಿಕ ಆಮ್ಲಜನಕದ ಬೇಡಿಕೆ ಶೇ. 70–90 ರವರೆಗೆ ಕಡಿಮೆಯಾಯಿತಲ್ಲದೇ ನೀರಿನಲ್ಲಿದ್ದ ಹಾನಿಕರಕ ಸೂಕ್ಷ್ಮಾಣುಜೀವಿಗಳು ಹಾಗೂ ವಿಷಕಾರಿ ಪದಾರ್ಥಗಳ ಮಟ್ಟ ಗಣನೀಯವಾಗಿ ಕುಗ್ಗಿತು. ನಾಲ್ಕನೇ ಹಂತದಲ್ಲಿ ಈ ನೀರನ್ನು ಕೆಲವು ಜಾತಿಯ ವಿಶೇಷ ಕಳೆಸಸ್ಯಗಳಿಂದ ತುಂಬಿದ ಜೌಗುಭೂಮಿಗೆ ಹರಿಸಿ ನೀರಿನಲ್ಲಿನ ಕರಗಿದ ಆಮ್ಲಜನಕದ ಮಟ್ಟವನ್ನು ಏರಿಸುವುದರ ಜೊತೆಗೆ ಹಾನಿಕಾರಕ ವಸ್ತುಗಳು ಮತ್ತು

ಬೆರೆತಿರುವ ಘನವಸ್ತುಗಳನ್ನು ನಾಶಪಡಿಸಲ್ಪಾಯಿತು. ಕೊನೆಯಲ್ಲಿ ಈ ನೀರನ್ನು ವಾಟರ್ ಹಯಸಿಂಥ್ ಕಳೆಸಸ್ಯಗಳಿಂದ ತುಂಬಿದ ಕೊಳದೊಳಗೆ ಹರಿಸಿ ಅಳಿದುಳಿದ ಹಾನಿಕಾರಕ ಸೂಕ್ಷ್ಮಾಣುಜೀವಿಗಳನ್ನೂ, ಭಾರಲೋಹದ ವಸ್ತುಗಳನ್ನೂ ತೆಗೆದು ಹಾಕಲಾಯಿತು. ಅಂತಿಮವಾಗಿ ಈ ಕಳೆಸಸ್ಯಗಳಿಂದ ತುಂಬಿದ ಕೊಳದಿಂದ ಹೊರಹಾಕಲ್ಪಟ್ಟ ನೀರು ಸಾಕಷ್ಟು ಶುದ್ಧೀಕರಣಗೊಂಡಿದ್ದು ಜೈವಿಕ ಆಮ್ಲಜನಕ ಬೇಡಿಕೆ ಹಾಗೂ ಭಾರಲೋಹದ ವಸ್ತುಗಳು ಗಣನೀಯವಾಗಿ ಕಡಿಮೆಯಾಗಿ ಕರಗಿದ ಆಮ್ಲಜನಕದ ಮಟ್ಟದಲ್ಲಿ ಸಾಕಷ್ಟು ಏರಿಕೆಯಾಗಿರುವುದು ಕಂಡುಬಂದಿತು.

ಪೀಠಿಕೆ: ಕಾಫಿ ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಇದನ್ನು ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಕಾಫಿ ಉತ್ಪಾದನೆಯಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದ್ದು ಭಾರತದ ಒಟ್ಟು ಉತ್ಪಾದನೆಯ ಶೇ. 58 ರಷ್ಟನ್ನು ನಮ್ಮ ರಾಜ್ಯವೇ ಉತ್ಪಾದಿಸುತ್ತಿದೆ (Murthy *et al.*, 2004) ರಾಜ್ಯದಾದ್ಯಂತ 3000 ಕ್ಕೂ ಹೆಚ್ಚು ಕಾಫಿ ತೋಟಗಳಿದ್ದು ಅಲ್ಲಿ ಬೆಳೆದ ಕಾಫಿಹಣ್ಣನ್ನು ಯಥೇಚ್ಛವಾಗಿ ನೀರು ಬಳಸಿ ನೆನೆಹಾಕಿ ಸಂಸ್ಕರಿಸಲಾಗುತ್ತದೆ. ಈ ಕ್ರಮದಿಂದಾಗಿ ನಮ್ಮ ರಾಜ್ಯದ ಕಾಫಿತೋಟಗಳಿಂದ ಭಾರೀ ಪ್ರಮಾಣದಲ್ಲಿ ಕಲುಷಿತ ನೀರು ಉತ್ಪಾದನೆಯಾಗುತ್ತಿದ್ದು ಜನ–ಜಾನುವಾರು ಹಾಗೂ ಪರಿಸರದ ಮೇಲೆ ಅನೇಕ ರೀತಿಯ ದುಷ್ಪರಿಣಾಮಗಳಾಗುತ್ತಿವೆ. ಸದ್ಯದ ಪರಿಸ್ಥಿತಿಯಲ್ಲಿ ಕಾಫಿತೋಟಗಳಿಂದ ಹೊರಹಾಕಲ್ಪಡುತ್ತಿರುವ ಕಲುಷಿತ ನೀರನ್ನು ಹತ್ತಿರದ ತೊರೆ, ಹಳ್ಳ, ನದಿಗಳಿಗೆ ಹಾಗೆಯೇ ಹರಿಯ ಬಿಡಲಾಗುತ್ತಿದ್ದು. ಇದರಿಂದ ತೀವ್ರವಾದ ಜಲಮಾಲಿನ್ಯವುಂಟಾಗುತ್ತಿದೆ (Chanakye *et al.*, 2004) ನಮ್ಮ ರಾಜ್ಯದ ಬಹುತೇಕ ಕಾಫಿ ತೋಟಗಳಲ್ಲಿ ಇಂತಹ ಕಲುಷಿತ ನೀರನ್ನು ಶುದ್ಧೀಕರಿಸುವ ಪದ್ಧತಿಯನ್ನು ಅಳವಡಿಸಿಕೊಳ್ಳ ಲಾಗಿಲ್ಲ. ಕೆಲವರು ಸಾಂಪ್ರದಾಯಕ ಪದ್ಧತಿಗಳಿಂದ ಕಲುಷಿತ ನೀರನ್ನು ಶುದ್ಧೀಕರಿಸುತ್ತಾರಾದರೂ ಆ ಪದ್ಧತಿಗಳಿಂದ ಅಂತಹಾ ಯಶಸ್ಸನ್ನು ಸಾಧಿಸಲಾಗುತ್ತಿಲ್ಲ.

ಈ ಹಿನ್ನಲೆಯಲ್ಲಿ ಕಾಫಿ ತೋಟಗಳಿಂದ ಹೊಬೀಳುವ ಕಲುಷಿತ ನೀರನ್ನು ಶುದ್ಧೀಕರಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಸೂಕ್ಷ್ಮಾಣುಜೀವಿ ಗಳನ್ನು ಈ ಪ್ರಯೋಗದಲ್ಲಿ ಬಳಸಿಕೊಳ್ಳಲಾಯಿತು.

ಪ್ರಯೋಗದ ಉದ್ದೇಶ: ಕಾಫಿತೋಟಗಳಿಂದ ಹೊರಸೂಸುವ ಕಲುಷಿತ ನೀರನ್ನು ಪರಿಣಾಮಕಾರಿ ಸೂಕ್ಷ್ಮಾಣುಜೀವಿ ತಂತ್ರಜ್ಞಾನ ಬಳಸಿ ಶುದ್ಧೀಕರಿಸುವ ಮೂಲಕ ಅದರಲ್ಲಿ ಜೈವಿಕ ಆಮ್ಲಜನಕದ ಬೇಡಿಕೆಯನ್ನು ಗಣನೀಯವಾಗಿ ತಗ್ಗಿಸುವುದು ಮತ್ತು ಕರಗಿದ ಆಮ್ಲಜನಕದ ಮಟ್ಟ ಹೆಚ್ಚಿಸುವುದು.

ಪ್ರಯೋಗದ ವಿವರಗಳು: ಈ ಪ್ರಯೋಗವನ್ನು ಚಿಕ್ಕಮಗಳೂರು ಜಿಲ್ಲೆಯ ಬಗನೆಹೆದ್ದಾಳ್ ಕಾಫಿತೋಟದಲ್ಲಿ ಕೈಗೊಳ್ಳಲಾಯಿತು. ಸಾಂಪ್ರದಾಯಿಕ ಪದ್ಧತಿಯಂತೆಯೇ ಈ ಪ್ರಯೋಗದಲ್ಲಿಯೂ ಸಹ ಮೊದಲಿಗೆ ಕಲುಷಿತ ನೀರನ್ನು ಆಮ್ಲೀಯ ಕೊಳದಲ್ಲಿ (Acidification Pond) ಹರಿಸುವ ಮೂಲಕ ಅದರ pH ಅನ್ನು 5.9–6.1 ಕ್ಕೆ ಹೆಚ್ಚಿಸುವ ಸಲುವಾಗಿ ನಿಗದಿತ ಪ್ರಮಾಣದ ಸುಣ್ಣ ತುಂಬಿದ 2ನೇ ಕೊಳಕ್ಕೆ ಹರಿಸಲಾಯಿತು. 3ನೇ ಹಂತದಲ್ಲಿ ಈ ನೀರನ್ನು ಪರಿಣಾಮಕಾರಿ ಸೂಕ್ಷ್ಮಾಣುಜೀವಿಗಳಿಂದ ತುಂಬಿದ 3ನೇ ಕೊಳದಲ್ಲಿ ಹರಿಸಿ ಸಂಸ್ಕರಿಸಲಾಯ್ತು. 4ನೇ ಹಂತದಲ್ಲಿ ಕೆಲವು ರೀತಿಯ ಸಸ್ಯಗಳನ್ನು ಬಳಸಿ ನೀರನ್ನು ಸಂಸ್ಕರಿಸಲಾಯಿತು. ಕೊನೆಯದಾಗಿ ಈ ನೀರನ್ನು ಹಳ್ಳ/ ನದಿಗಳಿಗೆ ಹರಿಯಬಿಡುವ ಮುನ್ನ ವಾಟರ್ ಹಯಸಿಂತ್ ತುಂಬಿದ 5ನೇ ಕೊಳದಲ್ಲಿ ಹರಿಸಲಾಯಿತು.

ಪ್ರಯೋಗದ ವೈಜ್ಞಾನಿಕ ವಿವರಣೆ: ಹಂತ 1: ಆಮ್ಲೀಯ ಕೊಳದಲ್ಲಿ ಕಲುಷಿತ ನೀರನ್ನು ಕನಿಷ್ಠ 6 ಗಂಟೆಗಳ ಕಾಲ ನಿಲ್ಲಿಸಿದಾಗ ಕಲುಷಿತ ನೀರು ತಿಳಿಗೊಂಡು ಅದರಲ್ಲಿನ ನಿರುಪಯುಕ್ತ/ ಹಾನಿಕಾರಕ ಘನಪದಾರ್ಥಗಳು ಮೇಲ್ಮಟ್ಟದಲ್ಲಿ ತೇಲಾಡುತ್ತವೆ. ಇವುಗಳನ್ನು ಜಾಲರಿಗಳನ್ನು ಬಳಸಿ ತೆಗೆದು ಹಾಕಬಹುದು.

ಹಂತ 2: ಆಮ್ಲೀಯ ಕೊಳದಲ್ಲಿ ತಿಳಿಗೊಳ್ಳುವ ನೀರಿನ pH ಸಾಕಷ್ಟು ಕೆಳಮಟ್ಟದಲ್ಲಿದ್ದು ಅದನ್ನು ಮುಂದಿನ ಹಂತಗಳಲ್ಲಿ ಸಂಸ್ಕರಿಸಲು ಅದರ pH ಅನ್ನು ಕನಿಷ್ಠ 6 ರವರೆಗಾದರೂ ಏರಿಸಬೇಕಾಗುತ್ತದೆ (Treagust, 1999). ಇದಕ್ಕಾಗಿ 2 ನೇ ಕೊಳದಲ್ಲಿ ನಿಗದಿತ ಪ್ರಮಾಣದ ಸುಣ್ಣ ($CaCO_3$) ವನ್ನು ತುಂಬಿ ಕಲುಷಿತ ತಿಳಿನೀರನ್ನು ಬಫರಿಂಗ್ ಮೂಲಕ ಅದರ pH ಅನ್ನು ಏರಿಸಲಾಗುವುದು. ಈ ಹಂತದಲ್ಲಿ ಪ್ರತೀ ಲೀ. ನೀರಿಗೆ 250 ಗ್ರಾಂ ಸುಣ್ಣ ಬೆರೆಸಲಾಯಿತು.

ಹಂತ 3: ಪ್ರಾಥಮಿಕ ನೀರು ಸಂಸ್ಕರಣೆ– ಈ ಹಂತದಲ್ಲಿ 2ನೇ ಹಂತದಿಂದ ಹೊರಬೀಳುವ ನೀರನ್ನು ಏರೋಬಿಕ ಚಿಕಿತ್ಸಾ ಕೊಳಗಳಿಗೆ ಹರಿಸಲಾಗುವುದು ಮತ್ತು ಈ ಕೊಳಗಳಲ್ಲಿ ಕಾಫಿ ತೋಟಗಳಿಂದಲೇ ಸಂಗ್ರಹಿಸಿದ ವಿಶೇಷ ರೀತಿಯ ಪರಿಣಾಮಕಾರಿ ಸೂಕ್ಷ್ಮಾಣುಜೀವಿಗಳ ಕಾರ್ಯಕ್ಷಮತೆಯಿಂದ ಕಲುಷಿತ ನೀರಿನಲ್ಲಿರುವ ಜೈವಿಕ ಆಮ್ಲಜನಕ ಬೇಡಿಕೆ ಶೇ. 70–90 ರವರೆಗೆ ಕಡಿಮೆ ಮಾಡಲಾಯಿತು. ಈ ಪರಿಣಾಮಕಾರಿ ಸೂಕ್ಷ್ಮಾಣುಜೀವಿಗಳು ಕಲುಷಿತ ನೀರಿನಲ್ಲಿರುವ ಹಾನಿಕಾರಕ ಸೂಕ್ಷ್ಮಾಣುಜೀವಿಗಳನ್ನು ಮಟ್ಟಹಾಕಿ ತಾವೇ ಚೆನ್ನಾಗಿ ಬೆಳೆದ ಎಲ್ಲಾ ರೀತಿಯ ವಿಷಕಾರಿ ಪದಾರ್ಥಗಳನ್ನು ತಿಂದು ಹಾಕುತ್ತವೆ (Hearne, 2006). ಹಲವು ಬಗೆಯ ಪರಿಣಾಮಕಾರೀ ಸೂಕ್ಷ್ಮಜೀವಿಗಳ ಮಿಶ್ರಣಗಳನ್ನು ಕಲಿಷಿತ ನೀರಿಗೆ ಅನೇಕ ಬಾರಿ ಬೆರೆಸುವ ಮೂಲಕ ಈ ಹಂತದಲ್ಲಿ ಕಲುಷಿತ ನೀರಿನಲ್ಲಿದ್ದ ಹಾನಿಕಾರಕ ಸೂಕ್ಷ್ಮಾಣುಜೀವಿ ಗಳನ್ನು ತೆಗೆದುಹಾಕಲಾಗುವುದು (Higa, 1994).

ಹಂತ 4: ದ್ವಿತೀಯ ಹಂತದ ನೀರು ಸಂಸ್ಕರಣೆ– ಈ ಹಂತದಲ್ಲಿ ಚೆನ್ನಾಗಿ ನೀರು ಹಾಯಿಸಲ್ಪಟ್ಟ ಹಾಗೂ ಕೆಲವು ಜಾತಿಯ ವಿಶೇಷ ಕಳೆ ಸಸ್ಯಗಳಿಂದ ತುಂಬಿದ ಜೌಗು ಭೂಮಿಯಲ್ಲಿ 3ನೇ ಹಂತದಿಂದ ಹೊರಬರುವ ನೀರನ್ನು ಹಾಯಿಸಲಾಗುತ್ತದೆ. ಈ ಕಳೆ ಸಸ್ಯಗಳಲ್ಲಿದುವ ಆಮ್ಲಜನಕವು ನೀರಿನಲ್ಲಿ ಬೆರೆತು ಕಲುಷಿತ ನೀರು ಮತ್ತಷ್ಟು ಶುದ್ಧಿಯಾಗಿ ಅದರಲ್ಲಿನ ಕರಗಿದ ಆಮ್ಲಜನಕ (DO) ದ ಮಟ್ಟ ಗಣನೀಯವಾಗಿ ಏರಿತ್ತದೆ. ಅಷ್ಟೇ ಅಲ್ಲದೆ ಅಳಿದುಳಿದ ಹಾನಿಕಾರಕ ಪದಾರ್ಥಗಳು ಮತ್ತು ಬೆರೆತಿರುವ ಘನವಸ್ತುಗಳು ಶೇ. 70 ರಷ್ಟು ನಾಶವಾಗುತ್ತವೆ (Vymzal et al., 1998).

ಹಂತ 5: ತೃತೀಯ ಹಂತದ ನೀರಿನ ಸಂಸ್ಕರಣೆ– ಈ ಹಂತದಲ್ಲಿ 4ನೇ ಹಂತದಿಂದ ಹೊರಬರುವ ನೀರನ್ನು ವಾಟರ್ ಹಯಸಿಂತ್ ಜಾತಿಯ ಕಳೆಸಸ್ಯಗಳಿಂದ ತುಂಬಿದ ಕೊಳದೊಳಗೆ ಹರಿಸಲಾಗುವುದು. ಈ ಕಳೆಗಿಡಗಳು ನೀರಿನಲ್ಲಿ ಅಳಿದುಳಿದ ಹಾನಿಕಾರಕ ಬ್ಯಾಕ್ಟೀರಿಯಾ ಹಾಗೂ ಭಾರಲೋಹದ (Heavy Metal) ವಸ್ತುಗಳನ್ನು ತೆಗೆದು ಹಾಕತ್ತವೆ. ಅಂತಿಮವಾಗಿ ಈ ಕಳೆಸಸ್ಯಗಳಿಂದ ತುಂಬಿದ ಕೊಳದಿಂದ

ಹೊರಹಾಕಲ್ಪಟ್ಟ ನೀರು ಸಂಸ್ಕರಿತ ಹಾಗೂ ಶುದ್ಧವಾಗಿರುತ್ತದೆ. ಇದನ್ನು ಯಾವುದೇ ಹಾನಿಯಿಲ್ಲದೇ ಹತ್ತಿರದ ತೊರೆಗಳಿಗೆ / ಹಳ್ಳಗಳಿಗೆ ಹರಿಸಬಹುದು.

ಫಲಿತಾಂಶ ಮತ್ತು ಚರ್ಚೆ: ಮೊದಲ ಹಂತದಲ್ಲಿ ಆಮ್ಲೀಯ ಕೊಳದಲ್ಲಿ ಕಲುಷಿತ ನೀರನ್ನು 6 ಗಂಟೆಗಳ ಕಾಲ ನಿಲ್ಲಿಸಿದಾಗ ನರೀಕ್ಷೆಯಂತೆಯೇ ಕಲುಷಿತ ನೀರು ತಿಳಿಗೊಂಡು ಘನಪದಾರ್ಥಗಳು ಮೇಲ್ಮೈಯಲ್ಲಿ ತೇಲಾಡಿದವು. ರೇಕುಗ ಳನ್ನು ಬಳಸಿ ಈ ಘನಪದಾರ್ಥಗಳನ್ನು ತೆಗೆದು ಹಾಕಲಾಯಿತು. ತಿಳಿಗೊಂಡ ನೀರಿನ pH 3.8 ಆಗಿತ್ತು.

ಎರಡನೇ ಹಂತದಲ್ಲಿ ಪ್ರತೀ ಲೀ. ನೀರಿಗೆ 250 ಮಿ.ಗ್ರಾಂ. ನಂತೆ ಸುಣ್ಣವನ್ನು ಬೆರೆಸಿ ಕಲುಷಿತ ನೀರನ್ನು ಸಂಸ್ಕರಿಸಿದಾಗ ನೀರಿನ pH 8.0 ರಿಂದ 10.23 ಕ್ಕೆ ಏರಿದುವುದು ಕಂಡುಬಂದಿತು. ಸುಣ್ಣವು ಬಫರ್ ರೀತಿಯಲ್ಲಿ ಕೆಲಸ ಮಾಡುವುದರಿಂದ ಕಲುಷಿತ ನೀರಿನ pH ನಲ್ಲಿ ಏರಿಕೆಯಾಗುತ್ತದೆ. ಈ ಫಲಿತಾಂಶವು Teagust (1999) ನೆಡೆಸಿದ ಪರೀಕ್ಷೆಯ ಫಲಿತಾಂ ಶಗಳಿಗೆ ಪೂರಕವಾಗಿತ್ತು.

ಮೂರನೇ ಹಂತದಲ್ಲಿ ಕಾಫಿತೋಟಗಳಿಂದ ಸಂಗ್ರಹಿಸಿದ ಪರಿಣಾಮಕಾರೀ ಸೂಕ್ಷ್ಮಾಣುಜೀವಿಗಳ ಮಿಶ್ರಣವನ್ನು ಕಲುಷಿತ ನೀರಿಗೆ ಮೇಲಿಂದ ಮೇಲೆ ಬೆರೆಸಿದಾಗ ಕಲುಡಿತ ನೀರಿನಲ್ಲಿದ್ದ ಹಾನಿಕಾರಕ ಸೂಕ್ಷ್ಮಾಣುಜೀವಿಗಳ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಕೆಯಾಗಿ ಅವುಗಳ ಜಾಗಚಲದಲಿ ಉಪಯುಕ್ತ ಸೂಕ್ಷ್ಮಾಣುಜೀವಿಗಳು ವೃದ್ಧಿಸಿರುವುದು ಕಂಡುಬಂದಿತು. ಈ ಹಂತದಲ್ಲಿ ಕಲುಷಿತ ನೀರಿನ ಜೈವಿಕ ಆಮ್ಲಜನಕದ ಬೇಡಿಕೆ ಸಹಾ ಗಣನೀಯವಾಗಿ ಕಡಿಮೆಯಾಯಿತು. ಈ ಫಲಿತಾಂ ಶಗಳನ್ನು ಈ ಹಿಂದಿನ ಅನೇಕ ಪ್ರಯೋಗಗಳು ಪುಷ್ಠೀಕರಿಸುತ್ತವೆ (Higa, 1994 and Hearne, 2006).

ನಾಲ್ಕನೇ ಹಂತದಲ್ಲಿ ವಿಶೇಷ ಜಾತಿಯ ಕಳೆಸಸ್ಯಗಳಿಂದ ತುಂಬಿದ ಕೋಳದಲ್ಲಿ 3 ನೇ ಹಂತದಿಂದ ಹರಬಿದ್ದ ಕಲುಷಿತ ನೀರನ್ನು ಹರಿಸಿದಾಗ ನೀರಿನ ಕರಗಿದ ಆಮ್ಲಜನಕದ ಮಟ್ಟದಲ್ಲಿ ಗಣನೀಯ ಏದಿಕೆ ಕಂಡುಬಂದಿತು. ಅಲ್ಲದೇ ಜೈವಿಕ ಆಮ್ಲಜನಕದ ಬೇಡಿಕೆ 6320 mg/dl ನಿಂದ 2600 mg/dl ಗೆ ಇಳಿಕೆಯಾಗಿರುವುದು ಕಂಡುಬಂದಿತು ಹಾಗೂ ಕರಗಿದ ಘನಪದಾರ್ಥಗಳ ಪ್ರಮಾಣ 12,594 mg/dl ನಿಂದ 23726 mg/dl ಗೆ ಇಳಿಕೆಯಾಗಿತ್ತು.

ಅಂತಿಮವಾಗಿ ವಾಟರ್ ಹಯಸಿಂಥ್ ಕಳೆಸಸ್ಯಗಳ ಮೂಲಕ ನೀರನ್ನು ಹರಿಸಿದಾಗ ಜೈವಿಕ ಆಮ್ಲಜನಕದ ಬೇಡಿಕೆ, TDS ಹಾಗೂ TSS ಗಳು ಕ್ರಮವಾಗಿ 2025, 4876 ಹಾಗೂ 798 mg/dl ಗೆ ಇಳಿಕೆಯಾಗಿರು ವುದು ಕಂಡುಬಂದಿತು.

ಕಾಫಿಹಣ್ಣನ್ನು ಸಂಸ್ಕರಿಸಿದ ಕಲುಷಿತ ನೀರು ಪರಿಣಾಮಕಾರಿ



ಸೂಕ್ಷ್ಮಾಣುಜೀವಿಗಳ ಮಿಶ್ರಣ

ವಿವಿಧ ಜಾತಿಯ ಕಳೆಸಸ್ಯಗಳನ್ನು ಬಳಸಿ ಶುದ್ಧೀಕರಣ

ವಾಟರ್ ಹಯಸಿಂಥ್ ಶುದ್ಧೀಕರಣ

ಕೋಷ್ಟಕ 1. ಕಾಪಿಬೀಜ ಸಂಸ್ಕರಿಸಿದ ಕಲುಷಿತ ನೀರಿನ ಶುದ್ಧೀಕರಣದ ವಿವಿಧ ಹಂತಗಳಲ್ಲಿ ಭೌತಿಕ ಹಾಗೂ ರಾಸಾಯನಿಕ ಅಂಶಗಳು

ಹಂತಗಳು ಅಂಶಗಳು	ಶುದ್ಧೀಕರಣಕ್ಕೆ ಮುಂಚಿನ ಕಲುಷಿತ ನೀರು	ಸುಣ್ಣದಿಂದ ಸಂಸ್ಕರಿಸಿದ ಕಲುಷಿತ ನೀರು	ಪರಿಣಾಮಕಾರೀ ಸೂಕ್ಷ್ಮಾಣುಜೀವಿ ಗಳಿಂದ ಶುದ್ಧಿಕರಿಸಿದ ಕಲುಷಿತ ನೀರು	ಕಳೆಸಸ್ಯಗಳಿಂದ ಹಾದುಬಂದ ಕಲುಷಿತ ನೀರು	ಕೊನೇ ಹಂತದಲ್ಲಿ ವಾಟರ್ ಹಯಸಿಂಥ್ ಮೂಲಕ ಹಾಯಿಸಿದ ಶುದ್ಧಿಕರಿಸಿದ ಕಲುಷಿತ ನೀರು
ಪಿ.ಎಚ್.	5.39	10.23	7.30	7.1	7.26
ರಾಸಾಯನಿಕ ಆಮ್ಲಜನಕ ಬೇಡಿಕೆ (COD) mg/L	–	–	–	–	3480
ಜೈವಿಕ ಆಮ್ಲಜನಕ ಬೇಡಿಕೆ (BOD) mg/L	8700	8045	6320	2600	2025
ಒಟ್ಟು ಕರಗಿದ ಘನವಸ್ತುಗಳು (TDS) mg/L	4068	11634	12594	3726	4876
ಒಟ್ಟು ಘನವಸ್ತುಗಳು (TSS) mg/L	5254	4892	10440	3208	798

ಪರಿಣಾಮಕಾರೀ ಸೂಕ್ಷ್ಮಾಣುಜೀವಿಗಳನ್ನು ಸತತವಾಗಿ ಕಲುಡಿತ ನೀರಿನಲ್ಲಿ ಸೇರಿಸಿದಾಗ ಅವುಗಳು ಚೆನ್ನಾಗಿ ಬೆಳೆದು ನೀರಿನಲ್ಲಿದ್ದ ಹಾನಿಖಾರಕ/ ರೋಗಕಾರಕ ಸೂಕ್ಷ್ಮಾಣುಜೀವಿಗಳನ್ನು ನಾಶಗೊಳಿಸುವು ದಲ್ಲದೇ ನೀರಿನ ಗುಣಮಟ್ಟವನ್ನು ಉತ್ತಮಪಡಿಸುತ್ತವೆ (Hige, 1994). ಈ ಪರಿಣಾಮಕಾರೀ ಸೂಕ್ಷ್ಮಾಣುಜೀವಿಗಳು ಬೇರೆ ಬೇರೆ ಜಾತಿಗೆ ಸೇರಿದ್ದರೂ ಸಹಾ ಒಟ್ಟಾಗಿ ಕಾರ್ಯನಿರ್ವಹಿಸಿ ಕಲುಷಿತ ನೀರಿನಲ್ಲಿ ಬೆರೆತಿರುವ ಸಾವಯಮ ಪದಾರ್ಥಗಳನ್ನು ಕರಗಿಸುತ್ತವೆ ಹಾಗೂ ವಿಷಕಾರೀ ಅಂಶ ಗಳನ್ನು ಸಹಾ ತೆಗೆದುಹಾಕುತ್ತವೆ (Hearne, 2006). ಅಲ್ಲದೇ ಈ ಪರಿಣಾಮಕಾರೀ ಸೂಕ್ಷ್ಮಾಣುಜೀವಿಗಳು ಅತಿವೇಗವಾಗಿ ವೃದ್ಧಿಸಿ ಇತರೇ ಹಾನಿಕಾರಕ ಸೂಕ್ಷ್ಮಾಣುಜೀವಿಗಳಿಗೆ ಬೆಳೆಯುವ ಅವಕಾಶಗಳನ್ನು ಕುಂಟಿತಗೊಳಿಸುತ್ತವೆ. ಇದರಿಂದಾಗಿ ಕಾಫಿ ಸಂಸ್ಕರಿಸಿದ ಕಲುಷಿತ ನೀರಿನಲ್ಲಿ ಜೈವಿಕ ಒತ್ತಡವೂ ಕುಗ್ಗುತ್ತದೆ (Okuda and Higa, 1999)

ಪದ್ಧತಿಯ ವಿಶೇಷ ಅನುಕೂಲಗಳು:

1. ಈ ಸಂಸ್ಕರಣಾ ಪದ್ಧತಿಯಲ್ಲಿ ಬಳಸುವ ಸುಣ್ಣ ಅತ್ಯಂತ ಮಿತವ್ಯಯಕಾರಿಯಾಗಿದ್ದು ಯಶಸ್ವಿಯಾಗಿ ಕಲುಷಿತ ನೀರಿನ pH ಅನ್ನು 6 ರ ಸಮೀಪಕ್ಕೆ ಕೊಂಡೊಯ್ಯತ್ತದೆ.
2. ಪ್ರಾಥಮಿಕ ಹಂತದ ನೀರು ಸಂಸ್ಕರಣೆಗೆ ಬಳಸುವ ತೊಟ್ಟಿಗಳನ್ನು ಸುಲಭವಾಗಿ ಕಡಿಮೇ ವೆಚ್ಚದಲ್ಲಿ ನಿರ್ಮಿಸಬಹುದು.
3. ಕಾಫಿ ತೋಟದಲ್ಲಿಯೇ ಇರುವ ಜೌಗು ಪ್ರದೇಶಗಳನ್ನು, ತೋಟಗಳನ್ನು ಈ ಪದ್ಧತಿಯಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಬಹುದು.
4. ಇಡೀ ಚಟುವಟಿಕೆಗಳು ಗಾಳಿಯ ಸಂಪರ್ಕದಲ್ಲೇ (Aerobic) ನಡೆಯುವುದರಿಂದ ತೋಟದಲ್ಲಿ ಯಾವುದೇ ತೆರನಾದ ದುರ್ಗಂಧಕ್ಕೆ ಅವಕಾಶ ಇರುವುದಿಲ್ಲ.
5. ಈ ಪ್ರಯೋಗದ ಕೇಂದ್ರಬಿಂದುವಾದ ಪರಿಣಾಮಕಾರಿ ಸೂಕ್ಷ್ಮಾಣುಜೀವಿಗಳನ್ನು ಕಾಫಿ ತೋಟದಿಂದಲೇ ಪಡೆಯಬಹುದು. ಅದಕ್ಕಾಗಿ ಹೆಚ್ಚು ವೆಚ್ಚಮಾಡುವ ಅಗತ್ಯವಿಲ್ಲ.
6. ಈ ಪ್ರಯೋಗವನ್ನು ದೊಡ್ಡಮಟ್ಟದಲ್ಲಿ ಕೈಗೊಳ್ಳಲು ಎಲ್ಲಾ ಅವಕಾಶಗಳೂ ಇವೆ.
7. ಈಗಾಗಲೇ ಚಿಕ್ಕಮಗಳೂರು ಜಿಲ್ಲೆಯ ಬಗನೆ ಹೆದ್ದಾಳ್ ಕಾಫಿ ತೋಟದಲ್ಲಿ ಹೊರಬರುವ ಸಂಸ್ಕರಿಸಿದ ನೀರನ್ನು ಹಾಸನದ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಪರೀಕ್ಷೆಗೊಳಪಡಿಸಿ ನಿರೀಕ್ಷಿತ ಫಲಿತಾಂಶಗಳನ್ನು ಪಡೆಯಲಾಗಿದೆ.

References:

1. Chanakya, H.N., Deepa, G.B., Vinutha, D. and Modak J.M. 2004. Multi feed biogas reactor for coffee waste water and biomass wastes-performance under highly fluctuating operating conditions, paper presented at the Tenth International Symposium on Anaerobic Digestion, Montreal, Canada, 23 August to 2 September 2004.
2. Higa, T. 1994. Effective Microorganisms: A New Dimension for Nature Farming. pp. 20-22. In J.F. Parr, S.B. Hornick, and M.E. Simpson (eds). Proceedings of the 2nd International Conference on Kyusei Nature Farming. U.S.Department of Agriculture, Washington, D.C, USA.
3. Murthy, K.V.N., D'Sa, A. and Kapur, G. 2004. An effluent treatment-cum-electricity generation option at coffee estates: is it financially feasible? International Energy Initiative, Bangalore, 2004.
4. Okuda, A and T. Higa, 1999. Purification of wastewater with Effective Microorganisms and is utilization in agriculture. PP.246-253: Y.D.A. Senanayake and U.R. Sangakkara (eds). Proceedings of the 5th International conference on Kyusei Nature Farming, Thailand, 1998, Asian Pacific Natural Agriculture Network (APNAN), Thailand.
5. Treagust, J. 1994. Coffee Waste Water Treatment. B.Sc. (Hons.) dissertation, Cranfield, United Kingdom: Cranfield University.
6. Vymzal, J, Brix, H., Cooper, P., Haberl, R., Perfler, R. and Laber, J. 1998. Removal mechanisms and types of constructed wetlands. *In:* Constructed Wetlands for wastewater treatment in Europe. Backhuys. Leiden, The Netherlands.

ಪ್ರಾಚೀನ ಭಾರತೀಯರ ಕೃಷಿ

ಕಾಶೀನಾಥ ಶಾಸ್ತ್ರಿ ಹೆಚ್.ವಿ.

ಅತಿಥಿ ಉಪನ್ಯಾಸಕರು ಹಾಗೂ ಸಂಶೋಧನಾ ವಿದ್ಯಾರ್ಥಿ, ಕುವೆಂಪು ವಿಶ್ವವಿದ್ಯಾನಿಲಯ, ಸಹ್ಯಾದ್ರಿಕಾಲೇಜು ಆವರಣ, ಶಿವಮೊಗ್ಗ–03

ಇಂದು ವಿಜ್ಞಾನ–ತಂತ್ರಜ್ಞಾನಗಳು ಎಷ್ಟೇ ಅಭಿವೃದ್ಧಿಯಾಗಿದ್ದರೂ, ಇಂದು ಏನೇ ಆವಿಷ್ಕಾರಗಳು ಆಗಿದ್ದರೂ ದೇಹಪೋಷಣೆಗೆ ಅಗತ್ಯವಾದ ಆಹಾರಕ್ಕೆ ಪರ್ಯಾಯವಾಗಿ ಬೇರೆ ಮಾರ್ಗಗಳನ್ನು ಶಾಶ್ವತವಾಗಿ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಹಾಗಾಗಿ ಕೃಷಿಯು ಹಿಂದಿನಿಂದ ಇಂದಿನವರೆಗೂ, ಇನ್ನುಮುಂದೆಯೂ ಅಗತ್ಯವಾಗಿದೆ. ಇದನ್ನು ಮನಗಂಡಂತಹ ಹಿಂದಿನ ಋಷಿಗಳು ಆಗಿನ ಕಾಲದಲ್ಲಿಯೇ ಹಲವು ಸಂಶೋಧನೆಗಳನ್ನು ನಡೆಸಿ ಲೋಕೋಪಕಾರಿಯಾಗಿದ್ದಾರೆ.

ವೇದಗಳ ಕಾಲದಲ್ಲಿಯೇ ವಿಜ್ಞಾನದ ಹಲವು ಶಾಖೆಗಳಾದ ಭೌತಶಾಸ್ತ್ರ, ಖಗೋಳಶಾಸ್ತ್ರ, ಲೋಹಶಾಸ್ತ್ರ, ಸಸ್ಯಶಾಸ್ತ್ರ ಇತ್ಯಾದಿ ಎಲ್ಲಾ ವಿಷಯಗಳಲ್ಲಿಯೂ ಸಂಶೋಧನೆಯು ನಡೆದಿತ್ತು. ಅಂತೆಯೇ ಕೃಷಿ ಕ್ಷೇತ್ರದಲ್ಲಿಯೂ ಸಾಕಷ್ಟು ಆವಿಷ್ಕಾರಗಳಾಗಿದ್ದವು. ಪ್ರಪಂಚದ ಪ್ರಾಚೀನ ಸಾಹಿತ್ಯಗಳಾದ ವೇದಾದಿಗಳಲ್ಲಿಯೂ ಕೃಷಿಗೆ ಸಂಬಂಧಿಸಿದ ಹಲವು ಮಾಹಿತಿಗಳಿವೆ.

ಪರಾಶರ ಮಹರ್ಷಿಗಳು ಕೃಷಿಯಲ್ಲಿಯೇ ಅತ್ಯಂತ ವಿಸ್ತಾರವಾದ ಸಂಶೋಧನೆ ನಡೆಸಿ ಹಲವು ಮಹತ್ತರವಾದ ವಿಷಯಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಅದುವೇ 'ಕೃಷಿಪರಾಶರ' ಎಂಬ ಕೃಷಿಗೆ ಸಂಬಂಧಿಸಿದ ಮಹತ್ತರವಾದ ಕೃತಿ. ಇದರಲ್ಲಿ ಮಹರ್ಷಿ ಪರಾಶರರು –

"ಅನ್ನಂತು ಧಾನ್ಯಸಂಭೂತಂ ಧಾನ್ಯಂತು ಕೃಷಿರ್ವಿನಾ ನಜಾ ।
ತಸ್ಮಾತ್ ಸರ್ವಂ ಪರಿತ್ಯಜ್ಯ ಕೃಷಿಂ ಯತ್ನೇನ ಕಾರಯೇತ್ ॥"

–ಅನ್ನವು ಧಾನ್ಯದಿಂದ ಬರುತ್ತದೆ. ಧಾನ್ಯವಾದರೂ ಕೃಷಿಯಿಲ್ಲದೆ ಹುಟ್ಟುವುದಿಲ್ಲ ಹಾಗಾಗಿ ಎಲ್ಲವನ್ನು ಬದಿಗಿಟ್ಟು ಕೃಷಿಯನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕು ಎಂದಿದ್ದಾರೆ.

ಹೀಗೆ ಈ ಕ್ಷೇತ್ರದಲ್ಲಿ ಪ್ರಾಚೀನ ಭಾರತೀಯರು ನಡೆಸಿದ ಸಂಶೋಧನೆಗಳ ಕುರಿತು ಪ್ರಬಂಧದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

ಇಂದು ವಿಜ್ಞಾನ–ತಂತ್ರಜ್ಞಾನಗಳು ಎಷ್ಟೇ ಅಭಿವೃದ್ಧಿಯಾಗಿದ್ದರೂ, ಹೊಸ–ಹೊಸ ಆವಿಷ್ಕಾರಗಳು ಏನೇ ಆಗಿದ್ದರೂ ನಮ್ಮ ದೇಹಪೋಷಣೆಗೆ ಅಗತ್ಯವಾದ, ನಮ್ಮ ಜೀವನ ನಿರ್ವಹಣೆಗೆ ಆವಶ್ಯಕವಾದ ಆಹಾರಕ್ಕೆ ಪರ್ಯಾಯವಾಗಿ ಬೇರೆ ಮಾರ್ಗಗಳನ್ನು ಶಾಶ್ವತವಾಗಿ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಹಾಗಾಗಿ ಕೃಷಿಯು ಹಿಂದಿನಿಂದ ಇಂದಿನವರೆಗೂ ಹಾಗೂ ಇನ್ನು ಮುಂದೆಯೂ ಅತ್ಯಗತ್ಯವಾದುದು. ಇದನ್ನು ಮನಗಂಡಂತಹ ನಮ್ಮ ಪ್ರಾಚೀನ ಋಷಿಗಳು ಆಗಿನ ಕಾಲದಲ್ಲಿಯೇ ಹಲವು ಸಂಶೋಧನೆಗಳನ್ನು ನಡೆಸಿ ಲೋಕೋಪಕಾರಿಯಾಗಿದ್ದಾರೆ. ಇಂದು ಕೃಷಿಯ ಸಾಧನಗಳಲ್ಲಿ, ಪರಿಕರಗಳಲ್ಲಿ, ಕಾರ್ಯಶೈಲಿಯಲ್ಲಿ ಬದಲಾವಣೆಯಾಗಿದ್ದರೂ ಅದನ್ನು 'ಕೃಷಿ' ಎಂದೇ ಸಂಬೋಧಿಸಲಾಗುತ್ತಿದೆ.

'ಕೃಷಿ' ಎಂಬುದು ಸಂಸ್ಕೃತ ಪದವಾಗಿದ್ದು, 'ಕೃಷ ವಿಲೇಖನೇ ಕರ್ಷತಿ' ಎಂಬ ಧಾತುವಿನಿಂದ ನಿಷ್ಪನ್ನವಾದುದು. 'ಕರ್ಷತೀತಿ ಕೃಷಿಃ' ಎಂಬುದು ಕೃಷಿ ಶಬ್ದದ ವ್ಯುತ್ಪತ್ತಿ. 'ಕರ್ಷತಿ' ಎಂದರೆ ಉಳುವುದು ಎಂದರ್ಥವಾಗುತ್ತದೆ. ಹಾಗಾಗಿ ಕೃಷಿಯಲ್ಲಿ ಅನೇಕ ಕಾರ್ಯವಿಧಾನಗಳಿದ್ದರೂ ಮೂಲ ಅರ್ಥ ಉಳುವುದಾಗಿದೆ. ಕರ್ನಾಟಕದಲ್ಲಿ ಸ್ಥಳೀಯವಾಗಿ ಕೃಷಿಯನ್ನು ಬೇರೆ ಬೇರೆ ಹೆಸರುಗಳಿಂದ ಹೆಸರಿಸುತ್ತಾರೆ. ಅವು – ವ್ಯವಸಾಯ, ಬೇಸಾಯ, ಒಕ್ಕಲುತನ, ಉಳುಮೆ, ರೈತಾಪಿ ಕೆಲಸ ಇತ್ಯಾದಿ. ಹೀಗೆ ಕೃಷಿಯು ಪ್ರದೇಶಕ್ಕನುಗುಣವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟರೂ ಅರ್ಥ ಒಂದೇ. ಭಾವ ಒಂದೇ.

ನಮ್ಮ ಪೂರ್ವಿಕರ ಜೀವನದ ಮೂಲ ಧ್ಯೇಯ ಮೋಕ್ಷಸಾಧನೆ. ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ತಮ್ಮ ಜೀವನಶೈಲಿಯನ್ನಾಗಿಸಿಕೊಂಡಿದ್ದರು. ಧರ್ಮಮಾರ್ಗದಲ್ಲಿ ಅರ್ಥಸಂಪಾದಿಸಿ ತನ್ಮೂಲಕ ತಮ್ಮ ಸತ್ಕಾಮನೆಗಳನ್ನು ಈಡೇರಿಸಿಕೊಂಡು ಜೀವನದ ಪರಮೋಚ್ಚ ಗುರಿಯಾದ ಮೋಕ್ಷವನ್ನು ಹೊಂದುವುದು ಜೀವನದ ಕ್ರಮವಾಗಿತ್ತು. ಈ ಎಲ್ಲಾ ಕಾರ್ಯಗಳನ್ನು ಪರಿಪೂರ್ಣವಾಗಿ ನಡೆಸಲು ಸಹಕಾರಿಯಾಗುವ ಸಾಧನವೇ ಶರೀರ. ಈ ಶರೀರವು ಆರೋಗ್ಯ ಹಾಗೂ ಬಲಯುಕ್ತವಾಗಿರಬೇಕಾದರೆ ಸತ್ವಯುತ-ಆಹಾರವು ಅತ್ಯಾವಶ್ಯಕವಾದುದು. ಈ ಆಹಾರವು ಕೃಷಿಜನ್ಯವಾದ್ದರಿಂದ ಪ್ರಾಚೀನರು ಕೃಷಿಯನ್ನು ತಮ್ಮ ಬದುಕಿನ ಭಾಗವಾಗಿಸಿಕೊಂಡಿದ್ದರು.

'ಅನ್ನತೋ ಪ್ರಾಣಃ ಪ್ರಾಣತೋ ಪರಾಕ್ರಮಃ' ಎಂಬ ಉಕ್ತಿಯಂತೆ ಆಹಾರದಿಂದಲೇ ಪ್ರಾಣದ ಅಸ್ತಿತ್ವ ಹಾಗೂ ಪ್ರಾಣದಿಂದಲೇ ದೇಹಕ್ಕೆ ಬಲ ಎಂಬ ಸಂದೇಶವು ಪ್ರಸಾರವಾಯಿತು. ವೇದಗಳಲ್ಲೇ ಪ್ರಾಚೀನವೆನಿಸಿದ ಋಗ್ವೇದಕ್ಕೆ ಸಂಬಂಧಿಸಿದ ಐತರೇಯೋಪನಿಷತ್ತಿನಲ್ಲಿ ಬ್ರಹ್ಮನು ಜಗತ್ತಿನ ರಕ್ಷಣೆಗಾಗಿ ಅನ್ನದ ಉತ್ಪತ್ತಿಯನ್ನು ಮಾಡಿದನೆಂದು ವಿವರಿಸಲಾಗಿದೆ.

'ಅನ್ನಂ ಬ್ರಹ್ಮೇತಿ ವ್ಯಜಾನಾತ್ । ಅನ್ನಾದ್ಯೇವ ಖಲ್ವಿಮಾನಿ ಭೂತಾನಿ ಜಾಯಂತಿ ।
ಅನ್ನೇನ ಜಾತಾನಿ ಜೀವಂತಿ । ಅನ್ನಂ ಪ್ರಯಂತ್ಯಭಿಶಂವಿಶಂತೀತಿ ॥

–ಅನ್ನವೇ ಬ್ರಹ್ಮ, ಅನ್ನದಿಂದಲೇ ಸಕಲ ಜೀವಿಗಳು ಹುಟ್ಟುವುದು, ಅನ್ನದಿಂದಲೇ ಹುಟ್ಟಿದ ಜೀವಿಗಳು ಜೀವಿಸುವುದು. ಇಂತಹ ಅನ್ನಕ್ಕೆ ಸಮಾನವಾದ ಬೇರೆ ವಸ್ತುವೊಂದಿಲ್ಲ ಎಂದಿದ್ದಾರೆ ಉಪನಿಷತ್‌ಕಾರರು. ಇಲ್ಲಿ ಅನ್ನವನ್ನೇ ಪರಬ್ರಹ್ಮವೆಂದು ಪ್ರತಿಪಾದಿಸಲಾಗಿದೆ. ಅನ್ನವೆಂದರೆ ಆಹಾರವೆಂದರ್ಥ. ಹಾಗಾಗಿ ಆಹಾರೋತ್ಪಾದನೆಗೆ ವೇದಕಾಲದಲ್ಲಿಯೇ ಅತ್ಯಂತ ಪ್ರಾಮುಖ್ಯತೆಯಿತ್ತು.

ಯಜುರ್ವೇದಾಂತರ್ಗತವಾದ ರುದ್ರಾಧ್ಯಾಯ ಚಮಕದ ಚತುರ್ಥೋನುವಾಕದಲ್ಲಿ ಕೃಷಿ ಸಂಬಂಧಿ ಹಲವು ಮಾಹಿತಿಗಳಿವೆ. ಇಲ್ಲಿ 'ವ್ರೀಹಯಶ್ಚಮೇ ಯವಾಶ್ಚಮೇ ಮಾಷಾಶ್ಚಮೇ ತಿಲಾಶ್ಚಮೇ ಮುದ್ಗಾಶ್ಚಮೇ ಖಲ್ವಾಶ್ಚಮೇ ಗೋಧೂಮಾಶ್ಚಮೇ ಮಸುರಾಶ್ಚಮೇ' ಹಾಗೂ ನೀವಾರಾಶ್ಚಮೇ' ಎಂದು ಪ್ರಾರ್ಥಿಸಲಾಗಿದೆ. ಇಲ್ಲಿ ಕ್ರಮವಾಗಿ ಭತ್ತ, ಜವೆ, ಉದ್ದು, ಎಳ್ಳು, ಹೆಸರು, ತೊಗರಿ, ಗೋಧಿ, ಚನ್ನಂಗಿ, ನವಣೆ, ಸಣ್ಣಭತ್ತ ಹೀಗೆ ಬಹುತೇಕ ಎಲ್ಲಾ ಧಾನ್ಯಗಳನ್ನು ಇಲ್ಲಿ ಹೆಸರಿಸಿ ಅವುಗಳೆಲ್ಲವು ನನಗೆ ಸಿಗುವಂತಾಗಲಿ ಎಂದು ಪ್ರಾರ್ಥಿಸಲಾಗಿದೆ. ಜೊತೆಗೆ 'ನೀವಾರ'ವೆಂದರೆ ಅರಣ್ಯಧಾನ್ಯಗಳೆಂದರ್ಥ ಅಂದರೆ ಬಿದಿರಕ್ಕಿ ಇತ್ಯಾದಿಗಳು. ಇವೆಲ್ಲವೂ ತಮಗೆ ಲಭಿಸುವಂತಾಗಲಿ ಎಂದಿದ್ದಾರೆ. ಇಲ್ಲಿ ಗಮನಿಸಬೇಕಾದದ್ದು, 'ವ್ರೀಹಯ'ವೆಂದರೆ ಭತ್ತವೆಂದರ್ಥ, 'ಅಣವ'ವೆಂದರೆ ಸಣ್ಣಭತ್ತ ಎಂದಾಗುತ್ತದೆ. ಇಲ್ಲಿ ಒಂದೇ ಧಾನ್ಯದ ಎರಡು ವಿಧಗಳನ್ನು ಹೆಸರಿಸಲಾಗಿದೆ. ಅಂದರೆ ಒಂದೇ ಧಾನ್ಯದ ಕೆಲವು ತಳಿಗಳ ಸಂಶೋಧನೆ ಅಂದು ನಡೆದಿತ್ತೆಂದು ಗಮನಿಸಬಹುದು.

ಪರಾಶರ ಮಹರ್ಷಿಯಿಂದ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಹಲವು ಸಂಶೋಧನೆಗಳು ನಡೆದು ಅತ್ಯುಪಯುಕ್ತವಾದ ಗ್ರಂಥ ರಚಿತವಾಯಿತು. ಇದೇ 'ಕೃಷಿಪರಾಶರ'. ಸ್ವತಃ ಖಗೋಳಶಾಸ್ತ್ರಜ್ಞನಾಗಿದ್ದರೂ ಕೃಷಿಯ ಅಗತ್ಯತೆಯನ್ನು ಮನಗಂಡು ಕೃಷಿಕ್ಷೇತ್ರದಲ್ಲಿಯೂ ಹಲವು ಸಂಶೋಧನೆಗಳನ್ನು ಮಾಡಿ ಲೋಕೋಪಕಾರಿಯಾಗಿದ್ದಾನೆ.
ಕೃಷಿಪರಾಶರದ ಪ್ರಾರಂಭದಲ್ಲಿ ಗ್ರಂಥದ ಉದ್ದೇಶವನ್ನು ಸ್ಪಷ್ಟವಾಗಿ ಈ ರೀತಿ ಹೇಳಲಾಗಿದೆ. –

ಪ್ರಜಾಪತಿಂ ನಮಸ್ಕೃತ್ಯ ಕೃಷಿಕರ್ಮ ವಿವೇಚನಮ್ ।
ಕೃಷಕಾಣಾಂ ಹಿತಾರ್ಥಾಯ ಬ್ರೂತೇ ಋಷಿ ಪರಾಶರಃ ॥ ಕೃ.ಪ. 1.1

'ಎಲ್ಲರಿಗೂ ಅಗತ್ಯವಾದ ಕೃಷಿಯನ್ನು ಸೃಷ್ಟಿಸಿದ ಬ್ರಹ್ಮನಿಗೆ ನಮಿಸಿ, ಆ ಕೃಷಿಯ ಮೂಲಕ ಸಕಲರಿಗೂ ಒಳಿತನ್ನು ಮಾಡುತ್ತಿರುವ ಕೃಷಿಕರ ಹಿತಕ್ಕೋಸ್ಕರವೇ ತಾನು ಈ ಕೃತಿಯನ್ನು ರಚಿಸುತ್ತಿದ್ದೇನೆ' ಎಂದಿದ್ದಾನೆ. ಕೃಷಿ ಎನ್ನುವುದು ಅತ್ಯುತ್ತಮವಾದ ವೃತ್ತಿ. ಇದನ್ನು ಯಾರು ತಮ್ಮ ಜೀವನದಲ್ಲಿ ಕನಿಷ್ಠಪಕ್ಷ ಪ್ರವೃತ್ತಿಯನ್ನಾಗಿ ಅಳವಡಿಸಿಕೊಂಡರೂ ಅದು

ನಮ್ಮನ್ನು ಪೋಷಿಸುತ್ತದೆ.

ಏಕಯಾ ಚ ಪುನಃ ಕೃಷ್ಯಾ ಪ್ರಾರ್ಥಕೋ ನೈವ ಜಾಯತೇ ।
ಕೃಷ್ಯಾನ್ವಿತೋ ಹಿ ಲೋಕೇಸ್ಮಿನ್ ಭೂಯಾದೇಕಶ್ಚ ಭೂಪತಿಃ ॥
(ಕೃ.ಪ. 1–3)

ಕೃಷಿಯನ್ನು ಯಾವಾತನು ಅನುಸರಿಸುತ್ತಾನೋ ಅವನು ತನ್ನ ಜೀವನ ನಿರ್ವಹಣೆಗೆ ಎಂದಿಗೂ ಯಾರನ್ನೂ ಬೇಡುವುದಿಲ್ಲ. ಹಾಗಾಗಿ ಕೃಷಿಕನೇ ನಿಜವಾದ ಭೂಪತಿಯೇ ಹೊರತು ರಾಜನಲ್ಲ ಎಂದಿದ್ದಾನೆ.

ರಾಜನೀತಿಯಲ್ಲಿ ಚಾಣಕ್ಯನಾದ ಕೌಟಿಲ್ಯನು, 'ದೇಶದ ಅರ್ಥವ್ಯವಸ್ಥೆಗೆ ಆಧಾರವಾಗಿರುವುದೇ ಕೃಷಿ. ಹಾಗಾಗಿ ಕೃಷಿಯನ್ನು ಅಗತ್ಯವಾಗಿ ಎಲ್ಲರೂ ಪ್ರೋತ್ಸಾಹಿಸಬೇಕು' ಎಂದಿದ್ದಾನೆ. ತನ್ನ ಕೃತಿಯಾದ ಅರ್ಥಶಾಸ್ತ್ರದಲ್ಲಿ ಕೃಷಿಯ ಕುರಿತಾಗಿ ಹಲವು ಉಪಯುಕ್ತ ಮಾಹಿತಿಯನ್ನು ನೀಡಿರುವುದನ್ನು ಗಮನಿಸಿದರೆ ಆತನು ಕೃಷಿಗೆ ಕೊಟ್ಟ ಮಹತ್ವ ತಿಳಿಯುತ್ತದೆ. ಉದಾಹರಣೆಗೆ –

ತತಃ ಪ್ರಭೂತೋದಕಮಲ್ಪೋದಕಂ ವಾ ಸಸ್ಯಂ ವಾಪಯೇತ್ ।
ಶಾಲಿ, ವ್ರೀಹಿ, ಕೋದ್ರವ, ತಿಲ, ಪ್ರಿಯಂಗು, ದಾರಕ, ವಾರಕಾಃ
ಪೂರ್ವವಾಪಾಃ ।
ಮುದ್ಗ, ಮಾಷ, ಶೈಮ್ಬ್ಯಃ, ಮಧ್ಯವಾಪಾಃ ।
ಕುಸುಂಭ, ಮಸೂರ, ಕುಲತ್ಥ, ಯವ, ಗೋಧೂಮ,
ಕಲಾಯಾತಾಸಿ, ಸರ್ಷಪಾಃ ಪಶ್ಚಾದ್ವಾಪಾಃ ॥
(ಅರ್ಥಶಾಸ್ತ್ರಮ್ 2–24)

ಭತ್ತ, ಎಳ್ಳು, ಹೆಸರು ಇತ್ಯಾದಿ ಧಾನ್ಯಗಳನ್ನು ಮಳೆಗಾಲದ ಆದಿಯಲ್ಲೂ, ಉದ್ದು, ಮುದ್ಗ, ಇತ್ಯಾದಿ ಧಾನ್ಯಗಳನ್ನು ಮಳೆಗಾಲದ ಮಧ್ಯದಲ್ಲೂ, ಗೋಧಿ, ಕುಸಿಬೆ, ಜವೆಗೋಧಿ, ಸಾಸಿವೆ ಇತ್ಯಾದಿ ಧಾನ್ಯಗಳನ್ನು ಮಳೆಗಾಲದ ಕೊನೆಯಲ್ಲೂ ಬಿತ್ತಬೇಕು ಎಂದಿದ್ದಾರೆ. ಈ ರೀತಿ ಯಾವ ಯಾವ ಬೆಳೆಗಳಿಗೆ ಎಷ್ಟು ಪ್ರಮಾಣದ ನೀರಿನ ಅಗತ್ಯತೆಯಿದೆ ಯೆಂದು ತಿಳಿದು ಕಾಲಧರ್ಮಕ್ಕನುಗುಣವಾಗಿ ಬಿತ್ತಬೇಕೆಂದು ಕೌಟಿಲ್ಯನು ಈ ರೀತಿಯ ಹಲವು ಮಾಹಿತಿಗಳನ್ನು ಅರ್ಥಶಾಸ್ತ್ರದಲ್ಲಿ ವಿವರಿಸಿದ್ದಾನೆ.

ಪ್ರಾಚೀನ ಭಾರತೀಯರು ಕೃಷಿಗೆ ನೀರಿನ ಅಗತ್ಯತೆಯನ್ನರಿತು, ಮಳೆಯನ್ನೇ ಪ್ರಮುಖ ನೀರಿನ ಮೂಲವಾಗಿಸಿಕೊಂಡಿದ್ದರು. ಆದ್ದರಿಂದ ಹವಾಮಾನವನ್ನು ಕುರಿತು ಅಧ್ಯಯನ ಮಾಡಿದ್ದರು. ಸಾಮಾನ್ಯವಾಗಿ ಪ್ರಕೃತಿಯಲ್ಲಿನ ಬದಲಾವಣೆಯನ್ನು ಗಮನಿಸಿಯೇ ಹವಾಮಾನವನ್ನು ನಿರ್ಧರಿಸುತ್ತಿದ್ದರು. ಒಬ್ಬ ಪರಿಪೂರ್ಣಕೃಷಿಕನಿಗೆ ಇದರ ಜ್ಞಾನವೂ ಇರಬೇಕಾಗುತ್ತದೆ. ಇದನ್ನರಿತೇ ಪರಾಶರರು–

ವೃಷ್ಟಿಮೂಲಾ ಕೃಷಿಃ ಸರ್ವಾ ವೃಷ್ಟಿ ಮೂಲಾಚ ಜೀವನಮ್ ।
ತಸ್ಮಾದಾದೌ ಪ್ರಯತ್ನೇನ ವೃಷ್ಟಿಜ್ಞಾನಂ ಸಮಾಚರೇತ್ ॥

–ಕೃಷಿಗೆ ಮಳೆಯೇ ಮೂಲ. ಜೀವಿಗಳು ಜೀವಿಸುವುದೂ ಕೂಡ ಮಳೆಯಿಂದಲೇ ಹಾಗಾಗಿ ಪ್ರಯತ್ನಪೂರ್ವಕವಾಗಿ ವೃಷ್ಟಿಜ್ಞಾನವನ್ನು ಅಂದರೆ ಹವಾಮಾನದ ಜ್ಞಾನವನ್ನು ಕೃಷಿಕನು ಹೊಂದಿರಲೇಬೇಕೆಂದು ಪ್ರತಿಪಾದಿಸಿದ್ದಾರೆ. ಜೊತೆಗೆ ಮಳೆಯು ಭೂಮಿಯ ಯಾವ ಯಾವ ಭಾಗದಲ್ಲಿ ಎಷ್ಟು ಪ್ರಮಾಣ ಬೀಳುತ್ತದೆ ಎಂಬುದನ್ನೂ ತಿಳಿದಿದ್ದರೆಂಬುದನ್ನು ಈ ಕೆಳಗಿನ ಶ್ಲೋಕವು ವ್ಯಕ್ತಪಡಿಸುತ್ತದೆ.

ಸಮುದ್ರೇ ದಶಭಾಗಾಂಶ್ಚ ಷಡ್‌ಭಾಗಾನಪಿ ಪರ್ವತೇ ।
ಪೃಥಿವ್ಯಾಂ ಚತುರೋ ಭಾಗಾನ್ ಸದಾವರ್ಷತಿ ವಾಸವಃ ॥ ಕೃ.ಪ. 4–20.

ಬೀಳುವ ಮಳೆಯನ್ನು 20 ಭಾಗಗಳಾಗಿ ವಿಂಗಡಿಸಿ ಅದರಲ್ಲಿ 10ಭಾಗ ಅಂದರೆ ಶೇ 50ರಷ್ಟು ಸಮುದ್ರದಲ್ಲಿಯೂ 6ಭಾಗ ಅಂದರೆ ಶೇ30ರಷ್ಟು ಪರ್ವತ ಪ್ರದೇಶದಲ್ಲೂ ಹಾಗೂ 4 ಭಾಗವು ಅಂದರೆ ಉಳಿದ ಶೇ20ರಷ್ಟು ಮಾತ್ರ ಭೂಮಿಯ ಮೇಲೆ ಬೀಳುತ್ತದೆಂಬ ಮಾಹಿತಿಯನ್ನು ಒಳಗೊಂಡಿದ್ದರು. ಹಾಗಾಗಿ ನೀರಿನ ಮಹತ್ವವನ್ನರಿತು ಬಳಸುತ್ತಿದ್ದರು.

ಹೀಗೆ ಇಷ್ಟೆಲ್ಲಾ ಮೂಲಪರಿಜ್ಞಾನವನ್ನು ಸ್ವಅನುಭವದ ಮೂಲಕ ಕಂಡುಕೊಳ್ಳುವುದರ ಮೂಲಕ ಕೃಷಿವಿಜ್ಞಾನಕ್ಕೆ ಸಂಬಂಧಿಸಿದ ಇತ್ತೀಚಿನ ಆವಿಷ್ಕಾರಗಳೆಂದು ಕರೆಯುವ ಸಂಶೋಧನೆಗಳು ಪ್ರಾಚೀನ ಭಾರತದಲ್ಲಿಯೇ ನಡೆದು ಅದನ್ನು ಅಳವಡಿಸಿಕೊಂಡಿದ್ದರೆಂಬುದು ಹಲವು ಮೂಲಗಳಿಂದ ತಿಳಿದುಬರುತ್ತದೆ.

ಯಾವುದೇ ಬೆಳೆ ಅಧಿಕ ಇಳುವರಿಯಿಂದ ಕೂಡಿರಬೇಕಾದರೆ ಬಿತ್ತುವ ಬೀಜವು ಸಂಸ್ಕರಣಗೊಂಡಿರಬೇಕು. ಇಲ್ಲವಾದಲ್ಲಿ ಬೆಳೆಯ ನಿರೀಕ್ಷಿತ ಫಲ ಸಿಗುವುದಿಲ್ಲ. ಹಾಗಾಗಿಯೇ ಇಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬೀಜ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ ಸಂಸ್ಕರಿಸಲ್ಪಟ್ಟ ಬೀಜಗಳನ್ನು ರೈತರಿಗೆ ವಿತರಿಸುತ್ತಿದೆ. ಪ್ರಾಚೀನರಿಗೂ ಇದರ ಮಹತ್ವ ಗೊತ್ತಿರದಿರಲಿಲ್ಲ. ಅವರೂ ಸಹ ಬೀಜ ಸಂಸ್ಕರಣಾ ವಿಧಾನವನ್ನು ತಮ್ಮ ಕೃಷಿ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು.

ಮಾಘೇವ ಫಾಲ್ಗುಣೇ ಮಾಸೀ ಸರ್ವಬೀಜಾನಿ ಸಂಗ್ರಹೇತ್ ।
ಶೋಷಯೇದಾತಪೇ ಸಮ್ಯಕ್ ನೈವಾಧೋ ವಿನಿಧಾಪಯೇತ್ ॥
ಕೃ.ಪ. 175

ಮಾಘ, ಫಾಲ್ಗುಣ ಮಾಸಗಳಲ್ಲಿ ಅಂದರೆ ಸಾಮಾನ್ಯವಾಗಿ ಫೆಬ್ರವರಿ, ಮಾರ್ಚ್ ತಿಂಗಳಿನಲ್ಲಿ ಎಲ್ಲಾ ವಿಧದ ಬೀಜಗಳನ್ನು ಸಂಗ್ರಹಿಸಬೇಕು. ಆನಂತರ ಅವುಗಳನ್ನು ಬಿಸಿಲಿನಲ್ಲಿಯೇ ಒಣಗಿಸಿ ಶೇಖರಿಸಿಡಬೇಕು. ಸಂಸ್ಕರಣಗೊಳ್ಳದ ಯಾವುದೇ ಬೀಜಗಳನ್ನು ಬಿತ್ತಬಾರದು. ಇಲ್ಲವಾದಲ್ಲಿ ಮುಂದಿನ ಎಲ್ಲಾ ಕಾರ್ಯಗಳೂ ವ್ಯರ್ಥವೇ. ಹೀಗೆ ಬಿತ್ತುವ ಬೀಜದ ಗುಣಮಟ್ಟ ಉಳುವ ಭೂಮಿಯ ಗುಣಮಟ್ಟವನ್ನಾಧರಿಸಿ ಕೃಷಿಮಾಡುವ ಜ್ಞಾನ ಹಿಂದಿನವರಲ್ಲಿತ್ತು.

13ನೇ ಶತಮಾನದ್ದೆಂದು ಹೇಳಲಾದ 'ಉಪವನ ವಿನೋದ' ಎಂಬ ಕೃತಿಯಲ್ಲಿ 'ಬೀಜರಹಿತ' ಹಣ್ಣನ್ನು ಬೆಳೆಯುವ ಅಂಶಗಳನ್ನು ಉಲ್ಲೇಖಿಸಲಾಗಿದೆ.

ಮಧುಯಷ್ಟಿ ಸಿತಾಕುಷ್ಮಂ ಮಧುಪುಷ್ಪ ವಿನಿರ್ಮಿತೈಃ ।
ಮೋದಕೈಃಚ್ಛಾದಿತೇ ಮೂಲೇ ನಿರಸ್ಥೀ ಸ್ಯಾತ್ ಫಲಂ ತರೋಃ ॥

ಮಧುಯಷ್ಟಿ, ಸಕ್ಕರೆ, ಕುಷ್ಮ, ಮಧುಪುಷ್ಪ ಇವುಗಳ ಮಿಶ್ರಣದಿಂದಾದ ರಸವನ್ನು ಹಣ್ಣಿನ ಗಿಡಗಳ ಬೇರುಗಳಿಗೆ ಲೇಪಿಸುವುದರಿಂದ ಹಣ್ಣುಗಳು ಬೀಜರಹಿತವಾಗಿ ಬೆಳೆಯುತ್ತವೆ ಎನ್ನಲಾಗಿದೆ.

ಈ ರೀತಿಯ ಹಲವು ಮಾಹಿತಿಗಳು ಭಾರತೀಯ ಸಾಹಿತ್ಯದಲ್ಲಿ ಹೇರಳವಾಗಿ ಕಾಣಸಿಗುತ್ತವೆ. ಹೀಗೆ ಕೃಷಿಗೆ ಸಂಬಂಧಿಸಿದಂತೆ ನೀರಿನ ಬಳಕೆ, ಭೂಮಿಯ ನಿರ್ವಹಣೆ, ಜಲಸಂಗ್ರಹ, ಬೀಜಬಿತ್ತನೆ ಹಲವು ರೀತಿಯ ಸಂಸ್ಕರಣೆ ಬೆಳೆಗಳಿಗೆ ಬೇಕಾಗುವ ಪೋಷಕಾಂಶ ಸಂಬಂಧಿ ಮಾಹಿತಿಗಳು ಹೀಗೆ ಹತ್ತು ಹಲವು ವಿಚಾರಗಳನ್ನು ಪೂರ್ವಭಾವಿಯಾಗಿ ತಿಳಿದು ಅದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿದ್ದರು. ತತ್ಪರಿಣಾಮವಾಗಿ ದೇಶ ಯಾವತ್ತೂ ಸುಭಿಕ್ಷವಾಗಿತ್ತು. ಇಂದು ಕೃಷಿಕರ

ಕಾರ್ಯವೈಖರಿಗಳಲ್ಲಿ ಹಲವು ಬದಲಾವಣೆಯಾಗಿದೆ. ಕೃಷಿಕರು ಸಣ್ಣ ಅವಶ್ಯಕತೆಗೂ ಸರ್ಕಾರದ ನೆರವನ್ನು ಕಾಯುವ ಪರಿಸ್ಥಿತಿಯುಂಟಾಗಿದೆ. ಕೃಷಿಕ್ಷೇತ್ರಗಳು ನಿಧಾನವಾಗಿ ಕೈಗಾರಿಕಾ ಕ್ಷೇತ್ರಗಳಾಗಿ ಮಾರ್ಪಾಡಾಗುತ್ತಿವೆ. ರೈತರು ಜೀವನ ನಿರ್ವಹಣೆಗೆ ನಗರಗಳಿಗೆ ವಲಸೆಹೋಗುತ್ತಿದ್ದಾರೆ. ವಿದ್ಯಾವಂತರು ಸರ್ಕಾರಿ ಅಥವಾ ಬಹುರಾಷ್ಟ್ರೀಯ ಕಂಪನಿಗಳ ಕೆಲಸವನ್ನು ಅವಲಂಬಿಸುತ್ತಿದ್ದಾರೆ. ಹೀಗೆ ಕೃಷಿಕ್ಷೇತ್ರವು ಅನಾದರಕ್ಕೆ ಒಳಗಾಗುತ್ತಿದೆ. ಆದ್ದರಿಂದ ಕೃಷಿಭೂಮಿಯನ್ನು ಹೊಂದಿರುವವರಾದರೂ ತಮ್ಮ ಬದುಕಿನ ಅಲ್ಪ ಸಮಯವನ್ನಾದರೂ ಕೃಷಿಗೆ ಕೊಡಬೇಕಾದಂತಹ ಪರಿಸ್ಥಿತಿಯಿದೆ. ಪರಾಶರರ ಮಾತಿನಲ್ಲೇ ಹೇಳುವುದಾದರೆ–

ಅನ್ನಂಪ್ರಾಣಾ ಬಲಂಚಾನ್ನಂ ಅನ್ನಂ ಸರ್ವಾರ್ಥಸಾಧನಮ್ ।
ದೇವಾಸುರಮನುಷ್ಯಾಶ್ಚ ಸರ್ವೇ ಚಾನ್ನೋಪಜೀವಿನಃ ॥
ಅನ್ನಂ ಹಿ ಧಾನ್ಯಸಂಜಾತಂ ಧಾನ್ಯಂ ಕೃಷ್ಯಾವಿನಾ ನ ಚ।
ತಸ್ಮಾತ್ ಸರ್ವಂ ಪರಿತ್ಯಜ್ಯ ಕೃಷಿಂ ಯತ್ನೇನ ಕಾರಯೇತ್ ॥
(ಕೃ.ಪ. 6,7)

–ಅನ್ನವೇ ಪ್ರಾಣ, ಬಲ ಹಾಗೂ ಸರ್ವಾರ್ಥಸಾಧಕವೂ ಹೌದು. ದೇವಾಸುರಮನುಷ್ಯರೆಲ್ಲರೂ ಅನ್ನೋಪಜೀವಿಗಳು. ಅನ್ನವು ಧಾನ್ಯದಿಂದ ಸಿಗುತ್ತದೆ. ಧಾನ್ಯವಾದರೋ ಕೃಷಿಯಿಂದಲೇ ಹೊರತು ಬೇರೆಯದರಿಂದ ಪ್ರಾಪ್ತವಾಗುವುದಿಲ್ಲ. ಆದ್ದರಿಂದ ಬೇರೆ ಕಾರ್ಯಗಳಿಗಿಂತ ಕೃಷಿಯನ್ನೇ ಪ್ರಾಧಾನವಾಗಿ ಮಾಡಿ ಎಂದಿದ್ದಾನೆ.

ಈ ರೀತಿಯಲ್ಲಿ ಕೃಷಿಗೆ ಪ್ರಾಧಾನ್ಯತೆಯನ್ನು ನೀಡಿ ಹಲವು ಮಹತ್ತರವಾದ ಕಾರ್ಯಗಳಿಗೆ ಶ್ರಮಿಸಿದ ಎಲ್ಲಾ ಪ್ರಾಚೀನ ಭಾರತೀಯರನ್ನು ಕೃತಜ್ಞತಾ ಭಾವದಿಂದ ಸ್ಮರಿಸುತ್ತಾ, ಅಂತೆಯೇ ಅದೇ ಸಾಲಿಗೆ ಸೇರುವಂತಹ, ಖ್ಯಾತತಂತ್ರಜ್ಞರಾದರೂ ಭಾರತದಾದ್ಯಂತ ಕೃಷಿಗೆ ಪೂರಕವಾದ ಕೈಗಾರಿಕೆಗಳು, ಅಣೆಕಟ್ಟುಗಳು, ವಿದ್ಯುತ್ ಸ್ಥಾವರಗಳು, ಮಾರ್ಗಗಳು, ಮೇಲ್ಸೇತುವೆಗಳನ್ನು ನಿರ್ಮಿಸಿ ಜನಮಾನಸದಲ್ಲಿ ಅಚ್ಚಳಿಯದೇ ನಿಂತಿರುವ ಭಾರತದ ರತ್ನವಾದ ಸರ್. ಎಂ. ವಿಶ್ವೇಶ್ವರಯ್ಯನವರನ್ನೂ ಸ್ಮರಿಸುತ್ತಾ, ಇವರ ಜನ್ಮದಿನದ ನಿಮಿತ್ತ ಅರ್ಥಪೂರ್ಣವಾದ ಸಮ್ಮೇಳನವನ್ನು ಆಯೋಜಿಸಿರುವ ಸ್ವದೇಶೀ ವಿಜ್ಞಾನ ಆಂದೋಲನದ ಎಲ್ಲಾ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಮಹನೀಯರ ಜನ್ಮದಿನದ ನಿಮಿತ್ತ ಈ ಪ್ರಬಂಧವನ್ನು ಅವರಿಗೆ ಅರ್ಪಿಸುತ್ತಿದ್ದೇನೆ.

ಸೂಕ್ಷ್ಮ ಪಾಚಿಗಳಿಂದ ಜೈವಿಕ ಡೀಸೆಲ್ ಉತ್ಪಾದನೆ

[1]ಹರಿಣಿ ಕುಮಾರ್, ಕೆ.ಎಮ್., [2]ರಾಧಿಕ, ಎನ್., [1]ರಮ್ಯಶ್ರೀ, ಕೆ.ಆರ್., ಮತ್ತು [1]ಹರೀಶ್,ಜೆ
[1]ಸಸ್ಯ ಜೈವಿಕ ತಂತ್ರಜ್ಞಾನ ವಿಭಾಗ, ಯು.ಎ.ಎಸ್, ಜಿ.ಕೆ.ವಿ.ಕೆ,ಬೆಂಗಳೂರು- ೫೬೦೦೬೫ [2] ಜೈವಿಕ ತಂತ್ರಜ್ಞಾನ ವಿಭಾಗ, ಐ.ಕೆ.ಆರ್ ಕಾಲೇಜ್ ಆಫ್ ಎಂಜಿನೀಯರಿಂಗ್ ಟೆಕ್ನಾಲಜಿ, ಹೈದರಾಬಾದ್- ೫೦೧೪೪೧

ಈ ಪ್ರಸ್ತುತ ಅಧ್ಯನಕ್ಕೆ ಹಸಿರು ಮನೆಯಲ್ಲಿನ (ಪ್ಲಾಸ್ಟಿಕ್ ಕುಂಡದಲ್ಲಿನ) ಭತ್ತದ ಮಣ್ಣಿನ ಮಾದರಿಯನ್ನು (ಎಸ್೧), ತೆಂಗಿನ ಮರದ ಅಡಿ ಇರುವ ಮಣ್ಣಿನ ಮಾದರಿಯನ್ನು (ಎಸ್೨), ಸಸ್ಯೋದ್ಯಾನದ ಕೊಳದಲ್ಲಿರುವ ನೀರನ್ನು (ಡಬ್ಲೂ೧) ಮತ್ತು ಯಲಹಂಕ ಹತ್ತಿರ ಇರುವ ಬಾವಿಯಲ್ಲಿ ನೀರನ್ನು ಪಡೆದು (ಡಬ್ಲೂ೨) ವಿಶ್ಲೇಷಣೆ ಮಾಡಲಾಯಿತು. ಈ ಮೇಲಿನ ಮಾದರಿಗಳನ್ನು ಬೆಂಗಳೂರಿನ ಉತ್ತರ ಭಾಗದಲ್ಲಿ ಸಂಗ್ರಹಿಸಿ ಸಂಶೋಧಿಸಲಾಯಿತು. ಸಂಗ್ರಹಿಸಿದ ಮಾದರಿಗಳನ್ನು ಅನುಕ್ರಮವಾಗಿ ಪ್ರಮಾಣ ದುರ್ಬಲಗೊಳಿಸುವ ತಂತ್ರಜ್ಞಾನದೊಂದಿಗೆ ಪ್ರತ್ಯೇಕಿಸಿ, ಶುದ್ಧ ಮಾಡಿ ಸಂಸ್ಕರಿಸುವ ತಂತ್ರಜ್ಞಾನದಿಂದ ಪಡೆಯಲಾಯಿತು. ನಂತರ ಪ್ರತ್ಯೇಕಿಸಿದ ಸೂಕ್ಷ್ಮ ಪಾಚಿಗಳನ್ನು ಉಪಭಾಗಗಳನ್ನಾಗಿ ನಿರ್ದಿಷ್ಟ ಪಾಚಿಯ ಮಾಧ್ಯಮದಲ್ಲಿ ಸಂಸ್ಕರಿಸಲಾಯಿತು (ಬೆನೆಕ್ಸ್ ಬ್ರಾತ್). ಪ್ರತ್ಯೇಕಿಸಿದ ಪಾಚಿಗಳನ್ನು ಪಾಚಿಯ ಸಮೂಹ, ಸೂಕ್ಷ್ಮದರ್ಶಕದ ವಿಕ್ಷಣೆ ಹಾಗೂ ನಿರ್ದಿಷ್ಟ ಮಾಧ್ಯಮದಲ್ಲಿನ ಅವುಗಳ ಬೆಳೆವಣಿಗೆಯ ಆಧಾರದ ಮೇಲೆ *ಕ್ಲೋರೆಲ್ಲಾ* (ಹಸಿರು ಪಾಚಿಯ ಒಂದು ಕುಲ), *ನೊಸ್ಟಾಕ್*, *ಮೈಕ್ರೊಸಿಸ್ಟಿಸ್* ಮತ್ತು *ಆಸಿಲೆಟೊರಿಯಾ* ವರ್ಗದ ಪಾಚಿಗಳೆಂದು ಧೃಡಪಡಿಸಲಾಯಿತು. *ಕ್ಲೋರೆಲ್ಲಾ* ವರ್ಗದ ಪಾಚಿಯು ಎಸ್೧ ಮತ್ತು ಡಬ್ಲೂ೨ ಮಾದರಿಯಲ್ಲಿ ಕಂಡು ಬಂದಿತು, *ನೊಸ್ಟಾಕ್* ವರ್ಗದ ಪಾಚಿಯು ಡಬ್ಲೂ೧ ಡಬ್ಲೂ೨, ಎಸ್೧ ಮತ್ತು ಎಸ್೨ ಮಾದರಿಯಲ್ಲಿ, *ಮೈಕ್ರೊಸಿಸ್ಟಿಸ್* ಡಬೂ೧ ಮಾದರಿಯಲ್ಲಿ ಹಾಗೂ *ಆಸಿಲೆಟೊರಿಯಾ* ವರ್ಗವು ಎಸ್೧ ಮತ್ತು ಡಬ್ಲೂ೧ ಮಾದರಿಯಲ್ಲಿ ಕಂಡು ಬಂದವು. ಮಣ್ಣು ಹಾಗೂ ನೀರಿನಿಂದ ಪ್ರತ್ಯೇಕಿಸಿದ ಪಾಚಿಯ ಮಾದರಿಗಳಾದ ಡಬ್ಲೂ೧, ಡಬ್ಲೂ೨, ಎಸ್೧ ಮತ್ತು ಎಸ್೨ ಅನುಕ್ರಮವಾಗಿ ೩೧೮. ೨ ಮಿಗ್ರಾಂ/ಮಿಲಿಲೀ, ೩೩.೧ ಮಿಗ್ರಾಂ/ಮಿಲಿಲೀ, ೩೭೫ ಮಿಗ್ರಾಂ/ಮಿಲಿಲೀ ಮತ್ತು ೪೯೬.೪ ಮಿಗ್ರಾಂ/ಮಿಲಿಲೀ ಮೆದಸ್ಸಿನ (ಅಪಿಡ್) ಅಂಶವನ್ನು ಹೊಂದಿದ್ದವು. ಇದರಿಂದ ಎಸ್೨ ಮಾದರಿಯ ಮೆದಸ್ಸಿನ ಅಂಶವು ಇತರ ಮಾದರಿಯ ಮೆದಸ್ಸಿನ ಅಂಶಕ್ಕೆ ಹೋಲಿಸಿದರೆ ಹೆಚ್ಚು ಎನ್ನುವುದು ಕಂಡು ಬಂದಿತು. *ನೊಸ್ಟಾಕ್* ವರ್ಗದ ಜೊತೆಗೆ ಎಸ್೨ ಮಾದರಿಯಲ್ಲಿ ಇತರ ವರ್ಗದ ಪಾಚಿಗಳಲ್ಲಿ ಕೂಡ ಹೆಚ್ಚಿನ ಮೆದಸ್ಸಿನ ಸಾಂದ್ರತೆಯನ್ನು ಕಾಣಬಹುದು. ಹೀಗಾಗಿ ಎಸ್೨ ಮಾದರಿಯ ಪಾಚಿಗಳನ್ನು ಅಧಿಕ ಬೆಳವಣಿಗೆಗಾಗಿ ಆಯ್ಕೆ ಮಾಡಲಾಯಿತು, ಟ್ರಾನ್ಸ್‌ಎಸ್ಟರಿಫಿಕೇಷನ್ ಮುಖಾಂತರ ಪಾಚಿಯನ್ನು ತೆಗೆಯುವುದರ ಜೊತೆಗೆ ಜೈವಿಕ ಡೀಸೆಲ್‌ನ್ನು ಪಡೆಯಲಾಯಿತು. ಜೈವಿಕ ಡೀಸೆಲ್ ಸಂಯೋಜನೆಯನ್ನು ಅನಿಲ ಕ್ರೋಮ್ಯಾಟೊಗ್ರಫಿಯನ್ನು ಬಳಸಿ ವಿಶ್ಲೇಷಿಸಲಾಯಿತು. ಅದರ ಫಲಿತಾಂಶದಿಂದ ಬೆನಲಿಕೆ ಆಮ್ಲವು (ಶೇ ೫೯.೪)ಇತರೆ ಆಮ್ಲಗಳಾದ ಅಯೋಲಿನಿಕ್ ಆಮ್ಲ (ಶೇ ೧೬. ೯), ಅರ್ಯಾಚಿಡೊನಿಕ್ ಆಮ್ಲ (ಶೇ ೯. ೨೩), ಪಾಮಿಟಿಕ್ ಆಮ್ಲ (ಶೇ೦.೯೪), ಮಿರಿಸ್ಟಿಕ್ ಆಮ್ಲ (ಶೇ ೦. ೭೯), ಸ್ಟಿಯರಿಕ್ ಆಮ್ಲ (ಶೇ ೦. ೭೭) ಮತ್ತು ಲಾಯುರಿಕ್ ಆಮ್ಲ (ಶೇ ೦. ೫೦) ಗಳಿಗಿಂತ ಅತ್ಯಧಿಕವಾಗಿದ್ದುದು ಕಂಡು ಬಂದಿತು. ಮೀಥೈಲ್ ಎಸ್ಟರ್ ಇರುವದರಿಂದಾಗಿ ಈ ಉತ್ಪನ್ನವು ಜೈವಿಕ ಡೀಸೆಲ್ ಎಂದು ಧೃಡಪಡಿಸಲಾಯಿತು.

ಜೈವಿಕ ಇಂಧನವು ಅತಿ ಸೂಕ್ಷ್ಮ ಪಾಚಿಯಿಂದ ನವೀಕರಿಸಬಹುದಾದ ಜೈವಿಕ ಇಂಧನವಾಗಿದೆ. ಸಂಪೂರ್ಣವಾಗಿ ವ್ಯತಿರಿಕ್ತ ಆಹಾರ ಮತ್ತು ಇತರ ಬೆಳೆ ಪರ ಪೂರ್ಯೆಕೆ ಧಕ್ಕೆಯಾಗದಂತೆ ಪೆಟ್ರೋಲಿಯಂನಿಂದ ಪಡೆದ ಸಾರಿಗೆ ಇಂಧನಗಳ ಸ್ಥಳಾಂತರ ಸಾಮರ್ಥ್ಯವನ್ನು ಹೊಂದಿದೆ. ಅತ್ಯಂತ ಉತ್ಪಾದಕ ತೈಲ ಬೆಳೆಗಳು, ತೈಲಪಾಮ್, ಅತಿ ಸೂಕ್ಷ್ಮ ಪಾಚಿಗೆ ಹತ್ತಿರ ಬರುವುದಿಲ್ಲ. ಜೈವಿಕ ಇಂಧನವನ್ನು ಅಗತ್ಯ ಪ್ರಮಾಣದಲ್ಲಿ ಸಮರ್ಥನೀಯವಾಗಿ ಒದಗಿಸಲು ಸಮರ್ಥವಾಗಿದೆ. ಅದೇರೀತಿ, ಕಬ್ಬಿನಿಂದ ಉತ್ಪಾದಿಸಲ್ಪಟ್ಟ ಎಥೆನಾಲ್ ಸೂಕ್ಷ್ಮ ಪಾಚಿ ಜೈವಿಕ ಇಂಧನಕ್ಕೆ ಹೊಂದಾಣಿಕೆಯಾಗುವುದಿಲ್ಲ. (ಚಿಸ್ಟಿ, 2007)

ಈಗ ಅಸ್ತಿತ್ವದಲ್ಲಿರುವ ವಿಧಾನಗಳನ್ನು ಬಳಸಿಕೊಂಡು ಕೃಷಿ ಬೆಳೆಗಳಿಂದ ಉತ್ಪಾದಿಸಿದ ಜೈವಿಕ ಇಂಧನ ಮತ್ತು ಜೈವಿಕ ಎಥೆನಾಲ್ ಸಂಪೂರ್ಣವಾಗಿ ಸಮರ್ಥವಾಗಿ ಪಳವಳಿಕೆ ಆಧಾರಿತ ಸಾರಿಗೆ ಇಂಧನಕ್ಕೆ ಬದಲಾಯಿಸಲು ಸಾಧ್ಯವಿಲ್ಲ. ಹೊಸ ಮತ್ತು ನವೀನ ತಂತ್ರಗಳನ್ನು ಬಳಸಿದಾಗ, ಪಾಚಿಯಿಂದ ಜೈವಿಕ ಇಂಧನ ಉತ್ಪಾದನೆಗೆ ಪೂರ್ಣಗೊಳಿಸಲು ಬೇಕಾದ ಉತ್ಪಾದನೆಯ ಬೆಲೆ ಮತ್ತು ಪ್ರಮಾಣ ಸಾಧಿಸಲು ಅಥವಾ ಪೆಟ್ರೋಲಿಯಂನ್ನು ಬದಲಾಯಿಸಲು ಸಾಧ್ಯವಾಗುತ್ತದೆ (ಕ್ಯಾಂಬೆಲ್, 2010).

ಏನೇ ಅಡೆತಡೆ ಬಂದರೂ ಅತಿ ವೇಗವಾಗಿ ಬೆಳೆಯುತ್ತಿರುವ ಅತಿ ಸೂಕ್ಷ್ಮ ಪಾಚಿ ಧರವ್ಯ ದೊಡ್ಡ ಪ್ರಮಾಣದ ವಿಂಗಡಣೆಗೆ ಅನುವಾಗುತ್ತದೆ. ಇವುಗಳು ಸೇರಿದಂತೆ, ಸರಿಯಾದ ಪಾಚಿ ತಳಿಗಳ ಆಯ್ಕೆ, ಪ್ರತಿ ಜಾತಿಯ ಪೋಟೋ ಜೈವಿಕ ಸೂಕ್ರವನ್ನು ರಚಿಸಲು ಒಂದು ಮಿತವ್ಯಯದ ಪೋಟೋ ಬಯೋರಿಯಾಕ್ಟರ್ ರಚನೆಯು ಹೆಚ್ಚು ಪರಿಣಾಮಕಾರಿಯದ ಸೂಕ್ಷ್ಮ ಪಾಚಿ ಬೆಳವನಿಗೆಯನ್ನು ಒಳಗೊಂಡಿದೆ (ಪಾಟೀಲ, 2008). ಎಲ್ಲಾ ಜೀವರಾಶಿಗಳ ನಡುವೆ, ಪಾಚಿ (ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ) ಸಾಮಾನ್ಯವಾಗಿ ಅಧಿಕ ದ್ಯುತಿ ಸಂಶ್ಲೇಷಣೆ ದಕ್ಷತೆ ಹೊಂದಿದೆ.

ಪಾಚಿಯು ಜೈವಿಕ ಇಂಧನದ ಉತ್ಪಾದನೆಗೆ ಹೆಚ್ಚಿನ ಇಳುವರಿಯನ್ನು ಕೊಡುವ ಮೂಲವಾಗಿದೆ. ಇದು ಸೋಯಾಬಿನ್ ತರಹ ಎಕರೆಗೆ 100 ಪಟ್ಟು ತೈಲದ ಪ್ರಮಾಣವನ್ನು ಉತ್ಪಾದಿಸುತ್ತದೆ.

ವಸ್ತುಗಳು ಮತ್ತು ವಿಧಾನಗಳು: ಪ್ರಾಯೋಗಿಕ ಮಾದರಿಗಳನ್ನು ಹೆಸರುಮನೆಯ ಭತ್ತದ ಮಡಿಕೆಗಳನ್ನು ಸಂಗ್ರಹಿಸಿ (I_1) ಮಣ್ಣಿನ ಮಾದರಿಗಳನ್ನು ತೆಂಗಿನ ಗಿಡಗಳಿಂದ ಹಾಗು ನೀರಿನ ಮಾದರಿಗಳನ್ನು ಜಿಕೆವಿಕೆ ಕ್ಯಾಂಪಸ್‌ನ ಬಾವಿ ಮತ್ತು ಯಲಹಂಕದ ಸಸ್ಯೋದ್ಯಾನದ ಕೊಳ (W-1), ಬೆಂಗಳೂರು (W-2) ಉತ್ತರ ಪ್ರತ್ಯೋಗಿತ ಶುದ್ಧ ಕಲ್ಚರ್‌ನ್ನು ಸರಣಿ ದುರ್ಬಲಗೊಳಿಸುವ ತಂತ್ರಗಳನ್ನು ಬಳಸಿ ಪಡೆಲಾಗಿದೆ. ಅತಿ ಸೂಕ್ಷ್ಮ ಪಾಚಿಯ ಕಲ್ಚರ್‌ಗಳನ್ನು ನಿರ್ದಿಷ್ಠ ಪಾಚಿ ಬೆನೆಕ್ ಸಾಲಿ ಮಾಧ್ಯಮವನ್ನು ಬಳಸಿ ಮತ್ತೆ ಮರು ಉಪ ಕಲ್ಚರ್‌ನಿಂದ ಪಡೆಯಲಾಗಿದೆ. ಅತಿ ಸೂಕ್ಷ್ಮ ಪಾಚಿಯನ್ನು ಸೂಕ್ಷ್ಮ ದರ್ಶಕದ ಆಧಾರದ ಮೇಲೆ ಪ್ರತ್ಯೇಕಿಸಿ ಮತ್ತು ಗುರುತಿಸಲಾಗಿದೆ (ವಸಾಹತು ಗುಣಲಕ್ಷಣಗಳು). ನಿರ್ದಿಷ್ಠ ಮಾಧ್ಯಮದ ಮೇಲೆ ಅತಿ ಸೂಕ್ಷ್ಮ ಪಾಚಿಯ ಬೆಳವಣಿಗೆ ಹಾಗು ಸೂಕ್ಷ್ಮದರ್ಶಕದಲ್ಲಿ ವೀಕ್ಷಣೆಯನ್ನು ಆಧರಿಸಿ ಪ್ರತ್ಯೇಕಿಸಿದ ಸೂಕ್ಷ್ಮ ಪಾಚಿಯನ್ನು ಕ್ಲೋರೆಲ್ಲಾ ತಳಿ ನಾಸ್ಟಿಕ್ ತಳಿ ಮೈಕ್ರೋ ಸಿಸ್ಟಸ್ ತಳಿ ಮತ್ತು ಆಸಿಲ್ಲಟೋರಿಯಾ ತಳಿ ಎಂದು ದೃಡಪಡಿಸಲಾಯಿತು.

ಕೊಬ್ಬಿನ ಅಂಶ ಅಂದಾಜಿಸಲು ಫಾಸ್ಪೇಟ್ ಬಫರ್‌ನ್ನು ಬಳಸಿದಾಗ ಎರಡು ಬೇರೆ ಬೇರೆ ಬೈಫೇಸಿಕ್ ಪದರಗಳ ದ್ರಾವಣ ಮತ್ತು ಜಲೀಯ ದ್ರಾವಣವನ್ನು ಪಡೆಯಲಾಯಿತು. ಲಿಪಿಡ್ ಹೊಂದಿರುವ ಕಾರ್ಬನಿಕ್ ಪದರದ (ಮೇಲಿನ) ಹೊರತೆಗೆಯಲು ಬಿಸಿ ಗಾಳಿ ಒಳಗೆ 30 ನಿಮಿಷ ಆವಿಯಾಗಲು ಬಿಡಲಾಯಿತು ಮತ್ತು ಒಟ್ಟು ಕೊಬ್ಬಿನ ಅಂಶವನ್ನು ಗ್ರಾವಿವೆಂಟ್ರಿಕಲಿ ಅಳೆಯಲಾಯಿತು. ಜೈವಿಕ ಇಂಧನವನ್ನು ಅತಿ ಸೂಕ್ಷ್ಮ ಪಾಚಿಯಿಂದ ಪಡೆಯಲು ಹೊರತೆಗೆದ ಪಾಚಿ ತೈಲವನ್ನು ಹೆಕ್ಟೇನ್ ಮತ್ತು ಈಥರ್ ಸೊಲಪ್‌ಗಲನ್ನು 4 ಗಂಟೆಗಳ ಕಾಲ ಕೊವಿಸಾಲ್ ಫ್ಲಾಸ್ಕ್‌ನಲ್ಲಿಟ್ಟು ಆವಿಯಾಗಲು ಬಿಡಲಾಯಿತು. ನಂತರ ಟ್ರಾನ್ಸ್ ಈಸ್ಟರಿಫಿಕೇಷನ್ ಪ್ರಕ್ರಿಯೆಗೆ ಒಳಪಡಿಸಿ, ಸೆಟ್ಲಿಂಗ್, ಜೈವಿಕ ಇಂಧನ ಪ್ರತ್ಯೇಕೀಕರಣ ತೊಳೆಯುವ, ಬಳಸುವ ಮತ್ತು ನಿರ್ಮಾಣ ಜೈವಿಕ ಇಂಧನ ಅಳತೆ ಸಿಲಿಂಡರ್ ಬಳಸಿ ಅಳೆಯಲಾಗುತ್ತಿತ್ತು.

ಫಲಿತಾಂಶಗಳು ಮತ್ತು ಚರ್ಚೆ

ಸೂಕ್ಷ್ಮ ಪಾಚಿಯ ಪ್ರತ್ಯೇಕೀಕರಣ: ಅತಿ ಸೂಕ್ಷ್ಮ ಪಾಚಿಯನ್ನು ಗುರುತಿಸಲು ಅದರ ಬಣ್ಣದ ಕೈಪಿಡಿ ಬಳಸಿ ಕಾಲೋನಿ (ಸೂಕ್ಷ್ಮದರ್ಶಕೀಯ) ರೂಪ ವಿಜ್ಞಾನ ಮತ್ತು ಸೂಕ್ಷ್ಮ ಅಂಗ ರಚನಾಶಾಸ್ತ್ರದ ಆಧಾರದ ಮೇಲೆ ಮಾಡಲಾಯಿತು (ನ್ಯಾನ್ಸಿ ಅಟ್ ಅಲ್. 2009). ಪ್ರತ್ಯೇಕಿತಪಾಚಿ ಸಮೂಹವು ಬೆನೆಕ್ಸ ಅಗರ್ ಮಾಧ್ಯಮದಲ್ಲಿ, ಹಸಿರು ಬಣ್ಣದಲ್ಲಿ ಮತ್ತು ಅನಿಯಮಿತ ಆಕಾರದಲ್ಲಿ ಕಂಡುಬಂದಿತು. ಪಾಚಿಯೇ 30 ದಿನಗಳಲ್ಲಿ ಅತಿ ಶೀರ್ಘವಾಗಿ ಬೆಳೆಯುವುದನ್ನು ತೋರಿಸುತ್ತದೆ (ಚಿತ್ರ 1).

ಅತಿ ಸೂಕ್ಷ್ಮ ಪಾಚಿಯು ಸೂಕ್ಷ್ಮ ದರ್ಶಕದಲ್ಲಿ ನಿರೀಕ್ಷಿಸಿದಾಗ ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ತಮ್ಮ ಸ್ವರೂಪದಲ್ಲಿನ ವೈಶಿಷ್ಟ್ಯದ ಮೇಲೆ ಗುರುತಿಸಲಾಗುತ್ತಿತ್ತು: ಹಸಿರು ಪಾಚಿಯು ಒಂದು ಕುಲ S_1 ಹಾಗು W_2 ಮಾದರಿಗಳು ನಾಸ್ಟಾಕ್ ಕುಲದಲ್ಲಿ ಕಂಡುಬರುವ W_1, W_2, S_1 ಹಾಗು S_2 ಮಾದರಿಗಳನ್ನು ಮೈಕ್ರೋಸಿಸ್ಟಿಸ್ ಕುಲದಲ್ಲಿ ಕಂಡುಬರುವ W_1 ಮಾದರಿ ಮತ್ತು ಆಸಿಲ್ಲೋಟೋರಿಯಾ ಕುಲದಲ್ಲಿ ಕಂಡುಬರುವ S_1 ಮತ್ತು W_1 ಮಾದರಿಗಳು ಕಂಡುಬರುತ್ತವೆ. ಗುರುತಿಸಿರುವ ಮಾದರಿಗಳನ್ನು ಉಪ ಕಲ್ಚರ್‌ನಿಂದ ಬೆಳೆಯಲ್ಪಟ್ಟ ಪಾಚಿಯ ಮಾದರಿಗಳನ್ನು ಮಣ್ಣಿನ ಮಾದರಿಗಳಿಂದ ನೇರವಾಗಿ ಕೆರೆದು ಮತ್ತು ಬೆನೆಕ್ ನ ಅಗರ್ ಮಾಧ್ಯಮವನ್ನು ನೇರವಾಗಿ ಸಾರ ಸಂಸ್ಕೃತಿಗಳು ಸೇರಿಸುವ ಮೂಲಕ ಸೇರಿಸಲಾಯಿತು ಮತ್ತು 20 ದಿನಗಳ ಬೆಳವಣಿಗೆ ಇರಿಸಲಾಗುತ್ತಿತ್ತು.

ಲಿಪಿಕ್ ಅಂದಾಜು: ಮಣ್ಣು ಮತ್ತು ನೀರಿನ ಮಾದರಿಗಳಿಂದ ಪ್ರತ್ಯೇಕಿಸಿದ ಪಾಚಿಯಿಂದ ಕೊಬ್ಬಿನ ಅಂಶವು 318.2 ಮಿ.ಗ್ರಾಂ/ ಮಿ.ಲೀ, 375 ಮಿ,ಗ್ರಾ/ ಮಿ.ಲೀ. ಮತ್ತು 396.4 ಮಿ.ಗ್ರಾಂ,ಮಿ.ಲಿ. ಈ ಮಾದರಿಗಳಿಂದ ತೆಗೆಯಲಾಯಿತು. (W_1, W_2, S_1 ಮತ್ತು S_2 ಮಾದರಿಗಳು). S_2 ಮಾದರಿಯ ಕೊಬ್ಬಿನ ಅಂಶವು ಬೇರೆ ಮಾದರಿಯ ಕೊಬ್ಬಿನ ಅಂಶದಿಂದ ಹೆಚ್ಚೆಂದು ಕಂಡುಬಂದಿತು. S_2 ಮಾದರಿಯಲ್ಲಿ ನಾಸ್ಟಾಕ್ ತಳಿ ಅಲ್ಲದೇ, ಇತರ ಅದರ ಅತಿ ಸೂಕ್ಷ್ಮ ಪಾಚಿ ತಳಿಗಳು ಸಹ ಹೆಚ್ಚಿನ ಮೇದಸ್ಸಿನ ಅಂಶಕ್ಕೆ ಕಾರಣವಾಗಿರಬಹುದು. ಹೀಗಾಗಿ S_2 ಮಾದರಿಯನ್ನು ಅತಿ ಸೂಕ್ಷ್ಮ ಪಾಚಿಯ ಸಾಮೂಹಿಕ ಕೃಷಿ ಇನಾಕ್ಯುಲೇಷನ್ ಮೂಲವೆಂದು ಆಯ್ಕೆ ಮಾಡಲಾಯಿತು. ಅತಿ ಸೂಕ್ಷ್ಮ ಪಾಚಿಯನ್ನು ಹೊರತೆಗೆದಾಗ ನಂತರ ಸೀತು ಟ್ರಾನ್ಸಈಸ್ಟರಿಫಿಕೇಷನ್‌ನಿಂದ ಜೈವಿಕ ಇಂಧನವನ್ನು ಪಡೆಯಿತು.

ಅತಿ ಸೂಕ್ಷ್ಮ ಪಾಚಿಯಿಂದ ಜೈವಿಕ ಇಂಧನ ಉತ್ಪಾದನೆ: ಅನಿಲ ಕ್ರೋಮ್ಯಾಟೋಗ್ರಫಿಯನ್ನು ಬಳಸಿಕೊಂಡು ಜೈವಿಕ ಇಂಧನಮೀಥೈಲ್ ಈಸ್ಟರ್ ಸಂಯೋಜನೆಯೊಂದಿಗೆ ವಿಶ್ಲೇಷಿಸಿದ್ದಾರೆ. ಫಲಿತಾಂಶ ವಿವರ: ಬೆಹನಿಕ್ ಆಮ್ಲ (39.4%)ನ್ನು ಬೇರೆ ಈಸ್ತರ್ಸ ಜೊತೆ ಹೋಲಿಸಿದಾಗ ಅತ್ಯುನ್ನತವಾಗಿದೆ. ಹೀಗೆ, ಅರ್ಯಾಕಿಡೋನಿಕ್ ಆಮ್ಲ (9.23%), ಸಾಲಿಟಿಕ್ ಆಮ್ಲ (0.94%), ಮೀರಿಸ್ಟಿಕ್ ಆಮ್ಲ (0.79%) ಸ್ಟಿಯರಿಕ್ ಆಮ್ಲ (0.77%) ಮತ್ತು ಲಾರಿಕ್ ಆಮ್ಲ (0.50%) ಮಿಥೈಲ್ ಈಸ್ಟರ್ ಉಪಸ್ಥಿತಿಯಲ್ಲಿ ಉತ್ಪನ್ನ ಜೈವಿಕ ಇಂಧನ ಎಂದು ದೃಡಪಡಿಸಲಾಯಿತು (ಟೇಬಲ್–2)



ಚಿತ್ರ–1 ನೀರು ಮತ್ತು ಮಣ್ಣಿನ ಮಾದರಿಯ ಬೆನೆಕ್ಸ್ ಬ್ರಾತ್ ಮತ್ತು ಅಗರ್ ಮಾಧ್ಯಮದಲ್ಲಿ ಪಾಚಿಯ ಬೆಳವಣಿಗೆ

ಚಿತ್ರ–2: ಮೈಕ್ರೋಸ್ಕೋಪಿಕ್‌ನ ಸೂಕ್ಷ್ಮದರ್ಶಕ



ಚಿತ್ರ–3: ಕ್ಲೋರೆಲಾದ ಸೂಕ್ಷ್ಮದರ್ಶಕ



ಚಿತ್ರ–4: ನಾಸ್ಟಕ್ ನ ಸೂಕ್ಷ್ಮದರ್ಶಕ



ಚಿತ್ರ–5: ಆಸಿಲಟೋರಿಯಾದ ಸೂಕ್ಷ್ಮದರ್ಶಕ

ಟೇಬಲ್–1: ಸೂಕ್ಷ್ಮಪಾಚಿಯ ಕೊಬ್ಬಿನಾಂಶ ಅಳೆಯುವಿಕೆ

ಮಾದರಿಗಳು	ಕೊಬ್ಬಿನಾಂಶ
W1: ಸಸ್ಯ ಉದ್ಯಾನದ ನೀರಿನ ಮಾದರಿ	318.2
W2: ಕೊಳವೆಬಾವಿ ನೀರಿನ ಮಾದರಿ (ಯಲಹಂಕ)	332.1
S1: ಹೆಸರು ಮನೆಯಲ್ಲಿ ಭತ್ತದ ಮಾದರಿಯ ಒದ್ದೆಮಣ್ಣಿನ ಮಾದರಿ (ಜಿಕೆವಿಕೆ)	375
S2: ತೆಂಗಿನ ಮರದ ಹಸಿಮಣ್ಣಿನ ಮಾದರಿ	396.4

ಟೇಬಲ್–2: ಗ್ಯಾಸ್ ಕ್ರೋಮೊಟೋಗ್ರಫಿಯಿಂದ ಜೈವಿಕ ಇಂಧನದ ಮಾದರಿ ಮಿಥೈಲ್ ಈಸ್ಟರ್ ಮಿಶ್ರಣಗಳು

ಮಿಥೈಲ್ ಎಸ್ಟರ್‌ನ	ಪ್ರಮಾಣ (ಶೇ.)
ಕಾಪ್ರೋಯಿಕ್ ಆಸಿಡ್	ಇಲ್ಲ
ಕೆಪ್ರಿಲಿಕ್ ಆಸಿಡ್	ಇಲ್ಲ
ಕೆಪ್ರಿಕ್ ಆಸಿಡ್	ಇಲ್ಲ
ಲೋರಿಕ್ ಆಸಿಡ್	0.50%
ಮೈರಿಸ್ಟಿಕ್ ಆಸಿಡ್	0.79%
ಪಾಲ್ಟಿಟಿಕ್ ಆಸಿಡ್	0.94%
ಸ್ಟೀಯರಿಕ್ ಆಸಿಡ್	0.77%
ಒಲಿಕ್ ಆಸಿಡ್	ಇಲ್ಲ
ಲಿನೋಲೆಯಿಕ್ ಆಸಿಡ್	16.93%
ಲಿನೋಲೆನಿಕ್ ಆಸಿಡ್	ಇಲ್ಲ
ಅರಚಡೋನಿಕ್ ಆಸಿಡ್	9.23%
ಬೆಹನಿಕ್ ಆಸಿಡ್	39.46%
ಇರೋಸಿಕ್ ಆಸಿಡ್	ಇಲ್ಲ
ಲಿಗನೊಸೆರಿಕ್ ಆಸಿಡ್	ಇಲ್ಲ

ಉಲ್ಲೇಖಗಳು:

1. ಆಲಾಬಿ ಮತ್ತು ಯೋನಿ, 2009 ಸೂಕ್ಷ್ಮಪಾಚಿ ತಂತ್ರಜ್ಞಾನ ಮತ್ತು ಜೈವಿಕ ಇಂಧನ ಉತ್ಪಾದನೆ / ಬ್ರಿಜೇಶ್ ಕೊಲಂಬಿಯಾದಲ್ಲಿ ಜೈವಿಕ ಶಕ್ತಿಯ ಉತ್ಪಾದನೆ. ಬ್ರಿಜೇಶ್ ಕೊಲಂಬಿಯಾ ಇನ್ನೋವೇಶನ್ ಕೌನ್ಸಿಲ್, ಪಿಪಿ 07–88

2. ಅರ್ಜಮೇಂಡಿಯಾ ಜಿ., ಐ ಕ್ಯಾಂಪೋಅ, ಈ ಅರ್ಗೂಯಿರೇನಾ ಎಮ್, ಸಂಚೇಝುಬ್, ಎಮ್, ಮೊಸ್ಟಿಝುಬ್ ಮತ್ತು ಎಲ್. ಎಮ್ ಗಾಂದಐ, 2007. ಹೆಟೆರೋಜಿನಸ್ NAOH ನಿಂದ ಜೈವಿಕ ಇಂಧನ ಉತ್ಪಾದಿಸುವಿಕೆ / ಅಲುಮಿನಾ ಕೆಟೊಲಿಸ್ಟ್: ಹೋಮಾಜೀನಿಯಸ್ NAOH ಜೊತೆ ಹೊಲಿಕೆ ಮಾಡುವುದು. ಕೆಮಿಕಲ್ ಇಂಜಿನೀಯರಿಂಗ್ ಜರ್ನಲ್, 134: 123–130.

3. ಬ್ರಾಡ್ಲೇ, ಟಿ, 2011, ಕೈಗಾರಿಕೆಗಾಗಿ ಸೂಕ್ಷ್ಮಪಾಚಿಯ ಬೃಹತ್ ಮಾದರಿ ಬೆಳವಣಿಗೆ, ಬಂದೋಬರಿಸೂರ್ಸ್ ಟೆಕ್ನಾಲಜಿ, 102: ಪಿಪಿ 5083–5092.

4. ಕ್ಯಾಂಬೆಲ್,ಪಿ.ಕೆ, ಬೀರ್, ಟಿ. ಬಟೀನ್, ಡಿ, 2010, ಕೊಳಗಳಲ್ಲಿ ಜೈವಿಕ ಇಂಧನ ಉತ್ಪಾದನೆಯ ಸೂಕ್ಷ್ಮ ಪಾಚಿಯ ಜೀವನ ಚಕ್ರ ನಿರ್ದರಣೆ, ಬಯೋರಿಸೊರ್ಸ್ ಟೆಕ್ನಾಲಜಿ, 102: ಪಿಪಿ 50–56

5. ಕ್ರಿಸ್ಟಿ, ಐ., 2007, ಸೂಕ್ಷ್ಮ ಪಾಚಿಯಿಂದ ಜೈವಿಕ ಇಂಧನ, ಬಯೋಟೆಕ್ನಾಲಜಿ ಅಡ್ವಾ 25: ಪಿಪಿ 294–306

6. ಗೀನ್‌ವೇಲ್: 2010, ಜೈವಿಕ ಇಂಧನ ಪಟ್ಟಿಯಲ್ಲಿ ಸೂಕ್ಷ್ಮ ಪಾಚಿಗೆ ಆದ್ಯತೆ ನೀಡುವಿಕೆ, ಎ.ರವೀವ್ ಆಫ್ ದ ಟೆಕ್ನಿಕಲ್ ಚಾಲೆಂಜಸ್, ಜೆ. ಆರ್, ಸೋಕ್ ಇಂಟರಪೇಸ್, 7 (46) ಪಿಪಿ 703–726.

7. ಮಟ,ಟಿ.ಎಂ. ಮಾರ್ಟಿನ್ಸ್, ಎ.ಎ., ಕಾಯಿತಾನೋ,ಎನ್.ಎಸ್. 2010, ಸೂಕ್ಷ್ಮ ಪಾಚಿಯಿಂದ ಜೈವಿಕ ಇಂಧನ ಉತ್ಪಾದಿಸುವಿಕೆ ರಿನೀವೆಬಲ್ ಆಪ್ ಸ್ಯೂಟಬಲ್ ಎನರ್ಜಿ ರಿವೀವ್ಸ್, 14: ಪಿಪಿ 217–232.

ಉಡುಪಿ ಮಲ್ಲಿಗೆಯಲ್ಲಿ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆ

[1]ಜಯಲಕ್ಷ್ಮೀ ನಾರಾಯಣ ಹೆಗಡೆ, [2]ಎಂ. ಕೆ. ನಾಗಮಣಿ, [3]ಪುಷ್ಪಾ ಪಿ. ಮತ್ತು [4] ಭಾರತಿ ಬಿ.
[1]ಕಾರ್ಯಕ್ರಮ ಸಂಯೋಜಕರು, ಬ್ರಹ್ಮಾವರ, ಉಡುಪಿ ಜಿಲ್ಲೆ [2] ಸಹ ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
[3] ಸಹಾಯಕ ಪ್ರಾಧ್ಯಾಪಕರು, ತೋಟಗಾರಿಕಾ ಮಹಾವಿದ್ಯಾಲಯ, ಶಿರಸಿ, ಉತ್ತರ ಕನ್ನಡ, [4] ಹಿರಿಯ ಸಂಶೋಧನಾ ಸಹಭಾಗಿ, ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆ ಯೋಜನೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಉಡುಪಿ ಮಲ್ಲಿಗೆ ಇದು ಉಡುಪಿಯ ಮೂಲವಾಗಿದ್ದು, ಪ್ರಮುಖವಾದ ವಾಣಿಜ್ಯ ಹೂ ಬೆಳೆಗಳಲ್ಲೊಂದಾಗಿದೆ. ಉಡುಪಿಯ ಶಂಕರಾಪುರ ಇದರ ಮೂಲ. ಇದು ಮಧುರ ಪರಿಮಳ ಬೀರುವ ಮಲ್ಲಿಗೆ. ಉಡುಪಿ ಮಲ್ಲಿಗೆಯ ವೈಜ್ಞಾನಿಕ ಹೆಸರು ಜಾಸ್ಮಿನಿಯಮ್ ಸಾಮಬ್ಯಾಕ್ 'ಅನಿಯಾನಮ್'. ಈ ಮಲ್ಲಿಗೆಯನ್ನು ಮುಡಿಯಲು, ಪೂಜೆಗೆ, ಅತಿಥಿ ಸತ್ಕಾರಕ್ಕೆ, ಸಭಾಂಗಣ ಅಲಂಕಾರಕ್ಕೆ ಉಪಯೋಗಿಸಲಾಗುತ್ತದೆ. ಇದಲ್ಲದೆ ಮಲ್ಲಿಗೆ ಹೂವನ್ನು ಸಂಸ್ಕರಿಸಿ ಸುಗಂಧ ತೈಲ ಉತ್ಪಾದನೆಯಲ್ಲೂ ಬಳಸಲಾಗುತ್ತದೆ. ಉಡುಪಿ ಮಲ್ಲಿಗೆಯನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಹೆಚ್ಚಾಗಿ ಬೆಳೆಯಲಾಗತ್ತಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ರೈತರು ಮೊಗ್ಗುಗಳನ್ನು ಬಿಡಿಸಿ ಚೆಂಡುಗಳನ್ನು ಕಟ್ಟಿ ಸ್ಥಳೀಯ ಮಾರುಕಟ್ಟೆಗೆ ಮತ್ತು ವಿಮಾನ ಮೂಲಕ ಮುಂಬಯಿ, ದೆಹಲಿ, ಅಹಮದಾಬಾದ್ ನಗರಗಳಿಗೆ ಮತ್ತು ಸೌದಿ ದೇಶಗಳಿಗೆ ಕಳುಹಿಸುತ್ತಾರೆ. ಕರಾವಳ ಪ್ರದೇಶದ ಸಣ್ಣ ಹಿಡುವಳಿದಾರರಿಗೆ ಮಲ್ಲಿಗೆ ಕೃಷಿ ಒಂದು ವರದಾನವಾಗಿದೆ. ಸಾಮಾನ್ಯವಾಗಿ ಇದು ಪೊದೆಯಾಕಾರದಲ್ಲಿ ಬೆಳೆಯುವ ತಳಯಾಗಿದ್ದು ಎಲೆಗಳು ಅಂಡಾಕಾರ ಅಥವಾ ಹೃದಯಾಕಾರವಿರುತ್ತದೆ. ಹೂಗಳಲ್ಲಿ ಸುಗಂಧದ ಅಂಶ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಬೇಗ ಬಾಡುವುದಿಲ್ಲ. ಉಡುಪಿ ಮಲ್ಲಿಗೆಯ ವೈಜ್ಞಾನಿಕ ಬೆಳವಣಿಗೆಗೆ ಇವುಗಳನ್ನು ಬಾಧಿಸುವ ಕೀಟಗಳು ಮತ್ತು ರೋಗಗಳು ಅಡ್ಡಿಯಂಟುಮಾಡುತ್ತಿವೆ. ಕೀಟಗಳಲ್ಲಿ ಪ್ರಮುಖವಾದವುಗಳೆಂದರೆ ಬಿಳಿ ನೊಣ, ಎಲೆ ಮತ್ತು ಮೊಗ್ಗು ತಿನ್ನುವ ಹುಳು ಮತ್ತು ಕೆಂಪು ಶಲ್ಕ ಕೀಟ. ಬಿಳಿ ನೊಣಗಳು ಎಲೆಗಳ ಕೆಳಗೆ ಕುಳಿತು ರಸವನ್ನು ಹೀರುತ್ತವೆ. ಇದರಿಂದ ಗಿಡಗಳ ಬೆಳೆವಣಿಗೆಯು ಕುಗ್ಗುತ್ತದೆ. ಇವುಗಳು ಎಲೆಗಳ ಮೇಲೆ ಸಿಹಿ ದ್ರವವನ್ನು ಸ್ರವಿಸುವುದರಿಂದ ಅದರ ಮೇಲೆ ಕಪ್ಪು ಬೂಷ್ಟು ಬೆಳೆಯುತ್ತದೆ. ಇದರಿಂದ ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಅಡ್ಡಿಯುಂಟಾಗಿ ಇಳುವರಿಯಲ್ಲಿ ಕುಂಠಿತವಾಗುತ್ತದೆ. ಈ ಕೀಟದ ಹತೋಟಿಗೆ 2.0 ಮಿ.ಲೀ. ಆಕ್ಸಿಡೆಮೆಟಾನ್ ಮಿಥೈಲ್ 25 ಇ.ಸಿ. ಅಥವಾ 2 ಮಿ.ಲೀ. ಮೆಲಾಥಿಯನ್ ೫೦ ಇ.ಸಿ. ಮತ್ತು ೩ ಗ್ರಾಂ. ನೀರಿನಲ್ಲಿ ಕರಗುವ ಗಂಧಕ ಪ್ರತೀ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಎಲೆ ಮತ್ತು ಮೊಗ್ಗು ತಿನ್ನುವ ಹುಳ ಹಸಿರು ಮರಿಗಳು ಎಳೆ ಎಲೆಗಳನ್ನು ಮಡಚಿ ಹಸಿರು ಭಾಗವನ್ನು ತಿನ್ನುತ್ತದೆ. ಅಲ್ಲದೆ ಕೆಲವು ಸಂದರ್ಭದಲ್ಲಿ ಮೊಗ್ಗುಗಳನ್ನು ಒಟ್ಟುಗೂಡಿಸಿ ಹೆಣೆದು ತಿನ್ನುವುದನ್ನು ಕಾಣಬಹುದು. ಈ ಕೀಟದ ಹತೋಟಿಗೆ 1.5 ಮಿ.ಲೀ. ಮೊನೋಕ್ರೊಟೋಪಾಸ್ 36 ಎಸ್.ಎಲ್. ಕೀಟನಾಶಕವನ್ನು ಪ್ರತೀ ಒಂದು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಅಲ್ಲದೇ ಕೆಂಪು ಶಲ್ಕ ಕೀಟ ಸಹ ಕೆಲವೊಮ್ಮೆ ಕಾಣಿಸಿಕೊಂಡು ಬೆಳೆ ಹಾನಿ ಮಾಡುತ್ತದೆ. ಇದರ ಹತ್ತೋಟಿಗೆ ಪ್ರತೀ ಒಂದು ಲೀಟರ್ ನೀರಿನಲ್ಲಿ 2 ಮಿ.ಲೀ ಮೆಲಾಥಿಯನ್ ೫೦ ಇ.ಸಿ. ಮತ್ತು ೩ ಗ್ರಾಂ.ನೀರಿನಲ್ಲಿ ಕರಗುವ ಗಂಧಕವನ್ನು ಬೆರೆಸಿ ಬಾಧೆ ಕಂಡು ಬಂದಾಗ ಸಿಂಪಡಿಸಬೇಕು. ಉಡುಪಿ ಮಲ್ಲಿಗೆಯನ್ನು ಬಾಧಿಸುವ ಪ್ರಮುಖ ರೋಗಗಳಲ್ಲಿ ಎಲೆ ಚುಕ್ಕೆ ರೋಗ, ಸೊರಗು ರೋಗ ಪ್ರಮುಖವಾಗಿವೆ. ಎಲೆ ಚುಕ್ಕೆ ರೋಗವು ಉಷ್ಣಾಂಶದಲ್ಲಿ ವ್ಯತ್ಯಾಸವಾದರೆ ಮತ್ತು ತೇವಾಂಶದ ವಾತಾವರಣ ಇದ್ದರೆ ಕಂಡು ಬರುತ್ತದೆ. ಈ ರೋಗಕ್ಕೆ ತುತ್ತಾದ ಗಿಡಗಳಲ್ಲಿ ಆರಂಭದಲ್ಲಿ ಎಲೆಗಳ ಮೇಲೆ ಸಣ್ಣ ಸಣ್ಣ ಚುಕ್ಕೆಗಳು ಕಂಡು ಬರುತ್ತದೆ. ರೋಗದ ಭಾದೆ ತೀವ್ರವಾದಾಗ ಈ ಚುಕ್ಕೆಗಳು ದೊಡ್ಡದಾಗಿ ವಿಲೀನಗೊಂಡು ಮಚ್ಚೆಗಳಾಗಿ ಎಲೆಗಳು ಒಣಗಿ ಉದುರುತ್ತವೆ. ಈ ಚುಕ್ಕೆಗಳ ಮಧ್ಯಭಾಗದಲ್ಲಿ ಬಿಳುಪಾಗಿದ್ದು ಸುತ್ತಲೂ ಕಪ್ಪು ಅಥವಾ ಕಂದು ಬಣ್ಣದಿಂದ ಕೂಡಿರುತ್ತದೆ. ಈ ರೋಗವನ್ನು ಹತೋಟಿಮಾಡಲು ಮಲ್ಲಿಗೆ ಬೆಳೆಯುವ ತೋಟವನ್ನು ಶುಚಿಯಾಗಿ ಇಡಬೇಕು. ರೋಗದ ಹತೋಟಿಗೆ ಲೀಟರ್ ನೀರಿಗೆ 1 ಗ್ರಾಂ ಕಾರ್ಬೆಂಡೆಜಿಮ್ ಅಥವಾ ೩ ಗ್ರಾಂ ತಾಮ್ರದ ಆಕ್ಸಿಕ್ಲೋರೈಡನ್ನು ಬೆರೆಸಿ ಗಿಡಗಳಿಗೆ ಸಿಂಪಡಿಸಬೇಕು. ಸೊರಗು ರೋಗ ಸಹ ಉಡುಪಿ ಮಲ್ಲಿಗೆಯನ್ನು ಬಾಧಿಸು ಪ್ರಮುಖವಾಗಿದ್ದು, ಈ ರೋಗವು ಮಣ್ಣುಜನ್ಯವಾಗಿದ್ದು, ತೇವಾಂಶ ಜಾಸ್ತಿ ಇರುವ ಪ್ರದೇಶದಲ್ಲಿ ಕಂಡುಬರುತ್ತದೆ. ಈ ರೋಗದ ಮುಖ್ಯ ಲಕ್ಷಣಗಳೆಂದರೆ ಆರಂಭದಲ್ಲಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತಾ ಹೋಗುತ್ತವೆ. ರೋಗ ತೀವ್ರವಾದಾಗ ಎಲೆಗಳೆಲ್ಲ ಒಣಗಿ ಉದುರಿ ಹೋಗುತ್ತವೆ. ನಂತರ ಗಿಡ ಸಂಪೂರ್ಣವಾಗಿ ಸೊರಗಿ

ಸಾಯುತ್ತವೆ. ಇಂತಹ ಸೊರಗಿದ ಗಿಡದ ಬೇರನ್ನು ಕಿತ್ತು ನೋಡಿದಾಗ ಬೇರಿನಲ್ಲಿ ಕಂದು ಬಣ್ಣದ ಮಚ್ಚೆಯನ್ನು ಕಾಣಬಹುದು. ಈ ರೋಗದ ಹತೋಟಿಗೆ ಭೂಮಿಯಲ್ಲಿ ನೀರು ಚೆನ್ನಾಗಿ ಬಸಿದು ಹೋಗುವ ಹಾಗೆ ನೋಡಿಕೊಳ್ಳಬೇಕು. ರೋಗಕ್ಕೆ ತುತ್ತಾದ ಗಿಡದ ಬುಡಕ್ಕೆ 1 ಗ್ರಾಂ ಕಾರ್ಬೆಂಡೆಜಿಮ್ ಶಿಲೀಂಧ್ರ ನಾಶಕವನ್ನು ಒಂದು ಲೀಟರ್ ನೀರಿನಲ್ಲಿ ಬೆರೆಸಿ ಪ್ರತಿ ಗಿಡದ ಭಾಗಕ್ಕೆ ಎರಡರಿಂದ ಐದು ಲೀಟರ್‌ನಷ್ಟು ಹಾಕಬೇಕು.

ಪೀಠಿಕೆ: ಉಡುಪಿ ಮಲ್ಲಿಗೆ ಇದು ಉಡುಪಿಯ ಮೂಲವಾಗಿದ್ದು, ಪ್ರಮುಖವಾದ ವಾಣಿಜ್ಯ ಹೂ ಬೆಳೆಗಳಲ್ಲೊಂದಾಗಿದೆ. ಉಡುಪಿಯ ಶಂಕರಾಪುರ ಇದರ ಮೂಲ. ಇದು ಮಧುರ ಪರಿಮಳ ಬೀರುವ ಮಲ್ಲಿಗೆ. ಉಡುಪಿ ಮಲ್ಲಿಗೆಯ ವೈಜ್ಞಾನಿಕ ಹೆಸರು ಜಾಸ್ಮಿನಿಯಮ್ ಸಾಮಬ್ಯಾಕ್ 'ಅನಿಯಾನಮ್'. ಈ ಮಲ್ಲಿಗೆಯನ್ನು ಮುಡಿಯಲು, ಪೂಜೆಗೆ, ಅತಿಥಿ ಸತ್ಕಾರಕ್ಕೆ, ಸಭಾಂಗಣ ಅಲಂಕಾರಕ್ಕೆ ಉಪಯೋಗಿ ಸಲಾಗುತ್ತದೆ. ಇದಲ್ಲದೆ ಮಲ್ಲಿಗೆ ಹೂವನ್ನು ಸಂಸ್ಕರಿಸಿ ಸುಗಂಧ ತೈಲ ಉತ್ಪಾದನೆಯಲ್ಲೂ ಬಳಸಲಾಗುತ್ತದೆ. ಉಡುಪಿ ಮಲ್ಲಿಗೆಯನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಹೆಚ್ಚಾಗಿ ಬೆಳೆಯಲಾಗತ್ತಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ರೈತರು ಮೊಗ್ಗುಗಳನ್ನು ಬಿಡಿಸಿ ಚೆಂಡುಗಳನ್ನು ಕಟ್ಟಿ ಸ್ಥಳೀಯ ಮಾರುಕಟ್ಟೆಗೆ ಮತ್ತು ವಿಮಾನ ಮೂಲಕ ಮುಂಬಯಿ, ದೆಹಲಿ, ಅಹಮದಾಬಾದ್ ನಗರಗಳಿಗೆ ಮತ್ತು ಸೌದಿ ದೇಶಗಳಿಗೆ ಕಳುಹಿಸುತ್ತಾರೆ. ಕರಾವಳಿ ಪ್ರದೇಶದ ಸಣ್ಣ ಹಿಡುವಳಿದಾರರಿಗೆ ಮಲ್ಲಿಗೆ ಕೃಷಿ ಒಂದು ವರದಾನವಾಗಿದೆ. ಸಾಮಾನ್ಯವಾಗಿ ಇದು ಪೊದೆಯಾಕಾರದಲ್ಲಿ ಬೆಳೆಯುವ ತಳಿಯಾಗಿದ್ದು ಎಲೆಗಳು ಅಂಡಾಕಾರ ಅಥವಾ ಹೃದಯಾಕಾರವಿರುತ್ತದೆ. ಹೂಗಳಲ್ಲಿ ಸುಗಂಧದ ಅಂಶ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಬೇಗ ಬಾಡುವುದಿಲ್ಲ. ಉಡುಪಿ ಮಲ್ಲಿಗೆಯ ವೈಜ್ಞಾನಿಕ ಬೆಳವಣಿಗೆಗೆ ಇವುಗಳನ್ನು ಬಾಧಿಸುವ ಕೀಟಗಳು ಮತ್ತು ರೋಗಗಳು ಅಡ್ಡಿಯಂಟುಮಾಡುತ್ತಿವೆ. ಉತ್ತಮವಾದ ಹೂ ಇಳುವರಿಯನ್ನು ಪಡೆಯಬೇಕಾದರೆ ಈ ಕೀಟ ಮತ್ತು ರೋಗಗಳನ್ನು ವೈಜ್ಞಾನಿಕವಾಗಿ ಹತೋಟಿ ಮಾಡಬೇಕಾಗುತ್ತದೆ.

ಮಲ್ಲಿಗೆಯಲ್ಲಿ ಸಾಮಾನ್ಯವಾಗಿ ಕಂಡು ಬರುವ ಕೀಟಗಳು: ಬಿಳಿ ನೊಣ: ಬಿಳಿ ನೊಣಗಳು ಎಲೆಗಳ ಕೆಳಗೆ ಮೆತ್ತಿ ರಸವನ್ನು ಹೀರುತ್ತವೆ. ಇದರಿಂದ ಗಿಡಗಳ ಬೆಳೆವಣಿಗೆಯು ಕುಗ್ಗುತ್ತದೆ. ಇವುಗಳು ಎಲೆಗಳ ಮೇಲೆ ಸಿಹಿ ದ್ರವವನ್ನು ಸ್ರವಿಸುವುದರಿಂದ ಅದರ ಮೇಲೆ ಕಪ್ಪು ಬೂಷ್ಟು ಬೆಳೆಯುತ್ತದೆ. ಇದರಿಂದ ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಅಡ್ಡಿಯುಂಟಾಗಿ ಇಳುವರಿಯಲ್ಲಿ ಕುಂಠಿತವಾಗುತ್ತದೆ.

ಹತೋಟಿ ಕ್ರಮ: ಈ ಕೀಟದ ಬಾಧೆ ಕಂಡೊಡನೆ 2.0 ಮಿ.ಲೀ. ಆಕ್ಸಿಡೆಮೆಟಾನ್ ಮಿಥೈಲ್ 25 ಇ.ಸಿ. ಅಥವಾ 2 ಮಿ.ಲೀ. ಮೆಲಾಥಿಯನ್ 50 ಇ.ಸಿ. ಮತ್ತು 3 ಗ್ರಾಂ. ನೀರಿನಲ್ಲಿ ಕರಗುವ ಗಂಧಕ ಪ್ರತೀ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಎಲೆ ಮತ್ತು ಮೊಗ್ಗು ತಿನ್ನುವ ಹುಳು : ಹಸಿರು ಮರಿ ಕೀಟವು ಎಳೆ ಎಲೆಗಳನ್ನು ಮಡಚಿ ಹಸಿರು ಭಾಗವನ್ನು ತಿನ್ನುತ್ತದೆ. ಅಲ್ಲದೆ ಕೆಲವು ಸಂದರ್ಭದಲ್ಲಿ ಮೊಗ್ಗುಗಳನ್ನು ಒಟ್ಟುಗೂಡಿಸಿ ಹೆಣೆದು ತಿನ್ನುವುದನ್ನು ಕಾಣಬಹುದು.

ಹತೋಟಿ ಕ್ರಮ: 1.5 ಮಿ.ಲೀ. ಮೊನೋಕ್ರೊಟೋಪಾಸ್ 36. ಎಸ್.ಎಲ್. ಕೀಟನಾಶಕವನ್ನು ಪ್ರತೀ ಒಂದು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಕೆಂಪು ಶಲ್ಕ ಕೀಟ: ಈ ಕೀಟವು ಬೆಳೆದ ರಂಬೆಯ ಮೇಲೆ ಮೆತ್ತಿ ಕೊಂಡಿರುತ್ತವೆ, ಪ್ರೌಢ ಮತ್ತು ಕೀಟವೆರಡೂ ರಸ ಹೀರುವುದರಿಂದ ಗಿಡದ ಬೆಳವಣಿಗೆಯು ಕುಂಠಿತವಾಗುತ್ತದೆ. ಮಳೆಗಾಲದ ಮುಂಚೆ ಮತ್ತು ಮಳೆಗಾಲದ ನಂತರ ಇದರ ತೀವ್ರತೆಯನ್ನು ಕಾಣಬಹುದು. ಹತೋಟಿ ಕ್ರಮ: ಪ್ರತೀ ಒಂದು ಲೀಟರ್ ನೀರಿನಲ್ಲಿ 2 ಮಿ.ಲೀ ಮೆಲಾಥಿಯನ್ 50 ಇ.ಸಿ. ಮತ್ತು 3 ಗ್ರಾಂ ನೀರಿನಲ್ಲಿ ಕರಗುವ ಗಂಧಕವನ್ನು ಬೆರೆಸಿ ಬಾಧೆ ಕಂಡು ಬಂದಾಗ ಸಿಂಪಡಿಸಬೇಕು.

ಉಡುಪಿ ಮಲ್ಲಿಗೆಗೆ ಬರುವ ಪ್ರಮುಖ ರೋಗಗಳು

ಎಲೆ ಚುಕ್ಕೆ ರೋಗ: ಈ ರೋಗವು ಉಷ್ಣಾಂಶದಲ್ಲಿ ವ್ಯತ್ಯಾಸವಾದರೆ ಮತ್ತು ತೇವಾಂಶದ ವಾತಾವರಣ ಇದ್ದರೆ ಕಂಡು ಬರುತ್ತದೆ. ಈ ರೋಗಕ್ಕೆ ತುತ್ತಾದ ಗಿಡಗಳಲ್ಲಿ ಆರಂಭದಲ್ಲಿ ಎಲೆಗಳ ಮೇಲೆ ಸಣ್ಣ ಸಣ್ಣ ಚುಕ್ಕೆಗಳು ಕಂಡು ಬರುತ್ತದೆ. ರೋಗದ ಭಾದೆ ತೀವ್ರವಾದಾಗ ಈ ಚುಕ್ಕೆಗಳು ದೊಡ್ಡದಾಗಿ ವಿಲೀನಗೊಂಡು ಮಚ್ಚೆಗಳಾಗಿ ಎಲೆಗಳು ಒಣಗಿ ಉದುರುತ್ತವೆ. ಈ ಚುಕ್ಕೆಗಳ ಮಧ್ಯಭಾಗದಲ್ಲಿ ಬಿಳುಪಾಗಿದ್ದು ಸುತ್ತಲೂ ಕಪ್ಪು ಅಥವಾ ಕಂದು ಬಣ್ಣದಿಂದ ಕೂಡಿರುತ್ತದೆ.

ಹತೋಟಿ: ಮಲ್ಲಿಗೆ ಬೆಳೆಯುವ ತೋಟವನ್ನು ಶುಚಿಯಾಗಿ ಇಡಬೇಕು. ರೋಗದ ಹತೋಟಿಗೆ ಲೀಟರ್ ನೀರಿಗೆ 1 ಗ್ರಾಂ ಕಾರ್ಬೆಂಡೆಜಿಮ್ ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡನ್ನು ಬೆರೆಸಿ ಗಿಡಗಳಿಗೆ ಸಿಂಪಡಿಸಬೇಕು.

ಸೊರಗು ರೋಗ: ಈ ರೋಗವು ಮಣ್ಣುಜನ್ಯವಾಗಿದ್ದು, ತೇವಾಂಶ ಜಾಸ್ತಿ ಇರುವ ಪ್ರದೇಶದಲ್ಲಿ ಕಂಡುಬರುತ್ತದೆ. ಈ ರೋಗದ ಮುಖ್ಯ ಲಕ್ಷಣಗಳೆಂದರೆ ಆರಂಭದಲ್ಲಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತಾ ಹೋಗುತ್ತವೆ. ರೋಗ ತೀವ್ರವಾದಾಗ ಎಲೆಗಳೆಲ್ಲ ಒಣಗಿ ಉದುರಿ ಹೋಗುತ್ತವೆ. ನಂತರ ಗಿಡ ಸಂಪೂರ್ಣವಾಗಿ ಸೊರಗಿ ಸಾಯುತ್ತವೆ. ಇಂತಹ ಸೊರಗಿದ ಗಿಡದ ಬೇರನ್ನು ಕಿತ್ತು ನೋಡಿದಾಗ ಬೇರಿನಲ್ಲಿ ಕಂದು ಬಣ್ಣದ ಮಚ್ಚೆಯನ್ನು ಕಾಣಬಹುದು.

ಹತೋಟಿ: ಭೂಮಿಯಲ್ಲಿ ನೀರು ಚೆನ್ನಾಗಿ ಬಸಿದು ಹೋಗುವ ಹಾಗೆ ನೋಡಿಕೊಳ್ಳಬೇಕು. ರೋಗಕ್ಕೆ ತುತ್ತಾದ ಗಿಡದ ಬುಡಕ್ಕೆ 1 ಗ್ರಾಂ ಕಾರ್ಬೆಂಡೆಜಿಮ್ ಶಿಲೀಂಧ್ರ ನಾಶಕವನ್ನು ಒಂದು ಲೀಟರ್ ನೀರಿನಲ್ಲಿ ಬೆರೆಸಿ ಪ್ರತಿ ಗಿಡದ ಭಾಗಕ್ಕೆ ಎರಡರಿಂದ ಐದು ಲೀಟರ್‌ನಷ್ಟು ಹಾಕಬೇಕು.

ಪರಿಣಾಮಕಾರಿಯಾದ ಕೀಟ ಮತ್ತು ರೋಗ ನಿರ್ವಹಣೆಯಲ್ಲಿ ಗಿಡಗಳ ಆರೋಗ್ಯ ಸಹ ಪ್ರಮುಖ ಪಾತ್ರವಹಿಸುತ್ತವೆ. ಹಾಗಾಗಿ ಉತ್ತಮ ಬೆಳೆ ನಿರ್ವಹಣೆ ಪದ್ಧತಿಯನ್ನು ಸಹ ಅನುಸರಿಸಬೇಕು. ಅವುಗಳಲ್ಲಿ ಕಳೆ ನಿರ್ವಹಣೆ, ಮಣ್ಣಿನ ನಿರ್ವಹಣೆ, ಗಡಗಳಲ್ಲಿ ಸುಣ್ಣದ ಬಳಕೆ, ಮೊಗ್ಗು ಚಿವುಟುವುದು, ಬಳ್ಳಿಯ ಸ್ವಚ್ಛತೆ ಮತ್ತು ಸವರುವಿಕೆ ಪ್ರಮುಖವಾಗಿವೆ.

ಕಳೆ ತೆಗೆಯುವಿಕೆ: ಕಳೆಗಳು ಭೂಮಿಯ ಮೇಲ್ಪದರದಲ್ಲಿರುವ ಸಾರಾಂಶವನ್ನು ಹೀರುವುದರಿಂದ ಗಿಡಗಳ ಬೆಳವಣಿಗೆ ಕುಂಠಿತ

ವಾಗುತ್ತದೆ. ಆದ್ದರಿಂದ ವರ್ಷಕ್ಕೆ ಎರಡು ಬಾರಿ ಬಳ್ಳಿಯ ಸುತ್ತ ಸಣ್ಣದಾಗಿ ಅಗೆತ ಮಾಡಿ ಕಳೆಗಳನ್ನು ನಿಯಂತ್ರಿಸಬಹುದು. ಇದರಿಂದ ಕಳೆಗಳು ಮಲ್ಲಿಗೆ ಗಿಡಗಳ ಜೊತೆ ಆಹಾರ ಪೈಪೋಟಿ ತಪ್ಪಿಸಬಹುದು.

ಮಣ್ಣಿನ ನಿರ್ವಹಣೆ: ಇಳಿಜಾರು ಪ್ರದೇಶಗಳಲ್ಲಿ ಮಲ್ಲಿಗೆಯನ್ನು ಬೆಳೆದಾಗ ನೀರಿನಿಂದ ಮೇಲ್ಮಣ್ಣು ಕೊಚ್ಚಿ ಹೋಗದಂತೆ ಅಡ್ಡ ಬದುಗಳನ್ನು ಹಾಕಿ ಮಣ್ಣು ಕೊಚ್ಚಣೆಯನ್ನು ತಡೆಯಬಹುದು. ಬೇಸಿಗೆಯಲ್ಲಿ ಮಲ್ಲಿಗೆಯ ಬೇರುಗಳು ಒಣಗದಂತೆ ಬುಡದಲ್ಲಿ ತರಗೆಲೆಗಳನ್ನು ಹರಡಿದರೆ ಭೂಮಿಯ ತೇವಾಂಶವನ್ನು ಕಾಪಾಡುತ್ತದೆ ಮತ್ತು ತರಗೆಲೆ ಕ್ರಮೇಣ ಸಾವಯವ ಗೊಬ್ಬರವಾಗಿ ಪರಿವರ್ತನೆಯಾಗಿ ಗಿಡಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

ಸುಣ್ಣದ ಬಳಕೆ: ಕರಾವಳಿಯ ಮಣ್ಣು ಹುಳಿಯಾಗಿರುವುದುರಿಂದ ಮಣ್ಣಿನ ರಸಸಾರವನ್ನು ಸರಿಯಾದ ಪ್ರಮಾಣದಲ್ಲಿಡಲು ಹಾಗೂ ಗಿಡಗಳಿಗೆ ಒದಗಿದ ಪೋಷಕಾಂಶಗಳು ಬಳ್ಳಿಗೆ ದೊರಕಲು ಪ್ರತೀ ವರ್ಷ ರಸಗೊಬ್ಬರಗಳನ್ನು ಕೊಡುವ 15 ದಿನಗಳ ಮುಂಚೆ ಪ್ರತಿ ಗಿಡದ (ಮೂರು ವರ್ಷದ) ಬುಡಕ್ಕೆ 250 – 500 ಗ್ರಾಂ. ಪುಡಿ ಸುಣ್ಣವನ್ನು ಮಣ್ಣಿನಲ್ಲಿ ಬೆರೆಸುವುದರಿಂದ ಮಣ್ಣಿನ ರಸಸಾರವನ್ನು ತಹಬದಿಗೆ ತರಲು ಸಾಧ್ಯವಾಗುತ್ತದೆ.

ಮೊಗ್ಗು ಚಿವುಟುವುದು: ಮಲ್ಲಿಗೆ ಗಿಡಗಳು ನಾಟಿ ಮಾಡಿದ ಹೊಸ ಚಿಗುರಿನ ಜೊತೆ ಹೂಗಳನ್ನು ಬಿಡುತ್ತವೆ. ಆದರೆ ಗಿಡ ಚೆನ್ನಾಗಿ ಬೆಳೆಯುವ ಮುಂಚೆಯೇ ಹೂಗಳನ್ನು ಅರಳಲು ಬಿಟ್ಟರೆ ಗಿಡಗಳ ಬೆಳವಣಿಗೆ ಕುಂಠಿತವಾಗುತ್ತದೆ. ಆದ್ದರಿಂದ ಗಿಡ ನೆಟ್ಟ 6 ತಿಂಗಳವರೆಗೆ ಮೊಗ್ಗುಗಳನ್ನು ಚಿವುಟಿ ಹಾಕಬೇಕು.

ಬಳ್ಳಿಯ ಸ್ವಚ್ಛತೆ ಮತ್ತು ಸವರುವಿಕೆ: ಪ್ರತೀ ವರ್ಷ ಬಳ್ಳಿಯನ್ನು ಸ್ವಚ್ಛ ಮಾಡುವುದು ಮುಖ್ಯ. ರೋಗ ಮತ್ತು ಕೀಟ ಬಾಧೆಗೆ ತುತ್ತಾದ ಗೆಲ್ಲುಗಳು, ಒಣಗಿರುವ, ಒತ್ತಾಗಿ ಬೆಳೆದ ಗೆಲ್ಲುಗಳನ್ನು ಸವರಿ ಗಿಡಕ್ಕೆ ಚೆನ್ನಾಗಿ ಗಾಳಿ, ಬೆಳಕು ಆಡುವ ಹಾಗೆ ನೋಡಿಕೊಳ್ಳಬೇಕು. ಗಿಡದಲ್ಲಿ ಆಗಾಗ ಮೂಡುವ ನೀರು ಕಂದುಗಳನ್ನು (ಹಬ್ಬುವ ಗೆಲ್ಲುಗಳು) ಕತ್ತರಿಸಿ ತೆಗೆಯುತ್ತಿರಬೇಕು. ಸಾಮಾನ್ಯವಾಗಿ ಮಲ್ಲಿಗೆ ಬಳ್ಳಿಯನ್ನು ಸವರುವಾಗ ಭೂಮಿಯಿಂದ ಎರಡು ಅಡಿ ಎತ್ತರದಲ್ಲಿ ಗೆಲ್ಲುಗಳನ್ನು ಕತ್ತರಿಸಿ ತೆಗೆಯಬೇಕು. ಗೆಲ್ಲುಗಳನ್ನು ಕತ್ತರಿಸಿದ ನಂತರ ಕತ್ತರಿಸಿದ ಭಾಗಕ್ಕೆ ಬೋರ್ಡೊ ಮುಲಾಮು ಹಚ್ಚಿ ಉಪಚರಿಸಬೇಕು. ಉಡುಪಿ ಮಲ್ಲಿಗೆಗೆ ವರ್ಷದ ಎಲ್ಲಾ ತಿಂಗಳುಗಳಲ್ಲಿ ಬೇಡಿಕೆ ಇರುವುದರಿಂದ ಒಂದೇ ಬಾರಿ ಎಲ್ಲಾ ಗಿಡಗಳನ್ನು ಸವರಿದರೆ ಹೂ ಪಡೆಯಲು ಒಂದು ತಿಂಗಳು ಕಾಯಬೇಕಾಗುತ್ತದೆ. ಆದ್ದರಿಂದ ರೈತರು ಒಂದೇ ಬಾರಿ ಗಿಡಗಳನ್ನು ಸವರುವ ಬದಲು ಗಿಡ ನೆಟ್ಟ 3 ವರ್ಷಗಳ ನಂತರ ಪ್ರತಿ 5 ರಿಂದ 10 ಗಿಡಗಳಂತೆ ಹಂತ ಹಂತವಾಗಿ ಸವರುವುದು ಒಳ್ಳೆಯದು. ಈ ವಿಧಾನದಲ್ಲಿ ಸವರಿದ ಗಿಡಗಳಿಂದ ಬಲಿಷ್ಠವಾದ ಮತ್ತು ಆರೋಗ್ಯಯುತವಾದ ಗೆಲ್ಲುಗಳು ಉತ್ಪತ್ತಿಯಾಗಿ ಹೂಗಳ ಗುಣಮಟ್ಟ ಸಹ ಉತ್ತಮವಾಗಿರುತ್ತದೆ. ಅಲ್ಲದೆ ಗಿಡಗಳಿಗೆ ಉತ್ತಮ ಆಕಾರವನ್ನು ಕೊಡಲು ಸಾಧ್ಯವಾಗುತ್ತದೆ. ಗಿಡಗಳ ಸವರುವಿಕೆಯಿಂದ ಗಿಡಗಳು ಪುನ:ಚೇತನಗೊಂಡು ಹೊಸ ಚಿಗುರೊಡೆದು ಹೆಚ್ಚು ಹೂ ಬಿಡಲು ಪ್ರಾರಂಭಿಸುತ್ತವೆ. ಉಡುಪಿ ಮಲ್ಲಿಗೆಯನ್ನು ಸವರಲು ಸೂಕ್ತ ಕಾಲ ಎಂದರೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳು. ಮಲ್ಲಿಗೆಯ ಉತ್ತಮ ಬೆಳವಣಿಗೆಗೆ ಹಾಗೂ ಪರಿಣಾಮಕಾರಿಯಾದ ಕೀಟ ಮತ್ತು ರೋಗಗಳ ಹತೋಟಿಗೆ ಪ್ರತಿ ಗಿಡಗಳಿಗೆ ಪ್ರತಿ ವರ್ಷ 2ಕೆ.ಜಿಯಷ್ಟು ಬೇವಿನ ಹಿಂಡಿ ಹಾಕಬೇಕು ಮತ್ತು ನೀರು ಬಸಿದು ಹೋಗುವಂತೆ ಅವಕಾಶ ಕಲ್ಪಿಸಬೇಕು.

ಕರ್ನಾಟಕದ ಕೃಷಿಗೆ ಕಾಲಿಟ್ಟ ಆಧುನಿಕ ಮತ್ತು ನಿಖರವಾದ ಲೇಸರ್ ತಂತ್ರಜ್ಞಾನ

ಪಿ. ಎಸ್. ಕಾಣನ್ನವರ, ಡಾ. ಪಿ. ಬಾಲಕೃಷ್ಣನ್, ರುದ್ರಗೌಡ ಸಿ., ರವೀಂದ್ರ ವೈ ಮತ್ತು ಡಾ. ಅನುರಾಜ್ ಬಿ.,
ಕೃಷಿ ವಿಶ್ವವಿದ್ಯಾಲಯ ರಾಯಚೂರು

ಜನಸಂಖ್ಯೆ ಹೆಚ್ಚಳದಿಂದ ಆಹಾರ ಉತ್ಪಾದನೆ ಹೆಚ್ಚಿಸಲು ಮಣ್ಣು ಮತ್ತು ನೀರಿನ ಸಂರಕ್ಷಣೆ ಅತೀ ಅವಶ್ಯವಾಗಿದೆ. ವೈಜ್ಞಾನಿಕ ಮತ್ತು ನಿಖರ ಭೂ-ಅಭಿವೃದ್ಧಿಯಿಂದ ಮಣ್ಣು ಮತ್ತು ನೀರನ್ನು ಸಂರಕ್ಷಿಸಿ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯ. ಈ ದೆಸೆಯಲ್ಲಿ ಸಾಂಪ್ರದಾಯಕ ಪದ್ಧತಿಗಳಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಸುಸ್ಥಿರ ಕೃಷಿಗೆ ಆಧುನಿಕ ಮತ್ತು ನಿಖರವಾದ ಲೇಸರ್ ಲೆವಲಿಂಗ್ ತಂತ್ರಜ್ಞಾನ ಒಂದು ಆಶಾಕಿರಣವಾಗಿದೆ. ಈ ತಂತ್ರಜ್ಞಾನವನ್ನು ೨೦೦೮-೦೯ ರಲ್ಲಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಪ್ರಥಮ ಬಾರಿಗೆ ಬಳಸಿ ಸತತ ಮೂರು ವರ್ಷಗಳ ಅಧ್ಯಯನದಿಂದ ಮಣ್ಣಿನ ತೇವಾಂಶದಲ್ಲಿ ಸಮನಾದ ಹಂಚಿಕೆ (Uniformity Coefficient, ೯೫-೯೮ %), ನೀರಾವರಿ ಸಮಯ ಮತ್ತು ನೀರಿನ ಉಳಿತಾಯ (೨೫-೩೦ %), ಬೇಸಾಯಕ್ಷೇತ್ರದ ಹೆಚ್ಚಳ (೩-೫ %) ಮತ್ತು ನಿಖರವಾದ ಲೇವಲಿಂಗ್ ಸೂಚ್ಯಾಂಕ (Levelling Index, ೧—೫ ಸೆಂ. ಮೀ.) ಕಂಡುಬಂದಿತು. ನಂತರ ಈ ತಂತ್ರಜ್ಞಾನದ ಲಾಭಗಳನ್ನು ತಿಳಿಸಲು ಈ ಭಾಗದ ಸಾವಿರಾರು ರೈತರಿಗೆ ಪ್ರತಿ ವರ್ಷದ ಕೃಷಿಮೇಳಗಳಲ್ಲಿ ಹಾಗೂ ರೈತರ ಜಮೀನಿನಲ್ಲಿ ಪ್ರಾಯೋಗಿಕ ಪ್ರದರ್ಶನ (Demonstration) ಮತ್ತು ಕ್ಷೇತ್ರ ಮಟ್ಟದ ತರಬೇತಿಗಳನ್ನು (Field level trainings) ಏರ್ಪಡಿಸಿ, ಜನಪ್ರಿಯಗೊಳಿಸಲಾಗಿದೆ. ಭತ್ತದ ರೈತರು ಇದನ್ನು ಬಳಸಿ, ಹೆಚ್ಚಿನ ಇಳುವರಿ (೨೫-೩೫ %), ಸರಳ ಕೃಷಿ (ಕಡಿಮೆ ಕೃಷಿ ಕಾರ್ಮಿಕರ ಬಳಕೆ), ಬಹಳಷ್ಟು ಶಕ್ತಿಯ ಉಳಿತಾಯ (೩೦-೪೦ %) ಕಂಡು ಇದರ ಸದುಪಯೋಗ ಪಡೆದುಕೊಂಡಿದ್ದಾರೆ. ಇದುವರೆಗೆ ಸುಮಾರು ೧೦೦೦ ಎಕರೆಗೂ ಹೆಚ್ಚು ಕ್ಷೇತ್ರದ ಭೂಮಿಯು ವೈಜ್ಞಾನಿಕ ಮತ್ತು ನಿಖರವಾಗಿ ಅಭಿವೃದ್ಧಿ ಪಡಿಸಲಾಗಿದ್ದು ಮತ್ತು ಕರ್ನಾಟಕದ ಎಲ್ಲ ರೈತರಿಗೂ ಕುತುಹಲ ಉಂಟುಮಾಡಿದೆ ಮತ್ತು ಇದನ್ನು ಬಳಸಲು ಉತ್ಸುಕರಾಗಿದ್ದಾರೆ. ಈ ರೀತಿ ಕರ್ನಾಟಕದ ಕೃಷಿಗೆ ಕಾಲಿಟ್ಟ ಆಧುನಿಕ ಮತ್ತು ನಿಖರವಾದ ಲೇಸರ್ ತಂತ್ರಜ್ಞಾನ ಕೃಷಿ ಕ್ರಾಂತಿಗೆ ನಾಂದಿ ಹಾಡಿದೆ.

ಪೀಠಿಕೆ: ಮಣ್ಣು ಮತ್ತು ನೀರು ಕೃಷಿಯ ಮುಖ್ಯ ಸಂಪನ್ಮೂಲಗಳು. ಕೃಷಿಯಲ್ಲಿ ಭೂ ಅಭಿವೃದ್ಧಿಯು ಸಂಪನ್ಮೂಲಗಳ ರಕ್ಷಣೆಗೆ ಅತೀ ಅವಶ್ಯಕ. ಏರುಪೇರಾದ ಕೃಷಿಭೂಮಿಯು ಬೀಜ ಮೊಳಕೆ ಒಡೆಯುವಲ್ಲಿ, ನೀರಿನ ಉಳಿತಾಯದಲ್ಲಿ ಮತ್ತು ಇಳುವರಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವದರಿಂದ ನಿಖರವಾದ ಭೂ ಅಭಿವೃದ್ಧಿಯು ಮಹತ್ತರವಾದ ಪಾತ್ರ ವಹಿಸುತ್ತದೆ. ನೀರಾವರಿ ಭೂಮಿಯನ್ನು ಅಭಿವೃದ್ಧಿಗೊಳಿಸಿದ ನಂತರವೇ ನೀರಾವರಿ ಒದಗಿಸುವುದು ಸೂಕ್ತ. ಸಮತಟ್ಟು ಇಲ್ಲದ ಜಮೀನುಗಳಲ್ಲಿ ನೀರು ಸಮನಾಗಿ ಲಬ್ಯವಿಲ್ಲದೇ ಅಸಮರ್ಪಕವಾಗಿ ನೀರು ಮತ್ತು ಮಣ್ಣಿನ ಪೋಲಾಗುವದರಿಂದ, ಬಳಕೆ

ಸಾಮರ್ಥ್ಯ ಕಡಿಮೆಯಾಗುವುದು ಮತ್ತು ಇಳುವರಿ ಸಹ ಕುಂಠಿತವಾಗುದು. ಈ ರೀತಿಯ ನೀರಿನ ಅಪವ್ಯಯ ಬಹುತೇಕ ಎಲ್ಲ ಒಣ ಪ್ರದೇಶಗಳಲ್ಲಿ ಮತ್ತು ಅಚ್ಚುಕಟ್ಟು ಪ್ರದೇಶಗಳಲ್ಲಿಯೂ ಸಾಮಾನ್ಯವಾಗಿ ಕಾಣಬಹುದು. ಆದ್ದರಿಂದ ನೀರಾವರಿಗೆ ತಕ್ಕಂತೆ ನಿಗದಿತ ಪ್ರಮಾಣಕ್ಕೆ ಭೂಮಿಯನ್ನು ಮಟ್ಟ ಮಾಡುವುದರಿಂದ ಹಾಗೂ ಸೂಕ್ತ ಸಂರಕ್ಷಣಾ ಕೃಷಿ ಚಟುವಟಿಕೆಗಳನ್ನು ಅನುಸರಿಸುವುದರಿಂದ ನೀರಿನ ಸಮರ್ಪಕ ಬಳಕೆಯಾಗಿ ಹೆಚ್ಚು ಹೆಚ್ಚು ಪ್ರದೇಶ ನೀರಾವರಿ ಅನುಕೂಲದಿಂದ ಬೆಳೆಯಲ್ಲಿ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯ. ಭೂಮಟ್ಟ ಮಾಡುವ ಸಾಂಪ್ರದಾಯಕ ಪದ್ಧತಿಗಳು ಜಟಿಲವಾಗಿದ್ದು, ನಿಖರವಲ್ಲದ್ದು ಮತ್ತು ಮೇಲಿಂದ ಮೇಲೆ ಪುನರಾವರ್ತನೆ ಮಾಡಬೇಕಾಗಿದ್ದು, ಇದಲ್ಲದೆ ಟ್ರಾಕ್ಟರ್ ಚಾಲಕನ ಕೌಶಲ್ಯದ ಮೇಲೆ ಅವಲಂಬಿತವಾಗಿವೆ. ಕಳಪೆಮಟ್ಟದ ಭೂ ಅಭಿವೃದ್ಧಿಯಿಂದ ನೀರಾವರಿಯಲ್ಲಿ (ಸುಮಾರು ೨೦-೨೫ %) ನೀರಿನ ಅಪವ್ಯಯವಾಗುತ್ತಿದೆ (ಕುಕ್ ಮತ್ತು ಪಿಕರ್ಟ್, ೧೯೬೦). ಆದ್ದರಿಂದ ಸಾಂಪ್ರದಾಯಕ ಭೂ ಅಭಿವೃದ್ಧಿ ವಿಧಾನಗಳಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಸುಸ್ಥಿರ ಕೃಷಿಗೆ ಇತ್ತೀಚಿನ ಹೊಸದಾದ ಲೇಸರ್ ಲೆವಲಿಂಗ್ ತಂತ್ರಜ್ಞಾನ ಆಶಾಕಿರಣವಾಗಿದೆ (ರಿಕ್‌ಮನ್, ೨೦೦೨). ಆದ್ದರಿಂದ ಎಲ್ಲ ಅಚ್ಚುಕಟ್ಟು ಪ್ರದೇಶಗಳಲ್ಲಿ ಹಾಗೂ ನೀರಾವರಿ ಕ್ಷೇತ್ರಗಳಲ್ಲಿ, ಅದರಲ್ಲೂ ಭತ್ತ ಬೆಳೆಯುವ ಹೈ. ಕರ್ನಾಟಕದ ಕೃಷ್ಣಾ ಮೇಲ್ದಂಡೆ ಯೋಜನೆ(ಯುಕೆಪಿ) ಮತ್ತು ತುಂಗಭದ್ರ ಯೋಜನೆ(ಟಿಬಿಪಿ)ಯ ಅಚ್ಚುಕಟ್ಟು ಪ್ರದೇಶಗಳಲ್ಲಿ ನೀರಾವರಿಗಾಗಿ ಸೂಕ್ತ ಪ್ರಮಾಣದ ನಿಖರವಾದ ಭೂಮಿ ಮಟ್ಟ ಮಾಡುವ ಕ್ರಮಗಳು ಅವಶ್ಯ ಹಾಗೂ ಅನಿವಾರ್ಯವಾಗಿದೆ.

ವಸ್ತು ಮತ್ತು ಪದ್ಧತಿಗಳು: ಕೃಷಿ ವಿಶ್ವವಿದ್ಯಾಲಯ ರಾಯಚೂರು ಈ ಲೇಸರ್ ಲೇವಲರ್ ಉಪಕರಣವನ್ನು ಪ್ರಥಮ ಬಾರಿಗೆ ೨೦೦೮-೦೯ರಲ್ಲಿ "ಸ್ಪೆಕ್ಟ್ರಾ ಪ್ರಿಸಿಜನ್ ಪ್ರೈವೇಟ್ ಲಿಮಿಟೆಡ್, ಹೊಸದೆಹಲಿ" ಇವರಿಂದ ಖರೀದಿಸಿ, ಕರ್ನಾಟಕದಲ್ಲಿನ ಸಾಂಪ್ರದಾಯಕ ಲೇವಲಿಂಗ್ ಪದ್ಧತಿಗೆ ಹೋಲಿಸಿ ಸೂಕ್ತವಾದ ಕಾರ್ಯವಿಧಾನ ಅನುಸರಿಸಿ ಲೇಸರ್ ತಂತ್ರಜ್ಞಾನದಿಂದ ಭೂ ಮಟ್ಟ ಮಾಡಿ ಒಂದು ತುಲನಾತ್ಮಕ ಅಧ್ಯಯನ ಕೈಗೊಳ್ಳಲಾಯಿತು. ಈ ಲೇವಲಿಂಗ್ ಪದ್ಧತಿಗಳನ್ನು ಎರಡು ಕ್ಷೇತ್ರಗಳಲ್ಲಿ ಸತತ ಮೂರು ವರ್ಷ ವಿವಿಧ ಮಣ್ಣಿನಲ್ಲಿ ಮತ್ತು ವಿವಿಧ ವಿಸ್ತೀರ್ಣದಲ್ಲಿ ಅಧ್ಯಯನ ನಡೆಸಲಾಗಿ, ಭೂ-ಅಭಿವೃದ್ಧಿಯ ಪೂರ್ವ ಮತ್ತು ನಂತರದ ವಿಚಲನ (Standard Deviation), ಲೇವಲಿಂಗ್ ಸೂಚ್ಯಾಂಕ (Levelling Index), ತೇವಾಂಶದ ವಿಚಲನೆ ಮತ್ತು ಹಂಚಿಕೆ (Soil-moisture Deviation and Uniformity) ಇನ್ನಿತರ ಅಂಶಗಳನ್ನು ಕಂಡುಹಿಡಿಯಲಾಯಿತು. ಭೂ ಮಟ್ಟಗೊಳಿಸುವ ಪೂರ್ವ ಮತ್ತು ನಂತರ, ಲೇವಲಿಂಗ್ ಸೂಚ್ಯಾಂಕ (Levelling Index)ವನ್ನು ಆಗರ್ ವಾಲ್ ಮತ್ತು ಗೊಯಲ್ ರವರು ಬಳಸಿದಂತಹ ಸೂತ್ರದಿಂದ ಕಂಡುಹಿಡಿಯಲ್ಲಾಗಿದೆ.

$$\text{ಲೇವಲಿಂಗ್ ಸೂಚ್ಯಾಂಕ} = \frac{\Sigma(\text{ಪ್ರತಿ ಗ್ರಿಡ್ ನ ಭೂ-ಮಟ್ಟದ ಅಂಕಿಗಳು - ಸರಾಸರಿ ಭೂ-ಮಟ್ಟದ ಅಂಕಿಗಳು})}{\text{ಒಟ್ಟು ಗ್ರಿಡ್ ಗಳ ಸಂಖ್ಯೆ}}$$

ಈ ಎರಡು ಪದ್ಧತಿಗಳಿಂದ ಭೂ-ಮಟ್ಟಗೊಳಿಸಿದ ನಂತರ ಕ್ಷೇತ್ರಗಳಲ್ಲಿ ಆದ ೧೯ ಮಿ. ಮೀ. ಮತ್ತು ೭೦ ಮಿ. ಮೀ. ಮಳೆಯ ನಂತರ ತೇವಾಂಶದ ಹಂಚಿಕೆಯಲ್ಲಿನ ಸಮಾನತೆಯ ಸೂಚ್ಯಾಂಕ (Uniformity Co-efficient) ವನ್ನು ಕ್ರಿಷ್ಚಿನ್‌ಸನ್ ಸೂತ್ರದಿಂದ ಕಂಡುಹಿಡಿಯಲಾಗಿದೆ (ಮೈಕಲ್, ೨೦೧೧).

$$C_u = 100\left[1 - \frac{\sum X}{m\,n}\right]$$

ಇಲ್ಲಿ,

C_u = ವಿಕರೂಪದ ತೇವಾಂಶದ ಹಂಚಿಕೆ, %

m = ಎಲ್ಲ ಗ್ರಿಡ್‌ಗಳ ಸರಾಸರಿ ತೇವಾಂಶ, %

n = ಒಟ್ಟು ಗ್ರಿಡ್ ಗಳ ಸಂಖ್ಯೆ

X = ಸರಾಸರಿ ತೇವಾಂಶದಿಂದ ಪ್ರತಿಯೊಂದು ಗ್ರಿಡ್‌ಗಳ ತೇವಾಂಶದ ವಿಚಲನೆ

ಈ ರೀತಿ ಇನ್ನೂ ಇತ್ಯಾದಿ ಲಾಭದಾಯಕ ಅಂಶಗಳು ಅಧ್ಯಯನದಿಂದ ದೃಢಪಟ್ಟ ನಂತರ ಈ ಲೇಸರ್ ಲೇವಲಿಂಗ್ ತಂತ್ರಜ್ಞಾನದ ಲಾಭಗಳನ್ನು ತಿಳಿಸಲು ಈ ಭಾಗದ ರೈತರಿಗೆ ಪ್ರತಿ ವರ್ಷದ ಕೃಷಿಮೇಳಗಳಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಕೇಂದ್ರಗಳಲ್ಲಿ ಹಾಗೂ ರೈತರ ಜಮೀನಿನಲ್ಲಿ ಪ್ರಾಯೋಗಿಕ ಪ್ರದರ್ಶನ ಮತ್ತು ಕ್ಷೇತ್ರ ಮಟ್ಟದ ತರಬೇತಿಗಳನ್ನು ನಡೆಸಿ ಸಾವಿರಾರು ರೈತರಿಗೆ ಈ ತಂತ್ರಜ್ಞಾನ ಅನುಕೂಲವಾಗುವಂತೆ ಜನಪ್ರೀಯಗೊಳಿಸಲಾಗಿದೆ.

ಫಲಿತಾಂಶ ಮತ್ತು ಚರ್ಚೆ: ಭೂಮಿಯನ್ನು ಎರಡು ಪದ್ಧತಿಗಳಿಂದ ಅಭಿವೃದ್ಧಿಗೊಳಿಸಿದ ನಂತರ, ಕೋಷ್ಟಕ ೧ ರಲ್ಲಿ ತಿಳಿಸಿರುವಂತೆ, ಲೇಸರ್ ತಂತ್ರಜ್ಞಾನದಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರವು ಅತ್ಯಂತ ಕಡಿಮೆ ಭೂಮಟ್ಟದ ವಿಚಲನ (೨.೦೭ ಸೆಂ. ಮೀ) ಹೊಂದಿದ್ದು ದೃಡಪಟ್ಟಿದೆ. ಇದು ಲೇಸರ್ ಲೇವಲಿಂಗ್ ಕ್ಷೇತ್ರದಲ್ಲಿನ ಭೂಮಟ್ಟದ ಕಡಿಮೆ ಏರು-ಪೇರನ್ನು ಸೂಚಿಸುತ್ತದೆ. ಅದೇ ರೀತಿಯಾಗಿ, ಭೂಮಟ್ಟದ ವಿಚಲನೆಯ ಜೊತೆಗೆ ಲೇವಲಿಂಗ್ ಸೂಚ್ಯಾಂಕವು ಸಹ ಅತ್ಯಂತ ಕಡಿಮೆ ಆಗುವುದು ಮತ್ತು ಭೂಮಿಯ ಎಲ್ಲ ಸ್ಥಳಗಳಲ್ಲಿ ಸಮನಾದ ತೇವಾಂಶದ ಹಂಚಿಕೆಯಾಗುವದು ಲೇಸರ್ ಲೇವಲಿಂಗ್ ಕ್ಷೇತ್ರದಲ್ಲಿ ಸಾಧ್ಯವಿದೆ ಎಂದು ಗೊತ್ತಾಗಿದೆ (ಕೋಷ್ಟಕ ೨, ೩ ಮತ್ತು ೪). ಸಾಂಪ್ರದಾಯಕ ಪದ್ಧತಿಯಿಂದ ಕ್ಷೇತ್ರದ ಲೇವಲಿಂಗ್ ವಿಚಲನದ ಕ್ಷೀಣತೆ ಮತ್ತು ಲೇವಲಿಂಗ್ ಸೂಚ್ಯಾಂಕವನ್ನು ಕೇವಲ ೪೩.೪೦ % ಮತ್ತು ೧೧ ಸೆಂ. ಮೀ. ನಷ್ಟು ಕಡಿಮೆ ಮಾಡಬಹುದು ಆದರೆ ಇದನ್ನು ಲೇಸರ್ ಲೇವಲಿಂಗ್ ಕ್ಷೇತ್ರದಲ್ಲಿ ೮೬.೬ % ಮತ್ತು ೧.೩ ಸೆಂ. ಮೀ. ನಷ್ಟು ಕಡಿಮೆ ಮಾಡುವುದು ಖಚಿತಪಟ್ಟಿದೆ (ಕೋಷ್ಟಕ ೫). ಇದು ಲೇಸರ್ ಲೇವಲಿಂಗ್‌ನಿಂದ ಹೆಚ್ಚು ನಿಖರವಾಗಿ ಭೂಮಿಯನ್ನು ಮಟ್ಟಗೊಳಿಸಬಹುದೆಂದು ಹಾಗೂ ಸಾಂಪ್ರದಾಯಕ ಪದ್ಧತಿಯಿಂದ ಭೂಮಿಯ ಏರು-ಪೇರನ್ನು ಸಮತಟ್ಟುಗೊಳಿಸುವುದು ಕಳಪೆಯಾಗಿದ್ದು ಮತ್ತು ಇದು ಚಾಲಕನ ಕೌಶಲ್ಯದ ಮೇಲೆ ಅವಲಂಬಿತವಾಗಿರವದು ಕಂಡುಬಂದಿದೆ. ತೇವಾಂಶ ಹಂಚಿಕೆಯು ಸಾಂಪ್ರದಾಯಕ ಲೇವಲಿಂಗ್ ಪದ್ಧತಿಯಲ್ಲಿ ೭೭.೭% ಮತ್ತು ಲೇಸರ್ ಲೇವಲಿಂಗ್ ಪದ್ಧತಿಯಲ್ಲಿ ೯೩.೯೪ % ನಷ್ಟು ಸಾದಿಸಬಹುದಾಗಿದೆ. ಈ ಅಸಮತೋಲನದ ತೇವಾಂಶ ಹಂಚಿಕೆಯು, ಬೆಳೆಗೆ ಪೋಶಕಾಂಶಗಳನ್ನು ಅಸಮತೋಲನವಾಗಿ ಒದಗಿಸುತ್ತದೆ ಇದರಿಂದ ಬೆಳೆಯ ಇಳುವರಿಯಲ್ಲಿ ಬದಲಾವಣೆಯಾಗುತ್ತದೆ. ಅತಿಯಾದ ನಿಖರತೆಯೊಂದಿಗೆ ಭೂ-ಮಟ್ಟಗೊಳಿಸಲು ಹೆಚ್ಚಿನ ಸಮಯ ಬೇಕಾಗುವದರಿಂದ, ಲೇಸರ್ ಲೇವಲಿಂಗ್ ಕ್ಷೇತ್ರಗಳಲ್ಲಿ ಕ್ರಮವಾಗಿ ಪ್ರತಿ ಘಂಟೆಗೆ ತಗುಲುವ ವೆಚ್ಚ ಮತ್ತು ಕ್ಷೇತ್ರ ಸಾಮರ್ಥ್ಯವು ಸಾಂಪ್ರದಾಯಕ ಪದ್ಧತಿಗಿಂತ ಹೆಚ್ಚಿರುವುದನ್ನು ಮತ್ತು ಕಡಿಮೆಯಾಗುವದನ್ನು ಕೋಷ್ಟಕ ೫ ರಲ್ಲಿ ಗಮನಿಸಬಹುದು.

ಇದುವರೆಗೂ ಈ ತಂತ್ರಜ್ಞಾನ ಯಶಸ್ವಿಯಾಗಿ ಬಳಕೆಯಾಗಿದ್ದು, ಸಾವಿರಕ್ಕೂ ಹೆಚ್ಚು ರೈತರ ಕ್ಷೇತ್ರದಲ್ಲಿ ವಿಸ್ತರಣೆಯಾಗಿ ನಿಖರ ಕೃಷಿಯ ಬೆಳವಣಿಗೆಯಲ್ಲಿ (Precision Agriculture) ಒಂದು ಮೈಲಿಗಲ್ಲು ಸಾಧಿಸಿದೆ. ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಹಲವಾರು ರೈತರ ಕ್ಷೇತ್ರದಲ್ಲಿ ಆಗುವ

ಸರಾಸರಿ ಅನುಕೂಲಗಳನ್ನು ಕೋಷ್ಟಕ ೬ ರಲ್ಲಿ ಹೇಳಲಾಗಿದೆ (ಇದೇ ರೀತಿಯಾಗಿ ಚೌಧ್ರಿ ಮತ್ತು ಇತರರ, (೨೦೦೫) ಕಟ್ಟಳೆಯಲ್ಲಿ ಹೇಳಲಾಗಿದೆ) ಮತ್ತು ಕೆಲವು ರೈತರ ಪಟ್ಟಿಯನ್ನು ಕೋಷ್ಟಕ ೭ ರಲ್ಲಿ ನೀಡಲಾಗಿದೆ. ರವಿಕುಮಾರ, ತಂ/ನಾಗೇಶ್ವರ್‌ರಾವ, ಸಿಂಧನೂರು ಇವರು ಕರ್ನಾಟಕದಲ್ಲಿ ಪ್ರಥಮ ಬಾರಿಗೆ ೫೦% ಸಹಾಯಕ-ದರ(ಸಬ್ಸಿಡಿ)ದಲ್ಲಿ ಲೇಸರ್ ಲೇವಲರ್‌ನ್ನು ಖರೀದಿಸಿದ ರೈತ (ಮೊ.ನಂ.:೯೬೧೧೨೧೫೬೬೭) ರಾಗಿದ್ದು ಬಾಡಿಗೆ ರೂಪದಲ್ಲಿ ಸಾಕಷ್ಟು ಲಾಭ ಗಳಿಸಿದ್ದು ಖರೀದಿಸಲು ಆಸಕ್ತ ರೈತರು/ ಉದ್ಯಮಿಗಳು ಹೆಚ್ಚಿನ ವಿವರಗಳಿಗಾಗಿ ಇವರನ್ನು ಸಂಪರ್ಕಿಸಬಹುದಾಗಿದೆ.

ಕೋಷ್ಟಕ ೧. ೨೦೦೯-೧೦ ನೇ ಸಾಲಿನಲ್ಲಿ ಕೈಗೊಂಡ ಅಧ್ಯಯನದ ಫಲಿತಾಂಶಗಳು.

ವಿವರಗಳು	ಲೇಸರ್ ತಂತ್ರಜ್ಞಾನದಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ	ಸಾಂಪ್ರದಾಯಕ ಪದ್ಧತಿಯಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ
ಕ್ಷೇತ್ರದ ಉದ್ದ, ಮೀ.	೧೦೦	೧೦೦
ಕ್ಷೇತ್ರದ ಅಗಲ, ಮೀ.	೬೦	೬೦
ಕ್ಷೇತ್ರದ ವಿಸ್ತೀರ್ಣ, ಚದರ ಮೀ.	೬೦೦೦	೬೦೦೦
ಭೂ-ಅಭಿವೃದ್ಧಿಯ ಮೊದಲಿನ ವಿಚಲನ (SD), ಸೆಂ. ಮೀ.	೨೧.೪೭	೨೨.೬೩
ಭೂ-ಅಭಿವೃದ್ಧಿಯ ನಂತರದ ವಿಚಲನ (SD), ಸೆಂ. ಮೀ.	೩.೦೭	೧೨.೦೪

ಕೋಷ್ಟಕ ೨. ೨೦೧೦-೧೧ ನೇ ಸಾಲಿನಲ್ಲಿ ಕೈಗೊಂಡ ಅಧ್ಯಯನದ ಫಲಿತಾಂಶಗಳು.

ವಿವರಗಳು	ಲೇಸರ್ ತಂತ್ರಜ್ಞಾನದಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ	ಸಾಂಪ್ರದಾಯಕ ಪದ್ಧತಿಯಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ
ಕ್ಷೇತ್ರದ ಉದ್ದ, ಮೀ.	೯೦	೮೦
ಕ್ಷೇತ್ರದ ಅಗಲ, ಮೀ.	೭೦	೭೦
ಕ್ಷೇತ್ರದ ವಿಸ್ತೀರ್ಣ, ಚದರ ಮೀ.	೬೩೦೦	೫೬೦೦
ಭೂಮಿಯ ಎತ್ತರದ ವ್ಯಾಪ್ತಿ, ಸೆಂ. ಮೀ.	೨೧ ರಿಂದ -೨೪	೩೦.೪ ರಿಂದ -೫೬
ಭೂ-ಅಭಿವೃದ್ಧಿಯ ಮೊದಲಿನ ವಿಚಲನ (SD), ಸೆಂ. ಮೀ.	೧೧.೪೧	೧೪.೪೩
ಭೂ-ಅಭಿವೃದ್ಧಿಯ ನಂತರದ ವಿಚಲನ (SD), ಸೆಂ. ಮೀ.	೧.೪೩	೪.೬೩
ಭೂ-ಅಭಿವೃದ್ಧಿ ಮೊದಲಿನ ಲೇವಲಿಂಗ್ ಸೂಚ್ಯಾಂಕ, ಸೆಂ. ಮೀ.	೯.೬೭	೧೧.೬೯
ಭೂ-ಅಭಿವೃದ್ಧಿ ನಂತರದ ಲೇವಲಿಂಗ್ ಸೂಚ್ಯಾಂಕ, ಸೆಂ. ಮೀ.	೧.೨೨	೬.೬೯
ಕ್ಷೇತ್ರ ಸಾಮರ್ಥ್ಯ ಹೆಕ್ಟೆರ್/ಘಂಟೆ	೦.೦೭೮	೦.೦೮೬

ಕೋಷ್ಟಕ ೩. ೨೦೧೦-೧೧ ನೇ ಸಾಲಿನಲ್ಲಿ ಮಳೆಯ ನಂತರ ಮಣ್ಣಿನ ತೇವಾಂಶದ ಹಂಚಿಕೆ ಕೈಗೊಂಡ ಅಧ್ಯಯನದ ಫಲಿತಾಂಶಗಳು.

ವಿವರಗಳು	ಲೇಸರ್ ತಂತ್ರಜ್ಞಾನದಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ			ಸಾಂಪ್ರದಾಯಕ ಪದ್ಧತಿಯಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ		
	ಮೊದಲ ಮಳೆಯ ನಂತರ (೧೯ ಮಿ. ಮಿ.)	ಎರಡನೇ ಮಳೆಯ ನಂತರ (೭೦ ಮಿ. ಮಿ.)	ಸರಾಸರಿ	ಮೊದಲ ಮಳೆಯ ನಂತರ (೧೯ ಮಿ. ಮಿ.)	ಎರಡನೇ ಮಳೆಯ ನಂತರ (೭೦ ಮಿ. ಮಿ.)	ಸರಾಸರಿ
ಸರಾಸರಿ ತೇವಾಂಶ, %	೩೦.೬೪	೩೪.೨೬	-	೩೦.೩೪	೩೬.೬೦	-
ತೇವಾಂಶದ ವಿಚಲನೆ, %	೩.೭೩	೩.೩೨	೩.೫೩	೯.೧೧	೧೨.೩೫	೧೦.೭೩
ಮಣ್ಣಿನ ತೇವಾಂಶ ಹಂಚಿಕೆ, %	೯೨.೯	೯೪.೩೬	೯೩.೬೩	೭೫.೯	೭೨.೯೩	೭೪.೪೧

ಕೋಷ್ಟಕ ೪. ೨೦೧೧-೧೨ ನೇ ಸಾಲಿನಲ್ಲಿ ಭತ್ತದ ಗದ್ದೆಯಲ್ಲಿ ಕೈಗೊಂಡ ಅಧ್ಯಯನದ ಫಲಿತಾಂಶಗಳು

ವಿವರಗಳು	ಲೇಸರ್ ತಂತ್ರಜ್ಞಾನದಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ		ಸಾಂಪ್ರದಾಯಕ ಪದ್ಧತಿಯಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ	
	ಕ್ಷೇತ್ರ -I	ಕ್ಷೇತ್ರ -II	ಕ್ಷೇತ್ರ -I	ಕ್ಷೇತ್ರ -II
ಕ್ಷೇತ್ರದ ಉದ್ದ, ಮೀ	೬೦	೬೦	೬೦	೬೦
ಕ್ಷೇತ್ರದ ಅಗಲ, ಮೀ	೩೫	೩೦	೩೫	೩೦
ಕ್ಷೇತ್ರದ ವಿಸ್ತೀರ್ಣ, ಚದರ ಮೀ	೨೧೦೦	೧೮೦೦	೨೧೦೦	೧೮೦೦
ಭೂ-ಅಭಿವೃದ್ಧಿಯ ಮೊದಲಿನ ವಿಚಲನ (SD), ಸೆಂ. ಮೀ	೨೩.೯೭		೧೨.೧೮	
ಭೂ-ಅಭಿವೃದ್ಧಿಯ ನಂತರದ ವಿಚಲನ (SD), ಸೆಂ. ಮೀ	೧.೫೯		೭.೯೭	

ಕೊಷ್ಟಕ ೫. ಒಟ್ಟಾರೆಯಾಗಿ ಸಾಂಪ್ರದಾಯಕ ಮತ್ತು ಲೇಸರ್ ಲೇವಲಿಂಗ್ ಪದ್ಧತಿಗಳ ಅಧ್ಯಯನದ ತುಲನಾತ್ಮಕ ಹೋಲಿಕೆಯ ಫಲಿತಾಂಶಗಳು.

ವಿವರಗಳು	ಲೇಸರ್ ತಂತ್ರಜ್ಞಾನದಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ	ಸಾಂಪ್ರದಾಯಕ ಪದ್ಧತಿಯಿಂದ ಭೂ-ಅಭಿವೃದ್ಧಿಗೊಳಿಸಿದ ಕ್ಷೇತ್ರ
ತೇಕಡವಾರು ವಿಚಲನದ ಕ್ಷೀಣತೆ, %	೮೬.೬	೪೩.೪
ಭೂ-ಅಭಿವೃದ್ಧಿ ನಂತರದ ಸರಾಸರಿ ಲೇವಲಿಂಗ್ ಸೂಚ್ಯಾಂಕ, ಸೆಂ. ಮೀ	೧.೩	೧೧
ಸರಾಸರಿ ಮಣ್ಣಿನ ತೇವಾಂಶ ಹಂಚಿಕೆ, %	೯೩.೯೪	೭೭.೭
ಪ್ರತಿ ಹೆಕ್ಟರ್ ಗೆ ತಗುಲುವ ವೆಚ್ಚ, ರೂ.	೯೯೨೦	೬೧೨೩
ಪ್ರತಿ ಘಂಟೆಗೆ ತಗುಲುವ ವೆಚ್ಚ, ರೂ.	೭೪೫	೫೮೦
ಕ್ಷೇತ್ರ ಸಾಮರ್ಥ್ಯ, ಹೆಕ್ಟರ್/ಘಂಟೆ	೦.೦೭೫	೦.೦೯೫

ಕೋಷ್ಟಕ ೬. ಲೇಸರ್ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಅನೇಕ ರೈತರ ಕ್ಷೇತ್ರದಲ್ಲಿ ಆದ ಸರಾಸರಿ ಲಾಭಗಳು.

ವಿವರಗಳು	ಅಂಕಿಗಳು, %
ಬೇಸಾಯ ಕ್ಷೇತ್ರದ ಹೆಚ್ಚಳ	೩ ರಿಂದ ೫
ಗೊಬ್ಬರ ಬಳಕೆಯಲ್ಲಿ ಉಳಿತಾಯ	೨೫ ರಿಂದ ೩೦
ನೀರಾವರಿ ಸಮಯ ಮತ್ತು ನೀರಿನ ಉಳಿತಾಯ	೨೫ ರಿಂದ ೩೧
ಕೂಲಿ ಆಳುಗಳ ಉಳಿತಾಯ	೪೫ ರಿಂದ ೫೦
ಶಕ್ತಿಯ ಉಳಿತಾಯ	೩೦ ರಿಂದ ೪೦
ಇಳುವರಿ ಹೆಚ್ಚಳ	೨೫ ರಿಂದ ೩೫

ಕೋಷ್ಟಕ ೭. ಲೇಸರ್ ಲೆವಲಿಂಗ್ ತಂತ್ರಜ್ಞಾನ ಅಳವಡಿಸಿದ ರೈತರ ಮಾಹಿತಿ

ಕ್ರ. ಸ.	ರೈತರ ಹೆಸರು	ಊರು	ದೂರವಾಣಿ ಸಂ.	ವಿಸ್ತೀರ್ಣ, ಎಕರೆಗಳಲ್ಲಿ
೧	ಶ್ರೀ ವೆಂಕಟರೆಡ್ಡಿ,	ದೇವಪೂರ ಕ್ರಾಸ್, ತಾ॥ ಸುರಪೂರು	೯೪೪೪೨೬೨೬೬೬	೫೫
೨	ಶ್ರೀ ಹರಿಕೇಂದ್ರ ಪ್ರಸಾದ,	ದೇವಪೂರ ಕ್ರಾಸ್, ತಾ॥ ಸುರಪೂರು	೯೪೪೪೯೦೩೨೧೪೮	೩೦
೩	ಶ್ರೀ ಬಸವರಾಜಪ್ಪ	ಸಿದ್ದಾಪುರ ಜಿ,ರಾಯಚೂರು	೯೪೪೪೨೨೨೪೪೪೪	೨೫
೪	ಶ್ರೀ ಶ್ರೀನಾಥ್,	ದೇವಪೂರ ಕ್ರಾಸ್, ತಾ॥ ಸುರಪೂರು	೯೪೪೦೦೦೧೧೩೧	೨೦
೫	ಶ್ರೀ ಬಸುರಾಜ	ಪಟ್ಟನ, ಆಳಂದ, ಗುಲ್ಬರ್ಗ	೯೪೪೯೭೭೫೬೬೨	೩೦
೬	ಶ್ರೀ ಸುಧಾಕರ	ಚಳ್ಳೂರು ಕ್ಯಾಂಪ್, ಕಾರಟಗಿ ಹತ್ತಿರ, ಗಂಗಾವತಿ	೯೪೪೪೯೨೫೪೭೬	೧೨

೭	ಶೀ ಅಮ್ಮನರಾಜು	ಕಾರಟಗಿ ಹತ್ತಿರ, ರಾಯಚೂರು	□	೮
೮	ಚನ್ನನಗೌಡ	ಸಾಸಲ್ಮರಿ ಕ್ಯಾಂಪ್ ಕಾರಟಗಿ ಹತ್ತಿರ, ರಾಯಚೂರು	೯೯೦೧೫೫೮೯೬	೮
೯	ಶ್ರೀ ಹರಿಬಾಬು,	ಕಾರಟಗಿ, ರಾಯಚೂರು	೯೫೩೫೮೮೫೫೬೭	೭
೧೦	ಶ್ರೀ ವಿರುಪಾಕ್ಷಪ್ಪ	ಸಿರುಗುಪ್ಪ ಹತ್ತಿರ, ಬಳ್ಳಾರಿ	೯೯೭೨೭೦೨೮೭೦	೫
೧೧	ಶ್ರೀ ಕೆ. ರಾಮಬಾಬು	ಕಾರಟಗಿ ಹತ್ತಿರ, ರಾಯಚೂರು	□	೪
೧೨	ಶ್ರೀ.ಬಿ.ಮುರಳಿ	ಕಾರಟಗಿ, ಜಿ. ರಾಯಚೂರು	□	೪
೧೩	ಶ್ರೀ ದೊರೆ ಚೌದರಿ	ಆತನೂರು ಮಾನ್ವಿ ಕ್ಯಾಂಪ್, ರಾಯಚೂರು	೯೦೩೫೦೬೨೬೮೪೪	೪೦
೧೪	ಶ್ರೀ ರಾಮು,	ಸಾಸಲ್ಮರಿ ಕ್ಯಾಂಪ್, ಸಿಂದನೂರು,	೯೪೪೪೮೧೭೬೭೧೬	೭
೧೫	ಶ್ರೀ ಶ್ರೀಕಾಂತ	ಮುಕುಂದ, ಸಿರಗುಪ್ಪ	□	೫೦
೧೬	ಶ್ರೀ ಶ್ರೀನಿವಾಸ್	ಕೃಷ್ಣ ನಗರ ಸಿರಗುಪ್ಪ	□	೬೦
೧೭	ಶ್ರೀ ಕಿಶೋರ್ ರೆಡ್ಡಿ	ಹನುಮನಗರ, ಸಿಂಧನೂರು	೯೪೪೯೫೧೩೪೮೦	೪
೧೮	ಶ್ರೀ ನಾಗರಾಜ	ಗೋರಬಾಳ, ಸಿಂಧನೂರು	೯೭೪೨೮೪೪೪೬೬	೧೦
೧೯	ಶ್ರೀ ಪಟೇಲ್ಸಾಬ	ಹಟ್ಟಿ , ಸಿಂಧನೂರು	೯೦೦೮೮೪೩೧೫೬	೧೦
೨೦	ಶ್ರೀ ಲಿಂಗನಗೌಡ	ಸಾಸಲ್ಮರಿ ಸಿಂಧನೂರು	□	೫
೨೧	ಶ್ರೀ ವಿರುಪನಗೌಡ	ಸಾಸಲ್ಮರಿ ಸಿಂಧನೂರು	□	೬
೨೨	ಶ್ರೀ ಪಿ. ಸತ್ಯನಾರಯಣ	ಕಾರಟಗಿ, ಜಿ. ರಾಯಚೂರು	೮೧೨೩೬೩೪೩೭೭	೫೦
೨೩	ಶೀ ಗುರುನಾಥಗೌಡ	ನುಗಡೊಣಿ, ಮಾನ್ವಿ	೯೪೮೨೧೪೪೫೧೫೫	೧೬
೨೪	ಶೀ ವಿಶ್ವನಾಥಗೌಡ	ಹರವಿ, ಮಾನ್ವಿ	೯೮೪೪೪೪೮೬೩೯	೩
೨೫	ಶೀ ವಿನಯಕುಮಾರ	ಹರವಿ, ಮಾನ್ವಿ	೯೯೮೬೫೧೮೨೭೪	೩
೨೬	ಶ್ರೀ ರಾಮಕೃಷ್ಣ	ಡ್ಯಾಡಿ ಕಾಲೊನಿ, ರಾಯಚೂರು	೯೯೦೧೩೨೫೪೦೩	೩೦
೨೭	ಶ್ರೀ ಸಿ. ಎಚ್. ಶ್ರೀನಿವಾಸ	ವಿಜಯನಗರ ಕ್ಯಾಂಪ್, ಕಲ್ಮಾಲ	೯೯೭೨೩೨೪೯೫೫೭	೨೩
೨೮	ಶ್ರೀ ಡಿ. ರವಿ	ಕಾಡ್ಲೂರು, ರಾಯಚೂರು	□	೮
೨೯	ಶ್ರೀ ಮುರಳಿ	ನಡವಿ, ಸಿರಗುಪ್ಪ	೯೯೦೦೬೪೯೭೧೨	೧೦
೩೦	ಶ್ರೀ ಸಿ. ಇಚ್. ರಾಮಕೃಷ್ಣ	ಗಂಗಾನಗರ ಕ್ಯಂಪ್, ಕವಿತಾಳ	೯೯೦೦೪೯೦೪೦೭	೧೦
೩೧	ಶ್ರೀ ರವಿಕುಮಾರ	ಬೆಂಡೆಗಮ್ಮುಲ, ಗೂಗಲ್, ರಾಯಚೂರು	೮೧೯೭೯೦೩೭೧೦	೮೦
೩೨	ಶ್ರೀ ವಸರತಗೌಡ	ಸಿರಿಗೇರಿ, ಸಿರಗುಪ್ಪ	□	೧೫
೩೩	ಶ್ರೀ ಸತ್ಯನಾರಯಣ	ಮಂದಕಲ್ ಕ್ರಾಸ್, ಗಬ್ಬೂರು	೯೪೪೮೬೪೧೮೬೮೬	೯೦
೩೪	ಶ್ರೀ ಬಸನಗೌಡ	ನುಗಡೊಣಿ, ಮಾನ್ವಿ	೯೪೮೦೩೦೩೫೫೫	೮
೩೫	ಶ್ರೀ ಪ್ರಸಾದ	ಸಾಸಲ್ಮರಿ, ಸಿಂಧನೂರು	೯೯೦೦೩೩೭೮೫೬	೫
೩೬	ಶ್ರೀ ಅಮರೇಗೌಡ	ಕಾಡಗುಂದ, ಸಿಂಧನೂರು	೯೯೦೧೪೩೩೧೭೬೮	೧೫
೩೭	ಶ್ರೀ ಸತ್ಯನಾರಯಣ	ನಡವಿ, ಸಿರಗುಪ್ಪ	೯೪೪೯೧೩೫೦೩೫	೨೦
೩೮	ಶ್ರೀ ಕೃಷ್ಣರೆಡ್ಡಿ	ಹನುಮನಗರ ಕ್ಯಾಂಪ್	೯೪೮೨೩೭೮೪೧೩೪	೮
೩೯	ಶ್ರೀ ಸುರ್ಯನಾರಯಣ	ತುರುವಿಹಾಳ, ಗುಂಜಳ್ಳಿ ಕ್ಯಾಂಪ್, ಸಿಂಧನೂರು	೯೪೪೮೭೯೯೮೮೭೨	೧೫
೪೦	ಶ್ರೀ ರುದ್ರಪ್ಪಗೌಡ	ವೀರುಪಾಪುರ, ಗಂಗಾವತಿ	೯೪೪೯೫೫೧೫೯೨೨	೮
೪೧	ಶ್ರೀ ಶ್ರೀಕಾಂತ ರೆಡ್ಡಿ,	ಮುಕುಂದ, ಗಂಗಾವತಿ	೯೪೪೮೮೩೦೩೭೮೮	೪೮
೪೨	ಶ್ರೀ ಶ್ರೀನಿವಾಸ ರಾವ್	ಕೃಷ್ಣನಗರ,ಬಳ್ಳಾರಿ	೯೮೮೦೧೦೧೨೨೩	೩೦
೪೩	ಶ್ರೀ ಬಂಡಿ ಶ್ರೀನಿವಾಸ	ಕೃಷ್ಣನಗರ,ಬಳ್ಳಾರಿ	೯೯೦೨೩೯೭೭೭೭	೨೫
೪೪	ಶ್ರೀ ಬಸವರಾಜ ಪೋಲಿಸ್ ಪಾಟೀಲ್	ಕೃಷ್ಣನಗರ,ಬಳ್ಳಾರಿ	೯೮೮೦೮೩೩೯೭೫	೨

೪೫	ಶ್ರೀ ಜಿ.ಹರಿಬಾಬು	ಕೃಷ್ಣನಗರ,ಬಳ್ಳಾರಿ	೮೦೯೫೯೩೨೬೭೦	೫
೪೬	ಶ್ರೀ ವೆಂಕಟರಾವ್	ಕೃಷ್ಣನಗರ,ಬಳ್ಳಾರಿ	೯೪೪೮೩೪೧೨೭೮	೨೮
೪೭	ಶ್ರೀ ಜಿ. ರಾಮಕೃಷ್ಣ	ಕೃಷ್ಣನಗರ,ಬಳ್ಳಾರಿ	೯೬೬೩೬೧೦೩೩೩	೮
೪೮	ಶ್ರೀ ಸೂರ್ಯಪ್ರಕಾಶ	ಕೃಷ್ಣನಗರ,ಬಳ್ಳಾರಿ	೮೧೦೫೫೯೬೮೫೯	೧೨
೪೯	ಶ್ರೀ ಮದುಸುಧನ	ಮುಕುಂದ	೯೫೫೮೪೧೪೫೮೪೪೪	೪೨
೫೦	ಶ್ರೀ ಮಹಾದೇವ ಸುಬೇದಾರ	ಚೆಳ್ಳುರು ಕ್ಯಾಂಪ್	೯೬೬೩೨೨೭೬೬೨	೮
೫೧	ಶ್ರೀ ರಾಮರಾವ್	ಗುಲ್ಯಾಳ, ಸುರಪೂರು	೮೭೨೨೦೯೭೭೭೩	೫೦
೫೨	ಶ್ರೀ ವಾಸು	ನಡವಿ, ಸಿಂಧನೂರು	□	೩೦
೫೩	ಶ್ರೀ ಶರಣಪ್ಪ	ರೌಡಕುಂದ, ಸಿಂಧನೂರು	೯೯೦೧೪೯೩೬೦೩	೧೬
೫೪	ಶ್ರೀ ಶರಣಪ್ಪಗೌಡ	ಹಂಚಿನಾಳ ಕ್ಯಾಂಪ್, ಸಿಂಧನೂರು	□	೬
೫೫	ಶ್ರೀ ಸತ್ಯನಾರಯಣ	ಸಿರಗುಪ್ಪ,	□	೨೨
೫೬	ಶ್ರೀ ಶ್ರೀನಿವಾಸ.ಎಂ	ಚೆಳ್ಳುರು ಕ್ಯಾಂಪ್	೯೮೪೫೪೪೦೮೮೧	೨
೫೭	ಶ್ರೀ ಸುನಿಲಗೌಡ	ಸಿರವಾರ	೯೯೦೨೦೯೨೭೨೪	೨೦
೫೮	ಶ್ರೀ ರವಿ	ನಿಲಗಲ್ ಕ್ರಾಸ್, ನಿಲಗಲ್,	೯೯೭೨೪೮೦೮೮೮	೬
೫೯	ಶ್ರೀ ಕಲ್ಯಾಣ	ನಿಲಗಲ್ ಕ್ರಾಸ್, ನಿಲಗಲ್, ಮಾನ್ವಿ	೯೯೭೨೪೮೦೮೮೮	೨

ತೀರ್ಮಾನಗಳು: ಕೃಷಿಯಲ್ಲಿ ಸಾಂಪ್ರದಾಯಕ ಪದ್ಧತಿಗಳ ಲೋಪದೋಷಗಳನ್ನು ಸರಿಪಡಿಸಿ, ಸುಸ್ಥಿರ ಕೃಷಿಗೆ ಆಧುನಿಕ ಮತ್ತು ನಿಖರವಾದ ಲೇಸರ್ ಲೆವಲಿಂಗ್ ತಂತ್ರಜ್ಞಾನದ ಪ್ರಯೋಜನವನ್ನು ಉತ್ತರ ಭಾರತದ ಪಂಜಾಬ, ಹರಿಯಾಣ ಮತ್ತು ಉತ್ತರಪ್ರದೇಶ ರಾಜ್ಯಗಳ ರೈತರು ಪಡೆದುಕೊಂಡಿದ್ದಾರೆ. ಪಂಜಾಬದಲ್ಲಿ ೯೦೦೦ ಕ್ಕಿಂತಲೂ ಹೆಚ್ಚು ಲೇಸರ್ ಲೇವಲರ್‌ಗಳಿದ್ದು, ಕರ್ನಾಟಕದಲ್ಲಿ ಕೇವಲ ೨೦ ಕ್ಕಿಂತ ಕಡಿಮೆ ಲೇಸರ್ ಲೇವಲರ್‌ಗಳಿವೆ. ಈ ದಿಶೆಯಲ್ಲಿ ಸರ್ಕಾರ ಮತ್ತು ಕೃಷಿ ಇಲಾಖೆ ಈ ಲೇಸರ್ ತಂತ್ರಜ್ಞಾನದ ಬಳಕೆಯಲ್ಲಿ ವಿಶೇಷ ಮುತುವರ್ಜಿ ವಹಿಸಿ ಲೇಸರ್ ಲೆವಲಿಂಗ್" ನಿಂದಾಗುವ ಲಾಭಗಳಾದ ಬೇಸಾಯಕ್ಕೆ ಕ್ಷೇತ್ರದ ಹೆಚ್ಚಳ, ಸರಳವಾಗಿ ನೀರುಣಿಸುವಿಕೆ, ಕಡಿಮೆ ನೀರಿನ ಬಳಕೆ, ಅತೀ ನೀರಾವರಿಯಿಂದಾಗುವ ಸವಳು, ಜವಳು, ಮಣ್ಣು ಸವಕಳಿ ಸಮಸ್ಯೆಗಳ ನಿರ್ಮೂಲನೆ, ಹೆಚ್ಚಿನ ನೀರಾವರಿ ಕ್ಷಮತೆ ಹಾಗೂ ನೀರಿನ ಉತ್ಪಾದಕತೆ, ಹೆಚ್ಚಿನ ಪೋಷಕಾಂಶಗಳ ಬಳಕೆ ಸಾಮರ್ಥ್ಯ, ಹೆಚ್ಚಿನ ಇಳುವರಿ, ಕೃಷಿಯಲ್ಲಿ ಆಳುಗಳ ಉಳಿತಾಯ, ಇಂಧನ ಮತ್ತು ಶಕ್ತಿಯ ಉಳಿತಾಯ ಮತ್ತು ಇನ್ನಿತರ ನಿಖರ ಕೃಷಿಯ ಲಾಭಗಳನ್ನು ಪಡೆದು ರಾಜ್ಯಾದ್ಯಂತ ಈ ಲೇಸರ್ ತಂತ್ರಜ್ಞಾನದ ಕ್ರಾಂತಿಯನ್ನು ಪಸರಿಸಬೇಕಾಗಿದೆ.

ಉಲ್ಲೇಖಗಳು:

Agarwal, M.C. and Goel, A.C., 1981, Effect of field levelling quality on irrigation efficiency and crop yield. Agricultural Water Management, 4: 457–464.

Chaudhuri, D., Mathankar, S.K., Singh, V.V. and Shirsat, N.A., 2005, Laser guided land levelling for rice crop production. Paper presented in the 39th annual convention of ISAE held at Acharya N.G. Ranga Agricultural University, Hyderabad, 9–11, March.

Cook, R.L. and Peikert, F.W., 1960. A comparison of tillage implement. The Journal of American Society of Agricultural Engineers, Vol. 31, 211–214.

Michael, A. M., 2011, Irrigation Theory and practice, second edition, Vikas publishing House Pvt. Ltd., Noida-201301 (UP), India, pp: 398-399.

Rickman, J.F., 2002, "Manual for laser land leveling". Rice-Wheat Consortium Technical

Bulletin Series 5. New Delhi–110 012, India: Rice-Wheat Consortium for the Indo- Gangetic plains, p. 24.

ಅಳವಿನಂಚಿನಲ್ಲಿರುವ ಮರದ ವಿಶಿಷ್ಟ ಗುರುತ್ವದ ಮೇಲೆ ತೊಂದರೆ ಪ್ರಭಾವ

ಬಿ. ತಾಂಬಟ್, ಎಸ್ ರಾಜಶೇಖರಮೂರ್ತಿ ಮತ್ತು ಎಮ್. ಮಹಾದೇವ ಮೂರ್ತಿ

ಬೆಳ ಶರೀರ ಕ್ರಿಯಾಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, (ಕೃ,ವಿ.ವಿ.ಬೆಂ.), ಹಾಸನ, ಅರಣ್ಯಶಾಸ್ತ್ರ ಹಾಗೂ ಪರಿಸರ ವಿಜ್ಞಾನ ವಿಭಾಗ, ಜಿ.ಕೆ.ವಿ.ಕೆ., ಕೃ,ವಿ.ವಿ., ಬೆಂಗಳೂರು, ಕರ್ನಾಟಕ.

ಜಿಮ್ನಾಕ್ರಾಂತರ ಕೆನಾರಿಕಾ (ಪಿಂಡಿಕಾಯಿ) ಪಶ್ಚಿಮ ಘಟ್ಟಕ್ಕೆ ಸಿಮಿತವಾಗಿರುವ ಮತ್ತು ಅಳಿವಿನಂಚಿನಲ್ಲಿರುವ ಒಂದು ಜಾತಿಯ ವಿಶಿಷ್ಟ ಮರ. ಇದು ಮಿರಿಸ್ಟಿಕಾ ಜೌಗು ಪ್ರದೇಶದಲ್ಲಿ ಕಾಣಸಿಗುತ್ತದೆ. ಈ ಜೌಗು ಪ್ರದೇಶ ಅಡಿಕೆ, ಭತ್ತ, ಇತ್ಯಾದಿ ವಾಣಿಜ್ಯ ಬೆಳೆಗಳಿಗೆ ಸೂಕ್ತ ತಾಣವಾದದ್ದರಿಂದ ಅತಿಕ್ರಮಣ ಹಾಗೂ ತೊಂದರೆ ಅನುಭವಿಸುತ್ತಿದೆ. ಇದರಿಂದಾಗಿ ಈ ಪ್ರದೇಶದಲ್ಲಿ ಬೆಳೆಯುವ ಜಿಮ್ನಾಕ್ರಾಂತರ ಕೆನಾರಿಕಾ ಮರದ ಅಳಿವು-ಉಳಿವು ಪ್ರಶ್ನೇ ಉದ್ಭವಿಸಿದೆ. ನಾವು ಈ ಮರದ ವಿಶಿಷ್ಟ ಗುರುತ್ವದ ಮೇಲೆ ಆಗುವ ತೊಂದರೆ ಪ್ರಭಾವನ್ನು ತಿಳಿಯಲು ಒಂದು ಅಧ್ಯಯನವನ್ನು ನಡೆಸಿದೆವು. ವಿಶಿಷ್ಟ ಗುರುತ್ವ ಮರದ ಮುಖ್ಯ ದೈಹಿಕ ಲಕ್ಷಣವಾಗಿದೆ. ಮರದ ಶಕ್ತಿ, ಯಾಂತ್ರಿಕ

ಗುಣ, ಠೀವಿ ಇತ್ಯಾದಿ ವಿಶಿಷ್ಟ ಗುರುತ್ವದಜೊತೆ ನಿಕಟವಾದ ಸಂಬಂಧ ಹೊಂದಿರುತ್ತವೆ. ಪಶ್ಚಿಮ ಘಟ್ಟದ ಕ್ಷೇತ್ರ ಸಮೀಕ್ಷೆ ಮೂಲಕ ಆರು ಸ್ಥಳಗಳನ್ನು ಆಯ್ಕೇ ಮಾಡಲಾಯಿತು. ಅವುಗಳೆಂದರೆ ಮಾಕುಟ್ಟ, ಸಂಪಾಜೆ, ಕತ್ತಲೆಕಾನ್, ತೋರ್ಮೆ, ದರ್ಬೆಜಡ್ಡಿ ಹಾಗು ಐತಾಳಿಮನೆ. ನಂತರ 17 ನಿಯತಾಂಕಗಳನ್ನು ಆಧರಿಸಿ ಜೌಗು ಪ್ರದೇಶಗಳನ್ನು ಕಡಿಮೆ ಹಾಗೂ ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳೆಂದು ವಿಂಗಡಿಸಲಾಯಿತು. ಪ್ರತಿ ಸ್ಥಳದಲ್ಲಿ ಎರಡು ರೀತಿಯ ಜೌಗು ಪ್ರದೇಶಗಳನ್ನು ಗುರುತಿಸಲಾಯಿತು. ಇನ್ಕ್ರಿಮೆಂಟ್ ಬೊರರ್ (ಕೊರೆಯುವ ಸಾಧನ) ಬಳಸಿ ಮರದ ಕೋರ್ ಮಾದರಿಯನ್ನು ಸಂಗ್ರಹಿಸಲಾಯಿತು. ಗರಿಷ್ಟ ತೇಪಾಂಶ ವಿಧಾನ ಅಳವಡಿಸಿ ಕೋರ್ ಮಾದರಿಯ ವಿಶಿಷ್ಟ ಗುರುತ್ವವನ್ನು ಕಂಡು ಹಿಡಿಯಲಾಯಿತು. ಜಿಮ್ಮಾಕ್ರಾಂತರ ಕೆನಾರಿಕಾ ಮರದ ಮಾದರಿ ವಿಶಿಷ್ಟ ಗುರುತ್ವ 0.339 ರಿಂದ 0.478 ರಷ್ಟಿದೆ. ವಿಶಿಷ್ಟ ಗುರುತ್ವದ ಸರಾಸರಿ ಅಂಕೆ ಅಂಶ ಕಡಿಮೆ (0.462±0.06) ತೊಂದರೆ ಅನುಭವಿಸುತ್ತಿರುವ ಪ್ರದೇಶಗಳಲ್ಲಿ ಹೆಚ್ಚಿದ್ದು ಮತ್ತು ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳಲ್ಲಿ ಕಮ್ಮಿಯಾಗಿತ್ತು (0.424±0.06). ಎರಡು ಪ್ರದೇಶಗಳನ್ನು ಹೋಲಿಸಿ ನೊಡಿದರೆ, ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶದಲ್ಲಿ ವಿಶಿಷ್ಟ ಗುರುತ್ವ ಕಡಿಮಿಯಾಗುತ್ತಿದೆ ಮತ್ತು ಆರರಲ್ಲಿ ಎರಡು ಪ್ರದೇಶದಲ್ಲಿ (ಸಂಪಾಜೆ ಮತ್ತು ತೋರ್ಮೆ) ತೊಂದರೆಯ ಪ್ರಭಾವದಿಂದ ಮರದ ವಿಶಿಷ್ಟ ಗುರುತ್ವ ಸಂಖ್ಯಾಶಾಸ್ತ್ರೀಯವಾಗಿ ಗಣನೀಯ ಪ್ರಮಾಣದಲ್ಲಿ ಕಡಿಮಿಯಾಗಿದೆ ಎಂಬ ವಿಷಯ ಮನದಟ್ಟಗುತ್ತದೆ. ಮರದ ವಿಶಿಷ್ಟ ಗುರುತ್ವದ ಮೌಲ್ಯಗಳನ್ನು ಆವರ್ತನ ಹಂಚಿಕೆ ಮಾಡಿ ನೊಡಿದಾಗ ಕಡಿಮೆ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳ ಮೌಲ್ಯಗಳು ಧನಾತ್ಮಾಕ ಹಂಚಿಕೆ ತೊರಿದರೆ, ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳಲ್ಲಿನ ಮೌಲ್ಯಾಗಳು ಋಣಾತ್ಮಕ ಹಂಚಿಕೆಯನ್ನು ತೊರಿದವು. ಈ ಎಲ್ಲ ವಿಚಾರಗಳು ಪ್ರದೇಶಕ್ಕೆ ಆಗುವ ತೊಂದರೆಯ ಪ್ರಭಾವದಿಂದ ಮರದ ವಿಶಿಷ್ಟ ಗುರುತ್ವದಲ್ಲಿ ಗಣನೀಯ ಪ್ರಮಾಣದ ಕಡಿತವಾಗುತ್ತದೆ ಎಂದು ಸೂಚಿಸುತ್ತೆವೆ.

ಪರಿಚಯ: ಭಾರತದ ಪಶ್ಚಿಮ ಘಟ್ಟವು ವಿಶ್ವದ್ದಾದ್ಯಾಂತ ಜೀವ ವೈವಿಧ್ಯತೆಯ ತಾಣವೆಂದು ಹೆಸರು ವಾಸಿಯಾಗಿದೆ. ಅಂತಹ ಘಟ್ಟ ಪ್ರದೇಶ ಮಿರಿಸ್ಟಿಕ ಜೌಗು ಎಂಬ ಅನನ್ಯ ಪರಿಸರ ವ್ಯಾವೆಸ್ಥೆ ಇದೆ. ಈ ಮಿರಿಸ್ಟಿಕ ಜೌಗ ಪ್ರದೇಶ ಸಿಹಿ ನೀರಿನ ಜೌಗು ಪ್ರದೇಶಗಳ ವರ್ಗಕ್ಕೆ ಸೇರಿದ್ದು ಹೆಚ್ಚಾಗಿ ಮಿರಿಸ್ಟಿಕ ಕುಟುಂಬ ವರ್ಗದ ಸದಸ್ಯರಿಂದ ಆವರಿಸಿಕೊಂಡಿದೆ. ಜೊತೆಗೆ ಈ ಮಿರಿಸ್ಟಿಕ ಜೌಗು ಪ್ರದೇಶ ಅಪಾರ ಪ್ರಮಾಣದಲ್ಲಿ ಅಪರೂಪದ, ಸ್ಥಳಿಯ, ಆರ್ಥಿಕವಾಗಿ ಉಪಯೋಗ ಹೊಂದಿರುವ ಹಾಗೂ ಅಪಾಯದ ಅಂಚಿನಲ್ಲಿರುವ ಸಸ್ಯ ಸಂಕುಲವನ್ನು ಸಹ ಹೊಂದಿದೆ. ಹಾಗಾಗಿ ತಳಿಗಳ ಸಂರಕ್ಷಣೆಗಾಗಿ ಹೆಚ್ಚಿನ ಆದ್ಯತೆಗೆ ಅರ್ಹವಾಗಿರುವ ಒಂದು ವಿಶಿಷ್ಟ ತಾಣ. ಮಿರಿಸ್ಟಿಕ ಜೌಗು ಪ್ರದೇಶ ಪಶ್ಚಿಮ ಘಟ್ಟಗಳ ಉದ್ಭಸುವ ಮುಂಚೆಯಿಂದಲೂ ಇವೆ ಮತ್ತು ವಾಸ್ತವವಾಗಿ ಜೀವಂತ ಪಳೀಯುಳಿಕೆಯಾಗಿ ಗೊಚರಿಸುತ್ತವೆ ಎಂದು ಕೆಲ ವಿಜ್ಞಾನಿಗಳ ಅನಿಸಿಕೆ. ಅತೆಯೇ ಇತ್ತಿಚಿನ ದಿನಗಳಲ್ಲಿ ಈ ಪ್ರದೇಶ ಜೀವಶಾಸ್ತ್ರಜ್ಞರಲ್ಲಿ ಹೆಚ್ಚಿನ ಆಸಕ್ತಿ ಮೂಡಿಸಿದೆ.

ಮಿರಿಸ್ಟಿಕ ಜೌಗು ಹೆಸರು ಸೂಚಿಸಿದಂತೆ ಮಿರಿಸ್ಟಿಕ ಸಸ್ಯ ಕುಟುಂಬಗಳಿಂದ ಆವರಿಸಿಕೊಂಡಿದೆ. ಅದರಲ್ಲೂ ಸಹ ಜಿಮ್ಮಾಕ್ರಾಂತೆರ ಕೆನಾರಿಕಾ (ಪಿಂಡಿಕಾಯಿ) ಎಂಬ ವಿಶೇಷ ಮರದ ವಾಸಸ್ಥಾನವಾಗಿದೆ. ಈ ಜಾತಿಯ ಮರ ಮಿರಿಸ್ಟಿಕ ಜೌಗು ಪ್ರದೇಶ ಬಿಟ್ಟು ಬೆರೆಲ್ಲೂ ಕಾಣಿಸಿಗದು. ಜೂತೆಗೆ ಜೌಗು ಪ್ರದೇಶಕ್ಕೆ ಹೊಂದಿಕೊಂಡು ಹೊಗುವ ಹಾಗೆ ಹಲವಾರು ರಚನಾತ್ಮಕ ಮತ್ತು ಶಾರೀರಿಕ ಮಾರ್ಪಾಟನ್ನು ಹೊಂದಿವೆ. ಮಿರಿಸ್ಟಿಕ ಜೌಗು ಪ್ರದೇಶ ಅಡಿಕೆ, ಭತ್ತ ಮತ್ತು ಇತರೆ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಸೂಕ್ತವಾಗಿರುವ ತಾಣವಾಗಿರುವುದರಿಂದ. ಇತ್ತೀಚಿನ ದಿನಗಳಲ್ಲಿ ಪಶ್ಚಿಮ ಘಟ್ಟದಲ್ಲಿ ವಿಶಿಷ್ಟ ಸ್ಥಾನಹೋದಿರುವ ಈ ಮಿರಿಸ್ಟಿಕ ಜೌಗು ಪ್ರದೇಶ ಅತಿಕ್ರಮಣ ಹಾಗೂ ಇನ್ನಿತರ ತೊಂದರೆ ಅನುಭವಿಸುತ್ತಿದೆ. ಇದರಿಂದಾಗಿ ಈ ಪ್ರದೇಶಕ್ಕೆ ಸೀಮಿತವಾಗಿರುವ ಜಿಮ್ಮಾಕ್ರಾಂತೆರ ಕೆನಾರಿಕಾ ಮರದ ಅಳಿವು-ಉಳಿವಿನ ಪ್ರಶ್ನೆ ಉದ್ಭವಿಸಿದೆ. ಜಿಮ್ಮಾಕ್ರಾಂತೆರ ಕೆನಾರಿಕಾ ಪಶ್ಚಿಮ ಘಟ್ಟಕ್ಕೆ ಸೀಮಿತವಾಗಿರುವ ಅಪರೂಪದ, ಸ್ಥಳಿಯ ಮತ್ತು ಅಳಿವಿನಂಚಿನಲ್ಲಿರುವ ಮರ. ಮಿರಿಸ್ಟಿಕ ಜೌಗು ಪ್ರದೇಶಕ್ಕಾಗುವ ತೊಂದರೆದಿಂದ ಮರದ ಬೆಳವಣಿಗೆ, ಶಕ್ತಿ, ಯಾಂತ್ರಿಕ ಗುಣ, ಠೀವಿ ಇತ್ಯಾದಿಗಳಿಗೆ ಸಂಬಂಧ ಹೊಂದಿರುವ ಮತ್ತು ಮರದ ಮುಖ್ಯ ದೈಹಿಕ ಲಕ್ಷಣವಾಗಿರುವ 'ವಿಶಿಷ್ಟ ಗುರುತ್ವ' ಅದರ ಮೇಲಾಗುವ ತೊಂದರೆ ಪ್ರಭಾವವನ್ನು ತಿಳಿಯಲು ಒಂದು ಅಧ್ಯಯನವನ್ನು ನಡೆಸಿದೆವು.

ವಸ್ತುಗಳು ಮತ್ತು ವಿಧಾನ: ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿರುವ ಪಶ್ಚಿಮ ಘಟ್ಟದ ಕ್ಷೇತ್ರ ಸಮೀಕ್ಷೆ ನಡೆಸುವ ಮೂಲಕ ಆರು ಸ್ಥಳಗಳನ್ನು ಆಯ್ಕೆ ಮಾಡಲಾಯಿತು. ಅವುಗಳೆಂದರೇ ಮಾಕುಟ್ಟ, ಸಂಪಾಜೆ, ಕತ್ತಲೆಕಾನ, ತೋರ್ಮೆ, ದೆರ್ಬೆಜಡ್ಡಿ ಮತ್ತು ಐತಾಳಿಮನೆ (ಕೊಡಗು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ). ಪ್ರತಿ ಕ್ಷೇತ್ರದ ಸಮೀಕ್ಷೆ ನಡೆಸಿ ಜಾಗರೂಕತೆಯಿಂದ ಸೂಕ್ತ ಜೌಗು ಪ್ರದೇಶವನ್ನು ಆಯ್ಕೆ ಮಾಡಲಾಯಿತು. ಒತ್ತಡ ಹಾಗೂ ತೊಂದರೆಯ ಪ್ರಮಾಣದ ಮೆರೆಗೆ ತಾಂಬಟ್ ಮತ್ತು ಇತರರು (2012) ವಿವರಿಸಿರುವ ವಿಧಾನವನ್ನು ಅಳವಡಿಸಿಕೊಂಡಿಂಡು ಜೌಗು ಪ್ರದೇಶಗಳನ್ನು ಕಡಿಮೆ ಹಾಗೂ ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳೆಂದು ವಿಂಗಡಿಸಲಾಯಿತು. ಪ್ರತಿ ಸ್ಥಳದಲ್ಲಿ ಕಡಿಮೆ ಹಾಗೂ ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಒರದೊಂದು ಜೌಗು ಪ್ರದೇಶಗಳನ್ನು ಗುರುತಿಸಿ ಆಯ್ಕೇಮಾಡಲಾಯಿತು. ನಂತರ, ಇನ್ಕ್ರಿಮೆಂಟ್ ಬೊರರ್ (ಕೊರೆಯುವ ಸಾಧನ) ಬಳಸಿ ಮರದ ಕೋರ್ ಮಾದರಿಯನ್ನು ಸಂಗ್ರಹಿಸಲಾಯಿತು. ಪ್ರತಿ ಜೌಗು ಪ್ರದೇಶದಿಂದ ಮೂರು ಮರ ಪ್ರತಿನ್ನು (3 ರೆಪ್ಲಿಕೇಶನ್) ಮತ್ತು ಪ್ರತಿ ಮರದಿಂದ ಎರಡು ಕೋರನ್ನು (ವಿರುದ್ಧ ದಿಕ್ಕಿನಲ್ಲಿ) ಸಂಗ್ರಹಿಸಲಾಯಿತು. ಸ್ಕಿಥ್‌ರವರ (1954) ಗರಿಷ್ಟ ತೇವಾಂಶ ವಿಧಾನ ಅಳವಡಿಸಿ ಕೋರ್ ಮಾದರಿಯ ವಿಶಿಷ್ಟ ಗುರುತ್ವವನ್ನು ಕಂಡು ಹಿಡಿಯಲಾಯಿತು.

ವ್ಲಿಶ್ಲೇಷಣೆ

ಸರಾಸರಿ ವಿಶಿಷ್ಟ ಗುರುತ್ವ: ಆರು ಪ್ರದೇಶಗಳ ಜಿಮ್ಮಾಕ್ರಾಂತೆರ ಕೆನಾರಿಕಾ ಮರದ ಕೋರ್ ಮಾದರಿಯನ್ನು ಪ್ರಯೋಗಲಾಯಕ್ಕೆ ತಂದು ಗರಿಷ್ಟ ತೇವಾಂಶ ವಿಧಾನ ಅಳವಡಿಸಿ ವಿಶಿಷ್ಟ ಗುರುತ್ವವನ್ನು ಕಂಡುಹಿಡಿಯಲಾಯಿತು. ಒಟ್ಟು 36 ಮರಗಳಿಂದ ಕೋರ್ ಸಂಗ್ರಹಿಸಲಾಯಿತು (6X3X2=36; 6 ಪ್ರದೇಶ, 3 ಪ್ರತಿಗಳು ಮತ್ತು 2 ವರ್ಗ [ಕಡಿಮೆ ಮತ್ತು ಹೆಚ್ಚಿನ ತೊಂದರೆ]). ಮೊದಲು ಪ್ರತಿ ಜೌಗು ಪ್ರದೇಶದಲ್ಲಿ

ಬರುವ ವಿಶಿಷ್ಟ ಗುರುತ್ವದ ಮೌಲ್ಯಗಳನ್ನು ಒಟ್ಟುಗುಡಿಸಿ ಸರಾಸರಿ ವಿಶಿಷ್ಟ ಗುರುತ್ವವನ್ನು ಕಂಡುಹಿಡಿದಯಲಾಯಿತು. ಮತ್ತು ಆ ಪ್ರದೇಶದಲ್ಲಿರುವ ಕಡಿಮೆ ಮತ್ತು ಹೆಚ್ಚಿನ ತೊಂದರೆ ವರ್ಗಗಳ ಮಧ್ಯ ಸಂಖ್ಯಾಶಾಸ್ತ್ರೀಯವಾಗಿ ವಿದ್ಯಾರ್ಥಿ 'ಟಿ ಪರೀಕ್ಷೆ' ಮೂಲಕ ತುಲನೆ ಮಾಡಲಾಯಿತು. ಆನಂತರ, ಪ್ರತಿ ವರ್ಗದಲ್ಲಿ ಬರುವ ವಿಶಿಷ್ಟ ಗುರುತ್ವದ ಮೌಲ್ಯಗಳನ್ನು ಒಟ್ಟುಗುಡಿಸಿ ಸರಾಸರಿ ವಿಶಿಷ್ಟ ಗುರುತ್ವವನ್ನು ಕಂಡುಹಿಡಿಯಲಾಯಿತು. ಆನಂತರ ಕಡಿಮೆ ಮತ್ತು ಹೆಚ್ಚಿನ ತೊಂದರೆ ಪ್ರದೇಶಗಳ ಸರಾಸರಿ ಮೌಲ್ಯಗಳನ್ನು ಸಂಖ್ಯಾಶಾಸ್ತ್ರೀಯವಾಗಿ ವಿದ್ಯಾರ್ಥಿ 'ಟಿ ಪರೀಕ್ಷೆ' ಮೂಲಕ ತುಲನೆ ಮಾಡಲಾಯಿತು (ಸ್ನೇಡೆಕೊರ್ ಮತ್ತು ಕಾಕ್‌ರಾನ್, 1967).

ವಿಶಿಷ್ಟ ಗುರುತ್ವದ ಮೌಲ್ಯಗಳ ಆವರ್ತನ ಹಂಚಿಕೆ: ಮೊದಲು ಪ್ರತಿ ಜೌಗು ಪ್ರದೇಶದಲ್ಲಿ ಬರುವ ವಿಶಿಷ್ಟ ಗುರುತ್ವದ ಮೌಲ್ಯಗಳ ಆವರ್ತನ ಹಂಚಿಕೆಯನ್ನು ಬಿಂಬಿಸಲಾಯಿತು. ಹಾಗೂ ಆ ಪ್ರದೇಶದಲ್ಲಿರುವ ಕಡಿಮೆ ಮತ್ತು ಹೆಚ್ಚಿನ ತೊಂದರೆ ವರ್ಗಗಳ ಮಧ್ಯ ಆವರ್ತನ ಹಂಚಿಕೆಯ ಮಾದರಿಯನ್ನು ಸಂಖ್ಯಾಶಾಸ್ತ್ರೀಯವಾಗಿ ಕೊಲ್ಮಗೊರೊವ್ – ಸ್ಮಿರ್‌ನೋವ್ ಪರೀಕ್ಷೆ ಮೂಲಕ ತುಲನೆ ಮಾಡಲಾಯಿತು. ಆನಂತರ, ಪ್ರತಿ ವರ್ಗದಲ್ಲಿ (ಕಡಿಮೆ ಮತ್ತು ಹೆಚ್ಚಿನ ತೊಂದರೆ) ಬರುವ ವಿಶಿಷ್ಟ ಗುರುತ್ವದ ಮೌಲ್ಯಗಳ ಒಟ್ಟುಗುಡಿಸಿ ಆವರ್ತನ ಹಂಚಿಕೆಯನ್ನು ಬಿಂಬಿಸಲಾಯಿತು ಮತ್ತು ಮೌಲ್ಯಗಳ ಆವರ್ತನ ಹಂಚಿಕೆಯ ಮಾದರಿಯನ್ನು ಸಂಖ್ಯಾಶಾಸ್ತ್ರೀಯವಾಗಿ ಕೊಲ್ಮಗೊರೊವ್ – ಸ್ಮಿರ್‌ನೋವ್ ಪರೀಕ್ಷೆ ಮೂಲಕ ತುಲನೆ ಮಾಡಲಾಯಿತು (ಸ್ನೇಡೆಕೊರ್ ಮತ್ತು ಕಾಕ್‌ರಾನ್, 1967).

ಫಲತಾಂಶಗಳು

ಸರಾಸರಿ ವಿಶಿಷ್ಟ ಗುರುತ್ವ: ಜಿಮ್ನಾಕ್ರಾಂತರ ಕೆನಾರಿಕಾ ಮರದ ಮಾದರಿ ವಿಶಿಷ್ಟ ಗುರುತ್ವ 0.339 ರಿಂದ 0.578 ರಷ್ಟಿದೆ. ಅಧ್ಯಯನ ನಡೆಸಿದ ಆರು ಪ್ರದೇಶಗಲ್ಲಿ ಎರಡು ವರ್ಗಗಳ ಪ್ರದೇಶಗಳನ್ನು ಹೋಲಿಸಿ ನೋಡಿದರೆ ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶದಲ್ಲಿ ವಿಶಿಷ್ಟ ಗುರುತ್ವ ಕಡಿಮೆಯಾಗುತ್ತಿದೆ ಎಂಬ ವಿಷಯ ತಿಳಿದುಬರುತ್ತದೆ. ಎರಡು ಪ್ರದೇಶಗಲ್ಲಿ (ಸಂಪಾಜೆ ಮತ್ತು ತೋರ್ಮೆ) ತೊಂದರೆಯ ಪ್ರಭಾವದಿಂದ ಮರದ ವಿಶಿಷ್ಟ ಗುರುತ್ವ ಸಂಖ್ಯಾಶಾಸ್ತ್ರೀಯವಾಗಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುವುದು ಕಂಡುಬರುತ್ತದೆ (ಕೋಷ್ಟಕ 1).

ಒಟ್ಟಾರೆ ಸರಾಸರಿ ವಿಶಿಷ್ಟ ಗುರುತ್ವ ಕಡಿಮೆ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳಲ್ಲಿ 0.462 ± 0.06 ರಷ್ಟಿದ್ದು ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳಲ್ಲಿ 0.424 ± 0.06 ರಷ್ಟಿತ್ತು. ಅಂದರೆ, ತೊಂದರೆ ಪ್ರಮಾಣ ಹೆಚ್ಚಾದಂತೆ ವಿಶಿಷ್ಟ ಗುರುತ್ವ ಮೌಲ್ಯ ಕಮ್ಮಿಯಾಗುತ್ತದೆ ಎಂಬುದು ಮನದಟ್ಟಾಗುತ್ತದೆ (ಚಿತ್ರ 2).

ವಿಶಿಷ್ಟ ಗುರುತ್ವದ ಮೌಲ್ಯಗಳ ಆವರ್ತನ ಹಂಚಿಕೆ: ಪ್ರತಿ ಪ್ರದೇಶದ ಮರದ ವಿಶಿಷ್ಟ ಗುರುತ್ವದ ಮೌಲ್ಯಗಳನ್ನು ಆವರ್ತನ ಹಂಚಿಕೆ ಮಾಡಿ ಅವುಗಳ ಮಾದರಿ ನೊಡಲಾಯಿತು. ಕಡಿಮೆ ಮತ್ತು ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಎರಡು ವರ್ಗಗಳ ಆವರ್ತನ ಹಂಚಿಕೆಯ ಮಾದರಿಯಲ್ಲಿ ವ್ಯಾತ್ಯಾಸ ತೊರಿದವು. ಈ ವ್ಯಾತ್ಯಸವನ್ನು ಸಂಖ್ಯಾಶಾಸ್ತ್ರೀಯವಾಗಿ ಕೊಲ್ಮಗೊರೊವ್ – ಸ್ಮಿರ್‌ನೋವ್ ಪರೀಕ್ಷೆ ಮೂಲಕ ತುಲನೆ ಮಾಡಿ ನೊಡಿದಾಗ ಎರಡು ಬೆರೆ ಬೆರೆ ರೀತಿಯ ಹಂಚಿಕೆ ಎಂಬುದು ಖಚಿತವಾಯಿತು. ಕಡಿಮೆ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳ ಮೌಲ್ಯಗಳು ಧನಾತ್ಮಕವಾಗಿ ಹಂಚಿಕೆ ತೊರಿದರೆ, ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳಲ್ಲಿನ ಮೌಲ್ಯಗಳು ಋಣಾತ್ಮಕ ಹಂಚಿಕೆಯನ್ನು ತೊರಿದವು (ಚಿತ್ರ 3).

ಚರ್ಚೆ : ಮರದ ವಿಶಿಷ್ಟ ಗುರುತ್ವವು ಒಂದು ಬಹು ಮುಖ್ಯವಾದ ಗುಣವಾಗಿದ್ದೆ ಹಾಗೂ ಇದು ಜೀವರಾಶಿ ಉತ್ಪಾದನೆಗೆ ನೇರ ಸಂಬಂಧ ಹೊಂದಿದೆ (ಕೆಅಯ್ಸಾ 1971). ಸಾಮಾನ್ಯವಾಗಿ ಮರದ ವಿಶಿಷ್ಟ ಗುರುತ್ವ ಯಾವುದೇ ರೀತಿಯ ಕ್ರಿಮಿ–ಕೀಟದ ಬಾದೆ ಮತ್ತು ಕೊಳೆಯುವಿಕೆಯ ಪ್ರಭಾವಕ್ಕೆ ಒಳಗಾಗುವುದಿಲ್ಲ (ಸಿಮಿಡ್‌ಟ್ಲೀಂಗ ಮತ್ತು ಅಮ್‌ಬುರ್ಗೆ 1982). ಆದರೆ ಅನೇಕ ಅಂಶಗಳು ಅಂದರೆ ಜಾಗ, ವಾತವರಣ, ಸ್ಥಳ, ಮರದ ಜಾತಿ ಇತ್ಯಾದಿ ವಿಶಿಷ್ಟ ಗುರುತ್ವದ ಮೇಲೆ ಪ್ರಭಾವ ಬಿರುತ್ತವೆ. ವಿಷೇಶವಾಗಿ ಸ್ಥಳದ ಮಳೆ, ತೇವಾಂಶ, ಪೋಷಕಾಂಶಗಳು, ಗಾಳಿ, ಶಾಖ ಇತ್ಯಾದಿ ಅಂಶಗಳು ವಿಶಿಷ್ಟ ಗುರುತ್ವದ ಮೇಲೆ ಪರಿಣಾಮ ಬಿರುತ್ತವೆ. ಪ್ರದೇಶದ ಎತ್ತರ, ಮಣ್ಣಿನ ಮಾದರಿ, ಆಕರ, ಅಕ್ಷಾಂಷ, ಇಳಿಜಾರು, ಸಂಯೋಜನೆ, ಮರಗಳ ಸಾಂಧ್ರತೆ, ಇತ್ಯಾದಿ ಗಾಢವಾಗಿ ವಿಶಿಷ್ಟ ಗುರುತ್ವ ನಿರ್ಧರಿಸುತ್ತದೆ (ಸಿಮಿಡ್‌ಟ್ಲೀಂಗ ಮತ್ತು ಅಮ್‌ಬುರ್ಗೆ 1982).

ವಿಶಿಷ್ಟ ಗುರುತ್ವದ ಒಂದು ಅನುಪಾತಕ್ಕೆ ಮರದ ವಸ್ತುವಿನ ಸ್ಪಷ್ಟ ಕುರುಹು ಎಂದು ಪರಿಗಣಿಸಬಹುದು. ಜೋರೆಫಿನಾ (1987) ಅವರು 220 ಜಾತಿಯ ಮರದ ವಿಶಿಷ್ಟ ಗುರುತ್ವವನ್ನು ಅಳತೆ ಮಾಡುತ್ತಾರೆ. ಅದರಲ್ಲಿ ಅರ್ಧ ಮರಗಳು ಉಷ್ಣವಲಯದ ಎಲೆಯುದುರುವ ಅರಣ್ಯ ಮತ್ತು ಇನ್ನರ್ಧ ಉಷ್ಣವಲಯದ ಮಳೆಗಾಡು ಪ್ರದೇಶದಿಂದ. ಅವರು, ವಿದ್ಯಾರ್ಥಿ ಟಿ ಪರೀಕ್ಷೆ' ಬಳಿಸಿಕೊಂಡು ಎರಡು ಪ್ರದೇಶಗಳ ಮರಗಳ ಗುಂಪುಗಳನ್ನು ಹೋಲಿಸಿ ನೋಡಿದಾಗ, ಎರಡು ಪ್ರದೇಶಗಳಲ್ಲಿನ ವಿವಿಧ ಜಾತಿಗಳ ಮರಗಳ ನಡುವೆ ವಿಶಿಷ್ಟ ಗುರುತ್ವದಲ್ಲಿ ಗಮನಾರ್ಹ ವ್ಯತ್ಯಾಸಗಳನ್ನು ತೋರಿಸಿದೆ ಫಲಿತಾಂಶಗಳು, ಒಣ ಎಲೆಯುದುರುವ ಅರಣ್ಯ ಕಾಡಿನಲ್ಲಿರುವ ಮರಗಳ ವಿಶಿಷ್ಟ ಗುರುತ್ವ ಗಮನಾರ್ಹ ಪ್ರಮಾಣದಲ್ಲಿ ಮಳೆಕಾಡು ಪ್ರದೇಶಗಳಿಗಿಂತ ಹೆಚ್ಚಿರುತ್ತದೆ ಎಂದು ಇಗಾಗಲೆ ನಿರುಪಿಸಿದ್ದಾರೆ.

ನಾವು ಈ ಅಧ್ಯಯನದಲ್ಲಿ ಜಿಮ್ನಾಕ್ರಾಂತರ ಕೆನಾರಿಕ ಒಂದು ಸ್ಥಳೀಯ ಮತ್ತು ಅಳಿವಿನಂಚಿನಲ್ಲಿರುವ ಮರದ ಮೇಲೆ ತೊಂದರೆಯ ಪ್ರಭಾವವನ್ನು ತಿಳಿಯಲು ಪ್ರಯತ್ನಿಸಿದೆವು. ಮರದ ವಿಶಿಷ್ಟ ಗುರುತ್ವದ ಮೌಲ್ಯಗಳನ್ನು ಆವರ್ತನ ಹಂಚಿಕೆ ಮಾಡಿ ನೋಡಿದಾಗ ಕಡಿಮೆ ತೊಂದರೆ ಅನುಭವಿಸುತ್ತಿರುವ ಪ್ರದೇಶಗಳಲ್ಲಿನ ಮೌಲ್ಯಗಳು ಋಣಾತ್ಮಕ ಹಂಚಿಕೆಯನ್ನು ತೋರಿದವು. ಹಾಗೆಯೇ ಎರಡು ಪ್ರದೇಶಗಳನ್ನು (ಸರಾಸರಿ ಮೊತ್ತ) ಹೋಲಿಸಿ ನೋಡಿದರೆ ತೊಂದರೆಯ ಪ್ರಭಾವದಿಂದ ಮರದ ವಿಶಿಷ್ಟ ಗುರುತ್ವ ಸಂಖ್ಯಾಶಾಸ್ತ್ರೀಯವಾಗಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂಬ ವಿಷಯ ಮನದಟ್ಟಾಗುತ್ತದೆ.

ಜಿಮ್ನಾಕ್ರಾಂತರ ಕೆನಾರಿಕ ಒಂದು ಸೂಕ್ಷ್ಮ ಸ್ವಭಾವದ ಮರ. ಹೆಚ್ಚಿನ ತೊಂದರೆ ಒತ್ತಡ ಸಹೀಸಲಾರದು. ಈಗಾಗಲೆ ತಾಂಬಟ್ ಹಾಗೂ ತಂಡ (2007) ತೊಂದರೆಯು ಪ್ರಬಾವದಿಂದ ಈ ಮರದ

ಬೀಜೋತ್ಪಾದನೆಯಲ್ಲಿ ಬೀಜ ವಿಕೃತಿಯಾಗಿರುವುದನ್ನು ಪ್ರಕಟಿಸಿದರ ದಾರೆ. ಜೊತೆಗೆ, ಸಂತಾನೋತ್ಪತ್ತಿಯಲ್ಲೂ ಸಹ ಬದಲಾವಣೆಯಾಗಿರು ವುದನ್ನು ಚೈತ್ರ ಮತ್ತು ತಾಂಬಟ್ (2007) ಗಮನಿಸಿದ್ದಾರೆ. ಹೆಚ್ಚಿನ ತೊಂದರೆಯಾದ ಪ್ರದೇಶದಲ್ಲಿ ಸಸ್ಯಕ ರೀತಿಯ ಸಂತಾನೋತ್ಪತ್ತಿಯನ್ನು ಅಳವಡಿಸುರುವದನ್ನು ನಿರುಪಿಸಿದ್ದಾರೆ. ಜೌಗು ಪ್ರದೇಶಕ್ಕೆ ತೊಂದರೆ ಯಾಗುವುದರಿಂದ ಅಲ್ಲಿರುವ ಸೊಕ್ಷ್ಮವಾತಾವರಣದಲ್ಲಿ ಏರು-ಪೇರಾಗಿ ಮರದ ಕೋಶ, ಅದರ ರಚನೆ, ಬೇಳವಣಿಗೆ, ನೀರಿನಾಂಶ, ಇತ್ಯಾದಿಗಳಲ್ಲಿ ವ್ಯಾತ್ಯಸವಾಗಿ ಮರದ ಒಟ್ಟಾರೆ ಬೆಳವಣಿಗೆ ಮೇಲೆ ಪ್ರಬಾವ ಬಿರಿರುತ್ತದೆ. ಪ್ರಮುಖವಾಗಿ ನೀರಿನಾಂಶದ ವ್ಯಾತ್ಯಸದಿಂದ ಮರದ ವಿಶಿಷ್ಟ ಗುರುತ್ವದಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿತವಾಗಿರಬಹುದು. ಈ ಎಲ್ಲಾ ವಿಚಾರಗಳು ಪ್ರದೇಶಕ್ಕೆ ಆಗುವ ತೊಂದರೆಯ ಪ್ರಭಾವದಿಂದ ಮರದ ವಿಶಿಷ್ಟ ಗುರುತ್ವದಲ್ಲಿ ಗಣನೀಯ ಪ್ರಮಾಣದ ಕಡಿತವಾಗುತ್ತದೆ ಎಂದು ಸೂಚಿಸುತ್ತವೆ.

ಸಾರಾಂಶ: ಕೊನೆಯದಾಗಿ ನಮ್ಮ ಅಧ್ಯಯನದ ಮುಖ್ಯ ಸಾರಾಂಶವೆನೆಂದರೆ, ತೊಂದರೆಯಿಂದಾಗಿ ಅಳಿವಿನಂಚಿನಲ್ಲಿರುವ ಜಿಮ್ನಾಕ್ರಾಂತರ ಕೆನಾರಿಕ ಮರದ ವಿಶಿಷ್ಟ ಗುರುತ್ವ ಕಡಿಮಿಯಾಗುತ್ತಿದೆ. ಇದರಿಂದ ಮರದ ಇತರ ಅಂಶಗಳಾದ ಬೆಳವಣಿಗೆ, ಶಕ್ತಿ, ಯಾಂತ್ರಿಕ ಗುಣ, ಠೀವಿ ಇತ್ಯಾದಿಗಳಿಗೂ ಸಹ ತೊಂದರೆಯಾಗುತ್ತಿದೆ ಹಾಗಾಗಿ ಮಾನವನ ತೊಂದರೆಯಿಂದ ಈ ಮರದ (ಸಂ)ರಕ್ಷಣೆ ಅತಿ ಅವಶ್ಯಕವಾಗಿದೆ.

ಉಲೇಖಗಳು (ಸೂಚನೆ: ಈ ಎಲ್ಲ ಉಲೇಖಗಳು ಆಂಗ್ಲಭಾಷೆಯಲ್ಲಿ ಪ್ರಕಟಗೊಂಡಿವೆ ಅವುಗಳನ್ನು ತರ್ಜುಮೆ ಮಾಡಿ ಬಳಸಲಾಗಿದೆ):

ಗಣೇಶನ್ ಆರ್ 2002. ನಿತ್ಯಹರಿದ್ವರ್ಣದ ಸಿಹಿನೀರಿನ ಜೌಗಿಪ್ರದೇಶ ಹಾಗೂ ಅವುಗಳ ಜೀವ ವೈವಿಧ್ಯತೆಯ ಸಸ್ಯ ಸಂಕುಲ, ಕಲ್ಕಾಡು-ಮುಂಡನತೂರೈ ಹುಲಿ ಮೀಸಲು ಅರಣ್ಯ ಪ್ರದೇಶ, ದಕ್ಷಿಣ ಪಶ್ಚಿಮ ಘಟ್ಟ ಪ್ರದೇಶ, ಭಾರತ. ದಿ ಇಂಟಿಯನ್ ಫೊರೆಸ್ಟರ್, ಸಂಚಿಕೆ 12, ಪುಟ 1351-1359.

ಜೋಸೇಫ, ಬಿ. ಎಮ್. 1987. ಪೆಕ್ಸಿಕೊದಲ್ಲಿನ ಎರಡು ಉಷ್ಣವಲಯದ ಕಾಡು ಜಾತಿಯ ಮರಗಳ ವಿಶಿಷ್ಟ ಗುರುತ್ವ. ಆಯ್ ಎ ಡಬ್ಲು ಎ ಬುಲೆಟಿವ್. ಸಂಚಿಕೆ 8(?), ಪುಟ 143-148.

ಕೆಅಯ್ಸಾ ಜೆ ಎಲ್. 1971. ಪೂರ್ಣ ಮರ ಬಳಕೆ-ಸಾಹೀತ್ಯದ ಒಂದು ವಿಶ್ಲೇಷಣೆ, ಭಾಗ 1. ಮಾರಾಟಮಾಡಲಾಗದ ತುದಿಯಿಂದ ಕಾಂಡದವರೆಗೆ. ಮಾಹಿತಿ ಉತ್ಪನ್ನ ಪ್ರಯೋಗಾಲಯ, ವ್ಯಾಂಕೋವರ್ ಪಾರ್ ಎಸ್ ಇ ಆರ್ವಿ-ಕ್ಯಾನ್ ಫಾರ, ಮುದ್ರಣ. ವಿಪಿಎಕ್ಸ್:ಪುಟ 69-98.

ಸಿಮಿಡ್ಟ್ಲೀಂಗ ಆರ್ ಸಿ ಮತ್ತು ಅಮ್ಬುರ್ಗೆ ಟಿ. ಎಲ್. 1982. ಅನುವಂಶಿಯ ವ್ಯಾತ್ಯಾಸದಿಂದ ಲೊಲ್ಬೊಲ್ಲಿ ಪೈನ್‌ನಲ್ಲಾಗವ ಕೊಳೆತದಮೇಲೆ ಪ್ರಭಾವ ಮತ್ತು ಅವುಗಳ ಪರಿವಾಚಕ ಬೆಳವಣಿಗೆ ಮತ್ತು ವಿಶಿಷ್ಟ ಗುರುತ್ವಗಳ ಜೊತೆಗಿರುವ ಸಂಬಂಧ. ಹೊಲ್ಜ್ ಫೊಸ್ಚಿಂಗ್. ಸಂಚಿಕೆ 36 (3), ಪುಟ 159-161.

ಸ್ಮಿಥ್ ಡ. ಎಮ್. 1954. ಸಣ್ಣ ಮರದ ವಿಶಿಷ್ಟ ಗುರುತ್ವವನ್ನು ನಿರ್ಧರಿಸುವ ಗರಿಷ್ಟ ತೇವಾಂಶ ವಿಧಾನ. ಅರಣ್ಯ ಉತ್ಪನ್ನಗಳ ಪ್ರಯೋಗಾಲಯದ ಕೈಪಿಡಿ, ಅಮೆರಿಕದ ಅರಣ್ಯ ಇಲಾಖೆ ಮತ್ತು ಕೃಷಿ ಇಲಾಖೆ ವರದಿ, ಸಂಖೆ 2014.

ತಾಂಬಟ್, ಬಿ., ಜಿ ಎನ್., ಚೈತ್ರ, ಕೆ. ವಿ. ವಸಂತ ರೆಡ್ಡಿ, ಅರ್ ವಾಸುದೇವ, ಕೆ., ಎನ್., ಗಣೇಶಯ್ಯ ಮತ್ತು ಆರ್ ಉಮಾಶಾಂಕರ. (2012). ಪಶ್ಚಿಮ ಘಟ್ಟಗಳ ಮಿರಿಸ್ಟಿಕಾ ಜೌಗು ಪ್ರದೇಶದ ತೊಂದರೆ (ಬೆದರಿಕೆ) ಮೌಲ್ಯಮಾಪನ. ಇಂಟರನ್ಯಾಷನಲ್ ಜರ್ನಲ್ ಆಫ್ ಫೊರೆಸ್ಟ್ರಿ ಆಂಡ ಯುಸಾಫ್ರಟ್ಸ್. ಸಂಚಿಕೆ 13(2), ಪುಟ 3-12.

ವಾಸುದೇವ, ಅರ್. ರಘು ಹೆಚ್ ಬಿ.. ದಾಸಪ್ಪಾ. ಆರ್ ಉಮಾಶಾಂಕರ ಮತ್ತು ಕೆ., ಎನ್., ಗಣೇಶಯ್ಯ (2001). ಪಶ್ಚಿಮ ಘಟ್ಟದ ವಿಮಶಾತ್ಮಕ ಅಳಿವಿನಂಚಿನಲ್ಲಿರುವ ಸಿಮಿಕಾರ್ಪಸ್ ಕಫ್ಲೆಕಾನೆನಸಿಸ್ ಮರದ ಸಂಖೆ ರಚನೆ, ಸಂತಾನೋತ್ಪತ್ತಿಯ ಜೀವ ವಿಜ್ಞಾನ ಮತ್ತು ಅದರ ಸಂರಕ್ಷಣೆ ವಿಚಾರ. ಪುಸ್ತಕದಲ್ಲಿ: ಅರಣ್ಯ ತಳಿ ಸಂಪನ್ಮೂಲ: ಸ್ಥಿತಿ, ತೊಂದರೆಗಳು ಮತ್ತು ಅವುಗಳ ಸಂರಕ್ಷಣೆ. ಸಂಪಾದಕರು: ಆರ್ ಉಮಾಶಾಂಕರ, ಕೆ., ಎನ್., ಗಣೇಶಯ್ಯ ಮತ್ತು ಕೆ ಎಸ್ ಭಾವಾ. ಆಕ್ಸಫರ್ಡ ಮತ್ತು ಆ ಬಿ ಹೆಚ್ ಮುದ್ರಣ ಕಂ. ಹೊಸ ದೆಹಲಿ. ಪುಟ 211-223.

ತಾಂಬಟ್, ಬಿ., ಕೆ. ವಿಶ್ವನಾಥ, ಜಿ ಎನ್., ಚೈತ್ರ ಹಾಗೂ ಆರ್ ಗುಣಗಾ (2007). ಪಶ್ಚಿಮ ಘಟ್ಟದ ಜೌಗು ಪ್ರದೇಶದ ಜಿಮ್ನಾಕ್ರಾಂತರ ಕೆನಾರಿಕ ಅಳಿವಿನಂಚಿನಲ್ಲಿರುವ ಒಂದು ಜಾತಿಯ ಮರ: ತೊಂದರೆಯ ಪ್ರಬಾವದಿಂದ ಈ ಮರದಲ್ಲಿ ಬೀಜ ವಿಕೃತಿಯಾಗಿರುವುದರ ಬಗ್ಗೆ ಒಂದು ವರದಿ.ದಿ ಇಂಟಿಯನ್ ಫೊರೆಸ್ಟರ್, ಸಂಚಿಕೆ 133(8), ಪುಟ 1075-1080.

ಚೈತ್ರ ಜಿ ಎನ್., ಮತ್ತು ತಾಂಬಟ್, ಬಿ. 2007. ಜಿಮ್ನಾಕ್ರಾಂತರ ಫರ್ಕಾರಿಯಾನ ಜೌಗು ಪ್ರದೇಶದ ಭಿನ್ನಲಿಂಗಿಯ ಜಾತಿಯ ಮರದಲ್ಲಿ ಸಸ್ಯಕ ರೀತಿಯ ಸಂತಾನೋತ್ಪತ್ತಿ. ಮಯ್‌ಫೊರೆಸ್ಟ, ಸಂಚಿಕೆ 43 (4), ಪುಟ 485-491.



ಚಿತ್ರ 1: ಅಧ್ಯಯನ ಸ್ಥಳಗಳ ನಕ್ಷೆ (ದಕ್ಷಿಣ ಭಾರತ, ಕರ್ನಾಟಕ ರಾಜ್ಯ, 3 ಜಿಲ್ಲೆಗಳು)



ಚಿತ್ರ 2: ಎರಡು ವರ್ಗಗಳ (ಕಡಿಮೆ ಮತ್ತು ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶ) ಜಿಮ್ನಾಕ್ರಾಂತರ ಕೆನಾರಿಕಾ ಮರದ ಮಾದರಿಯ ಸರಾಸರಿ ವಿಶಿಷ್ಟ ಗುರುತ್ವಗಳ ಚಿತ್ರಾತ್ಮಕ ಪ್ರಾತಿನಿಧ್ಯ (ವಿದ್ಯಾರ್ಥಿ 'ಟಿ ಪರೀಕ್ಷೆ'; ಟಿ=ಮೌಲ್ಯ–2.706; ಸಂಭವನೀಯತೆ < 0.008).



ಚಿತ್ರ 3: ಎರಡು ವರ್ಗಗಳ (ಕಡಿಮೆ ಮತ್ತು ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶ) ಜಿಮ್ನಾಕ್ರಾಂತರ ಕೆನಾರಿಕಾ ಮರದ ಮಾದರಿಯ ವಿಶಿಷ್ಟ ಗುರುತ್ವ ಮೌಲ್ಯಗಳ ಆವರ್ತನ ಹಂಚಿಕೆಯ ಚಿತ್ರಾತ್ಮಕ ಪ್ರಾತಿನಿಧ್ಯ (ಕೊಲ್ಮಗೊರೊವ್ – ಸ್ಮಿರ್ನೋವ್ ಪರೀಕ್ಷೆ; ಡಿ ಮೌಲ್ಯ–0.31; ಸಂಖ್ಯಾಶಾಸ್ತ್ರೀಯ ಸಂಭವನೀಯತೆ < 0.05).

ಕೋಷ್ಟಕ 1: ಆರು ಅಧ್ಯಯನ ಸ್ಥಳಗಳ ಜಿಮ್ನಾಕ್ರಾಂತರ ಕೆನಾರಿಕಾ ಮರದ ಮಾದರಿಯ ಸರಾಸರಿ ವಿಶಿಷ್ಟ ಗುರುತ್ವ ಮೌಲ್ಯಗಳ ವಿವರ.

ಕ್ರ ಸಂ	ಅಧ್ಯಯನ ನಡೆಸಿದ ಪ್ರದೇಶಗಳು	ಕಡಿಮೆ ತೊಂದರೆ ಅನುಭವಿಸುತ್ತಿರುವ ಪ್ರದೇಶ		ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಪ್ರದೇಶ		ವಿದ್ಯಾರ್ಥಿ 'ಟಿ ಪರೀಕ್ಷೆ' ಮತ್ತು ಸಂಭವನೀಯತೆ
		ವ್ಯಾಪ್ತಿ	ಸರಾಸರಿ±ವಿಚಲನ	ವ್ಯಾಪ್ತಿ	ಸರಾಸರಿ±ವಿಚಲನ	
1	ಮಾಕುಟ್ಟ	0.361-0.417	0.392±0.020	0.352-0.427	0.379±0.026	ಗಮನಾರ್ಹ ವಿಲ್ಲ
2	ಸಂಪಾಜೆ	0.451-0.550	0.495±0.031	0.339-0.404	0.375±0.022	t=8.15, p<0.00
3	ತೋರ್ಮೆ	0.508-0.578	0.539±0.024	0.459-0.547	0.503±0.0ಖ27	t=2.66, p<0.02
4	ಕತ್ತಲೆಕಾನ	0.366-0.418	0.396±0.017	0.355-0.412	0.387±0.023	ಗಮನಾರ್ಹ ವಿಲ್ಲ
5	ದೆರ್ಬೆಜಡ್ಡಿ	0.479-0.562	0.524±0.028	0.453-0.571	0.506±0.045	ಗಮನಾರ್ಹ ವಿಲ್ಲ
6	ಐತಾಳಿಮನೆ	0.389-0.462	0.429±0.028	0.353-0.445	0.396±0.030	ಗಮನಾರ್ಹ ವಿಲ್ಲ
ಒಟ್ಟಾರೆ ಸರಾಸರಿ		0.361-0.578	0.462±0.065	0.339-0.571	0.424±0.064	ಟಿ=ಮೌಲ್ಯ–2.706; ಸಂಭವನೀಯತೆ < 0.008

ಜೈವಿಕ ಡೀಸೆಲ್ ಉತ್ಪಾದಿಸುವ ಸಾಮರ್ಥ್ಯವಿರುವ ಸೂಕ್ಷ್ಮ ಪಾಚಿಗಳ ಗುರುತಿಸುವಿಕೆ ಮತ್ತು ಆಪಿಡ್ ಪ್ರೊಫೈಲಿಂಗ್

[1]ಹರಿಣಿ ಕುಮಾರ್, ಕೆ.ಎಮ್., [2]ಕ್ರಿಸ್ಟಿ ಸಾರ ಜಾರ್ಜ್., [1]ರಮ್ಯಶ್ರೀ, ಕೆ.ಆರ್., ಮತ್ತು [1]ಹರೀಶ್,ಜೆ
[1]ಸಸ್ಯ ಜೈವಿಕ ತಂತ್ರಜ್ಞಾನ ವಿಭಾಗ, ಯು.ಎ.ಎಸ್, ಜಿ.ಕೆ.ವಿ.ಕೆ,ಬೆಂಗಳೂರು- ೬೫ [2]ಪರಿಸರ ಜೈವಿಕ ತಂತ್ರಜ್ಞಾನ ವಿಭಾಗ, ವಿ.ಐ.ಟಿ,ವೆಲ್ಲೂರ್, ತಮಿಳನಾಡು- ೧೪

ಜೈವಿಕ ಡೀಸೆಲ್ ಭರವಸೆಯ ನವೀಕರಿಸಬಹುದಾದ ಜೈವಿಕ ಇಂಧನವಾಗಿರುವುದರಿಂದ ಹೆಚ್ಚಿನ ಗಮನವನ್ನು ತನ್ನೆಡೆಗೆ ಸೆಳೆಯುತ್ತಿದೆ. ಹೆಚ್ಚುತ್ತಿರುವ ತರಕಾರಿ ಬೆಲೆ, ಜೈವಿಕ ಡೀಸೆಲ್ ನಿರ್ಮಾಣಕ್ಕಿರುವ ಪೂರಕ ವಸ್ತುಗಳ ಉತ್ಪಾದನೆ ಹಾಗೂ ಆಹಾರ ಉತ್ಪಾದನೆಗಾಗಿ ಭೂ ಬಳಕೆ ಸ್ಪರ್ಧೆಯ ಕಾರಣಗಳಿಂದ ಇಂದು ಜೈವಿಕ ಡೀಸೆಲ್‌ನ್ನು ಕಡಿಮೆ ವೆಚ್ಚದಲ್ಲಿ ಉತ್ಪಾದನೆ ಮಾಡುವ ಕೆಲಸ ಅಗತ್ಯ. ಸೂಕ್ಷ್ಮ ಪಾಚಿಯನ್ನು ಬಳಸಿ ಜೈವಿಕ ಡೀಸೆಲ್ ಉತ್ಪಾದಿಸುವುದರಿಂದ

ಆಹಾರ ಮತ್ತು ಮೇವು ಸರಬರಾಜು ಮೇಲಿನ ಒತ್ತಡವನ್ನು ಕಡಿಮೆ ಮಾಡಬಹುದು. ಸಾಂಪ್ರದಾಯಿಕ ಜೈವಿಕ ಡೀಸೆಲ್ ಉತ್ಪಾದನೆಯು ಎರಡು ಹಂತದ ಪಕ್ರಿಯೆ ಒಳಗೊಂಡಿರುತ್ತದೆ, ತೈಲವನ್ನು ಮೊದಲ ಹಂತದಲ್ಲಿ ತೈಲದ ಪೂರಕ ಕಚ್ಚಾ ಸಾಮಗ್ರಿಗಳಂದ ತೆಗೆದುಕೊಳ್ಳಲ್ಪಡುತ್ತದೆ ಮತ್ತು ನಂತರ ಟ್ರಾನ್ಸ್‌ಎಸ್ಟರಿಫಿಕೇಷನ್ ಹಂತಕ್ಕೆ ಒಳಪಡಿ ಸಲಾಗುತ್ತದೆ. ಈ ಪ್ರಸ್ತುತ ಅಧ್ಯಯನದಲ್ಲಿ ಹೊಸ ಇನ್ಸಿಟು ಟ್ರಾನ್ಸ್‌ಎಸ್ಟರಿಫಿಕೇಷನ್ ವಿಧಾನವನ್ನು ಪ್ರಯೋಗಕ್ಕೆ ಒಳಪಡಿಸಲಾಯಿತು. ಇನ್ಸಿಟು ಟ್ರಾನ್ಸ್‌ಎಸ್ಟರಿಫಿಕೇಷನ್ ವಿಧಾನವು ತೈಲ ಹೊರತೆಗೆಯುವಿಕೆ ಮತ್ತು ಟ್ರಾನ್ಸ್‌ಎಸ್ಟರಿಫಿಕೇಷನ್ ಪ್ರಕ್ರಿಯೆನ್ನು ಒಂದೇ ಹಂತದಲ್ಲಿ ಸಂಯೋಜಿಸುತ್ತದೆ. ಈ ಯೋಜನೆಯಲ್ಲಿ, ಹಸಿರು ಪಾಚಿಯನ್ನು ಪೂರಕ ವಸ್ತುವಾಗಿ ಬಳಸಲಾಯಿತು ಮತ್ತು ಮಾಧ್ಯಮ ಮೇದಸ್ಸಿನ ಅಂಶಕ್ಕೆ ಸುಧಾರಿಸಲು ಹೊಂದುವಂತೆ ಮಾಡಲಾಯಿತು. ಲಿಪಿಡ್ ಪ್ರೊಫೈಲಿಂಗ್‌ನ್ನು ಕೊಬ್ಬಿನಾಮ್ಲಗಳನ್ನು ವಿಶ್ಲೇಸಿದಾಗ ಹಸಿರು ಪಾಚಿಯು ಜೈವಿಕ ಡೀಸೆಲ್ ಉತ್ಪಾದನೆಗೆ ಉತ್ತಮ ಮೂಲವೆಂಬುದನ್ನು ನಿರ್ಧರಿಸಲಾಯಿತು. ಈ ಅಧ್ಯಯನದಲ್ಲಿ ಪಿಸಿಆರ್ ಸೀಕ್ವೆನ್ಸಿಂಗ್ ಬಳಸಿ ಪಾಚಿಯನ್ನು ಗುರುತಿಸಲಾಯಿತು ಹಾಗು ಈ ಹಸಿರು ಪಾಚಿಯ *ಕ್ಲೋರೆಲ್ಲಾ ವಲ್ಗ್ಯಾರಿಸ್* ಹೋಲುತ್ತದೆ. ಅನಿಲ ಕ್ರೊಮ್ಯಾಟೋಗ್ರಫಿಯನ್ನು ಬಳಸಿಕೊಂಡು ಪಾಚಿಯ ಜಾತಿಯಲ್ಲಿ ಮೇದಾಮ್ಲಗಳನ್ನು ವಿಶ್ಲೇಷಣೆ ಮಾಡಿದಾಗ ಈ ಅಧ್ಯಯನದಲ್ಲಿ ಪಾಮಿಟಿಕ್ ಆಮ್ಲ (೧೬: ೦),ಅನೋಲಿಂಯಿಕ್ ಆಮ್ಲ (೧೮: ೨),ಅನೋಲೆನಿಕ್ ಆಮ್ಲ (೧೮:೨), ಸ್ಟಿಯರಿಕ್ ಆಮ್ಲ (೧೮: ೦) ಮತ್ತು ಬೆಹೆನಿಕ್ ಆಮ್ಲ (೨೨: ೦) ಉಪಸ್ಥಿತಿ ಇರುವುದು ತೋರಿಸಿತು. ಇವುಗಳಲ್ಲಿ ಅಪರ್ಯಾಪ್ತ ಕೊಬ್ಬಿನಾಮ್ಲಗಳಾದ ಒಲಂಯಿಕ್ ಆಮ್ಲ,ಅನೋಲಿನಿಕ್ ಆಮ್ಲ ಮತ್ತು ಅನೋಲಿಂಯಿಕ್ ಆಮ್ಲ ಸೇರಿವೆ. ಉಳಿದವು ಪರ್ಯಾಪ್ತ ಕೊಬ್ಬಿನಾಮ್ಲಗಳಾಗಿವೆ. ಈ ಅಧ್ಯಯನದಲ್ಲಿ ಬಳಸಲಾದ ಪಾಚಿಯ ತಳಿಗಳು ಉತ್ತಮ ಕೊಬ್ಬಿನಂಶವನ್ನು ತೋರಿಸುತ್ತಿದೆ. ಬೋಲ್ಡ್ ಬೇಸಲ್ ಮಾಧ್ಯಮವು ಹಸಿರು ಪಾಚಿಯ ತಳಿಯಾದ *ಕ್ಲೋರೆಲ್ಲಾ*ಗೆ ಉತ್ತಮವೆಂದು ಕಂಡು ಬಂತು. ಇನಾಕ್ಯುಲೇಷನ್ ನಂತರ, ಹದಿನೈದನೇ ದಿನದಲ್ಲಿ ಜೀವರಾಶಿ ಇಳುವರಿಯು ಪೂರ್ಣ ಸಾರಜನಕದಲ್ಲಿ ೧.೬೫ ಮೈಕ್ರೋಗ್ರಾಂ, ಅರ್ಧ ನೈಟ್ರೊಜನ್ ಪ್ರಮಾಣದಲ್ಲಿ ೦.೬೯ ಮೈಕ್ರೋಗ್ರಾಂ ಮತ್ತು ಸಾರಜನಕ ಅನುಪಸ್ಥಿತಿಯಲ್ಲಿ ೦.೩೧ ಮೈಕ್ರೋಗ್ರಾಂ ಆಗಿತ್ತು. ಗರಿಷ್ಠ ಕೊಬ್ಬು ಶೇಖರಣೆ ಸಾರಜನಕ ವಂಚಿತ ಮಾಧ್ಯಮದಲ್ಲಿ ಕಾಣಿಸಿಕೊಂಡಿತ್ತು ಹಾಗೂ ಜೀವರಾಶಿ ಇಳುವರಿಯು ಪೂರ್ಣ ಹಾಗೂ ಅರ್ಧ ಸಾರಜನಕಯುಕ್ತ ಮಾಧ್ಯಮದಲ್ಲಿ ಹೆಚ್ಚಾಗಿ ಕಂಡುಬಂದಿತು. ಆದಾಗ್ಯೂ, ಲಿಪಿಡ್ ಶೇಖರಣೆ ಸಾರಜನಕ ಕೊರತೆ ಇರುವ ಮಾಧ್ಯಮಗಳಲ್ಲಿ ಹೆಚ್ಚಾಗಿ ಕಂಡುಬಂತು.

ಪರಿಚಯ: ಜೈವಿಕ ಇಂಧನ ಇತ್ತೀಚಿನ ದಿನಗಳಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗಿರುವ ವಿಷಯ. ಏಕೆಂದರೆ, ಹೆಚ್ಚುತ್ತಿರುವ ತೈಲಗಳ ಬೆಲೆ, ಭೂಮಿಯ ತಾಪಮಾನ, ಪರಿಸರ ಹಾನಿ ಎಲ್ಲವೂ ಜೈವಿಕ ಇಂಧನ ಬಳಕೆಗೆ ಇಂಬು ನೀಡುತ್ತಿವೆ. ಹೀಗಿರುವಾಗ ಹೆಚ್ಚುತ್ತಿರುವ ಜನಸಂಖ್ಯೆಗೆ ಇರುವ ಕೃಷಿ ಭೂಮಿಯನ್ನು ಆಹಾರ ನಿರ್ವಹಣೆಗೆ ಬಳಸುತ್ತಿದ್ದು, ಅದನ್ನು ಜೈವಿಕ ಇಂಧನ ಉತ್ಪಾದಿಸಲು ಬೇಕಾದ ಬೆಳೆ ಬೆಳೆಯಲು ಕಷ್ಟ ಸಾಧ್ಯ ಎನಿಸದಿರದು. ಅಲ್ಲದೇ ಉತ್ಪಾದನೆ ವೆಚ್ಚ ಗಗನ ಮುಖಿಯಾಗಿರುವುದು, ನಮ್ಮೆಲ್ಲರ ಮುಂದಿನ ಇನ್ನೊಂದು ಸವಾಲು. ಈ ನಿಟ್ಟಿನಲ್ಲಿ ಕೃಷಿ ಭೂಮಿಯನ್ನು ಉಳಿಸಿ ಜೈವಿಕ ಇಂಧನ ಬೆಳೆಯ ಉತ್ಪಾದನೆ ವೆಚ್ಚವನ್ನು ತಗ್ಗಿಸಲು ಇರುವ ಮಾರ್ಗ ಅತ್ಯಾಧುನಿಕ ಪರಿವರ್ತನೆ ಕ್ರಿಯೆಯಿಂದ ಸೂಕ್ಷ್ಮಪಾಚಿ ಬಳಸಿ ಬಯೋಡೀಸೆಲ್ ಉತ್ಪಾದಿಸುವಿಕೆ. ಮುಸುಕಿನ ಜೋಳ, ಸೋಯಾ ಅವರೆ ಹಾಗು ಇನ್ನಿತರ ತೈಲ ಬೀಜಗಳನ್ನು ಉಪಯೋಗಿಸಿ ಬಯೋಡೀಸಲ್ ಉತ್ಪಾದಿಸುತ್ತಾರೆ (ಕ್ಯಾಂಬೆಲ್ ಎಟ್ ಅಲ್, 2010) (ರಿಚರ್ಡ್‌ಸನ್ ಎಟ್ ಅಲ್, 2012).

ಸೂಕ್ಷ್ಮ ಪಾಚಿಯಿಂದ ಜೈವಿಕ ಇಂಧನ ಉತ್ಪಾದಿಸುವುದು ಬಹು ಉಪಯುಕ್ತವಾಗಿದೆ. ಏಕೆಂದರೆ, ಇದು ಯಾವುದೇ ಬೆಳೆಗಳಿಗೆ ಪೈಪೋಟಿ ಕೊಡುವುದಿಲ್ಲ ಹಾಗು ಇದು ಸಲೈನ್ ಪರಿಸ್ಥಿತಿಯಲ್ಲೂ ಕಂಡು ಬರುತ್ತದೆ. ವಾತಾವರಣದ ಇಂಗಾಲದ ಡೈ ಆಕ್ಸೈಡ್ ಕಡಿಮೆ ಮಾಡುತ್ತದೆ (ಬೆನೆಮಾನ್, 2003) ಮತ್ತು ತ್ಯಾಜ್ಯ ನೀರಿನ ಶುಚಿಕರಣದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಸೂಕ್ಷ್ಮ ಪಾಚಿ ಸ್ವಾಭಾವಿಕವಾಗಿ ಸಿಹಿ ನೀರು ಮತ್ತು ಸಮುದ್ರ ನೀರಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಹಾಗು ಇದು ಪರಿಸರ ಸ್ನೇಹಿಯಾಗಿರುತ್ತದೆ (ಹೂಫ್‌ಮನ್, 1998; ಶೇನ್ ಎಟ್ ಅಲ್, 2008). ಇವುಗಳಿಗೆ ಬೇರು ಕಾಂಡ ಎಲೆಗಳು ಯಾವುದೂ ಇರುವುದಿಲ್ಲ. ಇವುಗಳು ಪತ್ರ ಹರಿತ್ತು ಹೊಂದಿದ್ದು ಸಸ್ಯಗಳ ರೀತಿಯಲ್ಲಿ ದ್ಯುತಿಸಂಶ್ಲೇಷಣೆ ಕ್ರಿಯೆಯನ್ನು ಒಳಗೊಂಡಿರುತ್ತವೆ. ಇವುಗಳಲ್ಲಿ ಲಿಪಿಡ್‌ನ ಅಂಶ ತುಂಬ ಇರುತ್ತದೆ ಹಾಗು ವರ್ಷವಿಡೀ ಬೆಳೆಯಬಹುದು. ಆದ್ದರಿಂದ, ಜೈವಿಕ ಇಂಧನ ತಯಾರಿಕೆಯಲ್ಲಿ ಉಪಯೋಗಿಸಬುಹುದು (ಚೆಸ್ತಿ ವೈ, 2007). ಸೂಕ್ಷ್ಮಪಾಚಿಯ ಲಿಪಿಡ್ ಅನ್ನು ಟ್ರೈಗ್ಲೀಸರಾಲ್ ಅಥವಾ ಟ್ರೈಗ್ಲೀಸರೈಡ್‌ಗಳ ರೂಪದಲ್ಲಿ ಉತ್ಪಾದಿಸುತ್ತದೆ (ಶೀಹಾನ್ ಎಟ್ ಅಲ್, 1998). [ಈ ಟ್ರೈಗ್ಲೀಸರೈಡ್‌ಗಳು ಜೈವಿಕ ಡೀಸೆಲ್ ಉತ್ಪಾದನೆಗೆ ಮೇದಾಮ್ಲ ಮಿಥೈಲ್ ಅಥವಾ ಈಥೈಲ್ ಈಸ್ಟರ್ ಅನ್ನು ಪಡೆಯಲು ಒಂದು ಕ್ರಿಯೆ ಎಂದು ಕರೆಯಲಾಗುತ್ತದೆ (ಗೋವಿಯಾ ಮತ್ತು ವಲೆವಿಯರ್, 2009)]. ಕ್ಲೋರೆಲ್ಲಾ ವಿಭನ್ನ ಪರಿಸ್ಥಿತಿಗಳಲ್ಲಿ ಫೋಟೊ ಆಟೋ ಟ್ರೋಪಿಕಲಿ ಅಥವಾ ಹೆಟೆರೋಟ್ರೋಪಿಕಲಿ ಬೆಳೆಯುವ ಒಂದು ಸೂಕ್ಷ್ಮಪಾಚಿ. ಅಸಿಟೇಟ್, ಗ್ಲೂಕೋಸ್ ನಂತಹ ಸಾವಯವ ಪದಾರ್ಥಗಳಿಂದ ಪೂರಕಗೊಂಡ ಕ್ಲೋರೆಲ್ಲಾದ ಹೆಟೆರೋಟ್ರೋಪಿಕ್ ಬೆಳವಣಿಗೆಯು ಜೀವಕೋಶಗಳಲ್ಲಿ ಹೆಚ್ಚಿನ ಜೀವರಾಶಿ ಉತ್ಪಾದಕತೆ ಮತ್ತು ಲಿಪಿಡ್‌ಗೆ (ಕೊಬ್ಬು/ಮೇದಸ್ಸು) ಕಾರಣವಾಗುತ್ತದೆ. (ಎಂಡೋ ಇತರರು 1977, ವ್ಯೂ ಇತರರು 1994).

ಸೂಕ್ಷ್ಮ ಪಾಚಿಯು ಮೂರನೇ ಪೀಳಿಗೆಯ ಜೈವಿಕ ಇಂಧನದ ಮೂಲ ಎಂದು ಯೋಚಿಸಲಾಗಿದೆ (ವಿಯರಾ ಕೋಸ್ಟ ಮತ್ತು ಗ್ರೈಕ್ಯೂಡಿ ಮೆರಾಯಿಸ್ 2011) ಹೆಚ್ಚು ಜೀವರಾಶಿಯ ಉತ್ಪಾದಕತೆಗೆ 20–50 ಪ್ರತಿಶತ ಟ್ರೈಗ್ಲೀಸೆರೊಲ್ ಅನ್ನು ಶೇಖರಿಸುವಿಕೆ (ಶುಷ್ಕ ತೂಕ W/W), ಇದಕ್ಕೆ ಉತ್ತಮ ಕೃಷಿ ಭೂಮಿಯ ಅನವಶ್ಯಕತೆ ಮತ್ತು ಹೆಚ್ಚು ನೀರನ್ನು ನವೀಕರಿಸುವಿಕೆಯು ಸೂಕ್ಷ್ಮ ಪಾಚಿಯನ್ನು ಜೈವಿಕ ಇಂಧನ ತಯಾರಿಸಲು ಉಪಯೋಗಿಸುವುದರಿಂದಾಗುವ ಅನುಕೂಲಗಳು (ಸಿಂಗ ಮತ್ತು ವ್ಯೂ 2010, ಸ್ಕಾಟ್ ಇತರರು 2010).

ಪಾಚಿಗಳಲ್ಲಿ ಅತಿ ಸೂಕ್ಷ್ಮ ಪಾಚಿಯು ಜೈವಿಕ ಇಂಧನ ಉತ್ಪಾದನೆಗೆ ಅತ್ಯುತ್ತಮವಾಗಿದೆ. ಸಾಮಾನ್ಯವಾಗಿ ಸೂಕ್ಷ್ಮಪಾಚಿಯು ವ್ಯಾಸದಲ್ಲಿ 2 ಮಿ.ಮಿ.ಗಿಂತ ಕಡಿಮೆ ಇದ್ದು, ದ್ಯುತಿಸಂಶ್ಲೇಷಣೆ ಸಾಮರ್ಥ್ಯವನ್ನು ಹೊಂದಿರುತ್ತದೆ (ಬಹುತೇಕ ಅತಿ ಸೂಕ್ಷ್ಮ ಪಾಚಿಯು ವ್ಯತ್ಯಾಸದಲ್ಲಿ 2–50 ಮೈ.ಮೀ. ಇರುತ್ತದೆ). ಕಡಲ ಕಳೆಯಡೆಯ ಬೃಹತ್ ಪಾಚಿಯನ್ನು ಹೆಚ್ಚಾಗಿ ಜೈವಿಕ ಇಂಧನ ಉತ್ಪಾದನೆಗೆ ಬಳಸಲಾಗುವುದಿಲ್ಲ. ಬೃಹತ್ ಪಾಚಿಗಿಂತ ಅತಿ ಸೂಕ್ಷ್ಮಪಾಚಿಯು ಹೆಚ್ಚು ತೈಲ ಹೊಂದಿರುವುದಾಗಿಯು, ಹೆಚ್ಚು ವೇಗವಾಗಿ ಬೆಳೆಯುವಂತದ್ದಾಗಿಯೂ ಬೆಳೆಯಲು ಸುಲಭದ್ದಾಗಿದೆ (ಎಬಿಐಎಮ್ ಶರಿಫ ಹುಕ್ರೇನ್ 2008). ಈಗಿನ ಸಂಶೋಧನೆ ಆಧಾರದ ಮೇಲೆ ಈ ಕೆಳಗಿನ ಗುರಿಗಳನ್ನಾಗಿ ರೂಪಿಸಲಾಗಿದೆ.

ವಸ್ತು ಮತ್ತು ವಿಧಾನಗಳು: ಬೇಕಾದ ರಸಾಯಿನಿಕಗಳು ಮತ್ತು ಲವಣಗಳು ಬಿ.ಜಿ–11 (ಹೈಮೀಡಿಯ ಲ್ಯಾಬೋರೇಟರಿ ಮುಂಬೈ) ಬಿಬಿಐಎಮ್ ಲವಣಗಳು ಸಿ.ಹೆಚ್.ಯೂ–13 ಮತ್ತು TAP ಮಾಧ್ಯಮ ಲವಣಗಳು $NaNO_3$ (ಮಾರ್ಕ್

ಸ್ಪೆಷಾಲಿಟಿ ಪ್ರೈ.ಲಿ., ಮುಂಬೈ) K_2HPO_4, KM_2PO_4, $FeSO_4$, EDTA (ಫಿಶರ್ ಸೈಂಟಿಫಿಕ್, ಮುಂಬೈ). $MgSo_4$ (ಟೈಟಾನ್ ಬಯೋಟೆಕ್ ಲಿ., ರಾಜಸ್ಥಾನ್) Nacl (ಎಸ್ ಡಿ ಫೈಸ್ ಕೆಮಿಕಲ್ ಲಿ., ಮುಂಬೈ) $cacl_2$, KOHಸಿಟ್ರಿಕ್ ಆಮ್ಲ, ಟ್ರೇ ಎಲಿಮೆಂಟ್, $-2nso_4 7H_2O$,H_3BO_3, $Mncl_2$, $4H_2O$ (ಹೈಮೀಡಿಯಾ ಲ್ಯಾಬೊರೇಟರಿಸ್, ಮುಂಬೈ), ನೈಲ್ ಕೆಂಪು ಬಣ್ಣ (ಮಾರ್ಕ್ಲ್ಯಾಬೊರೇಟರಿ, ಮುಂಬೈ).

ಸೂಕ್ಷ್ಮ ಪಾಚಿಗಳ ತಳಿಗಳ (ಸ್ಟೈನ್) ಸಂಗ್ರಹ ಮತ್ತು ಪ್ರತ್ಯೇಕತೆ: ಜೈವಿಕ ಇಂಧನ ಉತ್ಪಾದನೆಗೆ ಸಾಮರ್ಥ್ಯವಿರುವ ಸೂಕ್ಷ್ಮ ಪಾಚಿಗಳನ್ನು ಗುರುತಿಸಿ ಪ್ರತ್ಯೇಕಿಸುವುದಕ್ಕಾಗಿ ಹೆಬ್ಬಾಳ ಕೆರೆಯಿಂದ ನೀರಿನ ಮಾದರಿಗಳನ್ನು ಸಂಗ್ರಹಿಸಲಾಯಿತು. ಬಿ.ಟಿ.ಎಮ್. ಬಿ.ಜಿ.–11, ಸಿ.ಹೆಚ್.ಯು–13, ಮತ್ತು ಟಿ.ಎಸ್.ಪಿ., ಘನ ಮತ್ತು ದ್ರವ ಮಾಧ್ಯಮಗಳನ್ನು ತಯಾರಿಸಿ ಕ್ರಿಮಿ ಶುದ್ಧೀಕರಿಸಲಾಯಿತು, ಪಾಚಿಗಳ ಉತ್ತಮ ಬೆಳವಣಿಗೆ ಅದೇ ಕೆರೆಯ ಸಿಹಿ ನೀರನ್ನು ಮಾಧ್ಯಮಕ್ಕೆ ಸೇರಿಸಲಾಯಿತು. ಸೂಕ್ಷ್ಮದರ್ಶಕ ಅವಲೋಕನದಿಂದ ಪಾಚಿಯನ್ನು ಕ್ಲೋರೆಲ್ಲಾ ತಳಿ ಎಸ್.ಪಿ.ಎಸ್. ಎಂದು ಗುರುತಿಸಲಾಯಿತು (100 X ವರ್ಧನೆಯಲ್ಲಿ).

ಮಾಧ್ಯಮ ಮತ್ತು ಒತ್ತಡ ಸಹಿಷ್ಣುತೆಯನ್ನು ಉತ್ತಮಗೊಳಿಸುವಿಕೆ. ಇಂತ ಮಾಧ್ಯಮಗಳಿಗಿಂತ ಬಿಟಿಎಮ್ ಮಾಧ್ಯಮದಲ್ಲಿ ಬೆಳೆದ ಪ್ರತ್ಯೇಕ ಅತಿ ಸೂಕ್ಷ್ಮಪಾಚಿಯಲ್ಲಿ ಹೆಚ್ಚು ಬೆಳವಣಿಗೆಯನ್ನು ಗಮನಿಸಲಾಯಿತು. ಹಾಗೆಯೇ ಬಿ.ಜಿ.–11 ಮಾಧ್ಯಮದಲ್ಲಿ ಸಾಕಷ್ಟು ಬೆಳವಣಿಗೆಯನ್ನು ಗಮನಿಸಲಾಯಿತು.

ಸೂಕ್ಷ್ಮ ದರ್ಶಕದಿಂದ ವೀಕ್ಷಣೆ: ಸೂಕ್ಷ್ಮಪಾಚಿಗಳನ್ನು ಸೂಕ್ಷ್ಮ ದರ್ಶಕದಲ್ಲಿ ಗಮನಿಸಲಾಗಿ, ಅವುಗಳ ಸ್ವರೂಪದ ಲಕ್ಷಣ (Lamboded CXR_2 ಸೂಕ್ಷ್ಮದರ್ಶಕ)ಗಳನ್ನು ಆದರಿಸಿ ಗುರುತಿಸಲಾಯಿತು.

ಪಾಚಿ ಬೆಳವಣಿಗೆ ವಿಶ್ಲೇಷಣೆ: ಪ್ರತ್ಯೇಕ ಪಾಚಿಯ ಬೆಳವಣಿಯ ಗತಿಯನ್ನು 600 ನ್ಯಾನೋಮೀಟರ್ ಆಪ್ಟಿಕಲ್ ಸಾಂದ್ರತೆಯಲ್ಲಿ ಎಲಿಕೋ ಎಸ.ಎಲ್.–159 ಯುವಿ–ವಿ.ಐ.ಎಸ್. ರೋಹಿತದ್ಯುತಿಮಾಪಕ ಉಪಯೋಗಿಸಿ ಅಳೆಯಲಾಯಿತು.

ಕೊಬ್ಬನ್ನು ಪತ್ತೆ ಹಚ್ಚುವಿಕೆ: ಪರಿಣಾಮಕಾರಿ ಜೈವಿಕ ಇಂಧನ ಉತ್ಪಾದನೆಗೆ ಉತ್ತಮ ಕೊಬ್ಬನ್ನು ಉತ್ಪಾದಿಸುವ ಪಾಚಿಯ ಗುರುತಿಸುವಿಕೆ ಮತ್ತು ಕೊಬ್ಬಿನ ಗುಣಾತ್ಮಕ ಹಾಗು ಪರಿಮಾಣಾತ್ಮಕ ವಿಶ್ಲೇಶಣೆ ಅತ್ಯವಶ್ಯಕವಾಗಿದೆ. ನೈಲ್ ಕೆಂಪು ಬಣ್ಣ ಉಪಯೋಗಿಸುವ ಮೂಲಕ ಕ್ಷಿಪ್ರವಾಗಿ ಕೊಬ್ಬಿನ ಇರುವಿಕೆಯನ್ನು ಕಂಡು ಹಿಡಿಯಬಹುದಾಗಿದೆ.

ನೈಲ್ ಕೆಂಪುಸ್ಟೈನಿಂಗ್ (9 ಡೈಇಥೈಲ್ ಆಮೈನೊ–5 ಬೆನ್ಸೋ ಫೀನಾಕ್ಸಝುಝೋನ್)ನ್ನು ವಿಶೇಷವಾಗಿ ಪ್ರಾಣಿಗಳ ಜೀವಕೋಶಗಳು ಮತ್ತು ಇತರ ಸೂಕ್ಷ್ಮ ಜೀವಿಗಳಲ್ಲಿನ ಕೊಬ್ಬಿನ ಅಂಶವನ್ನು ಪತೆಹಚ್ಚಲು ಬಳಸಲಾಗುತ್ತದೆ (ಕುಕ್‌ಸಿ ಇತರರು 1987, ಎಲ್‌ಸಿ ಇತರರು 2007). ಸ್ಟೈನಿಂಗ್ ನ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಮತ್ತು ಪಾಚಿಯ ಕಾರ್ಯ ಸಾಂದ್ರತೆಯನ್ನು ನಿರ್ವಹಿಸಲು ಡೈಮೀಥೇಲ್ ಸಲ್ಫಾಕ್ಸೈಡ್ ಅನ್ನು ಕಡಿಮೆ ಸಾಂದ್ರತೆಯಲ್ಲಿ ಬಳಸಬಹುದು (ಚೆನ್‌ಡದಲ್ಲೂ ಮತ್ತು ಇತರರು 2009; ಸಾಲ್‌ಡಿಂಗ್ 2012).

ಸೂಕ್ಷ್ಮಪಾಚಿಯ ಕೋಷಗಳನ್ನು 15 ನಿಮಿಷಗಳ 2 ul ಕಾಲ ನೈಲ್ ಕೆಂಪು ಬಣ್ಣ ದ್ರಾವಣದೊಂದಿಗೆ ಸೇರಿಸಿ (ಅಸಿಟೊಸ್ ಜೊತೆ ಮಿಶ್ರಣ ಮಾಡಿ). 1.5 ul ಡಿ.ಎಸಮ್.ಎಸ್.ಓ. ಮಿಶ್ರಣ ಮಾಡಿ ತಯಾರಿಸಿದ ಮಿಶ್ರಣವನ್ನು 40^0c ನಲ್ಲಿ 60 ನಿಮಿಷಗಳ ಕಾಲ ಕಾವು ಕೊಡಬೇಕು. ನಂತರ ಪ್ರತಿದೀಪಕ ಸೂಕ್ಷ್ಮದರ್ಶಕ ಸಹಾಯದಿಂದ 100X ತೈಲ ಇಮ್ಮರ್ಶನ್ ಅಡಿಯಲ್ಲಿ ಚಿತ್ರ ತೆಗೆದು ಗಮನಿಸಬೇಕು.

ಪಾಚಿಗಳ ಸಾಮೂಹಿಕ ಕೃಷಿ: ಆರಂಭದಲ್ಲಿ ಸಾಮೂಹಿಕ ಕೃಷಿಯನ್ನು ಆಟೋಕ್ಲೇವ್ ಮಾಡಿದ ಬಿಬಿಎಂ ಮಾಧ್ಯಮವನ್ನು ಒಳಗೊಂಡ 2 ಲೀ. ಮತ್ತು 5 ಲೀ. ಬೋರೋಸಿಲ್ ಗಾಜಿನ ಪಾತ್ರೆಯಲ್ಲಿ ಮಾಡಲಾಯಿತು. ಮುಂಚೆಯೇ ತಯಾರಿಸಿದ ಕಲ್ಚರ್‌ನಿಂದ ಗಾಜಿನ ಬಾಟಲಿಗೆ ಸುಮಾರು 100 ಮಿ.ಲಿ. ಮತ್ತು 300 ಮಿ.ಲಿ. ಅನ್ನು ಸೂಕ್ಷ್ಮಜೀವ ರಹಿತ ಸ್ಥಿತಿಯಲ್ಲಿ ಇನ್ಯಾಕ್ಯುಲೇಟ್ ಮಾಡಲಾಯಿತು. ಹೊಸದಾಗಿ ಇನಾಕ್ಯುಲೇಟ್ ಮಾಡಿರುವ ಕಲ್ಚರ್‌ಗಳನ್ನು ಕೊಠಡಿ ತಾಪಮಾನದಲ್ಲಿ ನಿರಂತರ ಮಿಶ್ರಣ ಕ್ರಿಯೆಯೊಂದಿಗೆ 15–20 ದಿನಗಳ ವರೆಗೆ ಪ್ರತಿದೀಪಕ ಬಿಳಿ ಬೆಳಕಿನಲ್ಲಿ ಬೆಳೆಸಲಾಯಿತು.

ಕಲ್ಚರ್ ಕೋಯ್ಲು ಮಾಡುವುದು: ರೆಫ್ರಿಜಿರೇಟೆಡ್ ಉಪಕೇಂದ್ರವನ್ನು ಬಳಸಿ 20 ದಿನಗಳ ನಂತರ ಕೋಯ್ಲುಮಾಡಲಾಯಿತು. ಕೋಯ್ಲು ಮಾಡಿದ ಜೀವರಾಶಿಯ ತೂಕವನ್ನು ಅಳೆಯಲಾಯಿತು. ಜೀವರಾಶಿಯು ನೀರಿನಂಶವನ್ನು 50^0c ಬಿಸಿ ಗಾಳಿ ಓವೆನ್‌ನಲ್ಲಿ ಇಡುವ ಮೂಲಕ ತಿಳಿದುಕೊಳ್ಳಲಾಯಿತು. ಒಣಗಿದ ಜೀವರಾಶಿಯ ತೂಕವನ್ನು ಅಳೆದು ಮತ್ತೆ ಮುಂದಿನ ಕೊಬ್ಬಿನಂಶವನ್ನು ಹೊರತೆಗೆಯುವ ಕಾರ್ಯಕ್ಕಾಗಿ ಕೊಠಡಿ ತಾಪಮಾನದಲ್ಲಿ ಶೇಖರಿಸಿಡಲಾಯಿತು.

ಕೊಬ್ಬು ಹೊರತೆಗೆಯುವಿಕೆ: ಕುಬೋಟ ಹೈಸ್ಪೀಡಿ ಉಪಕೇಂದ್ರಿಕ ಉಪಯೋಗಿಸಿ 500 ಮಿಲಿ ಪಾಚಿಯನ್ನು ಕೊಯ್ಲು ಮಾಡಲಾಯಿತು (10000 ಆರ್‌ಪಿಎಮ್ ನಲ್ಲಿ 5 ನಿಮಿಷ) ಟ್ರಾನ್ಸ ವಸ್ಟರಿಫಿಕೇಷನ್ ಥಿನ್‌ಲೇಯರ್ ಕ್ರೋಮೋಟೋಗ್ರಫಿ, ಮೆದಾಮ್ಲ ವಿಶ್ಲೇಷಣೆ ಮತ್ತು ಪಿಸಿಆರ್‌ಗಳನ್ನು ಮಾಡಲಾಯಿತು.

ಫಲಿತಾಂಶ ಮತ್ತು ತೀರ್ಮಾನಗಳು:

ಪಾಚಿಗಳನ್ನು ಪ್ರತ್ಯೇಕಿಸುವುದು: 2 ರಿಂದ 3 ವಾರಗಳ ಬೆಳವಣಿಗೆಯ ನಂತರ ಹೆಟೆರೋಜಿನಿಯಸ್ ಪಾಚಿ ಕಲ್ಚರ್‌ಗಳನ್ನು ಪಡೆಯಲಾಯಿತು. ಸರಣಿ ಡೈಲೂಶನ್ ಪ್ರಕ್ರಿಯೆಯಿಂದ ಆಕ್ಸನಿಕ್ ಸಮೂಹಗಳನ್ನು ಪಡೆಯಲಾಯಿತು. ಮಾದರಿಗಳನ್ನು ಮೂರು ವಾರಗಳ ವರೆಗೆ ಬಿಬಿಎಮ್, ಬಿಜಿ–11 ಮತ್ತು ಪಾಚಿಯ ಬ್ರಾತ್ ಮಾಧ್ಯಮದಲ್ಲಿ ಗೆರೆ ಎಳೆಯಲಾಯಿತು. ಏಕ ಮತ್ತು ಶುದ್ಧ ಸಮೂಹಗಳನ್ನು ಪ್ರತ್ಯೇಕಿಸಲಾಯಿತು. ಒಂದು ಶುದ್ಧ ಸಮೂಹವನ್ನು ಎ–1 ಎಂದು ಕರೆಯಲಾಯಿತು. ತದನಂತರ ಈ ಸಮೂಹವನ್ನು ವಿವಿದ ಮಾಧ್ಯಮಗಳಿಗೆ ಸಬ್ ಕಲ್ಚರ್ ಮಾಡಲಾಯಿತು.

ಸಮೂಹ ಗುಣ ಲಕ್ಷಣಗಳು: ಸಮೂಹ ಎ–1, ಬಿಬಿಎಮ್, ಬಿಜಿ–11 ಮತ್ತು ಎಸಿಬಿ ಮಾಧ್ಯಮದಲ್ಲಿ ಹಸಿರು ಬಣ್ಣದ ಸಣ್ಣಗೋಳಾಕಾರದ ಸಮೂಹಗಳಾಗಿ ಕಾಣಿಸಿಕೊಂಡಿತು. ಅವುಗಳಿಗೆ 2–3 ವಾರಗಳ ಬೆಳವಣಿಗೆ ಅವದಿ ಅವಶ್ಯಕವಾಯಿತು. ಅವು ಬಿಬಿಎಮ್ ಮಾಧ್ಯಮದಲ್ಲಿ ಉತ್ತಮ ಬೆಳವೆಣಿಗೆಯನ್ನು ತೋರಿಸಿದವು.

ಸೂಕ್ಷ್ಮ ದರ್ಶಕದಲ್ಲಿ ವೀಕ್ಷಣೆ: ಪಾಚಿಯ ಶುದ್ಧ ಸಮೂಹಗಳ ಸ್ಲೈಡ್‌ಗಳನ್ನು 10X, 40X ಮತ್ತು ತೈಲ ಇಮರ್ಶನ್ ಅಡಿಯಲ್ಲಿ ನೋಡಲಾಯಿತು. ಅದರಲ್ಲಿ ತೆಳುವಾದ ಹಸಿರು ಬಟ್ಟಲಿನಾಕಾರದ ಕ್ಲೋರೋಪ್ಲಾಸ್ಟ್‌ಗಳನ್ನೊಳಗೊಂಡ ಏಕಕೋಶೀಯ ಜೀವಕೋಶಗಳು ಕಂಡುಬಂದವು. ಸೂಕ್ಷ್ಮದರ್ಶಕೀಯ ಮತ್ತು ಕಣ್ಣಿನ ಅವಲೋಕನಗಳನ್ನು ಹಾಗು ಪಾಚಿಗಳನ್ನು ಗುರುತಿಸುವ ಬಣ್ಣ ಕೈಪಿಡಿಗಳನ್ನು ಆದರಿಸ ಪಾಚಿಯನ್ನು ತಾತ್ಕಾಲಿಕವಾಗಿ ಕ್ಲೋರೆಲ್ಲಾ ಜಾತಿ ಎಂದು ಗುರುತಿಸಲಾಯಿತು (ನ್ಯಾನ್‌ಸಿ ಇತರರು 2009) ಚಿತ್ರ–1).

ಮಾಧ್ಯಮ ಉತ್ತಮಗೊಳಿಸುವಿಕೆ ಮತ್ತು ಒತ್ತಡ ಸಹಿಷ್ಣುತೆ: ಪ್ರತ್ಯೇಕವಾದ ಪಾಚಿಕಲ್ಚರ್‌ಗಳನ್ನು ಮೊದಲಿಗೆ ಬಿಬಿಎಮ್, ಬಿಜಿ–11, ಪಾಚಿ ಬ್ರಾತ್, ಸಿಹೆಚ್‌ಯು–13, ಮತ್ತು ಟಿಎಪಿ ಮಾಧ್ಯಮದಲ್ಲಿ ಸಬ್ ಕಲ್ಚರ್ ಮಾಡಲಾಯತು. ಇವಿಷ್ಟರಲ್ಲಿ ಬಿಬಿಎಮ್ ಮಾಧ್ಯಮದಲ್ಲಿ ಪಾಚಿಗಳ ಗಮಾನರ್ಹ ಬೆಳವಣಿಗೆ

ಕಂಡುಬಂದಿದ್ದಲ್ಲದೆ ಪಾಚಿ ಬ್ರಾತ್ ನಲ್ಲಿ ಬಿಜಿ–11 ಮಾಧ್ಯಮಕ್ಕಿಂತ ತುಲನಾತ್ಮಕವಾದ ಉತ್ತಮ ಬೆಳವಣಿಗೆ ಕಂಡು ಬಂದಿತು. ಸಿಹೆಚ್‌ಯು–13 ಮತ್ತು ಟಿಎಪಿ ಮಾಧ್ಯಮದಲ್ಲಿ ಯಾವುದೇ ಗಮನಾರ್ಹ ಬೆಳವಣಿಗೆ ಕಂಡುಬಂದಿಲ್ಲ. ಹೀಗಾಗಿ ಬಿಬಿಎಮ್ ಮಾಧ್ಯಮವು ಸಬ್ ಕಲ್ಚರ್ ಮತ್ತು ಇತರ ಪ್ರಯೋಗಗಳಿಗೆ ಅತ್ಯುತ್ಯಮ ಮಾಧ್ಯಮವಾಗಿದೆ. ಪಾಚಿ ಕಲ್ಚರ್‌ಗಳು ಬಿಬಿಎಮ್ ಮಾಧ್ಯಮದಲ್ಲಿ ಸಾಕಷ್ಟು ಸಾರಜನಕದಲ್ಲಿ ಕ್ಷಿಪ್ರ ಬೆಳವಣಿಗೆ ಮತ್ತು ಉತ್ತಮ ಜೀವರಾಶಿ ಇಳುವರಿಯನ್ನು ನೀಡಿತು. ಆದರೆ ಸಾರಜನಕ ವಂಚಿತ ಬಿಬಿಎಮ್ ಮಾಧ್ಯಮದಲ್ಲಿ ಕ್ಷಪ್ರ ಬೆಳವಣಿಗೆಗೆ ಮತ್ತು ಉತ್ತಮ ಜೀವರಾಶಿ ಇಳುವರಿ ಕಂಡುಬಂದಿಲ್ಲ.

ಬೆಳವಣಿಗೆ ಗತಿ ವಿಶ್ಲೇಷಣೆ: ವಿವಿಧ ಸಾರಜನಕ ಸಾಂದ್ರತೆಗಳಲ್ಲಿ ಪಾಚಿಯ ಕಲ್ಚರ್‌ಗಳ ಬೆಳವಣಿಗೆ ಗತಿಯನ್ನು 15 ದಿನಗಳವರೆಗೆ ನಿರಂತರವಾಗಿ ಒಡಿಯನ್ನು UV-VIS ರೋಹಿತ ದ್ಯುತಿಮಾಪಕದಿಂದ ಅಳೆಯಲಾಯಿತು (600 ನ್ಯಾನೋ ಮೀಟರ್‌ನಲ್ಲಿ). ಪೂರ್ಣಸಾರಜನಕ ಸಾಂದ್ರತೆಯಲ್ಲಿ ತ್ವರಿತ ಬೆಳವಣಿಗೆ ಗತಿಯನ್ನು ವೀಕ್ಷಿಸಲಾಯಿತು. 15ನೇ ದಿನದಂದು ಬೆಳವಣಿಗೆಯ ಮಂದ ಲಾಗ್ ಮತ್ತು ಸ್ಥಾಯಿ ಗತಿಯನ್ನು ಪೂರ್ಣ ಮತ್ತು ಅರ್ದ ಸಾರಜನಕ ಸಾಂದ್ರತೆಗಳಲ್ಲಿ ಅಳೆಯಲಾಯಿತು. 15ನೇ ದಿನದಂದು ಸಾರಜನಕ ವಂಚಿತ ಮಾಧ್ಯಮದಲ್ಲಿ ಬೆಳವಣಿಗೆಯ ಗತಿಯನ್ನು ನಿಧಾನವಾಗಿ ಅವನತಿಯ ಹಂತ ತಲುಪುವುದನ್ನು ತೋರಿಸಲಾಯಿತು (ಟೇಬಲ್–1, ಚಿತ್ರ 2).

ವರ್ಣ ದ್ರವ್ಯಗಳನ್ನು ಬೇರ್ಪಡಿಸುವಿಕೆ: ಮಾದರಿಯಲ್ಲಿನ ಪತ್ರ ಹರಿತ್ತು ಮತ್ತು ಕೆರೋಟಿನಾಯ್ಡಿಗಳ ಒಟ್ಟು ಪ್ರಮಾಣವನ್ನು ಲಿಚಟೆತಾಲೆರ್ ಸಮೀಕರಣದಿಂದ ಅಳೆಯಲಾಯಿತು.

ಕೊಬ್ಬಿನ ಅಂದಾಜು ಮಾಡುವಿಕೆ: ನೈಲ್ ಕೆಂಪು ಸ್ಟೇನಿಂಗ್ ಮಾಡಿ ಕೊಬ್ಬಿನಾಂಶದ ಇರುವಿಕೆಯನ್ನು ಕಂಡುಹಿಡಿಯಲು ಕಲ್ಚರ್‌ನ್ನು ನೀಲಿ ಬೆಳಕಿನಲ್ಲಿ ಪ್ರತಿ ಸೂಕ್ಷ್ಮದರ್ಶಕವನ್ನು ಬಳಸಿಕೊಂಡು ಗಮನಿಸಲಾಯಿತು ಸಾರಜನಕ ವಂಚಿತ ಸ್ಥಿತಿಯಲ್ಲಿ ಬೆಳೆದ ಕಲ್ಚರ್‌ನಲ್ಲಿ ಹೆಚ್ಚು ಪ್ರತಿದೀಪ್ತಿಯನ್ನು ಗಮನಿಸಲಾಯಿತು. ಇದರಿಂದ ಸಾರಜನಕ ಹೆಚ್ಚು ಕೊರತೆಉಂಟಾದಾಗ ಕೊಬ್ಬಿನಂಶ ಶೇಖರಣೆ ಹೆಚ್ಚಾಗುತ್ತದೆ ಎಂದು ತೋರಿಸಲಾಯಿತು.

ಕ್ಲೋರೋಫಾರ್ಮ ಮತ್ತು ಮಿಥೆನಾಲ್ ಅನ್ನು ದ್ರಾವಣವಾಗಿ ಬಳಸಿ ಕೊಬ್ಬನ್ನು ಬೇರ್ಪಡಿಸಲಾಯಿತು (ಬ್ಲಘ್ ಮತ್ತು ಡ್ರೈಯರ್, 1959). ಕೊಬ್ಬಿನಂಶವು ದ್ರವೀಯವಲ್ಲದ ಪ್ರಕೃತಿ ಹೊಂದಿರುವುದರಿಂದ ಕ್ಲೋರೋಫಾರ್ಮನಲ್ಲಿ ಸುಲಭವಾಗಿ ಕರಗುತ್ತದೆ. ಸೂಕ್ತ ಸೂತ್ರವನ್ನು ಬಳಸಿಕೊಂಡು ಕೊಬ್ಬಿನಂಶವನ್ನು ಅಳೆಯಲಾಯಿತು. ಪ್ರತಿ ಮಾದರಿಯ ಕೊಬ್ಬಿನಂಶವನ್ನು ಟೇಬಲ್–2ರಲ್ಲಿ ನೀಡಲಾಗಿದೆ. ಅತ್ಯಧಿಕ ಕೊಬ್ಬಿನಂಶವನ್ನು ಸಾರಜನಕ ವಂಚಿತ ಮಾಧ್ಯಮದಲ್ಲಿ ಬೆಳೆದ ಕಲ್ಚರ್‌ನಲ್ಲಿ ಕಾಣಬಹುದು.

ಟ್ರಾನ್ಸ್‌ಎಸ್ಟರಿಫಿಕೇಶನ್: NaOH ಮತ್ತು ಮಿಥೆನಾಲ್ ಮಿಶ್ರಣವನ್ನು ಬಳಸಿಕೊಂಡು ಕೊಬ್ಬಿನ ಮಾದರಿಯ ಟ್ರಾನ್ಸ್‌ಎಸ್ಟರಿಫಿಕೇಶನ್ ಪ್ರತಿಕ್ರಿಯೆಯನ್ನು ನಡೆಸಲಾಯಿತು. ಟ್ರಾನ್ಸ್‌ಎಸ್ಟರಿಫಿಕೇಶನ್ ಪ್ರಕ್ರಿಯೆಯಿಂದ ಉತ್ಪಾದನೆಯಾದ ಮಿಥೆಲ್‌ಎಸ್ಟರನ್ನು FAME, GCMS ಅಥವಾ HPCL ಉಪಯೋಗಿಸಿ ವಿಶ್ಲೇಶಿಸಿ ಪರಿಮಾಣಿಸಲಾಯಿತು.

ತಿನ್ ಲೇಯರ್ ಕೋಮಟೋಗ್ರಫಿ: ಸಾರಜನಕ ವಂಚಿತ ಮಾಧ್ಯಮದಲ್ಲಿ ಬೆಳೆದ ಕಲ್ಚರ್‌ಗಳಿಗೆ ತಿನ್ ಲೇಯರ್ ಕ್ರೋಮೊಟೋಗ್ರಫಿ ಸಾದರಪಡಿಸಲಾಯಿತು. ಇದು ಬೃಹತ್ ಪ್ರಮಾಣದ ಕೊಬ್ಬಿನ ಆಮ್ಲಗಳ ಇರುವಿಕೆಯನ್ನು ತೋರಿಸಿತು (ಚಿತ್ರ–3).

ತೀರ್ಮಾನಗಳು: ಬೆಂಗಳೂರಿನ ಹೆಬ್ಬಾಳ ಕೆರೆಯಿಂದ ಒಂದು ಶುದ್ಧ ಕುಲವನ್ನು ಪಡೆಯಲಾಯಿತು. ಇದಕ್ಕೆ ಪೂರಕವಾಗಿ ಇತರೆ ಜೀವ ವರ್ಗೀಕರಣ ವಿಧಾನಗಳನ್ನು ಬಳಸುವುದು ಅಗತ್ಯವಾಯಿತು. ಇದರ ಬೆಳವಣಿಗೆಗೆ ಉತ್ತಮ ಮಾಧ್ಯಮವೆಂದು ಕಂಡುಬಂದ ಬಿಬಿಎಂ ಮಾಧ್ಯಮದಲ್ಲಿ ಇದನ್ನು ಬೆಳೆಸಿ ಸಬ್ ಕಲ್ಚರ್ ಮಾಡಲಾಯಿತು. ಮಾಧ್ಯಮವನ್ನು ಉತ್ತಮಗೊಳಿಸಿ ಸಾರಜನಕ ಸಾಂದ್ರತೆಯನ್ನು ಬದಲಾಯಿಸುವ ಮೂಲಕ ಒತ್ತಡವನ್ನು ಪ್ರಚೋದಿಸಲಾಯಿತು.

ಸೂಕ್ತ ಸಾರಜನಕ ಹೊಂದಿದ ಮಾಧ್ಯಮದಲ್ಲಿ ಬೆಳೆದ ಕಲ್ಚರ್ಗಳು ತೋರಿತ ಬೆಳವಣಿಗೆ ಮತ್ತು ಉತ್ತಮ ಜೀವರಾಶಿ ಇಳುವರಿಯನ್ನು ತೋರಿಸಿದವು. ಸಾರಜನಕ ವಂಚಿತ ಕಲ್ಚರ್‌ಗಳಲ್ಲಿ ಉತ್ತಮ ಕೊಬ್ಬಿನ ಶೇಕರಣೆ ಗಮನಿಸಲಾಯಿತು. TLC ಇಂದ ಮುಕ್ತ ಕೊಬ್ಬಿನ ಆಮ್ಲಗಳು ಮತ್ತು ಟ್ರೈಗ್ಲಿಸಾರಾಲ್ಡಿಹೈಡ್‌ಗಳು ಇರುವುದು ಕಂಡುಬಂದವು. ಇದು ಹೊಸ ಪಾಚಿಯು ಜೈವಿಕ ಇಂಧನ ಉತ್ಪಾದನೆ ಮಾದರಿಯಾಗಿದೆ ಎಂದು ತೋರಿಸುತ್ತದೆ. ಟ್ರಾನ್ಸಎಸ್ಟರಿಫಿಕೇಶನ್ ಆದ ನಂತರ ಕೊಬ್ಬಿನ ಮಾದರಿಗಳಲ್ಲಿ ಮಿಥೇಲ್‌ಎಸ್ಟರ್ ಇರುವುದನ್ನು ಕಂಡುಹಿಡಿಯಲು GC-MS ಅಥವಾ HPCL ಅಂತಹ ವಿಸ್ತಾರವಾದ ವಿದಾನಗಳ ಅಗತ್ಯವಾಗುತ್ತದೆ. ಮೆಟಾಬಾಲಿಕ್, ಜೆನೆಟಿಕ್ ಇಂಜನೀಯರಿಂಗ್ ಮಾಡುವುದರಿಂದ ಸಹಜ ಪ್ರಕಾರ ಪಾಚಿಯ ತಳಿಗಳು ಹೊಸ ವಾತಾವರಣದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ಹಾಗು ಅಧಿಕ ಅಸೈಲ್ ಗ್ಲಿಸರಾಲ್ ಉತ್ಪಾದಿಸುವಂತೆ ಮಾಡಬಹುದು. ಇನ್ನೊಂದು ಸಮರ್ಥ ವಿಧಾನವೆಂದರೆ ಪ್ರತಿಕ್ರಿಯಾ ಸರಣಿಯಲ್ಲಿ ಅಗತ್ಯಕ್ಕಿಂತ ಹೆಚ್ಚು ಇರುವ ಪ್ರತಿಕ್ರಿಯೆಗಳನ್ನು ಅಳಿಸುವುದರಿಂದ ಜೈವಿಕ ಇಂಧನ ಉತ್ಪಾದನೆಗೆ ಅಗತ್ಯವಾಗಿರುವ ಹೆಚ್ಚುವರಿ ಮುನ್ಸೂಚಕ ಚಯೋಪಚಯಗಳನ್ನು ಉತ್ಪಾದಿಸುವುದು.

ಉಲ್ಲೇಖಗಳು:

1. ಎಂಡೋ ಹೆಚ್, ಹೊಸೊಯಾ, ಹೆಚ್, ಕೊಯಿಬೂಚಿ.ಟಿ, 1977, ಗ್ರೌತ್ ಯೀಲ್ಡ್ ಆಫ್ ಕ್ಲೋರೆಲ್ಲಾ ರೆಗ್ಯುಲಾರಿಸಮ್ ಡಾರ್ಕ ಹೆಟೆರೊಟ್ರೋಪಿಕ್ ಕಂಟೀನಸ್ ಕಲ್ಚರ್ ಯೂಸಿಂಗ್ ಅಸಿಟೆಟ್.ಜೆ., ಫೆರ್ಮಟೆಂಟ್. 55, 369–379.
2. ಗುಅವೇ ಇ.ಎಲ್., ಒಲಿವೆರಿಯ, ಎ.ಸಿ., 2009, ಸೂಕ್ಷ್ಮ ಪಾಚಿಯು ಜೈವಿಕ ಇಂಧನದ ಒಂದು ಕಚ್ಚಾ ವಸ್ತು. ಜೆ., ಇಂಡ್ ಮೈಕ್ರೋಬಿಯಲ್ ಬಯೋಟ್, 36 (2): 269–274.
3. ಸ್ಟಾಟ್ಸ್ ಎಸ್.ಎ., ಡಾಖೆಯ್ ಖಮ್ಸ್,ಪಿ., ಡೆನಿಸ್ಸ್, ಹೂವೆ, ಸಿ.ಜೆ., ಲಿಯಾ ಸ್ಮಿತ್ , ಡಿ.ಜೆ., ಅಟ್ ಅಲ್., ಪಾಚಿಯ ಜೈವಿಕ ಇಂಧನ ಚಾಲೆಂಜಸ್ ಮತು ಪ್ರೊಸ್ಪೆಕ್ಟಸ್, ಕುರ್‌ಒಪಿನ್‌ಬಯೋಟೆಕ್ನಲ್, 2010; 21:277–86.
4. ವು., ಕ್ಯೂ.ವೈ., ಯಿನ್, ಎಸ್.,' ಶೇಂಗ್, ಜಿ.ವೈ., ಘು, ಜೆ.ಎಂ, 1994 ಉಷ್ಣದಿಂದಾಗಿ ಹಳದಿ ಪಾಚಿಯ ಅವನತಿಯಿಂದ ಉಂಟಾಗುವ ಹೈಡ್ರೋಕಾರ್ಬನ್‌ನ ಬಗ್ಗೆ ಹೊಸ ಅನ್ವೇಷಣೆ. ವಿಜ್ಞಾನ.ಚಿನ.(ಬಿ) 37, 326–335.



ಚಿತ್ರ–1: ಸೂಕ್ಷ್ಮದರ್ಶಕ ವೀಕ್ಷಣೆ ಕ್ಲೋರೆಲ್ಲಾ



ಚಿತ್ರ–2: ಸಾರಜನಕ ವ್ಯತ್ಯಾಸದಿಂದ ಬಿಬಿಎಮ್ (ಬೋಲ್ಡ್ ಬೇಸಲ್ ಮೀಡಿಯಾ) ಮಾಧ್ಯಮದಲ್ಲಿ ಕ್ಲೋರೆಲ್ಲಾ ಬೆಳವಣಿಗೆ



ಚಿತ್ರ–3 ಕ್ಲೋರೆಲ್ಲಾದ ಟಿಎಲ್ಸಿ ಫಲಿತಾಂಶ

ಟೇಬಲ್– 1 ಸಾರಜನಕ ವ್ಯತ್ಯಾಸದಿಂದ ಬಿಬಿಎಮ್ (ಬೋಲ್ಡ್ ಬೇಸಲ್ ಮೀಡಿಯಾ) ಮಾಧ್ಯಮದಲ್ಲಿ ಕ್ಲೋರೆಲ್ಲಾ ಬೆಳವಣಿಗೆ

ದಿನಗಳು	ಪೂರ್ಣ ಸಾರಜನಕ	ಅರ್ಧ ಸಾರಜನಕ	ಸಾರಜನಕ ರಹಿತ
1	0.22	0.139	0.096
2	0.259	0.146	0.118
3	0.328	0.158	0.123
4	0.376	0.163	0.161
5	0.413	0.226	0.215
6	0.544	0.258	0.268
7	0.707	0.401	0.383
8	0.774	0.489	0.398
9	0.805	0.568	0.414
10	0.863	0.613	0.452
11	0.956	0.59	0.428
12	1.37	0.591	0.402
13	1.502	0.617	0.378
14	1.585	0.635	0.354
15	1.648	0.689	0.311

ಟೇಬಲ್–2 ಬೆಳವಣಿಗೆ ಸಮಯದಲ್ಲಿ ಕ್ಲೋರೆಲ್ಲಾದ ಬಣ್ಣಗಳ ವ್ಯತ್ಯಾಸ

ದಿನಗಳು	ಕ್ಲೋರೊಫಿಲ್ –ಎ	ಕ್ಲೋರೊಫಿಲ್ –ಬಿ	ಒಟ್ಟು ಕ್ಲೋರೊಫಿಲ್	ಒಟ್ಟು ಕ್ಯಾರೋಟಿನಾಯ್ಡ್ಸ
1	5.411	3.058	8.469	2.783
2	5.384	3.319	8.703	2.664
3	6.81	3.873	10.683	6.035
4	8.050	4.979	13.049	7.690
5	7.306	6.884	14.19	8.094
6	8.687	5.419	14.106	8.221
7	8.639	6.249	14.888	8.658

ಪೀಡೆ ನಿರ್ವಹಣೆಗೆ ಲಭ್ಯವಿರುವ ಹೊಸ ಕೀಟನಾಶಕಗಳು

ಕೆ. ಎಂ. ಶ್ರೀನಿವಾಸ ರೆಡ್ಡಿ, ಜಿ. ಶಿವಣ್ಣ, *ಶ್ರೀ. ಟಿ. ರುದ್ರಮುನಿ ಮತ್ತು **ಕೆ. ಎಲ್. ವಿಜಯ್ ಕುಮಾರ್
ಸಹಾಯಕ ಪ್ರಾಧ್ಯಪಕರು (ಕೀಟಶಾಸ್ತ್ರ), ಕೃ. ವಿ. ವಿ. ಬೆಂಗಳೂರು-೫೬೦ ೦೬೫, * ವಲಯ ಕೃಷಿ ಮತ್ತು ತೋಟಗಾರಿಕ ಸಂಶೋಧನ ಕೇಂದ್ರ,
ಹಿರಿಯೂರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ, ** ಕೃಷಿ ಕಾಲೇಜು, ವಿ. ಸಿ. ಫಾರಂ. ಮಂಡ್ಯ

ಸಸ್ಯ ಸಂರಕ್ಷಣೆಯಲ್ಲಿ ವಿವಿಧ ಪೀಡೆ ಹತೋಟಿ ಕ್ರಮಗಳನ್ನು ಅನುಸರಿಸಲಾಗುತ್ತದೆ. ಅವುಗಳಲ್ಲಿ ಮುಖ್ಯವಾದುದು ಪೀಡೆನಾಶಕಗಳ ಬಳಕೆ. ನಮ್ಮ ದೇಶದಲ್ಲಿ ಪೀಡೆನಾಶಕಗಳ ಬಳಕೆ 1950 ರಿಂದ ಪ್ರಾರಂಭವಾಯಿತು. ಭಾರತದಲ್ಲಿ ಇತ್ತೀಚೆಗೆ ಸುಮಾರು 248 ಪೀಡೆನಾಶಕಗಳು ನೋಂದಣಿಯಾಗಿವೆ. ಇವುಗಳಲ್ಲಿ ಬಹುತೇಕ ರಸಾಯನಿಕಗಳನ್ನು ನಮ್ಮ ದೇಶದಲ್ಲಿ ಉತ್ಪಾದಿಸುವುದಲ್ಲದೆ ಹೊರದೇಶಗಳಿಗೂ ಸಹ ರಫ್ತು ಮಾಡಲಾಗುತ್ತಿದೆ. ಕಳೆದ್ 5 ದಶಕಗಳಿಂದ ಪೀಡೆನಾಶಕಗಳನ್ನು ಬಳಸಿ ಪೀಡೆ ಮತ್ತು ರೋಗಗಳಿಂದಾಗುತ್ತಿದ್ದ ಶೇ. 30 ರಷ್ಟು ಆಹಾರ ಧಾನ್ಯದ ನಷ್ಟವನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದೇವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕೆಲವು ಪೀಡೆಗಳು ರಸಾಯನಿಕಗಳಿಗೆ ನಿರೋಧಕ ಶಕ್ತಿಯನ್ನು ಪಡೆದುಕೊಂಡಿರುವುದರಿಂದ ವಿಜ್ಞಾನಿಗಳು ಹೊಸ ಪೀಡೆನಾಶಕಗಳ ಅನ್ವೇಷಣೆಯಲ್ಲಿ ಸತತ ಪ್ರಯತ್ನ ಮಾಡುತ್ತಿದ್ದಾರೆ. ಇದರ ಫಲವಾಗಿ ಇತ್ತೀಚಿನ ವರ್ಷಗಳಲ್ಲಿ ಅನೇಕ ಹೊಸ ಪೀಡೆನಾಶಕಗಳು ಮಾರುಕಟ್ಟೆ ಪ್ರವೇಶಿಸಿವೆ. ಈಗ ಬಳಕೆಯಲ್ಲಿರುವ ಎಲ್ಲ ಕೀಟನಾಶಕಗಳ ಪರಿಚಯವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಈಗ ಬಳಕೆಯಲ್ಲಿರುವ ಕೀಟನಾಶಕಗಳನ್ನು ಮೂರು ವಿಧದಲ್ಲಿ ವರ್ಗೀಕರಿಸಲಾಗಿದೆ. ಹೊಟ್ಟೆ ಪಾಷಾಣಗಳು, ಸಂಪರ್ಕ/ ಸ್ಪರ್ಷಕ ಕೀಟನಾಶಕಗಳು, ಧೂಪಕಗಳು ಮತ್ತು ಅಂತರ್‌ವ್ಯಾಪಿ ಕೀಟನಾಶಕಗಳು. ಕೀಟಗಳನ್ನು ಕೊಲ್ಲುವ ವಿಧಾನದ ಆಧಾರದ ಮೇಲೆ ಕೀಟನಾಶಕಗಳನ್ನು 5 ಗುಂಪುಗಳಾಗಿ ವಿಂಗಡಿಸಲಾಗಿದೆ. ಭೌತಿಕ ಪಾಷಾಣಗಳು, ಜೀವದ್ರವ್ಯದ ಪಾಷಾಣಗಳು, ಉಸಿರಾಟ ತಡೆಯುವ ಪಾಷಾಣಗಳು, ನರಪಾಷಾಣಗಳು ಮತ್ತು ಕೀಟ ಬೆಳವಣಿಗೆ ಕುಂಠಿತಗೊಳಿಸುವ ಪಾಷಾಣಗಳು, ರಾಸಾಯನಿಕ ಪೀಡೆನಾಶಕಗಳು ವಿಂಗಡಿಸಲಾಗಿದೆ. ರಾಸಾಯನಿಕ ಕೀಟನಾಶಕಗಳನ್ನು ಕ್ಲೋರಿನ್ ಯುಕ್ತ ಹೈದ್ರೋಕಾರ್ಬನ್ಸ್, ರಂಜಕಯುಕ್ತ ಕೀಟನಾಶಕಗಳು (ಆರ್ಗಾನೋ ಫಾಸ್ಫೆಟ್ಸ್) , ಕಾರ್ಬಾಮೆಟ್ ಗುಂಪಿಗೆ ಸೇರಿದ ಕೀಟನಾಶಕಗಳು, ಪೈರಿಥ್ರಾಯಿಡ್ ಗುಂಪಿಗೆ ಸೇರಿದ ಕೀಟನಾಶಕಗಳು, ಆಕ್ಸಾಡೈಯಾಝಿನ್ ಸಂಯುಕ್ತಗಳು, ಫಿನೈಲ್ ಪೈರಝೋಲ್ ಸಂಯುಕ್ತಗಳು, ಪೈರೋಲ್ ಸಂಯುಕ್ತಗಳು, ಥೈಯೋಯುರಿಯಾ ಸಂಯುಕ್ತಗಳು ಮಾತು ಬೆಂಜಿನ್ ಡೈಕಾರ್ಬಕ್ಸಾಮೈಡ್ ಆಧಾರದ ಕೀಟನಾಶಕಗಳಾಗಿ ವಿಂಗಡಿಸಬಹುದು.

ಸಸ್ಯ ಸಂರಕ್ಷಣೆಯಲ್ಲಿ ವಿವಿಧ ಪೀಡೆ ಹತೋಟಿ ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಅವುಗಳಲ್ಲಿ ಮುಖ್ಯವಾದುದು ಪೀಡೆನಾಶಕಗಳ ಬಳಕೆ. ನಮ್ಮ ದೇಶದಲ್ಲಿ ಪೀಡೆನಾಶಕಗಳ ಬಳಕೆ 1950 ರಿಂದ ಪ್ರಾರಂಭವಾಯಿತು. 200ಕ್ಕೂ ಹೆಚ್ಚು ವಿವಿಧ ತರಹದ ಪೀಡೆನಾಶಕಗಳು ಬಳಕೆಯಲ್ಲಿವೆ. ಇವುಗಳಲ್ಲಿ ಬಹುತೇಕ ರಸಾಯನಿಕಗಳನ್ನು ನಮ್ಮ ದೇಶದಲ್ಲಿ ಉತ್ಪಾದಿಸುವುದಲ್ಲದೆ ಹೊರದೇಶಗಳಿಗೂ ಸಹ ರಫ್ತು ಮಾಡಲಾಗುತ್ತಿದೆ. ಕಳೆದ 5 ದಶಕಗಳಿಂದ ಪೀಡೆನಾಶಕಗಳನ್ನು ಬಳಸಿ ಪೀಡೆ ಮತ್ತು ರೋಗಗಳಿಂದಾಗುತ್ತಿದ್ದ ಶೇ. 30 ರಷ್ಟು ಆಹಾರ ಧಾನ್ಯದ ನಷ್ಟವನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದೇವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕೆಲವು ಪೀಡೆಗಳು ರಸಾಯನಿಕಗಳಿಗೆ ನಿರೋಧಕ ಶಕ್ತಿಯನ್ನು ಪಡೆದುಕೊಂಡಿರುವುದರಿಂದ ವಿಜ್ಞಾನಿಗಳು ಹೊಸ ಪೀಡೆನಾಶಕಗಳ ಅನ್ವೇಷಣೆಯಲ್ಲಿ ಸತತ ಪ್ರಯತ್ನ ಮಾಡುತ್ತಿದ್ದಾರೆ. ಇದರ ಫಲವಾಗಿ ಇತ್ತೀಚಿನ ವರ್ಷಗಳಲ್ಲಿ ಅನೇಕ ಪೀಡೆನಾಶಕಗಳು ಮಾರುಕಟ್ಟೆ ಪ್ರವೇಶಿಸಿವೆ. ಈಗ ಬಳಕೆಯಲ್ಲಿರುವ ಎಲ್ಲ ಕೀಟನಾಶಕಗಳು ಮತ್ತು ನುಶಿನಾಶಕಗಳ ಕಿರು ಪರಿಚಯನ್ನು ಈ ಲೇಖನದಲ್ಲಿ ಮಾಡಲಾಗಿದೆ.

ವಿವಿಧ ಪೀಡೆಗಳ ನಿರ್ವಹಣೆಯಲ್ಲಿ ಬಳಸುವ ರಸಾಯನಿಕ ಅಥವಾ ಜೈವಿಕ ಪದಾರ್ಥಗಳಿಗೆ ಒಟ್ಟಾಗಿ ಪೀಡೆನಾಶಕಗಳು ಎಂದು ಕರೆಯಲಾಗುತ್ತದೆ. ಈ ಗುಂಪಿನಲ್ಲಿ ಕಳೆನಾಶಕಗಳು ಮತ್ತು ರೋಗ ನಾಶಕಗಳು ಸಹ ಸೇರಿವೆ.

ವಿವಿಧ ಪೀಡೆನಾಶಕಗಳು:

1. ಕೀಟನಾಶಕಗಳು 2. ಶಿಲೀಂಧ್ರನಾಶಕಗಳು3. ನುಶಿನಾಶಕಗಳು
4. ದುಂಡಾಣುನಾಶಕಗಳು 5. ಇಲಿ ಪಾಷಾಣಗಳು
6. ಜಂತುಹುಳುನಾಶಕಗಳು 7, ಮೃದ್ವಂಗಿನಾಶಕಗಳು
8. ಕಳೆನಾಶಕಗಳು

ಕೀಟನಾಶಕಗಳ ವರ್ಗೀಕರಣ: ಈಗ ಬಳಕೆಯಲ್ಲಿರುವ ಕೀಟನಾಶಕಗಳನ್ನು ಮೂರು ವಿಧದಲ್ಲಿ ವರ್ಗೀಕರಿಸಲಾಗಿದೆ.

1. ಕೀಟಗಳ ಶರೀರದೊಳಕ್ಕೆ ಸೇರುವ ವಿಧಾನದ ಆಧಾರದ ಮೇಲೆ ಕೀಟನಾಶಕಗಳನ್ನು 4 ಗುಂಪುಗಳಾಗಿ ವಿಂಗಡಿಸಲಾಗಿದೆ.

(ಅ) **ಹೊಟ್ಟೆ ಪಾಷಾಣಗಳು (Stomach poisons):** ಇವು ಆಹಾರದ ಮೂಲಕ ಅನ್ನನಾಳಕ್ಕೆ ಸೇರಿ ಕೀಟಗಳನ್ನು ಕೊಲ್ಲುತ್ತವೆ.

(ಆ) **ಸಂಪರ್ಕ / ಸ್ಪರ್ಷಕ ಕೀಟನಾಶಕಗಳು (Contact poisons):** ಇವು ಕೀಟಗಳ ದೇಹದ ಯಾವುದೇ ಭಾಗಕ್ಕೆ ಸಂಪರ್ಕವಾದಗ, ಚರ್ಮದ ಮೂಲಕ ಅಥವಾ ಶ್ವಾಸನಾಳಗಳ ಮೂಲಕ ಶರೀರವನ್ನು ಸೇರಿ ಕೊಲ್ಲುತ್ತವೆ.

(ಇ) **ಧೂಪಕಗಳು (Fumigants):** ಇವು ಗಾಳಿಯ ರೂಪದಲ್ಲಿ ಶ್ವಾಸನಾಳಗಳ ಮೂಲಕ ಕೀಟಗಳ ಶರೀರ ಸೇರಿ ಕೊಲ್ಲುತ್ತವೆ.

(ಈ) **ಅಂತರ್‌ವ್ಯಾಪಿ ಕೀಟನಾಶಕಗಳು (Systemics):** ಇವು ಎಲೆಗಳ ಅಥವಾ ಬೇರುಗಳ ಮೂಲಕ ಸಸ್ಯ ರಸವನ್ನು ಸೇರಿ ಎಲ್ಲ ಭಾಗಗಳಿಗೆ ಹರಡಿ, ಸಸ್ಯಗಳನ್ನು ವಿಷಮಯ ಮಾಡುತ್ತವೆ. ಕೀಟಗಳು ವಿಷಪೂರಿತ ರಸವನ್ನು ಸೇವಿಸಿದಾಗ ಸಾಯುತ್ತವೆ.

2. ಕೀಟಗಳನ್ನು ಕೊಲ್ಲುವ ವಿಧಾನದ ಆಧಾರದ ಮೇಲೆ ಕೀಟನಾಶಕಗಳನ್ನು 5 ಗುಂಪುಗಳಾಗಿ ವಿಂಗಡಿಸಲಾಗಿದೆ.

(ಅ) **ಭೌತಿಕ ಪಾಷಾಣಗಳು (Physical poisons):** ಇವು ಕೀಟಗಳ ಮೇಲೆ ಭೌತಿಕ ಪರಿಣಾಮ ಬೀರಿ ಕೊಲ್ಲುತ್ತವೆ. ಉದಾಹರಣೆಗೆ ಪೆಟ್ರೋಲಿಯಮ್ ಅಥವಾ ಟಾರ್ ಎಣ್ಣೆಗಳನ್ನು ಹುಳುಗಳ ಮೇಲೆ ಪ್ರಯೋಗಿಸಿದಾಗ, ಅವು ಶ್ವಾಸರಂಧ್ರಗಳನ್ನು ಮುಚ್ಚಿ, ಉಸಿರಾಟ ನಿಲ್ಲಿಸಿ ಕೊಲ್ಲುತ್ತವೆ.

(ಆ) **ಜೀವದ್ರವ್ಯದ ಪಾಷಾಣಗಳು (Protoplasmic poisons):** ಜೀವಕೋಶಗಳಲ್ಲಿರುವ ಸಸಾರಜನಕ ಪದಾರ್ಥಗಳನ್ನು ಅವಪಾತ

ಮಾಡಿ ಸಾವನ್ನುಂಟು ಮಾಡುತ್ತವೆ.

(ಇ) **ಉಸಿರಾಟ ತಡೆಯುವ ಪಾಷಾಣಗಳು (Respiratory poisons):** ಇವು ಕೀಟಗಳ ಜೀವಕೋಶಗಳಲ್ಲಿ ಉಸಿರಾಟ ಕ್ರಿಯೆಗಳನ್ನು ಕುಂಠಿತಗೊಳಿಸಿ ಸಾವನ್ನುಂಟು ಮಾಡುತ್ತವೆ.

(ಈ) **ನರಪಾಷಾಣಗಳು (Nerve poisons):** ಈ ಕೀಟನಾಶಕಗಳು ಹುಳುಗಳ ನರಮಂಡಲದ ಮೆಲೆ ದುಷ್ಪರಿಣಾಮ ಬೀರಿ ಕೊಲ್ಲುತ್ತವೆ. ಈಗ ಬಳಸುತ್ತಿರುವ ಬಹುತೇಕ ಕೀಟನಾಶಕಗಳು ಈ ಗುಂಪಿಗೆ ಸೇರುತ್ತವೆ.

(ಉ) **ಕೀಟ ಬೆಳವಣಿಗೆ ಕುಂಠಿತಗೊಳಿಸುವ ಪಾಷಾಣಗಳು (Insect Growth Regulators):** ಈ ಕೀಟನಾಶಕಗಳು ಪೀಡೆಗಳ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರಿ ಅವುಗಳ ವೃದ್ಧಿಯನ್ನು ತಡೆಯುತ್ತವೆ ಅಥವಾ ಸಾವನ್ನುಂಟುಮಾಡುತ್ತವೆ

3. ರಾಸಾಯನಿಕ ಗುಣ ಅಥವಾ ಮೂಲದ ಆಧಾರದ ಮೇಲೆ ಕೀಟನಾಶಕಗಳನ್ನು ವಿಂಗಡಿಸಲಾಗಿದೆ.

1. ಅಜೈವಿಕ ಪೀಡೆನಾಶಕಗಳು (Inorganic Compounds):
ಉ: ಗಂಧಕ, ಜಿಂಕ್ ಫಾಸ್‌ಫೈಡ್.

2. ಜೈವಿಕ ಪೀಡೆನಾಶಕಗಳು (Organic compounds):
ಅ. ಪೆಟ್ರೋಲಿಯಮ್ ಅಥವಾ ಟಾರ್ ಮೂಲದ ರಾಸಾಯನಿಕಗಳು
ಆ. ಸಸ್ಯಜನ್ಯ ಪೀಡೆನಾಶಕಗಳು
ಇ. ಪ್ರಾಣಿಜನ್ಯ ಪೀಡೆನಾಶಕಗಳು
ಈ. ಸೂಕ್ಷ್ಮಜೀವಿ ಆಧಾರಿತ ಪೀಡೆನಾಶಕಗಳು
ಉ. ಸಂಯೋಜಿತ ರಸಾಯನಿಕ ಪೀಡೆನಾಶಕಗಳು

ಅ. ಪೆಟ್ರೋಲಿಯಮ್ ಅಥವಾ ಟಾರ್ ಮೂಲದ ರಾಸಾಯನಿಕಗಳು: ಈ ಪದಾರ್ಥಗಳು ಈಗ ಬಳಕೆಯಲ್ಲಿಲ್ಲ

ಆ. ಸಸ್ಯಜನ್ಯ ಪೀಡೆನಾಶಕಗಳು: ಸಸ್ಯಗಳಲ್ಲಿ ಕೀಟ ಮತ್ತು ರೋಗ ನಿರೋಧಕ ರಾಸಾಯನಿಕ ಪದಾರ್ಥಗಳಿರುತ್ತವೆ. ಕೆಲವು ಮುಖ್ಯವಾದ ರಾಸಾಯನಿಕಗಳೆಂದರೆ ಫೆನೊಲಿಕ್ ಸಂಯುಕ್ತಗಳು, ಟರ್ಪಿನೋಯ್ಡ್ಸ್, ಫ್ಲಾವೊನೋಯ್ಡ್ಸ್, ವಿಷಕ್ಷಾರಗಳು, ಇತ್ಯಾದಿ. ಈ ರಾಸಾಯನಿಕಗಳಿಗೆ ಹುಳುಗಳನ್ನು ಸಾಯಿಸುವ, ಆಹಾರ ಸೇವನೆ ತಡೆಗಟ್ಟುವ, ಕೀಟಗಳನ್ನು ವಿಕರ್ಷಿಸುವ ಗುಣಗಳಿದ್ದು ಹುಳುಗಳ ಸಂತಾನ ಉತ್ಪತ್ತಿಯ ಮೇಲೂ ಪರಿಣಾಮ ಬೀರುತ್ತವೆ. ಸಸ್ಯಗಳ ಬೇರೆ ಬೇರೆ ಭಾಗಗಳಲ್ಲಿ ಈ ವಿಷಪದಾರ್ಥಗಳು ಶೇಕರಣೆಯಾಗಿರುತ್ತವೆ. ಸಸ್ಯಗಳ ಈ ಭಾಗಗಳನ್ನು ಬಳಸಿ ತಯಾರಿಸಿದ ಪೀಡೆ ನಿರ್ವಹಣಾ ಪದಾರ್ಥಗಳಿಗೆ ಸಸ್ಯಜನ್ಯ ಪೀಡೆನಾಶಕಗಳೆಂದು ಕರೆಯುತ್ತೇವೆ. ಉದಾಹರಣೆಗೆ ಹೊಗೆಸೊಪ್ಪಿನ ಪುಡಿ, ಹೊಗೆಸೊಪ್ಪಿನ ಕಷಾಯ, ಬೇವಿನ ಬೀಜದ ಕಷಾಯ, ಬೇವಿನ ಎಣ್ಣೆ, ಹೊಂಗೆಯ ಎಣ್ಣೆ, ಇಪ್ಪೆ ಎಣ್ಣೆ, ಬೆಳ್ಳುಳ್ಳಿ ಕಷಾಯ, ಇತ್ಯಾದಿ ಸಸ್ಯ ಪದಾರ್ಥಗಳನ್ನು ಪೀಡೆ ನಿರ್ವಹಣೆಯಲ್ಲಿ ಉಪಯೋಗಿಸಲಾಗುತ್ತಿದೆ. ಮಾರುಕಟ್ಟೆಯಲ್ಲಿಯೂ ಸಹ ಬೇವು ಆಧಾರಿತ ಅನೇಕ ಪದಾರ್ಥಗಳು ರೈತರಿಗೆ ಲಭ್ಯವಿರುತ್ತವೆ.

ಇ. ಪ್ರಾಣಿಜನ್ಯ ಪೀಡೆನಾಶಕಗಳು: ಬಹಳ ವರ್ಷಗಳಿಗೆ ನಮ್ಮ ದೇಶದಲ್ಲಿ ಮತ್ತು ಪ್ರಪಂಚದ ಇತರೆ ದೇಶಗಳಲ್ಲಿ ಮೀನಿನ ಎಣ್ಣೆ ಉಪಯೋಗಿಸಿ ತಯಾರಿಸಿದ ಸೊಪನ್ನು ರಸ ಹೀರುವ ಪೀಡೆಗಳ ನಿರ್ವಹಣೆಯಲ್ಲಿ ಉಪಯೋಗಿಸಲಾಗಿದೆ. ಇದಲ್ಲದೆ ಜಪಾನ್ ದೇಶದಲ್ಲಿ ಸಮುದ್ರ ನೀರಿನಲ್ಲಿ ವಾಸಿಸುವ ಎರೆ ಹುಳು ಜಾತಿಗೆ ಸೇರಿದ ಲಂಬ್ರಿನೆರಿಸ್ ಹಟೆರೊಪೊಡಾ ಎಂಬ ಜೀವಿಯಿಂದ ಬೇರ್ಪಡಿಸಿದ ಪೀಡೆನಾಶಕ ವಿಷಪದಾರ್ಥ, "ನೇರಿಸ್ ಟಾಕ್ಸಿನ್"ನ ಆಧಾರದ ಮೇಲೆ ಹೊಸ ರಾಸಾಯನಿಕ ಕೀಟನಾಶಕಗಳನ್ನು ಉತ್ಪತ್ತಿ ಮಾಡಿದ್ದಾರೆ.

ಈ. ಸೂಕ್ಷ್ಮಜೀವಿ ಆಧಾರಿತ ಕೀಟನಾಶಕಗಳು: ಸೂಕ್ಷ್ಮಜೀವಿ ಆಧಾರಿತ ಕೀಟನಾಶಕಗಳು ಇತ್ತೀಚಿನ ವರ್ಷಗಳಲ್ಲಿ ಬಳಕೆಯಲ್ಲಿ ಬಂದಿವೆ. ಬ್ಯಾಕ್ಟೀರಿಯಾ ಮತ್ತು ಆ್ಯಕ್ಟಿನೋಮೈಸಿಟ್ಸ್ ಸೂಕ್ಷ್ಮಜೀವಿಗಳು ಉತ್ಪಾದಿಸುವ ವಿಷಪದಾರ್ಥಗಳನ್ನು ಬಳಸಿಕೊಂಡು ಕೀಟನಾಶಕಗಳನ್ನು ತಯಾರಿಸಲಾಗುತ್ತಿದೆ. ಈ ಕೀಟನಾಶಕಗಳು ಬಹಳ ಸುರಕ್ಷಿತವಾಗಿದ್ದು, ಕೆಲವು ಪೀಡೆಗಳನ್ನು ಹೊರತು ಬೇರೆ ಅನ್ಯ ಜೀವಿಗಳಿಗೆ ಮಾರಕವಾಗಿರುವುದಿಲ್ಲ. ಅದಲ್ಲದೆ, ಇವುಗಳು ಬೇರೆ ರೀತಿಯಲ್ಲಿ ಹುಳುಗಳನ್ನು ಸಾಯಿಸುವುದರಿಂದ ಹಳೆಯ ಕೀಟನಾಶಕಗಳಿಗೆ ನಿರೋಧಕ ಶಕ್ತಿಯನ್ನು ಪಡೆದುಕೊಂಡಿರುವ ಪೀಡೆಗಳನ್ನು ಸಹ ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು.

1. ಬ್ಯಾಸಿಲಸ್ ಥುರಿಂಜಿಯನ್‌ಸಿಸ್ ದುಂಡಾಣು ಆಧಾರಿತ ಕೀಟನಾಶಕಗಳು:

ಬ್ಯಾಸಿಲಸ್ ಥುರಿಂಜಿಯನ್‌ಸಿಸ್ (ಬಿ.ಟಿ.) ಒಂದು ಸ್ವಾಭಾವಿಕವಾಗಿ ಮಣ್ಣಿನಲ್ಲಿ ದೊರೆಯುವ ಅಣುಜೀವಿ ಆಗಿದ್ದು ಅನೇಕ ಕೀಟಗಳಲ್ಲಿ ರೋಗವನ್ನುಂಟು ಮಾಡಿ ಹುಳುಗಳು ಸಾಯಲಿಕ್ಕೆ ಕಾರಣವಾಗುತ್ತದೆ. ಈ ಬ್ಯಾಕ್ಟೀರಿಯಾ 40ಕ್ಕೂ ಹೆಚ್ಚು ಉಪಪ್ರಭೇದಗಳನ್ನು ಹೊಂದಿದ್ದು ಬೇರೆ ಬೇರೆ ತರಹದ ಕೀಟಗಳಲ್ಲಿ ರೋಗವನ್ನುಂಟು ಮಾಡುವುದು. ನಮ್ಮ ದೇಶದಲ್ಲಿ ಸಧ್ಯಕ್ಕೆ ಬ್ಯಾಸಿಲಸ್ ***ಥುರಿಂಜಿಯನ್ಸಸ್ ಕುರ್‌ಸ್ಟಾಕಿ*** ಆಧಾರಿತ ಕೀಟನಾಶಕಗಳು ಮಾತ್ರ ನೊಂದಣಿಯಾಗಿದ್ದು ಅವು ಮಾರುಕಟ್ಟೆಯಲ್ಲಿ ರೈತರಿಗೆ ದೊರೆಯುತ್ತಿವೆ. ಈ ಕೀಟನಾಶಕಗಳು ಬ್ಯಾಕ್ಟೀರಿಯಾದ ಬೀಜಾಣುಗಳನ್ನು ಹೊಂದಿದ್ದು, ಬೀಜಾಣುಗಳ ಮೇಲೆ ಹರಳು ರೂಪದ ವಿಷಪದಾರ್ಥವಿರುತ್ತದೆ.

ಮಾರುಕಟ್ಟೆಯಲ್ಲಿ ಲಭ್ಯವಿರುವ ಬಿ.ಟಿ. ಕೀಟನಾಶಕಗಳು: ***ಡೈಪೆಲ್ 8 ಎಲ್, ಡೆಲ್‌ಫಿನ್, ಬೈಯೋಬಿಟ್, ಬೈಯೋಲೆಪ್, ಹಾಲ್ಟ್,*** ಇತ್ಯಾದಿ. ಈ ಕೀಟನಾಶಕಗಳನ್ನು ಪತಂಗಗಳ ಮರಿಹುಳುಗಳ ನಿರ್ವಹಣೆಯಲ್ಲಿ ಉಪಯೋಗಿಸಬಹುದಾಗಿದೆ. ತರಕಾರಿ ಬೆಳೆಗಳಾದ ಎಲೆಕೋಸು, ಹೂಕೋಸು, ಬದನೆ ಮುಂತಾದ ಬೆಳೆಗಳಲ್ಲಿ ಈ ಕೀಟನಾಶಕಗಳನ್ನು ಬಳಸಿ ಸಬ್ರಬೆನ್ನಿನ ಪತಂಗ, ಕುಡಿ ಮತ್ತು ಕಾಯಿ ಕೊರಕ ಹುಳುಗಳನ್ನು ಹತೋಟಿ ಮಾಡಬಹುದು.

2. ಆ್ಯಕ್ಟಿನೋಮೆಸಿಟ್ಸ್ ಸೂಕ್ಷ್ಮಜೀವಿಗಳ ಆಧಾರಿತ ಪೀಡೆನಾಶಕಗಳು: ಆ್ಯಕ್ಟಿನೋಮೈಸಿಟ್ಸ್ ಜೀವಿಗಳು ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳ ಮಧ್ಯದ ಗುಂಪಿಗೆ ಸೇರಿದ ಸೂಕ್ಷ್ಮ ಜೀವಿಗಳು. ಇವು ಮಣ್ಣಿನಲ್ಲಿದ್ದು ಅನೇಕ ತರಹದ ವಿಷಪದಾರ್ಥಗಳನ್ನು ಉತ್ಪಾದಿಸುತ್ತವೆ. ಇತ್ತೀಚಿನ ವರ್ಷಗಳಲ್ಲಿ ಈ ವಿಷಪದಾರ್ಥಗಳನ್ನು ಬಳಸಿಕೊಂಡು ಕೆಲವು ಪೀಡೆನಾಶಕಗಳನ್ನು ವಿಜ್ಞಾನಿಗಳು ತಯಾರಿಸಿದ್ದಾರೆ.

* ಅಬಾಮೆಕ್ಟಿನ್ (ವರ್ಟಿಮೆಕ್ 1.9 ಇ.ಸಿ.): ನುಸಿ ಮತ್ತು ಕೀಟಪೀಡೆಗಳ ಹತೋಟಿಯಲ್ಲಿ ಬಳಸಬಹುದಾಗಿದೆ.
* ಸ್ಪೈನೋಸಾಡ್ (ಸಕ್ಸಸ್ 2.5 ಎಸ್.ಸಿ. ಮತ್ತು ಟ್ರೇಸರ್ 45 ಎಸ್.ಸಿ.): ಕೋಸಿನ ಬೆಳೆಗೆ ಬೀಳುವ ಹಸಿರುಹುಳು ಹತ್ತಿ, ಟೊಮ್ಯಾಟೋ ಮತ್ತು ತೊಗರಿಗೆ ಬೀಳುವ ಕಾಯಿಕೊರಕ ಹುಳುವಿನ ನಿರ್ವಹಣೆಯಲ್ಲಿ ಉಪಯೋಗಿಸಬಹುದಾಗಿದೆ.
* ಮಿಲ್ಬಿಮೆಕ್ಟಿನ್ (ಮಿಲ್ಬಿನಾಕ್ 1 ಇ.ಸಿ.): ನುಶಿನಾಶಕ

* ಎಮಾಮೆಕ್ಟಿನ್ ಬೆಂಜೋಯೇಟ್ (ಪ್ರೊಕ್ಲೇಮ್ 5 ಎಸ್.ಸಿ.) ಇದು ಅರೆಸಂಯೋಜಿತ ಕೀಟನಾಶಕವಾಗಿದ್ದು, ಕಾಯಿಕೊರಕ ಹುಳುವಿನ ಹತೋಟಿಯಲ್ಲಿ ಬಳಸಬಹುದಾಗಿದೆ.

ರಾಸಾಯನಿಕ ಕೀಟನಾಶಕಗಳು:

1. ಕ್ಲೋರಿನ್‌ಯುಕ್ತ ಹೈಡ್ರೋಕಾರ್ಬನ್ಸ್:

ಡೈಕೋಫಾಲ್ (ಕೆಲ್ಥೇನ್ 20 ಇಸಿ)

ಈ ಗುಂಪಿಗೆ ಸೇರಿದ ಅನೇಕ ಕೀಟನಾಶಕಗಳನ್ನು ನಿಷೇಧಿಸಲಾಗಿದೆ ಅಥವಾ ನಿರ್ಬಂಧಿತ ಬಳಕೆಗೆ ಒಳಪಡಿಸಲಾಗಿದೆ.

ನಿಷೇಧಿಸಲಾದ ಕೀಟನಾಶಕಗಳು: 1) ಆಲ್ಡ್ರಿನ್, 2) ಬೆಂಜಿನ್ ಹೆಗ್ಸಾ ಕ್ಲೋರೈಡ್ (ಬಿ. ಎಚ್. ಸಿ.), 3) ಕ್ಲೋರಡೇನ್, 4) ಎಂಡ್ರಿನ್, 5) ಹೆಪ್ಟಾಕ್ಲೋರ್, 6) ಟಾಕ್ಸಾಫಿನ್, 7) ಕ್ಲೋಬ್ ಬೆಂಯ್ಲೇಟ್, 8)ಡೈಆಲ್ಡ್ರಿನ್ 9) ಎಂಡೋಸಲ್ಫಾನ್

ನಿರ್ಬಂಧಿಸಲಾದ ಕೀಟನಾಶಕಗಳು: 1) ಡಿ.ಡಿ.ಟಿ., 2) ಲಿಂಡೇನ್ (ಗಾಮಾ ಬಿ.ಎಚ್.ಸಿ.)

2. ರಂಜಕಯುಕ್ತ ಕೀಟನಾಶಕಗಳು (ಆರ್ಗಾನೋ ಫಾಸ್ಫೇಟ್ಸ್):

ಅಸಿಫೇಟ್	(ಅಸಟಾಪ್ 75 ಎಸ್. ಪಿ)
ಕ್ಲೋರ್‌ಪೈರಿಫಾಸ್	(ಡರ್ಸಬಾನ್20 ಇಸಿ, ಕೋರ್‌ಬಾನ್ 20 ಇಸಿ, ಡರ್ಮೆಟ್ 20 ಇಸಿ)
ಈಥಿಯಾನ್	(ಫಾಸ್‌ಮೈಟ 50 ಇಸಿ)
ಫೆನಿಟ್ರೊಥಿಯಾನ್	(ಸುಮಿಥಿಯಾನ್ 100 ಇಸಿ)
ಫೆನ್‌ಸಲ್ಫೋಥಿಯಾನ್	(ದಾಸನೆಟ್ 5 ಜಿ)
ಮೆಲಾಥಿಯಾನ್	(ಮೆಲಾಥಿಯಾನ್ 50 ಇಸಿ, ಸ್ಟೆಥಿಯಾನ್ 50 ಇಸಿ)
ಆಕ್ಸಿಡೆಮಿಟಾನ್ ಮಿಥೈಲ್	(ಮೆಟಾಸಿಸ್ಟಾಕ್ಸ 25 ಇಸಿ)
ಮಿಥೈಲ್ ಪೆರಾಥಿಯಾನ್	(ಮೆಟಾಸಿಡ್ 50 ಇಸಿ)
ಫೋರೇಟ್	(ಥಿಮೆಟ್ 10 ಜಿ)
ಡೈಸಲ್ಫೋಟಾನ್	(ಡೈಸಿಸ್ಟಾಕ್ಸ 5 ಜಿ)
ಫೊಸಲಾನ್	(ಝೋಲೋನ್ 25 ಇಸಿ)
ಫಾಸ್ಫಾಮಿಡಾನ್	(ಡೈಮೆಕ್ರಾನ್ 100 ಇಸಿ)
ಪ್ರೊಫೆನೋಫಾಸ್	(ಕ್ಯೂರಕ್ರಾನ್ 50 ಇಸಿ)
ಕ್ವಿನಾಲ್‌ಫಾಸ್	(ಇಕಾಲಕ್ಸ 25 ಇಸಿ)
ಟ್ರೈಯಝೋಫಾಸ್	(ಹೊಸ್ಟೋಥಿಯಾನ್ 40 ಇಸಿ, ಟ್ರೆಲ್ಕಾ 20 ಇಸಿ)
ಮೊನೋಕ್ರೋಟೋಫಾಸ್	(ನುವಕ್ರಾನ್, ಮೊನೋಸಿಲ್ 36 ಎಸ್‌ಎಲ್)
ಡೈಕ್ಲೋರ್‌ವಾಸ್	(ನುವಾನ್ 76 ಇಸಿ)
ಟ್ರೈಕ್ಲೊರ್‌ಫಾನ್	(ಡಿಪ್ಟಿರೆಕ್ಸ್, ಟ್ಯೂಗಾನ್ 5 ಇಸಿ)

3. ಕಾರ್ಬಾಮೆಟ್ ಗುಂಪಿಗೆ ಸೇರಿದ ಹೊಸ ಕೀಟನಾಶಕಗಳು:

ಥೈಯೋಡಿಕಾರ್ಬ (ಲಾರ್ವಿನ್ 75 ಡಬ್ಲ್ಯು.ಪಿ): ಸ್ಪರ್ಷಕ ಕೀಟನಾಶಕ

ಕಾರ್ಬೋಸಲ್ಫಾನ್ (ಮಾರ್ಷಲ್ 25 ಇ.ಸಿ.): ಅಂತರ್‌ವ್ಯಾಪಿ ಕೀಟನಾಶಕ

ಫೇನೋಬುಕಾರ್ಬ ಅಥವಾ ಬಿ.ಪಿ.ಎಮ್.ಸಿ. (ಬಿಚ್‌ವಿನ್ 50 ಇ.ಸಿ.: ಅಂತರ್‌ವ್ಯಾಪಿ ಕೀಟನಾಶಕ.

ಕಾರ್ಬಾಫುರಾನ್ (ಫುರಡಾನ್ 3 ಜಿ):

ಪ್ರೊಪೊಕ್ಸರ್ (ಬೇಗಾನ್ 1 ಎಸ್)

4. ಪೈರಿಥ್ರಾಯಿಡ್ ಗುಂಪಿಗೆ ಸೇರಿದ ಕೀಟನಾಶಕಗಳು: ಇವು ಸ್ಪರ್ಷಕ ಕೀಟನಾಶಕಗಳಾಗಿದ್ದು ಪತಂಗಗಳ ಮರಿಹುಳುಗಳಿಗೆ ಮತ್ತು ಥ್ರಿಪ್ಸ್ ನುಸಿಗಳಿಗೆ ಮಾರಕವಾಗಿವೆ. ಮಾನವನಿಗೆ ಕಡಿಮೆ ಅಪಾಯಕಾರಿ ಮತ್ತು ಇವು ಅತಿ ಕಡಿಮೆ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತದೆ. ಲ್ಯಾಂಬ್ಡಸೈಹ್ಯಾಲೋಥ್ರಿನ್ (ಕರಾಟೆ 5 ಇ.ಸಿ., ಕುಂಗ್‌ಫು 2.5 ಇ.ಸಿ.)

ಫೇನ್‌ಪ್ರೋಪಾಥ್ರಿನ್	(ಮಿಯೋಥ್ರಿನ್ 30 ಇ.ಸಿ.)
ಇಥೊಫೇನ್‌ಪ್ರಾಕ್ಸ್	(ನುಕಿಲ್ 10 ಇ.ಸಿ.)
ಬೀಟಾಸೈಫ್ಲೊಥ್ರಿನ್	(ಬುಲ್‌ಡಾಕ್ 25 ಎಸ್.ಸಿ.)
ಅಲೆಥ್ರಿನ್	(ಕಾಯ್ಲ, ಆಲ್ ಔಟ್)
ಬೈಫೆನ್‌ಥ್ರಿನ್	(ಟಾಲ್ ಸ್ಟಾರ್ 10 ಇಸಿ)
ಸೈಪರ್‌ಮೆಥ್ರಿನ್	(ಸೈಪರ್ ಕಿಲ್ 20 ಇಸಿ, ರಿಪ್ ಕಾರ್ಡ್ 10 ಇಸಿ, ಸಿಂಬುಷ್ 20ಇಸಿ)
ಡೆಲ್ಟಾಮೆಥ್ರಿನ್	(ಡೆಸಿಸ್ 2.8 ಇಸಿ)
ಫೆನ್‌ವೆಲರೇಟ್	(ಸುಮಿಸಿಡಿನ್ 20 ಇಸಿ)

5. ಅಸೈಲ್‌ಯೂರಿಯ ಕೀಟನಾಶಕಗಳು: ಈ ಕೀಟನಾಶಕಗಳು ಹುಳುಗಳ ಸಹಜ ಬೆಳವಣಿಗೆಗೆ ಅಡ್ಡ ಬಂದು, ಬೆಳವಣಿಗೆಯಲ್ಲಿ ಏರುಪೇರು ಉಂಟುಮಾಡಿ ಅವುಗಳ ನಾಶಕ್ಕೆ ಕಾರಣವಾಗುತ್ತವೆ. ಬೆಳೆಯುತ್ತಿರುವ ಮರಿಹುಳುಗಳು ಜ್ವರಕ್ಕೆ ಹೋದಾಗ ಅಥವಾ ಪೊರೆ ಬಿಡುವಾಗ ಖೈಟಿನ್ ಎಂಬ ಸಕ್ಕರೆ ಪದಾರ್ಥದ ಉತ್ಪಾದನೆಯನ್ನು ತಡೆಗಟ್ಟುತ್ತವೆ. ಇದರಿಂದ ಮರಿ ಹುಳು ಪೊರೆ ಬಿಡಲಾರದೆ ಜ್ವರದ ಹಂತದಲ್ಲಿ ಸತ್ತು ಹೋಗುತ್ತದೆ. ಈ ಕೀಟನಾಶಕಗಳು ಬಹಳ ಸುರಕ್ಷಿತವಾಗಿದ್ದು ಅನ್ಯಜೀವಿಗಳಿಗೆ ಮತ್ತು ಉಪಯೋಗಿ ಕೀಟಗಳಿಗೆ ವಿಷಕಾರಿಯಾಗಿಲ್ಲ. ಈ ಗುಂಪಿಗೆ ಸೇರಿದ ಡೈಫ್ಲುಬೆಂಜುರಾನ್ ಡಿಮ್ಮಿನ ಬಹಳ ವರ್ಷಗಳಿಂದ ಮಾರುಕಟ್ಟೆಯಲ್ಲಿ ದೊರೆಯುತ್ತಿದ್ದರೂ ಸಸ್ಯ ಸಂರಕ್ಷಣೆಯಲ್ಲಿ ಅದರ ಬಳಕೆ ಬಹಳ ಕಡಿಮೆ. ಇತ್ತೀಚೆಗೆ ಬಿಡುಗಡೆಯಾದ ಸಂಯುಕ್ತಗಳು ಕೆಲವು ಪೀಡಗಳ ನಿರ್ವಹಣೆಯಲ್ಲಿ ಫಲಕಾರಿಯಾಗಿವೆ.

ಫ್ಲುಫೇನಾಕ್ಸುರಾನ್	(ಕ್ಯಾಸ್ಕೇಡ್ 10 ಡಿ.ಸಿ.)
ನೋವಾಲ್ಯುರಾನ್	(ರಿಮಾನ್ 10 ಇ.ಸಿ.)
ಲುಫೀನ್ಯುರಾನ್	(ಸಿಗ್ನಾ 5 ಇ.ಸಿ.)

ಈ ಕೀಟನಾಶಕಗಳು ಕೋಸು ಬೆಳೆಯ ಮೇಲೆ ಬರುವ ಹಸಿರು ಹುಳು ನಿರ್ವಹಣೆಯಲ್ಲಿ ಪರಿಣಾಮಕಾರಿಯಾಗಿವೆ. ಹತ್ತಿ, ತೊಗರಿ ಮತ್ತು ಟೊಮ್ಯಾಟೊ ಬೆಳೆಗಳಲ್ಲಿ ಕಾಯಿಕೊರಕ ಹುಳುವಿನ ಹತೋಟಿಯಲ್ಲಿ ನೊವಾಲುರಾನ್ ಸಂಯುಕ್ತವನ್ನು ಬಳಸಲಾಗುತ್ತಿದೆ.

6. ಥೈಯಾಡೈಯಾಜಿನ್ ಸಂಯುಕ್ತಗಳು: ಈ ಕೀಟನಾಶಕಗಳೂ ಸಹ ಪೀಡೆಗಳ ಬೆಳವಣಿಗೆಯಲ್ಲಿ ಏರುಪೇರು ಉಂಟು ಮಾಡಿ ಅವುಗಳನ್ನು ನಾಶಪಡಿಸುತ್ತವೆ. (ಅಪ್ಲಾಡ್ 25 ಎಸ್.ಸಿ.): ಬುಪ್ರೋಫೇಜಿನ್ ಈ ರಾಸಾಯನಿಕವನ್ನು ಜಿಗಿಹುಳುಗಳು, ಹಿಟ್ಟು ತಿಗಣೆ, ಜೇಡ ನುಸಿ, ಇತ್ಯಾದಿ ರಸಹೀರುವ ಪೀಡೆಗಳ ಹತೋಟಿಯಲ್ಲಿ ಬಳಸಬಹುದಾಗಿದೆ.

7. ನಿಯೊನಿಕೊಟಿನಾಯಿಡ್ ಕೀಟನಾಶಕಗಳು: ಉತ್ತಮ ಅಂತರ್‌ವ್ಯಾಪಿ ಕೀಟನಾಶಕಗಳು. ಹೊಗೆಸೊಪ್ಪಿನಲ್ಲಿರುವ ನಿಕೋಟಿನ್ ವಿಷಕ್ಷಾರ ತರಹದ ಸಂಯೋಜಿತ ಕೀಟನಾಶಕಗಳು. ರಸ ಹೀರುವ ಪೀಡೆಗಳಾದ

ಜಿಗಿಹುಳು, ಸಸ್ಯಹೇನು, ಬಿಳಿನೊಣ ಮತ್ತು ಥ್ರಿಪ್ಸ್ ನುಸಿಗಳ ನಿರ್ವಹಣೆಯಲ್ಲಿ ಬಳಸಹುದಾಗಿದೆ.

ಇಮಿಡಾಕ್ಲೊಪ್ರಿಡ್ (ಕಾನ್‌ಫಿಡಾರ್ 200 ಎಸ್.ಎಲ್ ಮತ್ತು ಗೌಜೋ 70 ಡಬ್ಲು.ಎಸ್.)

ಥೈಯಾಮೆಥೋಕ್ಸಾಮ್ (ಆಕ್ಟಾರಾ 25 ಡಬ್ಲು.ಜಿ. ಮತ್ತು ಕ್ರುಸರ್ 70 ಡಬ್ಲು.ಎಸ್)

ಅಸಿಟಾಮಿಪ್ರಿಡ್ (ಪ್ರೈಡ್ 20 ಎಸ್.ಪಿ)

ಕ್ಲೋಥಿಯಾನಿಡಿನ್ (ಡ್ಯಾನ್‌ಟಾಪ್ 50 ಡಬ್ಲು.ಡಿ.ಜಿ.)

ಥೈಯಾಕ್ಲೋಪ್ರಿಡ್ (ಕ್ಯಾಲಿಪ್ಸೊ 240 ಎಸ್.ಪಿ)

ಇಮಿಡಾಕ್ಲೋಪಿಡ್ 70 ಡಬ್ಲು.ಎಸ್. ಮತ್ತು ಥೈಯಾಮೆಥೊಕ್ಸಾಮ್ 70 ಡಬ್ಲು.ಎಸ್. ಇಳಿಕೆಗಳನ್ನು ಬೀಜೋಪಚಾರದ ರೂಪದಲ್ಲಿ ಬಳಸಿ ಸಸಿಯ ಹಂತದಲ್ಲಿ ಬರುವ ರಸಹೀರುವ ಪೀಡೆಗಳಿಂದ ಬೆಳೆಯನ್ನು ರಕ್ಷಿಸಬಹುದಾಗಿದೆ.

8. ಆಕ್ಸಾಡೈಯಾಝಿನ್ ಸಂಯುಕ್ತಗಳು

ಇಂಡೋಕ್ಸಾಕಾರ್ಬ್ (ಅವಾಂಟ್ 14.5 ಎಸ್.ಸಿ.): ಸ್ಪರ್ಷಕ ಕೀಟನಾಶಕಗಳಾಗಿದ್ದು ಕೀಟಗಳ ನರಮಂಡಲದ ಮೇಲೆ ಪ್ರಭಾವ ಬೀರಿ ಅವುಗಳ ಅವನತಿಗೆ ಕಾರಣವಾಗುತ್ತವೆ. ಕೋಸು ಬೆಳೆಗೆ ಬೀಳುವ ಹಸಿರುಹುಳು, ತೊಗರಿ, ಹತ್ತಿ ಮತ್ತು ಟೊಮ್ಯಾಟೊ ಕಾಯಿಕೊರಕ ಹುಳುಗಳ ಹತೋಟಿಯಲ್ಲಿ ಬಳಕೆಯಾಗುತ್ತಿದೆ.

9. ಫೀನೈಲ್ ಪೈರಝೋಲ್ ಸಂಯುಕ್ತಗಳು

ಫಿಪ್ರೋನಿಲ್ (ರೀಜೆಂಟ್ 5 ಎಸ್.ಸಿ ಮತ್ತು 0.30 ಜಿ.): ಸ್ಪರ್ಷಕ ಕೀಟನಾಶಕವಾಗಿದ್ದು, ಹುಳುಗಳ ನರಮಂಡಲದ ಮೇಲೆ ಪ್ರಭಾವ ಬೀರುತ್ತದೆ. ಭತ್ತಕ್ಕೆ ಬೀಳುವ ಕಾಂಡಕೊರಕ, ಎಲೆ ಸುತ್ತುವ ಹುಳ, ಕೋಸಿನ ಹಸಿರು ಹುಳ ಮತ್ತು ಥ್ರಿಪ್ಸ್ ನುಸಿಯ ನಿರ್ವಹಣೆಯಲ್ಲಿ ಬಳಸಬಹುದಾಗಿದೆ.

10. ಪೈರೋಲ್ ಸಂಯುಕ್ತಗಳು

ಕ್ಲೋರ್‌ಫೇನಾಪಿರ್ (ಇಂಟ್ರೆಪಿಡ್ 10 ಎಸ್.ಸಿ.): ಇದು ಸ್ಪರ್ಷಕ ಕೀಟನಾಶಕ ಮತ್ತು ನುಸಿನಾಶಕ.

11. ಥೈಯೋಯುರಿಯಾ ಸಂಯುಕ್ತಗಳು

ಡೈಯಫೇನ್‌ಥೈಯುರಾನ್ (ಪೇಗಾಸಸ್ 50 ಇ.ಸಿ.): ಇದು ಸ್ಪರ್ಷಕ ಕೀಟನಾಶಕ ಮತ್ತು ನುಸಿನಾಶಕ.

12. ಬೆಂಜಿನ್ ಡೈಕಾರ್ಬಕ್ಸಾಮೈಡ್ ಆಧಾರದ ಕೀಟನಾಶಕಗಳು: ಫ್ಲೂಬೆಂಡಿಅಮೈಡ್ (ಫೇಮ್ 48 ಎಸ್.ಸಿ.)

ತೆಂಗನ್ನು ಬಾಧಿಸುವ ರೋಗಗಳು ಮತ್ತು ಕೀಟಗಳು ಹಾಗೂ ಅವುಗಳ ಸಮಗ್ರ ಹತೋಟಿ ಕ್ರಮಗಳು

ಕೆ. ಎಂ. ಶ್ರೀನಿವಾಸ ರೆಡ್ಡಿ, ಬಿ. ಶಿವಣ್ಣ, *ಶ್ರೀ. ಟಿ. ರುದ್ರಮುನಿ ಮತ್ತು **ಎಂ. ಎಚ್. ಶಂಕರ
ಸಹಾಯಕ ಪ್ರಾಧ್ಯಪಕರು (ಕೀಟಶಾಸ್ತ್ರ), ಕೃ. ವಿ. ವಿ. ಬೆಂಗಳೂರು-೫೬೦ ೦೬೫, * ವಲಯ ಕೃಷಿ ಮತ್ತು ತೋಟಗಾರಿಕ ಸಂಶೋಧನ ಕೇಂದ್ರ, ಹಿರಿಯೂರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ, ** ಕೃಷಿ ವಿಜ್ಞಾನ ಕೇಂದ್ರ, ಜಿದರಮ್ಮನಗುಡಿ ಕಾವಲ್, ತಿಪಟೂರು, ತುಮಕೂರು

ಭೂಮಿಯ ಮೇಲಿನ ಕಲ್ಪವೃಕ್ಷ ಎಂದು ಕರೆಸಿಕೊಳ್ಳುವ ತೆಂಗು ಪ್ರಪಂಚದಲ್ಲಿರುವ ಅತ್ಯಂತ ಉಪಯುಕ್ತ ಮರಗಳಲ್ಲಿ ಒಂದಾಗಿದೆ. ತೆಂಗಿನ ಮರದ ಪ್ರತಿಯೊಂದು ಭಾಗವು ಮಾನವನಿಗೆ ಒಂದಿಲ್ಲೊಂದು ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ. ಲಕ್ಷಾಂತರ ಜನರ ಜೀವನ ನಿರ್ವಹಣೆಯಲ್ಲಿ ತೆಂಗು ಅತ್ಯಂತ ಪ್ರಮುಖ ಪಾತ್ರವಹಿಸುತ್ತಿದೆ. ಇಂಥ ಒಂದು ಪ್ರಮುಖ ಬೆಳೆಯಾದ ತೆಂಗಿನ ಇಳುವರಿ ಹಾಗೂ ಗುಣಮಟ್ಟ ದಿನೇ ದಿನೇ ಕುಸಿಯುತ್ತಿದೆ. ಭಾರತದಲ್ಲಿ ಪ್ರತಿ ಮರದಿಂದ ಪ್ರತಿ ವರ್ಷಕ್ಕೆ ಸರಾಸೈರ್ 40 ಕಾಯಿಗಳನ್ನು ರೈತರು ಪಡೆಯುತ್ತಿದ್ದು, ವೈಜ್ಞಾನಿಕ ಇಳುವರಿಗಿಂತ ಶೇಕಡಾ ೬೦ ರಷ್ಟು ಕಡಿಮೆಯಾಗಿರುತ್ತದೆ.

ಇದಕ್ಕೆ ಹಲವಾರು ಕಾರಣಗಳಿದ್ದು, ಹೆಚ್ಚು ರೈತರು ಸಣ್ಣ ಹಾಗೂ ಅತೀ ಸಣ್ಣ ಹಿಡುವಳಿದಾರರಾಗಿದ್ದು, ಜಮೀನುಗಳಲ್ಲಿ ಸಂಪನ್ಮೂಲಗಳ ಕೊರತೆ ಇರುವುದು, ಅಲ್ಲದೇ ಉತ್ಪಾದಕತೆಯನ್ನು ಹೆಚ್ಚಿಸಬಹುದಾದ ವೈಜ್ಞಾನಿಕ ಬೇಸಾಯ ಕ್ರಮಗಳನ್ನು ಅನುಸರಿಸದೆ ಇರುವುದು, ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಉತ್ಪಾದನಾ ವೆಚ್ಚ, ನೀರು ಮತ್ತು ಪೋಷಕಾಂಶಗಳ ಅಸಮರ್ಪಕ ಬಳಕೆಯಿಂದಾಗಿ ಗುಣಮಟ್ಟ ಮತ್ತು ಇಳುವರಿ ಕುಸಿಯುತ್ತಾ ಇದೆ. ಹೀಗಾಗಿ ತೆಂಗಿನಲ್ಲಿ ಸುಸ್ಥಿರ ಆರ್ಥಿಕ ಇಳುವರಿಯನ್ನು ಪಡೆಯಲು, ಸಾವಯವ ಅಂಶಗಳಿಂದ ಮಣ್ಣಿನಲ್ಲಿರುವ ಪೋಷಕಾಂಶಗಳ ನಿರ್ವಹಣೆ ಹಾಗೂ ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು ಮಾಡುವುದು ಅತ್ಯಗತ್ಯವಾಗಿದೆ.

ಕರ್ನಾಟಕದಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ರೋಗಗಳಾದ ಅಣಬೆರೋಗ, ಸುಳಿ ಕೊಳೆಯುವ ರೋಗ, ರಸ ಸೋರುವ ರೋಗ, ಗರಿ ಕೊಳೆಯುವ ರೋಗ, ಬೇರು ಸೊರಗು ರೋಗ, ಮಾಹಲಿ ಅಥವಾ ಕಾಂಡ ಕೊಳೆತ ರೋಗ, ಎಲೆ ಚುಕ್ಕೆ ರೋಗ ಮತ್ತು ಮುಕಟ ಸ್ತಂಭನ ರೋಗಗಳು ಅತಿ ಹೆಚ್ಚು ಹಾನಿಯನ್ನು ಉಂಟುಮಾಡುತ್ತವೆ. ಪ್ರಮುಖ ಕೀಟಗಳಾಗಿ ರೈನಾಸರಸ್ ದುಂಬಿ, ಕೆಂಪು ಮೂತಿ ಹುಳು, ಕಪ್ಪುತಲೆ ಕಂಬಳಿ ಹುಳು ಮತ್ತು ತೆಂಗಿನ ನುಸಿ ಪೀಡೆ ಕಂಡುಬಂದಿರುತ್ತವೆ.

ಈ ನಿಟ್ಟಿನಲ್ಲಿ ಕೃಷಿ ವಿಜ್ಞಾನ ಕೇಂದ್ರ, ಜಿದರಮ್ಮನಗುಡಿ ಕಾವಲ್, ತಿಪಟೂರು ರೈತರ ಜಮೀನಿನಲ್ಲಿ ಅನೇಕ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಂಡ್ಡಿತ್ತು. ಕೀಟ ಮತ್ತು ರೋಗ ಹತೋಟಿಯನ್ನು ಮಾಡಲು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿ ಒಳ್ಳೆಯ ಇಳುವರಿ ಪಡೆಯಲು ಸಹಕಾರಿಯಾಗಿದೆ.

ಭೂಮಿಯ ಮೇಲಿನ ಕಲ್ಪವೃಕ್ಷ ಎಂದು ಕರೆಸಿಕೊಳ್ಳುವ ತೆಂಗು ಪ್ರಪಂಚದಲ್ಲಿರುವ ಅತ್ಯಂತ ಉಪಯುಕ್ತ ಮರಗಳಲ್ಲಿ ಒಂದಾಗಿದೆ. ತೆಂಗಿನ ಮರದ ಪ್ರತಿಯೊಂದು ಭಾಗವು ಮಾನವನಿಗೆ ಒಂದಿಲ್ಲೊಂದು ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ. ಲಕ್ಷಾಂತರ ಜನರ ಜೀವನ ನಿರ್ವಹಣೆಯಲ್ಲಿ ತೆಂಗು ಅತ್ಯಂತ ಪ್ರಮುಖ ಪಾತ್ರವಹಿಸುತ್ತಿದೆ. ಇಂಥ ಒಂದು ಪ್ರಮುಖ ಬೆಳೆಯಾದ ತೆಂಗಿನ ಇಳುವರಿ ಹಾಗೂ ಗುಣಮಟ್ಟ ದಿನೇ ದಿನೇ ಕುಸಿಯುತ್ತಿದೆ. ಭಾರತದಲ್ಲಿ ಪ್ರತಿ ಮರದಿಂದ ಪ್ರತಿ ವರ್ಷಕ್ಕೆ ಸರಾಸರಿ 40 ಕಾಯಿಗಳನ್ನು ರೈತರು ಪಡೆಯುತ್ತಿದ್ದು, ವೈಜ್ಞಾನಿಕ ಇಳುವರಿಗಿಂತ ಶೇಕಡಾ 50 ರಷ್ಟು ಕಡಿಮೆಯಾಗಿರುತ್ತದೆ.

ಇದಕ್ಕೆ ಹಲವಾರು ಕಾರಣಗಳಿದ್ದು, ಹೆಚ್ಚು ರೈತರು ಸಣ್ಣ ಹಾಗೂ ಅತೀ ಸಣ್ಣ ಹಿಡುವಳಿದಾರರಾಗಿದ್ದು, ಜಮೀನುಗಳಲ್ಲಿ ಸಂಪನ್ಮೂಲಗಳ ಕೊರತೆ ಇರುವುದು, ಅಲ್ಲದೇ ಉತ್ಪಾದಕತೆಯನ್ನು ಹೆಚ್ಚಿಸಬಹುದಾದ ವೈಜ್ಞಾನಿಕ ಬೇಸಾಯ ಕ್ರಮಗಳನ್ನು ಅನುಸರಿಸದೆ ಇರುವುದು, ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಉತ್ಪಾದನಾ ವೆಚ್ಚ, ನೀರು ಮತ್ತು ಪೋಷಕಾಂಶಗಳ ಅಸಮರ್ಪಕ ಬಳಕೆಯಿಂದಾಗಿ ಗುಣಮಟ್ಟ ಮತ್ತು ಇಳುವರಿ ಕುಸಿಯುತ್ತಾ ಇದೆ. ಹೀಗಾಗಿ ತೆಂಗಿನಲ್ಲಿ ಸುಸ್ಥಿರ ಆರ್ಥಿಕ ಇಳುವರಿಯನ್ನು ಪಡೆಯಲು, ಸಾವಯವ ಅಂಶಗಳಿಂದ ಮಣ್ಣಿನಲ್ಲಿರುವ ಪೋಷಕಾಂಶಗಳ ನಿರ್ವಹಣೆ ಹಾಗೂ ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು ಮಾಡುವುದು ಅತ್ಯಗತ್ಯವಾಗಿದೆ.

ತೆಂಗಿನಲ್ಲಿ ಬರುವ ಪ್ರಮುಖ ರೋಗಗಳು ಹಾಗೂ ಅವುಗಳ ಸಮಗ್ರ ಹತೋಟಿ ಕ್ರಮಗಳು

1. ಅಣಬೆ ರೋಗ :

➢ ಅಣಬೆ ರೋಗವು ಕರ್ನಾಟಕದಲ್ಲಿ ತೀವ್ರವಾಗಿದ್ದು, ತುಂಬಾ ಹಾನಿಯನ್ನುಂಟುಮಾಡುತ್ತಿದೆ. ಗ್ಯಾನೋಡರ್ಮ ಲುಸಿಡಮ್ ಎಂಬ ಶಿಲೀಂಧ್ರದಿಂದ ಉಂಟಾಗುವ ಈ ರೋಗವು ಸಾಮಾನ್ಯವಾಗಿ ಮರದಿಂದ ಮರಕ್ಕೆ, ಮಣ್ಣು ಮತ್ತು ನೀರಿನ ಮುಖಾಂತರ ಹರಡುತ್ತದೆ.

➢ ಬೇರು ಕೊಳೆಯುವುದು, ಕಾಂಡದ ಸುತ್ತಲೂ ರಸಹೊಡೆದು, ಹೊರಬಾಗದ ತೊಗಟೆ ಸತ್ತು ಹೋಗುವುದು ಹಾಗೂ ಮರದ ಕೆಳಭಾಗದ ಗರಿಗಳು ಮೊದಲು ಹಳದಿ ಬಣ್ಣಕ್ಕೆ ತಿರುಗಿ ನಂತರ ಒಂದೊಂದಾಗಿ ಒಣಗಿ ಜೋತು ಬೀಳುತ್ತವೆ.

➢ ರೋಗದ ತೀವ್ರತೆಯಿಂದ ಬಳಲುತ್ತಿರುವ ಮರಗಳ ಕಾಯಿಗಳ ಗಾತ್ರ ಮತ್ತು ಗುಣಮಟ್ಟ ಕಡಿಮೆಯಿರುತ್ತದೆ. ಸೋಂಕು ಮುಂದುವರೆದಂತೆ ಗರಿಗಳ ಗಾತ್ರ ಕಿರಿದಾಗಿ ಹಳದಿ ಬಣ್ಣಕ್ಕೆ ತಿರುಗಿ ಅಂತಿಮವಾಗಿ ಮರ ಸತ್ತು ಹೋಗುತ್ತದೆ .

➢ ಕೆಲವು ಭಾರಿ ಮರದ ಬುಡದಲ್ಲಿ ಅಣಬೆಗಳು ಕಂಡು ಬರುತ್ತವ. ಈ ಅಣಬೆಗಳು ಬಟ್ಟಲಿನಾಕೃತಿಯಲ್ಲಿದ್ದು ಮೊದಲು ವರ್ಣಮಯವಾಗಿ ಕ್ರಮೇಣ ಕಿತ್ತಲೆ ಬಣ್ಣಕ್ಕೆ ತಿರುಗುತ್ತವೆ.

ಹತೋಟಿ ಕ್ರಮಗಳು:

✓ ರೋಗ ತೀವ್ರತೆಯಿಂದ ಬಳಲುತ್ತಿರುವ ಮರಗಳನ್ನು ಮೊದಲು ಪತ್ತೆಹಚ್ಚಿ ಬುಡ ಸಮೇತ ಕಿತ್ತು ಸುಡಬೇಕು.

✓ ಮರದ ಬುಡದಿಂದ 2.5 3 ಮೀ. ಅಂತರದಲ್ಲಿ 30 ಸೆಂ .ಮೀ ಅಗಲ ಮತ್ತು 1 ಮೀ. ಆಳವಾದ ಗುಣಿಯನ್ನು ಮರದ ಸುತ್ತಲೂ ತೆಗೆದು, ರೋಗ ಪೀಡಿತ ಮರದ ಬೇರುಗಳನ್ನು ಆರೋಗ್ಯಶಾಲಿ ಮರದ ಬೇರುಗಳಿಂದ ಬೇರ್ಪಡಿಸಿ ಈ ರೋಗ ಹರಡದಂತೆ ತಡೆಯಬೇಕು.

✓ ರೋಗ ಪೀಡಿತ ಮರದಿಂದ ಆರೋಗ್ಯಶಾಲಿ ಮರಕ್ಕೆ ನೀರು ಹಾಯಿಸಬಾರದು. ಹನಿ ನೀರಾವರಿ ಅಥವಾ ಬೇಸಿನ್ ನೀರಾವರಿ ಪದ್ಧತಿಯನ್ನು ಅನುಸರಿಸಬೇಕು.

✓ 50 ಗ್ರಾಂ ಪರೋಪ ಶಿಲೀಂಧ್ರ (ಟ್ರೈಕೊಡರ್ಮ ವಿರಿಡೆ ಅಥವಾ ಟ್ರೈಕೊಡರ್ಮ ಹಾರ್ಜಿಯಾನಮ್), 5 ಕೆ.ಜಿ. ಬೇವಿನ ಹಿಂಡಿಯ ಜೊತೆಗೆ ಬೆರೆಸಿ ವರ್ಷಕ್ಕೆ ಎರಡು ಭಾರಿ ಪ್ರತಿ ಮರಕ್ಕೆ ಕೊಡಬೇಕು.

✓ ರೋಗ ಪೀಡಿತ ಮರಗಳಿಗೆ 2 ಮಿ.ಲೀ. ಟ್ರೈಡೋಮಾರ್ಫ (ಕ್ಯಾಲಿಕ್ಸಿನ್) ಶಿಲೀಂಧ್ರ ನಾಶಕವನ್ನು 100 ಮಿ. ಲೀ. ನೀರಿನಲ್ಲಿ ಬೆರೆಸಿ ಬೇರಿನ ಮೂಲಕ 3 ತಿಂಗಳಿಗೊಮ್ಮೆ (ವರ್ಷದಲ್ಲಿ 4 ಸಲ) ಉಣಿಸಬೇಕು.

✓ ಜೊತೆಗೆ ಶಿಪಾರಸ್ಸು ಮಾಡಿದ ರಸಗೊಬ್ಬರಗಳು ಮತ್ತು 50 ಕೆ.ಜಿ. ಕೊಟ್ಟಿಗೆ ಗೊಬ್ಬರವನ್ನು ಪ್ರತಿ ಮರಕ್ಕೆ ವರ್ಷಕ್ಕೆ ಎರಡು ಭಾರಿ ಕೊಡಬೇಕು.

✓ ರೋಗ ರಹಿತ ಮಣ್ಣಿನಲ್ಲಿ ಬೆಳೆದ ತೆಂಗಿನ ಸಸಿಗಳನ್ನು ಬಳಸಬೇಕು ಹಾಗೂ ಬೇಸಾಯ ಮಾಡುವಾಗ ತೆಂಗಿನ ಮರಗಳ ಕಾಂಡ ಅಥವಾ ಬೇರುಗಳು ಹಾನಿಯಾಗದಂತೆ ಎಚ್ಚರವಹಿಸಬೇಕು.

ಮೇಲಿನ ಕ್ರಮಗಳನ್ನು ಸೂಕ್ತ ಸಮಯದಲ್ಲಿ ಅನುಸರಿಸುವುದರಿಂದ ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು.

2. ಸುಳಿ ಕೊಳೆ ರೋಗ :

➢ ಸುಳಿ ಕೊಳೆಯುವ ರೋಗ ಅತಿ ಮುಖ್ಯವಾದ ಹಾಗೂ ಹಾನಿಕಾರಕ ರೋಗವಾಗಿದೆ. ಸುಳಿಯ ಗರಿಗಳು ಒಣಗುವುದೇ ಈ ರೋಗದ ಮೊಟ್ಟಮೊದಲನೇ ಚಿಹ್ನೆ. ನಂತರ ಮರದ ಬೆಳವಣಿಗೆ ನಿಂತು ಹೋಗುತ್ತದೆ. ಸುಳಿಯ ಮಧ್ಯದಲ್ಲಿನ ಗರಿಗಳು ಒಣಗಿ ಸಾಯುತ್ತವೆ.

➢ ಇವು ಮೊದಲು ತಿಳಿಯಾದ ಕಂದು ಮಿಶ್ರಿತ ಬೂದು ಬಣ್ಣ ಹೊಂದಿ ನಂತರ ದಟ್ಟ ಕಂದು ಬಣ್ಣಕ್ಕೆ ತಿರುಗುತ್ತವೆ. ರೋಗ ಉಲ್ಬಣಗೊಂಡಂತೆ ಸುತ್ತಲಿನ ಎಲ್ಲಾ ಗರಿಗಳು ಒಣಗಿ ಬಾಡಿದಂತಾಗಿ ಸುಳಿ ಕಿತ್ತರೆ ಕೈಗೆ ಸುಲಭವಾಗಿ ಬರುತ್ತವೆ ಮತ್ತು ಕೆಟ್ಟ ವಾಸನೆಯಿಂದ ಕೂಡಿರುತ್ತದೆ. ಇಂತಹ ಮರಗಳು ಸಾವಿನಲ್ಲಿ ಕೊನೆಯಾಗುತ್ತವೆ.

➢ ಐದು ವರ್ಷದಿಂದ ಇಪ್ಪತ್ತು ವರ್ಷದ ಮರಗಳಲ್ಲಿ ಈ ರೋಗವು ಹೆಚ್ಚಾಗಿ ಕಂಡುಬರುತ್ತದೆ.

ಹತೋಟಿ ಕ್ರಮಗಳು:

➢ ಪ್ರಾರಂಭದ ಹಂತದಲ್ಲಿ ಮಧ್ಯದ ಎಳೆಯ ಸುಳಿ ಒಣಗಲು ಪ್ರಾರಂಭಿಸಿದಾಗ, ಸುಳಿಯಲ್ಲಿನ ರೋಗ ಪೀಡಿತ ಭಾಗವನ್ನು ತೆಗೆದು ಸ್ವಚ್ಛ ಮಾಡಿ ಶೇ. 1 ರ ಬೋರ್ಡೋ ದ್ರಾವಣವನ್ನು ಸುರಿಯಬೇಕು. ಹೊಸ ಚಿಗುರು ಹೊರ ಬಂದು ಸಾಮಾನ್ಯ ಗರಿಯಾಗುವವರೆಗೆ, ಚಿಕಿತ್ಸೆ ಮಾಡಿದ ಭಾಗವನ್ನು ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚಬೇಕು.

➢ ತೀವ್ರವಾಗಿ ರೋಗ ತಗುಲಿದ ತೆಂಗಿನ ಮರಗಳನ್ನು ಕತ್ತರಿಸಿ ಹಾಕಿ, ಅದೇ ಸ್ಥಳದಲ್ಲಿಯೇ ಸುಡುವುದು ಒಳ್ಳೆಯ ಕ್ರಮ. ಹೀಗೆ ಕತ್ತರಿಸಿದ ಮರಗಳ ಅಕ್ಕ ಪಕ್ಕದ ಮರಗಳಿಗೆ ಮುನ್ನೆಚರಿಕೆಯಾಗಿ ಶೇ. 1 ರ ಬೋರ್ಡೋ ದ್ರಾವಣವನ್ನು ಸಿಂಪಡಿಸಬೇಕು ಅಥವಾ 3 – 4 ಗ್ರಾಂ ತಾಮ್ರದ ಆಕ್ಸಿಕ್ಲೋರೈಡನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

➢ ಮುಂಜಾಗ್ರತಾ ಕ್ರಮವಾಗಿ ರೋಗ ಹರಡದಂತೆ ಶೇ. 1 ರ ಬೋರ್ಡೋ ದ್ರಾವಣವನ್ನು ಮಳೆಗಾಲ ಪ್ರಾರಂಭವಾಗುವ ಮೊದಲು ಸಿಂಪರಣೆ ಮಾಡಬೇಕು.

3. ರಸ ಸೋರುವ ರೋಗ ಅಥವಾ ಕಾಂಡ ಸ್ರಾವ:

➢ ಕಾಂಡದಲ್ಲಿ ರಸ ಸೋರುವುದು ಸೆರಟೊಸಿಸ್ಟಿಸ್ ಪ್ಯಾರಡೊಕ್ಸ ಎಂಬ ಶಿಲೀಂಧ್ರದಿಂದ ಬರುತ್ತದೆ. ಈ ರೋಗದ ಪ್ರಮುಖ ಚಿಹ್ನೆಗಳೆಂದರೆ ಮರದ ತೊಗಟೆಯ ಬಿರುಕುಗಳಿಂದ ಕೆಂಪು ಮಿಶ್ರಿತ ಕಂದು ಬಣ್ಣದ ದ್ರವ ಸುರಿಯುವುದು, ಹೊರಬಂದ ದ್ರವ ತೆಂಗಿನ

ಮರದ ತೊಗಟೆಯ ಮೇಲೆ ಒಣಗಿದ ನಂತರ ಕಪ್ಪು ಬಣ್ಣಕ್ಕೆ ತಿರಗುತ್ತದೆ.

➢ ದ್ರವ ಸುರಿಯುತ್ತಿರುವ ತಳಭಾಗದಲ್ಲಿನ ಕಾಂಡ ಕೊಳೆತಿರುತ್ತದೆ. ಪ್ರಾರಂಭದ ಹಂತದಲ್ಲಿ ಕಾಂಡದ ಒಳಗಡೆಯೇ ಕೊಳೆಯುವಿಕೆಯು ಕೇಂದ್ರೀಕರಿಸುತ್ತದೆ. ಆದರೆ ರೋಗದ ತೀವ್ರತೆ ಹೆಚ್ಚಿದಂತೆ ಕೊಳೆತ ಭಾಗಗಳು ಕೂಡಿಕೊಂಡು ರೋಗ ಉಲ್ಬಣಗೊಳ್ಳುತ್ತದೆ.

➢ ಈ ರೋಗವು ಕಾಂಡದ ಯಾವ ಭಾಗಗಳಲ್ಲಾದರೂ ಕಾಣಿಸಿಕೊಳ್ಳಬಹುದು. ರೋಗ ಪೀಡಿತ ಮರಗಳು ಶಕ್ತಿ ಕಳೆದುಕೊಂಡು ಆಹಾರಂಶಗಳನ್ನು ಹೀರಲಾಗದೆ ಇಳುವರಿ ಗಣನೀಯವಾಗಿ ಕಡಿಮೆಯಾಗುತ್ತದೆ, ಕೆಲವು ಸಂದರ್ಭಗಳಲ್ಲಿ ಮರಗಳು ಬಂಜೆಯಾಗಿ ಸಾಯುತ್ತವೆ.

ಹತೋಟಿ ಕ್ರಮಗಳು:

✓ ಮಧ್ಯಂತರ ಬೇಸಾಯ ಮಾಡುವಾಗ ಮರಗಳಿಗೆ ಗಾಯಗಳಾಗದಂತೆ ಎಚ್ಚರಿಕೆ ವಹಿಸಬೇಕು.

✓ ಪ್ರತಿ ಮರಕ್ಕೆ ಶಿಫಾರಸ್ಸು ಮಾಡಿದ ಸಾವಯವ ಮತ್ತು ರಾಸಾಯನಿಕ ಗೊಬ್ಬರದ ಜೊತೆಗೆ 5 ಕೆ.ಜಿ. ಬೇವಿನ ಹಿಂಡಿಯನ್ನು ಕೊಡಬೇಕು.

✓ ಮರದ ಸುತ್ತಲೂ ನೀರು ನಿಲ್ಲದ ಹಾಗೆ ಬಸೀ ಕಾಲುವೆಗಳನ್ನು ತೆಗೆಯುವುದು ಮತ್ತು ಒಣ ಪ್ರದೇಶದಲ್ಲಿ ತೇವಾಂಶ ಕೊರೆಯದಂತೆ ನೋಡಿಕೊಳ್ಳಬೇಕು.

✓ ಹಸಿರೆಲೆ ಗೊಬ್ಬರದ ಗಿಡಗಳನ್ನು ಮರದ ಸುತ್ತ ಬೆಳೆಸಿ, 40 45 ದಿನಗಳ ನಂತರ ಮಣ್ಣಿನಲ್ಲಿ ಬೆರೆಸುವುದು.

✓ ಬುಡದಲ್ಲಿ ರಸ ಸೋರುತ್ತಿರುವ (ತೊಗಟೆ) ಭಾಗವನ್ನು ಕತ್ತರಿಸಿ ತೆಗೆದು ಶೇ. 10 ರ ಬೋರ್ಡೊ ಮುಲಾಮನ್ನು ಲೇಪಿಸುವುದು.

✓ ಕಾರ್ಬಡೈಜಿಮ್ ಅಥವಾ ಕ್ಯಾಲಿಕ್ಸಿನ್ ಶೇ.1 ರ (100 ಮಿ.ಲೀ.) ಔಷಧಿಯನ್ನು ಬೇರಿನ ಮುಖಾಂತರ ಕೊಡುವುದು.

4. ಗರಿ ಕೊಳೆಯುವ ರೋಗ

➢ ಮಳೆಗಾಲ ಅಥವಾ ಹೆಚ್ಚು ತೇವಾಂಶ ಇರುವ ಹವಾಗುಣದಲ್ಲಿ ಈ ರೋಗವು ಉಲ್ಬಣಗೊಂಡು ತುಂಬಾ ಹಾನಿಕಾರಕವಾಗಿರುವುದು. ಈ ರೋಗದ ಪ್ರಾರಂಭದ ಚಿಹ್ನೆಗಳೆಂದರೆ ಎಳೆಯ ಗರಿಗಳ ಮೇಲೆ ಕೆಂಪು ಮಿಶ್ರಿತ ಕಂದು ಬಣ್ಣದ ಚುಕ್ಕಿ ಮತ್ತು ಮಚ್ಚೆಗಳು ಕಾಣಿಸಿಕೊಳ್ಳುತ್ತವೆ.

➢ ಈ ಚುಕ್ಕೆಗಳು ಹರಡುತ್ತಾ ಮುಂದುವರೆದು, ಒಂದಕ್ಕೊಂದು ಸೇರಿಕೊಂಡು ಮೆದುಕೊಳೆತ ಉಂಟಾಗುತ್ತದೆ. ಕೊಳೆತ ಚುಕ್ಕೆಗಳು ಒಣಗಿ, ಗಾಳಿಯಿಂದ ಒಣಗಿದ ಈ ಚುಕ್ಕೆಗಳು ಗರಿಗಳಿಂದ ಬೇರ್ಪಟ್ಟು, ಗರಿಗಳು ಬೀಸಣಿಗೆಯಂತೆ ಕಾಣುತ್ತವೆ.

➢ ಈ ರೋಗ ನಿದಾನವಾಗಿ ಹರಡುತ್ತದೆ ಹಾಗೂ ರೋಗ ಪೀಡಿತ ಮರವು ತಕ್ಷಣ ಸಾಯುವುದಿಲ್ಲ. ಆದರೆ ಗರಿಗಳ ಮೇಲು ಭಾಗ ಕೊಳೆತು ನಾಶವಾಗುವುದರಿಂದ ಇಳುವರಿಯ ಮೇಲೆ ಬಾರಿ ದುಷ್ಪರಿಣಾಮ ಉಂಟಾಗುತ್ತದೆ.

ಹತೋಟಿ ಕ್ರಮಗಳು:

✓ ಈ ರೋಗಪೀಡಿತ ಭಾಗಗಳನ್ನು ಕತ್ತರಿಸಿ, ತೆಗೆದು ಹಾಕಿ ಮರದ ಮುಕುಟವನ್ನು ಸ್ವಚ್ಚ ಮಾಡಿ, ಶೇ. 1 ರ ಬೋರ್ಡೊ ಮಿಶ್ರಣ ಅಥವಾ ಕ್ಯಾಲಿಕ್ಸಿನ್ 0.2 % ಅಥವಾ ಕಾಂಟಾಫ್ 0.2 0.4% ಅಥವಾ ಇಂಡೊಫಿಲ್ ಎಮ್–45, 0.2 % ಸಿಂಪಡಿಸಬೇಕು.

✓ ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಸುವುದರಿಂದ ಮತ್ತು ಶಿಫಾರಸ್ಸು ಮಾಡಿದ ಪ್ರಮಣದಲ್ಲಿ ಗೊಬ್ಬರ ಕೊಡುವುದರಿಂದ ಈ ರೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದು.

5. ಬೇರು ಸೊರಗು ರೋಗ : (ರೂಟ್ ವಿಲ್ಟ್)

✓ ಬೇರು ಸೊರಗು ರೋಗವು ಕೇರಳದ ದಕ್ಷಿಣ ಭಾಗದಲ್ಲಿ ತೀವ್ರವಾಗಿದ್ದು, ತಮಿಳು ನಾಡಿನ ಕೆಲ ಭಾಗಗಳಲ್ಲಿ ಅಂದರೆ ಕೇರಳಕ್ಕೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲಿ ಕಂಡುಬಂದಿದೆ.

✓ ಇತ್ತೀಚೆಗೆ ಈ ರೋಗವು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಸೂಳ್ಯ ತಾಲ್ಲೂಕಿನಲ್ಲೂ ಸಹ ಕಂಡುಬಂದಿದೆ. ಬೇರು ಸೊರಗು ರೋಗದ ಮುಖ್ಯ ಲಕ್ಷಣಗಳೆಂದರೆ ರೋಗ ಪೀಡಿತ ಮರಗಳು ಬಳಲಿ ನಿಶಕ್ತವಾಗುತ್ತವೆ. ಅಂದರೆ ಗರಿಗಳು ಬಾಗಿಕೊಂಡು, ಹಳದಿ ಬಣ್ಣಕ್ಕೆ ತಿರುಗಿ, ತುದಿಯು ಒಣಗಿ ಕಂದು ಬಣ್ಣಕ್ಕೆ ತಿರಗುತ್ತದೆ.

✓ ರೋಗದ ತೀವ್ರತೆ ಹೆಚ್ಚಿದಂತೆ ಹೊಸದಾಗಿ ಹೊರ ಬಂದ ಗರಿಗಳ ಗಾತ್ರ ಸಣ್ಣದಾಗಿರುತ್ತದೆ. ಫಸಲಿಗೆ ಬಂದ ತೆಂಗಿನ ಮರ ರೋಗ ಪೀಡಿತವಾದರೆ, ಕಾಯಿಗಳು ಬಲಿಯುವುದಕ್ಕೆ ಮೊದಲು ಉದುರುವುದು ಈ ರೋಗದ ಇನ್ನೊಂದು ಮುಖ್ಯ ಲಕ್ಷಣ. ರೋಗ ಪೀಡಿತ ಮರಗಳ ಕಾಯಿಗಳ ಗಾತ್ರ ಚಿಕ್ಕದಾಗಿದ್ದು, ಕೊಬ್ಬರಿ ಹಾಗೂ ಎಣ್ಣೆಯ ಅಂಶ ಕಡಿಮೆಯಾಗಿರುತ್ತದೆ.

ಹತೋಟಿ ಕ್ರಮಗಳು:

✓ ರೋಗ ಪೀಡಿತ ಮರಗಳನ್ನು ಬೇರು ಸಹಿತ ಸಂಪೂರ್ಣವಾಗಿ ನಿರ್ಮೂಲನೆ ಮಾಡಿ, ರೋಗ ರಹಿತ ಗಿಡಗಳನ್ನು ನಾಟಿ ಮಾಡುವುದು.

✓ ಸುಧಾರಿತ ಬೇಸಾಯ ಕ್ರಮಗಳು ಹಾಗೂ ಶಿಫಾರಸ್ಸು ಮಾಡಿದ ಸಾವಯವ ಮತ್ತು ರಾಸಾಯನಿಕ ಗೊಬ್ಬರಗಳನ್ನು ಬಳಸುವುದು.

✓ ಹಸಿರೆಲೆ ಗೊಬ್ಬರದ ಗಿಡಗಳನ್ನು ಬೆಳಸಿ, 40–45 ದಿನಗಳ ನಂತರ ಮಣ್ಣಿಗೆ ಸೇರಿಸುವುದು.

✓ ಮರದ ಸುತ್ತ ನೀರು ನಿಲ್ಲದ ಹಾಗೆ ಬಸೀ ಕಾಲುವೆಗಳನ್ನು ತೆಗೆಯುವುದು ಮತ್ತು ಒಣ ಪ್ರದೇಶದಲ್ಲಿ ತೇವಾಂಶ ಕೊರತೆಯಾಗದಂತೆ ನೋಡಿಕೊಳ್ಳುವುದು.

✓ ಬೇರು ಕೊಳೆ ರೋಗವು ಸಾಮಾನ್ಯವಾಗಿ ಎಲ್ಲೆ ಕೊಳೆ ರೋಗ ಬಂದ ಮರಗಳಲ್ಲಿ ಕಾಣಿಸಿಕೊಳ್ಳುವುದರಿಂದ ಎಲೆ ಕೊಳೆ ರೋಗದ ಹತೋಟಿ ಕ್ರಮಗಳನ್ನು ಕೈಗೊಳ್ಳಬೇಕು. ಈ ಎಲ್ಲಾ ಕ್ರಮಗಳನ್ನು ಅನುಸರಿಸುವುದರಿಂದ ರೋಗ ಪೀಡಿತ ಮರಗಳಿಂದ ಲಾಬದಾಯಕ ಇಳುವರಿ ಪಡೆಯಬಹುದು.

6. ಮಾಹಲಿ ಅಥವಾ ಕಾಯಿ ಕೊಳೆತ ರೋಗ :

➢ ಈ ರೋಗವು ಫೈಟೋಫ್ತೆರಾ ಪಾಮಿವೋರಾ ಎಂಬ ಶಿಲೀಂಧ್ರದಿಂದ ಬರುತ್ತದೆ. ಹೂವು ಗರ್ಭದಾರಣೆಯಾಗುವುದಕ್ಕೆ ಮೊದಲು ಮತ್ತು ನಂತರ ಉದುರುವುದು, ಮತ್ತು ಎಳೆಯ ಹಾಗೂ ಸುಮಾರಾಗಿ ಬಲಿತ ಕಾಯಿಗಳು ಉದುರುವುದು ಈ ರೋಗದ ಮುಖ್ಯ ಲಕ್ಷಣ.

➢ ಪ್ರಾರಂಭದಲ್ಲಿ ರೋಗ ಪೀಡಿತ ಕಾಯಿಯ ತೊಟ್ಟಿನ ಮೇಲೆ ವರ್ಣ ರಹಿತವಾದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಸ್ವಲ್ಪ ಕಾಲದನಂತರ ಈ ಭಾಗವು ಕಂದು ಬಣ್ಣಕ್ಕೆ ತಿರುಗುತ್ತದೆ. ಈ ಚುಕ್ಕೆಗಳ ಮೇಲ್ಬಾಗದಲ್ಲಿ ಚಾಪೆಯಂತೆ ಬೆಳೆದಿರುವ ಶಿಲೀಂಧ್ರ ಕಾಣಿಸಿಕೊಳ್ಳುತ್ತದೆ. ಈ ಕೊಳೆತ

ತೆಂಗಿನಕಾಯಿ ಸಿಪ್ಪೆಗೆ ಹರಡತ್ತದೆ, ಕೆಲವು ವೇಳೆ ಚಿಪ್ಪು ಬಲಿಯದೇ ಇರುವ ಸಂದರ್ಭದಲ್ಲಿ ಕೊಬ್ಬರಿಗೂ ಸಹ ಪ್ರವೇಶಿಸುತ್ತದೆ.

➢ ತೆಂಗಿನ ಜೊತೆ ಅಡಕೆಯನ್ನು ಅಂತರ ಬೆಳೆಯಾಗಿ ಬೆಳೆದರೆ ಈ ರೋಗದ ತೀವ್ರತೆ ಹೆಚ್ಚುತ್ತದೆ. ಸಾಮಾನ್ಯವಾಗಿ ಮುಂಗಾರು ಮಳೆಯಿಂದ ವಾತಾವರಣದಲ್ಲಿ ತೇವಾಂಶ ಹೆಚ್ಚಾದಾಗ ಈ ರೋಗ ಕಾಣಿಸಿಕೊಂಡು ಬಹಳ ಹಾನಿಯನ್ನುಂಟು ಮಾಡುತ್ತದೆ.

ಹತೋಟಿ ಕ್ರಮಗಳು : ಮುಂಗಾರು ಮಳೆಗೆ ಮುಂಚಿತವಾಗಿ ಶೇ. 1 ರ ಸಾಮರ್ಥ್ಯದ ಬೋರ್ಡೋ ಮಿಶ್ರಣ ಅಥವಾ ಫೈಟಲಾನ್ 0.5 % ಸಿಂಪಡಿಸಬೇಕು. ಅವಶ್ಯವಿದ್ದಲ್ಲಿ 40 ದಿನಗಳಿಗೊಮ್ಮೆ ಪುನ: ಸಿಂಪಡಿಸಬೇಕು. ರೋಗ ಪೀಡಿತ ಕಾಯಿಗಳನ್ನು ಆರಿಸಿ ನಾಶಗೊಳಿಸಬೇಕು.

7. ಎಲೆ ಚುಕ್ಕೆ ರೋಗ : ಈ ರೋಗದ ಚಿಹ್ನೆಗಳು ಬಲಿತ ಗರಿಗಳ ಮೇಲೆ ಮಾತ್ರ ಕಂಡು ಬರುತ್ತವೆ. ಎಲೆಗಳ ಮೇಲೆ ಬೂದಿ ಬಣ್ಣದ ಸೂಕ್ಷ್ಮ ಪಟ್ಟಿಯಿರುವ ಚುಕ್ಕೆಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಕ್ರಮೇಣ ಚುಕ್ಕೆಯ ಮಧ್ಯ ಭಾಗ ಬೂದಿ ಮಿಶ್ರಿತ ಬಿಳಿಯ ಬಣ್ಣಕ್ಕೆ ಮತ್ತು ಸುತ್ತಲಿನ ಭಾಗ ಕಂದು ಬಣ್ಣಕ್ಕೆ ತಿರುಗುತ್ತದೆ. ಚುಕ್ಕೆಗಳು ವಿಶಾಲವಾಗಿ ಒಂದನ್ನೊಂದು ಕೂಡಿಕೊಂಡು ಆಕಾರ ರಹಿತ ಮಚ್ಚೆಗಳಾಗುತ್ತವೆ. (ರೋಗ ಮುಂದುವರೆದಂತೆ ಗರಿಗಳ ತುದಿ ಮತ್ತು ಹಂಚುಗಳು ಒಣಗಿ ಇಡೀ ಗರಿಯೇ ಮುರುಟಿಕೊಳ್ಳುತ್ತದೆ.

ಹತೋಟಿ ಕ್ರಮಗಳು : ಮರದ ಸುತ್ತ ನೀರು ನಿಲ್ಲದ ಹಾಗೆ ಬಸಿ ಕಾಲುವೆ ಮಾಡುವುದು, ಹಾಗೂ ಪೊಟ್ಯಾಷ್ ಗೊಬ್ಬರಗಳನ್ನು ಹಾಕುವುದು, ಗರಿಗಳಿಗೆ ಶೇ. 1 ರ ಬೋರ್ಡೋ ದ್ರಾವಣ ಅಥವಾ ಶೇ. 0.5 ರ ಮೈಲುತುತ್ತದ ದ್ರಾವಣವನ್ನು ಸಿಂಪಡಿಸುವುದರಿಂದ ಈ ರೋಗವನ್ನು ನಿಯಂತ್ರಿಸಬಹುದು.

8. ಮುಕುಟ ಸ್ತಂಭನ ರೋಗ : (ಭೋರಾನ್ ಕೊರತೆ)

➢ ಈ ರೋಗವು ಮುಖ್ಯವಾಗಿ ಮಣ್ಣಿನಲ್ಲಿ ಬೋರಾನ್ ಲವಣಾಂಶದ ಕೊರತೆಯಿಂದ ಉಂಟಾಗತ್ತದೆ.

➢ ಈ ರೋಗದ ಲಕ್ಷಣಗಳೆಂದರೆ ಚಿಕ್ಕ ಗಾತ್ರದ ಮತ್ತು ಅಸ್ವಾಬಾವಿಕವಾಗಿ ತಿರುಚಿದಂತೆ ಅಥವಾ ಸುಕ್ಕುಗಟ್ಟಿರುವಂತ ಎಲೆಗಳನ್ನು ಕಾಣುತ್ತೇವೆ. ಎಲೆಗಳ ತುದಿಯಲ್ಲಿ ತೀವ್ರವಾದ ಅಂಗಾಂಶದ ಸಾವು ಕಂಡುಬರುವುದು. ಈ ರೀತಿ ಅಸ್ವಾಬಾವಿಕವಾಗಿ ಅವಿರ್ಭಜಿಸಿದ ಗರಿಗಳಲ್ಲಿ ಎಲೆಗಳು ವಿಕಸನಗೊಳ್ಳದಿರುವ ಪ್ರಯುಕ್ತ ಕೊನೆಗೆ ಇಂತಹ ಮರಗಳ ಮುಕುಟ ಭಾಗವು ಸ್ತಂಭನಗೊಂಡಂತೆ ಕಂಡುಬರುತ್ತದೆ.

➢ ಚಿಕ್ಕ ವಯಸ್ಸಿನ ಗರಿಗಳು ಈ ರೋಗಕ್ಕೆ ತುತ್ತಾದರೆ ಹೂ ಮತ್ತು ಕಾಯಿ ಬಿಡುವುದಿಲ್ಲ.

ಹತೋಟಿ ಕ್ರಮಗಳು :

100 ಗ್ರಾಂ . ಬೋರ್ಯಾಕ್ಸ್ ಪುಡಿಯನ್ನು 6 ತಿಂಗಳಿಗೊಮ್ಮೆ ಕೊಡುವುದರಿಂದ ಈ ರೋಗವನ್ನು ನಿಯಂತ್ರಿಸಬಹುದು.

ಸೂಚನೆ : ಬೋರ್ಡೋ ಮುಲಾಮು ತಯಾರಿಸುವ ವಿಧಾನ :

100 ಗ್ರಾಂ. ಮೈಲುತುತ್ತು (ಕಾಪರ್ ಸಲ್ಫೇಟ್) + 500 ಮಿ.ಲೀ. ನೀರಿನಲ್ಲಿ ಬೆರೆಸಿ ಮತ್ತು100 ಗ್ರಾಂ. ಸುಣ್ಣ + 500 ಮಿ.ಲೀ. ನೀರಿನಲ್ಲಿ ಬೆರೆಸಿ ಹೀಗೆ ಬೇರೆ ಬೇರೆ ತಯಾರಿಸಿದ ದ್ರಾವಣವನ್ನು ಮಿಶ್ರ ಮಾಡಿ ಉಪಯೋಗಿಸುವುದು.

ಬೋರ್ಡೋ ದ್ರಾವಣ ತಯಾರಿಸುವ ವಿಧಾನ: 1 ಕೆ.ಜಿ. ಮೈಲುತುತ್ತು (ಕಾಪರ್ ಸಲ್ಫೇಟ್) + 50 ಲೀ. ನೀರಿನಲ್ಲಿ ಬೆರೆಸಿ ಮತ್ತು1 ಕೆ.ಜಿ. ಸುಣ್ಣ + 50 ಲೀ. ನೀರಿನಲ್ಲಿ ಬೆರೆಸಿ ಹೀಗೆ ಬೇರೆ ಬೇರೆ ತಯಾರಿಸಿದ ದ್ರಾವಣವನ್ನು ಮಿಶ್ರ ಮಾಡುವಾಗ ಒಂದೇ ಸಾರಿ ಒಟ್ಟಿಗೆ ಮಿಶ್ರಮಾಡಬೇಕು(ಚಿತ್ರದಲ್ಲಿ ತೋರಿಸಿದಂತೆ) ಅಥವಾ ಮೈಲುತುತ್ತು ದ್ರಾವಣವನ್ನು ಸುಣ್ಣದಿಂದ ತಯಾರಿಸಿದ ದ್ರಾವಣದಲ್ಲಿ ಸುರಿಯಬೇಕು. ಹೀಗೆ ತಯಾರಿಸಿದ ಬೋರ್ಡೋ ದ್ರಾವಣದ ರಸ ಸಾರ 7 ಇರಬೇಕು. ಕಡಿಮೆಯಿದ್ದಲ್ಲಿ ಸ್ವಲ್ಪ ಸುಣ್ಣ ಸೇರಿಸಿ ರಸ ಸಾರ 7 ಇರುವಂತೆ ಎಚ್ಚರವಹಿಸಬೇಕು. ಭೋರ್ಡೋ ದ್ರಾವಣದಲ್ಲಿ ರಸ ಸಾರ ಹೆಚ್ಚು ಕಡಿಮೆ ಆದಲ್ಲಿ ಪರಿಣಾಮಕಾರಿಯಾಗಿ ಶಿಲೀಂಧ್ರವನ್ನು ನಾಶ ಮಾಡಲು ಸಾಧ್ಯವಾಗುವುದಿಲ್ಲ.

ಪ್ರಮುಖ ಕೀಟಗಳು ಹಾಗೂ ಅವುಗಳ ಸಮಗ್ರ ಹತೋಟಿ ಕ್ರಮಗಳ

1) ರೈನಾಸರಸ್ ದುಂಬಿ:

ಹಾನಿಕಾರಕ ಹಂತ : ರೈನಾಸರಸ್ ಪ್ರಾಯದ ದುಂಬಿ

ಹಾನಿಯ ಚಿಹ್ನೆಗಳು :

➢ ದುಂಬಿಗಳು ಗಿಡಗಳ ಸುಳಿ ಮತ್ತು ಎಲೆಗಳ ಬುಡದಲ್ಲಿ ಕೊರೆದು ತಿನ್ನುತ್ತವೆ. ಗರಿಗಳು ಬೆಳೆದಂತೆ ಅವು ಸಮನಾಗಿ ಕತ್ತರಿಸಿದ ಬೀಸಣಿಗೆಯಂತಿರುತ್ತವೆ.

➢ ದುಂಬಿಗಳು ಹೂ ಗೊಂಚಲುಗಳನ್ನು ಕೊರೆದಾಗ ಕಾಯಿಗಳ ಉತ್ಪತ್ತಿ ಕಡಿಮೆಯಾಗಿರುತ್ತದೆ. ಆಗಿಂದ್ದಾಗ್ಗೆ ಸುಳಿ ಭಾಗವನ್ನು ಆಕ್ರಮಿಸಿದಾಗ ಸಸಿಗಳು ಸಾಯುತ್ತವೆ.

ಹತೋಟಿ ಕ್ರಮಗಳು:

➢ ಸುಳಿಯ ಭಾಗದ ರಂಧ್ರದಲ್ಲಿ ಕಬ್ಬಿಣದ ಕೊಕ್ಕೆಯನ್ನು ತೂರಿಸಿ, ಹೊರ ತೆಗೆದು ಸಾಯಿಸಬೇಕು. ಮತ್ತು ಮರಗಳು ಕೊಳೆಯುತ್ತಿದ್ದಲ್ಲಿ ಸ್ವಚ್ಚಗೊಳಿಸಬೇಕು.

➢ ದುಂಬಿಗಳನ್ನು ದನದ ಸಗಣಿ ದ್ರಾವಣ ಅಥವಾ ಹರಳು ಹಿಂಡಿಯ ದ್ರಾವಣಗಳ ಸಹಾಯದಿಂದ ಆಕರ್ಷಣೆ ಮಾಡಿ ಸಂಗ್ರಹಿಸಿ ನಾಶಪಡಿಸಬೇಕು.

➢ ಕಾಂಪೋಸ್ಟ್ ಗುಂಡಿಗಳು ಇದ್ದಲ್ಲಿ ಗುಂಡಿಗಳಿಗೆ ಶೇ. 0.2 ಕಾರ್ಬೋರಿಲ್ ನಿಂದ ಮೂರು ತಿಂಗಳಿಗೊಮ್ಮೆ ಉಪಚರಿಸಬೇಕು. ಅಥವಾ ಕಾಂಪೋಸ್ಟ್ ಗುಂಡಿಗಳಿಗೆ ಮೆಟಾರೈಜಿಯಮ್ ಅನಿಸೋಪ್ಲಿಯೆ ಶಿಲೀಂಧ್ರವನ್ನು ಸೇರಿಸುವುದು.

➢ ಹೆಣ್ಣು ಮತ್ತು ಗಂಡು ದುಂಬಿಗಳನ್ನು ಹಿಡಿಯಲು 2 ಹೆಕ್ಟೇರಿಗೆ ಒಂದರಂತೆ ಸಿಮ್ ಆರ್. ಬಿ. ಫೆರಮೋನ್‌ಗಳನ್ನು ತೋಟದಲ್ಲಿ ಇರಿಸುವುದು. ಕೀಟದ ಭಾದೆಯು 10 ವಾರದಲ್ಲಿ ಕಡಿಮೆಯಾದನಂತರ ಸ್ಯಾಚೆಟನ್ನು ಬದಲಾಯಿಸುವುದು.

➢ ರಂಧ್ರದೊಳಗೆ ಹಾಗೂ ಸುಳಿಯ 2 ರಿಂದ 3 ಗರಿಗಳ ತೊಟ್ಟಿನ ಸಂದುಗಳಿಗೆ ಶೇ. 0.2 ಕಾರ್ಭೋರಿಲ್ ಮತ್ತು ಮರಳನ್ನು ಸಮಪ್ರಮಾಣದಲ್ಲಿ ಎಪ್ರಿಲ್–ಮೇ ಮತ್ತು ಅಕ್ಟೋಬರ್ – ನವಂಬರ್ ಮಾಹೆ ಗಳಲ್ಲಿ ತುಂಬಬೇಕು.

2) ಕೆಂಪು ಮೂತಿ ಹುಳು :

ಹಾನಿಕಾರಕ ಹಂತ : ಮರಿ ಹುಳುಗಳು (ಗ್ರಬ್ಸ್)

ಹಾನಿಯ ಚಿಹ್ನೆಗಳು :

➢ ಮರಿ ಹುಳುಗಳು ತೆಂಗಿನ ಮರದ ಕಾಂಡದ ಮೃದು

ಭಾಗಗಳನ್ನು ಕೊರೆಯುವುದರಿಂದ ಕಾಂಡದಲ್ಲಿ ರಂಧ್ರಗಳು ಕಾಣುತ್ತವೆ. ಕೀಟ ಭಾದೆಗೆ ಒಳಗಾದ ರಂಧ್ರಗಳಿಂದ ಕಂದು ಬಣ್ಣದ ರಸ ಸೋರಿರುವುದನ್ನು ಮತ್ತು ಹುಳುಗಳು ತಿಂದು ಹಾಕಿದ ನಾರು ಹೊರ ಬಂದಿರುವುದನ್ನು ಕಾಣಬಹುದು.

➢ ಕೀಟದ ಭಾದೆಯು ತೀವ್ರವಾದಾಗ ಸುಳಿ ಗರಿಗಳು ಒಣಗುತ್ತವೆ. ನಿಶಬ್ದ ಸಮಯದಲ್ಲಿ ರಂಧ್ರಗಳತ್ತಿರ ಕಿವಿ ಕೊಟ್ಟರೆ ಕೊರೆಯುವ ಶಬ್ದವನ್ನು ಕೇಳಬಹುದು.

ಹತೋಟಿ ಕ್ರಮಗಳು :

➢ ತೋಟದಲ್ಲಿ ಸತ್ತಿರುವ ಮರಗಳನ್ನು ಕಡಿದು ನಾಶಗೊಳಿಸುವುದು, ಮರದ ರಂಧ್ರಗಳಲ್ಲಿ ನಾರು ಪದಾರ್ಥ ಕಂಡು ಬಂದಲ್ಲಿ ರಂಧ್ರದೊಳಗಿನ ಹುಳುಗಳನ್ನು ಹೊರ ತೆಗೆದು ನಾಶ ಮಾಡ ಬೇಕು.

➢ ಮಧ್ಯಂತರ ಬೇಸಾಯ ಮಾಡುವಾಗ ಮರಗಳಿಗೆ ಗಾಯಗಳಾಗದಂತೆ ಎಚ್ಚರವಹಿಸಬೇಕು.

➢ ಹೆಣ್ಣು ಮತ್ತು ಗಂಡು ಹುಳುಗಳನ್ನು ಆಕರ್ಶಿಸುವಂತೆ 1 ಹೆಕ್ಟೇರಿಗೆ ಒಂದು ಫೆರೋಲೂರ್ ಫೆರಮೋನ್ ಉಪಯೋಗಿಸುವುದು.

➢ ಸುಳಿಯ 2–3 ಗರಿಗಳ ತೊಟ್ಟಿನ ಸಂದುಗಳಿಗೆ ಫೋರೇಟ್ 10 ಜಿ (5 ಗ್ರಾಂ) ಅಥವಾ 4 ಗ್ರಾಂ ಕಾರ್ಬೋರಿಲ್ ಒಂದು ಲೀಟರ್ ನೀರಿಗೆ ಬೆರೆಸಿ ಪ್ರತೀ ಮರಕ್ಕೆ ರಂಧ್ರಗಳಿಗೆ ಸುರಿಯಬೇಕು.

3) ತೆಂಗಿನ ನುಸಿ :

ಹಾನಿಯ ಚಿಹ್ನೆಗಳು :

➢ ನುಸಿಯು ಸಾಮಾನ್ಯವಾಗಿ ಎಳೆಯ ಕಾಯಿಗಳನ್ನು ತನ್ನ ಸೂಜಿಯಾಕಾರದ ಚಲೆಸೆರಗಳಿಂದ ಕಾಯಿಯ ತೊಟ್ಟಿನ ತಳ ಭಾಗದಲ್ಲಿರುವ ಅತೀ ಮೃದುವಾದ ಅಂಗಾಂಶವನ್ನು ಗಾಯ ಮಾಡಿದಾಗ ಹೊರ ಬರುವ ರಸವನ್ನು ಬಾಯಿಯಿಂದ ಹೀರಿಕೊಳ್ಳುತ್ತದೆ.

➢ ಎಳೆಯ ಕಾಯಿಗಳಲ್ಲಿ ಪ್ರಾರಂಭಿಕ ಸೂಚನೆಯಾಗಿ ತೊಟ್ಟಿನ ಹತ್ತಿರ ತ್ರಿಕೋನಾಕಾರದ ತೆಳು ಹಳದಿ ಮಚ್ಚೆಗಳು ಕಂಡು ಬರುತ್ತವೆ. ಕ್ರಮೇಣ ವಿಸ್ತಾರಗೊಂಡು ಕಂದು ಬಣ್ಣಕ್ಕೆ ತಿರುಗಿ ಕಾಯಿಯ ಮೇಲೆ ಬಿರುಕುಗಳು ಉಂಟಾಗುತ್ತವೆ. ಹಾಗೂ ಅಲ್ಲಲ್ಲಿ ಅಂಟು ಸಹ ಹೊರಬರುತ್ತದೆ.

➢ ಕೆಲವು ಎಳೆ ಕಾಯಿಗಳ ತೊಟ್ಟು ಸಡಿಲಗೊಂಡು ಸಣ್ಣ ಕಾಯಿಗಳು ಉದುರುತ್ತವೆ. ಉದರದೆ ಉಳಿದುಕೊಂಡ ಕಾಯಿಗಳ ಬೆಳವಣಿಗೆ ಕುಂಟಿತಗೊಂಡು ವಿಕಾರ ರೂಪಗೊಳ್ಳುತ್ತವೆ.

ಸಮಗ್ರ ನಿರ್ವಹಣೆ ಕ್ರಮಗಳು:

ಪೋಶಕಾಂಶಗಳ ನಿರ್ವಹಣೆ :

➢ ಪ್ರತೀ ಮರಕ್ಕೆ 50 ಕೆ.ಜಿ. ಸಾವಯವ ಗೊಬ್ಬರ, 5 ಕೆ.ಜಿ . ಬೇವಿನಹಿಂಡಿ, 1 ಕೆ.ಜಿ. ಜಿಪ್ಸಮ್, 50 ಗ್ರಾಂ ಬೋರ್ಯಾಕ್ಸ್, 1.3 ಕೆ.ಜಿ ಯೂರಿಯಾ, 2 ಕೆ.ಜಿ . ಸೂಪರ್ ಫಾಸ್ಪೇಟ್, 3.5 ಕೆ.ಜಿ. ಪೊಟ್ಯಾಷ್ (ವರ್ಷಕ್ಕೆ 2 ಭಾರಿ ಶಿಫಾರಸ್ಸಿನ ಅರ್ಧ ಪ್ರಮಾಣದಲ್ಲಿ ಜೂನ್ – ಜುಲೈ ಹಾಗೂ ಸೆಪ್ಟೆಂಬರ್– ಅಕ್ಟೋಬರ್ ತಿಂಗಳುಗಳಲ್ಲಿ ಒದಗಿಸುವುದು.

ಸಸ್ಯಾಧಾರಿತ ಕೀಟನಾಶಕಗಳ ಬಳಕೆ :

➢ ಬೇವಿನ ಎಣ್ಣೆ (20 ಮಿ. ಲೀ.) + ಬೆಳ್ಳುಳ್ಳಿ ರಸ (20 ಗ್ರಾಂ.) + ಸಾಬೂನಿನ ಮಿಶ್ರಣ (5 ಗ್ರಾಂ) ವನ್ನು 1 ಲೀಟರ್ ನೀರಿನಲ್ಲಿ ಅಥವಾ ಶೇ. 1 ರ ಅಜಾಡಿರ್ಯಾಕ್ಟಿನ್ 1 ಲೀಟರ್ ನೀರಿನಲ್ಲಿ 4 ಮಿ. ಲೀ. ಯಂತೆ ಬೆರೆಸಿ ಭಾದೆಗೊಳಗಾದ ಮರಗಳಲ್ಲಿನ ಕಾಯಿಗಳಿಗೆ ಸಿಂಪರಣೆ ಮಾಡುವುದು. ಪ್ರತಿ ಮರಕ್ಕೆ 2 ಲೀ. ದ್ರಾವಣ ಬೇಕಾಗುತ್ತದೆ.

➢ ಪ್ರತಿ ಮರಕ್ಕೆ ಶೇ. 5 ರ ಅಜಾಡಿರ್ಯಾಕ್ಟಿನ್ 7.5 ಮಿ.ಲೀ. ಅಥವಾ 10 ಮಿ.ಲೀ. ಶೇ. 1 ರ ಅಜಾಡಿರ್ಯಾಕ್ಟಿನ್ ಅಷ್ಟೇ ಪ್ರಮಾಣದ ನೀರಿನಲ್ಲಿ ಮಿಶ್ರಣ ಮಾಡಿ ಆರೋಗ್ಯವಂತ ಬೇರಿಗೆ ಕಟ್ಟುವುದು.

ಜೈವಿಕ ಕೀಟ ನಾಶಕಗಳ ಬಳಕೆ :

➢ ಹಿರ್ಸುಟೆಲ್ಲಾ ಥಾಂಸೋನಿ ಶಿಲೀಂಧ್ರ ಉತ್ಪನ್ನವನ್ನು (ಮೈಕೋಹಿಟ್) 15 ದಿನಗಳ ಅಂತರದಲ್ಲಿ 3 ಭಾರಿ ಸಿಂಪರಣೆ ಮಾಡುವುದು.

ರಾಸಾಯನಿಕ ಕೀಟ ನಾಶಕಗಳ ಬಳಕೆ :

➢ ಶೇ. 0.4 ರ ಗಂಧಕವನ್ನು (1 ಲೀ. ನೀರಿನಲ್ಲಿ 5 ಗ್ರಾಂ ನಂತೆ ಬೆರೆಸಿ) ಸಿಂಪಡಿಸುವುದು

4) ಕಪ್ಪು ತಲೆ ಕಂಬಳಿ ಹುಳು :

ಹಾನಿಕಾರಕ ಹಂತ : ಮರಿ ಹುಳುಗಳು

ಹಾನಿಯ ಚಿಹ್ನೆಗಳು :

➢ ಮರಿ ಹುಳುಗಳು ಗರಿಗಳ ತಳ ಭಾಗದಲ್ಲಿ ದಟ್ಟವಾದ ಬಲೆಯನ್ನು ಮಾಡಿಕೊಂಡು ಗರಿಯ ಹಸಿರು ಭಾಗವನ್ನು ಕೆರೆದು ತಿನ್ನುತ್ತವೆ. ಈ ರೀತಿ ಕೆರೆದು ತಿನ್ನುವುದರಿಂದ ಗರಿಗಳ ಮೇಲೆ ಒಣ ಹುಲ್ಲಿನ ಬಣ್ಣದ ಮಚ್ಚೆಗಳಾಗುತ್ತವೆ. ಕ್ರಮೇಣ ಈ ಮಚ್ಚೆಗಳು ಹರಡಿ ಒಣಗುತ್ತವೆ.

➢ ಈ ಕೀಟದ ಹಾವಳಿ ಜನವರಿ ಮಾಹೆಯಿಂದ ಮೇ ಮಾಹೆಯವರೆಗೆ ಅಧಿಕವಾಗಿರುತ್ತದೆ.

ಹತೋಟಿ:

ಎ. ಯಾಂತ್ರಿಕ ವಿಧಾನ :

➢ ಕೀಟದ ಆಕ್ರಮಣ ಸೂಚನೆ ಕಂಡ ಕೂಡಲೇ ಹುಳದ ಬಲೆಯಿರುವ ಗರಿ ಅಥವಾ ಅದರ ಭಾಗಗಳನ್ನು ಕತ್ತರಿಸಿ ಸುಡುವುದು.

ಬಿ. ಜೈವಿಕ ವಿಧಾನ :

➢ ಕಪ್ಪು ತಲೆ ಹುಳು ಮರಿ ಹುಳುವಿನ ಹಂತದಲ್ಲಿದ್ದಾಗ ಗೋನಿಯೋಜಸ್ ನೆಫಾಂಡಿಟಿಸ್ ಪರೋಪ ಜೀವಿಗಳನ್ನು 15 ರಿಂದ 20 ರಂತೆ ಪ್ರತಿ 15 ದಿನಗಳಿಗೊಮ್ಮೆ ಕನಿಷ್ಟ 4 ಭಾರಿ ಬಿಡುಗಡೆ ಮಾಡಬೇಕು.

➢ ಕಪ್ಪು ತಲೆ ಹುಳುವಿನ ಮೊಟ್ಟೆಗಳ ಹತೋಟಿಗಾಗಿ ಆಂಥೊಕೋರಿಡ್ ಬಗ್ ಪರಬಕ್ಷಗಳನ್ನು ಬಿಡುಗಡೆಗೊಳಿಸುವುದು.

ಸಿ. ರಾಸಾಯನಿಕ ವಿಧಾನ :

➢ ಸಿಂಪರಣೆ : ಮಾನೋಕ್ರೊಟೋಪಾಸ್ ಕೀಟ ನಾಶಕವನ್ನು 1.5 ಮಿ. ಲೀ./ಲೀಟರ್ ನೀರಿಗೆ ಬೆರೆಸಿ ಗರಿಗಳ ಸಂಪೂರ್ಣ ಒದ್ದೆಯಾಗುವಂತೆ ಸಿಂಪಡಿಸಬೇಕು.

➢ ಬೇರಿನ ಮೂಲಕ ಉಪಚಾರ : ಶೇ. 5 ಅಜಾಡೆರ್ಯಾಕ್ಟಿನ್ 7.5 ಮಿ. ಲೀ. ಅಥವಾ 10 ಮಿ.ಲೀ. ಮಾನೋಕ್ರೊಟೋಪಾಸ್ ಕೀಟನಾಶಕವನ್ನು ಸಮಪ್ರಮಾಣದ ನೀರಿನಲ್ಲಿ ಬೆರೆಸಿ ಬೇರಿನ ಮೂಲಕ ಉಣಿಸಬೇಕು.

ಚಾಮರಾಜನಗರ ಜಿಲ್ಲೆಯಲ್ಲಿ ಮಳೆಯ ಅಭಾವದ ಪರಿಣಾಮವಾಗಿ ಅಂತರ್ಜಲ ಕುಸಿತ-ಒಂದು ಅಧಯಯನ

ಭರತೇಶ. ಎಸ್

ಎಂ. ಎಸ್. ಸಿ ವಿಧಾರ್ಥಿ, ಮಾಲಿಕ್ಯೂಲರ್ ಬಯಾಲಜಿ ವಿಭಾಗ, ಯುವರಾಜ ಕಾಲೇಜು, ಜೆ. ಎಲ್.ಬಿ. ರಸ್ತೆ, ಮೈಸೂರು-570 005

ಚಾಮರಾಜನಗರ ಜಿಲ್ಲೆಗೆ ಕಾವೇರಿ ನದಿಯ ಉಪನದಿಗಳಾದ ಸುವರ್ಣಾವತಿ ಮತ್ತು ಚಿಕ್ಕಹೊಳೆ ಅಲ್ಪಪ್ರಮಾಣದ ಭೂಭಾಗಕ್ಕೆ ಆಸರೆಯಾಗಿವೆ. ಇದನ್ನು ಬಿಟ್ಟರೆ ಈ ಭಾಗದ ಶೇಕಡ ೫೦-೯೦% ಭಾಗ ಅಂತರ್ಜಲವನ್ನು ಕೃಷಿಗಾಗಿ ಮತ್ತು ದಿನಬಳಕೆಗಾಗಿ ಅವಲಂಬಿಸಿದ್ದಾರೆ. ಮಳೆಯಿಂದ ಮತ್ತು ನದಿಗಳ ಮೂಲಗಳಿಂದ ಹರಿದು ಬರುವ ಜಲವೇ ಈ ಜಿಲ್ಲೆಯ ಅಂತರ್ಜಲದ ಮೂಲ. ಈ ಜಿಲ್ಲೆಯಲ್ಲಿ ಕೆಂಪು ಮಣ್ಣು, ಹಳದಿ ಬೂದು ಬಣ್ಣ ಮಿಶ್ರಿತ ಮಣ್ಣು, ಹಾಗೂ ಕೆಲವು ಕಡೆ ಕಪ್ಪು ಮಣ್ಣನ್ನು ಕಾಣಬಹುದು. ಏಕದಳ ಧಾನ್ಯಗಳಾದ ಭತ್ತ, ರಾಗಿ, ಜೋಳ, ಇತ್ಯಾದಿ ಹಾಗೂ ದ್ವಿದಳ ಧಾನಗಳಾದ ಕಡಲೆ, ತೊಗರಿ, ಉದ್ದು, ಅಲಸಂದೆ ಹೀಗೆ ಅನೇಕ ಬೆಳೆಗಳನ್ನು ಬೆಳೆಯುತ್ತಾರೆ. ಈ ಜಿಲ್ಲೆಯಲ್ಲಿ ಹೆಚ್ಚಿನ ರೈತರು ಮಳೆ ಮತ್ತು ಅಂತರ್ಜಲದ ಆಧಾರಿತ ಬೇಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಮೊದಲಿಗೆ ರೈತರು ವ್ಯವಸಾಯಕ್ಕಾಗಿ ತೋಡು ಬಾವಿಗಳನ್ನು ಅವಲಂಬಿಸುತ್ತಿದ್ದರು. ಆದರೆ ಮಳೆಯ ಅನಿಶ್ಚಿತತೆಯಿಂದ ಹಾಗೂ ಬಾವಿಗಳು ಹೆಚ್ಚಾಗಿದ್ದರಿಂದ ಜಲಮಟ್ಟ ಬಹಳ ಕೆಳಗೆ ಹೋಗಿದೆ. ಹೀಗಾಗಿ ಬಾವಿಗಳು ಬತ್ತಿ ಹೋಗಿವೆ. ಈ ಕಾರಣದಿಂದ ಅಂತರ್ಜಲವನ್ನು ಕೊಳವೆ ಬಾವಿಗಳ ಮೂಲಕ ಪಡೆಯುವ ವ್ಯವಸ್ಥೆ ಹೆಚ್ಚಾಗಿವೆ. 2014 ರಲ್ಲಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಅಂತರ್ಜಲದ ಮಟ್ಟ ೩೦೦-1000 ಅಡಿಗಳವರೆಗೂ ಕುಸಿದಿದ್ದು, ಮುಂಬರುವ ವರ್ಷಗಳಲ್ಲಿ ಮುಂದಿನ ಪೀಳಿಗೆಗೆ ಇದು ಒಂದು ದೊಡ್ಡ ಸಮಸ್ಯೆ ಆಗುವುದರಲ್ಲಿ ಸಂದೇಹವಿಲ್ಲ. ಇದಕ್ಕೆ ಹಲವು ಕಾರಣಗಳಿದ್ದರೂ ಮಳೆಯ ಅಭಾವ, ಮಿತಿಮೀರಿದ ಅಂತರ್ಜಲದ ಬಳಕೆ, ಜನಸಂಖ್ಯೆ ಹೆಚ್ಚಳ, ಕೈಗಾರಿಕೆಗಳ ಸ್ಥಾಪನೆ ಮುಂತಾದವು ಮೂಲ ಕಾರಣಗಳಾಗಿವೆ. 2008-09 ರ ಸಮೀಕ್ಷೆಯ ಪ್ರಕಾರ ಜಿಲ್ಲೆಯಲ್ಲಿ ೪೧೩೦ ಕೊಳವೆಬಾವಿಗಳಿವೆ. ಅಂತರ್ಜಲ ಕುಸಿತದಿಂದ ಬಹುತೇಕ ಜನರು ಮೈಸೂರು, ಮಂಡ್ಯ, ಬೆಂಗಳೂರು ಹೀಗೆ ನಗರಗಳತ್ತ ಮುಖಮಾಡಿ ದಿನಗೂಲಿ ಮಾಡುತ್ತ ಜೀವನ ಸಾಗಿಸುವಂತೆ ಆಗಿದೆ.

ಪೀಠಿಕೆ– ಸಮಸ್ತ ಜೀವಕೋಟಿಗೆ ನೀರೆ ಆಧಾರ. ಜಲ ಇಲ್ಲದ ಜಗ ಇಲ್ಲ. ಸಸ್ಯಕುಲ, ಮಾನವಕುಲ ಹಾಗೂ ಪ್ರಾಣಿಗಳ ದೈನಂದಿನ ಚಟುವಟಿಕೆಗಳಿಗೆ ನೀರು ಅತ್ಯವಶ್ಯಕ. ಪ್ರಪಂಚದಲ್ಲಿ ಲಭ್ಯವಿರುವ ಒಟ್ಟು ನೀರಿನಲ್ಲಿ ಸಿಹಿ ನೀರು ಕೇವಲ ಶೇ.೨.೬೧. ರಷ್ಟು ಮಾತ್ರ. ಈ ಅಲ್ಪ ಪ್ರಮಾಣದ ನೀರನ್ನು ಎಷ್ಟರಮಟ್ಟಿಗೆ ಜೋಪಾನವಾಡಿ ಸಂರಕ್ಷಿಸಿಕೂಳ್ಳಬೇಕೆಂಬುದನ್ನು ಅರಿಯುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ನೀರಿನಿಂದಲ್ಲೆ ಹಸಿರು, ಹಸಿರಿನಿಂದಲೇ ಉಸಿರು. ವ್ಯವಸಾಯವೇ ನಮ್ಮ ದೇಶದ ಬೆನ್ನೆಲುಬು. ಇದಕ್ಕೆ ನೀರೇ ಆಧಾರ. ಮಳೆಯ ನೀರು ಹಳ್ಳಕೊಳಗಳಲ್ಲಿ ಹರಿದು ಕಡೆಗೆ ಸಮುದ್ರವನ್ನು ಸೇರುತ್ತದೆ. ಈ ರೀತಿ ಹರಿದು ಹೋಗುವ ನೀರಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಕಾಲುವೆಗಳ ಮೂಲಕ ನೀರನ್ನು ಹರಿಸಿ ವ್ಯವಸಾಯಕ್ಕೆ ಬಳಕೆ ಮಾಡಿಕೂಳ್ಳಲಾಗುತ್ತದೆ. ಆದರೆ ಈ ರೀತಿ ವ್ಯವಸ್ಥೆ ಎಲ್ಲಾ ಕಡೆ ಸಾಧ್ಯವಾಗುವುದಿಲ್ಲ. ಭೂಮಿಯ ಒಳಭಾಗದಲ್ಲಿ ದೊರೆಕುವ ನೀರನ್ನು ಬಾವಿಗಳ/ಕೊಳವೆಬಾವಿಗಳ ಮೂಲಕ ಹೊರತೆಗೆದು ಬಳಕೆ ಮಾಡಿಕೊಳ್ಳುವುದು ಈಗ ಸರ್ವೆಸಮಾನ್ಯ. ಇದೇ ಅಂತರ್ಜಲದ ಬಳಕೆ. ಬಳಕೆಯಾಗುತ್ತಿರುವ ಅಂತರ್ಜಲವನ್ನು ಮರು ಪೂರೈಕೆ ಮಾಡುವುದು ಅಷ್ಟೇ ಪ್ರಮುಖ ಅಂಶ.

ಚಾಮರಾಜನಗರ ಜೀಲ್ಲೆಯ ಭೌಗೋಳಿಕವಾಗಿ ೫೧೦೧ ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ. ಜಿಲ್ಲೆಯಲ್ಲಿ ೦೪ ತಾಲ್ಲೋಕುಗಳು (ಗುಂಡ್ಲುಪೇಟೆ, ಯಳಂದೂರು, ಕೊಳ್ಳೆಗಾಲ, ಚಾಮರಾಜನಗರ) ಮತ್ತು ೧೨೦ ಗ್ರಾಮಪಂಚಾಯಿತ್ತಿಗಳಿವೆ. ಇಲ್ಲಿ ಸರಾಸರಿ ಮಳೆ ೭೩೦ಮಿ.ಲೀ. ಆಗಿದ್ದು ೪೦–೪೭ ದಿನಗಳು ಸರಾಸರಿ ಮಳೆಯಾಗಿತ್ತದೆ. ಈ ಜೀಲ್ಲೆಗೆ ಕಾವೇರಿ ನದಿಯ ಉಪನದಿಗಳಾದ ಸುವರ್ಣಾವತಿ ಮತ್ತು ಚಿಕ್ಕಹೊಳೆ ಅಲ್ಪಪ್ರಮಾಣದ ಭೂಭಾಗಕ್ಕೆ ಆಸರೆಯಾಗಿದೆ. ಇದನ್ನು ಬಿಟ್ಟರೆ ಈ ಜಿಲ್ಲೆಯಲ್ಲಿ ಶೇ. ೮೦–೯೦% ಜನರು ಅಂತರ್ಜಲವನ್ನು ಕೃಷಿ ಮತ್ತು ದಿನಬಳಕೆಗಾಗಿ ಅವಲಂಬಿಸಿದ್ದಾರೆ. ಕೇಂದ್ರ ಅಂತರ್ಜಲ ಸಂಸ್ಥೆ ನಡೆಸಿದ ಸಮೀಕ್ಷೆಯ ಪ್ರಕಾರ ಜಿಲ್ಲೆಯಲ್ಲಿ ೮% ಮೇಲ್ಮೈನೀರಿನ ಮೇಲೆ ಅವಂಲಬಿಸಿದರೆ ಶೇ. ೨೩% ಭೂಭಾಗ ಅಂತರ್ಜಲದ ಮೂಲಕ ವ್ಯವಸಾಯ ಮಾಡಲಾಗುತ್ತದೆ. ಸಮೀಕ್ಷೆಯ ವರದಿ ಪ್ರಕಾರ ೭೩೨೮ ತೋಡು ಬಾವಿಗಳು ೧೪.೮೭೨ ಕೊಳವೆ ಬಾವಿಗಳು ಹಾಗೂ ೯೭ ಮೇಲೆ ನೀರಿನ ವಿಧಾನ ಹಾಗೂ ೪ ವಿತ ನೀರಾವರಿ ವಿಧಾನವನ್ನು ಒಳಗೂಂಡಿವೆ. ಜಿಲ್ಲೆಯಲ್ಲಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆ ನಡೆಸಿದ ಆಧ್ಯಯನ ಪ್ರಕಾರ , ಚಾಮರಾಜನಗರ ಜಿಲ್ಲೆಯಲ್ಲಿ ಲಭ್ಯವಿರುವ ಅಂತರ್ಜಲದ ಪ್ರಮಾಣ ಹಾಗೂ ಸ್ಥಿತಿಗತಿಯ ಬಗ್ಗೆ ತಾಲ್ಲೋಕುವಾರು ಗಳಲ್ಲಿ ಟೇಬಲ್ ೧ ರಲ್ಲಿ ಸೊಚಿಸಲಾಗಿದೆ.

ಟೇಬಲ್ ೧:

ತಾಲ್ಲೋಕುವಾರು ಅಂತರ್ಜಲ ಲಭ್ಯತೆ

ತಾಲ್ಲೋಕು	ಅಂತರ್ಜಲದ ಉತ್ಕರ್ಷ	ಅಂತರ್ಜಲ ಬಳಕೆ	ಅಂತರ್ಜಲ ಉಳಿಕೆ
ಚಾಮರಾಜನಗರ	೧೨೪೭೫	೭೫೧೩	೪೯೭೨
ಗುಂಡ್ಲುಪೇಟೆ	೧೨೨೬೩	೧೬೧೯೫	೨೪೨೨
ಕೂಳ್ಳೇಗಾಲ	೧೩೦೪೪	೧೧೨೭೫	೧೪೧೪
ಯಳಂದೂರು	೪೯೪೪	೧೬೫೦	೧೩೪೫

ಅಂತರ್ಜಲ ಸ್ಥಿತಿಗತಿ

ಕ್ರ ಸಂ	ತಾಲ್ಲೂಕು	ಅಂತರ್ಜಲ ಬಳಕೆ ಹೆ. ಮೀ. ಗಳಲಿ	ಅಂತರ್ಜಲ ಲಭ್ಯತೆ ಹೆ. ಮೀ. ಗಳಲ್ಲಿ	ವರ್ಗೀಕರಣ
೧.	ಚಾಮರಾಜನಗರ	೭೫೧೩	೪೯೭೨	ಸುರಕ್ಷಿತ
೨.	ಗುಂಡ್ಲುಪೇಟೆ	೧೬೧೯೫	೨೪೨೨	ಅರೆ ಚಿಂತಾಜನಕ
೩.	ಕೊಳ್ಳೇಗಾಲ	೧೧೨೭೫	೨೪೪೩	ಭಾಗಶಃ ಸುರಕ್ಷಿತ
೪.	ಯಳಂದೊರು	೧೬೫೦	೧೨೯೨	ಸುರಕ್ಷಿತ

ಪ್ರಸ್ತಕ ೨೦೧೪ ನೆ ವರ್ಷದ ಸಾಲಿನಲ್ಲಿ ಕೃಷಿ ಇಲಾಖೆ ಚಾಮರಾಜನಗರ ನಡೆಸಿದ ಸಮೀಕ್ಷೆಯ ಪ್ರಕಾರ ಈ ವರ್ಷದ ಮುಂಗಾರಿನಲ್ಲಿ ಆಗಬೇಕಿದ್ದ

ಬೆಳೆಯ ವಿಸ್ತೀರ್ಣ ಹಾಗೂ ಆಗಿರುವ ಭೂಭಾಗದ ಬೆಳೆಯ ವಿಸ್ತೀರ್ಣವನ್ನು ಟೇಬಲ್ ೨ ರಲ್ಲಿ ಸೂಚಿಸಲಾಗಿದೆ.

೨. ಜಿಲ್ಲೆಯಲ್ಲಿ ಅಂತರ್ಜಲ ಕುಸಿತಕ್ಕೆ ಕಾರಣಗಳೇನು:

೨.೧ ಮಳೆಯಲ್ಲಿ ಅಭಾವ ಮತ್ತು ಸರಾಸರಿ ಮಳೆಯ ಪ್ರಮಾಣದಲ್ಲಿ ಇಳಿಕೆ: ಚಾಮರಾಜನಗರ ಜೀಲೆಯಲ್ಲಿ ವರ್ಷಕ್ಕೆ ಸರಾಸರಿ ಮಳೆ ೭೩೦ ಮಿ. ಲೀ ಹಾಗುತ್ತಿತು. ಆದರೆ ಇತ್ತೀಚಿನ ವರ್ಷಗಳಲ್ಲಿ ಸರಾಸಲ್ಲಿ ಮಳೆಯ ಪ್ರಮಾಣ ೫೦೦–೫೩೦ ಮಿ. ಲೀ. ನಷ್ಟು ಹಾಗುತ್ತಿದೆ. ೨೦೧೪ನೇ ಸಾಲಿನಲ್ಲಿ ಆಗಿರುವ ತಾಲ್ಲೂಕುವಾರು ಮಳೆವಿವರವನ್ನು **ಟೇಬಲ್ ೩** ರಲ್ಲಿ ಸೂಚಿಸಲಾಗಿದೆ.

೨.೨ ಮಿತಿಮೀರಿದ ಅಂತರ್ಜಲ ಬಳಕೆ ಮತ್ತು ಹೆಚ್ಚಿನಜನಸಂಖ್ಯೆ ಜಿಲ್ಲೆಯಲ್ಲಿ ವ್ಯವಸಾಯಕ್ಕಾಗಿ, ಕುಡಿಯುವ ನೀರಿಗಾಗಿ ಹಾಗೂ ಕೈಗಾರಿಕಗಳ ಉಪಯೋಗಕ್ಕಾಗಿ ಕೊಠೆಯಲಾಗುತ್ತಿರುವ ಕೊಳವೆ ಬಾವಿಗಳು ಅಧಿಕಗೊಂಡು ಬಳಕೆ ದಿನೇ ದಿನೇ ಹೆಚ್ಚಾಗುತ್ತಲಿದೆ. ಇದರಿಂದ ಜಲಮಟ್ಟ ಕೆಳೆಗೆ ಸುರಿಯತ್ತಲಿದೆ. ೨೦೦೮ರಲ್ಲಿ ನಡೆದ ತಾಲ್ಲೂಕುವಾರು ಸಮೀಕ್ಷೆಯನ್ನು ತೆಗೆದುಕೊಂಡರೆ, ಅಂತರ್ಜಲದ ಲಭ್ಯತೆ ಯಳಂದೊರಿನಲ್ಲಿ ೧೦೦% ಸುರಕ್ಷಿತಸ್ಥಿತಿಯಲ್ಲಿದ್ದರೆ. ಚಾಮರಾಜನಗರ ತಾಲ್ಲೂಕಿನಲ್ಲಿ ೭೬% ಕೊಳ್ಳೆಗಾಲದಲ್ಲಿ ೪೦% ಭೂಭಾಗ ಅಂತರ್ಜಲ ಸಂಪನ್ಮೂಲದಲದಲ್ಲಿ ಸುರಕ್ಷಿತ ಮಟ್ಟವನ್ನು ಕಾಪಾಡಿಕೊಂಡಿದೆ. ಮುಂಬರುವ ವರ್ಷಗಳಲ್ಲಿ ಜಿಲ್ಲೆಯ ಹೆಚ್ಚಿನ ಭೂಭಾಗವು ಅಪತ್ತಿನ ಮಟ್ಟ ತಲುಪುವ ಸಾಧ್ಯತೆ ಹೆಚ್ಚುತ್ತಲೆ ಇದೆ. ದಿನದಿಂದ ದಿನ್ನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಯಿಂದ ದಿನಬಳಕೆಗೆ ಪೂರೈಕೆಯಾಗುತ್ತಿದೆ.

೩. ಜಿಲ್ಲೆಯಲ್ಲಿ ಅಂತರ್ಜಲ ಕುಸಿತದಿಂದ ಅದ ಪರಿಣಾಮಗಳು:

೩.೧ ಸಾವಿರಾರು ಎಕರೆ ತೆಂಗು ಅಡಿಕೆ ಬೆಳೆಗಳು ನಾಶ

ಅಂತರ್ಜಲ ಮಟ್ಟದ ಕುಸಿತದಿಂದ ಜಿಲ್ಲೆಯಲ್ಲಿ ಆನೇಕ ಬೆಳೆಗಳ ಇಳುವರಿ ಕುಂಠಿತಗೊಂಡಿದೆ. ನೀರಾವರಿ ಅವಲಂಬಿತ ಸಾವಿರಾರು ಎಕರೆ ಭೂಮಿ, ಮಳೆಆಧಾರಿತ ಭೂಎಕರೆಗಳಾಗಿ ಬದಲಾಗುತ್ತಿದೆ. ತೆಂಗು ಮತ್ತು ಅಡಿಕೆ ಬೆಳೆಯಲ್ಲಿ ತನ್ನದೇ ಆದ ಪ್ರಸಿದ್ಧಿಯನ್ನು ಪಡೆದಿದ್ದ ಚಾಮರಾಜನಗರ ಜಿಲ್ಲೆ ಮಳೆಯ ಅಭಾವ ಮತ್ತು ಅಂತರ್ಜಲ ಕುಸಿತದಿಂದ ಸಾವಿರಾರು ಎಕರೆ ಜಮೀನುಗಳಲ್ಲಿ ತೆಂಗು ಮತ್ತು ಅಡಿಕೆ ಬೆಳೆಗಳು ನಾಶಿಸಿಹೋಗಿವೆ. ಮುಂದಿನ ದಿನಗಳಲ್ಲಿ ಮಳೆ ಆಧಾರಿತ ಬೆಳೆಗಳನ್ನು ನಂಬಿ ರೈತರು ತಮ್ಮ ಬದುಕನ್ನು ಸಾಗಿಸುತ್ತಿದ್ದರೆ.

೩.೨ ಜಾನುವಾರು ಸಾಕಾಣಿಕೆಯಲ್ಲಿ ಹೆಚ್ಚಳ: ಅಂತರ್ಜಲ ನೀರಿನ ಕೊರತೆಯಿಂದಾಗಿ, ಕೃಷಿಯನ್ನು ಬಿಟ್ಟು ಜಾನುವಾರು ಸಾಗಾಣಿಕೆಗಳಲ್ಲಿ ಆನೇಕ ರೈತರು ತಮ್ಮನು ತೊಡಗಿಸಿ ಕೊಂಡಿದ್ದಾರೆ, ದನ, ಕುರಿ, ಮೇಕೆ, ಎಮ್ಮೆ ಹೀಗೆ ಜಾನುವಾರುಗಳು ಮತ್ತು ಆದರ ಉತ್ಪನ್ನಗಳನ್ನು ಮಾರಿ ಒಂದು ಆದಾಯಕ್ಕೆ ದಾರಿಯನ್ನು ಕಂಡುಕೊಂಡಿದ್ದಾರೆ. ಕರ್ನಾಟಕ ಮಿಲ್ಕ್ ಫೆಡರೆಷನ್ (ಕೆ ಎಂ, ಫ್) ಒಂದು ವಿಭಾಗವಾದ ಮೈಸೂರು ಚಾಮರಾಜನಗರ ಹಾಗೂ ಉತ್ಪಾದಕರ ಒಕ್ಕೂಟ ಆನೇಕ ರೈತರಿಗೆ ಬೆನ್ನುಲುಬಾಗಿ ನಿಂತಿದೆ.

೩.೩ ದಿನಗೂಲಿಗಾಗಿ ನಗರಗಳಾತ್ತ ವಲಸೆ: ಕಾಲಕಾಲಕ್ಕೆ ಮಳೆಯಾಗುತ್ತಿದ್ದ ವೇಳೆಗೆ ದಿನಕೂಲಿ ಕಾರ್ಮಿಕರು ಜಮೀನಿನಲ್ಲಿ ಕೆಲಸ ಮಾಡಿ ಆದಾಯ ಪಡೆಯುತ್ತಿದ್ದರು ಇತ್ತಿಚಿನ ವರ್ಷಗಳಲ್ಲಿ ಅಂತರ್ಜಲ ಕುಸಿತದಿಂದ ಜಮೀನಿನಲ್ಲಿ ಕೆಲಸ ಸಿಗದೆ ಆನೇಕ ಕೂಲಿಕಾರ್ಮಿಕರು ಹಾಗೂ ರೈತರು ಕೂಡ ನಗರಳತ್ತ ಮುಖಮಾಡಿ ಅಲ್ಲಿ ಮನೆ ನಿರ್ಮಾಣ ಮತ್ತು ಕಾರ್ಖಾನೆಗಳಲ್ಲಿ ದಿನಗೂಲಿ ಮಾಡುತ್ತಿದ್ದಾರೆ. ಇದ್ದಕ್ಕೆ ನಿಜವಾದ ಚಿತ್ರಣವಾಗಿ, ಬೆಳಗಿನ ಜಾವ ಚಾಮರಾಜನಗರದಿಂದ ಮೈಸೂರಿನತ್ತ ಹೊರಾಡುವ ರೈಲು ಸಾಕ್ಷಿಯಾಗಿದೆ.

೪. ಜಿಲ್ಲಾ ಇಲಾಖಾವತಿಯಿಂದ ಅಂತರ್ಜಲ ಮರುಭರಣಕ್ಕೆ ಕೈಗೊಂಡ ಕ್ರಮಗಳು.

ಸಮಗ್ರ ಜಲಾನಯನ ನಿರ್ವಹಣ ಕಾರ್ಯಕ್ರಮ: ಕರ್ನಾಟಕ ಸರ್ಕಾರದಿಂದ ಅನುಷ್ಠಾನ ಗೊಂಡಿರುವ ಈ ಯೋಜನೆಯ ಪ್ರಕಾರ ಪಂತ ಪಂತವಾಗಿ ಗ್ರಾಮಗಳಲ್ಲಿರುವ ಕೆರೆಗಳಿಗೆ ನದಿ ಮೂಲಕವಾಗಿ ನೀರು ಪೊರೈಸುವುದು. ಈ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಪ್ರಯತ್ನವನ್ನು ಜಿಲ್ಲಾ ಜಲಾನಯನ ಇಲಾಖೆ ಕೈಗೊಂಡಿದೆ ಹಾಗೂ ಇಲಾಖೆವತಿಯಿಂದ ಸೂಕ್ತ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಸೂಸುಕೆರೆ, ಚೆಕ್ ಡ್ಯಾಂ. ಸಬ್ ಸರ್ಫೇಸ್ ಡೈಕ್ ಹಾಗೂ ಇಂಗು ಬಾವಿ ಇತ್ಯಾದಿ ರಚನೆಗಳನ್ನು ನಿರ್ಮಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಅಂತರ್ಜಲ ಸಂರಕ್ಷಣೆ ಕೇವಲ ಸರ್ಕಾರದಲ್ಲ, ಪ್ರತಿಯೊಬ್ಬ ಕೃಷಿಕನ ಕರ್ತವ್ಯವು ಕೂಡ ಹೀಗಾಗಿ ರೈತರು ತಮ್ಮ ಜಮೀನಿನಲ್ಲಿ ತಂತುರು ಹನಿ ನೀರಾವರಿಪದ್ದತಿಯನ್ನು ಅಳವಡಿಸಿದರೆ ಅಧಿಕವಾಗಿ ನೀರು ಪೋಲಾಗುವುದಿಲ್ಲ ಮತ್ತು ಮಣ್ಣಿನ ಫಲವತ್ತತೆ ಹೆಚ್ಚಿಸುವ ಸಾವಯುವ ಕೃಷಿ ಪದ್ದತಿಯನ್ನು ಅನುಸರಿಸುವುದರಿಂದ ಬೆಳೆಯ ಇಳುವರಿಯು ಅಧಿಕಗೊಳ್ಳತ್ತದೆ.

ಉಪಸಂಹಾರ: ಮೊದಲಿಗೆ ರೈತರು ವ್ಯವಸಾಯಕ್ಕಾಗಿ ಬಾವಿಗಳನ್ನೆ ಆವಲಂಬಿಸುತ್ತಿದ್ದರು. ಆದರೆ ಮಳೆಯು ಅನಿಶ್ಚತತೆಯಿಂದ ಹಾಗೂ ಬಾವಿಗಳು ಹೆಚ್ಚಾಗಿದ್ದರಿಂದ ಜಲಮಟ್ಟ ಬಹಳ ಕೆಳಗೆ ಹೋಗಿದೆ. ಹೀಗಾಗಿ ಬಾವಿಗಳು ಬತ್ತಿ ಹೋಗಿವೆ. ಈ ಕಾರಣದಿಂದ ಅಂತರ್ಜಲವನ್ನು ಕೊಳವೆ ಬಾವಿಗಳ ಮೂಲಕ ಪಡೆಯುವ ವ್ಯವಸ್ಥೆ ಹೆಚ್ಚಾಯಿತು. ಅಂತರ್ಜಲವನ್ನು ಸಂಪನ್ಮೂಲ ಕೇವಲ ಇಂದಿನ ಜನರು ಉಪಯೋಗಕ್ಕೆ ಸೀಮಿತವಾಗಿದೆ, ಮುಂದಿನ ಪೀಳಿಗೆಯವರಿಗೂ ಉಪಲಬ್ದವಾಗುವಂತೆ ನೋಡಿಕೊಳ್ಳವ ಮರುಭರಣ ಕ್ರಮಗಳನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕಾಗಿದೆ. ಕೆಲವು ರಾಜಕೀಯ ಷಡ್ಯಂತ್ರಗಳಿಂದ ಹಾಗೂ ಗ್ರಾನೈಟ್ ಗಣಿಗಾರಿಕೆ ಮಾಲೀಕರು-ರಾಜಕೀಯ ವ್ಯಕ್ತಿಗಳ ಜೊತೆ ಒಳಒಪ್ಪಂದ ಮಾಡಿಕೊಡು ಪರಿಣಾಮವಾಗಿ ಸಮಗ್ರ ಜಲಾನಯನ ನಿರ್ವಾಹಣಾ ಕಾರ್ಯಕ್ರಮವು ೨–೩ ವರ್ಷಗಳಿಂದ ಆಮೆಗತಿಯಲ್ಲಿ ಸಾಗುತ್ತಿದ್ದೆ ಎಂಬುದು ಇಲ್ಲಿನ ಜನರ ಅಭಿಪ್ರಾಯ. ಸರ್ಕಾರದ ನಿರ್ಲಕ್ಷದಿಂದ ಚಾಮರಾಜನಗರ ಜಿಲ್ಲೆಯು ಆರ್ಥಿಕ ಬೆಳವಣಿಗೆಯು ಸಂಕಷ್ಟಕ್ಕೆ ಒಳಗಾಗುತ್ತಿದೆ.

Table2:

Proforma-2
Irrigated and Rainfed Area Coverage

District: Chamarajnagara
Season: Kharif

Weekend Date: 30-06-2014

Sl No	Name of the Taluk	Targetted Area (Ha)			Area Coverage (Ha)		
		Irrigated	Rainfed	Total	Irrigated	Rainfed	Total
1	Chararajnagara	5290	26830	32120	970	16150	17120
2	Gundlupet	400	48530	48930	130	37650	37780
3	Kollegal	13690	51260	64950	508	1900	2408
4	Yelandur	7375	4025	11400	490	1777	2267
	Total	26755	130645	157400	2098	57477	59575

ಜಂಟಿ ಕೃಷಿ ನಿರ್ದೇಶಕರು
ಚಾಮರಾಜನಗರ

ಟೇಬಲ್ ೩:

ಚಾಮರಾಜನಗರ ಜಿಲ್ಲೆಯಲ್ಲಿ 2014 ನೇ ಸಾಲಿನಲ್ಲಿ ಆಗಿರುವ ತಾಲ್ಲೂಕುವಾರು ಮಳೆ ವಿವರ (ಮಿ.ಮೀ).

Date: 03-07-2014

ಕ್ರ ಸಂ	ಮಾಹೆ	ಚಾಮರಾಜನಗರ				ಗುಂಡ್ಲುಪೇಟೆ				ಕೊಳ್ಳೇಗಾಲ				ಯಳಂದೂರು				ಜಿಲ್ಲೆಯ ಸರಾಸರಿ			
		ವಾಡಿಕೆ ಮಳೆ	ಬಿದ್ದ ಮಳೆ		ಶೇಕಡಾ ಹೊರತೆ	ವಾಡಿಕೆ ಮಳೆ	ಬಿದ್ದ ಮಳೆ		ಶೇಕಡಾ	ವಾಡಿಕೆ ಮಳೆ	ಬಿದ್ದ ಮಳೆ		ಶೇಕಡಾ	ವಾಡಿಕೆ ಮಳೆ	ಬಿದ್ದ ಮಳೆ		ಶೇಕಡಾ	ವಾಡಿಕೆ ಮಳೆ	ಬಿದ್ದ ಮಳೆ		ಶೇಕಡಾ
			2013ರ ಮಳೆ	2014ರ ಮಳೆ			2013ರ ಮಳೆ	2014ರ ಮಳೆ			2013ರ ಮಳೆ	2014ರ ಮಳೆ			2013ರ ಮಳೆ	2014ರ ಮಳೆ			2013ರ ಮಳೆ	2014ರ ಮಳೆ	
1	ಜನವರಿ	2.4	0.4	0.0	-99	4.2	0.1	0.8	-81	1.5	0.4	0.0	-98	1.3	0.5	0.1	-94	2.3	0.3	0.2	-92
2	ಫೆಬ್ರವರಿ	5.9	4.2	2.1	-64	6.8	2.5	6.1	-10	5.5	2.3	3.8	-31	3.5	2.2	0.5	-85	5.7	2.8	3.8	-33
3	ಮಾರ್ಚ್	12.5	2.7	14.5	16	15.6	0.5	31.2	100	10.7	10.2	26.2	145	13.3	4.5	9.9	-25	12.7	6.0	24.1	90
4	ಏಪ್ರಿಲ್	63.9	47.2	26.5	-58	75.2	91.6	68.0	-10	64.9	45.7	18.1	-72	69.3	64.2	9.6	-86	67.4	58.0	31.6	-53
5	ಮೇ	141.9	91.3	122.1	-14	141.3	56.7	133.2	-6	142.0	69.3	123.7	-13	148.2	116.2	149.4	1	142.1	73.2	126.8	-11
6	ಜೂನ್	49.2	32.8	49.7	1	48.8	78.1	55.8	14	53.9	44.4	76.5	42	64.3	43.2	56.6	-12	52.1	49.9	64.8	24
7	ಜುಲೈ	3.5	49.8	11.2	220	5.5	126.8	7.0	28	3.4	49.5	11.8	247	2.8	56.8	19.2	585	3.8	68.4	10.9	186
ಒಟ್ಟು		279.3	228.4	226.1	-19	297.4	356.3	302.1	2	281.9	221.8	260.1	-8	302.7	287.6	245.3	-19	286.1	258.6	262.2	-8
ಶೇಕಡವಾರು ಬಿದ್ದ ಮಳೆ				81				102				92				81				92	

ಮಾಹಿತಿ : KSNDMC,ಬೆಂಗಳೂರು

References:

೧.ಉಪನಿರ್ದೇಶಕರ ಕಾರ್ಯಾಲಯ ಗಣಿ ಮತ್ತು ಭೂವಿಜ್ಞಾನ ಇಲಾಖೆ

2. L. S. Balachandra, ground water information booklet, Central gound water board, Chamarajnagar District Karnataka, November. 2008

3. Dr. Harish M. "A study on ground water in Chamarajnagar District" Indian institution of science, Bangalore-12

ಮಿಡಿ ಮಾವುಗಳ ಬಾಹ್ಯ ಆಂಗ ರಚನೆಯ ವಿಶ್ಲೇಷಣೆ ಮತ್ತು ಸಂಬಂಧಗಳ ಅನ್ವೇಷಣೆ

ಬಿ. ತಾಂಬಟ್, ಜೈತ್ರ ಜಿ. ಎನ್., ಶ್ಯಾಮಗುಂಡು ಮತ್ತು ಶ್ರೀನಿವಾಸ ಸಿ.
ಬೆಳೆ ಶರೀರ ಕ್ರಿಯಾಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, (ಕೃ,ವಿ.ವಿ.ಬೆಂ.), ಹಾಸನ, ಸೂಕ್ಷ್ಮಜೀವಿಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ, ಬೆಂಗಳೂರು ವಿಶ್ವ ವಿದ್ಯಾನಿಲಯ, ಬೆಂಗಳೂರು,

ಹೇಗೆ ಮಾವು ಜನಪ್ರಿಯವಾಗಿ ಹಣ್ಣುಗಳ ರಾಜನೆಂದೇ ಗುರುತಿಸಿ ಕೊಂಡಿದಿಯೋ ಹಾಗೆಯೇ ಮಿಡಿಮಾವು ಉಪ್ಪಿನಕಾಯಿಗೆಂದೇ ಹೆಸರು ವಾಸಿಯಾಗಿದೆ. ಸಾಮಾನ್ಯವಾಗಿ ಉಪ್ಪಿನ ಕಾಯಿಗಳನ್ನು ಹೊಳುಗಳನ್ನಾಗಿ ಮಾಡಿ ತಯಾರಿಸಲಾಗುತ್ತದೆ. ಆದರೇ, ಈ ಮಿಡಿ ಮಾವನ್ನು ಇಡಿಯಾಗಿ (ಪೂರ್ತಿ ಕಾಯಿಯನ್ನು) ಬಳಸಿ ಉಪ್ಪಿನಕಾಯಿ ತಯಾರಿಸುತ್ತಾರೆ. ಮಿಡಿಮಾವುಗಳಲ್ಲಿ ಹಲವು ಬಗೆಗಳಿವೆ. ಒಂದು ಮಿಡಿಮಾವು ಇನ್ನೊಂದು ಮಿಡಿಮಾವಿಗಿಂತ ಸಸ್ಯೆಯ ಮತ್ತು ಪುನರುತ್ಪಾದನಾ ಅಂಗರಚನೆ ಹಾಗೂ ಕ್ರೀಯೆಯಲ್ಲಿ ವ್ಯಾತ್ಯಾಸಹೊಂದಿವೆ. ಮಿಡಿಮಾವುಗಳು ರುಚಿ, ಸುವಾಸನೆ, ಹೂ ಆಗುವ ಸಮಯ, ಹಣ್ಣಿನ ಬಣ್ಣ, ಗಾತ್ರ, ಸೂನೆ, ಪರಿಮಳ, ಹಾಗು ಎಲೆಯ ಅಂಗ ರಚನೆಯಲ್ಲಿ ಭಿನ್ನವಾಗಿವೆ. ಮಿಡಿಮಾವಿನ ಎಲೆಗಳು ಕಿರಿದಾಗಿ ಉದ್ದವಿರುತ್ತವೆ, ಹಾಗೂ ತಿಳಿ ಹಾಸಿರು ಬಣ್ಣದಿಂದ ಗಾಢ ಹಸಿರು ಬಣ್ಣ ಹೊಂದಿರುತ್ತವೆ. ಮರಗಳು ನೆರವಾಗಿದ್ದು, ಕಿರಿಟದ ಆಕಾರ ಅಥವಾ ವಿಶಾಲ ತ್ರಿಕೋಣಾಕೃತಿ ಹೊಂದಿದ್ದು ಬೃಹದಾಕಾರವಾಗಿರುತ್ತವೆ. ಸಾಮಾನ್ಯವಾಗಿ ನದಿಯ ದಂಡೆಯಲ್ಲಿ ಕಾಣಸಿಗುತ್ತವೆ. ಹಣ್ಣುಗಳು ಸಣ್ಣದಾಗಿದ್ದು ಅಧಿಕ ಆಮ್ಲಿಯವಾಗಿರುತ್ತವೆ. ಹಣ್ಣುಗಳು ಸಹ ಹೆಚ್ಚಾಗೆ ಹಾಸಿರಾಗಿಯೇ ಉಳಿದಿರುತ್ತವೆ (ಕೆಲವು ಮರದಲ್ಲಿ ಹಣ್ಣುಗಳು ಹಳದಿ ಬಣ್ಣಕ್ಕೆ ತಿರುಗಬಹುದು). ಮಿಡಿಯಲ್ಲಿ ಸೊನೆ ಹೇರಳವಾಗಿದ್ದು ವಿಶೀಷ್ಟ ಪರಿಮಳ ಹಾಗೂ ಹೆಚ್ಚು ಹುಳಿ (ಒಗರು) ಹೊಂದಿರುತ್ತವೆ. ಮಿಡಿಮಾವುಗಳ ಸಂರಕ್ಷಣೆ ಹಾಗೂ ಉಪಯುಕ್ತತೆಯನ್ನು ಗಮನದಲ್ಲಿಟ್ಟು 39 ವಿವಿಧ ಮಿಡಿ ಮಾವುಗಳಲ್ಲಿರುವ ವ್ಯಾತ್ಯಾಸ ತಿಳಿಯಲು ಬಾಹ್ಯ ಅಂಗ ರಚನೆಯಲ್ಲಿರುವ ವಿವಿಧ ಗುಣ ಲಕ್ಷಣಗಳಾದ ಎಲೆಯ ಸುತ್ತಳತೆಯ ಮಾದರಿ (ಅಂಡ ವೃತ್ತಾಕಾರ, ಉದ್ದವಾದ, ಅಂಡಾಕಾರ, ಬುಗುರಿಯಾಕಾರ, ಭರ್ಜಿಯಾಕಾರ, ಬುಗುರಿ–ಭರ್ಜಿಯಾಕಾರ, ಇತ್ಯಾದಿ), ಎಲೆಯ ಉದ್ದಳತೆ (ಸೆ. ಮಿ.), ಎಲೆಯ ತೊಟ್ಟಿನ ಉದ್ದ (ಸೆ. ಮಿ.), ಎಲೆಯ ತೊಟ್ಟಿನ ಉಬ್ಬುವಿಕೆಯ ಸುತ್ತಳತೆ (ಮಿ.ಮಿ.), ಎಲೆಯ ಸಿರಾ ವಿನ್ಯಾಸ (ಕಿರಿದಾದ–<450, ಮಧ್ಯಮ 45–600 ಅಗಲ >600), ದ್ವಿತೀಯ ಸಿರಗಳ ವಕ್ರತೆ (ಇದೆ/ಇಲ್ಲಾ), ಎಲೆ ರಚನೆ (ಒರಟು, ವಿಶಿಷ್ಟ, ಪೊರೆಯಂತೆ), ಎಲೆಯ ತುದಿಯ ಆಕಾರ (ವಿಶಾಲ, ತಿವ್ರ, ಚುಪಾದ), ಎಲೆಯ ತಳಭಾಗ ಆಕಾರ (ವಿಶಾಲ, ತಿವ್ರ, ಗೊಲಾಕಾರ), ಎಲೆ ಅಂಚು (ಸಂಪೂರ್ಣ, ಅಲೆ ಆಕಾರ), ಎಲೆಯ ರೋಮಾ (ಇದೆ/ಇಲ್ಲಾ), ಯಳೆ ಎಲೆ ಬಣ್ಣ (ತಿಳಿ ಹಸಿರು, ತಿಳಿ ಹಸಿರು–ಕಂದು ಛಾಯೆ, ತಿಳಿ ಹಸಿರು–ಕೆಂಪು ಛಾಯೆ, ಕೆಂಪು ಮಿಶ್ರಿತ ಕಂದು, ಆಳ ವಾದ ತಾಮ್ರದ ಬಣ್ಣ, ತಾಮ್ರ ಮಿಶ್ರಿತ ಕಂದು, ಇತ್ಯದಿ) ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದೆವು. ಮೆಲ್ಕಂಡ ಎಲ್ಲ ಮಾಹಿತಿಯನ್ನು ಬಳಸಿ ಅವುಗಳನ್ನು ವಿಭಿನ್ನವಾದ ದತ್ತಾಂಶ ಅವಳಿ ಭಾಷೆ (0,1) ಅಥವಾ ಸಂಕೇತ ಭಾಷೆಗೆ ಪರಿವರ್ತಿಸಿದೇವು. ಆನಂತರ ಸಂಕೇತ ಭಾಷೆಗೆ ಪರಿವರ್ತಿಸಿದ ಬಾಹ್ಯ ಆಂಗ ರಚನೆ ಮಾಹಿತಿಯನ್ನು ಅಂಕಿ ಅಂಶಗಳ ವಿಶ್ಲೇಷಣಾ ತಂತ್ರಾಂಶ ಬಳಸಿ, ಪಾರ್ಡ ಮತ್ತು ವರ್ಗ ಯೂಕ್ಲಿಡಿಯನ್ ದೂರ ವಿಧಾನವನ್ನು ಅಳವಡಿಸಿ ಗುಂಪು ವಿಷ್ಲೇಶಣೆ ಮಾಡಲಾಯಿತು. ಬಾಹ್ಯ ಆಂಗ ರಚನೆ ಎಲ್ಲ ಮಾಹಿತಿಯ ಗುಂಪು ವಿಷ್ಲೇಶಣೆಯಿಂದ ತಿಳಿದು ಬಂದ ಅಂಶವೇನೆಂದರೆ ಮಿಡಿ ಮಾವಿನ ತಳಿಗಳು ಗುಣ ಲಕ್ಷಣಗಳ್ಲಿ ಹಲವಾರು ವ್ಯಾತ್ಯಾಸ ಹೊಂದಿದ್ದು ಎರಡು ಗುಂಪುಗಳಾಗಿ ವರ್ಗಿಕರಿಸಲ್ಪಟ್ಟಿವೆ. ಹಾಗೂ ಹಣ್ಣಿನ ಮಾವಿಗಿಂತಲೂ ವಿಭಿನ್ನವಾಗಿವೆ.

ಪರಿಚಯ: ಹೇಗೆ ಮಾವು ಜನಪ್ರಿಯವಾಗಿ ಹಣ್ಣುಗಳ ರಾಜನೆಂದೇ ಗುರುತಿಸಿ ಕೊಂಡಿದಿಯೋ ಹಾಗೆಯೇ 'ಮಿಡಿಮಾವು' ಉಪ್ಪಿನಕಾಯಿ ಗೆಂದೇ ಹೆಸರು ವಾಸಿಯಾಗಿದೆ. ಸಾಮಾನ್ಯವಾಗಿ ಉಪ್ಪಿನ ಕಾಯಿಗಳನ್ನು ಹೊಳುಗಳನ್ನಾಗಿ ಮಾಡಿ ತಯಾರಿಸಲಾಗುತ್ತದೆ. ಆದರೇ, ಈ ಮಿಡಿಮಾವನ್ನು ಇಡಿಯಾಗಿ (ಪೂರ್ತಿ ಕಾಯಿಯನ್ನು) ಬಳಸಿ ಉಪ್ಪಿನಕಾಯಿ ತಯಾರಿಸುತ್ತಾರೆ. ಮಿಡಿ ಮಾವು ಅರಣ್ಯದ ಒಂದು ಉಪ ಉತ್ಪನ್ನ. ಮಿಡಿ ಮಾವು ಮರಗಳು ಸಾಮಾನ್ಯವಾಗಿ ನದಿ, ಹಳ್ಳ, ಇತ್ಯಾದಿ ಪ್ರದೇಶಗಳ ದಡದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಮಿಡಿಮಾವು ಮಲೆನಾಡಿಗೆ ಮಾತ್ರ ಸಿಮಿತ ವಾಗಿದ್ದರೆ ಹಣ್ಣಿನ ಮಾವು ಒಣ ಪ್ರದೇಶದಲ್ಲಿ ಕಂಡು ಬರುತ್ತದೆ. ಮಿಡಿಮಾವು ನೊಡಲಿಕ್ಕೆ ಹಣ್ಣಿನ ಮಾವಿನ ಹಾಗೆ ಇರುವುದು ಹಾಗಾಗಿ ಅವುನ್ನು ಮಾವಿನ ಒಂದು ವಿಧ ಅಂತ ಭಾವಿಸಲಾಗುತ್ತಿದೆ. ಆದರೆ, ಹಣ್ಣಿನ ಮಾವಿಗೆ ಹೋಲಿಸಿ ನೋಡಿದರೆ ಹಲವಾರು ವ್ಯಾತ್ಯಾಸಗಳಿವೆ ಎಂಬುದು ಖಚಿತವಾಗುತ್ತದೆ. ಅವುಗಳಲ್ಲಿ ಪ್ರಮುಖವಾಗಿರುವೆಂದರೆ, ಎಲೆಯ ಮಾರ್ಪಾಡು, ಹೂ ಆಗುವ ಸಮಯ, ಹಣ್ಣಿನ ಬಣ್ಣ, ಗಾತ್ರ, ಸೂನೆ, ಪರಿಮಳ, ಇತ್ಯಾದಿ. ಅಂತೆಯೇ, ಕೆಲವರು ಮಿಡಿಮಾವು ಮಾವಿನ ಇನ್ನೋಂದು ಜಾತಿ ಅಂತ ಅಭಿಪ್ರಾಯ ಪಟ್ಟಿದ್ದಾರೆ.

ಕರ್ನಾಟಕದ ಮಲೆನಾಡಿನಲ್ಲಿ ಉಪ್ಪಿನಕಾಯಿಗೆ ಹೆಸರು ವಾಸಿಯಾಗಿರುವ "ಮಿಡಿಮಾವು"ಗಳಲ್ಲೂ ಸಹ ಹಲವು ಬಗೆಗಳಿವೆ. ಒಂದು ಮಿಡಿಮಾವು ಇನ್ನೊಂದು ಮಿಡಿಮಾವಿಗಿಂತ ಸಸ್ಯೆಯ ಮತ್ತು ಪುನರುತ್ಪಾದನಾ ಅಂಗರಚನೆ ಹಾಗೂ ಕ್ರೀಯೆಯಲ್ಲಿ ವ್ಯಾತ್ಯಾಸಹೊಂದಿವೆ. ಮಿಡಿಮಾವುಗಳು ರುಚಿ, ಸುವಾಸನೆ, ಹೂ ಆಗುವ ಸಮಯ, ಹಣ್ಣಿನ ಬಣ್ಣ, ಗಾತ್ರ, ಸೂನೆ, ಪರಿಮಳ, ಹಾಗು ಎಲೆಯ ಅಂಗ ರಚನೆಯಲ್ಲಿ ಭಿನ್ನವಾಗಿವೆ. ಮಿಡಿಮಾವಿನ ಎಲೆಗಳು ಕಿರಿದಾಗಿ ಉದ್ದವಿರುತ್ತವೆ, ಹಾಗೂ ತಿಳಿ ಹಾಸಿರು ಬಣ್ಣದಿಂದ ಗಾಢ ಹಸಿರು ಬಣ್ಣ ಹೊಂದಿರುತ್ತವೆ. ಮರಗಳು ನೆರವಾಗಿದ್ದು, ಕಿರಿಟದ ಆಕಾರ ಅಥವಾ ವಿಶಾಲ ತ್ರಿಕೋಣಾಕೃತಿ ಹೊಂದಿದ್ದು ಬೃಹದಾಕಾರವಾಗಿರುತ್ತವೆ. ಸಾಮಾನ್ಯವಾಗಿ ನದಿಯ ದಂಡೆಯಲ್ಲಿ ಕಾಣಸಿಗುತ್ತವೆ. ಹಣ್ಣುಗಳು ಸಣ್ಣದಾಗಿದ್ದು ಅಧಿಕ ಆಮ್ಲಿಯವಾಗಿರುತ್ತವೆ. ಹಣ್ಣುಗಳು ಸಹ ಹೆಚ್ಚಾಗೆ ಹಾಸಿರಾಗಿಯೇ ಉಳಿದಿರುತ್ತವೆ (ಕೆಲವು ಮರದಲ್ಲಿ ಹಣ್ಣುಗಳು ಹಳದಿ ಬಣ್ಣಕ್ಕೆ ತಿರುಗಬಹುದು). ಮಿಡಿಯಲ್ಲಿ ಸೊನೆ ಹೇರಳವಾಗಿದ್ದು ವಿಶೀಷ್ಟ ಪರಿಮಳ ಹಾಗೂ ಹೆಚ್ಚು ಹುಳಿ (ಒಗರು) ಹೊಂದಿರುತ್ತವೆ.

ಮಿಡಿಮಾವಿನ ಉಪ್ಪಿನಕಾಯಿ ವಿಶೇಷವಾದ ರುಚಿ, ಪರಿಮಳ, ಹಾಗೂ ಸುವಾಸನೆಯನ್ನು ಹೊಂದಿರುತ್ತದೆ. ಜೊತೆಗೆ ಹೆಚ್ಚು ಕಾಲ ಸಂಗ್ರಹಿಸಿ ಇಡಬಹುದು. ಮಲೆನಾಡಿನಲ್ಲಿ ಹಲವರು ಮಿಡಿ ಮಾವನ್ನು ಸಂಗ್ರಹಿಸಿ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇನ್ನೂ ಕೆಲವರು ಮಿಡಿ ಉಪ್ಪಿನಕಾಯಿಯ ಕಾರ್ಖಾನೆಯನ್ನು ಸಹ ಹೊಂದಿದ್ದಾರೆ. ಇತ್ತೀಚೀನ ದಿನಗಳಲ್ಲಿ ಹೆಚ್ಚಿನ ಬೆಡಿಕೆಯಿಂದ ಮಿಡಿಮಾವಿನ ಕಟಾವು ಹೆಚ್ಚಾಗಿದೆ. ಇದರ ಪರಿಣಾಮವಾಗಿ ಕೆಲ ಮಿಡಿಮಾವಿನ ತಳಿಗಳು, ಮರಗಳು ಮತ್ತು ಮಿಡಿಮಾವು ಸಂಕುಲ ಅಧಿಕ ಬಳಕೆಯಿಂದ ನಸಿಶಿ ಹೋಗುತ್ತಿವೆ. ಕೆಲ ವಿಶೇಷ ಮಿಡಿಮಾವಿನ ತಳಿಗಳು ಇಗಾಗಲೆ ನಶೀಸಿ ಹೊಗೀವೆ ಹಾಗೂ ಇನ್ನೂ ಕೆಲವು ನಶೀಸಿ ಹೊಗುವ ಹಾದಿಯಲ್ಲಿವೆ. ಮಿಡಿಮಾವುಗಳ ಅಳಿವು-ಉಳಿವು, ಅಸ್ತಿತ್ವ, ಸಂರಕ್ಷಣೆ ಹಾಗೂ ಉಪಯುಕ್ತತೆಯನ್ನು ಗಮನದಲ್ಲಿಟ್ಟು ವಿವಿಧ ಮಿಡಿಮಾವು ತಳಿಗಳ ಗುರುತಿಸುವಿಕೆ ಅತಿ ಅವಶ್ಯಕ. ಹಾಗಾಗಿ, ನಾವು 39 ವಿವಿಧ ಮಿಡಿ ಮಾವುಗಳಲ್ಲಿರುವ ಬಾಹ್ಯ ಅಂಗ ರಚನೆಯಲ್ಲಿರುವ ವ್ಯಾತ್ಯಾಸ ಮತ್ತು ವಿವಿಧ ಗುಣ ಲಕ್ಷಣಗಳನ್ನು ತಿಳಿಯಲು ಒಂದು ಅಧ್ಯಯನವನ್ನು ಕೈಗೊಂಡೆವು, ಅದರ ಫಲಿತಾಂಶಗಳನ್ನು ಇಲ್ಲಿ ವಿವರಿಸಿದೆವು.

ವಸ್ತುಗಳು ಮತ್ತು ವಿಧಾನ: ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿರುವ ಪಶ್ಚಿಮ ಘಟ್ಟದ ಕ್ಷೇತ್ರ ಸಮೀಕ್ಷೆ ನಡೆಸುವ ಮೂಲಕ ಹಲವಾರು ಸ್ಥಳಗಳನ್ನು ಆಯ್ಕೆ ಮಾಡಲಾಯಿತು. ಮಿಡಿಮಾವು ಹಾಗೂ ಹಣ್ಣಿನ ಮಾವು ಹಲವಾರು ವಿಚಾರಗಲ್ಲಿ ವ್ಯಾತ್ಯಾಸ ಹೊಂದಿವೆ (ಕೋಷ್ಟಕ 1). ಆದರೂ ಸಹ ಮಿಡಿಮಾವುಗಳ ಮರವನ್ನು ಮಾವಿನ ಮರದಿಂದ ಬೆರೆ ಎಂದು ಗುರುತಿಸುವುದು ಸುಲಭದ ಕೆಲಸವಲ್ಲ. ಹಾಗಾಗಿ ಪ್ರತಿ ಕ್ಷೇತ್ರದ ಸಮೀಕ್ಷೆ ನಡೆಸಿ ಗ್ರಾಮಸ್ಥರು, ಮಿಡಿಮಾವುಗಳನ್ನು ಕೊಯ್ಯುವವರು ಮತ್ತು ಮಾರಾಟ ಮಾಡುವವರು, ತೋಟಗಾರಿಕೆ ಮತ್ತು ಅರಣ್ಯ ಇಲಾಖೆಯ ಸಹಾಯದಿಂದ ಮಿಡಿ ಮರಗಳನ್ನು ಮತ್ತು ಅವುಗಳ ಸಂಖೆಯನ್ನು ದಾಖಲು ಮಾಡಲಾಯಿತು. ವಿವಿಧ ಕ್ಷೇತ್ರ ಮತ್ತು ವಿಭಿನ್ನ ಬಾಹ್ಯ ಅಂಗ ರಚನೆ ಹೊಂದಿರುವ ಮಿಡಿಮಾವುಗಳ ಸಸಿಗಳನ್ನು ಸಂಗ್ರಹಿಸಲಾಯಿತು. ಜೊತೆಗೆ, ತೋಟಗಾರಿಗೆ ಇಲಾಖೆ, ಸಾಗರ, ಅರಣ್ಯ ಮಹಾವಿದ್ಯಾಲಯ, ಶಿರಸಿ ಮತ್ತು ಅಂಕುರ ನರ್ಸರಿ, ರಿಪ್ಪನಪೇಟೆರವರ ಬಳಿ ಇರುವ ವಿಶೇಷ ಮಿಡಿಮಾವುಗಳ ತಳಿಗಳನ್ನು ಸಹ ಸಂಗ್ರಹಿಸಲಾಯಿತು. ಎಲ್ಲ ಮಿಡಿಮಾವು ತಳಿಗಳ ಸಸಿಗಳನ್ನು ತಂದು ಕೃಷಿ ಮಹಾವಿದ್ಯಾಲಯ, ಹಾಸನದ ಬೆಳೆ ಶರೀರ ಕ್ರಿಯಾಶಾಸ್ತ್ರ ವಿಭಾಗದ ಹಸಿರು ಮನೆಯಲ್ಲಿ ಬೆಳೆಸಲಾಯಿತು. ಮಿಡಿಮಾವುಗಳ ಸಂರಕ್ಷಣೆ ಹಾಗೂ ಉಪಯುಕ್ತತೆಯನ್ನು ಗಮನದಲ್ಲಿಟ್ಟು 39 ವಿವಿಧ ಮಿಡಿ ಮಾವು ತಳಿಗಳನ್ನು ಆಯ್ಕೆ ಮಾಡಲಾಯಿತು (ಕೋಷ್ಟಕ 2). ತದನಂತರ, ಅವುಗಳ ನಡುವಿನ ಅಂತರ/ವ್ಯಾತ್ಯಾಸ ತಿಳಿಯಲು ಅಂತರಾಷ್ಟ್ರೀಯ ಸಸ್ಯ ತಳಿ ಸಂಪನ್ಮೂಲಗಳ ಸಂಸ್ಥೆ (ಅ.ಸ.ತ.ಸಂ.ಸಂ., 2012), ರೋಮ್, ಇಟಲಿ ಅಭಿವೃದ್ಧಿಪಡಿಸಿದ ಮಾವಿನ (ಮ್ಯಾಂಜಿಫೇರಾ ಇಂಡಿಕಾ ಲಿ.) ಗುಣ ಲಕ್ಷಣಗಳ ಪಟ್ಟಿಯನ್ನು ಆಧರಿಸಿ ಮಿಡಿಮಾವಿಗಳ ಬಾಹ್ಯ ಅಂಗ ರಚನೆಯಲ್ಲಿರುವ ವಿವಿಧ ಗುಣ ಲಕ್ಷಣಗಳನ್ನು ದಾಖಲು ಮಾಡಲಾಯಿತು.

ಅಧ್ಯಯನಕ್ಕೆ ಬಳಸಿದ ವಿವಿಧ ಬಾಹ್ಯ ಅಂಗ ರಚನೆಯ ಗುಣ ಲಕ್ಷಣಗಳು; ಎಲೆಯ ಸುತ್ತಳತೆಯ ಮಾದರಿ (ಅಂಡ ವೃತ್ತಾಕಾರ, ಉದ್ದವಾದ, ಅಂಡಾಕಾರ, ಬುಗುರಿಯಾಕಾರ, ಭರ್ಜಿಯಾಕಾರ, ಬುಗುರಿ-ಭರ್ಜಿಯಾಕಾರ, ಇತ್ಯಾದಿ), ಎಲೆಯ ಉದ್ದಳತೆ (ಸೆ. ಮಿ.), ಎಲೆಯ ತೊಟ್ಟಿನ ಉದ್ದ (ಸೆ. ಮಿ.), ಎಲೆಯ ತೊಟ್ಟಿನ ಉಬ್ಬುವಿಕೆಯ ಸುತ್ತಳತೆ (ಮಿ.ಮಿ.), ಎಲೆಯ ಸಿರಾ ವಿನ್ಯಾಸ (ಕಿರಿದಾದ-$<45^0$, ಮಧ್ಯಾಮ $45-60^0$ ಅಗಲ $>60^0$), ದ್ವಿತೀಯ ಸಿರಗಳ ವಕ್ರತೆ (ಇದೆ/ಇಲ್ಲಾ), ಎಲೆ ರಚನೆ (ಒರಟು, ವಿಶಿಷ್ಟ, ಪೊರೆಯಂತೆ), ಎಲೆಯ ತುದಿಯ ಆಕಾರ (ವಿಶಾಲ, ತಿವ್ರ, ಚುಪಾದ), ಎಲೆಯ ತಳಭಾಗ ಆಕಾರ (ವಿಶಾಲ, ತಿವ್ರ, ಗೊಲಾಕಾರ), ಎಲೆ ಅಂಚು (ಸಂಪೂರ್ಣ, ಅಲೆ ಆಕಾರ), ಎಲೆಯ ರೋಮಾ (ಇದೆ/ಇಲ್ಲಾ), ಎಳೆ ಎಲೆ ಬಣ್ಣ (ತಿಳಿ ಹಸಿರು, ತಿಳಿ ಹಸಿರು-ಕಂದು ಛಾಯೆ, ತಿಳಿ ಹಸಿರು-ಕೆಂಪು ಛಾಯೆ, ಕೆಂಪು ಮಿಶ್ರಿತ ಕಂದು, ಆಳ ವಾದ ತಾಮ್ರದ ಬಣ್ಣ, ತಾಮ್ರ ಮಿಶ್ರಿತ ಕಂದು, ಇತ್ಯದಿ), ಎಳೆ ಎಲೆಯಲ್ಲಿನ ವರ್ಣಧಾತು (ಕಡಿಮೆ, ಮಧ್ಯಮ, ಹೆಚ್ಚು), ಎಲೆ ಬಣ್ಣ (ತಿಳಿ ಹಸಿರು, ಹಸಿರು, ಗಾಢ ಹಸಿರು), ಪರಿಮಳ (ಇಲ್ಲ, ಮಧ್ಯಮ, ಹೆಚ್ಚು) ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದೆವು.

ಕೋಷ್ಟಕ 1: ಮಾವು ಹಾಗೂ ಮಿಡಿಮಾವುಗಳ ಸಾಮಾನ್ಯ ವ್ಯಾತ್ಯಾಸಗಳು.

ಕ್ರ.ಸಂ	ಗುಣ ಲಕ್ಷಣಗಳು	ಮಿಡಿಮಾವು	ಹಣ್ಣಿನ ಮಾವು
1	ನೈಸರ್ಗಿಕ ಹಂಚಿಕೆ	ಮಧ್ಯಮ ಪಶ್ಚಿಮ ಘಟ್ಟ	ಭಾರತ ಮತ್ತು ಇತರ ರಾಷ್ಟ್ರಗಳು
2	ನೈಸರ್ಗಿಕ ಬೆಳವಣಿಗೆ	ನದಿ, ಹಳ್ಳ, ಇತ್ಯಾದಿಗಳ ದಡದಲ್ಲಿ ತಂಪು ಪ್ರದೇಶ	ಒಣ ಹಾಗೂ ಉಷ್ಣ ಪ್ರದೇಶ
3	ಹಣ್ಣಿನ ಸಂಗ್ರಹ	ಕಾಡು ಪ್ರದೇಶದಿಂದ	ಸಾಗುವಳಿ ಮಾಡಿ
4	ಉಪಯೋಗ	ಉಪ್ಪಿನಕಾಯಿಗೆ ಮಾತ್ರ	ಹಣ್ಣು, ಉಪಿನಕಾಯಿ, ಜಾಮ್, ಜೂಸ್, ಇತ್ಯಾದಿ
5	ಉಪ್ಪನಕಾಯಿಗೆ ಉಪಯುಕ್ತ ಭಾಗ	ಪೂರ್ತಿ ಮಿಡಿ ಹಣ್ಣು	ಹಣ್ಣು ಕತ್ತರಿಸಿ ಭಾಗಮಾಡಿ ಬಳಸುವುದು
6	ಪರಿಮಳ	ವಿಶೇಷ ಪರಿಮಳ ಮತ್ತು ಹೆಚ್ಚಿನ ಪ್ರಮಾಣದಲ್ಲಿ	ಪರಿಮಳ ಮತ್ತು ಕಡಿಮೆ ಪ್ರಮಾಣದ
7	*ಹೂವು ಬಿಡುವ ಕಾಲ	ಸಾಮಾನ್ಯವಾಗಿ ಫೇಬ್ರುವರಿ	ಸಾಮಾನ್ಯವಾಗಿ ನವೆಂಬರ್

8	*ಹಣ್ಣು ಬಿಡುವ ಕಾಲ	ಮಾರ್ಚ – ಏಪ್ರೀಲ್	ತಳಿ ಅವಲಂಬಿತ್
9	ಮಾಗಿದ ಹಣಿನ ಗಾತ್ರ	ಗಾತ್ರದಲ್ಲಿ ಚಿಕ್ಕದು	ಗಾತ್ರದಲ್ಲಿ ದೊಡ್ಡದು
10	ಮಾಗಿದ ಹಣಿನ ರುಚಿ	ಒಗರು	ಸಿಹಿ
11	ಮಾಗಿದ ಹಣ್ಣು	ಹಸಿರು ಮತ್ತು ಗಟ್ಟಿ	ಹಳದಿ ಮತ್ತು ಮ್ಯುದು
12	ಉಪಿನಕಾಯಿ ಶೇಖರಣೆ	ಹಲವು ವರ್ಷ	ಕೆಲವು ತಿಂಗಳು
13	ಪ್ರೌಢ ಎಲೆ	ತೆಳು	ದಪ್ಪ
14	ಪ್ರೌಢ ಎಲೆ ಬಣ್ಣ	ತಿಳಿ ಹಸಿರು	ಗಾಢ ಹಸಿರು

*ಸೂಚನೆ: * ಪ್ರದೇಶಕ್ಕೆ ತಕ್ಕ ಹಾಗೆ ಬದಲಾಗುತ್ತದೆ.*

ವಿಶ್ಲೇಷಣೆ

ಸರಾಸರಿ ಎಲೆಯ ಉದ್ದ (ಸೆ. ಮಿ.), ಎಲೆಯ ಅಗಲ (ಸೆ. ಮಿ.) ಮತ್ತು ಎಲೆಯ ತೊಟ್ಟಿನ ಉದ್ದ (ಸೆ. ಮಿ.): ಎಲ್ಲ ಮಿಡಿ ತಳಿಗಳ ಎಲೆಯ ಉದ್ದ (ಸೆ. ಮಿ.), ಎಲೆಯ ಅಗಲ (ಸೆ. ಮಿ.) ಮತ್ತು ಎಲೆಯ ತೊಟ್ಟಿನ ಉದ್ದ (ಸೆ. ಮಿ.) ವನ್ನು ಧಾಖಲಿಸಿದೆವು. ಆನಂತರ ಅವುಗಳ ಸರಾಸರಿ ಮೊತ್ತವನ್ನು ಕಂಡು ಹಿಡಿದು ವಿವಿಧ ತಳಿಗಳನ್ನು ತುಲನೆ ಮಾಡಲಾಯಿತು. (ಸ್ನೇಡೆಕೊರ್ ಮತ್ತು ಕಾಕ್‌ರಾನ್, 1967).

ಗುಂಪು (ವೃಕ್ಷಕ) ವಿಶ್ಲೇಶಣೆ: ಬಾಹ್ಯ ಅಂಗ ರಚನೆಯಲ್ಲಿರುವ ವಿವಿಧ ಗುಣ ಲಕ್ಷಣಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದೆವು. ನಂತರ ಮಾಹಿತಿಯನ್ನು ದತ್ತಾಂಶ ಅವಳಿ ಭಾಷೆ (0, 1) ಅಥವಾ ಸಂಕೇತ ಭಾಷೆಗೆ ಪರಿವರ್ತಿಸಿದೇವು. ಆನಂತರ ಪರಿವರ್ತಿಸಿದ ಬಾಹ್ಯ ಅಂಗ ರಚನೆ ಗುಣ ಲಕ್ಷಣಗಳ ಮಾಹಿತಿಯನ್ನು ಅಂಕಿ ಅಂಶಗಳ ವಿಶ್ಲೇಷಣಾ ತಂತ್ರಾಂಶ ಬಳಸಿ, ವಾರ್ಡ ಮತ್ತು ವರ್ಗ ಯೂಕ್ಲಿಡಿಯನ್ ದೂರ ವಿಧಾನವನ್ನು ಅಳವಡಿಸಿ ಗುಂಪು (ವೃಕ್ಷಕ) ವಿಶ್ಲೇಶಣೆ ಮಾಡಲಾಯಿತು (ಸ್ಟ್ಯಾಟಿಸ್ಟೀಕಾ, 1993).

ಫಲಿತಾಂಶಗಳು

ಎಲೆಯ ಉದ್ದ, ಅಗಲ ಮತ್ತು ತೊಟ್ಟಿನ ಉದ್ದ (ಸೆ. ಮಿ.) ಸರಾಸರಿ ತುಲನೆ: ಬಾಹ್ಯ ಅಂಗ ರಚನೆಯ ಪ್ರಮುಖ ಅಂಗವಾದ ಎಲೆಯ ವಿವಿಧ ಗುಣ ಲಕ್ಷಣಗಳನ್ನು ಅಳತೆ ಮಾಡಿ ತುಲನೆ ಮಾಡಲಾಯಿತು. ಮಿಡಿ ಮಾವುಗಳು ವೈವಿಧ್ಯಮಯವಾಗಿವೆ, 39 ಮಿಡಿ ತಳಿಗಳ ಎಲೆ ಉದ್ದ 7 ರಿಂದ 21.6 ಸೆ. ಮಿ. ವರೆಗಿದ್ದು ಎಲೆ ಅಗಲ 2 ರಿಂದ 6 ಸೆ. ಮಿ. ವರೆಗೆ ದಾಖಲಿಸಲಾಯಿತು. ಮತ್ತು ಎಲೆಯ ತೊಟ್ಟಿನ ಉದ್ದ 0.5 ರಿಂದ 3.24 ಸೆ. ಮಿ. ವರೆಗೆ ದಾಖಲಿಸಲಾಯಿತು (ಕೋಷ್ಟಕ 2).

ಸಂಬಂಧಗಳ ವೃಕ್ಷಕ ಅನ್ವೇಷಣೆ: ಬಾಹ್ಯ ಅಂಗ ರಚನೆಯ ವಿವಿಧ ಗುಣ ಲಕ್ಷಣಗಳಮೆರೆಗೆ 39 ಮಿಡಿ ಹಾಗೂ 2 ಹಣ್ಣಿನ ಮಾವುಗಳನ್ನು ಗುಂಪು (ವೃಕ್ಷಕ) ವಿಷ್ಲೇಶಣೆ ಮಾಡಿದಾಗ ನಮಗೆ ಎರಡು ಪ್ರಮುಖ ಗುಂಪುಗಳಾಗಿ ಹಂಚಿಕೆ ಯಾಗಿರುವುದನ್ನು ಕಂಡೆವು. ಹಣ್ಣಿನ ಮಾವು ಆದ ಬಾದಾಮಿ ಮತ್ತು ಆಲ್ಫೋನ್ಸೊ ಜೊತೆ ಕೆಲ ಮಿಡಿ ಮಾವುಗಳ ತಳಿಗಳಾದ ಚಿನ್ನಿತೋಟ್, ಅಕ್ಕುಂಜಿ, ಗುಂಡಪ್ಪೆ, ಬಾಲೂರು, ಬಂಡಿಹಳ್ಳ, ಹಾರೆಕೊಪ್ಪಾ, ಮಾಗುಂಡಿ, ದೊಂಬೆಸರ, ತೊಟದೂರು, ಕೆಂಗೇರಿ ಅಪ್ಪೆ, ಧನ್ನಳ್ಳಿ, ಮಾಳಂಜಿ ಅಪ್ಪೆ, ಜೀರಿಗೆ ಅಪ್ಪೆ, ಅಸಲೆಹಳ್ಳ ಸೇರಿ ಒಂದು ಗುಂಪಾದರೆ. ಉಳಿದ ಎಲ್ಲ ಮಿಡಿಮಾವುಗಳಾದ ಆಶಾಡ, ಬಾಳೆಹೊಳೆ, ಬೆಳಗಾವಿ ಉದ್ದ, ಬೆಳಗಾವಿ ದುಂಡ, ಬಿಳಿ ಅಪ್ಪೆ, ಚವಥಿ, ಚಿನ್ನಿತೋಟ್, ಗೊರಿಮನೆ, ಗುಂಡಪ್ಪೆ, ಹಾಲ್ದೋಟ, ಹಾಲುವಳ್ಳಿ, ಇಸ್ಲೂರು ಅಪ್ಪೆ, ಕಡಕೇರಿ ಜೀರಿಗೆ ಅಪ್ಪೆ, ಕಲಕಯಿ, ಕೆಂಚಪ್ಪೆ, ಕೊಣನ ಕಟ್ಟೆ, ಲಕ್ಷಪ್ಪೆ, ಮಗರಮಕ್ಕಿ, ಮಾವಿನ ಕಟ್ಟೆ, ನಾಗರಗಳ ಅಪ್ಪೆ, ನಂದನಗರಾ ಅಪ್ಪೆ, ಪಡಗೋಡು ಅಪ್ಪೆ, ಸಂಪಾಜೇ; ಸಂಗಳಾ, ಸಿರಸಿ ಚೌಡಮ್ಮ, ಸೂಡುರು ಮತ್ತು ತುಡದಗುನಿ ಸೇರಿ ಇನ್ನೊಂದು ಗುಂಪಾಗಿ ಹಂಚಿಕೆ ತೋರಿದವು (ಚಿತ್ರ 1).



ಚಿತ್ರ 1: ಬಾಹ್ಯ ಅಂಗ ರಚನೆಯ ವಿವಿಧ ಗುಣ ಲಕ್ಷಣಗಳಮೆರೆಗೆ ಮಿಡಿಮಾವು ತಳಿಗಳ ಸಂಬಂಧಗಳ ವೃಕ್ಷಕ ಅನ್ವೇಷಣೆ (39 ಮಿಡಿ & 2 ಹಣ್ಣಿನ ಮಾವು; ಮಿಡಿಮಾವು ತಳಿ ಹೆಸರು ಮತ್ತು ಕೋಡ್)

ಕೋಷ್ಟಕ 2: ಅಧ್ಯಯನಕ್ಕೆ ಬಳಸಿದ ವಿವಿಧ ಮಿಡಿಮಾವುಗಳ ಹೆಸರು, ವಿಶ್ಲೇಷಣೆಗೆ ಬಳಸಿದ ಕೋಡ್, ಸ್ಥಳ, ಸರಾಸರಿ ಎಲೆಯ ಉದ್ದ, ಅಗಲ, ತೊಟ್ಟಿನ ಉದ್ದ ಮತ್ತು ಎಲೆಯ ಅನುಪಾತ (ಉದ್ದ/ಅಗಲ).

ಕ್ರಸಂ.	ಮಿಡಿಮಾವು ತಳಿ ಹೆಸರು	ತಳಿ ಹೆಸರು (ಆಂಗ್ಲ ಭಾಷೆಯಲ್ಲಿ)	ವಿಶ್ಲೇಷಣೆ ಕೋಡ್	ಹಂಚಿಕೆ ಪ್ರಮುಖ ಸ್ಥಳ	ಎಲೆಯ ಉದ್ದ	ಎಲೆಯ ಅಗಲ	ತೊಟ್ಟಿನ ಉದ್ದ	ಎಲೆಯ ಅನುಪಾತ
1	ಆಶಾಡ	Aashada	AASH	ಸಿರಸಿ	7.85	2.30	0.55	3.41
2	ಅಕ್ಕುಂಜಿ	Akkunji	AKKU	ಸಿರಸಿ	9.02	2.40	1.04	4.03
3	ಅಸಲೆಹಳ್ಳ	Asalehalla	ASLE	ಚಿಕ್ಕಮಂಗಳೂರು	9.26	2.48	1.18	3.88
4	ಬಾಳೆಹೊಳೆ	Balehole	BHOLE	ಚಿಕ್ಕಮಂಗಳೂರು	10.04	2.54	1.20	3.73
5	ಬಾಲೂರು	Baluru	BELR	ಸಿರಸಿ	10.08	2.62	1.24	3.76
6	ಬಂಡಿಹಳ್ಳ	Bandihalla	BANDI	ಚಿಕ್ಕಮಂಗಳೂರು	10.98	2.66	1.30	3.47
7	ಬೆಳಗಾವಿ ಉದ್ದ	Belgaum Long	BGML	ಬೆಳಗಾವಿ	11.72	2.96	1.32	4.51
8	ಬೆಳಗಾವಿ ದುಂಡ	Belgaum Round	BGMR	ಬೆಳಗಾವಿ	11.82	3.08	1.34	3.60
9	ಬಿಳಿ ಅಪ್ಪೆ	Bili appe	BILI	ಸಿರಸಿ	12.72	3.26	1.40	3.86
10	ಚವಥಿ	Chavathi	CHOW	ಸಿರಸಿ	12.80	3.32	1.52	3.71
11	ಚಿನ್ನಿತೋಟ್	Chinnithota	CHIN	ಸಾಗರ	12.84	3.32	1.52	3.79
12	ಧನ್ನಳ್ಳಿ	Dhannalli	DHAN	ಸಿರಸಿ	13.20	3.34	1.52	4.81
13	ದೊಂಬೆಸರ	Dombesara	DOMB	ಸಾಗರ	13.58	3.42	1.54	3.58
14	ಗೊರಿಮನೆ,	Gorimane	GORI	ಸಾಗರ	13.90	3.46	1.60	4.51
15	ಗುಂಡಪ್ಪೆ	Gundappe	GUND	ಸಿರಸಿ	14.26	3.50	1.64	3.19
16	ಹಾಲ್ದೋಟ	Haldota	HALD	ಸಿರಸಿ	14.40	3.54	1.66	3.97
17	ಹಾಲುವಳ್ಳಿ	Haluvalli	HALU	ಚಿಕ್ಕಮಂಗಳೂರು	14.40	3.68	1.70	3.13
18	ಹಾರೆಕೊಪ್ಪಾ	Harekoppa	HAREK	ಚಿಕ್ಕಮಂಗಳೂರು	14.58	3.69	1.72	2.95
19	ಇಸ್ಲೂರು ಅಪ್ಪೆ	Isloor appe	ISLO	ಸಿರಸಿ	14.78	3.70	1.72	4.22
20	ಜೀರಿಗೆ ಅಪ್ಪೆ	Jeerige appe	JEER	ಸಿರಸಿ	14.94	3.72	1.87	4.28
21	ಕಡಕೇರಿ ಜೀರಿಗೆ ಅಪ್ಪೆ	Kadakeri jeerige	KAD	ಸಿರಸಿ	14.96	3.76	1.88	3.31
22	ಕಲಕಯಿ	Kalkaayi	KALK	ಸಿರಸಿ	15.37	3.80	1.88	3.59
23	ಕೆಂಚಪ್ಪೆ	Kenchappe	KENC	ಸಾಗರ	15.48	3.92	1.90	3.13
24	ಕೆಂಗೇರಿ ಅಪ್ಪೆ	Kengeri appe	KENG	ಸಿರಸಿ	15.50	3.97	1.90	3.82
25	ಕೊಣನ ಕಟ್ಟೆ	Konkankatte	KONK	ಸಾಗರ	15.50	3.98	1.92	3.46
26	ಲಕ್ಷಪ್ಪೆ	Lakshappe	LAKS	ಸಾಗರ	15.64	4.06	1.92	5.34
27	ಮಗರಮಕ್ಕಿ	Magaramakki	MAGR	ಚಿಕ್ಕಮಂಗಳೂರು	15.66	4.07	1.92	3.83
28	ಮಾಗುಂಡಿ	Magundi	MAGU	ಚಿಕ್ಕಮಂಗಳೂರು	15.76	4.08	2.02	4.51
29	ಮಾಳಂಜಿ ಅಪ್ಪೆ	Malangi	MALG	ಸಿರಸಿ	15.78	4.09	2.06	3.87
30	ಮಾವಿನ ಕಟ್ಟೆ	Mavinakatte	MAVK	ಸಿರಸಿ	15.78	4.19	2.06	4.21
31	ನಾಗರಗಳ ಅಪ್ಪೆ	Nagaragala	NAG	ಬೆಳಗಾವಿ	16.05	4.26	2.14	3.95
32	ನಂದನಗರಾ ಅಪ್ಪೆ	Nandangara appe	NADR	ಸಿರಸಿ	16.90	4.30	2.28	4.01
33	ಪಡಗೋಡು ಅಪ್ಪೆ	Padagodu	PADG	ಸಾಗರ	17.02	4.46	2.32	3.95
34	ಸಂಪಾಜೇ	Sampaje	SAMP	ಮಡಿಕೇರಿ	17.38	4.48	2.36	4.70
35	ಸಂಗಳಾ	Sangala appe	SANG	ಸಾಗರ	17.64	4.55	2.66	3.92
36	ಸಿರಸಿ ಚೌಡಮ್ಮ	Sirsi Choudamma	SIRS	ಸಿರಸಿ	17.84	4.64	2.71	4.00
37	ಸೂಡುರು	Suduru	SUDU	ಸಾಗರ	18.22	4.68	2.84	4.55
38	ತೊಟದೂರು	Thotaduru	THOTA	ಚಿಕ್ಕಮಂಗಳೂರು	18.24	4.86	2.90	3.85
39	ತುಡದಗುನಿ	Tudaguni	TUDG	ಸಿರಸಿ	18.44	5.04	2.90	4.13
40	ಅಲ್ಫೇನ್ಸೊ	Alphenso	ALPS					
41	ಬಾದಾಮಿ	Badami	BADM					

ಚರ್ಚೆ: ಬಾಹ್ಯ ಆಂಗ ರಚನೆ ಎಲ್ಲ ಮಾಹಿತಿಯು ಗುಂಪು ವಿಷ್ಲೇಶಣೆಯಿಂದ ತಿಳಿದು ಬಂದ ಅಂಶವೇನೆಂದರೆ ಮಿಡಿ ಮಾವಿನ ತಳಿಗಳು ಗುಣ ಲಕ್ಷಣಗಳಲ್ಲಿ ಹಲವಾರು ವ್ಯತ್ಯಾಸ ಹೊಂದಿದ್ದು ಎರಡು ಗುಂಪುಗಳಾಗಿ ವರ್ಗೀಕರಿಸಲ್ಪಟ್ಟಿವೆ ಹಾಗೂ ಹಣ್ಣಿನ ಮಾವಿಗಿಂತಲೂ ವಿಭಿನ್ನವಾಗಿವೆ. ಮಿಡಿಮಾವುಗಳ ಗುಂಪುಗಾರಿಕೆ ಮತ್ತು ಅವುಗಳ ಭೂ ಪ್ರದೇಶಗಳ ಹಂಚಿಕೆ ನಡುವೆ ಯಾವುದೇ ಸಂಬಂಧ ಕಂಡು ಬರಲಿಲ್ಲ. ಕೆಲ ಮಿಡಿ ಮಾವುಗಳ ತಳಿಗಳು ಒಂದೇ ಪ್ರದೇಶದಿಂದ ಕೂಡಿದ್ದರು ಸಹ ಬೆರೆ ಬೆರೆ ಗುಂಪಿನಲ್ಲಿ ಕಂಡು ಬಂದವು. ಮಿಡಿಮಾವುಗಳ ಗುಂಪುಗಾರಿಕೆ ಬಹುಶಃ ಅವುಗಳ ಅನುವಂಶಿಯ ಗುಣ ಆಧಾರಿತವಾಗಿರಬಹುದು ಅಂತ ನಮ್ಮ ಅಭಿಪ್ರಾಯ. ಈ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನ ನೆರವಾಗಬಹುದು.

ಸಾರಾಂಶ: ಪಶ್ಚಿಮ ಘಟ್ಟದ ಮಿಡಿಮಾವುಗಳಲ್ಲಿ ತುಂಬ ವೈವಿಧ್ಯತೆ ಇದೆ. ಹಲವಾರು ಮಿಡಿಮಾವು ತಳಿಗಳು ಹಣ್ಣಿನ ಮಾವಿಗಿಂತಲೂ ವಿಭಿನ್ನವಾಗಿವೆ ಅಂತ ಗುಂಪು ವಿಷ್ಲೇಶಣೆಯಿಂದ ತಿಳಿದುಬರುತ್ತದೆ. ಜೊತೆಗೆ ಮಿಡಿಮಾವು ತಳಿಗಳು ಒಂದಕ್ಕಿಂತ ಇನ್ನೂಂದು ವಿಭಿನ್ನವಾಗಿದ್ದು, ಅವುಗಳ ಸಂರಕ್ಷಣೆ ಮತ್ತು ಉಪಯುಕ್ತತೆಯ ಮೆರೆಗೆ ಆಯ್ಕೆ ಕಷ್ಟಕರ ಅಂತ ಭಾಸವಾಗುತ್ತದೆ.

ಉಲೇಖಗಳು (ಸೂಚನೆ: ಈ ಎಲ್ಲ ಉಲೇಖಗಳು ಆಂಗ್ಲಭಾಷೆಯಲ್ಲಿ ಪ್ರಕಟಗೊಂಡಿವೆ ಅವುಗಳನ್ನು ತರ್ಜುಮೆ ಮಾಡಿ ಬಳಸಲಾಗಿದೆ):
ಅ.ಸ.ತ.ಸಂ.ಸಂ. 2006. ಮಾವಿನ (ಮ್ಯಾಂಜಿಫೇರಾ ಇಂಡಿಕಾ ಲಿ.) ಗುಣ ಲಕ್ಷಣಗಳು. ಅಂತರಾಷ್ಟ್ರೀಯ ಸಸ್ಯ ತಳಿ ಸಂಪನ್ಮೂಲಗಳ ಸಂಸ್ಥೆ, ರೋಮ್, ಇಟಲಿ.
ಸ್ಟ್ಯಾಟಿಸ್ಟೀಕಾ, 1993. ಬಿಡುಗಡೆ 4.5 ಎಫ್. ಅಂತರಾಷ್ಟ್ರೀಯ ಸಂಖ್ಯಾಶಾಸ್ತ್ರತಂತ್ರಾಂಶ, ಅಮೆರಿಕ.

ನ್ಯೂಕ್ಲಿಯಸ್ ನ ಇ ಟಿ ಎಸ್ ಭಾಗವನ್ನು ಉಪಯೋಗಿಸಿ ಮಾವು ಮತ್ತು ಮಿಡಿ ಮಾವಿನ ನಡುವೆ ಇರುವ ಅನುವಂಶೀಯ ಸಂಬಂಧದ ಅನ್ವೆಶಣೆ

ಚೈತ್ರ ಜಿ. ಎನ್., ಬಿ. ತಾಂಬಟ್ ಮತ್ತು ಚೈತ್ರ ಹೆಚ್. ವ್ಹಿ
ಬೆಳ ಶರೀರ ಕ್ರಿಯಾಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, (ಕೃ,ವಿ.ವಿ.ಬೆಂ.), ಹಾಸನ, ಕರ್ನಾಟಕ.

ಮಾವು ಅನಕಾರ್ಡಿಯೇಸಿ ಎಂಬ ಕುಟುಂಬ ವರ್ಗಕ್ಕೆ ಸೇರಿದ ಒಂದು ಬಹು ಮುಖ್ಯ ಬೆಳೆ. ಹಲವಾರು ಮಾವಿನ ವಿಧಗಳಲ್ಲಿ ಕೆಲವು ತಳಿಗಳನ್ನು ಉಪ್ಪಿನ ಕಾಯಿಗೆಂದೇ ಬಳಸುತ್ತಾರೆ. ಅವುಗಳಲ್ಲಿ ಮುಖ್ಯವಾದುದು ಮಿಡಿಮಾವು. ಕುತೂಹಲವೆಂದರೆ, ಕೃತಕ ರಾಸಾಯನಿಕ ಬಳಸದೆ ಮಿಡಿಮಾವಿನ ಉಪ್ಪಿನಕಾಯಿ ಸುಮಾರು ಮೂರು ವರ್ಷದವರೆಗೆ ಕೆಡದೆ ಹಾಗೆಯೇ ಶೇಖರಿಸಬಹುದು. ಈ ಮಿಡಿ ಸಾಮಾನ್ಯವಾಗಿ ಪಶ್ಚಿಮ ಘಟ್ಟಗಳ ನದಿ ದಡದಲ್ಲಿ ಕಾಣ ಸಿಗುತ್ತವೆ. ಮಿಡಿಮಾವು ವಿಶಿಷ್ಟವಾದ ಸುವಾಸನೆ ಹೊಂದಿದ್ದು, ಇತರೆ ಹಣ್ಣಿನ ಮಾವಿಗೆ ಹೋಲಿಸಿದರೆ ಹೂ, ಕಾಯಿ, ಹಣ್ಣು ಮತ್ತು ಹೊರಗಿನ ಮಾರ್ಪಾಟು ವಿಭಿನ್ನವಾಗಿದೆ. ಆದ್ದರಿಂದ ಅವುಗಳ ಅನುವಂಶೀಯ ಸಂಬಂಧ ಹಾಗೂ ಜೀವ ವೈವಿಧ್ಯತೆಯ ಬಗ್ಗೆ ಮಾಹಿತಿಯು ಈ ಮಿಡಿ ಮಾವಿನ ವಿವಿಧ ತಳಿಗಳನ್ನು ಬೆಳೆಸುವುದಕ್ಕೆ ಹಾಗೂ ಸಂರಕ್ಷಿಸುವ ದೃಷ್ಟಿಯಿಂದ ಮಹತ್ವವುಳ್ಳದ್ದಾಗಿದೆ. ಹಾಗಾಗಿ ನಾವು ಮಿಡಿಮಾವು ಮತ್ತು ಹಣ್ಣಿನ ಮಾವುಗಳ ನಡುವೆ ಇರುವ ಅನುವಂಶೀಯ ಸಂಬಂಧವನ್ನು ಕಂಡು ಹಿಡಿಯುವುದಕ್ಕಾಗಿ ಒಂದು ಪ್ರಯೋಗ ಕೈಗೊಂಡೆವು.

29 ಮಿಡಿ ಮಾವಿನ ತಳಿಗಳನ್ನು ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟದ ವಿವಿಧ ಪ್ರದೇಶಗಳಿಂದ ಸಂಗ್ರಹಿಸಲಾಯಿತು. ಪ್ರತಿ ತಳಿಗಳಿಂದ ಎಲೆಯ ಅಂಗಾಂಶದಿಂದ ವಂಶವಾಹಿನಿ ಅಂಶವನ್ನು ಬೇರ್ಪಡಿಸಲಾಯಿತು. ಈ ವಂಶವಾಹಿನಿಯನ್ನು ಜೀವಕೋಶದ ರೈಬೊಸೋಮ್ ವಂಶವಾಹಿನಿಯ ಇ ಟಿ ಎಸ್ ಭಾಗವನ್ನು ಬಳಸಿ ಪಿ.ಸಿ.ಆರ್. ವರ್ಧನೆಯನ್ನು ಮಾಡಲಾಯಿತು. ಹಾಗೂ ಅಗರೋಸ್ ಮತ್ತು 1 ಕಿ.ಬಿ. ಏಣಿ ಬಳಸಿಕೊಂಡು ಪಿ.ಸಿ.ಆರ್. ವರ್ಧನೆಯನ್ನು ಖಚಿತ ಪಡಿಸಲಾಯಿತು. ನಂತರ ಉತ್ಪನ್ನವನ್ನು ಶುದ್ಧೀಕರಿಸಿ ನೂಕ್ಲಿಕ ಆಮ್ಲದ ಅನುಕ್ರಮಕ್ಕಾಗಿ ಕಳುಹಿಸಲಾಯಿತು. ಬಂದ ಅನುಕ್ರಮಗಳನ್ನು ಮೊದಲು ಕೈಯಾರೆ, ನಂತರ ಗಣಕಯಂತ್ರದ ತಂತ್ರಾಂಶ ಬಳಸಿ ಪ್ರಮಾಣೀಕರಿಸಲಾಯಿತು. ಇತರೆ ಮಾವಲ್ಲದ ಹಾಗೂ ಮಾವಿನ ತಳಿಗಳ ಸರಣಿ (ಅನುಕ್ರಮ) ಗಳನ್ನು ಎನ್ ಸಿ ಬಿ ಐ ತಂತ್ರಾಂಶವನ್ನು ಬಳಸಿಕೊಂಡು ಪಡೆಯಲಾಯಿತು. ಮೆಗಾ 4 ತಂತ್ರಾಂಶದಲ್ಲಿ ಕ್ಲಸ್ಟಲ್ ಡಬ್ಲು ಬಳಸಿ ಇ ಟಿ ಎಸ್ ಭಾಗದ ಅನುಕ್ರಮವನ್ನು ಸಮರೇಖೆ ಮಾಡಿ (ಅಪವರ್ತನೆ) ಎನ್. ಜೆ. ಮರ ಮಾನದಂಡವಾಗಿಟ್ಟುಕೊಂಡು ಜಾತಿವಿಕಸನೀಯ ವಿಶ್ಲೇಷಣೆ ಮಾಡಲಾಯಿತು. ಜಾತಿ ವಿಕಸನೀಯ ಮರದ ವಿಶ್ಲೇಷಣೆಯಿಂದ ತಿಳಿದುಬಂದ ಸಂಗತಿ ಏನೆಂದರೆ, ಒಟ್ಟಾರೆ 29 ಮಿಡಿ ತಳಿಗಳಲ್ಲಿ 28 ಮಿಡಿ ತಳಿಗಳು ಹಣ್ಣು ಮಾವು ಮ್ಯಾಂಜಿಫೆರಾ ಇಂಡಿಕಾ ಜಾತಿಯ ಮಾವಿಗಿಂತ ಹೆಚ್ಚಾಗಿ ಮ್ಯಾಂಜಿಫೆರಾ ಕ್ಯಾಪ್ಟ್ರಿಸ್ಪರ್ಮ ಮತ್ತು ಮ್ಯಾಂಜಿಫೆರಾ ಜೈಲಾನಿಕಾ ಎನ್ನುವ ಜಾತಿಯ ಮಾವಿಗೆ ಹೆಚ್ಚು ಸನಿಹವಾಗಿವೆ. ನಮ್ಮ ಫಲಿತಾಂಶವನ್ನು ವಂಶವಾಹಿಯ ಇತರೆ ಪ್ರಯೋಗ ಹಾಗೂ ಬಾಹ್ಯ ಅಂಗ ರಚನೆ ಅಂಶಗಳನ್ನು ಬಳಸಿ ವಿಶ್ಲೇಷಣೆಯನ್ನು ಬಲಗೊಳಿಸುವ ಅಗತ್ಯ ವಿದೆ.

ಪರಿಚಯ: ಮಾವು (ಮ್ಯಾಂಜಿಫೆರಾ ಇಂಡಿಕ) ಅನಕಾರ್ಡಿಯೇಸಿ ಕುಟುಂಬಕ್ಕೆ ಸೇಧಿದ ಒಂದು ಮುಖ್ಯವಾದ ಹಣ್ಣಿನ ಬೆಳೆ. ಇದು ಸ್ಥಳೀಯವಾಗಿ ಉಷ್ಣವಲಯ ಮತ್ತು ಉಪ-ಉಷ್ಣವಲಯ ಪ್ರದೇಶಕ್ಕೆ ಸೇರಿದ್ದು, ಪೂರ್ವ ಭಾರತ, ಅಸ್ಸಾಂ ಹಾಗು ಬರ್ಮಾದಲ್ಲಿ ಹಲವಾರು ವಿವಿಧ ಜೋಡಿ ವರ್ಣತಂತು ವಂಶೀಯವಾಗಿ (ಆಲ್ಲೊಪಾಲಿಪ್ಲೊಇಡ್) ಹುಟ್ಟಿ ಕೊಂಡಿರಬಹುದು. ಮಾವು ಅನೇಕ ಅನುವಂಶೀಯ ವೈವಿಧ್ಯತೆ ಹೊಂದಿದ್ದು ಪ್ರಪಂಚದಲ್ಲಿ ಒಟ್ಟಾರೆ ಸುಮಾರು 1600 ತಳಿಗಳಿವೆ ಎಂದು ಉಲ್ಲೇಖವಿದೆ. ಭಾರತದಲ್ಲಿ ಮಾವಿನ ಕೃಷಿಯನ್ನು ಸುಮಾರು 400 ವರ್ಷಗಳಿಗಿಂತಲೂ ಹೆಚ್ಚಿನ ಸಮಯದಿಂದ ಮಾಡಲಾಗುತ್ತಿದೆ (ಮುಖರ್ಜಿ 1972). ಮಾವಿನ ವಿಶಿಷ್ಟ ರುಚಿಯಿಂದ ಅದನ್ನು ಶತಮಾನಗಳಿಂದ ಉಪಯೋಗಿಸುತ್ತಿದ್ದಾರೆ. ಮಾವು ರುಚಿಕರವಾದ ಹಣ್ಣಿಗೆ ಹೊರತಾಗಿ ಉಪ್ಪಿನಕಾಯಿಗೂ ಸಹ ಹೆಸರುವಾಸಿಯಾಗಿದೆ.

ಸಾಮಾನ್ಯವಾಗಿ ಉಪ್ಪಿನಕಾಯಿಯನ್ನು ಮಾವಿನ ಹೊಳುಗಳಿಂದ ತಯಾರಿಸುತ್ತಾರೆ. ಆದರೆ ಕೆಲವೊಂದು ಮಾವಿನ ತಳಿಗಳನ್ನು ಇಡಿಯಾಗಿ ಬಳಸಿ ಉಪ್ಪಿನಕಾಯಿಯನ್ನು ತಯಾರಿಸುತ್ತಾರೆ ಅಂತಹ ತಳಿಗಳನ್ನು 'ಮಿಡಿಮಾವು' ಎಂದು ಕರೆಯುತ್ತಾರೆ. ಈ ಮಿಡಿಮಾವು ಮತ್ತು ಅದರ ಉಪ್ಪಿನಕಾಯಿಗಳು ಪಶ್ಚಿಮ ಘಟ್ಟಗಳನ್ನೊಳಗೊಂಡ ಕರ್ನಾಟಕದ ಜಿಲ್ಲೆಗಳಾದ ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಇತರ ಮಲೆನಾಡಿನ ಪ್ರದೇಶಗಲ್ಲಿ ಜನರ ಒಂದು ಪ್ರಮುಖ ಆರ್ಥಿಕ ಮೂಲವಾಗಿದೆ. ಅನೇಕ ಮಿಡಿಮಾವು ತಳಿಗಳು ಆಯಾ ಜಿಲ್ಲೆಗೆ ಅಥವಾ ಪ್ರದೇಶಕ್ಕೆ ಸೀಮಿತವಾಗಿವೆ. ದುರಾದೃಷ್ಟವಶಾತ್ ಅನೇಕ ಮಿಡಿಮಾವು ತಳಿಗಳು ಜನರ ಅತಿಯಾಸೆಯಿಂದಾಗಿ ನಶಿಸುತ್ತಿವೆ. ಅನೇಕ ಕಡೆ ಮಿಡಿಮಾವು ಮರಗಳ ಸಂಖೆ, ಹರಡುವಿಕೆ, ಬೆಳವಣಿಗೆ ಕ್ಷೀಣಿಸುತ್ತಿದೆ. ಹಲವಾರು ತಳಿಗಳು ಅವಸಾನದ ಅಂಚಿನಲ್ಲಿವೆ ಮತ್ತು ಅವುಗಳು ನಶಿಸಿ ಹೋಗುವ ಮುನ್ನ ಅವುಗಳನ್ನು ಸಂರಕ್ಷಿಸುವುದು ಅತ್ಯವಶ್ಯಕ. ಆದರೆ, ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಬೆಳೆಯುವ ಮಿಡಿಮಾವುಗಳ ವಿವಿಧತೆ, ಹಣ್ಣಿನ ಮಾವು ಮತ್ತು ಮಿಡಿಮಾವುಗಳ ನಡುವಿನ ಅಂತರ, ವಿವಿಧ ಮಿಡಿಮಾವುಗಳಲ್ಲಿರುವ ವ್ಯಾತ್ಯಾಸ, ಅನುವಂಶೀಯ ಸಂಬಂಧಗಳ ಮಾಹಿತಿ ಬಗ್ಗೆ ಅಧ್ಯಯನ, ಸಂರಕ್ಷಣೆ ಮತ್ತು ಮಿಡಿಮಾವು ತಳಿಗಳ ಉಪಯೋಗದ ದೃಷ್ಟಿಯಿಂದ ಪೂರ್ವಾಪೇಕ್ಷತೆಯಾಗಿರುತ್ತದೆ. ಹಾಗಾಗಿ, ಮಿಡಿಮಾವುಗಳ ಅನುವಂಶೀಯ ವೈವಿಧ್ಯತೆ, ಮಿಡಿಮಾವು ಜಾತಿಗಳ ಒಳಗೆ ಹಾಗೂ ನಡುವೆ ಇರುವ ಸಂಬಂಧ, ಮಿಡಿ ಮರಗಳ ಸಂಕುಲ ಹಾಗೂ ತಳಿಗಳ ಬಗ್ಗೆ ತಿಳಿಯಲು ಒಂದು ಸಂಶೋಧನೆಯನ್ನು ನಡೆಸಿದೆವು.

ವಸ್ತುಗಳು ಮತ್ತು ವಿಧಾನಗಳು:

ಸಸ್ಯ ವಸ್ತುಗಳು: 30 ವಿವಿಧ ಮಿಡಿಮಾವು ತಳಿಗಳಾದ ಕೆಂಚಪ್ಪೆ, ನಂದನಗರಾ ಅಪ್ಪೆ, ಬೆಳಗಾವಿ ದುಂಡ, ತುಡಗಾಯ್ ಅಪ್ಪೆ, ಕೆಂಗ್ರಪ್ಪೆ, ಗೋರಿಮನೆ, ಶಿರಸಿ ಅಪ್ಪೆ, ದೊಂಬೆಸರ, ಕಲ್ಕಿಂಜಿ, ಮಾಲಂಗಿ, ಚೌಡಪ್ಪೆ, ಮಾಳಂಜಿ ಅಪ್ಪೆ, ಆಶದ ಅಪ್ಪೆ, ಬಿಳಿ ಅಪ್ಪೆ, ಚಿನ್ನಿತೋಟ್, ಗುಂಡಪ್ಪೆ, ಸಂಪಾಜೇ, ಮಾವಿನ ಕಟ್ಟೆ, ನಾಗರಗಳ ಅಪ್ಪೆ, ಹಾಲ್ದೋಟ, ಪಡಗೋಡು ಅಪ್ಪೆ, ಇಸ್ಲೂರು ಅಪ್ಪೆ, ಅಕ್ಕುರಜಿ, ಕಡಕೇರಿ ಜೀರಿಗೆ ಅಪ್ಪೆ, ಸೂಡೂರು, ಕೋಣನ ಕಟ್ಟೆ, ಲಕ್ಷಪ್ಪೆ, ಜೀರಿಗೆ ಅಪ್ಪೆ, ಬೆಳಗಾವಿ ಉದ್ದ, ಬೇಲೂರು, ಮತ್ತು ಧನ್ನಳ್ಳಿ ತಳಿಗಳನ್ನು ಕರ್ನಾಟಕದ ವಿವಿಧ ಭಾಗಗಳಿಂದ ಸಂಗ್ರಹಿಸಲಾಯಿತು. ಎಲ್ಲ ತಳಿಗಳ ವಂಶವಾಹಿನಿಯ ನ್ಯೂಕ್ಲಿಕ ಆಮ್ಲವನ್ನು ಆರೋಗ್ಯಪೂರ್ಣವಾದ (ರೋಗ ಮತ್ತು ಬೆಳವಣಿಗೆ ಕುಂಠಿತವಿಲ್ಲದ) ಎಲೆಯಿಂದ ಪ್ರತ್ಯೇಕಿಸಲಾಯಿತು.

ನ್ಯೂಕ್ಲಿಕ ಆಮ್ಲ ಹೊರತೆಗೆಯುವಿಕೆ: ಸಂಗ್ರಹಿಸಿದ ವಿವಿಧ ಮಿಡಿಮಾವು ತಳಿಗಳ ಎಲೆಯ ನಡುದಿಂಡನ್ನು ತೆಗೆದು, ಎಲೆಯನ್ನು ಸಣ್ಣ ಸಣ್ಣ ತುಂಡುಗಳಾನ್ನಾಗಿ ಕತ್ತರಿಸಿ ಕುಟ್ಟಾಣಿ ಮತ್ತು ಕಲಾಬತ್ತುವಿನಿಂದ ದ್ರವಸಾರಜನಕ ಬಳಸಿ ನುಣುವಾದ ಪುಡಿಯನ್ನು ಮಾಡಲಾಯಿತು. ಸುಮಾರು 500 ಮಿ.ಗ್ರಾಂ ನಷ್ಟು ರುಬ್ಬಿದ ಎಲೆಯ ಪುಡಿಯನ್ನು ಮೊದಲೇ ಬಿಸಿ ಮಾಡಿದ 2% ಸಿ.ಟಿ.ಎ.ಬಿ. ಪ್ರತ್ಯಾಮ್ಲವಿರುವ ಅಪಕೇಂದ್ರಿತ ನಳಿಕೆಯಲ್ಲಿ ಹಾಕಿ 65° ಸೆಲ್ಸಿಯಸ್ ಉಷ್ಣಾಂಶದಲ್ಲಿ ಒಂದು ಗಂಟೆಯವರೆಗೂ ಇರಿಸಲಾಯಿತು ಹಾಗು ಪ್ರತಿ 15–20 ನಿಮಿಷಕ್ಕೊಮ್ಮೆ ನಿಧಾನವಾಗಿ ಮಿಶ್ರಣವನ್ನು ಕುಲುಕಲಾಯಿತು. ನಂತರ ನಳಿಕೆಗಳನ್ನು ತೆಗೆದು ಕೊಠಡಿಯ ಉಷ್ಣಾಂಶಕ್ಕೆ ಬರುವಂತೆ ತಂಪು ಮಾಡಿ ಸಮ ಪ್ರಮಾಣದ ಕ್ಲೋರೋಫಾರಂ: ಐಸೊಅಮೈಲ್ (24:1) ಸೇರಿಸಿ ನಿಧಾನವಾಗಿ ಮಿಶ್ರಣವನ್ನು ಕುಲುಕಿ 10 ನಿಮಿಷ, 10,000 ಆರ್.ಪಿ.ಎಂ ನಲ್ಲಿ ಅಪಕೇಂದ್ರಿಕರಿಸಲಾಯಿತು. ನಳಿಕೆಯ ಮೇಲ್ಭಾಗದ ತಿಳಿ ಮಿಶ್ರಣವನ್ನು ನಿಧಾನವಾಗಿ ಜಾಗರುಕತೆಯಿಂದ ಇನ್ನೊಂದು ನಳಿಕೆಗೆ ವರ್ಗಾಂತರಿಸಲಾಯಿತು. ಆನಂತರ, ಸಮಪ್ರಮಾಣದ ಐಸೊಪ್ರೊಪನಾಲನ್ನು (ಮಂಜುಗಡ್ಡೆಯಷ್ಟು ಶಿಥಲವಿರುವ) ಸೇರಿಸಿ –20° ಸೆಲ್ಸಿಯಸ್‌ನಲ್ಲಿ ಒಂದು ರಾತ್ರಿಯ ಅವಧಿಯವರೆಗೆ ಇಡಲಾಯಿತು. ಮಾರನೆಯ ದಿನ, ತಳದಲ್ಲಿ ತಂಗಿದ್ದ ನ್ಯೂಕ್ಲಿಕ ಆಮ್ಲವನ್ನು 15 ನಿಮಿಷದವರೆಗೆ 10,000 ಆರ್.ಪಿ.ಎಮ್‌ನಲ್ಲಿ ಪುನಃ ಅಪಕೇಂದ್ರಿಸಿ ಆ ಸಮೂಹವನ್ನು 70% ಎಥನಾಲ್‌ನಲ್ಲಿ 2–3 ಬಾರಿ ತೊಳೆದು ನಂತರ ಸಂಪೂರ್ಣವಾಗಿ ಎಥನಾಲ್‌ನ ಕುರುಹುಗಳು ಹೋಗುವವರೆಗೆ ಒಣಗಿಸಲಾಯಿತು. ಆನಂತರ ಒಣಗಿದ ನ್ಯೂಕ್ಲಿಕ್ ಆಮ್ಲವನ್ನು ಟಿ.ಇ. ದ್ರಾವಣದಲ್ಲಿ (ರಸಸಾರ 8.0) ಕರಗಿಸಲಾಯಿತು. ಆನಂತರ, ರೈಬೊ ನ್ಯೂಕ್ಲಿಕ ಆಮ್ಲ ಕರಗಿಸುವ ಕಿಣ್ವಸೇರಿಸಿ ಒಂದು ಗಂಟೆಯವರೆಗೂ 37^0 ಸೆ. ನಲ್ಲಿರಿಸಲಾಯಿತು. ಬಂದಂತಹ ನ್ಯೂಕ್ಲಿಕ್ ಆಮ್ಲದ ಪ್ರಮಾಣ ಮತ್ತು ಗುಣಮಟ್ಟವನ್ನು 1% ಅಗರೋಸ್‌ನ ಅರೆಘನದ್ರವದಲ್ಲಿ ಮತ್ತು ರೋಹಿತದಲ್ಲಿ (ಎ260/ಎ280 ಪ್ರಮಾಣ) ಪರೀಕ್ಷಿಸಲಾಯಿತು.

ಪಾಲಿಮರೇಸ್ ಸರಣಿ ಕ್ರಿಯೆಯ ವರ್ಧನೆಗೆ ಬಳಸಿದ ಪ್ರೈಮರ: ವರ್ಧನೆಗೆ ನಾವು ಅನಕಾರ್ಡಿಯೇಸಿ ಕುಟುಂಬಕ್ಕೆ ವಿನ್ಯಾಸಗೊಳಿಸಿದ ಪರಮಾಣು ರೈಬೋಸೋಮ್ ನ್ಯೂಕ್ಲಿಕ್ ಆಮ್ಲದ ಹೊರಗಿನ ನಕಲು ಪ್ರದೇಶದ ಪ್ರೈಮರ್ ಜೋಡಿ ಇ.ಟಿ.ಎಸ್ 1ಎಫ್ ಮತ್ತು 18 ಎಸ್–ಐ.ಜಿ.ಎಸ್‌ನ್ನು ಉಪಯೋಗಿಸಿದೆವು (ಚಿತ್ರ 1). ಪ್ರತ್ಯೇಕಿಸಲಾದ ಮಿಡಿ ಮಾವು ತಳಿಗಳ ನ್ಯೂಕ್ಲಿಕ್ ಆಮ್ಲವನ್ನು ಪ್ರೈಮರ್ ಜೋಡಿ ಇ.ಟಿ.ಎಸ್ 1ಎಫ್ ಮತ್ತು 18 ಎಸ್–ಐ.ಜಿ.ಎಸ್‌ನ್ನು ಉಪಯೋಗಿಸಿ ಎ.ಬಿ.ಐ ವೆರಿಟಿ ಎಂಬ ಥರ್ಮೊ ಸೈಕ್ಲರ್‌ನಿಂದ ವರ್ಧಿಸಲಾಯಿತು (ಕೋಷ್ಟಕ 1).



ಚಿತ್ರ 1: ಪಾಲಿಮರೇಸ್ ಸರಣಿ ಕ್ರಿಯೆಯ ವರ್ಧನೆಗೆ ಬಳಸಿದ ನೂಕ್ಲೀಯರ ವಂಶವಾಹಿನಿಯ ಭಾಗ (ನಾವು ಬಳಸಿ ಭಾಗವನ್ನು ಬುದೂ ಬಣ್ಣದಿಂದ ಗುರುತಿಸಲಾಗಿದೆ).

ಕೋಷ್ಟಕ 1: ಇ.ಟಿ.ಎಸ್. ಪ್ರೈಮರ್‌ನ (ಆರಂಭಿಕ ಅನುಕ್ರಮ) ಅನುಕ್ರಮ

ಕ್ರ ಸಂ	ಪ್ರೈಮರ್	ಆರಂಭಿಕ ಅನುಕ್ರಮಗಳು (ಬೆಸಸ್)
1	ಇ.ಟಿ.ಎಸ್.ಎಫ್	ಟಿಟಿಸಿಜಿಜಿಟಿಎಟಿಸಿಸಿಟಿಜಿಟಿಜಿಟಿ ಟಿಜಿಸಿಟಿಟಿಎಸಿ
2	18ಎಸ್.1ಜಿ.ಎಸ್	ಜಿಎಜಿಎಸಿಎಎಜಿಸಿಎಟಿಎಟಿಜಿಎ ಸಿಟಿಎಸಿಟಿಜಿಜಿಸಿಎಜಿಜಿಎಟಿಸಿ ಎಎಸಿಸಿಎಜಿ

ಇ.ಟಿ.ಎಸ್ ಈ ಕೆಳಗಿನ ಉಷ್ಣಆವರ್ತನಿಯತಾಂಕಗಳನ್ನು ಉಪಯೋಗಿಸಲಾಯಿತು: ಸ್ವಭಾವ ಹರಣ 94° ಸೆ ನಲ್ಲಿ 3 ನಿಮಿಷ ನಂತರ, 40 ಸೆಕೆಂಡ್‌ಗಳ ಕಾಲ 94° ಸೆ ನಲ್ಲಿ, 50 ಸೆಕೆಂಡ್‌ಗಳ ಕಾಲ 50° ಸೆ ನಲ್ಲಿ, ಒಂದು ನಿಮಿಷ 72° ಸೆ ನಲ್ಲಿ ಒಟ್ಟು 35 ಆವರ್ತಗಳು ಮತ್ತು 10 ನಿಮಿಷ 72 ° ಸೆ ನಲ್ಲಿ ವಿಸ್ತರಣೆ. ವರ್ಧಿತ ಪಾಲಿಮರೇಸ್ ಸರಣಿ ಕ್ರಿಯೆಯ ಉತ್ಪನ್ನಗಳನ್ನು 2% ಅಗರೊಸ್ ಅರೆ ಘನರೂಪದ ದ್ರಾವಣ ಬಳಸಿ ದೃಷ್ಟಿ ಪ್ರಮಾಣೀಕರಿಸಲಾಯಿತು ವರ್ಧಿತ ತುಣುಕುಗಳನ್ನು ಅತಿ ನೇರಳೆ ಬೆಳಕು ಬಳಸಿ ಜೆಲ್ ಸಾಕ್ಷ್ಯಸಂಕಲನ ವ್ಯವಸ್ಥೆಯಲ್ಲಿ ಛಾಯಾಚಿತ್ರ ದಾಖಲೆ ಮಾಡಲಾಯಿತು.

ಅನುಕ್ರಮಗಳು ಮತ್ತು ವಿಶ್ಲೇಷಣೆ: ಎಲ್ಲ ಮಿಡಿಮಾವು ತಳಿಗಳ ವರ್ಧಿತವಾಗಿರುವ ನ್ಯೂಕ್ಲಿಕ್ ಆಮ್ಲದ ಉತ್ಪನ್ನಗಳನ್ನು ಮೊದಲು ಅಗರೋಸ್ ಜೆಲ್‌ನಲ್ಲಿ ಪರಿಶೀಲಿಸಿ (ಒಂದೇ ಒಂದು ಪಟ್ಟಿ ಬಂದಿರುದಾಗಿ ಖಚಿತ ಪಡಿಸುವುದು) ನಂತರ ಅನುಕ್ರಮಕ್ಕಾಗಿ ಯೂರೋಫಿನ್ಸ್ ಪ್ರೈ. ಲಿ. ಬೆಂಗಳೂರು ಇವರಿಗೆ ಕಳುಹಿಸಲಾಯಿತು. ಅವರಿಂದ ಬಂದಂತಹ ಅನುಕ್ರಮಗಳನ್ನು ಮೊದಲು ಕಣ್ಣಾರೆ ಪರಿಶೀಲಿಸಿ ನಂತರ ಗಣಕಯಂತ್ರ ತಂತ್ರಾಂಶ ಬಳಸಿ ಪ್ರಮಾಣೀಕರಿಸ ಲಾಯಿತು. ವಿಶ್ಲೇಷಣೆಗೋಸ್ಕರ ಮಾವಿನ ಜಾತಿಯ ಮ್ಯಾಂಜಿಫೆರಾ ಇಂಡಿಕಾ (ರಸಪೂರಿ, ಆಲ್ಫಾನ್ಸೊ), ಮ್ಯಾಂಜಿಫೆರಾ ಒಡೊರೆಟ, ಮ್ಯಾಂಜಿಫೆರಾ ಗ್ರಿಫಿತ್ತಿ, ಮ್ಯಾಂಜಿಫೆರಾ ಕ್ಯಾಮ್ಬೋಸ್ಪರ್ಮಾ ಜೊತೆಗೆ, ಮಾವಲ್ಲದ ಇತರೆ ಹೊರ ಜಾತಿಯ ಮರಗಳಾದ ಟ್ರೈಕೊಸ್ಸಿಫಾ ಅಕ್ಯುಮಿನೆಟ್, ಟ್ರೆಕೊಸಿದಾ ಉಲುಗುರೆನ್ಸಿಸ್ ಮತ್ತು ಬರ್ಸರಾ ಫಾಗರೈಡಿಸ್‌ಗಳ ಇ.ಟಿ.ಎಸ್ ಭಾಗದ ಅನುಕ್ರಮಗಳನ್ನು (ಸರಣಿಗಳನ್ನು) ಎನ್.ಸಿ.ಬಿ.ಐ ಹುಡುಕು ಉಪಕರಣ ಬಳಸಿಕೊಂಡು ಪಡೆಯಲಾಯಿತು (ಡೌನಲೋಡ್ ಮಾಡಲಾಯಿತು). ಮೆಗಾ 4 ತಂತ್ರಾಂಶದಲ್ಲಿ ಕ್ಲಸ್ಟಲ್ ಡಬ್ಲ್ಯು ಬಳಸಿ ಎಲ್ಲ ಮಾವುಗಳ ಇ.ಟಿ.ಎಸ್ ಭಾಗದ ಅನುಕ್ರಮಗಳನ್ನು ಸಮರೇಖೆ ಮಾಡಿ ಜೋಡಿಸಲಾಯಿತು. ಆನಂತರ, ಎನ್.ಜೆ. ಮರ ಮಾನದಂಡವಾಗಿ ಮಾಡಿ ಜಾತಿ ವಿಕಸನೀಯ ವಿಶ್ಲೇಷಣೆ ಮಾಡಲಾಯಿತು.

ಫಲಿತಾಂಶಗಳು: ಪ್ರೈಮರ್ ಜೋಡಿ ಇ.ಟಿ.ಎಸ್ 1ಎಫ್ ಮತ್ತು 18 ಎಸ್–ಐ.ಜಿ.ಎಸ್‌ನ್ನು ಬಳಸಿ, 29 ವಿವಿಧ ಮಿಡಿಮಾವುಗಳ ನ್ಯೂಕ್ಲಿಕ್ ಆಮ್ಲದ ಭಾಗವನ್ನು ಥರ್ಮೊಸೈಕ್ಲರ್ ಸಹಾಯದಿಂದ ವರ್ಧಿಸಲಾಯಿತು. ಬಂದಿರುವ, ಉತ್ಪನ್ನ ಇ.ಟಿ.ಎಸ್.ನದೇ (500 ಬೆಸಸ್) ಭಾಗವೆಂದು ಖಚಿತಪಡಿಸಲಾಯಿತು (ಚಿತ್ರ 2).



ಚಿತ್ರ 2: ಪ್ರೈಮರ್ ಜೋಡಿ ಇ.ಟಿ.ಎಸ್ 1ಎಫ್ ಮತ್ತು 18 ಎಸ್ ಐ.ಜಿ.ಎಸ್‌ನ್ನು ಉಪಯೋಗಿಸಿ ವರ್ಧಿಸಲಾದ ನ್ಯೂಕ್ಲಿಕ್ ಆಮ್ಲದ ತುಣುಕುಗಳು (1 ರಿಂದ 6, ಕೊನೆಯದು 1 ಕಿ.ಬೆ ಎಣೆ)

ಆನಂತರ, ಎಲ್ಲ ಮಾವಿನ ತಳಿಗಳ (ಮಿಡಿ ಮಾವು, ಇತರ ಮಾವು ಹಾಗು ಇತರ ಜಾತಿಯ ಮರಗಳ) ಇ.ಟಿ.ಎಸ್ ಭಾಗದ ಅನುಕ್ರಮ ಗಳನ್ನು ಬಳಸಿಕೊಂಡು ಮೆಗಾ 4 ತಂತ್ರಾಂಶದ ಸಹಾಯದಿಂದ ಜಾತಿ ವಿಕಸನೀಯ ವಿಶ್ಲೇಷಣೆ ಮಾಡಲಾಯಿತು. ಜಾತಿ ವಿಕಸನೀಯ ಮರದ ವಿಶ್ಲೇಷಣೆಯಿಂದ ತಿಳಿದು ಬಂದ ಸಂಗತಿಯೇನೆಂದರೆ, ಕೆಲ ಮಿಡಿಮಾವುಗಳಾದ ನಂದನಗರಾ, ಲಕ್ಷಪ್ಪೆ, ತುಡಗುನಿ, ಚೆನ್ನಿತೋಟ್, ಗೋರಿಮನೆ, ಶಿರಸಿ, ದೊಂಬೆಸರ, ಗುಂಡಪ್ಪೆ ಮತ್ತು ಕೆಂಗ್ರಪ್ಪೆ ಒಂದು ಗುಂಪು. ಮಾಲಂಗಿ ಮತ್ತು ಚೌಡಪ್ಪೆ ಇನ್ನೊಂದು ಗುಂಪು, ಸೂಡೂರು, ಸಂಪಾಜೇ, ಕೋಣನ ಕಟ್ಟೆ ಮತ್ತು ಕೆಂಚಪ್ಪೆ ಮಗದೊಂದು ಗುಂಪುಗಳಾಗಿ ತೋರಿದವು. ಒಟ್ಟಾರೆ ನೋಡಿದರೆ ನಾವು ಅಧ್ಯಯನಕ್ಕೆ ಬಳಸಿದ ಮಿಡಿ ಮಾವುಗಳು ಒಂದಕ್ಕೊಂದು ಹತ್ತಿರದ ಸಂಬಂಧ ಹೊಂದಿವೆ. ಮತ್ತು ಇತರ ಜಾತಿಯ ಮಾವುಗಳ ಜೊತೆ ಸಮಾನಾಂತರ ಹೊಂದಿವೆ. ಇನ್ನೊಂದು ವಿಶೇಷ ವೆನೆಂದರೆ, ಹಣ್ಣಿನ ಮಾವು ಆದ ಮಾಂಜಿಫೆರಾ ಇಂಡಿಕ (ತಳಿಗಳು: ರಸಪುರಿ, ಆಲ್ಫಾನ್ಸೊ) ಮಿಡಿಮಾವಿಗಿಂತಲೂ ಮಾಂಜಿಫೆರಾ ಗ್ರಿಫತ್ತಿ ಅನ್ನೋ ಜಾತಿಯ ಮಾವಿಗೆ ತುಂಬ ಹತ್ತಿರವಿದೆ. ಇತರ ಜಾತಿಯ ಟ್ರೈಕೊಸ್ಸಿಫಾ ಅಕ್ಯುಮಿನೆಟ್, ಟ್ರೆಕೊಸಿದಾ ಉಲುಗುರೆನ್ಸಿಸ್ ಮತ್ತು ಬರ್ಸರಾ ಫಾಗರೈಡಿಸ್ ಮಾವಿನ ಗುಂಪಿನಿಂದ ಹೊರತಾಗಿ ಕಂಡವು (ಚಿತ್ರ 3).



ಚಿತ್ರ 3: ಪರಮಾಣು ರೈಬೊಸೋಮ್‌ನ ಇ.ಟಿ.ಎಸ್ ಭಾಗವನ್ನು ಉಪಯೋಗಿಸಿ ಮಿಡಿ ಮಾವು ಹಾಗೂ ಹಣ್ಣಿನ ಮಾವುಗಳಿಗಿರುವ ಸಂಬಂಧ ಸೂಚಿಸುವ ಜಾತಿವಿಕಸನೀಯ ಮರ.

ಚರ್ಚೆ: ವರ್ಣತಂತು ಗುರುತುಗಳನ್ನು ಗುರುತು ನೆರವಿನ ಆಯ್ಕೆಯಲ್ಲಿ ಮತ್ತು ಮಾವಿನ ತಳಿ ಅಭಿವೃದ್ಧಿಪಡಿಸುವ ಕಾರ್ಯಕ್ರಮದಲ್ಲಿ ತಳಿಯನ್ನು ಗುರುತಿಸುವುದಕ್ಕೆ, ಜೀವದ್ರವ್ಯ ಸಂಗ್ರಹಣೆ, ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಉಪಯೋಗಿಸಬಹುದು. ಈ ವರ್ಣತಂತು ಗುರುತುಗಳು ಸಾಮಾನ್ಯವಾಗಿ ಬದಲಾವಣೆ ಹೊಂದುವ ಅಸಂಖ್ಯಾತ ಪುನರಾವರ್ತಿತ ಅನುಕ್ರಮಗಳು (ಅಡಾಟೊ ಇತರರು., 1995), ಯಾದೃಚ್ಛಿಕವಾಗಿ ವರ್ಧಿತ ಬಹುರೂಪಿ ವರ್ಣತಂತು (ಆರ್.ಎ.ಪಿ.ಡಿ) (ಸ್ಕೆಲ್ಲ್ ಮತ್ತು ನೈಟ್, 1992; ಫಿಟ್ಮಾವಟಿ ಇತರರು., 2010; ಸೌಜ಼ ಇತರರು 2011), ಒಂದೇ ಅನುಕ್ರಮ ಪುನರಾವರ್ತಿ (ಎಸ್.ಎಸ್.ಆರ್) (ಬೇಗಂ ಇತರರು., 2012), ವರ್ಧಿತ ತುಣುಕು ಉದ್ದ ಬಹುರೂಪಿ (ಎ.ಎಫ್.ಎಲ್.ಪಿ)(ಯಮನಕ ಇತರರು 2006) ಮತ್ತು ಅಂತರ ಸರಳ ಅನುಕ್ರಮ ಪುನರಾವರ್ತನೆಗಳು (ಐ.ಎಸ್.ಎಸ್. ಆರ್). ಈ ಪರಮಾಣುಗಳ ಕುರುಹುಗಳ ಜೊತೆಗೆ ಪತ್ರ ಹರಿತ್ತುವಿನ ವಂಶವಾಹಿನಿ ಮತ್ತು ವಂಶವಾಹಿಗಳ ವಿಭಾಜಿತ ಪ್ರದೇಶಗಳನ್ನೂ (ಆರ್.ಪಿ.ಎಲ್ 20–ಆರ್.ಪಿ.ಎಸ್ 12) ಮಾವಿನ ತಳಿಗಳನ್ನು ಪರಮಾಣು ವಿಧಾನದಿಂದ ಗುರುತಿಸಲು ಉಪಯೋಗಿಸು ತ್ತಾರೆ. ಅನುವಾದಿತವಲ್ಲದ ಪ್ರದೇಶಗಳಾದ ವಂಶವಾಹಿಗಳ ವಿಭಜಿತ ಪ್ರದೇಶ ಮತ್ತು ವಂಶವಾಹಿಗಳ ನಡುವೆ ಇರುವ ಅನುವಾದಿತವಲ್ಲದ ನ್ಯೂಕ್ಲೆಕ ಆಮ್ಲ ಇದು ಪರಿವರ್ತನೆಯ ಮುಖ್ಯ ತಾಣವಾಗಿದ್ದು ಇವುಗಳ ಉಪಯೋಗದಿಂದ ತನ್ನ ಮತ್ತು ಭಿನ್ನ ಜಾತಿಯ ಮಧ್ಯೆ ಇರುವ ವೈವಿಧ್ಯತೆಯನ್ನು ಪತ್ತೆ ಹಚ್ಚುವಲ್ಲಿ ಅನುಕೂಲಕರ ಮೂಲವನ್ನು ಒದಗಿಸುತ್ತದೆ ಅನುವಾದಿತವಲ್ಲದ ನ್ಯೂಕ್ಲೆಕ ಆಮ್ಲಗಳ ಅನುಕ್ರಮ ವಿಶ್ಲೇಷಣೆಯನ್ನು ಅನೇಕ ಕಾಡು ಮರಗಳ ಜಾತಿ ಹಾಗೂ ತಳಿಗಳನ್ನು ಗುರುತಿಸಲು ಉಪಯೋಗಿಸಲಾಗುತ್ತದೆ. ಪರಮಾಣು ರೈಬೊಸೋಮ್ ನ್ಯೂಕ್ಲೆಕ್ ಆಮ್ಲದ ಬಾಹ್ಯನಕಲು ಪ್ರದೇಶ (ಇ.ಟಿ.ಎಸ್) ಒಂದು ಮುಖ್ಯವಾದ ಅನುವಾದಿತವಲ್ಲದ ಪ್ರದೇಶ ಮತ್ತು ಇದು ಐ.ಟಿ.ಎಸ್‌ನ ಅದೇ ಮೂಲಕ್ಕೆ ಸೇರಿದ್ದು ಹೆಚ್ಚಿನ ಪ್ರತಿಗಳನ್ನು ಹೊಂದಿರುತ್ತದೆ. ಹಿಂದಿನ ಅಧ್ಯಯನಗಳ ಪ್ರಕಾರ ಐ.ಟಿ.ಎಸ್ ಪ್ರದೇಶ ಹೆಚ್ಚು ವೈವಿಧ್ಯಮಯವಾಗಿದ್ದು ಅದು ಜೀವವಿಕಸನದಲ್ಲಿ ಹೆಚ್ಚಿನ ಮಾಹಿತಿಯುಳ್ಳದ್ದಾಗಿದೆ, ಅದರೆ ಇ.ಟಿ.ಎಸ್ ಪ್ರದೇಶ ತುಂಬಾ ವೈವಿಧ್ಯಮಯವಾದ ಪ್ರದೇಶದಿಂದ ಸುತ್ತುವರಿಯಲ್ಪ ಪಟ್ಟಿರುವುದ ರಿಂದ ಹಾಗೂ ಸಾರ್ವತ್ರಿಕ ಪ್ರೈಮರ್ ಲಭ್ಯವಿಲ್ಲದ ಕಾರಣ ಈ ಪ್ರದೇಶದ ಸರಣಿ ಕ್ರಿಯೆ ಹಾಗು ಅನುಕ್ರಮ ಅಧ್ಯಯನ ಕಷ್ಟಸಾಧ್ಯ, ಹಾಗಾಗಿ ಇದನ್ನು ಐ.ಟಿ.ಎಸ್‌ನಂತೆ ವ್ಯಾಪಕವಾಗಿ ಬಳಸಲಾಗುತ್ತಿಲ್ಲ. ಈ ನಮ್ಮ ಅಧ್ಯಯನದಲ್ಲಿ ನಾವು ಪರಮಾಣು ರೈಬೊಸೋಮ್ ನ್ಯೂಕ್ಲೆಕ ಆಮ್ಲದ ಹೊರಗಿನ ನಕಲು ಪ್ರದೇಶದ ಅನುಕ್ರಮಗಳ ಪ್ರಯೋಜನವನ್ನು ಕರ್ನಾಟಕದ ವಿವಿಧ ಭಾಗಗಳಿಂದ ಸಂಗ್ರಹಿಸಿದ ಮಿಡಿಮಾವಿನ ತಳಿಗಳನ್ನು ಗುರುತಿಸುವುದಕ್ಕಾಗಿ ಬಳಸಿದ್ದೇವೆ.

ಇ.ಟಿ.ಎಸ್ ಭಾಗದ ಅನುಕ್ರಮಗಳನ್ನು ಬಳಸಿಕೊಂಡು ಮೆಗಾ 4 ತಂತ್ರಾಂಶದ ಸಹಾಯದಿಂದ ಜಾತಿ ವಿಕಸನೀಯ ವಿಶ್ಲೇಷಣೆ ಮಾಡಿದಾಗ, ಕಂಡು ಬಂದ ವಿಷಯವೆನೆಂದರೆ, ಮಿಡಿಮಾವು (29 ಜಾತಿಯ) ಮಾವಿನ ಜಾತಿಯ ಮರಗಳಾದ ಮಾಂಜಿಫೆರಾ ಒಡೊರೆಟಾ, ಮಾಂಜಿಫೆರಾ ಕ್ಯಾಂಪ್ಟೊಸ್ಪರ್ಮಾ, ಮಾಂಜಿಫೆರಾ ಇಂಡಿಕ (ತಳಿಗಳು: ರಸಪುರಿ, ಆಲ್‌ಫಾನ್ಸೊ) ಮತ್ತು ಮಾಂಜಿಫೆರಾ ಗ್ರಿಫಿತ್ತಿಯ ಜೊತೆ ಸಮಾನಾಂತರದಲ್ಲಿದೆ. ವಾಸ್ತವವಾಗಿ ನೋಡಿದರೆ, ಹಣ್ಣಿನ ಮಾವಾದ ಮಾಂಜಿಫೆರಾ ಇಂಡಿಕ ಮಿಡಿಮಾವಿಗಿಂತಲೂ ಇನ್ನೊಂದು ಜಾತಿಯ ಮಾವು ಮಾಂಜಿಫೆರಾ ಗ್ರಿಫಿತ್ತಿಗೆ ತುಂಬ ಹತ್ತಿರವಾಗಿದೆ. ಮತ್ತೊಂದು ರೀತಿ ನೋಡಿದರೆ ಮಿಡಿಮಾವು ತಳಿಗಳು ಸಾಮಾನ್ಯ ಹಣ್ಣಿನ ಮಾವಿಗಿಂತ ಬೇರೆ ದೇಶದ ಮಾವಿಗೆ ಹತ್ತಿರವಾಗಿದೆ. ಹಾಗಾಗಿ, ಮಿಡಿ ಮಾವು ಮಾಂಜಿಫೆರಾ ಇಂಡಿಕ ಅಲ್ಲದೇ ಬೇರೆ ತಳಿ ಇರಬಹುದೇ ಎಂಬ ಮಾತು ಪ್ರಬಲವಾಗುತ್ತದೆ. ಈ ರೀತಿಯ ಇತರ ಸಂಶೋಧನೆಗಳಿಂದ ಮಿಡಿ ಮಾವು ಬೇರೆ ಜಾತಿಯ ಮರ ಹೌದೋ ಅಲ್ಲವೋ ಅನ್ನೋದನ್ನ ಖಚಿತ ಪಡಿಸಬಹುದು.

ಸಾರಾಂಶ: ಕೊನೆಯುದಾಗಿ ನಮ್ಮ ಅಧ್ಯಯನದ ಮುಖ್ಯ ಸಾರಾಂಶವೆನೆಂದರೆ, ಮಿಡಿ ಮಾವು ಮಾಂಜಿಫೆರಾ ಇಂಡಿಕ ಅಲ್ಲದೇನೆ ಬೇರೆ ತಳಿ ಇರಬಹುದು. ನಮ್ಮ ಅಧ್ಯಯನದ ಜೊತೆ, ಇತರ ಸಂಶೋಧನೆಗಳಿಂದ ಮಿಡಿ ಮಾವುಗಳ ಬಗ್ಗೆ ಹೆಚ್ಚಿನ ವಿಷಯ ತಿಳಿದು ಮಿಡಿಮಾವು ಬೇರೆ ಜಾತಿಯ ಮಾವಿನ ಮರ ಹೌದೋ ಅಲ್ಲವೋ ಅನ್ನೋದನ್ನ ಖಚಿತ ಪಡಿಸಬಹುದು.

ಧನ್ಯವಾದಗಳು: ಆರ್ಥಿಕ ನೆರವು ನೀಡಿದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಭಾರತ ಸರ್ಕಾರ, ಹೊಸ ದೆಹಲಿ ಹಾಗೂ ಡಾ ಡಿ ಇಸ್ ಕೊಥಾರಿ ಡಾಕ್ಟರೇಟ್ ಪದವಿ ನಂತರದ ಫೆಲೋಶಿಪ್ ಯೋಜನೆ, ವಿಶ್ವವಿದ್ಯಾನಿಲಯಗಳ ಅನುದಾನ ಆಯೋಗ, ಹೊಸ ದೆಹಲಿ. ಅಧ್ಯಯನಕ್ಕೆ ಅನುಮತಿ ನೀಡಿದ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷೇಶ ಧನ್ಯವಾದಗಳು.

ಉಲ್ಲೇಖಗಳು (ಸೂಚನೆ: ಈ ಎಲ್ಲ ಉಲೇಖಗಳು ಆಂಗ್ಲಭಾಷೆಯಲ್ಲಿ ಪ್ರಕಟಗೊಂಡಿವೆ ಅವುಗಳನ್ನು ತರ್ಜುಮೆ ಮಾಡಿ ಬಳಸಲಾಗಿದೆ):

ಅಡಾಟೊ ಎ., ಶರೊನ್ ಡಿ., ಲಾವಿ ಯು., ಹಿಲೆಲ್ ಐ. ಮತ್ತು ಗಾಜಿಟ್ ಎಸ್. (1995). ನ್ಯೂಕ್ಲಿಕ್ ಆಮ್ಲದ ಬೆರಳಗುರುತುಗಳನ್ನು ಉಪಯೋಗಿಸಿ ಮ್ಯಾಂಜಿಫೆರಾ ಇಂಡಿಕಾ ತಳಿಗಳ ಅನುವಂಶೀಯ ವಿಶ್ಲೇಷಣೆ. ಜರ್ನಲ್ ಆಫ್ ಅಮೆರಿಕನ್ ಸೊಸೈಟಿ ಆಫ್ ಹಾರ್ಟಿಕಲ್ಚರಲ್ ಸೈನ್ಸ್. 120, 259–264.

ಫಿಟ್‌ಮಾವಟಿ, ಹಾರ್ಟಿನಾ ಎ. ಮತ್ತು ಪುರವಾಕೂ ಬಿ. (2010). ಬಾಹ್ಯ ಅಂಗರಚನೆ ಮತ್ತು ಆರ್.ಎ.ಪಿ.ಡಿ. ಗುರುತುಗಳ ಆಧಾರದ ಮೇಲೆ ಇಂಡೋನೇಶಿಯಾ ಮಾವುಗಳ (ಮ್ಯಾಂಜಿಫೆರಾ ಇಂಡಿಕಾ) ವೈವಿಧ್ಯತೆ.

ಸ್ಕೆನೆಲ್ ಆರ್. ಜೆ ಮತ್ತು ನೈಟ್ ಆರ್. ಜೆ., (1993). ಆರ್.ಎ.ಪಿ.ಡಿ. ಅಧ್ಯಯನದ ಮೂಲಕ ಮಾವಿನ ಜಾತಿಗಳ ಮಧ್ಯೆ ಇರುವ ಅನುವಂಶೀಯ ಸಂಬಂಧ. ಆಕ್ಟ ಹಾರ್ಟಿ., 341, 86–91.

ಸೌಜ಼ ಐ.ಜಿ.ಬಿ., ವೆರೆಂಟೆ ಎಸ್.ಇ.ಎಸ್., ಬ್ರಿಟ್ಟೊ ಎಫ್.ಬಿ., ಡಿಸೌಜ಼ ಎ.ಎ.ಬಿ., ಲಿಮಾ ಸೌಜ಼ ಪಿ.ಎಸ್.ಸಿ. (2011). ಆರ್.ಎ.ಪಿ.ಡಿ ಅಧ್ಯಯನದ ಮೂಲಕ ಬ್ರೆಜ಼ಿಲ್ ಮಾವಿನ (ಮ್ಯಾಂಜಿಫೆರಾ ಇಂಡಿಕಾ) ಅನುವಂಶೀಯ ವೈವಿಧ್ಯತೆ. ಜೆನೆಟಿಕ್ಸ್ ಮತ್ತು ಮಾಲಿಕ್ಯುಲರ್ ರಿಸರ್ಚ್. 10(4), 3080–3089.

ಮುಖರ್ಜಿ ಎಸ್.ಕೆ. (1992). ಮಾವಿನ ಉಗಮ. ಎಕನಾಮಿಕ್ ಬಾಟನಿ. 26: 260–264.

ನೌಕಿ ಯಮನಕ., ಮಸೋಮ್ ಹಾಸನ್., ಡಾಂಗ್ ಹೆಕ್ಸೋ., ಹಿರೋಶಿ ಸುನೆಮತ್ಸು., ಸಲ್ಮಾ ಇಡ್ರಿಸ್ ಮತ್ತು ಟೋಮೊಹಿರೋ ಬ್ಯಾನ. (2006). ಎ.ಎಫ್.ಎಲ್.ಪಿ ಅಧ್ಯಯನದ ಮೂಲಕ ನಾಲ್ಕು

ಮಾವಿನ ಜಾತಿಗಳಲ್ಲಿನ ಅನುವಂಶೀಯ ಸಂಬಂಧ ಹಾಗು ವೈವಿಧ್ಯತೆ. ಜೆನೆಟಿಕ್ ರಿಸೋರ್ಸ ಮತ್ತು ಕ್ರಾಪ್ ಎವಲ್ಯೂಶನ್. ಸಂಪುಟ 53(5): 949–954.

ಬೆಗಂ ಹೆಚ್., ರೆಡ್ಡಿ ಎಂ.ಟಿ., ಮಾಲತಿ ಎಸ್., ರೆಡ್ಡಿ ಬಿ.ಪಿ., ಸುನಿಲ್ ಎ., ನಾಗರಾಜು ಜೆ., ಸಿದಿಖ್ ಬಿ.ಎ. (2012). ಪರಮಾಣು ಅಧ್ಯಯನದ ಮೂಲಕ ಭಾರತದ ಆಂಧ್ರಪ್ರದೇಶದ ಸಾಂಪ್ರದಾಯಿಕವಾಗಿ ಪ್ರಮುಖ್ಯವಾದ ಮಾವುಗಳ ಅನುವಂಶೀಯ ಸಂಬಂಧ ಮತ್ತು ಗುಣ ವಿಶೇಷ. ಅಸ್ಸಾಂ ಮತ್ತು ಆಸ್ಟ್ರೇಲಿಯನ್ ಜರ್ನಲ್ ಆಫ್ ಪ್ಲಾಂಟ್ ಸೈನ್ಸ್ ಮತ್ತು ಬಯೋಟೆಕ್ನಾಲಜಿ, 6(1), 24–37.

ಬದನೆ ಸಸ್ಯದಲ್ಲಿನ ಬ್ಯಾಕ್ಟೀರಿಯಾ ಸೊರಗು ರೋಗ ಮತ್ತು ಅದರ ತಡೆಯುವಿಕೆ

ಅವಿನಾಶ್ ಪಿ. ಮತ್ತು ಉಮೇಶ್. ಎಸ್.
ಜೈವಿಕ ತಂತ್ರಜ್ಞಾನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-570 006

ಕೃಷಿ ಭಾರತ ದೇಶದ ಬೆನ್ನುಲುಬು, ಭಾರತ ಮತ್ತು ಅದರ ಉಪಖಂಡಗಳು ಹೆಚು-ಕಡಿಮೆ ಕೃಷಿ ಪ್ರಧಾನ ಚಟುವಟಿಕೆಗಳ ರಾಷ್ಟ್ರವಾಗಿದೆ. ಆಹಾರ. ವಾಣಿಜ್ಯ. ಇದರ ಮೂಲ ಉದ್ದೇಶ. ಕೃಷಿಗೆ ಸುಮಾರು 10000 ವರ್ಷಗಳ ಇತಿಹಾಸವಿದ್ದು ಮಾನವ ತನಗೆ ಬೇಕಾದ ಆಹಾರವನು ತಾನೇ ಬೆಳೆಸಿಕೊಳ್ಳಲಾರಂಭಿಸಿದ ದಿನದಿಂದ ಈ ಕೃಷಿ ಆರಂಭವಾಗಿದೆ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಪ್ರಕಾರ ಕೃಷಿ ಉತ್ಪನ್ನಗಳ ಉತ್ಪಾದನೆಯಲ್ಲಿ ಚೀನಾ ಮೊದಲನೇ ಸ್ಥಾನದಲ್ಲಿದ್ದು ನಂತರ ಯುರೋಪಿಯ ಒಕ್ಕೂಟ. ಭಾರತ ಮತ್ತು ಅಮೇರಿಕಾ ಮುಂದಿನ ಸ್ಥಾನ ಪಡೆದಿದೆ. ಪ್ರಪಂಚದ ಮೂವರಲ್ಲಿ ಒಬ್ಬರಿಗೆ ಕೃಷಿ ಉದ್ಯೋಗ ನೀಡಿದ್ದು ಭಾರತ ಶೇಕಡಾ 70 ಕ್ಕೂ ಹೆಚ್ಚು ಜನ ಕೃಷಿಯನ್ನು ಅವಲಂಭಿಸಿದ್ದಾರೆ. ಭಾರತದಲ್ಲಿಯೇ 8ನೇ ಅತಿದೊಡ್ಡ ರಾಜ್ಯವಾದ ಕರ್ನಾಟಕದಲ್ಲಿ ಶೇ. 70. ರಷ್ಟು ಜನತೆ ಕೃಷಿಯನ್ನು ಅವಲಂಬಿಸಿದ್ದಾರೆ (ಸಮೀಕ್ಷೆ, 1995) ರಾಗಿ, ಭತ್ತ, ಜೋಳ ಮೇಲು ಕೃಷಿಯಾಗಿದ್ದು ಈ ಸಂಧರ್ಭದಲ್ಲಿಯೇ ವಿವಿಧ ತರಕಾರಿ ಬೆಳೆಯುವ ಪರಿಪಾಠ ಅರಭಗೊಂಡಿಗೆ.

ತರಕಾರಿ ಬೆಳೆಗಳು ನಮ್ಮ ದೇಶದ ವಾಣಿಜ್ಯ ಬೆಳೆಯಾಗಿದ್ದು ಇದರಲ್ಲಿ ಪ್ರಮುಖವಾದವುಗಳು ಟೊಮೋಟೊ, ಬದನೆ, ಆಲೂಗಡ್ಡೆ, ಮೆಣಸಿನಕಾಯಿ ಇತ್ಯಾದಿ. ಇವುಗಳಲ್ಲಿ ಬದನೆ, ಇದು ಮೂಲತಃ ಭಾರತ ಮತ್ತು ಶ್ರೀಲಂಕಾ ದೇಶದ ಸಸ್ಯವಾಗಿದ್ದು. ಅನೇಕ ರೋಗಗಳಾದ ಮಧುಮೇಹ, ಬೊಜ್ಜು, ಅಪೌಷ್ಟಿಕತೆಗಳಿಗೆ ರಾಮಬಾಣವಾಗಿದೆ. ಈ ಸಸ್ಯವು ವೈಜ್ಞಾನಿಕ ವಿಂಗಡನೆಯಲ್ಲಿ ಸೊಲನೇಸ್ಯ ಕುಟುಂಬಕ್ಕೆ ಸೇರಿರುವ ಒಂದು ಸಸ್ಯ ಮತ್ತು ಬದನೆಕಾಯಿ ದಿನನಿತ್ಯ ಉಪಯೋಗದಲ್ಲಿರುವ ತರಕಾರಿ.

ಗಣ	ಸೊಲನೇಲ್ಸ್
ಕುಟುಂಬ	ಸೊಲನೇಸ್
ಜಾತಿ	ಸೋಲಾನಮ್
ಪ್ರಜಾತಿ	ಮೆಲೊಂಜಿನ

ಕೃಷಿಯಲ್ಲಿನ ಜಾಗತೀಕರಣ ಬದನೆ ಸಸ್ಯ ಅನೇಕ ರೋಗಗಳಿಗೆ ತುತ್ತಾಗಿದ್ದು ಪ್ರಮುಖವಾದವು ಅಂಗಮಾರಿ ರೋಗ, ಕೊನೆಯ ಅಂಗಮಾರಿರೋಗ, ಬ್ಯಾಕ್ಟೀರಿಯಾ ಸೊರಗು ರೋಗ, ನಂಜುರೋಗ ಗಳಾದ ಎಲೆ ಸುರಳರೋಗ ಪ್ರಮುಖವಾದವು. ಬ್ಯಾಕ್ಟೀರಿಯಾ ಸೊರಗು ರೋಗವೂ ಬ್ಯಾಕ್ಟೀರಿಯಲ್ ವಿಲ್ಟ್ ಎಂದು ಪ್ರಪಂಚದಾದ್ಯಂತ ಪ್ರಸಿದ್ಧವಾಗಿದ್ದು ರಾಲ್‌ಸ್ಟೋನಿಯಾ ಸೋಲನೇಸಿರಂ ಎಂಬ ರೋಗಾಣುಗಳಿಂದ ವ್ಯಾಪಿಸಲ್ಪಡುತ್ತದೆ. ಈ ರೋಗವು ವಾಣಿಜ್ಯ ಬೆಳೆಗಳಾದ ಟೊಮೋಟೊ, ಬದನೆ, ಆಲೂಗಡ್ಡೆ, ಮೆಣಸಿನಕಾಯಿ, ಬಾಳೆ ಮತ್ತು ತಂಬಾಕಿನಲ್ಲಿ ಹೆಚ್ಚಾಗಿ ಕಂಡು ಬಂದರೂ ಪ್ರಪಂಚದಾದ್ಯಂತ 200 ಸಸ್ಯ ಜಾತಿಗಳಲ್ಲಿ ರೋಗ ಹರಡುವ ಸಾಮರ್ಥ್ಯ ಹೊಂದಿದೆ. ಈ ಜೀವಿಯು 10 ವರ್ಷಗಳ ಕಾಲ ಮಣ್ಣಿನಲ್ಲಿ ಬದುಕಬಹುದಾದ ಸಾಮರ್ಥ್ಯ ಹೊಂದಿದೆ. ರೋಗದ ಲಕ್ಷಣಗಳೆಂದರೆ ಎಲೆಗಳು ಜೋತು ಬಿದ್ದು 5 ದಿನಗಳೊಳಗೆ ಎಲೆಗಳು ಒಣಗುತ್ತದೆ. ಇದು ಇಳುವರಿ ಕುಂಠಿತಕ್ಕೆ ಪ್ರಮುಖ ಕಾರಣವಾಗಿದೆ. ಈ ರೋಗವು ಶಿಲೀಂಧ್ರ ರೋಗದ ಗುಣಲಕ್ಷಣಗಳನ್ನು ಹೊಂದಿದ್ದು ರೈತರ ಗುರುತಿಸುವಿಕೆಗೆ ಕಷ್ಟವಾಗಿರುತ್ತದೆ.

ಈ ಎಲ್ಲಾ ತೊಂದರೆ ನಿರ್ವಹಣೆಗಾಗಿ ಭಾರತ ಸರ್ಕಾರ ಯು.ಜಿ.ಸಿ ಮತ್ತು ವಿಶ್ವವಿದ್ಯಾನಿಲಯದ ಪ್ರಾಯೋಜಕದೊಂದಿಗೆ ಈ ಕೆಳಗಿನ ನಿರ್ವಹಣ ಕ್ರಮಗಳನ್ನು ಅಭವೃದ್ಧಿ ಪಡಿಸಲಾಗಿದೆ.

1. ಬ್ಯಾಕ್ಟೀರಿಯಾ ಸೊರಗು ರೋಗದ ನಿರ್ದಿಷ್ಟ ಪತ್ತೆಗಾಗಿ ನಿರ್ದಿಷ್ಟ ಜೀನ್ ಬಳಕೆ.
2. ರೋಗ ನಿರೋಧಕ ತಳಗಳ ವಿಂಗಡಣೆ
3. ಸಾವಯವ ಕೃಷಿ ಪದ್ಧೆತ್ಯಲ್ಲಿ ಸ್ಯಾಲಿಸಿಲಿಕ್ ಆಮ್ಲ ಮತ್ತು ಇಂಡೋಲ್ ಅಸಿಟಿಕ್ ಆಮ್ಲದ ಬೀಜೋಪಚಾರ



ತಳಗಳು	ಶೇ (%)
ಅರ್ಕಾಶ್ರೀ	70
ಅರ್ಕಾ ಕುಸುಮಾಕರ್	66
ಪಿ. ಕೆ. ಎಂ	30
ಗ್ರೀನ್ ಲಾಂಗ್	10

ರೋಗ ನಿರೋಧಕ ತಳಗಳ ವಿಂಗಡಣೆ

ವಿಷಯ:-07

ವಸುಂಧರೀಯಮ್

ಭೂಶಾಸ್ತ್ರ, ಪರಿಸರಶಾಸ್ತ್ರ, ಜೀವಜಾಲಶಾಸ್ತ್ರ ಮತ್ತು ವಿಶ್ವಶಾಸ್ತ್ರ

THEME:-07

VASUNDAREEYAM
EARTH SCIENCES, ENVIRONMENTAL SCIENCES, ECOLOGY AND COSMOLOGY

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಕಾರವಾರದ ಕಾಳಿ ಅಳಿವೆಯ ಕಾಂಡ್ಲಾ ಪರಿಸರ ವ್ಯವಸ್ಥೆಯಲ್ಲಿನ ಮೃದ್ವಂಗಿಗಳ ವೈವಿಧ್ಯತೆಯ ಕುರಿತು ಒಂದು ಅಧ್ಯಯನ	ಡಾ॥ ವಸಂತ ಕುಮಾರ ಬಿ ಡಾ. ಇ. ಬಿ. ಸೇಡಂಕರ	584 – 585
2	ಪ್ರಕೃತಿದತ್ತವಾಗಿ ದೊರೆಯುವ ಮರಳನ್ನು ಉಪಯೋಗಿಸಿ ಬಣ್ಣಗಳ ಹೊರಹೀರುವಿಕೆಯ ಒಂದು ಅಧ್ಯಯನ.	ಭಾನುಪ್ರಕಾಶ್. ಎಂ ಬೆಳಗಲಿ. ಎಸ್. ಎಲ್	586 – 589
3	ಘನತ್ಯಾಜ್ಯ ನಿರ್ವಹಣೆ ಮತ್ತು ಜೈವಿಕ ಗೊಬ್ಬರದ ಭೌತ ರಾಸಾಯನಿಕ ಗುಣಲಕ್ಷಣಗಳು	ಶ್ಯಾಮಲ ಡಿ.ಸಿ. ಬೆಳಗಲಿ ಎಸ್.ಎಲ್	589 – 597
4	ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಕೊನೆ ಕಾಣದ ಮಾನವ–ಆನೆ ಸಂಘರ್ಷ ಮತ್ತು ಅವಘಡಗಳು	ಲಿಂಗರಾಜು ಹೆಚ್. ಜಿ ವೆಂಕಟರಮಣ ಜಿ. ವಿ	597 – 601
5	ದಕ್ಷಿಣ ಭಾರತ ಪರ್ಯಾಯ ದ್ವೀಪದಲ್ಲಿ ನೀಳರೇಖೆಗಳು ಭೂ ಭಾಗಗಳ ರಚನೆ ಮತ್ತು ಭೂಕಂಪಗಳು – ಒಂದು ಅಧ್ಯಯನ	ಅನ್ನಪೂರ್ಣ ಎಚ್	601 – 606
6	ಪ್ರಕೃತಿ ಸಂಘ : ಕೈತೋಟಕ್ಕೊಂದು ಪಾಠಶಾಲೆ	ಗೀತಾ. ಎಚ್	606 – 610
6	ಜೆ–ನರ್ಮ್ ರಾಷ್ಟ್ರೀಯ ನಗರ ಪುನರ್ಜೀವನ ಯೋಜನೆ ಅಡಿಯಲ್ಲಿ ತ್ಯಾಜ್ಯವಸ್ತು ನಿರ್ವಹಣೆ, ಪ್ರಚಲಿತ ಅಭ್ಯಾಸಗಳು ಮತ್ತು ಹೊಸ ಪ್ರಸ್ತಾವನೆ – ಒಂದು ಅಧ್ಯಯನ	ಟಿ.ಬಿ.ಮೃತ್ಯುಂಜಯ	610 – 612
7	ಪರಿಣಾಮಕಾರಿ ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ಬಳಕೆಯಿಂದ ಕಾಫಿಹಣ್ಣು ಸಂಸ್ಕರಿಸಿದ ಕಲುಷಿತ ನೀರಿನ ಶುದ್ಧೀಕರಣ	ಡಾ. ಹೇಮಂತ್ ಗೌಡ, ಕೆ ಡಾ. ರವಿಕುಮಾರ್, ಪಿ. ಡಾ. ಮಧುಸೂಧನ್, ಹೆಚ್.ಎಸ್	612 – 613
8	ಪ್ರಾಚೀನ ಭಾರತೀಯ ವಾಙ್ಮಯದಲ್ಲಿ ವಸುಂಧರೀಯಂ-ಪರಿಸರ ವಿಜ್ಞಾನ ಮಾಹಿತ್ಯ ಒಂದು ವಿಶ್ಲೇಷಣೆ	ಡಾ॥ ಟಿ. ಆರ್. ಶಾಂತಲಾ ಪ್ರಿಯದರ್ಶಿನಿ ಡಾ॥ ಅಪರ್ಣಾ ನಾಭಿರಾಜ್	614 - 617
9	ಮಿಥೈಲ್ ಪ್ಯಾರಾಥಿಯಾನ್ ಪ್ರೇರಿತ ಮ್ಯುಟೇಶನ್ ಮತ್ತು ವೀರ್ಯಾಣು ವಿರೂಪತೆಯ ವಿರುದ್ಧ ನೆಲ್ಲಿಕಾಯಿ (ಫ್ಲಿಲಾಂತಸ್ ಎಂಬ್ಲಿಕ)ಸಾರದಿಂದ ರಕ್ಷಣೆಯ ಸಾಧ್ಯತೆಯ ಬಗ್ಗೆ ಒಂದು ಅಧ್ಯಯನ	ಪ್ರಶಾಂತ ನಾಯ್ಕ ಕೆ. ಕೆ ವಿಜಯಲಕ್ಷ್ಮಿ	617 – 622

ಕಾರವಾರದ ಕಾಳಿ ಅಳಿವೆಯ ಕಾಂಡ್ಲಾ ಪರಿಸರ ವ್ಯವಸ್ಥೆಯಲ್ಲಿನ ಮೃದ್ವಂಗಿಗಳ ವೈವಿದ್ಯತೆಯ ಕುರಿತು ಒಂದು ಅಧ್ಯಯನ

೧. ಡಾ॥ ವಸಂತ ಕುಮಾರ ಬಿ ಮತ್ತು ೨. ಡಾ. ಇ. ಬಿ. ಸೇಡಂಕರ
೧. ಸಹಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಸರಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು, ಕಾರವಾರ(ಉ.ಕ.) ೨. ಸಹಾಯಕ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ಜಿ.ಎಚ್. ಕಾಲೇಜು, ಹಾವೇರಿ

ಫೈಲಾಮ ಮೃದ್ವಂಗಿಗಳು ಅತೀ ಹೆಚ್ಚಿನ ಸಂಖ್ಯೆಯುಳ್ಳ ಸುಮಾರು ೮೦೦೦೦ ಪ್ರಬೇದಗಳನ್ನೊಳಗೊಂಡ ಫೈಲಾಮ್ ಅರ್ತ್ರೋಪೊಡಾ ತುಂಪಿಗಿಂತ ಹೆಚ್ಚಿನ ಸಂಖ್ಯೆಯನ್ನು ಹೊಂದಿರುತ್ತವೆ ಸಮುದ್ರದ ಪರಿಸರ ವ್ಯವಸ್ಥೆಯಲ್ಲಿ. ಈ ಫೈಲಾಮ್‌ವು ಬಹಳ ವೈವಿದ್ಯಮಯ ಜಾತಿಯ ಪ್ರಬೇಧಗಳ ಇರುತ್ತವೆ. ಉದಾಹರಣೆಗೆ ಕ್ಲಾಮ್ಸ್, ಸಿಂಪಿ, ಮಸ್ಸೆಲ್ಸ್, ಬಸವನ ಅಕ್ಟೋಪಸ್, ಸ್ಕ್ವಿಡ್ ಸದಸ್ಯರನ್ನೊಳಗೊಂಡಿದೆ. ವಾಣಿಜಿಕವಾಗಿ ಬಹು ಮುಖ್ಯವಾದ ಪ್ರಾಣಿಗಳಿವು. ಇದನ್ನು ಬಡವನ ಸಮೃದ್ಧ ಪ್ರೋಟಿನ್ ಆಹಾರವಾಗಿ ಪರಿಣಿಸಲಾಗುತ್ತದೆ. ಈ ಪ್ರಾಣಿಗಳು, ಕಾಂಡ್ಲಾ ಪರಸರ ವ್ಯವಸ್ಥೆಯಲ್ಲಿನ ಕುರಿತಾದ ಅಧ್ಯಯನ ಬಹಳ ವಿರಳವಾಗಿ ಲಭ್ಯವಿರುತ್ತದೆ. ಈ ಕಾರಣಕ್ಕೆ ಇವುಗಳ ಕುರಿತು ಒಂದು ಸಂಕ್ಷೀಪ್ತವಾದ ಈ ಸಂಶೋಧನೆಯನ್ನು ಕೈಗೊಳ್ಳಲು ಕಾರಣವಾಗಿದೆ.

ಈ ದೃಷ್ಟಿಯಿಂದ ಪ್ರಸ್ತುತ ಈ ಅಧ್ಯಯನಕ್ಕೆ ಎರಡು ಕ್ಷೇತ್ರಗಳನ್ನು ಗುರುತಿಸಿಕೊಂಡು ಒಟ್ಟೂ ೧೩ ತಿಂಗಳುಗಳ ಅಧ್ಯಯನವನ್ನು ಕೈಗೊಳ್ಳಲಾಯಿತು. ಜನವರಿ ೨೦೧೦ ರಿಂದ ಜನವರಿ ೨೦೧೧ ರವರೆಗೆ ಒಂದು ವರ್ಷದ ಅವಧಿಗೆ, ಈ ಅಧ್ಯಯನದ್ಲಲಿ ಒಟ್ಟು ೩೭ ಪ್ರಬೇದಗಳು (೧೯ ಕುಟುಂಬಗಳು) ಸಂದರ್ಭದಲ್ಲಿ ದಾಖಲಾಗಿದೆ. ಈ ಪೈಕಿ ಕುಟುಂಬ ವೆನಿರಿಡೆ, ಲಿಟ್ಟೋರಿನಿಡೆ (1061/ಮೀ^{2}) ನಂತರ ಪ್ರಬಲ ಗುಂಪು (1567/ಮೀ^{2}) ಗುರುತಿಸಲಾಗಿದೆ. ಒಸ್ಟ್ರೀಡೆ (೮೫೪/ಮೀ.^{2}) ಮತ್ತು ಬುಸಿನಿಡೆ (20/ಮೀ.2). ಕುಟುಂಬಗಳು ಈ ಪ್ರದೇಶದಲ್ಲಿ ಈ ಸಮುದಾಯದ ಒಟ್ಟೂ ಸಾಂದ್ರತೆ ಬಹುಮಟ್ಟಿನ ಕೊಡುಗೆ ನೀಡಲಿಲ್ಲ. ಇದು ಮಾವಿನಹೊಳೆ ಜಾಗೆಯಲ್ಲಿ ಚಿಪ್ಪುಳ್ಳ ಮೃದ್ವಂಗಿಗಳ (2307/ಮೀ2) ವಿಷಯದಲ್ಲಿ ಹೆಚ್ಚು ಉತ್ಪಾದಕ ಎಂದು ಕಂಡು ಹಿಡಿದಿದೆ. ಈ ಪ್ರಸ್ತುತ ಡೇಟಾವನ್ನು ಊಹಿಸಿದಂತೆ ಇದೆ. ಕನಿಷ್ಠ ಅದರ ಸಂಖ್ಯೆಯ (೯೪೩/ಮೀ^{2}) ಕಡವಾಡ ಜಾಗೆಯಲ್ಲಿ ಗಮನಕ್ಕೆ ಬಂದಿದೆ, ಈ ಸಮುದಾಯದ ಜನಸಂಖ್ಯೆ ಏರುಪೇರುಗಳನ್ನು ಮುಖ್ಯವಾಗಿ ಕೆಸರು ರಚನೆ ಮತ್ತು ಇತರ ಮಡ್ಡಿಗಳ ರಚನೆ ಮೇಲೆ ನಿರ್ವಹಿಸಲ್ಪಡುತ್ತದೆ.

ಸಾಧನಗಳು ಮತ್ತು ವಿಧಾನಗಳು : ಪ್ರಸ್ತುತ ಅಧ್ಯಯನ ಕಾಳಿ ಅಳಿವೆಯ, ಕಾರವಾರ (ಚಿತ್ರ ೧) ಎಲ್ಲಾ ಮೃದ್ವಂಗಿ ಜಾತಿಗಳ ಮ್ಯಾಂಗ್ರೋವ್ ಪರಿಸರ ಸಂಯೋಜನೆ, ಸಮೃದ್ಧಿ ಮತ್ತು ಮೃದ್ವಂಗಿಗಳು ವಿತರಣೆ ಅಧ್ಯಯನವನ್ನು ಜನವರಿ ೨೦೧೦ ರಿಂದ ಜನವರಿ ೨೦೧೧ ರವರೆಗೆ ಹದಿಮೂರು ತಿಂಗಳ ಕಾಲ ಕೈಗೊಳ್ಳಲಾಗಿತ್ತು ಮತ್ತು ಕೈಯಿಂದ ಸಂಗ್ರಹಿಸಲಾಗಿತ್ತು. ಪಡೆದ ಕ್ಲಮ್ಸ್ (ಕುಟುಂಬ : ವೆನಿರಿಡೆ) ಇಳಿತದ ಅವಧಿಯಲ್ಲಿ ೧ x ೧ ಮೀ ಚೌಕಟ್ಟದ ಪ್ರದೇಶದಿಂದ ಸಂಗ್ರಹಿಸಲಾಗಿತ್ತು.



Fig 1: Map of Kali River Showing the position of Study Sites

ಚಿತ್ರ 1. ರಲ್ಲಿ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಜಾಗೆಗಳ ವಿವರ

ಫಲಿತಾಂಶಗಳು ಮತ್ತು ಚರ್ಚೆ : ಪ್ರಸ್ತುತ ಅಧ್ಯಯನದಲ್ಲಿ ಮುಖ್ಯವಾಗಿ ಕಾಳಿ ಅಳಿವೆ, ಕಾರವಾರ, ಕರ್ನಾಟಕದ ಮ್ಯಾಂಗ್ರೋವ್ ಪರಿಸರ ವ್ಯವಸ್ಥೆಗಳಲ್ಲಿ ಚಿಪ್ಪುಳ್ಳ ಪ್ರಾಣಿಗಳ ಸಂಯೋಜನೆ, ವೈವಿದ್ಯತೆಯ ಕುರಿತು ಕೇಂದ್ರಿಕರಿಸಲಾಗಿತ್ತು. ಒಟ್ಟೂ ೩೭ ಪ್ರಭೇದಗಳನ್ನು ಗುರುತಿಸಿ ಅವುಗಳು ೧೯ ಕುಟುಂಬಗಳಿಗೆ ಸೇರಿತ್ತವೆ ಎಂದು ಅಧ್ಯನದಿಂದ ಕಂಡು ಕೊಳ್ಳಲಾಗಿದೆ

ಪಟ್ಟಿ ೧. ರಲ್ಲಿ ಮೃದ್ವಂಗಿಗಳ ಕುಟುಂಬಗಳ ವಿವರ

ಕ್ರಮಸಂ	ಮೃದ್ವಂಗಿಗಳು
೧	ಎನೊಮಿಡೆ
೨	ಆರ್‌ಸಿಡೆ
೩	ಬೊಸಿನಿಡೆ
೪	ಸಿರಲತಿಡೆ
೫	ಕೊರಬಿಕ್ಯೂಲೆಡೆ
೬	ಲಿಟ್ಟೋರಿನಿಡೆ
೭	ಮೆಟ್ರಿಡೆ
೮	ಮೈಟಿಲಿಡೆ
೯	ನ್ಯಾಟಿಸಿಡೆ
೧೦	ನೆರಿಟಿಡೆ
೧೧	ಒಸ್ಟ್ರೀಡೆ
೧೨	ಪಾಸ್ಟೋಬ್ಲಿಡೆ
೧೩	ಫ್ಯಾಲಿಡೆ
೧೪	ಪೊಟಾಮಿಡೆ
೧೫	ಟೆಲ್ಲಿನಿಡೆ

೧೬	ಟೊನಿಡೆ
೧೭	ಟ್ರೋಚಿಡೆ
೧೮	ಟರ್ರಿಟ್ರಿಡೆ
೧೯	ವೆನಿರಿಡೆ

ಕೋಷ್ಟಕದಲ್ಲಿ ತಿಳಿಸಿರುವಂತೆ ಕನಿಷ್ಠ ಸಾಂದ್ರತೆಯು ಅಧ್ಯಯನದ ಎರಡನೇಯ ಜಾಗೆಯಲ್ಲಿ ಕಂಡುಕೊಳ್ಳಲಾಯಿತು. (೧೧೪೯/ಮೀ^{2}) (ಸುಂಕೇರಿ). ಅದೇ ರೀತಿ ಅತೀ ಹೆಚ್ಚಿನ ಸಾಂದ್ರತೆಯನ್ನು ಅಧ್ಯಯನದ ಒಂದನೇಯ ಜಾಗೆಯಲ್ಲಿ ಕಂಡುಕೊಳ್ಳಲಾಯಿತು. (ಕಣಸಗಿರಿ) (೧೨೪೦/ಮೀ^{2})

ಈ ಅಧ್ಯಯನದ ಪ್ರಕಾರ ಒಟ್ಟು ಮೃದ್ವಂಗಿಗಳ ಸಾಂದ್ರತೆಯು ಅತೀ ಕಡಿಮೆ ಲಭ್ಯವಿರುವುದು ಇದಕ್ಕೆ ಮುಂಗಾರು ಋತುವಿನಲ್ಲಿ ದಾಖಲಾಗಿದೆ. (ಖಷಾಒ), ಹಾಗೆ ಅತೀ ಹೆಚ್ಚಿನ ಸಾಂದ್ರತೆಯು ಮಳೆಗಾಲದಲ್ಲಿ ಗುರುತಿಸಲಾಗಿದೆ.

ಬೇಕೆಂದು ಕಂಡುಬರುತ್ತದೆ. ಜಾಗೃತಿ ಮತ್ತು ಒಂದು ಜೈವಿಕ ಸೂಚಕವಾಗಿ ಈ ಪ್ರಾಣಿಗಳ ಅನ್ವಯಿಕ ಚಾಲನೆ ಮತ್ತು ಭವಿಷ್ಯದಲ್ಲಿ ಸುರಕ್ಷಿತತೆ ಈ ಪ್ರಾಣಿಗಳ ಕುರಿತು ಕಾಳಿ ಅಳಿವೆಯ ಕಾಂಡ್ಲ ಪರಿಸರ ವ್ಯವಸ್ಥೆಯಲ್ಲಿ ಪ್ರಮುಖವಾಗಿದೆ.

ಟೇಬಲ್ ೧. ಇದು ಕನಿಷ್ಠ ಸಾಂದ್ರತೆಯನ್ನು (೧೧೪೯/ಮೀ ೨) ಅಧ್ಯಯನ ಕೇಂದ್ರ ೨ (ಸುಂಕೇರಿ) ನಲ್ಲಿ ಗಮನಿಸಲಾಯಿತು. ಈ ಡಾಟಾವನ್ನು ಊಹಿಸಿದಂತೆ ಇದೆ ಚಿಪ್ಪುಳ್ಳ ಕುಟುಂಬದ ಪರಿಶೀಲನಾಪಟ್ಟಿ ತೋರಿಸಲಾಗುತ್ತಿದೆ. ಒಟ್ಟು ೩೭ ಜಾತಿಯ ದಾಖಲಿಸಲಾಗಿದೆ. ಸೇರುತ್ತದೆ. ನಿಲ್ದಾಣದ ೧ (ಕಣಸಗಿರಿ) (೧೨೪೦/ಮೀ೨) ನಲ್ಲಿ ನೋಂದಾಯಿಸಲಾಗಿದೆ. ಅಧ್ಯಯನ ಸ್ಥಳಗಳಲ್ಲಿ ಒಟ್ಟು ಚಿಪ್ಪುಳ್ಳ ಸಾಂದ್ರತೆ ಹೆಚ್ಚು ಜನಸಂಖ್ಯೆ ಮಾನ್ಸೂನ್ ಸಮಯದಲ್ಲಿ ದಾಖಲಾಗಿದೆ. ಆದರೆ ನೈಋತ್ಯ ಮುಂಗಾರು ಕಾಲದಲ್ಲಿ ತುಲನಾತ್ಮಕವಾಗಿ ಕಡಿಮೆ ಆಗಿತ್ತು. ಅಧ್ಯಯನ ಪ್ರದೇಶದಲ್ಲಿ ಕೆಲಮ ಮೃದ್ವಂಗಿ ಜಾತಿಯ ತೋರಿಸಲಾಗುತ್ತಿದೆ.

ಟೇಬಕ್ ೨: ಅಧ್ಯಯನದ ಸಮಯದಲ್ಲಿ ಮೃದ್ವಂಗಿಗಳ ಸಾಂದ್ರತೆಯಲ್ಲಿನ ವ್ಯತ್ಯಾಸಗಳು

ಜಾಗೆಗಳು	Jan.08	Feb.	Mar.	Apr.	May.	Jun.	Jul.	Aug.	Sept.	Oct.	Nov.	Dec.	Jan.09	ಒಟ್ಟು
ಜಾಗೆ–೧–ಕಣಸಗಿರಿ	೮೩	೧೨೨	೧೬೨	೧೮೫	೮೬	೩೦	೨೧	೩೩	೫೧	೭೪	೧೦೨	೧೭೦	೧೨೧	೧೨೪೦
ಜಾಗೆ–೨–ಸುಂಕೇರಿ	೬೫	೧೬೭	೧೩೬	೧೬೧	೧೩೫	೩೦	೨೭	೩೬	೪೦	೭೫	೧೨೦	೧೪೭	೧೩೫	೧೧೪೯

ತೀರ್ಮಾನ : ಪ್ರಸ್ತುತ ಅಧ್ಯಯನದಿಂದ ಮೃದ್ವಂಗಿಗಳು ಮತ್ತು ಅವುಗಳ ಸಾಂದ್ರತೆಯು ಕಾಳಿ ಅಳಿವೆಯ ಕಾಂಡ್ಲಾ ಪರಿಸರ ವ್ಯವಸ್ಥೆಯಲ್ಲಿ ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತವೆ. ಈ ಅಧ್ಯಯನದಿಂದ ನಮಗೆ ತಿಳಿದು ಬಂದಿದ್ದು ಈ ಪ್ರಾಣಿಗಳನ್ನು ಸಂರಕ್ಷಿಸುವುದರಿಂದ ಕಾಂಡ್ಲಾ ಪರಿಸರ ವ್ಯವಸ್ಥೆಯಲ್ಲಿ ಬಹಳ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಮತ್ತು ಅದನ್ನು ಸಂರಕ್ಷಿಸ

ಆಧಾರ ಗ್ರಂಥಗಳು : ಫಿಲಿ ಪೋಸ್, ಕೆ.ಕೆ ೧೯೮೦. ಕಾರವಾರದ ನೀರಿನಲ್ಲಿ ಗ್ರೀನ್ ಮಜಲ್ಸ್‌ಗಳ ಕುರಿತು ಒಂದು ಅಧ್ಯಯನ. ಎಮ್.ಎಸ್ಸಿ ಥೀಸಿಸ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಹರಿಕಂತ್ರ, ಎಸ್.ಎನ್. ೧೯೭೫, ಕಾಳಿ ಅಳಿವೆಯ ಸ್ಥರದಲ್ಲಿ (ಬೆಂತೋಸ್) ಕುರಿತು ಒಂದು ಅಧ್ಯಯನ, ಮಹಾಸಾಗರ ಬುಲ್. ಎನ್.ಐ.ಒ, ೮:೫೩–೫೮ ಸಿಎಮ್ಎಫ್ಆರ್ಐ:೧೯೮೦ ಬುಲೇಟಿನ್

ಚಿತ್ರ 2. ಅಧ್ಯಯನದ ಸ್ಥಳದಲ್ಲಿ ಕೆಲವು ಮೃದ್ವಂಗಿಗಳ ಜಾತಿಗಳ ಚಿತ್ರ



1. *Perna Viridis*
2. *Phapia Malabarica*
3. *Bivalves*
4. *Meretrix Casta*
5. *Potamides Cingulatus*
6. *Saccortrea Cucullata*
7. *Nerita Polita*
8. *Turritella Duplicata*
9. *Meretrix Meretrix*
10. *Telescopium Telescopium*
11. *Cerithidea Fluviatilis*
12. *Pila Globosa*

ಪ್ರಕೃತಿದತ್ತವಾಗಿ ದೊರೆಯುವ ಮರಳನ್ನು ಉಪಯೋಗಿಸಿ ಬಣ್ಣಗಳ ಹೊರಹೀರುವಿಕೆಯ ಒಂದು ಅಧ್ಯಯನ.

ಭಾನುಪ್ರಕಾಶ್. ಎಂ ಮತ್ತು ಬೆಳಗಲಿ. ಎಸ್. ಎಲ್,
ಪರಿಸರ ರಸಾ೦ಯನ ಪರೀಕ್ಷಕೇಂದ್ರ, ಪರಿಸರವಿಜ್ಞಾನ ವಿಭಾಗ, ಮೈಸೂರು ವಿಶ್ವವಿದ್ಯಾನಿಲ೦ಯ, ಮಾನಸಗಂಗೋತ್ರಿ, ಮೈಸೂರು–570 006

ಪ್ರಪಂಚದಾದ್ಯಂತ ಕೈಗಾರೀಕರಣ, ನಗರೀಕರಣ ಹಾಗೂ ಆಧುನಿಕರಣದಿಂದ ಜಲಮಾಲಿನ್ಯ, ವಾಯುಮಾಲಿನ್ಯ ಮತ್ತು ಮಣ್ಣಿನ ಮಾಲಿನ್ಯಗಳು ಹೆಚ್ಚಾಗುತ್ತಿವೆ. ಇವುಗಳಲ್ಲಿ ಜಲಮಾಲಿನ್ಯವು ಪ್ರಮುಖವಾದುದೆಂದು ಪರಿಗಣಿಸಲಾಗಿದೆ. ಮಾಲಿನ್ಯದಿಂದ ಜಲದ ಗುಣಮಟ್ಟ ಹಾಳಾಗುವುದಲ್ಲದೆ ಅದು ಬಳಸುವುದಕ್ಕೆ ಯೋಗ್ಯವಾಗಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಪರಿಶುದ್ಧವಾದ ಜಲ ಅಲ್ಪ ಪ್ರಮಾಣದಲ್ಲಿ ದೊರಕುವುದರಿಂದ ಅದರ ಮಿತಬಳಕೆ ಅವಶ್ಯಕವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಜಲಲೀಯ ದ್ರಾವಣದಲ್ಲಿರುವ ಬಣ್ಣವನ್ನು ಪ್ರಕೃತಿದತ್ತವಾಗಿ ಸಿಗುವ ಮರಳಿನ ಕಣಗಳನ್ನು ಉಪಯೋಗಿಸಿ ಅಂಕಣವಿದಾನದಿಂದ ಹೊರಹೀರುವಿಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ. ಒಂದೇ ಗಾತ್ರದ ಮರಳಿನ ಕಣಗಳನ್ನು ಉಪಯೋಗಿಸಿ ಬಣ್ಣಗಳಾದ, ಬಿಸ್‌ಮಾರ್ಕ್‌ಬ್ರೌನ್, ಜಿಮ್ಸಸ್‌ಸ್ಟೇನ್ ಮತ್ತು ಪ್ಯುಸ್ಚಿನ್‌ಬೇಸಿಕನ್ನು ಅಂಕಣವಿದಾನದಿಂದ ಯಶಸ್ವಿಯಾಗಿ ಹೊರಹೀರುವಿಕೆಯನ್ನು ಮಾಡಲಾಗಿದೆ. ಗೊತ್ತಿರುವ ಜಲಲೀಯ ದ್ರಾವಣ ಬಣ್ಣದ ಸಾಂದ್ರತೆಯನ್ನು (ಮೇಲೆ ಹೆಸರಿಸಿರುವ) ಒಂದೇ ಗಾತ್ರದ ಮರಳಿನ ಕಣಗಳನ್ನು ಉಪಯೋಗಿಸಿ ಅಂಕಣವಿದಾನದಿಂದ ಹೊರಹೀರುವಿಕೆಯನ್ನು ಮಾಡಲಾಗಿದ್ದು, ಮೊದಲು ಅತಿ ನೇರಳೆ–ಗೋಚರ ಮಾಪಕದಿಂದ ಮತ್ತು ನಂತರದ ಮೌಲ್ಯಂಕಗಳನ್ನು ತೆಗೆದುಕೊಂಡು ಹೊರಹೀರುವಿಕೆಯ ಶೇಕಡವಾರು ಪ್ರಮಾಣವನ್ನು ದಾಖಲಿಸಲಾಗಿದೆ. ಈ ಅಧ್ಯಯನದಲ್ಲಿ ತಿಳಿದುಬರುವುದೇನೆಂದರೆ ಅಂಕಣವಿದಾನದಿಂದ 2 ಗ್ರಾಂ ಮರಳಿನ ಕಣಗಳನ್ನು ಉಪಯೋಗಿಸಿ 40 ಪಿ.ಪಿ.ಎಂ ಜಲಲೀಯ ದ್ರಾವಣದ ಬಣ್ಣದ ಸಾಂದ್ರತೆಯನ್ನು ಹೊರಹೀರುವಿಕೆಮಾಡಬಹುದಾಗಿದೆ. ಇದರಿಂದ ತಿಳಿದುಬರುವುದೇನೆಂದರೆ ಅಂಕಣವಿದಾನ ಬ್ಯಾಚ್‌ವಿದಾನಕ್ಕಿಂತ ಉತ್ತಮವಾಗಿದ್ದು ಕಡಿಮೆ ಸಮಯದಲ್ಲಿ ಫಲಿತಾಂಶಗಳನ್ನು ಪಡೆಯಬಹುದಾಗಿದೆ.

ಕೀಲಿಪದಗಳು: ಮರಳು, ಹೊರಹೀರುವಿಕೆ , ಬಣ್ಣಗಳು, ಅಂಕಣವಿದಾನ , ಅತಿನೇರಳೆ–ಗೋಚರ ಮಾಪಕ

ಪೀಠಿಕೆ: ನೀರು ಪ್ರಕೃತಿಗೆ ತುಂಬ ಮುಖ್ಯವಾಗಿದ್ದು ಮನುಷ್ಯನ ಆರೋಗ್ಯಪೂರ್ಣ ಹಾಗೂ ದೈನಂದಿನ ಚಟುವಟಿಕೆಗೆ ಅತ್ಯಅವಶ್ಯಕ ವಾಗಿದೆ. ಮಾನವನ ಹಲಾವಾರು ಚಟುವಟಿಕೆಯಿಂದ ನದಿ ಮತ್ತು ಅಂತರ ಜಲದ ಪ್ರಮಾಣ ದಿನೇ ದಿನೇ ಕ್ಷೀಣಗೊಳ್ಳುತ್ತಿದೆ. ನೀರು ಕಲುಷಿತಗೊಳ್ಳಲು ಪ್ರಮುಖವಾದ ಕಾರಣವೆಂದರೆ, ಕೈಗಾರಿಕೆಯಿಂದ ಹಾನಿಕಾರಕ ವಸ್ತುಗಳ ಹೊರಸೂಸುವಿಕೆಯಿಂದ ಪರಿಶುದ್ಧವಾದ ಪರಿಸರಕ್ಕೆ ಕುಂದುಂಟಾಗುವುದು (**ಶ್ರೀ ಹರಿ ಮತ್ತು ರಾಘವೇಂದ್ರ ಕಿರಣ, 2013**).

ಜವಳಿ ಉದ್ಯಮದ ಕಲುಷಿತ ನೀರು ಪರಿಸರಕ್ಕೆ ಒಂದು ದೊಡ್ಡ ಆಪತ್ತಾಗಿದೆ. ಜವಳಿ ಉದ್ಯಮದ ಕಲುಷಿತ ನೀರು ಶುದ್ಧವಾದ ನೀರಿನ ಜೊತೆ ಹೊರಹಾಯಿಸಿದಾಗ ಕಲುಷಿತ ನೀರು ಶುದ್ಧವಾದ ನೀರಿನ ಗುಣಮಟ್ಟವನ್ನು ಹಾಳುಮಾಡಿ ಬಳಕೆಗೆ ಯೋಗ್ಯವಾಗಿರುವುದಿಲ್ಲ. ಜವಳಿ ಉದ್ಯಮದ ಕಲುಷಿತ ನೀರಿನಲ್ಲಿ ವಿವಿಧ ರೀತಿಯ ಬಣ್ಣ, ಉಪ್ಪಿನಾಂಶ, ಸಾವಯವ ಉಪದ್ರವಗಳು ಮತ್ತು ದ್ರವೀಸುವ ವಸ್ತುಗಳ ಸಂಮಿಶ್ರಣವಿರುತ್ತವೆ (**ಕತ್ಯಾಲ. ಎಸ್.ಕೆ. ಮತ್ತು ದಾಗ ಕೆ., 2003**).

ಉಪ ಜವಳಿ ಕಾರ್ಖಾನೆಗಳಾದ, ಕಾಗದ ಮತ್ತು ತಿರುಳಿಗೆ ಬಣ್ಣ ಹಾಕುವ ಕೈಗಾರಿಕೆಗಳು ಮತ್ತು ಚರ್ಮ ಕೈಗಾರಿಕೆಗಳು ಸ್ವಲ್ಪ ಪ್ರಮಾಣದಲ್ಲಿ ಬಣ್ಣಗಳನ್ನು ಹೊರಸೂಸಿ ನದಿ ನೀರನ್ನು ಕಲುಷಿತಗೊಳ್ಳುತ್ತವೆ (**ಶ್ರೀರಾಮ ಚೌರಾಸಿಯಾ ಮತ್ತು ಶಶಿಕಾಂತ, 2007**).

ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲೆಲ್ಲ ವಸ್ತುಗಳಿಗೆ ಬಣ್ಣ ಹಾಕುವ ಕಾರ್ಖಾನೆಗಳು ಮತ್ತು ಮೆರುಗಿನ ಮುಕ್ತಾಯ ಕೊಡುವ ಕಾರ್ಖಾನೆಗಳು ವಿವಿಧ ರೀತಿಯ ಬಣ್ಣಗಳನ್ನು ಉಪಯೋಗಿಸತ್ತವೆ, ಅದರಿಂದ ಹೊರಸೂಸುವ ತ್ಯಾಜ್ಯನೀರಿನಲ್ಲಿ ಹೆಚ್ಚು ಪ್ರಮಾಣದ ಸಂಕೀರ್ಣ ಬಣ್ಣಗಳು ಮತ್ತು ಉಪದ್ರವಗಳಿಂದ ಕೊಡಿರುತ್ತವೆ. ಅವು ಬೆಳಕಿಗೆ, ಜೀವಿಗಳ ಚಟುವಟಿಕೆಗೆ ಭೇದಿಸಲ್ಪಡುವ ವಿಧಾನಕ್ಕೆ ಪ್ರತಿರೋಧ ಒಡ್ಡುತ್ತವೆ ಮತ್ತು ಅವುಗಳನ್ನು ನೀರನ್ನು ಶುದ್ಧೀಕರಿಸುವ ವಿಧಾನಗಳಿಂದ ಹೊರತೆಗೆಯಲಾಗುವುದಿಲ್ಲ. ಬಣ್ಣಗಳು ಮತ್ತು ಬಣ್ಣಗಳ ಭೇದಿಸುವಿಕ ೆಗಳು ದೀರ್ಘಕಾಲ ಪರಿಣಾಮ ಬೀರುವುದು ನಮಗೆ ಒಂದು ಸಾಮಾಜಿಕ ಕಳಕಳಿಯಾಗಿದೆ. ಕೆಲವುಗಳನ್ನು ಚರ್ಮಕೆರಳಿಸುವ, ಜೀನ್ ಮಾರ್ಪಾಟುಗೊಳಿಸುವ, ಕ್ಯಾನ್ಸರ್‌ನಂತಹ ಮತ್ತು ಚರ್ಮತುರಿಕೆಗಳಾಗಿವೆ. ಶೇ 90 % ರಲ್ಲಿ ಕೆಲವು ನಾಲ್ಕು ಸಾವಿರ ಬಣ್ಣಗಳನ್ನು ಪರಿಸರ ಮತ್ತು ವಿಷಕಾರಿ ಬಣ್ಣಗಳ ಸಂಸ್ಥೆಯಿಂದ ಪರೀಕ್ಷಿಸಿದ್ದು ಸಮೀಕ್ಷೆಯ ಪ್ರಕಾರ (ಸರಾಸರಿ ಮಾರಕ ಬದುಕುಳಿಯುವ ಪ್ರಮಾಣ 50 %). ಬೇಸಿಕ್ ಎರಡು ಅಸೋಸಂಯುಕ್ತ ಬಣ್ಣಗಳಲ್ಲಿ ಅತಿ ಹೆಚ್ಚು ಪ್ರಮಾಣದ ವಿಷಕಾರಿಯನ್ನು ನಾವು ಕಾಣಬಹುದು. ಸರಿಯಾಗಿ ಶುದ್ಧೀಕರಿಸಲಾಗದಿದ್ದರೆ ಲೋಹಗಳು ಮತ್ತು ಕ್ಲೋರೈಡ್‌ಗಳು ಬಣ್ಣದ ನೀರಿನಲ್ಲಿ ಇರುವುದರಿಂದ ಬಣ್ಣಗಳಿಂದ ನೀರಿನ ಜೀವಿಗಳ ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಗಮನಾರ್ಹವಾದ ತೊಂದರೆಯಾಗುತ್ತದೆ. ಜವಳಿ ಉದ್ಯಮಗಳ ಕಲುಷಿತ ನೀರಿನಿಂದ ಬಣ್ಣಗಳನ್ನು ಹೊರತೆಗೆಯುವುದು ಜಗತ್ತಿನ ಒಂದು ದೊಡ್ಡ ಸಮಸ್ಯೆಯಾಗಿದೆ. ಬಣ್ಣ ಮತ್ತು ವರ್ಣಗಳನ್ನು ಶುದ್ಧೀಕರಿಸಲು ಬೇರೆ ಬೇರೆ ವಿಧಾನಗಳಿವೆ. ಅದರಲ್ಲಿ ಘನೀಕರಿಸುವುದು, ಕುಚ್ಚಾಗುವಿಕೆ, ಓಝೋನ್ ವಿಧಾನ ಪೊರೆಯ ವರ್ಗೀಕರಣ, ಆಮ್ಲಜನಿಕ ರಹಿತ ಬಣ್ಣಗಳ ತೆಗೆಯುವ ವಿಧಾನ, ಆಕ್ಸಿಡೀಕರಣ ಮತ್ತು ಹೊರಹೀರುವಿಕೆ ವಿಧಾನ. ಈ ಎಲ್ಲ ವಿಧಾನಗಳಲ್ಲಿ ಹೊರಹೀರುವಿಕೆ ವರ್ಣಗಳು ಮತ್ತು ಕಲುಷಿತ ನೀರಿನ ಬಣ್ಣಗಳ ಶುದ್ಧಿಕರಿಸಲು ಒಂದು ಉತ್ತಮ ವಿಧಾನವಾಗಿದೆ.

ಹೊರಹೀರುವಿಕೆ ಬಣ್ಣಗಳನ್ನು ತೆಗೆಯುವ ಇತ್ತೀಚಿನ ಒಂದು ಅತ್ಯುತ್ತಮ ಭೌತಿಕ ವಿಧಾನವಾಗಿದೆ. ಹೊರಹೀರುವಿಕೆ ವಸ್ತುಗಳ ಕೆಲವುಗಳಲ್ಲಿ ಜಗಿಯುವ ತಂಬಾಕು (ಗೀತಾ ಕೆ.ಎಸ್. ಮತ್ತು ಬೆಳಗಲಿ ಎಸ್.ಎಲ್. 2011), ಹ್ಯಾಝೆಲ್‌ನೆಟ್ಸ್ (ಫಾತಿಮ ಎಮ್.ಆರ್. ಮತ್ತು ಆಸಾಫಾರಮ್ ಎ. 2011), ಕಬ್ಬು ಫೈಬರ್ ತ್ಯಾಜ್ಯ (ಸಚ್ಚಿನ್ ಎಂ. ಕಾನ್‌ವಡೆ ಮತ್ತು ಗಾಯಕ್‌ವಾಡ್ ಆರ್. ಡಬ್ಲ್ಯೂ. 2011), ಮೊಟ್ಟೆ ಚಿಪ್ಪು (ಗೀತಾ

ಕೆ.ಎಸ್. ಮತ್ತು ಬೆಳಗಲಿ ಎಸ್.ಎಲ್. 2012), ಆಲೂಗಡ್ಡೆ ಸಿಪ್ಪೆ (ಪೂಜಾ ವಿ. ಮತ್ತು ಶ್ರೀ ವಾತ್ಸವ, 2012), ಆಸ್ಪರ್‌ಜಿಲಸ್ ಟ್ಯಾಮರಿ (ಇಲ್. ಬಟಾಲ್ ಎ.ಐ. 2012), ಜೀವರಾಶಿ (ಮುರುಗನ್ ಟಿ. ಮತ್ತು ಗಣಪತಿ ಎ., 2012). ಮಿಶ್ರಿತ ಹೊರಹೀರುವಿಕೆ ವಸ್ತು (ಜಯಂತ್ ಕುಮಾರ್ ಬಸು, 2012), ಬತ್ತದ ಹೊಟ್ಟು (ಶಫೀಕ್ ಉಲ್ ಆಲಮ್ ಎ.ಎಮ್., 2012), ಶೇಲ್ (ಜರೀಯಾ ಇಂರತಾನಬೊವೋರ್ನ್, 2012), ಚಿಟೋಸನ್ ಮೋಂಟ್ ಮೋರಿಲಿನೊನೈಟ್ (ರೋಯಿಸ್ಕಿನೋ ಸ್ಲಾಮೆಟ್ ಮತ್ತು ಇರಡವಟಿ 2013), ಕಡಿಮೆ ಬೆಲೆಯ ಹೊರ ಹೀರುವಿಕೆ ವಸ್ತು (ರಾಮಕೃಷ್ಣಯ್ಯ .ಸಿ.ಆರ್. ಮತ್ತು ಅರ್ಪಿತ .ಡಿ.ಎನ್. 2012)

ವಸ್ತುಗಳು

1. ಮರಳು.
2. ಅಂಕಣ (2ಸೆ.ಮಿ. ಅಗಲ ಮತ್ತು 30ಸೆ.ಮಿ. ಉದ್ದ)
3. ಬಿಸ್ಮಾರ್ಕ್ ಬ್ರೌನ್ (ಎಸ್.ಡಿ. ಫೈನ್ ಕೆಮಿಕಲ್ಸ್)
4. ಜಿಮ್‌ಸಾಸ್ ಸ್ಟೇನ್ (ಎಸ್.ಡಿ. ಫೈನ್ ಕೆಮಿಕಲ್ಸ್)
5. ಫ್ಯೂಷ್ಚಿನ್ ಬೆಸಿಕ್ (ಎಸ್.ಡಿ. ಫೈನ್ ಕೆಮಿಕಲ್ಸ್)
6. ಅತಿನೇರಳೆ ಗೋಚರ ಮಾಪಕ (ಸಿಸ್ಟ್ರೋನಿಕ್ಸ್ 118)

ವಿಧಾನ

1. ಹೊರಹೀರುವಿಕೆಯ ವಸ್ತುವಿನ ತಯಾರಿಕೆ ಒಂದೇ ತರವಾದ ಗಾತ್ರವಿರುವ ಮರಳನ್ನು ಜರಡಿಯಲ್ಲಿ ಸೋಸುವಿಕೆಯಿಂದ ಪಡೆಯಲಾಗಿದೆ. ಈ ಮರಳನ್ನು ಬಾಷ್ಪೀಕರಿಸಿದ ನೀರಿನಲ್ಲಿ ತೊಳೆಯುವುದರ ಮೂಲಕ ಬೇಡದ ಇತರ ಮಣ್ಣು ಮತ್ತು ವಸ್ತುಗಳನ್ನು ಬೇರ್ಪಡಿಸಲಾಗಿದೆ. ನೀರಿನಲ್ಲಿರುವ ಮರಳನ್ನು ಮಸ್ಲಿನ್ ಬಟ್ಟೆಯ ಮುಖಾಂತರ ಸೋಸಿ 100^0 ಸೆ. ನಲ್ಲಿ ಬಿಸಿಗಾಳಿ ಮುಖಾಂತರ ಒಣಗಿಸಬೇಕು.

2. ಹೊರಹೀರುವಿಕೆಯ ಅಂಶಗಳ ವಿಧಾನ ಅಂಶಗಳ ವಿಧಾನದಲ್ಲಿ 2ಸೆ.ಮಿ. ಅಗಲ ಮತ್ತು 30 ಸೆ.ಮಿ. ಉದ್ದ ಇರುವ ಕಾಲಂ ಆಯ್ದುಕೊಳ್ಳಲಾಗಿದೆ. ಕಾಲಂನ ತಳದಲ್ಲಿ ಗ್ಲಾಸ್‌ವುಲ್ ಅನ್ನು ಹಾಕಿ ಅದರ ಮೇಲೆ ಗೊತ್ತಿರುವ ಅಳತೆಯ ಮರಳನ್ನು ಸೇರಿಸಿ ಕಾಲಂ ಅನ್ನು ಕಟ್ಟಲಾಗಿದೆ ಮತ್ತು ನೀರಿನ ಹೊರ ಹೀರುವಿಕೆಯ ವೇಗವನ್ನು 1 ಡ್ರಾಪ್ (ಹನಿ) / ಸೆಕೆಂಡ್‌ನಂತೆ ಹೊಂದಿಸಿಕೊಳ್ಳಲಾಗಿದೆ. ಜಲಿಲೀಯ ದ್ರಾವಣದ ಹೊರಹೀರುವಿಕೆಯ ಮೊದಲು ಮತ್ತು ನಂತರದ ಗುಣಲಕ್ಷಣಗಳನ್ನು ಗೋಚರ ಅತಿ ನೇರಳೆ ಮಾಪಕದಿಂದ ತಾಳೆ ನೋಡಿ ಅದರಲ್ಲಿರುವ ನೀರಾದ ವ್ಯತ್ಯಾಸ ಮತ್ತು ನಿರ್ವರ್ಣೀಕರ್ಣವನ್ನು ನೋಡಲಾಗಿದೆ.

ಫಲಿತಾಂಶಗಳು ಮತ್ತು ಚರ್ಚೆ

1 ಬಿಸ್‌ಮಾರ್ಕ ಬ್ರೌನ್

a) ಸಾಂದ್ರತೆಯ ಅವಲಂಬನೆ: ಬಿಸ್‌ಮಾರ್ಕ ಬ್ರೌನ್‌ನಿನ ಜಲಿಲೀಯ ದ್ರಾವಣವನ್ನು ಅಂಕಣ ವಿಧಾನದಲ್ಲಿ ನಿರ್ವಣೀಕರಿಸಲಾಗಿದೆ. 2 ಗ್ರಾಂ ಮರಳನ್ನು ಹೊರಹೀರುವಿಕೆ ವಸ್ತುವಾಗಿ ಉಪಯೋಗಿಸಲಾಗಿದೆ ಮತ್ತು ಬೇರೆ, ಬೇರೆ ಸಾಂದ್ರತೆ ಬಣ್ಣವಿರುವ ಜಲಿಲೀಯ ದ್ರಾವಣವನ್ನು ನಿರ್ವರ್ಣಗೊಳಿಸಲು ಅಧ್ಯಯನಮಾಡಲಾಗಿದೆ. ಈ ಫಲಿತಾಂಶದಲ್ಲಿ 2 ಗ್ರಾಂ ಮರಳು 10 ಪಿಪಿಎಂ ಸಾಂದ್ರತೆಯ ವರ್ಣವನ್ನು (ಶೇಕಡವಾರು 94.5%) ಹೊರ ತೆಗೆಯುತ್ತದೆ. ಸಾಂದ್ರತೆ ಹೆಚ್ಚಾದಂತೆ, ಶೇಕಡಾವಾರು ತೆಗೆಯುವಿಕೆ ಕಡಿಮೆಯಾಗಿದೆ. ಇದನ್ನು ಚಿತ್ರ 1 ರಲ್ಲಿ ತೋರಿಸಲಾಗಿದೆ.



ಚಿತ್ರ1: ಸಾಂದ್ರತೆಯ ಅವಲಂಬನೆ

b) ಪ್ರಮಾಣ ಅವಲಂಬನೆ: 8 ಗ್ರಾಂ ಮರಳನ್ನು ಒಂದೇ ಸಾಂದ್ರತೆ ಹೊಂದಿರುವ ಬಣ್ಣದ ಹೊರಹೀರುವಿಕೆ ವಸ್ತುವಾಗಿ ಆಯ್ಕೆಮಾಡಿ ಕೊಳ್ಳಲಾಗಿದೆ . 8 ಗ್ರಾಂ ಮರಳಿನಿಂದ 10 ಪಿಪಿಎಂ ಬಣ್ಣವನ್ನು ಶೇಕಡವಾರು (98.3%) ನಷ್ಟು ಹೊರತೆಗೆಯಲಾಗಿದೆ.



ಚಿತ್ರ:2 ಪ್ರಮಾಣ ಅವಲಂಬನೆ

2. ಫ್ಯೂಷ್ಚಿನ್ ಬೇಸಿಕ್

a) ಸಾಂದ್ರತೆ ಅವಲಂಬನೆ: ಮೊದಲಾಗಿ 2 ಗ್ರಾಂ ಮರಳನ್ನು ಹೊರಹೀರುವಿಕೆವಸ್ತುವಾಗಿ ತೆಗೆದುಕೊಳ್ಳಲಾಗಿದ್ದು ಮತ್ತು ಅದನ್ನು ಬೇರೆ ಬೇರೆ ಬಣ್ಣದ ಸಾಂದ್ರತೆಯಿಂದ ಅಧ್ಯಯನಗೊಳಪಡಿಸಲಾಗಿದೆ. ಇದರಿಂದ ತಿಳಿದುಬಂದಿರುವುದೆನೆಂದರೆ 2 ಗ್ರಾಂ ಮರಳು 10 ಪಿಪಿಎಂ ಬಣ್ಣದ ಶೇಕಡವಾರು (96%) ನಷ್ಟು ಹೊರಹೀರಬಹುದಾಗಿದೆ.



ಚಿತ್ರ 4: ಪ್ರಮಾಣ ಅವಲಂಬನೆ

3. ಜಿಮ್ಸಸ್ಟೇನ್

a) ಸಾಂದ್ರತೆ ಅವಲಂಬನೆ

ಮೊದಲಾಗಿ 2 ಗ್ರಾಂ ಮರಳನ್ನು ಹೊರಹೀರುವಿಕೆವಸ್ತುವಾಗಿ ತೆಗೆದುಕೊಳ್ಳಲಾಗಿದ್ದು ಮತ್ತು ಅದನ್ನು ಬೇರೆ ಬೇರೆ ಬಣ್ಣದ ಸಾಂದ್ರತೆಯಿಂದ ಅಧ್ಯಯನಗೊಳಪಡಿಸಲಾಗಿದೆ. ಇದರಿಂದ ತಿಳಿದುಬಂದಿರುವುದೆನೆಂದರೆ 2 ಗ್ರಾಂ ಮರಳು 10 ಪಿಪಿಎಂ ಬಣ್ಣದ ಶೇಕಡವಾರು (95.8%) ನಷ್ಟು ಹೊರಹೀರಬಹುದಾಗಿದೆ.



ಚಿತ್ರ.5 ಸಾಂದ್ರತೆ ಅವಲಂಬನೆ

b) ಪ್ರಮಾಣ ಅವಲಂಬನೆ: 8 ಗ್ರಾಂ ಮರಳನ್ನು ಒಂದೇ ಸಾಂದ್ರತೆ ಹೊಂದಿರುವ ಬಣ್ಣದ ಹೊರಹೀರುವಿಕೆ ವಸ್ತುವಾಗಿ ಆಯ್ಕೆಮಾಡಿಕೊಳ್ಳಲಾಗಿದೆ . 8 ಗ್ರಾಂ ಮರಳಿನಿಂದ 10 ಪಿಪಿಎಂ ಬಣ್ಣ ವನ್ನು ಶೇಕಡವಾರು (99.7%) ನಷ್ಟು ಹೊರತೆಗೆಯಲಾಗಿದೆ.



ಚಿತ್ರ. 6. ಪ್ರಮಾಣ ಅವಲಂಬನೆ

ವಿದ್ಯುತ್ ಸೂಕ್ಷ್ಮದರ್ಶಕ ಚಿತ್ರಣದಿಂದ ನಾವು ಹೊರಹೀರಿರುವುದು ಮತ್ತು ಹೊರಹೀರದೆ ಇರುವ ಬಣ್ಣವನ್ನು ವಿಂಗಡಿಸಬಹುದಾಗಿದೆ . ಚಿತ್ರಣದ ಫಲಿತಾಂಶವನ್ನು ಚಿತ್ರ 7. ರಲ್ಲಿ ತೋರಿಸಲಾಗಿದೆ. ಚಿತ್ರಣ ಮರಳ ಕಣಗಳ ಹೊರಹೀರುವಿಕೆ ಮತ್ತು ಹೊರಹೀರುವಿಕೆಯಲ್ಲದ ವ್ಯತ್ಯಾಸವನ್ನು ತೋರಿಸುತ್ತದೆ. ಇದರಿಂದ ಕಂಡುಬರುವುದೇನೆಂದರೆ ಮರಳು ಪ್ಯೂಷ್ಚಿನ್‌ಬೇಸಿಕ್, ಬಿಸ್‌ಮಾರ್ಕ್‌ಬ್ರೌನ್ ಮತ್ತು ಜಿಮ್ಸಸ್ಟೇನ್ ಬಣ್ಣಗಳನ್ನು ಅಂಕಣವಿದಾನದ ಮೂಲಕ ಉತ್ತಮವಾದ ಹೊರಹೀರು ವಿಕೆ ವಸ್ತುವಾಗಿ ಉಪಯೋಗಿಸಬಹುದಾಗಿದೆ.

ಚಿತ್ರ. ಅ ಚಿತ್ರ. ಆ



ಚಿತ್ರ. ಇ ಚಿತ್ರ. ಈ

ಚಿತ್ರ 7. ವಿದ್ಯುತ್ ಸೂಕ್ಷ್ಮದರ್ಶಕ ಚಿತ್ರಣಗಳು (ಅ) ಹೊರಹೀರದ ಮರಳ ಕಣ (ಆ) ಪ್ಯೂಷ್ಚಿನ್ ಬೇಸಿಕ್ ಬಣ್ಣ ಹೊರಹೀರಿದ ಮರಳ ಕಣ (ಇ) ಬಿಸ್‌ಮಾರ್ಕ್ ಬ್ರೌನ್ ಬಣ್ಣ ಹೊರಹೀರಿದ ಮರಳ ಕಣ ಈ)ಜಿಮ್ಸಸ್ಟೇನ್ ಹೊರಹೀರಿದ ಮರಳ ಕಣ

ತೀರ್ಮಾನ: ಪ್ರಸ್ತುತ ಅಧ್ಯಯನದಿಂದ ನಮಗೆ ಕಂಡುಬರುವುದೆನೆಂದರೆ, ಶೇಕಡಾವಾರು ಹೋರಹೀರುವಿಕೆಯು ನೇರವಾಗಿ ಹೋರಹೀರು ವಿಕೆಯ ವಸ್ತುವಿನ ಪ್ರಮಾಣಕ್ಕೆ ಮತ್ತು ವಿಲೋಮವಾಗಿ ವರ್ಣದ ಸಾಂದ್ರತೆಗೊ ಅವಲಂಬಿತವಾಗಿದೆ.

ಮೇಲಿನ ಅಧ್ಯಯನದಿಂದ ಮರಳು, ಬಿಸ್‌ಮಾರ್ಕ್ ಬ್ರೌನ್, ಪ್ಯೂಷ್ಚಿನ್ ಬೇಸಿಕ್ ಮತ್ತು ಜಿಮ್ಸಸ್ಟೇನ್ ವರ್ಣಗಳಿಗೆ ಉತ್ತಮ ಹೋರಹೀರುವಿಕೆಯ ವಸ್ತುವಾಗಿದೆ. ಅತಿ ಕಡಿಮೆ ವೆಚ್ಚದಲ್ಲಿ ಮತ್ತು ಸುಲಭವಾಗಿ ಸಿಗುವುದ ರಿಂದ ಮರಳನ್ನು ಕಲಷಿತ ನೀರಿನ ಬಣ್ಣವನ್ನು ತೆಗೆಯಲು ಉಪಯೋಗಿ ಸಬಹುದು.

ಉಲ್ಲೇಖನಗಳು:

1 ಪೂಜಾ ಮತ್ತು ಶ್ರೀವಾಸ್ತವ **2012**. ಆಲೋಗಡ್ಡೆ ಸಿಪ್ಪೆಯನ್ನು ಹೊರಹೀರುವ ವಸ್ತುವಾಗಿ ಬೇಸಿಕ್‌ಬಣ್ಣಗಳ ಹೊರತೆಗೆಯುವ ಅಧ್ಯಯನ , ನಡಾವಳಿ, *ರಸಾಯನ ಜೀವಶಾಸ್ತ್ರ ಮತ್ತು ಬೌತಿಕ ವಿಜ್ಞಾನ, 2(2),* 597–600.

2 ಗೀತಾ ಕೆ.ಎಸ್ ಮತ್ತು ಬೆಳಗಲಿ ಎಸ್.ಎಲ್ **2012**. ಅಗ್ಗವಾದ ಹೊರಹೀರುವಿಕೆವಸ್ತು ಬೆಳ್ಳುಳಿ ಸಿಪ್ಪೆಯಿಂದ ಕೆಲವು ಲೋಹಗಳು ಮತ್ತು ಬಣ್ಣಗಳ ಹೊರಹೀರುವಿಕೆಯ ಅಧ್ಯಯನ , ಎಕೋಸ್ಕಾನ್ ನಡಾವಳಿ, *4(1* ಮತ್ತು *2),* 189 – 193.

3 ಗೀತಾ ಕೆ.ಎಸ್ ಮತ್ತು ಬೆಳಗಲಿ ಎಸ್.ಎಲ್ **2012**. ಮೊಟ್ಟೆ

ಚಿಪ್ಪುಗಳನ್ನು ಹೊರಹೀರುವಿಕೆಯ ವಸ್ತುವಾಗಿ ಬಳಸಿ ಜಲಿಲೀಯ ತ್ಯಾಜ್ಯಜಲದ ಕೆಲವು ಬಾರ ಲೋಹಗಳನ್ನು ಹೋರ ತೆಗೆಯುವಿಕೆ , *ಪ್ರದೋಷಣ ಸಂಶೋದನೆ ನಡಾವಳಿ, 31(1).* 111–116.

4 ಜಯಂತಕುಮಾರಬಸು ಇತರರು. **2012.** ಸಮ್ಮಿಶ್ರ ಹೊರಹೀರುವ ವಸ್ತುವನ್ನು ಉಪಯೋಗಿಸಿ ಜವಳಿಬಣ್ಣ ನೇರನೀಲಿ86ನ ಸ್ಥಿರ ಹಾಸಿಗೆ ಅಂಕಣದ ಅಧ್ಯಯನ, *ಅನ್ವಯಿಕ ದಾಖಲೆಗಳ ಸಂಶೋದನ ವಿಜ್ಞಾನ ನಡಾವಳಿ, 4(2):* 882–891.

5 ಅನ್ ಜೆ. ಎಜ್., ಡುಲ್ಟ್ಸ ಎಸ್. **2007.** ಪಿಎಚ್ ಮತ್ತು ಮೆಲ್ಟ್ಸ ಚಾರ್ಚ ಗುಣಲಕ್ಷಣಗಳ ಕಾರ್ಯದ ಬಗ್ಗೆ ಚಿಟೋಸಾನ್ ಮೊಂಟ್ಮೊರಿಲ್ಲೈಟ್‌ನಿಂದ ಟ್ಯಾನ್ನಿಕ ಆಮ್ಲವನ್ನು ಹೋರಹೀರಿರುವುದು, *ಅನ್ವಯಿಕ ಮಣ್ಣಿನ ವಿಜ್ಞಾನ ನಡಾವಳಿ. 36:* 256–264

6 ಅಣ್ಣದೊರೈ ಜಿ., ಅಣ್ಣದೊರೈ ಆರ್.ಎಸ್., ಯನ್ ಪಿ.ಎಸ್. ಮತ್ತು ಲೀ ಡಿ. ಜೆ., **2003,** ಉಷ್ಣತೆಚಿಕಿತ್ಸೆಯ ಜೈವಿಕ ಕೆಸರಿನ ತ್ಯಾಜ್ಯವನ್ನು ಬಣ್ಣಗಳ ಹೊರಹೀರುವಿಕೆ ವಸ್ತುವಾಗಿ ಉಪಯೋಗಿಸುವುದು, *ಮುಂದುವರೆದ ಪರಿಸರ ಸಂಶೋಧನೆ ನಡಾವಳಿ. 7* 739 – 744.

7 ಭಟ್ಟಾಚಾರ್ಯ ಕೆ.ಜಿ. ಮತ್ತು ಶರ್ಮ ಎ., **2003.** ಬೇವಿನ ಎಲೆಯ ಪುಡಿಯಿಂದ ಅದ್ಭುತ ಹಸಿರು ಬಣ್ಣದ ಹೊರಹೀರುವಿಕೆ ಗುಣಲಕ್ಷಣಗಳು, *ಬಣ್ಣಗಳು ವರ್ಣದ್ರವ್ಯಗಳು ನಡಾವಳಿ. 57,* 211–222.

8 ನಮಃ ಶಿವಾಯಮ್ ಸಿ., ನಮಃ ಶಿವಾಯಮ್ ಕೆ. ಎಂ., ಸೆಲ್ವಿ ಕೆ., ಬೇಗಮ್ ಎ. ಆರ್., ಬೇಗಮ್ ಟಿ., ಯಮುನ ಆರ್. ಟಿ., **2001,** ತ್ಯಾಜ್ಯನೀರಿನ ಬಣ್ಣಗಳಿಗೆ ನಾರು ಮುಖ್ಯಭಾಗದ ತ್ಯಾಜ್ಯ ಸಂಭಾವ್ಯ ಜೀವರಾಶಿಯ ಒಂದು ಚಿಕಿತ್ಸೆಯಾಗಿದೆ, *ಜೀವರಾಶಿ ಜೈವಿಶಕ್ತಿ ನಡಾವಳಿ. 21* ,477–483

9 ನಮಃ ಶಿವಾಯಮ್ ಸಿ., ಮುನಿಯಸ್ವಾಮಿ ಎನ್., ಗಾಯಿತ್ರಿ ಕೆ., ರಾಣಿ ಎಂ., ರಂಗನಾಧನ್ ಕೆ., **1996,** ಸೆಲ್ಯೊಲೋಸ್ ತ್ಯಾಜ್ಯ ಕಿತ್ತಲೆ ಸಿಪ್ಪೆಯಿಂದ ಜಲಿಲೀಯ ದ್ರಾವಣ ಬಣ್ಣಗಳ ಹೊರತೆಗೆಯುವಿಕೆ, *ಜೈವಿಕ ಸಂಪನ್ಮೂಲಗಳು ತಾಂತ್ರಿಕತೆ ನಡಾವಳಿ. 57,* 37–43.

ಘನತ್ಯಾಜ್ಯ ನಿರ್ವಹಣೆ ಮತ್ತು ಜೈವಿಕ ಗೊಬ್ಬರದ ಭೌತ ರಾಸಾಯನಿಕ ಗುಣಲಕ್ಷಣಗಳು

ಶ್ಯಾಮಲ ಡಿ.ಸಿ. ಮತ್ತು ಬೆಳಗಲಿ ಎಸ್.ಎಲ್.
ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 570 006
ಇ.ಮೇಲ್ : shyamala_csh@yahoo.com

ಕೈಗಾರಿಕಾ ಕ್ರಾಂತಿ, ನಗರಗಳ ಬೆಳವಣಿಗೆ ಹಾಗೂ ಜನಜೀವನ ಶೈಲಿಯಲ್ಲಿನ ಬದಲಾವಣೆಯಿಂದ, ಇಂದು ವಿಶ್ವದಲ್ಲಿನ ನಗರಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳಲ್ಲಿ ಘನತ್ಯಾಜ್ಯ ನಿರ್ವಹಣೆಯು ಪ್ರಮುಖವಾದುದ್ದಾಗಿದೆ. ಈ ಘನತ್ಯಾಜ್ಯವನ್ನು ಮುಂದುವರಿದ ಹಾಗೂ ಮುಂದುವರಿಯುತ್ತಿರುವ ದೇಶಗಳು ಅದರ ಗುಣಲಕ್ಷಣಗಳ ಆಧಾರದ ಮೇಲೆ ವಿವಿಧ ವಿಧಾನಗಳನ್ನು ಬಳಸಿ ನಿರ್ವಹಣೆಯನ್ನು ಮಾಡುತ್ತಿವೆ. ಅವುಗಳಲ್ಲಿ ಜೈವಿಕ ಸಂಸ್ಕರಣಾ ವಿಧಾನವು ಭಾರತದಲ್ಲಿನ ಘನತ್ಯಾಜ್ಯ ಗುಣಲಕ್ಷಣಕ್ಕೆ ಪೂರಕವಾಗಿದೆ. ಈ ವಿಧಾನವು ಪರಿಸರಸ್ನೇಹಿ ಹಾಗೂ ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರಮಾಣದ ಘನತ್ಯಾಜ್ಯವನ್ನು ಉಪಯೋಗಿಸಿ ಉಪಯುಕ್ತ ಗೊಬ್ಬರವನ್ನಾಗಿ ಪರಿವರ್ತಿಸಬಹುದಾಗಿದೆ. ಈ ಸಂಶೋಧನಾ ವರದಿಯಲ್ಲಿ ಪ್ರಮುಖವಾಗಿ ಚರ್ಚಿಸಿರುವ ವಿಷಯಗಳೆಂದರೆ, ಘನತ್ಯಾಜ್ಯ ನಿರ್ವಹಣೆಯ ಘಟಕದಲ್ಲಿ (ಮೈಸೂರು ಜೈವಿಕ ಘಟಕ) ನಡೆಯುವ ಜೈವಿಕ ಸಂಸ್ಕರಣಾ ವಿಧಾನದಿಂದ ಘನತ್ಯಾಜ್ಯದಲ್ಲಾಗುವ 10ನೇ, 20ನೇ, 30ನೇ 40ನೇ, 50ನೇ ಮತ್ತು 60ನೇ ದಿನಗಳಲ್ಲಿ ಆಗುವ ಭೌತ – ರಾಸಾಯನಿಕ ಮತ್ತು ಭಾರಲೋಹಗಳನ್ನು ಪರೀಕ್ಷಿಸಿ ಮತ್ತು ಅವುಗಳನ್ನು ನಿಗದಿತ ಮಾನದಂಡಗಳೊಂದಿಗೆ ಹೋಲಿಸಿ ನೋಡಲಾಗಿದೆ. ಈ ಫಲಿತಾಂಶದಲ್ಲಿ ಕಂಡುಬರುವಂತಹ ಪ್ರಮುಖ ಅಂಶಗಳೆಂದರೆ, ಭೌತ –ರಾಸಾಯನಿಕ ಮಾನದಂಡಗಳಾದ ಇಂಗಾಲ ಮತ್ತು ಸಾರಜನಕ ಅನುಪಾತ, ರಸಸಾರ, ಲವಣಾಂಶಗಳು ಹಾಗೂ ಎಲ್ಲಾ ಭಾರಲೋಹಗಳು ನಿಗದಿತ ಮಟ್ಟದಲ್ಲಿ ಕಂಡು ಬರುತ್ತವೆ. ಭೌತಿಕ ಮಾನದಂಡಗಳಾದ ಉಷ್ಣತೆ ಮತ್ತು ತೇವಾಂಶಗಳು 40 ಮತ್ತು 50ನೇ ದಿನಗಳಲ್ಲಿ ಹೆಚ್ಚಾಗಿದ್ದು ನಂತರ ದಿನಗಳಲ್ಲಿ (60ನೇ ದಿನ) ಕಡಿಮೆಯಾಗಿವೆ. ದೊಡ್ಡ ಪ್ರಮಾಣದ ಅತ್ಯ ಅಮೂಲ್ಯ ಸಸ್ಯ ಪೋಷಕಾಂಶಗಳಾದ, ಸಾರಜನಕ, ರಂಜಕ, ಮತ್ತು ಇತರೆ ವಸ್ತುಗಳು 60ನೇ ದಿನದಲ್ಲಿ ಹೆಚ್ಚು ಕಂಡು ಬಂದಿದ್ದು ಈ ಗೊಬ್ಬರವನ್ನು ಕೃಷಿ ಮತ್ತು ತೋಟಗಾರಿಕೆಗೆ ಬಳಸಬಹುದಾಗಿದೆ.

ಮುಖ್ಯ ಪದಗಳು: ಘನತ್ಯಾಜ್ಯ ನಿರ್ವಹಣೆ, ಜೈವಿಕ ಗೊಬ್ಬರ, ಭೌತ ರಾಸಾಯನಿಕ ಗುಣಲಕ್ಷಣಗಳು, ಪೋಷಕಾಂಶಗಳು.

ಪೀಠಿಕೆ: ಕ್ಷೀಪ್ರ ಕೈಗಾರಿಕಾ ಬೆಳವಣಿಗೆ, ವಿಶ್ವದ ಆರ್ಥಿಕ ಅಭಿವೃದ್ಧಿ ಹಾಗೂ ನಗರಗಳಿಗೆ ಹಳ್ಳಿಗಳ ಜನರ ವಲಸೆ ಕಾರಣಗಳಿಂದ ನಗರಗಳಲ್ಲಿ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿದ್ದು ಹಾಗೂ ಜೊತೆಜೊತೆಗೆ ಹಲವಾರು ಸಮಸ್ಯೆಗಳು ಸಹ ಸವಾಲಾಗಿ ಪರಿಣಮಿಸಿವೆ. ಇವುಗಳಲ್ಲಿ ಪ್ರಯುಖವಾಗಿ ಜಲಮಾಲಿನ್ಯ, ವಾಯುಮಾಲಿನ್ಯ, ಶಬ್ದ ಮಾಲಿನ್ಯ ಹಾಗೂ ಘನತ್ಯಾಜ್ಯ ಮಾಲಿನ್ಯ. ಘನತ್ಯಾಜ್ಯ ಮಾಲಿನ್ಯ ಇಂದು ನಗರಗಳಲ್ಲಿ ಅತಿದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ, ಏಕೆಂದರೆ ಪ್ರತಿದಿನ ಸಾವಿರಾರು ಟನ್‌ನಷ್ಟು ತ್ಯಾಜ್ಯವನ್ನು ನಗರಗಳಲ್ಲಿ ಉತ್ಪತ್ತಿಯಾಗಿ, ಈ ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸದೆ, ಸಮಸ್ಯೆ ದೊಡ್ಡ ಮಟ್ಟದಲ್ಲಿ ಸಾಗುತ್ತಿದೆ (**ಸಿಂಗ್ ಮತ್ತು ಸಿಂಗ್, 1998; ಗುಪ್ತಾ ಮತ್ತು ಇತರರು., 1998**).

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ 2009–2012ರ ಅಂಕಿ ಅಂಶಗಳ ಪ್ರಕಾರ ಭಾರತದೇಶವು ದಿನವೊಂದಕ್ಕೆ 1, 27, 486 (ಟನ್/ದಿನ) ಘನತ್ಯಾಜ್ಯವನ್ನು ಉತ್ಪತ್ತಿ ಮಾಡುತ್ತಿದೆ. ಈ ತ್ಯಾಜ್ಯ ಉತ್ಪತ್ತಿ ಹೆಚ್ಚಾಗಲು ಪ್ರಯುಖ ಕಾರಣಗಳೆನೆಂದರೆ, ಜನ ಜೀವನ ಶೈಲಿ, ಆಹಾರ ಪದ್ದತಿ, ಹವಾಗುಣ ಹಾಗೂ ವಾಣಿಜ್ಯ ಚಟುವಟಿಕೆಗಳ ಮೇಲೆ ಅವಲಂಬಿತವಾಗಿದೆ. ಘನತ್ಯಾಜ್ಯ ಸಮರ್ಪಕವಾದ ನಿರ್ವಹಣೆಗಳೆಂದರೆ, ಜೈವಿಕ ಸಂಸ್ಕರಣಾ ವಿಧಾನ, ವೈಜ್ಞಾನಿಕ ರೀತಿಯ ಕಸ

ತುಂಬುವಿಕೆ, ವಹಿಸುವಿಕೆ, ಸುಡುವಿಕೆ, ಜೈವಿಕ ಅನಿಲ ಸಂಸ್ಕರಣಾ ವಿಧಾನ ಇತ್ಯಾದಿ. ಇವುಗಳಲ್ಲಿ ಜೈವಿಕ ಸಂಸ್ಕರಣಾ ವಿಧಾನವು ನಗರಗಳಲ್ಲಿ ಒಂದು ಪ್ರಚಲಿತ ಹಾಗೂ ಪರಿಣಾಮಕಾರಿ ವಿಧಾನವಾಗಿದೆ, ಏಕೆಂದರೆ, ಮಾದಲನೆಯದಾಗಿ, ಹೆಚ್ಚು ಪ್ರಮಾಣದ ಕಸವನ್ನು ಗೊಬ್ಬರವಾಗಿ ಪರಿವರ್ತಿಸಬಹುದು, ಸಂಪೂರ್ಣ ಪರಿಸರ ಸ್ನೇಹಿ ವಿಧಾನ, ಇದಕ್ಕೆ ತಗಲುವ ವೆಚ್ಚ ತುಂಬಾ ಕಡಿಮೆ ಹಾಗೂ ಈ ವಿಧಾನದಿಂದ ಸಸ್ಯಗಳಿಗೆ ಬೇಕಾದ ಪೋಷಕಾಂಶಗಳನ್ನು ಗೊಬ್ಬರದ ಮೂಲಕ ಪೂರೈಸಬಹುದು.

ಅಧ್ಯಯನ ಪ್ರದೇಶ: ಮೈಸೂರು ಕರ್ನಾಟಕ ರಾಜ್ಯದಲ್ಲಿರುವ ಒಂದು ಪ್ರಸಿದ್ಧ ಸಾಂಸ್ಕೃತಿಕ ಹಾಗೂ ಅರಮನೆ ನಗರವೆಂದು ಪ್ರಖ್ಯಾತಿಯನ್ನು ಪಡೆದಿದೆ. ಪ್ರತಿ ವರ್ಷ ಸೆಪ್ಟಂಬರ್ ಅಥವಾ ಆಕ್ಟೋಬರ್ ತಿಂಗಳಿನಲ್ಲಿ ವಿಶ್ವವಿಖ್ಯಾತ ದಸರ ಮಹೋತ್ಸವ ನಡೆಯುತ್ತದೆ ಹಾಗೂ ಇದನ್ನು ನೋಡಲು ದೇಶ–ವಿದೇಶದಿಂದ ಹಲವಾರು ಯಾತ್ರಿಕರು ಆಗಮಿಸುತ್ತಾರೆ. ಈ ನಗರವು ಸಮುದ್ರ ಮಟ್ಟದಿಂದ 770 ಕಿ.ಮಿ. ಎತ್ತರದಲ್ಲಿದೆ ಹಾಗೂ ವರ್ಷ ಪೂರ್ತಿ ಆಹ್ಲಾದಕರವಾದ ಹವಾಮಾನ ಹೊಂದಿದೆ. ಗರಿಷ್ಟ ಉಷ್ಣಾಂಶ 38.5 ಡಿಗ್ರಿಯಷ್ಟು 4 ನೇ ತಾರೀಖು ಮೇ 2006 ರಂದು ದಾಖಲಾಗಿತ್ತು ಹಾಗೂ ಕನಿಷ್ಟ ಉಷ್ಣಾಂಶ 7.7 ಡಿಗ್ರಿಯಷ್ಟು ದಿನಾಂಕ 16 ಜನವರಿ 2012 ದಾಖಲಾಗಿತ್ತು. ಸರಾಸರಿ ಮಳೆಯ ಮಟ್ಟ 804.2 ಮೀ.ಮೀ ಹಾಗೂ ಇದರ ವಿಸ್ತಾರವು 12^0 30' ಉತ್ತರ ರೇಖಾಂಶ ಮತ್ತು 76^0 39' ಪೂರ್ವ ಅಕ್ಷಾಂಶದಲ್ಲಿ ಕಂಡುಬರುತ್ತದೆ. ಇದರ ವಿಸ್ತಾರವು 128.42 ಚದರ ಕಿ.ಮೀ. ಹರಡಿಕೊಂಡಿದೆ (**ಚಿತ್ರ 1**). ಇಲ್ಲಿನ ಜನಸಂಖ್ಯೆ ಒಟ್ಟು 9, 55, 440 ರಷ್ಟಿದೆ.



ಚಿತ್ರ 1 : ಅಧ್ಯಯನ ಪ್ರದೇಶದ ಸ್ವರೂಪ ನಕ್ಷೆ

ಚಿತ್ರ 2 : ಘನತ್ಯಾಜ್ಯ ನಿರ್ವಹಣೆ ಘಟಕ

ಪರಿಕರಗಳು ಮತ್ತು ವಿಧಾನಗಳು:

ದ್ವಿತೀಯ ಹಂತದ ದತ್ತಾಂಶ ಮಾಹಿತಿಗಳು: ಮೈಸೂರು ನಗರವು ವೇಗವಾಗಿ ಬೆಳೆಯುತ್ತಿದ್ದು, ದಿನೇ ದಿನೇ ಘನತ್ಯಾಜ್ಯದ ಮಟ್ಟವೂ ಹೆಚ್ಚುತ್ತಿದ್ದು, ಪ್ರತಿದಿನ 65 ವಾರ್ಡಗಳಿಂದ ಸರಿಸುಮಾರು 400 ಟನ್‌ನಷ್ಟು ಘನತ್ಯಾಜ್ಯ ಉತ್ಪತ್ತಿಯಾಗುತ್ತಿದೆ, ಈ ಘನತ್ಯಾಜ್ಯವನ್ನು ವಿದ್ಯಾರಣ್ಯಪುರಂನ ಜೈವಿಕ ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಲಾಗುತ್ತದೆ. 2010 ರಿಂದ 2014 ರವರೆಗಿನ ದ್ವಿತೀಯ ಹಂತದ ದತ್ತಾಂಶ ಮಾಹಿತಿಗಳನ್ನು ಜೈವಿಕ ಸಂಸ್ಕರಣಾ ಘಟಕದ ಕಛೇರಿ ಮತ್ತು ಮೈಸೂರು ನಗರ ಪಾಲಿಕೆಯಲ್ಲಿ ಸಂಗ್ರಹಿಸಲಾಯಿತು.

ಜೈವಿಕ ಸಂಸ್ಕರಣಾ ಘಟಕ ಮತ್ತು ಮಾದರಿಗಳು: ಮುನ್ಸಿಪಲ್ ಘನತ್ಯಾಜ್ಯ ಸಾವಯವ ಜೈವಿಕ ಮಾದರಿಗಳನ್ನು ವಿದ್ಯಾರಣ್ಯಪುರಂನ ದೊಡ್ಡ ಪ್ರಮಾಣದ ಜೈವಿಕ ಸಂಸ್ಕರಣಾ ಘಟಕದಿಂದ ವಿವಿಧ ಹಂತಗಳಲ್ಲಿ ಮಾರ್ಚ್ 2013 ರಿಂದ ಏಪ್ರಿಲ್ 2013ರ ಮಾಹೆಯವರೆಗೆ ಮಾದರಿಯನ್ನು ಸಂಗ್ರಹಿಸಲಾಯಿತು (ಒಟ್ಟು ವಿಘಟನೆ ದಿನಗಳು 60 ರಿಂದ 65 ದಿನಗಳು). ಈ ಮಾದರಿಗಳ ಹಂತಗಳೆಂದರೆ; $10^{ನೇ}$, $20^{ನೇ}$, $30^{ನೇ}$, $40^{ನೇ}$, $50^{ನೇ}$ ಮತ್ತು $60^{ನೇ}$ ದಿನ ಘನತ್ಯಾಜ್ಯ ಮಾದರಿಗಳು. ಈ ಮಾದರಿಗಳನ್ನು ಪ್ರಯೋಗಾಲಯಕ್ಕೆ ತಂದು ಸ್ವಚ್ಛಗೊಳಿಸಿ, ಬಿಸಿಗಾಳಿಯ ಒಲೆಯಲ್ಲಿ ಒಣಗಿಸಿ 2 ಮಿ.ಮೀ. ಜಾಲರಿಯ ಸಹಾಯದಿಂದ ಶೋಧಿಸಿ, ಭೌತ–ರಾಸಾಯನಿಕ ಮತ್ತು ಭಾರ ಲೋಹಗಳ ಸಾರೀಕರಣ ಪರೀಕ್ಷೆಗೆ ಒಳಪಡಿಸಲಾಯಿತು. ವಿಶ್ಲೇಷಣೆ ಪ್ರಮಾಣೀತ ವಿಧಾನವನ್ನು **ಜಾಕ್ಸನ್ 1973, ಮಣಿ ಮತ್ತು ಇತರರು, 2007, ಅರುಣ್ ಕುಮಾರ್ 2008,** ಪ್ರಯೋಗಾಲಯ ಪುಸ್ತಕಗಳ ಆಧಾರದ ಪ್ರಕಾರ ನಡೆಸಲಾಯಿತು.

ಭೌತ–ರಾಸಾಯನಿಕ ಗುಣಲಕ್ಷಣಗಳು ಮತ್ತು ಭಾರ ಲೋಹಗಳ ಸಾರೀಕರಣದ ವಿಶ್ಲೇಷಣೆ ವಿಧಾನಗಳು: ಉಷ್ಣತೆಯನ್ನು ಪ್ರತಿ ಹಂತಗಳಲ್ಲಿನ ಘನತ್ಯಾಜ್ಯ ಮಾದರಿ ಸಂಗ್ರಹಣ ಸಂದರ್ಭದಲ್ಲಿ ಉಷ್ಣತಾಮಾಪಕ ಬಳಸಿ ಅಳೆಯಲಾಯಿತು, ತೇವಾಂಶ (ಬಿಸಿಗಾಳಿ ಒಲೆಯ ಮೂಲಕ, ಗ್ರಾವಿಮೆಟ್ರಿಕ್ ವಿಧಾನ); ಘನ ಸಾಂದ್ರತೆ (ಪೈಕ್ನೋಮೀಟರ್ ವಿಧಾನ); ಕ್ವಾರಿಯತೆ ಮತ್ತು ಆಮ್ಲೀಯತೆ (ಪಿ.ಹೆಚ್. ಮೀಟರ್ ಮೂಲಕ, 1:5 ನೀರಿನ ಸಾರ) ವಿದ್ಯುತ್ವಾಹಕತೆ (ಡಿಜಿಟಲ್ ವಾಹಕತೆ ಮೀಟರ್); ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂ (ಇಡಿಟಿಎ ವಿಧಾನ); ಒಟ್ಟು ಸಾವಯವ ಇಂಗಾಲ (ವಾಕಿ ಮತ್ತು ಬ್ಲಾಕ್ ವಿಧಾನ); ಒಟ್ಟು ಸಾವಯವ ಸಾರಜನಕ (ಜಲಡಾಲ್ ವಿಧಾನ); ನೈಟ್ರೇಟ್–ಸಾರಜನಕ (ಬ್ರೂಸಿನ್ ಸಲ್ಫೇಟ್ ವಿಧಾನ); ಅಮೋನಿಯಾ–ಸಾರಜನಕ (ನೆಸ್‌ಲರ್ಸ್ ರಿಯೇಜಂಟ್ ವಿಧಾನ); ಕರಗಬಲ್ಲ ಗಂಧಕ (ಬೇರಿಯಂ ಕ್ಲೋರೈಡ್ ವಿಧಾನ); ಒಟ್ಟು ರಂಜಕ (ಒಲ್‌ಸನ್ ವಿಧಾನ); ಪೊಟ್ಯಾಸಿಯಂ ಮತ್ತು ಸೋಡಿಯಂ (ಫ್ಲೇಮ್ ಫೊಟೋಮೀಟರ್ ವಿಧಾನ); ಒಟ್ಟು ಸಾರಜನಕ ಮತ್ತು ಸಾವಯವ ಇಂಗಾಲದ ಅನುಪಾತ (**ಮಾರ್ಟಿನ್, 1991**) ಗಳಿಂದ ನಿರ್ಧರಿಸಲಾಯಿತು. ನೀರಿನಲ್ಲಿ ಕರಗುವ ಮತ್ತು ಆಮ್ಲಗಳಲ್ಲಿ ಜೀರ್ಣವಾಗುವ ಪ್ರಮಾಣಾತ್ಮಕ ಭಾರಲೋಹಗಳಾದ, ತಾಮ್ರ, ಕ್ಯಾಡ್ಮಿಯಂ, ಸೀಸ, ಪಾದರಸ ಮತ್ತು ಆರ್ಸನಿಕ್ ಸಾರೀಕರ ಣವನ್ನು ಪರಮಾಣು ಹೀರಿಕೆ ವರ್ಣಪಟಲಪೊಟೋಮಾಪಕದ ಮೂಲಕ ಅಳೆಯಲಾಯಿತು (**ಮಣಿ ಮತ್ತು ಇತರರು, 2007**).

ಫಲಿತಾಂಶ ಮತ್ತು ವಿಮರ್ಶೆ:

ಕೋಷ್ಟಕ 1: ಘನತ್ಯಾಜ್ಯ ಸಂಗ್ರಹಣೆ & ಗೊಬ್ಬರದ ಉತ್ಪಾದನೆ

ಸಂ.	ತಿಂಗಳು	ಘನತ್ಯಾಜ್ಯ ಸಂಗ್ರಹಣೆ		ಗೊಬ್ಬರದ ಉತ್ಪಾದನೆ	
		2011–12	2012–13	2011–12	2012–13
1	ಏಪ್ರಿಲ್	4005	5657	467	345
2	ಮೇ	4497	5961	22	181
3	ಜೂನ್	4970	5614	181	401
4	ಜುಲೈ	6899	3898	479	275
5	ಆಗಸ್ಟ್	6542	4281	758	477
6	ಸೆಪ್ಟಂಬರ್	5663	5164	702	413
7	ಆಕ್ಟೋಬರ್	5945	5643	543	361
8	ನವಂಬರ್	5943	4654	514	316
9	ಡಿಸೆಂಬರ್	5975	3944	803	616.88
10	ಜನವರಿ	5704	3528	791	677.44
11	ಫೆಬ್ರವರಿ	5279	3599	863	773.87
12	ಮಾರ್ಚಿ	5645	2350	810	507.00
ಒಟ್ಟು (ಟನ್ ರೂಪದಲ್ಲಿ)		67,067	54,293	6,933	5344.2



ರೇಖಾ ಚಿತ್ರ 1: 2011–12 ರ ಘನತ್ಯಾಜ್ಯ ಸಂಗ್ರಹಣೆ & ಗೊಬ್ಬರದ ಉತ್ಪಾದನೆ



ರೇಖಾ ಚಿತ್ರ 2: 2012–13 ರ ಘನತ್ಯಾಜ್ಯ ಸಂಗ್ರಹಣೆ & ಗೊಬ್ಬರದ ಉತ್ಪಾದನೆ

ಕೋಷ್ಟಕ 2: ಘನತ್ಯಾಜ್ಯವು ವಿಘಟನೆ ಹೊಂದುವ ವಿವಿಧ ಹಂತಗಳಲ್ಲಿನ ಭೌತ–ರಾಸಾಯನಿಕ ಮತ್ತು ಭಾರಲೋಹಗಳ ಸಾಂದ್ರತೆಗಳು

ಸಂ ಖ್ಯೆ	ನಿಯತಾಂಕಗಳು	ಮಾಪನಗಳು	10ನೇ ದಿನ	20ನೇ ದಿನ	30ನೇ ದಿನ	40ನೇ ದಿನ	50ನೇ ದಿನ	60ನೇ ದಿನ	ವಿಘಟಿಸಿದ ಮಾನದಂಡಗಳು
1	ತಾಪಮಾನ	(ಡಿಗ್ರಿ ಸೆಲ್ಸಿಯಸ್)	48	59	62	65	42	38	–
2	ತೇವಾಂಶ	(ಶೇಕಡ)	59	58	60	61	40	28	45–65
3	ಆಮ್ಲೀಯತೆ ಮತ್ತು ಕ್ಷಾರೀಯತೆ	–	5.9	6.2	8.5	8	8.2	8.9	6.9–8.3
4	ವಿದ್ಯುತ್ವಾಹಕತೆ	(ಡಿಎಸ್/ಮಿ)	3	4	5	4	3	2	2–6
5	ಘನಸಾಂದ್ರತೆ	(ಮಿ.ಗ್ರಾಂ/ಮೀಟರ್)	0.76	0.79	0.82	0.85	0.89	0.90	0.12– 0.36
6	ಒಟ್ಟು ಸಾವಯವ ಇಂಗಾಲ	(ಶೇಕಡ)	19	18	17.5	17.4	16	15	ದೊರತಿಲ್ಲ
7	ಸಾವಯವ ವಸ್ತು	(ಶೇಕಡ)	33	31	30.17	29.9	27.58	25.86	>30
8	ಕ್ಯಾಲ್ಸಿಯಂ	(ಮಿ.ಗ್ರಾ/ಲೀ)	10	9	6.8	5.3	4.2	2.9	1.0–4.0
9	ಮೆಗ್ನೀಷಿಯಂ	(ಮಿ.ಗ್ರಾ/ಲೀ)	1.8	1.6	1.4	1.2	1	0.9	0.2–0.4
10	ಅಮೋನಿಯಂ– ಸಾರಜನಕ	(ಶೇಕಡ)	0.95	0.15	5.2	3.9	1.9	1.4	0.05
11	ನೈಟ್ರೇಟ್–ಸಾರಜನಕ	(ಮಿ.ಗ್ರಾಂ/ಕೆಜಿ)	5.3	5.9	6.8	5	6.9	9.2	2.4
12	ಒಟ್ಟು ರಂಜಕ	(ಶೇಕಡ)	0.42	0.48	0.54	0.68	0.78	0.9	0.4–1.1
13	ಒಟ್ಟು ಸಾರಜನಕ	(ಶೇಕಡ)	1.1	1.4	1.5	1.6	1.8	1.9	1.0–3.0
14	ಇಂಗಾಲ/ಸಾರಜನಕ ಅನುಪಾತ	–	17	12.85	11.6	10.8	8.8	7.8	<25
15	ಸೋಡಿಯಂ	(ಮಿ.ಗ್ರಾಂ/ಕೆಜಿ)	3000	2000	1500	1400	1300	1000	ದೊರತಿಲ್ಲ
16	ಪೊಟ್ಯಾಷಿಯಂ	(ಮಿ.ಗ್ರಾಂ/ಕೆಜಿ)	5000	6000	8000	8500	8800	9000	6000–17000
17	ತಾಮ್ರ	(ಮಿ.ಗ್ರಾಂ/ಕೆಜಿ)	180	186	140	120	110	98	1500
18	ಕ್ಯಾಡ್ಮಿಯಂ	(ಮಿ.ಗ್ರಾಂ/ಕೆಜಿ)	2.5	2.8	2.9	3.2	3.1	2.0	35
19	ಸೀಸ	(ಮಿ.ಗ್ರಾಂ/ಕೆಜಿ)	10	10	9	8	8	7	300
20	ಪಾದರಸ	(ಮಿ.ಗ್ರಾಂ/ಕೆಜಿ)	2	2	1	1	ಪ.ಹ.ಕ	ಪ.ಹ.ಕ	7.8
21	ಆರ್ಸನಿಕ್	(ಮಿ.ಗ್ರಾಂ/ಕೆಜಿ)	3	2	ಪ.ಹ.ಕ	ಪ.ಹ.ಕ	ಪ.ಹ.ಕ	ಪ.ಹ.ಕ	41

ಸೂಚನೆ: ಬಂಯೋಟ್ಕಿ 2003: ತೇವಾಂಶ, ಪೂರ್ಡ ವ ಮೋವ 2003: ಆಮ್ಲೀಯತೆ ಮತ್ತು ಕ್ಷಾರೀಯತೆ, ವಿದ್ಯುತ್ವಾಹಕತೆ, ಘನಸಾಂದ್ರತೆ, ಅಮೋನಿಯ–ಸಾರಜನಕ, ನೈಟ್ರೇಟ್– ಸಾರಜನಕ, ಒಟ್ಟು ರಂಜಕ ಮತ್ತು ಪೊಟ್ಯಾಷಿಯಂ, ತಿಕ್ಕಬ್ಬಿ ಪರಿವಾನಿ ಮತ್ತು ನಿರ್ದೇಶಕ ಕಾಯಿದೆ 1994: ಸಾವಯವ ವಸ್ತು ಮತ್ತು ಇಂಗಾಲ/ಸಾರಜನಕ ಅನುಪಾತ, ಬಾಲ್ಸರ್ 1997: ಕ್ಯಾಲ್ಸಿಯಂ ಮೆಗ್ನೀಷಿಯಂ ಮತ್ತು ಒಟ್ಟು ಸಾರಜನಕ, ಓಹಿ ಇತಿವಿ ಮಾಮಾರಿಡಗೌಡ ಭಾರ ಲೋಹಗಳು, ಪ.ಹ.ಕ ಪತ್ತೆ ಹಚ್ಚಲಾಗದಷ್ಟು ಕಡಿಮೆ.



ರೇಖಾ ಚಿತ್ರ 3: ಘನತ್ಯಾಜ್ಯ ವಿಘಟನೆಯಲ್ಲಿನ ತಾಪಮಾನ ವ್ಯತ್ಯಾಸ



ರೇಖಾ ಚಿತ್ರ 4: ಘನತ್ಯಾಜ್ಯ ವಿಘಟನೆಯಲ್ಲಿನ ತೇವಾಂಶ ವ್ಯತ್ಯಾಸ



ರೇಖಾ ಚಿತ್ರ 5: ಘನತ್ಯಾಜ್ಯ ವಿಘಟನೆಯಲ್ಲಿನ ಆಮ್ಲೀಯತೆ ಮತ್ತು ಕ್ಷಾರೀಯತೆ ವ್ಯತ್ಯಾಸ



ರೇಖಾ ಚಿತ್ರ 6: ಘನತ್ಯಾಜ್ಯ ವಿಘಟನೆಯಲ್ಲಿನ ವಿದ್ಯುತ್ವಾಹಕತೆ ವ್ಯತ್ಯಾಸ



ರೇಖಾ ಚಿತ್ರ 7: ಘನತ್ಯಾಜ್ಯ ವಿಘಟನೆಯಲ್ಲಿನ ಘನಸಾಂದ್ರತೆ ವ್ಯತ್ಯಾಸ



ರೇಖಾ ಚಿತ್ರ 8: ಘನತ್ಯಾಜ್ಯ ವಿಘಟನೆಯಲ್ಲಿನ ಒಟ್ಟು ಸಾವಯವ ಇಂಗಾಲ ವ್ಯತ್ಯಾಸ



ರೇಖಾ ಚಿತ್ರ 9: ಘನತ್ಯಾಜ್ಯ ವಿಘಟನೆಯಲ್ಲಿನ ಸಾವಯವ ವಸ್ತು ವ್ಯತ್ಯಾಸ



ರೇಖಾ ಚಿತ್ರ 10: ಘನತ್ಯಾಜ್ಯ ಕ್ಯಾಲ್ಸಿಯಂ ವಿಘಟನೆಯಲ್ಲಿನ ವ್ಯತ್ಯಾಸ



ರೇಖಾಚಿತ್ರ 11: ಘನತ್ಯಾಜ್ಯ ವಿಘಟನೆಯಲ್ಲಿನ ಮೆಗ್ನೀಷಿಯಂ ವ್ಯತ್ಯಾಸ



ರೇಖಾಚಿತ್ರ 12: ಘನತ್ಯಾಜ್ಯ ವಿಘಟನೆಯಲ್ಲಿನ ಅಮೋನಿಯಂ–ಸಾರಜನಕ ವ್ಯತ್ಯಾಸ



ರೇಖಾಚಿತ್ರ 13: ಘನತ್ಯಾಜ್ಯ ವಿಘಟನೆಯಲ್ಲಿನ 'ನೈಟ್ರೇಟ್–ಸಾರಜನಕ ವ್ಯತ್ಯಾಸ



ರೇಖಾಚಿತ್ರ 14: ಘನತ್ಯಾಜ್ಯ ವಿಘಟನೆಯಲ್ಲಿನ ಒಟ್ಟು ರಂಜಕ ವ್ಯತ್ಯಾಸ



ರೇಖಾ ಚಿತ್ರ 15:ಘನತ್ಯಾಜ್ಯ ವಿಘಟನೆಯಲ್ಲಿನ ಒಟ್ಟು ಸಾರಜನಕ ವ್ಯತ್ಯಾಸ



ರೇಖಾ ಚಿತ್ರ 16: ಘನತ್ಯಾಜ್ಯ ಇಂಗಾಲ/ಸಾರಜನಕ ಅನುಪಾತ ವಿಘಟನೆಯಲ್ಲಿನ ವ್ಯತ್ಯಾಸ



ರೇಖಾ ಚಿತ್ರ 17: ಘನತ್ಯಾಜ್ಯ ವಿಘಟನೆಯಲ್ಲಿನ ಸೋಡಿಯಂ ವ್ಯತ್ಯಾಸ



ರೇಖಾ ಚಿತ್ರ 18: ಘನತ್ಯಾಜ್ಯ ವಿಘಟನೆಯಲ್ಲಿನ ಪೊಟ್ಯಾಷಿಯಂ ವ್ಯತ್ಯಾಸ



ರೇಖಾ ಚಿತ್ರ 19: ಘನತ್ಯಾಜ್ಯ ವಿಘಟನೆಯಲ್ಲಿನ ತಾಮ್ರ ವ್ಯತ್ಯಾಸ



ರೇಖಾ ಚಿತ್ರ 20: ಘನತ್ಯಾಜ್ಯ ವಿಘಟನೆಯಲ್ಲಿನ ಭಾರಲೋಹಗಳಲ್ಲಿನ ವ್ಯತ್ಯಾಸ

ಘನತ್ಯಾಜ್ಯ ಸಂಗ್ರಹ, ಗೊಬ್ಬರದ ಉತ್ಪಾದನೆ ಹಾಗೂ ಮಾರಾಟ ಕೋಷ್ಟಕ 1 ರಲ್ಲಿ ನೀಡಲಾಗಿದೆ, 2011–12 ಸಾಲಿನ ಜುಲೈ ತಿಂಗಳಿನಲ್ಲಿ ಅತಿಹೆಚ್ಚು ಘನತ್ಯಾಜ್ಯ ಸಂಗ್ರಹಣೆಯಾಗಿದ್ದು ಹಾಗೂ ಫೆಬ್ರವರಿ ತಿಂಗಳಲ್ಲಿ ಅತಿಹೆಚ್ಚು ಗೊಬ್ಬರದ ಉತ್ಪಾದನೆ ಆಗಿದೆ. 2012–13 ಸಾಲಿನ ಮೇ ತಿಂಗಳಿನಲ್ಲಿ ಅತಿಹೆಚ್ಚು ಘನತ್ಯಾಜ್ಯ ಸಂಗ್ರಹಣೆಯಾಗಿದ್ದು ಹಾಗೂ ಫೆಬ್ರವರಿ ತಿಂಗಳಲ್ಲಿ ಅತಿಹೆಚ್ಚು ಗೊಬ್ಬರದ ಉತ್ಪಾದನೆ ಆಗಿದೆ (ರೇಖಾ ಚಿತ್ರ 1 & 2).

ಭೌತ–ರಾಸಾಯನಿಕ ಪರೀಕ್ಷೆಗಳ ಮಾದರಿಗಳ ವಿಶ್ಲೇಷಣೆ ಫಲಿತಾಂಶ ಗಳನ್ನು ಮಾಹಿತಿ ಕೋಷ್ಟಕ 2 ರಲ್ಲಿ ನೀಡಲಾಗಿದೆ. ಪ್ರಸ್ತುತ ಪರೀಕ್ಷೆಗಳಲ್ಲಿ, ಉಷ್ಣತೆ/ ತಾಪಮಾನ 38^0 ಸೆಲ್ಸಿಯಸ್ ರಿಂದ 65^0 ಸೆಲ್ಸಿಯಸ್ ರವರೆಗೆ ಹಾಗೂ ಅತಿ ಹೆಚ್ಚು ತಾಪಮಾನ $40^{ನೇ}$ ದಿನ ಹಾಗೂ $30^{ನೇ}$ ದಿನದಲ್ಲಿ ಗರಿಷ್ಠ ಮಟ್ಟದಲ್ಲಿದೆ ಏಕೆಂದರೆ, ಈ ಹಂತದಲ್ಲಿ ಉಷ್ಣ ಪ್ರಿಯ ಸೂಕ್ಷ್ಮಾಣು ಜೀವಿಗಳು ವಿಘಟನೆ ಪ್ರಕ್ರಿಯೆ ಹೆಚ್ಚಿರುತ್ತದೆ (ರೇಖಾ ಚಿತ್ರ 3). ತೇವಾಂಶ ಶೇಕಡ 28 ರಿಂದ 61 ರವರೆಗೆ, ಅತಿ ಹೆಚ್ಚು ತೇವಾಂಶವು $30^{ನೇ}$, $40^{ನೇ}$ ಹಾಗೂ $50^{ನೇ}$ ದಿನದಲ್ಲಿ ಗರಿಷ್ಠ ಮಟ್ಟದಲ್ಲಿದೆ, ನಂತರದ ದಿನಗಳಲ್ಲಿ ಕಡಿಮೆಯಾಗಿದೆ, ಏಕೆಂದರೆ ಸೂಕ್ಷ್ಮಾಣು ಜೀವಿಗಳು ವಿಘಟನೆ ಪ್ರಕ್ರಿಯೆಯಲ್ಲಿ ನೀರಿನ ಅಂಶ ಆವಿಯಾಗುತ್ತದೆ (ರೇಖಾ ಚಿತ್ರ 4). ಪಿ.ಹೆಚ್, 5.9 ($10^{ನೇ}$ ದಿನ) ರಿಂದ 8.9 ($50^{ನೇ}$ ದಿನ) ರವರೆಗೆ, ಮೊದಲ ಹಂತದಲ್ಲಿ ಘನತ್ಯಾಜ್ಯವು ಆಮ್ಲಲಿಯತೆಯಿಂದ ಕೂಡಿದ್ದು ನಂತರ ದಿನಗಳಲ್ಲಿ ಕ್ಷಾರೀಯತೆಯಿಂದ ಕೂಡಿದೆ, ಏಕೆಂದರೆ, ಘನತ್ಯಾಜ್ಯ ವಿಧಗಳ ಮೇಲೆ ಅವಂಲಂಬಿತವಾಗಿದೆ (ರೇಖಾ ಚಿತ್ರ 5). ವಿದ್ಯುತ್ವಾಹಕತೆ 2 ರಿಂದ 5 ಡೆಸಿಮೀಟರ್ ರವರೆಗೆ, ವಿದ್ಯುತ್ವಾಹಕತೆ ಪ್ರತಿ ಹಂತದಲ್ಲಿ ಕಡಿಮೆಯಾಗಿದೆ ಹಾಗೆಯೇ ಲವಣಾಂಶಗಳು ಕಡಿಮೆಯಾದಂತೆ, ವಿದ್ಯುತ್ವಾಹಕತೆಯೂ ಕಡಿಮೆಯಾಗುತ್ತದೆ (ರೇಖಾ ಚಿತ್ರ 6). ಘನಸಾಂದ್ರತೆ 0.76 ರಿಂದ 0.9 ಮಿ.ಗ್ರಾಂ/ಮಿ^{3} ರವರೆಗೆ, ಪ್ರತಿ ಹಂತದಲ್ಲಿ ಹೆಚ್ಚಾಗಿದೆ ಏಕಂದರೆ, ಸೂಕ್ಷ್ಮಾಣು ಜೀವಿಗಳು ವಿಘಟನೆ ಪ್ರಕ್ರಿಯೆಯ ಮೂಲಕ ಘನತ್ಯಾಜ್ಯವನ್ನು ವಿಘಟಿಸಿ ಸಣ್ಣ ಸಣ್ಣ ಕಣಗಳಾಗಿ ಮಾರ್ಪಡಿಸಿ ಘನಸಾಂದ್ರತೆಯನ್ನು ಹೆಚ್ಚಿಸುತ್ತವೆ (ರೇಖಾ ಚಿತ್ರ 7). ಒಟ್ಟು ಸಾವಯವ ಇಂಗಾಲ ಶೇಕಡ 19 ರಿಂದ 15 ರವರೆಗೆ ಮತ್ತು ಸಾವಯವ ವಸ್ತು ಶೇಕಡ 33 ರಿಂದ 25.86 ರವರೆಗೆ, ಈ ಒಟ್ಟು ಸಾವಯವ ಇಂಗಾಲ ಹಾಗೂ ಸಾವಯವ ವಸ್ತು ಪ್ರತಿ ಹಂತದಲ್ಲಿ ಕಡಿಮೆಯಾಗಲು ಕಾರಣವೆನೆಂದರೆ ಘನತ್ಯಾಜ್ಯ ವಿಘಟನೆಗೆ ಸೂಕ್ಷ್ಮಾಣು ಜೀವಿಗಳು ಸಾವಯವ ಇಂಗಾಲವನ್ನು ಆಹಾರವಾಗಿ ಬಳಸಿ ಇಂಗಾಲದ ಡೈಆಕ್ಸೈಡ್‌ನ್ನು ಬಿಡುಗಡೆ ಮಾಡುತ್ತವೆ (ರೇಖಾ ಚಿತ್ರ 8 & 9). ಕ್ಯಾಲ್ಸಿಯಂ 2.9 ರಿಂದ 10 ಮೀ.ಗ್ರಾಂ/ಲೀ ರವರೆಗೆ ಮತ್ತು ಮೆಗ್ನೀಷಿಯಂ 0.9 ರಿಂದ 1.8 ಮೀ.ಗ್ರಾಂ/ಲೀ ರವರೆಗೆ, ಕ್ಯಾಲ್ಸಿಯಂ ಹಾಗೂ ಮೆಗ್ನೀಷಿಯಂ ಪ್ರಮಾಣವು ಪ್ರತಿ ಹಂತದಲ್ಲಿ ಕಡಿಮೆಯಾಗಲು ಕಾರಣವೆನೆಂದರೆ, ವಿಘಟನೆಯ ಹಂತದಲ್ಲಿ ಗೊಬ್ಬರದ ಸಾರ ಸೋರಿಕೆ (ರೇಖಾ ಚಿತ್ರ 10 & 11). ಅಮೋನಿಯ–ಸಾರಜನಕ ಶೇಕಡ 0.15 ರಿಂದ 5.2 ರವರೆಗೆ ಮತ್ತು ನೈಟ್ರೈಟ್–ಸಾರಜನಕ 9.2 ರಿಂದ 5 ಮೀ.ಗ್ರಾಂ/ಕೆಜಿ ರವರೆಗೆ, ಅಮೋನಿಯ–ಸಾರಜನಕ ಹಾಗೂ ನೈಟ್ರೈಟ್–ಸಾರಜನಕ ಒಂದಕ್ಕೊಂದು ಸಹಸಂಬಂಧವಿದ್ದು, $40^{ನೇ}$ ದಿನಗಳಲ್ಲಿ ಈ ಬದಲಾವಣೆಯನ್ನು ರೇಖಾ ಚಿತ್ರ 12 ಮತ್ತು 13 ರಲ್ಲಿ ಗಮನಿಸಬಹುದಾಗಿದೆ. ಒಟ್ಟು ರಂಜಕ ಶೇಕಡ 0.42 ರಿಂದ 0.9 ರವರೆಗೆ, ಪ್ರತಿಹಂತದಲ್ಲಿ ರಂಜಕವು ಹೆಚ್ಚಾಗಿದೆ ಹಾಗೂ ಇದರಿಂದ ತಿಳಿಯುವುದೆನೆಂದರೆ, ಘನತ್ಯಾಜ್ಯ ಉತ್ತಮ ಸಾವಯವ ವಸ್ತುಗಳಿಂದ ಕೂಡಿದೆ (ರೇಖಾ ಚಿತ್ರ 14). ಒಟ್ಟು ಸಾರಜನಕ ಶೇಕಡ 1.1 ರಿಂದ 1.9 ರವರೆಗೆ, ಘನತ್ಯಾಜ ವಿಘಟನೆ ಹಂತದಲ್ಲಿ ಸಾವಯವ ಇಂಗಾಲದ ಪ್ರಮಾಣವು ಕಡಿಮೆ ಆದೆಂತೆಲ್ಲಾ ಒಟ್ಟು ಸಾರಜನಕ ಪ್ರಮಾಣ ಹೆಚ್ಚಾಗಿದೆ, ಇದರಿಂದ ಗೊಬ್ಬರವು ಹೆಚ್ಚು ಫಲವತ್ತತೆಯಿಂದ ಕೂಡಿರುತ್ತದೆ (ರೇಖಾ ಚಿತ್ರ 15). ಇಂಗಾಲ/ಸಾರಜನಕ ಅನುಪಾತವು 7.8 ರಿಂದ 17 ರವರೆಗೆ (ರೇಖಾ ಚಿತ್ರ 16), ಘನತ್ಯಾಜ ವಿಘಟನೆ ಹಂತದಲ್ಲಿ ಇಂಗಾಲ/ ಸಾರಜನಕ ಪ್ರಮಾಣವು ಸರಿಯಾದ ಪ್ರಮಾಣದಲ್ಲಿ ಇದ್ದರೆ, ಉತ್ತಮವಾದ ಗೊಬ್ಬರವನ್ನು ನಿಗದಿತ ಅವದಿಯಲ್ಲಿ ಪಡೆಯಬಹುದಾಗಿದೆ. ಸೋಡಿಯಂ 1000 ರಿಂದ 3000 ಮೀ.ಗ್ರಾಂ/ ಕೆಜಿ ರವರೆಗೆ ಮತ್ತು ಪೊಟ್ಯಾಷಿಯಂ 5000 ರಿಂದ 9000 ಮೀ.ಗ್ರಾಂ/ ಕೆಜಿ ರವರೆಗೆ ಕಂಡುಬಂದಿದೆ (ರೇಖಾ ಚಿತ್ರ 17 & 18), ಗೊಬ್ಬರದಲ್ಲಿ ಸೋಡಿಯಂ ಲವಣಗಳ ಪ್ರಮಾಣವು ಹೆಚ್ಚಾದರೆ ಸಸ್ಯಗಳ ಬೆಳವಣಿಗೆ ಕುಂಠಿತವಾಗುತ್ತದೆ ಹಾಗೆಯೇ, ಪೊಟ್ಯಾಷಿಯಂ ಪ್ರಮಾಣವು ಸಸ್ಯಗಳ ಬೆಳವಣಿಗೆಗೆ ಅತ್ಯಅವಶ್ಯಕ. ಭಾರಲೋಹಗಳಾದ, ತಾಮ್ರ 98 ರಿಂದ 186 ರವರೆಗೆ (ರೇಖಾ ಚಿತ್ರ 19) ಕ್ಯಾಡ್ಮಿಯಂ 2 ರಿಂದ 3.2 ಮೀ.ಗ್ರಾಂ/ಕೆಜಿ ರವರೆಗೆ, ಸೀಸ 7 ರಿಂದ 10 ಮೀ.ಗ್ರಾಂ/ಕೆಜಿ ರವರೆಗೆ ಪಾದರಸ 0 ರಿಂದ 2 ರವರೆಗೆ ಮತ್ತು ಆರ್ಸನಿಕ್ 0 ರಿಂದ 3 ಮೀ.ಗ್ರಾಂ/ಕೆಜಿ ರವರೆಗೆ ಸಾಂದ್ರತೆ ಕಂಡುಬಂದಿದೆ (ರೇಖಾ ಚಿತ್ರ 20). ಭಾರಲೋಹಗಳ ಪ್ರಮಾಣ ಘನತ್ಯಾಜ್ಯ ದಲ್ಲಿ ಹೆಚ್ಚಾಗಲು ಕಾರಣಗಳೆಂದರೆ, ದಿನಬಳಕೆ ವಸ್ತುಗಳಾದ, ಬ್ಯಾಟರಿ, ತಂತಿಗಳು ಇತ್ಯಾದಿ.

ಈ ವಿಶ್ಲೇಷಣೆಯಲ್ಲಿ, ಉಷ್ಣತೆ, ತೇವಾಂಶ, ಆಮ್ಲೀಯತೆ–ಕ್ಷಾರೀಯತೆ, ಅಮೋನಿಯಾ–ಸಾರಜನಕ, ನೈಟ್ರೈಟ್–ಸಾರಜನಕ ಹಾಗೂ ಕೆಲವು ಭಾರಲೋಹ ನಿಯತಾಂಕಗಳ ಸಾಂದ್ರತೆಯು ಅಸಮತೋಲನ ವ್ಯತ್ಯಾಸ ಕಂಡುಬಂದಿವೆ, ಇದಕ್ಕೆ ಮುಖ್ಯಕಾರಣವೇನೆಂದರೆ ಸೂಕ್ಷ್ಮಾಣು ಜೀವಿಗಳ ಪ್ರಕ್ರಿಯೆ, ಭೌತನಿಯತಾಂಕಗಳು ಬಳಸುವ ತ್ಯಾಜ್ಯ ಮತ್ತು ನಿರ್ವಹಣೆ ಪ್ರಮುಖ ಕಾರಣವಾಗುತ್ತವೆ.

ಈ ಪರೀಕ್ಷೆಯಲ್ಲಿ ಸಂಪೂರ್ಣ ವಿಘಟನೆಯನ್ನು ಹೊಂದಿದ ಗೊಬ್ಬರವಾದ $60^{ನೇ}$ ದಿನದ ಮಾದರಿಯನ್ನು ಶಿಫಾರಸ್ಸಾದ ಮಾನದಂಡನೆಗಳೊಂದಿಗೆ ಹೋಲಿಸಿ ನೋಡಿದಾಗ ಈ ನಿಯತಾಂಕ ಗಳಾದ, ತೇವಾಂಶ, ಸಾವಯವ ವಸ್ತು, ಒಟ್ಟು ರಂಜಕ, ಒಟ್ಟು ಸಾರಜನಕ, ಇಂಗಾಲ/ಸಾರಜನಕ ಅನುಪಾತ, ಪೊಟಾಸಿಯಂ ಸಾಂದ್ರತೆಗಳು ಶಿಫಾರಸ್ಸಾದ ಮಾನದಂಡಗಳ ನಿಭಂದನೆಗೆ ಒಳಪಟ್ಟಿದೆ. ಭಾರಲೋಹಗಳಾದ ತಾಮ್ರ ಕ್ಯಾಡ್ಮಿಯಂ, ಸೀಸ, ಪಾದರಸ ಮತ್ತು ಆರ್ಸನಿಕ್ ಸಾಂದ್ರತೆಗಳು ಒಯಿ ಇಪಿಯೆ ನಿಭಂದನೆಗಳಿಗೆ ಒಳಪಟ್ಟಿದೆ. ಆಮ್ಲೀಯತೆ ಮತ್ತು ಕ್ಷಾರಿಯತೆ, ಕ್ಯಾಲ್ಸಿಯಂ, ಮೆಗ್ನಿಷಿಯಂ, ಘನಸಾಂದ್ರತೆ, ನೈಟ್ರೈಟ್–ಸಾರಜನಕ ಮತ್ತು ಅಮೋನಿಯ–ಸಾರಜನಕ ಈ ಪರೀಕ್ಷಯಲ್ಲಿ ಶಿಫಾರಸ್ಸಾದ ಮಾನದಂಡಗಳ ನಿಭಂದನೆಗಿಂತ ಹೆಚ್ಚಿವೆ. ಕಾರಣವೆನೆಂದರೆ, ಬರಮಲ್ ಮತ್ತು ಇತರರು, 1998 ಅಂತಿಮ ರ ಪ್ರಕಾರ ಹಂತದಲ್ಲಿ ನೈಟ್ರೈಟ್–ಸಾರಜನಕ ಮಟ್ಟದಲ್ಲಿ ಏರಿಕೆ ಪ್ರಾಯಶಃ ಅಸ್ಥಿರ ಸಾವಯವ ಇಂಗಾಲ ಸಂಯುಕ್ತಗಳ ಪ್ರಬಲ ಅವನತಿ ಉಂಟಾಗುವ ಕೇಂದ್ರೀಕರಣ ಪರಿಣಾಮ ಕಾರಣದಿಂದ ಆಗಿರಬಹುದು. ಪಿ ಹೆಚ್, ಕ್ಯಾಲ್ಸಿಯಂ, ಮತ್ತು ಮೆಗ್ನಿಷಿಯಂ, ಹೆಚ್ಚಾಗಲು ಕಾರಣವೇನೆಂದರೆ, ಸಾವಯವ (ಕ್ಯಾಂಪ್ಬೆಲ್ ಮತ್ತು ಇತರರು,

1997) ಲವಣಗಳ ಸಾಂದ್ರತೆಯ ಪರಿಣಾಮ ಕಾರಣದಿಂದ ಆಗಿರಬಹುದು ಮತ್ತು ಘನಸಾಂದ್ರತೆ, ಹೆಚ್ಚಾಗಲು ಕಾರಣವೇನೆಂದರೆ, ಗೊಬ್ಬರ ಪ್ರಕ್ರಿಯೆಯಲ್ಲಿ, ಸೂಕ್ಷ್ಮಾಣುಜೀವಿಗಳು ಹೆಚ್ಚಿನ ಬೃಹತ್ ಸಾಂದ್ರತೆಯನ್ನು ವಿಘಟಿಸಿ ನಂತರ, ಸಣ್ಣ–ಸಣ್ಣ ತುಂಡುಗಳಾಗಿ ಸಡಿಲವಾಗಿ ಸಂಯೋಜಿತ ಕಚ್ಚಾ ವಸ್ತುಗಳಾಗಿ ಮುರಿಯುತ್ತವೆ (ಹೆಗಾರ್ಟಿ 1986).

ಉಪಸಂಹಾರ:

ಒಟ್ಟಾರೆ ಈ ಸಂಶೋಧನಾ ಫಲಿತಾಂಶಗಳಿಂದ ತಿಳಿದುಬರುವುದೇನೆಂದರೆ, ಒಟ್ಟು ಸಾರಜನಕ, ಒಟ್ಟು ರಂಜಕ, ಪೊಟಾಸಿಯಂ ಸಾಂದ್ರತೆಗಳ ಪ್ರಮಾಣವು ಹಂತ ಹಂತವಾಗಿ ಹೆಚ್ಚಾಗಿ, ಸಾವಯವ ಇಂಗಾಲ, ಸಾವಯವ ವಸ್ತು ಮತ್ತು ಇಂಗಾಲ/ಸಾರಜನಕ ಅನುಪಾತ, ಕಡಿಮೆಯಾಗಿದೆ, ಆದ್ದರಿಂದ ಗೊಬ್ಬರವು ಹೆಚ್ಚು ಪೋಷಕಾಂಶಗಳಿಂದ ಕೂಡಿದೆ. ಭೌತ–ರಾಸಾಯನಿಕ ನಿಯತಾಂಕಗಳಾದ, ತೇವಾಂಶ, ಸಾವಯವವಸ್ತು, ಒಟ್ಟು ರಂಜಕ, ಒಟ್ಟು ಸಾರಜನಕ ಇಂಗಾಲ/ ಸಾರಜನಕ ಅನುಪಾತ, ಪೊಟಾಸಿಯಂ ಸಾಂದ್ರತೆಯು ಶಿಫಾರಸ್ಸಾದ ಮಾನದಂಡಗಳಿಗೆ ಒಳಪಟ್ಟಿದೆ ಮತ್ತು ಭಾರಲೋಹಗಳಾದ ತಾಮ್ರ, ಕ್ಯಾಡ್ಮಿಯಂ, ಸೀಸ, ಪಾದರಸ ಮತ್ತು ಆರ್ಸನಿಕ್ ಸಾಂದ್ರತೆಗಳು ಒಯಿ ಇಪಿಯೆ ನಿಭಂಧನೆಗಳಿಗೆ ಒಳಪಡುತ್ತದೆ. ಒಟ್ಟಾರೆ, ಈ ಅಧ್ಯಯನದಿಂದ ತಿಳಿದುಬರುವುದೆನೆಂದರೆ, ಜೈವಿಕ ಸಂಸ್ಕರಣಾ ಘಟಕದಿಂದ ತಯಾರಿಸಿದ ನಗರ ತ್ಯಾಜ್ಯ ಗೊಬ್ಬರವು ಸಸ್ಯಗಳಿಗೆ ಅತ್ಯಅವಶ್ಯವಾಗಿ ಬೇಕಾದ ಒಟ್ಟು ಸಾರಜನಕ, ಒಟ್ಟು ರಂಜಕ, ಪೊಟಾಸಿಯಂ ಪೋಷಕಾಂಶಗಳಿಂದ ಕೂಡಿದ್ದು ಹಾಗೂ ಭಾರಲೋಹಗಳ ಮಾಲಿನ್ಯ ಮುಕ್ತವಾಗಿದ್ದು, ಕೃಷಿ ಚಟುವಟಿಕೆಗೆ ಬಳಸಬಹುದಾಗಿದೆ.

ಪರಾಮರ್ಶನ:

- ಬುಚನನ್ ಆರ್.ಇ. ಮತ್ತು ಗಿಬನ್ಸ್ ಎನ್.ಇ. (1974), ಬರ್‌ಗೀಸ್ ಸೂಕ್ಷ್ಮಾಣು ಜೀವಿಗಳನ್ನು ಪ್ರಯೋಗದ ಮೂಲಕ ತಿಳಿಯುವ ಕೈಪಿಡಿ. 8ನೇ ಮುದ್ರಣ. ವಿಲಿಯಂ ಮತ್ತು ಎಲ್‌ಕಿನ್ಸ್ ಕಂಪನಿ, ಬಾಲ್ಟಿಮೋರ್.
- ದುಬೇ ಆರ್.ಸಿ. ಮತ್ತು ಮಹೇಶ್ವರಿ ಡಿ.ಕೆ. (2002), ಸೂಕ್ಷ್ಮಾಣುಜೀವಿಗಳ ಪ್ರಯೋಗಶಾಲಾ ಕೈಪಿಡಿ, 2ನೇ ಎಸ್. ಚಂದ್ ಮತ್ತು ಕಂಪನಿ ಲಿಮಿಟೆಡ್, ರಾಮ್ ನಾಗರ್, ದೆಹಲಿ, ಪುಟ 354.
- ತ್ರಿವೇದಿ ಆರ್.ಕೆ. ಮತ್ತು ಗೊಯಲ್ ಪಿ.ಕೆ. (1986), ರಾಸಾಯನಿಕ ಮತ್ತು ಜೈವಿಕ ರೀತಿಯಲ್ಲಿ ನೀರಿನ ಮಾಲಿನ್ಯಗಳ ಅಧ್ಯಯನ ಪರಿಸರ ವಿಜ್ಞಾನ ಮಾಧ್ಯಮದ ಪುಸ್ತಕದಲ್ಲಿ ಪ್ರಕಟಣೆ, ಕರಾಡ್, ಪುಟ 1.
- ಬಾರ್ಕರ್ ಎ.ವಿ. (1997). ಸಂಯೋಜನೆ ಮತ್ತು ಕಾಂಪೋಸ್ಟ್ ಉಪಯೋಗಗಳ ಮೂಲಕ ಉತ್ಪನ್ನಗಳು ಮತ್ತು ತ್ಯಾಜ್ಯಗಳ ಎ.ಎಸ್.ಸಿ. ಸಿಂಪೋಸಿಯಮ್ ಸರಣಿ, ಅಮೇರಿಕನ್ ಕೆಮಿಕಲ್ ಸೊಸೈತಿ, 668 (10), ಪುಟಗಳು 14.–162.
- ಬಯೋಟ್ರೀಟ್, (2003), ಬಯೋಟ್ರೀಟ್ ರಾಷ್ಟ್ರೀಯ ಆಹಾರ ಜೈವಿಕ ತಂತ್ರಜ್ಞಾನ ಕೇಂದ್ರ, ಯುನಿವರ್ಸಿಟಿ ಕಾಲೇಜ್, ಕಾರ್ಕ್, ಐಲೆಂಡ್ ಲಭ್ಯವಿರುವ ಫಲಿತಾಂಶಗಳು ವರದಿ.
- ಬೊರ್ಡ ನಾ ಮೋನ, (2003), ಕಾಂಪೋಸ್ಟ್ ಪರೀಕ್ಷೆ ಮತ್ತು ವಿಶ್ಲೇಷಣೆ ಫಲಿತಾಂಶಗಳ ವಿವರಣೆ, ಬೊರ್ಡ್ ನಾ ಮೊನಾ.
- ಬ್ರಿನ್‌ಟಾನೊ ಡಬ್ಲೂ.ಎಫ್. ತ್ಯಾಜ್ಯ ಮತ್ತು ಕಾಂಪೋಸ್ಟ್ ಟೆಸ್ಟ್‌ಗಳ ಇಂಟರ್ಪ್ರಿಟೇಷನ್, ವುಡ್ಸ್ ಎಂಡ್ ರಿಸರ್ಚ್ ಲ್ಯಾಬೊರೇಟರಿ, 1 (4), ಪುಟಗಳು 1–6.
- ಬ್ಯೂಕ್ಯಾನನ್, ಆರ್.ಇ. ಮತ್ತು ಗಿಬ್ಬನ್ಸ್, ಎನ್.ಇ. (1974), ನಿರ್ಧಾರಕ ಬ್ಯಾಕ್ಟೀರಿಯ ಆಫ್ ಬರ್ಗ್ರೀಸ್ ಪ್ರಯೋಗಾಲಯ ಕೈಪಿಡಿ, 8ನೇ ಅವೃತ್ತಿ, ವಿಲಿಯಮ್ಸ್ ಮತ್ತು ವಿಲ್ಕಿನ್ಸ್ ಕಂಪೆನಿ, ಬಾಲ್ಟಿವೋರ್, ಪುಟಗಳು 29–48.
- ಇಪಿಎ, (1994), ಯಾರ್ಡ್ ತುಣುಕುಗಳ ಮತ್ತು ಮುನ್ಸಿಪಲ್ ಘನತ್ಯಾಜ್ಯ, ಅಮೇರಿಕಾದ ಇಪಿಎ, ಘನ ತ್ಯಾಜ್ಯ ಮತ್ತು ಎಮರ್ಜೆನ್ಸಿ ರೆಸ್ಪಾನ್ಸ ಕಚೇರಿ, ಪುಟಗಳು 17–21.
- ಜಾಕ್ಸನ್, ಎಲ್ (1973), ಮಣ್ಣಿನ ರಾಸಾಯನಿಕ ವಿಶ್ಲೇಷಣೆ ಪ್ರಯೋಗಾಲಯ ಕೈಪಿಡಿ, ದೆಹಲಿ ಮುದ್ರಣಾಲಯ.
- ಮಣಿ, ಎ.ಕೆ., ಶಾಂತಿ, ಆರ್, ಮತ್ತು ಸೆಲ್ಲುಮುತ್ತು, ಕೆ.ಎಂ. (2007), ಬೌತ–ರಾಸಾಯನಿಕ ಪ್ರಯೋಗಾಲಯ ಕೈಪಿಡಿ 1ನೇ ಆವೃತ್ತಿ, ಏಇ ಪ್ರಕಟಣೆ ಕೊಮಿಪುತ್ತೂರು, ಪುಟಗಳು 156–167.

ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಕೊನೆ ಕಾಣದ ಮಾನವ–ಆನೆ ಸಂಘರ್ಷ ಮತ್ತು ಅವಘಡಗಳು

ಲಿಂಗರಾಜು ಹೆಚ್. ಜಿ ಮತ್ತು ವೆಂಕಟರಮಣ ಜಿ. ವಿ

ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು–೦೬ ಇ.ಮೇಲ್: gurusiddappahs@gmail.com

ಪ್ರತಿಯೊಂದು ಕಾಡಂಚಿನ ಪ್ರದೇಶ ಮಾನವ–ಆನೆ ಸಂಘರ್ಷದಿಂದ ಮುಕ್ತವಾಗಿಲ್ಲ. ಕಾಡಂಚಿನ ಗ್ರಾಮಗಳಲ್ಲಿ ನಡೆಯುತ್ತಿರುವ ಈ ಸಂಘರ್ಷ ರಕ್ತ ಚರಿತ್ರೆಯ ಹಾದಿ ಹಿಡಿದಿದೆ. ಮಾನವನ ಸಾವು ಮತ್ತು ಗಾಯ ಈ ಸಂಘರ್ಷದಿಂದ ಉಂಟಾಗುವ ತೀವ್ರ ಅಭಿವ್ಯಕ್ತಿಗಳಾಗಿವೆ. ೨೦೧೩ ರಲ್ಲಿ ಈ ಒಂದು ಅಧ್ಯಯನವನ್ನು ಕೈಗೊಳ್ಳಲಾಯಿತು, ಈ ಅಧ್ಯಯನದ ಮುಖ್ಯ ಧ್ಯೇಯ ಆನೆ ಮತ್ತು ಮಾನವ ಸಂಘರ್ಷದಿಂದ ಘಟಿಸಿದಂತಹ ಮಾನವನ ಸಾವಿಗೆ ಸಾಮಾನ್ಯ ಕಾರಣಗಳು ಮತ್ತು ಗಾಯಗಳ ಸ್ವರೂಪವನ್ನು ಕಂಡು ಹಿಡಿಯುವುದು. ಅರಣ್ಯ ಇಲಾಖೆಯವರು ನೀಡಿರುವ ದಾಖಲೆಗಳ ಪ್ರಕಾರ ಮತ್ತು ವ್ಯಯಕ್ತಿಕ ಸಂಶೋಧನ ಭೇಟಿಯಿಂದ ತಿಳಿಯುವುದೇನೆಂದರೆ ೨೦೦೧ ರಿಂದ ೨೦೧೨ ರ ವರೆಗೆ ೨೭ ಜನರು ಮೃತಪಟ್ಟಿದ್ದು, ೨೧ ಮಂದಿ ಗಾಯಗೊಂಡಿದ್ದಾರೆ. ಕೆಲವರು ಸ್ಥಳದಲ್ಲೆ ಮೃತಪಟ್ಟಿದ್ದು, ಮತ್ತೆ ಕೆಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ಇದು ಈ ಪ್ರದೇಶದಲ್ಲಿ ಆನೆ ಮತ್ತು ಮಾನವನ ನಡುವಿನ ಸಂಘರ್ಷ ಎಷ್ಟು ತೀವ್ರವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಒಟ್ಟು ಪ್ರಕರಣಗಳಲ್ಲಿ ೩೮ ಪುರುಷರು ಮತ್ತು ೧೦ ಮಹಿಳೆಯರು ಸೇರಿದ್ದು, ಪುರುಷರು ೨೧ ಮತ್ತು ೭೦ ವರ್ಷಗಳ ನಡುವಿನ

ವಯೋಮಾನವರಾಗಿದ್ದು, ಹೆಂಗಸರು ೩೦ ರಿಂದ ೬೦ ವರ್ಷಗಳ ನಡುವಿನವರಾಗಿದ್ದಾರೆ. ಘಟನೆಗಳು ಒಂದು ಸ್ಪಷ್ಟವಾದ ಋತುವಿನಲ್ಲಿ ಮತ್ತು ದಿನದ ಕೆಲವು ಸಮಯದಲ್ಲಿ ಮಾತ್ರ ಸೀಮಿತವಾಗಿರುವುದನ್ನು ಗಮನಿಸಬಹುದು. ಎಲ್ಲಾ ದಾಳಿಗಳು ಹಠಾತ್ ಮತ್ತು ಅಪ್ರಚೋದಿತ ಎಂದು ಸ್ಥಳಿಯ ಮೂಲಗಳಿಂದ ತಿಳಿದುಬಂದಿದೆ. ಸಂತ್ರಸ್ತರಲ್ಲಿ ಶೇ ೫೩ ರಷ್ಟು ರೈತರು. ಶೇ ೧೮ ರಷ್ಟು ದನಕಾಯುವವರು, ಶೇ ೧೧ ರಷ್ಟು ಸ್ಥಳಿಯರು ಮತ್ತು ಶೇ ೧೬ ರಷ್ಟು ಕಾರ್ಮಿಕ ಗುಂಪಿಗೆ ಸೇರಿದವರಾಗಿದ್ದು, ಎಲ್ಲರೂ ದುರ್ಬಲ ಸಾಮಾಜಿಕ ಮತ್ತು ಆರ್ಥಿಕ ವರ್ಗದವರಾಗಿರುತ್ತಾರೆ.

ಪ್ರಮುಖ ಪದಗಳು: ಮಾನವ–ಆನೆ ಸಂಘರ್ಷ, ಅಪ್ರಚೋದಿತ, ಅಭಿವ್ಯಕ್ತಿ ಅವಘಡಗಳು

ಪೀಠಿಕೆ: ಕಾಡಾನೆ ಮಾನವ ಸಂಘರ್ಷದಿಂದ ಉಂಟಾದ ಸಾವುನೋವಿನ ಬಗ್ಗೆ ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡುವುದು ಕಷ್ಟಕರವಾದುದು. ಮಾನವನ ಸಾವು ನೋವು, ಬೆಳೆನಾಶ, ಆಸ್ತಿಪಾಸ್ತಿಹಾನಿ ಈ ಮೊದಲದವುಗಳನ್ನು ಆನೆಯ ಜೀವಿತದ ಮುಂದೆ ಮೌಲ್ಯಕಟ್ಟುತ್ತಾ ಕೂರುವುದು ಸರಿಯಾದ ಕ್ರಮವಲ್ಲ ಆದರೂ ಆನೆಗಳಿಂದ ಸಂಭವಿಸುವ ಸಾವು ನೋವುಗಳ ಪರಿಣಾಮವು ಅಸಹನೀಯ ಘಟನೆಗಳಾಗಿವೆ (Santiapillai ಮತ್ತು ಇತರರು, 2010). ಇತರ ಕಾರಣಗಳಿಂದ ಉಂಟಾಗುವ ಸಾವು ನೋವು, ಬೆಳೆನಾಶ ಇವುಗಳ ಮುಂದೆ ಆನೆ ಮಾನವ ಸಂಘರ್ಷದ ಪರಿಣಾಮವಾಗಿ ಉಂಟಾಗುವ ಸಾವುನೋವು ಸುಮರು ಶೇ 0.5 ಕ್ಕಿಂತ ಕಡಿಮೆಯಗಿರುತ್ತದೆ (malima ಮತ್ತು ಇತರರು, 2005). ಘಟನೆಗಳು ಹೆಚ್ಚಾಗಿ ಸಂಭವಿಸಿರುವುದು ಆನೆಗಳು ಮತ್ತು ಮಾನವ ದಾಟಬೇಕಾದ ರಸ್ತೆಗಳ ನಡುವೆಯೆ (Tchamba, 1996.) ಹಾಗೆ ನೋಡಿದರೆ ಮಲೇರಿಯಾ, ವಾಹನ ಅಪಘಾತ ಮತ್ತು ಇತರ ಘಟನೆಗಳಿಂದ, ಉಂಟಾಗುವ ಸಾವುನೋವುಗಳ ಮುಂದೆ ಅಷ್ಟು ಮಹತ್ವದ್ದಾಗಿ ಕಾಣಿಸುವುದಿಲ್ಲ. ಆನೆ ಸಂಘರ್ಷದಿಂದ ಉಂಟಾಗುವ ಸಾವುನೋವು ಕುಟುಂಬದ ಹಂತದಲ್ಲಿ ದುರ್ಘಟನೆ ಎನ್ನಬಹುದಾದರೂ ರಾಷ್ಟ್ರೀಯಾ ಮಟ್ಟದಲ್ಲಿ ಅದು ಗಮನಾರ್ಹ ಸಮಸ್ಯೆಯಲ್ಲ, ಆದರೂ ಇಂತಹ ಘಟನೆಗಳು ಜನತೆಯಲ್ಲಿ ಭಯವನ್ನು ಉಂಟುಮಾಡುವುದರ ಜೊತೆಗೆ ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದಂತೆ ಜಾಗೃತಿ ಉಂಟುಮಾಡುವಲ್ಲಿ ತೊಡಕಾಗಿ ಪರಿಣಮಿಸುತ್ತದೆ.

ಆನೆ ಮತ್ತು ಮಾನವ ಸಂಘರ್ಷ ಈ ಕೆಳಕಂಡ ಪ್ರಮುಖ ಸಂದರ್ಭಗಳಲ್ಲಿ ಸಂಭವಿಸಿರುವುದು ತಿಳಿದುಬರುತ್ತದೆ. 1) ನೀರಿನ ಮೂಲಗಳಿರುವ ನೆಲೆಗಳಲ್ಲಿ ಅನಾಹುತಗಳು ಹೆಚ್ಚಾಗಿ ಸಂಭವಿಸುತ್ತವೆ. 2) ಬೆಳೆ ರಕ್ಷಣೆಗಾಗಿ ರೈತರು ರಾತ್ತಿಯ ವೇಳೆ ಇರುವಂತಹ ಸಂದರ್ಭಗಳಲ್ಲಿ ಇಂತಹ ಘಟನೆಗಳು ಸಂಭವಿಸುತ್ತವೆ. 3) ಗಾಯಗೊಂಡ, ಘಾಸಿಗೊಂಡ ಮತ್ತು ತಾಯಿಯ ಜೊತೆ ಮರಿಗಳಿರುವ ಸಂದರ್ಭದಲ್ಲಿ ಜನರು ಹತ್ತಿರ ಹೋದಾಗ ಈ ದುರ್ಘಟನೆಗಳು ಉಂಟಾಗುತ್ತವೆ (Leggat ಮತ್ತು ಇತರರು, 2001). 4) ಅರಣ್ಯಕ್ಕೆ ಹೊಂದಿದ ಪ್ರದೇಶಗಳಲ್ಲಿ ಕೃಷಿ ಮತ್ತು ವಸತಿಗಳನ್ನು ನಿರ್ಮಿಸಿರುವ ಕಡೆ ಇಂತಹ ಪ್ರಸಂಗಗಳು ಕಾಣಿಸಿಕೊಂಡಿವೆ. ಪ್ರಸ್ತುತ ಪ್ರಬಂಧವು ಬಂಡೀಪುರ ರಾಷ್ಟ್ರೀಯ ಉದ್ಯಾನವನದ ವಲಯದಲ್ಲಿ ಕಾಡಾನೆ ಮಾನವ ಸಂಘರ್ಷದಿಂದ ಉಂಟಾದ ಮಾನವನ ಸಾವು ನೋವಿಗೆ ಸಂಬಂಧಿಸಿದಂತೆ ಅಂಕಿಅಂಶಗಳೊಂದಿಗೆ ವಿಶ್ಲೇಷಿಸಲಾಗಿದೆ.

ಅಧ್ಯಯನ ಕ್ಷೇತ್ರ



ಚಿತ್ರ 1: ಅಧ್ಯಯನ ಪ್ರದೇಶದ ಸ್ವರೂಪ ನಕ್ಷೆ

ಬಂಡೀಪುರ ರಾಷ್ಟ್ರೀಯ ಉದ್ಯಾನವನವು ಕರ್ನಾಟಕ ರಾಜ್ಯದಲ್ಲಿನ ಜಾಮರಾಜನಗರ ಜಿಲ್ಲೆಯಲ್ಲಿ ವ್ಯಾಪಿಸಿದೆ. ಈ ಪ್ರದೇಶವು $11^{0}35'34"$ ಉತ್ತರ ಅಕ್ಷಾಂಶದಿಂದ $11^{0}57'02"$ ಉತ್ತರ ಅಕ್ಷಾಂಶದವರೆಗೆ ಮತ್ತು $75^{0}12'17"$ ಪೂರ್ವ ರೇಖಾಂಶದಿಂದ $76^{0}51'32"$ಪೂರ್ವ ರೇಖಾಂಶದವರೆಗೆ ವಿಸ್ತರಿಸಿದ್ದು, ಒಟ್ಟು 868.63 ಚದುರ ಕಿಮೀ ಪ್ರದೇಶವನ್ನು ಒಳಗೊಂಡಿದೆ. ಈ ಉದ್ಯಾನವನದ ಗಡಿಯು ವಾಯುವ್ಯದಲ್ಲಿ ನಾಗರಹೊಳೆ ರಾಷ್ಟ್ರೀಯ ಉದ್ಯಾನದೊಂದಿಗೆ (ಕರ್ನಾಟಕ), ದಕ್ಷಿಣದಲ್ಲಿ ಮದುಮಲೈ ವನ್ಯಜೀವಿಧಾಮವನ್ನು (ತಮಿಳುನಾಡು), ನೈರುತ್ಯದಲ್ಲಿ ವೈನಾಡಿನ ವನ್ಯಜೀವಿಧಾಮ (ಕೇರಳ) ದೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಈ ಎಲ್ಲಾ ಸಂರಕ್ಷಿತ ಪ್ರದೇಶಗಳು ನೀಲಗಿರಿ ಜೈವಿಕ ಸಂರಕ್ಷಣ ವಲಯಕ್ಕೆ ಸೇರಿವೆ. ಈ ಉದ್ಯಾನವು ಮುಖ್ಯವಾಗಿ ಆನೆ ಸಂರಕ್ಷಣ ವಲಯವಾಗಿದೆ. ಈ ಉದ್ಯಾನವನದ ಮೂಲಕ ಮೈಸೂರು ಮತ್ತು ಊಟಿ ಹಾಗೂ ಮೈಸೂರು ಮತ್ತು ಕ್ಯಾಲಿಕಟನ್ನು ಸಂಪರ್ಕಿಸುವ ಎರಡು ಮುಖ್ಯರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತದೆ, ಈ ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು 680 ಮೀಟರ್‌ನಿಂದ 1450 ಮೀಟರ್ ಎತ್ತರದಲ್ಲಿದೆ. ಇಲ್ಲಿನ ವಾಷಿಕ ಸರಾಸರಿ ಮಳೆಯ ಪ್ರಮಾಣವು 914 ಮಿಲಿ ಮಿ ನಿಂದ 1270 ಮಿಲಿ ಮೀಟರಗಳಾಗಿದೆ. ಕಬಿನಿ ಜಲಾಶಯವು ಈ ಉದ್ಯಾನವನ್ನು ನಾಗರಹೊಳೆ ಉದ್ಯಾನವನದಿಂದ ಬೇರ್ಪಡಿಸುವ ಗಡಿಯಾಗಿದೆ. ಇಲ್ಲಿ ಮುಖ್ಯವಾಗಿ ಮೂರು ಋತುಗಳನ್ನು ನೊಡಬಹುದಾಗಿದೆ ಹೆಚ್ಚು ಮಳೆಯನ್ನು ತರುವ ಮಳೆಗಾಲ ಜೂನ್‌ನಿಂದ ಅಕ್ಟೋಬರ್ ಮಧ್ಯಭಾಗದವರೆಗೆ,

ಚಳಿಗಾಲವು ನವೆಂಬರ್‌ನಿಂದ ಪ್ರೆಬ್ರವರಿವರೆಗೆ, ಮತ್ತು ಬೇಸಿಗೆಕಾಲವು ಮಾರ್ಚ್‌ನಿಂದ ಮೇ ವರೆಗೆ ಕಂಡುಬರುತ್ತದೆ. ಈ ಉದ್ಯಾನವನವನ್ನು 1973 ರಲ್ಲಿ ಹುಲಿ ಯೋಜನೆ ವ್ಯಾಪ್ತಿಗೆ ಸೇರಿಸಲಾಗಿದ್ದು ಉದ್ಯಾನವನದ ಉತ್ತರ ಭಾಗದ ಗಡಿಯಲ್ಲಿ ಸುಮರು 200 ಹಳ್ಳಿಗಳು ವ್ಯಾಪಿಸಿವೆ (ಚಿತ್ರ 1).

ಪರಿಕರಗಳು ಮತು ವಿಧಾನಗಳು

ಮಾಹಿತಿ ಸಂಗ್ರಹ: ಪ್ರಸ್ತುತ ಪ್ರಬಂಧಕ್ಕೆ ಸಂಬಂಧಿಸಿದಂತೆ ಸಂತ್ರಸ್ತರ ಕುಟುಂಬದವರಿಂದ ಮತ್ತು ಅರಣ್ಯ ಇಲಾಖೆಯಿಂದ ಮಾಹಿತಿಗಳನ್ನು ಪಡೆಯಲಾಗಿದೆ.

ಸಂದರ್ಶನ: ಪ್ರಶ್ನಾವಳಿಗಳನ್ನು ಬಳಕೆಮಾಡಿಕೊಂಡು ಸಂತ್ರಸ್ತರ ಕುಟುಂಬದವರಿಂದ, ಅರಣ್ಯ ಅಧಿಕಾರಿಗಳಿಂದ ಮತ್ತು ಪ್ರತ್ಯಕ್ಷ ದರ್ಶಿಗಳಿಂದ ಮಾಹಿತಿಯನ್ನು ಕಲೆಹಾಕಲಾಗಿದೆ. ಈ ಮಾಹಿತಿಗಳಿಂದ ಘಟನೆ ನಡೆದ ದಿನಾಂಕ, ಸಮಯ, ಸ್ಥಳ, ಸಾವುನೋವುಗಳಿಗೆ ಒಳಗಾದ ವ್ಯಕ್ತಿಯ ವಯಸ್ಸು, ಲಿಂಗ, ಗಾಯ ಮತ್ತು ಸಾವಿನ ಸ್ವರೂಪ ಹಾಗೂ ಘಟನೆಗೆ ಕಾರಣಗಳನ್ನು ಅಧ್ಯಯನ ಮಾಡಲಾಯಿತು.

ಫಲಿತಾಂಶಗಳು ಮತು ವಿಮರ್ಶೆ: ಕಾಡಾನೆ ದಾಳಿಯಿಂದ ಅಧ್ಯಯನದ ಅವಧಿಯಲ್ಲಿ ಸರಾಸರಿ ಪ್ರತಿವರ್ಷಕ್ಕೆ 6/7 ಪ್ರಕರಣಗಳಂತೆ ಒಟ್ಟು 48 ಘಟನೆಗಳು ವರದಿಯಾಗಿವೆ. ಅದರಲ್ಲಿ ಮೂವತ್ತೇಳು ಮಂದಿ ಆನೆಗಳ ದಾಳಿಯಿಂದ ಪ್ರಾಣಬಿಟ್ಟಿದ್ದರೆ, 21 ಮಂದಿಗೆ ಗಾಯಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಅಧ್ಯಯನದ ಅವದಿಯಲ್ಲಿ ಘಟನೆಗಳು ಒಂದೇ ರೀತಿ ಇರದೆ ಪ್ರಾರಂಭದ ವರ್ಷಗಳಲ್ಲಿ ಹೆಚ್ಚು ಪ್ರಕರಣಗಳು ನಡೆದಿದ್ದು ನಂತರ ಆ ಪ್ರಮಾಣ ಕಡಿಮೆಯಾಗುತ್ತಾ ಸಾಗಿದೆ (ಕೋಷ್ಟಕ 2). ಈ ಪ್ರದೇಶದಲ್ಲಿ ವರದಿಯಾಗಿರುವ ಒಟ್ಟು ಘಟನೆಗಳ ಸಂಖ್ಯೆಯನ್ನು ಬೇರೆ ಪ್ರದೇಶಗಳಿಗೆ ಹೊಲಿಕೆ ಮಾಡಿದಾಗ ತುಂಬ ವಿರಳವಾಗಿರುವುದು ಕಂಡುಬರುತ್ತದೆ, ಭಗವತ್ (1995) ರವರ ಪ್ರಕಾರ 1980 ರಿಂದ 1991 ರ ವರೆಗೆ ಒಟ್ಟು 208 ದಕ್ಷಿಣ ಬಿಹಾರದಲ್ಲಿ ಮೃತಟ್ಟಿರುತ್ತಾರೆ.

ಘಟನೆಯ ಸಮಯ: ಘಟನೆಗಳು ದಿನದ ಎಲ್ಲಾ ಸಮಯದಲ್ಲೂ ಸಂಭವಿಸಿರುವುದು ಕಂಡುಬಂದಿದ್ದು ಶೇ14 ರಷ್ಟು ಪ್ರಕರಣಗಳು ಮುಂಜಾನೆಯಲ್ಲಿ (0000hrs – 0600 hrs), ಶೇ17ರಷ್ಟು ಬೆಳಗಿನ ಸಮಯದಲ್ಲಿ (06000 hrs –1200 hrs), ಶೇ21 ರಷ್ಟು ಮಧ್ಯಾಹ್ನದ ವೇಳೆ ಮತ್ತು ಶೇ46 ರಷ್ಟು ರಾತ್ರಿ ಮಂದ ಬೆಳಕಿನಲ್ಲಿ ಕಂಡುಬಂದಿದೆ. ರಾತ್ರಿಯ ವೇಳೆ ಮತ್ತು ಮುಂಜಾನೆಯಲ್ಲಿ ನಡೆದಿರುವ ಘಟನೆಗಳಿಗೆ ಮನುಷ್ಯರು ಆನೆಗಳ ಉಪಸ್ಥಿತಿಯನ್ನು ಗ್ರಹಿಸುವಲ್ಲಿ ವಿಫಲರಾಗುವುದೇ ಪ್ರಮುಖ ಕಾರಣವಾಗಿದೆ (ಚಿತ್ರ 2).



ಚಿತ್ರ 2: ಪ್ರಕರಣಗಳು ಸಂಭವಿಸಿರುವ ಸಮಯ

ಘಟನೆಯ ಕಾಲ: ಘಟನೆಗಳನ್ನುಕೂಲಂಕುಷವಾಗಿ ವಿಶ್ಲೇಷಣೆ ಮಾಡಿದಾಗ ಹೆಚ್ಚು ಪ್ರಕರಣಗಳು ಮಳೆಗಾಲದಲ್ಲಿ ಸಂಭವಿಸಿದ್ದು ಕೋಷ್ಟಕ 1 ರಲ್ಲಿ ನಮೂದಿಸಲಾಗಿದೆ. ಇದಕ್ಕೆ ಆಧಾರವಾಗಿ ಕೆಲವೊಂದು ದಿನಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಮಳೆಗಾಲದಲ್ಲಿ ಮಾನವ ಜೀವಹಾನಿ ಹೆಚ್ಚಿನ ಸಂಖ್ಯೆಯಲ್ಲಿ ಉಂಟಾಗಿರುವುದು ಕಂಡುಬರುತ್ತದೆ.

ವರ್ಷ	ಋತುಗಳು						ಒಟ್ಟು
	ಚಳಿಗಾಲ		ಬೇಸಿಗೆಗಾಲ		ಮಳೆಗಾಲ		
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	
ಮನುಷ್ಯನ ಸಾವು							
2001–2012	11	41	7	26	9	33	27
ಮನುಷ್ಯನ ನೋವು							
2001–2012	5	24	5	24	11	52	21

ಕೋಷ್ಟಕ 1: ಬೇರೆ ಬೇರೆ ಋತುಮಾನಗಳಲ್ಲಿ ವರದಿಯಾಗಿರುವ ಪ್ರಕರಣಗಳು

ಘಟನೆಯ ಸ್ಥಳ: ಹೆಚ್ಚಾಗಿ ಘಟನೆಗಳು ಕೃಷಿಭೂಮಿಯ ಹತ್ತಿರ ಸಂಭವಿಸಿರುವುದು ದಾಖಲಾಗಿದೆ (ಶೇ54 ರಷ್ಟು). ಬೆಳೆಯ ಲಭ್ಯತೆ ಮತ್ತು ರೈತರ ಅಕ್ರಮಣಕಾರಿ ಮನೋಭಾವದಿಂದ ಘಾಸಿಗೊಂಡ ಆನೆಗಳು ಸಂಘರ್ಷಕ್ಕಿಳಿಯುವುದು ಇದಕ್ಕೆ ಪ್ರಮುಖ ಕಾರಣವಾಗಿದೆ. ಶೇ19ರಷ್ಟು ರಸ್ತೆಯನ್ನು ದಾಟುವಾಗ, ಕೆಲಸಕ್ಕೆ ತೆರಳುವ ಸಂದರ್ಭದಲ್ಲಿ ಸಂಭವಿಸಿರುತ್ತವೆ. ಶೇ15ರಷ್ಟು ಘಟನೆಗಳು ಅರಣ್ಯದಲ್ಲಿ ಮತ್ತು ಕೇವಲ ಶೇ8 ರಷ್ಟು ಘಟನೆಗಳು ನೀರಿನ ಮೂಲಗಳ ಹತ್ತಿರ ನಡೆದಿದೆ (ಚಿತ್ರ 3).



ಚಿತ್ರ 3: 2001 ರಿಂದ 2012 ರವರೆಗೆ ಮಾನವ ಸಾವು ನೋವು ಸಂಭವಿಸಿರುವ ಸ್ಥಳಗಳು

ಸಂತ್ರಸ್ತರ ಲಿಂಗ ಮತ್ತು ವಯಸ್ಸು: ಒಟ್ಟು ನಡೆದ ಪ್ರಕರಣದಲ್ಲಿ 38 ಜನರು ಪುರುಷರಾಗಿದ್ದು ಅವರು ಸುಮಾರು 21–70 ವರ್ಷ ವಯೋಮಾನದವರಾಗಿದ್ದರೇ, ಹೆಂಗಸರು 25 ರಿಂದ 60 ವರ್ಷದೊಳಪಟ್ಟಿದ್ದಾರೆ.

ಈ ಒಂದು ಅಧ್ಯಯನದ ಪ್ರಕಾರ ಕಾಡಾನೆಯಿಂದ ಪುರುಷರಿಗೆ ಹೆಚ್ಚು ಸಾವು (83%) ಮತ್ತು ನೋವು (71 %) ಸಂಭವಿಸಿರುವುದು

ಕಂಡುಬರುತ್ತದೆ. ಸಾಮಾನ್ಯವಾಗಿ ಪುರುಷರು ಹೆಚ್ಚು ಹೊರಂಗಣ ಚಟುವಟಿಕೆಗಳಲ್ಲಿ ತೊಡಗಿರುವುದು ಇದಕ್ಕೆ ಪ್ರಮುಖ ಕಾರಣವೆನ್ನಬಹುದು. ಈ ಒಂದು ವರದಿಯ ಸಮರ್ಥನೆಗೆ ನಾವು ಸುಕುಮಾರ್(2003) ರವರು ನಡೆಸಿರುವ ವರದಿಯನ್ನು ನೋಡಬಹುದು. ಘಟನೆಗಳು ಸಂಭವಿಸಿರುವ ಸಂದರ್ಭದಲ್ಲಿ ಸಂತ್ರಸ್ತರು ಕೆಲಸಗಳಲ್ಲಿ ತೊಡಗಿರುವುದು ತಿಳಿದುಬಂದಿದೆ.

ಸಂತ್ರಸ್ತರ ಉದ್ಯೋಗ: ಘಟನೆಗಳ ವರದಿಗಳನ್ನು ಗಮನಿಸಿದಾಗ ತಿಳಿದುಬರುವುದೇನೆಂದರೆ ಶೇ53ರಷ್ಟು ರೈತರು ಬೆಳೆಗಳನ್ನು ಕಾಯುವ ಸಂದರ್ಭದಲ್ಲಿ ತೊಂದರೆಗೊಳಗಾಗಿರುತ್ತಾರೆ. ದನಗಾಹಿಗಳು (ಶೇ18ರಷ್ಟು) ಜಾನುವಾರುಗಳನ್ನು ಮೇಯಿಸಲು ಕಾಡಿನಂಚಿಗೆ ತೆರಳಿದ್ದಾಗ ಅವರಿಗೆ ಜೀವಹಾನಿಯಾಗಿರುತ್ತದೆ. ಶೇ16ರಷ್ಟು ಕೂಲಿಕಾರ್ಮಿಕರು ಅರಣ್ಯ ಗಡಿಯ ತೋಟಗಳಲ್ಲಿ ಕೆಲಸಮಾಡುವಾಗ ಆನೆಯ ತುಳಿತಕ್ಕೆ ಒಳಗಾಗಿರುತ್ತಾರೆ. ಅರಣ್ಯ ಮತ್ತು ಘಟನೆಗಳ ಸಂಬಂಧವನ್ನು ತಿಳಿಯಲು ಆನೆಗಳ ಪ್ರಯಾಣದ ದೂರ ಮತ್ತು ಘಟನೆಗಳ ಸಂಖ್ಯೆಯನ್ನು ಹೋಲಿಕೆ ಮಾಡಿದಾಗ ಗಮನಾರ್ಹ ಪರಸ್ಪರ ಸಂಬಂಧವಿರುವುದು ಕಂಡುಬಂದಿದೆ. ಇದರ ಪ್ರಕಾರ ಸುಮಾರು ಶೇ80ರಷ್ಟು ಘಟನೆಗಳು 2 ಕಿಮೀ ವ್ಯಾಪ್ತಿಯಲ್ಲಿ ಕಂಡುಬಂದಿದ್ದು ನಂತರ ಅರಣ್ಯಗಡಿ ದೂರವಾದಂತೆಲ್ಲಾ ಘಟನೆಗಳ ಸಂಖ್ಯೆ ವಿರಳವಾಗಿವೆ (ಚಿತ್ರ 4).



ಚಿತ್ರ 4: ಘಟನೆ ನಡೆದ ಪ್ರದೇಶಕ್ಕು ಮತ್ತು ಕಾಡಂಚಿಗೂ ಇರುವ ಸಂಬಂಧ

ANCF (2011) ಪ್ರಕಾರ ಜೀವಹಾನಿಗೆ ಕಾರಣವಾದ ಆನೆಗಳ ಲಿಂಗ ಮತ್ತು ವಯಸ್ಸುಗಳನ್ನು ಕಂಡುಹಿಡಿಯುವುದು ಕಷ್ಟಸಾಧ್ಯ. ಪ್ರಸ್ತುತ ಅಧ್ಯಯನದಲ್ಲಿ ಘಟನೆಗಳಿಗೆ ಕಾರಣವಾದ ಆನೆಗಳ ವಿವರಣೆಗಳನ್ನು ಪರಿಶೀಲಿಸಿದಾಗ 32 ಪ್ರಕರಣಗಳಿಗೆ ಮಾತ್ರ ವಿವರಗಳನ್ನು ತಿಳಿಯಲು ಸಾಧ್ಯವಾಯಿತು. ಶೇ 79 ರಷ್ಟು ಘಟನೆಗಳು ಒಂಟಿಸಲಗಗಳಿಂದ ನಡೆದಿರುತ್ತದೆ. ಸಂಶೋಧಕರು ಇದುವರೆಗೆ ನಡೆಸಿರುವ ಸಂಶೋದನೆಗಳೂ ಸಹ ಇದನ್ನು ಪುಷ್ಟಿಕರಿಸುತ್ತವೆ. ಸಾವು ನೋವುಗಳು ಸಂಭವಿಸುವ ಸಮಯದಲ್ಲಿ ಆನೆಗಳು ಅಕ್ರಮಣಕಾರಿ ಮನೋಭಾವವನ್ನು ಹೊಂದಿದ್ದು ಮತ್ತು ಮದವೇರಿ ಘಾಸಿಗೊಂಡ ಸಮಯದಲ್ಲೂ ಜೀವಹಾನಿ ಸಂಭವಿಸಬಹುದು ಎಂಬುದನ್ನು ಡೊರೆಮ್ (1999) ರವರ ಸಂಶೋಧನೆಯಲ್ಲಿ ತಿಳಿಯಬಹುದು. ಇಂತಹ ಅಂಶಗಳಿಂದಲೂ ಘಟನೆಗಳೂ ಅಧ್ಯಯನ ಪ್ರದೇಶದಲ್ಲಿ ಸಂಭವಿಸಿರಬಹುದು ಎಂಬುದನ್ನು ಅಂದಾಜಿಸಲಾಗಿದೆ. ಆನೆಗಳು ಮಾನವನನ್ನು ಕೊಲ್ಲುವ ಸಂಧರ್ಭದಲ್ಲಿ ಮೊದಲು ತಮ್ಮ ಸೊಂಡಲಿನಿಂದ ಎಸೆದು ನಂತರ ಕಾಲಿನಿಂದ ಬಲವಾಗಿ ಒತ್ತಡ ಹಾಕುವ ಮೂಲಕ ಕೊಂದಿರುತ್ತವೆ ಎಂಬುದು ತಿಳಿದುಬಂದಿವೆ. ಕೆಲವೊಮ್ಮೆ ಆನೆಗಳಿಂದ ತಪ್ಪಿಸಿಕೊಳ್ಳುವ ಸಂದರ್ಭದಲ್ಲಿ ಗಾಬರಿಯಾಗಿ ಜಾರಿಬಿದ್ದು ಗಾಯಗೊಂಡಿರುವುದನ್ನು ಕಾಣಬಹುದು. ದಾಸ್ (2001) ರವರು ತಮ್ಮ ಸಂಶೋಧನೆಯಲ್ಲಿ ಈ ರೀತಿಯ ಲಕ್ಷಣಗಳನ್ನು ಗಮನಿಸಿ ವರದಿಮಾಡ್ಡಿದ್ದಾರೆ.

ಪರಿಹಾರ ಧನ: 2001 ರಿಂದ 2012 ರವರೆಗೆ ಕಾಡಾನೆ ದಾಳಿಯಿಂದ ಉಂಟಾದ ಸಾವು ನೋವಿಗೆ, ಸಂತ್ರಸ್ತರ ಕುಟುಂಬಗಳಿಗೆ ಸುಮಾರು 37 ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರ ಅರಣ್ಯ ಇಲಾಖೆಯ ಮುಖಾಂತರ ವಿತರಿಸಿದೆ (ಕೋಷ್ಟಕ 2). ಸತ್ತವರಿಗೆ ಸುಮಾರು 3 ಲಕ್ಷ ರೂಪಾಯಿಗಳನ್ನು, ಗಾಯಗೊಂಡವರಿಗೆ ವೈದ್ಯಕೀಯ ವೆಚ್ಚವನ್ನು ಭರಿಸಲಾಗಿದೆ. ಶಾಶ್ವತ ಅಂಗವೈಕಲ್ಯ ಇದ್ದರೆ ಅಗತ್ಯ ವೈದಕೀಯ ಚಿಕಿತ್ಸೆ ಭರಿಸಿದ ನಂತರ ಸುಮಾರು 50 ಸಾವಿರದವರೆಗೆ ಪರಿಹರ ಧನವನ್ನು ಕೊಡಲಾಗಿದೆ. ಮರಣದ ಸಂದರ್ಭದಲ್ಲಿ ಪರಿಹಾರ ಧನ ವಿತರಣೆ ಸುಮಾರು 4/5 ತಿಂಗಳಾಗಿದ್ದು, ಗಾಯಗೊಂಡಿರುವ ಸಂದರ್ಭದಲ್ಲಿ 11 ತಿಂಗಳು ವಿಳಂಬವಾಗಿರುವುದು ಕಂಡುಬರುತ್ತದೆ.

ವರ್ಷ	ಮನುಷ್ಯನ ಸಾವು		ಮನುಷ್ಯನ ನೋವು		ಒಟ್ಟು	
	ಸಂಖ್ಯೆ	ಮೊತ್ತ (ರೂಪಾಯಿಗಳಲ್ಲಿ)	ಸಂಖ್ಯೆ	ಮೊತ್ತ (ರೂಪಾಯಿಗಳಲ್ಲಿ)	ಸಂಖ್ಯೆ	ಮೊತ್ತ (ರೂಪಾಯಿಗಳಲ್ಲಿ)
2001	3	3,00,000	*	–	3	3,00,000
2002	4	4,00,000	*	–	4	4,00,000
2003	4	4,00,000	*	–	4	4,00,000
2004	1	1,00,000	*	–	1	1,00,000
2005	1	1,00,000	1	25,000	2	1,25,000
2006	1	1,00,000	2	6,403	3	1,06,403
2007	3	4,50,000	3	19,248	6	4,69,248
2008	4	6,00,000	3	32,717	7	6,32,717
2009	3	4,50,000	3	37,867	6	4,87,867
2010	–	–	3	1,16,360	3	1,16,360
2011	1	1,50,000	4	56,000	5	2,06,000
2012	2	3,00,000	2	49,520	4	3,49,520
ಒಟ್ಟು	**27**	**33,50,000**	**21**	**3,43,115**	**48**	**36,93,115**

ಕೋಷ್ಟಕ 2: ಅಧ್ಯಯನದ ಅವಧಿಯಲ್ಲಿ ವರದಿಯಾದ ಒಟ್ಟು ಪ್ರಕರಣಗಳು ಮತ್ತು ವಿತರಿಸಲಾಗಿರುವ ಪರಿಹಾರ ಧನ

•ಡಾಖಲೆ ಲಭ್ಯವಿಲ್ಲ

ಉಪಸಂಹಾರ: ಕಾಡಾನೆಗಳಿಂದ ಉಂಟಾಗುವ ಜೀವಹಾನಿ ಮತ್ತು ನೋವು ಜನರಲ್ಲಿ ಭಯವನ್ನು ಉಂಟು ಮಾಡುವುದರ ಜೊತೆಗೆ ಸಾಮಾನ್ಯ ಜೀವನ ನಡೆಸುವಲ್ಲಿ ಅಡೆತಡೆ ಉಂಟು ಮಾಡುತ್ತವೆ. ದುರ್ಬಲ ವರ್ಗದವರು,. ಹೆಚ್ಚಾಗಿ ರೈತರು ಈ ಘಟನೆಗಳಿಂದ ತೊಂದರೆಗೆ ಒಳಗಾಗಿರುವುದರಿಂದ ತುಂಬ ಜಾಗರೂಕರಾಗಬೇಕಿರುವುದು ತುಂಬಾ ಅವಶ್ಯಕ. ಇಂತಹ ಘಟನೆಗಳು ನಡೆಯದಂತೆ ಮತ್ತು ಮರುಕಳಿಸದಂತೆ ಎಚ್ಚರ ವಹಿಸಬೇಕು. ಸರ್ಕಾರ ಮತ್ತು ಅರಣ್ಯ ಇಲಾಖೆ ಸರಿಯಾದ ಯೋಜನೆಗಳನ್ನು ರೂಪಿಸಿ ಸರಿಯಾದ ರೀತಿಯಲ್ಲಿ ಅವುಗಳನ್ನು ಕಾರ್ಯರೂಪಕ್ಕೆ ತರಬೇಕು.

ಉಲ್ಲೇಖನಗಳು:

1) Santipillai, C., Wijeyamohan, S., Bandara,G., Athurupana, R. and Dissanayake, N., 2010. An assessment of the human-elephant conflict in Sri Lanka. **Cey. J. Sc,** 39: 21-33.
2) Malima, C., Hoare, R. and Blanc. J., 2005. Systematic recording of human–elephant conflict: a case study in south-eastern Tanzania. **Pachyderm,** 38: 29–38.
3) Tchamba, M.N., 1996. History and present status of the human/elephant conflict in the Waza-Logone region, Cameroon, West Africa. **Biological Conservation,** 75: 35 –41.
4) Leggat, P. A., Durrheim, D. N. and Braack. L., 2001. Travelling in wildlife reserves in South Africa. **Journal of Travel Medicine,** 8: 41–45.
5) Bhagawat, A. M and Datye, H. S., 1995. Home range of elephants in fragmented habitats of Central India. **Journal of Bombay Natural History Society,** 92: 1-10.
6) Sukumar, R., 2003. The Living Elephants: evolutionary, ecology, behavior, and conservation. Oxford University Press, New York.
7) ANCF., 2011. Asian Nature Conservation Foundation Management plan for the Elephants in Bandipur Tiger Reserve.
8) Durrheim, D. M., 1999. Risk to tourists posed by wild mammals in South Africa. **J Travel Med,** 6: 172-179.
9) Das, S. K. and Chattopadhyay., 2011. Human fatalities from wild elephant attacks – A study of fourteen cases. **Journal of Forensic and Legal Medicine,** 18: 154-157.

ದಕ್ಷಿಣ ಭಾರತ ಪರ್ಯಾಯ ದ್ವೀಪದಲ್ಲಿ ನೀಳರೇಖೆಗಳು ಭೂ ಭಾಗಗಳ ರಚನೆ ಮತ್ತು ಭೂಕಂಪಗಳು – ಒಂದು ಅಧ್ಯಯನ

ಅನ್ನಪೂರ್ಣ ಎಚ್

ಸಂಶೋಧನಾ ವಿದ್ಯಾರ್ಥಿ, ಭೂ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 570007

ಅನಾದಿ ಕಾಲದಿಂದ ಭಾರತದ ದಕ್ಷಿಣ ಪ್ರಾಂತ್ಯ ಒಂದು ಸ್ಥಿರ ಭೂ ಭಾಗವೆಂದು ಪರಿಗಣಿಸಲಾಗಿದೆ. ಸ್ಥಿರ ಭೂ ಖಂಡವಾದರೂ ಸಹ ಕೆಲವು ಭೂ ಕಂಪನಗಳು ದಕ್ಷಿಣ ಭಾರತ್ ಪರ್ಯಾಯ ದ್ವೀಪದ ಕರಾವಳಿ ತೀರ ಪ್ರದೇಶಗಳಲ್ಲಿ ಉಲ್ಲೇಖವಾಗಿದೆ. ಇಂತಹ ಭೂ ಕಂಪನಗಳ ತೀವ್ರತೆಯನ್ನು ತಿಳಿಯಲು ವೈಜ್ಞಾನಿಕವಾದ ಅಧ್ಯಯನಗಳು ಅತ್ಯವಶ್ಯಕ. ಭೂ ವೈಜ್ಞಾನಿಕ ಮತ್ತು ಭೂಮಿಯ ಪ್ರಕ್ರಿಯೆಯ ಮೂಲಕ ವಿಕಸನಗೊಂಡ ಸ್ತರಭಂಗಗಳ(faults) ಕಾರಣದಿಂದ ಭೂಕಂಪನಗಳು ಸಂಭವಿಸುತ್ತವೆ. ಭೂಮಿಯ ಭೂರಚನೆಗಳಲ್ಲಿ ಉಂಟಾದ ಒತ್ತಡಗಳು ಭೂಕಂಪಕ್ಕೆ ಕಾರಣವಾಗಿದೆ. ಹಾಗಾಗಿ ಭೂಮಿಯ ರಚನೆಗಳು ನೀಳಮೇಲ್ಮೈ ರೇಖೆಗಳು (lineaments) ಇವೆಲ್ಲವುಗಳ ಅಧ್ಯಯನ ಭೂಕಂಪಶೀಲತೆ ಮತ್ತು ಭೂಕಂಪಗಳನ್ನು ಅರ್ಥೈಸಲು ಅಗತ್ಯವಾಗಿದೆ. ದಕ್ಷಿಣ ಭಾರತದ ನೀಳರೇಖೆಗಳನ್ನು ಪರಿಚಯಿಸಿಕೊಳ್ಳಲು ಈ ಅಧ್ಯಯನವನ್ನು ತೆಗೆದುಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ದಕ್ಷಿಣ ಭಾರತದ ಭೂರೂಪಶಾಸ್ತ್ರದ ವೈಶಿಷ್ಟ್ಯತೆ, ಭೌಗೋಳಿಕ ಲಕ್ಷಣಗಳು, ರಚನೆಗಳು ಮತ್ತು ಸಂಬಂಧಿಸಿದ ಭೂಕಂಪಶೀಲತೆಯನ್ನು ವಿಸ್ತಾರವಾಗಿ ವಿವರಿಸಲಾಗಿದೆ. ದಕ್ಷಿಣ ಭಾರತದ ಪ್ರಮುಖವಾದ ನೀಳರೇಖೆಗಳು ಮತ್ತು ಅವುಗಳ ದಿಕ್ಕುಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ. ಈ ಅಧ್ಯಯನದಲ್ಲಿ ದಕ್ಷಿಣ ಭಾರತದ ಭೂಕಂಪನಗಳು, ಭೂಕಂಪಶೀಲತೆ ಮತ್ತು ಭೂಕಂಪನಗಳ ವಲಯಗಳ ನಕ್ಷೆಗಳ ಬಗ್ಗೆ ಚರ್ಚಿಸಲಾಗಿದೆ. ಭೂಕಂಪ ಸಂಭವನೆಗಳು ಬಹುತೇಕವಾಗಿ ಉಉ ಇಂದ ದಪ–ದಪೂ ದಿಶೆಗಳಲ್ಲಿ ಕಂಡುಬರುತ್ತದೆ ಎಂಬುದನ್ನು ಗುರುತಿಸಲಾಗಿದೆ. ಈ ಭೂಕಂಪಗಳು ಪಶ್ಚಿಮ ಕರಾವಳಿಯ ಸ್ತರಭಂಗಗಳ ಪ್ರಭಾವದಿಂದ ಉಂಟಾಗಿರುವುದು ದೃಢವಾಗಿದೆ.

ಪ್ರಮುಖ ಪದಗಳು: ದಕ್ಷಿಣಭಾರತ, ನೀಳರೇಖೆಗಳು, ಭೂಕಂಪಗಳು, ಭೂಕಂಪಶೀಲತೆ

ಪರಿಚಯ : ಭಾರತದ ಪರ್ಯಾಯ ದ್ವೀಪಗಳಲ್ಲಿ ಒಂದು ವಿಶಿಷ್ಟ ಭೂ ಭಾಗಗಳಲ್ಲಿ ಒಂದಾಗಿದೆ. ಭಾರತದ ಮೇಲ್ಮೈ ಮತ್ತು ಯುರೇಷಿಯನ್ ಮೇಲ್ಮೈಗಳ ಒಮ್ಮುಖದ ಚಲನೆಯಿಂದಾಗಿ ಪ್ರಬಲವಾದ ಭೂಕಂಪಗಳ ಚಟುವಟಿಕೆಗಳು ಉಂಟಾಗಿವೆ. ಇತ್ತೀಚಿನ ಅಧ್ಯಯನಗಳ ಪ್ರಕಾರ ತಿಳಿದು ಬಂದಿರುವ ಸಂಗತಿ ಎಂದರೆ ಭೂಭಾಗದ ಆಗ್ನೇಯ ದಿಕ್ಕಿನ ಚಲನೆ ಮತ್ತು ನಿರಂತರವಾದ ಸಮುದ್ರ ನೀರಿನ ಮಟ್ಟಗಳ ವ್ಯತ್ಯಾಸಗಳು ಒತ್ತಡವನ್ನು ಉಂಟುಮಾಡುತ್ತಿವೆ. (ಪ್ರನಬ್ 2001) ಈ ತರಹದ ಒತ್ತಡಗಳು ಭೂಕಂಪಕ್ಕೆ ಪ್ರಮುಖವಾದ ಕಾರಣವಾಗುತ್ತದೆ. ನೀಳ ರೇಖೆಗಳಲ್ಲಿ ಉಂಟಾಗುವ ಚಲನೆ, ಅವುಗಳಿಂದ ಉಂಟಾಗುವ ಪರಿಣಾಮ ಎಲ್ಲವುದರಗಳ ಅಧ್ಯಯನಗಳು ಶತಮಾನಗಳಿಂದ ನಡೆಯುತ್ತಾ ಬಂದಿದೆ. ರಾಮಸ್ವಾಮಿ ಮತ್ತು ಸಂಗಡಿಗರು 1987 ರಿಂದ ಉಪಗ್ರಹಗಳಿಂದ ದೊರೆತ ದಕ್ಷಿಣ ಭಾರತದ ಭೂ ಭಾಗಗಳ ಅಧ್ಯಯನ ಮಾಡುತ್ತಾ ಬಂದಿದ್ದಾರೆ ಮತ್ತು ಭೂ ರಚನಾತಕ ಪ್ರಕ್ರಿಯೆಗಳನ್ನು ಅವಲೋಕಿಸಿದ್ದಾರೆ. ದಕ್ಷಿಣ ಭಾರತದಲ್ಲಿ ಗುರುತಿಸಲಾದ ಎಲ್ಲಾ ನೀಳರೇಖೆಗಳು ಬಿರುಕುಗಳು, ಸ್ತರಭಂಗಗಳು ಮತ್ತು ಅವುಗಳ ದಿಕ್ಕುಗಳನ್ನು ಇಲ್ಲಿ ಪರಿಚಿಸಲಾಗು

ವುದು.

ಅಧ್ಯಯನ ಪ್ರದೇಶ ಮತ್ತು ಭೌಗೋಳಿಕ ಅಧ್ಯಯನ (Study area and Geology): ಪ್ರಸ್ತುತ ಅಧ್ಯಯನ ಸ್ಥಳ ದಕ್ಷಿಣ ಭಾರತವು ಪರ್ಯಾಯ ದ್ವೀಪದ ಒಂದು ಭಾಗವಾಗಿದೆ. ಪರ್ಯಾಯ ದ್ವೀಪವು ಬೆಟ್ಟಗುಡ್ಡಗಳ ಸಾಲು ದಕ್ಷಿಣದ ಪ್ರಸ್ಥಭೂಮಿ, ನದಿಮುಖಜ ಭೂಮಿಯ ಮತ್ತು ಅಳವೆಗಳಿಂದ ಕೂಡಿದ ಕಿರಿದಾದ ಕರಾವಳಿ ತೀರವನ್ನು ಹೊಂದಿರುವ ಒಂದು ಸುಂದರವಾದ ಭೂ ರಚನೆಯಾಗಿದೆ.

ಆರ್ಕಿಯನ್ ಶೀಲ್ಡ್ ಒಂದು ಸ್ಥಿರವಾದ ಭೂಪ್ರದೇಶವಾಗಿದ್ದು ಭೂಚಲನೆ ಮತ್ತು ಭೂಕಂಪಶೀಲತೆಗೆ ನಿಶ್ಚಲವಾಗಿರುವುದು. ಈ ಆರ್ಕಿಯಾನ್ ಶೀಲ್ಡ್, ಧಾರವಾರ ಕ್ರೆಟನ್ ಪಾಂಡ್ಯನ್ ಮೊಬೈಲ್ ಬೆಲ್ಟ್ (pandyan mobile belt), ಪೊಟಿರೋಜೋಯಿಕ್ (ಪುರಾನ) ಸೆಡಿಮೆಂಟರಿ ಬೇಸಿನ್, ಇತ್ತೀಚಿನ ಯುಗಕ್ಕೆ ಸೇರಿದ ಪೂರ್ವ ಮತ್ತು ಪಶ್ಚಿಮ ಕರಾವಳಿಗಳು ಮತ್ತು ದಖನ್ ಪ್ರಸ್ಥಭೂಮಿಗಳನ್ನು ಹೊಂದಿದೆ. (ರಾಮಕೃಷ್ಣನ್, ವೈದ್ಯನಾಥನ್–2010) ಧಾರವಾರ ಕ್ರೆಟನ್ ಅನ್ನು ಉತ್ತರ ದಕ್ಷಿಣಾಭಿಮುಖವಾದ ಕ್ಲೋಸ್‌ಪೆಟ್ ಗ್ರಾನೇಟ್ ಇಬ್ಭಾಗವಾಗಿಸುತ್ತದೆ. ಈ ಭಾಗಗಳಿಗೆ ಈಸ್ಟನ್ ಧಾರವಾರ ಕ್ರೆಟನ್ (ಈ.ಧಾ.ಕ್ರೆ)ಮತ್ತು ವೆಸ್ಟರ್ನ್ ಧಾರವಾರ ಕ್ರೆಟನ್ (ವೆ ಧಾ ಕ್ರೆ)ಎಂದು ಹೆಸರು.

ಈ.ಧಾ.ಕ್ರೆ ಗ್ರಾನೇಟ್ ಗ್ನೈಸ್ ಮೆಗ್‌ಮಟೈಟ್, ಶಿಸ್ಟ್, ಕ್ವಾರ್ಟ್ಸೈಟ್, ಮೆಟಬಸಾಲ್ಟ್ ಮತ್ತು ಕೊಮಟಿಟಿಕ್ ಆಲ್ಟ್ರಾ ಬೇಸಿಕ್ ಮತ್ತು ಕೆಲವೇ ಕೆಲವು ರೂಪಾಂತರಗೊಂಡಿರುವ ಅಗ್ನಿಶಿಲೆ ಮತ್ತು ಪೀಲ್ಡೈಟ್ ನಿಂದ ಕೂಡಿರುವ ಪದರ ಶಿಲೆಯನ್ನು ಒಳಗೊಂಡಿರುತ್ತವೆ. ಪೆನಿನ್‌ಸುಲಾರ್ ಗ್ನೈಸ್, ಧಾರವಾರ್ ಸೂಪರ್ ಗ್ರೂಪ್ ನ ಒಂದು ಅನುಕ್ರಮವಾಗಿದ್ದು ಕೆಳಸ್ತರದಲ್ಲಿ ಪದರಗಳ ರಚನೆಯುಳ್ಳ ಕ್ವಾರೀಯ ಶಿಲೆಗಳು ಮತ್ತು ಅತಿಕ್ವಾರೀಯ ಶಿಲೆಗಳು ಮತ್ತು ಪದರವಾದ ಕಬ್ಬಿಣದ ಅದಿರಿನ ಶಿಲೆಗಳನ್ನು ಹೊಂದಿದೆ. ಮೇಲ್ಸ್ತರದಲ್ಲಿ ಚೂರುಗಲ್ಲುಂಡೆ, ಸುಣ್ಣದ ಕಲ್ಲು, ಗ್ರೇವಾಕ್ ಮತ್ತು ಚರ್ಟ್‌ಗಳಿಂದ ಕೂಡಿದೆ. (ರಾಮಕೃಷ್ಣನ್ ವೈದ್ಯನಾಥನ್ 2010)



ಚಿತ್ರ– 1 ಅಧ್ಯಯನ ಪ್ರದೇಶ ಮತ್ತು ಅದರ ಭೌಗೋಳಿಕ ಲಕ್ಷಣಗಳು

ದಕ್ಷಿಣ ಭಾರತ ಭೂರೂಪಶಾಸ್ತ್ರದ ವೈಶಿಷ್ಟ್ಯಗಳು : ವಾಲ್ಡಿಯ (1998) ಅವರ ವಾದಗಳ ಪ್ರಕಾರ ಭೂಕಂಪ ಚಟುವಟಿಕೆಗಳು ಸಾಮಾನ್ಯವಾಗಿ ನೀಳವಾದ ಶ್ರೇಣಿಗಳಿಗೆ ಸೀಮಿತವಾಗಿದೆ ಮತ್ತು ಭೂಪ್ರದೇಶಗಳನ್ನು ಸಂಬಂಧಿಸಿದ ವಿಶಾಲವಾಗಿ ಹರಡಿಕೊಂಡಿರುವ ಛೇದಿಸಿದೆ ವಲಯಗಳಿಗೆ ಸಂಬಂಧಿಸಿದಾಗಿದೆ. ಪ್ರೀಕೇಂಬ್ರಿಯನ್ ಯುಗದ ಸ್ತರಭಂಗಗಳು ಈಗ ಮತ್ತೆ ಕೀಯಾಶೀಲವಾಗಿದೆ ಎಂದು ವಾಲ್ಡಿಯ ತಿಳಿಸುತ್ತಾನೆ ಲಕ್ಷಾಂತರ ವರ್ಷಗಳಿಂದ ಭಾರತದಲ್ಲಿ ಖಂಡ–ಖಂಡಗಳ ನಡುವಿನ ಘರ್ಷಣೆಯು ಭೂಕಂಪವನ್ನು ಉಂಟುಮಾಡುತ್ತಿದೆ, ಈ ಘರ್ಷಣೆಯಿಂದಾಗಿ ಭೂಭಾಗಗಳ ಉಪವಾಹ (subduction) ಉಂಟಾಗುತ್ತಿದೆ ಮತ್ತು ಕೆಲವು ದುರ್ಬಲ ಸಮತಲ (plane) ಗಳ ಹುಟ್ಟಿಗೆ ಕಾರಣವಾಗುತ್ತದೆ. ಛೇದನಾವಲಯ (shear zone) ಎಂಬುದು ಒಂದು ದುರ್ಬಲದ ಸಮತಲ. ಇನ್ನೊಂದು ಅರ್ಥದಲ್ಲಿ ಚಪ್ಪಟೆ ಆಕಾರದ ಶಿಲೆಗಳು, ಚಚ್ಚಿ ಪುಡಿಯಾಗಲ್ಪಟ್ಟು ಶಿಲಾಭಾಗಗಳು ಸಂಪರ್ಕ ಸ್ಥಾನಕ್ಕೆ ಸಮನಾಂತರ ದಿಕ್ಕಿನಲ್ಲಿ ಒಂದಕ್ಕೊಂದು ಉಜ್ಜುತ್ತಾ ಸ್ಥಾನಪಲ್ಲಟಗೊಳ್ಳುತ್ತವೆ.(ಸೋಮನ್–2002) ಈ ಛೇದನಾವಲಯಗಳು ಕೆಲವು ಇಂಚುಗಳಿಂದ ಹಲವು ಕಿಲೋಮೀಟರ್‌ಗಳ ವರೆಗೆ ವಿಶಾಲವಾಗಿರುತ್ತವೆ. ಛೇದನಾವಲಯಗಳು ಅಳತೆಗೆ ಸಿಗುವಂಥದಾಗಿದ್ದು ನಕ್ಷೆಗಳನ್ನು ತಯಾರಿಸಲು ಸಾಧ್ಯವಾಗಿದೆ. ಈ ಛೇದನಾ ಪ್ರಕ್ರಿಯೆಯು ಶಿಲೆಗಳ ಒತ್ತಡ, ತಾಪಮಾನ ಮತ್ತು ಛೇದನಾದರ (rate of shear) ಗಳ ಮೇಲೆ ಅವಲಂಬಿತವಾಗಿದೆ.

ದಕ್ಷಿಣಭಾರತದ ಉದ ದಿಕ್ಕಿಗೆ ಅಭಿಮುಖವಾಗಿರುವ ಪಾರ್ಶ್ವ ಚಿತ್ರದಲ್ಲಿ ಅತೀ ಹೆಚ್ಚು ವೈಶಾಲ್ಯವಿರುವ ಮಂಗಳೂರು–ಚೆನ್ನೈ, ಎತ್ತರದ ಸ್ಥಳಾಕೃತಿ ಮತ್ತು ಕಡಿಮೆ ವೈಶಾಲ್ಯವಿರುವ ಕೊಚ್ಚಿನ್–ರಾಮನಾಥ್ ಪುರಂ, ಸ್ಥಳಾಕೃತಿಗಳನ್ನು ಗುರುತಿಸಬಹದಾಗಿದೆ ಇದನ್ನು ಸೆಮಟೋಜನಿಕ್ ಆರ್ಚಿಂಗ್ (Cymatogenic Arching)ಎಂದು ಕರೆಯುವರು. ಈ ಎರಡು ಎತ್ತರದ ಸ್ಥಳಾಕೃತಿಗಳ ಮಧ್ಯೆ ಇರುವ ತಗ್ಗುಪ್ರದೇಶವನ್ನು ಪೆನ್ನೈ–ಪಾಲಘಾಟ್– ಮನಮೇಲ್ಕುಡಿ ಎಂದು ಹೆಸರಿಸಲಾಗಿದೆ. ಇದನ್ನು ಸೈಮಟೋಜನಿಕ್ ಡೀಪನಿಂಗ್ (Cymatogenic Deepening) ಎಂದು ಕರೆಯುತ್ತಾರೆ. ಐ. ಆರ್. ಎಸ್. 1ಬಿ ಎಫ್.ಸಿ.ಸಿ ಚಿತ್ರಣವು ಪೂಉಪೂ–ಪದಪ ಅಭಿಮುಖವಾಗಿ ಭರ್ತಿಯಾಗಿರುವ ಬಿರುಕುಗಳ ಗುಂಪನ್ನು ತೋರಿಸುತ್ತದೆ, ಮಂಗಳೂರು–ಚೆನ್ನೈ ಎತ್ತರದ ಪ್ರದೇಶಗಳಲ್ಲಿ ಬಿರುಕುಗಳು ಡೋಲರೈಟ್ (dolerite) ಇಂದ ತುಂಬಿಹೋಗಿವೆ.

ಕೊಚ್ಚಿನ್ ರಾಮನಾಥ್‌ನ್‌ಪುರಂ ಎತ್ತರ ಪ್ರದೇಶದ ಬಿರುಕುಗಳು 30–40 ಕೀ ಮೀಟರ್‌ಗಳ ವಿಸ್ತಾರವಾದ ಪಶ್ಚಿಮಘಟ್ಟಗಳಿಂದಾಗಿ ವಿಶೇಷವಾಗಿ ವ್ಯಾಖ್ಯಾನಿಸಲ್ಪಟಿವೆ, ಭೂಭಾಗದ ಆರ್ಚಿಂಗ್ ಅಥವಾ ಕಮಾನಾಕೃತಿಯನ್ನು ಪಾಲಾರ್, ಪೆನ್ನಾರ್ ಮತ್ತು ವೈಗೈ ನದಿಗಳ ವಲಸೆಯ ಮೂಲಕ ರುಜುವಾತು ಪಡಿಸಬಹುದಾಗಿದೆ. ಪಾಲಾರ್ ನದಿಯು ದಕ್ಷಿಣಾಭಿಮುಖವಾಗಿಯೂ, ಉಳಿದೆರಡು ನದಿಗಳು ಉತ್ತರಾಭಿಮುಖವಾಗಿಯೂ ವಲಸೆ ಹೋಗಿರುವವು ಈ ವಲಸೆಯು ಎರಡು ಪ್ರದೇಶಗಳ ಅಕ್ಷದಿಂದ ದೂರಸರಿಯಲ್ಪಟ್ಟದ್ದಾಗಿದೆ. (ರಾಮಸ್ವಾಮಿ, 2006)

ಜಿಯಾಲೊಜಿಕಲ್ ಸೊಸೈಟಿ ಆಫ್ ಇಂಡಿಯಾದ ಕಾರ್ಮಿಕರು ದಕ್ಷಿಣ ಭಾರತದ ಪ್ರಾಂತ್ಯದಲ್ಲಿ ವಿವರವಾಧ ನಕ್ಷೆಗಳು ವ್ಯವಸ್ಥಿತವಾದ

ಅನ್ವೇಷಣೆ ಇತ್ಯಾದಿಗಳನ್ನು ಮಾಡಿದ್ದಾರೆ, ಈ ಪ್ರಕಾರ ಕೇರಳ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ಅಧ್ಯಯವನ್ನು ಕೆಳಗೆ ನೀಡಲಾಗಿದೆ.

ಕೇರಳ ಪ್ರಾಂತ್ಯ:

ವರದರಾಜನ್ ಮತ್ತು ಸಂಗಡಿಗರು ಈ ಕೆಳಕಂಡ ನೀಳಾ ರೇಖೆಗಳನ್ನು ಗುರುತಿಸಿ ಹೆಸರಿಸಿದ್ದಾರೆ.

1. ಪಶ್ಚಿಮ ಉತ್ತರ ಪಶ್ಚಿಮ – ಪೂರ್ವ ದಕ್ಷಿಣ ಪೂರ್ವ ಅಭಿಮುಖ ವಾಗಿರುವ **ಅಚನ್‌ಕೊವಿಲ್ ತಂಬ್ರಪಾನಿ ಛೇಧನಾವಲಯ** WNW-ESE(Trading Achrnkovil Tambrapani shear zone)
2. ಪಶ್ಚಿಮ ಉತ್ತರ ಪಶ್ಚಿಮ – ಪೂರ್ವ ದಕ್ಷಿಣ ಪೂರ್ವ ಅಭಿಮುಖ ವಾಗಿರುವ **ಬಾವಲಿ ನೀಳ ರೇಖೆ** (WNM-ESW TRADING BAVALI LINEMARK)
3. **ಮುವತ್ತುಪುಜ್ಹ– ತೆಕ್ಕಡಿ ನೀಳರೇಖೆ** (WSW-ESE-MUVATTUPUZZHAA- THEKKADI LINEMARK)
4. ಉತ್ತರ ಪಶ್ಚಿಮ – ದಕ್ಷಿಣ ದಕ್ಷಿಣ ಪೂರ್ವ ಇಂದ ಉತ್ತರ – ದಕ್ಷಿಣ ನೀಳರೇಖೆಗಳು (ಇವು ಪಶ್ಚಿಮ ಘಟ್ಟಗಳು ಮತ್ತು ಕರಾವಳಿಯ ಸಂಪರ್ಕ ವಲಯದಲ್ಲಿ ಕಂಡುಬರುತ್ತದೆ
5. ಉತ್ತರ ಪೂರ್ವ– ದಕ್ಷಿಣ ಪಶ್ಚಿಮ ಇಂದ ಪೂರ್ವ ಉತ್ತರ ಪೂರ್ವ– ಪಶ್ಚಿಮ ದಕ್ಷಿಣ ಪಶ್ಚಿಮ ನೀಳರೇಖೆಗಳು (ಪಶ್ಚಿಮ ಘಟ್ಟಗಳು ಮತ್ತು ಕರಾವಳಿ ಸಾಲುಗಳಲ್ಲಿ ಗುರುತಿಸಬಹುದಾಗಿದೆ.)

ತಮಿಳುನಾಡು ಪ್ರಾಂತ್ಯ:

ಇಲ್ಲಿ ಸ್ತರಭಂಗ ಮತ್ತು ಬಿರುಕುಗಳನ್ನು ಐದು ದಿಶೆಗಳಲ್ಲಿ ಗುರುತಿಸ ಬಹುದಾಗಿದೆ.

1. **ಮಯಾರ್, ಭವಾನಿ, ಅತ್ತೂರು ಛೇಧನಾವಲಯ** ಇದು ಪಾಂಡ್ಯನ್ ಮೊಬೈಲ್ ಬೆಲ್ಟ್‌ನ್ನು ಮೂರು ಭಾಗಗಳಾಗಿ ವಿಂಗಡಿಸುತ್ತದೆ; ಮಾರ್ಜಿನಲ್ ಜೋನ್, ಮುಧುರೈ ಬ್ಲಾಕ್ ತಿರುವನಂತಪುರ ಬ್ಲಾಕ್.
2. **ಪಾಲಘಾಟ್– ಕಾವೇರಿ ಛೇಧನಾವಲಯ** (ಉ ಪ–ದ.ಪೂ ಪೂ ಪ ಇಂದ ಪ ಉ ಪ –ಪೂ ದ ಪೂ ಅಭಿಮುಖ)
3. **ಗಂಗವಲ್ಲಿ ಛೇದನಾವಲಯ** (ಉ ಉ ಪೂ ದ ದ ಪ ಅಭಿಮುಖ)
4. **ಅಚನ್‌ಕೊವಿಲ್ ಛೇಧನಾವಲಯ** (ಉ ಪ -- ದ ಪೂ ಅಭಿಮುಖ)



ಚಿತ್ರ:2 ದಕ್ಷಿಣ ಭಾರತದ ಛೇದನಾವಲಯಗಳು

EDC: ಈಸ್ಟನ್ ಧಾರವಾರ್ ಕ್ರೆಟನ್, WDC: ವೆಸ್ಟನ್ ಧಾರವಾರ್ ಕ್ರೆಟನ್ SGT:ಸದರ್ನ್ ಗ್ರಾನುಲಿಟಿಕ್ ಬೆಲ್ಟೈನ್ PSZ:ಪಾಲಾರ್ ಶಿಯರ್ ಜೋನ್ MBSZ: ಮಾಯರ್–ಭವಾನಿ ಶಿಯರ್ ಜೋನ್ MSZ:ಮಾಯರ್ ಶಿಯರ್ ಜೋನ್

ಕರ್ನಾಟಕ ಪ್ರಾಂತ್ಯ:: ಧಾರವಾರ ಕ್ರೆಟನ್‌ಲ್ಲಿ ಕೆಲವು ಕಿರಿದಾದ ಸ್ತರಭಂಗಗಳನ್ನು ಹೊರತು ಪಡಿಸಿ ಪ್ರಮುಖವಾದ ಛೇಧನಾ ವಲಯ ಗಳು ಕಂಡುಬರುವುದಿಲ್ಲ ಶಿಲೆಗಳ ರಚನ್ಮಾತಕ ವಿರೂಪಗಳಿಗೆ ಕಾರಣವಾದ ಕೆಲವು ಛೇದನಾವಲಯಗಳೆಂದರೆ 'ಚಿತ್ರದುರ್ಗ ಛೇದನಾ ವಲಯ', 'ಬಾಬಾ ಬುಡನ್ ಛೇದನಾವಲಯ' ಈಸ್ಟರ್ನ್ ಧಾರವಾಡ ಕ್ರೆಟನ್ ಮತ್ತು ವೆಸ್ಟರ್ನ್ ಧಾರವಾಡ ಕ್ರೆಟನ್‌ಗಳು ಉತ್ತರ ದಕ್ಷಿಣಾಭಮುಖವಾದ ಎಡಗೈ ಛೇದನಾವಲಯ (sinistral shrea zone) ಇಂದ ಬೇರ್ಪಡಿಸಲ್ಪಟ್ಟಿವೆ. ಪಾಂಡ್ಯನ್ ಮೊಬೈಲ್ ಬೆಲ್ಟ್‌ಗಳಲ್ಲಿ ಪೆರಿಯಾರ್ ಮತ್ತು ವೈಗೈ ಛೇದನಾವಲಯಗಳನ್ನು ಗುರುತಿಸ ಲಾಗಿದೆ. (ರಾಮಕೃಷ್ಣ, ವೈದ್ಯನಾಥನ್2010) ಈಸ್ಟನ್ ಘಾಟ್‌ಮೊಬೈಲ್ ಬೆಲ್ಟ್‌ಗಳಲ್ಲಿ ಕಂಡುಬರುವ ಛೇದನಾ ವಲಯ ಗಳೆಂದರೆ ನಾಗವಲ್ಲಿ ಛೇಧನಾವಲಯ, ವಾಮಸಂದ್ರ ಛೇದನಾ ವಲಯ, ಸಿಲೆರು ಛೇದನಾವಲಯ, ಮಹಾನಂದಿ ಛೇದನಾವಲಯ, ಕೊರಪುತ್ ಛೇದನಾವಲಯ (ರಾಮಕೃಷ್ಣನ್ ಮತ್ತು ಸಂಗಡಿಗರ ನಂತರ, 1988)

ಉಪಗ್ರಹ 1ಐ ಮತ್ತು ಅನ್ವೇಷಣೆಗಳ ಮಾಹಿತಿಗಳ ಆಧಾರದಿಂದ ಉತ್ತರ ದಕ್ಷಿಣ/ ಉತ್ತರ. ಉತ್ತರ ಪೂರ್ವ ದಕ್ಷಿಣ. ದಕ್ಷಿಣ. ಪಶ್ಚಿಮ ನೀಳರೇಖೆಗಳು, ಉತ್ತರ ಪೂರ್ವ– ದಕ್ಷಿಣ ಪಶ್ಚಿಮ ನೀಳರೇಖೆಗಳು ಮತ್ತು ಉತ್ತರ ಪಶ್ಚಿಮ– ದಕ್ಷಿಣ ಪೂರ್ವ ನೀಳಾರೇಖೆಗಳನ್ನು ಅತಿ ಪ್ರಮುಖವಾದ ನೀಳಾರೇಖೆಗಳೆಂದು ತೋರಿಸಲಾಗಿದೆ.(ರಾಮಸ್ವಾಮಿ 2006)

1. ಉತ್ತರ ದಕ್ಷಿಣ ನೀಳರೇಖೆಗಳು: ಇದರಲ್ಲಿ ಐದು ವಿಧ

ಅ) ಸ್ಟಾನ್ಲೆ ರಿಸರ್ವಾಯರ್ –ತೆವರಮ್ ನೀಳಾರೇಖೆ: 350 ಕೀ ಮೀ ಉದ್ದದ ನೀಳಾರೇಖೆಯು ಉತ್ತರದ ಸ್ಟಾನ್ಲೆಯಿಂದ ದಕ್ಷಿಣದ ತೆವರಮ್ ವರೆಗೂ ಹರಡಿದೆ ಕಾವೇರಿ ಮತ್ತು ಅಮರಾವತಿ ನದಿಗಳು ಇದರ ನಿಯಂತ್ರಣಕ್ಕೆ ಒಳಪಟ್ಟಿವೆ

ಆ) ಕೃಷ್ಣಗಿರಿ– ಕೇಪ್ ಕ್ಯಾಮೊರಿನ್ ನೀಳರೇಖೆ: 250 ಕೀ ಮೀ ಉದ್ದದ ಈ ನೀಳರೇಖೆಯ ಉದ್ದಕ್ಕೂ ರಚನ್ಮಾತಕ ವೈಪರೀತ್ಯಗಳಾದ ಮಣ್ಣಿನ ಉಗುಳವಿಕೆ, ನೀರಿನ ಹರಿವಿನ ಹಿಂತಿರುಗುವಿಕೆ, ಭೂಕುಸಿತ ಇತ್ಯಾದಿಗಳನ್ನು ಗುರುತಿಸಬಹುದಾಗಿದೆ.

ಇ) **ಗುಡಿಯಟ್ಟಮ್ – ಕೇಪ್ ಕ್ಯಾಮೊರಿನ್ ನೀಳರೇಖೆ :** 530–550 ಕೀ ಮೀ ಉದ್ದದ ನೀಳರೇಖೆಯು ಚಿತ್ತೇರಿ, ಕೊಲ್ಲಿಮಾಲ ಬೆಟ್ಟಗಳನ್ನು ಕಡಿಮೆಭಾಗದಲ್ಲಿ ಮತ್ತು ಕಲ್ರಯಾನ್ ಪಚಮಾರಿ ಬೆಟ್ಟಗಳನ್ನು ತೀವ್ರವಾಗಿ ವಿಂಗಡಿಸುತ್ತದೆ. ಇದು ಕೊನೆಗೆ ಕೃಷ್ಣಗಿರಿ ಕೇಪ್ ಕ್ಯಾಪೊರಿನ್ ನೀಳರೇಖೆಯನು ಜೊತೆಗೆ ಸೇರಿ ಪಶ್ಚಿಮಘಟ್ಟಗಳನ್ನು ತುಂಡರಿಸುತ್ತದೆ.

ಈ) ತಂಜಾವೂರು– ಅವಡೈಯಕ್ಕೈಲ್ ನೀಳರೇಖೆ:

ಉ) ಕುಂಬಕೋನಲ್– ಮುತ್ತುಪೆಟ್ ನೀಳಾಖೆ

ಉಳದೆಲ್ಲವುಗಳಿಗಿಂತ ಈ ಮೇಲಿನ ಎರಡು ನೀಳರೇಖೆಗಳು ಅತೀ ಕಿರಿದಾದ ನೀಳರೇಖೆಗಳು.

2. ಉತ್ತರ ಪೂರ್ವ – ದಕ್ಷಿಣ ಪಶ್ಚಿಮ ನೀಳರೇಖೆ: ಇಲ್ಲಿ ಎರಡು ಉಪ–ಸಮಾನಾಂತರವಾಗಿರುವ ಸ್ತರಭಂಗಗಳನ್ನು ಕಾಣಬಹುದಾಗಿದೆ ಈ ಸ್ತರಭಂಗಗಳು ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಮೂಲಕವಾಗಿ ಹಾದು ಹೋಗುತ್ತವೆ ಮತ್ತು ಕಾವೇರಿ, ಸುರುಲಿಯರ್, ವೆಲ್ಲಾರ್, ನದಿಗಳನ್ನು ನಿಯಂತ್ರಿಸುತ್ತವೆ. ಪೆರಿಯಾರ್, ಭಾರತಪುಜಾ, ಪಂಬಾ, ಚಲಿಯಾರ್ ಮತ್ತು ಚಲಕುಡಿ ನದಿಗಳು ಕೂಡ ಈ ಪ್ರಮುಖ ನೀಳರೇಖೆಯ ದಿಕ್ಕಿನ ಜೊತೆಯಲ್ಲಿ ಹರಿಯುತ್ತವೆ.

3. ಉತ್ತರ ಪಶ್ಚಿಮ – ದಕ್ಷಿಣ ಪೂರ್ವ ನೀಳರೇಖೆ: ಈ ದಿಕ್ಕಿನಲ್ಲಿ ಹೇರಳವಾದ ಉಪ–ಸಮನಾಂತರವಾಗಿ ಇರುವ ನೀಳರೇಖೆಗಳನ್ನು ಗುರುತಿಸಲಾಗಿದೆ. ಪಂಬರ್ ನೀಳರೇಖೆ, ಪೊನ್ನೆಯಾರ್ ನೀಳರೇಖೆ, ಕಾವೇರಿ ನೀಳರೇಖೆ, ವೈಪರ್ ನೀಳರೇಖೆ ಮತ್ತು ತಾಮ್ರಪರ್ಣಿ ನದಿ ರೇಖೆಗಳು ಈ ಗುಂಪಿಗೆ ಸೇರಿದ್ದು Z ಆಕೃತಿಯಲ್ಲಿ ಜಾರಲ್ಪಟ್ಟಿರುತ್ತವೆ. ಹೀಗೆ ಸ್ತರಭಂಗಗಳಿಂದ ಕೂಡಿದ ಎರಡು ಎತ್ತರ ಪ್ರದೇಶಗಳು ಮತ್ತು ಒಂದು ತಗ್ಗು ಪ್ರದೇಶದ ಅಧ್ಯಯನದಿಂದ ತಿಳಿದು ಬರುವ ಸಂಗತಿಯೆಂದರೆ ಭಾರತ ಪ್ರಾಂತ್ಯದ ಮೇಲೆ ಶ್ರೇಷ್ಠ ಪ್ರಮುಖ ಒತ್ತಡವು ಉತ್ತರ–ದಕ್ಷಿಣ ದಿಕ್ಕಿನಲ್ಲಿ ಎಂದು

ದಕ್ಷಿಣ ಭಾರತದಲ್ಲಿ ಭೂಕಂಪಗಳು ಮತ್ತು ಭೂಕಂಪಶೀಲತೆ

ಭೂಕಂಪಗಳು ಭೂವೈಜ್ಞಾನಿಕ ಮತ್ತು ಭೂಮಿಯ ರಚನ್ಮಾತಕ ಪ್ರಕ್ರಿಯೆಗಳ ಮೂಲಕ ಸ್ತರಭಂಗಗಳಲ್ಲಿ ಉಂಟಾದ ಚಲನೆಗಳಿಂದ ಸಂಭವಿಸಸುತ್ತವೆ. ರಚನ್ಮಾತಕ ಕಾರ್ಯದಲ್ಲಿ ಒತ್ತಡ ಬಿಡುಗಡೆಯೇ ಭೂಕಂಪಗಳಿಗೆ ಕಾರಣ ಭೂಕಂಪಗಳ ಮೂಲ ಮತ್ತು ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ಅನೇಕ ಅಧ್ಯಯನಗಳನ್ನು ಮಾಡಲಾಗಿದೆ. ಇದರಲ್ಲಿ ಡಿಜಿಟಲ್ ಬ್ರಾಡ್ ಬ್ಯಾಂಡ್ ಅಳವಡಿಕೆ, ರಾಷ್ಟ್ರೀಯ ನೆಟ್‌ವರ್ಕ್ ಕೆಂದ್ರಗಳ ಸ್ಥಾಪನೆ, ರಿಕ್ಟರ್ ಮಾಪನದ M>6 ಭೂಕಂಪ ತೀವ್ರತೆ ಅಧ್ಯಯನ ಇತ್ಯಾದಿ ಮುಖ್ಯವಾದವುಗಳು. ಭೂಕ್ಷೇತ್ರರೇಖೆಯ ಅಧ್ಯಯನವು ಭೂಕಂಪ ಉತ್ಪಾದನಾ ಪ್ರಮಾಣಕ್ಕೆ ಒಂದು ಪರೋಕ್ಷ ಮಾಪನವಾಗಿದೆ. ಇತ್ತೀಚಿನ ದಿನಗಳಲ್ಲಿ ಗೋಬಲ್ ಪೊಜಿಶನಿಂಗ್ ಸಿಸ್ಟಂ (ಜಿ.ಪಿ.ಎಸ್) ಆಧಾರಿತ ಭೂಮಿತೀಯ ಅಧ್ಯಯನಗಳನ್ನು ಪ್ರಾರಂಭಿಸಲಾಗಿದೆ.

ಭೂಕಂಪಶೀಲತೆಯನ್ನು ಐತಿಹಾಸಿಕ ಮತ್ತು ಇತ್ತೀಚಿನ ಭೂಕಂಪ ಗಳ ವ್ಯಾಪ್ತಿ, ಕಾಲ ನೆಲೆ ಮತ್ತು ಆಳ ಇತ್ಯಾದಿಗಳ ಮೂಲಕ ವ್ಯಾಖ್ಯಾನಿಸಬಹುದು. ಭುಕಂಪಶೀಲತೆಯ ಅಧ್ಯಯನವು



1. ಮಂಗಳೂರು– ಚನ್ನೈ ಉತ್ತರ ಪ್ರದೇಶ
2. ಕೊಚ್ಚಿನ್ ರಾಮನಾಥಪುರಂ
3. ಉತ್ತರ ಪ್ರದೇಶ & ಪೂರ್ವ ದಕ್ಷಿಣ ಸ್ತರಭಂಗಗಳ ಗುಂಪು
a)ಅನೇಕ ದಿಕ್ಕುಗಳಲ್ಲಿ ಪಸರಿಸಿದ ನೀಳರೇಖೆ
b)ಪೂ ಉ ಪೂ –ಪ ದ ಪ ಅಭಿಮುಖವಾಗಿರುವ ಸ್ತರಭಂಗ ಗಳು

ಚಿತ್ರ –3 ದಕ್ಷಿಣ ಭಾರತದ ನೀಳರೇಖೆಗಳು, ಬಿರುಕುಗಳು:

ಭೂಮಿಯ ಕ್ರಿಯ್ಮಾತಕ ನಡವಳಿಕೆಯನ್ನು ಅರ್ಥಮಾಡಿಕೊಳ್ಳಲು, ಒಂದು ನಿರ್ದಿಷ್ಟ ಪ್ರದೇಶದಲ್ಲಿ ಭೂಕಂಪದ ಅಪಾಯವನ್ನು ನಿರ್ಧರಿಸಲು ಉಪಯಕ್ತ.

ಪ್ರಾಚೀನ ಕಾಲದಿಂದಲೂ ಭೂಕಂಪಗಳು ಭಾರತೀಯ ಉಪಖಂಡಗಳಲ್ಲಿಯೇ ಸಂಭವಿಸಿದೆ. ಸ್ಥಿರ ಭೂಪ್ರದೇಶವಾದರೂ ಸಹ 18ನೇ ಶತಮಾನದಲ್ಲಿ 11 ಭೂಕಂಪಗಳು (ಎಂ<6) ಸಂಭವಿಸಿವೆ (ರಾವಲಂಗೇಶ್ವರರಾವ್ ಮತ್ತು ಸೀತಾಪತಿ ರಾವ್ 1984, ರಾಮಲಿಂಗೇಶ್ವರರಾವ್ 1998). ಆದುದರಿಂದ ದಕ್ಷಿಣ ಭಾರತದ ಭೂಕಂಪಶೀಲತೆ, ಭೂಕಂಪಗಳಿಗೆ ಕಾರಣವಾದ ರಚನೆಗಳ ಅಧ್ಯಯನ ಅತ್ಯಗತ್ಯ. ಸ್ಥಿರ ಮತ್ತು ಮಂದಗತಿಯಲ್ಲಿ ಶೇಖರವಾಗುವ ಭೂಕಂಪಗಳ ಶಕ್ತಿಯು ಭೂಕಂಪಗಳಿಗೆ ಕಾರಣವಾಗಿದೆ. ಸ್ಥಿತಿಸ್ಥಾಪಕ ಶಕ್ತಿಗಳ ಶೇಖರಣೆ ಮತ್ತು ಸಡಿಲಿಕೆಯು ಸರಾಸರಿ ಪ್ರಮಾಣದ ಭೂಕಂಪಗಳಿಗೆ ಕಾರಣವಾಗಿದೆ. ಈ ಸ್ಥಿತಿ ಸ್ಥಾಪಕ ಶಕ್ತಿಯು ಭಾರತೀಯ ಪ್ರಾಂತ್ಯದ ಉತ್ತರಪೂರ್ವಭಿಮುಖವಾದ ಘರ್ಷಣೆಯ ಕಾರಣದಿಂದ ಉದ್ಭವಾಗಿರುವುದು ಭಾರತೀಯಯ ಫಲಕವು ಟಿಬೆಟ್ ಫಲಕದೊಂದಿಗೆ ಘರ್ಷಣೆಗೊಳ್ಳುತ್ತಿರುವ ಕಾರಣ ದಕ್ಷಿಣಾಭಿಮುಖವಾಗಿ ದುರ್ಬಲವಲಯಗಳು ಹೆಚ್ಚುತ್ತಾ ಹೋಗಿವೆ (ಭೂಪೇಶ್ ಮತ್ತು ಸಂಗಡಿಗರು 2000)

ಕೇರಳದ ಹಲವಾರು ಭುಕಂಪಗಳು ಪ್ರಾದೇಶಿಕವಾಗಿ ನದಿಗಳ ಜಲಾನಯ ಪ್ರದೇಶಗಳೊಂದಿಗೆ ನಿಯಂತ್ರಿತವಾಗಿವೆ.(ರಾಜೇಂದ್ರನ್ ಮತ್ತು ರಾಜೇಂದ್ರನ್ 1996) ಕಡಿಮೆ ಭೂಕಂಪಶೀಲತೆ ಹೊಂದಿದ ಇಡುಕ್ಕಿ ಇಲ್ಲಿ ಉಂಟಾದ ಭೂಕಂಪವು ಸ್ತರಭಂಗದ ರಂಧ್ರಗಳಲ್ಲಿ ಒತ್ತಡದ ಬದಲಾಣೆ ಕಾರಣದಿಂದ ಉಂಟಾಗಿದೆ. ಇಡುಕ್ಕಿ ಇಲ್ಲಿ ಉಂಟಾದ ಭೂಕಂಪವು ಕಡಿಮೆ ಭೂಕಂಪಶೀಲತೆ ಹೊಂದಿದ್ದು ಸ್ತರಭಂಗದ ರಂಧ್ರಗಳಲ್ಲಿನ ಒತ್ತಡದ ಬದಲಾವಣೆ ಕಾರಣದಿಂದ ಉಂಟಾಗಿದೆ. ಈ ರಂಧ್ರಗಳಲ್ಲಿನ ಒತ್ತಡ ಬದಲಾವಣೆಗೆ ಇಡುಕ್ಕಿ ಜಲಾಶಯದ ಪ್ರಭಾವ ಇದೆ ಎಂದು ಹೇಳಾಗಿದ್ದರೂ ಸರಿಯಾದ ದಾಖಲೆಗಳಲ್ಲ (ಗುಪ್ತ 1992 ಮತ್ತು ಉಲ್ಲೇಖಗಳು) ಇನ್ನು ಕೇರಳದಲ್ಲಿ 15 ಮಧ್ಯಮ ಪ್ರಮಾಣದ ಭೂಕಂಪಗಳು ಸಂಭವಿಸಿವೆ.



ಚಿತ್ರ– 4 ಭಾರತದ ಭೂಕಂಪ ವಲಯಗಳ ನಕ್ಷೆ

ದಕ್ಷಿಣ ಭಾರತದಲ್ಲಿ ಮಧ್ಯಮ ರೂಪದ ತೀವ್ರ ವಿರೂಪಗಳು ಕಂಡುಬಂದಿವೆ ಭೂಕಂಪವಲಯ ನಕ್ಷೆ ಪ್ರಕಾರ (ಚಿತ್ರ 3) ದಕ್ಷಿಣ ಭಾರತವು ವಲಯ 2 ಮತ್ತು ವಲಯ 3ರಲ್ಲಿ ಕಂಡುಬರುತ್ತದೆ ವಲಯ 2ರ ಭೂಕಂಪ ತೀವ್ರತೆಯು 4 ಮತ್ತು <4 ಆಗಿದ್ದು ವಲಯ 3ರ ಭೂಕಂಪ ತೀವ್ರತೆಯು 6 ಆಗಿದೆ.

ದಕ್ಷಿಣ ಭಾರತದ ಹೆಚ್ಚಿನ ಭೂಕಂಪಗಳು ಪಾಲಘಾಟ್ – ಕಾವೇರಿ ಛೇದನಾವಲಯಕ್ಕೆ ಸಂಬಂಧಿಸಿದಾಗಿವೆ. ಭೂಕಂಪಶೀಲ ನೀಳರೇಖೆಗಳನ್ನು ಅಧ್ಯಯನ ಮಾಡಿ ಕೇರಳದ ಉಪಗ್ರಹ IRS LSS-I ನ ಮಾಹಿತಿಯೊಂದಿಗೆ ಸಂಬಂಧ ಕಲ್ಪಸಿ ಹೋಲಿಕೆಯನ್ನು ಮಾಡಲಾಗಿದೆ. ಕೇರಳದ 31 ಭೂಕಂಪಗಳಲ್ಲಿ (1821 ರ ನಂತರ) 22 ಭೂಕಂಪಗಳು 9 ಪ್ರಮುಖ ನೀಳರೇಖೆಗಳ ಮತ್ತು ಸ್ತರಭಂಗಗಳು ಸನಿಹ ಘಟಿಸಿವೆ.

ಕೇರಳದ ಬಹುತೇಕ ಭೂಕಂಪಗಳು ಉಉದ–ದದಪೂ ಇಂದ ಉಪ–ದಪೂ ಅಭಿಮುಖವಾಗಿರುವ ನೀಳರೇಖೆಗಳ ಜೊತೆಯಾಗಿರುವುದನ್ನು ಗಮನಿಸಿಬಹುದಾಗಿದೆ. (ಗಣೇಶ್‌ರಾಜ್ ಮತ್ತು ಸಂಗಡಿಗರು 2001)

ಇತ್ತೀಚಿನ ದಕ್ಷಿಣ ಭಾರತದ ಭೂಕಂಪಗಳು (2000 ರ ನಂತರ)

1. 12. ಡಿಸಂಬರ್ 2000 –ಇಡುಕ್ಕಿ– ಪೈನಾವು ಕೇರಳ ಪ್ರದೇಶ; ಪ್ರಮಾಣ 4.6
2. 07. ಜನವರಿ 2001– ಇಡುರೆ– ಪೈನಾವು ಕೇರಳ ಪ್ರದೇಸ ; ಪ್ರಮಾಣ 4.7
3. 26 ಸಪ್ಟೆಂಬರ್ 2001 – ಪಾಂಡಿಚೇರಿ ಕರಾವಳ ಪ್ರದೇಶ; ಪ್ರಮಾಣ 5.5
4. 20 ಡಿಸಂಬರ್ 2006– ಕುನ್ನಕುಲಂ ವಡಕಂಚೇರಿ ಕೇರಳ;2.86
5. 27 ಡಿಸಂಬರ್ 2006– ಕುನ್ನಕುಲಂ ವಡಕಂಚೇರಿ ಕೇರಳ ;3.0



ಚಿತ್ರ 5 ದಕ್ಷಿಣ ಭಾರತದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಭೂಕಂಪಗಳು (ಪಾಲ್ಡಯ ಕೆ.ಎಸ್)

ತೀರ್ಮಾನ : ಭೂಕಂಪಶೀಲತೆಯ ಅಧ್ಯಯನವು ಭೂಮಿಯ ಕ್ರಿಯಾತ್ಮಕ ನಡವಳಿಕೆಗಳನ್ನು ಅರ್ಥಮಾಡಿಕೊಳ್ಳಲು ಒಂದು

ಪ್ರದೇಶದ ಭೂಕಂಪದ ಅಪಾಯವನ್ನು ನಿರ್ಧರಿಸಲು ಅತಿ ಮುಖ್ಯ. ಪ್ರಸ್ತುತ ಅಧ್ಯಯನದಲ್ಲಿ ದಕ್ಷಿಣ ಭಾರತದ ಭೌಗೋಳಿಕ ಲಕ್ಷಣಗಳು, ಭೂಸ್ವರೂಪದ ವೈಶಿಷ್ಟ್ಯತೆ, ಪರ್ಯಾಯ ದ್ವೀಪದ ಭೂಕಂಪ ವಲಯಗಳ ಚಿತ್ರಣ ಎಲ್ಲವನ್ನು ವಿವರಿಸಲಾಗಿದೆ. ಛೇದನಾವಲಯಗಳು, ನೀಳರೇಖೆಗಳು ಮತ್ತು ಬಿರುಕುಗಳ ದೀರ್ಘವಾದ ಅಧ್ಯಯನವನ್ನು ಮಾಡಲಾಗಿದೆ. ಭೂಕಂಪಶೀಲ ಛೇದನಾವಲಯಗಳಿಂದ ತಿಳಿದು ಬರುವ ಮಹತ್ವದ ವಿಚಾರವೆಂದರೆ ಭಾರತದ ಫಲಕದ ಚಲನೆಯಿಂದ ಅತಿ ಹೆಚ್ಚು ಒತ್ತಡವು ಉತ್ತರ ದಕ್ಷಿಣಾಭಿಮುಖವಾಗಿದ್ದು ಈ ಒತ್ತಡವೇ ಭೂಕಂಪಗಳಿಗೆ ಕಾರಣವಾಗಿದೆ.

ಉಲ್ಲೇಖಗಳು

1. Bhupesh Kumar, Gangrade and Sanat Kumar Arora: Seismicity of the Indian Peninsular Shield from Regional Earthquake Data, Journal on Pure and Applied Geophysics, 157 (2000) pp. 1683-1705
2. Buddha Ramalingeswara Rao: Histoical seismicity and deformation rates in Indian Peninsular shield, Journal of seismology, (2000) pp. 247 - 258.
3. K Ganesha Raj, M A Paul, V S Hegde and R Nijagunapp: Lineaments and seismicity of Kerala - a remote sensing based analysis vol.29, (2001), pp. 201-211
4. Imtiyaz A. Parvez, Franco Vaccari and Giuliano F. Panza: A deterministic seismic hazard map of India and adjacent areas, Geophys. J. Int. (2003) 155, pp. 489–508
5. Pronab K Banarjee, G G Vaz, B J Sengupta, A Bagchi: A qualitative assessment of seismic risk along the Peninsular coast, South of 19°N, Journal of geodynamics, 31 (2001) pp. 481-498
6. Ramasamy S.M: Remote sensing and Active tectonics of South India, Journal of Remote Sensing (2006)
7. Ramasamy,S.M. and Balaji, Remote sensing and Pleistocene tectonics of the Southern Indian Peninsula International Journal of Remote Sensing, (1995). 6 pp. 2375–2391
8. Ramaswamy. S.M, Bakliwal. P.C, Verma R.P, 1991, Remote sensing and river migration in Western India. International Journal of Remote Sensing, 12, pp 2597-2609
9. Rastogi, Chanda and Sarma, Investigation of June 7, 1988 Earthquake of Magnitude 4.5 near Idukki dam in Soutern India, PAGEOPH.vol.145 No. 1(1995)
10. Soman K, Geology of Kerala: Geological Society of India, Bangalore, (2002) pp. 1 - 335.
11. Menon A, Ornthammarath T, Corigliano M., and Lai C.G., Probabilistic Seismic Hazard Macrozonation of Tamil Nadu in Southern India Bulletin of the Seismological Society of America (June 2010) 100:1320-134.
12. Ramakrishnan and Vaidyanathan: Geology of India, Vol 1 & 2, (2010)
13. K S Subramanian, T A Selvam, Geology of Tamilnadu, Geological Society of India, Bangalore, (2001), pp. 1-192.
14. A.P. Singh, Niraj Kumar and B. Singh: Nature of the crust along Kuppam–Palani geotransect (South India) from Gravity studies: Implications for Precambrian continental collision and delamination (aug2006) pp. 41-47,
15. V Vijaya Rao, Kalachand Sain, P R Reddy, Walter D Mooney: Crustal Structure and tectonics of the Northern part of Southern Granulite Terrane, India. Earth and Planetary science letters, 251 (2006), pp. 90-103.
16. Vinod K Gaur and Keith F Priestley: Shear wave velocity structure beneath the Archaean granites around Hyderabad, inferred from receiver function analysis, Proc. Indian Acad. Sci. (Earth Planet. Sci.), 106, No. 1 & 2, June 1997, pp. 1-08

ಪ್ರಕೃತಿ ಸಂಘ : ಕೈತೋಟಕ್ಕೊಂದು ಪಾಠಶಾಲೆ

ಗೀತಾ. ಎಚ್

ಜೀವಶಾಸ್ತ್ರ ಉಪನ್ಯಾಸಕಿ, ಅಮೃತ ವಿದ್ಯಾಲಯ, ನಂ ೧೧೪, ೭ನೇ ಅಡ್ಡಾರಸ್ತೆ, ಬೋಗಾದಿ (ಉತ್ತರ), ಮೈಸೂರು–೫೭೦ ೦೨೬

ಶಾಲೆ ಮಕ್ಕಳಿಗೆ ಪರಿಸರದ ಬಗೆಗಿನ ಅರಿವು ಮೂಡಿಸುವ ಸಲುವಾಗಿ ನಡೆಸಲಾಗುವ ಪ್ರಕೃತಿ ಸಂಘ (Nature club) ಹಲವಾರು ಕಾರ್ಯಕ್ರಮಗಳನ್ನು ಹೊಂದಿರುತ್ತದೆ. ಅದರಲ್ಲಿ ಅತ್ಯಂತ ಪ್ರಮುಖವಾದದ್ದು ಶಾಲಾ ಕೈತೋಟ, ಕಳೆದ ನಾಲ್ಕು ವರ್ಷಗಳಿಂದ ಅಮೃತ ವಿದ್ಯಾಶಾಲೆಯಲ್ಲಿ ಈ ಕುರಿತು ಕಾರ್ಯಕ್ರಮ ಚಾಲ್ತಿಯಲ್ಲಿದೆ.

ಪ್ರಕೃತಿಸಂಘಗಳ ಇತಿಹಾಸ: ಸ್ವತಂತ್ರ ಭಾರತದ ಸುಭದ್ರತೆಯ ದೃಷ್ಟಿಯಿಂದ ಯುವಸಮುದಾಯಕ್ಕಾಗಿ ಪ್ರಾರಂಭಿಸಲಾದ NCC, ವರ್ಷಗಳು ಕಳೆದಂತೆ ಪರಿಸರ ಸಂರಕ್ಷಣೆಯ ಕಡೆಗೂ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿತು. ಸಿಯಾಚಿನ್‌ನಂತಹ ಸುಂದರ ಪ್ರದೇಶಗಳು ಮಿಲಿಟರಿ ಕಾರ್ಯಚರಣೆ ಮತ್ತು ಶತ್ರು ಪ್ರಹಾರಗಳಿಂದ ನಲುಗಿರಲು, ಮಿಲಿಟರಿಯ ಒಂದು ಸಂಪೂರ್ಣದಂಡನ್ನೆ ಪರಿಸರ ಸಂರಕ್ಷಣೆಗಾಗಿ ಸರಕಾರ ನಿಯೋಜಿಸಿತು. ದಿನಗಳು ಕಳೆದಂತೆ ಆಹಾರದ ಉಳಿಕೆ–ಬಳಕೆಗಳ ಬಗ್ಗೆಯೂ ಕಾಳಜಿ ಇರಬೇಕೆಂದು ಅರಿವಾಗತೊಡಗಿತು. ಹೀಗಾಗಿ ಸರಕಾರವು ಪರಿಸರ–ಕೃಷಿರಂಗಗಳ ಸಂರಕ್ಷಣೆ ಮಿಲಿಟರಿಯಿಂದಲ್ಲ, ಜನರಿಂದಲೇ ಸಾಧ್ಯ ಎಂಬುದನ್ನು ಮನಗಂಡು ಸ್ವತಂತ್ರ ಭಾರತದ ಉಗಮವಾಗಿ ೪೦ ವರ್ಷಗಳು ಸಂದನಂತರ 'National Green Corps' (NGC) ಎಂಬ ಸಂಘವನ್ನು ಹುಟ್ಟುಹಾಕಿತು. ೧೯೮೫ರ ನಂತರ ಅಸ್ತಿತ್ವಕ್ಕೆ ಬಂದ ಪರಿಸರ ಮತ್ತು ಅರಣ್ಯ ಸಚಿವಾಲಯವು ದೇಶದಾದ್ಯಂತ ಪರಿಸರ ಶಿಕ್ಷಣ ಕೇಂದ್ರಗಳನ್ನೂ, ಉತ್ಕೃಷ್ಟತಾ ಕೇಂದ್ರಗಳನ್ನೂ ಸ್ಥಾಪಿಸಿತು. ಸರ್ಕಾರೇತರ ಸಂಸ್ಥೆಗಳನ್ನು ಈ ನಿಟ್ಟಿನಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಯಿತು. ಸಿ.ಪಿ.ರಾಮಸ್ವಾಮಿ ಪ್ರತಿಷ್ಠಾನ, ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ (BNHS) ಮುಂತಾದ ಸಂಸ್ಥೆಗಳನ್ನು ಹೆಸರಿಸಬಹುದು, ೧೯೭೬ರಲ್ಲಿ WWF- ವಿಶ್ವ ವನ್ಯಜೀವಿ ಸಂಘವು ಭಾರತದಾದ್ಯಂತ ಭಾರತೀಯ ಪ್ರಕೃತಿಸಂಘಗಳನ್ನು (Nature club of India) ಸ್ಥಾಪಿಸುವಲ್ಲಿ ಯಶಸ್ವಿಯಾಯಿತು. ಪ್ರತಿಯೊಂದು ಶಾಲೆಯೂ ತನ್ನದೇ ಆದ ಪ್ರಕೃತಿ ಸಂಘವನ್ನು ಹೊಂದಿರಬೇಕೆಂಬುದೇ

ಇದರ ಆಶಯ. ಹೀಗೆ ಪ್ರಾರಂಭವಾದ ಇಕೊ ಕ್ಲಬ್ ಮೂವ್‌ಮೆಂಟ್ ಆಫ್ ಇಂಡಿಯಾ ೨೦೦೬ರಿಂದೀಚೆಗೆ ಸರಕಾರಗಳ ಸಹಯೋಗದೊಂದಿಗೆ ಪ್ರತಿಯೊಂದು ಶಾಲೆಯಲ್ಲೂ ಪರಿಸರ ಸಂಘ/ಪ್ರಕೃತಿ ಸಂಘಗಳನ್ನು ಸ್ಥಾಪಿಸಿತು. ಅಂತೆಯೇ ಸಿಬಿಎಸ್‌ಇ ಮೊದಲಾದ ಶಿಕ್ಷಣ ಮಂಡಳಿಗಳು ಪರಿಸರ/ಪ್ರಕೃತಿ ಸಂಘಗಳ ಮಹತ್ವವನ್ನು ಅರಿತು, ತಮ್ಮ ಕಾರ್ಯವ್ಯಾಪ್ತಿಗೆ ಬರುವ ಎಲ್ಲಾ ಶಾಲೆಗಳಲ್ಲೂ ಅಂತಹ ಸಂಘಗಳು ಕಾರ್ಯನಿರ್ವಹಿಸುವಂತೆ ಸೂಚಿಸುತ್ತಿವೆ.

ಮಕ್ಕಳಲ್ಲಿ ಪರಿಸರ ಕುರಿತು ಕಾಳಜಿ ಮೂಡಿಸಲು ಅಮೃತ ನೇಚರ್ ಅಂಡ್ ಇಕೊ ಕ್ಲಬ್ (ANEC) ಎಂಬ ಸಂಘವನ್ನು ಪ್ರಾರಂಭಿಸಲಾಯಿತು. ಪ್ರತಿ ಶೈಕ್ಷಣಿಕ ವರ್ಷಕ್ಕೂ ಒಂದರಂತೆ ವಿವಿಧ ವಿಷಯಗಳನ್ನು ಕೇಂದ್ರೀಕರಿಸಿ, ಹಲವಾರು ಚಟುವಟಿಕೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಸಾವಯವ ಕೈತೋಟದ ರಚನೆ ಮತ್ತು ನಿರ್ವಹಣೆ ಅವುಗಳಲ್ಲೆಲ್ಲಾ ಪ್ರಮುಖವಾಗಿದ್ದು ಪ್ರತಿವರ್ಷವೂ ಕೈಗೊಳ್ಳಲಾಗುತ್ತಿದೆ. ಇದನ್ನು ಕುರಿತ ಅಧ್ಯಯನವೇ ಪ್ರಸ್ತುತ ಪ್ರಬಂಧದ ವಸ್ತು.

ಇಂದಿನ ಯಾಂತ್ರೀಕೃತ ಯುಗದಲ್ಲಿ ಅಧುನಿಕತೆಯ ಸೋಗಿನಲ್ಲಿ ನವ ಪೀಳಿಗೆಯು ಆಹಾರೋತ್ಪನ್ನ ಕ್ರಿಯೆಯಾದ ಕೃಷಿಯಿಂದ ಸಂಪೂರ್ಣವಾಗಿ ವಿಮುಖರಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿಕ ಕುಟುಂಬಗಳಿಂದ ಬಂದ ಶಾಲಾ ವಿದ್ಯಾರ್ಥಿಗಳೂ ಕೂಡಾ ಕೈಗಾರಿಕಾ ಕೇಂದ್ರಗಳಾದ ಬೃಹತ್‌ನಗರಗಳತ್ತ ಮುಖಮಾಡಿದ್ದಾರೆ. ಕೃಷಿ ಚಟುವಟಿಕೆಗಳು ಇವರನ್ನು ಸೆಳೆಯುವಲ್ಲಿ ವಿಫಲವಾಗಿವೆ. ಹೀಗಿದ್ದಮೇಲೆ ನಮ್ಮ ಅನ್ನದಾತರನ್ನು ಕೃಷಿಕಾರ್ಯದಲ್ಲಿ ಕಾಣುವುದೇ ಅಪರೂಪವಾಗಿದೆ. ಇನ್ನು ನಗರ ಪ್ರದೇಶದ ವಿದ್ಯಾರ್ಥಿಗಳ ಪಾಡು ಕೇಳುವುದೇ ಬೇಡ. ಯಾರ ತರಕಾರಿ/ಹಣ್ಣು ಯಾವಗಿಡದಲ್ಲಿ ಬೆಳೆಯುತ್ತದೆ ಎಂಬುದನ್ನೇ ಅರಿಯದವರಾಗಿರುತ್ತಾರೆ.

ಸಾವಯವಗೊಬ್ಬರ ತಯಾರಿಕೆ: ಮೊದಲು ಹೆಜ್ಜೆ : ಮಕ್ಕಳಲ್ಲಿ ತ್ಯಾಜ್ಯ ನಿರ್ವಹಣೆಯ ಬಗ್ಗೆ ತಿಳುವಳಿಕೆ ಮೂಡಿಸುವುದು ಈ ನಿಟ್ಟಿನಲ್ಲಿ ಮೊದಲ ಪ್ರಯತ್ನ ಮಿತಬಳಕೆ–ಪುನರ್‌ಬಳಕೆ –ಮರುಬಳಕೆ ಎಂಬ ಪರಿಸರ ಸ್ನೇಹ ಮಂತ್ರದಂತೆ ಅಕ್ಕಿತುಂಬುವ ಪ್ಲಾಸ್ಟಿಕ್ ಚೀಲಗಳನ್ನು ಪುನರ್‌ಬಳಸಿ ಗಿಡಗಳನ್ನು ನೆಡಲು ಉಪಯೋಗಿಸಲಾಗುತ್ತಿದೆ. ಹಾಗೆಯೇ ಜೈವಿಕ ವಿಘಟನೆ ಹೊಂದುವ ವಸ್ತುಗಳಾದ ಉದುರಿದ ಎಲೆಗಳು, ಶಾಲೆಯ ಅಡುಗೆ ಕೋಣೆಯಲ್ಲಿ ದೊರೆಯುವ ತರಕಾರಿ, ಹಣ್ಣುಗಳ ಸಿಪ್ಪೆ, ಉಳಿದ ಆಹಾರ ಇತ್ಯಾದಿ ಬಳಸಿ ಗೊಬ್ಬರ ತಯಾರಿಸಲಾಗುತ್ತದೆ. ಶಾಲೆಯ ಗೋಶಾಲೆಯಲ್ಲಿರುವ ದೇಸಿ ಹಸುಗಳ ಸಗಣಿ, ಗಂಜಲಗಳನ್ನು ಗೊಬ್ಬರ ತಯಾರಿಕೆಗೆ ಬಳಸಲಾಗುತ್ತಿದೆ. ಪ್ರೌಢಶಾಲಾ ವಿಧ್ಯಾರ್ಥಿಗಳು ಸ್ವತಃ ಗೊಬ್ಬರ ತಯಾರಿಕೆಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ. ೬ x ೪ ಅಡಿ ವ್ಯಾಸದ ಮಣ್ಣಿನ ನೆಲದ ಮೇಲೆ ಮೊದಲಿಗೆ ಸಗಣಿ ಬಗ್ಗಡವನ್ನು ಚಿಮುಕಿಸಲಾಗುತ್ತದೆ. ಅದರ ಮೇಲೆ ೪ ಇಂಚಿನಷ್ಟು ದಪ್ಪದ ತರಗೆಲೆ ಪದರವನ್ನು ಒತ್ತಿದಂತೆ ಪೇರಿಸಲಾಗುತ್ತದೆ. ಅದರ ಮೇಲೆ ೧ ಇಂಚು ಮಣ್ಣು ಮತ್ತು ೨ ಇಂಚು ಸಗಣಿಯನ್ನು ಹರಡಲಾಗುತ್ತದೆ. ಪುನಃ ಇದರ ಮೇಲೆ ೪ ಇಂಚು ತರಗೆಲೆ, ತರಕಾರಿ ಸಿಪ್ಪೆಗಳನ್ನು ಹರಡಿ ಮತ್ತೊಮ್ಮೆ ಮಣ್ಣು–ಸಗಣಿಯ ಪದರ ಹರಡಲಾಗುತ್ತದೆ. ಸುಮಾರು ೫ ಅಡಿಗಳಷ್ಟು ಎತ್ತರದ ಗುಡ್ಡೆ ಆಗುವವರೆಗೂ ಈ ಕ್ರಿಯೆಗಳನ್ನು ಪುನರಾವರ್ತಿಸಲಾಗುತ್ತದೆ. ಕೊನೆಗೆ ನೀರನ್ನು ಚಿಮುಕಿಸಿ, ಒಂದು ಮಂದವಾದ ಪ್ಲಾಸ್ಟಿಕ್ ಅಥವಾ ಟಾರುಪಾಲಿನ ಹೊದಿಕೆಯನ್ನು ಗೊಬ್ಬರದ ಗುಡ್ಡೆಗೆ ಹೊದಿಸಲಾಗುತ್ತದೆ. ಈ ರೀತಿ ಸುಮಾರು ೧೫ ದಿನಗಳ ಕಾಲ ಬಿಟ್ಟು ಅನಂತರ ಇಡೀ ಗುಡ್ಡೆಯನ್ನು ತಳಮೇಲು ಮಾಡು ಮುಚ್ಚಿಟ್ಟು ೪೫ ದಿನಗಳ ನಂತರ ತೆರೆದು ನೋಡಿದಾಗ ಕಪ್ಪು ಬಣ್ಣದ, ಹುಡಿ–ಹುಡಿಯಾದ ತಂಪಾದ ಗೊಬ್ಬರ ತಯಾರಾಗಿರುತ್ತದೆ.

ಈ ರೀತಿ ತಯಾರಿಸಲ್ಪಡುವ ಗೊಬ್ಬರಕ್ಕೆ ಎರೆಹುಳುಗಳ ಎರವಲು ಪಡೆದಿದ್ದೇ ಆದಲ್ಲಿ ಅದು ಎರೆಗೊಬ್ಬರವಾಗುತ್ತದೆ. ಎರೆಗೊಬ್ಬರ, ಹಟ್ಟಿಗೊಬ್ಬರಕ್ಕಿಂತ ಬೇಗನೆ ಮಾಗುವುದೇ ಅಲ್ಲದೆ, ಇನ್ನೂ ಹೆಚ್ಚು ಫಲವತ್ತಾಗಿರುತ್ತದೆ.

ಗೊಬ್ಬರ ತಯಾರಿಕೆಯಲ್ಲಿ ತೊಡಗುವ ಮಕ್ಕಳು ನಿಸರ್ಗದತ್ತವಾದ ಕಸ–ಕಡ್ಡಿ, ಸಗಣಿ, ಮಣ್ಣು– ಇವುಗಳನ್ನು ಸ್ಪರ್ಶಿಸಿ ಪಡುವ ಆನಂದವೇ ಅಮೂಲ್ಯ. ಈ ಚಟುವಟಿಕೆಯು ಮಕ್ಕಳಲ್ಲಿ ಸಾಮೂಹಿಕ ಕಾರ್ಯಪ್ರವೃತ್ತಿಯನ್ನು ಸಹಕಾರ ಮನೋಭಾವನೆಯನ್ನೂ ಎಲ್ಲಾ ಕೆಲಸಗಳಲ್ಲೂ ಕಾರ್ಯಫನತೆ ಕಾಣುವ ಪ್ರವೃತ್ತಿಯನ್ನೂ, ನಿಸರ್ಗದ ಜೊತೆಗೆ ಸುಮಧರ ಬಾಂಧವ್ಯವನ್ನೂ ಜೈವಿಕ ಮೌಲ್ಯವನ್ನೂ ಕಲಿಸಿಕೊಡುವುದು.

ಈ ಮೇಲ್ಕಂಡ ಪ್ರಕ್ರಿಯೆಯನ್ನು ಮಕ್ಕಳು ತಮ್ಮ ತಮ್ಮ ಮನೆಗಳಲ್ಲೂ ಮಾಡಲು ಪ್ರೋತ್ಸಾಹಿಸಿದಾಗ ಒಂದು ಅತ್ಯುಪಯುಕ್ತ ಸಾಮಾಜಿಕ ಜವಾಬ್ದಾರಿಯನ್ನು ಅವರ ಹೆಗಲಿಗೆ ವಹಿಸಿದಂತಾಗುತ್ತದೆ. ಅಷ್ಟೇ ಅಲ್ಲದೆ ತಮ್ಮ ತಮ್ಮ ಮನೆಗಳಲ್ಲೇ ರಾಸಾಯನಿಕ ವಿಷಗಳಿಂದ ಮುಕ್ತವಾದ ಆಹಾರವನ್ನು ಉತ್ಪಾದಿಸಿ ಸೇವಿಸಿದಂತಾಗುತ್ತದೆ.

ರಸಗೊಬ್ಬರಗಳು ಮತ್ತು ರೈತರ ಆರ್ಥಿಕ ಸ್ಥಿತಿ–ಗತಿ: ಈ ಚಟುವಟಿಕೆಯು ಜೊತೆ–ಜೊತೆಗೇ ರಾಸಾಯನಿಕ ಗೊಬ್ಬರಗಳ, ಕೀಟನಾಶಕಗಳ ಬಳಕೆಯಿಂದ ಆಗುತ್ತಿರುವ ಮಾಲಿನ್ಯದ ಬಗ್ಗೆ ಮಕ್ಕಳಲ್ಲಿ ತಿಳುವಳಿಕೆ ಮೂಡಿಸಬಹುದಾಗಿದೆ. ನೀರಿನ ಸೆಲೆಗಳಲ್ಲಿ ಸೇರಿ ಈ ವಿಷಗಳು ಮಾಡುತ್ತಿರುವ ಅವಾಂತರಗಳನ್ನೂ, ಮಣ್ಣಿನ ನಿಸ್ಸಾರತೆಯನ್ನು ಹೆಚ್ಚಿಸುವಲ್ಲಿನ ಅವುಗಳ ಪಾತ್ರವನ್ನೂ ಮನವಮುಟ್ಟುವಂತೆ ತಿಳಿಸಬಹುದಾಗಿದೆ. ರಾಸಾಯನಿಕಗಳ ಬಳಕೆಯಿಂದ ಪ್ರಾಣಿ–ಪಕ್ಷಿಗಳಗಳಿಗೂ, ನಮಗೂ ಆರೋಗ್ಯದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ಕುರಿತು ತಿಳಿಹೇಳಬಹುದದಾಗಿದೆ. ಎಗ್ಗಿಲ್ಲದೆ ಕೃಷಿಯಲ್ಲಿ ಬಳಸಲಾಗುತ್ತಿರುವ ರಾಸಾಯನಿಕಗಳಿಂದ ಹೇಗೆ ಕೃಷಿಕನು ಸಾಲಗಾರನಾಗುತ್ತಿದ್ದಾನೆಂದೂ, ರೈತರು ತನ್ಮೂಲಕ ಹೇಗೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆಂದೂ ತಿಳಿಸಬಹುದು . ದೇಶದ ಬೆನ್ನೆಲುಬಾದ ರೈತನ ಸ್ಥಿತಿ–ಗತಿಗಳ ಚರ್ಚೆಗೂ ಇದು ಬುನಾದಿಯಾಗುತ್ತದೆ.

ಸಾವಯವ ಕೃಷಿಯು ಹೇಗೆ ರೈತನನ್ನು ಸ್ವಾವಲಂಬಿ ಮಾಡಬಲ್ಲದು ಎಂಬುದನ್ನು ತಿಳಿಸಿಕೊಡಲು ಮಕ್ಕಳಿಗೆ ಸಾವಯವ ಕೃಷಿಯನ್ನು ಕೈಯಾರೆ ಮೂಡಿಸಿ, ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ಹೇಗೆ ಮಾರಾಟಮಾಡುತ್ತಾರೆ, ಮಧ್ಯವರ್ತಿಗಳಿಂದ ಆಗುವ ಅವಾಂತರಗಲು ಏನೇನು ಎಂಬುದನ್ನೂ ತಿಳಿಸಿ ಕೊಡಬಹುದು. ಕೃಷಿಕನು ಹೇಗೆ ತನ್ನ ಪರಿಸರದಲ್ಲಿ ದೊರೆಯುವ ವಸ್ತುಗಳಿಂದಲೇ ಉತ್ಕೃಷ್ಟ ಆಹಾರವನ್ನು ಬೆಳೆಯಬಹುದು ಎನ್ನವುದನ್ನು ಪ್ರತ್ಯಕ್ಷವಾಗಿ ಮನಗಾಣಬಹುದು.

ಮಣ್ಣು–ನೀರು: ಸದ್ಬಳಕೆ ಹೀಗೆ ತಯಾರಿಸಿದ ಗೊಬ್ಬರವನ್ನು ಮಣ್ಣಿನೊಡನೆ ಸೇರಿಸಬೇಕು, ನಲವತ್ತು ಪ್ರತಿಶತ ಗೊಬ್ಬರ, ಅರವತ್ತು ಪ್ರತಿಶತ ಮಣ್ಣು ಕಲೆಸಿ ಚೀಲಗಳಲ್ಲಿ ಅರ್ಧದಷ್ಟು ತುಂಬಿಸಬೇಕು.

ಮಣ್ಣು ಸೇರಿಸುವ ಮೊದಲು ಮಣ್ಣಿನ ಗುಣವನ್ನು ತಿಳಿದಿರಬೇಕು. ಹೆಚ್ಚು ಜಿಗುಟೂ ಅಲ್ಲದ, ಹೆಚ್ಚು ನೊರಜೂ ಅಲ್ಲದ ಪುಡಿ ಆದ ಮಣ್ಣು ಗಿಡಗಳನ್ನು ಬೆಳೆಸಲು ಉತ್ತಮ. ನೀರನ್ನು ಅತಿಯಾಗಿ ಹಿಡಿದಿಡಲೂ ಬಾರದು, ಅತಿಯಾಗಿ ಸೋರಿಹೋಗಲು ಬಿಡಬಾರದು, ಸರಿಯಾದ ಪ್ರಮಾಣದಲ್ಲಿ ನೀರನ್ನು ಹಿಡಿದಿಡುವ ಮಣ್ಣೇ ಅತ್ಯುತ್ಕೃಷ್ಟ. ಪ್ರಯೋಗಗಳ ಮುಖಾಂತರ ಮಕ್ಕಳಿಗೆ ಇದನ್ನು ಮನದಟ್ಟು ಮಾಡಿಕೊಟ್ಟು ನಂತರ ಗೊಬ್ಬರ–ಮಣ್ಣಿನ ಮಿಶ್ರಣವನ್ನು ಚೀಲಗಳಲ್ಲಿ ತುಂಬಿಸಬೇಕು.

ಶಾಲಾ ಕಾರಿಡಾರಿನಲ್ಲಿ ಓರಣವಾಗಿ ಜೋಡಿಸಿದ ತುಂಬಿದ ಚೀಲಗಳಲ್ಲಿ ಮಕ್ಕಳ ಕೈಯಿಂದ ಸಾವಯವ ಬೀಜಗಳನ್ನು ಬಿತ್ತಿಸಲಾಗುತ್ತದೆ. ನಂತರದ ನಿರ್ವಹಣೆಯ ಮಹತ್ವವನ್ನು ವಿವರಿಸಿ, ನೀರುಣಿಸುವು ಜವಾಬ್ದಾರಿಯನ್ನೂ ವಹಿಸಲಾಗುತ್ತದೆ. ಇದು ಮಕ್ಕಳಲ್ಲಿ ನೀರಿನ ಮಹತ್ವವನ್ನು ಕುರಿತು ಅರಿವು ಮೂಡಿಸಲು ಸಹಾಯಕವಾಗುತ್ತದೆ. ನೀರಿನ ಒಂದೊಂದು ಹನಿಯೂ ಹೇಗೆ ಅಮೂಲ್ಯ, ನೀರು ಪೋಲಾಗದಂತೆ ತಡೆಗಟ್ಟವುದು ಹೇಗೆ, ಮನಬಂದಂತೆ ನೀರನ್ನು ಹಾಯಿಸುವುದರಿಂದ ಮಣ್ಣು, ಗೊಬ್ಬರ, ಬೀಜಗಳು ಹೇಗೆ ಕೊಚ್ಚಿಹೋಗುತ್ತವೆ ಎಂಬುದನ್ನು ಮಕ್ಕಳು ಸ್ವತಃ ಅರಿಯುತ್ತಾರೆ. ಹಾಗೆಯೇ ನಮಗೆ ಆಹಾರ–ನೀರು ಎಷ್ಟು ಮುಖ್ಯವೋ ಅಷ್ಟೇ ಸಸ್ಯಗಳಿಗೂ ಮುಖ್ಯ ಎಂಬ ಅಂಶವನ್ನು ಮನಗಾಣುತ್ತಾರೆ.

ಹೀಗೆ ಮಕ್ಕಳು ತಮ್ಮ ಕೈಯಿಂದಲೇ ಬೆಳೆದ ಕೈತೋಟದ ಮುಖಾಂತರ ಆಹಾರಕ್ಕೆ ಸಂಬಂಧಿಸಿದ ಆರ್ಥಿಕತೆಯನ್ನೂ ಕಲಿಯಲು ಪ್ರಾರಭಿಸುತ್ತಾರೆ. ತಾವು ಬೆಳೆದ ಆಹಾರೋತ್ಪನ್ನದ ಬೆಲೆಯ ನಿರ್ಧಾರವನ್ನು ಮಾಡುವ ಮೊದಲು ಪ್ರಪಂಚದ ಆರ್ಥಿಕ ಸ್ಥಿತಿಗತಿಗಳನ್ನೊಮ್ಮೆ ಅವಲೋಕಿಸುವುದು ಉತ್ತಮ.

ಆಹಾರ: ಹಸಿವು ಮತ್ತು ಅಪೌಷ್ಟಿಕತೆ: ಪ್ರಪಂಚದ ಸುಮಾರು ೮ ಕೋಟಿ ಜನರು, ಅಂದರೆ ಸರಿ ಸುಮಾರು ಒಂದು ಭೂಖಂಡದಲ್ಲಿ ವಾಸಿಸುವಷ್ಟು ಜನರು ರಾತ್ರಿಯ (ಒಂದು ಹೊತ್ತಿನ) ಆಹಾರವಿಲ್ಲದೆ ಮಲಗುತ್ತಾರೆ. ಇದು ಪ್ರಪಂಚಕ್ಕಾದ್ಯಂತ ಇರುವ ಎಲ್ಲ ಜನರಲ್ಲಿ ಅಂದರೆ ಯಾವುದೇ ದೇಶದ ನಗರವಾಸಿಗಳಲ್ಲಿ ಇರುವ ಹಸಿವನ್ನು ಪ್ರತಿನಿಧಿಸುತ್ತದೆ. ಇದಕ್ಕೆ ಬಡತನ ಒಂದು ಕಾರಣವಾದರೆ ತಮ್ಮ ಸುತ್ತಮುತ್ತಲಲ್ಲೇ ಇರುವ ಆಹಾರವನ್ನು ಗುರುತಿಸಲಾರದ, ಜ್ಞಾನದ ಕೊರತೆ ಮತ್ತೊಂದು ಕಾರಣ. ಹಲವು ವೇಳೆ ಏನನ್ನು ತಿನ್ನಬಹುದು, ಏನನ್ನು ತಿನ್ನಬಾರದು ಎಂಬ ಜಿಜ್ಞಾಸೆಯೂ ಈ ಜನರನ್ನು ಹಸಿವಿನೆಡೆಗೆ ದೂಡುತ್ತದೆ. ಉದಾಹರಣೆಗೆ ಗ್ರಾಮೀಣ ಜನತೆಗೆ ಬೆರಕೆ ಸೊಪ್ಪಿನ ಮಾಹಿತಿಯಿರುವಂತೆ ನಗರವಾಸಿಗಳಿಗೆ ಜ್ಞಾನವಿಲ್ಲದಿರುವುದು. ತಮ್ಮ ಮನೆಯ ಮುಂದೆಯೇ ಸೇವನಾಯೋಗ್ಯ ಸೊಪ್ಪುಗಳಿದ್ದರೂ ಅಪೌಷ್ಟಿಕತೆಯಿಂದ ತೊಳಲುವುದು, ಹಸಿವಿನಿಂದ ಬಳಲುವುದೂ ಅಜ್ಞಾನದಿಂದಲೇ. ಅಂತಹಾ ಹಲವಾರು ಸಸ್ಯಗಳನ್ನು, ಮನೆಯ ಮುಂದೆ ಸ್ವಚ್ಛ ಗೊಳಿಸಿ ಓರಣ ವಾಗಿ ಇಡುವ ನೆಪದಿಂದ ಕಿತ್ತು ಬಿಸುಟಿರುತ್ತಾರೆ. ಅಂಗಡಿಯಿಂದ ಕೊಳ್ಳದೆ, ತಮ್ಮ ಮನೆಯಂಗಳದಲ್ಲಿ ಹೆಕ್ಕಿತಂದ ಸೊಪ್ಪು–ತರಕಾರಿಗಳ ಉಪಯೋಗ ತಮ್ಮ ಘನತೆಗೆ ತಕ್ಕುದಲ್ಲದೆಂಬಂತೆ ವರ್ತಿಸುತ್ತಾರೆ. ಹೀಗಾಗಿ ಇಡೀ ಮಾನವ ಸಂತತಿಯಯು ೨೦೦೦ಕ್ಕೂ ಮಿಕ್ಕಿ ಜೀವವೈವಿಧ್ಯವುಳ್ಳ ಆಹಾರ ದೊರೆಯುತ್ತಿದ್ದರೂ ಕೇವಲ ಎರಡೋ, ಮೂರೋ, ಜಾತಿ ಪ್ರಬೇಧಗಳನ್ನೇ ಆಹಾರಕ್ಕಾಗಿ ಪೊರೆಹೋಗುತ್ತಾರೆ, ಇದಕ್ಕೆ ಉತ್ತಮ ಉದಾಹರಣೆ ಯೆಂದರೆ ಅಕ್ಕಿ ಗೋಧಿಗಳ ವಿಪರೀತ ಬಳಕೆ ಮತ್ತು ಕಿರುಧಾನ್ಯಗಳನ್ನೂ , ಸಿರಿಧಾನ್ಯಗಳನ್ನೂ ನಿಕೃಷ್ಟವಾಗಿ ಕಂಡು ಉಪಯೋಗಿಸದಿರುವುದು. ಕೇವಲ ಸಿದ್ದಾಹಾರಗಳನ್ನೇ ನೆಚ್ಚಿರುವ ನಗರದ ಯುವ ಪೀಳಿಗೆಯೂ ಅಪೌಷ್ಟಿಕತೆಯಿಂದ ನರಳುತ್ತಿದೆ. ತಿಳುವಳಿಕೆಯುಳ್ಳವರು, ಸುಶಿಕ್ಷಿತರೂ ತಮ್ಮ ಪರಿಸರದಲ್ಲಿರುವ ಆಹಾರವನ್ನು ಗುರುತಿಸಿ, ಅದು ಸೇವನಾಯೋಗ್ಯವಾಗಿ ಪರಿವರ್ತಿಸಲು ತೋರಿಸಿಕೊಡುವರು. ಉದಾಹರಣೆಗೆ ಕೆಸವಿನ ಗಡ್ಡೆ ಸೇವಾನಾಯೋಗ್ಯವಾಗಲು ಕೆಲವು ಪ್ರಕ್ರಿಯೆಗಳಿಗೆ ಒಳಪಡಿಸಬೇಕಾಗುವುದನ್ನು ಮಲೆನಾಡಿನ ಜಾಣ್ಮೆಯುಳ್ಳ ಜನರು ಕಂಡಕೊಂಡ ಬಗೆ.

ಸ್ಥಳಾವಕಾಶ ಮತ್ತು ಸಂಪನ್ಮೂಲಗಳ ನಿರ್ವಹಣೆ: ಇಂದಿನ ಜನಸಂಖ್ಯೆಗೂ ಪ್ರಕೃತಿದತ್ತ ಸಂಪನ್ಮೂಲಗಳಿಗೂ ಅಗಾಧ ಅಂತರವಿದೆ. ನಮ್ಮ ಬೇಡಿಕೆಗೆ ತಕ್ಕಂತೆ ನಿಸರ್ಗದ ಸಂಪನ್ಮೂಲಗಳು ಹೆಚ್ಚುವುದಿಲ್ಲ ಅಷ್ಟೊಂದು ಸಂಪನ್ಮೂಲಗಳನ್ನು ಹಿಡಿದಿಡುವ ಸಾಮರ್ಥ್ಯ ಈಗಿರುವ ಗಾತ್ರದ ಭೂಮಿಗಿಲ್ಲ ಹಾಗಿದ್ದಮೇಲೆ ಇರವಷ್ಟೇ ಸ್ಥಳದಲ್ಲಿ ದೊರೆಯುವಷ್ಟೇ ಸಂಪನ್ಮೂಲಗಳಲ್ಲಿ ಪರಿಸರವನ್ನು ಒಂದಿಷ್ಟೂ ಹಾಳುಗೆಡವದೆ ಆಹಾರೋತ್ಪಾದನೆ ಸಾಧ್ಯವೇ? ಇಂತಹಾ ಒಂದು ಪ್ರಯತ್ನವನ್ನು ಮಾಡಿ ಯಶಸ್ವಿಯಾಗಿರುವ ದೃಷ್ಟಾಂತಗಳು ನಮ್ಮೆದುರೇ ಇವೆ. ಅವುಗಳನ್ನು ಶಾಲಾಮಟ್ಟದಲ್ಲಿ ಪ್ರಯೋಗಕ್ಕೊಳಪಡಿಸುವುದೇ ನಮ್ಮ ಮುಂದಿನ ಗುರಿ.

ಸ್ಥಿರಕೃಷಿ – Permaculture

ಮಸನಬು ಫುಕವೋಕಾ ನೈಸರ್ಗಿಕ ಕೃಷಿಯಿಂದ ಯಶಗೊಳಿಸಿದಂತೆಯೇ ಸ್ಥಿರ ಕೃಷಿ (Permaculture) ಕೂಡಾ ಒಂದು ಯಶೋಗಾಥೆಯೇ. ಸ್ವೀಡನ್ನಿನ ಬಿಲ್ ಮಾಲಿಸನ್ ಜನಪ್ರಿಯಗೊಳಿಸಿದ ಸ್ಥಿರಕೃಷಿಯು ಎಂತಹಾ ನೆಲದಲ್ಲೂ ನೀರು ಅತಿಕಡಿಮೆಯಿರುವ ಪ್ರದೇಶದಲ್ಲೂ ಆಹಾರ ಉತ್ಪಾದಿಸಬಹುದಾದ ಪದ್ಧತಿ. ತೆಳ್ಳನೆ ಮಣ್ಣಿನ ಪದರದ ಮೇಲೆ ಅಗಾಧವಾಗಿ ಸಾವಯವ ವಸ್ತುಗಳನ್ನೂ, ತರಗೆಲೆಗಳನ್ನೂ, ಹ್ಯೂಮಸ್ ಉಳ್ಳ ಪದಾರ್ಥಗಳನ್ನೂ ಒಟ್ಟುಮಾಡಿ ಅದಕ್ಕೆ ಸಗಣಿನೀರು, ಗಂಜಲಗಳನ್ನು ಚಿಮುಕಿಸಿ ಒಂದು ತೆಳುವಾದ ಏರು ಮಡಿಯನ್ನು (Raised bed) ತಯಾರಿಸಿಕೊಳ್ಳಬೇಕು. ಇದು ಯಥೇಚ್ಛವಾದ ಉಪಯುಕ್ತ ಸೂಕ್ಷ್ಮಜೀವಿಗಳನ್ನು ಬೆಳಸುವಲ್ಲಿ ಸಹಾಯಕವಾಗುತ್ತದೆ. ಈ ವ್ಯವಸ್ಥೆಯ ಮೇಲೆ ಬೀಜಗಳ ಬಿತ್ತನೆ ಮಾಡಿದಾಗ ಹೂಮಸ್ಸನ್ನು ಅಗಾಧವಾಗಿ ಉಳ್ಳ ತರಗೆಲೆ ಒಣಹುಲ್ಲಿನ ಪದರ ತೇವಾಂಶ ಹಿಡಿದಿಟ್ಟು ಮೊಳಕೆ ಒಡೆಯುಲು ಸಹಾಯಕವಾಗುತ್ತದೆ. ತೆಳುಪದರದ ಮಣ್ಣಿನಲ್ಲಿ ಬೇರುಬಿಟ್ಟ ಸಸಿಗಳು ಎಲೆಕಸಗಳಲ್ಲಿ ಶೇಖರವಾದ ಪೋಷಕಾಂಶಗಳನ್ನೂ ತೇವಾಂಶವನ್ನೂ ಬಳಸಿಕೊಂಡು ಬೆಳೆಯುತ್ತವೆ. ಈ ವಿಧಾನದಿಂದ ಶೇಕಡಾ ೮೦ ರಷ್ಟು ನೀರಿನ ಬೇಡಿಕೆ ಕಡಿಮೆಯಾಗುತ್ತದೆ. ಒಮ್ಮೆ ಹೂಡಿದ ದೈಹಿಕಶ್ರಮದ, ಆರ್ಥಿಕತೆಯ ಬಂಡವಾಳ ಎಂದೆಂದಿಗೂ ಉಳಿಯುತ್ತದೆ.

Food Forest–ಆಹಾರ ಅರಣ್ಯ: ಸ್ಥಳೀಯ ಹವಾಮಾನಕ್ಕೆ ತಕ್ಕಂತೆ ಅರಣ್ಯದ ಬಗೆಗಳು ಇರುತ್ತವೆ. ಉದಾಹರಣೆಗೆ, ಅರೆ ಮಲೆನಾಡಿನಲ್ಲಿ ಅರೆ ನಿತ್ಯಹರಿದ್ವರ್ಣಕಾಡುಗಳು, ಪಶ್ಚಿಮ ಘಟ್ಟಗಳಲ್ಲಿ ತೇವಪೂರಿತ ಎಲೆಯುದುರುವ ಕಾಡು ಮತ್ತು ಮಳೆಕಾಡುಗಳು, ಹಾಗೆಯೇ ಮೈಸೂರಿನ ಸುತ್ತ ಮುತ್ತ ಕಾಣಬರುವ ಒಣಲೆಯುದುರುವ ಕಾಡುಗಳು ಮತ್ತು ಕುರುಚಲು ಕಾಡುಗಳು. ಅರಣ್ಯದಲ್ಲಿ ಪ್ರಮುಖವಾಗಿ ಮೂರು ಪದರಗಳಿರುತ್ತವೆ. ಎತ್ತರದ ಹಾಗೂ ಮಧ್ಯಮಗಾತ್ರದ ಮರಗಳು ಮತ್ತು ಪೊದೆಗಳು, ಬಳ್ಳಿಗಳು ಮತ್ತು ನೆಲಹಾಸು. ಈ ಅರಣ್ಯಪದರಗಳನ್ನು ಬಳಸಬಹುದಾದ ನಿಗದಿತ ಪ್ರದೇಶದಲ್ಲಿ ಮರು

ಸೃಷ್ಟಿಸಿ ಆಹಾರ ಪಡೆಯುವುದೇ ಆಹಾರ ಅರಣ್ಯದ ಮುಖ್ಯಾಂಶ. ವರ್ಷಾನುಗಟ್ಟಲೆ ಬೆಳೆಯುವ ಮರಗಳಾದ ಸಪೋಟ, ಸೀಬೆ, ಮಾವು, ನುಗ್ಗೆ ಕರಿಬೇವು ಮೊದಲಾದವು ಮೊದಲ ಪದರವನ್ನು ನಿರ್ಮಿಸುತ್ತವೆ. ಪ್ರತಿ ಚದುರ ಮೀಟರ್‌ಗೆ ವಿರಳತೆಯಿರುವಂತೆ ಈ ಮರ-ಪೊದೆಗಳನ್ನು ಆರಿಸಬೇಕು. ಎರಡನೇ ಪದರವಾದ ಬಳ್ಳಿಗಳಲ್ಲಿ ಹೀರೆ, ಹಾಗಲ, ತೊಂಡೆ ಸೋರೆ ಮುಂತಾದ ತರಕಾರಿಗಳನ್ನು ಬೆಳೆಯಬಹುದು. ಈ ಪದರದಲ್ಲಿರುವ ಸಸ್ಯಗಳು ಒಂದರಿಂದ ಮೂರುವರ್ಷದ ಬೆಳೆಗಳು. ನೆಲಹಾಸಿನಲ್ಲಿ ಸಣ್ಣ ಸಸ್ಯಗಳಾದ ಶುಂಠಿ, ಸೊಪ್ಪು, ಪುದಿನ, ಕೊತ್ತಂಬರಿ, ನೆಲಬಸಳೆ, ಮೆಂತ್ಯ ಬದನೆ, ಮೆಣಸಿನಕಾಯಿ ಇತ್ಯಾದಿ ಬೆಳೆಗಳನ್ನು ಬೆಳೆಯಬಹುದು ಈ ಸಸ್ಯಗಳು ೪ ರಿಂದ ೬ ತಿಂಗಳಕಾಲ ಬದುಕುತ್ತವೆ. ಇಳುವರಿಯ ನಂತರ ಹಸಿರೆಲೆ ಹೊಂದಿದ ಈ ಗಿಡಗಳನ್ನು ಮಣ್ಣಿನಲ್ಲಿ ಹುಗಿದು ಗೊಬ್ಬರವಾಗಿಸಲು ಸಹಾಯಕವಾಗುತ್ತದೆ. ಈ ರೀತಿಯಾಗಿ ನಿರ್ಮಿಸಿದ ಆಹಾರ ಅರಣ್ಯಗಳು ಮೂರುವರ್ಷಗಳಿಂದ ಹಿಡಿದು ೩೦೦ ವರ್ಷ ಅಥವಾ ಮೊರೆಕ್ಕೊದಲ್ಲಿ ಕಾಣಬರುವಂತೆ ೨೦೦೦ ವರ್ಷಗಳವರೆಗೂ ಬಾಳಬಲ್ಲವು ಈ ಸಸ್ಯಗಳನ್ನು ಆರಿಸುವಾಗ ಮಣ್ಣಿನಲ್ಲಿ ಸಸಾರಜನಕ ಸೇರಿಸಬಲ್ಲ ದ್ವಿದಳ ಸಸ್ಯಗಳನ್ನು ಸೇರಿಸಿದರೆ, ಮಣ್ಣಿನ ಫಲವತ್ತತೆ ಹೆಚ್ಚುತ್ತಾ ಹೋಗುತ್ತದೆ. ಯಾವುದೇ ರಸಗೊಬ್ಬರವಾಗಲೀ, ಕಳೆನಾಶಕವಾಗಲೀ, ಕೀಟನಾಶಕಗಳಾಗಲೀ ಬಳಸದ ಈ ವಿಧಾನವು ಸುಸ್ಥಿರ ಕೃಷಿ ವಿಧಾನವಾಗಿದೆ. ರೈತನಿಗೆ ಬೇಕಾದ ಇತರ ಉತ್ಪನ್ನಗಳನ್ನೂ ಈ ವಿಧಾನ ನೀಡಬಲ್ಲದು. ಹತ್ತಿ, ಸೇಣಬು, ಕಬ್ಬು ಬಿದಿರು, ಮರಮುಟ್ಟುಗಳನ್ನು ಈ ವಿಧಾನದಿಂದ ಪಡೆಯಬಹುದಾಗಿದೆ. ಮಣ್ಣಿಗೆ ಸೂಕ್ಷ್ಮಾಣುಜೀವಿಗಳನ್ನು ಒದಗಿಸುವ ವಿಧಾನದಲ್ಲಿ ಮಣ್ಣಿನ ಸವಕಳಿಗೆ ಯಾವುದೇ ಆಸ್ಪದವಿಲ್ಲ. ಸಂಪೂರ್ಣ ಆಹಾರ ಅರಣ್ಯವನ್ನು ಅಲ್ಲದಿದ್ದರೂ ಅದರ ಮಾದರಿಯನ್ನು ಶಾಲೆಯಲ್ಲಿ ಲಭ್ಯವಿರುವ ಅಲ್ಪಸ್ಥಳದಲ್ಲೇ ನಿರ್ಮಿಸಿ ಜನತೆಯಲ್ಲಿ ಅರಿವು ಮೂಡಿಸಬಹುದಾಗಿದೆ.

ಉಪಸಂಹಾರ: ಅಲೆಮಾರಿಯಾಗಿದ್ದ ಮಾನವ ಒಂದೆಡೆ ನೆಲೆನಿಂತು ಜೀವಿಸಲು ಪ್ರಾರಂಭಿಸಲು ಕಾರಣವಾದದ್ದೇ ಕೃಷಿ. ಅಂದಿನಿಂದ ಇಂದಿನವರೆಗೂ ಈ ಕಾರ್ಯವು ಅವಿರತವಾಗಿ ಉತ್ತಮಗೊಳ್ಳುತ್ತಾ ಸಾಗುತ್ತಿದೆ. ಈ ಉತ್ತಮಿಕೆಗೆ ಮಾನವನ ಕೈಚಳಕವೇ ಕಾರಣ. ಇಂತಹಾ ಕಾರ್ಯಕ್ಷಮತೆಯನ್ನು ವ್ಯವಸ್ಥಿತವಾಗಿ ಕ್ಷೀಣಿಸುವಂತೆ ಮಾಡುತ್ತಿರುವುದೇ ನಗರೀಕೃತ ಯಾಂತ್ರಿಕ ಜೀವನ. ಆ ಯಂತ್ರಗಳಿಂದಾಚೆಗಿನ ಬದುಕು ನಮ್ಮ ಜೀವನವನ್ನೂ, ಪರಿಸರವನ್ನೂ ಸುಂದರಗೊಳಿಸಬಲ್ಲದು. ಪ್ರಕೃತಿಯೊಂದಿಗಿನ ನಿರಂತರ ಒಡನಾಟಬಯಸುವ ಈ ಪ್ರಕ್ರಿಯು ನಮ್ಮ ಮುಂದಿನ ಪೀಳಿಗೆಗೂ ಆಶಾದಾಯಕವಾಗಬೇಕೆಂಬ ಆಶಯದೊಂದಿಗೆ ಶಾಲಾ ಆವರಣದಲ್ಲಿ ಪ್ರಕೃತಿ ಸಂಘದ ಒತ್ತಾಸೆಯಿಂದ ಪ್ರಾರಂಭಿಸಲಾಗಿರುವ ಶಾಲಾ ಕೈತೋಟ ಯೋಜನೆಯು ಕೇವಲ ತರಕಾರಿ ಬೆಳೆಯುವ ಚಟುವಟಿಕೆಯಾಗಿ ಉಳಿಯದೆ ನೈಸರ್ಗಿಕ-ಸಾವಯವ ಕೃಷಿ ವಿಧಾನಗಳ ವಿವಿಧ ಆಯಾಮಗಳನ್ನು ಮಕ್ಕಳಿಗೆ ಪರಿಚಯಿಸಬೇಕೆಂಬುದೇ ಈ ಯೋಜನೆಯ ಗುರಿ. ಇದರಿಂದ ಪ್ರೇರಿತಗೊಂಡ ಮಕ್ಕಳು ಮುಂದೊಮ್ಮೆ ಪರಿಸರವನ್ನು ಹಸಿರುಗೊಳಿಸಿಯಾರು ಎಂಬುದು ಪ್ರಸ್ತುತ ಪ್ರಕೃತಿಸಂಘದ ಆಸೆ. ಪರಿಸರವನ್ನು ಹಸಿರುಗೊಳಿಸುವುದಷ್ಟೇ ಅಲ್ಲದೆ, ಹಸಿರು ಜೀವನಕ್ರಮಗಳನ್ನೂ ಅನುಸರಿಸಿ ಇತರಿಗೂ ಮಾದರಿಯಾಗುವ ಲೋಕದ ಸತ್ಪ್ರಜೆಗಳಾಗಲಿ ಎಂಬ ಮಹದಾಸೆಯೊಂದಿಗೆ ಈ ಪ್ರಬಂಧದಲ್ಲಿ ಹೆಸರಿಸಿರುವ ಪ್ರಕೃತಿಸಂಘವು ಮುಂದಿನ ಹಸುರೀಕರಣ ಕಾರ್ಯಕ್ರಮಗಳನ್ನು ಕೈಗೊಳ್ಳಲಿದೆ.

ಪ್ರಕೃತಿ ಸಂಘದ ಕಾರ್ಯ ಶೀಲತೆಗೆ ಈ ಕೆಳಕಂಡ ಯಶೋಗಾಥೆಗಳೇ ಸ್ಫೂರ್ತಿ: ೧. ೧೯೯೯ ರಲ್ಲಿ ಮೇಟಗಳ್ಳಿಯ JSS ಶಾಲೆಯ ಪರಿಸರಸಂಘದ ಮಕ್ಕಳು ಕನ್ನಂಬಾಡಿ ಕಟ್ಟೆಯಿಂದ ಮೈಸೂರಿಗೆ ನೀರು ಪೂರೈಸುವ ಪೈಪು ಒಡೆದಿದ್ದನ್ನು ಗುರುತಿಸಿ, ಪ್ರತಿದಿನ ಎಷ್ಟು ನೀರು ಪೋಲಾಗುತ್ತಿದೆ ಎಂದು ನಡೆಸಿದ ಅಧ್ಯಯನವು ಅಂದಿನ ಎಲ್ಲಾ ವೃತ್ತಪತ್ರಿಕೆಗಳಲ್ಲೂ ಪ್ರಕಟವಾಯಿತು. ಇದರಿಂದ ಎಚ್ಚೆತ್ತುಕೊಂಡ ಅಧಿಕಾರಿಗಳು ಕೂಡಲೇ ಕಾರ್ಯಪ್ರವೃತ್ತರಾಗಿ ದುರಸ್ತಿಮಾಡಿಸಿದರು. ೨. ೨೦೦೧ ರಲ್ಲಿ ಬಣ್ಣದ ಗಣಪತಿಯ ವಿಗ್ರಹದ ಬಳಕೆಯನ್ನು ವಿರೋಧಿಸಿ ನಡೆಸಿದ ಅಂಚೆ ಕಾರ್ಡಿನ ಅಭಿಯಾನವು ಸಾವಿರಾರು ಜನರನ್ನು ತಲುಪಿ ಅವರಲ್ಲಿ ಅರಿವನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು. ಇದರಲ್ಲಿ ಭಾಗವಹಿಸಿದ ಮಕ್ಕಳು ವಿವಿಧ ಶಾಲೆಯ ಪರಿಸರಸಂಘದ ಸದಸ್ಯರು. ೩. ೨೦೦೨ ರಲ್ಲಿ ಯುವರಾಜಾ ಕಾಲೇಜಿನ ಪ್ರಕೃತಿ ಸಂಘವು ಸಮರೋಪಾದಿಯಲ್ಲಿ ಪಾರ್ಥೇನಿಯಂ ಕಳೆಯನ್ನು ನಾಶಪಡಿಸಿದರು. ೪. ೨೦೦೩ ರಲ್ಲಿ ವಿವೇಕಾನಂದ ಶಾಲೆಯ ಪರಿಸರ ಸಂಘದ ಮಕ್ಕಳು ತಮ್ಮ ಶಾಲಾ ಆವರಣದಲ್ಲಿ ಪ್ಲಾಸ್ಟಿಕ್ ಬಳಕೆಯ ನಿಷೇಧವನ್ನು ಯಶಸ್ವಿಯಾಗಿ ಜಾರಿಗೊಳಿಸಿದರು. ಪ್ಲಾಸ್ಟಿಕ್ ಲೋಟಗಳನ್ನು ಶಾಲಾಕಾರ್ಯಕ್ರಮಕ್ಕೆ ತಂದ ಶಿಕ್ಷಕರಿಗೂ ದಂಡವಿಧಿಸುವುದರ ಮೂಲಕ ಜನತೆಯ ಗಮನಸೆಳೆದರು.

೫. ೨೦೦೪-೦೬: ಈ ಸಮಯದಲ್ಲಿ ಮೈಸೂರಿನ ೨೦ ಶಾಲೆಗಳ ಪರಿಸರ ಸಮುಚ್ಛಯವು ಈ ಎಲ್ಲಾ ಶಾಲೆಗಳಲ್ಲೂ ಆನೆಗಳ ಉಳಿವಿಗಾಗಿ ಸಂವಹನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದರು.

೬. ೨೦೦೬-೦೮ ರಲ್ಲಿ ಆರಂಭವಾದ ಸಿವಿಕ್ ಕ್ಲಬ್ ಫಾರ್ ಎನ್‌ವಿರಾನ್‌ಮೆಂಟ್ ಎಂಬ ಸಂಸ್ಥೆಯು ಪರಿಸರದ ಬಗ್ಗೆ ಕಾಳಜಿಯಿರುವ ಸಮಾನಮನಸ್ಕರನ್ನು ಒಗ್ಗೂಡಿಸಿತು. ಅಲ್ಲಿಂದೀಚೆಗೆ ಪ್ರತಿ ವರ್ಷವೂ ಎಲ್ಲಾ ಶಾಲೆಗಳಲ್ಲೂ ವಿಶ್ವಸಂಸ್ಥೆಯ ಘೋಷವಾಕ್ಯಕ್ಕೆ ತಕ್ಕಂತೆ ಕಾರ್ಯಕ್ರಮಗಳು, ಅರಿವು ಮೂಡಿಸುವ ಕಾರ್ಯಗಾರಗಳು ನಡೆಯುತ್ತಾ ಬಂದಿದ್ದು ಆಹಾರದ ಉತ್ಪತ್ತಿಯ ಬಗ್ಗೆ ಕಾಳಜಿ ಹೆಚ್ಚಾಗುತ್ತಿದೆ. ಇದಕ್ಕೆ ಪ್ರೇರಣೆಯೆಂಬಂತೆ ಇರುವ ANISHA ಅಂತಹ ಸಂಸ್ಥೆಗಳು ಸ್ಫೂರ್ತಿದಾಯಕ ಕಾರ್ಯಮಾಡುತ್ತಿವೆ. ಪ್ರಸ್ತುತ ಶಾಲೆಯಲ್ಲಿನ ಸಾವಯವ-ನೈಸರ್ಗಿಕ ಕೃಷಿಯೂ ಆದರಲ್ಲೊಂದು.

ಅಮೃತ ವಿದ್ಯಾಲಯದ ಪ್ರಕೃತಿ ಸಂಘ : ಅಮೃತ ನೇಚರ್ ಅಂಡ್ ಇಕೊ ಕ್ಲಬ್

ಚಟುವಟಿಕೆಗಳ ಕೇಂದ್ರ: ಶಾಲೆಯ ಆವರಣ

ಉದ್ದಿಶ್ಯ ಗುಂಪು: ಪ್ರೌಢಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರು

ನಡೆಸುವ ಸಮಯ: ತಿಂಗಳಿಗೆರೆಡು ಶನಿವಾರಗಳು, ಬೆಳಗ್ಗೆ ೯ ರಿಂದ ಮಧ್ಯಾಹ್ನ ೧ ರವರೆಗೆ.

ವಿದ್ಯಾರ್ಥಿಗಳ ಸಂಖ್ಯೆ: ಸುಮಾರು ೨೦೦ ಮಕ್ಕಳು

ತೊಡಗಿಕೊಂಡ ಶಿಕ್ಷಕ-ಶಿಕ್ಷಕಿಯರ ಸಂಖ್ಯೆ- ಎಲ್ಲಾ ೫೨ ಮಂದಿ

ANEC ಕಾರ್ಯಕ್ರಮಗಳಲ್ಲಿ ಸಕ್ರಿಯರಾದ ಶಿಕ್ಷಕರ ಸಂಖ್ಯೆ: ೬

ಶಾಲೆಯ ಕಾರುಡಾರಿನ ವಿಸ್ತೀರ್ಣ:-

ಶಾಲೆಯ ಗೋಶಾಲೆಯಲ್ಲಿರುವ ಹಸು-ಕರುಗಳ ಒಟ್ಟು ಸಂಖ್ಯೆ:೧೦

ಪ್ರತಿದಿನ ಉತ್ಪತ್ತಿಯಾಗುವ ಸಗಣಿಯ ಪ್ರಮಾಣ: ಸುಮಾರು ೬ ಲೀಟರ್

ಪ್ರತಿದಿನ ಉತ್ಪತ್ತಿಯಾಗುವ ಗಂಜಲದ ಪ್ರಮಾಣ: ಸುಮಾರು ೮ ಲೀಟರ್

ಕೈತೋಟದಲ್ಲಿ ಬೆಳೆಯುವ ಉತ್ಪನ್ನಗಳು: ಬದನೆ, ಬೆಂಡೆ, ಟೊಮಾಟೋ, ಹಾಗಲ, ಹೀರೆ, ಸೋರೆ, ಪಡವಲ, ಸೌತೆ, ತುಪ್ಪೀರೆ, ಅಲಸಂದೆ,

ತಿಂಗಳಹುರಳಿ, ಸೀಮೆಬದನೆ, ಹಸಿರು ಮೆಣಸಿನಕಾಯಿ, ಸುವರ್ಣಗೆಡ್ಡೆ, ಶುಂಠಿ, ಅರಿಶಿಣ, ಇತ್ಯಾದಿ.

ಕೈತೋಟದಿಂದ ಬರುವ ಅಂದಾಜು ಇಳುವರಿ (ಒಂದು ತಿಂಗಳಿಗೆ):-

ಅಂದಾಜು ವೆಚ್ಚ:

ಅಂದಾಜು ಆದಾಯ:

ಲಾಭ:

ಆರ್ಥಿಕವಾಗಿ:

ಸಾಮಾಜಿಕವಾಗಿ: ಸಹಕಾರ, ಶ್ರಮದಾನ, ಕಾರ್ಯಗೌರವ, ನಿಸರ್ಗದೊಡನೆ ಬಾಂಧ್ಯವ್ಯ, ಜವಾಬ್ದಾರಿ ಜೀವವೈವಿಧ್ಯತೆಯ ಹೆಚ್ಚುವಿಕೆ ;

ಬೌದ್ಧಿಕವಾಗಿ: ಇತರರ ಬಗ್ಗೆ ಕಾಳಜಿ, ದೂರದರ್ಶಿತ್ವ, ಮುಂದಾಳುತ್ವ, ಕಾರ್ಯ-ಕಾರಣ ಸಂಬಂಧಗಳ ತಿಳಿಯುವಿಕೆ, ಕುತೂಹಲ, ಜಾಗೃತಿ

ಮಾನಸಿಕವಾಗಿ: ತನ್ನ ಬಗೆಗಿನ ಅರಿವು ಪ್ರಕೃತಿಯ ಸೊಬಗನ್ನು ಸವಿಯುವ ಪರಿ, ತಾಳ್ಮೆ, ಶ್ರಮ, ಸಹನಶೀಲತೆ

ಆಧ್ಯಾತ್ಮಿಕವಾಗಿ: ತನ್ನಂತೆ ಇತರರೆಂಬ ಗೌರವ ಸರ್ವಜೀವಿಗಳಲ್ಲೂ ಕರುಣೆ ಆಂತರಿಕ ಶಾಂತಿ, ಸಮಾಧಾನ, ಪ್ರಕೃತಿಯಲ್ಲಿ ದೈವವನ್ನು ನೋಡುವಿಕೆ,

ನಷ್ಟ: ಶನಿವಾರದ ರಜೆ.

ANEC- ಪ್ರಕೃತಿ ಸಂಘದ ಸ್ಥಾಪನೆಗೆ ಪ್ರೇರಣಾಶಕ್ತಿ, ಅಮೃತ ವಿದ್ಯಾಲಯದ ನಿರ್ಮಾತೃವೂ ಆಡಳಿತ ಪ್ರಮುಖರೂ ಆದ ಪ್ರಕೃತಿ ಪೂಜೆಯೂ ಮಾತಾ ಅಮೃತಾನಂದಮಯೀ ದೇವಿಯವರು ಪ್ರಕೃತಿಪೂಜೆಯೂ ದೇವರ ಪೂಜೆಯೇ ಎಂಬ ಅವರ ನಂಬಿಕೆ ಮಕ್ಕಳನ್ನು ನಿಸರ್ಗದೆಡೆಗೆ ಸೆಳೆಯುವಲ್ಲಿ ಸಫಲವಾಗಿದೆ.

ಸಾವಯವ ಕೈತೋಟದ ಪರಿಕಲ್ಪನೆಯು ಮೈಸೂರಿನ ಅಮೃತವಿದ್ಯಾಲಯದ ಆಡಳಿತಗಾರರೂ, ಪ್ರಿನ್ಸಿಪಾಲರೂ ಆಗಿರುವ ಪೂಜ್ಯ ಬ್ರಹ್ಮಚಾರಿಣಿ ವಿರಜಾಮೃತ ಚೈತನ್ಯರವರ ಕನಸಿನ ಕೂಸು. ಪ್ರಾಣಿ-ಪಕ್ಷಿಗಳಲ್ಲಿ ಅವರಿಗಿರುವ ಕಾಳಜಿ, ದೇಸೀಗೋವಿನ ಬಗ್ಗೆ ಅವರಿಗಿರುವ ಪೂಜ್ಯಭಾವನೆ ಸಸ್ಯ ಸಂಕುಲಗಳ ಬಗೆಗಿನ ವಿಶೇಷ ಪ್ರೀತಿ, ಶಾಲಾ ಆವರಣವನ್ನು ಜೀವನೋಲ್ಲಾಸದಿಂದ ಚೇತೋಹಾರಿಯಾಗಿ ಇರಿಸಿದೆ.

ಈ ಕಾರ್ಯಗಳಲ್ಲಿ ಕೈಜೋಡಿಸಿರುವ ಶಾಲೆಯ ಗೌರವಾನ್ವಿತ ಮುಖ್ಯೋಪಾ ಧ್ಯಾಯಿನಿಯವರೂ ನನ್ನ ಸಹೋದ್ಯೋಗಿ ಮಿತ್ರವೃಂದ, ಶಾಲೆಯ ಇತರ ಸಿಬ್ಬಂದಿವರ್ಗ ಇಲ್ಲಿ ಸ್ಮರಣೀಯರು. ಶಾಲಾ ಕೈತೋಟದ ಉಸ್ತುವಾರಿ ವಹಿಸಿರುವ, ಎಲ್ಲ ಸಮಯದಲ್ಲೂ ಸಂಘಬೋಧಿತ ಸಲಹೆ-ಸಹಕಾರ ನೀಡುತ್ತಿರುವ ಶ್ರೀಯುತ ಪುಟ್ಟಸ್ವಾಮಿಯವರು ವಂದನೀಯರು.

ಎಲ್ಲಕ್ಕಿಂತ ಮುಖ್ಯವಾಗಿ, ಪರಿಸರ ಕಾಳಜಿಯ ಕಿಚ್ಚನ್ನು ನನ್ನಲ್ಲಿ ಹೆಚ್ಚಿದ ಮಹನೀಯರಾದ ಶ್ರೀ ಮನು.ಕೆ ಇವರು ಸದಾ ಸ್ಮರಣೀಯರು. ತಮ್ಮಲ್ಲಿರುವ ಪುಸ್ತಕಗಳನ್ನೂ, ನಿಯತಕಾಲಿಕೆಗಳನ್ನೂ, ಛಾಯಾಚಿತ್ರಗಳನ್ನೂ ನಿಸ್ಪೃಹತೆಯಿಂದ ಕೊಟ್ಟು ಎಲ್ಲರೀತಿಯಿಂದಲೂ ಪ್ರೋತ್ಸಾಹಿಸಿರುವ ಇವರು ವಂದನೀಯರು.

ಆಕರ ಗ್ರಂಥಗಳು:

1. The Global Food Economy : The battle for the future of farming. Tony Weis; Books for change-2007

ಜೆ-ನರ್ಮ್ ರಾಷ್ಟ್ರೀಯ ನಗರ ಪುನರ್ಜೀವನ ಯೋಜನೆ ಅಡಿಯಲ್ಲಿ ತ್ಯಾಜ್ಯವಸ್ತು ನಿರ್ವಹಣೆ, ಪ್ರಚಲಿತ ಅಭ್ಯಾಸಗಳು ಮತ್ತು ಹೊಸ ಪ್ರಸ್ತಾವನೆ - ಒಂದು ಅಧ್ಯಯನ

ಟಿ.ಬಿ.ಮೃತ್ಯುಂಜಯ

ಪ್ರಾಣಿಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-6 ಇ-ಮೇಲ್: drmruthunjayatb@gmail.com

ಭಾರತ ದೇಶದ್ಯಾಂತ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ನಗರಗಳ ಅಭಿವೃದ್ಧಿಗೆ ಮೂಲಭೂತ ಸೌಲಭ್ಯಗಳ ಉನ್ನತೀಕರಣಕ್ಕಾಗಿ ಭಾರತ ಸರ್ಕಾರವು 'ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರ್ಜೀವನ ಯೋಜನೆ ಅಡಿಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಆಯೋಜಿಸಿ, ೨೦೦೫-೦೬ನೇ ಇಸವಿಯಲ್ಲಿ ಪ್ರಾರಂಭಿಸಿದೆ. ಈ ಯೋಜನೆಯ ಉದ್ದೇಶ, ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ, ಆಧುನೀಕರಣಗೊಳಿಸಿ, ನಗರಗಳಲ್ಲಿನ ಜನರ ಜೀವನ ಗುಣಮಟ್ಟವನ್ನು ಸುಧಾರಣೆ ಮಾಡುವುದಾಗಿದೆ.

ಈ ಯೋಜನೆಗೆ ಒಳಪಡುವ ಭಾರತದ ೬೫ ಪ್ರಮುಖ ನಗರಗಳಲ್ಲಿ ಸಾಂಸ್ಕೃತಿಕ ನಗರ 'ಮೈಸೂರು' ಒಂದು. ಈ ಯೋಜನೆಯಲ್ಲಿ ಮೈಸೂರನ್ನು 'ಸಿ' ನಗರವೆಂದು (೧೦ ಲಕ್ಷಗಳಿಗಿಂತ ಕಡಿಮೆ ಜನ ಸಂಖ್ಯೆ ಇರುವ ನಗರ) ವರ್ಗೀಕರಣ ಮಾಡಲಾಗಿದೆ. ಮೈಸೂರು ನಗರದ ಸಮಗ್ರ 'ನಗರ ಅಭಿವೃದ್ಧಿ ಯೋಜನೆ' (ಸಿಡಿಪಿ) ಮುಖಾಂತರ ತ್ಯಾಜ್ಯ ವಸ್ತುವನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮತ್ತು ವಿಲೇವಾರಿ ಮಾಡುವ ಸದ್ದುದೇಶ ಈ ಯೋಜನೆಯದು. ವಿವಿದ ಬಗೆಯ ತ್ಯಾಜ್ಯವಸ್ತು ನಿರ್ವಹಣೆಗೆ ಪ್ರಚಲಿತ ಅಭ್ಯಾಸಗಳು ಮತ್ತು ಹೊಸ ಪ್ರಸ್ತಾವನೆಗಳ ಬಗ್ಗೆ ಸುದೀರ್ಘವಾಗಿ ಸಮ್ಮೇಳನದಲ್ಲಿ ಚರ್ಚಿಸಲಾಗುವುದು. ಮೈಸೂರು ನಗರವು ಅತಿ ವೇಗದಲ್ಲಿ ಬೆಳೆಯುತ್ತಿದ್ದು, ದಿನೇ ದಿನೇ ಉತ್ಪಾದನೆಯಾಗುತ್ತಿರುವ ತ್ಯಾಜ್ಯ ವಸ್ತುಗಳ ನಿರ್ವಹಣೆ ಅತಿ ಅವಶ್ಯವಾಗಿರುವ ಹಿನ್ನಲೆಯಲ್ಲಿ, ಆಳವಾದ ಸಂಶೋಧನೆಯ ಅಗತ್ಯವಿದೆ. ಈ ಸಂಬಂಧ, ಸುದೀರ್ಘವಾಗಿ ಸಮ್ಮೇಳನದಲ್ಲಿ ಚರ್ಚಿಸಲಾಗುವುದು.

ಪ್ರಮುಖ ಪದಗಳು: ತ್ಯಾಜ್ಯವಸ್ತುಗಳು, ನಿರ್ವಹಣೆ, ಮೈಸೂರು ನಗರ.

ಪೀಠಿಕೆ: ಇತ್ತೀಚಿನ ದಿನಗಳಲ್ಲಿ ನಗರಗಳಲ್ಲಿ ಪ್ರತಿದಿನ ತ್ಯಾಜ್ಯವಸ್ತುಗಳ ವಿಲೇವಾರಿ ಮತ್ತು ಸಂಸ್ಕರಣೆ ಒಂದು ದೊಡ್ಡ ಸಮಸ್ಯೆಯಾಗಿದೆ. ಸ್ಥಳೀಯ ಮಹಾನಗರ ಪಾಲಿಕೆಗೆ ಮತ್ತು ಸರ್ಕಾರಕ್ಕೆ ಇದು ಬಗೆಹರಿಸಲಾಗದ ಸಮಸ್ಯೆಯಾಗಿದೆ. ಆದುದರಿಂದ ವೇಗವಾಗಿ ಬೆಳೆಯುತ್ತಿರುವ ನಗರಗಳ ಜನಸಂಖ್ಯೆಗನುಗುಣವಾಗಿ ಪಾಲಿಕೆಯವರು ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಮುಂದೆ ಆಗುವ ಅನಾಹುತಗಳನ್ನು ತಪ್ಪಿಸಬಹುದು. ಇಂದಿನ ದಿನಗಳಲ್ಲಿ ಲಭ್ಯವಿರುವ ಯೋಜನೆಗಳನ್ನು ಅನುಷ್ಠಾನಗೊಳಿಸಿ, ತ್ಯಾಜ್ಯವಸ್ತು ನಿರ್ವಹಣೆಯನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡಬೇಕೆಂಬುದನು ಈ ಪ್ರಬಂಧದಲ್ಲಿ ತಿಳಿಸಲಾಗಿದೆ.

ವಿಧಾನ: ನಗರಾಡಳಿತ ಒಂದು ರೀತಿಯಲ್ಲಿ ಸುವರ್ಣ ತ್ರಿಭುಜದಂತಿದೆ.

ನಾಗರೀಕರು, ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ತ್ರಿಭುಜದ ಸ್ಥಂಭಗಳಿದ್ದಂತೆ. ಈ ಮೂರು ಜನರ ಮಧ್ಯೆ ಸಮರ್ಪಕ ಸಮನ್ವಯ ಏರ್ಪಡಿಸುವ ಮೂಲಕ ನಗರಾಡಳಿತ ವ್ಯವಸ್ಥೆಯಲ್ಲಿ ಅತ್ಯುತಮ ಪರಿಣಾಮಕಾರಿಯಾದ ಬದಲಾವಣೆ ತರಬಹುದು. ಈ ಉದ್ದೇಶದಿಂದ ಮೈಸೂರು ನಗರದ ವ್ಯಾಪ್ತಿಯಲ್ಲಿ ಬರುವ ಪ್ರತಿ ಮತಗಟ್ಟೆಯಲ್ಲಿ ಒಂದು ನಾಗರೀಕ ಸಮಿತಿಯನ್ನು ರಚಿಸಿ, ಆ ಸಮಿತಿಯ ಸದಸ್ಯರಿಗೆ ಬಿಡುವಿನ ವೇಳೆಯಲ್ಲಿ ತ್ಯಾಜ್ಯವಸ್ತುಗಳನ್ನು ಯಾವ ರೀತಿ ಬೇರ್ಪಡಿಸಿ (ಉದಾ: ಒಣಕಸ, ಹಸಿಕಸ ಇತ್ಯಾದಿ) ನಗರಪಾಲಿಕೆಗೆ ಸಹಕರಿಸುವುದರ ಜೊತೆಗೆ ಜನ ಜಾಗೃತಿ ಮೂಡಿಸುವ ಮೂಲಕ ಈ ಸಂಶೋಧನೆಯನ್ನು ಕೈಗೊಳ್ಳಲಾಯಿತು. ಈ ವಿಧಾನ ಅನುಸರಿಸುವಾಗ 'ಜೆ-ನರ್ಮ್' ಯೋಜನೆಯನ್ನು ಮಾದರಿಯನ್ನಾಗಿಟ್ಟುಕೊಂಡು, ನಾಗರೀಕರ ಸಹಕಾರದೊಡನೆ ಈ ಅಧ್ಯಾಯನವನ್ನು ಮಾಡಲಾಯಿತು. ಮೈಸೂರು ನಗರದ ಪ್ರತಿ ಮತಗಟ್ಟೆಯಲ್ಲಿ ಕೆಲವು ಮನೆಗಳನ್ನು ಪರಿಗಣಿಸಿ, ಬಿಡುವಿನ ವೇಳೆಯಲ್ಲಿ, ಮನೆಯಲ್ಲಿರುವ ಮತ್ತು ಮನೆಯ ಸುತ್ತುಮುತ್ತಲಿನ ಜಾಗದಲ್ಲಿರುವ ತ್ಯಾಜ್ಯವಸ್ತುಗಳನ್ನು ಯಾವ ರೀತಿ ಬೇರ್ಪಡಿಸಿ (ಒಣಕಸ, ಹಸಿಕಸ) ನಗರಪಾಲಿಕೆಗೆ ಸಹಕರಿಸಬೇಕು ನಾನು ಸಕ್ರಿಯವಾಗಿ ಬಿಡುವಿನ ವೇಳೆ ಕರ್ತವ್ಯದಲ್ಲಿ ತೊಡಗಿಸಿಕೊಂಡಿವುದರಿಂದ ನಮ್ಮ ಸಮಸ್ಯೆಯ ಬಗ್ಗೆ ಜನರಿಗೆ ಅರಿವು ಮೂಡಿಸಿ ಮುಖ್ಯವಾಗಿ ತ್ಯಾಜ್ಯವಸ್ತುಗಳನ್ನು ಬೇರ್ಪಡಿಸಿ ಹೇಗೆ ನಗರಪಾಲಿಕೆಗೆ ಸಹಕರಿಸಬೇಕು ಎಂದು ನಾಗರೀಕರಲ್ಲಿ ಮನವಿ ಮಾಡಲಾಯಿತು.

ಫಲಿತಾಂಶ: ಪ್ರಸಕ್ತ ಅಧ್ಯಯನವನ್ನು ಜೆ-ನರ್ಮ್ ಯೋಜನೆಯ ಮಾದರಿಯಲ್ಲಿ ಕೈಗೊಂಡು, ಪ್ರತಿ ಭೂತ್ ಸಮಿತಿಗೆ ಒಂದು ನಾಗರೀಕ ಸಮಿತಿಯನ್ನು ಮಾಡಿ, ಅದರ ಮೂಖಾಂತರ ಬಡಾವಣೆಯಲ್ಲಿನ ತ್ಯಾಜ್ಯವಸ್ತು, ರಸ್ತೆ ರಿಪೇರಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಸಮಸ್ಯೆ ಮುಂತಾದ ಕೆಲಸ-ಕಾರ್ಯಗಳನ್ನು ಮಾಡಿಸಲು ನಗರಾಡಳಿತದ ಮೂಲಕ ಪ್ರಯತ್ನಿಸಲಾಗಿ, ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸಿ ಹಲವಾರು ಸಮಸ್ಯೆಗಳಿಗೆ ಹೇಗೆ ಪರಿಹಾರ ಕೈಗೊಳ್ಳಬಹುದೆಂದು ತಿಳಿಸಲಾಯಿತು. ಮೈಸೂರು ನಗರ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು, ಈ ಪರ್ವಕಾಲದಲ್ಲಿ ನಾಗರೀಕ ಸಮಿತಿಯ ಮೂಲಕ ಈ ನಗರವನ್ನು ಹೆಚ್ಚು ಸ್ವಚ್ಛ ಹಾಗೂ ಸುಂದರವಾಗಿಡಲು ಜೆ-ನರ್ಮ ಯೋಜನೆಯಿಂದ ಸಹಕಾರವಾಗಿದೆ. ಪ್ರಸ್ತುತ ವಿಷಯಕ್ಕೆಕ ಬಂದರೆ ತ್ಯಾಜ್ಯ ವಸ್ತು ನಿರ್ವಹಣೆ ಹಿನ್ನಲೆಯಲ್ಲಿ ಶ್ರೀಮತಿ ಆಲ್‌ಮಿತ್ರ ಪಟೇಲ್ ಆವರು ಕೆಲವು ವರ್ಷಗಳ ಹಿಂದೆ ದೇಶದ ಸರ್ವೋಚ್ಚ ನ್ಯಾಯಾಲಯದ ಮುಂದೆ ಸಾರ್ವಜನಿಕ ಹಿತಾಸಕ್ತಿ ಮೊಕದಮ್ಮೆಯೊಂದನ್ನುಯ ಹೂಡಿದರು. ಆದರ ವಿಷಯ ನಗರ ಪ್ರದೇಶಗಳಲ್ಲಿನ ತ್ಯಾಜ್ಯವಸ್ತುಗಳ ನಿರ್ವಹಣೆಗೆ ಸಂಬಂದಿಸಿದ್ದಾಗಿತ್ತು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಸುಪ್ರೀಂಕೋರ್ಟ ಕೂಡಲೇಲ ಸಮಿತಿಯೊಂದನ್ನು ರಚಿಸಿತು. ಈ ಎಲ್ಲದರ ಫಲವೆ ಮುನಿಸಿಫಲ್ ಘನತ್ಯಾಜ್ಯ ವಸ್ತು (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ ೨೦೦೦ (ಎಂಜೆಟಿಎನ್ ೨೦೦೦).

ಈ ಮಾದರಿ ಯೋಜನೆಯಿಂದ ದೇಶದ ಎಲ್ಲಾ ನಗರ-ಪಟ್ಟಣಗಳಲ್ಲಿ ಏಕರೂಪ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸಹಾಯವಾಗುತ್ತಿದೆ.

೧. ತ್ಯಾಜ್ಯ ವಸ್ತುವನ್ನು ಪ್ರತಿಯೊಂದು ಮನೆಯಿಂದ ಸಂಗ್ರಹಣೆ ಮಾಡುವುದು, 'ಜೈವಿಕ' ಮತ್ತು 'ಅಜೈವಿಕ' ವಸ್ತುಗಳನ್ನಾಗಿ ವಿಂಗಡಿಸುವುದು, ಶೇಖರಿಸುವುದು, ಸೂಕ್ತ ಸ್ಥಳಕ್ಕೆ ಸಾಗಿಸುವುದು, ಅದನ್ನು ನಿರ್ವಹಿಸುವು ಜವಾಬ್ದಾರಿಯನ್ನು ಮಹಾನಗರಪಾಲಿಕೆಗೆ ವಹಿಸುವುದು.

೨. ತ್ಯಾಜ್ಯ ವಸ್ತುವನ್ನು ಪ್ರತೇಕವಾಗಿ ಮೀಸಲ್ಲಿಟಿರುವ ಸ್ಥಳದಲ್ಲಿ ಸಂಸ್ಕರಣೆ ಮಾಡುವುದು.

೩. ಇದಕ್ಕೆಂದೇ ಮೀಸಲಾದ ಹೊಂಡ ಭರ್ತಿ (ಲ್ಯಾಂಡ್ ಫಿಲ್) ನಿವೇಶನದಲ್ಲಿ ವೈಜ್ಞಾನಿಕವಾಗಿ ಸಂಸ್ಕರಣೆ ವಿಲೆವಾರಿ ಮಾಡುವುದು. ಈ ರೀತಿ ಮಾಡುವುದರಿಂದ ಮೈಸೂರು ನಗರ ಸ್ವಚ್ಛವಾಗಿರಲು ಸಹಕಾರಿಯಾಗುತ್ತದೆ.

ಪ್ರಸಕ್ತ ಅಧ್ಯಯನವನ್ನು 'ಜೆ-ನರ್ಮ' ಯೋಜನೆಯ ಸಹಾಯದಿಂದ ಘನತ್ಯಾಜ್ಯ ನಿರ್ವಹಣಾ ಚಟುವಟಿಕೆಗಳನ್ನು ಪ್ರಚಲಿತಗೊಳಿಸಿ, ಮೇಲೆ ತಿಳಿಸಿದ ಕೆಲವು ನಿಯಮಗಳನ್ನು ಅನುಸರಿಸಿ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡು ವಿಷಯವನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ವಿಷಯಗಳನ್ನು ಈ ಮೂಲಕ ಮುಂದೆ ತಿಳಿಸಲಾಗಿದೆ.

೧	ಮನೆ, ವಾಣಿಜ್ಯ ಸಂಕೀರ್ಣ ಮತ್ತು ಸಂಸ್ಥೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವಸ್ತುಗಳು, ಕೊಳೆಯುವಂತಹ ಇನ್ನಿತರೆ ವಸ್ತುಗಳನ್ನು ಪ್ರತಿಯೊಂದು ಮನೆಯಿಂದಲ್ಲು ಪ್ರತಿ ನಿತ್ಯವೂ ಸಂಗ್ರಹಿಸುವುದು.
೨	ಮರು ಬಳಕೆಯಾಗುವ ತ್ಯಾಜ್ಯ ವಸ್ತುಗಳನ್ನು (ಅಂದರೆ ವಿಷಪೂರಿತ/ ಹಾನಿಕಾರಕ ವಸ್ತುಗಳನ್ನು ಹೊರತುಪಡಿಸಿ), ಉತ್ಪತ್ತಿಯಾಗುವ ಸ್ಥಳದಿಂದ ನಗರದ ಸ್ಥಳೀಯ ಸಂಸ್ಥೆಯವರು ನಿಗಧಿಪಡಿಸುವ ಸ್ಥಳ ಹಾಗೂ ಕಾಲಾವಧಿಯಲ್ಲಿ ಸಂಗ್ರಹಿಸುವುದು.
೩	ಕಟ್ಟಡಗಳ ಪ್ರತಿಯೊಂದು ಹಂತದ ನಿರ್ಮಾಣದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವಸ್ತುಗಳನ್ನು ನಿಗಧಿ ಪಡಿಸಿರುವ ಸ್ಥಳದಲ್ಲಿ ಪ್ರತ್ಯೇಕವಾಗಿ ಸಾಗಿಸುವುದು.
೪	ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಣೆ ಮಾಡಿ, ನಿಗಧಿ ಪಡಿಸಿರುವ ಸ್ಥಳದಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು.
೫	ಆಸ್ಪತ್ರೆ/ಚಿಕಿತ್ಸಾಲಯ ಹಾಗೂ ಕೈಗಾರಿಕಾ ಘಟಕಗಳಿಂದ ಉತ್ಪತ್ತಿಯಾಗುವ ಅಪಾಯಕಾರಿ, ನಿರುಪಯುಕ್ತ ವಸ್ತುಗಳನ್ನು ಕೇಂದ್ರ ಸರ್ಕಾರದ 'ಜೆ-ನರ್ಮ' ಯೋಜನೆಯ ನಿಯಮದ ಪ್ರಕಾರ ಉತ್ಪತ್ತಿ ಮಾಡುವ ಪ್ರತ್ಯೇಕವಾಗಿ ಅಥವಾ ಒಟ್ಟಾಗಿ ಅದನ್ನು ಸಂಸ್ಕರಿಸಿ ವಿಲೇವಾರಿ ಮಾಡವುದು.

ಇಂದು ವೇಗವಾಗಿ ಬೆಳೆಯುತ್ತಿರುವ ನಗರದಲ್ಲಿನ ಜನಸಂಖ್ಯೆಯು, ನಗರಾಡಳಿತ ವ್ಯವಸ್ತೆಯ ಮೇಲೆ ಎಲ್ಲಾ ರೀತಿಯಲ್ಲಿ ಹೆಚ್ಚಿನ ಒತ್ತಡವನ್ನು ಹೇರುತ್ತದೆ. ಆದುದರಿಂದ 'ಜೆ-ನರ್ಮ' ಯೋಜನೆ ಮೈಸೂರು ನಗರದ ಜನರಿಗೆ ಸಹಕಾರಿಯಾಗಿದೆ ಎಂದರೆ ತಪ್ಪಗಲಾರದು. ಈ ಯೋಜನೆಯಿಂದ ಮೈಸೂರು ನಗರಕ್ಕೆ ತುಂಬಾ ಉಪಯೋಗವಾಗಿದೆ. ತ್ಯಾಜ್ಯವಸ್ತುಗಳ ಬಗ್ಗೆ ಇನ್ನು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಹೆಚ್ಚಿನ ಸಂಶೋಧನೆ ಮಾಡಬೇಕಿದೆ. ಮುಖ್ಯವಾಗಿ ಸಾರಿಗೆ ವ್ಯವಸ್ಥೆ, ರಸ್ತೆ ರಿಪೇರಿ, ಕೊಳೆಗೇರಿ ನಿವಾಸಿಗಳಿಗೆ ವಸತಿ ಯೋಜನೆ, ವರ್ತಲ್ ರಸ್ತೆಗಳ ನಿರ್ಮಾಣ, ಬೀದಿ ದೀಪ, ರೈಲ್ವೆ ಯೋಜನೆ ಇತ್ಯಾದಿ ಬಗ್ಗೆ ಗಮನ ಹರಿಸಬೇಕಾಗಿದೆ. ಮೈಸೂರು ನಗರಕ್ಕ ಪ್ರವಾಸೋದ್ಯಮಕ್ಕೆ ಹೆಸರುವಾಸಿ. ಇಲ್ಲಿರುವ ಪಾರಂಪರಿಕ ಕಟ್ಟಡಗಳಿಗೆ ಮೂಲಭೂತ ಸೌಲಭ್ಯಗಳನ್ನು ನೀಡಿ

ಅಭಿವೃದ್ಧಿ ಪಡಿಸುವುದರ ಜೊತೆಗೆ ಕಟ್ಟಡಗಳನ್ನು ಸಂರಕ್ಷಣೆ ಮಾಡಬೇಕಿದೆ. ಇದರಿಂದ ಜನರ ಜೀವನ ಗುಣಮಟ್ಟವನ್ನು ಸುಧಾರಣೆ ಮಾಡಿ, ತ್ಯಾಜ್ಯವಸ್ತುಗಳನ್ನು ಸರಿಯಾದ ಕ್ರಮದಲ್ಲಿ ವಿಲೇವರಿ ಮಾಡಲು 'ಜೆ–ನರ್ಮ'ನಂತಹ ಯೋಜನೆಗಳು ಸಹಕಾರಿಯಾಗುತ್ತವೆ.

ಪ್ರಸ್ತುತ ಅಧ್ಯಯನದಲ್ಲಿ ತ್ಯಾಜ್ಯವಸ್ತು ನಿರ್ವಹಣೆಯಲ್ಲಿ ಹಳೆಯ ಪದ್ಧತಿಗಳನ್ನು ತೆಗೆದುಹಾಕಿ, ಹೊಸ ಪದ್ಧತಿಗಳನ್ನು ಜಾರಿಮಾಡಲು ಪ್ರಸ್ತಾವನೆಯನ್ನು ಈ ಮೂಲಕ ಮಾಡಲಾಗಿದೆ. ಇದನ್ನು ನಗರ ಅಭಿವೃದ್ಧಿ ಭಾಗವೆಂದು ಭಾವಿಸಬೇಕಾಗಿದೆ. ಇದು ಇಂದಿನ ತುರ್ತು ಮತ್ತು ಅನಿವಾರ್ಯದ ಕೆಲಸವಾಗಿದೆ. ಇದರ ಜೊತೆಗೆ, ತ್ಯಾಜ್ಯವಸ್ತುಗಳನ್ನು ಉತ್ಪತ್ತಿ ಮಾಡುತ್ತಿರುವ ವ್ಯಕ್ತಿಗಳು ಮತ್ತು ಕುಟುಂಬಗಳು ತಾವೇ ತ್ಯಾಜ್ಯವಸ್ತುಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುವ ಮತ್ತು ವಿಂಗಡಿಸಿ ವಿಲೇವಾರಿ ಮಾಡುವ ಅರಿವಿನ ಕೊರತೆ ಎದ್ದು ಕಾಣುತ್ತಿದೆ. ಈ ಅರಿವಿನ ಕೊರತೆಯಿಂದ ತ್ಯಾಜ್ಯ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡದೇ, ಪರಿಸರದ ನೈರ್ಮಲ್ಯದ ಸಮಸ್ಯೆಗಳು ಜಾಸ್ತಿ ಆಗಿವೆ. ಆದುದರಿಂದ 'ಮನೆಯೇ ಮೊದಲ ಪಾಠಶಾಲೆ' ಎಂಬ ಮಾತಿನಂತೆ ಕಸ ನಿರ್ವಹಣೆ, ವಿಂಗಡನೆಯ ಕೆಲಸ ನಮ್ಮ–ನಮ್ಮ ಮನೆಗಳಿಂದಲೆ ಆರಂಭವಾಗಬೇಕಿದೆ. ಇದು, ಮುಂದಿನ ಪೀಳಿಗೆಗೆ ಪಾಠವಾಗ ಬೇಕು. ಯುವಜನಾಂಗ ಕಸ ನಿರ್ವಹಣೆಗೆ ಹೆಚ್ಚಿನ ಆದ್ಯತೆ ಕೊಡಬೇಕು.

ಬೆಂಗಳೂರು ನಗರದಲ್ಲಿ ದಿನ ಬೆಳಗಾದರೆ ತ್ಯಾಜ್ಯವಸ್ತುಗಳ ವಿಲೇವಾರಿ ಮತ್ತು ಸಂಸ್ಕರಣೆಯು ಒಂದು ದೊಡ್ಡ ಸಮಸ್ಯೆಯಾಗಿ ಪರಿಗಣಿಸಿಕ ಸ್ಥಳೀಯ ಮಹಾನಗರ ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಬಗೆಹರಿಸಲಾಗದ ಸಮಸ್ಯೆಯಾಗಿದೆ. ಆದುದರಿಂದ ಮೈಸೂರು ನಗರದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಪಾಲಿಕೆಯವರು ಹೆಚ್ಚೆತ್ತುಕೊಂಡು ಮುಂಜಾಗ್ರತಕ್ರಮವಾಗಿ ನಿಯಮಗಳನ್ನು ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿದರೆ ಮುಂದೆ ಆಗುವ ಅನಾಹುತಗಳನ್ನು ತಪ್ಪಿಸಬಹುದು. ನಮ್ಮ ಮೈಸೂರು ನಗರಕ್ಕೆ ಲಭ್ಯವಾಗಿರುವ ಜೆ–ನರ್ಮ್ ಯೋಜನೆಯಲ್ಲಿ ತ್ಯಾಜ್ಯವಸ್ತು ನಿರ್ವಹಣೆಯನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡಬೇಕೆಂಬುದೆ ಈ ಪ್ರಬಂಧದ ಅಭಿಲಾಷೆ.

ಆಧಾರ ಗ್ರಂಥಗಳು

೧. ಬಿ.ಎಸ್. ಗೋಪಾಲರಾವ್, ಸಂಶೋಧನ ಸಂಯೋಜಕರು, ಜಲ, ಸಿಮ್ಲಾಕ, ಬೆಂಗಳೂರು–೧.

೨. ನಗರ ವ್ಯವಸ್ಥಾಪಕರ ಸಂಘ, ಕರ್ನಾಟಕ – ಪರಿವರ್ತನೆ. ಸಂಪುಟ–೨. ಸಂಚಿಕೆ–೧೧.

ಪರಿಣಾಮಕಾರಿ ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ಬಳಕೆಯಿಂದ ಕಾಫಿಹಣ್ಣು ಸಂಸ್ಕರಿಸಿದ ಕಲುಷಿತ ನೀರಿನ ಶುದ್ಧೀಕರಣ

ಡಾ. ಹೇಮಂತ್ ಗೌಡ, ಕೆ., ಡಾ. ರವಿಕುಮಾರ್, ಪಿ. ಮತ್ತು ಡಾ. ಮಧುಸೂಧನ್, ಹೆಚ್.ಎಸ್.
ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

ಭಾರತದಲ್ಲಿ ಉತ್ಪಾದನೆಯಾಗುವ ಕಾಫಿಯ ಶೇ. 58 ರಷ್ಟನ್ನು ಕರ್ನಾಟಕದಲ್ಲೇ ಉತ್ಪಾದನೆಯಾಗುತ್ತಿದ್ದು ರಾಜ್ಯದಾದ್ಯಂತ 2,20,000 ಹೆಕ್ಟೇರ್‌ಗಳಲ್ಲಿ ಕಾಫಿಯನ್ನು ಬೆಳೆಯಲಾಗುತ್ತಿದೆ. ಬಹುತೇಕ ಕಾಫಿ ತೋಟಗಳಲ್ಲಿ ಕಾಫಿಹಣ್ಣನ್ನು ಯಥೇಚ್ಛವಾಗಿ ನೀರು ಬಳಸಿ ಸಂಸ್ಕರಿಸಲಾಗುತ್ತಿದ್ದು ಇದು ಭಾರೀ ಪ್ರಮಾಣದ ಕಲುಷಿತ ನೀರಿನ ಉತ್ಪಾದನೆಗೆ ಕಾರಣವಾಗುತ್ತಿದೆ. ಇಂತಹ ಕಲುಷಿತ ನೀರನ್ನು ನೇರವಾಗಿ ಹತ್ತಿರದ ಜಲಮೂಲಗಳಿಗೆ ಹರಿಯಬಿಡುವುದರಿಂದ ಇದು ತೀವ್ರ ಜಲಮಾಲಿನ್ಯವುಂಟುಮಾಡುತ್ತಿದೆ. ಈ ಹಿನ್ನಲೆಯಲ್ಲಿ ಕಾಫಿಹಣ್ಣನ್ನು ಸಂಸ್ಕರಿಸಿದ ಕಲುಷಿತ ನೀರನ್ನು ಪರಿಣಾಮಕಾರಿ ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ಬಳಕೆಯಿಂದ ಶುದ್ಧೀಕರಿಸಲು ಪ್ರಯತ್ನ ನಡೆಸಲಾಯಿತು. ಕಾಫಿ ತೋಟಗಳಿಂದಲೇ ಸಂಸ್ಕರಿಸಿದ ಸೂಕ್ಷ್ಮಾಣುಜೀವಿಗಳನ್ನೇ ಬಳಸಿ ಕಲುಷಿತ ನೀರನ್ನು ಸಂಸ್ಕರಿಸಿ ಅದರಲ್ಲಿನ ಜೈವಿಕ ಆಮ್ಲಜನಕದ ಬೇಡಿಕೆ (BOD) ಯನ್ನು ಗಣನೀಯವಾಗಿ ತಗ್ಗಿಸಿ ಕರಗಿದ ಆಮ್ಲಜನಕ (DO) ವನ್ನು ಹೆಚ್ಚಿಸುವುದು ಈ ಪ್ರಯೋಗದ ಉದ್ದೇಶವಾಗಿತ್ತು. ಮೊದಲಿಗೆ ಕಲುಷಿತ ನೀರನ್ನು ಆಮ್ಲೀಯ ಕೊಳದಲ್ಲಿ 6 ಗಂಟೆಗಳ ಕಾಲ ನಿಲ್ಲಿಸುವ ಮೂಲಕ ಅದರ pH ಅನ್ನು 5.9–6.1 ಕ್ಕೆ ಏರಿಸಲಾಯಿತು. ಮೂರನೇ ಹಂತದಲ್ಲಿ ಈ ನೀರನ್ನು ನಿಗದಿತ ಪ್ರಮಾಣದ ಪರಿಣಾಮಕಾರಿ ಸೂಕ್ಷ್ಮಾಣುಜೀವಿಗಳು ಬೆರೆತ ಗಾಳಿಭರಿತ ಚಿಕಿತ್ಸಾಕೊಳಗಳಿಗೆ ಹರಿಸಿ ಸಂಸ್ಕರಿಸಲಾಯಿತು. ಇದರಿಂದಾಗಿ ಕಲುಷಿತ ನೀರಿನ ಜೈವಿಕ ಆಮ್ಲಜನಕದ ಬೇಡಿಕೆ ಶೇ. 70–90 ರವರೆಗೆ ಕಡಿಮೆಯಾಯಿತಲ್ಲದೇ ನೀರಿನಲ್ಲಿದ್ದ ಹಾನಿಕರಕ ಸೂಕ್ಷ್ಮಾಣುಜೀವಿಗಳು ಹಾಗೂ ವಿಷಕಾರಿ ಪದಾರ್ಥಗಳ ಮಟ್ಟ ಗಣನೀಯವಾಗಿ ಕುಗ್ಗಿತು. ನಾಲ್ಕನೇ ಹಂತದಲ್ಲಿ ಈ ನೀರನ್ನು ಕೆಲವು ಜಾತಿಯ ವಿಶೇಷ ಕಳೆಸಸ್ಯಗಳಿಂದ ತುಂಬಿದ ಜೌಗುಭೂಮಿಗೆ ಹರಿಸಿ ನೀರಿನಲ್ಲಿನ ಕರಗಿದ ಆಮ್ಲಜನಕದ ಮಟ್ಟವನ್ನು ಏರಿಸುವುದರ ಜೊತೆಗೆ ಹಾನಿಕಾರಕ ವಸ್ತುಗಳು ಮತ್ತು ಬೆರೆತಿರುವ ಘನವಸ್ತುಗಳನ್ನು ನಾಶಪಡಿಸಲಾಯಿತು. ಕೊನೆಯಲ್ಲಿ ಈ ನೀರನ್ನು ವಾಟರ್ ಹಯಸಿಂಥ್ ಕಳೆಸಸ್ಯಗಳಿಂದ ತುಂಬಿದ ಕೊಳದೊಳಗೆ ಹರಿಸಿ ಅಳಿದುಳಿದ ಹಾನಿಕಾರಕ ಸೂಕ್ಷ್ಮಾಣುಜೀವಿಗಳನ್ನೂ, ಭಾರಲೋಹದ ವಸ್ತುಗಳನ್ನೂ ತೆಗೆದು ಹಾಕಲಾಯಿತು. ಅಂತಿಮವಾಗಿ ಈ ಕಳೆಸಸ್ಯಗಳಿಂದ ತುಂಬಿದ ಕೊಳದಿಂದ ಹೊರಹಾಕಲ್ಪಟ್ಟ ನೀರು ಸಾಕಷ್ಟು ಶುದ್ಧೀಕರಣಗೊಂಡಿದ್ದು ಜೈವಿಕ ಆಮ್ಲಜನಕ ಬೇಡಿಕೆ ಹಾಗೂ ಭಾರಲೋಹದ ವಸ್ತುಗಳು ಗಣನೀಯವಾಗಿ ಕಡಿಮೆಯಾಗಿ ಕರಗಿದ ಆಮ್ಲಜನಕದ ಮಟ್ಟದಲ್ಲಿ ಸಾಕಷ್ಟು ಏರಿಕೆಯಾಗಿರುವುದು ಕಂಡುಬಂದಿತು.

ಕಾಫಿ ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಇದನ್ನು ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಕಾಫಿ ಉತ್ಪಾದನೆಯಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದ್ದು ಭಾರತದ ಒಟ್ಟು ಉತ್ಪಾದನೆಯ ಶೇ. 58 ರಷ್ಟನ್ನು ನಮ್ಮ ರಾಜ್ಯವೇ ಉತ್ಪಾದಿಸುತ್ತಿದೆ. ರಾಜ್ಯದಾದ್ಯಂತ 3000 ಕ್ಕೂ ಹೆಚ್ಚು ಕಾಫಿ ತೋಟಗಳಿದ್ದು ಅಲ್ಲಿ ಬೆಳೆದ ಕಾಫಿಹಣ್ಣನ್ನು ಯಥೇಚ್ಛವಾಗಿ ನೀರು ಬಳಸಿ ನೆನೆಹಾಕಿ ಸಂಸ್ಕರಿಸಲಾಗುತ್ತದೆ. ಈ ಕ್ರಮದಿಂದಾಗಿ ನಮ್ಮ ರಾಜ್ಯದ ಕಾಫಿತೋಟಗಳಿಂದ ಭಾರೀ ಪ್ರಮಾಣದಲ್ಲಿ ಕಲುಷಿತ ನೀರು ಉತ್ಪಾದನೆಯಾಗುತ್ತಿದ್ದು ಜನ–ಜಾನುವಾರು ಹಾಗೂ ಪರಿಸರದ ಮೇಲೆ ಅನೇಕ ರೀತಿಯ ದುಷ್ಪರಿಣಾಮಗಳಾಗುತ್ತಿವೆ. ಸಧ್ಯದ ಪರಿಸ್ಥಿತಿಯಲ್ಲಿ ಕಾಫಿತೋಟಗಳಿಂದ ಹೊರಹಾಕಲ್ಪಡುತ್ತಿರುವ ಕಲುಷಿತ ನೀರನ್ನು ಹತ್ತಿರದ ತೊರೆ, ಹಳ್ಳ, ನದಿಗಳಿಗೆ ಹಾಗೆಯೇ ಹರಿಯ

ಬಿಡಲಾಗುತ್ತಿದ್ದು. ಇದರಿಂದ ತೀವ್ರವಾದ ಜಲಮಾಲಿನ್ಯವುಂಟಾಗುತ್ತಿದೆ. ನಮ್ಮ ರಾಜ್ಯದ ಬಹುತೇಕ ಕಾಫಿ ತೋಟಗಳಲ್ಲಿ ಇಂತಹ ಕಲುಷಿತ ನೀರನ್ನು ಶುದ್ಧೀಕರಿಸುವ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿಲ್ಲ. ಕೆಲವರು ಸಾಂಪ್ರದಾಯಕ ಪದ್ಧತಿಗಳಿಂದ ಕಲುಷಿತ ನೀರನ್ನು ಶುದ್ಧೀಕರಿಸುತ್ತಾರಾದರೂ ಆ ಪದ್ಧತಿಗಳಿಂದ ಅಂತಹಾ ಯಶಸ್ಸನ್ನು ಸಾಧಿಸಲಾಗುತ್ತಿಲ್ಲ.

ಈ ಹಿನ್ನಲೆಯಲ್ಲಿ ಕಾಫಿ ತೋಟಗಳಿಂದ ಹೊಬೀಳುವ ಕಲುಷಿತ ನೀರನ್ನು ಶುದ್ಧೀಕರಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಸೂಕ್ಷ್ಮಾಣುಜೀವಿ ಗಳನ್ನು ಈ ಪ್ರಯೋಗದಲ್ಲಿ ಬಳಸಿಕೊಳ್ಳಲಾಯಿತು.

ಪ್ರಯೋಗದ ಉದ್ದೇಶ: ಕಾಫಿತೋಟಗಳಿಂದ ಹೊರಸೂಸುವ ಕಲುಷಿತ ನೀರನ್ನು ಪರಿಣಾಮಕಾರಿ ಸೂಕ್ಷ್ಮಾಣುಜೀವಿ ತಂತ್ರಜ್ಞಾನ ಬಳಸಿ ಶುದ್ಧೀಕರಿಸುವ ಮೂಲಕ ಅದರಲ್ಲಿ ಜೈವಿಕ ಆಮ್ಲಜನಕದ ಬೇಡಿಕೆ ಯನ್ನು ಗಣನೀಯವಾಗಿ ತಗ್ಗಿಸುವುದು ಮತ್ತು ಕರಗಿದ ಆಮ್ಲಜನಕದ ಮಟ್ಟ ಹೆಚ್ಚಿಸುವುದು.

ಪ್ರಯೋಗದ ವಿವರಗಳು: ಸಾಂಪ್ರದಾಯಿಕ ಪದ್ಧತಿಯಂತೆಯೇ ಈ ಪ್ರಯೋಗದಲ್ಲಿಯೂ ಸಹ ಮೊದಲಿಗೆ ಕಲುಷಿತ ನೀರನ್ನು ಆಮ್ಲೀಯ ಕೊಳದಲ್ಲಿ (Acidification Pond) ಹರಿಸುವ ಮೂಲಕ ಅದರ pH ಅನ್ನು 5.9–6.1 ಕ್ಕೆ ಹೆಚ್ಚಿಸುವ ಸಲುವಾಗಿ ನಿಗದಿತ ಪ್ರಮಾಣದ ಸುಣ್ಣ ತುಂಬಿದ 2ನೇ ಕೊಳಕ್ಕೆ ಹರಿಸಲಾಯಿತು. 3ನೇ ಹಂತದಲ್ಲಿ ಈ ನೀರನ್ನು ಪರಿಣಾಮಕಾರಿ ಸೂಕ್ಷ್ಮಾಣುಜೀವಿಹಳಿಂದ ತುಂಬಿದ 3ನೇ ಕೊಳದಲ್ಲಿ ಹರಿಸಿ ಸಂಸ್ಕರಿಸಲಾಯ್ತು. 4ನೇ ಹಂತದಲ್ಲಿ ಕೆಲವು ರೀತಿಯ ಸಸ್ಯಗಳನ್ನು ಬಳಸಿ ನೀರನ್ನು ಸಂಸ್ಕರಿಸಲಾಯಿತು. ಕೊನೆಯದಾಗಿ ಈ ನೀರನ್ನು ಹಳ್ಳ/ ನದಿಗಳಿಗೆ ಹರಿಯಬಿಡುವ ಮುನ್ನ ವಾಟರ್ ಹಯಸಿಂತ್ ತುಂಬಿದ 5ನೇ ಕೊಳದಲ್ಲಿ ಹರಿಸಲಾಯಿತು.

ಪ್ರಯೋಗದ ವೈಜ್ಞಾನಿಕ ವಿವರಣೆ: ಹಂತ 1: ಆಮ್ಲೀಯ ಕೊಳದಲ್ಲಿ ಕಲುಷಿತ ನೀರನ್ನು ಕನಿಷ್ಠ 6 ಗಂಟೆಗಳ ಕಾಲ ನಿಲ್ಲಿಸಿದಾಗ ಕಲುಷಿತ ನೀರು ತಿಳಿಗೊಂಡು ಅದರಲ್ಲಿನ ನಿರುಪಯುಕ್ತ/ ಹಾನಿಕಾರಕ ಘನಪದಾರ್ಥಗಳು ಮೇಲ್ಮಟ್ಟದಲ್ಲಿ ತೇಲಾಡುತ್ತವೆ. ಇವುಗಳನ್ನು ಜಾಲರಿಗಳನ್ನು ಬಳಸಿ ತೆಗೆದು ಹಾಕಬಹುದು.

ಹಂತ 2: ಆಮ್ಲೀಯ ಕೊಳದಲ್ಲಿ ತಿಳಿಗೊಳ್ಳುವ ನೀರಿನ pH ಸಾಕಷ್ಟು ಕೆಳಮಟ್ಟದಲ್ಲಿದ್ದು ಅದನ್ನು ಮುಂದಿನ ಹಂತಗಳಲ್ಲಿ ಸಂಸ್ಕರಿಸಲು ಅದರ pH ಅನ್ನು ಕನಿಷ್ಠ 6 ರವರೆಗಾದರೂ ಏರಿಸಬೇಕಾಗುತ್ತದೆ. ಇದಕ್ಕಾಗಿ 2 ನೇ ಕೊಳದಲ್ಲಿ ನಿಗದಿತ ಪ್ರಮಾಣದ ಸುಣ್ಣ ($CaCO_3$) ವನ್ನು ತುಂಬಿ ಕಲುಷಿತ ತಿಳಿನೀರನ್ನು ಬಫರಿಂಗ್ ಮೂಲಕ ಅದರ pH ಅನ್ನು ಏರಿಸಲಾಗುವುದು.

ಹಂತ 3: ಪ್ರಾಥಮಿಕ ನೀರು ಸಂಸ್ಕರಣೆ– ಈ ಹಂತದಲ್ಲಿ 2ನೇ ಹಂತದಿಂದ ಹೊರಬೀಳುವ ನೀರನ್ನು ಏರೋಬಿಕ ಚಿಕಿತ್ಸಾ ಕೊಳಗಳಿಗೆ ಹರಿಸಲಾಗುವುದು ಮತ್ತು ಈ ಕೊಳಗಳಲ್ಲಿ ಕಾಫಿ ತೋಟಗಳಿಂದಲೇ ಸಂಗ್ರಹಿಸಿದ ವಿಶೇಷ ರೀತಿಯ ಪರಿಣಾಮಕಾರಿ ಸೂಕ್ಷ್ಮಾಣುಜೀವಿಗಳ ಕಾರ್ಯಕ್ಷಮತೆಯಿಂದ ಕಲುಷಿತ ನೀರಿನಲ್ಲಿರುವ ಜೈವಿಕ ಆಮ್ಲಜನಕ ಬೇಡಿಕೆ ಶೇ. 70–90 ರವರೆಗೆ ಕಡಿಮೆ ಮಾಡಲಾಯಿತು. ಈ ಪರಿಣಾಮಕಾರಿ ಸೂಕ್ಷ್ಮಾಣುಜೀವಿಗಳು ಕಲುಷಿತ ನೀರಿನಲ್ಲಿರುವ ಹಾನಿಕಾರಕ ಸೂಕ್ಷ್ಮಾಣುಜೀವಿಗಳನ್ನು ಮಟ್ಟಹಾಕಿ ತಾವೇ ಚಿನ್ನಾಗಿ ಬೆಳೆದ ಎಲ್ಲಾ ರೀತಿಯ ವಿಷಕಾರಿ ಪದಾರ್ಥಗಳನ್ನು ತಿಂದು ಹಾಕುತ್ತವೆ. ಹಂತ 4: ದ್ವಿತೀಯ ಹಂತದ ನೀರು ಸಂಸ್ಕರಣೆ– ಈ ಹಂತದಲ್ಲಿ ಚೆನ್ನಾಗಿ ನೀರು ಹಾಯಿಸಲ್ಪಟ್ಟ ಹಾಗೂ ಕೆಲವು ಜಾತಿಯ ವಿಶೇಷ ಕಳೆ ಸಸ್ಯಗಳಿಂದ ತುಂಬಿದ ಜೌಗು ಭೂಮಿಯಲ್ಲಿ 3ನೇ ಹಂತದಿಂದ ಹೊರಬರುವ ನೀರನ್ನು ಹಾಯಿಸಲಾಗುತ್ತದೆ. ಈ ಕಳೆ ಸಸ್ಯಗಳಲ್ಲಿದುವ ಆಮ್ಲಜನಕವು ನೀರಿನಲ್ಲಿ ಬೆರೆತು ಕಲುಷಿತ ನೀರು ಮತ್ತಷ್ಟು ಶುದ್ಧಿಯಾಗಿ ಅದರಲ್ಲಿನ ಕರಗಿದ ಆಮ್ಲಜನಕ (DO) ದ ಮಟ್ಟ ಗಣನೀಯವಾಗಿ ಏರಿತ್ತದೆ. ಅಷ್ಟೇ ಅಲ್ಲದೆ ಅಳಿದುಳಿದ ಹಾನಿಕಾರಕ ಪದಾರ್ಥಗಳು ಮತ್ತು ಬೆರೆತಿರುವ ಘನವಸ್ತುಗಳು ಶೇ. 70 ರಷ್ಟು ನಾಶವಾಗುತ್ತವೆ. ಹಂತ 5: ತೃತೀಯ ಹಂತದ ನೀರಿನ ಸಂಸ್ಕರಣೆ– ಈ ಹಂತದಲ್ಲಿ 4ನೇ ಹಂತದಿಂದ ಹೊರಬರುವ ನೀರನ್ನು ವಾಟರ್ ಹಯಸಿಂತ್ ಜಾತಿಯ ಕಳೆಸಸ್ಯಗಳಿಂದ ತುಂಬಿದ ಕೊಳದೊಳಗೆ ಹರಿಸಲಾಗುವುದು. ಈ ಕಳೆಗಿಡಗಳು ನೀರಿನಲ್ಲಿ ಅಳಿದುಳಿದ ಹಾನಿಕಾರಕ ಬ್ಯಾಕ್ಟೀರಿಯಾ ಹಾಗೂ ಭಾರಲೋಹದ (Heavy Metal) ವಸ್ತುಗಳನ್ನು ತೆಗೆದು ಹಾಕತ್ತವೆ. ಅಂತಿಮವಾಗಿ ಈ ಕಳೆಸಸ್ಯಗಳಿಂದ ತುಂಬಿದ ಕೊಳದಿಂದ ಹೊರಹಾಕಲ್ಪಟ್ಟ ನೀರು ಸಂಸ್ಕರಿತ ಹಾಗೂ ಶುದ್ಧವಾಗಿರುತ್ತದೆ. ಇದನ್ನು ಯಾವುದೇ ಹಾನಿಯಿಲ್ಲದೇ ಹತ್ತಿರದ ತೊರೆಗಳಿಗೆ / ಹಳ್ಳಗಳಿಗೆ ಹರಿಸಬಹುದು.

ಪದ್ಧತಿಯ ವಿಶೇಷ ಅನುಕೂಲಗಳು:

1. ಈ ಸಂಸ್ಕರಣಾ ಪದ್ಧತಿಯಲ್ಲಿ ಬಳಸುವ ಸುಣ್ಣ ಅತ್ಯಂತ ಮಿತವ್ಯಯಕಾರಿಯಾಗಿದ್ದು ಯಶಸ್ವಿಯಾಗಿ ಕಲುಷಿತ ನೀರಿನ pH ಅನ್ನು 6 ರ ಸಮೀಪಕ್ಕೆ ಕೊಂಡೊಯ್ಯತ್ತದೆ.
2. ಪ್ರಾಥಮಿಕ ಹಂತದ ನೀರು ಸಂಸ್ಕರಣೆಗೆ ಬಳಸುವ ತೊಟ್ಟಿಗಳನ್ನು ಸುಲಭವಾಗಿ ಕಡಿಮೇ ವೆಚ್ಚದಲ್ಲಿ ನಿರ್ಮಿಸಬಹುದು.
3. ಕಾಫಿ ತೋಟದಲ್ಲಿಯೇ ಇರುವ ಜೌಗು ಪ್ರದೇಶಗಳನ್ನು, ತೋಟಗಳನ್ನು ಈ ಪದ್ಧತಿಯಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಬಹುದು.
4. ಇಡೀ ಚಟುವಟಿಕೆಗಳು ಗಾಳಿಯ ಸಂಪರ್ಕದಲ್ಲೇ (Aerobic) ನಡೆಯುವುದರಿಂದ ತೋಟದಲ್ಲಿ ಯಾವುದೇ ತೆರನಾದ ದುರ್ಗಂಧಕ್ಕೆ ಅವಕಾಶ ಇರುವುದಿಲ್ಲ.
5. ಈ ಪ್ರಯೋಗದ ಕೇಂದ್ರಬಿಂದುವಾದ ಪರಿಣಾಮಕಾರಿ ಸೂಕ್ಷ್ಮಾಣುಜೀವಿಗಳನ್ನು ಕಾಫಿ ತೋಟದಿಂದಲೇ ಪಡೆಯಬಹುದು. ಅದಕ್ಕಾಗಿ ಹೆಚ್ಚು ವೆಚ್ಚಮಾಡುವ ಅಗತ್ಯವಿಲ್ಲ.
6. ಈ ಪ್ರಯೋಗವನ್ನು ದೊಡ್ಡಮಟ್ಟದಲ್ಲಿ ಕೈಗೊಳ್ಳಲು ಎಲ್ಲಾ ಅವಕಾಶಗಳೂ ಇವೆ.

ಈಗಾಗಲೇ ಚಿಕ್ಕಮಗಳೂರು ಜಿಲ್ಲೆಯ ಬಗನೆ ಹೆದ್ದಾಳ್ ಕಾಫಿ ತೋಟದಲ್ಲಿ ಹೊರಬರುವ ಸಂಸ್ಕರಿಸಿದ ನೀರನ್ನು ಹಾಸನದ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಪರೀಕ್ಷೆಗೊಳಪಡಿಸಿ ನಿರೀಕ್ಷಿತ ಫಲಿತಾಂಶ ಗಳನ್ನು ಪಡೆಯಲಾಗಿದೆ.

ಪ್ರಾಚೀನ ಭಾರತೀಯ ವಾಙ್ಮಯದಲ್ಲಿ ವಸುಂಧರೀಯಂ-ಪರಿಸರ ವಿಜ್ಞಾನ ಮಾಹಿತ್ಯ ಒಂದು ವಿಶ್ಲೇಷಣೆ

ಡಾ॥ ಬಿ. ಆರ್. ಶಾಂತಲಾ ಪ್ರಿಯದರ್ಶಿನಿ, ಡಾ॥ ಅಪರ್ಣಾ ನಾಭರಾಜ್
ಶ್ರೀ ಧನ್ವಂತರಿ ಕೃಪಾ, 181-184 ಎಂ.ಐ.ಜಿ-1, ಗ್ರೇಡ್-4, ಕೆ. ಹೆಬ್. ಬಿ. ಕಾಲೋನಿ, ಹೊಟ್ಟಗಲ್ಲಿ, ಮೈಸೂರು-570 018

ಪರಿಸರ ಸಂರಕ್ಷಣೆ ಮತ್ತು ಸಕಲ ಜೀವರಾಶಿಗಳ ಸಂರಕ್ಷಣೆ ಪುರಾತನ ಭಾರತೀಯ ವಾಙ್ಮಯದಲ್ಲಿ ಲಭ್ಯವಿದೆ. ಆಯುರ್ವೇದ ಗ್ರಂಥಗಳಲ್ಲಿ ಪಶು, ಪಕ್ಷಿ, ಪ್ರಾಣಿ, ಜಲಜೀವರಾಶಿ ಹೀಗೆ ಹಲವು ಹತ್ತು ಜೀವ ವೈವಿಧ್ಯತೆಗಳ ವಿವರಣೆ, ಅವುಗಳ ಸಂರಕ್ಷಣೆ, ಭೂಮಿ, ಜಲ, ವಾಯುಮಾಲಿನ್ಯಗಳಲ್ಲದೇ ಮನುಷ್ಯನ ಮಾನಸಿಕ ಮಾಲಿನ್ಯದ ಬಗ್ಗೆಯೂ ಕೂಡ ಅತಿ ಗಾಢವಾದ ಚಿಂತನೆ ಚರಕ ಸಂಹಿತೆಯ "ಜನಪದೋಧ್ವಂಸೀಯ" ಅಧ್ಯಾಯನಗಳಲ್ಲಿಯೂ ಕೂಡ ಕಾಣಬಹುದಾಗಿದೆ. ವಿಷ್ಣು ಪುರಾಣ, ಪದ್ಮ ಪುರಾಣ, ಇತ್ಯಾದಿ ಪುರಾಣಾಗಳಲ್ಲಿ ಪರಿಸರ ಸಂರಕ್ಷಣೆಯ ಕುರಿತು ಮಾಹಿತಿ ಲಭ್ಯವಾಗಿದೆ. "ದೇಶಕಾಲ ಪ್ರಮಾಣಜ್ಞ" ಮತ್ತು "ಪರಾವರಜ್ಞ" ಎಂಬ ಎರಡು ವಿಶೇಷ ಪದಗಳು ಪರಿಸರ ತಜ್ಞರಿಗೆ ಮೀಸಲಾಗಿರುತ್ತಿತ್ತು. "ಯಥಾಬ್ರಹ್ಮಾಂಡ ತಥಾ ಪಿಂಡಾಂಡ" ಎಂಬ ವಿಷಯದ ಅರಿವು ಪರಿಸರದ ಜೊತೆಗೆ ನಮ್ಮ ಒಡನಾಟ ಹಾಗೂ ಅದರ ಸಂರಕ್ಷಣೆಯ ಮಹತ್ವವನ್ನು ಹೇಳುತ್ತದೆ. ಈ ಪ್ರಬಂಧದಲ್ಲಿ ಭಾರತೀಯ ಶಾಸ್ತ್ರಗಳಲ್ಲಿ ಇಂದಿಗೂ ವೈಜ್ಞಾನಿಕವೆನಿಸುವ ಅನೇಕ ವಿಷಯಗಳನ್ನು ವಿಶದೀಕರಿಸಲಾಗಿದೆ.

ಪರಿಸರದ ಸಂರಕ್ಷಣೆಯ ಬಗ್ಗೆ ತೀವ್ರ ತಿಳುವಳಿಕಾ ಆಂದೋಲನ ಗಳು ಕೇವಲ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರು ವುದು ಮಾತ್ರವಲ್ಲದೆ, ಪ್ರಾಚೀನ ಭಾರತದಲ್ಲಿಯೂ ಸರ್ವೇ ಸಾಮಾನ್ಯ ವಾಗಿತ್ತು. ನಮ್ಮ ಪೂರ್ವಜರಿಗೆ ಪ್ರಕೃತಿಯು ದೈವೀ ಸ್ವರೂಪವಾಗಿದ್ದು, ಅದು ತಮ್ಮ ಬದುಕಿನ ಒಂದು ಅವಿಭಾಜ್ಯ ಅಂಗವಾಗಿತ್ತು.

'ಪರಿಸರ' ಎಂದರೆ ನದಿ, ನಗರ, ಪರ್ವತ, ಪೃಥ್ವಿಯ ಮೇಲಿರುವ ಸಕಲ ಜೀವರಾಶಿಗಳನ್ನೊಳಗೊಂಡಿರುವಂತಹದ್ದು [ಉಲ್ಲೇಖ – ಶಬ್ದಕಲ್ಪದ್ರಮ: ತೃತೀಯ ಭಾಗ] ಗದ್ದಲ ಶಬ್ದ ರಹಿತ (ಅರಣ) ವಾಗಿರುವಂತಹ ವನವೇ 'ಅರಣ್ಯ' ಎಂದು ವಿವರಿಸಲಾಗಿದೆ.

'ವನ' ಎಂದರೆ ಬಹು ವೃಕ್ಷಯುಕ್ತ ಸ್ಥಾನ ಎಂದು ತಿಳಿಸಲಾಗಿದೆ. ಅಟವಿ, ಕಾನನ, ಅರಣ್ಯ–ಹೀಗೆ ಮೂವತ್ತಕ್ಕೂ ಹೆಚ್ಚು ಪರ್ಯಾಯ ಪದಗಳನ್ನು ವನಶಬ್ದಕ್ಕೆ ತಿಳಿಸಲಾಗಿದೆ. ತಮಸ್ಸನ್ನು ಹೋಗಲಾಡಿಸು ವಂತಹುದ್ದೇ ವನ ಎಂದು ವನಗಳ ಪ್ರಾಮುಖ್ಯತೆಯನ್ನು ಸಾರಿ ಹೇಳಲಾಗಿದೆ.

'ವೃಷ್ಟಿ ಪ್ರದಾನೇನ ವನ್ಯತೆ' ಎಂದರೆ ಮಳೆಯನ್ನು ಕರುಣಿಸುವಂತ ಹುದ್ದೇ ವನ ಎಂದೂ ವನ ಕಾನನದ ಅವಶ್ಯಕತೆಯನ್ನು ಒತ್ತಿ ಹೇಳಲಾಗಿದೆ. ಬಹು ಮುಖ್ಯವಾಗಿ 12 ವಿಧದ ವನಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

1. ಮಧುವನ	7. ಖಾದಿರ ವನ
2. ತಾಲವನ	8. ಮಹಾವನ
3. ಕುಮುದ ವನ	9. ಧವಲ ವನ
4. ಕಾಮ್ಯಕ ವನ	10. ಬಿಲ್ವ ವನ
5. ಬಕುಲವನ	11. ಭಾಂಡೀರ ವನ
6. ಭದ್ರವನ	12. ವೃಂದಾವನ

ಅಷ್ಟೇ ಅಲ್ಲದೆ, ವನಗಳನ್ನು 'ತಪೋವನ', ಶ್ರೀ ವನ, ಮಹಾವನ, ಎಂದು ವಿಂಗಡಿಸಲಾಗಿದೆ. ಹೀಗೆ ಇಂತಹ ವಿಶೇಷ ವನಗಳ ಬಗ್ಗೆ ಜನಸಾಮಾನ್ಯರಲ್ಲಿ ಧಾರ್ಮಿಕವಾಗಿ ಭಯ ಭಕ್ತಿಗಳನ್ನುಂಟು ಮಾಡಿ, ಅದರ ಸಂರಕ್ಷಣೆ ಮಾಡಲಾಗುತ್ತಿತ್ತು ಹಾಗೂ ಪೂಜಿಸಿಲಾಗತ್ತಿತ್ತು. ಯಾರು ಶಾಶ್ವತವಾಗಿ ಕುಲವೃದ್ಧಿ, ಧನವೃದ್ಧಿಯನ್ನು ಬಯಸುವರೋ ಅಂತಹವರು ಎಂದೂ ಮರಗಳನ್ನು ಕಡಿಯಬಾರದು ಮರಗಳನ್ನು ಕಡಿದರೆ ನರಕಪ್ರಾಪ್ತಿಯಾಗುವುದು ಎಂದು ಎಚ್ಚರಿಸಲಾಗುತ್ತಿತ್ತು. ಮನುಸ್ಮೃತಿಯಲ್ಲಿ ವೃಕ್ಷಗಳನ್ನು ಕಡಿಯುವುದನ್ನು 'ಉಪಪಾತಕ' ಎಂದು ಬಣ್ಣಿಸಲಾಗಿದೆ.

ಆಯುರ್ವೇದ ಗ್ರಂಥದಲ್ಲಿ ಚರಕಾಚಾರ್ಯರು ಪುರಷನ ಶರೀರವು ಸಂಪೂರ್ಣವಾಗಿ ಲೋಕವನ್ನೊಳಗೊಂಡಿದೆ ಎಂದು ವಿವರಿಸಿ ದ್ದಾರೆ. ಮಾನವನ ದೇಹದ ಪ್ರತಿಯೊಂದು ಅವಯುವಗಳೂ ಲೋಕದ ಒಂದೊಂದು ಅಂಶಗಳನ್ನು ಹೊಂದಿವೆ. ಉದಾಹರಣೆಗೆ ಆಕಾರವು ಪೃಥ್ವಿ ತತ್ವದಿಂದಲೂ, ಆರ್ದ್ರತೆಯು ಜಲತತ್ವದಿಂದಲೂ, ತಾಪ ಅಗ್ನಿ ತತ್ವದಿಂದಲೂ, ಪ್ರಾಣವು ವಾಯ ತತ್ವದಿಂದಲೂ ಹಾಗೂ ಎರಡು ವಸ್ತುಗಳ ನಡುವಣ ಅಂತರವು ಆಕಾಶ ತತ್ವದಿಂದಲೂ ಉಂಟಾಗಿರುತ್ತದೆ.

➢ ವೇದ ಪುರಾಣಗಳಲ್ಲಿ ಪ್ರಾಣಿಗಳ ವಧೆಯನ್ನು ಮಾಡಲೇಬಾರ ದೆಂದು ತಿಳಿಸಲಾಗಿದೆ. (ಮನುಸ್ಮೃತಿ 5.45)

ತನಗಾಗಿ ಮನುಷ್ಯನು ಪಶು, ಪಕ್ಷಿ ಇತ್ಯಾದಿ ಜೀವಿಗಳಿಗೆ ಸಾವು ನೋವುಂಟು ಮಾಡಿದರೆ ಖಂಡಿತವಾಗಿಯೂ ಸಂತೋಷ ಲಭಿಸದು ಎಂದು ನರಸಿಂಹ ಪುರಾಣವು ಹೇಳಿದೆ [13.44]

ಪ್ರಾಣಿಗಳನ್ನು ಕೊಂದು ಬೇಯಿಸಿ ತಿಂದರೆ, ಅದು ಮಹಾ ಪಾಪವೆಂದು ಪರಿಗಣಿಸಿದ್ದು, ತೀರ್ಥಯಾತ್ರೆ, ಪವಿತ್ರ ನದಿಸ್ನಾನ ಯಜ್ಞಯಾಗಾದಿಗಳಿಂದಲೂ ಪಾಪವಿಮೋಚನೆ ದೊರಕದು ಎಂದು ವಿಷ್ಣು ಪುರಾಣದಲ್ಲಿ ಹೇಳಲಾಗಿದೆ [3.8.15] ಪಶುಪಕ್ಷಿ, ಕ್ರಿಮಿ ಕೀಟಾದಿಗಳನ್ನು ಕೊಲ್ಲುವುದು ಅಥವಾ ಹಿಂಸಿಸುವುದು ಭಗವಂತನಿಗೆ ಪ್ರಿಯವಲ್ಲ ಎಂದು ತಿಳಿಸಿಲಾಗಿದೆ.

➢ ಹಿಂದೂ ಧರ್ಮದ ಪ್ರಕಾರ ಪ್ರತಿಯೊಂದು ಮರಕ್ಕೂ ವೃಕ್ಷ ದೇವತೆಯನ್ನು ಹೆಸರಿಸಿ, ನೆಡುವ ಮುನ್ನ ಪೂಜಿಸುತ್ತಿದ್ದರು. ಹೀಗೆ ವೃಕ್ಷಗಳನ್ನು ನೆಡುವ ಪರಂಪರೆಯು 1,500 ವರ್ಷಗಳಿಗೂ ಹಳೆಯದಿರಬೇಕೆಂದು ತಿಳಿಸಲಾಗಿದೆ.

➢ ವರಾಹ ಪುರಾಣ, ಮತ್ಸ್ಯ ಪುರಾಣಗಳಲ್ಲಿ ಮರಗಳನ್ನು ನೆಡುವ ವಿಧಿಯನ್ನು 'ವನ ಮಹೋತ್ಸವ' ವೆಂದು ಹೇಳಲಾಗಿದ್ದು, ನೆಡುವ ವಿಧಾನಗಳನ್ನು ಕೆಳಗಿನಂತೆ ತಿಳಿಸಲಾಗಿದೆ.

ಭೂಮಿಯನ್ನು ಶುದ್ಧಗೊಳಿಸಿ ಅಗೆದು ನೀರು ಹಾಕಬೇಕು, ಗುಗ್ಗಳ ಇತ್ಯಾದಿ ಧೂಪವನ್ನು ಹಾಕಿ, ಪೂರ್ಣ ಕುಂಭವನ್ನಿರಿಸಿ ಪವಿತ್ರ ನೀರನ್ನು ಪ್ರೋಕ್ಷಿಸಿ, ಋಗ್, ಯಜುರ್, ಸಾಮ ವೇದಗಳ ಮಂತ್ರ ಪಠಿಸಿ ಹೋಮವನ್ನು ಮಾಡಿ ಸಸಿಗಳನ್ನು ನೆಟ್ಟು ವನಮಹೋತ್ಸವ ವನ್ನು ಆಚರಿಸಲಾಗುತ್ತಿತ್ತು.

➢ ಒಂದು ಗಿಡವನ್ನು ನೆಟ್ಟರೂ ಕೂಡಾ ಸೀದಾ ಸ್ವರ್ಗಕ್ಕೆ ಹೋಗಬಹುದೆಂದು ಮತ್ಸ್ಯ ಪುರಾಣ (59–159) ದಲ್ಲಿ ಹೇಳಲಾಗಿದೆ. ವರಾಹ ಪುರಾಣ (172–39)ದಲ್ಲಿ ಯಾರು ಒಂದು ಅಶ್ವತ್ಥ, ಒಂದು ಬೇವು, 10 ಹೂ ಬಿಡುವ ಬಳ್ಳಿಗಳು, 2 ದಾಳಿಂಬೆ, 2 ಕಿತ್ತಳೆ, 5 ಮಾವಿನ ಗಿಡಗಳನ್ನು ನೆಡುವರೋ ಅವರು ಎಂದೂ ನರಕಕ್ಕೆ ಹೋಗಲಾರರು ಎಂದು ಹೇಳಲಾಗಿದೆ.

➢ ಪದ್ಮ ಪುರಾಣ (56.40–41) ದಲ್ಲಿ ಮರಗಳಲ್ಲಿ ನೆಲೆಸಿರುವ ದೈವತ್ವವನ್ನು ಆರಾಧಿಸುವ ಪರಿಪಾಠ ಇತ್ತಾದುದರಿಂದ ಮರಗಳನ್ನು, ಹುಲ್ಲುಗಾವಲನ್ನು ಕತ್ತರಿಸುವವರು ನರಕಕ್ಕೆ ಹೋಗುವರೆಂದು ಹೇಳಲಾಗಿದೆ.

➢ **ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಈ ಕೆಳಗಿನಂತೆ ತಿಳಿಸಲಾಗಿದೆ.**

1) ಉದ್ಯಾನವನದಲ್ಲಿರುವ ಅಥವಾ ನಗರದಲ್ಲಿರುವ, ನೆರಳನ್ನು ಒದಗಿಸುತ್ತಿರುವ ಮರಗಳ ಹಣ್ಣು, ಹೂವು, ಚಿಗುರುಗಳನ್ನು ಕಡಿದರೆ 6 ಪನ ದಂಡ, ಮೇಲಿನ ಮರಗಳ ಸಣ್ಣ ರೆಂಬೆಗಳನ್ನು ಕಡಿದರೆ 12 ಪನದಂಡ, ದೊಡ್ಡ ರೆಂಬೆಗಳನ್ನು ಕಡಿದರೆ 24 ಪನದಂಡ, ಮರದ ಬುಡವನ್ನು ಕಡಿದರೆ ದೊಡ್ಡ ಮೊತ್ತದ ದಂಡ, ಪೂರ್ಣ ಮರವನ್ನು ಕಡಿದರೆ ಇನ್ನೂ ಉಗ್ರದಂಡ.

➢ ಚರಕ ಸಂಹಿತೆಯ ವಿಮಾನಸ್ಥಾನದ 3ನೇಯ ಅಧ್ಯಾಯದಲ್ಲಿ 11 ನೇಯ ಶ್ಲೋಕದಲ್ಲಿ ಮರಗಳನ್ನೂ ವನಗಳನ್ನು ನಾಶಮಾಡುವುದು ಮನುಜ ಕುಲಕ್ಕೆ ಮಾರಕವೆಂದೂ, ಹೇಯ ಕೃತ್ಯವೆಂದೂ, ಪರಿಸರ ಮಾಲಿನ್ಯದ ಪ್ರಮುಖ ಕಾರಣವೆಂದೂ ತಿಳಿಸಿ, ತತ್ಪರಿಣಾಮವಾಗಿ ವಿವಿಧ ರೋಗಗಳು ಉತ್ಪತ್ತಿಯಾಗಿ ಮನುಜಕುಲವು ನಾಶವಾಗುವುದು ಎಂದು ಹೇಳಲಾಗಿದೆ.

➢ ಮನುಸ್ಮೃತಿಯಲ್ಲಿ [9.291] ಕೃಷಿಯಲ್ಲಿ ವಂಚಿಸಿ, ಕಳಪೆ ಬೀಜಗಳನ್ನು ಮಾರಾಟ ಮಾಡಿದವನಿಗೆ ಆತನ ಅವಯವಗಳನ್ನು ಕತ್ತರಿಸುವಂತಹ ಉಗ್ರ ದಂಡನೆಯನ್ನು ತಿಳಿಸಲಾಗಿದೆ. ಕೃಷಿ ಉಪಕರಣಗಳ ಕಳ್ಳತನ ಮಾಡಿದವನಿಗೆ ಅದರ ಉಪಯುಕ್ತತೆಗೆ ಅನುಗುಣವಾಗಿ ಶಿಕ್ಷೆಯನ್ನು ನಿಗದಿಪಡಿಸಲಾಗುತ್ತಿತ್ತು ಎಂದು ತಿಳಿಸಲಾಗಿದೆ.

➢ ಯಾರು ರಸ್ತೆಯಲ್ಲಿ ಕಸ ಚೆಲ್ಲತ್ತಾರೋ ಅವರಿಗೆ 1/8 ನೇ ಪನಭಾಗ ದಂಡ, ಕೊಳಚೆ ನೀರನ್ನು ಎಸೆದರೆ 1/4 ಪನದಂಡ, ಕಸ ಮತ್ತು ಕೊಳಚೆ ನೀರನ್ನು ಚೆಲ್ಲಿದರೆ ಅದರ ಎರಡರಷ್ಟು ದಂಡ, ಮಲವನ್ನು ದೇವಸ್ಥಾನದಲ್ಲಿ, ಕೆರೆ, ಕೊಳ, ಪವಿತ್ರ ಸ್ಥಾನ, ಸರ್ಕಾರಿ ಕಟ್ಟಡಗಳಲ್ಲಿ ವಿಸರ್ಜಿಸಿದರೆ ಒಂದೊಂದು ಪನದಂತೆ ಹೆಚ್ಚಿಸುತ್ತಾ ದಂಡ ವಿಧಿಸುವುದು, ಮೂತ್ರ ವಿಸರ್ಜಿಸಿದರೆ ಅದರ ಅರ್ಧದಷ್ಟು ದಂಡ ವಿಧಿಸಬೇಕೆಂದು ಕೌಟಿಲ್ಯ ಅರ್ಥಶಾಸ್ತ್ರ [2.145] ದಲ್ಲಿ ತಿಳಿಸಲಾಗಿದೆ. ಇದೇ ಗ್ರಂಥದಲ್ಲಿ ಸತ್ತ ನಾಯಿ, ಬೆಕ್ಕು, ಮುಂಗುಸಿ, ಹಾವುಗಳಿಗೆ 3 ಪನಗಳ ದಂಡವನ್ನೂ, ಕತ್ತೆ, ಒಂಟೆ, ಹೇಸರಗತ್ತೆಗಳ ಶವವನ್ನು ಅಥವಾ ಮನುಷ್ಯನ ಶವ ಬಿಸಾಡುವುದಕ್ಕೆ 50 ಪನ ದಂಡ ವಿಧಿಸುವುದು ವಾಡಿಕೆಯಲ್ಲಿತ್ತು ಎಂದು ಹೇಳಲಾಗಿದೆ.

➢ 'ವೃತಿತಾವೃತ್ತ, ಅಭಿವಾರಹ', "ಪರಿವೃತ್ತ" ಎಂಬ ಶಬ್ದಗಳು ಪರ್ಯಾವರಣ ಶಬ್ಧಕ್ಕೆ ಪರ್ಯಾಯವಾಗಿ ಬಳಸುತ್ತಿದ್ದರು. ಚಂದಾಂಸಿ ಎಂದರೆ ಮೂರು ಆವರಣಗಳಾದ ನೀರು, ಗಾಳಿ ಮತ್ತು ತರುಲತೆಗಳು ಎಲ್ಲೆಡೆ ಇರುತ್ತಿದ್ದವು ಎಂದರ್ಥ.
ಅಥರ್ವಣ ವೇದದ ಭೂಮಿ ಸೂಕ್ತವು ಪರಿಸರ ಪ್ರಜ್ಞೆಯ ದ್ಯೋತಕವಾಗಿದೆ. ಭೂಮಿಯಲ್ಲಿರುವ ಅಪಾರ ಸಂಪತ್ತನ್ನು ವರ್ಣಿಸುವ ಶಬ್ದವೇ ವಸುಧಾ, ವಸುಧಾ, ಹಿರಣ್ಯಾಕ್ಷ, ವಿಶ್ವಂಬರ ಇತ್ಯಾದಿಗಳು ಭೂಮಿಯ ವಿವಿಧ ಸ್ತರಗಳನ್ನು ವರ್ಣಿಸುತ್ತವೆ.

ಋಗ್ವೇದದಲ್ಲಿ ನೀರಿನ ಆಕರಗಳನ್ನು

1) 'ದಿವ್ಯ' – ಮಳೆ ನೀರು
2) ಸ್ರವಂತಿ– ಪ್ರಾಕೃತಿಕ ಚಿಲುಮೆ
3) ಖನಿತ್ರಿಮ – ಬಾವಿ ಮತ್ತು ಕಾಲುವೆಗಳು
4) ಸ್ವಯಾಮಜ - ಕೆರೆಗಳು
5) ಸಮುದ್ರಾಂತ – ನದಿಗಳು

➢ ತೈತ್ತರೀಯ ಅರಣ್ಯಕ, ಯಜುರ್‌ವೇದ, ಅಥರ್ವಣ ವೇದಗಳಲ್ಲಿ ಕುಡಿಯುವ ನೀರು, ಔಷಧೀಯ ಜಲ, ಸ್ಥಿರವಾದ ನೀರು ಇತ್ಯಾದಿ ವಿಷಯಗಳು ಲಭ್ಯ.

➢ ಛಾಂದ್ಯೋಗ್ಯ ಉಪನಿಷತ್ತಿನಲ್ಲಿ ನೀರಿನ ಗುಣಧರ್ಮಗಳನ್ನು ವಿಸ್ತಾರವಾಗಿ ಹೇಳುತ್ತಾ ಪ್ರತಿ ಜೀವಿಗೂ ಜೀವನವನ್ನೂ ಸಂತಸ, ಸಂತೃಪ್ತಿಯನ್ನೂ ಒದಗಿಸುವಂತಹದ್ದು, ಸಕಲಜೀವ ಕೋಟಿಗೂ ಅತ್ಯಾವಶ್ಯಕವಾಗಿ ಬೇಕಾಗಿರುವಂತಹದ್ದು ಎಂದು ಹೇಳುತ್ತದೆ. ಇಲ್ಲಿ ಜಲದ ಪರಿಕ್ರಮಣವನ್ನು ಕೂಡಾ ಕಾಣಬಹುದಾಗಿದೆ. ಸಾಗರದಿಂದ ಆಗಸಕ್ಕೆ ಅಲ್ಲಿಂದ ಭೂಮಿಗೆ ಬರುವ ಜಲದ ಸಂಚಾರವನ್ನು ಸಾರುತ್ತದೆ. ಮಳೆಯನ್ನು ವೈಭವೀಕರಿಸಲಾಗಿದೆ. ದೈವತ್ವವನ್ನು ನೀಡಿ 'ಪರ್ಜನ್ಯ ದೇವ' ಎಂದು ಹೇಳಲಾಗಿದೆ. ನೀರು ಅಮೃತವೆಂದೂ, ಪ್ರತಿ ಜೀವಿಗೂ ಅತ್ಯಾವಶ್ಯಕವೆಂದೂ, ಶುದ್ಧಾಶುದ್ಧ ನೀರಿಗೂ ಆರೋಗ್ಯ ಮತ್ತು ಅನಾರೋಗ್ಯಕ್ಕೂ ಅವಿನಾಭಾವ ಸಂಬಂಧವನ್ನು ಕಂಡುಕೊಳ್ಳಲಾಗಿತ್ತು. ನೀರಿನ ಪಾವಿತ್ರ್ಯತೆಯನ್ನು ಕಾಪಾಡುವುದು, ಮಾಲಿನ್ಯತೆಯನ್ನು ತಡೆಯುವುದು, ಕಲುಷಿತ ನೀರಿನಿಂದ ಉಂಟಾಗುವ ರೋಗರು ಜಿನಗಳ ಬಗ್ಗೆ ತಿಳುವಳಿಕೆ, ಇಷ್ಟೆಲ್ಲಾ ಮಹತ್ತರವಾದ ವಿಷಯಗಳು ತಿಳಿದು ಬರುತ್ತವೆ. ಹರಿಯುವ ನದಿ, ಶುದ್ಧ ನದಿ ತೀರಗಳು, ಐತಿಹಾಸಿಕ ಸಂಸ್ಕೃತಿಗಳಾದ ಸಿಂಧೂ, ಹರಪ್ಪಾ ಮೊಹೆಂಜೋ ದಾರೋ ನಾಗರೀಕತೆಗಳು, ಸರಸ್ವತಿ ನದಿಯೆಡೆಯಲ್ಲಿ ಹುಟ್ಟಿ ಬೆಳೆದ ನಾಗರೀಕತೆಯನ್ನು ಕಾಣುತ್ತೇವೆ.

➢ ಮನು ಸ್ಮೃತಿಯು ನೀರಿನ ಶುದ್ಧತೆಯ ಮಹತ್ವವನ್ನು ಹೇಳುತ್ತದೆ. ಪದ್ಮಪುರಾಣ ನೀರನ್ನು ಮಲಿನಗೊಳಿಸುವವರಿಗೆ ನರಕ ಪ್ರಾಪ್ತಿಯಾಗುವುದೆಂದು ಹೇಳಿ, ನೀರಿನ ಪರಿಶುದ್ಧತೆಯನ್ನು ಕಾಪಾಡುವ ಬಗ್ಗೆ ಎಚ್ಚರಿಸಿದೆ.

➢ ಚರಕ ಸಂಹಿತೆಯಲ್ಲಿ ತಿಳಿಸಲಾಗಿರುವ 'ಜನಪದೋಧ್ವಂಸೀಯ' ಅಧ್ಯಾಯವು ಜನಪದವನ್ನು ಧ್ವಂಸ ಮಾಡುವ ಕಾರಣಗಳನ್ನು ಉಲ್ಲೇಖಿಸಿ ವಾಯು ಮಾಲಿನ್ಯ, ಜಲ ಮಾಲಿನ್ಯ, ದೇಶಮಾಲಿನ್ಯ, ಕಾಲ ವೈಷಮ್ಯ, ಅದಕ್ಕೆಲ್ಲಾ ಕಾರಣವಾದ ಮಾನಸಿಕ ಮಾಲಿನ್ಯ ಅವುಗಳನ್ನು ತಡೆಗಟ್ಟುವ ವಿಧಾನಗಳು ಹೇಳಲಾಗಿದ್ದು, ಇಂದಿಗೂ ಅವು ಪ್ರಸ್ತುತವಾಗಿದೆ.

ಪರಿಸರ ಮಾಲಿನ್ಯದ ಗುಣಲಕ್ಷಣಗಳು ತಾಲಿಕಾ

	ಗುಣಲಕ್ಷಣಗಳು
ವಾತ/ವಾಯು	ಕಾಯಿಲೆಯುಂಟು ಮಾಡುವಂತಹ ಗಾಳಿ, ಸ್ವಭಾವಕ್ಕೆ ವಿರುದ್ಧವಾದಂತಹ ಚಲನೆ (ಅತಿ ತೀವ್ರತರ, ಧೂಳು, ಹೊಗೆಯಿಂದಾವೃತ ಗಾಳಿ), ಅತಿ ಬಿಸಿಯಾದ ಅಥವಾ ಅತಿಶೀತ ಗಾಳಿ, ಸುಂಟರಗಾಳಿ, ಪ್ರಕೃತಿಗೆ ವಿರುದ್ಧವಾದ ಗಾಳಿ
ಜಲ	ವಿಕೃತ ವಾಸನೆ, ಬಣ್ಣ, ಸ್ಪರ್ಶ, ರಸವುಳ್ಳವಂತಹದ್ದು, ಅತಿ ಜಿಗುಟಾದ, ಕ್ರಿಮಿಕೀಟ ಪಶುಪಕ್ಷಿಗಳಿಂದ ಕಲುಷಿತವಾದಂತಹ ನೀರು
ದೇಶ	ಪ್ರಾಕೃತಿವಲ್ಲದ ಬಣ್ಣ, ವಾಸನೆ, ಸ್ಪರ್ಶ ಇರುವಿಕೆ, ಹೆಚ್ಚಾದ ಸೊಳ್ಳೆ, ಕ್ರೀಮಿ ಕೀಟಗಳು, ಹಾವು ಚೇಳುಗಳು ಇಲಿ, ಮುಂಗುಸಿ, ನರಿ, ತೋಳ, ಪ್ರಾಣಿಗಳು ಅತಿ ಸಂಖ್ಯೆಯಲ್ಲಿರುವುದು, ಭೂಕಂಪ, ಬರಗಾಲ, ಇತ್ಯಾದಿ ನೈಸರ್ಗಿಕ ವಿಕೋಪಗಳಾಗುವುದು, ವಿಕೃತವಾದ ನಕ್ಷತ್ರಾದಿ ಉಲ್ಕಾಪಾತಗಳು, ವಿಕೃತವಾದ ಶಬ್ದ ಮಾಲಿನ್ಯ
ಕಾಲ	ಋತು ವೈಪರೀತ: ಅತಿವೃಷ್ಟಿ, ಅನಾವೃಷ್ಟಿ ಇತ್ಯಾದಿ

ಇದೆಲ್ಲದರ ಪರಿಹಾರಕ್ಕಾಗಿ ಪಂಚಕರ್ಮ (ವಮನ ಇತ್ಯಾದಿ ಶೋಧನ ಕ್ರಿಯೆಗಳು), ರಸಾಯನವನ್ನು (ಚ್ಯವನಪ್ರಾಶ–ಇತ್ಯಾದಿ) ವಿಧಿವತ್ತಾಗಿ ವೈದ್ಯರ ಸಲಹೆಯ ಮೇರೆಗೆ ತೆಗೆದುಕೊಳ್ಳುವುದು ಮತ್ತು ಸದ್‌ವೃತ್ತ (ಸತ್ಯಧರ್ಮ ಇತ್ಯಾದಿಗಳನ್ನು ಪಾಲಿಸುವುದು) ಹೇಳಲಾಗಿದೆ. ಇವುಗಳನ್ನು ಆಚರಣೆಗೆ ತರುವುದರಿಂದ ವಾಯುಮಾಲಿನ್ಯ, ವಾಯುಮಾಲಿನ್ಯದಿಂದ ಉಂಟಾಗುವ ಜಲಮಾಲಿನ್ಯ, ಜಲ ಮಾಲಿನ್ಯದಿಂದಾಗುವ ದೇಶ ಮಾಲಿನ್ಯ, ದೇಶ ಮಾಲಿನ್ಯದಿಂದ ಉಂಟಾಗುವ ಕಾಲ ವೈಷಮ್ಯಗಳನ್ನು ಹತೋಟಿಗೆ ತರಬಹುದೆಂದು ವಿವರಿಸಲಾಗಿದೆ.

ವೇದಗಳಲ್ಲಿ ಯಜ್ಞವನ್ನು ಸಕಲ ಜೀವಿಗಳಿಗೂ, ಪರಿಸರಕ್ಕೂ ಪೋಷಕವೆಂದೂ, ನಾಭಿನಾಳವು ಹೇಗೆ ಶಿಶುವಿಗೆ ಪೋಷಣೆ ನೀಡಬಲ್ಲದೋ ಹಾಗೆ ಎಂದು ವಿವರಿಸಲಾಗಿದೆ ಯಜ್ಞವೆಂದರೆ ಕೊಡುವುದು ಮತ್ತು ಪಡೆಯುವುದು ಎಂದರ್ಥ.

ದ್ರವ್ಯ, ದೇವತಾ ಮತ್ತು ದಾನಗಳನ್ನು ಯಜ್ಞವು ಒಳಗೊಂಡಿರುತ್ತದೆಂದೂ, ಯಜ್ಞೋಪಾಸನೆಯನ್ನು ವಿವರಿಸುತ್ತಾ ಪುರುಷ ಸೂಕ್ತ ಹೇಳುತ್ತದೆ– ಯಜ್ಞಕ್ಕೆ ಅರ್ಪಿಸಬಹುದಾದಂತಹ ಔಷಧಗಳ (ಅತ್ತಿ, ದರ್ಭೆ, ಸೋಮವಲ್ಲಿ, ವಟ), ಇತರೇ ವಸ್ತುಗಳಾದ ತುಪ್ಪ, ಕ್ಷಾಮ ವಸ್ತ್ರ, ಅಕ್ಷತೆ, ಇವುಗಳನ್ನು ಅಗ್ನಿಗೆ ಆಹುತಿ ನೀಡುವುದು ಪರಿಸರಕ್ಕೆ ಬಹಳ ಉಪಯುಕ್ತವೆಂದು ಇಂದು ವೈಜ್ಞಾನಿಕ ಸಂಶೋಧನೆಗಳಿಂದಲೂ ಅರಿಯಲಾಗಿದೆ.

ಅಗ್ನಿ ಹೋತ್ರ ಹೋಮವನ್ನು ವಿಧಿವತ್ತಾಗಿ ದಿನಕ್ಕೆ 2 ಬಾರಿ ನಡೆಸುತ್ತಾ ಬಂದು ಸಸ್ಯ ಸಮೃದ್ಧಿ, ಸಕಲ ವ್ಯವಸಾಯ ಉತ್ಪನ್ನಗಳ ಹೆಚ್ಚಳ, ಪರಿಸರ ಮಾಲಿನ್ಯದ ತಡೆಗಟ್ಟುವಿಕೆಗೆ ಹೀಗೆ ಅನೇಕ ಪ್ರಯೋಜನಗಳನ್ನು ಕಂಡುಕೊಂಡಿದ್ದಾರೆ. ವೈಜ್ಞಾನಿಕ ಸಂಶೋಧನೆಗಳಿಂದ ಅಗ್ನಿಹೋತ್ರ ಹೋಮ ಮಾಡಿದರೆ ಸೂಕ್ಷ್ಮಾಣು ಜೀವಿಗಳ ವೃದ್ಧಿಯು 91.4% ರಷ್ಟು ಕಡಿಮೆಯಾಗುವುದು ಎಂದು ದೃಢಪಟ್ಟಿದೆ. ಈ ಹೋಮದ ಭಸ್ಮದ ಲೇಪನದಿಂದ ಗಾಯಗಳು ಶೀಘ್ರವಾಗಿ ಗುಣವಾಗುವುದು. ಈ ಹೋಮದ ಬೂದಿ ಹಾಗೂ ಹೊಗೆಯ ಪ್ರಭಾವದಿಂದಾಗಿ ಬಾಳೆ, ದ್ರಾಕ್ಷಿ, ಮಾವು, ತರಕಾರಿ, ವೆನಿಲ್ಲಾ ಇತ್ಯಾದಿ ಬೆಳೆಗಳ ಇಳುವರಿಯಲ್ಲಿ ಹೆಚ್ಚಳ ಕಂಡುಬಂದಿದೆ, ಭಾರತೀಯ ಸೇನೆಯ ಸಂಶೋಧನೆ (ಮಾನಸಿಕ ವಿಭಾಗ:**) ಪ್ರಕಾರ ಈ ಹೋಮವು ದೀರ್ಘಕಾಲಿನ ಮಾದಕ ವ್ಯಸನಿ ಮತ್ತು ಮದ್ಯವ್ಯಸನಿಗಳ ಚಿಕಿತ್ಸೆಯಲ್ಲಿ ಸಹಾಯಕಾರಿ. ಇದು ಕುಡಿಯುವ ನೀರಿನ ಹಾಗೂ ವಾತಾವರಣದಲ್ಲಿನ ವಿಕಿರಣತೆಯನ್ನು ಕಡಿಮೆ ಮಾಡುತ್ತದೆ. ಇದರ ಪ್ರಭಾವದಿಂದ ಹಾಲು, ಜೇನು,ಹೂವು, ಹಣ್ಣುಗಳು, ತರಕಾರಿ ಉತ್ಪನಗಳಲ್ಲಿ ಹೆಚ್ಚಳ ಕಂಡುಬಂದಿದೆ. ಇದು ಮಣ್ಣಿನ ಫಲವತ್ತತೆ ಹೆಚ್ಚಿಸಿ ಸಾವಯವ ಕೃಷಿಗೆ ಸಹಾಯಕಾರಿಯಾಗಿದೆ. ಈ ಹೋಮವು ವಾತಾವರಣವನ್ನು ಶುದ್ದಿಗೊಳಿಸುತ್ತದೆ. ಪೆರು ಸರ್ಕಾರವು ಹೋಮದ ಆಚರಣೆಗೆ ಹೋಮ ಚಿಕಿತ್ಸಕ ಹುದ್ದೆಗಳನ್ನು ಮಂಜೂರು ಮಾಡಿದೆ.

ಇಂದು ಪರಿಸರಮಾಲಿನ್ಯ ಬೃಹದಾಕಾರವಾಗಿದ್ದು ಕಾಡುವ ಪಡಂಭೂತವಾಗಿದೆ. ಪರಿಸರ ಮಾಲಿನ್ಯವನ್ನು ತಡೆಗಟ್ಟುವ, ಅದರಿಂದುಂಟಾಗುವ ವಿಕೋಪಗಳ ಸಮಂಜಸ ನಿರ್ವಹಣೆಯ ಕುರಿತು ಅನೇಕ ವಿಚಾರ ಸಂಕಿರ್ಣಗಳು, ಗೋಷ್ಠಿಗಳು ಪ್ರಪಂಚದಾದ್ಯಂತ ನಡೆದು, ಇದಕ್ಕೆ ಸಂಬಂಧಿಸಿದಂತಹ, ಸ್ನಾತಕೋತ್ತರ ಪದವಿಗಳು ಎಲ್ಲೆಡೆ ಪ್ರಚಲಿತವಾಗಿ, ಪ್ರಾಶಸ್ತ್ಯ ಹೊಂದಿದ್ದರೂ ಕೂಡಾ ನಮ್ಮ ನೈಸರ್ಗಿಕ ಸಂಪತ್ತನ್ನೊಳಗೊಂಡ ವಸುಂಧರೀಯಂನ್ನು ಸಂರಕ್ಷಿಸಲು ಪುರಾತನವಾದರೂ ಇಂದು ಪ್ರಚಲಿತವಾಗಿ ವೈಜ್ಞಾನಿಕವಾಗಿಯೂ ಸ್ವೀಕೃತವಾಗುತ್ತಿರುವ ಆರ್ಷ ಪದ್ಧತಿಗಳನ್ನು ಮತೊಮ್ಮೆ ವಿಮರ್ಶಾತ್ಮಕವಾಗಿ, ಸತ್ಯಾಸತ್ಯತೆಯನ್ನು ತಿಳಿಯಬೇಕಾದ ಅನಿವಾರ್ಯತೆ ಒದಗಿದೆ.

ಆಕರ ಗ್ರಂಥಗಳು :

1. ವೃತಾವೃತಾ : ಅಥರ್ವವೇದ 12.01.52
2. ಆವೃತಾ ಅಥರ್ವವೇದ 10.01.30
3. ಪರಿವೃತಾಹ: ಅಥರ್ವವೇದ 10.8.31
4. ಚಂದಾಂಸಿ ಅಥರ್ವವೇದ 18.01.17
5. ಚಾಂದೋಗ್ಯ ಉಪನಿಷತ್ 7.10.1
6. ಆಪಃ ವಿಶ್ವ ಭೇಷಜೀ : ಋಗ್ವೇದ 01.23.20
7. ತೈತ್ತೀರಿಯ ಆರನ್ಯಕ 01.24.1.2
8. ಯಜುರ್ವೇದ 22.25
9. ಅಥರ್ವವೇದ 1.6.4
10. ಅಪ: ಸಮುದ್ರಾದ್ ದಿವಮುದ್ವಹಂತಿ ದಿವಸ್ಪೃಥಿವೀಮಧಿ

ಯೇ ಸ್ವಜಂತಿ: ಅಥರ್ವವೇದ 4.27.4
11. ಅಮೃತ ವಾ ಆಪ : ಶತಪಥ ಬ್ರಾಹ್ಮಣ 1.9.3.7
12. ಆಪ : ವಿಶ್ವ ಭೇಷಜಿ : ಋಗ್ವೇದ 1.23.20
13. ಭೇಷಜೀಕಾಪೋ ಅಮೀವಚಾತನೀ : ಋಗ್ವೇದ 10.87.6
14. ಪವಿತ್ರಂ ವಾಆಪಃ ಶತಪಥ ಬ್ರಾಹ್ಮಣ 1.1.1.1
15. ಆಪಃ ಪವಿತ್ರಮುಚ್ಯಂತೆ : ನುರುಕ್ತ 5.6.2.
16. ಮನುಸ್ಮೃತಿ 4.56
17. ಸುಕೂಪಾನಾಂ ತಡಾಗಾನಾಂ ಪ್ರಪಾನಾಂ ಚ ಪರಂತಪ।
ಸರಸಾಂ ಚೈವ ಭೈತ್ತಾರೊ ನರಾ ನಿರಯಗಾಮಿನಃ ॥
ಪದ್ಮಪುರಾಣ ಭಿಮಿ 96.7.8

ಮಿಥೈಲ್ ಪ್ಯಾರಾಥಿಯಾನ್ ಪ್ರೇರಿತ ಮ್ಯುಟೇಶನ್ ಮತ್ತು ವೀರ್ಯಾಣು ವಿರೂಪತೆಯ ವಿರುದ್ಧ ನೆಲ್ಲಿಕಾಯಿ (ಫ್ಲಿಲಾಂತಸ್ ಎಂಬ್ಲಿಕ) ಸಾರದಿಂದ ರಕ್ಷಣೆಯ ಸಾಧ್ಯತೆಯ ಬಗ್ಗೆ ಒಂದು ಅಧ್ಯಯನ

*ಪ್ರಶಾಂತ ನಾಯ್ಕ. **ಕೆ. ಕೆ ವಿಜಯಲಕ್ಷ್ಮಿ
*ಜೀವವಿಜ್ಞಾನ ವಿಭಾಗ, **ಆನ್ವಯಿಕ ಪ್ರಾಣಿಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–೫೭೪೧೧೯

ಕೃಷಿಯಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ಕ್ರಿಮಿನಾಶಕಗಳಲ್ಲಿ ಮಿಥೈಲ್ ಪ್ಯಾರಾಥಿಯಾನ್ ಎಂಬ ಫಾಸ್ಫೇಟ್ ಯುಕ್ತ ಸಾವಯವ ಕ್ರಿಮಿನಾಶಕವು ಒಂದು. ಸಿಂಪಡಿಸುವಾಗ ಸುತ್ತಮುತ್ತಲಿನ ಪರಿಸರವನ್ನು ಸೇರುವ ಇದು ಕಲುಷಿತಗೊಂದ ಗಾಳಿ, ನೀರು ಮತ್ತು ಆಹಾರದ ಮೂಲಕ ಸ್ವಲ್ಪಸ್ವಲ್ಪ ದೇಹವನ್ನು ಸೇರುತ್ತದೆ. ಈ ಕ್ರಿಮಿನಾಶಕವು ವರ್ಣತಂತುಗಳನ್ನು ಹಾನಿಗೊಳಿಸುವ (ಮ್ಯುಟೇಶನ್) ರಾಸಾಯನಿಕಗಳಲ್ಲಿ ಒಂದು ಎಂದು ಈಗಾಗಲೇ ಸಂಶೋಧನೆಯಿಂದ ಗುರುತಿಸಲ್ಪಟ್ಟಿದೆ. ಮ್ಯುಟೇಶನ್ ಕ್ಯಾನ್ಸರ್ ಸೇರಿದಂತೆ ಆರೋಗ್ಯದ ಮೇಲೆ ಅನೇಕ ದುಷ್ಪರಿಣಾಮಗಳಿಗೆ ಕಾರಣವಾಗುತ್ತದೆ. ಕ್ರಿಮಿನಾಶಕಗಳು ವಿಷರಾಸಾನಿಕವೆಂದು ತಿಳಿದಿದ್ದರೂ ಆಧುನಿಕ ಕೃಷಿಪದ್ಧತಿಯಲ್ಲಿ ಬೆಳೆಗಳನ್ನು ಹಾಳುಗೆಡುವ ಕ್ರಿಮಿಕೀಟಗಳನ್ನು ಹತೋಟಿಯಲ್ಲಿಡಲು ಅವುಗಳನ್ನು ಉಪಯೋಗಿಸುವುದು ಅನಿವಾರ್ಯವಾಗಿರುವುದರಿಂದ ಸಂಪೂರ್ಣವಾಗಿ ಅವುಗಳ ಬಳಕೆಯನ್ನು ನಿಲ್ಲಿಸಲು ಸಾಧ್ಯವಿಲ್ಲ. ಆರೋಗ್ಯದ ಮೇಲೆ ದುಷ್ಪರಿಣಾಮಗಳನ್ನುಂಟು ಮಾಡುವ ಇಂತಹ ರಾಸಾಯನಿಕಗಳಿಂದ ಸಂರಕ್ಷಿಸಿಕೊಳ್ಳಲು ಪರಿಹಾರ ಮಾರ್ಗವು ಪ್ರಕೃತಿಯಲ್ಲೇ ಇದ್ದು. ಆವುಗಳ ಬಗ್ಗೆ ಅಧ್ಯಯನ ಮಾಡಿ ಗುರುತಿಸುವುದು ಪ್ರಸ್ತುತ ದಿನಗಳಲ್ಲಿ ಮಹತ್ವವನ್ನು ಪಡೆದುಕೊಂಡಿವೆ. ಉತ್ಕರ್ಷಣನಿರೋಧಕ ಪೋಷಕಾಂಶಗಳಿಂದ ಸಮೃದ್ಧವಾಗಿರುವ ನೆಲ್ಲಿಕಾಯಿಯ ಸಾರದಿಂದ ಮಿಥೈಲ್ ಪ್ಯಾರಾಥಿಯಾನ್– ಪ್ರೇರಿತ ಮ್ಯುಟೇಶನ್ ನ್ನು ತಡೆಗಟ್ಟುವ ಅಥವಾ ಕಡಿಮೆಗೊಳಿಸುವ ಸಾಧ್ಯತೆಯ ಬಗ್ಗೆ ಸ್ವಿಸ್ ಆಲ್ಬಿನೊ ಇಲಿಗಳ ಮೇಲೆ ಮೈಕ್ರೊನ್ಯೂಕ್ಲಿಯಸ್ ಪರೀಕ್ಷೆ ಪ್ರಯೋಗ ಮಾದರಿಯನ್ನು ಉಪಯೋಗಿಸಿಕೊಂಡು ಒಂದು ಅಧ್ಯಯವನ್ನು ನಡೆಸಲಾಯಿತು. ಇದಕ್ಕಾಗಿ ೫೦,೧೦೦ ಮತ್ತು ೧೫೦ ನಿ. ಗ್ರಾಂ/ಕ್ರಿ. ಗ್ರಾಂ. ಪ್ರಮಾಣದಲ್ಲಿ ನೆಲ್ಲಿಕಾಯಿ ಸಾರವನ್ನು ಕ್ರಿಮಿನಾಶ (೩೦.೦ ಮ್. ಗ್ರಾಂ/ಕ್ರಿ. ಗ್ರಾಂ) ದೊಂದಿಗೆ ಇಲಿಗಳಿಗೆ ನೀಡಿ ಪರೀಕ್ಷಿಸಲಾಯಿತು. ಸೈಕ್ಲೊಫ್ಲಾಸ್ಫಮೈಡ್ ಎನ್ನುವ ಔಷಧಿಯನ್ನು ಮ್ಯುಟೇಶನ್ ಪೇರಕ ರಾಸಾನಿಕವಾಗಿ ಉಪಯೋಗಿಸಲಾಯಿತು. ನಲ್ಲಿಕಾಯಿ ಸಾರವು ಮಿಥೈಲ್ ಪ್ಯಾರಾಥಿಯಾನ್ ಕೀಟನಾಶಕದಿಂದ ಉಂಟಾದ ವರ್ಣತಂತುಗಳ ಮತ್ತು ಜೀವಕೋಶಗಳ ಮೇಲೆ ಉಂಟಾಗುವ ವಿಷಪರಿಣಾಮಗಳನ್ನು ಪ್ರಮಾಣ–ನಿರ್ಧರಿತವಾಗಿ ಕಡಿಮೆಗೊಳಿಸುತ್ತದೆ ಎನ್ನುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಕೀಲಿ ಪದಗಳು: ಮಿಥೈಲ್ ಪ್ಯಾರಥಿಯಾನ್, ನೆಲ್ಲಿಕಾಯಿ ಸಾರ, ಜೀವಸತ್ವ–ಸಿ, ಮೈಕ್ರೊನ್ಯುಕ್ಲಿಯುಸ್, ಪಿ/ ಎನ್ ಅನುಪಾತ ವರ್ಣತಂತುಗಳು ಪ್ರತಿ ಆಕ್ಸಿಡಕ.

೧. ಪೀಠಿಕೆ: ಇತ್ತೀಚಿನ ವರ್ಷಗಳಲ್ಲಿ ಅರ್ಬುದ ರೋಗ (ಕ್ಯಾನ್ಸರ್), ಹುಟ್ಟುಅಂಗವೈಕಲ್ಯತೆ, ಬಂಜೆತನ, ಉಸಿರಾಟ–ಸಂಬಂಧಿ ಕಾಯಿಲೆಗಳು ಶೀಘ್ರ ವೃದ್ಧಾಪ್ಯ ಲಕ್ಷಣಗಳು ಮುಂತಾದ ಆರೋಗ್ಯ ಸಮಸ್ಯಗಳು ಪ್ರಮಾಣ ಹೆಚ್ಚುತ್ತಿರುವುದು ನಾವು ನೋಡುತ್ತಿದ್ದೇವೆ. ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ಪ್ರಪಂಚದಾದ್ಯಂತ ವಿವಿಧ ಬಗೆಯ ಕ್ಯಾನ್ಸರ್ ಗಳಿಗೆ ಬಲಿಯಾಗುತ್ತಿರುವವರ ಸಂಖ್ಯೆ ಏರಿಕೆಯಾಗುತ್ತಿದ್ದು, ಇದು ೨೦೩೦ ರಲ್ಲಿ ಶೇಕಡ ೭೫ಕ್ಕೆ ಏರಲಿದೆ (Bray et al., 2012) ಇದಕ್ಕೆಲ್ಲಾ ಮೀತಿಮೀರಿದ ಪರಿಸರ ಮಾಲಿನ್ಯ ಮತ್ತು ಆಧುನಿಕ ಜೀವನ ಶೈಲಿಯ ಕಾರಣಸಿಂದ ಬಗೆಬಗೆಯ ರಾಸಾಯನಿಕಗಳಿಗೆ ನೇರ ಮತ್ತು ಪರೋಕ್ಷವಾಗಿ ತೆರೆದಿಕೊಂಡಿರುವುದು ಪ್ರಮುಖ ಕಾರಣ ಎಂದು ಅನೇಕ ಸಂಶೋಧನೆಗಳು ನಿರೊಪಿಸಿವೆ (Akthar, 1990: Rogers et al., 1993; Tian et al., 2005). ಪರಿಸರ ಮಾಲಿನ್ಯಕಾರಕಗಳಲ್ಲಿ ಕ್ರಿಮಿನಾಶಕಗಳು ಪ್ರಮುಖವಾದ ರಾಸಾನಿಕಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಮುಖ್ಯವಾಗಿ ಕೃಷಿಯಲ್ಲಿ ಕ್ರಿಮಿಕೀಟಗಳಿಂದ ಬೆಳೆಗಳನ್ನು ರಕ್ಷಿಸಲು ಕೀಟನಾಶಕಗಳನ್ನು ಉಪಯೋಗಿಸುವುದು ಅನಿವಾರ್ಯ. ಆದರೆ ಕೀಟನಾಶಕಗಳನ್ನು ಸಿಂಪಡಿಸುವಾಗ ಆವುಗಳು ಸತ್ತಲಿನ ಪರಿಸರಕ್ಕೆ ಹರಡಿ ಗಾಳಿ, ನೀರು ಮತ್ತು ಆಹಾರದ ಮೂಲಕ ಮಾನವನೊ ಸೇರಿದಂತೆ ಇನ್ನಿತರ ಪ್ರಾಣಿಗಳ ದೇಹವನ್ನೂ ಸೇರುತ್ತವೆ. ಆದರಲ್ಲಿಯೂ ಕ್ರಿಮಿನಾಶಕಗಳ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರು ಮತ್ತು ಆವುಗಳನ್ನು ವ್ಯವಸಾಯದಲ್ಲಿ ಬಳಸುವ ರೈತರು ಕ್ರಿಮಿನಾಶಕಗಳು ಹೆಚ್ಚಿನ ಪ್ರಮಾಣದಲ್ಲಿ ದೇಹವನ್ನು ಸೇರುವ ಸಾಧ್ಯತೆಗಳಿವೆ.

ಇಂತಹ ವಿಷವಸ್ತುಗಳು ನೇರ ಆಥಾವ ಪರೋಕ್ಷವಾಗಿ ಸ್ವಲ್ಪ ಸ್ವಲ್ಪವೇ ದೇಹವನ್ನು ಸೇರುವುದರಿಂದ ಅದರ ಪರಿಣಾಮಗಳು ತಕ್ಷಣಕ್ಕೆ ಕಂಡುಬರದಿದ್ದರೂ ಕಾಲಕ್ರಮೇಣ ಆರೋಗ್ಯದ ಮೇಲೆ ಅನೇಕ ರೀತಿಯಲ್ಲಿ ವ್ಯತಿರಿಕ್ತ ಪರಿಣಾಮಗಳನ್ನು ಉಂಟುಮಾಡುತ್ತವೆ. ಕರ್ನಾಟಕ–ಕಾಸರಗೋಡು ಗಡಿನಾಡು ಪ್ರದೇಶಗಳಲ್ಲಿ ವರದಿಯಾಗಿರುವ ಎಂಡೋ ಸಲ್ಫಾನೆ ದುರಂತ ಇದಕ್ಕೆ ಒಂದು ಜ್ವಲಂತ ನಿದರ್ಶನ. ಕ್ರಿಮಿನಾಶಕಗಳಿಂದ ವಿವಿಧ ರೀತಿಯ ಆರೋಗ್ಯ ಸಮಸ್ಯಗಳು ಉಂಟಾಗುತ್ತವೆ ಎಂದು ನಿರೊಪಿಸಿರುವ ಅನೇಕ ಸಂಶೋಧನಾ ಅಧ್ಯಯನಗಳಿವೆ (Dich et al., 1997; Elbaz et al., 2009) ಕ್ರಿಮಿನಾಶಕಗಳಿಂದ ಜೀವಕೋಶಗಳಲ್ಲಿ

ಉಂಟಾಗುವ ಒಂದು ಪ್ರಮುಖವಾದ ವಿಷಪರಿಣಾಮವೆಂದರೆ ಡಿ.ಎನ್.ಎ/ ವರ್ಣತಂತುಗಳನ್ನು ಹಾನಿಗೊಳಿಸುವುದು (ಮ್ಯುಟೇಶನ್). ಇದರಿಂದಾಗಿ ಸಾಮಾನ್ಯ ಜೀವಕೋಶಗಳು ಕ್ಯಾನ್ಸರ್ ಜೀವಕೋಶಗಳಾಗಿ ಪರಿವರ್ತನೆಗಳ್ಳುವುದು (Bassil et al., 2007) ವೀರ್ಯಾಣುಗಳು ವಿರೊಪಗೊಳ್ಳುವುದು (Mathew et al., 1992; Xia et al., 2004). ಭ್ರೂಣಗಳ ವಿಕೃತಗೊಳ್ಳುವಿಕೆ (ಟೆರಾಟೊಜೆನಿಸಿಟಿ) (Wilson,1977) ಜೀವಕೋಶಗಳ ಆಯುಷ್ಯ ಕುಂಠಿತಗೊಳ್ಳುವುದು (Bernard,1986) ಮುಂತಾದ ಅನಪೇಕ್ಷಿತ ಬದಲಾವಣೆಗಳಂಟಾಗಿತ್ತದೆ. ಜೀವಕಣಗಳಲ್ಲಿ ಉಂಟಾಗುವ ಈ ಬದಲಾವಣೆಗಳೇ ಅನೇಕ ತರದ ಆರೋಗ್ಯ ಸಮಸ್ಯಗಳಿಗೆ ಎಡಮಾಡಿಕೊಡುತ್ತದೆ.

ಮಿಥೈಲ್ ಪ್ಯಾರಾಥಿಯನ್ (ಮಿ. ಪ್ಯಾ) ಒಂದು ಫೊಸ್ಪೇಟ್ ಯುಕ್ತ ಸಾವಯವ ಕೀಟನಾಶಕ. ಹಲವು ವಿಧದ ಕ್ರಿಮಿಗಳನ್ನು ನಾಶಪಡಿಸುವ ಗುಣವಿರುವುದರಿಂದ ಇದನ್ನು ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ರೈತರು ಅನೇಕ ಬಗೆಯ ಬೆಳೆಗಳನ್ನು ಕ್ರಿಮಿಕೀಟಗಳಿಂದ ರಕ್ಷಿಸಲು ಹೆಚ್ಚಾಗಿ ಬಳಾಸುತ್ತಾರೆ. ಈ ಕೀಟನಾಶಕವು ಕ್ಯಾನ್ಸರ್ (Coral et al., 2009, Hreljac and Filipic) ಮತ್ತು ವೀರ್ಯಾಣುಗಳ ರಾಸಾಯನಿಕಗಳು ಉಂಟುಮಾಡಬಲ್ಲದು ಎನ್ನುವುದರ ಬಗ್ಗೆಯೂ ವರದಿಯಾಗಿದೆ (Mathew et. all., 1992) ಕ್ರಿಮಿನಾಶಕದಂತಹ ರಾಸಾಯನಿಕಗಳು ವಿಷಕಾರಿ ಮತ್ತು ಪರಿಸರ ಮಾಲಿನ್ಯಕಾರಕಗಳು ಎಂಬ ವಿಷಯ ಅರಿವಿದ್ದರೂ ಕೂಡ ಒಂದಲ್ಲ ಒಂದು ಉಪಯೋಗಕ್ಕಾಗಿ ಅವುಗಳನ್ನು ಉಪಯೋಗಿಸುವುದು ಅಧುನಿಕ ಯುಗದಲ್ಲಿ ಅನಿವಾರ್ಯವಾಗಿದೆ. ಪರಿಹಾರ ಸೂತ್ರವಾಗಿ ಅಂತಹ ರಾಸಾನಿಕಗಳಿಂದ ಆರೋಗ್ಯದ ಮೇಲೆ ಉಂಟಾಗುವ ಅನಪೇಕ್ಷಿತ ಪರಿಣಾಮಗಳಿಂದ ರಕ್ಷಿಸಿಕೊಳ್ಳಲು ನೈಸರ್ಗಿಕ ವಸ್ತುಗಳನ್ನು ಬಳಸಿ ಕೊಳ್ಳುವ ನಿಟ್ಟಿನಲ್ಲಿ ನಡೆಸುವ ಸಂಶೋಧನೆಗಳು ಇತ್ತೀಚಿನ ದಿನಗಳಲ್ಲಿ ಜಗತ್ತಿನಾದ್ಯಂತ ಮಹತ್ವವನ್ನು ಪಡೆದುಕೊಂಡಿದೆ (Prasad et al., 2002; De Flora and Ferguson, 2005; Dutta et al., 2007). ಬಾಹ್ಯಜೈವಿಕ–ರಾಸಾನಿಕಗಳಿಂದ ಉತ್ಪನ್ನಗೊಂಡ ಡಿ. ಎನ್. ಎ ಮತ್ತು ಇತರ ಜೈವಿಕ ಅಣುಗಳನ್ನು ಹಾನಿಗೊಳಿಸುವ ಸ್ವತಂತ್ರ–ರ್ಯಾಡಿಕಲ್ ಗಳನ್ನು (ಫ್ರೀ ರ್ಯಾಡಿಕಲ್) ನಾಶಪಡಿಸುವ ಗುಣವನ್ನು ಹೊಂದಿರುವಂತಹ ಹಲ್ಲು ಅಂಶಗಳು ನೆಲ್ಲಿಕಾಯಿ ((ಫ್ಲಿಲಾಂತಸ್ ಎಂಬ್ಲಿಕ) ಯಲ್ಲಿದೆ. ಆರ್ಯುವೇದ ಮತ್ತು ನಾಟಿ ವೈದ್ಯ ಪದ್ದತಿಯಲ್ಲಿ ನೆಲ್ಲಿಕಾಯಿ ಸಾರದಿಂದ ತಯಾರಿಸಿದ ಔಷಧಿಗಳನ್ನು ಅನೇಕ ಕಾಯಿಲೆಗಳು ಚಿಕಿತ್ಸಗೆ ಬಳಸುವ ಪದ್ದತಿ ಈ ಹಿಂದಿನಿಂದಲೂ ಚಾಲ್ತಿಯಲ್ಲಿದೆ (http://ayurveda-foryou.com/ ayurveda_herb/ amalaki.html) ಆದರೆ ಇದನ್ನು ಮ್ಯುಟೇಶನ್/ ಕ್ಯಾನ್ಸರ್ ನಿರೋಧಕವಾಗಿ ಉಪಯೋಗಿಸುವಲ್ಲಿ ಹೆಚ್ಚಿನ ಸಂಶೋಧನೆಗಳು ಈವರೆಗೆ ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಿಥೈಲ್ ಪ್ಯಾರಥಿಯಾನ್ ಪ್ರೇರಿತ ಮ್ಯುಟೇಶನ್ ನ್ನು ನೆಲ್ಲಿಕಾಯಿ ಸಾರದಿಂದ ತಡೆಗಟ್ಟುವ ಅಥವಾ ಕಡಿಮೆಗೊಳಿಸುವ ಸಾಧ್ಯತೆಯ ಬಗ್ಗೆ ಒಂದು ಅಧ್ಯಯನವನ್ನು ನಡೆಸಲಾಯಿತು.

೨. ಪ್ರಾಯೋಗಿಕ ವಿಧಾನಗಳು:

೨.೧ ರಾಸಾನಿಕಗಳು :

೨.೧.೧ ಮೆಟಾಸಿಡ್–೫೦ ಇದು ಮಾರುಕಟ್ಟೆಯಲ್ಲಿ ದೂರೆಯುವ ಮಿ.ಪ್ಯಾ. ಇದರ ವಾಣಿಜ್ಯ ರೂಪಕ (O,O-dimethly-O-4-nitrophenyl phosphorothionate; CAS No. 268-00-0) ತಯಾರಕರು: ಎಕ್ಸೆಲ್ ಬೇಯರ್ಸ್ ಇಂಡಿಯಾ ಲಿಮಿತೇಡ್ ಮುಂಬೈ, ಭಾರತ ಇದನ್ನು ಪರೀಕ್ಷಾ ರಾಸಾನಿಕ ವಾಗಿ ಉಪಯೋಗಿಸಲಾಯಿತು.

೨.೧.೨ ಸೈಕ್ಲೋಫ಼ಾಸ್ಫಮೈಡ್ (ಎಂಡೊಕ್ಸಾನ್ CAS ಸಂಖ್ಯೆ 6055-19-2 Batch ಸಂಖ್ಯೆ G106
ತಯಾರಕರು: ಅಸ್ಟ್ರಾ–ಫ಼ರ್ಮ ಏಜಿ, ಜರ್ಮನಿ) ಇದನ್ನು ಧನಾತ್ಮಕ ಪ್ರೇರಕವಾಗಿ ಬಳಸಿಕೊಳ್ಳಲಾಯಿತು.

೨.೧.೩ ನೆಲ್ಲಿಕಾಯಿ ಸಾರ: ತಾಜಾ ನೆಲ್ಲಿಕಾಯಿಗಳನ್ನು ಧೂಳು ಮತ್ತಿತರ ವಸ್ತುಗಳಿಂದ ಸ್ವಚ್ಛಗೊಳಿಸಿ ಭಟ್ಟಿಇಳಿಸಿದ ನೀರಿನೊಂದಿಗೆ ಕುಟ್ಟಣಿಗೆಯಲ್ಲಿ ಚೆನ್ನಾಗಿ ಅರೆದು, ಅದರಲ್ಲಿರುವ ರಸವನ್ನು ಹಿಂಡಿ ಪಡೆಯಲಾಯಿತು. ಹೀಗೆ ಪಡೆದ ರಸವನ್ನು ಲೈಯೊಫ಼ಿಲೈಸರ್ (Lyophilizer) ಎನ್ನುವ ಸಾಧನದಿಂದ ಸಂದ್ರೀಕರಿಸಲಾಯಿತು.

೨.೨ ಪ್ರಾಯೋಗಿಕ ಮಾದರಿಗಳು: ೨ ತಿಂಗಳು ಪ್ರಾಯದ, ಸಾರಸರಿ ೨೫ (೫ ಗ್ರಾಂ) ತೂಕವಿರುವ ಆರೋಗ್ಯವಂತ ಸ್ವಿಸ್ ಅಲ್ಬಿನೊ ಇಲಿ (Mus Musculus) ಗಳನ್ನು ಪ್ರಯೋಗ ಮಾದರಿಯಾಗಿ ಬಳಸಿಕೊಳ್ಳಲಾಯಿತು. ಸಿ. ಪಿ. ಸಿ ಎಸ್. ಇ.ಎ (Committee for the Purpose of control and supervision on Experiments on Animals) ಮಾರ್ಗಸೂಚಿಯಂತೆ ಈ ಇಲಿಗಳನ್ನು ವಿಭಾಗದ ಪ್ರಾಣಿಗ್ರಹದಲ್ಲಿ ಪೋಷಣೆ ಮಾಡಿ ಪ್ರಯೋಗಕ್ಕೆ ಉಪಯೋಗಿಸಲಾಯಿತು.

೨.೩ ಚಿಕಿತ್ಸಾಕ್ರಮ: ೩೦.೦ ಮಿ. ಗ್ರಾಂ/ ಕಿ.ಗ್ರಾಂ ದೇಹ ತೂಕ ಪ್ರಮಾಣದಲ್ಲಿ ಕ್ರಿಮಿನಾಶಕವನ್ನು ತೆಗೆದುಕೊಂಡು ಭಟ್ಟಿಇಳಿಸಿದ ನೀರಿನಲ್ಲಿ ಮಿಶ್ರಣ ಮಾಡಿ ಒಂದು ಗುಂಪು ಇಲಿಗಳಿಗೆ ಕುಡಿಸಲಾಯಿತು. ಕೀಟನಾಶಕಗಳು ಕುಲಷಿತಗೊಂಡಿರುವ ನೀರು ಮತ್ತು ಆಹಾರದ ಮೂಲಕ ದೇಹವನ್ನು ಸೇರುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಈ ಅಧ್ಯಯನದಲ್ಲಿ ಪರೀಕ್ಷಾ ರಾಸಾನಿಕವನ್ನು ಬಾಯಿಯ ಮೂಲಕ ನೀಡಲಾಯಿತು. ಆಯ್ಕೆ ಮಾಡಿದ ಕೀಟನಾಶಕದ ಪ್ರಮಾಣವು ೫೦–ಮಾರಕಪ್ರಮಾಣದ (LD 50) ಐದನೇ ಒಂದು ಭಾಗಕ್ಕೆ (1/5) ಸಮವಾಗಿರುತ್ತದೆ. (Hayes and Laws,1991). ಮೂರು ಗುಂಪು ಇಲಿಗಳಿಗೆ ಪ್ರತ್ಯೇಕವಾಗಿ ಕೀಟನಾಶಕದ ಜೊತೆಗೆ ಸಾಂದ್ರೀಕರಿಸಿದ ನೆಲ್ಲಿಕಾಯಿಯ ಸಾರವನ್ನು ಮೂರು ಪ್ರಮಾಣಗಳಲ್ಲಿ (೫೦,೧೦೦ ಮತ್ತು ೨೦೦ ಮಿ. ಗ್ರಾಂ/ಕಿ. ಗ್ರಾಂ ದೇಹ ತೂಕ) ನೀಡಲಾಯಿತು. ಸೈಕ್ಲೊಫ಼ಾಸ್ಫಮೈಡ್ ಎನ್ನುವ ಔಷಧವನ್ನು–(೫೦ ಮಿ. ಗ್ರಾಂ/ಕಿ. ಗ್ರಾಂ) ಮತ್ತು ಭಟ್ಟಿಇಳಿಸಿದ ನೀರನ್ನು ಕ್ರಮವಾಗಿ (ಧನಾತ್ಮಕ ನಿಯಂತ್ರಣ) ಪ್ರೇರಕ ರಾಸಾಯನಿಕ ಹಾಗೂ ಋಣಾತ್ಮಕ ನಿಯಂತ್ರಣವಾಗಿ ಉಪಯೋಗಿಸಲಾಯಿತು.

೨.೪ ಪ್ರಯೋಗ: ೨.೪.೧ ಮೈಕ್ರೋನ್ಯುಕ್ಲಿಯಸ್ ಪರೀಕ್ಷೆ: ಇಲಿಗಳನ್ನು ಚಿಕಿತ್ಸೆಗೊಳಪಟ್ಟ ೩೦ ಗಂಟೆಗಳ ನಂತರ ಸ್ಕಿಡ್ (೧೯೭೩) ಮತ್ತು ರಾವ್ (೧೯೮೩) ರವರು ರೂಪಿಸುವ ಮೈಕ್ರೊನ್ಯೊಕ್ಲಿಯಸ್ (ಕಿರುಕೋಶಕೇಂದ್ರ) ಪರೀಕ್ಷಾ ವಿಧಾನವನ್ನು ಆಧರಿಸಿ ಪ್ರಯೋಗವನ್ನು ನಡೆಸಲಾಯಿತು. ಅಸ್ಥಿಮಜ್ಜೆಯಲ್ಲಿ ತಯಾರಗುವ ರಕ್ತ– ಜೀವಕಣಗಳನ್ನು ಮೆಗ್ರುನ್ ವಾಲ್ಡ್– ಜಿಮ್ಸಾ ವಿಧಾನದಿಂದ ರಂಗು ಬರಿಸಿ ಪಾಲಿಕ್ರೊಮೇಟಿಕ್ ಎರಿತ್ರೋಸೈಟ್ (ಪಿ. ಸಿ.ಇ) ಮತ್ತು ನೊರ್ಮೊಕ್ರೊಮೇಟಿಕ್ ಎರಿತ್ರೊಸೈಟ್ (ಎನ್. ಸಿ. ಇ) ಎಂಬ ಬಳವಣಿಗೆ ಹಂತದ ಕೆಂಪುರಕ್ತಕಣಗಳನ್ನು ಸೊಕ್ಮದರ್ಶಕದ ಮೂಲಕ ನೋಡಿ ಅವುಗಳಲ್ಲಿ ಮೈಕ್ರೋನ್ಯುಕ್ಲಿಯಸ್ ಯುಕ್ತ ಮತ್ತು ರಹಿತ ಜೀವಕಣಗಳ್ ಪ್ರಮಾಣವನ್ನು ಲೆಕ್ಕ ಹಾಕಲಾಯಿತು. ಇದರ ಜೊತೆಗೆ, ರಾಸಾನಿಕದಿಂದ

ಜೀವಕೋಶಗಳಲ್ಲಿ ಉಂಟಾಗುವ ವಿಷ(ಸೈಟೊಟಾಕ್ಸಿಕ್) ಪರಿಣಾಮವನ್ನು ಪತ್ತೆಹಚ್ಚಲಿಕ್ಕಾಗಿ ಪಿ.ಸಿ.ಇ/ ಎನ್.ಸಿ.ಇ (ಪಿ/ಎನ್) ಅನುಪಾತವನ್ನು ಕಂಡುಹಿಡಿಯಲು ಅವುಗಳನ್ನು ಸಂಖ್ಯೆಗಳನ್ನು ಲೆಕ್ಕಹಾಕಲಾಯಿತು. ಪ್ರತಿ ಪ್ರಾಯೋಗಿಕ ಮತ್ತು ಪ್ರೇರಕ ಗುಂಪುಗಳಲ್ಲಿ ಮೂರು ಇಲಿಗಳನ್ನು ಬಳಸಿಕೊಳ್ಳಲಾಯಿತು. ಪ್ರತಿ ಇಲಿಗಳಿಂದ ೨,೦೦೦ ಪಿ. ಸಿ. ಇ ಮತ್ತು ಅದಕ್ಕೆ ಸಮಕೂಡುವ ಎನ್.ಸಿ.ಇ ರಕ್ತಕಣಗಳನ್ನು ಎಣಿಕೆ ಮಾಡಲಾಯಿತು.

೨.೪.೨ ಸಂಖ್ಯಾಶಾಸ್ತಿಕ ವಿಶ್ಲೇಷಣೆ: ಪರೀಕ್ಷಾ ರಾಸಾನಿಕದಿಂದ ಉಂಟಾದ ಹಾನಿಯ ಪ್ರಮಾಣದ ಹಾಗು ನೆಲ್ಲಿಕಾಯಿ ಸಾರದಿಂದ ಉಂಟಾದ ಬದಲಾವಣೆಯ ಪ್ರಖರತೆಯನ್ನು ಕಂಡುಹಿಡಿಯಲು ಪ್ರೇಡ್ಡ್ ಟಿ ಟೆಸ್ಟ್ ಎನ್ನುವ ಸಂಖ್ಯಾಶಾಸ್ತ್ರ ವಿಧಾನವನ್ನು ಬಳಸಿಕೊಳ್ಳಲಾಯಿತು.

೩. ಫ್ಲಲಿತಾಂಶಗಳು: ೩.೧ ಮೈಕ್ರೊನ್ಯುಕ್ಲಿಯಸ್ ಪರೀಕ್ಷೆಯಲ್ಲಿ ನಡೆಸುವ ಪ್ರಯೋಗದ ಫ್ಲಲಿತಾಂಶಗಳನ್ನು ಕೋಷ್ಟಕ ೧ರಲ್ಲಿ ತೋರಿಸಲಾಗಿದೆ (ಚಿತ್ರ೧,೨ ಮತ್ತು ೩) ಋಣಾತ್ಮಕ ನಿಯಂತ್ರಿತ ಇಲಿಗಳಿಗೆ ಹೊಲಿಸಿದರೆ ಮಿ. ಪ್ಯಾ. ಪಡೆಸ ಇಲಿಗಳಲ್ಲಿ ಮೈಕ್ರೊನ್ಯೂಕ್ಲಿಯಸ್ ಗಳನ್ನು ಹೊಂದಿರುವ ಜೀವಕಣಗಳ ಪ್ರಮಾಣದಲ್ಲಿ ಏರಿಕೆ ಮತ್ತು ಪಿ/ ಎನ್ ಅನುಪಾತದಲ್ಲಿ ಇಳಿಕೆಯಾಗಿರುವುದು ಸಂಖ್ಯಾಶಾಸ್ತ್ರಕವಾಗಿ ಸ್ಪಷ್ಟವಾಗಿ ಕಂಡುಬರುತ್ತದೆ. ಮಿ, ಪ್ಯಾ. ಮಾತ್ರ ಪಡೆಸ ಇಲಿಗಳ ಗುಂಪಿಗೆ ಹೋಲಿಸಿದರೆ, ಮಿ. ಪ್ಯಾ. ಜೊತೆಗೆ ನೆ. ಸಾ. ವನ್ನು ಪಡೆದ ಇಲಿಗಳಲ್ಲಿ ಮೈಕ್ರೊನ್ಯುಕ್ಲಿಯಸ್ ಯುಕ್ತ ಜೀವಕಣಗಳ ಸಂಖ್ಯೆಯ ಪ್ರಮಾಣ್– ನಿರ್ಧರಿತವಾಗಿ ಇಳಿಕೆಯಾಗಿರುವುದು ಮತ್ತು ಪಿ/ಎನ್ ಅನುಪಾತದಲ್ಲಿ ಪ್ರಮಾಣ– ನಿರ್ಧರಿತವಾಗಿ ಏರಿಕೆಯಾಗಿ ರುವುದು ಕಂಡುಬರುತ್ತದೆ.

ಟೇಬಲ್೧: ಮಿ.ಪ್ಯಾ. ಪ್ರೇರಿತ ಮೈಕ್ರೊನ್ಯುಕ್ಲಿಯಸ್ ಮತ್ತು ಪಿ/ಎನ್ ಅನುಪಾತದಲ್ಲಿ ನೆಲ್ಲಿಕಾಯಿ ಸಾರದಿಂದ ಉಂಟಾಗಿರುವ ಧನಾತ್ಮಕ ಬದಲಾವಣೆಗಳು:

ರಾಸಾಯನಿಕ ಪ್ರಮಾಣ (ಮಿ.ಗ್ರಾಂ/ಕಿ.ಗ್ರಾಂ)	*ಸರಾಸರಿ ಪಿ.ಸಿ.ಇ. ಯಲ್ಲಿರುವ ಮೈ.ನ್ಯೂಕ±SD	ಮೈ.ನ್ಯೂಕ ಪ್ರಮಾಣ–ದಲ್ಲಿ ಇಳಿಕೆ (%)	ಮೈ.ನ್ಯೂಕ ಮೊತ್ತ (ಪಿ.ಸಿ.ಇ.+ ಎನ್.ಸಿ.ಇ.) ±SD	ಮೈ.ನ್ಯೂಕ ಪ್ರಮಾಣದಲ್ಲಿ ಇಳಿಕೆ (%)	ಸರಾಸರಿ ಪಿ/ಎನ್ ಅನುಪಾತ±SD	ಪಿ/ಎನ್ ಅನುಪಾತದಲ್ಲಿ ಏರಿಕೆ (%)
ಭಟ್ಟಿ ಇಳಿಸಿದ ನೀರು	0.18±0.03	–	0.15±0.03	–	1.03±0.05	–
ಮಿ.ಪ್ಯಾ.–30.0	0.80±0.05[b]	–	0.63±0.08[b]	–	0.73±0.06[b]	–
ಸಿ.ಪಿ–50	2.45±0.10[c]	–	1.72±0.06[c]	–	0.42±0.04[c]	–
ನೆಲ್ಲಿಕಾಯಿ ಸಾರ (50)	0.15±0.02	–	0.09±0.01	–	0.97±0.06	–
ನೆಲ್ಲಿಕಾಯಿ ಸಾರ (100)	0.18±0.03	–	0.07±0.01	–	0.99±0.05	–
ನೆಲ್ಲಿಕಾಯಿ ಸಾರ (200)	0.10±0.01	–	0.10±0.01	–	1.02±0.07	–
ಮಿ.ಪ್ಯಾ (30.0) + ನೆ. ಸಾ (50)	0.45±0.06[b]	43.8	0.30±0.03[b]	52.4	0.91±0.06[b]	25.0
ಮಿ.ಪ್ಯಾ (30.0) + ನೆ.ಸಾ (100)	0.36±0.06[b]	55.0	0.26±0.03[b]	58.7	0.93±0.06[b]	28.0
ಮಿ.ಪ್ಯಾ (30.0) + ನೆ.ಸಾ (200)	0.30±0.04[b]	62.5	0.18±0.04[b]	71.4	0.94±0.04[a]	29.0

ಪ್ರತಿ ಗುಂಪಿನಲ್ಲಿ ೩ಇಲಿಗಳು ಮತ್ತು ಪ್ರತಿ ಇಲಿಗಳಿಂದ ೨,೦೦೦ ಪಿ.ಸಿ.ಇ ಮತ್ತು ಅದಕ್ಕೆ ಸಮಕೂಡುವ ಎನ್.ಸಿ.ಇ ಮೈ.ನ್ಯು=ಮೈಕ್ರೊನ್ಯೊಕ್ಲಿಯಸ್; ಪಿ.ಸಿ.ಇ= ಪಾಲಿಕ್ರೊಮೇಟೊ ಎರಿತ್ರೊಸೈಟ್; ಎನ್.ಸಿ.ಇ= ನೊರ್ಮೊಕ್ರೊಮೇಟೊ ಎರಿತ್ರೊಸೈಟ್.

[a] P<0.05, [b] P<0.01, [c] P<0.001 (Paired T-test).



ಚಿತ್ರ–1: ಮಿ.ಪ್ಯಾ. ಮತ್ತು ನಿಯಂತ್ರಿತಗಳು ಪ್ರೇರಿತ ಪಿ.ಸಿ.ಇ.ಯಲ್ಲಿ ಮೈಕ್ರೊನ್ಯೂಕ್ಲಿಯಸ್‌ಗಳ ಪ್ರಮಾಣ ಮತ್ತು ನೆಲ್ಲಿಕಾಯಿ ಸಾರದಿಂದ ಉಂಟಾಗಿರುವ ಧನಾತ್ಮಕ ಪರಿಣಾಮ.



ಚಿತ್ರ–2: ಮಿ.ಪ್ಯಾ. ಮತ್ತು ನಿಯಂತ್ರಿತಗಳು ಪ್ರೇರಿತ ಪಿ.ಸಿ.ಇ. ಮತ್ತು ಎನ್.ಸಿ.ಇ.ಯಲ್ಲಿರುವ ಮೈಕ್ರೊನ್ಯೂಕ್ಲಿಯಸ್‌ಗಳ ಪ್ರಮಾಣ ಮತ್ತು ನೆಲ್ಲಿಕಾಯಿ ಸಾರದಿಂದ ಉಂಟಾಗಿರುವ ಧನಾತ್ಮಕ ಪರಿಣಾಮ.



ಚಿತ್ರ–3: ಮಿ.ಪ್ಯಾ. ಮತ್ತು ನಿಯಂತ್ರಿತಗಳು ಪ್ರೇರಿತ ಪಿ./ಎನ್. ಅನುಪಾತ ಹಾಗೂ ನೆಲ್ಲಿಕಾಯಿ ಸಾರದಿಂದ ಉಂಟಾಗಿರುವ ಬದಲಾವಣೆಗಳು.

೪. ಮೀಮಾಂಸೆ: ವಂಶವಾಹಿ ಮಾಹಿತಿಗಳನ್ನು (ಜೀನ್ಸ್) ಹೊಂದಿರುವ ವರ್ಣತಂತುಗಳು (ಕ್ರೋಮೊಸೋಮ್) ತಮ್ಮ ರಚನೆ ಮತ್ತು ಸಂಖ್ಯೆಯ ನೈಜತೆಯನ್ನು ಉಳಿಸಿಕೊಳ್ಳುವುದು ಬಹಳ ಮುಖ್ಯ. ಆಂತರಿಕ ಆಥವಾ ಬಾಹ್ಯ ಕಾರಣಗಳಿಂದ ಆದರಲ್ಲಿ ಬದಲಾವಣೆಗಳುಂಟಾದರೆ ಅದು ಈ ಮೇಲೆ ತಿಳಿಸಿರುವ ಹಾಗೆ ಅನೇಕ ಆರೋಗ್ಯ ಸಮಸ್ಯಗಳಿಗೆ ಕಾರಣ ರವಾಗಬಹುದು. ಕ್ರೋಮೊಸೋಮ್ ಗಳಿಗೆ ನೇರವಾಗಿ ಹಾನಿಯುಂಟಾದಾಗ ತುಂಡಾದ ಭಾಗವು ಮೈಕ್ರೋನ್ಯುಕ್ಲಿಯಸ್ ರೂಪದಲ್ಲಿ ಜೀವಕಣ ಗಳಲ್ಲಿ ಕಾಣಬಹುದು. ಜೀವಕೋಶಗಳು ವಿಭಜನೆ ಕ್ರಿಯೆಯ ಅನಾಫ್ಲೇಸ್ ಹಂತದಲ್ಲಿ ಕ್ರೋಮೋಸೋಮ್ ಗಳನ್ನು ಸಮಪ್ರಮಾಣದಲ್ಲಿ ಎರಡು ದ್ರವಗಳಿಗೆ ಹಂಚುವ ಕದಿರು ಎಳೆಗಳಿಗೆ (ಸ್ಪಿಂಡಲ್ ಫ್ಲೈಬರ್ಸ್) ಹಾನಿಯುಂಟಾದಾಗ ಕೆಲವು ಕ್ರೋಮೋಸೋಮ್ ಗಳನ್ನು (ಸೆಂಟ್ರೊಮಿಯರ್ ಸಹಿತ)ಕೋಶಕೇಂದ್ರಿದಿಂದ (ನ್ಯೂಕ್ಲಿಯಸ್) ಪ್ರತೇಕವಾಗಿದ್ದು ಮೈಕ್ರೋನ್ಯುಕ್ಲಿಯಸ್ ರೂಪದಲ್ಲಿ ಕಾಣಬಹುದು. ಸ್ಮಿಡ್ (೧೯೭೩) ರವರ ಪರೀಕ್ಷಾ ವಿಧಾನದಂತೆ ರಂಗುಭರಿಸಿದ ಅಸ್ಥಮಜ್ಜೆ ಜೀವಕೋಶ ಗಳನ್ನು ಸೂಕ್ಷ್ಮದರ್ಶಕದ ಮೂಲಕ ನೋಡಿದಾಗ ತುಂಟಾದ ಕ್ರೋಮೋ ಸೋಮ್ ಭಾಗ (ಸೆಂಟ್ರೊಮಿಯರ್ ರಹಿತ) ಮತ್ತು ಕದಿರು ಎಳೆಗಳು ಹಾನಿಯಾಗಿ ಬೇರಯಾದ ಕ್ರೋಮೋಸೋಮ್ ಗಳನ್ನು (ಸೆಂಟ್ರೊಮಿಯರ್ ಸಹಿತ)ಕೋಶಕೇಂದ್ರದಂತೆ (ನ್ಯುಕ್ಲಿಯಸ್), ಆದರೆ ಚಿಕ್ಕಗಾತ್ರದಲ್ಲಿ ಕಾಣುವುದರಿಂದ ಅವುಗಳನ್ನು ಕಿರಿಕೋಶಕೇಂದ್ರ/ ಮೈಕ್ರೊನ್ಯುಕ್ಲಿಯಸ್ ಎಂದು ಹೆಸರಿಸಲಾಗಿದೆ. ಮೈಕ್ರೊನ್ಯುಕ್ಲಿಯಸ್ ಗಳನ್ನು ಹೊಂದಿರುವ ಜೀವಕೋಶಗಳ ಪ್ರಮಾಣ ರಾಸಾನಿಕ, ಕ್ಷಕಿರಣ್, ನೇರಳಾತೀತ ಕಿರಣ ಅಥವಾ ಇನ್ನಾವುದೇ. ಮ್ಯುಟಾಜನ್ ಗಳಿಂದ ವರ್ಣತಂತುಗಳಿಗೆ ಉಂಟಾಗುವ ಹಾನಿಯ ಪರಿಮಾಣವನು ಸೂಚಿಸುತ್ತದೆ (Schmid1975; Naik and Vijayalaxmi,2009) ಈ ಪ್ರಮಾಣವು ನೆಲ್ಲಿಕಾಯಿ ಸಾರ ಅಥವಾ ಇನ್ನಾವುದೇ ಸಾರ/ ರಾಸಾನಿಕಗಳಿಂದ ಈ ಪ್ರಮಾಣದಲ್ಲಿ ಸಾಕಷ್ಟು ಕಡಿಮೆಯಾದರೆ, ಆದು ಪ್ರೇರಿತ ರಾಸಾನಿಕಗಳಿದುಂಟಾಗುವ ರಕ್ಷಿಸಬಲ್ಲದು ಎಂಸು ತೋರಿಸುತ್ತದೆ.

ಈ ಅಧ್ಯಯನದಲ್ಲಿ ಋಣಾತ್ಮಕ ನಿಯಂತ್ರಿತಗಳಿಗೆ ಹೋಲಿಸಿದಾಗ ಕೀಟನಾಶಕವನ್ನು ಪಡೆದ ಇಲಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೈಕ್ರೊನ್ಯುಕ್ಲಿಯಸ್ ಯುಕ್ತ ಜೀವಕೋಶಗಳು ಇರುವುದು ಸಂಖ್ಯಾಶಾಸ್ತ್ರಿಕವಾಗಿ ಸ್ಪಷ್ಟವಾಗಿ ಕಡುಬರುತ್ತದೆ. ನಮಗೆ ದೊರೆತ ಈ ಫಲಿತಾಂಶವು, ಮಿ. ಪ್ಯಾ. ಕೀಟನಾಶಕವು ಮ್ಯುಟೇಶನ್ ಉಂಟುಮಾಡುತ್ತದೆ ಎಂದು ಈಗಾಗಲೇ ನಿರೊಪಿಸಿರುವ ವರದಿಗಳನ್ನು ಇನ್ನಷ್ಟು ಖಚಿತಪಡಿಸುತ್ತದೆ. ಕೀಟನಾಶಕವನ್ನು ಪಡೆದ ಇಲಿಗಳಿಗೆ ಹೋಲಿಸಿದಾಗ ನೆಲ್ಲಿಕಾಯಿ ಸಾರವನ್ನು ಪಡೆದ ಇಲಿಗಳ ಗುಂಪುಗಳಲ್ಲಿ ಮೈಕ್ರೊನ್ಯುಕ್ಲಿಯಸ್ ಯುಕ್ತ ಜೀವಕೋಶಗಳ ಸಂಖ್ಯೆಯು ಪ್ರಮಾಣ–ನಿರ್ಧರಿತವಾಗಿ ಇಳಿಕೆಯಾಗುತ್ತದೆ. ಈ ಮೂಲಕ ನೆಲ್ಲಿಕಾಯಿ ಸಾರವು ಮಿ. ಪ್ಯಾ. ಉಂಟುಮಾದುವ ವರ್ಣತಂತುಗಳ ಹಾನಿಯ (ಮ್ಯುಟೇಶನ್) ವಿರುದ್ಧ ರಕ್ಷಣೆ ನೀಡುತ್ತದೆ ಎನ್ನುವುದು ಸ್ಪಷ್ಟಗೊಳಿಸುತ್ತದೆ.

ನೆಲ್ಲಿಕಾಯಿ (ಫ್ಲಿಲಾಂತಸ್ ಎಂಬ್ಲಿಕಾ) ಇದು ಮಾನವನಿಗೆ ಪ್ರಕೃತಿಯು ವರವೆಂದೇ ಹೇಳಬಹುದು. ಇದು ನಮ್ಮ ದೇಹದ ಅನೇಕ ಶರೀರಕ್ರಿಯಾತ್ಮಕ ಚಟುವಟಿಕೆಗಳಿಗೆ ಮಾತ್ರವಲ್ಲದ ಉತ್ತಮ ಆರೋಗ್ಯವನ್ನು ಕಾಪಾಡಲು ಅವಶ್ಯವಿರುವ ಜೀವಸತ್ವಸಿಯಿಂದ ಸಮೃದ್ಧವಾಗಿದೆ. ಇದರ ಜೊತೆಗೆ ಎಲಾಜಿಕ್ ಆಮ್ಲ. ಟ್ಯಾನಿಸ್ ಆಮ್ಲ ಮತ್ತು ಪಾಲಿಫಿನಾಲ್ ಎನ್ನುವ ಇತರ ಪ್ರತಿಆಕ್ಸಿಡಕ ಗುಣವಿರುವ ಅಂಶಗಳೂ ಸಹ ಸಾಕಷ್ಟು ಪ್ರಮಾಣಸಲ್ಲಿ ಇವೆ (Khopde,2001). ಈ ಅಧ್ಯಯನಲ್ಲಿ ನೆಲ್ಲಿಕಾಯಿಯ ಜಲಸಾರದಿಂದ ಉಂಟಾದ ಸಕರಾತ್ಮಕ ಬದಲಾವಣೆಗಳಿಗೆ ಅದಲ್ಲಿರುವ ಪ್ರತಿಆಕ್ಸಿಡಕ, ಅದರಲ್ಲೂ ಪ್ರಮುಖವಾಗಿ ಜೀವಸತ್ವ–ಸಿ ಮುಖ್ಯ ಕಾರಣವೆಂದು ಹೇಳಬಹುದು. ಜೀವಸತ್ವ–ಸಿ ಬೇರೆ ಬೇರೆ ಕಾರ್ಯವಿಧಾನದ ಮೂಲಕ ಮ್ಯುಟೇಶನ್– ನಿರೋಧಕವಾಗಿ ಕೆಲಸ ಮಾಡುತ್ತದೆ ಎಂದು ಅಧ್ಯಯನದಿಂದ ತಿಳಿದುಬಂದಿದೆ. (De Flora and Ramel, 1988; Vijayalaxmi and Venu, 1999 Siddique and Afzal, 2005; Naik and Vijayalaxmi,2008). ಮಿ. ಪ್ಯಾ. ದೇಹವನ್ನು ಸೇರಿದಾಗ, ಉಪವಚಯ ಕ್ರಿಯೆಗೆ ಒಳಪಟ್ಟು ಅದರಿಂದ ಕೇಲವು ಸ್ವತಂತ್ರ ರ್ಯಾಡಿಕಲ್ ಗಳು ಉತ್ಪತ್ತಿಯಾಗುತ್ತದೆ. ಹೀಗೆ ಉತ್ಪತ್ತಿಯಾದ ಸ್ವತಂತ್ರ ರ್ಯಾಡಿಕಲ್ ಗಳು ಡಿ. ಎನ್. ಎ ಸೇರಿದಂತೆ ಇತರ ಜೈವಿಕ–ಅಣುಗಳನ್ನು (ಆರ್. ಎನ್. ಎ ಪ್ರೋಟಿನ್ಸ್, ಲಿಪಿಡ್ಸ್) ಉತ್ಕರ್ಷಣ ಕ್ರಿಯೆಗೆ ಒಳಪಡಿಸಿ ಹಾನಿಯನ್ನು ಉಂಟುಮಾಡುತ್ತದೆ. ನೆಲ್ಲಿಕಾಯಿ ಸಾರದಲ್ಲಿರುವ ಜೀವಸತ್ವ–ಸಿ ಮತ್ತು ಇತರ ಅಂಶಗಳಿಗೆ ಪ್ರಬಲವಾದ ಉತ್ಕರ್ಷಣವಿರೋಧಕಾರಿ (ಪ್ರತಿಆಕ್ಸಿಡಕ) ಗುಣವಿರುವುದರಿಂದ ಅವುಗಳು ಕೀಟನಾಶಕದಿಂದ ಉತ್ಪತ್ತಿಯಾದ ಸ್ವತಂತ್ರ ರ್ಯಾಡಿಕಲ್ (ಇಲೆಕ್ಟ್ರಾನ್ ಕೊರತೆಯಿಂದಾಗಿ ಅಸ್ಥಿರ ಸ್ಥಿಯಲ್ಲಿರುವ) ಗಲಿಗೆ ತನ್ನಲ್ಲಿರುವ ಇಲೆಕ್ಟ್ರಾನ್ ನೀಡಿ ತಟಸ್ಥಗೊಳಿಸುತ್ತದೆ ಮತ್ತು ಆ ಮೂಲಕ ಆವುಗಳಿಂದ ಉಂಟಾಗುವ ಹಾನಿಯನ್ನು ನಿಯಂತ್ರಿಸುತ್ತದೆ.

ಮಿ. ಪ್ಯಾ. ಕ್ರಿಮಿನಾಶಕದಲ್ಲಿ ಫ್ಲೊಸ್ಫೋರೋಥಯೋಟ್ ಎನ್ನುವ ಅಂಶವಿದ್ದು ಅದು ಪಿತ್ತಕೋಶದಲ್ಲಿರುವ ಮೈಕ್ರೊಸೋಮ್ ಒಕ್ಸಿಡೇಸ್ ಎನ್ನುವ ಕಿಣ್ವದಿಂದ ಉತ್ಕರ್ಷಣ ಕ್ರಿಯೆಗೆ ಒಳಪಟ್ಟು ಓಕ್ಸಾನ್ ಮತ್ತು ಮಿಥೈಲ್ ಪ್ಯಾರಕ್ಸನ್ ಆಗುತ್ತದೆ. ಇದರಲ್ಲಿ ಆಕ್ಸಾನ್ ಅತ್ಯಂತ ವಿಷಕಾರಿ ಆಣುವಾಗಿದ್ದು ಆದು ಜೀವಕೋಶದಳಲ್ಲಿರುವ ಡಿ. ಎನ್.ಎ, ಆರ್. ಎನ್.ಎ. ಪ್ರೋಟಿನ್ ಗಳನ್ನು ಹಾನಿಗೊಳಿಸುತ್ತದೆ (EHC, 63: http//www.inchem.org/documents/ehc/ehc/ehc63.htm). ಇಂತಹ ಸಂದರ್ಭದಲ್ಲಿ ಪ್ರತಿಆಕ್ಸಿಡಕ ಶಕ್ತಿ ಇರುವ ಅಂಶಗಳು ಈ ಜೈವಿಕ

ಅಣುಗಳಿಗೊಂದಿಗೆ ವಿಲೀನಗೊಂಡು ಆಕ್ಸಾನ್ನು ನಿರ್ಭಂಧಿಸಿ ಅದರಿಂದ ಉಂಟಾಗುವ ಹಾನಿಯನ್ನು ತಡೆಗಟ್ಟುತ್ತದೆ (Edgar,1974)

ಆರೋಗ್ಯ ಸ್ಥಿತಿಯಲ್ಲಿರುವ ಇಲಿಗಳಲ್ಲಿ ಪಿ.ಸಿ.ಇ ಮತ್ತು ಎನ್. ಸಿ, ಇ (ಪಿ/ಎನ್) ಸಂಖ್ಯೆ ಸರಿಸುಮಾರು ೧:೧ ಅನುಪಾತದಲ್ಲಿ ಇರುತ್ತದೆ. ಆದರೆ ಯಾವುದೇ ಒಂದು ರಾಸಾನಿಕದಿಂದ ಜೀವಕೋಶಗಳಿಗೆ ಹಾನಿ/ ವಿಷಪರಿಣಾಮ ಉಂಟಾದರೆ ಈ ಅನುಪಾತದಲ್ಲಿ ವ್ಯತ್ಯಾಸ, ಅಂದರೆ ಎನ್.ಸಿ.ಇ ಪ್ರಮಾಣ ಗಣನೀಯವಾಗಿ ಇಳಿಕೆಯಾಗುತ್ತದೆ (Von Ledebur and Schmid,1973). ಮಿ. ಪ್ಯಾ ಪಡೆದ ಇಲಿಗಳಲ್ಲಿನ ಫಲಿತಾಂಶವನ್ನು ಮಿ. ಪ್ಯಾ ಚಿಕಿತ್ಸೆಗೆ ಒಳಪಡೆದ ಇಲಿಗಳಿಗೆ ಹೋಲಿಸಿದಾಗ ಈ ಅನುಪಾತದಲ್ಲಿ ಇಳಿಕೆಯಾಗಿರುವುದು ಕಾಣುತ್ತದೆ. ಆದರಿಂದ್ದ, ಈ ರಾಸಾಯನಿಕವು ಜೀವಕೋಶಗಳ ಮೈಟಾಸಿಸ್ ವಿಭಜನೆಯನ್ನೂ ಕುಂಠಿತಗೊಳಿಸುತ್ತದೆ ಎಂದು (ಸೈಟೊಟಾಕ್ಸಿಸಿಟಿ/ ವಿಷಪರಿಣಾಮ) ಮನಗಾಣಬಹುದು. ಮಿ. ಪ್ಯಾ ಜೊತೆಗೆ ನೆಲ್ಲಿಕಾಯಿ ಸಾರವನ್ನು ಇಲಿಗಳಿಗೆ ಕುಡಿಸಿದಾಗ ಪಿ/ಎನ್ ಅನುಪಾತವು ಸಹಜ ಸ್ಥಿತಿಗೆ ಬಂದಿರುತ್ತದೆ. ಆದರೆ ಈ ಫಲಿತಾಂಶವು ಪ್ರಮಾಣ್-ನಿರ್ಧರಿತವಾಗಿರಲಿಲ್ಲ. ಅಂದರ್,ಮೂರು ಪ್ರಮಾಣದಲ್ಲಿ ತೆಗೆದುಕೊಂಡು ನೆಲ್ಲಿಕಾಯಿ ಸಾರದಿಂದ ಉಂಟಾದ ಬದಲಾವಣೆಯು ಬಹುಮಟ್ಟಿಗೆ ಒಂದೇ ತರದಲ್ಲಿತ್ತು. ನೆಲ್ಲಿಕಾಯಿ ಸಾರವು ಕಡಿಮೆ ಪ್ರಾಮಾಣದಲ್ಲಿರೂ (೫೦ಗ್ರಾಂ/ಕಿ.ಗ್ರಾಂ ದೇಹದ ತೂಕ) ಕೂಡ ಜೀವಕೋಶಗಳನ್ನು ರಕ್ಷಿಸುವಲ್ಲಿ ಅತ್ಯುತ್ತಮ ಪರಿಣಾಮವನ್ನು ಬೀರುವುದು ಕಂಡುಬಂತು. ನೆಲ್ಲಿಕಾಯಿ ಸಾರದಲ್ಲಿರುವ ಅನೇಕ ಪೋಷಕಾಂಶಗಳು. ಮಿ. ಪ್ಯಾ ಮತ್ತು ಆದರ ಉಪಾವಚಯ ಕ್ರಿಯೆಯ ಉತ್ಪನ್ನಗಳಿಂದ ಜೀವಕೋಶಗಳ ಮೇಲೆ ಉಂಟಾಗುವ ವಿಷಪರಿಣಾಮವನ್ನು ಮಿತಗೊಳಿಸುತ್ತದೆ.

ಒಟ್ಟಾರೆಯಾಗಿ ಈ ಅಧ್ಯಯನದಿಂದ ಮಿ. ಪ್ಯಾ ಕ್ರಿಮಿನಾಶಕವು ಕ್ರೋಮೋಸೋಮ್ ಮತ್ತು ಜೀವಕೋಶಗಳ ಮೇಲೆ ಉಂಟುಮಾಡುವ ವಿಷಪರಿಣಾಮಗಳನ್ನು ನೆಲಿಕಾಯಿ ಸಾರವು ಸಾಕಷ್ಟು ಮಟ್ಟಿಗೆ ಕಡಿಮೆಗೊಳಿಸುತ್ತದೆ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದುದರಿಂದ ಕ್ರಿಮಿನಾಶಕಗಳಂತಹ ಬಾಹ್ಯಜೈವಿಕ ರಾಸಾನಿಕಗಳು ಉಂಟುಮಾಡುವ ಹಾನಿ ಮತ್ತು ಅದರಿಂದ ಆರೋಗ್ಯದ ಮೇಲೆ ಉಂಟಾಗುವ ಆಹಾರ ಪದಾರ್ಥಗಳನ್ನು ನಮ್ಮ ದಿನನಿತ್ಯ ಬದುಕಿನ ಅಧಿಕ ಪ್ರಮಾಣದಲ್ಲಿ ಉಪಯೋಗಿಸುವುದು.

ಗ್ರಂಥಸೂಚಿ:

1) Akhtar R. (1990) Environmental pollution and health problem, Ashish Pub. House, NewDelhi, pp 49-78

2) Batoli S, B. Bonora, A. Colacci A. Niero and S. Grilli (1991) DNA damaging activity of methyl parathion, Res Commun Chem pathol Pharmacol. 71(2): 209-218.

3) Bassil K.L.C Vakil, M. Sanborn, D. C Cole, J. S Kaur and K. J Kerr (2007) Cancer health effects of pesticidies: systematic review, Can fam physiciol., 53(10): 1704-1711

4) Bernard L. S (1986) The Human Aging Process: Gene Loss as the Primary Cause Exper. Germotology, 21: 283-319

5) Bray F., A Jermal N Grey, J. M. E Ferlay and D. Forman(2012) Global Cancer transitions according to the Human Development kindex (2008-2030): a population-based study The Lancet Oncology, 13(8): 790-801.

6) Coral M. N, S. Ucman, H.Yildiz, H. Oztas and S. Dalkilic (2009) Potential neoplastic effects of parathon-methly on ratliver, J. Environ Sci., 21(5): pp696-699.

7) CPCSEA (Committee for the Purpose of Control and Supervision on Experiments on Animals), India, http:/ envfor.nic.in/divisions/law/cpcsea laboratory. Pdf.

8) De Flora S. and L. R Ferguson (2005) Overview of mechanisms of cancer chemo-preventive agents, Mutation Res., 591(1-2):8-15

9) De Flora S. and C. Ramel (1988) Mechanism of inhibitors of mutagenesis and carcinogenesis, Classification and overview, Mutation Res., 202(2):285-305.

10) Dich J, S. H. Zahm, A Hanberg and H.O Adami (1997) Pesticides and Cancer , Cancer causes Control, 8(3):420-443.

11) Edgar J.A (1974) Ascorbic acid and biological alkylating agents, Nature (Lond), 248, 136-137.

12) EHC-63 (Environmental Health Criteria -63 Organophosphorus insecticides: a general introduction: international programme on chemical safety: http://www. Inchem.org/ documents/ehc/ehc/ echc 63.htm).

13) Elbaz A., J. Clavel, P.U Rathouz, F. Moisan, J.P Galanaud, B. Delemotte, A. Alperovitch, and C. Tzourio (2009) Professional exposure to pesticides and Parkinson disease, Ann Neurola., 66(4):pp 494-504.

14) Hayes W. J and E. R. Laws(1991) Handbook of Pesticides toxicology. Vol 1 Academic Press Inc., pp.816-822.

15) Hreljac I., and M. Filipic (2009) Organophosphorus pesticides enhace the genotoxicity of benzo (a) pyrene by modulating its metabolism, Mutat Res., 671(1-2): 84-92 .

16) Khopde S.M., K.I Priyadarshini, H. Mohan, V. Ba Gawandi, J. G Satav, J. V Yakshmi, M.M Bavanliker, M.K Biyani and J.P Mittal (2001) Characterizing the antioxidant activity of amla (phyllathus emblica) Extract, Current Science, 81(2) :185-189

17) Kumar S.K B., R. Ankathil and K.S Devi (1993) Chromosimal aberrations induced bymethly parathon in human peripheral lymphocytes of alcoholics and smokers, Huma Exp Toxical., 12(4):285-288.

18) Mathew G. M. A Rahiman and K.K Vijaylaxmi(1990) In vivo genotoxic effects in mice of Metacid 50, an organphosphorus insecticide, Mutagenesis, 5(2) :147-149.

19) Mathew G., K.K Vijayalaxmi and M. Abdul Rahiman (1992) Methly parathon-induced sperm shape abnormalities in mouse, Mutar Res ., 280 (3):169-173

20) Moorhead P. S., P.C Nowell, W. J. Mellman, and D.M Battips(1960) Chromosome preparations of leukocytes cultured from human peripheral blood. Exp. Cell Res. 20:613-616.

21) Naik P. and K.K Vijalaxmi(2008)Cytogenetic evaluation for genotoxicity of bisphenol-A in bone marrow cells of Swiss albino mice. Mutar Res., 676(1-2):pp 106-112

22) Naik P. and K.K Vijalaxmi (2009) Modulatory effect of ascorbic acid against the methyl parathon induced micronucleus in Swiss albino mice, In: Proceedings of International Conference on biomarkers inhealth and

environmental management anf Environmental Mutagen Society of India XXXII Annual Meet: 40-50.
23) Prasad S., P. Naik and K. K Vijayalaxmi (2002) Efficiency of Coleus aromaticus extract in modifying cyclophosphamide and mitomycin- C induced clastogenicity in mouse bone marrow cells, Indian J. Exp. Biol., 40(9): 1020-1025.
24) Rogers A. E., S. H Zeisel and J Groopman(1993) Diet and carcinogenesis carcinogenesis, 14(11):2205-2217.
25) Siddique Y. H and M. Afzal(2005) Protective role of allicin and L- ascorbic acid against the genotoxic damage induced by chlormadinone acetate in cultured human lymphocytes, Indian J. Exp. Biol., 43(9): 769-772.
26) Schmid W.(1975) The micronucleus test, Mutation Res.,31:9-15
27) TianY., H. Ishikawa, T. Yamaguchi, T. Yamauchi and K. Yokoyama(2005) Teratogenicity and developmental toxicity of chlorpyrifos- Maternal exposures during organgenesis in mice, Reprod Toxical., 20(2): 267-270
28) Vijayalaxmi K.K and R Venu (1999) In vivo anticlastogenic effects off L- Ascorbic acid in mice, Mutation Res.., 438:47-51
29) von Ledebur M. and W. Schmid (1973) The micronucleus test- Methodological aspects, Mutation Res., 19(1) :109-11
30) Wilson J. G (1977) Teratogenic effects of environmental chemicals- Review, fed proc., 36(5): 1698-1703
31) Xia Y., Q Bian Q, L. Xu, S. cheng, L Song, J, Liu, W. Wu , S. Wang and X Wang (2004) Genotoxuc effects on human spermatozoa among pesticide factory workers exposed to fenvalerate Toxicology, (1-3): 49-60.

ವಿಷಯ:-08

ನಾಗಾರ್ಜುನೀಯಮ್
ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಪದಾರ್ಥಶಾಸ್ತ್ರಗಳು

THEME:-08

NAGARJUNEEYAM
CHEMICAL, BIOLOGICAL AND MATERIAL SCIENCES

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಮೈಕ್ರೋನ್ ರಬ್ಬರ್ ಮತ್ತು ನ್ಯಾನೋ ಸಿಲಿಕ ಮಿಶ್ರಿತ ಎಪೋಕ್ಸಿ ಪಾಲಿಮರ್‌ನ ಯಾಂತ್ರಿಕ ಮತ್ತು ಉಷ್ಣ ಗುಣಗಳ ಅಧ್ಯಯನ	ಎ. ರೇವತಿ, ನವನೀತ ಎಸ್ ಶೈಲಜ ಶ್ರೀಹರಿ, ಎನ್ ಜಗನ್ನಾಥನ್ ಸಿ.ಎಮ್ ಮಂಜುನಾಥ	625 – 628
2	ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯದ ಶಿಲೀಂಧ್ರ–, ಶಿಲೀಂಧ್ರನಂಜು–ಮತ್ತು ಉತ್ಕರ್ಷಣ–ನಿರೋಧಕ ಗುಣಗಳು – ಪ್ರಾಯೋಗಿಕ ನೆಲೆಯಲ್ಲಿ ಒಂದು ಅಧ್ಯಯನ	ಆರ್. ಯು. ಅಭಿಷೇಕ್ ಎಸ್. ತಿಪ್ಪೇಸ್ವಾಮಿ ಹೆಚ್. ಎನ್. ವೆಂಕಟೇಶ್ ಕೆ. ಮಂಜುನಾಥ್, ಡಿ. ಸಿ. ಮೋಹನ	628 – 633
3	ಪಾಲಿಅನಿಲಿನ್‌ನ ಬೆಳಕಿನ ಮತ್ತು ವಿದ್ಯುತ್ ಗುಣಲಕ್ಷಣಗಳು	ವಾದಿರಾಜ್ ಕೆ.ಟಿ ಬೆಳಗಲಿ ಎಸ್.ಎಲ್	633 – 634
4	ಸಾಂಕ್ರಾಮಿಕ ರೋಗ ಹರಡುವ ಮಾರಣಾಂತಿಕ ಇ-ಕೋಲೈ ೦157:ಹೆಚ್7 ಬ್ಯಾಕ್ಟೀರಿಯಾ	ಡಾ॥ ವಿ. ಪುಟ್ಟಲಿಂಗಮ್ಮ	635 - 637

ಮೈಕ್ರೋನ್ ರಬ್ಬರ್ ಮತ್ತು ನ್ಯಾನೋ ಸಿಲಿಕ ಮಿಶ್ರಿತ ಎಪೋಕ್ಸಿ ಪಾಲಿಮರ್‌ನ ಯಾಂತ್ರಿಕ ಮತ್ತು ಉಷ್ಣ ಗುಣಗಳ ಅಧ್ಯಯನ

ಎ. ರೇವತಿ[೧], ನವನೀತ ಎಸ್[೧], ಶೈಲಜ ಶ್ರೀಹರಿ[೧], ಎನ್ ಜಗನ್ನಾಥನ್[೨], ಸಿ.ಎಮ್ ಮಂಜುನಾಥ[೨]
[೧]ಸಾಮಾಜಿಕ ಧ್ಯೇಯ ಹಾಗೂ ವಿಶೇಷ ತಂತ್ರಜ್ಞಾನಗಳ ಕೇಂದ್ರ, [೨]ಸಂರಚನಾ ತಂತ್ರಜ್ಞಾನಗಳ ವಿಭಾಗ, ಸಿ.ಎಸ್.ಐ.ಆರ್– ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು, ಬೆಂಗಳೂರು –೫೬೦೦೧೭

ನೂತನ ತಂತ್ರಜ್ಞಾನಗಳ ಅಭಿವೃದ್ಧಿಯಲ್ಲಿ ಹೊಸ ಹೊಸ ಪದಾರ್ಥಗಳ ಆವಿಷ್ಕಾರ ಮತ್ತು ಅವುಗಳ ಸೇರ್ಪಡೆ ಬಹು ಪ್ರಮುಖ ಪಾತ್ರ ವಹಿಸುತ್ತದೆ. ಅದರಲ್ಲಿ ಸಂಘಟಿತ ಪದಾರ್ಥಗಳು ತಮ್ಮ ಕಡಿಮೆ ತೂಕ ಹಾಗೂ ನಿರ್ದಿಷ್ಟವಾದ ಶಕ್ತಿ (strength) ಮತ್ತು ಪೆಡಸುತನ (stiffness) ಗುಣಗಳಿಂದ ವೈಮಾನಿಕ (Aeronautical), ಅಂತರಿಕ್ಷ (Aerospace) ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಬಳಕೆಯಲ್ಲಿವೆ. ಇಂತಹ ಸಂಘಟಿತ ಪದಾರ್ಥಗಳಲ್ಲಿ ನೂತನ ಆವಿಷ್ಕಾರವಾದ ನ್ಯಾನೋ ಸಿಲಿಕ ಹಾಗೂ ಮೈಕ್ರೋನ್ ರಬ್ಬರ್ ಕಣಗಳನ್ನು ಎಪೋಕ್ಸಿ ಮಾತೃಕೆಯಲ್ಲಿ ಹುದುಗಿಸಿ, ಅದರಿಂದ ತಯಾರಿಸಿದ ನ್ಯಾನೋ ಸಂಘಟಿತ ವಸ್ತುಗಳ ಯಾಂತ್ರಿಕ ಮತ್ತು ಉಷ್ಣ ಗುಣಗಳ ಬಗ್ಗೆ ಈ ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ.

ಎಪೋಕ್ಸಿ ಪಾಲಿಮರ್‌ನ್ನು ಪರಿವರ್ತನೆಗೊಳಿಸಿ ನಾಲ್ಕು ವಿಧದ ಸಂಘಟಿತ ಪದಾರ್ಥಗಳನ್ನು ತಯಾರಿಸಲಾಗಿದೆ. (೧) ಬಲ್ಕ್ ಎಪೋಕ್ಸಿ (೨) ೯% ಮೈಕ್ರೋನ್ ರಬ್ಬರ್ ಕಣ ಮಿಶ್ರಿತ ಎಪೋಕ್ಸಿ (೩) ೧೦% ನ್ಯಾನೋ ಸಿಲಿಕ (Nano Silica) ಮಿಶ್ರಿತ ಎಪೋಕ್ಸಿ ಹಾಗೂ (೪) ೯% ಮೈಕ್ರೋನ್ ರಬ್ಬರ್ ಮತ್ತು ೧೦% ನ್ಯಾನೋ ಸಿಲಿಕ ಕಣ ಮಿಶ್ರಿತ ಹೈಬ್ರಿಡ್ ಎಪೋಕ್ಸಿ. ಈ ನಾಲ್ಕು ವಿಧದ ಸಂಘಟಿತ ಪದಾರ್ಥದಿಂದ ಪರೀಕ್ಷಾ ಮಾದರಿ (Test specimen) ಯನ್ನು ತಯಾರಿಸಿ ಅದರ ಯಾಂತ್ರಿಕ ಗುಣ (ಟೆನ್‌ಸೈಲ್ ಶಕ್ತಿ, ಮಾಡ್ಯುಲಸ್ ಹಾಗೂ ಸ್ಟ್ರೇನ್) ಮತ್ತು ಗಾಜು ಪರಿವರ್ತನಾ ಉಷ್ಣಾಂಶ (ಟಿ.ಜಿ) ವನ್ನು ಕಂಡುಹಿಡಿಯಲಾಗಿದೆ. ಅಲ್ಲದೆ ಪರಿಸರದ ತೀವ್ರ ತೇವಾಂಶ/ಉಷ್ಣಾಂಶಗಳಿಂದ ಸಂಘಟಿತ ಪದಾರ್ಥಗಳ ಟಿ.ಜಿಯ ಮೇಲಾಗುವ ಪರಿಣಾಮದ ಅಧ್ಯಯನಕ್ಕಾಗಿ ಪರೀಕ್ಷಾ ಮಾದರಿಯನ್ನು, ನೀರಿನಲ್ಲಿ ೭೦°C ಉಷ್ಣಾಂಶದಲ್ಲಿ ಅದ್ದಿ, ಅದರ ತೇವಾಂಶ ಹೀರಿಕೆಯು ಸಂಪೂರ್ಣಗೊಂಡಾಗ (Saturation), ಶುಷ್ಕ ಟಿ.ಜಿಯನ್ನು ಕಂಡುಹಿಡಿಯಲಾಗಿದೆ. ಮೈಕ್ರೋನ್ ರಬ್ಬರ್ ಕಣ ಮಿಶ್ರಿತ ಎಪೋಕ್ಸಿ ಸಂಘಟಿತ ಪದಾರ್ಥಗಳ ಟೆನ್‌ಸೈಲ್ ಶಕ್ತಿ ಮತ್ತು ಮಾಡ್ಯುಲಸ್ ಗುಣಗಳು ೧೧% ಹಾಗೂ ೨೦% ರಷ್ಟು ಕಡಿಮೆಯಾಗಿ, ಡಕ್ಟಲಿಟಿ ಮಾತ್ರ ೨೩% ನಷ್ಟು ವೃದ್ಧಿಯಾಗಿರುವುದು ಕಂಡುಬಂದಿದೆ. ನ್ಯಾನೋ ಸಿಲಿಕ ಮಿಶ್ರಿತ ಎಪೋಕ್ಸಿಯಲ್ಲಿ ಈ ಎಲ್ಲಾ ಗುಣಗಳು ೧೮%, ೨೧% ಹಾಗೂ ೩೨% ರಷ್ಟು ವೃದ್ಧಿಯಾಗಿವೆ. ಆದರೆ ಹೈಬ್ರಿಡ್ ಎಪೋಕ್ಸಿ ಸಂಘಟಿತ ಪದಾರ್ಥಗಳ (ಮೈಕ್ರೋನ್ ರಬ್ಬರ್ ಕಣ + ನ್ಯಾನೋ ಸಿಲಿಕ) ಟೆನ್‌ಸೈಲ್ ಶಕ್ತಿ ಮತ್ತು ಮಾಡ್ಯುಲಸ್ ಗುಣಗಳು ಬಲ್ಕ್ ಎಪೋಕ್ಸಿಯಷ್ಟೇ ಇರುವುದು ಕಂಡುಬಂದಿದೆ. ಅಟಾಮಿಕ್ ಮೈಕ್ರೋಸ್ಕೋಪಿಯಲ್ಲಿ ನೋಡಿದಾಗ ಈ ಹೈಬ್ರಿಡ್ ಸಂಘಟಿತ ಪದಾರ್ಥದಲ್ಲಿ, ಮೈಕ್ರೋನ್ ರಬ್ಬರ್ ಕಣವು ಸರಿಯಾದ ರೀತಿಯಲ್ಲಿ ವಿತರಿತವಾಗಿದೆ ಆದರೆ ನ್ಯಾನೋ ಸಿಲಿಕ ಕಣವು ಅಗ್ಲೋಮೆರೇಟ್ ಆಗಿರುವುದರಿಂದ ಬಹುಶ: ಅದರ ಗುಣಗಳು ವೃದ್ಧಿಯಾಗದೇ ಬಲ್ಕ್ ಎಪೋಕ್ಸಿಯಷ್ಟೇ ಇದೆ. ಅಷ್ಟೇ ಅಲ್ಲದೆ, ಎಪೋಕ್ಸಿ ಸಂಘಟಿತ ಪದಾರ್ಥಗಳಲ್ಲಿ ಮೈಕ್ರೋನ್ ರಬ್ಬರ್ ಮತ್ತು ನ್ಯಾನೋ ಸಿಲಿಕ ಕಣಗಳನ್ನು ಸೇರಿಸಿರುವುದರಿಂದ ಅದರ ಟಿ.ಜಿ ಸಹಾ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುವುದು ಕಂಡುಬಂದಿದೆ.

೧.೦ ಪೀಠಿಕೆ (INTRODUCTION): ನೂತನ ತಂತ್ರಜ್ಞಾನಗಳ ಅಭಿವೃದ್ಧಿಯಲ್ಲಿ ಹೊಸ ಹೊಸ ಪದಾರ್ಥಗಳ ಆವಿಷ್ಕಾರ ಮತ್ತು ಅವುಗಳ ಸೇರ್ಪಡೆ ಬಹು ಪ್ರಮುಖ ಪಾತ್ರ ವಹಿಸುತ್ತದೆ. ಅದರಲ್ಲಿ ಸಂಘಟಿತ ಪದಾರ್ಥಗಳು ತಮ್ಮ ಕಡಿಮೆ ತೂಕ ಹಾಗೂ ನಿರ್ದಿಷ್ಟವಾದ ಶಕ್ತಿ (strength) ಮತ್ತು ಪೆಡಸುತನ (stiffness) ಗುಣಗಳಿಂದ ವೈಮಾನಿಕ (Aeronautical), ಅಂತರಿಕ್ಷ (Aerospace) ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಬಳಕೆಯಲ್ಲಿವೆ. ಇಂತಹ ಸಂಘಟಿತ ಪದಾರ್ಥಗಳಲ್ಲಿ ನ್ಯಾನೋ ಸಂಘಟಿತ ವಸ್ತುಗಳು ಒಂದು ನೂತನ ಆವಿಷ್ಕಾರವಾಗಿದ್ದು, ಅದರಲ್ಲಿ ನ್ಯಾನೋಮೀಟರ್ ಗಾತ್ರದ ಫಿಲ್ಲರನ್ನು ಉಪಯೋಗಿಸಲಾಗುತ್ತದೆ [೧]. ವಿವಿಧ ಬಗೆಯ ಸೂಕ್ಷ್ಮ ಕಣ (Particulate), ನಾರಿನಂತಿರುವ (Fibrous) ಮತ್ತು ಪದರವಾಗಿರುವ (Layered) ನ್ಯಾನೋ ಫಿಲ್ಲರನ್ನು ಬಳಸಿದಾಗ ಸಂಘಟಿತ ಪದಾರ್ಥಗಳ ಥರ್ಮಲ್ (Thermal), ಇಲೆಕ್ಟ್ರಿಕಲ್ (Electrical) ಮತ್ತು ಯಾಂತ್ರಿಕ ಗುಣಗಳಲ್ಲಿ ಬದಲಾವಣೆಯಾಗಿರುವುದು ಕಂಡುಬಂದಿದೆ [೨–೬]. ಹೈಬ್ರಿಡ್ ಟಫ್‌ಂಡ್ ಎಫ್.ಆರ್.ಪಿ ಸಂಘಟಿತ ಪದಾರ್ಥಗಳಲ್ಲಿ, ಎಪೋಕ್ಸಿ ಮಾತೃಕೆಯನ್ನು ಎರಡು ವಿವಿಧ ಬಗೆಯ ಫಿಲ್ಲರಿಂದ (ಸಿಲಿಕ ಹಾಗೂ ರಬ್ಬರ್ ಕಣ) ಪರಿವರ್ತಿಸಿದಾಗ ಫ್ರ್ಯಾಕ್ಚರ್ ಟಫ್‌ನೆಸ್ ತುಂಬಾ ಹೆಚ್ಚಾಗಿರುವುದನ್ನು ಗಮನಿಸಬಹುದು [೨–೭].

ಸಂಘಟಿತ ಪದಾರ್ಥಗಳನ್ನು ತೀವ್ರ ತೇವಾಂಶ/ಉಷ್ಣಾಂಶಗಳಿರುವ ವಾತಾವರಣದಲ್ಲಿ ಬಳಸಿದಾಗ, ಅವುಗಳು ತೇವಾಂಶ ಹೀರಿಕೊಳ್ಳುವ ಅಂಶವು ಹಲವು ಅಧ್ಯಯನಗಳಿಂದ ದೃಢಪಟ್ಟಿದೆ [೮]. ಹೀಗೆ ಹೀರಿಕೊಂಡ ತೇವಾಂಶವು ಪದಾರ್ಥದ ಯಾಂತ್ರಿಕ ಗುಣ ಹಾಗೂ ಟಿ.ಜಿಯ ಮೇಲೆ ಪ್ರಭಾವ ಬೀರುತ್ತದೆ. ಮೈಕ್ರೋನ್ ಮತ್ತು ನ್ಯಾನೋ ಸಂಘಟಿತ ಪದಾರ್ಥದ ಟಿ.ಜಿಯ ಮೇಲೆ ತೇವಾಂಶ ಹೀರಿಕೆಯ ಪ್ರಭಾವದ ಕುರಿತು ಬಹಳ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ನ್ಯಾನೋ ಸಿಲಿಕ ಹಾಗೂ ಮೈಕ್ರೋನ್ ರಬ್ಬರ್ ಕಣ ಮಿಶ್ರಿತ ಎಪೋಕ್ಸಿ ಸಂಘಟಿತ ಪದಾರ್ಥಗಳ ಯಾಂತ್ರಿಕ ಮತ್ತು ಉಷ್ಣ ಗುಣ ಹಾಗೂ ಅವುಗಳ ತೇವಾಂಶ ಹೀರಿಕೆಯಿಂದ ಟಿ.ಜಿಯ ಮೇಲಾಗುವ ಪರಿಣಾಮವನ್ನು ಈ ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ.

೨.೦ ಪರೀಕ್ಷಾ ವಿಧಾನ (EXPERIMENTAL):

೨.೧ ಸಂಘಟಿತ ಪದಾರ್ಥಗಳು ಮತ್ತು ತಯಾರಿಕೆ:

ಈ ಅಧ್ಯಯನದಲ್ಲಿ ಉಪಯೋಗಿಸಿರುವ ಪದಾರ್ಥಗಳೆಂದರೆ – ಎಪೋಕ್ಸಿ ರಾಳ [ಡೈಗ್ಲೈಸಿಡೈಲ್ ಇತರ್ ಆಫ್ ಬಿಸ್‌ಫಿನಾಲ್ ಎ, 'LY೫೫೬'– ಹಂಟ್ಸ್‌ಮನ್, ಜರ್ಮನಿ], ಶೇಕಡಾ ೪೦ ಸಿಲಿಕ (SiO_2) ನ್ಯಾನೋ ಕಣ (ನ್ಯಾನೋಪಾಕ್ಸ್ –೪೦೦) ಮಿಶ್ರಿತ ಎಪೋಕ್ಸಿ ರಾಳ

ಮತ್ತು ಶೇಕಡಾ ೪೦ ಕಾರ್ಬೋಕ್ಸಿ ಟರ್ಮಿನೇಟೆಡ್ ಬ್ಯುಟಾಡೈಯಿನ್ ಅಕ್ರಿಲೋನೈಟ್ರೈಲ್ (ಸಿಟಿಬಿನ್) ಮೈಕ್ರೋ ರಬ್ಬರ್ (ಅಲ್ಟಿಪಾಕ್ಸ್– ೧೦೦೦) ಕಣ ಮಿಶ್ರಿತ ಎಪೋಕ್ಸಿ ರಾಳ [ನ್ಯಾನೋ ರೆಸಿನ್– ಜರ್ಮನಿ]. ಅಲ್ಲದೆ ಮಿಥೈಲ್ ಹೆಕ್ಸಾ ಹೈಡ್ರೋಫ್ಥಾಲಿಕ್ ಆಸಿಡ್ ಎನ್‌ಹೈಡ್ರೈಡ್ (ಅಲ್ಟಿಡರ್ ಎಚ್. ಇ ೬೦೦) ಕ್ಯೂರಿಂಗ್ ಏಜೆಂಟ್‌ನ್ನು [ನ್ಯಾನೋ ರೆಸಿನ್– ಜರ್ಮನಿ] ಸಹಾ ಬಳಸಲಾಗಿದೆ.

ಅಗತ್ಯವಿರುವ ಪ್ರಮಾಣದಲ್ಲಿ ಎಪೋಕ್ಸಿ ರಾಳ ಮತ್ತು ಅದಕ್ಕೆ ಸರಿಹೊಂದುವ ಪ್ರಮಾಣದಲ್ಲಿ ನ್ಯಾನೋ ಸಿಲಿಕ ಕಣ ಹುದುಗಿರುವ ಎಪೋಕ್ಸಿ ರಾಳ (ಶೇಕಡಾ ೧೦), ಮೈಕ್ರೋ ರಬ್ಬರ್ ಕಣ ಹುದುಗಿರುವ ಎಪೋಕ್ಸಿ ರಾಳ (ಶೇಕಡಾ ೯) ಮತ್ತು ಕ್ಯೂರಿಂಗ್ ಏಜೆಂಟ್‌ನ್ನು ಬೇರೆ ಬೇರೆ ಬೀಕರಿನಲ್ಲಿ ತೆಗೆದುಕೊಂಡು, ವ್ಯಾಕ್ಯೂಮ್ ಓವನ್ನಿನಲ್ಲಿ ೦.೧ atm ಮತ್ತು ೫೦°ಸೆ ನಲ್ಲಿ ಡಿಗ್ಯಾಸ್ ಮಾಡಬೇಕು. ಇದರಿಂದಾಗಿ ರಾಳ ಮತ್ತು ಕ್ಯೂರಿಂಗ್ ಏಜೆಂಟ್‌ನಲ್ಲಿರುವ ಗಾಳಿಗುಳ್ಳೆಗಳು ಸಂಪೂರ್ಣವಾಗಿ ತೆಗೆಯಲ್ಪಡುತ್ತವೆ. ಡಿಗ್ಯಾಸ್‌ನ ನಂತರ, ಎಲ್ಲಾ ಅವಯವಗಳನ್ನು (Constituents) ಮೆಕ್ಯಾನಿಕಲ್ ಸ್ಟಿರರಿಂದ ಚೆನ್ನಾಗಿ ಮಿಕ್ಸ್ ಮಾಡಿ, ಪುನಃ ಡಿಗ್ಯಾಸ್ ಮಾಡಬೇಕು. ಅನಂತರ ಕ್ಯೂರಿಂಗ್ ಏಜೆಂಟ್‌ನ್ನು ಬೆರೆಸಿ, ಮಿಶ್ರಣವನ್ನು ಸ್ಟೀಲ್ ಮೌಲ್ಡ್‌ನಲ್ಲಿ ಎರಕ ಹುಯ್ಯಬೇಕು. ಮೌಲ್ಡ್‌ನ್ನು ಓವನ್ನಿನಲ್ಲಿ ಇರಿಸಿ ೧೦೦°ಸೆ ನಲ್ಲಿ ೨ ಗಂಟೆ ಕ್ಯೂರ್ ಮಾಡಿ, ಮತ್ತೆ ೧೫೦°ಸೆನಲ್ಲಿ ೧೦ ಗಂಟೆ ಪೋಸ್ಟ್ ಕ್ಯೂರ್ ಮಾಡಬೇಕು. ಇದೇ ರೀತಿ ನಾಲ್ಕು ವಿಧದ ಎಪೋಕ್ಸಿ ಸಂಘಟಿತ ಪದಾರ್ಥಗಳನ್ನು ತಯಾರಿಸಲಾಗಿದೆ. (೧) ಬಲ್ಕ್ ಎಪೋಕ್ಸಿ (೨) ೯% ಕಾರ್ಬೋಕ್ಸಿ ಟರ್ಮಿನೇಟೆಡ್ ಬ್ಯುಟೈಲ್ ಅಕ್ರಿಲೋನೈಟ್ರೈಲ್ ರಬ್ಬರ್ (CTBN) ಕಣ ಮಿಶ್ರಿತ ಎಪೋಕ್ಸಿ (೩) ೧೦% ನ್ಯಾನೋ ಸಿಲಿಕ (Nano Silica) ಮಿಶ್ರಿತ ಎಪೋಕ್ಸಿ ಹಾಗೂ (೪) ೯% ಮೈಕ್ರೋನ್ ರಬ್ಬರ್ ಮತ್ತು ೧೦% ನ್ಯಾನೋ ಸಿಲಿಕ ಕಣ ಮಿಶ್ರಿತ ಹೈಬ್ರಿಡ್ ಎಪೋಕ್ಸಿ.

೨.೨ ಮೈಕ್ರೋಸ್ಟ್ರಕ್ಚರ್ ಹಾಗೂ ಯಾಂತ್ರಿಕ ಮತ್ತು ಉಷ್ಣ ಗುಣಗಳ ಪರೀಕ್ಷೆ: ಅಟಾಮಿಕ್ ಫೋರ್ಸ್ ಮೈಕ್ರೋಸ್ಕೋಪಿನಲ್ಲಿರುವ (ವೀಕೊ. ಯುಕೆ) 'ಜೆ' ಸ್ಕ್ಯಾನರ್ ಮತ್ತು 'ನ್ಯಾನೋಸ್ಕೋಪ್ ೪' ಕಂಟ್ರೋಲರ್ ನಿಂದ ಪರಿವರ್ತಿತ ಬಲ್ಕ್ ಎಪೋಕ್ಸಿಯ ಸೂಕ್ಷ್ಮಸಂರಚನೆಯನ್ನು (Microstructure) ಪರೀಕ್ಷಿಸಲಾಗಿದೆ. ಮೊದಲಿಗೆ ಅಲ್ಟ್ರಾ ಮೈಕ್ರೋಟೋಮ್‌ನಿಂದ, ಎಪೋಕ್ಸಿ ಸ್ಯಾಂಪಲನ್ನು ಕಟ್ ಮಾಡಿ ನಂತರ ಅದರ ಮೇಲ್ಪದರವನ್ನು (Surface) ನಯಗೊಳಿಸಿ, ಸಿಲಿಕಾನ್ ಪ್ರೋಬ್‌ನಿಂದ ಟ್ಯಾಪಿಂಗ್ ಮೋಡ್‌ನಲ್ಲಿ ಸ್ಕ್ಯಾನನ್ನು ತೆಗೆದುಕೊಳ್ಳಲಾಗುತ್ತದೆ.

ಎಪೋಕ್ಸಿ ಸಂಘಟಿತ ಪದಾರ್ಥಗಳ ಯಾಂತ್ರಿಕ ಗುಣ (ಟೆನ್‌ಸೈಲ್ ಶಕ್ತಿ, ಮಾಡ್ಯುಲಸ್ ಹಾಗೂ ಸ್ಟ್ರೈನ್) ಗಳನ್ನು ASTM D638 ಪರೀಕ್ಷಾ ವಿಧಾನದಿಂದ ಕಂಡುಹಿಡಿಯಲಾಗಿದೆ. 100KN ಗಣಕ ನಿಯಂತ್ರಿತ ಸರ್ವೋ ಹೈಡ್ರಾಲಿಕ್ ಮೆಶಿನ್ ಬಳಸಿ ಟೆನ್‌ಸೈಲ್ ಗುಣಗಳನ್ನು ೧ಮಿಮಿ/ಮಿನಿಟ್ ಕ್ರಾಸ್‌ಹೆಡ್ ವೇಗದಲ್ಲಿ ಕಂಡುಹಿಡಿಯಲಾಗಿದೆ ಹಾಗೂ ಐದು ಸ್ಯಾಂಪಲ್‌ಗಳನ್ನು ಪರೀಕ್ಷೆ ಮಾಡಿ ಅವುಗಳ ಸರಾಸರಿ ಗುಣಗಳನ್ನು ತುಲನೆ ಮಾಡಲಾಗಿದೆ.

ಎಪೋಕ್ಸಿ ಸಂಘಟಿತ ಪದಾರ್ಥಗಳ ಟಿ.ಜಿಯನ್ನು ASTM D3418 ಪರೀಕ್ಷಾ ವಿಧಾನದಲ್ಲಿ ಅಂತರೀಯ ಕ್ರಮವೀಕ್ಷಣ ಕ್ಯಾಲೋರಿಮೆಟ್ರಿಯಿಂದ (Differential Scanning Calorimetry) ಕಂಡುಹಿಡಿಯಲಾಗಿದೆ. ಅಷ್ಟೇ ಅಲ್ಲದೆ ಪರಿಸರದ ತೀವ್ರ ತೇವಾಂಶ/ಉಷ್ಣಾಂಶಗಳಿಂದ ಸಂಘಟಿತ ಪದಾರ್ಥಗಳ ಟಿ.ಜಿಯ ಮೇಲಾಗುವ ಪರಿಣಾಮದ ಅಧ್ಯಯನಕ್ಕಾಗಿ ಪರೀಕ್ಷಾ ಮಾದರಿಯನ್ನು, ೭೦°ಸೆ ಉಷ್ಣಾಂಶವಿರುವ ನೀರಿನಲ್ಲಿ ಅದ್ದಿ, ಅದರ ತೇವಾಂಶ ಹೀರಿಕೆಯು ಸಂಪೂರ್ಣ ಗೊಂಡಾಗ (Saturation), ಶುಷ್ಕ ಟಿ.ಜಿಯನ್ನು ಕಂಡುಹಿಡಿಯಲಾಗಿದೆ.

೩.೦ ಫಲಿತಾಂಶಗಳು (RESULTS) :

೩.೧ ಮೈಕ್ರೋಸ್ಟ್ರಕ್ಚರ್ : ಎಪೋಕ್ಸಿ ಸಂಘಟಿತ ಪದಾರ್ಥಗಳ ಎಎಫ್‌ಎಮ್ ಫೇಸ್ ಇಮೇಜನ್ನು ಚಿತ್ರ.೧ರಲ್ಲಿ ತೋರಿಸಲಾಗಿದೆ. ಚಿತ್ರ.೧(ಅ) ಪ್ರಕಾರ, ಮೈಕ್ರೋನ್ ರಬ್ಬರ್ ಎಪೋಕ್ಸಿಯಲ್ಲಿ ರಬ್ಬರ್ ಕಣಗಳು ಸರಿಸಮವಾಗಿ ಹರಡಿಕೊಂಡಿದ್ದು, ಅದರ ಸರಾಸರಿ ಗಾತ್ರವು ೦.೫ ರಿಂದ ೧.೦ ಮೈಕ್ರೋಮೀಟರ್‌ನಷ್ಟಿದೆ. ಆದೇ ರೀತಿ, ನ್ಯಾನೋ ಸಿಲಿಕ ಮಿಶ್ರಿತ ಎಪೋಕ್ಸಿಯಲ್ಲಿ (ಚಿತ್ರ.೧(ಇ)) ಸುಮಾರು ೨೦ ನ್ಯಾನೋಮೀಟರ್‌ನಷ್ಟಿರುವ ಸಿಲಿಕ ಕಣಗಳು, ಸರಿಸಮವಾಗಿ ಹರಡಿಕೊಂಡಿವೆ. ಆದರೆ, ಹೈಬ್ರಿಡ್ ಎಪೋಕ್ಸಿಯಲ್ಲಿ ರಬ್ಬರ್ ಕಣಗಳು ಮಾತ್ರ ಸರಿಸಮವಾಗಿ ಹರಡಿಕೊಂಡಿದ್ದು, ಸಿಲಿಕ ಕಣಗಳು ಅಗ್ಲೋಮರೇಟ್ ಆಗಿ ನೆಕ್ಲೇಸ್ ತರಹದ ಸಂರಚನೆ ಹೊಂದಿದ್ದು, ಅದರ ಸರಾಸರಿ ಗಾತ್ರವು ೧.೦ ಮೈಕ್ರೋಮೀಟರ್‌ನಷ್ಟಿದೆ (ಚಿತ್ರ.೧(ಈ)).



(ಅ) ಬಲ್ಕ್ ಎಪೋಕ್ಸಿ (ಆ) ಮೈಕ್ರೋನ್ ರಬ್ಬರ್ ಎಪೋಕ್ಸಿ



(ಇ) ನ್ಯಾನೋ ಸಿಲಿಕ ಎಪೋಕ್ಸಿ (ಈ) ಹೈಬ್ರಿಡ್ ಎಪೋಕ್ಸಿ

ಚಿತ್ರ.೧. ಎಪೋಕ್ಸಿ ಸಂಘಟಿತ ಪದಾರ್ಥಗಳ ಎಎಫ್‌ಎಮ್ ಫೇಸ್ ಇಮೇಜ್



ಚಿತ್ರ.೨ ಎಪೋಕ್ಸಿ ಸಂಘಟಿತ ಪದಾರ್ಥಗಳ ಟೆನ್‌ಸೈಲ್ ಕರ್ವ್

ಟೇಬಲ್.೧: ಎಪೋಕ್ಸಿ ಸಂಘಟಿತ ಪದಾರ್ಥದ ಯಾಂತ್ರಿಕ ಗುಣಗಳ ಸಾರಾಂಶ

ಸಂಘಟಿತ ಪದಾರ್ಥಗಳ ವಿಧ	ಟೆನ್‌ಸೈಲ್ ಶಕ್ತಿ (MPa)	% ಕಡಿಮೆ/ ಹೆಚ್ಚು	ಮಾಡ್ಯುಲಸ್ (GPa)	% ಕಡಿಮೆ/ ಹೆಚ್ಚು	ಸ್ಟ್ರೈನ್ (%)	% ಹೆಚ್ಚು
ಬಲ್ಕ್ ಎಪೋಕ್ಸಿ (೧)	೭೩.೩	-	೨.೬೨	–	೩.೭೮	–
ಮೈಕ್ರೋನ್ ರಬ್ಬರ್ ಎಪೋಕ್ಸಿ (೨)	೬೫.೧	– ೧೧.೨	೨.೧೧	– ೧೯.೫	೪.೬೫	+ ೨೩.೦
ನ್ಯಾನೋ ಸಿಲಿಕ ಎಪೋಕ್ಸಿ (೩)	೮೬.೩	+ ೧೭.೭	೩.೦೭	+ ೨೧.೦	೪.೯೯	+ ೩೨.೦
ಹೈಬ್ರಿಡ್ ಎಪೋಕ್ಸಿ (೪)	೬೪.೪	– ೧೨.೧	೨.೩೫	– ೧೦.೩	೪.೬೧	+ ೨೨.೦

೩.೩ ಗಾಜು ಪರಿವರ್ತನಾ ಉಷ್ಣಾಂಶ (ಟಿ.ಜಿ): ಎಪೋಕ್ಸಿ ಸಂಘಟಿತ ಪದಾರ್ಥಗಳ ಟಿ.ಜಿಯನ್ನು ಒಣ ಮತ್ತು ಶುಷ್ಕ ವಾತಾವರಣದಲ್ಲಿ ಕಂಡುಹಿಡಿಯಲಾಗಿದೆ. ಹೈಬ್ರಿಡ್ ಸಂಘಟಿತ ಪದಾರ್ಥದ ಮಾದರಿ ಟಿ.ಜಿ ಕರ್ವ್‌ನ್ನು ಚಿತ್ರ.೩ರಲ್ಲಿ ತೋರಿಸಲಾಗಿದೆ ಹಾಗೂ ಒಣ ಮತ್ತು ಶುಷ್ಕ ಟಿ.ಜಿಯನ್ನು ಟೇಬಲ್.೨ ರಲ್ಲಿ ಚಿತ್ರಿಸಲಾಗಿದೆ. ಎಪೋಕ್ಸಿ ರಾಳದಲ್ಲಿ ರಬ್ಬರ್ ಮತ್ತು ಸಿಲಿಕ ಫಿಲ್ಲರನ್ನು ಸೇರಿಸಿದಾಗ ಅದರ ಒಣ ಟಿ.ಜಿಯು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುವುದು ಕಂಡುಬಂದಿದೆ. ರಬ್ಬರ್ ಎಪೋಕ್ಸಿ ಸಂಘಟಿತ ಪದಾರ್ಥದಲ್ಲಿ ಒಣ ಟಿ.ಜಿಯು ೫°ಸೆ ನಷ್ಟು ಕಡಿಮೆಯಾಗಿದ್ದು, ಸಿಲಿಕ ಎಪೋಕ್ಸಿಯಲ್ಲಿ ಕೇವಲ ೨°ಸೆ ನಷ್ಟು ಕಡಿಮೆಯಾಗಿದೆ. ಆದರೆ ಎರಡೂ ಫಿಲ್ಲರನ್ನು ಒಟ್ಟಿಗೆ ಸೇರಿಸಿದಾಗ ಹೈಬ್ರಿಡ್ ಸಂಘಟಿತ ಪದಾರ್ಥದ ಟಿ.ಜಿಯು ೧೩°ಸೆ ಗಳಷ್ಟು ಕಡಿಮೆಯಾಗಿರುವುದು ಕಂಡುಬಂದಿದೆ. ಇದೇ ರೀತಿಯಾದ ವರ್ತನೆಯನ್ನು ಶುಷ್ಕ ಟಿ.ಜಿಯಲ್ಲಿ ಸಹಾ ಕಾಣಬಹುದು. ರಬ್ಬರ್ ಮತ್ತು ಸಿಲಿಕ ಕಣಗಳಿಂದ ಟಿ.ಜಿಯಲ್ಲಿ ಕಂಡುಬಂದಿರುವ ವ್ಯತ್ಯಾಸವನ್ನು ಕೆಲವೊಂದು ಲೇಖಕರು ಅವರ ಅಧ್ಯಯನದಲ್ಲಿ ಪ್ರಸ್ತುತಪಡಿಸಿದ್ದಾರೆ [೧೧,೧೭].

ಟೇಬಲ್.೨ : ಎಪೋಕ್ಸಿ ಸಂಘಟಿತ ಪದಾರ್ಥಗಳ ಒಣ ಮತ್ತು ಶುಷ್ಕ ಟಿ.ಜಿ

ಸಂಘಟಿತ ಪದಾರ್ಥಗಳ ವಿಧ	ಒಣ ಟಿ.ಜಿ (°ಸೆ)	% ಕಡಿಮೆ	ಶುಷ್ಕ ಟಿ.ಜಿ (°ಸೆ)	% ಕಡಿಮೆ
ಬ್ಲ್ಯಾಕ್ ಎಪೋಕ್ಸಿ	೧೫೦	-	೧೪೬	–
ಮೈಕ್ರೋನ್ ರೆಬ್ಬರ್ ಎಪೋಕ್ಸಿ	೧೪೫	– ೩.೪	೧೩೫	– ೭.೫
ನ್ಯಾನೋ ಸಿಲಿಕ ಎಪೋಕ್ಸಿ	೧೪೮	– ೧.೩	೧೪೧	– ೩.೪
ಹೈಬ್ರಿಡ್ ಎಪೋಕ್ಸಿ	೧೩೭	– ೯.೪	೧೩೦	– ೧೦.೯



ಚಿತ್ರ.೩ ಹೈಬ್ರಿಡ್ ಎಪೋಕ್ಸಿ ಸಂಘಟಿತ ಪದಾರ್ಥದ ಟಿ.ಜಿ ಕರ್ವ್

೪.೦ ಮುಕ್ತಾಯ (CONCLUSION) : ಈ ಅಧ್ಯಯನದ ಫಲಿತಾಂಶದ ಪ್ರಕಾರ, ಮೈಕ್ರೋನ್ ರಬ್ಬರ್ ಮತ್ತು ನ್ಯಾನೋ ಸಿಲಿಕ ಕಣವು ಎಪೋಕ್ಸಿ ಸಂಘಟಿತ ಪದಾರ್ಥಗಳ ಯಾಂತ್ರಿಕ ಗುಣ ಮತ್ತು ಗಾಜು ಪರಿವರ್ತನಾ ಉಷ್ಣಾಂಶದ (ಟಿ.ಜಿ) ಮೇಲೆ ಪರಿಣಾಮ ಬೀರಿವೆ. ಮೈಕ್ರೋನ್ ರಬ್ಬರ್ ಕಣಗಳನ್ನು ಎಪೋಕ್ಸಿಯಲ್ಲಿ ಸೇರಿಸಿದಾಗ ಅದರ ಟೆನ್‌ಸೈಲ್ ಗುಣ ಮತ್ತು ಟಿ.ಜಿ ಎರಡೂ ಕಡಿಮೆಯಾಗಿದೆ ಹಾಗೂ ಸಿಲಿಕ ಕಣಗಳಿಂದ ಟೆನ್‌ಸೈಲ್ ಗುಣ ವೃದ್ಧಿಯಾಗಿ, ಟಿ.ಜಿ ಮಾತ್ರ ಕಡಿಮೆಯಾಗಿರುವುದು ಕಂಡುಬಂದಿದೆ. ಈ ಎರಡೂ ಕಣಗಳನ್ನು ಒಟ್ಟಿಗೆ ಸೇರಿಸಿ ತಯಾರಿಸಿದ ಹೈಬ್ರಿಡ್ ಎಪೋಕ್ಸಿ ಸಂಘಟಿತ ಪದಾರ್ಥಗಳ ಟೆನ್‌ಸೈಲ್ ಗುಣ ಮತ್ತು ಟಿ.ಜಿ ಎರಡೂ ಕಡಿಮೆಯಾಗಿದೆ. ಆದರೆ ಈ ಎರಡೂ ಕಣಗಳನ್ನು ಒಟ್ಟಿಗೆ ಸೇರಿಸಿದಾಗ ಎಪೋಕ್ಸಿ ಸಂಘಟಿತ ಪದಾರ್ಥಗಳ ದಣಿವು (fatigue) ಮತ್ತು ಫ್ರ್ಯಾಕ್ಚರ್ ಗುಣಗಳು ಶೇಕಡಾ ೨೦೦ ರಷ್ಟು ವೃದ್ಧಿಯಾಗಿರುವುದು ನಮ್ಮ ಮೊದಲಿನ ಅನ್ವೇಷಣೆಯಲ್ಲಿ ತಿಳಿದುಬಂದಿದೆ, ಹಾಗಾಗಿ ಈ ಹೈಬ್ರಿಡ್ ಎಪೋಕ್ಸಿ ಸಂಘಟಿತ ಪದಾರ್ಥಗಳನ್ನು ಹಾನಿ ಸಹಿಷ್ಣುತಾ (damage tolerant) ಸಂಘಟಿತ ಸಂರಚನೆಗಳ ವಿನ್ಯಾಸದಲ್ಲಿ ಬಳಸಬಹುದು.

ವಂದನಾರ್ಪಣೆ (ACKNOWLEDGEMENTS): ಈ ಅಧ್ಯಯನಕ್ಕೆ ಸಂಬಂಧಪಟ್ಟ ಕೆಲವೊಂದು ಪರೀಕ್ಷೆಗಳು ಲಂಡನ್ನಿನ ಇಂಪೀರಿಯಲ್ ಕಾಲೇಜಿನಲ್ಲಿ ನಡೆದುದರಿಂದ, ಅದರ ಮುಖ್ಯಸ್ಥರಾದ ಎ.ಜೆ. ಕಿನ್‌ಲಾಕ್ ಮತ್ತು ಡಾ. ಎ.ಸಿ ಟೈಲರ್ ಇವರಿಗೆ ಲೇಖಕರು ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ನಮ್ಮ ಸಂಸ್ಥೆಯ ನಿರ್ದೇಶಕರಾದ ಶ್ಯಾಮ್ ಚೆಟ್ಟಿ ಮತ್ತು ಸಿ.ಎಸ್.ಎಮ್.ಎಸ್.ಟಿ ಹಾಗೂ ಸಂರಚನಾ ತಂತ್ರಜ್ಞಾನಗಳ ವಿಭಾಗದ ಮುಖ್ಯಸ್ಥರ ಬೆಂಬಲ ಮತ್ತು ಪ್ರೋತ್ಸಾಹಕ್ಕಾಗಿ, ಲೇಖಕರು ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ. ಪರೀಕ್ಷಣೆಯಲ್ಲಿ ಸಹಾಯ ಮಾಡಿರುವ ಸಿ.ಎಸ್.ಎಮ್.ಎಸ್.ಟಿ ಹಾಗೂ ಸಂರಚನಾ ತಂತ್ರಜ್ಞಾನಗಳ ವಿಭಾಗದ ಸಹೋದ್ಯೋಗಿಗಳಿಗೂ ಹೃತ್ಪೂರ್ವಕ ವಂದನೆಗಳು.

ಉಲ್ಲೇಖನಗಳು (REFERENCES):

[1] E.T. Thostenson, C. Li, T.W. Chou, "Nanocomposites in context", Comp. Sci. Tech., Vol. 65, pp. 491-516, 2005.

[2] A.J. Kinloch, K. Masania, A.C. Taylor, S. Sprenger, and D. Egan, "The fracture of glass fiber reinforced epoxy composites using nanoparticle modified matrices", J Mater. Sci., Vol. 43, No. 3, pp. 1151-1154, 2008.

[3] Y. Zhou, V. Rangari, H. Mahfuz, S. Jeelani, P.K. Mallik, "Experimental study on thermal and mechanical behaviour of polypropylene, talc/polypropylene and polypropylene/ clay nanocomposites", J Mater. Sci. Engg. A, Vol. 402, pp. 109-117, 2005.

[4] J. Ma, M.S. Mo, X.S. Du, P. Rosso, K. Friedrich and H.C. Kuan, " Effect of inorganic nanoparticles on mechanical property, fracture toughness and toughening mechanism of two epoxy systems", Polymer Vol. 49, pp. 3510-3523, 2008.

[5] A. Haque, M. Shamsuzzoha, F. Hussain and D. Dean, "S2- glass/epoxy polymer nanocomposites: manufacturing, structures, thermal and mechanical properties", J comp. mater., Vol. 37, No. 20, pp. 1821-1837, 2003.

[6] A.J. Kinloch, R.D. Mohammed, A.C. Taylor, C. Eger, S. Sprenger and Egan D, " The effect of silica nano particles and rubber particles on the toughness of multiphase thermosetting epoxy polymers", J Mater. Sci., Vol. 40, No. 18, pp. 5083-5086, 2005.

[7] A.J. Kinloch, R.D. Mohammed, A.C. Taylor, S. Sprenger, and D.J. Egan, "The interlaminar toughness of carbon fiber reinforced plastic composites using hybrid toughened matrices", J Mater. Sci., Vol. 41, No. 15, pp. 5043-5046, 2006.

[8] G.S Springer, "Environmental effects on composite materials", ed, Lancaster, PA: Technomic Publishing company, vol. 3, pp 1-34.

[9] J. Summerscales and T.J. Searle, "Low-pressure (vacuum infusion) techniques for moulding large composite structures", Proc IMechE, J Mater: Des Appl., Vol. 219, pp. 45-58, 2005.

[10] Standard test method for tensile properties of polymer matrix composite materials, ASTM D3039, Annual book of ASTM Standards, American Society for Testing and Materials, PA, Vol. 15.03, 2003.

[11] Standard test method for compression properties of polymer matrix composite materials, ASTM D3410, Annual book of ASTM Standards, American Society for Testing and Materials, PA, Vol. 15.03, 2003.

[12] Standard test method for ILSS polymer matrix composite materials, ASTM D2344, Annual book of ASTM Standards, American Society for Testing and Materials, PA, Vol. 15.03, 2003.

[13] Standard test method for Flexure properties of polymer matrix composite materials, ASTM D790, Annual book of ASTM Standards, American Society for Testing and Materials, PA, Vol. 15.03, 2003.

ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯದ ಶಿಲೀಂಧ್ರ-, ಶಿಲೀಂಧ್ರನಂಜು- ಮತ್ತು ಉತ್ಕರ್ಷಣ-ನಿರೋಧಕ ಗುಣಗಳು - ಪ್ರಾಯೋಗಿಕ ನೆಲೆಯಲ್ಲಿ ಒಂದು ಅಧ್ಯಯನ

ಆರ್. ಯು. ಅಭಿಷೇಕ್, ಎಸ್. ತಿಪ್ಪೇಸ್ವಾಮಿ, ಹೆಚ್. ಎನ್. ವೆಂಕಟೇಶ್, ಕೆ. ಮಂಜುನಾಥ್ ಮತ್ತು ಡಿ. ಸಿ. ಮೋಹನ*

ಸೂಕ್ಷ್ಮಜೀವಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಂಗಳೂರು-560 056.

*ಇ-ಅಂಚೆ: mohanadc@gmail.com

ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯದ ಎಲೆಭಾಗದ ಸಾರಾಂಶದ ಶಿಲೀಂಧ್ರ, ಶಿಲೀಂಧ್ರನಂಜು ಮತ್ತು ಉತ್ಕರ್ಷಣ ನಿರೋಧಕ ಗುಣಗಳನ್ನು ನಿರ್ಧರಿಸಲು ಹಾಗೂ ಅದರ ಸಕ್ರಿಯ ಅಂಶವನ್ನು ಬೇರ್ಪಡಿಸುವ ಉದ್ದೇಶದೊಂದಿಗೆ ಈ ಅಧ್ಯಯನವನ್ನು ಕೈಗೊಳ್ಳಲಾಯಿತು. ಎಲೆಭಾಗದ ಮಿಥನಾಲ್

ಸಾರವನ್ನು ವಿಭಾಗೀಕರಿಸಿದಾಗ 4–ಒ–ಮಿಥಾಕ್ಸಿಗ್ಯಾಲಿಕ್ ಆಸಿಡ್ (4–ಒ–ಎಂಜಿಎ) ಎಂಬ ಸಕ್ರಿಯ ಅಂಶವು ಬೇರ್ಪಟ್ಟಿತು. ಮಿಥನಾಲ್ ಸಾರದಲ್ಲಿ ಹೆಚ್ಚಿನ ಪ್ರಮಾಣದ ಫಿನಾಲಿಕ್ ಅಂಶವು (290 ಮಿ.ಗ್ರಾಂ ಜಿಎ/ಗ್ರಾಂ ಒಣಸಾರಕ್ಕೆ) ಕಂಡುಬಂದಿತು, ಇದು ಉತ್ಕರ್ಷಣ ನಿರೋಧಕ ಗುಣದಲ್ಲಿ ಫಿನಾಲಿಕ್ ಅಂಶಗಳ ಪ್ರಾಮುಖ್ಯತೆಯನ್ನು ತೋರಿಸುತ್ತದೆ. 4–ಒ–ಎಂಜಿಎಯ ಉತ್ಕರ್ಷಣ ನಿರೋಧಕ ಸಾಮರ್ಥ್ಯವು ಕೃತಕ ರಾಸಾಯನಿಕ ಬಿ.ಎಚ್.ಟಿ. ಮತ್ತು ಮಿಥನಾಲ್ ಸಾರಕ್ಕಿಂತ ಹೆಚ್ಚಾಗಿರುವುದು ಕಂಡುಬಂದಿತು. ಈ ಮಾದರಿಗಳನ್ನು ವಿವಿಧ ಜಾತಿಯ ಶಿಲೀಂಧ್ರಗಳ ಬೆಳವಣಿಗೆಯ ಮೇಲೆ ಪರೀಕ್ಷಿಸಿದಾಗ ಪರಿಮಾಣ–ಅವಲಂಬಿತ ಪ್ರತಿಬಂಧಕ ಕ್ರಿಯೆ ಕಂಡುಬಂದಿತು. ಅವುಗಳಲ್ಲಿ ಆಸ್ಪರ್ಜಿಲ್ಲಸ್ ಫ್ಲೇವಸ್ ಶಿಲೀಂಧ್ರವು ಹೆಚ್ಚಿನ ಪ್ರತಿರೋಧವನ್ನು ತೋರಿತು. ಈ ಶಿಲೀಂಧ್ರವು ಸಂಗ್ರಹಿಸಿದ ಆಹಾರ ಪದಾರ್ಥಗಳಲ್ಲಿ ತೇವಾಂಶವಿದ್ದಾಗ ಹೆಚ್ಚಿನ ಪ್ರಮಾಣದಲ್ಲಿ ಕಲುಷಿತಗೊಳಿಸುತ್ತದೆ. ಸಸ್ಯಸಾರವನ್ನು ಒಳಗೊಂಡು ಮತ್ತು ಹೊರತುಪಡಿಸಿ ಶಿಲೀಂಧ್ರದ ಮೇಲೆ ಪರೀಕ್ಷಿಸಿದಾಗ, ಸಸ್ಯಸಾರದ ಪ್ರಮಾಣ ಹೆಚ್ಚಾದ ಹಾಗೆ ಶಿಲೀಂಧ್ರರಾಶಿ ಮತ್ತು ಶಿಲೀಂಧ್ರನಂಜಿನ (ಅಫ್ಲಾಟಾಕ್ಸಿನ್) ಉತ್ಪಾದನೆಯಲ್ಲಿ ಕುಸಿತವುಂಟಾಯಿತು. ಶಿಲೀಂಧ್ರ ಜೀವರಾಶಿ ಮತ್ತು ಅಫ್ಲಾಟಾಕ್ಸಿನ್ ಉತ್ಪಾದನೆಗಳ ನಡುವೆ ಒಂದು ಧನಾತ್ಮಕವಾದ ಅನುರೂಪ ಸಂಬಂಧ ಕಾಣಿಸಿತು. ಪ್ರಾಯೋಗಿಕ ನೆಲೆಯಲ್ಲಿ ಪರೀಕ್ಷಿಸಿದಾಗ, ಮಿಥನಾಲ್ ಸಾರದ 2 ಮಿ.ಗ್ರಾಂ/ಮಿ.ಲೀ. ಮತ್ತು 4–ಒ–ಎಂಜಿಎಯ 2 ಮಿ.ಗ್ರಾಂ/ಮಿ.ಲೀ. ಪ್ರಮಾಣದಲ್ಲಿ ಅಫ್ಲಾಟಾಕ್ಸಿನ್ ಉತ್ಪಾದನೆ ಸಂಪೂರ್ಣವಾಗಿ ತಡೆಗಟ್ಟಲ್ಪಟ್ಟಿತು. ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯದ ಈ ಮಹತ್ವದ ಗುಣಗಳನ್ನು ಆಹಾರ ಪದಾರ್ಥಗಳು ಶಿಲೀಂಧ್ರದಿಂದ ಮತ್ತು ಉತ್ಕರ್ಷಣಶೀಲತೆಯಿಂದ ಹಾಳಾಗುವುದನ್ನು ತಡೆಗಟ್ಟಲು ಬಳಸಿಕೊಳ್ಳಬಹುದಾಗಿದೆ.

ಕೀಲಿಪದಗಳು: ಫಿಲ್ಲಾಂಥಸ್ ಪಾಲಿಫಿಲ್ಲಸ್, ಆಸ್ಪರ್ಜಿಲ್ಲಸ್ ಫ್ಲೇವಸ್, ಶಿಲೀಂಧ್ರ–ನಿರೋಧಕ, ಉತ್ಕರ್ಷಣ–ನಿರೋಧಕ, ೪–ಒ–ಮಿಥಾಕ್ಸಿಗ್ಯಾಲಿಕ್ ಆಸಿಡ್

ಪೀಠಿಕೆ : ಶಿಲೀಂಧ್ರಗಳು ಅನೇಕ ಜೈವಿಕ–ಕ್ರಿಯಾಶೀಲ ಅಂಶಗಳನ್ನು ಉತ್ಪಾದಿಸುತ್ತವೆ, ಅವುಗಳನ್ನು ಮೈಕೊಟಾಕ್ಸಿನ್ ಎಂದು ಕರೆಯುವರು. ಮೈಕೊಟಾಕ್ಸಿನ್ ಗಳು ಚಾಯಾಪಚಯ ಕ್ರಿಯೆಯ ಎರಡನೆಯ ಉತ್ಪನ್ನ (ಸೆಕೆಂಡರಿ ಮೆಟಬೊಲೈಟ್ಸ್) ಗಳಾಗಿವೆ, ಅವುಗಳಲ್ಲಿ ಕೆಲವು ಮಾನವ ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ಮಾರಕ ಪರಿಣಾಮಗಳನ್ನುಂಟು ಮಾಡುತ್ತವೆ. ಶಿಲೀಂಧ್ರಗಳು ತಮಗೆ ಸೂಕ್ತವಾದ ವಾತಾವರಣದಲ್ಲಿ ಆಹಾರ ಪದಾರ್ಥಗಳಲ್ಲಿ ಬೆಳೆದು ಮೈಕೊಟಾಕ್ಸಿನ್ ಗಳನ್ನು ಉತ್ಪಾದಿಸುವುದರೊಂದಿಗೆ ಅವುಗಳನ್ನು ಬಳಕೆಗೆ ಅಸೂಕ್ತವನ್ನಾಗಿಸುತ್ತವೆ. ಇದು ಆಹಾರ ಪದಾರ್ಥಗಳ ಗುಣಮಟ್ಟ ಮತ್ತು ಸುರಕ್ಷತೆಯ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡುತ್ತವೆ. ಅಫ್ಲಾಟಾಕ್ಸಿನ್, ಆಕ್ರಾಟಾಕ್ಸಿನ್ ಮತ್ತು ಫ್ಯುಮೋನಿಸಿನ್ ಗಳು ಕೆಲವು ಪ್ರಮುಖವಾದ ಮೈಕೊಟಾಕ್ಸಿನ್ ಗಳಾಗಿವೆ. ಅಫ್ಲಾಟಾಕ್ಸಿನ್ ಗಳು ಕ್ಯಾನ್ಸರ್ ಕಾರಕಗಳಾಗಿದ್ದು, ಮಾನವನಿಗೆ ಸಂಬಂಧಿಸಿದಂತೆ ಯಕೃತ್ ಮತ್ತು ಭ್ರೂಣದ ಬೆಳವಣಿಗೆಯ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡುತ್ತವೆ[1].

ಆಹಾರಧಾನ್ಯಗಳು ಕೊಯ್ಲಿನೋತ್ತರ, ಕೊಯ್ಲುಪೂರ್ವ ಮತ್ತು ಸಂಗ್ರಹಣೆಯ ಸಂದರ್ಭದಲ್ಲಿ ಶಿಲೀಂಧ್ರಗಳ ಬೆಳವಣಿಗೆಯಿಂದ ಹಾಳಾಗುತ್ತವೆ. ಹೀಗೆ ವಿವಿಧ ಹಂತಗಳಲ್ಲಿ ಆಹಾರ ಪದಾರ್ಥಗಳು ಹಾಳಾಗುವುದನ್ನು ತಪ್ಪಿಸಲು ಶಿಲೀಂಧ್ರ ನಿಯಂತ್ರಣ ಮಾಡುವುದು ಅತ್ಯವಶ್ಯವಾಗಿದೆ. ಆಹಾರಪದಾರ್ಥಗಳ ಸಂರಕ್ಷಿಸಲು ಹಲವಾರು ವಿಧಾನಗಳನ್ನು ಬಳಸಲಾಗುತ್ತದೆ, ಅವುಗಳಲ್ಲಿ ಶಿಲೀಂಧ್ರ ನಾಶಕಗಳ ಬಳಕೆ ಪ್ರಮುಖವಾದುದು, ಆದರೆ ಕೃತಕ ರಾಸಾಯನಿಕಗಳ ಉಳಿಕೆಗಳು ಆರೋಗ್ಯದ ಮೇಲೆ ಅಡ್ಡ ಪರಿಣಾಮವನ್ನುಂಟು ಮಾಡುತ್ತವೆ[2].

ಆಸ್ಪರ್ಜಿಲ್ಲಸ್ ಫ್ಲೇವಸ್, ಒಂದು ಪ್ರಮುಖ ಮೈಕೊಟಾಕ್ಸಿನ್ ಉತ್ಪಾದಕ ಶಿಲೀಂಧ್ರ, ಆದು ಆಹಾರಧಾನ್ಯಗಳನ್ನು ಹಾಳುಗೆಡವುತ್ತದೆ ಮತ್ತು ಮಾರಕ ಅಫ್ಲಾಟಾಕ್ಸಿನ್ ಬಿ1 ಅನ್ನು ಉತ್ಪಾದಿಸುತ್ತದೆ. ಕಳಪೆ ಕೊಯ್ಲಿನ ಮತ್ತು ಸಂಗ್ರಹಣಾ ವಿಧಾನಗಳು ಶಿಲೀಂಧದಿಂದ ಕಲುಷಿತಗೊಳ್ಳಲು ಪ್ರಮುಖ ಕಾರಣ. ಅಂದಾಜಿನ ಪ್ರಕಾರ ಪ್ರಪಂಚದ ಶೇ.25ರಷ್ಟು ಆಹಾರ ಬೆಳೆಗಳು ಮೈಕೊಟಾಕ್ಸಿನ್ ಗಳಿಂದ ಹಾಳಾಗುತ್ತವೆ, ಇವು ಪ್ರಮುಖವಾಗಿ ಆಸ್ಪರ್ಜಿಲ್ಲಸ್, ಫುಸೇರಿಯಮ್ ಮತ್ತು ಪೆನಿಸಿಲ್ಲಿಯಮ್ ಜಾತಿಯ ಶಿಲೀಂಧ್ರಗಳಿಂದ ಉತ್ಪಾದಿಸಲ್ಪಡುತ್ತವೆ[1].

ಇದಲ್ಲದೇ, ಪ್ರತಿಕ್ರಿಯಾತ್ಮಕ ಆಮ್ಲಜನಕ ವರ್ಗಗಳು (reactive oxygen species) ಪ್ರೊಟೀನ್, ಲಿಪಿಡ್ (ಮೇದಸ್ಸು) ಮತ್ತು ನ್ಯೂಕ್ಲಿಯಿಕ್ ಆಮ್ಲಗಳನ್ನು ಹಾನಿಗೊಳಿಸುವುದರಿಂದ ಉತ್ಕರ್ಷಣಶೀಲ ಒತ್ತಡವನ್ನು (oxidative stress) ಉಂಟುಮಾಡುತ್ತವೆ, ಇದು ಅಫ್ಲಾಟಾಕ್ಸಿನ್ ಸಂಶ್ಲೇಷಣೆಯನ್ನು ಉತ್ತೇಜಿಸುತ್ತದೆ. ಮೇದಸ್ಸಿನ ಉತ್ಕರ್ಷಣೆಯು (lipid peroxidation) ಆಹಾರ ಪದಾರ್ಥಗಳು ಹಾಳಾಗಲು ಪ್ರಮುಖ ಕಾರಣ, ಇದರಿಂದ ಅವುಗಳ ರುಚಿ ಮತ್ತು ವಾಸನೆ ಬದಲಾಗುವುದಲ್ಲದೇ, ಆರೋಗ್ಯದ ಮೇಲೆ ಅನಪೇಕ್ಷಿತ ಪರಿಣಾಮವುಂಟಾಗುತ್ತದೆ[2].

ಕೃತಕ ರಾಸಯನಿಕಗಳನ್ನು ಪ್ರಮುಖವಾಗಿ ಆಹಾರ ಪದಾರ್ಥಗಳ ಸಂರಕ್ಷಿಸಲು ಬಳಸಲಾಗುತ್ತದೆ, ಆದರೆ ಬ್ಯುಟೈಲೇಟೆಡ್ ಹೈಡ್ರಾಕ್ಸಿ ಟಾಲಿನ್ (ಬಿ.ಹೆಚ್.ಟಿ.), ಬ್ಯುಟೈಲೇಟೆಡ್ ಹೈಡ್ರಾಕ್ಸಿಅನಿಸೋಲ್ (ಬಿ.ಹೆಚ್.ಎ.) ಮತ್ತು ಪ್ರೊಪೈಲ್ ಗ್ಯಾಲೇಟ್ ನಂತಹ ಕೆಲವು ಕೃತಕ ರಾಸಯನಿಕಗಳು ವಿಷಕಾರಿ ಮತ್ತು ಕ್ಯಾನ್ಸರ್ ಕಾರಕ ಅಂಶಗಳನ್ನು, ಹಾಗೂ ಇತರ ಅಡ್ಡ ಪರಿಣಾಮಗಳನ್ನು ಹೊಂದಿವೆ[೩]. ಆದ್ದರಿಂದ ಕೃತಕ ರಾಸಯನಿಕಗಳಿಗೆ ಪರ್ಯಾಯವಾಗಿ ಆಹಾರ/ಔಷಧ ಪದಾರ್ಥಗಳಲ್ಲಿ ನೈಸರ್ಗಿಕ ಉತ್ಪನ್ನಗಳ ಬಳಕೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ.

ಸಸ್ಯ ಉತ್ಪನ್ನಗಳು ಆಹಾರದ ಗುಣಮಟ್ಟವನ್ನು ಉತ್ತಮಗೊಳಿಸುವುದರೊಂದಿಗೆ ಸಂರಕ್ಷಕವಾಗಿ ಕೆಲಸ ಮಾಡುತ್ತವೆ. ಸಸ್ಯಸಾರಗಳು ಫಿನಾಲಿಕ್, ಪಾಲಿಫಿನಾಲಿಕ್ ಮತ್ತು ಫ್ಲೇವನಾಯ್ಡ್ಸ ನಂತಹ ಹಲವು ಉತ್ಕರ್ಷಣ–ನಿರೋಧಕ ಅಂಶಗಳನ್ನು ಒಳಗೊಂಡಿರುತ್ತವೆ, ಇವು ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರ ನಿರೋಧಕಗಳಾಗಿಯೂ ಪಾತ್ರವಹಿಸುತ್ತವೆ. ಫಿನಾಲಿಕ್ ಅಂಶಗಳು ಶಿಲೀಂಧ್ರ ಬೆಳವಣಿಗೆಯನ್ನು ಮತ್ತು ಅಫ್ಲಾಟಾಕ್ಸಿನ್ ಉತ್ಪಾದನೆಯನ್ನು ತಡೆಗಟ್ಟುವ ಗುಣಹೊಂದಿದ್ದು, ಈ ಗುಣಗಳಿಗೆ ಫಿನಾಲಿಕ್ ಗಳ ಹೆಚ್ಚಿನ ಉತ್ಕರ್ಷಣ–ನಿರೋಧಕತೆಯೇ ಕಾರಣವಾಗಿದೆ. ಸಸ್ಯಸಾರಗಳ ಈ ಗುಣಗಳನ್ನು ಆಹಾರ ಪದಾರ್ಥಗಳ ಸಂರಕ್ಷಣೆಯಲ್ಲಿ ಪ್ರಮುಖವಾಗಿ ಬಳಸಿಕೊಳ್ಳಬಹುದಾಗಿದೆ.

ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯವು ಯೂಫೊರ್ಬಿಯೇಸಿ ಕುಟುಂಬಕ್ಕೆ ಸೇರಿದ ಎಲೆಯುದುರಿಸುವ ಮಾದರಿಯಾಗಿದ್ದು, ಉಷ್ಣವಲಯ ಮತ್ತು ಉಪೋಷ್ಣವಲಯ ಪ್ರದೇಶಗಳಲ್ಲಿ ಕಂಡುಬರುತ್ತವೆ. ಭಾರತದ

ಸಾಂಪ್ರದಾಯಿಕ ವೈದ್ಯಪದ್ಧತಿಯಲ್ಲಿ, ಫಿಲ್ಲಾಂಥಸ್ ಜಾತಿಗೆ ಸೇರಿದ ಹಲವು ಸಸ್ಯಗಳನ್ನು ಕರಳು ಬೇನೆ, ಯಕೃತ್ತಿನ ಕಾಯಿಲೆ, ಕಾಮಾಲೆ ಮತ್ತು ಮಧುಮೇಹಗಳನ್ನು ಗುಣಪಡಿಸಲು ಕಚ್ಚಾ ಔಷಧಗಳಾಗಿ ಬಳಸಲಾಗುತ್ತಿದೆ. ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯವು ಉರಿಯೂತ–ಮತ್ತು ಗೆಡ್ಡೆ–ನಿರೋಧಕ, ಹಾಗೂ ಯಕೃತ್–ರಕ್ಷಕ ಗುಣಗಳನ್ನು ಹೊಂದಿದೆಯೆಂದು ಈ ಹಿಂದಿನ ಸಂಶೋಧನೆಗಳು ದಾಖಲಿಸಿವೆ[4,5]. ನಮಗೆ ತಿಳಿದಂತೆ, ಈ ಸಸ್ಯದ ಶಿಲೀಂಧ್ರ–, ಶಿಲೀಂಧ್ರನಂಜು– ಮತ್ತು ಉತ್ಕರ್ಷಣ– ನಿರೋಧಕ ಗುಣಗಳನ್ನು ಹಾಗೂ ಆದರ ಸಕ್ರಿಯ ಅಂಶವನ್ನು ಇದೇ ಪ್ರಥಮ ಬಾರಿಗೆ ದಾಖಲಿಸುತ್ತಿದ್ದೇವೆ.

ವಸ್ತು ಮತ್ತು ವಿಧಾನಗಳು : ರಾಸಾಯನಿಕಗಳು ಮತ್ತು ಪರೀಕ್ಷಕ ಶಿಲೀಂಧ್ರ: ಶಿಲೀಂಧ್ರ ಬೆಳವಣಿಗೆಗೆ ಬೇಕಾದ ಎಲ್ಲಾ ರಾಸಾಯನಿಕಗಳನ್ನು ಹೈ–ಮೀಡಿಯ (ಮುಂಬೈ)ದಿಂದ ಖರೀದಿಸಲಾಯಿತು. ಬ್ಯುಟೈಲೇಟೆಡ್ ಹೈಡ್ರಾಕ್ಸಿಟಾಲಿನ್ (ಬಿ.ಹೆಚ್.ಟಿ.), ಅಂಝಡೊ ನೈಟ್ರೋ ಟೆಟ್ರಾಝೊಲಿಯಮ್(ಐ.ಎನ್.ಟಿ.) ಮತ್ತು ಎಲ್ಲಾ ದ್ರಾವಕಗಳನ್ನು ಸಿಸ್ಕೋ ರೀಸರ್ಚ್ ಲ್ಯಾಬೊರೇಟರೀಸ್(ಮುಂಬೈ)ನಿಂದ ಪಡೆದುಕೊಳ್ಳಲಾಯಿತು. 2,2-ಡೈಫಿನೈಲ್-1-ಪಿಕ್ರೈಲ್ ಹೈಡ್ರಜಿಲ್ (ಡಿಪಿಪಿಹೆಚ್)ನ್ನು ಸಿಗ್ಮಾ–ಆಲ್ಡ್ರಿಚ್ (ಜರ್ಮನಿ)ನಿಂದ ಮತ್ತು ಥಿನ್ ಲೆಯರ್ ಕ್ರೊಮ್ಯಾಟೋಗ್ರಫಿ (ಟಿ.ಎಲ್.ಸಿ.)ತಟ್ಟೆಗಳನ್ನು ಮೆರ್ಕ್(ಜರ್ಮನಿ)ನಿಂದ ಖರೀದಿಸಲಾಯಿತು. ಈ ಅಧ್ಯಯನದಲ್ಲಿ ಬಳಸಿದ ಎಲ್ಲಾ ರಾಸಾಯನಿಕಗಳು ವಿಶ್ಲೇಷಣಾತ್ಮಕ ದರ್ಜೆಗೆ ಸೇರಿದವಾಗಿವೆ. ಆಫ್ಲಟಾಕ್ಸಿನ್ ಉತ್ಪಾದಕ ಗುಣವುಳ್ಳ ಆಸ್ಪರ್ಜಿಲ್ಲಸ್ ಫ್ಲೇವಸ್ ನ್ನು ಪರೀಕ್ಷಕ ಶಿಲೀಂಧ್ರವನ್ನಾಗಿ ಈ ಅಧ್ಯಯನದಲ್ಲಿ ಬಳಸಲಾಗಿದೆ.

ಸಸ್ಯ ಮಾದರಿಗಳ ಸಂಗ್ರಹಣೆ: ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯದ ತಾಜಾ ಎಲೆಗಳನ್ನು ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರಿನಲ್ಲಿ 2011ರ ಜುಲೈ ತಿಂಗಳಿನಲ್ಲಿ ಸಂಗ್ರಹಿಸಲಾಯಿತು. ಸಸ್ಯದ ಮಾದರಿಯು ಡಾ. ವೈ. ಎಸ್. ಸೀತಾರಾಮ್, ಜೈವಿಕವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಇವರಿಂದ ಧೃಡೀಕರಿಸಲ್ಪಟ್ಟಿತು. ಸಂಗ್ರಹಿಸಿದ ಎಲೆಗಳನ್ನು ಬಟ್ಟಿ ಇಳಿಸಿದ ನೀರಿನಲ್ಲಿ ಚೆನ್ನಾಗಿ ತೊಳೆದು ನೆರಳಲ್ಲಿ ಒಣಗಿಸಲಾಯಿತು. ಒಣಗಿದ ನಂತರ ಚೆನ್ನಾಗಿ ಪುಡಿಮಾಡಿ ಗಾಳಿಯಾಡದ ಡಬ್ಬಿಯಲ್ಲಿ ಸಂಗ್ರಹಿಸಿಡಲಾಯಿತು.

ಸಸ್ಯಸಾರಗಳ ಸಿದ್ಧತೆ: ಸಾಕ್ಸಲೆಟ್ ಉಪಕರಣದಲ್ಲಿ 50ಗ್ರಾಂ ಪುಡಿಯನ್ನು ಅನುಕ್ರಮವಾಗಿ ೨೦೦ ಮಿ.ಲೀ. ಪೆಟ್ರೋಲಿಯಂ ಈಥರ್, ಟಾಲ್ವೀನ್, ಕ್ಲೋರೋಫಾರ್ಮ್ ಮತ್ತು ಮಿಥನಾಲ್ ದ್ರಾವಕಗಳೊಂದಿಗೆ ಸಾರತೆಗೆಯುವಿಕೆಗೆ ಒಳಪಡಿಸಲಾಯಿತು[6]. ಎಲ್ಲಾ ಸಸ್ಯಸಾರಗಳನ್ನು ಪ್ರತ್ಯೇಕವಾಗಿ ಬಾಷ್ಪೀಕರಿಸಿ, ಸಾಂದ್ರೀಕರಿಸಿದ ಸಸ್ಯಸಾರಗಳನ್ನು ಗಾಜಿನ ನಳಿಕೆಗಳಲ್ಲಿ ಸಂಗ್ರಹಿಸಿಡಲಾಯಿತು.

ಒಟ್ಟು ಫಿನಾಲಿಕ್ ಅಂಶಗಳ ನಿರ್ಧರಿಸುವಿಕೆ: ಎಲ್ಲಾ ಸಸ್ಯಸಾರಗಳ ಫಿನಾಲಿಕ್ ಅಂಶಗಳನ್ನು ಸಣ್ಣ ಬದಲಾವಣೆಗಳೊಂದಿಗೆ ಫಾಲಿನ್–ಸಿಯಾಲ್ಟ್ಯೂ ವಿಧಾನದಿಂದ ಕಂಡುಹಿಡಿಯಲಾಯಿತು[7]. ಪ್ರತಿ ಸಸ್ಯಸಾರವನ್ನು 1 ಮಿ.ಗ್ರಾಂ/ಮಿ.ಲೀ. ಪ್ರಮಾಣದಲ್ಲಿ 0.1 ಮಿ.ಲೀ. ಫಾಲಿನ್–ಸಿಯಾಲ್ಟ್ಯೂ ಕಾರಕ್ಕೆ ಸೇರಿಸಿ, 5 ನಿಮಿಷಗಳ ಕಾಲ ಕತ್ತಲೆಯಲ್ಲಿ ಕೊಠಡಿ ತಾಪಮಾನದಲ್ಲಿ ಇಡಲಾಯಿತು. ನಂತರ, 2 ಮಿ.ಲೀ. 15% ಸೋಡಿಯಂ ಕಾರ್ಬೋನೇಟನ್ನು ಸೇರಿಸಿ, 10 ಮಿ.ಲೀ. ನೀರನ್ನು ಸೇರಿಸಿ ತೆಳುಗೊಳಿಸಲಾಯಿತು ಮತ್ತು 90 ನಿಮಿಷಗಳ ಕಾಲ ಕತ್ತಲೆಯಲ್ಲಿ ಕೊಠಡಿ ತಾಪಮಾನದಲ್ಲಿ ಇಡಲಾಯಿತು. ಯು.ವಿ.–ಸ್ಪೆಕ್ಟ್ರೋಮೀಟರ್ (ಎಲಿಕೋ, ಭಾರತ) ಸಹಾಯದಿಂದ 720 ನ್ಯಾ.ಮೀ. ವ್ಯಾಪ್ತಿಯಲ್ಲಿ ಬೆಳಕಿನ ಹೀರುವಿಕೆಯನ್ನು ಅಳೆಯಲಾಯಿತು. ಒಟ್ಟು ಫಿನಾಲಿಕ್ ಅಂಶಗಳನ್ನು ಗ್ಯಾಲಿಕ್ ಆಸಿಡ್ ಇಕ್ವಿವ್ಯಾಲೆಂಟ್(ಮಿ.ಗ್ರಾಂ ಜಿಎಇ/ಗ್ರಾಂ ಒಣಸಾರಕ್ಕೆ)ನಲ್ಲಿ ವ್ಯಕ್ತಪಡಿಸಲಾಯಿತು.

ಮಿಥನಾಲ್ ಸಾರದಿಂದ ಜೈವಿಕ–ಕ್ರಿಯಾಶೀಲ ಅಂಶದ ಬೇರ್ಪಡಿಸುವಿಕೆ ಮತ್ತು ಗುರುತಿಸುವಿಕೆ: ಎಲೆಭಾಗದ ಮಿಥನಾಲ್ ಸಾರವು ಹೆಚ್ಚಿನ ಶಿಲೀಂಧ್ರನಾಶಕ ಕ್ರಿಯೆಯನ್ನು ತೋರಿಸಿತು, ಅದನ್ನು ವಿಭಾಗೀಕರಿಸಲ್ಪಟ್ಟಾಗ ಆಮ್ಲೀಯ, ಫಿನಾಲಿಕ್, ಬೇಸಿಕ್ ಮತ್ತು ನ್ಯೂಟ್ರಲ್ ಗಳೆಂಬ ನಾಲ್ಕು ಭಾಗಗಳಾಗಿ ಪ್ರತ್ಯೇಕಿಸಲ್ಪಟ್ಟಿತು. ಅವುಗಳಲ್ಲಿ ಹೆಚ್ಚಿನ ಶಿಲೀಂಧ್ರ–ನಿರೋಧಕ ಕ್ರಿಯೆಯನ್ನು ತೋರಿದ ಆಮ್ಲೀಯ ಭಾಗವನ್ನು ಶುದ್ಧೀಕರಿಸಲು ಕಾಲಂ ಕ್ರೊಮ್ಯಾಟೋಗ್ರಫಿಗೆ ಒಳಪಡಿಸಲಾಯಿತು. ಸಿಲಿಕಾ ಕಾಲಂನ್ನು ಕ್ಲೋರೋಫಾರ್ಮ್ ಮತ್ತು ಮಿಥನಾಲ್ (10:0, 9:1 ? 0:10) ಅನುಪಾತದಲ್ಲಿ ಧ್ರುವೀಯ ದ್ರಾವಕದ ಪ್ರಮಾಣವನ್ನು ಹೆಚ್ಚಿಸುತ್ತಾ ಹರಿಸಲಾಯಿತು. ಕಾಲಂನಲ್ಲಿ ಹರಿದ ದ್ರಾವಕಗಳನ್ನು ವಿವಿಧ ಭಾಗಗಳಾಗಿ ಶೇಖರಿಸದ ನಂತರ ಸಾಂದ್ರೀಕರಿಸಲಾಯಿತು. ಶಿಲೀಂಧ್ರ–ನಿರೋಧಕ ಕ್ರಿಯೆಯ ಮತ್ತು ಕ್ರೊಮ್ಯಾಟೋಗ್ರಫಿಕ್ ವಿಶ್ಲೇಷಣೆಯ ಆಧಾರದ ಮೇಲೆ, ಒಂದೇ ರೀತಿಯ ಗುಣಗಳನ್ನು ಹೊಂದಿದ್ದ ದ್ರಾವಕ ಭಾಗಗಳನ್ನು ಒಟ್ಟುಗೂಡಿಸಲಾಯಿತು. ಶುದ್ಧ ಸಕ್ರಿಯ ಸಂಯುಕ್ತವು ಹರಳುಗಳ ರೂಪದಲ್ಲಿ ದೊರೆಯಿತು. ನಂತರ ಅದನ್ನು ಪತ್ತೆಹಚ್ಚಲು ರೋಹಿತದರ್ಶಕದ (ಇನ್ಫ್ರಾರೆಡ್, ಎಲೆಕ್ಟ್ರೋಸ್ಪ್ರೇ ಐಯೋನೈಸೇಷನ್–ಮಾಸ್ ಸ್ಪೆಕ್ಟ್ರೋಮೆಟ್ರಿ ಮತ್ತು ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರೆಸೊನೆನ್ಸ್) ವಿಶ್ಲೇಷಣೆಗೊಳಪಡಿಸಲಾಯಿತು ಮತ್ತು ಹಿಂದೆ ದಾಖಲಾದ ಅಂಕಿಅಂಶಗಳೊಂದಿಗೆ ಹೋಲಿಸಿ ನೋಡಲಾಯಿತು[4].

ಶಿಲೀಂಧ್ರ–ನಿರೋಧಕ ಗುಣಗಳು: (i) ವಿಷಾಹಾರ ವಿಧಾನ– ಮಿಥನಾಲ್ ಸಾರ ಮತ್ತು 4–ಒ–ಎಂಜಿಎಗಳ ಶಿಲೀಂಧ್ರ ನಿರೋಧಕ ಗುಣಗಳನ್ನು ವಿಷಾಹಾರ ವಿಧಾನ (ಪಾಯಿಸನ್ಡ್ ಫುಡ್ ಟೆಕ್ನಿಕ್)ದಿಂದ ಪರೀಕ್ಷಿಸಲಾಯಿತು[6]. ಪರೀಕ್ಷಿಸಬೇಕಾದ ಎಲ್ಲಾ ಮಾದರಿಗಳನ್ನು ಮಿಥನಾಲ್ ನಲ್ಲಿ ಕರಗಿಸಿ, ಬೇಕಾದ ತೀವ್ರತೆಗೆ ಬರುವ ಹಾಗೆ ಸ್ಯಾಬೊರಾಡ್ ಡೆಕ್ಸ್ಟ್ರೋಸ್ ಅಗಾರ್ (ಎಸ್.ಡಿ.ಎ)ನಲ್ಲಿ ಸೇರಿಸಲಾಯಿತು. ಯಾವುದೇ ಸಸ್ಯ ಮಾದರಿಗಳನ್ನು ಒಳಗೊಳ್ಳದ, ಮಿಥನಾಲ್ ಮಾತ್ರವನ್ನು ಒಳಗೊಂಡ ಎಸ್.ಡಿ.ಎ.ಯನ್ನು ನಿಯಂತ್ರಣ ಮಾಧ್ಯಮವಾಗಿ ಬಳಸಲಾಯಿತು. ಎಸ್.ಡಿ.ಎ.ಯನ್ನು ಸ್ವತಾಪಕಾರಿ (ಆಟೋಕ್ಲೇವ್)ಯಲ್ಲಿ 121 ಡಿ.ಸೆ. ಉಷ್ಣತೆಯಲ್ಲಿ 15 ಎಲ್.ಬಿ.ಎಸ್. ಒತ್ತಡದಲ್ಲಿ ಕ್ರಿಮಿಶುದ್ಧೀಕರಣ ಮಾಡಲಾಯಿತು. ನಂತರ ಎಸ್.ಡಿ.ಎ. ತುಂಬಿದ ತಟ್ಟೆಗಳಲ್ಲಿ ಪರೀಕ್ಷಕ ಶಿಲೀಂಧ್ರವನ್ನು 7 ದಿನಗಳ ಕಾಲ ಕೊಠಡಿ ತಾಪಮಾನದಲ್ಲಿ ಬೆಳೆಸಲಾಯಿತು. ಈ ಪ್ರಯೋಗವನ್ನು ತ್ರಿಪ್ರತಿಗಳಲ್ಲಿ ಮಾಡಲಾಯಿತು. ಪರೀಕ್ಷಿಸಿದ ಮಾದರಿಗಳ ಶಿಲೀಂಧ್ರನಾಶಕ ಸಾಮರ್ಥ್ಯವನ್ನು ನಿರ್ಧರಿಸಲು ಕೊಟ್ಟಿರುವ ಸೂತ್ರದ ಆಧಾರದಲ್ಲಿ ನಿರ್ಬಂಧಿಸಲ್ಪಟ್ಟ ಶೇಕಡಾವಾರು ಕವಕಜಾಲವನ್ನು ಕಂಡುಹಿಡಿಯಲಾಯಿತು.

ಶೇ. ಕವಕಜಾಲದ ನಿರ್ಬಂಧನೆ= (ನಿಯಂತ್ರಕ– ಪರೀಕ್ಷಾ ಮಾದರಿ/ ನಿಯಂತ್ರಕ) X 100

(ii) ಕನಿಷ್ಟ ನಿರ್ಬಂಧಕ ಪ್ರಮಾಣ (ಕನಿಪ್ರ, ಮಿನಿಮಮ್ ಇನ್ಹಿಬಿಟರಿ

ಕಾನ್ಸನ್ಟ್ರೇಶನ್) ಮತ್ತು ಕನಿಷ್ಟ ಶಿಲೀಂಧ್ರನಾಶಕ ಪ್ರಮಾಣ (ಕಶಿಪ್ರ, ಮಿನಿಮಮ್ ಫಂಗಿಸೈಡಲ್ ಕಾನ್ಸನ್ಟ್ರೇಶನ್)– ಮಿಥನಾಲ್ ಸಾರ ಮತ್ತು 4-ಒ–ಎಂಜಿಎಗಳ ಕನಿಪ್ರ ಮತ್ತು ಕಶಿಪ್ರಗಳನ್ನು ಮೈಕ್ರೊಬ್ರಾಥ್–ಡೈಲುಶನ್ ವಿಧಾನದಿಂದ ಕಂಡುಹಿಡಿಯಲಾಯಿತÄ[3]. 96-ಗುಂಡಿಯಿರುವ ಮೈಕ್ರೊಟೈಟರ್ ತಟ್ಟೆಯಲ್ಲಿ ಎಸ್.ಡಿ.ಬಿ.ಯೊಂದಿಗೆ ಪರೀಕ್ಷಾ ಮಾದರಿಗಳನ್ನು 0.062-8.0 ಮಿ.ಗ್ರಾಂ/ಮಿ.ಲೀ. ಸಾಂದ್ರತೆ ಬರುವ ಹಾಗೆ ಎರಡು ಪಟ್ಟು ಸರಣಿಯಾಗಿ ಸಾರಗುಂದಿಸಲಾಯಿತು. ನಂತರ 15 ಮೈ.ಲೀ. ಪರೀಕ್ಷಕ ಶಿಲೀಂಧ್ರವನ್ನು ಸೇರಿಸಿ 30 ಡಿ.ಸೆ. ಉಷ್ಣತೆಯಲ್ಲಿ 72 ಗಂಟೆಗಳ ಇಡಲಾಯಿತು. ಆನಂತರ ಬೆಳವಣಿಗೆ ಕುಂದಿದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸಲು 15 ಮೈ.ಲೀ. ಚಿಕಿತ್ಸೆ ಮಾಡಿದ ಮಾದರಿಯನ್ನು ತೆಗೆದುಕೊಂಡು ಎಸ್.ಡಿ.ಎ.ಯ ಮೇಲೆ ಅಡ್ಡವಾಗಿ ಗೆರೆಯಾಕಾರದಲ್ಲಿ ಎಳೆಯಲಾಯಿತು ಹಾಗೂ ಮೈಕ್ರೊಟೈಟರ್ ತಟ್ಟೆಗೆ 50 ಮೈ.ಲೀ.ರಷ್ಟು ಐ.ಎನ್.ಟಿ.ಯನ್ನು ಸೇರಿಸಿ ಖಚಿತಪಡಿಸಕೊಳ್ಳಲಾಯಿತು. ತಿಳಿ ಹಳದಿ ಬಣ್ಣದ ಐ.ಎನ್.ಟಿ.ಯು ಕೆಂಪು ಬಣ್ಣಕ್ಕೆ ತಿರುಗಿದರೆ ಶಿಲೀಂಧ್ರದ ಬೆಳವಣಿಗೆಯಿದೆ ಎಂದೂ, ಹಳದಿ ಬಣ್ಣ ಹಾಗೆಯೇ ಉಳಿದರೆ ಬೆಳವಣಿಗೆ ಕುಂದಿದೆಯೆಂಬುದನ್ನು ತೋರಿಸುತ್ತದೆ.

ಮಿಥನಾಲ್ ಸಾರ ಮತ್ತು 4-ಒ–ಎಂಜಿಎಗಳ ಶಿಲೀಂಧ್ರ ನಿರೋಧಕ ಗುಣಗಳನ್ನು ಕಾಪರ್ ಆಕ್ಸಿಕ್ಲೋರೈಡ್ ಮತ್ತು ರಿಂಕ್ ಎಥಿಲೀನ್ ಬಿಸ್ಥಯೋಕಾರ್ಬಮೇಟ್ ನಂತಹ ಕೆಲವು ಕೃತಕ ರಾಸಾಯನಿಕಗಳೊಂದಿಗೆ ಹೋಲಿಕೆ ಮಾಡಲಾಯಿತು.

ಶಿಲೀಂಧ್ರನಂಜು–ನಿರೋಧಕ ಗುಣಗಳು: (i) ಪ್ರಾಯೋಗಿಕ ನೆಲೆಯಲ್ಲಿ– ಸುಕ್ರೋಸ್–ಮೆಗ್ನೀಷಿಯಂ ಸಲ್ಫೇಟ್–ಪೊಟಾಷಿಯಂ ಸಲ್ಫೇಟ್–ಯೀಸ್ಟ್ ಎಕ್ಸ್ಟ್ರಾಕ್ಟ್ (ಎಸ್.ಎಂ.ಕೆ.ವೈ.) ದ್ರವ ಮಾಧ್ಯಮವನ್ನು ಬಳಸಿಕೊಂಡು ಮಿಥನಾಲ್ ಸಾರ ಮತ್ತು 4–ಒ–ಎಂಜಿಎಗಳ ಆಫ್ಲಾಟಾಕ್ಸಿನ್ ತಡೆಗಟ್ಟುವ ಗುಣಗಳನ್ನು ಪರೀಕ್ಷಿಸಲಾಯಿತು[2]. ನೂರು ಮಿ.ಲೀ. ಗಾತ್ರದ ಫ್ಲಾಸ್ಕಿನಲ್ಲಿ 25 ಮಿ.ಲೀ.. ಎಸ್.ಎಂ.ಕೆ.ವೈ.ಯನ್ನು ತೆಗೆದುಕೊಂಡು 0.125, 0.25, 0.50, 1.0 ಮತ್ತು 2.0 ಮಿ.ಗ್ರಾಂ/ಮಿ.ಲೀ. ಸಾಂದ್ರತೆಯಲ್ಲಿ ಪರೀಕ್ಷಕ ಮಾದರಿಗಳನ್ನು ಸೇರಿಸಲಾಯಿತು. ಸ್ವತಾಪೀಕರಿಸಿದ ನಂತರ 15 ಮೈ.ಲೀ. ಆಫ್ಲಾಟಾಕ್ಸಿನ್–ಉತ್ಪಾದಕ ಆಸ್ಪರ್ಜಿಲ್ಲಸ್ ಫ್ಲೇವಸ್ ಶಿಲೀಂಧ್ರವನ್ನು ಸೇರಿಸಿ 28 ಡಿ.ಸೆ. ಉಷ್ಣತೆಯಲ್ಲಿ 10 ದಿನಗಳ ಇಡಲಾಯಿತು. ಯಾವುದೇ ಸಸ್ಯ ಮಾದರಿಗಳನ್ನು ಒಳಗೊಳ್ಳದ, ಡಿ.ಎಂ.ಎಸ್. ಮಾತ್ರವನ್ನು ಒಳಗೊಂಡ ಎಸ್.ಎಂ.ಕೆ.ವೈ.ಯನ್ನು ನಿಯಂತ್ರಣ ಮಾಧ್ಯಮವಾಗಿ ಬಳಸಲಾಯಿತು. ಹತ್ತು ದಿನಗಳ ನಂತರ, ಶಿಲೀಂಧ್ರ ಬೆಳೆಯನ್ನು ವ್ಯಾಟ್ಸ್ಮನ್ ನಂ.೧ ಫಿಲ್ಟರ್ ಪೇಪರಿನ ಮೂಲಕ ಬಸಿದು, ಉಳಿದ ಶಿಲೀಂಧ್ರಜಾಲವನ್ನು 100 ಡಿ.ಸೆ. ಉಷ್ಣತೆಯಲ್ಲಿ 12 ಗಂಟೆಗಳ ಕಾಲ ಒಣಗಿಸಿದ ನಂತರ ಅದರ ಒಣತೂಕವನ್ನು (ಮೈಸಿಲಿಯಲ್ ಡ್ರೈ ವೆಯ್ಟ್) ಆಳೆಯಲಾಯಿತು. ಬಸಿದ ದ್ರವವನ್ನು 20 ಮಿ.ಲೀ. ಕ್ಲೋರೋಫಾರ್ಮನೊಂದಿಗೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿದ ನಂತರ, ಬೇರ್ಪಡಿಸಿದ ಕ್ಲೋರೋಫಾರ್ಮ ಭಾಗವನ್ನು ಕತ್ತಲೆ ವಾತಾವರಣದಲ್ಲಿ ಸಾಂದ್ರೀಕರಿಸಲಾಯಿತು. ಹೀಗೆ ಬೇರ್ಪಟ್ಟ ಆಫ್ಲಾಟಾಕ್ಸಿನ ಪ್ರಮಾಣವನ್ನು ಟಿ.ಎಲ್.ಸಿ. ಮತ್ತು ಯು.ವಿ.–ಸ್ಪೆಕ್ಟ್ರೋಮೆಟ್ರಿಕ್ ವಿಧಾನದಿಂದ ನಿರ್ಧರಿಸಲಾಯಿತು.

(ii) ಜೈವಿಕ ನೆಲೆಯಲ್ಲಿ– ಮೆಕ್ಕೆಜೋಳದ ಕಾಳುಗಳನ್ನು ಜೈವಿಕ ಮಾಧ್ಯಮವಾಗಿ ಬಳಸಿಕೊಂಡು ಮಿಥನಾಲ್ ಸಾರ ಮತ್ತು 4–ಒ–ಎಂಜಿಎಗಳ ಆಫ್ಲಾಟಾಕ್ಸಿನ್ ತಡೆಗಟ್ಟುವ ಗುಣಗಳನ್ನು ಪರೀಕ್ಷಿಸಲಾಯಿತು[1]. ಮಿಥನಾಲ್ ಸಾರ ಮತ್ತು 4–ಒ–ಎಂಜಿಎಗಳನ್ನು 0.125-2.0 ಮಿ.ಗ್ರಾಂ/ಮಿ.ಲೀ. ಸಾಂದ್ರತೆಯಲ್ಲಿ ಮೆಕ್ಕೆಜೋಳದ ಕಾಳುಗಳಿಗೆ ಬೆರೆಸಲಾಯಿತು ಹಾಗೂ 100 ಮೈ.ಲೀ. ಆಫ್ಲಾಟಾಕ್ಸಿನ್–ಉತ್ಪಾದಕ ಆಸ್ಪರ್ಜಿಲ್ಲಸ್ ಫ್ಲೇವಸ್ ಶಿಲೀಂಧ್ರವನ್ನು ಸೇರಿಸಿ ಕೊಠಡಿ ತಾಪಮಾನದಲ್ಲಿ 15 ದಿನಗಳ ಇಡಲಾಯಿತು. ಹದಿನೈದು ದಿನಗಳ ನಂತರ, ಮೆಕ್ಕೆಜೋಳದ ಕಾಳುಗಳಲ್ಲಿ ಶಿಲೀಂಧ್ರ ಬೆಳವಣಿಗೆ ಮತ್ತು ಆಫ್ಲಾಟಾಕ್ಸಿನ್ ಉತ್ಪಾದನೆ ತಡೆಗಟ್ಟಲ್ಪಟ್ಟಿದೆಯೇ ಎಂಬುದನ್ನು ದಾಖಲಾದ ವಿಧಾನಗಳನ್ನು ಅನುಸರಿಸಿ ಕಂಡುಹಿಡಿಯಲಾಯಿತು.

ಉತ್ಕರ್ಷಣ–ನಿರೋಧಕ ಗುಣಗಳು: ಮಿಥನಾಲ್ ಸಾರ ಮತ್ತು 4–ಒ–ಎಂಜಿಎಗಳ ಉತ್ಕರ್ಷಣ ನಿರೋಧಕ ಗುಣಗಳನ್ನು 2,2-ಡೈಫಿನೈಲ್–1–ಪಿಕ್ರೈಲ್ ಹೈಡ್ರಜಿಲ್ (ಡಿಪಿಪಿಹೆಚ್) ವಿಧಾನದಿಂದ ಪರೀಕ್ಷಿಸಲಾಯಿತು[7]. ಪರೀಕ್ಷಾ ಮಾದರಿಗಳನ್ನು 156-2000 ಮೈ.ಗ್ರಾಂ/ಮಿ.ಲೀ. ಪ್ರಮಾಣದಲ್ಲಿ ಸಿದ್ಧಪಡಿಸಲಾಯಿತು. 1 ಮಿ.ಲೀ. ಪರೀಕ್ಷಾ ಮಾದರಿಗೆ 3 ಮಿ.ಲೀ. ಡಿಪಿಪಿಹೆಚ್ (0.1 ಮಿಲಿ ಮೋಲಾರ್)ದ್ರಾವಣವನ್ನು ಸೇರಿಸಿ, ಕತ್ತಲೆ ಸ್ಥಿತಿಯಲ್ಲಿ ೩೦ ನಿಮಿಷಗಳ ಕಾಲ ಇಡಲಾಯಿತು.ಯು.ವಿ.–ಸ್ಪೆಕ್ಟ್ರೋಮೀಟರ್ (ಎಲಿಕೋ, ಭಾರತ) ಸಹಾಯದಿಂದ 517 ನ್ಯಾ.ಮೀ. ವ್ಯಾಪ್ತಿಯಲ್ಲಿ ಬೆಳಕಿನ ಹೀರುವಿಕೆಯನ್ನು ಆಳೆಯಲಾಯಿತು. ಫಲಿತಾಂಶಗಳನ್ನು ಕೃತಕ ರಾಸಾಯನಿಕ ಬಿ.ಹೆಚ್.ಟಿ.ಯೊಂದಿಗೆ ಹೋಲಿಕೆ ಮಾಡಲಾಯಿತು.ಪರೀಕ್ಷಾ ಮಾದರಿಗಳ ಶೇಕಡಾವಾರು ಉತ್ಕರ್ಷಣ–ನಿರೋಧಕ ಸಾಮರ್ಥ್ಯವನ್ನು ನಿರ್ಧರಿಸಲು ಕೆಳಗೆ ಕೊಟ್ಟಿರುವ ಸೂತ್ರದ ಆಧಾರದಲ್ಲಿ ಕಂಡುಹಿಡಿಯಲಾಯಿತು.

ಶೇ. ಉತ್ಕರ್ಷಣ–ನಿರೋಧಕ ಸಾಮರ್ಥ್ಯ= (ನಿಯಂತ್ರಕ–ಪರೀಕ್ಷಾ ಮಾದರಿ/ನಿಯಂತ್ರಕ) X 100

ಸಾಂಖ್ಯಿಕ ವಿಶ್ಲೇಷಣೆ: ಎಲ್ಲಾ ಪ್ರಯೋಗಳನ್ನು ತ್ರಿಪ್ರತಿಗಳಲ್ಲಿ ಮಾಡಲಾಯಿತು ಹಾಗೂ ಪಡೆದ ಅಂಕಿಅಂಶಗಳನ್ನು ಎಸ್.ಪಿ.ಎಸ್.ಎಸ್. (ಐಬಿಎಮ್, ಯು.ಎಸ್.ಎ) ತಂತ್ರಾಂಶದಿಂದ ವಿಶ್ಲೇಷಿಸಲಾಯಿತು.

ಫಲಿತಾಂಶಗಳು ಮತ್ತು ವಿಶ್ಲೇಷಣೆ : ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯದ ಎಲೆಭಾಗದ ಸಾರವು ಶಿಲೀಂಧ್ರ, ಶಿಲೀಂಧ್ರನಂಜು ಮತ್ತು ಉತ್ಕರ್ಷಣ ನಿರೋಧಕ ಗುಣಗಳನ್ನು ತೋರಿತು, ನಂತರ ಈ ಗುಣಗಳಿಗೆ ಕಾರಣವಾದ 4–ಒ–ಎಂಜಿಎ ಎಂಬ ಸಕ್ರಿಯ ಅಂಶವನ್ನು ಬೇರ್ಪಡಿಸಲಾಯಿತು. ಮಿಥನಾಲ್ ಸಾರದಲ್ಲಿ ಹೆಚ್ಚಿನ ಪ್ರಮಾಣದ ಫಿನಾಲಿಕ್ ಅಂಶವು (290 ಮಿ.ಗ್ರಾಂ ಜಿಎ೩/ಗ್ರಾಂ ಒಣಸಾರಕ್ಕೆ) ಕಂಡುಬಂದಿತು. 4–ಒ–ಎಂಜಿಎಯ ಉತ್ಕರ್ಷಣ ನಿರೋಧಕ ಸಾಮರ್ಥ್ಯವು ಕೃತಕ ರಾಸಾಯನಿಕ ಬಿ.ಎಚ್.ಟಿ. ಮತ್ತು ಮಿಥನಾಲ್ ಸಾರಕ್ಕಿಂತ ಹೆಚ್ಚಾಗಿರುವುದು ಕಂಡುಬಂದಿತು (ಚಿತ್ರ–1). ಇದು ಉತ್ಕರ್ಷಣ ನಿರೋಧಕ ಗುಣದಲ್ಲಿ ಫಿನಾಲಿಕ್ ಅಂಶಗಳ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಮಿಥನಾಲ್ ಸಾರ ಮತ್ತು 4–ಒ–ಎಂಜಿಎ ಮಾದರಿಗಳನ್ನು ಆಸ್ಪರ್ಜಿಲ್ಲಸ್ ಫ್ಲೇವಸ್ ಶಿಲೀಂಧ್ರದ ಬೆಳವಣಿಗೆಯ ಮೇಲೆ ಪರೀಕ್ಷಿಸಿದಾಗ ಪರಿಮಾಣ–ಅವಲಂಬಿತ ಪ್ರತಿಬಂಧಕ ಕ್ರಿಯೆ ಕಂಡುಬಂದಿತು (ಕೋಷ್ಟಕ–1). ಸಸ್ಯಸಾರದ ಪ್ರಮಾಣ ಹೆಚ್ಚಾದ ಹಾಗೆ ಶಿಲೀಂಧ್ರರಾಶಿ ಮತ್ತು ಶಿಲೀಂಧ್ರನಂಜಿನ (ಆಫ್ಲಾಟಾಕ್ಸಿನ್) ಉತ್ಪಾದನೆಯಲ್ಲಿ ಕುಸಿತವುಂಟಾಯಿತು. ಶಿಲೀಂಧ್ರ ಜೀವರಾಶಿ ಮತ್ತು ಆಫ್ಲಾಟಾಕ್ಸಿನ್ ಉತ್ಪಾದನೆಗಳ ಇಳಿಕೆಯಲ್ಲಿ ಒಂದು ಧನಾತ್ಮಕವಾದ ಅನುರೂಪ ಸಂಬಂಧ ಕಾಣಿಸಿತು.

ಪ್ರಾಯೋಗಿಕ ನೆಲೆಯಲ್ಲಿ ಪರೀಕ್ಷಿಸಿದಾಗ, ಮಿಥನಾಲ್ ಸಾರದ 2 ಮಿ.ಗ್ರಾಂ/ಮಿ.ಲೀ. ಮತ್ತು 4–ಒ–ಎಂಜಿಎಯ 2 ಮಿ.ಗ್ರಾಂ/ಮಿ.ಲೀ. ಪ್ರಮಾಣದಲ್ಲಿ ಅಫ್ಲಾಟಾಕ್ಸಿನ್ ಉತ್ಪಾದನೆ ಸಂಪೂರ್ಣವಾಗಿ ತಡೆಗಟ್ಟಲ್ಪಟ್ಟಿತು (ಕೋಷ್ಟಕ–2). 4–ಒ–ಎಂಜಿಎ ಎಂಬ ಅಂಶವು ಹೈಡ್ರೋಲೈಸಬಲ್ ಟ್ಯಾನಿನ್ ಗುಂಪಿಗೆ ಸೇರಿದ್ದು, ಆದನ್ನು ಶಿಲೀಂಧ್ರ ಬೆಳವಣಿಗೆ ಮಾಧ್ಯಮದಲ್ಲಿ ಸೇರಿದಾಗ ಅಫ್ಲಾಟಾಕ್ಸಿನ್–ನಿರೋಧಕ ಗುಣವನ್ನು ಹೊಂದಿರುವುದಾಗಿ ಈಗಾಗಲೇ ದಾಖಲಾಗಿದೆ[8]. ಈ ಹೇಳಿಕೆಯ ಆಧಾರದಲ್ಲಿ ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯದ ಈ ಗುಣಗಳಿಗೆ 4-ಒ–ಎಂಜಿಎಯೇ ಕಾರಣವೆಂದು ವಿಶ್ಲೇಷಿಸಬಹುದು. ಶಿಲೀಂಧ್ರ ಬೆಳವಣಿಗೆಯನ್ನು ಮತ್ತು ಅಫ್ಲಾಟಾಕ್ಸಿನ್ ಉತ್ಪಾದನೆಯನ್ನು ತಡೆಗಟ್ಟುವ ಗುಣಹೊಂದಿದ್ದು, ಹಾಗೂ ಹೆಚ್ಚಿನ ಪ್ರಮಾಣದ ಫಿನಾಲಿಕ್ ಅಂಶಗಳೊಂದಿಗೆ ಹೆಚ್ಚಿನ ಉತ್ಕರ್ಷಣ–ನಿರೋಧಕ ಗುಣವನ್ನು ಹೊಂದಿದೆ. ಫಿಲ್ಲಾಂಥಸ್ ಪಾಲಿಫಿಲ್ಲಸ್ ಸಸ್ಯದ ಈ ಮಹತ್ವದ ಗುಣಗಳನ್ನು ಆಹಾರ ಪದಾರ್ಥಗಳು ಶಿಲೀಂಧ್ರದಿಂದ ಮತ್ತು ಉತ್ಕರ್ಷಣಶೀಲತೆಯಿಂದ ಹಾಳಾಗುವುದನ್ನು ತಡೆಗಟ್ಟಲು ಬಳಸಿಕೊಳ್ಳಬಹುದಾಗಿದೆ.

ಕೋಷ್ಟಕ 1- ಮಿಥನಾಲ್ ಸಾರ, 4-ಒ–ಎಂಜಿಎ ಮತ್ತು ಕೆಲವು ಕೃತಕ ರಾಸಾಯನಿಕಗಳ ಆಸ್ಪರ್ಜಿಲ್ಲಸ್ ಫ್ಲೇವಸ್ ನಿರೋಧಕ ಗುಣಗಳು

ಪರೀಕ್ಷಾ ಮಾದರಿಗಳು	ಆಸ್ಪರ್ಜಿಲ್ಲಸ್ ಫ್ಲೇವಸ್		
	ಶೇ. ಕವಕಜಾಲದ ನಿಬಂಧನೆ	ಕನಿಷ್ಠ (ಮಿ.ಗ್ರಾಂ/ಮಿ.ಲೀ)	ಕಪಿಷ್ಠ (ಮಿ.ಗ್ರಾಂ/ಮಿ.ಲೀ)
ಮಿಥನಾಲ್ ಸಾರ	12.7±0.14	0.25	2.0
4-ಒ-ಎಂಜಿಎ	1.1±0.33	4.0	>4.0
ಕಾಪರ್ ಆಕ್ಸಿಕ್ಲೋರೈಡ್	-	0.25	2.00
ಥಿಂಕ್ ಎಥಿಲೀನ್ ಬಿನ್ಡಯೋಕಾರ್ಬಮೇಟ್	-	0.12	1.00



ಚಿತ್ರ 1- ಮಿಥನಾಲ್ ಸಾರ, 4-ಒ–ಎಂಜಿಎ ಮತ್ತು ಬಿ.ಹೆಚ್.ಟಿ.ಗಳ ಉತ್ಕರ್ಷಣ ನಿರೋಧಕ ಗುಣಗಳು

ಉಲ್ಲೇಖನಗಳು

1. D. Garcia et al., 2012. Effect of Equisetum arvense and Stevia rebaudiana extracts on growth and mycotoxin production by Aspergillus flavus and Fusarium verticillioides in maize seeds as affected by water activity. International Journal of Food Microbiology, 153, 21-27.
2. R. Kumar et al., 2007. Evaluation of Chenopodium ambrosioides oil as a potential source of antifungal, antiaflatoxigenic and antioxidant activity. International Journal of Food Microbiology, 115, 159-164.
3. N.T. Dung et al., 2008. Chemical composition, antimicrobial and antioxidant activities of the essential oil and the ethanol extract of Cleistocalyx operculatus (Roxb.) Merr and Perry buds. Food and Chemical Toxicology, 46, 3632-3639.

ಕೋಷ್ಟಕ 2- ಪ್ರಾಯೋಗಿಕ ಮತ್ತು ಜೈವಿಕ ನೆಲೆಯಲ್ಲಿ ಮಿಥನಾಲ್ ಸಾರ ಮತ್ತು 4-ಒ–ಎಂಜಿಎಗಳ ಅಫ್ಲಾಟಾಕ್ಸಿನ್–ನಿರೋಧಕ ಗುಣಗಳ

ವಿವಿಧ ಪ್ರಮಾಣದಲ್ಲಿ ಪರೀಕ್ಷಾ ಮಾದರಿಗಳು	ಮಿಥನಾಲ್ ಸಾರ			4-ಒ-ಎಂಜಿಎ		
	ಕವಕಜಾಲದ ಒಣ ತೂಕ (ಮೈ.ಗ್ರಾಂ/20 ಮಿ.ಲೀ.)	ಅಫ್ಲಾಟಾಕ್ಸಿನ್-ಬಿ1 (ಮೈ.ಗ್ರಾಂ/ಕಿ.ಗ್ರಾಂ.) ಪ್ರಾಯೋಗಿಕ ನೆಲೆಯಲ್ಲಿ	ಅಫ್ಲಾಟಾಕ್ಸಿನ್-ಬಿ1 (ಮೈ.ಗ್ರಾಂ/ಕಿ.ಗ್ರಾಂ.) ಜೈವಿಕ ನೆಲೆಯಲ್ಲಿ	ಕವಕಜಾಲದ ಒಣ ತೂಕ (ಮೈ.ಗ್ರಾಂ/20 ಮಿ.ಲೀ.)	ಅಫ್ಲಾಟಾಕ್ಸಿನ್-ಬಿ1 (ಮೈ.ಗ್ರಾಂ/ಕಿ.ಗ್ರಾಂ.) ಪ್ರಾಯೋಗಿಕ ನೆಲೆಯಲ್ಲಿ	ಅಫ್ಲಾಟಾಕ್ಸಿನ್-ಬಿ1 (ಮೈ.ಗ್ರಾಂ/ಕಿ.ಗ್ರಾಂ.) ಜೈವಿಕ ನೆಲೆಯಲ್ಲಿ
Control	1047±0.32	1500±20	2500±32	1047±0.32	1500±24	2500±36
0.125	1007±0.39	180±12	2000±28	1173±0.41	1000±20	2000±28
0.250	973±0.24	60±8	2000±24	978±0.22	800±14	2000±30
0.500	948±0.29	50±8	1500±18	943±0.32	400±16	2000±28
1.000	963±0.19	00±0	1500±16	843±0.15	100±12	1500±16
2.000	878±0.14	00±0	1500±18	818±0.18	00±0	1500±18
4.000	-	-	1000±12	-	-	1500±22

4. Y.K. Rao et al., 2006. Anti-inflammatory activities of constituents isolated from Phyllanthus polyphyllus. Journal of Ethnopharmacology, 103, 181-186.
5. R. Srirama et al., 2010. Assessing species admixtures in raw drug trade of Phyllanthus, a hepato-protective plant using molecular tools. Journal of Ethnopharmacology, 130, 208-215.
6. D.C. Mohana et al., 2008. Herbal remedies for the management of seed-borne fungal pathogens by an edible plant Decalepis hamiltonii (Wight & Arn). Archives Phytopathology and Plant Protection, 41, 38-49.
7. A.H.Ebrahimabadi et al., 2010. Composition and antioxidant and antimicrobial activity of the essential oil and extracts of Stachys inflata Benth from Iran. Food Chemistry, 119, 452-458.
8. N. Mahoney et al., 2010. Aflatoxigenesis induced in Aspergillus flavus by oxidative stress and reduction by phenolic antioxidants from tree nuts. World Mycotoxin Journal, 3, 49-57.

ಪಾಲಿಅನಿಲಿನ್‌ನ ಬೆಳಕಿನ ಮತ್ತು ವಿದ್ಯುತ್ ಗುಣಲಕ್ಷಣಗಳು

ವಾದಿರಾಜ್ ಕೆ.ಟಿ.* ಮತ್ತು ಬೆಳಗಲಿ ಎಸ್.ಎಲ್
ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು. *ಇಮೇಲ್ ವಿಳಾಸ: vadi.raj89@gmail.com

ಅರೆವಾಹಕಗಳ ವಿದ್ಯುತ್ ಪ್ರಸರಣಾ ಶಕ್ತಿಯು ವಾಹಕ ಮತ್ತು ನಿರೋಧಕಗಳ ನಡುವೆ ಇರುತ್ತದೆ. ಇವುಗಳ ಬಳಕೆ ವಿದ್ಯುನ್ಮಾನ ಮತ್ತು ದೂರ ಸಂಪರ್ಕ ಸಾಧನೆಗಳಲ್ಲಿ ಹೆಚ್ಚಿದೆ. ಚಿಕ್ಕ ಕ್ಯಾಲ್ಕುಲೇಟರ್‌ನಿಂದ ಉಪಗ್ರಹಳವರೆಗೂ ಬಳಸಲಾಗುತ್ತದೆ. ಸಿಲಿಕಾ ವಸ್ತುಗಳನ್ನು ಅರೆವಾಹಕವನ್ನಾಗಿ ಅತೀ ಹೆಚ್ಚು ಉಪಯೋಗಿಸುತ್ತಾರೆ ಆದರೆ ಅವುಗಳ ಉತ್ಪಾದನಾ ವೆಚ್ಚ ಅಧಿಕವಾಗಿರುವುದರಿಂದ, ಅದರ ಬದಲು ಸಾವಯವ ಅರೆವಾಹಕಗಳನ್ನು ಪರಿಗಣಿಸಬಹುದು, ಏಕೆಂದರೆ, ಅವುಗಳ ಉತ್ಪಾದನ ವೆಚ್ಚ ಅತ್ಯಂತ ಕಡಿಮೆ ಮತ್ತು ಸುಲಭ.

ಪಾಲಿಅನಿಲಿನ್ ಉತ್ಪಾದನೆಯು ಒಂದು ಸಾವಯವ ಅರವಾಹಕವಾಗಿದ್ದು ಅರೋಮ್ಯಾಟಿಕ್ ಸುರುಳಿ ಮತ್ತು ಸಾರಜನಕದ ಎಲೆಕ್ಟ್ರಾನ್‌ಗಳು ಇರುವುದರಿಂದ ವಿದ್ಯುತ್ ವಾಹಿಸಬಲ್ಲದು ಮತ್ತು ಇದನ್ನು ಸುಲಭವಾಗಿ ಉತ್ಪಾದಿಸಬಹುದು ಹಾಗೂ ಇದು ಅಗ್ಗದಾಗಿದ್ದು ಪರಿಸರಕ್ಕೆ ಧಕ್ಕೆತರುವುದಿಲ್ಲ. ಇದರ ವಿದ್ಯುದ್ರಾಸಾಯನಿಕ ಬೆಳಕಿನ ಮತ್ತು ವಿದ್ಯುದ್‌ಗುಣಗಳು ಅದಕ್ಕೆ ಪೂರಕವಾಗಿದೆ. ಪಾಲಿಅನಿಲಿನ್‌ನನ್ನು ಹೈಡ್ರೋಕ್ಲೋರಿಕ್ ಆಮ್ಲ, ಅನಿಲಿನ್ ಮತ್ತು ಅಮೋನಿಯಮ್ ಪರ್‌ಸಲ್ಫೇಟ್ ಉಪಯೋಗಿಸಿ ಸಂಶ್ಲೇಶನೆಗೊಳಿಸಿದಾಗ ಇಮರಲ್ಡೈನ್ ಕ್ಲಾರವಾಗುತ್ತದೆ. ಇದನ್ನು ಅತಿನೇರಳೆ ಮತ್ತು ಗೋಚರ ರೋಹಿತ ಹಾಗು ಕ್ಷಕಿರಣ ವಿವರ್ತನೆಗೆ ಒಳಪಡಿಸಿ ಇದರ ಫಲಿತಾಂಶದಿಂದ, ಇದನ್ನು ಉಪಯೋಗಿಸಿ ಸಂಯೋಜಿತ ಸೌರಕೋಶವನ್ನು ಅಭಿವೃದ್ಧಿ ಪಡಿಸಬಹುದು.

ಮುಖ್ಯ ಪದಗಳು: ಅರೆವಾಹಕ, ಸಿಲಿಕಾನ್, ಪಾಲಿಅನಿಲಿನ್, ಪರಿಸರಕ್ಕೆ ಧಕ್ಕೆತಾರದ್ದು, ಸೌರ ಕೋಶ.

ಪರಿಚಯ: ಕೆಲವೊಂದು ವಸ್ತುಗಳು ವಿದ್ಯುತನ್ನು ವಾಹಿಸುತ್ತವೆ ಮತ್ತೆ ಕೆಲವು ವಾಹಿಸುವುದಿಲ್ಲ, ಆದರೆ ಅರೆವಾಹಕಗಳು ಕೆಲವು ಸ್ಥಿತಿಗಳಲ್ಲಿ ವಾಹಿಸುತ್ತವೆ ಇವುಗಳಲ್ಲಿ ಕೆಲವೊಂದು ಸಾವಯವ ವಸ್ತುಗಳು ಇವೆ, ಉದಾಹರಣೆ ಪಾಲಿಅನಿಲಿನ್. ಇದೊಂದು ವಿದ್ಯುತ್ ವಾಹಿಸುವ ಪಾಲಿಮರ್, ಆದರೂ p-ವಿಧದ ಅರೆವಾಹಕವಾಗಿ ಬಳಸಬಹುದು. ಇದರಲ್ಲಿ ವಿಶೇಷವಾದ ವಿದ್ಯುತ್ ಮತ್ತು ಬೆಳಕಿನ ಗುಣಲಕ್ಷಣಗಳಿರುವುದು ಕಂಡು ಬರುತ್ತದೆ, ಇದನ್ನು ಸೆನ್ಸರ್ ಸೌರಕೋಶ, ಎಂಟಿಸ್ಟ್ಯಾಟಿಕ್ ಪರದೆಗಳಲ್ಲಿ ಡಯೋಡ್‌ಗಳಲ್ಲಿ, ತುಕ್ಕುನಿರೋದಿ ಪರದೆಗಳಲ್ಲಿ ಬಳಸಲಾಗುತ್ತದೆ. ಇದರ ಸಂಶ್ಲೇಷಣೆಯ ಖರ್ಚು, ಸಂಕೋಚನ ಮತ್ತು ಉತ್ಕರ್ಷಣಾ ಕ್ಷಮತೆ ಹಾಗೂ ಪರಿಸರಕ್ಕೆ ಧಕ್ಕೆ ತಾರದ ಗುಣಗಳು ಇದರ ಉತ್ಕೃಷ್ಟತೆಯನ್ನು ಹೇಳುತ್ತವೆ. ಇದನ್ನು ವಿದ್ಯುತ್ ರಾಸಾಯನಿಕ ಮತ್ತು ರಾಸಾಯನಿಕ ವಿಧದಲ್ಲಿ ಸಂಶ್ಲೇಷಣೆ ಮಾಡಬಹುದು, ಆದರೆ ಇದರ ಸುಲಭವಿಧಾನ ರಾಸಾಯನಿಕ ಸಂಶ್ಲೇಷಣೆ ಮೂಲಕ ಮಾಡಬಹುದು, ಇದರಲ್ಲಿ ಅನಿಲಿನ್‌ನನ್ನು ನೀರಿನ ಮಾಧ್ಯಮದಲ್ಲಿ ಪಾಲಿಮರೈಸ್ ಮಾಡುವುದರಿಂದ ಪಡೆಯಬಹುದು ಹೀಗೆ ಮಾಡಿದಾಗ ಅನಿಯಮಿತ ಆಕಾರದ ಕಣಗಳು ಸೃಷ್ಟಿಯಾಗುತ್ತವೆ. ಇವುಗಳನ್ನು ತೆಳು ಪದರುಗಳಾಗಿ ಗಾಜಿನ ಮೇಲೆ ಹರಡಿ ಅದನ್ನು ಅರೆವಾಹಕವಾಗಿಯೂ ಅಥವಾ ವಾಹಕವಾಗಿಯೂ ಉಪಯೋಗಿಸ ಬಹುದು.

ವಿಧಿ ಮತ್ತು ವಿಧಾನ: ಪ್ರಸ್ತುತವಾಗಿ ಪಾಲಿಅನಿಲಿನ್‌ನನ್ನು ಸಂಶ್ಲೇಷಿಸಲು ಬೇಕಾದಂತಹ ರಾಸಾಯನಿಕಗಳನ್ನು ನಾವು ಮರ್ಕ್ ಸಂಸ್ಥೆಯಿಂದ ತರಿಸಿಕೊಂಡಿದೆ, ಎರಡುಸಾರಿ ಭಾಷ್ಪೀಕರಿಸಿದ ನೀರನ್ನು ಉಪಯೋಗಿಸ ಲಾಯಿತು. ರಾಸಾಯನಿಕಗಳಾದ ಅನಿಲಿನ್, ಹೈಡ್ರೋಕ್ಲೋರಿಕ್ ಆಮ್ಲ, ಅಮೋನಿಯಂ ಪರ್‌ಸಲ್ಫೈಟ್ ಹಾಗೂ ಸೋಡಿಯಂ ಪರ್‌ಕ್ಲೋರೈಟ್ ಬಳಸಲಾಯಿತು.

ಮೊದಲು 1. 9ಗ್ರಾಮ್ ಅನಿಲಿನ್ ಅನ್ನು 100 ಮಿ.ಲಿ. 0.1 N ಹೈಡ್ರೋಕ್ಲೊರಿಕ್ ಆಮ್ಲದಲ್ಲಿ ಕರಗಿಸಬೇಕು ನಂತರ 5.6ಗ್ರಾಮ್ ಅಮೋನಿಯಂ ಪರ್‌ಸಲ್ಫೈಟ್‌ನ್ನು ಸರಿಯಾಗಿ ತೂಕಮಾಡಿಕೊಂಡು 100 ಮಿ.ಲಿ. 0.1 N ಹೈಡ್ರೋಕ್ಲೋರಿಕ್ ಆಮ್ಲದಲ್ಲಿ ಕರಗಿಸುವುದು. ಅನಂತರ 100 ಮಿ.ಲಿ. ಅನಿಲಿನ್ ದ್ರಾವಣಕ್ಕೆ 20 ಮಿ.ಲಿ. ಅಮೋನಿಯಂ ಪರ್‌ಸಲ್ಫೈಟ್ ದ್ರಾವಣ ಬೆರೆಸಬೇಕು, ರಾಸಾಯನಿಕ

ಕ್ರಿಯೆ ಸಂಭವಾದ ಶುರುವಾದ ಬಳಿಕ 2 ಮಿ.ಲಿ. ಸೋಡಿಯಂ ಪರ್‌ಕ್ಲೋರೆಟ್‌ನ್ನು ಬೆರೆಸಿ 25 ನಿಮಿಷಗಳ ತನಕ ಹಾಗೆ ಬಿಡಬೇಕು ನಂತರ ಹಸಿರು ಬಣ್ಣಕ್ಕೆ ತಿರುಗುವ ದ್ರಾವಣವನ್ನು ವಾಟ್‌ಮನ್ ಫಿಲ್ಟರ್ ಕಾಗದ ಸಂಖ್ಯೆ42 ರಲ್ಲಿ ಸೋಸಲಾಯಿತು. ನಂತರ ವಾಟ್‌ಮನ್ ಫಿಲ್ಟರ್ ಕಾಗದದ ಮೇಲೆ ಬರುವ ಹಸಿರುಬಣ್ಣದ ಪಾಲಿಅನಿಲಿನ್ನನ್ನು 0.1 N ಹೈಡ್ರೋಕ್ಲೋರಿಕ್ ಆಮ್ಲ, ನೀರು ಮತ್ತು ಅಸಿಟೋನ್ ಮೂಲಕ ತೊಳೆದು 60^0C ಶಾಖದಲ್ಲಿ ಒಣಗಿಸಬೇಕು.

ನಂತರ ಪಾಲಿಅನಿಲಿನ್ ಅನ್ನು ಕ್ಷಕಿರಣ ವಿವರ್ತನೆ, ಅತಿನೇರಳೆ ಮತ್ತು ಗೋಚರ ರೋಹಿತಕ್ಕೆ ಒಳಪಡಿಸಬೇಕು.

ಫಲಿತಾಂಶ ಮತ್ತು ವಿವರಣೆಗಳು:

ಅತಿನೇರಳೆ ಮತ್ತು ಗೋಚರ ರೋಹಿತ: ಸಂಶ್ಲೇಷಿತ ಪಾಲಿಅನಿಲಿನ್‌ಅನ್ನು ಡೈ ಮೀಥೈಲ್, ಸಲ್ಫಾಕ್ಸೈಡ್ ನಲ್ಲಿ ರೋಹಿತಕ್ಕೆ ಒಳಪಡಿಸಿದಾಗ ಗ್ರಾಫ್ ಬಂದದ್ದನ್ನು ಚಿತ್ರ 1 ರಲ್ಲಿ ತೋರಿಸಿದೆ. ಮೊದಲು 290ನ.ಮಿ. ಗಳಲ್ಲಿ ಶಿಖರ ಬಂದದ್ದು ಅನಿಲಿನ್‌ನ್ನ ಅಂಶ ಇರುವುದನ್ನು ಸ್ಪಷ್ಟ ಪಡಿಸುತ್ತದೆ. ದ್ವಿತೀಯ ಶಿಖರ 320ನ.ಮಿ. ನಿಂದ 490ನ.ಮಿ.ಗಳ ಒಳಗೆ ಬರುವುದು, ಇದೆ π-π^* ಪರಿವರ್ತನೆಯಾಗಿದ್ದು ಇದಕ್ಕೆ ಬೆಂಜಾಯ್ಡ್ ಗುಂಪು ಕಾರಣವಾಗಿರುತ್ತದೆ. ಪ್ರಸ್ತುತ ಬಂದ ರೋಹಿತ ಪರಣಾಮವನ್ನು ಬ್ಯಾಂಡ್‌ಗ್ಯಾಪ್ ಕಂಡು ಹಿಡಿಯಲು ಉಪಯೋಗಿಸಿದಾಗ ಬ್ಯಾಂಡ್ ಗ್ಯಾಪ್ 4.10 ev ಇದೆ ಎಂದು ತಿಳಿಯಿತು.



ಚಿತ್ರ 1: ಅತಿನೇರಳೆ ಮತ್ತು ಗೋಚರ ರೋಹಿತ

ಕ್ಷಕಿರಣ ವಿವರ್ತನೆ (XRD): ಸಂಶ್ಲೇಷಿತ ಪಾಲಿಅನಿಲಿನ್ ನ ಸ್ಪಟಿಕತೆ ಮತ್ತು ಸ್ಪಟಿಕ ಗಾತ್ರಕ್ಕಾಗಿ ಕ್ಷಕಿರಣ ವಿವರ್ತನೆಗೆ ಒಳಪಡಿಸಲಾಯಿತು ಅದರ ಗ್ರಾಫ್ ಚಿತ್ರ 2ರಲ್ಲಿ ತೋರಿಸಿದೆ. ಫಲಿತಾಂಶವು ಉಹಿಸಿದಂತೆ ಸ್ಪಟಿಕ ಗಾತ್ರವು 2.10 nm ಇದ್ದು ಸ್ಪಟಿಕತೆ 36.15% ಇರುತ್ತದೆ. ಆದ್ದರಿಂದ ಇದನ್ನು ನ್ಯಾನೋ ಸೌರಕೋಶದಲ್ಲಿ ಬಳಸಲು ಉಪಯೋಗಿಸ ಬಹುದು. ತೀಕ್ಷ್ಣತೆ



ಚಿತ್ರ 2 ಕ್ಷಕಿರಣ ವಿವರ್ತನೆ

ಸಮಾರೋಪ: ಪ್ರಸ್ತುತ ಪಾಲಿಅನಿಲಿನ್ ಒಂದು ಸ್ವಾವಯವ ಅರೆವಾಹಕವಾಗಿದ್ದು ಅದರ ಬೆಳಕು ಮತ್ತು ವಿದ್ಯುತ್ ಗುಣಲಕ್ಷಣಗಳು ಅತ್ಯಂತ ಪರಿಣಾಮಕಾರಿಯಾಗಿರುತ್ತವೆ. ಕ್ಷಕಿರಣ ವಿವರ್ತನೆಯಿಂದ ಸಂಶ್ಲೇಷಿಸಿದ ಪಾಲಿಅನಿಲನ್ ನ್ಯಾನೊ ಅಳತೆಯದ್ದಾಗಿರುತ್ತದೆ. ಅತಿನೇರಳೆ ಮತ್ತು ಗೋಚರ ರೋಹಿತದಿಂದ ಅದೊಂದು ವಾಹಕ ಎಂದು ತಿಳಿಯುತ್ತದೆ. ಈ ಎಲ್ಲಾ ಅಂಶಗಳಿಂದ ಅದನ್ನು ಸೌರಕೋಶದಲ್ಲಿ ಬಳಸಬಹುದಾಗಿದೆ.

ಉಲ್ಲೇಖಗಳು:

1. H C Pant, M K Patra, S C Negi, A Bhatia, S R Vadera, N Kumar, Studies on conductivity and dielectric properties of polyaniline–zinc sulphide composites, Bulletin of Materials Science, **2006**, 29(4), 379-384
2. Deepshikha Saini, T. Basu, Synthesis and characterization of nanocomposites based on polyaniline-gold/graphene nanosheets, Applied Nanoscience, **2012**,2(4),467-479
3. Abdelaziz Rahy, Mohamed Sakrout, Sanjeev Manohar, Sung June Cho, John Ferraris, D. J. Yang, Polyaniline Nanofiber Synthesis by Co-Use of Ammonium Peroxydisulfate and Sodium Hypochlorite, Chemistry of Materials, **2008**, 20, 4808-4814.
4. Bitao Su, Yongchun Tong, Jie Bai, Ziqiang Lei, Ke Wang, Hongmei Mu, Na Dong, Acid doped polynailine nanofibers synthesized by interfacial polymerization, Indian journal of Chemistry, **2007**, 46(A), 595-599
5. Fahrettin Yakuphanoglu1, B. Filiz S¸enkal, Electrical transport properties of an organic semiconductor on polyaniline doped by boric acid, Polymers for advanced technologies, **2008**, 19, 1876-1881
6. Yu Li, A.A.Al-Ghamdi, Omar A.Al-Hartomy, Farid El-Tantawy, F.Yakuphanoglu, Semiconducting properties of nanofiber polyaniline organic semiconductor, Optoelectronics and advanced materials – Rapid communications, 2012, 6(1), 235-238.

ಸಾಂಕ್ರಾಮಿಕ ರೋಗ ಹರಡುವ ಮಾರಣಾಂತಿಕ ಇ-ಕೋಲೈ 0157:ಹೆಚ್7 ಬ್ಯಾಕ್ಟೀರಿಯಾ

ಡಾ॥ ವಿ. ಪುಟ್ಟಲಿಂಗಮ್ಮ
*ತಾಂತ್ರಿಕ ಅಧಿಕಾರಿ (ಮೈಕ್ರೋಬೈಯಾಲಜಿ ವಿಭಾಗ), ಡಿ. ಎಫ್. ಆರ್. ಎಲ್, ಸಿದ್ಧಾರ್ಥನಗರ, ಮೈಸೂರು-570 011

ಮನುಷ್ಯರಿಗೆ ಬರುವ ಅನೇಕ ಕಾಯಿಲೆಗಳಲ್ಲಿ ಬ್ಯಾಕ್ಟೀರಿಯಾಗಳಿಂದ ಬರುವ ಕಾಯಿಲೆಗಳೇ ಹೆಚ್ಚು, ಇ-ಕೋಲೈ 0157: ಎಚ್7 ವರ್ಗಕ್ಕೆ ಸೇರಿದ ಮತ್ತು ಇದೊಂದು ಹೈಬ್ರೀಡ್ ಎಂದು ಗುರ್ತಿಸಲಾಗಿದೆ. ಇದರ ವಿಷದ ಪ್ರಭಾವದಿಂದ ರಕ್ತಕಣಗಳು ಒಡೆದುಹೋಗಿ ರಕ್ತಸ್ರಾವವಾಗುತ್ತದೆ. ಹೀಮೋಲಿಟಿಕ್ ಯುರೀಮಿಯುವುಳ್ಳ ಸಿಂಡ್ರೋಮ್ ಹಾಗೂ ವಿಷದ ತೀವ್ರತೆ ಹೆಚ್ಚಾದಂತೆ ಯಕೃತ್, ಮೂತ್ರಜನಕಾಂಗ ನಾಶವಾಗುತ್ತದೆ. ಇದರ ಶಕ್ತಿಯುತವಾದ ವಿಷದ ಪ್ರಭಾವದಿಂದ ವ್ಯಕ್ತಿಯು ಸಾಯಲೂಬಹುದು. ಈ ಬ್ಯಾಕ್ಟೀರಿಯಾಗಳು ಅರೆಬೆಂದ ದನದ ಮಾಂಸ, ಹಂದಿ ಮಾಂಸ, ಹಸಿ ತರಕಾರಿಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳು ಮತ್ತು ಇತರ ಮಾಂಸ ಪದಾರ್ಥಗಳಿಂದ ಹರಡುತ್ತವೆ. ಇದರ ಸ್ಫೋಟದಿಂದ ಪ್ರತಿವರ್ಷ ಯುಎಸ್ ದೇಶದಲ್ಲಿ ಅನೇಕರು ಸಾವನ್ನಪ್ಪುತ್ತಾರೆ. 2011, ಜೂನ್ ನಲ್ಲಿ ಜರ್ಮನ್ ದೇಶದಲ್ಲಿ ಅತಿ ದೊಡ್ಡ ಇ-ಕೋಲೈ ಸ್ಫೋಟದ ಪರಿಣಾಮವಾಗಿ 3780 ಜನರಿಗೆ ಸೋಂಕಿನಿಂದಾಗಿ 47 ಜನರು ಮರಣ ಹೊಂದಿದರು. ಇ-ಕೋಲೈ ಸ್ಫೋಟದ 0157: ಎಚ್7 ಬೈಯೊವೇರ್‌ಫೇರ್ ಏಜೆಂಟ್ ಅರ್ಹತೆ ಇದೆ. ಎಂ.ಪಿ.ಸಿ.ಆರ್ ಪಾಲಿಮರೇಸ್ ಸರಣಿ ಕ್ರಿಯೆಯ ಮಾದರಿಯ ವ್ಯವಸ್ಥೆಯಲ್ಲಿ ಜೈವಿಕ ಯುದ್ಧ ಮತ್ತು ಶಂಕಿತೆ ಏಕಾಏಕಿ ತುರ್ತು ಅವುಗಳನ್ನು ಪತ್ತೆಹಚ್ಚುವಲ್ಲಿ ಅಪಾರ ಸಹಾಯವಾಗುತ್ತದೆ. ಪಾಲಿಮರೇಸ್ ಸರಣಿ ಕ್ರಿಯೆಯು ಒಂದು ಸುಲಭವಾದ ಮತ್ತು ತ್ವರಿತ ಸಮಯದಲ್ಲಿ ವಿಷಮತೆಯೊಂದಿಗಿನ ಸಂಬಂದಿತ ವಂಶವಾಹಿಗಳನ್ನು ಪತ್ತೆಹಚ್ಚುತ್ತದೆ.

ಪ್ರಮುಖ ಪದಗಳು:- ಇ-ಕೋಲ್ 0157: ಎಚ್7: ಎಚ್7, ಪಿ.ಸಿಆರ್, ಪಾಲಿಮರೇಸ್ ಸರಣಿ ಕ್ರಿಯೆ, ವಿಷಮತೆಯೊಂದಿಗಿನ ಸಂಬಂಧಿತ ವಂಶವಾಹಿ.

ಪರಿಚಯ: ಇಸ್ಕರಿಜಿಯಾ ಕೊಲಿ 0157:H7, ಎಕ ಪ್ರಕಾರತೆಯ ಸೊಂಕು. ಇ ಕೊಲಿ ಸಾಮಾನ್ಯವಾಗಿ ಆರೋಗ್ಯವಾದ ಮನುಷ್ಯರ ಮತ್ತು ಪ್ರಾಣಿಗಳ ಕರುಳಿನಲ್ಲಿ ವಾಸಿಸುತ್ತದೆ. ಆದರೆ ಎಲ್ಲಾ ಇ ಕೂಲಿಗಳು ವಿಷಕಾರಿಯಲ್ಲಿ. ಇ ಕೊಲಿ 0157:H7 ವರ್ಗಕ್ಕೆ ಸೇರಿದ ವಿಶೇಷವಾಗಿ ಮಾರಣಾಂತಿಕ ವಿಷಕಾರಿ ತಳಿಗಳಾಗಿರುತ್ತವೆ. ಈ ತಳಿಗಳು ತೀವ್ರ ಹೊಟ್ಟೆಸೆಳೆತ, ರಕ್ತಮಯ ಅತಿಸಾರ, ರೋಗಿ ನಿತ್ರಾಣನಾಗಿ ವಾಂತಿಯಾಗುತ್ತದೆ. ಚಿಕ್ಕವುಕ್ಕಳು ಮತ್ತು ವಯಸ್ಸಾದವರಲ್ಲಿ ಹಿಮೋಲೈಟಿಕ್ ಯುರೇಮಿಕ್ ಸಿಂಡ್ರೋಮ್ (HUS) ಎಂಬ ಮೂತ್ರಪಿಂಡದ ವೈಪಲ್ಯದಿಂದ ವ್ಯಕ್ತಿಯು ಮರಣ ವನ್ನೊಪ್ಪಬಹುದು. ಶೈಗಾ ರೀತಿಯ ವಿಷದಿಂದ ರಕ್ತನಾಳಗಳ ಎಂಡೋಥೀಲಿಯಮ್ ಜೀವಕೋಶಗಳು ನಾಶವಾಗಿ ಇದರಿಂದ ರಕ್ತ ಸ್ರಾವವಾಗಿ ಕೊಲೈಟಿನ್ ಹಾಗೂ ಹಿಮೋಲೈಟಿಕ್ ಯುರೇಮಿಕ್ ಸಿಂಡ್ರೋಮ್ ಉಂಟಾಗಬಹುದು. ಇ.ಕೊಲಿ 0157: H7 ತಳಿಗಳು Shiga toxin Sty-1 & Sty-2-1 ವಿನ್ಯಾಸದ ಕೋಡಿಂಗ್ ಹೊಂದಿರುತ್ತದೆ. ವಿದೇಶಗಳಲ್ಲಿ ಇ.ಕೊಲಿ 0157: H7 ತಡೆಗಟ್ಟಲು Kionis law 2005-2008 Documentory food borne ಈ ಕಾನೂನು ಯಾವುದೇ ಕೈಗಾರಿಕೆ ಕುಲಷಿತ ಅಥವಾ ಸೋಂಕು ತಗುಲಿದ ಇ.ಕೊಲಿ : 0157:H7 ಮಾಂಸ ತಯಾರಿಕ ಘಟಕವನ್ನು ಮುಚ್ಚುವಂತೆ ಸೂಚಿಸಿದೆ. Keyins ಕಾನೂನನ್ನು 2001ರಲ್ಲಿ ಎರಡು ವರ್ಷದ ಮಗು ವಿಷದ ಸೋಂಕಿನ ಹ್ಯಾಂಬರ್ಗರ್ ಸೇವಿಸಿ, ನಂತರ ಆ ಮಗು ಹಿಮಲೈಟಿಕ್ ಯುರೇಮಿಕ್ ಸಿಂಡ್ರೋಮ್ ಸೋಂಕಿನ ಕಾಯಿಲೆಯಿಂದ ಸಾವನ್ನು ಅಪ್ಪುತ್ತಾನೆ. ಈ ಕಾನೂನು Kevin-Kowrale YK of Colorad ರ ನೆನೆಪಿಗಾಗಿ ಮಾಡಿದ ಒಂದು ಕಾನೂನು ಇ.ಕೊಲಿ 0517:H7 ತಳಿಯನ್ನು ಜೈವಿಕ ಭಯಾನಕ ವಿಷವೆಂದು ಪರಿಗಣಿಸಲಾಗಿದೆ.

ಇ ಕೊಲಿ 0157:H7 ಸೊಂಕು ಹೇಗೆ ಹರಡುತ್ತದೆ?

ಸೊಂಕು ವಿಶ್ವದಾದ್ಯಂತ ಹರಡುತ್ತದೆ ಸಾಮಾನ್ಯವಾಗಿ ಸರಿಯಾಗಿ ಬೇಯಿಸದ ದನದ ಮಾಂಸ ಮತ್ತು ಇತರೆ ಮಾಂಸ ಪದಾರ್ಥಗಳು, ಹಸಿ ತರಕಾರಿಗಳು, ಹಣ್ಣಿನ ರಸಗಳು, ಮೊಳಕೆ ಕಾಳುಗಳು ಮತ್ತು ಇತರೆ ಪ್ರಾಣಿಗಳಿಂದ ಮತ್ತು ಹಾಲಿನಿಂದ ಹರಡುತ್ತದೆ. ಸೋಂಕು ಶಾಸ್ತ್ರ ಈ ಸೊಂಕಿನಿಂದ ಪ್ರವಾಸಿಗಳು ಅತಿಸಾರಕ್ಕೆ ತುತ್ತಾಗುತ್ತಾರೆ ಹಾಗೂ ಇದು ಒಂದು ನಿರ್ಧಿಷ್ಟ ಭೌಗೋಳಿಕ ಪ್ರದೇಶದ ವ್ಯಾಪ್ತಿಗೆ ಒಳ ಪಟ್ಟಿರುತ್ತದೆ. ಹಿಮೋಲೈಟಿಕ್ ಯುರೇಮಿಕ್ ಸಿಂಡ್ರೋಮ್‌ನ್ನು ರಕ್ತಹೀನತೆ. ಥ್ರಾಂಬೊಸೈಟೊಪ್ರೀನಿಯದ ಗುಣಲಕ್ಷಣಗಳಿಂದ ನಿರೂಪಿಸಲ್ಪಟ್ಟಿದೆ. ಇ ಕೋಲಿ 0157:H7 ಒಂದು ಪ್ರಮುಖ ಮತ್ತು ಬೆದರಿಕೆಯನ್ನೊಡ್ಡುವ ರೋಗ ಕಾರಕವಾಗಿದೆ.

ಇ ಕೂಲಿ 0157:H7 ಸೊಂಕು ಹರಡುವ ವಿಧಾನ'ಗಳು:

ಈ ಬ್ಯಾಕ್ಟೀರಿಯಗಳು ಅರೆಬೆಂದ ದನದ ಮಾಂಸ, ಹಂದಿ ಮಾಂಸ, ಇತರೆ ಮಾಂಸಹಾರದ ಉತ್ಪನ್ನಗಳು, ಹಸಿ ತರಕಾರಿ, ಮೊಳಕೆ ಕಾಳುಗಳು, ಹಣ್ಣಿನ ರಸ, ಹಾಲಿನ ಉತ್ಪನ್ನಗಳಿಂದ ಹರಡುತ್ತದೆ. ಇದು ದೊಡ್ಡ ಕರುಳಿನಲ್ಲಿ ವಿಭಜನೆಗೊಳ್ಳುತ್ತಾ ಭದ್ರವಾಗಿ ಕರುಳಿನ ಪದರಕ್ಕೆ ಅಂಟಿಕೊಳ್ಳುತ್ತದೆ. ಇದರಿಂದ ದೊಡ್ಡ ಪ್ರಮಾಣದ ಸಂಕ್ರಾಮಿಕ ರೋಗ ಹರಡುವ ಸಾಧ್ಯತೆ ಹೆಚ್ಚು, ರೋಗಗಳು ಹೆಪುಸಾಜಿಕ್ ಅತಿಸಾರ, ಕೊಲೈಟಿನ್, ಹಿಮುಲೈಟಿಕ್ — ಯುರೇಮಿಕ್ ಸಿಂಡ್ರೋಮ್ ,ರೋಗೋತ್ಪತ್ತಿ, ಇ ಕೊಲಿ 0157:H7, ಓ, ಎಚ್ ಪ್ರತಿ ಜನಕಗಳನ್ನು ಹೊಂದಿದೆ. ಇ ಕೊಲಿ 0157:H7: Verotoxin – I ಮತ್ತು Verotoxin – II ಎಂಬ ಭಯಾನಕ ವಿಷವಸ್ತುವನ್ನು ಉತ್ಪಾದಿಸುತ್ತದೆ. ಇದು ಕರುಳಿನ ಲೋಳೆ ಪೊರೆಯಲ್ಲಿ Pili ಮೂಲಕ ಅಂಟಿಕೊಳ್ಳುತ್ತದೆ. ಅಲ್ಲೆ ಶೈಗಾ ಮಾದರಿಯ ವಿಷಕಾರಿ ವಸ್ತುವನ್ನು ಬಿಡುಗಡೆಗೊಳಿಸುತ್ತದೆ.

ಸೊಂಕುನ್ನು ತಡೆಗಟ್ಟುವಿಕೆ:–

- ಸೊಂಕು ತಡೆಗಟ್ಟುವಿಕೆಯನ್ನು ಸರಿಯಾದ ನೈರ್ಮಲ್ಯದ ಅಭ್ಯಾಸ, ಆಹಾರ ತಯಾರಿಕೆಯಲ್ಲಿ ಸ್ವಚ್ಛತೆ.
- ಹಸಿ ಮಾಂಸವನ್ನು ಇತರೆ ಪದಾರ್ಥಗಳಿಂದ ದೂರ ಇಡಬೇಕು.
- ಕಾಳು, ತರಕಾರಿ ಮತ್ತು ಮೊಳಕೆ ಕಾಳುಗಳನ್ನು ಚೆನ್ನಾಗಿ ತೊಳೆದು ಉಪಯೋಗಿಸಬೇಕು.
- ಹ್ಯಾಂಬರ್ಗರ್ ಅಥವಾ ಇತರ ನೆಲದ ಉತ್ಪನ್ನಗಳನ್ನು ಹಾಗೂ ಸ್ವಚ್ಛತೆ ಇಲ್ಲದೇ ಗೋಮಾಂಸವನ್ನು ತಿನ್ನಬಾರದು.

ವಿವಿಧ ರೀತಿಯ ಮಾಂಸಗಳಿಂದ ಇ ಕೊಲಿ **0157:H7** ಸಂಗ್ರಹ ಮಾಡಲಾಗಿದೆ.

	ಪ್ರಾಣಿ ಮಾಂಸ (ಹಸಿ)	ಹುಡುಕಿದ ಸಂಖ್ಯೆ	ಇ ಕೊಲಿ 0157:H7 ದೊರೆತ ಸಂಖ್ಯೆಗಳು
1	ಕೋಳಿ ಕರಳು	23	2
2	ಕೋಳಿ ಮಾಂಸ,	23	0
3	ಕುರಿ ಮಾಂಸ	25	0
4	ದನದ ಮಾಂಸ	25	1
5	ಮೀನು	04	0
6	ಹಂದಿ ಮಾಂಸ	20	1

ಪ್ರಾಣಿ ಮಾಂಸ (ಹಸಿ) ಹುಡುಕಿದ ಸಂಖ್ಯೆ, ಇ ಕೊಲಿ 0157:H7 ಸಿಕ್ಕದ ಸಂಖ್ಯೆಗಳು ಕೋಳಿ ಕರಳು 23–2, ಕೋಳಿ, ಮಾಂಸ 23–0, ಕುರಿ ಮಾಂಸ 25– 0, ಹಂದಿ ಮಾಂಸ 20–1, ಮೀನು 04–0, ವಸ್ತುಗಳು ಮತ್ತು ವಿಧಾನಗಳು, ವಿವಿಧ ರೀತಿಯ ಮಾಂಸಗಳಿಂದ ಇ ಕೊಲಿ 0157:H7 ಸಂಗ್ರಹ ಮಾಡಲಾಗಿದೆ.

ವಸ್ತುಗಳು ಮತ್ತು ವಿಧಾನಗಳು :

ವಿವಿಧ ರೀತಿಯ ಮಾಂಸಗಳಿಂದ ಇ ಕೊಲಿ **0157:H7** ಸಂಗ್ರಹ ಮಾಡಲಾಗಿದೆ

	ಪ್ರಾಣಿ ಮಾಂಸ (ಹಸಿ)	ಹುಡುಕಿದ ಸಂಖ್ಯೆ	ಇ ಕೊಲಿ 0157:H7 ಸಿಕ್ಕದ ಸಂಖ್ಯೆಗಳು
1	ಕೋಳಿ ಕರಳು	23	2
2	ಕೋಳಿ ಮಾಂಸ,	23	0
3	ಕುರಿ ಮಾಂಸ	25	0
4	ದನದ ಮಾಂಸ	25	1
5-	ಮೀನು	04	0
6	ಹಂದಿ ಮಾಂಸ	20	1

ಪ್ರಾಣಿ ಮಾಂಸ (ಹಸಿ) ಹುಡುಕಿದ ಸಂಖ್ಯೆ, ಇ ಕೊಲಿ 0157:H7 ಸಿಕ್ಕದ ಸಂಖ್ಯೆಗಳು ಕೋಳಿ ಕರಳು 23–2, ಕೋಳಿ, ಮಾಂಸ 23–0, ಕುರಿ ಮಾಂಸ 25– 0, ಹಂದಿ ಮಾಂಸ 20–1, ಮೀನು 04–0, ವಸ್ತುಗಳು ಮತ್ತು ವಿಧಾನಗಳು, ವಿವಿಧ ರೀತಿಯ ಮಾಂಸಗಳಿಂದ ಇ ಕೊಲಿ 0157:H7 ಸಂಗ್ರಹ ಮಾಡಲಾಗಿದೆ.

ಡಿ.ಎನ್.ಎ ತಯಾರಿಕೆ ಮತ್ತು ಪಿ.ಸಿ.ಆರ್. ಸ್ವರಗೊಳಿಸುವಿಕೆ

ಡಿ.ಎನ್.ಎ ಯನ್ನು ಕುದಿಸುವ ಕ್ರಮದಿಂದ, ವಿಶೇಷವಾದ, ಸುಧಾರಿತ ಮ್ಯಾಕ್ಕೋಂಕಿ ಅಗಾರ ಸಾರ್ಬಿಟಾಲ್ ಹೊಂದಿರುವು ದರಿಂದ ಇ.ಕೊಲಿ ಅವುಗಳ ಗುಣಗಳಿಂದ ಪತ್ತೆ ಮಾಡಬೇಕು. ಇ ಕೊಲಿ 0157:H7 ತಳಿ ಸಂಖ್ಯೆ ಇ.ಕೊಲಿ : 0157:H7 ಅನ್ನು ಮಾದರಿ ತಳಿಯಾಗಿ ಮತ್ತು 4 ನಾವು ಸಂಗ್ರಹಿಸಿದ –1, –2, –3, –4 ಯನ್ನು ಸಂಶೋಧನೆಯಲ್ಲಿ ಉಪಯೋಗಿಸಲಾಗಿದೆ. ಈ ತಳಿಗಳನ್ನು Tryptcase Soya broth ಜೊತೆಗೆ 20 ಮಿಲಿಗ್ರಾಂ Novobiocin ಒಂದು ಲೀಟರ್ ಬ್ರಾತ್‌ಗೆ ಹಾಕಬೇಕು. ಇದನ್ನು ಇ.ಕೊಲಿ 0157: H7 ಎಲ್ಲಾ ತಳಿಗಳಿಗೂ ಹಾಕಿ ಬೆಳಸಬೇಕು 24 ಗಂಟೆಗಳ ಕಾಲ. ಇ ಕೊಲಿ ತಳಿಗಳನ್ನು ಮಾರ್ಪಡಿಸಿದ trypticase ಸೋಯ ಬ್ರಾತ್‌ನಲ್ಲಿ ಸಂಸ್ಕರಿಸಲಾಗುತ್ತದೆ. Novobiocin ಮತ್ತು / L20 ಮಿಗ್ರಾಂ cefixime (CT-SMAC) ಪೂರಕವಾದ ಸಾರ್ಬಿಟಾಲ್ ಅನ್ನು ಮ್ಯಾಕ್ಕೋಂಕಿ ಅಗರ್ ಬಳಸಿಕೊಂಡು ಇ.ಕೊಲಿ: 0157 : H7 ಕಂಡು ಹಿಡಿಯಲಾಗುತ್ತದೆ. ಉತ್ತಮ ಬೆಳವಣಿಗೆಯೊಂದಿಗೆ ಇದು ಬಣ್ಣರಹಿತವಾಗಿ ಕಾನಿಸಿಕೊಳ್ಳುತ್ತವೆ. H7 ಎಂಬುದು ಪ್ರತಿ ವಿಷದ ಅಂಶ.

ಕುದಿಸಿ ತಯಾರಿಸಿದ ಡಿಎನ್ಎ ಮತ್ತು DNTPs , ಪ್ರೈಮರ್ ಗಳು, Taq polymer, MgCl2, ಇವುಗಳನ್ನು ಪ್ರಯೋಗಗಳಿಂದ ಸ್ಥಿರ ಪಡಿಸಿದಂತೆ ನಿಗಧಿತ ಪ್ರಮಾಣದಲ್ಲಿ ಸೇರಿಸಿ ನಿಗದಿತ ಸಮಯದಲ್ಲಿ ಪಿಸಿಆರ್ ಕ್ರಿಯೆಯನ್ನು ಮಾಡಬೇಕು. ನಂತರ ಪಿಸಿಆರ್ ಮಿಶ್ರಣವನ್ನು Agar gel ನಿಂದ ತಯಾರಿಸಿದ ಜೆಲ್ ತಟ್ಟೆಗಳಿಗೆ ನಿಗದಿತ ರಂಧ್ರಗಳ ಮೂಲಕ ತುಂಬಿ Gel Electrophoresis ಯಂತ್ರದಲ್ಲಿ ಇಟ್ಟು ಸ್ವಲ್ಪ ಸಮಯದ ನಂತರ UV ದೀಪದ ಬೆಳಕಿನಲ್ಲಿ ನೋಡಬೇಕು. ಆಗ ನಾವು ನಿಗಧಿ ಪಡಿಸಿದ ತಳಿಗಳು ಬ್ಯಾಂಡ್ ರೂಪದಲ್ಲಿ ನಿಗದಿಪಡಿಸಿದ ಉದ್ದಗಳಲ್ಲಿ ಕಾಣುತ್ತವೆ.

ಪಿಸಿಆರ್ ಇತಿಹಾಸ : ಇದೊಂದು ಕ್ರಾಂತಿಕಾರಿ ವಿಧಾನವಾಗಿದೆ, 1983ರಲ್ಲಿ ಹಕ್ಕು ಸ್ವಾಮ್ಯ ಹೊಂದಿತು ಮತ್ತು ಸಂಶೋಧಿಸಲ್ಪಟ್ಟಿತು, ತ್ವರಿತ, ವಿಶ್ವಾಸಾರ್ಹ, ಸೂಕ್ಷ್ಮವಾದ ಸುಲಭವಾದ, ನಿರ್ದಿಷ್ಟವಾದ ವಿಧನವೆಂದು ದೃಢಪಟ್ಟಿದೆ. ಚರ್ಚೆ ಮತ್ತು ಸಾರಂಶ ಈ ಪ್ರಯೋಗದಿಂದ ಎಲ್ಲಾ ರೀತಿಯ ವಿಷ ಉತ್ಪಾದಿಸುವ ಇ–ಕೊಲಿ ಗಳನ್ನು ಕೆಲವೆ ಗಂಟೆಗಳ ಸಮಯದಲ್ಲಿ ಕಂಡು ಹಿಡಿಯಬಹುದು. ಈ ರೀತಿ ಉತ್ತಮಗೊಳಿಸಿದ ಪಿಸಿಆರ್ ತಂತ್ರಜ್ಞಾನದಿಂದ ಬಹಳ ಉಪಯೋಗವಿದೆ. ಯಾವುದೆಂದರೆ ಆಹಾರದಿಂದ ಸ್ಪೋಟಗೊಂಡ ವಿಷಯುಕ್ತ ಇ.ಕೊಲಿ 0157:H7 ತಳಿ ಮತ್ತ ಆಹಾರ ಪದಾರ್ಥಗಳನ್ನು ಕಾನೂನಿನಂತೆ ಪತ್ತೆ ಹಚ್ಚುವುದಕ್ಕೆ ಬಹಳಲ ಸಹಾಯವಾಗುತ್ತದೆ ಮತ್ತು ಬಹಳ ಮುಖ್ಯವಾದ ಕೆಲಸ ಇದರಿಂದಾಗಿ ಕಾಯಿಲೆ ಮತ್ತೆ ಹರಡದಂತೆ ತಡೆಗಟ್ಟಿ ಈಗಾಗಲೇ ಸೋಂಕು ತಗಲಿದವರನ್ನು ಕೂಡಲೆ ಚಿಕಿತ್ಸೆ ಕೊಡಿಸಿ ಪ್ರಾಣ ಅಪಾಯದಿರದ ತಪ್ಪಿಸಬಹುದು.

ಇ.ಕೊಲಿ : 0157:H7 ಸ್ಪೋಟಗೊಂಡ ವರದಿಗಳು: CDC ವರದಿಯ ಪ್ರಕಾರ 76 ದಶಲಕ್ಷ ಜನರು ಆಹಾರ ಮತ್ತು ನೀರಿನಿಂದ ಹರಡುವ ಕಾಯಿಲೆಗೆ ಗುರಿಯಾಗುತ್ತಾರೆ. ಮೂರು ಲಕ್ಷದ 25 ಸಾವಿರ ಜನರಿಗೆ ಚಿಕಿತ್ಸೆ ಕೊಡಬೇಕಾಗುತ್ತದೆ. ಹಾಗೆ 5 ಸಾವಿರ ಜನರು ಈ ಸೊಂಕಿನಿಂದ ಸಾವನ್ನು ಅಪ್ಪಿರುತ್ತಾರೆ. US ದೇಶದ ವರದಿಯ ಪ್ರಕಾರ.

ಉದಾ : 2011ರಲ್ಲಿ German ದೇಶದಲ್ಲಿ ಸ್ಪೋಟಗೊಂಡ ವರದಿ ಪ್ರಕಾರ 3790 ಜನರು ಸೋಂಕಿನಿಂದ ನರಳಿದರು ಮತ್ತು 47 ಜನರು ಸಾವನ್ನು ಅಪ್ಪಿದ ವರದಿ CDC ವರದಿಯಲ್ಲಿದೆ. ಇ.ಕೊಲಿ : 0157:H7 ಸಾಮಾನ್ಯವಾಗಿ ಮನುಷ್ಯರ ಮತ್ತು ಬಿಸಿ ರಕ್ತದ ಪ್ರಾಣಿಗಳಲ್ಲಿ ಕಂಡು ಬರುತ್ತದೆ. ಹೆಚ್ಚಿನ ಇಕೊಲಿ ತಳಿಗಳು ನಿರೂಪ ದ್ರವಿಗಳು ಆದರೆ ಕೆಲವು ತಳಿಗಳು ಮಾರನಾಂತಿಕ ಸೋಂಕನ್ನು ಹರಡಿ ಪ್ರಾಣಾಪಾಯ ಉಂಟಾಗುತ್ತದೆ. 1982 ಸೋಂಕು ಹರಡಿದ ನಂತರ ಇದು ಸಾರ್ವಜನಿಕ ಸಮಸ್ಯೆ ಎಂದು ಗುರುತಿಸಲ್ಪಟ್ಟಿತ್ತು.

21, 1912ರಲ್ಲಿ 58 ಜನರು ಈ ಸೋಂಕಿನಿಂದ ಬಳಲಿ ಸೋಂಕು 9 ರಾಜ್ಯಗಳಿಗೆ ಹರಡಿದ ವರದಿ ಇದೆ. ರೊಮೋನಿಯಾ (Romania) ದೇಶದ ಹಸಿರು ತರಕಾರಿಗಳು ಕಾರಣ ಎಂದು ವರದಿ ಮಾಡಿದ್ದಾರೆ, 58 ಜನರಲ್ಲಿ 3 ಜನರು ತೀವ್ರವಾದ ಇ.ಕೊಲಿ 0157: H7 ಸೋಂಕಿನಿಂದ ನರಳಿದರು, ಆದರೆ ಸಕಾಲಕ್ಕೆ ಸಿಕ್ಕ ವೈದ್ಯಕೀಯ ಉಪಚಾರದಿಂದ ಯಾವುದೇ ಸಾವು ಸಂಭವಿಸಿದ ವರದಿ ಇಲ್ಲ.

ಫಲಿತಾಂಶಗಳು ಮತ್ತು ಚರ್ಚೆ: ಇ.ಕೊಲಿ : 0157:H7 ಸೋಂಕಿನಿಂದ ಪ್ರತಿ ವರ್ಷ ಅಮೇರಿಕಾ ದೇಶದಲ್ಲಿ 73,000 ಸಾವಿರ ಜನರು ತೊಂದರೆಗೆ ಒಳಗಾಗುತ್ತಾರೆ. ಕಳೆದ ಎರಡು ದಶಕಗಳಿಂದ, ಇ ಕೋಲಿ 0157:ಎಚ್7 ಒಂದು ಸಮರ್ಥ ಮಾನವರ ರೋಗಕಾರಕ ಜೀವಿಗಳೆಂದೇ ಪರಿಗಣಿಸಲ್ಪಟ್ಟಿದೆ. ಜೀವಿಯ ಬದಲಾಗಿ ಸಂಪೂರ್ಣ ಜೀವಕೋಶ ಜೀವಾಣು ವಿಷಗಳನ್ನು ಉತ್ಪಾದಿಸಲಾಗುತ್ತದೆ ಇದರಿಂದ ಸಾವಿನ ಪ್ರಮಾಣವೂ ಹೆಚ್ಚಾಗುತ್ತದೆ. 120 ಮಾದರಿಗಳನ್ನು (ಭಾರತದ) ಕರ್ನಾಟಕದ ವಿವಿಧ ಮೂಲಗಳಿಂದ ಸಂಗ್ರಹಿಸಿ. H7 ಎಂಬುದು ಜೀವರಾಸಾಯನಿಕ ಮತ್ತು ಸೀರಮ್ ಶಾಸ್ತ್ರದ ಪರೀಕ್ಷೆಗಳಿಂದ ಇ ಕೊಲಿ 0157: H7 ಕಂಡು ಹಿಡಿಯುವಿಕೆಯನ್ನು ಶುದ್ಧೀಕರಿಸಲ್ಪಟ್ಟ ಬ್ಯಾಕ್ಟೀರಿಯಾದ ಡಿಎನ್ಎ ಯನ್ನು ಮಾದರಿ ಪರೀಕ್ಷೆಗಳಲ್ಲಿ ಬಳಸಲಾಗುತ್ತದೆ. ರಾಪಿಡ್ ಮತ್ತು ಸ್ವಯಂಚಾಲಿತ – 12 – 16 ಗಂಟೆಗಳ ಒಳಗೆ ಫಲಿತಾಂಶಗಳು ಸಾಮಾನ್ಯವಾಗಿ ಲಭ್ಯವಾಗುತ್ತದೆ. (Biowarfare agent) ಸೋಂಕು ಹರಡುವಿಕೆಯನ್ನು ತಡೆಗಟ್ಟುವಿಕೆ ಹಾಗೂ ಸೋಂಕನ್ನು ತಡೆಗಟ್ಟುವ ಮೊದಲು ಸೋಂಕಿನ ಮೂಲವನ್ನು ಕಂಡು ಹಿಡಿಯಬೇಕು. ಯಾವ ವಿಷಯುಕ್ತ ಆಹಾರ, Bacteria Torcin, Virus, ಶಿಲೀಂಧ್ರ ಎಂದು ಗುರುತಿಸಿ ಕೂಡಲೆ ತಕ್ಕ ಚಿಕಿತ್ಸೆ ನೀಡಬೇಕಾಗುತ್ತದೆ. ಸಾಮಾನ್ಯ Bio Chemical ವಿಧಾನಗಳಿಗೆ 6 ರಿಂದ 8 ದಿನಗಳು ಬೇಕಾಗುತ್ತದೆ. ಅಷ್ಟರಲ್ಲಿ ಸೋಂಕು ಉಲ್ಬಣಗೊಂಡು ರೋಗಿ ಸಾವನ್ನು ಅಪ್ಪಬಹುದು, ಪಿಸಿಆರ್ (ಪಾಲಿಮರೈಸ್ಡ್ ಚೈನ್ ರಿಯಾಕ್ಷನ್) ಅತ್ಯುನ್ನತವಾದುದೊಂದು ಸಂಶೋದನೆ (Nobel Prize ಪಡೆದ ಸಂಶೋದನೆ) ಅದೇನೆಂದರೆ ಕೆಲವೆ ಗಂಟೆಗಳಲ್ಲಿ ವಿಷ ಉತ್ಪಾದಿಸುವ ಜೀವಾಣ್ಯ ಮತ್ತು ಈ ತಳಿಗಳನ್ನು ಕಂಡು ಹಿಡಿಯಬಹುದು. ಅದು ಪಿಸಿಆರ್ ವಿಧಾನದಿಂದ ಈ ವಿಧಾನದಿಂದ ಕೇವಲ 4 ರಿಂದ 5 ಗಂಟೆಗಳಲ್ಲಿ ರೋಗಿಗೆ ಉತ್ತಮ ಮತ್ತು ಸೋಂಕಿಗೆ ತಕ್ಕಂತೆ ಚಿಕಿತ್ಸೆ ಕೊಟ್ಟು ಪ್ರಾಣಪಾಯದಿಂದ ಕಾಪಾಡಬಹುದು.

ಉಲ್ಲೇಖಗಳು

1. ನೀಲ್ ಎಂ. ಎ, Tarr ಪಿಐ, Clausen ಸಿಆರ್, ಕ್ರಿಸ್ಟಿ ಡಿಎಲ್, ಹಿಕ್ಮನ್ RO, ಎಸ್ಚರಿಕಿಯ 0157 : H7 ಹಿಮೊಲೈಟಿಕ್ ಯುರೇಮಿಕ್ ಸಿಂಡ್ರೋಮ್ ಸಂಬಂಧಿಸಿದ ಪ್ರಧಾನ ರೋಗಕಾರಕ : ಪೆಸಿಫಿಕ್ ವಾಯುವ್ಯದಲ್ಲಿ ಒಂದು ನಿರೀಕ್ಷಿತ ಅಧ್ಯಯನ. ಪೀಡಿಯಾಟ್ರಿಕ್ಸ್ 1987; 80 : 37–40,.
(2) Puttalingamma, Sowmya and Batra H.V ಆಹಾರದ ಮಾದರಿಗಳು *Chua, ehxA, ESPP, stx1*, ಮತ್ತು wzy ವಂಶವಾಹಿಗಳ ಏಕಕಾಲಿಕ ವರ್ಧನೆ ಮೂಲಕ H7 : ಇ ಕೊಲಿ serovar 0157 ಪತ್ತೆ ಮಲ್ಟಿಪ್ಲೆಕ್ಸ್ ಪಿಸಿಆರ್ ವಿನ್ಯಾಸವನ್ನು ಬಳಸಿ. 2013, 3(4) : 157 – 160.
(3) Puttalingamma.V ಹಾಗೂ Niveditha.S ಜರ್ನಲ್ ಫಾರ್ಮಸಿ ಹಾಗೂ ಔಷಧೀಯ ವಿಜ್ಞಾನ ಸಂಶೋದನೆ ರಿವ್ಯೂ ಲೇಖನ ವಿಮರ್ಶೆಯು : ಎಸ್ಚರಿಚಿಯ 0157 ಪತ್ತೆ : H7 ಎಂಬುದು, 2014; 4(3)49–52.
(4) ಬ್ಲೂ ರಿಬ್ಬನ್ ಟಾಸ್ಕ್ ಪೋರ್ಸ್ ಪರಿಹರಿಸುವ ಇ ಕೊಲಿ 0157: H7 ಸಾಮಾನ್ಯ ಚಿಕಾಗೋ : ರಾಷ್ಟ್ರೀಯ ಜಾನುವಾರು ಮತ್ತು ಮಾಂಶ ಬೋರ್ಡ್; 1994.
(5) ವಿಕಿಪೀಡಿಯ, ಮುಕ್ತ ವಿಶ್ವಕೋಶ.

ವಿಷಯ:-09

ಭಾಸ್ಕರೀಯಮ್
ಭೌತಿಕಶಾಶ್ತ್ರ, ಗಣಿತಶಾಸ್ತ್ರ ಮತ್ತು ಖಭೌತಶಾಸ್ತ್ರ ವಿಜ್ಞಾನಗಳು

THEME:-09

BHASKAREEYAM
PHYSICAL, MATHEMATICAL AND ASTRO-PHYSICAL SCIENCES

ಚಟುವಟಿಕೆಗಳು ಒಂದಾ ಹೊರಾಂಗಣ
ತ್ತದೆ
ಚಟುವಟಿಕೆಗಳು ಅವರ ನಿಜವಾದ ಜೀವನಶೈಲಿಗಳ ಮೇಲೆ
ಾರವಾಗಿದೆ.
ಚಟುವಟಿಕೆಗಳನ್ನು ಸಮಯದ ಭಾಗವಾಗಿ ಪರಿಗಣಿಸಲಾಗಿದೆ.

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಸ್ಥಳೀಯ ನಿವಾಸಿ ಅಂಶಗಳನ್ನೊಳಗೊಂಡ ಗಾಮಾ ವಿಕಿರಣ ಅಧ್ಯಯನದ ಒಂದು ಪ್ರಾಥಮಿಕ ಮಾದರಿ	ಚರಣ್ ಕುಮಾರ್ ಕೆ	640 – 645
2	ಭೂಕಂಪನದ ಮುಂಚಿತವಾಗಿ ವಾತಾವರಣದ ವಿದ್ಯುತ್ ಕ್ಷೇತ್ರದಲ್ಲಾಗುವ ಸಮನ್ವಯತೆ : ಒಂದು ಮಾದರಿ	ಚರಣ್ ಕುಮಾರ್ ಕೆ	645 – 649

ಸ್ಥಳೀಯ ನಿವಾಸಿ ಅಂಶಗಳನ್ನೊಳಗೊಂಡ ಗಾಮಾ ವಿಕಿರಣ ಅಧ್ಯಯನದ ಒಂದು ಪ್ರಾಥಮಿಕ ಮಾದರಿ

ಚರಣ್ ಕುಮಾರ್ ಕೆ
ಭೌತಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಇಪತ್ರ : charanbub@gmail.com

ವಿಶ್ವದಾದ್ಯಂತ, ಗಾಮಾ ವಿಕಿರಣ ಸಂಬಂಧಿತ ಲೇಖನಗಳಲ್ಲಿ, ಲೇಖಕರುಗಳು, ಯುನೈಟೆಡ್ ರಾಷ್ಟ್ರಗಳ ಪರಮಾಣು ವಿಕಿರಣಗಳ ಪರಿಣಾಮದ ವೈಜ್ಞಾನಿಕ ಸಮಿತಿಯ (UNSCEAR) ಪ್ರಕಾರ, 0.2 ಅನ್ನು ಒಳಾಂಗಣ ನಿವಾಸಿ ಅಂಶವನ್ನಾಗಿ ಮತ್ತು 0.8 ಅನ್ನು ಹೊರಾಂಗಣ ನಿವಾಸಿ ಅಂಶವನ್ನಾಗಿ ಪರಿಗಣಿಸುತ್ತಾರೆ. ಆದರೆ, ಈ ಕಲ್ಪನೆಯು ಒಂದು ನಿರ್ದಿಷ್ಟ ಸ್ಥಳದಲ್ಲಿನ ವಾತಾವರಣವನ್ನು ಸಮರ್ಪಕವಾಗಿ ಪ್ರತಿನಿಧಿಸುವುದಿಲ್ಲ. ವಾಸ್ತವಿಕವಾಗಿ, ಸ್ಥಳೀಯ ನಿವಾಸಿ ಅಂಶಗಳು, ಅಲ್ಲಿ ನೆಲೆಸಿರುವ ಜನರುಗಳ ಜೀವನಶೈಲಿ ಮತ್ತು ಹವಾಮಾನ ಗುಣಗಳ ಮೇಲೆ ಅವಲಂಬಿತವಾಗಿರುತ್ತದೆ. ಹಾಗಾಗಿ, ದಾವಣಗೆರೆ ನಗರ ಮತ್ತು ಜಿಲ್ಲೆಯ ದಾವಣಗೆರೆ, ಹರಿಹರ ಮತ್ತು ಹರಪನಹಳ್ಳಿ ತಾಲ್ಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿನ ಜನಜೀವನದ ಅನುಗುಣವಾಗಿ ಸ್ಥಳೀಯ ನಿವಾಸಿ ಅಂಶಗಳನ್ನು ಕಂಡುಹಿಡಿಯಲು ಒಂದು ಪ್ರಾಥಮಿಕ ಮಾದರಿಯನ್ನು ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ಪ್ರಕಾರ, UNSEAR ಅಂಶಗಳನ್ನು ಬಳಸಿಕೊಂಡರೆ, ದಾವಣಗೆರೆ ನಗರ ಪ್ರದೇಶದಲ್ಲಿ ಶೇ 30 (0.26) ರಷ್ಟು ಮತ್ತು ಗ್ರಾಮೀಣ ಪ್ರದೇಶದಲ್ಲಿ ಶೇ 90 (0.38) ರಷ್ಟು ಗಾಮಾ ವಿಕಿರಣ ಡೋಸ್ ಅನ್ನು ಕಡಿಮೆ ಅಂದಾಜಿಸಲಾಗುವುದು. ಅಪಾಯಕಾರಿ ಅಂಶವೆಂದರೆ, ಗ್ರಾಮೀಣ ಪ್ರದೇಶದಲ್ಲಿನ ರೈತರಿಗೆ ಶೇ 210 (0.62) ರಷ್ಟು ಕಡಿಮೆ ಗಾಮಾ ವಿಕಿರಣ ಡೋಸ್ ಅನ್ನು ಕಡಿಮೆ ಅಂದಾಜಿಸಲಾಗುವುದು ಮತ್ತು ಇದು ತುಂಬಾ ಗಮನಾರ್ಹವಾಗಿದೆ. ಹಾಗಾಗಿ, ಈ ಮಾದರಿಯು ಗ್ರಾನೈಟ್ ಶಿಕಾರಿ, ಪರಿಮಾಣು ಪ್ರಯೋಗ ಮತ್ತು ಯುರೇನಿಯಮ್ ಗಣಿಗಾರಿಕೆ ಪ್ರದೇಶದ ಹತ್ತಿರದ ಸಾರ್ವಜನಿಕರಿಗೆ ಆಗುವ ಗಾಮಾ ವಿಕಿರಣ ಡೋಸ್ ಅನ್ನು ಕಂಡುಹಿಡಿಯಲು ಸಹಕಾರಿಯಾಗಲಿದೆ.

ಮುನ್ನುಡಿ: ಭೂಮಿಯ ಮೇಲ್ಮೈ ಮೇಲಿನ ಗಾಮಾ ವಿಕಿರಣ ಅಧ್ಯಯನದಲ್ಲಿ ಡೋಸ್ ಅನ್ನು ಕಂಡುಹಿಡಿಯಲು, ಒಳಾಂಗಣ ಮತ್ತು ಹೊರಾಂಗಣ ನಿವಾಸಿ ಅಂಶವು ತುಂಬಾ ಮುಖ್ಯವಾದ ಅಂಶವಾಗಿದೆ[1](UNSCEAR 1993, 2000). ಭಾರತ (ಕೆರೂರು 2010, ಶಶಿಕುಮಾರ್ 2009, ಜೋಗ್ ಸಿಂಗ್ 2009, ಸುರೆಂದರ್ ಸಿಂಗ್ 2005) ಮತ್ತು ವಿಶ್ವದಾದ್ಯಂತ ಬಹಳಷ್ಟು ಸಂಶೋಧಕರು ಗಾಮಾ ವಿಕಿರಣ ಸಂಬಂಧಿತ ಅಧ್ಯಯನ ನಡೆಸುತ್ತಿದ್ದು, 0.8 ಅನ್ನು ಹೊರಾಂಗಣ ಮತ್ತು 0.2 ಅನ್ನು ಒಳಾಂಗಣ ಅಂಶವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಆದರೆ ಇದು ಒಂದು ನಿರ್ದಿಷ್ಟ ಸ್ಥಳದಲ್ಲಿನ ವಾತಾವರಣವನ್ನು ಸಮರ್ಪಕವಾಗಿ ಪ್ರತಿನಿಧಿಸುವುದಿಲ್ಲ. UNSCEAR ಅಂಶಗಳನ್ನು ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಮತ್ತು ನಿಯಮಗಳ ಅನುಗುಣವಾಗಿ ತಯಾರಿಸಲಾದ್ದು ವಾಸ್ತವಿಕವಾಗಿ, ಸ್ಥಳೀಯ ನಿವಾಸಿ ಅಂಶಗಳು ಅಲ್ಲಿ ನೆಲೆಸಿರುವ ಜನರುಗಳ ಜೀವನಶೈಲಿ ಮತ್ತು ಹವಾಮಾನ ಗುಣಗಳ ಮೇಲೆ ಅವಲಂಬಿತವಾಗಿರುತ್ತದೆ. ಗಮನಾರ್ಹವಾದ ಅಂಶವೆಂದರೆ, ಇಂತಹ ಸ್ಥಳಗಳಲ್ಲಿ UNSCEAR ಅಂಶವನ್ನು ಪರಿಗಣಿಸಿ ಡೋಸ್ ಅನ್ನು ಕಂಡುಹಿಡಿದರೆ, ಅದನ್ನು ಕಡಿಮೆ ಅಥವಾ ಹೆಚ್ಚು ಅಂದಾಜಿಸಿರುವ ಸಾಧ್ಯತೆಗಳು ಬಹಳಷ್ಟಿವೆ.

ವ್ಯವಸಾಯವು ಭಾರತದ ಬೆನ್ನೆಲುವಾಗಿದ್ದು ಶೇ 65 ರಷ್ಟು ಜನಸಂಖ್ಯೆಯು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಗ್ರಾಮೀಣ ಜನಸಮೂಹದ ಪ್ರಮುಖ ವೃತ್ತಿಯು ವ್ಯವಸಾಯವಾಗಿದ್ದು, ಇದು ಹೊರಾಂಗಣ ಪ್ರದೇಶಗಳಲ್ಲೇ ನಡೆಯುತ್ತದೆ. ಮತ್ತು ರೈತರುಗಳು 12–14 ಗಂಟೆಗಳ ಕಾಲ ಹೊರಾಂಗಣ ಪ್ರದೇಶಗಳಲ್ಲಿ ಸಮಯವನ್ನು ಕಳೆಯುತ್ತಾರೆ. ಆದರೆ ನಗರ ಪ್ರದೇಶಗಳಲ್ಲಿ, ಹೆಚ್ಚಾದ ಜನಸಂಖ್ಯೆಯು ಒಳಾಂಗಣ ಅಥವಾ ನೆರಳಿರುವ ಪ್ರದೇಶಗಳಲ್ಲಿ ಕೆಲಸ ಮಾಡುತ್ತಾರೆ. ಹಾಗಾಗಿ, ಸ್ಥಳೀಯ ನಿವಾಸಿ ಅಂಶಗಳನ್ನು ಕಂಡುಹಿಡಿಯಲು, ದಾವಣಗೆರೆ ಜಿಲ್ಲೆಯ ದಾವಣಗೆರೆ ನಗರ ಮತ್ತು ದಾವಣಗೆರೆ, ಹರಿಹರ ಮತ್ತು ಹರಪನಹಳ್ಳಿ ಗ್ರಾಮೀಣ ಭಾಗಗಳಲ್ಲಿನ ಜನರುಗಳ ಜೀವನಶೈಲಿ ಗನುಗುಣವಾಗಿ ಒಂದು ಪ್ರಾಥಮಿಕ ಮಾದರಿಯನ್ನು ತಯಾರಿಸಲಾಗಿದೆ. ಪ್ರಥಮ ಬಾರಿಗೆ ಈ ರೀತಿಯ ಅಧ್ಯಯನವು ಈ ಸ್ಥಳದಲ್ಲಿ ನಡೆಸಿದ್ದು, ಭವಿಷ್ಯದ ಸಂಶೋಧಕರಿಗೆ ಈ ನಿರ್ದಿಷ್ಟ ಪ್ರದೇಶದಲ್ಲಿ ನಿಖರವಾದ ಗಾಮಾ ವಿಕಿರಣ ಡೋಸ್ ಅನ್ನು ಕಂಡುಹಿಡಿಯಲು ಸಹಕಾರಿಯಾಗಲಿದೆ.

ಅಧ್ಯಯನ ಸ್ಥಳ: ದಾವಣಗೆರೆ ಜಿಲ್ಲೆಯು (14.46 ಉತ್ತರ, 75.92 ಪೂ) 5975.97 ಚದರ ಕಿ.ಮೀ. ನಷ್ಟು ಪ್ರದೇಶವನ್ನು ಹೊಂದಿದ್ದು, ಆರು ತಾಲ್ಲೂಕುಗಳನ್ನು ಒಳಗೊಂಡಿದೆ. ಇದರ ಪ್ರಮುಖ ಭಾಗವು ಕೃಷ್ಣ ಜಲಾನಯನ ಪ್ರದೇಶದಲ್ಲಿದ್ದು, ತುಂಗಾಭದ್ರಾ ಮತ್ತು ಚಿಕ್ಕಹಗರಿ ನದಿಗಳನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ವ್ಯವಸಾಯವು ಮುಖ್ಯ ವೃತ್ತಿಯಾಗಿದ್ದು, ಕಬ್ಬಿಣ ಮತ್ತು ಮ್ಯಾಂಗನೀಸ್ ಮುಖ್ಯವಾಗಿ ಸಿಗುವ ಅದಿರುಗಳಾಗಿವೆ. ಸ್ವಲ್ಪ ಉತ್ತರಭಾಗದ ಪ್ರದೇಶವನ್ನು ಹೊರತು ಪಡಿಸಿ, ಜಿಲ್ಲೆಯ ಎಲ್ಲಾ ಭಾಗಗಳ ಭೂಮಿಯು ಕೆಂಪು ಮಣ್ಣಿನಿಂದ ಇದ್ದು, ಕೃಷಿಗೆ ಯೋಗ್ಯವಾಗಿದೆ.

ವಿಧಾನ

ಮಾದರಿಯ ವಿವರಣೆ

ಹೊರಾಂಗಣ ಮತ್ತು ಒಳಾಂಗಣ ನಿವಾಸಿ ಅಂಶಗಳನ್ನು ಕಂಡು ಹಿಡಿಯಲು, ಅಧ್ಯಯನ ಸ್ಥಳದಲ್ಲಿನ ಜನಸಂಖ್ಯೆಯ ಒಂದು ದಿನದಲ್ಲಿನ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು ಮಾದರಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಈ ಮಾದರಿಯಲ್ಲಿ, ಜನರುಗಳು ತಮ್ಮ ದಿನನಿತ್ಯದ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಿ, ಆಯಾ ಚಟುವಟಿಕೆಗಳಿಗೆ ಎಷ್ಟು ಸಮಯವನ್ನು ಖರ್ಚುಮಾಡುತ್ತರೆ ಎಂಬ ಅಂಶಗಳನ್ನು ಉಪಯೋಗಿಸಿಕೊಳ್ಳಲಾಗಿದೆ.

ಈ ಮಾದರಿಯನ್ನು ಸಿದ್ಧಪಡಿಸಲು, ಕೆಲವು ಊಹೆಗಳನ್ನು ಉಪಯೋಗಿಸಲಾಗಿದೆ

ಅ. ಜನರ ಚಟುವಟಿಕೆಗಳು ಒಂದಾ ಹೊರಾಂಗಣ ಅಥವಾ ಒಳಾಂಗಣ ವಾಗಿರುತ್ತದೆ

ಆ. ಚಟುವಟಿಕೆಗಳು ಅವರ ನಿಜವಾದ ಜೀವನಶೈಲಿಗಳ ಮೇಲೆ ಆಧಾರವಾಗಿದೆ.

ಇ. ಚಟುವಟಿಕೆಗಳನ್ನು ಸಮಯದ ಭಾಗವಾಗಿ ಪರಿಗಣಿಸಲಾಗಿದೆ.

ಮಾದರಿಯ ಔಟ್ಲೈನ್



ಈ ಚಿತ್ರದಲ್ಲಿ $T_{i\,(out)}$ - ಹೊರಾಂಗಣ ಸಮಯದ ಭಾಗ, $T_{i\,(in)}$ - ಒಳಾಂಗಣ ಸಮಯದ ಭಾಗ, λ_i ಮತ್ತು μ_i ಹೋರಾಂಗಣ ಮತ್ತು ಒಳಾಂಗಣ ಸಮಯದ ಪ್ರಮಾಣಗಳು, i – ಚಟುವಟಿಕೆ ಮತ್ತು n – ಜನಸಂಖ್ಯೆ

ಮಾದರಿಯ ಅಳವಡಿಕೆ: ಮಾದರಿಯನ್ನು ಅಳವಡಿಸಲು, ವಿಶೇಷವಾದ ಪ್ರಶ್ನೆಗಳನ್ನು ತಯಾರಿಸಿ, ಅವುಗಳನ್ನು ಪ್ರತ್ಯೇಕ ವೃತ್ತಿಯಲ್ಲಿರುವ 1500 ಗ್ರಾಮೀಣ ಮತ್ತು 500 ನಗರ ಪ್ರದೇಶದ ಜನರುಗಳಿಗೆ ನೀಡಿ, ಅವರ ಚಟುವಟಿಕೆಗಳಿಗೆ ಸಮಯದ ಎಷ್ಟು ಭಾಗವನ್ನು ಮೀಸಲಿಡುವರು ಎಂಬ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

ಫಲಿತಾಂಶಗಳು

ದಾವಣಗೆರೆ ಗ್ರಾಮೀಣ ಪ್ರದೇಶ ಜನರುಗಳ ಹೊರಾಂಗಣ ಮತ್ತು ಒಳಾಂಗಣ ನಿವಾಸಿ ಅಂಶಗಳ ಮಾಹಿತಿಯನ್ನು ಕೆಳಗಿನ ಟೇಬಲ್‌ನಲ್ಲಿ ನೀಡಲಾಗಿದೆ.

ಗುಂಪು	ಚಟುವಟಿಕೆಗಳು											
	ಉಚಿತವಾದ ಸಮಂತ			ವೃತ್ತಿ/ಕೆಲಸ			ನಿದ್ರೆ			ಇತ್ಯಾದಿ		
	λ_a	μ_a	$T_a(h)$	λ_b	μ_b	$T_b(h)$	λ_c	μ_c	$T_c(h)$	λ_d	μ_d	$T_d(h)$
ವಿದ್ಯಾರ್ಥಿಗಳು	0.4	0.6	5 ± 0.2	0.1	0.9	8 ± 0.1	0.25	0.75	7 ± 0.2	0.4	0.6	4 ± 0.3
ರೈತರು	0.65	0.35	4 ± 0.2	0.8	0.2	11 ± 0.2	0.25	0.75	6 ± 0.3	0.4	0.6	3 ± 0.2
ವ್ಯಾಪಾರಸ್ಥರು	0.7	0.3	4 ± 0.3	0.8	0.2	9 ± 0.3	0.2	0.8	7 ± 0.2	0.35	0.65	4 ± 0.3
ಆರೋಗ್ಯ	0.1	0.9	3 ± 0.2	0.4	0.6	9 ± 0.2	0.1	0.9	7 ± 0.1	0.3	0.7	5 ± 0.1

ಮಾಹಿತಿಯ ಪ್ರಕಾರ, ಈ ಪ್ರದೇಶದ ಒಬ್ಬ ಗ್ರಾಮೀಣ ವ್ಯಕ್ತಿಯು 9.78 ಗಂಟೆಗಳಷ್ಟು ಹೊರಾಂಗಣ ಪ್ರದೇಶದಲ್ಲಿ ಕಳೆಯುತ್ತಾನೆಂದು, ಮತ್ತು ಒಬ್ಬ ರೈತನು 14.1 ಗಂಟೆಗಳಷ್ಟು ಹೊರಾಂಗಣ ಪ್ರದೇಶದಲ್ಲಿ ಕಳೆಯುತ್ತಾನೆಂದು ಮತ್ತು ಅದು UNSCEAR ಅಂಶಕ್ಕಿಂತ 195ರಷ್ಟು ಹೆಚ್ಚಿದ್ದು, ಗಮನಾರ್ಹ ಅಂಶವಾಗಿದೆ.

ಅದೇ ರೀತಿ, ಹರಿಹರ ಗ್ರಾಮೀಣ ಪ್ರದೇಶ ಜನರುಗಳ ಹೊರಾಂಗಣ ಮತ್ತು ಒಳಾಂಗಣ ನಿವಾಸಿ ಅಂಶಗಳ ಮಾಹಿತಿಯನ್ನು ಕೆಳಗಿನ ಟೇಬಲ್‌ನಲ್ಲಿ ನೀಡಲಾಗಿದೆ.

ಗುಂಪು	ಚಟುವಟಿಕೆಗಳು											
	ಉಚಿತವಾದ ಸಮಂತ			ವೃತ್ತಿ/ಕೆಲಸ			ನಿದ್ರೆ			ಇತ್ಯಾದಿ		
	λ_a	μ_a	$T_a(h)$	λ_b	μ_b	$T_b(h)$	λ_c	μ_c	$T_c(h)$	λ_d	μ_d	$T_d(h)$
ವಿದ್ಯಾರ್ಥಿಗಳು	0.65	0.35	4 ± 0.6	0.2	0.8	8 ± 0.2	0.4	0.6	8 ± 0.5	0.5	0.5	4 ± 0.2
ರೈತರು	0.7	0.3	2 ± 0.2	0.95	0.05	13 ± 0.1	0.35	0.65	6 ± 0.2	0.3	0.7	3 ± 0.4
ವ್ಯಾಪಾರಸ್ಥರು	0.65	0.35	3 ± 0.2	0.7	0.3	9 ± 0.2	0.1	0.9	7 ± 0.3	0.2	0.8	5 ± 0.4
ಆರೋಗ್ಯ	0.2	0.8	4 ± 0.1	0.3	0.7	10 ± 0.2	0	1	7 ± 0.1	0.2	0.8	3 ± 0.2

ಮಾಹಿತಿಯ ಪ್ರಕಾರ, ಈ ಪ್ರದೇಶದ ಒಬ್ಬ ಗ್ರಾಮೀಣ ವ್ಯಕ್ತಿಯು 10.12 ಗಂಟೆಗಳಷ್ಟು ಹೊರಾಂಗಣ ಪ್ರದೇಶದಲ್ಲಿ ಕಳೆಯುತ್ತಾನೆಂದು ಮತ್ತು ಇದು ದಿನದ ಶೇ 42.1 ರಷ್ಟು ಸಮಯವಾಗಿದೆ. ಈ ಪ್ರದೇಶದ ನಿವಾಸಿ ಅಂಶವು UNSCEAR ಅಂಶಕ್ಕಿಂತ 110ರಷ್ಟು ಹೆಚ್ಚಿದೆ.

ಅದೇರೀತಿ, ಹರಪನಹಳ್ಳಿ ಗ್ರಾಮೀಣ ಪ್ರದೇಶ ಜನರುಗಳ ಹೊರಾಂಗಣ ಮತ್ತು ಒಳಾಂಗಣ ನಿವಾಸಿ ಅಂಶಗಳ ಮಾಹಿತಿಯನ್ನು ಕೆಳಗಿನ ಟೇಬಲ್‌ನಲ್ಲಿ ನೀಡಲಾಗಿದೆ.

ಗುಂಪು	ಚಟುವಟಿಕೆಗಳು											
	ಉಚಿತವಾದ ಸಮಂತ			ವೃತ್ತಿ/ಕೆಲಸ			ನಿದ್ರೆ			ಇತ್ಯಾದಿ		
	λ_a	μ_a	$T_a(h)$	λ_b	μ_b	$T_b(h)$	λ_c	μ_c	$T_c(h)$	λ_d	μ_d	$T_d(h)$
ವಿದ್ಯಾರ್ಥಿಗಳು	0.6	0.4	3 ± 0.2	0.2	0.8	7 ± 0.1	0.3	0.7	8 ± 0.2	0.4	0.6	6 ± 0.1
ರೈತರು	0.6	0.4	3 ± 0.1	0.85	0.15	12 ± 0.2	0.3	0.7	6 ± 0.2	0.2	0.8	3 ± 0.1
ವ್ಯಾಪಾರಸ್ಥರು	0.3	0.7	4 ± 0.2	0.2	0.8	10 ± 0.1	0.1	0.9	8 ± 0.2	0.4	0.6	2 ± 0.1
ಆರೋಗ್ಯ	0.2	0.8	5 ± 0.1	0.3	0.7	9 ± 0.2	0.1	0.9	8 ± 0.1	0.3	0.7	2 ± 0.2

ಮಾಹಿತಿಯ ಪ್ರಕಾರ, ಒಬ್ಬ ಗ್ರಾಮೀಣ ವ್ಯಕ್ತಿಯು 8 ಗಂಟೆಗಳಷ್ಟು ಹೊರಾಂಗಣ ಪ್ರದೇಶದಲ್ಲಿ ಕಳೆಯುತ್ತಾನೆ ಇದು ದಿನದ ಶೇ 33.6 ರಷ್ಟು ಸಮಯವಾಗಿದೆ ಮತ್ತು ಇದು UNSCEAR ಅಂಶಕ್ಕಿಂತ 65ರಷ್ಟು ಹೆಚ್ಚಿದೆ. ಈ ವಲಯದಲ್ಲಿ, ವ್ಯಾಪಾರಸ್ಥರುಗಳಿಗೆ ಹೊರಾಂಗಣ ನಿವಾಸಿ ಅಂಶವು 0.2 ರಷ್ಟಿದ್ದು ಇದು ಹರಿಹರ ಮತ್ತು ದಾವಣಗೆರೆ ಗ್ರಾಮೀಣ ಪ್ರದೇಶಕ್ಕಿಂತ ಕಡಿಮೆ ಇದೆ.
ಅದೇರೀತಿ ದಾವಣಗೆರೆ ನಗರ ಪ್ರದೇಶ ಜನರುಗಳ ಹೊರಾಂಗಣ ಮತ್ತು ಒಳಾಂಗಣ ನಿವಾಸಿ ಅಂಶಗಳ ಮಾಹಿತಿಯನ್ನು ಕೆಳಗಿನ ಟೇಬಲ್‌ನಲ್ಲಿ ನೀಡಲಾಗಿದೆ.

ಗುಂಪು	ಚಟುವಟಿಕೆಗಳು											
	ಉಚಿತವಾದ ಸಮಂತ			ವೃತ್ತಿ/ಕೆಲಸ			ನಿದ್ರೆ			ಇತ್ಯಾದಿ		
	λ_a	μ_a	$T_a(h)$	λ_b	μ_b	$T_b(h)$	λ_c	μ_c	$T_c(h)$	λ_d	μ_d	$T_d(h)$
ವಿದ್ಯಾರ್ಥಿಗಳು	0.35	0.65	5 ± 0.5	0.1	0.9	8 ± 0.1	0.2	0.8	8 ± 0.4	0.2	0.8	3 ± 0.5
ದಿನಗೂಲಿ ಕೆಲಸಗಾರರು	0.3	0.7	2 ± 0.4	0.7	0.3	10 ± 0.5	0.1	0.9	7 ± 0.4	0.3	0.7	5 ± 0.2
ಆರೋಗ್ಯ ಕಾರ್ಯಕರ್ತರು	0.3	0.7	4 ± 0.2	0.1	0.9	8 ± 0.3	0	1	8 ± 0.2	0.5	0.5	4 ± 0.3
ನಾಗರಿಕ ಸೇವಾಕರ್ತರು	0.4	0.6	2 ± 0.1	0.3	0.7	10 ± 0.2	0.2	0.8	8 ± 0.1	0.3	0.7	4 ± 0.2
ಕೃಷಿ ವ್ಯಾಪಾತಿಗಳು	0.2	0.8	4 ± 0.2	0.4	0.6	10 ± 0.2	0.2	0.8	6 ± 0.2	0.2	0.8	4 ± 0.3

ಮಾಹಿತಿಯ ಪ್ರಕಾರ, ಒಬ್ಬ ನಗರ ವ್ಯಕ್ತಿಯು ಶೇ 25 ರಷ್ಟು ದಿನದ ಸಮಯವನ್ನು ಹೊರಾಂಗಣ ಪ್ರದೇಶದಲ್ಲಿ ಕಳೆಯುತ್ತಾನೆ ಮತ್ತು ಇದು UNSCEAR ಅಂಶಕ್ಕಿಂತ 25ರಷ್ಟು ಹೆಚ್ಚಿದೆ.
ಒಟ್ಟಾಗಿ, ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ಜನಸಮೂಹದ ಹೊರಾಂಗಣ ಮತ್ತು ಒಳಾಂಗಣ ಅಂಶಗಳ ಬೆಲೆಗಳನ್ನು ಕೆಳಗಿನ ಎರಡು ಟೇಬಲ್ ಗಳಲ್ಲಿ ನೀಡಲಾಗಿದೆ.

ಸರಾಸರಿ ನಿವಾಸಿ ಅಂಶಗಳು	ದಾವಣಗೆರೆ ಗ್ರಾಮೀಣ		ಹರಿಹರ ಗ್ರಾಮೀಣ		ಹರಪನಹಳ್ಳಿ ಗ್ರಾಮೀಣ	
	ಒಳಾಂಗಣ	ಹೊರಾಂಗಣ	ಒಳಾಂಗಣ	ಹೊರಾಂಗಣ	ಒಳಾಂಗಣ	ಹೊರಾಂಗಣ
ವಿದ್ಯಾರ್ಥಿಗಳು	0.42	0.58	0.31	0.69	0.4	0.6
ರೈತರು	0.75	0.25	0.61	0.39	0.67	0.33
ವ್ಯಾಪಾರಸ್ಥರು	0.47	0.53	0.59	0.41	0.8	0.2
ಆರೋಗ್ಯ ಕಾರ್ಯಕರ್ತರು	0.75	0.25	0.82	0.18	0.79	0.21
ಸರಾಸರಿ	0.6	0.40	0.58	0.42	0.67	0.33

ಗುಂಪು	ಸರಾಸರಿ ನಿವಾಸಿ ಅಂಶಗಳು	
	ಒಳಾಂಗಣ	ಹೊರಾಂಗಣ
ವಿದ್ಯಾರ್ಥಿಗಳು	0.81	0.19
ದಿನಗೂಲಿ ಕೆಲಸಗಾರರು	0.6	0.40
ಆರೋಗ್ಯ ಕಾರ್ಯಕರ್ತರು	0.84	0.16
ನಾಗರಿಕ ಸೇವಾಕರ್ತರು	0.72	0.23
ಕೃಷಿ ವ್ಯಾಪಾರಿಗಳು	0.72	0.28
ಸರಾಸರಿ	0.73	0.26

ಈ ಮಾದರಿಯ ಫಲಿತಾಂಶಗಳನ್ನು ಈಗಾಗಲೇ ಗಾಮಾವಿಕಿರಣ ಅಧ್ಯಯನ ಮಾಡಿರುವ, ತುಮಕೂರು (ಜಯಶೀಲನ್ 2014) ಮತ್ತು ಚಿಕ್ಕಮಗಳೂರು (ಮಂಜುನಾಥ 2013) ಪ್ರದೇಶಗಳ ಫಲಿತಾಂಶಗಳ ಜೊತೆಗೆ ಹೊಂದಾಣಿಸಲಾಗಿದ್ದು, UNSCEAR ಮತ್ತು ಈ ಅಧ್ಯಯನದ ಅಂಶಗಳನ್ನು ಉಪಯೋಗಿಸಿ ಡೋಸ್ (ಮೈಕ್ರೋ ಸೀವರ್ಟ್/ವರ್ಷ) ಅನ್ನು ಕಂಡುಹಿಡಿಯಲಾಗಿದೆ ಮತ್ತು ಫಲಿತಾಂಶವನ್ನು ಮುಂದಿನ ಟೇಬಲ್ ಮತ್ತು ರೇಖಾಚಿತ್ರಗಳಲ್ಲಿ ನೀಡಲಾಗಿದೆ.

ತುಮಕೂರು ಜಿಲ್ಲೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ಗಾಮಾ ಡೋಸ್‌ಗಳ ಮಾಹಿತಿ (ಜಯಶೀಲನ್ ಮತ್ತು ಇತರರು, 2014)

ಕ್ರ.ಸಂ	ಸ್ಥಳಗಳು	UNSCEAR	ಸ್ಥಳೀಯ ನಿವಾಸಿ ಅಂಶಗಳು		
			ಗ್ರಾಮೀಣ	ನಗರ ಪ್ರದೇಶ	ರೈತರುಗಳು
1	ಬೇಲ್ದಾರ	82.07	155.933	106.691	254.417
2	ಕೊರಟಗೆರೆ	237.63	451.497	308.919	736.653
3	ದಾಸರಹಳ್ಳಿ	249.1	473.29	323.83	772.21
4	ಮಧುಗಿರಿ	223.03	423.757	289.939	691.393
5	ಹೊಸಕೆರೆ	277.84	527.896	361.192	861.304
6	ಚಂದ್ರಬಾವಿ	295.67	561.773	384.371	916.577
7	ಮದಕಸಿರ	195.89	372.191	254.657	607.259
8	ಪಾವಗಡ	274.51	521.569	356.863	850.981
9	ಪೊನ್ನಸಮುದ್ರ	317.62	603.478	412.906	984.622
10	ವೈ.ಎನ್.	226.36	430.084	294.268	701.716
11	ಓಬಳಾಪುರ	219.38	416.822	285.194	680.078
12	ನೀಡಗಲ್ಲು	237.07	450.433	308.191	734.917
13	ಚಿರತಹಳ್ಳಿ	298.83	567.777	388.479	926.373
14	ತಾವರೆಕೆರೆ	63.26	120.194	82.238	196.106
15	ಸಿರಾ	44.67	84.873	58.071	138.477
16	ಬುಕ್ಕಪಟ್ಟಣ	84.3	160.17	109.59	261.33
17	ಹುಲಿಯುರ್	146.71	278.749	190.723	454.801
18	ಸಿ.ಎನ್.	84.16	159.904	109.408	260.896
19	ಹೊನ್ನವಲ್ಲಿ	110.43	209.817	143.559	342.333
20	ತಿಪಟೂರು	83.73	159.087	108.849	259.563
21	ನೋವನಿಕೆರೆ	68.78	130.682	89.414	213.218
22	ತುರುವೆಕೆರೆ	202.96	385.624	263.848	629.176
23	ದಂದಿನಸಿವರ	61.21	116.299	79.573	189.751
24	ಮಾಯಸಂದ್ರ	75.07	142.633	97.591	232.717
25	ಯೆಡಿಯೂರು	67.67	128.573	87.971	209.777
26	ಕುಣಿಗಲ್	139.15	264.385	180.895	431.365
27	ಹುಲಿಯೂರ್ ದುರ್ಗ	200.57	381.083	260.741	621.767
28	ಹೆಬ್ಬೂರ್	112.41	213.579	146.133	348.471
29	ತುಮಕೂರು	127.91	243.029	166.283	396.521
30	ಚೇಲೂರ್	88.11	167.409	114.543	273.141
31	ಸೀಬಿ	53.1	100.89	69.03	164.61
32	ಗುಬ್ಬಿ	94.82	180.158	123.266	293.942
33	ನಿಟ್ಟೂರು	94.02	178.638	122.226	291.462
34	ಕೆ.ಬಿ.	124.72	236.968	162.136	386.632



ಚಿಕ್ಕಮಗಳೂರು ಜಿಲ್ಲೆ ನಗರ ಮತ್ತು ಗ್ರಾಮೀಣಪ್ರದೇಶಗಳ ಮಾಹಿತಿ (ಮಂಜುನಾಥ ಮತ್ತು ಇತರರು, 2013)

ಕ್ರ.ಸಂ	ಸ್ಥಳಗಳು	UNSCEAR	ಸ್ಥಳೀಯ ನಿವಾಸಿ ಅಂಶಗಳು		
			ಗ್ರಾಮೀಣ	ನಗರ ಪ್ರದೇಶ	ರೈತರುಗಳು
1	ಅಜ್ಜಂ ಪುರ	138.4	262.96	179.92	429.04
2	ಚಿಕ್ಕಮಗಳೂರು ಗ್ರಾನೈಟ್ ವಲಯ	170.8	324.52	222.04	529.48
3	ಕಡೂರು ಗ್ರಾನೈಟ್ ವಲಯ	162.3	308.37	210.99	503.13
4	ಕಲ್ಯಾಡಿ ಗ್ರಾನೈಟ್ ವಲಯ	181.4	344.66	235.82	562.34
5	ಮಿರ್ಲೆ ಗ್ರಾನೈಟ್ ವಲಯ	189.5	360.05	246.35	587.45
6	ಮೂಡಿಗೆರೆ ಗ್ರಾನೈಟ್ ವಲಯ	180.3	342.57	234.39	558.93
7	ಅಜ್ಜಂ ಪುರ ಕ್ವೋರ್ಟೈಟ್ ವಲಯ	113.4	215.46	147.42	351.54
8	ಮುಂಡ್ರೆ ಕ್ವೋರ್ಟೈಟ್ ವಲಯ	168.8	320.72	219.44	523.28
9	ಕರ್ತೆಕೆರೆ	58.9	111.91	76.57	182.59
10	ಕಳಸಾಪುರ	84.1	159.79	109.33	260.71
11	ಕಲ್ಯಾಡಿ ಸ್ಫಟಿಕಶಿಲೆ ವಲಯ	56.2	106.78	73.06	174.22



ಈ ರೇಖಾಚಿತ್ರಗಳ ಪ್ರಕಾರ, UNSCEAR ಮತ್ತು ಈ ಮಾದರಿಯ ಫಲಿತಾಂಶಗಳ ಮಧ್ಯೆ ಗಮನಾರ್ಹ ವ್ಯತ್ಯಾಸಗಳಿದ್ದು, ಗಾಮಾವಿಕಿರಣ ಅಧ್ಯಯನಗಳಲ್ಲಿ ಈ ಮಾದರಿಯನ್ನು ಅಳವಡಿಸಿಕೊಂಡು ಗಾಮಾ ಡೋಸ್ ಮತ್ತು ಪ್ರಾಯೋಗಿಕವಾಗಿ ಗಾಮಾ ಡೋಸ್ ಅನ್ನು ಕಂಡುಹಿಡಿದು ಹೊಂದಾಣಿಸಿದರೆ, ಮಾದರಿಯ ನಿಖರತೆಯನ್ನು ಕಂಡು ಹಿಡಿಯಬಹುದಾಗಿದೆ.

ಸಾರಾಂಶ: ದಾವಣಗೆರೆ ಜಿಲ್ಲೆಯ ನಗರ ಮತ್ತು ಗ್ರಾಮೀಣ ಭಾಗದ ಜನಸಮೂಹಕ್ಕೆ ಗಾಮಾ ವಿಕಿರಣ ಅಧ್ಯಯನಕ್ಕೆ ಸ್ಥಳೀಯ ಹೊರಾಂಗಣ ಮತ್ತು ಒಳಾಂಗಣ ನಿವಾಸಿ ಅಂಶಗಳನ್ನು, ಒಂದುಮಾದರಿಯ ಮುಖಾಂತರ ಕಂಡು ಹಿಡಿಯಲಾಗಿದೆ. ಈ ಮಾದರಿಯ ಪ್ರಕಾರ, UNSCEAR ಅಂಶಗಳನ್ನು ಬಳಸಿದರೆ, ದಾವಣಗೆರೆ ಜಿಲ್ಲೆಯ ಗ್ರಾಮೀಣ ಭಾಗದ ಜನತೆಗೆ ಶೇ 91 ರಷ್ಟು ಮತ್ತು ನಗರ ಪ್ರದೇಶದ ಜನತೆಗೆ ಶೇ 30 ರಷ್ಟು ಡೋಸ್ ಅನ್ನು ಕಡಿಮೆ ಅಂದಾಜಿಸಬಹುದಾಗಿದೆ. ನಗರ ಪ್ರದೇಶಗಳಲ್ಲಿ UNSCEAR ಅಂಶಗಳನ್ನು ಬಳಸುವುದು ಅಷ್ಟೊಂದು ವ್ಯತ್ಯಾಸ ಕಂಡುಬರದಿದ್ದರೂ ಗ್ರಾಮೀಣ ಪ್ರದೇಶಗಳಲ್ಲಿ UNSCEAR ಅಂಶಗಳನ್ನು ಬಳಸುವುದು ಆ ಪ್ರದೇಶದ ಜನತೆಯ ಜೀವನಶೈಲಿಗೆ ಅನುಗುಣವಾಗಿಲ್ಲ. ಹಾಗಾಗಿ, ಮುಂದುವರೆದ ಮತ್ತು ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ, ಯುರೇನಿಯಮ್ ಅದಿರು ನಿಕ್ಷೇಪ, ಗ್ರಾನೇಟ್ ನಿಕ್ಷೇಪ ಮತ್ತು ಪರಮಾಣು ಶಕ್ತಿ ಪರೀಕ್ಷಾ ಕೇಂದ್ರಗಳ ಹತ್ತಿರ ಈ ಮಾದರಿಯನ್ನು ಅಳವಡಿಸಿಕೊಂಡರೆ, ನಿಖರವಾದ ಗಾಮಾ ವಿಕಿರಣ ಡೋಸ್ ಅನ್ನು ಕಂಡು ಹಿಡಿಯಬಹುದಾಗಿದೆ.

ಉಲ್ಲೇಖಗಳು

1. ಆದೆಲ್ ಅಬ್ಬೇ ಜಿ.ಇ ಮತ್ತು ಇತರರು., J. Environ. Radioact., 84, 65-78, 2005
2. ಜೋಗ ಸಿಂಗ್ ಮತ್ತು ಇತರರು, J. Environ. Radioact, 100, 94–98, 2009
3. ಕೆರೂರ್ ಬಿ ಆರ್ ಮತ್ತು ಇತರರು, Indian J. Pure Appl. Phys, 48, 809-812, 2010
4. ಮೊಹಮದ್ ಎ ಜೈಟೂನ್ ಮತ್ತು ಇತರರು, J. Environ. Radioact, 129, 148-156, 2014
5. ಮೂರ್ತಿ ವಿ ಆರ್ ಕೆ ಮತ್ತು ಇತರರು, Radiat. Meas, 43, 1541–1545, 2008
6. ಶಶಿಕುಮಾರ್ ಟಿ ಎಸ್ ಮತ್ತು ಇತರರು, Indian J. phys, 83(8), 1163-1169, 2009
7. ಸುರಿಂದರ್ ಸಿಂಗ್ ಮತ್ತು ಇತರರು, Radiat. Meas, 39, 431 –439, 2005
8. United Nations Scientific Committee on the Effects of Atomic Radiation (UNSCEAR), 1993, Forty-second Session of UNSCEAR, United Nations, New York.
9. United Nations Scientific Committee on the Effects of Atomic Radiation (UNSCEAR), 2000, Annex B. Exposures from Natural Radiation Sources, pp.84–156.
10. ಜಯಶೀಲನ್ ಎ ಮತ್ತು ಇತರರು, Radiat. Prot. Dosim, 158(1), 73–78, 2014
11. ಮಂಜುನಾಥ ಎಸ್ ಮತ್ತು ಇತರರು, India, Int. J. Radiat. Res.,11(3), 183-187, 2013

ಭೂಕಂಪನದ ಮುಂಚಿತವಾಗಿ ವಾತಾವರಣದ ವಿದ್ಯುತ್ ಕ್ಷೇತ್ರದಲ್ಲಾಗುವ ಸಮನ್ವಯತೆ : ಒಂದು ಮಾದರಿ

ಚರಣ್ ಕುಮಾರ್ ಕೆ
ಭೌತಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಇ–ಪತ್ರ : charanbub@gmail.com

ಈ ಪ್ರಬಂಧದಲ್ಲಿ, ಭೂಕಂಪನಗಳ ಮುರಿತ ಪ್ರದೇಶಗಳಲ್ಲಿ ಸೃಷ್ಟಿಸಲ್ಪಡುವ ಸ್ಥಳೀಯ ವಿದ್ಯುತ್ ಕ್ಷೇತ್ರಗಳ ಸ್ಪೈಕ್ ಗಳನ್ನು ಅರ್ಥೈಸಿಕೊಳ್ಳಲು ಒಂದು ಪ್ರಾಥಮಿಕ ಮಾದರಿಯನ್ನು ವಿವರಿಸಲಾಗಿದೆ. ಈ ಮಾದರಿಯು, ವಾಯುದ್ರವ ಮೋಡ, ಹೆಚ್ಚಿದ ಅಯಾನೀಕರಣ, ವಾಯುದ್ರವ–ಅಯಾನುಗಳ ಸಂವಹನ ಮತ್ತು ವಾಯುವಿನ ಮೇಲಕ್ಕೆತ್ತುವಿಕೆಯನ್ನು ಪ್ರಮುಖ ಅಂಶಗಳನ್ನಾಗಿ ದೃಶ್ಯೀಕರಿಸುತ್ತಿದೆ. ಈ ಮಾದರಿಯ ಪ್ರಕಾರ, ಭೂ ಒಳಪದರಗಳಲ್ಲಿನ ಚಲನವಲನಗಳಿಂದ ರೆಡಾನ್ ಅನಿಲವು ಹೆಚ್ಚು ಹೆಚ್ಚಾಗಿ ಹೊರಕ್ಕೆ ಬಂದು, ವಾತಾವರಣವನ್ನು ಅಯಾನೀಕರಿಸಿ, ವಾಯುದ್ರವ ಮೋಡಗಳ ಜೊತೆಗೆ ಸಂವಹಿಸಿ, ಮೋಡಗಳ ಸಾಂದ್ರೀಕರಣ ಕೇಂದ್ರಬಿಂದುಗಳನ್ನಾಗಿ ಬದಲಾಯಿಸುವುದರ ಜೊತೆಗೆ ವಿದ್ಯುತ್ ಕ್ಷೇತ್ರವನ್ನು ಬದಲಾಯಿಸುತ್ತದೆ. ಈ ವಿದ್ಯುತ್ ಕ್ಷೇತ್ರವು, ವಾತಾವರಣದಲ್ಲಿ ಅಣುಗಳನ್ನು ಅಯಾನೀಕರಿಸಿ, ಅತಿಗೆಂಪು ಸ್ಪೆಕ್ಟ್ರಮ್‌ನ ಒಂದು ಕಿರಿದಾದ ಕಿಟಕಿಯಲ್ಲಿ (0.7–20 ಮೈಕ್ರೋ ಮೀ) ಸಣ್ಣ ಸಣ್ಣ ಸ್ಪೈಕ್ ಗಳನ್ನು ಸೃಷ್ಟಿಸುತ್ತಿವೆ. ಹಾಗಾಗಿ, ಈ ಅಧ್ಯಯನವನ್ನು ಪೂರ್ಣವಾಗಿ ಅರಿತುಕೊಂಡಲ್ಲಿ, ಇದನ್ನು ಒಂದು ಹೊಸ ರೀತಿಯ ಭೂಕಂಪನದ ಭವಿಷ್ಯಸೂಚಕದಂತೆ ಉಪಯೋಗಿಸಬಹುದಾಗಿದೆ.

ಮುನ್ನುಡಿ: 1960ರ ಚಿಲಿಯ ಭೀಕರ ಭೂಕಂಪನ ಮತ್ತು ಇತ್ತೀಚಿನ ಫುಕುಶಿಮಾ ಪರಮಾಣು ಅವಘಡದ ನಂತರ, ವಿಶ್ವದಾದ್ಯಂತ ಹಲವಾರು ಸಂಶೋಧಕರು, ಭೂಕಂಪನಗಳ ಭವಿಷ್ಯ ಸೂಚನೆಗೆ ಹೊಸ ಹೊಸ ಮಾರ್ಗಗಳ ಶೋಧನೆಯಲ್ಲಿ ತೊಡಗಿದ್ದಾರೆ. ಭೂಕಂಪನಗಳನ್ನು ಕೆಲವೇ ಕೆಲವು ಗಂಟೆಗಳಲ್ಲಿ ಊಹಿಸುವುದು ಆಧುನಿಕ ಭೌಗೋಳಿಕ ಭೌತವಿಜ್ಞಾನದ ಒಂದು ಸಂಶೋಧನಾ ಪ್ರಶ್ನೆಯಾಗಿಯೇ ಉಳಿದಿದೆ. ಹಲವಾರು ಸಂಶೋಧಕರು (ಲಿಪರೋವ್ಸ್ಕಿ 1992, ಪುಲಿನೆಟ್ಸ್ 2006 ಮತ್ತು ಮೀಸ್ಟರ್ 2011) ತ್ವರಿತ ಸಮಯದಲ್ಲಿ ಕೆಲವೇ ಕೆಲವು ಗಂಟೆಗಳ ಮುಂಚಿತವಾಗಿ ಭೂಕಂಪನವನ್ನು ಗ್ರಹಿಸಲು, ಹಿಂದಿನ ಭೂಕಂಪನಶಾಸ್ತ್ರದ ವಿಧಾನಗಳ ಜೊತೆಯಲ್ಲಿ, ಭೂಕಂಪನ ಭೌತಶಾಸ್ತ್ರದ ಬಹು ಆಯಾಮವನ್ನು ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ.

ತ್ವರಿತ ಸಮಯದಲ್ಲಿ ಭೂಕಂಪನವನ್ನು ಗ್ರಹಿಸುವ ಪ್ರಯತ್ನವು ಅನೇಕ ಸಂಶೋಧನೆಗಳು ಆಗಿದ್ದು (ಗ್ರಿಗೋರೀವ್ 1988, ಫಿಡಾನಿ 2010), ಇವುಗಳು ಅನೇಕ ಭೌತಿಕ ಪರಿಣಾಮಗಳನ್ನು ಬಿಂಬಿಸಿವೆ. ಭೂಕಂಪನದ ಕೆಲವೇ ಕೆಲವು ಗಂಟೆಗಳ ಮುಂಚಿತವಾಗಿ, ಸ್ಥಿರ ವಿದ್ಯುತ್ ನಿಯಾಂತಕಗಳಲ್ಲಿ ಬದಲಾವಣೆ, ವಿದ್ಯುತ್ಕಾಂತೀಯ ಕ್ಷೇತ್ರದಲ್ಲಾಗುವ

ಬದಲಾವಣೆ, ಅತಿಗೆಂಪು ಸ್ಪೆಕ್ಟ್ರಮ್ ನಲ್ಲಾಗುವ (0.7–20 ಮೈಕ್ರೋ.ಮೀ) ಸ್ಪೈಕ್ ಗಳು ಮತ್ತು ಈ ರೀತಿಯ ಅನೇಕ ಬದಲಾವಣೆಗಳು ರುಜುವಾತಾಗಿವೆ. Tairos ಉಪಗ್ರಹವು, 10–11.5 ಮೈಕ್ರೋ.ಮೀ ಅತಿಗೆಂಪು ಸ್ಪೆಕ್ಟ್ರಮ್ ನಲ್ಲೇ, ಭೂಮಿಯ ಮುರಿತಗಳಲ್ಲಿ ಆಗುವ ಬದಲಾವಣೆಯನ್ನು ಸೆರೆಹಿಡಿದಿದ್ದು, ಮೇಲಿನ ಭೌತಿಕ ಲಕ್ಷಣಗಳು ಅತ್ಯಂತ ಸ್ಪಷ್ಟವಾಗಿ ಕಂಡು ಬಂದಿರುತ್ತವೆ (ಇಶೋವ್ 1983). ಈ ಭೌತಿಕ ಲಕ್ಷಣಗಳನ್ನು ಅನೇಕ ಸಂಶೋಧಕರು ತಮ್ಮದೇ ಆದ ಕಲ್ಪನೆಗಳಿಂದ ಬಣ್ಣಿಸಿದ್ದು, ಕ್ವಿಂಗ್ ರವರು (ಕ್ವಿಂಗ್ 1991) ಈ ಅತಿಗೆಂಪು ಸ್ಪೈಕ್ಸ್‌ಗಳು ಮುರಿತಗಳಿಂದ ಹೊರಬರುವ ಇಂಗಾಲದ ಡೈ ಆಕ್ಸಡ್ ನಿಂದಾಗುವ ಹಸಿರು ಮನೆ ಪರಿಣಾಮದಿಂದಾಗುತ್ತದೆ ಎಂದು ಪ್ರತಿಪಾದಿಸಿದರು. ಚಡ್ಡಾ ರವರು (ಚಡ್ಡಾ 2003) ಭೂಕಂಪನದ ಮುಂಚಿತವಾಗಿ, ಮಣ್ಣಿನ ತೇವಾಂಶವು ಬದಲಾಗಿ, ಅತಿಗೆಂಪು ಕಿರಣಗಳು ಕಂಡುಬರುತ್ತವೆ ಎಂದು ಮಾದರಿ ತಯಾರಿಸಿದರು. ಪುಲಿನೆಟ್ಸ್ (ಪುಲಿನೆಟ್ಸ್ 2005,2006) ರವರು ಭೂಕಂಪನದ ಸಮಯದಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ರೆಡಾನ್ ಅನಿಲವು ಹೊರಬಂದು, ವಾತಾವರಣದ ಅಣುಗಳನ್ನು ಅಯಾನೀಕರಿಸಿ, ವಾಯುದ್ರವ ಮೋಡಗಳ ಜೊತೆಗೆ ಸಂವಹಿಸಿ, ಮೋಡಗಳ ಸಾಂದ್ರೀಕರಣ ಕೇಂದ್ರಬಿಂದುಗಳನ್ನಾಗಿ ಬದಲಾಯಿಸುವುದರ ಜೊತೆಗೆ ವಿದ್ಯುತ್ ಕ್ಷೇತ್ರವನ್ನು ಬದಲಾಯಿಸುತ್ತದೆ ಎಂದು ಪ್ರತಿಪಾದಿಸಿದ್ದಾರೆ (ಚಿತ್ರ 1).



ಚಿತ್ರ 1

ಈ ಅಧ್ಯಯನದಲ್ಲಿ ಪುಲಿನೆಟ್ಸ್ ರವರ ಭೌತಿಕ ಪ್ರತಿಪಾದನೆಯನ್ನು ಅರ್ಥೈಸಿಕೊಳ್ಳಲು ಒಂದು ಮಾದರಿಯನ್ನು ಮಂಡಿಸಿ, ಹೇಗೆ ವಿದ್ಯುತ್ ಕ್ಷೇತ್ರವು ಬದಲಾಗುತ್ತವೆ ಮತ್ತು ವಾತಾವರಣವನ್ನು ಬಿಸಿಮಾಡುತ್ತವೆ ಎಂದು ವಿವರಿಸಲಾಗಿದೆ. ಈ ಮಾದರಿಯು ಪ್ರಾಥಮಿಕ ಹಂತದಲ್ಲಿದ್ದು ಇದನ್ನು ಸಂಪೂರ್ಣವಾಗಿ ಅರ್ಥೈಸಿ–ಕೊಂಡರೆ, ಭೂಕಂಪನವನ್ನು ಕೆಲವೇ ಗಂಟೆಗಳ ಮುಂಚಿತವಾಗಿ ತಿಳಿಯುವುದಕ್ಕೆ ಒಂದು ಹೊಸ ಮಾರ್ಗವನ್ನು ಶೋಧಿಸಿದಂತಾಗುತ್ತದೆ.

ವಾತಾವರಣದ ಮಾದರಿ

ಪರಿಚಯ: ಈ ಮಾದರಿಯು ಪುಲಿನೆಟ್ಸ್ ಪ್ರತಿಪಾದಿಸಿದಂತೆ, ಭೂಮಿಯ ಮೇಲ್ಪೈಯಿಂದ ರೆಡಾನ್ ಅನಿಲದ ಬಿಡುಗಡೆ ಮತ್ತು ವಾತಾವರಣದ ವಾಯುವಿನ ಜೊತೆಗೆ ಮಿಶ್ರಣವಾಗುವ ಪ್ರಕ್ರಿಯೆಯ ಮೇಲೆ ಅವಲಂಬಿತವಾಗಿರುತ್ತದೆ. ಮಾದರಿಯ ಯೋಜನೆಯನ್ನು ಚಿತ್ರ 2 ರಲ್ಲಿ ವಿವರಿಸಲಾಗಿದೆ.



ಚಿತ್ರ 2

ಭೂಕಂಪನ ಪ್ರದೇಶಗಳಲ್ಲಿ ಕಣಗಳ ಲಂಬಚಲನೆಯು ವಾತಾವರಣವು ಬಿಸಿಯಾಗುವುದರಿಂದ ಮತ್ತು ಮೋಡಗಳ ಸಾಂದ್ರೀಕರಣ ಬಿಂದುಗಳು ಪರಿವರ್ತನೆಯಾಗುವಾಗ ಆಗುವ ಸುಪ್ತ ಉಷ್ಣ ಬಿಡುಗಡೆಯಿಂದ ಆಗುತ್ತವೆ. ಈ ಮಾದರಿಯಲ್ಲಿ ಭೂಕಂಪನದ ಮುಂಚಿತವಾಗಿ ವಾಯುದ್ರವ ಮೋಡವು ಅಧಿಕವಾಗಿ ವಾತಾವರಣವನ್ನು ಸೇರುತ್ತವೆ ಮತ್ತು ಸೇರುವುದಕ್ಕೆ ತೆಗೆದುಕೊಳ್ಳುವ ಸಮಯವು, ವಾಯುದ್ರವ ಮೋಡವು ವಿಕಾಸಕ್ಕೆ ತೆಗೆದುಕೊಳ್ಳುವ ಸಮಯಕ್ಕಿಂತ ತುಂಬಾ ಕಡಿಮೆ ಇರುತ್ತದೆ ಎಂಬ ಕಲ್ಪನೆಗಳನ್ನು ಅಳವಡಿಸಿಕೊಳ್ಳಲಾಗಿದೆ. ವಿಜ್ಞಾನಿಗಳ ಪ್ರಕಾರ (ಫ್ರೆಂಕೆಲ್ 1949 ಮತ್ತು ಶಿಶ್ಕಿನ್ 1954) ದೊಡ್ಡ ವಾಯುದ್ರವ ಕಣವು ಋಣಾತ್ಮಕ ವಿದ್ಯುದಾವೇಶವನ್ನು ಹೊಂದಿರುತ್ತವೆ ಮತ್ತು ಸಣ್ಣ ಕಣವು ಧನಾತ್ಮಕ ವಿದ್ಯುದಾವೇಶವನ್ನು ಹೊಂದಿರುತ್ತವೆ. ಗುರುತ್ವಬಲದಿಂದ ದೊಡ್ಡ ಕಣಗಳ ಪ್ರತ್ಯೇಕವಾಗುತ್ತವೆ ಮತ್ತು ಈ ರೀತಿಯ ವಿದ್ಯಮಾನವನ್ನು "ವಿದ್ಯುತ್ ಗುರುತ್ವ ವಾಯುದ್ರವ ಜನರೇಟರ್" ಎಂದು ಬಿಂಬಿಸಲಾಗಿದ್ದು, ಇದರಿಂದ ಒಂದು ತರಹದ ವಿದ್ಯುತ್ ಕ್ಷೇತ್ರ ಮತ್ತು ವಿದ್ಯುತ್ ಪ್ರವಹಿಸುತ್ತದೆ (ಚಿತ್ರ 3).



ಚಿತ್ರ 3

ಸಾಮಾನ್ಯವಾಗಿ ಅಯಾನೀಕರಣವು 10/ಸೆಂ.ಮೀ^{3}/ಸೆಕೆಂಡ್ ಇದ್ದು, ಭೂಕಂಪನದ ಮುಂಚಿತವಾಗಿ ಇದು 10^2–10^4 ರಷ್ಟಾಗುತ್ತದೆ ಎಂದು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ (ಸೋರೋಕಿನ್ 2000, ಪುಲಿನೆಟ್ಸ್ 2004)

ಮಾದರಿ

ಚಲನ ಸಮೀಕರಣದ ವಿಶ್ಲೇಷಣೆಯನ್ನು ಮಾಡಲು, ಆ ಸಮೀಕರಣವು ಅಯಾನುಗಳು n^+_i, n^-_i ಮತ್ತು ಅಯಾನುಗಳು ವಾಯುದ್ರವದೊಂದಿಗೆ ಸಂವನಿಸಿದಾ ಗಾಗುವ ವಾಯುದ್ರವ ಅಯಾನುಗಳನ್ನು N^+_α, N^-_α ಪರಿಗಣಿಸಬೇಕಾಗುತ್ತದೆ. ಕೇವಲ ಅಯಾನು ಸಂವಹನ ಕ್ರಿಯೆಯಿಂದ, ರಿಕಾಂಬಿನೇಷನ್ ಪ್ರಕ್ರಿಯೆಯಾದರೆ ಆ ಸಮೀಕರಣವು $\frac{\partial n^{\pm}_i}{\partial t} = q_i - \alpha n^+ n^-_i$ (1) ಇಲ್ಲಿ $n^+_i = n^-_i = n$ ಆಗಿರುತ್ತದೆ.

ಸ್ಥಿರ ನಿಯಮದಲಿ $= \sqrt{\frac{q_i}{\alpha}}$ ಆಗಿದ್ದು ಅಯಾನೀಕರಣವು 10/ಸೆಂ.ಮೀ^{3}/ಸೆಕೆಂಡ್ ಆದಾಗ ಮತ್ತು ರಿಕಾಂಬಿ–ನೇಷನ್ ಅಂಶವು $\alpha = 10^{-7}$/ಸೆಂ.ಮೀ^{3}/ಸೆಕೆಂಡ್ (ನಾಗರಾಜ 2011) ಆದಾಗ n= 10^4 ಆಗುತ್ತದೆ. ಅಯಾನುಗಳು ಸ್ಥಿರ ಸ್ಥಾನವನ್ನು ಪಡೆಯಲು ಬೇಕಾಗುವ ಸಮಯವನ್ನು $\tau_0 = \frac{1}{\sqrt{\alpha q_i}} \sim 10^3$ ಸೆಕೆಂಡ್‌ನಿಂದ ನೀಡಲಾಗುವುದು.

ಅಯಾನುಗಳು ವಾಯುದ್ರವದೊಂದಿಗೆ ಸಂವಹಿಸಿದಾಗಾಗುವ ರಿಕಾಂಬಿನೇಷನ್ ಪ್ರಕ್ರಿಯೆಯನ್ನು

$$\frac{\partial n^{\pm}_i}{\partial t} = q_i - n^{\pm}_i \beta (N^+_\alpha + N^-_\alpha) \quad (2)$$

ದಿಂದನೀಡಲಾಗುತ್ತದೆ ಮತ್ತು $\alpha n^2 << n\beta(N^+_\alpha + N^-_\alpha)$ ಆದಾಗ

$$n^{\pm}_i = \frac{q_i}{(\beta(N^+_\alpha + N^-_\alpha))} \quad (3)$$

ಅಂದರೆ $N^+_i > N^-_i$. ಆದಾಗ $N^+_\alpha > \sqrt{\frac{q_i}{\alpha}\beta}$ (4)

ಇಲ್ಲಿ, â ಎಂಬುದು ಅಯಾನು ವಾಯುದ್ರವದ ನಡುವಣ ಆಗುವ ಸಂವಹನೆಯ ಅಂಶವಾಗಿರುತ್ತದೆ.

ಉದಾಹರಣೆಗೆ ಅಯಾನೀಕರಣವು 10^2/ಸೆಂ.ಮೀ^{3}/ಸೆಕೆಂಡ್ ಆದಾಗ ಮತ್ತು ರಿಕಾಂಬಿನೇಷನ್ ಅಂಶವು $\alpha = 10^{-7}$/ಸೆಂ.ಮೀ^{3}/ಸೆಕೆಂಡ್ ಮತ್ತು â $= 10^{-7}$/ಸೆಂ.ಮೀ^{3}/ಸೆಕೆಂಡ್ ಆದಾಗ N^+_α >1500/ ಸೆಂ.ಮೀ^{3} ಆಗುತ್ತದೆ. ಈಗ $N^+_\alpha = 10^4$/ಸೆಂ.ಮೀ^{3} ಆದಾಗಿ n= 0.5.(10^4)/ಸೆಂ.ಮೀ^{3} ಆಗುತ್ತದೆ. ಆದರೆ, ಕೆಲವೇ ಕೆಲವು ವಾಯುದ್ರವ ಕಣಗಳಿದ್ದರೆ $N^+_\alpha < \sqrt{\frac{q_i}{\alpha}\beta}$ ಮತ್ತು n=3.(10^4) /ಸೆಂ.ಮೀ^{3} ಆಗುತ್ತದೆ. ಅಂದರೆ, ಅಯಾನೀಕರಣವು ನಿರಂತರವಾಗಿ ಸ್ಥಿರವಾಗಿದ್ದರೆ, ವಾಯುದ್ರವ ಕಣಗಳು ಅಯಾನುಗಳ ಸಂಖ್ಯೆಯನ್ನು ಕಡಿಮೆಮಾಡುತ್ತವೆ ಮತ್ತು ವಿದ್ಯುತ್ ಕಂಡಕ್ಟಿವಿಟಿ ಯನ್ನು ಕಡಿಮೆ ಮಾಡುತ್ತದೆ ಜೊತೆಗೆ ವಿದ್ಯುತ್ ಕ್ಷೇತ್ರವನ್ನು ಹೆಚ್ಚು ಮಾಡುತ್ತದೆ.

ಈ ಮಾದರಿಯಲ್ಲಿಯೇ, ವಾಯುದ್ರವ ಕಣಗಳ ಹೆಚ್ಚಾಗುವಿಕೆಯ ಜೊತೆಗೆ ಅಯಾನೀಕರಣವು ಹೆಚ್ಚಾದರೆ, "ವಿದ್ಯುತ್ ಗುರುತ್ವ ವಾಯುದ್ರವ ಜನರೇಟರ್" ನಿಂದ ಒಂದು ಕೆಪಾಸಿಟರ್‌ನ ಮಾದರಿಯ ತಯಾರಾಗುತ್ತದೆ. ಒಂದು ಕಡೆ, ವಿದ್ಯುತ್ ಕ್ಷೇತ್ರವು ವಾಯುದ್ರವ ಚಲನೆಯಿಂದ ಹೆಚ್ಚಾದರೆ ಇನ್ನೊಂದು ಕಡೆ ವಾಯುದ್ರವ ಮೋಡದ ನಡುವೆ ವಿದ್ಯುತ್ ಪ್ರವಾಹದಿಂದ ವಿದ್ಯುತ್ ಕ್ಷೇತ್ರವು ಕಡಿಮೆಯಾಗುತ್ತದೆ. ಕೆಪಾಸಿಟರ್‌ನ ಮಾದರಿಯ ಪ್ರಕಾರ ವಿದ್ಯುತ್ ಕ್ಷೇತ್ರದಲ್ಲಾಗುವ ಬದಲಾವಣೆಯನ್ನು

$$\frac{\partial E_1(t)}{\partial t} = \frac{1}{\varepsilon_0}(V_- Q^- n^-_\alpha - \lambda_0 \frac{n}{n_0} E_1(t)) \quad (5)$$

ನಿಂದ ನೀಡಬಹುದಾಗಿದೆ. λ_0 ಕಂಡಕ್ಟಿವಿಟಿ ಮತ್ತು Q^- ಋಣ ವಾಯುದ್ರವ ಕಣಗಳ ವಿದ್ಯುದಾವೇಶ -

ವಿದ್ಯುದಾವೇಶವನ್ನು ಹೊಂದಿದ್ದು ಗುರುತ್ವ ಬಲದಿಂದ ಕೆಳಮುಖವಾಗಿ ಚಲಿಸುತ್ತದೆ ಮತ್ತು ಅದರ ಮೇಲೆ ಪರಿಣಾಮಬೀರುವ ಶಕ್ತಿಗಳ ಸಮೀಕರಣವು

$$\frac{4}{3}\pi R^3 \rho_a g - 6\pi R \eta V_- - Q^- E_1 = 0 \quad (6)$$

ಇಲ್ಲಿ ρ_a ವಾಯುದ್ರವ ಸಾಂದ್ರತೆ, ç ವಾಯುವಿನ ಸ್ನಿಗ್ಧತೆ ಮತ್ತು g ಗುರುತ್ವ ಬಲ

ಸಮೀಕರಣ 5 ಮತ್ತು 6 ರಿಂದ ಅತ್ಯದಿಕ ವಿದ್ಯುತ್ ಕ್ಷೇತ್ರವು

$$\frac{\partial E_1}{\partial t} = A - E_1 B \quad (7)$$

$$A = \frac{2R^2 \rho_a g Q^- N^-_\alpha}{9\eta\varepsilon_0} \quad \text{ಮತ್ತು} \quad B = \frac{1}{\varepsilon_0}\left(\lambda_0 \frac{n}{n_0} + \frac{(Q^-)^2 N^-_\alpha}{6\pi\eta R}\right)$$

ನಮ್ಮ ಮಾದರಿಯ ಪ್ರಕಾರ ದೊಡ್ಡ ಗಾತ್ರದ ವಾಯುದ್ರವ ಕಣಗಳ ಮೇಲೆ ಈ ವಿದ್ಯುತ್ ಕ್ಷೇತ್ರದಿಂದ ಯಾವುದೇ ತರಹದ ಬದಲಾವಣೆಯಾಗದೇ ಮತ್ತು ವಿದ್ಯುತ್ ಕ್ಷೇತ್ರದ ಮೌಲ್ಯವನ್ನು (ಸಮೀಕರಣ 7ರಿಂದ)

$$E_{lm} = \frac{2R^2 \rho_a N^{-}_{\alpha} Q^{-} g n_0}{9 \eta \lambda_0 n} \quad (8)$$

ಸಮೀಕರಣದಿಂದ ನೀಡಬಹುದಾಗಿದೆ.

ಸ್ಥಿರ ವಿದ್ಯುತ್ ಕಂಡಕ್ಟಿವಿಟಿ ಕ=10^{-14} ಸೀಮನ್ಸ್/ಮೀಟರ್ ಇದ್ದಾಗ, ದೊಡ್ಡ ವಾಯುದ್ರವ ಕಣಗಳ ಸಂಖ್ಯೆಯು N^{-}_{α} = 10^9ಮೀಟರ್$^{-3}$, ವಾಯುವಿನ ಸ್ನಿಗ್ಧತೆ ç = 1.8×10^{-5} ಕೆಜಿ/ಮೀಟರ್/ಸೆಕೆಂಡ್, ವಾಯುದ್ರವ ಸಾಂದ್ರತೆ ρ_a = 2.5×10^{-3} ಕೆಜಿ/ಮೀಟರ್^{3}, ವಾಯುದ್ರವ ಕಣಗಳ ವಿದ್ಯುದಾವೇಶ 2000e (ಕೋಂಡ್ರಾಟ್ಪೆವ್ 1981), ಗುರುತ್ವ ಬಲ 10 ಮೀಟರ್/ಸೆಕೆಂಡ್^{2}, $n_0 = \sqrt{q_i^0 / \alpha}$ = 10^4/ ಸಿ.ಮೀಟರ್^{3}, n= 0.5×10^4 /ಸಿ.ಮೀಟರ್^{3} ಆದಾಗ ವಿದ್ಯುತ್ ಕ್ಷೇತ್ರವು 2×10^6 ವೋಲ್ಟ್/ಮೀಟರ್ (3×10^6 V/m – ವಾತಾವರಣದ ಕಣಗಳನ್ನು ಮುರಿಯಲು ಬೇಕಾಗಿರುವ ವಿದ್ಯುತ್ ಕ್ಷೇತ್ರ) ರಷ್ಟಾಗಿರುತ್ತದೆ.

ಈ ವಿದ್ಯುತ್ ಕ್ಷೇತ್ರವು ಸ್ಥಿರವಾಗಿರುವ ಸಮಯವನ್ನು

$$\tau_r \approx \frac{\varepsilon_0 n_0}{\lambda_0 n} = \frac{\varepsilon_0 n_0 \beta N^{+}_{\alpha}}{\lambda_0 q_i}$$ ಸಮೀಕರಣದಿಂದ ನೀಡಲಾಗುತ್ತದೆ.

ಹಾಗಾಗಿ, ಅಯಾನೀಕರಣವು ಹೆಚ್ಚಾದರೆ, ಅಯಾನುಗಳು ಹೆಚ್ಚಾಗುತ್ತವೆ ಮತ್ತು ವಿದ್ಯುತ್ ಕ್ಷೇತ್ರವು ಸ್ಥಿರವಾಗಿರುವ ಸಮಯವು ಕಡಿಮೆಯಾಗುತ್ತದೆ. ಆದರೆ, ವಾಯುದ್ರವ ಸಂಖ್ಯೆಯು ಹೆಚ್ಚಿದ್ದರೆ ಈ ಅಯಾನುಗಳನ್ನು, ದೊಡ್ಡ ಅಯಾನುಗಳನ್ನಾಗಿ ಮಾರ್ಪಾಡುಮಾಡಿ ವಿದ್ಯುತ್ ಕ್ಷೇತ್ರವನ್ನು ಹೆಚ್ಚಿಸುತ್ತದೆ. ಆದ್ದರಿಂದ ಈ ರೀತಿಯ ಪ್ರಕ್ರಿಯು ಭೂಕಂಪನ ಮುಂಚಿತವಾಗಿ ಆಗುವುದರಿಂದ ವಿದ್ಯುತ್ ಕ್ಷೇತ್ರ ಸ್ಥಿರ ಸಮಯವು 1–10 ನಿಮಿಷಗಳ ವರೆಗೆ ಇರುತ್ತದೆ. ಅದೇ ರೀತಿ ಅಯಾನುಗಳ ಗಾತ್ರವು ದೊಡ್ಡದಾದಷ್ಟು ಅವು ಅನೇಕ ಅಯಾನುಗಳ ಬಲನೆಯನ್ನು ಕಡಿಮೆ ಮಾಡಿ ವಿದ್ಯುತ್ ಕ್ಷೇತ್ರವನ್ನು ಹೆಚ್ಚುಮಾಡುತ್ತದೆ.

ಟೇಬಲ್ 1, 2 ಮತ್ತು ಚಿತ್ರ 4,5, ಅನೇಕ ಅಯಾನೀಕರಣಗಳ ಮೌಲ್ಯಕ್ಕೆ ಹೊರಹೊಮ್ಮುವ ವಿದ್ಯುತ್ ಕ್ಷೇತ್ರ ಮತ್ತು ಅದರ ಸ್ಥಿರ ಸಮಯವನ್ನು α =10^{-7}/ಸೆಂ.ಮೀ^{3}/ಸೆಕೆಂಡ್ ಮತ್ತು â =10^{-7}/ ಸೆಂ.ಮೀ^{3}/ಸೆಕೆಂಡ್ ಆದಾಗ ತೋರಿಸುತ್ತಿದೆ.

ಟೇಬಲ್ *1-* N^{+}_{α} = 10^4 /ಸೆಂ.ಮೀ^{3} ಆದಾಗ

q_i	10^2	3×10^2	10^3	3×10^3	10^4
$\hat{o}_r$	30	10	3	1	0.55
E_{lm}	2×10^6	6×10^5	2×10^5	6×10^4	3×10^4

ಟೇಬಲ್ *2-* N^{+}_{α} = 10^4 /ಸೆಂ.ಮೀ^{3} ಆದಾಗ

q_i	10^2	3×10^2	10^3	3×10^3	10^4	3×10^4
$\hat{o}_r$	-	-	30	10	3	1
E_{lm}	-	-	2×10^6	6×10^5	2×10^5	6×10^4

ಈ ಮಾದರಿಯ ಪ್ರಕಾರ $3 . 10^2 – 3 . 10^4$ /ಸೆಂ.ಮೀ^{3}/ಸೆಕೆಂಡ್ ಅಯಾನೀಕರಣವು, $(0.3–6)10^5$ ವೋಲ್ಟ್/ಮೀಟರ್ ನಷ್ಟು ವಿದ್ಯುತ್ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು, ಈ ವಿದ್ಯುತ್ ಕ್ಷೇತ್ರವು ಅತಿಗಂಪು ಸ್ಪೆಕ್ಟ್ರಮ್ ನಲ್ಲಿ (7-15 ಮೈಕ್ರೋ ಮೀಟರ್) ಸ್ಪೇಕ್ಸ್ ಗಳನ್ನು ಸೃಷ್ಟಿಸುತ್ತವೆ ಮತ್ತು ಇವು ವಾತಾವರಣದಲ್ಲಿ ಕೆಲವು ಅಣುಗಳು ಕಂಪಿತ ಸ್ಪೆಕ್ಟ್ರಮ್ ಗೆ ಹೋಲಿಕೆಯಾಗುತ್ತದೆ (ಟೇಬಲ್ 3)



ಚಿತ್ರ *4*



ಚಿತ್ರ *5*

ಟೇಬಲ್ 3

ವಾಯುವಿನಲ್ಲಿನ ಅನಿಲ	ಪ್ರಮುಖ ತರಂಗಾಂತರ (ಮೈಕ್ರೋ ಮೀಟರ್)	ಕಾಮೆಂಟ್
ಮೀಥೇನ್ CH_4	4.3, 7.7	ಕಂಪಿತ ಶಕ್ತಿ ಮಟ್ಟಗಳ ನಡುವಿನ ಪರಿವರ್ತನೆಗಳು
ನೈಟ್ರಸ್ ಆಕ್ಸೈಡ್ N_2O	4.6, 7.8, 9.6	ಪರಮಾಣುಗಳ ಚಲನವಲನಗಳು
ಇಂಗಾಲದ ಡೈ ಆಕ್ಸೈಡ್ CO_2	4.3, 4.8, 5.2, 9.4,10.4 – 15	ಕಂಪಿತ ಮತ್ತು ಪರಿಭ್ರಮಣದ ಶಕ್ತಿ ಮಟ್ಟಗಳ ನಡುವಿನ ಪರಿವರ್ತನೆಗಳು
ಒಜೋನ್ O_3	4.8, 5.8, 9.1, 9.6, 14.1	ಪರಮಾಣುಗಳಲ್ಲಾಗುವ ಕಂಪಿತ ಶಕ್ತಿ ಮಟ್ಟಗಳ ನಡುವಿನ ಪರಿವರ್ತನೆಗಳು

ಒಟ್ಟಾಗಿ, ವಾಯುದ್ರವ ಕಣಗಳ ಸಾಂದ್ರತೆಯು ಸ್ಥಿರ ವಾಗಿದ್ದರು, ವಿದ್ಯುತ್ ಕ್ಷೇತ್ರದ ಮೌಲ್ಯವು ಕುಂಠಿತವಾದರೆ ಅದು ಅತಿಯಾದ ಅಯಾನೀಕರಣದಿಂದ ಮತ್ತು ಇದು ದುರ್ಬಲ ಅತಿಗೆಂಪು ವಿಕಿರಣಗಳನ್ನು ಹೊರಹೊಮ್ಮುತ್ತದೆ. ಅದೇ ರೀತಿ, ಅಯಾನೀಕರಣದ ಮೌಲ್ಯವು ಸ್ಥಿರವಾಗಿದ್ದು, ವಿದ್ಯುತ್ ಕ್ಷೇತ್ರದ ಮೌಲ್ಯವು ಹೆಚ್ಚಾದರೆ, ಅದು ಅತಿಯಾದ ವಾಯುದ್ರವ ಕಣಗಳ ಒಳನುಸುಳುವಿಕೆಯಿಂದ

ಎಂಬುದು ದೃಢವಾಗುತ್ತದೆ. ಹಾಗಾಗಿ, ಕೆಲವು ಗಂಟೆಗಳ ಮುಂಚೆ ಭೂಕಂಪನವನ್ನು ಅರಿಯಲು, 1–100 ಮೈಕ್ರೋ ಮೀಟರ್ ನಲ್ಲಿರುವ ಅತಿಗೆಂಪು ವಿಕಿರಣಗಳನ್ನು ಮಾನೀಟರ್ ಮಾಡುವುದು ಅತ್ಯವಶ್ಯಕವಾಗಿದೆ.

ಸಾರಾಂಶ : ಕೆಲವು ಗಂಟೆಗಳ ಮುಂಚೆಯೇ ಭೂಕಂಪನವನ್ನು ಕಂಡುಹಿಡಿಯಲು, ಪುಲಿನೆಟ್ಸ್ ರವರ ಉತ್ತರಗಳಿಗ– ನುಗುಣವಾಗಿ ಸ್ಥಳೀಯ ವಿದ್ಯುತ್ ಕ್ಷೇತ್ರ ಮತ್ತು ಅದರ ನಿಯತಾಂತಗಳನ್ನೊಳಗೊಂಡ ಒಂದು ಮಾದರಿಯನ್ನು ಸಿದ್ಧಪಡಿಸಲಾಗಿದೆ. ಈ ಮಾದರಿಯಲ್ಲಿ ಅತಿಯಾದ ವಾಯುದ್ರವ ಕಣಗಳ ಒಳನುಸುಳುವಿಕೆ, ಅತಿಯಾದ ಅಯಾನೀಕರಣ ಮತ್ತು ವಾಯುವಿನ ಲಂಬ ಚಲನವಲನಗಳಿವೆ ಎಂದು ಕಲ್ಪನೆ ಮಾಡಿಕೊಳ್ಳಲಾಗಿದೆ. ಅತಿಗೆಂಪು ವಿಕಿರಣಗಳಲ್ಲಿ ವಿಲಕ್ಷಣ ಬದಲಾವಣೆಗಳಿದ್ದರೂ, ಅತೀ ಕಡಿಮೆ ತರಂಗಾತರದ ಕಿಟಕಿಯಲ್ಲಿ (1–20 ಮೈಕ್ರೋ ಮೀಟರ್) ಮತ್ತು ಅತೀ ಕಡಿಮೆ 1–10 ನಿಮಿಷಗಳ ಸ್ಥಿರ ಸಮಯದಲ್ಲಿ ಉಪಗ್ರಹದ ಮೂಲಕ ಅಧ್ಯಯನಿಸುವ ಕಾರ್ಯವನ್ನು ಇಲ್ಲಿಯವರೆಗೂ ಭಾರತದಲ್ಲಿ ಯಾರೂ ಮಾಡಿರುವುದಿಲ್ಲ. ಹಾಗಾಗಿ, ಈ ಮಾದರಿಯನ್ನು ಅನುಸರಿಸಿ, ಪ್ರಾಯೋಗಿಕವಾಗಿ ವಿದ್ಯುತ್ ಕ್ಷೇತ್ರ, ವಾಯುದ್ರವ ಕಣಗಳ ಸಾಂದ್ರತೆ ಮತ್ತು ಅಯಾನೀಕರಣವನ್ನು ಒಟ್ಟಾಗಿ ಅಳೆದರೆ, ವಿದ್ಯುತ್ ಕ್ಷೇತ್ರದಲ್ಲಾಗುವ ಬದಲಾವಣೆಗಳಿಂದ, ಕೆಲವೇ ಗಂಟೆಗಳ ಮುಂಚಿತವಾಗಿ ಭೂಕಂಪನವನ್ನು ಊಹಿಸುವ ಸಾಧ್ಯತೆಗಳು ತುಂಬಾ ಹೆಚ್ಚಾಗಿವೆ.

ಉಲ್ಲೇಖಗಳು

1. ಲಿಪರ್ವಸ್ಕಿ ಮತ್ತು ಇತರರು, 1992 Ionospheric precursors of earthquakes, Nauka, 1992.
2. ಪುಲಿನೆಟ್ಸ್ ಮತ್ತು ಇತರರು, 2006 Phys. Chem. Earth, 31, 143–153, 2006.
3. ಮೀಸ್ಟರ್ ಸಿ ವಿ ಮತ್ತು ಇತರರು, 2011 Nat. Hazards Earth Syst. Sci., 11, 1011–1017, doi:10.5194/nhess-11-1011-2011, 2011.
4. ಗ್ರಿಗೋರ್ಜೆವ್ ಮತ್ತು ಇತರರು, 1988 Doclady Academii Nauk SSSR, 300, 1087–1090, 1988.
5. ಫಿಡಾನಿ ಸಿ ಮತ್ತು ಇತರರು, 2010 Nat. Hazards Earth Syst. Sci., 10, 967–978, doi:10.5194/nhess-10-967-2010, 2010.
6. ಇಷೋವ್ ಬಿ ವಿ ಮತ್ತು ಇತರರು, 1983 Morphological-structural investigations in the Far East, Wladiwostok, 114–119, 1983.
7. ಕ್ವಿಂಗ್ ಮತ್ತು ಇತರರು, 1991, Chinese Sci. Bull., 36, 319–323, 1991.
8. ಶಾಲಿಮೋವ್ ಮತ್ತು ಇತರರು, 1998 Phys. Earth Planet. Inter., 105, 211–218, 1998.
9. ಚಡ್ಡಾ ಆರ್ ಕೆ ಮತ್ತು ಇತರರು, 2003 Geophys. Res. Lett., 30, 69–71, 2003.
10. ಪುಲಿನೆಟ್ಸ್ ಎಸ್ ಎ ಮತ್ತು ಇತರರು, 2005., Ionospheric precursors of earthquakes, Springer, 2005.
11. ಫ್ರೀಡ್ ಎಫ್ ಟಿ ಮತ್ತು ಇತರರು, 2007 eEarth, 2, 7–16, doi:10.5194/ee-2-7-2007, 2007.
12. ಫ್ರೆಂಕೆಲ್, 1949 Theory of atmospheric electricity phenomena, GITTL, M.-L., 1949.
13. ಶಿಶ್ಕಿನ್ ಎನ್ಎಸ್, 1954., Cloud, precipitation and thunderstorm electricity, GITTL, Moscow,
14. ಸೋರೋಕಿನ್ ವಿ ಎಮ್ ಮತ್ತು ಇತರರು, 2000 Chemical Physics, 19, 71–80, 2000.
15. ಪುಲಿನೆಟ್ಸ್ ಎಸ್ ಎ ಮತ್ತು ಇತರರು, 2004 Ionospheric precursors of earthquakes, Springer, Berlin, Heidelberg, New York, 2004.
16. ನಾಗರಾಜ ಕಂಸಾಲಿ ಮತ್ತು ಇತರರು, 2011 J Atmos Sol-Terr Phy, 73 (2011) 2345–2351

ವಿಷಯ:–11

ಜೆ. ಸಿ. ಭೋಸೀಯಮ್ ವಿದ್ಯುತ್‌ಕಣಶಾಸ್ತ್ರ, ವಿದ್ಯುತ್‌ಚಕ್ತಿಶಾಸ್ತ್ರ, ಶಕ್ತಿ ಮತ್ತು ವಿ–ಸಂವನ ವಿಜ್ಞಾನಗಳು

THEME:-11

J. C. BOSEEYAM ELECTRONICS, ELECTRICAL, ENERGY AND COMMUNICATION SCIENCES

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಕ್ವಾಂಟಮ್‌ಡಾಟ್‌ದ್ಯುತಿವಿದ್ಯುಜ್ಜನಕ ಕೋಶಗಳು. ಸೌರವಿದ್ಯುತ್ ತಂತ್ರಜ್ಞಾನದ ಭವಿಷ್ಯದಆಶಾಕಿರಣ	ಸುಮಂತಕುಮಾರ.ಡಿ ಜೈಕುಮಾರ. ಬಿ ಹೆಚ್.ಎಂ.ಮಹೇಶ	652 – 656

ಕ್ವಾಂಟಮ್ ಡಾಟ್ ದ್ಯುತಿವಿದ್ಯುಜ್ಜನಕ ಕೋಶಗಳು. ಸೌರವಿದ್ಯುತ್ ತಂತ್ರಜ್ಞಾನದ ಭವಿಷ್ಯದ ಆಶಾಕಿರಣ

ಸುಮಂತಕುಮಾರ.ಡಿ, ಜೈಕುಮಾರ. ಬಿ, ಹೆಚ್.ಎಂ.ಮಹೇಶ.
ವಿದ್ಯುನ್ಮಾನ ವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು 560056, ಕರ್ನಾಟಕ.

ಪ್ರಸ್ತುತ ವಿಶ್ವದಲ್ಲಿ ಪರಿಸರ ಸ್ನೇಹಿ, ದಕ್ಷ, ಅಲ್ಪವೆಚ್ಚದ, ನವೀಕರಿಸಬಹುದಾದ ಮತ್ತು ಸುಸ್ಥಿರ ಪರ್ಯಾಯಇಂಧನ ಮೂಲದಅನ್ವೇಷಣೆ ಬಹಳಾ ದೊಡ್ಡ ಸವಾಲುಗಳಲ್ಲೊಂದಾಗಿ ಪರಿಣಮಿಸುತ್ತಿದೆ.ದ್ಯುತಿವಿದ್ಯುಜ್ಜನಕ ಕೋಶಗಳು (ಸೌರಕೋಶ) ಅರೆವಾಹಕಗಳನ್ನು ಬಳಸಿಕೊಂಡು ಸೂರ್ಯನ ಬೆಳಕನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸುತ್ತದೆ. ಇದನ್ನು ಭವಿಷ್ಯದ ಸುಸ್ಥಿರ ಇಂಧನ ಪೂರಣೆಗೆಸಮರ್ಥತಂತ್ರಜ್ಞಾನಎಂದು ಪರಿಗಣಿಸಲಾಗಿದೆ.ನ್ಯಾನೊತಂತ್ರಜ್ಞಾನದ ಕೂಸು 'ಕ್ವಾಂಟಮ್‌ಡಾಟ್' ನ ಉಗಮ ಸೌರವಿದ್ಯುತ್ ಸಂಶೋಧನಾ ವಲಯದಲ್ಲಿ ಹೊಸ ಸಂಚಲನ ಮೂಡಿಸಿದ್ದು, ಇದರಿಂದ ಮುಂದಿನ ಪೀಳಿಗೆಯ ಅಲ್ಪವೆಚ್ಚದ, ಹೆಚ್ಚು ಕಾರ್ಯಕ್ಷಮತೆಯ ಸೌರಕೋಶಗಳನ್ನು ತಯಾರಿಸಲು ಸಾಮರ್ಥ್ಯ ಹೊಂದಿದೆ ಎಂಬ ಆಶಾಕಿರಣ ಮೂಡಿಸುತ್ತಿದೆ.ಕ್ವಾಂಟಮ್ ಡಾಟ್‌ಗಳು, ಒಂದುಚದರ ಸೆಂಟಿಮೀಟರ್‌ವಿಸ್ತೀರ್ಣದ ಅರೆವಾಹಕವನ್ನುಒಂದು ಮಿಲಿಯನ್ ಬಾಗ ವಿಭಜಿಸಿದಾಗ ಸಿಗುವ, ಕೇವಲ 10 ನ್ಯಾನೊಮೀಟರ್ ಆಸುಪಾಸಿನ ಸ್ಪಟಿಕ. ಈ ಸ್ಥಿತಿಯಲ್ಲಿ, ಇವುಗಳ ಗಾತ್ರ ಮತ್ತುಆಕಾರದಲ್ಲಿ ಕೊಂಚ ಬದಲಾವಣೆಯಾದರೂತಮ್ಮಅನನ್ಯದೃಗ್ವಿದ್ಯುನ್ಮಾನ (ಆಪ್ಟೋಎಲೆಕ್ಟ್ರಾನಿಕ್) ಗುಣಲಕ್ಷಣಗಳಾದ– ಕ್ವಾಂಟಮ್ ಬಂಧನ ಪರಿಣಾಮ (ಕ್ವಾಂಟಮ್‌ಕನ್ಫೈನ್‌ಮೆಂಟ್‌ಎಫೆಕ್ಟ್), ಬಹು ಎಕ್ಸಿಟಾನ್‌ಉತ್ಪತ್ತಿ ಮುಂತಾವುದುಗಳನ್ನು ಪ್ರದರ್ಶಿಸುತ್ತವೆ. ಈ ಪ್ರಬಂಧವು, ಕ್ವಾಂಟಮ್‌ಡಾಟ್ಸ್‌ನ ಮೂಲಭೂತ ತಿಳುವಳಿಕೆ, ವಿಶಿಷ್ಟ ಗುಣಗಳು ಮತ್ತುಅದನ್ನು ಬಳಸಿಕೊಂಡು ಬೆಳಕು–ಶಕ್ತಿ ಪರಿವರ್ತನೆಯಲ್ಲಿಇತ್ತೀಚಿನ ಬೆಳವಣಿಗೆಗಳಾದ ಕ್ವಾಂಟಮ್‌ಡಾಟ್ ಹೆಟಿರೊಜಂಕ್ಷನ್ ಸೌರಕೋಶ, ಕ್ವಾಂಟಮ್‌ಡಾಟ್ ಶಾಟ್ಕೀ ಸೌರಕೋಶ, ಕ್ವಾಂಟಮ್‌ಡಾಟ್ ಸೆನ್ಸಿಟೈಸಡ್ ಸೌರಕೋಶಗಳ ಮೇಲೆ ಬೆಳಕು ಚೆಲ್ಲುತ್ತದೆ.

1. ಮುನ್ನುಡಿ : ಭೂಮಿಯ ಮೇಲೆ ಲಭ್ಯವಿರುವ ಅತ್ಯಂತ ಹೇರಳವಾದ, ಸ್ವಚ್ಛವಾದ, ಹಾಗೆಯೇ ಅತ್ಯಂತ ಕಡಿಮೆ ಬಳಸಲ್ಪಟ್ಟ ಶಕ್ತಿಯ ಮೂಲ– ಸೌರಶಕ್ತಿ. ಇಲ್ಲಿಯವರೆಗೆ, ನಮ್ಮ ಗ್ರಹದಲ್ಲಿ ಒಂದು ವರ್ಷದಲ್ಲಿ ಬಳಸಲ್ಪಡುವ ಪ್ರಮಾಣದಷ್ಟು ಇಂಧನದ ಶಕ್ತಿಯನ್ನು ಸೂರ್ಯ ಕೇವಲ ಒಂದು ಗಂಟೆಯಲ್ಲಿ ಭೂಮಿಗೆ ಪೂರೈಸುತ್ತಾನೆ. ಅಂದರೆ, ಸೌರಶಕ್ತಿಯನ್ನು ಅರೆವಾಹಕಗಳ ಸಹಾಯದಿಂದ ಉಪಯುಕ್ತ ಇಂಧನವಾಗಿ ನಮ್ಮ ಇಂದಿನ ಬಳಕೆ ಮತ್ತು ಅದರ ಸಾಮರ್ಥ್ಯದ ನಡುವೆ ದೊಡ್ಡ ಅಂತರವಿದೆ. ಇದು ಶಕ್ತಿ ಸಂಶೋಧನೆಯ ಈ ಶತಮಾನದ ಮಹಾ ಸವಾಲು ಎಂದು ಪರಿಗಣಿಸಲಾಗಿದೆ. ಅಲೆಕ್ಸಾಂಡರ್ ಎಡ್ಮಂಡ್ ಬೆಕ್ವೆರಲ್ 1839ರಲ್ಲಿ ದ್ಯುತಿವಿದ್ಯುತ್ಜನಕ ಪರಿಣಾಮವನ್ನು ಕಂಡುಹಿಡಿದ ನಂತರ ದ್ಯುತಿ ವಿದ್ಯುತ್ಜನಕ ತಂತ್ರಜ್ಞಾನ ಆಸಕ್ತಿಪಡೆಯಿತು[1]. ಸುಮಾರು 1 ಪ್ರತಿಶತ ಕಾರ್ಯಪಟುತ್ವದ ಸೆಲೇನಿಯಮ್ ಮತ್ತು ಚಿನ್ನದ ಪಿ–ಎನ್ ಸಂಗಮ (P-N Junction) ಸಾಧನವನ್ನು ಅಭಿವೃದ್ಧಿ ಪಡಿಸುವ ಮೂಲಕ ಚಾರ್ಲ್ಸ್ ಫ್ರಿಟ್ಸ್ 1883ರಲ್ಲಿ ಮೊದಲಬಾರಿಗೆ ದ್ಯುತಿವಿದ್ಯುಜ್ಜನಕ ಪರಿಣಾಮವನ್ನು ಒಂದು ಸಾಧನಕ್ಕೆ ಅಳವಡಿಸಿದರು[2]. 1954ರಲ್ಲಿ ಬೆಲ್ ಪ್ರಯೋಗಾಲಯ ಸುಮಾರು 6 ಪ್ರತಿಶತ ಕಾರ್ಯಪಟುತ್ವದ ಮೊದಲ ಪಿ–ಎನ್ ಸಂಗಮ ಸೌರಕೋಶವನ್ನು ಪ್ರಕಟಿಸಿತು[3]. ಬೆಲ್ ಪ್ರಯೋಗಾಲಯದ ನಾವಿನ್ಯತೆ ಮೊದಲ ಕಾರ್ಯಸಾಧ್ಯವಾದ ವಾಣಿಜ್ಯ ಸೌರಕೋಶ ಗಳನ್ನು ನಿರ್ಮಿಸಿ ದ್ಯುತಿವಿದ್ಯುಜ್ಜನಕ ಉದ್ಯಮದಲ್ಲಿ ಹೊಸಕ್ರಾಂತಿ ಯನ್ನೇ ಸೃಷ್ಟಿಸಿತು. ಹೀಗೆ ಸೌರಶಕ್ತಿ ತಾತ್ವಿಕವಾಗಿ ಹೆಚ್ಚು ವಿದ್ಯುತ್ ಆಧಾರಿತ ಭವಿಷ್ಯದ ಬಲಿಷ್ಠವಾದ ಮತ್ತು ವಿಜ್ಞಾನಿಗಳಿಗೆ ಆಕರ್ಷಣೆಗೊಳಗದ ಕ್ಷೇತ್ರವಾಗಿದೆ.

ಸೌರಕೋಶ ತಂತ್ರಜ್ಞಾನದ ಬೆಳವಣಿಗೆಯನ್ನು ಸಾಂಪ್ರದಾಯಿಕವಾಗಿ ಮೂರು ತಲೆಮಾರುಗಳಾಗಿ ವಿಂಗಡಿಸಬಹುದು. ಮೊದಲ ತಲೆಮಾರಿನ ಸೌರವಿದ್ಯುತ್ಕೋಶಗಳು ಮುಖ್ಯವಾಗಿ ಸಿಲಿಕಾನ್ ಬಿಲ್ಲೆಗಳನ್ನು ಆಧರಿಸಿ ಮಾಡಲ್ಪಟ್ಟಿದ್ದು, 15–20 ಪ್ರತಿಶತ ಕಾರ್ಯ ಪಟುತ್ವವನ್ನು ಪ್ರದರ್ಶಿಸುತ್ತವೆ. ಪ್ರಸ್ತುತ ವಿಶ್ವದಾದ್ಯಂತ ಮಾರಾಟವಾಗುವ ಶೇಕಡ 80ರಷ್ಟು ಪ್ರಾಬಲ್ಯವನ್ನು ಈ ರೀತಿಯ ಸೌರಕೋಶಗಳು ಹೊಂದಿವೆ. ಆದರೆ ವಾಸ್ತವವಾಗಿ, ಅತಿಯಾದ ವಸ್ತು ಮತ್ತು ಉತ್ಪಾದನ ವೆಚ್ಚ ಸೇರಿದಂತೆ, ತಮ್ಮ ಭಾರಿಯಾದ, ಸ್ಥೂಲವಾದ ಮತ್ತು ಗಡುಸಾದ ಪ್ರಕೃತಿಯ ಕಾರಣದಿಂದ, ಈ ಸೌರಕೋಶಗಳು ಸಾಂಪ್ರದಾಯಿಕ ಶಕ್ತಿಮೂಲಗಳ ಎದುರು, ವಿಷೇಶವಾಗಿ ಅಗ್ಗದ ಮತ್ತು ಸಮೃದ್ಧ ನೈಸರ್ಗಿಕ ಅನಿಲದ ಎದುರು ಪೈಪೋಟಿ ನಡೆಸಲು ಸಾಧ್ಯವಾಗುತ್ತಿಲ್ಲ.

ಪರ್ಯಾಯ ಮತ್ತು ಕಡಿಮೆ ವೆಚ್ಚದಲ್ಲಿ ಸೌರಶಕ್ತಿ ಪರಿವರ್ತನ ತಂತ್ರಜ್ಞಾನದ ಕಲ್ಪನೆ ಎರಡನೆ ತಲೆಮಾರಿನ ತೆಳುಲೇಪನ (Thin film) ಸೌರಕೋಶಗಳ ಅಭಿವೃದ್ಧಿಗೆ ಕಾರಣವಯಿತು. ಇಲ್ಲಿ ದುಬಾರಿ ಹಾಗು ಬೃಹತ್ ಅರೆವಾಹಕಗಳ ಬದಲಿಗೆ ಕೇವಲ ಕೆಲವು ನ್ಯಾನೊಮೀಟರ್ ನಿಂದ 10 ಮೈಕ್ರೊಮೀಟರ್ ದಪ್ಪಗಿರುವ ಆಯ್ದ ಅರೆವಾಹಕಗಳ ತೆಳುಲೇಪನದಿಂದ ಸೌರಕೋಶಗಳನ್ನು ತಯಾರಿಸಲಾಗುತ್ತದೆ. ಈ ತಂತ್ರಜ್ಞಾನವನ್ನು ಬಳಸಿಕೊಂಡು ವ್ಯಾಪಕವಾಗಿ ಅಭಿವೃದ್ಧಿ ಪಡಿಸಿ ತಯಾರಿಸಿದ್ದು ಅಸ್ಫಾಟಿಕ (Amorphous) ಸಿಲಿಕಾನ್ ಸೌರಕೋಶಗಳು[4]. ಆದರೆ, ಕಡಿಮೆ ದಕ್ಷತೆ ಮತ್ತು ನಿಧಾನ ತಯಾರಿಕಗತಿಯ (ಇದರಿಂದ ಹೆಚ್ಚುವ ಬಂಡವಾಳ ವೆಚ್ಚ) ಕಾರಣವಾಗಿ ಈ ತಂತ್ರಜ್ಞಾನ ಮಾರುಕಟ್ಟೆಯ ಪ್ರಮುಖಸ್ಥಾನವನ್ನು ಪಡೆಯಲು ಸಾಧ್ಯವಾಗಲಿಲ್ಲ. ಈ ಅವಧಿಯಲ್ಲಿ ಬೆಳಕಿನ ಹೆಚ್ಚು ಹೀರುವಿಕೆಗೆ ನೆರವಾಗುವ ಇತರ ಸಂಭಾವ್ಯ ತೆಳುಲೇಪನ ಸೌರಕೋಶ ಅರೆವಾಹಕ ವಸ್ತುಗಳ ಶೋಧನಕಾರ್ಯ ಮುಂದುವರಿಯಿತು. ಈ ಹುಡುಕಾಟದಲ್ಲಿ ಕೆಲವೇ ಕೆಲವು ಭರವಸೆಯ ತೆಳು ಲೇಪನ ವಸ್ತುಗಳನ್ನು ಗುರುತಿಸಲಾಯಿತು. ಅದರಲ್ಲಿ ಕಾಪರ್ ಇಂಡಿಯಮ್ ಡೈ ಸೆಲೆನೈಡ್ (CIS) ಮತ್ತು ಕ್ಯಾಡ್ಮಿಯಮ್ ಟೆಲ್ಲುರೈಡ್ (CdTe) ಪ್ರಮುಖವಾದವುಗಳು[5,6]. ಮೂರನೆ ತಲೆಮಾರಿ ದ್ಯುತಿವಿದ್ಯುಜ್ಜನಕ ವ್ಯವಸ್ಥೆಯಲ್ಲಿ, ತೆಳು ಲೇಪನ ಸೌರಕೋಶ ಹಾಗು ನ್ಯಾನೊತಂತ್ರಜ್ಞಾನಗಳ ಸಮ್ಮಿಲನದಲ್ಲಿ ಜನಿಸಿದ

ಜೈವಿಕ (Organic), ವರ್ಣದ್ರವ್ಯ–ಸಂವೇದನಾ (Dye Sensitized) ಮತ್ತು ಕ್ವಾಂಟಮ್ ಡಾಟ್ ಸೌರಕೋಶಗಳು ಒಳಗೊಂಡಿರುತ್ತವೆ. ಇವು ಭವಿಷ್ಯದ ಕಡಿಮೆ ತೂಕದ, ಕಡಿಮೆ ವೆಚ್ಚದ ಹಾಗು ಪರಿಣಾಮಕಾರಿಯಾಗಿ ಸೌರಶಕ್ತಿಯನ್ನು ಸೆರೆಹಿಡಿದು ಪರಿವರ್ತಿಸುವ ಮಾರ್ಗವಾಗಿದೆ[7]. ಮೂರನೇ ತಲೆಮಾರಿನ ತಂತ್ರಜ್ಞಾನ ಪ್ರಸ್ತುತ ಮಾರುಕಟ್ಟೆಯಲ್ಲಿ ಲಭ್ಯವಿರುವ ಮೊದಲ ತಲೆಮಾರಿನ ಸೌರಫಲಕಗಳಿಗಿಂತ ಕಡಿಮೆ ದಕ್ಷತೆ ಹೊಂದಿದ್ದು, ಮುಂದಿನ ದಿನಗಳಲ್ಲಿ ಸಾಂಪ್ರದಾಯಿಕ ಇಂಧನಗಳನ್ನು ಮಣಿಸುವ ಸಾಮರ್ಥ್ಯ ಹೊಂದಿದೆ. ಅದರಲ್ಲೂ ವಿಶೇಷವಾಗಿ ನ್ಯಾನೊಮೀಟರ್ ಗಾತ್ರದ ಅರೆವಾಹಕ ಹರಳುಗಳಾದ ಕ್ವಾಂಟಮ್ ಡಾಟ್‌ಗಳು ತಮ್ಮ ಅನನ್ಯ ಗಾತ್ರ ಹೊಂದಾಣಿಕೆ ಗುಣದ ಕಾರಣವಾಗಿ ಆಧುನಿಕ ಸೌರಕೋಶ ತಂತ್ರಜ್ಞಾನದ ಆಶಾಕಿರಣವಾಗಿ ಕಾಣುತ್ತಿದೆ.

2. ಕ್ವಾಂಟಮ್ ಡಾಟ್ ಎಂದರೇನು?

ಕ್ವಾಂಟಮ್ ಡಾಟ್ ಬಗ್ಗೆ ತಿಳಿಯುವುದಕ್ಕೆ ಮುನ್ನ, ಅರೆವಾಹಕ ನ್ಯಾನೊಹರಳುಗಳಲ್ಲಿ ಇಲೆಕ್ಟ್ರಾನುಗಳ ವಿಶೇಷ ವಿದ್ಯಮಾನಗಳನ್ನು ತಿಳಿಯುವುದು ಅಗತ್ಯ. ಒಂದು ಸಾಂಪ್ರದಾಯಿಕ ಅರೆವಾಹಕ ಪಿ–ಎನ್ ಸಂಗಮ ಸೌರಕೋಶದ ಸಂಧರ್ಭದಲ್ಲಿ ಅರೆವಾಹಕದ ವಲಯ ಅಂತರ (Band gap) ಕಿಂತ ಹೆಚ್ಚಿನ ಶಕ್ತಿ ಹೊಂದಿರುವ ಫೋಟಾನುಗಳು ಬಿದ್ದಾಗ, ಅರೆವಾಹಕವು ಆ ಫೋಟಾನುಗಳನ್ನು ಹೀರಿಕೊಂಡು ಇಲೆಕ್ಟ್ರಾನ್ ಮತ್ತು ಕುಳಿ (Hole) ಗಳ ಜೋಡಿಗಳನ್ನು ಉತ್ಪಾದಿಸುತ್ತದೆ. ನಂತರ ಈ ಜೋಡಿಗಳು ಆಂತರಿಕ ವಿದ್ಯುತ್ ಕ್ಷೇತ್ರದ ಪರಿಣಾಮವಾಗಿ ಬಾರ್ಪಟ್ಟು ಅವುಗಳ ಮುಕ್ತ ಅರಿವು ವಿದ್ಯುತ್ತನ್ನು ಸೃಷ್ಟಿಸುತ್ತದೆ. ಕೆಲವು ಸಂಧರ್ಭಗಳಲ್ಲಿ ದ್ಯುತಿ ಉದ್ರೇಕಿತ (Photo-exited) ಇಲೆಕ್ಟ್ರಾನ್–ಕುಳಿ ಜೋಡಿಗಳು ಸ್ಥಾಯಿವಿದ್ಯುತ್ ಬಲದ ಪರಿಣಾಮವಾಗಿ ಪರಸ್ಪರ ಆಕರ್ಷಿಸಿಕೊಂಡು ಜೋಡಿ ಬಂಧನದ ಸ್ಥಿತಿಯಲ್ಲೇ ಇದ್ದುಬಿಡುತ್ತವೆ. ಹೀಗೆ ಬಂಧನಗೊಂಡ ಇಲೆಕ್ಟ್ರಾನ್–ಕುಳಿ ಜೋಡಿಗಳನ್ನು 'ಎಕ್ಸಿಟಾನ್' ಎಂದು ಕರೆಯುತ್ತಾರೆ (ಚಿತ್ರ 1a). ಹಾಗೆಯೇ ಈ ಬಂಧಿತ ಇಲೆಕ್ಟ್ರಾನ್–ಕಳಿ ಜೋಡಿಯ ನಡುವಿನ ಅಂತರವನ್ನು 'ಎಕ್ಸಿಟಾನ್ ಬೋರ್ ತ್ರಿಜ್ಯ' (Exciton Bohr Radius) ಎಂದು ಕರೆಯುತ್ತಾರೆ.

'ಕ್ವಾಂಟಮ್ ಡಾಟ್' ಗಳು ಅರೆವಾಹಕ ವಸ್ತುಗಳಿಂದ ತಯಾರಿಸಿದ ನ್ಯಾನೊಹರಳುಗಳಾಗಿದ್ದು, ಇವುಗಳ ಗಾತ್ರವು ಎಕ್ಸಿಟಾನ್ ಬೋರ್ ತ್ರಿಜ್ಯಕಿಂತ ಕಡಿಮೆಯಿದ್ದಾಗ (ಚಿತ್ರ 1b) ಕ್ವಾಂಟಮ್ ಬಂಧನ ಪರಿಣಾಮವನ್ನು (Quantum Confinement Effect) ಪ್ರದರ್ಶಿಸುತ್ತವೆ[8]. ನಿರ್ದಿಷ್ಟವಾಗಿ ಹೇಳುವುದಾದರೆ, ಇವುಗಳಲ್ಲಿನ ಎಕ್ಸಿಟಾನ್‌ಗಳು ಬೇರ್ಪಡಿಸಲಾಗದ ರೀತಿಯಲ್ಲಿ ಹರೆವಾಹಕ ಹರಳಿನ ಮೂರೂ ಆಯಾಮಗಳಲ್ಲೂ ಬಂಧಿಯಾಗಿರುತ್ತವೆ. ಈ ವಸ್ತುಗಳ ದೃಗ್ವಿದ್ಯುನ್ಮಾನ (Opto-Electronic) ಗುಣಲಕ್ಷಣಗಳು ಬೃಹತ್ ಅರೆವಾಹಕಗಳು ಹಾಗು ಪ್ರತ್ಯೇಕ ಅಣುಗಳ ನಡುವಿನದಾಗಿದ್ದು, ಈ ಗುಣಲಕ್ಷಣಗಳನ್ನು ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವ ಸ್ವಾತಂತ್ರ್ಯವೂ ಇರುತ್ತದೆ.

3. ವಿಶೇಷ ಗುಣಲಕ್ಷಣಗಳು

3.1. ದ್ಯುತಿದೀಪ್ತಿ (Photoluminescence)

ಕ್ವಾಂಟಮ್ ಡಾಟ್ ಎಂದ ತಕ್ಷಣ ಮೊದಲು ನೆನಪಿಗೆ ಬರುವುದು ಅವುಗಳ ವಿಶಿಷ್ಟವಾದ ಬಣ್ಣ. ಬೇರೆ ಬೇರೆ ಗಾತ್ರದ ಆದರೆ ಒಂದೇ ಅರೆವಾಹಕ ವಸ್ತುವಿನ ಕ್ವಾಟಮ್ ಡಾಟ್‌ಗಳು ಬೇರೆ ಬೇರೆ ಬಣ್ಣದ ಬೆಳಕನ್ನು ಹೊರಸೂಸುತ್ತವೆ (ಚಿತ್ರ 2b). ಕ್ವಾಂಟಮ್ ಡಾಟ್‌ನ ದ್ಯುತಿ ಉದ್ರೇಕ ಕ್ರಿಯೆಯ ಸಂದರ್ಭದಲ್ಲಿ, ಕ್ವಾಂಟಮ್ ಡಾಟ್‌ನ ಮೇಲ್ಪೈ ಮೇಲೆ ಬಿದ್ದ ಫೋಟಾನು, ಕುಳಿಯನ್ನು ಹಿಂದಕ್ಕೆ ಬಿಟ್ಟು ವೇಲೆನ್ಸ್ ವಲಯದಿಂದ ವಾಹಕ ವಲಯಕ್ಕೆ (Conduction band) ವಲಸೆ ಹೋಗುವಂತೆ ಇಲೆಕ್ಟ್ರಾನನ್ನು ಉತ್ತೇಜಿಸುತ್ತದೆ. ಹೀಗೆ ಉದ್ರೇಕಗೊಂಡಿದ್ದ ಇಲೆಕ್ಟ್ರಾನ್‌ಗಳು ಕೆಲವು ಸಮಯದ ನಂತರ ಕೆಳಗಿನ ಶಕ್ತಿವಲಯದಲ್ಲಿನ ಕುಳಿಯ ಜತೆಗೆ ಮರು ಜೋಡಣೆಯಾಗುತ್ತವೆ ಹಾಗು ಇದರ ಪರಿಣಾಮವಾಗಿ ಕಡಿಮೆ ಶಕ್ತಿಯ ಫೋಟಾನ್‌ಗಳನ್ನು ಹೊರಸೂಸುತ್ತವೆ. ಈ ಪ್ರಕ್ರಿಯೆಯನ್ನು 'ದ್ಯುತಿದೀಪ್ತಿ' ಎಂದು ಕರೆಯುತ್ತಾರೆ. ಈ ಪ್ರಕ್ರಿಯೆಯ ಮೂಲ ಕಾರಣ ಕ್ವಾಂಟಮ್ ಬಂಧನ ಪರಿಣಾಮ. ಇದನ್ನು ಸ್ಥೂಲವಾಗಿ ಚಿತ್ರ 2a ನಲ್ಲಿ ವಿವರಿಸಲಾಗಿದೆ.



ಚಿತ್ರ 1. **(a)** ದ್ಯುತಿ ಉದ್ರೇಕಿತ ಇಲೆಕ್ಟ್ರಾನ್–ಕುಳಿ ಜೋಡಿಗಳು ಎಕ್ಸಿಟಾನ್ ಆಗುವ ಶಕ್ತಿ ವಲಯ ನಕ್ಷೆ. **(b)** ಕ್ವಾಂಟಮ್ ಡಾಟ್ ಹರಳಿನ ಗಾತ್ರ ಮತ್ತು ಎಕ್ಸಿಟಾನ್ ಬೋರ್ ತ್ರಿಜ್ಯದ ಹೋಲಿಕೆ.



ಚಿತ್ರ 2. (a) ದ್ಯುತಿದೀಪ್ತಿ ಪ್ರಕ್ರಿಯೆಯ ಸ್ಥೂಲನಕ್ಷೆ. (b) ವಿವಿಧ ಗಾತ್ರದ ಕ್ವಾಂಟಮ್ ಡಾಟ್‌ಗಳನ್ನು ಅತಿ ನೇರಳೆ ಬೆಳಕಿನಲ್ಲಿ ಉದ್ರೇಕಿಸಿದಾಗ ಕಾಣಿಸುವ ದ್ಯುತಿದೀಪ್ತಿ ಪ್ರಕ್ರಿಯೆಯ ಚಿತ್ರ [9].

ಗಾತ್ರದಲ್ಲಿ ದೊಡ್ಡದಾಗಿರುವ ಕ್ವಾಂಟಮ್ ಡಾಟ್‌ಗಳಲ್ಲಿ ಹಲವು ಶಕ್ತಿಯ ಮಟ್ಟಗಳಿದ್ದು (Energy levels) ಅವುಗಳ ನಡುವಿನ ಅಂತರವೂ ಕಿರಿದಾಗಿರುತ್ತವೆ. ಹಾಗಾಗಿ ಈ ಕ್ವಾಂಟಮ್ ಡಾಟ್‌ಗಳು ಕಡಿಮೆ ಶಕ್ತಿಯ ಫೋಟಾನ್‌ಗಳನ್ನು ಹೀರಿಕೊಳ್ಳುತ್ತವೆ, ಅಂದರೆ ರೋಹಿತದ ಕೆಂಪು ಕೊನೆಯ ಹತ್ತಿರವಿರುವುದನ್ನು ಹೀರಿಕೊಂಡು ಕೆಂಪು ಬೆಳಕನ್ನು ಹೊರಸೂಸುತ್ತವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಸೀಮಿತ ಹಾಗು ಪರಸ್ಪರ ದೂರದ ಶಕ್ತಿಯ ಮಟ್ಟವನ್ನು ಹೊಂದಿರುವ ಸಣ್ಣ ಕ್ವಾಂಟಮ್ ಡಾಟ್‌ಗಳು ನೀಲಿ ಬೆಳಕನ್ನು (ಹೆಚ್ಚು ಶಕ್ತಿ) ಹೊರಸೂಸುತ್ತವೆ. ಹಾಗಾಗಿ, ಕ್ವಾಂಟಮ್ ಡಾಟ್‌ನ ಶಕ್ತಿ ವಲಯ ಅಂತರ (ಅಥವ ಅದರ ಬಣ್ಣ) ಕ್ವಾಂಟಮ್ ಡಾಟ್‌ನ ಗಾತ್ರಕ್ಕೆ ವಿಲೋಮ ಅನುಪಾತದಲ್ಲಿರುತ್ತದೆ.

3.2. ಸರಿ ಹೊಂದಿಸಿಕೊಳ್ಳಬಹುದಾದ ವಲಯ ಅಂತರ (Tunable Band-gap)

ಸೂರ್ಯನಿಂದ ಬರುವ ಸುಮಾರು ಅರ್ಧಕಿಂತ ಹೆಚ್ಚು ವಿದ್ಯುತ್ಕಾಂತೀಯ ವಿಕಿರಣದ ಭಾಗ ಅತಿಗೆಂಪು ಪ್ರದೇಶದಲ್ಲಿರುತ್ತದೆ. ಆದರೆ 1.1 ev (Electron volt) ವಲಯ ಅಂತರವನ್ನು ಹೊಂದಿರುವ ಸಾಂಪ್ರದಾಯಿಕ ಬೃಹತ್ ಸಿಲಿಕಾನ್ ಅರೆವಾಹಕ ಸೌರಕೋಶಗಳು ಕೇವಲ ಕಣ್ಣಿಗೆ ಗೋಚರಿಸುವ ವಿದ್ಯುತ್ಕಾಂತೀಯ ತರಂಗಗಳನ್ನು ಹೀರಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತವೆ. ಹಾಗಾಗಿ ಸೌರವಿದ್ಯುತ್ ಪರಿವರ್ತನೆ ಪರಿಣಾಮಕಾರಿತ್ವವು ಶಾಕ್ಲೆ ಮತ್ತು ಕ್ವೀಜ಼ರ್‌ರ ವರದಿಯಂತೆ ಮೂಲಭೂತವಾಗಿ ಶೇಕಡ 31 ಕ್ಕೆ ಸೀಮಿತವಾಗಿರುತ್ತದೆ [10]. ಹೀಗೆ ಸೀಮಿತವಾಗಿರುವ ಸೌರಕೋಶದ ಶಕ್ತಿ ಪರಿವರ್ತನೆ ಪರಿಣಾಮಕಾರಿತ್ವವನ್ನು ಸುಧಾರಿಸಬೇಕೆಂದರೆ, ಸೌರ ವರ್ಣಪಟಲದ ನಿರ್ದಿಷ್ಟ ತರಂಗಕ್ಕೆ ಹೊಂದಿಸಲಾಗಿರುವ, ವಿವಿಧ ವಲಯ ಅಂತರವಿರುವ ಅರೆವಾಹಕಗಳ ಪದರುಗಳನ್ನು ಲಂಬವಾಗಿ ಪೇರಿಸಬೇಕು. ಇದಕ್ಕೆ ಪರಿಹಾರವೆಂದರೆ ಅರೆವಾಹಕ ನ್ಯಾನೊ ಹರಳುಗಳಾದ ಕ್ವಾಂಟಮ್ ಡಾಟ್. ಕ್ವಾಂಟಮ್ ಡಾಟ್‌ನ ಸಂಶ್ಲೇಷಣೆ ನಿಯತಾಂಕಗಳನ್ನು ಸರಿಹೊಂದಿಸುವ ಮೂಲಕ, ಅದರ ಗಾತ್ರ ಹಾಗೆಯೇ ವಲಯ ಅಂತರವನ್ನು (ಚಿತ್ರ 3) ಬೇಕಾಗಿರುವ ಸೌರ ವರ್ಣಪಟಲದ ನಿರ್ದಿಷ್ಟ ತರಂಗಾಂತರಕ್ಕೆ ಬರುವಂತೆ ಬದಲಾಯಿಸಿಕೊಳ್ಳಬಹುದು. ಹೀಗೆ, ವಿವಿಧ ವಲಯ ಅಂತರಕ್ಕೆ ಹೊಂದಿಸಲಾಗಿರುವ ಕ್ವಾಂಟಮ್ ಡಾಟ್‌ಗಳನ್ನು ಬಳಸಿಕೊಂಡು ಬಹು ಪದರುಗಳ, ಬಹು ಸಂಗಮ ಸೌರಕೋಶ ಸಾಧನಗಳನ್ನು ನಿರ್ಮಿಸಬಹುದು. ಈ ಸೌರಕೋಶಗಳು ಸೌರಶಕ್ತಿಯನ್ನು ದಕ್ಷವಾಗಿ ಸಂಗ್ರಹಿಸುವುದಲ್ಲದೇ, ಈ ಹಿಂದೆ ಉಪಯೋಗಿಸದ ಅತಿಗೆಂಪು ಶಕ್ತಿಯನ್ನೂ ಸಹ ಹೀರಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತವೆ[11].



ಚಿತ್ರ 3. ಕ್ವಾಂಟಮ್ ಡಾಟ್‌ಗಳ ಗಾತ್ರ ಬದಲಾದಂತೆ ಅವುಗಳ ವಲಯ ಅಂತರ ಬದಲಾಗುವ ಪ್ರಕ್ರಿಯೆಯನ್ನು ತೋರಿಸುವ ಶಕ್ತಿ ವಲಯ ನಕ್ಷೆ.

3.3. ಬಹು ಎಕ್ಸಿಟಾನ್ ಉತ್ಪತ್ತಿ (Multiple exciton generation)

ಫೋಟಾನ್‌ಗಳಲ್ಲಿನ ಹೆಚ್ಚುವರಿ ಶಕ್ತಿಯನ್ನು ಬಳಸಿಕೊಂಡು ಸೌರ ಕೋಶಗಳ ಕಾರ್ಯ ಪಟುತ್ವವನ್ನು ವೃದ್ಧಿಸಲು ಇತ್ತೀಚಿನ ದಿನಗಳಲ್ಲಿ ತೀವ್ರವಾಗಿ ಅಧ್ಯಯನಕ್ಕೊಳಗಾಗಿರುವುದು ಕ್ವಾಂಟಮ್ ಡಾಟ್‌ನ ಮತ್ತೊಂದು ವಿದ್ಯಮಾನ– 'ಬಹು ಎಕ್ಸಿಟಾನ್ ಉತ್ಪತ್ತಿ'. ಒಂದು ಸಾಂಪ್ರದಾಯಿಕ ಸೌರಕೋಶದ ಸಿದ್ಧಾಂತದಲ್ಲಿ, ಅರೆವಾಹಕದ ಮೇಲೆ ಬಿದ್ದ ಪ್ರತೀ ಫೋಟಾನ್‌ಗಳು ಕೇವಲ ಒಂದು ಇಲೆಕ್ಟ್ರಾನ್‌ನನ್ನು ಮಾತ್ರ ವಲಯ ಅಂತರದಾಚೆಗೆ ದಾಟಿಸಲು ಸಾಧ್ಯ, ಇನ್ನುಳಿದ ಫೋಟಾನ್‌ನ ಹೆಚ್ಚುವರಿ ಶಕ್ತಿಯು ಶಾಖವಾಗಿ ಪೋಲಾಗಿಬಿಡುತ್ತದೆ. ಇದನ್ನು ತಪ್ಪಿಸುವ ಪರಿಹಾರವೆಂದರೆ– ಬಹು ಎಕ್ಸಿಟಾನ್ ಉತ್ಪತ್ತಿ. ಇಲ್ಲಿ ಅರೆವಾಹಕದ ಮೇಲೆ ಬಿದ್ದ ಒಂದು ಫೋಟಾನ್ ಕಣವು ತನ್ನ ಶಕ್ತಿಯನ್ನು

ಶಾಖವಾಗಿ ಪರಿವರ್ತನೆಗೊಂಡು ವ್ಯರ್ಥವಾಗದೇ ಎರಡು ಅಥವ ಎರಡಕ್ಕಿಂತ ಹೆಚ್ಚು ಇಲೆಕ್ಟ್ರಾನ್‌ಗಳನ್ನು ವಲಯ ಅಂತರದಾಚೆಗೆ ದಾಟಿಸಿಬಿಡುತ್ತದೆ (ಚಿತ್ರ 4).



ಚಿತ್ರ 4. ಬಹು ಎಕ್ಸಿಟಾನ್ ಉತ್ಪತ್ತಿ ಪ್ರಕ್ರಿಯೆಯನ್ನು ವಿವರಿಸುವ ಅರೆವಾಹಕದ ಸ್ಫಟಿಕ ಜಾಲರಿ ಚಿತ್ರ.

ಬಹು ಎಕ್ಸಿಟಾನ್ ಉತ್ಪತ್ತಿ ಪ್ರಕ್ರಿಯೆಯನ್ನು ಸಂಕ್ಷಿಪ್ತವಾಗಿ ವ್ಯಾಖ್ಯಾನಿಸುವುದಾದರೆ– ಅರೆವಾಹಕದ ವಲಯ ಅಂತರಕ್ಕಿಂತ ದ್ವಿಗುಣ ಅಥವ ಅದಕ್ಕಿಂತ ಹೆಚ್ಚು ಶಕ್ತಿ ಹೊಂದಿರುವ ಫೋಟಾನ್ ಕಣವು ಪರಮಾಣುವನ್ನು ಅಪ್ಪಳಿಸಿದಾಗ ಕೇವಲ ಒಂದು ಇಲೆಕ್ಟ್ರಾನನ್ನು ಉದ್ರೇಕಿಸುವ ಬದಲು ಎರಡು ಅಥವ ಎರಡಕ್ಕಿಂತ ಹೆಚ್ಚು ಇಲೆಕ್ಟ್ರಾನ್‌ಗಳನ್ನು ಉದ್ರೇಕಗೊಳ್ಳುವಂತೆ ಮಾಡುತ್ತದೆ[12]. ಈ ರೀತಿಯಾಗಿ ಫೋಟಾನ್‌ಗಳಲ್ಲಿ ಲಭ್ಯವಿರುವಂತಹ ಸಂಪೂರ್ಣ ಶಕ್ತಿಯನ್ನು ಉಪಯೋಗಿಸಿಕೊಂಡು ಹೆಚ್ಚಿನ ವಿದ್ಯುತ್ ಉತ್ಪಾದಿಸಲು ಅನುಕೂಲವಾಗುತ್ತದೆ.

4. ಕ್ವಾಂಟಮ್ ಡಾಟ್ ಸೌರಕೋಶ ವಿಧಗಳು

ಕ್ವಾಂಟಮ್ ಡಾಟ್ ಸೌರಕೋಶಗಳನ್ನು ಅವುಗಳ ರಚನೆಯ ಆಧಾರದಲ್ಲಿ ಪ್ರಮುಖ ಮೂರು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ಕ್ವಾಂಟಮ್ ಡಾಟ್ ಬಹುಸಂಗಮ ಸೌರಕೋಶಗಳು (QD Heterojunction solar cells), ಕ್ವಾಂಟಮ್ ಡಾಟ್ ಶಾಟ್ಕಿ ಸೌರಕೋಶಗಳು (QD Schottky Solar cell) ಮತ್ತು ಕ್ವಾಂಟಮ್ ಡಾಟ್ ಸಂವೇದನಾ ಸೌರಕೋಶಗಳು (QD Sensitized Solar cell).

4.1. ಕ್ವಾಂಟಮ್ ಡಾಟ್ ಬಹುಸಂಗಮ ಸೌರಕೋಶಗಳು

ಒಂದು ಬಹುಸಂಗಮ ಸೌರಕೋಶ ಸಾಧನದಲ್ಲಿ, ಮೇಲಿನ ಮತ್ತು ಕೆಳಗಿನ ಪದರಗಳು ವಿಭಿನ್ನ ಪಾತ್ರಗಳನ್ನು ಹೊಂದಿರುತ್ತವೆ. ಮೇಲ್ಪದರ ಅಥವ ಕಿಟಕಿ ಪದರವು (Window layer) ಅತಿಹೆಚ್ಚು ವಲಯ ಅಂತರವಿರುವ ವಸ್ತುವಾಗಿದ್ದು, ಬೆಳಕಿನ ಪಾರದರ್ಶಕತೆಗಾಗಿ ಅದನ್ನು ಆಯ್ಕೆ ಮಾಡಿರಲಾಗುತ್ತದೆ. ಈ ಕಿಟಕಿ ಪದರವು ತನ್ನ ಮೇಲ್ಮೈ ಮೇಲೆ ಬಿದ್ದ ಎಲ್ಲಾ ಬೆಳಕನ್ನು ಕಡಿಮೆ ವಲಯ ಅಂತರವಿರುವ, ಸುಲಭವಾಗಿ ಬೆಳಕನ್ನು ಹೀರಿಕೊಳ್ಳುವ ಕೆಳಗಿನ ಪದರವನ್ನು ತಲುಪಲು ಅನುವು ಮಾಡಿಕೊಡು ತ್ತದೆ. ಹೀಗೆ ಕೆಳ ಪದರದ ಮೇಲೆ ಬಿದ್ದ ಬೆಳಕು, ಈ ಪದರುಗಳ ಸಂಗಮದ ಬಳಿ ಇಲೆಕ್ಟ್ರಾನ್ ಮತ್ತು ಕುಳಿಗಳನ್ನು ಉತ್ಪಾದಿಸುತ್ತದೆ. ಕ್ವಾಂಟಮ್ ಡಾಟ್ ಬಹುಸಂಗಮ ಸೌರಕೋಶಗಳ ಸಂದರ್ಭದಲ್ಲಿ (ಚಿತ್ರ 5) ಮೇಲ್ಪದರವು ಸೂಕ್ಷ್ಮ ಸರಂಧ್ರ ಲೋಹದ ಆಕ್ಸೈಡ್‌ಗಳಿಂದ ಮಾಡಲ್ಪಟ್ಟಿದ್ದು, ಇಲೆಕ್ಟ್ರಾನ್ ಸಂಗ್ರಾಹಕವಾಗಿ ಕಾರ್ಯನಿರ್ವಹಿಸು ತ್ತದೆ. ಹಾಗೆಯೆ ಕೆಳಪದರವಾಗಿರುವ ಕ್ವಾಂಟಮ್ ಡಾಟ್ ಮತ್ತು ಲೋಹದ ಪದರವು (ಸಾಮಾನ್ಯವಾಗಿ ಚಿನ್ನದ ಅಥವ ಬೆಳ್ಳಿಯ) ಬೆಳಕನ್ನು ಹೀರಿಕೊಳ್ಳುವ ಕೆಲಸ ನಿರ್ವಹಿಸುತ್ತದೆ. ಕ್ವಾಂಟಮ್ ಡಾಟ್‌ನ ವಾಹಕ ಹಾಗು ವೇಲೆನ್ಸಿ ವಲಯಗಳ ಸಹಾಯದಿಂದ ಕ್ರಮವಾಗಿ ಲೋಹದ ಆಕ್ಸೈಡ್ ಮತ್ತು ಮೇಲ್ಮೈ ಲೋಹದ ಪದರುಗಳಿಗೆ ಇಲೆಕ್ಟ್ರಾನ್ ನುಗ್ಗಿಸುವಿಕೆ ಹಾಗು ಕುಳಿಗಳ ಸಾಗಿಸುವ ಕಾರ್ಯ ನೆರವೇರುತ್ತದೆ.



ಚಿತ್ರ 5. ಕ್ವಾಂಟಮ್ ಡಾಟ್ ಬಹು ಸಂಗಮ ಸೌರಕೋಶದ ರಚನೆ.

ಈ ರೀತಿಯ ಸೌರಕೋಶಗಳಲ್ಲಿ ಕ್ವಾಂಟಮ್ ಡಾಟ್ ಹರಳುಗಳನ್ನು ಸೂಕ್ಷ್ಮ ಸರಂಧ್ರ ಲೋಹದ ಆಕ್ಸೈಡ್‌ನ ಲೇಪನದ ಮೇಲೆ ಭ್ರಮಣ ಲೇಪನ (Spin coating) ಅಥವ ಅದ್ದು ಲೇಪನ (Dip coating) ವಿಧಾನಗಳ ಸಹಾಯದಿಂದ ಲೇಪಿಸಲಾಗುತ್ತದೆ. ದಟ್ಟ ಮತ್ತು ಹೆಚ್ಚು ವಾಹಕತೆಯ ಕ್ವಾಂಟಮ್ ಡಾಟ್ ಲೇಪನ ಪಡೆಯಲು ಪ್ರತಿ ಪದರವನ್ನು ಅತೀ ಹೆಚ್ಚಿನ ತಿರುಗುವ ದರದಲ್ಲಿ ಅಥವ ಸಾಂದ್ರೀಕೃತ ಕ್ವಾಂಟಮ್ ಡಾಟ್ ದ್ರಾವಣದಲ್ಲಿ ಅದ್ದಿ ನಂತರ ಲಿಂಕರ್ ಅಣುಗಳ ಮೂಲಕ ಪ್ರಚೋದನೆ ಪಡಿಸಲಾಗುತ್ತದೆ. ಹೀಗೆ ಹಲವು ನೂರು ನ್ಯಾನೊ ಮೀಟರ್ ದಪ್ಪ ಕ್ವಾಂಟಮ್ ಡಾಟ್ ಲೇಪನವಿರುವ ಬಹು ಸಂಗಮ ಸೌರಕೋಶ ತಯಾರಾಗುತ್ತದೆ.

4.2. ಕ್ವಾಂಟಮ್ ಡಾಟ್ ಶಾಟ್ಕಿ ಸೌರಕೋಶಗಳು

ಶಾಟ್ಕಿ ಆಧಾರಿತ ಸೌರಕೋಶಗಳು ದೀರ್ಘ ಇತಿಹಾಸವನ್ನು ಹೊಂದಿವೆ. ಸುಮಾರು 1883ರಲ್ಲಿ ಚಾರ್ಲ್ಸ್ ಫ್ರಿಟ್ಸ್, ಸೆಲೆನಿಯಮ್‌ನ ಮೇಲೆ ತೆಳುವಾದ ಚಿನ್ನದ ಪದರವನ್ನು ಲೇಪಿಸಿ ವಿಶ್ವದ ಮೊದಲ ಸೌರಕೋಶವನ್ನು ನಿರ್ಮಿಸಿದನು[2]. ಅರೆವಾಹಕ ಮತ್ತು ಲೋಹದ ನಡುವಿನ ಸಂಗಮವನ್ನು ಶಾಟ್ಕಿ ಸಂಗಮ ಎನ್ನುತ್ತಾರೆ. ಲೋಹ ಮತ್ತು ಅರೆವಾಹಕವನ್ನು ಒಂದುಗೂಡಿಸಿದಾಗ, ಆ ಅರೆವಾಹಕದಲ್ಲಿ ಸವಕಳಿಯ (Depletion) ಪದರವು ನಿರ್ಮಾಣವಾಗುತ್ತದೆ. ಆಗ ಅರೆವಾಹಕ ಮತ್ತು ಮೇಲ್ಮೈ ಲೋಹದ ನಡುವೆ ಅಂತರ್ನಿರ್ಮಿತ ವಿದ್ಯುತ್ (Built-in potential) ಕಾಣಿಸಿಕೊಳ್ಳುತ್ತದೆ, ಇದನ್ನು ಶಾಟ್ಕಿ ತಡೆ ಪರಿಣಾಮ ಎನ್ನುತ್ತಾರೆ. ಒಂದು ಶಾಟ್ಕಿ ತಡೆಗೋಡೆ ಸೌರಕೋಶದ ರಚನೆಯನ್ನು ಚಿತ್ರ 6 ರಲ್ಲಿ ತೋರಿಸಲಾಗಿದೆ.



ಚಿತ್ರ 6. ಕ್ವಾಂಟಮ್ ಡಾಟ್ ಶಾಟ್ಕಿ ಸೌರಕೋಶದ ರಚನೆ.

ಇಲ್ಲಿ ಒತ್ತೊತ್ತಾಗಿ ಹಾಗು ಸಮತಟ್ಟಾದ ಕ್ವಾಂಟಮ್ ಡಾಟ್ ಪದರವನ್ನು ಭ್ರಮಣ ಲೇಪನ ಯಂತ್ರದ ಮೂಲಕ ಸಿದ್ಧಪಡಿಸಲಾಗುತ್ತದೆ. ಇನ್ನುಳಿದಂತೆ ಸೌರಕೋಶಗಳ ವಿವಿಧ ಪದರುಗಳ ಲೇಪನದ ತಂತ್ರಗಳು ಬಹು ಸಂಗಮ ಸೌರಕೋಶದಲ್ಲಿ ವಿವರಿಸಿದ ರೀತಿಯದೇ ಆಗಿರುತ್ತದೆ. ಚಿತ್ರದಲ್ಲಿ ತೋರಿಸಿದಂತೆ, ಒಂದು ಶಾಟ್ಕಿ ತಡೆಗೋಡೆಯು ಮೇಲ್ಮೈ ಸಂಪರ್ಕ ಲೋಹ ಹಾಗು ಕ್ವಾಂಟಮ್ ಡಾಟ್ ಪದರದ ನಡುವೆ ರೂಪುಗೊಳ್ಳುತ್ತದೆ. ದ್ಯುತಿ ಉತ್ಪಾದಿತ (Photogenerated) ಕುಳಿಗಳನ್ನು ಮೇಲ್ಮೈ ಲೋಹದ ಮೇಲಿರುವ ಪಾರದರ್ಶಕ ವಾಹಕ ಆಕ್ಸೈಡ್ (Transparent conducting oxide) ಸಂಪರ್ಕ ಮತ್ತು ಶಾಟ್ಕಿ ಪದರದಲ್ಲಿ ಆಗಿರುವ ಸವಕಳಿಯ ಪ್ರದೇಶದ ಮೂಲಕ ಪಡೆದುಕೊಳ್ಳಲಾಗುತ್ತದೆ.

4.3. ಕ್ವಾಂಟಮ್ ಡಾಟ್ ಸಂವೇದನಾ ಸೌರಕೋಶಗಳು

ಕ್ವಾಂಟಮ್ ಡಾಟ್ ಸಂವೇದನಾ ಸೌರಕೋಶಗಳು ಎರಡು ನ್ಯಾನೊ ಅರೆವಾಹಕ ಪದರ ರಚನೆಯ ನಡುವೆ ನ್ಯಾನೊಮೀಟರ್ ಗಾತ್ರದ ಬಹು ಕ್ವಾಂಟಮ್ ಡಾಟ್ ಹರಳುಗಳಿಂದ ರಚನೆಗೊಂಡಿರುವುದಾಗಿರುತ್ತದೆ. ಈ ವಿನ್ಯಾಸದಲ್ಲಿ ಕ್ವಾಂಟಮ್ ಡಾಟ್‌ನ ಹರಳುಗಳನ್ನು ಲಿಂಕರ್ ಅಣುವಿನ ಸಾಹಾಯದಿಂದ ಅಥವ ಕೆಲವೊಮ್ಮೆ ನೇರವಾಗಿ ವಿಸ್ತಾರ ವಲಯ ಅಂತರವಿರುವ ವಸ್ತುವಿಗೆ (ಉದಾಹರಣೆಗೆ ಸಾಮಾನ್ಯವಾಗಿ ಬಳಸುವ ಅರೆವಾಹಕ ಸಂಯುಕ್ತ ಪದಾರ್ಥಗಳಾದ TiO_2 ಅಥವ ZnO) ಜೋಡಿಸಲಾಗುತ್ತದೆ. ಅಂತಿಮವಾಗಿ ಕುಳಿಗಳ ವಾಹಕವಾಗಿರುವ ದ್ರವ ವಿದ್ಯುದ್ವಿಚ್ಛೇದ್ಯವನ್ನು (Liquid electrolyte) ದ್ಯುತಿ ವಿದ್ಯುದ್ವಾರ (Photo electrode) ಮತ್ತು ಪ್ರತಿಕೂಲ ವಿದ್ಯುದ್ವಾರದ (Counter electrode) ನಡುವೆ ಸೇರಿಸಿ ಕ್ವಾಂಟಮ್ ಡಾಟ್ ಸಂವೇದನಾ ಸೌರಕೋಶವನ್ನು ತಯಾರಿಸಲಾಗುತ್ತದೆ. ಈ ಸಾಧನದ ರಚನೆಯನ್ನು ಚಿತ್ರ 7 ರಲ್ಲಿ ವಿವರಿಸಲಾಗಿದೆ.



ಚಿತ್ರ 7. ಕ್ವಾಂಟಮ್ ಡಾಟ್ ಸಂವೇದನಾ ಸೌರಕೋಶದ ರಚನೆ

5. ಸಮಾರೋಪ ನುಡಿ

ಅರೆವಾಹಕ ಕ್ವಾಂಟಮ್ ಡಾಟ್‌ಗಳು ಸೂರ್ಯನ ಅಗಾಧ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳಬಲ್ಲ ವಸ್ತುವಾಗಿ ಭರವಸೆ ಮೂಡಿಸುತ್ತಿದೆ. ಕ್ವಾಂಟಮ್ ಡಾಟ್‌ನ ಗುಣಲಕ್ಷಣಗಳನ್ನು, ಅವುಗಳ ಗಾತ್ರವನ್ನು ಬದಲಾಯಿಸುವ ಮೂಲಕ ಅವಶ್ಯಕತೆಯ ತಕ್ಕಂತೆ ಹೊಂದಿಸಿಕೊಳ್ಳಬಹುದು. ಜೊತೆಗೆ, ತಮ್ಮ ವಲಯ ಅಂತರವನ್ನು ಬೆಳಕಿನ ವಿವಿಧ ತರಂಗಾಂತರಗಳಿಗೆ ಹೊಂದಿಸಿ ಕೊಳ್ಳಬಹುದಾದುದರಿಂದ, ಸೌರ ವರ್ಣಪಟಲದ ಅತಿಗೆಂಪು ಪ್ರದೇಶದವರೆಗೂ ಶಕ್ತಿಯನ್ನು ಬಳಸಿಕೊಳ್ಳಬಹುದಾಗಿದೆ. ಕ್ವಾಂಟಮ್ ಡಾಟ್‌ಗಳನ್ನು ತಯಾರಿಸುವುದು ಅಗ್ಗ ಮತ್ತು ಸುಲಭವಾಗಿರುವುದರಿಂದ ಕ್ವಾಂಟಮ್ ಡಾಟ್ ಸೌರಕೋಶಗಳನ್ನು ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದಾಗಿದೆ. ಪ್ರಸ್ತುತವಿರುವ ಅರೆವಾಹಕ ಕ್ವಾಂಟಮ್ ಡಾಟ್‌ಗಳಲ್ಲದೇ ಅನೇಕ ಬೇರೆ ಬಗೆಯ ಸಂಯುಕ್ತ ಅರೆವಾಹಕ ಕ್ವಾಂಟಮ್ ಡಾಟ್‌ಗಳನ್ನು ಉಪಯೋಗಿಸಿಕೊಂಡು ಬೆಳಕಿನ ಕೃಷಿಯಲ್ಲಿ ಪ್ರಮುಖ ಸುಧಾರಣೆಗಳನ್ನು ಮಾಡಬಹುದಾಗಿದೆ. ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಕಾರ್ಯಕ್ಷಮತೆಯುಳ್ಳ, ಕಡಿಮೆ ವೆಚ್ಚದ ಹಾಗು ಸುದೀರ್ಘ ಕಾಲದ ಸ್ಥಿರತೆಯುಳ್ಳ ಭವಿಷ್ಯದ ಪರ್ಯಾಯ ಇಂಧನದ ನಿರೀಕ್ಷೆಗೆ ಆಶಾಕಿರಣವಾಗಿದೆ.

ಉಲ್ಲೇಖಗಳು

1. Becquerel AE. Comptes Rendus. 1839, 9, 561–567.
2. Jenny Nelson. The Physics of Solar Cells. London, UK. Imperial College Press. 2003, pp 1-16.
3. Chapin DM, Fuller CS, Pearson GL. J. Appl. Phys. 1954, 25, 676-677.
4. K. Kuwano, S. Tsuda, M. Onishi, H. Nishikawa, S. Nakano, T. Imai, Jpn. J. Appl. Phys., 1980, p. 213.
5. David E. The staus and future of the photovoltaics industry. 2010.
6. D. A. Jenny and R. H. Bube. Semiconducting CdTe. Phys. Rev.1954.96 (5): 1190.
7. Shu, T. Zhou, Z. Wang, H. Liu, G. Xiang, P. Rong, Y. Han, H. Zhao, Y. Efficient quantum dot-sensitized solar cell with tunable energy band CdSexS(1-x) quantum dots. J. Mater. Chem.2012, 22, 10525–10529.
8. C.B. Murray. D.J. Norris. M.G. Bawendi. Synthesis and characterization of nearly monodisperse CdE (E = S, Se, Te) semiconductor nanocrystallites. J. Am. Chem. Soc. 1993. 115, 8706.
9. Quantum Dots. Aldrich Prod. Nos. 753742, 753793. http://www.sigmaaldrich.com/materials-science/nanomaterials/quantum-dots.html
10. W. Shockley and H.J. Queisser Detailed balance limit of efficiency of p–n junction solar cells. J. Appl. Phys.1961. 32, 510.
11. J.J. Choi. W.N. Wenger. R.S. Hoffman. Y. Lim. J. Luria, J. Jasieniak, J.A. Marohn, and T. Hanrath. Solution-processed nanocrystal quantum dot tandem solar cells. Adv. Mater.2011. 23, 3144.
12. Schaller. R, Klimov. V. High Efficiency Carrier Multiplication in PbSe Nanocrystals: Implications for Solar Energy Conversion. Physical Review Letters. 2004.

ವಿಷಯ:-12

ವರಾಹಮಿಹಿರಮ್

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಅಣುರೇಣುಮಾನ ತಂತ್ರಜ್ಞಾನ, ಆಹಾರ ತಂತ್ರಜ್ಞಾನ ಮತ್ತು ಅತೀತ ವಿಜ್ಞಾನಗಳು

THEME:-12

VARAHAMIHIRAM
IT, BT, NT, FT AND FRONTIER SCIENCES

ಕ್ರಮ ಸಂ.	ವಿಷಯ	ಲೇಖಕರು	ಪುಟ ಸಂಖ್ಯೆ
1.	ಅಂರ್ತಜಾಲ ಅಪರಾದ	ಡಾ. ವಿದ್ಯಾಶಂಕರ್ ಎಂ.ಹೆಚ್. ದಿವ್ಯಶಂಕರ್	659 – 661
2	ರಾಗಿ ಮತ್ತು ನವಣೆ ಭರಿತ ಪನ್ನೀರ್ ಪಾಯಸ–ದೇಹಕ್ಕೆಉಲ್ಲಾಸ	ಶಿವಕುಮಾರ್	661 – 664
3	ಪ್ರತಿಜೀವಕ ನಿರೋಧಕ ರೋಗಕಾರಕ ಸೂಕ್ಷ್ಮಾಣು ಜೀವಿಗಳನ್ನು ಹರಡುವ ಪ್ರಬಲ ಮಾಧ್ಯಮವಾಗಿ ಅಂತರ್ಜಾಲ ತಾಣಗಳ ಗಣಕ ಯಂತ್ರಗಳು	ಶೋಭಾ.ಕೆ.ಎಸ್ ಚೇತನ.ಎಸ್.ಇ ಪ್ರಶಾಂತ, ಓಂಕಾರಪ್ಪ.ಆರ್	665 – 667
4	ತ್ಯಾಜ್ಯ ಜಲ ಸಂಸ್ಕರಣೆಯಲ್ಲಿ ನ್ಯಾನೋತಂತ್ರಜ್ಞಾನದ ಪಾತ್ರ	ಶಂಕ್ರಮ್ಮ ಕೆ, ವಿದ್ಯಾ ಶೆಟ್ಟಿ ಕೆ	668 – 671
5	ಆಯುರ್ವೇದದಲ್ಲಿ ನ್ಯಾನೋ ತಂತ್ರಜ್ಞಾನದ ಮಾಹಿತಿ ಲಭ್ಯವಿದೆಯೇ?	ಡಾ॥ ಅಪರ್ಣಾ ನಾಭಿರಾಜ್, ಡಾ॥ ಶಾಂತಲಾ ಪ್ರಿಯದರ್ಶಿನಿ ಟಿ.ಆರ್	671 – 675
6	ಹಸಿರು ಮಾರುಕಟ್ಟೆ ನಿಲುವುಗಳು ಮತ್ತು ಸಿದ್ಧಾಂತಗಳ ಪ್ರಸಕ್ತ ಸ್ಥಿತಿಗತಿಗಳು	ಎಂ.ಸಿ.ಗೀತಾ ಡಾ॥ಎಂ.ಹೆಚ್.ವಿದ್ಯಾಶಂಕರ್	675 – 681
7	ಶಿವಮೊಗ್ಗ ನಗರದ ಅಲರ್ಜಿಕ ಪರಾಗರೇಣುಗಳ ಅಧ್ಯಯನ	ಸುಬ್ಬರಾಜು.ಎ, ಶೋಭಾ ಕೆ.ಎಸ್ ಆರ್.ಓಂಕಾರಪ್ಪ	681 – 683
8	ಜಲೀಯ ದ್ವಿ–ಹಂತದ ವಿಭಜನೆ ವಿಧಾನದಿಂದ ಕಿಣ್ವಗಳ ಸಂಸ್ಕರಣೆ ಹಾಗೂ ಶುದ್ಧೀಕರಣ	ಎಂ. ಸಿ. ಮಧುಸೂಧನ್ ಹೆಚ್. ಎಸ್. ಪ್ರಕಾಶ್ ಕೆ. ಎಸ್. ಎಂ. ಎಸ್. ರಾಘವರಾವ್	683 - 687
9	ಎಮ್ಮೆ ಹಾಲಿನಿಂದ ಉತ್ಪಾದಿಸಿದ ಬಯೋ–ಆಕ್ಟೀವ್ ಪೆಪ್ಟೈಡ್ ಗಳ ಪರಿಶೋಧನೆ	ನಾಗಮಣಿ. ಎ ನರಸಿಂಹಮೂರ್ತಿ	688 – 691
10	ವಿಜಾಪೂರ ಜಿಲ್ಲೆಯ ಹೈನುಗಾರಿಕೆ ಉದ್ಯಮದಲ್ಲಿ ಸಂಪನ್ಮೂಲ ಬಳಕೆಯ ಸಾಮರ್ಥ್ಯ — ಒಂದು ಆರ್ಥಿಕ ಅಧ್ಯಯನ	ಎಸ್. ಎಸ್. ಗುಳೇದಗುಡ್ಡ ಕೀರ್ತಿ. ಎಸ್, ಆರ್. ಎಸ್. ಪೋದ್ದಾರ	691 – 695
11	ಭಾರತೀಯ ಹೈನುಗಾರಿಕೆ ಉದ್ಯಮ ಮತ್ತು ಬೆಳವಣಿಗೆ	ಕೀರ್ತಿ. ಎಸ್ ಗುಳೇದಗುಡ್ಡ. ಎಸ್.ಎಸ್.	695 – 697
12	ಪೌಷ್ಟಿಕ ಭದ್ರತೆಗಾಗಿ ಕಿರುಧಾನ್ಯ	ಕೆ. ಗೀತಾ, ಶೀವಲೀಲಾ ಎಚ್. ಬಿ ಪಳನಿಮುತ್ತು, ಸವಿತಾ ಹುಲಮನಿ	697 – 700
13	ರಕ್ತಹೀನತೆ ಕಬ್ಬಣಾಂಶಯುಕ್ತ ಉತ್ವನ್ನಗಳು	ಕೆ. ಗೀತಾ, ಶೀವಲೀಲಾ ಎಚ್. ಬಿ ಸವಿತಾ ಹುಲಮನಿ ನೇತ್ರಾವತಿ ಹೀರೆಮಠ	700 – 702
14	ಹೈನುಗಾರಿಕೆ ಈಗ ಲಾಭದಾಯಕ	ಶಿವರಾಜ್. ಎಸ್. ಎ, ಅಕ್ಷತಾ. ಎಸ್. ಎ, ಸುಮಾ, ರತ್ನಮ್ಮ. ಖ, ಡಾ. ರಾಜಶೇಖರ್. ಎಸ್. ಎಮ್. ಅಮೀತಾ. ಜಿ.	702 – 703
15	ನ್ಯಾನೋ ಹೈಡ್ರೋಕ್ಸಿಎಪಟೈಟ್‌ನ ತಯಾರಿ ಹಾಗೂ ಸ್ಲಿಪ್ ಎರಕ ಹೊಯ್ಯುವಿಕೆ	ರಾ. ರಾಮಚಂದ್ರ ರಾವ್	704 – 707

ಅಂರ್ತಜಾಲ ಅಪರಾದ

★ ಡಾ. ವಿದ್ಯಾಶಂಕರ್ ಎಂ.ಹೆಚ್. ★★ದಿವ್ಯಶಂಕರ್.
ಸಹಾಯಕ ಪ್ರಾದ್ಯಾಪಕರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. ★★ಗೃಹಿಣಿ, ಭದ್ರಾವತಿ

ಇಂದು ಕರ್ನಾಟಕ ಅಂರ್ತಜಾಲ ಅಪರಾದದಲ್ಲಿ ೩ನೇ ಸ್ಥಾನ ಪಡೆದುಕೊಂಡಿದೆ. ೨೦೧೩ ರಲ್ಲಿ ಶೇ ೫೧.೫ ರಷ್ಟು ಹೆಚ್ಚಳವಾಗಿದ್ದು (೨೦೧೨ ಕ್ಕಿಂತ) ಬೆಂಗಳೂರು ನಗರ ಮೊದಲಸ್ಥಾನದಲ್ಲಿದೆ. ಅಂರ್ತಜಾಲ ಅಪರಾದಕ್ಕೆ ಇನ್ನೊಂದು ಹೆಸರಿದ್ದು ಗಣಕಯಂತ್ರ ಅಪರಾದವೆನ್ನುತ್ತಾರೆ. ಅಂರ್ತಜಾಲದ ಅಪರಾದವೆಂದರೆ ಅಂರ್ತಜಾಲದ ಸಹಾಯದಿಂದ ಗಣಕಯಂತ್ರ ಮತ್ತು ಜಾಲವನ್ನು ಉಪಯೋಗಿಸಿ ಕಾನೂನು ಬಾಹಿರವಾದ ಚಟುವಟಿಕೆಗಳನ್ನು ನಡೆಸುವುದು. ಉದಾ: ಕಳ್ಳತನ, ಬೇರೆಯವರ ಹೆಸರಿನಲ್ಲಿ ಮೋಸಮಾಡುವುದು, ಧಾಖಲೆಗಳನ್ನು ಕದಿಯುವುದು, ತಂತ್ರಜ್ಞಾನಗಳನ್ನು ಹಾಳುಮಾಡುವುದು ಇತ್ಯಾದಿ. ಈ ಪ್ರಬಂದದ ಗುರಿ ಮತ್ತು ಉದ್ದೇಶಗಳು ಈ ಕೆಳಕಂಡಂತೆ ಇವೆ.

- ಅಂರ್ತಜಾಲ ಅಪರಾದದ ವಿಧಗಳು ಮತ್ತು ಅದರಲ್ಲಿ ನಮ್ಮ ಪಾತ್ರದ ಬಗ್ಗೆ ಮಾಹಿತಿ ನೀಡುವುದು
- ಅಂರ್ತಜಾಲ ಅಪರಾದಗಳಿಗೆ ಇರುವ ಕಾನೂನುಗಳು ಮತ್ತು ಶಿಕ್ಷೆ
- ಅಂರ್ತಜಾಲ ಅಪರಾದಗಳನ್ನು ತಡೆಯುವಲ್ಲಿ ನಮ್ಮ ಕರ್ತವ್ಯಗಳು.

ಮುಖ್ಯಪದಗಳು: ಅಂರ್ತಜಾಲ ಅಪರಾದ, ಅಂರ್ತಜಾಲ ಭದ್ರತೆ., ಮಾಹಿತಿತಂತ್ರಜ್ಞಾನ, ಜಾಲ.

ಇಂದು ನಾವು ಗಣಕಯಂತ್ರದ ಮೇಲೆ ಎಷ್ಟುಅವಲಂಬಿತರಾಗಿದ್ದೇವೆ ಎಂದರೆ ಅದು ಜೀವನದ ಒಂದು ಅವಿಬಾಜ್ಯ ಅಂಗವೇನೋ ಎಂಬಂತೆ ಆಗಿದೆ, ಇದಕ್ಕೆ ಕಾರಣ ಆಂರ್ತಜಾಲ. ಇಂದು ನಾವು ಕುಳಿತಲ್ಲಿಂದಲೆ ಎಲ್ಲಾಕಡೆಯ ಎಲ್ಲಾತರಹದ ಮಾಹಿತಿಗಳನ್ನು ಪಡೆಯಬಹುದು. ಪ್ರತಿದಿನದ ಆವಿಷ್ಕಾರಗಳಿಂದ ಇಂದು ನಾವು ಕುಳಿತಲ್ಲಿಂದ ಅನೇಕರೀತಿಯ ಕೆಲಸಗಳನ್ನು ಮಾಡಿಸಬಹುದು/ಮಾಡಬಹುದು. ಉದಾ: ವಿಮಾನ, ರೈಲು, ಬಸ್ಸುಗಳ ಆಸನಕಾಯ್ದಿಸಿರುವಿಕೆ, ನಮ್ಮ ಬಿಲ್ಲುಗಳ ಪಾವತಿ, ಬ್ಯಾಂಕಿನವ್ಯವಹಾರಗಳು, ವಿವಾಹಕ್ಕಾಗಿ ವಧು-ವರಾನ್ವೇಷಣೆ, ಉದ್ಯೋಗ ಇತ್ಯಾದಿ.

ಇಷ್ಟು ಉಪಯೋಗಗಳಿದ್ದು ಅಂರ್ತಜಾಲವೆಂದರೆ ನಮಗೆ ಹೆದರಿಕೆ ಆಗುವಂತೆ ಮಾಡಿರುವುದು ಸೈಬರ್ ಕ್ರೈಮ್ ಅಂದರೆ ಅಂರ್ತಜಾಲದ ಮೂಲಕ ಅಪರಾದ ಮಾಡುವುದು. ನಾವುಹೇಗೆ ಕುಳಿತಲ್ಲಿಂದಲೇ ಅನೇಕ ಉತ್ತಮ ಕೆಲಸಗಳನ್ನು ಮಾಡುತ್ತೇವೆಯೋ ಅದೇರೀತಿ ಅನೇಕರು ತಾಪ್ಪು ಕುಳಿತಲ್ಲಿಂದಲೇ ಅಪರಾಧಗಳನ್ನು ಎಸಗುತ್ತಿದ್ದಾರೆ. ಅಂರ್ತಜಾಲದ ಮೂಲಕ ಅಪರಾದ ಮಾಡುವವರು ಮೊದಲು ಬೇರೆಯವವರ ಜಾಲಗಳ ಮಾಹಿತಿಯನ್ನು ತಾವು ಕದಿಯುತ್ತಾರೆ ನಂತರ ಅದರ ಸಹಾಯದಿಂದ ಅನೇಕಅಪರಾದಗಳನ್ನು ಎಸಗುತ್ತಾರೆ.

ಉದಾ: ಒಂದು ಕಂಪನಿಯ ಮಾಹಿತಿಜಾಲಕ್ಕೆ ನುಗ್ಗಿ ಅಲ್ಲಿಂದ ಕಂಪನಿಯ ತಂತ್ರಜ್ಞಾನಗಳನ್ನು ಕದಿಯುತ್ತಾರೆ ಅಲ್ಲದೇ ಕಂಪನಿಯ ಹಣಕಾಸಿನ ವ್ಯವಹಾರಗಳನ್ನು ತಮ್ಮ ಖಾತೆಗೆ ಬರುವಂತೆ ಮಾಡಿ ಮೋಸಮಾಡುತ್ತಾರೆ, ಇತ್ತಿಚೆಗೆ ನಮ್ಮ ಸೈನ್ಯಾಧಿಕರಿಗಳ ಸಂಬಳದ ಹಣವನ್ನು ಮೋಸಗಾರನೊಬ್ಬನು ತನ್ನ ಖಾತೆಗೆ ಜಮಾವಣೆ ಆಗುವಂತೆ ಮಾಡಿರುವುದು ಒಂದು ನಿದರ್ಶನ, ಈ ರೀತಿ ಅನೇಕ ಕಂಪೆನಿಗಳ ಉದ್ಯೋಗಿಗಳ ಸಂಬಳದ ಹಣವನ್ನು ತಮ್ಮ ಖಾತೆಗೆ ಬರುವಂತೆ ಮಾಡಿದ ಅನೇಕ ಉದಾಹರಣೆಗಳು ನಮ್ಮ ಮುಂದಿವೆ.



ವಿವಿದರೀತಿಯ ಅಪರಾದಗಳು:

೧. ಹ್ಯಾಕಿಂಗ್: ಕಾನೂನು ಭಾಹಿರವಾಗಿ ನನಗೆ ಸಂಬದಿಸಿಲ್ಲದ ವಿಷಯಗಳಬಗ್ಗೆ (ಬೇರೆಯವರ ಅತಿಮುಖ್ಯ ವಿಷಯಗಳು) ಆಸಕ್ತಿತೋರುವುದು ಮತ್ತು ಆ ಮಾಹಿತಿಗಳನ್ನು ಹಾಳು ಮಾಡುವುದು. ಅಥವಾ ಅದನ್ನು ಬೇಕಾದವರಿಗೆ ಸಿಗದಂತೆ ಮಾಡುವುದು.

೨. ವೈರಸ್ ಗಳನ್ನು ಹರಡುವುದು: ಅಂರ್ತಜಾಲದ ಮುಖಾಂತರ ಇತರರ ಯಂತ್ರಗಳಿಗೆ ವೈರಸ್ ಗಳನ್ನು ಹರಡುವುದು ಇದರ ಮೂಲಕ ಅವರ ಯಂತ್ರಗಳನ್ನು ಮತ್ತು ಮಾಹಿತಿಯನ್ನು ಹಾಳುಮಾಡುವುದು.

೩. ಸೈಬರ್ ಸ್ಟಾಕಿಂಗ್: ಬೇರೆಯವರನ್ನು ಅಂರ್ತಜಾಲದ ಮೂಲಕ ಅನುಸರಿಸಿ ಅವರ ವಯಕ್ತಿಕ ವಿಷಯಗಳನ್ನು ತಾನು ತಿಳಿದುಕೊಂಡು ಅವರಿಗೆ ತೊಂದರೆ ಉಂಟುಮಾಡುವುದು.

೪. ಪಿಶಿಂಗ್: ಬೇರೆಯವರ ಇಮೈಲ್ ಗಳಿಗೆ ನಿಮಗೆ ಲಕ್ಕಿ ಡ್ರಾದ ಮೂಲಕ ಹೆಚ್ಚು ಹಣಬಂದಿದೆ ಎಂದು ಮತ್ತು ಅದನ್ನು ಬಿಡಿಸಿಕೊಳ್ಳಲು ನೀವುಹಣಕಟ್ಟಬೇಕೆಂದು ಸಿಂದುವಲ್ಲದ ಇಮೈಲ್ ಮೂಲಕ ತಿಳಿಸಿ ಬಳಕೆದಾರರು ಕಟ್ಟಿದ ಆ ಹಣದೊಂದಿಗೆ ಪರಾರಿ ಆಗುವುದು.

೫. ವಿಶಿಂಗ್: ಬೇರೆಯವರಂತೆ ಸೋಗುಹಾಕಿ ಅವರ ಹೆಸರಿನಲ್ಲಿ ಸಂಬಂದ ಬೆಳೆಸಿ ಅದರ ಮೂಲಕ ಮೋಸಮಾಡುವುದು.

ಇನ್ನೂ ಅನೇಕ ವಿದದಲ್ಲಿ ಅಂರ್ತಜಾಲದ ಮೂಲಕ ಅಪರಾದಮಾಡುತ್ತಾರೆ ಅನೇಕ ಮಹಿಳೆಯರು ಅಂರ್ತಜಾಲದ ಮಾಯೆಯಲ್ಲಿ ನಿಜವನ್ನು ಪರಾಮರ್ಶಿಸದೇ ಇರುವುದೆಲ್ಲಾಸತ್ಯ ಎಂದು ನಂಬಿ ಕೊನೆಯಲ್ಲಿ

ವೇಶ್ಯೆಯರಾಗಿರುವುದು ಮತ್ತು ಅನೇಕ ಪುರುಷರು ಮಹಿಳೆಯ ಹೆಸರಿನಿಂದ ಬರುವ ವಿದ್ಯುನ್ಮಾನ ಪತ್ರಗಳನ್ನು ನಂಬಿ ಬ್ಯಾಂಕಿನ ಖಾತೆಗೆ ಸಂಬಂದಿಸಿದ ಮಾಹಿತಿ ನೀಡಿ ಮೋಸಹೋಗಿರುವುದು ಹಾಗೆಯೆ ಅನೇಕ ಕಂಪನಿಗಳಿಂದ ಬರುವ ನೀವು ೧ ಕೋಟಿ ಅಥವಾ ಅದಕ್ಕಿಂತ ಹೆಚ್ಚು ಹಣ ಗೆದ್ದಿರುವಿರಿ ಎಂಬ ಮಾಹಿತಿಯನ್ನು ನಿಜವೆಂದು ತಿಳಿದು ಅದರ ಬಗ್ಗೆ ಹಗಲು ಕನಸುಕಾಣುತ್ತಾ ಇರುವ ಹಣವನ್ನು ಕಳೆದು ಕೊಳ್ಳುವುದು, ಸ್ನೇಹಿತ–ಸ್ನೇಹಿತೆಯರಂತೆ ವರ್ತಿಸುವ ಜನರಿಂದ ಮೋಸಹೋಗುವುದು ಇತ್ಯಾದಿ.

ಇದನ್ನು ತಡೆಗಟ್ಟಲು ಸರ್ಕಾರಗಳು ಪ್ರಯತ್ನ ಪಡುತ್ತಿದ್ದರೂ ಅಂರ್ತಜಾಲ ಅಪರಾದಗಳು ಕಡಿಮೆ ಯಾಗುತ್ತಿಲ್ಲ ಅದಕ್ಕೆ ಕಾರಣ ದಿನ ದಿನವು ಅಪರಾದಿಗಳು ಹುಡುಕುವ ಹೊಸವಿದಾನಗಳು ಮತ್ತು ಕಾನೂನಿನ ಪರಿದಿಯಲ್ಲಿ ಅತಿ ಕಡಿಮೆ ಶಿಕ್ಷೆ ಇರುವುದು, ಎಲ್ಲಕ್ಕಿಂತ ಮಿಗಿಲಾಗಿ ಅಂರ್ತಜಾಲ ಅಪರಾದ ತಡೆಗಟ್ಟಲು ಸೂಕ್ತ ಸಿಬ್ಬಂದಿ ಕೊರತೆ. ಇವುಗಳನ್ನು ಸರಿಮಾಡಿದಲ್ಲಿ ನಾವು ಸ್ವಲ್ಪವಾದರೂ ತಡೆಯಲು ಪ್ರಯತ್ನಿಸ ಬಹುದು.

ಈಗಿರುವ ಕಾನೂನುಗಳು

ಮಾಹಿತಿ ತಂತ್ರಜ್ಞಾನದ ಆಕ್ಟ್ ೨೦೦೮ ರ ಪ್ರಕಾರ ಇಂಡಿಯನ್ ಪೀನಲ್ ಕೋಡ್ ಸೆಕ್ಷನ್ ೪೩ ಎ ೪೩ ಬಿ ಮತ್ತು ೬೬ ರ ಅಡಿಯಲ್ಲಿ ೩೭೯,೪೦೬,೪೨೦ ಮತ್ತು ೧೮೬೦ ರ ಅಡಿಯಲ್ಲಿ ಹ್ಯಾಕಿಂಗ್‌ಮತ್ತು ಮಾಹಿತಿ ಕಳ್ಳತನ ಮಾಡುವವರಿಗೆ ರೂ ೫ ಲಕ್ಷ ದವರೆಗೆ ದಂಡ ಹಾಗೂ ೩ ವರ್ಷದವರೆಗೆ ಸೆರೆವಾಸ ವಿದಿಸಬಹುದು. ೪೩ ಸಿ, ೪೩ ಇ ಮತ್ತು ೬೬, ೬೬ ಸಿ ಸೆಕ್ಷನ್ ೪೧೨,೪೧೯ ಮತ್ತು ೪೬೫ ಇಂಡಿಯನ್ ಪೀನಲ್ ಕೋಡ್ ೧೮೬೦ ರ ಅಡಿಯಲ್ಲಿ ಐಡೆಂಟಿಟಿ ದುರುಪಯೋಗ ಮತ್ತು ಇ–ಮೈಲ್ ಕದಿಯುವುದು, ವೈರಸ್ ಹರಡುವುದು ಇಂತಹ ಅಪರಾದ ಗಳಿಗೆ ಶಿಕ್ಷೆಗಳಿವೆ.

ಭಾರತದಲ್ಲಿ ಅತಿಹೆಚ್ಚು ನಡೆಯುತ್ತಿರುವ ಅಂರ್ತಜಾಲದ ಅಪರಾದ ಗಳೆಂದರೆ ವೈರಸ್ ಗಳನ್ನು ಹರಡುವುದು, ಮಾಲ್‌ವೇರ್, ಸ್ಪಾಮ್ ಇತ್ಯಾದಿ.(ಮಾಲ್ ವೇರ್– ಗಣಕಯಂತ್ರದ ಯಜಮಾನನ ಅನುಮತಿ ಇಲ್ಲದೇ ಕಡತಗಳನ್ನು ನಾಶಮಾಡುವುದು, ಮಾಹಿತಿಯನ್ನು ಕದಿಯುವುದು, ಗಣಕಯಂತ್ರವನ್ನು ಹಾಳು ಮಾಡುವುದು)



ನಿಜವಾದ ಮನುಷ್ಯನ ಗುರಿಯನ್ನು ಬಚ್ಚಿಟ್ಟು ಸುಳ್ಳು ಸೋಗುಹಾಕಿ ನಂಬಿಸುವುದು(ಸ್ಪಾಕಿಂಗ್), ಅಶ್ಲೀಲ ಚಿತ್ರಗಳನ್ನು, ಮಾಹಿತಿಯನ್ನು ಒಳಗೊಂಡ ರಚನೆಗಳು (ಪಾರ್ನೋಗ್ರಫಿ), ಪಿಶಿಂಗ್ (ಗುರುತಿನ ಸಂಖ್ಯೆ, ಕ್ರೆಡಿಟ್ ಕಾರ್ಡ ನ ಮಾಹಿತಿ, ಗುಪ್ತ ಮಾಹಿತಿ ಇತ್ಯಾದಿಗಳನ್ನು ಕದಿಯುವುದು). ಭಾರತದಲ್ಲಿ ಇಂದು ಅಂರ್ತಜಾಲ ಬಳಕೆದಾರರ ಸಂಖ್ಯೆ ಮತ್ತು ಅಂರ್ತಜಾಲದ ಮೂಲಕ ವಹಿವಾಟು ನಡೆಸುವವ ಸಂಖ್ಯೆ ಹೆಚ್ಚುತ್ತಿರುವುದು ಅಪರಾದಿಗಳಿಗೆ ಉಪಯುಕ್ತವಾಗಿದೆ.(ಹಿಂದು ಪತ್ರಿಕೆ –ನವಂಬರ್ ೨೬, ೨೦೦೬)

ನಮ್ಮ ದೇಶದಲ್ಲಿ ಅಂರ್ತಜಾಲ ಅಪರಾದ ತಡೆಯಲು ಸರ್ಕಾರಗಳು ಅನೇಕ ಕ್ರಮಗಳನ್ನು ಕೈಗೂಂಡರೂ ಜನತೆಗೆ ಮಹಿತಿಕೊರತೆ ಅವರನ್ನು ಮೋಸಹೋಗುವಂತೆ ಮಾಡಿ ಸಮಸ್ಯೆ ಸೃಷ್ಟಿಸುತ್ತಿದೆ, ಯುವಜನತೆ ಅಶ್ಲೀಲ ಚಿತ್ರಗಳ ತಾಣಗಳ ಮೂಲಕ ಕಾಮತೃಷೆ ತಣಿಸಿಕೊಳ್ಳಲು ಪ್ರಯತ್ನಿಸಿ ಮೋಸಹೋಗುವುದು ಅತಿ ಸಾಮನ್ಯವಾಗಿದೆ. ವಿಶೇಷವೆಂದರೆ ಸರಿಸುಮಾರು ಶೇ ೬೦ ರಷ್ಟು ಪ್ರಕರಣಗಳು ಧಾಖಲಾಗುವುದೇಇಲ್ಲ. ಭಾರತದಲ್ಲಿ ಇಂದು ನಾವು ಅನೇಕ ಮುಖ್ಯ ನಗರಗಳಲ್ಲಿ ಅಂರ್ತಜಾಲ ಅಪರಾದ ತಡೆಗಳಿಗೆ ವಿಶೇಷ ಆರಕ್ಷಕ ತಂಡವನ್ನು ರಚಿಸಿದೆ. ಆದರೆ ಅತಿಕಡಿಮೆ ಪ್ರಕರಣಗಳು ಧಾಖಲಾಗುತ್ತಿದೆ, ಅಲ್ಲದೇ ಅಪರಾದಿಗಳು ತಾವು ಅಪರಾದ ಮಾಡಲು ಉಪಯೋಗಿಸುವ ತಂತ್ರಜ್ಞಾನಗಳು ವಿನೂತನ ವಾಗಿರುವುದು ಮತ್ತು ನಮ್ಮಲ್ಲಿ ತಂತ್ರಜ್ಞಾನದಲ್ಲಿ ನಿಪುಣರಾದವರು ಅಪರಾದಪತ್ತೆ ತಂಡಗಳಲ್ಲಿ ಸೇರದಿರುವುದು.

ನಮ್ಮ ಸಲಹೆಗಳು

ನಾವು ಇಂದು ಈ ರೀತಿಯ ಅಪರಾದಗಳನ್ನುತಡೆಗಟ್ಟಲು ಶೈಕ್ಷಣಿಕವ್ಯವಸ್ತೆಯನ್ನು ಮಾರ್ಪಾಡು ಮಾಡಬೇಕಾಗಿದೆ. ಮನೆಯಲ್ಲಿ ಪಾಲಕರು ಪೋಷಕರು ಜವಾಬ್ದಾರಿಯನ್ನು ಹೆಚ್ಚಿಸಕೊಳ್ಳಬೇಕಾಗಿದೆ. ನಮ್ಮ ಸಂಸ್ಕೃತಿಯ ಚಿತ್ರಣವನ್ನು ಅಚ್ಚುಕಟ್ಟಾಗಿ ರೂಪಿಸಬೇಕಾಗಿದೆ.

- ಶೈಕ್ಷಣಿಕವ್ಯವಸ್ಥೆ ಯಲ್ಲಿ ವಿನೂತನವಾದ ವಿಷಯಗಳಬಗ್ಗೆ ಮತ್ತು ಅದರ ಸಾದಕಭಾದಕಗಳಬಗ್ಗೆ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸುವುದು.
- ಮನೆಯಲ್ಲಿ ಪಾಲಕರು/ಪೋಷಕರು ನಮ್ಮ ಮಗ/ಮಗಳು ಎನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಗಮನಿಸಬೇಕು, ಅವರ ಅರ್ತಜಾಲ,ಮೋಬೈಲ್ ಬಳಸುವಿಕೆಯ ಬಗ್ಗೆ ಹಾಗೆಯೇ ಸ್ನೇಹಿತರ ಬಗ್ಗೆ ಗಮನವಿದ್ದರೆ ಸುಮಾರು ಅಪರಾದಗಳನ್ನು ತಡೆಯಬಹುದು. ಸ್ವಾತಂತ್ರ್ಯ ನೀಡಬೇಕು ಆದರೆ ಸ್ವೇಚ್ಚಾಚಾರಕ್ಕೆ ಅವಕಾಶವಿರಬಾರದು
- ಸೈಬರ್ ಭದ್ರತೆಯ ಬಗ್ಗೆ ಅರಿವು ಮೂಡಿಸುವುದು.
- ಕಾನೂನುಗಳನ್ನು ಮಾರ್ಪಡಿಸಿ ಎಲ್ಲಾರೀತಿಯ ಅಪರಾದಗಳಿಗೆ ಅಪರಾದದ ಪ್ರಮಾಣಕ್ಕೆ ತಕ್ಕಂತೆ ಉಗ್ರಶಿಕ್ಷೆಯನ್ನು ತ್ವರಿತವಾಗಿ ನೀಡುವುದರ ಮೂಲಕ ಸಮಾಜದಲ್ಲಿ ಅಪರಾದಿಗಳಿಗೆ ಎಚ್ಚರಿಕೆಯನ್ನು ನೀಡಬೇಕು.
- ಸಾಮಾನ್ಯ ಜನತೆಗೆ ಅಂರ್ತಜಾಲದಬಗ್ಗೆ ಮತ್ತು ಅದರಿಂದ ನಡೆಸಬಹುದಾದ ಮೋಸಗಳಬಗ್ಗೆ ಜಾಗೃತಿ ಮೂಡಿಸಬೇಕು.
- ಪ್ರಸ್ತುತ ಇರುವ ಅಂರ್ತಜಾಲ (ಸೈಬರ್)ಆರಕ್ಷಕರಿಗೆ ಉತ್ತಮ ತರಬೇತಿ ನೀಡುವ ಮೂಲಕ ವ್ಯವಸ್ಥೆಯನ್ನು ಬಲಪಡಿಸುವುದು.
- ಪ್ರತಿ ಜಿಲ್ಲೆಗಳಲ್ಲಿ ಸೈಬರ್ ಕ್ರೈಂ ಗಳಿಗೆ ಪ್ರತ್ಯೇಕ ಆರಕ್ಷಕ ವ್ಯವಸ್ತೆ ಸ್ಥಾಪಿಸುವುದು.

ಸಮಾರೋಪ: ಇಂದು ಅಂತರ್ಜಾಲಅಪರಾದ ಒಂದು ದೊಡ್ಡಸಂಖ್ಯೆಯಲ್ಲಿ ಬೆಳೆಯುತ್ತಿರುವುದು ದುರದೃಷ್ಟಕರ ಸಂಗತಿ ಇದನ್ನು ನಾವು ಸೂಕ್ತಕ್ರಮಗಳನ್ನು ಕೈಗೊಂಡು ನಿಯಂತ್ರಿಸದಿದ್ದರೆ ಮುಂದೆ ನಾವುಗಳು ನಾವುಗಳೇ ಆವಿಷ್ಕಾರಮಾಡಿದ ವಿಷಯಗಳ ವಿರುದ್ದ ಹೋರಾಟ ಮಾಡಬೇಕಾದ ಪ್ರಸಂಗಬರಬಹುದು. ಆದ್ದರಿಂದ ನಾವೆಲ್ಲರೂ ಸೇರಿ ನಮ್ಮ ಕರ್ತವ್ಯವನ್ನು ಅಚ್ಚುಕಟ್ಟಾಗಿ ಮಾಡಿ ಅಪರಾದಗಳನ್ನು ತಡೆಯಬೇಕಾಗಿದೆ ಮತ್ತು ಇದು ಅನಿವಾರ್ಯವೂ ಆಗಿದೆ.

ರಾಗಿ ಮತ್ತು ನವಣೆ ಭರಿತ ಪನ್ನೀರ್ ಪಾಯಸ–ದೇಹಕ್ಕೆಉಲ್ಲಾಸ

ಶಿವಕುಮಾರ್

ಹೈನುವಿಜ್ಞಾನ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು-೫೬೦ ೦೨೪

ಈ ಅಧ್ಯಯನದಲ್ಲಿ ತೃಣ ಧಾನ್ಯಗಳಾದಂತಹ ನವಣೆ ಮತ್ತುರಾಗಿ ಧಾನ್ಯಗಳ ಹಿಟ್ಟನ್ನು ಉಪಯೋಗಿಸಿ ಪನ್ನೀರ್ ಪಾಯಸ ತಯಾರಿಸುವ ಪ್ರಯತ್ನ ಮಾಡಲಾಗಿದೆ. ನವಣೆ ಹಿಟ್ಟನ್ನು ೨, ೩,೪% ಪ್ರಮಾಣದಲ್ಲಿ ಮಿಶ್ರಣಗೊಳಿಸಲಾಗಿದ್ದು, ೨% ಮಟ್ಟದ ನವಣೆ ಹಿಟ್ಟು ಮಿಶ್ರಿತ ಪನ್ನೀರ್ ಪಾಯಸವು ಉತ್ತಮವಾದ ಸಂವೇದನಾ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಆದೇ ರೀತಿ ರಾಗಿ ಹಿಟ್ಟನ್ನು ೦.೫, ೧, ೧.೫% ಪ್ರಮಾಣದಲ್ಲಿ ಮಿಶ್ರಣಗೊಳಿಸಲಾಗಿದ್ದು, ೧.೦% ಮಟ್ಟದ ರಾಗಿ ಹಿಟ್ಟಿನ ಮಿಶ್ರಿತ ಪನ್ನೀರ್ ಪಾಯಸಕ್ಕೆ ಅತ್ಯುತ್ತಮವಾದ ಸಂವೇದನಾ ಅಂಕಗಳನ್ನು ನೀಡಲಾಗಿದೆ. ತೃಣಧಾನ್ಯ ಸಂಘಟಿತ ಪನ್ನೀರ್ ಪಾಯಸವು ಅತ್ಯುತ್ತಮವಾದ ರಚನಾ ವಿನ್ಯಾಸ, ಸ್ಥಿರತೆ ಮತ್ತು ಪರಿಮಳಯುಕ್ತ ಉತ್ಪನ್ನವಾಗಿ ಕಂಡು ಬಂದಿದೆ. ತೃಣಧಾನ್ಯ ಮಿಶ್ರಿತ ಉತ್ಪನ್ನವು ಕ್ರಮವಾಗಿ ೦.೧೭೫ ಮತ್ತು ೦.೦೪೬% ಪ್ರಮಾಣದ ಕಚ್ಚಾ ನಾರಿನಾಂಶವು ಹೊಂದಿರುತ್ತದೆ ಹಾಗೂ ಈ ಉತ್ಪನ್ನವು ದೇಹದ ಉತ್ತಮ ಪೋಷಣೆಗೆ ಬೇಕಾಗುವ ಪುಷ್ಟಿಕರ ಅಂಶಗಳನ್ನು ಹೊಂದಿರುತ್ತದೆ.

ಪೀಠಿಕೆ: ಇಂದು ನಮ್ಮದೇಶದ ಹಾಲಿನ ಉತ್ಪಾದನೆಯು೧೩೨.೨೭ ಮಿಲಿಯನ್ ಟನ್‌ಗಳಷ್ಟಾಗಿದ್ದು ಪ್ರಪಂಚದಲ್ಲೇ ಮೊದಲನೇ ಸ್ಥಾನ ಪಡೆದಿರುತ್ತದೆ.ಈ ಉತ್ಪಾದನೆಯುತಲಾ ಲಭ್ಯತೆಐ.ಸಿ.ಎಂ.ಆರ್ ಪ್ರಕಾರ ೨೯೧ ಗ್ರಾಂ ಗಳಷ್ಟಾಗಿದ್ದು, ಸುಸ್ಥಿಯಿಲ್ಲಿರುತ್ತದೆ.ಉತ್ಪಾದನೆಯ ಪ್ರಮುಖ ಭಾಗವನ್ನು ಸಾಂಪ್ರದಾಯಿಕ ಉತ್ಪನ್ನಗಳ ತಯಾರಿಕೆಗೆ ಬಳಕೆ ಮಾಡಲಾಗುತ್ತಿದ್ದು, ಆದರಲ್ಲಿ ಪ್ರಮುಖವಾಗಿ ಖೋವಾ ಆಧಾರಿತ ಸಿಹಿ ತಿಂಡಿಗಳು, ಪನ್ನೀರ್‌ಆಧಾರಿತ ತಿಂಡಿಗಳು ಹಾಗೂ ಹುದುಗುಬರಿಸಿದ ಉತ್ಪನ್ನಗಳ ತಯಾರಿಕೆಗೆ ಬಳಸಲಾಗುತ್ತಿದೆ.

FSSAI, 2006ರ ಪ್ರಕಾರ ಪನ್ನೀರ್‌ಒಂದು, ಲಾಕ್ಟಿಕ್‌ಆಮ್ಲ, ಸಿಟ್ರಿಕ್ ಆಮ್ಲಅಥವಾ ಹುಳಿಯಾದ ಹಾಲಿನಿಂದ ಪಡಲೀಕರಿಸಿದ/ಗರಣೀಕರಿಸಿದ ಎಮ್ಮೆ ಹಾಲು ಅಥವಾ ಹಸುವಿನ ಹಾಲು ಅಥವಾಆವೆರಡರ ಮಿಶ್ರಣದಿಂದಉತ್ಪಾದಿಸಲಾದ ಪದಾರ್ಥವಾಗಿರುತ್ತದೆ.ಈ ಉತ್ಪನ್ನವು ಶೇ.೭೦ ಕ್ಕಿಂತ ಹೆಚ್ಚು ನೀರಿನಾಂಶವನ್ನು ಹೊಂದಿರಬಾರದು ಹಾಗೂ ಶುಷ್ಕಗೊಳಿಸಿದ ಪದಾರ್ಥದಆಧಾರದಲ್ಲಿ (on dry matter basis) ಶೇ.೫೦ ಕ್ಕಿಂತಲೂಕಡಿಮೆಯಿರದ ಹಾಲಿನ ಕೊಬ್ಬನ್ನು ಹೊಂದಿರಬೇಕು.

ಭಾರತದ ಸಾಂಪ್ರದಾಯಿಕ ಉತ್ಪನ್ನಗಳ ತಯಾರಿಕೆಯಲ್ಲಿ ವಿಧವಿಧವಾದ ಪೋಷಕಾಂಶಗಳ ಮಿಶ್ರಣವನ್ನು ಸೇರಿಸಿ, ವಿವಿಧರೀತಿಯ ಹಾಲು ಆಧಾರಿತ ಭಕ್ಷಗಳನ್ನು ತಯಾರಿಸಲಾಗುತ್ತಿದ್ದು, ಅವುಗಳಲ್ಲಿ ಪಾಯಸವೂ ಒಂದಾಗಿದೆ.ಪಾಯಸವು ಹಾಲು ಆಧಾರಿತ ಸಿಹಿ ಉತ್ಪನ್ನವಾಗಿದ್ದು, ದಕ್ಷಿಣ ಭಾರತದ ಭಾಗದಲ್ಲಿ ಪಾಯಸವೆಂದು ಪ್ರಸಿದ್ಧಿಯಾಗಿದೆ ಹಾಗೂ ಉತ್ತರ ಭಾರತದ ಭಾಗದಲ್ಲಿಖೀರ್‌ಎಂದು ಪ್ರಸಿದ್ಧಿ ಪಡೆದಿದೆ.ಸಾಂಪ್ರದಾಯಿಕವಾಗಿ ಪಾಯಸವನ್ನುಒಂದು ಬಾಣಲೆಗೆ ಹಾಲು, ಸಕ್ಕರೆ ಹಾಗೂ ಅಕ್ಕಿಯನ್ನು ಮಿಶ್ರಣಗೊಳಿಸಿ ಹೊಗೆರಹಿತ ಬೆಂಕಿಯಒಲೆಯ ಮೇಲೆ ಮಿಶ್ರಣವನ್ನು ಭಾಗಶಃ ನಿರ್ಜಲೀಕರಿಸಲುಕಾಯಿಸಲಾಗುತ್ತದೆ (De, 1976).

ಇತ್ತೀಚಿನ ವರ್ಷಗಳಲ್ಲಿ ಧಾನ್ಯಗಳು ಮತ್ತು ಅವುಗಳ ಪಧಾರ್ಥಗಳಾಧಾರಿತ ಉತ್ಪನ್ನಗಳನ್ನು ಕ್ರಿಯಾತ್ಮಕ ಆಹಾರಗಳೆಂದು ಪರಿಗಣಿಸಲಾಗುತ್ತಿದೆ. ಏಕೆಂದರೆ, ಈ ಉತ್ಪನ್ನಗಳು ಮಾನವನದೇಹಕ್ಕೆ ಅವಶ್ಯವಿರುವ ಕಚ್ಚಾ ನಾರಿನಾಂಶ, ಸಸಾರಜನಕ, ಖನಿಜಗಳು, ಜೀವಸತ್ವಗಳು ಹಾಗೂ ಶಕ್ತಿಯನ್ನುಒದಗಿಸುತ್ತವೆ. ನಿಯಮಿತಆರೋಗ್ಯಕ್ಕಾಗಿಗ್ರಾಹಕರುಕ್ರಿಯಾತ್ಮಕ ಹಾಗೂ ಆರೋಗ್ಯಕರ ಆಹಾರಗಳ ಬಗ್ಗೆ ಹೊಂದಿರುವಜಾಗೃತೆಯನ್ನು ಗಮನದಲ್ಲಿರಿಸಿಕೊಂಡು ಧಾನ್ಯಭರಿತ ಹಾಲಿನ ಉತ್ಪನ್ನಗಳನ್ನು ಉತ್ಪಾದಿಸಲು ನವೀನ ತಂತ್ರಜ್ಞಾನಗಳನ್ನು ಆಳವಡಿಸಿಕೊಂಡು ಅವರಅಪಶ್ಯಕತೆ ಪೂರೈಸಲು ಸಾಧ್ಯವಾಗುತ್ತದೆ.

ತೃಣ ಧಾನ್ಯಗಳು ಇತರಎಲ್ಲಾ ಧಾನ್ಯಗಳಿಗಿಂತಲೂ ಸುಲಭವಾಗಿ ಜೀರ್ಣೀಕರಿಸಿಕೊಳ್ಳಬಹುದಾಗಿದೆ ಹಾಗೂ ಅವಶ್ಯ ಪೋಷಕಾಂಶಗಳಾದ ಕ್ಯಾಲ್ಸಿಯಂ, ಕಬ್ಬಿಣಾಂಶ ಹಾಗೂ ಕಚ್ಚಾ ನಾರಿನಾಂಶವನ್ನು ಒಳಗೊಂಡಿವೆ. ಈ ತೃಣ ಧಾನ್ಯಗಳು ಪೌಷ್ಟಿಕಾಂಶಗಳನ್ನು ಒದಗಿಸುವುದರ ಜೊತೆಗೆಉತ್ತಮಆರೋಗ್ಯಕ್ಕೆ ಪ್ರಯೋಜನಕಾರಿಯಾದಹಲವಾರು ಅಂಶಗಳನ್ನು ಹೊಂದಿವೆ(Itagi, 2012).ತೃಣಧಾನ್ಯಆಧಾರಿತ ಉತ್ಪನ್ನಗಳನ್ನು ಪ್ರಿಬಯೋಟಿಕ್ಸ್‌ಎಂದು ಪರಿಗಣಿಸಲಾಗಿದೆ ಹಾಗೂ ಇವುಗಳು ಪ್ರೋಬಯೋಟಿಕ್ಸ್ ಸೂಕ್ಷಜೀವಾಣುಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ(Arpita Das, 2012).

ಸಾಮಗ್ರಿಗಳು ಹಾಗೂ ತಯಾರಿಸುವ ವಿಧಾನಗಳು

ಹಾಲು: ತಾಜಾ ಹಸುವಿನ ಹಾಲನ್ನು ವಿದ್ಯಾರ್ಥಿಗಳ ಪ್ರಾಯೋಗಿಕ ಹೈನು ಸ್ಥಾವರ, ಹೈನು ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇಲ್ಲಿಂದ ಶೇಖರಿಸಿ ಶೇ.೩.೫ ಪ್ರಮಾಣದಕೊಬ್ಬಿನಾಂಶ ಹಾಗೂ ಶೇ.೮.೫ ಪ್ರಮಾಣದಕೊಬ್ಬುರಹಿತ ಘನ ಪದಾರ್ಥಇರುವಂತೆ ಹೊಂದಿಸಲಾಯಿತು.**ಸಕ್ಕರೆ:** ಅತ್ಯುತ್ತಮಗುಣಮಟ್ಟದ ಸಕ್ಕರೆಯನ್ನು ಸ್ಥಳೀಯ ಮಾರುಕಟ್ಟೆಯಿಂದ ಖರೀದಿಸಿ ಬಳಸಲಾಯಿತು.**ತೃಣಧಾನ್ಯ:** ಉತ್ತಮಗುಣಮಟ್ಟದ ನವಣೆ ಮತ್ತುರಾಗಿ ಧಾನ್ಯಗಳನ್ನು ಸ್ಥಳೀಯ ಮಾರುಕಟ್ಟೆಯಿಂದ ಖರೀದಿಸಿ ಉಪಯೋಗಿಸಲಾಯಿತು.**ಪನ್ನೀರ್:** Bhattacharya, (1971)ರವರವಿಧಾನದಪ್ರಕಾರ ಪನ್ನೀರ್‌ನ್ನು ಸ್ವಲ್ಪ ಮಟ್ಟಿಗಿನ ಮಾರ್ಪಾಡುಗಳನ್ನು ಮಾಡಿಕೊಂಡುತಯಾರಿಸಲಾಯಿತು ಹಾಗೂ ಇದನ್ನು ಪನ್ನೀರ್‌ಖೀರ್‌ಉತ್ಪಾದನೆಯಲ್ಲಿ ಬಳಸಲಾಯಿತು. **ಪನ್ನೀರ್‌ಪಾಯಸ/ ಖೀರ:** De, (2011).ರವರವಿಧಾನದಪ್ರಕಾರ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡುತಯಾರಿಸಲಾಯಿತು. ಈ ವಿಧಾನದಲ್ಲಿ

ಹಾಲನ್ನು (೧ ಲೀ) ಕುದಿಸಿ, ಆದರ ಮೂಲ ಗಾತ್ರಕ್ಕಿಂತ ಅರ್ಧದಷ್ಟು ಕಡಿಮೆಯಾಗುವಂತೆ ಮಾಡಿ ಸಕ್ಕರೆಯನ್ನು (೪೦ ಗ್ರಾಂ) ಸೇರಿಸಲಾಯಿತು. ನಂತರ ಹಾಲಿನ ಮಿಶ್ರಣವನ್ನು ಮೂಲಗಾತ್ರಕ್ಕಿಂತ ಮೂರನೇ ಒಂದು ಅಂಶದಷ್ಟು ಬರುವವರೆಗೆ ಸಾಂದ್ರೀಕರಿಸಲಾಯಿತು.ತದನಂತರ ಪನ್ನೀರ್ ತುಣುಕುಗಳನ್ನು (೧೫೦ ಗ್ರಾಂ) ಸೇರಿಸಲಾಯಿತು. ಈ ಮಿಶ್ರಣವನ್ನು ೩-೪ ನಿಮಿಷಗಳವರೆಗೆ ಕಾಯಿಸಲಾಯಿತು.

ಚಿತ್ರ ೧. ತೃಣಧಾನ್ಯ ಹಿಟ್ಟು ಮಿಶ್ರಿತ ಪನೀರ್ ಪಾಯಸ/ ಖೀರ್‌ತಯಾರಿಸುವ ವಿಧಾನ

ತಾಜಾ ಹಸುವಿನ ಹಾಲು (ಕೊಬ್ಬು-ಶೇ.೩.೫, ಕೊಬ್ಬುರಹಿತ ಘನ ಪದಾರ್ಥ-ಶೇ.೮.೫)

↓

ಹಾಲಿನ ತೂಕದ ಶೇ.೨, ಶೇ.೩ ಅಥವಾ ಶೇ.೪ ರ ಪ್ರಮಾಣದ ನವಣೆ ಹಿಟ್ಟು

↓

ಹಾಲಿನ ತೂಕದ ಶೇ.೦.೫, ಶೇ.೧ ಅಥವಾ ಶೇ.೧.೫ ರ ಪ್ರಮಾಣದರಾಗಿ ಹಿಟ್ಟು

↓

ಒಟ್ಟು ಘನ ವಸ್ತುಗಳು ಶೇ.೨೫ ರ ಮಟ್ಟಕ್ಕೆ ಸಾಂದ್ರೀಕರಣ

↓

ಹಾಲಿನ ತೂಕದ ಶೇ.೬ ರ ಪ್ರಮಾಣದಲ್ಲಿ ಸಕ್ಕರೆ

↓

ಹಾಲಿನ ತೂಕದ ಶೇ.೧೦ ರ ಪ್ರಮಾಣದಲ್ಲಿತುರಿದ ಪನ್ನೀರ್

↓

೩ ರಿಂದ ೪ ನಿಮಿಷಗಳವರೆಗೆ ಕುದಿಸುವುದು

↓

ಪ್ಲಾಸ್ಟಿಕ್ ಕಪ್‌ಗಳಲ್ಲಿ ಪ್ಯಾಕಿಂಗ್ ಮಾಡುವುದು

↓

೩೭±೧°ಸೆ. ಮತ್ತು ೭±೧°ಸೆ. ಉಷ್ಣಾಂಶದಲ್ಲಿ ಶೇಖರಣೆ

ವಿಶ್ಲೇಷಣಾತ್ಮಕ ವಿಧಾನ

ಹಾಲಿನ ವಿಶ್ಲೇಶಣೆ: ಕೊಬ್ಬಿನಾಂಶವನ್ನುಗರ್ಬರ್ ವಿಧಾನದಿಂದ ಹಾಗೂ ಕೊಬ್ಬುರಹಿತ ಘನ ಪದಾರ್ಥವನ್ನುಕ್ಷೀರಮಾಪಕದ ಸಹಾಯದಿಂದ ವಿಶ್ಲೇಷಿಸಲಾಯಿತು.

ತೃಣಧಾನ್ಯ ಭರಿತ ಪನ್ನೀರ್ ಪಾಯಸದ ವಿಶ್ಲೇಷಣೆ

ರಾಸಾಯನಿಕ ವಿಶ್ಲೇಷಣೆ

೧. ಒಟ್ಟು ಘನ ವಸ್ತುಗಳು, ಕಚ್ಚಾ ನಾರಿನಾಂಶ, ಖನಿಜಾಂಶ, ಕೊಬ್ಬಿನಾಂಶ ಮತ್ತು ಸಸಾರಜನಕ ಘಟಕಗಳನ್ನು IS, (1981) ನ ಪ್ರಕಾರ ವಿಶ್ಲೇಷಿಸಲಾಯಿತು. ೨. ರಸಸಾರ: ಡಿಜಿಟಲ್‌ರಸಸಾರಉಪಕರಣದಿಂದ ವಿಶ್ಲೇಷಿಸಲಾಯಿತು.೩.ನೀರಿನಚಟುವಟಿಕೆ: ನೀರಿನಚಟುವಟಿಕಾಯಂತ್ರದ ಮುಖಾಂತರ ೨೩±೨°ಸೆ. ಉಷ್ಣಾಂಶದಲ್ಲಿ ಪತ್ತೆಹಚ್ಚಲಾಯಿತು.

ಪನ್ನೀರ್ ಪಾಯಸ/ ಖೀರಜೊತೆ ವಿವಿಧ ಪ್ರಮಾಣಗಳಲ್ಲಿ ತೃಣಧಾನ್ಯ ಹಿಟ್ಟಿನ ಮಿಶ್ರಣ

ತೃಣಧಾನ್ಯ ಮಿಶ್ರಿತ ಪನ್ನೀರ್ ಪಾಯಸ/ ಖೀರತಯಾರಿಸಲುಚಿತ್ರ (೧)ರಲ್ಲಿ ತೋರಿಸಿರುವಂತೆ ಈ ಕೆಳಕಂಡ ನವಣೆ ಮತ್ತುರಾಗಿ ಹಿಟ್ಟಿನ ಮಿಶ್ರಣಗಳನ್ನು ಅಭ್ಯಸಿಸಲಾಯಿತು.T_0 = ಪನ್ನೀರ್ ಪಾಯಸ (ನಿಯಂತ್ರಿತಉತ್ಪನ್ನ), T_1= ಪನ್ನೀರ್ ಪಾಯಸ + ಶೇ.೨ ರಷ್ಟು ನವಣೆ ಹಿಟ್ಟುT_2=ಪನ್ನೀರ್ ಪಾಯಸ + ಶೇ.೩ ರಷ್ಟು ನವಣೆ ಹಿಟ್ಟು, T_3= ಪನ್ನೀರ್ ಪಾಯಸ + ಶೇ.೪ ರಷ್ಟು ನವಣೆ ಹಿಟ್ಟು, T_4= ಪನ್ನೀರ್ ಪಾಯಸ + ಶೇ.೦.೫ ರಷ್ಟುರಾಗಿ ಹಿಟ್ಟು, T_5= ಪನ್ನೀರ್ ಪಾಯಸ + ಶೇ.೧ ರಷ್ಟುರಾಗಿ ಹಿಟ್ಟು, T_6= ಪನ್ನೀರ್ ಪಾಯಸ + ಶೇ.೧.೫ ರಷ್ಟುರಾಗಿ ಹಿಟ್ಟು.ಈ ಉತ್ಪನ್ನಗಳ ಸಂವೇದನಾ ಮೌಲ್ಯಮಾಪನವನ್ನು ೯ ಅಂಕಗಳ ಹೆಡಾನಿಕ್ ಮಾಪನದಿಂದ ಮಾಡಲಾಯಿತು (Gupta, 1976).

ಕೋಷ್ಟಕ ೧: ಪನ್ನೀರ ಪಾಯಸ/ಖೀರ್‌ನಸಂವೇದನಾ ಗುಣಲಕ್ಷಣಗಳ ಮೇಲೆ ನವಣೆ ಹಿಟ್ಟಿನ ಪರಿಣಾಮಗಳು

ನವಣೆ ಹಿಟ್ಟಿನ ಪ್ರಮಾಣ	ಬಣ್ಣ ಮತ್ತುಗೋಚರತೆ	ದೇಹ ಮತ್ತು ಸ್ಥಿರತೆ	ಪರಿಮಳ	ಒಟ್ಟು ಸ್ವೀಕರತೆ
T_0	೮.೩೩	೭.೮೦	೮.೦೦	೭.೮೮
T_1	೮.೨೫	೮.೪೫	೮.೭೪	೮.೪೯
T_2	೭.೫೦	೭.೫೨	೭.೨೯	೭.೬೨
T_3	೭.೨೯	೭.೨೭	೬.೬೫	೭.೦೦
CD (P=0.05)	೦.೭೦೬	೦.೬೪೭	೦.೬೨೧	೦.೬೦೫

ಕೋಷ್ಟಕ ೨: ಪನ್ನೀರ ಪಾಯಸ/ ಖೀರ್‌ನ ಸಂವೇದನಾ ಗುಣಲಕ್ಷಣಗಳ ಮೇಲೆರಾಗಿ ಹಿಟ್ಟಿನ ಪರಿಣಾಮಗಳು

ರಾಗಿ ಹಿಟ್ಟಿನ ಪ್ರಮಾಣ	ಬಣ್ಣ ಮತ್ತುಗೋಚರತೆ	ದೇಹ ಮತ್ತು ಸ್ಥಿರತೆ	ಪರಿಮಳ	ಒಟ್ಟು ಸ್ವೀಕರತೆ
T_0	೮.೧೬	೭.೯೫	೭.೮೭	೭.೮೯
T_4	೮.೧೨	೮.೦೦	೮.೧೨	೭.೯೧
T_5	೮.೦೮	೮.೪೮	೮.೬೫	೮.೪೦
T_6	೭.೨೯	೬.೭೯	೬.೩೭	೬.೭೦
CD (P=0.05)	೦.೫೦೨	೦.೪೭೪	೦.೫೨೪	೦.೪೩೩

ಕೋಷ್ಟಕ ೩: ನಿರ್ದಿಷ್ಟಗೊಳಿಸಿದ ತೃಣಧಾನ್ಯಮಿಶ್ರಿತ ಪನೀರ್ ಪಾಯಸ/ಖೀರ್‌ನಭೌತ–ರಾಸಾಯನಿಕ ಸಂಯೋಜನೆ

ಘಟಕಗಳು (%)	ನಿಯಂತ್ರಿತಉತ್ಪನ್ನ	ಶೇ.೨ ನವಣೆ ಹಿಟ್ಟು ಮಿಶ್ರಿತ ಉತ್ಪನ್ನ	ಶೇ೧. ರಾಗಿ ಹಿಟ್ಟು ಮಿಶ್ರಿತ ಉತ್ಪನ್ನ	CD (P=0.05)
ಒಟ್ಟು ಘನ ವಸ್ತು	೩೫.೮೬	೩೭.೨೮	೩೫.೯೫	೩.೧೩೮
ಸಸಾರಜನಕ	೬.೭೦	೬.೮೨	೬.೭೧	೨.೫೪೪
ಕೊಬ್ಬಿನಾಂಶ	೭.೫೮	೭.೪೯	೭.೫೦	೦.೬೨೪
ಖನಿಜಾಂಶ	೧.೧೯	೧.೨೫	೧.೨೨	೦.೧೭೪
ಕಚ್ಚಾನಾರಿನಾಂಶ	೦.೦೦	೦.೧೭೩	೦.೦೪೬	೦.೦೧೫೯
ನುಸುಳುವಿಕೆ (m/m for 5sec.)	೧೦.೦	೮.೦೦	೯.೦೦	೦.೦೦
ರಸಸಾರ	೫.೯೩	೫.೯೯	೫.೯೬	೨.೨೨೯
ನೀರಿನಚಟುವಟಿಕೆ	೦.೯೨೮	೦.೯೦೯	೦.೯೧೩	೦.೦೧೨೯

ಫಲಿತಾಂಶಗಳು ಮತ್ತುಚರ್ಚೆ

ನವಣೆ ಮಿಶ್ರಿತ ಪನೀರ್ ಪಾಯಸ/ಖೀರ್‌ನ ಸಂವೇದನಾ ಗುಣಲಕ್ಷಣಗಳು

ನವಣೆ ಮಿಶ್ರಿತ ಪನೀರ್‌ಖೀರ್‌ನ ಸಂವೇದನಾ ಅಂಕಗಳನ್ನು ಕೋಷ್ಟಕ ೧ ನೀಡಲಾಗಿದೆ.ಶೇ.೨ ರಷ್ಟು ನವಣೆ ಹಿಟ್ಟು ಮಿಶ್ರಿತ ಪನೀರ್‌ಖೀರ್‌ನ ಬಣ್ಣ ಮತ್ತುಗೋಚರತೆಯಲ್ಲಿ ಸಾಂಖ್ಯಿಕವಾಗಿಗಮನಾರ್ಹ ವ್ಯತ್ಯಾಸ ಕಂಡುಬಂದಿರುವುದಿಲ್ಲ (P= 0.05).ಆದರೆ ನಿಯಂತ್ರಿತಉತ್ಪನ್ನ ಹಾಗೂ ಶೇ.೩ ಮತ್ತು ಶೇ.೪ ಮಟ್ಟದ ಮಿಶ್ರಿತ ಉತ್ಪನ್ನಗಳ ನಡುವಣ ಸ್ವಲ್ಪ ಮಟ್ಟಿನ ಮಂದಬಣ್ಣ ಹಾಗೂ ಗಾಢಗೋಚರತೆಯಿಂದಾಗಿಕಡಿಮೆ ಸಂವೇದನಾ ಅಂಕಗಳನ್ನು ನೀಡಲಾಗಿದೆ.ಶೇ.೨ ರ ಪ್ರಮಾಣದ ನವಣೆ ಹಿಟ್ಟು ಮಿಶ್ರಿತ ಉತ್ಪನ್ನ ನಿಯಂತ್ರಿತಉತ್ಪನ್ನದಜೊತೆತುಲನೆ ಮಾಡಿದಾಗ ಕಂಡುಬಂದಿರುವುದೇನೆಂದರೆ, ಉತ್ಪನ್ನಗಳ ಗುಣಮಟ್ಟದಲ್ಲಿ ಶೇ.೨ ರ ಪ್ರಮಾಣದ ನವಣೆ ಹಿಟ್ಟು ಮಿಶ್ರಿತ ಉತ್ಪನ್ನವುಉತ್ತಮವಾದ ಭೌತಿಕ ಸ್ಥಿರತೆ ಹೊಂದಿರುವುದನ್ನು ಗುರುತಿಸಿ ಉತ್ತಮವಾದ ಸಂವೇದನಾ ಅಂಕಗಳನ್ನು (೮.೪೫) ನೀಡಲಾಯಿತು.ಆದರೆನಿಯಂತ್ರಿತಉತ್ಪನ್ನಕ್ಕೆ(೭.೮೦) ಹೋಲಿಸಿದಾಗ ಶೇ.೩ ಮತ್ತು ಶೇ.೪ ರ ಪ್ರಮಾಣದ ಮಿಶ್ರಿತ ಉತ್ಪನ್ನಗಳಿಗೆ ಕಡಿಮೆ ಭೌತಿಕ ಸ್ಥಿರತೆಯ ಸಂವೇದನಾ ಅಂಕಗಳನ್ನು (೭.೫೨ ಮತ್ತು ೭.೨೭) ನೀಡಿರುತ್ತಾರೆ.ಶೇ.೨ ರ ಪ್ರಮಾಣದ ನವಣೆ ಹಿಟ್ಟು ಮಿಶ್ರಿತ ಉತ್ಪನ್ನವುಉತ್ತಮವಾದ ಸುವಾಸನೆ ಸಂವೇದನಾ ಅಂಕಗಳನ್ನು (೮.೬೪)ಹೊಂದಿರುತ್ತದೆ.ಆದರೆ ಶೇ.೩ ಮತ್ತು ಶೇ.೪ ಪ್ರಮಾಣದ ಮಿಶ್ರಿತ ಉತ್ಪನ್ನಗಳಲ್ಲಿ ಅಧಿಕ ನವಣೆ ಹಿಟ್ಟಿನ ಪರಿಮಳ ಹೊಂದಿರುವುದರಿಂದ ಕಡಿಮೆ (೭.೨೯ ಮತ್ತು ೭.೬೫) ಸಂವೇದನಾ ಅಂಕಗಳನ್ನು ತೀರ್ಪುಗಾರರು ನೀಡಿರುತ್ತಾರೆ.ಪನೀರ್‌ಖೀರ್‌ನಲ್ಲಿ ಶೇ.೨ ರ ಪ್ರಮಾಣದ ನವಣೆ ಹಿಟ್ಟಿನ ಮಿಶ್ರಣವು ಪ್ರಶಸ್ತವೆಂದು ಗುರುತಿಸಿ ಅತಿಉತ್ತಮವಾದಒಟ್ಟಾರೆ ಸ್ವೀಕಾರ ಅಂಕಗಳನ್ನು (೮.೪೯) ನೀಡಿರುತ್ತಾರೆ.(FAO, 1995) ವೈಜ್ಞಾನಿಕ ಸಂಶೋಧನಾ ವರದಿಯಕೂಡ ಈ ಮೇಲ್ಕಂಡ ಉತ್ಪನ್ನಗಳ ಲಕ್ಷಣಗಳನ್ನು ಹೊಂದಿರುತ್ತವೆ.

ರಾಗಿ ಮಿಶ್ರಿತ ಪನೀರ್ ಪಾಯಸ/ಖೀರ್‌ನ ಸಂವೇದನಾ ಗುಣಲಕ್ಷಣಗಳು

ರಾಗಿ ಮಿಶ್ರಿತ ಪನೀರ್ ಪಾಯಸ/ಖೀರ್‌ನ ,ಸಂವೇದನಾ ಅಂಕಗಳನ್ನು ಕೋಷ್ಟಕ ೨ ನೀಡಲಾಗಿದೆ.ಶೇ.೦.೫ ಮತ್ತು ಶೇ.೧.೦ ರ ಮಟ್ಟದರಾಗಿ ಹಿಟ್ಟು ಮಿಶ್ರಿತ ಉತ್ಪನ್ನಗಳ ನಡುವಣ ಬಣ್ಣ ಹಾಗೂ ಗೋಚರತೆಯ ಸಂವೇದನಾ ಅಂಕಗಳಲ್ಲಿ ಸಾಂಖ್ಯಿಕವಾಗಿಗಮನಾರ್ಹ ವ್ಯತ್ಯಾಸಕಂಡುಬಂದಿರುವುದಿಲ್ಲ (P= 0.05).ಆದೇರೀತಿ ಶೇ.೧.೫ ಪ್ರಮಾಣದ ಮಿಶ್ರಿತ ಉತ್ಪನ್ನವುಗಾಢಛಾಯೆ ಹಾಗೂ ಮಂದಗೋಚರತೆಯಿಂದಾಗಿಕಡಿಮೆ ಸಂವೇದನಾ ಅಂಕಗಳನ್ನು ಹೊಂದಿರುತ್ತದೆ (೭.೨೯).ಶೇ.೧ ಪ್ರಮಾಣದರಾಗಿ ಹಿಟ್ಟು ಮಿಶ್ರಿತ ಉತ್ಪನ್ನವುಉತ್ತಮಸ್ನಿಗ್ಧತೆ ಹೊಂದಿರುವುದರಿಂದ ಪ್ರಶಸ್ತ ಮಿಶ್ರಣವೆಂದು ಗುರುತಿಸಿ ಅತ್ಯುತ್ತಮವಾದ ಭೌತಿಕ ಸಂವೇದನಾ ಅಂಕಗಳನ್ನು (೮.೪೮) ನೀಡಲಾಗಿರುತ್ತದೆ.Wadikar, (2007) ರವರ ವರದಿಯ ಪ್ರಕಾರ ರಾಗಿಧಾನ್ಯಗಳಲ್ಲಿ ಪ್ರತಿರೋಧಕ ಪಿಷ್ಟದ ಉಪಸ್ಥಿತಿಯಿಂದಾಗಿ ರಾಗಿ ಹಿಟ್ಟಿನ ಮಿಶ್ರಿತ ಉತ್ಪನ್ನಗಳು ಉತ್ತಮವಾದದೇಹರಚನೆ ಮತ್ತು ಸ್ಥಿರತೆ ಹೊಂದಿರುವುದಾಗಿ ತಿಳಿದುಬಂದಿರುತ್ತದೆ.ಆದೇರೀತಿ Lestienne, (2007) ಮತ್ತು Amadou, (2011a) ರವರ ವರದಿ ಪ್ರಕಾರರಾಗಿ ಹಿಟ್ಟಿನ ಮಿಶ್ರಣದಿಂದಾಗಿ ಉತ್ಪನ್ನಗಳಲ್ಲಿ ರಚನಾ ಮತ್ತು ವಿನ್ಯಾಸವುಅಭಿವೃದ್ಧಿ ಹೊಂದಿರುವುದಾಗಿ ತಿಳಿಸಿರುತ್ತಾರೆ.ಶೇ.೧ ಪ್ರಮಾಣಕ್ಕಿಂತಲೂ ಹೆಚ್ಚಿನ ಮಟ್ಟದರಾಗಿ ಹಿಟ್ಟನ್ನು ಉತ್ಪನ್ನಗಳಲ್ಲಿ ಮಿಶ್ರಣಗೊಳಿಸುವುದರಿಂದ ಹೆಚ್ಚಿನ ಸ್ನಿಗ್ಧತೆ ಕಂಡುಬಂದಿರುವಕಾರಣ ಶೇ.೧.೫ ರ ಪ್ರಮಾಣದ ಮಿಶ್ರಿತ ಉತ್ಪನ್ನವನ್ನುಕಡಿಮೆ (೭.೭೯) ದೇಪ ಮತ್ತು ಸ್ಥಿರತೆ ಸಂವೇದನಾ ಅಂಕಗಳನ್ನು ತೀರ್ಪುಗಾರರು ನೀಡಿರುತ್ತಾರೆ.ಶೇ.೧ ಪ್ರಮಾಣದ ಮಿಶ್ರಿತ ಉತ್ಪನ್ನವನ್ನು ಇನ್ನುಳಿದ ಉತ್ಪನ್ನಗಳಿಗೆ ಹೋಲಿಸಿದಾಗ ಅತಿ ಹೆಚ್ಚು ಪರಿಮಳ ಸಂವೇದನಾ ಅಂಕಗಳನ್ನು (೮.೬೫) ಹೊಂದಿರುತ್ತದೆ.ಆದರೆ ಶೇ.೧ ರಕ್ಕಿಂತ ಹೆಚ್ಚಿನ ಪ್ರಮಾಣದ ಮಿಶ್ರಿತ ಉತ್ಪನ್ನಗಳಲ್ಲಿ ತೀರ್ಪುಗಾರರಿಗೆಅತಿ ಹೆಚ್ಚು ರಾಗಿ ಹಿಟ್ಟಿನ ಪರಿಮಳ ಕಂಡುಬಂದಿರುವು ದರಿಂದ ಕಡಿಮೆ ಪರಿಮಳ ಸಂವೇದನಾ ಅಂಕಗಳನ್ನು (೭.೩೭) ನೀಡಿರುತ್ತಾರೆ. Kulkarni, (1999) ರವರ ವರದಿಯ ಪ್ರಕಾರ ಆಹಾರಗಳಲ್ಲಿ ರಾಗಿ ಹಿಟ್ಟಿನ ಮಿಶ್ರಣವು ಉತ್ಪನ್ನಗಳ ರುಚಿಯನ್ನು ಹೆಚ್ಚಿಸುವುದಲ್ಲದೆ, ಮಧುಮೇಹಿ ರೋಗಿಗಳಲ್ಲಿ ಗ್ಲುಕೋಸ್‌ಅಂಶವನ್ನು

ನಿಯಂತ್ರಣದಲ್ಲಿಡಲು ಪರಿಣಾಮಕಾರಿಯಾಗುವುದೆಂದು ವರದಿಸಿರುತ್ತಾರೆ.ಶೇ.೧ ಪ್ರಮಾಣ ಮಿಶ್ರಿತ ಉತ್ಪನ್ನವುಉತ್ತಮವಾದ ಸಂವೇದನಾ ಅಂಕಗಳನ್ನು ಹೊಂದಿರುವುದರಿಂದ ಹೆಚ್ಚಿನಒಟ್ಟಾರೆ ಸ್ವೀಕರಣಾಂಕಗಳನ್ನು ನೀಡಿರುತ್ತಾರೆ. Verma, (2013) ರವರ ವರದಿಯ ಪ್ರಕಾರ ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆಯಲ್ಲಿಯುಕ್ತ ರೀತಿಯಿಂದರಾಗಿ ಧಾನ್ಯಗಳನ್ನು ಉಪಯೋಗಿಸಿದಲ್ಲಿ, ಉತ್ಪನ್ನಗಳಿಗೆ ಉತ್ತಮವಾದ ಸಂವೇದನಾ ಅಂಕಗಳು ಪ್ರಾಪ್ತಿಯಾಗುತ್ತವೆಂದು ತಿಳಿಸಿರುತ್ತಾರೆ.

ನಿರ್ದಿಷ್ಟಗೊಳಿಸಿದ ತೃಣಧಾನ್ಯಮಿಶ್ರಿತ ಪನೀರ ಪಾಯಸಖೀರ್‌ನ ಭೌತ–ರಾಸಾಯನಿಕ ಸಂಯೋಜನೆ

ಪ್ರಶಸ್ತ ಮಟ್ಟದ ನವಣೆ ಹಾಗೂ ರಾಗಿ ಹಿಟ್ಟು ಮಿಶ್ರಿತ ಪನೀರ್ ಪಾಯಸ/ ಖೀರ್‌ನರಾಸಾಯನಿಕ ಸಂಯೋಜನೆಯನ್ನು ಕೋಷ್ಟಕ–೩ ರಲ್ಲಿ ನೀಡಲಾಗಿದೆ.ತೃಣಧಾನ್ಯ ಮಿಶ್ರಿತ ಉತ್ಪನ್ನಗಳನ್ನು ನಿಯಂತ್ರಿತ ಉತ್ಪನ್ನಗಳಿಗೆ ಹೋಲಿಸಿದಾಗ ತುಸು ಹೆಚ್ಚು ಪ್ರಮಾಣದಲ್ಲಿಅವುಗಳು ಒಟ್ಟುಘನಪದಾರ್ಥ, ಸಸಾರಜನಕ ಮತ್ತು ಖನಿಜಾಂಶಗಳನ್ನು ಹೊಂದಿರುವುದಾಗಿದಾಖಲಾದ ವೀಕ್ಷಣೆಯಿಂದ ತಿಳಿದುಬಂದಿರುತ್ತದೆ. ಕಚ್ಚಾನಾರಿನಾಂಶವುತೃಣಧಾನ್ಯ ಮಿಶ್ರಿತ ಉತ್ಪನ್ನಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿಕಂಡುಬಂದಿದ್ದು, ನಿಯಂತ್ರಿತ ಉತ್ಪನ್ನಗಳಲ್ಲಿ ಕಚ್ಚಾನಾರಿನಾಂಶವನ್ನು ಹೊಂದಿರುವುದಿಲ್ಲವೆಂದುಕಂಡುಬಂದಿರುತ್ತದೆ. ನವಣೆ ,ಮತ್ತುರಾಗಿ ಮಿಶ್ರಿತ ಉತ್ಪನ್ನಗಳು ಕಚ್ಚಾನಾರಿನಾಂಶದ ಪ್ರಮಾಣವನ್ನುಕ್ರಮವಾಗಿ ಶೇ.೦.೧೭೩ ಮತ್ತು ಶೇ.೦.೦೪೬ ಹೊಂದಿರುವುದಾಗಿದಾಖಲಾಗಿದೆ.ತೃಣಧಾನ್ಯ ಮಿಶ್ರಿತ ಉತ್ಪನ್ನಗಳು ಹಾಗೂ ನಿಯಂತ್ರಿತ ಉತ್ಪನ್ನಗಳಲ್ಲಿನ ನುಸುಳುವಿಕೆ ಪ್ರಮಾಣದಲ್ಲಿ ವ್ಯತ್ಯಾಸಗಳುವುದನ್ನು ಕೋಷ್ಟಕ ೩ರಲ್ಲಿಕಾಣಬಹುದಾಗಿದೆ. ಆದಾಗ್ಯೂಉಪಚರಿತ ಉತ್ಪನ್ನಗಳ ರಸಸಾರದಲ್ಲಿಗಮನಾರ್ಹ ವ್ಯತ್ಯಾಸಕಂಡುಬಂದಿರುವುದಿಲ್ಲ. ಆದರೆ ನವಣೆ ಹಾಗೂ ರಾಗಿ ಹಿಟ್ಟು ಮಿಶ್ರಿತ ಉತ್ಪನ್ನಗಳಲ್ಲಿ ನೀರಿನಚಟುವಟಿಕೆ ಕಡಿಮೆಯಿರುವುದಾಗಿಕಂಡುಬಂದಿರುತ್ತದೆ.

ತೀರ್ಮಾನ

ಉತ್ಕೃಷ್ಟವಾದ ಪೌಷ್ಟಿಕಾಂಶ ಹಾಗೂ ಉತ್ತಮ ಸಂವೇದನಾ ಗುಣಲಕ್ಷಣಗಳಿಂದ ಸಾಂದ್ರೀಕೃತ ಹಾಲಿನ ಉತ್ಪನ್ನಗಳನ್ನು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿಗ್ರಾಹಕರು ಸೇವಿಸುತ್ತಿದ್ದಾರೆ. ಹಾಲಿನ ಸಾಂದ್ರೀಕರಣ ಮಧುರವಾದ ಪರಿಮಳವನ್ನು ನೀಡುತ್ತದೆ. ಪನ್ನೀರ್‌ನ ಮಿಶ್ರಣವು ಹೆಚ್ಚಿನ ಪೌಷ್ಟಿಕಾಂಶಗಳನ್ನು ಖೀರ್‌ಗೆಒದಗಿಸುತ್ತದೆ. ಮುಂದುವರೆದು, ಶೇ.೨ ರ ಪ್ರಮಾಣದ ನವಣೆ ಹಿಟ್ಟುಅಥವಾ ಶೇ.೨ ರ ಪ್ರಮಾಣದರಾಗಿ ಹಿಟ್ಟನ್ನು ಪನೀರ್‌ಖೀರ್‌ಗೆ ಮಿಶ್ರಣಗೊಳಿಸುವುದರಿಂದ ದೇಹದಉತ್ತಮಆರೋಗ್ಯಕ್ಕೆಅವಶ್ಯವಿರುವ ಸಸಾರಜನಕ, ನಾರಿನಾಂಶ, ಖನಿಜಾಂಶ, ಜೀವಸತ್ವ ಹಾಗೂ ಶಕ್ತಿಯನ್ನುಒದಗಿಸುವುದರಲ್ಲಿ ಮಹತ್ವದ ಪಾತ್ರವನ್ನು ಹೊಂದಿರುತ್ತದೆ. ಈ ನಿಟ್ಟಿನಲ್ಲಿತೃಣಧಾನ್ಯ ಮಿಶ್ರಿತ ಪನೀರ್ ಪಾಯಸ/ಖೀರ್‌ನಂತಹ ಉತ್ಪನ್ನಗಳ ಅಭಿವೃದ್ಧಿಯುದೇಶದ ಉದ್ದಗಲಕ್ಕೂಗ್ರಾಹಕರನ್ನು ಸೆಳೆಯುವಲ್ಲಿ ಖಂಡಿತವಾಗಿ ಸಫಲವಾಗುತ್ತದೆ. ಹಾಗೂ ರೈತರು, ಗೃಹಿಣಿಯರುತಮ್ಮ ಮನೆಯಲ್ಲಿ ತಯಾರಿಸಿ ಸೇವಿಸುವುದರಜೊತೆಗೆ ಮಾರಾಟ ಮಾಡುವುದರಿಂದರೈತರಆರೋಗ್ಯ ಮತ್ತುಆರ್ಥಿಕತೆ ಉತ್ತಮಗೊಳ್ಳುತ್ತದೆ.

ಉಲ್ಲೇಖಗಳು (BIBLIOGRAPHY)

AMADOU, I., GBADAMOSI, O.S. and GUO-WEI, L., 2011a. Millet-based traditional processed foods and beverages- A review. *Cereal Food World* **56**(3): 115-121.

ARPITA DAS., UTPAL RAYCHAUDHURI and RANU CHAKRABORTY., 2012. Cereal based functional food of Indian subcontinent: a review. *J.FoodSci Techno.* **49** (6):665-672.

BHATTACHARYA, D.C., MATHUR, O.N., SRINIVASAN, M.R. and SAMLIK, O.L., 1971.Studies on the method of production and shelf life of paneer.*J. Food Sci.Technol.*, . 8(5):117-120.

De SUKUMAR, *Outline of Dairy Technology*, (Oxford University Press, New Delhi, India, 2011).

DE, SUKUMAR.,THOMPKINSON, D.K., GAHLOT, D.P. and MATHUR, O.N., 1976. Studies on method of preparation and preservation of kheer.*Indian J. of Dairy Sci.* **29**, 316-318.

FAO:, 1995. Sorghum and millets in human nutrition.(FAO Food and Nutrition Series, No. 27). http://www.fao.org/docrep/t0818e/t0818e01.htm.

GUPTA, S. K. Sensory evaluation in food industry, I*ndian Dairyman, 28,*1976,293-295.

IS: 1479, (Part-I., 1981). Methods of test for dairy industry rapid examination of milk, *Bureau of Indian standards,* New Delhi.

ITIAGI, S., NAIK, R., BHARATHI, P. and SHARMA, P., 2012. Readymade Foxtail millet mix for Diabetes.*Int. J. of Sci.and Nature.***3** (1): 47-50.

KULKARNI, S., 1999.A compendium on payasam.*Southern Regional Station.NDRI. Bangalore.*

LESTIENNE, I., BUISSON, M., LULLERIN, V., PICQ, C. and TRECHE, S., 2007.Losses of nutrients and anti-nutritional factors during abrasive decortications of two pearl millet cultivars.*Food Chem.* **100**: 1316-1323.

VERMA VEENU AND PATEL S., 2013. Value added products from nutria-cereals: Finger millet(*Eleusinecoracana*). *J. of food Agri..***25**(3)169-176

WADIKAR., D. D., PREMVALLI, R.S., SATYANARAYANA SWAMY, Y. S. and BAWA, A.S., 2007. Lipid profile in finger millet.*J. Food Sci. Tech.* **44**(1):79-81.

ಪ್ರತಿಜೀವಕ ನಿರೋಧಕ ರೋಗಕಾರಕ ಸೂಕ್ಷ್ಮಾಣು ಜೀವಿಗಳನ್ನು ಹರಡುವ ಪ್ರಬಲ ಮಾಧ್ಯಮವಾಗಿ ಅಂತರ್ಜಾಲ ತಾಣಗಳ ಗಣಕ ಯಂತ್ರಗಳು

ಶೋಭಾ.ಕೆ.ಎಸ್, ಚೇತನ.ಎಸ್.ಇ, ಪ್ರಶಾಂತ ಮತ್ತು ಓಂಕಾರಪ್ಪ.ಆರ್
ಸೂಕ್ಷ್ಮಾಣು ಜೀವಶಾಸ್ತ್ರ ವಿಭಾಗ ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಶಿವಮೊಗ್ಗ, ಕುವೆಂಪು ವಿಶ್ವವಿದ್ಯಾಲಯ

ಆಧುನಿಕ ಪ್ರಪಂಚದಲ್ಲಿ ಗಣಕಯಂತ್ರಗಳು ನಿತ್ಯ ಜೀವನದ ಅವಿಭಾಜ್ಯ ಅಂಗಗಳಾಗಿ ರೂಪುಗೊಂಡಿವೆ. ಶೈಕ್ಷಣಿಕ ಹಾಗು ಸಾರ್ವಜನಿಕ ಕ್ಷೇತ್ರಗಳ ಎಲಾ ವಿಭಾಗಗಳಲ್ಲೂ ಗಣಕಯಂತ್ರಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿರುತ್ತವೆ.

ಪ್ರಸ್ತುತ ಸಂಶೋಧನಾ ಕಾರ್ಯದಲ್ಲಿ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಸುತ್ತಮುತ್ತಲಿನ ಅಂತರ್ಜಾಲ ತಾಣಗಳ ಗಣಕಯಂತ್ರಗಳನ್ನು ಪರೀಕ್ಷೆಗೆ ಒಳಪಡಿಸಲಾಯಿತು. ಗಣಕಯಂತ್ರಗಳ ಕೀಲಿ ಮಣೆ ಹಾಗೂ ಮೌಸ್‌ಗಳ ಮೇಲ್ಬಾಗದಿಂದ ಮಾದರಿಗಳನ್ನು ಲವಣಾಂಶ ದ್ರಾವಣದಲ್ಲಿ ಅದ್ದಿದ ಹತ್ತಿಯ ಸ್ವ್ಯಾಬ್‌ಗಳಲ್ಲಿ ಸಂಗ್ರಹಿಸಿಡಲಾಯಿತು. ಸೀರಿಯಲ್ಲ ಡೈಲೂಷನ್ ವಿಧಾನದಿಂದ ಈ ಮಾದರಿಗಳನ್ನು, ಪೋಷಕಾಂಶ ಅಗಾರ್ ಹೊಂದಿದ ಪೆಟ್ರಿ ತಟ್ಟೆಗಳಲ್ಲಿ ಸುರಿಯಲಾಯಿತು. ಈ ಪೋಷಕಾಂಶ ಮಾಧ್ಯಮದಲ್ಲಿ ಬೆಳೆದ ಸೂಕ್ಷ್ಮಾಣು ಜೀವಿಗಳನ್ನು ಬ್ಯಾಕ್ಟೀರಿಯ (೪೧) ಹಾಗೂ ಶಿಲೀಂಧ್ರಗಳ ಪ್ರಭೇಧಗಳೆಂದು ವಿಂಗಡಿಸಲಾಯಿತು. ಇವುಗಳಲ್ಲಿ ಬಹುಪಾಲು ಮನುಷ್ಯ ಹಾಗು ಕೃಷಿ ಬೆಳೆಗಳಿಗೆ ಹಾನಿಕಾರಕ ಸೂಕ್ಷ್ಮಾಣುಜೀವಿಗಳೆಂದು ಗುರುತಿಸಲ್ಪಟ್ಟಿರುವಂಥವು.

ಬ್ಯಾಕ್ಟೀರಿಯ ಪ್ರಭೇಧಗಳಾದ ಸ್ಟೆಫೈಲೋಕಾಕಸ್ ಆರಿಯಸ್, ಮೈಕ್ರೋಕಾಕಸ್ ಲ್ಯೂಟಿಯಸ್ ಮತ್ತು ಎಂಟೆರೋಕಾಕಸ್ ಫೀಕ್ಯಾಲಿಸ್ ಎಂಬುದನ್ನು ರಚನೆ ಹಾಗು ಜೀವರಸಾಯನ ಪರೀಕ್ಷೆಗಳ ಮೂಲಕ ಧೃಢಪಡಿಸಲಾಯಿತು, ಈ ಬ್ಯಾಕ್ಟೀರಿಯಾಗಳನ್ನು ಆಂಟಿಬೈಯೋಟಿಕ್ ಸಂಯೋಧನಾಶೀಲ ಪರೀಕ್ಷೆಗೆ (ಕಿರ್ಬಿ–ಬೇಯರ್ ವಿಧಾನ) ಒಳಪಡಿಸಿ, ಸಂವೇಧನಾಶೀಲ ಅಥವಾ ನಿರೋಧಕ ಶಕ್ತಿಯನ್ನು ಪ್ರತಿಬಂಧ ವಲಯವನ್ನು ಅಳೆಯುವುದರ ಮೂಲಕ ಗುರುತಿಸಲಾಯಿತು. ಸ್ಟೆಫೈಲೋಕಾಕಸ್ ಆರಿಯಸ್, ಮಿಥಿನಿಲಿನ್ ಹಾಗೂ ವ್ಯಾಂಕೋಮೈಸಿನ್‌ಗೆ ನಿರೋಧಕ ಶಕ್ತಿಯನ್ನು ತೋರಿದರೆ ಮೈಕ್ರೋಕಾಕಸ್ ವೆನಿಸಲಿನ್ನಗೆ ಮತ್ತು ಎಂಟ್ರೋಕಾಕಸ್ ಆಂಪಿಸಿಲಿನ್‌ಗೆ ನಿರೋಧಕ ಶಕ್ತಿಯನ್ನು ತೋರಿಸಿದವು.

ಪ್ರಸ್ತುತವಾಗಿ ಚಾಲ್ತಿಯಲ್ಲಿರುವ ರೋಗಾಣು ನಾಶಕದ್ರವ್ಯಗಳು ಈ ಬ್ಯಾಕ್ಟೀರಿಯಾಗಳನ್ನು ನಿಯಂತ್ರಿಸುವಲ್ಲಿ ವಿಫಲವಾಗಿದ್ದು ವಾಯವಿದಂಗ ಎಲೆಗಳ ನಾರವು(೧೦%) ಇವುಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿರುತ್ತದೆ.

ಈ ಅಧ್ಯಯನದ ಗಮನಾರ್ಹ ಅಂಶಗಳೆಂದರೆ ಗಣಕಯಂತ್ರಗಳು ರೋಗಕಾರಕ ಸೂಕ್ಷ್ಮಾಣು ಜೀವಿಗಳನ್ನು ಹರಡುವ ಪ್ರಬಲ ಮಾಧ್ಯಮಗಳಾಗಿ ಹೊರಹೊಮ್ಮುತ್ತಿರುವುದು ಹಾಗು ಆಂಟಿಬಯೋಟಿಕ್ ನಿರೋಧಕ ಬ್ಯಾಕ್ಟೀರಿಯಾಗಳು, ಸಂಪರ್ಕಹೊಂದಿದ ಮನುಷ್ಯರಿಗೆ ಸುಲಭವಾಗಿ ಹರಡಿ, ರೋಗಗಳನ್ನು ಉಂಟುಮಾಡುವ ಸಾಧ್ಯತೆಗಳು ಹೆಚ್ಚಾಗಿದ್ದು, ಇವುಗಳ ಹತೋಟಿಯು ಕ್ಲಿಷ್ಟಕರವಾಗಬಲ್ಲದು.

ಪ್ರಮುಖ ಪದಗಳು; ಅಂತರ್ಜಾಲ ತಾಣಗಳು, ಗಣಕಯಂತ್ರಗಳು, ಆಂಟಿಬಯೋಟಿಕ್ ನಿರೋಧಕ, ರೋಗಕಾರಕ ಸೂಕ್ಷ್ಮಾಣು ಜೀವಿಗಳು.

ಪರಿಚಯ : ತಂತ್ರಜ್ಞಾನಯುಗದಲ್ಲಿ ಗಣಕಯಂತ್ರಗಳು ತೀವ್ರತರವಾಗಿ ಉಪಯೋಗವಾಗುತ್ತಿರುವ ಸಾಧನಗಳಾಗಿವೆ. ಆಧುನಿಕ ಪ್ರಪಂಚದಲ್ಲಿ ಈ ಗಣಕಯಂತ್ರಗಳು ಶೈಕ್ಷಣಿಕ, ಆರೋಗ್ಯ ಹಾಗೂ ಎಲ್ಲಾ ಸಾರ್ವಜನಿಕ ಕ್ಷೇತ್ರಗಳ ಅವಿಭಾಜ್ಯ ಅಂಗಗಳಾಗಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ. ಕಂಪ್ಯೂಟರಗಳ ಮಾಲಿನ್ಯತೆಯಲ್ಲಿಕಲುಷಿತ ವಾತಾವರಣ, ಬಳಕೆದಾರರು ಮತ್ತು ನಿರ್ಜೀವ ವಸ್ತುಗಳು ಪ್ರಸರಣ ಮಾಧ್ಯಮಗಳಾಗಿ ಮುಖ್ಯ ಪಾತ್ರವನ್ನು ವಹಿಸುತ್ತವೆಎಂಬುದು ಅಧ್ಯಯನಗಳಿಂದ ತಿಳಿದುಬಂದಿದೆ.

ಆರೋಗ್ಯ ವ್ಯವಸ್ಥೆಯಲ್ಲಿ ಸೋಂಕು ಹರಡುವ ಸಾಧನಗಳನ್ನು ನಿಯಂತ್ರಿಸುವುದು ಅಥವಾ ತಡೆಗಟ್ಟುವುದು ಒಂದು ಪ್ರಮುಖ ಉದ್ದೇಶವಾಗಿವೆ. ಈ ನಿಟ್ಟಿನಲ್ಲಿ ಮೇಲೆ ತಿಳಿಸಿದ ಪ್ರಸರಣ ಮಾಧ್ಯಮಗಳಲ್ಲಿ ನಿರ್ಜೀವ ವಸ್ತುಗಳು ಸೂಕ್ಷ್ಮ ಜೀವಿಗಳ ಸಂಗ್ರಾಹಕ ಹಾಗೂ ಪ್ರಸರಣ ಮಾಧ್ಯಮಗಳೆಂದು ಗುರುತಿಸಲ್ಪಟ್ಟಿದೆ.

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಫೋನ್‌ಗಳು, ಕಂಪ್ಯೂಟರ್ ಕೀಬೋರ್ಡ ಹಾಗೂ ಮೌಸ್‌ಗಳು ರೋಗಕಾರಕ ಸೂಕ್ಷ್ಮಜೀವಿಗಳಿಂದ ಕಲುಷಿತಗೊಂಡು, ಆ ಸೂಕ್ಷ್ಮಜೀವಿಗಳ ಪ್ರಸರಣ ಮಾಧ್ಯಮಗಳಾಗಿ ಹೊರಹೊಮ್ಮುತ್ತಿರುವುದು ವಿವಿಧ ಅಧ್ಯಯನಗಳಿಂದ ಬೆಳಕಿಗೆ ಬಂದಿರುತ್ತದೆ. ಬಹು ಬಳಕೆದಾರರ ಅಂತರ್ಜಾಲ ತಾಣಗಳು, ಆರೋಗ್ಯ ಸಂಸ್ಥೆಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಬಳಸಲ್ಪಡುವ ಗಣಕಯಂತ್ರಗಳು ರೋಗಾಣುಕಾರಕ ಸೂಕ್ಷ್ಮಜೀವಿ ಗಳನ್ನು ಹರಡುವಲ್ಲಿ ಪಾತ್ರವನ್ನು ವಹಿಸುತ್ತಿವೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿಯೂ ಪರೀಕ್ಷಿಸಲಾಯಿತು.

ಉದ್ದೇಶಗಳು:

- ಕಂಪ್ಯೂಟರ ಕೀಲಿಮಣೆ ಮತ್ತು ಮೌಸ್‌ಗಳಿಂದ ಮಾದರಿಗಳನ್ನು ಸಂಗ್ರಹಿಸಿ, ಸೂಕ್ಷ್ಮಾಣು ಜೀವಿಗಳನ್ನು ಪ್ರತ್ಯೇಕಿಸುವುದು.
- ವಾಣಿಜ್ಯಕವಾಗಿ ಲಭ್ಯವಿರುವ ಶುಚಿಗೊಳಿಸುವ ದ್ರಾವಣಗಳ ಪ್ರಭಾವವನ್ನು ಸೂಕ್ಷ್ಮಾಣು ಜೀವಿಗಳ ಮೇಲೆ ಪರೀಕ್ಷಿಸುವುದು.
- ಸೂಕ್ಷ್ಮಾಣು ಜೀವಿಗಳ ಪ್ರತಿಜೀವಕ ಸಂವೇದನಾ ಸಾಮರ್ಥ್ಯವನ್ನು ಅಳೆಯುವುದು.
- ಪ್ರತಿಜೀವಕ ನಿರೋಧಕ ಸೂಕ್ಷ್ಮಾಣುಜೀವಿಗಳನ್ನು ನಿಯಂತ್ರಿಸುವಲ್ಲಿ ನೈಸರ್ಗಿಕ ಉತ್ಪನ್ನಗಳ ಪಾತ್ರವನ್ನುಕಂಡುಹಿಡಿಯುವುದು.

ಪರಿಕರಗಳು ಮತ್ತು ವಿಧಾನ :

ಮಾದರಿ ಸಂಗ್ರಹಣೆ: ಪ್ರಸ್ತುತ ಸಂಶೋಧನಾಪ್ರಯೋಗದಲ್ಲಿ ವಿವಿದ ಅಂತರ್ಜಾಲ ತಾಣಗಳ ಗಣಕಯಂತ್ರಗಳನ್ನು ಬಳಸಿಕೊಳ್ಳಲಾಯಿತು. ಗಣಕಯಂತ್ರಗಳ ಕೀಲಿಮಣೆ ಮತ್ತು ಮೌಸ್‌ಗಳನ್ನು ಲವಣಾಂಶ ದ್ರಾವಣದಲ್ಲಿ ಅದ್ದಿದ ಸ್ವ್ಯಾಬ್‌ಗಳ ಸಹಾಯದಿಂದ ಮೇಲ್ಭಾಗವನ್ನು ಸವರಿ ಮಾದರಿಗಳನ್ನು ಟೆಸ್ಟ್‌ಟ್ಯೂಬ್‌ಗಳಲ್ಲಿ ಸಂಗ್ರಹಿಸಲಾಯಿತು.

ಪ್ರತ್ಯೇಕಿಸುವುದು: ಮಾದರಿಗಳನ್ನು ಸೀರಿಯಲ್ ಡೈಲ್ಯೂಷನ್ ವಿಧಾನದಿಂದ ತಿಳಿಗೊಳಿಸಿ ಪ್ರತಿಯೊಂದು ಮಾದರಿಯನ್ನುಪೋಷಕಾಂಶ ಆಗಾರ್ ಹೊಂದಿದ ಪೆಟ್ರಿ ತಟ್ಟೆಗಳನ್ನು 37' ತಾಪಮಾನದಲ್ಲಿ 24 ಗಂಟೆಗಳ ಕಾಲ ಇನ್‌ಕ್ಯುಬೇಟರ್‌ನಲ್ಲಿ (ಕಾವು ಪೆಟ್ಟಿಗೆಯಲ್ಲಿ) ಇಡಲಾಯಿತು. ಪ್ರತ್ಯೇಕಗೊಂಡ ಸಮುದಾಯಗಳನ್ನು 4 ತಾಪಮಾನದಲ್ಲಿ ಶೇಖರಿಸಲಾಯಿತು.

ಬ್ಯಾಕ್ಟೀರಿಯಗಳ ಪ್ರಭೇಧಗಳನ್ನು ಆಕಾರ,ಗಾತ್ರ ಅಂಚು ಎತ್ತರ ಹಾಗೂ ಗ್ರಾಮ್ ಸ್ಟೈನಿಂಗ್ ವಿಧಾನದಿಂದ ವರ್ಗೀಕರಿಸಲಾಯಿತು. ಜೀವರಾಸಾಯನಿಕ ಪರೀಕ್ಷೆಗಳಾದ ಸ್ಟಾರ್ಚ ಹೈಡ್ರಾಲಿಸಿಸ್, ಜಿಲಾಟಿನ್ ಹೈಡ್ರಾಲಿಸಿಸ್, ಸಕ್ಕರೆ ಹುಳಿಸುವಿಕೆ, ಹೈಡ್ರೋಜನ್ ಪಾರಾಕ್ಸೈಡ್, ನೈಟ್ರೇಟ್‌ರಿಡಕ್ಷನ್, ಎಮ್‌ಆರ್‌ವಿಪಿ ಮೂಲಕ ಪ್ರಭೇದಗಳನ್ನು ಧೃಡೀಕರಿಸಲಾಯಿತು. ನಿರ್ಧಾರಿತದುಂಡಾಣು ಬ್ಯಾಕ್ಟೀರಿಯ ಪ್ರಭೇದಗಳ ಕುಲ ಬಹಿರಂಗಪಡಿಸಲುಜೀವರಸಾಯನಿಕ ಪರೀಕ್ಷೆಗಳಾದ ಮ್ಯಾನಿಟಾಲ್‌ಉಪ್ಪುಅಗರ್‌ಕೊಯ್ಯಾಗುಲೇಸ್ ಮತ್ತು ಹೀಮೊಲೈಸಿಸ್ ಪರೀಕ್ಷೆಗೆ ಒಳಪಡಿಸಲಾಯಿತು.

ಕೃತಕ ಶುದ್ಧೀಕರಣ ಸಲ್ಯೂಷನ್‌ಗಳ ಪ್ರಭಾವ: ಪ್ರತ್ಯೇಕಗೊಂಡ ಬ್ಯಾಕ್ಟೀರಿಯ ಪ್ರಭೇದಗಳ ಮೇಲೆ ಕೃತಕ ಶುದ್ಧೀಕರಣ ಸಲ್ಯೂಷನ್‌ಗಳ ಪ್ರಭಾವವನ್ನು**"ಅಗಾರ್‌ಬಾವಿ"** ವಿಧಾನದಿಂದಕಂಡುಹಿಡಿಯಲಾಯಿತು. (8 ಮಿಮೀ ಅಗಾರ್ ಬಾವಿಗಳನ್ನು) ಘನೀಕೃತಗೊಂಡಅಗಾರ್ ಮಾಧ್ಯಮದ ಮೇಲೆ, ಪ್ರತಿ ಬ್ಯಾಕ್ಟೀರಿಯಗಳ ದ್ರಾವಣವನ್ನು ಸವರಲಾಯಿತು.ಇವುಗಳಲ್ಲಿ 8 ಮಿಮೀ ಅಗಾರ್ ಬಾವಿಗಳನ್ನು ಕಾರ್ಕ್‌ಬೋರರ್ ಸಹಾಯದಿಂದಕೊರೆಯಲಾಯಿತು.

ಸುಮಾರು 100–200 ಮೈಕ್ರೋಲೀಟರ್ ಶುದ್ಧೀಕರಣ ದ್ರಾವಣಗಳನ್ನು (ಎಕ್ಸಪರ್ಟ, ಟ್ರಾವೆಲರ್ಸ್‌ಕಿಟ್, ಕೋಲಿನ್,ಡೆಟಾಲ್) ಮೈಕ್ರೊಪಿಪೆಟ್ ಸಹಾಯದ್ದಿಂದ ಬಾವಿಗಳಿಗೆ ವಿತರಿಸಲಾಯಿತು. ಈ ಪೆಟ್ರಿತಟ್ಟೆಗಳನ್ನು 24 ಗಂಟೆಗಳ 37°ತಾಪಮಾನದಲ್ಲಿಇನ್‌ಕ್ಯುಬೇಟರ್‌ನಲ್ಲಿ (ಕಾವು ಪೆಟ್ಟಿಗೆ)ಇಡಲಾಯಿತು. ಸಂವೇದನಾಶೀಲ ಶಕ್ತಿಯನ್ನು ಪ್ರತಿಬಂದ ವಲಯಗಳನ್ನು ಅಳೆಯುವುದರ ಮೂಲಕ ನಿರ್ಧರಿಸಲಾಯಿತು.

ಪ್ರತಿಜೀವಕ ಸಂವೇದನಾ ಪರೀಕ್ಷೆ (ಆಂಟಿಬಯಾಟಿಕ್ ಸೆನ್ಸಿಟಿವಿಟಿಟೆಸ್ಟ್) ಬ್ಯಾಕ್ಟೀರಿಯಗಳ ದ್ರಾವಣವನ್ನುಘನೀಕೃತಗೊಂಡ ಪೌಷ್ಟಿಕ ಅಗಾರ್ ಮಾಧ್ಯಮದ ಮೇಲೆ ಹತ್ತಿಸ್ವ್ಯಾಬ್‌ಗಳ ಸಹಾಯದಿಂದ ಸಮಾನವಾಗಿ ಸವರಲಾಯಿತು. ಪ್ರತಿಜೀವಕ ಡಿಸ್ಕ್‌ಗಳಾದ, ಮೆಥಿಸಿಲಿನ್, ಅಂಪಿಸಿಲಿನ್ ಮತ್ತು ವ್ಯಾಂಕೋಮೈಸಿನ್ (10ಮೈಕ್ರೊಗ್ರಾಮ್) ಗಳನ್ನು ಅಗಾರ್ ಮೇಲ್ಮೈಗಳಲ್ಲಿ ಸಮಾನದೂರದಲ್ಲಿಇರಿಸಲಾಯಿತು. ಸಂವೇದನೆಅಥವಾ ಪ್ರತಿರೋಧ ಶಕ್ತಿಯನ್ನು, ಪ್ರತಿಬಂದ ವಲಯವನ್ನು ಅಳೆಯುವ ಮೂಲಕ ಅಂದಾಜು ಮಾಡಲಾಯಿತು.

ನೈಸರ್ಗಿಕ ಉತ್ಪನ್ನಗಳ ಬ್ಯಾಕ್ಟೀರಿಯ ವಿರೋದಿ ಚಟುವಟಿಕೆ: ಶೇ.10% ಪ್ರಮಾಣದ ನೈಸರ್ಗಿಕ ಉತ್ಪನ್ನಗಳಾದ ಕ್ಲೋರೋಪಾರಂನಿಂದ ತೆಗೆದತೆಂಗಿನತೈಲ ಸಾರ ನೀರಿನಲ್ಲಿತೆಗೆದ ವಾಯು ವಿದಂಗಎಲೆಯ ಸಾರ, ಮತ್ತುಕ್ಯಾರಿಯಅರ್ಬೊರಿಯತೊಗಟೆಯ ಸಾರಗಳನ್ನು ಮೇಲೆ ತಿಳಿಸಿದ ಅಗಾರ್ ಬಾವಿ ವಿಧಾನದಲ್ಲಿ ಪರೀಕ್ಷಿಸಲಾಯಿತು.

ಫಲಿತಾಂಶಗಳು:–

- ಪ್ರಸ್ತುತ ಪ್ರಯೋಗದಲ್ಲಿ ಸುಮಾರು 4 ಮಾದರಿಗಳಿಂದ 41 ಬ್ಯಾಕ್ಟೀರಿಯ ಹಾಗೂ 17 ಶಿಲೀಂಧ್ರಗಳನ್ನು ಪ್ರತ್ಯೇಕಿಸಲಾಯಿತು. ಪ್ರತ್ಯೇಕಗೊಂಡ ಬ್ಯಾಕ್ಟೀರಿಯಾಗಳನ್ನು ಅವುಗಳ ಪ್ರಭೇದ ಹಾಗೂ ಕುಲಗಳಾಗಿ ವಿಂಗಡಿಸಲಾಯಿತು.
- ಗ್ರಾಂಧನಾತ್ಮಕ ಬ್ಯಾಕ್ಟೀರಿಯಗಳಾದ ಸ್ಟೆಫೈಲೊಕಾಕಸ್‌ಆರಿಯಸ್, ಮೈಕ್ರೊಕಾಕಸ್ ಲೂಟಿಯಸ್ ಮತ್ತುಎಂಟೆರೊಕಾಕಸ್ ಫೀಕಾಲಿಸ್ ಬ್ಯಾಕ್ಟೀರಿಯಾಗಳನ್ನು ಮುಂದಿನ ಪ್ರಯೋಗಕ್ಕೆ ಬಳಸಿಕೊಳ್ಳ ಲಾಯಿತು.
- ಕೃತಕ ಶುದ್ಧೀಕರಿಸುವ ದ್ರಾವಣಗಳು ಈ ಬ್ಯಾಕ್ಟೀರಿಯಾಗಳನ್ನು ಪ್ರತಿಬಂದಿಸುವ ಶಕ್ತಿಯನ್ನು ಪರೀಕ್ಷಿಸಿದಾಗ ಮೂರು ದ್ರಾವಣಗಳು, ನಕರಾತ್ಮಕ ಫಲಿತಾಂಶವನ್ನು ತೋರಿಸಿದ್ದು,50% ಡೆಟಾಲ್ ಸೋಂಕು ನಿವಾರಕದ್ರಾವಣವುಉತ್ತಮ ಫಲಿತಾಂಶವನ್ನು ತೋರಿಸಿದೆ.
- ಬ್ಯಾಕ್ಟೀರಿಯ ಪ್ರತಿಜೀವಕ ಸಂವೇದನಾ ಪರೀಕ್ಷೆಯಲ್ಲಿ ಮೇಲ್ಕಾಣಿಸಿದ ಬ್ಯಾಕ್ಟೀರಿಯ ಪ್ರಭೇದಗಳಲ್ಲಿ ಸ್ಟೆಫೈಲೊಕಾಕಸ್ ಮಿಥಿಸಿಲಿನ್ ಹಾಗೂ ವ್ಯಾಂಕೊಮೈಸಿನ್‌ಗೆ ನಿರೋಧಕ ಶಕ್ತಿಯನ್ನು ಮೈಕ್ರೊಕಾಕಸ್‌ಲೂಟಿಯಸ್ ಪೆನಿಸಿಲಿನ್‌ಗೆ ಮತ್ತು ಎಂಟೊರೊಕಾಕಸ್ ಆಂಪಿಸಿಲಿನ್‌ಗೆ ನಿರೋಧಕ ಶಕ್ತಿಯನ್ನು ತೋರಿಸಿದವು. ಪ್ರಮುಖವಾಗಿ ಸ್ಟೆಫೈಲೊಕಾಕಸ್‌ಆರಿಯಸ್ ಬ್ಯಾಕ್ಟೀರಿಯ ಬಹು ಪ್ರತಿಜೀವಕ ನಿರೋಧಕ ಶಕ್ತಿಯನ್ನು ತೋರಿಸಿದೆ.
- ನೈಸರ್ಗಿಕ ಉತ್ಪನ್ನಗಳಾದ ಸಸ್ಯಸಾರತೊಗಟೆಸಾರ, ತೈಲಸಾರಗಳನ್ನು ಈ ಬ್ಯಾಕ್ಟೀರಿಯಾಗಳನ್ನು ನಿಯಂತ್ರಿಸುವ ಶಕ್ತಿಯನ್ನು ಪರಿಶೀಲಿಸಿದಾಗ ಗಣನೀಯ ಪರಿಣಾಮಕಾರಿ ಫಲಿತಾಂಶವನ್ನುತೋರಿಸಿದಾಗ, ಗಣನೀಯ ಪರಿಣಾಮಕಾರಿ ಫಲಿತಾಂಶವನ್ನು ತೋರಿಸಿದವು. ಶೇಕಡ 10 ವಾಯುವಿದಂಗ ಎಲೆಯ ನೀರಿನಸಾರ ಹಾಗೂ ತೆಂಗಿನತೈಲದ ಕ್ಲೋರೋಫಾರಂ ಸಾರಉತ್ತಮ ಫಲಿತಾಂಷವನ್ನು ತೋರ್ಪಡಿಸಿದೆವು.

ಸಾರಾಂಶ:

- ಅಂತರ್ಜಾಲ ತಾಣಗಳ ಗಣಕಯಂತ್ರಗಳ ಕೀಬೋರ್ಡ ಮತ್ತು ಮೌಸ್‌ಗಳಿಂದ ಸಂಗ್ರಹಿಸಿದ ಮಾದರಿಗಳಲ್ಲಿ ರೋಗಾಣುಕಾರಕ ಬ್ಯಾಕ್ಟೀರಿಯಾಗಳುಗುರುತಿಸಲ್ಪಟ್ಟವು.
- ಪ್ರಮುಖವಾಗಿ ಗ್ರಾಂಧನಾತ್ಮಕ ದುಂಡಾಣುಗಳಾದ ಸ್ಟೆಫೈಲೊಕಾಕಸ್ ಫೀಕಾಲಿಸ್ ಬ್ಯಾಕ್ಟೀರಿಯಾಗಳನ್ನು ಪ್ರಯೋಗಕ್ಕೆ ಬಳಸಲಾಯಿತು.
- ಈ ಎಲ್ಲಾ ಬ್ಯಾಕ್ಟೀರಿಯಾ ಪ್ರಭೇದಗಳನ್ನು ನಿಯಂತ್ರಿಸುವಲ್ಲಿ ಕೃತಕ ಶುಚಿಗೊಳಿಸುವ ದ್ರಾವಣಗಳು ವಿಫಲವಾಗಿದ್ದು, ಕೇವಲ(50%) ಡೆಟಾಲ್ ರೋಗಾಣುನಾಶಕದ್ರವ್ಯವು ಉತ್ತಮ ಫಲಿತಾಂಶವನ್ನುತೋರಿಸಿತು.
- ಪ್ರತಿಜೀವಕ್ಕೆ ಸಂವೇದನಾ ಪರೀಕ್ಷೆಗೆ ಈ ಬ್ಯಾಕ್ಟೀರಿಯಾಗಳನ್ನು ಒಳಪಡಿಸಿದಾಗ ನಿರೋಧಕ ಶಕ್ತಿಯನ್ನು ತೋರಿಸಿದ್ದು,

ಸ್ಟೆಪ್ಟೆಲೊಕಾಕಸ್ ಆರಿಯಸ್ ಬ್ಯಾಕ್ಟೀರಿಯಾ ಬಹು ಪ್ರತಿಜೀವಕ ನಿರೋಧಕ ಶಕ್ತಿಯನ್ನು ತೋರಿಸಿತು.

❖ ಪ್ರತಿಜೀವಕ ನಿರೋಧಕ ಬ್ಯಾಕ್ಟೀರಿಯಾಗಳನ್ನು ನಿಯಂತ್ರಿಸುವಲ್ಲಿ ನೈಸರ್ಗಿಕ ಉತ್ಪನ್ನಗಳ ಸಾರಗಳಾದ ವಾಯುವಿದಂಗ ಹಾಗೂ ತೆಂಗಿನತೈಲ ಸಾರಗಳು ಸಮರ್ಥವಾಗಿವೆ ಎಂಬುದು ಧೃಡಪಟ್ಟಿತು.

ತೀರ್ಮಾನ :

❖ ಗಣಕಯಂತ್ರಗಳು ಪ್ರತಿಜೀವಕ ನಿರೋಧಕರೋಗಾಣುಕಾರಕ ಬ್ಯಾಕ್ಟೀರಿಯಾಗಳನ್ನು ಹರಡುವ ಪ್ರಬಲ ಮಾಧ್ಯಮಗಳಾಗಿ ಹೊರಹೊಮ್ಮುತ್ತಿರುವುದು ಹಾಗೂ ಸೋಂಕು ನಿವಾರಕ ದ್ರಾವಣಗಳು ಇವುಗಳನ್ನು ನಿಯಂತ್ರಿಸುವಲ್ಲಿ ವಿಫಲವಾಗಿರುವುದು.

❖ ಈ ಆಂಟಿಬಯಾಟಿಕ್ ನಿರೋಧಕ ಬ್ಯಾಕ್ಟೀರಿಯಾಗಳು ಗಣಕಯಂತ್ರಗಳ ಸಂಪರ್ಕ ಹೊಂದಿದ ಬಳಕೆದಾರರಿಗೆ ಸುಲಭವಾಗಿ ಹರಡಿ, ರೋಗಗಳನ್ನು ಉಂಟುಮಾಡುವ ಸಾಧ್ಯತೆಗಳು ಹೆಚ್ಚಾಗಿದ್ದು ಇವುಗಳ ಹತೋಟಿಯು ಕ್ಲಿಷ್ಟಕರವಾಗಬಲ್ಲದು.

ಕೋಷ್ಟಕ ಸಂಖ್ಯೆ 1: ಪ್ರತಿಜೀವಕ ನಿರೋಧಕ ರೋಗಕಾರಕ ಸೂಕ್ಷ್ಮಾಣು ಜೀವಿಗಳ ನೈಸರ್ಗಿಕ ಉತ್ಪನ್ನಗಳ ಪರಿಣಾಮ.

ಕ್ರ ಸಂ.	ಬ್ಯಾಕ್ಟೀರಿಯಾಗಳು	ಪ್ರತಿಬಂದ ವಲಯ ಮಿಮೀಟರಗಳಲ್ಲಿ						
		ಮಿಥಿಸಿಲಿನ್	ವ್ಯಾಂಕೊಮೈಸಿನ್	ಪೆನಿಸಿಲಿನ್	ಆಂಪಿಸಿಲಿನ್	ಸಸ್ಯಸಾರ,	ತೊಗಟೆಸಾರ	ತೈಲಸಾರ
1	ಸ್ಟೆಪ್ಟೆಲೊಕಾಕಸ್ ಆರಿಯಸ್	ನಿರೋಧಕ	ನಿರೋಧಕ	ನಿರೋಧಕ	ನಿರೋಧಕ	30	–	20
2	ಮೈಕ್ರೊಕಾಕಸ್ ಲೂಟಿಯಸ್	ನಿರೋಧಕ	10	ನಿರೋಧಕ	ನಿರೋಧಕ	24	10	30
3	ಎಂಟಿರೊಕಾಕಸ್ ಫೀಕಾಲಿಸ್	ನಿರೋಧಕ	–	ನಿರೋಧಕ	ನಿರೋಧಕ	21	20	30

ಉಲ್ಲೇಖಗಳು:

1 Ajenifuja , Oluwafemi ಎ ಮತ್ತು Ajibade V.A. 2012 ಪರಾವಲಂಬಿ ಮೊಟ್ಟೆಗಳನ್ನು ಮತ್ತು ಕಂಪ್ಯೂಟರ್ ಮೌಸ್ ಪರಾವಲಂಬಿಗಳು ಚೀಲಗಳು ಮತ್ತು ಫೆಡರಲ್ ಪಾಲಿಟೆಕ್ನಿಕ್, ಸಡಗರ – Ekiti , ನೈಜೀರಿಯಾ ವಿಜ್ಞಾನ ಮತ್ತು ಕಂಪ್ಯೂಟರ್ ಅಧ್ಯಯನ ಸ್ಕೂಲ್‌ನಲ್ಲಿ ಕೀಬೋರ್ಡ್ ವ್ಯಾಪಕತೆ, ವಿಜ್ಞಾನ ಫ್ರಾಂಟಿಯರ್ ರಿಸರ್ಚ್ ಜಾಗತಿಕಜರ್ನಲ. 12 (4): ಪುಟಗಳು 27-30 .

2 ಅಲ್ Ghamdi ಎಕೆ, Abdelmalek SMA , Ashshi ಎಎಮ್, Faidah ಎಚ್, Shukri ಎಚ್ ಮತ್ತು ಜಿ ಮಾನವ Fatani ಎಎ ಕಂಪ್ಯೂಟರ್ ಕೀಬೋರ್ಡ್ ಹಾಗು ಮೈಸ್, ಲಿಫ್ಟ್ ಬಟನ್ ಮತ್ತು ಖರೀದಿ ಬಂಡಿಗಳು 2011 ಬ್ಯಾಕ್ಟೀರಿಯಾದಿಂದ ಉಂಟಾಗುವ ಮಾಲಿನ್ಯವನ್ನು. ಮೈಕ್ರೋಬಯಾಲಜಿ ರಿಸರ್ಚ್ ಆಫ್ರಿಕನ್ ಜರ್ನಲ್. 5 (23): pp. 3998-4003 .

3 Amira ಎಚ್.ಎ.ಅಲ್ Abdulall . 2010 ಬೇರ್ಪಡಿಸುವಿಕೆ ಮತ್ತು ಪೂರ್ವ ಸೌದಿ ಅರೇಬಿಯಾದಲ್ಲಿ ದಮ್ಮಾಮ್ ಮೊಬೈಲ್ ಫೋನ್ ಸಂಬಧಿಸಿದ ಸೂಕ್ಷ್ಮಜೀವಿಗಳ ಗುರುತಿನ. ಕುಟುಂಬ ಮತ್ತು ಸಮುದಾಯ ಮೆಡಿಸಿನ್. 17 (1): ಪುಟಗಳಳು 11-14 .

4 Aneja ಕೆ. ಮೈಕ್ರೋಬಯಾಲಜಿ ಸಸ್ಯ ರೋಗಶಾಸ್ತ್ರ ಅಂಗಾಂಶ ಕೃಷಿ ಮತ್ತು ಅಣಬೆ ಸಾಗುವಳಿ ೧೯೯೬ ಪ್ರಯೋಗಗಲು. ೨ನೇ ಆವೃತ್ತಿ. ನ್ಯೂ ವಯಸ್ಸು ಇಂಟರ್ನ್ಯಾಷನಲ್ (ಪು) ಲಿಮಿಟೆಡ್. ಭಾರತದ pp.1-448

5 ಅನುಪಮ್ ದಾಸ್, ರಿತು Kansal , ಆಶಿಶ್ ಕೆ ಅಸ್ತಾನ, ಅನಿತಾ ಪಾಂಡೆ ಮತ್ತು ಮೊಲ್ಲಿ ಮದನ್ . 2011 Fomites ಇ. ಬಯಲಾಜಿಕಲ್ ರಿಸರ್ಚ್ ಆನ್ನಲ್ಸ್ 2 (2) : ಪುಟಗಳು 111-115

6 ಅಶೋಕ್ ಕುಮಾರ್ ಮತ್ತು ಮೀನಾ ಶ್ರೀವಾಸ್ತವ. ೨೦೧೩ ಕಂಪ್ಯೂಟರ್ ಕಾಲೇಜಿನಲ್ಲಿ ಘಟಕಗಳೂ ಮತ್ತು ಅದರ ಸುತ್ತಮುತ್ತಲಿನ ರೋಗಕಾರಕ ಬ್ಯಾಕ್ಟೀರಿಯೆ ಒಳಗೊಂಡಿರುತ್ತದೆ. ಅಂತರಾಷ್ಟ್ರೀಯ ಪರಿಣಿತರ ಪರಾಮರ್ಶೆ ಜರ್ನಲ್. 7 (1): ಪುಟಗಳು. 43-47 .

7 Awoleye ಓಂಕಾರವನ್ನು Ogunkanbi ಡಿಎ, Ayo - Lawal ಆರ್, ಎ Adewole ಹೋಗಿ Elufisan ರಿಂದ 2012 CKS ಜೊತೆ ಟಿಕ್ಕೋ ಸೂಕ್ಷ್ಮಜೀವಿಯ ಹಜಾರ್ಡ್ಸ್ ಅಸೋಸಿಯೇಟೆಡ್: ನೈಜೀರಿಯಾದ ಸಾರ್ವಜನಿಕ ಆರೋಗ್ಯ ಅಪಾಯದ ಮತ್ತು ನೀತಿ ಇಂಪ್ಲಿಕೇಶನ್ಸ್. ಮಾಹಿತಿ ವಿಜ್ಞಾನ ಇಂಟರ್ನ್ಯಾಷನಲ್ ಜರ್ನಲ್ ೨ (೪) ಪುಟಗಳು 37-41

8 ಬರ್ನೆಟ್ ಎಚ್. ಎಲ್ ಮತ್ತು ಬಿ. ಬಿ. ಹಂಟರ್, ೧೯೭೨ ಇಲ್ಲಸ್ಟ್ರೇಟೆಡ್ ಕುಲಗಳ ಅಪೂರ್ಣ ಶಿಲೀಂದ್ರಗಳು. 3rdedn . Burgress : ಹೊಸ ಆಸ್ಪತ್ರೆ ಪಂಸರ, Akure , ನೈಜೀರಿಯಾ. N.J. ಯಾರ್ಕ್. ಪುಟಗಳು : 241 .

9 ಬರ್ನ್ಡ್ ಹಾರ್ಟ್ಮನ್, ಮ್ಯಾಥಿಯಸ್ ಬೆನ್ಸನ್ ಆಕ್ಸೆಲ್ ಜಂಗರ್, ಲೊರೆಂಜೊ ಕ್ವಿಂಜೊಯಿ, ರೈನರ್ ರೋ « hrig , ಬರ್ನಾರ್ಡ್ Fengler , ಉಡೊ ಡಬ್ಲ್ಯೂ ಫಾ « rber , BurkhardWille , ಮತ್ತು ಗುಂಟರ್ ಹೇವನ್ pelmann . ತೀವ್ರ ನಿಗಾ ಘಟಕದಲ್ಲಿ ರೋಗಕಾರಕಗಳನ್ನು ಸಂಗ್ರಹಾಗಾರವಾಗಿ ೨೦೦೪ ಕಂಪ್ಯೂಟರ್ ಕೀಬೋರ್ಡ್ ಮತ್ತು ಮೌಸ್. ಕ್ಲಿನಿಕಲ್ ಮಾನಿಟರಿಂಗ್ ಮತ್ತು ಕಂಪ್ಯೂಟಿಂಗ್ ಜರ್ನಲ್. ೧೪ (೧): ಪುಟಗಳು. 7-12 .

10 ಕ್ಯಾಪ್ಪುಚ್ಚಿನೊ. J.G ಮತ್ತು ನಟಾಲಿಯಾ shermann . ಮೈಕ್ರೊಬಯಾಲ್– ogy .4th ಆವೃತ್ತಿಯ ೧೯೯೯ ಎ ಲ್ಯಾಬರೇಟರಿ ಮ್ಯಾನ್ಯುಯೆಲ್. ವೆಸ್ಲಿ ಲಾಂಗ್ಮನ್. Inc.England . ಪುಟಗಳು. 1-477

ತ್ಯಾಜ್ಯ ಜಲ ಸಂಸ್ಕರಣೆಯಲ್ಲಿ ನ್ಯಾನೋತಂತ್ರಜ್ಞಾನದ ಪಾತ್ರ

ಶಂಕ್ರಮ್ಮ ಕೆ, ವಿದ್ಯಾ ಶೆಟ್ಟಿ ಕೆ*
ರಾಸಾಯನಿಕ ಇಂಜಿನಿಯರಿಂಗ್ ವಿಭಾಗ, ನಾಷನಲ್ ಇನ್ಸ್ಟಿಟ್ಯೂಟ್ ಒಫ್ ಟೆಕ್ನಾಲಜಿ, ಸುರತ್ಕಲ್, ಕರ್ನಾಟಕ
ಇಮೇಲ್: shankrutk@gmail.com

20ನೇ ಶತಮಾನದಲ್ಲಿ ಮನುಕುಲಕ್ಕೆ ಶುದ್ಧ ಜಲವನ್ನು ಒದಗಿಸುವುದು ಒಂದು ವೈಜ್ಞಾನಿಕ ಸವಾಲಾಗಿದೆ. ಈ ನಿಟ್ಟಿನಲ್ಲಿ ನ್ಯಾನೋತಂತ್ರಜ್ಞಾನವು, ತ್ಯಾಜ್ಯ ಜಲ ಸಂಸ್ಕರಣೆಯ ಸಂಶೋಧನೆಯಲ್ಲಿ ಅತೀ ಮುಖ್ಯವಾಗಿದ್ದು, ಸುರಕ್ಷಿತ ಅಸಾಂಪ್ರದಾಯಿಕ ಜಲ ಮೂಲವನ್ನು ಒದಗಿಸಲು ಸಹಕಾರಿಯಾಗಿದೆ. ನಾನೋ ಕಣಗಳಾದ ಕಾರ್ಬೋನೇಷಿಯಸ್ ನಾನೋ ಕಣ, ಜೀಯೋಲೈಟ್ ಮತ್ತು ಡೆನ್ಡ್ರೈಮ್‌ಗಳು ನೀರಿನಲ್ಲಿನ ವಿಷಕಾರಿ ಲೋಹದ ಕಣಗಳು, ರೋಗ ಹರಡಿಸುವ ವೈರಾಣುಗಳು ಮತ್ತು ಅಜೈವಿಕ ದ್ರಾವ್ಯಗಳನ್ನು ತೆಗೆಯುವಲ್ಲಿ ಸಫಲವಾಗಿವೆ. ಇತ್ತೀಚಿನ ದಿನಗಳಲ್ಲಿ, ನಾನೋಹೀರಿಕೊಳ್ಳುವಿಕೆ, ನಾನೋವೇಗವರ್ಧಕಗಳು, ಜೈವಿಕ ಚಟುವಟಿಕೆಯುಳ್ಳ ಕಣಗಳು, ಜೈವಿಕಾನುಕರಣಶೀಲ ಪೊರೆಗಳು ಮುಂತಾದವು ತ್ಯಾಜ್ಯ ಜಲ ಸಂಸ್ಕರಣೆಯಲ್ಲಿ ಉಪಯೋಗಿಸುತ್ತಿದ್ದು, ಮುಂದಿನ ದಿನಗಳಲ್ಲಿ ನ್ಯಾನೋತಂತ್ರಜ್ಞಾನವನ್ನು ಸಣ್ಣ ಮತ್ತು ಬೃಹತ್ ಪ್ರಮಾಣದಲ್ಲಿ ತ್ಯಾಜ್ಯ ಜಲ ಸಂಸ್ಕರಣೆಯಲ್ಲಿ ಉಪಯೋಗಿಸಬಹುದಾಗಿದೆ.

ಮುನ್ನುಡಿ : ನ್ಯಾನೋತಂತ್ರಜ್ಞಾನ ಮತ್ತು ಪರಿಸರ, ಇವೆರಡು ಜೇನಸ್ ಮುಖೀಯಾ ಸಂಬಂಧವೇ? ಈ ಪ್ರಶ್ನೆಗೆ ಉತ್ತರವನ್ನು ಕಂಡು ಹಿಡಿಯಲು ಅನೇಕ ಸಂಶೋಧನೆಗಳು ನಡೆಯುತ್ತಿವೆ. ನ್ಯಾನೋ ತಂತ್ರಜ್ಞಾನ ಮತ್ತು ಅದರ ಉತ್ಪನ್ನಗಳು ಶುದ್ಧ ಮತ್ತು ಆರೋಗ್ಯಕರ ವಾತಾವರಣವನ್ನು ನೀಡುವವು ಎಂಬ ಬೃಹತ್ ಭರವಸೆಯು ಇತ್ತೀಚಿನ ದಿನಗಳಲ್ಲಿ ಕಂಡುಬಂದಿದೆ. ವಿಜ್ಞಾನಿಗಳಲ್ಲದೇ, ಸಾಮಾನ್ಯಜನರಲ್ಲೂ ಕೂಡ ನ್ಯಾನೋ ಕಣಗಳು ವಾತಾವರಣದ ಮೇಲೆ ಬೀರುವ ಪ್ರಭಾವಗಳ ಚರ್ಚೆ ನಡೆಯುತ್ತಲೇ ಇದೆ ಮತ್ತು ಬಹುಮುಖ್ಯವಾಗಿ ಇತ್ತೀಚಿನ ದಿನಗಳಲ್ಲಿ, ನ್ಯಾನೋ ವಿಷವೈದ್ಯ ಮಾರ್ಗವು ಅತ್ಯಂತ ಮಹತ್ವ ಪಡೆದುಕೊಂಡಿದೆ. ಭೂಮಿಯ ಮೇಲೆ, ಮನುಷ್ಯರು ಮತ್ತು ಅನೇಕ ಜೀವಿಗಳಿಗೆ ಶುದ್ಧ ನೀರು, ಗಾಳಿ ಮತ್ತು ಮಣ್ಣನ್ನು ಒದಗಿಸುವುದು ಈಗಿನ ಸಮಯದಲ್ಲಿ ಒಂದು ದೊಡ್ಡ ಸವಾಲಾಗಿದೆ (ಚಿತ್ರ 1). ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಶುದ್ಧ ಜಲದ ಕೊರತೆಯು ಅತಿಯಾಗಿದ್ದು, ನ್ಯಾನೋ ತಂತ್ರಜ್ಞಾನದಿಂದ ತ್ಯಾಜ್ಯ ಜಲವನ್ನು ಅಗ್ಗ ಮತ್ತು ಸಮರ್ಥವಾಗಿ ಶುದ್ಧೀಕರಿಸಬಹುದಾಗಿದೆ ಎಂಬ ಭರವಸೆಯು ಇತ್ತೀಚಿನ ದಿನಗಳಲ್ಲಿ ಮೂಡಿಬರುತ್ತಿದೆ. 100 ನ್ಯಾನೋ ಮೀಟರ್ ಗಿಂತ ಕಡಿಮೆ ಗಾತ್ರದ ನ್ಯಾನೋಕಣಗಳನ್ನು ಇತ್ತೀಚಿನ ದಿನಗಳಲ್ಲಿ ತ್ಯಾಜ್ಯ ಜಲ ಸಂಸ್ಕರಣೆಗೆ ಉಪಯೋಗಿಸುತ್ತಿದ್ದು, ಅವುಗಳ ಗಾತ್ರಾವಲಂಬಿತ ಲಕ್ಷಣಗಳು, ಹೆಚ್ಚು ಪ್ರಕ್ರಿಯೆ, ಹೆಚ್ಚು ಹೀರುವಿಕೆ, ಉನ್ನತ ಪ್ಯಾರಾ ಕಾಂತೀಯ ಗುಣಗಳು, ಮೇಲ್ಮೈ ಪ್ಲಾಸ್ಮಾನ್ ಅನುಕರಣ ಮತ್ತು ಕ್ವಾಂಟಮ್ ಬಂಧನ ಪರಿಣಾಮ ಮಂತಾದ ಅನೇಕ ಗುಣಲಕ್ಷಣಗಳು ಸಹಕಾರಿಯಾಗಲಿದೆ.



ಚಿತ್ರ 1

ತ್ಯಾಜ್ಯ ಜಲ ಸಂಸ್ಕರಣೆಯಲ್ಲಿ ನ್ಯಾನೋತಂತ್ರಜ್ಞಾನದ ಅನೇಕ ವಿಧಾನಗಳು

ಶುದ್ಧ ಜಲವು, ಜಗತ್ತಿನ ಎಲ್ಲಾ ಕಾರ್ಯನಿರತ ಸಮಾಜದ ಅವಶ್ಯಕತೆಯಾಗಿದ್ದು, ಅದು ಲಭ್ಯತೆಯು ಸೀಮಿತವಾಗಿದೆ. ಹೊಸ ಹೊಸ ಆವಿಷ್ಕಾರಗಳ ಮುಖಾಂತರ ಜಲ ಶುದ್ಧೀಕರಣಕ್ಕಾಗಿ ಪ್ರಯತ್ನಿಸುತ್ತಿದ್ದು, ಕಡಿಮೆ ವೆಚ್ಚದಲ್ಲಿ ಮತ್ತು ಪರಿಣಾಮಕಾರಿಯಾಗಿ ಜಲದಲ್ಲಿರುವ ತ್ಯಾಜ್ಯವನ್ನು ತೆಗೆಯುವುದು ಒಂದು ಸವಾಲಾಗಿದೆ. ಹಾಗಾಗಿ ನ್ಯಾನೋಕಣಗಳ ಪ್ರಬಲ ಹೀರುವಿಕೆ, ರಸಾಯನಿಕ ಮತ್ತು ದ್ಯುತಿ ರಸಾಯನಿಕ ತ್ಯಾಜ್ಯಗಳ ನಿರ್ಮೂಲನೆ, ಕಾಂತೀಯ ಗುಣಗಳು ಮತ್ತು ಅನೇಕ ಗುಣಗಳಿಂದ ತ್ಯಾಜ್ಯವನ್ನು ಹೇಗೆ ತೆಗೆಯಬಹುದು ಎಂದು ಕೆಳಗಿನ ವಿಭಾಗಗಳಲ್ಲಿ ವಿವರಿಸಲಾಗಿದೆ.

ಕಾಂತೀಯ ನ್ಯಾನೋ ಕಣಗಳು: ಕಾಂತೀಯ ನ್ಯಾನೋ ಕಣಗಳು, ಅಕಾಂತೀಯ ಕಣಗಳಿಗಿಂತ ಉತ್ತಮವಾಗಿದ್ದು, ಅಯಸ್ಕಾಂತೀಯ ಕ್ಷೇತ್ರದಿಂದ ಅವುಗಳನ್ನು ಜಲದಿಂದ ಬೇರ್ಪಡಸಬಹುದಾಗಿದೆ. ಈ ರೀತಿಯ ತಂತ್ರವನ್ನು ವೈದ್ಯಕೀಯ ಕ್ಷೇತ್ರ ಮತ್ತು ಅದಿರು ಸಂಸ್ಕರಣೆಯಲ್ಲಿ ಹೆಚ್ಚಾಗಿ ಉಪಯೋಗಿಸುತ್ತಾರೆ. ಈ ತಂತ್ರದ ಮುಖಾಂತರ, ನೀರಿನಲ್ಲಿರುವ ತ್ಯಾಜ್ಯವನ್ನು ತೆಗೆಯುವುದಲ್ಲದೇ, ಆ ಕಣಗಳನ್ನು ಮತ್ತೆ ಮತ್ತೆ ಮರುಬಳಕೆಮಾಡಬಹುದಾಗಿವೆ. ಈ ವಿಧಾನದಲ್ಲಿ Fe_2O_3, g-Fe_2O_3 ಮತ್ತು ಜ಼ೇಕಬ್ ಸೈಟ್ ($MnFe_2O_4$) ನ್ಯಾನೋಕಣಗಳನ್ನು ಜಲದಿಂದ ಕ್ರೋಮಿಯಂ ಅನ್ನು ಹೊರತೆಗೆಯಲು ಉಪಯೋಗಿಸುತ್ತಾರೆ. ನೀರಿನಲ್ಲಿ ಕರಗಬಹುದಂತಹ ಇಂಗಾಲದ ನ್ಯಾನೋಕೊಳವೆಗಳನ್ನು, ಕಬ್ಬಿಣದ ನ್ಯಾನೋ ಕಣಗಳೊಂದಿಗೆ ಉಪಯೋಗಿಸಿ ಆರೋಮ್ಯಾಟಿಕ್ ಸಂಯುಕ್ತಗಳನ್ನು ಜಲದಿಂದ ಪರಿಣಾಮಕಾರಿಯಾಗಿ ಬೇರ್ಪಡಿಸಬಹುದಾಗಿದೆ. (ಚಿತ್ರ 2)



ಚಿತ್ರ 2

ನ್ಯಾನೋ ಶೋಧಕಗಳು : ನ್ಯಾನೋ ಶೋಧಕ ಪೊರೆಗಳನ್ನು ಇತ್ತೀಚಿನ ದಿನಗಳಲ್ಲಿ ಕುಡಿಯುವ ನೀರು ಸಂಸ್ಕರಣೆ ಮತ್ತು ಶುದ್ಧೀಕರಣದಲ್ಲಿ ಅತಿಯಾಗಿ ಉಪಯೋಗಿಸುತ್ತಿದ್ದಾರೆ. ಈ ಪೊರೆಗಳು, ಒತ್ತಡ ಸಂಬಂಧಿತ ಪೊರೆಗಳಾಗಿದ್ದು, ರಿವರ್ಸ್ ಆಸ್ಮೋಸಿಸ್ ಮತ್ತು ಆಲ್ಟ್ರಾ ಶುದ್ಧೀಕರಣ ಪೊರೆಗಳ ನಡುವೆ ತಮ್ಮ ಗುಣಲಕ್ಷಣಗಳನ್ನು ಹೊಂದಿದ್ದು, ಅದರ ಪೊರೆಗಳ ಅಳತೆಯು 0.2 ರಿಂದ 4 ನಾನೋ ಮೀಟರ್ ಆಗಿವೆ. ಈ ಪೊರೆಗಳು ಜಲದಲ್ಲಿನ ಮಣ್ಣಿನ ಅಂಶಗಳು, ಮೈಕ್ರೋ ಜೀವಕೋಶಗಳು ಮತ್ತು ಅಜೈವಿಕ ಅಯಾನುಗಳು (Ca, Na) ಅನ್ನು ಪರಿಣಾಮಕಾರಿಯಾಗಿ ಹೊರತೆಗೆಯುತ್ತದೆ. ಈ ಪೊರೆಗಳನ್ನು ಅಂತರ್ಜಲವನ್ನು ಮೃದುವಾಗಿಸಲು, ಜೈವಿಕ ಪದಾರ್ಥಗಳನ್ನು ಹೊರತೆಗೆಯಲು, ಜಾಡಿನ ಮಾಲಿನ್ಯ ಕಾರಕಗಳು (ಜೈವಿಕ ಇಂಗಾಲ ಮುಂತಾದವು) ಮತ್ತು ಸಮುದ್ರ ನೀರಿನ ಡಿ–ಸಲೀನೇಷನ್‌ಗಾಗಿ ಉಪಯೋಗಿಸುತ್ತಾರೆ. ಇಂಗಾಲದ ನ್ಯಾನೋ ಕೊಳವೆಗಳನ್ನು, ಟೊಳ್ಳು ಏಕಶಿಲೀಯ ಸಿಲಿಂಡರ್ ಆಕೃತಿಯನ್ನಾಗಿ ಮಾಡಿದಾಗಿ ಅವು ಬ್ಯಾಕ್ಟೀರಿಯಾ ಮತ್ತು ಹೈಡ್ರೋ ಇಂಗಾಲವನ್ನು ಪರಿಣಾಮಕಾರಿಯಾಗಿ ತೆಗೆಯುವಲ್ಲಿ ಬಳಸಬಹುದಾಗಿದೆ ಮತ್ತು ಆಲ್ಟ್ರಾ ಸಾನೀಕೇಷನ್ ಕ್ರಿಯೆಯ ಮುಖಾಂತರ ಮತ್ತೆ ಮರುಬಳಕೆ ಮಾಡಬಹುದಾಗಿದೆ.

ನ್ಯಾನೋ ಹೀರುವಿಕೆ : ನ್ಯಾನೋ ಹೀರುವಿಕೆ ಕಣಗಳು, ಹೆಚ್ಚು ಮತ್ತು ನಿರ್ದಿಷ್ಟ ಪ್ರಮಾಣದಲ್ಲಿ ಹೀರಿಕೊಳ್ಳಲು ಶಕ್ತವಾಗಿದ್ದು, ಜಲ ಸಂಸ್ಕರಣೆಯಲ್ಲಿ ಅತೀ ಹೆಚ್ಚಾಗಿ ಉಪಯೋಗಿಸುತ್ತಾರೆ. ಅಮೇರಿಕಾ ಮತ್ತು ಏಷಿಯಾ ಖಂಡಗಳಲ್ಲಿ, ಈ ವಿಧಾನವು ಖಾಸಗಿ ವಾಣಿಜ್ಯವಾಗಿ ಬೆಳೆದಿದ್ದು, ನಿರ್ದಿಷ್ಟ ಪದಾರ್ಥಗಳನ್ನು ಜಲದಿಂದ ಈ ವಿಧಾನದಿಂದ ಬೇರ್ಪಡಿಸುವ ಸಂಶೋಧನೆ ಅತಿಯಾಗಿ ನಡೆಯುತ್ತಿದೆ. ಕಾಂತೀಯ ನ್ಯಾನೋ ಹೀರುವಿಕೆ ಕಣಗಳು, ತ್ಯಾಜ್ಯ ಜಲದಿಂದ ಸಾವಯವ ಕಲ್ಮಶಗಳನ್ನು ತೆಗೆಯಲು ಸಹಕಾರಿಯಾಗಿದೆ. ಬಹಳಷ್ಟು ತ್ಯಾಜ್ಯಕಣಗಳು ಕಾಂತೀಯ ಪ್ರಕೃತಿಹೊಂದಿಲ್ಲದ ಕಾರಣ, ಈ ವಿಧಾನದ ಮುಖಾಂತರ ಕೇವಲ ಕಾಂತೀಯ ತ್ಯಾಜ್ಯವನ್ನು ಶುದ್ಧೀಕರಣ ಮಾಡಬಹುದಾಗಿದೆ. ನ್ಯಾನೋ ಹೀರುವಿಕೆ ಕಣಗಳನ್ನು, ಕಾಂತೀಯ ಕಣಗಳನ್ನು ಲೇಪಿಸುವುದರ ಮುಖಾಂತರ ತಯಾರಿಸಲಾಗುವುದು ಮತ್ತು ಈ ಕಣಗಳನ್ನು ಶುದ್ಧಜಲದಿಂದ ಕಾಂತೀಯ ಬಲ, ಅಯಾನು ವಿನಿಮಯಕಾರಕಗಳನ್ನು ಉಪಯೋಗಿಸಿ ತೆಗೆಯಬಹುದಾಗಿದೆ.

ಇಂಗಾಲ ಆಧಾರಿತ ನ್ಯಾನೋ ಹೀರಿಕೆಗಳು: ಇಂಗಾಲ ಆಧಾರಿತ ನ್ಯಾನೋ ಹೀರಿಕೆಗಳು (ಇಂಗಾಲ ನ್ಯಾನೋ ಕೊಳವೆಗಳು) ಅತ್ಯಂತ ಪರಿಣಾಮಕಾರಿಯಾಗಿದ್ದು, ಅನೇಕ ಸಾವಯವ ರಸಾಯನಿಕಗಳನ್ನು ಜಲದಿಂದ ತೆಗೆಯಲು ಸಹಕಾರಿಯಾಗಿದೆ. ಅದರ ಈ ಗುಣವು, ಅದರ ಮೇಲ್ಮೈ ಪ್ರದೇಶ ಮತ್ತು ಪರಸ್ಪರ ಕ್ರಿಯೆಯಿಂದ ಬಂದಿರುತ್ತದೆ. ತನ್ನ ಜಲೀಯ ಹಂತದಲ್ಲಿ, ನ್ಯಾನೋ ಕೊಳವೆಗಳು ಗುಂಪುಗಟ್ಟಿ, ತಮ್ಮ ಮೇಲ್ಮೈ ಪ್ರದೇಶವನ್ನು ತಗ್ಗಿಸಿಕೊಳ್ಳುತ್ತದೆ. ಇನ್ನೊಂದು ಕಡೆ, ಈ ಗುಂಪುಗಳಲ್ಲಿನ, ಖಾಲಿ ರಂದ್ರಗಳು ಸಾವಯವ ಅಣುಗಳನ್ನು ಹೀರಿಕೊಳ್ಳುವ ಸ್ವಭಾವ ಹೊಂದಿದೆ. ಯಾಕ್ಟಿವೇಟೆಡ್ ಇಂಗಾಲವು, ನ್ಯಾನೋ ಕೊಳವೆಗಳಿಗಿಂತ ಹೆಚ್ಚು ಮೇಲ್ಮೈ ಪ್ರದೇಶ ಹೊಂದಿದ್ದರೂ, ಅವುಗಳು ಕೆಲವು ಬೃಹತ್ ಸಾವಯವ ಅಣುಗಳು ಮತ್ತು ಕೆಲವು ಪ್ರತಿಜೀವಕಕಣಗಳನ್ನು ಹೀರಿಕೊಳ್ಳುವುದಿಲ್ಲ. ಹಾಗಾಗಿ ಈ ರೀತಿಯ ತ್ಯಾಜ್ಯವನ್ನು ಜಲದಿಂದ ಶುದ್ಧೀಕರಸಲು ನ್ಯಾನೋ ಹೀರಿಕೆ ಕಣಗಳು ಅತ್ಯಂತ ಉಪಯುಕ್ತವಾಗಿವೆ.

ಭಾರೀ ಲೋಹಕ ಶುದ್ಧೀಕರಣ: ಆಕ್ಸೀಡೀಕೃತ ನ್ಯಾನೋ ಕೊಳವೆಗಳು ಭಾರೀ ಲೋಹ ಕಣಗಳನ್ನು ಶುದ್ಧೀಕರಣಕ್ಕೆ ಅತ್ಯಂತ ಉಪಯುಕ್ತವಾಗಿದೆ. ಮೇಲ್ಮೈ ಕ್ರಿಯಾತ್ಮಕ ಗುಂಪುಗಳಾದ ಕಾರ್ಬಾಕ್ಸಿಲ್, ಹೈಡ್ರಾಕ್ಸಿಲ್ ಮತ್ತು ಫಿನಾಲ್ ಗುಂಪುಗಳು, ಭಾರೀ ಲೋಹಕ ಕಣಗಳ ಹೀರುವಿಕೆಯಲ್ಲಿ ಸ್ಥಾಯೀ ವಿದ್ಯುತ್ ಆಕರ್ಷಣೆಯಿಂದ ಮತ್ತು ರಸಾಯನಿಕ ಬಂಧನದಿಂದ ಭಾರೀ ಲೋಹದ ಕಣಗಳನ್ನು ಹೊರತೆಗೆಯುತ್ತವೆ ಮತ್ತು ಲೋಹಗಳಾದ (Cu_2P, Pb_2P, Cd_2P and Zn_2P) ಅನ್ನು ಈ ಶುದ್ಧೀಕರಣ ಮಾರ್ಗದ ಮುಖಾಂತರ ಜಲದಿಂದ ಹೊರತೆಗೆಯಬಹುದಾಗಿದೆ.

ಲೋಹಾಧಾರಿತ ನ್ಯಾನೋ ಅಧಿಭೂಷಕಗಳು: ಕಬ್ಬಿಣದ ಆಕ್ಸೈಡ್, ಟೈಟೇನಿಯಮ್ ನ್ಯಾನೋ ಅಧಿಭೂಷಕಗಳು ಮುಂತಾದ ಲೋಹಾಧಾರಿತ ನ್ಯಾನೋ ಕಣಗಳನ್ನು, ಕಡಿಮೆ ಖರ್ಚಿನಲ್ಲಿ ಭಾರೀ ಲೋಹಕಣಗಳು ಮತ್ತು ವಿಕಿರಣ ನ್ಯೂಕ್ಲೈಡ್‌ಗಳನ್ನು ತೆಗೆಯಲು ಉಪಯೋಗಿಸುತ್ತಾರೆ. ಈ ಹೀರಿಕೆ ಪ್ರಕ್ರಿಯೆಯು ಕರಗಿರುವ ಲೋಹ ಮತ್ತು ಲೋಹದ ಆಕ್ಸೈಡ್ ನಲ್ಲಿರುವ ಆಮ್ಲಜನಕ ಪೆರಮಾಣುಗಳಿಂದ ಆಗುತ್ತದೆ. ಇದು ಎರಡು ಹಂತದ ಪ್ರಕ್ರಿಯೆಯಾಗಿದ್ದು, ಮೊದಲು ಹೊರ ಮೇಲ್ಮೈ ಪದರದ ಮೇಲೆ ಎಲ್ಲಾ ಲೋಹದ ಅಯಾನುಗಳು ಹರಡಿಕೊಳ್ಳುತ್ತವೆ ನಂತರ ಕಣಗಳ ರಂದ್ರಗಳ ಹತ್ತಿರ ಪ್ರಸರಣ ಕ್ರಿಯೆ ಉಂಟಾಗಿ ರಂದ್ರಗಳಲ್ಲಿ ಕುಳಿತುಕೊಳ್ಳುತ್ತವೆ. ನ್ಯಾನೋ ಗಾತ್ರದಲ್ಲಿ ಅವುಗಳ ಮೇಲ್ಮೈ ಪದರವು ದೊಡ್ಡದಿದ್ದು ಈ ಎರಡು ಹಂತಗಳ ಮುಖಾಂತರ ಅವು ಹೆಚ್ಚು ಕಣಗಳನ್ನು ಹೀರಿಕೊಳ್ಳುತ್ತವೆ. ಉದಾಹರಣೆಗೆ, ನ್ಯಾನೋ ಮಾಗ್ನೆಟೈಟ್ ಕಣಗಳ ಗಾತ್ರವನ್ನು 300 ರಿಂದ 11 ನ್ಯಾನೋ ಮೀಟರ್ ಗೆ ತಗ್ಗಿಸಿದರೆ, ಅದರ ಅರ್ಸೆನಿಕ್ ಹೀರುವ ಗುಣವು 100 ಪಟ್ಟು ಹೆಚ್ಚಾಗುತ್ತದೆ. ಈ ಮಾರ್ಗದ ಮುಖಾಂತರ ಅನೇಕ ಲೋಹದ ಕಣಗಳಾದ ಅರ್ಸೆನಿಕ್, ಲೆಡ್, ಮರ್ಕುರಿ ಮುಂತಾದವುಗಳನ್ನು ಜಲದಿಂದ ತೆಗೆಯಬಹುದಾಗಿದೆ. ಇವೆಲ್ಲದರಲ್ಲಿ, ಜಲದಿಂದ ಅರ್ಸೆನಿಕ್ ಅಣುವನ್ನು ತೆಗೆಯುವುದು ಬಹುಮುಖ್ಯವಾಗಿದ್ದು, ಅನೇಕ ಲೋಹದ ಆಕ್ಸೈಡ್ ನ್ಯಾನೋ ಕಣಗಳು, ಯಾಕ್ಟೀವೇಟೆಡ್ ಇಂಗಾಲಕ್ಕಿಂತ ಹೆಚ್ಚಾಗಿ ಅರ್ಸೆನಿಕ್ ಅನ್ನು ಪರಿಣಾಮಕಾರಿಯಾಗಿ ತೆಗೆಯಬಲ್ಲದಾಗಿದೆ.

ಪುನರುತ್ಪಾದನೆ ಮತ್ತು ಮರುಬಳಕೆ : ಈ ಮೇಲಿನ ಕಣಗಳನ್ನು ದ್ರವದಲ್ಲಿ ಹಾಕಿ ಅದರ ಪಿ.ಹೆಚ್. ಅನ್ನು ಬದಲಾಯಿಸುವುದರ ಮುಖಾಂತರ ಪುನರುತ್ಪಾನೆ ಮಾಡಬಹುದಾಗಿದೆ ಮತ್ತು ಅನೇಕ ಬಾರಿ ಮರುಬಳಕೆ ಮಾಡಬಹುದು. ಬಳಕೆಯ ನಂತರವು ಅದರ ದಕ್ಷತೆಯು ಹಾಗೆ ಇರುತ್ತದೆ ಅಥವಾ ಸ್ವಲ್ಪ ಕಡಿಮೆ ಯಾಗುವ ಸಾಧ್ಯತೆಗಳಿವೆ.

ಪಾಲಿಮರ್ ನ್ಯಾನೋ ಅಧಿಭೂಷಕಗಳು: ಡೆನ್‌ಡ್ರೈಮ್ ಒಟ್ಟಿಗಿನ ಅಧಿಭೂಷಕಗಳು ಸಾವಯವ ಮತ್ತು ಭಾರ ಲೋಹದ ಕಣಗಳನ್ನು ತೆಗೆಯುವಲ್ಲಿ ಸಫಲವಾಗಿದೆ. ಅದರ ಒಳಮೇಲ್ಮೈ ಪದರವು ಈ ರೀತಿಯ ಕಣಗಳನ್ನು ಹೀರಿಕೊಳ್ಳುತ್ತವೆ. ಈ ಪ್ರಕ್ರಿಯೆಯು ಸ್ಥಾಯಿವಿದ್ಯುತ್ ಆಕರ್ಷಣೆ, ಜಲಭೀತಿಯ ಪರಿಣಾಮ ಮತ್ತು ಜಲಜನಕ ಬಂಧಕಗಳಿಂದಾಗುತ್ತದೆ. ಈ ವಿಧಾನದ ಮುಖಾಂತರ ಹೆಚ್ಚು Cu_2P ಅಯಾನುಗಳನ್ನು ಜಲದಿಂದ ಬೇರ್ಪಡಿಸಿದ್ದು, 10 PPM ಅನ್ನು ಉಪಯೋಗಿಸಿ ಡೆನ್‌ಡ್ರೈಮ್ ಗಳನ್ನು ಪಿ.ಹೆಚ್. 4 ಇರುವ ದ್ರವದಲ್ಲಿ

ಶೋಧಿಕರಿಸಿ ಮರುಬಳಕೆ ಮಾಡಬಹುದಾಗಿದೆ. ಈ ನ್ಯಾನೋ ಕಣಗಳನ್ನು ನೀರಿನ ಶುದ್ಧೀಕರಣ ರಿಯಾಕ್ಟರ್ ಗಳಲ್ಲಿ ಬಳಸಬಹುದಾಗಿದೆ ಮತ್ತು ಇವುಗಳಿಂದ ಅನೇಕ ತ್ಯಾಜ್ಯಗಳನ್ನು ಶುದ್ಧೀಕರಿಸಬಹುದಾಗಿದೆ. ಇದರೊಂದಿಗೆ ನ್ಯಾನೋ ಕಣಗಳನ್ನು ಮತ್ತೆ ಜಲದಿಮದ ತೆಗೆಯಲು ಪ್ರತ್ಯೇಕ ಘಟಕದ ಅವಶ್ಯಕತೆ ಇದೆ.

ಅವುಗಳನ್ನು ಶುದ್ಧೀಕರಿಸುವುದು ಕಷ್ಟಕರವಾಗಿದೆ. ಆದ್ದರಿಂದ, ಇತ್ತೀಚಿನ ದಿನಗಳಲ್ಲಿ ಜೈವಿಕ ಚಟುವಟಿಕೆಗಳುಳ್ಳ ನ್ಯಾನೋ ಕಣಗಳನ್ನು, ಕ್ಲೋರಿನ್ ಮುಕ್ತ ಬಯೋಸೈಡ್ಸ್ ಗಳ ಬದಲಾಗಿ ಬಳಸುತ್ತಿದ್ದು, ನ್ಯಾನೋ ತಂತ್ರಜ್ಞಾನದ ಮುಖಾಂತರ, ಮೇಲಿನ ರೀತಿಯ ಅನೇಕ ಪಾತೋಜೆನ್ಸ್ ಗಳನ್ನು ಗುರುತಿಸಿ ಜಲದಿಂದ ಅವುಗಳನ್ನು ನಿವಾರಣೆಮಾಡ

ಕ್ರ.ಸಂ	ನ್ಯಾನೋ ತಂತ್ರಜ್ಞಾನ	ತ್ಯಾಜ್ಯ ಜಲ ನಿರ್ವಹಣೆಯಲ್ಲಿ ಪಾತ್ರ
1	ಇಂಗಾಲ ಆಧಾರಿತ ನ್ಯಾನೋ ಹೀರಿಕೆಗಳು	ನಿಕ್ಕೆಲ್ ಅಯಾನು ನಿವಾರಣೆ (ಹೆಚ್ಚು ಮೇಲ್ಮೈ ಪ್ರದೇಶ, ಹೆಚ್ಚು ಹೀರಿಕೆ ಗುಣ ಮುಂತಾದವು)
2	ಕಾಪ್ಟಿಮರ್.ಎಮ್.	ಬ್ರೋಮಿನ್, ಯುರೇನಿಯಮ್, ನೈಟ್ರೇಟ್ ಮುಂತಾದವು
3	ಪುನರಾತ್ಪಕ ಪಾಲಿಮರ್ ನ್ಯಾನೋ ಹೀರಿಕೆಗಳು	ಅನೇಕ ಸಾವಯವ ಮತ್ತು ಅಜೈವಿಕ ತ್ಯಾಜ್ಯಗಳ ಶುದ್ಧೀಕರಣ
4	ನ್ಯಾನೋ ಕ್ಲೇಗಳು	ಹೈಡ್ರೋ ಕಾರ್ಬನ್ ಡೈ ಮತ್ತು ಫಾಸ್ಪರಸ್
5	ಕಾರ್ಬೋ–ಐರನ್	ಸಕ್ರಿಯ ಇಂಗಾಲದ ಬಳಕೆ ಮತ್ತು ಕಬ್ಬಿಣವು ಅನೇಕ ತ್ಯಾಜ್ಯವನ್ನು ಕಡಿಮೆ ಮಾಡುತ್ತವೆ.

ನ್ಯಾನೋ ವೇಗವರ್ಧಕಗಳು: ನ್ಯಾನೋ ವೇಗವರ್ಧಕಗಳನ್ನು ತ್ಯಾಜ್ಯ ಜಲ ಶುದ್ಧೀಕರಣದಲ್ಲಿ ಉಪಯೋಗಿಸುತ್ತಿದ್ದು, ಇವುಗಳು ವೇಗವರ್ಧನೆ ಮಾಡಿ ತ್ಯಾಜ್ಯ ಮತ್ತು ಮಾಲಿನ್ಯ ಪದಾರ್ಥಗಳನ್ನು ಅವನತಿ ಮಾಡುತ್ತವೆ. ಸೆಮಿಕಂಡಕ್ಟರ್ ವಸ್ತುಗಳು, ವೇಲೆನ್ಸಿ ರಹಿತ ವಸ್ತುಗಳು ಮತ್ತು ದ್ವಿಲೋಹ ನ್ಯಾನೋ ಕಣಗಳನ್ನು ಪಾಲಿಕ್ಲೋರಿನೇಟೆಡ್ ಬೈಫೀನೈಲ್ಸ್, ಏಜೋ ಡೈಗಳು, ನೈಟ್ರೋ ಆರೋಮಾಟಿಕ್ಸ್ ಮುಂತಾದ ತ್ಯಾಜ್ಯವನ್ನು ತೆಗೆಯಲು ಉಪಯೋಗಿಸುತ್ತೇವೆ. ಈ ವಿಧಾನವನ್ನು ಪ್ರಾಯೋಗಿಕವಾಗಿ ಯಶಸ್ವಿಯಾಗಿದ್ದು, ಹೈಡ್ರೋಜನ್ ಉಪಯೋಗವನ್ನು ಸಮತೋಲನ ಗೊಳಿಸಿ, ಲೋಹೀಯ ಸಿಲ್ವರ್ ನ್ಯಾನೋ ವೇಗವರ್ಧಕಗಳು, ಎ.ಜಿ.ಸಿ.ಸಿ.ಎ ವೇಗವರ್ಧಕಗಳು, N-doped Tio_2 ಮುಂತಾದವುಗಳನ್ನು ಸೂಕ್ಷ್ಮಜೀವಿಗಳು ನಿವಾರಣೆಯಲ್ಲಿ ಬಳಸಬಹುದಾಗಿದೆ.

Tio_2-AGS ಪದಾರ್ಥವು Chromium ನಿವಾರಣೆಯಲ್ಲಿ ಅತೀ ಮುಖ್ಯವಾಗಿದ್ದು, ಈ ಮಾರ್ಗದ ಮುಖಾಂತರ ಲೆಡ್ ಆಧಾರಿತ ನ್ಯಾನೋಕಣಗಳ ಮುಖಾಂತರ ಹ್ಯಾಲೋಜಿನೇಟೆಡ್ ಸಾವಾಯವ ಸಂಯುಕ್ತವನ್ನು ತಗ್ಗಿಸಬಹುದಾಗಿದೆ.

ನ್ಯಾನೋ ವೇಗವರ್ಧಕ ಪೊರೆಗಳು: ಈ ಪೊರೆಗಳು ವೇಗವರ್ಧಕ ಸೈಟ್‌ಗಳು, ವೇಗವರ್ಧಕ ಸಮಯ, ಅನುಕ್ರಮ ಪ್ರತಿಕ್ರಿಯೆಗಳು ಮತ್ತು ಸುಲಭವಾಗಿ ಉತ್ಪಾದಿಸಬಹುದಾಗಿದೆ. ಇವು ಜಲದಲ್ಲಿರುವ ಸಾವಯವ ಮಾಲಿನ್ಯ ಪದಾರ್ಥಗಳು, ಮೈಕ್ರೋ ಆರ್ಗಾನಿಸಮ್, ಭೌತಿಕ ವಿಂಗಡನೆಯನ್ನು, ಅತಿನೇರಳೆ ಮತ್ತು ಗೋಚರ ಬೆಳಕಿನ ಕಿರಣಗಳ ಸಹಾಯದಿಂದ ಸಂಸ್ಕರಣೆಮಾಡುತ್ತವೆ. N-doped ZnO ನ್ಯಾನೋ ರಚನೆಯು ಅನೇಕ ಮೇಲಿನ ಪದಾರ್ಥಗಳನ್ನು ಗೋಚರ ಬೆಳಕಿನ ಮುಖಾಂತರ ಹೊರತೆಗೆಯುತ್ತದೆ. ಈ ಪೊರೆಗಳು ಬ್ಯಾಕ್ಟೀರಿಯ ವಿರೋಧಿಯಂತೆ ವರ್ತಿಸಿ, ತ್ಯಾಜ್ಯ ಜಲ ಶುದ್ಧೀಕರಿಸಲು ಸಹಕಾರಿಯಾಗಿದೆ.

ಜೈವಿಕ ಚಟುವಟಿಕೆಗಳುಳ್ಳ ನ್ಯಾನೋ ಕಣಗಳು: ಅನೇಕ ರೀತಿಯ ಪಾತೋಜೆನ್ಸ್ ನಿಂದಾಗಿ ಜಲವು ಅಶುದ್ಧವಾಗಿ ಅನೇಕ ಕಾಯಿಲೆಗಳನ್ನು ಹರಡುತ್ತಿವೆ. ಅನೇಕ ಮೈಕ್ರೋ ಜೀವಕೋಶಗಳು ಪಾತೋಜೆನ್ಸ್ ನಂತೆ ವರ್ತಿಸಿ, ಅವು ಯಾಂಟಿಬಾಡಿ ರೆಸಿಸ್ಟೆನ್ಟ್ ಆಗಿವೆ ಮತ್ತು ಜಲದಿಂದ

ಬಯೋಮಿಮೆಟಿಕ್ ಪೊರೆಗಳು: ಈ ಪೊರೆಗಳನ್ನು ಸಾಂಡಿಯಾ ನಾಷನಲ್ ಲ್ಯಾಬೋರೇಟರಿ ಮತ್ತು ನ್ಯೂ ಮಿಕ್ಸಿಕೋ ವಿಶ್ವವಿದ್ಯಾಲಯದ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಇವು ತಮ್ಮ ಹೊಸ ರೀತಿಯ ಡಿಸೈನ್ ಮತ್ತು ಫಾಬ್ರಿಕೇಶನ್ ಮುಖಾಂತರ ಜಲ ಸಂಸ್ಕರಣೆಯಲ್ಲಿ ಬಹುಮುಖ್ಯಪಾತ್ರವಹಿಸಲಿದೆ. ಇವುಗಳು ಸ್ವ ಗುಂಪು ಮತ್ತು ಪರಮಾಣು ಪದರಗಳ ಮುಖಾಂತರ ನ್ಯಾನೋ ರಂಧ್ರಗಳ ಸಹಾಯದಿಂದ ತ್ಯಾಜ್ಯ ಜಲ ನಿರ್ವಹಣೆಯಲ್ಲಿ ಬಹು ಮುಖ್ಯಪಾತ್ರವಹಿಸಲಿದೆ. ಈ ಪದರಗಳು ತನ್ನ ಒತ್ತಡಗುಣಲಕ್ಷಣಗಳನ್ನು ಉಪಯೋಗಿಸಿ, ಉಪ್ಪು ಮತ್ತು ಇನ್ನಿತರ ಮಲಿನ ಪದಾರ್ಥಗಳನ್ನು ತೆಗೆಯುತ್ತವೆ ಮತ್ತು ನೀರನ್ನು ಸರಾಗವಾಗಿ ಹರಿಬಿಡುತ್ತವೆ. ಈ ವಿಧಾನವು, ರಿವರ್ಸ್ ಆಸ್ಮೋಸಿಸ್ ತತ್ವವನ್ನು ಆಧರಿಸಿದ್ದು, ಬಹು ಉಪಯೋಗಿಯಾಗಲಿದೆ.

ಅಣುಗಳ ಅಚ್ಚು ಆಧಾರಿತ ಪಾಲಿಮರ್ಸ್: ಅಣುಗಳ ಅಚ್ಚು ಆಧಾರಿತ ಪಾಲಿಮರ್ಸ್ ಗಳು ಇತ್ತೀಚಿನ ದಿನಗಳಲ್ಲಿ ಬೆಳಕಿಗೆ ಬಂದಿದ್ದು, ಇವು ಜೀವವಿಜ್ಞಾನ, ಔಷಧೀಯ ಮತ್ತು ಪರಿಸರ ವಿಜ್ಞಾನದಲ್ಲಿ ಅತೀ ಮುಖ್ಯಪಾತ್ರ ವಹಿಸಲಿದೆ. ಈ ರೀತಿಯ ಒಂದು ವರ್ತನೆಯು, ಪಾಲಿಮರ್‌ನಲ್ಲಿರುವ ಮಾನೋಮರ್‌ಗಳು ಮತ್ತು ಕಾರ್ಯನಿರತ ಗುಂಪುಗಳು ಕೋವಲೆಂಟ್, ಸೆಮಿ ಕೋವಲೆಂಟ್ ರೀತಿಯ ಬಾಂಡಿಂಗ್‌ಗಳಿಂದಾಗಿ ಉಂಟಾಗುತ್ತದೆ. ಹೀರುವಿಕೆ ಅಥವಾ ವೇಗವರ್ಧಕ ನ್ಯಾನೋ ಕಣಗಳ ಗುಂಪುಗಳಲ್ಲಿ, ಮೇಲಿನ ಅಧ್ಯಯನವು ಅತ್ಯಂತ ಪರಿಣಾಮಕಾರಿಯಾಗಿದ್ದು, ಅವುಗಳನ್ನು ನ್ಯಾನೋ ಫೈಬರ್‌ಗಳಲ್ಲಿ ಬಂದಿಸಿ, ಅನೇಕ ಮಾಲಿನ್ಯ ಮತ್ತು ಜಲ ಶುದ್ಧೀಕರಣ ಕ್ರಿಯೆಗಳಲ್ಲಿ ಉಪಯೋಗಿಸಲಾಗುತ್ತದೆ.

ಸಾರಾಂಶ: ಇತ್ತೀಚಿನ ದಿನಗಳಲ್ಲಿ, ನ್ಯಾನೋ ತಂತ್ರಜ್ಞಾನವು ಅನೇಕ ರೀತಿಯಲ್ಲಿ ತ್ಯಾಜ್ಯಜಲ ನಿರ್ವಹಣೆ ಮಾಡಲು ಉಪಯೋಗಕಾರಿಯಾಗಿದ್ದು, ಇದು ಕಡಿಮೆ ಖರ್ಚು, ಹೆಚ್ಚು ಪರಿಣಾಮಕಾರಿ ಮತ್ತು ವಾತಾವರಣಸ್ನೇಹಿಯೂ ಆಗಿದೆ. ಈ ವಿಧಾನಗಳನ್ನು ಅಳವಡಿಸಿಕೊಳ್ಳುವುದರಿಂದ, ಅತೀ ಕಡಿಮೆ ಸಮಯದಲ್ಲಿ ಅತೀ ಹೆಚ್ಚು

ಪ್ರಮಾಣದಲ್ಲಿ ತ್ಯಾಜ್ಯ ಜಲ ಶುದ್ಧೀಕರಣ ಮಾಡಬಹುದಾಗಿದ್ದು, ಅನೇಕ ಅಪಾಯಕಾರಿ ಲೋಹಗಳನ್ನು ಮತ್ತು ಪದಾರ್ಥಗಳನ್ನು ಶುದ್ಧೀಕರಿಸುತ್ತದೆ. ಆದರೂ, ನ್ಯಾನೋ ತಂತ್ರಜ್ಞಾನದಿಂದ ಮನುಕುಲಕ್ಕೆ ಮತ್ತು ವಾತಾವರಣಕ್ಕೆ ಯಾವುದೇ ರೀತಿಯ ಪರಿಣಾಮವಾಗದಂತೆ ತಯಾರಿಸಿ, ಅದನ್ನು ತ್ಯಾಜ್ಯ ಜಲ ನಿರ್ವಹಣೆಯಲ್ಲಿ ಉಪಯೋಗಿಸುವುದು ಅತ್ಯಂತ ಸಹಕಾರಿಯಾಗಲಿದೆ.

ಆಯುರ್ವೇದದಲ್ಲಿ ನ್ಯಾನೋ ತಂತ್ರಜ್ಞಾನದ ಮಾಹಿತಿ ಲಭ್ಯವಿದೆಯೇ?

*ಡಾ॥ ಅಪರ್ಣಾ ನಾಭಿರಾಜ್, **ಡಾ॥ ಶಾಂತಲಾ ಪ್ರಿಯದರ್ಶಿನಿ ಟಿ.ಆರ್
*ವೈದ್ಯಾಧಿಕಾರಿ, ಡಾ॥ ವಿಜಯರವರ ಆಯುರ್ವೇದ ಚಿಕಿತ್ಸಾ ಮತ್ತು ಸಂಶೋಧನಾ ಕೇಂದ್ರ, ಜಯನಗರ, ಮೈಸೂರು.
** ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು, ಸರಕಾರಿ ಆಯುರ್ವೇದ ಕಾಲೇಜು, ಮೈಸೂರು.
E-mail: shantala301@gmail.com

ಪ್ರಾಚೀನ ಭಾರತೀಯ ವೈದ್ಯ ಪದ್ಧತಿಯಾದ ಆಯುರ್ವೇದದಲ್ಲಿ 'ನ್ಯಾನೋ' ಪದಾರ್ಥಗಳು, 'ನ್ಯಾನೋ ವಿಜ್ಞಾನ', ನ್ಯಾನೋ ಔಷಧಿಗಳ ತಿಳುವಳಿಕೆ ಇತ್ತೇ? ಸೂಕ್ಷ್ಮ ಪ್ರಮಾಣದ ವಸ್ತುಗಳ ಅರಿವಿತ್ತೇ? ಸೂಕ್ಷಾತೀಸೂಕ್ಷ್ಮ, ಅದೃಶ್ಯ–ಪ್ರಪಂಚದ ಜ್ಞಾನವಿದ್ದಿರಲು ಸಾಧ್ಯವೇ? ಅಥವಾ ಇವೆಲ್ಲಾ ಬರೀ ಆಧುನಿಕ ಆವಿಷ್ಕಾರಗಳೇ? ಇತ್ತೀಚಿನ ವಿಜ್ಞಾನಿಗಳ ಕೊಡುಗೆಯೇ? ಅತ್ಯಾಧುನಿಕ ವೈಜ್ಞಾನಿಕ ಉಪಕರಣಗಳಾದ x-ray diffraction, electron microscope ಇತ್ಯಾದಿಗಳು ಆವಿಷ್ಕಾರಗೊಂಡಿರದ ಕಾಲದಲ್ಲಿ ನ್ಯಾನೋ ಪ್ರಪಂಚ ಪ್ರಾಚೀನ ಭಾರತೀಯರಿಗೆ ತಿಳಿದಿರಲು ಹೇಗೆ ಸಾಧ್ಯ?

ವೇದಕಾಲದಿಂದಲೂ ಗುರು–ಶಿಷ್ಯ ಪರಂಪರೆಯು ಎಲ್ಲಾ ಭಾರತೀಯ ಕಲೆ, ವಿಜ್ಞಾನಗಳ ಪ್ರತೀಕವಾಗಿ ಇದ್ದವು. ನಳಂದಾ, ತಕ್ಷಶಿಲಾ ವಿಶ್ವವಿದ್ಯಾನಿಲಯಗಳು ಪ್ರಪಂಚದಾದ್ಯಂತ ಮೇಧಾವಿ ಜ್ಞಾನ ಪಿಪಾಸುಗಳಿಗೆ ಜ್ಞಾನ ಕೇಂದ್ರವಾಗಿದ್ದುದು ಐತಿಹಾಸಿಕ ಪುರಾವೆ.

ಇತಿಹಾಸ, ಪುರಾಣ, ಪುಣ್ಯ ಕಥೆಗಳೆಂದು ಹೆಮ್ಮೆಯಿಂದ ಬೀಗುತ್ತಾ ಎಲ್ಲವೂ ನಮ್ಮ ಋಷಿಮುನಿಗಳಿಗೆ ತಿಳಿದಿದ್ದಿತೆಂದು ನಾವು ಹೇಳಬೇಕಾದರೆ ಸೂಕ್ತ ನಂಬಲರ್ಹವಾದ ಪುರಾವೆಗಳನ್ನು ನೀಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಋಷಿಮುನಿಗಳ ತಪಃ ಚಕ್ಷು, ಜ್ಞಾನ ಚಕ್ಷು ಹಾಗೂ ಆಪ್ತೋಪದೇಶಗಳಿಂದ ಲಭ್ಯವಾದ ಜ್ಞಾನವು ಇಂದು ಅರ್ಥೈಸಿಕೊಳ್ಳುವುದು ಬಹಳ ಕ್ಲಿಷ್ಟಸಾಧ್ಯವಾದುದು. ಅತ್ಯಾಧುನಿಕ ವಿಜ್ಞಾನದ ಉಪಕರಣಗಳಿಂದ, ವಿಶ್ಲೇಷಣಾತ್ಮಕ ಅಧ್ಯಯನದಿಂದ ಪ್ರಾಚೀನ ಭಾರತೀಯ ಸಿದ್ಧಾಂತಗಳನ್ನು ಪ್ರಯೋಗಾತ್ಮಕ, ಉತ್ಕೃಷ್ಟ ಚಿಕಿತ್ಸಾ ಪದ್ಧತಿಯನ್ನು ತಿಳಿಯಲು ಸಾಧ್ಯವೆಂದು ನಂಬಿ ಈ ವಿಶ್ಲೇಷಣಾತ್ಮಕ ಪ್ರಬಂಧವನ್ನು ಮಂಡಿಸಿರುತ್ತೇವೆ.

'ನ್ಯಾನೋ' ಎಂಬುದು ಗ್ರೀಕ್ ಭಾಷೆಯ ಶಬ್ದವಾಗಿದ್ದು, ಕುಬ್ಜ ಎನ್ನುವ ಅರ್ಥ ನೀಡುತ್ತದೆ. ನಮ್ಮ ಸುತ್ತಮುತ್ತಲಿನ ನೈಸರ್ಗಿಕ ಘಟನೆಗಳಾದ ಕಾಡ್ಗಿಚ್ಚು, ಲಾವಾ ಹೊರಸೂಸುವ ಬೆಟ್ಟಗಳು, ಮಣ್ಣು ಸವೆತ, ಸುಂಟರಗಾಳಿ ಇತ್ಯಾದಿಗಳಿಂದಲೂ ಸೂಕ್ಷ್ಮಕಣಗಳ ಅನುಭವ ಉಂಟಾಗುತ್ತದೆ. ನ್ಯಾನೋ ಪ್ರಮಾಣದ ಅನೇಕ ಪದಾರ್ಥಗಳು ನಮ್ಮ ಸುತ್ತಮುತ್ತಲಿನ ದಿನನಿತ್ಯದ ಜೀವನದಲ್ಲಿ ಅನುಭವ ವೇದ್ಯವಾಗುತ್ತದೆ. ಮರಳಿನ ಕಣ (0.5 mm), ಪುಷ್ಪಗಳ ಪರಾಗ (10–30 um) ಕೆಂಪು ರಕ್ತ ಕಣಗಳು, ಕೂದಲಿನ ಸುತ್ತಳತೆ, ಸೂಕ್ಷ್ಮಾಣು ಜೀವಿಗಳ ಅಳತೆಯೆಲ್ಲಾ ನ್ಯಾನೋ ಪ್ರಮಾಣದ ನಿದರ್ಶನಗಳಾಗಿವೆ.

ಬಹಳ ಸೂಕ್ಷ್ಮ ಕಣಗಳ, Ultrafine particles. ನ್ಯಾನೋ particles ಗಳ ಸೂಕ್ತ ಬಳಕೆಯಿಂದ ಅಸ್ತಿತ್ವಕ್ಕೆ ಬರುತ್ತಲಿರುವ ಆಧುನಿಕ ವೈದ್ಯ ಪದ್ಧತಿಯ ವಿಸ್ತಾರ ತೀವ್ರವಾದ ವೈಜ್ಞಾನಿಕ ಸಂಶೋಧನೆಗಳಿಗೆ ಪಂಥಾಹ್ವಾನವಾಗಿದೆ. ನ್ಯಾನೋ ಔಷಧಿಗಳು ತೀವ್ರ ಬೇಡಿಕೆಯಲ್ಲಿದ್ದು ಅವುಗಳು ಅನುಕೂಲತೆ ಮತ್ತು ಅನಾನುಕೂಲತೆಗಳ ತುಲನಾತ್ಮಕ ಅಧ್ಯಯನವು ಜಾಗತಿಕ ಮಟ್ಟದಲ್ಲಿ ಅತೀ ದುಬಾರಿ ವೆಚ್ಚದ ಪ್ರಯೋಗಗಳಿಗೆ ನಾಂದಿ ಹಾಡಿವೆ.

ನ್ಯಾನೋ ಔಷಧಿಗಳು ಅತ್ಯಲ್ಪ ಪ್ರಮಾಣದಲ್ಲಿ, ತೀವ್ರ ಪರಿಣಾಮವನ್ನುಂಟು ಮಾಡುವುದು, ದೇಹದ ನಿಶ್ಚಿತ ಕಣಗಳ ಮೇಲೆ ಸೂಕ್ತ ಪರಿಣಾಮವನ್ನು ಬೀರಿ ಶರೀರಾಂತರ್ಗತವಾಗುವುದು. ಇಂತಹ ಲಾಭಗಳು ಒಂದೆಡೆಯಾದರೆ ಅನಾನುಕೂಲತೆಗಳನ್ನು ಉಂಟುಮಾಡುವ ಸಾಧ್ಯತೆಗಳು ಹೆಚ್ಚಿರುವುದರಿಂದ ಬೃಹತ್ ಪ್ರಮಾಣದಲ್ಲಿ ವೈಜ್ಞಾನಿಕ ಸಂಶೋಧನೆಗಳು ನಡೆಯುತ್ತಿರುವುದು ಎಲ್ಲರಿಗೂ ವೇದ್ಯವಾದ ವಿಷಯವಾಗಿದೆ.

ನ್ಯಾನೋ ತಂತ್ರಜ್ಞಾನದ ಬಳಕೆಯಿಂದ ವೈದ್ಯಕೀಯ ರಂಗದಲ್ಲಿ 'ನ್ಯಾನೋ ಔಷಧಿಗಳ ಉಗಮವಾಗಿವೆ. ನ್ಯಾನೋ ಕಣಗಳು ಹಾಗೂ ನ್ಯಾನೋ ಉಪಕರಣಗಳ ಸಹಾಯದಿಂದ ಮಾನವನ ಜೈವಿಕ ಕ್ರಿಯೆಗಳ ಮೇಲ್ವಿಚಾರಣೆ, ನಿಯಂತ್ರಣ ಹಾಗೂ ಸಮತೋಲನ ಕಾಪಾಡುವುದು ನ್ಯಾನೋ ಔಷಧಿಗಳ ಮುಖ್ಯ ಉದ್ದೇಶ. ಇಂದಿನ ಕಾಲದಲ್ಲಿ ನ್ಯಾನೋ ಔಷಧಿಗಳು ಕ್ಯಾನ್ಸರ್, ಹೃದಯದ ಕಾಯಿಲೆಗಳು, ಶ್ವಾಸಕೋಶದ ತೊಂದರೆ, ರಕ್ತ, ನರಗಳ ಕಾಯಿಲೆ, ಮಧುಮೇಹ, ಸಾಂಕ್ರಾಮಿಕ ರೋಗಗಳು, ಪಾರ್ಕಿನ್‌ಸನ್ಸ್ ರೋಗ, ಮೂಳೆಗಳ ತೊಂದರೆಗಳಲ್ಲಿ, ವ್ಯಾಪಕವಾಗಿ ಬಳಕೆಯಲ್ಲಿವೆ.

ಪ್ರಾಚೀನ ಭಾರತದಲ್ಲಿ 'ನ್ಯಾನೋ ಪದದ ಬದಲಾಗಿ ಸಂಸ್ಕೃತದ ಸೂಕ್ತವಾದಂತಹ ಸಮಂಜಸವಾದಂತಹ ಪದಪುಂಜಗಳನ್ನು ಮನಗಾಣಬಹುದಾಗಿದೆ.

ಸೂಕ್ಷ್ಮ, ಸೂಕ್ಷ್ಮತಿ ಸೂಕ್ಷ್ಮ, ಪರಮಸೂಕ್ಷ್ಮ, ಅದೃಶ್ಯ, ರಜಃ, ಧೂಲಿ, ಅಣು, ಪರಮಾಣು, ರೇಣು, ತ್ರಸರೇಣು, ಸ್ತೋಕ, ಅಲ್ಪ, ಕ್ಷುಲಕ, ಇವು ನ್ಯಾನೋ ಪದದ ಬದಲಾಗಿ ವಿವಿಧ ಸ್ತರಗಳಲ್ಲಿ ಬಳಕೆಯಾಗಿವೆ.

ಇತ್ತೀಚಿನ ದಿನಗಳಲ್ಲಿ ಆಯುರ್ವೇದೀಯ ವಿಜ್ಞಾನಿಗಳು ಬೇರೆ ಬೇರೆ ವಿಜ್ಞಾನಿಗಳ ಸಹಯೋಗದೊಂದಿಗೆ ಉತ್ಕೃಷ್ಟವಾದಂತಹ ಬೆಳಕು

ಚೆಲ್ಲುವಂತಹ ಸಂಶೋಧನೆಗಳನ್ನು ಮಾಡಿ ಆಯುರ್ವೇದದಲ್ಲಿ ನ್ಯಾನೋ ಔಷಧಿ ಎಂದಾಕ್ಷಣ ಭಸ್ಮಗಳ ಬಗ್ಗೆ ಪಡೆದಿರುವ ಅತ್ಯಲ್ಪವಾದರೂ ಉತ್ತಮವಾದ ಸಂಶೋಧನೆಗಳನ್ನಾಧರಿಸಿ ಆಯುರ್ವೇದದತ್ತ ಎಲ್ಲರ ಗಮನ ಸೆಳೆಯುವಲ್ಲಿ ಯಶಸ್ವೀ ಪಥದತ್ತ ಸಾಗುತ್ತಿದ್ದಾರೆ. ಭಸ್ಮಗಳಲ್ಲದೆ ಇತರೇ ಅದೃಶ್ಯ ಮತ್ತು ಅತಿಸೂಕ್ಷ್ಮ ವಸ್ತು ವಿಮರ್ಶೆ ಮಾಡಿದಾಗ ಕೆಳಗಿನ ವಿಷಯಗಳು ಗೋಚರವಾಗುತ್ತವೆ.

- ರಕ್ತನಾಳಗಳಲ್ಲಿ ಪ್ರವಹಿಸುವ ರಕ್ತಜ ಕ್ರಿಮಿಗಳ ವರ್ಣನೆಯಲ್ಲಿ ಸೂಕ್ಷ್ಮ ಜೀವಾಣುಗಳ ವಿಸ್ತೃತ ವರ್ಣನೆ, ಸೂಕ್ಷ್ಮ ಜೀವಾಣುಗಳು, ಅದೃಶ್ಯ ಜೀವಾಣುಗಳು, ಅವುಗಳಿಂದ ಉಂಟಾಗುವ ಸಾಂಕ್ರಾಮಿಕ ರೋಗಗಳ ವರ್ಣನೆ ಚರಕ, ಸುಶ್ರುತಾದಿ ಗ್ರಂಥಗಳಲ್ಲಿ ಲಭ್ಯವಿದೆ.
- ಪರಮಾಣು ರೂಪದಲ್ಲಿರುವಂತಹ ಅಸಂಖ್ಯಾತ ಅವಯವಗಳ ವರ್ಣನೆ ಶರೀರ ರಚನೆಯನ್ನು ತಿಳಿಸುವಾಗ ಲಭ್ಯವಿದೆ.
- ಚರ್ಮದ 7 ಪದರಗಳು, ನೇತ್ರದ ಒಳಗಿನ ಪಟಲಗಳ ವರ್ಣನೆಗಳಲ್ಲದೆ ಬೀಜ ಭಾಗಾವಯವದ ವರ್ಣನೆ (ಉತ್ಪತ್ತಿಗೆ ಕಾರಣವಾದ ಬೀಜಭಾಗದ ಅವಯವಗಳು) ಕಾಣಸಿಗುತ್ತವೆ.
- ದೇಹದಲ್ಲಿ ಚಲಿಸುವ ರಸಧಾತುವಿನಲ್ಲಿ ಉಂಟಾಗುವ ವಿಶೇಷ ಕಣಗಳ ವೈಶಿಷ್ಟ್ಯ ಪೂರ್ಣ ಗತಿಯ ವರ್ಣನೆ 3 ವಿಧವಾಗಿದ್ದು, ಅಗ್ನಿಯಂತೆ ಮೇಲ್ಮುಖ, ಜಲದಂತೆ ಕೆಳಮುಖ ಹಾಗೂ ಶಬ್ಧದಂತೆ ಸರ್ವತೋಮುಖ ಗತಿಯ ವರ್ಣನೆ 'Brownian Motion' ನಲ್ಲಾಗುವ ಸೂಕ್ಷ್ಮ ಕಣಗಳ ಗತಿಗೆ ಹೋಲಿಸಬಹುದಾಗಿದೆ.
- ದೇಹದಲ್ಲಿ ಉತ್ಪತ್ತಿಗೆ ಕಾರಣವಾದ ಅತ್ಯಂತ ಸೂಕ್ಷ್ಮ ಕಾರಣ ದ್ರವ್ಯಗಳು ಪಂಚ ತನ್ಮಾತ್ರಗಳು, ಪಂಚ ಮಹಾಭೂತಗಳು, ಅಣು–ಪರಮಾಣು, ದ್ವಯಣುಕ, ತ್ರಯಣುಕ ಇತ್ಯಾದಿ ವಿಶಿಷ್ಟ ಪದಗಳ ಸಮಂಜಸ ತಿಳುವಳಿಕೆ.
- ವಿಷದ ತೀವ್ರತೆಯ, ಕಾರ್ಮುಕತೆಯ, ವ್ಯವಾಯಿ, ವಿಕಾಶಿ ಗುಣಗಳ ತಿಳುವಳಿಕೆ.

ಮೇಲಿನಂತೆ ಸಾವಿರಾರು ಉದಾಹರಣೆಗಳನ್ನು ಆಯುರ್ವೇದ ಋಷಿಮುನಿಗಳಿಗೆ ತಿಳಿದಿದ್ದಂತಹ ಸೂಕ್ಷ್ಮಾತಿಸೂಕ್ಷ್ಮ ದ್ರವ್ಯಗಳ ಚಿಂತನೆ ಅರಿವಿಗೆ ಬಂದಾಗ ಅತ್ಯಾಶ್ಚರ್ಯವನ್ನುಂಟು ಮಾಡುವುದರಲ್ಲಿ ಸಂದೇಹವಿಲ್ಲ.

ಅನೇಕ ಶತಮಾನಗಳಿಂದ ಸತ್ಯಾಸತ್ಯತೆಯನ್ನು ಪರೀಕ್ಷಿಸುತ್ತಾ ದೇಶ, ಕಾಲಗಳಲ್ಲುಂಟಾದ ಪರಿವರ್ತನೆಗೆ ಪ್ರತಿಕ್ರಿಯಿಸುತ್ತಾ ಮೂಲಭೂತ ಸಿದ್ಧಾಂತಗಳಿಗೆ ಚ್ಯುತಿಯಾಗದಂತೆ ಅನೇಕ ನವೀನ, ಅತ್ಯಾವಶ್ಯಕವಾದಂತಹ ಮಾರ್ಪಾಡುಗಳನ್ನು ಭಾರತೀಯ ವೈದ್ಯ ಪದ್ಧತಿಯು ಅಳವಡಿಸಿಕೊಳ್ಳುತ್ತಾ ಬಂದಿರುವುದು ಐತಿಹಾಸಿಕ ಸತ್ಯ.

ಜನಸಾಮಾನ್ಯರ ಬದಲಾದ ಜೀವನಶೈಲಿ, ಆಹಾರ ಪದ್ಧತಿ, ಹವಾಮಾನದ ಬದಲಾವಣೆ, ಪರಿಸರದ ವೈಪರೀತ್ಯಗಳು ಹೀಗೆ ಹತ್ತು ಹಲವು ಕಾರಣಗಳಿಂದಾಗಿ ಉದ್ಭವಿಸಿ ಆಯುರ್ವೇದದಲ್ಲಿ ಒಂದಾದಂತಹ ವಿಶಿಷ್ಟ ಶಾಸ್ತ್ರವೇ "ರಸಶಾಸ್ತ್ರ" ಇದರಲ್ಲಿ ಚಿನ್ನ, ಬೆಳ್ಳಿ, ಖನಿಜಗಳು, ಗಂಧಕ, ಪಾರದ, ಪಾಷಾಣ, ಮುತ್ತು, ಹವಳ, ವಜ್ರ, ವೈಢೂರ್ಯ ಹೀಗೆ ಅನೇಕಾನೇಕ ದ್ರವ್ಯಗಳ ಶಾಸ್ತ್ರೋಕ್ತ ಸಂಗ್ರಹಣೆ, ಶುದ್ಧೀಕರಣ, ಭಸ್ಮೀಕರಣ, ಅಮೃತೀಕರಣ ಪ್ರಕ್ರಿಯೆಗಳು ಸವಿಸ್ತಾರವಾಗಿ ವರ್ಣಿಸಲಾಗಿದೆ.

ಮನುಷ್ಯನಿಗೆ ಅಲ್ಪ ಔಷಧ ಸೇವನೆ, ಸ್ವಾದರಹಿತ ಔಷಧ ಸೇವನೆ, ಶೀಘ್ರ ಪರಿಣಾಮಕಾರಿ ಔಷಧಿಗಳ ಅವಶ್ಯಕತೆ ತಲೆದೋರಿದಾಗ ಇದರ ಪೂರೈಕೆಗಾಗಿ ಸೃಷ್ಟಿಯಾದ ಔಷಧಗಳು ರಸಶಾಸ್ತ್ರದಿಂದಾಗಿ ಲಭ್ಯವಾಯಿತು. ಕಾಷ್ಠೌಷಧ ಅನಾನುಕೂಲತೆಗಳಿಲ್ಲದೆ ಅತೀ ದೀರ್ಘಕಾಲದ ಸವೀರ್ಯತಾವಧಿಯನ್ನು ಉಳಿಸಿಕೊಳ್ಳುವಂತಹ ರಸೌಷಧಿಗಳು ಅನೇಕ ಅನುಕೂಲತೆಗಳನ್ನು ಹೊಂದಿದ್ದು, ಔಷಧಗಳ ಗುಣಕರ್ಮವೀರ್ಯಗಳ ವೃದ್ಧಿಗಾಗಿ ಬಂದಂತಹ ಮಾರ್ಪಾಡಾಗಿದೆ.

ಭಸ್ಮಗಳಲ್ಲದೆ ಇನ್ನು ಕೆಲವು ವಿಶಿಷ್ಟ ಔಷಧಗಳ ಮಾರ್ಪಾಡುಗಳು ಸೂಕ್ಷ್ಮಕಣಗಳುಳ್ಳ, ಅತೀ ಶೀಘ್ರವಾಗಿ ದೇಹಾಂತರ್ಗತವಾಗುವಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ಹೆಸರಿಸಲಾಗಿದೆ.

- ಆವರ್ತಿತ ಘೃತ ತೈಲಗಳು
  ಉದಾ:– ಕ್ಷೀರಬಲಾ 101, ಶತಧೌತ ಘೃತ, ಅಣುತೈಲ – ಇವುಗಳನ್ನು
  - ವಿಶಿಷ್ಟ ತಯಾರಿಕಾ ಕ್ರಮಗಳನ್ನು ಅಳವಡಿಸಿ ಔಷಧಿಯ ಪ್ರತಿಯೊಂದು ಅಣುವಿನಲ್ಲೂ ಸೂಕ್ತ ದೇಹದ ಅಣುವಿನ ಮೇಲೆ ಪರಿಣಾಮ ಉಂಟುಮಾಡಲು ತಯಾರಿಸಲಾಗುವುದು.
- ಕಣ್ಣಿನ ವಿಶೇಷ ರಚನೆಯನ್ನಾಧರಿಸಿ, ದೃಷ್ಟಿ ಪಟಲಗಳವರೆಗು ಪಸರಿಸುವಂತಹ, ದೀರ್ಘಕಾಲ ಅಥವಾ ಅಲ್ಪಕಾಲ ಕಣ್ಣಿನ ಭಾಗಗಳ ಸಾಮಿಪ್ಯವನ್ನು ಹೊಂದುವ, ಅತಿ ಸೂಕ್ಷ್ಮ ಸ್ರೋತಸ್‌ಗಳನ್ನು ಬೇಧಿಸಿಹೋಗುವಂತಹ ಅತ್ಯದ್ಭುತ ಶಕ್ತಿಯುಳ್ಳಂತಹ ಸ್ಥಾನಿಕ ಔಷಧಿಗಳ ವಿಶಿಷ್ಟ ವಿಭಾಗವೇ 'ನೇತ್ರಕ್ರಿಯಾಕಲ್ಪಗಳು'

ಮಾನವನ ನೇತ್ರಗಳು ಅತ್ಯಂತ ವಿಶೇಷ ರಚನೆಯನ್ನು ಹೊಂದಿದ್ದು ಕಣ್ಣಿನ ಎಲ್ಲಾ ಪಟಲಗಳ ಸೂಕ್ಷ್ಮಾತಿಸೂಕ್ಷ್ಮ ಅವಯವಗಳನ್ನು ಔಷಧಿಗಳು ತಲುಪಬೇಕಾದರೆ, ಅಂತಹ ಔಷಧ ಕಲ್ಪಗಳು ಸೂಕ್ಷ್ಮಾತಿಸೂಕ್ಷ್ಮ ಕಣಗಳನ್ನೊಳಗೊಂಡಿರಬೇಕು, ಸೂಕ್ಷ್ಮ ಸ್ರೋತೋಗಾಮಿ ಗುಣವನ್ನೂ ಹೊಂದಿರಬೇಕು ಎಂಬುದನ್ನು ಮನಗಂಡಿದ್ದ ಆಯುರ್ವೇದ ಆಚಾರ್ಯರು ವಿಶೇಷ ನೇತ್ರ ಕಲ್ಪಗಳನ್ನು ರೂಪಿಸಿರುತ್ತಾರೆ. ಕಣ್ಣಿನ ಕಾಡಿಗೆ (ಅಂಜನ), ನೇತ್ರ ಬಿಡಾಲಕ (ಸೂಕ್ಷ್ಮ ಕಣಗಳುಳ್ಳ ನೇತ್ರದ ಸುತ್ತಲೂ ತೇಯ್ದು ಹಚ್ಚುವ ಔಷಧಿ), ನೇತ್ರ ತರ್ಪಣ, ಸೂಕ್ಷ್ಮ ಕಣಗಳಿಂದ ತಯಾರಾದ ಔಷಧೀಯ ತುಪ್ಪ, ಶತಧೌತ ಘೃತ (100 ಬಾರಿ ತೊಳೆದು ಪಕಮ ಸೂಕ್ಷ್ಮ ಕಣಗಳನ್ನೊಳಗೊಂಡ ವಿಶೇಷ ತುಪ್ಪ) ಇಂತಹ ತೀವ್ರ ಪರಿಣಾಮಕಾರಿಯಾದ ಔಷಧ ಯೋಗಗಳನ್ನು ಆಯುರ್ವೇದ ಗ್ರಂಥಗಳಲ್ಲಿ ಕಾಣಬಹುದು.

ವಿವಿಧ ಖನಿಜ ಧಾತುಗಳನ್ನು ವಿಶಿಷ್ಟ ಶೋಧನಾ, ಮಾರಣಾದಿ ಕರ್ಮಗಳಿಗೆ ಒಳ ಪಡಿಸಿ ಭಸ್ಮ ತಯಾರಿಸಿ; ಸೂಕ್ಷ್ಮ ಕಣಗಳಾಗಿ ಪರಿವರ್ತಿಸಿ ದೇಹಸಿದ್ಧಿಗೆ ಯೋಗ್ಯವಾಗಿ ಪರಿವರ್ತಿಸಲಾಗುವುದು. ರಸಶಾಸ್ತ್ರದಲ್ಲಿ ಶ್ರೇಷ್ಠ ಭಸ್ಮಗಳ ಲಕ್ಷಣಗಳನ್ನು ವಿವರಿಸುತ್ತಾ ಭಸ್ಮ ಪರೀಕ್ಷಾ ವಿಧಾನಗಳನ್ನು ಸವಿಸ್ತಾರವಾಗಿ ತಿಳಿಸಲಾಗಿದೆ. ಉತ್ತಮ ಭಸ್ಮವು ಸ್ವಾದರಹಿತ, ಗಂಧರಹಿತವಾಗಿದ್ದು, ಕೇತಕೀ ಪುಷ್ಪದ ರಜದಂತೆ ಸೂಕ್ಷ್ಮ ಕಣಗಳನ್ನೊಳಗೊಂಡಿರಬೇಕು, ಯೋಗವಾಹಿಯಾಗಿದ್ದು, ಅಲ್ಪ ಪ್ರಮಾಣದಲ್ಲಿ ಶೀಘ್ರ ಪರಿಣಾಮವನ್ನುಂಟು ಮಾಡಬೇಕು. ರೇಖಾಪೂರ್ಣತ್ವ, ವಾರಿತರ, ನಿಶ್ಚಂದಿ ಉತ್ತಮ, ಅಪುನರ್ಭವತ್ವ, ನಿರುಷ್ಣೀಕರಣ, ಅವಾಮಿ, ಇತ್ಯಾದಿ ಭಸ್ಮ ಪರೀಕ್ಷಾ ವಿಧಾನಗಳನ್ನು ರಸಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. (ತಾಲಿಕಾ–2) ಆಧುನಿಕ ವಿಜ್ಞಾನದ ಆವಿಷ್ಕಾರದಿಂದ ಬೆರಳಿನ ರೇಖೆಗಳಲ್ಲಿ 88–220 microns ಗಾತ್ರದಷ್ಟು ಸೂಕ್ಷ್ಮ ರಂಧ್ರಗಳಿರುತ್ತವೆ ಎಂದು ತಿಳಿದು ಬಂದಿದೆ.

(ತಾಲಿಕಾ–1).

ನ್ಯಾನೋ ಪದದ ಬದಲಾಗಿ ಆಯುರ್ವೇದದಲ್ಲಿ ಬಳಸಲಾಗಿರುವ ಕೆಲವು ವಿಶೇಷ ಪದಗಳು, ಅವುಗಳ ಪರಿಭಾಷೆ, ಪರ್ಯಾಯ ಹಾಗೂ ಉಲ್ಲೇಖ ಕೆಳಗಿನ ತಾಲಿಕಾ – 1ರಲ್ಲಿ ಹೇಳಲಾಗಿದೆ.

ಕ್ರ.ಸಂ.	ವಿಶೇಷ ಪದ	ಪರಿಭಾಷೆ	ಪರ್ಯಾಯ ಪದ	ಉಲ್ಲೇಖ
1	ಅಣು	ಆರಂಭಕ ಮಾನ, ಸೂಕ್ಷ್ಮ ರೂಪದಲ್ಲಿ ಇರುವಂತಹದ್ದು	ಅತಿ ಸೂಕ್ಷ್ಮ, ಅತ್ಯಲ್ಪ, ಕ್ಷುದ್ರ, ವಿದ್ಯುತ್	ಶ.ಕ.ದ್ರು. I ಭಾಗ ಚ.ವಿ. 7/10 ಸು.ಶಾ.3/3
2	ಸೂಕ್ಷ್ಮ	ಸೂಕ್ಷ್ಮ ಸ್ರೋತೋಗಾಮಿ ಗುಣವುಳ್ಳಂತಹದ್ದು	ಅಲ್ಪ, ಅಣು, ಕಣ	ಶ.ಕ.ದ್ರು V ಭಾಗ
3	ಕಣ	ಅತಿಸೂಕ್ಷ್ಮ ನಾಳಗಳಲ್ಲಿ ಚಲಿಸುವಂತಹದ್ದು	ಅತಿ ಸೂಕ್ಷ್ಮ, ಸ್ತೋಕ	ಆ.ಶ.ಕೋ.
4	ಸ್ತೋಕ		ಬಿಂದು, ಕಣ	ಶ.ಕ.ದ್ರು V ಭಾಗ
5	ರೇಣು	ಅಣುವಿನಂತೆ ಗತಿಯುಳ್ಳದ್ದು	ಧೂಲಿ, ಪರ್ಪಟ	ಶ.ಕ.ದ್ರು
6	ಪರಮ ಸೂಕ್ಷ್ಮ	ಪ್ರತ್ಯಕ್ಷ ಪ್ರಮಾಣಗಳಿಂದ ತಿಳಿಯಲು ಅಸಾಧ್ಯವಾಗಿರುವಂತಹದ್ದು	ಅಮೂರ್ತ	ಸು.ಶಾ. 1/16
7	ಪರಮಾಣು	ಅಣುವಿನ ಅತಿಸೂಕ್ಷ್ಮ ಭಾಗ	ಸೂಕ್ಷ್ಮತಮ	ಚ.ಶಾ. 7/17 ಅ.ಸಂ.ಶಾ. 5/10
8	ಅಣುಸ್ರೋತಸ್	ಅತ್ಯಲ್ಪಾಗ್ರ ಛಿದ್ರವುಳ್ಳ ಸ್ರೋತಸ್	–	ಚ.ಕ. 1/5 ಸು.ಚಿ 35/9
9	ಅದೃಶ್ಯ	ಅಪ್ರತ್ಯಕ್ಷ ಪ್ರಮಾಣಗಳಿಂದ ಉಪಲಬ್ಧವಾಗುವ ವಿಷಯ	–	ಶ.ಕ.ದ್ರು. I ಭಾಗ
10	ತ್ರಸರೇಣು	ಮುವತ್ತು ಪರಮಾಣುಗಳು ಸೇರಿದರೆ ಒಂದು ತ್ರಸರೇಣು ಪ್ರಮಾಣ	ಧ್ವಂಸಿ.	ಶ.ಕ.ದ್ರು. II ಭಾಗ

ತಾಲಿಕಾ–2

ಭಸ್ಮದ ಗುಣ ಕರ್ಮ ಹಾಗೂ ಭಸ್ಮ ಪರೀಕ್ಷಾ ವಿಧಾನಗಳ ವಿವರಣೆ:–

ಕ್ರ.ಸಂ.	ವಿಶೇಷ ಪದ	ವಿವರಣೆ	ಉಲ್ಲೇಖ
1	ಭಸ್ಮ	ಭಸ್+ಸ್ಮ = ಭೂತಕಾಲದಲ್ಲಿ ಹೊಳೆಯುತ್ತಲ್ಲಿದ್ದಂತಹದ್ದು	ಶಬ್ದ ಕಲ್ಪದ್ರುಮ ತೃತೀಯ ಭಾಗ
2	ರಸೀಭವ	ದೇಹದ ರಸ ಧಾತುವಿನಲ್ಲಿ ಅಂತರ್ಗತವಾಗುವಂತಹದ್ದು	
3	ಘಾರಿತರ	ನೀರಿನ ಮೇಲೆ ತೇಲುವಂತಹದ್ದು ಉದಾ:– ಮೃತಲೋಹ ಅಂದರೆ ಭಸ್ಮ	ರಸರತ್ನ ಸಮುಚ್ಚಯ 8/26
4	ರೇಖಾಪೂರ್ಣ	ಹೆಬ್ಬೆರಳು ಹಾಗೂ ತೋರು ಬೆರಳುಗಳ ಮಧ್ಯೆ ಹಿಡಿದು ಉಜ್ಜಿದಾಗ ಬೆರಳಿನ ರೇಖೆಗಳ ಮಧ್ಯೆ ಉಳಿಯಬೇಕು	ರಸರತ್ನ ಸಮುಚ್ಚಯ 8/27
5	ಯೋಗವಾಹಿ	ಯಾವ ದ್ರವ್ಯದೊಂದಿಗೆ ಸಂಯೋಗ ಹೊಂದುತ್ತದೆಯೋ ಆ ದ್ರವ್ಯದ ಕರ್ಮಗಳನ್ನು ಶೀಘ್ರವಾಗಿ, ಸುಲಲಿತವಾಗಿ ಮಾಡುವ ದ್ರವ್ಯ	ಆಯುರ್ವೇದ ಶಬ್ದಕೋಶ
6	ಅಪುನರ್ಭವ	ಬೆಲ್ಲ, ಗುಲಗಂಜಿ, ಟಂಕಣ, ಜೇನು, ತುಪ್ಪಗಳೊಂದಿಗೆ ಸಂಸ್ಕಾರ ಮಾಡಿದಾಗ, ಭಸ್ಮ ತನ್ನ ಮೂಲಧಾತುವಿಗೆ ರೂಪಾಂತರಗೊಳ್ಳದೇ ಇರುವುದು.	ರಸರತ್ನ ಸಮುಚ್ಚಯ 8/28
7	ಉತ್ತಮ/ಉನ್ನಾಮ	ಸ್ವಲ್ಪ ಭಸ್ಮವನ್ನು ನೀರಿನಲ್ಲಿ ಹಾಕಿ, ಅದರ ಮೇಲೆ ಒಂದು ಭಾರವಾದ ಧಾನ್ಯದ ಕಾಳನ್ನಿಟ್ಟಾಗ, ಆ ಕಾಳು ಹಂಸದಂತೆ ನೀರಿನ ಮೇಲೆ ತೇಲುವುದು.	ರಸರತ್ನ ಸಮುಚ್ಚಯ 8/2
8	ನಿರುದ್ಧೀಕರಣ	ಭಸ್ಮವನ್ನು ಬೆಳ್ಳಿಯೊಂದಿಗೆ ಸಂಸ್ಕರಿಸಿದಾಗ ಬೆಳ್ಳಿಯ ಪ್ರಮಾಣದಲ್ಲಿ ವ್ಯತ್ಯಾಸ ಉಂಟಾಗದು ಹಾಗೂ ಭಸ್ಮವು ಅಪುನರ್ಭವತ್ವ ಹೊಂದುತ್ತದೆ.	ರಸರತ್ನ ಸಮುಚ್ಚಯ 8/30

9	ಕೆತಕೀ ರಜ ಸನ್ನಿಭ	ಭಸ್ಮವು ಕೇತಕೀ ಪುಷ್ಪದ ರಜದಷ್ಟು ಸೂಕ್ಷ್ಮವಾಗಿರಬೇಕು.	ಚಕ್ರದತ್ತ, ರಸಾಯನ ಅಧಿಕಾರ
10	ಅಂಜನ ಸನ್ನಿಭ	ಭಸ್ಮವು ಕಾಡಿಗೆಯಂತೆ ಮೃದುವಾಗಿಯೂ, ಸೂಕ್ಷ್ಮವಾಗಿಯೂ ಇದ್ದರೆ ಶ್ರೇಷ್ಠ	
11	ನಿಶ್ಚಂದ್ರಿಕಾ	ಭಸ್ಮವನ್ನು ಸೂರ್ಯನ ಕಿರಣಗಳಿಗೆ ಹಿಡಿದಾಗ ಹೊಳಪು ರಹಿತವಾಗಿರಬೇಕು	
12	ಶ್ಲಕ್ಷ್ಣ	ಅಕರ್ಕಶ; ಮೃದುತ್ವ ಹೊಂದಿದ್ದಂತಹದ್ದು	ಸುಶ್ರುತ ಸೂತ್ರ ಸ್ಥಾನ 11/16 ಅಷ್ಟಾಂಗ ಹೃದಯ ಸೂತ್ರ 19/72
13	ಅವಾಮಿ	ಸೇವಿಸುವ ಔಷಧಿ ದ್ರವ್ಯವು ರೋಗಿಗೆ ವಾಂತಿ ಉಂಟುಮಾಡಬಾರದು	

ತಾಲಿಕಾ – 3

ಆಯುವೇದ ಔಷಧಿಯೋಗ ಇತ್ಯಾದಿಗಳ ಅಣು ಪ್ರಮಾಣ

ಕ್ರ.ಸಂ	ದ್ರವ್ಯ ವಿಶೇಷ	Chemical Composition	ಅಣು ಪ್ರಮಾಣ
1	ಪರಾಗ ಕಣ	-	30 micrometer
2	ಕೆಂಪುರಕ್ತಕಣ	-	7 micrometer
3	ಅಂಥ್ರಾಕ್ಸ್ ಬ್ಯಾಕ್ಟೀರಿಯಾ	-	1 micrometer
4	ಡಿಎನ್ಎ	-	2.5 nm
5	ಅಣು	-	1 nm
6	ನ್ಯಾನೊ ಚಿನ್ನದ ಕಣ	Au	2-30 nm
7	ನ್ಯಾನೋ ವಜ್ರ ಕಣ	C	2-10 nm
8	ಅಭ್ರಕ ಭಸ್ಮ	$[k(Mg,Fe)_3(AlSiO_{10}(OH)_2]$	19-88 1m
9	ತಾಮ್ರ ಭಸ್ಮ	Cu	32.8nm
10	ಯಶದ ಭಸ್ಮ	Zn	100-500nm
11	ಸ್ವರ್ಣ ಭಸ್ಮ	Au	56nm
12	ರಜತ ಭಸ್ಮ	Ag	323.8 nm
13	ಸ್ವರ್ಣ ಮಾಕ್ಷಿಕ ಭಸ್ಮ	$CuFeS_2$	931.4-1000 nm
14	ಮುಕ್ತಶುಕ್ತಿ ಭಸ್ಮ	$CaCO_3$	1.22-10.20 micrometer
15	ನಾಗಭಸ್ಮ	Pb	1 Micrometer – 20 Micrometer
16	ಅಶೋಧಿತ ಮನಃ ಶಿಲಾ	As_2S_2	54.18 Micrometer
17	ಶೋಧಿತ ಮನಃ ಶಿಲಾ	As_2S_2	15.55 Micrometer
18	ತ್ರಿಗುಣ ಬಲಿಯುಕ್ತ ರಸ ಸಿಂಧೂರ		18.68 Micrometer
19	ಮಂಡೂರ ಭಸ್ಮ	Fe_2O_3	200-300 nm
20	ಹಸುವಿನ ತುಪ್ಪ		179.02 Micrometer
21	ಶತಧೌತ ಘೃತ		59.99 Micrometer
22	ದ್ರಾಕ್ಷಾ ರಸ		0-75 Micrometer
23	ಸುರ್ಮ		100 Micrometer

ಉಪಸಂಹಾರ:–ನ್ಯಾನೋ ತಂತ್ರಜ್ಞಾನವೆಂಬ ವಿಜ್ಞಾನವು ಅತ್ಯಂತ ಅಗಾಧವಾಗಿದ್ದು, ಇನ್ನೂ ಹತ್ತು ಹಲವು ಆಯಾಮಗಳಲ್ಲಿ ಸಂಶೋಧನೆ ಅಗತ್ಯವಿದೆ. ಆಯುರ್ವೇದವು ಸಾಗರೋಪಾದಿಯಲ್ಲಿ ಆಳ–ಹರವುಗಳಿರುವ ಪ್ರಾಚೀನ ಜ್ಞಾನ ಸಂಪತ್ತು. ಇಂದು ನಮಗೆ ಇದರ ಬಗ್ಗೆ ಅರಿವಿರುವುದು ಅತ್ಯಲ್ಪ ಮಾತ್ರ. ಆಯುರ್ವೇದದಲ್ಲಿ ಹೇಳಲಾಗಿರುವ ನ್ಯಾನೋ ತಂತ್ರಜ್ಞಾನದಂತಹ, ವಿಜ್ಞಾನವೇ ವಿಸ್ಮಯ ಪಡುವಂತಹ ಅನೇಕ ವಿಷಯಗಳು ಅರಿವಿಗೆ ಬರುತ್ತವೆ. ಇಂತಹ ಅಮೂಲ್ಯ ಜ್ಞಾನ ಸಾಗರದ ಮೇಲೆ ಹೆಚ್ಚಿನ ವೈಜ್ಞಾನಿಕ ಸಂಶೋಧನೆಗಳು

ನಡೆಸಿದಲ್ಲಿ ಮನುಕುಲಕ್ಕೆ ಅಪಾರವಾದ ಲಾಭವಾಗುವುದರಲ್ಲಿ ಸಂಶಯವಿಲ್ಲ.

References:-

- ರಸರತ್ನ ಸಮುಚ್ಚಯ – 8ನೇ ಅಧ್ಯಾಯ (ರ.ರ.ಸ)
- ರಸ ತರಂಗಿಣಿ, – 2ನೇ ಅಧ್ಯಾಯ (ರ.ತ)
- ಆಯುರ್ವೇದೀಯ ರಸಶಾಸ್ತ್ರ – by ಡಾ.ಕೆ. ನಿಷ್ಟೇಶ್ವರ್ ಹಾಗೂ ಡಾ. ಆರ್ ವೈದ್ಯನಾಥ್
- ಚರಕ ಸಂಹಿತೆ – ಸೂತ್ರ ಸ್ಥಾನ 1/7, 1/70 ವಿಮಾನ ಸ್ಥಾನ 7/10 (ಚ.ವಿ.) ಶಾರೀರ ಸ್ಥಾನ 7/17, ಕಲ್ಪ ಸ್ಥಾನ 1/5 ಚಿಕಿತ್ಸಾ ಸ್ಥಾನ 16/3, 73,74, ಚಿಕಿತ್ಸಾಸ್ಥಾನ 1–3/58.
- ಸುಶ್ರುತ ಸಂಹಿತೆ – ಸೂತ್ರ ಸ್ಥಾನ 11/16, 18/41, ಶಾರೀರ ಸ್ಥಾನ 10/60, 69/3/3, 1/16 (ಸು.ಶಾ) ಚಿಕಿತ್ಸಾ ಸ್ಥಾನ 15/39, 13/1 ಉತ್ತರ ಸ್ಥಾನ 18/85, 44/21,23, 10/15
- ಅಷ್ಟಾಂಗ ಸಂಗ್ರಹ – ಶಾರೀರ ಸ್ಥಾನ 5/10 (ಅ.ಸಂ.ಶಾ)
- ಅಷ್ಟಾಂಗ ಹೃದಯ – ಸೂತ್ರ 19/72
- ಆಯುರ್ವೇದೀಯ ಶಬ್ದಕೋಶ – Vol-I (ಆ.ಶ.ಕೋ)
- ಶಬ್ದ ಕಲ್ಪ ದ್ರುಮ – ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ಹಾಗೂ ಪಂಚಮ ಭಾಗ
- ISPUB. Com/ijam/7/1/4255
- Vasanth et. al (197/a)
- Characterization of Bioactive nanoparticles – Bhasma an Indian Ayurvedic Drug.
- BARC – Heavy metals tested in medicines
- Genotoxicity evaluation of Bhasma using Micronucleus & comet assays.
- Bhasma – The ancient Indian medicine.
- Pharmaceutical Technology & research review article-2014. Shatadhouta Ghrita – A case study by Deshpande et. al Development of quality standards of ancient silver based nanomedicine. Analytical Evaluation of an Ayurvedic formulation Standard Analytical laboratory Pvt. Ltd.

ಹಸಿರು ಮಾರುಕಟ್ಟೆ ನಿಲುವುಗಳು ಮತ್ತು ಸಿದ್ಧಾಂತಗಳ ಪ್ರಸಕ್ತ ಸ್ಥಿತಿಗತಿಗಳು

1 ಎಂ.ಸಿ.ಗೀತಾ, 2 ಡಾ॥ಎಂ.ಹೆಚ್.ವಿದ್ಯಾಶಂಕರ್

1ಉಪನ್ಯಾಸಕರು, ವಾಣಿಜ್ಯ ವಿಭಾಗ, 2 ಸಹಾಯಕ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ

ಇಂದಿನ ಆಧುನಿಕ ಜಾಗತಿಕ ಯುಗದಲ್ಲಿ, ಗ್ರಾಹಕರನ್ನು ಹಾಗೂ ಬಳಕೆದಾರರನ್ನು ಹತೋಟಿಯಲ್ಲಿಟ್ಟುಕೊಳ್ಳಲು ಹಾಗೂ ನಮ್ಮ ಸ್ವಾಭಾವಿಕ ಪರಿಸರವನ್ನು ರಕ್ಷಿಸುವುದು ಪ್ರಯಾಸದ /ಸವಾಲಿನ ಕೆಲಸವೇ ಸರಿ ಹಾಗೂ ಅದು ಈ ಕಾಲದ ಅತ್ಯಂತ ಅವಶ್ಯಕತೆಯದ್ದಾಗಿದೆ. ಹಸಿರು ಮಾರುಕಟ್ಟೆ ಒಂದು ಪ್ರಕ್ರಿಯೆ ಪ್ರಸಕ್ತ ಮಾರುಕಟ್ಟೆಯಲ್ಲಿ ಅದು ತುಂಬಾ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಹಾಗೂ ಅದು ಪ್ರಪಂಚದ ಇತರೆ ಅಭಿವೃದ್ಧಿ ಹೊಂದಿದ ಭಾಗಗಳಂತೆ ಭಾರತದಲ್ಲಿ ಪ್ರಮುಖ ಸಿದ್ಧಾಂತವಾಗಿ ಹೊರಹೊಮ್ಮಿದೆ ಹಾಗೂ ಅದು ಅಭಿವೃದ್ಧಿಯ ಹಿನ್ನೆಡೆಯಲ್ಲಿ ಚೇತರಿಸಿಕೊಳ್ಳಲು ಸಹಾಯಕವಾಗುವ ಪ್ರಮುಖ ನಿಲುವಾಗಿ ಮನಗಂಡಿದೆ.

ಹಸಿರು ಮಾರುಕಟ್ಟೆಯು ಈ ದಿನಗಳಲ್ಲಿ ಮಾರುಕಟ್ಟೆ ಸಿದ್ಧಾಂತದ ಪವಿತ್ರ ಪುಷ್ಟಿದಾಯಕ ಘಟಕವಾಗಿದೆ. ತದನುಸಾರವಾಗಿ ಹೊಸ ವಿಧದ ಪದಾರ್ಥಗಳನ್ನು ಸೃಷ್ಟಿಸಿದೆ. ಅವುಗಳನ್ನು "ಹಸಿರು" ಪದಾರ್ಥಗಳು ಎಂದು ಕರೆಯಲಾಗಿದೆ, ಅವು ಪರಿಸರಕ್ಕೆ ಅಲ್ಪ ಪ್ರಮಾಣದ ನಷ್ಟ ಉಂಟು ಮಾಡುತ್ತದೆ. ಹೀಗೆ ಹಸಿರು ಮಾರುಕಟ್ಟೆಯು ಪರಿಸರ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ಹೊಂದಿದೆ ಹಾಗೂ ಉದ್ದಿಮೆ ಮತ್ತು ಗ್ರಾಹಕರ ಮನಸ್ಸಿನಲ್ಲಿ ಅಭಿವೃದ್ಧಿಯ ನಿಲುವನ್ನು ತಳೆದಿದೆ. ಈಗಿನ ಯುಗವು ಪುನರಾವರ್ತನೆ ಹೊಂದುವ, ವಿಷಯುಕ್ತವಲ್ಲದ ಹಾಗೂ ಪರಿಸರ ಸ್ನೇಹಿ ಪದಾರ್ಥವಾಗಿದೆ. ಇದು ಮಾರುಕಟ್ಟೆದಾರರಿಗೆ ಬಳಕೆದಾರರ ಅವಶ್ಯಕತೆಗಳನ್ನು ಪೂರೈಸುವ ಸಂತೃಪ್ತಿಪಡಿಸುವ ಹೊಸ ಮಂತ್ರವಾಗಿದೆ ಹಾಗೂ ಉತ್ತಮ ಲಾಭಾಂಶವನ್ನು ಹೊಂದಿದೆ.

ಈ ಪತ್ರಿಕೆಯ ಭಾರತೀಯ ಮಾರುಕಟ್ಟೆಯ ಪ್ರಸಕ್ತ ಸಾದೃಶಗಳನ್ನು ವಿವರಿಸುತ್ತದೆ ಹಾಗೂ ಸಮಸ್ಯೆಗಳನ್ನು ಅನ್ವೇಷಿಸುತ್ತದೆ ಹಾಗೂ ಹಸಿರು ಮಾರುಕಟ್ಟೆಯ ವ್ಯವಹಾರದ ಅವಕಾಶಗಳನ್ನು ಕಲ್ಪಿಸುತ್ತದೆ. ಏಕೆ ಕಂಪೆನಿಗಳು ಅದನ್ನು ಅನುಸರಿಸುತ್ತವೆ. ಹಾಗೂ ಹಸಿರು ಮಾರುಕಟ್ಟೆಯ ಭವಿಷ್ಯವಾಗಿದೆ ಹಾಗೂ ಹಸಿರು ಮಾರುಕಟ್ಟೆಯ ಒಂದು ನಿರಂತರ ಪ್ರಾಯೋಗಿಕವಾಗಿ ಬೇಡಿಕೆಯನ್ನು ಹೊಂದುತ್ತಾ ಸಾಗಿದೆ. ಮಾರುಕಟ್ಟೆಯು ಒಂದು ನಿರಂತರ ಪ್ರಾಯೋಗಿಕವಾಗಿ ಬೇಡಿಕೆಯನ್ನು ಹೊಂದುತ್ತಾ ಸಾಗಿದೆ. ಹಸಿರು ಮಾರುಕಟ್ಟೆಯ ಸನ್ನಿಯನ್ನು ಹೋಗಲಾಡಿಸಲು ಅವರು ಹಲವು ನಿಲುವುಗಳನ್ನು ವಿವರಿಸಲು ಪ್ರಯತ್ನಿಸಿರುತ್ತಾರೆ. ಹಸಿರು ಮಾರುಕಟ್ಟೆಯು ಸಾಧ್ಯವಾಗುವುದೇ ಅಲ್ಲದೆ ಅದು ಹಲವು ವಿಭಾಗಗಳಲ್ಲಿ ಲಾಭದಾಯಕವಾಗಿ ಸ್ಥಾಯಿಯಾಗಿ ಉಳಿಯುವಂತಹದ್ದಾಗಿದೆ.

ಅಧ್ಯಯನದ ಉದ್ದೇಶಗಳು:

* ಭಾರತದಲ್ಲಿ ಹಸಿರು ಮಾರುಕಟ್ಟೆಯ ಅವಶ್ಯಕತೆಯ ಹಲವು ದೃಷ್ಟಿಕೋನಗಳನ್ನು ಚರ್ಚಿಸುವುದು.
* ಯಶಸ್ವಿ ಹಸಿರು ಮಾರುಕಟ್ಟೆಯನ್ನು ಪಡೆಯಲು ಅವಶ್ಯಕತೆಯುಳ್ಳ ನಿಲುವುಗಳನ್ನು ಅರ್ಥೈಸಿಕೊಳ್ಳಲು
* ಭಾರತದಲ್ಲಿ ಸದೃಡ ಹಸಿರು ಮಾರುಕಟ್ಟೆಯ ಪ್ರಸಕ್ತ ಸಾದೃಶಗಳನ್ನು ಅಧ್ಯಯನ ಮಾಡಲು
* ಭಾರತದಲ್ಲಿ ಹಸಿರು ಮಾರುಕಟ್ಟೆದಾರರು ಎದುರಿಸುವ ಸವಾಲುಗಳನ್ನು ಅಧ್ಯಯನ ಮಾಡುವುದು.

ಮುಖ್ಯಪದಗಳು: ಪರಿಸರ ಸಮಸ್ಯೆಗಳು, ಹಸಿರು ಮಾರುಕಟ್ಟೆ, ಪುನರಾವರ್ತನೆಯ, ಸನ್ನಿ, ಸ್ಥಾಯಿ ಅಭಿವೃದ್ಧಿ.

ಪೀಠಿಕೆ: ಹಸಿರು ಮಾರುಕಟ್ಟೆ ಉದ್ದಿಮೆಗಾರರಲ್ಲಿ ಹೊಸ ಬೆಳಕನ್ನು ಚೆಲ್ಲಿದೆ ಹಾಗೂ ಅದು ಈ ಹಿಂದೆ 1980ರಿಂದಲೇ ಅಸ್ತಿತ್ವಕ್ಕೆ ಬಂದಿದೆ. ಹಾಗೂ ಅದು 1990ರಲ್ಲಿಂಯೇ (ಓಟ್‌ನ್ 1998)ರಲ್ಲಿ ಯೂರೋಪ್‌ನಲ್ಲಿ ಪ್ರಾರಂಭಗೊಂಡಿತ್ತು., 1980ರಲ್ಲಿ ಕೆಲವೊಂದು ಪದಾರ್ಥಗಳು ಪರಿಸರಕ್ಕೆ ಮಾತ್ರವಲ್ಲದೆ ಸಂಪೂರ್ಣ ಸಮಾಜಕ್ಕೆ ಮಾರಕವಾಗಿರುವುದು ಕಂಡು ಬಂದಿತ್ತು.

ಪರಿಸರದ ಕಠಿಣ ಮಾನದಂಡಗಳನ್ನು ಪೂರೈಸುವ ಸಲುವಾಗಿ ಮಾರುಕಟ್ಟೆದಾರರು ಹಾಗೂ ಗ್ರಾಹಕರು ತಮ್ಮ ಒಲವಿನ ಸೂಕ್ಷ್ಮತೆಯನ್ನು ಅತಿ ಹೆಚ್ಚಾಗಿ ಹಸಿರು ಪದಾರ್ಥಗಳ ಕಡೆ ಹಾಗೂ ಸೇವೆಗಳನ್ನು ತೋರಿಸಿದ್ದಾರೆ. ಅದರ ಪರಿಣಾಮದಿಂದಾಗಿ ಹಸಿರು ಮಾರುಕಟ್ಟೆಯ, ಮಾರುಕಟ್ಟೆಯ ಅಭಿವೃದ್ದಿಯೆಡೆಗೆ ಸಾಗುತ್ತಿರುವ ಸ್ಥಾಯಿ ಸಾಮಾಜಿಕ ಜವಾಬ್ದಾರಿಯುತ ಪದಾರ್ಥಗಳು ಹಾಗೂ ಸೇವೆಗಳತ್ತ ಹೊರಹೊಮ್ಮಿದೆ. ವಿಶವ ಆಯುಕ್ತತೆಯು (ಕಮಿಷನ್) ಪರಿಸರ ಹಾಗೂ ಅಭಿವೃದ್ದಿಯನ್ನು ವಿವರಿಸುತ್ತ ಸ್ಥಾಯಿ ಅಭಿವೃದ್ದಿಯನ್ನು ಕಲುಪವ" ಭವಿಷ್ಯದ ಪೀಳಿಗೆಯ ಸಾಮ್ರಾಜ್ಯ ಹೊಂದಿದೆ. ಹೊಂದಾಣಿಕೆಯಾಗದ ಪ್ರಸಕ್ತ ಅವಶ್ಯಕತೆಗಳನ್ನು ಪೂರೈಸುವುದು ತಮ್ಮ ಸ್ವಂತ ಅವಶ್ಯಕತೆಯನ್ನು ಪೂರೈಸಿಕೊಳ್ಳುವಿಕೆಯನ್ನು ತಲುಪುವುದು(ಬ್ರಾಂಚ್ ಲ್ಯಾಂಡ್ ವರದಿ 1987) ಹಸಿರು ಮಾರುಕಟ್ಟೆಯ ಕೈಗಾರಿಕಾ ಪ್ರದಕ್ಷಣೆ ಹಾಗೂ ಪರಿಸರ ಸಂರಕ್ಷತೆಯಂತಹ ವಿವಾದಾಂಶಗಳೊಂದಿಗೆ ನಿಕಟವಾದ ಸಾಮರಸ್ಯವನ್ನು ಹೊಂದಿದ್ದು, ವಿಸ್ತರಣಾ ಉತ್ಪಾದಕರ ಹೊಣೆಗಾರಿಕೆ, ಜೀವನ ಚಕ್ರ ವಿಶ್ಲೇಷಣೆ, ಪದಾರ್ಥಗಳ ಉಪಯೋಗ ಹಾಗೂ ಸಂಪನ್ಮೂಲಗಳ ಹರಿವು, ಮತ್ತು ಪರಿಣತಿಯ ದಾಪ್ತತೆಯ ಸಹಯೋಗವನ್ನು ಹೊಂದಿದೆ.

"ಹಸಿರು ಮಾರುಕಟ್ಟೆ" ಯು ಒಂದು ಪವಿತ್ರವಾದ ಮಾರುಕಟ್ಟೆ ಸಿದ್ಧಾಂತಕ್ಕೆ ಉಲ್ಲೇಖಿತವಾಗಿದೆ., ಅದರಲ್ಲಿ ಉತ್ಪಾದನೆ ಮಾರುಕಟ್ಟೆ ಬಳಕೆ ಪದಾರ್ಥದ ವಿತರಣೆ ಹಾಗೂ ಸೇವೆಳು ಪರಿಸರಕ್ಕೆ ಮಾರಕವಾಗದಂತೆ ಜಾಗತಿಕ ತಾಪಮಾನ ಹೆಚ್ಚಳದ ಕಾಳಜಿಯ ಬಗ್ಗೆ, ಸಾವಯವವಾಗಿ ಪರಿವರ್ತಿತವಾಗದ ಘನತ್ಯಾಜ್ಯ, ಕಲುಷಿತಗೊಳಿಸುವ ಹಾನಿಕಾರರು ಪದಾರ್ಥಗಳ ಇತ್ಯಾದಿ ಮಾರುಕಟ್ಟೆದಾರರು ಹಾಗೂ ಬಳಕೆದಾರರು ಹೆಚ್ಚು ಹೆಚ್ಚಾಗಿ ಅತೀ ಸೂಕ್ಷ್ಮತೆಯಿಲ್ಲದ ಹಸಿರು ಪದಾರ್ಥ ಹಾಗೂ ಸೇವೆಗಳನ್ನು ಬಳಸಿಕೊಳ್ಳುವುದು ಅತ್ಯವಶಕ್ತವಾಗಿದೆ. "ಹಸಿರಿ"ನ ಕಡೆಗೆ ವಾಲುವಿಕೆಯು ದುಬಾರಿ ಎಂಬುದಾಗಿ ಗೋಚರಿಸುತ್ತದೆ, ಆದರೂ ಸಹ ಅದು ಮೌಲ್ಯಾಧಾರಿತವಾಗಿ ದೀರ್ಘ ಕಾಲದವರೆಗೆ ಸರಿಸಾಟಿ ಇಲ್ಲದೆ ಲಾಭಕರವಾಗಿ ಪರಿಣಮಿಸಿದೆ.

ಪ್ರೈಡ್ ಮತ್ತು ಪ್ಲೋರ್ ವೆಲ್ನ್‌ದ 1993ರ ಪ್ರಕಾರ ಹಸಿರು ಮಾರುಕಟ್ಟೆಯು ಪರಿಸರ ಮಾರುಕಟ್ಟೆ ಹಾಗೂ ಸ್ಥಾಯಿ ಮಾರುಕಟ್ಟೆ ಎಂಬುದಾಗಿಯೇ ಉಲ್ಲೇಖಿತವಾಗಿದ್ದು, ವಿನ್ಯಾಸಗೊಳಿಸುವಿಕೆಯಲ್ಲಿ ಸಾಂಸ್ಥಿಕ ಪ್ರಯತ್ನಗಳು, ಉತ್ತೇಜಿಸುವಿಕೆ, ಬೆಲೆ ನಿಗದಿಪಡಿಸುವಿಕೆ ಹಾಗೂ ಪದಾರ್ಥಗಳ ವಿತರಣೆಯಲ್ಲಿ ಪರಿಸರಕೆಕ ಯಾವುದೇ ಹಾನಿ ಉಂಟಾಗುವುದಲ್ಲಿ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.

ಪೋಲೋನ್ವಿ (1994) ಹಸಿರು ಮಾರುಕಟ್ಟೆಯು ಮಾನವ ಅಗತ್ಯತೆಗಳನ್ನು ಅಥವಾ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಉತ್ಪಾದಿಸಿ ವಿನ್ಯಾಸಗೊಳಿಸಿದ್ದಾಗಿದೆ, ಇಂತಹ ಅವಶ್ಯಕತೆಗಳು ಅಥವಾ ಉಂಟಾಗುವ ಬೇಡಿಕೆಗಳು ಸ್ವಾಭಾವಿಕ ಪರಿಸರಕ್ಕೆ ಅಂತಹ ಹಾನಿಯನ್ನುಂಟುಪಡುವುದಿಲ್ಲ. ವಿಲ್ಲಿಂಗ್ಟನ್ (1994:93) ರವರ ಪ್ರಕಾರ ಹಸಿರು ಬಳಕೆದಾರ ಎಂದರೆ, ಬಳಕೆದಾರ ಅಥವಾ ಇತರೆಯವರ ಆರೋಗ್ಯದ ಮೇಲೆ ಹಾನಿಕರವಾಗುವಂತಹ ಪದಾರ್ಥಗಳ ಬಳಕೆಯನ್ನು, ನಿರಾಕರಿಸುವವ ಹಾಗೂ ಉತ್ಪಾದನೆಯಲ್ಲಿ ಪರಿಸರಕ್ಕೆ ಹಾನಿಮಾಡುವಂತಹ, ಉಪಯೋಗ, ವಿತರಣೆ ಅಸಮತೋಲನ ಮೊತ್ತದ ಶಕ್ತಿಯ ಬಳಕೆ, ಅನವಶ್ಯಕ ತ್ಯಾಜ್ಯವನ್ನು ಉಂಟು ಮಾಡುವುದು, ಹೆದರಿಕೆಯುಂಟು ಮಾಡುವ ಪ್ರಭೇದಗಳಿಂದ ಅಥವಾ ಪರಿಸರದಿಂದ ಸಿಗುವಂತಹ ಪದಾರ್ಥಗಳನ್ನು ಬಳಕೆ ಮಾಡುವುದು ಅನವಶ್ಯಕ ಉಪಯೋಗಗಳಲ್ಲಿ ತೊಡಗುವುದು, ಅಥವಾ ಪ್ರಾಣಿಗಳೊಂದಿಗೆ ಕ್ರೂರವಾಗಿ ವರ್ತಿಸುವುದು, ಇತರೆ ರಾಷ್ಟ್ರಗಳ ಮೇಲೆ ಕೆಟ್ಟ ಪರಿಣಾಮ ಬೀರುವುದು.

ಅರ್ಥ ಹಾಗೂ ವಿವರಣೆ : ಅಮೇರಿನ್ ಮಾರ್ಕೆಟಿಂಗ್ ಅಸೋಸಿಯೇಷನ್ ಪ್ರಕಾರ "ಹಸಿರು ಮಾರುಕಟ್ಟೆ ಎಂದರೆ, ಪರಿಸರ ಸಂರಕ್ಷಣೆಯು ಕ್ಷೇಮಕರ ಎಂಬುದಾಗಿ ಮನವರಿಕೆಯಾದ ಪದಾರ್ಥಗಳನ್ನು ಮಾರುಕಟ್ಟೆ ಮಾಡುವುದು ಅಭಿವೃದ್ದಿಯನ್ನು ಮನಗಂಡ ಹಾಗೂ ಪದಾರ್ಥಗಳನ್ನು 9 ಸೇವೆಗಳನ್ನು ಉತ್ತೇಜಿಸುವ ಗ್ರಾಹಕರ ಅವಶ್ಯಕತೆಗಳನ್ನು ಪೂರೈಸಿ ಸಂತುಷ್ಟಿಗೊಳಿಸುವ ಹಾಗೂ ಗುಣಮಟ್ಟವನ್ನು ಕಾಯ್ದುಕೊಳ್ಳುವ, ಕ್ಷೇಮತೆಯನ್ನು ಹೊಂದಿರುವ ಕೈಗೆಟುಕುವ ಬೆಲೆಗೆ ಲಭ್ಯವಾದ ಹಾಗೂ ಪರಿಸರಕ್ಕೆ ಮಾರಕವಲ್ಲದ ಉಪಯುಕ್ತಕರವಾದದ್ದು" ಹಸಿರು ಮಾರುಕಟ್ಟೆಯು ಕೈಗಾರಿಕಾ ಪ್ರದೂಕ್ಷಣೆ ಹಾಗೂ ಪರಿಸರ ನಾಶವಾದಂತಹ ವಿವಾದಂಶಗಳಿಗೆ ನಿಕಟ ಸಂಬಂಧವನ್ನು ಹೊಂದಿದೆ. ಉದಾ" ವಿಸ್ತರಣಾ ಉತ್ಪಾದಕರ ಹೊಣೆಗಾರಿಕೆ, ಜೀವನ ಚಕ್ರ, ವಿಶ್ಲೇಷಣೆ, ಪದಾರ್ಥಗಳ ಉಪಯೋಗ ಹಾಗೂ ಸಂಪನ್ಮೂಲಗಳ ಹರಿವು ಮತ್ತು ಪ್ರಾಕೃತಿಕ ಕ್ಷಮತೆ

ಮಿ॥ ಜೆ.ಪೋಲೊನ್ಸಿಕಿ ಪ್ರಕಾರ ಹಸಿರು ಮಾರುಕಟ್ಟೆ ಎಂದರೆ ಮಾನವ ಅವಶ್ಯಕತೆಗಳನ್ನು ಮತ್ತು ಬೇಡಿಕೆಗಳನ್ನು ಪೂರೈಸುವ ಎಲ್ಲಾ ಚಟುವಟಿಕೆಗಳು ರಾಷ್ಟ್ರೀಯ ಪರಿಸರದ ಅವಶ್ಯಕತೆಗಳನ್ನು ಮತ್ತು ಬೇಡಿಕೆಗಳನ್ನು ಅತ್ಯಂತ ಹಾನಿಕಾರಕವಾಗಿ ಪರಿಣಮಿಸಲ್ಪಟ್ಟು ಉತ್ಪಾದನೆಗೊಂಡು ಅನುಕೂಲಕರವಾಗುವಂತಿರಬೇಕು.

ಜಾರ್ಜ್ (1992) ರ ಪ್ರಕಾರ ಹಸಿರು ಮಾರುಕಟ್ಟೆ ಎಂದರೆ ಹಸಿರು ಮಾರುಕಟ್ಟೆಯ ಒಂದು ಪವಿತ್ರವಾದ ಜವಾಬ್ದಾರಿಯುತವಾಗಿ ನಡೆಯುವ ನಿಯಮಿತ ವ್ಯವಸ್ಥಾಪಕ ಪ್ರಕ್ರಿಯೆಯಾಗಿದ್ದು ಅದು ಗುರುತಿಸಲ್ಪಟ್ಟ, ನಿರೀಕ್ಷಿಸುವ, ಸಂತೃಪ್ತಿಗೊಳಿಸುವ ಹಾಗೂ ಅದರ ಅನುಭವದಾರನ ಅವಶ್ಯಕತೆಗಳನ್ನು ಪೂರೈಸುವ, ಗಣನೀಯ ಲಾಭಾಂಶ ಹೊಂದಿದೆ, ಮಾನವ ಅಥವಾ ಸ್ವಾಭಾವಿಕ ಪರಿಸರಕ್ಕೆ ಹಾನಿಯಾಗಿದೆ ಪ್ರತಿರೋಧ ಪರಿಣಾಮ ಉಂಟು ಮಾಡದ ಪ್ರಕ್ರಿಯೆಯಾಗಿದೆ. ಈ ವಿವರಣೆಯು ಒಂದು ವಿಸ್ತೃತವಾದ ಆಯಾಮವನ್ನು ವ್ಯಕ್ತಪಡಿಸುತ್ತದೆ. ಹಾಗೂ ಅದರ ಸುದೀರ್ಘಕಾಲದ ಪ್ರಾಮುಖ್ಯತೆಗಾಗಿ ಪಂಥಕಟ್ಟಿ ಕ್ರಮಿಸಿದವರ ಪಾತ್ರ ಪ್ರಮುಖವಾಗಿದೆ.

ಚಕ್ರ-1 ಹಲವು ಅರ್ಥವುಳ್ಳ ಹಸಿರು



ಹಸಿರು ಮಾರುಕಟ್ಟೆಯ ಅವಶ್ಯಕತೆ: ಪ್ರಸ್ತುತ ಸನ್ನಿವೇಶದಲ್ಲಿ, ಗ್ರಾಹಕರನ್ನು ಹಾಗೂ ಬಳಕೆದಾರರನ್ನು ಒಂದು ಹಿಡಿತದಲ್ಲಿಟ್ಟುಕೊಳ್ಳುವುದು, ಸವಾಲೇ ಸರಿ ಹಾಗೂ ಸ್ವಾಭಾವಿಕ ಪರಿಸರವನ್ನು ಸಂರಕ್ಷಿಸುವುದು ಇದು ಈ ಸಮಯದಲ್ಲಿ ಅತ್ಯವಶ್ಯಕವಾಗಿದೆ. ಹಸಿರು ನಿರ್ವಹಣೆಯ ಕೊರತೆಯಿಂದ ಕಂಪನಿಗಳು ತಮ್ಮ ನಿಷ್ಠಾವಂತ ಹಾಗೂ ಲಾಭದಾಯಕ ಗ್ರಾಹಕರನ್ನು ಮತ್ತು ಬಳಕೆದಾರರನ್ನು ಕಳೆದುಕೊಳ್ಳಬಹುದು. ಈಗಿನ ಅತ್ಯುನ್ನತ ತಂತ್ರಜ್ಞಾನದ ಅವಿಷ್ಕಾರಗಳ ವ್ಯಾಪಾರ ಜಗತ್ತಿನಲ್ಲಿ ಬೆಳೆಯುತ್ತಿರುವ ಸಮುದಾಯ ಮತ್ತು ಹಸಿರಿನಲ್ಲಿ ಬಳಕೆದಾರರ ಆಸಕ್ತಿ ಹಾಗೂ ಸಾಮಾಜಿಕ ಜವಾಬ್ದಾರಿಯ ಪದಾರ್ಥಗಳು, ಕಂಪನಿಗಳ ಅಂತರೀಕ ಮತ್ತು ಬಾಹ್ಯವಾಗಿ ಮುಂದುವರೆದ ಸಮುದಾಯದ ಒತ್ತಡ, ಉದಾ: ಆರೋಗ್ಯದ ಮೇಲಿನ ವಿವಾದಾಂಶಗಳು ನೆರೆಹೊರೆಯವರ ಅವಶ್ಯಕತೆಗಳು, ಹವಾಮಾನ ಬದಲಾವಣೆ, ಹಾಗೂ ಸರ್ಕಾರಿ ಕಾನೂನಾತ್ಮಕತೆ ಮತ್ತು ಆದ್ಯತೆಗಳು, ಅವಿಷ್ಕಾರ ತಂತ್ರಜ್ಞಾನಗಳು ಹಾಗೂ ಪರಿಸರ ಮಾಲಿನ್ಯದ ಬಗ್ಗೆ ವಿಶ್ಲೇಷಿಸುವುದು, ಮುಂದುವರೆದ ಸಂಪನ್ಮೂಲ ಹಾಗೂ ಶಕ್ತಿಯ ಕ್ರಮತೆ ಹಾಗೂ ಹಳೆಯ (ನಿಷ್ಠಾವಂತ ಮತ್ತು ಲಾಭದಾಯಕ) ಗ್ರಾಹಕರವನ್ನು ಬಳಕೆದಾರರನ್ನು ಉಳಿಸಿಕೊಳ್ಳುವುದು, ಆದ್ದರಿಂದ ಹಸಿರು ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವುದು, ತುಂಬಾ ಅವಶ್ಯಕತೆ ಇದೆ. ಹಲವಾರು ಕಂಪನಿಗಳು ಕಪ್ಪೆಚಿಪ್ಪಿನ ಮಾದರಿಯಲ್ಲಿ ಒಂದೆಡೆ ಹಸಿರು ಮಾರುಕಟ್ಟೆಯನ್ನು ಈ ಕೆಳಕಂಡ ಕಾರಣಗಳಿಂದಾಗಿ ನಡೆಸುತ್ತಿವೆ.

- ಭಾರತದಲ್ಲಿ ಶೇಕಡ 25% ರಷ್ಟು ಬಳಕೆದಾರರು ಪರಿಸರ ಸ್ನೇಹಿ ಪದಾರ್ಥಗಳನ್ನು ಉಪಯೋಗಿಸಲು ಇಚ್ಚಿಸುತ್ತಾರೆ. ಹಾಗೂ ಶೇ28% ರಷ್ಟು ಆರೋಗ್ಯ ಕಾಳಜಿಯನ್ನು ಪರಿಗಣಿಸುವವರಾಗಿದ್ದಾರೆ. ಆದ್ದರಿಂದ ಹಸಿರು ಮಾರುಕಟ್ಟೆದಾರರು ವಿಷದವಾದ ಉತ್ತಮ ಆಯಾಮವನ್ನು ಪೋಷಿಸುವವರಾಗಿರುತ್ತಾರೆ. ಈ ಹಲವಾರು ಕಂಪನಿಗಳು ಇದನ್ನು ಮನವರಿಕೆ ಮಾಡಿಕೊಂಡು ಅವರುಗಳ ಪರಿಸರ ಸ್ನೇಹ ಮಾದರಿ ಹಾಗೂ ಪರಿಸರ ಸಂವೇದನಾ ಉದ್ದೇಶಗಳು ಮತ್ತು ಲಾಭಾಂಶಕ್ಕೆ ಸಂಬಂಧಿಸಿದ ಉದ್ದೇಶಗಳಲ್ಲಿ ನಂಬಿಕೆಯನ್ನು ಹೊಂದಿದವರಾಗಿರುತ್ತಾರೆ.
- ಈ ಸರ್ಕಾರವು ಸಹ ಬಳಕೆದಾರರು ಹಾಗೂ ಸಮಾಜದ ಉದ್ದೇಶಗಳನ್ನು ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಕೇವಲ ಆಯ್ಕೆಗೆ ಮಾತ್ರ ಸೀಮಿತವಾಗದೆ ವ್ಯಾಪಕವಾಗಿ ಹಸಿರು ಮಾರುಕಟ್ಟೆಯನ್ನು ಅನುಸರಿಸಲು ಹಲವಾರು ನಿಯಮಗಳನ್ನು ಜಾರಿಗೆ ತಂದಿದೆ. ಉದಾಹರಣೆಗೆ ರಾಷ್ಟ್ರದಲ್ಲಿ ಹಲವು ಭಾಗದಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆಯ ನಿಷೇದ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇದ ಇತ್ಯಾದಿ.
- ಹಲವು ಕಂಪನಿಗಳ ಹಸಿರು ಮಾರುಕಟ್ಟೆಯನ್ನು ನಿರ್ವಹಿಸಲು ಸ್ಪರ್ಧಾತ್ಮಕ ಅಂಚನ್ನು ಆಯ್ಕೆ ಮಾಡಿಕೊಂಡಿದೆ.

ಹಸಿರು ಮಾರುಕಟ್ಟೆಯ ಪ್ರಾಮುಖ್ಯತೆ: ಹಸಿರು ಮಾರುಕಟ್ಟೆಯು ಕೆಳ ಹಂತದ ವ್ಯಾಪಾರಕ್ಕೆ ಪ್ರೇರಕ ಧನವನ್ನು ನೀಡುತ್ತದೆ. ಮತ್ತು ಮೇಲ್ಪಂಕ್ತಿಯಲ್ಲಿ ಅಭಿವೃದ್ಧಿಯ ಸಾಧ್ಯತೆಗಳಿವೆ. ವ್ಯಾಪಾರವನ್ನು ಮಾರ್ಪಾಡು ಮಾಡುವಾಗ್ಗ ಅಥವಾ ಉತ್ಪಾದನ ವಿಧಾನಗಳು ಪ್ರಾರಂಭಿಕ ವೆಚ್ಚಗಳನ್ನು ಹೊಂದಿರಬಹುದು. ದೀರ್ಘಾವದಿಯಲ್ಲಿ ಅದು ಭವಿಷ್ಯದ ವೆಚ್ಚದಲ್ಲಿ ಉಳಿತಾಯವನ್ನು ನೀಡುತ್ತದೆ. ಹೊಸದಾದ ಹಾಗೂ ಸುಧಾರಿತ ಪದಾರ್ಥಗಳನ್ನು ಅಭಿವೃದ್ಧಿಪಡಿಸುವ ಕಂಪನಿಗಳು ಹಾಗೂ ಪರಿಸರ ಯುಕ್ತ ಸೇವೆಗಳು ಅವರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಸಾಕಷ್ಟು ಲಾಭಾಂಶವನ್ನು ವೃದ್ಧಿಪಡಿಸುತ್ತದೆ. ಹಾಗೂ ಇತರೆ ಪರಿಸರ ಬಾಹಿರ ಮಾರುಕಟ್ಟೆಯೊಂದಿಗೆ ಸ್ಪರ್ಧಾತ್ಮಕವಾಗಿ ಎದುರಿಸುವುದಕ್ಕೆ ಅನುವು ನೀಡುತ್ತದೆ. ಬರಹವನ್ನು ಅವಲೋಕಿಸಿದಾಗ ಹಸಿರು ಮಾರುಕಟ್ಟೆಯನ್ನು ಹೆಚ್ಚಾಗಿ ಉಪಯೋಗಿಸುವುದಕ್ಕೆ ಉದ್ಯಮಿಗಳಿಗೆ ಹರಿವು ಸಲಹಾತ್ಮಕ ಕಾರಣಗಳ ಲಭ್ಯವಿರುತ್ತದೆ. ಅವುಗಳಲ್ಲಿ ಸಾಧ್ಯವಿರುವ ಐದು ಕಾರಣಗಳನ್ನು ಈ ಕೆಳಗೆ ನೀಡಿದೆ.

1. ಸಂಸ್ಥೆಯು ಅದರ ಉದ್ದೇಶಗಳನ್ನು ಸಾಧಿಸಲು (ಪೂರೈಸಲು) ಒಂದು ಸದಾವಕಾಶವಾಗಿ ಪರಿಸರ ಮಾರುಕಟ್ಟೆಯನ್ನು ಸ್ವೀಕರಿಸುತ್ತದೆ.
2. ಸಂಸ್ಥೆಗಳ ನೈತಿಕ ಹೊಣೆಗಾರಿಕೆಯನ್ನು ಸಾಮಾಜಿಕ ಜವಾಬ್ದಾರಿಕೆ

ಯಲ್ಲಿ ನಂಬಿಕೆಯನ್ನು ಹೊಂದಿದವುಗಳಾಗಿರುತ್ತದೆ.
3. ಸರ್ಕಾರಿ ಅಂಗಗಳು ಉದ್ದಿಮೆದಾರರ ಮೇಲೆ ಹೆಚ್ಚಿನ ಹೊಣೆಗಾರಿಕೆಯನ್ನು ಹೇರುತ್ತದೆ.
4. ಸ್ಪರ್ಧಾತ್ಮಕ ಪರಿಸರಯುಕ್ತ ಚಟುವಟಿಕೆಗಳು, ಉದ್ದಿಮೆಗಳ ಮೇಲೆ ಒತ್ತಡ ಉಂಟು ಮಾಡಿ ಪರಿಸರಾತ್ಮಕ ಮಾರುಕಟ್ಟೆ ಚಟುವಟಿಕೆಗಳಿಗೆ ಬದಲಾವಣೆ ಮಾಡಿಕೊಳ್ಳುವಂತೆ ಮಾಡಿದೆ.
5. ತ್ಯಾಜ್ಯ ವಿಲೇವಾರಿ ವೆಚ್ಚಗಳನ್ನು ನಿಯಂತ್ರಿಸುವಲ್ಲಿ

ಹಸಿರು ಮಾರುಕಟ್ಟೆಯು 4 "ಪಿ" ಗಳು: ಸಾಂಪ್ರದಾಯಿಕ ಮಾರುಕಟ್ಟೆಗಾರರಂತೆ, ಹಸಿರು ಮಾರುಕಟ್ಟೆದಾರರು 4"ಪಿ"ಗಳನ್ನು ಆವಿಷ್ಕಾರ ರೀತಿಯಲ್ಲಿ ವಿವರಿಸುತ್ತದೆ.

1. ಪದಾರ್ಥ(ಪ್ರಾಡೆಕ್ಟ್): ಉದ್ದಿಮೆದಾರರು ಹೊರಹೊಮ್ಮುತ್ತಿರುವ ಹಸಿರು ಮಾರುಕಟ್ಟೆಯನ್ನು ತಮ್ಮ ಸ್ವಂತಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಏಕೆಂದರೆ ಗ್ರಾಹಕರ ಪರಿಸರಯುಕ್ತ ಅವಶ್ಯಕತೆಗಳನ್ನು ಗುರುತಿಸಿ ಅವಶ್ಯಕತೆಗಳನ್ನು ಪೂರೈಸಲು ಅವಶ್ಯಕ ಪದಾರ್ಥಗಳನ್ನು ಅಭಿವೃದ್ಧಿ ಪಡಿಸುವುದು ಮಾರುಕಟ್ಟೆಯ ಹಲವು ವಿವಿಧ ಪದಾರ್ಥಗಳು ಹೆಚ್ಚಳ ಪರ್ಯಾಯ ಅಭಿವೃದ್ಧಿಗೆ ಬೆಂಬಲ ಒದಗಿಸಿದೆ.
* ಪುನರಾವರ್ತಿತ ವಸ್ತುಗಳನ್ನು ಪದಾರ್ಥಗಳನ್ನು ತಯಾರು ಮಾಡುವುದು ಉದಾ: ಕ್ವಕ್ ಅಂಡ್ ಟಪ್ (ವೇಗ ಮತ್ತು ಸದೃಢತೆಯ ಪುನರಾವರ್ತಿತ ಕೋಸುಗಡ್ಡೆ ಪೆಟ್ಟಿಗೆಗಳಿಂದ ಗೃಹಪಯೋಗಿ ಪದಾರ್ಥಗಳನ್ನು ಮಾಡುವುದು
* ಪುನರಾವರ್ತಿತಕೊಳ್ಳುವ ಅಥವಾ ಪುನರ್ ಉಪಯೋಗಿಸುವ ಪದಾರ್ಥಗಳು
* ಉತ್ತಮ ಪದಾರ್ಥಗಳು, ನೀರಿನ ಉಳಿತಾಯ ಮಾಡುವ, ಶಕ್ತಿ ಅಥವಾ ಇಂಧನ, ಹಣ ಉಳಿತಾಯ, ಪರಿಸರದ ಮೇಲೆ ಕಡಿಮೆ ಪ್ರಮಾಣ ಬೀರುವುದು, ಕ್ವೀನ್ಸ್ ಲ್ಯಾಂಡ್‌ನ ಜಲರಹಿತ ಪ್ರಿಂಟರ್, ಪ್ರಿಂಟ್ ಪಾಯಿಂಟ್ ಸಾಂಪ್ರಾದಾಯಿಕ ಪ್ರಿಂಟರ್‌ಗಳ ಹೊರತಾಗಿ ಕಡಿಮೆ ಜಲವನ್ನು ಉಪಯೋಗಿಸಿ ಕಾರ್ಯಕಾರಿ ವೆಚ್ಚವನ್ನು ಕಡಿಮೆಗೊಳಿಸುತ್ತದೆ. ಹಾಗೂ ಉಳಿತಾಯವನ್ನು ಗ್ರಾಹಕರಿಗೆ ಒದಗಿಸುವಲ್ಲಿ ಸಮರ್ಥನಾಗಿದೆ.
* ಪದಾರ್ಥಗಳ ಪರಿಸರ ಸ್ನೇಹಿ ಪ್ಯಾಕೇಜ್‌ನ ಸಹಾಯಕವಾಗಿದೆ. ಮ್ಯಾಕ್ ಡೊನಾಲ್ಡ್‌ರವರು ಉದಾ" ಪಾಲಿಸ್ಟರೀನ್ ಕವಚಗಳನ್ನು ಉಪಯೋಗಿಸುವ ಬದಲಿಗೆ ಕಾಗದವನ್ನು ಬಳಸಿದರು.
* ಹಸಿರು ಲೇಬಲ್‌ಗಳುಳ್ಳ ಪದಾರ್ಥಗಳ ಸಾಮಾನ್ಯವಾಗಿ ತತ್ವಯುತವಾಗಿರುತ್ತದೆ.
* ಸಾವಯವ ಪದಾರ್ಥಗಳು: ಹಲವು ಗ್ರಾಹಕರು
ಸಾವಯವ ಪದಾರ್ಥಗಳ ಪ್ರೀಮಿಯಂ ಹಣ ನೀಡಲು ಸಿದ್ದರಿರುತ್ತಾರೆ. ಸಾವಯವ ಮಾಂಸ ಮಾರುವವರು, ಉದಾ: ರುಚಿ ಮತ್ತು ಸ್ವಾದದ ಗುಣಮಟ್ಟವನ್ನು ಹೆಚ್ಚಿಸುವವರಾಗಿರುತ್ತಾರೆ.
* ಬಾಡಿಗೆ ಅಥವಾ ಎರವಲು ಪದಾರ್ಥಗಳ ಸೇವೆ: ಉದಾ:ಆಟಿಕೆಗಳ ಗ್ರಂಥಾಲಯ
* ಪ್ರಮಾಣೀಕೃತ ಪದಾರ್ಥಗಳು, ಪರಿಸರ ಸ್ನೇಹಿ ಹಾಗೂ ಅವರ ಅವಶ್ಯಕತೆಯನ್ನು ಪೂರೈಸುವಂತವು.
ಯಾವುದೇ ಪದಾರ್ಥ ಅಥವಾ ಸೇವೆಯನ್ನು ಅವು ಗ್ರಾಹಕರ ನಿರೀಕ್ಷೆಯ ಗುಣಮಟ್ಟವನ್ನು ಹೊಂದಿವೆಯೇ ಇಲ್ಲವೋ ಎಂಬುದನ್ನು ಸಂಪೂರ್ಣವಾಗಿ ಪರೀಕ್ಷಿಸಬೇಕು.

2. ಬೆಲೆ : ಮಾರುಕಟ್ಟೆ ಸಂಯೋಜನೆಯಲ್ಲಿ ಬೆಲೆ ನಿಗದಿಯ ಮೂಲತಃ ಕ್ಲಿಷ್ಟಕರವಾಗಿ ಹೆಚ್ಚಿನ ಗ್ರಾಹಕರು ಪ್ರೀಮಿಯಂನ್ನು ಪದಾರ್ಥಗಳ ಮೌಲ್ಯಕ್ಕನುಗುಣವಾಗಿ ನೀಡುವವರಾಗಿರುತ್ತಾರೆ.

ಈ ಮೌಲ್ಯವನ್ನು ಕ್ಷಮತೆಗೆ ಅನುಗುಣವಾಗಿ ಅಭಿವೃದ್ಧಿಪಡಿಸಬೇಕಾಗಿದೆ. ಕಾರ್ಯ, ವಿನ್ಯಾಸ, ದೃಷ್ಟಿಗೆ ಗೋಚರಿಸುವಿಕೆ ಅಥವಾ ಸ್ವಾದ ಪರಿಸರ ಸ್ನೇಹಿ ಫಲಗಳು ಸಾಮಾನ್ಯವಾಗಿ ಬೋನಸನ್ನು ನೀಡುತ್ತವೆ. ಆದರೆ ಅವು ಪದಾರ್ಥಗಳ ಸಮಾನ ಮೌಲ್ಯ ಹಾಗೂ ಗುಣಮಟ್ಟವನ್ನು ನಿರ್ಧರಿಸುತ್ತದೆ.

3. ಸ್ಥಾನ (ಜಾಗ): ಜಾಗದ ಆಯ್ಕೆಯ ಎಲ್ಲಿ ಮತ್ತು ಹೇಗೆ ಪದಾರ್ಥಗಳ ಲಭ್ಯತೆಯನ್ನು ಗುರುತರವಾಗಿ ಗ್ರಾಹಕರನ್ನು ಆಕರ್ಷಿಸುವುದರ ಮೇಲೆ ನಿರ್ಧಾರಿತವಾಗುತ್ತದೆ. ಕೆಲವೇ ಕೆಲವು ಗ್ರಾಹಕರು ಮತ್ತು ಹಸಿರು ಪದಾರ್ಥಗಳನ್ನು ಮಾತ್ರ ಖರೀದಿಸಲು ತಮ್ಮ ಮನಸ್ಸನ್ನು ಬದಲಾಯಿಸುತ್ತದೆ. ಮಾರುಕಟ್ಟೆದಾರರು ಹೊಸ ಹಸಿರು ಪದಾರ್ಥಗಳನ್ನು ಯಶಸ್ವಿಯಾಗಿ ಪರಿಚಯಿಸಲು ಇಚ್ಚಿಸಿರುತ್ತಾರೆ. ಹಲವು ಸಂದರ್ಭಗಳಲ್ಲಿ ಅವುಗಳನ್ನು ಮಾರುಕಟ್ಟೆ ಸ್ಥಳಗಳಲ್ಲಿ ವಿಷದವಾಗಿ ಸ್ಥಾನಿಕರಿಸಲು ಅವರು ಕೇವಲ ಸಣ್ಣ ಹಸಿರು ಗೂಡಿನ ಮಾರುಕಟ್ಟೆ ಮನವಿ ಮಾಡಿಕೊಳ್ಳುವುದಿಲ್ಲ ಕಂಪನಿಯು ತನ್ನ ಪದಾರ್ಥಗಳನ್ನು ಪ್ರದರ್ಶಿಸಲು ಸ್ಥಳ ತುಂಬಾ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಕಂಪನಿಯು ಆಯ್ಕೆ ಮಾಡಿಕೊಂಡಿರುವ ಸ್ಥಳವು ತನ್ನ ಸ್ಪರ್ಧಾಳುಗಳಿಗಿಂತ ಭಿನ್ನಾವಾಗಿರಬೇಕು. ಶೇಖರಣ, ಕೊಠಡಿಯ ಕ್ಷಮತೆ ಹಾಗೂ ಕಣ್ಣಿಗೆ ಗೋಚರಿಸುವ ಪ್ರದರ್ಶನ ಅಥವಾ ಪರಿಸರ ಸ್ನೇಹಿ ಹಾಗೂ ಇತರೆ ಪ್ರಯೋಜನಗಳಿಗೆ ಪುನರಾವರ್ತಿತ ಪದಾರ್ಥಗಳನ್ನು ಬಳಕೆ ಮಾಡುವುದು.

4. ಸುಧಾರಣೆ: ಸುಧಾರಿತ ಪದಾರ್ಥಗಳು ಹಾಗೂ ಸೇವೆಗಳು ಮಾರುಕಟ್ಟೆಗುರಿ ತಲುಪಬೇಕಾದಲ್ಲಿ ಬೆಲೆ ತೆತ್ತ ಪ್ರದರ್ಶನ ಸಾರ್ವಜನಿಕ ಸಂಬಂಧಗಳನ್ನು, ಮಾರಾಟ ಸುಧಾರಣೆಯನ್ನು, ನೇರ ಮಾರುಕಟ್ಟೆ ಹಾಗು ಅನ್ ಸ್ಕಾಟ್ ಸುದಾರಣೆಗಳನ್ನು ಹೊಂದಿದೆ.

ಭಾರತದ ಪ್ರಸಕ್ತ ಪರಿಸ್ಥಿತಿ: ಹಲವು ವಿಮರ್ಶಕರು 2011ನ್ನು ಮಾಡು ಇಲ್ಲವೆ ಮಡಿ ವರ್ಷ ಎಂಬುದಾಗಿ ವಿಮರ್ಶಿಸಿದಕ್ಕೆ ಹಲವು ಹಸಿರು ವ್ಯಾಪಾರವು ಹಸಿರು ವಿಭಾಗದ ಸ್ಪರ್ಧಾತ್ಮಕ ಹೆಚ್ಚಳದಿಂದಾಗಿ ಅವಿಷ್ಕಾರ ಹಾಗೂ ಸೇವೆಗಳನ್ನು ವ್ಯಾಪಾರದ ಉನ್ನತ ಶಿಖರಕ್ಕೆ ಕೊಂಡೇಯ್ದಿವೆ. ಹಾಗೆಯೇ ಇತರೆ ವ್ಯಾಪಾರಗಳು ಹಿಂದೆ ಬಿದ್ದಿವೆ. ಬೇಡಿಕೆಗಳು ಬರುತ್ತವೆ ಹೋಗುತ್ತವೆ ಆದರೆ ಯಾವುದೇ ಹಸಿರು ವ್ಯಾಪಾರವು ಅವುಗಳ ಮೇಲ್ಪಂಕ್ತಿಯಲ್ಲಿ ಉಳಿಯಲು ಸಾಧ್ಯವಾಗುತ್ತಿಲ್ಲ ಅಥವಾ ಅದನ್ನು ಪ್ರಯತ್ನಿಸುವುದು ಲಾಭಕರವಾಗಿಲ್ಲ. ಆದಾಗ್ಯೂ ಸಹ ಹಸಿರು ವ್ಯಾಪಾರವನ್ನು ನಿಯಮಿತವಾಗಿಟ್ಟುಕೊಂಡು ಹೋಗಲು ನಿಮ್ಮ ವ್ಯಾಪಾರವು ನೂತನ ಹಾಗೂ ಸುಲಲಿತವಾಗಿರಲು ಹಾಗೂ ಹೊಸ ಸವಾಲುಗಳನ್ನು ಕ್ರಿಯಾತ್ಮಕವಾಗಿ ಎದುರಿಸಲು ಹಾಗೂ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡಲ್ಲಿ, ನಿಜವಾಗಿ 2011ರ ಮತ್ತು ನಂತರದ ವರ್ಷವು ಹಸಿರು ವ್ಯಾಪಾರಕ್ಕೆ ಯಶಸ್ಸನ್ನು ಒದಗಿಸುತ್ತದೆ.

1. ಬಳಕೆದಾರರು: ಸಂಶೋಧನೆಗಳ ಪ್ರಕಾರ ಅರಣ್ಯ ಸಂರಕ್ಷಣೆಯನ್ನು ಹಾಗೂವಾಯು ಮಾಲಿನ್ಯ ಹಸಿರು ಪ್ರಾಮುಖ್ಯತೆಯ ಮುಖ್ಯ

ವಿವಾದಾಂಶಗಳನ್ನು ಆಯ್ಕೆ ಮಾಡಿಕೊಂಡಿರುವುದು ಭಾರತ ಮತ್ತು ಭಾರತವು ಒಂದೇ ರಾಷ್ಟ್ರ ಇದರಲ್ಲಿ ಹೆಚ್ಚು ಬಳಕೆದಾರರು ಹೇಳುವಂತೆ, ಯಾವ ರಾಷ್ಟ್ರವು ಹಸಿರು ಅವಿಷ್ಕಾರದ ಸಹಯೋಗದ ದೃಷ್ಟಿಕೋನ ಹೊಂದಿರುತ್ತದೆಯೇ ಅದೇ ಅಭಿವೃದ್ಧಿ ರಾಷ್ಟ್ರವಾಗಿರುತ್ತದೆ. ಇತರೆ ಅಭಿವೃದ್ಧಿ ರಾಷ್ಟ್ರಗಳ ಹೊರತಾಗಿ ಇತ್ತೀಚೆಗೆ 2011ರಲ್ಲಿ ಬಿಡುಗಡೆಯ ಹೊತ್ತಿಗೆ ಗ್ಲೋಬಲ್ ಇಮೇಜ್ ಪವರ್ ಗ್ರೀನ್ ಬ್ರಾಂಡ್ಸ್ ಸರ್ವೇ ಬಳಕೆದಾರರಿಗೆ ಪರಿಸರದ ಮೇಲಿರುವ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಅದು ಅವರನ್ನು ಹಸಿರು ಪದಾರ್ಥಗಳಿಗೆ ಪ್ರೀಮಿಯಂ ತೊಡಗಿಸುವಂತೆ ಮಾರ್ಪಾಡಿಸಿದ ಶೇ64% ಭಾರತೀಯ ಬಳಕೆದಾರರು ಮುಂದಿನ ವರ್ಷ ಅವರು ಹಸಿರು ಪದಾರ್ಥಗಳಿಗೆ ಹೆಚ್ಚು ಹಣ ತೊಡಗಿಸುತ್ತಾರೆ ಎಂಬುದನ್ನು ಸೂಚಿಸುತ್ತದೆ ಇನ್ನಷ್ಟು ನಿಖರವಾಗಿ ಹೊರಹೊಮ್ಮುತ್ತಿರುವ ರಾಷ್ಟ್ರಗಳು, ಭಾರತೀಯರು ಹಸಿರು ಪ್ರೀಮಿಯಂ ಬೆಲೆಯನ್ನು ನೀಡಲು ಇಚ್ಚಿಸುತ್ತಾರೆ. ಶೇ48% ಭಾರತೀಯರು ಶೇ10% ರಷ್ಟು ಹೆಚ್ಚು ಹಣವನ್ನು ಪದಾರ್ಥಗಳು ಹಸಿರು ಎಂಬ ಕಾರಣದಿಂದಾಗಿ ತೊಡಗಿಸುತ್ತಾರೆ. ಶೇ86% ರಷ್ಟು ಭಾರತೀಯ ಬಳಕೆದಾರರು ಹಸಿರು ಪದಾರ್ಥಗಳ ಪ್ರದರ್ಶನವು ಅವರಿಗೆ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡುತ್ತದೆ ಎಂದು ವರದಿ ಮಾಡಿದ್ದಾರೆ. ಭಾರತದಲ್ಲಿ ಶೇ28% ರಷ್ಟು ಭಾರತೀಯರು ಅಟೋವನ್ನು ಮುಂದಿನ ವರ್ಷ ಖರೀದಿಸುವುದಾಗಿ ತಿಳಿಸಿರುತ್ತಾರೆ ಕಳೆದ ವರ್ಷಕ್ಕೆ ಹೋಲಿಸಿದಾಗ ಅದರ ಖರೀದಿಯು ಶೇ16% ರಷ್ಟಿತು.

2. ಉತ್ಪಾದಕರು: ಗ್ಲೋಬಲ್ ಗ್ರೀನ್ ಬ್ರಾಂಡ್ ಸರ್ವೇ ಪ್ರಕಾರ "ಅಮಾಲ್" ಅನ್ನು ಮೊದಲ ಭಾರತೀಯ ಗ್ರೀನ್ ಬ್ರಾಂಡ್ ಎಂಬುದಾಗಿ ಪರಿಗಣಿಸಿದ್ದಾರೆ 2010ರ ಪರಿಸರ ಸಂರಕ್ಷಣೆಯ ವಿಭಾಗದಲ್ಲಿ ಅಂತರರಾಷ್ಟ್ರೀಯ ಡೈರಿ ಫೆಡರೇಷನ್ ಸಹ "ಅಮೂಲ್" ಹಸಿರು ಚಳುವಳಿಯನ್ನು ಉತ್ತಮ ಪರಿಸರ ಆದ್ಯತೆ ಎಂಬುದಾಗಿ ಪ್ರಶಸ್ತಿ ನೀಡಿದ್ದಾರೆ. ಸೃಷ್ಟಿ ಉತ್ತಮ ಹಸಿರು ಗಾರ್ನರ್ನ್ಸ್ ಪ್ರಶಸ್ತಿಯನ್ನು ಸತತವಾಗಿ 4ವರ್ಷಗಳವರೆಗೆ 2011ರಿಂದ ನೀಡಿದೆ.

2011ರ ಮೇಲ್ಪಂಕ್ತಿಯನ್ನು ಭಾರತದ ಗ್ರೀನ್ ಬ್ರಾಂಡ್ ಯಾವುದೆಂದರೆ:
1. ಅಮೂಲ್
2. ಡಾಬರ್ ಇಂಡಿಯಾ ಲಿ
3. ಇನ್ಫೋಸಿಸ್
4. ತಾಜ್ ಹೋಟೇಲ್‌ಗಳು
5. ಬ್ರಿಟಾನಿಯ ಇಂಡಸ್ಟ್ರೀಸ್ ಲಿ.,
6. ಸುಜಲೋ ಇಂಡಿಯಾ
7. ಹಿಂದೂಸ್ತಾನ್ ಯೂನಿಲಿವರ್ ಲಿ
8. ವಿಪ್ರೋ ಟೆಕ್ನಾಲಜೀಸ್ ಲಿ.,
9. ಮಾರುತಿ ಉದ್ಯೋಗ ಲಿ.,
10. ಗಾದ್ರೆಜ್ ಕನ್ಸೂಮರ್ ಪ್ರಾಜೆಕ್ಟ್

ಮೇಲ್ಕಂಡ ಎಲ್ಲಾ ಅಂಶಗಳು ದೀರ್ಘಾಕಾಲದ ಯಶಸ್ವಿಯಾಗಿ ಹಸಿರು ಹಾಗೂ ಬಳಕೆದಾರರ ಸ್ನೇಹಿತ ಎಂಬುದೊಂದೆ ಮಂತ್ರ ಎಂಬುದಾಗಿ ಪರಿಣಮಿಸಿದೆ.

3. ಸರ್ಕಾರ: ಭಾರತೀಯ ಸರ್ಕಾರವು ಸಹ ಹಸಿರು ಮಾರುಕಟ್ಟೆ ಮತ್ತು ಪರಿಸರ ಸ್ನೇಹವನ್ನು ಉತ್ತೇಜಿಸಲು ದೈನಂದಿನ ಉಪಯೋಗದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇದಿಸಿದೆ. ಆಟೊಮೇಟಿವ್ ಕೈಗಾರಿಕೆಗೆ ಹಸಿರು ವಾಹನಗಳನ್ನು ಅಭಿವೃದ್ಧಿಪಡಿಸಲು ಹೈಬ್ರಿಡ್‌ನ್ನು ಹಾಗೂ ವಿದ್ಯುತ್ ವಾಹನಗಳನ್ನು ಬೆಂಬಲಿಸಿದೆ ಹಾಗೂ ಹಸಿರು ಕಾರುಗಳ ತಯಾರಿಕೆಗೆ ಹಣವನ್ನು ತೊಡಗಿಸಿದೆ. ಭಾರತ ಸರ್ಕಾರವು ಕೆಳ ಹಂತದ ವಿಭಾಗವಾಗಿ ಹಾಗೂ ಕಟ್ಟಡ ನಿರ್ಮಾಣಕ್ಕೆ ಬಂಡವಾಳವನ್ನು ತೊಡಗಿಸಿದೆ. ಅದು ಆರ್ಥಿಕ ಬೆಳವಣಿಗೆ ಹಾಗೂ ಧೂಮ ಹೊರಸೂಸುವುದನ್ನು ಕಡಿಮೆ ಮಾಡುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಸರ್ಕಾರವು ಬಳಕೆದಾರರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಹಾನಿಕಾರಕ ಪದಾರ್ಥಗಳ ಉತ್ಪಾದನೆಯನ್ನು ಕುಂಠಿತಗೊಳಿಸಲು ಸೂಚನೆ ನೀಡಿದೆ. ಬಳಕೆದಾರ ಹಾಗೂ ಕೆಳಗಾರಿಕೆ ಉಪಯೋಗ ಅಥವಾ ಹಾನಿಕಾರಕ ವಸ್ತುಗಳ ಬಳಕೆಯನ್ನು ಮಾರ್ಪಾಡುಮಾಡಿ ಕೊಳ್ಳಬೇಕು.

ಹಸಿರಿಗಾಗಿ ಕಾರಣಗಳು: ಈ ಕೆಳಕಂಡ ಕಾರಣಗಳಿಂದಾಗಿ ಹಲವಾರು ಕಂಪನಿಗಳು ಹಸಿರು ಮಾರುಕಟ್ಟೆಯಲ್ಲಿ ತೊಡಗಿವೆ.

ಅವಕಾಶ: ಭಾರತದಲ್ಲಿ ಶೇ25% ರಷ್ಟು ಬಳಕೆದಾರರು ಪರಿಸರ ಸ್ನೇಹಿ ಪದಾರ್ಥಗಳನ್ನು ಇಷ್ಟಪಡುತ್ತಾರೆ. ಹಾಗೂ ಶೇ25% ರಷ್ಟು ಜನ ಆರೋಗ್ಯ ಕಾಳಜಿಯಿಂದಾಗಿ ಪರಿಗಣಿಸುತ್ತಾರೆ. ಸರ್ಫ್ ಎಕ್ಸ್‌ಲ್ ಡಿ.ಟಿ.ಜೌಂಟ್– ನೀರನ್ನು ಉಳಿತಾಯ ಮಾಡುತ್ತದೆ (ಪ್ರಕಟಣೆಯ ಸಂದೇಶ "ಎಷ್ಟು ನೀರನ್ನು ಪ್ರತಿನಿತ್ಯ ಉಳಿತಾಯ ಮಾಡಿ") ಹಾಗೂ ಶಕ್ತಿತಾಯ ಎಲ್.ಜಿ. ಕನ್ಸೂವರಿಕ್ಸ್ ಡ್ಯೂರೆಬಲ್ಸ್ ಹಸಿರು ಮಾರುಕಟ್ಟೆಗೆ ಉದಾಹರಣೆಯಾಗಿದೆ.

ಸಾಮಾಜಿಕ ಹೊಣೆಗಾರಿಕೆ (ಕಾಳಜಿ): ಹಲವು ಕಂಪನಿಗಳು ನಾವು ಸಹ ಪರಿಸರ ಸ್ನೇಹಿಯಾಗಿ ವರ್ತಿಸಬೇಕು ಎಂಬುದನ್ನು ಅಥೈಸಿಕೊಳ್ಳುತ್ತಿವೆ. ಹೆಚ್.ಎಸ್.ಬಿ.ಸಿ.ಯು ಇಂಗಾಲ ರಹಿತವಾದ ಪ್ರಪಮಚದ ಮೊದಲ ಬ್ಯಾಂಕ್ ಎಂಬುದಾಗಿ ಪ್ರಚಲಿತವಾಗಿದೆ. ಕೊಕೋ ಕೋಲಾ ಮತ್ತು ವಾಲ್ಟ್ ಡಿನ್ನಿ ವರ್ಲ್ಡ್– ಯು.ಎನ್. ಇವು ತ್ಯಾಜ್ಯ ವಿಲೇವಾರಿ ನಿರ್ವಹಣಾ ಪ್ರೋಗ್ರಾಂ ಮತ್ತು ಅದಕ್ಕೆ ಸಂಬಂಧಪಟ್ಟ ಪೂರಕ ವ್ಯವಸ್ಥೆಯನ್ನು ಒದಗಿಸುತ್ತದೆ.

ಸರ್ಕಾರದ ಒತ್ತಡ: ಭಾರತ ಸರ್ಕಾರವು ಹಾನಿಕಾರಕ ಪದಾರ್ಥಗಳ ಉತ್ಪಾದನೆಯ ಮೇಲೆ ಹಾಗು ಬಳಕೆದಾರರ ಹಿತಾಸಕ್ತಿ ಕಾಪಾಡಲು ಮತ್ತು ಸಮಾಜದ ಧೋರಣೆಯನ್ನು ಸಂರಕ್ಷಿಸಲು ಹಲವಾರು ಕಾಯ್ದೆಗಳನ್ನು ಜಾರಿಗೆ ತಂದಿದೆ. ಉದಾ" : ಮುಂಬೈನಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆಯ ನಿಷೇದ, ಸಾರ್ವಜನಿಕ ಪ್ರದೇಶಗಳಲ್ಲಿ ಧೂಮಪಾನ ಸೇವನೆ ನಿಷೇದ ಇತ್ಯಾದಿ.

ಸ್ಪರ್ಧಾತ್ಮಕ ಒತ್ತಡ : ಹಲವು ಕಂಪನಿಗಳು ಹಸಿರುಮಾರುಕಟ್ಟೆಯನ್ನು ತಮ್ಮ ಸ್ಪರ್ಧಾತ್ಮಕ ಅಂಚನ್ನಾಗಿ ಬಳಸಿಕೊಂಡಿದೆ ಹಸಿರು ಮಾರುಕಟ್ಟೆಯ ಆದ್ಯತೆಯ ಕಂಪನಿಗಳ ಗೂಡು ಎನಿಸಿಕೊಂಡಿರುವ ಬಾಡಿಶಾಪ್ ಅಂಡ್ ಗ್ರಿನ್ ಅಂಡ್ ಬ್ಲಾಕ್ ಪ್ರಮುಖ ಪಂಕ್ತಿಯ ಸ್ಪರ್ಧಾಗಳುಗಳಲ್ಲಿ ಒಂದಾಗಿದೆ.

ಕಡಿಮೆ ವೆಚ್ಚ : ಹಾನಿಕಾರಕ ತ್ಯಾಜ್ಯಗಳ ಮಿತಿಯು ಅತ್ಯಧಿಕ ಉಳಿತಾಯವನ್ನು ನೀಡುತ್ತದೆ. ಉದಾಹರಣೆಗೆ ಥರ್ಮಲ್ ಪವರ್ ಪ್ಲಾಂಟ್‌ಗಳಿಂದ ಉತ್ಪತ್ತಿಯಾಗುವ ಪ್ಲೈ ಆಶ್ (ಬೂದಿ) ಅದು ಅತ್ಯಧಿಕ ಘನ ತ್ಯಾಜ್ಯವಾಗಿ ಪರಿಣಮಿಸಿದ್ದು, ಅದನ್ನು ಧೂಮ್ರ–ಇಟ್ಟಿಗೆ ತಯಾರಿಕೆಯಲ್ಲಿ ಬಳಸಲಾಗುತ್ತಿದೆ.

ಹಸಿರು ಮಾರುಕಟ್ಟೆಯ ಸವಾಲುಗಳು ಹಾಗೂ ಅದರ ಗುಣಮಟ್ಟ ಕಾಯ್ದಿರಿಸುವಿಕೆ : ಕೇವಲ ಶೇ5% ರಷ್ಟು ಸಂದೇಶಗಳು ಹಸಿರು ಮಾರುಕಟ್ಟೆಗೆ ಬಂದಿವೆ ಪ್ರಚಾರ ಸತ್ಯವಾದರೂ ಕೂಡ ಈ ಬೇಡಿಕೆಗಳಲ್ಲಿ ಅಧಿಕೃತ ಗುಣಮಟ್ಟದ ಕೊರತೆ ಇದೆ. ಈ ಬೇಡಿಕೆಗಳಿಗೆ ಅಧಿಕೃತ ಗುಣಮಟ್ಟ ಇಲ್ಲ ಪದಾರ್ಥವು ಸಾವಯವ ಎಂದು ನಿಗದಿಪಡಿಸುವ ಗುಣಮಟ್ಟ ಪ್ರಾಮಾಣೀಖರಿಸುವುದ ನಿಗದಿತ ಸ್ಥಳ ಇಲ್ಲ ಅಧಿಕೃತ ಪ್ರಮಾಣಪತ್ರವನ್ನು ನೀಡುವ ಕೆಲವು ಕಾನೂನಾನತ್ಮಕ ಸಂಸ್ಥೆಗಳನ್ನು ತೆರೆಯದಿದ್ದಲ್ಲಿ ಪರೀಕ್ಷಣಾ ವ್ಯವಸ್ಥೆಯೇ ಇಲ್ಲದಂತಾಗುತ್ತದೆ. ಗುಣಮಟ್ಟ ನಿಯಂತ್ರಿಸುವ ಮಂಡಳಿಗಳು ಒಂದು ಕಡೆ ಇದ್ದಲ್ಲಿ ಲೇಬಲ್ ಮಾಡಲು ಲೈಸನ್ಸ್ ನೀಡಲು ಸಹಕಾರಿಯಾಗುತ್ತದೆ.

1. ಹೊಸ ಸಿದ್ಧಾಂತ : ಭಾರತೀಯ ಅಕ್ಷರಸ್ಥರು ಹಾಗೂ ನಗರ ಬಳಕೆದಾರರಿಗೆ ಹಸಿರು ಪದಾರ್ಥಗಳ ಲಾಭಗಳ ಬಗ್ಗೆ ಅರಿವಿದೆ. ಆದರೆ, ಅದು ಸಾಮಾಜಿಕವಾಗಿ ಹೊಸ ಸಿದ್ಧಾಂತವಾಗಿದೆ. ಬಳಕೆದಾರರಿಗೆ ವಿದ್ಯಾವಂತರನ್ನಾಗಿಸಬೇಕಿದೆ. ಹಾಗೂ ಅವರಿಗೆ ಪರಿಸರ ಹಾನಿಗಳ ಬಗ್ಗೆ ಜಾಗೃತಿಯನ್ನು ನೀಡಬೇಕಿದೆ. ಹೊಸ ಹಸಿರು ಚಳುವಳಿಯ ಸಮೂಹವನ್ನು ತಲುಪಬೇಕಿದೆ. ಅದು ಬಹಳ ಸಮಯ ತೆಗೆದುಕೊಳ್ಳುವುದರಿಂದ ಪರಿಶ್ರಮದ ಅಗತ್ಯತೆ ಇದೆ. ಭಾರತೀಯ ಸಾಂಪ್ರಾದಯಿಕ ಆಯುರ್ವೇದದಿಂದ ಭಾರತೀಯ ಬಳಕೆದಾರರು ಸ್ವಾಭಾವಿಕ ಹಾಗೂ ಗಿಡಮೂಲಿಕಾಯುಕ್ತವಾದ ಸುಂದರ ಪದಾರ್ಥಗಳಿಗೆ ಪ್ರಾಮುಖ್ಯತೆಯನ್ನು ನೀಡುತ್ತದೆ. ಭಾರತೀಯ ಬಳಕೆದಾರರು ಆರೋಗ್ಯಕರ ಜೀವನ ಶೈಲಿ ಅಂದರೆ "ಯೋಗ" ಮತ್ತು ಸ್ವಾಭಾವಿಕ ಆಹಾರ ಪದ್ಧತಿ ಬಳಕೆಯನ್ನು ಇಚ್ಚಿಸುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ಬಳಕೆದಾರರು ಈಗಾಗಲೇ ಹಸಿರು ಪದಾರ್ಥಗಳನ್ನು ಬಳಸಿಕೊಳ್ಳುವ ಅರಿವನ್ನು ಹೊಂದಿದ್ದಾರೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

2. ತಾಳ್ಮೆ ಮತ್ತು ನಿಷ್ಟೆ: ಹೂಡಿಕೆದಾರರು ಹಾಗೂ ಸಾಮುದಾಯಿಕ ಸಂಸ್ಥೆಗಳು ಪರಿಸರವನ್ನು ದೀರ್ಘಾವಧಿ ಹೂಡಿಕೆ ಅವಕಾಶ ಎಂಬುದನ್ನು ಗಮನದಲ್ಲಿರಿಸಕೊಳ್ಳಬೇಕು, ಈ ಹೊಸ ಹನಿಯ ಚಳುವಳಿಯನ್ನು ವಾಣಿಜ್ಯೋದ್ಯಮಿಗಳು ಮತ್ತು ಬಂಡವಾಳಶಾಹಿಗಳು ದೀರ್ಘಾವಧಿ ಪ್ರಯೋಜನಗಳನ್ನು ಗಮನದಲ್ಲಿರಿಸಿಕೊಳ್ಳಬೇಕು ಇದಕ್ಕಾಗಿ ಹೆಚ್ಚು ತಾಳ್ಮೆ ಇರಿಸಿಕೊಳ್ಳಬೇಕು ಹಾಗೂ ಇದರಿಂದ ಶೀಘ್ರವಾದ ಫಲಿತಾಂಶ ಇಲ್ಲದಿದ್ದರೂ ಸಹ ಅನುಸರಿಸಬೇಕು. ಇದು ಹೊಸ ಸಿದ್ಧಾಂತ ಹಾಗೂ ಯೋಚನೆ, ಅದು ತನ್ನದೆ ಆದ ಕಾಲವನ್ನು ಹೊಂದಿದೆ.

3. ಹಸಿರಿನ ಬಗೆಗೆ ಲಘು ದೃಷ್ಟಿಯನ್ನು ಹೋಗಲಾಡಿಸುವುದು: ಬಳಕೆದಾರರ ಪ್ರಯೋಜನಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಹಸಿರು ಮಾರುಕಟ್ಟೆಯ ಪ್ರಥಮ ನಿಯಮವಾಗಿದೆ, ಆ ಕಾರಣಕ್ಕಾಗಿಯೇ ಬಳಕೆದಾರರು ಕೆಲವು ಪದಾರ್ಥಗಳನ್ನು ಪ್ರಥಮವಾಗಿ ಖರೀದಿಸಲು ಆದ್ಯತೆಯನ್ನು ನೀಡುತ್ತಾರೆ. ಇದನ್ನು ವೃದ್ದಿ ಹಾಗೂ ಬಳಕೆದಾರರನ್ನೇ ಬ್ರಾಂಡ್‌ಗೆ ಆದ್ಯತೆ ನೀಡಲು ಉತ್ತೇಜಿಸುವುದು ಅಥವಾ ಹಸಿರು ಬದಲಿಗೆ ಪ್ರೀಮಿಯಂ ನೀಡಲು ಉತ್ತೇಜಿಸುವುದು ಪದಾರ್ಥವು ಸಂಪೂರ್ಣವಾಗಿ ಎಲ್ಲಾ ವಿಧದಲ್ಲಿ ಹಸಿರಾಗಿದ್ದು, ಆದರೆ ಬಳಕೆದಾರರಿಗೆ ಸಂತೃಪ್ತಿಯನ್ನು ಗೊಳಿಸದಿದ್ದಲ್ಲಿ ಅದರಿಂದ ಯಾವುದೇ ಪ್ರಯೋಜನ ಉಂಟಾಗಲಾರದು. ಇದು ಹಸಿರನ್ನು ಲಘು ದೃಷ್ಟಿಯಿಂದ ನೋಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಹಾಗೂ ಹಸಿರು ಪದಾರ್ಥಗಳು ದುಬಾರಿಯಾದಲ್ಲಿ ಅವು ಮಾರುಕಟ್ಟೆಯ ಬೇಡಿಕೆಯಿಂದ ವಂಚಿತವಾಗುತ್ತದೆ.

ಹಸಿರು ಮಾರುಕಟ್ಟೆಯಲ್ಲಿ ಅನುಸರಿಸಬೇಕಾದ ನಿಲುವು: ಹಸಿರು ಪದಾರ್ಥಗಳ ಮಾರುಕಟ್ಟೆಯನ್ನು ವಿಸ್ತರಿಸಲು, ಹಸಿರು ಪದಾರ್ಥಗಳ ಮಾರುಕಟ್ಟೆಯನ್ನು ಉತ್ತೇಜಿಸಲು ಕೆಲವು ನಿಲುವುಗಳನ್ನು ತೆಗೆದುಕೊಳ್ಳಬೇಕೆಂಬದು ಅತ್ಯಾವಶ್ಯಕವಾಗಿರುತ್ತದೆ. ಆ ನಿಲುವುಗಳನ್ನು ಈ ಕೆಳಕಂಡಂತೆ ಅನುಸರಿಸಬೇಕಾಗಿದೆ.

1. **ಪದಾಥಗಳ ವಿಂಗಡಣೆ:** ಆಗಿನ ಪಾರ್ಥಗಳನ್ನು ಮತ್ತು ಸವಿವೆಗಳನ್ನು ಹಸಿರು ಮಾರುಕಟ್ಟೆ ವಿಧಾನಗಳನ್ನು ಅನುಸರಿಸಿ ವಿಂಗಡಿಸಿ ಸತತ ಶ್ರೇಣಿಯ ಮಾಟುಕಟ್ಟೆ ಇದ್ದು ಅವುಗಳಲ್ಲಿ ಚಿಲ್ಲರೆ ವ್ಯಾಪಾರವು ಇರುತ್ತದೆ. ಉತ್ಪಾದಕರು ಅದರಲ್ಲಿ ಪರಿಸರ ಕ್ಷಮತೆಗೆ ಅನುಗುಣವಾಗಿ ವಿಂಗಡಿಸಿ ಸ್ಪರ್ಧಿಸುತ್ತಾರೆ. ಕಡೆಮೆ ಪರಿಸರ ಕ್ಷಮತೆಗೆ ಅನುಗುಣವಾಗಿ ವಿಂಗಡಿಸಿ ಸ್ಪರ್ಧಿಸುತ್ತಾರೆ. ಕಡಿಮೆ ಪರಿಸರ ಕ್ಷಮತೆಯುಳ್ಳ ಪದಾಥಗಳು ನೂತನ ಬದಲಾವಣೆಗೆ ಗುರಿಯಾಗುವುದನ್ನು ನಾವು ಕಾಣುತ್ತೇವೆ. ಅದರಿಂದಾಗಿ ಹಲವು ಸಂಸ್ಥೆಗಳು ಸ್ಪರ್ಧಾತ್ಮಕ ಪದಾರ್ಥಗಳಾಗಿವೆ.

2. **ಬಳಕೆದಾರ ಮೌಲ್ಯವನ್ನು ನೆಲೆಗೊಳಿಸುವುದು:** ಸಂಸ್ಥೆಗಳು ಗ್ರಾಹಕರು ನಿರೀಕ್ಷಿಸುವ ಮೌಲ್ಯಕ್ಕೆ ಪರಿಸರಯುಕ್ತ ಪದಾರ್ಥಗಳನ್ನು, ಉತ್ತೇಜಿಸಿ ಸರಬರಾಜು ಮಾಡಲು ಅನುವಾಗುವಂತೆ ಪರಿಸರಯುಕ್ತ ಪದಾರ್ಥಗಳನ್ನು ವಿನ್ಯಾಸಗೊಳಿಸಬೇಕು ಹಾಗೂ ಗ್ರಾಹಕ ಮಾರುಕಟ್ಟೆ ವಿಭಾಗವನ್ನು ಗುರಿಯಾಗಿರಿಸಿಕೊಂಡು ಸಂಸ್ಥೆಯ ವಿಂಗಡಿಸುವಂತೆ ಮಾಡಲು ಸಹಕಾರಿಯಾಗಿದೆ.

3. **ಸಾವಯವ ದ್ರವಿಸುವ ಪ್ಯಾಕೇಜ್‌ನ್ನು ವಿನ್ಯಾಸಗೊಳಿಸುವುದು:** ಹಸಿರು ಪದಾರ್ಥಗಳ ಉತ್ತೇಜನವು ಗ್ರಾಹಕರು ವಿನ್ಯಾಸಗೊಳಿಸುವಿಕೆಯಿಂದ ಸದೃಡವಾಗಿ ಪ್ರಭಾವಿತಗೊಂಡಿದೆ ಎಂಬುದು ಕಂಡು ಬಂದಿದೆ. ಆದ್ದರಿಂದ ಸಾವಯವ ದ್ರವೀಕೃತಗೊಳ್ಳುವ ಪ್ಯಾಕಿಂಗ್ ಸದೃಡ ಹಾಗೂ ಮಾದರಿಯಾಗಿ ಅವರು ತೀರ್ಮಾನ ಕೈಗೊಳ್ಳಲು ಸಹಕಾರಿಯಾಗಿ ಪರಿಣಾಮ ಬೀರುವುದು ಗೋಚರಿಸುತ್ತದೆ. ಆದ್ದರಿಂದ ಹಸಿರು ಮಾರುಕಟ್ಟೆಯಲ್ಲಿ ಕೊಡಗಿರುವ ವ್ಯಕ್ತಿಗಳು ಪದಾರ್ಥಗಳ ಪ್ಯಾಕೇಜಿಂಗ್ (ಪೊಟ್ಟಣ) ಅನ್ನು ಪುನರಾವರ್ತಿಸಲು ಅನುಕೂಲವಾಗುವಂತಹ ಕೈಯಿಂದ ಮಾಡಲ್ಪಡುವ ಕಾಗದದ ಪ್ಯಾಕೇಜಿಂಗ್‌ನ್ನು ಮಾಡಬೇಕು, ಯಾಂತ್ರಿಕ ಪದಾರ್ಥಗಳನ್ನು ಉಪಯೋಗಿಸುವುದರ ಹೊರತಾಗಿ

4. **ಹಸಿರು ಮಾರುಕಟ್ಟೆಯಲ್ಲಿ ಪದಾರ್ಥಗಳ ಗಣನೆ:** ಹಸಿರು ಮಾರುಕಟ್ಟೆಯ ಮಾರುಕಟ್ಟೆಯನ್ನು ಉತ್ತೇಜಿಸಲು ಗ್ರಾಹಕರ ಪರಿಸರಯುಕ್ತ ಅವಶ್ಯಕತೆಗಳನ್ನು ಗುರ್ತಿಸುವುದು ತುರ್ತು ಅವಶ್ಯಕತೆ ಇರುತ್ತದೆ. ಹಾಗೂ ಅದರಂತೆ ಪದಾರ್ಥಗಳನ್ನು ಅಭಿವೃದ್ದಿಪಡಿಸಬೇಕಾಗಿರುತ್ತದೆ. ಅದು ಅತಿ ಹೆಚ್ಚು ಪರಿಸರ ಸ್ನೇಹಿ ಪ್ಯಾಕೇಜ್ ಹೊಂದಿರುವಿಕೆಯನ್ನು ಒಳಗೊಂಡಿರುತ್ತದೆ ಅದು ಬಳಕೆದಾರರ ನಿರೀಕ್ಷಿತ ಗುಣಮಟ್ಟದ್ದಾಗಿದ್ದು ಅವರ ಅವಶ್ಯಕತೆಯನ್ನು ಪೂರೈಸುವ ಪದಾರ್ಥಗಳಾಗಿವೆಯೇ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ. ಆದ್ದರಿಂದ ಮಾರುಕಟ್ಟೆದಾರರ ಅವುಗಳನ್ನು ಹೆಚ್ಚಿನ ಬೆಲೆ ವಿಕ್ರಯಿಸಬಹುದಾಗಿದ್ದು, ಆ ಪದಾರ್ಥಗಳ ಪರಿಸರ ಸ್ನೇಹಿ ಎಂಬುದಾಗಿಬಣ್ಣಿಸಲು ಸಹಾಯಕವಾಗಿದೆ.

ಉಪಸಂಹಾರ : ಸಾಕಷ್ಟು ಬಳಕೆದಾರ ಹಸಿರು ಮಾರುಕಟ್ಟೆ ಎಂಬುದು

ಹೊಸತಾಗಿದ್ದು, ಅದೇನಾದರೂ, ಹಸಿರು ಮಾರುಕಟ್ಟೆಯ ಪದಾರ್ಥವನ್ನು ಮಾರುಕಟ್ಟೆ ಮಾಡುವುದಾಗಿದ್ದು, ಅವು ಪರಿಸರ ಸ್ನೇಹಿ ಎಂಬುದು ಮನದಟ್ಟಾಗಬೇಕಾಗಿದೆ. ಆದ್ದರಿಂದ ವಿಭಿನ್ನ ಸಾಂಪ್ರಾದಾಯಿಕ ಬಳಕೆದಾರರಿಗೆ ಪೂರಕವಾಗುವಂತೆ, ಹೆಚ್ಚುತ್ತಿರುವ ಹಸಿರು ಪದಾರ್ಥಗಳ ಬೆಲೆ ಹಾಗೂ ಹಸಿರು ಮಾರುಕಟ್ಟೆಗಳ ನಡುವಿನ ಹೊಂದಾಣಿಕೆಯನ್ನು ಅರ್ಥೈಸಿಕೊಳ್ಳುವುದು ಅತ್ಯಾವಶ್ಯಕವಾಗಿದೆ ಹಸಿರು ಮಾರುಕಟ್ಟೆಯ ಪ್ರಸಕ್ತವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ ಅದಕ್ಕಾಗಿ ಅವಿಷ್ಕೃತ ತಂತ್ರಜ್ಞಾನ ಅವಶ್ಯಕತೆ ಇದ್ದು, ಹಸಿರು ಪದಾರ್ಥಗಳು ವಿಸ್ಕೃತ ಮಾರುಕಟ್ಟೆಯನ್ನು ಅಂತರಿಕವಾಗಿ ಮತ್ತು ಅಂತರರಾಷ್ಟ್ರಿಯವಾಗಿ ಪ್ರಾದೇಶಿಕಬಹುದಾಗಿದೆ ಅದಕ್ಕೆ ಕಾಲಾನುಗತ "ಹಸಿರು ಪದಾರ್ಥಗಳ ಪರಾಮರ್ಶೆ ಇದ್ದು ಪದಾರ್ಥಗಳು "ಪರಿಸರ ಸ್ನೇಹಿ " ಹಾಗೂ ಆರ್ಥಿಕವಾಗಿ ಬಳಕೆದಾರರ ಕೈಗೆಟುಕುವಂತಿರಬೇಕು; ಅದರಲ್ಲೂ ಮಾಧ್ಯಮ ಹಾಗೂ ಕೆಳ ಹಂತದ ಆರ್ಥಿಕ ವರ್ಗದವರಿಗೆ ಲಭ್ಯವಾಗುವಂತಿರಬೇಕು. ಅಂತಿಮವಾಗಿ ಬಳಕೆದಾರರು, ಕೈಗಾರಿಕಾ ಖರೀದಿಗಾರರು ಹಾಗೂ ಪೂರೈಕೆದಾರರು ಪರಿಸರ ಸ್ನೇಹದ ಮೇಲೆ ಋಣಾತ್ಮಕ ಪ್ರಭಾವವನ್ನು ಅತ್ಯಂತ ಕಡಿಮೆ ಒತ್ತಡ ಪರಿಣಾಮ ಬೀರುವಂತಿರಬೇಕು ಭಾರತದಂತಹ ಅಭಿವೃದ್ಧಿ ರಾಷ್ಟ್ರಗಳಲ್ಲಿ ಹಸಿರು ಮಾರುಕಟ್ಟೆಯು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಗ್ರಂಥ ಪರಾಮರ್ಶೆ

1. ಅಮಿತಾಬ್ ಘೋಷ್(2008) ಗ್ರೀನ್ ಮಾರ್ಕೆಟಿಂಗ್ ಸ್ಟ್ರೇಷಜೀಸ್, ಐ.ಸಿ.ಎಫ್.ಎ.ಐ ಯೂನಿವರ್ಸಿ ಪ್ರೇಸ್, ಹೈದರಬಾದ್.
2. ಆಮ್ 2ನೇ ಅಸಾದೊಲ್ಲಾಹಿ (2011) ದಿ ರೋಲ್ ಆಫ್ "ಗ್ರೀನ್ ಮಾರ್ಕೆಟಿಂಗ್" .

ಶಿವಮೊಗ್ಗ ನಗರದ ಅಲರ್ಜಿಕ ಪರಾಗರೇಣುಗಳ ಅಧ್ಯಯನ

ಸುಬ್ಬರಾಜು.ಎ, ಶೋಭಾ ಕೆ.ಎಸ್ ಮತ್ತು ಆರ್.ಓಂಕಾರಪ್ಪ,
ಸೂಕ್ಷ್ಮ ಜೀವಶಾಸ್ತ್ರ, ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು(ಸ್ವಾ), ಕುವೆಂಪು ವಿಶ್ವವಿದ್ಯಾನಿಲಯ
ಶಿವಮೊಗ್ಗ 577203

ಪ್ರಸ್ತುತ ಅಧ್ಯಯನದಲ್ಲಿ ಶಿವಮೊಗ್ಗ ನಗರದ ಏರೋಬಯಾಲಾಜಿಕಲ್ ಸಮೀಕ್ಷೆಯನ್ನು ಕೇಂದ್ರೀಕರಿಸಲಾಗಿತ್ತು (ಡಿಸೆಂಬರ್ ೨೦-೨೦೧೧ ರಿಂದ ಸೆಪ್ಟೆಂಬರ್ ೨೦-೨೦೧೧) ನಗರದ ಪ್ರಮುಖ ಸ್ಥಳಗಳ ವಾಯುವಿನಲ್ಲಿರುವ ಅಲರ್ಜಿಕ ಪರಾಗರೇಣುಗಳನ್ನು ಗಾತ್ರೀಯವಲ್ಲದ ವಿಧಾನವನ್ನು ಬಳಸಿಕೊಂಡು ಪರಿಮಾಣಾತ್ಮಕ ಎಣಿಕೆಯನ್ನು ನಿರ್ಧರಿಸಲಾಯಿತು. ಪ್ರಸ್ತುತ ಅಧ್ಯಯನದ ಪರಾಗರೇಣುಗಳು ಟೆರ್ಡ್ಯಾಕ್ಸ್ ಪ್ರೊಕುಕೋಮರ್ಸ್(೩೩%) ಮತ್ತು ಆಸ್ಟೆರೇಸಿ(೧೫%) ಗಾಂಧೀಬಜಾರ್ ಪ್ರದೇಶದಲ್ಲಿ ಪ್ರಧಾನವಾಗಿದ್ದು, ರೈಲು ನಿಲ್ದಾಣ ಪ್ರದೇಶದಲ್ಲಿ ಕೊಕಸ್ ನ್ಯೂಸಿಫೇರಾ(೧೯%) ಮತ್ತು ಪೊಯೇಸಿ (೧೫%) ಪರಾಗರೇಣುಗಳು ಹೆಚ್ಚು. ವಿದ್ಯಾನಗರ ಮತ್ತು ಬಸ್‌ನಿಲ್ದಾಣ ಪ್ರದೇಶದಲ್ಲಿ ಅತ್ಯಂತ ಪ್ರಬಲ ಪರಾಗರೇಣುಗಳೆಂದರೆಟೆರ್ಡ್ಯಾಕ್ಸ್ ಪ್ರೊಕುಕೋಮರ್ಸ್‌ಮತ್ತು ಪೊಯೇಸಿ ಹಾಗೂ ಆಸ್ಟೆರೇಸಿ ಕೊಕಸ್ ನ್ಯೂಸಿಫೆರಾ ಮತ್ತು ಸೈಕಸ್ ಪರಾಸಗರೇಣುಗಳು ಕಡಿಮೆ ಪ್ರಮಾಣದಲ್ಲಿ ಕಾಣಿಸಿಕೊಡವು. ಟೆರ್ಡ್ಯಾಕ್ಸ್ ಪ್ರೊಕುಕೋಮರ್ಸ್ ಪರಾಗರೇಣು ಎಲ್ಲಾ ಮಾದರಿ ಪ್ರದೇಶಗಳಲ್ಲಿ ಹೆಚ್ಚು. ಪ್ರಭುತ್ವ ಪರಾಗರೇಣು ಎರಡು ಪ್ರದೇಶಗಳಿಗೆ ಹೋಲಿಸಿದರೆ ಬಸ್ ನಿಲ್ದಾಣ ಮತ್ತು ವಿದ್ಯಾನಗರ ಪ್ರದೇಶದಲ್ಲಿ ಹೆಚ್ಚಾಗಿತ್ತು.

ಪ್ರಮುಖ ಪದಗಳು: ಏರೋಬಯಾಲಜಿ, ಅಲರ್ಜಿಕ, ಪರಾಗರೇಣುಗಳು.

ಪರಿಚಯ: ೧೯೩೦ರಲ್ಲಿ ಎಫ್.ಸಿ ಮೇಯರ್ ಗಾಳಿಯಲ್ಲಿ ಜೀವನದ ಅಧ್ಯಯನದ ಒಳಗೊಂಡಿರುವ ಒಂದು ಯೋಜನೆ ವಿವರಿಸಲು ವಾಯುಜೀವಶಾಸ್ತ್ರ ಪದ ಪದವನ್ನು ಉಪಯೋಗಿಸಿದ್ದರು. ಅಂದಿನಿಂದ ವಾಯುಸೂಕ್ಷ್ಮಾಣು ಜೀವಶಾಸ್ತ್ರ, ಏರೋಸಾಯಿಲೈಸೇಶನ್, ವೈಮಾನಿಕ ಪ್ರಸರಣ ಶೇಖರಣೆ ಮಾಡುವ ಅಧ್ಯಯನ ಎಂದು ಹೇಳಲಾಗಿದೆ [೧]. ಗಾಳಿಯಿಂದ ಪ್ರಸಾರಗೊಳ್ಳುವ ಅಥವಾ ಹರಡುವ ಏರೋಸ್ಪೋರಾಗಳು ಬಾಹ್ಯ ಮತ್ತು ಆಂತರಿಕ ಪರಿಸರಗಳಲ್ಲಿ ಕಂಡುಬರುತ್ತದೆ. ಇವುಗಳಲ್ಲಿ ಶೀಲೀಂದ್ರಗಳ ಬೀಜಕಗಳು, ಅಲರ್ಜಿಕ ಪರಾಗರೇಣುಗಳು, ಸೂಕ್ಷ್ಮಾಣುಜೀವಗಳ ಕೋಶಗಳು ಪ್ರಮುಖವಾಗಿದ್ದವು [೨]. ವಾತಾವರಣದಲ್ಲಿ ಈ ಏರೋಸ್ಪೋರಗಳ ಉಪಸ್ಥಿತಿ ವಿವಿದ ಭೌಗೋಳಿಕ ಪ್ರದೇಶಗಳಲ್ಲಿ ಬದಲಾಗುತ್ತದೆ. ಅಲರ್ಜಿಕ ಪರಾಗರೇಣುಗಳಿಂದ ಉಂಟಾಗುವ ಆರೋಗ್ಯ ಹಾನಿಗಳು ಪ್ರತಿ ರಕ್ಷೆಯ ಸಾಮರ್ಥ್ಯ ಮತ್ತು ವಯಸ್ಸಿನ ಗುಂಪುಗಳ ಮೇಲೆ ಆಧಾರಿತವಾಗಿರುತ್ತದೆ. ಪ್ರಸ್ತುತ ಅಧ್ಯಯನದ ಗುರಿ ಶಿವಮೊಗ್ಗ ನಗರದ ವಾಣಿಜ್ಯಿಕ ಪ್ರಮುಖ ಸ್ಥಳಗಳಲ್ಲಿ ಅಲರ್ಜಿಕ ಪರಾಗರೇಣುಗಳ ಪತ್ತೆ ಹಾಗೂ ಅವುಗಳ ಪ್ರಾಮುಖ್ಯತೆಯನ್ನು ಗುರುತಿಸುವುದು. [೩]

ಉದ್ದೇಶಗಳು:

- ವಾಯುಮಾದರಿಗಳನ್ನು ಸಂಗ್ರಹಿಸುವುದು.
- ಪರಾಗರೇಣುಗಳ ಪರಿಮಾಣವನ್ನು ಗುರುತಿಸುವುದು.
- ಅಲರ್ಜಿಕ ಪರಾಗರೇಣುಗಳನ್ನು ಗುರುತು ಹಿಡಿಯುವುದು.

ಪರಿಕರಗಳು ಮತ್ತು ವಿಧಾನಗಳು:

೧. ಮಾದರಿ ಸಂಗ್ರಹಣೆ: ೨೪ ಗಂಟೆಗಳ ಮಧ್ಯಂತರದಲ್ಲಿ ವಿವಿಧ ಪ್ರಮುಖ ಸ್ಥಳಗಳಾದ ಗಾಂಧಿ ಬಜಾರ್, ರೈಲ್ವೇ ನಿಲ್ದಾಣ, ಬಸ್ ನಿಲ್ದಾಣ ಹಾಗೂ ವಿದ್ಯಾನಗರಗಳಲ್ಲಿ ಗಾಳಿ ಮಾದರಿಗಳಲ್ಲಿ ಗುರುತ್ವಾಕರ್ಷಣ ಗಾಜು ಬಿಲ್ಲೆ ವಿಧಾನದಿಂದ ೩ ತಿಂಗಳುಗಳ ಕಾಲ ಮಾಡಲಾಯಿತು.

೨. ಪರಾಗರೇಣುಗಳ ಪರಿಮಾಣ ಹಾಗೂ ಗುರುತಿಸುವಿಕೆ: ಮೇಲೆ ತಿಳಿಸಿದ ವಿಧಾನದಲ್ಲಿ ನಿರ್ದಿಷ್ಟ ಗಾತ್ರದ (೧೮ ಎಂ.ಎಂ) ಗಾಜುಬಿಲ್ಲೆಗಳನ್ನು ಉಪಯೋಗಿಸಲಾಯಿತು. ಈ ಬಿಲ್ಲೆಗಳಮೇಲೆ ಕರಗಿದ ವ್ಯಾಸಲಿನ್ ದ್ರಾವಣವನ್ನು ಸವರಲಾಯಿತು. ಈ ಬಿಲ್ಲೆಗಳನ್ನು ಆಯ್ದುಕೊಂಡ ಪ್ರಮುಖ ಸ್ಥಾನಗಳಲ್ಲಿ ೨೪ ಗಂಟೆಗಳ ಕಾಲ ತೆರೆದಿಡಲಾಯಿತು. ಆ ನಂತರ ಈ ಬಿಲ್ಲೆಗಳನ್ನು ಪ್ರಯೋಗಾಲಯದಲ್ಲಿ ಗ್ಲಿಸರಿನ್ ದ್ರಾವಣದಲ್ಲಿ ಸಂಸ್ಕರಿಸಿ, ಹೊದಿಕೆ ಗಾಜುಗಳನ್ನು ಹಾಕಿ

(೨೨ x ೫೦, ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಲಾಯಿತು. ಎಲ್ಲಾ ಪ್ರದೇಶಗಳಲ್ಲಿ ಕಂಡುಬಂದ ಪರಾಗರೇಣುಗಳ ಸಂಖ್ಯೆ, ಆಕಾರ, ಬಣ್ಣ, ಹಾಗೂ ಗುಣಲಕ್ಷಣಗಳನ್ನು ಗುರುತಿಸಲಾಯಿತು.

ಫಲಿತಾಂಶಗಳು ಮತ್ತು ಚರ್ಚೆ: ಪ್ರಸ್ತುತ ಅಧ್ಯಯನದಲ್ಲಿ ಶಿವಮೊಗ್ಗ ನಗರದ ಪರಾಗರೇಣುಗಳ ಋತುಕಾಲಿಕ ವಿತರಣೆ ಟ್ರೈಡ್ಯಾಕ್ಸ್ ಪ್ರೋಕುಂಬರ್ಸ್ ಪರಾಗರೇಣುಗಳು ಇತರೇ ಪರಾಗರೇಣುಗಳಿಗಿಂತ ಪ್ರಾಬಲ್ಯ ಹೊಂದಿದ್ದವು. ಗಾಂಧಿಬಜ಼ಾರ್ ಪ್ರದೇಶದಲ್ಲಿ ಅತ್ಯಂತ ಸಾಮಾನ್ಯವಾದ ಪರಾಗರೇಣುಗಳು ಕಂಡುಬಂದಿದ್ದು ಆಸ್ಟೆರೇಸಿ, ಕೊಕಸ್ ನ್ಯೂಸಿಫೆರಾ, ಸೈಕ್ಯಾಸ್, ಪೋಯೇಸಿ ಇತ್ಯಾದಿ (ಅಂಜೂರ ೧) ಹಾಗೂ ರೈಲು ನಿಲ್ದಾಣ ಪ್ರದೇಶದಲ್ಲಿ ಟ್ರೈಡ್ಯಾಕ್ಸ್ ಪ್ರೋಕುಂಬರ್ಸ್ ಹೆಚ್ಚು ಇತರೆ ಪರಾಗರೇಣುಗಳಿಗೆ ಹೋಲಿಸಿದರೆ (ಅಂಜೂರ ೨). ವಿದ್ಯಾನಗರದಲ್ಲಿ ಟ್ರೈಡ್ಯಾಕ್ಸ್ ಪ್ರೋಕುಂಬರ್ಸ್ ಮತ್ತು ಪೋಯೇಸಿಯಾ ಪರಾಗರೇಣುಗಳು ಅತ್ಯಂತ ಪ್ರಬಲವಾಗಿದ್ದು, ಆಸ್ಟೆರೇಸಿ, ಕೊಕಸ್ ನ್ಯೂಸಿಫೆರಾ, ಮತ್ತು ಸೈಕ್ಯಾಸ್‌ಗಳು ಮಧ್ಯಮ ಪ್ರಮಾಣದಲ್ಲಿ ಕಂಡು ಬಂದವು (ಅಂಜೂರ ೩ ಮತ್ತು ೪ ಕ್ರಮವಾಗಿ). ಶಿವಮೊಗ್ಗ ನಗರ ವಾತಾವರಣದಲ್ಲಿ ಪರಾಗರೇಣುಗಳ ಅಧ್ಯಯನವನ್ನು ಗಾತ್ರಿಯ ಅಲ್ಲದ ಕಾರ್ಯ ವಿಧಾನಗಳನ್ನು ಉಪಯೋಗಿಸಿಕೊಂಡಿದ್ದವು[೧೧]. ಈ ಅಧ್ಯಯನದ ಸಮಯದಲ್ಲಿ ಪರಾಗರೇಣುಗಳು ಸಂಪೂರ್ಣವಾಗಿ ವಿವಿಧ ಪ್ರದೇಶದಲ್ಲಿ ಗುರುತಿಸಲಾಯಿತು. (ಅಂಜೂರ ೫) ಎಡಿಕೋಟ್ಸ್, ಏಕದಳ ಸಸ್ಯಗಳು ಮತ್ತು ಸೈಕ್ಯಾಡೆಲೆಸ್ ವರ್ಗಕ್ಕೆ ಸರ್ವೇಸಾಮಾನ್ಯ ಪರಾಗರೇಣುಗಳು ಸೇರುತ್ತವೆ. ಆಸ್ಟೆರೇಸಿ, ಕೊಕಸ್ ನ್ಯೂಸಿಫೆರಾ, ಪೋಯೇಸಿ, ಮತ್ತು ಸೈಕ್ಯಾಸ್‌ಗಳಿಗೆ ಹೋಲಿಸಿದರೆ ಟ್ರೈಡ್ಯಾಕ್ಸ್ ಪ್ರೋಕುಂಬರ್ಸ್ ಪರಾಗರೇಣುಗಳು ಅತ್ಯಧಿಕವಾಗಿ ಗುರುತಿಸಲಾಯಿತು. ಎಲ್ಲಾ ನಾಲ್ಕು ಪ್ರದೇಶಗಳಲ್ಲಿ ಪೋಯೇಸಿ ಮತ್ತು ಆಸ್ಟರೇಸಿ ಇರುವಿಕೆ ಸಮಾನ ಶೇಖಡವಾರು ಹೆಚ್ಚು ಅಥವಾ ಕಡಿಮೆ ಆಗಿತ್ತು ಹಾಗೂ ಕೊಕೊಸ್ ನ್ಯೂಸಿಫೆರಾ ಮತ್ತು ಸೈಕ್ಯಾಸ್ ಪರಾಗರೇಣುಗಳು ಕನಿಷ್ಟ ಶೇಕಡವಾರು ಗಮನಿಸಲಾಯಿತು.

ನಗರದ ಪ್ರದೇಶದಲ್ಲಿ ಪರಾಗರೇಣುಗಳ ಪ್ರಾಬಲ್ಯ ಇತರ ಹಿಂದಿನ ಅಧ್ಯಾಯನಗಳಲ್ಲಿ ಆಸ್ಟರೇಸಿ, ಸೈಕ್ಯಾಸ್ ಮತ್ತು ಇತರ ಪರಾಗರೇಣುಗಳು ಕಂಡಿದ್ದವು [೬]. ನಗರದ ಪ್ರದೇಶದಲ್ಲಿ ಪರಾಗರೇಣುಗಳ ಅಧ್ಯಾಯನಗಳು ಅತ್ಯಂತ ಪ್ರಮುಖ ಪ್ರದೇಶಗಳಲ್ಲಿ ಮತ್ತು ಒಳಾಂಗಣ ಪರಿಸರದಲ್ಲಿ ನಡೆದಿದೆ. ಪ್ರಸ್ತುತ ಅಧ್ಯಯನದಲ್ಲಿ ನಗರ ಪ್ರದೇಶಗಳ ಪರಾಗರೇಣುಗಳು ಪ್ರಬಲ ತಾಣಗಳಲ್ಲಿ ಟ್ರೈಡ್ಯಾಕ್ಸ್ ಪ್ರೋಕುಂಬರ್ಸ್ ಪರಾಗರೇಣುಗಳು ಎಲ್ಲಾ ಪ್ರದೇಶಗಳಲ್ಲಿ ಮೂರು ತಿಂಗಳಲ್ಲಿ ಹೆಚ್ಚು ಕಂಡುಬಂದವು. ಈ ಪರಾಗರೇಣುಗಳಿಂದ ಉಂಟಾಗುವ ಅಲರ್ಜಿ ಪರಿಣಾಮಗಳು ಹೆಚ್ಚು ಎಂಬುದನ್ನು ಸೂಚಿಸಿದೆ. ಈ ಪ್ರದೇಶಗಳು ದಟ್ಟವಾದ ಜನಸಂಖ್ಯೆ ಉಳ್ಳವಾದುದ್ದರಿಂದ, ಇದು ಆರೋಗ್ಯಕ್ಕೆ ಅಪಾಯಕಾರಿ ಯಾಗಿದೆ.



ಅಂಜೂರ ೧: ಗಾಂಧಿ ಬಜ಼ಾರದ ಮೂರು ತಿಂಗಳ ಒಟ್ಟು ಪರಾಗರೇಣುಗಳು.



ಅಂಜೂರ ೨: ಬಸ್ ನಿಲ್ದಾಣ ಮೂರು ತಿಂಗಳ ಒಟ್ಟು ಪರಾಗರೇಣುಗಳು



ಅಂಜೂರ ೩: ವಿದ್ಯಾನಗರ ಮೂರು ತಿಂಗಳ ಒಟ್ಟು ಪರಾಗರೇಣುಗಳು



ಅಂಜೂರ ೪: ರೈಲ್ವೇನಿಲ್ದಾಣ ಮೂರು ತಿಂಗಳ ಒಟ್ಟು ಪರಾಗರೇಣುಗಳು



ಅಂಜೂರ ೫: ವಿವಿದ ಸ್ಥಳಗಳ ಮೂರು ತಿಂಗಳ ಒಟ್ಟು ಪರಾಗರೇಣುಗಳ ಸಂಖ್ಯೆ

ತೀರ್ಮಾನ:

- ವಾಣಿಜ್ಯಿಕ ಪ್ರಮುಖ ಸ್ಥಾನಗಳಲ್ಲಿ ಪ್ರಬಲ ಅಲರ್ಜಿಕ ಕಾರಕ ಪರಾಗರೇಣುಗಳು ಗುರುತಿಸಲ್ಪಟ್ಟವು.
- ಈ ಪರಾಗರೇಣುಗಳು ಅಲರ್ಜಿಕ್ ರೆನೈಟಿಸ್ ಮತ್ತು ಪ್ರಬಲಸಂವೇದನಾ (ಹೈಪರ್ ಸೆಂಟಿವಿಟಿ) ಪರಿಣಾಮಗಳನ್ನು ಸಂಪರ್ಕಹೊಂದಿದ ವ್ಯಕ್ತಿಗಳಲ್ಲಿ ತೋರಬಹುದು.
- ಈ ದೃಷ್ಟಿಯಿಂದ ಅಲರ್ಜಿ ವ್ಯಕ್ತಿಗಳು ದೂಳುಮುಖವಾಡ ದರಿಸುವುದು ಹಾಗೂ ಈ ಸ್ಥಾನಗಳ ಕಡಿಮೆ ಸಂಪರ್ಕ ಹೊಂದುವುದರಿಂದ ಅಲರ್ಜಿ ಪ್ರಮಾಣವನ್ನು ತಗ್ಗಿಸಬಹುದು.

ಉಲ್ಲೇಖಗಳು:

೧. ಅಗರ್ವಾಲ್. ಎಮ್. ಕೆ, ಶಿವ್ಪುರಿ ಡಿ, ಎನ್. ೧೯೭೪ ಶಿಲೀಂಧ್ರಗಳ ಉಸಿರಾಟದ ಅಲರ್ಜಿ ತಮ್ಮ ಪಾತ್ರವನ್ನು ಬೀಜಕಗಳನು. ಪರಾಗ ಬೀಜಕವನ್ನು ಸಂಶೋಧನೆ ಅಡ್ವಾನ್ಸಸ್. ೧:೭೮–೧೨೮

೨. ಹಾಗೇಶ್ ,ಎಸ್.ಎನ್ ಮತ್ತು ಮೇತೇವ್ .೧೯೮೮) . ಬೆಂಗಳೂಱು ವಾತಾವರಣದಲ್ಲಿ ಪ್ರಧಾನ ಪರಾಗರೇಣುಗಳು ಋತುಕಾಲಿಕ ಅವಧಿಗೆ, ಭಾರತೀಯ ಜೆ ವಾಯು ಜೀವಶಾಸ್ತ್ರ.೧೧ (೧ & ೨): ೧೬ – ೧೮.

3. ಅನೇಜ ಕೆ. ಆರ್. ಮೈಕ್ರೋಬಿಯಾಲಜಿರಲ್ಲಿ ೧೯೬೬ ಪ್ರಯೋಗಗಳು, ಸಸ್ಯರೋಗ ಲಕ್ಷಣಶಾಸ್ತ್ರ, ಅಂಗಾಂಶ ಕೃಷಿ ಮತ್ತು ಅಣಬೆ ಕೃಷಿ ೨ನೇ ಆವೃತ್ತಿ. ವಿಶ್ವಪ್ರಕಾಶನ (ನ್ಯೂ ಏಜ್ ಇಂಟರ್ ಪ್ರೈ. ಲಿ.) ದೆಹಲಿ .

೪. ಬಜಾಬ್. ಎ ೧೯೮೮ ನಾಗ್ಪುರ ಎರಡು ವಿವಿಧ ಸ್ಥಳಗಳಲ್ಲಿ ಗಾಳಿಯಲ್ಲಿ ಕಾರ್ಯಸಾಧ್ಯವಾದ ಬೀಜಕಗಳ ಸ್ಟಡೀಸ್. ಜೆ. ಪಾಲಿಹೋಲ್.೧೪ (೨): ೧೩೬–೧೪೯.

5. ಬೆಹಾಗಿ, ವಿ.ಐ. (೧೯೯೧). Puccinia arachidis SPEG ಉಂಟಾಗುವ ಶೇಂಗಾ ಆಫ್ ತುಕ್ಕು ಮೇಲೆ ಸ್ಟಡೀಸ್. ಉತ್ತರ ಕರ್ನಾಟಕದಲ್ಲಿ. M.sc (ಕೃಷಿ). ಕೃಷಿ ವಿಜ್ಞಾನ ಧಾರವಾಡ ಥೀಸಿಸ್ ವಿಶ್ವವಿದ್ಯಾಲಯ, ಪುಟಗಳು: ೯೦–೧೧೫ .

೬. ಚಕ್ರವರ್ತ್ತಿ. ಪಿ. ಗುಪ್ತಾ– -ಬಟ್ಟಾಚಾರ್ಯ. ಎಸ್, ಚೌದರಿ.ಐ ಮಂಜುಂಬಾರ್, ಎಂ. ಆರ್ ಮತ್ತು ಚಡಾ. ಎಸ್. (೨೦೦೧) ಪಶ್ಚಿಮ ಬಂಗಾಳದಲ್ಲಿ ಕೃಷಿ ಜಮೀನಿನಲ್ಲಿ ವಿವಿಧ ಎತ್ತರಗಳಲ್ಲಿ ಅಲರ್ಜಿ ಪರಾಗರೇಣುಗಳು ಮತ್ತು ಬೀಜಕಗಳ ಸಾಂದ್ರತೆಯ ವ್ಯತ್ಯಾಸಗಳು. ಭಾರತ. ಆನ್. ಅಗ್ರಿಕ್. ಪರಿಸರ. ಮೇ. ೮: ೧೨೩–೧೩೦.

೭. ದೇವಿ.ಎನ್, ಧಾರ್. ಬಿ. ಮತ್ತು ಶರ್ಮಾ. ಜಿ. ಸಿ (೨೦೦೨) ಗೌಹಾತಿ ನಗರದ ಅರೆ ನಗರ ಪ್ರದೇಶಗಳಲ್ಲಿ ಏರ್‌ಸ್ಪೋರ. ಭಾರತ. ಜೆ.ವಾಯುಜೀವಶಾಸ್ತ್ರ ೧೦ (೧ & ೨): ೨೦–೩೧.

೮. ವಾಯುಮಂಡಲದ ಗ್ರೆಗೋರಿ PH ೧೯೬೧. ಮೈಕ್ರೋಬಿಯಾಲಜಿ. ಲಿಯೊನಾರ್ಡ್ ಹಿಲ್ ಬುಕ್ Ltd.London ೨ ನೇ edition. ೧೯೮೮.

೯. ಹರ್‌ಲಾಪುರ್, ಎಸ್. ಐ. (೨೦೦೫). ಸೋಂಕುಶಾಸ್ತ್ರ ಮತ್ತು Exserohilum turcicum (ಪಾಸ್) ಲಿಯೊನಾರ್ಡ್ ಮತ್ತು Suggs ಉಂಟಾಗುವ ಮೆಕ್ಕೆ turcicum ಎಲೆರೋಗ ನಿರ್ವಹಣೆ. ಪಿಎಚ್ಡಿ. ಪ್ರಬಂಧ, ಕೃಷಿ ವಿಜ್ಞಾನ ಧಾರವಾಡದ ವಿಶ್ವವಿದ್ಯಾಲಯ, ಪುಟಗಳು: ೯೨–೧೦೨.

೧೦. ಹಿರ್ಸ್ಟ್. ಜೆ. ಎಂ, (೧೯೫೩) ವಾತಾವರ್ಣದ ಬೀಜಕವನ್ನು ವಿಷಯ ದೈನಿಕ ನಿಯತಕಾಲಿಕತೆಯ Changes ಮತ್ತು ವಾತಾವರಣದ ಪರಿಣಾಮಗಳು. ಟ್ರಾನ್ಸ್. ಬ್ರಿಟ್ Mycol ಸಾಕ್ ೩೬: ೩೭೫–೩೯೩.

11. ಸಿಂಗ್ ಎಸ್ ಮತ್ತು ಚೌಹಾನ್ , .೧೯೯೯ ಎಸ್.ವಿ.ಎಸ್. ಅಗ್ರಾ ನಗರದ ಭಾರತೀಯ ಆಫ್ ವಾಯು ಜೀವಶಾಸ್ತ್ರ ಅಧ್ಯಯನಗಳು. ಜೆ Aerobiol .೧೨ (೧ & ೨); ೧೪–೧೯.

12. ಮುರ್‌ದಾಂಕರ್ ಎಸ್.ಎಮ್೧೯೯೦. ಔರಂಗಾಬಾದ್ ನಲ್ಲಿ ಕೆಲವು ಜಾಗ ಮೇಲೆ ಏರ್ ಸ್ಪೋರಾ ಸ್ಟಡೀಸ್. ಪಿಹೆಚ್.ಡಿ ಪ್ರಬಂಧ. ಮರಾಠಾವಾಡ ವಿಶ್ವವಿದ್ಯಾಲಯ, ಔರಂಗಾಬಾದ್

೧೩. ಮಿಶ್ರಾ. ಆರ್.ಪಿ (೧೯೫೫). ಪರಾಗರೇಣುಗಳಿಂದ ಮತ್ತು ಜಬಲ್ಪುರ (ಎಂ. ಪಿ) ಶಿಲೀಂಧ್ರಗಳ ಬೀಜಕಗಳ ವಿಶೇಷ ಸಂಬಧಿಸಿದಂತೆ Aeropalynological ಅಧಯನಗಳು.

14. ಓಮಚನ್ ಎಂ. ಮಿಶ್ರಾ, ಆರ್ಪಿ ಮತ್ತು ಖಾರೆ. ಎನ್ ಜಬಲ್ಪುರ ಎರಡು ವಿವಿಧ ಸೈಟ್ಗಳಿಂದ (೧೯೮೮) ವಾತಾವರಣ ಪರಾಗ ಸಸ್ಯ. ಒಂದು ಪ್ರಾಥಮಿಕ ವರದಿಗಳ ಭಾರತೀಯ ಜಿ ವಾಯು ಜೀವಶಾಸ್ತ್ರ ೧ (೧ & ೨): ೬೬–೭೦.

15. ಕುಟ್ಜೆಲ್, ಆರ್. ಜಾಂಗ್. ವೈ. ಜೋನ್ಸ್, ಆರ್. ಮತ್ತು ಡೈಯರ್. ಪಿ (೧೯೯೭) ಪವನಶಾಸ್ತ್ರ ನಿಯತಾಂಕಗಳನ್ನು ಸಂಬಂಧಿಸಿದಂತೆ ವಾತಾವರಣ ಮೋಲ್ಡ್ ಬೀಜಕವನ್ನು ಎಣಿಕೆಗಳು. ಇಂಟ್. ಜೆ Biometeorol.೪೧: ೧೭–೨೧.

16. ರಾವತ್.ಎ ಮತ್ತು ಸಿಂಗ್ ಎ. ಬಿ .೨೦೦೦. ಭಾರತದಲ್ಲಿ: ಅಲರ್ಜಿ ಮತ್ತು ಅಸ್ತಮಾ ಅಡ್ವಾನ್ಸಸ್. ಎಡ್. ರಾಜೇಂದ್ರ ಪ್ರಸಾದ್, ಲಕ್ನೋ . ೨೩–೪೬.

17. ಸಿಂಗ್, ಎ. ಬಿ. ಮತ್ತು ಬಾಬು ಸಿ. ಆರ್. (೧೯೮೦) ದೆಹಳಿಯ ಪರಾಗ ಅಲರ್ಜಿ ಸ್ಟಡೀಸ್ ೧೧೩–೧೧೬: ಸಾಮಾನ್ಯ ಅಲರ್ಜಿ ಪರಾಗ ಅಲರ್ಜಿ ೩೫ ದೈನಿಕ ನಿಯತಕಾಲಿಕತೆ.

೧೮. ಸಿಂಗ್ ಎಸ್ ಮತ್ತು ಚೌಚಾನ್, ಎಸ್. ವಿ.ಎಸ್ (೧೯೯೯). ಆಗ್ರಾ ನರಗರದ ಭಾರತೀಯ ಆಫ್ ವಾಯು ಜೀವಶಾಸ್ತ್ರ ಅಧ್ಯಯನಗಳು. ಜೆ. ವಾಯುಜೀವಶಾಸ್ತ್ರ .೧೨ (೧ & ೨); ೧೪–೧೯.

ಜಲೀಯ ದ್ವಿ–ಹಂತದ ವಿಭಜನೆ ವಿಧಾನದಿಂದ ಕಿಣ್ವಗಳ ಸಂಸ್ಕರಣೆ ಹಾಗೂ ಶುದ್ಧೀಕರಣ

ಎಂ. ಸಿ. ಮಧುಸೂಧನ್[1], ಹೆಚ್. ಎಸ್. ಪ್ರಕಾಶ್[1] ಮತ್ತು ಕೆ. ಎಸ್. ಎಂ. ಎಸ್. ರಾಘವರಾವ್[2]
ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ–570006
ಆಹಾರ ತಂತ್ರಜ್ಞಾನ ವಿಭಾಗ, ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ, ಮೈಸೂರು, ಕರ್ನಾಟಕ–570020
ಇಮೇಲ್: mcmsudhan@gmail.com

ಜಲೀಯ ದ್ವಿ–ಹಂತದ ವಿಭಜನೆ ವಿಧಾನವನ್ನು ಬಹಳಷ್ಟು ಜೈವಿಕ ವಸ್ತುಗಳ ಸಂಸ್ಕರಣೆ ಹಾಗೂ ಶುದ್ಧೀಕರಣ ಕಾರ್ಯಕ್ಕಾಗಿ ಯಶಸ್ವಿಯಾಗಿ ಬಳಸಲಾಗಿದೆ. ಈ ವಿಧಾನದ ಉಪಯೋಗಗಳಲ್ಲಿ ಪ್ರಮುಖವಾದವುಗಳೆಂದರೆ ಹೆಚ್ಚಿನ ಸಾಮರ್ಥ್ಯ ಹೊಂದಿರುವ, ಅಧಿಕ ಇಳುವರಿ ನೀಡುವಂತಹ, ಕಡಿಮೆ ಶಕ್ತಿ ಮತ್ತು ಸಮಯವನ್ನು ಬಳಸುವುದರ ಜೊತೆಗೆ ಹೆಚ್ಚಿನ ಪ್ರಮಾಣದ ಉತ್ಪಾದನೆ ಮತ್ತು ನಿರಂತರ ಕಾರ್ಯನಿರ್ವಹಣೆಗಾಗಿ ಬಳಸಬಹುದಾಗಿದೆ. ಸಾಮಾನ್ಯವಾಗಿ ಜೈವಿಕ ವಸ್ತುಗಳ ಸಂಸ್ಕರಣೆಯಲ್ಲಿ ಉನ್ನತ ಶುದ್ಧೀಕರಣ ವಿಧಾನಗಳಾದ ಕ್ರೋಮಾಟೋಗ್ರಫಿ, ಎಲೆಕ್ಟ್ರೋಫೋರೆಸಿಸ್ ಮುಂತಾದವುಗಳು ಹೆಚ್ಚಾಗಿ ಬಳಕೆಯಾಗಿದ್ದು, ಬಹಳಷ್ಟು ವಿಧಾನಗಳನ್ನು ಒಂದರ ನಂತರ ಮತ್ತೊಂದರಂತೆ ಬಳಸಬೇಕಾಗಿರುವುದರಿಂದ ಬಹಳ ವೆಚ್ಚವಾಗುತ್ತದೆ ಮತ್ತು ಒಟ್ಟಾರೆ ಉತ್ಪಾದನೆ ಕುಂಠಿತವಾಗುತ್ತದೆ ಹಾಗಾಗಿ ಈ ವಿಧಾನವನ್ನು ಹೆಚ್ಚಿನ ಪ್ರಮಾಣದ ಸಂಸ್ಕರಣೆ ಹಾಗೂ ಶುದ್ಧೀಕರಣಕ್ಕಾಗಿ ಬಳಸಲಾಗುತ್ತಿದ್ದು ಉತ್ತಮ ಕಾರ್ಯನಿರ್ವಹಣೆಗೆ ಹೆಸರಾಗಿದೆ. ಕಳೆದ ಮೂರು ದಶಕಗಳಲ್ಲಿ

ಈ ವಿಧಾನವನ್ನು ಬಳಸಿಕೊಂಡು ಬಹಳಷ್ಟು ಜೈವಿಕ ವಸ್ತುಗಳನ್ನು ಮುಖ್ಯವಾಗಿ ನೈಸರ್ಗಿಕ ಬಣ್ಣಗಳು, ಕಿಣ್ವಗಳು, ಶರ್ಕರ ಪಿಷ್ಟಗಳು ಇತ್ಯಾದಿ. ಸಂಸ್ಕರಿಸುವ ವಿಧಾನಗಳನ್ನು ಯಶಸ್ವಿಯಾಗಿ ತೋರಿಸಲಾಗಿರುತ್ತದೆ. ಈ ಜಲೀಯ ದ್ವಿಹಂತದ ವಿಭಜನೆ ವಿಧಾನವನ್ನು ಬಳಸಿಕೊಂಡು ಆಲ್ಕೋಹಾಲ್ ಡಿಹೈಡ್ರೋಜಿನೇಸ್, ಇನ್ವರ್ಟೇಸ್, ಬೀಟಾ–ಗ್ಯಾಲಕ್ಟೋಸಿಡೇಸ್ ಮುಂತಾದ ಕೆಲವು ಕಿಣ್ವಗಳ ಸಂಸ್ಕರಣೆ ಮತ್ತು ಶುದ್ದೀಕರಣ ಕಾರ್ಯವನ್ನು ನಿದರ್ಶನಗಳೊಂದಿಗೆ ವಿವರವಾಗಿ ಚರ್ಚಿಸಲಾಗಿದೆ.

ಜಲೀಯ ದ್ವಿಹಂತದ ವಿಭಜನೆ (Aqueous two-phase extraction, ATPE) : ಜೈವಿಕ ವಸ್ತುಗಳ ಸಂಸ್ಕರಣೆ ಹಾಗೂ ಶುದ್ದೀಕರಣ ಪ್ರಕ್ರಿಯೆಯು ಒಂದು ಸೂಕ್ಷ್ಮ ವಿಧಾನವಾಗಿದ್ದು, ಆ ವಸ್ತುವಿನ ಜೈವಿಕ ಚಟುವಟಿಕೆಗಳನ್ನು ಉಳಿಸಿಕೊಳ್ಳುವುದು ಅತ್ಯಮೂಲ್ಯವಾಗಿರುತ್ತದೆ. ವಾಸ್ತವವಾಗಿ ಸಾವಯವ ದ್ರಾವಕಗಳು ಶುದ್ದೀಕರಣ ಕಾರ್ಯಕ್ಕೆ ಸಾಮಾನ್ಯವಾಗಿ ಬಳಕೆಯಾಗುತ್ತಿದ್ದು, ಇದರಲ್ಲಿ ಈ ಜೈವಿಕ ವಸ್ತುಗಳ ಕರಗುವ ಪ್ರಮಾಣ ಕಡಿಮೆ ಇರುತ್ತದೆ ಹಾಗೆಯೇ ಆ ವಸ್ತುಗಳು ನಾಶವಾಗುವ ಸಾಧ್ಯತೆಗಳು ಸಹ ಹೆಚ್ಚಾಗಿರುತ್ತದೆ. ಆದ್ದರಿಂದ ಜೈವಿಕ ವಸ್ತುಗಳ ಬೇರ್ಪಡಿಸುವಿಕೆ, ಶುದ್ದೀಕರಣ ಮತ್ತು ಕ್ರೋಡೀಕರಣಕ್ಕಾಗಿ ಒಂದು ಪರಿಣಾಮಕಾರಿ ವಿಧಾನದ ಅಗತ್ಯವಿದೆ. ಜಲೀಯ ದ್ವಿಹಂತದ ವಿಭಜನೆ (Aqueous two-phase extraction, ATPE), ಇಂತಹ ಒಂದು ವಿಧಾನವಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ನೀರಿನ ಅಂಶವನ್ನು ಒಳಗೊಂಡಿದ್ದು ಉತ್ತಮ ಜೈವಿಕ ಹೊಂದಾಣಿಕೆ ಇರುವಂಥದ್ದಾಗಿದೆ. ಹೆಚ್ಚಿನದಾಗಿ ಇದು ಹೆಚ್ಚಿನ ಸಾಮರ್ಥ್ಯ ಹೊಂದಿರುವ, ಅಧಿಕ ಇಳುವರಿ ನೀಡುವಂತಹ, ಕಡಿಮೆ ಶಕ್ತಿ ಮತ್ತು ಸಮಯವನ್ನು ಬಳಸುವುದರಿಂದ ಒಂದು ಉತ್ತಮ ಸಂಸ್ಕರಣ ವಿಧಾನವಾಗಿದೆ. ಇದಲ್ಲದೆ ಈ ವಿಧಾನವು ಹೆಚ್ಚಿನ ಪ್ರಮಾಣದ ಉತ್ಪಾದನೆ ಮತ್ತು ನಿರಂತರ ಕಾರ್ಯನಿರ್ವಹಣೆಗಾಗಿ ಬಳಸಬಹುದಾಗಿದೆ. ಇದು ಕಿಣ್ವಗಳು ಮತ್ತು ನೈಸರ್ಗಿಕ ಬಣ್ಣಗಳು ಸೇರಿದಂತೆ ಬಹಳಷ್ಟು ಜೀವಾಂಶಗಳನ್ನು ಸಂಸ್ಕರಿಸುವ ಶ್ರೇಷ್ಠ ಮತ್ತು ಬಹುಮುಖ ಕೌಶಲ್ಯವಾಗಿ ಗುರುತಿಸಲ್ಪಟ್ಟಿದೆ (Albertsson, 1971; Raghavarao *et al*., 1995; Patil and Raghavarao, 2007; Madhusudhan *et al*., 2011).

ಶುದ್ದೀಕರಿಸಿದ ಜೈವಿಕ ವಸ್ತುಗಳು ಉದಾಹರಣೆಗೆ ಕಿಣ್ವಗಳು, ಪ್ರೋಟೀನ್‌ಗಳು, ಅಮೈನೋ ಆಸಿಡ್, ನೈಸರ್ಗಿಕ ಬಣ್ಣಗಳು ಮುಂತಾದವುಗಳು ಬಹಳಷ್ಟು ಉಪಯೋಗಗಳನ್ನು ಹೊಂದಿರುತ್ತವೆ. ಈ ವಸ್ತುಗಳ ಶುದ್ದೀಕರಣ ಪ್ರಕ್ರಿಯೆಯು ಬಹಳಷ್ಟು ವಿಭಿನ್ನ ಹಂತಗಳಲ್ಲಿ ಸಂಸ್ಕರಿಸುವ ವಿಧಾನಗಳನ್ನು ಹೊಂದಿರುತ್ತದೆ. ಸಂಸ್ಕರಣೆಯು (Downstream processing) ಒಂದು ಅತಿಮುಖ್ಯವಾದ ವಿಭಾಗವಾಗಿದ್ದು, ಯಾವುದೇ ಒಂದು ವಸ್ತುವಿನ ಬೆಲೆಯು ಮುಖ್ಯವಾಗಿ ಅದರ ಸಂಸ್ಕರಣಾ ವೆಚ್ಚವನ್ನು ಅವಲಂಭಿಸಿರುತ್ತದೆ. ಸಂಸ್ಕರಣಾ ಹಂತಗಳಲ್ಲಿ ಮುಖ್ಯವಾಗಿ ಆ ವಸ್ತುವನ್ನು ಬೇರೆ ಇತರ ವಸ್ತುಗಳಿಂದ ಬೇರ್ಪಡಿಸಿ, ಶುದ್ದೀಕರಿಸಿ ಕೊನೆಯದಾಗಿ ಕ್ರೋಢಿಕರಣ ಪ್ರಕ್ರಿಯೆಯ ನಂತರ ಅದನ್ನು ಸರಿಯಾದ ವಿಧಾನಗಳಿಂದ ಒಣಗಿಸಿ, ಪುಡಿಯ ರೀತಿ ಶೇಖರಿಸಬೇಕಾಗುತ್ತದೆ ಇಲ್ಲವೆ ತೇವಾಂಶವನ್ನು ಕಡಿಮೆಮಾಡಿ ಅದನ್ನು ಸರಿಯಾದ ವಿಧಾನಗಳಿಂದ ಶೇಖರಿಸಬೇಕಾಗುತ್ತದೆ. ಈ ಸಂಸ್ಕರಣೆಯ ವಿವಿಧ ಹಂತಗಳಲ್ಲಿ ಆ ವಸ್ತುಗಳ ಜೈವಿಕ ಚಟುವಟಿಕೆಯನ್ನು ಉಳಿಸಿಕೊಳ್ಳುವುದು ತುಂಬಾ ಅತ್ಯಮೂಲ್ಯವಾಗಿರುತ್ತದೆ. ನಂತರ ಈ ವಸ್ತುಗಳ ಹೆಚ್ಚಿನ ಪ್ರಮಾಣದ ಉತ್ಪಾದನೆಗೆ ಅದರ ಕಚ್ಚಾವಸ್ತುಗಳು, ಸಂಸ್ಕರಣಾ ವಿಧಾನ, ಮಾನವ ಸಂಪನ್ಮೂಲ ಹಾಗೂ ಮಾರಾಟ ಬಹಳ ಮುಖ್ಯವಾದ ಅಂಶಗಳಾಗಿರುತ್ತದೆ (Kula *et al*., 1982). ಸಾಮಾನ್ಯವಾಗಿ ಉನ್ನತ ಶುದ್ದೀಕರಣ ವಿಧಾನಗಳಾದ ಕ್ರೋಮಾಟೋಗ್ರಫಿ, ಎಲೆಕ್ಟ್ರೋಫೋರೆಸಿಸ್ ಮುಂತಾದವುಗಳು ಜೈವಿಕ ವಸ್ತುಗಳ ಸಂಸ್ಕರಣೆಯಲ್ಲಿ ಹೆಚ್ಚಾಗಿ ಬಳಕೆಯಾಗುವ ವಿಧಾನಗಳಾಗಿದ್ದು, ಬಹಳಷ್ಟು ಸಂಸ್ಕರಣೆಗಳಲ್ಲಿ ಈ ವಿಧಾನಗಳನ್ನು ಒಂದರ ನಂತರ ಮತ್ತೊಂದರಂತೆ ಬಳಸಬೇಕಾಗಿರುವುದರಿಂದ ಬಹಳ ವೆಚ್ಚವಾಗುತ್ತದೆ ಮತ್ತು ಸಮಯವನ್ನು ತೆಗೆದುಕೊಳ್ಳುತ್ತದೆ. ಹಾಗೆಯೆ, ಸಾವಯವ ದ್ರಾವಕಗಳಲ್ಲಿ (organic solvents) ಜೈವಿಕ ವಸ್ತುಗಳ ಕರಗುವ ಪ್ರಮಾಣ (solubility) ಬಹಳಷ್ಟು ಕಡಿಮೆ ಇರುತ್ತವೆ, ಹಾಗಾಗಿ ಬೇರ್ಪಡಿಸುವಿಕೆಯಲ್ಲಿ ಇವುಗಳ ಬಳಕೆಯಿಂದ ಆ ವಸ್ತುಗಳು ನಾಶವಾಗುವ ಸಾಧ್ಯತೆಗಳು ಹೆಚ್ಚಾಗಿದ್ದು, ಪ್ರಮುಖವಾಗಿ ಉತ್ಪಾದನೆ ಕುಂಠಿತವಾಗುತ್ತದೆ. ಆದ್ದರಿಂದ ಜಲೀಯ ದ್ವಿಹಂತದ ವಿಭಜನೆಯಲ್ಲಿ ಬಳಸುವ ವಸ್ತುಗಳಲ್ಲಿ (ATPS, Aqueous two-phase System) ಹೆಚ್ಚಿನ ಪ್ರಮಾಣದಲ್ಲಿ ನೀರಿನ ಅಂಶ (80% ಕ್ಕಿಂತ ಹೆಚ್ಚು) ಇರುವುದರಿಂದ ಜೈವಿಕ ವಸ್ತುಗಳ ಕರಗುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಇದರಿಂದ ಅವುಗಳು ಹಾಳಾಗುವ ಸಾಧ್ಯತೆಗಳು ಬಹಳ ಕಡಿಮೆ ಇರುತ್ತದೆ. ಇದಕ್ಕಿಂತ ಮುಖ್ಯವಾಗಿ ಬೇರ್ಪಡಿಸುವಿಕೆ (Isolation/ separation), ಶುದ್ದೀಕರಣ (purification) ಮತ್ತು ಕ್ರೊಢೀಕರಣ (concentration) ಕಾರ್ಯಗಳು ಒಂದೇ ಹಂತದಲ್ಲಿ ನಡೆಯುವುದರಿಂದ, ಜೈವಿಕ ವಸ್ತುಗಳ ಸಂಸ್ಕರಣೆಗೆ ಒಂದು ಪರಿಣಾಮಕಾರಿಯಾದ ಒಂದು ವಿಧಾನವಾಗಿರುತ್ತದೆ ಮತ್ತು ಸಾವಯವ ದ್ರಾವಕಗಳ ಬಳಕೆಯನ್ನು ಕಡಿಮೆ ಮಾಡುವುದರಿಂದಾಗಿ ಇದೊಂದು ಪರಿಸರ ಸ್ನೇಹಿ ವಿಧಾನವಾಗಿರುತ್ತದೆ. ಈ ವಿಧಾನವನ್ನು ಬಳಸಿಕೊಂಡು ಬಹಳಷ್ಟು ಜೀವಾಂಶಗಳನ್ನು ಮುಖ್ಯವಾಗಿ ಕೈಗಾರಿಕೆಗಳಿಗೆ ಉಪಯುಕ್ತ ಕಿಣ್ವಗಳು, ನೈಸರ್ಗಿಕ ಬಣ್ಣಗಳು ಹಾಗೂ ಪ್ರೋಟೀನ್‌ಗಳನ್ನು ಸಂಸ್ಕರಿಸಲಾಗಿದ್ದು, ಉತ್ತಮ ಕಾರ್ಯನಿರ್ವಹಣೆಗೆ ಹೆಸರಾಗಿದೆ (Chethana *et al.,* 2007, Madhusudhan and Raghavarao, 2013).

ಇದೊಂದು ಎರಡು ಹಂತಗಳು ಕೂಡ ನೀರಿನಿಂದಲೇ ಕೂಡಿರುವಂತಹ ಬೇರ್ಪಡಿಸುವಿಕೆಯ (extraction/separation) ವಿಧಾನವಾಗಿದೆ. ನೀರಿನಲ್ಲಿ ಕರಗುವ ಎರಡು ಪಾಲೀಮರ್ (polymer) ಅಥವಾ ಒಂದು ಪಾಲೀಮರ್ ಮತ್ತು ಒಂದು ಅಜೈವಿಕ ಉಪ್ಪನ್ನು (Inorganic salt) ನಿಗದಿತ ಪ್ರಮಾಣದಲ್ಲಿ ಸೇರಿಸಿ, ಚೆನ್ನಾಗಿ ಕಲಸಿ ಬೇರ್ಪಡಿಸಲು ಅನುವು ಮಾಡಿಕೊಟ್ಟಾಗ 2 ವಿಭಾಗಗಳಾಗಿ (two-phase) ಬೇರ್ಪಡುತ್ತವೆ. ಈ ವಿಧಾನದಲ್ಲಿ ಜೈವಿಕ ವಸ್ತುಗಳನ್ನು ಸಂಸ್ಕರಿಸಲು ಹೊರಟಾಗ ಆ ವಸ್ತುಗಳ ಹೊರ ಮೇಲ್ಮೈ ಗುಣಲಕ್ಷಣಗಳು, ವಿಭಜನೆಗೆ ಬಳಸುವ ವಸ್ತುಗಳು (ಪಾಲೀಮರ್ ಮತ್ತು ಅಜೈವಿಕ ಉಪ್ಪಿನ ವಿಧ ಮತ್ತು ಪ್ರಮಾಣ), ಪಿ.ಎಚ್ (pH), ಪ್ರೋಟಿನ್ ಪ್ರಮಾಣ ಮತ್ತು ಇತರೆ ಭೌತಿಕ ಅಂಶಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಈ ವಿಧಾನದ ಬೇರ್ಪಡಿಸುವಿಕೆಗೆ ಸೂಕ್ತ ಅಂಶಗಳನ್ನು ಪರಿಗಣಿಸುವುದು ಬಹು ಮುಖ್ಯ, ಹಾಗಾಗಿ ಅಂತಹ ಅಂಶಗಳನ್ನು ಗುರುತಿಸಿ ನಂತರ ಆ ವಿಧಾನವನ್ನು ಜೀವಾಣುಗಳ ಸಂಸ್ಕರಣೆಗೆ ಬಳಸಲಾಗುತ್ತದೆ (Albertsson, 1986). ಒಂದು ಸಣ್ಣ ಬದಲಾವಣೆಯೂ ಕೂಡ ಈ ಬೇರ್ಪಡಿಸುವಿಕೆಯಲ್ಲಿ ಮುಖ್ಯವಾಗಿರುತ್ತದೆ. ಕಿಣ್ವಗಳು ಹಾಗೂ ಬಣ್ಣಗಳು ಬಹುಮುಖ್ಯವಾಗಿ ಈ ವಿಧಾನದಲ್ಲಿ ಸಂಸ್ಕರಣೆಗೊಳ್ಳುವ ವಸ್ತುಗಳಾಗಿದ್ದು ಇದಲ್ಲದೆ, ಅನೇಕ ಜೈವಿಕ ತಂತ್ರಜ್ಞಾನದಿಂದ ಉತ್ಪಾದನೆಗೊಂಡ ಪ್ರೋಟೀನ್‌ಗಳು, ಹಾಗೆಯೇ ಶರ್ಕರ ಪಿಷ್ಟಗಳು,

ವೈರಸ್‌ಗಳು, ಜೀವಕೋಶಗಳು ಮತ್ತು ಅವುಗಳ ಇತರ ಉತ್ಪನ್ನಗಳು ಸಹ ಈ ವಿಧಾನದಿಂದ ಸಂಸ್ಕರಿಸಲ್ಪಟ್ಟಿದ್ದು ಉದ್ಯಮಗಳಿಗೂ ಸಹಕಾರಿಯಾಗಿದ್ದು ಮಾರುಕಟ್ಟೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ (Patil *et al.*, 2008; Madhusudhan *et al.*, 2011).

ಕಿಣ್ವಗಳು (Enzymes): ಬಹಳಷ್ಟು ಹಿಂದಿನಿಂದಲೂ ಕಿಣ್ವಗಳು ಆಹಾರ ಸಂಸ್ಕರಣೆ, ಜವಳಿ, ಚರ್ಮ, ವೈದ್ಯಕೀಯ ಹಾಗೂ ಇತರೆ ಉದ್ಯಮಗಳಲ್ಲಿ ಬಳಸಲಾಗುತ್ತದೆ. ಇಲ್ಲಿ ಸಂಪೂರ್ಣವಾಗಿ ಅಥವ ಒಂದು ಹಂತದವರೆಗೆ ಶುದ್ಧೀಕರಣಗೊಂಡ ಕಿಣ್ವಗಳು ಹೆಚ್ಚಾಗಿ ಬಳಕೆಯಾಗುತ್ತಿದ್ದು ಅವುಗಳ ಸಂಸ್ಕರಣೆಗೆ ಹೆಚ್ಚಿನ ಮಹತ್ವ ಇರುತ್ತದೆ. ಹಾಗಾಗಿ ಇವುಗಳ ಉತ್ಪಾದನೆಗೆ ಹೆಚ್ಚಿನ ಅಗತ್ಯತೆ ಕಂಡುಬರುತ್ತಿದೆ. ಈ ನಿಟ್ಟಿನಲ್ಲಿ ಕಿಣ್ವಗಳ ಶುದ್ಧೀಕರಣ ಒಂದು ಬಹಳ ಮುಖ್ಯ ಕಾರ್ಯವಾಗಿದೆ. ಕಿಣ್ವಗಳು ಸಾಮಾನ್ಯವಾಗಿ ಎಲ್ಲಾ ಜೀವಿಗಳಲ್ಲು ಕಂಡುಬರುತ್ತವೆ, ಮುಖ್ಯವಾಗಿ ಸೂಕ್ಷ್ಮಾಣು ಜೀವಿಗಳು, ಸಸ್ಯಗಳು ಮತ್ತು ಪ್ರಾಣಿಗಳಲ್ಲಿ ಇವುಗಳು ಹೆಚ್ಚಾಗಿ ಕಂಡುಬರುವುದರಿಂದ ಇವುಗಳನ್ನು ಉನ್ನತ ಮಟ್ಟದಲ್ಲಿ ಶುದ್ಧೀಕರಿಸಲಾಗುತ್ತಿದೆ. ಈ ಕಿಣ್ವಗಳನ್ನು ಶುದ್ಧೀಕರಿಸಲು ಬಹಳ ವಿಧಾನಗಳನ್ನು ಬಳಸಲಾಗುತ್ತಿದ್ದು ಹೆಚ್ಚಾಗಿ ಕ್ರೋಮಾಟೋಗ್ರಫಿ, ಎಲೆಕ್ಟ್ರೋಫೋರೆಸಿಸ್, ಪ್ರಸಿಪಿಟೇಷನ್ (precipitation) ಮುಂತಾದ ವಿಧಾನಗಳನ್ನು ಒಂದರ ನಂತರ ಮತ್ತೊಂದರಂತೆ ಜೋಡಿಸಿ ಶುದ್ಧೀಕರಿಸಲಾಗುತ್ತಿದ್ದು ಉತ್ಪಾದನಾ ವೆಚ್ಚವು ಸಹ ಹೆಚ್ಚಾಗಿರುತ್ತದೆ. ಜಲೀಯ ದ್ವಿಹಂತದ ವಿಭಜನೆ ವಿಧಾನವು ಒಂದು ಕಡಿಮೆ ವೆಚ್ಚದ ಪರಿಸರ ಸ್ನೇಹಿ ವಿಧಾನವಾಗಿ ಕಂಡುಬರುತ್ತದೆ. ಬಹಳಷ್ಟು ಪ್ರಯೋಗಗಳು ಯಶಸ್ವಿಯಾಗಿದ್ದು ಕೆಲವು ಸಂಶೋಧನಾ ಲೇಖನಗಳು ಮತ್ತು ಪೇಟೆಂಟ್‌ಗಳು ಸಹ ಹೊರಬಂದಿದ್ದು ಈ ವಿಧಾನದ ಯಶಸ್ವಿ ಗಾಥೆಯನ್ನು ತೋರಿಸುತ್ತದೆ. ಜಲೀಯ ದ್ವಿಹಂತದ ವಿಭಜನೆ ವಿಧಾನದಿಂದ ಕಿಣ್ವಗಳನ್ನು ಸಂಸ್ಕರಿಸಿದ ಕೆಲವು ಉದಾಹರಣೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದ್ದು (**ಕೋಷ್ಟಕ 1**), ಇವುಗಳಲ್ಲಿ ಕೆಲವುಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ.

ಬ್ರೊಮೆಲೀನ್ (Bromelain, E.C. 3.4.22.32)

ಔಷಧ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಸ್ಯಜನ್ಯ ಪ್ರೋಟಿಯೇಸ್‌ಗಳು ಬಹಳಷ್ಟು ಮುಖ್ಯ ಪಾತ್ರ ವಹಿಸುತ್ತಿವೆ. ಇದಕ್ಕೆ ಮುಖ್ಯ ಕಾರಣಗಳೆಂದರೆ, ಇವುಗಳ ಅಧಿಕ ಉಷ್ಣ ಹಾಗೂ ಕ್ಷಾರ ಸಹಿಷ್ಣುತೆ ಬ್ರೊಮೆಲೀನ್ ಒಂದು ಪ್ರೋಟೀನನ್ನು ಕತ್ತರಿಸಲು ಬಳಸಲ್ಪಡುವಂತಹ ಕಿಣ್ವ ಆಗಿದ್ದು, ಮುಖ್ಯವಾಗಿ ಅನಾನಸ್ ಹಣ್ಣು ಹಾಗೂ ಕಾಂಡದಲ್ಲಿ ಕಂಡುಬರುತ್ತದೆ. ಇದನ್ನು ಮುಖ್ಯವಾಗಿ ಆಹಾರ ಸಂಸ್ಕರಣೆಯಲ್ಲಿ (ಮಾಂಸವನ್ನು ಮೆದು ಮಾಡಲು, ಧಾನ್ಯ ಪ್ರೋಟೀನ್‌ಗಳನ್ನು ಕರಗಿಸಲು, ಬೇಕರಿ ಉತ್ಪನ್ನಗಳಲ್ಲಿ, ಬಿಯರ್ ಸಂಸ್ಕರಣೆಯಲ್ಲಿ), ಚರ್ಮ ಹದಮಾಡಲು ಹಾಗೂ ಜವಳಿ ಉದ್ಯಮಗಳಲ್ಲಿ ಹೆಚ್ಚಾಗಿ ಬಳಸಲ್ಪಡುತ್ತಿದೆ.

ಈ ಕಿಣ್ವವನ್ನು ಸಂಸ್ಕರಿಸಲು (ಶುದ್ಧೀಕರಣ ಮತ್ತು ಕ್ರೋಢೀಕರಣ) ಬಹಳಷ್ಟು ವಿಧಾನಗಳು ಲಭ್ಯವಿದ್ದು, ಬಹಳಷ್ಟು ವಿಧಾನಗಳು ಬಹುಹಂತದ ಶುದ್ಧೀಕರಣ ಕಾರ್ಯಗಳನ್ನು ಒಳಗೊಂಡಿದ್ದು, ಸಮಯ ಮತ್ತು ಹಣದ ಅಗತ್ಯ ಹೆಚ್ಚು ಮತ್ತು ಇಳುವರಿ ಕಡಿಮೆ. ಹಾಗಾಗಿ ಈ ಜಲೀಯ ದ್ವಿಹಂತದ ವಿಭಜನೆ ಬಹಳಷ್ಟು ಪ್ರಯೋಜನಕಾರಿಯಾಗಿದ್ದು, ಒಂದೇ ಹಂತದಲ್ಲಿ ಶುದ್ಧೀಕರಣ ಮತ್ತು ಕ್ರೋಢೀಕರಣ ಸಾಧ್ಯವಿದ್ದು ಸಂಪೂರ್ಣವಾಗಿ ಈ ಕಿಣ್ವವನ್ನು ಬೇರ್ಪಡಿಸಬಹುದಾಗಿದೆ. ದ್ವಿಹಂತದ ವಿಭಜನೆಯಲ್ಲಿ ಬ್ರೊಮೆಲೀನ್ ಸಂಸ್ಕರಣೆಯನ್ನು ಯಶಸ್ವಿಯಾಗಿ ತೋರಿಸಲಾಗಿದೆ. ವಿವಿಧ ಹಂತಗಳನ್ನು ಮುಖ್ಯವಾಗಿ ಪಾಲಿಮರ್‌ನ ವಿಧ ಮತ್ತು ಪ್ರಮಾಣ, ಅಜೈವಿಕ ಉಪ್ಪಿನ ವಿಧ ಹಾಗೂ ಪ್ರಮಾಣ, pH ಮತ್ತಿತರ ಅಂಶಗಳನ್ನು ಸೂಕ್ಷ್ಮ ಅಂಶಗಳನ್ನು ಸಂಪೂರ್ಣವಾಗಿ ಅವಲೋಕಿಸಿ, ಒಂದು ಅತ್ಯುನ್ನತ ಪ್ರಮಾಣವನ್ನು ಕಂಡುಹಿಡಿಯಲಾಗಿದೆ. ಅದರಂತೆ, 18% PEG-1500 (ಪಾಲಿ-ಎಥಿಲೀನ್‌ಗ್ಲೈಕೋಲ್) ಮತ್ತು 14% ಪೊಟಾಸಿಯಂ ಫಾಸ್ಫೇಟ್ ಅತ್ಯುತ್ತಮ ಪ್ರಮಾಣವಾಗಿದ್ದು, ಈ ಕಿಣ್ವವನ್ನು 4 ಪಟ್ಟು ಶುದ್ಧೀಕರಿಸಿ ತೋರಿಸಲಾಗಿದೆ (Babu *et al.*, 2008).

ಕೋಷ್ಟಕ 1: ಜಲೀಯ ದ್ವಿಹಂತದ ವಿಭಜನೆ ವಿಧಾನದಿಂದ ಸಂಸ್ಕರಿಸಿದ ಕೆಲವು ಕಿಣ್ವಗಳು

ಕಿಣ್ವಗಳು	ಮೂಲ ವಸ್ತು	ಆಧಾರ
ಬ್ರೊಮೆಲೀನ್ (Bromelain)	ಅನಾನಸ್ (pine apple)	Babu *et al.*, 2008
ಆಲ್ಕೋಹಾಲ್ ಡಿಹೈಡ್ರೋಜಿನೇಸ್, (Alcohol dehydrogenase)	ಬೇಕರ್ಸ್ ಈಸ್ಟ (baker's yeast)	Madhusudhan *et al.*, 2008
ಇನ್ವರ್ಟೇಸ್ (Inverstase)	ಬೇಕರ್ಸ್ ಈಸ್ಟ (baker's yeast)	Madhusudhan and Raghavarao, 2011
ಲಿಪಾಕ್ಸಿಗಿನೇಸ್ (Lipoxigenase)	ಸೋಯಾಬೀನ್ (soybeans)	Lakshmi *et al.*, 2009
ಪೆರಾಕ್ಸಿಡೇಸ್ (Peroxidase)	ಐಪೋಮಿಯ ಪಾಮೆಟ್ಟ *(Ipomoea palmetta)*	Srinivas *et al.*, 2002
ಬೀಟಾ-ಗ್ಯಾಲಕ್ಟೋಸಿಡೇಸ್ (b-glucosidase)	ಬಾರ್ಲಿ (Barly)	Hemavathi and Raghavarao, 2011
ಅಮೈಲೊಗ್ಲುಕೋಸಿಡೇಸ್ (Amyloglucosidase)	ಆಸ್ಪರಜಿಲ್ಲಸ್ ನೈಗರ್ *(Aspergillus niger)*	Tanuja *et al.*, 2000
ಪೆಪೇನ್ (Papain)	ಪಪ್ಪಾಯಿ	Nitsawang *et al.*, 2006
ಕೈಟೀನೇಸ್ (Chitinase)	ನ್ಯುರೋಸ್ಪೊರಾ ಕ್ರಾಸ್ಸಾ, ಕೋಸು ಮತ್ತು ಫಫ್ ಬಾಲ್ಸ್ (*Neurospora crassa*, cabbage, and puffballs)	Teotia *et al.*, 2004
ಪೆಪ್ಸೀನ್ (Pepsin)	ಕರುವಿನ ಹೊಟ್ಟೆ (bovine stomach)	Imelio *et al.*, 2008; Boeris *et al.*, 2009
ಲೈಪೇಸ್ (Lipase)	ಬುರ್ಕೊಲ್ಡೇರಿಯ ಸ್ಯುಡೋಮಲೆಯ್ *(Burkolderia Pseudomallei)*	Ooi *et al.*, 2009
ಲೈಸೋಜೈಮ್ (Lysozyme)	ಮೊಟ್ಟೆ	Dembczynski *et al.*,2010

ಆಲ್ಕೋಹಾಲ್ ಡಿಹೈಡ್ರೋಜಿನೇಸ್ (Alcohol dehydrogenase, E.C. 1.1.1.1): ಆಲ್ಕೋಹಾಲ್ ಡಿಹೈಡ್ರೋಜಿನೇಸ್ ಕಿಣ್ವವು ಸಾಮಾನ್ಯವಾಗಿ ಎಲ್ಲಾ ಸೂಕ್ಷ್ಮಾಣುಜೀವಿಗಳಲ್ಲಿ ಮತ್ತು ಪ್ರಾಣಿಗಳ ಪಿತ್ತಜನಕಾಂಗದಲ್ಲಿ ಕಂಡುಬರುತ್ತದೆ. ಇದು ಬಹಳ ಮುಖ್ಯವಾಗಿ ಆಲ್ಕೋಹಲ್‌ನ್ನು ಉಪಯೋಗಿಸಿಕೊಳ್ಳುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಶುದ್ದೀಕರಿಸಿದ ಈ ಕಿಣ್ವವನ್ನು ಬಹುಮುಖ್ಯವಾಗಿ ಜೀವರಸಾಯನಿಕ ಪ್ರಯೋಗಗಳಲ್ಲಿ, ಅಪರಾಧ ಪತ್ತೆ ವಿಜ್ಞಾನ ಪ್ರಯೋಗಗಳಲ್ಲಿ ಆಲ್ಕೋಹಾಲ್, ಎಥಿಲೀನ್‌ಗ್ಲೈಕೋಲ್, ಎನ್‌ಎಡಿ (NAD$^+$), ಆಲ್ಡಿಹೈಡ್ ಮುಂತಾದವುಗಳನ್ನು ಪತ್ತೆ ಮಾಡಲು ಹಾಗೂ ಬಯೋಸೆನ್ಸಾರ್‌ಗಳಲ್ಲಿ ಬಳಸಲಾಗುತ್ತದೆ.

ಸಾಮಾನ್ಯವಾಗಿ ಬೇಕರ್ಸ್ ಈಸ್ಟ್ (baker's yeast) ನಿಂದ ಈ ಕಿಣ್ವವನ್ನು ಸಂಸ್ಕರಿಸಲಾಗಿದ್ದು ಬಹಳ ಲೇಖನಗಳು ಲಭ್ಯವಿರುತ್ತದೆ. ಮಧುಸೂಧನ್ ಮತ್ತಿತರು ಈ ಕಿಣ್ವವನ್ನು ಜಲೀಯ ದ್ವಿಹಂತದ ವಿಭಜನೆ ವಿಧಾನದಿಂದ ಸಂಸ್ಕರಿಸಿದ್ದು, ಈ ವಿಧಾನದಲ್ಲಿ ಮುಖ್ಯವಾದ ಅಂಶಗಳ ಬಗೆಗೆ ವಿಸ್ತಾರವಾದ ಸಂಶೋಧನೆ ಕೈಗೊಂಡಿದ್ದು, PEG-20,000 ಮತ್ತು ಪೊಟಾಸಿಯಂ ಫಾಸ್ಫೇಟ್‌ಗಳನ್ನು ಒಳಗೊಂಡ ಒಂದು ಹಂತ ಅತಿ ಹೆಚ್ಚಿನ ಆಂದರೆ 6.6 ಪಟ್ಟು ಹೆಚ್ಚಿನ ಶುದ್ದೀಕರಣವನ್ನು ಹಾಗೂ ಶೇ. 90% ಅಷ್ಟು ಕಿಣ್ವವನ್ನು ಕಚ್ಚಾಸಾರದಿಂದ (crude extract) ಹೊರತೆಗೆಯಲು ಯಶಸ್ವಿಯಾಗಿರುತ್ತಾರೆ. ಈ ಸಂಶೋಧನೆಯಲ್ಲಿ ವಿಭಿನ್ನ PEG ಗಳನ್ನು (1500-20,000) ಮತ್ತು ಜೈವಿಕ ಉಪ್ಪಿನ ವಿಭಿನ್ನ ಪ್ರಮಾಣಗಳನ್ನು ಬಳಸಿ, ಈ ಹಂತದಲ್ಲಿ ವಿವಿಧ pH ಹಾಗೂ ಹಂತಗಳ ಪ್ರಮಾಣ (volume ratio) ಗಳನ್ನು ಪಡೆಯಲಾಗಿದೆ. ಈ ವಿಧಾನದಿಂದ ಪಡೆದ ಕಿಣ್ವದ ಪ್ರಮಾಣ ಇತರೆ ಉನ್ನತ ಶುದ್ದೀಕರಣ ವಿಧಾನಗಳಿಗಿಂತ ಹೆಚ್ಚಿನ ಇಳುವರಿ ಮತ್ತು ಶುದ್ಧತೆಯನ್ನು ಪಡೆದ ಬಗೆಗೆ ದಾಖಲಾಗಿದೆ (Madhusudhan *et al.*, 2008).

ಬೀಟಾ-ಗ್ಯಾಲಕ್ಟೋಸಿಡೇಸ್ (β-glucosidase, E.C. 3.2.1.21) ಬೀಟಾ ಗ್ಲುಕೋಸಿಡೇಸ್ ಕಿಣ್ವವು ಮುಖ್ಯವಾಗಿ ಆಹಾರ ಉದ್ದಿಮೆಗಳಲ್ಲಿ ಉಪೊಯೋಗಿಸಲ್ಪಡುತ್ತದೆ. ಅವುಗಳಲ್ಲಿ ಪ್ರಮುಖವಾದವೆಂದರೆ ಸೆಲ್ಯುಲೋಸ್ ಹೊಂದಿದ ತ್ಯಾಜ್ಯವಸ್ತುಗಳಿಂದ ಗ್ಲುಕೋಸ್ ಉತ್ಪಾದಿಸುವುದು. ಮತ್ತು ಜೈವಿಕ ಇಂಧನ ತಯಾರಿಕೆ. ಈ ಕಿಣ್ವವು ಸೆಲ್ಯುಲೋಸ್ ಮತ್ತು ಲಿಗ್ನೊಸೆಲ್ಯುಲೋಸ್‌ನಂತಹ ಪಾಲಿಸ್ಯಾಕರೈಡ್‌ಗಳನ್ನು ವಿಭಜನೆಗೊಳಿಸಿ ಅವುಗಳನ್ನು ಸರಳವಾದ ಮಾನೋಸ್ಯಾಕರೈಡ್‌ಗಳಾಗಿ ಪರಿವರ್ತಿಸಲು ಸಹಕಾರಿಯಾಗಿದೆ.

ಈ ಕಿಣ್ವದ ಶುದ್ದೀಕರಣವನ್ನು ಕಡಿಮೆ ವೆಚ್ಚದ ಮತ್ತು ಅಧಿಕ ಇಳುವರಿ ನೀಡುವಂತಹ ATPE ವಿಧಾನವನ್ನು ಬಳಸಿ ತೋರಿಸಲಾಗಿದೆ.. ವಿವಿಧ ಸೂಕ್ಷ್ಮ ಅಂಶಗಳು ಶುದ್ಧತೆಯಲ್ಲಿ ಮೂಲ ಕಾರಣಗಳಾಗಿರುವುದರಿಂದ ಅವುಗಳ ಪರಿಣಾಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಲಾಗಿದ್ದು ಒಂದು ಉತ್ಕೃಷ್ಟ ಪ್ರಮಾಣವನ್ನು ಕಂಡುಹಿಡಿಯಲಾಗಿದೆ. ಶೇ. 14% ರಷ್ಟು PEG-1500 ಮತ್ತು 13% ಅಮೋನಿಯಂ ಸಲ್ಫೇಟ್ ಒಳಗೊಂಡ ATPS, ಅನ್ನು ಬಳಸಿ ಬಾರ್ಲಿಯ ಕಚ್ಚಾಸಾರದಿಂದ (crude extract of barley) ಶೇ. 98.26% ಅಷ್ಟು ಕಿಣ್ವವನ್ನು ಪಡೆಯಬಹುದಾಗಿದೆ. ಮತ್ತು ಈ ಪ್ರಮಾಣದಿಂದ ಅದರ ಶುದ್ಧತೆಯ 2.1 ರಷ್ಟು ಹೆಚ್ಚಾಗಿರುತ್ತದೆ. ಹಾಗೆಯೇ ಎರಡನೇ ಹಂತದ ಸಂಸ್ಕರಣೆಯಿಂದ 7 ಶುದ್ಧತೆಯ ಪ್ರಮಾಣವನ್ನು 4 ಪಟ್ಟು ಹೆಚ್ಚಾಗಿ ಪಡೆಯಬಹುದಾಗಿದೆ (Hemavathi and Raghavarao, 2011).

ಲಿಪಾಕ್ಸಿಜಿನೇಸ್ (Lipoxigenase, LOX, E.C. 1.13.11.12 : ಲಿಪಾಕ್ಸಿಜಿನೇಸ್ ಕಿಣ್ವವು ಕೊಬ್ಬಿನ ವಿಭಜನೆಗೆ ಕಾರಣವಾಗಿದ್ದು ಆದರಿಂದ ಉತ್ಪಾದಿಸಲ್ಪಡುವಂತಹ ಹೈಡ್ರೋಪೆರಾಕ್ಸೈಡ್ ಡೆರಿವೆಟಿವ್‌ಗಳು ಮುಖ್ಯವಾಗಿ ಸಾಮಾನು, ಬಣ್ಣಗಳು, ಸೋಪಿನ ಮುಡಿ, ಅಂಟು, ಪ್ಲಾಸ್ಟಿಕ್ ಉತ್ಪಾದನೆ ಮುಂತಾದ ಕೈಗಾರಿಕೆಗಳಲ್ಲಿ ಬಳಸಲ್ಪಡುತ್ತದೆ. ಇದಲ್ಲದೆ ಈ ಕಿಣ್ವವನ್ನು ಆಹಾರ ಉದ್ದಿಮೆಯಲ್ಲಿಯೂ ಗಣನೀಯವಾಗಿ ಬಳಸಲಾಗುತ್ತದೆ. (ಬ್ರೆಡ್, ಸುಗಂಧ ದ್ರವ್ಯ ತಯಾರಿಕೆ ಇತ್ಯಾದಿ).

ಸೋಯಾಬೀನ್‌ಗಳಲ್ಲಿ ಈ ಕಿಣ್ವವು ಅತಿ ಹೆಚ್ಚಾಗಿ ಕಂಡುಬರುತ್ತದೆ. ಈ ಕಿಣ್ವವನ್ನು ಸಂಸ್ಕರಿಸಲು ಬಹಳಷ್ಟು ವಿಧಾನಗಳನ್ನು ಬಳಸಲಾಗಿದ್ದು, ATPE ಅವುಗಳಲ್ಲಿ ಒಂದು ಮತ್ತು ಇದು ಅತಿಕಡಿಮೆ ಸಮಯದಲ್ಲಿ ಹೆಚ್ಚಿನ ಇಳುವರಿ ನೀಡುವಂತದ್ದಾಗಿದೆ. ವಿವಿಧ ಸೂಕ್ಷ್ಮ ಅಂಶಗಳ ಪರಿಣಾಮವನ್ನು ಪರಿಗಣಿಸಿ ಒಂದು ಉತ್ತಮ ಪ್ರಮಾಣವನ್ನು ಸಂಶೋಧಿಸಲಾಗಿದ್ದು, ಅದರಂತೆ ಸೋಯಾಬೀನ್ ಕಚ್ಚಾಸಾರವನ್ನು ಜಲೀಯ ದ್ವಿ-ಹಂತದ ವಿಭಜನೆಗೆ ಒಳಪಡಿಸಿ ಸಂಪೂರ್ಣ ಇಳುವರಿಯೊಂದಿಗೆ 4.38 ಪಟ್ಟು ಹೆಚ್ಚಿನ ಶುದ್ದೀಕರಣವನ್ನು ಪಡೆಯಲಾಗಿದೆ. ಈ ಕಾರ್ಯಕ್ಕಾಗಿ, PEG-6000 ಮತ್ತು ಅಮೋನಿಯಂ ಸಲ್ಫೇಟ್ ಅನ್ನು ಬಳಸಲಾಗಿದ್ದು ಈ ವಿಭಜನೆಗೆ ಒಳಪಡಿಸುವ ಮುಂಚೆ ಪ್ರಿಸಿಪಿಟೇಷನ್ ಮಾಡಲಾಗಿದೆ (Lakshmi *et al.*, 2009).

ಇನ್ವರ್ಟೇಸ್ (Inverstase, E.C. 3.2.1.26) : ಇನ್ವರ್ಟೇಸ್ ಕಿಣ್ವವು ಬಹಳ ಮುಖ್ಯವಾಗಿ ಆಹಾರ ಉದ್ದಿಮೆಗಳಲ್ಲಿ ಬಳಸಲ್ಪಡುತ್ತದೆ. ಇದು ಸುಕ್ರೋಸ್ ಅನ್ನು ಗ್ಲುಕೋಸ್ ಮತ್ತು ಫ್ರಕ್ಟೋಸ್ ಆಗಿ ವಿಭಜಿಸುವುದರಿಂದಾಗಿ, ಇದನ್ನು ಪ್ರಮುಖವಾಗಿ ಬೇಕರಿ ಉತ್ಪನ್ನಗಳಲ್ಲಿ ಬಳಸಲಾಗುತ್ತದೆ. ಕೃತಕ ಜೇನುತುಪ್ಪ ತಯಾರಿಕೆಯಲ್ಲಿ, ಹಾಲಿನ ಉತ್ಪನ್ನಗಳಲ್ಲಿ, ಪಾನೀಯಗಳಲ್ಲಿ, ಸಿಹಿ ತಿಂಡಿ ತಯಾರಿಕೆಯಲ್ಲಿ ಇದು ಬಳಕೆಯಲ್ಲಿದೆ. ಇದಲ್ಲದೆ, ಈ ಕಿಣ್ವವನ್ನು ಸೌಂದರ್ಯವರ್ಧಕ, ಔಷಧ ಹಾಗೂ ಕಾಗದ ತಯಾರಿಕೆಯಲ್ಲಿಯೂ ಬಳಸಲ್ಪಡುತ್ತದೆ. ಈ ಕಿಣ್ವವು ಸುಕ್ರೋಸ್ ಅನ್ನು ಸಮಪ್ರಮಾಣದ ಗ್ಲುಕೋಸ್ ಮತ್ತು ಫ್ರಕ್ಟೋಸ್ ಮಿಶ್ರಣವನ್ನಾಗಿ ಪರಿವರ್ತಿಸಲು ಬಳಸಲಾಗುತ್ತದೆ. ಇದು ಶೇ. 100 ರಷ್ಟು ಪರಿವರ್ತನಾ ಸಾಮರ್ಥ್ಯವನ್ನು ಹೊಂದಿರುವುದರಿಂದಾಗಿ ಸಾಮಾನ್ಯ ಬಳಕೆಯಲ್ಲಿರುವಂತಹ ಆಸಿಡ್ ಹೇಡ್ರಾಲಿಸಿಸ್‌ಗೆ (ಕಂದು ಬಣ್ಣದ ಉತ್ಪನ್ನ ಮತ್ತು ಕಡಿಮೆ ಸಾಮರ್ಥ್ಯ) ಪರ್ಯಾಯವಾಗಿ ಬಳಸಬಹುದಾಗಿದೆ.

ಬಹಳಷ್ಟು ಸೂಕ್ಷ್ಮಾನು ಜೀವಿಗಳು ಮತ್ತು ಸಸ್ಯಗಳಿಂದ ಈ ಕಿಣ್ವವನ್ನು ಸಂಸ್ಕರಿಸಬಹುದಾಗಿದೆ. ಬೇಕರ್ಸ್ ಈಸ್ಟ್ ನಿಂದ ಇನ್ವರ್ಟೇಸ್ ಅನ್ನು ATPE ವಿಧಾನದಿಂದ ಶುದ್ದೀಕರಿಸಲಾಗಿದ್ದು, ಇತರೆ ವಿಧಾನಗಳಿಗಿಂತ ಉತ್ತಮ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಲಾಗಿದೆ.. ಸಂಸ್ಕರಣೆಯ ಮೇಲೆ ಪರಿಣಾಮ ಬೀರುವಂತಹ ಸೂಕ್ಷ್ಮ ಅಂಶಗಳನ್ನು ಸಂಪೂರ್ಣವಾಗಿ ವಿಶ್ಲೇಷಿಸಲಾಗಿದ್ದು ಒಂದು ಅತ್ಯುತ್ತಮ ಪ್ರಮಾಣವನ್ನು ಕಂಡುಹಿಡಿಯಲಾಗಿದೆ. ಇದರಂತೆ, PEG-3350 ಮತ್ತು ಮೆಗ್ನೀಷಿಯಂ ಸಲ್ಫೇಟ್‌ಗಳಿಂದ ಕೂಡಿದ ATPS ನಲ್ಲಿ ಅತ್ಯಂತ ಹೆಚ್ಚಿನ ಶುದ್ಧತೆ (8.8 ಪಟ್ಟು) ಲಭ್ಯವಾಗಿದ್ದು ಇಳುವರಿ ಶೇ. 77% ರಷ್ಟು ಇರುತ್ತದೆ (Madhusudhan and Raghavarao, 2011).

ಉಪಸಂಹಾರ: ಜಲೀಯ ದ್ವಿಹಂತದ ವಿಭಜನೆ ವಿಧಾನವನ್ನು ಬಳಸಿಕೊಂಡು ಬಹಳಷ್ಟು ಜೈವಿಕ ವಸ್ತುಗಳನ್ನು ಮುಖ್ಯವಾಗಿ ಕಿಣ್ವಗಳು, ನೈಸರ್ಗಿಕ ಬಣ್ಣಗಳು, ಶರ್ಕರ ಪಿಷ್ಟಗಳು ಇತ್ಯಾದಿ. ಸಂಸ್ಕರಿಸುವ ವಿಧಾನಗಳನ್ನು ಯಶಸ್ವಿಯಾಗಿ ತೊರಿಸಲಾಗಿರುತ್ತದೆ. ಇದೊಂದು ಬಹು ಉಪಯುಕ್ತವಾದ ವಿಧಾನವಾಗಿದ್ದು ಸಂಸ್ಕರಣೆಯ ವೆಚ್ಚವನ್ನು ತಗ್ಗಿಸಿ ಆ ವಸ್ತುವಿನ ಜೈವಿಕ

ಗುಣಲಕ್ಷಣಗಳನ್ನು ಉಳಿಸುವಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ ಮತ್ತು ಇದೊಂದು ಪರಿಸರ ಸ್ನೇಹಿ ವಿಧಾನವಾಗಿದ್ದು ಸಾವಯವ ದ್ರಾವಣಗಳ ಬಳಕೆಯನ್ನು ಮಿತಗೊಳಿಸುವ ಒಂದು ಬಹುಮುಖ್ಯ ವಿಧಾನವಾಗಿ ಕಂಡುಬರುತ್ತದೆ.

ಉಲ್ಲೇಖ:

* Albertsson, PA (1971) Partition of Cell Particles and Macromolecules, 2nd ed. Wiley, New York.
* Babu BR, Rastogi NK and Raghavarao KSMS 2008. Liquid–liquid extraction of bromelain and polyphenol oxidase using aqueous two-phase system. Chem Eng Process 47: 83–89.
* Boeris V, Spelzini D, Farruggia B and Pico G (2009) Aqueous two-phase extraction and polyelectrolyte precipitation combination: A simple and economically technologies for pepsin isolation from bovine abomasum homogenate. *Process Biochem*, 44, 1260–1264.
* Chethana S, Nayak CA and Raghavarao KSMS (2007) Aqueous two-phase extraction for purification and concentration of betalains, *J Food Eng*, 81, 679–687.
* Dembczynski R, Bia³as W, Regulski W, Jankowski T (2010) Lysozyme extraction from hen egg white in an aqueous two-phase system composed of ethylene oxide–propylene oxide thermoseparating copolymer and potassium phosphate. *Process Biochem*, 45, 369–374.
* Hemavathi AB, Raghavarao KSMS (2011) Differential partitioning of b-galactosidase and b-glucosidase using aqueous two phase extraction. *Process Biochemistry*, 46, 649–655
* Imelio N, Marini A, Spelzini D, Pico G and Farruggia B (2008) Pepsin extraction from bovine stomach using aqueous two-phase systems: Molecular mechanism and influence of homogenate mass and phase volume ratio. *J Chromatogr B*, 873, 133–138.
* Kula MR, Kroner KH and Hustedt H (1982) Purification of enzymes by liquid–liquid extraction, *Adv Biochem Eng*, 24, 73–118.
* Lakshmi MC, Madhusudhan MC and Raghavarao KSMS (2012) Extraction and Purification of Lipoxygenase from Soybean Using Aqueous Two-Phase System. *Food Bioprocess Technol*, 5 (1), 193-199
* Madhusudhan M.C and Raghavarao KSMS (2013) Aqueous two phase extraction for the recovery of beet pigments and enzymes, "*Red Beet Biotechnology for food and biopharmaceutical applications*". Editor B. Neelwarne, Springer publications, pp 393-408.
* Madhusudhan MC and Raghavarao KSMS (2011) Aqueous two phase extraction of invertase from baker's yeast: Effect of process parameters on partitioning. *Process Biochem*, 46 (10), 2014-2020
* Madhusudhan MC, Lakshmi MC and Raghavarao KSMS (2011) Aqueous Two-phase Extraction of Enzymes for Food Processing, "Enhancing Extraction Processes in the Food Industry", for series on "Contemporary Food Engineering", series Editor-in-Chief Da-Wen Sun, Taylor and Francis, 437-475
* Madhusudhan MC, Raghavarao KSMS and Nene S (2008) Integrated process for extraction and purification of alcohol dehydrogenase from Baker's yeast involving precipitation and aqueous two phase extraction. *Biochem Eng J*, 38 (3), 414-420
* Nitsawang, S., Hatti-Kaul, R., Kanasawuda, P. 2006. Purification of papain from *Carica papaya* latex: Aqueous two-phase extraction versus two-step salt precipitation. *Enzyme Microb Technol*, 39, 1103–1107.
* Ooi CW, Tey BT, Hii SL, Ariff A, Wu HS, Wei JC, Juang RS, Kamal SMM and Ling TC (2009) Direct purification of *Burkholderia pseudomallei* lipase from fermentation broth using aqueous two-phase systems. *Biotechnol Bioproc*, E14, 811–818.
* Patil G and Raghavarao KSMS (2007) Aqueous two-phase extraction for purification of C-phycocyanin, *Biochem Eng J*, 34,156–164.
* Patil G, Chethana S, Madhusudhan MC and Raghavarao KSMS (2008) Fractionation and purification of the phycobiliproteins from *Spirulina platensis*. *Bioresource Technol*, 99, 7393–7396.
* Raghavarao KSMS, Rastogi NK, Gowthaman MK and Karanth NG (1995) Aqueous two-phase extraction for downstream processing of enzymes/proteins, *Adv Appl Microbiol*, 41, 97-171.
* Srinivas ND, Barhate RS and Raghavarao KSMS (2002) Aqueous two-phase extraction in combination with ultrafiltration for downstream processing of Ipomoea peroxidase. *J Food Eng* 54: 1–6.
* Tanuja S, Srinivas ND, Gowthaman MK and Raghavarao KSMS (2000) Aqueous two-phase extraction coupled with ultrafiltration for purification of amyloglucosidase. *Bioprocess Eng* 23, 63–68.
* Teotia S, Lata R and Gupta MN (2004) Chitosan as a macroaffinity ligand purification of chitinases by affinity precipitation and aqueous two-phase extractions. *J Chromatogr A*, 1052, 85–91.

ಎಮ್ಮೆ ಹಾಲಿನಿಂದ ಉತ್ಪಾದಿಸಿದ ಬಯೋ-ಆಕ್ಟೀವ್ ಪೆಪ್ಟೈಡ್ ಗಳ ಪರಿಶೋಧನೆ

ನಾಗಮಣಿ. ಎ* ಮತ್ತು ನರಸಿಂಹಮೂರ್ತಿ
ಹೈನು ವಿಜ್ಞಾನ ಮಹಾ ವಿದ್ಯಾಲಯ, ಹೆಬ್ಬಾಳ, ಬೆಂಗಳೂರು - ೫೬೦ ೦೨೪. *Email: nagudscb@gmail.com

ಹಾಲಿನಿಂದ ಬಯೋ-ಆಕ್ಟೀವ್ ಪೆಪ್ಟೈಡ್ (ಬಿಎಪಿ) ಗಳನ್ನು ಬೇರ್ಪಡಿಸಬಹುದು. ಇಮ್ಯುನೊಮಾಡುಲೇಶನ್ ಪ್ರಕ್ರಿಯೆಯಲ್ಲಿ ಬಯೋ-ಆಕ್ಟೀವ್ ಪೆಪ್ಟೈಡ್ (ಬಿಎಪಿ)ಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ಕೆಳಕಂಡ ಪರಿಶೋಧನೆಯಲ್ಲಿ ಎಮ್ಮೆ ಹಾಲನ್ನು ಉಪಯೋಗಿಸಲಾಗಿತ್ತು. ಎಮ್ಮೆ ಹಾಲಿನ ಪ್ರೋಟೀನ್ ಗಳಿಂದ ಬೇರ್ಪಡಿಸಿದ ಬಿಎಪಿಗಳನ್ನು, ಅದರ ಗುಣಲಕ್ಷಣಗಳ ಪರಿಶೀಲನೆಗಾಗಿ ಪರೀಕ್ಷೆ ಮಾಡಲಾಗಿತ್ತು. ಬೆರ್ಪಡಿಸಿದ ಬಿಎಪಿಗಳನ್ನು, ವೀನಿಂಗ್ ಫುಡ್ ನಲ್ಲಿ ಸಂಘೀಕರಿಸಿ ಅದರ ಫ್ಯಾಗೊಸೈಟಿಕ್ ಆಕ್ಟಿವಿಟಿ ಮತ್ತು ಲಿಂಫೋಸೈಟ್ ಪ್ರೊಲಿಫ್ಲೆರೇಶನ್ ಪ್ರಕ್ರಿಯೆಯು ಹೇಗೆ ಇಮ್ಯುನೋಮಾಡ್ಯುಲೇಟರಿ ಪ್ರೊಪರ್ಟಿಯನ್ನು ಹೆಚ್ಚಿಸುತ್ತದೆ ಎಂದು ತಿಳಿಯಲು ಸಂಶೋಧಿಸಲಾಗಿತ್ತು. ಆಲ್ಫ-ಕೆಸಿನ್ ಮತ್ತು ಬೀಟ-ಲ್ಯಾಕ್ಟೋಗ್ಲೊಬುಲಿನ್ ಬಿಎಪಿಗಳನ್ನು ಉತ್ಪತ್ತಿಸಲು, ನ್ಯುಟ್ರೇಸ್ ಎಂಜೈಮ ನ್ನು ೧:೨೫ ಪ್ರಮಾಣದಲ್ಲಿ [ಅಂದರೆ ಎಂಜೈಮ: ಸಬ್ಸ್ಟ್ರಟ್ (ಇ:ಎಸ್)] ೧೦% ಡಿಗ್ರೀ ಒಫ್ ಹೈಡ್ರಾಲಿಸಿಸ್ (ಡಿ.ಹೆಚ್) ಪಡೆಯಲು ತಯಾರಿಸಲಾಗಿತ್ತು. ಪ್ರಯೋಗಾತ್ಮಕ ಪರೀಕ್ಷೆಗಳನ್ನು ಪ್ರಾಣಿಗಳಲ್ಲಿ ಅಳವಡಿಸಿದಾಗ ತಿಳಿಯಬಂದುದು ಏನೆಂದರೆ, ಬಿಎಪಿಗಳನ್ನು ಪ್ರಾಣಿಗಳಿಗೆ (ಇಲಿಗಳನ್ನು ಅಲವಡಿಸಲಾಗಿತ್ತು) ತಿನ್ನಿಸಿದಾಗ, ಆಲ್ಫ-ಕೆಸಿನ್ ಬಿಎಪಿಗಳು ಅತ್ಯಂತ ಪ್ರಶಂಸನೀಯ ಫಲಿತಾಂಶವನ್ನು ತೋರ್ಪಡಿಸಿದವು. ತುಲನಾತ್ಮಕ ಸಂಬಂಧವನ್ನು ಪರಿಶೀಲಿಸಿದಾಗ, ಆಲ್ಫ-ಕೆಸಿನ್ ಬಿಎಪಿಗಳು ಹೆಚ್ಚುವರಿ ಮ್ಯಾಕ್ರೋಫೇಜ್ ಶೇಕಡವಾರು (೭೬%), ಫ್ಯಾಗೋಸೈಟಿಕ್ ಇಂಡೆಕ್ಸ್ (೪.೩೯) ಹಾಗು ಟೋಟಲ್ ಲಿಂಫೋಸೈಟ್ ಕೌಂಟ್ (೧೩,೫೦೦ ಅಣುಕೋಶಗಳು/ಮೈಕ್ರೋ ಲೀಟರ್ ರಕ್ತ)ಅನ್ನು ಪರಿಣಾಮಿಸಿದವು ಆದರೆ ಬೀಟ-ಲ್ಯಾಕ್ಟೋಗ್ಲೊಬುಲಿನ್ ಬಿಎಪಿಗಳು ಮ್ಯಾಕ್ರೋಫೇಜ್ ಶೇಕಡವಾರು (೫೮%), ಫ್ಯಾಗೋಸೈಟಿಕ್ ಇಂಡೆಕ್ಸ್ (೪.೦೧) ಹಾಗು ಟೋಟಲ್ ಲಿಂಫೋಸೈಟ್ ಕೌಂಟ್ (೧೨,೮೦೦ ಅಣುಕೋಶಗಳು/ಮೈಕ್ರೋ ಲೀಟರ್ ರಕ್ತ) ಫಲಿತಾಂಶವನ್ನು ಪರಿಣಾಮಿಸಿದವು.

ಪೀಠಿಕೆ: ಎಮ್ಮೆ ಹಾಲು, ಹಸುವಿನ ಹಾಲಿಗಿಂತ ಉನ್ನತ ಮಟ್ಟದ ಪ್ರೊಟೀನ್, ಕೊಬ್ಬಿನಾಂಶ, ಕ್ಯಾಲ್ ಶಿಯಂ, ಫಾಸ್ಫರಸ್ ಗಳನ್ನು ಒಳಗೊಂಡಿರುತ್ತದೆ. ಈ ಎಲ್ಲಾ ಅಂಶಗಳಿಂದ, ಎಮ್ಮೆ ಹಾಲು ಮಕ್ಕಳಿಗೆ ಉತ್ತಮ ಆಹಾರದ ಪುರವಣಿ ಎಂದು ಪರಿಗಣಿಸಲಾಗಿದೆ.

ಎಮ್ಮೆ ಹಾಲಿನ ಪ್ರೊಟೀನ್ ಗಳು - ಇಮ್ಯುನೋಗ್ಲಾಬ್ಯುಲಿನ್, ಲ್ಯಾಕ್ಟೋಫೆರಿನ್, ಲೈಸೊಜೈಮ್, ಲ್ಯಾಕ್ಟೋಪೆರಾಕ್ಸಿಡೇಸ್ ಗಳನ್ನು ಹಸುವಿನ ಹಾಲಿಗಿಂತ ಉನ್ನತ ಮಟ್ಟದಲ್ಲಿ ಹೊಂದಿರುತ್ತದೆ; ಆದುದರಿಂದ ಎಮ್ಮೆ ಹಾಲು ಎಳೆಯ ಮಕ್ಕಳಿಗೆ ಉತ್ತಮ ಪೌಶ್ಟಿಕತೆಯನ್ನು ನೀಡಲು ಉಪಯುಕ್ತವಾಗುತ್ತದೆ (ಖೊರ್ಹೊನೆನ್ ಮತ್ತು ಫಿಹ್ಲಾಂತೊ, ೨೦೦೩). ವೀನ್ಡಿಂಗ್ ಪದದವನ್ನು ತಾಯಿಯ ಹಾಲನ್ನು ಹೊರತುಪಡಿಸಿ ಇತರೆ ಆಹರ ಕ್ರಮವನ್ನು ಅಲವಡಿಸುವುದು ಎಂದು ಆಚಾರ್ಯ ಮತ್ತು ಷಾಹ್ ರವರು (೧೯೯೮) ವಿವರಿಸಿದ್ದಾರೆ.

ವಿಧಾನಕ್ರಮ: ಎಮ್ಮೆ ಹಾಲಿನ ಮಾದರಿಗಳನ್ನು ಹಾಲು ಉತ್ಪಾದಕರ ಸಂಘಗಳಿಂದ ತಂದು ಶೇಕರಿಸಲಾಗಿತ್ತು. ಕೊಬ್ಬು ರಹಿತ ಹಾಲನ್ನು ಪಡೆಯಲು ಶೇಕರಿಸಿದ ಹಾಲಿನಿಂದ (೧೦ ಡಿಗ್ರೀ ಉಷ್ಣಾಂಶ)ದಲ್ಲಿ ಬೇರ್ಪಡಿಸಲಾಗಿತ್ತು. ಕೊಬ್ಬು ರಹಿತ ಹಾಲಿನಿಂದ (ಸ್ಕಿಮ್ ಮಿಲ್ಕ್) ಕೇಸಿನ್ ಮತ್ತು ವೇಂಯ್ ಪ್ರೊಟೀನ್ ಫೈಡ್ರೋಲೈಸೇಟ್ ಗಳನ್ನು ಉತ್ಪಾದಿಸಲು, ನ್ಯೂಟ್ರೇಸ್ ಮತ್ತು ಟ್ರಿಪ್ಸಿನ್ ಎನ್ಜೈಮ್ ಗಳನ್ನು ಅಲವಡಿಸಿಲಾಗಿತ್ತು. ಬೇರ್ಪಡಿಸಿದ ಕೇಸಿನ್ ಮತ್ತು ವೇಯ್ ಪ್ರೊಟೀನ್ ಅಂಶಗಳನ್ನು ರಾಸಯನಿಕ ಪರೀಕ್ಷೆಗೆ ಪ್ರಮಾಣಬದ್ಧ ಕಾರ್ಯವಿಧಾನದಲ್ಲಿ ಪರೀಕ್ಷಿಸಲಾಗಿತ್ತು.

ನಂತರ, ಇಮ್ಯುನೋಮಾಡ್ಯುಲೇಟರಿ ಪ್ರಕ್ರಿಯೆಯನ್ನು ತೋರ್ಪಡಿಸುವ ಮ್ಯಾಕ್ರೊಫೇಜ್ ಸಂಖ್ಯೆಯನ್ನು ಕಂಡುಹಿಡಿಯಲು ಫ್ಯಾಗೋಸೈಟೊಸಿಸ್ ಪರೀಕ್ಷೆಯನ್ನು ಮಾಡಲು ಇಲಿಗಳನ್ನು ಅಲವಡಿಸಲಾಗಿತ್ತು. ಇಲಿಗಳ ಪೆರಿಟೊನಿಯಲ್ ಭಾಗ(ಚರ್ಮದ ಕೆಳಭಾಗ)ದಿಂದ ಫ್ಲ್ಯುಯಿಡ್ ಅನ್ನು ಶೇಕರಿಸಿ ಅದರಲ್ಲಿ ಮ್ಯಾಕ್ರೊಫೇಜ್ ಸಂಖ್ಯೆಯನ್ನು ಲೆಕ್ಕಿಸಿ, ಫ್ಯಾಗೋಸೈಟೊಸಿಸ್ ಪರೀಕ್ಷೆಯನ್ನು ಮಾಡಲಾಗಿತ್ತು.

ಫ್ಯಾಗೋಸೈಟಿಕ್ ಇಂಡೆಕ್ಸ್ ಅನ್ನು ಕಂಡುಹಿಡಿಯಲು ಈ ಸೂತ್ರವನ್ನು ಉಪಯೋಗಿಸಲಾಗಿತ್ತು: **ಪಿ.ಐ = ಡಿ.ಪಿ.ಐ- ಎ.ಪಿ.ಐ**

ಪಿ.ಐ: ಫ್ಯಾಗೋಸೈಟಿಕ್ ಇಂಡೆಕ್ಸ್

ಡಿ.ಪಿ.ಐ: ಡಿಫರೆನ್ಷಿಯಲ್ ಫ್ಯಾಗೋಸೈಟಿಕ್ ಇಂಡೆಕ್ಸ್

ಎ.ಪಿ.ಐ: ಆಕ್ಟ್ಯುಯಲ್ ಫ್ಯಾಗೋಸೈಟಿಕ್ ಇಂಡೆಕ್ಸ್

ಉತ್ತಮ ಫ್ಯಾಗೋಸೈಟಿಕ್ ಆಕ್ಟಿವಿಟಿ ವ್ಯಕ್ತಪಡಿಸಿರುವ, ಬಯೊ-ಆಕ್ಟೀವ್ ಪೆಪ್ಟೈಡ್ ಗಳನ್ನು ಆಯ್ಕೆಮಾಡಿ ಮಾರುಕಟ್ಟೆಯಿಂದ ತಂದ ವೀನ್ಡಿಂಗ್ ಫುಡ್ ಗಳಲ್ಲಿ ೫ ಮತ್ತು ೧೦ ಶೇಖಡವಾರು ಪ್ರಮಾಣದಲ್ಲಿ ಸಂಘೀಕರಿಸಲಾಗಿತ್ತು. ಇವುಗಳನ್ನು ಐದು ಪಂಗಡಗಳಾಗಿ ವಿಭಾಗಿಸಲಾಗಿತ್ತು:

ಎಫ್೦: ಅನ್ಡೈಲಡ್ರೋಲೈಸ್ಡ್ ಕೇಸಿನ್ ಅನ್ನು ಸಂಘೀಕರಿಸಿರಿವ ಕಂಟ್ರೋಲ್ ವೀನ್ಡಿಂಗ್ ಫುಡ್

ಎಫ್೧: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ - ಕೇಸಿನ್ ಬಿ ಎ ಪಿ ಗಳನ್ನು ೫% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್

ಎಫ್೨: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ -ಕೇಸಿನ್ ಬಿ ಎ ಪಿ ಗಳನ್ನು ೧೦% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್

ಎಫ್೩: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಬೀಟ - ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳನ್ನು ೫% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್

ಎಫ್೪: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಬೀಟ - ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳನ್ನು ೧೦% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್

ಸಮ ಪ್ರಮಾಣ ತೂಕವಿರುವ ಇಲಿಗಳನ್ನು ಸಂಗ್ರಹಿಸಿಲಾಗಿತ್ತು. ಅವುಗಳಿಗೆ ಕೊಡುವ ಆಹಾರದಾನದ ಪ್ರಕಾರ ವಿಂಗಡಿಸಿ, ಸಕಾಲಕ್ಕೆ ಸರಿಯಾಗಿ ಪ್ರತಿಯೊಂದು ಗುಂಪಿನ ತೂಕ ತೆಗೆದುಕೊಳ್ಳಲಾಗಿತ್ತು. ಸಕಾಲದಲ್ಲಿ ಪ್ರತೀ ಗುಂಪಿನ ಇಲಿಗಳ ರಕ್ತವನ್ನು ಶೇಕರಿಸಿ, ಟೋಟಲ್ ಲಿಂಫೋಸೈಟ್ ಕೌಂಟ್ ಅನ್ನು ಖಂಡುಹಿಡಿಯಲಾಗುತ್ತದೆ (ಜೈನ್, ೧೯೯೦).

ಪರಿಣಾಮ: ಸಂಘೀಕರಿಸಿದ ವೀನ್ಡಿಂಗ್ ಫುಡ್ ಗಳ ರಾಸಾಯನಿಕ

ಅಂಶಗಳನ್ನು ಪರೀಕ್ಷಿಸಿದಾಗ, ಟೇಬಲ್–೧ ರಲ್ಲಿ ತೋರಿಸಿದಂತೆ: ೧೦% ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಮತ್ತು
ಬೀಟ –ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳು, ಕಂಟ್ರೋಲ್ ಹಾಗು ೫% ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಮತ್ತು
ಬೀಟ –ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳಿಗಿಂತ ಹೆಚ್ಚುವರಿ ಫಲಿತಾಂಶವನ್ನು ಪರಿಣಾಮಿಸಿದವು. ಬೇರ್ಪಡಿಸಿದ ಕೇಸಿನ್ ಮತ್ತು ವೇಯ್ ಪ್ರೊಟೀನ್ ಅಂಶಗಳ ಬಿಎಪಿಗಳನ್ನು, ಮ್ಯಾಕ್ರೊಫೇಜ್ ಸಂಖ್ಯೆಯನ್ನು ಕಂಡುಹಿಡಿಯಲು ಫ್ಯಾಗೋಸೈಟೊಸಿಸ್ ಪರೀಕ್ಷೆಗೆ ಪರಿಣಾಮಿಸಿದಾಗ, ಟೇಬಲ್–೨ ಮತ್ತು ೩ ರಲ್ಲಿ ಸ್ಪಷ್ಟೀಕರಿಸಿದಹಾಗೆ : ಟ್ರಿಪ್ಸಿನ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಮತ್ತು ಬೀಟ –ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳಿಗಿಂತ ಹೆಚ್ಚುವರಿ ಫಲಿತಾಂಶವನ್ನು ನ್ಯೂಟ್ರೇಸ್ ಹೈಡ್ರೋಲೈಸ್ಡ್ ಬಿಎಪಿ ಗಳು ತೋರಿಸಿದವು. ಆಂತೆಯೆ, ಇಲಿಗಳಿಂದ ಶೇಖರಿಸಿದ ರಕ್ತದಿಂದ ಟೋಟಲ್ ಲಿಂಫೋಸೈಟ್ ಕೌಂಟ್ ಅನ್ನು ಖಂಡುಹಿದಾಗ, ಟೇಬಲ್–೪ ರಲ್ಲಿ(ಚಿತ್ರ– ೧). ಪರಿಣಾಮಿಸಿದೇ ನೆಂದರೆ: ಅತಿ ಹೆಚ್ಚುವರಿ ಫಲಿತಾಂಶವನ್ನು ೧೦% ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ–ಕೇಸಿನ್ (೧೩,೫೦೦ ಅಣುಕೋಶಗಳು/ಮೈಕ್ರೋ ಲೀಟರ್ ರಕ್ತ) ಮತ್ತು ಬೀಟ –ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳು ತೋರ್ಪಡಿಸಿದವು (೧೨,೮೦೦ ಅಣುಕೋಶಗಳು/ಮೈಕ್ರೋ ಲೀಟರ್ ರಕ್ತ).

ಈ ಪರಿಶೋಧನೆಯಿಂದ ತಿಳಿಯಬಂದುದು ಏನೆಂದರೆ, ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಬಿಎಪಿ ಗಳು ಇಮ್ಯುನೋಮಾಡ್ಯುಲೇಶನ್ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ನಿಸ್ಚಯಿಸಲಾಗುತ್ತದೆ, ಏಕೆಂದರೆ ಇವುಗಳು 'ಮಿಥಿಯೋನಿನ್' ಯೆಂಬ ಪ್ರೊಟೀನ್ ಅನ್ನು ಬಳಸಿಕೊಂಡು 'ಫ್ಲುಟಥಯೊನ್' ಯೆಂಬ ಮೂಲ ಪ್ರೊಟೀನ್ ಅನ್ನು ಉತ್ಪಾದನೆ ಮಾಡುತ್ತದೆ. ಇಮ್ಯುನೋಮಾಡ್ಯುಲೇಶನ್ ಪ್ರಕ್ರಿಯೆಯಲ್ಲಿ ಫ್ಲುಟಥಯೊನ್‌ಯೆಂಬುದು ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ.

ಟೇಬಲ್ ೧: ಸಂಘೀಕರಿಸಿದ ವೀನ್ನಿಂಗ್ ಫುಡ್ ಗಳ ರಾಸಾಯನಿಕ ಅಂಶಗಳನ್ನು ಪರೀಕ್ಷೆ:

ಸಂಘೀಕರಿಸಿದ ವೀನ್ನಿಂಗ್ ಫುಡ್	ನೈಟ್ರೋಜನ್	ಪ್ರೊಟೀನ್	ಆಶ್ %
ಎಫ್೦	೯.೨೯	೫೯.೩೧	೧.೯
ಎಫ್೧	೧೧.೧೬	೭೧.೨೦	೨.೩
ಎಫ್೨	೧೨.೮೮	೭೨.೧೭	೨.೭
ಎಫ್೩	೧೧.೪೧	೭೨.೭೯	೨.೧
ಎಫ್೪	೧೨.೧೫	೭೭.೫೩	೨.೬

ಟಿಪ್ಪಣಿ–
ಎಫ್೦: ಅನ್ಹೈಡ್ರೋಲೈಸ್ಡ್ ಕೇಸಿನ್ ಅನ್ನು ಸಂಘೀಕರಿಸಿರಿವ ಕಂಟ್ರೋಲ್ ವೀನ್ನಿಂಗ್ ಫುಡ್
ಎಫ್೧: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಬಿಎಪಿ ಗಳನ್ನು ೫% ಅಲ್ಲಿ ಸಂಘೀಕರಿಸಿರಿವ ವೀನ್ನಿಂಗ್ ಫುಡ್
ಎಫ್೨: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಬಿಎಪಿ ಗಳನ್ನು ೧೦% ಅಲ್ಲಿ ಸಂಘೀಕರಿಸಿರಿವ ವೀನ್ನಿಂಗ್ ಫುಡ್
ಎಫ್೩: ನ್ಯೂಟ್ರೇಸ್ ಹೈಡ್ರೋಲೈಸ್ಡ್ –ಬೀಟ –ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳನ್ನು ೫% ಅಲ್ಲಿ ಸಂಘೀಕರಿಸಿರಿವ ವೀನ್ನಿಂಗ್ ಫುಡ್
ಎಫ್೪: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಬೀಟ –ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳನ್ನು ೧೦% ಅಲ್ಲಿ ಸಂಘೀಕರಿಸಿರಿವ ವೀನ್ನಿಂಗ್ ಫುಡ್

ಟೇಬಲ್ – ೨: ಇಲಿಗಳ ಪೆರಿಟೋನಿಯಲ್ ಫ್ಲೂಡ್ ನಲ್ಲಿ ಮ್ಯಾಕ್ರೊಫೇಜ್ ಸಂಖ್ಯೆಯ ಎಣಿಕೆ

ಬಿಎಪಿ ಗಳ ಮೂಲ	ಮ್ಯಾಕ್ರೊಫೇಜ್ ಸಂಖ್ಯೆ (%)	
	ನ್ಯೂಟ್ರೇಸ್	ಟ್ರಿಪ್ಸಿನ್
ಆಲ್ಫ– ಕೆಸಿನ್	೭೬	೬೩
ಬೀಟ – ಕೆಸಿನ್	೫೪	೪೮
ಆಲ್ಫ– ಲ್ಯಾಕ್ಟಾಲ್ಬುಮಿನ್	೪೩	೩೯
ಬೀಟ ಲ್ಯಾಕ್ಟೊಗ್ಲಾಬ್ಯುಲಿನ್	೫೮	೫೨

ಟೇಬಲ್ – ೩: ಬಿಎಪಿ ಗಳ ಫ್ಯಾಗೊಸೈಟಿಕ್ ಇಂಡೆಕ್ಸ್

ಬಿಎಪಿ ಗಳ ಮೂಲ		ಡಿ.ಪಿ.ಐ	ಎ.ಪಿ.ಐ	ಪಿ.ಐ
ಆಲ್ಫ–ಕೆಸಿನ್	ನ್ಯೂಟ್ರೇಸ್	೪.೭೧	೦.೩೨	೪.೩೯
	ಟ್ರಿಪ್ಸಿನ್	೧.೩೭	೦.೩೨	೧.೦೫
ಬೀಟ–ಕೆಸಿನ್	ನ್ಯೂಟ್ರೇಸ್	೨.೮	೦.೩೨	೨.೪೮
	ಟ್ರಿಪ್ಸಿನ್	೦.೮೫	೦.೩೨	೦.೫೩
ಆಲ್ಫ–ಲ್ಯಾಕ್ಟಲ್ಬ್ಬುಮಿನ್	ನ್ಯೂಟ್ರೇಸ್	೧.೯೮	೦.೩೨	೧.೬೬
	ಟ್ರಿಪ್ಸಿನ್	೧.೦೯	೦.೩೨	೦.೭೭
ಬೀಟ–ಲ್ಯಾಕ್ಟೊಗ್ಲಾಬ್ಯುಲಿನ್	ನ್ಯೂಟ್ರೇಸ್	೪.೩೩	೦.೩೨	೪.೦೧
	ಟ್ರಿಪ್ಸಿನ್	೧.೬೪	೦.೩೨	೧.೩೨

ಟಿಪ್ಪಣಿ– ಪಿ.ಐ: ಫ್ಯಾಗೋಸೈಟಿಕ್ ಇಂಡೆಕ್ಸ್ ; ಡಿ.ಪಿ.ಐ: ಡಿಫೆರೆನ್ಷಿಯಲ್ ಫ್ಯಾಗೋಸೈಟಿಕ್ ಇಂಡೆಕ್ಸ್
ಎ.ಪಿ.ಐ: ಆಕ್ಟ್ಯುಯಲ್ ಫ್ಯಾಗೋಸೈಟಿಕ್ ಇಂಡೆಕ್ಸ್

ಟೇಬಲ್–೪: ಸಂಘೀಕರಿಸಿದ ವೀನ್ಡಿಂಗ್ ಫುಡ್ ಗಳ ಸೇವನೆಯಿಂದ ಟೋಟಲ್ ಲಿಂಫೋಸೈಟ್ ಕೌಂಟ್‌ನ ಪ್ರಭಾವ

ಸಂಘೀಕರಿಸಿದ ವೀನ್ಡಿಂಗ್ ಫುಡ್	ಟೋಟಲ್ ಲಿಂಫೋಸೈಟ್ ಕೌಂಟ್ (ಅಣುಕೋಶಗಳು/ಮೈಕ್ರೋ ಲೀಟರ್ ರಕ್ತ) ಸೇವನೆ ಪ್ರಕ್ರಿಯೆ (ದಿನಗಳು)			
	೦	೧೦	೨೦	೩೦
ಎಫ್೦	೪,೪೦೦	೪,೬೦೦	೪,೮೦೦	೪,೮೦೦
ಎಫ್೧	೪,೪೦೦	೬,೫೦೦	೯,೫೦೦	೧೧,೪೦೦
ಎಫ್೨	೪,೫೦೦	೮,೫೦೦	೧೦,೮೦೦	೧೩,೫೦೦
ಎಫ್೩	೪,೬೦೦	೫,೭೦೦	೮,೭೦೦	೧೦,೨೦೦
ಎಫ್೪	೪,೭೦೦	೮,೧೦೦	೧೦,೪೦೦	೧೨,೮೦೦

ಟಿಪ್ಪಣಿ–

ಎಫ್೦: ಅನ್ಹೈಡ್ರೋಲೈಸ್ಡ್ ಕೇಸಿನ್ ಅನ್ನು ಸಂಘೀಕರಿಸಿರಿವ ಕಂಟ್ರೋಲ್ ವೀನ್ಡಿಂಗ್ ಫುಡ್
ಎಫ್೧: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಬಿಎಪಿ ಗಳನ್ನು ೫% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್
ಎಫ್೨: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಬಿಎಪಿ ಗಳನ್ನು ೧೦% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್
ಎಫ್೩: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಬೀಟ –ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳನ್ನು ೫% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್
ಎಫ್೪: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಬೀಟ –ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳನ್ನು ೧೦% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್

ಸೇವನೆಗೆ ಮುಂಚೆ ಸೇವನೆಯ ನಂತರ

ಎಫ್೦: ಅನ್ಹೈಡ್ರೋಲೈಸ್ಡ್ ಕೇಸಿನ್ ಅನ್ನು ಸಂಘೀಕರಿಸಿರಿವ ಕಂಟ್ರೋಲ್ ವೀನ್ಡಿಂಗ್ ಫುಡ್




ಎಫ್೧: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಬಿಎಪಿ ಗಳನ್ನು ೫% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್



ಎಫ್೨: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಆಲ್ಫ –ಕೇಸಿನ್ ಬಿಎಪಿ ಗಳನ್ನು ೧೦% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್




ಎಫ್೩: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಬೀಟ -ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳನ್ನು ೫% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್





ಎಫ್೪: ನ್ಯೂಟ್ರೇಸ್ ಹೈಡ್ರೋಲೈಸ್ಡ್ ಬೀಟ -ಲ್ಯಾಕ್ಟೋಗ್ಲಾಬ್ಯುಲಿನ್ ಬಿಎಪಿ ಗಳನ್ನು ೧೦% ಅಲ್ಲಿ ಸಂಘೀಕರಿಸಿರಿವ ವೀನ್ಡಿಂಗ್ ಫುಡ್





ಚಿತ್ರ- ೧: ಸಂಘೀಕರಿಸಿದ ವೀನ್ಡಿಂಗ್ ಫುಡ್ ಗಳನ್ನು ಸೇವಿಸಿದ ಇಲಿಗಳ ಲಿಂಫೊಸೈಟ್ ಅಣುಕೋಶಗಳ ಸೂಕ್ಷ್ಮದರ್ಶಕದ ಚಿತ್ರಗಳು

ರೆಫರೆನ್ಸ್:

೧. ಆಚಾರ್ಯ, ಎಮ್. ಆರ್. ಮತ್ತು ಷಾಹ್, ಆರ್. ಕೆ. ೧೯೯೮: ಇನ್ಫಾನ್ಟ್ ಅನ್ಡ್ ವೀನ್ಡ್ಂಗ್ ಫ್ಯಾರ್ಮುಲೇಶನ್ಸ್ ಕಂಟೈನಿಂಗ್ ಪ್ರೊಬಯೊಟಿಕ್ ಕಲ್ಚರ್ಸ್. ಇಂಡಿಯನ್ ಫುಡ್ ಇಂಡಸ್ಟ್ರಿ.೧೭ (೬): ೩೫೩- ೩೫೬.

೨. ಖೊಹೊನೆನ್, ಹೆಚ್ ಮತ್ತು ಫಿಹ್ಲಾಂತೊ, ಏ. ೨೦೦೩: ಬಯೊಆಕ್ಟೀವ್ ಪೆಪ್ಟೈಡ್ಸ್: ನ್ಯೂ ಚಾಲೆಂಜಸ್ ಅಂಡ್ ಆಪೊರ್ಚುನಿಟಿಸ್ ಫಾರ್ ದಿ ಡೈರಿ ಇಂಡಸ್ಟ್ರಿ. ಆಸ್ಟ್ರೇಲಿಯನ್ ಜರ್ನಲ್. ಡೈರಿ ಟೆಕ್ನೊಲೊಜಿ. ೫೮: ೧೨೯-೧೩೪.

೩. ಜೈನ್. ಎಸ್., ಮತ್ತು ಹರಿಒಮ್ ಯಾದವ್. ೨೦೦೭: ಇನ್-ವಿಟ್ರೊ ಫ್ಯಾಗೊಸೈಟೊಸಿಸ್ ಅಸ್ಸೆ ಆಫ್ ಮ್ಯಾಕ್ರೋಫೇಜ್ಸ್. ಪ್ರೊಟೊಕಾಲ್ ಆನ್ಲೈನ್. ಅನಿಮಲ್ ಬಯೊಕೆಮಿಸ್ಟ್ರಿ ಡಿವಿಝನ್, ನ್ಯಾಶಿನಲ್ ಡೈರಿ ರೀಸರ್ಚ್ ಇನ್ಸ್ಟಿಟ್ಯೂಟ್.

ವಿಜಾಪೂರ ಜಿಲ್ಲೆಯ ಹೈನುಗಾರಿಕೆ ಉದ್ಯಮದಲ್ಲಿ ಸಂಪನ್ಮೂಲ ಬಳಕೆಯ ಸಾಮರ್ಥ್ಯ – ಒಂದು ಆರ್ಥಿಕ ಅಧ್ಯಯನ

ಎಸ್. ಎಸ್. ಗುಳೇದಗುಡ್ಡ[1]., ಕೀರ್ತಿ. ಎಸ್ [2] ಹಾಗೂ ಆರ್. ಎಸ್. ಪೋದ್ದಾರ[3]

[1] ಸಹ ಸಂಶೋಧನಾ ನಿರ್ದೇಶಕರು, ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಾಪೂರ, [2] ಹಿರಿಯ ಎಮ್. ಎಸ್ಸಿ.(ಕೃಷಿ) ವಿದ್ಯಾರ್ಥಿ, ಕೃಷಿ ಅರ್ಥಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ವಿಜಾಪೂರ, [3] ಮುಖ್ಯಸ್ಥರು, ಯೋಜನೆ ಪೂರ್ವ ಸಿದ್ಧತೆ ಹಾಗೂ ನಿರ್ವಹಣಾ ಘಟಕ, ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಪ್ರಸ್ತುತ ಅಧ್ಯಯನವು ಹೈನುಗಾರಿಕೆಯಲ್ಲಿ ತೊಡಗಿರುವ ರೈತರ ಸಾಮಾಜಿಕ – ಆರ್ಥಿಕ ಪರಿಸ್ಥಿತಿ, ಖರ್ಚು, ಆದಾಯ ಹಾಗೂ ಸಂಪನ್ಮೂಲ ಬಳಕೆಯ ಇಳುವರಿಯ ಕುರಿತು ವಿಶ್ಲೇಷಿಸುವುದಾಗಿ ಉದ್ದೇಶಿಸಲಾಗಿದೆ. 2011–12ನೇ ಸಾಲಿಗೆ ಹೊಂದುವಂತೆ ಜಾನುವಾರುಗಳ ಘಟಕಗಳ ಗಾತ್ರ, ಜಾನುವಾರು ತಳಿಗಳು, ಒಣ ಹಾಗೂ ಹಸಿ ಮೇವು ಮತ್ತು ಬೂಸ, ಹಾಲು ಉತ್ಪಾದನೆಯ ಸಾಮರ್ಥ್ಯ, ಹಾಲು ಕರೆಯುವ ಹಾಗೂ ಒಣ ದಿನಗಳ ಸಂಖ್ಯೆ, ನೀರು ಹಾಗೂ ವಿದ್ಯುತ್ ಲಭ್ಯತೆ, ಕ್ಷೇತ್ರ ನಿರ್ವಹಣೆಗೆ ಲಭ್ಯವಿರುವ ಅನುಭವವುಳ್ಳ ಸಿಬ್ಬಂದಿ ಹಾಗೂ ಕಾರ್ಮಿಕರು, ಜಾನುವಾರುಗಳಿಗೆ ಅಗತ್ಯವಿರುವ ಪಶುಸಂಗೋಪನಾ ಸೇವೆಗಳು ಇತ್ಯಾದಿಗಳ ಮಾಹಿತಿಯನ್ನು ಕಲೆಹಾಕಲಾಯಿತು. ಈ ಅಧ್ಯಯನದ ಫಲಿತಾಂಶದಿಂದ ಶೇಕಡ 47.4 ರಷ್ಟು ಸರಾಸರಿ ರೈತರ ವಯಸ್ಸು 47.7, ಶೇಕಡ 26 ರಷ್ಟು ರೈತರು ಅನಕ್ಷರಸ್ಥರು, ಶೇಕಡ 26 ರಷ್ಟು ಜನರು ಹಿರಿಯ ಹಂತದ ಶಿಕ್ಷಣವನ್ನು ಪೂರೈಸಿದ್ದಾರೆ. ಸರಾಸರಿ ಕುಟುಂಬ ಗಾತ್ರ 6.64 ಇದ್ದು ಇದರಲ್ಲಿ ಶೇಕಡಾ 39.76 ರಷ್ಟು ಪುರುಷರು, ಶೇಕಡ 31.02 ರಷ್ಟು ಮಹಿಳೆಯರು ಹಾಗೂ ಉಳಿದ ಪಾಲು ಮಕ್ಕಳದ್ದಾಗಿದೆ. ವಾರ್ಷಿಕ ಸರಾಸರಿ ರೂ. 1,03,840 ರಷ್ಟು ಜಾನುವಾರುಗಳ ಮೇಲೆ ಖರ್ಚು ಮಾಡಿರುವುದಾಗಿ ತಿಳಿದು ಬಂದಿದೆ. ಇದರಲ್ಲಿ ಶೇಕಡ 47.98 ರಷ್ಟು ಮೊತ್ತ ಆಹಾರ ಪದಾರ್ಥಗಳ ಮೇಲೆ ಖರ್ಚು ಮಾಡಿದ್ದಾರೆ. ಸರಾಸರಿ 33.23 ಮನುಷ್ಯ ದಿನಗಳ ಶ್ರಮವನ್ನು ಕಾರ್ಮಿಕರು ಪಟ್ಟಿರುವುದಾಗಿ ತಿಳಿದು ಬಂದಿದೆ.

ಈ ಅಧ್ಯಯನದ ಫಲಿತಾಂಶವು ಪ್ರಸ್ತುತಪಡಿಸುವದೇನೆಂದರೆ, ವಿನ್ಯಾಸದಲ್ಲಿರುವ ವಿವರಣಾತ್ಮಕ ಚಂಚಲವು ಶೇಕಡಾ 69 ರಷ್ಟು ಹೈನುಗಾರಿಕೆ ಘಟಕದಲ್ಲಿನ ಬದಲಾವಣೆಯನ್ನು ವಿವಿಧ ಅಧ್ಯಯನಸಾರದ ಗುಣಾಂಶ ಸೂಚಿಸಿರುವಂತೆ ದೃಢಪಡಿಸಿದೆ. ಎಮ್ಒಪಿಪಿ ಹಾಗೂ ಎಮ್ಎಫ್ಸಿ ಯ ಅನುಪಾತವು ಮಾನವ

ಕೂಲಿಯಲ್ಲಿ, ಒಣ ಮೇವಿನಲ್ಲಿ, ಹಸಿ ಮೇವು ಹಾಗೂ ಬೂಸಾದಲ್ಲಿ ಒಂದಕ್ಕಿಂತ ಕಡಿಮೆ ಇದ್ದು, ಜಾನುವಾರು ಸೇವೆಗಳು ಈ ಅನುಪಾತದಿಂದ ಹೊರತಾಗಿದೆ. ಜಾನುವಾರು ಸೇವೆಗಳಲ್ಲಿ ಎಮ್‌ಪಿಪಿ, ಎಮ್‌ಎಫ್‌ಸಿ ಯ ಅನುಪಾತವು ಒಂದಕ್ಕಿಂತ ಹೆಚ್ಚಿದೆ. ಇದರಿಂದ ಮಾನವ ಕೂಲಿ, ಒಣ ಮೇವು, ಹಸಿ ಮೇವು ಹಾಗೂ ಬೂಸ ಅತಿ ಬಳಕೆಯಾಗಿರುವುದು ಕಂಡು ಬಂದಿದೆ ಆದರೆ ಜಾನುವಾರುಗಳ ಸೇವೆಗಳಿಗೆ ಸಂಬಂಧಿಸಿದಂತೆ ಅದು ಅತಿ ಕಡಿಮೆ ಬಳಕೆಯಾಗಿದೆ.

ಪ್ರಮುಖ ಪದಗಳು, – ಹೈನುಗಾರಿಕೆ, ಸಂಪನ್ಮೂಲಗಳು, ಖರ್ಚು, ಆದಾಯ, ಸಾಮರ್ಥ್ಯ

ಪೀಠಿಕೆ : ಭಾರತೀಯ ಹೈನುಗಾರಿಕೆ ಉದ್ಯಮವು ದೇಶದ ಸಾಮಾಜಿಕ – ಆರ್ಥಿಕ ಅಭಿವೃದ್ಧಿಯಲ್ಲಿ ತನ್ನದೇ ಆದ ಮಹತ್ವ ಪಡೆದಿದ್ದು, ಕೃಷಿಯಲ್ಲಿ ಅಪಾರ ಕೊಡುಗೆಯನ್ನು ನೀಡಿದೆ. ಭಾರತವು 1,32,431 ಸಾವಿರ ಟನ್ ನಷ್ಟು (2012–13) ಹಾಲು ಉತ್ಪಾದಿಸುತ್ತಿದ್ದು, ಹಾಲಿನ ಉತ್ಪಾದನೆಯಲ್ಲಿ ಕಳೆದ ಒಂದು ದಶಕದಿಂದ ವಿಶ್ವದಲ್ಲಿ ಪ್ರಥಮ ಸ್ಥಾನವನ್ನು ಅಲಂಕರಿಸಿದೆ, ಮತ್ತು ಪ್ರಪಂಚದ ಶೇ. 15 ರಷ್ಟು ಹಾಲು ಭಾರತದಲ್ಲಿ ಉತ್ಪಾದನೆಯಾಗುತ್ತಿದೆ. ಹಾಲಿನ ಗುಂಪಿಗೆ ಸೇರಿದ ಉತ್ಪನ್ನಗಳ ಮೌಲ್ಯವು ಕಷಿ ಉತ್ಪನ್ನಗಳಿಗಿಂತ 4 ಪಟ್ಟಿನಷ್ಟು ಹೆಚ್ಚಿನ ಮೌಲ್ಯವನ್ನು ಹೊಂದಿದ್ದು, ಈ ಅಂಶವು ಹೈನುಗಾರಿಕೆ ಉದ್ಯಮದ ಮಹತ್ವವನ್ನು ಎತ್ತಿ ತೋರಿಸುತ್ತಿದೆ. ಹೈನುಗಾರಿಕೆಯು ಗ್ರಾಮೀಣ ಜನರಿಗೆ ಜೀವನೋಪಾಯ ಹಾಗೂ ಪೌಷ್ಟಿಕ ಭದ್ರತೆಯನ್ನು ಒದಗಿಸುತ್ತಿರುವುದೇ ಅಲ್ಲದೆ, 8.5 ಮಿ. ಜನರಿಗೆ ಉದ್ಯೋಗ ನೀಡುತ್ತಿರುವುದು ಉಲ್ಲೇಖನೀಯವೇ ಬೇಕಾದ ಸಂಗತಿಯಾಗಿದೆ. ಗ್ರಾಮೀಣ ಹಾಗೂ ನಗರ ನಿವಾಸಿಗಳು ಶೇ. 9.2 ಮತ್ತು ಶೇ. 12.4 ರಷ್ಟು ಪ್ರೋಟೀನನ್ನು ಹಾಲು ಹಾಗೂ ಹಾಲಿನ ಉತ್ಪನ್ನಗಳ ಸೇವನೆಯಿಂದ ಸ್ವೀಕರಿಸುತ್ತಿದ್ದು, ಇದು ಮಾಂಸಾಹಾರಿ ಪದಾರ್ಥಗಳಿಂದ ಸೇವಿಸುತ್ತಿರುವ ಪ್ರೋಟೀನಿಗಿಂತ ಹೆಚ್ಚಿದೆ.

ಉತ್ತಮ ರಾಷ್ಟ್ರೀಯ ಸಂಪನ್ಮೂಲಗಳ ನಿರ್ವಹಣೆಯಿಂದ ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವುದು ಹಾಗೂ ನೂತನ ತಂತ್ರಜ್ಞಾನವನ್ನು ಬಳಸಿ ಹಾಲನ್ನು ಸಂಸ್ಕರಿಸುವುದು ಭಾರತೀಯ ಹೈನುಗಾರಿಕೆ ಉದ್ಯಮದ ಉದ್ದೇಶವಾಗಿದೆ. ಈ ಉದ್ಯಮವು ಉತ್ತಮ ಆದಾಯ ಹಾಗೂ ಉದ್ಯೋಗಾವಕಾಶಗಳನ್ನು ಒದಗಿಸುತ್ತಿದ್ದು, ಹಾಲು ಅಗ್ಗ ದರದಲ್ಲಿ ಸಿಗುವ ಪೌಷ್ಠಿಕ ಆಹಾರವಾಗಿದೆ. ಈ ಉದ್ಯಮವನ್ನು ಅಪಾರ ಸಂಖ್ಯೆಯಲ್ಲಿರುವ fಷಿ9$\frac{3}{4}$— ಹಿಂದುಳಿದ ಜನರ ಆದಾಯದ ಮೂಲವಾಗಿರುವುದು ಕಂಡು ಬಂದಿದೆ. ಈ ಅಧ್ಯಯನವು ಜಿಲ್ಲೆಯ ರೈತರಿಗೆ ಹಾಲಿನ ಉತ್ಪಾದನೆಯನ್ನು ವೃದ್ಧಿಸುವ ನಿಟ್ಟಿನಲ್ಲಿ ಸಹಾಯವಾಗಲಿದೆ.

ಉದ್ದೇಶಗಳು

1 ಹೈನುಗಾರಿಕೆಯಲ್ಲಿನ ಖರ್ಚು, ಆದಾಯ ಹಾಗೂ ಸಂಪನ್ಮೂಲಗಳ ಅಧ್ಯಯನ ಮಾಡುವುದು.

2 ಹೈನುಗಾರಿಯಲ್ಲಿ ತೊಡಗಿರುವ ರೈತರ ಸಾಮಾಜಿಕ – ಆರ್ಥಿಕ ಸ್ಥಿತಿಗೆ ಬೆಲೆಕಟ್ಟುವುದು.

ಕಾರ್ಯವಿಧಾನ: ಉದ್ದೇಶಗಳನ್ನು ಸಾಧಿಸಲು 2011–12ನೇ ಬೆಳೆ ಸಾಲಿನ ಅಂಕಿ ಸಂಖ್ಯೆ ಮಾಹಿತಿಯನ್ನು ಕ್ಷೇತ್ರ ಮಟ್ಟದಲ್ಲಿ ಕರ್ನಾಟಕದ ವಿಜಾಪೂರ ಜಿಲ್ಲೆಯಲ್ಲಿ ಪಡೆದುಕೊಳ್ಳಲಾಯಿತು. ವಿಜಾಪೂರ ಜಿಲ್ಲೆಯ ಪಶು ಸಂಗೋಪನ ಇಲಾಖೆಯನ್ನು ಸಂದರ್ಶಿಸಿದ ತರುವಾಯ ಗೊತ್ತು ಗುರಿ ಇಲ್ಲದೆ ಹೈನುಗಾರಿಕೆಯಲ್ಲಿ ನಿರತವಾಗಿರುವ ರೈತರನ್ನು ಭೇಟಿ ಮಾಡಿ ಅಂಕಿ ಸಂಖ್ಯೆ ಮಾಹಿತಿ ಪಡೆಯಲಾಯಿತು.

ಅಂಕಿ ಸಂಖ್ಯೆ ಮಾಹಿತಿಯ ಮೂಲ :

ದ್ವಿತೀಯ ಅಂಕಿ ಅಂಶಗಳ ಮಾಹಿತಿ: ದ್ವಿತೀಯ ಅಂಕಿಅಂಶಗಳ ಮಾಹಿತಿಯನ್ನು ಹೈನುಗಾರಿಕಾ ಘಟಕಗಳ ಹಾಗೂ ಇನ್ನಿತರ ವಿವರಗಳನ್ನು ವಿಜಾಪೂರ ಜಿಲ್ಲೆಯ ಪಶುಸಂಗೋಪನಾ ಇಲಾಖೆ ಮತ್ತು ವಿಜಾಪೂರ ಜಿಲ್ಲಾ ಆರ್ಥಿಕ ಹಾಗೂ ಸಂಖ್ಯಾಶಾಸ್ತ್ರ ಇಲಾಖೆಯಿಂದ ಪಡೆಯಲಾಯಿತು.

ಪ್ರಾಥಮಿಕ ಅಂಕಿ ಅಂಶಗಳ ಮಾಹಿತಿ : ಹೈನುಗಾರಿಕಾ ಘಟಕಗಳ ಗಾತ್ರ ಜಾನುವಾರು ತಳಿಗಳು, ಕರು ಹಾಗೂ ಮೇವಿನ ವೆಚ್ಚ ಹಾಲು ಸಂಗ್ರಹಿಸುವ ಕೇಂದ್ರಗಳು, ಹುಲ್ಲಿನ ಲಭ್ಯತೆ, ಹಸಿ ಹಾಗೂ ಒಣ ಮೇವು ಮತ್ತು ಬೂಸಾ, ಹಾಲು ಉತ್ಪಾದನೆಯ ಸಾಮರ್ಥ್ಯ, ಹಾಲು ಕರೆಯುವ ಹಾಗೂ ಕರೆಯದಿರುವ ದಿನಗಳ ಸಂಖ್ಯೆ, ನೀರು ಹಾಗೂ ವಿದ್ಯುತ್ ಲಭ್ಯತೆ, ಕ್ಷೇತ್ರ ನಿರ್ವಹಣೆಗೆ ಬೇಕಾಗುವ ಅನುಭವವುಳ್ಳ ಸಿಬ್ಬಂದಿ ಹಾಗೂ ಕೂಲಿ ಕಾರ್ಮಿಕರು, ವೈದ್ಯಕೀಯ ಸೇವೆಗಳು, ಕಟ್ಟುವ ಸಾಮಗ್ರಿಗಳ ಮೇಲಿನ ಖರ್ಚು, ಕ್ಷೇತ್ರದ ಸ್ಥಳ, ಬಂಡವಾಳ ಹೂಡಿಕೆ ಮೇಲಿನ ಬಡ್ಡಿದರ, ಹೈನುಗಾರಿಕೆ ಘಟಕ ಹಾಗೂ ಮಾರುಕಟ್ಟೆಗೆ ಇರುವ ಅಂತರ ಹಸುವಿನ ಬೆಲೆಯು ಅದರ ವಯಸ್ಸು, ಕರುಗಳ ಸಂಖ್ಯೆ, ಹಾಲಿನ ಇಳುವರಿ ಮತ್ತು ಆರೋಗ್ಯ ಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ. ದಿನಗೂಲಿ ಮೊತ್ತ ಹಾಗೂ ಇತ್ಯಾದಿಯ ಬಗೆಗಿನ ಅಂಕಿ ಅಂಶಗಳ ಮಾಹಿತಿಯನ್ನು ರೈತರಿಂದ ಪಡೆಯಲಾಯಿತು.

ಹೈನುಗಾರಿಕೆ ರೈತರ ಸಂಖ್ಯೆಯ ಆಧಾರದ ಮೇಲೆ ವಿಜಾಪೂರ ಜಿಲ್ಲೆಯ ವಿಜಾಪೂರ ಮತ್ತು ಬಸವನ ಬಾಗೇವಾಡಿ ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡು, ಆಯ್ಕೆ ಮಾಡಲಾದ ಎರಡು ತಾಲ್ಲೂಕುಗಳಿಂದ ತಲಾ ಎರಡು ಹಳ್ಳಿಗಳ ರಮಾಪೂರ, ಬಬಲೇಶ್ವರ ಮತ್ತು ಮನಗೂಳಿ, ಕೂಡಗಿ ಹಳ್ಳಿಗಳನ್ನು ಆಯ್ಕೆ ಮಾಡಲಾಯಿತು. ರಮಾಪೂರ ಹಾಗೂ ಬಬಲೇಶ್ವರದಲ್ಲಿ ತಲಾ 13 ರೈತರನ್ನು ಮತ್ತು ಮನಗೂಳಿ ಹಾಗೂ ಕೂಡಗಿ ಹಳ್ಳಿಗಳಲ್ಲಿ ತಲಾ 12 ರೈತರನ್ನು ಆಯ್ಕೆ ಮಾಡಲಾಗಿದ್ದು, ಒಟ್ಟು 50 ರೈತರಿಂದ ಅಂಕಿ ಅಂಶಗಳ ಮಾಹಿತಿಯನ್ನು ಪಡೆಯಲಾಯಿತು. ಖಾನೆಗಳುಳ್ಳ ಪೃಥಕ್ಕರಣದಿಂದ ಹೈನುಗಾರಿಕಾ ರೈತರ ಆರ್ಥಿಕ – ಸಾಮಾಜಿಕ ಪಾರ್ಶ್ವ ಚಿತ್ರವನ್ನು ಅಧ್ಯಯನ ಮಾಡಲಾಯಿತು. ಹೈನುಗಾರಿಕೆ ಉದ್ಯಮದಲ್ಲಿನ ಸಂಪನ್ಮೂಲ ಬಳಕೆಯ ಸಾಮರ್ಥ್ಯವನ್ನು ಬೆಲೆಕಟ್ಟಲು ಕಾಬ್–ಡೋಗ್ಲಾಸ್ ಪ್ರೊಡಕ್ಷನ್ ಫಂಕ್ಷನ್‌ನನ್ನು ಪ್ರಯೋಗಿಸಲಾಯಿತು.

ಪ್ರೊಡಕ್ಷನ್ ಫಂಕ್ಷನ್ ಪ್ರಾಯೋಗಿಕರಣ: ಸಂಪನ್ಮೂಲ ಬಳಕೆಯ ಸಾಮರ್ಥ್ಯ ಹಾಗೂ ಕಚ್ಚಾ ವಸ್ತುಗಳಿಂದ ಹಾಲಿನ ಇಳುವರಿಯು ಬೀಳುವುದು ಪ್ರಭಾವವನ್ನು ತಿಳಿಯಲು ಕಾಬ್–ಡೋಗ್ಲಾಸ್ ಪ್ರೊಡಕ್ಷನ್ ಫಂಕ್ಷನ್‌ನನ್ನು ಬಳಸಲಾಯಿತು.

ಕಾಬ್–ಡೋಗ್ಲಾಸ್ ಪ್ರೊಡಕ್ಷನ್ ಫಂಕ್ಷನ್‌ನ ಸ್ಪಷ್ಟೀಕರಣವನ್ನು ಕೆಳಗಿ ವಿವರಿಸಿದೆ.

$$Y = A X_1^{a^1} X_2^{a^2} X_3^{a^3} X_4^{a^4} X_5^{a^5} e^u$$

Y = ಹಾಲು ಹಾಗೂ ಸಗಣಿಯಿಂದ ಬರುವ ಮೂಲ ಆದಾಯ

X_1 = ಕೂಲಿ (ಮಾನವ ದಿನಗಳು)

X_2 = ಒಣ ಮೇವು (ಣ)

X_3 = ಹಸಿರು ಮೇವು (ಡ)

X_4 = ಬೂಸಾ(ಡ)

X_5 = ಪಶು ವೈದ್ಯಕೀಯ ಸೇವೆಗಳು (ರೂ)

A = ಸ್ಥಿರತೆ

a^1 = ಉತ್ಪಾದನೆ ಹಿಗ್ಗುವಿಕೆಯ ಅಂಕಿಗಳು

u = ವಕ್ರ ತಪ್ಪಾಂಕ / ವಕ್ರ ಸಮಸ್ಯೆ

ಅಧ್ಯಯನದ ಉದ್ದೇಶಿಕವಾಗಿ ಈಡೇರಿಸಲು, ಮಾನವ ದಿನಗಳ ಸಂಖ್ಯೆ, ಒಣ

ಮೇವು, ಹಸಿರು ಮೇವು ಹಾಗೂ ಬೂಸಾವನ್ನು ಭೌತಿಕ ಪ್ರಮಾಣದಲ್ಲಿ ಮತ್ತು ಪಶುವೈದ್ಯಕೀಯ ಸೇವೆಯನ್ನು ಆರ್ಥಿಕ ಪ್ರಮಾಣದಲ್ಲಿ ಅಳೆಯಲಾಗಿದೆ. ಮೇಲಿನ ಫಂಕ್ಷನ್ ನನ್ನು ಲಾಗರದಮಿಕ್ ಟ್ರನ್ಸಫಾರ್ಮೇಷನ್ ಮೂಲಕ ಲೀನಿಯರ್ ಫಾರಂಗೆ ಮಾರ್ಪಡಿಸಲಾಯಿತು.

ಲೀನಿಯರ್ ಫಾರಂ:

$$\text{Log } Y = \log A + a_1 \log X_1 + \log X_2 = +a_3 \log X_3 + a_4 \log X_4 + a_5 \log X_5 + \log U$$

ಪ್ರತಿ ಸಂಪನ್ಮೂಲಕ್ಕೆ ಮಾರ್ಜಿನಲ್ ವ್ಯಾಲ್ಯೂ ಪ್ರಾಡೆಕ್ಟನನ್ನು ಜಿಯೋಮೆಟ್ರಿಕ್ ಮೀನ್ ಹಂತದಲ್ಲಿ ಅಳೆಯಲಾಯಿತು.

ಉತ್ಪನ್ನದ ಜಿಯೋಮೆಟ್ರಿಕ್ ಮೀನ್ ನ ಹಂತವನ್ನು ಲೆಕ್ಕ ಹಾಕಲು ಉಪಯೋಗಿಸಿದ ಸೂತ್ರ

X_i ನ ಮಾಜಿನಲ್ ವ್ಯಾಲ್ಯೂ ಪ್ರಾಡಕ್ಟ = $a_{i\ Y/X}$ ಇದರಲ್ಲಿ

Y = ಒಟ್ಟು ಆದಾಯದ ಜಿಯೋಮೆಟ್ರಿಕ್ ಮೀನ್

$X_i = i^{th}$ ಸಂಪನ್ಮೂಲದ ಜಿಯೋಮೆಟ್ರಿಕ್ ಮೀನ್

$a_i = i^{th}$ ಸಂಪನ್ಮೂಲದ ಎಲಾಸ್ಟಿಸಿಟಿ ಆಫ್ ಪ್ರೊಡಕ್ಷನ್

ಸಂಪನ್ಮೂಲ ಅತ್ಯುತ್ತಮ ಬಳಕೆಯನ್ನು ಕಂಡು ಹಿಡಿಯಲು ಮಾಜಿನಲ್ ವ್ಯಾಲ್ಯೂ ಪ್ರಾಡಕ್ಟನನ್ನು ಸಮ ಮಾಡಲಾಯಿತು.

$$MPP = (dy/dx) = P_p/P_y$$

$$\text{i.e., } a_3 (Y/X) = P_p/P_y$$

$$X^* = (a_3 YP_y)/Pp$$

X^* = ಆಪ್ಟಿಮಮ್ ಕ್ವಾಂಟಿಟಿ ಆಫ್ ಔಟಪುಟ್

a_3 = ಪ್ರೊಡಕ್ಷನ್ ಎಲಾಸ್ಟಿಸಿಟಿ ಆಫ್ ಇನ್‌ಪುಟ್

MPP = ಮಾರ್ಜಿನಲ್ ಫಿಸಿಕಲ್ ಪ್ರಾಡಕ್ಟ ಆಫ್ ಇನ್‌ಪುಟ್

Pp = ಪಶುವೈದ್ಯಕೀಯ ಸೇವೆಗಳ ತಲಾ ದರ (ರೂ)

Py = ಉತ್ಪಾದಕರಿಗೆ ಸಿಗುವ ಬೆಲೆ (ರೂ?)

ಉದಯ, 2008 ಶಿಫಾರಸ್ಸಿನಂತೆ ದುಡಿತದ ರೇಟ್ ಆಫ್ ರಿಟನ್ಸನನ್ನು ಲೆಕ್ಕ ಹಾಕಲಾಯಿತು.

$$\text{ರೇಟ್ ಆಫ್ ರಿಟರ್ನ} = \frac{\text{ಗಳಿಕೆ} - \text{ಒಟ್ಟು ವೆಚ್ಚ}}{\text{ಒಟ್ಟು ಸಂಪನ್ಮೂಲ ವೆಚ್ಚ}}$$

ಫಲಿತಾಂಶ ಹಾಗೂ ಚರ್ಚೆ: ಹೈನುಗಾರಿಕೆಯಲ್ಲಿ ತೊಡಗಿರುವ ಬಿಜಾಪೂರ ಜಿಲ್ಲೆಯ ರೈತರ ಸಾಮಾಜಿಕ ಆರ್ಥಿಕ ಪರಿಸ್ಥಿತಿಯನ್ನು ಕೋಷ್ಟಕ–1 ರಲ್ಲಿ ಸಾದರಪಡಿಸಲಾಗಿದೆ. ಇದರ ಪ್ರಕಾರ ಸರಾಸರಿ ರೈತರ ವಯಸ್ಸು 47.4 ಇದು ತಿಳಿದುಬಂದಿದ್ದು, ಸಾಕ್ಷರತೆಯಲ್ಲಿ ಮಾನದಂಡವಾಗಿ ಪರಿಗಣಿಸಿದಾಗ ಶೇ. 26 ರಷ್ಟು ರೈತರು ಅನಕ್ಷರಸ್ಥರು, ಎಸ್.ಎಸ್.ಎಲ್.ಸಿ. ಮುಗಿಸಿದವರು (20%), ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದವರು (14%), ಸ್ನಾತಕ ಪದವೀಧರರು (8%), ಪದವಿ ಪೂರ್ವ ಶಿಕ್ಷಣವನ್ನು ಪೂರೈಸಿರುತ್ತಾರೆ. ಸಂಘ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವಿಕೆಯನ್ನು ಗಣನೆಗೆ ತೆಗೆದುಕೊಂಡಾಗ ಶೇ. 54 ರಷ್ಟು ಸಹಕಾರಿ ಸಂಘಗಳಲ್ಲಿ ಸದಸ್ಯರಾಗಿರುವುದಾಗಿಯೂ, ಶೇ. 10 ರಷ್ಟು ರೈತರು ಅದರಲ್ಲೂ ಮಹಿಳೆಯರು ಸ್ವಸಹಾಯ ಗುಂಪಿನ ಸದಸ್ಯರಾಗಿದ್ದು, ಕೇವಲ ಶೇಕಡ 4 ರಷ್ಟು ರೈತರು ಮಾತ್ರ ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಸದಸ್ಯರಾಗಿರುವುದಾಗಿ ತಿಳಿದುಬಂದಿರುವುದು. ಈ ಚಿತ್ರಣವು ರೈತರು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಹಾಲನ್ನು ಮಾರದೇ ಇರುವುದನ್ನು ಗಮನಿಸಲೇಬೇಕಾದ ಸಂಗತಿಯಾಗಿದೆ, ಶೇ. 8 ರಷ್ಟು ರೈತರು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಹಾಗೂ ಇನ್ನಿತರ ಸಂಸ್ಥೆಗಳಲ್ಲಿ ಭಾಗಿಯಾಗಿರುವುದಾಗಿ ತಿಳಿದು ಬಂದಿದೆ. ಸುಮಾರು ಶೇ. 16 ರಷ್ಟು ರೈತರು ತಾವು ಯಾವುದೇ ಸಂಘ ಸಂಸ್ಥೆಗಳಲ್ಲಿ ಪಾಲ್ಗೊಂಡಿಲ್ಲವೆಂದು ತಿಳಿಸಿರುತ್ತಾರೆ.

ಪ್ರತಿ ಕುಟುಂಬದಲ್ಲಿ ಸರಾಸರಿ 7 ಮಂದಿ ವಾಸಿಸುತ್ತಿರುವುದಾಗಿಯೂ, ಸರಾಸರಿ ಜಮೀನು ಹಿಡುವಳಿ 10.35 ಎಕರೆ ಇದೆ. ಈ 10.35 ಎಕರೆಯಲ್ಲಿ ಶೇ. 88.79 ರಷ್ಟು ಒಣಭೂಮಿ ಹಾಗೂ ಇನ್ನುಳಿದ 11.21 ರಷ್ಟು ಭೂಮಿ ನೀರಾವರಿಗೊಳಪಟ್ಟಿದೆ. ಈ ಅಂಕಿ ಅಂಶವು ಹೆಚ್ಚಿನ ರೈತರು ದೊಡ್ಡ ರೈತರೆಂಬುದನ್ನು ಎತ್ತಿ ತೋರಿಸುತ್ತದೆ. ಸರಾಸರಿ 1.92 (60.38%) ಎಮ್ಮೆಗಳನ್ನು ಸಲಹುತ್ತಿದ್ದು, ಇವು ಸರಾಸರಿ ಹಸುಗಳಿಗಿಂತ (39.62%) ಹೆಚ್ಚಿರುವುದಾಗಿ ತಿಳಿದು ಬಂದಿದೆ. ವಿಜಾಪೂರ ಜಿಲ್ಲೆಯ ಹೆಚ್ಚು ಉಷ್ಣ ಹವಾಮಾನದ ಅನುಗುಣವಾಗಿ ಹಸುಗಳಿಗಿಂತ ಎಮ್ಮೆಗಳನ್ನು ಸಾಕಲಾಗುತ್ತಿದೆ. ಸರಾಸರಿ ಕುಟುಂಬದ ಗಾತ್ರವು 6.64 ಇದ್ದು, ಅದರಲ್ಲಿ ಶೇ. 39.76 ರಷ್ಟು ಮಂದಿ ಪುರುಷರು, ಶೇ. 31.02 ರಷ್ಟು ಮಹಿಳೆಯರು ಮತ್ತು ಶೇ. 29.22 ರಷ್ಟು ಮಂದಿ ಮಕ್ಕಳಿರುತ್ತಾರೆ. ಹೈನುಗಾರಿಕೆಯಲ್ಲಿ ತೊಡಗಿರುವ ರೈತರು ಸರಾಸರಿ 2,93,618.10 ರೂಗಳ ಆದಾಯಗಳಿಸಿದ್ದು, ಅದರಲ್ಲಿ ಸುಮಾರು 2,65,500 (90.56%) ರೂಗಳ ಆದಾಯವು ಕೃಷಿಯಿಂದ ಬಂದಿರುವುದು. ಹೈನುಗಾರಿಕೆಯಿಂದ ಕೇವಲ 27,668.10 ರೂ (9.44%) ಮಾತ್ರ ಹೈನುಗಾರಿಕೆಯಿಂದ ಬರುತ್ತಿದೆ. ಈ ಪ್ರದೇಶದಲ್ಲಿ ದೇಶೀಯ ತಳಿಗಳನ್ನು ಸಲಹುತ್ತಿರುವುದರಿಂದ ಮತ್ತು ಜಾನುವಾರುಗಳ ಗಾತ್ರ ಕಡಿಮೆಯಿರುವುದರಿಂದ ಈ ಪ್ರದೇಶದಲ್ಲಿ ಹೈನುಗಾರಿಕೆಯ ಪಾತ್ರ ಬೇರೆ ಪ್ರದೇಶಗಳಲ್ಲಿ ಇರುವಷ್ಟು ಮಹತ್ವ ಪಡೆದಿರುವುದಿಲ್ಲ.

ಆಸ್ತಿ ಹಿಡುವಳಿಯ ಕುರಿತಂತೆ, ಶೇ. 7.76 ರಷ್ಟು ರೈತರು ದ್ವಿಚಕ್ರ ವಾಹನಗಳನ್ನು ಹೊಂದಿರುತ್ತಾರೆ. ಶೇ. 13.98 ರಷ್ಟು ಮಂದಿಯ ಬಳಿ ಸಐಕಲ್ ಇರುತ್ತದೆ. ಶೇ. 57.76 ರಷ್ಟು ರೈತರು ನೇಗಿಲು, ಕಟಾವು ಯಂತ್ರಗಳು, ಹಾಗೂ ಬೇರೆ ರೀತಿಯ ಆಸ್ತಿಯನ್ನು ಹೊಂದಿರುತ್ತಾರೆ.

ರೈತರು ಸರಾಸರಿ 7,03,840 ರೂಗಳನ್ನು ಪ್ರತಿ ವರ್ಷಕ್ಕೆ ಖರ್ಚು ಮಾಡಿದ್ದಾರೆ ಇದರಲ್ಲಿ ಶೇ. 47.98 ರಷ್ಟು ಆಹಾರದ ಮೇಲೆ, ಶೇ. 13.99 ರಷ್ಟು ವಿದ್ಯಾಭ್ಯಾಸದ ಮೇಲೆ, ಶೇ. 18.36 ರಷ್ಟು ಬಟ್ಟೆಯ ಮೇಲೆ, ಸಾಮಾಜಿ ಕಾರ್ಯಕ್ರಮಗಳ ಮೇಲೆ (15.47%) ಮತ್ತು ಇನ್ನಿತರೆಗಳ ಮೇಲೆ ಖರ್ಚು ಮಾಡಿರುತ್ತಾರೆ. ಈ ಅಂಕಿ ಅಂಶವು ಈ ಜಿಲ್ಲೆಯ ಜನತೆ ವಿದ್ಯಾಭ್ಯಾಸಕ್ಕೆ ಒತ್ತು ನೀಡುತ್ತಿಲ್ಲಯಂಬುದನ್ನು ಬಯಲಿಗೆಳೆಯುತ್ತದೆ.

ಕ್ಷೀರ ಕ್ಷೇತ್ರದಲ್ಲಿನ ಕಾರ್ಮಿಕ ಬಳಸುವಿಕೆಯ ಮಾದರಿಯನ್ನು ಕೋಷ್ಟಕ 3 ರಲ್ಲಿ ಪ್ರಸ್ತುತಪಡಿಸಲಾಗಿದೆ. ವರ್ಷಕ್ಕೆ ಸರಾಸರಿ 33.23 ಮಾನವ ದಿನಗಳನ್ನು ದುಡಿಮೆ ಬಳಸಲಾಗಿದೆ. ಹೆಚ್ಚಿನ ದುಡಿಮೆಯನ್ನು ಕಟ್ಟಿ ಮೇಯಿಸುವುದಕ್ಕಾಗಿ (8.60 ಮಾನವ ದಿನಗಳು), ಕ್ರಮೇಣವಾಗಿ ಹಾಲು ಹಿಂಡುವುದಕ್ಕೆ, ಹಾಲಿನ ವಿತರಣೆಗೆ ಜಾನುವಾರುಗಳ ಶುಚಿಗೊಳಿ ಬಳಸಲಾಗಿದೆ. ಪ್ರತಿ ದಿನ ಎರಡರಿಂದ ಮೂರು ಬಾರಿ ದನಗಳಿಗೆ ಮೇಯಿಸುವುದರಿಂದ ಅತಿ ಹೆಚ್ಚು ದುಡಿಮೆ ಇದರ ಮೇಲೆ ಮಾಡಲಾಗಿದೆ.

ಸರಾಸರಿ 3,323 ರೂಗಳನ್ನು ಕೂಲಿಗೆ ನೀಡಲಾಗಿದೆ. ಇದರಲ್ಲಿ ಹೆಚ್ಚಿನ ಖರ್ಚು ಕಟ್ಟಿ ಮೇಯಿಸುವುದಕ್ಕೆ (860 ರೂ), ಕ್ರಮೇಣವಾಗಿ ಕೊಟ್ಟಿಗೆಯನ್ನು ತೊಳೆಯುವುದಕ್ಕೆ (730 ರೂ), ಮೇಯಿಸುವುದಕ್ಕೆ (453 ರೂ), ಹಾಲು ಹಿಂಡುವುದಕ್ಕೆ (435 ರೂ), ಸಾರಿಗೆ ಹಾಗೂ ಹಾಲಿನ ವಿತರಣೆಗೆ (380 ರೂ), ಕಸಕಡ್ಡಿ ಸಂಗ್ರಹಿಸುವುದಕ್ಕೆ (235 ರೂ) ಮತ್ತು ಜಾನುವಾರುಗಳನ್ನು ತೊಳೆಯುವುದಕ್ಕೆ (230 ರು) ಖರ್ಚು ಮಾಡಲಾಗಿದೆ.

ಕಾಬ್ ಡೊಗ್ಲಾಸ್ ಪ್ರೊಡಕ್ಷನ್ ಫಂಕ್ಷನ್ ನ ಲೆಕ್ಕಾಚಾರವನ್ನು ಕೋಷ್ಟಕ–4 ರಲ್ಲಿ

ಪ್ರಸ್ತುತಪಡಿಸಲಾಗಿದೆ. ಈ ಮಾದರಿಯಲ್ಲಿ ಸೇರಿಸಲಾಗಿರುವ ಸ್ಪಷ್ಟೀಕರಣಾತ್ಮಕ ವೇರಿಯೆಬಲ್ ಕೋ ಎಫಿಸಿಯಂಟ್ ಆಫ್ ಮಲ್ಟಿಪಲ್ ಡಿಟರ್ಮಿನೇಶನ್ ನಲ್ಲಿ ಸೂಚಿಸಿರುವಂತೆ ಶೇ. 69 ರಷ್ಟು ಹೈನುಗಾರಿಕೆಯಲ್ಲಿನ ಭೇದವನ್ನು ವ್ಯಕ್ತಪಡಿಸಿದೆ. ಕಂಡು ಹಿಡಿದಿರುವ 'ಎಫ್' ಬೆಲೆಯು ಸಂಖ್ಯಾನುಶಾಸ್ತ್ರದ ಅನುಸಾರವಾಗಿ ಈ ಮಾದರಿಗೆ ಹೊಂದುತ್ತದೆ. ಹೆಚ್ಚಾಗುತ್ತಿರುವ ರಿಟನ್ಸ ಟು ಸ್ಕೇಲನ್ನು ಗಮನಿಸಬಹುದಾಗಿದೆ.

ಸಂಪನ್ಮೂಲಗಳ ಅತ್ಯುತ್ತಮತೆಯ ಉಪಯೋಗವನ್ನು ಪಡೆಯಲು ಮಾರ್ಜಿನಲ್ ವ್ಯಾಲ್ಯೂ ಪ್ರಾಡಕ್ಟ ಹಾಗೂ ಮಾರ್ಜಿನಲ್ ವಾಲ್ಯೂ ಪ್ರಾಡಕ್ಟ್ ಹಾಗೂ ಮಾರ್ಜಿನಲ್ ಫ್ಯಾಕ್ಟರ್ ಕಾಸ್ಟನ ತುಲನೆಯ ಜ್ಞಾನವು ಬಹು ಅವಶ್ಯವಾಗಿದೆ.

ಕೋಷ್ಟಕ–5 ರಂತೆ, ಎಂವಿಪಿ ಹಾಗೂ ಎಂಐಎಫ್‌ಸಿಯ ಅನುಪಾತವು ಪಶುವೈದ್ಯಕೀಯ ಸೇವೆಗಳನ್ನು ಹೊರತುಪಡಿಸಿ ಎಲ್ಲದರಲ್ಲಿ ಅಂದರೆ ಮಾನವ ದುಡಿಮೆ, ಒಣ ಮೇವು, ಹಸಿರು ಮೇವು ಹಾಗೂ ಬೂಸಾದಲ್ಲಿ ಶೇ. 1 ಕ್ಕಿಂತ ಹೆಚ್ಚಿರುವುದಾಗಿ ಕಂಡು ಬಂದಿದೆ. ಎಂವಿಪಿ ಹಾಗೂ ಎಂಐಎಫ್‌ಸಿಯ ಅನುಪಾತವು ಮಾನವ ದುಡಿಮೆ, ಒಣಮೇವು, ಹಸಿರು ಮೇವು ಹಾಗೂ ಬೂಸಾದಲ್ಲಿ ಒಂದಕ್ಕಿಂತ ಜಾಸ್ತಿ ಇರುವುದು. ಇದು ಈ ಸಂಪನ್ಮೂಲಗಳನ್ನು ಅತಿಯಾಗಿ ಬಳಸಿರುವುದನ್ನು ಸೂಚಿಸಿದೆ. ಆದರೆ ಪಶು ವೈದ್ಯಕೀಯ ಸೇವೆಗಳನ್ನು ಸರಿಯಾಗಿ ಬಳಸಿರುವುದಿಲ್ಲ.

ನಿರ್ಣಯತೆ: ಈ ಅಧ್ಯಯನದ ಫಲಿತಾಂಶವು ಆರ್ಥಿಕ ಸಿದ್ಧಾಂತಗಳಂತೆ ಸಂಪನ್ಮೂಲಗಳನ್ನು ಬಳಕೆ ಮಾಡಿಲ್ಲದ್ದನ್ನು ಎತ್ತಿ ಹಿಡಿದಿದೆ. ದುಡಿಮೆಯ ಎಂವಿಪಿ ಹಾಗೂ ಎಂಐಎಫ್‌ಸಿಯ ಅನುಪಾತವು ನಕಾರಾತ್ಮಕವಾಗಿದ್ದು, ಒಣಮೇವು, ಹಸಿರು ಮೇವಿನಲ್ಲಿ ಹಾಗೂ ಬೂಸಾ ಬಳಕೆಯಲ್ಲಿ ಒಂದಕ್ಕಿಂತ ಕಡಿಮೆ ಇರುವುದರಿಂದ ಈ ಸಂಪನ್ಮೂಲಗಳನ್ನು ಕ್ರೋಡಿಕರಿಸಿದರೆ ರೈತನಿಗೆ ಹೈನುಗಾರಿಕೆಯಿಂದ ಆದಾಯವು ವೃದ್ಧಿಸುತ್ತದೆ. ರೈತರಿಗೆ ಅವರು ಅತಿಯಾಗಿ ಬಳಸುತ್ತಿರುವ ಸಂಪನ್ಮೂಲಗಳ ಬಗ್ಗೆ (ದುಡಿಮೆ, ಒಣ ಮೇವು, ಹಸಿರು ಮೇವು,ಬೂಸಾ) ಅರಿವು ಮೂಡಿಸಬೇಕಾದ ಅನಿವಾರ್ಯತೆ ಈ ಕ್ಷಣದ ಅವಶ್ಯಕತೆಯಾಗಿದೆ. ಸಮತೋಲಿತ ಸಂಪನ್ಮೂಲಗಳ ಉಪಯೋಗದ ಬಗ್ಗೆ ಈ ಜಿಲ್ಲೆಯ ರೈತರಿಗೆ ತರಬೇತಿ ಅಥವಾ ಕಾರ್ಯಾಗಾರ ಹಮ್ಮಿಕೊಂಡರೆ ಸೃಷ್ಟಿಸಿಕೊಂಡ ಪಿಡುಗು ಕೊನೆಯಾಗಬಹುದಾಗಿದೆ.

ಆಕರ

Eswaraprasad, Y., Srirama Murthy, C., Satynarayana, G., Chennorayadut, K. V. and Llitha Achoth, 1988. An econometric analysis of cotton production in Guntur district of Andhra Pradesh. *Margin,* **21** (1): 79-86.

Nagaraju, T., Khan, H. S. S. and Vijaykumar, H. S., 1994, Resource use efficiency in hybrid cotton in different locations in the Tungabhadra command area. *Agricultural Economics Review,* 7 (1): 56-62.

ಕೋಷ್ಟಕ 1. ಬಿಜಾಪೂರ ಜಿಲ್ಲೆಯ ಹೈನುಗಾರಿಕೆ ರೈತರ ಸಾಮಾಜಿಕ ಆರ್ಥಿಕ ಪರಿಸ್ಥಿತಿ

ಕ್ರ. ಸಂ.	ವಿವರ	ಸಂಖ್ಯೆ	ಶೇಕಡಾ
1	ಸ್ಯಾಂಪಲ್ ಸೈಜ್ (ಸಂ.)	50	
2	ವಯಸ್ಸು (ವರ್ಷಗಳು)	47.4	
	ವಿದ್ಯಾಭ್ಯಾಸ (ಸಂ.)		
	ಅ. ಅನಕ್ಷರಸ್ಥ	13	26
	ಬ. ಪ್ರಾಥಮಿಕ	7	14
	ಕ. ಹಿರಿಯ ಶಾಲೆ	13	26
	ಡ. ಎಸ್.ಎಸ್.ಎಲ್.ಸಿ.	10	20
	ಇ. ಪಿ.ಯು.ಸಿ.	3	6
	ಈ. ಸ್ನಾತಕ ಹಂತ	4	8
	ಒಟ್ಟು	**50**	**100**
3	ಸಂಘಟನೆ/ಸಂಸ್ಥೆ ಇತರ (ಸಂ.)		
	ಭಾಗವಹಿಸುವಿಕೆ		
	ಅ. ಸಹಕಾರಿ ಸಂಘಗಳು	27	54
	ಬ. ಕೆ.ಎಮ್.ಎಫ್.	02	4
	ಕ. ಸ್ವ ಸಹಾಯ ಗುಂಪುಗಳು	05	10
	ಡ. ಸ್ಥಳೀಯ ಸಂಸ್ಥೆಗಳು	04	8
	ಇ. ಇತರೆ	04	8
	ಈ. ಪಾಲ್ಗೊಳ್ಳದಿರುವಿಕೆ	08	16
	ಒಟ್ಟು	**50**	**100**
4	ಕುಟುಂಬ ಗಾತ್ರ (ಸಂ.)		
	ಅ. ಗಂಡು	2.64	39.76
	ಬ. ಹೆಣ್ಣು	2.06	31.02
	ಕ. ಮಕ್ಕಳು	1.94	29.22
	ಒಟ್ಟು	**6.64**	**100.00**
5	ಜಮೀನು ಹಿಡುವಳಿ (ಎಕರೆಗಳಲ್ಲಿ)		
	ಅ. ನೀರಾವರಿ	1.16	11.21
	ಬ. ಒಣ ಭೂಮಿ	9.19	88.79
	ಒಟ್ಟು	**10.35**	**100.00**
6	ಹೈನುಗಾರಿಕೆ ಘಟಕದ ಗಾತ್ರ (ಸಂ.)		
	ಅ. ಹಸು	1.26	39.62
	ಬ. ಎಮ್ಮೆ	1.92	60.38
	ಒಟ್ಟು	**3.18**	**100.00**
7	ಡೈರಿ ಇದ್ದ ರೈತರ ಸರಾಸರಿ ಆದಾಯ (ರೂ.)		
	ಅ. ಕ್ಷೀರ ಉದ್ಯಮ	27668.10	9.44
	ಬ. ಬೇರೆ ಮೂಲಗಳಿಂದ	2,65,500.00	90.56
	ಒಟ್ಟು	**293168.10**	**100.00**
8.	ರೈತನ ಆಸ್ತಿ ಪಟ್ಟಿ (ಸಂ.)		
	ಅ. ಸೈಕಲ್	0.9	13.98
	ಬ. ಬೈಕ್	0.5	7.76
	ಕ. ಕಾರ್/ಜೀಪು	0.06	0.93
	ಡ. ದೂರದರ್ಶನ	0.74	11.49
	ಇ. ಆಕಾಶವಾಣಿ	0.14	2.17
	ಈ. ಎತ್ತಿನ ಗಾಡಿ	0.38	5.90
	ಉ. ಇತರೆ	3.72	57.76
	ಒಟ್ಟು	**6.44**	**100.00**

ಕೋಷ್ಟಕ 2. ಆಯ್ಕೆ ಮಾಡಲಾಗಿರುವ ರೈತರ ಸೇವನೆ/ಖರ್ಚಿನ ಮಾದರಿ

ಕ್ರ. ಸಂ.	ವಿವರ	ಮೌಲ್ಯ (ರೂ)	ಶೇ.ಒಟ್ಟು ಆದಾಯ
1	ಆಹಾರ	49820	47.98
2	ಬಟ್ಟೆ	19060	18.36
3	ಸಾಮಾಜಿಕ ಕಾರ್ಯಕ್ರಮಗಳು	16060	15.47
4.	ವಿದ್ಯಾಭ್ಯಾಸ	14530	13.99
5.	ಇತರೆ	4370	4.21
	ಒಟ್ಟು	**103,840**	**100.00**

ಕೋಷ್ಟಕ 3 : ಕ್ಷೀರ ಕ್ಷೇತ್ರದಲ್ಲಿನ ಕಾರ್ಮಿಕ ಬಳಸುವಿಕೆ ಮಾದರಿ

ಕ್ರ. ಸಂ.	ವಿವರ	ಯುನಿಟ್	ಸಂಖ್ಯೆ	ಮೊತ್ತ (ರೂ)	ಒಟ್ಟು ಶೇ.
1.	ಹುಲ್ಲುಗಾವಲು	ಮಾನವ ದಿನಗಳು	4.53	453.00	13.63
2.	ಕಟ್ಟಿ ಮೇಯಿಸುವದು	ಮಾನವ ದಿನಗಳು	8.60	860.00	25.88
3.	ಕೊಟ್ಟಿಗೆ ಸ್ವಚ್ಛ ಗೊಳಿಸುವದು	ಮಾನವ ದಿನಗಳು	7.30	730.00	21.97
4.	ಜಾನುವಾರುಗಳನ್ನು ಸ್ವಚ್ಛಗೊಳಿಸುವದು	ಮಾನವ ದಿನಗಳು	2.30	230.00	6.92
5.	ಹಾಲು ಹಿಂಡುವದು	ಮಾನವ ದಿನಗಳು	4.35	435.00	13.09
6.	ಸಾರಿಗೆ ಹಾಗೂ ಹಾಲಿನ ವಿತರಣೆ	ಮಾನವ ದಿನಗಳು	3.80	380.00	11.44
7.	ಕಸ ಕಡ್ಡಿಗಳನ್ನು ಸಂಗ್ರಹಿಸುವದು	ಮಾನವ ದಿನಗಳು	2.35	235.00	7.07
	ಒಟ್ಟು ಕಾಮಿಕ ವೆಚ್ಚ		**33.23**	**3323**	**100.00**

ಕೋಷ್ಟಕ 4 : ಹೈನುಗಾರಿಕೆ ಉದ್ಯಮದಲ್ಲಿ ಕಾಬ್ ಡಗ್ಲಾಸ್ ಪ್ರಡೊಕ್ಷನ್ ಫಂಕ್ಷನ್ ಲೆಕ್ಕಾಚಾರ

ಕ್ರ.ಸಂ.	ಸ್ಪಷ್ಟೀಕರಣಾತ್ಮಕ ವೆರಿಬಲ್	ಕೋ–ಎಫಿಸಿಯಂಟ್ಸ
1	ಇಂಟರಸೆಪ್ಟ ಬಿ	3.1957*** (1.2187)
2	ಕೂಲಿ (ಮಾನವ ದಿನಗಳು)	–1.198** (0.3577)
3	ಒಣ ಮೇವು (ಕ್ವಿ)	0.971** (0.2936)
4	ಹಸಿರು ಮೇವು (ಕ್ವಿ)	0.047 (0.0656)
5	ಬೂಸ (ಕ್ವಿ)	0.234** (0.0861)
6	ಪಶುವೈದ್ಯಕೀಯ ಸೇವೆಗಳು (ರೂ)	0.130 (0.1030)
7	$ಆರ್^2$	0.69
8	ಹೊಂದಿಸಿದ $ಆರ್^2$	0.66
9	'ಎಫ್' ಮೌಲ್ಯ	19.83
10	ರೀರ್ನ್ ಸ್ಕೇಲ್	0.1843

ಟಿಪ್ಪಣಿ ಕೌಸಿನಲ್ಲಿ ಕೊಟ್ಟ ಸಂಖ್ಯೆಗಳು ಡರ್ಡ ಎರರ
* 1% ಮಹತ್ವವನ್ನು ಸೂಚಿಸುವದು
** 5% ಮಹತ್ವವನ್ನು ಸೂಚಿಸುವದು
*** 10% ಮಹತ್ವವನ್ನು ಸೂಚಿಸುವದು

ಕೋಷ್ಟಕ 5. ಹೈನುಗಾರಿಕೆ ಉದ್ಯಮದಲ್ಲಿ ಮಾರ್ಜಿನಲ್ ವಾಲ್ಯೂ ಪ್ರೋಡಕ್ಟ ಮತ್ತು ಮಾರ್ಜಿನಲ್ ಫ್ಯಾಕ್ಟರ್ ಕಾಸ್ಟ್ ದರ ಅನುಪಾತ

ಕ್ರ. ಸಂ.	ಸಂಪನ್ಮೂಲ	ಎವಿಪಿ ಎಫ್‌ಸಿ	ಎವಿಪಿ ಮ್ಹಿಪಿ	ಎವಿಪಿ/ಎಫ್‌ಸಿ ಎವಿಎಫ್‌ಸಿ
	ಕೂಲಿ (ಮಾನವ ದಿನಗಳು)	100	–23.44	–0.23
2	ಒಣ ಮೇವು (ಕ್ವಿಂ)	250	81.29	0.33
3	ಹಸಿರು ಮೇವು (ಕ್ವಿಂ.)	80	47.54	0.59
4	ಬೂಸಾ (ಕ್ವಿಂ.)	1200	24.63	0.02
5	ಪಶುವೈದ್ಯಕೀಯ ಸೇವೆಗಳು (ರೂ)	1.00	6.27	6.27

ಭಾರತೀಯ ಹೈನುಗಾರಿಕೆ ಉದ್ಯಮ ಮತ್ತು ಬೆಳವಣಿಗೆ

ಕೀರ್ತಿ. ಎಸ್.[1] ಗುಳೇದಗುಡ್ಡ. ಎಸ್.ಎಸ್.[2]

[1] ಹಿರಿಯ ಎಮ್.ಎಸ್ಸಿ. (ಕೃಷಿ) ವಿದ್ಯಾರ್ಥಿ, ಕೃಷಿ ಅರ್ಥಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ವಿಜಾಪೂರ, [2] ಸಹ ಸಂಶೋಧನಾ ನಿರ್ದೇಶಕರು, ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಾಪೂರ, ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಭಾರತ ದೇಶವು ಹಾಲು ಉತ್ಪಾದನೆ ಹಾಗೂ ಸೇವನೆಯಲ್ಲಿ ಮುಂಚೂಣಿಯಲ್ಲಿದ್ದು ಅದರ ಉತ್ಪಾದನೆ 2020 ರವೇಳೆಗೆ ಯೂರೋಪಿಯನ್ ಒಕ್ಕೂಟದ ಒಟ್ಟು ಹಾಲು ಉತ್ಪಾದನೆಯಷ್ಟು ಸಮನಾದಷ್ಟು ಹಾಲು ಉತ್ಪಾದಿಸಲಿದೆ ಎಂದು ಅಂದಾಜಿಸಲಾಗಿದೆ. ಉತ್ಕೃಷ್ಟ ಗುಣಮಟ್ಟದ ಹಾಲು ಉತ್ಪನ್ನಗಳಿಂದಷ್ಟೇ ಅಲ್ಲದೆ ಬಡ ರೈತಾಪಿ ವರ್ಗದವರ ಕಲ್ಯಾಣದ ದೃಷ್ಟಿಯಿಂದ ಮಹತ್ವ ಪಡೆದಿದೆ. ಜಾಗತೀಕರಣದ ಪರಿಣಾಮವಾಗಿ ವಿಶ್ವ ಹೈನುಗಾರಿಕೆ ಮಾರುಕಟ್ಟೆಯು ಸರಬರಾಜಿನ ಕಡೆಯಿಂದ

ಬೇಡಿಕೆ ಆಧಾರಿತ ಮಾರುಕಟ್ಟೆಯಡೆಗೆ ಮುಖಮಾಡಿದೆ. ಕಳೆದ ದಶಕದಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟು ಶೇಕಡ 3% ಪ್ರತಿ ವರ್ಷದಂತೆ ಬೆಳವಣಿಗೆಯಾಗಿದ್ದು, ಹಾಲು ಉತ್ಪಾದನೆ 2% ಹೆಚ್ಚಾಗಿರುವುದು ಕಂಡು ಬಂದಿದೆ. ಈ ಚಿತ್ರಣಗಳು ಅಂತಾರಾಷ್ಟ್ರೀಯವಹಿವಾಟು ಹಾಗೂ ಹೆಚ್ಚಾಗುತ್ತಿರುವ ಕ್ರೂಡೀಕೃತ ಉತ್ಪಾದನೆಯನ್ನು ಪುಷ್ಟೀಕರಿಸುತ್ತದೆ. 2012–13 ಇಸವಿಯ ವೇಳೆಯಲ್ಲಿ 1,32,431 ಸಾವಿರ ಟನ್ ನಷ್ಟು ಹಾಲು ಉತ್ಪಾದನೆಯಾಗಿದ್ದು ಅದರಲ್ಲಿ 5,718 ಸಾವಿರ ಟನ್ ನಷ್ಟು ಹಾಲು ಕರ್ನಾಟಕದ ಪಾಲಾಗಿದೆ. ಪ್ರತಿ ಮನುಷ್ಯನಿಗೆ ಕರ್ನಾಟಕದಲ್ಲಿ 244 ಗ್ರಾಂ. ಹಾಲು ಪ್ರತಿ ದಿನಕ್ಕೆ 2012–13 ರಲ್ಲಿ ಲಭ್ಯವಿದ್ದು ಇದು ದೇಶದ ಪ್ರತಿ ಮನುಷ್ಯನಿಗೆ ಒಂದು ದಿನಕ್ಕೆ ಲಭ್ಯವಿರುವ ಹಾಲಿನ ಮೊತ್ತಕ್ಕಿಂತ ಕಡಿಮೆ ಇದೆ. 2004–05 ಮತ್ತು 2011–12 ಸಾಲಿಗೆ ಹೋಲಿಸಿದರೆ ಒಟ್ಟು ಹಾಲು ಉತ್ಪನ್ನಗಳ ಮೊತ್ತವು ರೂ. 1,23,907 ಕೋಟಿ ಇಂದ ರೂ. 3,05,484 ಕೋಟಿಗೆ ಏರಿಕೆಯಾಗಿರುವುದು ಋಣಾತ್ಮಕವಾಗಿದೆ. ಪ್ರತಿ ಮನುಷ್ಯನ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೇಲಿನ ಖರ್ಚಿನಲ್ಲಿ 2000–01 ರಿಂದ 2009–10 ವೇಳೆಯಲ್ಲಿ ಹೆಚ್ಚಾಗಿದ್ದು ಇದರಲ್ಲಿ ಎಲ್ಲ ವರ್ಷಗಳಲ್ಲಿಯೂ ನಗರ ನಿವಾಸಿಗಳ ಪಾಲು ಗ್ರಾಮೀಣ ಭಾಗದವರಿಗಿಂತ ಹೆಚ್ಚಿದೆ. ಭಾರತವು ರೂ. 3,318.3 ಕೋಟಿ ಬೆಲೆ ಬಾಳುವ 1,59,228.52 ಮೆಟ್ರಿಕ್ ಟನ್ ನಷ್ಟು ಹಾಲು ಉತ್ಪನ್ನಗಳನ್ನು ರಫ್ತು ಮಾಡಿದೆ. ಬಾಂಗ್ಲಾದೇಶ, ಈಜಿಪ್ಟ, ಅರಬ್ ಗಣರಾಜ್ಯ, ಅರಬ್ ಎಮಿರೇಟ್ಸ ಒಕ್ಕೂಟ, ಅಲ್ಜೀರಿಯಾ, ಎಮೆನ್ ಗಣರಾಜ್ಯ ಹಾಗೂ ಪಾಕಿಸ್ಥಾನ ದೇಶಗಳು ಭಾರತೀಯ ಹಾಲು ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ಪ್ರಮುಖ 6 ರಾಷ್ಟ್ರಗಳಾಗಿವೆ. ಗಣನೀಯವಾಗಿ ಹೆಚ್ಚುತ್ತಿರುವ ಹಾಲು ಉತ್ಪಾದನೆ, ರಫ್ತು, ಉದ್ಯೋಗಾವಕಾಶ, ಹಾಲಿನ ಬೆಲೆ ಭಾರತಕ್ಕೆ ಇರುವ ವಹಿವಾಟಿನ ಶಕ್ತಿ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ವಿಪುಲ ಅವಕಾಶಗಳನ್ನು ಇಮ್ಮಡಿಗೊಳಿಸುವತ್ತ ದಾಪುಗಾಲು ಇಟ್ಟಿದೆ.

ಪೀಠಿಕೆ: ಶೇ. 57 ರಷ್ಟು ಜನರು ಕೃಷಿಯ ಮೇಲೆ ಅವಲಂಬಿತರಾಗಿದ್ದು, ಶೇ. 73 ರಷ್ಟು ಗ್ರಾಮೀಣರ ದುಡಿಮೆ ಕೃಷಿ ಆಧಾರಿತವಾಗಿದೆ. 3ನೇ 4 ರಷ್ಟು ದುಡಿಮೆಯ ಬೇಡಿಕೆಯನ್ನು ಹೆಂಗಸರು ಪೂರೈಸುತ್ತಿದ್ದಾರೆ. ಇದು ಪಶು ಪಾಲನೆಯು ಲಿಂಗ ಸಮಾನತೆಯನ್ನು ಕಾಪಾಡುತ್ತಿರುವುದನ್ನು ಸೂಚಿಸುತ್ತದೆ. ?ನಸಂಖ್ಯೆ ಸ್ಫೋಟದ ಪರಿಣಾಮವಾಗಿ ಆಹಾರ ಮತ್ತು ಹಾಲಿನ ಉತ್ಪನ್ನಗಳ ಬೇಡಿಕೆಯು ಕ್ರಮೇಣವಾಗಿ ಏರುತ್ತಿದೆ. ಕಳೆದ ಎರಡು ದಶಕಗಳಲ್ಲಿ ಒಟ್ಟು ದೇಶೀಯ ಉತ್ಪನ್ನವು 4.8 ರಿಂದ 6.5% ವರೆಗೆ ಬೆಳವಣಿಗೆ ಕಂಡು ಬಂದಿದೆ. ಸಣ್ಣ, ಅತಿ ಸಣ್ಣ ರೈತರು ಹಾಗೂ ಭೂರಹಿತ ಕೂಲಿ ಕಾರ್ಮಿಕರು ಜಾನುವಾರುಗಳ ಪೋಷಣೆಯಿಂದ ಅಧಿಕ ಆದಾಯಗಳಿಸುತ್ತಿರುವುದೇ ಅಲ್ಲದೆ, ಈ ಕಾರ್ಯವು ಅವರಿಗೆ ಗ್ರಾಮೀಣಪ್ರದೇಶಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸುತ್ತಿದೆ. ಭಾರತೀಯ ಜಾನುವಾರು ರಂಗವು ವಿಶ್ವದಲ್ಲಿ ವಿಶಾಲವಾದ ರಂಗವಾಗಿದೆ. ಭಾರತದಲ್ಲಿ ವಿಶ್ವದಲ್ಲಿನ ಶೇ. 57 ರಷ್ಟು ಎಮ್ಮೆ, ಶೇ. 14.7 ರಷ್ಟು ದನಕರುಗಳು, ಶೇ. 20.4 ರಷ್ಟು ಮೆಲಕು ಚೀಲದ ಪ್ರಾಣಿಗಳು, ಶೇ. 2.4 ರಷ್ಟು ಒಂಟೆಗಳು, ಶೇ. 1.4 ರಷ್ಟು ಕುದುರೆಗಳು, ಶೇ. 1.5 ರಷ್ಟು ಹಂದಿಗಳನ್ನು ಮತ್ತು ಶೇ. 3.1 ಷ್ಟು ಕೋಳಿಗಳನ್ನು ಹೊಂದಿರುವುದು ಹೆಮ್ಮೆಯ ಸಂಗತಿ. 90 ಮಿಲಿಯನ್ ರಥುತರ ಕುಟುಂಬಗಳು 140 ಮಿ. ಹೆಕ್ಟೇರ್ ನಷ್ಟು ಪ್ರದೇಶದಲ್ಲಿ ಬೆಳೆಗಳನ್ನು ಬೆಳೆಯುತ್ತಿದ್ದು, 90 ಮಿ. ನಷ್ಟು ಹಾಲು ಕರೆಯುವ ಪ್ರಾಣಿಗಳನ್ನು ಸಾಕುತ್ತಿದ್ದಾರೆ. ಜಾನುವಾರುಗಳ ಉತ್ಪಾದನೆಯು ಗ್ರಾಮೀಣ ಜನತೆಗೆ ಆದಾಯ ಹಾಗೂ ಉದ್ಯೋಗಾವಕಾಶಗಳನ್ನು ನೀಡುತ್ತಿದೆ. ಭಾರತವು ವಿಶ್ವದಲ್ಲಿನ ಅತಿ ಹೆಚ್ಚು ಹಾಲು ಉತ್ಪಾದಿಸುವ ಹಾಗೂ ಸೇವಿಸುವ ರಾಷ್ಟ್ರಗಳ ಪೈಕಿ ಮುಂಚೂಣಿಯಲ್ಲಿದೆ. ಭಾರತವು 2020 ರ ವೇಳೆಗೆ ಯುರೋಪ್ ಒಕ್ಕೂಟವು ಉತ್ಪಾದಿಸುವ ಹಾಲಿಗೆ ಸಮನಾದಷ್ಟು ಹಾಲು ಉತ್ಪಾದಿಸಲೆಂದು ಅಂದಾಜಿಸಲಾಗಿದೆ. ಭಾರತದಲ್ಲಿ ಅತಿ ಕಡಿಮೆ ವೆಚ್ಚದಲ್ಲಿ ಹಾಲನ್ನು ಉತ್ಪಾದಿಸಲಾಗುತ್ತಿದ್ದು, ಅದರ ಪಾಲು ಶೇ. 16 ರಷ್ಟು ವಿಶ್ವದ ಹಾಲಿನ ಉತ್ಪಾದನೆಯಷ್ಟಿದೆ. ಶೇ. 70 ರಷ್ಟು ಖರ್ಚು ಪಶು ಸಂಗೋಪನೆಯಲ್ಲಿ ತೊಡಗಿರುವ ರೈತರು ಸಣ್ಣ ಹಾಗೂ ಅತಿ ಸಣ್ಣ ರೈತರಾಗಿದ್ದು, ಅವರ ಪ್ರಕಾರ ಹೆಚ್ಚಿನ ಮೊತ್ತವನ್ನು ಮೇವಿನ ಮೇಲೆ ವಿನಿಯೋಗಿಸಲಾಗುತ್ತಿದೆ. ರೂ. 60,532.21 ಕೋ.ಗಳಷ್ಟು ನಷ್ಟ ಕೆಚ್ಚಲಿಂದ ಸಂಭವಿಸುತ್ತಿದೆ. ಅದರಲ್ಲಿ ರೂ. 4,365.32 ಕೋ. ಯಷ್ಟು ನಷ್ಟ ಅಸಮರ್ಪಕ ಕೆಚ್ಚಲಿನ ಪಶು ವೈದ್ಯಕೀಯ ನಿರ್ವಹಣೆಯಿಂದ ಸಂಭವಿಸುತ್ತಿದೆ. ಕಳೆದ ದಶಕದಲ್ಲಿ ಜಾಗತಿಕ ಹಾಲು ಉತ್ಪಾದನೆಯು ಶೇ. 2 ರಷ್ಟು ಬೆಳವಣಿಗೆ ಕಂಡಿದೆ. 2013–14ನೇ ಸಾಲಿನಲ್ಲಿ ಬಾಂಗ್ಲಾದೇಶ, ಈಜಿಪ್ಟ್, ಯುನೈಟೆಡ್ ಅರಬ್ ಎಮಿರೇಟ್ಸ್, ಅಲ್ಜೀರಿಯ, ಎಮೆನ್ ಗಣರಾಜ್ಯ ಹಾಗೂ ಪಾಕಿಸ್ತಾನ, ಭಾರತವು ರಫ್ತು ಮಾಡುವ ಪ್ರಮುಖ ರಾಷ್ಟ್ರಗಳಾಗಿವೆ. ಹೆಚ್ಚುತ್ತಿರುವ ಹಾಲಿನ ಉತ್ಪಾದನೆ, ರಫ್ತು, ಉದ್ಯೋಗಾವಕಾಶಗಳು ಏರುತ್ತಿರುವ ಹಾಲು ಹಾಗೂ ಹಾಲಿನ ಉತ್ಪನ್ನಗಳ ಮೌಲ್ಯ ಭಾರತಕ್ಕೆ ಇರುವ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ವಿಪುಲ ಅವಕಾಶಗಳನ್ನು ಸೂಚಿಸುತ್ತದೆ.

ಉದ್ದೇಶಗಳು

- ಜಾನುವಾರು ಜನಸಂಖ್ಯೆಯಲ್ಲಿನ ಬೆಳವಣಿಗೆಯನ್ನು ಅಧ್ಯಯನ ಮಾಡುವುದು
- ಭಾರತ ಹಾಗೂ ಕರ್ನಾಟಕದಲ್ಲಿನ ಹಾಲಿನ ಉತ್ಪಾದನೆಯನ್ನು ವಿಶ್ಲೇಷಿಸುವುದು.
- ಭಾರತದಲ್ಲಿನ ತಲಾ ಹಾಲಿನ ಲಭ್ಯತೆ ಹಾಗೂ ತಲಾ ಮಾಸಿಕ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೇಲಿನ ಖರ್ಚನ್ನು ವಿಶ್ಲೇಷಿಸುವುದು.
- ಭಾರತೀಯ ಹೈನುಗಾರಿಕೆ ಉದ್ಯಮದ ದೇಶೀಯ ಆರ್ಥಿಕ ಹಾಗೂ ಹಾಲಿನ ಉತ್ಪನ್ನಗಳ ಮೌಲ್ಯದ ಕೊಡುಗೆ ಮತ್ತು ಹಾಲಿನ ರಫ್ತನ್ನು ಅಭ್ಯಸಿಸುವುದು.

ಕಾರ್ಯವಿಧಾನ: ಮೇಲೆ ಉಲ್ಲೇಖಿಸಿರುವ ಉದ್ದೇಶಗಳಿಗನುಸಾರವಾಗಿ, ಅಧಿಕೃತ ಸಂಸ್ಥೆಗಳಾದ ರಾಷ್ಟ್ರೀಯ ಹೈನುಗಾರಿಕಾ ಅಭಿವೃದ್ಧಿ ಮಂಡಳಿಯ ವೆಬ್ ಸೈಟ್, ಇಂಡಿಯಾ ಸ್ಟಾಟ್ ವೆಬ್ ಸೈಟ್, ಪಶುಸಂಗೋಪನಾ ಇಲಾಖೆ, ಭಾರತ ಸರ್ಕಾರ ಇತ್ಯಾದಿ ಮೂಲಗಳಿಂದ ಮಾಹಿತಿಯನ್ನು ಕಲೆಹಾಕಲಾಯಿತು. ಸಂಖ್ಯಾಶಾಸ್ತ್ರದ ??????ಗಳಾದ ವಿಶ್ಲೇಷಣಾ ಸಲಕರಣೆ, ಕಾಂಪೌಂಡ್ ಆ್ಯನಿವಲ್ ಗ್ರೋತ್ ರೇಟ್ ಗಳನ್ನು ಪ್ರಯೋಗಿಸಲಾಗಿದೆ.

ಫಲಿತಾಂಶ ಹಾಗೂ ಚರ್ಚೆ: ಜಾನುವಾರುಗಳ ಜನಸಂಖ್ಯೆಯ ಬೆಳವಣಿಗೆಯನ್ನು ಕೋಷ್ಟಕ 1ರಲ್ಲಿ ಪ್ರಸ್ತುತಪಡಿಸಲಾಗಿದೆ. ಇದರ ಪ್ರಕಾರ, ಒಟ್ಟು ದನಕರುಗಳ ಜೀವಿ ಸಂಖ್ಯೆಯು 155.3 ಮಿ. ಇಂದ 199.1 ಮಿ.ಗೆ ಶೇ. 28.2 ರಷ್ಟು 1951 ಮತ್ತು 2007 ರಲ್ಲಿ ಹೆಚ್ಚಳವಾಗಿರುವುದಾಗಿ ಕಂಡು ಬಂದಿದೆ. ಒಟ್ಟು ಬೊವೈನ್ ಜೀವಿ ಸಂಖ್ಯೆಯು 198.7 ಮಿ. ಇಂದ 304.4 ಮಿ. ವರೆಗೆ ಅಂದರೆ ಶೇ. 80 ರಷ್ಟು ಬೆಳವಣಿಗೆ, 1951 ರಿಂದ 2007 ರ ವೇಳೆಯಲ್ಲಿ ಕಂಡಿದೆ. ಇದರಲ್ಲಿ ಕುದುರೆ, ಒಂಟೆ ಹಾಗೂ ಕತ್ತೆಗಳ ಹೊರತುಪಡಿಸಿ ಎಲ್ಲಾ ಪ್ರಾಣಿಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ.

ಕೋಷ್ಟಕ 2 ರ ಪ್ರಕಾರ, ಭಾರತ ಹಾಗೂ ಕರ್ನಾಟಕವು ಶೇ. 4.5 ಹಾಗೂ ಶೇ. 3.56 ರಷ್ಟು ಪ್ರತಿ ವರ್ಷ 2002–03 ರಿಂದ 2012–13 ರವರೆಗೆ ಬೆಳವಣಿಗೆಯಾಗಿದೆ. ಕರ್ನಾಟಕದ ಹಾಲಿನ ಉತ್ಪಾದನೆಯ ಬೆಳವಣಿಗೆಯು, ಭಾರತದ ಹಾಲು ಉತ್ಪಾದನೆಯ ಬೆಳವಣಿಗೆಗಿಂತ ಕಡಿಮೆ ಇರುವುದು ಕಳವಳಕಾರಿ ವಿಷಯವಾಗಿದೆ. ಭಾರತದ ಹಾಲಿನ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು 2002–03 ರಿಂದ 2012–13 ರ ಅವಧಿಯಲ್ಲಿ ಶೇ. 4.3 ರಿಂದ ಶೇ. 5.5 ರಷ್ಟು ಮಾತ್ರ ಇದೆ.

ಹಾಲು ಹಾಗೂ ಹಾಲಿನ ಉತ್ಪನ್ನಗಳ ಮೇಲಿನ ನಗರ ಹಾಗೂ ಗ್ರಾಮೀಣರ ತಲಾ ಖರ್ಚನ್ನು ಕೋಷ್ಟಕ–3 ರಲ್ಲಿ ಪ್ರಸ್ತುತಪಡಿಸಲಾಗಿದೆ. ಇದರಲ್ಲಿ ಉಲ್ಲೇಖವಾಗಿರುವಂತೆ, ನಗರ ಜನತೆಯ ತಲಾ ಹಾಲು ಹಾಗೂ ಹಾಲಿನ ಉತ್ಪನ್ನಗಳ ಮೇಲಿನ ಖರ್ಚು ಗ್ರಾಮೀಣರ ತಲಾ ಖರ್ಚಿಗಿಂತ ಎಲ್ಲ ವರ್ಷಗಳಲ್ಲಿಯೂ (2004–05 ರಿಂದ 2009–10 ರವರೆಗೆ) ಅಧಿಕವಾಗಿದೆ. ಈ ಅಂಕಿ ಅಂಶಗಳು ಹಾಲನ್ನು ಉತ್ಪಾದಿಸುವ ಗ್ರಾಮೀಣ ಜನತೆಯ ತಾಜಾ ಹಾಲಿನ ಮೇಲನ್ನು ಸೂಚಿಸುತ್ತದೆ. ಭಾರತ (233 ಗ್ರಾಂ/ದಿನ) ಹಾಗೂ ಕರ್ನಾಟಕದಲ್ಲಿ (290 ಗ್ರಾಂ/ದಿನ) ತಲಾ ಲಭ್ಯವಿರುವ ಹಾಲಿನ ಪ್ರಮಾಣದಲ್ಲಿ 2011–12 ಅಂಖಿ ಅಂಶಗಳನ್ನು 2004–05 ಕ್ಕೆ ತುಲನೆ ಮಾಡಿದಾಗ ಭಾರತ (290 ಗ್ರಾಂ/ದಿನ)ಹಾಗೂ ಕರ್ನಾಟಕ (244 ಗ್ರಾಂ/ದಿನ) ತಲಾ ಲಭ್ಯವಿರುವ ಹಾಲಿನಲ್ಲಿ ಹೆಚ್ಚಳವಾಗಿರುವುದಾಗಿ ಕಂಡು ಬಂದಿದೆ. ವಿಪರ್ಯಾಸವೆಂದರೆ ಕರ್ನಾಟಕದಲ್ಲಿ ತಲಾ ಲಭ್ಯವಿರುವ ಹಾಲಿನ ಪ್ರಮಾಣವು ಭಾರತಕ್ಕಿಂತ ಎಲ್ಲ ವರ್ಷಗಳಲ್ಲಿಯೂ ಕಡಿಮೆ ಇದೆ.

ಜಾನುವಾರು ರಂಗದ ಒಟ್ಟು ದೇಶೀಯ ಉತ್ಪನ್ನಕ್ಕೆ ನೀಡುವ ಕೊಡುಗೆ 2004–05 ಮತ್ತು 2011–12ರ ಸಾಲಿಗೆ ತುಲನೆ ಮಾಡಿದಾಗ ರೂ. 1,19, 333 ಕೋ. ಇಂದ ರೂ. 3,27,838 ಕೋ. ಏರಿಕೆಯಾಗಿದೆ. ಇದರ ಬೆನ್ನಲ್ಲೆ ಒಟ್ಟು ದೇಶೀಯ ಉತ್ಪನ್ನಕ್ಕೆ ಕೃಷಿ ಕ್ಷೇತ್ರವು ನೀಡುತ್ತಿರುವ ಕೊಡುಗೆಯಲ್ಲಿ ಶೇ. 15.18 ರಷ್ಟು ಇಳಿಕೆಯಾಗಿದೆ. ಕೃಷಿ ಹಾಗೂ ಜಾನುವಾರುಗಳ ಮೌಲ್ಯವು ಕುಸಿಯುತ್ತಿದೆ.

ಹಾಲಿನ ಗುಂಪಿಗೆ ಸೇರುವ ಉತ್ಪನ್ನಗಳ ಮೌಲ್ಯವು ರೂ. 1,23,907 ಕೋ (2004–05) ಇಂದ ರೂ. 3,05,484 ಕೋ. (2011–12) ಗಳಷ್ಟು ಪ್ರಗತಿಯಾಗಿರುವುದು ಧನಾತ್ಮಕ ಬೆಳವಣಿಗೆಯಾಗಿದೆ. ಆದರೆ ಜಾನುವಾರು ಉತ್ಪನ್ನಗಳಲ್ಲಿನ ಹಾಲಿನ ಗುಂಪಿನ ಪಾಲು ಶೇ. 68.82 ರಿಂದ 66.55 ರವರೆಗೆ ಇಳಿಕೆಯಾಗಿದೆ. ಹಾಲನ್ನು ಉತ್ಪಾದಿಸುವ ಖರ್ಚು ದಿನೇ ದಿನೇ ಹೆಚ್ಚಳವಾಗುತ್ತಿರುವುದೂ ಇದಕ್ಕೆ ಕಾರಣ ಇರಬಹುದಾಗಿದೆ.

ಬಾಂಗ್ಲಾದೇಶ, ಈಜಿಪ್ಟ್, ಯುನೈಟೆಡ್ ಅರಬ್ ಎಮಿರೇಟ್ಸ್, ಅಲ್ಜೀರಿಯ, ಏಮೆನ್ ಗಣರಾಜ್ಯ ಇತ್ಯಾದಿ ರಾಷ್ಟ್ರಗಳು ಭಾರತದ ಹಾಲಿನ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ಪ್ರಮುಖ ರಾಷ್ಟ್ರಗಳಾಗಿವೆ. 2011–12 ರಿಂದ 2013–14 ರವರೆಗೆ ಬಾಂಗ್ಲಾದೇಶ, ಈಜಿಪ್ಟ್, ಯುನೈಟೆಡ್ ಅರಬ್ ಎಮಿರೇಟ್ಸ್ ರಾಷ್ಟ್ರಗಳು ಸತತ 3 ವರ್ಷ ಹೆಚ್ಚಚ್ಚು ಆಮದು ಮಾಡಿಕೊಳ್ಳುತ್ತಿವೆ. ಅಲ್ಜೀರಿಯ, ಏಮೆನ್ ಗಣರಾಜ್ಯ, ಪಾಕಿಸ್ತಾನ 2011–12 ರಲ್ಲಿ ಆಮದು ಮಾಡಿಕೊಂಡಿಲ್ಲ ಆದರೆ ಮುಂದಿನ 2 ವರ್ಷಗಳಲ್ಲಿ ಭಾರತವು ಪ್ರಮಾಣ ಹಾಗೂ ಮೌಲ್ಯವನ್ನು ಗಣನೆಗೆ ತೆಗೆದುಕೊಂಡಾಗ ಈ ಎರಡು ದೇಶಗಳಿಗೆ ಹೆಚ್ಚಾಗಿ ರಫ್ತು ಮಾಡಿದೆ.

ಕಳೆದ ಒಂದು ದಶಕದಿಂದ ಭಾರತವು ಹಾಲಿನ ಉತ್ಪಾದನೆಯಲ್ಲಿ ಮುಂಚೂಣಿಯನ್ನು ಕಾಯ್ದುಕೊಂಡಿದೆ. ಹಾಲಿನ ಉತ್ಪಾದನೆಯಲ್ಲಿ ಹೆಚ್ಚಳವಾಗಿರುವುದರಿಂದ ತಲಾ ಹಾಲಿನ ಲಭ್ಯತೆಯಲ್ಲಿ ಭಾರತ ಹಾಗೂ ಕರ್ನಾಟಕದಲ್ಲಿ ಹೆಚ್ಚಾಗಿದೆ. ಒಟ್ಟು ದೇಶೀಯ ಉತ್ಪಾದನೆಯಗೆ ಜಾನುವಾರು ರಂಗದ ಕೊಡುಗೆ ಅಲ್ಪ ಪ್ರಮಾಣದಲ್ಲಿ ಕುಸಿದಿದೆ. ಇಷ್ಟಾದರೂ ಸಹ ಹಾಲಿನ ಉತ್ಪನ್ನಗಳ ಮೌಲ್ಯವು ಹೆಚ್ಚಾಗಿರುವುದು ತೃಪ್ತಿಕರವಾಗಿದೆ. ಜಾನುವಾರು ಕ್ಷೇತ್ರದ ಮೌಲ್ಯಕ್ಕೆ ಹೈನುಗಾರಿಕೆ ರಂಗವು ನೀಡುವ ಕೊಡುಗೆಯಲ್ಲಿ ಅಲ್ಪ ನಕಾರಾತ್ಮಕ ಪ್ರಗತಿ ದಾಖಲಿಸಿದೆ. ದೇಶವು ಬಹುತೇಕ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡುತ್ತಿರುವುದು, ನಾವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಹೊಂದುವಂತಹ ಹಾಲಿನ ಉತ್ಪನ್ನಗಳನ್ನು ಉತ್ಪಾದಿಸುವ ಅಗತ್ಯತೆಯನ್ನು ಪ್ರತಿಪಾದಿಸುತ್ತದೆ. ಈ ಬೆಳವಣಿಗೆಯು ಭಾರತಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ವಿಪುಲ ಅವಕಾಶವನ್ನು ತೋರಿಸುತ್ತದೆ. ನಮ್ಮ ಹೈನುಗಾರಿಕೆ ಉದ್ದಿಮೆಯನ್ನು ಸೂಕ್ತವಾದ ಹೋಜನೆ ಹಾಗೂ ಕಾರ್ಯಮಗಳ ಮೂಲಕ ಇನ್ನಷ್ಟು ಅಭಿವೃದ್ಧಿ ಮಾಡಬಹುದಾಗಿದೆ.

Anonymous,2013, Annual Report 2012-13, Department of Animal Husbandry, GOI.
Anonymous,2013, Karnataka Economic Survey-2011-12.
Anonymous,2013, Karnataka Economic Survey-2012-13.
Reshma M and Babu, A,S., 2014, Demand and supply of milk in Karnataka By 2012, Are we heading towards a crises?, International Journal of Innovative Research in Science, Engineering and Technology.,Vol3(4),Page 11117 – 11123.
www.agriexchange.apeda.gov.in
www.indiastat.com
www.nddb.org

ಪೌಷ್ಟಿಕ ಭದ್ರತೆಗಾಗಿ ಕಿರುಧಾನ್ಯ

ಕೆ. ಗೀತಾ, ಶೀವಲೀಲಾ ಎಚ್. ಬಿ., ಪಳನಿಮುತ್ತು ಮತ್ತು ಸವಿತಾ ಹುಲಮನಿ
ಅಖಿಲ ಭಾರತ ಸಮನ್ವಯ ಸಂಶೋಧನಾ ಕಾರ್ಯಕ್ರಮ, ಗೃಹ ವಿಜ್ಞಾನ (ಆಹಾರ ಮತ್ತು ಪೋಷಣೆ), ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು–೬೫

ಕಿರುಧಾನ್ಯಗಳೆಂದರೆ ರಾಗಿ, ನವಣೆ, ಹಾರಕ, ಸಾಮೆ, ಬರುಗು ಮತ್ತು ಊದಲು ಬೆಳೆಗಳ ಸಮೂಹ. ಈ ಕಿರುಧಾನ್ಯಗಳು ಹೆಚ್ಚು ಪೌಷ್ಟಿಕತೆಗೆ ಹೆಸರಾಗಿದ್ದು ಈ ಧಾನ್ಯಗಳಲ್ಲಿ ಶೇಖಡ ೭–೧೨ ಪ್ರೋಟೀನ್, ಶೇಖಡ ೭೫–೮೫ ಶೇಖಡ ೧–೪ ಕೊಬ್ಬು, ಶೇಖಡ ೨–೩ ಖನಿಜಗಳು ಹಾಗೂ ಫೈಟೊ ಕೆಮಿಕಲ್ಸ್ ಮತ್ತು ಸೂಕ್ಷ್ಮಪೋಷಕಾಂಶಗಳನ್ನು ಹೊಂದಿರುತ್ತವೆ. ಕಿರುಧಾನ್ಯಗಳ ಬಳಕೆಯಿಂದ ಮಧುಮೇಹ, ಹೃದಯರೋಗ, ಕರುಳಿನ ಬೇನೆ,ಬೊಜ್ಜು ಇತ್ಯಾದಿ ರಕ್ತದಲ್ಲಿನ ಕೋಲೆಸ್ಟ್ರಾಲ್, ಹೃದ್ರೋಗ ವ್ಯಾದಿಗಳನ್ನು ನಿರ್ವಹಣೆ ಮಾಡಬಹುದಾಗಿದ್ದು ಹಾಗೂ ಮಲಬದ್ಧತೆ, ಕರುಳಿನ ಕ್ಯಾನ್ಸರ್‌ಗಳನ್ನು ದಿನನಿತ್ಯ ಕಿರುಧಾನ್ಯಗಳ ಬಳಕೆಯನ್ನು ಹೆಚ್ಚಿಸಲು ಸಾಂಪ್ರದಾಯಿಕ ಸಂಸ್ಕರಣೆ ಹಾಗೂ ಮೌಲ್ಯವರ್ಧನೆಗೆ ಕೈಗೂಡಿಸಬೇಕು. ಧಾನ್ಯಗಳ ಪೂರ್ಣಕಾಳುಗಳ ಹಿಟ್ಟು, ಹೊಟ್ಟು ಬೇರ್ಪಡಿಸಿದ ಹಿಟ್ಟು, ಅರಳು, ಅರಳಿಟ್ಟು ಮಾಡಿಕೊಂಡು ದಿನನಿತ್ಯ ಬಳಸಬಹುದು. ಹಿಟ್ಟಿನಿಂದ ರೊಟ್ಟಿ, ಮುದ್ದೆ, ದೋಸೆ, ಇಡ್ಲಿ, ಸಾವಿಗೆ, ಕರಿದ ತಿನಿಸುಗಳು ಬೇಕರಿ ತಿನಿಸುಗಳು, ಖಾರಾ, ಸಿಹಿ ತಿಂಡಿಗಳನ್ನು ತಯಾರಿಸಬಹುದು. ಈ ಕಿರುಧಾನ್ಯಗಳಿಂದ ಮಾಲ್ಟ್ ತಯಾರಿಸಿ ಪೂರಕ ಪಾನಿಯ ಇಲ್ಲವೆ ಆರೋಗ್ಯದಾಯಕ ತಿನಿಸು ತಯಾರಿಸಿ ನ್ಯೂನ ಪೋಷಣೆ ನಿವಾರಿಸಬಹುದು ಹಾಗೂ ಶೀಶು ಪೂರಕ ಆಹಾರವಾಗಿ ಬಳಸಬಹುದು. ಆಧುನಿಕ ತಿನಿಸುಗಳಾದ ಕುರಕುರೆ, ನೂಡಲ್ಸ್ ಮುಂತಾದವುಗಳಲ್ಲದೆ ನಿಗದಿತ ರೀತಿಯಲ್ಲಿ ಸಂಸ್ಕರಿಸಿ ಇತರೆ ಅವಶ್ಯಕ ಆಹಾರ ವಸ್ತುಗಳನ್ನು ಸೂಕ್ತವಾಗಿ ಮಿಶ್ರಮಾಡಿ ಹಲವು ರೋಗಗಳ ತಡೆ ಹಾಗೂ ನಿವಾರಣೆಗೆ ಬೇಕಾದ ರೀತಿಯಲ್ಲಿ ನಿತ್ಯದ ಆಹಾರವಾಗಿ ಬಳಸಿಕೊಳ್ಳಬಹುದು.

"ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ" ಎಂಬುದು ಸುಪ್ರಸಿದ್ಧ ಗಾದೆ ಮಾತು. ಜನ ಸಾಮಾನ್ಯರ ಜೀವನಾನುಭವದ ಈ ಗಾಧೆಯನ್ನು ವಿಶ್ಲೇಷಿಸಿ ನೋಡಿದರೆ, ರೋಗಗಳಿಗೆ ಮುಖ್ಯ ಕಾರಣ ನಾವು ಮಾಡುವ ತಪ್ಪು ಊಟದ ಪದ್ಧತಿಯೆ ಕಾರಣವೆಂದು ತೋರಿ ಬರುತ್ತದೆ. ಮನುಷ್ಯರಿಗೆ ಎಲ್ಲ ಭಾಗ್ಯಕ್ಕಿಂತ ಆರೋಗ್ಯ ಭಾಗ್ಯವೇ ದೊಡ್ಡದ್ದು. ಇತ್ತೀಚೀನ ಸಮೀಕ್ಷೆಯ ಪ್ರಕಾರ ಆಹಾರದ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ರಕ್ತಹೀನತೆಯಿಂದ ಬಳಲುತ್ತಿರುವುದು ಕಂಡುಬಂದಿದೆ. ಗರ್ಭಿಣಿ ಸ್ತ್ರೀಯರಲ್ಲಿ ರಕ್ತಹೀನತೆ ಮತ್ತು ಅಪೌಷ್ಠಿಕ ಆಹಾರ ಸೇವನೆಯಿಂದ ಹುಟ್ಟುವ ಮಕ್ಕಳಲ್ಲಿ ಹಲವಾರು ತೊಂದರೆಗಳು ಕಂಡು ಬರುತ್ತಿವೆ. ನಮ್ಮ ದೇಶದಲ್ಲಿ, ಅಪುಷ್ಟಿಕ ಆಹಾರ ಸೇವನೆಗೆ ಬಡತನ ಒಂದೇ ಕಾರಣವಲ್ಲ, ಅನೇಕ್ ಅಜನರಲ್ಲಿ ಪೌಷ್ಟಿಕ ಆಹಾರ ಮತ್ತು ಪೋಷಣೆಯ ಬಗ್ಗೆ ತಿಳುವಳಿಕೆ ಇಲ್ಲದೇ ಇರುವುದು ಕೂಡ ಮುಖ್ಯ ಕಾರಣ. ಆದ್ದರಿಂದ ಜನ ಸಾಮಾನ್ಯರು ಆಹಾರ ಪದಾರ್ಥಗಳ ಮತ್ತು ಅವುಗಳಲ್ಲಿನ ಪೌಷ್ಟಿಕತೆಯ ಬಗ್ಗೆ ತಿಳಿದುಕೊಳ್ಳುವುದು ಅತಿ ಅಗತ್ಯ.

ಧಾನ್ಯಗಳು ನಮ್ಮ ದಿನಿತ್ಯದ ಆಹಾರ ಪದ್ಧತಿಯ ಮುಖ್ಯ ಭಾಗವಾಗಿವೆ. ದಿನನಿತ್ಯ ಬಳಕೆಯಲ್ಲಿರುವ ಧಾನ್ಯಗಳನ್ನು, "ಮುಖ್ಯ ಧಾನ್ಯಗಳು" ಮತ್ತು "ಕಿರುಧಾನ್ಯಗಳೆಂದು" ವಿಂಗಡಿಸಲಾಗಿದೆ. ಅಕ್ಕಿ ಹಾಗೂ ಗೋಧಿ ಇಂದು ಅತಿಯಾಗಿ ಬಳಕೆಯಲ್ಲಿರುವ ದಿನನಿತ್ಯದ ಮುಖ್ಯ ಧಾನಯ್ಗಳಾಗಿವೆ. ಆದರೆ ಕಿರು ಧಾನ್ಯಗಳಾದ ರಾಗಿ, ಸಜ್ಜೆ, ನವಣೆ, ಸಾಮೆ, ಊದಲೂ ಮತ್ತು ಹಾರಕಗಳ ಬಳಕೆ ಅತಿ ಕಡಿಮೆ ಇದ್ದು ಇವುಗಳನ್ನು "ಒರಟು ಧಾನ್ಯಗಳೆಂದು" ಮತ್ತು "ತೃಣಧಾನ್ಯಗಳೆಂದು" ಹೆಸರಿಸಲಾಗಿದೆ. ಹೆಸರೆ ತಿಳಿಸುವಂತೆ ಕಿರುಧಾನ್ಯ ಎಂದರೆ ಚಿಕ್ಕದಾದ ಧಾನ್ಯ ಎಂದರ್ಥ, ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವ ಗಾದೆಯಂತೆ, ಇವುಗಳು ನಮ್ಮೆಲರಿಗೂ ಸಿರಿಧಾನ್ಯಗಳಾಗಿವೆ ಎನ್ನಬಹುದು. ಏಕೆಂದರೆ ಕಾಳುಗಳ ಗಾತ್ರ ಚಿಕ್ಕದಾದರೂ ಪೌಷ್ಠಿಕತೆ ಮತ್ತು ಔಷಧೀಯ ಗುಣಗಳನ್ನು ಹೇರಳವಾಗಿ ಕಿರುಧಾನ್ಯಗಳು ಹೊಂದಿವೆ.

ಈ ಬೆಳೆಗಳಿಗೆ ಸುಮಾರು 10 ಸಾವಿರ ವರ್ಷಗಳ ಬೇಸಾಯ ಇತಿಹಾಸವಿದ್ದು, ಈ ಬೆಳೆಗಳನ್ನು ನಮ್ಮ ದೇಶದಲ್ಲಿ ಕರ್ನಾಟಕ, ಮಧ್ಯಪ್ರದೇಶ, ಆಂಧ್ರಪ್ರದೇಶ, ಮಹಾರಾಷ್ಟ್ರ, ಗುಜರಾತ್, ಜಾರ್ಖಂಡ, ಉತ್ತರಪ್ರದೇಶ ಹಾಗೂ ಉತ್ತರಖಾಂಡ ರಾಜ್ಯಗಳಲ್ಲಿ ಬೆಳೆಯಲಾಗುತ್ತದೆ. ನವಣೆಯನ್ನು ದಕ್ಷಿಣ ಕರ್ನಾಟಕದಲ್ಲಿ ರಾಗಿ ಮತ್ತು ಇತರೆ ಬೆಳೆಗಳ ಜೊತೆ ಮಿಶ್ರ ಬೆಳೆಯಾಗಿ ಬೆಳೆದರೆ, ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಮುಖ್ಯವಾಗಿ ಬೆಳೆಯುತ್ತಾರೆ. ಹಳದಿ ಬಣ್ಣದ ಕಾಳುಗಳು ಚಿನ್ನದಂತೆ ಪಳಪಳ ಹೊಳೆಯುತ್ತವೆ. ಹಾಗೆಯೇ, ಸಾಮೆಯನ್ನು ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ, ಮುಂಗಾರಿನಲ್ಲಿ ಏಕ ಬೆಳೆಯಾಗಿ ಬೆಳೆಯುತ್ತಾರೆ. ಹಾರಕ ಮತ್ತು ಬರಗು ಬೆಳೆಯನ್ನು ಉತ್ತರ ಕರ್ನಾಟಕದಲ್ಲಿ ಬೆಳೆಯುತ್ತಾರೆ. ಇನ್ನೂ ರಾಗಿ ದಕ್ಷಿಣ ಕರ್ನಾಟಕದ ಪ್ರಮುಖ ಬೆಳೆಗಳಲ್ಲೊಂದು. ಹಾಗೆಯೇ ಸಜ್ಜೆ, ದಕ್ಷಿಣ ಕರ್ನಾಟಕದಲ್ಲಿ ಮಿಶ್ರ ಬೆಳೆಯಾಗಿ ಬೆಳೆದರೆ, ಉತ್ತರ ಕರ್ನಾಟಕದಲ್ಲಿ ಮೇವಿಗಾಗಿ ಬೆಳೆಯುತ್ತಾರೆ.

ಈ ಕಿರುಧಾನ್ಯಗಳ ಮುಖ್ಯವಾದ ವಿಶಿಷ್ಟತೆ ಎಂದರೆ ಮಳೆಯಾಶ್ರಿತ ಪ್ರದೇಶಗಳಲ್ಲಿ ಇವುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಬರಗಾಲದಲ್ಲಿ ರೈತರಿಗೆ ಆಸರೆಯಾಗುವ ಈ ಕಿರುಧಾನ್ಯಗಳನ್ನು "ಬರಗಾಲದ ಮಿತ್ರರು" ಎಂದು ಕರೆಯುತ್ತಾರೆ. ಬರಗಾಲದ ಮಿತ್ರರಾದ ಕಿರುಧಾನ್ಯಗಳೆ ಮುಂದಿನ ದಿನಗಳಲ್ಲಿ ಭವಿಷ್ಯದ ಆಹಾರವೆಂದರೆ ತಪ್ಪಾಗಲಾರದು. ಪೌಷ್ಟಿಕಾಂಶಗಳ ದೃಷ್ಟಿಯಿಂದ ಸಿರಿಧಾನ್ಯಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ದಿನನಿತ್ಯ ನಮ್ಮ ಆಹಾರ ಪದ್ಧತಿಯಲ್ಲಿ ಹೇರಳವಾಗಿ ಬಳಕೆಯಲ್ಲಿರುವ ಅಕ್ಕಿ ಹಾಗೂ ಗೋಧಿಯಲ್ಲಿರುವ ಪೌಷ್ಟಿಕಾಂಶಗಳಿಗೆ ಹೋಲಿಸಿದರೆ ಸಿರಿಧಾನ್ಯಗಳು ೩–೫ ಪಟ್ಟು ಅಧಿಕ ಪೌಷ್ಟಿಕಾಂಶಗಳನ್ನು ಹೊಂದಿವೆ. ಅಕ್ಕಿ ಮತ್ತು ಗೋಧಿಗಿಂತ ಹೆಚ್ಚು ಪ್ರಮಾಣದಲ್ಲಿ ಸಸಾರಜನಕ, ಜೀವಸತ್ವ, ನಾರಿನಾಂಶ ಹಾಗೂ ಖನಿಜಾಂಶಗಳನ್ನು ಹೊಂದಿವೆ. ಉದಾ: 100 ಗ್ರಾಂ ಪಾಲಿಶ್ ಅಕ್ಕಿಯಲ್ಲಿ 6.8 ಗ್ರಾಂ ಪ್ರೋಟೀನ್, 0.2 ನಷ್ಟು ನಾರಿನಾಂಶವಿರುತ್ತದೆ. ಆದರೆ ನವಣೆಯಲ್ಲಿ 12.3 ಗ್ರಾಂ ಪ್ರೋಟೀನ್, 8 ಗ್ರಾಂ ನಷ್ಟು ನಾರಿನಾಂಶವಿರುತ್ತದೆ. ಅಕ್ಕಿ ಮತ್ತು ಗೋಧಿಗಳಿಗಿಂತ ಕಿರುಧಾನ್ಯಗಳಲ್ಲಿ ಎರಡರಷ್ಟು ಕೊಬ್ಬಿನಂಶವಿದೆ. ಕಿರುಧಾನ್ಯಗಳ ಮತ್ತೊಂದು ವಿಶೇಷತೆಯೆಂದರೆ ಇವುಗಳಲ್ಲಿನ ಲವಣಾಂಶವು ಇತರೆ ಧಾನ್ಯಗಳಿಗಿಂತ 4 ರಿಂದ 5 ಪಟ್ಟು ಹೆಚ್ಚು ಇದೆ. ಭಾರತದಲ್ಲಿ, ಅತಿಯಾಗಿ ಕಾಡುತ್ತಿರುವ ರಕ್ತಹೀನತೆಗೆ ಪರಿಹಾರವೆಂದರೆ ಕಡಿಮೆ ಬೆಲೆಯ ಕಿರುಧಾನ್ಯಗಳ ಬಳಕೆ, ಜೀವಕೋಶಗಳ ರಚನೆಯನ್ನು ಸಂರಕ್ಷಿಸಲು ಬೇಕಾಗಿರುವ ರಂಜಕವು ಅಕ್ಕಿಗೆ ಹೋಲಿಸಿದರೆ ಕಿರುಧಾನ್ಯಗಳಲ್ಲಿ ಹೇರಳವಾಗಿದೆ. ಬೆಳೆಯುವ ಮಕ್ಕಳಗಷ್ಟೇ ಅಲ್ಲದೇ ಋತು ಬಂಧದ ಹಂತದಲ್ಲಿರುವ ಮಹಿಳೆಯರಿಗೆ ಅವಶ್ಯಕವಾಗಿರುವ ಕ್ಯಾಲ್ಸಿಯಂ ಕಿರುಧಾನ್ಯವಾದ ರಾಗಿಯಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿದೆ. 100 ಗ್ರಾಂ ರಾಗಿಯಲ್ಲಿ 340 ಇದೆ. ಮತ್ತೊಂದು ಮುಖ್ಯವಾದ ಮೈಕ್ರೋ ಖನಿಜಾಂಶವಾದ ಝಿಂಕ್‌ನ ಪ್ರಮಾಣವು, ಕಿರಿಧಾನ್ಯಗಳಲ್ಲಿ ಇತರೆ ದಿನಗಳಕೆಯಲ್ಲಿರುವ ಧಾನ್ಯಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿದೆ.

ಕಿರುಧಾನ್ಯ ಹಾಗೂ ಇತರೆ ಏಕದಳ ಧಾನ್ಯಗಳ ಪೌಷ್ಟಿಕಾಂಶಗಳ ಪ್ರಮಾಣ
(ಸೇವಿಸುವ ಪ್ರತಿ 100 ಗ್ರಾಂ. ಗೆ)

ಧಾನ್ಯ	ಶಕ್ತಿ (ಕಿಲೋ ಕ್ಯಾಲರಿ)	ಪಿಷ್ಟಾಂಶ (ಗ್ರಾಂ)	ಕೊಬ್ಬು (ಗ್ರಾಂ)	ಸಸಾರಜನಕ (ಗ್ರಾಂ)	ನಾರು (ಗ್ರಾಂ)	ಖನಿಜಾಂಶ (ಮಿಲಿಗ್ರಾಂ)	ಕ್ಯಾಲ್ಸಿಯಂ (ಮಿಲಿಗ್ರಾಂ)	ಕಬ್ಬಿಣ (ಮಿಲಿಗ್ರಾಂ)	ರಂಜಕ (ಮಿಲಿಗ್ರಾಂ)	ಸತು (ಮಿಲಿಗ್ರಾಂ)
ನವಣೆ	331	12.3	4.3	60.9	8.0	3.3	31	2.8	290	2.4
ಸಾಮೆ	341	7.7	4.7	67.0	7.6	1.5	17	9.3	220	3.7
ಕೊರಲು	341	12.5	1.1	70.4	2.2	1.9	14	0.8	206	1.4
ಊದಲು	307	6.2	2.2	65.5	9.8	4.4	20	5.0	280	3.0
ಹಾರಕ	309	8.3	1.4	65.9	9.0	2.6	27	0.5	188	0.7
ರಾಗಿ	328	7.3	1.3	72.0	3.6	2.7	344	3.09	283	2.3
ಸಜ್ಜೆ	361	11.6	5.0	67.5	1.2	2.3	42	8.0	296	3.1
ಮೆಕ್ಕೆ ಜೋಳ	342	11.1	3.6	66.2	2.7	1.5	10	2.3	348	2.8
ಜೋಳ	349	10.4	1.9	72.6	1.6	1.6	25	4.1	222	1.6
ಅಕ್ಕಿ	345	6.8	0.5	78.2	0.2	0.6	10	0.7	160	1.4
ಗೋಧಿ	346	11.8	1.5	71.2	1.2	1.5	41	5.3	306	2.7

ಪೌಷ್ಟಿಕಾಂಶ ಭರಿತ ಕಿರುಧಾನ್ಯಗಳನ್ನು ಪ್ರಾಚೀನ ಕಾಲದಿಂದಲೂ ಬಳಕೆಮಾಡಲಾಗುತ್ತಿದ್ದು ಕಾಲಕ್ರಮೇಣ ಇದರ ಬಳಕೆ ಕಡಿಮೆಯಾಗಿದೆ. ಇದಕ್ಕೆ ಹಲವಾರು ಕಾರಣಗಳನ್ನು ಹೆಸರಿಸಬಹುದು, ಮುಖ್ಯವಾಗಿ ಸಂಸ್ಕರಣಾ ಸೌಲಭ್ಯಗಳ ಆಭಾವ ಹಾಗೂ ಉತ್ಪಾದನೆ ಕಡಿಮೆಯಾಗಿರುವುದರಿಂದ, ಬಳಸಲು ಲಭ್ಯತೆಯು ಕಡಿಮೆಯಾಗಿದೆ. ಅಕ್ಕಿ, ಗೋಧಿಗಳನ್ನು ಸಂಸ್ಕರಿಸುವಂತೆ ಕಿರುಧಾನ್ಯಗಳ ಸಂಸ್ಕರಣೆಗೆ ಯಂತ್ರಗಳ ಕೊರೆತೆ ಇದೆ. ಮುಖ್ಯವಾಗಿ ಜನರಿಗೆ ಇವುಗಳ ಪೌಷ್ಟಿಕತೆ ಹಾಗೂ ಉಪಯೋಗಿಸುವ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದು.

ಆದರೆ ಇತ್ತೀಚಿನ ದಿನಗಳಲ್ಲಿ ಕಿರುಧಾನ್ಯಗಳ ಬೇಡಿಕೆ ಹೆಚ್ಚುತ್ತಿದೆ ಏಕೆಂದರೆ ಕಿರುಧಾನ್ಯಗಳೌ ಪೌಷ್ಟಿಕವು ಹೌದು ಜೊತೆಗೆ ಹಲವಾರು ಔಷಧೀಯ ಗುಣಗಳನ್ನು ಹೊಂದಿದ್ದು, ಇಂದಿನ ಜನಸಾಮಾನ್ಯರಿಗೆ ಕಾಡುತಿರುವ ಕಾಯಿಲೆಗಳನ್ನು ನಿಯಂತ್ರಿಸಲು ಸಾಧ್ಯವಿದೆ.

ಕಿರುಧಾನ್ಯಗಳಾದ ನವಣೆ, ಸಾವೆ, ಹಾರಕ, ಬರಗು, ಊದಲು, ಸಜ್ಜೆಗಳು ಕಡಿಮೆ ಪ್ರಮಾಣದಲ್ಲಿ ಶರ್ಕರಪಿಷ್ಟವನ್ನು ಹೊಂದಿವೆ. ಅದರಲ್ಲೂ ನವಣೆ ಅತ್ಯಂತ ಕಡಿಮೆ ಪ್ರಮಾಣದ ಶರ್ಕರಪಿಷ್ಟವನ್ನು ಹೊಂದಿದೆ. ಕಡಿಮೆ ಪ್ರಮಾಣದ ಶರ್ಕರಪಿಷ್ಟವನ್ನು ಹೊಂದಿರುವ ಕಿರುಧಾನ್ಯಗಳು ಸೇವನೆಯು ಮಧುಮೇಹ, ಬೊಜ್ಜು ಹಾಗೂ ಹೃದಯ ಸಂಬಂಧಿತ ಕಾಯಿಲೆಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತವೆ. ಕಿರುಧಾನ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಾರಿನಾಶವಿದ್ದು, ಈ ನಾರಿನಾಂಶವು ರಕ್ತದಲ್ಲಿನ ಕೊಲೆಸ್ಟ್ರಾಲ್, ಸಕ್ಕರೆ ಮುಂತಾದ ಅಂಶಗಳನ್ನು ಕಡಿಮೆ ಮಾಡಿ ಮಧುಮೇಹ, ಬೊಜ್ಜು, ಹೃದಯ ರೋಗಗಳ ನಿಯಂತ್ರಣಕ್ಕೆ ಸಹಾಯ ಮಾಡುತ್ತದೆ. ಅಲ್ಲದೆ ಮಲಬದ್ಧತೆ ದೊಡ್ಡ ಕರುಳಿನ ಕ್ಯಾನ್ಸರ್ ಗಳಂತಹ ರೋಗಗಳನ್ನು ತಡೆಗಟ್ಟಬಲ್ಲದು. ನಾರಿನಾಂಶದಲ್ಲಿ ಎರಡು ವಿಧಗಳಿವೆ ಕರಗುವ ಹಾಗೂ ಕರಗದ ನಾರಿನಾಶ, ಕರಗುವ ನಾರಿನಾಂಶವು ಆಹಾರವನ್ನು ಸಣ್ಣ ಕರುಳನಲ್ಲಿ ನಿಧಾನವಾಗಿ ಸಾಗಿಸುವಂತೆ ಮಾಡುತ್ತದೆ. ಇದರ ಪರಿಣಾಮ ದಿಂದಾಗಿ ಸಣ್ಣ ಕರುಳಿನಿಂದ ರಕ್ತಕ್ಕೆ ಸಕ್ಕರೆಯು ನಿಧಾನವಾಗಿ ಸೇರುತ್ತದೆ. ಇದರಿಂದ ಊಟದ ನಂತರದ ರಕ್ತದಲ್ಲಿನ ಸಕ್ಕರೆ ಪ್ರಮಾಣವು ನಿಧಾನವಾಗಿ ಏರುತ್ತದೆ. ಕರಗದ ನಾರಿನಾಂಶವು ಮಲದ ಪ್ರಮಾಣ ಹೆಚ್ಚಿಸಿ ಮಲಬದ್ಧತೆ ನಿವಾರಿಸುತ್ತದೆ. ಹಾಗೆಯೇ ಕ್ಲಿಷ್ಟ ಶರ್ಕರಪಿಷ್ಟಿಗಳು ಹೇರಳವಾಗಿರುವ ಕಿರುಧಾನ್ಯಗಳ ಬಳಕೆ ಕ್ರೀಡಾಪಟುಗಳಲ್ಲಿ ದೈಹಿಕ ಸಹಿಷ್ಣುತೆಯನ್ನು ಹೆಚ್ಚಿಸಿ ಉತ್ತಮ ಕ್ರೀಡಾ ಪ್ರದರ್ಶನವನ್ನು ತೋರಿಸುವ ಸಹಾಯವಾಗುವುದು. ಇದೇ ರೀತಿ ಬೆಳೆಯುವ ಮಕ್ಕಳಗೂ ಚಟುವಟಿಕೆಯಿಂದ್ರಿವಲು ಕಿರುಧಾನ್ಯಗಳು ಸಹಾಯಕಾರಿ, ಇತ್ತೀಚಿನ ದಿನಗಳಲ್ಲಿ ಮುಖ್ಯವಾಗಿ ಕೇಳಬರುತ್ತಿರುವ ಮತ್ತೊಂದು ವಿಷಯವೆಂದರೆ ಆಹಾರ ಪಧಾರ್ಥಗಳ ಗ್ಲೈಸೆಮಿಕ್ ಇಂಡೆಕ್ಸ. ನಾವು ಸೇವಿಸುವ ಪ್ರತಿಯೊಂದು ಆಹಾರ ಪಧರ್ಥಕ್ಕೂ ಒಂದೊಂದು ರೀತಿಯ ಗ್ಲೈಸೆಮಿಕ್ ಇಂಡೆಕ್ಸ ಇರುತ್ತದೆ. ಕಿರುಧಾನ್ಯಗಳ ಗ್ಲೈಸೆಮಿಕ್ ಇಂಡೆಕ್ಸ ಇತರೆ ಧಾನ್ಯಗಳಿಗಿಂತ ಕಡಿಮೆ ಅಂದರೆ ಅಕ್ಕೆ–80 ಗೋಧಿ–75 ಕಿರುಧಾನ್ಯಗಳು–55–57.

ಮಧುಮೇಹಿಗಳಿಗೆ ಆಹಾರದ ಗ್ಲೈಸೆಮಿಕ್ ಇಂಡೆಕ್ಸ ಎಷ್ಟು ಕಡಿಮೆ ಇರುತ್ತದೆಯೋ ಅಷ್ಟು ಆರೋಗ್ಯಕರ ಇದಲ್ಲದೆ ಕಿರುಧಾನ್ಯಗಳಲ್ಲಿ ಸತು ಮತ್ತು ಮ್ಯಾಗನಿಸೀಂ ಹೆಚ್ಚಾಗಿದ್ದಲ್ಲಿ ಇದು ಇನ್ಸುಲಿನ್ ಶ್ರವಿಸಲು ಸಹಾಯ ಮಾಡುತ್ತದೆ. ನಮ್ಮ ದೇಹದಲ್ಲಿ ಕೆಲವು ರಾಸಾಯನಿಕ ಕ್ರಿಯೆಗಳಂದ ಕಣಗಳು ಉತ್ಪತ್ತಿಯಾಗುತ್ತದೆ. ಇವು ಜೀವಜೋಶ ಗಳನ್ನು ಹಾನಿಗೊಳಿಸಿ, ಅನಿಯಂತ್ರಿತ ಕೋಶ ವಿಭಜನೆಯನ್ನುಂಟು ಮಾಡಿ, ಕ್ಯಾನ್ಸರ್ ರೋಗಗಳಿಗೆ ಕಾರಣವಾಗುತ್ತದೆ. ಕಿರುಧಾನ್ಯಗಳ

ಲ್ಲಿರುವ ಪೊಲಿಫಿನೊಲ್ಸ್, ಟ್ಯಾನಿನ್ಸ್, ಫೈಟೆಟ್ಸ್ ಮುಂತಾದವುಗಳು ಕಿರುಧಾನ್ಯಗಳಲ್ಲಿ ಹೆಚ್ಚಾಗಿದ್ದು ಕ್ಯಾನ್ಸರ್ ಬರದಂತೆ ರಕ್ಷಿಸುತ್ತದೆ.

ಕಿರುಧಾನ್ಯಗಳನ್ನು ಪ್ರಾಥಮಿಕ ಸಂಸ್ಕರಣೆಗೊಳಪಡಿಸಿ ಅಕ್ಕಿ, ಅವಲಕ್ಕಿ, ಅರಳು, ರವೆ ಮತ್ತು ಹಿಟ್ಟನ್ನು ತಯಾರಿಸಬಹುದು. ಇವುಗಳನ್ನು ದಿನನಿತ್ಯ ರೂಢಿಯಲ್ಲಿರುವ ಆಹಾರ ತಿನುಸುಗಳಾದ ರೊಟ್ಟಿ, ದೋಸೆ, ಇಡ್ಲಿ, ಉಪ್ಪಿಟ್ಟು, ಬಿಸಿಬೆಳೆಬಾತ್, ಅನ್ನಾ, ಪಲಾವ್, ಕರಿದ ಪಧಾರ್ಥಗಳಾದ ಚಕ್ಕಲಿ, ನಿಪ್ಪಟ್ಟು, ಕೊಡಬಳೆ ತಯಾರಿಸಲು ಬೇರೆ ಧಾನ್ಯಗಳಂತೆ ಇವುಗಳನ್ನು ಬಳಸಬಹುದು. ಅಧುನಿಕ ತಿನಿಸುಗಳಾದ ಫ್ಲೆಕ್ಸ್, ನೂಡಲ್ಸ್, ಪಾಸ್ತಾ, ಬೇಕರಿ ತಿನಿಸುಗಳು ಇತ್ಯಾದಿಗಳನ್ನೂ ತಯಾರಿಸಬಹುದು ಒಟ್ಟಿನಲ್ಲಿ ಹೇಳಬೇಕಾದರೆ ಕಿರುಧಾನ್ಯಗಳು ಸಿರಿಧಾನ್ಯವು ಹೌದು ಆರೋಗ್ಯ ರಕ್ಷಕ ಧಾನ್ಯವು ಹೌದು.

ರಕ್ತಹೀನತೆ ಕಬ್ಬಿಣಾಂಶಯುಕ್ತ ಉತ್ಪನ್ನಗಳು

ಕೆ. ಗೀತಾ, ಶೀವಲೀಲಾ ಎಚ್. ಬಿ., ಸವಿತಾ ಹುಲಮನಿ ಮತ್ತು ನೇತ್ರಾವತಿ ಹೀರೆಮಠ
ಅಖಿಲ ಭಾರತ ಸಮನ್ವಯ ಸಂಶೋಧನಾ ಕಾರ್ಯಕ್ರಮ, ಗೃಹ ವಿಜ್ಞಾನ (ಆಹಾರ ಮತ್ತು ಪೋಷಣೆ), ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು-೬೫

ಇಂದು ಭಾರತದಲ್ಲಿ ಶೇಖಡ ೭೦% ಮಹಿಳೆಯರು ಮತ್ತು ಹದಿವಯಸ್ಸಿನ ಹೆಣ್ಣು ಮಕ್ಕಳಲ್ಲಿ ರಕ್ತಹೀನತೆ ಕಂಡುಬಂದಿದೆ. ಅಪೌಷ್ಟಿಕವಾದ ಆಹಾರ ಸೇವನೆ, ಜಠರ ಸಂಬಂಧೀ ಕಾಯಿಲೆಗಳು, ಪ್ಲೋರಿಕ್ ಆಮ್ಲ, ವೀಟಾಮಿನ್ ಬಿ೬, ವೀಟಾಮಿನ್ ಸಿ, ವೀಟಾಮಿನ್ ಇ, ವೀಟಾಮಿನ್ ಬಿ೨ ಜೀವಸತ್ವಗಳ ಕೊರತೆ ಹಾಗೂ ಜಂತುಹುಳ ಮತ್ತು ಕೊಕ್ಕೆಹುಳಗಳಿಂದಲೂ ಸಹ ರಕ್ತಹೀನತೆ ಉಂಟಾಗುತ್ತದೆ. ಇದನ್ನು ತಡೆಗಟ್ಟಲು ಬಹುಮುಖ್ಯವಾಗಿ ಆಹಾರದಲ್ಲಿ ಕಬ್ಬಿಣಾಂಶ ಹೆಚ್ಚಾಗಿರುವ ಆಹಾರ ಪದಾರ್ಥಗಳ ಸೇವನೆ ಅತ್ಯಗತ್ಯ. ಈ ನಿಟ್ಟಿನಲ್ಲಿ, ಎ. ಐ.ಸಿ.ಆರ್.ಪಿ. (ಆಹಾರ ಮತ್ತು ಪೋಷಣೆ) ವಿಭಾಗವು, ಸ್ಥಳೀಯವಾಗಿ ಕಡಿಮೆ ವೆಚ್ಚದಲ್ಲಿ ಮನೆಯಲ್ಲೆ ತಯಾರಿಸಬಹುದಾದ ಕಬ್ಬಿಣಾಂಶಯುಕ್ತ ಆಹಾರ ಪದಾರ್ಥಗಳನ್ನು/ತಿನಿಸುಗಳನ್ನು ತಯಾರಿಸಬಹುದೆಂದು ಸಂಶೋಧನೆ ನಡೆಸಿದೆ. ಕಬ್ಬಿಣಾಂಶ ಅಧಿಕವಾಗಿರುವ ಆಹಾರ ಪದಾರ್ಥಗಳಾದ ಅಳವೆ ಬೀಜ, ಉಪಯೋಗಿಸದೆ ಬೀಸಾಕಲ್ಪಡುವ ಹೂಕೋಸಿನ ಎಲೆ, ಕ್ಯಾರೆಟ್ ಸೊಪ್ಪು, ಮೂಲಂಗಿ ಸೊಪ್ಪು, ದಂಟಿನ ಬೀಜ, ಬೆಟ್ಟದನೆಲ್ಲಿಕಾಯಿ ಪುಡಿ, ಮುಂತಾದವುಗಳನ್ನು ಒಣಗಿಸಿ ಪುಡಿ ಮಾಡಿ ಜನಬಳಕೆಯ ದಿನನಿತ್ಯ ಸೇವಿಸಬಹುದಾದ ತಿನಿಸುಗಳಾದ ಖಾಕರಾ (ಒಣ ಚಪಾತಿ), ಪೌಷ್ಟಿಕ ಲಡ್ಡು, ನಿಪ್ಪಟ್ಟು, ಬಿಸ್ಕತ್ತು, ಅವಲಕ್ಕಿ ಲಡ್ಡು, ಅವಲಕ್ಕಿ ಖಾರ ಮಿಕ್ಸ ಮುಂತಾದವುಗಳನ್ನು ತಯಾರಿಸಿ ಅವುಗಳ ಇಂದ್ರಿಯ ಮಾಪನ, ಶೇಕರಣಾ ಸಾಮರ್ಥ್ಯವನ್ನು ಹಾಗೂ ರಾಸಾಯನಿವಾಗಿ ಪರೀಕ್ಷಿಸಿ, ಇವುಗಳು ಕಬ್ಬಿಣಾಂಶಯುಕ್ತವಾಗಿದ್ದು ದಿನನಿತ್ಯ ಆಹಾರ ಪದ್ದತಿಯಲ್ಲಿ ಬಳಸಬಹುದೆಂದು ದೃಡಪಡಿಸಿದೆ.

ಉದ್ದೇಶ:- "ಜೀವನ ಶೈಲಿಗೆ ಅಳವಡಿಕೆಯಾಗುವ ಕಬ್ಬಿಣ ಭರಿತ ತಿನಿಸು: ರಕ್ತಹೀನತೆ ನಿವಾರಣೆಗೆ ಸೂತ್ರ"

ಭಾರತದ ಶೇಕಡಾ 70 ಮಹಿಳೆಯರು ಮತ್ತು ಹದವಸ್ಸಿನ ಹೆಣ್ಣುಮಕ್ಕಳಲ್ಲಿ ರಕ್ತಹೀನತೆ ಪ್ರಚಲಿತವಾಗಿದೆ ಎನ್ನುವುದಕ್ಕೆ ಅಲ್ಲದೆ, ಇತ್ತೀಚೆಗಿನ ಆಘಾತಕಾರಿ ಸಂದೇಶದನುಸಾರ ಪುರುಷರಲ್ಲಿಯೂ ಕಂಡುಬರುತ್ತಿದೆ ರಕ್ತಹೀನತೆ, ಒಟ್ಟಾರೆ ದೇಶದ ಶೇಕಡ 74.3 ರಷ್ಟು ಜನರು ರಕ್ತಹೀನತೆ ಒಳಗಾಗಿದ್ದಾರೆ.

ಪರಿಣಾಮ: * ಶೇ. 20 ರಷ್ಟು ತಾಯಿಯರ ಸಾವು
- ಪ್ರತಿ ಹತ್ತು 6-9 ತಿಂಗಳ ಮಕ್ಕಳಲ್ಲಿ ಏಳು ಮಕ್ಕಳು ರಕ್ತಹೀನರು ಅದರಲ್ಲಿಯೂ ಶೇಕಡ ಮೂರು ರಕ್ರಹೀನತೆಗೆ ಒಳಗಾಗಿರುತ್ತಾರೆ.
- 40% ಸಾಧಾರಣ ರಕ್ತಹೀನತೆ.

ರಕ್ತಹೀನತೆಯಲ್ಲಿ ಒಟ್ಟಾರೆ ಕೆಂಪುರಕ್ತಕಣಗಳ ಸಂಖ್ಯೆ ತಗ್ಗುವುದರಿಂದ ಶರೀರದ ಜೀವ ಕ್ರಿಯಾಶೀಲತೆಗೆ ಅಗತ್ಯವಾಗಿ ಬೇಕಾದ ಅಮ್ಲಜನಕ ಸರಬರಾಜು ತಗ್ಗುತ್ತದೆ. ಬೆಳವಣಿಗೆ ಕುಂಠಿತ ಗೊಳ್ಳುತ್ತದೆ. ಮೆದುಳನಲ್ಲಿ ಸೂಚ್ಯಂಕ ಸಂಪರ್ಕದಲ್ಲಿ ಅಡಚಣೆಗಾಗಿ ಮನಃಸ್ಥೈರ್ಯ ಕಡಿಮೆಯಾಗುತ್ತದೆ. ಬುದ್ಧಿ ಮಾಂದ್ಯತೆ, ನೆನಪುಶಕ್ತಿಕುಂದುತ್ತಾ ಹೋಗುತ್ತದೆ. ಒಟ್ಟಾರೆ ಭೌತಿಕ ಶರೀರ ಕ್ರಿಯಾಶೀಲತೆ ಕಡಿಮೆಯಾದಾಗ ಪರಿಣಾಮ ಆದಾಯ ಕುಟುಂಬ ಹಾಗೂ ರಾಷ್ಟ್ರಮಟ್ಟದಲ್ಲಿಯೂ ತಗ್ಗುತ್ತದೆ, ಜೊತೆಗೆ ಪರಿಹಾರಕ್ಕಾಗಿ ಹೆಚ್ಚಿನ ವ್ಯಯವಾಗುತ್ತದೆ. ಇನ್ನು ಮಹಿಳೆಯರು ಹಾಗೂ ಗರ್ಭಿಣಿಯರು ರಕ್ತಹೀನತೆಗೆ ಒಳಗಗಿದ್ದಾರೆ, ಮಗುವು ಜನಿಸುವಾಗಲೇ ಅನೇಕ ಅಸಮತೆ ಹಾಗೂ ಊನತೆಗೆ ಒಳಗಾಗಿದ್ದು, ಹೆಚ್ಚಿನ ಆರ್ಥಿಕ ಒತ್ತಡ ಹೇರುತ್ತದೆ, ಮುಂದಿನ ಯುವ ಪ್ರಜೆಯ ಶಕ್ತಿ ಸಾಮರ್ಥ್ಯ ಕ್ಷೀಣಿಸುತ್ತದೆ.

ರಕ್ತಹೀನತೆಯ ಪ್ರಭಾವ



ರಾಷ್ಟ್ರಮಟ್ಟದ ಆರ್ಥಿಕ ಸಾಮರ್ಥ್ಯಕ್ಕೆ ಅಡಚಣೆ / ಧಕ್ಕೆ

ನಮ್ಮ ರಾಷ್ಟ್ರದಲ್ಲಿ ರಕ್ತಹೀನತೆಗೆ ಪ್ರಮುಖ ಕಾರಣಗಳು:
- ಅಪೌಷ್ಟಿಕ ಆಹಾರ ಸೇವನೆ
- ಸಾಂಕ್ರಮಿಕ ರೋಗ/ ತೀವ್ರ ರಕ್ತಸ್ರಾವ ಸಂದರ್ಭಗಳು
- ಆಹಾರದಲ್ಲಿ ಕಬ್ಬಿಣಾಂಶದ ಕೊರತೆ
- ಸೇವಿಸಿದ ಆಹಾರದಿಂದ ಕಬ್ಬಿಣಾಂಶ ಒದಗುವಿಕೆ
- ಬದಲಾದ ಜೀವನ ಶೈಲಿ

• ರಾಷ್ಟ್ರದಾದ್ಯಂತ ನಡೆದ ಸಮೀಕ್ಷೆಯ ಆಧಾರದ ಮೇಲೆ ಕಂಡುಬಂದಿರುವುದೇನೆಂದರೆ, ಧಾನ್ಯಗಳ ಆಧಾರಿತ ದಿನನಿತ್ಯದ ಆಹಾರ ಸೇವಿಸುವವರಲ್ಲಿ ಗುಣಮಟ್ಟ, ಉತ್ತಮವಾಗಿರದೆ ಪ್ರಮುಖವಾಗಿ ಅವಶ್ಯಕವಾದ ಕಬ್ಬಿಣಾಂಶ, 'ಎ' ಜೀವಸತ್ವ, 'ಬಿ12' ಜೀವಸತ್ವ ಮತ್ತು ಫೊರಿಕ್ ಆಮ್ಲಗಳ ಪ್ರಮಾಣ ಕಡಿಮೆ ಇದೆ. ಪ್ರಮುಖವಾಗಿ ಆರ್ಥಿಕ ವೆಚ್ಚ ಕಡಿತದಿಂದಾಗಿ ಉತ್ತಮ ಪ್ರಮಾಣದ ಪೋಟಿನ್ಯುಕ್ತ ಬೇಳೆಕಾಳು, ಕಬ್ಬಿಣಾಂಶ ಭರಿತ ಹಸಿರು ಸೊಪ್ಪು ಸೇವನೆ, ಪ್ರಾಣಿಜನ್ಯ ಮೂಲ ಆಹಾರ ಸೇವನೆಮಟ್ಟ ಪೂರ್ಣ ಜೀವಿಕೆಯ ಹಂತದಲ್ಲಿಲ್ಲ.

• ಕುಟುಂಬ ಮಟ್ಟದಲ್ಲಿ ಎಲ್ಲಾ ಪೋಷಕಯುಕ್ತ ಆಹಾರ ಎಲ್ಲರಿಗೂ ಅಗತ್ಯ ಪ್ರಮಾಣದಲ್ಲಿ ಹಂಚಿಕೆಯಾಗದಿರುವ ಸಂಸ್ಕೃತಿ ಆಧಾರಿತ ಉಣಬಡಿಕೆಯಾಗಿಯೇ ಇನ್ನು ಕಾಣುತ್ತಿದೆ.

• ಇನ್ನು ಆರ್ಥಿಕ ನಿಲುವು ಸರಿಯಾಗಿದ್ದರೂ ಸರಿಯಾದ ವಿಧಾನದಲ್ಲಿ ಸಂಸ್ಕರಿಸಿ ಉಣಬಡಿಸಲು ಇತ್ತೀಚಿಗೆ ಮಹಿಳೆಯರಿಗೆ ಉದ್ಯಮ ನಿಯಮಿತ ಸಮಯ ಒದಗದಿರುವುದು.

• ಬದಲಾದ ಜೀವನ ಶೈಲಿಯ ಪ್ರಯುಕ್ತ ಯುವ ಜನತೆ ಝಂಕ್ ತಿನಿಸುಗಳಿಗೆ ಅಕರ್ಷಿತರಾಗಿದದ್ದು ಪೌಷ್ಟಿಕತೆಯ ಬಗ್ಗೆ ಕಾಳಜಿಯಿಲ್ಲದಾಗಿದೆ.

• ಕೆಲವೆಡೆ ಉಕೃಷ್ಟ ಆಹಾರದ ಭಾಗಾಂಶ ಕಸದ ಬುಟ್ಟಿ ಸೇರುತ್ತಿದೆ ಮತ್ತು ಉತ್ತಮ ರೀತಿಯಲ್ಲಿ ಬೇಡಿಕೆಗನುಸಾರವಾಗಿ ಸಂಸ್ಕರಣೆ ಬಳಕೆಯಾಗದಿರುವುದು.

• ಕಬ್ಬಿಣಾಂಶದ ಪ್ರಾಮುಖ್ಯತೆ ಮತ್ತು ಪೂರೈಕೆಯ ವಿಧಾನಗಳ ಬಗ್ಗೆ ಅರವಿಲ್ಲದಿರುವುದು.

"ಆಹಾರ ಸೇವನೆ ತಪ್ಪಾದಾಗ ಔಷಧಿ ಉಪಯೋಗವಿಲ್ಲ, ಆಹಾರ ಸೇವನೆ ನಿಯಮ ಬದ್ಧವಾಗಿರುವ ಔಷಧಿಯೇ ಬೇಕಿಲ್ಲ"

ಸೂಕ್ತ ವಿಧಾನಗಳು: ರಕ್ತಹೀನತೆ ತಡೆಗಟ್ಟುವ / ನಿವಾರಿಸುವ:

• ತೀವ್ರ ಹಂತದಲ್ಲಿರುವಾಅಗ ವೈಧ್ಯರ ಸಲಹೆಯಂತೆ ಕಬ್ಬಿಣ ಮತ್ತು ಫೊರಿಕ್ ಆಮ್ಲ ಮದ್ದು ಸೇವನೆ.

• ದಿನನಿತ್ಯ ಎಲ್ಲಾ ವಯಸ್ಸಿನವರೂ ನಿಗಧಿತ ಸಮತೋಲನ ಆಹಾರ ಸೇವಿಸುವುದು ಹಾಗೂ ನಿಗಧಿತ ಪ್ರಮಾಣದಲ್ಲಿ ಎಲ್ಲಾ ಪೋಷಕಾಂಶಗಳನ್ನು ಒದಗಿಸುವುದು–ಕಬ್ಬಿಣಾಂಶ, ಫೋಡೊಕ ಆಮ್ಲ, ಬಿ–ಜೀವಸತ್ವ ಮತ್ತು ಸಿ–ಜೀವಸತ್ವಕ್ಕೆ ಹೆಚ್ಚಿನ ಗಮನಹರಿಸುವುದು.

• ಸೂಕ್ತ ರೀತಿಯಲ್ಲಿ ಸಂಸ್ಕರಿಸಿ ಹೀರುವಿಕೆಗೆ ಅಡಚಣೆಯಾಗುವಂತಹ ಕೆಲವು ರಾಸಾಯನಿಕ ಅಂಶಗಳನ್ನು ಕಾರ್ಯಹೀನಗೊಳಿಸಿ ಕಬ್ಬಿಣಾಂಶ ಒದಗುವಿಕೆಯನ್ನು ಉತ್ತೇಜಿಸುವಂತೆ ಖಾದ್ಯ ತಯಾರಿಸುವುದು ಅಗತ್ಯವಾಗಿದೆ.

• ಬದಲಾದ ಜೀವನ ಶೈಲಿಗೆ ಹೊಂದುವಂತಹ ತಿನಿಸು ತಯಾರಿಕೆಯಲ್ಲಿಯೂ ನಿಸರ್ಗದತ್ತವಾದ ಪೂರಕ ಹಸಿರು ಸೊಪ್ಪುಗಳನ್ನು ಬಳಸುವುದರಿಂದ ಝಂಕ್ ತಿನಿಸುಗಳೂ ಕಬ್ಬಿಣಬರಿತ ಸೂತ್ರವಾಗುತ್ತದೆ.

• ದಿನನಿತ್ಯ ಸೇವಿಸುವ ಪಲ್ಯ, ಸಾರು, ಸಾಗು, ಹಸಿಸಾಲಾಡ್ ಗಳಲ್ಲಿ ಸೊಪ್ಪು ಬಳಸುವುದು ಸಾಮಾನ್ಯವಾಗಿ ನೀಡುವ ಸಲಹೆಯಾದರೂ, ಸಾಧಾರಣವಾಗಿ ಎಲ್ಲ ಮಾತೆಯರೂ ಇದನ್ನು ಮಕ್ಕಳಿಗೆ ತಿನ್ನಿಸುವಾಗ ಬಹಳ ಕಷ್ಟಪಡುವುದನ್ನು ಎಲ್ಲರೂ ಒಪ್ಪುವ ಮಾಹಿತಿ.

• ಈ ಎಲ್ಲ ಸಮಸ್ಯೆಗಳನ್ನಷ್ಟೇ ಅಲ್ಲದೆ, ಜನಸಾಮಾನ್ಯವಾಗಿ ವ್ಯರ್ಜಿಸಲ್ಪಡುವ ಕಬ್ಬಿಣಭರಿತ ಗೆಡ್ಡೆಗಳ ಸೊಪ್ಪಿನ ಭಾಗವನ್ನು ನಿಗಧಿತ ರೀತಿಯಲ್ಲಿ ಸಂಸ್ಕರಿಸಿ ವಿವಿಧ ಹಿಟ್ಟಿನ ಮಿಶ್ರಣ; ದಿನನಿತ್ಯ ಸೇವಿಸುವ ತಿನಿಸು ಆಹಾರ, ವಾಣಿಜ್ಯೋಧ್ಯಮದಲ್ಲಿ ಪ್ರಚಲಿತವಾಗಿ ಬಳಕೆಯಾಗುವ ಜೀವನ ಶೈಲಿ ಆಕರ್ಷಿತ ಅರೆ ಸಂಸ್ಕರಿಸಿದ, ಪೂರ್ಣಸಂಸ್ಕರಿಸಿದ ದಿಡೀರ್ ತಿನಿಸುಗಳು, ರಕ್ತಹೀನತೆ ನಿವಾರಣೆಗೆ ಸಾಮಾಜಿಕ ಉದ್ದೇಶಿತ ಆಹಾರ ಪೂರೈಕೆ, ಪೌಷ್ಟಿಕಾಂಶ ಪೂರೈಕೆ ಸಂಯೋಜನೆ ಕಾರ್ಯಕ್ರಮಗಳಿಗೆ ಅಳವಡಿಕೆಯಾಗುವಂತಹ ತಿನಿಸುಗಳು, ಶಿಕ್ಷಣ ಸಂಸ್ಥೆಮಟ್ಟದ ಪೂರಕ ಆಹಾರ ವ್ಯವಸ್ಥೆಗಳಲ್ಲಿ ಉಪಯುಕ್ತವಾಗುವಂತೆ ವಿವಿಧ ರೀತಿಯಲ್ಲಿ ನವೀನ ಕಬ್ಬಿಣ ಭರಿತ ತಿನಿಸುಗಳನ್ನು ಪ್ರಾಯೋಗಿಕವಾಗಿ ತಯಾರಿಸಿ, ರುಚಿ ಹಾಗೂ ಪೋಷಕಾಂಶಗಳ ಪ್ರಮಾಣ ತಯಾರಿ ವೆಚ್ಚವನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿದೆ. ಇವುಗಳನ್ನು ಸ್ವಚ್ಚವಾಗಿ ತಯಾರಿಸಿ, ಶುದ್ಧವಾಗಿ "ಪ್ಯಾಕ್ ಮಾಡಿ" ಕನಿಷ್ಠ 6 ತಿಂಗಳು ಶೇಖರಿಸಿಡಬಹುದು.

ತಯಾರಿಸಬಹುದಾದ ತಿನಿಸುಗಳು:

• ಗ್ರೀನ್ ಹೆಲ್ತ್ ಸ್ಟಾರಸ್
• ಉಪ್ಪು ಮತ್ತು ಸಿಹಿ ಬಿಸ್ಕತ್ತು
• ಪೊಹಾ ಕರುಕು
• ಸೊಪ್ಪುಯುಕ್ತ ಕುರುಕು
• ಸಬ್ಬಗೆ ಬಿಸ್ಕತ್ತು
• ಅವಲಕ್ಕಿ ಚಿಕ್ಕಿ
• ಮಸ್ಕ ಚಸ್ಕ ಬಿಸ್ಕತ್ತು
• ಅವಲಕ್ಕಿ ಸಬ್ಬಗೆ ಕುಕ್ಕಿಸ್
• ಸಜ್ಜಿಗೆ ಖಾರ ಕುಕ್ಕಿಸ್
• ಅವಲಕ್ಕಿ ಸಿಹಿ
• ಅವಲಕ್ಕಿ ಕುಕ್ಕಿಸ್
• ಗೋಧಿ ಹೂಕೋಸಿನ ಎಲೆ ಕಾಕ್ರಾ
• ಹೂಕೋಸಿನ ಎಲೆ ನಿಪ್ಪಟ್ಟು
• ಹೂಕೋಸಿನ ಎಲೆ ಕುರುಕು
• ಗೋಧಿ ಮೂಲಂಗಿ ಸೊಪ್ಪು ಕಾಕ್ರಾ
• ಹೂಕೋಸಿನ ಎಲೆ ಪರಾತಾ
• ಹೂಕೋಸಿನ ಎಲೆ ಪಾನಿಪುರಿ
• ಸೊಪ್ಪು ಭರಿತ ಶಾವಿಗೆ
• ಕಿರುಧಾನ್ಯ ಹೂಕೋಸಿನ ಎಲೆಯಿಂದ ಡಿಸ್ಯೆನರ್ ಅಕ್ಕಿ
• ವ್ಯರ್ಜಿಸಲ್ಪಡುವ ಹೂಕೋಸಿನ ಎಲೆ, ಕ್ಯಾರೆಟ್ ಸೊಪ್ಪು ಈ ತಿನಿಸುಗಳ ಮೂಲಕ ಕಬ್ಬಿಣಾಂಶ ಪೂರೈಕೆ ಅಷ್ಟೆ ಅಲ್ಲದೆ, ಮೌಲ್ಯವರ್ಧಿತಗೊಂಡು ಹೆಚ್ಚಿನ ಬೆಲೆ ಮತ್ತು ಆರೋಗ್ಯಕರ ಪ್ರಜೆಗೆ ದಾರಿಯಾಗುತ್ತದೆ. ಜೊತೆಗೆ ನಿಸರ್ಗದತ್ತ ಹಸಿರು ಸೊಪ್ಪು ಆರೋಗ್ಯರಕ್ಷಣೆಗೆ ನಾಂದಿಯಾಗುತ್ತದೆ. ಪರಿಸರದಲ್ಲಿ ಬಿಸಾಕಲ್ಪಟ್ಟು ತ್ಯಾಜ್ಯ ಸಮಸ್ಯೆ ಹಾಗೂ ಕೊಳೆತು ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆದಂಟಾಗುತ್ತದೆ.

ಚಾಕಲೋಟ್ ಮತ್ತು ಟಾಫಿಗಳಲ್ಲಿ ಶೇಕಡ 25ರಷ್ಟು ಸೊಪ್ಪಿನ ಪುಡಿ ಬಳಸಲಾಗಿದೆ, ಡೈಮೆಂಡ್ ಕಟ್, ನಿಪ್ಪಟ್ಟುಗಳಲ್ಲಿ ಶೇಕಡ 10 ರಷ್ಟು

ಹಸಿರು ಸೊಪ್ಪು ಪುಡಿ, ಬೇಕರಿ ತಿನಿಸುಗಳಲ್ಲಿ ಶೇಕಡ 30 ರಷ್ಟು ಸೊಪಿನ ಪುಡಿ ಬಳಸಲಾಗಿದೆ. ಗೋಧಿ ಆಧಾರಿತ ಕಾಕ್ರಾಗಳಲಿ ನೀರಿನ ಬದಲು ತಾಜಾ ಸೊಪ್ಪಿನ ತಿರುಳು ಬಳಸಲಾಗಿದೆ (ಸುಮಾರು 100–120 ಸೊಪ್ಪು / 100 ಗ್ರಾಂ ಮಿಶ್ರಣ). ಇತರೆ ತಿನಿಸುಗಳಲ್ಲಿ ಕೆಲವು ಧಾನ್ಯ ಆಧಾರಿತ ಕಬ್ಬಿಣ ಪೂರಕಗಳನ್ನು ಬಳಸಲಾಗಿದೆ.

ಸಂದೇಶ: ಭಾರತದಲ್ಲಿ ಬಹು ವಿರಳವಾಗಿ ಮಕ್ಕಳು, ಮಹಿಳೆ ಮತ್ತು ಪುರುಷರನ್ನೂ ವ್ಯಾಪಿಸಿಕೊಳ್ಳುತ್ತಿರುವ ಅನಿಮಿಯಾ ರಾಷ್ಟ್ರೀಯ ಮಟ್ಟದಲ್ಲಿ ಒಂದು ಛಲವಾಗಿದ್ದು ಇಂದಿನ ಬದಲಾದ ಜೀವನ ಶೈಲಿಗೆ ಹೊಂದುವಂತಹ ಆಹಾರ ರೂಪಗಳನ್ನೇ ಆಧಾರವಾಗಿಟ್ಟುಕೊಂಡು ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಈಗಾಗಲೇ ಪ್ರಪಂಚದ ಇತರೆ ವಿಜ್ಞಾನಿಗಳು ಅಧ್ಯಯನ ಮುಖೇನ ತ್ಯಜಿಸಲ್ಪಡುವ ಗೆಡ್ಡೆಗೆಣಸುಗಳ ಸೊಪ್ಪಿನ ಭಾಗವನ್ನು (ಹೂಕೋಸು, ಮೂಲಂಗಿ, ಕ್ಯಾರೆಟ್, ಬೀಟರೂಟ್ ಸೊಪ್ಪು) ಬಳಸುವುದರಿಂದ ಯಾವುದೇ ತೊಡಕು ಇಲ್ಲದೆ, ಕಬ್ಬಿಣಾಂಶ ಜೈವಿಕವಾಗಿ ಒದಗಿಸುವ ಸಾಧ್ಯತೆಯನ್ನು ಸಾಭಿತು ಪಡಿಸಿದ್ದಾರೆ. ಗಮನದಲ್ಲಿರಿಸಬೇಕಾದ ಒಂದಂಶವೆಂದರೆ, ಸಂಸ್ಕರಣೆಗೆ ಮುನ್ನ ಸ್ವಚ್ಚ ಮಾಡುವುದನ್ನು ಅನುಸರಿಸಬೇಕು. ಈ ರೀತಿಯ ತಿನಿಸುಗಳನ್ನು ಸೂಕ್ತವಾಗಿ ಪ್ಯಾಕ್ ಮಾಡಿ ವಾಣಿಜ್ಯೋಧ್ಯಮದಲ್ಲಿಯು ಮೌಲ್ಯ ಸಂಪಾಧಿಸಬಹುದು. ಮಹಿಳಾ ಸ್ವಯಂ ಸಹಕಾರ ಸಂಘಗಳು ಮತ್ತು ರೈತ ಸಹಕಾರ ಸಂಘಗಳು ಇವುಗಳನ್ನು ಅಳವಡಿಸಿಕೊಂಡು ಆದಾಯಗಳಿಸ ಬಹುದು. ಸಾಮಾಜಿಕ ಆಹಾರ ಪೋಷಣೆ ಪೂರಕ ಕಾರ್ಯಕ್ರಮ ಗಳಲ್ಲೂ ಪ್ರಾಂತೀಯ ಬೆಳೆ ಆಧಾರಿತವಾಗಿ ಯೋಜನೆಗಳನ್ನು ಆಳವಡಿಸಿಕೊಳ್ಳ ಬಹುದು.

ಹೈನುಗಾರಿಕೆ ಈಗ ಲಾಭದಾಯಕ

ಶಿವರಾಜ್. ಎಸ್. ಎ, ಅಕ್ಷತಾ. ಎಸ್. ಎ, ಸುಮಾ, ರತ್ನಮ್ಮ. ಖ, ಡಾ. ರಾಜಶೇಖರ್. ಎಸ್. ಎಮ್. ಅಮೀತಾ. ಜಿ.

ಮೊದಲು ನನ್ನೆಡೆಗೆ ಬರುವ ಸಲಹೆ ಕೇಳುವ ಮಿತ್ರರು ಹಾಗೂ ಸಂಬಂಧಿಕರಿಗೆ ಹೈನುಗಾರಿಕೆ ಉದ್ಯಮವಾಗಿ ಕೈ ಹಾಕಲು ಹೇಳಲು ಹಿಂಜರಿಕೆ ಆಗುತ್ತಿತ್ತು. ಆದರೆ ಈ ಕೆಲವು ದಿನಗಳಲ್ಲಿ ಹಾಲಿನ ದರ ಏರಿಕೆ ಹಾಗೂ ಈ ಉದ್ಯಮದಲ್ಲಿ ಲಭಿಸುವ ಲಾಭದ ಬಗ್ಗೆ ಒಂದು ಅಧ್ಯಯನ ಮಾಡಿದಾಗ ಹಾಗೂ ಈ ಉದ್ಯಮದ ಹಿಂದೆ ಇರುವ ಒಳ್ಳೆಯ ಉದ್ದೇಶ ವಿಶ್ಲೇಷಿಸಿದಾಗ ಈಗ ಮಿತ್ರ ಸಂಬಂಧಿಕರಷ್ಟೆಲ್ಲಾ ಅನೇಕರಿಗೆ ಈ ಉದ್ಯಮವನ್ನು ಕೈಗೆತ್ತಿಕೊಳ್ಳಲು ಪ್ರೋತ್ಸಾಹಿಸಲು ತುಂಬಾ ಸಂತೋಷವಾಗುತ್ತದೆ.

ನನ್ನ ಅಧ್ಯಯನ ಹಾಗೂ ತಿಳುವಳಿಕೆಯ ಪ್ರಕಾರ ಹಾಲಿನ ದರ ಕೆಲವೇ ಕೆಲವು ತಿಂಗಳು ಅಥವಾ ವರ್ಷಗಳಲ್ಲಿ ಅತಿಯಾದ ಏರಿಕೆ ಕಂಡಿದೆ.

2011

2012

2013

2014

ಆದರೆ ಸ್ವಂತ ಜಮೀನು ಹಾಗೂ ನೀರಿನ ವ್ಯವಸ್ಥೆ ಇದ್ದವರಿಗೆ ಮೇವಿನ ಬೆಲೆ ಏನು ಏರಿಕೆ ಅಗಿಲ್ಲ. ಹಿಂಡಿ ತಿನಿಸುಗಳ ಬೆಲೆ ಏರಿಕೆಯಾಗಿದ್ದರು ಹೈನುಗಾರಿಕೆ ಈಗ ಲಾಭದಾಯಕವಾಗಿದೆ.

ರಾಸಾಯನಿಕ ಗೊಬ್ಬರ ಬೆಲೆ ಏರಿಕೆ ಹಾಗೂ ಬೇಡಿಕೆ ನಿರ್ವಹಣೆ ಕೊರತೆಯಿಂದ ಹೈನುಗಾರಿಕೆಯಲ್ಲಿ ಸಿಗುವ ಕೊಟ್ಟಿಗೆ ಗೊಬ್ಬರ ಸಾವಯವ ಕೃಷಿ ಮಾಡಲು ಪೂರಕವಾಗಿದೆ. ಕೊಟ್ಟಿಗೆ ಗೊಬ್ಬರದ ಬೆಲೆ ಹೆಚ್ಚಾಗಿದ್ದು ಉದ್ಯಮದ ಅದಾಯಕ್ಕೆ ಪೂರಕವಾಗಿದೆ. ಸ್ವಂತ ಹೊಲ ಇದ್ದವರಿಗೆ ಈ ಗೊಬ್ಬರವನ್ನು ತಮ್ಮ ಹೊಲದಲ್ಲಿ ಉಪಯೋಗಿಸಬಹುದು.

ರಸಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಗೂ ಆರೋಗ್ಯ ದಿನೆ ದಿನೇ ಹದಗೆಡುತ್ತಿರುವ ಮಾತುಗಳು ನಿಜವಾಗಿದ್ದು ರಸಗೊಬ್ಬರವು ಮಣ್ಣಿನಲ್ಲಿರುವ ಜೈವಿಕ ಸಮತೋಲನವನ್ನು ನಶಿಸುತ್ತಿವೆ. ಆದರೆ ಕೆಲ ವಿಜ್ಞಾನಿಗಳ ಪ್ರಕಾರ ಒಂದು ಕೆ. ಈ. ರಸಗೊಬ್ಬರ 50 ಕೆ. ಈ. ಸಗಣಿ ಗೊಬ್ಬರಕ್ಕೆ ಸಮವೆಂದು ಹಾಗೂ ಕೊಟ್ಟಿಗೆ ಗೊಬ್ಬರದಿಂದ ಬೆಳೆದರೆ ಉತ್ಪನ್ನು ಕಡಿಮೆಯಾಗುವುದೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಮೊದಲೆರಡು ವರ್ಷ ಈ ಸಮಸ್ಯೆ ಉದ್ಭವಿಸಬಹುದು. ಕಾರಣ ಮಣ್ಣು ರಸಗೊಬ್ಬರ ಅಂಟಿಕೊಂಡಿದ್ದು ಜೈವಿಕ ಮೌಲ್ಯವನ್ನು ಮರುಪಡೆಯಲು ಸಮಯಬೇಕಾಗುತ್ತದೆ. ಎಂದು ಅನುಭವಿ ರೈತರ ಪ್ರಕಾರ ಒಂದೆರಡು ವರ್ಷ ಕೊಟ್ಟಿಗೆ ಗೊಬ್ಬರ ಮಾತ್ರ ಉಪಯೋಗಿಸಿದಾಗ ಮರು ವರ್ಷದಿಂದ ರಸಗೊಬ್ಬರ ಬಳಕೆಗಿಂತ ಮೂರ್ ನಾಲ್ಕು ಪಟ್ಟು ಹೆಚ್ಚು ಇಳುವರಿ ಬಂದಿರುವುದೆಂದು ಅಧ್ಯಯನದ ಪ್ರಕಾರ ತಿಳಿಯಲಾಗಿದೆ. ಹಾಗೂ ಈ ರೀತಿ ಬೆಳೆದಿರುವ ಉತ್ಪನ್ನಗಳು ಆರೋಗ್ಯಕರವಾಗಿದ್ದು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಕಂಡು ಕಂಡಿದೆ. ಈ ಉತ್ಪನ್ನಗಳು ವಿದೇಶಿ ಮಾರುಕಟ್ಟೆಗೂ ಲಗ್ಗೆ ಹಾಕಿವೆ. ಈ ವಿಷಯವನ್ನು ಸೂಕ್ಷ್ಮವಾಗಿ ಈಗ ಗಮನಿಸಿ ಸರಿಪಡಿಸಿಕೊಳ್ಳದ್ದಿದ್ದರೆ ಮಾವು ರಫ್ತು ನಿಷೇದವಾಅದ ಹಾಗೆ ನಮ್ಮ ಹಲವು ಉತ್ಪನ್ನಗಳ ಭವಿಷ್ಯ ಕಷ್ಟಕರವಾಗಬಹುದು.

ಸಗಣಿಯಿಂದ ಜೈವಿಕ ಅನಿಲ ಉತ್ಪಾದಿಸಿ ರೈತರು ಹಲವು ಗ್ರಾಮಗಳಲ್ಲಿ ಪ್ರಾರಂಭಿಸಿ ಯಶಸ್ವಿಯಾಗಿ ವೆಚ್ಚವಿಲ್ಲದೆ ಅಡಿಗೆ ಅನಿಲ ತಯಾರಿಸಿ ಆಹಾರ ಸೇವಿಸುತ್ತಿದ್ದಾರೆ. ಮುಂದೊಮ್ಮೆ ಅಡಿಗೆ ಅನಿಲ ಸಿಲಿಂಡರ್ ಬೆಲೆ ಗಗನಕ್ಕೇರಿದಾಗ ಇದರ ಯೋಚನೆ ಗಣನೀಯ ವಾಗಬಹುದು.

ಹಿಂದಿರುಗಿ ಹಾಲಿಗೆ ಬರುವುದಾದರೆ ಡಾ: ವರ್ಗಿಸ್ ಕೂರಿಯನ್ ನವರು ಕಲ್ಪಿಸಿರುವ ಹಾಲು ಉತ್ಪಾದಕರ ಒಕ್ಕೂಟಾ ಮೂಲಕ ಹಾಲು

ಖರೀದಿ ಹಾಗೂ ವಿತರಣೆಯಿಂದ ಹಾಲು ಉತ್ಪನ್ನಕ್ಕೆ ಉತ್ತಮ ಮಾರುಕಟ್ಟೆ ಕಲ್ಪಿಸಲಾಗಿದೆ. ಬಂದ ಲಾಭದಲ್ಲಿ ರೈತರಿಗೆ ಹಾಗೂ ಮಾರುಕಟ್ಟೆ ವಿಸ್ತೀರ್ಣ ಹಾಗೂ ಅಭಿವೃದ್ಧಿಗೆ ಬಳಸಿದ ಕಾರಣ ಒಂದು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ಆದರೆ ನಮ್ಮಲ್ಲಿ ಬೇರೆ ತೋಟಗಾರಿಕೆ ಬೆಳೆಗಳಾದ ಮಾವು ಪೇರಲು, ಚಿಕ್ಕು, ಇತ್ಯಾದಿ ಯಾವುದೇ ರೈತ ಉತ್ಪನ್ನಗೆ ಅಚ್ಚುಕಟ್ಟಾದ ಮಾರುಕಟ್ಟೆ ಇರದ ಕಾರಣ ಕೈಸುಟ್ಟು ಕೊಳ್ಳುವುದು ಸಹಜವಾಗಿದೆ. ಆದ್ದರಿಂದ ಹೈನುಗಾರಿಕೆಯಲ್ಲಿ ಆದಾಯದ ನಿಕರ ಲಾಭ ಲೆಕ್ಕ ಹಾಕಬಹುದು ಹಾಗೂ ನಾಲ್ಕರೂ ರೈತರು ಸೇರಿ ಒಂದು ಬ್ರಾಂಡ್ ಮಾಡಿ ಉತ್ತಮ ಮಟ್ಟದ ಹಾಲು ಗ್ರಾಹಕರಿಗೆ ನೀಡಿ ಪೂರ್ತಿ ಲಾಭ ಪಡೆದುಕೊಳ್ಳಬಹುದು.

ನಮ್ಮ ದೇಶ ಹಾಲು ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದು ಹಿಂದೆ ಹೆಚ್ಚಿಗೆ ಉತ್ಪಾದನೆಯಾದ ಹಾಲಿನ ಗುಣಮಟ್ಟ ಕಡಿಮೆ ಇರುವ ಕಾರಣ ಹಾಲಿನ ಪೌಡರ್ ಆಗಿ ಮರುಬಳಕೆಗೆ ಶೇಖರಿಸಲಡಲಾಗುತ್ತಿತ್ತು. ಇದಕ್ಕೆ ತಗಲುವ ವೆಚ್ಚ ಹೆಚ್ಚಾಗಿದ್ದು ಹಾಗೂ ಪುಡಿಯಿಂದ ಮತ್ತೆ ನೀರಿನೊಡನೆ ಬೇರಿಸಿದ ಹಾಲು ರುಚಿಕರವಾಗದ ಕಾರಣ ಹಾಲಿನ ದರದಲ್ಲಿ ಏರಿಕೆ ಪೂರಕವಾದ ಚಿಂತನೆಯಾಗಿರಲಿಲ್ಲ. ಆದರೆ ಈಗ ಕಾಲ ಈ ವಿಷಯದಲ್ಲಿ ಬದಲಾಗಿದೆ. ಹಾಲಿನ ಅನೇಕ ಉತ್ಪನ್ನಗಳು ಮೊಸರು, ಬೆಣ್ಣೆ, ತುಪ್ಪ, ಪನ್ನೀರು, ಕೋವ, ಪೇಡ, ಚಾಕಲೇಟ್, ಬಿಸ್ಕಟ್, ಲಸ್ಸಿ ತುಪ್ಪದ ಮೈಸೂರು ಪಾಕ್ ಇತ್ಯಾದಿ ಅನೇಕ ಹಾಲಿನ ಉತ್ಪನ್ನಗಳ ತಯಾರಿಕೆಯಿಂದ ಹಾಲಿನ ಶೇಖರಿಸಿ ಇಡುವ ಗುಣಮಟ್ಟ ಹಾಗೂ ಬೆಲೆವೃದ್ಧಿಯಾಗಲು ಹೆಚ್ಚಿನ ಆದಾಯ ಪಡೆಯಲು, ಹಾಗೂ ಉದ್ಯೋಗವಕಾಶ ಕಲ್ಪಿಸಲು ಗ್ರಾಹಕರ ಅಭಿರುಚಿ ತೀರಿಸಲು ಮೆಚ್ಚುಗೆ ಪಾತ್ರ ವಹಿಸಿದೆ. ಹೀಗಾಗಿ ಹಾಲಿನ ದರ ಇನ್ನೂ ಹೆಚ್ಚಾಗುವ ಸಂಭವವಿದೆ.

ಇನ್ನೂ ಹೆಚ್ಚಿನ ಲಾಭ ಪಡೆಯಲು ಅಂತರಾಷ್ಟ್ರೀಯ ಗುಣಮಟ್ಟವನ್ನು ಮುಟ್ಟುವ ನಿಟ್ಟಿನಲ್ಲಿ ಈ ಉದ್ಯಮವು ಸಂಪೂರ್ಣವಾಗಿ ಆಧುನಿಕ ಯಂತ್ರೋಪಕರಣ ಸಹಾಯ ಹಾಗೂ ಆರೋಗ್ಯಕರ ಹಾಲು ಉತ್ಪಾದನ ಪದ್ಧತಿಗಳ ಅಳವಡಿಕೆಯಿಂದ ಮುಂದೊಂದು ದಿನ ಸಾಕಾರವಾಗಬಹುದು. ಅಂದರೆ ಹಾಲು ಕರಿಯುವ ಯಂತ್ರ ಹಾಗೂ ಆಧುನಿಕ ಯಂತ್ರೋಪಕರಣಗಳ ಅಳವಡಿಕೆ ಮಿತವಾದ ಜೀವ ನಿರೋಧಕ ಬಳಕೆ ಇತ್ಯಾದಿ.

ಈ ಸಮಯಕ್ಕೆ ಅವಿಚಾರ ಬೇಡ ಹಾಲು ಅಮೃತವಿದ್ದಂತೆ ಮನೆಯಲ್ಲಿರುವ ಮಕ್ಕಳ ಹಾಗೂ ವೃದ್ಧರ ಆರೋಗ್ಯ ಕಾಪಾಡಲು ಹಾಗೂ ಮುಂದಿನ ದೇಶದ ಭವಿಷ್ಯವಾಗುವ ಈಗಿನ ಮಕ್ಕಳ ಆರೋಗ್ಯ ವಿಚಾರವಾಗಿ ಈ ಹಾಲನ್ನು ಸಂಪೂರ್ಣ ನಮ್ಮ ದೇಶದ ಮಕ್ಕಳ ಹಾಗೂ ನಾಗರಿಕರ ಬಳಕೆಗೆ ಸೀಮಿತವಾದರೆ ಸಂತೋಷ.

ಈ ಉದ್ಯಮಕ್ಕಿಗೆತ್ತಿಕೊಳ್ಳುವುದು ಸ್ವಾಗತಾರ್ಹ ಏಕೆಂದರೆ ಈ ಉದ್ಯಮದಲ್ಲಿ ತಾವುಗಳು ಸಮಾಜಕ್ಕೆ ಕಲಿಯುಗದ ಅಮೃತವನ್ನು ಉಣಬಡಿಸುತ್ತಿರುವ ಪುಣ್ಯಕ್ಕೆ ಪತ್ರರಾಗುವಿರಿ. ಇರುವ ಹಣವನ್ನು ಬಾರ್ ಅಂಡ್ ರೆಸ್ಟೋರೆಂಟ್, ಲಾಡ್ಜ್, ಹೋಟಲ್, ಮತ್ತು ಮನೆ ಬಾಡಿಗೆ ಇತ್ಯಾದಿಗಳಲ್ಲಿ ತೊಡಗಿಸುವ ಬದಲು ಹಾಲು ಉತ್ಪಾದನೆಯಲ್ಲಿ ತೊಡಗಿಸುವುದು ಸಾಕಾರವೆನಿಸುತ್ತದೆ.

ಸರ್ಕಾರದ ಅನೇಕ ಯೋಜನಗೆಗಳ ಸಹಾಯ ಪಡೆದುಕೊಂಡು ಸಂಪೂರ್ಣ ಮಾಹಿತಿಯೊಂದಿಗೆ ಈ ಉದ್ಯಮವನ್ನು ಲಾಭದಾಯಕವೆಂದು ಪ್ರಾರಂಭಿಸಬಹುದು. ಸರ್ಕಾರವು ಕ್ಷೀರ ಭಾಗ್ಯ ಯೋಜನೆ ಆಡಿಯಲ್ಲಿ ಹಾಲಿನ ಪೌಷ್ಟಿಕಾಂಶದ ಮಹತ್ವ ತಿಳಿದು ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದಲ್ಲಿ ಹಾಲು ವಿತರಿಸುವ ಯೋಜನೆ ಯಶಸ್ವಿಯಾಗಿ ಕೈಗೊಂಡು ಸಾರ್ವಜನಿಕರ ಹಾಗೂ ಮಕ್ಕಳ ಹಾರೈಕೆಗೆ ಪಾತ್ರವಾಗಿದೆ. \

ಗಣಿಗಾರಿಕೆಯಲ್ಲಿ ತೊಡಗಿದ್ದ ಅನೇಕರು ಗಣಿನೀತಿ ಹಾಗೂ ನಿರ್ಬಂಧ ಹೇರಿದಾಗ ಉದ್ಯೋಗದಿಂದ ವಂಚಿತರಾದವರಿಗೆ ಪರಿಯಾಯ ಪರಿಸರ ಸ್ನೇಹಿ ಉದ್ಯೋಗ ಮಾರ್ಗವಾಗಿ ಜೀವನೋಪಾಯಕ್ಕೆ ನಾಂದಿಯಾಗಬಹುದು. ಗ್ರಾಮೀಣ ಯುವಕರಿಗೆ ಹೊಸ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ, ಸ್ವಸಹಾಯ, ಮಹಿಳಾ ಸಂಘಗಳ ಸಬಲೀಕರಣ ದಲ್ಲಿ ಹೈನುಗಾರಿಕೆ ಪ್ರಮುಖ ಪಾತ್ರವೆಂದು ಈಗಾಗಲೇ ದೃಢೀಪಡಿಸಿದೆ.

ಉತ್ತರ ಕರ್ನಾಟಕದಲ್ಲಿ ಬರಗಾಲ ಬಿದ್ದಾಗ ಗೊಳೆ ಹೋಗುವವ ನಿಲ್ಲಿಸಲು ಸರ್ಕಾರದ ಬತ್ತಳಿಕೆಯಲ್ಲಿ ಪಾಶು ಪತಾಸ್ತ್ರದಂತೆ ಸಿದ್ಧವಿರುವ ಒಂದು ಅಭಿಲಾಷೆ.

ಮೊದಲಿಗಿಂತಲೂ ರೋಗ ನಿರ್ವಹಣೆ ಹಾಗೂ ಚಿಕಿತ್ಸೆಯಲ್ಲಿ ಅನೇಕ ಅಭಿವೃದ್ಧಿ ಹಾಗೂ ಆಧುನಿಕ ವಿಜ್ಞಾನದ ಬೆಳಕಿನಿಂದ ಹೊಸ ಪೀಳಿಗೆ ಪಶು ವೈದ್ಯರ ಕಾರ್ಯ ವೈಖ್ಯರಿಯಿಂದ ಈ ಉದ್ಯಮದಲ್ಲಿ ತಗಲುವ ನಷ್ಟ ನಿರ್ವಾಹಿಸಲು ಅನುಕೂಲಕರವಾಗಿದೆ. ಹೈನುರಾಸುಗಳ ವಿಮಾ ಪದ್ಧತಿ ಅಳವಡಿಸಿಕೊಂಡು ಅರಿವಿಲ್ಲದೆ ಆಗುವ ನಷ್ಟಗಳ ಪರಿಹಾರ ಪಡೆಯಬಹುದು. ಆಧುನಿಕ ಮೇವು ನಿರ್ವಹಣೆ ಪದ್ಧತಿಗಳನ್ನು ಅಳವಡಿಸಿಕೊಂಡು ದೀರ್ಘಕಾಲ ಮೇವಿನ ಅಭಾವವಾಗದಂತೆ ನೋಡಿಕೊಳ್ಳಬಹುದು. ಈಗ ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಹಾಲು ಕೊಡುವ ಹಸು ತಳಗಳಾದ ಹೆಚ್. ಎಫ್, ಜರ್ಸಿ, ಸರಾಸರಿ ದಿನಕ್ಕೆ 25 ರಿಂದ 30 ಲೀಟರ್ ಹಾಲು ನೀಡುವ ಶಕ್ತಿಹೊಂದಿರುತ್ತದೆ.

ಈ ಕಾರ್ಯವನ್ನು ಕೈಗೆತ್ತಿಕೊಳ್ಳಲು ಹಿಂಜರಿಯುವ ಮನಸ್ಥಿತಿ ಪೂರಕವಲ್ಲ ಏಕೆಂದರೆ ನವ್ಮೆಲ್ಲಾರ ಕಾಯುವ ಕೃಷ್ಣ ಗೋಪಾಲಕನಾಗಿದ್ದ ಎಂಬುವುದನ್ನು ನಾವು ಮರೆಯಬಾರದು. ಹೀಗಾಗಿ ಈ ಸಮಯದಲ್ಲಿ ಈ ಉದ್ಯಮದ ಲಾಭ ಪಡೆಯಲು ಕರ್ನಾಟಕ ವೈಜ್ಞಾನಿಕ ಮನವುಳ್ಳ ಮಹನೀಯರಿಗೆ ಈ ಮೂಲಕ ಕೀರಿಯನಾದ ನನ್ನಿಂದ ಕಿವಿ ಮಾತು.

ಹಾಲು ಕರೆಯುವವರು ಕೀರಿಯರಲ್ಲ.
ಹಾಲು ಕುಡಿಯುವವರು ಮರೆಯುವುದಿಲ್ಲ
ಹಾಲಿ ಸವಿದೊಡೆ ಮೊಸರು ಬೆಣ್ಣೆ ತುಪ್ಪವಾಗಿ
ಪಂಚಾಮೃತವಾಯಿತು ಕೂಡಲ ಸಂಗಮದೇವನಿಗೆ.

ನ್ಯಾನೋ ಹೈಡ್ರೋಕ್ಸಿಎಪಟೈಟ್‌ನ ತಯಾರಿ ಹಾಗೂ ಸ್ಲಿಪ್ ಎರಕ ಹೊಯ್ಯುವಿಕೆ

ರಾ. ರಾಮಚಂದ್ರ ರಾವ್

ವಿಜ್ಞಾನಿ, ವಸ್ತು ವಿಜ್ಞಾನ ವಿಭಾಗ, ಸಿ.ಎಸ್.ಐ.ಆರ್. – ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು, ಬೆಂಗಳೂರು –೫೬೦೦೧೭

E.Mail: rrrao@nal.res.in

ಹೈಡ್ರೋಕ್ಸಿಎಪಟೈಟ್ ಮಾನವನ ಮೂಳೆಯಲ್ಲಿರುವ ನಿರವಯವ ವಸ್ತುಗಳಿಗೆ ರಾಸಾಯನಿಕವಾಗಿ ಸಮನಾಗಿದ್ದು ಉತ್ತಮ ಜೀವ ಸಾಮರಸ್ಯ ಮತ್ತು ಮೂಳೆ ಅಂಗಾಂಶಗಳೊಂದಿಗೆ ಏಕೀಕರಣ (ಸಮನ್ವಯ) ಹೊಂದುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಜೀವ ಚಿಕಿತ್ಸಕ ಕ್ಷೇತ್ರದಲ್ಲಿ ವಿವಿಧ ರೂಪಗಳಲ್ಲಿ ಉಪಯೋಗಿಸಲ್ಪಡುತ್ತಿವೆ. ಪ್ರಸ್ತುತ ಅಧ್ಯಯನದಲ್ಲಿ ನ್ಯಾನೋ ಗಾತ್ರದ ಹೈಡ್ರೋಕ್ಸಿಎಪಟೈಟ್ ಕಣಗಳನ್ನು ಗ್ಲೈಸೀನ್ ಇಂಧನ ಆಧಾರಿತ ದ್ರವ್ಯ ದಹನ ಕ್ರಿಯೆಯ ಮೂಲಕ ತಯಾರಿಸಲಾಗಿದೆ. ಹೀಗೇ ತಯಾರಿಸಿದ ಕಣಗಳ ಪ್ರಾವಸ್ಥಾ ಸ್ಥಿತಿ, ಕ್ರಿಸ್ಟಲೀಯ ಗಾತ್ರ, ಕಣಗಳ ಗಾತ್ರ, ಕಣಗಳ ಹೊರಮೈ ವಿಸ್ತಾರ, ಆಕಾರ ಮೊದಲಾದವುಗಳ ವಿಶ್ಲೇಷಣೆಯನ್ನು ಮಾಡಲಾಯಿತು. ಈ ಅಧ್ಯಯನದ ಪ್ರಕಾರ ಕಣಗಳ ಕ್ರಿಸ್ಟಲೀಯ ಗಾತ್ರ ೧೦–೨೦ ನ್ಯಾ.ಮೀ., ಕಣ ಗಾತ್ರ ೧೦೦–೧೫೦ನ್ಯಾ.ಮೀ. ಹಾಗೂ ಹೊರಮೈ ವಿಸ್ತಾರ ೧೦–೧೬m^2/g ಆಗಿದೆ. ಈ ನ್ಯಾನೋ ಗಾತ್ರದ ಹೈಡ್ರೋಕ್ಸಿಎಪಟೈಟ್ ಕಣಗಳನ್ನು ಡಿ–ಅಯಾನೀಕರಿಸಿದ ನೀರಿನಲ್ಲಿ ಸೇರಿಸಿ ೩೬Vol.% ಸ್ಲಿಪ್ ಅನ್ನು ತಯಾರಿಸಲಾಯಿತು ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಅಚ್ಚಿನಲ್ಲಿ ಎರಕ ಹೊಯ್ಯಲಾಯಿತು. ಹೀಗೇ ಎರಕ ಹೊಯ್ದಂತಹ ಪದಾರ್ಥಗಳನ್ನು ೧೨೫೦$^{\circ}$C ನಲ್ಲಿ ಕಾಯಿಸಿ ಘನೀಕರಿಸಲಾಯಿತು. ನಂತರ ಈ ಪದಾರ್ಥಗಳ ಸಾಂದ್ರತೆ, ಸರಂಧ್ರತೆ ಹಾಗೂ ಸೂಕ್ಷ್ಮ ರಚನೆಯನ್ನು ಅಭ್ಯಸಿಸಲಾಯಿತು.

ಮುಖ್ಯ ಪದಗಳು: ನ್ಯಾನೋ ಹೈಡ್ರೋಕ್ಸಿಎಪಟೈಟ್, ತಯಾರಿ, ಸ್ಲಿಪ್ ಎರಕ ಹೊಯ್ಯುವಿಕೆ

1. ಪ್ರಸ್ತಾವನೆ: ಹೈಡ್ರೋಕ್ಸಿಎಪಟೈತ್ ಒಂದು ಸಂಸ್ಕರಿತ (ಕೃತಕವಾಗಿ ತಯಾರಿಸಲ್ಪಟ್ಟ) ಕ್ಯಾಲ್ಸಿಯಮ್ ಫೋಸ್ಫೇಟ್ ಅಗಿದ್ದು ಮಾನವನ ಮೂಳೆಯಲ್ಲಿರುವ ನಿರವರವ ವಸ್ತುಗಳಿಗೆ ರಾಸಾನಿಕವಾಗಿ ಸಮನಾಗಿದೆ. ಈ ರಾಸಾನಿಕವು ಉತ್ತಮ ಜೀವ ಸಾಮರಸ್ಯ ಮತ್ತು ಮೂಳೆ ಅಂಗಾಂಶಗಳೊಂದಿಗೆ ಏಕೀಕರನ್ (ಸಮನ್ವಯ) ಹೊಂದಿದೆ ಹಾಗೂ ಹೊಸ ಅಂಗಾಂಶಗಳ ಬೆಳವಣಗೆಯನ್ನು ಪ್ರಚೋದಿಸುತ್ತದೆ. ಈ ಕಾರಣಗಳಗಾಗಿ ಹೈಡ್ರೋಕ್ಸಿಎಪಟೈಟ್ ಸರಂಧ್ರಿತ ಸ್ಕಾ ಫೋಲ್ಡ್ ಗಳು ನಿಯಂತ್ರಿತ ಔಷಧ ವಿತರಣಾ ವ್ಯೆವಸ್ಥೆ ಹಾಗೂ ಜೀವಕೋಶ ತಾಂತ್ರಿಕತೆಯಲ್ಲಿ ಉಪಯೋಗಿಕ್ಕಾಗಿ ಅಭಿವೃದ್ಧಿಯಲ್ಲಿದೆ.

ಹೈಡ್ರೋಕ್ಸಿಎಪಟೈಟ್ ವಿವಿಧ ಉತ್ಪನ್ನಗಳ ಅಭಿವೃದ್ಧಿಯಲ್ಲಿ ಪ್ರಾರಂಭಿಕ ಕಣಗಳು ಕ್ರಿಸ್ಟಲೀಯ ಸ್ಥಿತಿ ಹಾಗೂ ಕಣಗಳ ಗಾತ್ರ ಪ್ರಮುಖ ಪಾತ್ರ ವಹಿಸುತ್ತದೆ. ನ್ಯಾನೋ ಗಾತ್ರದ ಕಣಗಳ ಸಾಮಾನ್ಯವಾಗಿ ದೊಡ್ಡ ಗಾತ್ರದ ಕಣಗಳಗಿಂತ ಅಧಿಕ ಜೀವ ಸಾಮರಸ್ಯತೆ ಹಾಗೂ ಜೈವಿಕ ಕ್ರಿಯಾಶೀಲತೆಯನ್ನು ಪ್ರದರ್ಶಿಸುತ್ತವೆ ಹಾಗೂ ಇದರಿಂದಾಗಿ ಸಂಶೋಧಕರ ಗಮನವನ್ನು ಹೆಚ್ಚು ಸೆಳೆದಿದ್. ಹೈಡ್ರೋಕ್ಸಿಎಪಟೈಟ್ ತಯಾರಿಯಲ್ಲಿ ಘನಸ್ಥಿತಿ ಪ್ರಕ್ರಿಯೆ, ಪ್ರಿಪಿಪಿಟೇಷನ್ ಕ್ರಿಯೆ. ಹೈಡ್ರೋಥರ್ಮಲ್ ಪ್ರಕಿಯೆ, ಸೋಲ್ ಜೆಲ್ ಕ್ರಿಯೆ, ಯಂತ್ರ ರಾಸಾಯನಿಕ ಪ್ರಕ್ರಿಯೆ, ಮೈಕ್ರೋ ಎಮಲ್ಷನ್ ಪ್ರಕ್ರಿಯೆ ಹಾಗೂ ದ್ರವ್ಯ ದಹನ ಪ್ರಕ್ರಿಯೆ ಮೊದಲಾದ ವಿಧಾನಗಳನ್ನು ಬಳಸಲಾಗುತ್ತದೆ.

ಹೀಗೆ ತಯಾರಿಸಿದ ಹೈಡ್ರೋಕ್ಸಿಎಪಟೈಟ್ ಕಣಗಳಿಂದ ಸರಂಧ್ರ ಅಥವಾ ಘನ ರೂಪದ ಇಂಪ್ಲಾಂಟ್ ಅಥವಾ ಸ್ಕಾ ಫೋಲ್ಡ್ ಗಳನ್ನು ಸ್ಲಿಪ್ ಎರಕ ಹೊಯ್ಯುವಿಕೆ, ಏಕಮುಖ ಒತ್ತಡ, ಐಸೋಪ್ರೆಸ್ಸಿಂಗ್, ಇಂಜಿಕ್ಷನ್ ಮೋಲ್ಡಿಂಗ್ ಅಲ್ಲದ ಘನ ಮುಕ್ತ ರೂಪ ಮೊದಲಾದ ವಿವಿಧ ಅಕಾರ ತರಿಸುವ ವಿಧಾನಗಳ ಮೂಲಕ ತಯಾರಿಸಲಾಗುತ್ತದೆ. ಕಣಗಳ ತಾಯಾರಿ ಹಾಗೂ ಆಕಾರ ತರಿಸುವ ಪ್ರತಿಯೊಂದು ವಿಧಾನಗಳು ಅವುಗಳದೇ ಅದ ಅನುಕೂಲಗಳು ಹಾಗು ಇತಿಮಿತಿಗಳನ್ನು ಹೊಂದಿವೆ.

ಪ್ರಸ್ತುತ ಅಧ್ಯಯನದಲ್ಲಿ ನ್ಯಾನೋ ಗಾತ್ರದ ಹೈಡ್ರೋಕ್ಸಿಎಪಟೈಟ್ ಕಣಗಳನ್ನು ಗ್ಲೈಸೀನ್ ಇಂಧನ ಅಧಾರಿತ ದ್ರವ್ಯ ದಹನ ಕ್ರಿಯೆಯ ಮೂಲಕ ತಯಾರಿಸಲಾಗಿದೆ ಹಾಗೂ ಈ ಕಣಗಳ ಸ್ಲಿಪ್ ಎರಕ ಹೊಯ್ಯುವ ಅಧ್ಯಯನವನ್ನು ಪ್ರಸ್ತುತ ಪಡಿಸಲಾಗಿದೆ.

2. ಪ್ರಾಯೋಗಿಕ ಪ್ರಕ್ರಿಯೆ

2.1 ಹೈಡ್ರೋಕ್ಸಿಎಪಟೈಟ್ ನ ತಯಾರಿ : ಮರ್ಕ್ ಸ್ಪಷಾಲಿಟಿ ಪ್ರೈವೆಟ್ ಲಿಮಿಟೆಡ್, ಮುಂಬಯಿ, ಇದರ ಉತ್ಪನ್ನಗಳಾದ ಕ್ಯಾಲ್ಸಿಯಂ ನೈಟ್ರೇಟ್ ಟೆಟ್ರಾಹೈಡ್ರೇಟ್ [$Ca(NO_3)_2.4H_2O$] ಡೈಅಮೋನಿಯಂ ಹೈಡ್ರೂಜನ್ ಫೋಸ್ಫೇಟ್ [$(NH_4)_2HPO_4$] ಮತ್ತು ಗ್ಲಾಯಿಸಿನ್ ಗಳನ್ನು ಪ್ರಾರಂಭಿಕ ರಾಸಾನಿಕಗಳಾಗಿ ತೆಗೆದು ಕೊಳ್ಳಲಾಯಿತು. ಕ್ಯಾಲ್ಸಿಯಂ ನೈಟ್ರೇಟ್ ಟೆಟ್ರಾಹೈಡ್ರೇಟ್ ಉತ್ಕರ್ಷಕವಾಗಿಯೂ ಗ್ಲಾಯಿಸಿನ್ ಅಪಕರ್ಷಕವಾಗಿಯೂ ಕಾರ್ಯ ನಿರ್ವಹಿಸುತ್ತದೆ. ಕ್ಯಾಲ್ಸಿಯಂ ನೈಟ್ರೇಟ್ ಟೆಟ್ರಾಹೈಡ್ರೇಟ್ ಮತ್ತು ಡೈಅಮೋನಿಯಂ ಹೈಡ್ರೂಜನ ಫೋಸ್ಫೇಟ್ ರಾಸಾಯನಿಕಗಳನ್ನು Ca:P ಗಳ ಅನುಪಾತ 1.67 ಇರುವಂತೆ ಹಾಗೂ ಉತ್ಕರ್ಷಕ ಮತ್ತು ಅಪಕರ್ಷಕಗಲು ಅನುಪಾತ 1 ಇರುವಂತೆ ತೆಗೆದುಕೊಳ್ಳಲಾಯಿತು. ರಾಸಾಯನಿಕ ಕ್ರಿಯೆಯ ಸಿದ್ಧಾಂತದ ಅನುಸಾರ ಇಂಧನದ ಸಂಪೂರ್ಣ ದಹನ ನಡಿಯಬೇಕಾದರೆ ಉತ್ಕರ್ಷಕ ಮತ್ತು ಅಪಕರ್ಷಕಗಳ ನಡುವಿನ ಅನುಪಾತ 1 ಇರಬೇಕು. ದ್ರವ್ಯ ದಹನ ಕ್ರಿಯೆಯಿಂದ ಹೈಡ್ರೋಕ್ಸಿ ಎಪಟೈಟ್ ನ ತಯಾರಿಕೆಯ ಅನುಕ್ರಮವನ್ನು ಚಿತ್ರ 1 ರಲ್ಲಿ ತೋರಿಸಲಾಗಿದೆ.

ಹೀಗೆ ತಯಾರಿಸಿದ ಕಣಗಳನ್ನು ೬೦೦$^{\circ}$C ಮತ್ತು ೧೦೦೦$^{\circ}$C ನಲ್ಲಿ ಕಾಯಿಸಲಾಯಿತು. ಎಲ್ಲಾ ಕಣಗಳ ಹರಳಿನ ಪ್ರಾವಸ್ಥಾ ಸ್ಥಿತಿ (crystalline phase) , ಯನ್ನು ಕ್ಷ–ಕಿರಣಗಳ ಪ್ರವರ್ತನದ ಮೂಲಕ (X-ray diffraction) ಹಾಗೂ ಇವುಗಳಲ್ಲಿ ಕ್ರಿಯಾತ್ಮಕ ವರ್ಗಗಳನ್ನು (functional groups) ನಸುಗೆಂಪು ಕಿರಣಗಳ ವರ್ಣ ಪಟಲಗಳ ಮೂಲಕ ವಿಶ್ಲೇಷಿಸಲಾಯಿತು. ಈ ಕಣಗಳ ಗಾತ್ರ, ಹೊರಮೈ ವಿಸ್ತೀರ್ಣ (ಬಿ. ಇ. ಟಿ ನಿಯಮ) ಮತ್ತು ಸ್ಕಾ ನಿಂಗ್ ಇಲೆಕ್ಟ್ರಾನ್ ಸೂಕ್ಷ್ಮದರ್ಶಕದ ಮೂಲಕ ಆಕಾರ ಮತ್ತು ಗಾತ್ರದ ವಿಶ್ಲೇಷಣೆಯನ್ನು ಮಾಡಲಾಯಿತು.



ಚಿತ್ರ1. ದ್ರವ್ಯ ದಹನ ಕ್ರಿಯೆಯಿಂದ ಹೈಡ್ರೋಕ್ಸಿಎಪಟೈಟ್ ತಯಾರಿ

2.2 ಹೈಡ್ರೋಕ್ಸಿಎಪಟೈಟ್ ನ ಸ್ಲಿಪ್ ಎರಕ ಹೊಯ್ಯುವಿಕೆ

ದ್ರವ್ಯ ದಹನ ಕ್ರಿಯೆಯಿಂದ ತಯಾರಿಸಿ ೬೦೦°C ನಲ್ಲಿ ಕಾಯಿಸಿದ ಹೈಡ್ರೋಕ್ಸಿಎಪಟೈಟ್ ನ ಕಣಗಳನ್ನು ಡಿ ಅಯಾನೀಕರಿಸಿದ ನೀರಿನಲ್ಲಿ ಸೇರಿಸಿ ಸ್ಲಿಪ್ ಅನ್ನು ತಯಾರಿಸಲಾಯಿತು. ಡಿ ಅಯಾನೀಕರಿಸಿದ ನೀರಿನಲ್ಲಿ Hap ಕಣಗಳ ಚದುರುವಿಕೆಯನ್ನು ಹೆಚ್ಚಿಸಲು ೦.1% ಡಿಸ್ಪರ್ ಸೆಂಟ್ ರಾಸಾಯನಿಕವನ್ನು ಸೇರಿಸಲಾಯಿತು. ಹೀಗೆ ತಯಾರಿಸಿದ HAp ಸ್ಲಿಪ್ ಅನ್ನು ಪಾಲಥೀನ್ ಡಬ್ಬದಲ್ಲಿ ಅಲ್ಯುಮಿನ ಸಿರಾಮಿಕ್ ನ ಗೋಲಗಳ ಜೊತೆ ಸೇರಿಸಿ ರೋಲರ್ ಮಿಲ್ ನಲ್ಲಿ ಸುಮಾರು 16 ಗಂಟೆಗಳ ಕಾಲ ಘರ್ಷಣೆಗೊಳಪಡಿಸಲಾಯಿತು. ನಂತರ ಈ ಸ್ಲಿಪ್ ಅನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್ ನ ಅಚ್ಚಿನಲ್ಲಿ ಎರಕ ಹೊಯ್ಯಲಾಯಿತು. ಸ್ಲಿಪ್ ಎರಕ ಹೊಯ್ಯುವ ಕ್ರಿಯಾಸರಣಿಯನ್ನು ಚಿತ್ರ2 ರಲ್ಲಿ ತೋರಿಸಲಾಗಿದೆ. ಹೀಗೆ ಎರಕ ಹೊಯ್ದಂತಹ ಪದಾರ್ಥಗಳನ್ನು 1250°C ನಲ್ಲಿ ಕಾಯಿಸಿ ಘನೀಕರಿಸಲಾಯಿತು ಘನೀಕರಿಸಿದ ಪದಾರ್ಥಗಳ ಸಾಂಧ್ರತ ಮತ್ತು ಸರಂಧ್ರತೆಯನ್ನು ಕಂಡುಹಿಡಿಯಲಾಯಿತು. ಹಾಗೂ ಸೂಕ್ಷ್ಮ ಸಂರಚನಗಳನ್ನು ಸ್ಕ್ಯಾನಿಂಗ್ ಇಲೆಕ್ಟ್ರಾನ್ ಮೈಕ್ರೋಸ್ಕೋಪ್ ನ ಸಹಾಯದಿಂದ ಅಭ್ಯಸಿಸಲಾಯಿತು.



ಚಿತ್ರ 2. ಹೈಡ್ರೋಕ್ಸಿ ಎಪಟೈಟ್ ಕಣಗಳ ಸ್ಲಿಪ್ ಎರಕ ಹೊಯ್ಯುವಿಕೆಯ ಕ್ರಿಯಾಸರಣಿ

ಚಿತ್ರ 2. ಫಲಿತಾಂಶಗಳು ಮತ್ತು ವಿಶ್ಲೇಷಣೆ

2.1 ಹೈಡ್ರೋಕ್ಸಿಎಪಟೈಟ್ ತಯಾರಿ: ದ್ರವ್ಯ ದಹನ ಕ್ರಿಯೆಯಿಂದ ತಯಾರಿಸಿದ ಹಾಗೂ ೬೦೦°C ಮತ್ತು 1೦೦೦°C ನಲ್ಲಿ ಕಾಯಿಸಿದ ಹೈಡ್ರೋಕ್ಸಿಎಪಟೈಟ್ ಕಣಗಳನ್ನು ಕ್ರಮವಾಗಿ HAG HAG600 ಮತ್ತು HAG1000ಎಂದು ನಿಯೋಜಿಸಲಾಯಿತು. ಈ ಕಣಗಳ ಕ್ಷ- ಕಿರಣ ವರ್ಣಪಟಲಗಳನ್ನು ಚಿತ್ರ 3(a-c) ಯಲ್ಲಿ ನೀಡಲಾಗಿದೆ. ಈ ವರ್ಣಪಟಲಗಳನ್ನು JCPDS ಮಾನ್ಯತೆ ಹೊಂದಿದೆ ವರ್ಣಪಟಲ ಮಾಹಿತಿಗೆ ತುಲನೆ ಮಾಡಿದಾಗ HAG ಮತ್ತು HAG600 ಕಣಗಳು ಹೈಡ್ರೋಕ್ಸಿಎಪಟೈಟ್ ಮತ್ತು ಬಿಟಾ- ಟ್ರೈಕ್ಯಾಲ್ಸಿಯಂ ಫೋಸ್ಫೇಟ್ (JCPDS-9-432) ಹರಳುಗಳ ಮಿಶ್ರಣವೆಂದು ನಿರ್ಣಯಿಸಲ್ಪಟ್ಟಿತು.



ಚಿತ್ರ 3(a) HAG (b) HAG600 ಮತ್ತು HAG1000 ಕಣಗಳ ಕ್ಷ- ಕಿರಣ ವರ್ಣಪಟಲಗಳು

HAG, HAG600 ಮತ್ತು HAG1000 ಕಣಗಳು ಅವಗೆಂಪು ಕಿರಣಗಳ ವರ್ಣಪಟಲಗಳನ್ನು ಚಿತ್ರ 4 (a-c) ಯಲ್ಲಿ ತೋರಿಸಲಾಗಿದೆ. ಈ ವರ್ಣಪಟಲಗಳಲ್ಲಿ ಕಂಡುಬರುವ 569/604/1040 cm^{-1} ಮತ್ತು 1100cm^{-1} ತರಂಗಗಳಲ್ಲಿನ ಪಟಲಗಳು PO_4^{3-} ಕ್ರಿಯಾತ್ಮಕ ಸಮೂಹಕ್ಕೆ ಸಂಬಂದಿಸಿದ್ದಾಗಿದ್ದು 632cm^{-1} ಮತ್ತು 3570Cm^{-1} ಪಟಲಗಳು ಹೈಡ್ರೋಕ್ಸಿಎಪಟೈಟ್ OH^-ಅಯಾನ್ ಗಳ ವೈಬ್ರೇಷನ್ ಮತ್ತು ಸ್ಟ್ರೆಚಿಂಗ್ ಕಂಪನಿಗಳಿಗೆ ಸಂಬಂಧಿಸಿದ್ದಾಗಿದೆ. ಅವಗೆಂಪು ಕಿರಣಗಳ ವರ್ಣಪಟಲಗಳ ಆಧಾರದಂತೆ ದ್ರವ್ಯದಹನ ಕ್ರಿಯೆಯ ಮೂಲಕ ತಯಾರಿಸಿದ HAG ಮತ್ತು 600°C ನಲ್ಲಿ ಕಾಯಿಸಿದಾಗ HAG600 ಕಣಗಳು ಹೈಡ್ರೋಕ್ಸಿಎಪಟೈಟ್ ಮತ್ತು ಪ್ರಾವಸ್ಥಾ ಸ್ಥಿತಿಯನ್ನು ಹೊಂದಿದ್ದು 1000°C ಕಾಯಿಸಿದಾಗ (HAG1000) ಹೈಡ್ರೋಕ್ಸಿಎಪಟೈಟ್ ಮತ್ತು ಬಿಟಾ-ಟ್ರೈಕ್ಯಾಲ್ಸಿಂ ಫೋಸ್ಫೇಟ್ ಗಳ ಮಿಶ್ರಣಗಳಾಗಿ ಮಾರ್ಪಡುತ್ತದೆ ಎಂದು ತಿಳಿಯಬಹುದು. ಈ ಫಲಿತಾಂಶಗಳು ಕ್ಷ-ಕಿರಣ ಪ್ರವರ್ತನದ ಅಧ್ಯಯನದ ಫಲಿತಾಂಶದೊಡನೆ ಸಹಮತ ಹೊಂದಿದೆ.



ಚಿತ್ರ 4(a) HAG (b) HAG 600 ಮತ್ತು HAG1000 ಕಣಗಳ ಅವಗೆಂಪು ಕಿರಣ ವರ್ಣಪಟಗಳು

ಕಣದ ಗಾತ್ರ ವಿಶ್ಲೇಷಣೆಯ ಅನುಸಾರ ದ್ರವ್ಯ ದಹನ ಕ್ರಿಯೆಯ ಮೂಲಕ ತಯಾರಿಸಿದ ಹಾಗೂ 600°C ನಲ್ಲಿ ಸಂಸ್ಕರಿಸಿದ ಕಣಗಳ ಗಾತ್ರವು 0.5um ನಿಂದ 10um ನವರೆಗೆ ವಿಸ್ತರಿಸಿದೆ ಹಾಗೂ ಇದು ಹೈಡ್ರೋಕ್ಸಿಎಪಟೈಟ್ ಕಣಗಳು ಅಗ್ಲಾಮರೇಟ್ ಆಗಿರುವುದನ್ನು ಸೂಚಿಸುತ್ತದೆ. ಈ ಫಲಿತಾಂಶಕ್ಕೆ ವ್ಯತಿರಿಕ್ತವಾಗಿ ಹೈಡ್ರೋಕ್ಸಿಎಪಟೈಟ್ ಕಣಗಳ ಹೊರಮೈ ವಿಸ್ತೀರ್ಣವು 10-16m^2/g ಅಗಿದ್ದು ಇದರಿಂದ ಕಂಡುಹಿಡಿದ ಕಣಗಳ ಗಾತ್ರವು ಸುಮಾರು 150nm ಅಗಿರುತ್ತದೆ. ಈ ಫಲಿತಾಂಶಗಳನ್ನು ಸಮರ್ಥಿಸಲು ಸ್ಕಾ ನ್ಯಿಂಗ್ ಇಲೆಕ್ಟ್ರಾನ್ ಮೈಕ್ರೋಸ್ಕೋಪ್ ನ ಮೂಲಕ ಹೈಡ್ರೋಕ್ಸಿಎಪಟೈಟ್ ಕಣಗಳನ್ನು ವಿಶ್ಲೇಷಿಸಲಾಯಿತು ಚಿತ್ರ 5(a-b) ನಲ್ಲಿ ತೋರಿಸಿದ SEM ಚಿತ್ರದ ಪ್ರಕಾರ AHG ಕಣಗಳ ಮೂಲ ಗಾತ್ರ 100-150nm ಅಗಿದೆ ಹಾಗೂ ಅಗ್ಲಾಮರೇಟ್ ಗಳ ಗಾತ್ರ 0.5um ನಿಂದ2.0umಆಗಿದೆ. ಈ ಫಲಿತಾಂಶವು ಕಣಗಾತ್ರ ಮತ್ತು ಹೊರಮೈ ವಿಸ್ತೀರ್ಣ ವಿಶ್ಲೇಷನೆ ಫಲಿತಾಂಶಕ್ಕೆ ಸಹ ಸಂಬಂಧಿತವಾಗಿದು.

2.1 ಹೈಡ್ರೋಕ್ಸಿಎಪಟೈಟ್ ಸ್ಲಿಪ್ ಎರಕ ಹೊಯ್ಯುವಿಕೆ : HAG600 ಕಣಗಳನ್ನು ಡಿಅಯಾನೀಕರಿಸಿದ ನೀರಿನಲ್ಲಿ ಡಿಸ್ಪರ್ ಸೆಂಟ್ ರಾಸಾನಿಕದ ಸಹಾಯದಿಂದ ಸೇರಿಸಿ ಸುಮಾರು 28-32 vol.% ನಷ್ಟು ಕಣಗಳನ್ನು ಹೊಂದಿರುವ ಸ್ಲಿಪ್ ಅನ್ನು ತಯಾರಿಸಲಾಯಿತು. ಈ ಸ್ಲಿಪ್ ಅನ್ನು ಪ್ಲಾಸ್ಟರ್ ಅಫ್ ಪ್ಯಾರಿಸ್ ಅಚ್ಚಿನಲ್ಲಿ ಎರಕ ಹೊಯ್ದಾಗ ಸುಮಾರು 42-44% ತಾಜಾ ಸಾಂಧ್ರರೆ (green density) ಇರುವ ಉತ್ಪನ್ನಗಳು ದೊರೆಯಿತು. ಇವುಗಳು 1250°C ನಲ್ಲಿ ಕಾಯಿಸಿದಾ 50+_ 1% ಘನೀಕರಿಸಿದ ಸಾಂದ್ರತೆ ಇರುವ ಉತ್ಪಾನ್ನಗಳು ದೊರಕಿದವು. ಆರ್ಕಿಮಿಡೀಶ್ ನಿಯಮದ ಪ್ರಕಾರ ಕಂಡುಹಿಡಿದಾಗ ಈ ಉತ್ಪನ್ನಗಳಲ್ಲಿನ ಸರಂದ್ರತೆ ಸುಮಾರು 45+_ 1% ಇರುವುದು ಕಂಡು ಹಿಡಿಯಲ್ಪಟ್ಟಿತು. ಈ ಉತ್ಪನ್ನಗಳನ್ನು ಎಮರೀ ಕಾಗದ ಹಾಗೂ ಡೈಮಂಡ್ ಪೇಸ್ಟ್ ಗಳನ್ನುಪಯೋಗಿಸಿ ಪಾಲಿಷ್ ಮಾಡಲಾಯಿತು ಮತ್ತು 900°C ನಲ್ಲಿ 30 ನಿಮಿಷಗಳ ಕಾಲ ಉಷ್ಣೋಪಚಾರ ನೀಡಲಾಯಿತು.

ಪಾಲಿಷ್ ಮಾಡಿ ಉಷ್ಣೋಪಚಾರ ನೀಡಿದ ಉತ್ಪನ್ನಗಳ ಸೂಕ್ಷ್ಮ ಸಂರಚನೆ ಮತ್ತು ಮರಿತಕ್ಕೊಳಪಡಿಸಿದ ಉತ್ಪನ್ನಗಳ ಸಂರಚನೆಗಳ SEM ಚಿತ್ರಗಳನ್ನು ಚಿತ್ರ 6(a-b) ಯಲ್ಲಿ ನೀಡಲಾಗಿದೆ.



ಚಿತ್ರ 5 ಸ್ಕಾ ನ್ಯಿಂಗ್ ಇಲೆಕ್ಟ್ರಾನ್ ಮೈಕ್ರೋಸ್ಕೋಪ್ ನ ಮೂಲಕ ತೆಗೆದ (HAG) ಕಣಗಳ ಸೂಕ್ಷ್ಮ ಸಂರಚನೆಗಳು. 10000X ಮತ್ತು 20000X



ಚಿತ್ರ ೬ (a) ಪಾಲಿಷ್ ಮಾಡಿ ಉಷ್ಣೋಪಚಾರ ನೀಡಿದ ಮತ್ತು (b) ಮುರಿತಕ್ಕೊಳಪಡಿಸಿದ ಹೈಡ್ರೋಕ್ಸಿಎಪಟೈಟ್‌ನ ಸೂಕ್ಷ್ಮ ಸಂರಚನೆಗಳು

ಈ SEM ಚಿತ್ರಗಳ ವಿಶ್ಲೇಷಣೆಯಂತೆ ಸ್ಲಿಪ್ ಎರಕ ಹೊಯ್ದು ಘನೀಕರಿಸಿದ ಹೈಡ್ರೋಕ್ಸಿಎಪಟೈಟ್‌ನ ಗ್ರೇಖಿನ್‌ನ ಗಾತ್ರ ೦.೩um ನಿಂದ ೩.೦um ವರೆಗಿದೆ ಹಾಗೂ ಸೂಕ್ಷ್ಮ ರಂಧ್ರಗಳು ೦.೫-um ನಿಂದ ೫.೦um ನ ವರೆಗಿದೆ. ಘನೀಕರಿಸಿದ ಹೈಡ್ರೋಕ್ಸಿಎಪಟೈಟ್ ನ ಸಂರಚನೆಗಳಲ್ಲಿನ ರಂಧ್ರಗಳ ಗಾತ್ರ ವಿಶ್ಲೇಷಣೆಯಂತೆ ರಂಧ್ರಗಳ ಗಾತ್ರವು 10nm ನಿಂದ ೫೦೦nm ಗಳ ವರೆಗಿನ ಶ್ರೇಣಿಯಲ್ಲಿದೆ. ಈ ಫಲಿತಾಂಶವು ಸ್ಕಾ ್ಯನಿಂಗ್ ಇಲೆಕ್ಟ್ರಾನ್ ಮೈಕ್ರೋಸ್ಕೋಪ್ ನಿಂದ ಮಾಡಿದ ವಿಶ್ಲೇಷಣೆಯನ್ನು ದೃಢೀಕರಿಸುತ್ತದೆ.

4. ನಿರ್ಣಯಗಳು:– ಪ್ರಸ್ತುತ ಅಧಯನದಿಂದ ನ್ಯಾನೋ ಗಾತ್ರದ ಹೈಡ್ರೋಕ್ಸಿಎಪಟೈಟ್ ನ ಕಣಗಳನ್ನು ದ್ರವ್ಯ ದಹನ ಕ್ರಿಯೆಯ ಮೂಲಕ ತಯಾರಿಸಬಹುದೆಂದು ನಿರ್ಣಯಿಸಬಹುದು. ಈ ಕಣಗಳು ಶುದ್ಧ ಹೈಡ್ರೋಕ್ಸಿಎಪಟೈಟ್ ಪ್ರಾವಸ್ಥಾ ಸ್ಥಿತಿಯನ್ನು ಹೊಂದಿದ್ದು ಕ್ರಿಷ್ಟಲೀಯ ಗಾತ್ರ 10–20nm, ಪ್ರಾಥಮಿಕ ಕಣಗಳ ಗಾತ್ರ 100–150nm ಅಗ್ಲಾಮರೇಟ್ ಗಾತ್ರ ೦.೫um–10um ಹಾಗೂ ಹೊರಮೈ ವಿಸ್ತೀರ್ಣ 10–16m^2/g ಆಗಿರುವುದು. ಹೀಗೇ ತಯಾರಿಸಿದ ಕಣಗಳು 1000°C ನಲ್ಲಿ ಕಾಯಿಸಿದಾಗ ಹೈಡ್ರೋಕ್ಸಿಎಪಟೈಟ್ ಮತ್ತು ಬಿಟಾ–ಟ್ರೈಕ್ಯಾಲ್ಸಿಯಂ ಫೋಸ್ಫೇಟ್ ಗಳ ಮಿಶ್ರಣಗಳಾಗಿ ಮಾರ್ಪಾಡುತ್ತವೆ. ಹೀಗೇ ತಯಾರಿಸಿದ ಹೈಡ್ರೋಕ್ಸಿಎಪಟೈಟ್ ಕಣಗಳನ್ನು ಸ್ಲಿಪ್ ಎರಕ ಹೊಯ್ಯುವ ಪ್ರಕ್ರಿಯೆಗೆ ಒಳಪಡಿಸಿದಾಗ ಪ್ರತಿಶತ ೫೦ ಘನತ್ವ ಹಾಗೂ ಪ್ರತಿಶತ ೪೫ ಸರಂಧ್ರ ಹೊಂದಿರುವ ಮತ್ತು ೦.೫um ನಿಂದ ೫.೦um ವರೆಗಿನ ಗಾತ್ರದ ಸೂಕ್ಷ್ಮ ರಂಧ್ರಗಳನ್ನು ಹೊಂದಿದ ಉತ್ಪನ್ನಗಳನ್ನು ಪಡೆಯಬಹುದು. ಈ ಉತ್ಪನ್ನಗಳು ಜೀವ ಚಿಕಿತ್ಸಕ ಸ್ಕಾ ್ಯಫೋಲ್ಡ್ ನ ತಯಾರಿಯಲ್ಲಿ ಉಪಯೋಗವನ್ನು ಹೊಂದಿವೆ.

ಕೃತಜ್ಞತೆಗಳು: ಪ್ರಾಯೋಗಿಕ ಸಹಕಾರವನ್ನು ನೀಡಿದ ಶ್ರೀ. ಎಲ್. ಮಾರಿಯಪ್ಪನ್, ಶ್ರೀಮತಿ. ಎಚ್. ಎನ್. ರೂಪ, ಜಿ. ಶಿಲ್ಪ, ಸಿ. ಹರೀಷ, ಡಾ. ಎ. ವನಜ, ಡಾ. ಜೆ. ಅಂಜನ ಹಾಗೂ ಶ್ರೀಮತಿ ಕಲಾವತಿ ಇವರುಗಳೀಗೆ ಲೇಖಕರು ಕೃತಜ್ಞತೆಯನ್ನು ಸಲ್ಲಿಸುತ್ತಾರೆ.

ಗ್ರಂಥ ಋಣ

1. L. L. Hench, Bioceramics from concept to clinic, J. Am. Ceram. Soc., 75[7] 1487-1510 (1991)
2. R. Ramachandra Rao, H. N. Roopa, T. S. Kannan, Solid state synthesis and thermal stability of HAP and HAP-B-TCP composite ceramic power, J. Mater. Sci: Mater.Med. 8[8] 511-518 (1997)
3. A. Cuneyt Tas, Combustion suynthesis of calcium phosphate bioceramic powders, J. Eur. Ceram. Soc. 20 [14-15] 2389-2394 (2000).
4. S. Sasikumar and R. Vijayaraghavan, Synthesis and characterization of bioceramic calcium phosphates by rapid combustion synthesis. J. Mater. Sci. Technol. 26[12] 144-1118 (2010)
5. S. K. Ghosh, S. K. Roy, B. Kundu, S. Datta and D. Basu, Synthesis of nanosized hydroxyapatite poweres through solution combustion route under differenct reaction conditions. Mater. Sci. and Eng. B. 176 [1] 14-21 (2011).

ಲೇಖಕರ ಪಟ್ಟಿ

ಪಿ. ಎಸ್. ಕಾಣನ್ನವರ 547
ಪಿ.ಅಶೋಕ 36
ಪಿ.ಅಶೋಕ 525
ಪೀರಪ್ಪ ಶೇಟ್ಟಪ್ಪ ಭಾಂಗೆ 316
ಬೆಳಗಲಿ ಎಸ್.ಎಲ್ 633
ಬೆಳಗಲಿ. ಎಸ್. ಎಲ್ 586, 589
ಭಾನು ಕೆ.ಎನ್ 170
ಭಾನುಪ್ರಕಾಶ್. ಎಂ 586
ಭರತೇಶ. ಎಸ್ 569
ಭಾರತಿ ಬಿ. 495, 545
ಸವಿತ ಎ.ಪಿ. 369
ಸವಿತಾ ಹುಲಮನಿ 697, 700
ಸುನೀತ ಕೆ.ಎನ್ 240
ಸುನಿತಾ ಬಸವರಾಜ ಪಾಟೀಲ್ 12
ಸುನಿತ, ಎ. ಬಿ. 459
ಸುಬ್ಬರಾಜು.ಎ 681
ಸುಮಂತಕುಮಾರ.ಡಿ 652
ಸುಮಾ 702
ಸುರೇಶ್‌ಕುಮಾರ. ಬಿ 459
ಸಾಯಬಣ್ಣ ಈರಣ್ಣ ಗುಡುಬಾ 67
ಸತೀಶ. ಆರ್ 253
ಸರ್ದಾರ ರಾಯಪ್ಪ ಸೊಪ್ಪಿ 64
ಸೌಮ್ಯ .ಆರ್ 29
ಸೌಮ್ಯಲತ, ಬಿ. ಎಸ್ 489
ಸ್ನೇಹ. ಡಿ. ಆರ್ 416
ದಿಲೀಪ್ ಕುಮಾರ್ ಎಂ 76
ದೀಪ ಎಂ.ಬಿ 323, 352
ದಿವ್ಯ ಎಂ.ಬಿ 323
ದಿವ್ಯಶಂಕರ್ 659
ನವೀನ್ ಚಂದ್ರ ಸಿ.ಬಿ 337
ನವನೀತ ಎಸ್ 625
ನರಸಿಂಹಮೂರ್ತಿ 688
ನಾಗಮಣಿ. ಎ 688
ನಾಗರಾಜು, ಎನ್. 519
ನಾಗರಾಜಮೂರ್ತಿ 116, 119
ನಾಗೇಶ .ಕೆ.ಟಿ. 340
ನೇತ್ರಾವತಿ ಹೀರೆಮಠ 700
ನೀಲಕಂಠ ಸ್ವಾಮಿ 262
ನೀಲಕಂಠ ಸ್ವಾಮಿ 45
ಪಲ್ಲವಿ 515
ಪಲ್ಲವಿ, ಎಮ್. ಎಸ್ 516
ಪಳನಿಮುತ್ತು 697
ಪುಷ್ಪಾ ಪಿ. 495, 545
ಪುಷ್ಪ, ಆರ್. ಎನ್ 519
ಪ್ರಭಾವತಿ.ಎಸ್.ಎನ್ 6
ಪ್ರಸನ್ನ 224
ಪ್ರಶಾಂತ ನಾಯ್ಕ 617
ಪ್ರಶಾಂತ 665
ಪ್ರೊ. ಡಾ॥ ಬಿ.ಜೆ. ಶರತ್‌ಚಂದ್ರ 432. 439
ಪ್ರೋ. ಪಿ.ಕೆ ಖಂಡೋಬಾ 45
ಶರ್ಮಿಳಾ ಟಿ.ಸಿ. 328
ಶಬ್ನಮ್ 478
ಶಶಿಕುಮಾರ್ ಟಿ.ಪಿ 398
ಶಂಭುಲಿಂಗ ಉಪಾಧ್ಯಾಯ 407
ಶ್ಯಾಮಲ ಡಿ.ಸಿ. 589
ಶ್ಯಾಮಗುಂಡು 572
ಶಂಕ್ರಮ್ಮ ಕೆ 668
ಶಕುಂತಲ ಸಿ 395, 398
ಶಕುಂತಲ ಎನ್.ಡಿ 24
ಶೋಭಾ.ಕೆ.ಎಸ್ 665, 681
ಶೈಲಜ ಶ್ರೀಹರಿ 625
ವಿ.ಪಿ. ಭಾರತಿ 515
ವಿಶ್ವನಾಥರಡ್ಡಿ ಹಣಮಗೌಡ 319
ವಿಜಯಕುಮಾರ ಮೇಟಿ 490
ವಿರೇಶ ಹತ್ತಿ 36
ವಿರೇಶ ಹತ್ತಿ 525
ವಿದ್ಯಾ ಶೆಟ್ಟಿ ಕೆ 668
ವಿದ್ವಾನ್ ರವಿ ಜೋಶಿ 276
ವಿದ್ವಾನ್ ಡಾ. ಎ. ಎನ್. ಸುಧೀರ್ ಕುಮಾರ್ 216
ಬಸವರಾಜ ಕುಂಬಾರ 36
ಬಸವರಾಜ ಕುಂಬಾರ 525
ಬಿ. ಸಣ್ಣಪ್ಪ 471, 478
ಬಿ. ನವೀನ್ 36
ಬಿ. ಶಿವಣ್ಣ 31
ಬಿ. ಶಿವಣ್ಣ 522
ಬಿ. ಶಿವಣ್ಣ, 561, 575
ಬಿ. ತಾಂಬಟ್ 497, 552, 572, 576
ಬಿ.ಕೆ. ರವೀಂದ್ರನಾಥ್ 90
ಬಿ.ಕೆ.ಪ್ರಕಾಶ್ 478
ಬಿಳಿಗಿರಿ. ಎನ್ 411
ಲಿಂಗರಾಜು ಹೆಚ್. ಈ 597
ಯೋಗೇಶ. ಬಿ. ಎಸ್ 93
ಯೋಗೇಶ್. ಜಿ. ಎಸ್ 444
ಸಿ. ಉಮಾಶಂಕರ 500
ಸಿ.ಜಿ. ರಮೇಶ್ 124,126
ಸಿ.ಎಮ್ ಮಂಜುನಾಥ 625
ಶಿಲ್ಪ ಎಸ್,ಎನ್ 331
ಶಿವಪ್ಪ .ಎಮ್. ಭೂಸನೂರ 344
ಶೀವಲೀಲಾ ಎಚ್. ಬಿ 697, 700
ಶಿವರಾಜ್. ಎಸ್. ಎ 702

ಶಿವಕುಮಾರ್ 661
ಶ್ರೀ ಜನಾರ್ಧನ್‌ಡಿ.ಎಸ್ 508
ಶ್ರೀ ಟಿ. ರುದ್ರಮುನಿ 31
ಶ್ರೀ. ಟಿ. ರುದ್ರಮುನಿ 561, 575
ಶ್ರೀನಿವಾಸ ಸಿ. 572
ಶ್ರೀಮತಿ ಸುಧಾ ಹೆಚ್.ಎಸ್ 387
ಶ್ರೀಮತಿ ಎಸ್.ಸುರ್ಮ 162, 166
ಶ್ರೀಮತಿ ಗಾಯತ್ರಿ 380
ವಾದಿರಾಜ್ ಕೆ.ಟಿ 633
ವನಮಾನ ಎಸ್.ಎಂ. 190
ಮಲ್ಲಿಕೇಶ. ಹೆಚ್.ಹೆಚ್, 249
ಮಮತಾ. ಕೆ. 463
ಮಹಮ್ಮದ ಸನಾವುಲ್ಲಾ 497
ಮಹಾಂತೇಶ ಪಾಟೀಲ 71
ಮಹದೇವ ನಾಯಕ. ಎಚ್.ಇ 208, 211
ಮಧು ಕರ್ನಾಟ್ ಎಸ್ 159
ಮಾಲಿನಿ ಎನ್ ಅಭ್ಯಂಕರ್ 255, 262
ಮಾದಪ್ಪ. ಜಿ 109
ವೆಂಕಟರಮಣ ಜಿ. ವಿ 597
ವೆಂಕಟೇಶ ಕಡೂನ 258
ವೈ. ಎನ್. ಶಿವಲಿಂಗಯ್ಯ 31
ವೈ.ಎನ್. ಶಿವಲಿಂಗಯ್ಯ 513
ಅನಮ್ಥ ಆಚಾರ್ಯ 428
ಅನ್ನಪೂರ್ಣ ಎಚ್ 601
ಅನಿತ. ಎಂ. ಎಸ್. 184
ಅವಿನಾಶ್ ಪಿ. 581
ಅಶ್ವಿನಿ. ಹೆಚ್. ಎಸ್. 446
ಅಮೃತಾ. ಬಿ. ಎಸ್ 297
ಅರುಣಶ್ರೀ.ಎಂ.ಕೆ. 251
ಅರುಣ್ ಆರ್. 304, 391
ಅಕ್ಷತಾ. ಎಸ್. ಎ, 702
ಜನಾರ್ಧನ 232
ಆಶಾ, ಎಸ್. 211
ಆಶಾ. ಎಸ್ 265
ಜಮುನ ಪ್ರಕಾಶ್ 6
ಜಯಲಕ್ಷ್ಮೀ ನಾರಾಯಣ ಹೆಗಡೆ 495, 545
ಆರ್. ಯು. ಅಭಿಷೇಕ್ 628
ಜಗದೀಶ್ ಬಾಬು ಎಚ್. ಕೆ 395, 398
ಜಗದೀಶ್ ಬಾಬು ಎಚ್.ಕೆ. 304
ಜೈಕುಮಾರ. ಬಿ 652
ಜಿ. ಅನಂತಪದ್ಮನಾಭ 200
ರಾ. ರಾಮಚಂದ್ರ ರಾವ್ 704
ರಾಧಿಕ, ಎಸ್. 542
ರವೀಂದ್ರ ವೈ 547
ರಹಿಮಾನ ಆಯ್. ಗೊರಜನಾಳ 130
ರಶ್ಮಿ.ಎಂ. 16
ರಾಮಪ್ಪ, ಹೆಚ್. ಕೆ 516
ರಮ್ಯ. ಎ 76
ರಮ್ಯಶ್ರೀ, ಕೆ.ಆರ್. 542, 556
ರಾಮಕೃಷ್ಣ ನಾಯ್ಕ 515
ರಮೇಶ. 135, 139
ರುದ್ರಗೌಡ ಸಿ 547
ರಾಜಕುಮಾರ ಎಂ ದಣ್ಣೂರ 60
ಉಮೇಶ್. ಎಸ್. 581
ರಕ್ಷಿತ್ 426
ರತ್ನಮ್ಮ. ಖ 704
ರಾಚೋಟಿದೇವರು 194, 460
ರಾಧಾ, ಎಮ್.ಆರ್ 519
ರೇವಣ್ಣ. ಜಿ. 246
ರೇಖಾ. ಕೆ. ಎನ್ 113
ರೇಣುಕ, ಹೆಚ್. ಎಮ್ 516
ಎ. ಉಮೇಶ 471
ಎ. ರೇವತಿ 625
ಎಸ್ ರಾಜಶೇಖರಮೂರ್ತಿ 552
ಎಸ್. ಪೋದ್ದಾರ 691
ಎಸ್. ಎಸ್. ಗುಳೇದಗುಡ್ಡ 691, 695
ಎಸ್. ಎಮ್. ಅಮೀತಾ. ಜಿ. 702
ಎಸ್. ತಿಪ್ಪೇಸ್ವಾಮಿ 628
ಎನ್ ಜಗನ್ನಾಥನ್ 625
ಎನ್. ಅಂಬರೀಶ್ 224
ಎನ್. ಆನಂದಗೌಡ 395
ಎನ್.ಚಿನ್ನಸ್ವಾಮಿ 150
ಎಂ. ಸಿ. ಮಧುಸೂಧನ್ 683
ಎಂ. ಎಚ್. ಶಂಕರ 575
ಎಂ. ಕೆ. ನಾಗಮಣಿ 495, 545
ಎಂ.ಸಿ.ಗೀತಾ 675
ಎಂ.ಜಿ ಪ್ರಮೋದ್ 309
ಎಂ.ಜಿ ಪ್ರಮೋದ್ 412
ಎಂ.ಎನ್.ಕವಿತಾ 196
ಎಂ.ಟಿ.ಸಂಜಯ್ 36
ಎಂ.ಟಿ.ಸಂಜಯ್ 525
ಎಂ.ಹೆಚ್. ಶಂಕರ 513
ಎಂ.ಕೆ. ನಾಗಮಣಿ 500
ಎಮ್. ಮಹಾದೇವ ಮೂರ್ತಿ 552
ಎಮ್. ಹೆಚ್. ಶಂಕರ 522
ಟಿ. ರುದ್ರಮುನಿ 522
ಟಿ. ಎಂ. ಗೀತಾಂಜಲಿ 269
ಟಿ.ವಿ.ರಾಮಚಂದ್ರ ಪ್ರಸಾದ್ 525
ಟಿ.ಬಿ.ಮೃತ್ಯುಂಜಯ 610
ಓಂಕಾರಪ್ಪ.ಆರ್ 665, 681

ಹರೀಶ್,ಜೆ 542, 556
ಹರಿಣಿ ಕುಮಾರ್, ಕೆ.ಎಮ್ 542, 556
ಹೇಮಾವತಿ, ಸತೀಶ್. ಆರ್ 346
ಹೆಚ್. ಪಿ. ಭವ್ಯ 405
ಹೆಚ್. ಮಹದೇವಸ್ವಾಮಿ 228
ಹೆಚ್. ಮಹದೇವಸ್ವಾಮಿ 286
ಹೆಚ್. ಎಸ್. ಪ್ರಕಾಶ್ 683
ಹೆಚ್. ಎನ್. ವೆಂಕಟೇಶ್ 628
ಹೆಚ್.ಎಂ. ಸುಧಾ 284
ಹೆಚ್.ಎಂ.ಮಹೇಶ 652
ಹೆಚ್.ಹೆಚ್. ಮಲ್ಲಿಕೇಶ 374
ಹೆಚ್.ಹೆಚ್. ಮಲ್ಲಿಕೇಶ 313
ಹೆಚ್.ಕಮಲ 190
ಕಾಶಿನಾಥ ಶಿವಪ್ಪ ಟಕ್ಕಳಕಿ 334
ಕಾಶೀನಾಥ ಶಾಸ್ತ್ರಿ ಹೆಚ್.ವಿ. 539
ಕು. ತಂಗಾರಾಣಿ 423
ಕಾವ್ಯಶ್ರೀ, ವಿ.ವಿ. 519
ಕುಮಾರಿ. ರಾಜೆಶ್ವರಿ ಆಚಾರ್ಯ 428
ಕೆ. ಮಂಜುನಾಥ್ 628
ಕೆ. ಎಲ್. ವಿಜಯ್ ಕುಮಾರ್ 561
ಕೆ. ಎಸ್. ಎಂ. ಎಸ್. ರಾಘವರಾವ್ 683
ಕೆ. ಎಂ. ಶ್ರೀನಿವಾಸ ರೆಡ್ಡಿ 31
ಕೆ. ಎಂ. ಶ್ರೀನಿವಾಸ ರೆಡ್ಡಿ 561, 575
ಕೆ. ಹುದ್ದಾರ 697
ಕೆ. ಕೆ ವಿಜಯಲಕ್ಷ್ಮಿ 617
ಕೆ. ಗೀತಾ 697. 700
ಕೆ.ಜಿ. ಮಂಜುನಾಥ್ 478
ಕೆ.ಎಂ. ಶ್ರೀನಿವಾಸ ರೆಡಿ 522
ಕೆ.ಎಂ. ಶ್ರೀನಿವಾಸ ರೆಡ್ಡಿ 513
ಡಾ. ಇಂದಿರಾ ಟಿ. 363
ಡಾ. ಪಿ. ಬಾಲಕೃಷ್ಣನ್ 547
ಡಾ. ಸಂಪತ್‌ಕುಮಾರ್ 162, 166
ಡಾ. ನಂಜುಂಡ.ಡಿ.ಸಿ 337
ಡಾ. ವಿ.ಟಿ ಕಾಂಬಳೆ 60
ಡಾ. ವಿದ್ಯಾಶಂಕರ್ ಎಂ.ಹೆಚ್ 659, 675
ಡಾ. ಸಿ.ಆರ್. ಗೋಪಿನಾಥ್ 503, 506
ಡಾ. ಸಿ.ಕೆ ಪುಟ್ಟಸಾಮಿ 45
ಡಾ. ಶಿವಮೂರ್ತಿ ಎ 423
ಡಾ. ಶ್ರೀನಿವಾಸ. ಈ 453
ಡಾ. ಶ್ರೀಪಥಿ ಆಚಾರ್ಯ. ಈ 428, 436
ಡಾ. ಮಹದೇವ್‌ಜೆ 508
ಡಾ. ಮಧುಸೂಧನ್ ಹೆಚ್.ಎಸ್ 532, 536
ಡಾ. ಮಧುಸೂಧನ್, ಹೆಚ್.ಎಸ್ 612
ಡಾ. ಮಾಲಿನಿ ಎಸ್. ಎಸ್ 450, 453, 455
ಡಾ. ಅನುರಾಜ್ ಬಿ 547
ಡಾ. ಇ. ಬಿ. ಸೇಡಂಕರ 584
ಡಾ. ಜಿ. ಶೀಲಾ 24
ಡಾ. ಜಿ.ಟಿ. ರಾಮಚಂದ್ರಪ್ಪ 304, 346, 391
ಡಾ. ರವಿಕುಮಾರ್ ಪಿ 532, 534, 536
ಡಾ. ರವಿಕುಮಾರ್, ಪಿ. 612
ಡಾ. ರಾಮಕೃಷ್ಣ ಜಿ. 178
ಡಾ. ರಾಜಶೇಖರ್ 702
ಡಾ. ಎಸ್. ಡಿ. ಶಶಿಕಲಾ 236
ಡಾ. ಎಸ್.ಎಂ. ಮುತ್ತಯ್ಯ 81
ಡಾ. ಎನ್ ಎಲ್ ಶ್ರೀಮತಿ 159
ಡಾ. ಎಂ.ಪಿ. ರಮೇಶ 147
ಡಾ. ಎಂ.ಶ್ರೀನಿವಾಸಮೂರ್ತಿ 187
ಡಾ. ಎಂ.ಡಿ ಉಮೇಶ 326
ಡಾ. ಎಚ್.ಎನ್. ನರಸಿಂಹಮೂರ್ತಿ 503. 506
ಡಾ. ಹೆಬ್ಬಾರ್, ಎ. 534
ಡಾ. ಹೇಮಂತ್ ಗೌಡ ಕೆ 532, 534, 536
ಡಾ. ಹೇಮಂತ್ ಗೌಡ, ಕೆ 612
ಡಾ. ಕೃಷ್ಣ ಆರ್ ಹೊಂಬಳ್ 259, 328, 331, 352
ಡಾ. ಕೆ.ವಿ. ಶಿವಕುಮಾರ್ 508
ಡಾ. ಡಿ. ಕುಮಾರ್ 182
ಡಾ. ಗಜಾನನ ಪ್ರಭು ಬಿ 423
ಡಾ. ಗೋಪಾಲಕೃಷ್ಣ.ಆರ್. 16
ಡಾ. ಗೆಹಲೌಟ್, ಬಿ.ಎಸ್ 534
ಡಾ.ಪದ್ಮಿನಿ ಎಸ್.ವಿ 485
ಡಾ.ಪ್ರಭಾಕರ್.ಬಿ.ಟಿ 426
ಡಾ.ಬಿ.ಎಚ್.ಗುಜಲಾರ 180
ಡಾ.ಸಿ.ಕೆ ಪುಟ್ಟಸ್ವಾಮಿ 60, 76
ಡಾ.ಸಿ.ಗಂಗರಾಜು 152
ಡಾ.ಮಂಜುನಾಥ್.ಪಿ 162, 166
ಡಾ.ರಾಜಕುಮಾರ್ ನಾಗರಹಳ್ಳಿ 503. 506
ಡಾ.ಎ.ಡಿ. ರಂಗನಾಥ್ 508
ಡಾ.ಕೆ.ವ್ಹಿ.ಜುಕ್ತಿಮಠ 154
ಡಾ.ಚೇತನಾ ರಾಧಾಕೃಷ್ಣ.ಪಿ.ಎಂ 457
ಡಾ॥ ಸಂದ್ಯಾರಾಣಿ. ಹೆಚ್. ವಿ 446
ಡಾ॥ ನಾ. ದತ್ತಾತ್ರೇಯ 96, 100
ಡಾ॥ ವಿ. ಪುಟ್ಟಲಿಂಗಮ್ಮ 635
ಡಾ॥ ವಿಜಯಕುಮಾರ ಎಚ್. ಸಾಲಿಮನಿ 316, 319
ಡಾ॥ ಸಿ. ಕೆ. ಪುಟ್ಟಸ್ವಾಮಿ 116, 119
ಡಾ॥ ಶಿಶಿರ ಎಸ್. ರಾನಡೆ 432, 439
ಡಾ॥ ವಸಂತ ಕುಮಾರ ಬಿ 584
ಡಾ॥ ಅಪರ್ಣಾ ನಾಭಿರಾಜ್ 614, 671
ಡಾ॥ ಆರ್. ಪೂರ್ಣಿಮ 143
ಡಾ॥ ಎಂ. ಎ. ಶೃತಿಕೀರ್ತಿ 220
ಡಾ॥ ಐ. ಆರ್. ಶಾಂತಲಾ ಪ್ರಿಯದರ್ಶಿನಿ 614, 671
ಡಾ॥ ಟಿ. ರಮೇಶ್ 403

ಡಾ॥ ಕೆ. ನಾರಾಯಣ ಭಟ್	54
ಡಾ॥ ಡಿ. ಬಿ. ಪುರಾಣಿಕ	18, 21
ಡಾ॥ ಗಂಗಮ್ಮ ಹೆಚ್.ಎ	300
ಡಾ॥ ತ್ರಿಶೂಲಿ ಪಿ.ಬಿ	432. 439
ಕ್ರಿಸ್ಟಿ ಸಾರ ಜಾರ್ಜ್	556
ಕೀರ್ತಿ. ಎಸ್, ಆರ್.	691, 695
ಡಿ. ಸಿ. ಮೋಹನ	628
ಗುಂಡಪ್ಪ ಸಿ. ಸಿಂಗೆ	377
ಗುಂಡಪ್ಪ ಸಿ.ಸಿಂಗೆ	87
ಗಾಣಿಗರ್ ಎನ್ ಎಸ್	48
ಗೀತಾ. ಎಚ್	606
ಗಿರೀಶ ಹೆಚ್. ಸಿ.	497
ಗಿರೀಶ್ ಎಂ ಬಿ	205
ದುಂಡಯ್ಯ	278
ಚಂದ್ರಶೇಖರ ಎಸ್. ಕಳ್ಳಿಮನಿ	515
ಚಂದ್ರಮೌಳಿ ಎಂ.ಎಸ್	170
ಚಂದ್ರೇಗೌಡ, ವೆಂಕಟೇಗೌಡ	356
ಚರಣ್ ಕುಮಾರ್ ಕೆ	640, 645
ದೇವರಾಜು.ಎಸ್.ಎಸ್	359
ಚೇತನ.ಎಸ್.ಇ	665
ಚೈತನ್ಯ ಎಸ್.	349
ಚೈತನ್ಯ ಎಸ್.	107
ಚೈತ್ರ ಜಿ. ಎನ್	497
ಚೈತ್ರ ಜಿ. ಎನ್	572, 576
ಚೈತ್ರ ಹೆಚ್. ವ್ಹಿ	576

ಸಮ್ಮೇಳನದ ಪ್ರಾಯೋಜಕರ ಪಟ್ಟಿ (SPONSORS LIST)

ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ನವದೆಹಲಿ
DEPARTMENT OF SCIENCE & TECHONOLOGY, NEW DELI

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು
KARNATAKA STATE OPEN UNIVERSITY, MYSORE

ಇನ್ಫೋಸಿಸ್ ಫೌಂಡೇಶನ್, ಬೆಂಗಳೂರು
INFOSYS FOUNDATION, BENGALURU

ಕೇಂದ್ರಿಯ ಭಾರತೀಯ ಭಾಷಾ ಪರಿಷತ್, ಮೈಸೂರು
CENTRAL INSTITUTE OF INDIAN LANGUAGES, MYSORE

ಬಿ. ಎಲ್. ಡಿ. ಇ. ವಿಶ್ವವಿದ್ಯಾಲಯ, ವಿಜಯಪುರ
B. L. D. E. UNIVERSITY, VIJAYAPURA

ಸಿ. ಎಸ್. ಐ. ಆರ್-ಕೇಂದ್ರಿಯ ಆಹಾರ ತಂತ್ರಜ್ಞಾನ ಸಂಶೋಧನೆ ಸಂಸ್ಥೆ, ಮೈಸೂರು
CSIR-CFTRI, MYSORE

ಜೆ. ಎಸ್. ಎಸ್. ವಿಶ್ವವಿದ್ಯಾಲಯ, ಮೈಸೂರು
J. S. S. UNIVERSITY, MYSORE

ಕೃಷಿ ವಿಶ್ವವಿದ್ಯಾಲಯ, ಧಾರವಾಡ
UNIVERSITY OF AGRICULTURAL SCIENCES, DHARWAD

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ಮೈಸೂರು
KARNATAKA STATE Dr. GANGUBAI HANGAL MUSIC & PERFORMANCE ARTS UNIVERSITY, MYSORE

ಕರ್ನಾಟಕ ಪಶು ಹಾಗೂ ಪಶುವೈದ್ಯಕೀಯ, ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ
KARNATKA VETERINARY, ANIMAL & FISHERIES SCIENCE UNIVERSITY, BIDAR

ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು
MANGALORE UNIVERSITY, MANGALORE

ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ
KUVEMPU UNIVERSITY, SHIMOGA

ಕೃಷಿ ವಿಶ್ವವಿದ್ಯಾಲಯ, ರಾಯಚೂರು
UNIVERSITY OF AGRICULTURAL SCIENCES, RAICHUR

ಸಂದೇಶ್ ದಿ ಪ್ರಿನ್, ಮೈಸೂರು
SANDEESH THE PRINCE, MYSORE

ಇಂಡಿಯಮ್, ಪ್ರಾಪ್ರಿಟ್ರಿಸ್, ಬೆಂಗಳೂರು
INDIUM PROPRIETIES, BENGALURU

ಫೇರ್ವೆಲ್ಲಿ ಟ್ರಾನ್ಸ್ ಪೋರ್ಟ್, ತಮಿಳುನಾಡು
FAIVELEY TRANSPORT, TAMIL NADU

ಸಾಗರ್ ಫೌಂಡರಿ ಕೆಮಿಕಲ್ಸ್, ಭದ್ರಾವತಿ
SAGAR FOUNDARY CHEMICALS, BHADRAVATI

ಫೆನ್‌ಫಿ ಮೆಟಲರ್ಜಿ, ಬೆಂಗಳೂರು
FENFEE METALLURGICALS, BENGALURU

ಕೊಟೆಕ್ ಊರ್ಜಾ, ಬೆಂಗಳೂರು
KOTEK URJA, BENGALURU

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಷನ್ ಸೊಸೈಟಿ (ರಿ), ಉಜ್ಜರೆ
SIR DHARMASTHALA MANJUNATHESWARA EDUCATION SOCIETY (R), UJIRE

ನಂದಿನಿ ಎಜೆನ್ಸಿ, ಮೈಸೂರು
NANDINI AGENCIES, MYSORE

ಟೆಕ್ನೋಕೆಮ್ ಎಜೆನ್ಸಿ, ಮುಂಬೈ
TECHNOCHEM AGENCIES, MUMBAI

ಶ್ರೀ. ಹೆಚ್. ಎಸ್. ಪ್ರಕಾಶ್, ಚೀಫ್ ಜನರೆಲ್ ಮ್ಯಾನೇಜರ್, ಐ.ಇ.ಎಂ.ಎಲ್, ಬೆಂಗಳೂರು
Shr. H. S. PRAKASK, CHIEF MANAGER, BEML, BENGALURU

ಕರ್ನಾಟಕ ಹೈಬ್ರೀಡ್ ಮೈಕ್ರೋಡಿವೈಸ್ ಲಿಮಿಟೆಡ್, ಬೆಂಗಳೂರು
KARNATAKA HYBRIDE MICORDIVICES LIMITED, BENGALURU

ಸಮ್ಮೇಳನದ ವರದಿ

ಭಾರತ ರತ್ನ ಡಾ. ಸರ್. ಎಂ. ವಿಶ್ವೇಶ್ವರಯ್ಯ ನವರ ಜನ್ಮಾಚರಣೆಯ ಸುಸಂಧರ್ಭದಲ್ಲಿ ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕವು ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ 10ನೇ ಕನ್ನಡ ವಿಜ್ಞಾನ ಸಮ್ಮೇಳನವನ್ನು ಸೆಪ್ಟೆಂಬರ್ 15-17, 2014 ರಲ್ಲಿ ನಡೆಸಲಾಗುತ್ತಿದೆ. ಸದರಿ ಸಮ್ಮೇಳನದಲ್ಲಿ ಸುಮಾರು 450 ವಿಜ್ಞಾನಿ / ಕನ್ನಡ ಭಾಷಾಭಿಮಾನಿಗಳು ಭಾಗವಹಿಸಿ 350 ಸಂಶೋಧನಾ ಲೇಖನಗಳನ್ನು ಕನ್ನಡ ಭಾಷೆಯಲ್ಲಿ ಮಂಡಿತವಾದವು. ಈ ಸಮ್ಮೇಳನದ ಮಹದೋದ್ದೇಶವು ವಿಜ್ಞಾನವನ್ನು ಕನ್ನಡ ಭಾಷೆಯಲ್ಲಿ ಜನಸಾಮಾನ್ಯರಿಗೆ ತಲುಪಿಸುವುದು ಮತ್ತು ಕನ್ನಡ ಭಾಷೆಯ ಮೇಲೆ ಪ್ರೇಮ, ಹಿರಿಮೆ ಮತ್ತು ವಿಶ್ವಾಸವನ್ನು ಬೆಳೆಸುವ ಹಾಗೂ ಕನ್ನಡ ಭಾಷೆಯ ಮೇಲೆ ಹೆಚ್ಚಿನ ಒಲವನ್ನು ಮೂಡಿಸುವಂತೆ ಮಾಡುವುದೇ ಆಗಿದೆ ಸದರಿ ಸಮ್ಮೇಳನದಲ್ಲಿ ಸುಮಾರು 32 ಪರ್ಯಾಯ ಗೋಷ್ಠಿಗಳು ನಡೆದವು. ಸದರಿ ಸಮ್ಮೇಳನಕ್ಕೆ ಕೆ. ಎಸ್. ಓ. ಯು / ಜೆ. ಎಸ್. ಎಸ್. ವಿಶ್ವವಿದ್ಯಾಲಯ / ಕೆ.ಎಸ್.ಜಿ.ಹೆಚ್.ಪಿ.ಎ.ಎಮ್. ವಿಶ್ವವಿದ್ಯಾಲಯ / ಸಿ. ಎಫ್. ಟಿ. ಆರ್. ಐ / ಎ. ಐ. ಐ. ಎಸ್. ಹೆಚ್ / ಸಿ. ಐ. ಐ. ಎಲ್ / ಡಿ. ಎಫ್. ಆರ್. ಎಲ್ / ಆರ್. ಐ. ಇ ಸಂಸ್ಥೆಗಳು ಜೊತೆಗೂಡಿದ್ದವು.

ಈ ಸಮ್ಮೇಳನದಲ್ಲಿ ಎಲ್ಲಾ ಕ್ಷೇತ್ರದ ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಸಾಂಸ್ಕೃತಿಕ- ಸಾಮಾಜಿಕ ಮತ್ತು ಆಧುನಿಕ ವಿಜ್ಞಾನಗಳ ವಿಚಾರವಾಗಿ ಲೇಖನಗಳನ್ನು ಮಂಡಿಸಲಾಗುತ್ತಿದೆ. ಇದರ ಜೊತೆಯಲ್ಲಿ ಸಮ್ಮೇಳನದ ಕೇಂದ್ರ ವಿಷಯಗಳಾದ ರಾಷ್ಟ್ರೀಯ ಅಭ್ಯುದಯಕ್ಕೆ ಪಶು ವಿಜ್ಞಾನ ಮತ್ತು ಭಾರತ ರತ್ನ ಡಾ॥ ಎಂ. ವಿಶ್ವೇಶ್ವರಯ್ಯ ನವರ ಮಹತ್ವ ಪೂರ್ಣ ಕೊಡುಗೆಗಳು ಎಂಬ ವಿಚಾರಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ.

ಕನ್ನಡ ವಿಜ್ಞಾನ ಸಮ್ಮೇಳನದ ಈ ಸುಸಂಧರ್ಭದಲ್ಲಿ ಸಾಂಪ್ರದಾಯಿಕ ಮತ್ತು ಆಧುನಿಕ ವಿಜ್ಞಾನ ವಿಷಯಗಳಲ್ಲಿ ಪ್ರಭುತ್ವಗಳಿಸಿ ಅವುಗಳ ಹಿರಿಮೆಯನ್ನು ಕನ್ನಡದ ಪ್ರಬುದ್ಧತೆಯೊಡನೆ ಮೇಳವಿಸಿ ತಿಳಿಸುವ ಸಾಮರ್ಥ್ಯ ಹೊಂದಿದಂತಹ ಕರ್ನಾಟಕದ ಹೆಮ್ಮೆಯ ಪ್ರತಿಭಾನ್ವಿತ ವಿಜ್ಞಾನಿಗಳನ್ನು **"ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ"** ನೀಡಿ ಗೌರವಿಸುವುದು ಸಂಪ್ರದಾಯ ಪ್ರಸಕ್ತ **2014 ನೇ ಸಾಲಿನಲ್ಲಿ ಈ ಗೌರವಕ್ಕೆ ಪಾತ್ರರಾಗುವಂತಹ ಮಹನೀಯರುಗಳು** (1) ಡಾ॥ ಶಂಕರ್ ಬಿ. ದಂಡಿನ್, ನಿವೃತ್ತ ಕುಲಪತಿಗಳು, ತೋ. ವಿ. ವಿ. ಬಾಗಲಕೋಟೆ : (2) ಡಾ॥ ವಸುಂಧರ ಭೂಪತಿ, ಖ್ಯಾತ ಆಯುರ್ವೇದ ವೈದ್ಯರು, ಬೆಂಗಳೂರು ರವರಿಗೆ ನೀಡಲಾಗಿತು, 2014 ನೇ ಸಾಲಿನಿಂದ ಸ್ವದೇಶಿ ವಿಜ್ಞಾನ ಆಂದೋಳನವು **"ಬೀಮ್ ಸೇನ್ ಜೋಶಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕಾರ"** ವನ್ನು ನೀಡಲು ಪ್ರಾರಂಬಿಸಿದ್ದು ಇದರ ಪ್ರಪ್ರಥಮ ಪುರಸ್ಕೃತರಾಗಿ ಪ್ರೊ॥ ಆರ್. ವಿಶ್ವೇಶ್ವರನ್, ಖ್ಯಾತ ವೀಣಾ ವಾದಕರು, ಮೈಸೂರು ಇವರಿಗೆ ನೀಡಲಾಯಿತು.

ಸದರಿ ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ಸನ್ಮಾನ್ಯ ಶ್ರೀ. ಎಸ್. ಆರ್. ಪಾಟೀಲ, ಯೋಜನೆ ಹಾಗೂ ಸಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ನೇರವೇರಿಸಿದರು. ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಸನ್ಮಾನ್ಯ ಡಾ॥ ಸರ್ವಮಂಗಳ ಶಂಕರ್, ಕುಲಪತಿಗಳು, ಕರ್ನಾಟಕ ರಾಜ್ಯ ಡಾ. ಗಂಗೂಬಾಹಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ, ಮೈಸೂರ್ ರವರು ಬಿಡುಗಡೆಮಾಡಿದರು. 9ನೇ ಕನ್ನಡ ವಿಜ್ಞಾನ ಸಮ್ಮೇಳನದ ನಡಾವಳಿ "ವಿಜ್ಞಾನ ಕನ್ನಡ-9" ವನ್ನು ಡಾ॥ ಬಿ. ಎಸ್. ದಂಡಿನ್, ನಿವೃತ ಕುಲಪತಿಗಳು, ತೋ. ವಿ. ವಿ. ಬಾಗಲಕೋಟೆ ರವರು ಬಿಡುಗಡೆಮಾಡಿದರು. ಸ್ವದೇಶಿ ವಿಜ್ಞಾನ ಅಂದೋಳನ-ಕರ್ನಾಟಕದ 10 ವರ್ಷದ ಸಾಧನೆ ಮಾಹಿತಿ ಕೈಪಿಡಿಯನ್ನು ಸನ್ಮಾನ್ಯ ಶ್ರೀ. ಶ್ರೀನಿವಾಸ ಪ್ರಸಾದ್, ಕಂದಾಯ ಹಾಗೂ ಮೈಸೂರು ಉಸ್ತುವಾರಿ ಸಚಿವರು ಬಿಡುಗಡೆ ಮಾಡಿದರು, ಸದರಿ ಸಮಾರಂಭದ ಸ್ವಾಗತ ಭಾಷಣವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ॥ ಸಿ. ಬಸವರಾಜು ರವರು ನೀಡಿದರು. ಪ್ರೊ॥ ಕೆ. ಐ. ವಾಸು, ಸ್ಥಾಪಕ, ಪೋಷಕ, ಮಾರ್ಗದರ್ಶಿಕ ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕ ರವರು "ಮಾತೃಭಾಷೆ ಮತ್ತು ವಿಜ್ಞಾನ ಮಹತ್ವ" ಎಂಬ ವಿಷಯದ ಮೇಲೆ ಭಾಷಣ ನೀಡಿದರು, ಪ್ರೊ॥ ಎಂ. ಎಸ್. ಜೋಗದ್, ಅಧ್ಯಕ್ಷರು, ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕ ರವರು ಸ್ವದೇಶಿ ವಿಜ್ಞಾನ ಆಂದೋಳನದ ಪರಿಚಯ ವನ್ನು ನೀಡಿದರು. 11ನೇ ಕನ್ನಡ ವಿಜ್ಞಾನ ಸಮ್ಮೇಳನದ ಕೈಪಿಡಿಯನ್ನು ಮಾನ್ಯ ಶ್ರೀ ಗೋ. ಮಧುಸೂಧನ್ ರವರ ಬಿಡುಗಡೆ ಮಾಡಿದರು. ಈ ಸಮಾರಂಭದಲ್ಲಿ ಸನ್ಮಾನ್ಯ ಶ್ರೀ ಕ್ಯಾಪ್ಟನ್ ಗಣೇಶ ಕಾರ್ಣಿಕ್, ಎಂ. ಎಲ್. ಸಿ, ಸಂಯೋಜಕರು, 10ನೇ ಕ. ವಿ. ಸ ಹಾಗೂ ವಿಶ್ವವಿದ್ಯಾಲಯದ ಹಿರಿಯ ಪ್ರತಿನಿಧಿಗಳು ಮತ್ತು ಮಾಧ್ಯಮದ ಮಿತ್ರರು ಭಾಗವಹಿಸಿದರು. ಸದರಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸನ್ಮಾನ್ಯ ಡಾ॥ ಕೆ. ಎಸ್. ರಂಗಪ್ಪ, ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರು ವಹಿಸಿದರು, ವಂದನಾರ್ಪಣೆಯನ್ನು ಡಾ॥ ಅ. ಮೈ. ಸುಧಾಕರ್ ರವರು ನೀಡಿದರು.

ಸದರಿ ಸಮ್ಮೇಳನವು 3 ದಿನಗಳ ಕಾಲ 4 ಸಭಾಂಗಣದಲ್ಲಿ 32 ವಿಜ್ಞಾನದ ವಿವಿಧ ಗೋಷ್ಠಿಗಳು ಸಮನಾಂತರವಾಗಿ ಕನ್ನಡ ಭಾಷೆಯಲ್ಲಿ ಪ್ರಬಂಧಗಳು ಮಂಡಿತವಾದವು. ಸಮ್ಮೇಳನದ ಪ್ರತಿಯೊಂದು ಗೋಷ್ಠಿಗಳಲ್ಲಿ ಅಹ್ವಾನಿತ ಉಪನ್ಯಾಸಗಳು ನೀಡಲಾದವು. ಈ ಗೋಷ್ಠಿಗಳಲ್ಲಿ ಕರ್ನಾಟಕದ ವಿಶ್ವವಿದ್ಯಾಲಯಗಳಾದ : ಕುವೆಂಪು ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಕರ್ನಾಟಕ ಪಶುವೈದ್ಯಕೀಯ, ಪಶು, ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ತುಮಕೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ದ ಜೊತೆಗೆ ಸಂಶೋಧನಾ ಸಂಸ್ಥೆಗಳಾದ, ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆ, ಅಂತರಿಕ್ಷ ಪ್ರಯೋಗಶಾಲೆ, ಭಾರತೀಯ ವಿಜ್ಞಾನ ಸಂಸ್ಥೆ ಗಳಿಂದ ಪ್ರಾಧ್ಯಪಕರು, ವಿಜ್ಞಾನಿಗಳು, ವಿಧ್ಯಾರ್ಥಿಗಳು ಭಾಗವಹಿಸಿದರು.

10ನೇ ಕನ್ನಡ ವಿಜ್ಞಾನ ಸಮ್ಮೇಳನದ ಮುಕ್ತಾಯ ಸಮಾರಂಭವು ದಿನಾಂಕ 17ನೇ ಸಪ್ಟೆಂಬರ್, 2014 ರ ಸಂಜೆ 4:00 ಗಂಟೆಗೆ ಆಯೋಜಿಸಲಾಗಿತ್ತು. ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ. ದಿನೇಶ್ ಗುಂಡುರಾವ್, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಭಾಗವಹಿಸಿದ್ದರು, ಡಾ॥ ಎಂ. ಜಿ. ಕೃಷ್ಣನ್, ಕುಲಪತಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ರವರು, ಡಾ॥ ಸರ್ವಮಂಗಳ ಶಂಕರ್, ಕುಲಪತಿಗಳು, ಕ. ರಾ. ಗಂ. ಹಾ. ಸಂ. ಪ್ರ. ಕ. ವಿ. ವಿ. ಮೈಸೂರು, ಶ್ರೀ. ಕ್ಯಾಪ್ಟನ್. ಗಣೇಶ್ ಕಾರ್ನಿಕ್, ಎಂ. ಎಲ್. ಸಿ, ಮುಖ್ಯ ಸಚೇತಕರು, ವಿ. ಪ, ವಿಧಾನ ಪರಿಷತ್ ರವರು ಹಾಗೂ ಇತರ ಗಣ್ಯರು ಭಾಗವಹಿಸಿದರು; ಪ್ರೊ॥ ಕೆ. ಐ. ವಾಸು, ಪೋಷಕರು, ಸ್ಥಾಪಕ, ಮಾರ್ಗದರ್ಶಕ, ಸ್ವದೇಶಿ ವಿಜ್ಞಾನ ಅಂದೋಳನ-ಕರ್ನಾಟಕ, ರವರು ಭಾಗವಹಿಸಿದರ. ಈ ಸಮಾರಂಭದ ಅಧ್ಯಕ್ಷತೆಯನ್ನು ಡಾ॥ ಸಿ. ಬಸವರಾಜ್, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರ್ ರವರು ವಹಿಸಿದ್ದರು. ಈ ಸಮಾರಂಭದಲ್ಲಿ 10ನೇ ಕನ್ನಡ ವಿಜ್ಞಾನ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಿದ ಪ್ರತಿನಿಧಿಗಳಿಗೆ ಅತ್ಯುತ್ತಮ ಪ್ರಬಂಧ ಮಂಡನೆ ಪ್ರಶಸ್ತಿ, ಯುವ ವಿಜ್ಞಾನಿ ಪ್ರಶಸ್ತಿ (45 ವರ್ಷದೊಳಗಿನವರು) ಮತ್ತು ಮಹಿಳಾ ವಿಜ್ಞಾನಿ ಪ್ರಶಸ್ತಿಯನ್ನು ನೀಡಲಾಯಿತು. ಕೊನೆಯದಾಗಿ ಸಮ್ಮೇಳನವು ಶ್ರೀ. ಹೆಚ್. ರಮೇಶ, ಪ್ರಧಾನ ಕಾರ್ಯದರ್ಶಿ, ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕ ರವರ ವಂದನಾರ್ಪಣೆಯೊಂದಿಗೆ ಮುಕ್ತಾಯ ಪಾಯಿತು.

ಈ ಸಮ್ಮೇಳನದ ಯಶಸ್ವಿಗೆ ಸಹಕಾರ ನೀಡಿದಂತಹ ಎಲ್ಲಾ ಮಹನೀಯರುಗಳಿಗೆ, ಪ್ರತಿನಿಧಿ, ಮಾಧ್ಯಮ ಪ್ರತಿನಿಧಿಗಳು, ಮುದ್ರಕರು, ವಿಶ್ವವಿದ್ಯಾಲಯ ಮತ್ತು ಎಲ್ಲಾ ಭೋಧಕ ಮತ್ತು ಭೋದಕೇತರ ಸಿಬ್ಬಂದಿಗೆ ಹಾಗೂ ಸಮ್ಮೇಳನದ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಮತ್ತು ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕದ ಎಲ್ಲಾ ಸದಸ್ಯರುಗಳಿಗೆ ವಿಶೇಷವಾಗಿ ಸ್ವದೇಶಿ ವಿಜ್ಞಾನ ಆಂದೋಳನ-ಮೈಸೂರು ಜಿಲ್ಲಾ ಘಟಕದ ಎಲ್ಲಾ ಪಧಾಧಿಕಾರಿಗಳಿಗೆನನ್ನ ಅನಂತ ಅನಂತ ವಂದನೆಗಳು

ವಿಶೇಷ ಸೂಚನೆ:- ಈ ನಡಾವಳಿಯಲ್ಲಿ ಮುದ್ರಿತವಾಗಿರುವ ಎಲ್ಲಾ ಲೇಖನಗಳು ಲೇಖಕರು ಕಳುಹಿಸಿದ ಮಾದರಿಯಲ್ಲೇ ಮುದ್ರಿತವಾಗಿವೆ. ಈ ಲೇಖನಗಳಿಗೆ ಸಂಬಂಧಿಸಿದ ಯಾವುದೇ ವಿವರ ಅಥವಾ ಮಾಹಿತಿ ಬೇಕಾಗಿದೆಲ್ಲಿ ಲೇಖಕರುಗಳನ್ನೆ ನೇರವಾಗಿ ಸಂಪರ್ಕಿಸಬೇಕೆಂದು ಮನವಿ.

ಪ್ರಧಾನ ಕಾರ್ಯದರ್ಶಿ, ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕ
ಪ್ರಧಾನ ಕಾರ್ಯದರ್ಶಿ, 10ನೇ ಕನ್ನಡ ವಿಜ್ಞಾನ ಸಮ್ಮೇಳನ